START

START

START

MICRO FILMED
BY
KARNATAKA STATE
ARCHIVES
1988

MICRO FILMED
BY
KARNATAKA STATE
ARCHIVES
1988

1. Continuation of "SAMACHAR"
DAILY NEWS PAPER
MYSORE.

From 1:8:1953 ....

File No. ARS 33 APP 87
Date 25:6:88

1. Continuation of "SAMACHAR"
DAILY NEWS PAPER
MYSORE.

From 1:8:1953 ....

File No. ARS 33 APP 87
Date 25:6:88

ಮದ್ರಾಸ್ ಮಂತ್ರಿಮಂಡಲದ ರಾಜೀನಾಮೆಗೆ ಒತ್ತಾಯ

ವಿಷಯ ಪರಿಶೀಲಿಸುವುದಾಗಿ ರಾಜಾಜಿ

ಮದ್ರಾಸ್ ಶಾಸನ ಸಭೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಸುಧಾರಣೆಯ ವಿಷಯವು ಬಹುಮತದಿಂದ ನಿರಾಕರಣೆಯಾಗಿ ಸರಕಾರಕ್ಕೆ ಸೋಲು ಉಂಟಾದುದರಿಂದ ರಾಜಾಜಿ ಮಂತ್ರಿಮಂಡಲವು ರಾಜೀನಾಮೆ ಕೊಡಬೇಕೆಂದು ವಿರೋಧಪಕ್ಷದ ಶ್ರೀ ತನ್ನೇಟಿ ವಿಶ್ವನಾಥಂರವರು ಒಂದು ಪ್ರಶ್ನೆಯನ್ನು ನಿನ್ನೆ ಎತ್ತಿದರು.

ಈ ವಿಷಯದಲ್ಲಿ ರಾಜೀನಾಮೆಯನ್ನು ಕೊಡುವ ವಿಷಯವು ಮಂತ್ರಿಮಂಡಲಕ್ಕೆ ಸೇರಿದೆ. ತಾವು ಈಬಗ್ಗೆ ಏನೂ ಹೇಳಲು ಸಾಧ್ಯವಿಲ್ಲ ಹಾಗೆ ಬೇಕಾದರೆ ವಿರೋಧ ಪಕ್ಷದವರು ಅವಿಶ್ವಾಸ ನಿರ್ಣಯವನ್ನು ತರಬಹುದು ಎಂದು ಸಭಾಧ್ಯಕ್ಷರು ತಿಳಿಸಿದರು.

ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮಾತನಾಡುತ್ತಾ ಈ ವಿಷಯವು ಸರ್ಕಾರಕ್ಕೆ ಬಿಡಬೇಕೇ ವಿನಹ ಶಾಸನಸಭೆಯಲ್ಲಿ ಚರ್ಚಿಸಲು ಅವಕಾಶವಿಲ್ಲವೆಂದು ಹೇಳಿದರು ಪುನಃ ಇದೇ ವಿಷಯದಲ್ಲಿ ಮಧ್ಯಾಹ್ನ ಸಭೆಯಲ್ಲಿ ವಿರೋಧ ಪಕ್ಷದ ಶ್ರೀಗಳಾದ ನಾಗರೆಡ್ಡಿ ಮತ್ತು ಕಲ್ಯಾಣಸುಂದರಂರವರು ಇದೇಪ್ರಶ್ನೆಯನ್ನೆತ್ತಿದರು.

ರಾಜೀನಾಮೆ ಕೊಡುವ ವಿಷಯವನ್ನು ತಮ್ಮ ಮಂತ್ರಿಮಂಡಲ ಪರಿಶೀಲಿಸುವುದಾಗಿ ಮುಖ್ಯಮಂತ್ರಿಗಳು ಉತ್ತರವಿತ್ತರು.

ಸಭೆ ಮುಗಿಯುವ ವೇಳೆಯಲ್ಲಿ ಸಭಾಧ್ಯಕ್ಷರು ಪುನಃ ಮಾತನಾಡುತ್ತಾ ಈಸಾಲಿನ ಅಧಿವೇಶನವು ಈಗ ಮುಕ್ತಾಯವಾಗುತ್ತದೆ. ಮುಕ್ತಾಯವಾಗುವ ವೇಳೆಯಲ್ಲಿ ಸದಸ್ಯರೊಬ್ಬರಿಂದ ಒಂದು ನಿಲುವಳಿ ಸೂಚನೆ ಬಂದಿದೆ. ಅದನ್ನು ತಾವು ಪರಿಶೀಲಿಸಿ ತೀರ್ಮಾನವೀಯುವುದಾಗಿಯೂ, ಅವಶ್ಯಕವಿದ್ದರೆ ಆ ವಿಷಯವನ್ನು ಚರ್ಚಿಸುವುದಕ್ಕೆ ಪುನಃ ಅಧಿವೇಶನವನ್ನು ಕರೆಯಲು ಸಭಾ ನಾಯಕರಿಗೆ ಸೂಚನೆ ಕೊಡುವುದಾಗಿ ಹೇಳಿದರು. ಈ ನಿಲುವಳಿ ಸೂಚನೆ ಯಾವುದೆಂಬುದನ್ನು ಅವರು ಹೇಳಲಿಲ್ಲ. ಆದರೆ ಇದು ರಾಜಾಜಿ ಮಂತ್ರಿಮಂಡಲ ರಾಜೀನಾಮೆ ಪ್ರಶ್ನೆಯಿರಬಹುದೆಂದು ಹೇಳಲಾಗಿದೆ.

ಕರ್ನಾಟಕ ಪ್ರಾಂತ್ಯರಚನೆ ಬಗ್ಗೆ ಪ್ರಧಾನಿಬಳಿ ನಿಯೋಗ

ಕರ್ನಾಟಕ ಪ್ರಾಂತ್ಯರಚನೆ ಬಗ್ಗೆ ಶ್ರೀ ಕೆ.ಆರ್. ಕಾರಂತರವರ ನಾಯಕತ್ವದಲ್ಲಿ ನಿಯೋಗವೊಂದು ಸದ್ಯದಲ್ಲೇ ಪ್ರಧಾನಿ ನೆಹರೂ, ಗೃಹಸಚಿವ ಡಾ॥ ಕಟ್ಜುರವರನ್ನು ಭೇಟಿ ಮಾಡಲಿದೆಯೆಂದು ತಿಳಿಯಬರುತ್ತದೆ.

ದೇಶದ ಆರ್ಥಿಕಸ್ಥಿತಿ ಉತ್ತಮಗೊಳ್ಳುತ್ತಿದೆಯೆಂದು ವಾಣಿಜ್ಯ ಸಚಿವರು

ಸ್ವಾತಂತ್ರ್ಯ ಬಂದಾಗಿನಿಂದ ದೇಶದಲ್ಲಿ ಆರ್ಥಿಕ ಪರಿಸ್ಥಿತಿಯು ಉತ್ತಮಗೊಳ್ಳುತ್ತಿದೆ. ದೇಶವು ಅಭಿವೃದ್ಧಿ ಮಾರ್ಗದಲ್ಲಿ ಈಗ ಸಾಗುತ್ತಿದೆ. ಕೈಗಾರಿಕೋತ್ಪನ್ನಗಳು ಹೆಚ್ಚುತ್ತಿವೆ. ಸೆಣಬು, ಹತ್ತಿಯ ಕೊರತೆ ಪೂರ್ಣವಾಗಿ ತಪ್ಪಿದೆ. ಆಹಾರ ಪರಿಸ್ಥಿತಿ ಉತ್ತಮಗೊಂಡಿದೆಯೆಂದು ವಾಣಿಜ್ಯಸಚಿವ ಶ್ರೀ ಕರಮರ್‌ಕರ್‌ರವರು ಜಯಪುರ್‌ನಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ದ್ರಾವಿಡ ಫೆಡರೇಷನ್ ನೀತಿ ಖಂಡನೆ

ದ್ರಾವಿಡ ಫೆಡರೇಷನವರು ಪ್ರತಿಯೊಂದು ಪ್ರಶ್ನೆಯನ್ನೂ ಬ್ರಾಹ್ಮಣ-ಬ್ರಾಹ್ಮಣೇತರು, ಉತ್ತರ ಭಾರತ ದಕ್ಷಿಣಭಾರತ ಎಂಬ ಪ್ರತ್ಯೇಕ ಮನೋಭಾವದಿಂದ ಪರಿಗಣಿಸುತ್ತಲಿರುವುದು ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವೆಂದು ತಮಿಳನಾಡು ಕಮ್ಯೂನಿಸ್ಟ ಪಕ್ಷವು ದ್ರಾವಿಡ ಫೆಡರೇಷನ್ನಿನ ನೀತಿಯನ್ನು ಖಂಡಿಸಿದೆ.

ರಬ್ಬರ್ ಪದಾರ್ಥಗಳ ರಫ್ತು

ರಬ್ಬರ್‌ನಿಂದ ತಯಾರಾದ ವಸ್ತುಗಳನ್ನು ಓಪನ್ ಜನರಲ್ ಲೈಸೆನ್ಸ್‌ನಲ್ಲಿ ರಫ್ತು ಮಾಡಲು ಭಾರತ ಸರ್ಕಾರವು ಅನುಮತಿಯಿತ್ತಿದೆ. ಟ್ಯೂಬು ಮತ್ತು ಟೈರುಗಳಿಗೆ ಇದು ಅನ್ವಯಿಸುವುದಿಲ್ಲ.

ಡಾ॥ ರಾಧಾಕೃಷ್ಣನ್ ದೆಹಲಿಯಲ್ಲಿ

ಭಾರತ ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರು ತಮ್ಮ ೨ ತಿಂಗಳ ವಿದೇಶೀ ಪ್ರವಾಸವನ್ನು ಪೂರೈಸಿಕೊಂಡು ನಿನ್ನೆಯ ದಿನ ದೆಹಲಿಗೆ ಹಿಂತಿರುಗಿದರು.

ವನಪ್ರದೇಶ ರಕ್ಷಣೆಗೆ ಬ್ರಿಟಿಷ್ ತಜ್ಞರು

ಭಾರತದಲ್ಲಿರುವ ವನಪ್ರದೇಶಗಳ ರಕ್ಷಣೆ ಮತ್ತು ಉತ್ಪತ್ತಿ ಬಗ್ಗೆ ಸಲಹೆ ನೀಡಲು ಬ್ರಿಟನ್ನಿನ ತಜ್ಞರಾದ ಡಾ॥ ಮಕ್ಲಾಗ್‌ರು ಭಾರತಕ್ಕೆ ಬರಲಿರುವರು. ಹಿಂದೆ ಇವರು ಪಂಜಾಬಿನಲ್ಲಿ ಅರಣ್ಯ ಮುಖ್ಯಾಧಿಕಾರಿಗಳಾಗಿದ್ದರು.

ಇಂದ್ರಧನುಸ್

ಈ ರಾತ್ರಿ ೯-೩೦ ಗಂಟೆಗೆ ಮೈಸೂರು ಆಕಾಶವಾಣಿಯಲ್ಲಿ "ಇಂದ್ರಧನುಸ್" ಎಂಬ ಹಿಂದಿಯ ವಿವಿಧ ಕಾರ್ಯಕ್ರಮ ನಡೆಯುತ್ತದೆ.

ಮಂತ್ರಿಮಂಡಲಕ್ಕೆ ಮತ್ತಿಬ್ಬರು ಸಚಿವರೇ?

ಅಕ್ಟೋಬರ್ ನಂತರ ಪುನರ್ರಚನೆ

ಬೆಂಗಳೂರು ೩೧

ಬಳ್ಳಾರಿ ಜಿಲ್ಲೆಯು ಮೈಸೂರುಪ್ರಾಂತ್ಯಕ್ಕೆ ಸೇರಿದನಂತರ ಮಂತ್ರಿಮಂಡಲದ ಪುನರ್ರಚನೆಯಾಗಬಹುದು. ಅಲ್ಲಿನ ಜನಸಂಖ್ಯೆಯ ಆಧಾರದಮೇಲೆ ಒಬ್ಬರು ಅಥವಾ ಇಬ್ಬರುಮಂತ್ರಿಗಳನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳಲಾಗುತ್ತದೆ--ಎಂದು ವಿದ್ಯಾಸಚಿವ ಶ್ರೀ ಎ. ಜಿ ರಾಮಚಂದ್ರರಾಯರು ಹೈದರಾಬಾದಿನಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಮೈಸೂರಿನ ಸಾಲಕ್ಕೆ ಹೈದರಾಬಾದಿನಲ್ಲಿ ಹಣವನ್ನು ಶೇಖರಿಸಲು ಶ್ರೀಯುತರು ಅಲ್ಲಿಗೆ ಹೋದಾಗ ಈ ವಿಷಯವನ್ನುವ್ಯಕ್ತಪಡಿಸಿದರೆಂದು ಹೇಳಲಾಗಿದೆ.

ಸಂಜೀವರೆಡ್ಡಿಯವರಿಗೆ ಕರೆ

ಆಂಧ್ರಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎನ್. ಸಂಜೀವರೆಡ್ಡಿಯವರು ನಿನ್ನೆಯದಿನ ಪ್ರಧಾನಿ ನೆಹರೂರವರ ಕರೆಯಮೇರೆ ದೆಹಲಿಗೆ ಪ್ರಯಾಣಮಾಡಿದರು.

ಆಗಸ್ಟು ೩ನೇ ತಾರೀಖು ಮದರಾಸಿಗೆ ಹಿಂತಿರುಗುವರು.

ಶ್ರೀಗಳಾದ ಟಿ. ಪ್ರಕಾಶಂ ಮತ್ತು ಟಿ. ವಿಶ್ವನಾಥಂರವರು ಸಹ ಆಂಧ್ರಪ್ರಾಂತ್ಯ ಮಸೂದೆ ವಿಷಯದಲ್ಲಿ ಮಾತನಾಡಲು ನಾಳೆಯದಿನ ದೆಹಲಿಗೆ ತೆರಳುವರು. ಅವರು ಅಲ್ಲಿ ಪ್ರಧಾನಿ ನೆಹರೂ, ಗೃಹಸಚಿವ ಡಾ॥ ಕಟ್ಜು ಮತ್ತು ಶ್ರೀಗಳಾದ ಆಚಾರ್ಯ ಕೃಪಲಾನಿ, ಜಯಪ್ರಕಾಶ್ ನಾರಾಯಣರನ್ನು ಭೇಟಿಮಾಡುವರೆಂದು ತಿಳಿಯಬರುತ್ತದೆ.

ನಾಜಿಮುದ್ದೀನ್ ಅಸಹಕಾರ

ಪ್ರಧಾನಿ ನೆಹರೂರವರ ಗೌರವಾರ್ಥವಾಗಿ ಕರಾಚಿಯಲ್ಲಿ ಪಾಕೀಸ್ತಾನಗೌವರ್ನರ್ ಜನರಲ್‌ರು ಏರ್ಪಡಿಸಿದ್ದ ಸತ್ಕಾರಕೂಟಕ್ಕೆ ಬರಲು ಆಹ್ವಾನವನ್ನು ಮಾಜಿ ಪಾಕ್ ಪ್ರಧಾನಿ ನಾಜಿಮುದ್ದೀನ್‌ರು ನಿರಾಕರಿಸಿದರೆಂದೂ, ಹಾಲಿ ಪ್ರಧಾನಿ ಮಹಮ್ಮದ್ ಆಲಿಯವರು ಏರ್ಪಡಿಸಿದ್ದ ಸತ್ಕಾರಕೂಟಕ್ಕೆ ಅವರನ್ನು ಆಹ್ವಾನಿಸಲೇ ಇಲ್ಲವೆಂದು ತಿಳಿಯಬರುತ್ತದೆ.

ವಿದ್ಯಾರ್ಥಿಗಳಿಗೆ ಸೈನ್ಯ ಶಿಕ್ಷಣ

ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಸೈನ್ಯ ಶಿಕ್ಷಣ ಕೊಡಬೇಕೆಂಬ ಖಾಸಗಿ ನಿರ್ಣಯವು ಆಗಸ್ಟ ೩ ನೇ ತಾರೀಖಿನಿಂದ ಸೇರಲಿರುವ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬರುವ ಪ್ರಥಮ ಖಾಸಗಿ ನಿರ್ಣಯವಾಗಿದೆ. ಕಾಂಗ್ರೆಸ್ಸಿನ ಡಾ॥ ರಾವ್ ಸುಭಾಸ್‌ಸಿಂಗ್‌ರವರು ನಿರ್ಣಯವನ್ನು ಕಳುಹಿಸಿದ್ದಾರೆ.

ಶಾಸನಸಭಾಧಿವೇಶನ ಮುಕ್ತಾಯ

ಮದ್ರಾಸಿನ ಕಿರಿದು ಶಾಸನಸಭಾಧಿವೇಶನವು ನಿನ್ನೆಯದಿನ ಮುಕ್ತಾಯವಾಯಿತು ಮುಂದಿನ ಅಧಿವೇಶನದಲ್ಲಿ ಮದ್ರಾಸ್ ಮತ್ತು ಆಂಧ್ರಪ್ರಾಂತ್ಯ ಪ್ರತ್ಯೇಕವಾಗಿ ಬೇರೆಬೇರೆ ಶಾಸನಸಭೆಗಳಾಗುವುದರಿಂದ ಈಗಿನ ಸ್ಥಿತಿಯಲ್ಲಿ ಇದು ಕೊನೆಯ ಅಧಿವೇಶನವಾದ್ದರಿಂದ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿ, ಶ್ರೀ ಟಿ. ಪ್ರಕಾಶಂ ಮುಂತಾದವರು ಹೊಸರಾಜ್ಯಕ್ಕೆ ಶುಭಾಶಯಗಳನ್ನು ಕೋರಿ ಮಾತನಾಡುತ್ತಾ ಹೊಸ ಪ್ರಾಂತ್ಯಗಳು ಸ್ನೇಹದಿಂದ ತಮ್ಮ ಕಾರ್ಯಗಳನ್ನು ನಡೆಸಲೆಂದು ಹಾರೈಸಿದರು.

ತಮಿಳುನಾಡು ಪ್ರವಾಸ

ಭೂದಾನ ಯಜ್ಞ ಚಳುವಳಿಯ ಅಂಗವಾಗಿ ಶ್ರೀ ಜಯಪ್ರಕಾಶ ನಾರಾಯಣರವರು ಆಗಸ್ಟು ೧೫ ರಿಂದ ೨ ವಾರ ಕಾಲ ತಮಿಳುನಾಡಿನಲ್ಲಿ ಪ್ರವಾಸ ಮಾಡಲಿರುವರು.

ಅಪೇರ

31—7—53 ರಿಂದ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಇನ್‌ಸ್ಪೆಕ್ಟರ್ ತಮಿಳು

ಪಾತ್ರ:-ಬಾಲಚಂದರ್, ಟಿ. ಕೆ. ಷಣ್ಮುಗಂ, ಟಿ. ಕೆ. ಸರಸ್ವತಿ, ಅಂಜಲಿದೇವಿ

ರಣಜಿತ್

31—7—53 ರಿಂದ 8 ನೇ ವಾರ

[50 ನೇ ದಿನ]

"ಫಿಲ್ಮಿಸ್ತಾನ್"ರವರ ಈ ವರ್ಷದ ಅಮೋಘ ಸಂಗೀತಮಯ ಹಿಂದೀ ಕಲಾಕೃತಿ.

ಅನಾರ್‌ಕಲಿ

ಪಾತ್ರ: ಬಿನಾರಾಯ್, ಪ್ರದೀಪ್ ಕುಮಾರ್, ಕುಲ್‌ದೀಪ್, ಮುಬಾರಕ್

ಸಂಗೀತ ಸಿ. ರಾಮಚಂದ್ರ.

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು:— ಹಿ. ಕಾ. ಸುಬ್ಬರಾವ್

ಮೋಹನ ಮುದ್ರಣಾಲಯ ಮೈಸೂರು.

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೩೮

ಸಮಾಚಾರ

ದಿನಪತ್ರಿಕೆ ಸಂಪುಟ ೩ ಸಂಚಿಕೆ ೨೮೩

೧-೮-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾವೇರಿ, ಕಪಿನಿಗಳಲ್ಲಿ ಪ್ರವಾಹ

ಪ್ರವಾಹದಿಂದ ತೊಂದರೆಯಾಗದಂತೆ ಮುಂಜಾಗ್ರತೆ ಕ್ರಮ

ಮೈಸೂರು ಆಗಸ್ಟ ೧

ಕಳೆದ ೨—೩ ದಿನಗಳಿಂದ ಕೊಡಗು ಮತ್ತು ಇತರ ಪ್ರದೇಶಗಳಲ್ಲಿ ಭಾರಿ ಮಳೆಯಾಗುತ್ತಲಿರುವುದರಿಂದ ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ ಮತ್ತು ಕಪಿನಿ ಮುಂತಾದ ನದಿಗಳಲ್ಲಿ ಪ್ರವಾಹ ಬರಲು ಪ್ರಾರಂಭವಾಗಿದೆ. ಆದರೆ ಕಳೆದ ತಿಂಗಳಲ್ಲಿ ಬಂದಷ್ಟು ಅಧಿಕ ಪ್ರಮಾಣದಲ್ಲಿ ಬರುತ್ತಿಲ್ಲ. ಆದಾಗ್ಯೂ ನಂಜನಗೂಡು, ಟಿ. ನರಸೀಪುರ ಮುಂತಾದ ಕಡೆ ತಗ್ಗುಪ್ರದೇಶದಲ್ಲಿ ನೀರು ನುಗ್ಗಬಹುದೆಂಬ ಶಂಕೆಯಿಂದ ಈಗಾಗಲೇ ಎಲ್ಲೆಡೆಯಲ್ಲಿಯೂ ಜಿಲ್ಲಾಧಿಕಾರಿಗಳು ಸೂಕ್ತಎಚ್ಚರಿಕೆಯನ್ನು ಕೊಟ್ಟಿದ್ದಾರೆ.

ಕಳೆದ ಪ್ರವಾಹದಲ್ಲಿ ತೊಂದರೆಗೀಡಾದ ಜನರು ಪುನಃ ತಮ್ಮತಮ್ಮ ಹಳೇ ಸ್ಥಾನಗಳಿಗೆ ಬರಲು ಇನ್ನೂ ಅವಕಾಶವನ್ನು ಕೊಟ್ಟಿಲ್ಲ. ಈಗಾಗಲೇ ಅವರು ಪ್ರತ್ಯೇಕ ಸ್ಥಾನಗಳನ್ನು ಕಟ್ಟಿಕೊಳ್ಳಲು ಜಿಲ್ಲಾಧಿಕಾರಿಗಳು ೫೦೦೦ ರೂಪಾಯಿಗಳನ್ನು ಉಚಿತವಾಗಿ ಹಂಚಿದ್ದಾರೆ. ಇನ್ನೂ ೫೦೦೦ ರೂಪಾಯಿಗಳನ್ನು ಹಂಚುವ ವ್ಯವಸ್ಥೆಯಿದೆ.

ತೊಂದರೆಗೀಡಾಗಿರುವ ಮಕ್ಕಳ ಪರಿಹಾರಕ್ಕಾಗಿ ತಲಕಾಡಿನಲ್ಲಿ ಕಳೆದವಾರದಿಂದಲೂ ಉಚಿತ ಹಾಲಿನ ಕೇಂದ್ರ ಸಹಾಯನೀಡುತ್ತದೆ.

ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಈ ಪರಿಹಾರ ಕಾರ್ಯಗಳಲ್ಲಿ ಅತ್ಯಂತ ಮುತವರ್ಜಿಯನ್ನು ವಹಿಸಿ ನೊಂದವರಿಗೆಲ್ಲಾ ಸಾಧ್ಯವಾದಷ್ಟು ಸಹಾಯ ನೀಡುವಂತೆ ತಮ್ಮ ಅಧಿಕಾರಿಗಳಿಗೆ ಆಜ್ಞೆ ಇತ್ತಿದ್ದಾರೆ.

ಅವರು ನಾಳೆಯೂ ಟಿ. ನರಸೀಪುರ, ನಂಜನಗೂಡು ಮುಂತಾದ ಸ್ಥಳಗಳಿಗೆ ಪುನಃ ಭೇಟಿಯಿತ್ತು ಎಲ್ಲವನ್ನೂ ಪರಿಶೀಲಿಸಲಿರುವರೆಂದು ತಿಳಿಯಬರುತ್ತದೆ.

ಈ ದಿನ ಬೆಳಗ್ಗೆ ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ೧೦೩.೯೫ ಅಡಿಗಳಷ್ಟಿದ್ದಿತು. ೬೯೦೦೦ ಕ್ಯೂಸೆಕ್ಸ್‌ಗಳಷ್ಟು ನೀರು ಬರುತ್ತಾ ಸುಮಾರು ೭೭೦೦೦ ಕ್ಯೂಸೆಕ್ಸ್‌ಗಳಷ್ಟು ನೀರನ್ನು ಬಿಡಲಾಗುತ್ತಿದೆ. ಕಪಿನಿಯಲ್ಲಿ ೨೨೩೪೬ ಕ್ಯೂಸೆಕ್ಸ್‌ಗಳಷ್ಟು ನೀರು ಮಾತ್ರ ಬರುತ್ತಿದೆ.

ಇನ್ನು ಒಂದೆರಡು ದಿನಗಳಲ್ಲಿ ಸ್ವಲ್ಪ ಪ್ರವಾಹಬರುವ ಸೂಚನೆಯಿದೆ ಆದರೆ ಹಿಂದಿನಹಾಗೆ ಪ್ರವಾಹದ ಹಾವಳಿಯೇನೂ ಇರುವುದಿಲ್ಲವೆಂದು ಊಹಿಸಲಾಗಿದೆ.

ಸಿಹಿತಿಂಡಿ ಹಂಚಿಕೆ

ಮೈಸೂರು ೧

ಶ್ರೀಮನ್ಮಹಾರಾಜರವರ ವರ್ಧಂತಿ ಪ್ರಯುಕ್ತ ನಗರದ ಎಲ್ಲಾ ವಿದ್ಯಾಶಾಲೆಗಳಲ್ಲಿ ಈದಿನ ಸಿಹಿ ತಿಂಡಿಯನ್ನು ಹಂಚಲಾಯಿತು. ಇದಕ್ಕಾಗಿ ಶ್ರೀಮನ್ಮಹಾರಾಜರು ಒಂದೂವರೆ ಸಾವಿರ ರೂಪಾಯಿಗಳನ್ನು ವಿದ್ಯಾ ಇಲಾಖೆಗೆ ಕೊಟ್ಟಿದ್ದರೆಂದು ತಿಳಿಯಬರುತ್ತದೆ.

ಉಪನ್ಯಾಸ

ಕರ್ನಾಟಕಸಂಘದ ಆಶ್ರಯದಲ್ಲಿ ಇದೇ ೩ ನೇ ತಾ॥ ಸೋಮವಾರ ಸಂಜೆ ೬ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಕರ್ನಾಟಕ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ವಿ. ಕೃ. ಗೋಕಾಕ್ ಅವರು ಉಪನ್ಯಾಸ ಮಾಡುತ್ತಾರೆ. ಮಹಾರಾಜಾ ಕಾಲೇಜ್ ಪ್ರೊ॥ ಎಸ್. ವಿ. ರಂಗಣ್ಣನವರು ಅಧ್ಯಕ್ಷತೆ ವಹಿಸುತ್ತಾರೆ.

ಮುಯ್ಯಿಗೆ ಮುಯ್ಯಿ

ದ್ರಾವಿಡ ಕಳಗಂಪವರು ಈದಿನದಿಂದ ದಕ್ಷಿಣ ಭಾರತದಲ್ಲಿರುವ ಹಿಂದೀ ಬೋರ್ಡುಗಳನ್ನು ಅಳಿಸುವ ಚಳುವಳಿಯನ್ನು ಪುನಃ ಪ್ರಾರಂಭಿಸಲಿರುವರು.

ರೈಲ್ವೆ ನಿಲ್ದಾಣ ಮತ್ತು ಇತರ ಸಾರ್ವಜನಿಕ ಪ್ರದೇಶಗಳಲ್ಲಿರುವ ಹಿಂದಿ ಭಾಷೆಯಲ್ಲಿರುವ ಬೋರ್ಡುಗಳನ್ನೂ ಇವರು ಟಾರುಗಳಿಂದ ಅಳಿಸುವ ಕ್ರಮವನ್ನು ಇಟ್ಟುಕೊಂಡಿದ್ದಾರೆ. ಈ ಹಿಂದೀ ಬೋರ್ಡುಗಳು ದಕ್ಷಿಣ ಭಾರತದವರ ಮೇಲೆ ಉತ್ತರ ಭಾರತ ದಬ್ಬಾಳಿಕೆಯ ಸಂಕೇತವೆಂದು ಹೇಳುತ್ತಿದ್ದಾರೆ.

ದ್ರಾವಿಡರ ಈ ಚಳುವಳಿಗೆ ವಿರುದ್ಧವಾಗಿ ಕಾಂಗ್ರೆಸ್ಸಿಗರು ಸೀಮೆಯೆಣ್ಣೆ ಡಬ್ಬಗಳ ಸಮೇತ ಅವರೊಡನೆ ಹೊರಟು ಟಾರಿನಿಂದ ಅಳಿಸಿದ ಬೋರ್ಡುಗಳನ್ನು ಸೀಮೆಎಣ್ಣೆಯಿಂದ ಒರಸಿ ಎಂತಿನಂತೆ ಬೋರ್ಡುಗಳಿರುವಂತೆ ಮಾಡಲು ತೀರ್ಮಾನಿಸಿದ್ದಾರೆ.

ಕಲ್ಕತ್ತಾದಲ್ಲಿ ಟ್ರಾಂ ಮುಷ್ಕರ ನಿಂತಿತು

ಕಳೆದ ೧೫ ದಿನಗಳಿಂದ ಕಲ್ಕತ್ತಾದಲ್ಲಿ ಟ್ರಾಂ ಕೆಲಸಗಾರರು ನಡೆಸುತ್ತಲಿದ್ದ ಮುಷ್ಕರವನ್ನು ನಿಲ್ಲಿಸಿ ಕೆಲಸಕ್ಕೆ ಬರಲು ಪ್ರಾರಂಭಿಸಿದ್ದಾರೆ. ನಗರದ ನಾನಾ ಭಾಗಗಳಲ್ಲಿ ಟ್ರಾಂಗಳ ಸಂಚಾರವು ಪ್ರಾರಂಭವಾಗಿದೆ.

ಕಾಲಟಿಯಲ್ಲಿ ಕಾಲೇಜು ಸ್ಥಾಪನೆ

ಶ್ರೀ ಶಂಕರಾಚಾರ್ಯರವರ ಜನ್ಮಸ್ಥಳವಾದ ಕಾಲಟಿಯಲ್ಲಿ ಒಂದನೇ ದರ್ಜೆಯ ಕಾಲೇಜೊಂದನ್ನು ಸ್ಥಾಪಿಸಲು ತಿರುವಾಂಕೂರ್ ಕೊಚ್ಚಿನ್‌ಸರ್ಕಾರವು, ಅಲ್ಲಿಯ ಅದ್ವೈತ ಆಶ್ರಮದ ಸ್ವಾಮಿ ಆಗಮಾನಂದರವರಿಗೆ ಅನುಮತಿಯನ್ನಿತ್ತಿದೆ.

೨ ಮಣ ಅಕ್ಕಿ ಕದ್ದಿದ್ದಕ್ಕೆ ೯ ತಿಂಗಳು ಕಠಿಣ ಸಜಾ

ರತ್ನಗಿರಿಯಲ್ಲಿ ಮಧುಕರ್ ಸುಧಾಗ್ ಪರಾರ್ ಎಂಬ ಕಂಟ್ರಾಕ್ಟರು ತಿವಾರಿ ಬಂದರಿನಲ್ಲಿ ಅಕ್ಕಿಯನ್ನು ಇಳಿಸಿ ಸರ್ಕಾರಿ ಡಿಪೋವಿಗೆ ಸಾಗಿಸುತ್ತಿದ್ದಾಗ ಅದರಲ್ಲಿ ೨ ಮಣ ಅಕ್ಕಿ ಮತ್ತು ೪ ಮಣ ಮೈದಾವನ್ನು ತನ್ನ ಮನೆಗೆ ಕಳುಹಿಸಿದ್ದಕ್ಕೆ ರತ್ನಗಿರಿ ಮ್ಯಾಜಿಸ್ಟ್ರೇಟರು ಆತನಿಗೆ ೯ ತಿಂಗಳು ಕಠಿಣಸಜಾ ೫೦೦ ರೂ. ಜುಲ್ಮಾನೆಯನ್ನು ವಿಧಿಸಿದ್ದಾರೆ ಆತನ ಸೇವಕನಿಗೆ ೩ ತಿಂಗಳ ಸಾದಾಸಜಾ ವಿಧಿಸಲಾಗಿದೆ.

ಕರ್ನಾಟಕ ಪ್ರಾಂತ್ಯ ಚಳುವಳಿಯಲ್ಲಿ ಭಾಗವಹಿಸಕೂಡದು

ಕರ್ನಾಟಕ ಪ್ರಾಂತ್ಯ ರಚನೆಗಾಗಿ ಇದೇ ೯ನೇ ತಾರೀಖಿನಿಂದ ನಡೆಯಲಿರುವ ಚಳುವಳಿಯಲ್ಲಿ ಕಾಂಗ್ರೆಸ್ ಸದಸ್ಯರಾರೂ ಭಾಗವಹಿಸಕೂಡದೆಂದು ಹೈದರಾಬಾದ್ ಪ್ರದೇಶ ಕಾಂಗ್ರೆಸ್ ಸಮಿತಿಯು ತನ್ನ ಸದಸ್ಯರುಗಳಿಗೆ ಆದೇಶವಿತ್ತಿದೆ.

ಭಾಷಾವಾರು ಪ್ರಾಂತ್ಯ ರಚನೆ ಬಗ್ಗೆ ಉನ್ನತಮಟ್ಟದ ಸಮಿತಿಯನ್ನು ನೇಮಿಸಲಿರುವುದರಿಂದ ಈ ಸತ್ಯಾಗ್ರಹ ಚಳುವಳಿಗಳು ಅನಾವಶ್ಯಕವೆಂದು ಅಲ್ಲಿಯ ಕಾಂಗ್ರೆಸ್‌ಅಧ್ಯಕ್ಷ ಸ್ವಾಮಿ ರಮಾನಂದತೀರ್ಥರವರು ಹೇಳಿದ್ದಾರೆ.

ಬೆರಿಯಾರ ಪುಸ್ತಕಗಳಿಗೆ ಬಹಿಷ್ಕಾರ

ರಷ್ಯಾ ಉಪಪ್ರಧಾನಿಯಾಗಿ ವಜಾ ಆದ ಬೆರಿಯಾರವರ ಪುಸ್ತಕಗಳನ್ನು ಭಾರತದಲ್ಲಿ ಮಾರಕೂಡದೆಂದು ಕಮ್ಯೂನಿಸ್ಟ ಪಕ್ಷವು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಮದರಾಸಿನಲ್ಲಿ ಟ್ರಾಂ ವ್ಯವಸ್ಥೆ

ಮದ್ರಾಸ್‌ನಲ್ಲಿ ಟ್ರಾಂವೇ ವ್ಯವಸ್ಥೆಯನ್ನು ಪುನಃ ಆರಂಭಿಸಲು ಕಾಂಗ್ರೆಸ್ ನಾಯಕತ್ವದ ಎಲೆಕ್ಟ್ರಿಕ್ ಟ್ರಾಂವೆ ಯೂನಿಯನ್ ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

○ ಅಮೆರಿಕದ ಸೆನೆಟ್‌ನಲ್ಲಿ ರಿಪಬ್ಲಿಕ್ ಪಕ್ಷದ ನಾಯಕ ಸೆನೆಟರ್ ಟಾಫ್ಟ್‌ರವರು ನಿನ್ನೆಯದಿನ ನಿಧನರಾದರು ಅವರಿಗೆ ೬೩ ವರ್ಷ ವಯಸ್ಸು.

ಆಂಧ್ರಪ್ರಾಂತ್ಯರಚನೆ ಮುಂದಕ್ಕೆ ಹಾಕಬೇಕು

ಆಂಧ್ರಪ್ರಾಂತ್ಯ ನಿರ್ಮಾಣ ಘೋಷಣೆ ಯಾದಮೇಲೆ ಕಹಿ ಪ್ರಸಂಗಗಳು ಹೆಚ್ಚುತ್ತಿವೆ. ಇದರಿಂದ ದೇಶದ ಪ್ರಗತಿಗೆ ಧಕ್ಕೆ ಬರುತ್ತದೆ ಪ್ರಧಾನಿ ನೆಹರೂರವರು ಮನಸ್ಸುಮಾಡಿ ಆಂಧ್ರಪ್ರಾಂತ್ಯರಚನೆಯನ್ನು ಮುಂದಕ್ಕೆ ಹಾಕುವುದು ಸೂಕ್ತವೆಂದು ಸರ್ವೆಂಟ್ಸ್ ಆಫ್ ಇಂಡಿಯಾ ಸಂಸ್ಥೆಯ ಶ್ರೀ ಪಿ. ಕೋದಂಡರಾಯರು ಒಂದು ಹೇಳಿಕೆಯಿತ್ತಿದ್ದಾರೆ.

ಕಾಶ್ಮೀರವು ಸ್ವತಂತ್ರವಾಗಿರಕೂಡದು

ಕಾಶ್ಮೀರ ಸಂಸ್ಥಾನವು ಸ್ವತಂತ್ರವಾಗಿರುಕೂಡದೆಂದು ಭಾರತ ಕಮ್ಯೂನಿಸ್ಟ ಪಕ್ಷವು ತೀರ್ಮಾನಿಸಿದೆ. ಭಾರತದಿಂದ ಇದು ಪ್ರತ್ಯೇಕವಾದರೆ ಕಾಶ್ಮೀರಿಗಳು ಮತ್ತಷ್ಟುಗಲಾಟೆಗರಿಗೆ ಸಿಕ್ಕಿ ನರಳುವರೆಂದು ತಿಳಿಸಿದೆ.

೬೦೦ ಕಾರ್ಮಿಕರ ಮುಷ್ಕರ

ಗಿರಣಿಯ ಮಾಲೀಕರಿಗೂ ಕಾರ್ಮಿಕ ಸಂಘಕ್ಕೂ ವಿವಾದದ ಪರಿಣಾಮವಾಗಿ ಬೊಂಬಾಯಿನಲ್ಲಿರುವ ೪೦೦೦ ಮಂದಿ ಕಾರ್ಮಿಕರಲ್ಲಿ ೬೦೦ ಮಂದಿ ಬಟ್ಟೆ ಗಿರಣಿ ಕಾರ್ಮಿಕರು ನಿನ್ನೆಯದಿನ ಮುಷ್ಕರ ಹೂಡಿದರು.

ಟ್ರಾಂವೆ ದರ ವಿಚಾರಣೆ

ಕಲ್ಕತ್ತಾದಲ್ಲಿ ಟ್ರಾಂವೆಗಳ ಎರಡನೇ ದರ್ಜೆಯ ದರವಿಂಕೆ ಪರಿಶೀಲಿಸುವುದಕ್ಕಾಗಿ ಕಲ್ಕತ್ತ ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಪಿ. ಬಿ. ಮುಖರ್ಜಿಯವರಿರುವ ಏಕಸದಸ್ಯ ಪಂಚಾಯಿತಿಯನ್ನು ಪಶ್ಚಿಮಬಂಗಾಳ ಸರ್ಕಾರ ನೇಮಿಸಿದೆ

ಡಾ॥ಮೋದಿ ಕುಣಿಗಲ್‌ನಲ್ಲಿ

ನೇತ್ರ ವೈದ್ಯರಾದ ಡಾ॥ ಮೋದಿಯವರು ಇಂದಿನಿಂದ ನೇತ್ರಚಿಕಿತ್ಸೆಯನ್ನು ಕುಣಿಗಲ್‌ನಲ್ಲಿ ಪ್ರಾರಂಭಿಸಿರುವರು.

ಸಿಮೆಂಟ್ ಹತೋಟಿ ರದ್ದು

ಹೈದರಾಬಾದ್ ಪ್ರಾಂತ್ಯದಲ್ಲಿ ಈದಿನದಿಂದ ಸಿಮೆಂಟಿನ ಹತೋಟಿಯನ್ನು ವಜಾ ಮಾಡಲಾಗಿದೆ.

ವಿಚಿತ್ರ ಜನನ

ತಿಪಟೂರಿನ ಬಳಿ ಇರುವ ಪುರಲೇಹಳ್ಳಿ ಎಂಬಲ್ಲಿ ರಂಗಮ್ಮನೆಂಬುವಳು, ಕಳೆದ ೨೫ ನೇ ತಾ॥ ಒಂದು ಸ್ತ್ರೀ ಶಿಶುವನ್ನು ೨೭ನೇ ತಾರೀಖು ಒಂದು ಗಂಡು ಮಗುವನ್ನೂ ಪ್ರಸವಿಸಿದ್ದಾಳೆಂದು ತಿಳಿಯಬರುತ್ತದೆ.

ಮದ್ರಾಸ್ ಮಂತ್ರಿಮಂಡಲದ ರಾಜೀನಾಮೆಗೆ ಒತ್ತಾಯ

ವಿಷಯ ಪರಿಶೀಲಿಸುವುದಾಗಿ ರಾಜಾಜಿ

ಮದ್ರಾಸ್ ಶಾಸನ ಸಭೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಸುಧಾರಣೆಯ ವಿಷಯವು ಬಹುಮತದಿಂದ ನಿರಾಕರಣೆಯಾಗಿ ಸರಕಾರಕ್ಕೆ ಸೋಲು ಉಂಟಾದುದರಿಂದ ರಾಜಾಜಿ ಮಂತ್ರಿಮಂಡಲವು ರಾಜೀನಾಮೆ ಕೊಡಬೇಕೆಂದು ವಿರೋಧಪಕ್ಷದ ಶ್ರೀ ತನ್ನೇಟಿ ವಿಶ್ವನಾಥಂರವರು ಒಂದು ಪ್ರಶ್ನೆಯನ್ನು ನಿನ್ನೆ ಎತ್ತಿದರು.

ಈ ವಿಷಯದಲ್ಲಿ ರಾಜೀನಾಮೆಯನ್ನು ಕೊಡುವ ವಿಷಯವು ಮಂತ್ರಿಮಂಡಲಕ್ಕೆ ಸೇರಿದೆ. ತಾವು ಈಬಗ್ಗೆ ಏನೂ ಹೇಳಲು ಸಾಧ್ಯವಿಲ್ಲ ಹಾಗೆ ಬೇಕಾದರೆ ವಿರೋಧ ಪಕ್ಷದವರು ಅವಿಶ್ವಾಸ ನಿರ್ಣಯವನ್ನು ತರಬಹುದು ಎಂದು ಸಭಾಧ್ಯಕ್ಷರು ತಿಳಿಸಿದರು.

ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮಾತನಾಡುತ್ತಾ ಈ ವಿಷಯವು ಸರ್ಕಾರಕ್ಕೆ ಬಿಡಬೇಕೇ ವಿನಹ ಶಾಸನಸಭೆಯಲ್ಲಿ ಚರ್ಚಿಸಲು ಅವಕಾಶವಿಲ್ಲವೆಂದು ಹೇಳಿದರು ಪುನಃ ಇದೇ ವಿಷಯದಲ್ಲಿ ಮಧ್ಯಾಹ್ನ ಸಭೆಯಲ್ಲಿ ವಿರೋಧ ಪಕ್ಷದ ಶ್ರೀಗಳಾದ ನಾಗರೆಡ್ಡಿ ಮತ್ತು ಕಲ್ಯಾಣಸುಂದರಂರವರು ಆಕ್ಷೇಪಣೆಯನ್ನೆತ್ತಿದರು.

ರಾಜೀನಾಮೆ ಕೊಡುವ ವಿಷಯವನ್ನು ತಮ್ಮ ಮಂತ್ರಿಮಂಡಲ ಪರಿಶೀಲಿಸುವುದಾಗಿ ಮುಖ್ಯಮಂತ್ರಿಗಳು ಉತ್ತರವಿತ್ತರು.

ಸಭೆ ಮುಗಿಯುವ ವೇಳೆಯಲ್ಲಿ ಸಭಾಧ್ಯಕ್ಷರು ಪುನಃ ಮಾತನಾಡುತ್ತಾ ಈಸಾಲಿನ ಅಧಿವೇಶನವು ಈಗ ಮುಕ್ತಾಯವಾಗುತ್ತದೆ. ಮುಕ್ತಾಯವಾಗುವ ವೇಳೆಯಲ್ಲಿ ಸದಸ್ಯರೊಬ್ಬರಿಂದ ಒಂದು ನಿಲುವಳಿ ಸೂಚನೆ ಬಂದಿದೆ. ಅದನ್ನು ತಾವು ಪರಿಶೀಲಿಸಿ ತೀರ್ಮಾನವೀಯುವುದಾಗಿಯೂ, ಅವಶ್ಯಕವಿದ್ದರೆ ಆ ವಿಷಯವನ್ನು ಚರ್ಚಿಸುವುದಕ್ಕೆ ಪುನಃ ಅಧಿವೇಶನವನ್ನು ಕರೆಯಲು ಸಭಾ ನಾಯಕರಿಗೆ ಸೂಚನೆ ಕೊಡುವುದಾಗಿ ಹೇಳಿದರು. ಈ ನಿಲುವಳಿ ಸೂಚನೆ ಯಾವುದೆಂಬುದನ್ನು ಅವರು ಹೇಳಲಿಲ್ಲ. ಆದರೆ ಇದು ರಾಜಾಜಿ ಮಂತ್ರಿಮಂಡಲ ರಾಜೀನಾಮೆ ಪ್ರಶ್ನೆಯಿರಬಹುದೆಂದು ಹೇಳಲಾಗಿದೆ.

ಕರ್ಣಾಟಕ ಪ್ರಾಂತ್ಯರಚನೆ ಬಗ್ಗೆ ಪ್ರಧಾನಿಬಳಿ ನಿಯೋಗ

ಕರ್ಣಾಟಕ ಪ್ರಾಂತ್ಯರಚನೆ ಬಗ್ಗೆ ಶ್ರೀ ಕೆ.ಆರ್. ಕಾರಂತರವರ ನಾಯಕತ್ವದಲ್ಲಿ ನಿಯೋಗವೊಂದು ಸದ್ಯದಲ್ಲೇ ಪ್ರಧಾನಿ ನೆಹರೂ, ಗೃಹಸಚಿವ ಡಾ॥ ಕಟ್ಜುರವರನ್ನು ಭೇಟಿ ಮಾಡಲಿದೆಯೆಂದು ತಿಳಿಯಬರುತ್ತದೆ.

ದೇಶದ ಆರ್ಥಿಕಸ್ಥಿತಿ ಉತ್ತಮಗೊಳ್ಳುತ್ತಿದೆಯೆಂದು ವಾಣಿಜ್ಯ ಸಚಿವರು

ಸ್ವಾತಂತ್ರ್ಯ ಬಂದಾಗಿನಿಂದ ದೇಶದಲ್ಲಿ ಆರ್ಥಿಕ ಪರಿಸ್ಥಿತಿಯು ಉತ್ತಮಗೊಳ್ಳುತ್ತಿದೆ. ದೇಶವು ಅಭಿವೃದ್ಧಿ ಮಾರ್ಗದಲ್ಲಿ ಈಗ ಸಾಗುತ್ತಿದೆ. ಕೈಗಾರಿಕೋತ್ಪನ್ನಗಳು ಹೆಚ್ಚುತ್ತಿವೆ. ಸೆಣಬು, ಹತ್ತಿಯ ಕೊರತೆ ಪೂರ್ಣವಾಗಿ ತಪ್ಪಿದೆ. ಆಹಾರ ಪರಿಸ್ಥಿತಿ ಉತ್ತಮಗೊಂಡಿದೆಯೆಂದು ವಾಣಿಜ್ಯಸಚಿವ ಶ್ರೀ ಕರಮರ್‌ಕರ್‌ರವರು ಜಯಪುರ್‌ನಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ದ್ರಾವಿಡ ಫೆಡರೇಷನ್ ನೀತಿ ಖಂಡನೆ

ದ್ರಾವಿಡ ಫೆಡರೇಷನ್‌ನವರು ಪ್ರತಿಯೊಂದು ಪ್ರಶ್ನೆಯನ್ನೂ ಬ್ರಾಹ್ಮಣ-ಬ್ರಾಹ್ಮಣೇತರು, ಉತ್ತರ ಭಾರತ ದಕ್ಷಿಣಭಾರತ ಎಂಬ ಪ್ರತ್ಯೇಕ ಮನೋಭಾವದಿಂದ ಪರಿಗಣಿಸುತ್ತಲಿರುವುದು ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವೆಂದು ತಮಿಳುನಾಡು ಕಮ್ಯೂನಿಸ್ಟ ಪಕ್ಷವು ದ್ರಾವಿಡ ಫೆಡರೇಷನ್ನಿನ ನೀತಿಯನ್ನು ಖಂಡಿಸಿದೆ.

ರಬ್ಬರ್ ಪದಾರ್ಥಗಳ ರಫ್ತು

ರಬ್ಬರ್‌ನಿಂದ ತಯಾರಾದ ವಸ್ತುಗಳನ್ನು ಓಪನ್ ಜನರಲ್ ಲೈಸೆನ್ಸ್‌ನಲ್ಲಿ ರಫ್ತು ಮಾಡಲು ಭಾರತ ಸರ್ಕಾರವು ಅನುಮತಿಯಿತ್ತಿದೆ. ಟ್ಯೂಬು ಮತ್ತು ಟೈರುಗಳಿಗೆ ಇದು ಅನ್ವಯಿಸುವುದಿಲ್ಲ.

ಡಾ॥ ರಾಧಾಕೃಷ್ಣನ್ ದೆಹಲಿಯಲ್ಲಿ

ಭಾರತ ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರು ತಮ್ಮ ೨ ತಿಂಗಳ ವಿದೇಶೀ ಪ್ರವಾಸವನ್ನು ಪೂರೈಸಿಕೊಂಡು ನಿನ್ನೆಯ ದಿನ ದೆಹಲಿಗೆ ಹಿಂತಿರುಗಿದರು.

ವನಪ್ರದೇಶ ರಕ್ಷಣೆಗೆ ಬ್ರಿಟಿಷ್ ತಜ್ಞರು

ಭಾರತದಲ್ಲಿರುವ ವನಪ್ರದೇಶಗಳ ರಕ್ಷಣೆ ಮತ್ತು ಉತ್ಪತ್ತಿ ಬಗ್ಗೆ ಸಲಹೆ ನೀಡಲು ಬ್ರಿಟನ್ನಿನ ತಜ್ಞರಾದ ಡಾ॥ ಮಕ್ಲಾಗನ್‌ರು ಭಾರತಕ್ಕೆ ಬರಲಿರುವರು. ಹಿಂದೆ ಇವರು ಪಂಜಾಬಿನಲ್ಲಿ ಅರಣ್ಯ ಮುಖ್ಯಾಧಿಕಾರಿಗಳಾಗಿದ್ದರು.

ಇಂದ್ರಧನುಸ್

ಈ ರಾತ್ರಿ ೯-೩೦ ಗಂಟೆಗೆ ಮೈಸೂರು ಆಕಾಶವಾಣಿಯಲ್ಲಿ "ಇಂದ್ರಧನುಸ್" ಎಂಬ ಹಿಂದಿಯ ವಿವಿಧ ಕಾರ್ಯಕ್ರಮ ನಡೆಯುತ್ತದೆ.

ಮಂತ್ರಿಮಂಡಲಕ್ಕೆ ಮತ್ತಿಬ್ಬರು ಸಚಿವರೇ?

ಅಕ್ಟೋಬರ್ ನಂತರ ಪುನರ್ರಚನೆ

ಬೆಂಗಳೂರು ೩೧

ಬಳ್ಳಾರಿ ಜಿಲ್ಲೆಯು ಮೈಸೂರುಪ್ರಾಂತ್ಯಕ್ಕೆ ಸೇರಿದನಂತರ ಮಂತ್ರಿಮಂಡಲದ ಪುನರ್ರಚನೆಯಾಗಬಹುದು. ಅಲ್ಲಿನ ಜನಸಂಖ್ಯೆಯ ಆಧಾರದಮೇಲೆ ಒಬ್ಬರು ಅಥವಾ ಇಬ್ಬರು ಮಂತ್ರಿಗಳನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳಲಾಗುತ್ತದೆ-ಎಂದು ವಿದ್ಯಾಸಚಿವ ಶ್ರೀ ಎ. ಜಿ ರಾಮಚಂದ್ರರಾಯರು ಹೈದರಾಬಾದಿನಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ಮೈಸೂರಿನ ಸಾಲಕ್ಕೆ ಹೈದರಾಬಾದಿನಲ್ಲಿ ಹಣವನ್ನು ಶೇಖರಿಸಲು ಶ್ರೀಯುತರು ಅಲ್ಲಿಗೆ ಹೋದಾಗ ಈ ವಿಷಯವನ್ನು ವ್ಯಕ್ತಪಡಿಸಿದರೆಂದು ಹೇಳಲಾಗಿದೆ.

ಸಂಜೀವರೆಡ್ಡಿಯವರಿಗೆ ಕರೆ

ಆಂಧ್ರಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎನ್. ಸಂಜೀವರೆಡ್ಡಿಯವರು ನಿನ್ನೆಯದಿನ ಪ್ರಧಾನಿ ನೆಹರೂರವರ ಕರೆಯಮೇರೆ ದೆಹಲಿಗೆ ಪ್ರಯಾಣಮಾಡಿದರು.

ಆಗಸ್ಟು ೩ನೇ ತಾರೀಖು ಮದರಾಸಿಗೆ ಹಿಂತಿರುಗುವರು.

ಶ್ರೀಗಳಾದ ಟಿ. ಪ್ರಕಾಶಂ ಮತ್ತು ಟಿ. ವಿಶ್ವನಾಥಂರವರು ಸಹ ಆಂಧ್ರಪ್ರಾಂತ್ಯ ಮಸೂದೆ ವಿಷಯದಲ್ಲಿ ಮಾತನಾಡಲು ನಾಳೆಯದಿನ ದೆಹಲಿಗೆ ತೆರಳುವರು. ಅವರು ಅಲ್ಲಿ ಪ್ರಧಾನಿ ನೆಹರೂ, ಗೃಹಸಚಿವ ಡಾ॥ ಕಟ್ಜು ಮತ್ತು ಶ್ರೀಗಳಾದ ಆಚಾರ್ಯ ಕೃಪಲಾನಿ, ಜಯಪ್ರಕಾಶ್ ನಾರಾಯಣರನ್ನು ಭೇಟಿಮಾಡುವರೆಂದು ತಿಳಿಯಬರುತ್ತದೆ.

ನಾಜಿಮುದ್ದೀನ್ ಅಸಹಕಾರ

ಪ್ರಧಾನಿ ನೆಹರೂರವರ ಗೌರವಾರ್ಥವಾಗಿ ಕರಾಚಿಯಲ್ಲಿ ಪಾಕೀಸ್ತಾನಗೌರ್ನರ್ ಜನರಲ್‌ರು ಏರ್ಪಡಿಸಿದ್ದ ಸತ್ಕಾರಕೂಟಕ್ಕೆ ಬರಲು ಆಹ್ವಾನವನ್ನು ಮಾಜಿ ಪಾಕ್ ಪ್ರಧಾನಿ ನಾಜಿಮುದ್ದೀನ್‌ರು ನಿರಾಕರಿಸಿದರೆಂದೂ, ಹಾಲಿ ಪ್ರಧಾನಿ ಮಹಮ್ಮದ್ ಅಲಿಯವರು ಏರ್ಪಡಿಸಿದ್ದ ಸತ್ಕಾರಕೂಟಕ್ಕೆ ಅವರನ್ನು ಆಹ್ವಾನಿಸಲೇ ಇಲ್ಲವೆಂದು ತಿಳಿಯಬರುತ್ತದೆ.

ವಿದ್ಯಾರ್ಥಿಗಳಿಗೆ ಸೈನ್ಯ ಶಿಕ್ಷಣ

ವಿದ್ಯಾರ್ಥಿಗಳಿಗೆ ಕಡ್ಡಾಯವಾಗಿ ಸೈನ್ಯ ಶಿಕ್ಷಣ ಕೊಡಬೇಕೆಂಬ ಖಾಸಗಿ ನಿರ್ಣಯವು ಆಗಸ್ಟ್ ೩ ನೇ ತಾರೀಖಿನಿಂದ ಸೇರಲಿರುವ ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬರುವ ಪ್ರಥಮ ಖಾಸಗಿ ನಿರ್ಣಯವಾಗಿದೆ. ಕಾಂಗ್ರೆಸ್ಸಿನ ಡಾ॥ ರಾವ್ ಸುಭಾಸ್‌ಸಿಂಗ್‌ರವರು ನಿರ್ಣಯವನ್ನು ಕಳುಹಿಸಿದ್ದಾರೆ.

ಶಾಸನಸಭಾಧಿವೇಶನ ಮುಕ್ತಾಯ

ಮದ್ರಾಸಿನ ಕಿರಿಯ ಶಾಸನಸಭಾಧಿವೇಶನವು ನಿನ್ನೆಯದಿನ ಮುಕ್ತಾಯವಾಯಿತು ಮುಂದಿನ ಅಧಿವೇಶನದಲ್ಲಿ ಮದ್ರಾಸ್ ಮತ್ತು ಆಂಧ್ರಪ್ರಾಂತ್ಯ ಪ್ರತ್ಯೇಕವಾಗಿ ಬೇರೆಬೇರೆ ಶಾಸನಸಭೆಗಳಾಗುವುದರಿಂದ ಈಗಿನ ಸ್ಥಿತಿಯಲ್ಲಿ ಇದು ಕೊನೆಯ ಅಧಿವೇಶನವಾದ್ದರಿಂದ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿ, ಶ್ರೀ ಟಿ. ಪ್ರಕಾಶಂ ಮುಂತಾದವರು ಹೊಸರಾಜ್ಯಕ್ಕೆ ಶುಭಾಶಯಗಳನ್ನು ಕೋರಿ ಮಾತನಾಡುತ್ತಾ ಹೊಸ ಪ್ರಾಂತ್ಯಗಳು ಸ್ನೇಹದಿಂದ ತಮ್ಮ ಕಾರ್ಯಗಳನ್ನು ನಡೆಸಲೆಂದು ಹಾರೈಸಿದರು.

ತಮಿಳುನಾಡು ಪ್ರವಾಸ

ಭೂದಾನ ಯಜ್ಞ ಚಳುವಳಿಯ ಅಂಗವಾಗಿ ಶ್ರೀ ಜಯಪ್ರಕಾಶ ನಾರಾಯಣರವರು ಆಗಸ್ಟು ೧೫ ರಿಂದ ೨ ವಾರ ಕಾಲ ತಮಿಳುನಾಡಿನಲ್ಲಿ ಪ್ರವಾಸ ಮಾಡಲಿರುವರು.

ಅಪೇರ

31—7—53 ರಿಂದ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಇನ್‌ಸ್ಪೆಕ್ಟರ್ ತಮಿಳು

ಪಾತ್ರ:-ಬಾಲಚಂದರ್, ಟಿ. ಕೆ. ಷಣ್ಮುಗಂ, ಟಿ. ಕೆ. ಸರಸ್ವತಿ, ಅಂಜಲಿದೇವಿ

ರಣಜಿತ್

31—7—53 ರಿಂದ 8 ನೇ ವಾರ

[50 ನೇ ದಿನ]

"ಫಿಲ್ಮಿಸ್ತಾನ್"ರವರ ಈ ವರ್ಷದ ಅಮೋಘ ಸಂಗೀತಮಯ ಹಿಂದೀ ಕಲಾಕೃತಿ.

ಅನಾರ್‌ಕಲಿ

ಪಾತ್ರ: ಬಿನಾರಾಯ್, ಪ್ರದೀಪ್ ಕುಮಾರ್, ಕುಲ್‌ದೀಪ್, ಮುಬಾರಕ್

ಸಂಗೀತ ಸಿ. ರಾಮಚಂದ್ರ.

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು:— ಹಿ. ಕಾ. ಸುಬ್ಬರಾವ್

ಮೋಹನ ಮುದ್ರಣಾಲಯ ಮೈಸೂರು.

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೩೪

ಸಮಾಚಾರ

ದಿನಪತ್ರಿಕೆ ಸಂಪುಟ ೩ ಸಂಚಿಕೆ ೨೮೩

೧-೮-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾವೇರಿ, ಕಪಿನಿಗಳಲ್ಲಿ ಪ್ರವಾಹ

ಪ್ರವಾಹದಿಂದ ತೊಂದರೆಯಾಗದಂತೆ ಮುಂಜಾಗ್ರತೆ ಕ್ರಮ

ಮೈಸೂರು ಆಗಸ್ಟ್ ೧

ಕಳೆದ ೨—೩ ದಿನಗಳಿಂದ ಕೊಡಗು ಮತ್ತು ಇತರ ಪ್ರದೇಶಗಳಲ್ಲಿ ಭಾರಿ ಮಳೆಯಾಗುತ್ತಲಿರುವುದರಿಂದ ಕಾವೇರಿ, ಹೇಮಾವತಿ, ಲಕ್ಷ್ಮಣತೀರ್ಥ ಮತ್ತು ಕಪಿನಿ ಮುಂತಾದ ನದಿಗಳಲ್ಲಿ ಪ್ರವಾಹ ಬರಲು ಪ್ರಾರಂಭವಾಗಿದೆ. ಆದರೆ ಕಳೆದ ತಿಂಗಳಲ್ಲಿ ಬಂದಷ್ಟು ಅಧಿಕ ಪ್ರಮಾಣದಲ್ಲಿ ಬರುತ್ತಿಲ್ಲ. ಆದಾಗ್ಯೂ ನಂಜನಗೂಡು, ಟಿ. ನರಸೀಪುರ ಮುಂತಾದ ಕಡೆ ತಗ್ಗು ಪ್ರದೇಶದಲ್ಲಿ ನೀರು ನುಗ್ಗಬಹುದೆಂಬ ಶಂಕೆಯಿಂದ ಈಗಾಗಲೇ ಎಲ್ಲೆಡೆಯಲ್ಲಿಯೂ ಜಿಲ್ಲಾಧಿಕಾರಿಗಳು ಸೂಕ್ತಎಚ್ಚರಿಕೆಯನ್ನು ಕೊಟ್ಟಿದ್ದಾರೆ.

ಕಳೆದ ಪ್ರವಾಹದಲ್ಲಿ ತೊಂದರೆಗೀಡಾದ ಜನರು ಪುನಃ ತಮ್ಮತಮ್ಮ ಹಳೇ ಸ್ಥಾನಗಳಿಗೆ ಬರಲು ಇನ್ನೂ ಅವಕಾಶವನ್ನು ಕೊಟ್ಟಿಲ್ಲ. ಈಗಾಗಲೇ ಅವರು ಪ್ರತ್ಯೇಕ ಸ್ಥಾನಗಳನ್ನು ಕಟ್ಟಿಕೊಳ್ಳಲು ಜಿಲ್ಲಾಧಿಕಾರಿಗಳು ೫೦೦೦ ರೂಪಾಯಿಗಳನ್ನು ಉಚಿತವಾಗಿ ಹಂಚಿದ್ದಾರೆ. ಇನ್ನೂ ೫೦೦೦ ರೂಪಾಯಿಗಳನ್ನು ಹಂಚುವ ವ್ಯವಸ್ಥೆಯಿದೆ.

ತೊಂದರೆಗೀಡಾಗಿರುವ ಮಕ್ಕಳ ಪರಿಹಾರಕ್ಕಾಗಿ ತಲಕಾಡಿನಲ್ಲಿ ಕಳೆದವಾರದಿಂದಲೂ ಉಚಿತ ಹಾಲಿನ ಕೇಂದ್ರ ಸಹಾಯನೀಡುತ್ತದೆ.

ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಈ ಪರಿಹಾರ ಕಾರ್ಯಗಳಲ್ಲಿ ಅತ್ಯಂತ ಮುತವರ್ಜಿಯನ್ನು ವಹಿಸಿ ನೊಂದವರಿಗೆಲ್ಲಾ ಸಾಧ್ಯವಾದಷ್ಟು ಸಹಾಯ ನೀಡುವಂತೆ ತಮ್ಮ ಅಧಿಕಾರಿಗಳಿಗೆ ಆಜ್ಞೆ ಇತ್ತಿದ್ದಾರೆ.

ಅವರು ನಾಳೆಯದಿನ ಟಿ. ನರಸೀಪುರ, ನಂಜನಗೂಡು ಮುಂತಾದ ಸ್ಥಳಗಳಿಗೆ ಪುನಃ ಭೇಟಿಯಿತ್ತು ಎಲ್ಲವನ್ನೂ ಪರಿಶೀಲಿಸಲಿರುವರೆಂದು ತಿಳಿಯಬರುತ್ತದೆ.

ಈ ದಿನ ಬೆಳಗ್ಗೆ ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ೧೨೩.೯೫ ಅಡಿಗಳಷ್ಟಿದ್ದಿತು. ೬೯೦೦೦ ಕ್ಯೂಸೆಕ್ಸ್‌ಗಳಷ್ಟು ನೀರು ಬರುತ್ತಾ ಸುಮಾರು ೭೨೦೦೦ ಕ್ಯೂಸೆಕ್ಸ್‌ಗಳಷ್ಟು ನೀರನ್ನು ಬಿಡಲಾಗುತ್ತಿದೆ. ಕಪಿನಿಯಲ್ಲಿ ೨೩೩೮೬ ಕ್ಯೂಸೆಕ್ಸ್‌ಗಳಷ್ಟು ನೀರು ಮಾತ್ರ ಬರುತ್ತಿದೆ.

ಇನ್ನು ಒಂದೆರಡು ದಿನಗಳಲ್ಲಿ ಸ್ವಲ್ಪ ಪ್ರವಾಹಬರುವ ಸೂಚನೆಯಿದೆ ಆದರೆ ಹಿಂದಿನಹಾಗೆ ಪ್ರವಾಹದ ಹಾವಳಿಯೇನೂ ಇರುವುದಿಲ್ಲವೆಂದು ಊಹಿಸಲಾಗಿದೆ.

ಸಿಹಿತಿಂಡಿ ಹಂಚಿಕೆ

ಮೈಸೂರು ೧

ಶ್ರೀಮನ್ಮಹಾರಾಜರವರ ವರ್ಧಂತಿ ಪ್ರಯುಕ್ತ ನಗರದ ಎಲ್ಲಾ ವಿದ್ಯಾಶಾಲೆಗಳಲ್ಲಿ ಈದಿನ ಸಿಹಿ ತಿಂಡಿಯನ್ನು ಹಂಚಲಾಯಿತು. ಇದಕ್ಕಾಗಿ ಶ್ರೀಮನ್ಮಹಾರಾಜರು ಒಂದೂವರೆ ಸಾವಿರ ರೂಪಾಯಿಗಳನ್ನು ವಿದ್ಯಾ ಇಲಾಖೆಗೆ ಕೊಟ್ಟಿದ್ದರೆಂದು ತಿಳಿಯಬರುತ್ತದೆ.

ಉಪನ್ಯಾಸ

ಕರ್ಣಾಟಕಸಂಘದ ಆಶ್ರಯದಲ್ಲಿ ಇದೇ ೩ ನೇ ತಾ॥ ಸೋಮವಾರ ಸಂಜೆ ೬ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಕರ್ಣಾಟಕ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ವಿ. ಕೃ. ಗೋಕಾಕ್ ಅವರು ಉಪನ್ಯಾಸ ಮಾಡುತ್ತಾರೆ. ಮಹಾರಾಜಾ ಕಾಲೇಜ್ ಪ್ರೊ॥ ಎಸ್. ವಿ. ರಂಗಣ್ಣನವರು ಅಧ್ಯಕ್ಷತೆ ವಹಿಸುತ್ತಾರೆ.

ಮುಯ್ಯಿಗೆ ಮುಯ್ಯಿ

ದ್ರಾವಿಡ ಕಳಗಂನವರು ಈದಿನದಿಂದ ದಕ್ಷಿಣ ಭಾರತದಲ್ಲಿರುವ ಹಿಂದೀ ಬೋರ್ಡುಗಳನ್ನು ಅಳಿಸುವ ಚಳುವಳಿಯನ್ನು ಪುನಃ ಪ್ರಾರಂಭಿಸಲಿರುವರು.

ರೈಲ್ವೆ ನಿಲ್ದಾಣ ಮತ್ತು ಇತರ ಸಾರ್ವಜನಿಕ ಪ್ರದೇಶಗಳಲ್ಲಿರುವ ಹಿಂದಿ ಭಾಷೆಯಲ್ಲಿರುವ ಬೋರ್ಡುಗಳನ್ನೂ ಇವರು ಟಾರುಗಳಿಂದ ಅಳಿಸುವ ಕ್ರಮವನ್ನು ಇಟ್ಟುಕೊಂಡಿದ್ದಾರೆ. ಈ ಹಿಂದೀ ಬೋರ್ಡುಗಳು ದಕ್ಷಿಣ ಭಾರತದವರ ಮೇಲೆ ಉತ್ತರ ಭಾರತ ದಬ್ಬಾಳಿಕೆಯ ಸಂಕೇತವೆಂದು ಹೇಳುತ್ತಿದ್ದಾರೆ.

ದ್ರಾವಿಡರ ಈ ಚಳುವಳಿಗೆ ವಿರುದ್ಧವಾಗಿ ಕಾಂಗ್ರೆಸ್ಸಿಗರು ಸೀಮೆಯೆಣ್ಣೆ ಡಬ್ಬಗಳ ಸಮೇತ ಅವರೊಡನೆ ಹೊರಟು ಟಾರಿನಿಂದ ಅಳಿಸಿದ ಬೋರ್ಡುಗಳನ್ನು ಸೀಮೆಎಣ್ಣೆಯಿಂದ ಒರಸಿ ಎಂತಿನಂತೆ ಬೋರ್ಡುಗಳಿರುವಂತೆ ಮಾಡಲು ತೀರ್ಮಾನಿಸಿದ್ದಾರೆ.

ಕಲ್ಕತ್ತಾದಲ್ಲಿ ಟ್ರಾಂ ಮುಷ್ಕರ ನಿಂತಿತು

ಕಳೆದ ೧೫ ದಿನಗಳಿಂದ ಕಲ್ಕತ್ತಾದಲ್ಲಿ ಟ್ರಾಂ ಕೆಲಸಗಾರರು ನಡೆಸುತ್ತಲಿದ್ದ ಮುಷ್ಕರವನ್ನು ನಿಲ್ಲಿಸಿ ಕೆಲಸಕ್ಕೆ ಬರಲು ಪ್ರಾರಂಭಿಸಿದ್ದಾರೆ. ನಗರದ ನಾನಾ ಭಾಗಗಳಲ್ಲಿ ಟ್ರಾಂಗಳ ಸಂಚಾರವು ಪ್ರಾರಂಭವಾಗಿದೆ.

ಕಾಲಟಿಯಲ್ಲಿ ಕಾಲೇಜು ಸ್ಥಾಪನೆ

ಶ್ರೀ ಶಂಕರಾಚಾರ್ಯರವರ ಜನ್ಮಸ್ಥಳವಾದ ಕಾಲಟಿಯಲ್ಲಿ ಒಂದನೇ ದರ್ಜೆಯ ಕಾಲೇಜೊಂದನ್ನು ಸ್ಥಾಪಿಸಲು ತಿರುವಾಂಕೂರ್ ಕೊಚ್ಚಿನ್‌ಸರ್ಕಾರವು, ಅಲ್ಲಿಯ ಅದ್ವೈತ ಆಶ್ರಮದ ಸ್ವಾಮಿ ಆಗಮಾನಂದರವರಿಗೆ ಅನುಮತಿಯಿತ್ತಿದೆ.

೨ ಮಣ ಅಕ್ಕಿ ಕದ್ದಿದ್ದಕ್ಕೆ ೯ ತಿಂಗಳು ಕಠಿಣ ಸಜಾ

ರತ್ನಗಿರಿಯಲ್ಲಿ ಮಧುಕರ್ ಸುಧಾಗ್ಪರಾಗ್ ಎಂಬ ಕಂಟ್ರಾಕ್ಟರು ತಿವಾರಿ ಬಂದರಿನಲ್ಲಿ ಅಕ್ಕಿಯನ್ನು ಇಳಿಸಿ ಸರ್ಕಾರಿ ಡಿಪೋವಿಗೆ ಸಾಗಿಸುತ್ತಿದ್ದಾಗ ಅದರಲ್ಲಿ ೨ ಮಣ ಅಕ್ಕಿ ಮತ್ತು ೪ ಮಣ ಮೈದಾವನ್ನು ತನ್ನ ಮನೆಗೆ ಕಳುಹಿಸಿದ್ದಕ್ಕೆ ರತ್ನಗಿರಿ ಮ್ಯಾಜಿಸ್ಟ್ರೇಟರು ಆತನಿಗೆ ೯ ತಿಂಗಳು ಕಠಿಣಸಜಾ ೫೦೦ ರೂ. ಜುಲ್ಮಾನೆಯನ್ನು ವಿಧಿಸಿದ್ದಾರೆ ಆತನ ಸೇವಕನಿಗೆ ೩ ತಿಂಗಳ ಸಾದಾಸಜಾ ವಿಧಿಸಲಾಗಿದೆ.

ಕರ್ಣಾಟಕ ಪ್ರಾಂತ್ಯ ಚಳುವಳಿಯಲ್ಲಿ ಭಾಗವಹಿಸಕೂಡದು

ಕರ್ಣಾಟಕ ಪ್ರಾಂತ್ಯ ರಚನೆಗಾಗಿ ಇದೇ ೯ನೇ ತಾರೀಖಿನಿಂದ ನಡೆಯಲಿರುವ ಚಳುವಳಿಯಲ್ಲಿ ಕಾಂಗ್ರೆಸ್ ಸದಸ್ಯರಾರೂ ಭಾಗವಹಿಸಕೂಡದೆಂದು ಹೈದರಾಬಾದ್ ಪ್ರದೇಶ ಕಾಂಗ್ರೆಸ್ ಸಮಿತಿಯು ತನ್ನ ಸದಸ್ಯರುಗಳಿಗೆ ಆದೇಶವಿತ್ತಿದೆ.

ಭಾಷಾವಾರು ಪ್ರಾಂತ್ಯ ರಚನೆ ಬಗ್ಗೆ ಉನ್ನತಮಟ್ಟದ ಸಮಿತಿಯನ್ನು ನೇಮಿಸಲಿರುವುದರಿಂದ ಈ ಸತ್ಯಾಗ್ರಹ ಚಳುವಳಿಗಳು ಅನಾವಶ್ಯಕವೆಂದು ಅಲ್ಲಿಯ ಕಾಂಗ್ರೆಸ್‌ಅಧ್ಯಕ್ಷ ಸ್ವಾಮಿ ರಮಾನಂದತೀರ್ಥರವರು ಹೇಳಿದ್ದಾರೆ.

ಬೆರಿಯಾರ ಪುಸ್ತಕಗಳಿಗೆ ಬಹಿಷ್ಕಾರ

ರಷ್ಯಾ ಉಪಪ್ರಧಾನಿಯಾಗಿ ವಜಾ ಆದ ಬೆರಿಯಾರವರ ಪುಸ್ತಕಗಳನ್ನು ಭಾರತದಲ್ಲಿ ಮಾರಕೂಡದೆಂದು ಕಮ್ಯೂನಿಸ್ಟ ಪಕ್ಷವು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಮದರಾಸಿನಲ್ಲಿ ಟ್ರಾಂ ವ್ಯವಸ್ಥೆ

ಮದ್ರಾಸ್‌ನಲ್ಲಿ ಟ್ರಾಂವೇ ವ್ಯವಸ್ಥೆಯನ್ನು ಪುನಃ ಆರಂಭಿಸಲು ಕಾಂಗ್ರೆಸ್ ನಾಯಕತ್ವದ ಎಲೆಕ್ಟ್ರಿಕ್ ಟ್ರಾಂವೆ ಯೂನಿಯನ್ ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

○ ಅಮೆರಿಕದ ಸೆನೆಟ್‌ನಲ್ಲಿ ರಿಪಬ್ಲಿಕ್ ಪಕ್ಷದ ನಾಯಕ ಸೆನೆಟರ್ ಟಾಫ್ಟ್‌ರವರು ನಿನ್ನೆಯದಿನ ನಿಧನರಾದರು ಅವರಿಗೆ ೬೩ ವರ್ಷ ವಯಸ್ಸು.

ಆಂಧ್ರಪ್ರಾಂತ್ಯರಚನೆ ಮುಂದಕ್ಕೆ ಹಾಕಬೇಕು

ಆಂಧ್ರಪ್ರಾಂತ್ಯ ನಿರ್ಮಾಣ ಘೋಷಣೆಯಾದಮೇಲೆ ಕಹಿ ಪ್ರಸಂಗಗಳು ಹೆಚ್ಚುತ್ತಿವೆ. ಇದರಿಂದ ದೇಶದ ಪ್ರಗತಿಗೆ ಧಕ್ಕೆ ಬರುತ್ತದೆ ಪ್ರಧಾನಿ ನೆಹರೂರವರು ಮನಸ್ಸುಮಾಡಿ ಆಂಧ್ರಪ್ರಾಂತ್ಯರಚನೆಯನ್ನು ಮುಂದಕ್ಕೆ ಹಾಕುವುದು ಸೂಕ್ತವೆಂದು ಸರ್ವೆಂಟ್ಸ್ ಆಫ್ ಇಂಡಿಯಾ ಸಂಸ್ಥೆಯ ಶ್ರೀ ಪಿ. ಕೋದಂಡರಾಯರು ಒಂದು ಹೇಳಿಕೆಯಿತ್ತಿದ್ದಾರೆ.

ಕಾಶ್ಮೀರವು ಸ್ವತಂತ್ರವಾಗಿರಕೂಡದು

ಕಾಶ್ಮೀರ ಸಂಸ್ಥಾನವು ಸ್ವತಂತ್ರವಾಗಿರಕೂಡದೆಂದು ಭಾರತ ಕಮ್ಯೂನಿಸ್ಟ ಪಕ್ಷವು ತೀರ್ಮಾನಿಸಿದೆ. ಭಾರತದಿಂದ ಇದು ಪ್ರತ್ಯೇಕವಾದರೆ ಕಾಶ್ಮೀರಿಗಳು ಮತ್ತಷ್ಟು ಗುಲಾಮಗಿರಿಗೆ ಸಿಕ್ಕಿ ನರಳುವರೆಂದು ತಿಳಿಸಿದೆ.

೬೦೦ ಕಾರ್ಮಿಕರ ಮುಷ್ಕರ

ಗಿರಣಿಯ ಮಾಲೀಕರಿಗೂ ಕಾರ್ಮಿಕ ಸಂಘಕ್ಕೂ ವಿವಾದದ ಪರಿಣಾಮವಾಗಿ ಬೊಂಬಾಯಿನಲ್ಲಿರುವ ೪೦೦೦ ಮಂದಿ ಕಾರ್ಮಿಕರಲ್ಲಿ ೬೦೦ ಮಂದಿ ಬಟ್ಟೆ ಗಿರಣಿ ಕಾರ್ಮಿಕರು ನಿನ್ನೆಯದಿನ ಮುಷ್ಕರ ಹೂಡಿದರು.

ಟ್ರಾಂವೆ ದರ ವಿಚಾರಣೆ

ಕಲ್ಕತ್ತಾದಲ್ಲಿ ಟ್ರಾಂವೆಗಳ ಎರಡನೇ ದರ್ಜೆಯ ದರಏರಿಕೆ ಪರಿಶೀಲಿಸುವುದಕ್ಕಾಗಿ ಕಲ್ಕತ್ತ ಶ್ರೇಷ್ಠ ನ್ಯಾಯಾಲಯದ ನ್ಯಾಯಮೂರ್ತಿ ಶ್ರೀ ಪಿ. ಬಿ. ಮುಖರ್ಜಿಯವರಿರುವ ಏಕಸದಸ್ಯ ಪಂಚಾಯಿತಿಯನ್ನು ಪಶ್ಚಿಮಬಂಗಾಳ ಸರ್ಕಾರ ನೇಮಿಸಿದೆ

ಡಾ॥ಮೋದಿ ಕುಣಿಗಲ್‌ನಲ್ಲಿ

ನೇತ್ರ ವೈದ್ಯರಾದ ಡಾ॥ ಮೋದಿಯವರು ಇಂದಿನಿಂದ ನೇತ್ರಚಿಕಿತ್ಸೆಯನ್ನು ಕುಣಿಗಲ್‌ನಲ್ಲಿ ಪ್ರಾರಂಭಿಸಿರುವರು.

ಸಿಮೆಂಟ್ ಹತೋಟಿ ರದ್ದು

ಹೈದರಾಬಾದ್ ಪ್ರಾಂತ್ಯದಲ್ಲಿ ಈದಿನದಿಂದ ಸಿಮೆಂಟಿನ ಹತೋಟಿಯನ್ನು ವಜಾ ಮಾಡಲಾಗಿದೆ.

ವಿಚಿತ್ರ ಜನನ

ತಿಪಟೂರಿನ ಬಳಿ ಇರುವ ಪುರಲೇಹಳ್ಳಿ ಎಂಬಲ್ಲಿ ರಂಗಮ್ಮನೆಂಬುವಳು, ಕಳೆದ ೨೫ ನೇತಾ॥ ಒಂದು ಸ್ತ್ರೀ ಶಿಶುವನ್ನು ೨೮ನೇ ತಾರೀಖು ಒಂದು ಗಂಡು ಮಗುವನ್ನೂ ಪ್ರಸವಿಸಿದ್ದಾಳೆಂದು ತಿಳಿಯಬರುತ್ತದೆ.

ವಿಮಾನಯಾನ ರಾಷ್ಟ್ರೀಕರಣ

ಇಂದಿನಿಂದ ಖಾಸಗಿ ವಿಮಾನ ಸಂಸ್ಥೆಗಳೆಲ್ಲಾ ಬಂದು

ಭಾರತದಲ್ಲಿ ವಿಮಾನಯಾನವು ಇಂದಿನಂದ ಹೊಸ ಅಭಿವೃದ್ಧಿ ಹಂತವನ್ನು ಹತ್ತಿದೆ. ಈದಿನದಿಂದ ರಾಷ್ಟ್ರದ ಎಲ್ಲಾ ವಿಮಾನಯಾನವು ಖಾಸಗಿಯವರಿಂದ ಸರಕಾರಕ್ಕೆ ಸೇರಿತು. ವಿಮಾನ ಸಂಚಾರ ವ್ಯವಸ್ಥೆಯನ್ನು ಸ್ಥಿರವಾದ ಆಧಾರದಮೇಲೆ ಬೆಳೆಸಲು ಆರ್ಥಿಕ ಮತ್ತು ರಾಷ್ಟ್ರೀಯ ದೃಷ್ಟಿಯಿಂದ ಅವನ್ನು ರಾಷ್ಟ್ರೀಕರಣ ಮಾಡಲಾಗಿದೆ. ಇನ್ನುಮುಂದೆ ಖಾಸಗಿ ಸಂಸ್ಥೆಗಳಾವುವೂ ವಿಮಾನಯಾನವನ್ನು ನಡೆಸುವಂತಿಲ್ಲ.

ಈ ಕಾರ್ಯಕ್ರಮಗಳನ್ನು ನೋಡಿಕೊಳ್ಳಲು ಎರಡು ಸರ್ಕಾರಿ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ. ಒಂದು ಅಂತರರಾಷ್ಟ್ರೀಯ ವಿಮಾನಯಾನ ಮತ್ತೊಂದು ಆಂತರಿಕ ಮತ್ತು ನೆರೆರಾಜ್ಯಗಳ ವಿಮಾನಯಾನ ಕಾರ್ಯವನ್ನು ನೋಡಿಕೊಳ್ಳುತ್ತವೆ.

ಈ ರಾಷ್ಟ್ರೀಕರಣ ಅಂಗವಾಗಿ ಈಬೆಳಿಗ್ಗೆ ದಿಹಲಿಯಲ್ಲಿ ಪ್ರಧಾನಿ ನೆಹರೂರವರು ಸಫ್ದರ್‌ಜಂಗ್ ವಿಮಾನ ನಿಲ್ದಾಣದಲ್ಲಿ ಹೊಸ ಪತಾಕೆಯನ್ನು ಆರೋಹಣ ನಡೆಸಿ ಕಾಶ್ಮೀರ ಮತ್ತು ಕರಾಚಿಗಳ ಕಡೆ ಹೊರಡುವ ವಿಮಾನ ಸಂಚಾರವನ್ನು ಉದ್ಘಾಟಿಸಿದರು.

ಖಾದಿ ಬೆಳವಣಿಗೆಗೆ ವಿಶೇಷ ಕಾರ್ಯಕ್ರಮ

ಅಖಿಲ ಭಾರತ ಖಾದಿ ಮತ್ತು ಗ್ರಾಮ ಕೈಗಾರಿಕೆ ಸಮಿತಿಯು ದೇಶಾದ್ಯಂತ ಖಾದಿ ಬೆಳವಣಿಗೆಗಾಗಿ ಮಹಾತ್ಮಗಾಂಧಿಯವರ ಜನ್ಮದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮವನ್ನು ನಡೆಸಲು ನಿರ್ಧರಿಸಿದೆ.

ಈ ಸಂದರ್ಭದಲ್ಲಿ ಖಾದಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ಬಳಕೆಯಲ್ಲಿ ಬರಲು ವಿಶೇಷರೀತಿಯ ಪ್ರಚಾರಕಾರ್ಯವನ್ನು ನಡೆಸಲು ತೀರ್ಮಾನಿಸಿದೆ.

ಖಾದಿ ಬೆಳವಣಿಗೆಗೆ ಈ ಸಮಿತಿಯು ಈಗಾಗಲೇ ದೇಶದ ನಾನಾ ಸಂಸ್ಥೆಗಳಿಗೆ ೩೧ ಲಕ್ಷ ರೂಪಾಯಿಗಳ ಸಾಲವನ್ನು ಕೊಟ್ಟಿದೆ.

ಸೂಯೆಜ್ ಕಾಲುವೆ ವಿವಾದ

ಸೂಯೆಜ್ ಕಾಲುವೆ ವಿವಾದದ ಬಗ್ಗೆ ತಾವು ಬ್ರಿಟಿಷ್ ಪ್ರಧಾನಿ ಚರ್ಚಿಲರನ್ನು ಯಾವಾಗ ಎಲ್ಲಿಬೇಕಾದರೂ ಭೇಟಿಮಾಡಲು ಸಿದ್ಧವಿರುವುದಾಗಿ ಈಜಿಪ್ಟಿನ ರಾಷ್ಟ್ರಾಧ್ಯಕ್ಷ ಮತ್ತು ಪ್ರಧಾನಿ ಜನರಲ್ ನಗೀಬ್‌ರವರು ತಿಳಿಸಿದ್ದಾರೆ.

ಕುರುಡಿಗೆ ಕಣ್ಣು ಬಂತು

ತಂಜಾವೂರು ವೈದ್ಯೇಶ್ವರ ದೇವಸ್ಥಾನದಲ್ಲಿ ೧೭ ವರ್ಷದ ಕುರುಡು ಮಗಳನ್ನು ವಿಶೇಷ ಪೂಜೆಗಾಗಿ ಆಕೆಯ ತಂದೆಯು ಕರೆದೊಯ್ದು ಪೂಜೆ ನಡೆಸಿ ಹಿಂತಿರುಗುತ್ತಿದ್ದಾಗ ಆ ಬಾಲಕಿಗೆ ಕಣ್ಣು ಬಂದಿತೆಂದು ಹೇಳಲಾಗಿದೆ.

ಸತ್ಕಾರಕೂಟ

ಮೈಸೂರು ಆಗಸ್ಟ್ ೧

ಶ್ರೀಮನ್ಮಹಾರಾಜರವರ ೩೫ನೇ ವರ್ಷದ ವರ್ಧಂತಿಯ ಅಂಗವಾಗಿ ನಿನ್ನೆಯ ದಿನ ಸಂಜೆ ಜಗನ್ಮೋಹನಭವನದಲ್ಲಿ ಒಂದು ಸತ್ಕಾರಕೂಟವು ನಡೆಯಿತು.

ಈ ಸಮಾರಂಭಕ್ಕೆ ಶ್ರೇಷ್ಠ ನ್ಯಾಯಮೂರ್ತಿ ಶ್ರೀ ಮೇದಪ್ಪ, ಮಾಜಿ ಆರ್ಥಿಕ ಸಚಿವ ಶ್ರೀ ಹೆಚ್.ಸಿ. ದಾಸಪ್ಪ ಮುಂತಾದ ಅನೇಕ ಗಣ್ಯ ಮಹನೀಯರು ಆಗಮಿಸಿದ್ದರು.

ಉಪಹಾರವಾದನಂತರ ಅದೇ ಭವನದಲ್ಲಿರುವ ಥಿಯೇಟರ್‌ನಲ್ಲಿ ಅರಮನೆಯ ವಿದ್ವಾಂಸರುಗಳಿಂದ ಸಂಗೀತ, ಶ್ರೀ ಯು. ಎಸ್. ಕೃಷ್ಣರಾವ್ ಮತ್ತು ಪಾರ್ಟಿಯವರಿಂದ ನೃತ್ಯಪ್ರದರ್ಶನ, ಕರ್ನಾಟಕ ಬ್ಯಾಂಡು, ಲಾರೆನ್ಸ್ ಸ್ಕೂಲಿನವರಿಂದ ಆಂಗ್ಲ ಸಂಗೀತಗೋಷ್ಠಿ ಮುಂತಾದುವು ನಡೆದುವು.

ವಿಶಾಲ ಆಂಧ್ರಪ್ರಾಂತ್ಯಕ್ಕಾಗಿ ಚಳುವಳಿ

ವಿಶಾಲ ಆಂಧ್ರಪ್ರಾಂತ್ಯ ರಚನೆಗಾಗಿ ಚಳುವಳಿಯನ್ನು ನಡೆಸಲು ಕಮ್ಯೂನಿಸ್ಟ್ ಪಕ್ಷವಿನಹ ಮಿಕ್ಕೆಲ್ಲ ಪಕ್ಷಗಳು ಒಂದು ಸಮಿತಿಯನ್ನು ರಚಿಸಿಕೊಂಡಿವೆ. ಈ ಕಾರ್ಯ ಸಮಿತಿಯಲ್ಲಿ ೪೦ ಸದಸ್ಯರಿರುವರು. ಹೈದರಾಬಾದ್, ಒರಿಸ್ಸಾ, ಮಧ್ಯಪ್ರದೇಶ, ಮೈಸೂರು ಮತ್ತು ಮದ್ರಾಸಿನ ಇತರ ಭಾಗಗಳ ೨೫೦ ಜನರ ಸ್ಥಾಯಿಸಮಿತಿಯನ್ನು ಏರ್ಪಡಿಸಲಾಗಿದೆ.

ಭೂದಾನವಾರ

ಇದೇ ಮಾಹೆ ೧೫ ನೇ ತಾರೀಖಿನಿಂದ ಭಾರತಾದ್ಯಂತ ಭೂದಾನ ವಾರವನ್ನು ಆಚರಿಸಲು ನಿರ್ಧರಿಸಲಾಗಿದೆ. ಈ ವಿಷಯದಲಿ ಎ. ಐ. ಸಿ. ಸಿ. ಯು ಎಲ್ಲಾ ಕಾಂಗ್ರೆಸ್ ಸಂಸ್ಥೆಗಳಿಗೆ ಸೂಚನೆಯನ್ನಿತ್ತು ಈ ವಾರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಾಧ್ಯವಾದಷ್ಟು ಭೂಮಿಯನ್ನು ಸಂಗ್ರಹಿಸಬೇಕೆಂದು ಮನವಿಮಾಡಿದೆ.

ಗಾಂಧಿ ಸ್ಮಾರಕನಿಧಿ ಕಾರ್ಯದರ್ಶಿಯವರ ಭೇಟಿ

ಅರಸೀಕೆರೆ ಜುಲೈ ೧

ಗಾಂಧಿ ಸ್ಮಾರಕನಿಧಿಯ ಕಾರ್ಯದರ್ಶಿ ಶ್ರೀ ಆರ್.ಎಸ್. ಧೋತ್ರೆಯವರು ಇದೇಮಾಹೆ ೭ನೇ ತಾರೀಖಿನಿಂದ ಸಂಸ್ಥಾನದಲ್ಲಿ ಗಾಂಧಿ ಸ್ಮಾರಕನಿಧಿಯ ಕಾರ್ಯಗಳಬಗ್ಗೆ ೩ ದಿನಗಳ ಪ್ರವಾಸವನ್ನು ಕೈಗೊಳ್ಳುವರು. ಅವರು ಅನೇಕ ಸಾರ್ವಜನಿಕ ಸೇವಾಸಂಸ್ಥೆಗಳಿಗೆ ಭೇಟಿಕೊಡುವರು.

● ಭಾರತ-ಚೀಣಾ ಸ್ನೇಹ ಸಂಘದ ಆಶ್ರಯದಲ್ಲಿ ಈ ಸಂಜೆ ೬ ಗಂಟೆಗೆ ಮಾದರಿ ಶಾಲೆಯಲ್ಲಿ ವಿಚಾರಗೋಷ್ಠಿ ನಡೆಯಲಿದೆ.

ರಾಜಾಜಿ ಸರ್ಕಾರ ರಾಜೀನಾಮೆ ಕೊಡುವುದಿಲ್ಲ

ಹೈದರಾಬಾದ್ ಕಾಂಗ್ರೆಸ್‌ನಲ್ಲಿ ಬಿಕ್ಕಟ್ಟು

ಹೈದರಾಬಾದ್ ಕಾಂಗ್ರೆಸಿನಲ್ಲಿ ಇತ್ತೀಚೆಗೆ ಉದ್ಭವಿಸಿರುವ ಬಿಕ್ಕಟ್ಟಿನ ಬಗ್ಗೆ ಪ್ರಧಾನಿ ನೆಹರೂರವರೊಡನೆ ಸಮಾಲೋಚನೆಗಾಗಿ ಹೈದರಾಬಾದಿನ ಗೃಹಸಚಿವ ಶ್ರೀ ಡಿ. ಜಿ. ಬಿಂದುರವರು ದೆಹಲಿಗೆ ತೆರಳಲಿರುವರು

ಹೈದರಾಬಾದ್ ಶಾಸನ ಸಭೆಯ ೨೦ ಕಾಂಗ್ರೆಸ್ ಸದಸ್ಯರು ಇತ್ತೀಚೆಗೆ ಆ ಪ್ರಾಂತ್ಯದಲ್ಲಿ ಆಡಳಿತ ಕುಸಿದು ಬೀಳುತ್ತಿರುವುದರಿಂದ ಪ್ರಧಾನಿಯವರು ಪ್ರವೇಶಿಸಿ ಸರಿಪಡಿಸಬೇಕೆಂದೂ, ಇಲ್ಲವಾದಲ್ಲಿ ತಾವು ಕಾಂಗ್ರೆಸ್ ಸಂಸ್ಥೆಗೆ ರಾಜೀನಾಮೆ ಕೊಡುವುದಾಗಿ ತಿಳಿಸಿದ್ದರು. ಈ ವಿಷಯದಲ್ಲಿ ಸಹ ಶ್ರೀ ಬಿಂದುರವರು ನೆಹರುರೊಡನೆ ಮಾತುಕತೆ ನಡೆಸುವರೆಂದು ತಿಳಿಯಬರುತ್ತದೆ. ಪಕ್ಷದಲ್ಲಿ ಶಿಸ್ತು, ಶಿಸ್ತು ಮೀರಿದವರ ಮೇಲಿನ ಕ್ರಮ ಮುಂತಾದ ವಿಷಯಗಳು ಚರ್ಚೆಗೆ ಬರಲಿವೆಯೆಂದು ಹೇಳಲಾಗಿದೆ.

ಹೈದರಾಬಾದ್ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರವರು ಸಹ ದೆಹಲಿಗೆ ತೆರಳಿ ಪ್ರಧಾನಿಯನ್ನು ಭೇಟಿ ಮಾಡಲಿರುವರು.

ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಅಖಿಲಭಾರತ ರೇಡಿಯೋ ಕೇಂದ್ರದ ರಾಷ್ಟ್ರೀಯ ಸಂಗೀತ ಕಾರ್ಯದಲ್ಲಿ ಈ ರಾತ್ರಿ ೯-೪೫ ಗಂಟೆಗೆ ನಜೀರ್ ಮೊಹಿದ್ದೀನ್ ದಾಗೆರ್ ಮತ್ತು ನಜೀರ್ ಅಮೀನುದ್ದೀನ್ ಡಾಗೇರ್ ಸಹೋದರರ ಸಂಗೀತ ನಡೆಯುತ್ತದೆ.

ವಿದ್ಯಾರ್ಥಿ ಸಂಘದ ನೂತನ ಅಧಿಕಾರ ವರ್ಗ

ಸಾರ್ವಜನಿಕ ವಿದ್ಯಾರ್ಥಿನಿಲಯದ ವಿದ್ಯಾರ್ಥಿ ಸಂಘದ ಚುನಾವಣೆಯು ನಿನ್ನೆ ದಿನ ನಡೆದು ಶ್ರೀ ಆರ್. ವಾಸುದೇವಮೂರ್ತಿಯವರನ್ನು ಅಧ್ಯಕ್ಷ, ಶ್ರೀ ದಾವುದ್‌ಪರೀಫ್ ಉಪಾಧ್ಯಕ್ಷ ಮತ್ತು ಸಿ. ಎಸ್. ಅನಂತಯ್ಯನವರನ್ನು ಕಾರ್ಯದರ್ಶಿಗಳನ್ನಾಗಿ ಚುನಾಯಿಸಲಾಯಿತು.

ನಿಜಾಮರ ಆಸ್ತಿ ಪಂಚವಾರ್ಷಿಕ ಯೋಜನೆಗೆ ವಿನಿಯೋಗಿಸಬೇಕು

ಹೈದರಾಬಾದ್ ನಿಜಾಮರ ಆಸ್ತಿಯನ್ನು ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತ ಮಾಡಲು ಉಪಯೋಗಿಸಬೇಕು ಮತ್ತು ಅವರನ್ನು ಪದಚ್ಯುತಿಗೊಳಿಸಿ, ಹೈದರಾಬಾದನ್ನು ವಿಭಜಿಸಬೇಕೆಂದು ಅಖಿಲ ಭಾರತ ರೈತ ಮತ್ತು ಕಾರ್ಮಿಕ ಪಕ್ಷ ಒತ್ತಾಯಮಾಡಿದೆ.

ಮದ್ರಾಸ್ ಕಿರಿಯ ಶಾಸನ ಸಭೆಯಲ್ಲಿ ವಿದ್ಯಾಭ್ಯಾಸ ಸುಧಾರಣೆಯ ಬಗ್ಗೆ ಸರ್ಕಾರಕ್ಕೆ ಸೋಲುಂಟಾದುದರಿಂದ ರಾಜಾಜಿ ಸರ್ಕಾರವು ಕೂಡಲೇ ರಾಜೀನಾಮೆ ಕೊಡಬೇಕೆಂಬ ವಿಷಯದಲ್ಲಿ ಮುಖ್ಯಮಂತ್ರಿ ಶ್ರೀ ಸಿ ರಾಜಗೋಪಾಲಾಚಾರಿಯವರು ನಿನ್ನೆಯದಿನ ಅಲ್ಲಿಯ ಹಿರಿಯ ಶಾಸನ ಸಭೆಯಲ್ಲಿ ಮಾತನಾಡುತ್ತಾ, ಈಚಿನ ಶಾಸನ ಸಭೆಯ ನಿರ್ಣಯವು ಕಾನೂನಿನ ರೂಪವಾಗಿಲ್ಲ ಸಲಹಾ ರೂಪವಾಗಿದೆ. ಆದ್ದರಿಂದ ರಾಜಕೀಯ ಪರಿಣಾಮವೇನೂ ಅದರಿಂದ ಇಲ್ಲ ಹಾಗೆ ಇಷ್ಟವಿದ್ದರೆ ವಿರೋಧ ಪಕ್ಷದವರು ಅವಿಶ್ವಾಸ ನಿರ್ಣಯವನ್ನು ತರಲಿ ಪ್ರಾಥಮಿಕ ವಿದ್ಯಾಭ್ಯಾಸದ ಹೊಸ ಪದ್ಧತಿಯನ್ನು ಈಗ ಬದಲಾಯಿಸುವುದು ಸೂಕ್ತವಲ್ಲ. ಸ್ವಲ್ಪ ಕಾಲವಾದಮೇಲೆ ನಿಪುಣರ ಸಮಿತಿಯನ್ನು ನೇಮಿಸಲಾಗುತ್ತದೆ. ಈಗಿನ ಸರ್ಕಾರವು ರಾಜೀನಾಮೆಯನ್ನು ಕೊಡುವುದಾಗಲಿ ಅಥವ ಶಾಸನ ಸಭೆಯನ್ನು ರದ್ದುಗೊಳಿಸುವುದಾಗಲಿ ಸಂಪ್ರದಾಯಕ್ಕೆ ವಿರೋಧ ಎಂದು ಅವರು ತಿಳಿಸಿದ್ದಾರೆ.

ಯಾಂತ್ರಿಕ ವ್ಯವಸಾಯ ಕ್ರಮ ಭಾರತದಲ್ಲಿ ಸಾಧ್ಯವಿಲ್ಲ

ಭಾರತದಲ್ಲಿ ಪಂಚವಾರ್ಷಿಕ ಯೋಜನೆಯನ್ನು ಕಾರ್ಯರೂಪಕ್ಕೆ ತರುವಾಗ ಸಹಕಾರ ಪ್ರಯತ್ನ ಅವಲಂಬಿಸಬೇಕಾಗಿದೆ. ಆದರೆ ಅಮೆರಿಕದ ಯಾಂತ್ರಿಕ ವ್ಯವಸಾಯ ಕ್ರಮವನ್ನು ಭಾರತದಲ್ಲಿ ಪೂರ್ಣವಾಗಿ ಅನುಕರಿಸಲು ಸಾಧ್ಯವಿಲ್ಲ. ನಾವು ಭಾರಿ ವ್ಯಾಪಾರೀ ವ್ಯವಸಾಯ ಸಂಘಗಳನ್ನು ಹೊಂದಿರುವುದಕ್ಕಾಗಲೀ ಸಾಮೂಹಿಕ ವ್ಯವಸಾಯ ಕ್ರಮವನ್ನು ಅನುಸರಿಸುವಂತೆ ಬಲಾತ್ಕಾರಪಡಿಸುವುದಕ್ಕಾಗಲಿ ಸಾಧ್ಯವಿಲ್ಲವೆಂದು ಅಮೆರಿಕಾದಲ್ಲಿರುವ ಭಾರತ ರಾಯಭಾರಿ ಶ್ರೀ ಜಿ. ಎಲ್. ಮೆಹ್ತಾರವರು ಹೇಳಿದ್ದಾರೆ.

ಅಪೇರ
31—7—53 ರಿಂದ ಪಾರಂಭ
ಪ್ರತಿದಿನ ಮೂರು ಆಟಗಳು
ಇನ್‌ಸ್ಪೆಕ್ಟರ್ ತಮಿಳು
ಪಾತ್ರ:–ಬಾಲಚಂದರ್, ಟಿ. ಕೆ. ಷಣ್ಮುಗಂ, ಟಿ. ಕೆ. ಸರಸ್ವತಿ, ಅಂಜಲಿದೇವಿ

ಪ್ರಕಾಶಕರು:—ಜಿ. ಎಲ್. ಸ್ವಾಮಿ
ಮುದ್ರಕರು:— ಹಿ. ಕಾ. ಸುಬ್ಬರಾವ್
ಮೋಹನ ಮುದ್ರಣಾಲಯ ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎರ. ೫೩೮

ಸಮಾಚಾರ

ದಿನಪತ್ರಿಕೆ
ಸಂಪುಟ ೩
ಸಂಚಿಕೆ ೨೮೪

೩-೮-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ತೆರಿಗೆ ಕೊಡದಿದ್ದುದಕ್ಕೆ ದೇವರ ರಥಗಳ ವಶ

ಸರ್ಕಾರದ ವಿಚಿತ್ರ ನೀತಿ

ಪುರಿಯಲ್ಲಿರುವ ಸುಪ್ರಸಿದ್ಧ ಜಗನ್ನಾಥ ಬಲಭದ್ರ ಮತ್ತು ಸುಭದ್ರ ದೇವರುಗಳ ರಥಗಳನ್ನು ಸರ್ಕಾರದವರು ವಶಪಡಿಸಿಕೊಂಡಿದ್ದಾರೆ. ಸರ್ಕಾರಕ್ಕೆ ಬರಬೇಕಾದ ೯೭೫೫—೧—೦ ರೂ. ರಸ್ತೆ ಸೆಸ್ಸು ದೇವಸ್ಥಾನದವರು ಕೊಡಲಿಲ್ಲವೆಂದು ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆಯೆಂದು ಹೇಳಲಾಗಿದೆ.

ಕಾಶ್ಮೀರ ಭವಿಷ್ಯ ಬಗ್ಗೆ ಭಿನ್ನಾಭಿಪ್ರಾಯ

ಕಾಶ್ಮೀರದ ಭವಿಷ್ಯದ ಬಗ್ಗೆ ಅಲ್ಲಿಯ ಪ್ರಧಾನಿ ಷೇಕ್ ಅಬ್ದುಲ್ಲಾ ಮತ್ತು ರಾಜ್ಯಾಂಗ ಸಭೆ ಅಧ್ಯಕ್ಷ ಗುಲಾಂ ಮಹಮದ್ ಸಾದಿಕ್‌ರವರಲ್ಲಿ ತೀವ್ರ ಭಿನ್ನಾಭಿಪ್ರಾಯವುಂಟಾಗಿರುವುದಾಗಿ ಹೇಳಲಾಗಿದೆ.

ಕಾಶ್ಮೀರವು ಸ್ವತಂತ್ರವಾಗಿರಬೇಕೆಂದು ಇತ್ತೀಚೆಗೆ ಷೇಕ್ ಅಬ್ದುಲ್ಲಾ ಹೇಳಿರುವುದಕ್ಕೆ ಗುಲಾಂ ಮಹಮದ್‌ರವರ ಅಭಿಪ್ರಾಯವು ವಿರೋಧ. ಕಾಶ್ಮೀರದವರೆಲ್ಲಾ ಷೇಕ್ ಅಬ್ದುಲ್ಲಾ ಮಾತೇ ಪ್ರಮಾಣವೆಂದು ಜನರು ಅಭಿಪ್ರಾಯಪಡುವ ಕಾಲವು ಮುಗಿದಿದೆಯೆಂದೂ ಹೇಳಲಾಗಿದೆ.

ಕಾಶ್ಮೀರವು ಸ್ವಾತಂತ್ರವಾಗಿರಬೇಕೆಂಬುದು ಬರೀ ಮಕ್ಕಳಾಟಿಕೆ ಮತ್ತು ಅಸಂಬಂಧವಾದುದೆಂದು ಈಗಾಗಲೇ ಸಿದ್ದಿಕ್‌ರವರು ಹೇಳಿದ್ದಾರೆ. ಇದು ಕೇವಲ ಒಬ್ಬರ ಅಭಿಪ್ರಾಯವೆಂದು ಷೇಕ್ ಅಬ್ದುಲ್ಲಾರವರು ತಿಳಿಸಿದ್ದಾರೆ.

ಅವರು ಸಿದ್ದಿಕ್‌ರವರು ವಿಶೇಷ ಬೆಂಬಲವನ್ನು ಪಡೆಯುತ್ತಿದ್ದಾರೆಂದೂ ಅವರಿಬ್ಬರ ನಡುವೆ ವೈರುಧ್ಯವು ಹೆಚ್ಚುತ್ತಿರುವುದಾಗಿಯೂ ಕಳೆದ ಒಂದು ವರ್ಷದಿಂದ ಷೇಕ್ ಅಬ್ದುಲ್ಲಾರವರು ಸಿದ್ದಿಕ ರೊಡನೆ ಮಾತುಕತೆ ಸಹ ನಡೆಸುತ್ತಿಲ್ಲವೆಂದು ಹೇಳಲಾಗಿದೆ.

ಅಂತು ಕಾಶ್ಮೀರ ಭವಿಷ್ಯದ ಬಗ್ಗೆ ಅಲ್ಲಿಯೇ ಭಿನ್ನಾಭಿಪ್ರಾಯವು ತಲೆದೋರಿರುವುದು ಪ್ರಮುಖ ವಿಷಯವಾಗಿದೆ.

ಮೈಸೂರು ಜಿಲ್ಲೆಯಲ್ಲಿ ಸ್ಥಳೀಯ ಸೆಸ್ಸು

ಮೈಸೂರು ಜಿಲ್ಲೆಯ ಭೂ ಮತ್ತು ಅರಣ್ಯ ಕಂದಾಯದ ಪ್ರತಿ ರೂಪಾಯಿಗೆ ಒಂದೂವರೆ ಆಣೆಯಂತೆ ಸ್ಥಳೀಯ ಸೆಸ್ಸು ವಿಧಿಸಬೇಕೆಂಬ ಜಿಲ್ಲಾ ಬೋರ್ಡಿನ ನಿರ್ಣಯಕ್ಕೆ ಸರ್ಕಾರವು ಅನುಮತಿ ನೀಡಿದೆ.

ಕದನ ನಿಲ್ಲಡೆಗೆ ಅಡ್ಡಿ ತರುವುದಿಲ್ಲ

ಕೊರಿಯಾದಲ್ಲಿ ಯುದ್ಧ ನಿಲ್ಲಡೆಗಾಗಿ ಆಗಿರುವ ಒಪ್ಪಂದಕ್ಕೆ ತಾವು ಯಾವ ರೀತಿಯಾದ ಅಡ್ಡಿಯನ್ನೂ ತರುವುದಿಲ್ಲವೆಂದು ದಕ್ಷಿಣ ಕೊರಿಯಾ ಅಧ್ಯಕ್ಷ ಡಾ॥ ಸಿಂಗ್ ಮನ್‌ರೀಯವರು ಪುನಃ ಘೋಷಿಸಿರುವುದಾಗಿ ಹೇಳಲಾಗಿದೆ.

ಶ್ರೀಮತಿ ಸುಚೇತಾರವರ ರಾಜೀನಾಮೆ

ಪಾರ್ಲಿಮೆಂಟಿನಲ್ಲಿರುವ ಪ್ರಜಾ ಸೋಷಲಿಸ್ಟ್ ಪಕ್ಷದ ನಾಯಕತ್ವಕ್ಕೆ ಶ್ರೀಮತಿ ಸುಚೇತಾ ಕೃಪಲಾನಿಯವರು ರಾಜೀನಾಮೆ ಯಿತ್ತಿದ್ದಾರೆಂದು ತಿಳಿಯಬರುತ್ತದೆ.

ನಿರುದ್ಯೋಗ ಪರಿಹಾರಕ್ಕೆ ಯೋಜನೆ

ಭಾರತದಲ್ಲಿ ಈಗ ಉಂಟಾಗಿರುವ ವಿದ್ಯಾವಂತ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು, ಆಯೋಜನಾ ಕಮೀಷನ್ ಒಂದು ಯೋಜನೆಯನ್ನು ಸೂಚಿಸಿ, ಪ್ರಾಂತ ಸರ್ಕಾರಗಳು ಸಹಕರಿಸಬೇಕೆಂದು ಮನವಿಮಾಡಿದೆ.

ಸಣ್ಣಪುಟ್ಟ ಕೈಗಾರಿಕೆಗಳನ್ನು ಮತ್ತು ವ್ಯಾಪಾರಗಳನ್ನು ಖಾಸಗಿಯವರು ಆರಂಭಿಸಲು ವಿಶೇಷ ಸಹಾಯನೀಡುವುದು. ಈಗ ಜನಬಲ ಕಡಿಮೆಯಾಗಿರುವ ಉದ್ಯೋಗಗಳಲ್ಲಿ ಜನರಿಗೆ ಶಿಕ್ಷಣ ದೊರೆಯಲು ಸೌಕರ್ಯ ಹೆಚ್ಚಿಸುವುದು. ಪ್ರಾಂತ ಸರ್ಕಾರಗಳಿಗೂ ಮತ್ತು ಸಾರ್ವಜನಿಕ ಸಂಸ್ಥೆಗಳಿಗೂ ಬೇಕಾಗುವ ವಸ್ತುಗಳನ್ನು ಸಣ್ಣಪುಟ್ಟ ಕೈಗಾರಿಕೆಗಳು ತಯಾರಿಸಿದವರಿಂದಲೇ ಕೊಂಡು ಪ್ರೋತ್ಸಾಹಿಸುವುದು. ನಗರ ಪ್ರದೇಶಗಳಲ್ಲಿ ವಯಸ್ಕರ ಶಿಕ್ಷಣ ಕೇಂದ್ರಗಳನ್ನು ತೆರೆಯಲು ಸಹಾಯನೀಡುವುದು. ರಸ್ತೆಗಳ ಮೂಲಕ ಸಾಗಾಣಿಕೆ ನಡೆಯುವುದಕ್ಕೆ ಪ್ರೋತ್ಸಾಹ. ಖಾಸಗಿ ಗೃಹನಿರ್ಮಾಣ ಕಾರ್ಯಗಳಿಗೆ ಪ್ರೋತ್ಸಾಹ. ನಿರುದ್ಯೋಗದಿಂದ ಕೂಡಿದ ನಿರಾಶ್ರಿತರ ನಗರಗಳಿಗೆ ವ್ಯವಸ್ಥೆಯ ಸಹಾಯವನ್ನು ನೀಡಿ ಅಲ್ಲಿ ಅವರು ಖಾಯಂಆಗಿನಿಲ್ಲಲು ವ್ಯವಸ್ಥೆಮಾಡುವುದು. ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮದ ಫಲವಾಗಿ ಎಲ್ಲೆಲ್ಲಿ ಉದ್ಯೋಗಾವಕಾಶಗಳಿರುವುವೋ ಅಲ್ಲೆಲ್ಲಾ ಕಾರ್ಯ ಮತ್ತು ಶಿಕ್ಷಣ ಕೇಂದ್ರಗಳನ್ನು ತೆರೆಯುವುದು, ವಿದ್ಯುದೀಕರಣ, ವಿದ್ಯುಚ್ಛಕ್ತಿ, ಅರಣ್ಯಗಳನ್ನು ಬೆಳೆಸುವುದು, ಭೂರಕ್ಷಣಾ ಮತ್ತು ಸಹಕಾರ ವ್ಯವಸಾಯ ಇವರಲ್ಲಿ ಅಡಕವಾಗಿದೆ.

ಈ ಮೇಲ್ಕಂಡ ಅಂಶಗಳಿಂದ ದೇಶದಲ್ಲಿ ನಿರುದ್ಯೋಗತನ ಸಾಕಷ್ಟು ಬಗೆಹರಿಸಹುದೆಂದು ಕಮೀಷನ್ ಆಶಿಸಿದೆ.

ಖೈದಿಗಳಿಂದ ಚಂದಾ

ಬರೋಡ ಜೈಲಿನಲ್ಲಿರುವ ಬಂದಿಗಳು ಭಾರತದ ಪಂಚವಾರ್ಷಿಕ ಯೋಜನೆಗಾಗಿ ೧೦೦ ರೂ ಚಂದ ಹಣವನ್ನು ತಮ್ಮ ವರಮಾನದಿಂದ ಕೊಟ್ಟಿದ್ದಾರೆ.

ಮದರಾಸ್ ಟ್ರಾಂವೆ

ಕಳೆದ ನಾಲ್ಕು ತಿಂಗಳಿನಿಂದ ನಿಲ್ಲಿಸಲ್ಪಟ್ಟಿದ್ದ ಮದರಾಸ್ ಟ್ರಾಂವೇ ಸರ್ವೀಸನ್ನು ಇದೇ ೨ನೇ ತಾರೀಖಿನಿಂದ ಪ್ರಾರಂಭಿಸಲಾಗುವುದೆಂದು ಹೇಳಲಾಗಿದೆ.

ಬಳ್ಳಾರಿ ಭವಿಷ್ಯ

ಗಡಿ ನಿರ್ಧಾರವು ಸಮಿತಿಯ ಸಲಹೆಯ ಮೇರೆ ಬಳ್ಳಾರಿಯ ಭವಿಷ್ಯವನ್ನು ಮುಂದಕ್ಕೆ ಬದಲಾಯಿಸಿಕೊಳ್ಳಬಹುದೆಂದು ಪ್ರಧಾನಿ ನೆಹರೂರವರು ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎನ್. ಸಂಜೀವರೆಡ್ಡಿಯವರಿಗೆ ಭರವಸೆಯಿತ್ತಿರುವುದಾಗಿ ತಿಳಿಯಬರುತ್ತದೆ.

ರಾಘವೇಂದ್ರ ಸ್ವಾಮಿಗಳ ಆರಾಧನೆ

ಮೈಸೂರು ೩

ಸುಬ್ಬರಾಯನ ಕೆರೆಯ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಇದೇ ಮಾಹೆ ೨೫ನೇ ತಾರೀಖಿನಿಂದ ೩ ದಿನಗಳ ಕಾಲ ಶ್ರೀ ಸ್ವಾಮಿಗಳವರ ಆರಾಧನೆಯು ನಡೆಯುತ್ತದೆ.

ಬೊಂಬಾಯಿನಲ್ಲಿ ಭಾರಿ ಮಳೆ

ಬೊಂಬಾಯಿನಲ್ಲಿ ನಿನ್ನೆಯದಿನ ಭಾರಿ ಮಳೆಬಂದು ಸಂಚಾರ ವ್ಯವಸ್ಥೆಗೆ ಅಡಚಣೆಯುಂಟಾಗಿತ್ತು ಅಲ್ಲಿಯ ನಿಲ್ದಾಣಕ್ಕೆ ಬರಬೇಕಾಗಿದ್ದ ವಿಮಾನಗಳನ್ನು ಬೇರೆಕಡೆಗೆ ಕಳುಹಿಸಲಾಗಿತ್ತೆಂದು ವರದಿಯಾಗಿದೆ.

ಭಾರತಕ್ಕೆ ಹೋಗುವುದು ಅದೃಷ್ಟ ಎಂದು ಘಜ್ನಫರ್ ಅಲಿಖಾನ್

ಭಾರತ ಮತ್ತು ಪಾಕೀಸ್ತಾನಗಳ ನಡುವೆ ಇಷ್ಟು ಸೌಹಾರ್ದ ನೆಲಸುತ್ತಲಿರುವ ಸಮಯದಲ್ಲಿ ತಾವು ಭಾರತಕ್ಕೆ ಹೋಗುವುದು ತಮ್ಮ ಅದೃಷ್ಟವೆಂದು ಭಾರತದಲ್ಲಿ ಪಾಕೀಸ್ತಾನ ಹೈಕಮಿಷನರು ಆಗಿ ನೇಮಕವಾಗಿರುವ ಘಜ್ನಾಫರ್ ಅಲಿಖಾನರು ಹೇಳಿದ್ದಾರೆ.

ಕೇಂದ್ರ ರಕ್ಷಣಾಶಾಖಾ ಕಾರ್ಯದರ್ಶಿ

ಮೈಸೂರು ೩

ಕೇಂದ್ರ ಸರ್ಕಾರದ ರಕ್ಷಣಾಶಾಖೆಯ ಕಾರ್ಯದರ್ಶಿ ಶ್ರೀ ಹೆಚ್. ಎಂ. ಪಾಟೀಲರು ನಿನ್ನೆ ಬೆಳಿಗ್ಗೆ ರಾಜಧಾನಿಗೆ ಆಗಮಿಸಿದರು. ಅವರನ್ನು ಪ್ರಭುತ್ವ ಭವನದಲ್ಲಿ ಜಿಲ್ಲಾಧಿಕಾರಿ ಶ್ರೀ ಎಂ. ಎಸ್. ಸ್ವಾಮಿನಾಥರು ಸ್ವಾಗತಿಸಿದರು. ಅವರು ಈ ದಿನ ಇಲ್ಲಿ ತಂಗಿದ್ದು ನಾಳೆದಿನ ಉದಕಮಂಡಲಕ್ಕೆ ಪ್ರಯಾಣಬೆಳೆಸುವರು.

ಅಂತರರಾಷ್ಟ್ರೀಯ ಸಮ್ಮೇಳನದ ಪ್ರತಿನಿಧಿಗಳು

ಮೈಸೂರು ೩

ಬೆಂಗಳೂರಿನಲ್ಲಿ ಸಮಾವೇಶಗೊಂಡಿರುವ ಅಂತರರಾಷ್ಟ್ರೀಯ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಸುಮಾರು ೫೦ ಮಂದಿ ಪ್ರತಿನಿಧಿಗಳು ನಿನ್ನೆ ರಾಜಧಾನಿಗೆ ಆಗಮಿಸಿ ಪ್ರೇಕ್ಷಣೀಯ ಸಂಸ್ಥೆಗಳಿಗೆ ಭೇಟಿಯಿತ್ತು, ವಾಪಸು ಹಿಂತಿರುಗಿದರು.

ಹಣ್ಣು ರಕ್ಷಣಾ ಶಿಕ್ಷಣಕ್ಕೆ ಮನ್ನಣೆ

ಮೈಸೂರು ೩

ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನ ಲಯದ ಹಣ್ಣಿನ ರಕ್ಷಣಾ ಶಾಖೆಯವರು ಕೊಡುತ್ತಿರುವ ಶಿಕ್ಷಣಕ್ಕೆ ಭಾರತ ಸರ್ಕಾರದವರು ನೌಕರಿಗಳಿಗಾಗಿ ಮನ್ನಣೆ ಇತ್ತಿದ್ದಾರೆ.

ಭಾರತಕ್ಕೆ ಬರ್ಮಾ ನಿಯೋಗ

ಭಾರತದಲ್ಲಿ ನಡೆದಿರುವ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಲು ಬರ್ಮಾದಿಂದ ಒಂದು ನಿಯೋಗವು ಭಾರತಕ್ಕೆ ಬರಲಿದೆಯೆಂದು ತಿಳಿಯಬರುತ್ತದೆ.

೧೯ ವರ್ಷ ಕಾರಾಗೃಹವಾದ ನಂತರ ನಿರಪರಾಧಿ

೧೯ ವರ್ಷಗಳಿಂದ ಕೊಲೆಅಪಾದನೆಗಾಗಿ ಕಾರಾಗೃಹವಾಸವನ್ನು ಅನುಭವಿಸುತ್ತಲಿದ್ದ ಕಾರ್ಲೊ ಕಾರ್ಬ ನಿಯರೊ ಎಂಬುವನು ನಿರಪರಾಧಿಯೆಂದು ಈಗ ಇಟಲಿಯ ನ್ಯಾಯಾಲಯವೊಂದು ತೀರ್ಮಾನವಿತ್ತಿದೆ.

ಭೂದಾನ ಚಳುವಳಿಗೆ ಮನವಿ

ಆಗಸ್ಟ್ ೧೫ರಿಂದ ಮೈಸೂರು ಸಂಸ್ಥಾನಾದ್ಯಂತ ಭೂದಾನ ಯಜ್ಞ ಚಳುವಳಿ ನಡೆಯಬೇಕೆಂದು ಸಂಸ್ಥಾನದ ಭೂದಾನ ಸಮಿತಿಯವರು ಪ್ರಾರ್ಥಿಸಿದ್ದಾರೆ.

ಪತ್ರಿಕೆಗಳ ಜವಾಬ್ದಾರಿ ಗುರುತರವಾದುದು

ದೇಶದ ಪ್ರಗತಿ ಮಾರ್ಗದಲ್ಲಿ ಪತ್ರಿಕೆಗಳು ಟೀಕಿಸಬೇಕು

ಕೊಡಗು ಮುಖ್ಯಮಂತ್ರಿ ಶ್ರೀ ಪೂಣಾಚಾರವರ ಹೇಳಿಕೆ

ಮೈಸೂರು ೩

ಟೀಕೆ ಮಾಡುವುದು ಪತ್ರಿಕೆಗಳ ಅದ್ಯಂತ ಹಕ್ಕು. ಆದರೆ ಪತ್ರಿಕೆಗಳು ಅವುಗಳನ್ನು ದುರುಪಯೋಗ ಪಡಿಸಬಾರದು. ಭಾರತದಲ್ಲಿ ಪ್ರಜಾಪ್ರಭುತ್ವದ ಪರೀಕ್ಷೆಯು ಪ್ರಾರಂಭವಾಗಿದೆ. ದೇಶದಲ್ಲಿ ಅನೇಕ ವಿನಾಶಕಾರಕ ಶಕ್ತಿಗಳು ಕೆಲಸಮಾಡುತ್ತಿವೆ. ದೇಶದ ಸಂಘಟಕ ಕಾರ್ಯ, ಸ್ವಾತಂತ್ರ್ಯ ಭದ್ರತೆ ಮುಂತಾದ ಅನೇಕ ಗುರುತರವಾದ ಕಾರ್ಯಗಳನ್ನು ನಡೆಸಬೇಕಾಗಿರುವ ಸರ್ಕಾರಕ್ಕೆ ಪತ್ರಿಕೆಗಳು ದೇಶದ ಪ್ರಗತಿ ಮಾರ್ಗದಲ್ಲಿ ತಕ್ಕ ನೆರವನ್ನು ನೀಡಬೇಕು ಪಾಂಡವರ ಸತ್ಯ ಪರೀಕ್ಷೆಯನ್ನು ಮಾಡಲು ದೂರ್ವಾಸರು ತನ್ನ ಸಹಸ್ರಾರು ಶಿಷ್ಯರೊಂದಿಗೆ ಅವರಬಳಿಗೆ ಬಂದು ಪ್ರಾಪ್ತಿಯನ್ನು ಅಪೇಕ್ಷಿಸಿದಂತೆ ಭಾರತಸ್ಥಿತಿಯು ಈಗ ಇದೆ—ಎಂದು ಕೊಡಗಿನ ಮುಖ್ಯಮಂತ್ರಿ ಶ್ರೀ ಪೂಣಾಚಾರವರು ಮೊನ್ನೆಯದಿನ ಸಾಧ್ವಿ ಪತ್ರಿಕೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ಮಾತನಾಡುತ್ತಾ ತಿಳಿಸಿದರು.

ಈ ಸಮಾರಂಭಕ್ಕೆ ನಗರದ ಅನೇಕ ಪ್ರಮುಖರು, ಕೊಡಗಿನ ಸಚಿವ ಶ್ರೀ ಕೆ. ಮಲ್ಲಪ್ಪ. ಮೈಸೂರು ನಾಜಿ ಸಚಿವ ಶ್ರೀ ಹೆಚ್. ಸಿ ದಾಸಪ್ಪ ಮತ್ತು ಇನ್ನೂ ಅನೇಕ ಮಹನೀಯರು ಆಗಮಿಸಿದ್ದರು.

ಕುಮಾರಿ ಟಿ. ವಸಂತ ಮತ್ತು ಮಾಲತಿಯವರಿಂದ ಮಂಗಳಾಚರಣೆ, ಶ್ರೀ ಬಂಗಲೆ ಶ್ಯಾಮರಾಯರಿಂದ ಭಾರತ ವಾಚನ ನಡೆಯಿತು.

ಅನಂತರ ಪತ್ರಿಕೆಯ ಸಂಚಾಲಕರಾದ ಶ್ರೀ ಅಗರಂ ರಂಗಯ್ಯನವರು ಅತಿಥಿಗಳನ್ನು ಸ್ವಾಗತಿಸಿ ದಿವಂಗತ ಶ್ರೀ ತಾತಯ್ಯನವರನ್ನು ಸ್ಮರಿಸಿಕೊಂಡು ಅವರ ಸೇವೆಯನ್ನು ಕೊಂಡಾಡಿದರು.

ಶ್ರೀ ಹೆಚ್. ಸಿ ದಾಸಪ್ಪನವರು ಮಾತನಾಡುತ್ತಾ ಕೊಡಗಿನ ಮುಖ್ಯಮಂತ್ರಿಯವರನ್ನು ಎಲ್ಲರಿಗೂ ಪರಿಚಯ ಮಾಡಿಕೊಟ್ಟು ಕೊಡಗು ಮತ್ತು ಮೈಸೂರುಗಳ ಮಧುರ ಬಾಂಧವ್ಯವನ್ನು ವಿವರಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಪೂಣಾಚಾರವರು ಮಾತನಾಡುತ್ತಾ ಶ್ರೀ ರಂಗಯ್ಯನವರು ಪತ್ರಿಕಾ ಪ್ರಪಂಚ ಮತ್ತು ಕಾಂಗ್ರೆಸ್‌ನಲ್ಲಿ ನಡೆಸಿದ ಸೇವೆಯನ್ನು ಸ್ಮರಿಸಿಕೊಂಡು ಅವರ ಉದ್ಯಮವು ಇನ್ನೂ ಉತ್ತಮವಾಗಿ ಯಶಸ್ವಿಯಾಗಿ ಬೆಳೆಯಲೆಂದು ಆಶಿಸಿದರು.

ವಿಮಾನಯಾನ ರಾಷ್ಟ್ರೀಕರಣ ಸಮಾರಂಭ

ಬೆಂಗಳೂರು ೩

ಭಾರತದಲ್ಲಿ ವಿಮಾನಯಾನ ಸಂಚಾರ ವ್ಯವಸ್ಥೆಯು ರಾಷ್ಟ್ರೀಕರಣವಾದುದರ ಸಂಬಂಧವಾಗಿ ಮೊನ್ನೆಯದಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಬೆಂಗಳೂರಿನಿಂದ ದೆಹಲಿಗೆ ಪ್ರಥಮಸಂಚಾರವನ್ನು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಮಾತನಾಡುತ್ತಾ, ರಾಷ್ಟ್ರೀಕರಣವೆಂದರೆ ಸಮತಾವಾದ ರಾಷ್ಟ್ರೀಕರಣವಾದುದನ್ನು ಜನರು ತಪ್ಪೆಂದು ತಿಳಿದುಕೊಂಡು ಕೆಲಸಮಾಡಬೇಕು. ಖಾಸಗಿಯವರ ಕೈಲಿದ್ದಕ್ಕಿಂತಲೂ ಉತ್ತಮವಾಗಿದ್ದ ಸೇವೆಯನ್ನು ಸಲ್ಲಿಸಬೇಕು-ಎಂದು ಹೇಳಿದರು.

ಖೈದಿಗಳಿಗೆ ಸೌಲಭ್ಯ

ಉತ್ತರಪ್ರದೇಶದ ಸೆರೆಮನೆಗಳಲ್ಲಿರುವ ಖೈದಿಗಳು ಖಾದಿ ಟೋಪಿಯನ್ನು ಹಾಕಿಕೊಳ್ಳಲು ಅನುಮತಿ ನೀಡಲಾಗಿದೆ. ಅವರು ಸೊಳ್ಳೆಪರದೆ, ಚಪ್ಪಲಿಗಳನ್ನು ಉಪಯೋಗಿಸಲು ಸಹ ಅವಕಾಶ ಕೊಡಲಾಗಿದೆ.

ತಂಬಾಕು ಅಗಿಯುವುದು, ಬೀಡಿ ಚುಟ್ಟಾ ಮುಂತಾದುವನ್ನು ಸೇದುವುದಕ್ಕೆ ಇದ್ದ ಪ್ರತಿಬಂಧಕವನ್ನೂ ತೆಗೆದುಹಾಕಲಾಗಿದೆ-ಎಂದು ತಿಳಿಯಬರುತ್ತದೆ.

ನಿರುದ್ಯೋಗ ದಿನ

ಆಗಸ್ಟು ೧೫ನೇ ತಾರೀಖು ದೇಶದಾದ್ಯಂತ 'ನಿರುದ್ಯೋಗ ದಿನ' ವನ್ನಾಗಿ ಆಚರಿಸಬೇಕೆಂದು ಭಾರತ ಕಮ್ಯೂನಿಸ್ಟ್ ಪಕ್ಷವು ನಿರ್ಧರಿಸಿದೆ.

ಪತ್ರಿಕೆಗಳ ಜವಾಬ್ದಾರಿಯ ಜನಾಭಿಪ್ರಾಯವನ್ನು ಪ್ರತಿಬಿಂಬಿಸುತ್ತಿರುವ ಉತ್ತಮ ದರ್ಜೆಯ ಮತ್ತು ಸತ್ಯ ಪ್ರತಿಪಾದಕ ಪತ್ರಿಕೆಗಳು ದೇಶದಲ್ಲಿ ಹೆಚ್ಚಲೆಂದು ತಿಳಿಸಿದರು.

ನಂತರ ವಿದ್ವಾನ್ ಎ. ಸುಬ್ಬರಾಯರ ಸಂಗೀತವು, ವಿದ್ವಾನ್ ಟಿ. ಎಸ್ ತಾತಾಚಾರ್‌ರವರ ಪಿಟೀಲು, ಆ|| ವಿದ್ವಾನ್ ಟಿ ಎಂ. ವೆಂಕಟೇಶದೇವರುರವರ ಮೃದಂಗ, ವಿದ್ವಾನ್ ವಿ. ನಾಗಭೂಷಣಾಚಾರ್‌ರವರ ಡೋಲಕ್, ವಿದ್ವಾನ್ ಬಾಬುಸ್ವಾಮಿಯವರ ಘಟಂ ಸಮೇತ ನಡೆಯಿತು.

ಈ ಸಮಾರಂಭದ ಅಂಗವಾಗಿ ನಿನ್ನೆಯದಿನ ಒಂದು ಸತ್ಕಾರಕೂಟವು ನಡೆಯಿತು. ಇದಕ್ಕೂ ಅನೇಕ ಗಣ್ಯವ್ಯಕ್ತಿಗಳು ಆಗಮಿಸಿದ್ದರು.

ಕರ್ಣಾಟಕ ಪ್ರಾಂತ್ಯರಚನೆಗೆ ಸತ್ಯಾಗ್ರಹ ಬೇಡ

ಕ್ರಿಯಾಸಮಿತಿ ಸದಸ್ಯ ಶ್ರೀ ಕಾರಂತರ ವಿರೋಧ

ಆಗಸ್ಟ್ ೯ ನೇ ತಾರೀಖಿನಿಂದ ಕರ್ಣಾಟಕ ಪ್ರಾಂತ್ಯರಚನೆಗಾಗಿ ಚಳುವಳಿಯನ್ನು ಹೂಡಬೇಕೆಂದು ಕರ್ಣಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕ್ರಿಯಾ ಸಮಿತಿಯು ನಿರ್ಧರಿಸಿ ಈ ವಿಷಯದಲ್ಲಿ ಒಂದು ಉಪಸಮಿತಿಯನ್ನು ರಚಿಸಿ ಅದರಲ್ಲಿ ಶ್ರೀ ಕೆ. ಆರ್. ಕಾರಂತರನ್ನು ಸದಸ್ಯರನ್ನಾಗಿ ಆರಿಸಲಾಗಿತ್ತಷ್ಟೆ. ಈ ವಿಷಯದಲ್ಲಿ ಶ್ರೀ ಕೆ. ಆರ್. ಕಾರಂತರು ಒಂದು ಹೇಳಿಕೆಯನ್ನಿತ್ತು ತಾವು ಈ ನಿರ್ಣಯವನ್ನು ಸಮರ್ಥಿಸುವುದಿಲ್ಲ ವೆಂದು ಹೇಳಿದ್ದಾರೆ.

ಈ ಚಳುವಳಿಯಿಂದ ಪ್ರಯೋಜನವೇನೂ ಇಲ್ಲ. ಅದರಲ್ಲೂ ಸ್ವಾತಂತ್ರ್ಯದಿನವಾದ ಆಗಸ್ಟು ೧೫ನೇ ತಾ|| ಕಪ್ಪು ಧ್ವಜವನ್ನು ಹಾರಿಸಬೇಕೆಂಬುದು ತೀರಾ ಶೋಚನೀಯವಾದುದು. ಈ ವಿಚಾರವನ್ನು ಪುನರ್ವಿಮರ್ಶಿಸಲು ಕೂಡಲೇ ಬೆಂಗಳೂರಿನಲ್ಲಿ ಪರಿಷತ್ತಿನ ಸಭೆ ಸೇರಬೇಕು ಎಂದು ಅವರು ತಿಳಿಸಿದ್ದಾರೆ

ರಾಜಕೀಯಕ್ಕೆ ಉಪವಾಸ ಬೇಡ

ಬಳ್ಳಾರಿ ಭವಿಷ್ಯದ ಬಗ್ಗೆ ಉಪವಾಸ ಮಾಡುತ್ತಿರುವ ಶ್ರೀ ರಾಮರೆಡ್ಡಿಯವರಿಗೆ ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ತಂತಿಯನ್ನು ಕಳುಹಿಸಿ ಉಪವಾಸವನ್ನು ನಿಲ್ಲಿಸಬೇಕೆಂದೂ ಮತೀಯ ವಿಚಾರಗಳಿಗೆ ಉಪವಾಸ ಆಚರಿಸಬೇಕೇ ವಿನಹ ರಾಜಕೀಯಕ್ಕಲ್ಲ ಎಂದು ತಿಳಿಸಿದ್ದಾರೆ.

ಹಿಂದಿ ಬೋರ್ಡು ಅಳಿಸುವ ಚಳುವಳಿ

ಬೆಂಗಳೂರು ೩

ದ್ರಾವಿಡ ಸಂಘದ ಸದಸ್ಯರು ಹಿಂದೀ ಭಾಷೆಯಲ್ಲಿರುವ ಬೋರ್ಡುಗಳನ್ನು ಅಳಿಸುವ ಚಳುವಳಿಯ ಸಂಬಂಧದಲ್ಲಿ ಮೊನ್ನೆಯದಿನ ದಂಡು ಮತ್ತು ಕೃಷ್ಣರಾಜಪುರಂ ರೈಲ್ವೆ ನಿಲ್ದಾಣಗಳಲ್ಲಿ ೭ ಜನರನ್ನು ಬಂಧಿಸಲಾಯಿತು.

ಮದ್ರಾಸ್ ಶಾಸನ ಸಭೆಯ ವಿಶೇಷ ಅಧಿವೇಶನಕ್ಕೆ ಮನವಿ

ಸರ್ಕಾರಕ್ಕೆ ಸೋಲುಂಟಾದರೂ ರಾಜೀನಾಮೆ ಕೊಡದಿರುವುದರಿಂದ ಈ ಪ್ರಶ್ನೆಯನ್ನು ಪರಿಶೀಲಿಸಲು ಮದ್ರಾಸ್ ಶಾಸನ ಸಭೆಯ ವಿಶೇಷ ಅಧಿವೇಶನವನ್ನು ಕರೆಯುವಂತೆ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಚಾರಿಯವರನ್ನು ಒತ್ತಾಯಪಡಿಸುವುದಾಗಿ ಪ್ರಜಾಸೋಷಲಿಸ್ಟ್ ಪಕ್ಷದ ಶ್ರೀ ಟಿ. ವಿಶ್ವನಾಥಂರವರು ಹೇಳಿದ್ದಾರೆ.

ಸೇವಾದಳ ಪ್ರಾಥಮಿಕ ಶಿಕ್ಷಣ

ಮೈಸೂರು ೩

ಭಾರತ ಸೇವ ದಳದ ಪ್ರಾಥಮಿಕ ಶಿಕ್ಷಣವನ್ನು ಆಗಸ್ಟ್ ತಿಂಗಳಿನ ೨ನೇ ವಾರದಿಂದ ಮೈಸೂರು ನಗರದ ವಿವಿಧ ಭಾಗಗಳಲ್ಲಿ ಕೊಡಲು ತೀರ್ಮಾನಿಸಿದೆ ಪ್ರಾಥಮಿಕ ಶಿಕ್ಷಣವನ್ನು ಪಡೆಯಲಿಚ್ಛಿಸುವರು ನಿವೇದನ ಪತ್ರಗಳೊಡನೆ ಮೈಸೂರು ಹಳೇ ಅಗ್ರಹಾರದಲ್ಲಿರುವ ಶ್ರೀ ಶಿವಾನಂದಮೂರ್ತಿಯವರೊಡನೆ ಪತ್ರವ್ಯವಹಾರ ಮಾಡಬೇಕಾಗಿ ತಿಳಿಸಲಾಗಿದೆ.

ಪಾರ್ಲಿಮೆಂಟ್ ಅಧಿವೇಶನ

ಪಾರ್ಲಿಮೆಂಟಿನ ಅಧಿವೇಶನವು ಈದಿನ ದೆಹಲಿಯಲ್ಲಿ ಪ್ರಾರಂಭವಾಯಿತು. ಮೊದಲನೇ ೩ ದಿನಗಳಲ್ಲಿ ಉಳಿದಿರುವ ಮಸೂದೆಗಳನ್ನು ಪರಿಶೀಲಿಸಲಾಗುವುದು ಈ ಅಧಿವೇಶನದಲ್ಲಿ ೧೨ ಸರ್ಕಾರಿ ಹೊಸ ಮಸೂದೆಗಳನ್ನು ಮಂಡಿಸಲಾಗುತ್ತದೆ-ಎಂದು ತಿಳಿಯಬರುತ್ತದೆ. ಅದರಲ್ಲಿ ಮುಖ್ಯವಾದುದು ಆಂಧ್ರಪ್ರಾಂತ್ಯ ಮಸೂದೆ.

ಪಾರ್ಲಿಮೆಂಟಿನ ಕಾಂಗ್ರೆಸ್ ಸದಸ್ಯರ ಸಭೆ

ಪಾರ್ಲಿಮೆಂಟಿನ ಕಾಂಗ್ರೆಸ್ ಸದಸ್ಯರ ಸಭೆಯು ನಿನ್ನೆಯ ದಿನ ಪಕ್ಷದ ನಾಯಕ ಶ್ರೀ ನೆಹರೂರವರು ಅಧ್ಯಕ್ಷತೆಯಲ್ಲಿ ನಡೆಯಿತು. ತಮಗೂ ಪಾಕ್ ಪ್ರಧಾನಿ ಮಹಮ್ಮದ್ ಆಲಿಯವರಿಗೂ ಕರಾಚಿಯಲ್ಲಿ ಆದ ಮಾತುಕತೆಗಳ ಬಗ್ಗೆ ವಿವರವನ್ನು ಸಭೆಗೆ ತಿಳಿಸಿದರೆಂದು ಹೇಳಲಾಗಿದೆ.

ಅಪೇರ
31—7—53 ರಿಂದ ಪ್ರಾರಂಭ
ಪ್ರತಿದಿನ ಮೂರು ಆಟಗಳು
ಇನ್‌ಸ್ಪೆಕ್ಟರ್ ತಮಿಳು
ಪಾತ್ರ:-ಬಾಲಚಂದರ್, ಟಿ. ಕೆ. ಷಣ್ಮುಗಂ, ಟಿ. ಕೆ. ಸರಸ್ವತಿ, ಅಂಜಲಿದೇವಿ

ಪ್ರಕಾಶಕರು:—ಜಿ. ಎಲ್. ಸ್ವಾಮಿ
ಮುದ್ರಕರು:— ಹಿ. ಕಾ. ಸುಬ್ಬರಾವ್
ಮೋಹನ ಮುದ್ರಣಾಲಯ ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೪

ಸಮಾಚಾರ

ದಿನಪತ್ರಿಕೆ
ಸಂಪುಟ ೩
ಸಂಚಿಕೆ ೨೮೫

೪-೮-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮದರಾಸಿನ ಕನ್ನಡ ಪ್ರದೇಶಗಳು ಮೈಸೂರಿಗೆ ಸೇರಬೇಕು

ಕೊಯಮತ್ತೂರು ಜಿಲ್ಲಾ ಕನ್ನಡಿಗರ ಸಮ್ಮೇಳನದಲ್ಲಿ ಒತ್ತಾಯ

ಕೊಯಮತ್ತೂರು ಜಿಲ್ಲಾ ಕನ್ನಡಿಗರ ಸಮ್ಮೇಳನವು ಗೋಪಿಚೆಟ್ಟಿ ಪಾಳ್ಯದ ತಾಲ್ಲೂಕು ತಾಳವಾಡಿ ಗ್ರಾಮದಲ್ಲಿ ಮೊನ್ನೆ ದಿನ ಬೊಂಬಾಯಿನ ಶಾಸನಸಭಾ ಸದಸ್ಯರೂ, ಕರ್ನಾಟಕ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿಗಳ ಆದ ಶ್ರೀ ಗುದ್ದೆಪ್ಪ ಹಳ್ಳಿಕೇರಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಕೊಳ್ಳೇಗಾಲ ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷರಿಂದ ಧ್ವಜಾರೋಹಣವಾದನಂತರ ಮೈಸೂರು ಶಾಸನಸಭಾ ಸದಸ್ಯರಾದ ಶ್ರೀ ಯು. ಎಂ. ಮಾದಪ್ಪನವರು ಸಮ್ಮೇಳನದ ಉದ್ಘಾಟನ ಮಾಡುತ್ತಾ "ಕೊಯಮತ್ತೂರು ಜಿಲ್ಲಾ ಕನ್ನಡಿಗರನ್ನು ಮಾತ್ರವಲ್ಲದೆ, ಆಂಗ್ಲರ ಆಳ್ವಿಕೆಯಿಂದ ಹರಿದು ಹಂಚಿ ಹೋಗಿರುವ ಎಲ್ಲಾ ಕನ್ನಡಿಗರನ್ನು ಯಾವ ಪ್ರಾಂತ್ಯದಲ್ಲಿ ಇದ್ದಾಗ್ಯೂ ಪ್ರೀತಿ ವಿಶ್ವಾಸದಿಂದ ಮೈಸೂರು ಪ್ರಾಂತ್ಯಕ್ಕೆ ಸೇರಿಸಿಕೊಂಡು, ನಮ್ಮ ಸಹೋದರರಂತೆ ಕಾಣುತ್ತೇವೆ. ನಮ್ಮ ಸಹೋದರರು ಬೇರೆ ಬೇರೆ ಸರ್ಕಾರಗಳ ಆಡಳಿತದಲ್ಲಿ ಸಿಕ್ಕಿ ತೊಂದರೆ ಪಡುತ್ತಿರುವುದು ವಿಮೋಚನೆಯಾಗಬೇಕಾದರೆ ಭಾಷಾವಾರು ಪ್ರಾಂತ ರಚನೆಯೊಂದೇ ನಿವಾರ್ಯ ಪಥ. ಈ ಭಾಷಾವಾರು ಪ್ರಾಂತ್ಯರಚನೆಗೆ ಅಡ್ಡಿ ಆತಂಕಗಳು ಆಡಳಿತ ವರ್ಗದಿಯಲ್ಲಿ ಬರುತ್ತಲಿವೆ. ಕೆಚ್ಚೆದೆಯ ವೀರರಾದ ಕನ್ನಡಿಗರು ಇವುಗಳಿಗೆ ಎದೆಗೊಟ್ಟು ನಿಂತು, ಅಖಂಡ ಕರ್ಣಾಟಕದ ನಿರ್ಮಾಣದಲ್ಲಿ ಭಾಗಿಗಳಾಗಬೇಕು—ಎಂದು ಹೇಳಿದರು.

ಕೊಳ್ಳೇಗಾಲದಿಂದ ಆಗಮಿಸಿದ ತಾಲ್ಲೂಕು ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ ಸಿ. ಕೃಷ್ಣಶೆಟ್ಟರು, ಕಾರ್ಯದರ್ಶಿಗಳಾದ ಶ್ರೀ ರಾಮಕೃಷ್ಣಶೆಟ್ಟರು ಭಾಷಣಮಾಡುತ್ತಾ ಈ ಜಿಲ್ಲೆಯ ಕನ್ನಡಿಗರೆಲ್ಲಾ ಮೈಸೂರಿಗೆ ಸೇರಲೇಬೇಕೆಂದು ತಿಳಿಸಿದರು.

ಅಧ್ಯಕ್ಷ ಶ್ರೀ ಗುದ್ದೆಪ್ಪ ಹಳ್ಳಿಕೇರಿಯವರು ಮಾತನಾಡುತ್ತಾ "ಕರ್ನಾಟಕ ಏಕೀಕರಣವಾಗಬೇಕಾದ್ದು ಕನ್ನಡಿಗರ ಪರಂಪರೆಯಾದ ಆಸೆ ಎಂತಲೂ, ಇದನ್ನು ತಡೆಗಟ್ಟಲು ಯಾರಿಂದಲೂ ಸಾಧ್ಯವಿಲ್ಲ ಆದ್ದರಿಂದ ಪ್ರಜಾಸರ್ಕಾರದವರು ಇದನ್ನು ಕೂಡಲೆ ಸ್ವಾಗತ ಮಾಡುತ್ತಾರೆಂದು ನಂಬಿದ್ದೇನೆ" ಎಂದು ತಿಳಿಸಿದರು.

ಅನಂತರ ಈ ಕೆಳಕಂಡ ನಿರ್ಣಯವನ್ನು ಮಾಡಲಾಯಿತು:—

ಬಳ್ಳಾರಿ ಪೌರಸಭಾಧ್ಯಕ್ಷರ ದಸ್ತಗಿರಿ ಮತ್ತು ಶಿಕ್ಷೆ

ಬಳ್ಳಾರಿ ಮೈಸೂರಿಗೆ ಸೇರಿಸಿದ್ದಕ್ಕೆ ಪ್ರತಿಭಟನಾ ಚಳುವಳಿ

ರಾಷ್ಟ್ರೀಯ ವಿಸ್ತರಣ ಅಭಿವೃದ್ಧಿ ಕ್ಷೇತ್ರಗಳು

೧೯೫೩-೧೯೫೪ನೇ ಸಾಲಿನಲ್ಲಿ ರಾಷ್ಟ್ರೀಯ ವಿಸ್ತರಣ ಯೋಜನೆಯ ಅಂಗವಾಗಿ ಮೈಸೂರು ಸಂಸ್ಥಾನದಲ್ಲಿ ೭ ಅಭಿವೃದ್ಧಿ ಕಾರ್ಯಕ್ಷೇತ್ರಗಳನ್ನು ಸ್ಥಾಪಿಸಲು ಕೇಂದ್ರ ಆಯೋಜನ ಸಮಿತಿಯು ತನ್ನ ಒಪ್ಪಿಗೆಯನ್ನು ನೀಡಿದೆ.

ಭಾರತಾದ್ಯಂತ ಈ ಯೋಜನೆಯ ಅಂಗವಾಗಿ ೨೨೦ ಅಭಿವೃದ್ಧಿ ಕೇಂದ್ರಗಳನ್ನೂ ಸ್ಥಾಪಿಸಲಾಗುತ್ತದೆ. ಇವುಗಳಲ್ಲೆಲ್ಲಾ ಉತ್ತರ ಪ್ರದೇಶದಲ್ಲಿ ಇದರ ಸಂಖ್ಯೆಯು ಅಧಿಕವಾಗಿದೆ [೩೭ ಕ್ಷೇತ್ರಗಳು]

ಈ ಕ್ಷೇತ್ರಗಳು ಒಂದು ಕೋಟಿ ೩೦ಲಕ್ಷ ಜನಸಂಖ್ಯೆಯುಳ್ಳ ಸುಮಾರು ೨೦,೦೦೦ ಗ್ರಾಮಗಳಿಗೆ ಅಡಕವಾಗಿದೆ. ೩ ವರ್ಷಗಳ ಕಾಲದಲ್ಲಿ ಇದರ ವೆಚ್ಚವು ೧೫ಕೋಟಿ ರೂಪಾಯಿಗಳಾಗುತ್ತವೆ. ಪ್ರತಿಯೊಂದು ಕ್ಷೇತ್ರಕ್ಕೂ ಏಳೂವರೆಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತದೆ. ಈ ರಾಷ್ಟ್ರೀಯ ವಿಸ್ತರಣ ಯೋಜನೆಯ ಪ್ರಕಾರ ಈ ಪ್ರದೇಶಗಳಲ್ಲಿ ಜನರಿಗೆ ಬೇಕಾಗುವ ಸಾಮಾನ್ಯ ಸೌಕರ್ಯಗಳನ್ನು ಕಲ್ಪಿಸಲ ಗುವುದು

ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಒಟ್ಟು ೧೨೦೦ ಇಂತಹ ಕ್ಷೇತ್ರಗಳನ್ನು ರಚಿಸಲು ವ್ಯವಸ್ಥೆ ಮಾಡಲಾಗುವುದೆಂದು ತಿಳಿಯಬರುತ್ತದೆ.

ಪಾಲಿ ಸಂಸ್ಥೆಗೆ ಅಮೆರಿಕದ ಸಹಾಯ

ನಲಂದಾದಲ್ಲಿರುವ ಪಾಲಿ ಮತ್ತು ಬೌದ್ಧ ಸಾಹಿತ್ಯ ಸಂಸ್ಥೆಗೆ ಅಮೇರಿಕಾ ಸರ್ಕಾರವು ೫೦ಸಾವಿರ ರೂ. ಗಳನ್ನು ಕೊಟ್ಟಿದೆ.

ಬಳ್ಳಾರಿ ಜಿಲ್ಲಾದ ೭ ತಾಲ್ಲೂಕುಗಳು ಮೈಸೂರು ರಾಜ್ಯಕ್ಕೆ ಸೇರಿಸುವ ಸಂದರ್ಭದಲ್ಲೇ ಕೊಯಮತ್ತೂರು ಜಿಲ್ಲಾ ಗೋಪಿಚೆಟ್ಟಿ ಪಾಳ್ಯದ ತಾಲ್ಲೂಕು ತಾಳವಾಡಿ ಫಿರ್ಕಾ ಕನ್ನಡ ಪ್ರದೇಶವು ಭವಾನಿ ತಾಲ್ಲೂಕು ಬರಗೂರು ಅರಣ್ಯ ಪ್ರದೇಶ, ಕೆ ಕೈಗಾರಿ ತಾಲ್ಲೂಕು ಇವುಗಳು ಸೇರಿಸಲ್ಪಡಬೇಕೆಂದು ಕೇಂದ್ರಸರ್ಕಾರವನ್ನು ಈ ಸಭೆಯು ಸರ್ವಾನುಮತದಿಂದ ಒತ್ತಾಯ ಪೂರ್ವಕವಾಗಿ ಪ್ರಾರ್ಥಿಸುತ್ತದೆ".

ಬಳ್ಳಾರಿ ಜಿಲ್ಲೆಯನ್ನು ಮೈಸೂರಿಗೆ ಸೇರಿಸಿರುವುದನ್ನು ಪ್ರತಿಭಟಿಸಿ ಬಳ್ಳಾರಿಯಲ್ಲಿ ಈಗ ನಡೆಯುತ್ತಿರುವ ಚಳುವಳಿಯ ಸಂಬಂಧದಲ್ಲಿ ನಿನ್ನೆಯದಿನ ಅಲ್ಲಿನ ಪೌರಸಭಾಧ್ಯಕ್ಷ ಶ್ರೀ ಮಲ್ಲಿಗೆ ದೊಡ್ಡಬಸಪ್ಪ ಮತ್ತು ೨ ಮಂದಿ ವಕೀಲರೂ ಅವರಾಗಿ ೫ಜನ ಮಂದಿಯನ್ನು ನಿಷೇಧಾಜ್ಞೆಯನ್ನು ಉಲ್ಲಂಘಿಸಿದರೆಂದು ಪೋಲೀಸರು ದಸ್ತಗಿರಿ ಮಾಡಿದರು ಅನಂತರ ಅಲ್ಲಿನ ಸಬ್ ಮ್ಯಾಜಿಸ್ಟ್ರೇಟರು ಅವರಿಗೆ ೨ ವಾರಗಳ ಸದಾ ಶಿಕ್ಷೆಯನ್ನು ವಿಧಿಸಿದರು.

ಶಾಸನಸಭೆ ಪಕ್ಷಭಾದ್ಯತೆ ಪರಿಶೀಲನೆ ಸಮಿತಿ

ಬೆಂಗಳೂರು ೪

ನಿನ್ನೆಯದಿನ ಶಾಸನಸಭೆಯ ಪಕ್ಷಭಾದ್ಯತೆ ಸಮಿತಿಗೆ ಶ್ರೀಗಳಾದ ಬಿ. ರಾಚಯ್ಯ ನೀಲೇಗೌಡ, ಟಿ. ಮರಿಯಪ್ಪ ಮತ್ತು ಕೆಂಪರಾಜ್‌ರವರು ಅವಿರೋಧವಾಗಿ ಚುನಾಯಿತರಾದರು.

ಶ್ರೀಗಳಾದ ಎಂ. ವಿ. ರಾಮರಾವ್, ಎಂ. ರಾಜಶೇಖರಮೂರ್ತಿ ಮತ್ತು ಕೆ. ಪಟ್ಟಾಭಿರಾಮ್‌ರವರನ್ನು ಸದಸ್ಯರನ್ನಾಗಿ ಅಧ್ಯಕ್ಷರು ನಾಮಕರಣಮಾಡಿ, ಶ್ರೀ ಟಿ. ಮರಿಯಪ್ಪನವರನ್ನು ಸಮಿತಿಯ ಅಧ್ಯಕ್ಷರಾಗಿ ನೇಮಿಸಿದರು.

ಇಂಟರ್ ಕಾಲೇಜುಗಳು ವಿಶ್ವವಿದ್ಯಾನಿಲಯದಾಡಳಿತದಲ್ಲೇ ಇರಬೇಕು

ಬೆಂಗಳೂರು ೪

ವಿಶ್ವವಿದ್ಯಾನಿಲಯಗಳ ಹತೋಟಿಯಿಂದ ಇಂಟರ್ ಕಾಲೇಜುಗಳನ್ನು ತಪ್ಪಿಸುವುದು ಸಾಧುವಲ್ಲವೆಂದು ಶ್ರೀ ಟಿ. ಮರಿಯಪ್ಪನವರು ಶಾಸನ ಸಭೆಯಲ್ಲಿ ಶಿಕ್ಷಣ ಸುಧಾರಣ ಸಮಿತಿಯವರದಿ ಚರ್ಚೆಗೆ ಬಂದಾಗ ತಿಳಿಸಿದರು.

ಸದ್ಯದಲ್ಲಿಯೇ ಭಾರತ ಸರ್ಕಾರವು ನೇಮಿಸಿರುವ ಸೆಕೆಂಡರಿ ವಿದ್ಯಾಭ್ಯಾಸ ಸುಧಾರಣಾ ಸಮಿತಿಯವರ ವರದಿ ಹೊರಬೀಳುವ ನಿರೀಕ್ಷೆಯಿರುವುದರಿಂದ ಸಂಸ್ಥಾನದ ವರದಿಯನ್ನು ಅನಂತರ ಪರಿಶೀಲಿಸುವುದು ಸೂಕ್ತವೆಂದು ವಿರೋಧ ಪಕ್ಷದ ಜನಾಬ್ ಇಮಾಂರವರು ಹೇಳಿದರು.

ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಭೆ

ಮೈಸೂರು ೪

ರಾಜಧಾನಿಯಲ್ಲಿ ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘವೊಂದನ್ನು ಸ್ಥಾಪಿಸಲು, ಇದೇ ೬ನೇ ತಾರೀಖು ಬೆಳಗ್ಗೆ ೧೧ ಗಂಟೆಗೆ ಗಾಯತ್ರಿ ಹೋಟೇಲಿನಲ್ಲಿ ಸಭೆಯೊಂದನ್ನು ಏರ್ಪಡಿಸಲಾಗಿದೆಯೆಂದೂ, ನಗರದ ಕಾರ್ಯನಿರತ ಪತ್ರಿಕೋದ್ಯೋಗಿಗಳೆಲ್ಲಾ ಸಭೆಗೆ ಬರಮಾಡಬೇಕೆಂದೂ, ಸಂಚಾಲಕರು ಕೋರುತ್ತಾರೆ.

ಬಳ್ಳಾರಿ ಪ್ರಶ್ನೆ ಪುನಃ ಪರಿಶೀಲನೆ

ಬಳ್ಳಾರಿ ತಾಲ್ಲೂಕನ್ನು ಮೈಸೂರಿಗೆ ಸೇರಿಸಿರುವುದು ವಿಷಯದಲ್ಲಿ ಅನೇಕ ಆಂಧ್ರನಾಯಕರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸುತ್ತಿರುವುದರಿಂದ ಬಳ್ಳಾರಿ ಪ್ರಶ್ನೆಯನ್ನು ಗಡಿ ನಿರ್ಣಯ ಸಮಿತಿಯ ಪರಿಶೀಲನೆಗೆ ಒಪ್ಪಿಸಲಾಗುವುದೆಂದು, ಪ್ರಧಾನಿ ನೆಹರೂರವರು ಸದ್ಯದಲ್ಲೇ ಹೇಳಿಕೆಯೊಂದನ್ನು ಹೊರಡಿಸುವುದೆಂದು ತಿಳಿಯಬರುತ್ತದೆ.

ಆಂಧ್ರದ ತಾತ್ಕಾಲಿಕ ರಾಜಧಾನಿಯು ಕರ್ನೂಲ್ ಆಗಬಾರದೆಂದು ಅನೇಕ ಕಾಂಗ್ರೆಸ್ ಮತ್ತು ಇತರ ಪಕ್ಷದವರು ಪ್ರಧಾನಿಯವರನ್ನು ಒತ್ತಾಯಪಡಿಸುತ್ತಿರುವುದಾಗಿಯೂ ಹೇಳಲಾಗುತ್ತಿದೆ. ಅಂತ್ಯ ನಿರ್ಧಾರವನ್ನು ಕೇಂದ್ರಸರ್ಕಾರವು ಈಗ ಕೈಕೊಳ್ಳಬೇಕಾಗಿದೆ ಆದ ಬಗ್ಗೆ ರೀತಿಯಾಗುವುದೆಂದು ಬಗ್ಗೆ ಇನ್ನೂ ಯಾವ ನಿರ್ಧಾರವೂ ಆಗಿಲ್ಲವೆಂದು ತಿಳಿಯಬರುತ್ತದೆ.

ಬಳ್ಳಾರಿ ಪ್ರಶ್ನೆಯನ್ನು ಕೇಂದ್ರವು ಪುನಃ ಪರಿಶೀಲಿಸುವುದೆಂದು ಪತ್ರಿಕೆಗಳಲ್ಲಿ ಪತ್ರಿಕೆಗೆ ಒಂದು ಸುದ್ದಿಯು ಬಂದ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಶಾಸನ ಸಭೆಯಲ್ಲಿ ಮಾತನಾಡುತ್ತಾ ತಾವು ಈಸುದ್ದಿ ನೋಡಿರುವುದಾಗಿಯೂ ಆದರೆ ಇದನ್ನು ಪ್ರಕಾಶಿಸುವರ ಕಛೇರಿಯಿಂದ ಹೊರಬಿದ್ದ ಸುದ್ದಿಯೆಂದು ಭಾವಿಸಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ.

ಈಗಾಗಲೇ ಮೈಸೂರು ಶಾಸನ ಸಭೆಗಳ ಬಳ್ಳಾರಿ ಪ್ರಶ್ನೆಯನ್ನು ಪುನ ಪರಿಶೀಲಿಸಕೂಡದೆಂದು ನಿರ್ಣಯವನ್ನು ನೆಹರೂರವರ ಗಮನಕ್ಕೆ ತರಲಾಗಿದೆ ಅದಕ್ಕೆ ಉತ್ತರ ಕಾಯುತ್ತಿರುವುದಾಗಿಯೂ ಮುಖ್ಯ ಮಂತ್ರಿಗಳು ತಿಳಿಸಿದ್ದಾರೆ.

● ನೇಪಾಳದಲ್ಲಿ ಗುಂಪಿನವರ ಮುಖಂಡ ನೆನಿಸಿಕೊಂಡಿದ್ದ ಭೀಮದತ್ ಪಂತ ಎಂಬುವರನ್ನು ಗುಂಡಿಟ್ಟು ಕೊಲ್ಲಲಾಯಿತೆಂದು ಹೇಳಲಾಗಿದೆ.

ಟ್ರಾಂವೆ ದರ ವಿರೋಧ ಕಾರ್ಯಾಚರಣೆ ನಿಂತಿತು

ಕಲ್ಕತ್ತಾದಲ್ಲಿ ಟ್ರಾಂವೆ ಕಂಪೆನಿಯಲ್ಲಿ ದರವನ್ನು ಏರಿಸಿರುವುದರ ಬಗ್ಗೆ ನಡೆಯುತ್ತಿದ್ದ ಎಲ್ಲಾ ಕಾರ್ಯಚರಣೆಗಳನ್ನೂ ನಿಲ್ಲಿಸಿರುವುದಾಗಿ ಸಮಿತಿ ಅಧ್ಯಕ್ಷರು ತಿಳಿಸಿದ್ದಾರೆ. ಪಶ್ಚಿಮಬಂಗಾಳ ಮುಖ್ಯಮಂತ್ರಿ ಡಾ|ಬಿ. ಸಿ. ರಾಯ್‌ರವರು ತಮ್ಮ ಯುರೋಪ್ ಪ್ರವಾಸವನ್ನು ಮುಗಿಸಿಕೊಂಡು ಕಲ್ಕತ್ತಾಕ್ಕೆ ಆಗಮಿಸಿ ಅಲ್ಲಿಯ ಪರಿಸ್ಥಿತಿಗಳನ್ನೆಲ್ಲಾ ಪರಿಶೀಲಿಸಿ ಅವುಗಳ ಪರಿಹಾರವನ್ನು ಕಲ್ಪಿಸಲು ಭರವಸೆಯಿತ್ತಿರುವುದರಿಂದ ಈರೀತಿ ಮಾತಲಾಗಿದೆ. ಆದರೆ ಇಂದು 'ಬಂದಿಗಳ ಬಿಡುಗಡೆ' ದಿನವನ್ನಾಗಿ ಆಚರಿಸಲಾಗುವುದೆಂದು ತಿಳಿಯಬರುತ್ತದೆ.

ಕೊರಿಯಾ ಯುದ್ಧಬಂದಿ ವಿನಿಮಯ ಸಮಿತಿ

ಭಾರತದ ಮೇಲೆ ಹೆಚ್ಚಿನ ಜವಾಬ್ದಾರಿ

ಕೊರಿಯಾ ಯುದ್ಧ ಬಂದಿಗಳ ವಿನಿಮಯದ ತಟಸ್ಥ ರಾಷ್ಟ್ರಗಳ ಸಮಿತಿಗೆ ಭಾರತವನ್ನು ಅಧ್ಯಕ್ಷಸ್ಥಾನಕ್ಕೆ ಚುನಾಯಿಸಿರುವುದು ಭಾರತದ ಮೇಲೆ ವಿಶೇಷ ಜವಾಬ್ದಾರಿ ಬಿದ್ದಿದೆ ಆದರೂ ಅದನ್ನು ನಿರ್ವಹಿಸುವುದರಲ್ಲಿ ಭಾರತ ಶಕ್ತಿಮೀರಿ ಕೆಲಸ ಮಾಡುವುದು ಎಂದು ಪ್ರಧಾನಿ ನೆಹರೂ ತಿಳಿಸಿದ್ದಾರೆ.

ಅಧಿಕಾರ ದುರುಪಯೋಗಕ್ಕೆ ಶಿಕ್ಷೆ

ಕೈರೋದಲ್ಲಿ ವಾಫಡಿಸ್ಟ್ ಪಕ್ಷವು ಆಡಳಿತದಲ್ಲಿದ್ದಾಗ ಅದರ ನಾಯಕರಾದ ಮುಸ್ತಫಾನಹಸ್‌ಪಾಷಾರವರ ಪತ್ನಿಯು ತಮ್ಮ ಪ್ರಭಾವ ಉಪಯೋಗಿಸಿ ತಮ್ಮ ಗ್ರಾಮಾಂತರ ಪ್ರದೇಶದ ಮನೆಗೆ ರಸ್ತೆಯೊಂದನ್ನು ಮಾಡಿಸಿಕೊಂಡಿರುವ ಅಪಾದನೆ ಮೇಲೆ ಕೈರೋ ನ್ಯಾಯಾಲಯವು ಈ ರಸ್ತೆಯ ವೆಚ್ಚಗಳನ್ನೆಲ್ಲಾ ಆಕೆಯಿಂದ ವಸೂಲ್ಮಾಡಲು ಆಜ್ಞೆಮಾಡಿದೆ.

ವಲಸೆಗಾರರ ಪ್ರಶ್ನೆ

ಭಾರತ ಪಾಕೀಸ್ತಾನಗಳ ವಲಸೆಗಾರರ ಆಸ್ತಿಪಾಸ್ತಿ ಮತ್ತು ಇತರ ವಿಷಯಗಳಿಗೆ ಸಂಬಂಧಪಟ್ಟಂತ ಉಭಯ ಸರ್ಕಾರಗಳ ಉನ್ನತಾಧಿಕಾರಿಗಳ ನಡುವೆ ಕಳೆದ ಒಂದು ವಾರದಿಂದ ನಡೆಯುತ್ತಲಿದ್ದ ಮಾತುಕತೆಗಳು ಈದಿನ ಮುಕ್ತಾಯವಾಗುವ ನಿರೀಕ್ಷೆಯಿದೆ. ಈ ಸಂಬಂಧದಲ್ಲಿ ಒಂದು ಸಂಯುಕ್ತ ಪ್ರಕಟಣೆ ಹೊರಬೀಳುವುದು. ಪುನಃ ಮಾತುಕತೆಗಳು ದೆಹಲಿಯಲ್ಲಿ ಪ್ರಾರಂಭವಾಗುವುದೆಂದು ಹೇಳಲಾಗಿದೆ.

ಪ್ರಸಾರ ಭಾಷಣ

ಅಖಿಲಭಾರತ ರೇಡಿಯೋದಿನ ಪ್ರಜಾಪ್ರಭುತ್ವಕ್ಕೆ ಸವಾಲು ಎಂಬ ಇಂಗ್ಲಿಷ್ ಭಾಷಣ ಮಾಲೆಯಲ್ಲಿ, ನಾಳೆರಾತ್ರಿ ೮-೩೦ ಗಂಟೆಗೆ ದೆಹಲಿ ಕೇಂದ್ರದಿಂದ ಬ್ರಿಟನ್ನಲ್ಲಿ ಭಾರತ ಹೈ ಕಮಿಷನರ್ ಆಗಿದ್ದ ಶ್ರೀ ವಿ. ಕೆ. ಕೃಷ್ಣಮೆನನ್‌ರವರು ಭಾಷಣಮಾಡುತ್ತಾರೆ. ಎಲ್ಲಾ ಪ್ರಸಾರ ಕೇಂದ್ರಗಳಲ್ಲೂ ಇದನ್ನು ಕೇಳಬಹುದು.

ಮನುಷ್ಯನು ರಿಕ್ಷಾ ಎಳೆಯುವುದು ತಪ್ಪಬೇಕು

ಮನುಷ್ಯನು ರಿಕ್ಷಾವನ್ನು ಎಳೆಯುವುದನ್ನು ಮತ್ತು ಗೋವಧೆಯನ್ನು ಭಾರತಾದ್ಯಂತ ನಿಲ್ಲಿಸಲು ತಕ್ಕ ಕಾರ್ಯಕ್ರಮವನ್ನು ಅನುಸರಿಸಬೇಕೆಂದು ಆಚಾರ್ಯ ವಿನೋಬಾ ಭಾವೆಯವರು ಮನವಿಮಾಡಿದ್ದಾರೆ.

ಬೊಂಬಾಯಿನಲ್ಲಿ ಮುಂಗಾರು ಮಳೆ

ಬೊಂಬಾಯಿ ಮತ್ತು ಅದರ ಸುತ್ತಮುತ್ತ ಮುಂಗಾರು ಮಳೆಯು ಈ ಸಾಲಿನಲ್ಲಿ ಸುಮಾರು ೮೦ ಅಂಗುಲಗಳಷ್ಟು ಆಗಿದೆ. ಸಾಮಾನ್ಯವಾಗಿ ಆಗುವ ಮಳೆಗಿಂತ ಈ ಸಲ ೩೦ ಅಂಗುಲಗಳಷ್ಟು ಹೆಚ್ಚಾಗಿ ಆಗಿರುವುದಾಗಿ ಹೇಳಲಾಗಿದೆ.

ತೇನ್‌ಸಿಂಗ್ ಆಗಮನ

ತಮ್ಮ ವಿದೇಶಿ ಪ್ರವಾಸವನ್ನು ಪೂರೈಸಿಕೊಂಡು ಹಿಮಾಲಯ ಪರ್ವತ ರೋಹಿ ತೇನ್‌ಸಿಂಗ್‌ರವರು ತಮ್ಮ ಪತ್ನಿ ಪುತ್ರಿಯರೊಡನೆ ನಿನ್ನೆಯದಿನ ಬೊಂಬಾಯಿಗೆ ಆಗಮಿಸಿದರು ಅಲ್ಲಿಯ ಪುರಜನರ ಪರವಾಗಿ ಮೇಯರ್‌ರವರು ಅವರನ್ನು ಸ್ವಾಗತಿಸಿದರು.

ಭಾರತೀಯ ಶಿಲ್ಪಿಸಂಘ ಸ್ಥಾಪನೆ

ಭಾರತದಲ್ಲಿರುವ ಶಿಲ್ಪಿಕಲೆಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಬೊಂಬಾಯಿನಲ್ಲಿ ಭಾರತೀಯ ಶಿಲ್ಪಿಕಲಾ ಸಂಘವೊಂದು ಸ್ಥಾಪಿತವಾಗಿದೆ.

ಮಿತ್ರರಾಷ್ಟ್ರಗಳಿಗೆ ಮಿಲಿಟರಿ ನೆರವು

ಮಿತ್ರರಾಷ್ಟ್ರಗಳಿಗೆ ಮಿಲಿಟರಿ ನೆರವನ್ನು ನೀಡಲು ಅಮೆರಿಕಾ ಶಾಸನಸಭೆಯು ೬೫೦೦೦ ಲಕ್ಷ ಡಾಲರುಗಳನ್ನು ಮಂಜೂರ್ಮಾಡಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೩—೮—೧೯೫೩

ಪಲ್ಲ	ರೂ. ಅ	ರೂ. ಅ
ಕಡಲೇಕಾಯಿ	೧೫—೪	೩೩—
ಹರಳು	೪೨—	—
ಎಳ್ಳು	೫೦—	೯೮—೨
ಪೊಂಗೆಬೀಜ	—	—
ಹುರುಳಿ	೪೯—೧೨	೫೨—೨
ಹೆಸರು	೫೬—	೭೦—೧೪
ಅವರೆ	—	—
ಉದ್ದು	೫೫—೬	೭೫—೨
ಹುಚ್ಚೆಳ್ಳು	—	—
ಅಲಸಂದೆ	೬೨—	೭೧—
ಮೆಣಸಿನಕಾಯಿ	—	—
ಹುಣಸೇಹಣ್ಣು	—	—
ಸೀಗೆಕಾಯಿ	೭—೨	—
ಬೆಲ್ಲ	—	
ತೆಂಗಿನಕಾಯಿ	೧೫೦	೨೦೮

ಪಾರ್ಲಿಮೆಂಟಿನಲ್ಲಿ ಮುಖರ್ಜಿಯವರ ಪ್ರಶಂಸೆ

ನಿನ್ನೆ ದೆಹಲಿಯಲ್ಲಿ ಪ್ರಾರಂಭವಾದ ಪಾರ್ಲಿಮೆಂಟ್ ಅಧಿವೇಶನದಲ್ಲಿ ಪ್ರಧಾನಿ ನೆಹರೂರವರು ಡಾ|| ಶ್ಯಾಮಪ್ರಸಾದ್ ಮುಖರ್ಜಿ ಯವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ಮಂಡಿಸಿ ಅವರ ಬಗ್ಗೆ ಗುಣಕಥನ ಮಾಡಿದರು. ಅವರು ಮಹಾ ವ್ಯಕ್ತಿಯೊಬ್ಬರೆಂದೂ, ಅವರ ನಿಧನದಿಂದ ಭಾರತಕ್ಕೆ ಅಪಾರ ನಷ್ಟವುಂಟಾಗಿದೆಯೆಂದೂ, ದುರದೃಷ್ಟಕರವಾದ ವಿಚಿತ್ರ ಸಂಘರ್ಷಗಳಲ್ಲಿ ಅವರು ಬಂಧನದಲ್ಲಿ ನಿಧನರಾದುದು ವಿಷಾದಕರವೆಂದೂ ನೆಹರು ತಿಳಿಸಿದರು.

ಅವರ ಗೌರವಾರ್ಥವಾಗಿ ಅಧಿವೇಶನವನ್ನು ಒಂದು ದಿನದ ಮಟ್ಟಿಗೆ ಮುಂದಕ್ಕೆ ಹಾಕಲಾಯಿತು.

ಬಿರುಗಾಳಿ

ಒರಿಸ್ಸಾದಲ್ಲಿ ನಿನ್ನೆ ಒಂದು ಭಾರಿ ಬಿರುಗಾಳಿ ಪರಿಣಾಮವಾಗಿ ಟೆಲಿಗ್ರಾಫ್, ಟೆಲಿಫೋನ್ ವ್ಯವಸ್ಥೆಗಳಿಗೆಲ್ಲಾ ವಿಶೇಷ ತೊಂದರೆಯುಂಟಾಗಿರುವುದಾಗಿ ತಿಳಿಯಬರುತ್ತದೆ.

ಪ್ರವಾಹ ಹಾವಳಿ ತಡೆಗಟ್ಟಲು ಕಾರ್ಯ

ಅಸ್ಸಾಂನಲ್ಲಿ ಪ್ರವಾಹವನ್ನು ತಡೆಗಟ್ಟುವ ಕಾರ್ಯಕ್ಕಾಗಿ ೪ ಕೋಟಿ ರೂಪಾಯಿಗಳನ್ನು ವೆಚ್ಚಮಾಡಲು ಸರ್ಕಾರವು ನಿರ್ಧರಿಸಿದೆ.

ಪ್ರವಾಹ

ಬಿಹಾರಿನಲ್ಲಿರುವ ನದಿಗಳಲ್ಲೆಲ್ಲಾ ಪ್ರವಾಹಬಂದು ಸುಮಾರು ೨೦೦೦ ಚದುರಮೈಲಿಗಳಲ್ಲಿ ಅದು ಆವರಿಸಿಕೊಂಡಿದೆ.

ಭಾರತ ಪಾಕೀಸ್ತಾನ ವ್ಯಾಪಾರ

ಭಾರತ ಮತ್ತು ಪಾಕೀಸ್ತಾನಗಳ ನಡುವೆ ವ್ಯಾಪಾರವನ್ನು ಹೆಚ್ಚಿಸುವುದಕ್ಕಾಗಿ ಉಭಯ ದೇಶಗಳ ವ್ಯಾಪಾರಗಳು ಮತ್ತು ಕೈಗಾರಿಕೋದ್ಯಮಿಗಳು ಅಮೃತಸರದಲ್ಲಿ ಸಭೆ ಸೇರಲಿರುವರೆಂದು ತಿಳಿಯಬರುತ್ತದೆ

ಕಲ್ಕತ್ತಾದಲ್ಲಿ ಮಳೆ

ಕಲ್ಕತ್ತಾದಲ್ಲಿ ನಿನ್ನೆಯದಿನ ಭಾರಿ ಮಳೆಯು ಬಂದು ನಗರದ ತಗ್ಗುಪ್ರದೇಶಗಳಿಗೆ ನೀರು ನುಗ್ಗಿ ಸಂಚಾರಕ್ಕೆ ಅಡಚಣೆಯುಂಟಾಗಿದೆಯೆಂದು ತಿಳಿಯಬರುತ್ತದೆ.

ಶಾಸನಸಭಾ ವಿಸರ್ಜನೆ

ಪರ್ಶಿಯಾದಲ್ಲಿ ಶಾಸನಸಭೆಯಾದ ಮಜ್ಲಿಸ್ಸನ್ನು ವಿಸರ್ಜಿಸಬೇಕೆಂದು ಪ್ರಧಾನಿ ಡಾ|| ಮುಸಾದಿಕ್‌ರವರ ಸೂಚನೆಯಬಗ್ಗೆ ಅಲ್ಲಿ ಪ್ರಜಾಭಿಪ್ರಾಯವನ್ನು ಸಂಗ್ರಹಿಸಿದಾಗ ಅದರ ಪರವಾಗಿ ಲಕ್ಷಾಂತರಜನರು ಮತನೀಡಿದರೆಂದೂ ವಿರೋಧವಾಗಿ ಕೇವಲ ೬೦ ಜನ ಮತ ನೀಡಿರುವುದಾಗಿ ಹೇಳಲಾಗಿದೆ.

ಚತುರ್ರಾಷ್ಟ್ರಗಳ ಶಾಂತಿ ಸಮ್ಮೇಳನ

ಕೂಡಲೇ ಒಂದು ಶಾಂತಿ ಸಮ್ಮೇಳನವನ್ನು ಏರ್ಪಡಿಸುವಂತೆ ಸಲಹೆಯನ್ನು ಬ್ರಿಟನ್, ಅಮೆರಿಕಾ ಮತ್ತು ಫ್ರಾನ್ಸಗಳಿಗೆ ನೀಡುವಂತೆ ರಷ್ಯಾ ಸರ್ಕಾರವು ಆ ರಾಷ್ಟ್ರಗಳಲ್ಲಿರುವ ತನ್ನ ರಾಯಭಾರಿಗಳಿಗೆ ಸೂಚನೆಯನ್ನಿತ್ತಿರುವುದಾಗಿ ಹೇಳಲಾಗಿದೆ.

WANTED

Wanted a Printing machine, in running condition--Crown or Demmy Folio.

Contact:—
The Samachara office,
Mothikhana Buildings,
Jaganmohan paiace road
MYSORE.

ಹೊಸದಾಗಿ ಬಂದಿದೆ

ಹರ್‌ಕುಲಿಸ್ ಸೈಕಲ್‌ಗಳು, ಮಕ್ಕಳ ಟ್ರೈಸಿಕಲ್‌ಗಳು ಮತ್ತು ಗಾಡಿಗಳು.

ಶಾರದ ಸೈಕಲ್ ಮತ್ತು ವಾಚ್ ಸ್ಟೋರ್ಸ್, ದೊಡ್ಡಗಡಿಯಾರ ಹತ್ತಿರ, ಮೈಸೂರು.

ಪ್ರಕಾಶಕರು:—ಜಿ. ಎಲ್. ಸ್ವಾಮಿ
ಮುದ್ರಕರು:— ಹಿ. ಕಾ. ಸುಬ್ಬರಾವ್
ಮೋಹನ ಮುದ್ರಣಾಲಯ ಮೈಸೂರು.

ಪ್ರಭಾ 7—8—53 ರಿಂದ ಅಮೋಘಪ್ರಾರಂಭ ದಿನ 3 ಆಟಗಳು
ನಿಮ್ಮ ಮೆಚ್ಚಿನ: ಬಿನಾರಾಯ್ ಮತ್ತು ಪ್ರೇಂನಾಥ್ ನಟಿಸಿರುವ
P. N. ಫಿಲ್ಮ್ಸ್‌ರವರ **-ಶಗೂಫಾ-**
ಸಹಾಯಕರು....ಪೂರ್ಣಿಮಾ, ಸುಂದರ್, ಯಶೋಧರಖಟ್ಟು
ಸಂಗೀತ—ಸಿ. ರಾಮಚಂದ್ರ [ಅನಾರ್ಕಲಿ ಖ್ಯಾತಿ]

ಬೆಳಗಿನಪ್ರದರ್ಶನ:7—8—53 ರಿಂದ 3 ದಿನಗಳು
ಸೊಹ್ರಾಬ್‌ಮೋದಿ, ನಾಸೀಂ ನಟಿಸಿರುವ
"ಶೀಷ್ ಮಹಲ್"

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೮

ಸಮಾಚಾರ

ದಿನಪತ್ರಿಕೆ ಸಂಪುಟ ೩ ಸಂಚಿಕೆ ೨೮೫

೫-೮-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಬಿಹಾರಿನಲ್ಲಿ ಪ್ರವಾಹದ ಹಾವಳಿ

೨೫ ಲಕ್ಷ ಜನರಿಗೆ ತೊಂದರೆ

ಬಿಹಾರಿನಲ್ಲಿ ಕೋಸಿ, ಕಮಲ, ಬಲಾನ್ ಮುಂತಾದ ನದಿಗಳಲ್ಲಿ ವಿಶೇಷ ಪ್ರವಾಹ ಬಂದು ೨ ಸಾವಿರ ಚದರ ಮೈಲಿಗಳಷ್ಟು ಪ್ರದೇಶ ನೀರಿನಲ್ಲಿ ಮುಳಗಿ ಹೋಗಿದೆ. ಇದರಿಂದ ೨೫ ಲಕ್ಷ ಜನರಿಗೆ ವಿಶೇಷ ಕಷ್ಟವುಂಟಾಗಿದೆ, ಶೇಕಡ ೭೫ ರಷ್ಟು ಭತ್ತ ಮತ್ತು ಜೋಳದ ಪೈರು ನಾಶವಾಗಿದೆ ಸಂಚಾರ ಮಾರ್ಗವೆಲ್ಲ ಬಂದಾಗಿ, ನೊಂದವರಿಗೆ ಆಹಾರ ಒದಗಿಸಲು ತುಂಬಾ ತೊಂದರೆ ಆಗಿದೆ. ೨ ಸಾವಿರ ದೋಣಿಗಳ ಮೂಲಕ ಸರ್ಕಾರದವರು ಪರಿಹಾರ ಕಾರ್ಯ ನಡೆಸುತ್ತಿದ್ದಾರೆ. ಅನೇಕ ಮನೆಗಳು ಕುಸಿದು ಬಿದ್ದಿವೆ. ಅನೇಕ ಜನರು ಹಾವುಗಳ ಕಡಿತದಿಂದ ಮೃತಪಟ್ಟಿದ್ದಾರೆ.

ರಾವಿ ನದಿಯಲ್ಲಿ ವಿಶೇಷ ಪ್ರವಾಹ ಬಂದು ಅಮೃತಸರ ಜಿಲ್ಲೆಯ ಉತ್ತರಭಾಗದಲ್ಲಿರುವ ೭೦ ಹಳ್ಳಿಗಳಿಗೆ ಅಪಾಯ ಉಂಟಾಗಿದೆ ಈ ನದಿಯಲ್ಲಿ ಈಗ ಮೂರುವರೆ ಲಕ್ಷ ಕ್ಯೂಸೆಕ್ಸಗಳಷ್ಟು ನೀರು ಹೊರಬೀಳುತ್ತಿದೆ.

ರಾಜಕೀಯ ಸಮ್ಮೇಳನದಲ್ಲಿ ಎಲ್ಲರಿಗೂ ಸ್ಥಾನ ಬೇಡ

ಕೊರಿಯಾ ಯುದ್ಧ ಮುಕ್ತಾಯ ಸಂಬಂಧದಲ್ಲಿ ನೇಮಿಸಿರುವ ರಾಜಕೀಯ ಸಮ್ಮೇಳನದಲ್ಲಿ ಕೊರಿಯಾ ಯುದ್ಧದಲ್ಲಿ ನೇರವಾಗಿ ಭಾಗವಹಿಸಿದ್ದ ರಾಷ್ಟ್ರಗಳು ಮಾತ್ರ ಇರಬೇಕು ಎಂದು ದಕ್ಷಿಣಕೊರಿಯಾ ಶಾಸನಸಭೆಯು ನಿರ್ಣಯ ಮಾಡಿದೆ.

ಸಂಸ್ಥೆಗಳ ಹಣ ಭೂದಾನಕ್ಕೆ ಬೇಡ

ಭೂದಾನ ಯಜ್ಞ ಚಳುವಳಿಯ ಕಾರ್ಯವನ್ನು ಕೈಗೊಂಡಿರುವ ಶ್ರೀ ಶಂಕರರಾವ್ ದೇವ್‌ರವರು ಇಂದೂರಿನಲ್ಲಿ ಕೆಲವು ಗಿರಣಿಗಳು ಕೊಟ್ಟ ಚಂದಾ ಹಣವನ್ನು ನಿರಾಕರಿಸಿದ್ದಾರೆ. ಸಂಸ್ಥೆಗಳು ಸಂಪಾದಿಸಿದ ಹಣದಿಂದ ತಾವು ಏನೂ ಸ್ವೀಕರಿಸುವುದಿಲ್ಲವೆಂದೂ ವ್ಯಕ್ತಿಗಳು ಸ್ವಶಕ್ತಿಯಿಂದ ಸಂಪಾದಿಸಿದ ಹಣವನ್ನು ಮಾತ್ರ ತಾವು ಸ್ವೀಕರಿಸುವುದಾಗಿ ತಿಳಿಸಿದ್ದಾರೆ.

ಖಾದಿ ಅಭಿವೃದ್ಧಿಗೆ ನೆರವು

ಹೈದರಾಬಾದಿನಲ್ಲಿ ಖಾದಿ ಅಭಿವೃದ್ಧಿಗಾಗಿ ಅಲ್ಲಿಯ ಸರ್ಕಾರವು ಒಂದು ಲಕ್ಷ ರೂಪಾಯಿಗಳ ಸಾಲವನ್ನು ಕೊಟ್ಟಿದೆ.

ಹೈದರಾಬಾದ್ ಕಾಂಗ್ರೆಸ್ಸಿಗರಿಗೆ ನೆಹರೂ ಹಿತೋಕ್ತಿ

ಹೈದರಾಬಾದಿನಲ್ಲಿ ಆಡಳಿತವು ಇತ್ತೀಚೆಗೆ ಕುಸಿದುಬಿದ್ದು ಹೋಗುತ್ತಿದೆ ಆದ್ದರಿಂದ ಅದನ್ನು ಸರಿಪಡಿಸದಿದ್ದಲ್ಲಿ ತಾವು ಶಾಸನ ಸಭೆಗೆ ರಾಜೀನಾಮೆ ಕೊಡುವುದಾಗಿ ಅಲ್ಲಿಯ ಶಾಸನ ಸಭೆಯ ೨೦ ಸದಸ್ಯರು ಪ್ರಧಾನಿ ನೆಹರೂರವರಿಗೆ ಬರೆದ ಪತ್ರಕ್ಕೆ ಅವರು ಉತ್ತರಕೊಡುತ್ತಾ ಶಾಸನ ಸಭೆಗೆ ಅವರು ರಾಜೀನಾಮೆ ಕೊಡಕೂಡದೆಂದು ತಮ್ಮ ತೊಂದರೆಗಳನ್ನೆಲ್ಲಾ ಮುಖ್ಯಮಂತ್ರಿಯವರಿಗೆ ತಿಳಿಸಿ ಅದರ ಪರಿಣಾಮವೇನಾಗುವುದೆಂಬುದನ್ನು ಕಾಯಬೇಕೆಂದು ತಿಳಿಸಿದ್ದಾರೆ.

ತುಟ್ಟಿಭತ್ಯದ ಭೇದದ ಬಗ್ಗೆ ಸರ್ಕಾರದ ಮೇಲೆ ಮೊಕದ್ದಮೆ

ಮಧ್ಯಭಾರತ ಸರ್ಕಾರವು ೪೦೦ ರೂಪಾಯಿಗಳಿಗಿಂತ ಹೆಚ್ಚಿಗೆ ಸಂಬಳವನ್ನು ಪಡೆಯುವ ತನ್ನ ನೌಕರರುಗಳಿಗೆ ಕೇಂದ್ರ ಸರ್ಕಾರವು ಕೊಡುತ್ತಿರುವಂತೆ ತುಟ್ಟಿಭತ್ಯವನ್ನು ಇತರರಿಗೆ ಕಡಮೆ ದರದಲ್ಲಿ ಕೊಡುತ್ತಾ ಭೇದಭಾವವನ್ನು ತೋರಿಸುತ್ತಲಿರುವುದು ರಾಜ್ಯಾಂಗಕ್ಕೆ ವಿರೋಧವೆಂದು ಅಲ್ಲಿಯ ಸರ್ಕಾರಿ ನೌಕರರ ಸಂಘವು ನಾಗಪುರ ಮುಖ್ಯ ನ್ಯಾಯಾಲಯದಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿದೆ. ನ್ಯಾಯಾಲಯವು ಆ ಅರ್ಜಿಯನ್ನು ಸ್ವೀಕರಿಸಿ ವಿಚಾರಣೆ ಪ್ರಾರಂಭಿಸಿದೆ.

ವಿಶ್ವಸಂಸ್ಥೆಯಲ್ಲಿ ಎಲ್ಲಾ ರಾಷ್ಟ್ರಗಳೂ ಇರಬೇಕು

ವಿಶ್ವಸಂಸ್ಥೆಯು ಶಕ್ತಿಯುತವಾಗಿ ಕೆಲಸ ಮಾಡಬೇಕಾದರೆ ಅದರಲ್ಲಿ ವಿಶ್ವದ ಎಲ್ಲಾ ರಾಷ್ಟ್ರಗಳಿಗೂ ಸ್ಥಾನವಿರಬೇಕು ಎಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹೆಮರ್ಸ್ ಕಜೋಲ್ಡ್ ರವರು ಹೇಳಿದ್ದಾರೆ.

ಈಡನ್ ಬ್ರಿಟನ್ನಿನ ಪ್ರಧಾನಿ ?

ಇದೇ ಅಕ್ಟೋಬರ್ ವೇಳೆಗೆ ಬ್ರಿಟನ್ನಿನ ವಿದೇಶಾಂಗಸಚಿವ ಅಂಥೋಣಿ ಈಡನ್‌ರವರು. ಸರ್ ಚರ್ಚಿಲ್ಲರ ಸ್ಥಾನದಲ್ಲಿ ಪ್ರಧಾನಿಯಾಗಬಹುದೆಂದು ಹೇಳಲಾಗುತ್ತಿದೆ.

ಸಿಲೋನಿನಲ್ಲಿ ಭಾರತೀಯರ ಸಮಸ್ಯೆ

ಸಿಂಹಳ ದ್ವೀಪದಲ್ಲಿ ಒಂಬತ್ತುವರೆ ಲಕ್ಷ ಮಂದಿ ಭಾರತೀಯವಂಶ ಜನರಿದ್ದಾರೆ. ಅವರಲ್ಲಿ ೪ ಲಕ್ಷ ಜನರನ್ನು ಈಗಿನ ಕಾನೂನು ಪ್ರಕಾರ ಸಿಲೋನಿನ ಪ್ರಜೆಗಳೆಂದು ಅಂಗೀಕರಿಸಲಾಗುವುದು. ಇನ್ನೂ ಎರಡೂವರೆ ಲಕ್ಷ ಜನರಿಗೆ ಖಾಯಂ ನಿವಾಸಕ್ಕಾಗಿ ರಹದಾರಿ ಕೊಟ್ಟು ಅನಂತರ ಕೆಲವು ಕಾಲದಲ್ಲಿ ಅವರನ್ನ ಸಿಲೋನಿನ ಪ್ರಜೆಗಳೆಂದು ಪರಿಗಣಿಸಲು ಅವಕಾಶಕೊಡಬೇಕೆಂದು ಸಲಹೆ ಮಾಡಲಾಗಿತ್ತು. ಇನ್ನುಳಿದ ೩ ಲಕ್ಷ ಮಂದಿ ಪೈಕಿ ಒಂದುವರೆ ಲಕ್ಷ ಜನರು ಭಾರತೀಯರು. ಇನ್ನುಳಿದ ಒಂದುವರೆ ಲಕ್ಷ ಜನ ಭಾರತೀಯ ಜನಾಂಗಕ್ಕೆ ಸೇರಿದವರಲ್ಲ. ಇದರ ವಿಚಾರವೇ ಭಾರತಕ್ಕೆ ಅಂತಕವನ್ನುಂಟುಮಾಡಿದೆ. ಅನೇಕ ಜನರನ್ನು ಸಿಲೋನಿನಿಂದ ಹೊರದೂಡುವುದು ವೈಯುಕ್ತವಾಗಿ ಅವರಿಗೆ ತೀವ್ರ ಕಷ್ಟಗಳನ್ನುಂಟುಮಾಡುವುದಲ್ಲದೆ, ಭಾರತ ಮತ್ತು ಸಿಲೋನುಗಳಿಗೂ ತೀವ್ರಕಷ್ಟಗಳನ್ನುಂಟುಮಾಡುವುದು. ಈ ದೃಷ್ಟಿಯಿಂದ ಈ ಸಮಸ್ಯೆಯನ್ನು ಪರಿಹರಿಸಬೇಕು—ಎಂದು ಪ್ರಧಾನಿ ನೆಹರೂರವರು ತಿಳಿಸಿದ್ದಾರೆ.

ನಿರಾಶ್ರಿತರ ಆಸ್ತಿಗಳ ಬಗ್ಗೆ ಸಮಾಲೋಚನೆ

ಕರಾಚಿಯಲ್ಲಿ ಕಳೆದ ಎರಡುವಾರದಿಂದ ಭಾರತ ಮತ್ತು ಪಾಕೀಸ್ತಾನ ಸರ್ಕಾರಗಳ ಮುಖ್ಯಸ್ಥರ ಅಧಿಕಾರಿಗಳ ನಡುವೆ ನಿರಾಶ್ರಿತರ ಆಸ್ತಿಪಾಸ್ತಿಗಳ ಬಗ್ಗೆ ನಡೆಯುತ್ತಲಿದ್ದ ಮಾತುಕತೆ ನಿನ್ನೆ ಮುಗಿದುವು.

ಕೊರಿಯಾದಲ್ಲಿ ಡಲ್ಸ್

ಅಮೇರಿಕಾ ವಿದೇಶಾಂಗ ಕಾರ್ಯದರ್ಶಿ ಡಲ್ಸ್‌ರವರು ಉತ್ತರಕೊರಿಯಾ ಅಧ್ಯಕ್ಷ ಸಿಂಗ್‌ಮನ್ ರೀಯವರೊಡನೆ ಮಾತುಕತೆ ನಡೆಸಲು ಸಿಯಾಲ್ ಸೇರಿದ್ದಾರೆ. ಅಲ್ಲಿ ಅವರು ೩ ದಿನಗಳ ಕಾಲವಿರುತ್ತಾರೆ.

ಬ್ರಿಟಿಷ್ ವಾರ್ತಾ ಸಂಸ್ಥೆ

ಭಾರತದಲ್ಲಿ ಬ್ರಿಟನ್ನಿನ ವಾರ್ತಾ ಸಂಸ್ಥೆಯ ಹಂಗಾಮಿ ಡೈರೆಕ್ಟರಾದ ವಿ| ಡಿ.ಎಫ್. ಗೆರ್‌ರವರನ್ನು ಸ್ವದೇಶಕ್ಕೆ ವರ್ಗಾಯಿಸಿರುವುದರಿಂದ ಅವರ ಸ್ಥಾನದಲ್ಲಿ ಮಿ| ಆರ್. ಮೆಕ್‌ಸಾ ಹಲ್ಸ್‌ರನ್ನು ನೇಮಿಸಲಾಗಿದೆ.

ಪ್ರವಾಹ ಪರಿಹಾರಕ್ಕೆ ನೆರವು

ಮುಲ್ತಾನಿನಲ್ಲಿ ಇತ್ತೀಚೆಗೆ ಆದ ಪ್ರವಾಹಗಳ ಪರಿಹಾರ ಕಾರ್ಯಕ್ಕಾಗಿ ಪ್ರಧಾನಿ ನೆಹರೂರವರು ೧೧,೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ.

● ಶಿವಮೊಗ್ಗಾ ತಾಲ್ಲೂಕು ಖಜಾನೆಯಲ್ಲಿ ಇಡಲಾಗಿದ್ದ ೪ ಸಾವಿರ ರೂ. ಸ್ಟಾಂಪುಗಳಿಗೆ ಗೆದ್ದಲು ತಿಂದು ನಾಶವಾಗಿದೆ.

ಪಾನನಿರೋಧ ರದ್ದಾಗಬೇಕು

ಶಾಸನಸಭೆಯಲ್ಲಿ ಸದಸ್ಯರ ಸಲಹೆ

ಬೆಂಗಳೂರು ೫

ಸಂಸ್ಥಾನದಲ್ಲಿ ನೂತನ ವಿದ್ಯಾಭ್ಯಾಸ ಸುಧಾರಣೆಗಳನ್ನು ಜಾರಿಗೆತರಲು ಹೊಸ ತೆರಿಗೆಗಳನ್ನು ವಿಧಿಸಬಾರದೆಂದೂ, ಪಾನನಿರೋಧ ರದ್ದುಮಾಡಿ, ಅದರಿಂದ ಬರುವ ಹಣವನ್ನು ಅದಕ್ಕೆ ಉಪಯೋಗಿಸಬೇಕೆಂದೂ ಶ್ರೀ ಕಾರ್ಯಾಂರವರು ಶಾಸನಸಭೆಯಲ್ಲಿ ವಿದ್ಯಾ ಸುಧಾರಣಾ ಸಮಿತಿಯ ವರದಿ ಚರ್ಚೆಯಲ್ಲಿ ತಿಳಿಸುತ್ತಾರೆ.

ಮಹಿಳೆಯರಿಗೆ ಸಮಾನ ಹಕ್ಕುಬಾಧ್ಯತೆಗಳಿರಬೇಕೆಂದೂ ಆದರೆ ಮಹಿಳೆಯರನ್ನು ಮಹಿಳೆಯರನ್ನಾಗಿ ತಯಾರುಮಾಡುವ ವಿದ್ಯಾಭ್ಯಾಸ ಶಿಕ್ಷಣ ಕೊಡಬೇಕೆಂದೂ, ಅವರಿಗೆ ಹೆಚ್ಚಿನ ವಿದ್ಯಾಭ್ಯಾಸ ಅನಗತ್ಯವೆಂದೂ, ಮಹಿಳೆಯರು ಮನೆಯಲ್ಲಿ ರಾಣಿಯಾಗಿರಬೇಕೇಹೊರತು ರಾಜ್ಯದ ರಾಣಿಯಾಗಿರಕೂಡದೆಂದೂ ಶ್ರೀ ಶಿವಪ್ಪನವರು ಅಭಿಪ್ರಾಯಪಟ್ಟರು.

ಮಹಿಳೆಯರಿಗೆ ಹೆಚ್ಚಿನ ವಿದ್ಯಾಭ್ಯಾಸ ಕೂಡದೆಂಬ ಅಭಿಪ್ರಾಯವನ್ನು ತೀವ್ರವಾಗಿ ಖಂಡಿಸಿ ಶ್ರೀಮತಿ ಸುಬ್ಬಮ್ಮ ಮತ್ತು ಸಿದ್ದಮ್ಮನವರು ಮಾತನಾಡಿ, ಮಹಿಳೆಯರಿಗೆ ಉಚ್ಚಶಿಕ್ಷಣ ಅಗತ್ಯವೆಂದೂ, ಅವರು ಒಂದುಮೈಲಿಯಲ್ಲಿ ರಾಣಿಯಾದರೂ ಇನ್ನೊಂದು ಮೈಲಿಯಲ್ಲಿ ರಾಜ್ಯಾಳುವಂತಹ ಶಿಕ್ಷಣ ಬೇಕೆಂದೂ ತಿಳಿಸಿದರು

ನಿಮ್ನವರ್ಗದವರಿಗೆ ಸರ್ಕಾರಿ ಹುದ್ದೆ ಮೀಸಲು

ಬೆಂಗಳೂರು ೫

ಸರ್ಕಾರಿ ಹುದ್ದೆಗಳಲ್ಲಿ ಶೇ|| 16ಕ್ಕೆ ರಷ್ಟು ಸ್ಥಾನಗಳನ್ನು ನಿಮ್ನವರ್ಗದವರಿಗೆ ಮೀಸಲಾಗಿಡಲು ಸರ್ಕಾರ ಆಜ್ಞೆ ಮಾಡಿರುವುದಾಗಿ ಸಚಿವ ಶ್ರೀ ಚನ್ನಯ್ಯನವರು ನಿನ್ನೆಯ ದಿನ ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ನಿಮ್ನ ವರ್ಗದವರ ಅಭಿವೃದ್ಧಿ ಕಾರ್ಯಗಳಿಗಾಗಿ ನೇಮಕವಾಗಿದ್ದ ಇತ್ತೀಚೆಗೆ ವಜಾ ಆದ ರೆವಿನ್ಯೂ ಇನ್ಸ್‌ಪೆಕ್ಟರ್‌ಗಳ ಹುದ್ದೆಯನ್ನು ಪುನಃ ಜಾರಿಗೆ ತರುವ ವಿಷಯವನ್ನು ಸರ್ಕಾರವು ಪರಿಶೀಲಿಸುತ್ತಲಿರುವುದಾಗಿಯೂ ಸಚಿವರು ತಿಳಿಸಿದರು.

ಜಿಲ್ಲಾಬೋರ್ಡುಗಳಿಗೆ ನೇರವಾದ ಚುನಾವಣೆ

ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ನಿನ್ನೆ ನಡೆದು ಜಿಲ್ಲಾಬೋರ್ಡುಗಳ ರಚನೆಯ ವಿಧಾನವನ್ನು ಚರ್ಚಿಸಿತೆಂದೂ, ಜಿಲ್ಲಾಬೋರ್ಡುಗಳಿಗೆ ನೇರವಾದ ಚುನಾವಣೆ ನಡೆಯಬೇಕೆಂದು ಅಭಿಪ್ರಾಯಪಡಲಾಯಿತೆಂದೂ ಹೇಳಲಾಗಿದೆ.

ನೀರಿನ ಕಂದಾಯದಲ್ಲಿ ಪಕ್ಷಪಾತ ಕೂಡದು

ಪುರಸಭಾಧ್ಯಕ್ಷರಿಗೆ ತಗಡೂರರ ನೋಟೀಸ್

"ರಾಜ್ಯಾಂಗದ ೧೪ನೇ ವಿಧಿಯು" ಮುನಿಸಿಪಾಲಿಟಿಗಳಿಗೂ ಅನ್ವಯಿಸುತ್ತದೆ ಎಂಬ ವಿಚಾರವನ್ನು ತಾವು ಒಪ್ಪುತ್ತೀರೆಂದು ಭಾವಿಸುತ್ತೇನೆ. ಹೀಗಿರುವಲ್ಲಿ ಮನೆ ಬಾಡಿಗೆ ಅಂದಾಜು ಮತ್ತು ಕಂದಾಯ ನಿಶ್ಚಯಮಾಡುವುದರಲ್ಲಾಗಲೀ ಬಾಡಿಗೆ ಬರುವ ವಸ್ತು ವಾಸವಾಗಿರುವ ಎಂಬ ಅಂಶಗಳ ಮೇಲಾಗಲೀ ಅಥವಾ ನೀರಿನ ತೆರಿಗೆಯನ್ನು ವಿಧಿಸುವುದರಲ್ಲಾಗಲೀ ಪಕ್ಷಪಾತವೇಕೆ ಎಂಬುದು ನನಗೆ ಅರ್ಥವಾಗುವುದಿಲ್ಲ."

೧೯೫೧-೫೨ನೇ ಪುರಸಭಾ ಆಡಳಿತದ ವರದಿಯ ಪ್ರಕಾರ ನಗರದಲ್ಲಿ ೩೯೧೭೨ ಮನೆಗಳು ಇರುತ್ತವೆಯೆಂತಲೂ [ಅಧ್ಯಕ್ಷರ ಪತ್ರಿಕಾಸಮ್ಮೇಳನದ ಹೇಳಿಕೆಯ ಮತ್ತು ಸಿಟಿ ಮುನಿಸಿಪಲ್ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯ ಹೇಳಿಕೆಯ ಪ್ರಕಾರ ಸಿಟಿಯಲ್ಲಿ ೨೪೫೫೩ ಮನೆಗಳುತ್ತವೆಯೆಂತಲೂ] ಈ ಪೈಕಿ ೧೦೬೩೪ ಮನೆಗಳಿಗೆ ನಲ್ಲಿ ಹಾಕಲಾಗಿದೆಯೆಂತಲೂ, ಅದರಲ್ಲಿ ೮೪೬೧ ಮನೆಗಳಿಗೆ ಫ್ಲಾಟ್‌ವಾಟರ್‌ರೇಟ್ ಹಾಕಿದೆಯೆಂತಲೂ ಮತ್ತು ೧೦೨೩ ಮನೆಗಳಿಗೆ ಮೀಟರ್ ಹಾಕಿ [ಬಾಡಿಗೆ ಅಂದಾಜು ಪ್ರತಿ ರೂಪಾಯಿಗೆ ವರ್ಷಕ್ಕೆ ೩೦೦ ಗ್ಯಾಲನ್ ನೀರನ್ನು ವಜಾಕೊಟ್ಟು] ಉಪಯೋಗಿಸಿದ ನೀರಿಗೆ ನೀರಿನ ತೆರಿಗೆ ಹಾಕುತ್ತಿರುವುದಾಗಿಯೂ ನಮೂದಿಸಿದೆ. ಮೀಟರ ಹಾಕಿರುವ ೧೦೨೩ ಮನೆಗಳಿಗೆ ಈ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟು ಮೀಟರ್ ಹಾಕದ ೮೪೬೧ ಮನೆಗಳಿಗೆ ಫ್ಲಾಟ್‌ರೇಟ್ ಕಂದಾಯವನ್ನು ವಿಧಿಸಿ ಮೇಲ್ಕಂಡ ಸೌಕರ್ಯಗಳನ್ನು ಕೊಡದೆ ಪಕ್ಷಪಾತಮಾಡಿರುವುದು ಸರಿಯಲ್ಲ. ಮತ್ತು ಹಾಗೆ ಮಾಡುವುದು ರಾಜ್ಯಾಂಗದ ೧೪ನೇ ವಿಧಿಗೆ ವ್ಯತಿರಿಕ್ತವಾದದ್ದು. ಈ ಕಾರಣದಿಂದ ತಾ॥ ೨೬-೧-೫೦ ರಿಂದೀಚೆಗೆ ನಾವು ಕೊಟ್ಟಿರತಕ್ಕ ನೀರಿನ ಕಂದಾಯವನ್ನು ವಾಪಸು ವಾಪತಿ ಮಾಡಬೇಕಾಗಿ ಮುನಿಸಿಪಲ್ ಆಕ್ಟ್ ಸೆಕ್ಷನ್ ೨೦೧ರ ಪ್ರಕಾರ ಈ ಬಹಿರಂಗ ನೋಟೀಸನ್ನು ಕೊಟ್ಟಿದ್ದೇನೆ.

ಮೂಲಭೂತ ಹಕ್ಕಿನ ಸಂರಕ್ಷಣೆಗಾಗಿ ರಿಟ್‌ಪೇಟೆಂಟುಗಳು ಹೈಕೋರ್ಟಿನಮೂಲಕ ಸೂಕ್ತ ಪರಿಹಾರ ಹೊಂದಬೇಕಾಗುತ್ತದೆ. —ತಗಡೂರು ರಾಮಚಂದ್ರರಾವ್

ಮದ್ರಾಸಿಗೆ ತ್ರಿವೇದಿ

ಆಂಧ್ರಕ್ಕೆ ವಿಶೇಷಾಧಿಕಾರಿಗಳಾಗಿ ನೇಮಕವಾಗಿರುವ ಶ್ರೀ ಚಂದೂಲಾಲ್ ತ್ರಿವೇದಿಯವರು ನಾಳೆಯ ದಿನ ಮದ್ರಾಸಿಗೆ ಆಗಮಿಸಿ ಅಲ್ಲಿ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿ ಮತ್ತು ಇತರ ಅಧಿಕಾರಿಗಳು, ವಿವಿಧ ಪಕ್ಷಗಳ ನಾಯಕರು ಮತ್ತು ಪ್ರಮುಖರನ್ನು ಭೇಟಿಮಾಡುವರೆಂದು ತಿಳಿಯಬರುತ್ತದೆ.

ರೈಲ್ವೆ ವಸ್ತುಪ್ರದರ್ಶನ ಜನತೆಯ ಆಸ್ತಿ

ಅದನ್ನು ನೋಡಲು ಶುಲ್ಕ ವಿಧಿಸಕೂಡದು

ನ್ಯಾಯಾಲಯದ ಮುಂದೆ ಅರ್ಜಿ

ನಾಗಪುರಕ್ಕೆ ಆಗಮಿಸಿರುವ ಭಾರತ ರೈಲ್ವೆ ಶತಮಾನೋತ್ಸವದ ವಸ್ತುಪ್ರದರ್ಶನದ ವಿಶೇಷ ರೈಲಿಗೆ ತಮ್ಮನ್ನು ಉಚಿತವಾಗಿ ನೋಡಲು ಬಿಡಲಿಲ್ಲವೆಂದು ಅಲ್ಲಿಯ ರೈಲ್ವೆ ಮಂಡಲದ ಉಪಾಧ್ಯಕ್ಷರಾದ ಶ್ರೀ ಪೇಪಲ್‌ಲಾಲ್‌ಷಾ ಎಂಬುವವರು ನಾಗಪುರದ ಶ್ರೀ ನ್ಯಾಯಾಲಯದಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿ ಪ್ರದರ್ಶನವನ್ನು ನೋಡಲು ಉಚಿತವಾಗಿ ತಮ್ಮನ್ನು ಬಿಡುವಂತೆ ರೈಲ್ವೆ ಅಧಿಕಾರಿಗಳಿಗೆ ಸೂಚನೆ ಕೊಡಬೇಕೆಂದು ಕೋರಿದ್ದಾರೆ.

ಜುಲೈ ೨೦ ನೇ ತಾರೀಖು ಈ ವಿಶೇಷ ರೈಲು ಅಲ್ಲಿಗೆ ಆಗಮಿಸಿದ್ದಾಗ ನೂರಾರು ಜನ ಅತಿಥಿಗಳಿಗೆ ಅದನ್ನು ಉಚಿತವಾಗಿ ತೋರಿಸಿ ಮಾರನೇ ದಿನದಿಂದ ಪ್ರವೇಶಕ್ಕೆ ೪ ಆಣೆ ಶುಲ್ಕವನ್ನು ವಿಧಿಸುತ್ತಿರುವುದು ರೈಲ್ವೆ ಕಾನೂನು ಮತ್ತು ರಾಜ್ಯಾಂಗಕ್ಕೆ ವಿರೋಧವೆಂದೂ ಪ್ರದರ್ಶನವು ಪ್ರತಿಯೊಬ್ಬ ಭಾರತೀಯನಿಗೂ ಸೇರಿರುವ ಆಸ್ತಿಯಾದುದರಿಂದ ಅದನ್ನು ನೋಡಲು ಶುಲ್ಕ ವಿಧಿಸಕೂಡದೆಂದೂ ಶ್ರೀ ಸಾಸಲ ಲಾಲ್‌ರವರು ತಮ್ಮ ಅರ್ಜಿಯಲ್ಲಿ ನಮೂದಿಸಿದ್ದಾರೆ.

ಈ ವಿಷಯವು ಇತ್ಯರ್ಥವಾಗುವವರಿಗೂ ಈ ಪ್ರದರ್ಶನದ ರೈಲು ನಾಗಪುರದಿಂದ ಹೊರಕ್ಕೆ ಹೋಗದಂತೆ ತಡೆ ಆಜ್ಞೆಯನ್ನೂ ಅವರು ಕೋರಿದ್ದಾರೆ.

● ಕೊರಿಯಾದಲ್ಲಿ ಯುದ್ಧ ಬಂದಿಗಳ ವಿನಿಮಯ ಕಾರ್ಯವು ಇವೊತ್ತು ಉಭಯ ಪಕ್ಷಗಳಲ್ಲಿಯೂ ಪ್ರಾರಂಭವಾಯಿತು.

-ಮೈಸೂರು ಪೇಟೆಧಾರಣೆ-

ತಾರೀಖು ೪—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೦—	೩೦—೧೦
ಹರಳು	೪೦—೧೪	೪೭—೨
ಎಳ್ಳು	೫೫—	೯೫—೨
ಹೊಂಗೆಬೀಜ	೧೯—	—
ಹುರುಳಿ	೪೮—೮	೫೦—೧೨
ಹೆಸರು	೩೯—೧೦	೭೫—೧೪
ಅವರೆ	—	—
ಉದ್ದು	೬೬—	೭೧—೧೪
ಹುಚ್ಚೆಳ್ಳು	—	—
ಅಲಸಂದೆ	೪೫—	೭೫—
ಮೆಣಸಿನಕಾಯಿ	—	—
ಹುಣಸೇಹಣ್ಣು	೩—೨	೭—೬
ಸೀಗೆಕಾಯಿ	೬—	೭—೩
ಬೆಲ್ಲ	—	
ತೆಂಗಿನಕಾಯಿ	೧೫೦	೨೬೩

ಆಂಧ್ರ ರಾಜಧಾನಿ ಪ್ರಶ್ನೆ

ಕರ್ನೂಲ್ ಆಂಧ್ರಪ್ರಾಂತ್ಯ ರಾಜಧಾನಿಯಾಗಿರುವ ಬಗ್ಗೆ ಭಾರತ ಸರ್ಕಾರವು ತನ್ನ ನಿಲುವನ್ನು ಯಾವರೀತಿಯೂ ಈಗ ಬದಲಾಯಿಸುವುದಿಲ್ಲವೆಂದೂ ಮದರಾಸ್ ಶಾಸನಸಭೆಯಲ್ಲಿರುವ ಆಂಧ್ರ ಸದಸ್ಯರಿಗೆ ಇದು ಸೇರಿದ ವಿಷಯವೆಂದೂ ಹೇಳಲಾಗಿದೆ. ಅವರು ಈಗ ಅಥವಾ ಮುಂದಕ್ಕೆ ಈ ರಾಜಧಾನಿ ಪ್ರಶ್ನೆಯನ್ನು ಪುನರ್ವಿಮರ್ಶಿಸಿ ತಮಗೆ ಸೂಕ್ತವಾದ ತೀರ್ಮಾನವನ್ನು ಮಾಡಲು ಅವಕಾಶವಿದೆಯೆಂದೂ ಅದರಂತೆ ಕೇಂದ್ರವು ನಡೆದುಕೊಳ್ಳುವುದೆಂದು ಶಿಫಾರಿಸಲಾಗಿದೆಯೆಂದೂ ತಿಳಿಯಬರುತ್ತದೆ.

ಕೊರಿಯಾಕ್ಕೆ ಭಾರತ ನಿಯೋಗ

ಸ್ವದೇಶಕ್ಕೆ ಹಿಂತಿರುಗಿದ ಯುದ್ಧ ಖೈದಿಗಳನ್ನು ನೋಡಿಕೊಳ್ಳಲು ನೇಮಿಸಿರುವ ತಟಸ್ಥಮಂಡಲಿಯಲ್ಲಿ ಭಾರತದ ಪರವಾಗಿ ಶ್ರೀ ಆರ್. ಕೆ. ನೆಹರೂರವರ ನಾಯಕತ್ವ ಒಂದು ನಿಯೋಗವು ಇದೀಗ ಕೊರಿಯಾಕ್ಕೆ ತೆರಳಿತು ಅದು ಮೊದಲು ಟೋಕಿಯೋಗೆ ಭೇಟಿಯಿತ್ತು ಅಲ್ಲಿ ವಿಶ್ವಸಂಸ್ಥೆಯ ಸೈನ್ಯದೊಡನೆ ಈ ಖೈದಿಗಳಿಗೆ ಸಂಬಂಧಪಟ್ಟಂತೆ ಆಡಳಿತ ವಿಷಯ ಮುಂತಾದ ನಾನಾ ಭಾಗಗಳಲ್ಲಿ ವಿಚಾರವಿನಿಮಯ ಮಾಡಿ ಅನಂತರ ಪಾಮುನ್‌ಜಾನ್‌ಗೆ ಹೋಗಿ ಅಲ್ಲಿ ಉತ್ತರ ಕೊರಿಯಾ ಮತ್ತು ಚೈನಾ ಸೈನ್ಯದವರೊಡನೆ ಮಾತುಕತೆ ನಡೆಸಿ ಅನಂತರ ಭಾರತಕ್ಕೆ ಹಿಂತಿರುಗುತ್ತದೆ.

ಮಹಿಳೆಯರಿಗೆ ನೆಹರೂ ಮನವಿ

ಭಾರತ ಸರ್ಕಾರವು ಕೈಗೊಂಡಿರುವ ನಾನಾ ರಾಷ್ಟ್ರೀಯ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಮಹಿಳೆಯರು ಉಳಿತಾಯ ಯೋಜನಾ ಚಳುವಳಿಯಲ್ಲಿ ತಮ್ಮ ಶಕ್ತಿ ಮೀರಿ ನೆರವು ನೀಡಬೇಕೆಂದು ಪ್ರಧಾನಿ ನೆಹರು ಮನವಿ ಮಾಡಿದ್ದಾರೆ

ಅಧಿಕಾರಿವರ್ಗ ಚುನಾವಣೆ

ಮೈಸೂರು ೫

ಮೈಸೂರು ತಾಲ್ಲೂಕು ಕಾಂಗ್ರೆಸ್ಸಿನ ಅಧಿಕಾರಿವರ್ಗ ಚುನಾವಣೆಯು ಇದೇ ೯ ನೇ ತಾರೀಖು ಬೆಳಗ್ಗೆ ೧೧-೩೦ ಗಂಟೆಗೆ ಮೈಸೂರುನಗರ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದೆಂದು ಚುನಾವಣಾಧಿಕಾರಿಗಳು ತಿಳಿಸುತ್ತಾರೆ.

ಮೈಸೂರು ದಕ್ಷಿಣ ಕ್ಷೇತ್ರದ ಚುನಾವಣೆಯೂ ಸಹ ಅದೇ ದಿನ ೧೨ ಗಂಟೆಗೆ ಅದೇ ಸ್ಥಳದಲ್ಲಿ ನಡೆಯುತ್ತದೆ

ಪ್ರೆಸ್ ಮಾಲೀಕರಿಗೆ ಜುಲ್ಮಾನೆ

ಮೈಸೂರು ೫

ರಾಜಧಾನಿಯ ಕುಮಾರ ಪ್ರೆಸ್ಸಿನ ಶ್ರೀಗಳಾದ ಕೆ. ಕಮಾ ಸ್ವಾಮಿ ಮತ್ತು ಸುಬ್ಬಣ್ಣನವರುಗಳಿಗೆ ನಗರದ ನ್ಯಾಯಾಧೀಶರು ನಿನ್ನೆ ತಲಾ ೨೫ರೂ. ಜುಲ್ಮಾನೆಯನ್ನು ವಿಧಿಸಿದರು. ಕಳೆದ ಡಿಸೆಂಬರ್ ತಿಂಗಳಲ್ಲಿ ಮಹಾರಾಜಾ ಕಾಲೇಜಿನ ದಿನಾಚರಣೆ ಸಂಬಂಧದಲ್ಲಿ "ಹನುಮಂತಯ್ಯನವರೇ, ಇಗೋ, ನಿಮಗೆ 'ರೀಬಾಪ್ಪಟ ಪ್ರದರ್ಶನ'" ಎಂಬ ಹಸ್ತ ಪತ್ರಿಕೆಗಳನ್ನು ಮುದ್ರಣಾಲಯದ ಮತ್ತು ಮುದ್ರಕರ ಹೆಸರಿಲ್ಲದೆ ಅವರು ಮುದ್ರಿಸಿದರೆಂದು ಅವರ ಮೇಲೆ ಆಪಾದನೆ ಹೊರಿಸಲಾಗಿತ್ತು.

ಭೂದಾನ ಯಜ್ಞದಲ್ಲಿ ಸಂಗ್ರಹಣೆ

ಭೂದಾನ ಯಜ್ಞ ಚಳುವಳಿಯು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ೧೯ ಲಕ್ಷ ಎಕರೆ ಜಮೀನನ್ನು ಸಂಗ್ರಹಿಸಿರುವುದಾಗಿ ತಿಳಿಯಬರುತ್ತದೆ.

ಅಪೇರ

31—7—53 ರಿಂದ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಇನ್‌ಸ್ಪೆಕ್ಟರ್ ತಮಿಳು ಚಿತ್ರ

ಪಾತ್ರ:—ಬಾಲಚಂದರ್, ಟಿ. ಕೆ. ಷಣ್ಮುಗಂ, ಟಿ. ಕೆ. ಸರಸ್ವತಿ, ಅಂಜಲಿದೇವಿ

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು:— ಹಿ. ಕಾ. ಸುಬ್ಬರಾವ್

ಮೋಹನ ಮುದ್ರಣಾಲಯ ಮೈಸೂರು.

WANTED

A Printing machine, in running condition—Crown or Demmy Folio.

Contact:—

The SAMACHARA office, Mothikhana Buildings, Jaganmohan palace Road, Mysore.

ಫೋನ್ ೫೭೪ — ರಿಜಿಸ್ಟರ್ ನಂ. ಎಂ. ೫೩೮

ಸಮಾಚಾರ

ದಿನಪತ್ರಿಕೆ — ಸಂಪುಟ ೩ — ಸಂಚಿಕೆ ೨೮೫

೬-೮-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪ್ರಾಂತ್ಯಗಳ ಪುನರ್ವಿಂಗಡನ ಸಲಹಾ ಸಮಿತಿ

ಸದ್ಯದಲ್ಲೇ ನೇಮಿಸಲಾಗುವುದು

ಭಾರತಾದ್ಯಂತ ಭಾಷಾವಾರು ಪ್ರಾಂತ್ಯ ರಚನೆ, ಈಗಿರುವ ಪ್ರಾಂತ್ಯಗಳ ಪುನರ್ವಿಂಗಡನೆಗಳ ಬಗ್ಗೆ ಅನೇಕರೀತಿಯಾದ ಬೇಡಿಕೆ, ಚಳುವಳಿ ಮುಂತಾದುವೆಲ್ಲಾ ಇತ್ತೀಚೆಗೆ ಹೆಚ್ಚುತ್ತಲಿರುವುದರಿಂದ ಕೇಂದ್ರ ಸರ್ಕಾರವು ಈಗಾಗಲೇ ಘೋಷಿಸಿರುವ ಪ್ರಾಂತ್ಯ ವಿಂಗಡನ ಸಲಹಾಸಮಿತಿಯನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ನೇಮಿಸಲು ನಿರ್ಧಾರಕ್ಕೆ ಬಂದಿರುವುದಾಗಿ ತಿಳಿಯಬರುತ್ತದೆ. ಈ ಸಮಿತಿಯು ಯಾವ ರಾಜಕೀಯ ಪಕ್ಷದಂತೆ ವರ್ತಿಸುವುದಿಲ್ಲ. ದೇಶದ ಆರ್ಥಿಕ, ಸಾಮಾಜಿಕ, ಭೂಗೋಳಿಕ ಮತ್ತು ಭಾಷೆ ಮುಂತಾದ ನಾನಾ ವಿಷಯಗಳನ್ನು ಕೂಲಂಕೂಷವಾಗಿ ಅಂಕಿ ಅಂಶಗಳಿಂದ ಸಂಗ್ರಹಿಸಿ ಸರ್ಕಾರಕ್ಕೆ ತನ್ನ ಸಲಹೆಯನ್ನು ನೀಡುತ್ತದೆ. ಅನಂತರ ಸರ್ಕಾರವು ಸೂಕ್ತ ವ್ಯವಸ್ಥೆಯನ್ನು ಮಾಡುವುದೆಂದು ಹೇಳಲಾಗಿದೆ.

ಈ ವಿಷಯದಲ್ಲಿ ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಒಂದು ಹೇಳಿಕೆಯನ್ನು ಕೊಡಲಿರುವರೆಂದು ತಿಳಿಯಬರುತ್ತದೆ.

ಕಾರ್ಯನಿರತ ಪತ್ರಿಕೋದ್ಯೋಗಿ ಸಂಘ

ಮೈಸೂರು ೬

ಮೈಸೂರುನಗರದ ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಭೆಯು ಶ್ರೀ ಆರ್. ಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಇದಿನ ಬೆಳಗ್ಗೆ ನಡೆದು, ನಗರದಲ್ಲಿ ಒಂದು ಕಾರ್ಯನಿರತ ಪತ್ರಿಕೋದ್ಯೋಗಿಗಳ ಸಂಘವನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಲಾಯಿತು.

ಅದಕ್ಕೆ ಶ್ರೀ ಆರ್. ಗೋಪಾಲಕೃಷ್ಣರಾಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಗಳಾದ ಕೆ. ಅನಂತಸುಬ್ಬರಾಯ, ಮತ್ತು ಬಿ.ಕೆ. ಗೌಡರನ್ನು ಉಪಾಧ್ಯಕ್ಷರನ್ನಾಗಿಯೂ ಶ್ರೀ ಎಸ್. ಎಸ್. ಶಾಸ್ತ್ರಿಯವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಯಿತು

ಸಂಘವು ಯಶಸ್ವಿಯಾಗಿ ಕೆಲಸಮಾಡಲು ಪತ್ರಿಕೆಗಳ ಮಾಲೀಕರೂ ಮತ್ತು ಸಂಪಾದಕರುಗಳೂ ಸಹಕರಿಸಿ ಸಹಾಯ ಮಾಡಬೇಕೆಂದು ಪ್ರಾರ್ಥಿಸಲಾಯಿತು.

ಭಾರತದ ಪ್ರೆಸ್‌ಟ್ರಸ್ಟ್ ವಾರ್ತಾ ಸಂಸ್ಥೆಯ ನೌಕರರ ಬೇಡಿಕೆಗಳ ಬಗ್ಗೆ ಸಂಘದ ಸಹಾನುಭೂತಿಯನ್ನು ವ್ಯಕ್ತಪಡಿಸಲಾಯಿತು.

ಅಹೋಬಲ ಸ್ವಾಮಿಗಳ ಪಟ್ಟಾಭಿಷೇಕ ಶ್ರೀ ಮುಖಸೇವೆ

ಮೈಸೂರು ೬

ರಾಜಧಾನಿಯ ಶ್ರೀ ಅಹೋಬಲ ಮಠದ ೪೩ ನೇ ಆಸ್ಥಾನ ಪತಿಗಳ ಪಟ್ಟಾಭಿಷೇಕ ಶ್ರೀ ಮುಖಸೇವೆಯು ಕಳೆದ ಸೋಮವಾರ ದರ್ಬಾರ್‌ಬಕ್ಷಿ ಶ್ರೀ ಹೆಚ್. ಎಲ್. ದೇವರಾಜೇ ಅರಸುರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಈ ಸಮಾರಂಭಕ್ಕೆ ಮಠದ ಅನೇಕ ಶಿಷ್ಯವರ್ಗದವರು ಭಕ್ತರೂ ಪಂಡಿತೋತ್ತಮರೂ ಆಗಮಿಸಿದ್ದರು ಶ್ರೀ ಮಠದಕಾರ್ಯಕರ್ತರಾದ ವಿದ್ವಾನ್ ರಂಗಾಚಾರ್ಯರು ಶ್ರೀ ಮಠದ ಪರಂಪರೆ, ವೈಶಿಷ್ಟ್ಯ ಮುಂತಾದ ವಿಷಯದಲ್ಲಿ ಭಾಷಣಮಾಡಿದರು

ಶ್ರೀ ಸ್ವಾಮಿಗಳವರು ಮಾಡಿರುವ ಲೋಕೋಪಕಾರ ಮುಂತಾದ ಕಾರ್ಯಗಳನ್ನು ಅಧ್ಯಕ್ಷರು ವಿವರಿಸಿ ಅವರ ಕಾರ್ಯಗಳನ್ನು ಕೊಂಡಾಡಿದರು.

ಸ್ವಾತಂತ್ರ್ಯ ದಿನಾಚರಣೆ

ಆಗಸ್ಟು ೧೫ನೇ ತಾರೀಖ್ ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ ಧ್ವಜಾರೋಹಣ ವಿನಹ ಮಿಲಟರಿ ಪೆರೇಡು ಮುಂತಾದ ವಿಶೇಷ ಕಾರ್ಯಕ್ರಮಗಳನ್ನಾವುದನ್ನೂ ಮದ್ರಾಸ್ ಸರ್ಕಾರವು ಏರ್ಪಡಿಸಿಲ್ಲ.

ಆಹಾರ ವ್ಯವಸಾಯ ಸಮ್ಮೇಳನ ಮುಕ್ತಾಯ

ಬೆಂಗಳೂರು ೬

ಕಳೆದ ಒಂದುವಾರದಿಂದ ಇಲ್ಲಿ ನಡೆಯುತ್ತಿದ್ದ ಏಷ್ಯಾ ಮತ್ತು ದೂರಪ್ರಾಚ್ಯ ಆಹಾರ ಮತ್ತು ವ್ಯವಸಾಯ ಪ್ರಾದೇಶಿಕ ಸಮ್ಮೇಳನವು ನಿನ್ನೆಯದಿನ ಮುಕ್ತಾಯವಾಯಿತು.

ಡ್ರೈವರನಿಗೆ ಶಿಕ್ಷೆ ಹೆಚ್ಚಿತು

ಬೆಂಗಳೂರು ಸಿವಿಲ್ ಪ್ರದೇಶದ ಮಹಮದ್ ಗೌಸ್ ಎಂಬಾತನು ತನ್ನ ಆಟೋರಿಕ್ಷಾದಲ್ಲಿ ಕುಳಿತಿದ್ದ ಶ್ರೀಮತಿ ಜಯಮ್ಮ ಎಂಬಾಕೆಯ ಮೇಲೆ ಕೈಮಾಡಲು ನೋಡಲು ಅದನ್ನು ಪ್ರತಿಭಟಿಸಲು ಆಕೆಯನ್ನು ಹೊರಕ್ಕೆ ದೂಡಿ ಆಕೆಯು ಪ್ರಜ್ಞೆಯಿಲ್ಲದೆ ಬಿದ್ದುದಕ್ಕಾಗಿ ಕೆಳಕೋರ್ಟಿನವರು ವಿಧಿಸಿದ್ದ ೨ ವಾರಗಳ ಶಿಕ್ಷೆಯನ್ನು ಮೈಸೂರು ಹೈಕೋರ್ಟಿನವರು ಹೈಕೋರ್ಟಿನವರು ಹೆಚ್ಚಿಸಿ ಆತನಿಗೆ ೩ ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿದ್ದಾರೆ

ಮಠಗಳ ಭೂಮಿಯನ್ನು ಬಡವರಿಗೆ ಕೊಡಬೇಕು

ಶಂಕರಾಚಾರ್ಯರ ತತ್ವಪಾಲಕರಾಗಿದ್ದೇವೆಂದು ಹೇಳುವವರು, ಮಾಯಾ, ಮೋಹ ಮತ್ತು ಆಸ್ತಿಗಳ ಪಾಶಕ್ಕೆ ಬಲಿಯಾಗಿರುವುದು ಆಶ್ಚರ್ಯ, ಅದನ್ನು ಅವರು ಬಿಟ್ಟು ತಮ್ಮ ಮಠಗಳಿಗೆ ಸೇರಿದ ಜಮೀನುಗಳನ್ನೆಲ್ಲಾ ಬಡವರಿಗೆ ಕೊಡಬೇಕು—ಎಂದು ಆಚಾರ್ಯ ವಿನೋಬಾಭಾವೆಯವರು ತಿಳಿಸಿದ್ದಾರೆ.

ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಇದೇ ಮಾಹೆ ೮ನೇ ತಾರೀಖು ರಾತ್ರಿ ೯-೪೫ ಗಂಟೆಗೆ ಆಕಾಶವಾಣಿಯಲ್ಲಿ ಶ್ರೀ ಮುದಿಕೊಂಡ ವೆಂಕಟರಾಮ ಅಯ್ಯರ್‌ರವರ ಸಂಗೀತಕಛೇರಿಯು ನಡೆಯುತ್ತದೆ. ಈ ಕಾರ್ಯಕ್ರಮವನ್ನು ಎಲ್ಲಾ ರೇಡಿಯೋ ಕೇಂದ್ರಗಳಿಂದ ಪ್ರಸಾರಮಾಡಲಾಗುತ್ತದೆ.

ಗೌರಿಶಂಕರ ವಿಜಯಕ್ಕೆ ವಿಶೇಷ ಸ್ಟಾಂಪು

ತೇನ್‌ಸಿಂಗ್ ಮತ್ತು ಹಿಲೇರಿಯರು ಗೌರೀಶಂಕರ ಶಿಖರವನ್ನು ಜಯಿಸಿದ ಜ್ಞಾಪಕಾರ್ಥವಾಗಿ ಭಾರತ ಸರ್ಕಾರವು ೨ ಆಣೆಯ ಮತ್ತು ೧೪ ಆಣೆಗಳ ವಿಶೇಷ ರೀತಿಯ ಸ್ಟಾಂಪುಗಳನ್ನು ಪ್ರಕಟಿಸುವುದೆಂದು ಸಂಪರ್ಕ ಶಾಖಾ ಉಪಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಮಹಾರಾಜ ಕಾಲೇಜು ಪತ್ರಿಕೋದ್ಯಮ ಸಂಘ ಪ್ರಾರಂಭೋತ್ಸವ

ಮೈಸೂರು ೬

ಮಹಾರಾಜಾ ಕಾಲೇಜಿನಲ್ಲಿರುವ ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಸಂಘದ ಪ್ರಾರಂಭ ಭಾಷಣವನ್ನು ವಿದ್ಯಾವಂತ ಶ್ರೀ ಎ. ಜಿ. ರಾಮಚಂದ್ರರಾಯರು ಇದೇ ೮ ನೇ ತಾರೀಖು ಸಂಜೆ ೫ ಗಂಟೆಗೆ ಮಾಡುತ್ತಾರೆ

ವೃದ್ಧ ಸಿತಾಹತ ದಿವಂಗತ ವೆಂಕಟಕೃಷ್ಣಯ್ಯನವರ ಭಾವಚಿತ್ರವನ್ನು ತಾಯಿನಾಡು ಪತ್ರಿಕೆ ಮಾಲೀಕರಾದ ಶ್ರೀ ಪಿ. ಆರ್. ರಾಮಯ್ಯನವರು ನೆರವೇರಿಸುವರು ಶ್ರೀ ಸಿದ್ಧವನಹಳ್ಳಿ ಕೃಷ್ಣಶರ್ಮರವರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣವನ್ನು ಮಾಡುತ್ತಾರೆ.

ಈ ಸಮಾರಂಭಕ್ಕೆ ಪ್ರೊಫೆಸರ್ ವಿ. ಎಲ್. ಡಿಸೌಜಾರವರು ಅಧ್ಯಕ್ಷತೆ ವಹಿಸುವರು.

ಚಲನಚಿತ್ರಗಳಲ್ಲಿ ನೈತಿಕಮಟ್ಟ ಅತ್ಯಗತ್ಯ

ಚಲನಚಿತ್ರಗಳು ಜನತೆಯ ನೈತಿಕ ಮಟ್ಟವನ್ನು ಉತ್ತಮಗೊಳಿಸುವಂತೆ ಇರಬೇಕು. ಮನರಂಜನೆಯು ಜನರಿಗೆ ಅತ್ಯಗತ್ಯ ಆದಕ್ಕಾಗಿಯೇ ಚಲನಚಿತ್ರಗಳ ಅವಶ್ಯಕತೆಯಿದೆ. ಅದನ್ನು ತಯಾರಿಸುವವರು ಜನರ ನೈತಿಕ ಕ್ಷೇಮವನ್ನು ಪ್ರಥಮವಾಗಿ ಗಮನಿಸಬೇಕು-ಎಂದು ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ತಿಳಿಸಿದ್ದಾರೆ.

ಬುಡಕಟ್ಟಿನ ಜನರ ಸಮ್ಮೇಳನ

ಭಾರತ ಬುಡಕಟ್ಟಿನ ಜನರ ಸಮ್ಮೇಳನವೊಂದು ಇದೇ ನವಂಬರ್ ಮಾಹೆಯಲ್ಲಿ ರಾಂಚಿಯಲ್ಲಿ ನಡೆಯುವುದೆಂದು ತಿಳಿಯಬರುತ್ತದೆ.

ಆಂಧ್ರ ಮಸೂದೆ

ಪಾರ್ಲಿಮೆಂಟಿನಲ್ಲಿ ಆಂಧ್ರ ಮಸೂದೆಯನ್ನು ಇದೇ ೧೦ನೇ ತಾರೀಖು ಮಂಡಿಸಲಾಗುವುದೆಂದು ತಿಳಿಯಬರುತ್ತದೆ.

ಸಿಂಗ್‌ಮನ್‌ರೀಯವರಿಗೆ ಐಸನ್‌ಹೋವರ್‌ರ ಸಂದೇಶ

ಅಮೇರಿಕಾಧ್ಯಕ್ಷ ಜನರಲ್ ಐಸನ್‌ಹೋವರ್‌ರವರು ಮಿ॥ಡಲ್ಲೆಸ್‌ರವರಮೂಲಕ ದಕ್ಷಿಣಕೊರಿಯಾ ಅಧ್ಯಕ್ಷ ಡಾ॥ ಸಿಂಗ್‌ಮನ್‌ರೀಯವರಿಗೆ ಒಂದು ಸಂದೇಶವನ್ನು ಕಳುಹಿಸಿದ್ದಾರೆಂದು ತಿಳಿಯಬರುತ್ತದೆ.

ನೌಕಾ ದಿನ

ಬೊಂಬಾಯಿನಲ್ಲಿ ಅಕ್ಟೋಬರ್ ೧೧ನೇ ತಾರೀಖು ನೌಕಾದಿನವನ್ನು ಆಚರಿಸಲಾಗುತ್ತದೆ. ರಾಷ್ಟ್ರಪತಿ ಡಾ॥ ರಾಜೇಂದ್ರಪ್ರಸಾದ್‌ರವರು ಎಲ್ಲಾ ನೌಕೆಗಳನ್ನು ಅಕ್ಟೋಬರ್ ೧೧ನೇ ತಾರೀಖು ವೀಕ್ಷಿಸುವರು. ಸಾರ್ವಜನಿಕರೂ ಸಹ ಇದನ್ನು ನೋಡಲು ವ್ಯವಸ್ಥೆ ಮಾಡಲಾಗುತ್ತದೆ.

ಜಹಗೀರ್‌ದಾರಿ ರದ್ದು

ಭೂಪಾಲಿನಲ್ಲಿರುವ ಪ್ರಮುಖ ೪೬ ಜಹಗೀರ್‌ದಾರರು ತಮ್ಮ ಜೀವಮಾನ ಪರ್ಯಂತ ವೆಚ್ಚಕ್ಕಾಗಿ ಹಣವನ್ನು ಸರ್ಕಾರವು ಕೊಡುವುದಾದರೆ ತಾವು ತಮ್ಮ ಜಹಗೀರಿಗಳನ್ನು ಸರ್ಕಾರಕ್ಕೆ ಒಪ್ಪಿಸುವುದಾಗಿ ತಿಳಿಸಿದ್ದಾರೆ.

ಆಂಧ್ರ ಪ್ರಾಂತ್ಯ ಸ್ಥಾಪನೆ ತಡವಾಗುವುದಿಲ್ಲ

ತಾತ್ಕಾಲಿಕವಾಗಿ ಕರ್ನೂಲ್ ರಾಜಧಾನಿಯಾಗಿರುವುದು

ಕೇಂದ್ರದ ನಿರ್ಧಾರ

ಆಂಧ್ರಪ್ರಾಂತ್ಯರಚನೆ ಬಗ್ಗೆ ಈಗ ಅಲ್ಲಿಯ ಕೆಲವು ನಾಯಕರಲ್ಲಿ ಭಿನ್ನಾಭಿಪ್ರಾಯವುಂಟಾಗಿ ಪ್ರತ್ಯೇಕವಾಗಿ ಅವರುಗಳು ಪ್ರಧಾನಿ ನೆಹರೂರವರನ್ನು ಭೇಟಿ ಮಾಡಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅನೇಕ ಸಂಸ್ಥೆಗಳೂ ಸಹ ತಮ್ಮ ಮನವಿಗಳನ್ನು ಸಲ್ಲಿಸಿವೆ. ಕರ್ನೂಲ್ ತಾತ್ಕಾಲಿಕ ರಾಜಧಾನಿಯಾಗಿರಕೂಡದೆಂದು ಕೆಲವರ ಮನವಿ. ಬಳ್ಳಾರಿ ಪ್ರಶ್ನೆಯನ್ನು ಪುನಃ ಪರಿಶೀಲಿಸಬೇಕೆಂದು ಮತ್ತೊಂದು ಪ್ರಶ್ನೆಯಾಗಿದೆ.

ಆದರೆ ಅಕ್ಟೋಬರ್ ಒಂದನೇ ತಾರೀಖಿನ ದಿನ ಆಂಧ್ರಪ್ರಾಂತ್ಯ ರಚನೆಯಾಗಬೇಕೆಂದು ಕೇಂದ್ರವು ಮಾಡಿರುವ ನಿರ್ಧಾರವನ್ನು ಬದಲಾಯಿಸಿ ಹೊಸ ಪ್ರಾಂತ್ಯ ರಚನೆಯನ್ನು ವಿಳಂಬ ಮಾಡುವುದಿಲ್ಲವೆಂದೂ, ಸದ್ಯಕ್ಕೆ ಕರ್ನೂಲ್ ನೂತನ ಪ್ರಾಂತ್ಯದ ತಾತ್ಕಾಲಿಕ ರಾಜಧಾನಿಯಾಗಿರುವುದೆಂದೂ ತಿಳಿಯಬರುತ್ತದೆ. ನೂತನ ಶಾಸನ ಸಭೆಯು ಬೇಕಾದಲ್ಲಿ ಮುಂದೆ ಹೊಸ ನಿರ್ಧಾರವನ್ನು ತೆಗೆದುಕೊಳ್ಳಲು ಅವಕಾಶವಿರುವುದಾಗಿ ಹೇಳಲಾಗಿದೆ.

ಆಂಧ್ರಪ್ರಾಂತ್ಯದ ಬಗ್ಗೆ ವಿಶೇಷ ಅಧಿಕಾರಿಗಳಿಗೆ ಸಹಾಯಕರಾಗಿರಲು ಮದ್ರಾಸ್ ಸರ್ಕಾರವು ಅಲ್ಲಿಯ ಗೃಹಕಾರ್ಯದರ್ಶಿಗಳಾದ ಶ್ರೀ ಓ. ಪುಲ್ಲಾರೆಡ್ಡಿಯವರನ್ನು ಆಂಧ್ರ ವ್ಯವಹಾರ ಕಾರ್ಯದರ್ಶಿಗಳನ್ನಾಗಿ ನೇಮಿಸಿದೆ.

ವ್ಯವಸಾಯ ಸಂಶೋಧನಾ ಕೇಂದ್ರ

ವ್ಯವಸಾಯ ಸಂಶೋಧನಾ ಮತ್ತು ಶಿಕ್ಷಣ ಕೇಂದ್ರವು ಕೊಯಮತ್ತೂರಿನಲ್ಲಿ ತನ್ನ ಕಾರ್ಯವನ್ನು ಪ್ರಾರಂಭಿಸಿದೆ.

ಇಲ್ಲಿಯ ವ್ಯವಸಾಯ ಶಿಕ್ಷಣ ಕಾಲೇಜಿನಲ್ಲಿ ರೈತರಿಗಾಗಿಯೇ ವ್ಯವಸಾಯದಲ್ಲಿ ಆಧುನಿಕರೀತಿಯ ವಿಶೇಷ ಶಿಕ್ಷಣವನ್ನು ಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಶಿಕ್ಷಣವನ್ನು ಮಾತೃಭಾಷೆಯಲ್ಲೇ ಕೊಡಲಾಗುತ್ತದೆ.

ಬೊಂಬಾಯಿ ಸಂಗೀತಗಾರರ ನಿರ್ಧಾರ

ಅಖಿಲ ಭಾರತ ರೇಡಿಯೊ ಕೇಂದ್ರದ ಕಾರ್ಯಕ್ರಮದಲ್ಲಿ ಭಾಗವಹಿಸುವುದಿಲ್ಲವೆಂದು ನಿರ್ಧರಿಸಿದ್ದ ಬೊಂಬಾಯಿನ ಸಂಗೀತಕಲಾ ಮಂಡಲಿಯವರು ತಮ್ಮ ನಿರ್ಧಾರವನ್ನು ಬದಲಾಯಿಸಿ ಬಹಿಷ್ಕಾರವನ್ನು ವಾಪಸ್ಸು ಪಡೆದಿದ್ದಾರೆ.

ಮರುವಸತಿ ಶಾಖೆಯ ಸಂಧಾನ

ನಿರಾಶ್ರಿತರ ಆಸ್ತಿಪಾಸ್ತಿಗಳ ಬಗ್ಗೆ ಭಾರತ ಮತ್ತು ಪಾಕೀಸ್ತಾನ ಮರುವಸತಿ ಶಾಖಾ ಉನ್ನತಾಧಿಕಾರಿಗಳ ನಡುವೆ ಮೊನ್ನೆಯ ದಿನ ಮುಕ್ತಾಯವಾದ ಮಾತುಕತೆಗಳು ಪುನಃ ಈ ದಿನ ಪ್ರಾರಂಭವಾಗುವುದಾಗಿ ತಿಳಿಯಬರುತ್ತದೆ. ಭಾರತದ ಪ್ರತಿನಿಧಿಗಳು ಈದಿನ ಸ್ವದೇಶಕ್ಕೆ ಹಿಂತಿರುಗಬೇಕಾಗಿತ್ತು. ಆದರೆ ಅದು ರದ್ದಾಗಿದೆಯೆಂದು ತಿಳಿಯಬರುತ್ತದೆ.

ಗ್ರಾಮಹಿತಚಿಂತಕ ಸಮಿತಿಗಳ ರಚನೆ

ಮದ್ರಾಸ್ ಸರ್ಕಾರವು ಗ್ರಾಮ ಹಿತ ಚಿಂತಕ ಜಿಲ್ಲಾ ಸಮಿತಿಗಳನ್ನು ರಚಿಸಲು ನಿರ್ಧರಿಸಿದೆ. ಇದರಲ್ಲಿ ೧೦ ಜನ ಸದಸ್ಯರಿರುವರು. ಅವರಲ್ಲಿ ೫ ಜನರು ಸಾಮಾಜಿಕ ಸೇವೆಯಲ್ಲಿ ಹೆಚ್ಚು ಆಸಕ್ತಿ ವಹಿಸುವವರಾಗಿರುತ್ತಾರೆ. ಆಯಾ ಜಿಲ್ಲಾ ಕಲೆಕ್ಟರುಗಳು ಆ ಸಮಿತಿಗಳ ಅಧ್ಯಕ್ಷರಾಗಿರುವರು.

ಹಿರಿಯ ಶಾಸನ ಸಭಾಧಿವೇಶನ

ಕೇಂದ್ರ ಹಿರಿಯ ಶಾಸನ ಸಭಾಧಿವೇಶನವು ಇದೇ ಮಾಹೆ ೨೪ನೇ ತಾರೀಖಿನಿಂದ ಪ್ರಾರಂಭವಾಗುವುದೆಂದು ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೫—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—೮	೩೨—೧೪
ಹುರುಳು	—	—
ಎಳ್ಳು	೬೦—೪	೬೬—೧೪
ಹೊಂಗೆಬೀಜ	—	—
ಹುರುಳಿ	೪೯—	೫೦—
ಹೆಸರು	೫೪—	೬೦—೧೨
ಅವರೆ	—	—
ಉದ್ದು	೬೦—೮	—
ಹುಚ್ಚೆಳ್ಳು	—	—
ಅಲಸಂದೆ	೫೫—೪	೬೮—೨
ಮೆಣಸಿನಕಾಯಿ	—	—
ಹುಣಸೇಹಣ್ಣು	—	—
ಸೀಗೆಕಾಯಿ	—	—
ಬೆಲ್ಲ	—	
ತೆಂಗಿನಕಾಯಿ	—	

ದೇಶಾದಂತ್ಯ ಗೋಧಿ ಹತೋಟಿ ರದ್ದು

ಪಾರ್ಲಿಮೆಂಟಿನಲ್ಲಿ ಆಹಾರ ಸಚಿವರ ಹೇಳಿಕೆ

ದೆಹಲಿ ಪ್ರಾಂತ್ಯವನ್ನು ಬಿಟ್ಟು ಉಳಿದ ಎಲ್ಲಾ ಪ್ರಾಂತ್ಯಗಳಲ್ಲೂ ಗೋಧಿಯ ಮೇಲಿ ಹತೋಟಿಯನ್ನು ರದ್ದುಗೊಳಿಸಬೇಕೆಂದು ಕೇಂದ್ರ ಸರ್ಕಾರವು ಸೂಚನೆಯನ್ನು ಕೊಟ್ಟಿರುವುದಾಗಿ ಕೇಂದ್ರ ಆಹಾರ ಉಪಸಚಿವ ಶ್ರೀ ಎಂ. ವಿ. ಕೃಷ್ಣಪ್ಪನವರು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ. ಈಗಾಗಲೇ ೯ ಪ್ರಾಂತ್ಯಗಳಲ್ಲಿ ಗೋಧಿಯ ಮೇಲೆ ಹತೋಟಿಯನ್ನು ತೆಗೆಯಲಾಗಿದೆ.

ಚೈನಾದಿಂದ ಅಕ್ಕಿಯನ್ನು ತರಿಸಿಕೊಳ್ಳುವ ವಿಷಯದಲ್ಲಿ ಭಾರತವು ಚೈನಾ ಸರ್ಕಾರದೊಡನೆ ವ್ಯವಹಾರ ನಡೆಸುತ್ತಲಿದ್ದುದನ್ನು ಇತ್ತೀಚೆಗೆ ನಿಲ್ಲಿಸಲಾಗಿದೆ. ವಿದೇಶಗಳಿಂದ ಅಕ್ಕಿಯನ್ನು ತರಿಸಿಕೊಳ್ಳುವ ಆವಶ್ಯಕತೆಯು ಈಗ ಇಲ್ಲವಾಗಿ ಆ ವಿಷಯದಲ್ಲಿ ಮುಂದುವರಿಸಲಿಲ್ಲವೆಂದು ಆಹಾರ ಸಚಿವ ಶ್ರೀ ಕಿದ್ವಾಯಿಯವರು ತಿಳಿಸಿದ್ದಾರೆ.

೧೯೫೨-೫೩ ರಲ್ಲಿ ಅಕ್ಕಿಯ ಉತ್ಪಾದನೆಯನ್ನು ಪರಿಶೀಲಿಸಿ ಅನಂತರ ಅದರ ಮೇಲಿನ ಹತೋಟಿಯನ್ನು ಸಡಿಲಿಸುವ ಪ್ರಶ್ನೆಯನ್ನು ತೆಗೆದುಕೊಳ್ಳಲಾಗುವುದೆಂದೂ ಸಚಿವರು ತಿಳಿಸಿದ್ದಾರೆ.

ನಗರದ ಜನಸಂಖ್ಯೆ ೧ಂಸಾವಿರಕ್ಕೆ ಮೀರಕೂಡದು

ಯಾವುದೇ ನಗರದ ಜನಸಂಖ್ಯಾ ವ್ಯಾಪ್ತಿಯು ೧ಂಸಾವಿರಕ್ಕೆ ಮೀರಕೂಡದು. ಜಾಡಮಾಲಿಗಳ ಸ್ಥಿತಿಯನ್ನು ಸುಧಾರಿಸಬೇಕು. ನಾಗರೀಕರಿಗೆ ಉತ್ತಮ ಹಾಲಿನ ಸರಬರಾಜು ವ್ಯವಸ್ಥೆ ಮಾಡಬೇಕು-ಎಂದು ಆಚಾರ್ಯ ವಿನೋಬಾ ಭಾವೆಯವರು ಬಿಹಾರ್ ಪ್ರಾಂತ್ಯದ ಪುರಸಭೆಗಳ ಅಧ್ಯಕ್ಷರು ಸಮ್ಮೇಳನದಲ್ಲಿ ತಿಳಿಸಿದ್ದಾರೆ

ಅಮೆರಿಕಾ ದಕ್ಷಿಣಕೊರಿಯಾ ರಕ್ಷಣಾ ಒಪ್ಪಂದ.

ಅಮೆರಿಕಾ ಮತ್ತು ದಕ್ಷಿಣ ಕೊರಿಯಾ ನಡುವೆ ಆಗುವ ರಕ್ಷಣಾ ಒಪ್ಪಂದದ ಬಗ್ಗೆ ಮಾತುಕತೆಗಳು ದಕ್ಷಿಣಕೊರಿಯಾ ಅಧ್ಯಕ್ಷ ಡಾ|| ಸಿಂಗ್‌ಮನ್‌ರೀ ಮತ್ತು ಅಮೇರಿಕಾ ವಿದೇಶಾಂಗ ಕಾರ್ಯದರ್ಶಿ ಮಿ|| ಡಲ್ಸ್‌ರವರ ನಡುವೆ ಪ್ರಾರಂಭವಾಗಿದೆಯೆಂದು ತಿಳಿಯಬರುತ್ತದೆ.

ಕಾಂಗ್ರೆಸ್ ಅಧಿವೇಶನದ ವೆಚ್ಚ

ಕಳೆದ ಜನವರಿ ಮಾಹೆಯಲ್ಲಿ ಹೈದರಾಬಾದಿನಲ್ಲಿ ನಡೆದ ಎ. ಐ. ಸಿ. ಸಿ. ಅಧಿವೇಶನದ ವೆಚ್ಚವು ೬ ಲಕ್ಷ ೩೪ ಸಾವಿರ ರೂಪಾಯಿಗಳಾಯಿತೆಂದು ಹೇಳಲಾಗಿದೆ.

ನಗರಾರೋಗ್ಯ

ಮೈಸೂರು ೬

ಕಳೆದ ಮಾಹೆಗೆ ಅಂತ್ಯವಾದ ಪಕ್ಷದಲ್ಲಿ ನಗರದಲ್ಲಿ ಪ್ಲೇಗು ರೋಗವು ಇರಲಿಲ್ಲ. ೧೧೯೫ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಯಿತು.

ಸಿಡುಬುರೋಗದಿಂದ ಒಂದು ಮರಣವಾಯಿತು. ೩೫೬ ಪ್ರಾಥಮಿಕ ಮತ್ತು ೫೪೩ ವ್ಯಾಕ್ಸಿನೇಷನ್ ಮಾಡಲಾಯಿತು. ಡಿಫ್ತೀರಿಯಾ ರೋಗವು ೧೯ ಜನರಿಗೆ ತಗುಲಿ ೩ ಮರಣಗಳಾದುವು. ಇದರ ವಿರುದ್ಧವಾಗಿ ೧೩೨ ಇನ್ಯಾಕ್ಯುಲೇಷನ್‌ಗಳಾದುವು.

ಜ್ಯೋತಿನಗರದಲ್ಲಿ ೭ ಜನರಿಗೆ ಕಾಲರಾ ತಗುಲಿ ೨ ಮರಣಗಳಾದುವು. ೮೭೫ ಕಾಲರಾ ಇನಾಕ್ಯುಲೇಷನ್ ಹಾಕಲಾಯಿತು ಪರಿಸ್ಥಿತಿಯು ಹದಕ್ಕೆ ಬಂದಿದೆ--ಎಂಬುದಾಗಿ ಮೈಸೂರು ನಗರಾರೋಗ್ಯ ಅಧಿಕಾರಿಗಳ ಪ್ರಕಟಣೆಯು ತಿಳಿಸುತ್ತದೆ.

ಡಾ|| ಮಿಸ್ ಕ್ಯಾಸ್ಪರ್‌ರ ನಿಧನ

ವಾಣಿವಿಲಾಸ ಆಸ್ಪತ್ರೆಯ ಸೂಪರಿಂಟೆಂಡೆಂಟರಾಗಿದ್ದು ಕಳೆದ ಮಾಹೆ ೧೩ ನೇ ತಾ|| ಕೆಲಸದಿಂದ ವಿಶ್ರಾಂತಿ ಪಡೆದ ಡಾ|| ಮಿಸ್ ಕ್ಯಾಸ್ಪರ್‌ರವರು ಮೊನ್ನೆ ಬೆಳಿಗ್ಗೆ ಹೃದಯಕ್ರಿಯೆ ನಿಂತು ನಿಧನರಾದರು.

ಬಂದರುಗಳ ವಿಸ್ತರಣ ಕಾರ್ಯ

ಬೊಂಬಾಯಿ, ಮದರಾಸ್, ತಿರುವಾಂಕೂರ್-ಕೊಚ್ಚಿ ಮುಂತಾದ ಪ್ರಾಂತ್ಯಗಳಲ್ಲಿ ಕಿರಿಯ ಬಂದರುಗಳ ವಿಸ್ತರಣ ಕಾರ್ಯವನ್ನು ನಡೆಸಲು ಭಾರತ ಸರ್ಕಾರವು ಒಟ್ಟು ೬೦ ಲಕ್ಷರೂಪಾಯಿಗಳ ಸಾಲವನ್ನು ಮಂಜೂರ್ಮಾಡಿದೆ.

ರಾಜಕಮಲ್

1-8-53 ರಿಂದ ಪ್ರತಿದಿನ 3 ಆಟಗಳು

ಪಕ್ಷಿರಾಜಾರವರ

ಪೊನ್ನಿ [ತಮಿಳು]

ಪಾತ್ರ:—ಲಲಿತ, ಪದ್ಮಿನಿ, ಶ್ರೀರಾಂ, ಶಾಂತಕುಮಾರಿ, ದೊರೈರಾಜ್.

ಪ್ರಕಾಶಕರು:—ಜಿ. ಎಲ್. ಸ್ವಾಮಿ
ಮುದ್ರಕರು:— ಹಿ. ಕಾ. ಸುಬ್ಬರಾವ್
ಮೋಹನ್ ಮುದ್ರಣಾಲಯ ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೮

ಸಮಾಚಾರ

ದಿನಪತ್ರಿಕೆ
ಸಂಪುಟ ೩
ಸಂಚಿಕೆ ೨೮೪

೭-೮-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಜಿಲ್ಲಾಬೋರ್ಡುಗಳು ಕೂಡಲೇ ರದ್ದಾಗಬೇಕು

ಶಾಸನಸಭಾ ಕಾಂಗ್ರೆಸ್ ಪಕ್ಷದ ಸದಸ್ಯರ ಒತ್ತಾಯ

ಮೈಸೂರು ಸಂಸ್ಥಾನದಲ್ಲಿ ಅನೇಕವರ್ಷಗಳಿಂದ ಚುನಾವಣೆ ನಡೆಯದೆ ಇರುವ ಜಿಲ್ಲಾಬೋರ್ಡುಗಳನ್ನು ಈ ಕೂಡಲೇ ರದ್ದುಮಾಡಿ, ಪ್ರತಿ ಜಿಲ್ಲೆಯ ಜಿಲ್ಲಾಧಿಕಾರಿಗಳನ್ನು ಅಧ್ಯಕ್ಷರನ್ನಾಗಿಯೂ, ಮತ್ತು ಆಯಾ ಜಿಲ್ಲಾ ಶಾಸನಸಭಾ ಸದಸ್ಯರುಗಳನ್ನು ಸದಸ್ಯರನ್ನಾಗಿಯೂ ನೇಮಿಸಿ, ಕೂಡಲೇ ಈ ಸಮಿತಿಗೆ ಜಿಲ್ಲಾಬೋರ್ಡುಗಳ ಆಡಳಿತ ವಹಿಸಿಕೊಡಬೇಕೆಂದು ಶಾಸನಸಭೆಯ ಕಾಂಗ್ರೆಸ್‌ಪಕ್ಷದ ೪೮ ಮಂದಿ ಸದಸ್ಯರು ಒತ್ತಾಯ ಪತ್ರಗಳನ್ನು ಮುಖ್ಯಮಂತ್ರಿಗಳಿಗೆ ಬರೆದಿದ್ದಾರೆಂದು ತಿಳಿಯಬರುತ್ತದೆ.

ಫಲ ಪುಷ್ಪ ಬಹುಮಾನ ವಿನಿಯೋಗ

ಮೈಸೂರು ೭

ಮೈಸೂರಿನ ಉದ್ಯಾನ ಕಲಾ ಸಂಘದ ಆಶ್ರಯದಲ್ಲಿ ಫಲ ಪುಷ್ಪ ಬಹುಮಾನ ವಿನಿಯೋಗ ಸಮಾರಂಭವು ನಾಳೆ ಸಂಜೆ ೫-೩೦ ಗಂಟೆಗೆ ಲೆ|| ಕ|| ಸರ್ದಾರ್ ಎ.ವಿ. ಸುಬ್ರಹ್ಮಣ್ಯರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಮೃಗಾಲಯದಲ್ಲಿ ನಡೆಯುತ್ತದೆ.

ರಾಮಾಯಣ ವಾಚನ

ಮೈಸೂರು ೭

ಗಮಕ ಕಲಾಸಂಘದ ಆಶ್ರಯದಲ್ಲಿ ಸಾಧ್ವಿಪತ್ರಿಕೆ ಕಛೇರಿ ಮಹಡಿಯ ಮೇಲೆ ಈ ಸಂಜೆ ೬ ಗಂಟೆಗೆ ಶ್ರೀಮತಿ ಶಕುಂತಲಾ ಬಾಯಿ ಪಾಂಡುರಂಗರಾವ್‌ರವರಿಂದ ಶ್ರೀ ಕುವೆಂಪುರವರ 'ರಾಮಾಯಣ ದರ್ಶನ' ವಾಚನ ಮತ್ತು ಶ್ರೀ ಪಾಂಡುರಂಗರಾವ್‌ರವರಿಂದ ಅದರಬಗ್ಗೆ ಉಪನ್ಯಾಸ ನಡೆಯುತ್ತದೆ.

ಟೀಪುಸುಲ್ತಾನ್ ದಿನಾಚರಣೆ

ಮೈಸೂರು ೭

ಅಂಜುಮನ್-ಇ-ತಹೇಹದ್-ಇ-ಇಸ್ಲಾಮ್‌ನ ಆಶ್ರಯದಲ್ಲಿ ನಾಳೆ ಬೆಳಿಗ್ಗೆ ೯ ಗಂಟೆಗೆ ಶ್ರೀರಂಗಪಟ್ಟಣದ ಗುಂಬಜ್‌ನಲ್ಲಿ ಟೀಪುಸುಲ್ತಾನ್ ದಿನಾಚರಣೆಯು ನಡೆಯುತ್ತದೆ. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರು ಅಧ್ಯಕ್ಷತೆ ವಹಿಸುತ್ತಾರೆ.

ವಿದ್ಯಾ ಸುಧಾರಣೆ ಬಗ್ಗೆ ಸರ್ಕಾರದ ಕಾರ್ಯಕ್ರಮ

ಬೆಂಗಳೂರು ೭

ಈಗಾಗಲೇ ವಿದ್ಯಾ ಸುಧಾರಣೆ ಕೆಲಸದಲ್ಲಿ ಪ್ರಾರಂಭ ಕಾರ್ಯವನ್ನು ಸರ್ಕಾರ ಮಾಡಿದೆ. ಸಭೆಯಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಮತ್ತು ಸಲಹೆಗಳನ್ನು ವಿದ್ಯಾಇಲಾಖೆಯ ಪರಿಣತರ ಸಮ್ಮೇಳನದ ಮುಂದಿಟ್ಟು ಅವರ ಅಭಿಪ್ರಾಯಗಳನ್ನು ಕೇಳಿಕೊಂಡು ಯಾವ ಯಾವ ಸಲಹೆಗಳನ್ನು ಸರ್ಕಾರಿ ಆಜ್ಞೆ ಮೂಲಕ ಜಾರಿಗೆ ತರಬಹುದೋ ಅವುಗಳನ್ನು ತಕ್ಷಣ ಜಾರಿಗೆ ತರುತ್ತೇವೆ. ಶಾಸನವನ್ನು ಯಾವಯಾವುದರ ಬಗ್ಗೆ ತರಬೇಕೋ ಅಬಗ್ಗೆ ಶಾಸನ ತಯಾರಿಸಿ ಮುಂದಿನ ಅಧಿವೇಶನದಲ್ಲಿ ಮಂಡಿಸುತ್ತೇವೆ-ಎಂದು ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ನಿನ್ನೆ ಶಾಸನಸಭೆಯಲ್ಲಿ ತಿಳಿಸಿರುತ್ತಾರೆ.

ಕಲಾ ವಸ್ತುಪ್ರದರ್ಶನ

ಮಾಸ್ಕೋವಿನಲ್ಲಿ ನಿನ್ನೆಯದಿನ ಕಲಾ ವಸ್ತುಪ್ರದರ್ಶನವೊಂದು ಪ್ರಾರಂಭವಾದೆ ಅದರಲ್ಲಿ ಸಮಾರು ೪೦೦ ವಸ್ತುಗಳಿವೆ.

ಮೈಸೂರಿನಲ್ಲಿ ಪ್ರವಾಹದ ಹಾವಳಿ

ಶಾಸನಸಭೆಯಲ್ಲಿ ವಿವರ

ಬೆಂಗಳೂರು ೭

ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸೇತುವೆಯಾಚೆ ಇರುವ ರಸ್ತೆ ಸುಮಾರು ೨೦೦ ಅಡಿಗಳಷ್ಟು ನೀರಿನಲ್ಲಿ ಮುಳಗಿ, ಅದರಿಂದ ೪ ಸಾವಿರರೂಗಳನ್ನು ನಷ್ಟ ಸಂಭವಿಸಿತೆಂದು ಅಂದಾಜು ಮಾಡಲಾಗಿದೆ. ನಂಜನಗೂಡು ಬಳಿ ಕಪಿನೀನದಿ ದಡದ ತೋಟದಲ್ಲಿದ್ದ ೩೫ ಗುಡಿಸಲುಗಳು ಪ್ರವಾಹದಲ್ಲಿ ಕೊಚ್ಚಿಹೋಗಿವೆ ನಗರ್ಲೆಗ್ರಾಮದ ಜಮೀನುಗಳಲ್ಲಿ ರಾಗಿ ಮತ್ತು ಭತ್ತದ ಬೆಳೆಗಳೂ ನಂಜನಗೂಡು ತಾಲ್ಲೂಕಿನ ಸಮೀಪದ ಇತರ ಹಳ್ಳಿಗಳಲ್ಲಿ ಜಮೀನುಗಳೂ ಈ ಪ್ರವಾಹದಿಂದ ನಷ್ಟಕ್ಕೊಳಗಾಗಿವೆ. ಗುಡಿಸಲುಗಳು ನಾಶವಾದ್ದರಿಂದ ೧೧,೦೬೦ ರೂ ನಷ್ಟವಾಗಿರುವುದಾಗಿ ತಿಳಿಸಲಾಗಿದೆ. ನಂಜನಗೂಡು ತಾಲ್ಲೂಕಿನಲ್ಲಿ ಪರಿಹಾರ ಕಾರ್ಯಕ್ಕಾಗಿ ೧೦ ಸಾವಿರ ರೂ. ಮಂಜೂರ್ಮಾಡಲಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಾನದಿಯ ಪ್ರವಾಹದಿಂದ ಬೆಳೆಗಳಿಗೆ ವಿಶೇಷ ನಷ್ಟವುಂಟಾಗಿದೆ. ಬಿತ್ತನೆ ಬೀಜ ಕೊಚ್ಚಿಹೋದ ಕಡೆಗಳಿಗೆ ಸರಬರಾಜು ಮಾಡಲಾಗುತ್ತಿದೆ. ಇದೂ ಅಲ್ಲದೆ ಇತರ ಪರಿಹಾರ ಕಾರ್ಯಗಳನ್ನೂ ಕೈಗೊಳ್ಳಲಾಗಿದೆ-ಎಂದು ರೆವಿನ್ಯೂ ಸಚಿವರು ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ಭೂಪಾಲಿನಲ್ಲಿ ಜಮೀನ್ದಾರಿ ರದ್ದು

ಭೂಪಾಲ್ ಶಾಸನಸಭೆಯಲ್ಲಿ ನಿನ್ನೆಯದಿನ ಜಮೀನ್ದಾರಿ ರದ್ದಿನ ಮಸೂದೆಯು ಸರ್ವಾನುಮತದಿಂದ ಅಂಗೀಕಾರವಾಯಿತು. ಇದರಿಂದ ಸರ್ಕಾರ ೯೯ ಜಮೀನ್ದಾರಿಗಳನ್ನು ವಹಿಸಿಕೊಳ್ಳುತ್ತದೆ ಜಮೀನ್ದಾರರಿಗೆ ತಮ್ಮ ಉಪಯೋಗಕ್ಕೆ ೫೦ ಎಕರೆ ಜಮೀನನ್ನು ಬಿಟ್ಟುಕೊಡಲಾಗುತ್ತದೆ.

● ಆಗಸ್ಟು ೩ನೇ ತಾ|| ನಿಂದ ಸಿಂಹಳದಲ್ಲಿ ಆಹಾರ ಬೆಲೆ ಏರಿಸುವುದರ ಬಗ್ಗೆ ನಡೆಯುವ ವಿರೋಧ ಚಳವಳಿಯಲ್ಲಿ ಸಿಂಹಳ ಭಾರತೀಯರು ಭಾಗವಹಿಸುವುದಿಲ್ಲವೆಂದು ತಿಳಿಯಬರುತ್ತದೆ.

ಮೈಸೂರು ರಾಜಕೀಯ ದೆಹಲಿಯಲ್ಲಿ ಚರ್ಚೆ

ಮೈಸೂರು ೭

ಮೈಸೂರಿನ ರಾಜಕೀಯ ಪರಿಸ್ಥಿತಿಯನ್ನು ಕಾಂಗ್ರೆಸ್ ಪ್ರಧಾನಿ ನೆಹರೂರವರೊಡನೆ ಚರ್ಚಿಸಲು ಮೈಸೂರು ಪ್ರಾದೇಶ ಕಾಂಗ್ರೆಸ್‌ಸಮಿತಿ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡ ಶ್ರೀಗಳಾದ ಎಸ್.ಚೆನ್ನಯ್ಯ ಮತ್ತು ಟಿ. ಸುಬ್ರಹ್ಮಣ್ಯರವರು ನಾಳಿದ್ದು ದೆಹಲಿ ಹೋಗುವರು.

ಶರಾಬ್ ಅಂಗಡಿ ಕಳವು ಪತ್ತೆ

ರಾಜಧಾನಿಯ ಲಷ್ಕರ್‌ಮೊಹಲ್ಲಾ ಕುಂಬಾರಗೇರಿಯಲ್ಲಿರುವ ಶರಾಬು ಅಂಗಡಿಗೆ ಕಳೆದ ೪ನೇ ತಾರೀಖು ಮಧ್ಯರಾತ್ರಿ ನಗ್ಗಿ ಕಳವುಮಾಡಿದ ಸಂದರ್ಭದಲ್ಲಿ ರಾಯನ್ ಮತ್ತು ಇತರ ೬ ಜನರನ್ನು ದಸ್ತಗಿರಿಮಾಡಿ, ಶರಾಬ್ ಬಾಟಿಗಳನ್ನು ವಶಪಡಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ತ್ರಿವೇದಿ ಮದ್ರಾಸ್‌ನಲ್ಲಿ

ಆಂಧ್ರಪ್ರಾಂತ್ಯ ರಚನೆ ಆಡಳಿತ ಬಗ್ಗೆ ಕೇಂದ್ರ ಸರ್ಕಾರವು ವಿಶೇಷಾಧಿಕಾರಿಗಳನ್ನಾಗಿ ನೇಮಿಸಿರುವ ಶ್ರೀ ತ್ರಿವೇದಿಯವರು ನಿನ್ನೆ ಮದ್ರಾಸ್‌ಗೆ ಆಗಮಿಸಿದರು. ಇಂದಿನಿಂದ ಅವರು ತಮ್ಮ ಕೆಲಸವನ್ನು ಪ್ರಾರಂಭಿಸುವರು ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿ ಮತ್ತು ವ್ಯವಸಾಯ ಸಚಿವ ಡಾ|| ಸಾಂಗಣ್ಣಗೌಡರನ್ನೂ ಭೇಟಿ ಮಾಡಿದ್ದರು.

ಗೋಪಾಲರಾಯರಿಗೆ ಶಿಕ್ಷೆ ಖಾಯಂ

ಬೆಂಗಳೂರು ೭

ಹಣದ ಮೋಸದ ಮೊಕದ್ದಮೆಯ ೩ ಅಪಾದನೆಗಳಲ್ಲಿ ಬಿ. ಎಸ್. ಗೋಪಾಲರಾಯರಿಗೆ ಅಡಿಷನಲ್ ಒಂದನೇ ದರ್ಜೆ ಮ್ಯಾಜಿಸ್ಟ್ರೇಟರು ತಲಾ ೨ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿದ್ದುದರ ಮೇಲೆ ಹೂಡಿದ್ದ ಅವರ ಅಪೀಲ್ ಅರ್ಜಿಯನ್ನು ಸೆಷನ್ಸ್ ನ್ಯಾಯಾಧೀಶರು ತಿರಸ್ಕರಿಸಿದ್ದಾರೆ.

ಕನ್ನಡ ಟೈಪ್‌ರೈಟರ್ ಬಗ್ಗೆ ಹೊಸಕಾರ್ಯಕ್ರಮ

ಬೆಂಗಳೂರು ೭

ಕನ್ನಡ ಟೈಪುರೈಟರುಗಳ ರಚನೆ ಬಗ್ಗೆ ಕಳೆದ ಮಾಹೆಯಲ್ಲಿ ಹೊಸದಾಗಿ ರಚಿತವಾದ ಸಮಿತಿಯು ಸರ್ಕಾರಿ ಕೆಲವು ತೀರ್ಮಾನಕ್ಕೆ ಬಂದು ಸರ್ಕಾರಕ್ಕೆ ತನ್ನ ವರದಿಯನ್ನು ಕಳುಹಿಸುವ ವಿಷಯದಲ್ಲಿ ಸರ್ಕಾರದವರು ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ ಈರೀತಿ ತಿಳಿಸಿದ್ದಾರೆ.

ಶರ್ಮಾ ಸಮಿತಿಯು ಶಿಫಾರಸುಗಳಿಗೆ ವಿಶ್ವ ಸ್ವಾಗತದೊರೆಯಿತು. ಯಂತ್ರ ತಯಾರಿಕೆ ವಿಷಯದಲ್ಲಿ ಸಲಹೆಗಳಿಗೆ ಪುರಸ್ಕಾರ ದೊರೆತರೂ ಲಿಪಿ ಸಂಸ್ಕರಣ ಬಗ್ಗೆ ವಿರೋಧವು ಕಾಣಬಂದಿತು ಸರ್ಕಾರಿ ಮುದ್ರಣಾಲಯದ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ವಿಜಯಬಾಲಯ್ಯನವರು ಶರ್ಮಾ ಸಮಿತಿಯ ತಿಮ್ಮಪಡಿಗಳನ್ನು ಅದಷ್ಟು ಕಡಮೆ ಮಾಡಿ ಒಂದು ಪುಸ್ತಕವನ್ನು ಬರೆದು ಸರಕಾರಕ್ಕೆ ಕೆಲವು ಸಲಹೆಗಳನ್ನು ನೀಡಿದರು ಈ ಪುಸ್ತಕಕ್ಕೆ ಹಿಂದಿನಂತೆ ಟೀಕೆಗಳು ಬಂದಾಗ್ಯೂ ಲಿಪಿಗಳ ಬದಲಾವಣೆ ಕಡಮೆಯದ್ದರಿಂದ ಸಾರ್ವಜನಿಕರು ತೃಪ್ತಿ ಪಡುವರೆಂದು ಕಾಣಬಂದಿತು.

ಅದಕ್ಕಾಗಿ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಟಿ. ಟಿ. ಶರ್ಮ, ಎಂ. ಆರ್. ಶ್ರೀನಿವಾಸಮೂರ್ತಿ, ಸಿ. ಕೆ. ವೆಂಕಟರಾಮಯ್ಯ, ಟಿ. ಕೃಷ್ಣಸ್ವಾಮಿಶೆಟ್ಟಿ, ಜೆ. ಬಿ. ಮಲ್ಲಾರಾಧ್ಯ ಮತ್ತು ಶ್ರೀ ವಿಜಯಪಾಲಯ್ಯನವರನ್ನೊಳಗೊಂಡು ಪ್ರತ್ಯೇಕ ಸಮಿತಿಯನ್ನು ರಚಿಸಲಾಯಿತು.

ಆ ಸಮಿತಿಯು ಕಳೆದ ಹೋಮಾಹೆಯಲ್ಲಿ ಭೆ ಸೇರಿ ವಿಚಾರಗಳನ್ನು ಚರ್ಚಿಸಿ ಸರ್ಕಾರಕ್ಕೆ ಕೆಲವು ಸಲಹೆಗಳನ್ನು ಕೊಟ್ಟಿದೆ. ಅದು ಈಗ ಪರಿಶೀಲನೆಯಲ್ಲಿದೆ.

ಈಗ ಹೊಸದಾಗಿ ಸೇರಿದ್ದ ಸಮಿತಿಯು ಹೊಸ ಸಮಿತಿಯೇ ಹೊರತು ಏನಹ ಶ್ರೀ ಶರ್ಮರವರ ಸಮಿತಿಯಲ್ಲವೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ.

ಪತ್ರಿಕಾಲಯಗಳಿಗೆ ಅಮೇರಿಕಾಧಿಕಾರಿಯ ಭೇಟಿ

ಮೈಸೂರು ೭

ಮದ್ರಾಸಿನಲ್ಲಿರುವ ಅಮೇರಿಕಾ ಸುದ್ದಿ ಶಾಖೆಯ ಅಧಿಕಾರಿಗಳಾದ ಮಿ॥ ರೈಮಂಡ್ ಇ ಬಾರ್ನ್ಸ್‌ರವರು ನಿನ್ನೆಯದಿನ ನಗರಕ್ಕೆ ಆಗಮಿಸಿ ಎಲ್ಲಾ ಪತ್ರಿಕಾಲಯಗಳಿಗೆ ಭೇಟಿಯಿತ್ತು ಅಲ್ಲಿಯ ಕಾರ್ಯಕಲಾಪಗಳ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಮೈಸೂರು ನಗರದಂತಹ ಪಟ್ಟಣದಲ್ಲಿ ೭-೮ ದಿನಪತ್ರಿಕೆಗಳು ಜನತೆಗೆ ಅತ್ಯಲ್ಪ ವೆಚ್ಚದಲ್ಲಿ ಸುದ್ದಿಯನ್ನು ಒದಗಿಸುವುದಲ್ಲದೆ ಸ್ವತಂತ್ರವಾಗಿ ಅವುಗಳನ್ನು ನಡೆಸಿಕೊಂಡು ಹೋಗುತ್ತಿರುವುದು ಶ್ಲಾಘನೀಯವೆಂದು ಅವರು ಹೇಳಿದರು.

ಹಲವಾರು ವರ್ಷಗಳ ಹಿಂದೆ ತಮ್ಮ ಸ್ವಂತ ಊರಾದ ವಿರ್ಜಾನಿಯ ಎಂಬಲ್ಲಿ ೫-೬ ಪತ್ರಿಕೆಗಳಿದ್ದು ಒಬ್ಬ ಮಾಲೀಕನು ಒಂದೊಂದು ಪತ್ರಿಕೆಯನ್ನಾಗಿ ಕೊಳ್ಳಲು ಪ್ರಾರಂಭಿಸಿ ಎಲ್ಲಾ ಪತ್ರಿಕೆಗಳನ್ನೂ ಕೊನೆಗೆ ಕೊಂಡು ಈಗ ಆ ಊರಿಗೆಲ್ಲಾ ತಾನೊಬ್ಬನೇ ಏಕಮಾತ್ರ ಪತ್ರಿಕೆಯನ್ನು ಹೊರಡಿಸುತ್ತಲಿರುವನು. ಆರೀತಿ ಬಂಡವಾಳಗಾರರ ಕೈಗೆ ಸಿಕ್ಕದಂತೆ ಮೈಸೂರು ನಗರದಲ್ಲಿ ಪತ್ರಿಕೆಗಳು ತಮ್ಮ ಸೇವೆ ನಡೆಸುತ್ತಲಿರುವುದು ಪ್ರಶಂಸನೀಯವೆಂದು ಅವರು ನುಡಿದರು.

ಇತ್ತೀಚೆಗೆ ಭಾರತ ಅಮೇರಿಕಾಗಳ ನಡುವೆ ಸ್ನೇಹ ಮತ್ತು ಮಧುರ ಬಾಂಧವ್ಯವು ಹೆಚ್ಚುತ್ತಲಿದೆ ಅದು ಇನ್ನೂ ಚೆನ್ನಾಗಿ ಬೆಳೆದು ಒಬ್ಬರನ್ನೊಬ್ಬರು ಹೆಚ್ಚಾಗಿ ಅರಿತುಕೊಳ್ಳಲು ಪತ್ರಿಕೆಗಳು, ತಮ್ಮ ನೆರವು ನೀಡಬೇಕಾಗಿದೆ. ತಮ್ಮ ಸಂಸ್ಥೆಯು ಈ ವಿಷಯದಲ್ಲಿ ಪತ್ರಿಕೆಗಳಿಗೆ ಯಾವರೀತಿಯ ಸುದ್ದಿ ಮತ್ತು ನೆರವು ನೀಡಲು ಸಾಧ್ಯವೋ ಅವನ್ನೆಲ್ಲಾ ಮಾಡುವುದಾಗಿ ಅವರು ತಿಳಿಸಿದರು.

ಸಾರ್ವಜನಿಕ ವಿದ್ಯಾರ್ಥಿ ನಿಲಯ ಸಂಘ

ಮೈಸೂರು ೭

ಮೈಸೂರು ಸಾರ್ವಜನಿಕ ವಿದ್ಯಾರ್ಥಿನಿಲಯ ಸಂಘದ ಕಾರ್ಯಕಾರಿಸಮಿತಿ ಸಭೆಯು ಮೊನ್ನೆಯದಿನ ಶ್ರೀ ಆರ್. ವಾಸುದೇವಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆದು ಸಂಘದ ಕಾರ್ಯಕ್ರಮವನ್ನು ಚರ್ಚಿಸಿತು. ಇದೇ ಮಾಹೆ ೧೫ನೇ ತಾರೀಖು ಸಂಘದ ಪ್ರಾರಂಭೋತ್ಸವವನ್ನು ನೆರವೇರಿಸಲು ನಿರ್ಧರಿಸಲಾಯಿತು.

ಹೊಸದಾಗಿ ಬಂದಿದೆ

ಹರ್‌ಕುಲಿಸ್ ಸೈಕಲ್‌ಗಳು, ಮಕ್ಕಳ ಟ್ರೈಸಿಕಲ್‌ಗಳು ಮತ್ತು ಸಾಡಿಗಳು

ಶಾರದ ಸೈಕಲ್ ಮತ್ತು ವಾಚ್ ಸ್ಟೋರ್ಸ್, ದೊಡ್ಡಗಡಿಯಾರ ಚೌಕ, ಮೈಸೂರು.

ಉಪವಾಸಕ್ಕೆ ತಲೆಬಾಗಿದರೆ ಸರ್ಕಾರ ನಡೆಯುವುದೇ ಅಸಾಧ್ಯ

ಬಳ್ಳಾರಿ ಪ್ರಶ್ನೆ ಈಗ ಪುನರಾರಂಭಿಸಲು ಸಾಧ್ಯವಿಲ್ಲ

ಪ್ರಧಾನಿ ನೆಹರೂರವರ ಸ್ಪಷ್ಟ ಹೇಳಿಕೆ

ಬಳ್ಳಾರಿ ಜಿಲ್ಲೆಯ ಕೆಲವು ಭಾಗಗಳನ್ನು ಮೈಸೂರಿಗೆ ಸೇರಿಸುವುದನ್ನು ಬದಲಾಯಿಸಬೇಕೆಂದು ಅಲ್ಲಿನ ಶ್ರೀ ಕಾಮರೆಡ್ಡಿ ಎಂಬುವರು ಕಳೆದ ೪೮ ದಿನಗಳಿಂದ ಉಪವಾಸ ಮಾಡುತ್ತಿರುವುದನ್ನು ಪ್ರಧಾನಿ ನೆಹರೂ ಖಂಡಿಸಿ, ಹೀಗೆ ರಾಜಕೀಯ ಉದ್ದೇಶಗಳಿಗಾಗಿ ಉಪವಾಸಗಳು ನಡೆದು ಅವುಗಳನ್ನು ಒಪ್ಪಿಕೊಂಡಲ್ಲಿ ಸರ್ಕಾರ ನಡೆಯುವುದೇ ಅಸಾಧ್ಯವೆಂದು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಶ್ರೀ ಕಾಮರೆಡ್ಡಿ ಉಪವಾಸಕ್ಕೆ ಮಾನ್ಯತೆ ಕೊಡಬೇಕೆಂದು ಕೆಲವರು, ಮತ್ತೆ ಕೆಲವರು ಅವಕ್ಕೆ ಒಪ್ಪಿಗೆ ಇತ್ತರೆ ತಾವು ಪ್ರತ್ಯುಪವಾಸ ಕೈಗೊಳ್ಳುವುದಾಗಿಯೂ ತಂತಿಗಳನ್ನು ಕಳುಹಿಸುತ್ತಿದ್ದಾರೆ. ಹೀಗಾಗಿ ರಾಜಕೀಯವು ಒಂದು ವಿಚಿತ್ರ ಅಧೋಗತಿಗೆ ಇಳಿದಿದೆ. ಇದಕ್ಕೆ ತಲೆ ಬಾಗುವುದಾದರೆ ಈ ಬಗೆಯ ಸಂದರ್ಭಗಳ ಮುಂದೆ ಈ ಸಭೆಯೇ ಅಧಿಕಾರ ಶೂನ್ಯವಾಗುತ್ತದೆ. ಆದ್ದರಿಂದಲೇ ಶ್ರೀ ಕಾಮರೆಡ್ಡಿಯವರಿಗೆ ತಾವು ತಂತಿ ಕಳುಹಿಸಿ ಉಪವಾಸ ನಿಲ್ಲಿಸುವಂತೆ ಪ್ರಾರ್ಥಿಸಿರುವುದಾಗಿ ಅವರು ಹೇಳಿದ್ದಾರೆ.

ಕೇವಲ ವ್ಯಕ್ತಿಯೊಬ್ಬರ ಉಪವಾಸಕ್ಕಾಗಿ ಈ ಸಭೆಯು ಹಿಂದೆ ಕೈಗೊಂಡಿದ್ದ ತೀರ್ಮಾನಗಳಿಗೆ ಮಸಿ ಬಳಿಯುವುದು ಸಾಧ್ಯವಿಲ್ಲ. ನ್ಯಾಯಮೂರ್ತಿ ಮಿಶ್ರಾರವರಿಗೆ ಯಾವುದೇ ಪಕ್ಷಪಾತವಾಗಲೀ ಸಂಕುಚಿತ ಮನೋಭಾವನೆಗಳಾಗಲೀ ಇರಲಿಲ್ಲ. ಅಂತಹವರು ಕೊಟ್ಟ ತೀರ್ಮಾನವನ್ನು ಭಾರತ ಸರ್ಕಾರ ಆಳವಾಗಿ ಯೋಚಿಸಿ ಅಂಗೀಕರಿಸಿದಮೇಲೆ ಅದನ್ನು ಈರೀತಿ ಬುಡಮೇಲು ಮಾಡಲು ಯತ್ನಿಸುವುದು ಸರಿಯಲ್ಲ. ಆದ್ದರಿಂದ ಬಳ್ಳಾರಿ ಪ್ರಶ್ನೆಯನ್ನು ಈಗ ಪುನರಾರಂಭಿಸಲು ಸಾಧ್ಯವಿಲ್ಲ. ಮುಂದೆ ಆಂಧ್ರ ಪ್ರಾಂತರಚನೆಯಾದ ಮೇಲೆ ಆಂಧ್ರಪ್ರಾಂತಕ್ಕೂ ನೆರೆಯ ಯಾವುದೇ ಪ್ರಾಂತಕ್ಕೂ ಗಡಿಗಳ ಬಗ್ಗೆ ಸಣ್ಣಪುಟ್ಟ ಸರಿ ಹೊಂದಾಣಿಕೆ ಅಗ ಬೇಕಾಗಿದ್ದಲ್ಲಿ, ಆ ಎರಡು ಪ್ರಾಂತಗಳೂ ಒಪ್ಪಿದಲ್ಲಿ ಮಾತ್ರ ಗಡಿ ಕಮೀಷನ್‌ಗಳನ್ನು ನೇಮಿಸಲಾಗುವುದು...ಎಂದು ನೆಹರೂ ಸ್ಪಷ್ಟವಾಗಿ ತಿಳಿಸಿದ್ದಾರೆ.

ಸಾಲಕ್ಕೆ ಕೊಟ್ಟ ಹಣ ವಾಪಸ್ಸು ಕೊಡಿ

ಮದ್ರಾಸ್ ಸರ್ಕಾರವು ಇತ್ತೀಚೆಗೆ ತೆಗೆದ ೫ ಕೋಟಿ ರೂಪಾಯಿಗಳ ಸಾಲಕ್ಕೆ ಈಗ ಚಂದಾ ಕೊಟ್ಟಿರುವವರಲ್ಲಿ ಕೆಲವರು ತಮ್ಮ ಹಣವನ್ನು ವಾಪಸ್ಸು ಕೊಡಲು ಕೇಳಿದ್ದಾರೆ. ಅವಶ್ಯಕವಿದ್ದಕ್ಕಿಂತ ಹೆಚ್ಚಿಗೆ ಹಣ ವಸೂಲಾಗಿರುವುದರಿಂದ ಹೀಗೆ ಮಾಡಲಾಗಿದೆ ಈ ಹಣವು ಸುಮಾರು ೩೩ ಲಕ್ಷವಾಗುತ್ತದೆ. ಇದನ್ನು ವಾಪಸ್ಸು ಕೊಟ್ಟನಂತರ ಉಳಿದ ಹಣವನ್ನು ಮದರಾಸ್ ಮತ್ತು ಹೊಸ ಆಂಧ್ರಪ್ರಾಂತ್ಯಗಳಿಗೆ ರಾಷ್ಟ್ರಾಧ್ಯಕ್ಷರು ಹಂಚುತ್ತಾರೆ.

ಪೋಲೀಸ್ ದೌರ್ಜನ್ಯ ವಿಚಾರಣೆ

ಕಳೆದ ಮಾಹೆಯಲ್ಲಿ ಕಲ್ಕತ್ತಾದಲ್ಲಿ ಪೋಲೀಸಿನವರು ಸುದ್ದಿಗಾರರ ಮೇಲೆ ನಡೆಸಿದ ದೌರ್ಜನ್ಯ ಕೃತ್ಯಗಳ ಬಗ್ಗೆ ವಿವರಣೆ ನಡೆಸಲು ಕಲ್ಕತ್ತಾದ ಮುಖ್ಯನ್ಯಾಯಾಲಯದ ಶ್ರೀ ಮುಖರ್ಜಿಯವರನ್ನು ನೇಮಿಸಲಾಗಿದೆ. ಹಿಂದೆ ನೇಮಕವಾಗಿದ್ದ ಶ್ರೀ ಘೋಷ್‌ರವರು ದೇಹಾರೋಗ್ಯ ನಿಮಿತ್ತ ಆ ಕೆಲಸವನ್ನು ಮಾಡಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ.

ಪ್ರವಾಹದ ಹಾವಳಿಯಿಂದ ನೀರಿಲ್ಲ, ದೀಪವಿಲ್ಲ

ಜಮ್ಮುವಿನಲ್ಲಿರುವ ತಾವಿ ನದಿಯಲ್ಲಿ ಪ್ರವಾಹವುಂಟಾಗಿ ಅದಕ್ಕೆ ಕಟ್ಟಿರುವ ಅಣೆಕಟ್ಟು ಒಡೆದು ಹೋಗಿ ನೀರು ವಿದ್ಯುಚ್ಛಕ್ತಿ ಕೇಂದ್ರಕ್ಕೆ ನುಗ್ಗಿರುವುದರಿಂದ ವಿದ್ಯುಚ್ಛಕ್ತಿ ತಯಾರಿಕೆಯು ನಿಂತುಹೋಗಿದೆ. ಇದರಿಂದ ನಗರದಲ್ಲಿ ದೀಪವಿಲ್ಲ, ಕುಡಿಯುವುದಕ್ಕೆ ನೀರಿಲ್ಲ ಜನರೆಲ್ಲರೂ ತಪಿಸುತ್ತಲಿದ್ದಾರೆ.

ಅಪೇರ

7—8—53 ರಿಂದ 2ನೇ ವಾರ

ಪ್ರತಿದಿನ ಮೂರು ಆಟಗಳು

ಇನ್‌ಸ್ಪೆಕ್ಟರ್ ತಮಿಳು

ಪಾತ್ರ:—ಬಾಲಚಂದರ್, ಟಿ. ಕೆ. ಷಣ್ಮುಗಂ, ಟಿ. ಕೆ. ಸರಸ್ವತಿ, ಅಂಜಲಿದೇವಿ

ಕಾಲೇಜು ವಿದ್ಯಾರ್ಥಿಗಳ ಸ್ವಾಗತ ದಿನಾಚರಣೆ

ಮೈಸೂರು ೭

ಮಹಾರಾಜಾ ಕಾಲೇಜು ಹೊಸ ವಿದ್ಯಾರ್ಥಿಗಳ ಸ್ವಾಗತ ದಿನಾಚರಣೆಯು ಮೊನ್ನೆ ದಿನ ಪ್ರೊಫೆಸರ್ ವಿ. ಎಲ್. ಡಿಸೌಜಾರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾಲೇಜಿನ ಹಲವಾರು ಅಧ್ಯಾಪಕರು ವಿದ್ಯಾರ್ಥಿಗಳನ್ನು ಸ್ವಾಗತಿಸಿ ಅವರ ಕರ್ತವ್ಯದ ಬಗ್ಗೆ ಮಾತನಾಡಿದರು.

● ಮದ್ರಾಸ್ ಪ್ರಾಂತ್ಯದಲ್ಲಿರುವ ಕಿರಿಯ ಬಂದರುಗಳ ಅಭಿವೃದ್ಧಿಗಾಗಿ ೧೦ ಲಕ್ಷ ರೂ. ಗಳ ಸಾಲವನ್ನು ಕೇಂದ್ರ ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಶ್ರೀ ಕೆ. ಎಸ್. ರಾಜಗೋಪಾಲರ ಶ್ರೀ ನೃತ್ಯ ಕಲಾಮಂದಿರ ಮೈಸೂರು

ವೈಕುಂಠ ಕಲಾಮಂದಿರವನ್ನು ತಾ॥ 6--8--53 ರಿಂದ, ರಮಾವಿಲಾಸ ಅಗ್ರಹಾರದಲ್ಲಿರುವ "ಚೇತನ ಮುದ್ರಾಲಯದ" ಕಟ್ಟಡದ ಹಿಂಭಾಗದ ಮನೆ [Out House] ಗೆ ಬದಲಾಯಿಸಿದೆ. ಕಲಾಭಿಮಾನಿಗಳು ಎಂದಿನಂತೆ ಪ್ರೋತ್ಸಾಹಿಸಬೇಕಾಗಿ ವಿನಂತಿ.

—ವ್ಯವಸ್ಥಾಪಕ.

ರಣಜಿತ್

7—8—53 ರಿಂದ 9 ನೇ ವಾರ

"ಫಿಲ್ಮಿಸ್ತಾನ್"ರವರ ಈ ವರ್ಷದ ಅಮೋಘ ಸಂಗೀತಮಯ ಹಿಂದೀ ಕಲಾಕೃತಿ.

ಅನಾರ್‌ಕಲಿ

ಪಾತ್ರ: ಬಿನಾರಾಯ್, ಪ್ರದೀಪ್ ಕುಮಾರ್, ಕುಲ್‌ದೀಪ್, ಮುಬಾರಕ್

ಸಂಗೀತ ಸಿ. ರಾಮಚಂದ್ರ.

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು:— ಹಿ. ಶಾ. ಸುಬ್ಬರಾವ್

ಮೋಹನ್ ಮುದ್ರಣಾಲಯ ಮೈಸೂರು.

WANTED

A Printing machine, in running condition—Crown or Demmy Folio.

Contact:—

The SAMACHARA office, Mothikhana Buildings, Jaganmohan Palace Road, Mysore.

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೩೮

ಸಮಾಚಾರ

ದಿನಪತ್ರಿಕೆ ಸಂಪುಟ ೩ ಸಂಚಿಕೆ ೨೮೮

೮-೮-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳ ಆಯ್ಕೆ

ಸೋಮವಾರ ಪಟ್ಟಿಯು ಪ್ರಕಟಿಸುವ ಸಂಭವ

ಮೈಸೂರು ೮

ಮೈಸೂರು ಮೆಡಿಕಲ್ ಕಾಲೇಜಿಗೆ ವಿದ್ಯಾರ್ಥಿಗಳನ್ನು ಆಯ್ಕೆಮಾಡುವ ಸಮಿತಿಯವರು ಕಳೆದ ಮೂರುದಿನಗಳಿಂದ ಸಭೆ ಸೇರಿ ಅರ್ಜಿ ಹಾಕಿಕೊಂಡ ಒಟ್ಟು ೮೦೦ ಮಂದಿ ವಿದ್ಯಾರ್ಥಿಗಳ ಪೈಕಿ, ಸುಮಾರು ೫೦೦ ಮಂದಿ ವಿದ್ಯಾರ್ಥಿಗಳನ್ನು ಕರೆಸಿಕೊಂಡು ಭೇಟಿ ಮಾಡಿದರು. ಅದರಲ್ಲಿ ೮೦ ಮಂದಿ ಮಹಿಳಾ ವಿದ್ಯಾರ್ಥಿಗಳೂ ಇದ್ದರು. ವಿದ್ಯಾರ್ಥಿಗಳನ್ನು ಭೇಟಿಮಾಡುವ ಕೆಲಸವು ಈಗ ಮುಗಿದು ಅಂತ್ಯ ಆಯ್ಕೆಯ ಪಟ್ಟಿಯನ್ನು ಸಮಿತಿಯವರು ತಯಾರಿಸಿ, ಇದೇ ೧೦ ನೇ ತಾರೀಖು ವಿಶ್ವವಿದ್ಯಾನಿಲಯಕ್ಕೆ ಕಳುಹಿಸುವರೆಂದೂ, ವಿಶ್ವವಿದ್ಯಾನಿಲಯದವರೇ ಅದನ್ನು ಪ್ರಕಟಿಸುವರೆಂದೂ ತಿಳಿದುಬಂದಿದೆ.

ಪ್ರವಾಹಗಳ ಶಾಶ್ವತ ನಿರೋಧ ಕ್ರಮ

ಮೈಸೂರು ಸಂಸ್ಥಾನದಲ್ಲಿ ಪ್ರವಾಹದ ಹಾವಳಿಯಿಂದ ಆಗುವ ತೊಂದರೆಯನ್ನು ಖಾಯಂ ಆಗಿ ತಪ್ಪಿಸಲು ಸರ್ಕಾರ ಒಂದು ಯೋಜನೆಯನ್ನು ತಯಾರಿಸಲಿದೆಯೆಂದು ರೆವಿನ್ಯೂ ಸಚಿವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ. ಪ್ರವಾಹಕ್ಕೆ ಸಿಕ್ಕುವ ಸ್ಥಳಗಳಿಂದ ಮನೆಗಳನ್ನು ಖಾಯಂ ಆಗಿ ಎತ್ತರವಾದ ಸ್ಥಳಗಳಿಗೆ ಬದಲಾಯಿಸಲು ಗ್ರಾಮಪಂಚಾಯಿತಿ ಮತ್ತು ಪೌರಸಭೆಗಳಿಗೆ ಹಣ ಸಹಾಯ ಮಾಡಲಾಗುವುದೆಂದೂ ಅವರು ತಿಳಿಸಿದ್ದಾರೆ.

ಆಂಧ್ರಕ್ಕೆ ಮತ್ತೊಬ್ಬ ವಿಶೇಷಾಧಿಕಾರಿ

ಕೇಂದ್ರ ಸರ್ಕಾರದ ರಕ್ಷಣಾ ಕಾರ್ಯದರ್ಶಿ ಶ್ರೀ ಎಸ್. ಚಕ್ರವರ್ತಿಯವರನ್ನು ಆಂಧ್ರ ಪ್ರಾಂತ್ಯರಚನೆಯ ಕಾರ್ಯಕ್ಕಾಗಿ ನೇಮಿತವಾಗಿರುವ ಶ್ರೀ ಚಂದೂಲಾಲ್ ತ್ರಿವೇದಿಯವರಿಗೆ ಸಹಾಯಕರಾಗಿ ನೇಮಿತವಾಗಿದ್ದಾರೆ. ಆಂಧ್ರಪ್ರಾಂತ್ಯರಚನೆಯಾದನಂತರ ಹೊಸ ಪ್ರಾಂತ್ಯದಲ್ಲಿ ಶ್ರೀ ಎಸ್. ಚಕ್ರವರ್ತಿಯವರಿಗೆ ಪ್ರಮುಖ ಹುದ್ದೆಯನ್ನೊಂದು ಕೊಡಲಾಗುವುದು.

ಹಿಮಾಲಯ ಹತ್ತಲು ಹೋದ ರಷ್ಯಾ ತಂಡದ ನಿರ್ಗಮನ

ಹಿಮಾಲಯ ಪರ್ವತವನ್ನು ಟಿಬೆಟ್ ಕಡೆಯಿಂದ ಹತ್ತಲು ಯತ್ನಿಸುತ್ತಿದ್ದ ರಷ್ಯಾ ತಂಡವೊಂದು ಮಂಜಿನ ಗಡ್ಡೆಯ ಹೊಡತಕ್ಕೆ ಸಿಕ್ಕಿ ನಾಶವಾಗಿರುವುದಾಗಿ ಇಟಲಿಯ ಪತ್ರಿಕೆಯೊಂದು ಪ್ರಕಟಿಸಿದೆ. ೨೬೦೦೦ ಅಡಿ ಎತ್ತರಕ್ಕೆ ಈ ತಂಡವು ಹೋಗಿ ಟಿಬೆಟ್ಟಿನ ಮಾರ್ಗದರ್ಶಕರು ಮತ್ತು ಇತರರನ್ನು ಹಿಂದಕ್ಕೆ ಕಳುಹಿಸಿ ಮುಂದಿನ ಯತ್ನವನ್ನು ತಾವೇ ಮುಂದುವರಿಸುತ್ತಲಿದ್ದರೆಂದೂ ಆ ಪತ್ರಿಕೆ ವರದಿಮಾಡಿದೆ.

ಆದರೆ ಇದಕ್ಕೆ ಯಾವ ಅಧಿಕೃತವಾದ ಸಮರ್ಥನೆ ದೊರೆತಿಲ್ಲ.

ಭಾರತದಲ್ಲಿ ೭೦೦ ಲಕ್ಷ ಮಂದಿ ನಿರುದ್ಯೋಗಿಗಳು

ಭಾರತದಲ್ಲಿ ಈಗ ೭೦೦ ಲಕ್ಷಕ್ಕಿಂತಲೂ ಹೆಚ್ಚು ಮಂದಿ ನಿರುದ್ಯೋಗಿಗಳಿದ್ದಾರೆಂದು, ಈ ಸಮಸ್ಯೆಯನ್ನು ಕೂಡಲೇ ಬಗೆ ಹರಿಸದಿದ್ದರೆ ಪರಿಸ್ಥಿತಿಯು ವಿಷಮಗೊಳ್ಳುವುದೆಂದೂ ಪ್ರಜಾಸೋಷಲಿಸ್ಟ್ ನಾಯಕ ಡಾ॥ ರಾಮ್ ಮನೋಹರ್ ಲೋಹಿಯಾರವರು ತಿಳಿಸಿದ್ದಾರೆ.

ಜನರಲ್ ನಗೀಬರು ಕೋರ್ಟಿನಲ್ಲಿ ಸಾಕ್ಷಿ

ಕೈರೋವಿನಲ್ಲಿ ೨೦ ಜನ ಕಮ್ಯೂನಿಸ್ಟರನ್ನು ವಿಚಾರಣೆ ಮಾಡುತ್ತಿರುವ ಉನ್ನತ ಮಿಲಿಟರಿ ನ್ಯಾಯಾಲಯವೊಂದು ಈಜಿಪ್ಟಿನ ರಾಷ್ಟ್ರಾಧ್ಯಕ್ಷ ಜನರಲ್ ನಗೀಬರನ್ನು ಸಾಕ್ಷಿಯಾಗಿ ಬರಲು ಸಮನ್ಸ್ ಕೊಟ್ಟಿದೆ.

ಭಾರತಕ್ಕೆ ರಷ್ಯಾದ ಗೋಧಿ

ರಷ್ಯಾವು ಭಾರತಕ್ಕೆ ಸರಕು ವಿನಿಮಯ ಪದ್ಧತಿಮೇರೆಗೆ ವರ್ಷಕಾಲ ಗೋಧಿಯನ್ನು ಸರಬರಾಜುಮಾಡಲು ಒಪ್ಪಿದೆಯೆಂದೂ, ಭಾರತವು ಯಾವ ಸಾಮಗ್ರಿಗಳನ್ನು ಸರಬರಾಜು ಮಾಡಬೇಕೆಂಬುದರಬಗ್ಗೆ ಎರಡು ರಾಷ್ಟ್ರಗಳ ಅಧಿಕಾರಿಗಳು ಪರಸ್ಪರ ಸಮಾಲೋಚನೆ ಮಾಡಿ ನಿರ್ಧರಿಸುವರೆಂದೂ ಕೇಂದ್ರ ಆಹಾರಸಚಿವ ಶ್ರೀ ಕಿದ್ವಾಯ್‌ರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

೧೧॥ ಲಕ್ಷ ಟನ್ ಅಕ್ಕಿ ಸಂಗ್ರಹಣೆ

ಭಾರತದ ಎಲ್ಲಾ ಪ್ರಾಂತ್ಯಗಳಲ್ಲಿ ಇದೇ ಜುಲೈ ೧೮ನೇ ತಾರೀಖಿನವರೆಗೆ ಒಟ್ಟು ೧೧॥ ಲಕ್ಷ ಟನ್ ಅಕ್ಕಿ ಮತ್ತು ೨ ಲಕ್ಷ ಟನ್ ಗೋಧಿ ಸಂಗ್ರಹಿಸಲಾಗಿದೆಯೆಂದೂ ಆಹಾರ ಉಪಸಚಿವ ಶ್ರೀ ಕೃಷ್ಣಪ್ಪನವರು ತಿಳಿಸಿದ್ದಾರೆ.

ಭಾರತ ನೌಕೆಗಳಿಗೆ ಜ॥ ನಗೀಬರ ಭೇಟಿ

ಈಜಿಪ್ಟಿನ ರಾಷ್ಟ್ರಾಧ್ಯಕ್ಷ ಮತ್ತು ಪ್ರಧಾನಿಯಾಗಿರುವ ಜನರಲ್ ನಗೀಬ್‌ರವರು ಅಲೆಗ್ಸಾಂಡ್ರಿಯಾದಲ್ಲಿ ಭಾರತದ ನೌಕೆಯಾದ ಗೋದಾವರಿ ಮತ್ತು ಗೋಮತಿಗಳಿಗೆ ಭೇಟಿಯನ್ನಿತ್ತಿದ್ದರು.

ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ ತಾವು ಭಾರತ ಪ್ರಧಾನಿ ನೆಹರೂರವರನ್ನು ಸಂದರ್ಶಿಸಿ ವಿಚಾರ ವಿನಿಮಯ ನಡೆಸಿದುದನ್ನು ಜ್ಞಾಪಿಸಿಕೊಂಡು ಇಂತಹ ಚರಿತ್ರಾರ್ಹವಾದ ಭೇಟಿಯನ್ನು ತಾವು ಎಂದಿಗೂ ಮರೆಯುವುದಿಲ್ಲವೆಂದೂ ಭಾರತ ಮತ್ತು ಈಜಿಪ್ಟಿನ ಬಾಂಧವ್ಯ ಮತ್ತು ಸ್ನೇಹವು ಇನ್ನೂ ಉತ್ತಮಗೊಳ್ಳುವುದೆಂದೂ ಅವರು ತಿಳಿಸಿದ್ದಾರೆ.

ಕಮ್ಯೂನಿಸ್ಟರಿಗೆ ವಿಶ್ವಸಂಸ್ಥೆ ದಂಡನಾಯಕರ ಎಚ್ಚರಿಕೆ

ಕೊರಿಯಾ ಯುದ್ಧ ಮುಕ್ತಾಯ ಒಪ್ಪಂದವನ್ನು ಕಮ್ಯೂನಿಸ್ಟರು ಉಲ್ಲಂಘಿಸಿದರೆ ವಿಶ್ವಸಂಸ್ಥೆ ಸೈನ್ಯವು ಯಾವ ಅಸ್ತ್ರವನ್ನು ಬೇಕಾದರೂ ಉಪಯೋಗಿಸಿ ಆಕ್ರಮಣವನ್ನು ಎದುರಿಸುವುದಾಗಿ ವಿಶ್ವಸಂಸ್ಥೆ ಸೈನ್ಯದ ಸರ್ವ ಸೇನಾನಿ ಜ॥ ಮಾರ್ಕ್ ಕ್ಲಾರ್ಕ್‌ರವರು ಎಚ್ಚರಿಸಿದ್ದಾರೆ.

ಜ॥ ಮಾರ್ಕ್‌ಕ್ಲಾರ್ಕ್‌ರವರ ನಿವೃತ್ತಿ

ಕೊರಿಯಾದಲ್ಲಿ ವಿಶ್ವಸಂಸ್ಥೆ ಸೈನ್ಯ ದಂಡನಾಯಕರಾದ ಜನರಲ್ ಮಾರ್ಕ್ ಕ್ಲಾರ್ಕ್‌ರವರು ಅಕ್ಟೋಬರ್‌ನಿಂದ ತಮ್ಮನ್ನು ಸೈನ್ಯ ಕೆಲಸದಿಂದ ನಿವೃತ್ತಿ ಮಾಡುವಂತೆ ಅಮೇರಿಕಾ ಸರ್ಕಾರವನ್ನು ಕೇಳಿರುವುದಾಗಿ ವರದಿಯಾಗಿದೆ. ಅವರನ್ನು ಯಾವ ಕೆಲಸಕ್ಕೆ ನೇಮಿಸಲಾಗಿತ್ತೋ ಆ ಕೆಲಸವನ್ನು ಈ ಮುಗಿಸಿರುವುದರಿಂದ ತಮಗೆ ಇನ್ನು ನಿವೃತ್ತಿ ಮಾಡಿ ವಿಶ್ರಾಂತಿ ಕೊಡಬೇಕೆಂದು ಕೇಳಿರುವುದಾಗಿ ಹೇಳಲಾಗಿದೆ.

ಸೆಣಬು ಪರಿಶೀಲನಾ ಮಂಡಲಿ

ದೇಶದಲ್ಲಿ ಸೆಣಬಿನ ಉತ್ಪನ್ನ, ಅದರ ವ್ಯಾಪಾರ ಮುಂತಾದ ಬಗ್ಗೆ ತಕ್ಕ ಪರಿಶೀಲನೆ ನಡೆಸಿ ಭಾರತ ಸರ್ಕಾರಕ್ಕೆ ಸಲಹೆ ನೀಡಲು ಒಂದು ಸೆಣಬು ಪರಿಶೀಲನಾ ಮಂಡಲಿಯನ್ನು ನೇಮಿಸಲಾಗಿದೆಯೆಂದು ತಿಳಿಯ ಬರುತ್ತದೆ.

ಕೈಗಾರಿಕಾ ಆರ್ಥಿಕ ಸಹಾಯ ಸಂಸ್ಥೆ

ಹೈದರಾಬಾದಿನಲ್ಲಿ ಕೈಗಾರಿಕೆ ಆರ್ಥಿಕ ಸಹಾಯ ಸಂಸ್ಥೆಯನ್ನು ಸದ್ಯದಲ್ಲೇ ಸ್ಥಾಪಿಸಲು ಅಲ್ಲಿಯ ಸರ್ಕಾರವು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಕರ್ನಾಟಕ ಪ್ರಾಂತ್ಯದ ಬಗ್ಗೆ ಸದ್ಯದಲ್ಲೇ ನೆಹರೂ ಹೇಳಿಕೆ

ಕರ್ನಾಟಕ ಪ್ರಾಂತ್ಯ ನಿರ್ಮಾಣವು ನ್ಯಾಯವಾಗಿದೆ. ಅದಕ್ಕೆ ಮೈಸೂರು ಸರ್ಕಾರ ಮತ್ತು ಜನತೆಯ ಸಹಾನುಭೂತಿ ಇದೆ. ಈ ಬಗ್ಗೆ ಇದ್ದ ಸ್ವಲ್ಪ ವಿರೋಧವೂ ಈಗ ಕಡಿಮೆ ಆಗಿದೆ. ಶೀಘ್ರದಲ್ಲಿಯೇ ತಾವು ಒಂದು ಹೇಳಿಕೆಯನ್ನು ಪಾರ್ಲಿಮೆಂಟ್ ಮುಂದೆ ಕೊಡುತ್ತೇನೆ-ಎಂದು ಪ್ರಧಾನಿ ನೆಹರೂರವರು ನಿನ್ನೆ ಪಾರ್ಲಿಮೆಂಟ್ ಸದಸ್ಯರಾದ ಶ್ರೀಗಳಾದ ಎಂ.ಎಸ್. ಗುರುಪಾದಸ್ವಾಮಿ ಮತ್ತು ಶಿವಮೂರ್ತಿಸ್ವಾಮಿಯವರು ಅವರನ್ನು ಭೇಟಿಮಾಡಿದಾಗ ತಿಳಿಸಿದ್ದಾರೆ.

ಅಖಂಡ ಕರ್ನಾಟಕ ರಾಜ್ಯ ನಿರ್ಮಾಣದವರ ದಸ್ತಗಿರಿ

ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಸಮಿತಿಯವರಾದ ಶ್ರೀಗಳಾದ ಮಹದೇವಪ್ಪ, ಮನಗೊಂಡ, ಎ ಜಿ ಮಧೋಲ್ ಸಿ. ಜಿ. ಪಾಟೀಲ್ ಚನ್ನಯಸ್ವಾಮಿ, ವೀರಭದ್ರಪ್ಪ ಹಳ್ಳಿಕೇರಿ ಮುಂತಾದ ೭ ಜನರನ್ನು ನಿನ್ನೆ ಸಂಜೆ ಹುಬ್ಬಳ್ಳಿಯಲ್ಲಿ ದಸ್ತಗಿರಿ ಮಾಡಲಾಯಿತು. ಇದು ನಾಳೆಯಿಂದ ಕರ್ನಾಟಕ ಪ್ರಾಂತ್ಯಕ್ಕಾಗಿ ಸತ್ಯಾಗ್ರಹ ಚಳುವಳಿಯ ಸಂಬಂಧದಲ್ಲಿ ಎಂದು ಹೇಳಲಾಗಿದೆ.

ತುಂಗಭದ್ರಾ ಯೋಜನೆಗೆ ಇಂಜನಿಯರ ಸಮಿತಿ

ತುಂಗಭದ್ರಾ ಯೋಜನೆಯನ್ನು ಪೂರ್ಣಗೊಳಿಸಿ ಆಡಳಿತವನ್ನು ನಿರ್ವಹಿಸಿಕೊಂಡು ಹೋಗಲು ೬ ಮಂದಿ ಚೀಫ್ ಇಂಜನಿಯರುಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಲಾಗುವುದೆಂದೂ, ಹೈದರಾಬಾದ್, ಮೈಸೂರು ಮತ್ತು ಆಂಧ್ರಗಳಿಂದ ಇಬ್ಬಿಬ್ಬರು ಇಂಜನಿಯರುಗಳು ಇರುವರೆಂದೂ ಹೇಳಲಾಗಿದೆ.

ಭಾರತಕ್ಕೆ ಜಪಾನ್ ನಿಯೋಗ

ಭಾರತ ಮತ್ತು ಜಪಾನ್ ನಡುವೆ ವ್ಯಾಪಾರವನ್ನು ಉತ್ತಮಗೊಳಿಸುವ ಬಗೆಗೆ ಅಲ್ಲಿಂದ ಒಂದು ನಿಯೋಗವು ಭಾರತಕ್ಕೆ ಬರುವುದಾಗಿ ತಿಳಿಯಬರುತ್ತದೆ.

ಉತ್ತರ ಕೊರಿಯಾದಲ್ಲಿ ಉನ್ನತಾಧಿಕಾರಿಗಳ ದಸ್ತಗಿರಿ

ಮಾಜಿ ವಿದೇಶಾಂಗ ಸಚಿವರೂ ಸೇರಿದ್ದಾರೆ

ಸರ್ಕಾರ ಉರುಳಿಸಲು ಸಂಚು

ದಕ್ಷಿಣ ಕೊರಿಯಾ ಮತ್ತು ವಿಶ್ವಸಂಸ್ಥೆ ಅಮೇರಿಕಾಗಳೊಡನೆ ಸಂಧಾನ ನಡೆಸಿ ತಮ್ಮ ರಾಷ್ಟ್ರದ ಗುಟ್ಟುಗಳನ್ನೆಲ್ಲಾ ಅವರಿಗೆ ತಿಳಿಸಿದರೆಂಬ ಆಪಾದನೆಮೇಲೆ ಉತ್ತರ ಕೊರಿಯಾ ಸರ್ಕಾರವು ೧೨ ಉನ್ನತಾಧಿಕಾರಿಗಳನ್ನು ದಸ್ತಗಿರಿ ಮಾಡಿದೆ. ಇವರಲ್ಲಿ ಅಲ್ಲಿಯ ಸರ್ಕಾರದ ಮಾಜಿ ರಕ್ಷಣಾಸಚಿವ ಪಾಕ್‌ಹಾಂಗ್ ನಾಮ್‌ರವರೂ ಇರುವುದಾಗಿ ಹೇಳಲಾಗಿದೆ. ಕೆಲವು ತಿಂಗಳ ಹಿಂದೆ ಇವರ ಮನೆಯಲ್ಲಿ ಗುಪ್ತ ಸಭೆಯು ನಡೆದು ಈಗಿನ ಸರ್ಕಾರವನ್ನು ಉರುಳಿಸುವ ನಿರ್ಧಾರ ಮಾಡಿತೆಂದು ಹೇಳಲಾಗಿದೆ.

ಯಳಂದೂರಿನಲ್ಲಿ ಸಾರ್ವಜನಿಕ ವಿದ್ಯಾರ್ಥಿ ನಿಲಯ ಸ್ಥಾಪನೆ

ಯಳಂದೂರು ೮

ಯಳಂದೂರಿನಲ್ಲಿ ಸಾರ್ವಜನಿಕ ವಿದ್ಯಾರ್ಥಿನಿಲಯವೊಂದನ್ನು ಸ್ಥಾಪಿಸುವ ಬಗ್ಗೆ ಅಲ್ಲಿಯ ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ಲಕ್ಷ್ಮೀನಾರಾಯಣರಾವ್‌ರವರ ಅಧ್ಯಕ್ಷತೆಯಲ್ಲಿ ಮೊನ್ನೆಯ ದಿನ ಒಂದು ಸಭೆ ನಡೆಯಿತು. ಊರಿನ ಅನೇಕ ಗಣ್ಯವ್ಯಕ್ತಿಗಳು ಈ ಸಭೆಗೆ ಆಗಮಿಸಿದ್ದರು. ಮೈಸೂರಿನ ಸಾರ್ವಜನಿಕ ವಿದ್ಯಾರ್ಥಿನಿಲಯದ ಸ್ಥಾಪಕ ಶ್ರೀ ಟಿ. ಎಸ್. ಸುಬ್ಬಣ್ಣನವರು ಎಲ್ಲಾ ತಾಲ್ಲೂಕುಗಳಲ್ಲೂ ಈ ರೀತಿಯ ಜಾತ್ಯಾತೀತ ವಿದ್ಯಾರ್ಥಿನಿಲಯಗಳ ಸ್ಥಾಪನೆ ಅವಶ್ಯಕತೆಯನ್ನು ವಿವರಿಸಿದರು. ಈ ಕಾರ್ಯಕ್ಕಾಗಿ ಶ್ರೀ ದೊಡ್ಡ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು

ಈ ಸಮಿತಿಗೆ ಶ್ರೀ ವೀರಣ್ಣನವರು ಉಪಾಧ್ಯಕ್ಷರು ಶ್ರೀಗಳಾದ ಮಾದಪ್ಪ ಮತ್ತು ಟಿ. ಎಸ್. ಸುಬ್ಬಣ್ಣ ಕಾರ್ಯದರ್ಶಿಗಳು, ಶ್ರೀ ಈಶ್ವರಪ್ಪ ಖಜಾಂಚಿಗಳನ್ನಾಗಿಯೂ ಶ್ರೀಗಳಾದ ಲಕ್ಷ್ಮೀನಾರಾಯಣರಾವ್, ಚೆಟ್ಟಿಪ್ಪ, ಪುಟ್ಟಲಿಂಗಪ್ಪ, ಸಿದ್ಧಮಲ್ಲಪ್ಪದೇವರು, ಪುಟ್ಟಸ್ವಾಮಿ ಮತ್ತು ಮಾದಯ್ಯನವರನ್ನು ಸದಸ್ಯರನ್ನಾಗಿ ಚುನಾಯಿಸಲಾಯಿತು.

ಮೈಸೂರು ಕ್ಷಾಮಪ್ರದೇಶಗಳ ಸಹಾಯಕ್ಕೆ ಒತ್ತಾಯ

ಮೈಸೂರಿನ ಕ್ಷಾಮಪ್ರದೇಶಗಳಲ್ಲಿ ಕೇಂದ್ರ ಸರ್ಕಾರವು ಕೂಡಲೇ ಪರಿಹಾರಕಾರ್ಯಗಳನ್ನು ಕೈಗೊಳ್ಳಬೇಕೆಂದು ಕೆ. ಪಿ. ಸಿ. ಸಿ. ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಪ್ರಧಾನಿ ನೆಹರೂರವರನ್ನು ಮೊನ್ನೆ ಭೇಟಿ ಮಾಡಿ ಒತ್ತಾಯಪಡಿಸಿದರೆಂದು ತಿಳಿಯಬರುತ್ತದೆ.

ತೆಂಗಿನಕಾಯಿ ಬೆಳೆಯಲ್ಲಿ ಭಾರತವು ವಿಶ್ವದ ೨ನೇ ರಾಷ್ಟ್ರ

ವಿಶ್ವದಲ್ಲಿ ತೆಂಗಿನಕಾಯಿಯನ್ನು ಬೆಳೆಯುವ ದೇಶಗಳಲ್ಲೆಲ್ಲಾ ಭಾರತವು ಎರಡನೆಯದಾಗಿದೆ. ಇಲ್ಲಿ ಸುಮಾರು ೧೫ ಲಕ್ಷ ಎಕರೆಗಳಲ್ಲಿ ತೆಂಗಿನ ಫಸಲು ಆಗುತ್ತಿದೆ. ತಿರುವಾಂಕೂರ್—ಕೊಚ್ಚಿನ್ ಮತ್ತು ಬೊಂಬಾಯಿ ಪ್ರಾಂತ್ಯಗಳಲ್ಲಿ ಇದರ ಬೆಳೆ ಅಧಿಕವಾಗಿದೆ. ಬೊಂಬಾಯಿ ಪ್ರಾಂತ್ಯದಲ್ಲಿ ಇದರ ಬೆಳೆಯು ೩೦೦೦೦ ಎಕರೆಗಳಷ್ಟಿದೆ ಎಂದು ತಿಳಿಯಬರುತ್ತದೆ. ಕಳೆದ ವರುಷ ೩೧೬ ಕೋಟಿ ೯೦ ಲಕ್ಷ ತೆಂಗಿನಕಾಯಿ ಉತ್ಪತ್ತಿ ಆದುವು.

ಈ ಪ್ರಾಂತ್ಯದಲ್ಲಿ ಹಗ್ಗದ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಿ ಸುಮಾರು ೧೦೦೦೦ ಜನರಿಗೆ ಕೆಲಸಗಳನ್ನು ಒದಗಿಸುವ ವಿಷಯದಲ್ಲಿ ಬೊಂಬಾಯಿ ಸರಕಾರವು ಶಿಕ್ಷಣ ಕೇಂದ್ರಗಳನ್ನು ತೆರೆಯುವ ವ್ಯವಸ್ಥೆ ಮಾಡಿದೆ.

ಈ ಹಗ್ಗದ ಕೈಗಾರಿಕೆಯ ಪಠೋಟಿ ಬಗ್ಗೆ ಕೇಂದ್ರವು ಒಂದು ಶಾಸನವನ್ನು ಮಾಡುವ ವಿಷಯವು ಪಾರ್ಲಿಮೆಂಟಿನಲ್ಲಿ ಮಂಡಿಸಲಾಗುತ್ತದೆಯೆಂದು ತಿಳಿಯಬರುತ್ತದೆ.

ಸಮಾಜ ಸೇವಕ ಕೇಂದ್ರ

ಸೌರಾಷ್ಟ್ರದಲ್ಲಿ ಇದೇ ೧೫ ನೇ ತಾರೀಖಿನ ದಿನ ೪೦೦ ಸಮಾಜಸೇವಾ ಕೇಂದ್ರಗಳನ್ನು ಸ್ಥಾಪಿಸಲಾಗುವುದೆಂದು ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೭—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೩—	೨೮—೧೦
ಹುರಳಿ	—	—
ಎಳ್ಳು	೫೦—೨	೬೫—೧೪
ಹೊಂಗೆಬೀಜ	೨೨—೮	—
ಹುರುಳಿ	೪೯—೨	೫೦—
ಹೆಸರು	—	—
ಅವರೆ	೪೫—	—
ಉದ್ದು	೬೧—೧೦	೭೦—೨
ಹುಚ್ಚೆಳ್ಳು	—	—
ಅಲಸಂದೆ	೩೯—	೬೧—
ಮೆಣಸಿನಕಾಯಿ	—	—
ಹುಣಸೇಹಣ್ಣು	೬—೩	—
ಸೀಗೆಕಾಯಿ	—	—
ಬೆಲ್ಲ	—	—
ತೆಂಗಿನಕಾಯಿ	೧೪೬	೩೬೦

ದಕ್ಷಿಣಕೊರಿಯಾ---ಅಮೆರಿಕಾ ಭದ್ರತಾ ಒಪ್ಪಂದ

ಈ ದಿನ ಸಹಿಯಾಗಲಿದೆ

ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಡಲ್ಸ್‌ರವರು ಇತ್ತೀಚೆಗೆ ದಕ್ಷಿಣ ಕೊರಿಯಾಕ್ಕೆ ಆಗಮಿಸಿ ಕಳೆದ ಎರಡು ದಿನಗಳಿಂದ ಅಲ್ಲಿಯ ಅಧ್ಯಕ್ಷ ಸಿಂಗ್‌ಮನ್‌ರೀಯವರೊಡನೆ ಮಾತುಕತೆಗಳನ್ನು ಪ್ರಾರಂಭಿಸಿದರು. ಈಗ ಕೊರಿಯಾ ಯುದ್ಧ ಮುಕ್ತಾಯವಾದುದರಿಂದ ದಕ್ಷಿಣ ಕೊರಿಯಾದ ರಕ್ಷಣೆ, ರಾಜಕೀಯ ಸಮ್ಮೇಳನದ ಕಾರ್ಯಕ್ರಮ ಮುಂತಾದ ವಿಷಯಗಳೆಲ್ಲವೂ ಚರ್ಚಿಸಲಾಯಿತೆಂದು ತಿಳಿಯಬರುತ್ತದೆ. ಅನಂತರ ದಕ್ಷಿಣ ಕೊರಿಯಾ ರಕ್ಷಣೆಗೆ ಸಂಬಂಧಪಟ್ಟ ಬಗ್ಗೆ ಒಂದು ಒಪ್ಪಂದವು ಆಯಿತೆಂದೂ ಈ ಒಪ್ಪಂದಕ್ಕೆ ಉಭಯತ್ರರೂ ಈದಿನ ಸಹಿ ಹಾಕುವರೆಂದೂ ತಿಳಿಯಬರುತ್ತದೆ.

ಹಿಂದೆ ಅಮೆರಿಕಾ ಮತ್ತು ಜಪಾನ್‌ಗಳ ನಡುವೆ ಆದ ರಕ್ಷಣಾ ಒಪ್ಪಂದದಂತೆಯೇ ಈ ಒಪ್ಪಂದವೂ ಇರುವುದಾಗಿ ತಿಳಿಯಬರುತ್ತದೆ. ಜಪಾನಿನಲ್ಲಿ ಅಮೆರಿಕಾವು ಸೈನ್ಯವನ್ನಿಟ್ಟಿರುವಂತೆಯೇ ದಕ್ಷಿಣ ಕೊರಿಯಾದಲ್ಲಿಯೂ ಸೈನ್ಯವನ್ನು ಇಡಬಹುದು. ಆ ರಾಜ್ಯದಮೇಲಿನ ಧಾಳಿಯನ್ನು ಈ ಸೈನ್ಯವು ತಡೆಯುವುದೆಂದು ಹೇಳಲಾಗಿದೆ.

ಕಾಶ್ಮೀರ ರಾಷ್ಟ್ರೀಯ ಸಮ್ಮೇಳನದಲ್ಲಿ ಒಡಕು

ಕಾಶ್ಮೀರದ ರಾಷ್ಟ್ರೀಯ ಸಮ್ಮೇಳನಕ್ಕೆ ಪ್ರತಿನಿಧಿಗಳ ಆಯ್ಕೆ ಮತ್ತು ಅದರ ಕಾರ್ಯಕಾರಿ ಸಮಿತಿಯ ಚುನಾವಣೆಗಳನ್ನು ಷೇಕ್‌ಅಬ್ದುಲ್ಲಾರವರು ಮುಂದಕ್ಕೆ ಹಾಕಿದ್ದಾರೆಂದೂ, ಇದಕ್ಕೆ ಅಲ್ಲಿ ತಮಗೂ ಮತ್ತು ಇತರ ನಾಯಕರುಗಳಿಗೂ ಉಂಟಾಗಿರುವ ಭಿನ್ನಾಭಿಪ್ರಾಯಗಳೇ ಕಾರಣವೆಂದೂ ಹೇಳಲಾಗಿದೆ. ಕಳೆದ ೨೦ ವರ್ಷಗಳಿಂದಲೂ ಕಾಶ್ಮೀರದಲ್ಲಿ ಅವಿರೋಧವಾಗಿ ನಾಯಕರಾಗಿದ್ದ ಷೇಕ್ ಅಬ್ದುಲ್ಲಾರವರ ಬಗ್ಗೆ ಈಗ ವಿರೋಧ ಪ್ರಾರಂಭವಾಗಿದೆಯೆಂದೂ ಭಾರತದೊಡನೆ ಹೆಚ್ಚು ಸಂಬಂಧ ಇಟ್ಟುಕೊಳ್ಳಕೂಡದೆಂಬ ಷೇಕರ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆ ದೊರೆಯುತ್ತಿಲ್ಲವೆಂದೂ ಹೇಳಲಾಗಿದೆ.

ಚಲನಚಿತ್ರ ಕೈಗಾರಿಕೆ ಅಧೋಗತಿಗಿಳಿಯುತ್ತಿದೆ

ದೇಶದಲ್ಲಿ ಚಲನಚಿತ್ರ ಕೈಗಾರಿಕೆಗೆ ಧಕ್ಕೆ ಉಂಟಾಗಿರುವುದರಿಂದ ಅದನ್ನು ಪುನರುದ್ಧಾರ ಮಾಡುವುದಕ್ಕಾಗಿ ಭಾರತಾದ್ಯಂತವಿರುವ ಚಿತ್ರಮಂದಿರಗಳಲ್ಲಿ ಆಗಸ್ಟ್ ೧೫ನೇ ತಾರೀಖಿನ ಸಂಜೆಯ ಪ್ರದರ್ಶನದಲ್ಲಿ ವಸೂಲಾಗುವ ಹಣವನ್ನೆಲ್ಲಾ ಅಖಿಲಭಾರತ ಚಲನಚಿತ್ರ ಮಂಡಲಿಗೆ ಕೊಡಬೇಕೆಂದು ಮನವಿಯನ್ನು ಮಾಡಲಾಗಿದೆ.

ಈ ಸಂದರ್ಭದಲ್ಲಿ ಮಂಡಲಿಯ ಅಧ್ಯಕ್ಷರಾದ ಶ್ರೀ ಬಿ. ಎನ್. ಸರ್ಕಾರ್‌ರವರು ಕಲ್ಕತ್ತಾದಲ್ಲಿ ಮಾತನಾಡುತ್ತಾ ಈ ಕೈಗಾರಿಕೆಯಮೇಲೆ ಸರ್ಕಾರದವರು ವಿಧಿಸುತ್ತಲಿರುವ ತೆರಿಗೆಯನ್ನು ಕಡಮೆಮಾಡಬೇಕೆಂದೂ ತಿಳಿಸಿದ್ದಾರೆ.

ಅಮರನಾಥಕ್ಕೆ ಭೇಟಿ

ಹಿಮಾಲಯದಲ್ಲಿರುವ ಯಾತ್ರಾಸ್ಥಳವಾದ ಅಮರನಾಥದಲ್ಲಿ ಈಶ್ವರ ದರ್ಶನವು ಇದೇ ಮಾಹೆ ೨೪ನೇ ತಾರೀಖು ಆಗುವುದರಿಂದ ಲಕ್ಷಾಂತರ ಜನರು ಅಲ್ಲಿಗೆ ಹೋಗುತ್ತಾರೆ. ಅದಕ್ಕೆ ಕಾಶ್ಮೀರ ಸರ್ಕಾರವು ತಕ್ಕ ವ್ಯವಸ್ಥೆಗಳನ್ನೆಲ್ಲಾ ಮಾಡುವುದಾಗಿ ತಿಳಿಯಬರುತ್ತದೆ.

ಅಪೇರ

7—8—53 ರಿಂದ 2ನೇ ವಾರ

ಪ್ರತಿದಿನ ಮೂರು ಆಟಗಳು

ಇನ್‌ಸ್ಪೆಕ್ಟರ್ ತಮಿಳು

ಪಾತ್ರ:-ಬಾಲಚಂದರ್, ಟಿ. ಕೆ. ಷಣ್ಮುಗಂ, ಟಿ. ಕೆ. ಸರಸ್ವತಿ, ಅಂಜಲಿದೇವಿ

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು:— ಹಿ. ಕಾ. ಸುಬ್ಬರಾವ್

ಮೋಹನ ಮುದ್ರಣಾಲಯ ಮೈಸೂರು.

WANTED

A Printing machine in running condition—Crown or Demmy Folio.

Contact:—

The SAMACHARA office, Mothikhana Buildings, Jaganmohan Palace Road, Mysore.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೮

ಸಮಾಚಾರ

ದಿನಪತ್ರಿಕೆ ಸಂಪುಟ ೩ ಸಂಚಿಕೆ ೨೪೦

೧೦-೮-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾಶ್ಮೀರದ ರಾಜಕೀಯದಲ್ಲಿ ಪರರಾಷ್ಟ್ರಗಳ ಕೈವಾಡ

ನೂತನ ಪ್ರಧಾನಿ ಭಕ್ಷಿ ಗುಲಾಂ ಮಹಮುದ್‌ರವರ ಹೇಳಿಕೆ

ಕಾಶ್ಮೀರ ಸಂಸ್ಥಾನವನ್ನು ವಿಭಜಿಸಿ ಒಂದು ಸ್ವತಂತ್ರ ಸಂಸ್ಥಾನ ಸ್ಥಾಪನೆಗೆ ನಮ್ಮ ಸಹೋದ್ಯೋಗಿಗಳಲ್ಲಿ ಕೆಲವರು ಪ್ರಯತ್ನಿಸುತ್ತಿದ್ದರು. ಈ ಚಳುವಳಿಗೆ ಹೊರ ರಾಷ್ಟ್ರಗಳ ಕೈವಾಡ ಮತ್ತು ಬೆಂಬಲವಿತ್ತು. ಇಂತಹ ರಾಷ್ಟ್ರೀಯ ವಿಪತ್ತನ್ನು ತಪ್ಪಿಸುವುದಕ್ಕಾಗಿ ತಾವು ಸರ್ಕಾರದ ಹೊಣೆಗಾರಿಕೆಯನ್ನು ಹೊರಬೇಕಾಗಿ ಬಂದಿತು-ಎಂದೂ ನೂತನ ಪ್ರಧಾನಿ ಭಕ್ಷಿ ಗುಲಾಂ ಮಹಮುದ್‌ರವರು ತಮ್ಮ ರೇಡಿಯೋ ಭಾಷಣದಲ್ಲಿ ತಿಳಿಸಿದ್ದಾರೆ.

ತಮ್ಮ ರಾಷ್ಟ್ರೀಯ ಚಳುವಳಿಯು ಜಾತ್ಯಾತೀತ, ಪ್ರಜಾಪ್ರಭುತ್ವ ಧ್ಯೇಯ ಮತ್ತು ಸಂಪ್ರದಾಯಗಳಿಗೂ ಭಾರತ ಪ್ರಜಾಪ್ರಭುತ್ವ ಚಳುವಳಿಗೂ ಎಂದಿಗೂ ಅಳಿಯದ ನಿಕಟ ಸಂಪರ್ಕವಿದೆ. ದೆಹಲಿ ಒಪ್ಪಂದದ ಪ್ರಕಾರ ಭಾರತ ಮತ್ತು ಕಾಶ್ಮೀರಗಳಲ್ಲಿ ಸಮಾನ ಪೌರತ್ವವಿದೆ—ಎಂದು ಅವರು ತಿಳಿಸಿದ್ದಾರೆ.

ಪತ್ರಿಕೋದ್ಯಮವು ಕೇವಲ ವೃತ್ತಿ ಆಗಕೂಡದು

ವಿದ್ಯಾರ್ಥಿಗಳಿಗೆ ಹಿತೋಕ್ತಿ

ಮೈಸೂರ ೨೧೦

ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಮೊನ್ನೆಯದಿನ ಸಂಜೆ ಮಹಾರಾಜ ಕಾಲೇಜಿನ ಪತ್ರಿಕೋದ್ಯಮಿ ಸಂಘದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಈಗಿನ ಪ್ರಜಾಪ್ರಭುತ್ವ ಯುಗದಲ್ಲಿ ಪತ್ರಿಕೆಗಳ ಪಾತ್ರದ ವಿಷಯದಲ್ಲಿ ಸಚಿವರು ಮಾತನಾಡುತ್ತಾ ವಿದ್ಯಾರ್ಥಿಗಳು ಈ ವೃತ್ತಿಯಲ್ಲಿ ಶಿಕ್ಷಣವನ್ನು ಪಡೆದು ಉತ್ತಮ ದರ್ಜೆಯ ಪತ್ರಿಕೋದ್ಯಮಿಗಳಾಗುವಂತೆ ಹರಸಿದರು.

ತಾಯಿನಾಡು ಪತ್ರಿಕೆ ಮಾಲೀಕರಾದ ಶ್ರೀ ಪಿ. ಆರ್. ರಾಮಯ್ಯನವರು ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಭಾವಚಿತ್ರವನ್ನು ಅನಾವರಣ ಮಾಡಿ, ಸಂಸ್ಥಾನದ ಮತ್ತು ಅದರಲ್ಲೂ ಪತ್ರಿಕಾ ಪ್ರಪಂಚದಲ್ಲಿ ಅವರು ನಡೆಸಿದ ಸೇವೆಯನ್ನು ವಿವರಿಸಿದರು.

ಶ್ರೀ ಸಿದ್ದವನಹಳ್ಳಿ ಕೃಷ್ಣಶರ್ಮರವರು ಲೋಕಮಾನ್ಯ ಬಾಲಗಂಗಾಧರ ತಿಲಕ್ ಮತ್ತು ಮಹಾತ್ಮಗಾಂಧಿಯವರು ಪತ್ರಿಕೋದ್ಯಮದಲ್ಲಿ ಮಾಡಿದ ಸೇವೆಯನ್ನು ಕೊಂಡಾಡಿದರು. ಅವರುಗಳು ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮದ ಬಗ್ಗೆ ಶಿಕ್ಷಣ ಪಡೆಯದಿದ್ದರೂ, ಅವರು ಒಂದು ಆದರ್ಶ ಇಟ್ಟುಕೊಂಡು ಜನಜಾಗೃತಿಗಾಗಿ ಪತ್ರಿಕೋದ್ಯಮವನ್ನು ನಡೆಸಿದರು. ಅವರು ನಡೆಸಿದ್ದು ಈಗಿನ ಕಾಲದಂತೆ ಕೇವಲ ಒಂದು ವೃತ್ತಿಗಾಗಿ ಅಲ್ಲ. ದೇಶದಲ್ಲಿ ಕ್ರಾಂತಿಯನ್ನು ಎಬ್ಬಿಸಿ, ತನ್ಮೂಲಕ ಹೊಸ ಸಮಾಜ ರಚನೆಗೆ ಕಾರಣ ಕರ್ತರಾದರು. ಗಾಂಧಿಜೀಯವರು ಪ್ರಕಟಿಸುತ್ತಿದ್ದ "ಯಂಗ್ ಇಂಡಿಯ" ಮತ್ತು "ಹರಿಜನ" ಪತ್ರಿಕೆಗಳನ್ನು ಓದಿ ವಿದ್ಯಾರ್ಥಿಗಳು ಅವರ ಆದರ್ಶವನ್ನು ಮುಂದೆ ಇಟ್ಟುಕೊಳ್ಳಬೇಕೆಂದು ಅವರು ತಿಳಿಸಿದರು.

ಪ್ರಾರಂಭದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ನಾಡಿಗರವರಿಂದ ಸ್ವಾಗತವಾದ ನಂತರ ಕಾರ್ಯದರ್ಶಿಗಳು ವರದಿಯನ್ನು ಒಪ್ಪಿಸಿ ಸಂಘಕ್ಕೆ ಒಂದು ಪುಸ್ತಕಭಂಡಾರ ಮತ್ತು ತಾವು ನಡೆಸುತ್ತಿರುವ ಪತ್ರಿಕೆಗೆ ಹಣ ಸಹಾಯ ದೊರೆಯಬೇಕೆಂದು ಪ್ರಾರ್ಥಿಸಿದರು.

ಉಪಾಧ್ಯಕ್ಷ ಶ್ರೀ ರಾಮಕೃಷ್ಣರವರು ವಂದನೆಯನ್ನು ಅರ್ಪಿಸಿದರು.

ನಗರರಚನೆ ಶಿಕ್ಷಣ ಶಾಲೆ

ಭಾರತ ಸರ್ಕಾರವು ದೆಹಲಿಯಲ್ಲಿ ಒಂದು 'ನಗರ ರಚನೆ' ಶಿಕ್ಷಣಶಾಲೆಯನ್ನು ಸ್ಥಾಪಿಸುವುದಾಗಿ ತಿಳಿಯಬರುತ್ತದೆ.

ಬಿಜಾಪುರದಲ್ಲಿ ಗಲಭೆ

೭೦ ಜನರ ಬಂಧನ

ಕರ್ನಾಟಕ ಪ್ರಾಂತ್ಯರಚನೆ ಸಂಬಂಧದಲ್ಲಿ ನಿನ್ನೆಯ ದಿನ ಬಿಜಾಪುರದಲ್ಲಿ ಗಲಭೆ ನಡೆದು ಪ್ರದರ್ಶನಕಾರರು ಪೋಲೀಸಿನವರ ಮೇಲೆ ಧಾಳಿ ನಡಿಸಿದುದರ ಪರಿಣಾಮವಾಗಿ ಅವರು ಅಶ್ರುವಾಯುವನ್ನು ಉಪಯೋಗಿಸಿ ಗುಂಪು ಚದುರಿಸಿದರೆಂದು ತಿಳಿಯಬರುತ್ತದೆ. ಈ ಸಂದರ್ಭದಲ್ಲಿ ಇಲ್ಲಿ ೭೦ ಜನರನ್ನು ಬಂಧಿಸಲಾಗಿದೆ. ಬಿಜಾಪುರ ಮತ್ತು ಆ ಜಿಲ್ಲೆಯ ಕೆಲವು ಪ್ರಮುಖ ಪ್ರದೇಶಗಳಲ್ಲಿ ಜಿಲ್ಲಾ ಕಲೆಕ್ಟರು ೧೪೪ ವಿಧಿಯ ಪ್ರಕಾರ ಪ್ರದರ್ಶನ, ಸಭೆ ಮುಂತಾದವನ್ನು ನಿಷೇಧಿಸಿದ್ದಾರೆಂದು ಹೇಳಲಾಗಿದೆ.

ವಿದ್ಯಾರ್ಥಿಗಳಿಗೆ ಕಡ್ಡಾಯ ಸೈನಿಕ ಶಿಕ್ಷಣ

ಎಲ್ಲಾ ಕಾಲೇಜ್ ಮತ್ತು ಹೈಸ್ಕೂಲುಗಳ ವಿದ್ಯಾರ್ಥಿಗಳಿಗೆ ಸೈನಿಕಶಿಕ್ಷಣವನ್ನು ಒತ್ತಾಯವಾಗಿ ಕೊಡಬೇಕೆಂಬ ಖಾಸಗಿ ನಿರ್ಣಯದ ಮೇಲೆ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಯುತ್ತಿದೆ.

ಶ್ರೀನಗರದಲ್ಲಿ ಗೋಲಿಬಾರು

ಷೇಕ್ ಅಬ್ದುಲ್ಲಾ ಸರ್ಕಾರವನ್ನು ವಜಾ ಮಾಡಿದುದರ ಪರಿಣಾಮವಾಗಿ ನಿನ್ನೆಯ ಮಧ್ಯಾಹ್ನ ಶ್ರೀನಗರದಲ್ಲಿ ಸ್ವಲ್ಪ ಗಲಭೆಗಳಾಗಿ ಪೋಲೀಸಿನವರಮೇಲೆ ಪ್ರದರ್ಶನಗಾರರು ಕಲ್ಲುಗಳನ್ನು ಎಸೆದರು. ಗಲಭೆಯನ್ನು ಅಡಗಿಸಲು ಪೋಲೀಸಿನವರು ಗುಂಡುಹಾರಿಸಿದರು. ಇದರಿಂದ ಒಂದೆರಡು ಸಾವು ನೋವುಗಳು ಉಂಟಾಯಿತೆಂದು ತಿಳಿಯಬರುತ್ತದೆ.

ನೂತನ ಪ್ರಧಾನಿ ಭಕ್ಷಿ ಗುಲಾಂ ಮಹಮುದ್‌ರವರು ನಗರದಲ್ಲೆಲ್ಲಾ ಸುತ್ತಿ ಗಲಭೆಗಾರರಿಗೆ ತಿಳುವಳಿಕೆ ಕೊಟ್ಟು ಹಿತ ನುಡಿದರೆಂದೂ ಹೇಳಲಾಗಿದೆ.

ಹೊಸ ಪ್ರಧಾನಿಗೆ ಬೆಂಬಲವನ್ನು ಕೊಡುವುದಾಗಿ ತಿಳಿಸಿ ಪ್ರಾಂತ್ಯದ ನಾನಾಭಾಗಗಳಿಂದ ವಿವಿಧ ಪಕ್ಷಗಳು ಮತ್ತು ಪ್ರಮುಖರುಗಳು ತಂತಿಗಳನ್ನು ಕಳುಹಿಸುತ್ತಿರುವುದಾಗಿ ತಿಳಿಯಬರುತ್ತದೆ.

ತಿರುಚ್ಚಿಯಲ್ಲಿ ೬ ಜನರ ದಸ್ತಗಿರಿ

ತಿರುವಾಂಕೂರ್-ಕೊಚ್ಚಿ ಸರ್ಕಾರದ ಮೇಲೆ ತಮ್ಮ ವಿರೋಧವನ್ನು ವ್ಯಕ್ತಪಡಿಸಲು ಒಂದು ಭಾರಿ ಗುಂಪು ನಿನ್ನೆಯ ದಿನ ಕೇಂದ್ರ ಆಯೋಜನಾ ಸಚಿವ ಶ್ರೀ ಗುಲ್ಜಾರಿಲಾಲ್ ನಂದಾರವರ ಬಿಡಾರಗಳ ಗಲಭೆಯನ್ನು ನಡೆಸಿದರೆಂದು ೬ ಜನರನ್ನು ಪೋಲೀಸಿನವರು ಬಂಧಿಸಿದ್ದಾರೆಂದು ತಿಳಿಯಬರುತ್ತದೆ. ಅದರಲ್ಲಿ ಪಾರ್ಲಿಮೆಂಟ್ ಸದಸ್ಯರೊಬ್ಬರೂ ಇರುವರು.

೧೨೦೦ ರೂ ಸಂಬಳದವರಿಗೆ ತುಟ್ಟಿಭತ್ಯ ಖೋತಾ

ತಿಂಗಳಿಗೆ ಒಂದುಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ಸಂಬಳ ಪಡೆವ ಅಧಿಕಾರಿಗಳಿಗೆ ತುಟ್ಟಿಭತ್ಯ ನಿಲ್ಲಿಸಲು ಹೈದರಾಬಾದ್ ಸರ್ಕಾರವು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

○ ಬಳ್ಳಾರಿಯ ಭವಿಷ್ಯದ ಬಗ್ಗೆ ಶ್ರೀ ಟಿ. ಕಾಮಿರೆಡ್ಡಿಯವರು ನಡೆಸುತ್ತಲಿದ್ದ ಸತ್ಯಾಗ್ರಹವು ನಿನ್ನೆಯ ದಿನ ನಿಂತಿತು.

ಹುತಾತ್ಮರ ದಿನಾಚರಣೆ

ಮೈಸೂರು ೧೨

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ಸಂಘದವರು ನಿನ್ನೆ ಹುತಾತ್ಮರ ದಿನಾಚರಣೆಯನ್ನು ಶ್ರೀ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ನಿಲಯದ ಶ್ರೀಗಳಾದ ವೀರಭದ್ರಾಚಾರಿ, ಅನಂತಮೂರ್ತಿ, ಪಿಸಾಕ್‌ದಾಸ್, ಸಿ. ಎಸ್. ಅನಂತಯ್ಯ ಮತ್ತು ಎಂ. ಎಸ್. ನಂಜುಂಡರಾವ್ ರವರು ಹುತಾತ್ಮರ ಸೇವೆಯನ್ನು ಕೊಂಡಾಡಿ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ತಾಲ್ಲೂಕು ಕಾಂಗ್ರೆಸ್ ಅಧಿಕಾರ ವರ್ಗ

ಮೈಸೂರು ೧೦

ಮೈಸೂರು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಸಭೆಯು ನಿನ್ನೆ ಶ್ರೀ ನಾ. ಭದ್ರಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಂಡ ಅಧಿಕಾರ ವರ್ಗದವರ ಚುನಾವಣೆಯು ಅವಿರೋಧವಾಗಿ ನಡೆಯಿತು — ಅಧ್ಯಕ್ಷರು ಶ್ರೀ ಕೆ. ಪುಟ್ಟಸ್ವಾಮಿ ಉಪಾಧ್ಯಕ್ಷರು--ಶ್ರೀ ಕೆ. ಕೆಂಪೇಗೌಡ, ಕಾರ್ಯದರ್ಶಿ--ಶ್ರೀ ವಿ. ಚಿನ್ನಸ್ವಾಮಿ ಖಜಾಂಚಿ--ಶ್ರೀ ಆರ್. ಭದ್ರಯ್ಯ.

ಷೇಕ್ ಅಬ್ದುಲ್ಲಾ ಮೇಲೆ ಅಮೆರಿಕಾ ಪ್ರಭಾವ

ಷೇಕ್ ಅಬ್ದುಲ್ಲಾರ ಇತ್ತೀಚಿನ ವರ್ತನೆಗಳಿಗೆಲ್ಲಾ ಅಮೇರಿಕಾದ ಪ್ರಭಾವವೇ ಕಾರಣವೆಂದು ಭಾರತ ಕಮ್ಯುನಿಸ್ಟ್ ಪಕ್ಷವು ಪ್ರಕಟಿಸಿದೆ.

ವಿನೋಬಭಾವೆಯವರಿಗೆ ಅಲಸ್ಯ

ಆಚಾರ್ಯ ವಿನೋಬಭಾವೆಯವರು ಗಯಾ ಬಳಿ ಕಿಸರ್ ಸರಮ್ ಎಂಬಲ್ಲಿ ಅಸ್ವಸ್ಥರಾಗಿದ್ದಾರೆ. ಅವರು ಕೇವಲ ಪಾನೀಯ ಆಹಾರವನ್ನು ಸ್ವೀಕರಿಸುತ್ತಲಿದ್ದಾರೆ.

ಕರ್ನಾಟಕ ವಾರ

ಹುಬ್ಬಳ್ಳಿ, ಗದಗು, ಹಲಗೇರಿ ಮುಂತಾದ ಕಡೆಗಳಲ್ಲಿ ಕರ್ನಾಟಕ ವಾರವನ್ನು ನಿನ್ನೆ ಆಚರಿಸಲಾಯಿತು. ಹರತಾಳ ಮತ್ತು ಪ್ರದರ್ಶನ ಮೆರವಣಿಗೆಗಳು ನಡೆದುವು. ಗದಗಿನಲ್ಲಿ ಕ್ರಿಯಾಸಮಿತಿಯ ಸದಸ್ಯರಾದ ಶ್ರೀ ವಾಲಿ ಚೆನ್ನಪ್ಪನವರನ್ನು ದಸ್ತಗಿರಿ ಮಾಡಲಾಯಿತು.

ಕುದುರೆಜೂಜು ಮುಕ್ತಾಯ

ಬೆಂಗಳೂರು ೧೨

ಜೂನ್ ೧೭ನೇ ತಾರೀಖು ಪ್ರಾರಂಭವಾದ ಕುದುರೆ ಜೂಜು ನಿನ್ನೆಯದಿನ ಮುಕ್ತಾಯವಾಯಿತು.

ಕಾಶ್ಮೀರ ಪ್ರಧಾನಿ ಷೇಕ್ ಅಬ್ದುಲ್ಲಾರ ವಜಾ ಮತ್ತು ದಸ್ತಗಿರಿ

ಭಕ್ಷಿ ಗುಲಾಂ ಮಹಮದ್‌ರವರ ನಾಯಕತ್ವದಲ್ಲಿ ಹೊಸ ಸರ್ಕಾರ ಸ್ಥಾಪನೆ

[ಕಾಶ್ಮೀರದ ಮುಖ್ಯಮಂತ್ರಿ ಷೇಕ್ ಅಬ್ದುಲ್ಲಾರವರನ್ನು ಕೆಲಸದಿಂದ ವಜಾಮಾಡಿ ಅವರನ್ನು ದಸ್ತಗಿರಿಮಾಡಿ] ಗುಪ್ತಸ್ಥಳಕ್ಕೆ ಕೊಂಡೊಯ್ಯಲಾಗಿರುವುದಾಗಿ ತಿಳಿಯಬರುತ್ತದೆ.

ಕಾಶ್ಮೀರದ ಅಧಿಪತಿಯಾದ ಶ್ರೀ ಕರಣಸಿಂಗ್‌ರವರು ಅಲ್ಲಿಯ ಮುಖ್ಯಮಂತ್ರಿ ಷೇಕ್ ಅಬ್ದುಲ್ಲಾರವರನ್ನೂ ಮತ್ತು ಅವರ ಮಂತ್ರಿಮಂಡಲವನ್ನೂ ನಿನ್ನೆಯದಿನ ವಜಾಮಾಡಿ ಅದೇ ಮಂತ್ರಿಮಂಡಲದಲ್ಲಿ ಉಪಪ್ರಧಾನಿಯಾಗಿದ್ದ ಭಕ್ಷಿ ಗುಲಾಂ ಮಹಮ್ಮದ್‌ರವರನ್ನ ಹೊಸ ಸರ್ಕಾರವನ್ನ ರಚಿಸುವಂತೆ ಆಹ್ವಾನಿಸಿದರು.

ಅವರ ಆಹ್ವಾನವನ್ನ ಗುಲಾಂ ಮಹಮದ್‌ರವರು ಒಪ್ಪಿಕೊಂಡು ನಿನ್ನೆಯದಿನ ಬೆಳಗಿನಜಾವ ೮-೩೦ ವೇಳೆಯಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿ ಅಧಿಕಾರವನ್ನು ವಹಿಸಿಕೊಂಡರು. ಹಿಂದಿನ ಮಂತ್ರಿಮಂಡಲದಲ್ಲಿ ಆರ್ಥಿಕ ಸಚಿವರಾಗಿದ್ದ ಪಂಡಿತ ಗಿರಿಧರಲಾಲ್ ಡೋಗ್ರಾರವರು ಮತ್ತೊಬ್ಬ ಮಂತ್ರಿಯಾಗಿ ಪ್ರಮಾಣ ವಚನವನ್ನ ಸ್ವೀಕರಿಸಿದರು. ಇತರ ಮಂತ್ರಿಗಳ ಹೆಸರನ್ನ ಸದ್ಯದಲ್ಲಿಯೇ ಪ್ರಕಟಿಸಲಾಗುವುದಾಗಿ ನೂತನ ಪ್ರಧಾನಿಯವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಪ್ರಾಂತ್ಯದ ಅಧಿಪತಿ ಶ್ರೀ ಕರಣಸಿಂಗ್‌ರವರು ಮತ್ತೊಂದು ಆಜ್ಞೆಯನ್ನ ಹೊರಡಿಸಿ ಈ ಬದಲಾವಣೆಗೆ ವಿವರಗಳನ್ನು ಇತ್ತಿದ್ದಾರೆ—

ಕಳೆದ ಹಲವಾರು ತಿಂಗಳುಗಳಿಂದ ಮಂತ್ರಿ ಮಂಡಲದಲ್ಲಿ ರಾಜಕೀಯ, ಆರ್ಥಿಕ ಮತ್ತು ಆಡಳಿತ ವಿಷಯಗಳಲ್ಲಿ ತೀವ್ರ ಭಿನ್ನಾಭಿಪ್ರಾಯ ತಲೆದೋರಿತು. ಮಂತ್ರಿಮಂಡಲದ ಸದಸ್ಯರು ಬಹಿರಂಗವಾಗಿ ಈ ವಿಷಯದಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲಾರಂಭಿಸಿದರು. ಇದರಿಂದ ಜನರಲ್ಲಿ ಮಂತ್ರಿಮಂಡಲದಮೇಲಿದ್ದ ವಿಶ್ವಾಸವೆಲ್ಲಾ ಹೋಯಿತು. ದೇಶದಲ್ಲಿ ಆರ್ಥಿಕ ದುಃಸ್ಥಿತಿ ಹೆಚ್ಚಿತು. ಆದರಕಡೆ ಗಮನವಿಲ್ಲದೆಹೋಯಿತು. ದಕ್ಷತೆಯ ಆಡಳಿತ ಸಾಧ್ಯವಿಲ್ಲದಾಯಿತು. ಸಂಯುಕ್ತ ಜವಾಬ್ದಾರಿಯು ಮಾಯವಾಯಿತು. ಷೇಕ್ ಅಬ್ದುಲ್ಲಾರವರು ತಮ್ಮಿಷ್ಟಬಂದಂತೆ ನಡೆಯಲಾರಂಭಿಸಿದರು. ದೇಶದಲ್ಲಿ ಲಂಚಕೋರತನ, ಸ್ವಜನ ಪಕ್ಷಪಾತ, ದಬ್ಬಾಳಿಕೆಗಳು ಹೆಚ್ಚಿತು ಇದರಲ್ಲಿ ಸರ್ಕಾರವು ತನ್ನ ಕೆಲಸವನ್ನ ನಿರ್ವಹಿಸಲು ಅನರ್ಹವಾಯಿತು. ಈ ವಿಷಯದಲ್ಲಿ ಮೊನ್ನೆಯದಿನ ಅವರನ್ನ ಕರೆಸಿ ಹಿತವಚನವನ್ನ ನುಡಿದು, ಐಕ್ಯತೆ, ಭದ್ರತೆಯು ಪ್ರಜೆಗಳ ಹಿತದೃಷ್ಟಿಯಿಂದ ಅವಶ್ಯಕವಾಗಿರುವುದರಿಂದ ಕೂಡಲೇ ಮಂತ್ರಿಮಂಡಲದಸಭೆಯು ರಿಯಾಸತ್‌ರವರ ಗೃಹದಲ್ಲಿ ನಡೆಯುವ ಸೂಚನೆ ಕೊಡಲಾಯಿತು. ಅದನ್ನು ಷೇಕ್ ಅಬ್ದುಲ್ಲಾರವರು ತಿರಸ್ಕರಿಸಿ ಹೊರಟುಹೋದರು ಕೂಡಲೇ ಅವರನ್ನು ಮುಖ್ಯಮಂತ್ರಿ ಪದವಿಯಿಂದ ವಜಾಮಾಡಿ ಅವರ ಮಂತ್ರಿಮಂಡಲವನ್ನು ವಿಸರ್ಜಿಸಿರುವುದಾಗಿ ಅವರಿಗೆ ಪತ್ರ ಬರೆದು ತಿಳಿಸಲಾಯಿತು-ಎಂದು ಸದರಿ ರಿಯಾಸತ್‌ರವರ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ರಾಜ್ಯಾಂಗಸಭೆಯ ಅಧ್ಯಕ್ಷರಾದ ಮಿ॥ ಮಹಮದ್ ಸಾದಿಕ್‌ರವರು ಒಂದು ಹೇಳಿಕೆಯನ್ನ ಕೊಡುತ್ತಾ ಪ್ರಾಂತ್ಯದ ಅಧಿಪತಿಯವರು ಈಗ ಕೈಗೊಂಡಿರುವ ಕಾರ್ಯವು ಕಾಲೋಚಿತವಾಗಿಯೂ ಸರಿಯಾಗಿಯೂ ಇದೆಯೆಂದೂ ಈಗಿನ ಸ್ಥಿತಿಗೆ ಅದು ಅನಿವಾರ್ಯವಾಗಿತ್ತೆಂದೂ ಹಾಗೆ ಮಾಡದಿದ್ದರೆ ಮತ್ತಷ್ಟು ಅನಾಯಕತೆಯುಂಟಾಗುತ್ತಿತ್ತೆಂದೂ ಅವರು ಹೇಳಿದ್ದಾರೆ.

ಕಾಶ್ಮೀರದ ಹೊಸ ಪರಿಸ್ಥಿತಿಯ ಬಗ್ಗೆ ಭಾರತ ಸರ್ಕಾರದ ವಕ್ತಾರರೊಬ್ಬರು ಮಾತನಾಡುತ್ತ ಪ್ರಜೆಗಳ ಪೂರ್ಣ ಬೆಂಬಲವಿರುವ ಸರ್ಕಾರಕ್ಕೆ ಭಾರತವು ತನ್ನ ಪೂರ್ಣ ಸಹಕಾರವನ್ನು ನೀಡುವುದೆಂದೂ, ಕಳೆದ ೩ ತಿಂಗಳಿಂದ ಅಲ್ಲಿಯ ಪರಿಸ್ಥಿತಿಯ ಬಗ್ಗೆ ಭಾರತ ಸರ್ಕಾರಕ್ಕೆ ಅನೇಕ ನಾಯಕರು ಭೇಟಿ ನಡೆಸಿ ತಿಳಿಸುತ್ತಿದ್ದರೆಂದೂ ಆದರೆ ಅದು ಆಂತರಿಕ ಆಡಳಿತಕ್ಕೆ ಸಂಬಂಧಪಟ್ಟ ವಿಷಯವಾದ್ದರಿಂದ ಅಲ್ಲಿಯ ನಾಯಕರೇ ತಮ್ಮಲ್ಲಿ ತೀರ್ಮಾನಿಸಬೇಕೆಂದು ಸಲಹೆ ಕೊಡಲಾಗಿತ್ತೆಂದೂ ತಿಳಿಸಿದ್ದಾರೆ.

ದೇಶದ ರಕ್ಷಣಾ ಹಿತದೃಷ್ಟಿಯಿಂದ ಷೇಕ್ ಅಬ್ದುಲ್ಲಾ ಮತ್ತು ಅವರ ಅನುಯಾಯಿ ಮಾಜಿ ರೆವಿನ್ಯೂ ಸಚಿವ ಮಿರ್ಜಾ ಅಫ್‌ಸುಲ್ ಬೇಗ್‌ರನ್ನೂ ಕೆಲವು ಉನ್ನತ ಅಧಿಕಾರಿಗಳನ್ನೂ ದಸ್ತಗಿರಿಮಾಡಿ ಗುಪ್ತಸ್ಥಳಕ್ಕೆ ಕೊಂಡೊಯ್ಯಲಾಗಿರುವುದಾಗಿ ತಿಳಿಯಬರುತ್ತದೆ ದಸ್ತಗಿರಿಯಾದವರಲ್ಲಿ ಕಾಶ್ಮೀರ ಪ್ರಸಾರ ಶಾಖೆಯ ಡೈರೆಕ್ಟರು ಜನರಲ್ ಮತ್ತು ವಾರ್ತಾ ಶಾಖಾ ಮುಖ್ಯಾಧಿಕಾರಿಗಳೂ ಸೇರಿದ್ದಾರೆ.

ಪ್ರಾಂತ್ಯದ ಅಧಿಪತಿಯವರು ಈ ಕಾರ್ಯವನ್ನೆಲ್ಲಾ ಭಾರತ ಸರ್ಕಾರದ ಗಮನಕ್ಕೆ ತಂದು ನಡೆಸಿರುವುದಾಗಿ ತಿಳಿಯಬರುತ್ತದೆ.

ಫೇಲಾದ ವಿದ್ಯಾರ್ಥಿಗಳಿಗೆ ಪ್ರಮೋಷನ್

ಮೈಸೂರು ೧೦

ಹಾಜರಾತಿ ಕಡಮೆಯಾಗಿದ್ದ ಫೇಲಾದ ಜೂನಿಯರ್ ಬಿ.ಎ. ಬಿ.ಎಸ್.ಸಿ.,ಆನರ್ಸ್ ತರಗತಿಗಳ ವಿದ್ಯಾರ್ಥಿಗಳಿಗೆಲ್ಲಾ ಮುಂದಿನ ತರಗತಿಗೆ ತೇರ್ಗಡೆ ಮಾಡುವುದಾಗಿ ಪ್ರಕಟಿಸಲಾಗಿದೆ.

ಮೈಸೂರಿಗೆ ಗೋಧಿ

ಬೆಂಗಳೂರು ೧೦

ಹೈದರಾಬಾದ್‌ನಿಂದ ಮೈಸೂರು ಸಂಸ್ಥಾನಕ್ಕೆ ಸದ್ಯದಲ್ಲೇ ೨೫೦೦ ಟನ್ನುಗಳಷ್ಟು ಗೋಧಿ ಬರುವುದಾಗಿ ತಿಳಿಯಬರುತ್ತದೆ.

೧೦೦೦೦ ಟನ್ನು ಜೋಳವನ್ನು ಕೊಡುವಂತೆ ಮೈಸೂರು ಸರ್ಕಾರವು ಕೇಂದ್ರವನ್ನು ಕೇಳಿರುವುದಾಗಿ ಹೇಳಲಾಗಿದೆ.

ಸ್ವಾತಂತ್ರ್ಯ ದಿನೋತ್ಸವ

ಬೆಂಗಳೂರು ೧೦

ಇದೇ ೧೫ನೇ ತಾರೀಖು ಸಂಸ್ಥಾನಾದ್ಯಂತ ಸ್ವಾತಂತ್ರ್ಯ ದಿನೋತ್ಸವವನ್ನು ಸೂಕ್ತ ರೀತಿಯಲ್ಲಿ ಆಚರಿಸಲು ಸರ್ಕಾರವು ಸೂಚನೆ ಕೊಟ್ಟಿದೆ.

ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪ್ರಮುಖ ಖಾಸಗಿ ಸಂಸ್ಥೆಗಳೊಡನೆ ಸಹಕರಿಸಿ ಈ ಮಹೋತ್ಸವವನ್ನು ಆಚರಿಸಲು ಆಜ್ಞೆಕೊಡಲಾಗಿದೆ.

ಕರ್ಣಾಟಕ ಸತ್ಯಾಗ್ರಹ ಆಗಸ್ಟು ೩ ನೇ ವಾರ

ಕರ್ಣಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕಾರ್ಯ ಸಮಿತಿಯು ಮೊನ್ನೆಯದಿನ ಸಭೆ ಸೇರಿ ನಿನ್ನೆಯಿಂದ ಪ್ರಾರಂಭಿಸಬೇಕೆಂದಿದ್ದ ಸತ್ಯಾಗ್ರಹ ಚಳುವಳಿಯನ್ನು ಆಗಸ್ಟು ಮೂರನೇ ವಾರಕ್ಕೆ ಮುಂದುವರಿಸಲು ನಿರ್ಧರಿಸಿತ್ತೆಂದು ತಿಳಿಯಬರುತ್ತದೆ.

ತಮ್ಮ ಗೈರು ಹಾಜರಿಯಲ್ಲಿ ಸತ್ಯಾಗ್ರಹ ನಡೆಸಲು ತೀರ್ಮಾನ ಮಾಡಿದ್ದುದನ್ನು ಖಂಡಿಸಿದ್ದ ಶ್ರೀ ಕೆ. ಪಿ. ಕಾರಂತರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಫಲಪುಷ್ಪ ಬಹುಮಾನ ವಿನಿಯೋಗ

ಮೈಸೂರು ೧೦

ನಗರದಲ್ಲಿರುವ ಮೃಗಾಲಯದಲ್ಲಿ ಮೊನ್ನೆ ದಿನ ಲೆ॥ ಕೆ. ಎ. ವಿ. ಸುಬ್ರಹ್ಮಣ್ಯರಾಜೇಅರಸಿನವರ ಅಧ್ಯಕ್ಷತೆಯಲ್ಲಿ ಫಲಪುಷ್ಪ ಪ್ರದರ್ಶನದ ಅಂಗವಾಗಿ ಬಹುಮಾನ ವಿನಿಯೋಗ ಸಮಾರಂಭವು ನಡೆಯಿತು. ಈ ಸಮಿತಿಯ ಅಧ್ಯಕ್ಷ ಮತ್ತು ತೋಟಗಳ ಇಲಾಖಾಮುಖ್ಯಾಧಿಕಾರಿ ಡಾ॥ ಮರಿಗೌಡರು ಸ್ವಾಗತಭಾಷಣವನ್ನು ಮಾಡಿ ಪ್ರದರ್ಶನಗಳ ಆವಶ್ಯಕತೆಯನ್ನು ವಿವರಿಸಿದರು. ಕಾರಣಾಂತರದಿಂದ ನಿಂತು ಹೋಗಿದ್ದ ಈ ಪ್ರದರ್ಶನವನ್ನು ಪುನಃ ನಡೆಸಲು ಪ್ರಾರಂಭಿಸಿದುದಕ್ಕೆ ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತ, ಈ ಕಾರ್ಯಗಳಲ್ಲಿ ದಿವಂಗತ ಹೆಚ್. ಸಿ. ಜವರಯ್ಯನವರ ಕಾರ್ಯಗಳನ್ನು ಅಧ್ಯಕ್ಷರು ಸ್ಮರಿಸಿಕೊಂಡರು.

ಶ್ರೀಮಾನ್ ಭದ್ರಯ್ಯನವರಿಗೆ ಶ್ರೀಮನ್ಮಹಾರಾಜರ ಪರ್ಯಾಯ ಪಾರಿತೋಷಕ ಬೆಳ್ಳಿ ಬಟ್ಟಲು, ಮತ್ತು ಶ್ರೀಗಳಾದ ಭದ್ರಯ್ಯ, ಟಿ. ಶಾಂತರಾಜಪ್ಪ, ಶ್ರೀಮತಿ ಇರಾನಿ ಮುಂತಾದವರಿಗೂ ಫಲಪುಷ್ಪ ಮತ್ತು ತರಕಾರಿ ಪ್ರದರ್ಶನಕಾರರಿಗೂ ಬಹುಮಾನಗಳನ್ನು ಹಂಚಲಾಯಿತು.

ಶ್ರೀಮನ್ಮಹಾರಾಜರವರು ಮೊನ್ನೆದಿನ ಬೆಳಗ್ಗೆ ಪ್ರದರ್ಶನಕ್ಕೆ ಭೇಟಿ, ಅಲ್ಲಿ ಒಂದು ಗಂಟೆ ಕಾಲ ಎಲ್ಲ ಪ್ರದರ್ಶನಗಳನ್ನೂ ನೋಡಿ ಸಂತೋಷಪಟ್ಟರು. ಸಮಿತಿಯ ಡಾ॥ ಮರಿಗೌಡ ಮತ್ತು ಶ್ರೀ ಟಿ. ವೆಂಕಟರಮಣಯ್ಯನವರು ಅವರನ್ನು ಸ್ವಾಗತಿಸಿದರು.

ಅಪೇರ

7—8—53 ರಿಂದ 2ನೇ ವಾರ

ಪ್ರತಿದಿನ ಮೂರು ಆಟಗಳು

ಇನ್‌ಸ್ಪೆಕ್ಟರ್ ತಮಿಳು

ಪಾತ್ರ:-ಬಾಲಚಂದರ್, ಟಿ. ಕೆ. ಷಣ್ಮುಗಂ, ಟಿ. ಕೆ. ಸರಸ್ವತಿ,ಅಂಜಲಿದೇವಿ

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು: — ಹಿ. ಕಾ. ಸುಬ್ಬರಾವ್

ಮೋಹನ ಮುದ್ರಣಾಲಯ ಮೈಸೂರು.

WANTED

A Printing machine in running condition—Crown or Demmy Folio

Contact:—

The SAMACHARA office, Mothikhana Buildings, Jaganmohan Palace Road, Mysore.

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೬೮

ಸಮಾಚಾರ

ದಿನಪತ್ರಿಕೆ

ಸಂಪುಟ

ಸಂಚಿಕೆ

೧೧-೮-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮೆಡಿಕಲ್ ಕಾಲೇಜ್ ಸೀಟುಗಳ ಪಟ್ಟಿ ಪ್ರಕಟಣೆ

೭೧ ಮಂದಿ ಆಯ್ಕೆ

ಮೈಸೂರು ೧೧

ಮೈಸೂರು ಮೆಡಿಕಲ್ ಕಾಲೇಜಿಗೆ ಸೀಟುಗಳ ಹಂಚಿಕೆ ಬಗ್ಗೆ ಕಳೆದ ೫-೬ ದಿನಗಳಿಂದಲೂ ನಡೆಯುತ್ತಿದ್ದ ಆಯ್ಕೆ ಸಮಿತಿಯ ಸಭೆಯು ನಿನ್ನೆ ಸಂಜೆ ಮುಕ್ತಾಯವಾಗಿ, ಈದಿನ ಕಾಲೇಜಿನಲ್ಲಿ ಅಂತ್ಯ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿದೆ.

ಸಮಿತಿಯವರು ೭೧ ಮಂದಿ ವಿದ್ಯಾರ್ಥಿಗಳನ್ನ ಆಯ್ಕೆಮಾಡಿದ್ದಾರೆ.

ಅದರಪೈಕಿ, ನಿಮ್ನ ತರಗತಿಯವರಿಗೆ ಶೇಕಡ ೧೫ ರಷ್ಟು ಕೊಡಲಾಗಿದೆ. ಮಹಿಳೆಯರಿಗೆ ೯ ಸೀಟು ಕೊಡಲಾಗಿದೆ. ಇನ್ನು ನಾಲ್ಕು ಸೀಟುಗಳನ್ನು ಸರ್ಕಾರದವರೇ ಭರ್ತಿಮಾಡುವರೆಂದು ತಿಳಿದುಬಂದಿದೆ.

ಹಿಂದೆಯೇ ಪ್ರಕಟಿಸಿದಂತೆ, ಒಟ್ಟು ೮೦೦ ಮಂದಿ ಪ್ರವೇಶ ಅರ್ಜಿಗಳ ಪೈಕಿ ೫೦೦ ಮಂದಿ ವಿದ್ಯಾರ್ಥಿಗಳನ್ನು ಸಮಿತಿಯವರು ಭೇಟಿಗಾಗಿ ಕರೆದಿದ್ದರು.

ಕೋರ್ಟಿನಲ್ಲಿ ಶಿಕ್ಷೆ

ಮೈಸೂರು ೧೧

ನಗರದ ಬಸ್ ನಿಲ್ದಾಣದ ಬಳಿ ಪತ್ರಿಕೆಗಳನ್ನ ಮಾರುತ್ತಿದ್ದ ಒಬ್ಬ ಹುಡುಗನನ್ನು ಬಯ್ಯುತ್ತಿದ್ದ ಗಂಡ್ಲಪೇಟೆ ನಾಗಯ್ಯ ಎಂಬುವರಿಗೆ ಬುದ್ಧಿವಾದ ಹೇಳಲು ಬಂದ ಪೊಲೀಸಿನವನನ್ನೂ ಸಹ ಬಯ್ದನೆಂದು ದೇವರಾಜ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಎರಡನೇ ನ್ಯಾಯಾಧೀಶರು ನಾಗಯ್ಯ ಎಂಬುವರಿಗೆ ೧೫ ರೂ. ಜುಲ್ಮಾನೆ ತಪ್ಪಿದರೆ, ಆರಿನ ಸಜಾ ಶಿಕ್ಷೆಯನ್ನು ವಿಧಿಸಿದರು.

ವಾಣಿವಿಲಾಸ ಮಾರ್ಕೆಟ್ಟಿನ ಬಳಿ ಗಲೀಜು ಮಾಡುತ್ತಿದ್ದ ದೇವಮ್ಮ ಎಂಬಾಕೆಗೆ ಬುದ್ಧಿವಾದ ಹೇಳಲು ಹೋದ ಪುರಸಭೆಯ ನೌಕರ ಲಕ್ಕಯ್ಯನನ್ನು ಬಯ್ದುದಲ್ಲದೆ, ಆಕೆಯ ಮಾತನ್ನು ಕೇಳಿ ಭೈರಪ್ಪ ಎಂಬುವನು ಆತನನ್ನು ಹೊಡೆದನೆಂದು ಆಪಾದಿಸಲ್ಪಟ್ಟು, ಭೈರಪ್ಪನಿಗೆ ೪೦ ರೂ. ಜುಲ್ಮಾನೆ ತಪ್ಪಿದರೆ. ೧೫ ದಿನ ಸಾದಾ ಶಿಕ್ಷೆ ಮತ್ತು ದೇವಮ್ಮನಿಗೆ ೨೦ ರೂ. ದಂಡ ತಪ್ಪಿದರೆ ೧೦ ದಿನ ಸಾದಾ ಶಿಕ್ಷೆಗಳನ್ನು ನಗರದ ದ್ವಿತೀಯ ನ್ಯಾಯಾಧೀಶರು ವಿಧಿಸಿರುತ್ತಾರೆ.

ಉದ್ದಾಮ್‌ಪುರದಲ್ಲಿ ಅಬ್ದುಲ್ಲಾ ಬಂಧನ

ಕಾಶ್ಮೀರದ ಮಾಜಿ ಪ್ರಧಾನಿ ಷೇಕ್ ಅಬ್ದುಲ್ಲಾರವರನ್ನು ಉದ್ದಾಮ್‌ಪುರವೆಂಬಲ್ಲಿರುವ ಒಂದು ಅರಮನೆಯಲ್ಲಿ ಬಂಧನದಲ್ಲಿಡಲಾಗಿರುವುದಾಗಿ ಹೇಳಲಾಗಿದೆ.

ಸತ್ಕಾರಕೂಟ

ಮೈಸೂರು ೧೧

ರಾಜಧಾನಿಯಲ್ಲಿ ನಡೆದ ಫಲಪುಷ್ಪ ಪ್ರದರ್ಶನ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ನಿನ್ನೆ ಸಂಜೆ ಮೃಗಾಲಯದಲ್ಲಿ ಒಂದು ಸತ್ಕಾರಕೂಟವನ್ನ ಏರ್ಪಡಿಸಿದ್ದರು

ಈ ಸಂಬಂಧದಲ್ಲಿ ಪ್ರದರ್ಶನವು ಯಶಸ್ವಿಯಾಗಲು ಸಹಕಾರ ನೀಡಿದ ತೋಟದ ಇಲಾಖಾ ಮುಖ್ಯಾಧಿಕಾರಿ ಡಾ॥ ಮರಿಗೌಡ, ಪುರಸಭಾಧಿಕಾರಿ ಮತ್ತು ಇತರ ಅಧಿಕಾರಿಗಳಿಗೆ ವಂದನೆಯನ್ನು ಅವರು ಅರ್ಪಿಸಿದರು.

ಸುಂದರ ನಗರವಾದ ಮೈಸೂರಿನಲ್ಲಿ ಹೆಚ್ಚು ಹೆಚ್ಚು ತೋಟಗಳನ್ನು ಬೆಳೆಸಬೇಕೆಂದೂ, ಅದಕ್ಕೆ ತೋಟದ ಇಲಾಖೆ ಮತ್ತು ಮೈಸೂರು ಶಾಖೆಯವರು ಎಲ್ಲ ಸಹಾಯವನ್ನೂ ಜನರಿಗೆ ನೀಡುವರೆಂದೂ ಅವರು ಭರವಸೆ ಇತ್ತರು.

ಪುಸ್ತಕ ಭಂಡಾರಕ್ಕೆ ಸಚಿವರ ಭೇಟಿ

ಮೈಸೂರು ೨೧

ವಿದ್ಯಾಸಚಿವ ಶ್ರೀ ಎ.ಜಿ. ರಾಮಚಂದ್ರರಾಯರು ಮೊನ್ನೆಬೆಳಗ್ಗೆ ರಾಜಧಾನಿಯ ಸಾರ್ವಜನಿಕ ಪುಸ್ತಕಭಂಡಾರಕ್ಕೆ ಭೇಟಿ ಇತ್ತಿದ್ದರು ಅವರನ್ನ ಸಮಿತಿಯ ಅಧ್ಯಕ್ಷರಾದ ಶ್ರೀ ಹೆಚ್ ಸುಬ್ಬರಾವ್ ಮತ್ತು ಕಾರ್ಯದರ್ಶಿ ಶ್ರೀ ಎ‌ನ್. ಶ್ರೀನಿವಾಸಮೂರ್ತಿಯವರು ಸ್ವಾಗತಿಸಿ, ಪುಸ್ತಕ ಭಂಡಾರದ ಅಭಿವೃದ್ಧಿಗೆ ಹೆಚ್ಚು ಹಣ ಸಹಾಯಮಾಡಬೇಕೆಂದು ಮನವಿಮಾಡಿದರು.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೧

ಭಾರತದ ಸ್ವಾತಂತ್ರ್ಯ ದಿನಾಚರಣೆಯ ಪ್ರಯುಕ್ತ, ಇದೇಮಾಹೆ ೧೫ನೇ ತಾರೀಖು ಬೆಳಗ್ಗೆ ೯ ಗಂಟೆಗೆ ಟೌನ್‌ಹಾಲ್ ಮೈದಾನದ ಆವರಣದಲ್ಲಿ ಧ್ವಜಾರೋಹಣ ಸಮಾರಂಭವನ್ನು ಏರ್ಪಡಿಸಲಾಗಿದೆಯೆಂದೂ, ಪುರಜನರೆಲ್ಲರೂ ಸಮಾರಂಭದಲ್ಲಿ ಭಾಗವಹಿಸಬೇಕೆಂದೂ ಪುರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಪ್ರಾರ್ಥಿಸಿರುತ್ತಾರೆ.

ಗುಂಟೂರು—ವಿಜಯವಾಡ ಆಂಧ್ರಪ್ರಾಂತ್ಯ ರಾಜಧಾನಿ ಆಗಬೇಕು

ಗುಂಟೂರಿನಲ್ಲಿ ಆಂಧ್ರ ರಾಜಧಾನಿ ಸಮಿತಿಯ ಸಭೆಯು ನಡೆದು ವಿಜಯವಾಡಾ ಅಥವಾ ಗುಂಟೂರು ಹೊಸ ಪ್ರಾಂತ್ಯದ ರಾಜಧಾನಿಯಾಗಬೇಕೆಂಬ ನಿರ್ಣಯವನ್ನು ಮಾಡಿತು. ಈ ಸಭೆಗೆ ಆಂಧ್ರಪ್ರಾಂತ್ಯದ ಸುಮಾರು ೫೦ ಮಂದಿ ಶಾಸನಸಭಾಸದಸ್ಯರು ಹಾಜರಿದ್ದರು.

ಕಾಶ್ಮೀರ ಘಟನೆ ಬಗ್ಗೆ ಪಾಕ್ ಪ್ರಧಾನಿ ವಿಷಾದ

ಪ್ರಧಾನಿ ನೆಹರೂ ಭೇಟಿಗಾಗಿ ಕಾತುರತೆ

ಪಾಕಿಸ್ಥಾನ ಪ್ರಧಾನಿ ಮಹಮ್ಮದ್ ಅಲಿಯವರು ಭಾರತ ಪ್ರಧಾನಿ ನೆಹರೂರವರಿಗೆ ಒಂದು ತಂತಿಯನ್ನು ಕಳುಹಿಸಿ ಕಾಶ್ಮೀರ ಘಟನೆ ಬಗ್ಗೆ ತಮ್ಮ ವಿಷಾದವನ್ನು ವ್ಯಕ್ತಪಡಿಸಿರುವುದಾಗಿಯೂ ಇನ್ನೂ ಒಂದು ವಾರದೊಳಗೆ ಶ್ರೀ ನೆಹರೂರವರನ್ನು ತಾವು ಭೇಟಿ ಮಾಡಲು ಇಚ್ಛಿಸುವುದಾಗಿಯೂ ತಿಳಿಸಿರುವುದಾಗಿ ಹೇಳಲಾಗಿದೆ. ಶ್ರೀ ನೆಹರೂರವರಿಂದ ಉತ್ತರ ಬಂದೊಡನೆಯೇ ಅವರು ದೆಹಲಿಗೆ ಬರಲು ಸಿದ್ಧರಾಗಿರುವುದಾಗಿ ಅವರು ತಿಳಿಸಿದ್ದಾರೆ.

ಪಾಕೀಸ್ತಾನ ಮುಸ್ಲಿಂಲೀಗಿನ ಕಾರ್ಯದರ್ಶಿಯವರು ಈ ಬಗ್ಗೆ ಒಂದು ಹೇಳಿಕೆಯನ್ನಿತ್ತು ಷೇಕ್ ಅಬ್ದುಲ್ಲಾರ ಪದಚ್ಯುತಿಯಿಂದ ಕಾಶ್ಮೀರದಲ್ಲಿ ವಿಷಮ ಪರಿಸ್ಥಿತಿ ತಲೆದೋರಿದೆಯೆಂದೂ, ಕಾಶ್ಮೀರದಲ್ಲಿರುವ ಮುಸ್ಲಿಂರಿಗೆ ಇದರಿಂದ ಉಂಟಾಗಿರುವ ವಿಪತ್ತನ್ನು ಸಂಯುಕ್ತರಾಷ್ಟ್ರ ಸಂಸ್ಥೆಯ ಗಮನಕ್ಕೆ ತಂದು ಭದ್ರತಾಸಮಿತಿಯು ಈ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವಂತೆ ಒತ್ತಾಯ ಮಾಡಬೇಕೆಂದು ಹೇಳಿದ್ದಾರೆ.

ಕರಾಚಿಯ ಕೆಲವು ಪತ್ರಿಕೆಗಳು ಮತ್ತು ವಾಣಿಜ್ಯ ಸಂಸ್ಥೆಗಳೂ ಕಾಶ್ಮೀರ ಅಧಿಪತಿಯ ಈ ಕಾರ್ಯವನ್ನು ವಿರೋಧಿಸಿ ಹರತಾಳವನ್ನು ನಡೆಸಬೇಕೆಂದು ಸೂಚಿಸಿವೆ.

ಗ್ರಾಮ ಪಂಚಾಯಿತಿಗಳ ಸ್ಥಾಪನೆ

ಒಂದು ಸಾವಿರ ಜನಸಂಖ್ಯೆಯಿರುವ ಗ್ರಾಮಗಳಲ್ಲಿ ಪಂಚಾಯಿತಿಗಳನ್ನು ಸ್ಥಾಪಿಸಬೇಕೆಂದು ಮದ್ರಾಸ್ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಇಲ್ಲಿಯವರೆಗೆ ೫೦೦ ಜನಸಂಖ್ಯೆಯಿರುವ ಗ್ರಾಮಗಳಲ್ಲಿ ಪಂಚಾಯಿತಿಗಳನ್ನು ಸ್ಥಾಪಿಸಲು ಅವಕಾಶವಿತ್ತು.

ನೆಹರೂ-ಕೊಯಿರಾಲಾ ಭೇಟಿ

ನೇಪಾಳದಲ್ಲಿ ಇತ್ತೀಚೆಗೆ ಉಂಟಾಗಿರುವ ಆಡಳಿತ ಬಿಕ್ಕಟ್ಟಿನ ಬಗ್ಗೆ ಮಾತುಕತೆ ನಡೆಸಲು ಪ್ರಧಾನಿ ನೆಹರೂರವರು ನೇಪಾಳ ಕಾಂಗ್ರೆಸ್ ನಾಯಕ ಶ್ರೀ ಬಿ. ಪಿ. ಕೊಯಿರಾಲಾರವರಿಗೆ ಒಂದು ಪತ್ರ ಬರೆದು ದೆಹಲಿಯಲ್ಲಿ ಇದೇ ೧೭ನೇ ತಾರೀಖು ಭೇಟಿಮಾಡುವಂತೆ ಕೋರಿರುವುದಾಗಿ ತಿಳಿಬರುತ್ತದೆ

ಬೀಹಾರಿನಲ್ಲಿ ಪ್ರವಾಹ ಹಾವಳಿ

ಕಳೆದ ಎರಡು ಮೂರುದಿನಗಳಿಂದ ಬೀಹಾರ್ ಪ್ರಾಂತ್ಯದ ಕೆಲವು ನದಿಗಳಲ್ಲಿ ಪ್ರವಾಹವು ಕಡಮೆಯಾಗಿದ್ದು ಈಗ ಪುನಃ ಪ್ರಾರಂಭವಾಗಿರುವುದಾಗಿ ತಿಳಿಯಬರುತ್ತದೆ.

ಪಶ್ಚಿಮ ಬಂಗಾಳದಲ್ಲಿ ಪ್ರವಾಹದ ಹಾವಳಿಯಿಂದ ಸುಮಾರು ಒಂದು ಲಕ್ಷ ಜನರು ತೊಂದರೆಗೀಡಾಗಿದ್ದಾರೆ.

ಪಂಚವಾರ್ಷಿಕ ಯೋಜನೆಯಲ್ಲಿ ಬದಲಾವಣೆ

ಈಗ ನಡೆದಿರುವ ಎರಡು ವರ್ಷಗಳ ಕೆಲಸದ ಅನುಭವದಿಂದ ಪಂಚವಾರ್ಷಿಕ ಯೋಜನೆಯಲ್ಲಿ ಬದಲಾವಣೆಗಳನ್ನು ಮಾಡುವ ಆವಶ್ಯಕತೆಯ ಬಗ್ಗೆ ಕೇಂದ್ರ ಸರ್ಕಾರವು ಎಲ್ಲಾ ಪ್ರಾಂತ್ಯ ಸರ್ಕಾರಗಳ ಸಲಹೆಯನ್ನು ಕೇಳುವುದಾಗಿ ತಿಳಿಯಬರುತ್ತದೆ.

ನೇಪಾಳ ದೊರೆ ದೆಹಲಿಯಲ್ಲಿ

ಆರೋಗ್ಯ ಪರೀಕ್ಷಾರ್ಥವಾಗಿ ನೇಪಾಳ ದೊರೆ ರಾಜಾ ತ್ರಿಭುವನರವರು ದೆಹಲಿಗೆ ಆಗಮಿಸಿದ್ದಾರೆ.

ಜಹಗೀರಿಗಳ ರದ್ದು

ಈಗ ಬೊಂಬಾಯಿ ಪ್ರಾಂತ್ಯದೊಳಗೆ ಲೀನವಾಗಿರುವ ಹಿಂದಿನ ರಾಜರ ಸಂಸ್ಥಾನಗಳಿಗೆ ಸೇರಿದ್ದ ಜಹಗೀರಿಗಳನ್ನೆಲ್ಲಾ ರದ್ದುಗೊಳಿಸಲು ಬೊಂಬಾಯಿ ಸರ್ಕಾರವು ನಿರ್ಧರಿಸಿದೆ.

ಮೀನುಸಂಗ್ರಹಣ ಉದ್ಯೋಗ ಹತೋಟಿ

ಮದ್ರಾಸ್ ಪ್ರಾಂತ್ಯದಲ್ಲಿ ಮೀನು ಸಂಗ್ರಹಣ ಉದ್ಯೋಗ ಹತೋಟಿಗಾಗಿ ಒಂದು ಶಾಸನವನ್ನು ಜಾರಿಗೆ ತರಲಾಗುವುದೆಂದು ತಿಳಿಯಬರುತ್ತದೆ.

ಕುಷ್ಠರೋಗ ಆಸ್ಪತ್ರೆ ಸ್ಥಾಪನೆ

ಮದ್ರಾಸ್ ಪ್ರಾಂತ್ಯದ ತಿರುವಣಿಯಲ್ಲಿ ಒಂದು ಕುಷ್ಠರೋಗ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರವನ್ನು ಸ್ಥಾಪಿಸಲಾಗುವುದೆಂದು ತಿಳಿಯಬರುತ್ತದೆ.

ಹೈದರಾಬಾದಿನಲ್ಲಿ ೯೦ ಜನರ ದಸ್ತಗಿರಿ

೧೪೪ನೇ ವಿಧಿ ಉಲ್ಲಂಘಿಸಿದ್ದುದಕ್ಕಾಗಿ

ಹೈದರಾಬಾದ್ ನಗರದಲ್ಲಿ ೧೪೪ ನೇ ವಿಧಿಯನ್ನು ಜಾರಿಮಾಡಿ ಮೆರವಣಿಗೆ, ಸಭೆ ಮುಂತಾದುವನ್ನೂ, ೫ಕ್ಕಿಂತ ಹೆಚ್ಚಾಗಿ ಜನರು ಒಂದೆಡೆ ಸೇರುವುದನ್ನೂ ಪ್ರತಿಬಂಧಿಸಿದ್ದುದನ್ನು ನಿನ್ನೆಯದಿನ ಮುರಿದರೆಂಬ ಆಪಾದನೆಮೇಲೆ ೯೦ ಜನರನ್ನು ದಸ್ತಗಿರಿ ಮಾಡಿರುವುದಾಗಿ ತಿಳಿಯಬರುತ್ತದೆ.

ಸರ್ಕಾರದ ಆಡಳಿತದಲ್ಲಿರುವ ಸಂಚಾರ ವ್ಯವಸ್ಥೆಯ ಮೋಟಾರು ಡ್ರೈವರುಗಳು ಕಂಡಕ್ಟರುಗಳು ಬೋನಸ್ ಮುಂತಾದ ಬಗ್ಗೆ ಮಾಡಿದ್ದ ಬೇಡಿಕೆಗಳನ್ನು ಸರ್ಕಾರದವರು ತಿರಸ್ಕರಿಸಿದುದರ ಪರಿಣಾಮವಾಗಿ ಮುಷ್ಕರವು ನಡೆಯಿತು. ನಗರದಲ್ಲಿ ಸಂಚಾರ ವ್ಯವಸ್ಥೆಗೆ ವಿಶೇಷ ಅಡಚಣೆಯುಂಟಾಗಿ ಜನರಿಗೆಲ್ಲಾ ಹೆಚ್ಚು ತೊಂದರೆಯಾಗಿರುವುದಾಗಿ ಗೊತ್ತಾಗಿದೆ.

ಭಾರತದ ಬಗ್ಗೆ ರಷ್ಯದ ಪ್ರಶಂಸೆ

ಭಾರತವು ಶಾಂತಿಪ್ರಿಯ ರಾಷ್ಟ್ರ. ಕೊರಿಯಾದಲ್ಲಿ ಶಾಂತಿ ಸ್ಥಾಪಿಸಬೇಕೆಂದು ಬಯಸಿದ ರಾಷ್ಟ್ರಗಳಿಗೆ ಭಾರತ ಮಹದುಪಕಾರ ಮಾಡಿದೆ. ಭಾರತದೊಡನೆ ರಷ್ಯಾದ ಸಂಬಂಧ ಹೆಚ್ಚುತ್ತಿದೆ. ಉಭಯ ರಾಷ್ಟ್ರಗಳ ನಡುವೆ ಸಾಂಸ್ಕೃತಿಕ ಮತ್ತು ಆರ್ಥಿಕ ಸಂಪರ್ಕ ಪ್ರಗತಿಯಾಗುತ್ತಿದೆ ಎಂದು ರಷ್ಯದ ಪ್ರಧಾನಿ ಮಾಲೆಂಕೋವ್‌ರವರು ಸುಪ್ರೀಂ ಸೋವಿಯಟ್‌ನಲ್ಲಿ ತಿಳಿಸಿದ್ದಾರೆ.

ಕಾಶ್ಮೀರ ಅಧಿಪತಿಯು ಕಾರ್ಯ ಉತ್ತಮವಾದುದು

ಕಾಶ್ಮೀರದ ಈಗಿನ ರಾಜಕೀಯ ವಾತಾವರಣದಲ್ಲಿ ಅಲ್ಲಿಯ ಸಾದರ್-ಇ-ರಿಯಾಸತ್‌ರವರು ಮಾಡಿರುವುದು ಉತ್ತಮವಾದುದೆಂದು ಪ್ರಜಾಸೋಷಲಿಸ್ಟ್ ಪಕ್ಷದ ನಾಯಕ ಆಚಾರ್ಯ ಕೃಪಲಾನಿಯವರು ಹೇಳಿದ್ದಾರೆ.

ಕರ್ಣಾಟಕ ವಾರ ಸಪ್ತಾಹ

ಆಗಸ್ಟ್ ೯ ರಿಂದ ೧೫ ನೇ ತಾರೀಖಿನವರೆಗೆ "ಕರ್ಣಾಟಕ ವಾರ"ವನ್ನು ಆಚರಿಸಬೇಕೆಂದೂ, ಆ ಸಮಯದಲ್ಲಿ ಶಾಂತಿ ರೀತಿಯಲ್ಲಿ ಮೆರವಣಿಗೆ ಮತ್ತು ಸಭೆಗಳನ್ನು ನಡೆಸಬೇಕೆಂದು ಹುಬ್ಬಳ್ಳಿಯಲ್ಲಿ ಸೇರಿದ ಅಖಂಡ ಕರ್ಣಾಟಕ ರಾಜ್ಯ ನಿರ್ಮಾಣ ಸಮಿತಿಯು ಸಭೆಯು ನಿರ್ಧರಿಸಿದ್ದಾರೆ.

ಪ್ರಕಾಶಕರು:— ಜಿ. ಎಲ್. ಸ್ವಾಮಿ
ಮುದ್ರಕರು:— ಹಿ. ಶಾ. ಸುಬ್ಬರಾವ್
ಮೋಹನ ಮುದ್ರಣಾಲಯ ಮೈಸೂರು.

ನೂತನ ಅಡ್ವೋಕೇಟ್ ಜನರಲ್

ಬೆಂಗಳೂರು ೧೧

ಮೈಸೂರು ಸರ್ಕಾರದ ನೂತನ ಅಡ್ವೋಕೇಟ್ ಜನರಲ್ ಆಗಿ ನೇಮಿತರಾಗಿರುವ ಶ್ರೀ ಸಿಟ್ಟೂರ್ ಶ್ರೀನಿವಾಸರಾಯರು ನಿನ್ನೆಯದಿನ ಶ್ರೀ ಎ. ಆರ್. ಸೋಮನಾಥ ಅಯ್ಯರ್‌ರವರಿಂದ ಅಧಿಕಾರವನ್ನು ವಹಿಸಿಕೊಂಡರು. ಇವರನ್ನು ಈ ಸ್ಥಾನದಲ್ಲಿ ಮೂರುವರ್ಷಕಾಲ ನೇಮಿಸಲಾಗಿದೆ.

ಶಿವಮೊಗ್ಗದಲ್ಲಿ ಸರ್ಕಾರಿ ಪ್ಲೀಡರಾಗಿರುವ ಶ್ರೀ ಜಿ. ಚಿನ್ನಪ್ಪನವರನ್ನು ಅಸಿಸ್ಟೆಂಟ್ ಅಡ್ವೋಕೇಟ್ ಜನರಲ್ ಆಗಿ ನೇಮಿಸಲಾಗಿದೆ.

ಕಾಶ್ಮೀರ ಪರಿಸ್ಥಿತಿ ಶಾಂತವಾಗಿದೆ

ಕಾಶ್ಮೀರದಲ್ಲಿ ಪರಿಸ್ಥಿತಿಯು ಶಾಂತವಾಗಿರುವುದಾಗಿ ತಿಳಿಯಬರುತ್ತದೆ. ಹೊಸ ಸರ್ಕಾರಕ್ಕೆ ತಮ್ಮ ಪೂರ್ಣ ಬೆಂಬಲವನ್ನು ನೀಡುವುದಾಗಿ ಸಾವಿರಾರುಜನರೂ ವಿವಿಧ ಪಕ್ಷದವರೂ ನೂತನಪ್ರಧಾನಿ ಗುಲಾಂ ಮಹಮದ್‌ರವರ ನಿವಾಸಕ್ಕೆ ಬಂದು ಭರವಸೆಯನ್ನಿತ್ತು ಹೋಗುತ್ತಿದ್ದಾರೆಂದು ಹೇಳಲಾಗಿದೆ.

ಕಾಶ್ಮೀರಕ್ಕೆ ಹೋಗಲು ರಹದಾರಿ

ಕಾಶ್ಮೀರ ಪ್ರವೇಶಕ್ಕೆ ರಹದಾರಿಯನ್ನು ಕೊಡುವ ಕ್ರಮವನ್ನು ಸ್ವಲ್ಪ ಬಿಗಿಪಡಿಸಿದುದಾಗಿ ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೦—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೫—೧೪	೨೮—
ಹರಳು	—	—
ಎಳ್ಳು	೫೧—	೭೫—
ಹೊಂಗೆಬೀಜ	—	—
ಹುರುಳಿ	೪೮—೪	೪೮—೬
ಹೆಸರು	೬೬—೩	೭೩—೧೦
ಅವರೆ	—	—
ಉದ್ದು	೬೬—೧೩	೬೭—೧೪
ಹುಚ್ಚೆಳ್ಳು	೬೧—	೭೩—೨
ಅಲಸಂದೆ	೬೯—	೭೧—
ಮೆಣಸಿನಕಾಯಿ	—	—
ಹುಣಸೇಹಣ್ಣು	—	—
ಸೀಗೆಕಾಯಿ	—	—
ಬೆಲ್ಲ	—	
ತೆಂಗಿನಕಾಯಿ	೧೫೩	೨೯೭

ಪಾರ್ಲಿಮೆಂಟಿನಲ್ಲಿ ಆಂಧ್ರಪ್ರಾಂತ್ಯ ಮಸೂದೆ

ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ಆಂಧ್ರಪ್ರಾಂತ್ಯ ರಚನೆಗೆ ಸಂಬಂಧಪಟ್ಟ ಮಸೂದೆಯನ್ನು ಮಂಡಿಸಲಾಯಿತು.

ಆಂಧ್ರಪ್ರಾಂತ್ಯಕ್ಕೆ ಸರಿಯಾದ ಕಟ್ಟಡ ವ್ಯವಸ್ಥೆ ಇಲ್ಲದುದರಿಂದ ಮದ್ರಾಸ ಪ್ರಾಂತ್ಯವು ಅದಕ್ಕೆ ೨೫೦.೪ ಲಕ್ಷ ರೂ. ಪರಿಹಾರ ಕೊಡಬೇಕೆಂಬ ಕಲಮನ್ನು ಮದ್ರಾಸ್ ಶಾಸನಸಭೆಯು ವಿರೋಧಿಸಿದ್ದರೂ ಅದನ್ನು ಮಸೂದೆಯಲ್ಲಿ ಉಳಿಸಲಾಗಿದೆ.

ಆಸ್ತಿಪಾಸ್ತಿ ಹಂಚಿಕೆ ಬಗ್ಗೆ ಪ್ರವೀಣರ ಸಮಿತಿ ನೇಮಿಸಿ ಅದರಮೇಲೆ ಅದನ್ನು ಹಂಚಬೇಕೆಂಬ ಮದ್ರಾಸ್ ಶಾಸನಸಭೆಯ ಸಲಹೆಯನ್ನು ಒಪ್ಪಿಕೊಂಡಿಲ್ಲ.

ಆಂಧ್ರ ಮತ್ತು ನೆರೆಹೊರೆಯ ಪ್ರಾಂತ್ಯಗಳ ಬಗ್ಗೆ ಉಂಟಾಗಿರುವ ಗಡಿ ವಿವಾದಗಳಿಗಾಗಿ ಗಡಿ ಕಮೀಷನ್‌ಗೆ ನೇಮಿಸಬೇಕೆಂಬ ಶಿಫಾರಸನ್ನೂ ಮಸೂದೆಯಲ್ಲಿ ಸೇರಿಸಿಲ್ಲ.

ಆಂಧ್ರ ಶಾಸನಸಭೆಯು ನಿರ್ಣಯ ಮಾಡಿ ರಾಷ್ಟ್ರಪತಿಯು ನಿಗದಿ ಮಾಡುವ ತಾರೀಖು ಅಥವ ೧೯೫೬ ರ ಜನವರಿಯೊಳಗಾಗಿ ಒಂದು ಪ್ರತ್ಯೇಕ ಹೈಕೋರ್ಟನ್ನು ಸ್ಥಾಪನೆಯಾಗಬೇಕೆಂದು ನಮೂದಿಸಲಾಗಿದೆ.

ಆಸ್ತಿ ಪಾಸ್ತಿ ಮತ್ತು ಲೇಣಿದೇಣಿಗಳ ಹಂಚಿಕೆ ಬಗ್ಗೆ ಉಂಟಾಗುವ ಯಾವುದೇ ವಿವಾದವನ್ನು ಪರಿಹರಿಸಲು ರಾಷ್ಟ್ರಪತಿಯವರಿಗೆ ವಿಶೇಷ ಅಧಿಕಾರವನ್ನು ಕೊಡುವ ಹೊಸ ಕಲಮನ್ನು ಮಸೂದೆಯಲ್ಲಿ ಸೇರಿಸಲಾಗಿದೆ.

ಕರ್ನೂಲು ತಾತ್ಕಾಲಿಕ ರಾಜಧಾನಿಯಾಗಿರಬೇಕೆಂಬ ಬಗ್ಗೆ ಯಾವ ಪ್ರಸ್ತಾಪವನ್ನೂ ಮಸೂದೆಯಲ್ಲಿ ಮಾಡಿಲ್ಲ.

ತುಂಗಭದ್ರಾ ಯೋಜನೆಗೆ ಬಗ್ಗೆ ಒಪ್ಪಂದಕ್ಕೆ ಬರಲು ಎರಡುವರ್ಷಕಾಲ ಅವಧಿ ಕೊಡಲಾಗಿದೆ. ಆ ಅವಧಿಯೊಳಗಾಗಿ ಮೈಸೂರು ಮತ್ತು ಆಂಧ್ರಪ್ರಾಂತ್ಯಗಳಿಗೆ ಒಪ್ಪಂದ ಆಗದಿದ್ದಲ್ಲಿ ರಾಷ್ಟ್ರಪತಿಯವರೇ ನಿರ್ಧರಿಸಲು ಅಧಿಕಾರ ಕೊಡಲಾಗಿದೆ.

● ಭಾರತದಲ್ಲಿ ಕಳೆದ ಮಾಹೆಯಲ್ಲಿ ಗಿರಣಿಗಳು ಅತ್ಯಧಿಕ ಪ್ರಮಾಣದಲ್ಲಿ ಒಟ್ಟು ನಲವತ್ತಮೂರುವರೆ ಕೋಟಿ ಗಜ ಬಟ್ಟೆಯನ್ನು ತಯಾರಿಸಿರುವುದಾಗಿ ವರದಿಯಾಗಿದೆ.

ಪತ್ರವ್ಯವಹಾರ:—

ಭಕ್ತಾದಿಗಳಿಗೆ ತೊಂದರೆ

ಇದೇ ೭ ನೇ ತಾರೀಖು ಆಡಿಶುಕ್ರವಾರ ಪ್ರಯುಕ್ತ ಸಾವಿರಾರು ಭಕ್ತಾದಿಗಳು ಹೆಂಗಸರು ಮತ್ತು ಮಕ್ಕಳೊಡನೆ ಶ್ರೀ ಚಾಮುಂಡೇಶ್ವರಿ ಅಮ್ಮನವರ ದರ್ಶನಕ್ಕಾಗಿ ಬೆಟ್ಟದಮೇಲೆ ಬೆಳಗ್ಗೆ ೮ ರಿಂದ ೧೨ ಗಂಟೆವರೆಗೆ ಬಿಸಿಲಿನಲ್ಲಿ ಕಾದು ದರ್ಶನ ಸಿಕ್ಕದೆ ಬೇಸರಗೊಂಡು ಹಿಂತಿರುಗಬೇಕಾಯಿತು. ರಾಜಮನೆತನದವರು ಬರುತ್ತಾರೆಂದು ೮ ಗಂಟೆಯಿಂದ ಮುಚ್ಚಲಾಗಿದ್ದ ಮಹಾದ್ವಾರವನ್ನು ೧೨ ಗಂಟೆಯಾದರೂ ತೆಗೆಯಲಿಲ್ಲ. ಅದೂ ಅಲ್ಲದೆ ಅವರು ದರ್ಶನ ಪಡೆದು ಹೊರಟುಹೋದ ಮೇಲೂ ಸಹ ಅರ್ಧ ಗಂಟೆವರೆವಿಗೆ ಬಾಗಿಲನ್ನು ತೆರೆಯಲಿಲ್ಲ. ಈರೀತಿ ಸಾವಿರಾರು ಜನ ಭಕ್ತಾದಿಗಳಿಗೆ ದೇವರ ದರ್ಶನಕ್ಕೆ ಬಂದಾಗ ತೊಂದರೆ ಕೊಡುವುದನ್ನು ಕೂಡಲೇ ನಿಲ್ಲಿಸಿ ಸೂಕ್ತ ವ್ಯವಸ್ಥೆ ಮಾಡುವರೆಂದು ನಂಬುತ್ತೇವೆ— ನೊಂದ ಭಕ್ತಾದಿಗಳು.

ಹೊಸದಾಗಿ ಬಂದಿದೆ
ಹರ್‌ಕ್ಯುಲಿಸ್ ಸೈಕಲ್‌ಗಳು, ಮಕ್ಕಳ ಟ್ರೈಸಿಕಲ್‌ಗಳು ಮತ್ತು ಗಾಡಿಗಳು.
ಶಾರದ ಸೈಕಲ್ ಮತ್ತು ವಾಚ್ ಸ್ಟೋರ್ಸ್, ದೊಡ್ಡಗಡಿಯಾರ ಚೌಕ, ಮೈಸೂರು.

ಅಪೇರ
7—8—53 ರಿಂದ 2ನೇ ವಾರ
ಪ್ರತಿದಿನ ಮೂರು ಆಟಗಳು
ಇನ್‌ಸ್ಪೆಕ್ಟರ್ ತಮಿಳು
ಪಾತ್ರ:- ಬಾಲಚಂದರ್, ಟಿ. ಕೆ. ಷಣ್ಮುಗಂ, ಟಿ. ಕೆ. ಸರಸ್ವತಿ, ಅಂಜಲಿದೇವಿ

WANTED
A Printing machine in running condition—Crown or Demmy Folio
Contact:—
The SAMACHARA office,
Mothikhana Buildings, Jaganmohan Palace Road, Mysore.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೮

ಸಮಾಚಾರ

ದಿನಪತ್ರಿಕೆ
ಸಂಪುಟ ೩
ಸಂಚಿಕೆ ೨೯೩

೧೨-೮-೧೯೫೩ ನೇ ಬುಧವಾರ] ★ ಸಂಪಾದಕರು:— ಜಿ. ಎಲ್. ಸ್ವಾಮಿ

ವಿಶ್ವಸಂಸ್ಥೆ ಅಧಿಕಾರಿಗಳಿಗೆ ಕಾಶ್ಮೀರ ಸರ್ಕಾರದ ಎಚ್ಚರಿಕೆ

ಷೇಕ್ ಅಬ್ದುಲ್ಲಾರಿಂದ ಸರ್ಕಾರಿ ಪತ್ರಗಳ ಅಪಹರಣ?

ಈ ಮನೋಧೋರಣೆ ವಿಹಿತವಾದುದಲ್ಲ

[ತಾಯಿನಾಡು ಅಗ್ರಲೇಖನ]

" ಭಾರತ ರಾಜ್ಯಾಂಗದ ಮೂಲಕ ಪ್ರಜೆಗಳಿಗೂ, ಪ್ರಜಾಭಿಪ್ರಾಯವನ್ನು ಪ್ರತಿಬಿಂಬಿಸುವ ಪತ್ರಿಕೆಗಳಿಗೂ ವಾಕ್ ಸ್ವಾತಂತ್ರ್ಯ ಮತ್ತು ಪ್ರಕಟಣ ಸ್ವಾತಂತ್ರ್ಯವು ಲಭ್ಯವಾಗಿದ್ದರೂ, ಸರ್ಕಾರದ ಕೆಲವು ಅಧಿಕಾರಿಗಳಿಗೆ ಅದರ ಅರ್ಥವೇನೆಂಬುದೇ ಗೊತ್ತಿಲ್ಲ. ರಾಜಧಾನಿಯ ಒಂದು ಪತ್ರಿಕೆಯಲ್ಲಿ ಪ್ರಮಾದವಶಾತ್ ತಪ್ಪು ಸುದ್ದಿ ಪ್ರಕಟವಾದಾಗ ಅಲ್ಲಿನ ಅಧಿಕಾರ ವರ್ಗದವರೊಬ್ಬರು " ನನಗೆ ಅಧಿಕಾರವಿದೆ. ಜಬರ್ದಸ್ತಿದೆ, ಈ ಪತ್ರಿಕೆಗಳನ್ನು ಮಟ್ಟಹಾಕಬಲ್ಲೆ" ಎಂಬ ಮನೋಧೋರಣೆಯನ್ನು ತಾಳಿ ತಮಗೆ ಅಂತಹ ಯಾವ ಅಧಿಕಾರವೂ ಇಲ್ಲದಿದ್ದರೂ ಆ ಪತ್ರಿಕೆಯ ಸಂಪಾದಕರಿಗೂ, ಪ್ರಕಟಣಕಾರರಿಗೂ ನೋಟೀಸ್‌ಗಳನ್ನು ಜಾರಿ ಮಾಡಿ ' ನಿಮ್ಮಮೇಲೆ ಏತಕ್ಕೆ ಕ್ರಮ ಕೈಗೊಳ್ಳಕೂಡದು ' ಎಂದರು. ಪ್ರಾಯಶಃ ಈ ಅಧಿಕಾರಿಗೆ ಕಾನೂನು ಕಟ್ಟಳೆಗಳೇನೆಂಬ ಅರಿವೇ ಇಲ್ಲ. ಹಿಂದಿನ ನಿರಂಕುಶಾಧಿಕಾರವು ಮೈಸೂರಿನಲ್ಲಿ ಈಗಲೂ ನಡೆಯುತ್ತಿರಬಹುದೋ ಏನೋ ಎಂಬ ಭ್ರಮೆಯಿಂದ ಆ ಅಧಿಕಾರಿಗಳು ಆ ಪತ್ರಿಕೆಗೆ ನೋಟೀಸ್ ಜಾರಿ ಮಾಡಿರಬಹುದು. ಪ್ರಾಯಶಃ ೧೯೪೭ ರಿಂದ ಈಚೆಗೆ ಮೈಸೂರು ವೃತ್ತ ಪತ್ರಿಕೆಗಳ ಮೇಲಿನ ಶಾಸನವು ಯಾವ ರೀತಿ ಮಾರ್ಪಾಟಾಗಿದೆ, ಈಗ ಯಾವ ಕಾನೂನಿದೆ ಎಂಬ ತಿಳುವಳಿಕೆಯೇ ಈ ಅಧಿಕಾರಿಗಳಿಗಿಲ್ಲವೆಂದು ಕಾಣುತ್ತದೆ.... ಆರೀತಿ ಗೊತ್ತಿಲ್ಲದೇ ಇದ್ದರೆ ಆ ಅಧಿಕಾರಿಗಳನ್ನು ಲಿಖಿತಮೂಲಕವಾದ ಪರೀಕ್ಷೆಗೂ, ವೈವಾಪೋಸಿ ಪರೀಕ್ಷೆಗೂ ಗುರಿ ಮಾಡಿ ಆಮೇಲೆ ಅವರ ಪ್ರಮೋಷನ್ ನಿರ್ಧರಿಸಬೇಕಾಗಿದೆ. ವೃತ್ತಪತ್ರಿಕೆಗಳಲ್ಲಿ ತಪ್ಪು ಸುದ್ದಿಗಳು ಬಂದರೆ ಸಂಬಂಧ ಪಟ್ಟವರು ಆ ಪತ್ರಿಕಾ ಸಂಪಾದಕರಿಗೆ ಬರೆದು ತಿದ್ದುಪಡಿ ಹಾಕಿಸುವುದು ಲೋಕಾರೂಢಿ. ಯಾವುದೋ ಅಪಘಾತದಲ್ಲಿ ಯಾರೋ ಮಡಿದರೆಂದೂ, ಆ ಮೇಲೆ ಅಂತಹವರು ಮರಣ ಹೊಂದಿಲ್ಲವೆಂದೂ ಗೊತ್ತಾದರೆ ಇದರಲ್ಲಿ ಅಧಿಕಾರ ವರ್ಗದವರ ಆಸಕ್ತಿಯೇನೋ ನಮಗೆ ಗೊತ್ತಾಗಿಲ್ಲ.... ಇದಕ್ಕಾಗಿ ಡೆಪ್ಯುಟಿ ಕಮೀಷನರ್ ಕಛೇರಿಯಿಂದ ನೋಟೀಸ್‌ಗಳು ಹೋಗಿರುವುದು ಯಾವ ಕಾನೂನಿನ ಆಧಾರದ ಮೇಲೆಂಬುದು ನಮಗಿನ್ನೂ ಗೊತ್ತಾಗಿಲ್ಲ. ಇವನ್ನು ಸಕಾಲದಲ್ಲಿಯೇ ಅರಿತು, ಆ ನೋಟೀಸ್‌ಗಳನ್ನು ವಾಪಸು ತೆಗೆದುಕೊಂಡಿರುವುದು ವಿಹಿತವಾಗಿಯೇ ಇದೆ .... ಪ್ರಜಾಪ್ರಭುತ್ವ ಯುಗದಲ್ಲಿ ಇಂತಹದೆಲ್ಲಾ ನಡೆಯುವುದೆಂದರೆ ಅದಕ್ಕೆ ನಾವು ಏನನ್ನ ಬೇಕೊ ಗೊತ್ತಿಲ್ಲ. ತಮಗೆ ಯಾವ ಮಿತಿಯಲ್ಲಿ ಕಾನೂನಿನ ಅಧಿಕಾರಗಳಿವೆ ಅವನ್ನು ಯಾವ ಪರಿಸ್ಥಿತಿಗಳಲ್ಲಿ ಚಲಾಯಿಸಬೇಕೆಂಬುವನ್ನು ಅಧಿಕಾರ ವರ್ಗದವರು ಮೊದಲು ತಿಳಿಯ ಬೇಕು. .... ಪತ್ರಿಕೆಗಳ ವಿಷಯದಲ್ಲಿ ಅಧಿಕಾರ ವರ್ಗದವರ ಮನೋಧೋರಣೆ ಎಷ್ಟು ಬೇಗ ಬದಲಾಯಿಸಿದರೆ ಅಷ್ಟೂ ಉತ್ತಮ."

[ಕಳೆದ ಮಾಹೆ ೨೭ನೇ ತಾರೀಖು ನಮ್ಮ ಪತ್ರಿಕೆಯಲ್ಲಿ ರಾಜಧಾನಿಯ ಬೆಂಕಿ ಕಡ್ಡಿ ಕಾರ್ಖಾನೆಯ ಆಸ್ಫೋಟನೆ ಸಂಬಂಧದಲ್ಲಿ ಶ್ರೀ ಶಿವರಾಮು ಎಂಬುವರು ಮೃತಪಟ್ಟರೆಂದು ತಪ್ಪು ಪ್ರಕಟಣೆ ಆಗಿ, ಮಾರನೇ ದಿನ ಅದರ ಬಗ್ಗೆ ವಿಷಾದ ವ್ಯಕ್ತಪಡಿಸಲಾಗಿತ್ತು. ಈ ವಿಷಯದಲ್ಲಿ ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರ ಕಛೇರಿಯಿಂದ ಶ್ರೀ ಪಿ. ಎಸ್. ರಾಜಶೇಖರಪ್ಪರವರ ಸಹಿಯಲ್ಲಿ ಇದೇ ೪ನೇ ತಾರೀಖು ಒಂದುಪತ್ರ ಬಂದು, ತಪ್ಪು ಸುದ್ದಿ ಪ್ರಕಟವಾಗಿರುವುದಕ್ಕೆ ಕಾರ್ಯಕ್ರಮ ಏಕೆ ತೆಗೆದುಕೊಳ್ಳಬಾರದೆಂದು ನಮೂದಿಸಲಾಗಿತ್ತು.

ಅನಂತರ ಇದೇ ೮ನೇ ತಾರೀಖು ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಸಂಪಾದಕರನ್ನು ಬರಮಾಡಿಕೊಂಡು ತಮ್ಮ ಗೈರುಹಾಜರಿಯಲ್ಲಿ ಕಛೇರಿಯ ದಿನಚರಿ ಪತ್ರವ್ಯವಹಾರದ ಅಚಾತುರ್ಯದಿಂದ ಮೇಲ್ಕಂಡ ಪತ್ರ ಬರೆಯಲಾಯಿತೆಂದೂ, ಅದಕ್ಕೆ ತಮ್ಮ ವಿಷಾದವನ್ನು ವ್ಯಕ್ತಪಡಿಸಿ, ಪತ್ರವನ್ನು ವಾಪಸು ಪಡೆಯುವುದಾಗಿ ಹೇಳಿದರು. ಅದೇದಿನ ಹಿಂದೆ ಸಹಿಹಾಕಿದ್ದವರಿಂದಲೇ ಮತ್ತೊಂದು ಪತ್ರ ಬಂದು ಹಿಂದಿನ ಪತ್ರವನ್ನು ವಾಪಸು ಪಡೆಯಲಾಗಿದೆಯೆಂದು ತಿಳಿಸಲಾಯಿತು. — ಸಂ]

ಗೋದಾವರಿ ನದಿಯಲ್ಲಿ ಪ್ರವಾಹ

ಗೋದಾವರಿ ನದಿಯಲ್ಲಿ ಇತ್ತೀಚೆಗೆ ಬಹಳ ಪ್ರವಾಹವು ಬಂದು ಸುತ್ತಮುತ್ತಲಿನ ಗ್ರಾಮಗಳು ಹೊಲಗದ್ದೆಗಳಿಗೆಲ್ಲಾ ನೀರಿನಿಂದ ತುಂಬಿದೆ.

ಭಧ್ರಾಚಲಂನಲ್ಲಿ ದೋಣಿಗಳಲ್ಲಿ ಜನರು ಓಡಾಡುತ್ತಿರುವುದಾಗಿ ಹೇಳಲಾಗಿದೆ.

ನಿರುದ್ಯೋಗ ಪರಿಹಾರಕ್ಕೆ ಸಲಹೆಗಳು

ನಿರುದ್ಯೋಗ ಸಮಸ್ಯೆಯನ್ನು ಭಾರತ ರಾಷ್ಟ್ರೀಯ ಕಾರ್ಮಿಕ ಸಂಘವು ಪರಿಶೀಲಿಸಿ ಅದರ ನಿವಾರಣೆಗಾಗಿ ಸರ್ಕಾರವು ಅನುಸರಿಸಬೇಕಾದ ಕೆಲವು ಮಾರ್ಗಗಳನ್ನು ಸೂಚಿಸಿ ನಿರ್ಣಯಮಾಡಿದೆ.

ದೇಶದಲ್ಲಿ ಗ್ರಾಮ ಮತ್ತು ಕುಟೀರ ಕೈಗಾರಿಕೆಗಳ ಸ್ಥಾಪನೆಗಾಗಿ ಸರ್ಕಾರವು ತನ್ನ ನೆರವನ್ನು ನೀಡಬೇಕು ಮತ್ತು ಇಲ್ಲಿಯೇ ದೊರೆಯುವ ಕಚ್ಚಾ ವಸ್ತುಗಳಿಂದ ಸಾಮಾನುಗಳನ್ನು ತಯಾರಿಸಲು ಪ್ರೋತ್ಸಾಹ ಕೊಡಬೇಕು ಭಾರತದಲ್ಲಿ ತಯಾರಿಸಲಾಗುವ ವಸ್ತುಗಳನ್ನು ಹೊರಗಿನಿಂದ ತರಿಸಿಕೊಳ್ಳುವುದನ್ನು ನಿಷೇಧಿಸಬೇಕು.

ಗ್ರಾಮ ಮತ್ತು ಕುಟೀರ ಕೈಗಾರಿಕಾ ವಸ್ತುಗಳಿಗೆ ತಕ್ಕ ವ್ಯಾಪಾರ ಕಲ್ಪಿಸಬೇಕು. ಸರ್ಕಾರ ಮತ್ತು ಜನರು ಸ್ವದೇಶೀ ವಸ್ತುಗಳನ್ನೇ ಕೊಳ್ಳುವಂತೆ ವ್ಯವಸ್ಥೆ ಮಾಡಬೇಕು.

ಜೀವನಕ್ಕೆ ಸಂಪಾದನೆಯನ್ನು ಕಲ್ಪಿಸಲು ಉಪಯುಕ್ತವಾಗುವಂತಹ ವಿದ್ಯಾಭ್ಯಾಸವನ್ನು ವಿಶ್ವವಿದ್ಯಾನಿಲಯ ಮತ್ತು ಶಾಲೆಗಳಲ್ಲಿ ಕೊಡುವಂತೆ ಈಗಿನ ಪದ್ಧತಿಯನ್ನು ಸುಧಾರಿಸಬೇಕು ಎಣ್ಣೆಗಳನ್ನು ತಯಾರಿಸುವುದು, ಬಟ್ಟೆನೇಯುವುದು, ಬತ್ತವನ್ನು ಅಕ್ಕಿಯನ್ನಾಗಿ ಮಾಡುವುದು ಮುಂತಾದವನ್ನು ಗ್ರಾಮ ಕೈಗಾರಿಕೆಗಳಾಗಿರುವಂತೆ ಏರ್ಪಡಿಸಿ, ಮರಗೆಲಸ, ದರ್ಜಿಕೆಲಸ, ಮಣ್ಣಿನಪಾತ್ರೆ ತಯಾರಿಕೆ ಮುಂತಾದುವನ್ನು ಯಂತ್ರ ಕೈಗಾರಿಕೆಯನ್ನಾಗಿ ಮಾಡುವುದನ್ನು ನಿಲ್ಲಿಸುವುದು.

ನಿರುದ್ಯೋಗ ಸಮಸ್ಯೆಗೆ ಸಂಬಂಧಪಟ್ಟ ಆಡಳಿತ ವ್ಯವಸ್ಥೆಗಾಗಿ ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ಪ್ರತ್ಯೇಕ ಸಚಿವರನ್ನು ನೇಮಿಸಬೇಕು—ಎಂದು ಈ ಸಮಿತಿಯು ಸಲಹೆಗಳನ್ನು ನೀಡಿದೆ.

ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವುದರಿಂದ ನಿರುದ್ಯೋಗ ಸಮಸ್ಯೆ ಪರಿಹಾರವಾಗುವುದಿಲ್ಲವೆಂದೂ, ಗಿರಣಿಗಳು ಅನಾವಶ್ಯಕ ಮುಚ್ಚುವುದನ್ನು ಸರ್ಕಾರವು ತಡೆಗಟ್ಟಬೇಕೆಂದೂ ಸಮಿತಿ ಅಭಿಪ್ರಾಯಪಟ್ಟಿದೆ.

ತಿಂಗಳಿನಲ್ಲಿ ೧೩೬ ಅಂಗುಲ ಮಳೆ

ಶಿವಮೊಗ್ಗ ಜಿಲ್ಲೆಯ ಆಗುಂಬೆಯಲ್ಲಿ ಕಳೆದ ತಿಂಗಳು ೧೩೬ ಅಂಗುಲ ಮಳೆ ಬಿದ್ದಿತೆಂದು ವರದಿಯಾಗಿದೆ.

ಆಗಸ್ಟ್ ೧೫ ಸಂಬಳ ರಜಾ ದಿನ

ಬೆಂಗಳೂರು ೧೨

ಇದೇ ಮಾಹೆ ೧೫ ನೇ ತಾರೀಖು ಆರನೇ ಸ್ವಾತಂತ್ರ್ಯ ದಿನವಾದ್ದರಿಂದ ಅಂದು ಸರ್ಕಾರದ ಎಲ್ಲಾ ಕೈಗಾರಿಕಾ ಸಂಸ್ಥೆಗಳಿಗೆ ಸಂಬಳದ ರಜಾದಿನವನ್ನಾಗಿ ಸರ್ಕಾರವು ಘೋಷಿಸಿದೆ.

ಖಾಸಗಿ ಕೈಗಾರಿಕಾ ಸಂಸ್ಥೆಗಳೂ ಇದೇ ರೀತಿ ಮಾಡಬೇಕೆಂದು ಸರ್ಕಾರವು ಕೋರಿದೆ

ವಿಶ್ವಸಂಸ್ಥೆ ಅಧಿಕಾರಿಗಳಿಗೆ ಕಾಶ್ಮೀರದ ಎಚ್ಚರಿಕೆ

ಕಾಶ್ಮೀರ ಸಂಸ್ಥಾನದಲ್ಲಿರುವ ವಿಶ್ವಸಂಸ್ಥೆಯ ವೀಕ್ಷಕರು ತಮ್ಮ ಪಹರೆ ಕಾರ್ಯದಲ್ಲಿ ನಿರತರಾಗದೆ, ಸಂಸ್ಥಾನದ ಒಳ ಆಡಳಿತ ವ್ಯವಹಾರದಲ್ಲಿ ಕೈ ಹಾಕುವುದನ್ನು ಬಿಡಬೇಕೆಂದು ನೂತನ ಕಾಶ್ಮೀರ್ ಸರ್ಕಾರದವರು ಎಚ್ಚರಿಕೆ ಇತ್ತಿದ್ದಾರೆ. ಹಾಗಿಲ್ಲದಿದ್ದಲ್ಲಿ ಅವರಿಗೆ ಕೊಟ್ಟಿರುವ ರಾಯಭಾರಿ ವಿನಾಯಿತಿಗಳನ್ನು ತೆಗೆದು ಹಾಕಲಾಗುವುದೆಂದು ತಿಳಿಸಲಾಗಿದೆ. ಇತ್ತೀಚೆಗೆ ಅವರುಗಳು ಶ್ರೀನಗರಕ್ಕೆ ಬಂದು ಪಾಕೀಸ್ತಾನ ಪರವಾದ ಚಳುವಳಿಗಳಲ್ಲಿ ತೊಡಗಿದ್ದಾರೆಂದು ಹೇಳಲಾಗಿದೆ.

ಜರ್ಮನಿ ಕಂಪೆನಿಯ ಸಹಾಯದಿಂದ ಉಕ್ಕಿನ ಕಾರ್ಖಾನೆ

ಭಾರತದಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು ಜರ್ಮನಿಯ ಕಂಪೆನಿಯೊಂದರಿಂದ ಹಣ ಮತ್ತು ಯಂತ್ರಗಳನ್ನು ಪಡೆಯುವ ಬಗ್ಗೆ ಸಂಧಾನ ನಡೆಯುತ್ತಿರುವುದಾಗಿ ಕೇಂದ್ರ ಉತ್ಪನ್ನ ಖಾತಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ನಿರುದ್ಯೋಗ ಸಮಸ್ಯೆಗೆ ಪ್ರಾಂತ್ಯಗಳ ಗಮನ ಕಡಿಮೆ

ನಿರುದ್ಯೋಗ ಸಮಸ್ಯೆಯನ್ನು ಪ್ರಾಂತ್ಯ ಸರ್ಕಾರಗಳು ಅಷ್ಟು ಗಮನಾರ್ಹ ರೀತಿಯಲ್ಲಿ ಪರಿಶೀಲಿಸುತ್ತಿಲ್ಲವೆಂದು ಭಾರತ ರಾಷ್ಟ್ರೀಯ ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಹರಿಹರನಾಥಶಾಸ್ತ್ರಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಕಾಶ್ಮೀರದಲ್ಲಿ ನೂತನ ಸುಧಾರಣೆಗಳು

ಕಾಶ್ಮೀರದಲ್ಲಿ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಯನ್ನು ಉತ್ತಮಗೊಳಿಸಲು ನೂತನ ಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರು ಆಡಳಿತ ಯಂತ್ರದಲ್ಲಿ ಪ್ರಗತಿಪರವಾದ ಬದಲಾವಣೆಗಳನ್ನು ಮಾಡಲಿರುವರೆಂದು ತಿಳಿಯಬರುತ್ತದೆ.

ಅಧಿಕಾರಿಗಳಲ್ಲಿ ಲಂಚಕೋರತನ, ಅಧಿಕಾರ ದುರುಪಯೋಗ ಮತ್ತು ಸರ್ಕಾರಿ ಕೆಲಸಗಳಲ್ಲಿ ಅಸಡ್ಡೆ, ಸ್ವಜನ ಪಕ್ಷಪಾತ ಮುಂತಾದ ಬಗ್ಗೆ ಇರುವ ದೂರುಗಳನ್ನೆಲ್ಲಾ ಪರಿಶೀಲಿಸಿ ಉಗ್ರಕಾರ್ಯಕ್ರಮವನ್ನು ತೆಗೆದುಕೊಳ್ಳಲು ಸದ್ಯದಲ್ಲೇ ಒಂದು ಲಂಚನಿರೋಧ ಮಂಡಲಿಯನ್ನು ನೇಮಿಸಲಾಗುವುದೆಂದು ಹೇಳಲಾಗಿದೆ.

ಸರ್ಕಾರದ ಅನೇಕ ಇಲಾಖೆಗಳಲ್ಲಿ ನಡೆದಿರುವ ಹಣದ ದುರುಪಯೋಗದ ಬಗ್ಗೆ ಇರುವ ದೂರುಗಳನ್ನು ಸಹ ಈ ಮಂಡಲಿಯು ವಿಚಾರಿಸುತ್ತದೆ.

ಮ್ಯಾಜಿಸ್ಟ್ರೇಟ್ ಕೋರ್ಟುಗಳಿಗೆ ಪಬ್ಲಿಕ್ ಪ್ರಾಸಿಕ್ಯೂಟರ್ ನೇಮಕ

ಬೆಂಗಳೂರು ೧೨

ಸಂಸ್ಥಾನದಲ್ಲಿರುವ ಪ್ರಥಮದರ್ಜೆಯ ಮ್ಯಾಜಿಸ್ಟ್ರೇಟ್ ಕೋರ್ಟುಗಳಲ್ಲಿ ಪ್ರಾಸಿಕ್ಯೂಷನ್ ಮೊಕದ್ದಮೆಗಳನ್ನು ನಡೆಸಲು ವಕೀಲ ವೃತ್ತಿಯಲ್ಲಿರುವವರಲ್ಲಿಯೇ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರನ್ನು ಆರಿಸಿ ನೇಮಿಸುವುದಾಗಿ ತಿಳಿಯಬರುತ್ತದೆ. ಈಗ ಪೋಲೀಸ್ ಇಲಾಖೆಯವರು ಈ ಕೆಲಸವನ್ನು ಮಾಡುತ್ತಲಿದ್ದಾರೆ.

ವಿದ್ಯಾಸಚಿವರು ದೆಹಲಿಗೆ

ಬೆಂಗಳೂರು ೧೨

ಅಖಿಲಭಾರತ ಪ್ರಾಚೀನ ಸಂಶೋಧನಾ ಸಮಿತಿಯಲ್ಲಿ ಭಾಗವಹಿಸಲು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ನಾಳೆ ದೆಹಲಿಗೆ ಹೋಗಲಿರುವರು.

ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿ ಸಭೆ

ದೆಹಲಿಯಲ್ಲಿ ನಿನ್ನೆಯದಿನ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿ ಸಭೆ ನಡೆದು ಕಾಶ್ಮೀರದಲ್ಲಿ ನಡೆದ ಇತ್ತೀಚಿನ ಘಟನೆಗಳನ್ನು ಪರಿಶೀಲಿಸಿತೆಂದು ತಿಳಿದುಬಂದಿದೆ.

ಬೀಹಾರಿನಲ್ಲಿ ಗಂಧಕ ಪತ್ತೆ

ಬಿಹಾರಿನಲ್ಲಿ ಗಂಧಕ ಖನಿಜವು ಅಧಿಕ ಪ್ರಮಾಣದಲ್ಲಿ ಪತ್ತೆಯಾಗಿರುವುದಾಗಿ ತಿಳಿಯಬರುತ್ತದೆ. ಇದರಿಂದ ವಿದೇಶಗಳಿಂದ ಗಂಧಕವನ್ನು ಆಮದು ಮಾಡುವುದನ್ನು ನಿಲ್ಲಿಸಲು ಅವಕಾಶವಾಗಬಹುದೆಂದು ಹೇಳಲಾಗಿದೆ.

○ ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯವೇನೋ ಬಂದಿದೆ. ಇನ್ನೂ ಆರ್ಥಿಕ ಸ್ವಾತಂತ್ರ್ಯ ಬರಬೇಕಾಗಿದೆ ಎಂದು ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರು ಹೇಳಿದ್ದಾರೆ.

ಭಾರತ-ಸಿಂಹಳ ಪ್ರಧಾನಿಗಳ ಪುನಃ ಭೇಟಿ

ಸಿಂಹಳದಲ್ಲಿ ಭಾರತೀಯ ಪೌರತ್ವ ವಿಷಯ ಚರ್ಚೆಗಾಗಿ

ಸಿಂಹಳದಲ್ಲಿರುವ ಭಾರತೀಯರ ಪೌರತ್ವದ ಬಗ್ಗೆ ಲಂಡನ್ನಿನಲ್ಲಿ ಉಭಯರಾಷ್ಟ್ರಗಳ ಪ್ರಧಾನಿಯವರೊಡನೆ ನಡೆದ ಮಾತುಕತೆಗಳನ್ನು ಮುಂದುವರಿಸಲು ತಾವು ಅದಷ್ಟು ಜಾಗ್ರತೆಯಾಗಿ ದೆಹಲಿಗೆ ಆಗಮಿಸಲು ಇಚ್ಛಿಸುವುದಾಗಿ ಸಿಂಹಳ ಪ್ರಧಾನಿ ಸೇನಾನಾಯಕೆಯವರು ವ್ಯಕ್ತಪಡಿಸಿರುವುದಾಗಿ ಗೊತ್ತಾಗಿದೆ.

ಈ ವಿಷಯವಲ್ಲಿ ಪೂರ್ವಭಾವಿಯಾಗಿ ಕಾರ್ಯಕ್ರಮ ಪಟ್ಟಿಯು ತಯಾರಾಗಬೇಕಾಗಿರುವುದಾಗಿ ಹೇಳಲಾಗಿದೆ.

ಸಿಂಹಳದಲ್ಲಿ ಆಹಾರ ವಸ್ತುಗಳ ಬೆಲೆಯನ್ನು ಏರಿಸಿರುವುದನ್ನು ಪ್ರತಿಭಟಿಸಿ ಅಲ್ಲಿಯ ವಿರೋಧ ಪಕ್ಷದವರು ಏರ್ಪಡಿಸಿರುವ ಚಳುವಳಿಯಲ್ಲಿ ಭಾರತೀಯ ಕಾರ್ಮಿಕರು ಭಾಗವಹಿಸುವುದಿಲ್ಲವೆಂಬ ತೀರ್ಮಾನಕ್ಕೆ ಅಲ್ಲಿಯ ಪ್ರಧಾನಿಯವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

ಶೇಕ್ ಅಬ್ದುಲ್ಲಾರಿಂದ ಸರ್ಕಾರಿ ಕಾಗದ ಪತ್ರ ಅಪಹರಣವೇ ?

ಕಾಶ್ಮೀರದ ಪ್ರಧಾನಿ ಪಟ್ಟದಿಂದ ಪದಚ್ಯುತಿ ಆದ ಶೇಕ್ ಅಬ್ದುಲ್ಲಾರವರು ಸರಕಾರದ ಕೆಲವು ಮುಖ್ಯ ಗುಪ್ತ ಕಾಗದ ಪತ್ರಗಳನ್ನು ತಾವು ದಸ್ತಗಿರಿಯಾಗುವುದಕ್ಕೆ ಮುಂಚೆಯೇ ರವಾನಿಸಿದ್ದರೆಂದೂ, ತಾವು ಕದನ ನಿಲ್ಲಡೆ ಸರಹದ್ದಿನ ಆಚೆ ಸಂಪರ್ಕ ಪಡೆಯಲು ಯತ್ನಿಸುತ್ತಿದ್ದರೆಂದೂ ಸುದ್ದಿ ಹರಡಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೧—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—	೨೭—೮
ಹರಳು	—	—
ಎಳ್ಳು	೬೨—೨	೭೫—೧೨
ಹೊಂಗೆಬೀಜ	—	—
ಹುರುಳಿ	೪೬—	೪೮—೧೪
ಹೆಸರು	೪೦—	೬೨—೨
ಅವರೆ	—	—
ಉದ್ದು	೬೦—೧೦	೬೩—೨
ಹುಚ್ಚೆಳ್ಳು	—	—
ಅಲಸಂದೆ	೬೦—೨	೬೬—೧೦
ಮೆಣಸಿನಕಾಯಿ	—	—
ಹುಣಸೇಹಣ್ಣು	೭—೧೦	—
ಸೀಗೆಕಾಯಿ	೭—	—
ಬೆಲ್ಲ	—	
ತೆಂಗಿನಕಾಯಿ	೧೫೩	೨೭೯

ಭಾರತ--ಪಾಕೀಸ್ತಾನ ಪ್ರಧಾನಿಗಳ ಭೇಟಿ

ಪಾಕೀಸ್ತಾನ ಪ್ರಧಾನಿ ಮಹಮದ ಅಲಿಯವರು ಪ್ರಧಾನಿ ನೆಹರೂರವರನ್ನು ಅದಷ್ಟು ಜಾಗ್ರತೆಯಾಗಿ ಭೇಟಿಮಾಡಲು ಇಷ್ಟಪಡುವುದಾಗಿ ಬರೆದಿರುವ ಪತ್ರವೊಂದನ್ನು ಭಾರತದಲ್ಲಿರುವ ಪಾಕೀಸ್ತಾನ ರಾಯಭಾರಿಯವರು ನಿನ್ನೆಯದಿನ ಶ್ರೀ ನೆಹರೂರವರಿಗೆ ಸಲ್ಲಿಸಿದರೆಂದು ಗೊತ್ತಾಗಿದೆ.

ಉಭಯತ್ರರ ಭೇಟಿಯು ಸೆಪ್ಟಂಬರ್ ಒಂದನೇವಾರದಲ್ಲಿ ನಡೆಯುವುದೆಂದು ತಿಳಿಸಲಾಗಿತ್ತು. ಆದರೆ ಈ ಭೇಟಿಯು ಇನ್ನೂ ಜಾಗ್ರತೆಯಾಗಿ ನಡೆಯಬಹುದೆಂದು ಈಗ ಊಹಿಸಲಾಗಿದೆ.

ಉತ್ತರ ಕೊರಿಯಾ ಉಪ ಪ್ರಧಾನಿಯ ಆತ್ಮಹತ್ಯೆ

ಉತ್ತರಕೊರಿಯಾ ಸರ್ಕಾರದ ಉಪಪ್ರಧಾನಿಯವರಾದ ಹೋ ಕೈರವರು ಆತ್ಮಹತ್ಯೆಯನ್ನು ಮಾಡಿಕೊಂಡಿರುವುದಾಗಿ ತಿಳಿಯಬರುತ್ತದೆ.

ಇತ್ತೀಚೆಗೆ ಉತ್ತರಕೊರಿಯಾದಲ್ಲಿ ಸರಕಾರವನ್ನು ಉರುಳಿಸಲು ಯತ್ನಮಾಡಿದರೆಂದು ಕೆಲವರನ್ನು ಶಿಕ್ಷಿಸಲಾಯಿತು. ಈ ಸಂಗಡಕ್ಕೆ ಈ ಉಪಪ್ರಧಾನಿಯವರು ಬಲಿಗರಾಗಿದ್ದರೆಂದು ಹೇಳಲಾಗಿದೆ

ಕಾಶ್ಮೀರ ವ್ಯವಹಾರದಲ್ಲಿ ಅಮೆರಿಕಾ ಕೈವಾಡವಿಲ್ಲ

ಕಾಶ್ಮೀರದ ವ್ಯವಹಾರಗಳಲ್ಲಿ ಅಮೆರಿಕಾ ಕೈವಾಡವಿದೆಯೆಂದು ಭಾರತ ಕೆಲವು ಪಂಗಡಗಳು ಮಾಡಿರುವ ಅಪಾದನೆಯನ್ನು ಇಲ್ಲಿರುವ ಅಮೆರಿಕಾ ರಾಯಭಾರಿಯವರು ನಿರಾಕರಿಸಿದ್ದಾರೆ.

GRAPHOLOGY - 50 Words writing [Hand] Reading Rs.4 Full psychological Guidance. Life Rs.5
TULASI FAMILY CHARITIES, BANGALORE 3.

WANTED
A Printing machine in running condition—Crown or Demmy Folio
Contact:—
The SAMACHARA office, Mothikhana Buildings, Jaganmohan Palace Road, Mysore.

ನಿರುದ್ಯೋಗ ದಿನಾಚರಣೆ

ಮೈಸೂರು ೧೨

ಇದೇ ೧೫ನೇ ತಾರೀಖು ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ನಿರುದ್ಯೋಗ ದಿನಾಚರಣೆಯು ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ಆಚರಿಸಲ್ಪಡುವುದೆಂದು ಪಕ್ಷದವರು ತಿಳಿಸಿದ್ದಾರೆ.

ದೆಹಲಿ ಇತಿಹಾಸ ಬರೆಯಲು ಸಮಿತಿ

ದೆಹಲಿ ನಗರದ ಇತಿಹಾಸವನ್ನು ಬರೆಯಲು ಅಲ್ಲಿಯ ಕಮೀಷನರ್‌ರವರು ೯ ಜನರ ಒಂದು ಸಮಿತಿಯನ್ನು ರಚಿಸಿರುವುದಾಗಿ ತಿಳಿಯಬರುತ್ತದೆ.

ಇದರ ಪರಿಚಯವಿದೆಯೆ !!
ಒಂಟಿ ಪೆಟ್ಟಿಗೆಗಳಲ್ಲಿರುವ
ಮೈಸೂರು--
--ಸಾಬೂನು
●●●●
ಸಂಪೂರ್ಣವಾಗಿ ಶುದ್ಧವಾದ, ಯಾವ ಬೆರಕೆಯೂ, ಅಪಾಯಕರ ರಸಾಯನಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮವಾದ ಒಗೆಯುವ ಸಾಬೂನು. ಯಾವ ಶ್ರಮವಿಲ್ಲದೆಯೇ ಶುಭ್ರವಾಗಿ ತೊಳೆಯುತ್ತದೆ, ತೊಂದರೆ, ಶ್ರಮ, ಕಾಲ, ಹಣ ಉಳಿಸುತ್ತದಲ್ಲದೆ, ಸಂಪೂರ್ಣ ತೃಪ್ತಿಯನ್ನೂ ಕೊಡುತ್ತದೆ.
★ ★ ★ ★
ಒಂದು ಪೆಟ್ಟಿಯನ್ನು ಬಳಸಿನೋಡಿ.
ಎಲ್ಲ ಕಡೆಯೂ ಸಿಗುತ್ತದೆ.
....
ಗವರ್ನಮೆಂಟ್ ಸೋಪ್--
ಫ್ಯಾಕ್ಟರಿ. ಬೆಂಗಳೂರು.

ಪ್ರಕಾಶಕರು:—ಜಿ. ಎಲ್. ಸ್ವಾಮಿ
ಮುದ್ರಕರು:— ಹಿ. ಕಾ. ಸುಬ್ಬರಾವ್
ಮೋಹನ ಮುದ್ರಣಾಲಯ ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೮

ಸಮಾಚಾರ

ದಿನಪತ್ರಿಕೆ
ಸಂಪುಟ ೩
ಸಂಚಿಕೆ ೨೯೭

೧೪-೮-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಇಂದು--ನಾಳೆಯಲ್ಲಿ ನೆಹರೂ--ಮಹಮ್ಮದಾಲಿ ಭೇಟಿ

ಮುಖ್ಯಮಂತ್ರಿಗಳ ಪ್ರವಾಸ

ಮೈಸೂರು ೧೩

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇದೇ ೧೫ ನೇ ತಾರೀಖು ಮಧ್ಯಾಹ್ನ ರಾಜಧಾನಿಗೆ ಆಗಮಿಸುವರು. ಸಂಜೆ ೭--೩೦ ಗಂಟೆಗೆ ಮೈಸೂರು ಆಕಾಶವಾಣಿಯ ಮೂಲಕ ಸ್ವಾತಂತ್ರ ದಿನಾಚರಣೆ ಸಂಬಂಧವಾಗಿ ಭಾಷಣಮಾಡುವರು ಮಾರನೇ ದಿನ ನಗರ ಪರಿಶೀಲನೆಮಾಡಿ, ಶ್ರೀರಂಗಪಟ್ಟಣಕ್ಕೆ ಭೇಟಿಯಿತ್ತು ಬೆಂಗಳೂರಿಗೆ ವಾಪಸಾಗುವರು. ಇದೇ ೧೯ ನೇ ತಾರೀಖು ಪುನಃ ಮೈಸೂರಿಗೆ ಆಗಮಿಸಿ ಕೇಂದ್ರ ಆಹಾರ ಪರಿಶೋಧನಾ ಸಂಸ್ಥೆಯ ಸ್ಥಳೀಯ ಸಲಹಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ, ನಾಗಮಂಗಲಕ್ಕೆ ಪ್ರಯಾಣ ಬೆಳೆಸುವರು.

ಶಿಕ್ಷೆಗೊಳಗಾಗಿರುವ ಖೈದಿಗಳನ್ನು ಬಿಡಬೇಕು

ಕೊರಿಯಾ ಯುದ್ಧದಲ್ಲಿ ಶಿಕ್ಷೆಗೆ ಒಳಗಾಗಿರುವ ಎಲ್ಲಾ ಖೈದಿಗಳನ್ನು ಉತ್ತರಕೊರಿಯಾದವರು ಬಿಡುಗಡೆ ಮಾಡಬೇಕು ಇಲ್ಲವಾದಲ್ಲಿ ಒಪ್ಪಂದ ಕರಾರನ್ನು ಮುರಿದಂತೆ ಆಗುತ್ತದೆ ಎಂದು ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಿ॥ ಜಾನ್‌ಫಾಸ್ಟರ್ ಡಲ್ಲೆಸ್‌ರವರು ಉತ್ತರಕೊರಿಯಾ ಮತ್ತು ಚೈನಾಕ್ಕೆ ಎಚ್ಚರಿಸಿದ್ದಾರೆ. ಚೀನಾಕ್ಕೆ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ಸದ್ಯದಲ್ಲೇ ಸ್ಥಾನವನ್ನು ಕೊಡುವುದನ್ನು ತಮ್ಮ ಸರ್ಕಾರವು ವಿರೋಧಿಸುವುದಾಗಿಯೂ ಅವರು ಹೇಳಿದ್ದಾರೆ.

ಅಕ್ಟೋಬರ್ ಮಧ್ಯಭಾಗದಲ್ಲಿ ರಾಜಕೀಯ ಮಹಾಸಮ್ಮೇಳನವು ತಟಸ್ಥರಾಷ್ಟ್ರಗಳಲ್ಲೊಂದರಲ್ಲಿ ನಡೆಯಬಹುದೆಂದು ಅವರು ತಿಳಿಸಿ ಈ ವಿಷಯದಲ್ಲಿ ಚೀನಾ ಮತ್ತು ಉತ್ತರ ಕೊರಿಯಾದವರಲ್ಲಿ ಸಂಧಾನ ನಡೆಸಿ ನಿರ್ಧರಿಸಬೇಕಾಗಿದೆ ಎಂದೂ ಹೇಳಿದ್ದಾರೆ.

ಡಾ॥ ಖಾನ್ ಸಾಹೇಬರ ಮೇಲೆ ಪ್ರತಿಬಂಧಕ

ಗಡಿನಾಡು ಪ್ರಾಂತ್ಯದ ಡಾ॥ ಖಾನ್ ಸಾಹೇಬರ ಮೇಲೆ ಹೆಚ್ಚಿನ ನಿರ್ಬಂಧಗಳನ್ನು ಮತ್ತೊಂದು ಒಂದು ವರ್ಷ ಕಾಲ ಪಾಕೀಸ್ತಾನ್ ಸರ್ಕಾರ ಹಾಕಿ, ಈಗ ಅವರನ್ನು ಹಜಾರಾ ಜಿಲ್ಲೆಯ ಖಾನ್‌ಪುರಕ್ಕೆ ವರ್ಗಾಯಿಸಲಾಗಿದೆ ಒಂದುವರ್ಷದ ಹಿಂದೆ ಅವರಮೇಲಿನ ನಿರ್ಬಂಧಗಳನ್ನು ಸಡಿಲಗೊಳಿಸಿ, ಅಬೋಟಾಬಾದಿನಲ್ಲಿ ಇಡಲಾಗಿತ್ತು.

ನೆಹರೂ-ಮಹಮದಾಲಿ ಭೇಟಿ

ಪ್ರಧಾನಿ ನೆಹರೂರವರನ್ನು ಭೇಟಿಮಾಡಿ ತಮ್ಮ ಹಿಂದಿನ ಮಾತುಕತೆಗಳನ್ನು ಮುಂದುವರಿಸಲು ಪಾಕೀಸ್ತಾನದ ಪ್ರಧಾನಿ ಮಹಮದಾಲಿಯವರು ಇಂದು ಅಥವಾ ನಾಳೆ ದೆಹಲಿಗೆ ಆಗಮಿಸುವರೆಂದು ತಿಳಿಯಬರುತ್ತದೆ.

ಕಾಶ್ಮೀರದಲ್ಲಿ ಇತ್ತೀಚಿನ ಘಟನೆಗಳಾದ ಮೇಲೆ ಪಾಕ್ ಪ್ರಧಾನಿಯವರು ಭಾರತ ಪ್ರಧಾನಿಗೆ ಒಂದುಪತ್ರವನ್ನು ಕಳುಹಿಸಿ ತಾವು ಅವರನ್ನು ಆದಷ್ಟು ಜಾಗ್ರತೆ ನೋಡಲು ಇಚ್ಛಿಸುವುದಾಗಿ ತಿಳಿಸಿದ್ದರು. ಅದಕ್ಕೆ ಶ್ರೀ ನೆಹರೂರವರು ಉತ್ತರ ಕೊಡುತ್ತಾ ಕಾಶ್ಮೀರದಲ್ಲಿ ನಡೆದಿರುವ ಘಟನೆಗಳು ಅಂತರಿಕವಾದುದರಿಂದ ಆಬಗ್ಗೆ ಪರಿಶೀಲನೆ ನಡೆಸುವುದು ಹಿತವಲ್ಲವೆಂದೂ ತಿಳಿಸಿದ್ದರು. ಅಲ್ಲದೆ ಇತರ ವಿಷಯಗಳನ್ನು ಚರ್ಚಿಸಲು ಯಾವಾಗಬೇಕಾದರೂ ಬರಬಹುದು.

ಆದರೆ ಕೂಡಲೇ ಬರುವಲ್ಲಿ ಇಲ್ಲಿಯ ಅನೇಕ ಕೆಲಸಕಾರ್ಯಗಳಿಗೆ ತೊಂದರೆಯುಂಟಾಗುವುದಲ್ಲದೆ ಪಾಕ್ ಪ್ರಧಾನಿಯವರ ಸ್ವಾಗತಕ್ಕೂ ಸಹ ಸಿದ್ಧತೆಮಾಡಲು ಕಾಲವಿರುವುದಿಲ್ಲ. ಕಾಶ್ಮೀರದಲ್ಲಿ ಈಗ ಉದ್ಭವಿಸಿರುವ ಪರಿಸ್ಥಿತಿ ಸಮಯದಲ್ಲಿ ಈ ಭೇಟಿ ನಡೆದರೆ ಜನರಲ್ಲಿ ತಪ್ಪು ತಿಳುವಳಿಕೆ ಬರುವುದೆಂದೂ ತಿಳಿಸಲಾಗಿತ್ತು ಆ ದಾಗ್ಯೂ ಪಾಕ್ ಪ್ರಧಾನಿಯವರು ನೆಹರೂರವರನ್ನು ಭೇಟಿಮಾಡಲು ಅತ್ಯಂತ ಕಾತುರರಾಗಿರುವುದರಿಂದ ತಾವು ಕೂಡಲೇ ಬರುವುದಾಗಿಯೂ ಆದರೆ ಕಾಶ್ಮೀರ ಪ್ರಶ್ನೆ ವಿನಹ ಇತರ ವಿಷಯಗಳಲ್ಲಿ ತಾವು ವಿಚಾರ ವಿನಿಮಯ ನಡೆಸುವುದಾಗಿಯೂ ತಿಳಿಸಿರುವರೆಂದು ಹೇಳಲಾಗಿದೆ.

ಅವರು ದೆಹಲಿಗೆ ಬರುವ ವೇಳೆಯನ್ನು ಇನ್ನೂ ಖಂಡಿತವಾಗಿ ತಿಳಿಸಿಲ್ಲವಾದರೂ ಇಂದು ನಾಳೆಯಲ್ಲೇ ಬರಲಿರುವರೆಂದು ಹೇಳಲಾಗಿದೆ.

ಸಿಂಹಳದಲ್ಲಿ ಜರೂರು ಪರಿಸ್ಥಿತಿ

ಕೊಲಂಬೋವಿನಲ್ಲಿ ಗೋಲಿಬಾರ್ ಮತ್ತು ಕರ್ಫ್ಯೂ

ಸಿಂಹಳದಲ್ಲಿ ಸರ್ಕಾರವು ಅಕ್ಕಿ ಮತ್ತು ಇತರ ಕೆಲವು ನಿತ್ಯ ಉಪಯುಕ್ತ ವಸ್ತುಗಳ ಮೇಲಿನ ಬೆಲೆ ಹೆಚ್ಚಿಸಿರುವುದನ್ನು ಪ್ರತಿಭಟಿಸಲು ನಿನ್ನೆಯದಿನ ಸಿಂಹಳದ ಅದ್ಯಂತ ಮೆರವಣಿಗೆ, ಸಭೆ ಮತ್ತು ಹರತಾಳ ನಡೆಯಿತು. ಈ ಸಂದರ್ಭ ಬಸ್ಸುಗಳ ಚಲನೆಗೆ ಅಡ್ಡಿ, ಟೆಲಿಫೋನ್ ಮತ್ತು ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸುವುದು ಮುಂತಾದ ನಾನಾ ದೌರ್ಜನ್ಯ ಕೃತ್ಯಗಳನ್ನು ಅಡಗಿಸಲು ಪೋಲೀಸಿನವರು ಮೂರುಬಾರಿ ಗೋಲಿಬಾರು ಮಾಡಿದರೆಂದು ಹೇಳಲಾಗಿದೆ. ಪರಿಸ್ಥಿತಿಯು ಹತೋಟಿಯಲ್ಲಿದೆಯೆಂದು ಅಧಿಕಾರಿ ವರ್ಗಗಳಲ್ಲಿ ಹೇಳಲಾಗುತ್ತಿದೆ.

ಆದರೂ ಮುನ್ನೆಚ್ಚರಿಕೆಗಾಗಿ ಪಶ್ಚಿಮ ಮತ್ತು ದಕ್ಷಿಣ ಸಿಂಹಳದಲ್ಲಿ ಜರೂರು ಪರಿಸ್ಥಿತಿಯನ್ನೂ, ಕೊಲಂಬೊ ಪಟ್ಟಣದಲ್ಲಿ ಕರ್ಫ್ಯೂವನ್ನು ಘೋಷಿಸಲಾಗಿದೆ ಯೆಂದು ತಿಳಿಯಬರುತ್ತದೆ. ಜರೂರು ಪರಿಸ್ಥಿತಿಯು ಒಂದು ತಿಂಗಳು ಕಾಲವಿರುವುದಾಗಿ ಹೇಳಲಾಗಿದೆ.

ಅಲ್ಲಿಯ ಪ್ರಧಾನಿ ಸೇನಾ ನಾಯಿಕೆಯವರು ವಿರೋಧ ಪಕ್ಷದವರ ಈ ಬೆದರಿಕೆಗಳಿಗೆ ಸರ್ಕಾರವು ಹೆದರದೆ ಅವರನ್ನು ಮಟ್ಟಹಾಕುವುದಾಗಿ ತಿಳಿಸಿದ್ದಾರೆ.

ಹೋಟೆಲು ಕೆಲಸಗಾರರ ನೂತನ ಸಂಘ

ಮೈಸೂರು ೧೩

ನಗರದಲ್ಲಿರುವ ಹೋಟೆಲು ಕೆಲಸಗಾರರ ಸಂಘದ ಕೆಲಸ ಕಾರ್ಯಗಳು ಇತ್ತೀಚೆಗೆ ಅಸಮರ್ಪಕವಾಗಿದೆ. ಕಳೆದ ಮಂಗಳವಾರ ರಾತ್ರಿ ೯-೩೦ ಗಂಟೆಗೆ ಈ ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಪೋಲಿಸ್ ಸಹಾಯದೊಡನೆ ಸಂಘದ ಮಹಾ ಸಭೆಯನ್ನು ನಡೆಸಿ ಸದಸ್ಯರು ಮಾತನಾಡಲು ಅವಕಾಶವನ್ನು ಕೊಡಲಿಲ್ಲ. ಸಂಘವನ್ನು ಉತ್ತಮಸ್ಥಿತಿಗೆ ತರುವಂತೆ ಅಸಿಸ್ಟೆಂಟ್ ಲೇಬರ್ ಕಮಿಷನರಿಗೆ ಮನವಿ ಸಲ್ಲಿಸಿದುದು ಪ್ರಯೋಜನವಿಲ್ಲದಾಗಿದೆ. ಆದ್ದರಿಂದ ಆ ಸಂಘವನ್ನು ಸುಮಾರು ೭೦ ಜನ ಸದಸ್ಯರು ತ್ಯಜಿಸಿ ಪ್ರತ್ಯೇಕವಾಗಿ ಸಂಘವನ್ನು ರಚಿಸಲಾಗಿದೆ ಈ ಹೊಸಸಂಘದ ಮಹಾ ಸಭೆಯನ್ನು ಸದ್ಯದಲ್ಲೇ ಕರೆದು ಸಂಘದ ನಿಬಂಧನೆ ಮತ್ತು ಅಧಿಕಾರಿಗಳ ಚುನಾವಣೆಯನ್ನು ನಡೆಸಲಾಗುತ್ತದೆಂದು ಸಂಚಾಲಕರಾದ ಶ್ರೀ ಡಿ.ವಿ. ದತ್ತಾತ್ರೇಯರವರು ತಿಳಿಸಿದ್ದಾರೆ.

ದೇವರಿಗೆ ವಿಶೇಷ ಪೂಜೆ

ಮೈಸೂರು ೧೩

ಸ್ವಾತಂತ್ರ ದಿನಾಚರಣೆಯ ದಿನ ಕೋಟೆಯಲ್ಲಿರುವ ತ್ರಿನೇಶ್ವರ, ತ್ರಿಪುರಸುಂದರಿ, ವಿಘ್ನೇಶ್ವರ, ಸೋಮೇಶ್ವರ ಮುಂತಾದ ದೇವರುಗಳಿಗೆ ವಿಶೇಷ ಪೂಜೆ, ಅಲಂಕಾರಗಳನ್ನು ಏರ್ಪಡಿಸಲಾಗಿದೆ.

೧೧ ಗುಡಿಸಲುಗಳು ಬೆಂಕಿಯಿಂದ ಭಸ್ಮ

ಮೈಸೂರು ೧೩

ಮೈಸೂರು ತಾಲ್ಲೂಕಿನ ನಾಗೇನಹಳ್ಳಿ ಪಕ್ಕದಲ್ಲಿರುವ ಆದಿಕರ್ನಾಟಕ ಕಾಲೋನಿಯಲ್ಲಿ ೧೧ ಗುಡಿಸಲುಗಳು ನಿನ್ನೆ ಬೆಳಗ್ಗೆ ಬೆಂಕಿಯಿಂದ ಭಸ್ಮವಾದವು ಅವುಗಳಲ್ಲಿ ದಾಸ್ತಾನು ಮಾಡಿದ್ದ ಧಾನ್ಯಗಳೂ ನಾಶವಾದುವು.

ಠಕ್ಕು ಚಕ್ರಬಂಧುಸ್ಪರ್ಧೆ

ಬೆಂಗಳೂರು ೧೩

ಮದರಾಸ್ ಮತ್ತು ಮಧುರೆಗಳಲ್ಲಿ ನಡೆಸಲಾಗುತ್ತಿರುವ ಮದುಂಗಿ, ವೀನಸ್ ಟ್ರೇಡರ್ಸ್, ರಾಮಾಚಾರ್ಲು, ಮಿನರ್ವ, ಸಿವಿಸ, ವರ್ಮ, ವಿ. ಪಿ, ಅರುಣ, ಎ. ಸಿ. ಗಣೇಶ್, ರಾಯಲ್, ಮಹಾಲಕ್ಷ್ಮಿ, ಯುನೈಟೆಡ್ ಕಾರ್ಪೋರೇಷನ್ ಮುಂತಾದ ಚಕ್ರಬಂಧಸ್ಪರ್ಧೆಗಳು ಠಕ್ಕುಸಂಸ್ಥೆಗಳೆಂದೂ, ಅವುಗಳ ಮೇಲೆ ಸರ್ಕಾರದವರು ಕಾರ್ಯಕ್ರಮ ಕೈಗೊಂಡು ಶಿಕ್ಷೆ ವಿಧಿಸಲಾಗಿದೆಯೆಂದೂ, ಈ ಬಗ್ಗೆ ಸಾರ್ವಜನಿಕರು ಎಚ್ಚರಿಕೆಯಿಂದಿರಬೇಕೆಂದೂ ಮೈಸೂರು ಸರ್ಕಾರದ ಪ್ರಕಟನೆ ಒಂದು ತಿಳಿಸಿದೆ.

ಪಾಕೀಸ್ತಾನದಲ್ಲಿ ಸ್ವಾತಂತ್ರ್ಯೋತ್ಸವ ರದ್ದು

ಕಾಶ್ಮೀರದಲ್ಲಿ ಇತ್ತೀಚೆಗೆ ನಡೆದ ಘಟನೆಗಳ ಪರಿಣಾಮವಾಗಿ ಪಾಕೀಸ್ತಾನವು ತನ್ನ ಸ್ವತಂತ್ರ ದಿನಾಚರಣೆಯದಿನ ಏರ್ಪಡಿಸಿದ್ದ ಎಲ್ಲಾ ಸಮಾರಂಭಗಳನ್ನು ರದ್ದುಮಾಡುವುದಾಗಿ ತಿಳಿಯಬರುತ್ತದೆ.

ಪಾಕ್ ಕಾಶ್ಮೀರದಲ್ಲಿ ಮುನ್ನೆಚ್ಚರಿಕೆ ಕ್ರಮ

ಪಾಕೀಸ್ತಾನದ ವಶದಲ್ಲಿರುವ ಕಾಶ್ಮೀರದ ಭಾಗಗಳಲ್ಲಿ ಅಗತ್ಯವಾದ ಮುನ್ನೆಚ್ಚರಿಕೆ ಕ್ರಮಗಳನ್ನು ಕೂಡಲೆ ಕೈಗೊಳ್ಳಬೇಕೆಂದು ಪಾಕಿಸ್ತಾನ ಸರ್ಕಾರವು ಸೂಚನೆ ಕೊಟ್ಟಿದೆ.

ದೇಶದಲ್ಲಿ ಅಕ್ಕಿ ಸ್ವಪರಿಪೂರ್ಣವಾಗಿದೆ

ಪಾರ್ಲಿಮೆಂಟಿನಲ್ಲಿ ಆಹಾರ ಸಚಿವರ ಹೇಳಿಕೆ

ಕೇಂದ್ರ ಆಹಾರ ಶಾಖಾ ಉಪಸಚಿವ ಶ್ರೀ ಎಂ.ವಿ. ಕೃಷ್ಣಪ್ಪನವರು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ದೇಶದಲ್ಲಿ ಅಕ್ಕಿ ಪರಿಸ್ಥಿತಿಯು ಉತ್ತಮವಾಗಿದೆ. ಭತ್ತದ ಬೆಳೆಯು ನಿರೀಕ್ಷಿಸಿದ್ದಕ್ಕಿಂತಲೂ ಅಧಿಕ ಪ್ರಮಾಣದಲ್ಲಿ ಆಗಿದೆ ಈಗಾಗಲೇ ಒಟ್ಟು ೧೧ ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ಸಂಗ್ರಹಿಸಲಾಗಿದೆ. ಈಗ ಬರ್ಮಾದಿಂದ ಒಂದೂವರೆ ಲಕ್ಷ ಟನ್ ಅಕ್ಕಿಯು ಬಂದಿದೆ. ಇದನ್ನು ದಾಸ್ತಾನಿನಲ್ಲಿಡಲಾಗುತ್ತದೆ. ಈಗ ದೇಶವು ಅಕ್ಕಿಯಲ್ಲಿ ಸ್ವಪರಿಪೂರ್ಣತೆಯಾಗಿರುವುದರಿಂದ ಇನ್ನು ಮುಂದೆ ವಿದೇಶಗಳಿಂದ ಅಕ್ಕಿಯನ್ನು ತರಿಸಿಕೊಳ್ಳುವ ಅವಶ್ಯಕತೆ ಇಲ್ಲವೆಂದು ಅವರು ತಿಳಿಸಿದ್ದಾರೆ.

ಕೈಮಗ್ಗ ಕೈಗಾರಿಕಾ ಅಭಿವೃದ್ಧಿ

೭ ಕೋಟಿ ರೂ. ಯೋಜನೆ

ಭಾರತದ ನಾನಾ ಭಾಗಗಳಲ್ಲಿ ಈಗ ಉಂಟಾಗಿರುವ ಕೈಮಗ್ಗದವರ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ೧೩ ಸಂಸ್ಥಾನ ಸರ್ಕಾರಗಳು ೭ ಕೋಟಿ ರೂ.ಗಳ ಯೋಜನೆಯೊಂದನ್ನು ತಯಾರಿಸಿ ಕೇಂದ್ರಕ್ಕೆ ಕಳುಹಿಸಿದೆಯೆಂದು ತಿಳಿದು ಬಂದಿದೆ.

ಇದನ್ನು ಜಾರಿಗೆ ತರುವುದರಿಂದ ೧೧೦೦೦ ಲಕ್ಷ ಕೈಮಗ್ಗದ ಬಟ್ಟೆಯನ್ನು ತಯಾರಿಸಬಹುದೆಂದೂ, ಅದರಿಂದ ಲಕ್ಷಾಂತರ ಮಂದಿ ಕೈಮಗ್ಗದವರಿಗೆ ಕೆಲಸ ದೊರೆಯುವುದೆಂದೂ ಹೇಳಲಾಗಿದೆ.

ಕಾಶ್ಮೀರ ಪರಿಸ್ಥಿತಿ ಉತ್ತಮ

ಕಾಶ್ಮೀರ ಪರಿಸ್ಥಿತಿಯು ಇತ್ತೀಚೆಗೆ ಉತ್ತಮವಾಗಿರುವುದಾಗಿ ತಿಳಿಯಬರುತ್ತದೆ ಇತ್ತೀಚೆಗೆ ಅಲ್ಲಿ ಯಾವ ಘಟನೆಗಳೂ ನಡೆದಿಲ್ಲ. ಅಧಿಕ ಸಂಖ್ಯೆಯಲ್ಲಿ ಕಾಶ್ಮೀರ ರಾಷ್ಟ್ರೀಯ ಸಮ್ಮೇಳನದ ಸದಸ್ಯರು ಹೊಸ ಸರ್ಕಾರಕ್ಕೆ ತಮ್ಮ ಬೆಂಬಲವನ್ನು ಕೊಡುವ ಭರವಸೆ ಕೊಟ್ಟಿರುವುದಾಗಿ ತಿಳಿಯಬಹುತ್ತದೆ.

ಬರ್ಮಾದಲ್ಲಿರುವ ಎಣ್ಣೆ ಕಂಪೆನಿಗಳಲ್ಲಿ ಭಾಗ

ಬರ್ಮಾದಲ್ಲಿ ಬ್ರಿಟಿಷರ ವಶದಲ್ಲಿರುವ ಎಲ್ಲಾ ಎಣ್ಣೆ ಕಂಪೆನಿಗಳಲ್ಲಿ ⅓ ಭಾಗದಷ್ಟು ಆಸ್ತಿಯನ್ನು ಬರ್ಮಾ ಸರ್ಕಾರಕ್ಕೆ ಬಿಟ್ಟುಕೊಡಲು ಉಭಯ ಸರ್ಕಾರಗಳ ನಡುವೆ ಒಪ್ಪಂದವಾಗಿರುವುದಾಗಿ ಗೊತ್ತಾಗಿದೆ.

● ಗ್ರೀಸ್‌ನಲ್ಲಿ ಭೂಕಂಪವುಂಟಾಗಿ ೧೦೦೦ ಜನರು ಸತ್ತುಹೋದರೆಂದು ವರದಿಯಾಗಿದೆ.

ಸಾರ್ವಜನಿಕ ಸಭೆ

ಮೈಸೂರು ೧೩

ಇದೇ ೧೫ನೇ ತಾರೀಖು ಶನಿವಾರ ಸಂಜೆ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಸಂಜೆ ೬ ಗಂಟೆಗೆ ಪುರಭವನ ಮೈದಾನದಲ್ಲಿ ಒಂದು ಬಹಿರಂಗಸಭೆ ನಡೆಯುತ್ತದೆ.

ಕೈಮಗ್ಗದವರಿಗೆ ನೆರವು

ಬೆಂಗಳೂರು ೧೩

ಮೊಳಕಾಲ್ಮೂರು ಮತ್ತು ಹೊಸದುರ್ಗ ತಾಲ್ಲೂಕುಗಳಲ್ಲಿ ಕೈಮಗ್ಗ ಕೈಗಾರಿಕೆಗೆ ಬಹಳ ತೊಂದರೆಯುಂಟಾಗಿ ಅದರಲ್ಲಿ ತೊಡಗಿರುವವರಿಗೆ ದುಃಸ್ಥಿತಿಯುಂಟಾಗಿರುವುದರಿಂದ, ಚಿತ್ರದುರ್ಗ ಜಿಲ್ಲಾಧಿಕಾರಿಗಳ ಬಳಿ, ಅಸ್ಸಾಂ ಭೂಕಂಪ ಪರಿಹಾರ ನಿಧಿಯಲ್ಲಿ ಉಳಿದಿರುವ ೮೦೦೦ ರೂಪಾಯಿಗಳನ್ನು ಈ ಕೈಮಗ್ಗದವರಿಗೆ ಉದ್ಯೋಗವನ್ನು ಒದಗಿಸಲು ಉಪಯೋಗಿಸಲು ಅನುಮತಿಯಿತ್ತಿರುವುದಾಗಿ ಸರ್ಕಾರವು ಒಂದು ಪ್ರಕಟಣೆಯನ್ನಿತ್ತಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೨—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೨	೨೫—೧೪
ಹರಳು	—	—
ಎಳ್ಳು	೭೫—೨	೭೫—೧೪
ಹೊಂಗೆಬೀಜ	—	—
ಹುರುಳಿ	೪೪—	೪೨—೨
ಹೆಸರು	೪೦—೨	೬೯—೧೪
ಅವರೆ	—	—
ಉದ್ದು	೬೯—೪	೬೯—೮
ಹುಚ್ಚೆಳ್ಳು	—	—
ಅಲಸಂದೆ	೬೫—	೬೧—
ಮೆಣಸಿನಕಾಯಿ	—	—
ಹುಣಸೇಹಣ್ಣು	—	—
ಸೀಗೆಕಾಯಿ	—	—
ಬೆಲ್ಲ	—	
ತೆಂಗಿನಕಾಯಿ	೧೩೩	೨೦೩

WANTED

A Printing machine in running condition—Crown or Demmy Folio

Contact—

The SAMACHARA office, Mothikhana Buildings, Jaganmohan Palace Read, Mysore.

ಅಮದಾದ ಗೋಧಿಯ ಮೇಲೆ ಹತೋಟಿ ರದ್ದಾಯಿತು

ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಸಾಗಾಣಿಕೆ ನಿರ್ಬಂಧ ರದ್ದು

ದೇಶಾದ್ಯಂತ ಹಿಟ್ಟಿನ ಗಿರಣಿಗಳು ಆಮದಾದ ಗೋಧಿಯಿಂದ ಮೈದ, ರವೆ ಮುಂತಾದುವನ್ನು ತಯಾರಿಸಲು ಭಾರತ ಸರ್ಕಾರವು ಅವಕಾಶವನ್ನಿತ್ತಿದೆ. ಈ ಪದಾರ್ಥಗಳ ಮೇಲೆ ಪ್ರಮಾಣ ಅಥವ ಬೆಲೆಯ ಹತೋಟಿಯಿಲ್ಲದೆ ಬಹಿರಂಗ ಪೇಟೆಯಲ್ಲಿ ಮಾರಬಹುದ.

ಈ ಆಮದಾದ ಗೋಧಿಯಿಂದ ತಯಾರಾದ ವಸ್ತುಗಳ ಮೇಲಿನ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಸಾಗಾಣಿಕೆ ನಿರ್ಬಂಧವನ್ನೂ ಸಹ ತೆಗೆಯಲು ಭಾರತ ಸರ್ಕಾರವು ನಿರ್ಧರಿಸಿದೆ.

ಆದ್ದರಿಂದ ಮೈಸೂರು ಸಂಸ್ಥಾನದಲ್ಲೂ ಆಮದಾದ ಗೋಧಿ ಮತ್ತು ಅದರಿಂದ ತಯಾರಾದ ಪದಾರ್ಥಗಳ ಮೇಲಿನ ಹತೋಟಿಯನ್ನು ತೆಗೆದು ಹಾಕಿರುವುದಾಗಿ ಪತ್ರಿಕಾ ಪ್ರಕಟಣೆಯೊಂದು ತಿಳಿಸುತ್ತದೆ.

ಸರ್ಕಾರಿ ರೇಡಿಯೋ ಕಾರ್ಪೊರೇಷನ್ ಸ್ಥಾಪಿಸಲು ಸಿದ್ಧ ಎಂದು ಕೇಸ್ಕರ್

ಅಖಿಲ ಭಾರತ ರೇಡಿಯೋವನ್ನು ಕಾರ್ಪೊರೇಷನ್‌ಗೆ ವಹಿಸಬೇಕೆಂಬ ಸಲಹೆಯನ್ನು ಸರ್ಕಾರವು ಸ್ವಾಗತಿಸುತ್ತದೆ. ಆದರೆ ಆ ಕಾರ್ಪೊರೇಷನ್ ಖಾಸಗಿಯಾಗಿದ್ದು ವ್ಯಾಪಾರ ಪ್ರಸಾರಕ್ಕೆ ಮಾತ್ರ ತೊಡಗಲು ಸರ್ಕಾರವು ಒಪ್ಪುವುದಿಲ್ಲ ಎಂದು ಕೇಂದ್ರ ಪ್ರಸಾರಶಾಖಾ ಸಚಿವ ಡಾ॥ ಬಿ. ವಿ. ಕೇಸ್ಕರ್‌ರವರು ಹೇಳಿರುವರು.

ಈಗಿನಂತೆ ಈ ಶಾಖೆಯು ಸರ್ಕಾರದ ನೇರವಾದ ಆಡಳಿತದಲ್ಲಿರದೆ ಸರ್ಕಾರದ ಕಾರ್ಪೊರೇಷನ್ ವ್ಯವಸ್ಥೆಗೆ ಮಾತ್ರ ತಾವು ಒಪ್ಪುವುದಾಗಿ ಇವರು ತಿಳಿಸಿದ್ದಾರೆ.

ಚಲನಚಿತ್ರ ಸಂಗೀತದ ವಿಚಾರವಾಗಿ ಅವರು ಪ್ರಸ್ತಾಪಿಸಿ ಉತ್ತಮ ಮಟ್ಟದ ಚಲನ ಚಿತ್ರಗಳನ್ನು ಮಾತ್ರ ಈಗ ಪ್ರಸಾರ ಮಾಡಲಾಗುತ್ತಿದೆ ಅಲ್ಲದೆ ರಾಷ್ಟ್ರೀಯ ಮತ್ತು ಶಾಸ್ತ್ರೀಯ ಸಂಗೀತಕ್ಕೆ ಸರ್ಕಾರವು ಹೆಚ್ಚು ಪ್ರಾಶಸ್ತ್ಯವನ್ನು ಕೊಡುವುದೆಂದು ತಿಳಿಸಿದ್ದಾರೆ.

ಭಾರತದಲ್ಲಿ ೫ ಕೋಟಿ ಜಮೀನಿಲ್ಲದ ರೈತರಿರುವರು

ಭಾರತದಲ್ಲಿ ಜಮೀನಿಲ್ಲದ ರೈತರು ಸುಮಾರು ೫ ಕೋಟಿ ಜನರಿರುವರು ಪ್ರತಿಯೊಬ್ಬನಿಗೂ ಒಂದು ಎಕರೆ ಜಮೀನಾದರೂ ಬರುವಂತೆ ೫ ಕೋಟಿ ಎಕರೆ ಜಮೀನನ್ನು ಸಂಗ್ರಹಿಸಬೇಕಾಗಿದೆ--ಎಂದು ಶ್ರೀ ವಿನೋಬಾಭಾವೆಯವರು ಇದೇ ೧೫ ನೇ ತಾರೀಖು ನಡೆಯಲಿರುವ ಭೂದಾನ ಚಳುವಳಿಯನ್ನು ಸ್ವಾಗತಿಸುತ್ತಾ ತಿಳಿಸಿದ್ದಾರೆ.

○ ಉತ್ತರ ಕೊರಿಯಾದ ಮಾಜಿ ವಿದೇಶಾಂಗ ಸಚಿವ ಪಾಕ್ ಹಾನ್ ಯಾನ್‌ರವರನ್ನು ದೇಶದ್ರೋಹ ಚಟುವಟಿಕೆಯಲ್ಲಿ ಭಾಗವಹಿಸಿದ್ದಾರೆಂಬ ಅಪಾದನೆಮೇಲೆ ವಿಚಾರಣೆಗೆ ಒಳಪಡಿಸಲಾಗಿರುವುದಾಗಿ ತಿಳಿಯಬರುತ್ತದೆ.

ಪ್ರಭಾ ★ ಜಯಪ್ರದ ೨ನೇ ವಾರ 14-8 53 ರಿಂದ ದಿನವೂ 3 ಆಟಗಳು ಸಿಮ್ಲಾ ನೆಚ್ಚಿನ ನಟರಾದ ಪ್ರೇಂನಾಥ್, ಬೀನಾರಾಯ್ ನಟಿಸಿರುವ, ಮನಾಕರ್ಷಣೀಯ ಸಂಗೀತದಿಂದ ಕೂಡಿದ ಅತ್ಯುತ್ತಮ ಮನೋರಂಜನೀಯ ಹಿಂದಿಚಿತ್ರ—

★ ಶಗೂಫ ★

ಸಂಗೀತ: ಸಿ ರಾಮಚಂದ್ರ

ಬೆಳಗಿನ ಪ್ರದರ್ಶನ: 14-8-53 ರಿಂದ 3 ದಿನಗಳು ವೈಜಯಂತಿಮಾಲ, ಪ್ರಾಣ್ ನಟಿಸಿರುವ 'ಬಹಾರ್' [ಹಿಂದಿ]

ಅಪೇರ

7—8—53 ರಿಂದ 2ನೇ ವಾರ ಪ್ರತಿದಿನ ಮೂರು ಆಟಗಳು

ಇನ್‌ಸ್ಪೆಕ್ಟರ್ ತಮಿಳು

ಪಾತ್ರ:—ಬಾಲಚಂದರ್, ಟಿ. ಕೆ. ಷಣ್ಮುಗಂ, ಟಿ. ಕೆ. ಸರಸ್ವತಿ, ಅಂಜಲಿದೇವಿ

ರಾಜಕಮಲ್, ಮೈಸೂರು.

8-8-53ನೇ ಶನಿವಾರದಿಂದ 3ನೇ ವಾರ

ಪೊನ್ನಿ [ತಮಿಳು]

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು: — ಹಿ. ಶಾ. ಸುಬ್ಬರಾವ್

ಮೋಹನ್ ಮುದ್ರಣಾಲಯ ಮೈಸೂರು.

ಪೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೮

ಸಮಾಚಾರ

ದಿನಪತ್ರಿಕೆ ಸಂಪುಟ ೧ ಸಂಚಿಕೆ ೨೧೪

೧೪-೮-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಬರ್ಮಾ ಕೈಗಾರಿಕಾ ನಿಯೋಗ

ಬೆಂಗಳೂರು ೧೪

ಭಾರತದಲ್ಲಿ ಪ್ರವಾಸ ಮಾಡುತ್ತಿರುವ ಬರ್ಮಾ ಕೈಗಾರಿಕಾ ನಿಯೋಗದವರು ಈದಿನ ಬೆಂಗಳೂರಿಗೆ ಆಗಮಿಸಿ, ಭದ್ರಾವತಿ ಕೃಷ್ಣರಾಜಸಾಗರ ಮುಂತಾದ ಪ್ರದೇಶಗಳಿಗೆ ಭೇಟಿ ಇತ್ತು, ೨೦ ನೇ ತಾರೀಖು ಹೈದರಾಬಾದಿಗೆ ಪ್ರಯಾಣ ಬೆಳೆಸುವರು.

ಸಂಸ್ಥಾನದ ರಸ್ತೆಗಳ ವಿಂಗಡಣೆ

ಸಂಸ್ಥಾನದಲ್ಲಿರುವ ಎಲ್ಲ ರಸ್ತೆಗಳನ್ನು ೨ ವಿಭಾಗಮಾಡಿ, ಸರ್ಕಾರದವರು ೬೮೭೨ ಮೈಲಿ ಮತ್ತು ಜಿಲ್ಲಾ ಬೋರ್ಡುಗಳು ೩೯೭೩ ಮೈಲಿಗಳಷ್ಟು ನಿರ್ವಹಿಸಲು ಆಜ್ಞೆ ಮಾಡಲಾಗಿದೆ. ಇದರಿಂದ ಸರ್ಕಾರಕ್ಕೆ ೪, ೮೫, ೫೫೨ ರೂ. ಹೆಚ್ಚು ಖರ್ಚಾಗುವುದು. ಜಿಲ್ಲಾ ಬೋರ್ಡುಗಳಿಗೆ ೪,೩೧,೭೫೭ ರೂಗಳು ಉಳಿತಾಯವಾಗುವುದು.

ಇಂಜನಿಯರಿಂಗ್ ಕಾಲೇಜಿನ ಮೇಲೆ ರಿಟ್ ಅರ್ಜಿ

ಬೆಂಗಳೂರು ಮಲ್ಲೇಶ್ವರದಲ್ಲಿರುವ ಬಿ. ಎಸ್.ಸಿ ಪದವೀಧರ ಶ್ರೀ ಎ.ಜಿ.ಶ್ರೀವತ್ಸ ಎಂಬುವರು ತಾವು ಫಸ್ಟ್‌ಕ್ಲಾಸ್ ಪಡೆದಿದ್ದರೂ; ತಮಗಿಂತ ಕಡಮೆ ನಂಬರು ಬಂದಿದ್ದ ವಿದ್ಯಾರ್ಥಿಗಳಿಗೆ ಸರ್ಕಾರಿ ಇಂಜನಿಯರಿಂಗ್ ಕಾಲೇಜಿನಲ್ಲಿ ಸೀಟು ಕೊಟ್ಟು ತಮಗೆ ಕೊಡದಿರುವುದು ರಾಜ್ಯಾಂಗದ ಮೂಲಭೂತ ಹಕ್ಕಿಗೆ ಚ್ಯುತಿ ತಂದಿರುವುದೆಂದೂ, ಆದ್ದರಿಂದ ತಮ್ಮನ್ನು ಆ ಕಾಲೇಜಿಗೆ ಸೇರಿಸುವಂತೆ ಸೂಚನೆ ಕೊಡಬೇಕೆಂದೂ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ.

ತೆಲ್ಲಿಚೇರಿ-ಮೈಸೂರು ರೈಲ್ವೆ

ತೆಲ್ಲಿಚೇರಿ ಮತ್ತು ಮೈಸೂರುಗಳ ಮಧ್ಯೆ ರೈಲ್ವೆ ಸಂಚಾರವನ್ನು ಏರ್ಪಡಿಸುವ ವ್ಯವಸ್ಥೆಯನ್ನು ಮುಂದಿನ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸುವ ವಿಷಯವನ್ನು ಸರ್ಕಾರವು ಪರಿಶೀಲಿಸುವುದಾಗಿ ರೈಲ್ವೆ ಸಚಿವ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಪಾರ್ಲಿಮೆಂಟ್ ಸದಸ್ಯರು ಅವರಿಗೆ ಸಲ್ಲಿಸಿದ ಮನವಿಗೆ ಉತ್ತರವಾಗಿ ತಿಳಿಸಿದ್ದಾರೆ.

ಕೊರಿಯಾಕ್ಕೆ ಭಾರತದ ಸೈನ್ಯ

ಕೊರಿಯಾ ಯುದ್ಧ ಖೈದಿಗಳ ಮೇಲ್ವಿಚಾರಣೆ ಸಂಬಂಧದಲ್ಲಿ ಭಾರತದ ಸೈನ್ಯವನ್ನು ಇದೇ ೧೮, ೧೯ ಮತ್ತು ೨೦ನೇ ತಾರೀಖುಗಳಲ್ಲಿ ೩ ಪ್ರತ್ಯೇಕ ಹಡಗುಗಳಲ್ಲಿ ಮದರಾಸಿನಿಂದ ಕೊರಿಯಾಕ್ಕೆ ರವಾನಿಸಲಾಗುವುದೆಂದು ಹೇಳಲಾಗಿದೆ.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೪

ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ನಾಳೆಬೆಳಗ್ಗೆ ೭-೧೫ ಗಂಟೆಗೆ ಧ್ವಜಾರೋಹಣ ಸಮಾರಂಭವು ಪ್ರೊಫೆಸರ್ ವಿ. ಎಲ್. ಡಿ. ಗೌ ಡಾರವರಿಂದ ನಡೆಯುತ್ತದೆ.

ರಾಜಕೀಯ ವೇತನ ನಿಲ್ಲಿಸಲಾಗುವುದು

ಪ್ರಧಾನಿ ನೆಹರೂ ಹೇಳಿಕೆ

ಭಾರತದಲ್ಲಿ ಆಗಾಖಾನ್ ಮತ್ತು ಇತರ ಅನೇಕರಿಗೆ ಕೊಡುತ್ತಿರುವ ರಾಜಕೀಯ ವೇತನವನ್ನು ಕಾಲಕ್ರಮದಲ್ಲಿ ನಿಲ್ಲಿಸಲಾಗುವುದೆಂದು ಪ್ರಧಾನಿ ನೆಹರೂ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ. ಇದಕ್ಕಾಗಿ ೧೯೫೩-೫೪ರಲ್ಲಿ ೨೮.೭೦ ಲಕ್ಷ ರೂಗಳನ್ನು ಒದಗಿಸಲಾಗಿದೆ.

ಆಗಾಖಾನರಿಗೆ ವರ್ಷಕ್ಕೆ ೧೨ ಸಾವಿರ ರೂ. ವೇತನ ಕೊಡಲಾಗುತ್ತಿದೆ. ಅವರಿಗೆ ೧೦ ಸಾವಿರ ರೂ. ವರಮಾನ ತೆರಿಗೆಯನ್ನು ವಿಧಿಸಲಾಗಿದೆ. ಉಳಿಕೆ ೨ ಸಾವಿರ ರೂ.ಗಳನ್ನು ಅವರಿಗೆ ಕೊಡುತ್ತಿರುವುದು ಮಹತ್ತರವೆಂದು ಆಗಾಖಾನರು ಹೇಳಿರುವರೆಂದೂ ತಿಳಿಸಲಾಯಿತು. ಈ ರಾಜಕೀಯ ವೇತನವನ್ನು ಮುಂದುವರಿಸಿಕೊಂಡುಬರುವುದು ತಮಗೆ ಇಷ್ಟವಿಲ್ಲವೆಂದು ಆಗಾಖಾನರು ತಮಗೆ ತಿಳಿಸಿರುವುದಾಗಿ ಪ್ರಧಾನಿ ಹೇಳಿದರು.

ದಾವಣಗೆರೆಬಳಿ ಲಾಠಿ ಪ್ರಹಾರ

ಕರ್ನಾಟಕ ಪ್ರಾಂತ್ಯ ರಚನೆ ಚಳವಳಿ ಅಂಗವಾಗಿ ನೆನ್ನೆಯದಿನ ಸುಮಾರು೫೦೦ ಜನರು ದಾವಣಗೆರೆಯಿಂದ ಅರಸೀಕೆರೆಗೆ ಹೋಗುತ್ತಲಿದ್ದ ರೈಲನ್ನು ನಿಲ್ಲಿಸಲು ಪ್ರಯತ್ನಿಸಿದರು. ಅದನ್ನು ತಡೆಗಟ್ಟಲು ಪೋಲೀಸಿನವರು ಲಾಠಿಪ್ರಹಾರ ಮಾಡಿ ಗುಂಪನ್ನು ಚದುರಿಸಿದರೆಂದು ತಿಳಿಯಬರುತ್ತದೆ.

ಟೆಲಿಗ್ರಾಫ್ ಮತ್ತು ಟೆಲಿಫೋನ್ ತಂತಿಗಳನ್ನು ಕತ್ತರಿಸುವ ಯತ್ನವು ಸಹ ನಡೆಯಿತೆಂದು ಹೇಳಲಾಗಿದೆ.

ಅರಸೀಕೆರೆ ಮತ್ತು ಹುಬ್ಬಳ್ಳಿ ರೈಲ್ವೆ ನಡುವೆ ಶಸ್ತ್ರ ಸಜ್ಜಿತ ದಳವನ್ನು ಹಾಕಲಾಗಿದೆ.

ಸೂಚನೆ

ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ, ನಾಳೆ ದಿನ 'ಸಮಾಚಾರ' ಪತ್ರಿಕೆ ಪ್ರಕಟವಾಗುವುದಿಲ್ಲ.

ವ್ಯವಸ್ಥಾಪಕ.

ಕಾಶ್ಮೀರಕ್ಕಾಗಿ ರಕ್ತಹರಿಸಲು ಪಾಕೀಸ್ತಾನ ಸಿದ್ಧ

ಕಾಶ್ಮೀರಿ ಸಹೋದರರ ಬಿಡುಗಡೆಗೆ ಪಾಕೀಸ್ತಾನದ ಜನರು ರಕ್ತ ಹರಿಸಲು ಸಿದ್ಧರಿದ್ದಾರೆ ಮತ್ತು ಆ ಸಮಸ್ಯೆಯನ್ನು ಇತ್ಯರ್ಥ ಪಡಿಸಲು ನಿರ್ದಿಷ್ಟ ಮತ್ತು ಖಚಿತ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕೆಂದೂ ಪಾಕೀಸ್ತಾನ ಪಂಜಾಬ್ ಮುಸ್ಲಿಂಲೀಗ್ ಕಾರ್ಯಕಾರೀ ಸಮಿತಿ ಒತ್ತಾಯಪಡಿಸಿದೆ.

೪೦ ಲಕ್ಷ ಕಾರ್ಮಿಕರ ಮುಷ್ಕರ

ಫ್ರಾನ್ಸಿನಲ್ಲಿ ರೈಲು, ಅಂಚೆ, ಆಸ್ಪತ್ರೆ, ಜನಾರೋಗ್ಯ, ವಿಮಾನ, ಕೈಗಾರಿಕಾಸಂಸ್ಥೆ ಮುಂತಾದ ನಾನಾ ಕ್ಷೇತ್ರಗಳಲ್ಲಿ ಕೆಲಸಮಾಡುವ ಸುಮಾರು ೪೦ ಲಕ್ಷ ಜನರು ಮುಷ್ಕರವನ್ನು ಹೂಡಿರುವುದಾಗಿ ತಿಳಿಯಬರುತ್ತದೆ. ಇದರಿಂದ ಫ್ರಾನ್ಸಿನ ಎಲ್ಲಾ ಕೆಲಸಗಳೂ ಕಟಸ್ಥವಾಗಿಹೋಗಿವೆ.

ದೇಶದಿಂದ ಉಚ್ಚಾಟನೆ

ದೇಶದ ರಕ್ಷಣಾ ಮತ್ತು ಹಿತದೃಷ್ಟಿಗೆ ವಿರುದ್ಧವಾಗಿ ವರ್ತಿಸುತ್ತಲಿರುವರೆಂಬ ಅಪಾದನೆಯಮೇಲೆ ಮಿಸ್ ಎಡಿನ ಫಾನ್‌ಟೀನ್ ಎಂಬ ವಿದೇಶೀ ಮಹಿಳೆಯು ಕೂಡಲೇ ಪ್ರಾಂತ್ಯವನ್ನು ಬಿಟ್ಟು ಹೊರಟುಹೋಗಬೇಕೆಂದು ಕಾಶ್ಮೀರ ಸರ್ಕಾರವು ಆಜ್ಞೆ ಮಾಡಿದೆ.

ರಾಜಕೀಯ ಸಮ್ಮೇಳನದಲ್ಲಿ ಭಾರತಕ್ಕೆ ಸ್ಥಾನ

ಕೊರಿಯಾ ಯುದ್ಧ ಸಂಬಂಧದಲ್ಲಿ ನಡೆಯಲಿರುವ ರಾಜಕೀಯ ಸಮ್ಮೇಳನದಲ್ಲಿ ಭಾರತಕ್ಕೆ ಪ್ರಾತಿನಿಧ್ಯವನ್ನು ಕೊಡಲೇಬೇಕೆಂದು ವಿಶ್ವಸಂಸ್ಥೆಯ ಅಧ್ಯಕ್ಷ ಪಿಯರ್ಸನ್‌ರವರು ಹೇಳಿದ್ದಾರೆ.

ಆಹಾರ ಧಾನ್ಯಗಳ ಸಂಗ್ರಹಣೆ

ಮೈಸೂರು ಸಂಸ್ಥಾನದಲ್ಲಿ ೧೦೪,೦೦೦ ಟನ್, ತಿರುವಾಂಕೂರು-ಕೊಚ್ಚಿ ೧೦೨,೦೦೦ ಕೊಡಗು ೧ ಸಾವಿರ, ಬೊಂಬಾಯಿ ೩೨೭,೦೦೦ ಮತ್ತು ಮದ್ರಾಸ್ ೨೩೮,೦೦೦ ಟನ್‌ಗಳಷ್ಟು ಆಹಾರಧಾನ್ಯಗಳನ್ನು ದಾಸ್ತಾನು ಮಾಡಿಡಲಾಗಿದೆಯೆಂದು ತಿಳಿಸಲಾದೆಗ.

ಅಮಶಂಕೆಯಿಂದ ೭೪ ಮಂದಿ ಮರಣ

ಕೋಲಾರ ಜಿಲ್ಲೆಯ ೭೩ ಹಳ್ಳಿಗಳಲ್ಲಿ ಅಮಶಂಕೆ ರೋಗದಿಂದ ಒಂದು ವಾರದಲ್ಲಿ ೭೪ ಜನ ಸತ್ತರೆಂದು ವರದಿಯಾಗಿದೆ.

ಮೆಡಿಕಲ್ ಕಾಲೇಜಿಗೆ ಪ್ರವೇಶ ಸಿಕ್ಕಲಿಲ್ಲವೆಂದು ವಿಷಪ್ರಾಶನವೇ ?

ಮೈಸೂರು ೧೪

ಹಾಸನದ ವ್ಯವಸಾಯಶಾಖಾ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಕುಲಕರ್ಣಿಯವರ ಮಗಳು ಶ್ರೀಮತಿ ನಾಗರತ್ನಮ್ಮ ಎಂಬ ಸುಮಾರು ೨೦ ವರ್ಷದ ಮಹಿಳೆಯು ಈದಿನ ಬೆಳಗ್ಗೆ ವಿಷಪ್ರಾಶನ ಮಾಡಿ ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲಾಗಿರುವುದಾಗಿ ತಿಳಿಯಬರುತ್ತದೆ. ವಿಶೇಷ ಚಿಕಿತ್ಸೆ ಕೊಡುತ್ತಿದ್ದರೂ ಆಕೆಯು ಪ್ರಜ್ಞಾಶೂನ್ಯಳಾಗಿ ಸ್ಥಿತಿಯು ಚಿಂತಾಜನಕವಾಗಿರುವುದಾಗಿ ಹೇಳಲಾಗಿದೆ.

ಆಕೆಗೆ ಮೆಡಿಕಲ್ ಕಾಲೇಜಿನಲ್ಲಿ ಪ್ರವೇಶ ದೊರೆಯಲಿಲ್ಲವಾಗಿ ವಿಷಪ್ರಾಶನ ಮಾಡಿದಳೆಂದು ಹೇಳಲಾಗಿದೆ.

ಪರೀಕ್ಷಾಫಲಿತಾಂಶ

ಮೈಸೂರು ವಿಶ್ವವಿದ್ಯಾನಿಲಯದ ಎಂ. ಎ., ಎಂ. ಎಸ್ ಸಿ. ಮತ್ತು ಇಂಡಾಲಜಿ ಪೋಸ್ಟ್ ಗ್ರಾಜುಯೇಟ್ ಪರೀಕ್ಷೆಗಳ ಫಲಿತಾಂಶವು ೧೯ನೇ ತಾ॥ ಬುಧವಾರ ಬೆಳಗ್ಗೆ ೧೧ ಗಂಟೆಗೆ ಪ್ರಕಟವಾಗುತ್ತದೆ.

ನಿರುದ್ಯೋಗಿತನ ಶೇಕಡ ೩೫ ರಷ್ಟು ಹೆಚ್ಚಿದೆ

ಭಾರತದಲ್ಲಿ ನಿರುದ್ಯೋಗವು ಕಳೆದ ೧೮ ತಿಂಗಳಿನಲ್ಲಿ ಶೇಕಡ ೩೫ ರಷ್ಟು ಹೆಚ್ಚಾಗಿದೆ. ೧೨ ವರ್ಷಕ್ಕಿಂತ ಕಡಮೆ ಮಕ್ಕಳಲ್ಲಿ ಇದು ಅಷ್ಟು ಹೆಚ್ಚಾಗಿಲ್ಲವಿದ್ದರೂ, ಗುಮಾಸ್ತರ ಸಂಖ್ಯೆಯಲ್ಲಿ ಶೇಕಡ ೫೧ ರಷ್ಟು ವಿಶೇಷವಾಗಿದೆ. ಈ ನಿರುದ್ಯೋಗ ಸಮಸ್ಯೆಯು ಬಂಗಾಳ, ಬೊಂಬಾಯಿ, ಯು ಪಿ. ಮತ್ತು ಮದರಾಸುಗಳಲ್ಲಿ ಹೆಚ್ಚಾಗಿದ್ದು ಮದರಾಸ್ ಮತ್ತು ಬೊಂಬಾಯಿಗಳಲ್ಲಿ ಪರಿಸ್ಥಿತಿಯು ವಿಶೇಷ ಹದಗೆಟ್ಟಿದೆ. ಖಾಸಗೀ ಸಂಸ್ಥೆಗಳಲ್ಲಿ ೧೯೪೯ ರಲ್ಲಿ ೧೦೦ ಕ್ಕೆ ೨೭ ಮಂದಿಗೆ ಕೆಲಸ ಸಿಕ್ಕುತ್ತಿತ್ತು. ಆದರೆ ಈಗ ಅದು ೧೩ ಕ್ಕೆ ಇಳಿದು ಹೋಗಿದೆ, ಇತ್ತೀಚೆಗೆ ಅಲ್ಲಿ ಸಿಕ್ಕುವುದೇ ಕಷ್ಟವಾಗಿದೆ.

ಕಳೆದ ೫ ವರ್ಷಗಳಲ್ಲಿ ೧೩ ಲಕ್ಷ ಮಂದಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ತೇರ್ಗಡೆ ಆಗಿ, ಕೆಲಸವಿಲ್ಲದೆ ತೊಂದರೆಗೊಳಗಾಗಿದ್ದಾರೆ-ಎಂದು ಪ್ರಜಾಸೋಷಲಿಸ್ಟ್ ನಾಯಕ ಶ್ರೀ ಅಶೋಕ ಮೆಹತಾ ತಿಳಿಸಿದ್ದಾರೆ.

● ಬಿಕನೀರ್ ಮಹಾರಾಜರ ಸಹೋದರರು ರಾಜಸ್ಥಾನದಲ್ಲಿ ಭೂದಾನ ಯಜ್ಞ ಚಳುವಳಿಗೆ ತಮ್ಮ ಜಮೀನಿನಲ್ಲಿ ೩ ಲಕ್ಷ ೪೪ ಎಕರೆ ಜಮೀನನ್ನು ಕೊಟ್ಟಿದ್ದಾರೆ.

ಸ್ವಾತಂತ್ರ್ಯ ದಿನಾಚರಣೆಯಂದು ವಿಶೇಷ ಪ್ರಸಾರ

ಮೈಸೂರು ೧೪

ಇದೇ ೧೫ನೇ ತಾರೀಖು ಸ್ವಾತಂತ್ರ್ಯ ದಿನಾಚರಣೆಯ ದಿನ ಮೈಸೂರು ಆಕಾಶವಾಣಿಯು ವಿಶೇಷ ಪ್ರಸಾರಗಳನ್ನು ಏರ್ಪಡಿಸಿರುತ್ತದೆ. ಅಂದಿನ ಕಾರ್ಯಕ್ರಮ ಈರೀತಿ ಇದೆ:—

ಬೆಳಗ್ಗೆ ೭ ಗಂಟೆಗೆ ವಂದೇಮಾತರಂ, ೭-೫ ಎ. ವಿ. ನಾರಾಯಣಪ್ಪನವರಿಂದ ನಾಗಸ್ವರ, ೭-೧೫ ದೆಹಲಿಯಲ್ಲಿ ಪ್ರಧಾನಿ ನೆಹರೂರವರು ನಡೆಸುವ ಧ್ವಜಾರೋಹಣ ಪುನಃಪ್ರಸಾರ.

ಮಧ್ಯಾಹ್ನ ೧-೩೦ ರಾಷ್ಟ್ರೀಯ ಭಾವನಾ ಸಂಗೀತ, ೧-೫೦ ತಿರುಮಲೆ ರಾಜಮ್ಮನವರಿಂದ 'ಆಧುನಿಕ ಭಾರತದಲ್ಲಿ ಮಹಿಳೆಯರ ಪಾತ್ರ' ಭಾಷಣ, ೨-೦ ದೇವೀರಪ್ಪ-ಸ್ವತಂತ್ರಶಿಲ್ಪಿಗಳು- ಮಕ್ಕಳಿಗಾಗಿ.

ಸಂಜೆ—೫-೩೦ ಮತ್ತು ೮-೩೦ ನೀಲಮ್ಮ ಕಡಾಂಬಿಯವರಿಂದ ವೀಣೆ ಮತ್ತು ಸಂಗೀತ, ೬-೧೫ ಕನ್ನಡ ಪದ್ಯಗಳು ಪಿ. ಕಾಳಿಂಗರಾವ್, ೬-೩೦ ಪಂಚವಾರ್ಷಿಕ ಯೋಜನೆಯಲ್ಲಿ ವ್ಯವಸಾಯಗಾರನ ಪಾತ್ರ ಎ. ಕೃಷ್ಣಮೂರ್ತಿರಾವ್, ಭಾಷಣ ಮತ್ತು ವಿಷಕಂಠರಾವ್ ಲಾವಣಿ, ೭-೩೦ ಸ್ವತಂತ್ರದಿನ ಸಂದೇಶ-ಕೆ. ಹನುಮಂತಯ್ಯ ೮-೦ ಬೆಂಗಳೂರಿನಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮ ಪುನಃ ಪ್ರಸಾರ, ೮-೩೦ ಎಚ್ಚಮ್ಮನಾಯಕ- ನಾಟಕ ಜಿ. ಸದಾಶಿವರಾವ್ ೯-೧೫ ಬಿಸ್ಮಿಲ್ಲಾಖಾನರ ಶಹನಾಯ್, ೯-೩೦ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ ಗಜಾನನ್ವಾರ್ ಜೋಷಿ, ಕೃಷ್ಣ ಉದಯವರ್ಕಾರ್, ಬಸವರಾಜ ರಾಜಗುರು ೧೧-೦ ಮುಕ್ತಾಯ.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೪

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನಾಳೆಯದಿನ ಬೆಳಗ್ಗೆ ೯ ಗಂಟೆಗೆ ಪುರಸಭೆಯ ಆಶ್ರಯದಲ್ಲಿ ಪುರಭವನ ಮೈದಾನದಲ್ಲಿ ಧ್ವಜಾರೋಹಣ, ಮತ್ತು ವಂದನಾ ಸ್ವೀಕಾರ ನಡೆಯುತ್ತದೆ. ಸಂಜೆ ೬ ಗಂಟೆಗೆ ಪುರಭವನದಲ್ಲಿ ಬಹಿರಂಗಸಭೆ ನಡೆಯುವುದು. ಇದರಲ್ಲಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಭಾಷಣ ಮಾಡುತ್ತಾರೆ. ನಗರ ಕಾಂಗ್ರೆಸ್ ಸಮಿತಿಯವರು ನೃತ್ಯ, ಭಾರತ ವಾಚನ ಮುಂತಾದುವನ್ನು ಏರ್ಪಡಿಸಿರುವರು.

ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಉಪಾಧ್ಯಾಯರ ಕಾಲೇಜಿನಲ್ಲಿ ಶ್ರೀ ಡಿ.ಎಲ್. ನರಸಿಂಹಾಚಾರ್ಯರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯುವುದು

ರಾಜಧಾನಿಯ ವರಲಕ್ಷ್ಮೀ ಲಲಿತಕಲಾಸಂಸ್ಥೆಯವರು ನಾಳೆ ಸಂಜೆ ೫ ಗಂಟೆಗೆ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ಶ್ರೀ ಎಂ. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಮಾರಂಭ ಏರ್ಪಡಿಸಿದ್ದಾರೆ.

ಪಾಕೀಸ್ತಾನ ಪ್ರಧಾನಿ ಭಾನುವಾರ ದೆಹಲಿಗೆ ಬರುವರು

ಕಾಶ್ಮೀರ ಪರಿಸ್ಥಿತಿ ಬಗ್ಗೆಯೂ ಚರ್ಚೆ ನಡೆಯುತ್ತದೆ

ಪಾಕೀಸ್ತಾನ ಪ್ರಧಾನಿ ಮಹಮ್ಮದ್ ಆಲಿಯವರು ಇದೇ ೧೬ ನೇ ತಾರೀಖು ಭಾನುವಾರದಿನ ಕರಾಚಿಯಿಂದ ಹೊಸ ದೆಹಲಿಗೆ ಬಂದು ಪ್ರಧಾನಿ ನೆಹರೂರವರೊಡನೆ ಲಂಡನ್ನಿನಲ್ಲಿ ನಡೆದ ಮಾತುಕತೆಗಳನ್ನು ಮುಂದುವರಿಸುವರೆಂದು ಅಧಿಕೃತವಾಗಿ ಹೇಳಲಾಗಿದೆ.

ನಿನ್ನೆಯದಿನ ಮಹಮ್ಮದ್ ಆಲಿಯವರು ಈ ವಿಷಯವನ್ನು ತಮ್ಮ ಮಂತ್ರಿಮಂಡಲದ ಸಭೆಯನ್ನು ನಡೆಸಿದನಂತರ ತಿಳಿಸಿದರೆಂದೂ ಇದೇ ಸುದ್ದಿಯು ಭಾರತ ಸರಕಾರಕ್ಕೂ ಬಂದಿರುವುದಾಗಿ ಹೇಳಲಾಗಿದೆ.

ಅವರು ಸುದ್ದಿಗಾರರೊಡನೆ ಮಾತನಾಡುತ್ತಾ ತಾವು ಪ್ರಧಾನಿ ನೆಹರೂರವರೊಡನೆ ಕಾಶ್ಮೀರ ಪರಿಸ್ಥಿತಿಯ ಬಗ್ಗೆಯೂ ಮಾತುಕತೆ ನಡೆಸಿ ಅದಕ್ಕೆ ಸಂಬಂಧಪಟ್ಟ ವಿವಾದಗಳ ಪರಿಹಾರಗಳ ವಿಷಯವಾಗಿಯೂ ಚರ್ಚಿಸುವುದಾಗಿ ಹೇಳಿದ್ದಾರೆ.

ಅವರು ದೆಹಲಿಯಲ್ಲಿ ಎಷ್ಟುದಿನ ಇರಬೇಕಾಗುವ ಅವಶ್ಯಕತೆ ಕಾಣಬರುತ್ತದೋ ಅಷ್ಟುದಿನವಿರುವುದಾಗಿ ಮತ್ತೊಂದು ಪ್ರಶ್ನೆಗೆ ಉತ್ತರವಾಗಿ ತಿಳಿಸಿದ್ದಾರೆ.

ಪ್ರವಾಸಿಗರ ಸುದ್ಧಿ ಕಛೇರಿ

ತಿರುಪತಿ ದೇವಸ್ಥಾನದ ಆಡಳಿತ ವರ್ಗದವರು ದೆಹಲಿ, ಬೊಂಬಾಯಿ, ಬೆಂಗಳೂರುಗಳಲ್ಲಿ ಪ್ರವಾಸಿಗರ ಸುದ್ದಿ ಕಛೇರಿಯನ್ನು ತೆರೆಯುವರೆಂದು ತಿಳಿಸಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೩—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೮	೨೬—೧೦
ಹರಳು	—	—
ಎಳ್ಳು	೫೫—೨	೭೬—
ಹೊಂಗೆಬೀಜ	—	—
ಹುರುಳಿ	೪೬—೨	೪೮—೮
ಹೆಸರು	—	—
ಅವರೆ	—	—
ಉದ್ದು	೫೭—೮	೬೯—
ಹುಚ್ಚೆಳ್ಳು	—	—
ಅಲಸಂದೆ	೬೭—೧೦	೬೮—೧೦
ಮೆಣಸಿನಕಾಯಿ	—	—
ಹುಣಸೇಹಣ್ಣು	—	—
ಸೀಗೆಕಾಯಿ	—	—
ಬೆಲ್ಲ	—	
ತೆಂಗಿನಕಾಯಿ	೧೯೫	೨೬೮

ಕಾಶ್ಮೀರದಲ್ಲಿ ಭತ್ತದ ಬೆಲೆ ಇಳಿಸಲಾಯಿತು

ನೂತನ ಸರ್ಕಾರದ ಸುಧಾರಣೆ

ಕಾಶ್ಮೀರದಲ್ಲಿ ಷೇಕ್ ಅಬ್ದುಲ್ಲಾರ ಪದಚ್ಯುದ ಆದನಂತರ ಸ್ವಲ್ಪಗಲಾಟೆ ಆಗಿ, ಈಗ ಪರಿಸ್ಥಿತಿ ಶಾಂತವಾಗಿದೆ. ಒಟ್ಟು ೯೦ ಮಂದಿ ಗಲಭೆಗಾರರನ್ನು ದಸ್ತಗಿರಿ ಮಾಡಲಾಗಿದೆ. ಶ್ರೀನಗರದಲ್ಲಿ ವಿಶೇಷ ನ್ಯಾಯಾಧೀಶರುಗಳನ್ನು ನೇಮಿಸಲಾಗಿದೆ.

ಜಮ್ಮುವಿನ ಜೈಲಿನಲ್ಲಿ ಮಾಜಿ ರೆವಿನ್ಯೂ ಸಚಿವ ಮಿರ್ಜಾ ಅಫ್‌ಜಲ್ ಬೇಗ್‌ರನ್ನು ಬಂಧನದಲ್ಲಿಡಲಾಗಿದೆ. ಷೇಕ್ ಅಬ್ದುಲ್ಲಾ ಮತ್ತು ಮಿರ್ಜಾ ಬೇಗ್‌ರವರ ಪತ್ನಿಯವರಿಗೆ ೧ ಸಾವಿರ ರೂ. ಮಾಸಾಶನ ಕೊಡಲಾಗಿದೆ. ಷೇಕ್ ಅಬ್ದುಲ್ಲಾರ ಆಪ್ತ ಕಾರ್ಯದರ್ಶಿ ಶ್ರೀ ಆರ್. ಸಿ. ರೇನಾರವರನ್ನು ಹಿಂದೆ ಬಂಧಿಸಲ್ಪಟ್ಟು, ಈಗ ಬಿಡುಗಡೆ ಮಾಡಲಾಗಿದೆ.

೮೨ ಸಾವಿರ ರೂ. ವೆಚ್ಚದಲ್ಲಿ ಷೇಕ್ ಅಬ್ದುಲ್ಲಾರು ಕೊಂಡ ಬಾರಿ ಮೋಟಾರು ಕಾರನ್ನು ನೂತನ ಪ್ರಧಾನಿ ಉಪಯೋಗಿಸುವುದಿಲ್ಲವೆಂದೂ, ಅದನ್ನು ವಿಶೇಷ ಸಮಾರಂಭಗಳಿಗೆ ಮಾತ್ರ ಉಪಯೋಗಿಸಲ್ಪಡುವುದೆಂದೂ ಹೇಳಲಾಗಿದೆ.

ನೂತನ ಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರು ಪ್ರಧಾನಿ ಹುದ್ದೆ ಸ್ವೀಕರಿಸಿದೊಡನೆಯೇ ಅನೇಕ ಸುಧಾರಣೆಗಳನ್ನು ಜಾರಿಗೆ ತಂದಿದ್ದಾರೆ. ಅವರಲ್ಲಿ ಮುಖ್ಯವಾದುದು ಭತ್ತದ ಬೆಲೆಯನ್ನು ೧೦-೮-೦ ಯಿಂದ ೮-೮-೦ ರೂಗೆ ಇಳಿಸಿದ್ದಾರೆ. ಸರ್ಕಾರದವರು ರೈತರಿಂದ ಬಲಾತ್ಕಾರವಾಗಿ ಆಹಾರ ಸಂಗ್ರಹಣೆ ಮಾಡುತ್ತಿದ್ದ ನೀತಿಯನ್ನು ಬದಲಾಯಿಸಿದ್ದಾರೆ. ಸರ್ಕಾರದ ಖರ್ಚನ್ನು ಕಡಮೆಮಾಡಿ, ಬಡ ನೌಕರರ ಸಂಬಳವನ್ನು ಹೆಚ್ಚಿಸಲಾಗುವುದೆಂದೂ ಅವರು ಭರವಸೆ ಕೊಟ್ಟಿದ್ದಾರೆ.

ಅಖಂಡ ಭಾರತ ದಿನ

ಮೈಸೂರು ೧೪

ರಾಜಧಾನಿಯ ಭಾರತೀಯ ಜನಸಂಘದ ಆಶ್ರಯದಲ್ಲಿ ಆಗಸ್ಟ್ ೧೫ರಂದು 'ಅಖಂಡ ಭಾರತದಿನ' ವನ್ನು ಆಚರಿಸಲಾಗುವುದು. ಇದರ ಅಂಗವಾಗಿ ಸುಬ್ಬರಾಯನಕೆರೆಯ ಮೈದಾನದಲ್ಲಿ ಸಂಜೆ ೬ ಗಂಟೆಗೆ ಸಾರ್ವಜನಿಕ ಸಭೆ ನಡೆಯುತ್ತದೆ.

ಉಚಿತ ನೇತ್ರಚಿಕಿತ್ಸೆ

ನೇತ್ರ ವೈದ್ಯರಾದ ಡಾ|| ಮೋದಿಯವರು ಇದೇ ೧೬ನೇ ತಾರೀಖು ಮಳವಳ್ಳಿ, ೧೭ನೇ ತಾ|| ನಾಗಮಂಗಲ, ೧೮ನೇ ತಾ|| ಕೃಷ್ಣರಾಜಪೇಟೆ, ೧೯ನೇ ತಾ|| ಪಾಂಡವಪುರ ಮತ್ತು ೨೦ನೇ ತಾರೀಖು ಶ್ರೀರಂಗಪಟ್ಟಣ ವಿಶ್ರಾಂತಿ ಭವನಗಳಲ್ಲಿ ಉಚಿತವಾಗಿ ನೇತ್ರಚಿಕಿತ್ಸೆ ನಡೆಸುತ್ತಾರೆ.

ಮದ್ಯಪಾನ ನಿರೋಧ ಸಪ್ತಾಹ

ಸ್ವಾತಂತ್ರ್ಯೋತ್ಸವದ ಅಂಗವಾಗಿ ನಾಳೆಯಿಂದ ಮಧ್ಯಪ್ರದೇಶದಲ್ಲಿ ಮದ್ಯಪಾನ ನಿರೋಧ ಸಪ್ತಾಹವನ್ನು ಆಚರಿಸಲಾಗುತ್ತದೆ.

ರಣಜಿತ್

14—8—53 ರಿಂದ 10ನೇ ವಾರ

"ಫಿಲ್ಮೀಸ್ತಾನ್"ರವರ ಈ ವರ್ಷದ ಅಮೋಘ ಸಂಗೀತಮಯ ಹಿಂದೀ ಕಲಾಕೃತಿ.

ಅನಾರ್ಕಲಿ

ಪಾತ್ರ: ಬಿನಾರಾಯ್, ಪ್ರದೀಪ್ ಕುಮಾರ್, ಕುಲ್‌ದೀಪ್, ಮುಬಾರಕ್

ಸಂಗೀತ ಸಿ. ರಾಮಚಂದ್ರ.

ಅಪೇರ

14—8—53 ರಿಂದ 3ನೇ ವಾರ

ಪ್ರತಿದಿನ ಮೂರು ಆಟಗಳು

ಇನ್‌ಸ್ಪೆಕ್ಟರ್ ತಮಿಳು

ಪಾತ್ರ:-ಬಾಲಚಂದರ್, ಟಿ. ಕೆ. ಷಣ್ಮುಗಂ, ಟಿ. ಕೆ. ಸರಸ್ವತಿ, ಅಂಜಲಿದೇವಿ

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು:— ಹಿ. ಕಾ. ಸುಬ್ಬರಾವ್

ಮೋತಿ ಮುದ್ರಣಾಲಯ ಮೈಸೂರು.

WANTED

A Printing machine in running condition—Crown or Demmy Folio

Contact:—

The SAMACHARA office, Mothikhana Buildings, Jaganmohan Palace Road, Mysore.







ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೪

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧

೧೭-೮-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಗೋದಾವರಿ ನದಿಯಲ್ಲಿ ವಿಶೇಷ ಪ್ರವಾಹ

ರಾಜಮಹೇಂದ್ರಿ ಪಟ್ಟಣವೆಲ್ಲಾ ಜಲಮಯ

ಗೋದಾವರಿ ನದಿಯಲ್ಲಿ ವಿಶೇಷವಾಗಿ ಪ್ರವಾಹವು ಬಂದು ರಾಜಮಹೇಂದ್ರಿ ನಗರವೆಲ್ಲಾ ನೀರಿನಿಂದ ತುಂಬಿರುವುದಾಗಿ ವರದಿಯಾಗಿದೆ.

ಕಳೆದ ೫೩ ವರ್ಷಗಳಲ್ಲಿ ಈ ರೀತಿಯಾದ ಪ್ರವಾಹವು ಬಂದಿಲ್ಲವೆಂದು ಹೇಳಲಾಗಿದೆ.

ರಾಜಮಹೇಂದ್ರಿ ಮತ್ತು ಗೋದಾವರಿ ರೈಲ್ವೆ ಮಾರ್ಗದಲ್ಲಿ ನೀರು ರೈಲು ಕಂಬಿಯ ಮೇಲೆ ೩-೪ ಅಡಿಗಳಷ್ಟು ನಿಂತು ಈ ಮಾರ್ಗದಲ್ಲಿ ಓಡಾಡುವ ರೈಲುಗಳನ್ನೆಲ್ಲಾ ಬೇರೆ ಕಡೆ ಹೋಗುತ್ತಿವೆ.

ರಾಜಮಹೇಂದ್ರಿ ಪಟ್ಟಣದಲ್ಲಿ ನೀರು ಊರಿನಲ್ಲೆಲ್ಲಾ ನುಗ್ಗಿದೆ. ರೈಲ್ವೆ ನಿಲ್ದಾಣವೆಲ್ಲಾ ನೀರಿನಿಂದ ತುಂಬಿದೆ. ಜನ ಮತ್ತು ಜಾನುವಾರುಗಳ ಸಾವುನೋವು, ಭತ್ತದ ಫಸಲಿಗೆ ವಿಶೇಷ ನಷ್ಟ ಸಂಭವಿಸಿರುವುದಾಗಿ ಹೇಳಲಾಗಿದೆ. ಸರ್ಕಾರದವರು ಪರಿಹಾರ ಕಾರ್ಯಗಳನ್ನು ಕೈಗೊಂಡಿರುವರು.

ನೂತನ ಹೊಟೆಲ್ ಕೆಲಸಗಾರರ ಸಂಘ

ಮೈಸೂರು ೧೭

ರಾಜಧಾನಿಯಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ನಿಯೋ ಹೊಟೇಲ್ ಕೆಲಸಗಾರರ ಸಂಘಕ್ಕೆ ಚುನಾವಣೆ ನಡೆದು ಕೆಳಕಂಡ ಅಧಿಕಾರ ವರ್ಗದವರ ಚುನಾಯಿತರಾಗಿದ್ದಾರೆ:—

ಅಧ್ಯಕ್ಷ ಶ್ರೀ ಡಿ. ರಂಗನಾಥ್ ಉಪಾಧ್ಯಕ್ಷ--ಶ್ರೀ ಹೆಚ್. ಎಸ್. ಮೂರ್ತಿ ಕಾರ್ಯದರ್ಶಿ--ಶ್ರೀ ಡಿ. ವಿ. ದತ್ತಾತ್ರೇಯ ಉಪಕಾರ್ಯದರ್ಶಿ--ಶ್ರೀ ಡಿ. ಕೆ. ವೇಣುಗೋಪಾಲ್ ಖಜಾಂಜಿ--ಶ್ರೀ ಟಿ. ಕೆ. ನಾರಾಯಣ್.

ಮೇಲ್ಕಂಡ ಸಂಸ್ಥೆಯವರು ಮೊನ್ನೆ ಸ್ವಾತಂತ್ರ್ಯದಿನಾಚರಣೆಯನ್ನು ಆಚರಿಸಿದರು ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯ ಮತ್ತು ಶ್ರೀ ಮೀರ್‌ನಜರ್ ಹುಸೇನ್‌ರು ಭಾಷಣ ಮಾಡಿದರು.

ನೇತಾಜಿಯವರ ಪ್ರಶಂಸೆ

ನಗರದ ಸಾರ್ವಜನಿಕ ವಿದ್ಯಾರ್ಥಿನಿಲಯದ ಸಂಘದ ಆಶ್ರಯದಲ್ಲಿ, ನಿನ್ನೆ ಶ್ರೀ ಐ. ಎನ್. ಎ. ರಾಮರಾಯರು ನೇತಾಜಿ ಸುಭಾಷ್ ಚಂದ್ರಬೋಸರ ವಿಷಯವಾಗಿ ಭಾಷಣಮಾಡಿದರು. ಶ್ರೀ ಎಂ. ಎಸ್. ನಂಜುಂಡರಾಯರ ಅಧ್ಯಕ್ಷತೆ ವಹಿಸಿದ್ದರು.

ಪಾಕ್ ಪ್ರಧಾನಿಗೆ ದೆಹಲಿಯಲ್ಲಿ ಅಭೂತ ಸ್ವಾಗತ

ಪಾಕೀಸ್ತಾನ ಪ್ರಧಾನಿ ಮಹಮದಾಲಿಯವರು ಪ್ರಧಾನಿ ನೆಹರೂರವರೊಡನೆ ತಮ್ಮ ಚರ್ಚೆಯನ್ನು ಮುಂದುವರಿಸಲು ನಿನ್ನೆಯ ದಿನ ಹೊಸ ದೆಹಲಿಗೆ ಆಗಮಿಸಿದರು ಅವರೊಡನೆ ಬೇಗಂ ಮಹಮದಾಲಿ, ವಿದೇಶಾಂಗ ಸಚಿವ ಮಹಮದ್ ಜಫರುಲ್ಲಾಖಾನ್ ಮತ್ತು ಪಾಕ್ ಸರ್ಕಾರದ ಹಿರಿಯ ಅಧಿಕಾರಿಗಳು ಆಗಮಿಸಿದ್ದಾರೆ.

ಮಿ|| ಮಹಮದ್ ಆಲಿಯವರನ್ನು ಸ್ವಾಗತಿಸಲು ದೆಹಲಿ ವಿಮಾನ ನಿಲ್ದಾಣದಲ್ಲಿ ೧೦ ಸಾವಿರಕ್ಕಿಂತ ಹೆಚ್ಚು ನಾಗರೀಕರು, ಮಂತ್ರಿಗಳು, ರಾಯಭಾರಿ ವರ್ಗದವರು, ಪಾರ್ಲಿಮೆಂಟ್ ಸದಸ್ಯರೂ ಸೇರಿದ್ದರು.

ವಿಮಾನವು ಬಂದೊಡನೆಯೇ ಪಾಕ್ ಪ್ರಧಾನಿಯನ್ನು ಶ್ರೀ ನೆಹರೂರವರು ಸ್ವಾಗತಿಸಿ ಪುಷ್ಪಹಾರವನ್ನು ಹಾಕಿದರು. ಕಾಂಗ್ರೆಸ್ ಮತ್ತು ಇತರ ನಾನಾ ಸಂಸ್ಥೆಗಳ ಪರವಾಗಿಯೂ ಪುಷ್ಪಹಾರವನ್ನು ಅವರಿಗೆ ಅರ್ಪಿಸಲಾಯಿತು. ಮಹಮದಾಲಿಯವರು ಸೈನ್ಯದ ಗೌರವ ರಕ್ಷೆಯನ್ನ ಸ್ವೀಕರಿಸಿ, ಜೀಪಿನಲ್ಲಿ ಶ್ರೀ ನೆಹರೂ ಮತ್ತು ತಮ್ಮ ಪತ್ನಿಯೊಡನೆ ರಾಷ್ಟ್ರಪತಿ ಭವನಕ್ಕೆ ತೆರಳಿದರು. ದಾರಿಯುದ್ದಕ್ಕೂ ಸಾವಿರಾರು ಜನರು ಅವರಬಗ್ಗೆ ಹರ್ಷೋದ್ಗಾರಗಳನ್ನು ವ್ಯಕ್ತಪಡಿಸಿದರು. ಅವರು ನಿನ್ನೆ ರಾತ್ರಿ ಅನೌಪಚಾರಿಕರಾಗಿ ರಾಷ್ಟ್ರಾಧ್ಯಕ್ಷರನ್ನು ಭೇಟಿಮಾಡಿದ್ದರು. ರಾತ್ರಿ ನೆಹರೂರವರೊಡನೆ ಭೋಜನಮಾಡಿದರು. ಇಂದಿನಿಂದ ಮಾತುಕತೆಗಳು ಪ್ರಾರಂಭವಾಗುತ್ತದೆ.

ಈಗಿನ ಏರ್ಪಾಡಿನಂತೆ ಮಹಮದಾಲಿಯವರು ೪ ದಿನಗಳಕಾಲ ದೆಹಲಿಯಲ್ಲಿರುವರು.

● ಟೆಲಿಫೋನ್ ಎಕ್ಸ್‌ಚೇಂಜ್‌ನಲ್ಲಿ ಮೊನ್ನೆಯದಿನ ಬೆಳಗ್ಗೆ ಶ್ರೀ ವೆಂಕಟರಾಮರವರು ಧ್ವಜಾರೋಹಣ ನಡೆಸಿದರು. ಅನಂತರ ಸಿಹಿತಿಂಡಿಯನ್ನು ಹಂಚಲಾಯಿತು.

○ ಮೈಸೂರು ಜಲಪುರಿ ಆದಿಜಾಂಬವ ಮೊಹಲ್ಲಾದ ಶ್ರೀ ದುರ್ಗಾಂಬಾ ಸಹಕಾರ ಸಂಘದವರು ಸ್ವಾತಂತ್ರ್ಯದಿನಾಚರಣೆಯನ್ನು ಆಚರಿಸಿ, ಮಕ್ಕಳಿಗೆ ಬಹುಮಾನಗಳನ್ನು ಕೊಟ್ಟರು.

ಪರ್ಶಿಯಾ ಸರ್ಕಾರ ಉರುಳಿಸಲು ಸೈನ್ಯ ಪಿತೂರಿ

ಷಾ ರವರು ಇರಾಕಿಗೆ ಪರಾರಿ

ಪರ್ಶಿಯಾದಲ್ಲಿ ಡಾ|| ಮುಸಾಡೆಕ್‌ರವರ ಸರ್ಕಾರವನ್ನು ಉರುಳಿಸಿ ಅವರನ್ನು ಕೊಲೆ ಮಾಡಲು ರಾಯಲ್ ಗಾರ್ಡ್ಸ್ ದಳದವರು ಮಾಡಿದ ಪಿತೂರಿಯು ವಿಫಲವಾಗಿರುವುದಾಗಿ ವರದಿಯಾಗಿದೆ.

ಈ ದಳದವರು ಮೊದಲು ವಿದೇಶಾಂಗ ಸಚಿವ ಮಿ|| ಫಾತಿಮಿಯವರನ್ನು ದಸ್ತಗಿರಿ ಮಾಡಿ ಪ್ರಧಾನಿ ಸೇನಾನಿಯನ್ನೂ ಹಿಡಿಯಲು ಹೋಯಿತು. ಇದರ ಇನ್ನೊಂದು ತಂಡವು ಡಾ|| ಮುಸಾಡೆಕ್‌ರವರನ್ನು ಹಿಡಿಯಲು ಹೋದಾಗ ಅಲ್ಲಿದ್ದ ಗೃಹರಕ್ಷಕರು ಅನುಮಾನದಿಂದ ಈ ದಳದ ನಾಯಕನನ್ನು ದಸ್ತಗಿರಿ ಮಾಡಿದರು. ಕೂಡಲೇ ದಸ್ತಗಿರಿಯಾಗಿದ್ದ ವಿದೇಶಾಂಗ ಸಚಿವರನ್ನೂ ಮತ್ತು ಇನ್ನೂ ಕೆಲವರನ್ನು ಬಿಡುಗಡೆ ಮಾಡಿ ರಾಯಲ್ಸ್ ದಳದವರನ್ನೆಲ್ಲಾ ಹಿಡಿಯಲಾಯಿತು

ಷಾರವರು ಇರಾಕಿಗೆ ತಮ್ಮ ಪತ್ನಿಯೊಡನೆ ಪರಾರಿಯಾಗಿರುವುದಾಗಿ ಗೊತ್ತಾಗಿದೆ.

ಕಾವೇರಿಯಲ್ಲಿ ಪ್ರವಾಹ

ಮೈಸೂರು ೧೭

ಇತ್ತೀಚಿಗೆ ಕೊಡಗಿನಲ್ಲಿ ವಿಶೇಷ ಮಳೆ ಆದ್ದರಿಂದ ಕಾವೇರಿಯಲ್ಲಿ ಪುನಃ ಪ್ರವಾಹ ಬಂದಿದೆ. ಈದಿನ ಬೆಳಿಗ್ಗೆ ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ೧೨೪-೬ ಅಡಿಗಳಷ್ಟು ಇತ್ತು ೧೧೩,೧೧೮ ಕ್ಯೂಸೆಕ್ಸ್‌ಗಳಷ್ಟು ನೀರು ಬರುತ್ತಿದೆ, ಮತ್ತು ೧,೨೫.೫೩೮ ಕ್ಯೂಸೆಕ್ಸ್‌ಗಳಷ್ಟು ನೀರನ್ನು ಹೊರಕ್ಕೆ ಬಿಡಲಾಗುತ್ತಿದೆ.

ಕಾಶ್ಮೀರದ ಆಕ್ರಮಣಗಾರರಿಗೆ

ಕೇಂದ್ರ ಸಚಿವರ ಎಚ್ಚರಿಕೆ

ಬೆಂಗಳೂರು ೧೭

ಎಲ್ಲಿಯವರೆಗೆ ಕಾಶ್ಮೀರ ಜನತೆ ಭಾರತದೊಡನಿರಲು ಬಯಸುವುದೋ ಅಲ್ಲಿಯವರೆವಿಗ ಕಾಶ್ಮೀರ ಭಾರತಕ್ಕೆ ಸೇರಿದ್ದು ಆಕ್ರಮಣಕಾರರು ಯಾರೇ ಆಗಲಿ, ಕಾಶ್ಮೀರದ ಒಂದು ಕಲ್ಲನ್ನು ಅಪಹರಿಸಲು ಪ್ರಯತ್ನಿಸಿದರೂ ಅವರ ಕೈ ಕತ್ತರಿಸಲಾಗುವುದೆಂದು ಭಾರತ ರಕ್ಷಣಾಸಚಿವ ಶ್ರೀ ಮಹಾವೀರ್ ತ್ಯಾಗಿಯವರು ನಿನ್ನೆದಿನ ಇಲ್ಲಿಯ ಹಿಂದಿ ಪ್ರಚಾರ ಸಮಿತಿ ಸಭೆಯಲ್ಲಿ ಎಚ್ಚರಿಕೆ ಕೊಟ್ಟಿದ್ದಾರೆ.

ಮುಖ್ಯಮಂತ್ರಿಗಳಿಂದ ನಗರ ಪರಿಶೀಲನೆ

ಮೈಸೂರು ೧೭

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಬೆಳಿಗ್ಗೆ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯ, ಕಮೀಷನರ್ ಶ್ರೀ ಲಕ್ಷ್ಮಣರಾವ್, ಟ್ರಸ್ಟ್‌ಬೋರ್ಡ್ ಅಧ್ಯಕ್ಷ ಶ್ರೀ ಲಿಂಗಣ್ಣ ಮುಂತಾದವರೊಡನೆ ನಗರ ಪರಿಶೀಲನೆ ನಡೆಸಿದರು. ಸೀವೇಜ್ ಫಾರಂ, ರಾಮಾನುಜ ರಸ್ತೆಯಲ್ಲಿರುವ ಎಲೆ ತೋಟಗಳು, ನಜರ್‌ಬಾದ್ ಬಳಿ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರಿಗೆ ಹೌಸಿಂಗ್ ಕಾರ್ಪೋರೇಷನ್‌ರವರು ಕಟ್ಟಿರುವ ಗೃಹಗಳು ಮತ್ತು ಇತರ ಸ್ಥಳಗಳಿಗೆ ಭೇಟಿ ಇತ್ತಿದ್ದರು.

ಪೂರ್ವಭಾವಿ ತಿಳುವಳಿಕೆ ಕೊಡದೆ ನೀರುಬಂದು

ನಿನ್ನೆ ಬೆಳಿಗ್ಗೆ ೮ ಗಂಟೆ ವೇಳೆಗೆ ನಗರದಲ್ಲಿ ಅನೇಕ ಕಡೆ ಇದಕ್ಕಿದ್ದಂತೆಯೇ ನೀರಿನ ಸರಬರಾಜು ನಿಂತುಹೋಗಿ ಜನರಿಗೆ ವಿಶೇಷ ತೊಂದರೆಯುಂಟಾಯಿತು. ಮಹಿಳೆಯರು ಬಾವಿಗಳನ್ನು ಹುಡಿಕಿಕೊಂಡು, ಹೋಗುತ್ತಿದ್ದ ದೃಶ್ಯವು ಎಲ್ಲೆಡೆಯಲ್ಲೂ ಕಾಣಬರುತ್ತಿತ್ತು ವಿಚಾರಿಸಲಾಗಿ ವಿದ್ಯುತ್ ನಿಂತುಹೋದ್ದರಿಂದ ಈರೀತಿಯಾಯಿತೆಂದು ತಿಳಿಯಬಂತು.

ಇಂತಹ ಸನ್ನಿವೇಶಗಳಲ್ಲಿ ಪುರಸಭೆಯವರು ಅಥವಾ ವಿದ್ಯುತ್ ಇಲಾಖೆಯವರು ಪೂರ್ವಭಾವಿ ಪತ್ರಿಕೆಗಳ ಮೂಲಕ ಮತ್ತು ಇತರ ರೀತಿ ಜನರಿಗೆ ತಿಳುವಳಿಕೆ ಕೊಡುತ್ತಿದ್ದರು. ಆದರೆ ಈಸಲ ಮಾತ್ರ ಹಾಗೆ ಮಾಡದಿರಲು ಕಾರಣವೇನೋ ತಿಳಿಯದಾಗಿದೆ. ಸಂಜೆ ೪ ಗಂಟೆ ವೇಳೆಗೆ ವಿದ್ಯುತ್ ಬರುವುದೆಂದು ಅಧಿಕಾರಿಗಳಿಂದ ತಿಳಿದುಬಂದರೂ ಸಂಜೆ ೫--೩೦ ವೇಳೆ ವಿದ್ಯುತ್ ಬಂದಿತು. ಇನ್ನು ಮುಂದಾದರೂ ಸಂಬಂಧಪಟ್ಟವರು ಎಚ್ಚರಿಕೆಯಿಂದಿರುವುದು ಉತ್ತಮ.

● ಮೈಸೂರಿನನಿವೃತ್ತ ಸೂಪರಿಂಟೆಂಡಿಂಗ್ ಇಂಜನಿಯರಾದ ಶ್ರೀ ಎಂ. ಸಿ. ಸಂಪತ್ತಯ್ಯಂಗಾರ್‌ರವರನ್ನು ಅಸ್ಸಾಂನಲ್ಲಿ ನಡೆಯಲಿರುವ ವಿದ್ಯುಚ್ಛಕ್ತಿಯೋಜನೆಯ ಕಾರ್ಯಗಳಿಗಾಗಿ ವಿಶೇಷ ಇಂಜನಿಯರಾಗಿ ಅಲ್ಲಿಯ ಸರ್ಕಾರವು ನೇಮಿಸಿಕೊಂಡಿದೆ.

ಪ್ರಾಂತ್ಯಗಳ ಪುನರ್ರಚನೆ ಆಗಬೇಕು

ಭಾರತದಲ್ಲಿ ೧೫ ಅಥವ ೧೮ ಸ್ಥಾನಗಳು ಮಾತ್ರ ಇರಬೇಕು

ಮುಖ್ಯಮಂತ್ರಿ ಹನುಮಂತಯ್ಯನವರ ಸಲಹೆ

ಸ್ವರಾಜ್ಯದ ಉದಯವನ್ನು ಕಣ್ಣಾರೆ ಕಂಡ ನಾವು ಭಾಗ್ಯಶಾಲಿಗಳು. ಈ ಸ್ವರಾಜ್ಯ ರಾಮರಾಜ್ಯವಾಗಿ ಪರಿಣಮಿಸುವಂತೆ ಅದನ್ನು ರೂಪಿಸುವ ಭಾಗ್ಯವು ನಮ್ಮದು. ನಮ್ಮ ಭಾಗ್ಯಕ್ಕೆ ರಾಷ್ಟ್ರದ ಜನರಿಗೆಲ್ಲ ತಿನ್ನುವುದಕ್ಕಿದ್ದು, ಉಡುವುದಕ್ಕಿದ್ದು, ಅವರು ಸುಸಂಸ್ಕೃತರಾಗಿ, ದೈವಭಕ್ತರಾಗಿ, ಧರ್ಮಶ್ರದ್ಧೆಯುಳ್ಳವರಾಗಿ ಜೀವನ ನಡೆಸುವುದಾದರೆ ರಾಮರಾಜ್ಯ ದೊರಕಿಸಿದಂತೆಯೇ ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಭಾರತ ಸ್ವಾತಂತ್ರ್ಯದಿನವಾದ ಮೊನ್ನೆ ಆಕಾಶವಾಣಿಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಪಂಚವಾರ್ಷಿಕ ಯೋಜನೆಯ ವಿಷಯವಾಗಿ ಮುಖ್ಯಮಂತ್ರಿಗಳು ಮಾತನಾಡುತ್ತಾ ನಮ್ಮ ಸಂಸ್ಥಾನಕ್ಕೆ ಪಂಚವಾರ್ಷಿಕ ಯೋಜನೆಗಾಗಿ ೩೬·೬೦ ಕೋಟಿ ರೂ. ಗಳನ್ನು ವೆಚ್ಚಮಾಡಬೇಕೆಂದು ನಿಶ್ಚಯಿಸಲಾಗಿದೆ. ಈಗ ಕೈಗೊಂಡಿರುವ ದೊಡ್ಡ ನೀರಾವರೀ ಕೆಲಸಗಳಿಂದ ೧೧೩೫೭೬ ಎಕರೆಗಳಷ್ಟು ಹೊಸ ಜಮೀನು ತರಿ ಸಾಗುವಳಿಗೆ ಬರುವುದಲ್ಲದೆ ಈ ಪ್ರದೇಶದಲ್ಲಿ ಈಗಾಗಲೇ ಸಾಗುವಳಿಯಲ್ಲಿರುವ ೩೦೦೦ ಎಕರೆ ಜಮೀನಿಗೆ ನಿಶ್ಚಿತ ನೀರಿನ ಸೌಕರ್ಯ ಮಾಡಿಕೊಟ್ಟಂತಾಗುತ್ತದೆ. ಸುಮಾರು ೧೦೦೦ ಸಣ್ಣಪುಟ್ಟ ಕೆರೆಗಳನ್ನು ದುರಸ್ತು ಮಾಡಲಾಗುತ್ತದೆ. ಇದರಿಂದ ೨೫೦೦೦ ಎಕರೆಗಿಂತ ಹೆಚ್ಚಿನ ಜಮೀನಿಗೆ ನೀರಿನ ಸೌಕರ್ಯ ದೊರೆಯುತ್ತದೆ. ಕಬ್ಬಿ ಕಾಲುವೆಗಳನ್ನು ಉತ್ತಮಗೊಳಿಸುವುದರಿಂದ ೧,೨೦,೦೦೦ ಎಕರೆ ಜಮೀನಿಗೆ ನೀರು ಸಿಕ್ಕುತ್ತದೆ. ಒಟ್ಟಿನಲ್ಲಿ ಪಂಚವಾರ್ಷಿಕ ಯೋಜನೆಯಿಂದ ೪೬೨೫೬ ಎಕರೆ ಹೊಸ ತರೀ ಜಮೀನು ಸಾಗುವಳಿಗೆ ಬರುವುದಲ್ಲದೆ ೧,೪೫,೦೦೦ ಎಕರೆಗಿಂತ ಹೆಚ್ಚಿಗೆ ತರೀ ಜಮೀನಿಗೆ ಸಮೃದ್ಧಿಯಾಗಿ ನೀರು ದೊರಕಿಸಿದಂತಾಗುತ್ತದೆ. ಈ ಐದು ವರ್ಷಗಳಲ್ಲಿ ಸಂಸ್ಥಾನವು ಆಹಾರ ವಿಷಯದಲ್ಲಿ ಸ್ವಾವಲಂಬಿಯಾಗುತ್ತದೆಂದು ನುಡಿದರು.

ಈ ಯೋಜನೆಗೆ ಬೇಕಾಗುವ ಹಣದ ವಿಷಯವಾಗಿ ಅವರು ಪ್ರಸ್ತಾಪಿಸಿ, ಈ ಯೋಜನೆ ಪೂರ್ಣವಾಗಿ ಕಾರ್ಯರೂಪಕ್ಕೆ ಬರಬೇಕಾದರೆ ೯ ಕೋಟಿ ರೂ. ಗಳನ್ನು ಸಾಲವಾಗಿ ಪಡೆಯಬೇಕು. ಅಲ್ಲದೆ ತೆರಿಗೆ ಮೂಲಕ ೮ ಕೋಟಿ ರೂಪಾಯಿಗಳನ್ನು ಪಡೆಯಬೇಕು. ಈಗ ೩ ಕೋಟಿ ರೂ. ಸಾಲ ತೆಗೆಯಲಾಗಿದೆ. ಇನ್ನೂ ೬ ಕೋಟಿ ರೂಪಾಯಿಗಳ ಸಾಲವನ್ನು ತೆಗೆಯಬೇಕಾಗಿದೆ. ಈ ಸಾಲದ ಹಣವಲ್ಲದೆ ಯೋಜನೆಗಾಗಿ ಬೇಕಾಗುವ ಉಳಿಕೆಯ ಹಣವನ್ನು ತೆರಿಗೆಯಿಂದ ಪಡೆಯಬೇಕಾಗಿದೆ ಎಂದರು.

ಸರ್ಕಾರವು ಕೈಗೊಂಡಿರುವ ಸಾಂಸ್ಕೃತಿಕ ಯೋಜನೆಯನ್ನು ಅವರು ಪ್ರಸ್ತಾಪಿಸಿ ಅದರ ಅವಶ್ಯಕತೆಯನ್ನು ತಿಳಿಸಿ ಕೊಡಗು ಸಂಸ್ಥಾನವೂ ಕೂಡ ಈ ಯೋಜನೆಯಲ್ಲಿ ಭಾಗಿಯಾಗುವುದೆಂದು ತಿಳಿಸಿದರು.

ಪ್ರಾಂತ್ಯದ ಮುನಿಸಿಪಲ್ ಪ್ರದೇಶಗಳಲ್ಲಿ ಶುದ್ಧವಾದ ನೀರನ್ನು ಒದಗಿಸಲು ಎರಡೂ ಮುಕ್ಕಾಲು ಕೋಟಿ ರೂಪಾಯಿಗಳ ಯೋಜನೆಗೆ ಸರ್ಕಾರವು ಒಪ್ಪಿ ಈ ಕಾರ್ಯವನ್ನು ಪ್ರಾರಂಭಿಸಲು ೫೦ ಲಕ್ಷ ರೂಪಾಯಿಗಳ ಸಾಲವನ್ನು ಕೊಡಲಾಗಿದೆ ಎಂದು ತಿಳಿಸಿದರು.

ಆಹಾರ ಬೆಲೆಗಳ ವಿಷಯವಾಗಿ ಮಾತನಾಡುತ್ತಾ ಆಗಸ್ಟ್ ೧೬ ರಿಂದ ಸರ್ಕಾರದವರು ಬೆಲೆ ಇಳಿಸಿರುವುದನ್ನು ತಿಳಿಸಿದರು.

ಬಳ್ಳಾರಿ ಜಿಲ್ಲೆಯ ೩೮೭೧ ಚದುರ ಮೈಲಿ ವಿಸ್ತಾರವುಳ್ಳ ೬ ತಾಲ್ಲೂಕುಗಳು ಮೈಸೂರಿಗೆ ಸೇರುವುದನ್ನು ಅವರು ತಿಳಿಸುತ್ತಾ ಮೈಸೂರು ಪ್ರಜೆಗಳಾಗುವ ೬,೭೩,೭೨೨ ಜನರಿಗೆ ಸ್ವಾಗತ ನೀಡಿದರು.

ಪ್ರಾಂತ್ಯ ವಿಂಗಡನೆ ವಿಷಯವಾಗಿ ಮುಖ್ಯಮಂತ್ರಿಗಳು ಪ್ರಸ್ತಾಪಿಸಿ ಮೈಸೂರಿನ ಸುತ್ತಮುತ್ತಲಿರುವ ಪ್ರಾಂತ್ಯಗಳಿಂದ ಯಾವ ಭಾಗ ಜನರು ಮೈಸೂರಿಗೆ ಬಂದರೂ ಸ್ವಾಗತವಿದೆ ಎಂದು ತಿಳಿಸಿದರು.

ಭಾಷಾವಾರು ಪ್ರಾಂತ್ಯ ವಿಚಾರವಾಗಿ ಅವರ ಅಭಿಪ್ರಾಯವನ್ನು ತಿಳಿಸುತ್ತಾ ಪ್ರಾಂತ್ಯಗಳ ಪುನರ್ರಚನೆ ಆಡಳಿತದ ಅನುಕೂಲಕ್ಕೆ ಸರಿಹೋಗಬೇಕು. ಇದರಲ್ಲಿ ಭಾಷೆಯೂ ಕೂಡ ಗಮನಾರ್ಹವಾದುದು. ಭಾರತ ದೇಶವನ್ನು ಸುಮಾರು ೨ ಅಥವಾ ೩ ಕೋಟಿ ಪ್ರಜಾಸಂಖ್ಯೆಯುಳ್ಳ ೧೫ ಅಥವಾ ೧೭ ಸಂಸ್ಥಾನಗಳಾಗಿ ವಿಂಗಡಿಸಬಹುದು. ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ ಸುಮಾರು ೨ ಅಥವಾ ೩ ಕೋಟಿ ಪ್ರಜೆಗಳನ್ನುಳ್ಳ ಸಂಸ್ಥಾನವೆಂದರೆ ಅತ್ಯುತ್ತಮ—ಎಂದು ಹೇಳಿದ್ದಾರೆ.

ಸ್ವಾತಂತ್ರ್ಯದಿನಾಚರಣೆ

ಮೈಸೂರು ೧೭

ಪುರಭವನದ ಮೈದಾನದಲ್ಲಿ ಮೊನ್ನೆಯ ದಿನ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರಿಂದ ರಾಷ್ಟ್ರಧ್ವಜಾರೋಹಣವು ನಡೆದು ಸ್ವಾತಂತ್ರ್ಯದಿನಾಚರಣೆ ಪ್ರಾರಂಭವಾಯಿತು.

ನಗರದ ಅನೇಕ ಪ್ರಮುಖರು ಸರ್ಕಾರಿ ಅಧಿಕಾರಿಗಳು ಸಾವಿರಾರು ಜನ ಪ್ರೇಕ್ಷಕರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು. ಶಸ್ತ್ರಸಜ್ಜಿತ ವಿಶೇಷ ಪೋಲೀಸ್‌ದಳ, ಸ್ಕೌಟುಗಳು, ಸೇವಾದಳ ಮುಂತಾದ ನಾನಾ ಸಂಸ್ಥೆಗಳವರು ಸಲ್ಲಿಸಿದ ಗೌರವ ರಕ್ಷೆಯನ್ನು ಜಿಲ್ಲಾಧಿಕಾರಿ ಶ್ರೀ ಎಂ. ಎಸ್. ಸ್ವಾಮಿನಾಥನವರು ಸ್ವೀಕರಿಸಿದರು.

ಸಂಜೆ ಪುರಭವನದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಸಭೆಯಲ್ಲಿ ನೃತ್ಯ ಸಂಗೀತ ಮುಂತಾದುವೆಲ್ಲವೂ ನಡೆದನಂತರ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಸ್ವಾಗತ ಭಾಷಣ ಮಾಡಿದರು.

ಮುಖ್ಯಮಂತ್ರಿಗಳು ಅನಂತರ ಮಾತನಾಡುತ್ತಾ ಕಳೆದ ೬ ವರ್ಷಗಳಲ್ಲಿ ಜನತಾ ಸರ್ಕಾರವು ಅನೇಕ ಪ್ರಗತಿ ಕಾರ್ಯಗಳನ್ನು ಮಾಡಿದೆ. ಅವುಗಳನ್ನು ಅಲ್ಲಗಳೆದು ಅನೇಕ ತೊಂದರೆಗಳನ್ನು ಉಂಟುಮಾಡುವ ಮನೋಭಾವನೆ ಹೋಗಬೇಕು. ಮನೆಗಳಲ್ಲಿ ಕುಳಿತು ಚಾಡಿ ಹೇಳುವುದು, ಗೊಣಗುವುದು ಮತ್ತು ಇತರರ ಬಗ್ಗೆ ಸಹನೆ ಇಲ್ಲದೆ ಅಲ್ಲಗಳೆಯುವುದು ಹೆಂಗಸರ ಸ್ವಭಾವ. ಆದರೆ ಆ ಹೆಂಗಸರ ಗುಣಗಳು ಈಗ ಗಂಡಸರಲ್ಲಿ ಪ್ರಾರಂಭವಾಗಿದೆ. ಇದು ದೇಶದ ಹಿತಕ್ಕೆ ಧಕ್ಕೆ ತರುವುದು. ಒಂದು ಗಿಡವು ಫಲ ಕೊಡಬೇಕಾದರೆ ಅನೇಕ ವರ್ಷಗಳು ಬೇಕಾಗುವುದು. ಅದರಂತೆ ಯಾವ ದೇಶಕ್ಕೂ ಸಹ ತಮ್ಮ ಜನರ ಮಟ್ಟವನ್ನು ಏರಿಸಿ ಸಮೃದ್ಧಿ ತರಬೇಕಾದರೆ ಅನೇಕ ವರ್ಷಗಳು ಬೇಕಾಗುವುದು. ಆದ್ದರಿಂದ ಜನರು ತಾಳ್ಮೆಯಿಂದ ಸರ್ಕಾರಕ್ಕೆ ಸಹಕಾರ ನೀಡಬೇಕು ಎಂದು ಕೋರಿದರು.

ವಲಸೆಗಾರರ ಸ್ವತ್ತಿನ ಬಗ್ಗೆ ಒಪ್ಪಂದ

ವಲಸೆಗಾರರ ಚರಸ್ವತ್ತಿನ ಬಗ್ಗೆ ಭಾರತ ಮತ್ತು ಪಾಕೀಸ್ತಾನಗಳ ನಡುವೆ ಒಪ್ಪಂದವಾಗಿರುವುದಾಗಿ ಕರಾಚಿಯಲ್ಲಿ ಉಭಯ ಸರ್ಕಾರ ಪ್ರತಿನಿಧಿಗಳ ಒಂದು ಸಂಯುಕ್ತ ಪ್ರಕಟಣೆ ತಿಳಿಸುತ್ತದೆ.

WANTED

A Printing machine in running condition—Crown or Demmy Folio

Contact:—

The SAMACHARA office,
Mothikhana Buildings, Jaganmohan Palace Road, Mysore.

ಆಹಾರ ಧಾನ್ಯಗಳ ಬೆಲೆಯಲ್ಲಿ ಇಳಿತಾಯ

ಬೆಂಗಳೂರು ೧೭

ಇತ್ತೀಚೆಗೆ ಆಹಾರ ಪರಿಸ್ಥಿತಿಯು ಉತ್ತಮವಾಗಿದೆಯಾದ್ದರಿಂದ ಆಹಾರ ಧಾನ್ಯಗಳ ಬೆಲೆಯನ್ನು ಇಳಿಸಲಾಗಿದೆಯೆಂದು ಸರ್ಕಾರದವರು ತಿಳಿಸಿದ್ದಾರೆ.

ಸಣ್ಣಕ್ಕಿ:—ಸೇರಿಗೆ ೧೦ ಅಣೆ ೮ ಕಾ. ಇದ್ದುದು ೧೦ ಅಣೆ ೬ ಕಾ. ದಪ್ಪಕ್ಕಿ ಸೇರಿಗೆ ೯ ಅಣೆ ಇದ್ದುದು ೮ ಅಣೆ [ರೂಗೆ ೨ ಸೇರು]. ಗೋಧಿ ಸೇರಿಗೆ ೮ ಅಣೆ ೮ ಕಾ. ಇದ್ದುದು ೮ ಅಣೆ (ರೂಗೆ ೨ ಸೇರು.) ರಾಗಿ, ಜೋಳ ಮುಂತಾದ ಧಾನ್ಯ ಸೇರಿಗೆ ೫ ಅಣೆ ೪ ಕಾ.[ರೂಗೆ ೩ ಸೇರು] ಇದ್ದುದು ೪ ಅಣೆ ೧೧ ಕಾ. (ರೂಗೆ 3¼ ಸೇರು).

ಈ ಇಳಿತಾಯವು ನಿನ್ನೆಯಿಂದ ಜಾರಿಗೆ ಬಂದಿದೆ.

ದಕ್ಷಿಣ ಭಾರತದಲ್ಲಿ ಹೆಚ್ಚಿನ ರೈಲ್ವೆಗಳಿಗೆ ಒತ್ತಾಯ

ದೇಶದಲ್ಲಿ ಕೈಗಾರಿಕಾ ಮತ್ತು ವಾಣಿಜ್ಯ ಅಭಿವೃದ್ಧಿಯಾಗಬೇಕಾದರೆ ಈಗ ರೈಲ್ವೆ ಸಂಚಾರದಲ್ಲಿ ಉಂಟಾಗಿರುವ ಅನೇಕ ತೊಂದರೆಗಳನ್ನು ಪರಿಹರಿಸುವುದಲ್ಲದೆ ದಕ್ಷಿಣ ಭಾರತದಲ್ಲಿ ಹೆಚ್ಚಿಗೆ ರೈಲ್ವೆ ಮಾರ್ಗಗಳನ್ನು ತೆರೆಯಬೇಕೆಂದು ಮೈಸೂರು ವಾಣಿಜ್ಯ ಸಂಸ್ಥೆಯವರು ಆಯೋಜನಾ ಸಮಿತಿಗೆ ಮನವಿಮಾಡಿದ್ದಾರೆ.

ಬೆಂಗಳೂರು-ಸೇಲಂ, ಚಿತ್ರದುರ್ಗ-ರಾಯದುರ್ಗ ರೈಲ್ವೆ ಮಾರ್ಗಗಳನ್ನು ಕೂಡಲೆ ಕೈಗೊಳ್ಳಬೇಕೆಂದೂ ಅವರು ಒತ್ತಾಯ ಮಾಡಿದ್ದಾರೆ.

ಪ್ರವಾಹ ಪರಿಹಾರಕ್ಕೆ ೫೦ ಲಕ್ಷ ರೂ

ಉತ್ತರ ಬಿಹಾರಿನಲ್ಲಿ ೨೦ ನದಿಗಳಲ್ಲಿ ಪ್ರವಾಹ ಬಂದು, ೩ ಸಾವಿರ ಚದುರ ಮೈಲಿಗಳಷ್ಟು ಪ್ರದೇಶ ಅನಾಹುತಕ್ಕೀಡಾಗಿರುವುದರಿಂದ ಅದರ ಪರಿಹಾರಕಾರ್ಯಕ್ಕಾಗಿ ಬಿಹಾರ್ ಸರ್ಕಾರವು ೫೦ ಲಕ್ಷ ರೂ. ಮಂಜೂರುಮಾಡಿದೆ.

ಅಪೇರ

14—8—53 ರಿಂದ 3ನೇ ವಾರ

ಪ್ರತಿದಿನ ಮೂರು ಆಟಗಳು

ಇನ್‌ಸ್ಪೆಕ್ಟರ್ ತಮಿಳು

ಪಾತ್ರ:-ಬಾಲಚಂದರ್, ಟಿ. ಕೆ. ಷಣ್ಮುಗಂ, ಪಿ. ಕೆ. ಸರಸ್ವತಿ, ಅಂಜಲಿದೇವಿ

ಪ್ರಕಾಶಕರು:—ಜಿ. ಎಲ್. ಸ್ವಾಮಿ
ಮುದ್ರಕರು:— ಬಿ. ಕಾ. ಸುಬ್ಬರಾವ್
ಮೋಹನ ಮುದ್ರಣಾಲಯ ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೨

೧೮-೮-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಟಿ. ನರಸೀಪುರದಲ್ಲಿ ಪುನಃ ಪ್ರವಾಹ

ಮುಂಜಾಗ್ರತೆ ಕಾರ್ಯಕ್ರಮ ಕೈಗೊಳ್ಳಲಾಗಿದೆ

ಮೈಸೂರು ೧೮

ಕಪಿಲಾ ಮತ್ತು ಕಾವೇರಿ ನದಿಗಳಲ್ಲಿ ಪುನಃ ಪ್ರವಾಹ ಬರುತ್ತಿರುವುದರಿಂದ ಟಿ. ನರಸೀಪುರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮುಂಜಾಗ್ರತೆ ಕಾರ್ಯಕ್ರಮವನ್ನು ಕೈಗೊಳ್ಳಲಾಗಿದೆ. ನಿನ್ನೆ ಬೆಳಿಗ್ಗೆ ೧೦ ಗಂಟೆಯಿಂದ ಮೈಸೂರು-ಟಿ. ನರಸೀಪುರ ರಸ್ತೆಯ ಗರ್ಗೇಶ್ವರಿ ಬಳಿ ನೀರು ನುಗ್ಗಿರುವುದರಿಂದ ರಸ್ತೆ ಬಂದಾಗಿದೆ. ಟಿ. ನರಸೀಪುರದ ತಾಲ್ಲೂಕು ಕಛೇರಿ ಹತ್ತಿರ ನೀರು ನುಗ್ಗಿದೆ. ತಿರುಮಕೂಡಲು ಪ್ರದೇಶಗಳಲ್ಲಿ ಅನೇಕ ಮನೆಗಳನ್ನು ಖಾಲಿಮಾಡಲಾಗಿದೆ. ಸುತ್ತಮುತ್ತಲಿನ ಅನೇಕ ಗದ್ದೆಗಳಿಗೆ ನೀರು ನುಗ್ಗಿದೆ. ಮೂಗೂರು ರಸ್ತೆಗೆ ಪ್ರವಾಹ ನುಗ್ಗಿದೆ. ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನವರು ನಿನ್ನೆ ಮಧ್ಯಾಹ್ನ ಟಿ. ನರಸೀಪುರ ಮತ್ತು ಮೂಗೂರಿಗೆ ಭೇಟಿ ಕೊಟ್ಟು ಪ್ರವಾಹದ ಬಗ್ಗೆ ಪರಿಶೀಲನೆ ನಡೆಸಿ, ಸೂಕ್ತ ಪರಿಹಾರ ಕಾರ್ಯಕ್ರಮ ಗೊಳ್ಳುವಂತೆ ಸೂಚನೆ ಕೊಟ್ಟರು.

ನಂಜನಗೂಡಿನಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್

ನಂಜನಗೂಡಿನಲ್ಲಿ ಹತ್ತಿ ಮತ್ತು ಎಣ್ಣೆ ಬೀಜಗಳ ಮಾರಾಟದ ಬಗ್ಗೆ ಒಂದು ರೆಗ್ಯುಲೇಟೆಡ್ ಮಾರ್ಕೆಟ್ಟನ್ನು ಸ್ಥಾಪಿಸುವ ಬಗ್ಗೆ ಜಿಲ್ಲಾಧಿಕಾರಿಗಳಾದ ಶ್ರೀ ಎಂ.ಎಸ್. ಸ್ವಾಮಿನಾಥನವರು ಮುಖ್ಯ ಮಾರ್ಕೆಟಿಂಗ್ ಅಧಿಕಾರಿಗಳಾದ ಶ್ರೀ ಮರುದೇವಗೌಡರೊಡನೆ ನಿನ್ನೆ ಬೆಳಿಗ್ಗೆ ನಂಜನಗೂಡಿಗೆ ಭೇಟಿ ಇತ್ತು ಅಲ್ಲಿನ ವರ್ತಕರೊಡನೆ ಮಾತುಕತೆ ನಡೆಸಿದರು. ಅಲ್ಲಿನ ಜನರು ಈ ಮಾರ್ಕೆಟ್ಟಿನ ಅವಶ್ಯಕತೆಯನ್ನು ಒತ್ತಿ ಹೇಳಿ ಕೂಡಲೇ ಅದನ್ನು ಸರ್ಕಾರದವರು ಸ್ಥಾಪಿಸಬೇಕೆಂದು ಮನವಿಮಾಡಿದರು. ಅಧಿಕಾರಿಗಳು ಸೂಕ್ತಕ್ರಮ ಕೈಗೊಳ್ಳುವುದಾಗಿ ಭರವಸೆ ಇತ್ತರು.

ಭೂದಾನ ಯಜ್ಞಕ್ಕಾಗಿ ವಿದ್ಯಾರ್ಥಿಗಳ ಚಳುವಳಿ

ತಮಿಳುನಾಡಿನಲ್ಲಿ ಭೂದಾನ ಯಜ್ಞ ಚಳುವಳಿಯನ್ನು ಯಶಸ್ವಿಗೊಳಿಸಲು ತಮ್ಮ ವಿಶ್ರಾಂತಿ ಕಾಲವನ್ನು ಉಪಯೋಗಿಸುವುದಾಗಿ ಮದರಾಸಿನ ೧೦೦ ಮಂದಿ ಕಾಲೇಜಿನ ವಿದ್ಯಾರ್ಥಿಗಳು ಶ್ರೀ ಜಯಪ್ರಕಾಶ್ ನಾರಾಯಣರ ಮುಂದೆ ಪ್ರತಿಜ್ಞೆ ಮಾಡಿದ್ದಾರೆ.

ಪಾಕೀಸ್ತಾನದಲ್ಲಿ ಧರ್ಮಯುದ್ಧದ ಕೂಗು

ಪಾಕೀಸ್ತಾನ ಪ್ರಧಾನಿ ಮಹಮದಾಲಿಯವರು ಭಾರತಕ್ಕೆ ಆಗಮಿಸಿ ಪ್ರಧಾನಿ ನೆಹರೂರವರೊಡನೆ ಉಭಯ ರಾಷ್ಟ್ರಗಳ ನಡುವೆ ಇರುವ ವಿವಾದ ಪರಿಹಾರಗಳ ಬಗ್ಗೆ ಚರ್ಚೆಗಳನ್ನು ನಡೆಸುತ್ತಲಿದ್ದಾಗ ಕರಾಚಿಯಲ್ಲಿ ಬಹಿರಂಗ ಸಭೆಗಳಲ್ಲಿ ಭಾರತದಮೇಲೆ "ಧರ್ಮಯುದ್ಧ" ಹೂಡಬೇಕೆಂಬ ಕೂಗು ನಡೆಯುತ್ತಿದೆ.

ಮೊನ್ನೆಯದಿನ ಶ್ರೀ ಮತಿ ಫಾತಿಮಾ ಜಿನ್ನಾರವರ ಅಧ್ಯಕ್ಷತೆಯಲ್ಲಿ ಒಂದು ಬಹಿರಂಗ ಸಭೆಯು ನಡೆಯಿತು. ಇದರಲ್ಲಿ ಅಲ್ಲಿಯ ಸರ್ಕಾರದ ಕೈಗಾರಿಕಾಸಚಿವ ಅಬ್ದುಲ್ ಖಯಾಂಖಾ, ಆಜಾದ್ ಕಾಶ್ಮೀರದ ನಾಯಕರು ಭಾಗವಹಿಸಿದ್ದರು.

ಎಲ್ಲಾ ಶಾಂತಿ ಮಾರ್ಗಗಳು ವಿಫಲವಾದಲ್ಲಿ ಭಾರತದ ಮೇಲೆ ಯುದ್ಧ ಹೂಡಬೇಕಾಗುತ್ತದೆ. ಪಾಕೀಸ್ತಾನಿಗಳೆಲ್ಲರೂ ಇದಕ್ಕೆ ಈಗಿನಿಂದ ಸಿದ್ಧವಾಗಿರಬೇಕೆಂದು ತಮ್ಮ ಭಾಷಣದಲ್ಲಿ ಅವರುಗಳು ತಿಳಿಸಿದರು.

ಸಭೆಯ ಮುನ್ನ ಮೆರವಣಿಗೆಯು ಫಾತಿಮಾ ಜಿನ್ನಾರವರ ನಾಯಕತ್ವದಲ್ಲಿ ನಡೆಯಿತು. "ನಮಗೆ ಕಾಶ್ಮೀರ ಬೇಕು" "ನಮಗೆ ಧರ್ಮಯುದ್ಧ ಬೇಕು" ಎಂಬ ಘೋಷಣೆಗಳು ಇಲ್ಲಿ ಕೇಳುತ್ತಿದ್ದುವೆಂದು ಹೇಳಲಾಗಿದೆ.

ಭಾರತ ಚಲನಚಿತ್ರಗಳಿಗಾಗಿ ಮನವಿ

ಪಾಕೀಸ್ತಾನದಲ್ಲಿ ಚಲನಚಿತ್ರ ಕೈಗಾರಿಕೆಯು ಹೆಚ್ಚಾಗಿಲ್ಲವಾಗಿ ಪಶ್ಚಿಮ ಪಾಕೀಸ್ತಾನದಲ್ಲಿರುವ ಚಲನಚಿತ್ರ ಮಂದಿರಗಳನ್ನು ಮುಚ್ಚುವಸ್ಥಿತಿ ಉಂಟಾಗಿದೆ. ಭಾರತದಿಂದ ಚಲನಚಿತ್ರಗಳನ್ನು ತರಿಸಿಕೊಳ್ಳಲು ರಹದಾರಿ ಕೊಡಬೇಕೆಂದು ಪಶ್ಚಿಮ ಪಾಕೀಸ್ತಾನ ಚಲನಚಿತ್ರ ಸಂಘದ ಅಧ್ಯಕ್ಷರು ಪಾಕ್ ಸರ್ಕಾರಕ್ಕೆ ಮನವಿ ಮಾಡಿದ್ದಾರೆ

ಯುವತಿಯ ಸಾಹಸ

ಪೆಪ್ಸು ಸಂಸ್ಥಾನದ ಇಬ್ಬರು ಭಾರಿ ಡಕಾಯಿತರುಗಳನ್ನು ಎದುರಿಸಿ ಅವರನ್ನು ಕೊಂದ ೨೧ ವರ್ಷದ ದಲೀಪ್‌ಕೌರ್ ಎಂಬ ಯುವತಿಗೆ ಅವರ ಸರ್ಕಾರವು ೨೫೦ ರೂ. ಬಹುಮಾನವನ್ನು ಸಾರ್ವಜನಿಕ ಸಮಾರಂಭದಲ್ಲಿ ಕೊಟ್ಟಿದೆ.

ಕಾಶ್ಮೀರ ರಕ್ಷಣೆ ಭಾರತಕ್ಕೆ ಸೇರಿದುದು

ಕೇಂದ್ರ ರಕ್ಷಣಾ ಸಚಿವರ ಹೇಳಿಕೆ

ಬೆಂಗಳೂರು ೧೮

ಕಾಶ್ಮೀರ ಪ್ರಜೆಗಳು ಇಚ್ಛಿಸುವವರೆಗೆ ಭಾರತದೊಡನಿರುವರೇ ಅಥವಾ ಇಚ್ಛಿಸುವವರೆಗೆ ಯಾರೇ ಆಗಲಿ, ಪಾಕೀಸ್ತಾನವೇ ಆಗಲಿ ಅಥವಾ ಪತ್ತಾರು ಪಾಕೀಸ್ತಾನಗಳೇ ಆಗಲಿ ನಮ್ಮನ್ನು ಕಾಶ್ಮೀರದಿಂದ ಹೊರದೂಡಲು ಸಾಧ್ಯವಿಲ್ಲ. ಪಾಕೀಸ್ತಾನದಲ್ಲಿ ಮತೀಯ ಘೋಷಣೆ ಯುದ್ಧದ ಕೂಗು ಹೆಚ್ಚಾಗುತ್ತಿದೆ. ಹಾಗೇನಾದರೂ ಭಾರತದಮೇಲೆ ಯುದ್ಧ ನಡೆಸಲು ಪಾಕೀಸ್ತಾನ ನಿರ್ಧರಿಸಿದೆ ಆದರೆ ಜವಾಬ್ದಾರಿಯಲ್ಲೇ ಅವರೇ ಆಗುತ್ತದೆ ಅನಂತರ ಆದಕ್ಕಾಗಿ ಅದು ವಿಷಾದಿಸುತ್ತದೆ. ಎಂದು ಕೇಂದ್ರ ರಕ್ಷಣಾ ಸಚಿವ ಶ್ರೀ ಮಹಾವೀರತ್ಯಾಗಿಯವರು ನಿನ್ನೆಯದಿನ ಕಾರ್ಪೊರೇಷನವರು ಅವರ ಗೌರವಾರ್ಥವಾಗಿ ಏರ್ಪಡಿಸಿದ್ದ ಸತ್ಕಾರಕೂಟದಲ್ಲಿ ಮಾತನಾಡುತ್ತಾ ತಿಳಿಸಿದರು.

ಕಾಶ್ಮೀರದ ರಕ್ಷಣೆ, ಆಡಳಿತ ನಮಗೆ ಸೇರಿದುದು. ಕಾಶ್ಮೀರದ ಪ್ರತಿಯೊಂದು ಅಂಗುಲವನ್ನೂ ರಕ್ಷಿಸಬೇಕಾದುದು ನಮ್ಮ ಕರ್ತವ್ಯ. ಆ ಜವಾಬ್ದಾರಿಯಿಂದ ನಾವು ಓಡಿ ಹೋಗಲಾರೆವು. ಕಾಶ್ಮೀರ ಪ್ರಜೆಗಳ ಇಚ್ಛೆಗೆ ವಿರುದ್ಧವಾಗಿ ಬಲವಂತವಾಗಿ ನಾವು ಕಾಶ್ಮೀರವನ್ನು ಇಟ್ಟುಕೊಳ್ಳಲು ಇಷ್ಟವಿಲ್ಲ. ಯಾವ ಕಡೆ ಸೇರಬೇಕೆಂಬ ನಿರ್ಧಾರಕ್ಕೆ ಬರಲು ಕಾಶ್ಮೀರ ಜನತೆಗೆ ಸೇರಿದ್ದು. ಹಿಂದೆ ಅವರ ಪ್ರಧಾನಿ ಏನೇನೊ ಮಾತನಾಡಲಾರಂಭಿಸಿದರು. ಅದು ಜನರಿಗೆ ರುಚಿಸಲಿಲ್ಲ. ಅವರನ್ನು ಓಡಿಸಿ ಬೇರೆಯವರನ್ನು ನೇಮಿಸಿಕೊಂಡಿದ್ದಾರೆ. ಜನರಿಂದ ಚುನಾಯಿತವಾಗಿರುವ ಸರ್ಕಾರಕ್ಕೆ ಭಾರತವು ಪೂರ್ಣ ಬೆಂಬಲವನ್ನು ನೀಡುತ್ತದೆ. ಕಾಶ್ಮೀರ ಜನತೆಯಾಗಲಿ, ಭಾರತದ ಜನತೆಯಾಗಲಿ, ಯಾವ ಕೋಮಿನವರೇ ಆಗಲಿ ಪ್ರತಿಯೊಬ್ಬರ ಹಕ್ಕುಗಳೂ ಮತ್ತೊಬ್ಬರ ಹಕ್ಕುಗಳಷ್ಟೇ ಸಮಾನವಾಗಿ ರಕ್ಷಿಸಲ್ಪಡುವುವೆಂದು ಕೇಂದ್ರ ಸರ್ಕಾರದ ಪರ ತಾವು ಭರವಸೆ ನೀಡುವುದಾಗಿ ಶ್ರೀ ತ್ಯಾಗಿಯವರು ಹೇಳಿದರು.

ಕೇಂದ್ರ ರಕ್ಷಣಾ ಸಚಿವ ಶ್ರೀ ಮಹಾವೀರ ತ್ಯಾಗಿಯವರು ಈದಿನ ಮಧ್ಯಾಹ್ನ ರಾಜಧಾನಿಗೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರೊಡನೆ ಆಗಮಿಸಿದರು.

ರಾಜಕೀಯ ಸಮ್ಮೇಳನದಲ್ಲಿ ಭಾರತದ ಸ್ಥಾನ

ಪ್ರಧಾನಿ ನೆಹರೂ ಹೇಳಿಕೆ

ಕೊರಿಯಾ ಯುದ್ಧದಲ್ಲಿ ಸಂಬಂಧಪಟ್ಟ ಪಕ್ಷಗಳು ಅಪೇಕ್ಷಿಸಿದಲ್ಲಿ ಮಾತ್ರ ಭಾರತವು ರಾಜಕೀಯ ಸಮ್ಮೇಳನದಲ್ಲಿ ಭಾಗವಹಿಸುತ್ತಿದೆಯೇ ವಿನಹ ಅದರಲ್ಲಿ ಸ್ಥಾನವನ್ನು ಬಲವಂತವಾಗಿ ಅಪೇಕ್ಷಿಸುವುದಿಲ್ಲ--ಎಂದು ಪ್ರಧಾನಿ ನೆಹರೂರವರು ನಿನ್ನೆಯ ದಿನ ಪ್ರಜಾ ಸಭೆಯಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಕೊರಿಯಾ ಯುದ್ಧ ಮುಕ್ತಾಯ ಸಂಬಂಧದಲ್ಲಿ ಪ್ರಕಟವಾಗದೆ ಒಪ್ಪಂದ, ಭರವಸೆ ಮುಂತಾದುವನ್ನೆಲ್ಲಾ ನೀಡಲಾಗಿದೆ. ಇದರಿಂದ ಏನು ಹಾನಿಯುಂಟಾಗುತ್ತದೆ ಎಂಬುದನ್ನು ಈಗ ಹೇಳಲು ಸಾಧ್ಯವಿಲ್ಲ. ಭಾರತಕ್ಕೆ ಬೇಕಾದುದು ಶಾಂತಿಯುತ ಮುಕ್ತಾಯ ವಿನಹ ಮತ್ತೆ ಬೇರೆಯಲ್ಲ ಎಂದು ಅವರು ಹೇಳಿದ್ದಾರೆ.

೧೪ ವರ್ಷದ ಬಾಲಕನ ಸಾಹಸ

ಹೈದರಾಬಾದಿನಲ್ಲಿ ೧೪ ವರ್ಷದ ಇಬ್ರಾಹಿಂ ಎಂಬ ಬಾಲಕನು ಕೆರೆಯಲ್ಲಿ ಬಿದ್ದ ೫ ಜನರನ್ನು ರಕ್ಷಿಸಿದುದಕ್ಕಾಗಿ ಅಲ್ಲಿಯ ಸರಕಾರವು ಆತನ ಸಾಹಸವನ್ನು ಮೆಚ್ಚಿ ಒಂದು ಚಿನ್ನದ ಪದಕವನ್ನು ಕೊಟ್ಟಿದೆ. ಅವನ ವಾಸಕ್ಕೆ ೩೫೦೦ ರೂ. ಬೆಲೆಬಾಳುವ ಮನೆ ಮತ್ತು ಆತನ ವಿದ್ಯಾಭ್ಯಾಸಕ್ಕೆ ಸರ್ಕಾರವು ಪ್ರತಿ ಮಾಹೆಯಗೂ ೨೦ ರೂ. ವೇತನ ವನ್ನು ಕೊಡಲು ಆಜ್ಞೆ ಮಾಡಿರುವುದಾಗಿ ತಿಳಿಯಬರುತ್ತದೆ.

ಹೋಟೆಲ್ ಕೆಲಸಗಾರರಿಂದಲೇ ಉಪಹಾರ ಮಂದಿರ ಸ್ಥಾಪನೆ

ಮೈಸೂರು ೧೮

ರಾಜಧಾನಿಯಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ನ್ಯೂ ಹೋಟೆಲ್ ಕೆಲಸಗಾರರ ಸಂಘದವರು ಕೆಲಸಗಾರರಿಂದಲೇ ಬಂಡವಾಳ ಹಾಕಿ ಪ್ರಥಮವಾಗಿ ನಗರದಲ್ಲಿ ಹೊಟೇಲೊಂದನ್ನು ನಡೆಸಬೇಕೆಂದೂ, ಕ್ರಮೇಣ ಈ ಬಂಡವಾಳವನ್ನು ಹೆಚ್ಚಿಸಿ, ನಗರದಲ್ಲಿರುವ ಎಲ್ಲಾ ಹೊಟೇಲುಗಳನ್ನೂ ತಾವೇ ನಡೆಸಿಕೊಂಡು ಬರಬೇಕೆಂದೂ ನಿರ್ಧರಿಸಿದ್ದಾರೆ.

ಭಾರತದ ಪ್ರತಿಷ್ಠೆಯನ್ನು ಕಾಪಾಡಿ

ಕೊರಿಯಾಕ್ಕೆ ಹೋಗುವ ಭಾರತ ಸೈನಿಕರಿಗೆ ಪ್ರಧಾನಿ ಸಂದೇಶ

ನಿಮ್ಮ ಮೇಲೆ ವಿಶಿಷ್ಟ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಹೊರಿಸಲಾಗಿದೆ. ನೀವು ನಿಷ್ಪಕ್ಷಪಾತವಾಗಿ, ಮೈತ್ರಿಭಾವನೆ ಮತ್ತು ದಯಾಸ್ನೇಹವನ್ನು ಉಭಯ ಪಕ್ಷದ ಬಂದಿಗಳಿಗೆ ಮತ್ತು ನೊಂದಿರುವ ಕೊರಿಯಾ ಪ್ರಜೆಗಳಿಗೆ ತೋರಿಸಬೇಕು ವಿಶ್ವವು ನಿಮ್ಮ ಕರ್ತವ್ಯವನ್ನು ಸೂಕ್ಷ್ಮವಾಗಿ ಎದುರುನೋಡುತ್ತಿದೆ ಭಾರತದ ಕೀರ್ತಿಯನ್ನು ನೀವು ಎತ್ತಿಹಿಡಿಯಬೇಕಾದುದು ನಿಮ್ಮ ಪ್ರಮುಖ ಕರ್ತವ್ಯ ಎಂದು ಪ್ರಧಾನಿ ನೆಹರೂರವರು ಕೊರಿಯಾಕ್ಕೆ ಈದಿನ ಪ್ರಯಾಣ ಮಾಡಲಿರುವ ಮೇಲ್ವಿಚಾರಕ ಸೈನ್ಯಕ್ಕೆ ಒಂದು ಸಂದೇಶವನ್ನು ಕಳುಹಿಸುತ್ತಾ ತಿಳಿಸಿದ್ದಾರೆ.

ನಿನ್ನೆಯದಿನ ಮದ್ರಾಸ್‌ನಲ್ಲಿ ಈ ಮೇಲ್ವಿಚಾರಕ ಸೈನ್ಯಕ್ಕೆ ಬೀಳ್ಕೊಡುವ ಸಮಾರಂಭವು ನಡೆಯಿತು. ಪ್ರಧಾನಿ ನೆಹರೂರವರ ಸಂದೇಶವನ್ನು ರಕ್ಷಣಾ ಶಾಖಾ ಉಪಸಚಿವ ಶ್ರೀ ಸತೀಶ ಚಂದ್ರರವರು ಓದಿದರು. ಅದಕ್ಕೆ ಪೂರ್ವ ಹಂಗಾಮಿ ಪ್ರಧಾನ ಸೇನಾನಿ ಲೇ॥ ಜ॥ ಶ್ರೀನಾಗೇಶರವರು ಕಳುಹಿಸಿದ್ದ ಸಂದೇಶವನ್ನು ಓದಲಾಯಿತು. ಅವರು ಸಹ ತಾಟಸ್ಥ ರೀತಿಯಿಂದ ವರ್ತಿಸಿ ತಮ್ಮ ಮೇಲೆ ಹೊರಿಸಿರುವ ಹೊಣೆಯನ್ನು ನಿಷ್ಪಕ್ಷಪಾತವಾಗಿ ಅತ್ಯಂತ ಸ್ನೇಹಮಯವಾಗಿ ನಡೆಸಿ, ಭಾರತಕ್ಕೆ ಕೀರ್ತಿ ತರಬೇಕೆಂದು ತಿಳಿಸಿದ್ದಾರೆ.

ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮಾತನಾಡುತ್ತಾ ಮಹಾತ್ಮಾಗಾಂಧಿಯವರು ಮಾಡಬೇಕೆಂದಿದ್ದ ಈ ಕೆಲಸವನ್ನು ಈಗ ಮೇಲ್ವಿಚಾರಕ ಸೈನ್ಯವು ನಡೆಸುವುದೆಂದು ಹೇಳಿದರು.

ಜನಸಂಘ ಹಿಂದೂ ಮಹಾ ಸಭೆಯಲ್ಲಿ ಐಕ್ಯವಾಗಬೇಕು

ಜನಸಂಘದ ಹಂಗಾಮಿ ಅಧ್ಯಕ್ಷ ಪಂಡಿತ ಎಂ. ಸಿ. ಶರ್ಮಾರವರು ಅಲಹಾಬಾದಿನಲ್ಲಿ ಜನಸಂಘದ ಎರಡನೇ ವಾರ್ಷಿಕಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಜನಸಂಘವು ಹಿಂದೂ ಮಹಾಸಭೆಯೊಡನೆ ಐಕ್ಯವಾಗುವ ಕಾಲವು ಸನ್ನಿಹಿತವಾಗಿದೆ ಎಂದು ತಿಳಿಸಿದ್ದಾರೆ.

ಭೂದಾನ ಯಜ್ಞ ಸಂಗ್ರಹಣೆ

ಹೈದರಾಬಾದಿನಲ್ಲಿ ಇಲ್ಲಿಯವರೆಗೆ ಭೂದಾನ ಯಜ್ಞ ಚಳುವಳಿಯಲ್ಲಿ ೬೭೦೦೦ ಎಕರೆ ಜಮೀನನ್ನು ಸಂಗ್ರಹಿಸಲಾಗಿದೆ. ಬರುವ ಏಪ್ರಿಲ್ ವೇಳೆಗೆ ಒಂದುವರೆ ಲಕ್ಷ ಎಕರೆಗಳನ್ನು ಸಂಗ್ರಹಿಸಲಾಗುವುದೆಂದು ಹೇಳಲಾಗಿದೆ.

ಮಹಾತ್ಮರ ಸಮಾಧಿಗೆ ಪುಷ್ಪಾರ್ಪಣೆ

ಪಾಕೀಸ್ತಾನ ಪ್ರಧಾನಿ ಮಹಮ್ಮದ್ ಆಲಿಯವರು ತಮ್ಮ ಪತ್ನಿ ಸಮೇತ ನಿನ್ನೆಯದಿನ ರಾಜಘಾಟನಲ್ಲಿ ಮಹಾತ್ಮರ ಸಮಾಧಿಗೆ ಭೇಟಿಯಿತ್ತು ಪುಷ್ಪಹಾರಗಳನ್ನು ಅರ್ಪಿಸಿದರು.

ನಿನ್ನೆಯದಿನ ಅವರು ದೆಹಲಿಯಬಳಿಯಿರುವ ನಿರಾಶ್ರಿತರ ಶಿಬಿರಕ್ಕೆ ಭೇಟಿಯಿತ್ತು ಅಲ್ಲಿಯ ಕಾರ್‍ಯಕಲಾಪಗಳನ್ನು ವೀಕ್ಷಿಸಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸುತ್ತಾ ಈ ಕೆಲಸಗಳ ಬಗ್ಗೆ ವಿವರ ಮತ್ತು ನಕ್ಷೆ ಮುಂತಾದುವನ್ನು ತಮ್ಮ ರಾಷ್ಟ್ರದ ಉಪಯೋಗಕ್ಕಾಗಿ ತೆಗೆದುಕೊಂಡರೆಂದು ತಿಳಿಯಬರುತ್ತದೆ.

ಅಲ್ಲಿದ್ದ ನಿರಾಶ್ರಿತರಿಗೆ ತಿಂಡಿ ಹಂಚಲು ಪಾಕ್ ಪ್ರಧಾನಿಯವರು ೫೦೦ ರೂಪಾಯಿಗಳನ್ನು ಕೊಟ್ಟರೆಂದು ತಿಳಿಯಬರುತ್ತದೆ.

ಅವರು ನಿನ್ನೆದಿನ ಪಾರ್ಲಿಮೆಂಟ್ ಸಭೆಗೆ ಭೇಟಿಇತ್ತು ಸ್ವಲ್ಪಕಾಲ ಅದರ ಕಾರ್ಯಕಲಾಪಗಳನ್ನು ವೀಕ್ಷಿಸಿದರು. ಸದಸ್ಯರು ಅವರಿಗೆ ಸುಸ್ವಾಗತವನ್ನು ಬಯಸಿದರು.

● ಪಂಚವಾರ್ಷಿಕ ಯೋಜನೆಯ ಅಂಗವಾಗಿ ಭಾರತದಲ್ಲಿ ೧೦ ಲಕ್ಷ ಟನ್ ತಯಾರಿಕೆಯ ಉಕ್ಕಿನ ಕಾರ್ಖಾನೆಯನ್ನು ಜರ್ಮನಿಯ ಸುಪ್ರಸಿದ್ಧ ಕೃಪ್ ಕಂಪೆನಿಯ ಸಹಾಯದಿಂದ ಸ್ಥಾಪಿಸಲು ಒಪ್ಪಂದವಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೭—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೮—	೨೬—
ಹರಳು	—	—
ಎಳ್ಳು	೪೨—೮	೭೭—
ಹೊಂಗೆಬೀಜ	—	—
ಹುರುಳಿ	೪೭—೧೨	೪೮—೬
ಹೆಸರು	೭೩—೮	೭೩—೧೪
ಅವರೆ	—	—
ಉದ್ದು	೭೧—೪	—
ಹುಚ್ಚೆಳ್ಳು	—	—
ಅಲಸಂದೆ	೫೫—೧೦	೭೩—೮
ಮೆಣಸಿನಕಾಯಿ	—	—
ಹುಣಸೇಹಣ್ಣು	—	—
ಸೀಗೆಕಾಯಿ	೫—	೫—೮
ಬೆಲ್ಲ	—	
ತೆಂಗಿನಕಾಯಿ	೧೫೦	೨೯೫

ಗೋದಾವರಿ ನದಿಯ ಪ್ರವಾಹ ಇಳಿಮುಖ

ಸಾವಿರಾರು ಚದುರಮೈಲಿ ಪ್ರದೇಶದಲ್ಲಿ ನಷ್ಟ

ಗೋದಾವರಿ ನದಿಯಲ್ಲಿ ಪ್ರವಾಹವು ಸ್ವಲ್ಪ ಇಳಿಮುಖವಾಗಿರುವುದಾಗಿ ವರದಿಯಾಗಿದೆ. ರಾಜಮಹೇಂದ್ರಿ ಪಟ್ಟಣದಲ್ಲಿ ಅರ್ಧಭಾಗವೆಲ್ಲವೂ ನೀರಿನಿಂದ ತುಂಬಿದೆ. ಗೋದಾವರಿ ನದಿಯ ದಡದಲ್ಲಿರುವ ಅನೇಕ ಗ್ರಾಮಗಳು, ಬತ್ತದ ಪೈರಿನ ಗದ್ದೆಗಳು ಮುಂತಾದ ಸುಮಾರು ೧೦೦೦ ಚದುರ ಮೈಲಿ ಪ್ರದೇಶದಲ್ಲಿ ನೀರು ನುಗ್ಗಿ ವಿಶೇಷವಾಗಿ ಹಾನಿಯನ್ನುಂಟುಮಾಡಿದೆ. ಮದರಾಸ್ ಮತ್ತು ಕಲ್ಕತ್ತಾಗಳ ನಡುವಿನ ರೈಲ್ವೆ ಸಂಚಾರಕ್ಕೆ ಇನ್ನೂ ಅಡ್ಡಿಯಿದ್ದೇ ಇದೆ. ಇದರಿಂದ ಲಕ್ಷಾಂತರ ರೂಪಾಯಿಗಳ ನಷ್ಟ ಸಂಭವಿಸಿರುವುದಾಗಿ ಅಂದಾಜು ಮಾಡಲಾಗಿದೆ. ನಿಖರವಾಗಿ ವಿವರಗಳು ತಿಳಿಯಬಂದಿಲ್ಲ. ಸರ್ಕಾರವು ಪರಿಹಾರ ಕಾರ್ಯಗಳನ್ನು ನಡೆಸುತ್ತಲಿವೆ. ಲಕ್ಷಾಂತರ ಜನರು ಮನೆಮಠಗಳನ್ನು ಕಳೆದುಕೊಂಡಿದ್ದಾರೆ.

ಗ್ರಾಮಸೇವಕರ ತರಪೇತು

ರಾಷ್ಟ್ರೀಯ ವಿಸ್ತರಣ ಕಾರ್ಯಗಳನ್ನು ನಡೆದು ಇನ್ನೂ ೩ ವರ್ಷಗಳಲ್ಲಿ ಆ ಯೋಜನಾ ಮಂಡಲಿಯು ೧೩ ಸಾವಿರ ಗ್ರಾಮ ಸೇವಕರಿಗೆ ತರಪೇತು ಕೊಡಲು ಕೇಂದ್ರಗಳನ್ನು ಸ್ಥಾಪಿಸುವದಾಗಿ ತಿಳಿಯಬರುತ್ತದೆ.

ವ್ಯವಸಾಯಶಿಕ್ಷಣ, ಮೂಲಶಿಕ್ಷಣ ಮುಂತಾದುವುಗಳಿಗೂ ಇಲ್ಲಿ ಪ್ರಾಮುಖ್ಯತೆಯನ್ನು ಕೊಡಲಾಗುತ್ತದೆ. ಈ ಕಾರ್ಯಕ್ಕಾಗಿ ಒಂದುಕೋಟಿ ೮ ಲಕ್ಷ ರೂಪಾಯಿಗಳು ವೆಚ್ಚವಾಗುತ್ತದೆ. ಇದರ ಪೈಕಿ ಕೇಂದ್ರವು 84½ ಲಕ್ಷ ರೂಪಾಯಿಗಳನ್ನು ಕೊಡುತ್ತದೆ ಉಳಿಕೆ ಹಣವನ್ನು ಪ್ರಾಂತ್ಯ ಸರ್ಕಾರಗಳು ವೆಚ್ಚಮಾಡುತ್ತದೆಯೆಂದು ಹೇಳಲಾಗಿದೆ.

ಕೈಮಗ್ಗದವರ ಸತ್ಯಾಗ್ರಹ

ದೇಶದಲ್ಲಿ ಕೈಮಗ್ಗ ಕೈಗಾರಿಕೆಗೆ ಸರ್ಕಾರದ ರಕ್ಷಣೆ ಬೇಕೆಂದು ಒತ್ತಾಯ ಪಡಿಸಲು ಮುಂದಿನ ತಿಂಗಳು ಮಧ್ಯಭಾಗದಿಂದ ಸತ್ಯಾಗ್ರಹ ಚಳುವಳಿ ಹೂಡಬೇಕೆಂದು ಮದ್ರಾಸ್ ಪ್ರಾಂತೀಯ ಕೈಮಗ್ಗ ಸಂಘದವರು ನಿರ್ಧರಿಸಿದ್ದಾರೆ.

ಸರ್ಕಾರಿ ಪ್ಲೀಡರ್ ನೇಮಕ

ಬೆಂಗಳೂರು ೧೮

ಮೈಸೂರುಜಿಲ್ಲೆಯ ಸರ್ಕಾರಿ ಪ್ಲೀಡರ್ ಆಗಿ ಶ್ರೀ ಎಸ್. ಚೆನ್ನಸ್ವಾಮಿ ಶೆಟ್ಟಿಯವರನ್ನು ನೇಮಿಸಲಾಗಿದೆ.

ಈಗ ಮೈಸೂರಿನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿರುವ ಶ್ರೀ ಜಿ. ಶಂಕರಶೆಟ್ಟಿಯವರನ್ನು ಇನ್ನೂ ಮೂರು ವರ್ಷಕಾಲ ಆಸ್ಥಾನದಲ್ಲಿಯೇ ಸರ್ಕಾರದವರು ನೇಮಿಸಿದ್ದಾರೆ.

ಆಂಧ್ರ ನೌಕರರ ವರ್ಗಾವಣೆ

ಮೈಸೂರು ಸಂಸ್ಥಾನಕ್ಕೆ ಸೇರಲಿರುವ ಬಳ್ಳಾರಿ ಜಿಲ್ಲೆಯ ೭ ತಾಲ್ಲೂಕುಗಳಲ್ಲಿರುವ ಎಲ್ಲಾ ಆಂಧ್ರ ಸರ್ಕಾರಿ ನಾನ್‌ಗೆಜೆಟೆಡ್ ನೌಕರರನ್ನು ಬಳ್ಳಾರಿಜಿಲ್ಲೆಯ ಉಳಿಕೆ ೩ ತಾಲ್ಲೂಕುಗಳಿಗೆ ವರ್ಗಾವಣೆಮಾಡಿ ಅಲ್ಲಿರುವ ಕನ್ನಡ ನೌಕರರನ್ನು ಈ ತಾಲ್ಲೂಕುಗಳಿಗೆ ವರ್ಗಮಾಡುವಂತೆ ಮದ್ರಾಸ್ ಸರಕಾರವು ಆಜ್ಞೆಮಾಡಿದೆ.

ಈ ವರ್ಗಾವಣೆಯಾಗುವ ನೌಕರರ ಸಂಖ್ಯೆಯು ಜೋರಾ ಆದಲ್ಲಿ ಈ ತಾಲ್ಲೂಕಿಗೆ ಸಂಬಂಧಪಟ್ಟ ಮದ್ರಾಸ್ ಇತರ ಜಿಲ್ಲೆಗಳಲ್ಲಿರುವ ನೌಕರರನ್ನು ಮೈಸೂರಿಗೆ ಸೇರುವ ತಾಲ್ಲೂಕುಗಳಿಗೆ ವರ್ಗಾಯಿಸಲಾಗುತ್ತದೆ.

ಅರಣ್ಯ ಸಂಪತ್ತಿನ ರಕ್ಷಣೆಗೆ ಪ್ರವೀಣರು

ಭಾರತದ ಅರಣ್ಯ ಸಂಪತ್ತನ್ನು ರಕ್ಷಿಸುವುದು ಮತ್ತು ಅಭಿವೃದ್ಧಿ ಪಡಿಸುವುದರ ಬಗ್ಗೆ ಸಲಹೆ ಕೊಡಲು ಕೊಲಂಬೊ ಟೆಕ್ನಿಕಲ್ ಸಹಾಯ ವ್ಯವಸ್ಥೆ ಯೋಜನೆ ಮೇರೆಗೆ ಡಾ॥ ಮೆಲ್ಲಗನ್ ಎಂಬ ಪ್ರವೀಣರು ಇಲ್ಲಿಗೆ ಬರಲಿದ್ದಾರೆ.

ಪ್ರಕಾಶಕರು:—ಜಿ. ಎಲ್. ಸ್ವಾಮಿ
ಮುದ್ರಕರು:— ಹಿ. ಕಾ. ಸುಬ್ಬರಾವ್
ಮೋಹನ ಮುದ್ರಣಾಲಯ ಮೈಸೂರು.

ಪ್ರಭಾ 21—8—53 ರಿಂದ ಆಮೋಘ ಪ್ರಾರಂಭ. ದಿನ 3 ಆಟಗಳು
ಬಕ್ರೀದ್ ಹಬ್ಬದ ಪ್ರಯುಕ್ತ ವಿಶೇಷ ಆಕರ್ಷಣೆ
ಕಶ್ಯಪ್ ಪ್ರೊಡಕ್ಷನ್ಸ್‌ರವರ ಹೃದಯಾಕರ್ಷಣೀಯ ಸಂಗೀತದಿಂದ ಕೂಡಿದ ಭವ್ಯ ಸಾಮಾಜಿಕ ಹಿಂದಿ ಚಿತ್ರ:—
★★ ನ ಯಾ ಘ ರ್ ★★
ಪಾತ್ರ—ಗೀತಾಬಾಲಿ, ಶೇಖರ್, ಬೇಗಂಪ್ಯಾರ, ಲೀಲಾಚಿಟ್ನೀಸ್ ಮತ್ತು ಜಗ್‌ದೀಪ್
ಸಂಗೀತ:—ಶಂಕರ್ ಜೈಕಿಷನ್
ಬೆಳಗಿನಪ್ರದರ್ಶನ:21—8—53 ರಿಂದ 3ದಿನಗಳು
ನರ್ಗೀಸ್, ರಾಜ್‌ಕಪೂರ್, ನಿಗಾರ್ ನಟಿಸಿರುವ 'ಆಗ್'

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೩

೧೯-೮-೧೯೫೩ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಬೊಂಬಾಯಿನಲ್ಲಿ ವಿವಿಧ ಘಟ್ಟ ಮಾರಾಟ ತೆರಿಗೆ ರದ್ದು

೨ ಘಟ್ಟಗಳಲ್ಲಿ ಮಾತ್ರ ವಿಧಿಸಲಾಗುವುದು

ಬೊಂಬಾಯಿ ಪ್ರಾಂತ್ಯದಲ್ಲಿ ಈಗ ವಿಧಿಸುತ್ತಲಿರುವ ವಿವಿಧ ಘಟ್ಟಗಳ ಮಾರಾಟ ತೆರಿಗೆಯನ್ನು ರದ್ದುಗೊಳಿಸಿ ಎರಡು ಘಟ್ಟಗಳಲ್ಲಿ ಮಾತ್ರ ವಿಧಿಸಲು ಅಲ್ಲಿಯ ಸರ್ಕಾರವು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಈ ನಿರ್ಧಾರದ ಪ್ರಕಾರ ಮೊದಲನೆಯ ಘಟ್ಟದಲ್ಲಿ ರೂ. ಗೆ ಮೂರುಕಾಸು ಮತ್ತು ಎರಡನೇ ಘಟ್ಟದಲ್ಲಿ ರೂ.ಗೆ ೬ ಕಾಸುಗಳಂತೆ ತೆರಿಗೆಯನ್ನು ಹಾಕಲ್ಪಡುತ್ತದೆ.

ಅಲ್ಲಿಯ ಶಾಸನಸಭೆಯು ಈ ಹೊಸ ವ್ಯವಸ್ಥೆಯನ್ನು ಅಂಗೀಕರಿಸಿದಮೇಲೆ ಇದನ್ನು ಜಾರಿಗೆ ಕೊಡಲಾಗುತ್ತದೆ.

ಮೇಲ್ವಿಚಾರಕ ಸೈನ್ಯವನ್ನು ಬೀಳ್ಕೊಡುವ ಸಮಾರಂಭ

ಸ್ವದೇಶಕ್ಕೆ ಹಿಂತಿರುಗದ ಖೈದಿಗಳನ್ನು ನೋಡಿಕೊಳ್ಳಲು ಭಾರತದಿಂದ ಕೊರಿಯಾಕ್ಕೆ ಹೋಗುವ ಮೇಲ್ವಿಚಾರಕ ಸೈನ್ಯದ ಮೊದಲನೆ ತಂಡವು ನಿನ್ನೆಯ ಮಧ್ಯಾಹ್ನ ಜಲದುರ್ಗ ಎಂಬ ಭಾರತ ಹಡಗಿನಲ್ಲಿ ಮದರಾಸ್ ನಿಂದ ತೆರಳಿತು ಈ ತಂಡದಲ್ಲಿ ಸುಮಾರು ೧೫೪೦ ಜನರಿರುವರು.

ಮದ್ರಾಸಿನ ಗೌರ್‍ನರ್ ಶ್ರೀ ಶ್ರೀಪ್ರಕಾಶ ಮತ್ತು ಕೇಂದ್ರ ರಕ್ಷಣಾ ಉಪಸಚಿವ ಶ್ರೀ ಸತೀಶ ಚಂದ್ರರವರು ಮತ್ತು ಮದ್ರಾಸ್ ನಗರದ ನಾಗರೀಕರು ನಿನ್ನೆಯದಿನ ಶುಭವನ್ನು ಕೋರಿ ಈ ತಂಡವನ್ನು ಬೀಳ್ಕೊಟ್ಟರು.

ಈ ಸಮಯದಲ್ಲಿ ಶ್ರೀ ಶ್ರೀಪ್ರಕಾಶರವರು ಮಾತನಾಡುತ್ತಾ ಸಾಮಾನ್ಯವಾಗಿ ಸೈನ್ಯವು ಯುದ್ಧಮಾಡುವುದಕ್ಕೆ ಹೋಗುತ್ತದೆ ಆದರೆ ಇತಿಹಾಸದಲ್ಲೇ ಮೊಟ್ಟಮೊದಲನೆಯದಾಗಿ ಸೈನ್ಯವು ಈಗ ಶಾಂತಿ ಕಾರ್ಯಕ್ಕಾಗಿ ತೆರಳುತ್ತಲಿದೆ. ಈ ಕಾರ್ಯವು ಭಾರತಕ್ಕೆ ಬಂದಿರುವುದು ನಮ್ಮಗಳ ಅದೃಷ್ಟ. ಇಂತಹ ಸೈನ್ಯವು ಮದ್ರಾಸ್ ನಗರದಿಂದ ತೆರಳುವುದು ಮದ್ರಾಸಿನವರ ಅದೃಷ್ಟ ಮತ್ತು ಅದನ್ನು ಬೀಳ್ಕೊಡುವ ಕಾರ್ಯವು ತಮಗೆ ಲಭಿಸಿದುದು ತಮ್ಮ ಅದೃಷ್ಟವೆಂದೂ ತಿಳಿಸಿದರು.

ಇದರ ಎರಡನೇ ತಂಡದ ಸುಮಾರು ೨೬೦೦ ಜನರು ಎರಡು ಹಡಗುಗಳಲ್ಲಿ ಪ್ರಯಾಣ ಮಾಡುತ್ತಾರೆ. ಕೊನೆಯ ಮತ್ತು ಮೂರನೇ ತಂಡವು ಇನ್ನು ೩—೪ ದಿನಗಳಲ್ಲಿ ಹೊರಡುತ್ತದೆ.

ರಾಷ್ಟ್ರಾಧ್ಯಕ್ಷರ ಸಹಾನುಭೂತಿ

ಗೋದಾವರಿ ನದಿಯ ಪ್ರವಾಹದಿಂದ ಉಂಟಾದ ದುಃಸ್ಥಿತಿಯಲ್ಲಿ ನೊಂದವರಿಗೆ ರಾಷ್ಟ್ರಾಧ್ಯಕ್ಷರು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿ ಅದರ ಸಂಕೇತವಾಗಿ ಮದ್ರಾಸಿನ ಗೌರ್‍ನರ್‌ರಿಗೆ ೧೦೦೦ ರೂಪಾಯಿಗಳನ್ನು ಕಳುಹಿಸಿದ್ದಾರೆ.

● ಭೂದಾನ ಯಜ್ಞದ ಚಳುವಳಿಯ ಅಂಗವಾಗಿ ಶ್ರೀ ಜಯಪ್ರಕಾಶ ನಾರಾಯಣರವರು ತಮಿಳುನಾಡಿನಲ್ಲಿ ಕೈಗೊಂಡಿರುವ ತಮ್ಮ ಪ್ರವಾಸಕಾಲದಲ್ಲಿ ಒಂದೇದಿನದಲ್ಲಿ ೬೬೬ ಎಕರೆ ಜಮೀನು ಸಂಗ್ರಹಿಸಿದ್ದಾರೆ.

ವಿಷ ಆಹಾರ ಸೇವನೆಯಿಂದ ಬುದ್ಧಿ ಭ್ರಮಣೆ

ವಿಷ ಆಹಾರವನ್ನು ಸೇವಿಸಿದುದರಿಂದ ಏಕಕಾಲದಲ್ಲಿ ೭ ಸಂಸಾರಕ್ಕೆ ಸೇರಿದ ೨೬ ಜನರಿಗೆ ಬುದ್ಧಿ ಭ್ರಮಣೆಯುಂಟಾಗಿ ವೆಲ್ಲೂರಿನ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕಾಟ್ಪಾಡಿಯ ಒಂದು ಅಂಗಡಿಯಲ್ಲಿ ಜೋಳವನ್ನು ಇವರು ಕೊಂಡು ಆ ರಾತ್ರಿ ಅದನ್ನು ಊಟಮಾಡಿದರು. ಎಲ್ಲರಿಗೂ ಬುದ್ಧಿ ಭ್ರಮಣೆಯುಂಟಾಗಿ, ಒಬ್ಬರನ್ನೊಬ್ಬರು ಬೈದು ಹೊಡೆದಾಡಲಾರಂಭಿಸಿದರು.

ಮಹಿಳೆಯರು ತಮ್ಮ ಮೈಮೇಲಿನ ವಸ್ತ್ರಗಳನ್ನು ಬಿಸಾಡಿ ನಗ್ನರಾಗಿ ಬೀದಿಯಲ್ಲಿ ಓಡಲಾರಂಭಿಸಿದರು. ಕೂಡಲೇ ಅವರನ್ನು ಹಿಡಿದು ಗಾಡಿಯಲ್ಲಿ ಹಾಕಿಕೊಂಡು ಆಸ್ಪತ್ರೆಗೆ ದಾಖಲ್ಮಾಡಲಾಯಿತೆಂದೂ ಈಗ ಅವರು ಗುಣ ಹೊಂದುತ್ತಿರುವುದಾಗಿಯೂ ಹೇಳಲಾಗಿದೆ.

ತುಟ್ಟಿಭತ್ಯ ರದ್ದಿನಿಂದ ೩೮ ಲಕ್ಷ ರೂ. ಉಳಿತಾಯ

ತಿಂಗಳಿಗೆ ಒಂದುಸಾವಿರ ರೂ. ಗಿಂತ ಹೆಚ್ಚಿಗೆ ಸಂಬಳ ಬರುವವರಿಗೆ ತುಟ್ಟಿಭತ್ಯವನ್ನು ರದ್ದುಮಾಡುವುದರಿಂದ ಕೇಂದ್ರ ಸರ್ಕಾರಕ್ಕೆ ೩೮ ಲಕ್ಷ ರೂ. ಗಳು ಉಳಿತಾಯವಾಗುವುದೆಂದು ಅಂದಾಜು ಮಾಡಲಾಗಿದೆ.

● ಈ ವರ್ಷ ಪೈರು ಉತ್ತಮವಾಗಿದ್ದಲ್ಲಿ ರೇಷನ್ ಪದ್ಧತಿಯನ್ನು ವಜಾಮಾಡಲಾಗುವುದೆಂದು ಬೊಂಬಾಯಿನ ಆಹಾರ ಸಚಿವರು ತಿಳಿಸಿದ್ದಾರೆ.

ವಿದ್ಯುಚ್ಛಕ್ತಿ ಪ್ರಗತಿ

ಬೆಂಗಳೂರು ೧೯

ಕಳೆದ ಮಾಹೆಯಲ್ಲಿ ಸಂಸ್ಥಾನದಲ್ಲಿ ೫ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಯಿತು. ೨೮೨ ಬೀದಿ ದೀಪಗಳು. ೮೩೮ ಮನೆಗಳಿಗೆ ದೀಪ, ಅಡಿಗೆ ಮುಂತಾದುವಕ್ಕೆ ೭೧, ಯಂತ್ರಗಳಿಗಾಗಿ ೫೦, ವ್ಯವಸಾಯಕ್ಕೆ ೧೦೩ ಬಾಬುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ-ಎಂದು ಸರ್ಕಾರದ ಪ್ರಕಟಣೆಯಿಂದ ತಿಳಿಯಬರುತ್ತದೆ.

ಕಳೆದ ಮಾಹೆಯ ಅಂತ್ಯದವರೆಗೆ ಸಂಸ್ಥಾನದಲ್ಲಿ ೬೦೯ ಗ್ರಾಮಗಳಿಗೆ ವಿದ್ಯುತ್ ಒದಗಿಸಲಾಗಿದೆ. ೧,೧೯,೨೭೯ ಮನೆಗಳಿಗೆ, ೧೯೩ ಸಿನಿಮಾಗಳಿಗೆ, ೪೭೪೧ ವ್ಯವಸಾಯ ೭೭೦೫ ಯಂತ್ರ ಬಾಬಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಲಾಗಿದೆ.

ರಾಜಧಾನಿಯಲ್ಲಿ ಕೇಂದ್ರ ರಕ್ಷಣಾ ಸಚಿವರು

ಬೆಂಗಳೂರು ೧೯

ಕೇಂದ್ರ ರಕ್ಷಣಾ ವ್ಯವಸ್ಥೆ ಸಚಿವರಾದ ಶ್ರೀ ಮಹಾವೀರ್ ತ್ಯಾಗಿಯವರು ನಿನ್ನೆ ಸಂಜೆ ರಾಜಧಾನಿಗೆ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರೊಡನೆ ಆಗಮಿಸಿದರು. ಟೋಲ್‌ಗೇಟ್ ಬಳಿ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯ ಕಮೀಷನರ್ ಶ್ರೀ ಎಫ್. ಲಕ್ಷ್ಮಣರಾವ್, ಜಿಲ್ಲಾಧಿಕಾರಿ ಶ್ರೀ ಎಂ. ಎಸ್. ಸ್ವಾಮಿನಾಥನ್ ಮತ್ತು ಇತರ ಅಧಿಕಾರಿಗಳು ಅವರನ್ನು ಸ್ವಾಗತಿಸಿದರು.

ಶ್ರೀ ತ್ಯಾಗಿಯವರು ಲಲಿತಮಹಲ್ ಅರಮನೆಗೆ ತೆರಳುವ ಮುನ್ನ ಮಾರ್ಗದಲ್ಲಿ ಈಗ ಕೇಂದ್ರ ರಕ್ಷಣಾ ಶಾಖೆಗೆ ಸೇರಿರುವ ಮಾಜಿ ಮೈಸೂರು ಕುದುರೆ ಮತ್ತು ಪದಾತಿದಳಗಳ ಕಟ್ಟಡಗಳನ್ನು ಪರಿಶೀಲಿಸಿದರು.

ನಿನ್ನೆ ರಾತ್ರಿಯೇ ಅವರು ಮದರಾಸಿಗೆ ಪ್ರಯಾಣ ಬೆಳೆಸಿದರು.

ಗೋದಾವರಿ ಪ್ರವಾಹದಿಂದ ಕೋಟ್ಯಾಂತರ ರೂ. ನಷ್ಟ

ಗೋದಾವರಿ ನದಿಯ ಪ್ರವಾಹದಿಂದ ಕೋಟ್ಯಾಂತರ ರೂಗಳಷ್ಟು ನಷ್ಟ ಸಂಭವಿಸಿದೆಯೆಂದು ಹೇಳಲಾಗಿದೆ.

ರಾಜಮಹೇಂದ್ರಿ ಪಟ್ಟಣದ ಅರ್ಧಭಾಗದಷ್ಟು ಪ್ರದೇಶ ನೀರಿನಲ್ಲಿ ಮುಳುಗಿ ೫೦ ಸಾವಿರ ಜನರು ಮನೆಮಠಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ವಾಹನಗಳ ಸಂಚಾರವು ಸಂಪೂರ್ಣವಾಗಿ ನಿಂತುಹೋಗಿದೆ. ಮರಗಳ ಮೇಲೆ ರಕ್ಷಣೆ ಪಡೆಯುತ್ತಿರುವ ನೂರಾರು ಜನರನ್ನು ರಕ್ಷಿಸಲು ದೋಣಿಗಳನ್ನು ಉಪಯೋಗಿಸಲಾಗುತ್ತಿದೆ.

೧೬ ವರ್ಷದ ಯುವತಿಯ ಆತ್ಮಹತ್ಯೆ

ಮೈಸೂರು ೧೯

ಕೃಷ್ಣರಾಜ ಮೊಹಲ್ಲಾ ಅಕ್ಕಿ ಚಿಕ್ಕಣ್ಣ ಛತ್ರದಲ್ಲಿ ವಾಸವಾಗಿದ್ದ ನಾಚಾರಮ್ಮ ಎಂಬ ೧೬ ವರ್ಷದ ಅವಿವಾಹಿತ ಯುವತಿಯು ನಿನ್ನೆ ಸಂಜೆ ಮನೆಯಲ್ಲಿ ಯಾರೂ ಇಲ್ಲದ ಸಮಯದಲ್ಲಿ ಹಗ್ಗದಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಳೆಂದು ವರದಿಯಾಗಿದೆ. ಆಕೆಯು ಗಾಣಿಗರ ಜಾತಿಗೆ ಸೇರಿದವಳೆಂದೂ, ಹೊಟ್ಟೆ ನೋವಿನಿಂದ ನರಳುತ್ತಿದ್ದು ಈ ರೀತಿ ಪ್ರಾಣ ತೆಗೆದುಕೊಂಡಿರಬಹುದೆಂದೂ ಹೇಳಲಾಗಿದೆ. ಕೃಷ್ಣರಾಜ ಪೋಲೀಸಿನವರು ಮಹಜರ್ ಕ್ರಮ ನಡೆಸಿದರು.

ಮುಖ್ಯಮಂತ್ರಿಗಳ ಕಾರ್ಯಕ್ರಮ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈದಿನ ಬೆಳಗ್ಗೆ ಸಾಂಕ್ರಾಮಿಕ ರೋಗ ಆಸ್ಪತ್ರೆ, ಅರಗು ಕಾರ್ಖಾನೆಗಳಿಗೆ ಭೇಟಿ ಇತ್ತಿದ್ದರು. ಪುರಸಭಾಧ್ಯಕ್ಷ ಟಿ. ವೆಂಕಟರಮಣಯ್ಯನವರೂ ಸಹ ಅವರ ಸಂಗಡ ಇದ್ದರು.

ಅನಂತರ ಅವರು ಕೇಂದ್ರ ಆಹಾರ ಸಂಶೋಧನಾ ಸಂಸ್ಥೆಯ ಸ್ಥಳೀಯ ಸಲಹಾ ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದರು. ಮಧ್ಯಾಹ್ನ ಅವರು ಬೆಂಗಳೂರಿಗೆ ಪ್ರಯಾಣ ಬೆಳೆಸಿದರು.

ಕಾಶ್ಮೀರ ಬಗ್ಗೆ ನೆಹರೂಗೆ ವರದಿ

ಕಾಶ್ಮೀರ ಪರಿಸ್ಥಿತಿಯನ್ನು ಪ್ರಧಾನಿ ನೆಹರೂರವರಿಗೆ ತಿಳಿಸಲು ಕಾಶ್ಮೀರ ರಾಜ್ಯಾಂಗ ಸಭೆಯ ಅಧ್ಯಕ್ಷ ಸಾದಿಕ್‌ರವರು ಈದಿನ ದೆಹಲಿಗೆ ಬರುವರೆಂದು ತಿಳಿಯಬರುತ್ತದೆ.

ಮಹಮ್ಮದಾಲಿ-ನೆಹರೂ ಸಂಧಾನ ಮುಂದುವರೆದಿದೆ

ಕಾಶ್ಮೀರದ ವಿಷಯದಲ್ಲಿ ಪ್ರಧಾನಿ ನೆಹರೂ ಮತ್ತು ಪಾಕ್ ಪ್ರಧಾನಿ ಮಹಮ್ಮದಾಲಿಯವರ ನಡುವೆ ನಿನ್ನೆ ಸುಮಾರು ೮೦ ನಿಮಿಷಕಾಲ ಮಾತುಕತೆ ನಡೆಯಿತೆಂದು ತಿಳಿಯಬರುತ್ತದೆ.

ನಾಳೆ ದಿನ ಇವರ ಮಾತುಕತೆಗಳು ಮುಕ್ತಾಯವಾಗಿ ಒಂದು ಸಂಯುಕ್ತ ಹೇಳಿಕೆ ಪ್ರಕಟವಾಗುವುದೆಂದು ತಿಳಿಯಬರುತ್ತದೆ.

ಕಾಶ್ಮೀರ ಭವಿಷ್ಯದ ವಿಷಯದಲ್ಲಿ ಅಲ್ಲಿಯ ಜನರ ಅಭಿಪ್ರಾಯವನ್ನು ಪಡೆಯುವುದು ಅವಶ್ಯಕವೆಂದು ಉಭಯ ಪ್ರಧಾನಿಗಳು ಒಪ್ಪಿರುವುದಾಗಿ ಇದು ಹೇಗೆ ನಡೆಯಬೇಕೆಂಬ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲವೆಂದು ಹೇಳಲಾಗಿದೆ.

ಬಳ್ಳಾರಿ ಕೊಡಿ ಎಂದು ಮೈಸೂರು ಕೇಳಲಿಲ್ಲ

ಕೇಂದ್ರವು ತಾನಾಗಿಯೇ ಅದಕ್ಕೆ ವಹಿಸಿದೆ

ಪಾರ್ಲಿಮೆಂಟಿನಲ್ಲಿ ಉಪ ಗೃಹಸಚಿವರ ಹೇಳಿಕೆ

ಬಳ್ಳಾರಿಯನ್ನು ತಮಗೆ ಕೊಡಬೇಕೆಂದು ಮೈಸೂರು ಸರ್ಕಾರವು ಯಾವಾಗಲೂ ಕೇಳಲಿಲ್ಲ. ಆದರೆ ಆಭಾಗದಲ್ಲಿ ಕನ್ನಡ ಜನರೇ ಹೆಚ್ಚಾಗಿದ್ದುದರಿಂದ ಅದನ್ನು ತಮ್ಮ ಪ್ರಾಂತ್ಯಕ್ಕೆ ಸೇರಿಸಿಕೊಳ್ಳಬೇಕೆಂದು ಕೇಂದ್ರ ಸರ್ಕಾರವು ಮೈಸೂರು ಸರ್ಕಾರವನ್ನು ಪ್ರಾರ್ಥಿಸಿತು. ಅಲ್ಲದೆ ಬಳ್ಳಾರಿ ಪೂರ್ವದಲ್ಲಿ ಮೈಸೂರಿಗೇ ಸೇರಿತ್ತು--ಎಂದು ಕೇಂದ್ರ ಗೃಹಶಾಖೆಯ ಉಪಸಚಿವ ಶ್ರೀ ಬಿ. ಎನ್. ದಾತಾರ್‌ರವರು ಆಂಧ್ರ ಮಸೂದೆಯಮೇಲೆ ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಇರಾನಿನಲ್ಲಿ ಗಲಭೆ

ಇರಾನಿನಲ್ಲಿ ಪ್ರಧಾನಿ ಮುಸಾದಿಕ್ ಸರ್ಕಾರವನ್ನು ಉರುಳಿಸುವ ಪ್ರಯತ್ನವು ವಿಫಲವಾಗಿ ಅವರ ಷಾರವರು ದೇಶಬಿಟ್ಟು ಪರಾರಿಯಾದರಷ್ಟೆ. ಈಗ ಟೆಹರಾನ್ ನಗರದಲ್ಲಿ ಜನರು ಗುಂಪು ಗುಂಪಾಗಿ ತಿರುಗುತ್ತಾ ಅಲ್ಲಿ ಸ್ಥಾಪಿಸಲ್ಪಟ್ಟಿರುವ ಷಾರವರ ಪ್ರತಿಮೆಗಳನ್ನು ನಾಶಮಾಡಿದರೆಂದು ವರದಿಯಾಗಿದೆ. ದೇಶವನ್ನು ಬಿಟ್ಟುಹೋದ ಷಾರವರೊಡನೆ ಯಾವ ಸಂಧಾನವೂ ಬರಕೂಡದೆಂದು ಇರಾಕ್‌ನಲ್ಲಿರುವ ಇರಾನಿನ ರಾಯಭಾರಿಗೆ ತಿಳಿಸಲಾಗಿದೆ.

ಒಳಸಂಚಿಗೆ ಕಾರಣರಾದ ಜ|| ಜಹೇದಿಯವರನ್ನು ದಸ್ತಗಿರಿಮಾಡಲು ಆಜ್ಞೆಮಾಡಲಾಗಿದೆ. ಆದರೆ ಅವರು ಈಗ ಪರಾರಿಯಾಗಿ ಬೆಟ್ಟಗುಡ್ಡಗಳಲ್ಲಿ ಅಡಗಿರಬಹುದೆಂದು ಹೇಳಲಾಗಿದೆ.

ಇರಾನನ್ನು ರಿಪಬ್ಲಿಕ್ ಆಗಿ ಘೋಷಿಸಲಾಗುವುದಿಲ್ಲವೆಂದು ಅಲ್ಲಿನ ವಿದೇಶಾಂಗ ಸಚಿವರು ತಿಳಿಸಿದ್ದಾರೆ.

೧೨೨ ವರ್ಷದ ವೃದ್ಧರ ಮರಣ

ತಿರುವಾಂಕೂರಿನ ಕೈಲಾಸಿನಲ್ಲಿ ಅತ್ಯಂತ ವಯೋವೃದ್ಧರಾದ ೧೨೨ ವರ್ಷದ ರಾಮತರ್ ಎಂಬುವರು ಮೊನ್ನೆಯದಿನ ಮೃತರಾದರು. ಅವರಿಗೆ ೮೧ ಮಂದಿ ಮಕ್ಕಳು, ಮೊಮ್ಮಕ್ಕಳು ಮತ್ತು ಮರಿಮಕ್ಕಳು ಇದ್ದಾರೆ.

ಕೊರಿಯಾ ರಾಜಕೀಯ ಸಮ್ಮೇಳನದಲ್ಲಿ ಭಾರತ ಇರಬೇಕೆಂದು ಬ್ರಿಟನ್

ಬೇಡವೆಂದು ಅಮೆರಿಕಾ

ಕೊರಿಯಾದ ರಾಜಕೀಯ ಸಮಿತಿಯಲ್ಲಿ ಭಾರತಕ್ಕೆ ಸ್ಥಾನವನ್ನು ಕೊಡಬೇಕೆಂದು ನಿನ್ನೆಯದಿನ ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ಬ್ರಿಟನ್ನಿನ ಪ್ರತಿನಿಧಿಯು ಮಾತನಾಡುತ್ತಾ ತಿಳಿಸಿದರು. ಏಷ್ಯಾದಲ್ಲೆಲ್ಲಾ ಭಾರತವು ಹಿರಿಯ ರಾಷ್ಟ್ರವಾಗಿದೆ. ಕೊರಿಯಾ ಕದನ ನಿಲ್ಲಡೆಗೆ ಇದು ಈಗಾಗಲೇ ಅತ್ಯುತ್ತಮ ಸೇವೆ ಸಲ್ಲಿಸಿದೆ ಇನ್ನೂ ಸಲ್ಲಿಸುತ್ತಲಿದೆ. ಭಾರತದ ಪಾತ್ರವು ಇದರಲ್ಲಿ ಪ್ರಮುಖವಾದುದು. ಆದ್ದರಿಂದ ಇದಕ್ಕೆ ಸ್ಥಾನವು ರಾಜಕೀಯ ಸಮಿತಿಯಲ್ಲಿ ಇದ್ದೇ ಇರಬೇಕೆಂದು ಅವರು ವಾದಿಸಿದರು.

ಅಮೆರಿಕಾ ಪ್ರತಿನಿಧಿಯು ಇದನ್ನು ವಿರೋಧಿಸಿ ಕೊರಿಯಾ ಯುದ್ಧದಲ್ಲಿ ನೇರವಾಗಿ ಯಾರು ಸಂಬಂಧಿಸಿದ್ದರೋ ಅವರು ಮಾತ್ರ ಇರಬೇಕೇ ವಿನಹ ಭಾರತಕ್ಕೆ ಸ್ಥಾನ ಕೊಡುವುದನ್ನು ತಮ್ಮ ಸರ್ಕಾರವು ವಿರೋಧಿಸುವುದಾಗಿ ತಿಳಿಸಿದರು. ಈ ರಾಜಕೀಯ ಸಮ್ಮೇಳನದಲ್ಲಿ ಯಾವ ಯಾವ ರಾಷ್ಟ್ರಗಳಿರಬೇಕೆಂಬ ಬಗ್ಗೆ ಇನ್ನೂ ಅಂತ್ಯ ತೀರ್ಮಾನವಾಗಿಲ್ಲ.

ವಿಮಾನ ಕಾರ್ಖಾನೆಯಿಂದ ಬಂಡವಾಳ ವಾಪಸು

ಮೈಸೂರು ಸರ್ಕಾರದ ಪ್ರಯತ್ನ

ಬೆಂಗಳೂರು ೧೯

ಬೆಂಗಳೂರು ವಿಮಾನ ಕಾರ್ಖಾನೆಯಲ್ಲಿ ಮೈಸೂರು ಸರ್ಕಾರದವರು ಹಾಕಿರುವ ೬೦ ಲಕ್ಷ ರೂ. ಬಂಡವಾಳವನ್ನು ವಾಪಸು ತೆಗೆದುಕೊಂಡು ಅದನ್ನು ಇಲ್ಲಿನ ಪಂಚವಾರ್ಷಿಕ ಯೋಜನೆಗೆ ಉಪಯೋಗಿಸಿಕೊಳ್ಳಲು ಸಲುವಾಗಿ ಕೇಂದ್ರ ರಕ್ಷಣಾಸಚಿವ ಶ್ರೀ ತ್ಯಾಗಿಯವರೊಡನೆ ಮೈಸೂರು ಸರ್ಕಾರದವರು ಮಾತುಕತೆ ನಡೆಸಿದರೆಂದು ತಿಳಿದುಬಂದಿದೆ.

WANTED

A Printing machine in running condition—Crown or Demmy Folio

Contact:—

The SAMACHARA office, Mothikhana Buildings, Jaganmohan Palace Road, Mysore.

ಬೇಗಂ ಮಹಮ್ಮದಾಲಿ ಕರಾಚಿಗೆ

ಭಾರತಕ್ಕೆ ತಮ್ಮ ಪತಿಯೊಡನೆ ಆಗಮಿಸಿದ್ದ ಬೇಗಂ ಮಹಮದ್ ಆಲಿಯವರು ನಿನ್ನೆ ದಿನ ರಾತ್ರಿ ವಿಶೇಷ ವಿಮಾನದಲ್ಲಿ ಆತುರವಾಗಿ ಕರಾಚಿಗೆ ಹಿಂತಿರುಗಿದರು. ಅವರ ಮಗಳಿಗೆ ಆಕಸ್ಮಿಕ ಒಂದು ಬೆರಳು ಕತ್ತರಿಸಿ ಹೋದುದರಿಂದ ಅವರು ತ್ವರಿತವಾಗಿ ಹಿಂತಿರುಗಿದರು.

ದೆಹಲಿಯಲ್ಲಿ ವಿಶೇಷ ಪೌರಸಮಾರಂಭ

ಪಾಕೀಸ್ತಾನ ಪ್ರಧಾನಿ ಮಹಮದ್ ಆಲಿಯವರಿಗೆ ದೆಹಲಿಯ ಪೌರಸಭೆಯವರು ಈಸಂಜೆ ಕೆಂಪು ಕೋಟೆಯಲ್ಲಿ ವಿಶೇಷ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೮—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೩—೨	೨೮—
ಜೋಂಗೆಬೀಜ	—	—
ಹುರುಳಿ	೪೭—	೪೮—೧೨
ಹೆಸರು	೭೨—೨	—
ಅವರೆ	—	—
ಉದ್ದು	೭೦—	—
ಹುಚ್ಚೆಳ್ಳು	—	—
ಅಲಸಂದೆ	೫೯—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೬—	೭—೮
ಸೀಗೆಕಾಯಿ	೬—೮	—
ಬೆಲ್ಲ	—	—
ತೆಂಗಿನಕಾಯಿ	೨೨೪	೨೯೦

ಪರ್ಷಿಯಾ ಷಾ ಲಂಡನ್ನಿಗೆ

ಇರಾನಿನ ಷಾರವರು ತಮ್ಮ ಪತ್ನಿಯೊಡನೆ ಬಾಗ್ದಾದಿಗೆ ಓಡಿಹೋಗಿದ್ದರಷ್ಟೆ. ಅವರು ಈಗ ಲಂಡನ್ನಿಗೆ ತೆರಳಿರುವುದಾಗಿ ಹೇಳಲಾಗಿದೆ.

ಟೆಹರಾನನ್ನು ಬಿಟ್ಟು ಓಡಿಹೋಗಲು ಷಾರವರಿಗೆ ಪ್ರಧಾನ ಮಂತ್ರಿ ಡಾ|| ಮುಸಾದಿಕ್‌ರವರೇ ವಿಮಾನ ವ್ಯವಸ್ಥೆಯನ್ನು ಮಾಡಿದ್ದರೆಂದು ಟೆಹರಾನಿನ ಪತ್ರಿಕೆಯೊಂದು ಆಪಾದಿಸಿದೆ.

ಕ್ಷಾಮಪರಿಹಾರಕ್ಕಾಗಿ ದಿನಕ್ಕೆ ೬೬ ಸಾವಿರ ರೂ

ಮದರಾಸ್ ಸರ್ಕಾರದವರು ಕ್ಷಾಮಪರಿಹಾರಕ್ಕಾಗಿ ದಿನಕ್ಕೆ ೬೬ ಸಾವಿರ ರೂಗಳನ್ನು ಖರ್ಚುಮಾಡುತ್ತಿರುವರೆಂದೂ, ಈಗಾಗಲೇ ೧೦ ಕೋಟಿ ರೂಪಾಯಿಗಳು ವೆಚ್ಚವಾಗಿದೆಯೆಂದೂ ತಿಳಿಸಲಾಗಿದೆ.

ಅಪೇರ

14—8—53 ರಿಂದ 3ನೇ ವಾರ

ಪ್ರತಿದಿನ ಮೂರು ಆಟಗಳು

ಇನ್‌ಸ್ಪೆಕ್ಟರ್ ತಮಿಳು ಚಿತ್ರ

ಪಾತ್ರ:—ಬಾಲಚಂದರ್, ಟಿ. ಕೆ. ಷಣ್ಮುಗಂ, ಪಿ. ಕೆ. ಸರಸ್ವತಿ, ಅಂಜಲಿದೇವಿ

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು:— ಹಿ. ಕಾ. ಸುಬ್ಬರಾವ್

ಮೋಹನ್ ಮುದ್ರಣಾಲಯ ಮೈಸೂರು.

ನೈಸರ್ಗಿಕ ಬಣ್ಣಗಳಲ್ಲಿ

ಬೇಕ್‌ಲೈಟ್ ಸಾಮಾನುಗಳಲ್ಲಿ

ಮೈಸೂರೈಟ್ ಮತ್ತು ಐವರೈಟ್

ಅಸಮಾನವಾದ ದರ್ಜೆಗೆ ಸೇರಿದ್ದು

ಕುಡಿಯುವ ಪಾತ್ರೆಗಳು, ಬಟ್ಟಲುಗಳು, ಬಶಿಗಳು, ಕ್ಷೌರದ ದೊನ್ನೆಗಳು, ಸಿಗರೇಟು ಬೂದಿಯನ್ನು ಹಾಕುವ ತಟ್ಟೆಗಳು, ಟೇಬಲ್ ಅಲಂಕರಿಸುವ ಕೌಶಲ್ಯದ ಸಾಮಾನುಗಳು, ಅಂಗಶೃಂಗಾರ ಪದಾರ್ಥಗಳನ್ನಿಡುವ ಸಾಮಾನುಗಳು, ವಿಧವಿಧವಾದ ಸಮೂನೆಗಳಲ್ಲಿ ಮತ್ತು ಆಕರ್ಷಕ ಬಣ್ಣಗಳಲ್ಲಿ

ತಯಾರಿಸಲ್ಪಡುವುವು.

ಅಚ್ಚು ಮಾಡಿದ ಮೈಸೂರೈಟ್ ಸಾಮಾನುಗಳು

ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ,

ಮೈಸೂರು ರೋಡ್, ಬೆಂಗಳೂರು-೨

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೪

೨೦-೮-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪರ್ಶಿಯಾದಲ್ಲಿ ಮುಸಾದಿಕ್ ಸರ್ಕಾರ ಪತನ

ಜನರಲ್ ಜಹೇದಿಯವರು ನೂತನ ಪ್ರಧಾನಿ

ಷಾರವರು ಸ್ವದೇಶಕ್ಕೆ ಹಿಂತಿರುಗುವರು

ಪರ್ಶಿಯಾದ ಷಾರವರ ಬೆಂಬಲಿಗರಾದ ರಾಯಲ್‌ದಳಕ್ಕೆ ಸೇರಿದವರು ದಂಗೆ ಎದ್ದು ಡಾ|| ಮುಸಾದಿಕ್‌ರವರ ಸರ್ಕಾರವನ್ನು ಉರುಳಿಸಿ ತಾವು ಅಧಿಕಾರವನ್ನು ವಹಿಸಿಕೊಂಡಿರುವುದಾಗಿ ಟೆಹರಾನ್ ರೇಡಿಯೋ ವಿನಿಂದ ಪ್ರಸಾರಮಾಡಿದ್ದಾರೆ. ಈ ಸೈನ್ಯದಳದವರು ಸರ್ಕಾರದ ಎಲ್ಲಾ ಸೈನ್ಯ, ಕಛೇರಿ ಮುಂತಾದುವನ್ನು ತಮ್ಮ ವಶಪಡಿಸಿಕೊಂಡು ಮಂತ್ರಿಮಂಡಲ ಮತ್ತು ಡಾ|| ಮುಸಾದಿಕ್‌ರವರ ಅನುಯಾಯಿಗಳಲ್ಲಿ ಅನೇಕರನ್ನು ದಸ್ತಗಿರಿಮಾಡಿದ್ದಾರೆ. ಟೆಹರಾನಿನಲ್ಲಿ ನೂತನ ಮಿಲಿಟರಿ ಗೌರ್ನರನ್ನೂ ಸೈನ್ಯಾಧಿಕಾರಿಯನ್ನೂ ನೇಮಿಸಿದ್ದಾರೆ

ಡಾ|| ಮುಸಾದಿಕ್‌ರವರನ್ನು ಷಾ ಬೆಂಬಲಿಗರು ದಸ್ತಗಿರಿ ಮಾಡಿರುವುದಾಗಿಯೂ ಉಭಯ ಪಕ್ಷಗಳವರ ಘರ್ಷಣೆಯಲ್ಲಿ ವಿದೇಶಾಂಗ ಸಚಿವ ಮಿ|| ಫಾತಿಮಿಯವರನ್ನು ಕತ್ತರಿಸಿಹಾಕಿರುವುದಾಗಿಯೂ ವರದಿಯಾಗಿದೆ.

ಷಾರವರು ಟೆಹರಾನನ್ನು ಬಿಟ್ಟುಹೋಗುವ ಮುನ್ನ ಹೊಸ ಪ್ರಧಾನಿಯನ್ನಾಗಿ ನೇಮಿಸಿದ್ದ ಜನರಲ್ ಜಹೇದಿಯವರು ತಮ್ಮ ಹೊಸ ಹುದ್ದೆಯನ್ನು ನಿನ್ನೆಯದಿನ ವಹಿಸಿಕೊಂಡರು. ಅವರು ರಾತ್ರಿ ತಮ್ಮ ಜನರಿಗೆ ಒಂದು ಪ್ರಸಾರ ಭಾಷಣವನ್ನು ಮಾಡುತ್ತಾ ಷಾರವರು ನೇಮಿಸಿರುವ ತಮ್ಮ ಸರ್ಕಾರಕ್ಕೆ ಸಕಲರೂ ಬೆಂಬಲ ನೀಡಬೇಕೆಂದು ಕೋರಿದ್ದಾರೆ.

ಈ ಗಲಭೆಗಳ ಪರಿಣಾಮವಾಗಿ ಸುಮಾರು ೩೦೦ ಜನರು ಸತ್ತುಹೋಗಿರುವುದಾಗಿ ತಿಳಿಯಬರುತ್ತದೆ.

ನಗರದಲ್ಲಿ ಪ್ರದರ್ಶನಕಾರರು ಡಾ|| ಮುಸಾದಿಕ್‌ರವರ ಪಕ್ಷದವರಿಗೆ ಸೇರಿರುವ ಅನೇಕ ಮನೆಗಳು, ವೃತ್ತ ಪತ್ರಿಕಾಲಯ ಮುಂತಾದುವುಗಳಿಗೆಲ್ಲಾ ಬೆಂಕಿಯಿಟ್ಟು ಸುಟ್ಟಿರುವುದಾಗಿ ವರದಿಯಾಗಿದೆ.

ಈಗ ರೋಂ ನಗರದಲ್ಲಿರುವ ಪರ್ಶಿಯಾ ಷಾರವರು ನೂತನ ಪ್ರಧಾನಿ ಜ|| ಜಹೇದಿಯವರಿಗೆ ಒಂದು ಕೇಬಲ್ ಕಳುಹಿಸಿ ತಾವು ರಾಜಧಾನಿಗೆ ಹಿಂತಿರುಗುವುದಾಗಿ ತಿಳಿಸಿದ್ದಾರೆಂದು ಹೇಳಲಾಗಿದೆ.

ಆಪಾದಿತರು ತಾವಾಗಿ ಶರಣಾಗತರಾದರು

ಬೆಂಗಳೂರು ೨೦

ಕಳೆದವಾರ ಒಂದನೇ ತಾರೀಖು ಸ್ಟೇಟ್ ಹುಜೂರು ಖಜಾನೆಯಿಂದ ೭,೩೪,೦೦೦ ರೂಗಳನ್ನು ತೆಗೆದುಕೊಂಡು ಹೋಗಿ ಮೈಸೂರು ಬ್ಯಾಂಕಿಗೆ ಆ ಹಣವನ್ನು ಕಟ್ಟುವ ಸಂಬಂಧದಲ್ಲಿ ೧,೧೦,೦೦೦ ರೂ. ಗಳ ಲೆಕ್ಕ ಕಡಮೆಬಂದು ಇದಕ್ಕೆ ಸಂಬಂಧಪಟ್ಟ ಖಜಾನಾಧಿಕಾರಿ ಶ್ರೀ ಸಿ. ಎನ್. ಕೃಷ್ಣಮೂರ್ತಿಯವರು ಪತ್ತೆಯಿಲ್ಲದಾಗಿದ್ದರು. ಅವರು ಮೊನ್ನೆಯದಿನ ತಾವಾಗಿಯೇ ಜಿಲ್ಲಾಧಿಕಾರಿ ಶ್ರೀ ಟಿ. ರಂಗಮಲ್ಲಯ್ಯನವರ ಮನೆಗೆ ಹೋಗಿ ಶರಣಾಗಿತರಾದರೆಂದು ತಿಳಿಯಬರುತ್ತದೆ.

ಅವರನ್ನು ಪೋಲೀಸರವರ ವಶಕ್ಕೆ ಕೊಡಲಾಗಿದೆ. ಮುಂದಿನ ತನಿಖೆ ನಡೆಯುತ್ತಿದೆ.

ಶ್ರೀ ಕೃಷ್ಣಮೂರ್ತಿಯವರು ೫ ನೇ ತಾರೀಖು ಬೆಂಗಳೂರನ್ನು ಬಿಟ್ಟು ಉತ್ತರ ಭಾರತಕ್ಕೆ ತೆರಳಿ ಅಲ್ಲಿ ನಾನಾ ಪ್ರದೇಶಗಳಲ್ಲಿ ಪ್ರವಾಸಮಾಡಿ ಕೊನೆಗೆ ಹಿಮಾಲಯ ಪರ್ವತವನ್ನು ಸ್ವಲ್ಪಭಾಗ ಹತ್ತಿ ಅನಂತರ ವಾಪಸುಬಂದು ಈಗ ಶರಣಾಗತರಾದರೆಂದು ಹೇಳಲಾಗಿದೆ.

ಶ್ರೀ ಬಿ.ಟಿ. ಕೆಂಪಣ್ಣನವರಿಗೆ ರಜಾ

ತುಮಕೂರು ಜಿಲ್ಲಾಧಿಕಾರಿಗಳಾದ ಶ್ರೀ ಬಿ. ಟಿ. ಕೆಂಪಣ್ಣನವರಿಗೆ ನಿವೃತ್ತ ಪೂರ್ವ ಇದೇ ೨೩ ನೇ ತಾರೀಖಿನಿಂದ ೬ ತಿಂಗಳ ರಜಾ ಕೊಡಲಾಗಿದೆ.

ಅಖಿಲಭಾರತ ರೇಡಿಯೋ ಕೇಂದ್ರದ ಮಾಜಿ ಮುಖ್ಯಾಧಿಕಾರಿಯ ವಜಾ

ಅಖಿಲಭಾರತ ರೇಡಿಯೋ ಕೇಂದ್ರದ ಡೈರೆಕ್ಟರ್ ಜನರಲ್ ಆಗಿದ್ದ ಶ್ರೀ ಎಸ್. ಎಸ್. ಲಕ್ಷ್ಮಣರವರನ್ನು ಕೆಲಸದಿಂದ ವಜಾಮಾಡಿರುವುದಾಗಿ ತಿಳಿಯಬರುತ್ತದೆ.

ಕೆಲವು ಅಪಾದನೆ ಮೇಲೆ ಕೇಂದ್ರ ಸರಕಾರವು ಅವರನ್ನು ಕೆಲಸದಿಂದ ಸಸ್ಪೆಂಡ್ ಮಾಡಿತ್ತು.

ನಗರಾರೋಗ್ಯ

ಮೈಸೂರು ೨೦

ಇದೇ ೧೫ ನೇ ತಾರೀಖಿಗೆ ಮುಕ್ತಾಯವಾದ ಪಕ್ಷದಲ್ಲಿ ನಗರದಲ್ಲಿ ಕಾಲರಾ, ಪ್ಲೇಗು ಮತ್ತು ಸಿಡುಬು ರೋಗಗಳು ಇರಲಿಲ್ಲ. ಆದಾಗ್ಯೂ ೯೬೨ ಮನೆಗಳಿಗೆ ಸೈನೋಗ್ಯಾಸ್, ೨೯೭ ಪ್ರಾಥಮಿಕ ಮತ್ತು ೫೧೯೦-ರಿವ್ಯಾಕ್ಸಿನೇಷನ್ ನಡೆಸಲಾಗಿದೆ.

ಡಿಫ್ತೀರಿಯಾ ರೋಗವು ೧೧ ಮತ್ತು ಟೈಫಾಯಿಡ್ ರೋಗವು ೮ ಜನಕ್ಕೆ ತಗುಲಿತು ಡಿಫ್ತೀರಿಯಾ ವಿರುದ್ಧ ೨೮ ಇನಾಕ್ಯುಲೇಷನ್ ಮಾಡಲಾಯಿತು. ಎಂದು ಮೈಸೂರುನಗರ ಆರೋಗ್ಯಾಧಿಕಾರಿಗಳ ವರದಿಯು ತಿಳಿಸುತ್ತದೆ.

ವಿಶೇಷ ಅಲಂಕಾರ

ಮೈಸೂರು ೨೦

ಅರಮನೆ ಕೋಟೆಯಲ್ಲಿರುವ ಶ್ರೀ ಕೋಡಿಸೋಮೇಶ್ವರ ನವಗ್ರಹ ದೇವಸ್ಥಾನದಲ್ಲಿ ನಾಳೆದಿನ ಅಮ್ಮನವರಿಗೆ ಮಹಾಲಕ್ಷ್ಮಿ ಅಲಂಕಾರ ಮತ್ತು ಶನಿವಾರ ಸ್ವಾಮಿಯವರಿಗೆ ಕೋದಂಡರಾಮ ಅಲಂಕಾರ ನಡೆಯುವುದು.

ಸಕ್ಕರೆಬೆಲೆ ಇಳಿತಾಯ

ಬೆಂಗಳೂರು ೨೦

ಮಾರುಕಟ್ಟೆಗಳಲ್ಲಿ ಸಕ್ಕರೆ ಬೆಲೆಯು ಇತ್ತೀಚೆಗೆ ಏರಿ ಹೋಗುತ್ತಲಿರುವುದರಿಂದ ಅದನ್ನು ತಡೆಗಟ್ಟಲು ಸರ್ಕಾರದವರು ಸಕ್ಕರೆ ಬೆಲೆಯನ್ನು ಕಡಮೆ ಮಾಡಿದ್ದಾರೆ.

ಜಿಲ್ಲಾ ಕೇಂದ್ರಗಳಲ್ಲಿ ವೀಸೆಗೆ ೧-೧-೬ ರೂ, ಚೀಲಕ್ಕೆ ೮೧-೧೦-೯ ರೂ. ಒಟ್ಟುಮಾರಾಟಬೆಲೆ ೭೯-೧೫-೯ ರೂ. [ಈಗಿನ ಬೆಲೆ ವೀಸೆಗೆ ರೂ. ೧-೪-೯.]

ತಾಲ್ಲೂಕು ಕೇಂದ್ರಗಳಲ್ಲಿ ವೀಸೆಗೆ ೧-೨-೬, ಚೀಲಕ್ಕೆ ೮೬-೫-೩ ರೂ, ಒಟ್ಟುಮಾರಾಟ ೮೪-೧೦-೩ ರೂ.

ಗ್ರಾಮಾಂತರ ಡಿಪೋಗಳಲ್ಲಿ ವೀಸೆಗೆ ೧-೩-೦ ರೂ, ಚೀಲಕ್ಕೆ ೮೮-೧೦-೯ ಒಟ್ಟುಮಾರಾಟ ೮೬-೧೫-೯ ರೂ.

ಸಕ್ಕರೆಯನ್ನು ಇನ್ನುಮುಂದೆ ರೇಷನ್ ಡಿಪೋಗಳಲ್ಲಿ ಕೊಡಲಾಗುತ್ತದೆ. ಅಕ್ಕಿ ರೇಷನ್ ಇರುವವರಿಗೆ ತಿಂಗಳಿಗೆ ಒಂದೂವರೆ ಪೌಂಡು ಇತರರಿಗೆ ಮುಕ್ಕಾಲು ಪೌಂಡು.

ರಿಟ್ ಅರ್ಜಿಗಳಿಗೆ ಹೆಚ್ಚಿಗೆ ರುಸುಂ

ಬೆಂಗಳೂರು ೨೦

ಮೈಸೂರು ಶ್ರೇಷ್ಠನ್ಯಾಯಾಲಯಕ್ಕೆ ಸಲ್ಲಿಸುವ ಹೇಬಿಯಸ್ ಕಾರ್ಪಸ್ ಅರ್ಜಿವಿನಹ ಇತರ ಎಲ್ಲಾ ರಿಟ್ ಅರ್ಜಿಗಳ ರುಸುಂ ಅನ್ನು ೨ ರೂಪಾಯಿಗಳಿಂದ ೨೦ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

೫೮೮ ಪೌಂಡು ಅಕ್ರಮ ಹೊಗೆಸೊಪ್ಪು ಪತ್ತೆ

ಮೈಸೂರು ೨೦

ಕೇಂದ್ರ ಎಕ್ಸೈಜು ಸುಂಕದ ಅಧಿಕಾರಿಗಳಾದ ಶ್ರೀ ದಿನಕರರವರು ಮೊನ್ನೆಯದಿನ ಮಂಡಿ ಮೊಹಲ್ಲಾದಲ್ಲಿ ಕೆಲವೆಡೆ ಶೋಧಿಸಿ ೧೪೧ ಜೀಲುಗಳಲ್ಲಿ ತುಂಬಿದ್ದ ಸುಮಾರು ೫೦೦೦ ಪೌಂಡು ಅಕ್ರಮ ಹೊಗೆಸೊಪ್ಪನ್ನು ವಶಪಡಿಸಿಕೊಂಡಿರುವುದಾಗಿ ಗೊತ್ತಾಗಿದೆ.

ಬರ್ಮಾ ವ್ಯಾಪಾರ ನಿಯೋಗ

ಬರ್ಮಾದ ವ್ಯಾಪಾರ ನಿಯೋಗವು ಭಾರತದಲ್ಲಿರುವ ಬರ್ಮಾ ರಾಯಭಾರಿಯವರೊಡನೆ ಆಹಾರ ಸಂಶೋಧನಾಲಯಕ್ಕೆ ಭೇಟಿಯಿತ್ತು ಅಲ್ಲಿಯ ಕಾರ್ಯಕಲಾಪಗಳ ಬಗ್ಗೆ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದರು.

ಬೆಂಗಳೂರಿಗೆ ಬರುವವರ ಮೇಲೆ ತೆರಿಗೆ

ಬೆಂಗಳೂರು ೨೦

ಇಲ್ಲಿಯ ಕಾರ್ಪೊರೇಷನ್ ಶಾಸನವನ್ನು ತಿದ್ದುಪಡಿ ಮಾಡುವ ಬಗ್ಗೆ ನೇಮಿತವಾಗಿದ್ದ ಉಪಸಮಿತಿಯು ಕಾರ್ಪೊರೇಷನ್ ಅಥವ ಅದಕ್ಕೆ ಸಂಬಂಧಪಟ್ಟ ಉಪಸಮಿತಿಗಳಲ್ಲಿ ಹಾಜರಾದ ಸದಸ್ಯರಿಗೆ ಸಭೆಯೊಂದಕ್ಕೆ ೫ ರೂ ನಂತೆ ಸಂಭಾವನೆ ಕೊಡಬೇಕು ಬೆಂಗಳೂರಿಗೆ ಬಂದಿಳಿಯುವ ಪ್ರತಿ ಪ್ರಯಾಣಿಕರ ಟಿಕೆಟ್ಟಿನ ಬೆಲೆಯಮೇಲೆ ರೂಗೆ ೬ ಕಾಸಿನಂತೆ ತೆರಿಗೆಯನ್ನು ವಿಧಿಸಬೇಕೆಂದು ತಿದ್ದುಪಡಿಗಳನ್ನು ಸೂಚಿಸಿದೆ.

ಎಂ. ಪಿ. ಸಿ. ಸಿ. ಅಧಿವೇಶನ ಮುಂದಕ್ಕೆ

ಇದೇ ಮಾಹೆ ೨೯-೩೦ರಲ್ಲಿ ಕೆ.ಜಿ.ಎಫ್‌ನಲ್ಲಿ ನಡೆಯಬೇಕಾಗಿದ್ದ ಎಂ. ಪಿ. ಸಿ. ಸಿ. ಅಧಿವೇಶನವನ್ನು ಮುಂದುವರಿಸಲಾಗಿದೆ. ಆ ಜಿಲ್ಲೆಯಲ್ಲಿ ಕಾಲರಾ ಉಪದ್ರವವಿರುವುದರಿಂದ ಸ್ವಾಗತ ಸಮಿತಿಯವರು ಈ ನಿರ್ಧಾರವನ್ನು ಮಾಡಿದ್ದಾರೆ. ಅಧಿವೇಶನ ಎಲ್ಲಿ ಯಾವಾಗ ನಡೆಯುವುದೆಂದು ಇನ್ನೂ ತೀರ್ಮಾನವಾಗಿಲ್ಲ.

ದಸರಾ ವಸ್ತುಪ್ರದರ್ಶನ ಸಮಿತಿಗೆ

ದಸರಾ ವಸ್ತುಪ್ರದರ್ಶನ ಸಮಿತಿಗೆ ಶ್ರೀಗಳಾದ ವಿ. ಆರ್. ನಾಯ್ಡು, ಎಸ್. ಎಂ. ಲಿಂಗಪ್ಪ, ಎ. ರಾಮಣ್ಣ ಮತ್ತು ಪಿ. ಗೋಪಾಲಕೃಷ್ಣಶೆಟ್ಟರನ್ನು ನಾಮಕರಣ ಮಾಡಲಾಗಿದೆ.

● ರಕ್ಷಣಾ ವ್ಯವಸ್ಥೆ ಸಚಿವರಾದ ಶ್ರೀ ಮಹಾವೀರ ತ್ಯಾಗಿಯವರು ನಿನ್ನೆಯದಿನ ಬೆಳಗ್ಗೆ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಮಾಡಿದರು.

ಭಾರತ-ಪಾಕ್ ಪ್ರಧಾನಿಗಳ ಸಂಧಾನ ಮುಕ್ತಾಯ

ಈ ದಿನ ಮಹಮ್ಮದಾಲಿ ನಿರ್ಗಮನ

ಭಾರತ ಮತ್ತು ಪಾಕೀಸ್ತಾನಿ ಪ್ರಧಾನಿಗಳ ನಡುವೆ ಕಳೆದ ೪ ದಿನಗಳಿಂದ ನಡೆಯುತ್ತಿದ್ದ ಮಾತುಕತೆಗಳು ಈದಿನ ಮುಕ್ತಾಯವಾಗಿ ಒಂದು ಸಂಯುಕ್ತ ಹೇಳಿಕೆಯು ಹೊರಬೀಳುವ ನಿರೀಕ್ಷೆಯಿದೆ.

ನಿನ್ನೆಯದಿನ ಉಭಯತ್ರರ ನಡುವೆ ಸುಮಾರು ೮೫ ನಿಮಿಷಕಾಲ ಮಾತುಗಳು ನಡೆದವು ಆ ಸಮಯದಲ್ಲಿ ಅವರೊಡನೆ ಮತ್ಯಾರೂ ಇರಲಿಲ್ಲ.

ಈದಿನ ರಾತ್ರಿ ಮಹಮದ್ ಅಲಿಯವರು ಕರಾಚಿಗೆ ಹಿಂತಿರುಗುವ ವ್ಯವಸ್ಥೆಯನ್ನು ಮಾಡಲಾಗಿದೆ.

ಬಂಗಾಳದ ೩೧ ಜನ ಪಾರ್ಲಿಮೆಂಟಿನ ಸದಸ್ಯರು ಮಿ॥ ಮಹಮದ್ ಅಲಿಯವರನ್ನು ಭೇಟಿಮಾಡಿದ್ದರು.

ಪೌರಸ್ವಾಗತ

ನಿನ್ನೆ ಸಂಜೆ ದೆಹಲಿಯ ಪುರಜನರು ಮಿ॥ ಮಹಮದ್ ಅಲಿಯವರಿಗೆ ಒಂದು ಸತ್ಕಾರವನ್ನು ಏರ್ಪಡಿಸಿದ್ದರು. ಸುಮಾರು ೪೦ ವಿವಿಧಪಕ್ಷ ಪ್ರತಿನಿಧಿಗಳು ಅವರಿಗೆ ಪುಷ್ಪಹಾರವನ್ನು ಅರ್ಪಿಸಿದರು.

ದೆಹಲಿಯ ಪುರಸಭೆಯ ಅಧ್ಯಕ್ಷರಾದ ಶ್ಯಾಮಲಾಲ್‌ರವರು ಪುರಜನರ ಪರವಾಗಿ ಬಿನ್ನವತ್ತಳೆಯನ್ನರ್ಪಿಸಿ ಅವರಿಗೆ ದಂತದ ಆನೆಯನ್ನು ಇತ್ತರು ಬೇಗಂ ಮಹಮದ್ ಅಲಿಯವರಿಗಾಗಿ ಒಂದು ನೆನಪಿನ ವಸ್ತುವನ್ನು ಕೊಡಲಾಯಿತು.

ಈ ಸಂದರ್ಭದಲ್ಲಿ ಮಿ॥ ಮಹಮ್ಮದ್ ಅಲಿಯವರು ಮಾತನಾಡುತ್ತಾ ದೆಹಲಿಯ ಪುರಜನರು ತಮಗೆ ಇತ್ತ ಸ್ವಾಗತದಂತಹ ಸ್ವಾಗತವು ತಮ್ಮ ಜೀವಮಾನದಲ್ಲಿ ಎಂದೂ ದೊರೆತಿಲ್ಲ, ಉಭಯ ರಾಷ್ಟ್ರಗಳ ನಡುವೆ ಇರುವ ವಿಶ್ವಾಸವನ್ನು ಇದು ವ್ಯಕ್ತಪಡಿಸುತ್ತದೆ. ಭಾರತ ಮತ್ತು ಪಾಕೀಸ್ತಾನಗಳು ಅವಳಿಮಕ್ಕಳಂತೆ. ದುರಾದೃಷ್ಟದಿಂದ ಎರಡು ರಾಷ್ಟ್ರಗಳ ನಡುವೆ ಸೌಹಾರ್ದ್ಯವು ನಿಮಾಯವಾಗಿತ್ತು. ಈಗ ಪುನಃ ಅಂಕುರವಾಗಿದೆ ಇದು ಪ್ರಬುದ್ಧಮಾನಕ್ಕೆ ಒಂದು ಉಭಯತ್ರರಲ್ಲಿ ಸೌಜನ್ಯ, ಪ್ರೀತಿ ವಿಶ್ವಾಸ ಸಹೋದರ ಭಾವ ಬೆಳೆಯಲೆಂದು ಆಶಿಸುತ್ತೇನೆ ಎಂದು ಹೇಳಿದರು.

ಕರೆಂಟ್ ಪತ್ರಿಕೆಯ ಮೇಲೆ ಮೊಕದ್ದಮೆ ವಾಪಸ್ಸು

ಫೋರ್ಜರಿ ಪತ್ರಗಳನ್ನು ಸತ್ಯವಾದ ಪತ್ರಗಳೆಂದು ಬೊಂಬಾಯಿನ ಕರೆಂಟ್ ಪತ್ರಿಕೆ ಪ್ರಕಟಿಸಿದ್ದಕ್ಕೆ ಅದರ ಸಂಪಾದಕ ಶ್ರೀ ಡಿ.ಎಫ್. ಕಾರಕರವರ ಮೇಲೆ ಅಲ್ಲಿಯ ಸರ್ಕಾರವು ಹೂಡಿದ್ದ ಮೊಕದ್ದಮೆಯನ್ನು ಈಗ ವಾಪಸ್ಸು ತೆಗೆದುಕೊಳ್ಳಲಾಗಿದೆ.

ಪ್ರವಾಹದಲ್ಲಿ ನೊಂದವರಿಗೆ ಪರಿಹಾರ

ಗೋದಾವರಿ ನದಿಯ ಪ್ರವಾಹದಿಂದ ಸುಮಾರು ೧೦ ಲಕ್ಷ ಜನರು ತಮ್ಮ ಆಸ್ತಿಪಾಸ್ತಿಗಳನ್ನೆಲ್ಲಾ ಪೂರ್ತಾ ಕಳೆದುಕೊಂಡು ನಿರ್ಗತಿಕರಾಗಿರುವುದಾಗಿ ತಿಳಿದುಬಂದಿದೆ.

ರಾಜಮಹೇಂದ್ರಿ ಪಟ್ಟಣದಲ್ಲಿಯೇ ಸುಮಾರು ೨೫೦೦೦ ಸಂಸಾರಗಳು ಅಂದರೆ ಅಲ್ಲಿಯ ಜನಸಂಖ್ಯೆಯಲ್ಲಿ ಮುಕ್ಕಾಲುಭಾಗ ಸಹ ಎಲ್ಲವನ್ನೂ ಕಳೆದುಕೊಂಡಿರುತ್ತಾರೆ.

ಈ ಪ್ರದೇಶಗಳಲ್ಲಿ ಹಂಚಲು ಮದ್ರಾಸ್ ಸರ್ಕಾರವು ೧೦೦೦೦ ಚೀಲಗಳಷ್ಟು ಅಕ್ಕಿಯನ್ನು ಕಳುಹಿಸಿದೆ. ಸರ್ಕಾರದ ಕೆಲವು ಮಂತ್ರಿಗಳು ಮತ್ತು ಉನ್ನತಾಧಿಕಾರಿಗಳು ಈ ಪ್ರದೇಶಗಳಿಗೆಲ್ಲಾ ಭೇಟಿಯಿತ್ತು ಪರಿಹಾರ ಕಾರ್ಯಗಳ ಬಗ್ಗೆ ತಕ್ಕವ್ಯವಸ್ಥೆಯನ್ನು ಮಾಡುತ್ತಿದ್ದಾರೆ.

ಕಾವೇರಿ ನದಿಯ ಪ್ರವಾಹದಿಂದ ತಿರುಚರಪಲ್ಲಿಯಲ್ಲಿ ಸುಮಾರು ೭೦೦ ಜನರು ಮನೆ ಮಠಗಳನ್ನು ಕಳೆದುಕೊಂಡಿದ್ದಾರೆಂದು ಹೇಳಲಾಗಿದೆ.

ಭಾರತೀಯರಿಗೆ ಆಂಗ್ಲಭಾಷೆ ಅತ್ಯಗತ್ಯ

ಏಷ್ಯಾಖಂಡದಲ್ಲಿರುವ ಪ್ರಮುಖ ರಾಷ್ಟ್ರಗಳಲ್ಲಿ ಒಂದಾಗಿ ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ನಮ್ಮ ಸ್ಥಾನವನ್ನು ಕಾಪಾಡಿಕೊಳ್ಳಬೇಕಾದರೆ ಇಂಗ್ಲಿಷ್ ಭಾಷೆಯೊಡನೆ ನಮ್ಮ ಸಂಪರ್ಕವನ್ನು ಕಡಮೆಮಾಡಿಕೊಳ್ಳಲು ಸಾಧ್ಯವೇ ಇಲ್ಲವೆಂದು ಬೊಂಬಾಯಿನ ವಿಶ್ವವಿದ್ಯಾನಿಲಯದ ಉಪಸ್ವಾಮಿಪತಿಗಳಾದ ಶ್ರೀ ನವರೋಜಿ ಜಹಾಂಗೀರ್ ವಾಡಿಯಾರವರು ತಿಳಿಸಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೯—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೦—೮	೫೫—೬
ಎಳ್ಳು	೩೦—	೪೦—೧೨
ಹುರುಳಿ	೪೮—	೪೮—೧೨
ಹೆಸರು	೬೨—೪	೬೪—
ಅಲಸಂದೆ	೫೫—೨	—
ಹೊಂಗೆಬೀಜ	—	—
ಅವರೆ	—	—
ಉದ್ದು	—	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೬—೧೪	—
ಸೀಗೆಕಾಯಿ	—	—
ಬೆಲ್ಲ	—	
ತೆಂಗಿನಕಾಯಿ	೧೪೦	೨೫೩

ಕಾಫಿಬೀಜದ ರಫ್ತಿಗೆ ಅವಕಾಶವಿಲ್ಲ

ಪಾರ್ಲಿಮೆಂಟಿನಲ್ಲಿ ಕೈಗಾರಿಕಾ ಸಚಿವರ ಹೇಳಿಕೆ

ಕಾಫಿ ಬೀಜದ ಬೆಳೆಯನ್ನು ಕಡಮೆ ಮಾಡಿದ ಹೊರತು ಅದನ್ನು ಭಾರತದಿಂದ ಹೊರಕ್ಕೆ ರಫ್ತುಮಾಡಲು ಅವಕಾಶವನ್ನು ಕೊಡುವ ವಿಷಯವನ್ನು ಸರ್ಕಾರವು ಪರಿಶೀಲಿಸುವುದಿಲ್ಲ ಎಂದು ಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಈಗ ಮಾರುಕಟ್ಟೆಗಳಲ್ಲಿ ಕಾಫಿಬೀಜದ ಅಭಾವವುಂಟಾಗಿರುವುದಕ್ಕೆ ಸಾಗಾಣಿಕೆಗೆ ಇರುವ ತೊಂದರೆಯೇ ಕಾರಣವಾಗಿರಬಹುದೆಂದು ಅವರು ಹೇಳಿದ್ದಾರೆ.

ಕೊರಿಯಾಕ್ಕೆ ಮೇಲ್ವಿಚಾರ ಸೈನ್ಯದ ಎರಡನೇತಂಡದ ಪ್ರಯಾಣ

ಸ್ವದೇಶಕ್ಕೆ ಹಿಂತಿರುಗದ ಖೈದಿಗಳನ್ನು ನೋಡಿಕೊಳ್ಳಲು ಭಾರತದ ಮೇಲ್ವಿಚಾರಕ ಸೈನ್ಯದ ಎರಡನೇ ತಂಡವು ನಿನ್ನೆಯದಿನ ಮದ್ರಾಸ್‌ನಿಂದ ಎರಡು ಹಡಗುಗಳಲ್ಲಿ ಕೊರಿಯಾಕ್ಕೆ ಪ್ರಯಾಣ ಮಾಡಿತು.

ಈ ತಂಡಕ್ಕೂ ಪ್ರಧಾನಿ ನೆಹರೂರವರು ಮತ್ತು ಈ ಸೈನ್ಯದ ಅಧಿಪತಿಯಾದ ಮೇ॥ ಜ॥ ಎಸ್. ಪಿ. ಥರೋಟ್‌ರವರು ಒಂದು ವಿಶೇಷ ಸಂದೇಶವನ್ನು ಕಳುಹಿಸಿ ಶಾಂತಿಯನ್ನು ಕಾಪಾಡಲು ಹೋಗುತ್ತಿರುವ ಈ ಸೈನ್ಯದಕಡೆ ವಿಶ್ವದೃಷ್ಟಿಯೆಲ್ಲವೂ ಕೇಂದ್ರೀಕೃತವಾಗಿದೆ. ಪ್ರಾಮಾಣಿಕ, ನಿಷ್ಪಕ್ಷಪಾತವಾಗಿ ಈ ಸೈನ್ಯವು ತನ್ನ ಕಾರ್ಯವನ್ನು ನಿರ್ವಹಿಸುವುದಾಗಿ ತಮಗೆ ಪೂರ್ಣ ನಂಬಿಕೆಯಿದೆ. ತ್ವರಿತವಾಗಿ ಇದು ತನ್ನ ಕೆಲಸವನ್ನು ಕೈಗೊಳ್ಳಲಿ ಎಂದು ಹಾರೈಸಿದ್ದಾರೆ.

ಮದ್ರಾಸ್ ಗೌರ್ನರ್ ಶ್ರೀ ಶ್ರೀ ಪ್ರಕಾಶ ಮತ್ತು ಕೇಂದ್ರ ರಕ್ಷಣಾ ಉಪಸಚಿವ ಶ್ರೀ ಸತೀಶಚಂದ್ರರವರು ಈ ತಂಡಕ್ಕೆ ಶುಭವನ್ನು ಕೋರಿ ಬೀಳ್ಕೊಟ್ಟರು.

ಕೊಲಂಬೋವಲ್ಲಿ ಕರ್ಫ್ಯೂ ರದ್ದು

ಸಿಂಹಳದಲ್ಲಿ ಆಹಾರ ಬೆಲೆಯು ಏರಿಕೆ ವಿರೋಧವಾಗಿ ನಡೆಯುತ್ತಿದ್ದ ಗಲಭೆಗಳ ಪರಿಣಾಮವಾಗಿ ಕೊಲಂಬೋವಿನಲ್ಲಿ ವಿಧಿಸಿದ್ದ ಕರ್ಫ್ಯೂವನ್ನು ಈಗ ತೆಗೆದುಹಾಕಿರುವುದಾಗಿ ತಿಳಿಯಬರುತ್ತದೆ.

ಭಾರತ-ಪೂರ್ವ ಆಫ್ರಿಕಾ ನಡುವೆ ಟೆಲಿಫೋನ್

ಪೂರ್ವ ಆಫ್ರಿಕಾಕ್ಕೂ ಮತ್ತು ಭಾರತಕ್ಕೂ ನಡುವೆ ರೇಡಿಯೋ ಟೆಲಿಫೋನ್ ಸಂಪರ್ಕವು ಮೊನ್ನೆಯಿಂದ ಪ್ರಾರಂಭವಾಯಿತು.

● ಜಾಂನಗರದಲ್ಲಿ ನಿನ್ನೆಯದಿನ ೨೪ಗಂಟೆಗಳ ಕಾಲದಲ್ಲಿ ೧೨ ಅಂಗುಲ ಮಳೆಯು ಬಂದಿದೆ.

ದೊಣ್ಣೆಯಿಂದ ಹೊಡೆದುದಕ್ಕೆ ೩ ವರ್ಷ ಕಠಿಣಸಜಾ

ಮೈಸೂರು ೨೦

ಕೃಷ್ಣರಾಜನಗರ ತಾಲ್ಲೂಕು ಹೊಸಕೊಪ್ಪಲು ಗ್ರಾಮದ ಬಸವಲಿಂಗಯ್ಯ ಎಂಬುವನಿಗೆ ಐ.ಪಿ.ಸಿ. ೩೦೪ನೇ ವಿಧಿಯ ಪ್ರಕಾರ ಮೈಸೂರು ಜಿಲ್ಲಾ ಅಡಿಷನಲ್ ಸೆಷನ್ಸ್ ನ್ಯಾಯಾಧೀಶರು ನಿನ್ನೆಯ ದಿನ ೩ ವರ್ಷ ಕಠಿಣ ಸಜಾವನ್ನು ವಿಧಿಸಿದರು.

ಕಳೆದ ಜನವರಿ ೩ ನೇ ತಾರೀಖು ಬಸವಲಿಂಗಯ್ಯನು ತನ್ನ ನೆಂಟ ವೀರಭದ್ರಯ್ಯ ಎಂಬುವವನನ್ನು ದೊಣ್ಣೆಯಿಂದ ಹೊಡೆದುದರ ಪರಿಣಾಮವಾಗಿ ಅವನು ಸತ್ತುಹೋದನೆಂದು ಪೋಲಿಸಿನವರು ಬಸವಲಿಂಗಯ್ಯನ ಮೇಲೆ ಮೊಕದ್ದಮೆ ಹೂಡಿದರು.

ಪ್ರಾಸಿಕ್ಯೂಷನ್‌ಪರ ಶ್ರೀ ಎಸ್. ನಾಗರಾಜಪ್ಪ ಮತ್ತು ಅಪಾದಿತರಪರ ಲಾಯರ್ ಶ್ರೀ ಎ. ವಿ. ಶ್ರೀಕಂಠಯ್ಯನವರು ವಕಾಲತ್ತು ವಹಿಸಿದ್ದರು.

ರಾಜಕಮಲ್
18-8-53ನೇ ಆರೋಭವಾದ 4ನೇ ವಾರ
ಪೊನ್ನಿ [ತಮಿಳು]

ಪ್ರಕಾಶಕರು:—ಜಿ. ಎಲ್. ಸ್ವಾಮಿ
ಮುದ್ರಕರು:— ಹಿ. ಕಾ. ಸುಬ್ಬರಾವ್
ಮೋಹನ ಮುದ್ರಣಾಲಯ ಮೈಸೂರು.

WANTED

A Printing machine in running condition—Crown or Demmy Folio

Contact:—

The SAMACHARA office, Mothikhana Buildings, Jaganmohan Palace Road, Mysore.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೫

೨೧-೮-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತ-ಪಾಕೀಸ್ತಾನಗಳನಡುವೆ ನವಯುಗ ಪ್ರಾರಂಭವಾಗಿದೆ

ಉಭಯ ರಾಷ್ಟ್ರಗಳ ಬಿಕ್ಕಟ್ಟು ಪರಿಹಾರಕ್ಕೆ ಜನರು ಶಾಂತಿಯಿಂದ ನೆರವು ನೀಡಬೇಕು

ಪತ್ರಿಕಾ ಗೋಷ್ಠಿಯಲ್ಲಿ ಪಾಕ್ ಪ್ರಧಾನಿಯ ಮನವಿ

ತರುಗೂ ಮತ್ತು ಶ್ರೀ ನೆಹರೂರವರಿಗೂ ಕಳೆದ ೪ ದಿನಗಳಿಂದ ನಡೆದ ಚರ್ಚೆಯು ಉತ್ತಮ ಫಲವನ್ನು ಕೊಟ್ಟಿದೆ. ಅನೇಕ ಉಪಯುಕ್ತವಾದ ತೀರ್ಮಾನಗಳು ಆಗಿವೆ. ಇನ್ನು ಒಂದುವರ್ಷದೊಳಗಾಗಿ ಉಭಯ ರಾಷ್ಟ್ರಗಳ ನಡುವೆ ಕಾಶ್ಮೀರ ಬಗ್ಗೆ ಇರುವ ವಿವಾದವು ಪರಿಹಾರವಾಗುವ ನಂಬಿಕೆ ಇದೆ. ತಮ್ಮ ಮಾತುಕತೆಗಳಲ್ಲಿ ಅಖಂಡ ಕಾಶ್ಮೀರ ಪ್ರಶ್ನೆಯನ್ನು ಚರ್ಚಿಸಲಾಯಿತು. ಎಂದು ಪಾಕ್ ಪ್ರಧಾನಿ ಮಿ॥ ಮಹಮದ್ ಅಲಿಯವರು ಉಭಯ ಪ್ರಧಾನಿಗಳ ಸಮಾಲೋಚನೆ ಮುಕ್ತಾಯವಾದನಂತರ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಕಾಶ್ಮೀರಪ್ರಶ್ನೆಯನ್ನಲ್ಲದೆ ಇನ್ನೂ ಹಲವಾರು ಪ್ರಮುಖ ವಿಷಯಗಳಲ್ಲಿ ಮಾತುಕತೆ ನಡೆದುವು ವಲಸೆಗಾರರ ಆಸ್ತಿಯ ಬಗ್ಗೆಯೂ ಚರ್ಚೆ ನಡೆಯಿತು. ಕರಾಚಿಯಲ್ಲಿ ಉಭಯ ಸರ್ಕಾರಗಳ ಪ್ರತಿನಿಧಿಗಳ ನಡುವೆ ನಡೆದ ಚರ್ಚೆ ಪ್ರಗತಿದಾಯಕವಾಗಿದೆ ಪುನಃ ಈ ಚರ್ಚೆಯು ಇನ್ನು ಒಂದು ತಿಂಗಳೊಳಗಾಗಿ ಕಲ್ಕತ್ತಾದಲ್ಲಿ ನಡೆಯುತ್ತದೆ. ಆಗ ಪೂರ್ವ ಮತ್ತು ಪಶ್ಚಿಮ ಬಂಗಾಳಗಳಿಗೆ ಮತ್ತು ಅಸ್ಸಾಂಗೆ ಸಂಬಂಧಪಟ್ಟ ಇನ್ನೂ ಕೆಲವು ವಿಷಯಗಳು ಚರ್ಚೆಯಾಗಲಿವೆ ನಾವುಗಳೆಲ್ಲರೂ ಹಿಂದೆ ನಡೆದಿದ್ದನ್ನು ಮರೆತು ಹೊಸಯುಗವು ಪ್ರಾರಂಭವಾಗುದನ್ನು ಸ್ವಾಗತಿಸೋಣ ಉಭಯ ರಾಷ್ಟ್ರಗಳ ಪ್ರತಿನಿಧಿಗಳಲ್ಲಿ ನಂಬಿಕೆಯನ್ನಿಟ್ಟು ಜನರು ಅವರಿಗೆ ನೆರವು ನೀಡಬೇಕು ಪತ್ರಿಕೆಗಳು ಸಹ ಎಲ್ಲಾ ಭಿನ್ನಾಭಿಪ್ರಾಯಗಳೂ ಶಾಂತರೀತಿ ಪರಿಣಾಮವಾಗುವುದಕ್ಕೆ ತಕ್ಕ ಸಹಾಯವನ್ನು ಮಾಡಬೇಕು ಎಂದು ಮಿ॥ ಮಹಮದ್ ಅಲಿಯವರು ತಿಳಿಸಿದರು.

ವಿಶ್ವಸಂಸ್ಥೆಯಲ್ಲಿ ಕಾಶ್ಮೀರ ಪ್ರಶ್ನೆಯನ್ನು ಹಿಂದಕ್ಕೆ ತೆಗೆದುಕೊಳ್ಳುವ ವಿಷಯವನ್ನು ಅನರು ಪ್ರಸ್ತಾಪಿಸಿ ಈ ಬಗ್ಗೆ ಉಭಯ ಸರ್ಕಾರಗಳ ನಡುವೆ ಅಂತ್ಯತೀರ್ಮಾನವಾಗುವವರೆಗೆ ಆ ಪ್ರಶ್ನೆಯು ವಿಶ್ವಸಂಸ್ಥೆಯಲ್ಲಿ ಇರುತ್ತದೆ ಎಂದು ಅವರು ತಿಳಿಸಿದರು.

ಮೈಸೂರಿಗೆ ಸೇರಲು ಹೊಸೂರಿನವರ ಕಾತುರ

ಮದರಾಸಿನ ಸೇಲಂ ಜಿಲ್ಲೆಯ ಹೊಸೂರು ಮತ್ತು ಡೆಂಕಣಿಕೋಟೆ ಮುಂತಾದ ಪ್ರದೇಶಗಳ ಕನ್ನಡ ಜನರು ಮೈಸೂರಿಗೆ ಸೇರಲು ಕಾತರರಾಗಿದ್ದಾರೆಂದು ಅಲ್ಲಿ ಪ್ರವಾಸ ಮಾಡಿದ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಹಳ್ಳಿಕೇರಿ ಮತ್ತು ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್‌ರು ತಿಳಿಸಿದ್ದಾರೆ.

ವಿವಾಹ ಮಹೋತ್ಸವ

ರಾಜಧಾನಿಯ ಪುರಸಭಾ ಸದಸ್ಯರೂ ಮತ್ತು ಹಿರಿಯ ಶಾಸನಸಭಾ ಸದಸ್ಯರೂ ಆದ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ತಮ್ಮ ಪುತ್ರಿ ಶ್ರೀಮತಿ ಪಾರ್ವತಿಯನ್ನು ದಿವಂಗತ ಶ್ರೀ ಅನಂತರಾಮಯ್ಯನವರ ಪುತ್ರ ಶ್ರೀ ಅಶ್ವತ್ಥನಾರಾಯಣರಿಗೆ ಕೊಟ್ಟು ವಿವಾಹವನ್ನು ತಮ್ಮ ನಿವಾಸದಲ್ಲಿ ನೆರವೇರಿಸಿದರು.

ಚಾಮುಂಡೇಶ್ವರಿ ಭವನದ ಶ್ರೀ ಪಿ. ವಿ. ರಾಮಯ್ಯರ್‌ರವರ ಸಹೋದರ ಶ್ರೀ ಪಿ. ವಿ.ಎ. ನಾರಾಯಣ ಅಯ್ಯರ್‌ರವರು ತಮ್ಮ ಪುತ್ರಿ ಶ್ರೀಮತಿ ಕಾಮಾಕ್ಷಿಯನ್ನು ಮದ್ರಾಸಿನ ಶ್ರೀ ಎಲ್. ಎಸ್. ರಾಮಯ್ಯರ್‌ರವರ ಪುತ್ರ ಶ್ರೀ ಸುಂದರೇಶರಿಗೆ ಕೊಟ್ಟು ವಿವಾಹವನ್ನು ನಿನ್ನೆ ರಾಜಧಾನಿಯಲ್ಲಿ ನೆರವೇರಿಸಿದರು.

ಕಾಶ್ಮೀರದ ಇತ್ತೀಚಿನ ಘಟನೆಗಳ ಬಗ್ಗೆ ಅವರು ಪ್ರಸ್ತಾಪಿಸಿ ಈ ಘಟನೆಗಳಿಂದ ಪಾಕೀಸ್ತಾನ ಪ್ರಜೆಗಳ ಮನಸ್ಸಿನಲ್ಲಿ ವಿಶೇಷ ಪರಿಣಾಮ ಉಂಟಾಯಿತು ಆದರೆ ಈಗಿನ ಮಾತುಗಳು ಜನರಲ್ಲಿ ಮೂಡಿದ್ದ ಸಂಶಯಗಳನ್ನು ನಿವಾರಣೆ ಮಾಡಿರುವುದಾಗಿಯೂ ಈ ಘಟನೆಗಳಲ್ಲಿ ಭಾರತ ಸೈನ್ಯವು ಗುಂಡುಹಾರಿಸಲಿಲ್ಲ ಎಂಬ ಭರವಸೆ ತಮಗೆ ಈಗ ಉಂಟಾಗಿರುವುದಾಗಿ ಮಿ॥ ಮಹಮದ್ ಅಲಿಯವರು ತಿಳಿಸಿದರು.

ಕಾಶ್ಮೀರದ ಬಗ್ಗೆ ಜನಮತಗಣನೆ ಅಧಿಕಾರಿ

ಇನ್ನು ಎಂಟು ತಿಂಗಳಲ್ಲಿ ನೇಮಕ

ಉಭಯ ಪ್ರಧಾನಿಗಳ ತೀರ್ಮಾನ

ಭಾರತ ಮತ್ತು ಪಾಕ್ ಪ್ರಧಾನಿಗಳು ಕಳೆದ ೪ ದಿನಗಳಿಂದಲೂ ಕಾಶ್ಮೀರದಬಗ್ಗೆ ಮಾತುಕತೆ ನಡೆಸಿದ ವಿಚಾರವಾಗಿ ನಿನ್ನೆ ರಾತ್ರಿ ಒಂದು ಸಂಯುಕ್ತ ಪ್ರಕಟಣೆ ಹೊರಬಿದ್ದಿದೆ. ಅದರ ಪ್ರಕಾರ, ಕಾಶ್ಮೀರ ಪ್ರಶ್ನೆಯನ್ನು ಅಲ್ಲಿನ ಜನರ ಅಪೋತ್ತರಕ್ಕನುಗುಣವಾಗಿ ಜನಮತ ಗಣನೆ ನಡೆಸಲು ಮುಂದಿನವರ್ಷ ಏಪ್ರಿಲ್ ಒಳಗಾಗಿ ಜನಮತ ಗಣನಾಧಿಕಾರಿಯನ್ನು ನೇಮಿಸಲಾಗುವುದೆಂದು ತಿಳಿಸಲಾಗಿದೆ. ಇದಕ್ಕೆ ಪೂರ್ವಭಾವಿಯಾಗಿ ಅಂಶಗಳನ್ನು ನಿರ್ಧರಿಸಲು ಮಿಲಿಟರಿ ತಜ್ಞರ ಸಮಿತಿ ನೇಮಿಸಬೇಕು. ಈ ಸಮಿತಿಯವರು ಉಭಯ ಪ್ರಧಾನಿಗಳಿಗೆ ಮತ್ತು ಜನಗಣನೆ ಅಧಿಕಾರಿಗಳಿಗೆ ಸಲಹೆ ನೀಡಬೇಕು-ಎಂದು ತಿಳಿಸಲಾಗಿದೆ.

ಎರಡು ರಾಷ್ಟ್ರಗಳ ಬಗ್ಗೆ ಸ್ನೇಹ ಸೌಹಾರ್ದಮಾರ್ಗಗಳಿಂದ ಸಮಸ್ಯೆ ಬಗೆಹರಿಸಬೇಕೆಂದೂ, ಪತ್ರಿಕೆಗಳು ಮತ್ತು ರೇಡಿಯೋ ಅಪಪ್ರಚಾರ ಮಾಡಕೂಡದೆಂದೂ ಮನವಿ ಮಾಡಲಾಗಿದೆ.

ನಿರಾಶ್ರಿತರ ಆಸ್ತಿಪಾಸ್ತಿಗಳ ವಿಚಾರವಾಗಿಯೂ ಉಭಯ ಪ್ರಧಾನಿಗಳು ಮಾತುಕತೆ ನಡೆಸಿ, ಇನ್ನೊಂದು ತಿಂಗಳಲ್ಲಿ ಸರ್ಕಾರದ ಪ್ರತಿನಿಧಿಗಳ ಸಭೆ ನಡೆಯಬೇಕೆಂದೂ ತೀರ್ಮಾನಿಸಲಾಯಿತು.

೧೩ ವರ್ಷದ ಬಾಲಕನ ಆತ್ಮಹತ್ಯೆ

ಮೈಸೂರು ೨೧

ರಾಜಧಾನಿಯ ವಾಣಿವಿಲಾಸ ಮೊಹಲ್ಲಾದಲ್ಲಿ ರೈಲ್ವೆ ಕಾಲೋನಿಯಲ್ಲಿರುವ ಶ್ರೀ ಗುರುಮೂರ್ತಿ ಎಂಬುವರ ೧೩ ವರ್ಷದ ಬಾಲಕ ಶಂಕರ್ ಎಂಬಾತನು ಮೊನ್ನೆದಿನ ಸಂಜೆ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ಹಗ್ಗದಿಂದ ನೇಣುಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನೆಂದು ವರದಿಯಾಗಿದೆ. ಆತನು ಹಿಂದೆ ತನ್ನ ತಂದೆಯ ಗಡಿಯಾರವನ್ನು ಕಳವುಮಾಡಿದ್ದನೆಂದೂ, ಅದಕ್ಕಾಗಿ ಮನೆಯಲ್ಲಿ ತಂದೆ ತಾಯಿಗಳು ಬೆದರಿಸಿದ್ದರೆಂದೂ, ಅದನ್ನೆ ಮನಸ್ಸಿಗೆ ಹಚ್ಚಿಕೊಂಡು ಪ್ರಾಣ ತೆಗೆದುಕೊಂಡಿರಬಹುದೆಂದೂ ಹೇಳಲಾಗಿದೆ.

ಒಂಟಿಕೊಪ್ಪಲು ಪೋಲೀಸರು ಮಹಜರ್ ಕ್ರಮ ನಡೆಸಿದರು.

ಟೆಲಿಫೋನ್ ತಂತಿ ಕಳ್ಳನ ಪತ್ತೆ

ಮೈಸೂರು ೨೧

ಒಂಟಿಕೊಪ್ಪಲಿನಲ್ಲಿ ಟೆಲಿಫೋನ್ ತಂತಿ ಕಳವು ಇತ್ತೀಚೆಗೆ ಹೆಚ್ಚುತ್ತಿದ್ದು ಈದಿನ ಬೆಳಿಗ್ಗೆ ೧೨೦೦ ಅಡಿ ತಂತಿಯನ್ನು ಕದ್ದ ತರ ತ್ರಿಪ್ತ ರಂಗ ಎಂಬುವನನ್ನು ಅಲ್ಲಿನ ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ಮೈಸೂರು ಜಿಲ್ಲೆ ಬೆಳೆಗಳ ಸ್ಪರ್ಧಾ ಸಮಿತಿ

ಮೈಸೂರು ಜಿಲ್ಲೆಯಲ್ಲಿ ನಡೆಯಲಿರುವ ಆಹಾರ ವಸ್ತುಗಳ ಬೆಳೆಯ ಸ್ಪರ್ಧೆಗೆ ಸರಕಾರದವರು ೩ ಸದಸ್ಯರ ಒಂದು ಸಮಿತಿಯನ್ನು ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರ ಅಧ್ಯಕ್ಷತೆಯಲ್ಲಿ ನೇಮಿಸಿದ್ದಾರೆ.

ಮೈಸೂರು ಡಿವಿಜನ್ನಿನ ವ್ಯವಸಾಯ ಶಾಖೆ ಅಸಿಸ್ಟೆಂಟ್ ಡೈರೆಕ್ಟರ್ ಈ ಸಮಿತಿಯ ಕಾರ್ಯದರ್ಶಿಗಳು.

ವ್ಯವಸಾಯಕ್ಕೆ ಸಂಬಂಧಪಟ್ಟ ವಾರ್ತಾ ಸಮಿತಿಯೊಂದನ್ನು ಸಹ ಸರ್ಕಾರದವರು ನೇಮಿಸಿದ್ದಾರೆ ಇದರಲ್ಲಿ ೧೫ ಜನ ಸದಸ್ಯರಿರುವರು ಈ ಸಮಿತಿಗೂ ಜಿಲ್ಲಾಧಿಕಾರಿಗಳೇ ಅಧ್ಯಕ್ಷರು.

ಆಹಾರ ಸಂಶೋಧನಾಲಯದ ನೌಕರರಿಗೆ ವಾಸದ ಮನೆಗಳು

ಕೇಂದ್ರ ಆಹಾರ ಸಂಶೋಧನಾಲಯದ ಸ್ಥಳೀಯ ಸಲಹಾ ಸಮಿತಿಯ ಸಭೆಯು ನಿನ್ನೆಯದಿನ ಬೆಳಿಗ್ಗೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಅಲ್ಲಿ ಕೆಲಸಮಾಡುವ ನೌಕರರಮಾನೇತುಗಳಿಗೆ ಈ ಕೇಂದ್ರಕ್ಕೆ ಸೇರಿರುವ ಸ್ಥಳದಲ್ಲಿಯೇ ೧೭೫ ವಾಸದ ಮನೆಗಳನ್ನು ಈ ಕೇಂದ್ರದಲ್ಲಿ ಮುಖ್ಯ ಯಂತ್ರ ಮುಂತಾದುವನ್ನು ಇಡಲು ಚಲುವಾಂಬಾ ಭವನದ ಉತ್ತರಭಾಗದಲ್ಲಿ ಒಂದು ಪ್ರತ್ಯೇಕ ಕಟ್ಟಡವನ್ನು ಸಹ ಕಟ್ಟಬೇಕೆಂದು ಸಭೆಯಲ್ಲಿ ತೀರ್ಮಾನವಾಯಿತು

ಮುಂದಿನ ಸಾಲಿನ ೧೦ ಲಕ್ಷ ರೂ ಆದಾಯ ಮತ್ತು ೧೪ ಲಕ್ಷ ರೂ ವ್ಯಯವನ್ನು ಸಹ ಸಭೆ ಅಂಗೀಕರಿಸಿತು.

ಡಾ|| ಮುಸಾದಿಕ್‌ರ ದಸ್ತಗಿರಿ

ಪ್ರಾಣಾಪಾಯವಾಗದಂತೆ ನೂತನ ಸರ್ಕಾರದ ವ್ಯವಸ್ಥೆ

ಇಪ್ಪತ್ತು ನಾಲ್ಕು ಗಂಟೆಗಳಲ್ಲಿ ಶರಣಾಗತರಾಗಬೇಕೆಂದು ಈ ಜಿಪ್ಟಿನ ಮಾಜಿ ಪ್ರಧಾನಿ ಡಾ|| ಮುಸಾದಿಕ್‌ರವರಿಗೆ ಹೊಸ್ತ ಪ್ರಧಾನಿ ಮೇ|| ಜ|| ಜಹೇದಿಯವರು ಆಜ್ಞೆಯನ್ನು ಮಾಡಿದಮೇಲೆ ಹೊಸ ಸರ್ಕಾರವು ಡಾ|| ಮುಸಾದಿಕ್‌ರವರು ಅಡಗಿದ್ದ ಗುಪ್ತಸ್ಥಳದಲ್ಲಿ ಅವರನ್ನು ನಿನ್ನೆಯದಿನ ದಸ್ತಗಿರಿ ಮಾಡಿತು. ಅವರ ಸಂಗಡಿಗರಾದ ಮಾಜಿ ಸೈನ್ಯಾಧಿಕಾರಿ, ಪೋಲೀಸ್ ಮುಖ್ಯಾಧಿಕಾರಿ, ಟೆಹರಾನಿನ ಮಾಜಿ ಗೌರ್ನರ್ ಮುಂತಾದ ಅನೇಕರನ್ನೂ ಈಗ ದಸ್ತಗಿರಿ ಮಾಡಲಾಗಿದೆ.

ಡಾ|| ಮುಸಾದಿಕ್, ಅವರ ಪತ್ನಿ ಮತ್ತು ಮಕ್ಕಳನ್ನು ಟೆಹರಾನಿನಿಂದ ಬೇರೆಕಡೆಗೆ ಕೊಂಡೊಯ್ಯಲಾಗಿರುವುದಾಗಿ ತಿಳಿಯಬರುತ್ತದೆ.

ಷಾರವರ ಆಜ್ಞೆಯಪ್ರಕಾರ ಅವರ ಪ್ರಾಣಕ್ಕೆ ಯಾವ ಹಾನಿಯೂ ಉಂಟಾಗದಂತೆ ಅವನ್ನು ಕಾಪಾಡುವುದಾಗಿ ನೂತನ ಸರ್ಕಾರ ಸೆಯುನ್ನಿತ್ತಿದೆ.

ಇರಾನಿನಾದ್ಯಂತ ಎಲ್ಲಾ ಶಾಲಾ ಕಾಲೇಜು ಮತ್ತು ಕಛೇರಿಗಳಲ್ಲಿ ಷಾರವರ ಭಾವಚಿತ್ರವನ್ನು ಕೂಡಲೇ ಇಡಬೇಕೆಂದು ಆಜ್ಞೆ ಮಾಡಲಾಗಿದೆ. ಸೈನಿಕರೆಲ್ಲರೂ ೨೪ ಗಂಟೆಗಳಕಾಲ ಕೆಲಸದಲ್ಲಿರಬೇಕೆಂದು ಸೂಚನೆ ಕೊಡಲಾಗಿದೆ.

ಈ ಗಲಭೆಯಲ್ಲಿ ಟೆಹರಾನಿನಲ್ಲಿರುವ ಭಾರತೀಯರ ಆಸ್ತಿ, ಪ್ರಾಣಕ್ಕೆ ಯಾವರೀತಿಯಾದ ನಷ್ಟವೂ ಉಂಟಾಗಿಲ್ಲವೆಂದು ಅಧಿಕೃತವಾಗಿ ತಿಳಿಯಬರುತ್ತದೆ.

ಬಳ್ಳಾರಿಯಲ್ಲಿ ಜನಾಭಿಪ್ರಾಯ ಸಂಗ್ರಹಣೆ ಅನಗತ್ಯ

ಪಾರ್ಲಿಮೆಂಟಿನಲ್ಲಿ ಗೃಹಸಚಿವರ ಹೇಳಿಕೆ

ಆಂಧ್ರಪ್ರಾಂತ್ಯ ಮಸೂದೆಯ ವಿಷಯದಮೇಲಿನ ಚರ್ಚೆಗಳಿಗೆ ಕೇಂದ್ರ ಗೃಹಸಚಿವ ಡಾ|| ಖಟ್ಜುರವರು ಉತ್ತರ ಕೊಡುತ್ತಾ, ಗಡಿ ನಿರ್ಧಾರಣ ಸಮಿತಿಯು ಮದ್ರಾಸ್, ಆಂಧ್ರ ಮತ್ತು ಮೈಸೂರು ಪ್ರಾಂತ್ಯಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಕೂಲಂಕುಶವಾಗಿ ಪರಿಶೀಲಿಸುತ್ತದೆ. ಆದರೆ ಬಳ್ಳಾರಿಯನ್ನು ಮೈಸೂರಿಗೆ ಸೇರಿಸುವ ವಿಷಯದಲ್ಲಿ ಜನಾಭಿಪ್ರಾಯ ಸಂಗ್ರಹಿಸಬೇಕೆಂದು ಕೆಲವು ಸದಸ್ಯರು ಅಭಿಪ್ರಾಯ ಪಡುತ್ತಿದ್ದಾರೆ. ಮಿಶ್ರಾರವರ ವರದಿಯಂತೆ ಬಳ್ಳಾರಿಯಲ್ಲಿ ಕನ್ನಡಿಗರ ಸಂಖ್ಯೆಯೇ ಅತ್ಯಧಿಕವಾಗಿದೆ. ಅಂತಹಕಡೆ ಜನಾಭಿಪ್ರಾಯಕ್ಕಾಗಿ ಕಾಲ ಮತ್ತು ಹಣವನ್ನು ವ್ಯಯ ಮಾಡುವುದು ವೃಥಾ ನಷ್ಟ. ಆದ್ದರಿಂದ ಸರ್ಕಾರವು ಅದಕ್ಕೆ ತನ್ನ ಅಭಿಮತವನ್ನು ನೀಡಲಾರದು ಎಂದು ತಿಳಿಸಿದ್ದಾರೆ.

ಗೋದಾವರಿ ಪ್ರವಾಹ ಇಳಿಮುಖ

ಗೋದಾವರಿ ನದಿಯ ಪ್ರವಾಹವು ಈಗಾಗಲೇ ೭ ಅಡಿಗಳಷ್ಟು ಇಳಿದಿದೆ.

ಈ ಪ್ರವಾಹದ ಹಾವಳಿಯಿಂದ ಉತ್ತರ ಗೋದಾವರಿ ಜಿಲ್ಲೆಯಲ್ಲಿ ತೊಂದರೆಗೀಡಾದ ಸುಮಾರು ೨೨೦೦೦ ಜನಕ್ಕೆ ನಿತ್ಯವೂ ಉಚಿತವಾಗಿ ಆಹಾರವನ್ನು ಒದಗಿಸಲಾಗುತ್ತಿದೆ. ಆ ಪ್ರದೇಶದಲ್ಲಿ ಒಡೆದು ಹೋಗಿರುವ ಕೆಲವು ಅಣೆಕಟ್ಟು ಮುಂತಾದುವನ್ನು ಸರಿಪಡಿಸಲು ೭ ಜನ ವಿಶೇಷ ಎಗ್ಸಿಕ್ಯೂಟಿವ್ ಇಂಜನಿಯರುಗಳು ಕೆಲಸಮಾಡುತ್ತಿರುವರು. ಆಗೇ ೧೭ ನೇ ತಾರೀಖಿನಿಂದ ೨೧ ರವರೆಗೆ ಆ ಪ್ರದೇಶದ ಶಾಲಾ, ಕಛೇರಿ ಮುಂತಾದುವುಗಳಿಗೆ ರಜಾವನ್ನು ಕೊಡಲಾಗಿದೆ.

ಹೈದರಾಬಾದ್ ಪ್ರಾಂತ್ಯದಲ್ಲೂ ಈ ನದಿಯ ಪ್ರವಾಹದಿಂದ ತೊಂದರೆಗೀಡಾದ ಜನರಿಗೆ ಆಹಾರ ಮತ್ತು ಬಟ್ಟೆಯನ್ನು ಒದಗಿಸಲು ಸರ್ಕಾರವು ೨೫೦೦೦ ರೂಪಾಯಿಗಳನ್ನು ಮಂಜೂರ್ಮಾಡಿದೆ. ಈ ಪ್ರವಾಹದ ದೆಸೆಯಿಂದ ಸುಮಾರು ೫೭ ಗ್ರಾಮಗಳು ಹಾಳಾಗಿ, ೪೭೦೦೦ ಜನರು ತೊಂದರೆಗೀಡಾಗಿದ್ದಾರೆ. ಸುಮಾರು ೧೫ ಜನರು ಸತ್ತಿರುವುದಾಗಿ ತಿಳಿಯಬರುತ್ತದೆ.

ಕಾಶ್ಮೀರದಲ್ಲಿ ವಿಚಾರಣಾ ಸಮಿತಿ ನೇಮಕ

ಕಾಶ್ಮೀರದಲ್ಲಿ ಇತ್ತೀಚೆಗೆ ನಡೆದ ಘಟನೆಗಳ ಪರಿಣಾಮವಾಗಿ ಉಂಟಾದ ಆಸ್ತಿಪಾಸ್ತಿ ನಷ್ಟ, ಪ್ರಾಣಹಾನಿ ಮುಂತಾದ ಬಗ್ಗೆ ತನಿಖೆನಡೆಸಲು ಅಲ್ಲಿಯ ರಾಜ್ಯಾಂಗ ಸಭೆಯ ಅಧ್ಯಕ್ಷ ಗುಲಾಂ ಮಹಮುದ್ ಸಾದಿಕ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೦—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೫—೨	೨೬—೮
ಎಳ್ಳು	೬೬—೬	೮೩—
ಹುರುಳಿ	೪೮—೧೪	—
ಹೆಸರು	—	—
ಅಲಸಂದೆ	೫೫—೪	೬೩—೮
ಹೊಂಗೆಬೀಜ	—	—
ಅವರೆ	—	—
ಉದ್ದು	—	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೬—೯	—
ಸೀಗೆಕಾಯಿ	೬—೮	—
ಬೆಲ್ಲ	—	
ತೆಂಗಿನಕಾಯಿ	೨೦೫	೨೯೦

'ವೀರಕುಣಿತ' ರಹದಾರಿ ರಿಟ್ ಅರ್ಜಿ ವಜಾ

ನಂಜನಗೂಡು ನೇರಳೆ ಗ್ರಾಮದಲ್ಲಿ ಮಾರಮ್ಮನ ಪೂಜೆ ಸಂಬಂಧದಲ್ಲಿ ವೀರಕುಣಿತಕ್ಕೆ ಮೈಸೂರು ಜಿಲ್ಲಾಧಿಕಾರಿ ಮತ್ತು ಅಮಲ್ದಾರರುಗಳು ವಜಾ ಮಾಡಿದ್ದ ಲೈಸನ್ಸ್ ಪುನಃ ಕೊಡುವಂತೆ ಆಜ್ಞೆ ಮಾಡಬೇಕೆಂದು ಆ ಗ್ರಾಮದ ನಿವಾಸಿಗಳಾದ ಮುದ್ದಯ್ಯ ಮತ್ತು ವೀರಣ್ಣನಾಯ್ಕ ಎಂಬುವವರು ಹೈಕೋರ್ಟಿನಲ್ಲಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಮೈಸೂರು ಹೈಕೋರ್ಟಿನವರು ತಳ್ಳಿಹಾಕಿದ್ದಾರೆ.

ಶಿಕ್ಷಣ ಶಾಖಾ ಕಾರ್ಯದರ್ಶಿ

ಬೆಂಗಳೂರು ೨೧

ರಜದ ಮೇಲೆ ಹೋಗಲಿರುವ ಶ್ರೀ ಬಿ. ಟಿ. ಕೆಂಪಣ್ಣನವರ ಸ್ಥಾನದಲ್ಲಿ ವಿದ್ಯಾ ಶಾಖಾ ಕಾರ್ಯದರ್ಶಿ ಶ್ರೀ ಎಲ್. ಮುನಿಸ್ವಾಮಿಯವರನ್ನು ತುಮಕೂರು ಜಿಲ್ಲಾಧಿಕಾರಿಗಳನ್ನಾಗಿಯೂ ರಜಾದ ಮೇಲಿರುವ ಶ್ರೀ ಸಿ. ನರಸಿಂಹ ಮೂರ್ತಿಯವರನ್ನು ಶಿಕ್ಷಣ ಶಾಖಾ ಕಾರ್ಯದರ್ಶಿಗಳನ್ನಾಗಿಯೂ ನೇಮಿಸಲಾಗಿದೆ.

ಮೊರಾಕೋ ಸುಲ್ತಾನರ ಪದಚ್ಯುತಿ

ಮೊರಾಕೋವಿನಲ್ಲಿರುವ ಈಗಿನ ಸುಲ್ತಾನರನ್ನು ಫ್ರೆಂಚ್-ಸರ್ಕಾರವು ಪದಚ್ಯುತಿಗೊಳಿಸಿ ಆ ದೇಶದಿಂದ ಹೊರ ಹಾಕಿ, ಅವರ ಸೋದರ ಮಾವನನ್ನು ಹೊಸ ಸುಲ್ತಾನರನ್ನಾಗಿ ನೇಮಿಸಿದೆ.

ಇರಾನಿನ ವಿದೇಶಾಂಗ ಸಚಿವ ಫಾತಿಮಿ ಕೊಲೆಯಾಗಿಲ್ಲ ?

ಡಾ|| ಮುಸಾದಿಕ್ ಸರ್ಕಾರದಲ್ಲಿ ವಿದೇಶಾಂಗ ಸಚಿವರಾಗಿದ್ದ ಹುಸೇನ್ ಫಾತಿಮಿಯವರನ್ನು ಗಲಭೆಗಾರರು ಕತ್ತರಿಸಿಹಾಕಿದ ಸುದ್ದಿಯು ನಿರಾಧಾರವಾದುದೆಂದು ಅವರು ಎಲ್ಲಿಯೇ ಪರಾರಿಯಾಗಿರಬಹುದೆಂದು ಅಲ್ಲಿಯ ಪೋಲೀಸ್ ವೃತ್ತಗಳು ಇತ್ತೀಚೆಗೆ ತಿಳಿದು ಅವರನ್ನು ಪತ್ತೆಹಚ್ಚಲು ತ್ವರಿತ ಕಾರ್ಯದಲ್ಲಿ ತೊಡಗಿರುವುದಾಗಿ ಹೇಳಲಾಗಿದೆ.

'ಕಾಮಕಲಾ' ಸಂಪಾದಕರಿಗೆ ಜುಲ್ಮಾನೆ ಖಾಯಂ

ಬೆಂಗಳೂರು ೨೧

ಅಶ್ಲೀಲ ಪ್ರಕಟಣೆಯ ಅಪಾದನೆ ಮೇಲೆ 'ಕಾಮಕಲಾ' ಪತ್ರಿಕೆಯ ಸಂಪಾದಕರಾದ ಶ್ರೀ ಎಂ. ರಾಮಮೂರ್ತಿಯವರಿಗೆ ಮ್ಯಾಜಿಸ್ಟ್ರೇಟರು ವಿಧಿಸಿದ್ದ ೩ ತಿಂಗಳ ಕಠಿಣ ಸಜಾ ಮತ್ತು ೨೦೦ ರೂಪಾಯಿ ಜುಲ್ಮಾನೆ ಶಿಕ್ಷೆಯಮೇಲೆ ಅಪೀಲಿನಲ್ಲಿ ಬೆಂಗಳೂರು ಜಿಲ್ಲಾ ಸೆಷನ್ಸ್ ನ್ಯಾಯಾಧೀಶರು ನಿನ್ನೆಯ ದಿನ ತೀರ್ಪಿತ್ತು ಕಾರಾಗೃಹ ಶಿಕ್ಷೆಯನ್ನು ವಜಾ ಮಾಡಿ ೨೦೦ ರೂಪಾಯಿಗಳ ಜುಲ್ಮಾನೆಯನ್ನು ಖಾಯಂಮಾಡಿದ್ದಾರೆ.

ತಿರುವಾಂಕೂರಿನಲ್ಲಿ ಮರಣದಂಡನೆ ಶಿಕ್ಷೆ

ಭಾರತದೊಡನೆ ಐಕ್ಯವಾಗುವುದಕ್ಕೆ ಮುನ್ನ ತಿರುವಾಂಕೂರ್-ಕೊಚ್ಚಿನ್ ಪ್ರಾಂತ್ಯದಲ್ಲಿ ಮರಣದಂಡನೆ ಶಿಕ್ಷೆ ಇರಲಿಲ್ಲ. ಈಗ ಪುನಃ ಪ್ರಾರಂಭವಾಗಿದೆ. ನಿನ್ನೆಯದಿನ ಕೇಳನ್ ಮಾಧವನ್ ಎಂಬಾತನನ್ನು ತಿರುವನಂತಪುರದಲ್ಲಿ ಗಲ್ಲಿಗೆ ಹಾಕಲಾಗಿದೆ.

ಉಪಾಧ್ಯಾಯರನ್ನು ಹೊಡೆದ ತಂದೆಗೆ ಶಿಕ್ಷೆ

ತಿರುವಾಂಕೂರಿನ ವೆನುಕುಲಂ ಎಂಬ ಹಳ್ಳಿಯ ಮಾಧ್ಯಮಿಕ ಶಾಲಾ ಉಪಾಧ್ಯಾಯರೊಬ್ಬರು ಒಬ್ಬ ವಿದ್ಯಾರ್ಥಿಯನ್ನು ಹೊಡೆದರೆಂದೂ, ಅದನ್ನು ಕೇಳಿ ಆ ಹುಡುಗನ ತಂದೆಯು ರೇಗಿ ಶಾಲೆಗೆ ನುಗ್ಗಿ ಉಪಾಧ್ಯಾಯರನ್ನು ತೀವ್ರವಾಗಿ ಹೊಡೆದು ಗಾಯಪಡಿಸಿದನೆಂಬ ಅಪಾದನೆಯಮೇಲೆ ಆ ಹುಡುಗನ ತಂದೆ ಗೋಪಾಲಪಿಳ್ಳೆ ಎಂಬುವನಿಗೆ ೧೮ ತಿಂಗಳು ಕಠಿಣ ಶಿಕ್ಷೆ ಮತ್ತು ೨೦೦ರೂ. ದಂಡವನ್ನು ವಿಧಿಸಲಾಗಿದೆ.

ಬರ್ಮಾ ಪ್ರಧಾನಿಯ ಉಪವಾಸ

ಈದ್ ಹಬ್ಬದ ಸಮಯದಲ್ಲಿ ಮುಸ್ಲಿಮರು ಗೋಹತ್ಯ ಮಾಡುವುದನ್ನು ನಿಲ್ಲಿಸಬೇಕೆಂದು ಬರ್ಮಾದ ಬೌದರು ಚಳುವಳಿ ಪ್ರಾರಂಭಿಸಿದ್ದಾರೆ. ಈಸಮಸ್ಯೆಯ ಪರಿಹಾರಕ್ಕಾಗಿ ಅಲ್ಲಿನ ಪ್ರಧಾನಿಯವರು ಮೊನ್ನೆಯಿಂದ ಉಪವಾಸ ಪ್ರಾರಂಭಿಸಿದ್ದಾರೆಂದು ವರದಿಯಾಗಿದೆ.

ರಣಜಿತ್

21-8-53 ರಿಂದ ಅಮೋಘ ಪ್ರಾರಂಭ

ವರ್ಮ ಫಿಲಂಸ್‌ರವರ

ಔರತ್ ಹಿಂದಿ

ಪಾತ್ರ--ಬೀನಾರಾಯ್, ಪ್ರೇಮನಾಥ್

—ವಿಶೇಷ ಬೆಳಗಿನ ಪ್ರದರ್ಶನ—

○ ಔರತ್ ○

೨೨ ನೇ ಶನಿವಾರ, ೨೩ ನೇ ಭಾನುವಾರ

ಅಪೇರ

21—8—53 ನೇ ಶುಕ್ರವಾರದಿಂದ

ಪ್ರತಿದಿನ ಮೂರು ಆಟಗಳು

ಮದ್ರಾಸ್ ಪಿಕ್‌ಚರ್ಸ್‌ರವರ:—

★ ಪಣಂ ★ ತಮಿಳು

ಪಾತ್ರ:-ಶಿವಾಜಿಗಣೇಶ, ಪದ್ಮನಿ, ಎನ್.ಎಸ್. ಕೃಷ್ಣನ್ ಮತ್ತು ಟಿ.ಎ. ಮಧುರಂ

ಪ್ರಕಾಶಕರು:—ಜಿ. ಎಲ್. ಸ್ವಾಮಿ

ಮುದ್ರಕರು:— ಹಿ. ಕಾ. ಸುಬ್ಬರಾವ್

ಮೋಹನ ಮುದ್ರಣಾಲಯ ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೪

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೭

೨೨-೮-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಅಕ್ಕಿ ವಿನಹ ಎಲ್ಲಾ ಆಹಾರ ಧಾನ್ಯಗಳ ನಿಯಂತ್ರಣ ರದ್ದು

ಆಹಾರ ಸಚಿವ ಕಿದ್ವಾಯಿ ಹೇಳಿಕೆ

ದೇಶದಲ್ಲಿ ಅಕ್ಕಿ ವಿನಹ ಮಿಕ್ಕೆಲ್ಲ ಆಹಾರ ಧಾನ್ಯಗಳ ಮೇಲಿರುವ ನಿಯಂತ್ರಣವನ್ನೆಲ್ಲಾ ಸದ್ಯದಲ್ಲಿಯೇ ರದ್ದುಗೊಳಿಸುವುದಾಗಿ ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಬೊಂಬಾಯಿನಲ್ಲಿ ಹೇಳಿದ್ದಾರೆ.

ದೇಶದಲ್ಲಿ ೧೯೪೭ ಕ್ಕಿಂತ ಈಗ ಆಹಾರ ಬೆಳೆಯು ಅತ್ಯಧಿಕಗೊಂಡಿದೆ. ವಿದೇಶಗಳಿಂದ ಆಮದಾದ ಅಕ್ಕಿಯನ್ನು ಈಗ ಬಳಸಿಯೇಯಿಲ್ಲ. ಎಲ್ಲವೂ ದಾಸ್ತಾನಿನಲ್ಲಿದೆ.

ಈಗ ಜನರಿಗೆ ಬೇಕಾಗುವಷ್ಟು ಅಕ್ಕಿಯನ್ನು ಆಂತರಿಕವಾಗಿಯೇ ಪಡೆಯಲಾಗುತ್ತಿದೆ.

೫೨-೫೩ ನೇ ಸಾಲಿನಲ್ಲಿ ಆಹಾರವು ೨೦ ಕೋಟಿ ಎಕರೆಗಳಲ್ಲಿ ಬೆಳೆದು ಹೊಸ ದಾಖಲೆಯನ್ನು ಸ್ಥಾಪಿಸಿದೆ. ೨ ಕೋಟಿ ೩೪ ಲಕ್ಷ ಎಕರೆಗಳಲ್ಲಿ ಅಕ್ಕಿಯನ್ನು ಬೆಳೆಯಲಾಗಿದೆ.

೪೫--೪೬ ನೇ ಸಾಲಿಗಿಂತ ಗೋಧಿಯ ಬೆಳೆಯು ಈಗ ವಿಶೇಷವಾಗಿ ಆಗಿದೆ. ಕೇಂದ್ರಸರ್ಕಾರದ ಬಳಿ ಇರುವ ಗೋಧಿಯನ್ನು ಹೇಗೆ ವಿಲೆ ಮಾಡಬೇಕೆಂಬುದೇ ಸರ್ಕಾರಕ್ಕೆ ತಿಳಿಯದಾಗಿದೆಯೆಂದು ಆಹಾರಸಚಿವರು ಹೇಳುತ್ತಾ ತಾವು ೫೨--೫೩ ನೇ ಸಾಲಿನಲ್ಲಿ ಭಾರತವು ಆಹಾರ ಸ್ವಸಂಪೂರ್ಣವಾಗುವುದೆಂದು ಹಿಂದೆ ಹೇಳಿದಾಗ ಯಾರೂ ನಂಬಲಿಲ್ಲವೆಂದೂ ಈಗ ತಮ್ಮ ಮಾತು ನಿಜವಾದುದನ್ನು ಪ್ರತ್ಯಕ್ಷವಾಗಿ ಕಾಣುತ್ತಿರುವುದಾಗಿಯೂ ಹೇಳಿದ್ದಾರೆ.

ಮಡಕೇರಿ ಧನಲಕ್ಷ್ಮಿ ಬಗ್ಗೆ ಕುತೂಹಲ

ಕಳೆದ ಒಂದು ವರ್ಷದಿಂದ ಅನ್ನ ನೀರು ಸೇವಿಸದೆ ಚಟುವಟಿಕೆಯಿಂದಿರುವ ಮಡಕೇರಿಯ ೧೪ ವರ್ಷದ ಧನಲಕ್ಷ್ಮಿಯನ್ನು ನೋಡಲು ಪ್ರಪಂಚದ ಅನೇಕಕಡೆಗಳಿಂದ ಜನರು ಬರುತ್ತಿದ್ದಾರೆ. ಆಕೆಯನ್ನು ಇಷ್ಟರಲ್ಲಿಯೇ ಬೆಂಗಳೂರಿಗೆ ಕರೆದುಕೊಂಡು ವೈದ್ಯಪ್ರಯೋಗ ಮಾಡಲು ಕೇಂದ್ರ ಸರಕಾರ ನಿರ್ಧರಿಸಿದ್ದಾರೆ.

ಸೂಯೆಜ್ ಕಾಲುವೆಯ ಆಸ್ಪತ್ರೆಯ ಸುಪ್ರಸಿದ್ಧ ವೈದ್ಯರಾದ ಡಾ|| ಗೊಡೆಲ್‌ರವರು ಮೊನ್ನೆ ದಿನ ಮಡಕೇರಿಗೆ ಭೇಟಿಯಿತ್ತು ಆಕೆಯನ್ನು ಪರೀಕ್ಷಿಸಿದರು. ಆಕೆ ಹೇಗೆ ಜೀವಿಸುತ್ತಿದ್ದಾಳೆಂಬುದನ್ನು ಪೂರ್ಣವಾಗಿ ಪರಿಶೀಲಿಸಲು ಭಾರತದ ವೈದ್ಯರಿಗೆ ವಿದೇಶೀ ವೈದ್ಯರು ಸಂತೋಷದಿಂದ ಸಹಕಾರ ನೀಡುವುದಾಗಿ ಅವರು ತಿಳಿಸಿದ್ದಾರೆ.

ಅಂಚೆ ಅಧಿಕಾರಿಗಳ ನಿಧನ

ಮೈಸೂರು ೨೨

ಮೈಸೂರು ಡಿವಿಜನ್ ಅಂಚೆ ಇಲಾಖೆಯ ಸೂಪರಿಂಟೆಂಡೆಂಟರಾದ ಶ್ರೀ ನಾಯುಡುರವರು ಮೊನ್ನೆ ಮಧ್ಯಾಹ್ನ ಇಲ್ಲಿಂದ ಮೇಯಿಲ್ ರೈಲಿನಲ್ಲಿ ಮದರಾಸಿಗೆ ಪ್ರಯಾಣ ಮಾಡುತ್ತಿದ್ದಾಗ, ಮೊದಲನೇ ತರಗತಿಯಲ್ಲಿ ಅವರು ಮೃತಹೊಂದಿದ್ದು ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಗೊತ್ತಾಯಿತು. ಹೃದಯ ವೇದನೆಯಿಂದ ಅವರು ಮರಣ ಹೊಂದಿರಬಹುದೆಂದು ತಿಳಿಯಬರುತ್ತದೆ.

ಪರಿಹಾರವಿಲ್ಲದೆ ಜಮೀನ್‌ದಾರಿ ರದ್ದು

ಚೀನಾದಲ್ಲಿ ಜಮೀನುದಾರಿ ಪದ್ಧತಿಯನ್ನು ಯಾವ ಪರಿಹಾರವೂ ಇಲ್ಲದೆ ಸಂಪೂರ್ಣವಾಗಿ ರದ್ದು ಮಾಡಲಾಗಿದೆ. ೧೧ ಕೋಟಿ ೬೦ ಲಕ್ಷ ಎಕರೆ ಜಮೀನನ್ನು ೩೦ ಕೋಟಿ ರೈತರುಗಳಿಗೆ ತಲಾ ಮೂರನೇ ಒಂದು ಎಕರೆಯಂತೆ ಹಂಚಲಾಗಿದೆ. ರೈತರು ತಮ್ಮ ಬೆಳೆಯಲ್ಲಿ ಶೇಕಡ ೧೫ ರಷ್ಟನ್ನು ಸರ್ಕಾರಕ್ಕೆ ತೆರಿಗೆಯಾಗಿ ಕೊಡಬೇಕು ಎಂದು ಕಮ್ಯೂನಿಸ್ಟ್ ಚೀನಾದಲ್ಲಿ ಪ್ರವಾಸಮಾಡಿ ಹಿಂತಿರುಗಿರುವ ಪಾರ್ಲಿಮೆಂಟ್ ಸದಸ್ಯ ಶ್ರೀ ಶ್ರೀಕಂಠ ನಾಯರ್ ತಿಳಿಸಿದ್ದಾರೆ.

ಭಿಕ್ಷುಕರು, ವೇಶ್ಯೆಯರು ಮತ್ತು ಇತರ ಸಮಾಜ ವಿರುದ್ಧ ಶಕ್ತಿಗಳನ್ನೆಲ್ಲಾ ಗ್ರಾಮಗಳಲ್ಲೂ, ಬಡವರ ಮನೆಗಳಲ್ಲೂ ಕೆಲಸಕ್ಕಾಗಿ ಉಪಯೋಗಿಸಿಕೊಂಡು, ಅವರಿಂದ ರಚನಾತ್ಮಕ ಕಾರ್ಯಕ್ರಮ ನಡೆಸಲಾಗುತ್ತಿದೆ. ಇದರಿಂದ ಅಲ್ಲಿ ನಿರುದ್ಯೋಗತನವೇ ಇಲ್ಲದಂತಾಗಿದೆ--ಎಂದೂ ಅವರು ಹೇಳಿದ್ದಾರೆ.

ಇರಾನಿನ ಷಾರವರು ಸ್ವದೇಶಕ್ಕೆ ವಾಪಸು

ಟೆಹರಾನಿನಲ್ಲಿ ಹೊಸ ಸರ್ಕಾರವು ಈಗ ರಚಿಸಲಾಗಿರುವುದರಿಂದ, ಅದರ ಕೋರಿಕೆ ಮೇಲೆ ಇರಾನಿನ ಷಾರವರು ಸ್ವದೇಶಕ್ಕೆ ಬರಲು ರೋಂ ನಗರದಿಂದ ಬಾಗ್‌ದಾದಿಗೆ ಆಗಮಿಸಿದ್ದಾರೆ. ಅವರು ಅಲ್ಲಿ ಸ್ವಲ್ಪಕಾಲ ವಿದ್ದು ಅನಂತರ ಟೆಹರಾನಿಗೆ ಹಿಂತಿರುಗುವರೆಂದು ತಿಳಿಯಬರುತ್ತದೆ.

ಸಂಗೂರಿನಲ್ಲಿ ಹೆರಿಗೆ ಆಸ್ಪತ್ರೆ

ಮೈಸೂರು ೨೨

ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಮೊನ್ನೆದಿನ ಸಂಗೂರಿಗೆ ಭೇಟಿಯಿತ್ತರು. ಅಲ್ಲಿ ಒಂದು ಗರ್ಭಿಣಿಯರ ಆಸ್ಪತ್ರೆಯನ್ನು ಸ್ಥಾಪಿಸಬೇಕೆಂದು ನಿವಾಸಿಗಳು ಮನವಿ ಮಾಡಿಕೊಂಡರು. ಈ ವಿಷಯದಲ್ಲಿ ಅಲ್ಲಿಯ ಪ್ರಮುಖರನ್ನು ಜಿಲ್ಲಾಧಿಕಾರಿಗಳು ಬರಮಾಡಿಕೊಂಡು ಆ ಆಸ್ಪತ್ರೆಯ ಸ್ಥಾಪನೆಗೆ ಎಲ್ಲರೂ ಉದಾರ ಸಹಾಯವನ್ನು ಮಾಡಿದರೆ ಸರ್ಕಾರದ ನೆರವಿನಿಂದ ಹೊಸ ಆಸ್ಪತ್ರೆಯನ್ನು ತೆರೆಯಲವಕಾಶವಾಗುವುದೆಂದು ತಿಳಿಸಿದರು.

ಅಲ್ಲಿಯ ಮಹಾಜನರು ೫೦೦೦ ರೂಪಾಯಿಗಳನ್ನು ಈ ಕಾರ್ಯಕ್ಕಾಗಿ ಕೊಡಲು ಒಪ್ಪಿದರು. ಪುರಸಭೆಯು ಸಹ ೫೦೦೦ ರೂಗಳನ್ನು ಕೊಡಲಿದೆಯೆಂದು ತಿಳಿಯಬರುತ್ತದೆ.

ಈ ಹತ್ತು ಸಾವಿರ ರೂಪಾಯಿಗಳ ಜೊತೆಗೆ ಜಿಲ್ಲಾಬೋರ್ಡ್ ೧೦೦೦೦ ರೂ. ಮತ್ತು ಸರ್ಕಾರವು ೧೦೦೦೦ ರೂಪಾಯಿಗಳ ಹಣವನ್ನು ಪಡೆದು ಉತ್ತಮದರ್ಜೆಯ ಆಸ್ಪತ್ರೆಯನ್ನು ಕಟ್ಟಲಾಗುವುದೆಂದು ಭರವಸೆ ಇತ್ತರು.

ಕಾಶ್ಮೀರ ಪ್ರಜಾಭಿಪ್ರಾಯ ಕಾರ್ಯ

ರಾಜಕೀಯಕ್ಕೆ ಸೇರದ ಪ್ರಮುಖರೊಬ್ಬರ ನೇಮಕವಾಗಬೇಕೆಂದು ನೆಹರೂ

ವಿಶ್ವಸಂಸ್ಥೆಯು ಕಾಶ್ಮೀರದಲ್ಲಿ ಪ್ರಜಾಭಿಪ್ರಾಯ ಸಂಗ್ರಹಣೆಗಾಗಿ ಹಿಂದೆ ಮಿ|| ನಿಮಿಟ್ಸ್‌ರನ್ನು ನೇಮಿಸಿದುದು ಈಗ ಐತಿಹಾಸಿಕ ಸ್ಮರಣೆ. ಮುಂದಿನ ಎಪ್ರಿಲ್‌ನಲ್ಲಿ ಪ್ರಜಾಭಿಪ್ರಾಯ ಸಂಗ್ರಹಣೆಗಾಗಿ ಯೂರೋಪಿನ ಯಾವುದಾದರೂ ಸಣ್ಣ ರಾಷ್ಟ್ರದ ಅಥವ ಏಷ್ಯಾ ರಾಷ್ಟ್ರದ ಒಬ್ಬ ಪ್ರಮುಖ ವ್ಯಕ್ತಿಗಳನ್ನ ನೇಮಿಸಬೇಕಾಗಿದೆ. ಅಂತಹವರು ರಾಜಕೀಯದಿಂದ ದೂರವಿರುವವರಾಗಿರಬೇಕು.

ಮಹಾರಾಷ್ಟ್ರಗಳಿಗೆ ಸಂಬಂಧಪಟ್ಟಂತಹವರನ್ನು ನೇಮಿಸುವುದರಿಂದ ರಾಜಕೀಯ ಕೈವಾಡ ವುಂಟಾಗುವುದಲ್ಲದೆ ವ್ಯಾಪಕವಾದ ಜಗಳವು ಇದ್ದೇ ಇರುತ್ತದೆ. ಎಂದು ಪ್ರಧಾನಿ ನೆಹರೂರವರು ಕಾಶ್ಮೀರದಲ್ಲಿ ಪ್ರಜಾಭಿಪ್ರಾಯ ಸಂಗ್ರಹಣಾಧಿಕಾರಿ ನೇಮಕದ ಬಗ್ಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಾಗಿ ತಿಳಿಯಬರುತ್ತದೆ.

ಸೂಚನೆ

ಉಪಾಕರ್ಮದ ಪ್ರಯುಕ್ತ ಸೋಮವಾರ ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ.

ಅಶೋಕಾ ರಸ್ತೆಗೆ ಸಿಮೆಂಟ್ ಕಾಂಕ್ರಿಟ್ ಮಾಡಿಸಬೇಕು

ಮೈಸೂರು ೨೨

ಮೈಸೂರು ಪುರಸಭಾಧಿವೇಶನ ಇದೇ ಮಾಹೆ ೨೮ನೇ ತಾ|| ನಡೆಯುತ್ತದೆ.

ಮೈಸೂರು ಅಶೋಕಾ ರೋಡ್‌ನಲ್ಲಿ ಹಳ್ಳ ಕೊಳ್ಳಗಳು ಇದ್ದು ವಾಹನ ಸಂಚಾರಕ್ಕೆ ತುಂಬಾ ತೊಂದರೆಯಾಗಿರುವುದರಿಂದ ಪುನಃ ಆ ರಸ್ತೆಯನ್ನು ಟಾರುಮಾಡುವಬದಲು ಸಿಮೆಂಟ್ ರೋಡನ್ನು ಮಾಡುವಂತೆ ಮರಾಮತ್ ಇಲಾಖೆಗೆ ಸೂಚನೆ ಕೊಡುವಂತೆ ಸರ್ಕಾರವನ್ನು ಪ್ರಾರ್ಥಿಸಬೇಕೆಂಬ ಒಂದು ನಿರ್ಣಯವನ್ನು ಶ್ರೀ ಹೆಚ್. ಎಸ್. ಮುದ್ದಯ್ಯನವರು ಮಂಡಿಸಲಿರುವರು.

ಅಮೆರಿಕದಲ್ಲಿ ಮೈಸೂರು ಎಂಪೋರಿಯಂ

ಅಮೆರಿಕದ ಮಹಿಳೆಯರಿಗೆ ಮೈಸೂರು ರೇಷ್ಮೆ ಸೀರೆಗಳ ಮೇಲೆ ಹೆಚ್ಚು ಆಸಕ್ತಿ ಇರುವುದರಿಂದ, ಮತ್ತೂ ರತ್ನಗಂಬಳಿಗಳ ಮಾರಾಟಕ್ಕಾಗಿ ಅಮೆರಿಕದಲ್ಲಿ ಒಂದು ಮೈಸೂರು ಎಂಪೋರಿಯಂ ಸ್ಥಾಪಿಸುವ ಉದ್ದೇಶ ಸರ್ಕಾರಕ್ಕೆ ಇದೆಯೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ರೇಷ್ಮೆ ವ್ಯಾಪಾರಿ ಸಂಘದ ಸತ್ಕಾರ ಕೂಟದಲ್ಲಿ ತಿಳಿಸಿದ್ದಾರೆ.

ಕಟ್ಟಡ ಮತ್ತು ಭೂಮಿಗಳ ಸ್ವಾಧೀನ

ಕರ್ನೂಲಿನಲ್ಲಿ ಆಂಧ್ರ ರಾಜಧಾನಿಗಾಗಿ ಬೇಕಾಗುವ ಕಟ್ಟಡ ಮತ್ತು ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಮದರಾಸ್ ಸರಕಾರದವರು ಕೇಂದ್ರ ಸರ್ಕಾರದ ಅನುಮತಿ ಪಡೆದನಂತರ ಒಂದು ಆರ್ಡಿನೆನ್ಸ್ ಹೊರಡಿಸಲಿದ್ದಾರೆಂದು ತಿಳಿದುಬಂದಿದೆ.

ಪತ್ನಿಗಾಗಿ ಪತಿಯ ಮರಣ

ಇಂದೂರಿನ ಚಮೇಲಿ ನದಿಯ ಪ್ರವಾಹದಲ್ಲಿ ಸಿಕ್ಕಿ ಕೊಚ್ಚಿಹೋಗುತ್ತಿದ್ದ ತನ್ನ ಪತ್ನಿಯ ದೃಶ್ಯವನ್ನು ನೋಡಲಾರದೆ ಪನ್ನಾಲಾಲ್ ಎಂಬುವನು ಅಲ್ಲೇ ಪ್ರಾಣಬಿಟ್ಟನೆಂದೂ, ಆದರೆ ಆಕೆಯನ್ನು ಹಳ್ಳಿಗರು ಪ್ರವಾಹದಿಂದ ರಕ್ಷಿಸಿದರೆಂದೂ ವರದಿಯಾಗಿದೆ.

ಸ್ವತಂತ್ರ ಕಾಶ್ಮೀರ ಕೂಗು ನಿಂತಿತು

ಕಾಶ್ಮೀರ ಜನಮತಗಣನೆ ಬಗ್ಗೆ ಭಾರತ ಪಾಕ್ ಪ್ರಧಾನಿಗಳ ನಡುವೆ ಒಪ್ಪಂದವಾಗಿರುವುದರಿಂದ "ಸ್ವತಂತ್ರ ಕಾಶ್ಮೀರ" ಕೂಗು ಕೊನೆಗೊಂಡಿತು ಎಂದು ಅಲ್ಲಿಯ ಶಾಸನಸಭಾಧ್ಯಕ್ಷ ಗುಲಾಂ ಮಹಮದ್ ಸಾದಿಕ್ ಹೇಳಿದ್ದಾರೆ.

ಗೋದಾವರಿ ನದಿ ಪ್ರದೇಶದಲ್ಲಿ ವಿಮಾನಗಳಿಂದ ಆಹಾರ ಸರಬರಾಜು

ಗೋದಾವರಿ ನದಿಯ ಪ್ರವಾಹವು ಇಳಿಮುಖವಾಗುತ್ತಲಿದ್ದರೂ ಆ ಪ್ರದೇಶದಲ್ಲಿ ಆವರಿಸಲ್ಪಟ್ಟಿರುವ ಜನರು ಇನ್ನೂ ಹೊರಕ್ಕೆ ಬರಲು ಮಾರ್ಗವಿಲ್ಲದಾಗಿದೆ.

ಗೋದಾವರಿ ನದಿಯ ಮುಖಜಭೂಮಿಯಲ್ಲಿ ಸಿಕ್ಕಿಕೊಂಡಿರುವ ಜನರಿಗೆ ಮಿಲಿಟರಿಯವರು ವಿಮಾನಗಳ ಮೂಲಕ ಆಹಾರ ಪೊಟ್ಟಣಗಳನ್ನು ಮೇಲಿಂದ ಹಾಕುತ್ತಲಿದ್ದಾರೆ.

ಅಮಲಾಪುರ, ರಜೋಲ್ ಮುಂತಾದ ಕೆಲವು ಗ್ರಾಮಗಳು ಈ ತೊಂದರೆಗೀಡಾಗಿವೆ.

ರಾಜಮಹೇಂದ್ರಿಯಲ್ಲಿಯೇ ೩ ಭಾಗ ನೀರಿನಲ್ಲಿ ಇನ್ನೂ ಮುಳುಗಿದೆ. ಮದ್ರಾಸಿನ ಸಚಿವರುಗಳಲ್ಲಿ ಕೆಲವರು ಈ ಪ್ರದೇಶಗಳಲ್ಲೆಲ್ಲಾ ಆಹಾರ ವಸ್ತುಗಳೊಡನೆ ಪ್ರವಾಸ ಮಾಡಿ ಜನರಿಗೆ ಅದನ್ನು ಒದಗಿಸುತ್ತಲಿದ್ದಾರೆ.

ಅನೇಕ ಕಡೆ ಗಂಜಿ ಕೇಂದ್ರಗಳನ್ನು ಸ್ಥಾಪಿಸಿ ನೂರಾರು ಜನರಿಗೆ ಆಹಾರವನ್ನು ಒದಗಿಸಲಾಗುತ್ತಿದೆ.

ಪ್ರಜಾ ಸೋಷಲಿಸ್ಟ್ ನಾಯಕ ಶ್ರೀ ಟಿ. ಪ್ರಕಾಶಂರವರು ಒಂದು ಪರಿಹಾರ ಸಮಿತಿಯನ್ನು ರಚಿಸಿದ್ದಾರೆ.

ಈ ಪ್ರಾಂತ್ಯದಲ್ಲಿ ನಡೆಯಬೇಕಾಗಿರುವ ಪರಿಹಾರ ಕಾರ್ಯಗಳಿಗಾಗಿ ಕೇಂದ್ರವು ೫ ಕೋಟಿ ರೂಪಾಯಿಗಳನ್ನಾದರೂ ಕೊಡಬೇಕೆಂದು ಅವರು ತಿಳಿಸಿದ್ದಾರೆ.

ಭೂದಾನ ಯಜ್ಞಕ್ಕೆ ಸಂಗ್ರಹಣೆ

ಇದೇ ಮಾಹೆ ೧೯ ನೇ ತಾರೀಖಿನವರೆಗೆ ಭಾರತಾದ್ಯಂತ ಭೂದಾನ ಯಜ್ಞ ಚಳುವಳಿಯಲ್ಲಿ ೧೭ ಲಕ್ಷ ೭೫ ಸಾವಿರ ಎಕರೆ ಜಮೀನನ್ನು ಸಂಗ್ರಹಿಸಿರುವುದಾಗಿ ತಿಳಿಯಬರುತ್ತದೆ. ಬಿಕನೀರ್ ಮಹಾರಾಜರು ಕೊಟ್ಟಿರುವ ೧ ಲಕ್ಷ ೭೮ ಸಾವಿರ ಎಕರೆ ಜಮೀನು ಇದರಲ್ಲಿ ಸೇರಿಲ್ಲ.

ಭೂದಾನಯಜ್ಞ ಕಾರ್ಯವನ್ನು ಇನ್ನೂ ಜಯಪ್ರದವಾಗಿ ಮಾಡುವ ವಿಷಯದಲ್ಲಿ ಪಾರ್ಲಿಮೆಂಟಿನ ಸದಸ್ಯರು ನಿನ್ನೆಯದಿನ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿದರು. ಇವರು ಇಲ್ಲಿಯವರೆಗೆ ಸುಮಾರು ೫೦೦೦ ಎಕರೆ ಜಮೀನನ್ನು ಸಂಗ್ರಹಿಸಿರುವುದಾಗಿ ತಿಳಿಯಬರುತ್ತದೆ.

ಮಧ್ಯ ಪ್ರದೇಶದಲ್ಲಿ ಒಂದು ಭೂದಾನ ಯಜ್ಞ ಮಂಡಲಿಯನ್ನು ಇತ್ತೀಚೆಗೆ ಸ್ಥಾಪಿಸಲಾಗಿದೆ.

ನೆಹರೂ-ಮಹಮದ್ ಅಲಿ ಸಂಯುಕ್ತ ಪ್ರಕಟಣೆಗೆ ಸ್ವಾಗತ

ಕಾಶ್ಮೀರ ವಿವಾದ ಇತ್ಯರ್ಥದ ಬಗ್ಗೆ ಭಾರತ ಮತ್ತು ಪಾಕೀಸ್ತಾನ ಪ್ರಧಾನಿಗಳು ಇತ್ತೀಚೆ ಹೊರಡಿಸಿರುವ ಸಂಯುಕ್ತ ಪ್ರಕಟಣೆಯನ್ನು ಕಾಶ್ಮೀರದಲ್ಲಿ ಸ್ವಾಗತಿಸಲಾಗಿದೆ.

ಅಲ್ಲಿಯ ಮುಖ್ಯ ಮಂತ್ರಿ ಭಕ್ಷಿ ಗುಲಾಂ ಮಹಮದ್‌ರವರು ಈ ವಿಷಯದಲ್ಲಿ ಮಾತನಾಡುತ್ತ ಈ ಹೊಸ ನಿರ್ಧಾರಕ್ಕೆ ಕಾಶ್ಮೀರ ಸರ್ಕಾರ ಮತ್ತು ಜನತೆಯ ಪೂರ್ಣ ಬೆಂಬಲವಿದೆ. ಕಾಶ್ಮೀರ ಜನರೇ ತಮ್ಮ ಭವಿಷ್ಯವನ್ನು ನಿರ್ಧಾರ ಮಾಡಬೇಕೆಂದು ಉಭಯ ಪ್ರಧಾನಿಗಳ ಒಪ್ಪಿರುವುದಕ್ಕೆ ಎಲ್ಲರ ಸ್ವಾಗತ. ಪರಕೀಯರ ಪ್ರವೇಶವಿಲ್ಲದೆ ಈ ನಿರ್ಧಾರಕ್ಕೆ ಬಂದಿರುವುದು ಚರಿತ್ರಾರ್ಹವಾದುದು ಮತ್ತೂ ಸಂತೋಷ ವಿಷಯ.

ಕಾಶ್ಮೀರಿಗಳ ನ್ಯಾಯಬದ್ಧ ಹಕ್ಕನ್ನೂ ಉಭಯತ್ರರೂ ಒಪ್ಪಿದ್ದಾರೆ. ಜನರಲ್ಲಿದ್ದ ಪ್ರಾಂತ್ಯ ವಿಂಗಡಣೆಯ ಶಂಕೆ ಈಗ ನಿವಾರಣೆಯಾಗಿದೆ. ನಮ್ಮ ಸರ್ಕಾರವು ಜನಾಭಿಪ್ರಾಯ ಸಂಗ್ರಹಣಾಧಿಕಾರಿಯನ್ನು ನೇಮಿಸಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ಎಂದು ಹೇಳಿದ್ದಾರೆ.

ರಾಜ್ಯಾಂಗ ಸಭಾಧ್ಯಕ್ಷ ಮಿ|| ಜಿ. ಎಂ. ಸಾದಿಕ್‌ರವರೂ ಸಹ ಈ ಒಪ್ಪಂದವನ್ನು ಸ್ವಾಗತಿಸಿದ್ದಾರೆ.

ಬ್ರಿಟನ ಕೆಲವು ಪ್ರಮುಖ ಪತ್ರಿಕೆಗಳು ಈ ನಿರ್ಧಾರವನ್ನು ಸ್ವಾಗತಿಸಿ ಉಭಯ ರಾಷ್ಟ್ರಗಳವರು ತಮ್ಮಲ್ಲಿಯೇ ಈ ವಿವಾದವನ್ನು ಪರಿಹರಿಸಿಕೊಳ್ಳಲು ತೀರ್ಮಾನಿಸಿರುವುದನ್ನು ಮೆಚ್ಚಿವೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೧—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೫—	೨೫—೪
ಎಳ್ಳು	೬೨—೪	೪೭—೧೨
ಹುರುಳಿ	೪೫—೨	೪೭—೧೨
ಹೆಸರು	೫೮—೧೦	೬೧—
ಅಲಸಂದೆ	—	—
ಹೊಂಗೆಬೀಜ	—	—
ಅವರೆ	೫೧—೧೨	೫೫—೪
ಉದ್ದು	—	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೬—೧	೬—೧೦
ಸೀಗೆಕಾಯಿ	೬—೧೪	—
ಬೆಲ್ಲ	೮—	
ತೆಂಗಿನಕಾಯಿ	೧೯೬	೨೯೩

ಬೊಂಬಾಯಿನಲ್ಲಿ ಭಾರಿ ಅಗ್ನಿ ಅನಾಹುತ

೧೧ ಜನರ ಮರಣ: ೧೨ ಮಂದಿಗೆ ಗಾಯ

ಲಕ್ಷಾಂತರ ರೂಪಾಯಿಗಳ ನಷ್ಟ

ಬೊಂಬಾಯಿನ ಗಿರಿಗಾಂ ಪ್ರದೇಶದಲ್ಲಿ ನಿನ್ನೆಯದಿನ ಒಂದು ೪ ಅಂತಸ್ತಿನ ಭಾರಿ ಮನೆಯು ಬೆಂಕಿಗಾಹುತಿಯಾಯಿತು. ಮನೆಯಲ್ಲಿದ್ದ ೪ ಮಕ್ಕಳು ಅಲ್ಲಿಯೇ ಬೆಂದು ಹೋದರು. ಈ ಪ್ರಕರಣದಲ್ಲಿ ಒಟ್ಟು ೧೧ ಜನರು ಮಡಿದು ೧೨ ಜನರಿಗೆ ಗಾಯಗಳಾಗಿರುವುದಾಗಿ ವರದಿಯಾಗಿದೆ.

ಈ ಮನೆಯ ಮೊದಲನೆಯ ಅಂತಸ್ತಿನಲ್ಲಿದ್ದ ಪ್ಲಾಸ್ಟಿಕ್ ಕಾರ್ಖಾನೆಯಲ್ಲಿ ಆದ ಆಸ್ಫೋಟನೆಯ ಪರಿಣಾಮವಾಗಿ ಮನೆಗೆಲ್ಲಾ ಬೆಂಕಿ ತಗುಲಿತು. ಅಲ್ಲಿ ವಾಸವಾಗಿದ್ದ ಸುಮಾರು ೨೫ ಸಂಸಾರಗಳನ್ನು ತ್ವರಿತವಾಗಿ ಅಲ್ಲಿಂದ ಸಾಗಿಸುವ ಕಾರ್ಯ ನಡೆಯಿತು. ಆದಾಗ್ಯೂ ೧೧ ಜನರು ಮರಣಕ್ಕೀಡಾದರು.

೧೩ ಅಗ್ನಿಶಮನ ಯಂತ್ರಗಳು ೩ ಗಂಟೆಗಳಕಾಲ ಹೋರಾಡಿ ಬೆಂಕಿಯನ್ನು ಆರಿಸಿತು. ಪಕ್ಕದ ಮನೆಯಲ್ಲಿ ಸುಮಾರು ೫೦ ಸಂಸಾರಗಳಿದ್ದವು ಬೆಂಕಿಯೂ ಅಲ್ಲಿಗೂ ಹರಡಲು ಅಲ್ಲಿದ್ದ ಜನರನ್ನು ಬೇರೆಕಡೆಗೆ ಕರೆದೊಯ್ಯಲಾಯಿತು ಈ ರೀತಿ ಭಾರಿ ಪ್ರಮಾಣದಲ್ಲಿ ಅಗ್ನಿ ಅನಾಹುತವು ಬೊಂಬಾಯಿನಲ್ಲಿ ಹಿಂದೆ ನಡೆದಿಲ್ಲವೆಂದು ತಿಳಿಯಬರುತ್ತದೆ.

ಈ ಅನಾಹುತದಿಂದ ಲಕ್ಷಾಂತರ ರೂಪಾಯಿಗಳ ನಷ್ಟ ಸಂಭವಿಸಿರುವುದಾಗಿ ಅಂದಾಜು ಮಾಡಲಾಗಿದೆ.

ಆಂಧ್ರ ಪ್ರಜಾಸೋಷಲಿಸ್ಟ್ ಸಭೆ

ಆಂಧ್ರಪ್ರಾಂತ್ಯದ ಪ್ರಜಾಸೋಷಲಿಸ್ಟ್ ಪಕ್ಷದ ಸಭೆಯು ನಿನ್ನೆಯದಿನ ಪ್ರಾರಂಭವಾಯಿತು. ಹೊಸ ಆಂಧ್ರಪ್ರಾಂತ್ಯದ ಆಡಳಿತದಲ್ಲಿ ಈ ಪಕ್ಷದ ಪಾತ್ರದ ವಿಷಯವಾಗಿ ಚರ್ಚೆಗಳು ನಡೆವುವೆಂದು ಗೊತ್ತಾಗಿದೆ.

ಫ್ರಾನ್ಸಿನಲ್ಲಿ ಮುಷ್ಕರ

ಫ್ರಾನ್ಸಿನಲ್ಲಿ ಕಳೆದವಾರ ೪೦ ಲಕ್ಷ ಜನರು ಪ್ರಾರಂಭಿಸಿದ ಮುಷ್ಕರವು ಈಗ ಪೂರ್ಣವಾಗಿ ನಿಲ್ಲುವ ಸಂಭವವಿದೆ-ಎಂದು ತಿಳಿಯಬರುತ್ತದೆ.

ಜಿಲ್ಲಾಬೋರ್ಡ್ ಸಭೆ

ಮೈಸೂರು ೨೨

ಜಿಲ್ಲಾ ಬೋರ್ಡ್ ಸಭೆಯು ಸೆಪ್ಟಂಬರ್ ೮ ನೇ ತಾರೀಖು ಮಧ್ಯಾಹ್ನ ೧ ಗಂಟೆಗೆ ಜಿಲ್ಲಾಭವನದಲ್ಲಿ ನಡೆಯುತ್ತದೆ.

ಅಲಹಾಬಾದಿನಲ್ಲಿ ಭಾರಿಮಳೆ

ಅಲಹಾಬಾದಿನಲ್ಲಿ ಕಳೆದ ೨ ದಿನಗಳಲ್ಲಿ ಸುಮಾರು ೧೯ ಅಂಗುಲಗಳಷ್ಟು ಮಳೆ ಬಿದ್ದಿದೆ ಕಳೆದ ೭೦ ವರ್ಷಗಳಲ್ಲಿ ಇಲ್ಲಿ ಜನರು ಇಂತಹ ಮಳೆಯನ್ನು ನೋಡಿಯೇ ಇರಲಿಲ್ಲವೆಂದು ತಿಳಿಯಬರುತ್ತದೆ.

ಈ ಮಳೆಯ ದೆಸೆಯಿಂದ ಗಂಗಾ ಮತ್ತು ಯಮುನಾ ನದಿಗಳಲ್ಲಿ ವಿಶೇಷ ಪ್ರವಾಹವುಂಟಾಗಿದೆ.

ಈ ಪ್ರವಾಹ ಮತ್ತು ಮಳೆಯ ಹಾವಳಿಯಿಂದ ಸುಮಾರು ೨೦೦ ಮನೆಗಳು ಕುಸಿದು ಬಿದ್ದಿವೆ. ಇಲ್ಲಿಯವರೆಗೆ ತಿಳಿದಿರುವಂತೆ ಎರಡು ಮರಣಗಳಾಗಿ ೫ ಜನರಿಗೆ ಗಾಯಗಳಾಗಿವೆ. ಸುಮಾರು ೧೫೦೦೦ ಜನರು ತಮ್ಮ ಮನೆಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಆಸ್ಪತ್ರೆ, ಶಾಲಾ ಕಾಲೇಜುಗಳು, ಕಛೇರಿಗಳು ಮುಂತಾದೆಡೆ ಜನರು ಆಶ್ರಯ ಪಡೆಯುತ್ತಿದ್ದಾರೆ.

ಅಪೇರ

21—8—53 ನೇ ಶುಕ್ರವಾರದಿಂದ ಪ್ರತಿದಿನ ಮೂರು ಆಟಗಳು

ಮದ್ರಾಸ್ ಪಿಕ್ಚರ್ಸ್‌ರವರ:—

★ ಪಣಂ ★ ತಮಿಳು

ಪಾತ್ರ:—ಶಿವಾಜಿಗಣೇಶ, ಪದ್ಮಿನಿ, ಎನ್.ಎಸ್. ಕೃಷ್ಣ ಮತ್ತು ಟಿ.ಎ.ಮಧುರಂ

ಪ್ರಕಾಶಕರು:—ಜಿ. ಎಲ್. ಸ್ವಾಮಿ
ಮುದ್ರಕರು:— ಹಿ. ಕಾ. ಸುಬ್ಬರಾವ್
ಶೋರ್ ಮುದ್ರಣಾಲಯ ಮೈಸೂರು.

WANTED

A Printing machine in running condition—Crown or Demmy Folio

Contact:—

The SAMACHARA office,
Mothikhana Buildings, Jaganmohan Palace Road, Mysore.

ಪೋಸ್ಟ್ ಕಛೇರಿ ರಿಜಿಸ್ಟರ್ ನಂ. ಎಂ. ೫೨೧೮

ಸಮಾಚಾರ

ದಿನ ಸಂಪುಟ ಸಂಚಿಕೆ ೭

೨೫-೮-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮೈಸೂರು ಮಂತ್ರಿಮಂಡಲ ಉರುಳಿಸುವ ಉದ್ದೇಶವಿಲ್ಲ

ವೀರಣ್ಣಗೌಡರ ಹೇಳಿಕೆ

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡ, ಶ್ರೀಗಳಾದ ಎಸ್. ಚೆನ್ನಯ್ಯ ಮತ್ತು ಟಿ. ಸುಬ್ರಹ್ಮಣ್ಯರವರುಗಳು ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ನೆಹರೂರವರನ್ನು ಭೇಟಿಮಾಡಿ, ಮೈಸೂರಿನ ರಾಜಕೀಯ ವಿಷಯದಲ್ಲಿ ಮಾತುಕತೆ ನಡೆಸಿದರೆಂದು ತಿಳಿಯಬರುತ್ತದೆ. ಅವರುಗಳು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದ್ ಡಾ|| ರಾಧಾಕೃಷ್ಣನ್, ಶ್ರೀ ಜಗಜೀವನ್ ರಾಮ್, ಕಾಂಗ್ರೆಸ್ ಕಾರ್ಯದರ್ಶಿಗಳನ್ನೂ ಭೇಟಿಮಾಡಿದ್ದರು.

ಮೈಸೂರು ಮಂತ್ರಿಮಂಡಲದ ಮೇಲೆ ಅವಿಶ್ವಾಸ ತಂದು ಅದನ್ನು ಉರುಳಿಸಲು ಹೈಕಮ್ಯಾಂಡಿನ ಅನುಮತಿ ಪಡೆಯುವುದಕ್ಕಾಗಿ ತಾವು ದೆಹಲಿಗೆ ಬಂದಿಲ್ಲವೆಂದೂ ಮೈಸೂರು ಕಾಂಗ್ರೆಸ್ ಮತ್ತು ಆಡಳಿತ ಭದ್ರಪಡಿಸುವ ವಿಚಾರದಲ್ಲಿ ಮಾತುಕತೆ ನಡೆಸಲು ತಾವು ಅಲ್ಲಿಗೆ ಆಗಮಿಸಿರುವುದಾಗಿಯೂ ಶ್ರೀ ವೀರಣ್ಣಗೌಡರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ.

ಅವರು ಈದಿನ ಬೆಂಗಳೂರಿಗೆ ವಾಪಸು ಬರುವ ನಿರೀಕ್ಷೆ ಇದೆ.

ಕಿದ್ವಾಯಿಯವರ ರಷ್ಯದ ಟೀಕೆಯಂತೆ !

ಶ್ರೀ ರಫಿ ಅಹಮದ್ ಕಿದ್ವಾಯಿ ಆಹಾರ ಸಚಿವರು; ಶ್ರೀ ಮಹಮದ್ ಅಲಿ ಪಾಕಿಸ್ತಾನದ ಪ್ರಧಾನಿ; ಜನರಲ್ ಕಾರಿಯಪ್ಪ ಸೈನ್ಯದ ಹಿಂದಿನ ಸಚಿವರು; ಜಸ್ಟಿಸ್ ಯು. ಪಿ. ರಾಜಧಾನಿ-ಎಂಬ ಅಸ್ಪಷ್ಟ ಉತ್ತರಗಳನ್ನು ಕ್ರೈಸ್ತ ಶಾಲಾ ಉಪಾಧ್ಯಾಯರ ಕೆಲಸಕ್ಕೆ ಅರ್ಜಿ ಹಾಕಿಕೊಂಡಿದ್ದ ಗ್ವಾಲಿಯರಿನ ಒಬ್ಬ ವಿದ್ಯಾರ್ಥಿಯು ಕೊಟ್ಟಿದ್ದಾನೆ.

ಅಂತರ ರಾಷ್ಟ್ರೀಯ ಗೃಹಕೈಗಾರಿಕಾ ಪ್ರದರ್ಶನ

ಅಂತರ ರಾಷ್ಟ್ರೀಯ ಗೃಹ ಮತ್ತು ಕುಶಲ ಕೈಗಾರಿಕೆಗಳ ಪ್ರದರ್ಶನವೊಂದು ಲಂಡನ್ನಿನ ಒಲಂಪಿಯಾದಲ್ಲಿ ಅಕ್ಟೋಬರ್ ೨ರಿಂದ ೧೦ನೇ ತಾರೀಖಿನವರೆಗೆ ನಡೆಯುತ್ತದೆ. ವಿಶ್ವದ ಪ್ರಮುಖ ೧೦ ರಾಷ್ಟ್ರಗಳು ಇದರಲ್ಲಿ ಭಾಗವಹಿಸುತ್ತವೆ ಅದರಲ್ಲಿ ಭಾರತವೂ ಸೇರಿದೆ.

ಹೆಚ್ಚಿನ ದರದಲ್ಲಿ ಅಕ್ಕಿ ಮಾರಕೂಡದು

ಮೈಸೂರು ೨೫

ಸರ್ಕಾರದವರು ನಿಗದಿ ಮಾಡಿರುವ ದರಕ್ಕಿಂತ ಹೆಚ್ಚು ಬೆಲೆಗೆ ಆಹಾರ ಧಾನ್ಯಗಳನ್ನು ಇಲ್ಲಿಯ ವರ್ತಕರು ಮಾರದಂತೆ ಸೂಕ್ತ ಆಜ್ಞೆಯನ್ನು ಹೊರಡಿಸುವಂತೆ ಸರ್ಕಾರವನ್ನು ಕೋರಬೇಕೆಂಬ ನಿರ್ಣಯವೊಂದನ್ನು ಶ್ರೀ ಬಿ.ಜಿ. ದಾಸ್‌ರವರು ಇದೇ ೨೮ನೇ ತಾರೀಖು ನಡೆಯಲಿರುವ ಪುರಸಭಾಧಿವೇಶನದಲ್ಲಿ ಮಂಡಿಸಲಿರುವರು.

ಮುಳವಳ್ಳಿಯಲ್ಲಿ ಸಕ್ಕರೆ ಕಾರ್ಖಾನೆ

ಮುಳವಳ್ಳಿಯಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸುವ ವಿಷಯದಲ್ಲಿ ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಎಂ.ಕೆ. ಶಿವನಂಜಪ್ಪನವರು ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರೊಡನೆ ಸಮಾಲೋಚನೆ ನಡೆಸುತ್ತಲಿರುವುದಾಗಿಯೂ ಸದ್ಯದಲ್ಲೇ ಶ್ರೀ ಕಿದ್ವಾಯಿಯವರು ಸಂಸ್ಥಾನಕ್ಕೆ ಭೇಟಿಕೊಡುವರೆಂದೂ ಹೇಳಲಾಗಿದೆ.

ಸ್ವತ್ತಿನ ತೆರಿಗೆ ಮಸೂದೆ

ಸ್ವತ್ತಿನ ಮೇಲೆ ಯಾವ ದರದಲ್ಲಿ ತೆರಿಗೆಯನ್ನು ವಿಧಿಸಬೇಕೆಂಬ ಬಗ್ಗೆ ಕೇಂದ್ರ ಆರ್ಥಿಕ ಸಚಿವ ಶ್ರೀ ದೇಶಮುಖ್‌ರವರು ಪಾರ್ಲಿಮೆಂಟಿನಲ್ಲಿ ಒಂದು ಮಸೂದೆಯನ್ನು ಮಂಡಿಸಿದ್ದಾರೆ.

ನೊಂದವರಿಗೆ ಪರಿಹಾರ

ಅಲಹಾಬಾದಿನಲ್ಲಿ ಇತ್ತೀಚೆಗೆ ಮಳೆ ಮತ್ತು ಪ್ರವಾಹದಿಂದ ನೊಂದವರ ಪರಿಹಾರಕ್ಕಾಗಿ ಪ್ರಧಾನಿಯವರು ೫೦೦೦ ರೂ.ಗಳನ್ನು ಕೊಟ್ಟಿದ್ದಾರೆ.

ಉಕ್ಕಿನ ಕಾರ್ಖಾನೆ ಬಂದು

ಕಲ್ಕತ್ತಾ ಬಳಿ ಬರ್ನ್‌ಪುರದಲ್ಲಿರುವ ಉಕ್ಕಿನ ಕಾರ್ಖಾನೆಯಲ್ಲಿ ಕೆಲಸಗಾರರು ಮುಷ್ಕರ ಹೂಡುವುದಾಗಿ ತಿಳಿಸಿ ಇತ್ತೀಚೆ ನಿಧಾನವಾಗಿ ಕೆಲಸಗಳನ್ನು ಮಾಡಲು ಪ್ರಾರಂಭಿಸಿದುದರಿಂದ ನಿನ್ನೆಯದಿನ ಅದರ ಆಡಳಿತಗಾರರು ಆ ಸಂಸ್ಥೆಯನ್ನು ಮುಚ್ಚಿ ಲಾಕ್‌ಔಟ್ ಘೋಷಿಸಿದ್ದಾರೆ. ೧೪ ಸಾವಿರ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಲಾಗಿದೆ.

ದೇವರು ಬೇಡವೆನ್ನುವವರೆಗೂ ಅಧಿಕಾರದಲ್ಲಿರುವೆನು

ಮೈಸೂರು ಮುಖ್ಯ ಮಂತ್ರಿಗಳ ಹೇಳಿಕೆ

ಮಂತ್ರಿ ಮಂಡಲಕ್ಕೆ ಕಾಂಗ್ರೆಸ್ ಸಮಿತಿಗಳು ರಕ್ಷಣೆ ಕೊಡುತ್ತಿಲ್ಲ

ಮುಖ್ಯ ಮಂತ್ರಿ ಹನುಮಂತಯ್ಯನವರ ಆಕ್ಷೇಪಣೆ

ಬೆಂಗಳೂರು ೨೫

ದ್ವೇಷಾಸೂಯೆಗಳು, ಅಶಿಸ್ತು ತುಂಬಿ ತುಳುಕುತ್ತಿವೆ. ಇವುಗಳು ಮುಂದುವರಿದರೆ ಕಾಂಗ್ರೆಸ್ ಸಂಸ್ಥೆ ಒಡೆದುಹೋಗುವುದು. ಮೈಸೂರು ಮಂತ್ರಿಮಂಡಲವನ್ನು ಬೈಯುವವರು ಬೈಯಲಿ. ಆದರೆ ಸಂಸ್ಥಾನದಲ್ಲಿ ಯಾವ ಕಾಂಗ್ರೆಸ್ ಸಮಿತಿಯೂ ಮಂತ್ರಿಮಂಡಲಕ್ಕೆ ರಕ್ಷಣೆ ಕೊಡುತ್ತಿಲ್ಲದಿರುವುದು ವಿಷಾದಕರ ಎಂದು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ನಗರ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ತಿಳಿಸಿದ್ದಾರೆ.

ಬೆಂಗಳೂರು ೨೫

ಈಗಿನ ಮಂತ್ರಿ ಮಂಡಲದಲ್ಲಿ ಜನರು ವಿಶ್ವಾಸವನ್ನು ಕಳೆದುಕೊಂಡಿದ್ದಾರೆಂದೂ ತಮ್ಮನ್ನು ಮುಖ್ಯ ಮಂತ್ರಿ ಪದವಿಯಿಂದ ತೆಗೆದು ಹಾಕಲು ಪ್ರಯತ್ನ ನಡೆಯುತ್ತಿರುವುದಾಗಿಯೂ ಎಂ.ಪಿ.ಸಿ.ಸಿ. ಅಧ್ಯಕ್ಷ ಶ್ರೀ ವೀರಣ್ಣಗೌಡರು ಮತ್ತು ಪಾರ್ಲಿಮೆಂಟರಿ ಉಪಸಮಿತಿ ಸದಸ್ಯ ಶ್ರೀ ಎಸ್. ಚನ್ನಯ್ಯನವರು ತಮ್ಮನ್ನು ಕೆಲವು ದಿನಗಳ ಕೆಳಗೆ ಭೇಟಿಮಾಡಿದಾಗ ತಿಳಿಸಿದರೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆಯ ದಿನ ಸಿಟಿ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ತಿಳಿಸಿದರು. ದೇವರು ಎಲ್ಲಿಯವರೆಗೆ ಸಂಸ್ಥಾನದಲ್ಲಿ ತಾವು ಮುಖ್ಯಮಂತ್ರಿಯಾಗಿರಲು ಇಚ್ಛಿಸುವನೋ ಅಲ್ಲಿಯವರೆಗೂ ತಾವು ಇರುವುದಾಗಿ ಅವರುಗಳಿಗೆ ಉತ್ತರಕೊಟ್ಟ ನಂತರ ಅವರು ಮರುವಾತಾಡದೆ ಹೊರಟುಹೋದರೆಂದೂ ತಿಳಿಸಿದರು.

ತಾವು ಮುಖ್ಯಮಂತ್ರಿಯಾದಾಗಿನಿಂದ ಇಲ್ಲಿಯವರೆಗೆ ಸಂಸ್ಥಾನದಲ್ಲಿರುವ ಪುರಸಭೆಗಳು, ನೂರಾರು ಬಿನ್ನವತ್ತಳೆಗಳನ್ನು ತಮಗೆ ಅರ್ಪಿಸಿ ವಿಶ್ವಾಸವನ್ನು ವ್ಯಕ್ತಪಡಿಸಿರುವಾಗ ಕಾಂಗ್ರೆಸ್ಸಿನಲ್ಲಿ ಕೆಲವರು ಈ ರೀತಿ ಹೇಳಿರುವುದು ಆಶ್ಚರ್ಯವೆಂದು ಮುಖ್ಯ ಮಂತ್ರಿಗಳು ಹೇಳಿದರು.

ಮೈಸೂರು ಗಡಿ ಬಳಿ ಮದ್ರಾಸ್ ಪೋಲಿಸರ ಗೋಳಿಬಾರ್

ಮದ್ರಾಸ್ ಪೋಲಿಸಿನವರು ಮೊನ್ನೆಯ ದಿನ ಕೋಲಾರದ ಬಳಿ ಸುಗ್ಲಿ ಎಂಬ ಗ್ರಾಮದ ಬಳಿ ಗಡಿ ದಾಟಿ ಕಾರೊಂದನ್ನು ಅಟ್ಟಿಸಿಕೊಂಡು ಗುಂಡು ಹಾರಿಸಿದುದರ ಪರಿಣಾಮವಾಗಿ ಕಾರಿನಲ್ಲಿದ್ದ ಇಪ್ಪತ್ತು ವರ್ಷದ ಷೇಕ್ ಸಾಹೇಬ್ ಎಂಬುವವರು ಮೃತರಾಗಿ ಇತರರಿಗೆ ಗಾಯಗಳಾದುವೆಂದು ತಿಳಿಯಬರುತ್ತದೆ. ಆ ಕಾರಿನಲ್ಲಿ ಮದ್ಯ ತುಂಬಿದ ೩೦ ಸೀಲಾದ ಟಿನ್ನುಗಳಿದ್ದುವು.

ಮದ್ರಾಸ್ ಪೋಲಿಸ್‌ನ ಸಬ್ ಇನ್ಸ್‌ಪೆಕ್ಟರ್ ರಾಘವಲುನಾಯಿಡು, ಪೋಲೀಸ್ ಕಾನ್ಸ್‌ಟೇಬಲ್ ಎಂ. ಎ. ಮುನಿಸ್ವಾಮಿ, ಗ್ರಾಮ ಮುನ್ಸೀಫ್ ರಾಮ ಚಂದ್ರರೆಡ್ಡಿ ಮತ್ತು ಮೊಗಾಲಿ ವೆಂಕಟಗಿರಿ ಕೋಟೆ ನಿವಾಸಿಗಳಾದ ಎಲ್.ವಿ. ಸುಬ್ರಹ್ಮಣ್ಯಂ, ಸಯದ್ ಹಬೀದ್ ಮತ್ತು ನಾರಾಯಣರೆಡ್ಡಿ ಇವರನ್ನು ಮೈಸೂರು ಪೋಲಿಸಿನವರು ದಸ್ತಗಿರಿ ಮಾಡಿ ಅವರ ಮೇಲೆ ಕೇಸ್ ರಿಜಿಸ್ಟರ್ ಮಾಡಿದ್ದಾರೆ. ಅವರ ಮೇಲೆ ರಿಮ್ಯಾಂಡ್ ಪಡೆಯಲಾಗಿದೆ.

ಕಾರಿನಲ್ಲಿ ಗಾಯಗೊಂಡವರ ವಿವರ ಇನ್ನೂ ಪತ್ತೆಯಿಲ್ಲವಾಗಿದೆ. ಕಾರಿನಲ್ಲಿದ್ದ ಅಳಿದವರ ಮೇಲೆ ಪಾನನಿರೋಧ ಕಾನೂನಿನ ರೀತ್ಯ ಮೊಕದ್ದಮೆ ಹೂಡಲಾಗಿದೆ.

ಜೈಲಿನಲ್ಲಿ ನಾಟಕ ಮಂಡಲಿ

ಔರಂಗಬಾದ್ ಜೈಲಿನಲ್ಲಿ ಖೈದಿಗಳೆಲ್ಲರೂ ಸೇರಿ ಒಂದು ನಾಟಕ ಮಂಡಲಿಯನ್ನು ರಚಿಸಿಕೊಂಡು ಈಗಾಗಲೇ ಜೈಲಿನಲ್ಲಿಯೇ ಕೆಲವು ನಾಟಕಗಳನ್ನು ಆಡಿದ್ದಾರೆ. "ನಮ್ಮ ಭೂಮಿ" ಎಂಬ ನಾಟಕವೊಂದನ್ನು ಬಹಿರಂಗವಾಗಿ ಅವರು ಸದ್ಯದಲ್ಲೇ ಆಡಲಿರುವರೆಂದು ತಿಳಿದು ಬರುತ್ತದೆ ಈ ನಾಟಕ ಮಂಡಲಿಗೆ ಸಾಮಾನುಗಳನ್ನು ಕೊಳ್ಳಲು ಅಲ್ಲಿಯ ಕಲೆಕ್ಟರ್ ಮತ್ತು ಗಿರಣಿಯ ಮ್ಯಾನೇಜರ್ ತಲಾ ೨೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಮೊಸಾದಿಕ್ ರಹಸ್ಯ ಸ್ಥಳಕ್ಕೆ

ಟೆಹರಾನಿನ ಅರಮನೆಯ ಅಧಿಕಾರಿಗಳ ಕ್ಲಬ್ಬಿನಲ್ಲಿ ಬಂಧನದಲ್ಲಿದ್ದ ಡಾ|| ಮುಸಾದಿಕ್‌ರನ್ನು ರಹಸ್ಯ ಸ್ಥಳಕ್ಕೆ ಕರೆದೊಯ್ಯಲಾಗಿದೆ.

ಭಾರತ--ಸಿಂಹಳ ಸೌಹಾರ್ದ್ಯ ಅತ್ಯಗತ್ಯ

ಪ್ರಧಾನಿ ಸೇನಾನಾಯಕೆಯವರ ಹೇಳಿಕೆ

ಇಂದಿನ ಏಷ್ಯಾಖಂಡ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಭಾರತವು ಅತ್ಯಂತ ಪ್ರಬಲವಾದ ರಾಷ್ಟ್ರವಾಗುತ್ತದೆ. ಅದರೊಡನೆ ಸಿಂಹಳವು ಸೌಹಾರ್ದ್ಯ ಸಂಬಂಧವನ್ನು ಇಟ್ಟುಕೊಳ್ಳುವುದು ಅತ್ಯಗತ್ಯ—ಎಂದು ಸಿಂಹಳ ಪ್ರಧಾನಿ ಸೇನಾನಾಯಕೆಯವರು ತಿಳಿಸುತ್ತಾ ತಾವು ಪ್ರಧಾನಿ ನೆಹರೂರವರೊಡನೆ ಲಂಡನ್ನಿನಲ್ಲಿ ಪ್ರಾರಂಭಿಸಿದ ಭಾರತೀಯರ ಪೌರತ್ವಹಕ್ಕಿನ ವಿಷಯವನ್ನು ಸಾಧ್ಯವಾದಷ್ಟು ಜಾಗ್ರತೆಯಾಗಿ ಮುಂದುವರಿಸುವುದಾಗಿ ತಿಳಿಸಿದ್ದಾರೆ.

ವಜ್ರಮಹೋತ್ಸವ

ದಕ್ಷಿಣಭಾರತ ತೋಟದ ಮಾಲೀಕರ ಸಂಘದ ವಜ್ರಮಹೋತ್ಸವವನ್ನು ಮದರಾಸ್‌ನಲ್ಲಿ ಅಲ್ಲಿಯ ಗೌರ್ನರ್ ಶ್ರೀ ಶ್ರೀಪ್ರಕಾಶರವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ ತೋಟಗಳ ಮಾಲೀಕರು ಕಾರ್ಮಿಕರ ಹಿತ ರಕ್ಷಣೆಗೆ ಹೆಚ್ಚು ಗಮನವೀಯಬೇಕೆಂದು ತಿಳಿಸಿದರು.

ಉಕ್ಕಿನ ಕೈಗಾರಿಕೆಗೆ ವಿಶ್ವಬ್ಯಾಂಕಿನಿಂದ ಸಾಲ

ಭಾರತದಲ್ಲಿ ಉಕ್ಕಿನ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರವು ೩೦ ಕೋಟಿ ರೂಪಾಯಿಗಳಿಗಾಗಿ ವಿಶ್ವಬ್ಯಾಂಕಿಗೆ ಸಾಲದ ಅರ್ಜಿಯನ್ನು ಸಲ್ಲಿಸಲಾಗಿದೆಯೆಂದು ತಿಳಿಯಬರುತ್ತದೆ.

೭೧ ಕೋಟಿ ರೂಪಾಯಿಗಳ ಬಂಡವಾಳದ ಒಂದು ಭಾರಿ ಕಾರ್ಖಾನೆಯನ್ನು ಸ್ಥಾಪಿಸಲು ಸರ್ಕಾರವು ನಿರ್ಧರಿಸಿ ಈಗ ಎರಡು ಪ್ರಮುಖ ಜರ್ಮನಿಯ ಸಂಸ್ಥೆಗಳೊಡನೆ ಒಪ್ಪಂದವನ್ನು ಮಾಡಿಕೊಂಡಿದೆ. ಆ ಸಂಸ್ಥೆಗಳು ತಾಂತ್ರಿಕ ಮತ್ತು ಆರ್ಥಿಕ ನೆರವನ್ನು ನೀಡುತ್ತವೆ. ಅವು ೯ ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕುವುದಾಗಿ ಹೇಳಲಾಗಿದೆ.

ವಿಮಾನ ಇಂಜನಿಯರಿಂಗ್ ವಿಶೇಷ ಶಿಕ್ಷಣ

ಕೊಲಂಬೋ ಯೋಜನೆಯ ಪ್ರಕಾರ ಭಾರತದ ವಿಮಾನ ಶಾಖೆಯ ಶ್ರೀಗಳಾದ ನಾರಾಯಣ ಶಾಸ್ತ್ರಿ, ಎ. ವಿ. ಪರ್ಕರ್ ಮತ್ತು ರಘುನಾಥ ಪ್ರಸಾದ್ ಎಂಬ ಮೂವರು ಅಧಿಕಾರಿಗಳು ವಿಮಾನ ಪರಿಕ್ಷಾ ಮತ್ತು ಇಂಜನಿಯರಿಂಗ್ ಕೆಲಸಗಳಲ್ಲಿ ವಿಶೇಷ ಶಿಕ್ಷಣವನ್ನು ಪಡೆಯಲು ಬ್ರಿಟನ್ನಿಗೆ ತೆರಳಿದ್ದಾರೆ.

ಬ್ರಿಟಿಷ್ ಸರ್ಕಾರವು ಭಾರತ ಸರ್ಕಾರದ ಮನವಿಯಮೇಲೆ ಇವರಿಗೆ ವಿಶೇಷ ಶಿಕ್ಷಣ ಸೌಲಭ್ಯಗಳನ್ನು ಏರ್ಪಡಿಸಿದೆ.

ಗೋಧಿ ಹತೋಟಿ ರದ್ದು

ಸದ್ಯದಲ್ಲಿಯೇ ದೇಶಾದ್ಯಂತ ಗೋಧಿಯ ಹತೋಟಿಯನ್ನು ರದ್ದುಗೊಳಿಸಲಾಗುವುದೆಂದು ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಹೇಳಿದ್ದಾರೆ.

ಈ ರೀತಿ ಮಾಡಿದಲ್ಲಿ ಆಹಾರ ಪದಾರ್ಥಗಳ ಬೆಲೆ ಕಡಮೆಯಾಗುವುದೆಂದು ಅವರು ತಿಳಿಸಿದ್ದಾರೆ.

ಪ್ರಾಂತೀಯ ಸರ್ಕಾರಗಳು ಸರಬರಾಜು ಮಾಡುತ್ತಿರುವ ದರಗಳಿಗಿಂತಲೂ ಕಡಿಮೆ ಬೆಲೆಯಲ್ಲಿ ಗೋಧಿಯನ್ನು ಕೊಳ್ಳುವವರಿಗೆ ನೇರವಾಗಿ ಸರಬರಾಜು ಮಾಡುವುದಾಗಿ ಅವರು ಹೇಳಿದ್ದಾರೆ.

ಮುಂದಿನ ವರ್ಷ ದೇಶದಲ್ಲಿ ಉತ್ಪತ್ತಿಯಾಗುವ ಅಕ್ಕಿ ಸ್ವಪರಿಪೂರ್ಣವಾಗುವುದರಿಂದ ವಿದೇಶಗಳಿಂದ ಅಕ್ಕಿಯನ್ನು ತರಿಸುವುದಿಲ್ಲವೆಂದೂ ಅವರು ತಿಳಿಸಿದ್ದಾರೆ.

ರಾಷ್ಟ್ರೀಯ ಪರಿಹಾರ ನಿಧಿಗೆ ಸಹಾಯ ನೀಡಿ

ದೇಶದಲ್ಲಿ ಉಂಟಾದ ಅನೇಕ ಪ್ರವಾಹ ಮತ್ತು ಇತರ ನಷ್ಟಗಳ ಪರಿಹಾರಕ್ಕಾಗಿ ನಿರ್ಮಿಸಿರುವ "ಪ್ರಧಾನಿ ರಾಷ್ಟ್ರೀಯ ನಿಧಿ"ಗೆ ಜನರು ಉದಾರವಾಗಿ ಧನಸಹಾಯ ಮಾಡಬೇಕೆಂದು ಪ್ರಧಾನಿ ನೆಹರೂರವರು ಮನವಿ ಮಾಡಿದ್ದಾರೆ.

ಸಮಾಜ ಹಿತರಕ್ಷಣಾ ಶಿಕ್ಷಣ

ಸಮಾಜ ಹಿತರಕ್ಷಣಾ ಕಾರ್ಯದಲ್ಲಿ ಶಿಕ್ಷಣವನ್ನು ಪಡೆಯಲು ವೇಲ್ಸಿನ ಸ್ವಾನ್‌ಸೀ ವಿಶ್ವವಿದ್ಯಾನಿಲಯಕ್ಕೆ ಭಾರತದಿಂದ ಅಸ್ಸಾಂ ಸರ್ಕಾರದ ನೌಕರರಾದ ಶ್ರೀ ಬಿ. ಎಸ್. ಖಾರ್ಡ್‌ರವರು ಹೋಗಲಿರುವರು.

ವಲಸೆಗಾರರ ಆಸ್ತಿ ಬಗ್ಗೆ ಮಾತುಕತೆ

ಭಾರತ ಮತ್ತು ಪಾಕೀಸ್ತಾನ ಸರ್ಕಾರ ಪ್ರತಿನಿಧಿಗಳ ನಡುವೆ ಕರಾಚಿಯಲ್ಲಿ ಪ್ರಾರಂಭವಾದ ವಲಸೆಗಾರರ ಆಸ್ತಿಪಾಸ್ತಿಗಳ ಬಗ್ಗೆ ಮಾತುಕತೆಗಳು ಮುಂದಿನತಿಂಗಳು ೩೦ನೇ ತಾರೀಖು ದೆಹಲಿಯಲ್ಲಿ ಪ್ರಾರಂಭವಾಗುವುದಾಗಿ ತಿಳಿಯಬರುತ್ತದೆ.

ಹರಿಜನರಿಗೆ ಸೌಲಭ್ಯ

ಗೋದಾವರಿ ನದಿಯ ಪ್ರವಾಹದಿಂದ ತೊಂದರೆಗೀಡಾದ ಹರಿಜನ ಮತ್ತು ಬುಡಕಟ್ಟಿನ ಜನರಿಗೆ ವಿಶೇಷ ಸೌಲಭ್ಯಗಳನ್ನು ಒದಗಿಸಲು ಹೈದರಾಬಾದ್ ಸರ್ಕಾರವು ವಿಶೇಷ ವ್ಯವಸ್ಥೆಗಳನ್ನು ಮಾಡಿದೆ.

ತುಮಕೂರು-ಗುಬ್ಬಿ, ನಡುವೆ ಗೂಡ್ಸ್ ಗಾಡಿ ಅಪಘಾತ

ಪೂನಾ ಕಡೆಯಿಂದ ಬೆಂಗಳೂರಿಗೆ ಬರುತ್ತಿದ್ದ ಗೂಡ್ಸ್ ಗಾಡಿಯೊಂದು ಮೊನ್ನೆಯ ದಿನ ತುಮಕೂರು ಮತ್ತು ಗುಬ್ಬಿ ನಡುವೆ ಕಂಬಿ ತಪ್ಪಿ ಉರುಳಿತು. ಯಾರಿಗೂ ಏನು ಅಪಾಯವಾಗಲಿಲ್ಲ. ಈ ಮಾರ್ಗದಲ್ಲಿ ಉಂಟಾಗಿರುವ ಅಡಚಣೆಯಿಂದ ಬೆಂಗಳೂರು ಪೂನಾ ರೈಲು ಗಾಡಿಗಳನ್ನು ಆ ದಿನ ಮೈಸೂರಿನ ಮೂಲಕ ಬಿಡಲಾಗಿತ್ತು. ಈಗ ಮಾರ್ಗವನ್ನು ಸರಿಪಡಿಸ ಮಾಮೂಲಿನಂತೆ ರೈಲುಗಳನ್ನು ಬಿಡಲಾಗುತ್ತಿದೆ.

ಪ್ರವಾಹ ಪ್ರದೇಶದಲ್ಲಿ ಪ್ರವಾಸ

ಮದ್ರಾಸಿಗೆ ಆಗಮಿಸಿರುವ ಕೇಂದ್ರ ಕಾರ್ಮಿಕ ಸಚಿವ ಶ್ರೀ ವಿ. ವಿ. ಗಿರಿಯವರು ಗೋದಾವರಿ ನದಿಯ ಪ್ರವಾಹಕ್ಕೆ ಈಡಾದ ಪ್ರದೇಶಗಳಲ್ಲಿ ನಾಳೆಯಿಂದ ೩ ದಿನಗಳ ಪ್ರವಾಸವನ್ನು ಕೈಗೊಳ್ಳುವರು.

ಕಾಶ್ಮೀರ ಸರ್ಕಾರಕ್ಕೆ ಬೆಂಬಲ

ಕಾಶ್ಮೀರದಲ್ಲಿ ಸ್ಥಾಪಿತವಾಗಿರುವ ಹೊಸ ಸರ್ಕಾರಕ್ಕೆ ತಮ್ಮ ಜನರ ಪೂರ್ಣ ಬೆಂಬಲವನ್ನು ಲಡಕ್ ಲಾಮರವರು ವ್ಯಕ್ತಪಡಿಸಿದ್ದಾರೆ.

ಅಪೇರ

21—8—53 ನೇ ಶುಕ್ರವಾರದಿಂದ

ಪ್ರತಿದಿನ ಮೂರು ಆಟಗಳು

ಮದ್ರಾಸ್ ಪಿಕ್‌ಚರ್ಸ್‌ರವರ:—

• ಪಣಂ • ತಮಿಳು

ಪಾತ್ರ:—ಶಿವಾಜಿಗಣೇಶ್, ಪದ್ಮನಿ, ಎನ್.ಎಸ್. ಕೃಷ್ಣನ್ ಮತ್ತು ಟಿ.ಎ.ಮಧುರಂ

ಪ್ರಕಾಶಕರು ಮತ್ತು ಮುದ್ರಕರು.

ಜಿ. ಎಲ್. ಸ್ವಾಮಿ.

ಸಮಾಚಾರ ಪ್ರೆಸ್, ಮೈಸೂರು.

ಮೈಸೂರು ಕೈಗಾರಿಕೆಗೆ

ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು !

ಬಹುಕಾಲ ಬಾಳಿಕೆಬರುವವು !

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ

ಆಧುನಿಕ ರೀತಿಯಲ್ಲಿ ತಯಾರಾಗುವುವು !!!

★★★★★

ಮೈಸೂರು ಉಕ್ಕಿನ ಸಾಮಾನುಗಳು.

ಗಾಡಿಪಟ್ಟಿ ಅಥವಾ ಪಳಿಗಳು (FLATS) ದುಂಡು ಮತ್ತು ಚಮುರ ಸಲಾಕಿಗಳು (ROUNDS & SQUARES) ಕೋನ ಕಂಬಿಗಳು (ANGLES) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (REINFORCING RODS) ಮತ್ತು ಬೀಲುಪಟ್ಟಿಗಳು (HOOPS)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು

ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ

ಮೈಸೂರು ಕಬ್ಬಿಣದ

ಮತ್ತು

ಉಕ್ಕಿನ ಕಾರಖಾನೆ, ಭದ್ರಾವತಿ.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೬೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೮

೨೬-೮-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ನಂಜನಗೂಡಿನಲ್ಲಿ ಭಾರಿ ದರೋಡೆಗಾರರ ಬಂಧನ

೩ ಸಾವಿರ ರೂ. ಮಾಲುಗಳ ವಶ

ನಂಜನಗೂಡು ೨೬

ನಂಜನಗೂಡು—ಗುಂಡ್ಲಪೇಟೆ ನಡುವೆ ರಾತ್ರಿವೇಳೆಯಲ್ಲಿ ಎತ್ತಿನ ಗಾಡಿಗಳಲ್ಲಿ ಹೋಗುವವರನ್ನು ಸುಲಿಗೆ ಮಾಡುತ್ತಿದ್ದ ೧೩ ಮಂದಿಯ ಒಂದು ಭಾರಿ ದರೋಡೆಕಾರ ತಂಡವನ್ನು ಕಳೆದ ೬ ತಿಂಗಳಿನಿಂದ ನಂಜನಗೂಡು ಪೊಲೀಸಿನವರು ಶೋಧನೆ ನಡೆಸಿ ಪತ್ತೆ ಹಚ್ಚಿ ಬಂಧಿಸಿದ್ದಾರೆ. ಈ ಗುಂಪಿನ ಮುಖಂಡನು ಎಲ್ಲ ಎಂಬುವನೆಂದು ತಿಳಿಯಬರುತ್ತದೆ.

ಈ ಗುಂಪಿಗೆ ಸೇರಿದ ಇನ್ನು ನಾಲ್ಕು ಮಂದಿ ಪತ್ತೆಯಿಲ್ಲವೆಂದು ಹೇಳಲಾಗಿದೆ.

ಈ ಗುಂಪಿನವರು ಹೊಳೇನರಸೀಪುರ, ಕೃಷ್ಣರಾಜನಗರ, ಮಳವಳ್ಳಿ, ತಿರಾ ಮುಂತಾದ ನಾನಾಕಡೆ ಇದೇ ರೀತಿ ಸುಲಿಗೆ ನಡೆಸುತ್ತಲಿದ್ದರೆಂದು ಹೇಳಲಾಗಿದೆ.

ಇವರು ಲೂಟಿಮಾಡಿದ ಸುಮಾರು ೩,೦೦೦ ರೂ. ಬೆಲೆ ಬಾಳುವ ಅನೇಕ ಪದಾರ್ಥಗಳನ್ನು ಪೊಲೀಸಿನವರು ವಶಪಡಿಸಿಕೊಂಡಿರುವರು.

ಲಕ್ಕೋಟೆಯಲ್ಲಿ ನೋಟನ್ನು ಕಳುಹಿಸಕೂಡದು

ಇತ್ತೀಚೆಗೆ ಲಕ್ಕೋಟೆಗಳಲ್ಲಿ ಕರೆನ್ಸಿನೋಟುಗಳನ್ನು ರವಾನೆ ಮಾಡುತ್ತಿರುವುದರಲ್ಲಿ ಕಳವು ಆಗುತ್ತಿದೆಯೆಂದೂ ದೂರುಬರುತ್ತಿದೆಯೆಂದೂ, ಅಂತಹ ನೋಟುಗಳನ್ನು ಕಳುಹಿಸುವವರು ಇನ್ಷೂರ್ಡ್ ಲಕ್ಕೋಟೆಯಲ್ಲಿಟ್ಟು ರವಾನಿಸಬೇಕೆಂದೂ ಹಾಗೆ ಮಾಡದಿದ್ದಲ್ಲಿ ಅಂಚೆ ಇಲಾಖೆಯವರು ನಷ್ಟಕ್ಕೆ ಜವಾಬ್ದಾರರಲ್ಲವೆಂದೂ ಭಾರತ ಸರ್ಕಾರದವರು ಎಚ್ಚರಿಕೆ ಕೊಟ್ಟಿದ್ದಾರೆ.

ಖಾದಿ ಪ್ರೋತ್ಸಾಹಕ್ಕಾಗಿ ಮನವಿ

ದೇಶದಲ್ಲಿ ಖಾದಿ ಬಟ್ಟೆಯನ್ನು ಜನರು ಉಪಯೋಗಿಸಲು ಪ್ರಾರಂಭ ಮಾಡಿದರೆ ಸುಮಾರು ೪೦ ಲಕ್ಷ ರೂಪಾಯಿಗಳನ್ನು ಉಳಿಸಬಹುದು.

ವಿದೇಶೀ ವಿನಿಮಯ ಉಳಿಸಲು ಮತ್ತು ರಾಷ್ಟ್ರೀಯ ಸಂಪತ್ತನ್ನು ವೃದ್ಧಿಗೊಳಿಸಲು ದೇಶಾದ್ಯಂತ ಜನರು ಖಾದಿಯನ್ನೇ ಉಪಯೋಗಿಸಬೇಕು ಎಂದು ಪಾಕೀಸ್ತಾನ ಪಂಜಾಬಿನ ಮುಖ್ಯಮಂತ್ರಿ ಮಲ್ಲಿಕ್ ಫಿರೋಜ್ ಖಾನ್‌ನೂನ್‌ರು ತಮ್ಮ ಜನರಿಗೆ ಮನವಿಮಾಡಿದ್ದಾರೆ.

ಬೆಂಗಳೂರು ಸೆಂಟ್ರಲ್ ಜೈಲು ಬಳ್ಳಾರಿಗೆ ವರ್ಗ

ಬೆಂಗಳೂರು ೨೬

ಬಳ್ಳಾರಿಯು ಮೈಸೂರಿಗೆ ಸೇರಿದೊಡನೆಯೇ ಬೆಂಗಳೂರಿನಲ್ಲಿರುವ ಸೆಂಟ್ರಲ್ ಜೈಲನ್ನು ಅಲ್ಲಿಗೆ ವರ್ಗಾಯಿಸಿ ಇಲ್ಲಿಯ ಜೈಲು ಕಟ್ಟಡವನ್ನು ವಿಶ್ವವಿದ್ಯಾನಿಲಯದ ಕಾಲೇಜುಗಳ ಉಪಯೋಗಕ್ಕಾಗಿ ಕೊಡಲಾಗುವುದೆಂದು ತಿಳಿಯಬರುತ್ತದೆ.

ಬರ್ಮಾ ನದಿಗಳ ಪ್ರವಾಹದಿಂದ ವಿಶೇಷ ಹಾವಳಿ

ಬರ್ಮಾದ ಸಿಟ್ಟಾಂಗ್, ಪೆಗು ಮತ್ತು ಕ್ಸೈಕ ನದಿಗಳಲ್ಲಿ ಭಾರಿ ಪ್ರವಾಹವುಂಟಾಗಿ ಕೋಟ್ಯಾಂತರ ರೂ. ನಷ್ಟ ಸಂಭವಿಸಿದೆ. ಸುಮಾರು ೬೦ ಮೈಲಿಗಳಷ್ಟು ಪ್ರದೇಶದಲ್ಲಿ ಪ್ರವಾಹ ನುಗ್ಗಿದೆ. ಅನೇಕ ಗದ್ದೆಗಳು ನೀರಿನಲ್ಲಿ ಮುಳುಗಿ ೫೦ ಸಾವಿರ ಟನ್ ಭತ್ತದ ಪೈರಿಗೆ ನಷ್ಟ ಸಂಭವಿಸಿದೆ. ಪೆಗು ನದಿಯಲ್ಲಿ ೧೫ ಜನರು ನೀರುಪಾಲಾದರು. ಸಾವಿರಾರು ಜನರನ್ನು ರಕ್ಷಿಸಲು ಸೈನಿಕರ ನೆರವು ಪಡೆಯಲಾಗಿದೆ.

ಭಾರತದಲ್ಲಿ ಅರೆಬ್-ಏಷ್ಯ ಸಮ್ಮೇಳನ

ಮೊರಾಕೋ ಸುಲ್ತಾನನನ್ನು ಫ್ರೆಂಚ್ ಸರ್ಕಾರವು ಪದಚ್ಯುತಿಗೊಳಿಸಿರುವುದು ಮತ್ತು ಇತರ ಅರಬ್ ಪ್ರಶ್ನೆಗಳನ್ನು ಪರಿಶೀಲಿಸುವುದಕ್ಕಾಗಿ ದೆಹಲಿಯಲ್ಲಿ ಅರಬ್-ಏಷ್ಯ ಸಮ್ಮೇಳನವೊಂದನ್ನು ಪ್ರಧಾನಿ ನೆಹರೂ ಕರೆಯಬೇಕೆಂದು ಅರಬ್ ನಾಯಕರುಗಳು ಪ್ರಯತ್ನಿಸುತ್ತಿರುವರೆಂದು ವರದಿಯಾಗಿದೆ.

ಇನಾಂ ರೈತರಿಗೆ ರಕ್ಷಣೆ

ಮೈಸೂರು ಸಂಸ್ಥಾನದಲ್ಲಿರುವ ಇನಾಂ ಮತ್ತು ಜೋಡಿ ಗ್ರಾಮಗಳಲ್ಲಿರುವ ರೈತರುಗಳನ್ನು ಜಮೀನುದಾರರು ಓಡಿಸದಂತೆ ರಕ್ಷಣೆ ಕೊಡಲು ಸರ್ಕಾರದವರು ಒಂದು ಆರ್ಡಿನೆನ್ಸ್ ಜಾರಿಗೆ ತರಲು ಆಲೋಚಿಸುತ್ತಿದ್ದಾರೆಂದು ತಿಳಿದು ಬಂದಿದೆ.

ನೇಕಾರರ ಪ್ರದರ್ಶನ

ತಮಗೆ ಉದ್ಯೋಗವನ್ನು ಕಲ್ಪಿಸಿಕೊಡಿ ಎಂದು ನೆಯ್ಗೆಯವರ ೧೫೫ ಜನರ ತಂಡವೊಂದು ನಾಗಲಪುರಂನಿಂದ ೬೨ ಮೈಲಿ ದೂರವಿರುವ ಕೊಯಿಲ್‌ಪಟ್ಟಿಗೆ ಕಾಲ್ನಡಗೆ "ಹಸಿವು ಮೆರವಣಿಗೆ" ಯನ್ನು ಕೈಗೊಂಡಿದೆ.

ಹಿಟ್ಟಿನ ಗಿರಣಿ ಮಾಲೀಕರ ಸಭೆ

ಮೈಸೂರು ೨೬

ನಗರದಲ್ಲಿರುವ ಗಿರಣಿಗಳ ಮಾಲೀಕರ ಸಂಘದ ವಿಶೇಷ ಸರ್ವಸದಸ್ಯರ ಸಭೆಯು ಇದೇ ೩೦ನೇ ತಾರೀಖು ಭಾನುವಾರ ಸಂಜೆ ೪ ಗಂಟೆಗೆ ಪುರಭವನದಲ್ಲಿ ನಡೆಯುತ್ತದೆ.

ಪಾಕ್ ಮಂತ್ರಿ ಮಂಡಲದಲ್ಲಿ ಬಿಕ್ಕಟ್ಟೇ ?

ಇತ್ತೀಚೆಗೆ ದೆಹಲ್ಲಿಯಲ್ಲಿ ಆದ ನೆಹರೂ-ಮಹಮುದಾಲಿ ಒಪ್ಪಂದದ ಬಗ್ಗೆ ಪಾಕೀಸ್ತಾನದ ಮಂತ್ರಿಮಂಡಲದಲ್ಲಿ ಭಿನ್ನಾಭಿಪ್ರಾಯವಾಗಿ ಬಿಕ್ಕಟ್ಟು ಉಂಟಾಗಿದೆಯೆಂದು ಹೇಳಲಾಗುತ್ತಿದೆ.

ಸಿಲೋನ್ ಸರ್ಕಾರದಮೇಲೆ ಅವಿಶ್ವಾಸ ನಿರ್ಣಯ

ಸಿಲೋನ್ ಸರ್ಕಾರದಮೇಲೆ ಅಲ್ಲಿನ ವಿರೋಧ ಪಕ್ಷದವರು ತಂದಿರುವ ಅವಿಶ್ವಾಸ ನಿರ್ಣಯವು ಮುಂದಿನತಿಂಗಳು ಒಂದನೇ ತಾರೀಖು ಶಾಸನಸಭೆಯಲ್ಲಿ ಚರ್ಚೆಗೆ ಬರಲಿದೆ

ದಾವಣಗೆರೆ ತಾಲ್ಲೂಕಿನಲ್ಲಿ ಭೀಕರ ಕ್ಷಾಮ

ದಾವಣಗೆರೆ ತಾಲ್ಲೂಕಿನಲ್ಲಿ ಆಹಾರವಿಲ್ಲದೆ ಭೀಕರ ಕ್ಷಾಮವುಂಟಾಗಿ ದಾವಣಗೆರೆಯಲ್ಲಿರುವ ಮಾರವಾಡಿ ಸಂಘದವರು ಹಳ್ಳಿಗಳಲ್ಲಿ ಬಳಲುತ್ತಲಿರುವ ಜನರಿಗೆ ರೊಟ್ಟಿ--ಪಲ್ಯವನ್ನು ಹಂಚುವ ಕಾರ್ಯದಲ್ಲಿ ತೊಡಗುವುದಾಗಿ ತಿಳಿಯಬರುತ್ತದೆ.

ಔರಂಗಾಬಾದಿನಲ್ಲಿ ಎ.ಐ.ಆರ್. ಕೇಂದ್ರ ರದ್ದಿಗೆ ಪ್ರತಿಭಟನೆ

ಔರಂಗಾಬಾದಿನಲ್ಲಿರುವ ಎ.ಐ.ಆರ್. ಕೇಂದ್ರವನ್ನು ಮುಚ್ಚಲು ಸರ್ಕಾರದವರು ನಿರ್ಧರಿಸಿರುವುದನ್ನು ವಿರೋಧಿಸಲು ಸೆಪ್ಟೆಂಬರ್ ೨ನೇ ತಾರೀಖು ಅಲ್ಲಿ 'ಪ್ರತಿಭಟನಾ ದಿನ' ಆಚರಿಸಲು ನಿರ್ಧರಿಸಲಾಗಿದೆ.

ಭಾರತದಲ್ಲಿ ಕುಷ್ಠರೋಗ

ಭಾರತದಲ್ಲಿ ಕುಷ್ಠರೋಗದಿಂದ ಸುಮಾರು ೧೦ ಲಕ್ಷ ಜನರು ನರಳುತ್ತಿದ್ದಾರೆ. ಕುಷ್ಠರೋಗ ನಿವಾರಣೆ ಕಾರ್ಯವನ್ನು ಕೈಗೊಳ್ಳಲು ಆರ್ಥಿಕ ಮತ್ತು ಕೆಲಸಗಾರರ ನೆರವು ಬೇಕೆಂದು ಬ್ರಿಟನ್ನಿನಲ್ಲಿರುವ ಭಾರತ ಹೈಕಮಿಷನರು ಶ್ರೀ ಬಿ. ಜಿ. ಖೇರ್‌ರವರು ಬ್ರಿಟನ್ನಿನಲ್ಲಿ ಈ ರೋಗಕ್ಕೆ ಸಂಬಂಧಪಟ್ಟ ಒಂದು ಪ್ರದರ್ಶನವನ್ನು ಪ್ರಾರಂಭಿಸುತ್ತಾ ಮನವಿ ಮಾಡಿದ್ದಾರೆ.

ಕೃಷ್ಣರಾಜಸಾಗರದಲ್ಲಿ ಬಿದ್ದು ದುರ್ಮರಣವೆ ?

ಮೈಸೂರು ೨೬

ನಿವೃತ್ತ ಚೀಫ್ ಇಂಜನಿಯರ್ ಶ್ರೀ ಬಾಪಟ್‌ರ ಮಗ ಶ್ರೀ ತ್ರಿಯಂಬಕರಾವ್ ಎಂಬುವರು ಕಳೆದ ಶುಕ್ರವಾರ ತಮ್ಮ ಪತ್ನಿ ಮತ್ತು ಮಗುವಿನೊಡನೆ ಕೃಷ್ಣರಾಜಸಾಗರಕ್ಕೆ ಭೇಟಿಯಿತ್ತಿದ್ದಾಗ ಅವರ ಪತ್ನಿಯು ಮಗುವನ್ನು ಗಂಡನಕೈಗೆ ಕೊಟ್ಟು ಸ್ವಲ್ಪ ಬರುವುದಾಗಿ ಹೇಳಿಹೋದರೆಂದೂ ಬಹಳ ಹೊತ್ತಾದರೂ ಅವರು ಬರದಿರಲು ಹುಡುಕಲಾರಂಭಿಸಿದಾಗ ಮೊನ್ನೆಯದಿನ ಆಕೆಯ ಶವವು ಕಾವೇರಿ ನದಿಯಲ್ಲಿ ದೊರೆಯಿತೆಂದು ತಿಳಿಯಬರುತ್ತದೆ.

ಡಾ|| ಮೋದಿಯವರ ನೇತ್ರಚಿಕಿತ್ಸೆ

ಮೈಸೂರು ೨೬

ಮೈಸೂರುಜಿಲ್ಲೆಯಲ್ಲಿ ಮುಂದಿನ ತಿಂಗಳು ೧೫ ರಿಂದ ೨೨ ನೇ ತಾರೀಖಿನವರೆಗೆ ಡಾ|| ಮೋದಿಯವರು ಪ್ರವಾಸಮಾಡಿ ಉಚಿತ ನೇತ್ರಚಿಕಿತ್ಸೆ ಮಾಡುವರು. ೧೫ ನೇ ತಾ|| ಟಿ. ನರಸೀಪುರ, ೧೭ ಚಾಮರಾಜನಗರ, ೧೮ ಗುಂಡ್ಲಪೇಟೆ, ೧೯ ಸರಗೂರು, ೨೦ ಹುಣಸೂರು, ೨೧ ಪಿರಿಯಾಪಟ್ಟಣ ಮತ್ತು ೨೨ ಕೃಷ್ಣರಾಜನಗರಕ್ಕೆ ಭೇಟಿಕೊಡುವರು.

ಅಕ್ಟೋಬರ್ ತಿಂಗಳಿನಲ್ಲಿ ಮೈಸೂರು ತಾಲ್ಲೂಕು ಮತ್ತು ನಂಜನಗೂಡಿನಲ್ಲಿ ಪ್ರವಾಸಮಾಡುವರು.

ಶಾರದಾವಿಲಾಸ ಕಾಲೇಜಿನಲ್ಲಿ ಲಾ ತರಗತಿ

ರಾಜಧಾನಿಯ ಶಾರದಾವಿಲಾಸ್ ಕಾಲೇಜಿನಲ್ಲಿ ಲಾ ತರಗತಿಯನ್ನು ತೆರೆಯುವ ಬಗ್ಗೆ ಅನುಮತಿ ಕೊಡಲು ಮೈಸೂರು ವಿಶ್ವವಿದ್ಯಾನಿಲಯದ ಕಮೀಷನ್‌ರವರು ನಿನ್ನೆ ಕಾಲೇಜಿಗೆ ಭೇಟಿ ಇತ್ತು ಪರಿಶೀಲನೆ ನಡೆಸಿದರು. ಮುಂದಿನ ನವೆಂಬರ್ ತಿಂಗಳಿನಿಂದ ಮೇಲ್ಕಂಡ ತರಗತಿಯನ್ನು ತೆರೆಯಲು ಅನುಮತಿ ಕೊಡಬಹುದೆಂದು ನಿರೀಕ್ಷಿಸಲಾಗಿದೆ.

ಕಾಶ್ಮೀರ ದಿನಾಚರಣೆ

ಕಾಶ್ಮೀರದ ಇತ್ತೀಚಿನ ಘಟನೆಗಳನ್ನು ಆಂಗ್ಲೋ-ಅಮೆರಿಕನ್ ಸಾಮ್ರಾಜ್ಯಶಾಹಿಗಳ ಕುತಂತ್ರವಿದೆಯೆಂದೂ, ಅವರುಗಳು ಕಾಶ್ಮೀರವನ್ನು ಮತ್ತೊಂದು ಕೊರಿಯಾವನ್ನಾಗಿ ಮಾಡಲು ಹವಣಿಸುತ್ತಿದ್ದಾರೆಂದೂ ತಿಳಿಯಬರುತ್ತದೆ. ಇದನ್ನು ಭಾರತದ ಜನರೆಲ್ಲರೂ ಎದುರಿಸಬೇಕು. ಆದ್ದರಿಂದ ಇದೇ ೩೦ನೇ ತಾರೀಖು ದೇಶಾದ್ಯಂತ ಕಾಶ್ಮೀರದ ದಿನಾಚರಣೆಯನ್ನಾಗಿ ಆಚರಿಸಬೇಕೆಂದು ಕಮ್ಯೂನಿಸ್ಟ್ ಪಕ್ಷದವರು ಮನವಿಮಾಡಿದ್ದಾರೆ.

ದೇಶದ ನಾನಾ ಭಾಗಗಳಲ್ಲಿ ಪ್ರವಾಹದ ಹಾವಳಿ

ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳಿಂದ ಪರಿಹಾರ ಕಾರ್ಯ

ಉತ್ತರ ಮತ್ತು ದಕ್ಷಿಣಭಾರತದ ನದಿಗಳ ಪ್ರವಾಹ ಹಾವಳಿಯಿಂದ ವಿಶೇಷ ಕಷ್ಟಗಳು ಸಂಭವಿಸಿವೆ. ಆಯಾ ಪ್ರಾಂತ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರವು ತಮ್ಮ ಕೈಲಾದಷ್ಟು ಪರಿಹಾರ ಕಾರ್ಯಗಳನ್ನು ನಡೆಸುತ್ತಲಿವೆ.

ಬಿಹಾರಿನ ಮುಸಾಫರ್‌ನಲ್ಲಿ ಜನರನ್ನು ರಕ್ಷಿಸಲು ೨೫೦ ನಾಡು ದೋಣಿಗಳನ್ನು ಉಪಯೋಗಿಸಲಾಗುತ್ತಿದೆ. ೫೦೦೦ ಮಣ ಆಹಾರವನ್ನು ಈಗಾಗಲೇ ಉಚಿತವಾಗಿ ಹಂಚಲಾಗಿದೆ. ಅಗ್ಗವಾಗಿ ಆಹಾರವನ್ನು ಮಾರಲು ಸುಮಾರು ೧೦೦ ಅಂಗಡಿಗಳನ್ನು ತೆರೆಯಲಾಗಿದೆ.

ಉತ್ತರಪ್ರದೇಶದಲ್ಲಿ ಅಲಹಾಬಾದ್ ಮತ್ತು ಕಾನ್‌ಪುರಗಳಲ್ಲಿ ಪ್ರವಾಹ ಹಾವಳಿಯಿಂದ ಅಪಾರ ಹಾನಿಯುಂಟಾಗಿದೆ. ಹಲವಾರು ಪರಿಹಾರ ಕೇಂದ್ರಗಳನ್ನು ಸರ್ಕಾರವು ತೆರೆದಿದೆ. ಪರಿಹಾರ ಕಾರ್ಯಗಳಿಗಾಗಿ ಪ್ರಧಾನಿಯವರು ೧೦೦೦೦ ರೂಪಾಯಿಗಳನ್ನು ಕಳುಹಿಸಿದ್ದಾರೆ.

ಗೋದಾವರಿ ನದಿಯ ಪ್ರವಾಹದಿಂದ ಆಂಧ್ರಪ್ರದೇಶದಲ್ಲಿ ಕೋಟ್ಯಾಂತರ ರೂಪಾಯಿಗಳ ನಷ್ಟ ಸಂಭವಿಸಿವೆ. ಇನ್ನೂ ಹಲವೆಡೆ ನೀರು ನಿಂತಿರುವುದರಿಂದ ನಷ್ಟದ ಪೂರ್ಣ ವಿವರಗಳು ತಿಳಿದಿಲ್ಲ. ತ್ವರಿತ ಪರಿಹಾರ ಕಾರ್ಯಗಳು ನಡೆಯುತ್ತಿವೆ. ನಿಂತು ಹೋಗಿದ್ದ ರೈಲು ವ್ಯವಸ್ಥೆಯನ್ನು ಸರಿಪಡಿಸಲಾಗಿದೆ.

ಹೈದರಾಬಾದ್ ಪ್ರಾಂತ್ಯದಲ್ಲಿ ಗೋದಾವರಿ ಪ್ರವಾಹದ ಹಾವಳಿಯಿಂದ ಸುಮಾರು ೩೭೦೦೦ ಜನರು ತೊಂದರೆಗೀಡಾಗಿದ್ದಾರೆ. ಸುಮಾರು ೨೦-೨೫ ಜನರು ಸತ್ತು ಅಪಾರ ಆಸ್ತಿ ನಷ್ಟವಾಗಿದೆ. ಅಲ್ಲಿಯ ಸರ್ಕಾರವು ಉಚಿತವಾಗಿ ಹಂಚಲು ೨೫೦೦೦ ರೂಪಾಯಿಗಳನ್ನು ಮಂಜೂರ್ಮಾಡಿದೆ.

ರಾಯಲಸೀಮೆಯ ಪರಿಹಾರ ನಿಧಿಯಿಂದ ಹೈದರಾಬಾದ್ ಮುಖ್ಯಮಂತ್ರಿಯವರು ಪ್ರಧಾನಿಯವರ ಪರಿಹಾರ ನಿಧಿಗೆ ೨೫೦೦೦ ರೂಪಾಯಿಗಳನ್ನು ಕಳುಹಿಸಿ ಗೋದಾವರಿ ನದಿಯ ಪ್ರವಾಹದಲ್ಲಿ ನೊಂದವರಿಗೆ ಇದನ್ನು ಉಪಯೋಗಿಸುವಂತೆ ಕೋರಿದ್ದಾರೆ.

ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಚಾರಿಯವರು ನಿನ್ನೆ ದಿವಸ ವಿಶೇಷ ವಿಮಾನದಲ್ಲಿ ಪ್ರವಾಹಪೀಡಿತ ಪ್ರದೇಶಗಳಲ್ಲಿ ಪರೀಕ್ಷೆಯನ್ನು ನಡೆಸಿದರು. ತಮ್ಮ ಈ ಕಾರ್ಯಕ್ರಮವನ್ನು ಯಾರಿಗೂ ತಿಳಿಸದೆ ನಡೆಸಿಕೊಂಡು ರಾಜಮಹೇಂದ್ರಿ ಬಳಿ ಇರುವ ಮಧುರ ಪುಡಿಯಲ್ಲಿ ವಿಮಾನದಿಂದ ಇಳಿದು ನೊಂದ ಪ್ರದೇಶಗಳನ್ನು ಪರಿಶೀಲಿಸಿದರು.

● ಒರಿಸ್ಸಾ ಸರ್ಕಾರವು ತನ್ನ ಪ್ರಾಂತ್ಯದಲ್ಲಿದ್ದ ೪೭೮ ಜಹಗೀರಿಗಳನ್ನು ವಶಪಡಿಸಿಕೊಂಡಿತು. ಅದರ ವರಮಾನವು ೬೩ ಲಕ್ಷ ರೂಪಾಯಿಗಳು.

ಮೆಡಿಕಲ್ ಕಾಲೇಜು ಬೆಂಗಳೂರಿಗೆ ವರ್ಗಾವಣೆ?

ಮೈಸೂರು ೨೬

ಮೆಡಿಕಲ್ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವ ವಿಷಯವನ್ನು ಸರ್ಕಾರವು ಪರಿಶೀಲಿಸುತ್ತಿರುವುದಾಗಿ ತಿಳಿಯಬರುತ್ತದೆ.

ಬೆಂಗಳೂರಿನಲ್ಲಿರುವ ಮೆಡಿಕಲ್ ಸ್ಕೂಲನ್ನು ಮೈಸೂರಿಗೆ ವರ್ಗಾಯಿಸುವ ವಿಚಾರವೂ ಸರ್ಕಾರ ಆಲೋಚನೆಯಲ್ಲಿದೆ.

ಶ್ರೀಮನ್ಮಹಾರಾಜರಿಗೆ ತೈಲಚಿತ್ರ ಸಮರ್ಪಣೆ

ಮೈಸೂರು ೨೬

ಮೈಸೂರಿನ ಸುಪ್ರಸಿದ್ಧ ಕಲಾವಿದರಾದ ಶ್ರೀ ಎಂ. ರಾಮುರವರು ಮೊನ್ನೆಯದಿನ ಶ್ರೀಮನ್ಮಹಾರಾಜರನ್ನು ಭೇಟಿಮಾಡಿ ತಾವು ಬರೆದ ಶ್ರೀಕಂಠೇಶ್ವರಸ್ವಾಮಿ ತೈಲಚಿತ್ರವನ್ನು ಅರ್ಪಿಸಿದರು. ಶ್ರೀ ರಾಮುರವರ ಕಲಾಕೌಶಲ್ಯದಬಗ್ಗೆ ಶ್ರೀಮನ್ಮಹಾರಾಜರವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಭೂ ಸೈನ್ಯ ರಚನೆ

ಭೂಪಾಲಿನಲ್ಲಿ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಲು ಅಲ್ಲಿಯ ಸರ್ಕಾರವು ತ್ವರಿತ ಕಾರ್ಯಗಳನ್ನು ಪ್ರಾರಂಭಿಸಲಿವೆ.

ಸುಮಾರು ೧೦೦೦ ಜನರ ಭೂ ಸೈನ್ಯವನ್ನು ಕೂಡಲೇ ರಚಿಸಿ ನೀರಾವರಿ, ರಸ್ತೆ ನಿರ್ಮಾಣ ಮತ್ತು ವ್ಯವಸಾಯ ಕಾರ್ಯಗಳಲ್ಲಿ ಅವರು ತೊಡಗುವಂತೆ ಮಾಡಲಾಗುತ್ತದೆ.

ಕಬ್ಬಿನ ಬೆಲೆ ನಿರ್ಧಾರ

ಕಬ್ಬಿನ ಬೆಲೆಯನ್ನು ನಿರ್ಧರಿಸಲು ಮುಂದಿನ ತಿಂಗಳು ೨ನೇ ತಾರೀಖು ಎಲ್ಲಾ ಪ್ರಾಂತ್ಯಗಳ ಪ್ರತಿನಿಧಿಗಳ ಸಭೆಯೊಂದು ಆಹಾರ ಸಚಿವ ಕಿದ್ವಾಯಿಯವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೫—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—	೨೬—೪
ಎಳ್ಳು	೫೩—	೮೮—೧೪
ಹುರುಳಿ	೪೫—	೪೮—೭
ಹೆಸರು	೬೫—೧೦	—
ಅಲಸಂದೆ	೬೮—	೬೨—೨
ಕೊಂಗೆಬೀಜ	—	—
ಅವರೆ	೫೨—೧೪	—
ಉದ್ದು	೬೯—೧೨	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೫—೯	೭—೫
ಸೀಗೆಕಾಯಿ	೬—೯	—
ಬೆಲ್ಲ	—	
ತೆಂಗಿನಕಾಯಿ	೨೦೦	೨೯೦

ರಿಟ್ ಅರ್ಜಿಯ ಫೀಜು ಹೆಚ್ಚಕೂಡದು

ಹೈಕೋರ್ಟಿಗೆ ಮನವಿ

ಮೈಸೂರು ೨೬

ರಿಟ್ ಅರ್ಜಿಗಳ ಮೇಲೆ ಶುಲ್ಕವನ್ನು ಹೆಚ್ಚಿಸಿರುವುದನ್ನು ಪುನರ್ವಿಮರ್ಶಿಸಬೇಕೆಂದು ಇಲ್ಲಿಯ ವಕೀಲರಾದ ಶ್ರೀ ಎ. ಎಸ್. ರಾಮಯ್ಯನವರು ಮೈಸೂರು ಹೈಕೋರ್ಟು ರಿಜಿಸ್ಟ್ರಾರ್‌ರಿಗೆ ಒಂದು ಪತ್ರವನ್ನು ಬರೆದು ಈರೀತಿ ತಿಳಿಸಿದ್ದಾರೆ:—

ರಾಜ್ಯಾಂಗದ ೨೨೭ ನೇ ವಿಧಿ ಮೇರೆ ಹೈಕೋರ್ಟಿನವರು ಮಾಡಿದ್ದ ಮೇಲ್ಕಂಡ ನಿಯಮವನ್ನು ಪುನರ್ವಿಮರ್ಶೆ ಮಾಡುವುದು ಅವಶ್ಯಕವೆಂತ ಭಾವಿಸಿ ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇನೆ.

ರಿಟ್‌ಅರ್ಜಿಗಳನ್ನು ದಾಖಲ್ಮಾಡುವ ಮತ್ತು ಅದರ ನಡವಳಿಕೆಗಳ ಬಗ್ಗೆಯೂ ನಿಯಮಗಳನ್ನು ಏರ್ಪಡಿಸಲು ೨೨೭ ನೇ ವಿಧಿ ಪ್ರಕಾರ ಹೈಕೋರ್ಟಿನವರಿಗೆ ಅವಕಾಶವಿದೆ. ಆದರೆ ಆ ವಿಧಿಯಲ್ಲಿಯೇ ರೀತಿಯನ್ನು ಹಾಕಲಾಗಿದೆ. ಅದರ ಪ್ರಕಾರ ಮಾಡಿದ ನಿಯಮವು ಜಾರಿಯಲ್ಲಿರತಕ್ಕ ಕಾನೂನಿಗೆ ವಿರೋಧವಾಗಿರಬಾರದು. ಜಾರಿಯಲ್ಲಿರುವ ಕೋರ್ಟು ಫೀ ಆಕ್ಟ್ ಪ್ರಕಾರ ಹೈಕೋರ್ಟಿನಲ್ಲಿ ದಾಖಲ್ಮಾಡುವ ಎಲ್ಲಾ ಅರ್ಜಿಗಳಿಗೂ ಎರಡು ರೂಪಾಯಿ ಕೋರ್ಟು ಫೀ ಕೊಡಬೇಕೆಂತ ನಿಯಮವಿದೆ.

ಈಗ ಇಪ್ಪತ್ತು ರೂಗಳಿಗೆ ಹೆಚ್ಚಿಸಿರುವುದು ಕೋರ್ಟು ಫೀ ಆಕ್ಟಿನ ನಿಯಮಕ್ಕೆ ವಿರೋಧವಾಗಿದೆ. ಈಗ ಫೀಜು ಹೆಚ್ಚಿಗೆ ಮಾಡಿದ ವಿಧಿಯು ಜನಸಾಮಾನ್ಯರಿಗೆ ಹೈಕೋರ್ಟಿಗೆ ಪರಿಹಾರದ ಬಗ್ಗೆ ಅಹವಾಲು ಮಾಡಿಕೊಳ್ಳುವುದನ್ನು ತಡೆಗಟ್ಟಿದಂತಾಗಿದೆ. ಮೂಲಭೂತ ಹಕ್ಕನ್ನು ಸ್ಥಾಪನೆ ಮಾಡಿಕೊಳ್ಳುವ ಬಗ್ಗೆ ಹಾಕುವ ಎಲ್ಲಾ ಅರ್ಜಿಗಳಿಗೂ ಸುಪ್ರೀಂ ಕೋರ್ಟಿನಲ್ಲೇ ಹತ್ತು ರೂ. ಕೋರ್ಟು ಫೀ ಗೊತ್ತಾಗಿದೆ.

ಜಾರಿಯಲ್ಲಿರುವ ಆಕ್ಟಿಗೆ ವಿರೋಧವಾಗಿರುವ ಈ ವಿಷಯವನ್ನು ಪುನರ್ವಿಮರ್ಶೆ ಮಾಡಲು ಪರಿಶೀಲನೆಯ ಬಗ್ಗೆ ಹೈಕೋರ್ಟಿನವರ ಗಮನಕ್ಕೆ ತರಬೇಕೆಂದು ಅಪೇಕ್ಷಿಸುತ್ತೇನೆ.

ಖಾದಿ ಸಮ್ಮೇಳನ

ಖಾದಿ ಬಟ್ಟೆಯನ್ನು ಸರ್ಕಾರಿ ಕಛೇರಿಗಳಲ್ಲಿ ಉಪಯೋಗಿಸುವ ವಿಷಯದಲ್ಲಿ ಇದೇ ಮಾಹೆ ೨೯ನೇ ತಾರೀಖು ದೆಹಲಿಯಲ್ಲಿ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳ ಸಚಿವರ ಮತ್ತು ಪ್ರಮುಖ ಅಧಿಕಾರಿಗಳ ಸಭೆಯು ನಡೆಯುತ್ತದೆ.

ಈ ಸಭೆಯಲ್ಲಿ ರಾಷ್ಟ್ರಾಧ್ಯಕ್ಷರು ಮತ್ತು ಪ್ರಧಾನಿಯವರು ಭಾಷಣ ಮಾಡುತ್ತಾರೆ.

● ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಬರೆದಿರುವ "ರಾಮಕೃಷ್ಣ ಉಪನಿಷತ್" ಪ್ರಬಂಧಕ್ಕೆ ಮದರಾಸ್ ಸರ್ಕಾರದವರು ಉತ್ತಮ ಗ್ರಂಥವೆಂದು ೫೦೦ ರೂ. ಬಹುಮಾನ ಕೊಟ್ಟಿದ್ದಾರೆ.

ರಾಘವೇಂದ್ರ ಸ್ವಾಮಿಗಳ ಜಯಂತಿ

ಮೈಸೂರು ೨೬

ಸುಬ್ಬರಾಯನಕೆರೆಯ ಬಳಿ ಇರುವ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದಲ್ಲಿ ಈ ರಾತ್ರಿ ಎಂಟೂವರೆ ಗಂಟೆಗೆ ಶ್ರೀ ಗುರುಗಳವರ ಮಹಿಮೆಯ ಬಗ್ಗೆ ಉಪನ್ಯಾಸ, ನಾಳೆ ರಾತ್ರಿ ಎಂಟೂವರೆ ಗಂಟೆಗೆ ದರ್ಬಾರ್‌ಬಕ್ಷಿ ಶ್ರೀ ಹೆಚ್. ಎಲ್. ದೇವರಾಜಅರಸ್‌ರವರ ನೇತೃತ್ವದಲ್ಲಿ ವಿದ್ವಾನ್ ಎ. ಸುಬ್ಬರಾಯರ ಸಂಗೀತ ನಡೆಯುತ್ತದೆ.

ಲಷ್ಕರ್ ಮೊಹಲ್ಲಾ ಅಶೋಕಾ ರಸ್ತೆ ೪ನೇ ಪಶ್ಚಿಮ ಕ್ರಾಸ್‌ನಲ್ಲಿರುವ ಸಂಗೀತ ವಿದ್ವಾನ್ ಶ್ರೀ ವೆಂಕಟರಮಣಯ್ಯನವರ ಮನೆಯಲ್ಲಿ ನಿನ್ನೆಯಿಂದ ೧೦ ದಿನಗಳವರೆಗೆ ರಾಘವೇಂದ್ರ ಸ್ವಾಮಿಗಳ ಜಯಂತ್ಯುತ್ಸವ ಪ್ರಾರಂಭವಾಗಿದೆ. ಪ್ರತಿನಿತ್ಯ ಏಳೂವರೆ ಗಂಟೆಯಿಂದ ಸಂಗೀತ ಕಛೇರಿ ನಡೆಯುತ್ತದೆ.

ಗೋದಾವರಿ ಪ್ರವಾಹ ಪರಿಹಾರಕ್ಕೆ ನಿಧಿ

ಗೋದಾವರಿ ನದಿ ಪ್ರವಾಹದಲ್ಲಿ ನೊಂದವರ ಪರಿಹಾರಕ್ಕಾಗಿ ಪ್ರಧಾನಿ ಪರಿಹಾರ ನಿಧಿಗೆ ಶ್ರೀ ಜಿ. ಡಿ. ಬಿರ್ಲಾರವರು ೫೦೦೦೦ ರೂ. ಗಳನ್ನು ಕೊಟ್ಟಿದ್ದಾರೆ. ಕೇಂದ್ರ ಆರೋಗ್ಯ ಸಚಿವರ ಪರಿಹಾರ ನಿಧಿಯಿಂದ ೫೦೦೦ ರೂ, ರೆಡ್‌ಕ್ರಾಸ್ ಸಂಸ್ಥೆಯು ೧೦೦೦೦ ರೂ. ಗಳನ್ನು ಕೊಡಲಾಗಿದೆ.

ಆಂಧ್ರಪ್ರಾಂತ್ಯ ಗೌರ್ನರ್‌ಗೆ ಮಿಲಿಟರಿ ಕಾರ್ಯದರ್ಶಿ

ಆಂಧ್ರಪ್ರಾಂತ್ಯ ಗೌರ್ನರ್‌ಗೆ ಮಿಲಿಟರಿ ಕಾರ್ಯದರ್ಶಿಯನ್ನಾಗಿ ಮೇಜರ್ ಕೆ.ಟಿ.ವಿ. ಎಂ. ನಂಬಿಯಾರ್‌ರನ್ನು ನೇಮಿಸಲಾಗಿದೆ.

ಶ್ರೀ ಚಂದೂಲಾಲ್ ತ್ರಿವೇದಿಯವರು ಪಂಜಾಬ್ ಗೌರ್ನರ್ ಆಗಿದ್ದಾಗ ಅವರಿಗೆ ಶ್ರೀ ನಂಬಿಯಾರ್‌ರು ಮಿಲಿಟರಿ ಕಾರ್ಯದರ್ಶಿಗಳಾಗಿದ್ದರು.

ಡಾ|| ಮುಸಾದಿಕ್ ಜೈಲು ಆಸ್ಪತ್ರೆಯಲ್ಲಿ

ಪದಚ್ಯುತರಾದ ಮಾಜಿ ಪ್ರಧಾನಿ ಡಾ|| ಮುಸಾದಿಕ್‌ರವರನ್ನು ಈಗ ಟೆಹರಾನಿನಲ್ಲಿರುವ ಜೈಲು ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಇಟ್ಟಿರುವುದಾಗಿ ತಿಳಿಯಬರುತ್ತದೆ.

ದೇಶದ್ರೋಹದ ಅಪಾದನೆ ಮೇಲೆ ಸಧ್ಯದಲ್ಲೇ ಅವರ ಮೇಲೆ ವಿಚಾರಣೆ ನಡೆಯುತ್ತದೆ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಪೋಸ್ಟ್ ರಿಜಿಸ್ಟರ್ ನಂ. ಎಂ. ೫೬೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೯

೨೭-೮-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಹಿರಿಯ ಪತ್ರಿಕೋದ್ಯಮಿ ಟಿ. ಕೃಷ್ಣರಾಯರ ನಿಧನ

ಮೈಸೂರು ೨೭

ಮೈಸೂರಿನ ಹಿರಿಯ ಪತ್ರಿಕೋದ್ಯಮಿಗಳಾದ ಶ್ರೀ ಟಿ. ಕೃಷ್ಣರಾಯರು ಈದಿನ ಬೆಳಗ್ಗೆ ಹಳ್ಳದಕೇರಿಯಲ್ಲಿರುವ ತಮ್ಮ ನಿವಾಸದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀಯುತರಿಗೆ ೯೨ ವರ್ಷ ವಯಸ್ಸಾಗಿತ್ತು ಇವರು ಪ್ರಾರಂಭದಲ್ಲಿ ನಂಜನಗೂಡು ಮಿಡ್ಲ್‌ಸ್ಕೂಲಿನಲ್ಲಿ ಉಪಾಧ್ಯಾಯರಾಗಿ ಸೇರಿ ಅನಂತರ ಕನ್ನಡ ವಾರಪತ್ರಿಕೆಯಾದ ವೃತ್ತಾಂತ ಪತ್ರಿಕೆಯ ಉಪಸಂಪಾದಕರಾಗಿ ೪೭ ವರ್ಷ ಕಾಲ ಅವಿಚ್ಛಿನ್ನವಾಗಿ ಸೇವೆಯನ್ನು ಸಲ್ಲಿಸಿದರು.

ಇವರು ಮದ್ರಾಸಿನ ಹಿಂದು, ಮದ್ರಾಸ್ ಮೇಲ್, ಬೊಂಬಾಯಿನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಬಾತ್ಮೀದಾರರಾಗಿಯೂ ಕೆಲಸವನ್ನು ಮಾಡಿದ್ದರು.

ಪತ್ರಿಕಾ ಪ್ರಪಂಚದಲ್ಲಿ ಸೇವೆಯನ್ನು ಅವರು ಗೈದಿರುವುದಲ್ಲದೆ. ಪುರಸಭೆಯಲ್ಲಿ ಕೆಲವು ಕಾಲ ಸದಸ್ಯರಾಗಿಯೂ, ನಗರದ ಹಲವು ಸಹಕಾರ ಸಂಸ್ಥೆಗಳಲ್ಲಿ ಡೈರೆಕ್ಟರ್ ಸಹ ಆಗಿದ್ದು ನಾನಾ ಕ್ಷೇತ್ರಗಳಲ್ಲಿ ಕೆಲಸಮಾಡಿರುವರು.

ಇವರು ಕೆಲಸದಿಂದ ನಿವೃತ್ತರಾದ ಮೇಲೆ ಹಿಂದಿನ ಮಹಾರಾಜರು ಇವರಿಗೆ ವಿಶೇಷ ವಿರಾಮ ವೇತನ ಮತ್ತು ಸಾರ್ವಜನಿಕ ಪದಕವನ್ನು ದಯಪಾಲಿಸಿದ್ದರು.

ಇವರಿಗೆ ಇಬ್ಬರು ಗಂಡುಮಕ್ಕಳು, ಮೂವರು ಹೆಣ್ಣುಮಕ್ಕಳು ಅನೇಕ ಮೊಮ್ಮಕ್ಕಳು ಮರಿಮಕ್ಕಳು ಇದ್ದಾರೆ.

ಈ ಬೆಳಗ್ಗೆ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯ, ರೆವರೆಂಡ್ ಫಾದರ್ ಪ್ಲ್ಯಾನೀ ಮತ್ತು ಅನೇಕ ಗಣ್ಯವ್ಯಕ್ತಿಗಳು, ಪತ್ರಿಕೋದ್ಯೋಗಿಗಳೂ ಅವರ ಮನೆಗೆ ಭೇಟಿಯಿತ್ತು ಅಂತ್ಯಪ್ರಣಾಮವನ್ನು ಸಲ್ಲಿಸಿದರು.

ಮೈಸೂರು ಪತ್ರಿಕೋದ್ಯೋಗಿ ಸಂಘದ ಪರವಾಗಿ ಶ್ರೀ ಆರ್. ಗೋಪಾಲಕೃಷ್ಣರಾಯರೂ, ಸಮಾಚಾರ ಪತ್ರಿಕೆಯ ಪರವಾಗಿ ಶ್ರೀ ಜಿ. ಎಲ್. ಸ್ವಾಮಿಯವರು ದಿವಂಗತರಿಗೆ ಪುಷ್ಪಹಾರಗಳನ್ನು ಅರ್ಪಿಸಿದರು.

ನಗರದ ಕಾರ್ಯನಿರತ ಪತ್ರಿಕೋದ್ಯೋಗಿಗಳಸಂಘದವರುಮತ್ತು ಪತ್ರಿಕೋದ್ಯೋಗಿ ಸಂಘದವರು ಶ್ರೀ ಕೃಷ್ಣರಾಯರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯ ಮಾಡಿ, ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದ್ದಾರೆ.

ದಿವಂಗತರ ಗೌರವಾರ್ಥವಾಗಿ ಈದಿನ ವೆಸ್ಲಿ ಪ್ರೆಸ್, ಸಿಟಿ ಕೋ- ಆಪರೇಟೀವ್ ಸೊಸೈಟಿ ಮತ್ತು ಬ್ಯಾಂಕುಗಳಿಗೆ ರಜಾ ಕೊಡಲಾಗಿದೆ.

ಚಿತ್ರದುರ್ಗ ಜಿಲ್ಲೆಯಲ್ಲಿ ಭೀಕರ ಕ್ಷಾಮ ಪರಿಸ್ಥಿತಿ

ಪರಿಹಾರ ಬಗ್ಗೆ ರೆವಿನ್ಯೂ ಸಚಿವರ ಭರವಸೆ

ಬೆಂಗಳೂರು ೨೭

ಪ್ರಾಂತ್ಯದ ಇತರ ಪ್ರದೇಶಗಳಿಗಿಂತ ಚಿತ್ರದುರ್ಗ ಜಿಲ್ಲೆಯಲ್ಲಿ ಅಭಾವಸ್ಥಿತಿಯು ಹೆಚ್ಚು ತೀವ್ರವಾಗಿದೆ. ಇದನ್ನು ಪರಿಹರಿಸಲು ಸರ್ಕಾರವು ತನ್ನ ಕೈಲಾದ ನೆರವನ್ನು ನೀಡುವುದಾಗಿ ಆ ಪ್ರಾಂತ್ಯದಲ್ಲಿ ಪ್ರವಾಸ ಮಾಡಿ ಹಿಂತಿರುಗಿದ ರೆವೆನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ತಿಳಿಸಿದ್ದಾರೆ. ಇವರ ಪ್ರವಾಸಕಾಲದಲ್ಲಿ ಜಿಲ್ಲೆಯ ಸರ್ಕಾರಿ ಅಧಿಕಾರಿಗಳಲ್ಲದೆ ಕೆಲವು ಖಾಸಗಿ ಪ್ರಮುಖರು ಸಹ ಇದ್ದರು.

ಕಳೆದ ಎರಡು ವಾರಗಳಲ್ಲಿಯೇ ೨ ಲಕ್ಷ ಮೌಲ್ಯದ ಪರಿಹಾರ ಕಾರ್ಯಗಳು ನಡೆದಿವೆ. ಅವಶ್ಯಕವಿರುವ ಕಾರ್ಯಗಳನ್ನು ಕೈಗೊಂಡು ಈ ಭಾಗದಲ್ಲಿ ಕೆಲಸವಿಲ್ಲದೆ ತೊಂದರೆಗೀಡಾಗಿರುವವರಿಗೆ ಉದ್ಯೋಗವನ್ನು ಕಲ್ಪಿಸಿಕೊಳ್ಳುವ ಶಕ್ತಿ ಕುಂದಿರುವುದನ್ನು ತಪ್ಪಿಸಲಾಗುತ್ತದೆ. ಹೆಚ್ಚಿಗೆ ಧಾನ್ಯ ಸರಬರಾಜಿಗಾಗಿ ಬೇಡಿಕೆಗಳು ಬಂದಿವೆ. ಇನ್ನು ೨-೩ ತಿಂಗಳಾದರೂ ಇಲ್ಲಿಯ ಜನರಿಗೆ ಹೆಚ್ಚಿಗೆ ಆಹಾರ ಒದಗಿಸಬೇಕಾಗಿದೆ. ಕೆಲವೆಡೆ ನೇಯ್ಗೆಯವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಮಂತ್ರಿಗಳು ತಿಳಿಸಿದ್ದಾರೆ.

ವಿದ್ಯಾವಂತ ಮಹಿಳೆಯರು ಸಮಾಜಸೇವೆ ಮಾಡಲಿ

ಮುಖ್ಯಮಂತ್ರಿಗಳ ಮನವಿ

ಬೆಂಗಳೂರು ೨೭

ಮಹಿಳಾ ವಿದ್ಯಾ ಸಂಸ್ಥೆಗಳಲ್ಲಿ ಹೋಟೇಲುಗಳ ಬದಲು ಮಹಿಳಾ ಆಹಾರ ಸಮಿತಿಯ ಕ್ಯಾಂಟೀನ್‌ಗಳನ್ನು ಏರ್ಪಡಿಸಲು ಸೂಕ್ತ ಕಟ್ಟಡಗಳು, ಗ್ರಾಮಾಂತರಗಳಲ್ಲಿರುವ ನರ್ಸಿಂಗ್ ಶಾಲೆಗಳಿಗೆ ತರಪೇತು ಹೊಂದಿದ ಉಪಾಧ್ಯಾಯರುಗಳು, ಶೇಷಾದ್ರಿ ರಸ್ತೆಯಲ್ಲಿರುವ ಗರ್ಲ್ ಗೈಡುಗಳ ಕಟ್ಟಡ ವಾಪಸು, ಇವೇ ಮುಂತಾದ ಬೇಡಿಕೆಗಳನ್ನು ಇಲ್ಲಿನ ಮಹಿಳಾ ಆಹಾರ ಸಮಿತಿಯವರು ಮುಖ್ಯಮಂತ್ರಿಗಳನ್ನು ಭೇಟಿಮಾಡಿ ಮನವಿಮಾಡಿಕೊಂಡರು.

ಕಟ್ಟಡಗಳಿಗಾಗಿ ಕೆಲಸಮಾಡದೆ ಕುಳಿತಿರಬಾರದು. ಗುಡಿಸಲುಗಳು ಸಿಕ್ಕಿದರೆ ಸಾಕು. ಸರ್ಕಾರದವರು ಅದಕ್ಕೆ ಸಹಾಯಮಾಡಿ ತಾತ್ಕಾಲಿಕ ಗುಡಿಸಲುಗಳ ವ್ಯವಸ್ಥೆ ಮಾಡುವರು. ತರಪೇತು ಉಪಾಧ್ಯಾಯರುಗಳು ಸಿಕ್ಕುವುದು ಕಷ್ಟ. ಮೊದಲು ಕೆಲಸ ಪ್ರಾರಂಭವಾಗಲಿ ನಮ್ಮಲ್ಲಿ ಅನೇಕ ಮಂದಿ ವಿದ್ಯಾವಂತ ಮಹಿಳೆಯರಿದ್ದಾರೆ ಅವರು ಕ್ಲಬ್ಬುಗಳಲ್ಲಿ ಕುಳಿತು ಕಾಲಕಳೆಯುವುದಕ್ಕಿಂತ ದಿನದ ಒಂದೆರಡು ಗಂಟೆಗಳ ಕಾಲ ಸಮಾಜಸೇವೆ ಮಾಡಿದರೆ ಉದ್ಯೋಗಗಳನ್ನು ಹುಡುಕಿ ಕೊಂಡು ಹೋಗುವ ಕಾಟ ತಪ್ಪುವುದು. ವೃಥಾ ಕಾಲಹರಣ ಮಾಡುವುದಕ್ಕಿಂತ ಸ್ವಯ ಪ್ರೇರಿತರಾಗಿ ಮಹಿಳೆಯರು ಸೇವೆ ಸಲ್ಲಿಸಲಿ— ಎಂದು ಮುಖ್ಯಮಂತ್ರಿಗಳು ಸಲಹೆ ಮಾಡಿದರು.

ಕಾರ್ಪೊರೇಷನ್ ನೌಕರರ ಮುಷ್ಕರ

ಬೆಂಗಳೂರು ಕಾರ್ಪೊರೇಷನ್ ನೌಕರರ ಕುಂದುಕೊರತೆಗಳನ್ನು ಅಧಿಕಾರಿಗಳು ಇದೇರಿಸದಿದ್ದಲ್ಲಿ ಇದೇ ೩೯ ನೇ ತಾರೀಖು ಒಂದು ದಿನದ ಸಾಂಕೇತಿಕ ಮುಷ್ಕರ ಹೂಡಬೇಕೆಂದು ತೀರ್ಮಾನಿಸಲಾಗಿದೆ.

ಪ್ರಚಾರ ಶಾಖಾ ಸಚಿವರ ಸಮ್ಮೇಳನ

ಪ್ರಾಂತ್ಯಗಳ ಪ್ರಚಾರ ಶಾಖೆಗಳ ಕಾರ್ಯವನ್ನು ಉತ್ತಮಗೊಳಿಸಲು ಎಲ್ಲಾ ಪ್ರಚಾರ ಶಾಖಾ ಸಚಿವರ ಸಮ್ಮೇಳನವೊಂದು ಮುಂದಿನ ತಿಂಗಳು ದೆಹಲಿಯಲ್ಲಿ ನಡೆಯಲಿದೆ.

ಅಕ್ಕಿ ನುಚ್ಚಿನ ಆಮದು ರಹದಾರಿ ರದ್ದು

ಅಕ್ಕಿನುಚ್ಚನ್ನು ಹೊರಗಿನಿಂದ ಆಮದು ಮಾಡಲು ಕೊಡಲಾಗಿದ್ದ ಅನುಮತಿ ಫಲಕಾರಿಯಾಗಿಲ್ಲವಾದ್ದರಿಂದ ಅದನ್ನು ರದ್ದುಗೊಳಿಸಲಾಗಿದೆಯೆಂದು ಸರ್ಕಾರದ ಪ್ರಕಟಣೆ ತಿಳಿಸುತ್ತದೆ.

ಸಯಾಂ ಸರ್ಕಾರ ಉರುಳಿಸಲು ಪ್ರಯತ್ನ

ಥಾಯ್‌ಲೆಂಡ್ ಪ್ರಧಾನಿ ಪಿಬನ್ ಸಂಗ್ರಾಮ್‌ರ ಸರ್ಕಾರವನ್ನು ಉರುಳಿಸಲು ಪಿತೂರಿ ನಡೆಸುತ್ತಿದ್ದಾರೆಂದು ೧೧ ಮಂದಿ ಕಮ್ಯೂನಿಸ್ಟರನ್ನು ಪೋಲಿಸರು ನಿನ್ನೆ ದಸ್ತಗಿರಿ ಮಾಡಿದ್ದಾರೆ.

ಮಾಜಿ ರಾಜರುಗಳಿಗೆ ತೆರಿಗೆ ರಿಯಾಯಿತಿ ರದ್ದು

ಭಾರತದ ಮಾಜಿ ದೇಶೀಯ ಸಂಸ್ಥಾನಗಳ ರಾಜರುಗಳಿಗೆ ಕೊಡಲಾಗಿದ್ದ ಆದಾಯ ತೆರಿಗೆ ಮತ್ತು ಸೂಪರ್ ಟ್ಯಾಕ್ಸ್‌ಗಳ ರಿಯಾಯಿತಿಯನ್ನು ರದ್ದುಮಾಡಲಾಗಿದೆಯೆಂದು ಭಾರತ ಸರ್ಕಾರವು ತಿಳಿಸಿದೆ.

● ಬೆಂಗಳೂರು ಕಾರ್ಪೊರೇಷನ್ ಚುನಾವಣೆಯು ಇದೇ ಡಿಸೆಂಬರ್ ೨೦ ನೇ ತಾ|| ನಡೆಯಲು ಆಜ್ಞೆಯಾಗಿದೆ.

ಡಾ|| ತಿರುಮೂರ್ತಿಯವರ ನಿಧನ

ಮೈಸೂರು ೨೭

ಮದರಾಸ್ ಮೆಡಿಕಲ್ ಕಾಲೇಜಿನ ಮಾಜಿ ಪ್ರಿನ್ಸಿಪಾಲರೂ ಮತ್ತು ಅಖಿಲ ಭಾರತ ಮೆಡಿಕಲ್ ಕೌನ್ಸಿಲ್ ಸದಸ್ಯರೂ ಆಗಿದ್ದ ಡಾ|| ತಿರುಮೂರ್ತಿಯವರು ನಿನ್ನೆ ಬೆಂಗಳೂರಿನಿಂದ ಮೈಸೂರಿಗೆ ರೈಲಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಹೃದಯಕ್ರಿಯೆ ನಿಂತು ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಕಾಫಿ ಕುಡಿಯುತ್ತಾ ಮರಣ

ನಿನ್ನೆ ರಾತ್ರಿ ೯ ಗಂಟೆ ವೇಳೆಯಲ್ಲಿ ಹಳೇ ಅಗ್ರಹಾರದಲ್ಲಿರುವ ವಿಷ್ಣು ಪ್ರಸನ್ನ ಕಾಫಿ ಮಂದಿರದಲ್ಲಿ ಅಪರಿಚಿತರೊಬ್ಬರು ಕಾಫಿ ಕುಡಿಯುತ್ತಾ ಹಾಗೆಯೇ ನಿಧನರಾದರೆಂದು ತಿಳಿಯಬರುತ್ತದೆ. ವಿಷಯ ತಿಳಿದೊಡನೆಯೇ ಕೃಷ್ಣರಾಜ ಪೋಲೀಸಿನವರು ಮಹಜರ್ ನಡೆಸಿ ಶವವನ್ನು ಆಸ್ಪತ್ರೆಗೆ ಕಳುಹಿಸಿದರು. ಆತ ಯಾರೆಂದು ಇನ್ನೂ ತಿಳಿದುಬಂದಿಲ್ಲ.

ಬಡತನದಿಂದ ತಂದೆ, ತಾಯಿ, ಮಕ್ಕಳ ಆತ್ಮಹತ್ಯೆ

ಮಧುರೆಯ ನಿರುದ್ಯೋಗಿಯಾಗಿದ್ದ ಟಿ. ಆರ್. ರಾಧಾಕೃಷ್ಣ ಅಯ್ಯರ್ ಎಂಬುವರು ತಮ್ಮ ಪತ್ನಿ, ಮತ್ತು ೩ ಮಕ್ಕಳ ಸಮೇತ ಮನೆಯಲ್ಲಿ ವಿಷ ತೆಗೆದುಕೊಂಡು ಆತ್ಮಹತ್ಯೆ ಮಾಡಿಕೊಂಡ ವಿಷಾದ ಪ್ರಸಂಗ ವರದಿಯಾಗಿದೆ. ಆತನು ಅನೇಕ ಕಾಲದಿಂದ ಕೆಲಸವಿಲ್ಲದೆ ಬಡತನ ತಾಳಲಾರದೆ ಎಲ್ಲರಿಗೂ ವಿಷ ಕೊಟ್ಟು ತಾನೂ ಪ್ರಾಣ ಬಿಟ್ಟನೆಂದು ವರದಿಯಾಗಿದೆ.

ಸಂಸ್ಥಾನದಲ್ಲಿ ಗೃಹ ನಿರ್ಮಾಣ ಬೋರ್ಡ್

ಮೈಸೂರು ಸಂಸ್ಥಾನದಲ್ಲಿ ಮನೆ ಇಲ್ಲದ ಎಲ್ಲಾ ಜನರಿಗೂ ಗೃಹಗಳನ್ನು ಒದಗಿಸಲು ಬ್ರಿಟನ್ನಿನಲ್ಲಿರುವಂತೆ ಇಲ್ಲೂ ಒಂದು ಗೃಹ ನಿರ್ಮಾಣ ಬೋರ್ಡನ್ನು ರಚಿಸಲು ಸರ್ಕಾರ ಆಲೋಚಿಸುತ್ತಿದೆಯೆಂದು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿದ್ದಾರೆ. ಕೇಂದ್ರ ಸರ್ಕಾರದ ಸಹಾಯದಿಂದ ಈಗ ನಿರ್ಮಿತವಾಗಿರುವ ಗೃಹ ನಿರ್ಮಾಣ ಕಾರ್ಪೊರೇಷನ್ ಕಾರ್ಮಿಕರಿಗೆ ಮಾತ್ರ ಮನೆಗಳನ್ನು ಒದಗಿಸಲು ಅವಕಾಶವಿರುವುದರಿಂದ, ಪ್ರತ್ಯೇಕ ಸಂಸ್ಥೆ ಅಗತ್ಯವೆಂದು ಅವರು ಹೇಳಿದ್ದಾರೆ.

ಸರ್ಕಾರಿ ನೌಕರರಿಗೆ ಆಸ್ಪತ್ರೆಗಳು

ಭಾರತ ಸರ್ಕಾರದ ಅಂಚೆ ಮತ್ತು ಇತರ ಇಲಾಖೆಯ ನೌಕರರುಗಳ ಸೌಕರ್ಯಕ್ಕಾಗಿ ಬೊಂಬಾಯಿ ಮದ್ರಾಸ್ ಮತ್ತು ಕಲ್ಕತ್ತಾ ನಗರಗಳಲ್ಲಿ ಆಸ್ಪತ್ರೆಗಳನ್ನು ತೆರೆಯಲು ಕೇಂದ್ರ ಸರ್ಕಾರ ಆಲೋಚಿಸುತ್ತಿರುವುದಾಗಿ ಪಾರ್ಲಿಮೆಂಟಿನಲ್ಲಿ ತಿಳಿಸಿದೆ.

ಪ್ರಧಾನಿ ಪರಿಹಾರ ನಿಧಿಗೆ ಪಾರ್ಲಿಮೆಂಟ್ ಸದಸ್ಯರ ಕ್ರಿಕೆಟ್ ಪಂದ್ಯ

ನೆಹರೂ, ರಾಧಾಕೃಷ್ಣನ್ ಕ್ಯಾಪ್ಟನ್‌ಗಳಾಗಿರುವರು

ಪ್ರವಾಹದಿಂದ ನೊಂದವರಿಗಾಗಿ ಏರ್ಪಡಿಸಿರುವ ಪ್ರಧಾನಿ ಪರಿಹಾರ ನಿಧಿಗೆ ಹಣವನ್ನು ಒದಗಿಸಲು ಪಾರ್ಲಿಮೆಂಟಿನ ಉಭಯ ಸಭೆಯ ಸದಸ್ಯರು ಒಂದು ಕ್ರಿಕೆಟ್ ಆಟವನ್ನು ಆಡಲಿರುವರೆಂದು ತಿಳಿಯಬರುತ್ತದೆ.

ಒಂದು ಪಂಗಡಕ್ಕೆ ಪ್ರಧಾನಿ ನೆಹರೂ ಮತ್ತೊಂದು ಪಂಗಡಕ್ಕೆ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರು ಕ್ಯಾಪ್ಟನ್‌ಗಳಾಗಿರುವರು. ಈ ಆಟದಲ್ಲಿ ಪ್ರಮುಖ ಕ್ರಿಕೆಟ್ ಪ್ರೇಮಿಗಳು ಆಟವಾಡುತ್ತಾರೆ. ಶ್ರೀಗಳಾದ ತಾಂಡನ್, ಗಾಡ್ಗಿಲ್, ಎ. ಕೆ. ಗೋಪಾಲನ್ ಮುಂತಾದವರು ಇದರಲ್ಲಿ ಭಾಗವಹಿಸುವರು.

ಪಾಕ್ ಮಂತ್ರಿಮಂಡಲದ ಒಪ್ಪಿಗೆ

ಭಾರತ ಮತ್ತು ಪಾಕಿಸ್ತಾನ ಪ್ರಧಾನಿಗಳ ನಡುವೆ ಕಾಶ್ಮೀರ ವಿಷಯದಲ್ಲಿ ಆದ ತೀರ್ಮಾನಗಳಿಗೆ ಪಾಕ್ ಸರ್ಕಾರವು ತನ್ನ ಒಪ್ಪಿಗೆಯನ್ನು ಇತ್ತಿರುವುದಾಗಿ ತಿಳಿಯಬರುತ್ತದೆ.

ಈ ವಿಷಯದಲ್ಲಿ ಪಾಕ್ ಮಂತ್ರಿಮಂಡಲದ ಅಭಿಪ್ರಾಯವನ್ನು ಒಳಗೊಂಡಿರುವ ಒಂದು ಪತ್ರವು ಸದ್ಯದಲ್ಲೇ ಪ್ರಧಾನಿ ನೆಹರೂರವರಿಗೆ ಬರುವುದಾಗಿ ತಿಳಿಯಬರುತ್ತದೆ.

ಭೂದಾನ ಯಜ್ಞಕ್ಕೆ ದಾನ

ತಮಿಳುನಾಡಿನ ನಾಲ್ಕು ಜಿಲ್ಲೆಗಳಲ್ಲಿ ೪ ಸಾವಿರ ಎಕರೆ ಜಮೀನನ್ನು ಭೂದಾನ ಯಜ್ಞಕ್ಕಾಗಿ ಶ್ರೀ ಜಯಪ್ರಕಾಶ್ ನಾರಾಯಣರು ತಮ್ಮ ಪ್ರವಾಸದಲ್ಲಿ ಸಂಗ್ರಹಿಸಿದ್ದಾರೆ.

ಮಾಜಿ ರಘೋಗರ್ ಸಂಸ್ಥಾನದ ರಾಜರಾಗಿದ್ದು ಈಗ ಮಧ್ಯಭಾರತ್ ಶಾಸನಸಭೆಯ ಸದಸ್ಯರಾದ ರಾಜಾಬಹದ್ದೂರ್ ಸಿಂಗ್‌ರವರು ೧೧ ಸಾವಿರ ಬಿಗಾಸ್ಟು ಜಮೀನನ್ನು ಕೊಟ್ಟಿದ್ದಾರೆ.

ಗೋದಾವರಿ ಪರಿಹಾರ ಸಮಿತಿ

ಗೋದಾವರಿ ನದಿಯ ಪ್ರವಾಹದಿಂದ ನೊಂದವರಿಗೆ ಪರಿಹಾರವನ್ನು ಕೊಡಲು ನಿಧಿ ಸಂಗ್ರಹಣೆ ಮುಂತಾದ ನಾನಾ ಕಾರ್ಯಗಳನ್ನು ಮಾಡುವ ಬಗ್ಗೆ ದೆಹಲಿಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಪಾರ್ಲಿಮೆಂಟಿನ ಉಪಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರ್‌ರವರು ಈ ಸಮಿತಿಯ ಅಧ್ಯಕ್ಷರಾಗಿರುವರು.

ಪ್ರವಾಹದಿಂದ ನೊಂದವರು

ಅಲಹಾಬಾದಿನಲ್ಲಿ ಇತ್ತೀಚಿನ ಪ್ರವಾಹಗಳಿಂದ ಸುಮಾರು ೫ ಲಕ್ಷ ಜನರು ತೊಂದರೆಗೀಡಾಗಿರುವುದಾಗಿ ಗೊತ್ತಾಗಿದೆ.

ಎನ್. ಮಾಧವರಾಯರು ಆರ್ಥಿಕ ಕಾರ್ಯದರ್ಶಿ

ಬೆಂಗಳೂರು ೨೭

ರೆವಿನ್ಯೂ ಕಮೀಷನರಾಗಿರುವ ಶ್ರೀ ಎನ್. ಮಾಧವರಾಯರನ್ನು ಸರ್ಕಾರದ ಆರ್ಥಿಕ ಕಾರ್ಯದರ್ಶಿಗಳನ್ನಾಗಿ ನೇಮಿಸಿ, ಗೃಹ ಶಾಖಾ ಕಾರ್ಯದರ್ಶಿಗಳಾದ ಶ್ರೀ ಜಿ. ಎನ್. ನಾಗರಾಜರಾಯರನ್ನು ರೆವಿನ್ಯೂ ಕಮೀಷನರಾಗಿ ನೇಮಿಸಲಾಗಿದೆ.

ಸ್ಥಳೀಯ ಅಭಿವೃದ್ಧಿ ಕಾರ್ಯಗಳು

ಮದ್ರಾಸ್ ಪ್ರಾಂತ್ಯದಲ್ಲಿ ೧೪೧ ಸ್ಥಳೀಯ ಅಭಿವೃದ್ಧಿ ಯೋಜನಾ ಕಾರ್ಯಗಳನ್ನು ಕಾರ್ಯರೂಪಕ್ಕೆ ತರಲು ಸರ್ಕಾರದವರು ಅನುಮತಿಯನ್ನು ನೀಡಿರುವುದಾಗಿ ತಿಳಿಯಬರುತ್ತದೆ. ಇದಕ್ಕಾಗಿ ೪೦ ಲಕ್ಷ ರೂಪಾಯಿಗಳು ವೆಚ್ಚವಾಗಲಿದೆ.

ಕೊರಿಯಾ ರಾಜಕೀಯ ಸಮ್ಮೇಳನದಲ್ಲಿ ಭಾರತ

ಕೊರಿಯಾ ರಾಜಕೀಯ ಸಮ್ಮೇಳನದಲ್ಲಿ ವಿಶ್ವಸಂಸ್ಥೆಯ ಬಹು ಸಂಖ್ಯಾತ ಸದಸ್ಯರು ಇಷ್ಟಪಟ್ಟರೆ ಮಾತ್ರ ಭಾರತವು ಭಾಗವಹಿಸುವುದೆಂದು ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

ಗೃಹ ಕೈಗಾರಿಕೆಗಳ ರಫ್ತು

ಕಳೆದವರ್ಷ ಭಾರತವು ೧೭ ಕೋಟಿ ರೂ. ಬೆಲೆಬಾಳುವ ಗೃಹ ಮತ್ತು ಸಣ್ಣ ಕೈಗಾರಿಕೆ ವಸ್ತುಗಳನ್ನು ಹೊರಕ್ಕೆ ರಫ್ತು ಮಾಡಿತೆಂದು ತಿಳಿಸಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೭—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೧೪	೨೫—೮
ಎಳ್ಳು	೬೫—೧೪	೮೦—
ಹುರುಳಿ	೪೫—೪	೪೭—೧೦
ಹೆಸರು	೭೩—	—
ಅಲಸಂದೆ	೭೪—೧೦	—
ಹೊಂಗೆಬೀಜ	—	—
ಅವರೆ	—	—
ಉದ್ದು	೬೯—೮	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೬—೫	—
ಸೀಗೆಕಾಯಿ	—	—
ಬೆಲ್ಲ	—	
ತೆಂಗಿನಕಾಯಿ	೧೫೩	೩೬೦

ರಾಷ್ಟ್ರೀಯ ಅಭಿವೃದ್ಧಿ ಮಂಡಲಿ

ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿರುವ ಕೆಲಸಗಳನ್ನು ನಡೆಸಲು ಪ್ರಧಾನಿ ನೆಹರೂರವರ ಅಧ್ಯಕ್ಷತೆಯಲ್ಲಿ ಒಂದು ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯನ್ನು ರಚಿಸಲಾಗಿದೆ.

ಇದೇ ವರ್ಷ ಅಕ್ಟೋಬರ್ ೨ನೇ ತಾರೀಖಿನಿಂದ ಈ ಅಭಿವೃದ್ಧಿ ಕಾರ್ಯಗಳು ಪ್ರಾರಂಭವಾಗಲಿವೆ.

ರಾಜಕೀಯ ಸಮ್ಮೇಳನದಲ್ಲಿ ಭಾರತ ಬೇಡ

ಕೊರಿಯಾ ಶಾಂತಿ ಸಮ್ಮೇಳನದಲ್ಲಿ ಭಾರತಕ್ಕೆ ಸ್ಥಾನವನ್ನು ಕೊಡಕೂಡದೆಂದೂ ಅದರೊಡನೆ ಸಹಕರಿಸಲು ದಕ್ಷಿಣ ಕೊರಿಯಾಕ್ಕೆ ಅಸಾಧ್ಯವೆಂದೂ ಅದರ ಪ್ರತಿನಿಧಿ ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ಹೇಳಿದ್ದಾರೆ.

ಮಲೇರಿಯಾ ನಿರೋಧ ಕ್ರಮ

ವಿಶ್ವ ಆರೋಗ್ಯ ಸಂಸ್ಥೆಯು ಭಾರತದಲ್ಲಿ ಇಲ್ಲಿಯವರೆಗೆ ನಡೆಸಿರುವ ಮಲೇರಿಯಾ ನಿವಾರಣಾ ಕಾರ್ಯದಲ್ಲಿ ೧೦ ಲಕ್ಷ ಜನರು ಉಪಯೋಗ ಹೊಂದಿರುವುದಾಗಿ ತಿಳಿಯಬರುತ್ತದೆ.

ಆಂಧ್ರಪ್ರಾಂತ್ಯ ನಿರ್ಮಾಣ

ಅಕ್ಟೋಬರ್ ಒಂದನೇ ತಾರೀಖು ಕರ್ನೂಲಿನಲ್ಲಿ ಆಂಧ್ರಪ್ರಾಂತ್ಯವನ್ನು ಸ್ಥಾಪಿಸಲು ವಿಶೇಷಾಧಿಕಾರಿ ಶ್ರೀ ಚಂದೂಲಾಲ್ ತ್ರಿವೇದಿಯವರು ಎಲ್ಲಾ ವ್ಯವಸ್ಥೆಗಳನ್ನೂ ಮಾಡುತ್ತಿರುವುದಾಗಿ ಗೊತ್ತಾಗಿದೆ

ಅಲ್ಲಿಯ ಕಾರ್ಯಕ್ರಮಗಳ ಬಗ್ಗೆ ಅವರು ವಿವಿಧ ರಾಜಕೀಯ ಪಕ್ಷದ ನಾಯಕರಾದ ಶ್ರೀ ಎನ್. ಸಂಜೀವರೆಡ್ಡಿ, ಶ್ರೀ ಟಿ. ವಿಶ್ವನಾಥಂ ಮತ್ತು ಜಿ. ಲಚ್ಚಣ್ಣನವರೊಡನೆ ವಿಚಾರ ವಿನಿಮಯ ನಡೆಸಿದರೆಂದು ತಿಳಿಯಬರುತ್ತದೆ.

ಪ್ರಾಥಮಿಕ ಶಿಕ್ಷಣ ಸುಧಾರಣಾ ಸಮಿತಿ

ಮದ್ರಾಸ್ ಪ್ರಾಂತ್ಯದಲ್ಲಿ ಪ್ರಾಥಮಿಕ ಶಿಕ್ಷಣ ಸುಧಾರಣೆಗಾಗಿ ನಾಲ್ಕು ಮಂದಿಯ ಒಂದು ಸಮಿತಿಯನ್ನು ಅಲ್ಲಿನ ಸರ್ಕಾರವು ನೇಮಿಸಿದೆ.

೧೭೫೦ ರೂಗೆ ಒಂದು ಮನೆ

೧೭೫೦ ರೂಪಾಯಿಗಳ ವೆಚ್ಚದಲ್ಲಿ ಒಂದು ವಾಸದ ಮನೆಯನ್ನು ಕಟ್ಟುವ ಕ್ರಮವನ್ನು ಕೇಂದ್ರ ಗೃಹನಿರ್ಮಾಣ ಪರಿಶೋಧನಾ ಸಮಿತಿಯು ಕಂಡುಹಿಡಿದಿರುವುದಾಗಿ ವರದಿಯಾಗಿದೆ.

ಲಷ್ಕರ್ ಮೊಹಲ್ಲಾ ದಿನಾಚರಣೆ

ಮೈಸೂರು ೨೭

ಇದೇ ೨೯ನೇ ತಾರೀಖು ಶನಿವಾರ ಲಷ್ಕರ್ ಮೊಹಲ್ಲಾದಲ್ಲಿ ದಿನಾಚರಣೆಯನ್ನು ಪುರಸಭೆಯವರು ಆಚರಿಸಲು ವ್ಯವಸ್ಥೆ ಮಾಡಿದ್ದಾರೆ. ಬೆಳಿಗ್ಗೆ ೬-೩೦ ರಿಂದ ೯-೩೦ ಗಂಟೆವರೆಗೆ ಮೊಹಲ್ಲಾ ನಿರ್ಮಲೀಕರಣ, ರಸ್ತೆ ರಿಪೇರಿ, ಸುಬ್ರಮಣ್ಯಂ ಹಾಲಿನ ಕೇಂದ್ರದಲ್ಲಿ ಡೇವಿ ಹಾಕುವುದು, ಮಕ್ಕಳ ಮತ್ತು ಗರ್ಭಿಣೀಯರ ಪರೀಕ್ಷೆ, ಸಂಜೆ ೬ ಗಂಟೆಗೆ ಕಾಂತರಾಜ್ ಅರಸ್ ಪಾರ್ಕಿನಲ್ಲಿ ಬಹಿರಂಗ ಸಭೆ ನಡೆಯುವುದು. ಮಹಾಜನರು ಸಹಕರಿಸಬೇಕೆಂದು ಪುರಸಭಾಧ್ಯಕ್ಷರು ಮನವಿ ಮಾಡಿದ್ದಾರೆ.

ಕಾಶ್ಮೀರದ ಅಭಿವೃದ್ಧಿ ಯೋಜನೆಗಳ ಕಾರ್ಯಗತ

ಕಾಶ್ಮೀರದಲ್ಲಿ ಈಗ ಪರಿಸ್ಥಿತಿ ಮಾಮೂಲಿನಂತೆ ಶಾಂತವಾಗಿದೆ. ತಾವು ಈಗಾಗಲೇ ಉದ್ದೇಶಿಸಿರುವ ಹಲವಾರು ಆರ್ಥಿಕ ಯೋಜನೆಗಳನ್ನು ಕಾರ್ಯಗತ ಮಾಡಲಾಗುತ್ತಿದೆ. ಕೇಂದ್ರ ಸರ್ಕಾರದ ಅಭಿಪ್ರಾಯದಂತೆ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತಮಾಡಲು ಇಷ್ಟರಲ್ಲಿಯೇ ನಿರ್ಧಾರ ಮಾಡಲಾಗುವುದು-ಎಂದು ಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರು ತಿಳಿಸಿದ್ದಾರೆ.

ತಾವು ದೆಹಲಿಯಲ್ಲಿ ಪ್ರಧಾನಿ ಮತ್ತು ಇತರ ನಾಯಕರೊಡನೆ ಕಾಶ್ಮೀರದ ಪರಿಸ್ಥಿತಿ ಬಗ್ಗೆ ಮಾತುಕತೆ ನಡೆಸಿದುದಾಗಿಯೂ ಅವರು ಹೇಳಿರುತ್ತಾರೆ.

ಅಪೇರ
27-8-53 ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ಕನ್ನಿಕಾ ತಮಿಳು
ಪಾತ್ರ:—ಟಿ. ವರದಂ, ಕಾಳಿ ಎನ್. ರತ್ನಂ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ.

ರಣಜಿತ್
21-8-53 ರಿಂದ ಅಮೋಘ ಪ್ರಾರಂಭ
ವರ್ಮ ಫಿಲಂಸ್‌ರವರ
ಔರತ್ ಹಿಂದಿ
ಪಾತ್ರ--ಬಿನಾರಾಯ್, ಪ್ರೇಮನಾಥ್

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ರಾಜಕಮಲ್, ಮೈಸೂರು.
28—8—53 ರಿಂದ ಅಮೋಘ ಪ್ರಾರಂಭ. ಭರಣಿಯವರ
ಚಂಡಿರಾಣಿ [ತೆಲುಗು]
ಭೂಮಿಕೆ:— ಭಾನುಮತಿ, ವಿದ್ಯಾವತಿ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್ ಮತ್ತು ರೇಲಂಗಿ. ನಿರ್ದೇಶನ:— ಭಾನುಮತಿ.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೦

೨೮-೮-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ರೈಲ್ವೆ ಕಳ್ಳನ ದಸ್ತಗಿರಿ

ಮೈಸೂರು ೨೭

ಸದರ್ನ್ ರೈಲ್ವೆಯ ಮೈಸೂರು ರನ್ನಿಂಗ್ ಶೆಡ್ಡಿನಲ್ಲಿ ಹಿಂದೆ ಸಾವಿರಾರು ರೂ. ಬೆಲೆಬಾಳುವ ಕಬ್ಬಿಣದ ಷಾಕ್ ಅಬ್‌ಸರ್‌ವರ್ ಸ್ಪ್ರಿಂಗ್‌ಗಳನ್ನು ಕಳುವುಮಾಡಿದ ರೈಲ್ವೆ ನೌಕರ ಸಾಬ್‌ಜಾನ್ ಎಂಬವನನ್ನು ರೈಲ್ವೆ ಪೋಲೀಸರು ನಿನ್ನೆ ದಸ್ತಗಿರಿಮಾಡಿ ಮಾಲುಗಳನ್ನು ವಶಪಡಿಸಿಕೊಂಡಿದ್ದಾರೆ.

ರಾಮಯ್ಯ ಸ್ಮಾರಕ ಸಂಗೀತ ಸ್ಪರ್ಧೆಗಳು

ಶ್ರೀ ವರಲಕ್ಷ್ಮೀ ಸಂಗೀತ ಸಂಸ್ಥೆಯ ೮ನೇ ವಾರ್ಷಿಕೋತ್ಸವದ ಅಂಗವಾಗಿ ಮಾಮೂಲಿನಂತೆ "ರಾಮಯ್ಯ ಸ್ಮಾರಕ ಸಂಗೀತ ಸ್ಪರ್ಧೆ" ಗಳನ್ನು ಏರ್ಪಡಿಸಲಾಗಿದೆ. ಸ್ಪರ್ಧೆಗಳಲ್ಲಿ ಮೈಸೂರು ಸಹೋದರರ ಕೃತಿಗಳು, ದೇವರನಾಮಗಳು ಇತರ ವಾಗ್ಗೇಯಕಾರರ ಕೃತಿಗಳು ಎಂದು ೩ ವಿಭಾಗಗಳನ್ನು ಮಾಡಲಾಗಿದೆ. ಈ ಭಾಗಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ವಿದ್ವತ್ ಸ್ಟಾಂಡರ್ಡ್‌ಗಳಲ್ಲಿ ಹಾಡುಗಾರಿಕೆ ಮತ್ತು ವಾದ್ಯಗಳಲ್ಲಿ ನಡೆಯುತ್ತವೆ. ಸ್ಪರ್ಧೆಗಳನ್ನು ಇದೇ ೨೯ನೇ ತಾರೀಖು ಸಂಸ್ಥೆಯ ಕೃಷ್ಣಮೂರ್ತಿಪುರಂ ಶಾಖೆಯಲ್ಲಿಯೂ ೩೦ನೇ ತಾರೀಖು ಕೇಂದ್ರ ಮಂದಿರಗಳಲ್ಲಿಯೂ ೩೧ನೇ ತಾರೀಖು ಬೆಳಿಗ್ಗೆ ಚಾಮುಂಡಿಪುರಂ ಶಾಖೆಯಲ್ಲಿಯೂ ಅದೇ ದಿನ ಸಂಜೆ ವಾಣಿವಿಲಾಸಪುರ ಶಾಖೆಯಲ್ಲಿಯೂ ಏರ್ಪಡಿಸಲಾಗಿವೆ.

ವಿವಾಹ ಮಹೋತ್ಸವ

ರಾಜಧಾನಿಯ ಸಂತೇಪೇಟೆ ವರ್ತಕರಾದ ಶ್ರೀ ಕೆ. ನರಸಿಂಹಯ್ಯನವರು ತಮ್ಮ ಪುತ್ರ ಶ್ರೀ ಕೆ.ಎನ್. ಸತ್ಯನಾರಾಯಣರಿಗೆ ಶಿವಪುರದ ಶ್ಯಾನುಭೋಗ್ ಶ್ರೀ ಹೆಚ್. ಸುಬ್ಬರಾಯರ ಪುತ್ರಿ ಶ್ರೀಮತಿ ನಾಗರತ್ನಮ್ಮನನ್ನು ತಂದುಕೊಂಡು ನಿನ್ನೆ ವಿವಾಹವನ್ನು ಹೊಯ್ಸಳ ಕರ್ನಾಟಕ ಸಂಘದ ಕಟ್ಟಡದಲ್ಲಿ ನೆರವೇರಿಸಿದರು

ವರ್ತಕರೊಬ್ಬರ ಆಕಸ್ಮಿಕ ಮರಣ

ಮೈಸೂರು ೨೮

ರಾಜಧಾನಿಯ ಪುರಸಭೆಯ ಸದಸ್ಯರಾದ ಶ್ರೀ ಬಿ. ಎಲ್. ರಾಮಸ್ವಾಮಿಶೆಟ್ಟಿಯವರ ಅಣ್ಣಂದಿರಾದ ಶ್ರೀ ಬಿ. ಎಲ್. ಗೋಪಾಲಶೆಟ್ಟರು ನಿನ್ನೆ ಸಂಜೆ ಗಾಯತ್ರಿ ಭವನದ ಮುಂದೆ ಬರುತ್ತಿರುವಾಗ್ಗೆ ಅಕಸ್ಮಾತ್ ಹೃದಯಕ್ರಿಯೆ ನಿಂತು ಮೃತಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರಿಗೆ ೬೦ ವರ್ಷ ವಯಸ್ಸಾಗಿತ್ತು.

● ಅಖಿಲಭಾರತ ರೇಡಿಯೋ ಕೇಂದ್ರದ ಮಾಜಿ ಡೈರೆಕ್ಟರ್ ಜನರಲ್ ಶ್ರೀ ಎನ್. ಎ. ಎಸ್. ಲಕ್ಷ್ಮಣ್‌ರನ್ನು ರಾಷ್ಟ್ರಾಧ್ಯಕ್ಷರು ಕೆಲಸದಿಂದ ವಜಾಮಾಡಿದ್ದಾರೆ.

ಮೈಸೂರು ಮಂತ್ರಿಮಂಡಲ ಮುಂದೇನಾದೀತು ?

ಕಾಂಗ್ರೆಸ್ ಅಧ್ಯಕ್ಷ ವೀರಣ್ಣ ಗೌಡರ ಹೇಳಿಕೆ

ಮುಖ್ಯ ಮಂತ್ರಿಗಳು ಭಾವಿಸಿರುವಂತೆ ಅವರನ್ನು ಪದಚ್ಯುತಿ ಮಾಡುವುದಕ್ಕೆ ಈಗ ಪ್ರಯತ್ನವೇನೂ ನಡೆಯುತ್ತಿಲ್ಲವೆಂದೂ, ಆದರೆ ಮುಂದೇನಾಗುವುದು ಅಥವ ಮುಂದೆ ಯಾವ ರೂಪ ತಾಳುವುದು ಎಂಬುದನ್ನು ಈಗ ನಾನು ಹೇಳುವುದಕ್ಕೆ ಸಾಧ್ಯವಿಲ್ಲ--ಎಂದು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣ ಗೌಡರು ಹೇಳಿದ್ದಾರೆ.

ಶೇಕ್ ಅಬ್ದುಲ್ಲಾ ಬಿಡುಗಡೆ ಆಗಬೇಕಂತೆ

ಕಾಶ್ಮೀರದ ಜನರಲ್ಲಿ ಉಂಟಾಗಿರುವ ಕಳವಳವನ್ನು ಹೋಗಲಾಡಿಸಲು ಕೂಡಲೇ ಶೇಕ್ ಅಬ್ದುಲ್ಲಾರನ್ನು ಬಿಡುಗಡೆ ಮಾಡಬೇಕೆಂದೂ, ಕಾಶ್ಮೀರದ ಭವಿಷ್ಯದ ಬಗ್ಗೆ ಜನಮತಗಣನೆ ಅಧಿಕಾರಿಗಳನ್ನು ನೇಮಿಸದೆ ಕಾಲ ಒದಗಿರುವುದರಿಂದ, ಇದು ಅಗತ್ಯವೆಂದೂ ಜಮ್ಮು--ಕಾಶ್ಮೀರ್ ರಾಷ್ಟ್ರೀಯ ಸಮ್ಮೇಳನದ ಕಾರ್ಯದರ್ಶಿಯವರು ಒತ್ತಾಯ ಮಾಡಿದ್ದಾರೆ.

ಮಕ್ಕಳ ಪೋಷಣೆಗೆ ರಷ್ಯ ಸರ್ಕಾರದ ಆಸಕ್ತಿ

ಬ್ರಿಟನ್, ಯೂರೋಪ್ ಮತ್ತು ರಷ್ಯಾ ದೇಶಗಳಲ್ಲಿ ಪ್ರವಾಸಮಾಡಿ ಈಗ ಪ್ರಧಾನಿ ನೆಹರೂರ ಪುತ್ರಿ ಶ್ರೀಮತಿ ಇಂದಿರಾಗಾಂಧಿಯವರು ದೆಹಲಿಗೆ ವಾಪಸು ಬಂದಿದ್ದಾರೆ.

ರಷ್ಯದಲ್ಲಿ ಮಹಿಳೆಯರಿಗೆ ವಿಶೇಷ ಸೌಲಭ್ಯ ಮತ್ತು ಸಮಾನ ಹಕ್ಕುಗಳು ಇವೆ. ಮಕ್ಕಳನ್ನು ಹೆಚ್ಚು ಪ್ರೀತಿ ಮತ್ತು ಆದರದಿಂದ ನೋಡಿಕೊಳ್ಳಲಾಗುತ್ತಿದೆ. ೧೬ ವರುಷದವರೆಗಿನ ಮಕ್ಕಳನ್ನು ರಕ್ಷಣೆಮಾಡಲು ಸರ್ಕಾರದವರೇ ಅರಮನೆಗಳಂತಹ ಭವನಗಳನ್ನು ಏರ್ಪಡಿಸಿದ್ದಾರೆ-ಎಂದು ಅವರು ತಿಳಿಸಿರುವರು.

ಭೂದಾನ ಯಜ್ಞಕ್ಕೆ ದಾನ

ತಂಜಾವೂರ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಮತ್ತು ಭಾರಿ ಜಮೀನುದಾರರೂ ಆದ ಶ್ರೀ ಕೆ. ಎಸ್. ಶಾಂಬಶಿವ ಅಯ್ಯರ್ ೧.೫ ಲಕ್ಷ ರೂ. ಬೆಲೆಬಾಳುವ ೬೭ ಎಕರೆ ಜಮೀನನ್ನು ಭೂದಾನ ಯಜ್ಞಕ್ಕಾಗಿ ದಾನಮಾಡಿದ್ದಾರೆ. ಅವರ ಪತ್ನಿಯು ೩೦೦ ರೂ. ಬಾಳುವ ತಮ್ಮ ಚಿನ್ನದ ಸರವನ್ನೂ, ಅವರ ಸಹೋದರರು ೩೫ ಎಕರೆ ಜಮೀನನ್ನೂ ಕೊಟ್ಟಿದ್ದಾರೆ.

ಪ್ರಜಾಸೋಷಲಿಸ್ಟರ ಸತ್ಯಾಗ್ರಹ

ಸೂರತ್ ಜಿಲ್ಲೆಯ ಪಾರ್ಡಿ ತಾಲ್ಲೂಕಿನ ಹುಲ್ಲುಗಾವಲುಗಳಲ್ಲಿ ಧಾನ್ಯಗಳನ್ನು ಬೆಳೆಯುವಂತೆ ಮಾಡಲು ಅಲ್ಲಿಯ ಪ್ರಜಾಸೋಷಲಿಸ್ಟ್ ಪಕ್ಷದ ೧೧೦ ಸ್ವಯಂ ಸೇವಕರು ಶ್ರೀ ಅಶೋಕ ಮೆಹ್ತಾರವರ ನಾಯಕತ್ವದಲ್ಲಿ ಸೆಪ್ಟೆಂಬರ್ ಒಂದರಿಂದ ಸತ್ಯಾಗ್ರಹ ಹೂಡಲಿದ್ದಾರೆಂದು ತಿಳಿಯಬರುತ್ತದೆ.

ಮೆಡಿಕಲ್ ಸ್ಕೂಲಿನಮೇಲೆ ರಿಟ್ ಅರ್ಜಿ

ಈ ವರ್ಷ ಎಲ್. ಎಂ. ಪಿ. ತರಗತಿಗೆ ತನಗಿಂತಲೂ ಕಡಮೆ ನಂಬರು ಬಂದಿರುವ ವಿದ್ಯಾರ್ಥಿಯನ್ನು ಆರಿಸಿ ಪಕ್ಷಪಾತ ತೋರಿಸಿ ತಮಗೆ ಸೀಟು ಕೊಟ್ಟಿಲ್ಲವೆಂದು ದಾವಣಗೆರೆಯ ಶ್ರೀ ಎಸ್. ಆರ್. ಪಾಟೀಲ್‌ರವರು ಹೈಕೋರ್ಟಿನಲ್ಲಿ ಒಂದು ರಿಟ್ ಅರ್ಜಿ ಸಲ್ಲಿಸಿ, ತಮಗೆ ಸ್ಥಳ ದೊರಕಿಸಿಕೊಡಬೇಕೆಂದು ಪ್ರಾರ್ಥಿಸಿದ್ದಾರೆ ಅರ್ಜಿಯನ್ನು ಅಂಗೀಕರಿಸಲಾಗಿದೆ.

ಟೈಪ್‌ರೈಟಿಂಗ್ ಹೊಸ ರಿಕಾರ್ಡ್

ಅಖಿಲ ಭಾರತ ಶೀಘ್ರಲಿಪಿ ಬರಹಗಾರರ ಸಂಘದವರು ದೆಹಲಿಯಲ್ಲಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಅಕೋಲಾದ ಶ್ರೀ ಎಸ್. ಎಸ್. ನಿಲೋಜಿಯವರು ೧೦೪.೩ ಪದಗಳನ್ನು ಟೈಪ್‌ಮಾಡಿ ಹೊಸ ರಿಕಾರ್ಡನ್ನು ಸ್ಥಾಪಿಸಿದ್ದಾರೆ.

೯ ಸಾವಿರ ಟನ್ ಕೃತಕ ಗೊಬ್ಬರ ಉತ್ಪತ್ತಿ

ಸಿಂದ್ರಿ ಗೊಬ್ಬರ ಕಾರ್ಖಾನೆಯಲ್ಲಿ ದಿನಕ್ಕೆ ೯ ಸಾವಿರ ಟನ್ ಉತ್ಪನ್ನವನ್ನು ಹೆಚ್ಚಿಸಲು ಪ್ರಯತ್ನ ಮಾಡಲಾಗುತ್ತಿದೆಯೆಂದು ಕೇಂದ್ರ ಉತ್ಪನ್ನ ಶಾಖಾಸಚಿವ ಶ್ರೀ ರೆಡ್ಡಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

೧೩೮ ಕೋಟಿ ರೂ. ಬಂಡವಾಳ ಹೊರಕ್ಕೆ

೧೯೪೭ ನೇ ಜುಲೈ ನಿಂದ ೧೯೫೨ ನೇ ಅಂತ್ಯದವರೆಗೆ ಒಟ್ಟು ೧೩೮.೩೬ ಕೋಟಿ ರೂಗಳಷ್ಟು ಬಂಡವಾಳ ಭಾರತದಿಂದ ಹೊರಕ್ಕೆ ವರ್ಗಾಯಿಸಲಾಗಿದೆಯೆಂದು ತಿಳಿಸಲಾಗಿದೆ.

○ ಅಖಿಲಭಾರತ ಭಾಷಾವಾರು ಪ್ರಾಂತ್ಯಗಳ ಸಮ್ಮೇಳನವು ಸೆಪ್ಟಂಬರ್ ಮಾಹೆ ೨೬ ನೇ ತಾರೀಖು ಕೈರಾ ಜಿಲ್ಲೆಯ ಆನಂದ್ ಎಂಬಲ್ಲಿ ನಡೆಯುತ್ತದೆ.

ಹಳೇ ವಿದ್ಯಾರ್ಥಿಗಳ ಸಭೆ

ಮೈಸೂರು ೨೮

ದಳವಾಯಿ ಹೈಸ್ಕೂಲಿನ ಹಳೆಯ ವಿದ್ಯಾರ್ಥಿಗಳ ಕೂಟವು ಇದೇ ಮಾಹೆ ೩೦ನೇ ತಾರೀಖು ಭಾನುವಾರ ಸಂಜೆ ೬ ಘಂಟೆಗೆ ಸ್ಕೂಲಿನ ಆವರಣದಲ್ಲಿ ಸಮಾವೇಶಗೊಳ್ಳಲಿದೆ. ಸಂಘದ ಸದಸ್ಯರುಗಳೂ, ಇತರ ವಿದ್ಯಾರ್ಥಿಗಳೂ, ಹಿತೈಷಿಗಳೂ ಹಾಜರಿದ್ದು ಈ ವರ್ಷದ ಕಾರ್ಯಕ್ರಮವನ್ನು ರೂಪಿಸಲು ಸಹಕರಿಸಬೇಕಾಗಿ ಕಾರ್ಯದರ್ಶಿಗಳು ಕೋರುತ್ತಾರೆ.

ಕಾಶ್ಮೀರದ ಘಟನೆಗಳಲ್ಲಿ ವಿದೇಶಿ ಕೈವಾಡ

ಕಾಶ್ಮೀರದಲ್ಲಿ ಇತ್ತೀಚೆಗೆ ನಡೆದ ಘಟನೆಗಳಲ್ಲಿ ವಿದೇಶೀಯರ ಕೈವಾಡ ಇತ್ತೆಂಬ ಬಗ್ಗೆ ನೂತನ ಸರ್ಕಾರದವರು ವಿಷಯ ಸಂಗ್ರಹಣ ಮಾಡುತ್ತಿರುವರೆಂದೂ, ಸದ್ಯದಲ್ಲೇ ಅವನ್ನು ಪ್ರಕಟಿಸುವುದಾಗಿಯೂ ಆದರ ರಾಜ್ಯಾಂಗ ಸಭಾಧ್ಯಕ್ಷ ಶ್ರೀ ಜಿ.ಎಂ. ಸಾದಿಕ್‌ರವರು ಹೇಳಿದ್ದಾರೆ.

ಬಳ್ಳಾರಿ ಇಂಜನಿಯರಿಂಗ್ ಶಾಖೆಯ ವರ್ಗ

ಬಳ್ಳಾರಿಯು ಮೈಸೂರಿಗೆ ಸೇರುವುದರಿಂದ ಮುಂದಿನ ತಿಂಗಳು ೧೫ನೇ ತಾರೀಖಿನೊಳಗಾಗಿ ಅಲ್ಲಿರುವ ೨೭ ಲಕ್ಷ ರೂ. ಬೆಲೆಬಾಳುವ ಇಂಜನಿಯರಿಂಗ್ ಇಲಾಖೆಯ ಸಾಮಗ್ರಿಗಳನ್ನೂ ಮತ್ತು ಕಛೇರಿಗಳನ್ನು ಆಂಧ್ರಪ್ರಾಂತ್ಯದ ಅನಂತಪುರಕ್ಕೆ ವರ್ಗಾಯಿಸಲಾಗುವುದೆಂದು ಹೇಳಲಾಗಿದೆ.

ಮೈಸೂರು ಮನೆ

ಉದಕಮಂಡಲದಲ್ಲಿರುವ ಮೈಸೂರು ಸರ್ಕಾರಕ್ಕೆ ಸೇರಿರುವ ವನದರ್ಶಿನಿ ಎಂಬ ಗೃಹದ ಹೆಸರನ್ನು "ಮೈಸೂರು ಮನೆ" ಎಂದು ಬದಲಾಯಿಸಲಾಗಿದೆ.

ಜನಸಂಘದಲ್ಲಿ ಮುಸ್ಲಿಂ ಸದಸ್ಯರು

ಭಾರತೀಯ ಜನಸಂಘದಲ್ಲಿ ಮುಸ್ಲೀಮರು ಇತ್ತೀಚೆಗೆ ಹೆಚ್ಚಿನಸಂಖ್ಯೆಯಲ್ಲಿ ಸೇರುತ್ತಿರುವುದಾಗಿ ಆ ಸಂಘದ ಅಧ್ಯಕ್ಷರು ತಿಳಿಸಿದ್ದಾರೆ.

ಪರ್ಶಿಯಾಕ್ಕೆ ಅಮೆರಿಕಾ ಆರ್ಥಿಕ ಸಹಾಯ

ಪರ್ಶಿಯಾಕ್ಕೆ ಅಮೆರಿಕಾವು ೨೩ ದಶಲಕ್ಷ ಡಾಲರುಗಳ ನೆರವನ್ನು ಮುಂದಿನ ವರ್ಷ ನೀಡಲಿದೆಯೆಂದು ಅದಕ್ಕೆ ಅಲ್ಲಿಯ ಕಾಂಗ್ರೆಸ್ ಒಪ್ಪಿಗೆ ದೊರೆತಿರುವುದಾಗಿ ತಿಳಿಯಬರುತ್ತದೆ.

○ ಪರ್ಶಿಯಾ ಷಾರವರು ತಮ್ಮ ನೂತನ ಪ್ರಧಾನಿ ಜನರಲ್ ಜಹೇದಿಯವರನ್ನು ಮಾರ್ಷಲ್ ಪಟ್ಟಕ್ಕೇರಿಸಿದ್ದಾರೆ.

ಗೋದಾವರಿ ಪ್ರದೇಶದಲ್ಲಿ ೬ ಕೋಟಿ ರೂ. ಪರಿಹಾರಕಾರ್ಯ

ಗೋದಾವರಿ ನದಿ ಪ್ರವಾಹದಲ್ಲಿ ನೊಂದ ಕಡೆ ವ್ಯಾಪಕವಾದ ಪರಿಹಾರ ಕಾರ್ಯಗಳನ್ನು ನಡೆಸಲು ಮದ್ರಾಸ್ ಸರ್ಕಾರವು ೯ ಕೋಟಿ ರೂಪಾಯಿಗಳ ಯೋಜನೆಯನ್ನು ಸದ್ಯದಲ್ಲೇ ಕಾರ್ಯರೂಪಕ್ಕೆ ತರಲಿರುವುದಾಗಿ ತಿಳಿಯಬರುತ್ತದೆ. ಈ ಭಾಗದಲ್ಲಿ ಪ್ರವಾಸ ನಡೆಸಿಕೊಂಡುಬಂದು ಅಲ್ಲಿಯ ರೆವಿನ್ಯೂ ಬೋರ್ಡಿನ ಸದಸ್ಯರು ಒಪ್ಪಿಸಿದ ವರದಿಯಮೇಲೆ ಈ ನಿರ್ಧಾರವನ್ನು ಮಾಡಲಾಗಿದೆ. ಮನೆಮಠಗಳನ್ನು ಕಳೆದುಕೊಂಡವರಿಗೆ, ವ್ಯವಸಾಯ ಸಲಕರಣಗಳನ್ನು ಕೊಳ್ಳುವ ರೈತರಿಗೆ ಸಾಲವನ್ನು ಕೊಡಲಾಗುತ್ತದೆ. ಭೂ ಕಂದಾಯವನ್ನು ಅನೇಕ ಕಡೆ ಮನ್ನಮಾಡಲಾಗುತ್ತದೆ ನೊಂದಿರುವ ಸರ್ಕಾರಿ ನೌಕರರಿಗೆ ಎರಡು ತಿಂಗಳ ಸಂಬಳವನ್ನು ಮುಂಗಡವಾಗಿ ಕೊಟ್ಟು ಅದನ್ನು ಸಣ್ಣ ಕಂತುಗಳಲ್ಲಿ ವಸೂಲ್ಮಾಡುವ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ಒಡೆದುಹೋಗಿರುವ ಕಟ್ಟೆಗಳು ಸೇತುವೆಗಳು ಮುಂತಾದುವನ್ನು ೬೦ ಲಕ್ಷ ರೂಪಾಯಿಗಳ ವೆಚ್ಚದಿಂದ ರಿಪೇರಿ ಮಾಡಲಾಗುವುದು.

ಪ್ರವಾಹದಲ್ಲಿ ನೊಂದವರಿಗೆ ರಾಷ್ಟ್ರಾಧ್ಯಕ್ಷರ ಸಹಾನುಭೂತಿ

ಬೀಹಾರ್ ಪ್ರಾಂತ್ಯದಲ್ಲಿ ಉಂಟಾಗಿರುವ ಪ್ರವಾಹ ಹಾವಳಿಯಲ್ಲಿ ನೊಂದವರಿಗೆ ರಾಷ್ಟ್ರಾಧ್ಯಕ್ಷರು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾ, ಅದರ ಸಂಕೇತವಾಗಿ ಅಲ್ಲಿಯ ಗೌರ್ನರಿಗೆ ಒಂದು ಸಾವಿರ ರೂಪಾಯಿಗಳನ್ನು ಕಳುಹಿಸಿದ್ದಾರೆ.

ಆಂಧ್ರಪ್ರಾಂತ್ಯ ಮಸೂದೆ

ಕೇಂದ್ರ ಪ್ರಜಾಸಭೆಯು ಆಂಧ್ರ ಪ್ರಾಂತ್ಯ ಮಸೂದೆಯನ್ನು ನಿನ್ನೆಯದಿನ ಅಂಗೀಕರಿಸಿತು.

ಈ ಸಂಬಂಧದಲ್ಲಿ ಕೇಂದ್ರ ಗೃಹಸಚಿವ ಡಾ॥ ಕೆ. ಎನ್. ಕಟ್ಜುರವರು ಮಾತನಾಡುತ್ತಾ ಅಖಿಲಭಾರತ ಗಡಿನಿರ್ಧಾರ ಕಮಿಷನ್ ಶೀಘ್ರದಲ್ಲೇ ರಚನೆಯಾಗುವುದೆಂದೂ, ಆಗ ಭಾರತದ ಎಲ್ಲ ಭಾಷಾವಾರು ಪ್ರಾಂತ್ಯಗಳ ರಚನೆಯು ಇತ್ಯರ್ಥವಾಗುವುದೆಂದೂ ತಿಳಿಸಿದ್ದಾರೆ.

ವಿಮಾನ ಅಪಘಾತ

ಪೂನಾಬಳಿ ನಿನ್ನೆಯದಿನ ವಿಮಾನದಳದ ವಿಮಾನವೊಂದು ಅಪಘಾತಕ್ಕೀಡಾಗಿ ಅದರಲ್ಲಿದ್ದ ೯ ಅಧಿಕಾರಿಗಳು ನಿಧನ ಹೊಂದಿದರೆಂದು ತಿಳಿಯಬರುತ್ತದೆ.

ವಿದ್ಯಾ ಸುಧಾರಣೆ ವಿಸ್ತರಣೆ

ಮದ್ರಾಸ್ ಪ್ರಾಂತ್ಯದಲ್ಲಿ ಈಗ ಜಾರಿಗೆ ಬಂದಿರುವ ವಿದ್ಯಾ ಸುಧಾರಣೆಯನ್ನು ಪಟ್ಟಣಗಳಿಗೆ ಮುಂದಿನಸಾಲಿನಿಂದ ವಿಸ್ತರಿಸಲಾಗುವುದೆಂದು ತಿಳಿಯಬರುತ್ತದೆ.

ಭಾರತ ಆಹಾರ ಸಚಿವರ ಮೇಲೆ ಬರ್ಮಾ ಆರೋಪಣೆ

ಭಾರತಕ್ಕೆ ಬರ್ಮಾ ವ್ಯಾಪಾರ ನಿಯೋಗವು ಬಂದಿದ್ದಾಗ್ಗೆ ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಸ್ನೇಹಪರವಾಗಿ ವರ್ತಿಸದೆ ಅಸಡ್ಡೆಯಿಂದ ಮತ್ತು ದುರಹಂಕಾರದಿಂದ ಆ ನಿಯೋಗದ ನಾಯಕರಾಗಿದ್ದ ಬರ್ಮಾದ ವಾಣಿಜ್ಯ ಸಚಿವರೊಡನೆ ವರ್ತಿಸಿದರೆಂದೂ ಇವರಿಂದ ಬರ್ಮಾ ಮಂತ್ರಿಮಂಡಲದಲ್ಲಿ ಅತೃಪ್ತಿಯುಂಟಾಗಿದೆಯೆಂದು ಅಲ್ಲಿಯ ಪತ್ರಿಕೆಯೊಂದು ಆಪಾದಿಸಿದೆ.

ಶ್ರೀ ಕಿದ್ವಾಯಿಯವರು ಬರ್ಮಾ ಅಕ್ಕಿಯನ್ನು ಬಹಳ ಕಡಮೆ ಬೆಲೆಗೆ ಕೇಳಿ ಭಾರತ ವಸ್ತುಗಳಿಗೆ ವಿಶ್ವದಲ್ಲಿ ಎಲ್ಲಿಯೂ ಇಲ್ಲದಷ್ಟು ಬೆಲೆ ಕೇಳಿದರೆಂದೂ ಅಲ್ಲದೆ ನಿಮ್ಮ ಅಕ್ಕಿಯನ್ನು ಮಾರಲು ಭಾರತಕ್ಕೆ ಬದಲು ಶತ್ರುರಾಷ್ಟ್ರಗಳಿಗೆ ಏಕೆ ಹೋಗಬಾರದು ಎಂದು ಹಂಗಿಸಿದರೆಂದೂ ಆದಕ್ಕೆ ಬರ್ಮಾ ಸಚಿವರು ಉತ್ತರ ಕೊಡಲಿಲ್ಲವೆಂದು ಅಲ್ಲಿಯ ಅಧಿಕಾರಿ ವೃತ್ತಗಳಲ್ಲಿ ಹೇಳಲಾಗಿದೆ.

ಅಲ್ಲಿಯ ಸರ್ಕಾರಿ ಅಧಿಕಾರಿಗಳೊಬ್ಬರು ಈ ವಿಷಯದಲ್ಲಿ ಮಾತನಾಡುತ್ತಾ ತಮ್ಮ ಅಕ್ಕಿಯನ್ನು ಸಮುದ್ರಕ್ಕೆ ಬೇಕಾದರೂ ಬಿಸಾತುತ್ತೇವೆ. ಆದರೆ ಕಿದ್ವಾಯಿಯವರು ಕೇಳಿದ ಬೆಲೆಗೆ ಕೊಡುವುದಿಲ್ಲವೆಂದು ಹೇಳಿರುವುದಾಗಿ ಆ ಪತ್ರಿಕೆ ಪ್ರಕಟಿಸಿ ಶ್ರೀ ಕಿದ್ವಾಯಿಯವರ ವರ್ತನೆಯನ್ನು ಕಟುವಾಗಿ ಟೀಕಿಸಿದೆ.

ತಿರುಪತಿಗೆ ಮುಖ್ಯಮಂತ್ರಿಗಳ ಭೇಟಿ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ತಿರುಪತಿಗೆ ಪ್ರಯಾಣ ಮಾಡಿದರು. ಅಲ್ಲಿಂದ ಅವರು ನಾಳೆ ಹಿಂತಿರುಗುವರು.

-ಮೈಸೂರು ಪೇಟೆಧಾರಣೆ-

ತಾರೀಖು ೨೭—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೨—೧೪	೨೭ ೮
ಎಳ್ಳು	೬೭—೧೦	೭೯—೧೪
ಹುರುಳಿ	—	—
ಹೆಸರು	—	—
ಹರಳು	೨೮—೪	—
ಅಲಸಂದೆ	೭೩—೮	೭೪—೬
ಹೊಂಗೆಬೀಜ	೧೫—೧೨	—
ಅವರೆ	—	—
ಉದ್ದು	—	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೬—	—
ಸೀಗೆಕಾಯಿ	—	—
ಬೆಲ್ಲ	—	
ತೆಂಗಿನಕಾಯಿ	೧೪೪	೨೭೮

ಕೊರಿಯಾ ಶಾಂತಿ ಸಮ್ಮೇಳನದಲ್ಲಿ ಭಾರತ

ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ತೀರ್ಮಾನ

ಕೊರಿಯಾ ಶಾಂತಿ ಸಮ್ಮೇಳನದಲ್ಲಿ ಭಾರತವು ಭಾಗವಹಿಸಬೇಕೆಂದು ನಿನ್ನೆ ದಿನ ನಡೆದ ವಿಶ್ವಸಂಸ್ಥೆಯ ರಾಜಕೀಯ ಸಮಿತಿಯು ನಿರ್ಧರಿಸಿತು. ಈ ನಿರ್ಣಯದ ಪರವಾಗಿ ೨೭ ಮತಗಳು ಬಂದವು. ೧೧ ರಾಷ್ಟ್ರಗಳು ತಟಸ್ಥವಾಗಿದ್ದುವು.

ಬ್ರಿಟನ್, ರಷ್ಯಾ, ದಕ್ಷಿಣ ಅಮೆರಿಕಾದ ಕೆಲವು ರಾಷ್ಟ್ರಗಳು ಪರವಾಗಿಯೂ ಅಮೆರಿಕಾ, ಪಾಕೀಸ್ತಾನ ಮುಂತಾದುವು ವಿರೋಧವಾಗಿಯೂ ಮತ ನೀಡಿದುವು. ಫ್ರಾನ್ಸ್ ತಟಸ್ಥ ರಾಷ್ಟ್ರಗಳಲ್ಲಿ ಒಂದಾಗಿತ್ತು.

ಈ ನಿರ್ಣಯವನ್ನು ಪರಿಶೀಲಿಸಲು ಈದಿನ ಮಹಾ ಸಭಾಧಿವೇಶನ ನಡೆಯುವುದೆಂದು ತಿಳಿಯಬರುತ್ತದೆ.

ಮುಖ್ಯಮಂತ್ರಿಯನ್ನು ಅಧಿಕಾರದಿಂದ ತೆಗೆಯಲು ಯತ್ನಿಸುತ್ತಿಲ್ಲ

ವೀರಣ್ಣಗೌಡರ ಹೇಳಿಕೆ

ದೆಹಲಿಗೆ ತೆರಳಿದ್ದ ಮೈಸೂರು ಪ್ರಾದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣಗೌಡರು, ಶ್ರೀಗಳಾದ ಎಸ್. ಚನ್ನಯ್ಯ ಮತ್ತು ಟಿ. ಸುಬ್ರಮಣ್ಯಂರವರು ನಿನ್ನೆ ಬೆಂಗಳೂರಿಗೆ ಹಿಂತಿರುಗಿದರು.

ಮೈಸೂರಿನ ರಾಜಕೀಯ ಮತ್ತು ಆಡಳಿತ ವಿಷಯದಲ್ಲಿ ತಾವು ಪ್ರಧಾನಿ ನೆಹರೂರೊಡನೆ ಮಾತುಕತೆ ನಡೆಸಿದುದಾಗಿಯೂ ಕಾಂಗ್ರೆಸ್ ಸಂಸ್ಥೆಯ ಪ್ರತಿಷ್ಠೆಯನ್ನು ಉಳಿಸುವ ಬಗ್ಗೆ ಹೊರತು ಅದಕ್ಕೆ ಕುಂದು ತರುವಂತಹ ಯಾವ ವಿಷಯವನ್ನೂ ತಾವು ಚರ್ಚಿಸಿಲ್ಲವೆಂದೂ ಶ್ರೀ ವೀರಣ್ಣಗೌಡರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರನ್ನು ಅಧಿಕಾರದಿಂದ ತೆಗೆದುಹಾಕಬೇಕೆಂದು ತಾವು ಪ್ರಯತ್ನಿಸುತ್ತಿಲ್ಲವೆಂದೂ, ಆರೀತಿ ಶ್ರೀ ಹನುಮಂತಯ್ಯನವರು ಹೇಳುತ್ತಿರುವುದು ಅವರ ಕಲ್ಪನೆಯೆಂದೂ, ಅಪಾರ್ಥಮಾಡಿಕೊಂಡು ಅವರು ಸಂಶಯಗ್ರಸ್ತರಾಗಿರುವಂತೆ ಕಾಣುತ್ತದೆಯೆಂದೂ ಶ್ರೀ ವೀರಣ್ಣಗೌಡರು ಹೇಳಿದ್ದಾರೆ.

ಒಂದೆಡೆ ಮಾರಾಟ ತೆರಿಗೆ ಪರಿಶೀಲನೆ

ಸರ್ಕಾರಕ್ಕೆ ನಷ್ಟವಾಗದಂತೆ ಈಗ ವಿವಿಧ ಘಟ್ಟಗಳಲ್ಲಿ ವಿಧಿಸುತ್ತಲಿರುವ ಮಾರಾಟ ತೆರಿಗೆಯನ್ನು ಒಂದೇಕಡೆ ವಿಧಿಸುವ ವಿಷಯವನ್ನು ಸರ್ಕಾರವು ಪರಿಶೀಲಿಸುವುದಾಗಿ ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ವರ್ತಕರಿಗೆ ಭರವಸೆಯನ್ನಿತ್ತಿದ್ದಾರೆ.

ಹೊಲೆಯುವ ಯಂತ್ರಗಳು

ಭಾರತದಲ್ಲಿ ತಯಾರಾಗುವ ಹೊಲಿಗೆ ಯಂತ್ರಗಳನ್ನು ೨೬ ವಿದೇಶಗಳು ಕೊಳ್ಳುತ್ತಿವೆ.

ಪ್ರಧಾನಿ ನೆಹರೂಗೆ ಪಾಕ್ ಮಂತ್ರಿಮಂಡಲದ ಪತ್ರ

ಕಾಶ್ಮೀರ ವಿಷಯದಲ್ಲಿ ಭಾರತ ಮತ್ತು ಪಾಕೀಸ್ತಾನಗಳ ಪ್ರಧಾನಿಗಳ ನಡುವೆ ಆದ ಮಾತುಕತೆಗಳನ್ನು ಕಳೆದ ಒಂದು ವಾರದಿಂದ ಪಾಕ್ ಮಂತ್ರಿ ಮಂಡಲವು ಪರಿಶೀಲಿಸಿ ತನ್ನ ಅಭಿಪ್ರಾಯವನ್ನು ಒಳಗೊಂಡ ಪತ್ರವೊಂದನ್ನು ಪ್ರಧಾನಿ ನೆಹರೂರವರಿಗೆ ಕಳುಹಿಸಿರುವುದಾಗಿ ತಿಳಿಯಬರುತ್ತದೆ.

ಸರ್ಕಾರವು ದುಷ್ಕೃತ್ಯಗಳನ್ನು ತಪ್ಪಿಸಬೇಕು

ಬೊಂಬಾಯಿ ಪ್ರಾಂತ್ಯದಲ್ಲಿ ಇತ್ತೀಚೆಗೆ ಕೊಲೆಗಳು ಹೆಚ್ಚುತ್ತಿವೆ. ಅವರಲ್ಲಿ ಸಮಾಜ ಮತ್ತು ಸಾರ್ವಜನಿಕ ಸೇವಕರ ಕೊಲೆಯು ವಿಶೇಷವಾಗಿ ನಡೆಯುತ್ತಿದೆ. ಇದನ್ನು ತಡೆಗಟ್ಟಲು ಸರ್ಕಾರವು ಸೂಕ್ತಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಬೊಂಬಾಯಿ ಪ್ರದೇಶ ಕಾಂಗ್ರೆಸ್ ಸಮಿತಿಯು ಸರಕಾರವನ್ನು ಕೋರಿದೆ.

ಪತ್ನಿ ಮತ್ತು ೩ ಮಕ್ಕಳ ಕೊಲೆ

ಮದ್ರಾಸ್ ಪ್ರಾಂತ್ಯದ ಅಂಬಾಸಮುದ್ರ ತಾಲ್ಲೂಕಿನ ವಿಕ್ರಮಸಿಂಗಪುರದ ನಿವಾಸಿ ಸುಬ್ಬಯ್ಯಾಚಾರಿ ಎಂಬುವನು ತನ್ನ ೩೫ ವರ್ಷದ ಪತ್ನಿ, ೧೩, ೫ ಮತ್ತು ೩ ವರ್ಷಗಳ ಮೂರು ಮಕ್ಕಳನ್ನು ಕೊಲೆಮಾಡಿದನೆಂದು ಈಗ ಆತನನ್ನು ದಸ್ತಗಿರಿ ಮಾಡಲಾಗಿದೆ. ಮತ್ತೊಂದು ೧೦ ವರ್ಷದ ಮಗುವನ್ನು ಕೊಲೆಮಾಡಲು ಯತ್ನಿಸಿದಾಗ ಅದು ತಪ್ಪಿಸಿಕೊಂಡಿತೆಂದೂ ಹೇಳಲಾಗಿದೆ.

● ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ಮುಂದಿನ ತಿಂಗಳು ೪ನೇ ತಾರೀಖು ಬೆಂಗಳೂರಿನಲ್ಲಿ ನಡೆಯುವುದೆಂದು ಹೇಳಲಾಗಿದೆ.

ಪ್ರಭಾ 30-8-53 ರಿಂದ 5 ದಿನಗಳು ದಿನವಹಿ 3 ಪ್ರದರ್ಶನಗಳು
ವಿ. ಶಾಂತಾರಾಂರವರ:—
ಅಮರ್ ಭೂಪಾಲಿ
ಪಾತ್ರ...ಸಂಧ್ಯಾ, ಪಂಡಿತ್ ರಾವ್ ನಗರ್‌ಕರ್, ಲಲಿತಾಪವರ್
ಕಡೆಯ ಎರಡು ದಿನಗಳು
ನಯಾ ಗರ್
ಬೆಳಗಿನ ಪ್ರದರ್ಶನ 28-8-53 ರಿಂದ 3 ದಿನಗಳು. ಮಧುಬಾಲ, ನಾಸೀರ್ ಖಾನ್ ನಟಿಸಿರುವ "ಪಾಕ್ ಶೀಶ್"

ಪ್ರಕಾಶಕರು ಮತ್ತು ಮುದ್ರಕರು. ಜಿ. ಎಲ್. ಸ್ವಾಮಿ. ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೦

೨೮-೮-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ರೈಲ್ವೆ ಕಳ್ಳನ ದಸ್ತಗಿರಿ

ಮೈಸೂರು ೨೭

ಸದರ್ನ್ ರೈಲ್ವೆಯ ಮೈಸೂರು ರನ್ನಿಂಗ್ ಷೆಡ್ಡಿನಲ್ಲಿ ಹಿಂದೆ ಸಾವಿರಾರು ರೂ. ಬೆಲೆಬಾಳುವ ಕಬ್ಬಿಣದ ಷಾಕ್ ಅಬ್‌ಸರ್‌ವರ್ ಸ್ಪ್ರಿಂಗ್‌ಗಳನ್ನು ಕಳುವುಮಾಡಿದ ರೈಲ್ವೆ ನೌಕರ ಸಾಬ್‌ಜಾನ್ ಎಂಬುವನನ್ನು ರೈಲ್ವೆ ಪೋಲೀಸರು ನಿನ್ನೆ ದಸ್ತಗಿರಿಮಾಡಿ ಮಾಲುಗಳನ್ನು ವಶಪಡಿಸಿಕೊಂಡಿದ್ದಾರೆ.

ರಾಮಯ್ಯ ಸ್ಮಾರಕ ಸಂಗೀತ ಸ್ಪರ್ಧೆಗಳು

ಶ್ರೀ ವರಲಕ್ಷ್ಮೀ ಸಂಗೀತ ಸಂಸ್ಥೆಯ ೮ನೇ ವಾರ್ಷಿಕೋತ್ಸವದ ಅಂಗವಾಗಿ ಮಾಮೂಲಿನಂತೆ "ರಾಮಯ್ಯ ಸ್ಮಾರಕ ಸಂಗೀತ ಸ್ಪರ್ಧೆ" ಗಳನ್ನು ಏರ್ಪಡಿಸಲಾಗಿದೆ. ಸ್ಪರ್ಧೆಗಳಲ್ಲಿ ಮೈಸೂರು ಸಹೋದರರ ಕೃತಿಗಳು, ದೇವರನಾಮಗಳು ಇತರ ವಾಗ್ಗೇಯಕಾರರ ಕೃತಿಗಳು ಎಂದು ೩ ವಿಭಾಗಗಳನ್ನು ಮಾಡಲಾಗಿದೆ. ಈ ಭಾಗಗಳಲ್ಲಿ ಪ್ರಾಥಮಿಕ, ಮಾಧ್ಯಮಿಕ, ಪ್ರೌಢ ವಿದ್ವತ್ ಸ್ಟಾಂಡರ್ಡ್‌ಗಳಲ್ಲಿ ಹಾಡುಗಾರಿಕೆ ಮತ್ತು ವಾದ್ಯಗಳಲ್ಲಿ ನಡೆಯುತ್ತವೆ. ಸ್ಪರ್ಧೆಗಳನ್ನು ಇದೇ ೨೯ನೇ ತಾರೀಖು ಸಂಸ್ಥೆಯ ಕೃಷ್ಣಮೂರ್ತಿಪುರಂ ಶಾಖೆಯಲ್ಲಿಯೂ ೩೦ನೇ ತಾರೀಖು ಕೇಂದ್ರ ಮಂದಿರಗಳಲ್ಲಿಯೂ ೩೧ನೇ ತಾರೀಖು ಬೆಳಿಗ್ಗೆ ಚಾಮುಂಡಿಪುರಂ ಶಾಖೆಯಲ್ಲಿಯೂ ಅದೇ ದಿನ ಸಂಜೆ ವಾಣಿವಿಲಾಸಪುರ ಶಾಖೆಯಲ್ಲಿಯೂ ಏರ್ಪಡಿಸಲಾಗಿದೆ.

ವಿವಾಹ ಮಹೋತ್ಸವ

ರಾಜಧಾನಿಯ ಸಂತೇಪೇಟೆ ವರ್ತಕರಾದ ಶ್ರೀ ಕೆ. ನರಸಿಂಹಯ್ಯನವರು ತಮ್ಮ ಪುತ್ರ ಶ್ರೀ ಕೆ.ಎನ್. ಸತ್ಯನಾರಾಯಣರಿಗೆ ಶಿವಪುರದ ಪ್ಯಾನುಫೋರ್ಡ್ ಶ್ರೀ ಹೆಚ್. ಸುಬ್ಬರಾಯರ ಪುತ್ರಿ ಶ್ರೀಮತಿ ನಾಗರತ್ನಮ್ಮನನ್ನು ತಂದುಕೊಂಡು ನಿನ್ನೆ ವಿವಾಹವನ್ನು ಹೊಯಿಸಳ ಕರ್ನಾಟಕ ಸಂಘದ ಕಟ್ಟಡದಲ್ಲಿ ನೆರವೇರಿಸಿದರು

ವರ್ತಕರೊಬ್ಬರ ಆಕಸ್ಮಿಕ ಮರಣ

ಮೈಸೂರು ೨೮

ರಾಜಧಾನಿಯ ಪುರಸಭೆಯ ಸದಸ್ಯರಾದ ಶ್ರೀ ಬಿ. ಎಲ್. ರಾಮಸ್ವಾಮಿಶೆಟ್ಟಿಯವರ ಅಣ್ಣಂದಿರಾದ ಶ್ರೀ ಬಿ. ಎಲ್. ಗೋಪಾಲಶೆಟ್ಟರು ನಿನ್ನೆ ಸಂಜೆ ಗಾಯತ್ರಿ ಭವನದ ಮುಂದೆ ಬರುತ್ತಿರುವಾಗ್ಗೆ ಅಕಸ್ಮಾತ್ ಹೃದಯಕ್ರಿಯೆ ನಿಂತು ಮೃತಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಮೃತರಿಗೆ ೬೦ ವರ್ಷ ವಯಸ್ಸಾಗಿತ್ತು.

● ಅಖಿಲಭಾರತ ರೇಡಿಯೋ ಕೇಂದ್ರದ ಮಾಜಿ ಡೈರೆಕ್ಟರ್ ಜನರಲ್ ಶ್ರೀ ಎನ್. ಎ. ಎಸ್. ಲಕ್ಷ್ಮಣ್‌ರನ್ನು ರಾಷ್ಟ್ರಾಧ್ಯಕ್ಷರು ಕೆಲಸದಿಂದ ವಜಾಮಾಡಿದ್ದಾರೆ.

ಮೈಸೂರು ಮಂತ್ರಿಮಂಡಲ ಮುಂದೇನಾದೀತು?

ಕಾಂಗ್ರೆಸ್ ಅಧ್ಯಕ್ಷ ವೀರಣ್ಣಗೌಡರ ಹೇಳಿಕೆ

ಮುಖ್ಯ ಮಂತ್ರಿಗಳು ಭಾವಿಸಿರುವಂತೆ ಅವರನ್ನು ಪದಚ್ಯುತಿ ಮಾಡುವುದಕ್ಕೆ ಈಗ ಪ್ರಯತ್ನವೇನೂ ನಡೆಯುತ್ತಿಲ್ಲವೆಂದೂ, ಆದರೆ ಮುಂದೇನಾಗುವುದು ಅಥವ ಮುಂದೆ ಯಾವ ರೂಪ ತಾಳುವುದು ಎಂಬುದನ್ನು ಈಗ ನಾನು ಹೇಳುವುದಕ್ಕೆ ಸಾಧ್ಯವಿಲ್ಲ--ಎಂದು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣಗೌಡರು ಹೇಳಿದ್ದಾರೆ.

ಷೇಕ್ ಅಬ್ದುಲ್ಲಾ ಬಿಡುಗಡೆ ಆಗಬೇಕಂತೆ

ಕಾಶ್ಮೀರದ ಜನರಲ್ಲಿ ಉಂಟಾಗಿರುವ ಕಳವಳವನ್ನು ಹೋಗಲಾಡಿಸಲು ಕೂಡಲೇ ಷೇಕ್ ಅಬ್ದುಲ್ಲಾರನ್ನು ಬಿಡುಗಡೆ ಮಾಡಬೇಕೆಂದೂ, ಕಾಶ್ಮೀರದ ಭವಿಷ್ಯದ ಬಗ್ಗೆ ಜನಮತಗಣನೆ ಅಧಿಕಾರಿಗಳನ್ನು ನೇಮಿಸಲು ಕಾಲ ಒದಗಿರುವುದರಿಂದ, ಇದು ಅಗತ್ಯವೆಂದೂ ಜಮ್ಮು-ಕಾಶ್ಮೀರ್ ರಾಷ್ಟ್ರೀಯ ಸಮ್ಮೇಳನದ ಕಾರ್ಯದರ್ಶಿಯವರು ಒತ್ತಾಯ ಮಾಡಿದ್ದಾರೆ.

ಮಕ್ಕಳ ಪೋಷಣೆಗೆ ರಷ್ಯ ಸರ್ಕಾರದ ಆಸಕ್ತಿ

ಬ್ರಿಟನ್, ಯೂರೋಪ್ ಮತ್ತು ರಷ್ಯಾ ದೇಶಗಳಲ್ಲಿ ಪ್ರವಾಸಮಾಡಿ ಈಗ ಪ್ರಧಾನಿ ನೆಹರೂರ ಪುತ್ರಿ ಶ್ರೀಮತಿ ಇಂದಿರಾಗಾಂಧಿಯವರು ದೆಹಲಿಗೆ ವಾಪಸು ಬಂದಿದ್ದಾರೆ.

ರಷ್ಯದಲ್ಲಿ ಮಹಿಳೆಯರಿಗೆ ವಿಶೇಷ ಸೌಲಭ್ಯ ಮತ್ತು ಸಮಾನ ಹಕ್ಕುಗಳು ಇವೆ. ಮಕ್ಕಳನ್ನು ಹೆಚ್ಚು ಪ್ರೀತಿ ಮತ್ತು ಆದರದಿಂದ ನೋಡಿಕೊಳ್ಳಲಾಗುತ್ತಿದೆ. ೧೬ ವರುಷದವರೆಗಿನ ಮಕ್ಕಳನ್ನು ರಕ್ಷಣೆಮಾಡಲು ಸರ್ಕಾರದವರೇ ಅರಮನೆಗಳಂತಹ ಭವನಗಳನ್ನು ಏರ್ಪಡಿಸಿದ್ದಾರೆ-ಎಂದು ಅವರು ತಿಳಿಸಿರುವರು.

ಭೂದಾನ ಯಜ್ಞಕ್ಕೆ ದಾನ

ತಂಜಾವೂರ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಮತ್ತು ಭಾರಿ ಜಮೀನುದಾರರೂ ಆದ ಶ್ರೀ ಕೆ. ಎಸ್. ಶಾಂಬಶಿವ ಅಯ್ಯರ್ ೧-೫ ಲಕ್ಷ ರೂ. ಬೆಲೆಬಾಳುವ ೬೭ ಎಕರೆ ಜಮೀನನ್ನು ಭೂ ದಾನ ಯಜ್ಞಕ್ಕಾಗಿ ದಾನಮಾಡಿದ್ದಾರೆ. ಅವರ ಪತ್ನಿಯರು ೩೦೦ ರೂ. ಬಾಳುವ ತಮ್ಮ ಚಿನ್ನದ ಸರವನ್ನೂ, ಅವರ ಸಹೋದರರು ೩೫ ಎಕರೆ ಜಮೀನನ್ನೂ ಕೊಟ್ಟಿದ್ದಾರೆ.

ಪ್ರಜಾಸೋಷಲಿಸ್ಟರ ಸತ್ಯಾಗ್ರಹ

ಸೂರತ್ ಜಿಲ್ಲೆಯ ಪಾರ್ಡಿ ತಾಲ್ಲೂಕಿನ ಹುಲ್ಲುಗಾವಲುಗಳಲ್ಲಿ ಧಾನ್ಯಗಳನ್ನು ಬೆಳೆಯುವಂತೆ ಮಾಡಲು ಅಲ್ಲಿಯ ಪ್ರಜಾ ಸೋಷಲಿಸ್ಟ್ ಪಕ್ಷದ ೧೦೦ ಸ್ವಯಂ ಸೇವಕರು ಶ್ರೀ ಅಶೋಕ ಮೆಹ್ತಾರವರ ನಾಯಕತ್ವದಲ್ಲಿ ಸೆಪ್ಟಂಬರ್ ಒಂದರಿಂದ ಸತ್ಯಾಗ್ರಹ ಹೂಡಲಿದ್ದಾರೆಂದು ತಿಳಿಯಬರುತ್ತದೆ.

ಮೆಡಿಕಲ್ ಸ್ಕೂಲಿನಮೇಲೆ ರಿಟ್ ಅರ್ಜಿ

ಈ ವರ್ಷ ಎಲ್. ಎಂ. ಪಿ. ತರಗತಿಗೆ ತನಗಿಂತಲೂ ಕಡಮೆ ನಂಬರು ಬಂದಿರುವ ವಿದ್ಯಾರ್ಥಿಯನ್ನು ಆರಿಸಿ ಪಕ್ಷಪಾತ ತೋರಿಸಿ ತಮಗೆ ಸೀಟು ಕೊಟ್ಟಿಲ್ಲವೆಂದು ದಾವಣಗೆರೆಯ ಶ್ರೀ ಎಸ್. ಆರ್. ಪಾಟೀಲ್‌ರವರು ಹೈಕೋರ್ಟಿನಲ್ಲಿ ಒಂದು ರಿಟ್ ಅರ್ಜಿ ಸಲ್ಲಿಸಿ, ತಮಗೆ ಸ್ಥಳ ದೊರಕಿಸಿಕೊಡಬೇಕೆಂದು ಪ್ರಾರ್ಥಿಸಿದ್ದಾರೆ ಅರ್ಜಿಯನ್ನು ಅಂಗೀಕರಿಸಲಾಗಿದೆ.

ಟೈಪ್‌ರೈಟಿಂಗ್ ಹೊಸ ರಿಕಾರ್ಡ್

ಅಖಿಲ ಭಾರತ ಶೀಘ್ರಲಿಪಿ ಬರಹಗಾರರ ಸಂಘದವರು ದೆಹಲಿಯಲ್ಲಿ ಏರ್ಪಡಿಸಿದ್ದ ಸ್ಪರ್ಧೆಯಲ್ಲಿ ಆಕೋಲಾದ ಶ್ರೀ ಎಸ್. ಎಸ್. ನಿಬೋಜೆಯವರು ೧೦೪.೩ ಪದಗಳನ್ನು ಟೈಪ್‌ಮಾಡಿ ಹೊಸ ರಿಕಾರ್ಡನ್ನು ಸ್ಥಾಪಿಸಿದ್ದಾರೆ.

೯ ಸಾವಿರ ಟನ್ ಕೃತಕ ಗೊಬ್ಬರ ಉತ್ಪತ್ತಿ

ಸಿಂದ್ರಿಗೊಬ್ಬರ ಕಾರ್ಖಾನೆಯಲ್ಲಿ ದಿನಕ್ಕೆ ೯ ಸಾವಿರ ಟನ್ ಉತ್ಪನ್ನವನ್ನು ಹೆಚ್ಚಿಸಲು ಪ್ರಯತ್ನ ಮಾಡಲಾಗುತ್ತಿದೆಯೆಂದು ಕೇಂದ್ರ ಉತ್ಪನ್ನ ಶಾಖಾಸಚಿವ ಶ್ರೀ ರೆಡ್ಡಿಯವರು ಪಾರ್ಲಿಮೆಂಟನಲ್ಲಿ ತಿಳಿಸಿದ್ದಾರೆ.

೧೩೮ ಕೋಟಿ ರೂ. ಬಂಡವಾಳ ಹೊರಕ್ಕೆ

೧೯೪೭ ನೇ ಜುಲೈ ನಿಂದ ೧೯೫೩ ನೇ ಅಂತ್ಯದವರೆಗೆ ಒಟ್ಟು ೧೩೮.೩೬ ಕೋಟಿ ರೂಗಳಷ್ಟು ಬಂಡವಾಳ ಭಾರತದಿಂದ ಹೊರಕ್ಕೆ ವರ್ಗಾಯಿಸಲಾಗಿವೆಯೆಂದು ತಿಳಿಸಲಾಗಿದೆ.

○ ಅಖಿಲಭಾರತ ಭಾಷಾವಾರು ಪ್ರಾಂತ್ಯಗಳ ಸಮ್ಮೇಳನವು ಸೆಪ್ಟಂಬರ್ ಮಾಹೆ ೨೬ ನೇ ತಾರೀಖು ಕೈರಾ ಜಿಲ್ಲೆಯ ಅನಂದ್ ಎಂಬಲ್ಲಿ ನಡೆಯುತ್ತದೆ.

ಹಳೇ ವಿದ್ಯಾರ್ಥಿಗಳ ಸಭೆ

ಮೈಸೂರು ೨೮

ದಳವಾಯಿ ಹೈಸ್ಕೂಲಿನ ಹಳೆಯ ವಿದ್ಯಾರ್ಥಿಗಳ ಕೂಟವು ಇದೇ ಮಾಹೆ ೩೦ ನೇ ತಾರೀಖು ಭಾನುವಾರ ಸಂಜೆ ೬ ಘಂಟೆಗೆ ಸ್ಕೂಲಿನ ಆವರಣದಲ್ಲಿ ಸಮಾವೇಶಗೊಳ್ಳಲಿದೆ. ಸಂಘದ ಸದಸ್ಯರುಗಳೂ, ಇತರ ವಿದ್ಯಾರ್ಥಿಗಳೂ, ಹಿತೈಷಿಗಳೂ ಹಾಜರಿದ್ದು ಈ ವರ್ಷದ ಕಾರ್ಯಕ್ರಮವನ್ನು ರೂಪಿಸಲು ಸಹಕರಿಸಬೇಕಾಗಿ ಕಾರ್ಯದರ್ಶಿಗಳು ಕೋರುತ್ತಾರೆ.

ಕಾಶ್ಮೀರದ ಘಟನೆಗಳಲ್ಲಿ ವಿದೇಶಿ ಕೈವಾಡ

ಕಾಶ್ಮೀರದಲ್ಲಿ ಇತ್ತೀಚೆಗೆ ನಡೆದ ಘಟನೆಗಳಲ್ಲಿ ವಿದೇಶೀಯರ ಕೈವಾಡ ವಿತ್ತೆಂಬ ಬಗ್ಗೆ ನೂತನ ಸರ್ಕಾರದವರು ವಿಷಯ ಸಂಗ್ರಹಣ ಮಾಡುತ್ತಿರುವರೆಂದೂ, ಸದ್ಯದಲ್ಲೇ ಅವನ್ನು ಪ್ರಕಟಿಸುವುದಾಗಿಯೂ ಅದರ ರಾಜ್ಯಾಂಗ ಸಭಾಧ್ಯಕ್ಷ ಶ್ರೀ ಜಿ.ಎಂ. ಸಾದಿಕ್‌ರವರು ಹೇಳಿದ್ದಾರೆ.

ಬಳ್ಳಾರಿ ಇಂಜನಿಯರಿಂಗ್ ಶಾಖೆಯ ವರ್ಗ

ಬಳ್ಳಾರಿಯು ಮೈಸೂರಿಗೆ ಸೇರುವುದರಿಂದ ಮುಂದಿನತಿಂಗಳು ೧೫ನೇ ತಾರೀಖಿನೊಳಗಾಗಿ ಅಲ್ಲಿರುವ ೨೭ ಲಕ್ಷ ರೂ. ಬೆಲೆಬಾಳುವ ಇಂಜನಿಯರಿಂಗ್ ಇಲಾಖೆಯ ಸಾಮಗ್ರಿಗಳನ್ನೂ ಮತ್ತು ಕಛೇರಿಗಳನ್ನು ಆಂಧ್ರಪ್ರಾಂತ್ಯದ ಅನಂತಪುರಕ್ಕೆ ವರ್ಗಾಯಿಸಲಾಗುವುದೆಂದು ಹೇಳಲಾಗಿದೆ.

ಮೈಸೂರು ಮನೆ

ಉದಕಮಂಡಲದಲ್ಲಿರುವ ಮೈಸೂರು ಸರ್ಕಾರಕ್ಕೆ ಸೇರಿರುವ ವನವರ್ತಿನಿ ಎಂಬ ಗೃಹದ ಹೆಸರನ್ನು "ಮೈಸೂರು ಮನೆ" ಎಂದು ಬದಲಾಯಿಸಲಾಗಿದೆ.

ಜನಸಂಘದಲ್ಲಿ ಮುಸ್ಲಿಂ ಸದಸ್ಯರು

ಭಾರತೀಯ ಜನಸಂಘದಲ್ಲಿ ಮುಸ್ಲೀಮರು ಇತ್ತೀಚೆಗೆ ಹೆಚ್ಚಿನಸಂಖ್ಯೆಯಲ್ಲಿ ಸೇರುತ್ತಿರುವುದಾಗಿ ಆ ಸಂಘದ ಅಧ್ಯಕ್ಷರು ತಿಳಿಸಿದ್ದಾರೆ.

ಪರ್ಶಿಯಾಕ್ಕೆ ಅಮೆರಿಕಾ ಆರ್ಥಿಕ ಸಹಾಯ

ಪರ್ಶಿಯಾಕ್ಕೆ ಅಮೆರಿಕಾವು ೨೩ ದಶಲಕ್ಷ ಡಾಲರುಗಳ ನೆರವನ್ನು ಮುಂದಿನ ವರ್ಷ ನೀಡಲಿದೆಯೆಂದು ಅದಕ್ಕೆ ಅಲ್ಲಿಯ ಕಾಂಗ್ರೆಸ್ ಒಪ್ಪಿಗೆ ದೊರೆತಿರುವುದಾಗಿ ತಿಳಿಯಬರುತ್ತದೆ.

○ ಪರ್ಶಿಯಾ ಷಾರವರು ತಮ್ಮ ನೂತನ ಪ್ರಧಾನಿ ಜನರಲ್ ಜಹೇದಿಯವರನ್ನು ಮಾರ್ಷಲ್ ಪಟ್ಟಕ್ಕೇರಿಸಿದ್ದಾರೆ.

ಗೋದಾವರಿ ಪ್ರದೇಶದಲ್ಲಿ ೬ ಕೋಟಿ ರೂ. ಪರಿಹಾರಕಾರ್ಯ

ಗೋದಾವರಿ ನದಿ ಪ್ರವಾಹದಲ್ಲಿ ನೊಂದ ಕಡೆ ವ್ಯಾಪಕವಾದ ಪರಿಹಾರ ಕಾರ್ಯಗಳನ್ನು ನಡೆಸಲು ಮದ್ರಾಸ್ ಸರ್ಕಾರವು ೯ ಕೋಟಿ ರೂಪಾಯಿಗಳ ಯೋಜನೆಯನ್ನು ಸದ್ಯದಲ್ಲೇ ಕಾರ್ಯರೂಪಕ್ಕೆ ತರಲಿರುವುದಾಗಿ ತಿಳಿಯಬರುತ್ತದೆ. ಈ ಭಾಗದಲ್ಲಿ ಪ್ರವಾಸ ನಡೆಸಿಕೊಂಡುಬಂದು ಅಲ್ಲಿಯ ರೆವಿನ್ಯೂ ಬೋರ್ಡಿನ ಸದಸ್ಯರು ಒಪ್ಪಿಸಿದ ವರದಿಯಮೇಲೆ ಈ ನಿರ್ಧಾರವನ್ನು ಮಾಡಲಾಗಿದೆ. ಮನೆಮಠಗಳನ್ನು ಕಳೆದುಕೊಂಡವರಿಗೆ, ವ್ಯವಸಾಯ ಸಲಕರಣೆಗಳನ್ನು ಕೊಳ್ಳುವ ರೈತರಿಗೆ ಸಾಲವನ್ನು ಕೊಡಲಾಗುತ್ತದೆ. ಭೂಕಂದಾಯವನ್ನು ಅನೇಕ ಕಡೆ ಮನ್ನಮಾಡಲಾಗುತ್ತದೆ ನೊಂದಿರುವ ಸರ್ಕಾರಿ ನೌಕರರಿಗೆ ಎರಡು ತಿಂಗಳ ಸಂಬಳವನ್ನು ಮುಂಗಡವಾಗಿ ಕೊಟ್ಟು ಅದನ್ನು ಸಣ್ಣ ಕಂತುಗಳಲ್ಲಿ ವಸೂಲ್ಮಾಡುವ ವ್ಯವಸ್ಥೆಯನ್ನು ಮಾಡಲಾಗುತ್ತದೆ.

ಒಡೆದುಹೋಗಿರುವ ಕಟ್ಟೆಗಳು ಸೇತುವೆಗಳು ಮುಂತಾದುವನ್ನು ೬೦ ಲಕ್ಷ ರೂಪಾಯಿಗಳ ವೆಚ್ಚದಿಂದ ರಿಪೇರಿ ಮಾಡಲಾಗುವುದು.

ಪ್ರವಾಹದಲ್ಲಿ ನೊಂದವರಿಗೆ ರಾಷ್ಟ್ರಾಧ್ಯಕ್ಷರ ಸಹಾನುಭೂತಿ

ಬೀಹಾರ್ ಪ್ರಾಂತ್ಯದಲ್ಲಿ ಉಂಟಾಗಿರುವ ಪ್ರವಾಹ ಹಾವಳಿಯಲ್ಲಿ ನೊಂದವರಿಗೆ ರಾಷ್ಟ್ರಾಧ್ಯಕ್ಷರು ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾ, ಅದರ ಸಂಕೇತವಾಗಿ ಅಲ್ಲಿಯ ಗೌರ್ನರ್‌ಗೆ ಒಂದು ಸಾವಿರ ರೂಪಾಯಿಗಳನ್ನು ಕಳುಹಿಸಿದ್ದಾರೆ.

ಆಂಧ್ರಪ್ರಾಂತ್ಯ ಮಸೂದೆ

ಕೇಂದ್ರ ಪ್ರಜಾಸಭೆಯು ಆಂಧ್ರ ಪ್ರಾಂತ್ಯ ಮಸೂದೆಯನ್ನು ನಿನ್ನೆಯದಿನ ಅಂಗೀಕರಿಸಿತು.

ಈ ಸಂಬಂಧದಲ್ಲಿ ಕೇಂದ್ರ ಗೃಹಸಚಿವ ಡಾ|| ಕೆ. ಎನ್. ಖಟ್ಜು ರವರು ಮಾತನಾಡುತ್ತಾ ಅಖಿಲಭಾರತ ಗಡಿನಿರ್ಧಾರ ಕಮೀಷನ್ ಶೀಘ್ರದಲ್ಲೇ ರಚನೆಯಾಗುವುದೆಂದೂ, ಆಗ ಭಾರತದ ಎಲ್ಲ ಭಾಷಾವಾರು ಪ್ರಾಂತ್ಯಗಳ ರಚನೆಯು ಇತ್ಯರ್ಥವಾಗುವುದೆಂದೂ ತಿಳಿಸಿದ್ದಾರೆ.

ವಿಮಾನ ಅಪಘಾತ

ಪೂನಾಬಳಿ ನಿನ್ನೆಯ ದಿನ ವಿಮಾನ ದಳದ ವಿಮಾನವೊಂದು ಅಪಘಾತಕ್ಕೀಡಾಗಿ ಅದರಲ್ಲಿದ್ದ ೯ ಅಧಿಕಾರಿಗಳು ನಿಧನ ಹೊಂದಿದರೆಂದು ತಿಳಿಯಬರುತ್ತದೆ.

ವಿದ್ಯಾ ಸುಧಾರಣೆ ವಿಸ್ತರಣೆ

ಮದ್ರಾಸ್ ಪ್ರಾಂತ್ಯದಲ್ಲಿ ಈಗ ಜಾರಿಗೆ ಬಂದಿರುವ ವಿದ್ಯಾಸುಧಾರಣೆಯನ್ನು ಪಟ್ಟಣಗಳಿಗೆ ಮುಂದಿನಸಾಲಿನಿಂದ ವಿಸ್ತರಿಸಲಾಗುವುದೆಂದು ತಿಳಿಯಬರುತ್ತದೆ.

ಭಾರತದ ಆಹಾರ ಸಚಿವರ ಮೇಲೆ ಬರ್ಮಾ ಆರೋಪಣೆ

ಭಾರತಕ್ಕೆ ಬರ್ಮಾ ವ್ಯಾಪಾರ ನಿಯೋಗವು ಬಂದಿದ್ದಾಗ್ಗೆ ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಸ್ನೇಹಪರವಾಗಿ ವರ್ತಿಸದೆ ಅಸಡ್ಡೆಯಿಂದ ಮತ್ತು ದುರಹಂಕಾರದಿಂದ ಆ ನಿಯೋಗದ ನಾಯಕರಾಗಿದ್ದ ಬರ್ಮಾದ ವಾಣಿಜ್ಯ ಸಚಿವರೊಡನೆ ವರ್ತಿಸಿದರೆಂದೂ ಇವರಿಂದ ಬರ್ಮಾ ಮಂತ್ರಿಮಂಡಲದಲ್ಲಿ ಅತೃಪ್ತಿಯುಂಟಾಗಿದೆಯೆಂದು ಅಲ್ಲಿಯ ಪತ್ರಿಕೆಯೊಂದು ಆಪಾದಿಸಿದೆ.

ಶ್ರೀ ಕಿದ್ವಾಯಿಯವರು ಬರ್ಮಾ ಅಕ್ಕಿಯನ್ನು ಬಹಳ ಕಡಮೆ ಬೆಲೆಗೆ ಕೇಳಿ ಭಾರತ ವಸ್ತುಗಳಿಗೆ ವಿಶ್ವದಲ್ಲಿ ಎಲ್ಲಿಯೂ ಇಲ್ಲದಷ್ಟು ಬೆಲೆ ಕೇಳಿದರೆಂದೂ ಅಲ್ಲದೆ ನಿಮ್ಮ ಅಕ್ಕಿಯನ್ನು ಮಾರಲು ಭಾರತಕ್ಕೆ ಬದಲು ಶತ್ರುರಾಷ್ಟ್ರಗಳಿಗೆ ಏಕೆ ಹೋಗಬಾರದು ಎಂದು ಹಂಗಿಸಿದರೆಂದೂ ಆದ್ದರಿಂದ ಬರ್ಮಾ ಸಚಿವರು ಉತ್ತರ ಕೊಡಲಿಲ್ಲವೆಂದು ಅಲ್ಲಿಯ ಅಧಿಕಾರಿ ವೃತ್ತಗಳಲ್ಲಿ ಹೇಳಲಾಗಿದೆ.

ಅಲ್ಲಿಯ ಸರ್ಕಾರಿ ಅಧಿಕಾರಿಗಳೊಬ್ಬರು ಈ ವಿಷಯದಲ್ಲಿ ಮಾತನಾಡುತ್ತಾ ತಮ್ಮ ಅಕ್ಕಿಯನ್ನು ಸಮುದ್ರಕ್ಕೆ ಬೇಕಾದರೂ ಬಿಸಾಡುತ್ತೇವೆ. ಆದರೆ ಕಿದ್ವಾಯಿಯವರು ಕೇಳಿದ ಬೆಲೆಗೆ ಕೊಡುವುದಿಲ್ಲವೆಂದು ಹೇಳಿರುವುದಾಗಿ ಆ ಪತ್ರಿಕೆ ಪ್ರಕಟಿಸಿ ಶ್ರೀ ಕಿದ್ವಾಯಿಯವರ ವರ್ತನೆಯನ್ನು ಕಟುವಾಗಿ ಟೀಕಿಸಿದೆ.

ತಿರುಪತಿಗೆ ಮುಖ್ಯಮಂತ್ರಿಗಳ ಭೇಟಿ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ತಿರುಪತಿಗೆ ಪ್ರಯಾಣ ಮಾಡಿದರು. ಅಲ್ಲಿಂದ ಅವರು ನಾಳೆ ಹಿಂತಿರುಗುವರು.

-ಮೈಸೂರು ಪೇಟೆಧಾರಣೆ-

ತಾರೀಖು ೨೭—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೩—೧೪	೨೭ . ೮
ಎಳ್ಳು	೬೭—೧೦	೭೯—೧೪
ಹುರುಳಿ	—	—
ಹೆಸರು	—	—
ಹರಳು	೩೮—೪	—
ಅಲಸಂದೆ	೭೩—೮	೭೪—೬
ಹೊಂಗೆಬೀಜ	೧೫—೧೩	—
ಅವರೆ	—	—
ಉದ್ದು	—	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೬—	—
ತೀಗೆಕಾಯಿ	—	—
ಬೆಲ್ಲ	—	
ತೆಂಗಿನಕಾಯಿ	೧೪೪	೨೭೮

ಕೊರಿಯಾ ಶಾಂತಿ ಸಮ್ಮೇಳನದಲ್ಲಿ ಭಾರತ

ವಿಶ್ವಸಂಸ್ಥೆಯ ರಾಜಕೀಯ ಸಮಿತಿಯಲ್ಲಿ ತೀರ್ಮಾನ

ಕೊರಿಯಾ ಶಾಂತಿ ಸಮ್ಮೇಳನದಲ್ಲಿ ಭಾರತವು ಭಾಗವಹಿಸಬೇಕೆಂದು ನಿನ್ನೆದಿನ ನಡೆದ ವಿಶ್ವಸಂಸ್ಥೆಯ ರಾಜಕೀಯ ಸಮಿತಿಯು ನಿರ್ಧರಿಸಿತು. ಈ ನಿರ್ಣಯದ ಪರವಾಗಿ ೨೭ ಮತಗಳು ಬಂದವು. ೧೧ ರಾಷ್ಟ್ರಗಳು ತಟಸ್ಥವಾಗಿದ್ದುವು.

ಬ್ರಿಟನ್, ರಷ್ಯಾ, ದಕ್ಷಿಣ ಅಮೆರಿಕಾದ ಕೆಲವು ರಾಷ್ಟ್ರಗಳು ಪರವಾಗಿಯೂ ಅಮೆರಿಕಾ, ಪಾಕೀಸ್ತಾನ ಮುಂತಾದುವು ವಿರೋಧವಾಗಿಯೂ ಮತ ನೀಡಿದುವು. ಫ್ರಾನ್ಸ್ ತಟಸ್ಥ ರಾಷ್ಟ್ರಗಳಲ್ಲಿ ಒಂದಾಗಿತ್ತು.

ಈ ನಿರ್ಣಯವನ್ನು ಪರಿಶೀಲಿಸಲು ಈದಿನ ಮಹಾ ಸಭಾಧಿವೇಶನ ನಡೆಯುವುದೆಂದು ತಿಳಿಯಬರುತ್ತದೆ.

ಮುಖ್ಯಮಂತ್ರಿಯನ್ನು ಅಧಿಕಾರದಿಂದ ತೆಗೆಯಲು ಯತ್ನಿಸುತ್ತಿಲ್ಲ

ವೀರಣ್ಣಗೌಡರ ಹೇಳಿಕೆ

ದೆಹಲಿಗೆ ತೆರಳಿದ್ದ ಮೈಸೂರು ಪ್ರಾದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣಗೌಡರು, ಶ್ರೀಗಳಾದ ಎಸ್. ಚನ್ನಯ್ಯ ಮತ್ತು ಟಿ. ಸುಬ್ರಮಣ್ಯಂರವರು ನಿನ್ನೆ ಬೆಂಗಳೂರಿಗೆ ಹಿಂತಿರುಗಿದರು.

ಮೈಸೂರಿನ ರಾಜಕೀಯ ಮತ್ತು ಆಡಳಿತ ವಿಷಯದಲ್ಲಿ ತಾವು ಪ್ರಧಾನಿ ನೆಹರೂರೊಡನೆ ಮಾತುಕತೆ ನಡೆಸಿದುದಾಗಿಯೂ ಕಾಂಗ್ರೆಸ್ ಸಂಸ್ಥೆಯ ಪ್ರತಿಷ್ಠೆಯನ್ನು ಉಳಿಸುವ ಬಗ್ಗೆ ಹೊರತು ಅದಕ್ಕೆ ಕುಂದು ತರುವಂತಹ ಯಾವ ವಿಷಯವನ್ನೂ ತಾವು ಚರ್ಚಿಸಲ್ಲವೆಂದೂ ಶ್ರೀ ವೀರಣ್ಣಗೌಡರು ತಿಳಿಸಿದ್ದಾರೆ.

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರನ್ನು ಅಧಿಕಾರದಿಂದ ತೆಗೆದುಹಾಕಬೇಕೆಂದು ತಾವು ಪ್ರಯತ್ನಿಸುತ್ತಿಲ್ಲವೆಂದೂ, ಅಂತಿ ಶ್ರೀ ಹನುಮಂತಯ್ಯನವರು ಹೇಳುತ್ತಿರುವುದು ಅವರ ಕಲ್ಪನೆಯೆಂದೂ, ಅಪಾರ್ಥಮಾಡಿಕೊಂಡು ಅವರು ಸಂಶಯಗ್ರಸ್ತರಾಗಿರುವಂತೆ ಕಾಣುತ್ತದೆಯೆಂದೂ ಶ್ರೀ ವೀರಣ್ಣಗೌಡರು ಹೇಳಿದ್ದಾರೆ.

ಒಂದೆಡೆ ಮಾರಾಟ ತೆರಿಗೆ ಪರಿಶೀಲನೆ

ಸರ್ಕಾರಕ್ಕೆ ನಷ್ಟವಾಗದಂತೆ ಈಗ ವಿವಿಧ ಘಟ್ಟಗಳಲ್ಲಿ ವಿಧಿಸುತ್ತಲಿರುವ ಮಾರಾಟ ತೆರಿಗೆಯನ್ನು ಒಂದೇಕಡೆ ವಿಧಿಸುವ ವಿಷಯವನ್ನು ಸರ್ಕಾರವು ಪರಿಶೀಲಿಸುವುದಾಗಿ ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ವರ್ತಕರಿಗೆ ಭರವಸೆಯನ್ನಿತ್ತಿದ್ದಾರೆ.

ಹೊಲೆಯುವ ಯಂತ್ರಗಳು

ಭಾರತದಲ್ಲಿ ತಯಾರಾಗುವ ಹೊಲಿಗೆ ಯಂತ್ರಗಳನ್ನು ೨೬ ವಿದೇಶಗಳು ಕೊಳ್ಳುತ್ತಿವೆ.

ಪ್ರಧಾನಿ ನೆಹರೂಗೆ ಪಾಕ್ ಮಂತ್ರಿಮಂಡಲದ ಪತ್ರ

ಕಾಶ್ಮೀರ ವಿಷಯದಲ್ಲಿ ಭಾರತ ಮತ್ತು ಪಾಕೀಸ್ತಾನಗಳ ಪ್ರಧಾನಿಗಳ ನಡುವೆ ಆದ ಮಾತುಕತೆಗಳನ್ನು ಕಳೆದ ಒಂದು ವಾರದಿಂದ ಪಾಕ್ ಮಂತ್ರಿ ಮಂಡಲವು ಪರಿಶೀಲಿಸಿ ತನ್ನ ಅಭಿಪ್ರಾಯವನ್ನು ಒಳಗೊಂಡ ಪತ್ರವೊಂದನ್ನು ಪ್ರಧಾನಿ ನೆಹರೂರವರಿಗೆ ಕಳುಹಿಸಿರುವುದಾಗಿ ತಿಳಿಯಬರುತ್ತದೆ.

ಸರ್ಕಾರವು ದುಷ್ಕೃತ್ಯಗಳನ್ನು ತಪ್ಪಿಸಬೇಕು

ಬೊಂಬಾಯಿ ಪ್ರಾಂತ್ಯದಲ್ಲಿ ಇತ್ತೀಚೆಗೆ ಕೊಲೆಗಳು ಹೆಚ್ಚುತ್ತಿವೆ. ಅದರಲ್ಲಿ ಸಮಾಜ ಮತ್ತು ಸಾರ್ವಜನಿಕ ಸೇವಕರ ಕೊಲೆಯು ವಿಶೇಷವಾಗಿ ನಡೆಯುತ್ತಿದೆ. ಇದನ್ನು ತಡೆಗಟ್ಟಲು ಸರ್ಕಾರವು ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಬೊಂಬಾಯಿ ಪ್ರದೇಶ ಕಾಂಗ್ರೆಸ್ ಸಮಿತಿಯು ಸರಕಾರವನ್ನು ಕೋರಿದೆ.

ಪತ್ನಿ ಮತ್ತು ೩ ಮಕ್ಕಳ ಕೊಲೆ

ಮದ್ರಾಸ್ ಪ್ರಾಂತ್ಯದ ಅಂಬಾಸಮುದ್ರ ತಾಲ್ಲೂಕಿನ ವಿಕ್ರಮಸಿಂಗಪುರದ ನಿವಾಸಿ ಸುಬ್ಬಯ್ಯಾಚಾರಿ ಎಂಬುವನು ತನ್ನ ೩೫ ವರ್ಷದ ಪತ್ನಿ, ೧೩, ೫ ಮತ್ತು ೨ ವರ್ಷಗಳ ಮೂರು ಮಕ್ಕಳನ್ನು ಕೊಲೆಮಾಡಿದನೆಂದು ಈಗ ಅತನನ್ನು ದಸ್ತಗಿರಿ ಮಾಡಲಾಗಿದೆ. ಮತ್ತೊಂದು ೧೦ ವರ್ಷದ ಮಗುವನ್ನು ಕೊಲೆಮಾಡಲು ಯತ್ನಿಸಿದಾಗ ಅದು ತಪ್ಪಿಸಿಕೊಂಡಿತೆಂದೂ ಹೇಳಲಾಗಿದೆ.

● ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ಮುಂದಿನ ತಿಂಗಳು ೪ನೇ ತಾರೀಖು ಬೆಂಗಳೂರಿನಲ್ಲಿ ನಡೆಯುವುದೆಂದು ಹೇಳಲಾಗಿದೆ.

ಪ್ರಭಾ 30-8-53 ರಿಂದ 5 ದಿನಗಳು ದಿನವಹಿ 3 ಪ್ರದರ್ಶನಗಳು
ವಿ. ಶಾಂತಾರಾಂರವರ:—
ಅಮರ್ ಭೂಪಾಲಿ
ಪಾತ್ರ:-ಸಂಧ್ಯಾ, ಪಂಡಿತ್ ರಾವ್ ನಗರ್‌ಕರ್, ಲಲಿತಾಪವರ್
ಕಡೆಯ ಎರಡು ದಿನಗಳು
ನಯಾಗರ್
ಬೆಳಗಿನ ಪ್ರದರ್ಶನ 28-8-53 ರಿಂದ 3 ದಿನಗಳು. ಮಧುಬಾಲ, ನಾಸೀರ್ ಖಾನ್ ನಟಿಸಿರುವ "ಶಾಹ್ ಜಹಾನ್"

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೧

೨೯-೮-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮೈಸೂರಿನಲ್ಲಿ ಸುವ್ಯವಸ್ಥಿತ ಮೀನು ಮಾರಾಟ ಕೇಂದ್ರ

ಕೇಂದ್ರ ಆಯೋಜನಾ ಸಮಿತಿಯ ಸಲಹೆ

ಉಚಿತ ಒಳ ಚರಂಡಿ ವ್ಯವಸ್ಥೆ ಸದ್ಯಕ್ಕೆ ಮುಂದುವರಿಯಬೇಕು

ಮೈಸೂರು ೨೯

ನಗರ ಪುರಸಭೆಯ ಸಾಮಾನ್ಯ ಅಧಿವೇಶನವು ನಿನ್ನೆ ಸಂಜೆ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಪ್ರಾರಂಭದಲ್ಲಿ ಪುರಸಭೆಯ ಮಾಜಿ ಸದಸ್ಯರೂ ಮತ್ತು ಹಿರಿಯ ಪತ್ರಿಕೋದ್ಯಮಿಗಳೂ ಆಗಿದ್ದ ಶ್ರೀ ಟಿ. ಕೃಷ್ಣರಾಯರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯವನ್ನು ಅನುಮೋದಿಸಲಾಯಿತು.

ಅಶೋಕಾ ರಸ್ತೆಯಲ್ಲಿ ಹಳ್ಳಕೊಳ್ಳಗಳು ಬಿದ್ದು ವಾಹನಕ್ಕೆ ವಿಶೇಷ ತೊಂದರೆಯಾಗಿರುವುದರಿಂದ ಅದನ್ನು ಪುನಃ ಟಾರುಮಾಡುವ ಬದಲು ಸಿಮೆಂಟ್ ಮಾಡುವಂತೆ ಇಂಜನಿಯರಿಂಗ್ ಇಲಾಖೆಗೆ ಸರ್ಕಾರದವರು ಸೂಚನೆ ಕೊಡಬೇಕೆಂದು ಪ್ರಾರ್ಥಿಸುವ ಶ್ರೀ ಹೆಚ್. ಎಸ್. ಮುದ್ದಯ್ಯನವರ ನಿರ್ಣಯವು ಅಂಗೀಕೃತವಾಯಿತು.

ಆಹಾರ ಧಾನ್ಯಗಳನ್ನು ಖಾಸಗಿಯವರು ಸರ್ಕಾರದ ದರಕ್ಕಿಂತ ಹೆಚ್ಚಿಗೆ ಮಾರಕೂಡದೆಂದು ಸರ್ಕಾರದವರು ಸೂಕ್ತ ಆಜ್ಞೆಯನ್ನು ಹೊರಡಿಸಬೇಕೆಂದು ಪ್ರಾರ್ಥಿಸುವ ಶ್ರೀ ಬಿ. ಜಿ. ದಾಸ್‌ರ ನಿರ್ಣಯವು ತಿರಸ್ಕೃತವಾಯಿತು.

ಸರ್ಕಾರದವರು ಈ ನಿರ್ಣಯವನ್ನು ಅನುಮೋದಿಸಿದರೆ, ಹಿಂದೆ ಹತೋಟಿ ಕಾಲದಲ್ಲಿದ್ದಂತೆ ಕಾಳಸಂತೆ ಮುಂತಾದ ನಾನಾ ಕಿರುಕುಳಗಳು ಪುನಃ ಉದ್ಭವಿಸುವುವು— ಎಂದು ಅನೇಕ ಸದಸ್ಯರು ನಿರ್ಣಯವನ್ನು ವಿರೋಧಿಸಿದರು.

ಯಾದವಗಿರಿ ಬಡಾವಣೆಗೆ ನೀರಿನ ಸೌಕರ್ಯ ಕಲ್ಪಿಸಲು ೫೧೬೧೦ ರೂ. ಗಳ ಅಂದಾಜನ್ನು ಸರ್ಕಾರವು ಮಂಜೂರುಮಾಡಿರುವುದನ್ನು ರಿಕಾರ್ಡ್ ಮಾಡಲಾಯಿತು.

ನಗರದ ಮಾರ್ಕೆಟ್ಟುಗಳಲ್ಲಿರುವ ಅಂಗಡಿಗಳ ಬಾಡಿಗೆದಾರರು ಬೇರೆಯವರಿಗೆ ಬಾಡಿಗೆ ಕೊಡುವುದನ್ನು ತಡೆಗಟ್ಟುವ ಉಪ ನಿಯಮಗಳನ್ನು ಸರ್ಕಾರದವರು ಮಂಜೂರುಮಾಡಿರುವುದನ್ನು ರಿಕಾರ್ಡ್ ಮಾಡಲಾಯಿತು.

ಭಾರತದ ಪಂಚವಾರ್ಷಿಕ ಯೋಜನೆಯ ಅಂಗವಾಗಿ ಮೈಸೂರು ನಗರದಲ್ಲಿ ಒಂದು ವ್ಯವಸ್ಥಿತ ಮೀನು ಮಾರಾಟದ ಕೇಂದ್ರವನ್ನು ಸ್ಥಾಪಿಸಬೇಕೆಂದು ಆಯೋಜನಾ ಕಮೀಷನ್‌ರವರು ಮಾಡಿರುವ ಸಲಹೆಯನ್ನು ಪರಿಶೀಲಿಸಲು ಬಂದ ಪತ್ರವನ್ನು ಮ್ಯಾನೇಜಿಂಗ್ ಸಮಿತಿಗೆ ಕಳುಹಿಸಲಾಯಿತು.

ಪುರಸಭಾ ಚುನಾವಣೆಯನ್ನು ಮುಂದುವರಿಸಿದ ವಿಷಯದಲ್ಲಿ ಶ್ರೀ ಬಿ. ಜಿ. ದಾಸ್‌ರವರು ಕೇಳಿದ ಪ್ರಶ್ನೆಗಳಿಗೆ ಉತ್ತರವಾಗಿ, ವಯಸ್ಕರ ಮತದಾನ ಪದ್ಧತಿಯ ಮೇಲೆ ಚುನಾವಣೆ ನಡೆಸಲು ಕೆಲವು ಆಡಳಿತ ತೊಂದರೆಗಳಿದ್ದುದರಿಂದ ಸರ್ಕಾರದವರು ಚುನಾವಣೆಯನ್ನು ಮುಂದುವರಿಸಿದರೆಂದೂ, ಸರ್ಕಾರಕ್ಕೆ ಈಬಗ್ಗೆ ಅಧಿಕಾರವಿರುವುದಾಗಿಯೂ ಅಧ್ಯಕ್ಷರು ತಿಳಿಸಿದರು.

ಪುನಃ ಚುನಾವಣೆಯು ಯಾವಾಗ ನಡೆಯುವುದೆಂದು ಖಚಿತವಾಗಿ ತಿಳಿಸಲಾಗುವುದೇ ಅಥವ ಅದನ್ನು ಪುನಃ ಮುಂದುವರಿಸಲಾಗುವುದೇ ಎಂಬ ಪ್ರಶ್ನೆಗೆ, ಕಾಲ ನಿರ್ದಿಷ್ಟವಾಗಿ ತಿಳಿಸಿದರು ರಿಟರ್ನಿಂಗ್ ಅಧಿಕಾರಿಗಳೆಂದೂ, ಪುರಸಭೆಗಳ ಕಾನೂನಿನ ೧೫ ನೇ ವಿಧಿ ಪ್ರಕಾರ, ಚುನಾವಣೆಯು ಮುಂದುವರೆಯುವುದಿಲ್ಲವೆಂದು ಉತ್ತರ ಕೊಡಲಾಯಿತು.

ಮನೆಗಳಿಗೆ ಒಳ ಚರಂಡಿ ಸೌಕರ್ಯವನ್ನು ಉಚಿತವಾಗಿ ಕೊಡುತ್ತಿರುವ ಈಗಿನ ಪದ್ಧತಿಯನ್ನು ರದ್ದುಮಾಡಿ, ಬೆಂಗಳೂರು ಮತ್ತು ಇತರ ಸಣ್ಣ ಪುರ ಸಭೆಗಳಿರುವಂತೆಯೇ ಮನೆ ಮಾಲೀಕರುಗಳೇ ಅದರ ವೆಚ್ಚ ಕೊಡಬೇಕೆಂದು ಸರ್ಕಾರದಿಂದ ಬಂದಿದ್ದ ಪತ್ರವನ್ನು ಪರಿಶೀಲಿಸಿ, ಈ ರಿಯಾಯಿತಿಯನ್ನು ಇನ್ನು ೨ ವರ್ಷಗಳ ಕಾಲ ಮುಂದುವರಿಸಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಬೇಕೆಂದು ನಿರ್ಧರಿಸಲಾಯಿತು.

ಮೈಸೂರು ನಗರದಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ಪುರಸಭೆಯವರು ಕೊಡುತ್ತಿರುವ ೩೮ ಸಾವಿರ ರೂ. ಚಂದಾವನ್ನು ರದ್ದುಮಾಡುವುದಾದರೆ ಪುರಸಭೆಯವರು ಸರ್ಕಾರಕ್ಕಾಗಿ ಆರೋಗ್ಯ ತೆರಿಗೆಯನ್ನು ವಸೂಲು ಮಾಡಿ ಕೊಡುವುದಾಗಿ ಸರ್ಕಾರಕ್ಕೆ ತಿಳಿಸಬೇಕೆಂದು ತೀರ್ಮಾನಿಸಲಾಯಿತು.

ಸೈನ್ಯ ಮತ್ತು ಪೋಲೀಸ್ ದಳಗಳಿಗೆ ಖಾದಿ

ಭಾರತದ ಪೋಲೀಸ್ ಮತ್ತು ಸೈನಿಕ ದಳಗಳು ಖಾದಿಯನ್ನು ಉಪಯೋಗಿಸುವ ಸಾಧಕಬಾಧಕಗಳನ್ನು ಇದೇ ೨೯ನೇ ತಾರೀಖು ದೆಹಲಿಯ ರಾಷ್ಟ್ರಭವನದಲ್ಲಿ ನಡೆಯುವ ಸಭೆಯಲ್ಲಿ ಪರಿಶೀಲಿಸಲಾಗುವುದೆಂದು ಹೇಳಲಾಗಿದೆ.

ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಮಾತೃಭಾಷೆ ಶಿಕ್ಷಣ ಮಾಧ್ಯಮ ಆಗಬೇಕು

ಸೆಕೆಂಡರಿ ವಿದ್ಯಾಭ್ಯಾಸ ಸುಧಾರಣಾ ಸಮಿತಿಯ ಸಲಹೆ

ಸೆಕೆಂಡರಿ ವಿದ್ಯಾಭ್ಯಾಸ ಕ್ರಮದಲ್ಲಿ ಮಾತೃಭಾಷೆಯು ಶಿಕ್ಷಣ ಮಾಧ್ಯಮವಾಗಿರಬೇಕು. ಇದಲ್ಲದೆ ರಾಷ್ಟ್ರಭಾಷೆ ಮತ್ತು ವಿದೇಶಿ ಭಾಷೆಯನ್ನೂ ಸಹ ಅಲ್ಲಿ ಕಲಿಯುವಂತೆ ವ್ಯವಸ್ಥೆ ಮಾಡಬೇಕು-ಎಂಬುದಾಗಿ ಮದ್ರಾಸಿನ ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳಾದ ಡಾ|| ಲಕ್ಷಣಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರವು ನೇಮಿಸಿದ್ದ ಸೆಕೆಂಡರಿ ವಿದ್ಯಾಭ್ಯಾಸ ಸುಧಾರಣಾ ಸಮಿತಿಯು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿರುವ ತನ್ನ ವರದಿಯಲ್ಲಿ ತಿಳಿಸಿದೆ.

ಸೆಕೆಂಡರಿ ವಿದ್ಯಾಭ್ಯಾಸವು ೭ ವರ್ಷಕಾಲ ನಡೆಯಬೇಕು. ಉತ್ತಮ ಪಠ್ಯಪುಸ್ತಕಗಳನ್ನು ಆರಿಸಲು ಪರಿಗಣಿತ ಸಮಿತಿಗಳಿರಬೇಕು, ತಾಂತ್ರಿಕ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ಕೊಡುವುದು ಅತ್ಯಾವಶ್ಯಕ. ವ್ಯವಸಾಯ, ಕೈಗಾರಿಕೆ, ವ್ಯಾಪಾರ, ವಾಣಿಜ್ಯ, ಪೌರತ್ವ ವಿಷಯದಲ್ಲಿ ತರಪೇತು ಕೊಡುವ ವ್ಯವಸ್ಥೆಯಿರಬೇಕು, ಕೆಲವು ಪಾಠಗಳನ್ನು ಸಾರ್ವತ್ರಿಕವಾಗಿ ಎಲ್ಲರೂ ಕಲಿಯಬೇಕು. ಪ್ರತಿವರ್ಷವೂ ಪಾಠಶಾಲೆಗಳು ೨೦೦ ದಿನಗಳಾದರೂ ಕೆಲಸ ಮಾಡಬೇಕು, ಪ್ರತಿ ವಾರದಲ್ಲೂ ೪೫ ನಿಮಿಷಗಳ ೩೫ ಪೀರಿಯಡ್‌ಗಳಿರಬೇಕು. ಎಂಬ ಈ ಸಲಹೆಗಳೂ ಈ ವರದಿಯಲ್ಲಿ ಅಡಕವಾಗಿವೆ. ಇದಲ್ಲದೆ ಉಪಾಧ್ಯಾಯರ ಸ್ಥಿತಿಗತಿಗಳನ್ನು ಉತ್ತಮಗೊಳಿಸುವುದು, ದೈಹಿಕ ಶಿಕ್ಷಣಕ್ರಮ, ಉಪಾಧ್ಯಾಯರ ನೇಮಕದ ಬಗ್ಗೆ ಅನುಸರಿಸಬೇಕಾದ ನೀತಿ ನಿಯಮಗಳು ಇವುಗಳಬಗ್ಗೆಯೂ ಸೂಕ್ತ ಸಲಹೆಗಳನ್ನೂ ಈ ವರದಿಯಲ್ಲಿ ಕೊಡಲಾಗಿದೆ.

ಮೈಸೂರು ಉಪಾಧ್ಯಾಯರಿಗೆ ಉನ್ನತ ಶಿಕ್ಷಣ

ಭಾರತದಲ್ಲಿ ಶಿಕ್ಷಣ ಪಡೆದ ಉಪಾಧ್ಯಾಯರು ಮತ್ತು ಶಾಲಾ ಮುಖ್ಯೋಪಾಧ್ಯಾಯರುಗಳಿಗೆ ಉನ್ನತ ಶಿಕ್ಷಣ ಕೊಡಲು ಅಮೆರಿಕದಿಂದ ೫ ಮಂದಿ ಪ್ರವೀಣರು ಆಗಮಿಸಿದ್ದಾರೆ. ಪ್ರಥಮ ವ್ಯಾಸಂಗದ ಶಿಕ್ಷಣವನ್ನು ಪಾಟ್ನಾದಲ್ಲಿ ಮುಂದಿನ ತಿಂಗಳು ೧೪ನೇ ತಾರೀಖಿನಿಂದ ಪ್ರಾರಂಭಿಸಲಾಗುವುದು. ಅನಂತರ ಜಬ್ಬಲ್‌ಪುರ, ಬರೋಡಾ ಮತ್ತು ಮೈಸೂರುಗಳಲ್ಲಿಯೂ ನಡೆಯುವುದು.

ಜಿಲ್ಲಾಬೋರ್ಡ್ ಅಧ್ಯಕ್ಷರಿಗೆ ಮೋಟಾರು ಕೊಡಕೂಡದು

ಮದರಾಸ್ ಸರ್ಕಾರದ ಆಜ್ಞೆ

ಜಿಲ್ಲಾಬೋರ್ಡುಗಳು ತಮ್ಮ ಅಧ್ಯಕ್ಷ ಮತ್ತು ಇತರ ಅಧಿಕಾರಿಗಳಿಗೆ ಮೋಟಾರು ಕಾರುಗಳನ್ನು ತಮ್ಮ ಹಣದಿಂದ ಕೊಂಡುಕೊಳ್ಳಬಹುದೆಂದು ಮದರಾಸ್ ಸರ್ಕಾರದವರು ಕೊಟ್ಟ ಅನುಮತಿಯನ್ನು ಈಗ ರದ್ದುಮಾಡಿದ್ದಾರೆ. ಮುಂದೆ ಯಾವ ಬೋರ್ಡ್ ಅಧ್ಯಕ್ಷರೂ ಬೋರ್ಡಿನ ಹಣದಿಂದ ಕಾರುಗಳನ್ನು ಕೊಳ್ಳಕೂಡದೆಂದೂ ಈಗಾಗಲೇ ಕೊಂಡ ಕಾರುಗಳನ್ನು ಬಹಿರಂಗ ಹರಾಜಿನಲ್ಲಿ ಮಾರಿ ಆ ಹಣವನ್ನು ಬೋರ್ಡಿಗೆ ಕಟ್ಟಬೇಕೆಂದೂ ಸರ್ಕಾರದವರು ಆಜ್ಞೆಮಾಡಿದ್ದಾರೆ.

೪೦೦೦ ಜನರಿಗೆ ಉಚಿತ ಗಂಜಿ ಹಂಚಿಕೆ

ಕೊಲ್ಲಾಪುರಕ್ಕೆ ೨೫ ಮೈಲಿ ದೂರದಲ್ಲಿರುವ ಸಿಪಾನಿ ಎಂಬ ಗ್ರಾಮದಲ್ಲಿರುವ ನಿರುದ್ಯೋಗಿಗಳಿಗೆ ಪ್ರತಿ ನಿತ್ಯವೂ ಒಂದು ಲೋಟಾ ಬಿಸಿ ಜೋಳದ ಗಂಜಿಯನ್ನು ಉಚಿತವಾಗಿ ಕೊಡಲು ಅಲ್ಲಿಯ ಸಾಹುಕಾರರು ಮತ್ತು ವರ್ತಕರು ಏರ್ಪಾಡು ಮಾಡಿದ್ದಾರೆ. ಸದ್ಯಕ್ಕೆ ೩ ತಿಂಗಳ ಕಾಲ ಈ ಉದಾರದಾನ ನಿತ್ಯವೂ ನಡೆಯುತ್ತಿದೆ. ಸುಮಾರು ೪೦೦೦ ಜನರು ಈ ಉಚಿತ ಸೌಕರ್ಯಗಳನ್ನು ಪಡೆಯುತ್ತಿರುವರು.

ಮೊಸಾದಿಕ್‌ರು ದೇಶಕ್ಕೆ ಭಾರಿ ಸಾಲ ಹೊರಿಸಿದ್ದಾರೆ

ಪರ್ಷಿಯಾದ ಮಾಜಿ ಪ್ರಧಾನಿ ಡಾ|| ಮೊಸಾದಿಕ್‌ರು ತಮ್ಮ ಆಡಳಿತ ಕಾಲದಲ್ಲಿ ದೇಶಕ್ಕೆ ೧೭೭೦ ಕೋಟಿ ೫೦ ಲಕ್ಷ ರಿಯಲ್‌ಗಳಷ್ಟು ಸಾಲ ಹೊರಿಸಿ ಹೋದರೆಂದು ನೂತನ ಪ್ರಧಾನಿ ತಿಳಿಸಿದ್ದಾರೆ.

○ ಈ ವರ್ಷದ ಮೊದಲನೆ ಆರು ತಿಂಗಳಿನಲ್ಲಿ ಭಾರತವು ವಿದೇಶಗಳಿಂದ ೩೯ ಕೋಟಿ ೯೨ ಲಕ್ಷ ರೂಪಾಯಿಗಳಷ್ಟು ಬೆಲೆಬಾಳುವ ಗೋಧಿಯನ್ನು ಆಮದು ಮಾಡಿರುವುದಾಗಿ ಹೇಳಲಾಗಿದೆ. ೧೯೫೨ ರಲ್ಲಿ ಭಾರತವು ೧೨೭ ಕೋಟಿ ೪೦ ಲಕ್ಷ ರೂ. ಗಳಷ್ಟು ಗೋಧಿಯನ್ನು ತರಿಸಿತ್ತು.

ಕೊರಿಯಾ ಸಮ್ಮೇಳನದಲ್ಲಿ ಭಾರತಕ್ಕೆ ಸ್ಥಾನ ಬೇಕಿಲ್ಲ

ಮಹಾಸಭೆಯಲ್ಲಿ ಭಾರತ ಪ್ರತಿನಿಧಿ ಹೇಳಿಕೆ

ಕೊರಿಯಾದಲ್ಲಿ ಸ್ಥಾಪಿತವಾಗಲಿರುವ ಶಾಂತಿ ಸಮ್ಮೇಳನದಲ್ಲಿ ಯಾವ ರಾಷ್ಟ್ರಗಳು ಭಾಗವಹಿಸಬೇಕೆಂಬ ವಿಷಯವನ್ನು ನಿರ್ಧರಿಸಲು ನಿನ್ನೆಯ ದಿನ ವಿಶ್ವಸಂಸ್ಥೆಯ ಮಹಾಧಿವೇಶನವು ಸಭೆ ಸೇರಿತ್ತು. ಭಾರತವು ಈ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಬೇಕೆಂಬ ರಾಜಕೀಯ ಸಮಿತಿಯ ನಿರ್ಧಾರವು ಚರ್ಚೆಗೆ ಬಂದಾಗ ಭಾರತ ಪ್ರತಿನಿಧಿ ಶ್ರೀ ವಿ.ಕೆ. ಕೃಷ್ಣ ಮೆನನ್‌ರವರು ಮಾತನಾಡುತ್ತ ಶಾಂತಿ ಸಮ್ಮೇಳನದಲ್ಲಿ ತಾನು ಭಾಗ ವಹಿಸಬೇಕೆಂದು ಭಾರತವು ಉಮೇದುವಾರಿಕೆ ಸಲ್ಲಿಸಿಲ್ಲ. ಆ ಸ್ಥಾನಕ್ಕಾಗಿ ಅದು ಒತ್ತಾಯ ಮಾಡುವುದಿಲ್ಲ. ಶಾಂತಿ ಸ್ಥಾಪನಾ ಕಾರ್ಯದಲ್ಲಿ ಉತ್ತಮ ವಾತಾವರಣವನ್ನು ಕಲ್ಪಿಸಿ, ಅಮೆರಿಕಾ ಮತ್ತು ಬ್ರಿಟನ್ನಿನ ನಡುವೆ ಈಗ ಎದ್ದಿರುವ ಭಿನ್ನತೆಯನ್ನು ತಪ್ಪಿಸಲು ಭಾರತವು ಶಾಂತಿ ಸಮ್ಮೇಳನದಲ್ಲಿರಬೇಕೆಂಬ ವಿಷಯವನ್ನು ಓಟಿಗೆ ಹಾಕಬಾರದೆಂದು ತಿಳಿಸಿದರು. ಅನಂತರ ಕೋರಿಕೆ ಮೇಲೆ ವಿಷಯದಲ್ಲಿ ಮತವನ್ನು ಪಡೆಯದೆ ಅದನ್ನು ಅಲ್ಲಿಗೇ ಬಿಡಲಾಯಿತು.

ಸೂಕ್ತ ರೀತಿಯ ನಿಲುವನ್ನು ಅವಲಂಬಿಸಲು ಶ್ರೀ ಕೃಷ್ಣಮೆನನ್‌ರವರಿಗೆ ಭಾರತ ಸರ್ಕಾರವು ಪೂರ್ಣ ಸ್ವಾತಂತ್ರವನ್ನು ಕೊಟ್ಟಿದ್ದಿತು.

೧॥ ಲಕ್ಷ ಮಂದಿ ವಿದ್ಯಾವಂತ ನಿರುದ್ಯೋಗಿಗಳು

ಮೈಸೂರು ಸಂಸ್ಥಾನದಲ್ಲಿ ೩,೨೬೭, ಮದರಾಸಿನಲ್ಲಿ ೩,೨೦೫೧, ದೆಹಲಿಯಲ್ಲಿ ೯೩೯೪, ಒಟ್ಟು ದೇಶದಲ್ಲಿ ೧೪೭೬೯ ಮಂದಿ ವಿದ್ಯಾವಂತ ನಿರುದ್ಯೋಗಿಗಳಿದ್ದಾರೆ. ೨ ಸಾವಿರ ಮಂದಿ ಪದವೀಧರರು ಮತ್ತು ೩೦ ಸಾವಿರ ಎ. ಎಸ್. ಎಲ್. ಸಿ. ಗಳೂ ಕೆಲಸವಿಲ್ಲದೆ-ಇದ್ದಾರೆ ಎಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ.

ಗೋಹತ್ಯೆ ತಪ್ಪಿಸಬೇಕೆಂದು ಪ್ರಧಾನಿಗೆ ಮನವಿ

ದೇಶದಲ್ಲಿ ಗೋಹತ್ಯವನ್ನು ತಪ್ಪಿಸಲು ಕ್ರಮತೆಗೆದುಕೊಳ್ಳಬೇಕೆಂದು ಸೇಟ್ ಗೋವಿಂದದಾಸ್‌ರವರ ನಾಯಕತ್ವದಲ್ಲಿ ಭಾರತ ಗೋ ಸೇವಕ ಸಮಾಜದ ಒಂದು ನಿಯೋಗವು ಪ್ರಧಾನಿ ನೆಹರೂರವರನ್ನು ಭೇಟಿ ಮಾಡಿ ಮನವಿಮಾಡಿತು. ಪ್ರಾಂತ್ಯಗಳಲ್ಲಿ ಮಾಡಿರುವ ಶಾಸನವು ಅಷ್ಟು ಫಲಪ್ರದವಾಗಿಲ್ಲದುದರಿಂದ ರಾಜ್ಯಾಂಗದ ೪೮ ನೇ ವಿಧಿಯ ಪ್ರಕಾರ ಕೇಂದ್ರವು ಸೂಕ್ತಕ್ರಮವನ್ನು ಕೈಗೊಳ್ಳಬೇಕೆಂದು ಅವರು ಮನವಿ ಮಾಡಿದರೆಂದು ತಿಳಿಯಬರುತ್ತದೆ.

○ ರಾಷ್ಟ್ರಾಧ್ಯಕ್ಷರು ಅಕ್ಟೋಬರ್ ೯ ನೇ ತಾರೀಖು ಬೊಂಬಾಯಿಗೆ ಆಗಮಿಸಿ ೧೦ ನೇ ತಾರೀಖು ನೌಕಾದಳ ಪರಿಶೀಲನೆ ನಡೆಸುತ್ತಾರೆ. ಅದಕ್ಕೆ ಮೂರುವಾರ ಮೊದಲು ಪಂಜಾಬ್ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಪ್ರವಾಸ ನಡೆಸುವರು.

ಭಾರತವಾಚನ

ಮೈಸೂರು ೨೯

ಸಂತೇಪೇಟೆಯಲ್ಲಿರುವ ಕುಂಚಿಟಿಗರ ಶ್ರೀ ರಾಮ ಮಂದಿರದಲ್ಲಿ ಪ್ರತಿನಿತ್ಯವೂ ಸಂಜೆ ಏಳುವರೆಯಿಂದ ಎಂಟುವರೆವರೆವಿಗೆ ಗಮಕ ವಿದ್ವಾನ್ ಶ್ರೀ ಕೃಷ್ಣರಾಯರವರಿಂದ ಭಾರತ ವಾಚನವೂ, ಸಂಜೆ ೭ರಿಂದ ೮ರವರೆವಿಗೆ ಗಮಕ ಸಹೋದರರಿಂದ ಶ್ರೀ ಕೌಶಿಕ್ ಮತ್ತು ಶ್ರೀ ವೆಂಕಟಸುಬ್ಬಯ್ಯನವರಿಂದ ಶಂಕರವಿಜಯ ವಾಚನವು ನಡೆಯುತ್ತಿ.

ಕಾಂಗ್ರೆಸ್ಸಿನಿಂದ ಮಾಜಿ ಸಚಿವರ ಉಚ್ಚಾಟನೆ ?

ಸರ್ಕಾರದ ವಿರುದ್ಧ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರೆಂದು ಪಂಜಾಬಿನ ಮಾಜಿ ಸಚಿವ ಶ್ರೀ ಶ್ರೀರಾಮಶರ್ಮರವರನ್ನು ಕಾಂಗ್ರೆಸ್ಸಿನಿಂದ ತೆಗೆದುಹಾಕುವ ವಿಷಯವನ್ನು ಎ. ಐ. ಸಿ. ಸಿ. ಯು ಪರಿಶೀಲಿಸುವುದಾಗಿ ತಿಳಿಯಬರುತ್ತದೆ. ಈ ಬಗ್ಗೆ ಅವರ ಭಾಷಣ ಮುಂತಾದ ವಿಷಯ ಸಂಗ್ರಹಣೆ ಕಾರ್ಯದಲ್ಲಿ ಪಂಜಾಬ್ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ತೊಡಗಿದ್ದಾರೆ. ಶ್ರೀ ಶ್ರೀರಾಮಶರ್ಮರವರ ಸಹಾಯಕರಾಗಿದ್ದ ಮತ್ತಿಬ್ಬರನ್ನೂ ಕಾಂಗ್ರೆಸ್ಸಿನಿಂದ ಹೊರದೂಡಲಾಗುವುದೆಂದು ತಿಳಿಯಬರುತ್ತದೆ.

ಪರಿಹಾರ ಸಮಿತಿಗಳ ರಚನೆ

ಇತ್ತೀಚೆಗೆ ಗೋದಾವರಿ ಪ್ರವಾಹದಿಂದ ನೊಂದವರಿಗೆ ಪರಿಹಾರಕ್ಕಾಗಿ ನಿಧಿ ಸಂಗ್ರಹಣೆ ಮಾಡಲು ಮದ್ರಾಸ್, ಹೈದರಾಬಾದ್ ಮುಂತಾದೆಡೆ ಪರಿಹಾರ ನಿಧಿ ಸಮಿತಿಗಳನ್ನು ರಚಿಸಲಾಗಿದೆ. ಸಾರ್ವಜನಿಕರು ಈ ಪರಿಹಾರ ಕಾರ್ಯಗಳಿಗೆ ಉದಾರವಾಗಿ ದಾನ ಮಾಡಬೇಕೆಂದು ಕೋರಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೯—೮—೧೯೫೩

ಪಲ್ಲ	ರೂ. ಅ	ರೂ. ಅ
ಕಡಲೇಕಾಯಿ	೧೨—೨	೨೮—೨
ಎಳ್ಳು	೬೦—೮	೮೮—
ಹುರುಳಿ	—	—
ಹೆಸರು	೪೫—೨	೬೧—೧೦
ಹುರುಳು	೪೦—೨	೪೩—
ಅಲಸಂದೆ	೫೭—೧೮	೭೪—೧೦
ಹೊಂಗೆಬೀಜ	—	—
ಅವರೆ	—	—
ಉಪ್ಪು	೭೦—೧೦	೭೨—೬
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೭—	—
ಸೀಗೆಕಾಯಿ	೭—	—
ಬೆಲ್ಲ	೮—	
ತೆಂಗಿನಕಾಯಿ	೧೬೦	೨೬೮

ನೆಹರೂ ವಿದೇಶಾಂಗ ನೀತಿ ಬಗ್ಗೆ ಬರ್ಮಾ ಪ್ರಧಾನಿ ಪ್ರಶಂಸೆ

ಏಷ್ಯಾ ರಾಷ್ಟ್ರಗಳೆಲ್ಲಾ ನೆಹರೂಗೆ ಕೃತಜ್ಞರಾಗಿರಬೇಕು

ವಿಶ್ವದಲ್ಲಿ ಅನೇಕ ರಾಷ್ಟ್ರಗಳು ಭಾರತ ಪ್ರಧಾನಿ ನೆಹರೂರವರ ವಿದೇಶಾಂಗ ನೀತಿ ಮತ್ತು ನಿಲುವನ್ನು ಪೂರ್ಣವಾಗಿ ತಿಳಿದುಕೊಳ್ಳದಿರುವುದು ವಿಷಾದಕರ. ಏಷ್ಯಾದಲ್ಲೆಲ್ಲಾ ಅವರು ಅತ್ಯಂತ ಗಣನೆಯ ವ್ಯಕ್ತಿ ಅವರಿಗೆ ಎಲ್ಲಾ ಏಷ್ಯಾ ರಾಷ್ಟ್ರಗಳೂ ಚಿರಕೃತಜ್ಞರಾಗಿರಬೇಕು-ಎಂದು ಬರ್ಮಾದ ಪ್ರಧಾನಿ ಥೂಕಿನ್ ನೂರವರು ನೆಹರೂರವರ ವಿದೇಶಾಂಗನೀತಿಯ ಬಗ್ಗೆ ಪ್ರಶಂಸಿಸಿದ್ದಾರೆ.

ಪ್ರಧಾನಿ ನೆಹರೂರವರ ವಿದೇಶಾಂಗ ನೀತಿಯಲ್ಲಿ ಮೂರು ಸೂತ್ರಗಳು ಅಡಕವಾಗಿವೆ. ವಿಶ್ವದಲ್ಲಿ ಎಲ್ಲಿಯೂ ಯುದ್ಧವಾಗದಂತೆ ನೋಡಿಕೊಳ್ಳಬೇಕು, ಹಾಗೇನಾದರೂ ಯುದ್ಧವಾದಲ್ಲಿ ವಸಾಹತು ಶೃಂಖಲೆಗಳಿಂದ ಪಾರಾಗಿರುವ ಏಷ್ಯಾ ರಾಷ್ಟ್ರಗಳಿಗೆ ಅದು ಹರಡದಂತೆ ನೋಡಿಕೊಳ್ಳುವುದು. ಹಾಗೇನಾದರೂ ಹರಡಿದರೆ ಏಷ್ಯನ್ನರು ಏಷ್ಯನ್ನರೊಡನೆ ಯುದ್ಧ ಮಾಡಬಾರದು ಎಂಬೀ ಮೂರುಸೂತ್ರಗಳು ಅವರ ನಿಲುವು. ಯುದ್ಧಕ್ಕಾಗಿ ಹಾತೊರೆಯುತ್ತಿರುವ ರಾಷ್ಟ್ರಗಳು ಇವನ್ನು ಚೆನ್ನಾಗಿ ಅರಿತುಕೊಳ್ಳಬೇಕು—ಎಂದು ಅವರು ತಿಳಿಸಿದ್ದಾರೆ

ಸರ್ಕಾರಿ ಬಸ್ಸುಗಳಲ್ಲಿ ಹಣದ ದುರುಪಯೋಗ

ಬೆಂಗಳೂರು ೨೯

ಸರ್ಕಾರಿ ಬಸ್ಸುಗಳ ಸಂಚಾರ ಇಲಾಖೆಯಲ್ಲಿ ಇತ್ತೀಚೆಗೆ ಉತ್ಪತ್ತಿಯು ಹೆಚ್ಚುತ್ತಲಿದ್ದಾಗ್ಯೂ ಅದರ ನೌಕರರು ಪ್ರಯಾಣೀಕರಿಗೆ ಟಿಕೆಟ್ಟುಗಳನ್ನು ಕೊಡದೆ ಬಂದ ಹಣವನ್ನು ದುರುಪಯೋಗಪಡಿಸುತ್ತಲಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ ಪ್ರಯಾಣ ಮಾಡುವ ಸಾರ್ವಜನಿಕರು ಸಹಕರಿಸಿದರೆ ಮಾತ್ರ ಈ ದುರುಪಯೋಗವನ್ನು ತಪ್ಪಿಸಲು ಸಾಧ್ಯ. ಈ ಬಸ್ಸುಗಳಲ್ಲಿ ಓಡಾಡುವ ಪ್ರಯಾಣೀಕರು ಟಿಕೀಟುಗಳನ್ನು ಕೊಡುವಂತೆ ಒತ್ತಾಯಪಡಿಸಿಯಾದರೂ ಪಡೆಯಬೇಕು. ಹಾಗೇನಾದರೂ ಕೊಡದಿದ್ದಲ್ಲಿ ಕೂಡಲೇ ವಿಷಯವನ್ನು ಇಲಾಖಾ ಜನರಲ್ ಮ್ಯಾನೇಜರ ಗಮನಕ್ಕೆ ತರಬೇಕು. ಅಲ್ಲದೆ ಪ್ರತಿಯೊಂದು ಬಸ್ಸಿನಲ್ಲೂ ಒಂದೊಂದು "ದೂರಿನ ಪುಸ್ತಕ"ವನ್ನು ಇಡಲಾಗಿದೆ. ಅದರಲ್ಲಿ ವಿಷಯಗಳನ್ನು ಬರೆಯಬಹುದು. ಸರ್ಕಾರಕ್ಕೆ ತಪ್ಪಿಹೋಗುತ್ತಿರುವ ಆದಾಯವು ಸರಿಯಾಗಿ ವಸೂಲಾಗುವಂತೆ ಸಾರ್ವಜನಿಕರು ಸಹಕರಿಸಬೇಕೆಂದು ಸರ್ಕಾರವು ಒಂದು ಪ್ರಕಟಣೆಯನ್ನಿತ್ತಿದೆ.

ಕಲ್ಕತ್ತ ಬಳಿ ಕಾಂಗ್ರೆಸ್ ಅಧಿವೇಶನ

ಕಲ್ಕತ್ತೆಗೆ ೩೦ ಮೈಲಿ ದೂರದಲ್ಲಿರುವ ಕಲ್ಯಾಣಿಪಟ್ಟಣದಲ್ಲಿ ಮುಂದಿನ ಜನವರಿ ತಿಂಗಳಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯಲು ವ್ಯವಸ್ಥೆ ಮಾಡಲಾಗುತ್ತಿದೆ. ಅದನ್ನು ಉಪಯೋಗಿಸಲು ಒಂದು ಲಕ್ಷ ರೂ. ಗಳನ್ನು ಬಂಗಾಳ ಸರಕಾರಕ್ಕೆ ಕೊಡಬೇಕಾಗುವುದು.

ಭಾರತ ಸೇವಕ ಸಮಾಜಕ್ಕೆ ಸಹಾಯ ಮಾಡಿ

ಭಾರತ ಸೇವಕ ಸಮಾಜ ಸಂಸ್ಥೆಯು ಫಲಕಾರಿಯಾಗಿ ಕೆಲಸಮಾಡಲು ಸಾರ್ವಜನಿಕರು ಹಣ ಸಹಾಯ ಮಾಡಬೇಕೆಂದು ಅವರ ಅಧ್ಯಕ್ಷ ಪಂಡಿತ ನೆಹರೂರವರು ಒಂದು ಮನವಿ ಹೊರಡಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಸೈನಿಕ ಶಿಕ್ಷಣ

ದೆಹಲಿಯ ಶಾಲೆಗಳಲ್ಲಿ ಓದುವ ಸುಮಾರು ೪೧೦೦೦ ಬಾಲಕರಿಗೆ ಸೈನಿಕ ಶಿಕ್ಷಣವನ್ನು ಕೊಡುವ ಒಂದು ವ್ಯವಸ್ಥೆಯನ್ನೂ ಪ್ರಾರಂಭಿಸಲಾಗಿದೆ. ಬಂದೂಕ ಉಪಯೋಗ ವಿನಹ ಮಿಕ್ಕೆಲ್ಲ ಬಾಬುಗಳಲ್ಲಿ ಆ ಬಾಲಕರಿಗೆ ಶಿಕ್ಷಣ ಕೊಡಲಾಗುವುದು

೨೫೦೦೦ ಎಕರೆ ಬತ್ತದ ಗದ್ದೆ ನೀರಿನ ಪಾಲು

ಗೋದಾವರಿ ನದಿ ಪ್ರವಾಹದ ಹಾವಳಿಯಿಂದ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ ೨೫೦೦೦ ಎಕರೆ ಬತ್ತದ ಗದ್ದೆ ಮತ್ತು ೭೦೦೦ ಎಕರೆ ಸಿದ್ಧವಾಗಿದ್ದ ಪೈರಿನ ಗದ್ದೆಗಳು ನೀರಿನ ಪಾಲಾಗಿ ಎಲ್ಲವೂ ಹಾಳಾಗಿವೆ.

○ ಬಿಹಾರಿನಲ್ಲಿ ಉಂಟಾಗಿರುವ ನದಿಗಳ ಪ್ರವಾಹದ ಹಾವಳಿಯಿಂದ ಸುಮಾರು ೮೦೦ ಮನೆಗಳು ಬಿದ್ದುಹೋಗಿವೆ. ೭ ಲಕ್ಷ ಜನರು ತೊಂದರೆಗೀಡಾಗಿದ್ದಾರೆಂದು ತಿಳಿಯಬರುತ್ತದೆ.

ಅಪೇರ

27--8--53 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಕನ್ನಿಕಾ ತಮಿಳು

ಪಾತ್ರ:–ಟಿ. ವರದಂ, ಕಾಳಿ ಎನ್ ರತ್ನಂ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ.

ರಣಜಿತ್

28-8–53 ರಿಂದ 2 ನೇ ವಾರ

ವರ್ಮ ಫಿಲಂಸ್ ರವರ

ಔರತ್ ಹಿಂದಿ

ಪಾತ್ರ--ಬಿನಾರಾಯ್, ಪ್ರೇಮನಾಥ್

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೫೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೨

೩೧-೮-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ನಿರುದ್ಯೋಗ ಪರಿಹಾರಕ್ಕೆ ಖಾದಿ ಒಂದು ಸಾಧನೆ

ಸೈನ್ಯ ಮತ್ತು ಪೋಲಿಸ್ ಖಾತೆ ಬಿಟ್ಟು ಮಿಕ್ಕೆಲ್ಲ ಶಾಖೆಗಳಲ್ಲಿ ಖಾದಿ ಉಪಯೋಗಿಸಬೇಕು

ರಾಷ್ಟ್ರಾಧ್ಯಕ್ಷರ ಮನವಿ

ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬೇಕಾದರೆ ಖಾದಿಯ ಬೆಳವಣಿಗೆ ಬಗ್ಗೆ ಪ್ರಾಂತ್ಯ ಮತ್ತು ಕೇಂದ್ರ ಸರ್ಕಾರಗಳು ಮತ್ತು ಜನತೆಯು ಎಲ್ಲಾ ಕಾರ್ಯಕ್ರಮಗಳನ್ನು ನಡೆಸಬೇಕು, ದೇಶದಲ್ಲಿ ಉದ್ಯೋಗವನ್ನು ಒದಗಿಸಲು ಖಾದಿ ಬೆಳವಣಿಗೆಯೇ ಮುಖ್ಯವಾದ ಸಾಧನೆ ಅದರಬಗ್ಗೆ ಕ್ರಮಗಳನ್ನು ಶೀಘ್ರವಾಗಿ ಪರಿಶೀಲಿಸಬೇಕಾಗಿದೆ. ಸೈನ್ಯ ಮತ್ತು ಪೋಲೀಸ್ ಖಾತೆಗಳು ಬಿಟ್ಟು ಸರ್ಕಾರದಲ್ಲಿ ಮಿಕ್ಕೆಲ್ಲ ಶಾಖೆಗಳಲ್ಲಿ ಖಾದಿಯನ್ನು ಉಪಯೋಗಿಸಬೇಕು ಆಗ ಖಾದಿ ಕೊಳ್ಳುವವರಿಗೆ ಕೊರತೆ ಇರುವುದಿಲ್ಲ ಎಂದು ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದ್‌ರವರು ನಿನ್ನೆಯದಿನ ದೆಹಲಿಯಲ್ಲಿ ನಡೆದ ಕೇಂದ್ರ ಮತ್ತು ಪ್ರಾಂತ್ಯ ಸಚಿವರ ಸಮ್ಮೇಳನದಲ್ಲಿ ತಿಳಿಸಿದರು.

ದೇಶದಲ್ಲಿ ವ್ಯವಸಾಯಗಾರರಿಗೆ ವರ್ಷವೆಲ್ಲಾ ಕೆಲಸವಿರುವುದಿಲ್ಲ. ವಿರಾಮ ಕಾಲದಲ್ಲಿ ರೈತರು ಖಾದಿ ನೂಲನ್ನು ತೆಗೆದು ಬಟ್ಟೆಯನ್ನು ನೆಯ್ದರೆ ಅವರ ಆರ್ಥಿಕ ಸ್ಥಿತಿಯು ಉತ್ತಮವಾಗುತ್ತದೆ. ಪೂರ್ಣ ಕಾರ್ಯವಿಲ್ಲದವರಿಗೆ ಕೆಲಸವು ಒದಗಿದಂತಾಗುತ್ತದೆ-ಎಂದು ರಾಷ್ಟ್ರಾಧ್ಯಕ್ಷರು ಹೇಳಿದರು.

ಈ ಸಂದರ್ಭದಲ್ಲಿ ಪ್ರಧಾನಿ ನೆಹರೂರವರು ಸಹ ಮಾತನಾಡುತ್ತಾ ಖಾದಿ ಕೈಗಾರಿಕೆಯಲ್ಲಿ ಕೀಳು ಮೇಲು ಎಂಬ ಭಾವನೆ ಇಲ್ಲ. ದೇಶದ ಪ್ರಗತಿಗೆ, ನಿರುದ್ಯೋಗ ಪರಿಹಾರಕ್ಕೆ ಇವರ ಬೆಳವಣಿಗೆಯೇ ಮಾರ್ಗವೆಂದು ಹೇಳಿದರು.

ಈ ಸಂದರ್ಭದಲ್ಲಿ ಅಖಿಲಭಾರತ ಖಾದಿ ಮತ್ತು ಕೈಗಾರಿಕೆ ಮಂಡಲಿಯು ಸಭೆ ನಡೆಸಿ ದೇಶಾದ್ಯಂತ ಖಾದಿ ವ್ಯಾಪಾರಕ್ಕೆ ಏಕರೀತಿಯ ವ್ಯವಸ್ಥೆಯನ್ನು ಅನುಸರಿಸಬೇಕೆಂಬ ಅಭಿಪ್ರಾಯಪಟ್ಟಿತು.

ತಮಿಳು ಉತ್ಸವ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದ್‌ರವರು ಮೊನ್ನೆ ಶನಿವಾರ ದೆಹಲಿಯಲ್ಲಿ ಆರನೇ ತಮಿಳು ಉತ್ಸವವನ್ನು ಉದ್ಘಾಟಿಸುತ್ತಾ ಹಿಂದಿಭಾಷೆಯನ್ನು ಯಾರಮೇಲೂ ಒತ್ತಾಯ ಪಡಿಸಬಾರದು ಜನರು ತಾವಾಗಿಯೇ ರಾಷ್ಟ್ರಭಾಷೆಯನ್ನು ಕಲಿಯಬೇಕು ಉತ್ತರಭಾರತದವರು ದಕ್ಷಿಣ ಭಾರತದ ಹಲವಾರು ಭಾಷೆಗಳನ್ನು ಕಲಿಯಬೇಕೆಂದು ತಿಳಿಸಿದರು.

ಉತ್ತರಭಾರತದಲ್ಲಿ ಭೂಕಂಪ

ಮೊನ್ನೆ ಶನಿವಾರ ಬೆಳಿಗ್ಗೆ ೭-೩೦ ಗಂಟೆ ವೇಳೆಯಲ್ಲಿ ಉತ್ತರಭಾರತದ ನಾನಾ ಪ್ರದೇಶದಲ್ಲಿ ಭೂಕಂಪವುಂಟಾಯಿತು. ಆದರೆ ಎಲ್ಲಿಯೂ ಪ್ರಾಣ ಹಾನಿಯೇನೂ ಸಂಭವಿಸಲಿಲ್ಲ ಈ ಭೂಕಂಪವು ದೆಹಲಿ, ಗ್ವಾಲಿಯರ್, ಪಾಟ್ನಾ, ಭಾವನಗರ, ಕಾನ್ಪುರ್, ಕಾಶಿ, ಗ್ವಾಲಿಯರ್ ಮುಂತಾದೆಡೆ ಸ್ವಲ್ಪ ಕಾಲ ಆಗಿರುವುದಾಗಿ ವರದಿಯಾಗಿದೆ.

ನೇಪಾಳ ರಾಜಧಾನಿ ಖಾಟ್ಮಂಡುವಿನಲ್ಲಿ ಮಾತ್ರ ಸುಮಾರು ಒಂದೂಕಾಲು ನಿಮಿಷ ಕಾಲ ಭೂಮಿ ನಡುಗಿತು. ಜನರೆಲ್ಲರೂ ಗಾಬರಿಯಿಂದ ಮನೆಗಳನ್ನು ಬಿಟ್ಟು ಹೊರಕ್ಕೆಬಂದರು.

ಭಾರತದ ಜನಸಂಖ್ಯೆ ೩೫ ಕೋಟಿ ೬೭ ಲಕ್ಷ

೧೯೫೧ನೇ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆಯು ೩೫ಕೋಟಿ ೬೭ಲಕ್ಷ. ಜಲಂಧರ್‌ನ ಜನಗಣತಿ ಕಛೇರಿಯಲ್ಲಿ ಒಂದುಲಕ್ಷ ೩೫ಸಾವಿರ ಜನರಿಗೆ ಸಂಬಂಧಪಟ್ಟ ದಾಖಲೆಗಳು ಸುಟ್ಟುಹೋದುದರಿಂದ ಇದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ

ಈ ಜನಸಂಖ್ಯೆಯಲ್ಲಿ ನಿಮ್ನ ವರ್ಗದವರು ೫ ಕೋಟಿ ೧೨ ಲಕ್ಷ ಇರುವರು. ನಿಮ್ನ ವರ್ಗ ಜನಾಂಗದವರು ೧೯೧ ಲಕ್ಷ ಜನರಿರುವರು. ಈ ಜನಸಂಖ್ಯೆಗೆ ಸಂಬಂಧಪಟ್ಟಂತೆ ರಾಷ್ಟ್ರೀಯ ಪುಸ್ತಕವೊಂದನ್ನು ತಯಾರಿಸಲಾಗಿದೆ.

ಆಚಾರ್ಯ ಕೃಪಲಾನಿ ಪ್ರಜಾಸೋಷಲಿಸ್ಟ್ ಪಕ್ಷದ ನಾಯಕ

ಲೋಕಸಭೆಯಲ್ಲಿ ಪ್ರಜಾಸೋಷಲಿಸ್ಟ್ ಪಕ್ಷದ ನಾಯಕರಾಗಿ ಆಚಾರ್ಯ ಕೃಪಲಾನಿಯವರು, ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಕಾರ್ಯದರ್ಶಿಯರಾಗಿಯೂ ಚುನಾಯಿತರಾಗಿದ್ದಾರೆ.

ರಾಜ್ಯಪರಿಷತ್ತಿಗೆ ಆಚಾರ್ಯ ನರೇಂದ್ರ ದೇವ್‌ರವರ ನಾಯಕರಾಗಿಯೂ ಶ್ರೀ ಸಿ. ಜಿ. ಕೆ. ರೆಡ್ಡಿಯವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿದ್ದಾರೆ.

ನಿರುದ್ಯೋಗ ಪರಿಹಾರ ಯೋಜನೆ ತೃಪ್ತಿಕರವಾಗಿಲ್ಲ

ಐ. ಎನ್. ಟಿ. ಯು. ಸಿ. ಕಾರ್ಯದರ್ಶಿಯ ಹೇಳಿಕೆ

ನಿರುದ್ಯೋಗ ಪರಿಹಾರಕ್ಕೆ ಆಯೋಜನಾ ಮಂಡಲಿಯು ತಯಾರಿಸಿರುವ ೧೧ ಅಂಶಗಳ ಯೋಜನೆಯು ತೃಪ್ತಿಕರವಾಗಿಲ್ಲವೆಂದು ಐ.ಎನ್.ಟಿ.ಯು.ಸಿ ಕಾರ್ಯದರ್ಶಿಗಳಾದ ಶ್ರೀ ಹರಿಹರನಾಥಶಾಸ್ತ್ರಿಗಳವರು ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ.

ದೊಡ್ಡದೊಡ್ಡ ಕೈಗಾರಿಕೆಗಳಬಗ್ಗೆ ಸರಕಾರವು ನಿರ್ದಿಷ್ಟ ನೀತಿಯನ್ನು ಅನುಸರಿಸಬೇಕು. ಕೈಗಾರಿಕೆಗಳನ್ನು ಮುಚ್ಚಲು ಅವಕಾಶವನ್ನು ಕೊಡಬಾರದು ಹಾಗೆ ಮುಚ್ಚುವ ಸ್ಥಿತಿ ಒದಗಿದರೆ ಸರ್ಕಾರವೇ ಅದನ್ನು ವಹಿಸಿಕೊಂಡು ನಡೆಸಬೇಕು. ಆಗಮಾತ್ರ ನಿರುದ್ಯೋಗ ಪರಿಹಾರವಾಗುತ್ತದೆ. ಕೆಲಸಗಾರರಿಗೆ ಬೇರೆಕಡೆ ಕೆಲಸ ಒದಗಿಸುವವರೆಗೆ ಇರುವ ಕೆಲಸದಿಂದ ತೆಗೆದುಹಾಕಕೂಡದು-ಎಂದು ಅವರು ತಿಳಿಸಿದ್ದಾರೆ.

ದೇಶದಲ್ಲಿ ನಿರುದ್ಯೋಗಕ್ಕೆ ಕಾರಣವನ್ನು ಅವರು ವಿವರಿಸುತ್ತಾ, ಕೈಗಾರಿಕಾ ವಿಸ್ತರಣ ಕಾರ್ಯ ತಡೆದಿರುವುದು, ಕೈಗಾರಿಕೆಗಳನ್ನು ಮುಚ್ಚುವುದು ಮತ್ತು ಕೈಗಾರಿಕಾ ಆಡಳಿತದವರು ಕೂಲಿ ಉಳಿಸುವ ಮತ್ತು ಇತರ ಉಳಿತಾಯ ಯೋಜನೆಗಳನ್ನು ಮಾಡುವುದೇ ಮುಖ್ಯ ಕಾರಣಗಳೆಂದು ಅಭಿಪ್ರಾಯಪಟ್ಟಿದ್ದಾರೆ.

ಭಾರತದಿಂದ ಬಟ್ಟೆ ರಫ್ತು

ಭಾರತದಿಂದ ೧೯೫೨-೫೩ನೇ ಸಾಲಿನಲ್ಲಿ ೭೦ ಕೋಟಿ ರೂಪಾಯಿಗಳ ಬೆಲೆ ಬಾಳುವಷ್ಟು, ಹತ್ತಿ ಬಟ್ಟೆ ಮತ್ತು ನೂಲನ್ನು ರಫ್ತು ಮಾಡಿರುವುದಾಗಿ ತಿಳಿಯಬರುತ್ತದೆ. ೫೧-೫೨ನೇ ಸಾಲಿನಲ್ಲಿ ಐವತ್ತೆಂಟುವರೆ ಕೋಟಿ ರೂಗಳಷ್ಟು ಮಾತ್ರ ಆಗಿತ್ತು.

ಕಾರ್ಯನಿರತ ಪತ್ರಿಕೋದ್ಯೋಗಿ ದಿನ

ಕೈಗಾರಿಕಾ ಕಾನೂನು ಅನ್ವಯದ ಮಟ್ಟಿಗೆ ಪತ್ರಿಕೋದ್ಯೋಗಿಗಳು ಕಾರ್ಮಿಕರು ಎಂದು ಪರಿಗಣಿಸುವ ಕಾನೂನನ್ನು ಭಾರತ ಸರ್ಕಾರವು ಕೂಡಲೇ ರಚಿಸಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಕಾರ್ಯನಿರತ ಪತ್ರಿಕೋದ್ಯೋಗಿ ಫೆಡರೇಷನ್ ಕಾರ್ಯಕಾರಿ ಸಮಿತಿಯು ಅಂಗೀಕಾರ ಮಾಡಿ ಸೆಪ್ಟಂಬರ್ ೨೭ ನೇ ದಿನ ಕಾರ್ಯನಿರತ ಪತ್ರಿಕೋದ್ಯೋಗಿ ದಿನವನ್ನು ಆಚರಿಸಬೇಕೆಂದು ನಿರ್ಧರಿಸಿದೆ.

● ಕಾಶ್ಮೀರದಲ್ಲಿ ಸುವ್ಯವಸ್ಥಿತ ಆಹಾರ ಸಮಿತಿಯನ್ನು ರೂಪಿಸಲು ಒಂದು ಆಹಾರ ಮಂಡಲಿಯನ್ನು ರಚಿಸಲಾಗಿದೆ. ಆ ಪ್ರಾಂತ್ಯದಲ್ಲಿ ಕಡ್ಡಾಯ ಧಾನ್ಯ ವಸೂಲಿ ಕ್ರಮ ವಿರುವುದಿಲ್ಲ.

ಷಾಜಿ ಸಮಾಧಿ

ಬೆಂಗಳೂರು ೩೧

ಶಿವಮೊಗ್ಗಾ ಜಿಲ್ಲೆಯಲ್ಲಿ ಹೊದಿಗೆರೆ ಗ್ರಾಮದಲ್ಲಿರುವುದು ಶಿವಾಜಿಯ ತಂದೆ ಷಾಜಿಯ ಸಮಾಧಿಯೆಂದು ನಿರ್ಧರಿಸಲಾಗಿರುವುದಾಗಿಯೂ ಕೇಂದ್ರ ಪ್ರಾಚ್ಯ ಸಂಶೋಧನಾ ಸಮಿತಿಯು ಇದನ್ನು ಒಪ್ಪಿರುವುದಾಗಿಯೂ ಶಿಕ್ಷಣ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಹೇಳಿದ್ದಾರೆ.

ಪರಿಹಾರ ನಿಧಿಗೆ ದ್ರವ್ಯ ಶೇಖರಣೆ

ಆಂಧ್ರ ಮತ್ತು ಬೀಹಾರ್ ಪ್ರಾಂತ್ಯಗಳಿಗಾಗಿ ಶೇಖರಿಸಲಾಗುತ್ತಿರುವ ಪ್ರಧಾನಿಯವರ ಪರಿಹಾರ ನಿಧಿಗೆ ಇಲ್ಲಿಯವರೆಗೆ ೨ ಲಕ್ಷ ೬೮ ಸಾವಿರ ರೂ.ವಸೂಲಾಗಿದೆ.

ಲಕ್ನೋ ವಿಶ್ವವಿದ್ಯಾನಿಲಯ ಬಂದು

ವಿಶ್ವವಿದ್ಯಾನಿಲಯದ ಸಂಘಕ್ಕೆ ಸಂಬಂಧಪಟ್ಟ ಕಾನೂನು ವಿಷಯದಲ್ಲಿ ವಿದ್ಯಾರ್ಥಿಗಳು ನಡೆಸುತ್ತಲಿರುವ ಚಳುವಳಿಯ ಅಂಗವಾಗಿ ಲಕ್ನೋ ವಿಶ್ವವಿದ್ಯಾನಿಲಯವನ್ನು ಅನಿರ್ದಿಷ್ಟಕಾಲ ಮುಚ್ಚಲಾಗಿದೆ.

ಜೈಲು ಬೇಡ-ಕಾಲೇಜು ಸ್ಥಾಪನೆಯಾಗಲಿ

ಬೆಂಗಳೂರಿನಲ್ಲಿರುವ ಸೆಂಟ್ರಲ್ ಜೈಲನ್ನು ಬಳ್ಳಾರಿಗೆ ವರ್ಗಾಯಿಸಲಾಗುವುದೆಂಬ ಸುದ್ದಿಯನ್ನು ಕೇಳಿ ಬಳ್ಳಾರಿ ನಾಗರೀಕರು ಅತೃಪ್ತಿಪಟ್ಟು ಅದಕ್ಕೆ ಬದಲಾಗಿ ಒಂದು ಫಸ್ಟ್‌ಗ್ರೇಡ್ ಕಾಲೇಜನ್ನು ಸ್ಥಾಪಿಸಲೆಂದು ಆಶಯ ವ್ಯಕ್ತಪಡಿಸಿದ್ದಾರೆ.

ಚೀನಾಕ್ಕೆ ರಷ್ಯಾ ಸಾಲ

ರಷ್ಯದ ಭಾರಿ ಯಂತ್ರೋಪಕರಣಗಳನ್ನು ಚೈನಾ ಕೊಳ್ಳಲು ಕಮ್ಯೂನಿಸ್ಟ್ ಚೀನಾಕ್ಕೆ ಸೋವಿಯಟ್ ರಷ್ಯವು ೫ ಸಾವಿರ ದಶಲಕ್ಷ ರೂಬಲ್ಸ್‌ಗಳ ಸಾಲವನ್ನು ಕೊಟ್ಟಿರುವುದಾಗಿ ಹೇಳಲಾಗಿದೆ.

ಕೇಂದ್ರ ಶಿಕ್ಷಣ ಸಲಹಾ ಸಮಿತಿ ಸಭೆ

ಅಖಿಲ ಭಾರತ ಕೇಂದ್ರ ಶಿಕ್ಷಣ ಸಲಹಾ ಸಮಿತಿಯ ಸಭೆಯು ಮುಂದಿನ ನವೆಂಬರ್ ತಿಂಗಳಿನಲ್ಲಿ ದೆಹಲಿಯಲ್ಲಿ ಸೇರಲಿದೆ ಎಲ್ಲಾ ಪ್ರಾಂತ್ಯಗಳ ಶಿಕ್ಷಣ ಸಚಿವರು ಇದರಲ್ಲಿ ಭಾಗವಹಿಸುವರು.

ಕೊರಿಯಾ ಸಮ್ಮೇಳನದಲ್ಲಿ ಭಾರತಕ್ಕೆ ಸ್ಥಾನ ಬೇಕಿಲ್ಲ

ಮಹಾಸಭೆಯಲ್ಲಿ ಭಾರತ ಪ್ರತಿನಿಧಿ ಹೇಳಿಕೆ

ಕೊರಿಯಾದಲ್ಲಿ ಸ್ಥಾಪಿತವಾಗಲಿರುವ ಶಾಂತಿ ಸಮ್ಮೇಳನದಲ್ಲಿ ಯಾವ ರಾಷ್ಟ್ರಗಳು ಭಾಗವಹಿಸಬೇಕೆಂಬ ವಿಷಯವನ್ನು ನಿರ್ಧರಿಸಲು ನಿನ್ನೆಯ ದಿನ ವಿಶ್ವಸಂಸ್ಥೆಯ ಮಹಾಧಿವೇಶನವು ಸಭೆ ಸೇರಿತ್ತು. ಭಾರತವು ಈ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಬೇಕೆಂಬ ರಾಜಕೀಯ ಸಮಿತಿಯ ನಿರ್ಧಾರವು ಚರ್ಚೆಗೆ ಬಂದಾಗ ಭಾರತ ಪ್ರತಿನಿಧಿ ಶ್ರೀ ವಿ.ಕೆ. ಕೃಷ್ಣ ಮೆನನ್‌ರವರು ಮಾತನಾಡುತ್ತ ಶಾಂತಿ ಸಮ್ಮೇಳನದಲ್ಲಿ ತಾನು ಭಾಗವಹಿಸಬೇಕೆಂದು ಭಾರತವು ಉಮೇದುವಾರಿಕೆ ಸಲ್ಲಿಸಿಲ್ಲ. ಆ ಸ್ಥಾನಕ್ಕಾಗಿ ಅದು ಒತ್ತಾಯ ಮಾಡುವುದಿಲ್ಲ. ಶಾಂತಿ ಸ್ಥಾಪನಾ ಕಾರ್ಯದಲ್ಲಿ ಉತ್ತಮ ವಾತಾವರಣವನ್ನು ಕಲ್ಪಿಸಿ, ಅಮೆರಿಕಾ ಮತ್ತು ಬ್ರಿಟನ್ನಿನ ನಡುವೆ ಈಗ ಎದ್ದಿರುವ ಭಿನ್ನತೆಯನ್ನು ತಪ್ಪಿಸಲು ಭಾರತವು ಶಾಂತಿ ಸಮ್ಮೇಳನದಲ್ಲಿರಬೇಕೆಂಬ ವಿಷಯವನ್ನು ಓಟಿಗೆ ಹಾಕಬಾರದೆಂದು ತಿಳಿಸಿದರು. ಅವರ ಕೋರಿಕೆ ಮೇಲೆ ವಿಷಯದಲ್ಲಿ ಮತವನ್ನು ಪಡೆಯದೆ ಅದನ್ನು ಅಲ್ಲಿಗೇ ಬಿಡಲಾಯಿತು.

ಸೂಕ್ತ ರೀತಿಯ ನಿಲುವನ್ನು ಅವಲಂಬಿಸಲು ಶ್ರೀ ಕೃಷ್ಣಮೆನನ್‌ರವರಿಗೆ ಭಾರತ ಸರ್ಕಾರವು ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟಿದ್ದಿತು.

೧॥ ಲಕ್ಷ ಮಂದಿ ವಿದ್ಯಾವಂತ ನಿರುದ್ಯೋಗಿಗಳು

ಮೈಸೂರು ಸಂಸ್ಥಾನದಲ್ಲಿ ೩೨೬೭, ಮದರಾಸಿನಲ್ಲಿ ೩೨೦೫೧, ದೆಹಲಿಯಲ್ಲಿ ೯೩೯೪, ಒಟ್ಟು ದೇಶದಲ್ಲಿ ೧೪೭೬೯೯ ಮಂದಿ ವಿದ್ಯಾವಂತ ನಿರುದ್ಯೋಗಿಗಳಿದ್ದಾರೆ. ೨ ಸಾವಿರ ಮಂದಿ ಪದವೀಧರರು ಮತ್ತು ೩೦ ಸಾವಿರ ಎ. ಎಸ್. ಎಲ್. ಸಿ. ಗಳೂ ಕೆಲಸವಿಲ್ಲದೆ ಇದ್ದಾರೆ ಎಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ.

ಗೋಹತ್ಯೆ ತಪ್ಪಿಸಬೇಕೆಂದು ಪ್ರಧಾನಿಗೆ ಮನವಿ

ದೇಶದಲ್ಲಿ ಗೋಹತ್ಯವನ್ನು ತಪ್ಪಿಸಲು ಕ್ರಮತೆಗೆದುಕೊಳ್ಳಬೇಕೆಂದು ಸೇಟ್ ಗೋವಿಂದದಾಸ್‌ರವರ ನಾಯಕತ್ವದಲ್ಲಿ ಭಾರತ ಗೋ ಸೇವಕ ಸಮಾಜದ ಒಂದು ನಿಯೋಗವು ಪ್ರಧಾನಿ ನೆಹರೂರವರನ್ನು ಭೇಟಿ ಮಾಡಿ ಮನವಿಮಾಡಿತು. ಪ್ರಾಂತ್ಯಗಳಲ್ಲಿ ಮಾಡಿರುವ ಶಾಸನವು ಅಷ್ಟು ಫಲಪ್ರದವಾಗಿಲ್ಲದುದರಿಂದ ರಾಜ್ಯಾಂಗದ ೪೮ ನೇ ವಿಧಿಯ ಪ್ರಕಾರ ಕೇಂದ್ರವು ಸೂಕ್ತಕ್ರಮವನ್ನು ಕೈಗೊಳ್ಳಬೇಕೆಂದು ಅವರು ಮನವಿ ಮಾಡಿದರೆಂದು ತಿಳಿಯಬರುತ್ತದೆ.

○ ರಾಷ್ಟ್ರಾಧ್ಯಕ್ಷರು ಅಕ್ಟೋಬರ್ ೯ ನೇ ತಾರೀಖು ಬೊಂಬಾಯಿಗೆ ಆಗಮಿಸಿ ೧೦ ನೇ ತಾರೀಖು ನೌಕಾದಳ ಪರಿಶೀಲನೆ ನಡೆಸುತ್ತಾರೆ. ಅದಕ್ಕೆ ಮೂರುವಾರ ಮೊದಲು ಪಂಜಾಬ್ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಪ್ರವಾಸ ನಡೆಸುವರು.

ಭಾರತವಾಚನ

ಮೈಸೂರು ೨೯

ಸಂತೇಪೇಟೆಯಲ್ಲಿರುವ ಕುಂಚಿಟಿಗರ ಶ್ರೀ ರಾಮಮಂದಿರದಲ್ಲಿ ಪ್ರತಿನಿತ್ಯವೂ ಸಂಜೆ ಐದುವರೆಯಿಂದ ಆರುವರೆವರಿವಿಗೆ ಗಮಕ ವಿದ್ವಾನ್ ಶ್ರೀ ಕೃಷ್ಣರಾಯರವರಿಂದ ಭಾರತ ವಾಚನವೂ, ಸಂಜೆ ೭ರಿಂದ ೮ರವರಿವಿಗೆ ಗಮಕ ಸಹೋದರರಿಂದ ಶ್ರೀ ಕೌಶಿಕ್ ಮತ್ತು ಶ್ರೀ ವೆಂಕಟಸುಬ್ಬಯ್ಯನವರಿಂದ ಶಂಕರವಿಜಯ ವಾಚನವು ನಡೆಯುತ್ತಿ.

ಕಾಂಗ್ರೆಸ್ಸಿನಿಂದ ಮಾಜಿ ಸಚಿವರ ಉಚ್ಚಾಟನೆ ?

ಸರ್ಕಾರದ ವಿರುದ್ಧ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರೆಂದು ಪಂಜಾಬಿನ ಮಾಜಿ ಸಚಿವ ಶ್ರೀ ಶ್ರೀರಾಮಶರ್ಮರವರನ್ನು ಕಾಂಗ್ರೆಸ್ಸಿನಿಂದ ತೆಗೆದುಹಾಕುವ ವಿಷಯವನ್ನು ಎ. ಐ. ಸಿ. ಸಿ. ಯು ಪರಿಶೀಲಿಸುವುದಾಗಿ ತಿಳಿಯಬರುತ್ತದೆ. ಈ ಬಗ್ಗೆ ಅವರ ಭಾಷಣ ಮುಂತಾದ ವಿಷಯ ಸಂಗ್ರಹಣೆ ಕಾರ್ಯದಲ್ಲಿ ಪಂಜಾಬ್ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ತೊಡಗಿದ್ದಾರೆ. ಶ್ರೀ ಶ್ರೀರಾಮಶರ್ಮರವರ ಸಹಾಯಕರಾಗಿದ್ದ ಮತ್ತಿಬ್ಬರನ್ನೂ ಕಾಂಗ್ರೆಸ್ಸಿನಿಂದ ಹೊರಹಾಕಲಾಗುವುದೆಂದು ತಿಳಿಯಬರುತ್ತದೆ.

ಪರಿಹಾರ ಸಮಿತಿಗಳ ರಚನೆ

ಇತ್ತೀಚೆಗೆ ಗೋದಾವರಿ ಪ್ರವಾಹದಿಂದ ನೊಂದವರಿಗೆ ಪರಿಹಾರಕ್ಕಾಗಿ ನಿಧಿ ಸಂಗ್ರಹಣೆ ಮಾಡಲು ಮದ್ರಾಸ್, ಹೈದರಾಬಾದ್ ಮುಂತಾದೆಡೆ ಪರಿಹಾರ ನಿಧಿ ಸಮಿತಿಗಳನ್ನು ರಚಿಸಲಾಗಿದೆ. ಸಾರ್ವಜನಿಕರು ಈ ಪರಿಹಾರ ಕಾರ್ಯಗಳಿಗೆ ಉದಾರವಾಗಿ ದಾನ ಮಾಡಬೇಕೆಂದು ಕೋರಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು. ೨೮—೮—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೨—೨	೨೮—೨
ಎಳ್ಳು	೬೦—೮	೮೮—
ಹುರುಳಿ	—	—
ಹೆಸರು	೪೫—೨	೭೧—೧೦
ಹುರುಳು	೪೦—೨	೪೩—
ಅಲಸಂದೆ	೫೭—೧೮	೭೪—೧೦
ಹೊಂಗೆಬೀಜ	—	—
ಅವರೆ	—	—
ಉಪ್ಪು	೭೦—೧೦	೭೨—೬
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೭—	—
ಸೀಗೆಕಾಯಿ	೭—	—
ಬೆಲ್ಲ	೮—	
ತೆಂಗಿನಕಾಯಿ	೧೬೦	೨೭೮

ನೆಹರೂ ವಿದೇಶಾಂಗ ನೀತಿ ಬಗ್ಗೆ ಬರ್ಮಾ ಪ್ರಧಾನಿ ಪ್ರಶಂಸೆ

ಏಷ್ಯಾ ರಾಷ್ಟ್ರಗಳೆಲ್ಲಾ ನೆಹರೂಗೆ ಕೃತಜ್ಞರಾಗಿರಬೇಕು

ಸರ್ಕಾರಿ ಬಸ್ಸುಗಳಲ್ಲಿ ಹಣದ ದುರುಪಯೋಗ

ಬೆಂಗಳೂರು ೨೯

ಸರ್ಕಾರಿ ಬಸ್ಸುಗಳ ಸಂಚಾರ ಇಲಾಖೆಯಲ್ಲಿ ಇತ್ತೀಚೆಗೆ ಉತ್ಪತ್ತಿಯು ಹೆಚ್ಚುತ್ತಲಿದ್ದಾಗ್ಯೂ ಅದರ ನೌಕರರು ಪ್ರಯಾಣೀಕರಿಗೆ ಟಿಕೆಟ್ಟುಗಳನ್ನು ಕೊಡದೆ ಬಂದ ಹಣವನ್ನು ದುರುಪಯೋಗಪಡಿಸುತ್ತಲಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆ. ಪ್ರಯಾಣ ಮಾಡುವ ಸಾರ್ವಜನಿಕರು ಸಹಕರಿಸಿದರೆ ಮಾತ್ರ ಈ ದುರುಪಯೋಗವನ್ನು ತಪ್ಪಿಸಲು ಸಾಧ್ಯ. ಈ ಬಸ್ಸುಗಳಲ್ಲಿ ಓಡಾಡುವ ಪ್ರಯಾಣೀಕರು ಟಿಕೇಟುಗಳನ್ನು ಕೊಡುವಂತೆ ಒತ್ತಾಯಪಡಿಸಿಯಾದರೂ ಪಡೆಯಬೇಕು. ಹಾಗೇನಾದರೂ ಕೊಡದಿದ್ದಲ್ಲಿ ಕೂಡಲೇ ವಿಷಯವನ್ನು ಇಲಾಖಾ ಜನರಲ್ ಮ್ಯಾನೇಜರ ಗಮನಕ್ಕೆ ತರಬೇಕು. ಅಲ್ಲದೆ ಪ್ರತಿಯೊಂದು ಬಸ್ಸಿನಲ್ಲೂ ಒಂದೊಂದು "ದೂರಿನ ಪುಸ್ತಕ"ವನ್ನು ಇಡಲಾಗಿದೆ. ಅದರಲ್ಲಿ ವಿಷಯಗಳನ್ನು ಬರೆಯಬಹುದು. ಸರ್ಕಾರಕ್ಕೆ ತಪ್ಪಿಹೋಗುತ್ತಿರುವ ಆದಾಯವು ಸರಿಯಾಗಿ ವಸೂಲಾಗುವಂತೆ ಸಾರ್ವಜನಿಕರು ಸಹಕರಿಸಬೇಕೆಂದು ಸರ್ಕಾರವು ಒಂದು ಪ್ರಕಟಣೆಯನ್ನಿತ್ತಿದೆ.

ಕಲ್ಕತ್ತ ಬಳಿ ಕಾಂಗ್ರೆಸ್ ಅಧಿವೇಶನ

ಕಲ್ಕತ್ತೆಗೆ ೩೦ ಮೈಲಿ ದೂರದಲ್ಲಿರುವ ಕಲ್ಯಾಣಿಪಟ್ಟಣದಲ್ಲಿ ಮುಂದಿನ ಜನವರಿ ತಿಂಗಳಿನಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನಡೆಯಲು ವ್ಯವಸ್ಥೆ ಮಾಡಲಾಗುತ್ತಿದೆ. ಅದನ್ನು ಉಪಯೋಗಿಸಲು ಒಂದು ಲಕ್ಷ ರೂ. ಗಳನ್ನು ಬಂಗಾಳ ಸರಕಾರಕ್ಕೆ ಕೊಡಬೇಕಾಗುವುದು.

ಭಾರತ ಸೇವಕ ಸಮಾಜಕ್ಕೆ ಸಹಾಯ ಮಾಡಿ

ಭಾರತ ಸೇವಕ ಸಮಾಜ ಸಂಸ್ಥೆಯು ಫಲಕಾರಿಯಾಗಿ ಕೆಲಸಮಾಡಲು ಸಾರ್ವಜನಿಕರು ಹಣ ಸಹಾಯ ಮಾಡಬೇಕೆಂದು ಅದರ ಅಧ್ಯಕ್ಷ ಪಂಡಿತ ನೆಹರೂರವರು ಒಂದು ಮನವಿ ಹೊರಡಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಸೈನಿಕ ಶಿಕ್ಷಣ

ದೆಹಲಿಯ ಶಾಲೆಗಳಲ್ಲಿ ಓದುವ ಸುಮಾರು ೪೮೦೦೦ ಬಾಲಕರಿಗೆ ಸೈನಿಕ ಶಿಕ್ಷಣವನ್ನು ಕೊಡುವ ಒಂದು ವ್ಯವಸ್ಥೆಯನ್ನೂ ಪ್ರಾರಂಭಿಸಲಾಗಿದೆ. ಬಂದೂಕ ಉಪಯೋಗ ವಿನಹ ಮಿಕ್ಕೆಲ್ಲ ಬಾಬುಗಳಲ್ಲಿ ಆ ಬಾಲಕರಿಗೆ ಶಿಕ್ಷಣ ಕೊಡಲಾಗುವುದು

ವಿಶ್ವದಲ್ಲಿ ಅನೇಕ ರಾಷ್ಟ್ರಗಳು ಭಾರತ ಪ್ರಧಾನಿ ನೆಹರೂರವರ ವಿದೇಶಾಂಗ ನೀತಿ ಮತ್ತು ನಿಲುವನ್ನು ಪೂರ್ಣವಾಗಿ ತಿಳಿದುಕೊಳ್ಳದಿರುವುದು ವಿಷಾದಕರ. ಏಷ್ಯಾದಲ್ಲೆಲ್ಲಾ ಅವರು ಅತ್ಯಂತ ಗಣನೆಯ ವ್ಯಕ್ತಿ ಅವರಿಗೆ ಎಲ್ಲಾ ಏಷ್ಯಾ ರಾಷ್ಟ್ರಗಳೂ ಚಿರ ಕೃತಜ್ಞರಾಗಿರಬೇಕು-ಎಂದು ಬರ್ಮಾದ ಪ್ರಧಾನಿ ಮೂಊರವರ ನೆಹರೂರವರ ವಿದೇಶಾಂಗನೀತಿಯ ಬಗ್ಗೆ ಪ್ರಶಂಸಿಸಿದ್ದಾರೆ.

ಪ್ರಧಾನಿ ನೆಹರೂರವರ ವಿದೇಶಾಂಗ ನೀತಿಯಲ್ಲಿ ಮೂರು ಸೂತ್ರಗಳು ಅಡಕವಾಗಿವೆ. ವಿಶ್ವದಲ್ಲಿ ಎಲ್ಲಿಯೂ ಯುದ್ಧವಾಗದಂತೆ ನೋಡಿಕೊಳ್ಳಬೇಕು, ಹಾಗೇನಾದರೂ ಯುದ್ಧವಾದಲ್ಲಿ ಪಶ್ಚಾಹಿತ ಶೃಂಖಲೆಗಳಿಂದ ಪಾರಾಗಿರುವ ಏಷ್ಯಾ ರಾಷ್ಟ್ರಗಳಿಗೆ ಅದು ಹರಡದಂತೆ ನೋಡಿಕೊಳ್ಳುವುದು. ಹಾಗೇನಾದರೂ ಹರಡಿದರೆ ಏಷ್ಯನ್ನರು ಏಷ್ಯನ್ನರೊಡನೆ ಯುದ್ಧ ಮಾಡಬಾರದು ಎಂಬೀ ಮೂರುಸೂತ್ರಗಳು ಅವರ ನಿಲುವು. ಯುದ್ಧಕ್ಕಾಗಿ ಹಾತೊರೆಯುತ್ತಿರುವ ರಾಷ್ಟ್ರಗಳು ಇದನ್ನು ಚೆನ್ನಾಗಿ ಅರಿತುಕೊಳ್ಳಬೇಕು—ಎಂದು ಅವರು ತಿಳಿಸಿದ್ದಾರೆ

೨೫೮೦೦ ಎಕರೆ ಬತ್ತದ ಗದ್ದೆ ನೀರಿನ ಪಾಲು

ಗೋದಾವರಿ ನದಿ ಪ್ರವಾಹದ ಹಾವಳಿಯಿಂದ ಪಶ್ಚಿಮ ಗೋದಾವರಿ ಜಿಲ್ಲೆಯಲ್ಲಿ ೨೫೦೦೦ ಎಕರೆ ಬತ್ತದ ಗದ್ದೆ ಮತ್ತು ೭೦೦೦ ಎಕರೆ ಸಿದ್ಧವಾಗಿದ್ದ ಪೈರಿನ ಗದ್ದೆಗಳು ನೀರಿನ ಪಾಲಾಗಿ ಎಲ್ಲವೂ ಹಾಳಾಗಿವೆ.

○ ಬಿಹಾರಿನಲ್ಲಿ ಉಂಟಾಗಿರುವ ನದಿಗಳ ಪ್ರವಾಹದ ಹಾವಳಿಯಿಂದ ಸುಮಾರು ೮೦೦ ಮನೆಗಳು ಬಿದ್ದುಹೋಗಿವೆ. ೭ ಲಕ್ಷ ಜನರು ತೊಂದರೆಗೀಡಾಗಿದ್ದಾರೆಂದು ತಿಳಿಯಬರುತ್ತದೆ.

ಅಪೇರ

27--8--53 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಕನ್ನಿಕಾ ತಮಿಳು

ಪಾತ್ರ:-ಟಿ. ವರದಂ, ಕಾಳಿ ಎನ್ ರತ್ನಂ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ.

ರಣಜಿತ್

28-8-53 ರಿಂದ 2 ನೇ ವಾರ

ವರ್ಮ ಫಿಲಂಸ್‌ರವರ

ಔರತ್ ಹಿಂದಿ

ಪಾತ್ರ--ಬಿನಾರಾಯ್, ಪ್ರೇಮನಾಥ್

ಪ್ರಕಾಶಕರು ಮತ್ತು ಮುದ್ರಕರು.

ಜಿ. ಎಲ್. ಸ್ವಾಮಿ.

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೨

೩೧-೮-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ನಿರುದ್ಯೋಗ ಪರಿಹಾರಕ್ಕೆ ಖಾದಿ ಒಂದು ಸಾಧನೆ

ಸೈನ್ಯ ಮತ್ತು ಪೋಲಿಸ್ ಖಾತೆ ಬಿಟ್ಟು ಮಿಕ್ಕೆಲ್ಲ ಶಾಖೆಗಳಲ್ಲಿ ಖಾದಿ ಉಪಯೋಗಿಸಬೇಕು

ರಾಷ್ಟ್ರಾಧ್ಯಕ್ಷರ ಮನವಿ

ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸಬೇಕಾದರೆ ಖಾದಿಯ ಬೆಳವಣಿಗೆ ಬಗ್ಗೆ ಪ್ರಾಂತ್ಯ ಮತ್ತು ಕೇಂದ್ರ ಸರ್ಕಾರಗಳು ಮತ್ತು ಜನತೆಯು ಎಲ್ಲಾ ಕಾರ್ಯಕ್ರಮಗಳನ್ನು ನಡೆಸಬೇಕು, ದೇಶದಲ್ಲಿ ಉದ್ಯೋಗವನ್ನು ಒದಗಿಸಲು ಖಾದಿ ಬೆಳವಣಿಗೆಯೇ ಮುಖ್ಯವಾದ ಸಾಧನೆ ಅದರಬಗ್ಗೆ ಕ್ರಮಗಳನ್ನು ಶೀಘ್ರವಾಗಿ ಪರಿಶೀಲಿಸಬೇಕಾಗಿದೆ. ಸೈನ್ಯ ಮತ್ತು ಪೊಲೀಸ್ ಖಾತೆಗಳು ಬಿಟ್ಟು ಸರ್ಕಾರದಲ್ಲಿ ಮಿಕ್ಕೆಲ್ಲ ಶಾಖೆಗಳಲ್ಲಿ ಖಾದಿಯನ್ನು ಉಪಯೋಗಿಸಬೇಕು ಆಗ ಖಾದಿ ಕೊಳ್ಳುವವರಿಗೆ ಕೊರತೆ ಇರುವುದಿಲ್ಲ ಎಂದು ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದ್‌ರವರು ನಿನ್ನೆಯದಿನ ದೆಹಲಿಯಲ್ಲಿ ನಡೆದ ಕೇಂದ್ರ ಮತ್ತು ಪ್ರಾಂತ್ಯ ಸಚಿವರ ಸಮ್ಮೇಳನದಲ್ಲಿ ತಿಳಿಸಿದರು.

ದೇಶದಲ್ಲಿ ವ್ಯವಸಾಯಗಾರರಿಗೆ ವರ್ಷವೆಲ್ಲಾ ಕೆಲಸವಿರುವುದಿಲ್ಲ. ವಿರಾಮ ಕಾಲದಲ್ಲಿ ರೈತರು ಖಾದಿ ನೂಲನ್ನು ತೆಗೆದು ಬಟ್ಟೆಯನ್ನು ನೆಯ್ದರೆ ಅವರ ಆರ್ಥಿಕ ಸ್ಥಿತಿಯು ಉತ್ತಮವಾಗುತ್ತದೆ. ಪೂರ್ಣ ಕಾರ್ಯವಿಲ್ಲದವರಿಗೆ ಕೆಲಸವು ಒದಗಿದಂತಾಗುತ್ತದೆ-ಎಂದು ರಾಷ್ಟ್ರಾಧ್ಯಕ್ಷರು ಹೇಳಿದರು.

ಈ ಸಂದರ್ಭದಲ್ಲಿ ಪ್ರಧಾನಿ ನೆಹರೂರವರು ಸಹ ಮಾತನಾಡುತ್ತಾ ಖಾದಿ ಕೈಗಾರಿಕೆಯಲ್ಲಿ ಕೀಳು ಮೇಲು ಎಂಬ ಭಾವನೆ ಇಲ್ಲ. ದೇಶದ ಪ್ರಗತಿಗೆ, ನಿರುದ್ಯೋಗ ಪರಿಹಾರಕ್ಕೆ ಇದರ ಬೆಳವಣಿಗೆಯೇ ಮಾರ್ಗವೆಂದು ಹೇಳಿದರು.

ಈ ಸಂದರ್ಭದಲ್ಲಿ ಅಖಿಲಭಾರತ ಖಾದಿ ಮತ್ತು ಕೈಗಾರಿಕೆ ಮಂಡಲಿಯು ಸಭೆ ನಡೆಸಿ ದೇಶಾದ್ಯಂತ ಖಾದಿ ವ್ಯಾಪಾರಕ್ಕೆ ಏಕರೀತಿಯ ವ್ಯವಸ್ಥೆಯನ್ನು ಅನುಸರಿಸಬೇಕೆಂಬ ಅಭಿಪ್ರಾಯಪಟ್ಟಿತು.

ತಮಿಳು ಉತ್ಸವ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದ್‌ರವರು ಮೊನ್ನೆ ಶನಿವಾರ ದೆಹಲಿಯಲ್ಲಿ ಆರನೇ ತಮಿಳು ಉತ್ಸವವನ್ನು ಉದ್ಘಾಟಿಸುತ್ತಾ ಹಿಂದಿಭಾಷೆಯನ್ನು ಯಾರಮೇಲೂ ಒತ್ತಾಯ ಪಡಿಸಬಾರದು ಜನರು ತಾವಾಗಿಯೇ ರಾಷ್ಟ್ರಭಾಷೆಯನ್ನು ಕಲಿಯಬೇಕು ಉತ್ತರಭಾರತದವರು ದಕ್ಷಿಣ ಭಾರತದ ಹಲವಾರು ಭಾಷೆಗಳನ್ನು ಕಲಿಯಬೇಕೆಂದು ತಿಳಿಸಿದರು.

ಉತ್ತರಭಾರತದಲ್ಲಿ ಭೂಕಂಪ

ಮೊನ್ನೆ ಶನಿವಾರ ಬೆಳಿಗ್ಗೆ ೭-೩೦ ಗಂಟೆ ವೇಳೆಯಲ್ಲಿ ಉತ್ತರಭಾರತದ ನಾನಾ ಪ್ರದೇಶದಲ್ಲಿ ಭೂಕಂಪವುಂಟಾಯಿತು. ಆದರೆ ಎಲ್ಲಿಯೂ ಪ್ರಾಣ ಹಾನಿಯೇನೂ ಸಂಭವಿಸಲಿಲ್ಲ ಈ ಭೂಕಂಪವು ದೆಹಲಿ, ಗ್ವಾಲಿಯರ್, ಪಾಟ್ನಾ, ಭಾವನಗರ, ಕಾನ್ಪುರ್, ಕಾಶಿ, ಗ್ವಾಲಿಯರ್ ಮುಂತಾದೆಡೆ ಸ್ವಲ್ಪ ಕಾಲ ಆಗಿರುವುದಾಗಿ ವರದಿಯಾಗಿದೆ.

ನೇಪಾಳ ರಾಜಧಾನಿ ಖಾಟ್ಮಂಡುವಿನಲ್ಲಿ ಮಾತ್ರ ಸುಮಾರು ಒಂದೂಕಾಲು ನಿಮಿಷ ಕಾಲ ಭೂಮಿ ಗುಡುಗಿತು. ಜನರೆಲ್ಲರೂ ಗಾಬರಿಯಿಂದ ಮನೆಗಳನ್ನು ಬಿಟ್ಟು ಹೊರಕ್ಕೆಬಂದರು.

ಭಾರತದ ಜನಸಂಖ್ಯೆ ೩೬ ಕೋಟಿ ೬೭ ಲಕ್ಷ

೧೯೫೧ನೇ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆಯು ೩೬ಕೋಟಿ ೬೭ಲಕ್ಷ. ಜಲಂಧರ್‌ನ ಜನಗಣತಿ ಕಛೇರಿಯಲ್ಲಿ ಒಂದುಲಕ್ಷ ೩೫ಸಾವಿರ ಜನರಿಗೆ ಸಂಬಂಧಪಟ್ಟ ದಾಖಲೆಗಳು ಸುಟ್ಟುಹೋದುದರಿಂದ ಇದನ್ನು ಲೆಕ್ಕಕ್ಕೆ ತೆಗೆದುಕೊಂಡಿಲ್ಲ

ಈ ಜನಸಂಖ್ಯೆಯಲ್ಲಿ ನಿಮ್ನ ವರ್ಗದವರು ೫ ಕೋಟಿ ೧೨ ಲಕ್ಷ ಇರುವರು. ನಿಮ್ನ ವರ್ಗ ಜನಾಂಗದವರು ೧೯೧ ಲಕ್ಷ ಜನರಿರುವರು. ಈ ಜನಸಂಖ್ಯೆಗೆ ಸಂಬಂಧಪಟ್ಟಂತೆ ರಾಷ್ಟ್ರೀಯ ಪುಸ್ತಕವೊಂದನ್ನು ತಯಾರಿಸಲಾಗಿದೆ.

ಆಚಾರ್ಯ ಕೃಪಲಾನಿ ಪ್ರಜಾಸೋಷಲಿಸ್ಟ್ ಪಕ್ಷದ ನಾಯಕ

ಲೋಕಸಭೆಯಲ್ಲಿ ಪ್ರಜಾಸೋಷಲಿಸ್ಟ್ ಪಕ್ಷದ ನಾಯಕರಾಗಿ ಆಚಾರ್ಯ ಕೃಪಲಾನಿಯವರು, ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಕಾರ್ಯದರ್ಶಿಯಗಿಯೂ ಚುನಾಯಿತರಾಗಿದ್ದಾರೆ.

ರಾಜ್ಯಪರಿಷತ್ತಿಗೆ ಆಚಾರ್ಯ ನರೇಂದ್ರದೇವ್‌ರವರ ನಾಯಕರಾಗಿಯೂ ಶ್ರೀ ಸಿ. ಜಿ. ಕೆ. ರೆಡ್ಡಿಯವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿದ್ದಾರೆ.

ನಿರುದ್ಯೋಗ ಪರಿಹಾರ ಯೋಜನೆ ತೃಪ್ತಿಕರವಾಗಿಲ್ಲ

ಐ. ಎನ್. ಟಿ. ಯು. ಸಿ. ಕಾರ್ಯದರ್ಶಿಯ ಹೇಳಿಕೆ

ನಿರುದ್ಯೋಗ ಪರಿಹಾರಕ್ಕೆ ಆಯೋಜನಾ ಮಂಡಲಿಯು ತಯಾರಿಸಿರುವ ೧೧ ಅಂಶಗಳ ಯೋಜನೆಯು ತೃಪ್ತಿಕರವಾಗಿಲ್ಲವೆಂದು ಐ.ಎನ್.ಟಿ.ಯು.ಸಿ ಕಾರ್ಯದರ್ಶಿಗಳಾದ ಶ್ರೀ ಹರಿಹರನಾಥಶಾಸ್ತ್ರಿಗಳವರು ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ.

ದೊಡ್ಡದೊಡ್ಡ ಕೈಗಾರಿಕೆಗಳಬಗ್ಗೆ ಸರಕಾರವು ನಿರ್ದಿಷ್ಟ ನೀತಿಯನ್ನು ಅನುಸರಿಸಬೇಕು. ಕೈಗಾರಿಕೆಗಳನ್ನು ಮುಚ್ಚಲು ಅವಕಾಶವನ್ನು ಕೊಡಬಾರದು ಹಾಗೆ ಮುಚ್ಚುವ ಸ್ಥಿತಿ ಒದಗಿದರೆ ಸರ್ಕಾರವೇ ಅದನ್ನು ವಹಿಸಿಕೊಂಡು ನಡೆಸಬೇಕು. ಆಗಮಾತ್ರ ನಿರುದ್ಯೋಗ ಪರಿಹಾರವಾಗುತ್ತದೆ. ಕೆಲಸಗಾರರಿಗೆ ಬೇರೆಕಡೆ ಕೆಲಸ ಒದಗಿಸುವವರೆಗೆ ಇರುವ ಕೆಲಸದಿಂದ ತೆಗೆದುಹಾಕಕೂಡದು-ಎಂದು ಅವರು ತಿಳಿಸಿದ್ದಾರೆ.

ದೇಶದಲ್ಲಿ ನಿರುದ್ಯೋಗಕ್ಕೆ ಕಾರಣವನ್ನು ಅವರು ವಿವರಿಸುತ್ತಾ, ಕೈಗಾರಿಕಾ ವಿಸ್ತರಣ ಕಾರ್ಯ ತಡೆದಿರುವುದು, ಕೈಗಾರಿಕೆಗಳನ್ನು ಮುಚ್ಚುತ್ತಿರುವುದು ಮತ್ತು ಕೈಗಾರಿಕಾ ಆಡಳಿತದವರು ಕೂಲಿ ಉಳಿಸುವ ಮತ್ತು ಇತರ ಉಳಿತಾಯ ಯೋಜನೆಗಳನ್ನು ಮಾಡುವುದೇ ಮುಖ್ಯ ಕಾರಣಗಳೆಂದು ಅಭಿಪ್ರಾಯಪಟ್ಟಿದ್ದಾರೆ.

ಭಾರತದಿಂದ ಬಟ್ಟೆ ರಫ್ತು

ಭಾರತದಿಂದ ೧೯೫೨-೫೩ನೇ ಸಾಲಿನಲ್ಲಿ ೭೦ ಕೋಟಿ ರೂಪಾಯಿಗಳ ಬೆಲೆ ಬಾಳುವಷ್ಟು ಹತ್ತಿ ಬಟ್ಟೆ ಮತ್ತು ನೂಲನ್ನು ರಫ್ತು ಮಾಡಿರುವುದಾಗಿ ತಿಳಿಯಬರುತ್ತದೆ. ೫೧-೫೨ನೇ ಸಾಲಿನಲ್ಲಿ ಐವತ್ತೆಂಟುವರೆ ಕೋಟಿ ರೂಗಳಷ್ಟು ಮಾತ್ರ ಆಗಿತ್ತು.

ಕಾರ್ಯನಿರತ ಪತ್ರಿಕೋದ್ಯೋಗಿ ದಿನ

ಕೈಗಾರಿಕಾ ಕಾನೂನು ಅನ್ವಯವಾಗುವಷ್ಟರಮಟ್ಟಿಗೆ ಪತ್ರಿಕೋದ್ಯೋಗಿಗಳು ಕಾರ್ಮಿಕರು ಎಂದು ಪರಿಗಣಿಸುವ ಕಾನೂನನ್ನು ಭಾರತ ಸರ್ಕಾರವು ಕೂಡಲೇ ರಚಿಸಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಕಾರ್ಯನಿರತ ಪತ್ರಿಕೋದ್ಯೋಗಿ ಫೆಡರೇಷನ್ ಕಾರ್ಯಕಾರಿ ಸಮಿತಿಯು ಅಂಗೀಕಾರ ಮಾಡಿ ಸೆಪ್ಟಂಬರ್ ೨೭ ನೇ ದಿನ ಕಾರ್ಯನಿರತ ಪತ್ರಿಕೋದ್ಯೋಗಿ ದಿನವನ್ನು ಆಚರಿಸಬೇಕೆಂದು ನಿರ್ಧರಿಸಿದೆ.

● ಕಾಶ್ಮೀರದಲ್ಲಿ ಸುವ್ಯವಸ್ಥಿತ ಆಹಾರ ಸಮಿತಿಯನ್ನು ರೂಪಿಸಲು ಒಂದು ಆಹಾರ ಮಂಡಲಿಯನ್ನು ರಚಿಸಲಾಗಿವೆ. ಆ ಪ್ರಾಂತ್ಯದಲ್ಲಿ ಕಡ್ಡಾಯ ಧಾನ್ಯ ವಸೂಲಿ ಕ್ರಮ ವಿರುವುದಿಲ್ಲ.

ಶಿವಾಜಿ ಸಮಾಧಿ

ಬೆಂಗಳೂರು ೩೧

ಶಿವಮೊಗ್ಗ ಜಿಲ್ಲೆಯಲ್ಲಿ ಹೊದಿಗೆರೆ ಗ್ರಾಮದಲ್ಲಿರುವುದು ಶಿವಾಜಿಯ ತಂದೆ ಷಾಜಿಯ ಸಮಾಧಿಯೆಂದು ನಿರ್ಧರಿಸಲಾಗಿರುವುದಾಗಿಯೂ ಕೇಂದ್ರ ಪ್ರಾಚ್ಯ ಸಂಶೋಧನಾ ಸಮಿತಿಯು ಇದನ್ನು ಒಪ್ಪಿರುವುದಾಗಿಯೂ ಶಿಕ್ಷಣ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಹೇಳಿದ್ದಾರೆ.

ಪರಿಹಾರ ನಿಧಿಗೆ ದ್ರವ್ಯ ಶೇಖರಣೆ

ಆಂಧ್ರ ಮತ್ತು ಬೀಹಾರ್ ಪ್ರಾಂತ್ಯಗಳಿಗಾಗಿ ಶೇಖರಿಸಲಾಗುತ್ತಿರುವ ಪ್ರಧಾನಿಯವರ ಪರಿಹಾರ ನಿಧಿಗೆ ಇಲ್ಲಿಯವರೆಗೆ ೨ ಲಕ್ಷ ೬೮ ಸಾವಿರ ರೂ.ವಸೂಲಾಗಿದೆ.

ಲಕ್ನೋ ವಿಶ್ವವಿದ್ಯಾನಿಲಯ ಬಂದು

ವಿಶ್ವವಿದ್ಯಾನಿಲಯದ ಸಂಘಕ್ಕೆ ಸಂಬಂಧಪಟ್ಟ ಕಾನೂನು ವಿಷಯದಲ್ಲಿ ವಿದ್ಯಾರ್ಥಿಗಳು ನಡೆಸುತ್ತಲಿರುವ ಚಳುವಳಿಯ ಅಂಗವಾಗಿ ಲಕ್ನೋ ವಿಶ್ವವಿದ್ಯಾನಿಲಯವನ್ನು ಅನಿರ್ದಿಷ್ಟಕಾಲ ಮುಚ್ಚಲಾಗಿದೆ.

ಜೈಲು ಬೇಡ-ಕಾಲೇಜು ಸ್ಥಾಪನೆಯಾಗಲಿ

ಬೆಂಗಳೂರಿನಲ್ಲಿರುವ ಸೆಂಟ್ರಲ್ ಜೈಲನ್ನು ಬಳ್ಳಾರಿಗೆ ವರ್ಗಾಯಿಸಲಾಗುವುದೆಂಬ ಸುದ್ದಿಯನ್ನು ಕೇಳಿ ಬಳ್ಳಾರಿ ನಾಗರೀಕರು ಅತೃಪ್ತಿಪಟ್ಟು ಅದಕ್ಕೆ ಬದಲಾಗಿ ಒಂದು ಫಸ್ಟ್‌ಗ್ರೇಡ್ ಕಾಲೇಜನ್ನು ಸ್ಥಾಪಿಸಬೇಕೆಂದು ಆಶಯ ವ್ಯಕ್ತಪಡಿಸಿದ್ದಾರೆ.

ಚೀಣಾಕ್ಕೆ ರಷ್ಯಾ ಸಾಲ

ರಷ್ಯದ ಭಾರಿ ಯಂತ್ರೋಪಕರಣಗಳನ್ನು ಕೊಳ್ಳಲು ಕಮ್ಯೂನಿಸ್ಟ್ ಚೀಣಾಕ್ಕೆ ಸೋವಿಯಟ್ ರಷ್ಯವು ೫ ಸಾವಿರ ದಶಲಕ್ಷ ರೂಬಲ್ಸ್‌ಗಳ ಸಾಲವನ್ನು ಕೊಟ್ಟಿರುವುದಾಗಿ ಹೇಳಲಾಗಿದೆ.

ಕೇಂದ್ರ ಶಿಕ್ಷಣ ಸಲಹಾ ಸಮಿತಿ ಸಭೆ

ಅಖಿಲ ಭಾರತ ಕೇಂದ್ರ ಶಿಕ್ಷಣ ಸಲಹಾ ಸಮಿತಿಯ ಸಭೆಯು ಮುಂದಿನ ನವೆಂಬರ್ ತಿಂಗಳಿನಲ್ಲಿ ದೆಹಲಿಯಲ್ಲಿ ಸೇರಲಿದೆ ಎಲ್ಲಾ ಪ್ರಾಂತ್ಯಗಳ ಶಿಕ್ಷಣ ಸಚಿವರು ಇದರಲ್ಲಿ ಭಾಗವಹಿಸುವರು.

ಪುನಃ ಭಾರತ--ಪಾಕ್ ಪ್ರಧಾನಿಗಳ ಭೇಟಿ ?

ಪಾಕೀಸ್ತಾನ ಪ್ರಧಾನಿ ಮಹಮುದಾಲಿಯವರು ಪ್ರಧಾನಿ ನೆಹರೂರವರಿಗೆ ಎರಡು ಪತ್ರಗಳನ್ನು ಬರೆದಿರುವುದಾಗಿಯೂ ಉಭಯತ್ರರ ಭೇಟಿಯು ಪುನಃ ನಡೆಯಬೇಕಾಗಿದೆಯೆಂದು ಅವರು ಆ ಪತ್ರವೊಂದರಲ್ಲಿ ತಿಳಿಸಿರುವುದಾಗಿ ಹೇಳಲಾಗಿದೆ.

ನಿನ್ನೆಯದಿನ ಕರಾಚಿಯಲ್ಲಿರುವ ಭಾರತ ಹೈಕಮಿಷನರ್‌ರವರು ಪಾಕ್ ಪ್ರಧಾನಿಯವರನ್ನು ಭೇಟಿಮಾಡಿ ಮೊಹರಾದ ಒಂದು ಪತ್ರವನ್ನು ಸಲ್ಲಿಸಿದರೆಂದು ತಿಳಿಯಬರುತ್ತದೆ.

ಪಾಕ್ ಪ್ರಧಾನಿಯವರ ಪತ್ರಗಳಿಗೆ ಶ್ರೀ ನೆಹರೂರವರ ಉತ್ತರವು ಇದರಲ್ಲಿರುವುದಾಗಿ ಊಹಿಸಲಾಗಿದೆ.

ಜಮೀನ್ ವಶಪಡಿಸಿಕೊಳ್ಳಲು ರೈತ ತಂಡದ ಸತ್ಯಾಗ್ರಹ

ಪಾರ್ಡಿ ತಾಲ್ಲೂಕಿನಲ್ಲಿ ಘೂಮ್ಲ ಮತ್ತು ಪಾರಿಯಾ ಗ್ರಾಮಗಳ ನಡುವೆ ಐದು ಜಮೀನ್‌ದಾರರಿಗೆ ಸೇರಿರುವ ೧೦೦೦ ಎಕರೆ ಜಮೀನನ್ನು ವಶಪಡಿಸಿಕೊಂಡು ಆಹಾರ ಧಾನ್ಯಗಳನ್ನು ಬೆಳೆಯಲು ಸೂಕ್ತ ಕೆಲಸಗಳನ್ನು ಪ್ರಾರಂಭಿಸಲು ೯೯೦ ಜನ ಸ್ಥಳೀಯ ರೈತರ ಸತ್ಯಾಗ್ರಹಿಗಳು ನಾಳೆಯದಿನ ಆ ಜಮೀನುಗಳ ಬಳಿಗೆ ಹೋಗಲಿರುವರು.

ಆ ತಂಡವನ್ನು ಸರ್ಕಾರದವರು ದಸ್ತಗಿರಿ ಮಾಡಿದರೆ ಮತ್ತೊಂದು ತಂಡವು ಹೊರಡಲು ಸಿದ್ಧತೆಗಳಾಗಿರುವುದಾಗಿ ತಿಳಿಯಬರುತ್ತದೆ.

ಈ ತಂಡದಲ್ಲಿ ಪ್ರಜಾ ಸೋಷಲಿಸ್ಟ್ ನಾಯಕ ಶ್ರೀ ಅಶೋಕ ಮೆಹ್ತಾ ಮುಂತಾದವರಿರುವರು.

ಕಾಶ್ಮೀರ ದಿನಾಚರಣೆ

ದೆಹಲಿ, ಬೊಂಬಾಯಿ, ಪಾಟ್ನಾ, ಕಲ್ಕತ್ತಾ ಮುಂತಾದ ದೇಶದ ಪ್ರಮುಖ ನಗರಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ನಿನ್ನೆಯ ದಿನ ಕಾಶ್ಮೀರ ದಿನಾಚರಣೆ ನಡೆಯಿತು. ಕಾಶ್ಮೀರದಲ್ಲಿ ಕೋಮುವಾರು ನೀತಿಯನ್ನು ಕೆಲವರು ಅನುಸರಿಸುತ್ತಲಿರುವುದನ್ನು ಖಂಡಿಸಿ ಪ್ರಜಾಪ್ರಭುತ್ವ ಸ್ಥಾಪನೆಯಲ್ಲಿ ಕಾಶ್ಮೀರವು ಪ್ರಗತಿ ಸಾಧಿಸಲು ಭಾರತವು ಎಲ್ಲಾ ಸಹಾಯವನ್ನು ನೀಡುವುದಾಗಿ ತಿಳಿಸಲಾಯಿತು. ಭಾರತ ಸರ್ಕಾರವು ಕಾಶ್ಮೀರಕ್ಕೆ ಎಲ್ಲಾ ರೀತಿಯ ಆರ್ಥಿಕ ನೆರವನ್ನು ನೀಡಬೇಕೆಂದು ಕೋರಲಾಯಿತು.

ಡಾ|| ಮುಸಾದಿಕ್‌ರ ವಿಚಾರಣೆ

ಇದೇ ಮಾಹೆ ೧೩ನೇ ತಾ|| ಪರ್ಷಿಯಾ ಷಾರವರು ನೂತನ ಪ್ರಧಾನಿಯನ್ನು ನೇಮಿಸಿದವೇಳೆ ಅಕ್ರಮ ಅಧಿಕಾರದಲ್ಲಿದ್ದು ಅನೇಕ ವಿವೇಚನಾರಹಿತ ಕಾರ್ಯಗಳನ್ನು ನಡೆಸಿದರೆಂದು ಡಾ|| ಮುಸಾದಿಕ್‌ರನ್ನು ಮಿಲಿಟರಿ ನ್ಯಾಯಾಲಯದಲ್ಲಿ ವಿಚಾರಣೆ ಮಾಡಲಾಗುವುದೆಂದೂ ತಿಳಿಯಬರುತ್ತದೆ. ಅವರ ಆಜ್ಞೆಯನ್ನು ಪಾಲಿಸಿದವರ ವಿಚಾರಣೆಯೂ ನಡೆಯುವುದು.

ಸಂಸ್ಕೃತಿ ಪ್ರಚಾರಕಾರ್ಯ

ಬೆಂಗಳೂರು ೩೧

ಸಂಸ್ಕೃತಿ ಮತ್ತು ಸಾಹಿತ್ಯಾಭಿವೃದ್ಧಿ ಸಮಿತಿಯ ಸಭೆಯು ಇದೇ ಮಾಹೆ ೨೬ನೇ ತಾರೀಖು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಇಲಾಖಾ ಡೈರೆಕ್ಟರ್‌ರವರು ಸೂಚಿಸಿರುವ ಕಾರ್ಯ ಯೋಜನೆಗಳ ಬಗ್ಗೆ ವಿವರವಾದ ಚರ್ಚೆಗಳಾದುವು. ಅನಂತರ ವ್ಯವಸ್ಥೆ, ಯೋಜನಾ ಮತ್ತು ಸನ್ಮಾನ ಸಮಿತಿಗಳನ್ನು ರಚಿಸಲಾಯಿತು.

ನೀತಿ ಬೋಧಕ ಕಾರ್ಯಗಳು ಶಾಲೆಗಳಲ್ಲಿ ನಡೆಯಬೇಕಾಗಿರುವುದು ಅಗತ್ಯವಾದಾಗ್ಯೂ ಗ್ರಾಮಾಂತರ ಪ್ರದೇಶಗಳಲ್ಲಿ ಜನತೆಗೆ ಗಮಕಗೋಷ್ಠಿ ಮತ್ತು ಉಪನ್ಯಾಸಗಳ ಮೂಲಕ ನಮ್ಮ ಸಂಸ್ಕೃತಿ ಮತ್ತು ಸಾಹಿತ್ಯವನ್ನು ಪ್ರಚಾರ ಮಾಡಬೇಕಾದುದು ಅಗತ್ಯವೆಂದು ಮುಖ್ಯಮಂತ್ರಿಗಳು ತಿಳಿಸುತ್ತಾ ಈ ಯೋಜನೆಯಿಂದ ಜನರ ನೀತಿ ಮತ್ತು ಆರ್ಥಿಕ ಮಟ್ಟವು ಉತ್ತಮಗೊಳ್ಳುತ್ತದೆ. ಪಂಚವಾರ್ಷಿಕಯೋಜನೆಯೊಂದಿಗೆ ಮೈಸೂರು ಸರ್ಕಾರವು ಈ ಸಂಸ್ಕೃತಿ ಪ್ರಚಾರ ಕಾರ್ಯವನ್ನು ಕೈಗೊಂಡಿರುವುದರಿಂದ ಜನರ ನೀತಿಯುತ ಜೀವನವೂ ಉತ್ತಮವಾಗುತ್ತವೆ. ಈ ಯೋಜನೆಯನ್ನು ಕಾರ್ಯಗತಮಾಡುವ ಜವಾಬ್ದಾರಿಯು ಸಲಹಾಸಮಿತಿಗೆ ಸೇರಿದೆ. ಸದಸ್ಯರೆಲ್ಲರೂ ಈ ಯೋಜನೆಯಲ್ಲಿ ತೀವ್ರಾಸಕ್ತಿ ಹೊಂದಿ ಯಶಸ್ವಿಯಾಗುವಂತೆ ಕೆಲಸಮಾಡುವರೆಂದು ತಾವು ಆಶಿಸುವುದಾಗಿ ತಿಳಿಸಿ, ಇನ್ನು ೩ ತಿಂಗಳೊಳಗಾಗಿ ವ್ಯವಸ್ಥಾಪಕ ಸಮಿತಿಯವರು ಒಂದು ಕಾರ್ಯಕ್ರಮವನ್ನು ಕೊಡಬೇಕೆಂದು ಕೋರಿದರು.

ವೈದ್ಯಾಧಿಕಾರಿಗಳ ವರ್ಗ

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿರುವ ಅಸಿಸ್ಟೆಂಟ್ ಸರ್ಜನ್ ಶ್ರೀಮತಿ ರತ್ನಾಬಾಯಿ ಮೊರೆಯವರನ್ನು ಚಲುವಾಂಬ ಆಸ್ಪತ್ರೆಗೆ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿ ವರ್ಗಾಯಿಸಲಾಗಿದೆ.

ಕೆ. ಜಿ. ಎಫ್. ನ್ಯೂ ಜಿಲ್ಲಾ ಮೆಡಿಕಲ್ ಆಫೀಸರಾಗಿರುವ ಶ್ರೀ ಕೆ. ಕೃಷ್ಣರಾವ್‌ರವರನ್ನು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೂ, ಇಲ್ಲಿರುವ ಶ್ರೀ ಸಿ. ಎಸ್. ದೇವಿಡ್‌ರನ್ನು ಕೆ. ಜಿ. ಎಫ್. ಮೆಡಿಕಲ್ ಆಫೀಸರಾಗಿ ವರ್ಗಾಯಿಸಲಾಗಿದೆ.

ವಿದೇಶದಿಂದ ಹಿಂತಿರುಗಿರುವ ಶ್ರೀ ಹೆಚ್. ವಿ. ವೆಂಕಟರಾಮಯ್ಯನವರನ್ನು ಮೈಸೂರು ಕ್ಷಯರೋಗ ಆಸ್ಪತ್ರೆಯಲ್ಲಿ ನೇಮಿಸಲಾಗಿದೆ.

ಮಿಡತೆ ಹಾವಳಿ ವಿರೋಧ ಕ್ರಮ ಪರಿಶೀಲನೆ

ಮಿಡತೆ ಹಾವಳಿಯನ್ನು ತಪ್ಪಿಸಲು ಕೈಗೊಂಡಿರುವ ಕಾರ್ಯಗಳನ್ನು ಪರಿಶೀಲಿಸಲು ಪಾರ್ಲಿಮೆಂಟಿನ ೮ ಸದಸ್ಯರು ನಿನ್ನೆಯದಿನ ಬಿಕಾನೀರ್‌ಗೆ ಭೇಟಿಯಿತ್ತಿದ್ದರು.

ಪಂಚವಾರ್ಷಿಕಯೋಜನೆ ಯುದ್ಧಕ್ಕೆ ಸಮಾನ

ಆಯೋಜನಾಮಂಡಲಿಯ ಉಪಾಧ್ಯಕ್ಷರ ಹೇಳಿಕೆ

ದೇಶದಲ್ಲಿ ಸರ್ಕಾರವು ಕೈಗೊಂಡಿರುವ ಪಂಚವಾರ್ಷಿಕ ಯೋಜನೆಯ ಕಾರ್ಯವು ನೈತಿಕದೃಷ್ಟಿಯಿಂದ ಯುದ್ಧಕ್ಕೆ ಸಮಾನವಾದುದು. ಈ ಯೋಜನೆಯು ಬರೀ ಅಭಿವೃದ್ಧಿ ಯೋಜನೆಗಳಲ್ಲ ರಾಷ್ಟ್ರೀಯ ಜೀವನವನ್ನು ಉತ್ತಮಗೊಳಿಸುವ ನೂತನ ಕಾರ್ಯಕ್ರಮ ಎಂದು ಆಯೋಜನಾ ಸಮಿತಿಯ ಉಪಾಧ್ಯಕ್ಷರಾದ ಶ್ರೀ ವಿ. ಟಿ. ಕೃಷ್ಣಮಾಚಾರಿಯವರು ಹೇಳಿದ್ದಾರೆ.

ಪಂಚವಾರ್ಷಿಕ ಯೋಜನೆಯ ಪ್ರಕಾರ ಕೈಗೊಂಡಿರುವ ನದೀ ಕಣಿವೆ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಅಂತರ ರಾಜ್ಯಗಳ ವ್ಯವಸ್ಥೆಯನ್ನು ಏರ್ಪಡಿಸಲಾಗುವುದೆಂದು ಅವರು ಹೇಳಿದ್ದಾರೆ.

ಬನುಮಯ್ಯ ಕಾಮರ್ಸ್ ಕಾಲೇಜು ಸಂಘ

ಮೈಸೂರು ೩೧

ಡಿ. ಬನುಮಯ್ಯ ಕಾಮರ್ಸ್ ಕಾಲೇಜಿನ ಸಂಘದ ಚುನಾವಣೆಯು ಇದೇ ೨೯ನೇ ತಾರೀಖು ನಡೆದು ಶ್ರೀ ಅನಂತಪದ್ಮನಾಭ ಅಧ್ಯಕ್ಷ, ಶ್ರೀ ಬಿ. ಕೆ. ಆತ್ಮಾರಾಮ್ ಉಪಾಧ್ಯಕ್ಷ ಮತ್ತು ಶ್ರೀ ಸಿ. ಸಿದ್ದಪ್ಪ ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಎಸ್. ವಿ. ದ್ವಾರಕನಾಥ್, ಎಂ. ಎಸ್ ನಾಗೇಶ್ವರಯ್ಯ, ಎಸ್. ರಾಚಯ್ಯ, ಶ್ರೀಧರ ಮತ್ತು ಹೆಚ್. ಆರ್. ವಿಶ್ವೇಶ್ವರ ಶಾಸ್ತ್ರಿಯವರು ಪ್ರತಿನಿಧಿಗಳಾಗಿಯೂ, ಶ್ರೀ ಕೆ. ಎಸ್. ಅನಂತಸ್ವಾಮಿಯವರು ಆಟಗಳ ಕ್ಯಾಪ್ಟನ್ ಆಗಿ ಚುನಾಯಿತರಾದರು.

ಪ್ರಸನ್ನ ನಂಜುಡೇಶ್ವರ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ

ಸಂತೇ ಪೇಟೆಯಲ್ಲಿರುವ ಶ್ರೀ ಪ್ರಸನ್ನ ನಂಜುಡೇಶ್ವರಸ್ವಾಮಿ ದೇವಸ್ಥಾನದಲ್ಲಿ ನಿನ್ನೆ ರಾತ್ರಿ ವಿಶೇಷ ಪೂಜೆಯು ಜರುಗಿತು. ಮೈಸೂರು ಸಬ್ ಡಿವಿಜನ್ ಆಫೀಸರ್ ಶ್ರೀ ಮರ್ಷಿದ್ ಪೀರ್, ಅಮಲ್ದಾರ್ ಶ್ರೀ ಮುನಿದೇವಯ್ಯ, ಆಹಾರ ಶಾಖಾಧಿಕಾರಿ ಶ್ರೀ ನಾಗೇಗೌಡ, ಪುರ ಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯ, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್. ಲಿಂಗಣ್ಣ, ಶಾಸನ ಸಭಾ ಉಪಾಧ್ಯಕ್ಷ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟಿ, ಶ್ರೀ ಎಸ್. ಚನ್ನಯ್ಯ ಮುಂತಾದ ಅನೇಕ ಮಹನೀಯರು ಆಗಮಿಸಿದ್ದರು.

ವ್ಯವಸ್ಥಾಪಕರಾದ ಶ್ರೀ ಬಿ.ಎಸ್. ಸುಬ್ಬರಾಯರು ಎಲ್ಲರನ್ನೂ ಸ್ವಾಗತಿಸಿ ೧೭೫ ವರ್ಷಗಳ ಹಿಂದೆ ಮುಮ್ಮಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಕಟ್ಟಲ್ಪಟ್ಟ ಈ ದೇವಸ್ಥಾನಕ್ಕೆ ಇತ್ತೀಚೆಗೆ ಭಕ್ತಾದಿಗಳ ಭೇಟಿಯು ಹೆಚ್ಚುತ್ತಿದೆ. ಇನ್ನೂ ಹೆಚ್ಚು ಭಕ್ತರು ಬಂದು ದೇವರ ಸೇವೆಯನ್ನು ನಡೆಸುವಂತೆ ಎಲ್ಲರೂ ಸಹಕರಿಸಬೇಕೆಂದು ಕೋರಿದರು.

ದಳವಾಯಿ ಹೈಸ್ಕೂಲ್ ಹಳೇವಿದ್ಯಾರ್ಥಿ ಸಂಘ ಸಭೆ

ದಳವಾಯಿ ಹೈಸ್ಕೂಲಿನ ಹಳೇವಿದ್ಯಾರ್ಥಿಗಳ ಸಂಘಸಭೆಯು ನಿನ್ನೆಯದಿನ ನಡೆದು ಸಂಘದ ವಾರ್ಷಿಕೋತ್ಸವವನ್ನು ಡಿಸೆಂಬರ್‌ನಲ್ಲಿ ನಡೆಸಬೇಕೆಂದೂ ಆಗ ಸಾಹಿತ್ಯ ಸ್ಪರ್ಧೆಗಳನ್ನು ಏರ್ಪಡಿಸಬೇಕೆಂದು ತೀರ್ಮಾನಿಸಿ ಸದಸ್ಯರಾಗದಿರುವ ಹಳೆಯ ವಿದ್ಯಾರ್ಥಿಗಳು ಕೂಡಲೇ ಸಂಘವನ್ನು ಸೇರಬೇಕೆಂದು ಕೋರಲಾಗಿದೆ.

○ ದಕ್ಷಿಣಭಾರತದಲ್ಲಿ ಚಲನಚಿತ್ರಗಳ ಪ್ರಗತಿಕಾರ್ಯಗಳಿಗಾಗಿ ಶ್ರೀ ವಾಸನರವರ ಅಧ್ಯಕ್ಷತೆಯಲ್ಲಿ ಒಂದು ಚಲನಚಿತ್ರಗಾರರ ಸಂಘವನ್ನು ಸ್ಥಾಪಿಸಲಾಗಿದೆ.

ವಿಶ್ವಸಂಸ್ಥೆ ಅಧ್ಯಕ್ಷತೆಗೆ ಶ್ರೀಮತಿ ವಿಜಯಲಕ್ಷ್ಮೀ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ವಿಶ್ವಸಂಸ್ಥೆಯ ಅಧ್ಯಕ್ಷ ಸ್ಥಾನಕ್ಕೆ ಬೆಂಬಲ ನೀಡಲು ಅಮೆರಿಕಾವು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ. ಮುಂದಿನ ತಿಂಗಳು ೧೫ನೇ ತಾರೀಖು ಈ ಆಯ್ಕೆ ಆಗುತ್ತದೆ.

ಸೂಯೆಜ್ ಕಾಲುವೆ ಒಪ್ಪಂದ

ಈಜಿಪ್ಟ್ ಮತ್ತು ಬ್ರಿಟನ್‌ಗಳ ನಡುವೆ ಸೂಯೆಜ್ ಕಾಲುವೆ ಒಪ್ಪಂದವು ಮುಂದಿನ ತಿಂಗಳು ನಡೆಯಬಹುದೆಂದು ತಿಳಿಯಬರುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಕರಡು ಒಪ್ಪಂದವು ತಯಾರಾಗುತ್ತಲಿರುವುದಾಗಿ ಹೇಳಲಾಗಿದೆ.

ಭಾರತ ಸೇವಕ ಸಮಾಜ ಸಪ್ತಾಹ

ಬೊಂಬಾಯಿ ಪ್ರಾಂತ್ಯದಲ್ಲಿ ಮುಂದಿನ ವಾರ ಭಾರತ ಸೇವಕ ಸಮಾಜ ಸಪ್ತಾಹವನ್ನು ಆಚರಿಸಲಾಗುತ್ತದೆ. ಈ ಸಂಸ್ಥೆಗೆ ಸದಸ್ಯರನ್ನು ಕೂಡಿಸುವ ಕೆಲಸವಲ್ಲದೆ ಸಂಸ್ಥೆಯು ಇನ್ನೂ ನಾನಾ ಅಭಿವೃದ್ಧಿ ಕಾರ್ಯಗಳಲ್ಲಿ ತೊಡಗುವುದು.

ಅಪೇರ

27--8--53 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಕನ್ನಿಕಾ ತಮಿಳು

ಪಾತ್ರ:-ಟಿ. ವರದಂ, ಕಾಳಿ ಎನ್. ರತ್ನಂ, ಎನ್. ಎಸ್. ಕೃಷ್ಣನ್, ಟಿ. ಎ. ಮಧುರಂ.

ಪ್ರಕಾಶಕರು ಮತ್ತು ಮುದ್ರಕರು.

ಜಿ. ಎಲ್. ಸ್ವಾಮಿ.

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೩೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೨

೧-೯-೧೯೫೩ ನೇ ಮಂಗಳವಾರ] ★ ಸಂಪಾದಕರು:— ಜಿ. ಎಲ್. ಸ್ವಾಮಿ

ಷೇಕ್ ಅಬ್ದುಲ್ಲಾರವರ ವಿಚಾರಣೆ

ಕಾಶ್ಮೀರ ಸರ್ಕಾರದ ನಿರ್ಧಾರ

ಕಾಶ್ಮೀರದ ಮಾಜಿ ಪ್ರಧಾನಿ ಷೇಕ್ ಅಬ್ದುಲ್ಲಾರನ್ನು ಲಂಚ ಮತ್ತು ದುರಾಡಳಿತ ಆಪಾದನೆ ಮೇಲೆ ವಿಚಾರಣೆಗೆ ಗುರಿಪಡಿಸಲು ನೂತನ ಸರ್ಕಾರವು ನಿರ್ಧರಿಸಿ, ಈ ಬಗ್ಗೆ ತನಿಖೆ ಈಗಾಗಲೇ ನಡೆಯುತ್ತಿದೆಯೆಂದೂ ಹೇಳಲಾಗಿದೆ.

ಪ್ರವಾಹದಲ್ಲಿ ನೊಂದವರಿಗೆ ಪರಿಹಾರ

ಪ್ರವಾಹದಲ್ಲಿ ನೊಂದವರ ಪರಿಹಾರ ವಿಷಯದಲ್ಲಿ ನಿನ್ನೆಯದಿನ ದೆಹಲಿಯಲ್ಲಿ ಪರಿಹಾರ ಮತ್ತು ಕ್ಷೇಮಾಭಿವೃದ್ಧಿಯ ಸಮಿತಿಗಳ ಸಂಯುಕ್ತಸಭೆನಡೆಯಿತು. ರಾಷ್ಟ್ರಪತಿ ಡಾ|| ರಾಜೇಂದ್ರ ಪ್ರಸಾದ್‌ರವರು ಇದರಲ್ಲಿ ಭಾಗವಹಿಸಿದ್ದರು ಪ್ರವಾಹದಿಂದ ಹೆಚ್ಚಾಗಿ ಅನಾಹುತಕ್ಕೊಳಗಾಗಿರುವ ಮದರಾಸ್, ಉತ್ತರಪ್ರದೇಶ ಮತ್ತು ಬೀಹಾರಿನ ಪ್ರಾಂತ್ಯಗಳಲ್ಲಿ ನಡೆಯಬೇಕಾಗಿರುವ ಪರಿಹಾರ ಕಾರ್ಯಗಳ ವಿಷಯದಲ್ಲಿ ಸಭೆಯು ಚರ್ಚೆ ನಡೆಸಿತು.

ಈ ನೊಂದವರಿಗಾಗಿ ಬಟ್ಟೆ ಸಂಗ್ರಹಣೆ ಮತ್ತು ಹಂಚಿಕೆ ಕಾರ್ಯಗಳನ್ನು ನಡೆಸಲು ಶ್ರೀ ಶ್ರೀರಾಂರವರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿಯನ್ನು ರಚಿಸಲಾಯಿತು.

ಪ್ರಧಾನಿಯವರ ಪರಿಹಾರನಿಧಿಗೆ ಜನತೆಯು ಉದಾರವಾಗಿ ದ್ರವ್ಯ, ಬಟ್ಟೆ ಮತ್ತು ಇತರ ಉಪಯುಕ್ತ ವಸ್ತುಗಳನ್ನು ದಾನ ಮಾಡಬೇಕೆಂದು ಕೋರುವ ನಿರ್ಣಯವನ್ನು ಮಾಡಲಾಯಿತು.

ಬರ್ಮಾ ಪತ್ರಿಕೆ ಆಪಾದನೆ ನಿರಾಧಾರವಾದುದು

ಅಕ್ಕಿ ವ್ಯವಹಾರದಲ್ಲಿ ಬರ್ಮಾ ನಿಯೋಗದವರೊಡನೆ ಕೇಂದ್ರ ಆಹಾರ ಸಚಿವ ಕಿದ್ವಾಯಿಯವರು ಗೌರವಯುತವಾಗಿ ವರ್ತಿಸಲಿಲ್ಲವೆಂದು ಬರ್ಮಾ ಪತ್ರಿಕೆಯೊಂದು ಮಾಡಿದ್ದ ಆಪಾದನೆಯನ್ನು ಶ್ರೀ ಕಿದ್ವಾಯಿಯವರು ಅಲ್ಲಗಳೆದು ಅದು ಸತ್ಯಕ್ಕೆ ದೂರವೆಂದು ತಿಳಿಸಿದ್ದಾರೆ.

ಈ ವಿಷಯದಲ್ಲಿ ಅವರು ಬರ್ಮಾ ಸರ್ಕಾರದೊಡನೆ ವ್ಯವಹಾರ ನಡೆಸುವುದಾಗಿ ತಿಳಿಯಬರುತ್ತದೆ.

ಬಳ್ಳಾರಿಗೆ ಕಛೇರಿಗಳ ವರ್ಗಾವಣೆ

ಅಕ್ಟೋಬರ್ ಒಂದನೇ ತಾರೀಖಿನಿಂದ ಮೈಸೂರು ಸಂಸ್ಥಾನಕ್ಕೆ ಸೇರಲಿರುವ ಬಳ್ಳಾರಿಗೆ ಕೆಲವು ಪ್ರಾದೇಶಿಕ ಕಛೇರಿಗಳನ್ನು ವರ್ಗಾಯಿಸಲಾಗುವುದೆಂದು ತಿಳಿಯಬರುತ್ತದೆ.

ಪಾರ್ಲಿಮೆಂಟಿನಲ್ಲಿ ಪ್ರಜಾ-ಸೋಷಲಿಸ್ಟ್‌ಪಕ್ಷದನಾಯಕ

ಪಾರ್ಲಿಮೆಂಟಿನಲ್ಲಿಪ್ರಜಾಸೋಷಲಿಸ್ಟ್ ಪಕ್ಷದ ನಾಯಕರಾಗಿ ಆಚಾರ್ಯ ಕೃಪಲಾನಿಯವರನ್ನೂ, ಶ್ರೀ ಎಂ ಎಸ್. ಗುರುಪಾದಸ್ವಾಮಿಯವರನ್ನು ಕಾರ್ಯದರ್ಶಿಯನ್ನಾಗಿಯೂ ಚುನಾಯಿಸಲಾಗಿದೆ. ಕೇಂದ್ರ ಹಿರಿಯ ಶಾಸನ ಸಭೆಗೆ ಶ್ರೀ ಸಿ. ಜಿ. ಕೆ. ರೆಡ್ಡಿಯವರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ.

ಕೊಲೊಂಬೊದಲ್ಲಿ ಕೊರಿಯಾ ರಾಜಕೀಯ ಸಮ್ಮೇಳನ

ಸಿಲೋನಿನ ರಾಜಧಾನಿಯಾದ ಕೊಲೊಂಬೋದಲ್ಲಿ ಕೊರಿಯಾ ರಾಜಕೀಯ ಸಮ್ಮೇಳನವು ನಡೆಯಬಹುದೆಂದು ಆಸ್ಟ್ರೇಲಿಯಾ ರೇಡಿಯೋ ವರದಿಮಾಡಿದೆ.

ಸ್ಕೌಟು ಜಾಂಬೂರಿ

ಡಿಸೆಂಬರ್ ೨೭ರಿಂದ ೩೧ರ ವರೆವಿಗೆ ಹೈದರಾಬಾದಿನಲ್ಲಿ ಅಖಿಲಭಾರತ ಸ್ಕೌಟು ಮತ್ತು ಗೈಡ್ ದಳದ ಜಾಂಬೂರಿ ನಡೆಯುತ್ತದೆ. ಈರೀತಿಯ ಜಾಂಬೂರಿ ನಡೆಯುವುದು ಭಾರತದಲ್ಲಿ ಇದೇ ಪ್ರಥಮವೆಂದು ಹೇಳಲಾಗಿದೆ.

ಮಾರಾಟತೆರಿಗೆ ಬಗ್ಗೆ ಬೊಂಬಾಯಿ ವೈದ್ಯರ ಪ್ರತಿಭಟನೆ

ಔಷಧಿಗಳ ಮಾರಾಟಗಾರರು ರೂಗೆ ನಾಲ್ಕು ಆಣೆಯಂತೆ ಮಾರಾಟ ತೆರಿಗೆ ಕೊಡಬೇಕೆಂದು ಬೊಂಬಾಯಿ ಸರ್ಕಾರದವರು ಯೋಚಿಸಿರುವುದನ್ನು ಅಲ್ಲಿನ ವೈದ್ಯರುಗಳು ಪ್ರತಿಭಟಿಸಿ, ಇದರಿಂದ ಬಡಜನರಿಗೆ ತುಂಬಾ ಕಷ್ಟವಾಗುವುದೆಂದು ತಿಳಿಸಿದ್ದಾರೆ.

ಬಳ್ಳಾರಿಗೆ ಮೈಸೂರಿನ ಆಯುರ್ವೇದ ಕಾಲೇಜ್ ಬೇಕಂತೆ

ಮೈಸೂರಿನಲ್ಲಿರುವ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜನ್ನು ಬಳ್ಳಾರಿಗೆ ವರ್ಗಾಯಿಸಬೇಕೆಂದು ಹೊಸಪೇಟೆಯಲ್ಲಿ ನಡೆದ ಬಳ್ಳಾರಿ ಜಿಲ್ಲಾ ಎಲ್. ಐ. ಎಂ. ಡಾಕ್ಟರುಗಳ ಸಂಘದ ವಾರ್ಷಿಕ ಸಭೆಯಲ್ಲಿ ನಿರ್ಣಯಮಾಡಿ, ಈಬಗ್ಗೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರಲ್ಲಿ ನಿಯೋಗ ಹೋಗಬೇಕೆಂದು ನಿರ್ಧರಿಸಲಾಗಿದೆ.

ಮುಖ್ಯಮಂತ್ರಿಯಾಗಿರಲು ಹನುಮಂತಯ್ಯನವರಿಗೆ ಅರ್ಹತೆ ಇಲ್ಲ

ಕಾಂಗ್ರೆಸ್ ಅಧ್ಯಕ್ಷ ವೀರಣ್ಣಗೌಡರ ಹೇಳಿಕೆ

ಬೆಂಗಳೂರು ೧

ಶ್ರೀ ಕೆ ಹನುಮಂತಯ್ಯನವರನ್ನು ನಾಯಕರನ್ನಾಗಿ ನಾವು ಚುನಾಯಿಸಿ ತಪ್ಪುಮಾಡಿದೆವು. ಅವರಿಗೆ ಮುಖ್ಯಮಂತ್ರಿಯಾಗಿರಲು ಅರ್ಹತೆಯಿಲ್ಲ. ಅವರು ಆಡಳಿತ ಮುಖ್ಯಸ್ಥರಾಗಿರಲು ತಕ್ಕ ವ್ಯಕ್ತಿಯಲ್ಲ--ಎಂದು ಎಂ. ಪಿ. ಸಿ. ಸಿ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರು ನಿನ್ನೆಯದಿನ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಶ್ರೀ ಕೆ. ಹನುಮಂತಯ್ಯನವರು ಮುಖ್ಯಮಂತ್ರಿಯಾದಾಗಿನಿಂದ ನಡೆಸಿದ ಕಾರ್ಯಗಳ ಬಗ್ಗೆ ಕಾಂಗ್ರೆಸ್ಸಿನವರಲ್ಲಿ ಭಿನ್ನಾಭಿಪ್ರಾಯ ಮೂಡಿತು. ಆದರೆ ಅವರು ತಮ್ಮ ಹಾದಿಯನ್ನು ತಿದ್ದಿಕೊಳ್ಳುವರೆಂದು ಸುಮ್ಮನಿದ್ದುದಾಯಿತು. ಆದರೆ ಅವರು ಕಾಂಗ್ರೆಸ್ ಮತ್ತು ಅದರ ಕಾರ್ಯಕರ್ತರನ್ನು ಬಹಿರಂಗವಾಗಿ ಟೀಕಿಸಲಾರಂಭಿಸಿದರು. ತಾಮ್ರದ ತಂತಿ, ಅಮಾನಿಕೆರೆ, ಗಂಧಕ ಪ್ರಕರಣ ಮುಂತಾದುವು ಹೊರಬಿದ್ದುವು. ಶ್ರೀ ಹನುಮಂತಯ್ಯನವರನ್ನು ಟೀಕಿಸಲು ಯಾರೇ ಹೊರಟರೂ ಅವರನ್ನು ಶತ್ರುಗಳಂತೆ ಪರಿಗಣಿಸುತ್ತಲಿರುವರು.

ಹಲವಾರು ಪ್ರಕರಣಗಳಿಂದ ನಾವು ಅವರ ಸರ್ಕಾರವನ್ನು ಸಮರ್ಥಿಸಲಾಗಲಿಲ್ಲ. ಸಮರ್ಥಿಸಲು ಕಾರಣವೂ ಇಲ್ಲ. ಮಿತವ್ಯಯದಿಂದ ಖೋತಾ ಆಯವ್ಯಯವನ್ನು ಸಮತೂಕ ಆಯವ್ಯಯವನ್ನಾಗಿ ಪರಿವರ್ತಿಸುತ್ತೇನೆಂದು ಹೇಳುತ್ತಾ ಅವರು ಸಾರ್ವಜನಿಕರನ್ನು ತಪ್ಪುಹಾದಿಗೆಳೆಯುತ್ತಿದ್ದಾರೆ. ತಮ್ಮ ಅಧಿಕಾರವನ್ನು ಭದ್ರಪಡಿಸಿಕೊಳ್ಳುವ ಉದ್ದೇಶದಿಂದ ಸಾರ್ವಜನಿಕ ಹಣವನ್ನು ನಿರ್ಲಕ್ಷ್ಯವಾಗಿ ವಿನಿಯೋಗಿಸುತ್ತಲಿದ್ದಾರೆ. ಬ್ಲಿಟ್ಸ್ ಪತ್ರಿಕೆ ಛಾಪಿರಾತೇ ಇದಕ್ಕೆ ಸಾಕ್ಷಿ. ಈ ಪತ್ರಿಕೆ ೪೦-೫೦ ಸಾವಿರ ರೂ. ಗಳನ್ನು ಕೊಟ್ಟಿರಬಹುದು. ಮೈಸೂರು ಸರ್ಕಾರವು ಸಾಲವೆತ್ತುವಾಗ ಕಾಂಗ್ರೆಸ್ ಸಹಾಯ ಮಾಡಲಿಲ್ಲವೆಂದು ಅವರು ಆರೋಪಿಸಿದ್ದಾರೆ. ಆಡಳಿತದಲ್ಲಿ ಜನರಿಗೆ ಭರವಸೆಯಿಲ್ಲದಿರುವಾಗ ಯಾರು ತಾನೆ ಹಣವನ್ನು ಕೊಡುತ್ತಾರೆ ? ತಮ್ಮನ್ನು ಹೊಗಳಿ ನೂರಾರು ಮಾನಪತ್ರಗಳು ಬಂದಿರುವುದಾಗಿ ಅವರು ಹೇಳುತ್ತಿದ್ದಾರೆ ಮಾನಪತ್ರಗಳು ಬೆಂಬಲವೀಯುವ ಸರ್ಟಿಫಿಕೇಟುಗಳಲ್ಲ. ಬಿನ್ನವತ್ತಳೆಗಳು ವೇದವಾಕ್ಯವಲ್ಲ ಎಂದು ಶ್ರೀ ವೀರಣ್ಣಗೌಡರು ತಿಳಿಸಿದರು.

ತಮ್ಮ ದೆಹಲಿ ಪ್ರವಾಸದ ವಿಷಯವಾಗಿ ಪ್ರಸ್ತಾಪಿಸಿ, ಶ್ರೀ ಹನುಮಂತಯ್ಯನವರನ್ನು ಹತೋಟಿಗೆ ತರಲು ಪಟ್ಟ ಯತ್ನಗಳು ನಿಷ್ಫಲವಾದುದರಿಂದ ಕಾಂಗ್ರೆಸ್ ಹೈಕಮ್ಯಾಂಡಿಗೆ ವಿಷಯಗಳನ್ನು ತಿಳಿಸಲು ದೆಹಲಿಗೆ ಹೋದುದಾಗಿಯೂ ಅವರು ಹೇಳಿದರು.

ಸರ್ಕಾರವು ಕೈಗೊಂಡಿರುವ ಸಾಂಸ್ಕೃತಿಕ ಪ್ರಚಾರ ವಿಚಾರವಾಗಿ ಶ್ರೀ ಗೌಡರು ಮಾತನಾಡುತ್ತಾ ನಮ್ಮ ಗ್ರಾಮಸ್ಥರಿಗೆ ಸಂಸ್ಕೃತರಾಗಬೇಕೆಂದು ಹೇಳುವುದು ಗ್ರಾಮಸ್ಥರಿಗಲ್ಲದೆ ನಮ್ಮ ಸಂಸ್ಕೃತಿಗೇ ಅಪಮಾನ ನಮ್ಮ ಗ್ರಾಮಸ್ಥರು ಬಹು ಸಂಸ್ಕೃತರು ಅಧಿಕಾರದಲ್ಲಿರುವ ವಿದ್ಯಾವಂತರಂತೆ ಒರಟರಲ್ಲ ಎಂದು ಹೇಳಿದರು.

ಶ್ರೀ ಹನುಮಂತಯ್ಯನವರು ಸ್ವಪ್ರತಿಷ್ಠಾಭಿವೃದ್ಧಿಗಾಗಿ ಪಂಡಿತ ನೆಹರೂರವರ ಉತ್ತರಾಧಿಕಾರಿಯೆಂದು ಕರೆಸಿಕೊಳ್ಳಲು, ಟೀಪುಸುಲ್ತಾನನೆಂದು ಕರಿಸಿಕೊಳ್ಳಲು ಸಾರ್ವಜನಿಕ ಹಣವನ್ನು ವ್ಯಯಮಾಡುತ್ತಿದ್ದಾರೆ. ಇಂತಹವರನ್ನು ಬುದ್ಧಿವಂತರೆಂದು ನಾವು ಒಪ್ಪುವುದಕ್ಕಾಗುವುದಿಲ್ಲ ಎಂದು ಶ್ರೀ ವೀರಣ್ಣಗೌಡರು ತಿಳಿಸಿದರು.

ಶ್ರೀ ಕೆ. ಸಿ. ರೆಡ್ಡಿಯವರು ಮುಖ್ಯಮಂತ್ರಿಯಾಗಿದ್ದಾಗ ಮೂರುಬಾರಿ ತಮಗೆ ಮಂತ್ರಿಯಾಗಲೆಂದು ಬಂದ ಆಹ್ವಾನವನ್ನು ನಿರಾಕರಿಸಿದುದಾಗಿಯೂ ಪಬ್ಲಿಕ್ ಸರ್ವಿಸ್ ಕಮೀಷನ್ ಅಧ್ಯಕ್ಷತೆಗೆ ಆಹ್ವಾನ ಬಂದಾಗ ತಮ್ಮ ಸಮ್ಮತಿ ಇತ್ತಾದರೂ ಅದು ಆಗಲಿಲ್ಲವೆಂದೂ ಆದರೆ ಅಧಿಕಾರ ಲಾಲಸೆಗಾಗಿ ತಾವು ಹಾತೊರೆಯುತ್ತಿಲ್ಲವೆಂದೂ ಕಾಂಗ್ರೆಸ್ ಸಂಸ್ಥೆಯ ಹೆಸರು, ದೇಶದ ಹಿತ ಮಾತ್ರ ತಮ್ಮ ಗಮನವೆಂದು ಶ್ರೀ ವೀರಣ್ಣಗೌಡರು ತಿಳಿಸಿದರು.

೪ ಆಣೆ ಆಸೆಗಾಗಿ ಕೆಲಸ ಹೋಯಿತು

ಸೂರತ್ ಪುರಸಭೆಯ ನೌಕರರೊಬ್ಬರು ಕಲ್ಲಿದ್ದಲು ವರ್ತಕರೊಬ್ಬರಿಗೆ ರಹದಾರಿ ಕೊಡುವ ಬಗ್ಗೆ ನಾಲ್ಕು ಆಣೆ ಲಂಚ ಪಡೆದರೆಂದು ಅವರನ್ನು ಕೆಲಸದಿಂದ ತೆಗೆದು ಹಾಕಲಾಗಿದೆ.

● ಭೂದಾನ ಯಜ್ಞಕ್ಕಾಗಿ ಕೊಯಮತ್ತೂರು ಜಿಲ್ಲೆಯಲ್ಲಿ ಸುಮಾರು ೫೫೧೬ ಎಕರೆ ಜಮೀನು ಮತ್ತು ೨೩ ಸಾವಿರ ರೂ. ಹಣ ಸಂಗ್ರಹವಾಗಿದೆ. ಮಧ್ಯಪ್ರದೇಶದಲ್ಲಿ ಇಲ್ಲಿಯವರೆಗೆ ೮೮೭೭೦ ಎಕರೆ ಜಮೀನು ಸಂಗ್ರಹವಾಗಿದೆ.

ಕಾಶ್ಮೀರದ ಶಾಲಾ ಕಾಲೇಜುಗಳಲ್ಲಿ ಉಚಿತ ವಿದ್ಯಾಭ್ಯಾಸ

ಸರ್ಕಾರದ ನೂತನ ಆಜ್ಞೆ

ಕಾಶ್ಮೀರ ಮತ್ತು ಜಮ್ಮು ಪ್ರಾಂತ್ಯದಾದ್ಯಂತ ಮಕ್ಕಳ ಶಿಕ್ಷಣದಿಂದ ಕಾಲೇಜುಗಳಲ್ಲಿ ಎಂ. ಎ. ಪರೀಕ್ಷೆಯವರೆವಿಗೆ ವಿದ್ಯಾಭ್ಯಾಸವೆಲ್ಲಾ ಉಚಿತವಾಗಿ ನಡೆಯುವಂತೆ ಸರ್ಕಾರವು ಹೊಸ ಆಜ್ಞೆಯನ್ನು ಇತ್ತಿದೆ.

ಈ ಹೊಸ ಸುಧಾರಣೆಯಿಂದ ಸುಮಾರು ಒಂದುಲಕ್ಷ ೧೦ ಸಾವಿರ ಬಾಲಕ ಬಾಲಕಿಯರಿಗೆ ಅನುಕೂಲವಾಗುತ್ತದೆ. ಅವಲ್ಲದೆ ಪ್ರಾಂತ್ಯಾದ್ಯಂತ ಬಾಲಕ ಬಾಲಕಿಯರ ಸಹಶಿಕ್ಷಣವನ್ನು ರದ್ದುಗೊಳಿಸಲು ಸರ್ಕಾರವು ನಿರ್ಧರಿಸಿದೆ.

ತಮಿಳು ಉತ್ಸವ ಮುಕ್ತಾಯ

ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ನಡೆಯುತ್ತಲಿದ್ದ ತಮಿಳು ಉತ್ಸವವು ನಿನ್ನೆಯದಿನ ಮುಕ್ತಾಯವಾಯಿತು. ಉತ್ತಮ ತಮಿಳು ಗ್ರಂಥಕರ್ತರಿಗೆ ಬಹುಮಾನವನ್ನು ಹಂಚಲಾಯಿತು.

"ರಾಮಕೃಷ್ಣ ಉಪನಿಷತ್" ಬರೆದಿದ್ದಕ್ಕೆ ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ ೫೦೦ ರೂ. ಬಹುಮಾನವನ್ನು ಕೊಡಲಾಯಿತು. ಇವನ್ನು ಅವರ ಪುತ್ರಿ ಶ್ರೀಮತಿ ದೇವದಾಸ್ ಗಾಂಧಿಯವರು ಸ್ವೀಕರಿಸಿದರು. ಈ ಹಣವನ್ನು ರಾಮಕೃಷ್ಣಾಶ್ರಮಕ್ಕೆ ಕೊಡುವುದಾಗಿ ಶ್ರೀ ರಾಜಾಜಿ ತಿಳಿಸಿದ್ದಾರೆ.

ಕೊರಿಯಾಕ್ಕೆ ಭಾರತದ ಮೇಲ್ವಿಚಾರಕ ಸೈನ್ಯ

ಕೊರಿಯಾದಲ್ಲಿ ಸ್ವದೇಶಕ್ಕೆ ಹಿಂತಿರುಗದ ಯುದ್ಧ ಖೈದಿಗಳ ಮೇಲ್ವಿಚಾರಣೆ ಸಂಬಂಧವಲ್ಲಿ ಅಲ್ಲಿಗೆ ತೆರಳಿರುವ ಭಾರತ ಸೈನ್ಯದ ಮೊದಲನೆ ತಂಡವು ಈದಿನ ಕೊರಿಯಾ ಬಂದರಾದ ಇಂಚಾನ್ ಸೇರುತ್ತದೆ. ಇದರಲ್ಲಿ ೧೧೦೦ ಜನರಿರುವರು. ಇವರನ್ನು ಕೂಡಲೇ ನಿಸ್ಸೈನ್ಯವಲಯಕ್ಕೆ ಹೆಲಿಕಾಪ್ಟರ್ ವಿಮಾನಗಳ ಮೂಲಕ ರವಾನಿಸಲು ಸಕಲ ಸಿದ್ಧತೆಗಳನ್ನು ವಿಶ್ವಸಂಸ್ಥೆ ಸೈನ್ಯದವರು ಮಾಡಿದ್ದಾರೆ.

ಈ ಸೈನ್ಯದ ಕೊನೆಯ ತಂಡವು ಮದ್ರಾಸಿನಿಂದ ಜಲಗೋಪಾಲ್ ಎಂಬ ಜಹಜಿನಲ್ಲಿ ಪ್ರಯಾಣ ಬೆಳೆಸುವುದು ಇದರಲ್ಲಿ ೧೧೦೦ ಸೈನಿಕರಿರುವರು.

ಕ್ರಿಕೆಟ್ ಟೆಸ್ಟ್ ಪಂದ್ಯ

ಭಾರತ ಕ್ರಿಕೆಟ್ ಸಂಸ್ಥೆಯ ವಜ್ರಮಹೋತ್ಸವ ಸಂದರ್ಭವಲ್ಲಿ ಭಾರತಕ್ಕೆ ಆಗಮಿಸಿರುವ ಕಾಮನ್ವೆಲ್ತ್ ಕ್ರಿಕೆಟ್ ತಂಗಡದವರೊಡನೆ ಭಾರತವು ೫ ಟೆಸ್ಟ್ ಪಂದ್ಯಗಳನ್ನು ಆಡಲು ನಿರ್ಧರಿಸಿದೆ.

ಈ ಪಂದ್ಯಗಳು ನವಂಬರ್ ೫ ರಲ್ಲಿ ಲಕ್ನೋ, ನವೆಂಬರ್ ೧೯ ರಲ್ಲಿ ದೆಹಲಿ, ಡಿಸೆಂಬರ್ ೩ ರಲ್ಲಿ ಬೊಂಬಾಯಿ, ಡಿಸೆಂಬರ್ ೩೧ ರಲ್ಲಿ ಕಲ್ಕತ್ತಾ ಮತ್ತು ಜನವರಿ ೧೪ ರಲ್ಲಿ ಮದ್ರಾಸ್ ನಲ್ಲಿ ನಡೆಯುತ್ತವೆ.

ಸಾರ್ವಜನಿಕ ವಿದ್ಯಾರ್ಥಿ ನಿಲಯ ಸಂಘ

ಮೈಸೂರು ೧

ಸಾರ್ವಜನಿಕ ವಿದ್ಯಾರ್ಥಿ ನಿಲಯ ಸಂಘದ ಆರಂಭ ಭಾಷಣವನ್ನು ಇದೇ ಮಾಹೆ ೬ನೇ ತಾರೀಖು ಸಂಜೆ ೬-೩೦ ಗಂಟೆಗೆ ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ಮಾಡುವರು.

ಕಸ್ತೂರಿ ಬಾ ಸಂಸ್ಥೆಯ ಮೈಸೂರು ಶಾಖೆಯ ಪ್ರತಿನಿಧಿ ಶ್ರೀಮತಿ ಯಶೋದರ ದಾಸಪ್ಪನವರು ಅಧ್ಯಕ್ಷತೆ ವಹಿಸುತ್ತಾರೆ.

ಕೃಷ್ಣ ಪರಮಾತ್ಮನ ವಚನಗಳನ್ನು ಎಲ್ಲರೂ ತಿಳಿಯಬೇಕು

ಶ್ರೀ ಕೃಷ್ಣ ಜನ್ಮಾಷ್ಟಮಿಯ ಮಹೋತ್ಸವವು ಭಾರತಾದ್ಯಂತ ನಾನಾ ಪಟ್ಟಣಗಳಲ್ಲಿ ನಿನ್ನೆಯದಿನ ಪ್ರಾರಂಭವಾಯಿತು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದ್‌ರವರು ದೆಹಲಿಯಲ್ಲಿರುವ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ದೇವಸ್ಥಾನಕ್ಕೆ ಭೇಟಿಯಿತ್ತು ಸುಮಾರು ಒಂದು ಗಂಟೆಕಾಲ ಧ್ಯಾನ ನಡೆಸಿ ಅನಂತರ ಗೀತಾ ಪಠನವನ್ನು ಮಾಡಿದರು.

ಶ್ರೀ ಕೃಷ್ಣ ಜನ್ಮಸ್ಥಾನವಾದ ಮಥುರೆಯಲ್ಲಿ ಕೇಂದ್ರ ಪ್ರಸಾರ ಶಾಖಾ ಸಚಿವ ಡಾ|| ಬಿ. ವಿ. ಕೇಸ್ಕರ್‌ರವರ ನೇತೃತ್ವದಲ್ಲಿ ಉತ್ಸವಗಳು ಪ್ರಾರಂಭವಾದುವು ಈ ಸಂದರ್ಭದಲ್ಲಿ ಡಾ|| ಕೇಸ್ಕರ್‌ರವರು ಮಾತನಾಡುತ್ತಾ ಯುದ್ಧ ಸಂದಿಗ್ಧ ಪರಿಸ್ಥಿತಿಯಲ್ಲಿರುವ ವಿಶ್ವದಲ್ಲಿ ಶ್ರೀ ಕೃಷ್ಣ ಪರಮಾತ್ಮನ ಬೋಧನೆಗಳನ್ನು ಜನರು ಚೆನ್ನಾಗಿ ಅರಿತುಕೊಂಡು ಅವನ್ನು ಕಾರ್ಯರೂಪಕ್ಕೆ ತರಬೇಕು ಪರಮಾತ್ಮನ ಹಿತನುಡಿಗಳು ವಿಶ್ವಸಂದೇಶಗಳೇ ಹೊರತು ಯಾವ ಪಕ್ಷ ಅಥವ ಕೋಮಿಗೆ ಅಲ್ಲ ಎಂದು ಅವರು ಹೇಳಿದರು.

ಅಲ್ಲಿ ಈ ಮಹೋತ್ಸವವು ೫ ದಿನಗಳ ಕಾಲ ನಡೆಯುತ್ತದೆ.

ಸರ್ಕಾರಿ ಅಧಿಕೃತ ಭಾಷೆ

ಮಧ್ಯಪ್ರದೇಶದಲ್ಲಿ ಹಿಂದಿ ಮತ್ತು ಮರಾಠಿಯನ್ನು ಅಧಿಕೃತ ಭಾಷೆಯಾಗಿ ಉಪಯೋಗಿಸುವಂತೆ ಸರ್ಕಾರವು ಆಜ್ಞೆಯನ್ನಿತ್ತಿದೆ ರಾಜ್ಯಾಂಗದಲ್ಲಿ ನಮೂದಿಸಿರುವ ಅಥವ ಅತ್ಯಂತ ಅವಶ್ಯಕತೆಯಿರುವಾಗ ಮಾತ್ರ ಇಂಗ್ಲೀಷ್ ಭಾಷೆಯನ್ನು ಉಪಯೋಗಿಸಲಾಗುತ್ತದೆ. ಇತರ ಸಂದರ್ಭಗಳಲ್ಲಿ ಈ ಎರಡು ಅಧಿಕೃತ ಭಾಷೆಗಳಲ್ಲಿ ಒಂದನ್ನು ಉಪಯೋಗಿಸಲಾಗುವುದು.

ಪತ್ರಿಕೋದ್ಯಮ ಶಿಕ್ಷಣ

ಉಸ್ಮೇನಿಯಾ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಶಿಕ್ಷಣವನ್ನು ಕೊಡಲು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಗಿರಣಿ ಮಾಲೀಕರಿಗೆ ಪ್ರಧಾನಿ ನೆಹರೂ ಮನವಿ

ಗೋದಾವರಿ ಪ್ರವಾಹದಲ್ಲಿ ನೊಂದವರಿಗೆ ಸಹಾಯ

ಆಂಧ್ರಪ್ರಾಂತ್ಯದ ನೂತನ ಲಾಂಛನ

ಆಂಧ್ರಪ್ರಾಂತ್ಯದ ನೂತನ ಕೇಂದ್ರ ಕಛೇರಿಯು ಕರ್ನೂಲ್‌ನಲ್ಲಿ ಇದೇ ೨೫ ನೇ ತಾರೀಖು ಪ್ರಾರಂಭವಾಗುತ್ತದೆ ಹೊಸರಾಜ್ಯವು ಅಕ್ಟೋಬರ್ ಒಂದನೇ ತಾರೀಖು ಪ್ರಾರಂಭವಾದಾಗ್ಯೂ ಮುಂಚೆಯೇ ಹೊಸ ಕಛೇರಿಯು ಸ್ಥಾಪಿತವಾಗುತ್ತದೆ.

ಹೊಸ ಆಂಧ್ರರಾಜ್ಯಕ್ಕೆ ನೂತನ ರಾಜಚಿಹ್ನೆಯನ್ನು ತಯಾರಿಸಲಾಗಿದೆ. ಈ ಚಿಹ್ನೆಯಲ್ಲಿ ಅಶೋಕಚಕ್ರ, ಪೂರ್ಣ ಕುಂಭ ಮತ್ತು ಅಶೋಕಸಿಂಹಗಳು ಇದರಲ್ಲಿ ಅಡಕವಾಗಿವೆ.

ಈ ನೂತನ ಲಾಂಛನವನ್ನು ಆಂಧ್ರದ ವಿಶೇಷ ಅಧಿಕಾರಿಗಳಾದ ಶ್ರೀ ತ್ರಿವೇದಿಯವರು ಕಾಂಗ್ರೆಸ್, ಪ್ರಜಾಸೋಷಲಿಸ್ಟ್ ಮುಂತಾದ ಪಕ್ಷಗಳ ಸಲಹೆ ಪಡೆದು ನಿರ್ಧರಿಸಿದ್ದಾರೆ.

ತೇನ್‌ಸಿಂಗ್‌ಗೆ ಪಾಕಿಸ್ತಾನ ಆಹ್ವಾನ

ಪಾಕೀಸ್ತಾನ ಪರ್ವತಾರೋಹಿ ತಂಡವೊಂದು ತ್ರಿಚ್‌ಮೀರ್ ಪರ್ವತವನ್ನು ಹತ್ತಲು ಎವರೆಸ್ಟ್ ಪರ್ವತಾರೋಹಿ ತೇನ್‌ಸಿಂಗ್‌ರನ್ನು ಆಹ್ವಾನಿಸಿದೆ.

ಕೈಮಗ್ಗ ಬಟ್ಟೆ ಉಪಯೋಗಿಸಿ ಎಂದು ರಾಜಾಜಿ

ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮಧುರೆಯಲ್ಲಿ ಮಾತನಾಡುತ್ತಾ ಕೈಮಗ್ಗದವರ ಪರಿಸ್ಥಿತಿಯು ಉತ್ತಮವಾಗಿಲ್ಲ ಜನರೆಲ್ಲರೂ ಕೈಮಗ್ಗದ ಬಟ್ಟೆಗಳನ್ನೇ ಉಪಯೋಗಿಸಿ ಆ ಕೈಗಾರಿಕೆಗೆ ಉತ್ತೇಜನ ಕೊಡಬೇಕೆಂದು ಮನವಿ ಮಾಡಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೩೧—೮—೧೯೫೩

ಪಲ್ಲ	ರೂ. ಅ	ರೂ. ಅ
ಕಡಲೇಕಾಯಿ	೧೩—	೨೬—೧೦
ಎಳ್ಳು	೬೪—೧೪	೮೭—೧೦
ಹುರುಳಿ	೪೭—೨	—
ಹೆಸರು	—	—
ಹರಳು	೩೦—೪	—
ಅಲಸಂದೆ	೬೮—	೭೫—
ಹೊಂಗೆಬೀಜ	—	—
ಅವರೆ	—	—
ಉದ್ದು	೬೮—	೬೯—೧೦
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	—	—
ಸೀಗೆಕಾಯಿ	—	—
ಬೆಲ್ಲ	೯—	—
ತೆಂಗಿನಕಾಯಿ	೮೦	೨೫೭

Gōdāvari nadi pravāhadalli...

ಗೋದಾವರಿ ನದಿ ಪ್ರವಾಹದಲ್ಲಿ ದೈವವಶಾತ್ ಅನೇಕರು ಸತ್ತಿಲ್ಲವಾದರೂ ಲಕ್ಷಾಂತರಜನರು ಮನೆಮಠಗಳನ್ನೂ ತಮ್ಮ ಸರ್ವಸ್ವವನ್ನೂ ಕಳೆದುಕೊಂಡು ಆಹಾರ, ಬಟ್ಟೆ ಮುಂತಾದ ಅವಶ್ಯಕವಾದ ವಸ್ತುಗಳೂ ಸಹ ಇಲ್ಲದೆ ಪರಿತಪಿಸುತ್ತ ವಿಶೇಷ ಸಂಕಟಕ್ಕೆ ಈಡಾಗಿದ್ದಾರೆ. ಮದ್ರಾಸ್ ಸರ್ಕಾರವು ಸಾಧ್ಯವಾದಷ್ಟು ಪರಿಹಾರಕಾರ್ಯದಲ್ಲಿ ತೊಡಗಿದೆ. ಕೇಂದ್ರವೂ ಸಹ ತನ್ನ ಕೈಲಾದಷ್ಟು ಸಹಾಯವನ್ನು ಕೊಡುತ್ತದೆ. ಆದಾಗ್ಯೂ ಸಾರ್ವಜನಿಕರ ನೆರವು ಅತ್ಯಾವಶ್ಯಕವಾಗಿದೆ. ದ್ರವ್ಯ ಸಹಾಯಕ್ಕಾಗಿ ಈಗಾಗಲೇ ಮನವಿ ಸಲ್ಲಿಸಲಾಗಿದೆ. ಈಗ ಅನೇಕ ದಾನಿಗಳು ಮುಂದೆಬಂದು ದ್ರವ್ಯ ಸಹಾಯ ನೀಡುತ್ತಿದ್ದಾರೆ. ಬಟ್ಟೆ ಗಿರಣಿಯವರು ಸಹ ಸಾಧ್ಯವಾದಷ್ಟು ಜಾಗ್ರತೆಯಾಗಿ ಬಟ್ಟೆಯನ್ನು ದಾನಮಾಡಬೇಕು--ಎಂದು ಪ್ರಧಾನಿ ನೆಹರೂರವರು ಮನವಿಮಾಡಿದ್ದಾರೆ.

ಕೃಷ್ಣಮೆನನ್ ಭಾರತಕ್ಕೆ

ವಿಶ್ವ ಸಂಸ್ಥೆಯ ವಿಶೇಷ ಅಧಿವೇಶನದಲ್ಲಿ ಭಾಗವಹಿಸಿದ ಭಾರತ ಪ್ರತಿನಿಧಿ ಶ್ರೀ ವಿ. ಕೆ. ಕೃಷ್ಣಮೆನನ್‌ರವರು ಸರ್ಕಾರದೊಡನೆ ಸಮಾಲೋಚನೆಗಾಗಿ ಭಾರತಕ್ಕೆ ಬರಲಿರುವರು.

ಲಂಚಕ್ಕಾಗಿ ಅಧಿಕಾರಿಗಳ ವಜಾ

ಲಂಚದ ಅಪಾದನೆ ಮೇಲೆ ೫ ಮಂದಿ ಉನ್ನತ ರೈಲ್ವೆ ಅಧಿಕಾರಿಗಳನ್ನು ಪಾಕೀಸ್ತಾನ್ ಸರ್ಕಾರವು ಕೆಲಸದಿಂದ ತೆಗೆದು ಹಾಕಿದೆ.

ಭಾರತಕ್ಕೆ ರಷ್ಯದ ಹೊಸ ರಾಯಭಾರಿ

ಮಿ|| ಮೈಕೇಲ್ ಅಲೆಕ್ಸೀವಿಚ್ ಮೆನ್ಷಿಕಾಫ್‌ರನ್ನು ಭಾರತದಲ್ಲಿ ಹೊಸ ರಾಯಭಾರಿಯನ್ನಾಗಿ ರಷ್ಯ ನೇಮಿಸಿದೆ.

ಹೊಸದಾಗಿ ಬಂದಿದೆ

ಹರ್‌ಕುಲಿಸ್ ಸೈಕಲ್‌ಗಳು, ಮಕ್ಕಳ ಟ್ರೈಸಿಕಲ್‌ಗಳು ಮತ್ತು ಗಾಡಿಗಳು.

ಶಾರದ ಸೈಕಲ್ ಮತ್ತು ವಾಚ್ ಸ್ಟೋರ್ಸ್, ದೊಡ್ಡಗಡಿಯಾರ ಹೌಸ್, ಮೈಸೂರು.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೩೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೪

೨-೯-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾಶ್ಮೀರ ಒಪ್ಪಂದದ ಬಗ್ಗೆ ಜನರ ಟೀಕೆ ಸರಿಯಲ್ಲ

ಪಾಕೀಸ್ತಾನ ಪ್ರಧಾನಿ ಮಹಮದ್ ಅಲಿ ಹೇಳಿಕೆ

ಪಾಕೀಸ್ತಾನ ಪ್ರಧಾನಿ ಮಹಮದ್ ಅಲಿಯವರು ನಿನ್ನೆಯದಿನ ಕರಾಚಿಯಲ್ಲಿ ಮಾತನಾಡುತ್ತಾ ತಮಗೂ ಮತ್ತು ಭಾರತ ಪ್ರಧಾನಿ ನೆಹರೂರವರಿಗೂ ಕಾಶ್ಮೀರ ವಿಷಯದಲ್ಲಿ ಆದ ಒಪ್ಪಂದದ ಅರ್ಥ ವಿವರಣೆಯನ್ನು ವಿಮರ್ಶಿಸುತ್ತಾರೆ.

ದೆಹಲಿಯಲ್ಲಿ ಮಾತುಕತೆ ಮುಗಿದನಂತರ ಉಭಯಪ್ರಧಾನಿಗಳು ಇತ್ತ ಸಂಯುಕ್ತ ಪ್ರಕಟಣೆಯನ್ನು ಪಾಕೀಸ್ತಾನದಲ್ಲಿ ಚೆನ್ನಾಗಿ ಅರ್ಥಮಾಡಿಕೊಳ್ಳದೆ ಗೊತ್ತಿಲ್ಲದ ಟೀಕೆಯನ್ನು ಮಾಡುತ್ತಿರುವುದು ವಿಷಾದಕರ. ಈ ಟೀಕೆಗಳಿಂದ ಪಾಕೀಸ್ತಾನ ಪ್ರಜೆಗಳ ಮನಸ್ಸಿನಲ್ಲಿ ಗೊಂದಲ ಉಂಟಾಗಿದೆ ಎಂದು ಮಹಮ್ಮದ್ ಅಲಿಯವರು ತಿಳಿಸುತ್ತಾ ಉಭಯಪ್ರಧಾನಿಗಳ ನಡುವೆ ಎರಡು ಅಂಶಗಳಲ್ಲಿ ಒಪ್ಪಂದವಾಯಿತು. ಒಂದು ಕಾಶ್ಮೀರದಲ್ಲಿ ಪ್ರಜಾಭಿಪ್ರಾಯ ಅಧಿಕಾರಿ ನೇಮಕದ ತಾರೀಖು ಮತ್ತು ಎರಡನೆಯದು ಉಭಯ ಸರ್ಕಾರಗಳ ಮಿಲಿಟರಿ ಮತ್ತು ಸಿವಿಲ್ ಅಧಿಕಾರಿಗಳು ಪೂರ್ವಭಾವಿ ವಿಷಯ ಚರ್ಚಿಸಿ ಪ್ರಧಾನಿಗಳಿಗೆ ಸೂಕ್ತ ಸಲಹೆಗಳನ್ನು ಕೊಡುವುದು. ಎಲ್ಲಾ ವಿಷಯಗಳನ್ನು ಪ್ರಮಾಣಿಕರಾಗಿ ಮತ್ತು ಮೈತ್ರಿಯುತವಾಗಿ ಕಾರ್ಯರೂಪಕ್ಕೆ ತರಲು ಉಭಯ ಪ್ರಧಾನಿಗಳ ಮನಸ್ಸು. ಉಭಯ ರಾಷ್ಟ್ರಗಳಲ್ಲಿ ಪ್ರಧಾನಿಗಳಿಗೆ ಆದ ಸ್ವಾಗತದಿಂದ ಒಂದು ರಾಷ್ಟ್ರದಜನರಲ್ಲಿ ಮತ್ತೊಂದರಮೇಲೆ ಭಿನ್ನಾಭಿಪ್ರಾಯವಿಲ್ಲವೆಂದು ತಿಳಿಯಬರುತ್ತದೆ ಜನರು ಸಾವಧಾನದಿಂದ ಎಲ್ಲವನ್ನು ಪರಿಶೀಲಿಸಬೇಕು ಎಂದು ಮಹಮ್ಮದ್ ಅಲಿಯವರು ತಿಳಿಸಿದ್ದಾರೆ.

ಇದೇ ವಿಷಯವಲ್ಲಿ ಪಾಕ್ ಗೌರ್ನರ್ ಜನರಲ್ ಪಾಕ್ ಮಂತ್ರಿಮಂಡಲದಲ್ಲಿ ಭಿನ್ನಾಭಿಪ್ರಾಯವಿದೆಯೆನ್ನುವುದಕ್ಕೆ ಆಧಾರವಿಲ್ಲವೆಂದು ತಿಳಿಸಿದ್ದಾರೆ.

ವಿದ್ಯುಚ್ಛಕ್ತಿ ಸರಬರಾಜಿನ ಬಗ್ಗೆ ಪತ್ರಿಕಾ ಪ್ರಕಟಣೆ

ಬೆಂಗಳೂರು ೨

ಕೆಲವು ಪ್ರದೇಶಗಳಲ್ಲಿ ಅದರಲ್ಲೂ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ವಿದ್ಯುಚ್ಛಕ್ತಿ ಸರಬರಾಜು ಕೆಲವು ಸಮಯಗಳಲ್ಲಿ ನಿಂತುಹೋಗುವ ವಿಷಯದಲ್ಲಿ ಸರಕಾರದವರು ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಅದಕ್ಕೆ ಕಾರಣಗಳನ್ನು ವಿವರಿಸಿ ಇದಕ್ಕೆ ಸಂಬಂಧಪಟ್ಟ ನ್ಯೂನಾತಿರಿಕ್ತಗಳನ್ನು ಇಲಾಖೆಯವರಿಗೆ ಸಾರ್ವಜನಿಕರು ತಿಳಿಸಬೇಕೆಂದು ಮನವಿ ಮಾಡಿದ್ದಾರೆ.

ಕಳೆದ ಎರಡು ವರ್ಷಗಳಿಂದ ವಿದ್ಯುಚ್ಛಕ್ತಿಯ ಪ್ರವಾಹ ಶಕ್ತಿಯನ್ನು ೫೦ ಸೈಕಲ್ಲುಗಳಿಗೆ ಪರಿವರ್ತಿಸುತ್ತಲಿರುವುದು, ಬೆಂಗಳೂರಿನಲ್ಲಿ ಭೂಮಿಯೊಳಗೆ ವಿದ್ಯುತ್ ತಂತಿಗಳನ್ನು ಹಾಕುವ ಯೋಜನೆ ಕೈಗೊಂಡಿರುವುದು, ಕಳೆದ ಯುದ್ಧದ ದೆಸೆಯಿಂದ ವಿದ್ಯುಚ್ಛಕ್ತಿ ಸಲಕರಣಗಳು ದೊರೆಯದಿರುವುದು, ವಿದ್ಯುಚ್ಛಕ್ತಿ ತಂತಿಗಳಮೇಲೆ ಕಲ್ಲು ಅಥವಾ ಮರದ ಕೊಂಬೆ, ಬಳ್ಳಿ ಮುಂತಾದುವನ್ನು ಹಾಕಿ ಕೆಲವರ ಅಸಮಾಜಿಕ ವರ್ತನೆ ಮುಂತಾದುವುಗಳಿಂದ ವಿದ್ಯುಚ್ಛಕ್ತಿ ಸರಬರಾಜಿಗೆ ಆಗಿಂದಾಗ್ಗೆ ಅಡ್ಡಿಯುಂಟಾಗುತ್ತಿದೆ. ವಿದ್ಯುತ್ ಸರಬರಾಜಿನ ವಿಧಾನವನ್ನು ಉತ್ತಮಗೊಳಿಸಲು ಇಲಾಖೆಯವರು ಎಲ್ಲಾ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ಸಾರ್ವಜನಿಕರು ಅವರೊಡನೆ ಸಹಕರಿಸಬೇಕೆಂದು ಈ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಡಾ|| ಮೋದಿಯವರ ಕಾರ್ಯಕ್ರಮ

ಬೆಂಗಳೂರು ೩

ಉಚಿತ ನೇತ್ರಚಿಕಿತ್ಸೆ ನಡೆಸಲು ಡಾ|| ಮೋದಿಯವರು ಇದೇ ೧೫ನೇ ತಾರೀಖಿನಿಂದ ೨೨ರ ಪೂರ್ತ ಈರೀತಿ ಕಾರ್ಯಕ್ರಮ ಏರ್ಪಡಿಸಿದ್ದಾರೆ—

೧೫ನೇ ತಾ|| ಟಿ. ನರಸೀಪುರ, ೧೬ ಯಳಂದೂರು,೧೭ ಚಾಮರಾಜನಗರ, ೧೮ ಗುಂಡ್ಲುಪೇಟೆ, ೧೯ ನರಗೂರು, ೨೦ ಹುಣಸೂರು, ೨೧ ಪಿರಿಯಾಪಟ್ಟಣ, ೨೨ ಕೃಷ್ಣರಾಜನಗರ. ಆಯಾ ಪ್ರದೇಶದ ಪ್ರವಾಸ ಮಂದಿರಗಳಲ್ಲಿ ಈ ಚಿಕಿತ್ಸಾಕಾರ್ಯ ನಡೆಯುತ್ತದೆ.

ನೂತನ ಅಧಿಕಾರಿ ವರ್ಗ

ರಾಜಧಾನಿಯ ಪ್ರಥಮದರ್ಜೆ ಕಾಲೇಜಿನ ಕರ್ನಾಟಕ ಸಂಘದ ನೂತನ ಸಾಲಿನ ಕಾರ್ಯಕಾರಿ ಸಮಿತಿಯ ಚುನಾವಣೆಗಳು ನಡೆದು ಶ್ರೀ ಸಿ. ಎಸ್. ಅನಂತಯ್ಯನವರು ಕಾರ್ಯದರ್ಶಿಯಾಗಿಯೂ, ಶ್ರೀಗಳಾದ ಸಂಗಪ್ಪ, ಕೃಪಾನಂದ ಮತ್ತು ಸತ್ಯನಾರಾಯಣ ಸದಸ್ಯರುಗಳಾಗಿಯೂ ಚುನಾಯಿತರಾದರು.

ಭಾರತದಲ್ಲಿ ಅಣುಶಕ್ತಿ ಸಾಧನೆ

ಭಾರತದಲ್ಲಿ ಅಣುಶಕ್ತಿ ಸಾಧನೆಗೆ ಸಂಬಂಧಪಟ್ಟ ಕೆಲಸವನ್ನು ೩ ವರ್ಷದಲ್ಲಿ ಪೂರೈಸಲಾಗುವುದೆಂದೂ ಶಾಂತಿ ಉದ್ದೇಶಕ್ಕಾಗಿ ಈ ಕಾರ್ಯವನ್ನು ಕೈಗೊಳ್ಳಲಾಗಿದೆಯೆಂದೂ ಭಾರತ ಅಣುಶಕ್ತಿ ಮಂಡಲಿಯ ಅಧ್ಯಕ್ಷ ಡಾ|| ಬಾಬಾರವರು ಹೇಳಿದ್ದಾರೆ.

ಅಣುಶಕ್ತಿಗೆ ಬೇಕಾಗುವ ಯುರೇನಿಯಂ ಖನಿಜವು ಬಿಹಾರಿನಲ್ಲಿ ದೊರೆಯುತ್ತದೆಂದೂ ಆ ಬಗ್ಗೆ ಸರ್ಕಾರವು ಪರಿಶೀಲನೆ ನಡೆಸಿ ಒಂದು ಯೋಜನೆಯನ್ನು ಸಿದ್ಧಗೊಳಿಸುವುದಾಗಿಯೂ ಅವರು ಹೇಳಿದ್ದಾರೆ.

ವೀರಣ್ಣಗೌಡರ ಹೇಳಿಕೆಗೆ ಹನುಮಂತಯ್ಯನವರ ಉತ್ತರ

ಕಾಂಗ್ರೆಸ್ ಇತಿಹಾಸದಲ್ಲಿ ಇಂತಹ ಹೇಳಿಕೆ ಹೊರಬಿದ್ದಿಲ್ಲ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಆಡಳಿತವು ಸಮರ್ಪಕವಾಗಿಲ್ಲ. ಇತ್ಯಾದಿಯಾಗಿ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣಗೌಡರು ಮಾಡಿರುವ ಟೀಕೆಗಳಿಗೆ ಮುಖ್ಯಮಂತ್ರಿಯವರು ಈರೀತಿ ಹೇಳಿಕೆಯನ್ನಿತ್ತಿದ್ದಾರೆ:—

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀಯುತ ವೀರಣ್ಣಗೌಡರ ಹೇಳಿಕೆಯನ್ನು ಓದಿ ನನ್ನ ಮನಸ್ಸಿಗೆ ಬಹಳ ವ್ಯಥೆಯಾಗಿದೆ. ಕಾಂಗ್ರೆಸ್ ಇತಿಹಾಸದಲ್ಲೇ ಇಂತಹ ಹೇಳಿಕೆಯು ಹೊರಬಿದ್ದಿಲ್ಲ. ಈ ಹೇಳಿಕೆಗೆ ಉತ್ತರ ಕೊಡುವುದು ಸುಲಭವಾದ ಕೆಲಸ. ಆದರೆ ಇಂದೇ ನನ್ನ ಉತ್ತರವನ್ನು ಕೊಡುವುದು ಸೂಕ್ತವಲ್ಲ ಕಾಂಗ್ರೆಸ್ಸಿನ ಅಧ್ಯಕ್ಷರಾದ ಪಂಡಿತ ಜವಹರಲಾಲ್ ನಹ್ರೂರವರು ಈ ವಿಷಯವನ್ನೆಲ್ಲಾ ವಿಮರ್ಶಿಸುತ್ತಿದ್ದಾರೆ. ಆದುದರಿಂದ ಅವರ ಅನುಮತಿ ಇಲ್ಲದೆ ನಾನು ಉತ್ತರ ಕೊಡುವುದು ಕಾಂಗ್ರೆಸ್ ಶಿಸ್ತಿಗೆ ಅನುಗುಣವಾಗಿರುವುದಿಲ್ಲ.

ಈ ಮಂತ್ರಿ ಮಂಡಲವು ತೃಪ್ತಿಕರವಾಗಿ ಕೆಲಸ ಮಾಡಿದೆಯೇ ಇಲ್ಲವೇ ಎಂಬುದು ಗೋಪ್ಯವಾದ ವಿಚಾರವೇನೂ ಅಲ್ಲ ಕಾಂಗ್ರೆಸ್ ಸಂಸ್ಥೆಗೂ, ಮೈಸೂರಿನ ಮಹಾಜನತೆಗೂ ಶ್ರೀ ವೀರಣ್ಣಗೌಡರ ಹೇಳಿಕೆಯನ್ನು ಅರ್ಥಮಾಡಿಕೊಳ್ಳಬಲ್ಲ ಇಂಗಿತಜ್ಞತೆ ಇದೆ ಎಂದು ನನ್ನ ನಂಬಿಕೆ.

ಕೊರಿಯಾ ಶಾಂತಿ ಸಮ್ಮೇಳನ

ಕೊರಿಯಾ ಶಾಂತಿ ಸಮ್ಮೇಳನದ ಕಾಲ ಮತ್ತು ಸ್ಥಳದ ವಿಷಯವಾಗಿ ಅದಕ್ಕೆ ಸಂಬಂಧಪಟ್ಟ ೧೦ ರಾಷ್ಟ್ರಗಳು ನಿನ್ನೆಯ ದಿನ ಸಭೆನಡೆಸಿ ತೀರ್ಮಾನಕ್ಕೆ ಬಂದಿರುವುದಾಗಿ ಹೇಳಲಾಗಿದೆ. ಈ ತೀರ್ಮಾನವನ್ನು ಉತ್ತರ ಕೊರಿಯಾ ಮತ್ತು ಚೈನಾ ಸರ್ಕಾರಗಳ ಒಪ್ಪಿಗೆಗಾಗಿ ಕಳುಹಿಸಲಾಗಿದೆ.

ಈ ಸಮ್ಮೇಳನವನ್ನು ಜಿನೀವಾ ಸಾನ್‌ಫ್ರಾನ್ಸಿಸ್‌ಕೊ ಅಥವಾ ಹೊನಲೂಲುಗಳಲ್ಲಿ ಅಕ್ಟೋಬರ್ ೧೫ನೇ ತಾ|| ನಡೆಸಬೇಕೆಂದು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಮಹಾರಾಜರ ಪ್ರವಾಸ

ಮೈಸೂರು ೨

ಮದ್ರಾಸಿನ ರಸಾಯನಿಕ ಸಂಸ್ಥೆಯೊಂದರ ಕಟ್ಟಡದ ಶಂಕುಸ್ಥಾಪನೆಯನ್ನು ಮಹಾರಾಜರು ೬ ನೇ ತಾರೀಖು ಭಾನುವಾರ ಟ್ಯುಟಿಕಾರ್ನ್ ಬಳಿಯಿರುವ ಮಿಲವಿಶ್ಟ್ರ್ ಎಂಬಲ್ಲಿ ನೆರವೇರಿಸುವರು ಅನಂತರ ಅವರು ಸುತ್ತಮುತ್ತಲಿರುವ ಯಾತ್ರಾಸ್ಥಳಗಳಿಗೆ ಭೇಟಿಯಿತ್ತು ೧೦ ನೇ ತಾರೀಖು ಹಿಂತಿರುಗುವರು.

ಪ್ರವಾಹ ಪರಿಹಾರಕ್ಕೆ ರೈಲ್ವೆ ನೌಕರರ ಸಹಾಯ

ಗೋದಾವರಿ ಪ್ರವಾಹದಲ್ಲಿ ನೊಂದವರ ಪರಿಹಾರಕ್ಕಾಗಿ ದಕ್ಷಿಣ ರೈಲ್ವೆ ನೌಕರರ ಸಂಘದವರು ೧ ಲಕ್ಷ ರೂ. ಸಹಾಯಮಾಡಲು ನಿರ್ಧರಿಸಿದ್ದಾರೆ. ನೌಕರರ ಸಂಬಳದಲ್ಲಿ ಚಂದಾ ಹಣವನ್ನು ತೆಗೆದುಕೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ತಿಳಿಸಲಾಗಿದೆ.

೨೬೦ ಬಂದಿಗಳ ಬಿಡುಗಡೆ

ಕಾಶ್ಮೀರ ಸರ್ಕಾರ ಬದಲಾವಣೆಯಾದ ಕಾಲದಲ್ಲಿ ದೌರ್ಜನ್ಯ ಕೃತ್ಯಗಳನ್ನು ಎಸಗಿದರಿಂದ ದಸ್ತಗಿರಿಯಾದವರಲ್ಲಿ ೨೬೦ ಜನರು ಕ್ಷಮೆಯಾಚನೆ ಮಾಡಿರುವುದರಿಂದ ಹೊಸ ಸರ್ಕಾರವು ಅವರನ್ನು ಬಂಧನದಿಂದ ಬಿಡುಗಡೆ ಮಾಡಿದೆ.

ಅವಿಶ್ವಾಸ ನಿರ್ಣಯ ತಿರಸ್ಕಾರ

ಸಿಂಹಳ ಸರ್ಕಾರದ ಮೇಲೆ ಅಲ್ಲಿಯ ಪ್ರತಿನಿಧಿ ಸಭೆಯಲ್ಲಿ ವಿರೋಧ ಪಕ್ಷದವರು ಮಂಡಿಸಿದ್ದ ಅವಿಶ್ವಾಸ ನಿರ್ಣಯವು ೨೬--೫೯ ಮತಗಳಿಂದ ಬಿದ್ದುಹೋಯಿತು.

ಶ್ರೀಮತಿ ವಿಜಯಲಕ್ಷ್ಮಿ ಅವರಿಗೆ ಪಾಕ್ ಬೆಂಬಲ

ಸಂಯುಕ್ತ ಸಂಸ್ಥೆ ಅಧ್ಯಕ್ಷತೆಗೆ ಶ್ರೀಮತಿ ವಿಜಯಲಕ್ಷ್ಮಿಯವರ ಉಮೇದುವಾರಿಕೆಗೆ ಪಾಕೀಸ್ತಾನವು ಬೆಂಬಲನೀಡಲು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಕೋಟಾ ನಾಣ್ಯ ತಯಾರಿಕೆ

ಕಳೆದ ೨ ವರ್ಷಗಳಲ್ಲಿ ೩ ಲಕ್ಷ ೩೮ ಸಾವಿರ ರೂಪಾಯಿಗಳ ಖೋಟಾ ನಾಣ್ಯವನ್ನು ವಶಪಡಿಸಿಕೊಂಡಿರುವ ತಿರುವಾಂಕೂರ್ ಕೊಚ್ಚಿನ್ ಪ್ರಾಂತ್ಯಗಳಲ್ಲಿ ಕೋಟಾ ನಾಣ್ಯ ತಯಾರಿಕೆಯು ಒಂದು ಗೃಹಕೈಗಾರಿಕೆಯಾಗಿರುವಂತೆ ಕಾಣುತ್ತದೆ-ಎಂದು ಗೃಹಸಚಿವರು ಪಾರ್ಲಿಮೆಂಟಿನಲ್ಲಿ ಹೇಳಿರುವರು.

ಕಬ್ಬಿನ ಕನಿಷ್ಠ ಬೆಲೆ ಏರುವುದಿಲ್ಲ

ಕಬ್ಬಿನ ಕನಿಷ್ಠ ಬೆಲೆಯನ್ನು ಹೆಚ್ಚಿಸುವ ಉದ್ದೇಶ ಸರ್ಕಾರಕ್ಕೆ ಇಲ್ಲವೆಂದು ಕೇಂದ್ರ ಆಹಾರಸಚಿವರು ಹೇಳಿದ್ದಾರೆ.

೧೦೫೫ ಜನರ ರೈತ ತಂಡದ ದಸ್ತಗಿರಿ

೧೦೦೦ ಎಕರೆ ಜಮೀನನ್ನು ವಶಪಡಿಸಿಕೊಳ್ಳಲು ಬೊಂಬಾಯಿ ಪ್ರಾಂತ್ಯದಲ್ಲಿ ಸತ್ಯಾಗ್ರಹ

ಸೂರತ್‌ಗೆ ೫೦ ಮೈಲಿ ದೂರದಲ್ಲಿ ಪಾರ್ಡಿ ತಾಲ್ಲೂಕಿನ ಧೂಮ್ಲ ಮತ್ತು ಪಾರಿಯಾ ಗ್ರಾಮಗಳ ನಡುವೆ ಜಮೀನ್ದಾರರಿಗೆ ಸೇರಿರುವ ೧೦೦೦ ಎಕರೆ ಜಮೀನನ್ನು ವಶಪಡಿಸಿಕೊಂಡು ಆಹಾರಧಾನ್ಯಗಳನ್ನು ಬೆಳೆಯುವಂತೆ ಮಾಡುವ ಉದ್ದೇಶದಿಂದ ಹೊರಟ ೧೦೫೫ ರೈತ ಸತ್ಯಾಗ್ರಹಿಗಳ ತಂಡವೊಂದನ್ನು ಬೊಂಬಾಯಿ ಪೋಲೀಸಿನವರು ನಿನ್ನೆಯದಿನ ದಸ್ತಗಿರಿ ಮಾಡಿದ್ದಾರೆ. ಆ ತಂಡದಲ್ಲಿ ಪ್ರಜಾ ಸೋಷಲಿಸ್ಟ್ ನಾಯಕ ಶ್ರೀ ಅಶೋಕ ಮೆಹ್ತಾರವರು ಸಹ ಇದ್ದಾರೆ.

ಮಾಲೀಕರು ತಮ್ಮ ಜಮೀನಿಗೆ ಅಕ್ರಮವಾಗಿ ಇವರು ಪ್ರವೇಶ ಮಾಡುತ್ತಿದ್ದಾರೆಂಬ ದೂರು ಕೊಟ್ಟಮೇಲೆ ಸರ್ಕಾರವು ಈ ಕಾರ್ಯವನ್ನು ಕೈಗೊಂಡಿತು.

"ಸತ್ಯಾಗ್ರಹವಲ್ಲ" "ದುರಾಗ್ರಹ"

ಸೂರತ್ ಜಿಲ್ಲೆಯ ಪಾರ್ಡಿ ತಾಲ್ಲೂಕಿನಲ್ಲಿ ಹುಲ್ಲು ಬೆಳೆಯುತ್ತಿರುವ ಜಮೀನನ್ನು ವಶಪಡಿಸಿಕೊಳ್ಳಲು ಯತ್ನಿಸುವ ಕಾರ್ಯವು ಸತ್ಯಾಗ್ರಹವಲ್ಲ. ಅದು ದುರಾಗ್ರಹ. ಪ್ರಜಾ ಸೋಷಲಿಸ್ಟ್ ಪಕ್ಷದವರು ಕೈಗೊಂಡಿರುವ ಈ ಕಾರ್ಯಕ್ಕೆ ಸರ್ಕಾರವು ಶಾಸನರೀತ್ಯಾ ಕ್ರಮ ನಡೆಸುವುದಾಗಿ ಬೊಂಬಾಯಿ ಮುಖ್ಯಮಂತ್ರಿ ಶ್ರೀ ಮೊರಾರ್ಜಿ ದೇಸಾಯಿಯವರು ಅಲ್ಲಿಯ ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ಬಳ್ಳಾರಿಯಲ್ಲಿ ಅನ್ನದಾನ

ಬಳ್ಳಾರಿ ಮೈಸೂರಿಗೆ ಸೇರುವ ಅಕ್ಟೋಬರ್ ೧ನೇ ತಾರೀಖು ಸುದಿನವೆಂದು ಆಚರಿಸಲು ಅಲ್ಲಿನ ಜಿಲ್ಲಾ ಕರ್ನಾಟಕ ಕ್ರಿಯಾ ಸಮಿತಿಯು ಕಾರ್ಯಕ್ರಮ ಕೈಗೊಳ್ಳುತ್ತಿದೆ. ಆ ದಿನ ಬಡಬಗ್ಗರಿಗೆ ಅನ್ನದಾನ ಮಾಡಲು ಶ್ರೀಗಳಾದ ಸಿಂದಿಗೆ ಬಸಪ್ಪ ಮತ್ತು ಗವಿಸಿದ್ದಪ್ಪನವರು ತಲಾ ೧ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಮದ್ರಾಸಿಗೆ ವಾಸುದೇವಾಚಾರ್ಯರು

ಮೈಸೂರು ೩

ರಾಜಧಾನಿಯ ಸುಪ್ರಸಿದ್ಧ ಸಂಗೀತ ರತ್ನ ಕೆ. ವಾಸುದೇವಾಚಾರ್ಯರು ಮದ್ರಾಸಿನ ಶ್ರೀಮತಿ ರುಕ್ಮಿಣಿ ಅರುಂಡೇಲ್‌ರವರ ಕಲಾಕ್ಷೇತ್ರದಲ್ಲಿ ಸಂಗೀತದ ಪ್ರಾಧ್ಯಾಪಕರಾಗಲು ಒಪ್ಪಿದ್ದಾರೆಂದು ತಿಳಿದು ಬಂದಿದೆ.

ಶ್ರೀ ಎನ್. ಸಂಜೀವರೆಡ್ಡಿಯವರ ಆಯ್ಕೆ

ಆಂಧ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎನ್. ಸಂಜೀವರೆಡ್ಡಿಯವರು ಮದ್ರಾಸ್ ಕಿರಿಯ ಶಾಸನಸಭೆಯ ಉಪಚುನಾವಣೆಯಲ್ಲಿ ಜಯಗಳಿಸಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೧—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೩—	೨೬—೧೩
ಎಳ್ಳು	೬೫—	೮೫—೧೦
ಹುರುಳಿ	೪೬—೧೦	೪೭—೪
ಹೆಸರು	೩೬—೧೩	—
ಹರಳು	—	—
ಅಲಸಂದೆ	೫೫—	೭೪—೩
ಹೊಂಗೆಬೀಜ	—	—
ಅವರೆ	—	—
ಉದ್ದು	೬೪—	೬೮—೧೦
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೫—೪	೭—೬
ಸೀಗೆಕಾಯಿ	೭—೧	೭—೩
ಬೆಲ್ಲ	—	—
ತೆಂಗಿನಕಾಯಿ	೧೫೮	೩೭೪

ಅಗ್ಗವಾಗಿ ಸಿಕ್ಕುತ್ತದೆ ! ಅಗ್ಗವಾಗಿ ಸಿಕ್ಕುತ್ತದೆ !

ಗೌರಿಹಬ್ಬಕ್ಕಾಗಿ ಸರಕುತೀರಿಕೆಯ ಅಮೋಘ ಮಾರಾಟ !

2-9-53 ರಿಂದ 12-9-53 ರ ವರೆಗೆ

ವಿಪರೀತ ಕಡಮೆ ಬೆಲೆ ! ಶೇಕಡ ೫೦ ರಷ್ಟು ಕಡಮೆ ! ಹತ್ತಿ ಬಟ್ಟೆ ಬೆಲೆಯ ದರದಲ್ಲೇ ಶುದ್ಧವಾದ ರೇಷ್ಮೆಯ ಷರ್ಟಿಂಗ್ ಮತ್ತು ಕೋಟಿಂಗ್‌ಗಳು.

ಮೊದಲು ಬಂದವರಿಗೆ ಪ್ರಥಮ ಅವಕಾಶ.......

ಈ ಕೆಳಕಂಡ ಷೋ ರೂಮುಗಳಿಗೆ ಭೇಟಿಕೊಡಿ——

೧. ಮೈಸೂರು ಸರ್ಕಾರಿ ರೇಷ್ಮೆ ಕಾರ್ಖಾನೆ,
ಮಾನಂದವಾಡಿ ರಸ್ತೆ, ಮೈಸೂರು.

೨. ಮೈಸೂರು ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಡಿಪೋ,
ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು.

ಮೈಸೂರು ಸರ್ಕಾರಿ ರೇಷ್ಮೆ ಕಾರ್ಖಾನೆ, ಮೈಸೂರು.

ಕರ್ನೂಲ್‌ನಲ್ಲಿ ತುರ್ತು ಆಜ್ಞೆ ಜಾರಿ

ವಿಶೇಷಾಧಿಕಾರಿಗಳು ಯಾವ ಕಟ್ಟಡಬೇಕಾದರೂ ವಶಪಡಿಸಿಕೊಳ್ಳಬಹುದು

ಕರ್ನೂಲ್‌ನಲ್ಲಿ ಹೊಸದಾಗಿ ಸ್ಥಾಪಿಸಲಾಗುವ ಆಂಧ್ರ ಸರ್ಕಾರಕ್ಕೆ ಬೇಕಾಗುವ ಕಟ್ಟಡಗಳನ್ನು ವಶಪಡಿಸಿಕೊಳ್ಳುವ ವಿಷಯದಲ್ಲಿ ಮದ್ರಾಸ್ ಸರ್ಕಾರವು ಒಂದು ತುರ್ತು ಆಜ್ಞೆಯನ್ನು ಮಾಡಿದೆ.

ಈ ಆಜ್ಞೆಯ ಪ್ರಕಾರ ಆಂಧ್ರ ಪ್ರಾಂತ್ಯದ ವಿಶೇಷಾಧಿಕಾರಿಗಳು ಹೊಸ ಪ್ರಾಂತ್ಯ ರಚನೆಗಾಗಿ ಕರ್ನೂಲ್ ನಗರದಲ್ಲಿ ತಮಗೆ ಬೇಕಾಗುವ ಯಾವ ಕಟ್ಟಡ ಅಥವಾ ನಿವೇಶನವನ್ನು ವಶಪಡಿಸಿಕೊಳ್ಳಲು ಅಧಿಕಾರವನ್ನು ಪಡೆದಿರುತ್ತಾರೆ.

ಮಾಧ್ಯಮಿಕ ಶಾಲೆ ಆರಂಭೋತ್ಸವ

ಮೈಸೂರು ೩

ಮೈಸೂರು ತಾಲ್ಲೂಕು ಜಯಪುರದ ಹೋಬಳಿ ಕಡಕೊಳಗ್ರಾಮದಲ್ಲಿ ನೂತನ ಮಾದರಿ ಮಾಧ್ಯಮಿಕ ಶಾಲೆ ಪ್ರಾರಂಭೋತ್ಸವವನ್ನು ವಿಧಾನಸಭೆಯ ಸದಸ್ಯ ಶ್ರೀ ಎನ್. ಶಿವನಂಜೇಗೌಡರು ಈ ಬೆಳಗ್ಗೆ ನೆರವೇರಿಸಿದರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎಲ್. ತಿಮ್ಮಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಮೇಲ್ವಿಚಾರಕ ಸೈನ್ಯ

ಕೊರಿಯಾ ಯುದ್ಧ ಖೈದಿಗಳ ಮೇಲ್ವಿಚಾರಣೆಗಾಗಿ ತೆರಳಿರುವ ಭಾರತದ ಮೊದಲನೇ ತಂಡವು ನಿನ್ನೆಯದಿನ ನಿಸ್ಸೈನ್ಯವಲಯವನ್ನು ಸೇರಿತು. ಇದರಲ್ಲಿ ೧೭೦೦ ಜನ ಸೈನಿಕರೂ, ೭೫ ಅಧಿಕಾರಿಗಳೂ, ಇರುವರು.

ತಾರಾಲೋಕ--ಸ್ವೀಕಾರ

ಮೇಲುಕೋಟೆಯ ಶ್ರೀ ಭಾ. ನಂ. ನರಸಿಂಹಾಚಾರ್ಯರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ "ತಾರಾಲೋಕ" ಮಾಸಪತ್ರಿಕೆಯ ತೃತೀಯ ವಾರ್ಷಿಕ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಸಂಸ್ಕೃತಿ ಮತ್ತು ಅದರ ಪ್ರಾಮುಖ್ಯತೆ, ನಾಟಕ, ವಿಮರ್ಶೆ ಮುಂತಾದ ಅನೇಕ ಉಪಯುಕ್ತ ಲೇಖನಗಳು ಇವೆ. ಜನರಲ್ಲಿ ನೈತಿಕ ಮಟ್ಟ, ಮಾನವತೆ ಮತ್ತು ನಾಗರೀಕತೆ ಮುಂತಾದ ಸದ್ಗುಣಗಳು ಉಂಟಾಗಲು ಸಹಕಾರಿಯಾಗಿ ಹೊರಡುವ ಈ ಪತ್ರಿಕೆಯು ತನ್ನ ಉದ್ಯಮದಲ್ಲಿ ಯಶಸ್ವಿಯಾಗಿ ಬಾಳಲೆಂದು ಹಾರೈಸುತ್ತೇವೆ. ಬೆಲೆ ಆರು ಆಣೆ.

ಅಪೇರ

2-9-53 ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು

ಡೆಮನ್-ಲ್ಯಾಂಡ್

(ಬೇತಾಳಪುರ) ಶ್ರೀ [ತಮಿಳು]

ಪಾತ್ರ:— ಟಿ.ಆರ್. ಮಹಾಲಿಂಗಂ ಏಮುಮುಂಗಳಂ, ಸಾರಂಗಪಾಣಿ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

SARADAVILAS EDUCATIONAL INSTITUTIONS, (REGD.)
MYSORE.

NOTIFICATION Dated 31st August, 1953.

LAW COLLEGE FOR MYSORE CITY.

It is proposed to start a Law College in Mysore City from 1-11-1953. The Inspection Committee of Mysore University which visited the above Institution on 25-8-53 desires to know the number of students who are prepared to join if affiliation is granted. Therefore Graduates who are eligible and prepared to join the Law College from 1-11-53, if affiliation is granted, are requested to intimate to the undersigned, on or before the 10th Sept 1953, their names, addresses, age, qualifications and present occupation. The proposed Law College will be run between 8 and 10 a.m. and 5-30 to 7-30 p.m. in the Saradavilas College buildings, with the help of highly qualified and experienced Staff, the fees being the same as prevailing in Government Law College, Bangalore. Hostel facilities will also be provided if there is sufficient number of students requiring the same.

P. Gopalakrishna Setty, Hon. Secretary.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೫

೩-೯-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಬೊಂಬಾಯಿ ಮಹಾರಾಷ್ಟ್ರದ ರಾಜಧಾನಿಯಾಗಬೇಕು

ಕಾಂಗ್ರೆಸ್ ಪ್ರಮುಖರ ನಿರ್ಧಾರ

ಬೊಂಬಾಯಿ, ಮಧ್ಯಪ್ರದೇಶ ಮತ್ತು ಹೈದರಾಬಾದಿನ ಕಾಂಗ್ರೆಸ್ ಪ್ರಮುಖರು ಕಳೆದ ೩ ದಿನಗಳಿಂದ ದಿಹಲಿಯಲ್ಲಿ ಸಭೆ ನಡೆಸಿ ಮಹಾರಾಷ್ಟ್ರಕ್ಕೆ ಬೊಂಬಾಯಿ ನಗರವು ರಾಜಧಾನಿಯಾಗಬೇಕೆಂದು ತೀರ್ಮಾನಿಸಿದ್ದಾರೆ.

ಮಹಾರಾಷ್ಟ್ರ ರಚನೆ ಬಗ್ಗೆ ಎಲ್ಲರೂ ಒಮ್ಮತಕ್ಕೆ ಬಂದು ನೂತನ ಪ್ರಾಂತ್ಯದ ಅಭಿವೃದ್ಧಿಗೆ ಸಂಬಂಧಪಟ್ಟ ವಿಷಯಗಳನ್ನು ಇವರು ಚರ್ಚಿಸಿದರೆಂದಾಗಿ ತಿಳಿಯಬರುತ್ತದೆ. ಮುಂದೆ ಸಭೆಯು ನಾಗಪುರದಲ್ಲಿ ಸೇರಲಿದೆ.

ಕೇಂದ್ರ ಸರ್ಕಾರದ ವ್ಯವಸಾಯ ಸಚಿವ ಡಾ॥ ಪಿ. ಎಸ್. ದೇಶಮುಖ್, ಮಧ್ಯಪ್ರದೇಶದ ವಿದ್ಯಾಸಚಿವ ಡಾ॥ ಪಿ. ಕೆ. ದೇಶಮುಖ್, ಬೊಂಬಾಯಿನ ರೆವಿನ್ಯೂ ಸಚಿವ ಶ್ರೀ ಬಿ. ಎಸ್. ಹೀರೆ, ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎನ್. ವಿ. ಗಾಡ್ಗಿಲ್, ಸ್ವಾಮಿರಮಾನಂದ ತೀರ್ಥ ಮುಂತಾದವರು ಇದರಲ್ಲಿ ಭಾಗವಹಿಸಿದ್ದರು.

ಸರ್ಕಾರಿ ನೌಕರಿ ನೇಮಕ ಪದ್ಧತಿ ಸರಿಯಿಲ್ಲ

ವಿಶ್ವವಿದ್ಯಾನಿಲಯದ ಪದವಿಗಳನ್ನು ಕೆಲವು ಕೆಲಸಗಳಿಗೆ ಮಾತ್ರ ಕಡ್ಡಾಯ ಮಾಡಬೇಕೆಂದೂ, ಇಲ್ಲದಿದ್ದರೆ ಅನಾವಶ್ಯಕವಾದ ನಿರುದ್ಯೋಗ ಪದವೀಧರರು ಹೆಚ್ಚಾಗುವರೆಂದು ಕೇಂದ್ರ ಸೆಕೆಂಡರಿ ಶಿಕ್ಷಣ ಸಮಿತಿಯ ಅಧ್ಯಕ್ಷರಾದ ಡಾ॥ ಲಕ್ಷ್ಮಣ ಸ್ವಾಮಿಯವರು ತಿಳಿಸಿದ್ದಾರೆ. ಭಾರತದ ಪಬ್ಲಿಕ್ ಸರ್ವಿಸ್ ನೌಕರಿಗಳಿಗೆ ಸೇರಿಸಿಕೊಳ್ಳುತ್ತಿರುವ ಪದ್ಧತಿ ಸಮರ್ಪಕವಾಗಿಲ್ಲವೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

೬ ತಿಂಗಳಲ್ಲಿ ೧ಂ ಕೋಟಿ ರೂ ತುಟ್ಟಿಭತ್ಯ ವಿನಿಯೋಗ

ಭಾರತ ಸರ್ಕಾರವು ೧೯೫೨-೫೩ನೇ ಸಾಲಿನ ದ್ವಿತೀಯಾರ್ಧದಲ್ಲಿಯೇ ೯೮ ಕೋಟಿ ರೂಪಾಯಿಗಳಷ್ಟು ತುಟ್ಟಿ ಭತ್ಯವನ್ನು ತನ್ನ ಸಿವಿಲಿಯನ್ ಸಿಬ್ಬಂದಿಗೆ ಕೊಟ್ಟಿರುವುದಾಗಿ ತಿಳಿಯಬರುತ್ತದೆ. ರೈಲ್ವೆ ನೌಕರರಿಗೆ ಕೊಟ್ಟಿರುವ ತುಟ್ಟಿ ಭತ್ಯವು ಇದರಲ್ಲಿ ಸೇರಿಲ್ಲ.

○ ಪ್ಯಾರಿಸ್ ನಗರದಿಂದ ಸೈಗಾನಿಗೆ ಹೊರಟ ಪ್ರಯಾಣಿಕರ ವಿಮಾನವೊಂದು ಆಲ್ಪ್ಸ್ ಶಿಖರಕ್ಕೆ ಡಿಕ್ಕಿ ಹೊಡೆದು ಆಸ್ಫೋಟನೆಯಾಗಿ ಮಚ್ಚು ನೂರಾಯಿತೆಂದೂ, ಅದರಲ್ಲಿದ್ದ ೪೧ ಮಂದಿ ಜನರು ಸತ್ತು ಹೋದರೆಂದು ವರದಿಯಾಗಿದೆ.

ಕಂದಾಯ ಹೆಚ್ಚಿಸಿದ್ದಕ್ಕೆ ಪುರಸಭೆಯ ಮೇಲೆ ರಿಟ್ ಅರ್ಜಿ

ಮೈಸೂರು ೩

ರಾಜಧಾನಿಯ ಚಾಮುಂಡಿಪುರಂ ನಿವಾಸಿಗಳಾದ ಶ್ರೀಗಳು ಎ. ಎಸ್. ರಾಮಯ್ಯ, ಕಗಡೂರು ರಾಮಚಂದ್ರರಾವ್, ಎಸ್. ನಂಜುಂಡಯ್ಯ, ಎಂ. ಬಿ. ಮಹದೇವಯ್ಯ, ಸಿದ್ದೋಜಿರಾವ್ ಮತ್ತು ಶ್ರೀಮತಿ ಜಯಲಕ್ಷ್ಮಮ್ಮರವರುಗಳು ಮೈಸೂರು ಹೈಕೋರ್ಟಿನಲ್ಲಿ ಒಂದು ರಿಟ್ ಅರ್ಜಿಯನ್ನು ಕಳೆದ ೨೯ನೇ ತಾರೀಖು ಸಲ್ಲಿಸಿ, ಇತ್ತೀಚೆಗೆ ಮೈಸೂರು ನಗರದ ಪುರಸಭೆಯವರು ಮನೆ ಮತ್ತು ನೀರಿನ ಕಂದಾಯ ಹೆಚ್ಚಿಸಿರುವುದು ಅಕ್ರಮವೆಂದೂ ಅದನ್ನು ರದ್ದುಗೊಳಿಸಬೇಕೆಂದೂ ಪ್ರಾರ್ಥಿಸಿರುತ್ತಾರೆ.

ಅರ್ಜಿದಾರರು ಈರೀತಿ ಮನವಿ ಮಾಡಿದ್ದಾರೆ:

ವಾರ್ಷಿಕ ಬಾಡಿಗೆ ಅಂದಾಜು ಮೌಲ್ಯವನ್ನು ನಿಷ್ಕರ್ಷೆ ಮಾಡುವುದರಲ್ಲಿ ಅಸಮಾನತೆಯನ್ನು ತೋರಿಸಿರುವುದರಿಂದ ಅರ್ಜಿದಾರರ ಮೂಲಭೂತ ಹಕ್ಕಿಗೆ ಭಂಗ ಬಂದಿದೆ. ೧೧೨೩ ರೇಟ್ ಪೇಯರುಗಳಿಗೆ ಉಚಿತವಾಗಿ ನೀರು ಹಂಚಿಕೆ, ೮೪೬೧ ರೇಟ್ ಪೇಯರುಗಳಿಗೆ ಅದೇ ಸೌಕರ್ಯಗಳನ್ನು ಕಲ್ಪಿಸಿಕೊಡದೆ ಇರುವುದರಿಂದ ಅರ್ಜಿದಾರರ ಮೂಲಭೂತ ಹಕ್ಕಿಗೆ ಧಕ್ಕೆ ಬಂದಿದೆ.

ಮೈಸೂರು ಒಂದನೇ ಮುನ್ಸೀಫ್ ಕೋರ್ಟಿನಲ್ಲಿ ನಡೆಯುತ್ತಿರುವ ಮೊಕದ್ದಮೆಗಳಲ್ಲಿ ಮೇಲ್ಕಂಡ ವಿಚಾರಗಳು ತೀರ್ಮಾನಕ್ಕೆ ಇವೆ. ಆದುದರಿಂದ ಆ ರಿಕಾರ್ಡುಗಳನ್ನು ಈ ಕೋರ್ಟಿಗೆ ತರಿಸಿಕೊಳ್ಳುವುದು ಅವಶ್ಯಕ.

[1] ಮುನಿಸಿಪಾಲಿಟಿಯವರು ವಿಧಿಸಿ ತಯಾರುಮಾಡಿರುವ ಕಂದಾಯದ ಪಟ್ಟಿಯನ್ನು ತರಿಸಿ ಕಂದಾಯ ವಿಧಿಸಿರುವುದನ್ನು ರದ್ದುಮಾಡಬೇಕಾಗಿಯೂ [2] ನೀರಿನ ತೆರಿಗೆಯನ್ನು ವಿಧಿಸಿದ್ದನ್ನು ರದ್ದುಮಾಡಿ ಮೀಟರ್ ಹಾಕಿದ ಮನೆಗಳಿಗಿರುವ ಉಚಿತ ನೀರಿನ ಸೌಕರ್ಯಗಳನ್ನು ಇತರೇ ರೇಟ್‌ಪೇಯರುಗಳಿಗೂ ಕಲ್ಪಿಸಿಕೊಡಬೇಕಾಗಿಯೂ [3] ಒಂದನೇ ಎದುರರ್ಜಿದಾರರು ಇನ್ನು ಮುಂದಕ್ಕೆ ಕಂದಾಯ ವಿಧಿಸುವ ಬಗ್ಗೆ ಹೌಸ್ ರೆಂಟ್ ಕಂಟ್ರೋಲ್ ಆಕ್ಟಿನ ನಿಯಮಗಳ ಪ್ರಕಾರ ವಾರ್ಷಿಕ ಬಾಡಿಗೆ ಮೌಲ್ಯವನ್ನು ನಿಷ್ಕರ್ಷಿಸಬೇಕೆಂದೂ ಪ್ರಾರ್ಥಿಸಿದ್ದಾರೆ.

ಡಾ॥ ಲೋಹಿಯಾರವರ ವಿದೇಶ ಪ್ರವಾಸ

ಪೂರ್ವ ಜರ್ಮನಿಯಲ್ಲಿ ನಡೆಯುವ ಮಹಾಚುನಾವಣೆಗಳನ್ನು ವೀಕ್ಷಿಸಲು ಮತ್ತು ಲ್ಯೂನೆಬರ್ಗ್‌ನಲ್ಲಿ ನಡೆಯುವ ಅಂತರ ರಾಷ್ಟ್ರೀಯ ಸೋಷಲಿಸ್ಟ್ ಯುವಕ ಸಮ್ಮೇಳನದಲ್ಲಿ ಭಾಗವಹಿಸಲು ಭಾರತದ ಸೋಷಲಿಸ್ಟ್ ನಾಯಕ ಡಾ॥ ರಾಮ್ ಮನೋಹರ್ ಲೋಹಿಯಾರವರು ಜಿನೀವಾಕ್ಕೆ ಪ್ರಯಾಣ ಮಾಡಿದ್ದಾರೆ.

ಮುಖ್ಯ ಮಂತ್ರಿಯ ಮೇಲಿನ ಆಪಾದನೆ ನಿರಾಧಾರ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಮೇಲೆ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣಗೌಡರು ಮಾಡಿದ ಆಪಾದನೆಗಳು ನಿರಾಧಾರವೆಂದು ಅವು ಜನತೆಯ ಅಭಿಪ್ರಾಯವಲ್ಲವಾದುದರಿಂದ ಆ ಟೀಕೆಗಳಿಗೆ ಮಾನ್ಯತೆ ಕೊಡಕೂಡದೆಂದು ಬೆಂಗಳೂರು ಬಿನ್ನಿ ಮಿಲ್ ಕಾರ್ಮಿಕ ಸಂಘದ ಅಧ್ಯಕ್ಷರು ಪ್ರಧಾನಿ ನೆಹರೂ ಮತ್ತು ರೈಲ್ವೆ ಸಚಿವ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರಿಗೆ ತಂತಿ ಕಳುಹಿಸಿದ್ದಾರೆ.

ಮುಂದಿನ ವರ್ಷ ಅಕ್ಟೋಬರ್‌ಗೆ ಕರ್ನಾಟಕ ಪ್ರಾಂತ್ಯ ಆಗಬೇಕು

೧೯೫೪ನೇ ಅಕ್ಟೋಬರ್ ವೇಳೆಗೆ ಕರ್ನಾಟಕ, ಮಹಾರಾಷ್ಟ್ರ, ಮತ್ತು ಕೇರಳ ಪ್ರಾಂತ್ಯಗಳನ್ನು ರಚಿಸುವುದಾಗಿ ಸರ್ಕಾರ ಘೋಷಿಸಬೇಕು. ಮತ್ತು ಭಾಷಾವಾರು ರೀತ್ಯ ಗಡಿಗಳನ್ನು ನಿರ್ಧರಿಸಲು ಒಂದು ಗಡಿನಿರ್ಧಾರ ಸಮಿತಿ ರಚಿಸಬೇಕು-ಎಂದು ಕೇಂದ್ರ ರಾಜ್ಯ ಸಭೆಯಲ್ಲಿ ಕಮ್ಯೂನಿಸ್ಟ್ ಸದಸ್ಯ ಶ್ರೀ ಪಿ. ಸುಂದರಯ್ಯನವರು ತಿಳಿಸಿದರು.

ಅಖಿಲ ಭಾರತ ಗಡಿ ನಿರ್ಧಾರದ ಬಗೆ ಯುಕ್ತ ಕ್ರಮ ಕೈಕೊಳ್ಳುವ ಜೊತೆಗೆ ಇತರೆ ವಿಷಯಗಳನ್ನು ಕೇಂದ್ರ ಸರ್ಕಾರ ಪರಿಶೀಲಿಸುವುದಾಗಿಯೂ ಗೃಹ ಸಚಿವ ಶ್ರೀ ಕಟ್ಜುರವರು ಭರವಸೆ ಇತ್ತರು.

ತುಂಗಾ ಅಣೆಕಟ್ಟಿನ ಬಳಿ ಬೃಂದಾವನ ನಿರ್ಮಾಣ

ತುಂಗಾ ಅಣೆಕಟ್ಟಿನ ಬಳಿ ರಮಣೀಯವಾದ ದೃಶ್ಯವನ್ನು ನೋಡಲು ಸಹಸ್ರಾರು ಜನರು ಹೋಗುತ್ತಲಿರುವುದರಿಂದ ಆ ಪ್ರದೇಶವನ್ನು ಇನ್ನೂ ರಮಣೀಯವಾಗಿ ಮಾಡಲು ಒಂದು ಬೃಂದಾವನವನ್ನು ಕಟ್ಟಲು ಸರ್ಕಾರವು ೩ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಲಿದೆಯೆಂದು ತಿಳಿಯಬರುತ್ತದೆ.

○ ಪಾಕೀಸ್ತಾನದ ರೇಡಿಯೋ ಮೂಲಕ ಭಾರತದ ಚಲನಚಿತ್ರ ಸಂಗೀತ ಪ್ರಸಾರ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ರಾವಲ್‌ಪಿಂಡಿಯ ರೇಡಿಯೋ ಸಲಹಾಸಮಿತಿ ಶಿಫಾರಸುಮಾಡಿದೆ.

ಭೂ ಸತ್ಯಾಗ್ರಹದಲ್ಲಿ ಬಂಧನ

ಭೂಸತ್ಯಾಗ್ರಹ ಸಂಬಂಧದಲ್ಲಿ ೧೦೫೫ ಜನರನ್ನು ಸೂರತ್‌ನಲ್ಲಿ ಪೋಲೀಸಿನವರು ದಸ್ತಗಿರಿಮಾಡಿದ್ದಲ್ಲಿ ಕೇವಲ ೧೧ ಮಂದಿಯನ್ನು ಮಾತ್ರ ಉಳಿಸಿಕೊಂಡು ಇತರರನ್ನು ಬಿಡುಗಡೆ ಮಾಡಿರುವುದಾಗಿ ತಿಳಿಯಬರುತ್ತದೆ.

ಪ್ರಜಾಸೋಷಲಿಸ್ಟ್ ನಾಯಕ ಶ್ರೀ ಅಶೋಕಮೆಹ್ತಾ ಮತ್ತು ಇತರ ನಾಯಕರನ್ನು ಬಿಟ್ಟಿಲ್ಲ.

ಯುದ್ಧಮಾಡದಿದ್ದುದಕ್ಕೆ ಭಾರತಕ್ಕೆ ಶಿಕ್ಷೆ

ಕೊರಿಯಾಯುದ್ಧದಲ್ಲಿ ಭಾರತವು ಹೋರಾಡದಿದ್ದುದರಿಂದಲೇ ಈಗ ರಾಜಕೀಯ ಸಮ್ಮೇಳನದಲ್ಲಿ ಸ್ಥಾನ ಸಿಕ್ಕಲಿಲ್ಲ. ಈ ಕಾರ್ಯಕ್ಕೆ ಭಾರತವು ತೆತ್ತ ದಂಡವಿದು ಎಂದು ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಿ॥ ಡಲ್ಲೆಸ್‌ರವರು ಹೇಳಿದ್ದಾರೆ.

ಭಾರತಕ್ಕೆ ಹೆಲಿ ಕಾಪ್ಟರ್

ದೇಶದ ಕೆಲವು ಅಭಾವ ಪ್ರದೇಶಗಳಲ್ಲಿ ಅವಶ್ಯಕ ವಸ್ತುಗಳನ್ನು ಸರಬರಾಜಗಾಗಿ ಭಾರತ ಸರ್ಕಾರವು ಕೆಲವು ಹೆಲಿ ಕಾಪ್ಟರುಗಳನ್ನು ಕೊಳ್ಳಲು ನಿರ್ಧರಿಸಿರುವುದಾಗಿ ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಫುಟ್‌ಬಾಲ್

ರಾಷ್ಟ್ರೀಯ ಸಂತೋಷ ಸ್ಮಾರಕ ಫುಟ್‌ಬಾಲ್ ಟ್ರೋಫಿ ಫೈನಲ್ಸ್ ಪಂದ್ಯವು ನಿನ್ನೆಯದಿನ ಕಲ್ಕತ್ತಾದಲ್ಲಿ ಮೈಸೂರು ಮತ್ತು ಬಂಗಾಳ ನಡುವೆ ನಡೆದು ಆಟವು ಸಮನಾಯಿತು. ಪುನಃ ನಾಳೆ ಆಟ ನಡೆಯುತ್ತೆ.

ಟೈಮ್ಸ್ ಆಫ್ ಇಂಡಿಯಾ ಕಲ್ಕತ್ತಾ ಪತ್ರಿಕೆ ನಿಂತಿತು

ಕಲ್ಕತ್ತಾದಲ್ಲಿ ಪ್ರಕಟವಾಗುತ್ತಿದ್ದ ಟೈಮ್ಸ್ ಆಫ್ ಇಂಡಿಯಾ ಮತ್ತು ಅದಕ್ಕೆ ಸೇರಿದ ಸತ್ಯಯುಗ್ ಮತ್ತು ನವಭಾರತ ಪತ್ರಿಕೆಗಳನ್ನು ಯಾವಕಾರಣವೂ ಇಲ್ಲದೆ ಮೊನ್ನೆಯಿಂದ ನಿಲ್ಲಿಸಿರುವುದರಿಂದ ಸುಮಾರು ೧೦೦೦ ಕಾರ್ಮಿಕರು ನಿರುದ್ಯೋಗಿಗಳಾಗಿದ್ದಾರೆ.

ಕಾಶ್ಮೀರ ವ್ಯವಹಾರದಲ್ಲಿ ಅಮೆರಿಕಾ ಪ್ರವೇಶವಿಲ್ಲ

ಕಾಶ್ಮೀರ ವ್ಯವಹಾರಗಳಲ್ಲಿ ಅಮೆರಿಕಾ ಪ್ರವೇಶಿಸುತ್ತಲಿದೆಯೆಂಬ ಸುದ್ದಿಯು ನಿರಾಧಾರವಾದುದೆಂದು ಕರಾಚಿಯಲ್ಲಿರುವ ಅಮೆರಿಕಾ ರಾಯಭಾರಿಯವರು ಹೇಳಿದ್ದಾರೆ.

● ಬಳ್ಳಾರಿ ಜಿಲ್ಲೆಯ ಕಲೆಕ್ಟರಾಗಿರುವ ಶ್ರೀ ಡಿ.ಆರ್. ಸುಂದರಂರವರನ್ನು ನೂತನ ಆಂಧ್ರ ಪ್ರಾಂತ್ಯದ ಗೌರ್ನರು ಆಗಲಿರುವ ಶ್ರೀ ತ್ರಿವೇದಿಯವರ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ರಾಗಿ, ಜೋಳ ಪರಿಸ್ಥಿತಿ ಉತ್ತಮವಾಗಿಲ್ಲ

ಕೇಂದ್ರದ ನೆರವು ಬಾರದಿದ್ದರೆ ವಿಷಮ ಪರಿಸ್ಥಿತಿ

ಬೆಂಗಳೂರು ೩

ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಗಳಲ್ಲಿ ಜನರಿಗೆ ಕೊಡಲು ೧೨೦೦೦ ಟನ್ನುಗಳಷ್ಟು ರಾಗಿ, ಜೋಳ ಬೇಕಾಗುತ್ತದೆ. ಈಗ ಕೇವಲ ೩೦೦೦ ಟನ್ನುಗಳಷ್ಟು ದಾಸ್ತಾನಿದೆ. ಕೇಂದ್ರ ಸರ್ಕಾರವು ಕೂಡಲೇ ೧೦೦೦೦ ಟನ್ನುಗಳಷ್ಟು ರಾಗಿ ಮತ್ತು ಜೋಳವನ್ನು ಕೊಡದಿದ್ದರೆ ಪ್ರಾಂತ್ಯದಲ್ಲಿ ಆಹಾರ ಪರಿಸ್ಥಿತಿ ವಿಷಮಿಸಿಕೊಳ್ಳುವುದೆಂದು ಹೇಳಲಾಗಿದೆ. ಈ ವಿಷಯವನ್ನು ಕೇಂದ್ರಸರ್ಕಾರದ ಗಮನಕ್ಕೆ ತಂದು ಮನವಿ ಮಾಡಲಾಗಿರುವುದಾಗಿ ತಿಳಿಯಬರುತ್ತದೆ.

ಸಂಸ್ಥಾನದಲ್ಲಿ ಅಕ್ಕಿ ಪರಿಸ್ಥಿತಿಯು ಸಮರ್ಪಕವಾಗಿದೆ. ಈಗಿರುವ ೫,೨೦,೦೦೦ ಪಲ್ಲಾ ಅಕ್ಕಿಯು ೯ ತಿಂಗಳುಗಳಿಗೆ ಸಾಕಾಗುತ್ತದೆ.

ಜನವರಿ ಮಾಹೆಯಿಂದ ಮೈಸೂರು ಗೋಧಿಯನ್ನು ತೆಗೆದುಕೊಂಡೇ ಇಲ್ಲ. ಹೋದ ತಿಂಗಳು ೭೦೦೦ ಟನ್ ಈಗ ೫೦೦೦ ಟನ್ ಬಂದಿದೆ.

ಚಿತ್ರದುರ್ಗ, ಕೋಲಾರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಮಳೆ ಸರಿಯಾಗಿ ಬಾರದೆ ಪರಿಸ್ಥಿತಿ ಹದಗೆಟ್ಟಿದೆ. ಮಳೆಬಂದರೆ ಮಾತ್ರ ಫಸಲಿಗೆ ಸಹಾಯವಾಗುತ್ತದೆ.

ಅಭಾವ ಪ್ರದೇಶಗಳಲ್ಲಿ ಆಹಾರ ಇಲಾಖೆ ಡೈರೆಕ್ಟರ್ ಮತ್ತು ಕ್ಷಾಮ ಪರಿಹಾರ ಕಾರ್ಯದ ಕಮೀಷನರೂ ಆದ ಶ್ರೀ ಕೆ. ಪಿ. ರಾಮನಾಥಯ್ಯನವರು ಪ್ರವಾಸ ನಡೆಸುತ್ತಲಿದ್ದಾರೆ.

ಎರಡನೇ ದರ್ಜೆ ಅಕ್ಕಿ ದಾಸ್ತಾನು ಹೆಚ್ಚಾಗಿಲ್ಲ

ರೇಷನ್ ದಾರರಿಗೆ ಒಂದನೇ ದರ್ಜೆ ಅಕ್ಕಿ ಕೊಡುವ ವ್ಯವಸ್ಥೆ

ಮೈಸೂರು ೩

ಮಧ್ಯಮ ದರ್ಜೆಯ ಅಕ್ಕಿಯ ದಾಸ್ತಾನು ಬಹಳ ಕಡಿಮೆಯಿರುವುದರಿಂದ ಈ ತರಹದ ಅಕ್ಕಿಯನ್ನು ಕೊಳ್ಳುವವರಿಗೆ ಶೇಕಡ ೫೦ ರಷ್ಟನ್ನು ಮಾತ್ರ ಕೊಟ್ಟು ಉಳಿಕೆ ಉತ್ತಮ ದರ್ಜೆಯ ಅಕ್ಕಿಯನ್ನು ಕೊಡಲಾಗುತ್ತದೆ. ಬೇಕಾದಲ್ಲಿ ಪೂರ್ತಿ ಪ್ರಮಾಣ ಉತ್ತಮ ದರ್ಜೆಯ ಅಕ್ಕಿಯನ್ನೇ ಪಡೆಯಬಹುದು.

ಆರ್. ತರಗತಿಯ ರೇಷನ್ ದಾರರಿಗೆ ಪ್ರತಿಯೊಬ್ಬನಿಗೂ ಪ್ರತಿ ತಿಂಗಳಿಗೆ ಒಂದೂವರೆ ಪೌಂಡು ಮತ್ತು ಎಂ. ತರಗತಿಯವರಿಗೆ ಮುಕ್ಕಾಲು ಪೌಂಡು ಸಕ್ಕರೆಯನ್ನು ಡಿಪೋಗಳಲ್ಲಿ ಕೊಡುವ ವ್ಯವಸ್ಥೆ ಮಾಡಲಾಗಿದೆ.

ಎಂ. ತರಗತಿ ರೇಷನ್ ದಾರರಿಗೆ ಧಾನ್ಯಗಳ ಪ್ರಮಾಣದಲ್ಲಿ ಶೇಕಡ ೨೫ ರಷ್ಟು ರಾಗಿಯನ್ನು ಕೊಡಲಾಗುತ್ತದೆ ಎಂದು ನಗರದ ರೇಷನ್ ಅಧಿಕಾರಿಗಳು ಪ್ರಕಟಿಸಿದ್ದಾರೆ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಗೋದಾವರಿ ಪ್ರವಾಹದಿಂದ ಕ್ಲಿಷ್ಟ ಪರಿಸ್ಥಿತಿ

ಗೋದಾವರಿ ನದಿಯಲ್ಲಿ ಪ್ರವಾಹವುಂಟಾಗಿ ಆ ಪ್ರಾಂತ್ಯದಲ್ಲಿ ವಿಶೇಷ ತೊಂದರೆಯಾಗಿ ಕ್ಲಿಷ್ಟ ಪರಿಸ್ಥಿತಿಯುಂಟಾಗಿದೆ. ಹೊಸದಾಗಿ ಸ್ಥಾಪಿತವಾಗುವ ಆಂಧ್ರ ಪ್ರಾಂತ್ಯ ಸರ್ಕಾರವು ಇದನ್ನು ಎದುರಿಸಬೇಕಾಗಿದೆ. ಇದಕ್ಕೆ ತಕ್ಕ ನೆರವನ್ನು ನೀಡಬೇಕಾದುದು ಎಲ್ಲರ ಕರ್ತವ್ಯವೆಂದು ಗೃಹ ಸಚಿವ ಡಾ|| ಕಟ್ಜುರವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ.

ಮಂತ್ರಿ ಮಂಡಲದ ಮೇಲೆ ಅವಿಶ್ವಾಸ ನಿರ್ಣಯ

ಮಧ್ಯಭಾರತದ ಮಂತ್ರಿ ಮಂಡಲದ ಮೇಲೆ ವಿರೋಧ ಪಕ್ಷದವರು ಒಂದು ಅವಿಶ್ವಾಸ ನಿರ್ಣಯವನ್ನು ಮಂಡಿಸಲು ಅಲ್ಲಿಯ ಶಾಸನ ಸಭಾಧ್ಯಕ್ಷರು ಅಂಗೀಕಾರ ನೀಡಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೩—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೩	೨೭—
ಎಳ್ಳು	೬೦—೮	೮೬—೧೦
ಹುರುಳಿ	೪೫—೧೪	೪೮—೬
ಹೆಸರು	೫೩—೧೨	—
ಹಲಸು	—	—
ಅಲಸಂದೆ	೬೩—೧೪	೭೦—೨
ಹೊಂಗೆಬೀಜ	—	—
ಅವರೆ	—	—
ಉದ್ದು	—	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	—	—
ಸೀಗೆಕಾಯಿ	—	—
ಬೆಲ್ಲ	—	—
ತೆಂಗಿನಕಾಯಿ	೧೪೮	೨೬೫

ರಾಜಕೀಯ ಸಮ್ಮೇಳನದಲ್ಲಿ ಪ್ರಗತಿಯಿಲ್ಲದಿದ್ದರೆ ಅಮೆರಿಕದ ಬಹಿಷ್ಕಾರ

ಕೊರಿಯಾ ರಾಜಕೀಯ ಸಮ್ಮೇಳನ ಸ್ಥಾಪಿತವಾದ ಮೂರು ತಿಂಗಳುಗಳಲ್ಲಿ ಪ್ರಗತಿಯೇನೂ ಕಾಣದಿದ್ದರೆ ಅಮೆರಿಕವು ಅದನ್ನು ಬಹಿಷ್ಕರಿಸುವುದೆಂದು ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಿ|| ಡಲೆಸ್‌ರವರು ಹೇಳಿದ್ದಾರೆ.

ರಾಜಕೀಯ ಸಮ್ಮೇಳನದಲ್ಲಿ ಭಾರತಕ್ಕೆ ಸ್ಥಾನ ಬೇಡವೆಂದು ಅಮೆರಿಕಾ ವಿರೋಧಿಸಿದ ಮಾತ್ರಕ್ಕೆ ಭಾರತದ ವಿಷಯದಲ್ಲಿ ಅಮೆರಿಕಾಕ್ಕೆ ಇರುವ ಗೌರವವೇನೂ ಕಡಿಮೆಯಾಗಿಲ್ಲ. ಭಾರತದ ಸ್ನೇಹವನ್ನು ಅಮೆರಿಕಾ ಸದಾ ಅಪೇಕ್ಷಿಸುತ್ತದೆ-ಎಂದು ಅವರು ಹೇಳಿದ್ದಾರೆ.

ಮತದಾರರ ಪಟ್ಟಿ ಬಗ್ಗೆ ಪುರಸಭಾಧಿಕಾರಿಗಳ ಮನವಿ

ಮೈಸೂರು ೩

ಮುಂದಿನ ವರ್ಷ ಅಂದರೆ ತಾರೀಖು ೧-೧-೧೯೫೪ ರಿಂದ ಪುನರ್ರಚಿತವಾಗಲಿರುವ ಪುರಸಭೆಯ ಸದಸ್ಯರ ಚುನಾವಣೆಯು ಈ ವರ್ಷದಲ್ಲಿ ಸಕಾಲಕ್ಕೆ ನಡೆಯಲು ತಕ್ಕ ಏರ್ಪಾಡು ಮಾಡಲಾಗುತ್ತಿದೆ. ಈ ಸಂಬಂಧದಲ್ಲಿ ಕಾನೂನು ಪ್ರಕಾರ ಪ್ರಚುರಪಡಿಸಬೇಕಾಗಿರುವ ಮತದಾರರ ಪಟ್ಟಿಗೆ ಕಳೆದ ಏಪ್ರಿಲ್ ೧೯೫೩ ರ ಒಂದನೇ ತಾ|| ದಿವಸ ೨೧ ವರುಷ ವಯಸ್ಸು ದಾಟಿರುವವರ ಹೆಸರುಗಳನ್ನು ಈಗಾಗಲೇ ತಯಾರಾಗಿರುವ ಪಟ್ಟಿಯಲ್ಲಿರುವ ಮತದಾರರ ಹೆಸರುಗಳ ಜೊತೆಗೆ ಸೇರಿಸುವುದಲ್ಲದೆ, ಸದರಿ ಪಟ್ಟಿಯ ದುರಸ್ತಿನ ಕ್ರಮವನ್ನು ಕೈಕೊಳ್ಳಬೇಕಾಗುತ್ತದೆ.

ಈ ಬಗ್ಗೆ ಮುನಿಸಿಪಲ್ ರೆವಿನ್ಯೂ ಇಲಾಖೆಯ ನೌಕರರುಗಳು ಅವರವರ ಕಾರ್ಯಕ್ಷೇತ್ರಗಳಲ್ಲಿ ತನಿಖೆ ನಡೆಸಿ ಆ ಬಗ್ಗೆ ವರದಿಯನ್ನು ಕೊಡತಕ್ಕ ಬಗ್ಗೆ ಆಜ್ಞಾಪಿಸಲ್ಪಟ್ಟಿದ್ದಾರೆ. ಈ ನೌಕರರು ಪೌರರಲ್ಲಿ ಇದೇ ತಿಂಗಳು ತಾರೀಖು ೪ ರಿಂದ ೧೦ ರವರೆಗೆ ಮನೆಮನೆಗೂ ಹೋಗಿ ತನಿಖೆ ಮಾಡುವವರಾಗಿದ್ದಾರೆ.

ಮಹಾಜನರು ಈ ಬಗ್ಗೆ ಸಹಾನುಭೂತಿಯಿಂದ ಮೇಲ್ಕಂಡ ತನಿಖೆಗೆ ಪುರಸ್ಕಾರ ಕೊಟ್ಟು ಚುನಾವಣೆ ಕೆಲಸವು ಯಶಸ್ವಿಯಾಗಿ ನಡೆಯಲು ಸಹಕರಿಸಬೇಕೆಂದು ಮುನಿಸಿಪಲ್ ಕಮೀಷನರ್ ಪ್ರಾರ್ಥಿಸುತ್ತಾರೆ.

ಉಪಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಸೋಲು

ಬೊಂಬಾಯಿ ಶಾಸನ ಸಭೆಗೆ ಹುಬ್ಬಳ್ಳಿಯಿಂದ ನಡೆದ ಉಪಚುನಾವಣೆಯಲ್ಲಿ ಏಕೀಕರಣ ಪಕ್ಷದ ಉಮೇದುವಾರರಾಗಿದ್ದ ಶ್ರೀ ಎ. ಎಸ್. ಕಂಬಳಿಯವರು ಕಾಂಗ್ರೆಸ್ ಸ್ಪರ್ಧಿ ಶ್ರೀ ಎಂ. ಆರ್. ಪಾಟೀಲ್‌ರನ್ನು ೨೯೧೫ ಓಟುಗಳಿಂದ ಸೋಲಿಸಿ, ಜಯಗಳಿಸಿದ್ದಾರೆ.

ಮದ್ರಾಸ್ ಶಾಸನಸಭೆಗೆ ಗೋದಾವರಿ ಜಿಲ್ಲೆಯ ರಾಮಚಂದ್ರಪುರಂ ಕ್ಷೇತ್ರದಿಂದ ನಡೆದ ಉಪಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷದ ಶ್ರೀ ಕೆ. ಪಟ್ಟಾಭಿರಾಮಯ್ಯನವರು ಪ್ರಜಾಸೋಷಲಿಸ್ಟ್ ಪಕ್ಷದ ಸ್ಪರ್ಧಿ ಶ್ರೀ ಕೆ. ರಾಮಚಂದ್ರರಾಯರವರನ್ನು ೧೩೧೨೦ ಮತಗಳಿಂದ ಸೋಲಿಸಿದ್ದಾರೆ. ಕಾಂಗ್ರೆಸ್ಸಿನವರು ಸ್ಪರ್ಧಿಸದೆ ಪ್ರಜಾಸೋಷಲಿಸ್ಟ್ ಉಮೇದುವಾರರಿಗೆ ಬೆಂಬಲವನ್ನಿತ್ತಿದ್ದರು.

ಪಂಚವಾರ್ಷಿಕ ಯೋಜನೆ ಪುನಃ ಪರಿಶೀಲನೆ

ದೇಶದ ಕೃಷಿ ಮತ್ತು ವ್ಯವಸಾಯ ಕ್ಷೇತ್ರಗಳಲ್ಲಿ ಉದ್ಯೋಗವನ್ನು ಕಲ್ಪಿಸುವ ಸುವ್ಯವಸ್ಥೆಯನ್ನು ಮಾಡಲು ಪಂಚವಾರ್ಷಿಕ ಯೋಜನೆಯನ್ನು ಪುನಃ ಪರಿಶೀಲಿಸಲಾಗುವುದೆಂದು ಆರ್ಥಿಕ ಸಚಿವ ದೇಶ್‌ಮುಖ್‌ರವರು ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷ ಸಭೆಯಲ್ಲಿ ತಿಳಿಸಿದ್ದಾರೆ.

ಪ್ರವಾಹದ ಹಾವಳಿ

ಗಂಗಾನದಿಯಲ್ಲಿ ಇತ್ತೀಚೆಗೆ ಉಂಟಾದ ಪ್ರವಾಹದ ಹಾವಳಿಯಲ್ಲಿ ೭ ಸೇತುವೆಗಳು ಉತ್ತರ ಪ್ರದೇಶದಲ್ಲಿ ಕೊಚ್ಚಿಕೊಂಡು ಹೋಗಿರುವುದಾಗಿ ತಿಳಿಯಬರುತ್ತದೆ.

ಪ್ರಭಾ ★ ಅಮೋಘ ಪ್ರಾರಂಭ 4-9-53 ರಿಂದ ದಿನವಹಿ 3 ಆಟಗಳು
ರಾಜಕಮಲ್‌ರವರ ಮನಾಕರ್ಷಣೀಯ ಸಂಗೀತದಿಂದ
ಹಾಸ್ಯಪೂರಿತ ಸಾಮಾಜಿಕ ಹಿಂದಿಚಿತ್ರ:—
ತೀನ್‌ಬತ್ತಿ ಚಾರ್‌ರಾಸ್ತ
ಪಾತ್ರ:—ಸಂಧ್ಯಾ, ಕರನ್‌ದಿವಾನ್, ಶೀಲಾರಮಣಿ, ಶಶಿಕಲಾ, ಮೀನಾಕ್ಷಿ, ಸ್ಮೃತಿ ಬಿಶ್ವಾಸ್, ಲಲಿತಕುಮಾರಿ, ದಿವಾನ್ ಶರಾರ್.
ದಿಗ್ದರ್ಶನ: ವಿ. ಶಾಂತಾರಾಂ. ಸಂಗೀತ: ಶಿವರಾಂಕೃಷ್ಣ
ಕಡೇದಿನ:— ವಿ. ಶಾಂತಾರಾಂರವರ:——"ಅಮರ ಭೂಪಾಳಿ"
ಬೆಳಗಿನ ಪ್ರದರ್ಶನ 4-9-53 ರಿಂದ 3 ದಿನಗಳು ದೇವಾನಂದ್, ಕಾಮಿನಿಕೌಶಲ್ ನಟಿಸಿರುವ 'ಜಿದ್ದಿ'

ರಾಜಕಮಲ್
4-9-53 ರಿಂದ ಅಮೋಘ 2 ನೇ ವಾರ
ಭರಣಿಯವರ:—
ಚಂಡಿರಾಣಿ
[ತೆಲುಗು]
ಭೂಮಿಕೆ:— ಭಾನುಮತಿ, ವಿದ್ಯಾವತಿ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್ ಮತ್ತು ರೇಲಂಗಿ.
ನಿರ್ದೇಶನ:— ಭಾನುಮತಿ.

ರಣಜಿತ್
4-9-53 ರಿಂದ 3 ನೇ ವಾರ
ವರ್ಮಾ ಫಿಲಂಸ್‌ರವರ
ಔರತ್ ಹಿಂದಿ
ಪಾತ್ರ—ಬೀನಾರಾಯ್, ಪ್ರೇಮನಾಥ್.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೪೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೭

೪-೯-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ನಗರಾರೋಗ್ಯ

ಮೈಸೂರು ೪

ಕಳೆದ ಮಾಹೆ ೩೧ನೇ ತಾರೀಖಿಗೆ ಮುಕ್ತಾಯವಾದ ಪಕ್ಷದಲ್ಲಿ ನಗರದಲ್ಲಿ ಪ್ಲೇಗು, ಕಾಲರಾ ಮತ್ತು ಸಿಡುಬು ರೋಗಗಳು ಎಲ್ಲಿಯೂ ಇರಲಿಲ್ಲ. ಆದಾಗ್ಯೂ ಮುಂಜಾಗ್ರತೆಗಾಗಿ ೧೩೧೬ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಯಿತು. ೫೦ ಕಾಲರಾ ನಿರೋಧ ಇನಾಕ್ಯುಲೇಷನ್‌ಗಳನ್ನು ೨೮೧ ಪ್ರಾಥಮಿಕ ಮತ್ತು ೩೯೬ ರಿ-ವ್ಯಾಕ್ಸಿನೇಷನ್‌ಗಳನ್ನು ಮಾಡಲಾಯಿತು.

ಡಿಫ್ತೀರಿಯಾ ರೋಗವು ೯ ಜನರಿಗೆ ತಗುಲಿ ೨ ಮರಣ, ಟೈಫಾಯಿಡ್ ರೋಗವು ೬ ಜನರಿಗೆ ತಗುಲಿ ಒಂದು ಮರಣವಾಯಿತು. ೧೪೦ ಡಿಫ್ತೀರಿಯಾ ವಿರೋಧ ಮತ್ತು ೧೧ ಟೈಫಾಯಿಡ್ ವಿರೋಧ ಇನಾಕ್ಯುಲೇಷನ್‌ಗಳನ್ನು ಈ ಪಕ್ಷದಲ್ಲಿ ಮಾಡಲಾಯಿತು.

ಭಾರತ ಸೇವಕ ಸಮಾಜ ನಿಧಿಗೆ ಸಹಾಯಮಾಡಿ

ಭಾರತ ಸರ್ಕಾರದ ರಾಷ್ಟ್ರೀಯ ಪಂಚವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಮಾಡಲು ಅಗತ್ಯವಾದ ಜನತಾ ಸೇವೆಯನ್ನು ನೀಡುವ ಸಲುವಾಗಿ ಪಂಡಿತ ಜವಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಪಕ್ಷಾತೀತವಾದ ಭಾರತ ಸೇವಕ ಸಮಾಜದ ಕಾರ್ಯಕಲಾಪಗಳ ಸಹಾಯಕ್ಕಾಗಿ ನಿಧಿ ಕೂಡಿಸುವ ಕಾರ್ಯ ಆರಂಭವಾಗಿ ಪಂಡಿತ್ ನೆಹರೂ, ಶ್ರೀ ಜಿ. ಎಲ್. ನಂದ ಶ್ರೀ ಸುಬ್ರಹ್ಮಣ್ಯಂರವರುಗಳು ಈ ಬಗ್ಗೆ ಮಹಾಜನರಲ್ಲಿ ಮನವಿಮಾಡಿಕೊಂಡಿದ್ದಾರೆ. ಮೈಸೂರುನಗರ ಮತ್ತು ಜಿಲ್ಲೆಯ ಬಾಪ್ತಿ ಮಹಾಜನರೂ ಹಾಗೂ ಸರ್ಕಾರಿ ಅಧಿಕಾರಿಗಳು ಈ ಕಾರ್ಯದಲ್ಲಿ ಉದಾರವಾಗಿ ನೇರವಾಗಿ ಸಮಾಜಕ್ಕೆ ಧನಸಹಾಯ ಮಾಡಬೇಕೆಂದು ಮೈಸೂರು ಜಿಲ್ಲಾ ಸಂಚಾಲಕರು ಕೋರುತ್ತಾರೆ.

ವಾರ್ಷಿಕೋತ್ಸವ

ಫ್ರೆಂಡ್ಸ್ ಕ್ರಿಕೆಟ್ ಕ್ಲಬ್ಬಿನ ಎರಡನೇ ವಾರ್ಷಿಕೋತ್ಸವವು ನಾಳೆ ಸಂಜೆ ೫ ಗಂಟೆಗೆ ದೊಡ್ಡಕೆರೆ ಮೈದಾನದಲ್ಲಿ ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್. ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಸದಸ್ಯರನ್ನುದ್ದೇಶಿಸಿ ಭಾಷಣಮಾಡುತ್ತಾರೆ.

ಆಸ್ಪತ್ರೆ ಕಟ್ಟಡ ಆರಂಭೋತ್ಸವ

ದಿವಂಗತ ಶ್ರೀ ಸಿ. ಪೆರುಮಾಳ್‌ಚೆಟ್ಟಿಯವರ ಉದಾರದಾನದಿಂದ ನಜರ್‌ಬಾದ್ ಮೊಹಲ್ಲಾದಲ್ಲಿ ಕಟ್ಟಿರುವ ಹೊಸ ಆಸ್ಪತ್ರೆಯ ಕಟ್ಟಡದ ಆರಂಭೋತ್ಸವವನ್ನು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇದೇ ೬ ನೇ ತಾರೀಖು ಭಾನುವಾರ ಬೆಳಗ್ಗೆ ನಡೆಸುತ್ತಾರೆ.

ಮೈಸೂರು ರಾಜಕೀಯದ ಭವಿಷ್ಯವೇನು ?

ಶಾಸನಸಭೆ ಕಾಂಗ್ರೆಸ್ ಪಕ್ಷ ಸಭೆಯಲ್ಲಿ ಅನಧಿಕೃತ ಚರ್ಚೆಯೇ

ಎಲ್ಲಾ ಕಾಂಗ್ರೆಸ್ ನಾಯಕರು ಬೆಂಗಳೂರಿನಲ್ಲಿ

ಬೆಂಗಳೂರು ೪

ಮೈಸೂರು ಶಾಸನಸಭೆಗಳ ಕಾಂಗ್ರೆಸ್ ಪಕ್ಷದ ಸಭೆಯು ಈ ಸಂಜೆ ಬೆಂಗಳೂರಿನಲ್ಲಿ ರೆಸಿಡೆನ್ಸಿಯಲ್ಲಿ ಸೇರಲಿದೆ.

ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣಗೌಡರು ಮತ್ತು ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರ ನಡುವೆ ಈಗ ಬಹಿರಂಗವಾಗಿ ಉಂಟಾಗಿರುವ ಘರ್ಷಣೆಯು ಈ ಸಭೆಯಲ್ಲಿ ಚರ್ಚೆಗೆ ಬರಬಹುದೆಂದು ಸಂಸ್ಥಾನಾದ್ಯಂತ ಎಲ್ಲ ಜನತೆಯ ಗಮನವು ರೆಸಿಡೆನ್ಸಿ ಭವನದ ಕಡೆ ತಿರುಗಿದೆ.

ಆದರೆ ಈ ವಿಷಯವು ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಲ್ಲವಾಗಿ ಅಧಿಕೃತವಾಗಿ ಚರ್ಚಿಸಲು ಅವಕಾಶವಿಲ್ಲವೆಂದು ಸಂಬಲರ್ಹವಾದ ಕಡೆಗಳಿಂದ ತಿಳಿಯಬರುತ್ತದೆ. ಆದಾಗ್ಯೂ ಅನಧಿಕೃತವಾಗಿ ಸಭೆಯೊಳಗೆ ಬಿರುಸಿನಿಂದ ಚರ್ಚೆಗಳಾಗುವ ಸಂಭವವಿದೆಯೆಂದೂ ಈ ಸಭೆಯಲ್ಲಿ ಯಾವ ಅಂತ್ಯತೀರ್ಮಾನವನ್ನು ತೆಗೆದುಕೊಳ್ಳದೆ ಈ ವಿಷಯವನ್ನು ಪರಿಶೀಲಿಸಲು ಪ್ರತ್ಯೇಕವಾಗಿ ಮತ್ತೊಂದು ವಿಶೇಷ ಸಭೆಯನ್ನು ಕರೆಯುವ ಕಾರ್ಯಕ್ರಮ ನಡೆಯುವುದೆಂದೂ ಹೇಳಲಾಗಿದೆ.

ಶಾಸನ ಸಭೆಯ ಸದಸ್ಯರಲ್ಲದ ಕೆಲವು ಪ್ರಮುಖ ಕಾಂಗ್ರೆಸ್ ನಾಯಕರು ಈದಿನ ಬೆಂಗಳೂರಿನಲ್ಲಿಯೇ ಬಿಡಾರ ಮಾಡಿರುವುದಾಗಿ ತಿಳಿಯಬರುತ್ತದೆ.

ರಿಸರ್ವ್ ಬ್ಯಾಂಕಿಗೆ ಸಾರ್ವಜನಿಕರ ಸಾಲ ವರ್ಗಾವಣೆ

ಬೆಂಗಳೂರು ೪

ಮೈಸೂರು ಸರ್ಕಾರವು ತೆಗೆದಿರುವ ಸಾರ್ವಜನಿಕ ಸಾಲವನ್ನು ಇದೇ ಅಕ್ಟೋಬರ್ ಒಂದನೇ ತಾರೀಖಿನಿಂದ ರಿಸರ್ವ್ ಬ್ಯಾಂಕಿಗೆ ವರ್ಗಾವಣೆ ಮಾಡಲಾಗುತ್ತದೆ. ಅದಕ್ಕೆ ಸಂಬಂಧಪಟ್ಟ ವ್ಯವಹಾರವನ್ನು ಮೈಸೂರು ಬ್ಯಾಂಕಿಗೆ ಬದಲಾಗಿ ರಿಸರ್ವ್ ಬ್ಯಾಂಕಿನೊಡನೆ ನಡೆಸಬೇಕೆಂದು ಸರ್ಕಾರಿ ಪ್ರಕಟಣೆಯೊಂದು ತಿಳಿಸುತ್ತದೆ.

ಬಳ್ಳಾರಿ ಮೈಸೂರಿಗೆ ಸೇರುವ ಸಮಾರಂಭ

ಬೆಂಗಳೂರು ೪

ಬಳ್ಳಾರಿಯು ಮೈಸೂರಿಗೆ ಸೇರುವ ಅಕ್ಟೋಬರ್ ಒಂದನೇ ತಾರೀಖು ದಿನ ನಡೆಯಬೇಕಾಗಿರುವ ಸಮಾರಂಭಕ್ಕೆ ಆಗಮಿಸಬೇಕೆಂದು ಶ್ರೀಮನ್ಮಹಾರಾಜರನ್ನು ಮತ್ತು ಮೈಸೂರಿನ ಮಂತ್ರಿಗಳನ್ನು ಆಹ್ವಾನಿಸಲು ಕರ್ನಾಟಕ ಕ್ರಿಯಾಸಮಿತಿಯು ನಿರ್ಧರಿಸಿದೆ. ಇದಕ್ಕಾಗಿ ಅವರು ಸದ್ಯದಲ್ಲೇ ಇಲ್ಲಿಗೆ ಬರಲಿರುವರು.

ಮುನ್ಸೀಫ್‌ರಾಗಿ ನೇಮಕ

ಬೆಂಗಳೂರು ೪

ಮೈಸೂರು ಶ್ರೇಷ್ಠ ನ್ಯಾಯಾಲಯದ ಬೆಂಚ್‌ಕ್ಲಾರ್ಕ್ ಶ್ರೀ ಕೆ. ಎಂ. ಸಿದ್ದಪ್ಪನವರನ್ನು ಮುನ್ಸೀಫ್‌ರಾಗಿ ನೇಮಿಸಲಾಗಿದೆ.

ಮುಖ್ಯಮಂತ್ರಿಗಳು ಕಾರ್ಕಳಕ್ಕೆ

ಬೆಂಗಳೂರು ೪

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇದೇ ೧೬ ನೇ ತಾರೀಖು ಕಾರ್ಕಳಕ್ಕೆ ಭೇಟಿಯಿತ್ತು ಅಲ್ಲಿಯ ಇಂಜನಿಯರಿಂಗ್ ಕಾಲೇಜು ಪ್ರಾರಂಭೋತ್ಸವವನ್ನು ನೆರವೇರಿಸುವರು.

ಹರಿಕಥೆ

ಮೈಸೂರು ೪

ನಾಳೆ ಶ್ರಾವಣ ಶನಿವಾರದ ಪ್ರಯುಕ್ತ ಕೋಟೆ ಆಂಜನೇಯಸ್ವಾಮಿಗೆ ವಿಶೇಷ ಅಲಂಕಾರವೂ ರಾತ್ರಿ ೯-೩೦ ಗಂಟೆಗೆ ಶ್ರೀ ಮಿರ್ಲೆ ಶ್ರೀನಿವಾಸರಾಯರಿಂದ ರಾಮಾಂಜನೇಯ ಎಂಬ ಹರಿಕಥೆಯು ನಡೆಯುತ್ತದೆ.

ಜಯಪುರದಲ್ಲಿ ಚಳುವಳಿ

ಜಯಪುರದಲ್ಲಿ ಮನೆಗಂದಾಯ ಮತ್ತು ಅಕ್ಟ್ರಾಯಿ ಸುಂಕ ಹಾಕಿರುವುದನ್ನು ವಿರೋಧಿಸಿ ಚಳುವಳಿಯು ಪ್ರಾರಂಭವಾಗಿದೆ. ಈ ಸಂದರ್ಭದಲ್ಲಿ ಈಗಾಗಲೇ ನೂರಾರು ಜನರ ದಸ್ತಗಿರಿಗಳಾಗಿವೆ. ಉಪವಾಸ ಮುಷ್ಕರವನ್ನು ಪ್ರಾರಂಭಿಸಿದ ಪ್ರಜಾಸೋಷಲಿಸ್ಟ್ ಪಕ್ಷದ ಶ್ರೀ ರಾಮಚರಣ್‌ರನ್ನು ಬಂಧಿಸಲಾಗಿದೆ.

ನಗರದಲ್ಲಿ ಅನೇಕ ಅಂಗಡಿಗಳು, ಉಪಹಾರ ಮಂದಿರ ಮುಂತಾದುವನ್ನು ಮುಚ್ಚಿ ಹರತಾಳವನ್ನು ಆಚರಿಸಲಾಯಿತು.

ಗೋದಾವರಿ ಪರಿಹಾರಕ್ಕೆ ನೆರವು

ಹೈದರಾಬಾದಿನ ವಾರಂಗಲ್‌ನಲ್ಲಿರುವ ಸರ್ಕಾರಿ ನೌಕರರು ಗೋದಾವರಿ ಪರಿಹಾರ ಕಾರ್ಯಕ್ಕಾಗಿ ಒಂದುದಿನದ ಸಂಬಳವನ್ನು ಕೊಡಲು ನಿರ್ಧರಿಸಿದ್ದಾರೆ.

ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಬದಲಾವಣೆ

ಬ್ರಿಟನ್ನಿನ ಮಂತ್ರಿ ಮಂಡಲದಲ್ಲಿ ಪ್ರಧಾನಿ ಚರ್ಚಿಲ್‌ರು ಕೆಲವು ಬದಲಾವಣೆಗಳನ್ನು ಮಾಡಿದ್ದಾರೆ. ಆದರೆ ಉನ್ನತ ಮಟ್ಟದ ವ್ಯತ್ಯಾಸವೇನೂ ಇಲ್ಲ. ಮಂತ್ರಿ ಮಂಡಲದಲ್ಲಿದ್ದ ಒಬ್ಬ ಸಚಿವರನ್ನು ತೆಗೆದುಹಾಕಿ ಹೊಸ ೩ ಜನರನ್ನು ತೆಗೆದುಕೊಂಡಿರುವರು. ಈಗ ಒಟ್ಟು ಸಚಿವ ಸಂಖ್ಯೆಯು ೧೭ ರಿಂದ ೧೯ಕ್ಕೆ ಏರಿತು. ಕೆಲವು ಸಚಿವಶಾಖೆಗಳ ಮೇಲ್ವಿಚಾರಣೆಗಾಗಿ ಇದ್ದ ೭ ಮಂದಿ ಹಿರಿಯ ಲಾರ್ಡುಗಳ ಹುದ್ದೆಯನ್ನು ರದ್ದುಗೊಳಿಸಲಾಗಿದೆ. ಸಚಿವಶಾಖೆಗಳು ಯಾವರೀತಿಯ ಆತಂಕವೂ ಇಲ್ಲದಂತೆ ಕೆಲಸಮಾಡಲು ಈ ವ್ಯವಸ್ಥೆ ಮಾಡಲಾಗಿದೆ.

ಅಮೆರಿಕಾ ಮಾಜಿ ಉಪಾಧ್ಯಕ್ಷರ ಎಚ್ಚರಿಕೆ

ಭಾರತದ ಪ್ರಧಾನಿ ನೆಹರೂರವರ ನೀತಿಗಳು ನಮಗೆ ಸಮರ್ಪಕವಾಗಿರಲಿ ಅಥವ ಇಲ್ಲದಿರಲಿ ನಾವು ಅವರನ್ನು ಅನುಸರಿಸಬೇಕು ಎಂದು ಅಮೆರಿಕಾ ಮಾಜಿ ಉಪಾಧ್ಯಕ್ಷ ಮಿ|| ಹೆನ್ರಿ ವಾಲೇಸ್‌ರವರು ಹೇಳುತ್ತಾ ಹಾಗಿಲ್ಲದೆ ನೆಹರೂರವರಿಗೆ ವಿಷಾದವೂ ಆದಲ್ಲಿ ಅಮೆರಿಕಾವು ವಿಶೇಷ ತೊಂದರೆಗೀಡಾಗುತ್ತದೆ. ರಷ್ಯಾವು ಭಾರತವನ್ನು ಪ್ರವೇಶಿಸುತ್ತದೆ ಎಂದು ಎಚ್ಚರಿಸಿದ್ದಾರೆ.

ನೀರಾವರಿ ಯೋಜನೆಗಳು

ತಿರುವಾಂಕೂರ್-ಕೊಚ್ಚಿ ಸರ್ಕಾರವು ಆ ಪ್ರಾಂತ್ಯದಲ್ಲಿ ೬ ಪ್ರಮುಖ ನೀರಾವರಿ ಮತ್ತು ಕಾಲುವೆ ಯೋಜನೆ ಕಾರ್ಯವನ್ನು ನಡೆಸುತ್ತಲಿದೆ. ಇದರಿಂದ ಒಂದು ಲಕ್ಷ ಟನ್ ಬತ್ತದ ಬೆಳೆಯು ಹೆಚ್ಚುತ್ತದೆ. ಈ ಯೋಜನೆಗಳು ಪೂರ್ಣವಾದಲ್ಲಿ ೩ ಲಕ್ಷ ೧೬ ಸಾವಿರ ಎಕರೆ ಜಮೀನಿಗೆ ಸಹಾಯವಾಗುವುದಾಗಿ ತಿಳಿಯಬರುತ್ತದೆ.

ಕ್ರಿಯಾಸಮಿತಿ ಸಭೆ

ಅಖಂಡ ಕರ್ನಾಟಕ ರಾಜ್ಯನಿರ್ಮಾಣ ಪರಿಷತ್ತಿನ ಕ್ರಿಯಾಸಮಿತಿಯ ಸಭೆಯು ಇದೇ ೬ ನೇ ತಾರೀಖು ಸೋಮವಾರ ಬೆಂಗಳೂರುನಗರದ ವಿ.ನರ್ಸ್ ಸರ್ಕಲ್ ಬಳಿಯಿರುವ ಕೇಂದ್ರ ಕಾರ್ಯಾಲಯದಲ್ಲಿ ನಡೆಯುತ್ತದೆ.

ಪ್ರಾರಂಭ ಭಾಷಣ

ಮೈಸೂರು ೪

ದಕ್ಷಿಣ ಕನ್ನಡ ವಿದ್ಯಾರ್ಥಿ ಸಂಘದ ಪ್ರಾರಂಭಭಾಷಣವನ್ನು ಇದೇ ಭಾನುವಾರ ಬೆಳಗ್ಗೆ ೧೦ ಗಂಟೆಗೆ ದಾಸಪ್ರಕಾಶದಲ್ಲಿ ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ನೆರವೇರಿಸುತ್ತಾರೆ.

○ ಬಂಗಾಳದ ಮಾಜಿ ಮುಖ್ಯಮಂತ್ರಿ ಎ. ಕೆ. ಫಜಲ್ ಹಕ್‌ರವರು ಪಾಕಿಸ್ತಾನದಲ್ಲಿ ಮುಸ್ಲಿಂಲೀಗಿಗೆ ಬಲವಾದ ವಿರೋಧ ಪಕ್ಷವನ್ನು ಕಟ್ಟಲು ನೆರವು ನೀಡಬೇಕೆಂದು ಎಲ್ಲಾ ವಿರೋಧಪಕ್ಷಗಳನ್ನೂ ಕೇಳಿದ್ದಾರೆ.

ಬೀಹಾರಿನ ಪ್ರವಾಹದಿಂದ ೨೧ ಕೋಟಿ ರೂ. ನಷ್ಟ

ಉತ್ತರಪ್ರದೇಶದಲ್ಲಿ ೫೦೦೦ ಹಳ್ಳಿಗಳು ನೀರುಪಾಲು

ಬೀಹಾರಿನಲ್ಲಿ ಇತ್ತೀಚೆಗೆ ಉಂಟಾದ ನದಿಗಳ ಪ್ರವಾಹದಿಂದ ೨೧ ಕೋಟಿ ರೂಪಾಯಿಗಳ ನಷ್ಟ ಸಂಭವಿಸಿರುವುದಾಗಿ ಅಲ್ಲಿಯ ಸರ್ಕಾರವು ಕೇಂದ್ರಕ್ಕೆ ಸಲ್ಲಿಸುವ ವರದಿಯಿಂದ ತಿಳಿಯಬರುತ್ತದೆ.

ಈ ಪ್ರಾಂತ್ಯದಲ್ಲಿ ಪರಿಹಾರ ಕಾರ್ಯಗಳಿಗಾಗಿ ವೆಚ್ಚವಾಗುವ ಹಣದಲ್ಲಿ ಅರ್ಧದಷ್ಟನ್ನು ಕೇಂದ್ರವು ಕೊಡಬೇಕೆಂದು ಮನವಿ ಮಾಡಲಾಗಿದೆ. ಈ ವಿಷಯ ಪರಿಶೀಲನೆಯಲ್ಲಿದೆ.

ಉತ್ತರ ಪ್ರದೇಶದಲ್ಲಿ ಪ್ರವಾಹದ ಹಾವಳಿಯಿಂದ ಸುಮಾರು ೫೦೦೦ ಹಳ್ಳಿಗಳು ಮತ್ತು ೧೦ ಲಕ್ಷ ಎಕರೆ ಜಮೀನು ನೀರಿನ ಪಾಲಾಗಿ ವಿಶೇಷ ತೊಂದರೆಯುಂಟಾಗಿದೆ. ಇಲ್ಲಿಯ ಪರಿಹಾರಕಾರ್ಯಗಳಿಗಾಗಿ ಸುಮಾರು ಒಂದುಕೋಟಿ ೩೫ ಲಕ್ಷ ರೂಪಾಯಿಗಳ ವೆಚ್ಚಮಾಡಬೇಕಾಗಿದೆ ಯೆಂದು ತಿಳಿಯಬರುತ್ತದೆ.

ಸರ್ಕಾರಿ ಉಪಯೋಗಕ್ಕೆ ಖಾದಿ

ಭೂಪಾಲ್ ಸರ್ಕಾರವು ತನ್ನ ಉಪಯೋಗಕ್ಕೆ ಬೇಕಾಗುವಷ್ಟು ಖಾದಿ ಬಟ್ಟೆಯನ್ನು ಕೊಳ್ಳಲು ನಿರ್ಧರಿಸಿದೆ

ಸರ್ಕಾರಿ ನೌಕರರು ಸಹ ಹೆಚ್ಚಿನ ಪ್ರಮಾಣದಲ್ಲಿ ಖಾದಿಯನ್ನು ಕೊಳ್ಳಬೇಕೆಂದು ಮನವಿ ಮಾಡಿದೆ.

ರಾತ್ರಿ ವೇಳೆ ಮಹಿಳಾ ಕಾರ್ಮಿಕರ ನೇಮಕ ಕೂಡದು

ರಾತ್ರಿ ವೇಳೆಗಳಲ್ಲಿ ಕೈಗಾರಿಕಾ ಸಂಸ್ಥೆಗಳಲ್ಲಿ ಮಹಿಳೆಯರು ಮತ್ತು ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳಕೂಡದೆಂದು ಒಂದು ಮಸೂದೆಯನ್ನು ಕೇಂದ್ರ ಕಾರ್ಮಿಕ ಉಪ ಸಚಿವ ಅಬೀದ್ ಅಲಿಯವರು ಲೋಕಸಭೆಯಲ್ಲಿ ಮಂಡಿಸಿದ್ದಾರೆ.

ಕಾಶ್ಮೀರದಲ್ಲಿ ನೂತನ ಸುಧಾರಣೆಗಳು

ಆಹಾರಧಾನ್ಯಗಳ ಬೆಲೆಯಲ್ಲಿ ಇಳಿತಾಯ

ಕಾಶ್ಮೀರದಲ್ಲಿ ಹೊಸ ಸರ್ಕಾರವು ಅಲ್ಲಿಯ ಜನರಿಗೆ ಮತ್ತಷ್ಟು ಸೌಕರ್ಯಗಳನ್ನು ಕಲ್ಪಿಸಿದೆ. ಪ್ರಾಂತ್ಯದಲ್ಲೆಲ್ಲಾ ಅಕ್ಕಿ ಮತ್ತು ಗೋಧಿಹಿಟ್ಟಿನ ಬೆಲೆಯನ್ನು ಕಡಮೆಮಾಡಿದೆ. ಅಕ್ಕಿಯ ಬೆಲೆಯು ಮಣಕ್ಕೆ ೨೬ ರೂಪಾಯಿಗಳು ಇದ್ದುದು ೮ ರೂ. ಗೋಧಿಹಿಟ್ಟು ೨೫ ರೂ. ೧೦ ಆಣೆಯಿಂದ ೨೦ ರೂ. ಗೆ ಇಳಿಸಲಾಗಿದೆ.

ಕಾಶ್ಮೀರ ಕಣಿವೆ ಪ್ರದೇಶದಲ್ಲಿರುವ ರೈತರಿಗೆ ಅವರ ಕಂದಾಯದಲ್ಲಿ ಶೇಕಡ ೧೨½ ಯಿಂದ ೨೫ ರವರೆಗೆ ರಿಯಾಯಿತಿಯನ್ನು ಕೊಡಲಾಗಿದೆ.

ಆಹಾರಧಾನ್ಯಗಳನ್ನು ಕಡ್ಡಾಯವಾಗಿ ಸಂಗ್ರಹಿಸುವ ಪದ್ಧತಿಯನ್ನು ರದ್ದುಗೊಳಿಸಿ ರೈತರು ಸ್ವಯಂಪ್ರೇರಣೆಯಿಂದ ಕೊಡುವ ಧಾನ್ಯಗಳನ್ನು ಸ್ಥಳದಲ್ಲಿಯೇ ಪೂರ್ತಿ ಹಣವನ್ನು ಕೊಟ್ಟು ಸರ್ಕಾರವು ನೇರವಾಗಿ ಕೊಳ್ಳುವ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ತಿಳಿಯಬರುತ್ತದೆ.

ಪ್ರಾಂತ್ಯದಲ್ಲಿ ಜನರಿಗೆ ಕೊಡುತ್ತಲಿದ್ದ ರೇಷನ್ ಪ್ರಮಾಣವನ್ನು ೨೬ ಸೇರುಗಳಿಗೆ ಹೆಚ್ಚಿಸಲಾಗಿದೆ.

ಸರ್ಕಾರಿ ನೌಕರರಿಗೆ ರಾಜಕೀಯ ಬೇಡ

ಆಂಧ್ರ ಪ್ರಾಂತ್ಯಕ್ಕೆ ಸಂಬಂಧಪಟ್ಟ ಕೇಂದ್ರ ಕಚೇರಿ ನೌಕರರನ್ನುದ್ದೇಶಿಸಿ ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮಾತನಾಡುತ್ತಾ ಸರ್ಕಾರಿ ನೌಕರರು ಯಾವ ರಾಜಕೀಯ ಪಕ್ಷವನ್ನು ಸೇರದೆ, ಅದರಿಂದ ದೂರವಿರಬೇಕೆಂದು ತಿಳಿಸಿದ್ದಾರೆ.

● ಆಚಾರ್ಯ ವಿನೋಬಾಭಾವೆಯವರ ಭೂದಾನ ಯಜ್ಞ ಚಳವಳಿಗೆ ಮಧ್ಯಭಾರತ ಸರ್ಕಾರವು ೨ ಲಕ್ಷ ಎಕರೆ ಜಮೀನು ಕೊಡಲು ನಿರ್ಧರಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೩—೯—೧೯೫೩

ಪಲ್ಲ	ರೂ. ಅ	ರೂ. ಅ
ಕಡಲೇಕಾಯಿ	೧೩—೮	೨೬—
ಎಳ್ಳು	೫೦—	೮೬—೧೪
ಹುರುಳಿ	೪೭—೬	೪೭—೧೪
ಹೆಸರು	೬೦—	—
ಹರಳು	—	—
ಅಲಸಂದೆ	೬೮—೬	೬೩—೪
ಹೊಂಗೆಬೀಜ	—	—
ಅವರೆ	—	—
ಉದ್ದು	—	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೩—೧೦	೮—೬
ಸೀಗೆಕಾಯಿ	೭—೨	—
ಬೆಲ್ಲ	—	—
ತೆಂಗಿನಕಾಯಿ	೧೪೯	೨೬೭

ಕೈಮಗ್ಗದವರಿಗೆ ನೆರವು

೪೦ ಕೌಂಟು ಮತ್ತು ಅದಕ್ಕಿಂತ ಕಡಮೆ ದರ್ಜೆಯಲ್ಲಿ ಪಂಚೆ ಮತ್ತು ಬಣ್ಣದ ಸೀರೆಯ ತಯಾರಿಕೆಯನ್ನು ಕೈಮಗ್ಗದವರಿಗೆ ಮೀಸಲಾಗಿಡಬೇಕೆಂಬ ನಿರ್ಣಯವನ್ನು ಬೊಂಬಾಯಿ ಶಾಸನಸಭೆಯು ಮಾಡಿದೆ.

ಈ ಸಂದರ್ಭದಲ್ಲಿ ಅಲ್ಲಿಯ ಸಹಕಾರ ಶಾಖಾಸಚಿವ ಶ್ರೀ ಎಂ. ಪಿ. ಪಾಟೀಲರು ಮಾತನಾಡುತ್ತಾ, ಪ್ರಾಂತ್ಯದಲ್ಲಿ ಕೈಮಗ್ಗದ ಬಟ್ಟೆಗಳಿಗೆ ಮಾರಾಟವು ಸರಿಯಾಗಿ ಆಗದೆ ಜನರಿಗೆ ವಿಶೇಷ ತೊಂದರೆಯುಂಟಾಗಿದೆ. ಸುಮಾರು ೪ ಲಕ್ಷ ರೂಪಾಯಿಗಳ ದಾಸ್ತಾನು ಉಳಿದುಹೋಗಿದೆ. ಇವರಿಗೆ ನೆರವುನೀಡಲು ಸರ್ಕಾರವು ೬೦ ಲಕ್ಷ ರೂ.ಗಳ ಯೋಜನೆಯನ್ನು ತಯಾರಿಸಿದೆ. ಇದನ್ನು ಕಾರ್ಯರೂಪಕ್ಕೆ ತರಲು ಕೇಂದ್ರದ ಅಂಗೀಕಾರವನ್ನು ಕಾಯಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಸರ್ಕಾರಿ ಆಜ್ಞೆ

ಬೆಂಗಳೂರು ೪

ಸರ್ಕಾರದ ಅರಣ್ಯ ಮತ್ತು ವ್ಯವಸಾಯ ಶಾಖೆ ಕಾರ್ಯದರ್ಶಿ ಶ್ರೀ ಕೆ. ಮಹಮುದ್ ಅಹಮುದ್‌ರವರನ್ನು ರೆವಿನ್ಯೂ ಕಾರ್ಯದರ್ಶಿಗಳಾಗಿ ವರ್ಗಾಯಿಸಿ, ಅಸ್ಥಾನಕ್ಕೆ ಶ್ರೀ ಡಿ. ಜೆ. ಬಾಲರಾಜ್‌ರವರನ್ನು ನೇಮಿಸಲಾಗಿದೆ.

ಸರ್ಕಾರದ ಜೇನ ವಿದ್ಯಾಶಾಖೆಯ ಕಾರ್ಯದರ್ಶಿ ಶ್ರೀ ಬಿ. ಎಂ. ಕೃಷ್ಣರನ್ನು ವಿದ್ಯಾಭ್ಯಾಸ ಇಲಾಖಾ ಕಾರ್ಯದರ್ಶಿಯನ್ನಾಗಿಯೂ, ಮೈಸೂರು ಡಿವಿಜನ್ನಿನ ಮಾರಾಟ ತೆರಿಗೆ ಡೆಪ್ಯುಟಿಕಮೀಷನರ್ ಶ್ರೀ ಸಿ. ಎಸ್. ಶಂಕರಯ್ಯರ್‌ರನ್ನು ಜೇನವಿಮಾ ಕಾರ್ಯದರ್ಶಿಯನ್ನಾಗಿ ನೇಮಿಸಿ, ಮಾರಾಟತೆರಿಗೆ ಡೆಪ್ಯುಟಿಕಮೀಷನರಾಗಿ ಶ್ರೀ ಹೆಚ್. ಎಸ್. ಮಲ್ಲರಾಜೇಅರಸ್‌ರನ್ನು ನೇಮಿಸಲಾಗಿದೆ.

ಕರ್ನೂಲ್‌ಗೆ ಟೆಲಿಫೋನ್ ಸಂಪರ್ಕ

ಅಕ್ಟೋಬರ್ ಒಂದನೇ ತಾರೀಖಿನಿಂದ ಅಂಧ್ರಪ್ರಾಂತ್ಯದ ರಾಜಧಾನಿಯಾಗಲಿರುವ ಕರ್ನೂಲ್‌ಗೆ ಟೆಲಿಫೋನ್ ಸೌಕರ್ಯವನ್ನು ಒದಗಿಸುವ ವ್ಯವಸ್ಥೆ ನಡೆಯುತ್ತಿರುವುದಾಗಿ ತಿಳಿಯಬರುತ್ತದೆ.

ಬೆಂಗಳೂರು ಮತ್ತು ಕರ್ನೂಲ್ ನಡುವೆ ಸಮಾಚಾರ ತಂತಿ ವ್ಯವಸ್ಥೆಯನ್ನು ಸಹ ಕಲ್ಪಿಸಲಾಗುವುದೆಂದು ತಿಳಿಯಬರುತ್ತದೆ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು!
ಬಹುಕಾಲ ಬಾಳಿಕೆಬರುವವು!
ನಿಪುಣರಾದ ಕೆಲಸಗಾರರ ಮೇಲ್ವಿಚಾರಣೆಯಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು !!!

★★★★★

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಪಳಿಗಳು (FLATS) ದುಂಡು ಮತ್ತು ಚದುರ ಸಲಾಕಿಗಳು (ROUNDS & SQUARES) ಕೋನ ಕಂಬಿಗಳು (ANGLES) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (REINFORCING RODS) ಮತ್ತು ಬೀಲುಪಟ್ಟಿಗಳು (HOOPS)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು

ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರಖಾನೆ, ಭದ್ರಾವತಿ.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೭

೫-೯-೧೯೫೩ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಜೂಜುಕೋರರಿಗೆ ಶಿಕ್ಷೆ

ಮೈಸೂರು ೫

ಇದೇ ೨ನೇ ತಾರೀಖು ರಾತ್ರಿ ೧೧-೩೦ ಗಂಟೆ ವೇಳೆಯಲ್ಲಿ ಬೆಳ್ಳಿಕಟ್ಟೆಗೆ ಮೀಸಲ್ ನಲ್ಲಿರುವ ಕಾಟಪ್ಪನವರ ಗರಡಿಯ ಬಳಿ ಸುಬ್ಬಯ್ಯ ಎಂಬುವವರ ಮನೆಯಲ್ಲಿ ಜೂಜಾಡುತ್ತಿದ್ದಾಗ ಸುಬ್ಬಯ್ಯ ಮತ್ತು ಇತರ ೭ ಜನರನ್ನು ನಗರದ ಬಿ. ಡಿವಿಜನ್ ಪೋಲೀಸ್ ಇನ್ಸ್‌ಪೆಕ್ಟರು ದಸ್ತಗಿರಿಮಾಡಿ ೪೦-೧೨-೦ರೂ. ಅನ್ನು ವಶಪಡಿಸಿಕೊಂಡು ಅವರ ಮೇಲೆ ಮೊಕದ್ದಮೆ ಹೂಡಿದ್ದರು.

ಎರಡನೇ ಸಿಟಿ ಮ್ಯಾಜಿಸ್ಟ್ರೇಟರು ಎಲ್ಲರಿಗೂ ತಲಾ ೨೦ ರೂ ಜುಲ್ಮಾನೆಯನ್ನೂ, ಜೂಜಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಸುಬ್ಬಯ್ಯನವರಿಗೆ ಒಂಬತ್ತಿಂಗಳು ಕಠಿಣ ಸಜಾ ೨೦೦ ರೂ ಜುಲ್ಮಾನೆ ಅದು ಕೊಡದಿದ್ದರೆ ಮತ್ತೊಂದುತಿಂಗಳ ಸಜಾವನ್ನು ವಿಧಿಸಿದರು.

ನಗರದ ಆನೇಸಾರೋಟು ಬೀದಿಯಲ್ಲಿರುವ ಶಿವಣ್ಣ ಎಂಬುವವರ ಬೀಡಿ ಅಂಗಡಿಯಲ್ಲಿ ನಿನ್ನೆಯರಾತ್ರಿ ಸಟ್ಟಾ ಜೂಜಾಡುತ್ತಿದ್ದದನ್ನು ಬಿ. ಡಿವಿಜನ್ ಪೋಲೀಸ್ ಇನ್‌ಸ್ಪೆಕ್ಟರು ಪತ್ತೆಹಚ್ಚಿ ಸದರಿ ಶಿವಣ್ಣ ಮತ್ತು ಪದ್ಮನಾಭನ್ ನಾಯರ್ ಎಂಬವರನ್ನು ದಸ್ತಗಿರಿಮಾಡಿ, ಅಲ್ಲಿದ್ದ ೨೭-೫-೦ ರೂ. ಅನ್ನು ವಶಪಡಿಸಿಕೊಂಡು ಮೊಕದ್ದಮೆಯನ್ನು ಹೂಡಿದ್ದಾರೆ.

ನಗರದಲ್ಲಿ ನಾಳಿನ ಕಾರ್ಯಕ್ರಮ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಾಳೆ ಬೆಳಗ್ಗೆ ೯ ಗಂಟೆಗೆ ನಜರಬಾದಿನಲ್ಲಿರುವ ಶ್ರೀಮತಿ ನಾಗಮ್ಮ ಪೆರುಮಾಳ್‌ಚೆಟ್ಟಿಯವರ ಹೆರಿಗೆ ಆಸ್ಪತ್ರೆಯ ಪ್ರಾರಂಭೋತ್ಸವನನ್ನು ನೆರವೇರಿಸುವರು.

ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ನಾಳೆ ಬೆಳಗ್ಗೆ ೧೦ಗಂಟೆಗೆ ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿಸಂಘದ ಆರಂಭ ಭಾಷಣ ಮಾಡುವರು.

ಬೆಳಗ್ಗೆ ೧೦-೩೦ ಗಂಟೆಗೆ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಬಸವಯ್ಯ ಕಾಲೇಜಿನ ನೂತನ ಬಿ. ಕಾಂ. ತರಗತಿಯ ಪ್ರಾರಂಭೋತ್ಸವವನ್ನು ನೆರವೇರಿಸುವರು.

ಮಧ್ಯಾಹ್ನ ೨ ಗಂಟೆಗೆ ರೆವಿನ್ಯೂ ಸಚಿವರು ಕೃಷ್ಣರಾಜಸಾಗರದ ಕಾರ್ಯನಿರ್ವಾಹಕ ಸಮಿತಿಯಲ್ಲಿ ಭಾಗವಹಿಸುವರು.

ರಾತ್ರಿ ೮ ಗಂಟೆಗೆ ಶ್ರೀ ಕಡಿದಾಳ್ ಮಂಜಪ್ಪನವರು ಸಾರ್ವಜನಿಕ ವಿದ್ಯಾರ್ಥಿನಿಲಯ ಸಂಘದ ಆರಂಭ ಭಾಷಣವನ್ನು ಮಾಡುವರು.

● ಇದೇ ೨೫ರಿಂದ ೨೭ನೇ ತಾರೀಖಿನವರೆಗೆ ವೆಲ್ಲೂರು ಮೆಡಿಕಲ್ ಕಾಲೇಜಿನಲ್ಲಿ ಮದರಾಸ್ ಪ್ರಾಂತ್ಯದ ಸಾಮಾಜಿಕ ಕಾರ್ಯಕರ್ತರ ಸಮ್ಮೇಳನವು ನಡೆಯಲಿದೆ.

ಶ್ರೀ ಹನುಮಂತಯ್ಯನವರು ವಿಶ್ವಾಸದ ಮತಗಳಿಸಬೇಕು

ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರ ಅಭಿಪ್ರಾಯ ?

ಬೆಂಗಳೂರು ೫

ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯು ನಿನ್ನೆ ಮದಿನ ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ವಿಶೇಷ ಆಹ್ವಾನದ ಮೇರೆ ಹಿರಿಯ ಶಾಸನ ಸಭಾಧ್ಯಕ್ಷ ಶ್ರೀ ಕೆ. ಟಿ. ಭಾಷ್ಯಂರವರು ಸಭೆಯಲ್ಲಿ ಹಾಜರಿದ್ದರು.

ಪ್ರಾರಂಭದಲ್ಲಿ ಗೇಣಿದಾರರ ಕಾನೂನಿನ ವಿಷಯವಾಗಿ ಸೆಲೆಕ್ಟ್ ಸಮಿತಿಯ ವರದಿಯನ್ನು ಸಭೆಯಲ್ಲಿ ಪರಿಶೀಲಿಸಲು ಪ್ರಾರಂಭವಾದಾಗ ಸದಸ್ಯರಲ್ಲಿ ಹೆಚ್ಚು ಸಂಖ್ಯೆಯಿಲ್ಲದೆ, ಇರುವವರಲ್ಲಿ ಆಸಕ್ತಿ ಕಡಮೆಯಿದ್ದುದರಿಂದ ವಿಷಯದಲ್ಲಿ ಹೆಚ್ಚು ಚರ್ಚೆ ನಡೆಯಲಿಲ್ಲ.

ಕಾಂಗ್ರೆಸ್ಸಿನಲ್ಲಿ ಇತ್ತೀಚೆಗೆ ಉಂಟಾಗಿರುವ ಭಿನ್ನಾಭಿಪ್ರಾಯದ ವಿಷಯವಾಗಿ ಸಭೆಯಲ್ಲಿ ವಿಪುಲವಾದ ಚರ್ಚೆಯಾಗುವುದೆಂದು ಸದಸ್ಯರು ಮತ್ತು ಸಾರ್ವಜನಿಕರು ಕುತೂಹಲರಾಗಿದ್ದರು. ಮಾತ್ರ ಅಲ್ಲಿ ಕಾಣಬರುತ್ತಿತ್ತು. ರೆಸಿಡೆನ್ಸಿಯ ಬಳಿ ಸಾವಿರಾರು ಸಾರ್ವಜನಿಕರು ಸೇರಿದ್ದರು.

ಸಂಜೆವೇಳೆಗೆ ರಾಜಕೀಯ ವಿಷಯದಲ್ಲಿ ವಿಪುಲ ಚರ್ಚೆ ಪ್ರಾರಂಭವಾಯಿತು.

ಮುಖ್ಯಮಂತ್ರಿಗಳು ಆದಷ್ಟು ಜಾಗ್ರತೆಯಾಗಿ ವಿಶ್ವಾಸದ ಮತವನ್ನು ಪಡೆಯಬೇಕೆಂದು ಅನೇಕ ಸದಸ್ಯರು ಸೂಚಿಸಿದುದಾಗಿ ತಿಳಿಯಬರುತ್ತದೆ. ಪ್ರಾರಂಭದಲ್ಲಿ ಈಗ ಪಕ್ಷದಲ್ಲಿ ಉಂಟಾಗಿರುವ ಒಡಕನ್ನು ಶ್ರೀ ಹನುಮಂತಯ್ಯನವರು ಸಭೆಯ ಗಮನಕ್ಕೆ ತಂದು ಮುಂದಿನ ಕ್ರಮದ ಬಗ್ಗೆ ಸಲಹೆ ನೀಡುವಂತೆ ಪ್ರಾರ್ಥಿಸಿದರೆಂದು ತಿಳಿಯಬರುತ್ತದೆ

ಸರ್ಕಾರದ ನೌಕರಿ ನೇಮಕದ ಬಗ್ಗೆ ನೂತನ ಸೂಚನೆ

ಬೆಂಗಳೂರು ೫

ಸರ್ಕಾರಿ ನೌಕರಿಯ ಶೇಕಡ 16⅔ ರಷ್ಟನ್ನು ನಿಮ್ನ ವರ್ಗ ಮತ್ತು ಗುಡ್ಡಗಾಡಿನವರಿಗೂ, ಶೇಕಡ ೫೦ ರಷ್ಟನ್ನು ಹಿಂದುಳಿದ ಪಂಗಡದವರಿಗೂ ಮೀಸಲಾಗಿಟ್ಟು, ಉಳಿದ 33⅓ ರಷ್ಟನ್ನು ಎಲ್ಲ ವರ್ಗದವರಿಗೂ ದಕ್ಷತೆಯ ಆಧಾರದಮೇಲೂ ನೇಮಿಸಬೇಕೆಂಬ ಪಬ್ಲಿಕ್ ಸರ್ವೀಸ್ ಕಮೀಷನ್ನಿನ ಸೂಚನೆಯನ್ನು ಸರ್ಕಾರದವರು ಒಪ್ಪಿದ್ದಾರೆ.

ಕೇಂದ್ರ ಉಪಮಂತ್ರಿಗಳ ಆಗಮನ

ಮೈಸೂರು ೫

ಕೇಂದ್ರ ಸರ್ಕಾರದ ಪ್ರಕೃತಿ, ಸಂಪತ್ತು ಮತ್ತು ಸಂಶೋಧನಾ ಶಾಖಾ ಉಪಸಚಿವ ಶ್ರೀ ಕೆ. ಡಿ. ಮಾಳವೀಯರವರು ನಿನ್ನೆ ರಾತ್ರಿ ಇಲ್ಲಿಗೆ ಆಗಮಿಸಿದರು. ಅವರು ಈದಿನ ಬೆಳಗ್ಗೆ ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಭೇಟಿಕೊಟ್ಟು ಅನಂತರ ಕೊಯಮುತ್ತೂರಿಗೆ ಪ್ರಯಾಣ ಬೆಳೆಸಿದರು.

ಜಾಡಮಾಲಿಗಳಿಗೆ ಗೃಹಗಳ ಆರಂಭೋತ್ಸವ

ಮೈಸೂರು ೫

ಜಿಲ್ಲಾಧಿಕಾರಿ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಮೊನ್ನೆದಿನ ಟಿ ನರಸೀಪುರದ ಪುರಸಭೆಯವರು ತಮ್ಮ ಜಾಡಮಾಲಿಗಳಿಗೆ ಕಟ್ಟಿಸಿರುವ ಗೃಹಗಳ ಆರಂಭೋತ್ಸವವನ್ನು ನೆರವೇರಿಸಿದರು. ಅಧ್ಯಕ್ಷ ಶ್ರೀ ಶ್ರೀನಿವಾಸಯ್ಯಂಗಾರ್ಯರು ಸ್ವಾಗತ ಭಾಷಣಮಾಡಿ, ಪುರಸಭೆಯವರು ಕೈಗೊಂಡಿರುವ ಅಭಿವೃದ್ಧಿಕಾರ್ಯಗಳನ್ನು ವಿವರಿಸಿದರು.

ಭೂದಾನ ಯಜ್ಞಕ್ಕೆ ಸರ್ಕಾರದ ಸಹಾಯ

ಮಧ್ಯಭಾರತ್ ಸರ್ಕಾರದವರು ೨ ಲಕ್ಷ ಎಕರೆ ಜಮೀನನ್ನು ಆಚಾರ್ಯ ವಿನೋಬಾಭಾವೆಯವರಿಗೆ ಕೊಟ್ಟು, ಅದನ್ನು ಭೂಮಿಗಳಿಲ್ಲದ ರೈತರಿಗೆ ಹಂಚಬೇಕೆಂದು ತಿಳಿಸಿದೆ.

ಕೊರಿಯಾಕ್ಕೆ ಭಾರತದ ಸೈನ್ಯ

ಕೊರಿಯಾಕ್ಕೆ ಭಾರತದಿಂದ ಮೇಲ್ವಿಚಾರಕ ಸೈನ್ಯದ ಕೊನೆಯ ತಂಡವು ಈದಿನ ಮದ್ರಾಸ್‌ನಿಂದ ತೆರಳಲಿದೆ. ಈ ತಂಡದಲ್ಲಿ ಒಟ್ಟು ೧೪೦೦ ಸೈನ್ಯದವರಿರುವರು.

ಮೈಸೂರಿನಲ್ಲಿ ಮೂಲ ಶಿಕ್ಷಣದ ಕೇಂದ್ರ

ಮೂಲಶಿಕ್ಷಣದ ಯುನೆಸ್ಕೋ ಕೇಂದ್ರವನ್ನು ಮೈಸೂರಿನಲ್ಲಿ ತೆರೆಯಲಾಗುವುದೆಂದು ಕೇಂದ್ರ ಶಿಕ್ಷಣ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

● ಆಂಧ್ರ ಪ್ರಾಂತ್ಯದಲ್ಲಿ ನೂತನ ಮಂತ್ರಿಮಂಡಲವನ್ನು ರಚಿಸುವ ವಿಷಯವನ್ನು ಪರಿಶೀಲಿಸಲು ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ಸಭೆಯು ಇದೇ ೧೬ ನೇ ತಾರೀಖು ಮದ್ರಾಸ್‌ನಲ್ಲಿ ಸೇರುತ್ತದೆ.

ನಿರುದ್ಯೋಗ ಸಮಸ್ಯೆ ತೀವ್ರ ಕಳವಳ

ಭಾರತದಲ್ಲಿ ನಿರುದ್ಯೋಗ ಹೆಚ್ಚುತ್ತಿರುವುದರ ಬಗ್ಗೆ ಸಭೆ ತೀವ್ರ ಕಳವಳಪಡುತ್ತದೆ ಮತ್ತು ಪಂಚವಾರ್ಷಿಕ ಯೋಜನೆಯನ್ನು ಸೂಕ್ತವಾಗಿ ಪುನರ್ವಿಮರ್ಶಿಸಿ ಈ ಉದ್ದೇಶದ ಸಿದ್ಧಿಗಾಗಿ ಅಗತ್ಯವಾದ ಕ್ರಮಗಳನ್ನು ಕೂಡಲೇ ಕೈಗೊಳ್ಳಬೇಕು-ಎಂಬ ನಿರ್ಣಯವನ್ನು ಕೇಂದ್ರ ಆರ್ಥಿಕ ಸಚಿವರು ಪಾರ್ಲಿಮೆಂಟಿನಲ್ಲಿ ನಿನ್ನೆ ಮಂಡಿಸಿದರು.

ಶಿಕ್ಷಿತ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲು ೧೪.೭ ಕೋಟಿ ರೂ.ಗಳ ವೆಚ್ಚದಲ್ಲಿ ವಿಶೇಷ ಶಿಕ್ಷಣಾಭಿವೃದ್ಧಿ ಯೋಜನೆಯನ್ನು ಭಾರತ ಸರ್ಕಾರ ತಯಾರಿಸಿ ಈ ವಿಚಾರದಲ್ಲಿ ಸಂಸ್ಥಾನ ಸರಕಾರಗಳ ಅಭಿಪ್ರಾಯ ಪಡೆಯಲಾಗುತ್ತಿದೆಯೆಂದೂ ಸಚಿವರು ತಿಳಿಸಿದರು.

ಸೆಕೆಂಡರಿ ವಿದ್ಯಾಭ್ಯಾಸ ಸುಧಾರಣೆ

ಕೇಂದ್ರ ಸೆಕೆಂಡರಿ ವಿದ್ಯಾಭ್ಯಾಸ ಸುಧಾರಣಾ ಕಮೀಷನ್ ವರದಿಯನ್ನು ಡಿಸೆಂಬರ್ ತಿಂಗಳಿನ ಅಂತ್ಯದಲ್ಲಿ ಅಖಿಲ ಭಾರತ ವಿಶ್ವವಿದ್ಯಾನಿಲಯದ ಬೋರ್ಡ್ ದೆಹಲಿಯಲ್ಲಿ ಸಭೆ ಸೇರಿ ಪರಿಶೀಲಿಸುವುದೆಂದು ತಿಳಿದುಬಂದಿದೆ.

ರೆಡ್‌ಕ್ರಾಸ್ ಸಂಸ್ಥೆ ನೆರವು

ಪೂರ್ವ ಮತ್ತು ಪಶ್ಚಿಮ ಗೋದಾವರಿ ಜಿಲ್ಲೆಗಳಲ್ಲಿ ಪ್ರವಾಹದಿಂದ ನೊಂದವರಿಗಾಗಿ ರೆಡ್ ಕ್ರಾಸ್ ಸಂಸ್ಥೆಯು ಈಗ ಕೊಟ್ಟಿರುವ ೧೦೦೦೦ ರೂಗಳ ಜೊತೆಗೆ ಆಹಾರ ಮುಂತಾದ ಇತರ ವಸ್ತುಗಳ ನೆರವನ್ನು ಸಹ ನೀಡಿದೆ.

ವಿಶ್ವವಿದ್ಯಾನಿಲಯದಲ್ಲಿ ತಮಿಳು ಪೀಠ

ಅಣ್ಣಾಮಲೆ ವಿಶ್ವವಿದ್ಯಾನಿಲಯದಲ್ಲಿ ತಮಿಳು ಭಾಷೆಯ ಪ್ರಗತಿಗೆ ನಡೆಸಿರುವ ಕೆಲಸಗಳನ್ನು ಮೆಚ್ಚಿ ಅಲ್ಲಿ ಒಂದು ತಮಿಳು ಪೀಠವನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ೩ಲಕ್ಷ ರೂಪಾಯಿಗಳ ವಿಶೇಷ ಗ್ರಾಂಟನ್ನು ಕೊಟ್ಟಿದೆ.

ಮೈಸೂರಿನಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತ ಬರಬೇಕು

ಮೈಸೂರಿನಲ್ಲಿ ಈಗ ಉಂಟಾಗಿರುವ ರಾಜಕೀಯ ಗೊಂದಲದಿಂದ ಸಂಸ್ಥಾನದ ಪ್ರಗತಿಗೆ ಅಡ್ಡಿ ಉಂಟಾಗುವುದು ಆದ್ದರಿಂದ ರಾಷ್ಟ್ರಾಧ್ಯಕ್ಷರು ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕು--ಎಂದು ಮೈಸೂರು ಸಂಸ್ಥಾನದ ಹಿಂದೂ ಮಹಾಸಭೆಯ ಕಾರ್ಯದರ್ಶಿಗಳು ತಿಳಿಸಿದ್ದಾರೆ.

○ ಕಳೆದವರ್ಷ ಭಾರತದಲ್ಲಿ ೩೫ ಕೋಟಿ ರೂ. ಗಳಷ್ಟು ಸಿಗರೇಟನ್ನು ಜನರು ಉಪಯೋಗಿಸಿದ್ದಾರೆಂದೂ, ಇದರಿಂದ ಸರ್ಕಾರಕ್ಕೆ ತೆರಿಗೆ ರೂಪದಲ್ಲಿ ೭ ೫ ಕೋಟಿ ರೂ, ಗಳು ಬಂದಿವೆಯೆಂದೂ ತಿಳಿಸಲಾಗಿದೆ.

ಕಾಶ್ಮೀರ ಪ್ರಜಾಭಿಪ್ರಾಯ ಅಧಿಕಾರಿಯ ರಾಜೀನಾಮೆ

ರಾಜೀನಾಮೆ ಅಂಗೀಕರಿಸಕೂಡದೆಂದು: ಪಾಕಿಸ್ತಾನ

ಸರ್ಕಾರದ ಮನವಿ

ಕಾಶ್ಮೀರದಲ್ಲಿ ಪ್ರಜಾಭಿಪ್ರಾಯ ಸಂಗ್ರಹಣ ಅಧಿಕಾರಿ ಅಡ್ಮಿರಲ್ ನಿಮಿಟ್ಸ್‌ರವರು ಸ್ವಂತಕಾರಣಗಳಿಗಾಗಿ ತಾವು ಈ ಕೆಲಸದಲ್ಲಿರಲು ಸಾಧ್ಯವಿಲ್ಲವೆಂದು ತಿಳಿಸಿ ರಾಜೀನಾಮೆ ಕೊಟ್ಟಿರುವುದಾಗಿ ವಿಶ್ವಸಂಸ್ಥೆಯ ಸೆಕ್ರೆಟರಿ ಜನರಲ್‌ರವರು ಭಾರತಕ್ಕೆ ತಿಳಿಸಿರುವುದಾಗಿ ಗೊತ್ತಾಗಿದೆ.

ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯು ೧೯೪೯ ನೇ ಮಾರ್ಚಿ ತಿಂಗಳಲ್ಲಿ ಕಾಶ್ಮೀರದಲ್ಲಿ ಪ್ರಜಾಭಿಪ್ರಾಯ ಸಂಗ್ರಹಿಸಲು ಇವರನ್ನು ನೇಮಿಸಿತ್ತು.

ಪ್ರಧಾನಿ ನೆಹರೂ ಮತ್ತು ಪಾಕ್ ಪ್ರಧಾನಿ ಮಹಮದ್ ಅಲಿಯವರಿಗೆ ಇತ್ತೀಚೆಗೆ ಆದ ಕಾಶ್ಮೀರ ಒಪ್ಪಂದದ ಮೇಲೆ ಪಾಕೀಸ್ತಾನ ಪತ್ರಿಕೆಗಳು ಟೀಕಿಸುತ್ತಾ ಜನರಲ್ ನಿಮಿಟ್ಸ್‌ರವರೇ ಪ್ರಜಾಭಿಪ್ರಾಯ ಅಧಿಕಾರಿಗಳಾಗಿ ಇರಬೇಕೆಂದು ದೊಡ್ಡ ಚಳುವಳಿಯನ್ನೇ ಎಬ್ಬಿಸಿತ್ತು. ಪ್ರಧಾನಿ ನೆಹರೂರವರು ಇವರ ನೇಮಕದ ವಿಷಯದಲ್ಲಿ ಅದು ಚರಿತ್ರಾರ್ಹಸ್ಮಾರಕವೆಂದು ಹೇಳಿದ್ದುದೇ ಇದಕ್ಕೆ ಕಾರಣವಾಯಿತು ಈಗ ತಾನಾಗಿಯೇ ರಾಜೀನಾಮೆ ಬಂದಿದೆ.

ಅಡ್ಮಿರಲ್ ನಿಮಿಟ್ಸ್‌ರವರ ರಾಜೀನಾಮೆಯನ್ನು ಅಂಗೀಕರಿಸದೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳುವಂತೆ ಒತ್ತಾಯ ಪಡಿಸಬೇಕೆಂದು ಪಾಕೀಸ್ತಾನ ಸರ್ಕಾರವು ಅಮೆರಿಕಾ ವಿದೇಶಾಂಗ ಕಛೇರಿಗೆ ಮನವಿ ಮಾಡಿರುವುದಾಗಿ ತಿಳಿಯಬರುತ್ತದೆ.

ಪಾಕ್ ಪ್ರಧಾನಿಗೆ ನೆಹರೂ ಉತ್ತರ

ಪಾಕೀಸ್ತಾನ ಪ್ರಧಾನಿ ಮಹಮದಾಲಿಯವರು ಪ್ರಧಾನಿ ನೆಹರೂರವರಿಗೆ ಇತ್ತೀಚೆಗೆ ಬರೆದ ಪತ್ರಕ್ಕೆ ನಿನ್ನೆಯ ದಿವಸ ಉತ್ತರವನ್ನು ಕಳುಹಿಸಲಾಯಿತೆಂದು ತಿಳಿಯಬರುತ್ತದೆ.

ಕಾಶ್ಮೀರಪ್ರಜಾಭಿಪ್ರಾಯ ಸಂಗ್ರಹಣೆಯ ಪೂರ್ವಭಾವಿ ನಡೆಯಬೇಕಾದ ಕೆಲವು ವಿಷಯಗಳ ಬಗ್ಗೆ ಪಾಕ್‌ಮಂತ್ರಿಮಂಡಲ ಅಭಿಪ್ರಾಯವನ್ನು ಪ್ರಧಾನಿ ನೆಹರೂರವರಿಗೆ ಮಹಮದಾಲಿಯವರು ತಿಳಿಸಿದ್ದರೆಂದು ಗೊತ್ತಾಗಿದೆ. ಇದಕ್ಕೆ ಈಗ ಭಾರತದ ಉತ್ತರವನ್ನು ಕಳುಹಿಸಲಾಗಿದೆ.

ಅಸ್ಪೃಶ್ಯತಾ ನಿವಾರಣಾ ಕಾನೂನು

ದೇಶದಲ್ಲಿರುವ ಅಸ್ಪೃಶ್ಯತಾ ನಿವಾರಣೆಯನ್ನು ಕಾರ್ಯರೂಪಕ್ಕೆ ತರದಿರುವವರಿಗೆ ಶಿಕ್ಷೆಯನ್ನು ವಿಧಿಸುವ ವಿಷಯದಲ್ಲಿ ಕೇಂದ್ರ ಸರ್ಕಾರವು ಒಂದು ಕರಡು ಕಾನೂನನ್ನು ತಯಾರಿಸಿ ಪ್ರಾಂತ್ಯ ಸರ್ಕಾರಗಳ ಅಭಿಪ್ರಾಯಕ್ಕಾಗಿ ಕಳುಹಿಸಿದೆ. ಈ ತಿಂಗಳೊಳಗಾಗಿ ಉತ್ತರವನ್ನು ಪ್ರಾಂತ್ಯಗಳು ಕಳುಹಿಸಬೇಕಾಗಿದೆ.

ಹಿಟ್ಟಿನ ಗಿರಣಿ ಮಾಲೀಕರ ಸಭೆ

ಮೈಸೂರು ೫

ಮೈಸೂರು ನಗರದ ಹಿಟ್ಟಿನ ಗಿರಣಿ ಮಾಲೀಕರ ಸಂಘದ ವಿಶೇಷ ಸಭೆಯು ಕಳೆದ ೩೦ ನೇ ತಾ|| ಶ್ರೀ ಜಿ. ಜನಾರ್ಧನ ನಾಯಡುರವರ ಅಧ್ಯಕ್ಷತೆಯಲ್ಲಿ ನಡೆದು ಹಲ್ಲರುಗಳ ರಹದಾರಿ, ವಾರದ ರಜ, ಪುರಸಭೆಯ ತಿದ್ದುಪಡಿ ಬೈಲಾ, ವಿದ್ಯುತ್ ಇಲಾಖೆಯ ಕನಿಷ್ಠದರ ಕಡಮೆ ಮಾಡುವುದು ಇವೇ ಮುಂತಾದ ವಿಷಯಗಳನ್ನು ಪರಿಶೀಲಿಸಲಾಯಿತು.

ಗಣೇಶೋತ್ಸವ

ರಾಜಧಾನಿಯ ರಮಾವಿಲಾಸ ಅಗ್ರಹಾರದಲ್ಲಿರುವ ಯುವಕ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ಇದೇ ೧೨ ನೇ ತಾರೀಖು ಶನಿವಾರ ದಿನ ಗಣೇಶೋತ್ಸವವನ್ನು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲು ನಿರ್ಧರಿಸುವುದರಿಂದ ಸಾರ್ವಜನಿಕರು ಎಂದಿನಂತೆ ಸಹಾಯ ಮಾಡಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ.

ನಿರುದ್ಯೋಗ ದಿನ

ರಾಜಧಾನಿಯ ಭಾರತೀಯ ಜನಸಂಘದ ಆಶ್ರಯದಲ್ಲಿ ಕೇಂದ್ರ ಸಮಿತಿಯ ಆದೇಶದಂತೆ ನಿರುದ್ಯೋಗ ದಿನವನ್ನು ೬ನೇ ತಾರೀಖು ಭಾನುವಾರ ಆಚರಿಸಲಾಗುವುದು.

ಮೈಸೂರಿಗೆ ಸೋಲು

ಸಂತೋಷ ಟ್ರೋಫಿ ಫುಟ್ ಬಾಲ್ ಪಂದ್ಯದಲ್ಲಿ ನಿನ್ನೆಯ ದಿನ ಕಲ್ಕತ್ತಾವು ಮೈಸೂರಿನ ಮೇಲೆ ೩-೧ ಗೋಲುಗಳಿಂದ ವಿಜಯಗಳಿಸಿತು. ಪಶ್ಚಿಮ ಬಂಗಾಳ ಗೌರ್ನರರು ಪಾರಿತೋಷಕವನ್ನು ವಿನಿಯೋಗಿಸಿದರು.

-ಮೈಸೂರು ಪೇಟೆಧಾರಣೆ-

ತಾರೀಖು ೪—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—	೩೬—೬
ಎಳ್ಳು	೬೮—೨	೯೦—
ಹುರುಳಿ	೪೬—೧೨	೪೭—
ಹೆಸರು	೫೮—	—
ಹರಳು	—	—
ಅಲಸಂದೆ	೬೫—	೭೬—೨
ಹೊಂಗೆಬೀಜ	—	—
ಅವರೆ	—	—
ಉದ್ದು	೭೧—೧೪	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	—	—
ಸೀಗೆಕಾಯಿ	—	—
ಬೆಲ್ಲ	—	—
ತೆಂಗಿನಕಾಯಿ	೩೦೭	೩೭೧

ಬ್ಲಿಟ್ಸ್ ಪತ್ರಿಕೆಗೆ ಕೊಟ್ಟಿದ್ದು ೩೭೨೫ ರೂ. ಮಾತ್ರ

ಬೆಂಗಳೂರು ೫

ಆಗಸ್ಟು ೧೫ನೇ ತಾ|| ಬೊಂಬಾಯಿನ ಬ್ಲಿಟ್ಸ್ ಪತ್ರಿಕೆಯು ಪ್ರಕಟಿಸಿದ, ಮೈಸೂರು ವಿಶೇಷಸಂಚಿಕೆಗೆ ಸರ್ಕಾರವು ವಿಶೇಷ ಹಣ ಕೊಟ್ಟಿರುವುದಾಗಿ ಪ್ರಕಟವಾಗಿರುವ ವರದಿಗಳು ನಿಜವಲ್ಲ. ಕೇವಲ ೩೭೨೫ ರೂಪಾಯಿಗಳೆಂದು ಸರಕಾರವು ಒಂದು ಪ್ರಕಟಣೆಯನ್ನು ಹೊರಡಿಸಿದೆ.

ಬ್ಲಿಟ್ಸ್ ಪತ್ರಿಕೆಯು ಪ್ರಕಟಿಸಿರುವ ವಿಶೇಷ ಸಂಚಿಕೆಯ ವೆಚ್ಚವನ್ನೆಲ್ಲಾ ಸರಕಾರವು ಕೊಟ್ಟಿಲ್ಲ ಅದರಲ್ಲಿ ಉಪಯೋಗಿಸಿರುವ ಬ್ಲಾಕುಗಳು ಮತ್ತು ಇತರ ವಿಷಯಗಳು ಉಚಿತವಾಗಿ ಪ್ರಕಟವಾಗಿವೆ. ಸರಕಾರವು ಕೊಟ್ಟಿರುವ ಜಾಹಿರಾತು ಸುಮಾರು ೩ ಪುಟಗಳಷ್ಟಿವೆ. ಕಾಲಂ ಅಂಗುಲಕ್ಕೆ ಇರುವ ಸಾಮಾನ್ಯದರ ರೂ. ೧೨-೮-೦ ಲೆಕ್ಕದಂತೆ ೩೭೨೫ ರೂಪಾಯಿಗಳನ್ನು ಕೊಡಲಾಗಿದೆ.

ಮೈಸೂರಿಗೆ ಸಂಬಂಧಿಸಿದ ಇತರ ಲೇಖನಗಳಿಂದ ಲಾಭಯುತವಾಗಿದೆಯೇ ವಿನಹ ನಷ್ಟವಾಗಿಲ್ಲ. ಮುಂಗಡವಾಗಿ ಆ ಪತ್ರಿಕೆಗೆ ಯಾವ ಹಣವನ್ನೂ ಕೊಡಲಿಲ್ಲ. ಈ ಬಗ್ಗೆ ಆಪಾದನೆಗಳು ನಿರಾಧಾರವಾದುವು ಎಂದೂ ಆ ಪ್ರಕಟನೆ ತಿಳಿಸುತ್ತದೆ.

ಯುದ್ಧಖೈದಿಗಳ ಬಿಡುಗಡೆ

ವಿಶ್ವ ಸಂಸ್ಥೆ ಸೈನ್ಯದವರು ಕೊರಿಯಾದಲ್ಲಿ ಇಲ್ಲಿಯವರೆಗೆ ೧೨೦೦೦ ಉತ್ತರಕೊರಿಯಾದ ಯುದ್ಧಖೈದಿಗಳನ್ನು ಬಿಡುಗಡೆ ಮಾಡಿರುವುದಾಗಿ ತಿಳಿಯಬರುತ್ತದೆ.

ನಿನ್ನೆಯದಿನ ಉತ್ತರಕೊರಿಯಾಸೈನ್ಯವು ಮೇಜರ್ ಜನರಲ್ ಒಬ್ಬರನ್ನು ಬಿಡುಗಡೆ ಮಾಡಲಾಯಿತು. ಇವರನ್ನು ೧೯೫೦ರಲ್ಲಿದಸ್ತಗಿರಿ ಮಾಡಲಾಗಿತ್ತು.

ಆಂಧ್ರದಲ್ಲಿ ಭದ್ರಸರ್ಕಾರ ರಚನೆಯಾಗಲಿದೆ

ಆಂಧ್ರಪ್ರಾಂತ್ಯ ಶಾಸನಸಭೆಯಲ್ಲಿರುವ ಕಮ್ಯೂನಿಸ್ಟ್, ಸ್ವತಂತ್ರರು, ಪ್ರಜಾಸೋಷಲಿಸ್ಟ್ ಮುಂತಾದ ಎಲ್ಲಾಪಕ್ಷಗಳ ಅಭಿಪ್ರಾಯವನ್ನು ಪಡೆದು ಎಲ್ಲರೂ ಒಪ್ಪುವಂತಹ ಭದ್ರಸರ್ಕಾರವನ್ನು ರಚಿಸಲಾಗುವುದೆಂದು ಪ್ರಜಾಸೋಷಲಿಸ್ಟ್ ನಾಯಕ ಶ್ರೀ ಟ. ಪ್ರಕಾಶಂರವರು ಹೇಳಿದ್ದಾರೆ.

ರಾಷ್ಟ್ರಾಧ್ಯಕ್ಷರಿಗೆ ತೇಣಸಿಂಗ್ ಗೌರವ ಸೂಚಕ

ಗೌರಿಶಂಕರದ ಬಳಿ ತಂದ ಒಂದು ಕಲ್ಲನ್ನು ತೇಣಸಿಂಗ್‌ರವರು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರವರಿಗೆ ತಮ್ಮ ಗೌರವ ಸೂಚಕವಾಗಿ ಕಳುಹಿಸಿದ್ದಾರೆ.

ರಾಷ್ಟ್ರಪತಿ ಭವನದಲ್ಲಿ ಇದನ್ನು ಅಪೂರ್ವವಸ್ತು ಸಂಗ್ರಹಣೆಯಲ್ಲಿ ಇಡಲಾಗುವುದು.

ವ್ಯಾಪಾರ ಒಪ್ಪಂದ

ರಷ್ಯಾ ಮತ್ತು ಪರ್ಷಿಯಾ ನಡುವೆ ವ್ಯಾಪಾರ ಒಪ್ಪಂದವೊಂದು ಆಗಿರುವುದಾಗಿ ತಿಳಿಯಬರುತ್ತದೆ

ಆರಂಭ ಭಾಷಣ

ಮೈಸೂರು ೫

ನಗರದ ನ್ಯಾಷನಲ್ ಇಂಜನೀಯರಿಂಗ್ ಶಾಲೆಯ ಸಂಘದ ಆರಂಭ ಭಾಷಣವನ್ನು ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ನಾಳೆ ರಾತ್ರಿ ೮ ಗಂಟೆಗೆ ಶಾಲೆಯ ಆವರಣದಲ್ಲಿ ಮಾಡುವರು

ಮೇಲ್ಕಂಡ ಶಾಲೆಯ ಕರ್ನಾಟಕ ಸಂಘದ ಆರಂಭ ಭಾಷಣವನ್ನು ಇದೇ ೭ ನೇ ತಾರೀಖು ಸಂಜೆ ೫ ಗಂಟೆಗೆ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳು ನೆರವೇರಿಸುವರು. ಶ್ರೀ ಪಿ. ಹೆಚ್. ಕೃಷ್ಣರಾಯರು ಅಧ್ಯಕ್ಷತೆ ವಹಿಸುವರು.

ಎಂ.ಪಿ.ಸಿ.ಸಿ. ಅಧಿವೇಶನ

ಬೆಂಗಳೂರು ೫

ಎಂ.ಪಿ.ಸಿ.ಸಿ. ಅಧಿವೇಶನವು ಇದೇ ಮಾಹೆ ೨೫,೨೬ ಮತ್ತು ೨೭ರಲ್ಲಿ ಕೆ.ಜಿ.ಎಫ್‌ನಲ್ಲಿ ಸೇರುವುದಾಗಿ ತಿಳಿಯಬರುತ್ತದೆ.

ನೆಹರೂರವರಿಂದ ಆಂಧ್ರಪ್ರಾಂತ್ಯ ಪ್ರಾರಂಭ

ಹೊಸ ಆಂಧ್ರಪ್ರಾಂತ್ಯವು ರಚನೆಯಾಗಲಿರುವ ಅಕ್ಟೋಬರ್ ಒಂದನೇ ತಾರೀಖಿನ ದಿನನಡೆಯಲಿರುವ ಸಮಾರಂಭದಲ್ಲಿ ಪ್ರಧಾನಿ ನೆಹರೂರವರು ಭಾಗವಹಿಸುವರೆಂದು ತಿಳಿಯಬರುತ್ತದೆ.

ಹೊಸದಾಗಿ ಬಂದಿದೆ

ಹರ್ಕ್ಯುಲಿಸ್ ಸೈಕಲ್‌ಗಳು, ಮಕ್ಕಳ ಟ್ರೈಸಿಕಲ್‌ಗಳು ಮತ್ತು ಗಾಡಿಗಳು.

ಶಾರದ ಸೈಕಲ್ ಮತ್ತು ವಾಚ್ ಸ್ಟೋರ್ಸ್, ದೊಡ್ಡಗಡಿಯಾರ ಚೌಕ, ಮೈಸೂರು.

ಅಪೇರ

2-9-53 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಡೆಮನ್-ಲ್ಯಾಂಡ್

(ಬೇತಾಳಪುರ) ಶ್ರೀ [ತಮಿಳು

ಪಾತ್ರ:— ಟಿ.ಆರ್. ಮಹಾಲಿಂಗಂ ಎಮಮುಂಗಳಂ, ಸಾರಂಗಪಾಣಿ.

ರಣಜಿತ್

4-9-53 ರಿಂದ 3 ನೇ ವಾರ

ವಸ್ತ್ರ ಫಿಲಂಸ್‌ರವರ

ಔರತ್ ಹಿಂದಿ

ಪಾತ್ರ--ಬಿನಾರಾಯ್, ಪ್ರೇಮನಾಥ್.

ಪ್ರಕಾಶಕರು ಮತ್ತು ಮುದ್ರಕರು.

ಜಿ. ಎಲ್. ಸ್ವಾಮಿ.

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ

ಸಂಪುಟ ೪

ಸಂಚಿಕೆ ೧೪

೭-೯-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ವಿಶ್ವೇಶ್ವರಯ್ಯನಾಲೆ ರೈತರಿಂದ ೭೫ಲಕ್ಷ ರೂ. ತೆರಿಗೆ ಬಾಕಿ

ವಸೂಲುಮಾಡಲು ತ್ವರಿತ ಕ್ರಮ

ಮೈಸೂರು ೭

ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಕೃಷ್ಣರಾಜಸಾಗರದ ಕಾರ್ಯಕಾರಿ ಸಮಿತಿಯ ಸಭೆಯು ನಿನ್ನೆ ಮಧ್ಯಾಹ್ನ ನಡೆದು, ವಿಶ್ವೇಶ್ವರಯ್ಯ ನಾಲೆಯ ಭಾಗದಲ್ಲಿರುವ ೮೫ ಸಾವಿರ ಎಕರೆ ಜಮೀನುಗಳ ಪೈಕಿ, ೯ ಸಾವಿರ ಎಕರೆಯಲ್ಲಿ ಕಬ್ಬನ್ನು ಬೆಳೆಯಲು ಅವಕಾಶ ಕೊಡಬೇಕೆಂದು ತೀರ್ಮಾನಿಸಲಾಯಿತು.

ಮೇಲ್ಕಂಡ ಪ್ರದೇಶದ ರೈತರುಗಳಿಂದ ಸುಮಾರು ೭೫ ಲಕ್ಷ ರೂ. ನೀರು ಕಂದಾಯ. ಬಾಕಿ ಬಿದ್ದಿರುವುದನ್ನು ಕೂಡಲೇ ವಸೂಲುಮಾಡುವುದು, ಮಲೇರಿಯಾ ನಿವಾರಣಾ ಕಾರ್ಯಕ್ರಮವನ್ನು ಇನ್ನೂ ವಿಶೇಷವಾಗಿ ಕೈಗೊಳ್ಳುವುದು ಇವೇ ಮುಂತಾದ ವಿಷಯಗಳು ಚರ್ಚಿಸಲ್ಪಟ್ಟವೆಂದು ತಿಳಿದು ಬಂದಿದೆ.

ವಾಣಿಜ್ಯ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನ

ವಿದ್ಯಾಸಚಿವರ ಮನವಿ

ಮೈಸೂರು ೭

ನಗರದ ಡಿ. ಬನುಮಯ್ಯ ಕಾಲೇಜಿನಲ್ಲಿ ಹೊಸದಾಗಿ ತೆರೆದಿರುವ ಕಾಮರ್ಸ್ ಡಿಗ್ರಿ ತರಗತಿಯ ಪ್ರಾರಂಭೋತ್ಸವವನ್ನು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ನಿನ್ನೆ ನೆರವೇರಿಸಿದರು.

ಬನುಮಯ್ಯ ವಿದ್ಯಾಸಂಸ್ಥೆಗಳ ಟ್ರಸ್ಟಿಗಳ ಪರವಾಗಿ ಡಾ|| ಕುಪ್ಪುಸ್ವಾಮಿಯವರು ಸ್ವಾಗತ ಭಾಷಣ ಮಾಡಿ ಮೈಸೂರು ವಿಶ್ವವಿದ್ಯಾನಿಲಯದವರು ಈ ತರಗತಿಯನ್ನು ತೆರೆಯಲು ಅವಕಾಶ ಕೊಟ್ಟಿದ್ದಕ್ಕೆ ವಂದನೆಯನ್ನು ಅರ್ಪಿಸಿದರು.

ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಡಿ. ವಿ. ಬನುಮಯ್ಯನವರು ವರದಿಯನ್ನು ಓದಿ, ಹಿಂದೆ ಶ್ರೀ ಬನುಮಯ್ಯನವರಿಂದ ಕೇವಲ ಒಂದು ಪುಟ್ಟ ಶಾಲೆಯಾಗಿ ತೆರೆಯಲ್ಪಟ್ಟ ಈ ಸಂಸ್ಥೆಯು ಈಗ ಕಾಲೇಜಾಗಿ ಅನೇಕ ಸಾವಿರಾರುಮಂದಿಗೆ ವಿದ್ಯಾರ್ಜನೆಗೆ ಅವಕಾಶವಾಗಿರುವ ವಿಚಾರವನ್ನು ತಿಳಿಸಿದರು.

ಬೆಂಗಳೂರು ಕಾರ್ಪೊರೇಷನ್ ಮೇಯರಾದ ಶ್ರೀ ಹನುಮಂತಯ್ಯನವರು ಮಾತನಾಡಿ, ದಿವಂಗತ ಶ್ರೀ ಬನುಮಯ್ಯನವರು ವಿದ್ಯಾಭ್ಯಾಸಕ್ಕಾಗಿ ಮಾಡಿರುವ ಸಹಾಯವನ್ನು ಪ್ರಶಂಸಿಸಿದರು.

ಸಚಿವ ಶ್ರೀ ರಾಮಚಂದ್ರರಾಯರು ತರಗತಿಯ ಪ್ರಾರಂಭೋತ್ಸವವನ್ನು ನೆರವೇರಿಸಿ ಶ್ರೀ ಬನುಮಯ್ಯ ಮತ್ತು ಅವರ ಸಂಸಾರದವರು ಈ ವಿದ್ಯಾಸಂಸ್ಥೆಯ ಪ್ರಗತಿಗಾಗಿ ಶ್ರಮಿಸುತ್ತಿರುವುದನ್ನು ಪ್ರಶಂಸಿಸಿದರು. ಕಾಮರ್ಸ್ ವಿದ್ಯಾಭ್ಯಾಸದ ಅವಶ್ಯಕತೆಯು ಈಗ ವಿಶೇಷವಾಗಿದೆಯೆಂದೂ, ಇದನ್ನು ವಿದ್ಯಾರ್ಥಿಗಳು ಅರಿತು, ತಮ್ಮ ವಿದ್ಯಾರ್ಜನೆಯನ್ನು ಹೆಚ್ಚು ಆಸಕ್ತಿಯಿಂದ ಮುಂದುವರಿಸಿಕೊಂಡು ಹೋಗಬೇಕೆಂದು ತಿಳಿಸಿದರು ಈಗ ದೇಶದಲ್ಲಿ ವಿದ್ಯಾವಂತರ ನಿರುದ್ಯೋಗ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಿದೆ. ಅದಕ್ಕೆ ಈಗಿನ ವಿದ್ಯಾಭ್ಯಾಸದ ಪದ್ಧತಿಯೇ ಕಾರಣ. ಆದ್ದರಿಂದ ಅದನ್ನು ಬದಲಾಯಿಸಿ ಈಗಿನ ವಾತಾವರಣಕ್ಕೆ ಅನುಗುಣವಾದ ವಿದ್ಯಾಭ್ಯಾಸ ಕೊಡಬೇಕಾದುದು ಅತ್ಯಾವಶ್ಯಕ. ಪರದೇಶದವರು ತಮ್ಮ ಕೈಗಾರಿಕೆ ಮತ್ತು ಇತರ ವ್ಯಾಪಾರದಲ್ಲಿ ತಮ್ಮ ಜನರಿಗೆ ಬೇಕಾಗುವಷ್ಟನ್ನು ಮೊದಲು ತಯಾರಿಸಿ, ಅನಂತರ ಹೊರಕ್ಕೆ ಕಳುಹಿಸುವುದರಲ್ಲಿ ತೊಡಗಿದ್ದಾರೆ. ಅದನ್ನು ನಮ್ಮ ದೇಶದವರೂ ಕಲಿಯಬೇಕು. ಈ ಮಾರ್ಗವನ್ನು ಅನುಸರಿಸಿದರೆ ಮಾತ್ರ ದೇಶವು ಪ್ರಗತಿಯಾಗುವುದು-ಎಂದು ಸಚಿವರು ತಿಳಿಸಿದರು.

ಮುಖ್ಯ ಮಂತ್ರಿಗಳಿಂದ ಹೆರಿಗೆ ಆಸ್ಪತ್ರೆ ಆರಂಭ

ಮೈಸೂರು ೭

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಬೆಳಗ್ಗೆ ನಜರಬಾದಿನಲ್ಲಿ ನೂತನವಾಗಿ ಕಟ್ಟಲಾಗಿರುವ ಶ್ರೀಮತಿ ನಾಗಮ್ಮ ಪೆರುಮಾಳ್ ಚೆಟ್ಟಿಯವರ ಹೆರಿಗೆ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಶ್ರೀಮತಿ ರಾಜಮ್ಮ ಕಲ್ಲೋಳಿಮಠದವರಿಂದ ಪ್ರಾರ್ಥನೆ ಮತ್ತು ಶ್ರೀಮತಿ ಎಂ. ಕೆ. ಸರೋಜಾ ಮತ್ತು ಇಂದಿರಾರವರಿಂದ ಸಂಗೀತವಾದನಂತರ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಸ್ವಾಗತ ಭಾಷಣ ಮಾಡಿ, ಆಸ್ಪತ್ರೆಗಾಗಿ ದಿವಗಂತ ಪೆರುಮಾಳ್ ಚೆಟ್ಟರು ೩೦ ಸಾವಿರ ರೂಪಾಯಿಗಳನ್ನು ಮತ್ತು ಸರ್ಕಾರದವರು ೩೭ ಸಾವಿರ ರೂಪಾಯಿಗಳನ್ನು ಸಹಾಯ ಮಾಡಿದುದಕ್ಕೆ ವಂದಿಸಿದರು.

ದಾನಿಗಳ ಪರವಾಗಿ ಶ್ರೀ ಜಾನಕಿರಾಂ ಚೆಟ್ಟರು ರಜತ ಕರಂಡದಲ್ಲಿ ಬಿನ್ನವತ್ತಳೆಯನ್ನು ಮುಖ್ಯಮಂತ್ರಿಗಳಿಗೆ ಅರ್ಪಿಸಿದರು.

ಆಸ್ಪತ್ರೆ ಶಾಲೆಗಳು ಮುಂತಾದ ಕಾರ್ಯಗಳಿಗೆ ದಿವಂಗತ ಶ್ರೀ ಪೆರುಮಾಳ್‌ಚೆಟ್ಟರ ಉದಾರ ಸಹಾಯಕ್ಕಾಗಿ ಮುಖ್ಯ ಮಂತ್ರಿಗಳು ಅಭಿನಂದಿಸಿದರು. ಮೈಸೂರು ಸಂಸ್ಥಾನದಲ್ಲಿ ಬಹಳ ಕಾಲದಿಂದಲೂ ಧರ್ಮಕಾರ್ಯಗಳಿಗೆ ದಾನಿಗಳು ಮುಂದೆ ಬರುತ್ತಿದ್ದಾರೆ. ಇದನ್ನು ಸಾರ್ವಜನಿಕರು ಮುಂದುವರಿಸಿಕೊಂಡು ಬರಬೇಕು. ಮಹಿಳೆಯರು ಧರಿಸುವ ಸುವರ್ಣಾಭರಣಗಳಲ್ಲಿ ರತ್ನಗಳು ಇದ್ದು ಎಷ್ಟು ಶೋಭಿಸುವುವೋ ಅದರಂತೆ ದಾನಿಗಳ ಉದಾರ ಸಹಾಯವೂ ಸೇರಿದರೆ ಅಷ್ಟು ಕಳೆಗಟ್ಟುವುದು. ಇಂತಹ ಧರ್ಮಸಂಸ್ಥೆಯಾದ ಆಸ್ಪತ್ರೆಯಲ್ಲಿ ಕೆಲಸ ಮಾಡುವವರು ಬರುವ ರೋಗಿಗಳ ಸೇವೆಯನ್ನು ಮರೆಯದೆ ಮತ್ತು ಧರ್ಮಕ್ಕೆ ಕೀರ್ತಿ ಬರುವಂತೆ ಕೆಲಸಮಾಡಬೇಕು--ಎಂದು ಅವರು ತಿಳಿಸಿದರು. ಮುಂದೆ ಈ ಮೊಹಲ್ಲಾದಲ್ಲಿರುವ ವಿಲಟಂ ಕಟ್ಟಡಗಳಲ್ಲಿ ಸುಮಾರು ೫೦೦ ಸಂಸಾರಗಳಿಗೆ ವಸತಿ ಗೃಹ ಕಲ್ಪಿಸಲು ಅವಕಾಶವಾಗಬಹುದು - ಅದರಿಂದ ಮುಂದೆ ಈ ಆಸ್ಪತ್ರೆಯು ಹೆಚ್ಚು ಜನರಿಗೆ ಉಪಯೋಗವಾಗುವುದು-ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಮಾನವ ಸಂಪತ್ತನ್ನು ದೇಶದ ಪ್ರಗತಿಗೆ ಉಪಯೋಗಿಸಿ

ರೆವಿನ್ಯೂಸಚಿವರ ಮನವಿ

ಮೈಸೂರು ೭

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದ ಸಂಘದ ಆರಂಭ ಭಾಷಣವನ್ನು ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ನಿನ್ನೆ ಸಂಜೆ ನೆರವೇರಿಸಿದರು. ಶ್ರೀ ಹೆಚ್. ಸಿ. ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ವಾಸುದೇವಮೂರ್ತಿಯವರು ಸ್ವಾಗತಭಾಷಣಮಾಡಿ, ಇಂತಹ ಸಾರ್ವಜನಿಕ ನಿಲಯದ ಸಹಾಯಕ್ಕೆ ಸರ್ಕಾರದವರು ಸ್ವಲ್ಪ ಜಮೀನು ಕೊಡಬೇಕೆಂದು ಪ್ರಾರ್ಥಿಸಿದರು.

ಈಗ ವಿದ್ಯಾರ್ಥಿಗಳಿಗೆ ಉಪದೇಶ ಕೇಳುವುದರಲ್ಲಿ ಆಸಕ್ತಿ ಇಲ್ಲ. ಅವರಲ್ಲಿ ಬಿಸಿ ರಕ್ತ ಇರುವುದರಿಂದ ಅವರಿಗೆ ಯಾವ ಸಲಹೆಯನ್ನು ಕೇಳುವ ಸ್ಥಿತಿಯಲ್ಲಿ ಇಲ್ಲ. ಈಗಿನ ವಿದ್ಯಾಭ್ಯಾಸದಿಂದ ವಿದ್ಯಾವಂತರ ಸಮಸ್ಯೆ ಬಗೆಹರಿಯುವ ಬದಲು ಅವರೇ ಒಂದು ದೊಡ್ಡ ಸಮಸ್ಯೆ ಆಗಿದ್ದಾರೆ.

ನಮ್ಮಲ್ಲಿ ಎಲ್ಲಿಯವರೆಗೆ ಮೈಬಗ್ಗಿ ಕೆಲಸ ಮಾಡುವುದು ಬರುವುದಿಲ್ಲವೋ ಅಲ್ಲಿಯವರೆಗೆ ದೇಶ ಮುಂದುವರಿಯುವುದಿಲ್ಲ. ಕೆರೆ, ಬಾವಿ.ವಸತಿಸೌಕರ್ಯ,ಆಸ್ಪತ್ರೆ. ಶಾಲಾಕಾಲೇಜು ಇವುಗಳ ನಿರ್ಮಾಣಕ್ಕೆ ಮಾನವ ಸಂಪತ್ತನ್ನು ಉಪಯೋಗಿಸಬೇಕು.

ವಿದ್ಯಾರ್ಥಿಗಳು ಇಸಂ ಬಿಟ್ಟು ಕರ್ತವ್ಯನಿಷ್ಠರಾಗಬೇಕು

ರೆವಿನ್ಯೂಸಚಿವರ ಹಿತೋಕ್ತಿ

ಮೈಸೂರು ೭

ನಗರದಲ್ಲಿರುವ ದಕ್ಷಿಣಜಿಲ್ಲೆ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ನಿನ್ನೆ ದಿನ ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ಮಾಡಿ. ಈಗ ವಿದ್ಯಾರ್ಥಿಗಳಲ್ಲಿ ಅಶಿಸ್ತು, ಅಪ್ರಾಮಾಣಿಕತೆ, ಇಸಂಗಳು ಹೆಚ್ಚಾಗುತ್ತಿದೆಯೆಂದೂ, ಇದರಿಂದ ದೇಶದ ಪ್ರಗತಿಗೆ ಧಕ್ಕೆ ಬರುವುದೆಂದೂ ತಿಳಿಸಿದರು.

ಸಂಘದ ಅಧ್ಯಕ್ಷ ಶ್ರೀ ಕೆ. ನಾರಾಯಣರಾಯರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ಶ್ರೀ ಎ ರಾಮಣ್ಣನವರು ಸ್ವಾಗತ ಬಯಸಿ ಸಂಘದ ಕಾರ್ಯಚಟುವಟಿಕೆಗಳನ್ನು ವಿವರಿಸಿದರು.

ವಿದ್ಯೆಯ ಗುರಿ ಮಾನವನನ್ನು ಸುಸಂಸ್ಕೃತನನ್ನಾಗಿ ಮಾಡುವುದಲ್ಲದೆ ಅತನ ಜೀವನವನ್ನು ಸುಲಲಿತವನ್ನಾಗಿ ಮಾಡುವುದು. ಆದರೆ ಈಗಿನ ವಿದ್ಯೆಯಿಂದ ನಾಡಿನಹಿರಿಯ ಸಮಸ್ಯೆಗಳು ಬಗೆಹರಿಯುವ ಬದಲು, ಆ ವಿದ್ಯೆಯನ್ನು ಪಡೆದ ನಿರುದ್ಯೋಗ ವಿದ್ಯಾವಂತರರೇ ಈಗ ದೇಶಕ್ಕೆ ಒಂದು ದೊಡ್ಡ ಸಮಸ್ಯೆ ಆಗಿದ್ದಾರೆ ಇದು ಬಗೆ ಹರಿಯಬೇಕಾದರೆ ಈಗಿನ ವಿದ್ಯಾ ಪದ್ಧತಿಯಲ್ಲಿ ಬದಲಾವಣೆ ಆಗಬೇಕು. ವಿದ್ಯಾ ಸುಧಾರಣೆ ಬಗ್ಗೆ ದೇಶದಲ್ಲಿ ಒಮ್ಮತವಿಲ್ಲದುದರಿಂದ ಅದನ್ನು ಜಾರಿಗೆ ತರಲು ಸಾಧ್ಯವಿಲ್ಲವಾಗಿದೆ. ಈಗ ವಿದ್ಯಾರ್ಥಿಗಳು ಇಸಂಗಳ ಪ್ರಭಾವಕ್ಕೆ ಒಳಗಾಗಿ ಅವನ್ನು ಇನ್ನೊಬ್ಬರ ಮೇಲೆ ಹೊರಿಸಲು ಯತ್ನಿಸುತ್ತಿದ್ದಾರೆ ಇದರಿಂದ ದೇಶದ ವಾಸ್ತವಿಕ ಸಮಸ್ಯೆ ಬಗೆ ಹರಿಯುವುದಿಲ್ಲ. ವಿದ್ಯಾರ್ಥಿಗಳು ರಾಜಕೀಯ ಗೊಂದಲಕ್ಕೆ ಸಿಕ್ಕದೆ ಶಿಸ್ತಿನ ಪರಿಪಾಲಕರೂ, ಕರ್ತವ್ಯ ನಿಷ್ಠಾವಂತರೂ, ಪ್ರಮಾಣಿಕರೂ, ಆಗಿದ್ದು ಹಿತವಾದಿಗಳಾಗಿರಬೇಕು.. ಎಂದು ಸಚಿವರು ತಿಳಿಸಿದರು.

ಕಾರ್ಯದರ್ಶಿ ಶ್ರೀ ಎ. ರಾಮಚಂದ್ರರಾಯರು ವಂದನೆಯನ್ನು ಅರ್ಪಿಸಿದರು.

○ ಮೈಸೂರು ಮಂತ್ರಿಮಂಡಲದ ಸಭೆಯು ಇಂದಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಇಲವಾಲ ಬಂಗಲೆಯಲ್ಲಿ ಪ್ರಾರಂಭವಾಯಿತು. ಸಭೆಯು ನಾಳೆಯೂ ನಡೆಯಲಿದೆ.

ನಮ್ಮಲ್ಲಿ ಕೆಲವರಿಗೆ ಪ್ರಜಾಪ್ರಭುತ್ವ ಬೇಕಿಲ್ಲ ಅವರಿಗೆ ಸರ್ವಾಧಿಕಾರತ್ವ ಬೇಕು. ಆದರೆ ಅದು ಬಂದರೆ ದೇಶಕ್ಕೆ ಹಾನಿ. ವಿದ್ಯಾರ್ಥಿಗಳು ವೈಯುಕ್ತಿಕ ದ್ವೇಷ, ಅಸೂಯೆಗಳನ್ನು ತೊರೆದು, ಶಿಸ್ತಿನಿಂದ ವರ್ತಿಸಬೇಕು. ಜಾತಿ ಮತಗಳ ಕಲಹದಲ್ಲಿ ವಿದ್ಯಾರ್ಥಿಗಳು ಸೇರಬಾರದು-ಎಂದು ಸಚಿವರು ತಿಳಿಸಿದರು

ಮೈಸೂರು ಕಾಂಗ್ರೆಸ್ ಬಿಕ್ಕಟ್ಟು ಪರಿಹಾರ

ಕಾಂಗ್ರೆಸ್ಸಿನವರಲ್ಲಿಯೇ ಅಪಪ್ರಚಾರ ಕೂಡದು

ಶಾಸನಾ ಸಭಾ ಕಾಂಗ್ರೆಸ್ ಪಕ್ಷದಲ್ಲಿ ತೀರ್ಮಾನ

ಬೆಂಗಳೂರು ೭

ಮೈಸೂರು ಮಂತ್ರಿಮಂಡಲದ ವಿಷಯದಲ್ಲಿ ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆಯಿಂದ ಉಂಟಾಗಿದ್ದ ಬಿಕ್ಕಟ್ಟು ಎಲ್ಲವೂ ಸೌಹಾರ್ದ್ಯಯುತವಾಗಿ ಮೊನ್ನೆಯದಿನ ಪರಿಹಾರವಾಯಿತು.

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ೪ ಮತ್ತು ೫ ನೇ ತಾರೀಖುಗಳಲ್ಲಿ ಸಭೆ ಸೇರಿ, ಕಳೆದವಾರ ಎಂ.ಪಿ.ಸಿ.ಸಿ. ಅಧ್ಯಕ್ಷರು ಪತ್ರಿಕಾ ಸಮ್ಮೇಳನದಲ್ಲಿ ಮುಖ್ಯಮಂತ್ರಿಯವರ ಆಡಳಿತ ವಿಷಯದಲ್ಲಿ ಮಾಡಿದ್ದ ಆಪಾದನೆಗಳ ಬಗ್ಗೆ ಚರ್ಚೆ ಪ್ರಾರಂಭವಾಗಿ, ಶ್ರೀ ಕೆ. ಹನುಮಂತಯ್ಯನವರು ಕೂಡಲೇ ತಮ್ಮ ಮೇಲಿನ ವಿಶ್ವಾಸದ ಮತವನ್ನು ಪಡೆಯಬೇಕೆಂದು ತಿಳಿಸಲಾಯಿತು. ಈ ವಿಷಯದಲ್ಲಿ ವಿಪುಲ ಚರ್ಚೆ ನಡೆಯಿತು ಕೆಲವರು ಮತಪಡೆಯಬೇಕೆಂದೂ ಮತ್ತೆ ಕೆಲವರು ಆತುರಾತುರದಿಂದ ಮತ ಪಡೆಯುವುದು ಸೂಕ್ತವಲ್ಲವೆಂದೂ ತಿಳಿಸಿದರು.

ಈ ನಡುವೆ ಸದಸ್ಯರು ತಮ್ಮ ತಮ್ಮಲ್ಲಿಯೇ ಚರ್ಚೆಗಳನ್ನು ನಡೆಸಿದರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ವೀರಣ್ಣಗೌಡರು ಈ ವಿಷಯದಲ್ಲಿ ಮಾತನಾಡುತ್ತಾ ಶ್ರೀ ಹನುಮಂತಯ್ಯನವರ ಮಂತ್ರಿಮಂಡಲದ ಮೇಲೆ ಅವಿಶ್ವಾಸವನ್ನು ತರುವ ಅಭಿಪ್ರಾಯವು ತಮ್ಮದಲ್ಲವೆಂದು ವಿವರಣೆಯನ್ನಿತ್ತರು. ಈಗಲೇ ಮತಪಡೆದು ಅನಾವಶ್ಯಕವಾದ ಕಹಿ ಪ್ರಸಂಗವುಂಟುಮಾಡಿದರೆ ತಾವು ಉಪವಾಸ ಮಾಡುವುದಾಗಿ ಶ್ರೀ ಎಂ. ವಿ. ರಾಮರಾಯರು ತಿಳಿಸಿದರು.

ಕಾಂಗ್ರೆಸ್ ಪಕ್ಷದ ಹಿತದೃಷ್ಟಿಯಿಂದ ಕಾಂಗ್ರೆಸ್ಸಿನವರಲ್ಲಿ ಸೌಹಾರ್ದ್ಯವು ಅತ್ಯಗತ್ಯವೆಂದು ಒಬ್ಬರನ್ನು ಒಬ್ಬರು ಪತ್ರಿಕೆಗಳ ಮೂಲಕ ಅಥವ ಬಹಿರಂಗವಾಗಿ ದೂಷಿಸಕೂಡದೆಂದೂ ಲೋಪದೋಷಗಳು ಏನು ಇದ್ದರೂ ಪಕ್ಷದಲ್ಲಿಯೇ ಚರ್ಚಿಸಿ ಒಮ್ಮತಕ್ಕೆ ಬರಬೇಕೆಂದೂ ಅಭಿಪ್ರಾಯವು ಕೊನೆಗೆ ಹೊರಬಿತ್ತು ಆದ್ದರಿಂದ ನಿರ್ಣಯವನ್ನು ಮಾಡಿ ವಿಶ್ವಾಸ ಪಡೆಯುವ ಪ್ರಸಂಗವನ್ನು ಅಲ್ಲಿಯೇ ಮುಕ್ತಾಯವಾಗಿ ಮಧುರ ವಾತಾವರಣದಿಂದ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಖಾನ್ ಸಾಹೇಬರ ಮೇಲಿನ ಪ್ರತಿಬಂಧಕ ರದ್ದು

ಗಡಿನಾಡಿನ ಮಾಜಿ ಮುಖ್ಯಮಂತ್ರಿ ಡಾ|| ಖಾನ್ ಸಾಹೇಬರ ಚಲನ ವಲನಗಳ ಬಗ್ಗೆ ಪಾಕೀಸ್ಥಾನ ಸರ್ಕಾರದವರು ಇತ್ತೀಚೆಗೆ ಹಾಕಿದ್ದ ಪ್ರತಿಬಂಧಕಾಜ್ಞೆಗಳನ್ನು ರದ್ದುಮಾಡಿ, ಅವರು ಹಜಾರಾ ಜಿಲ್ಲೆಯಲ್ಲಿ ಎಲ್ಲಿಬೇಕಾದರೂ ಸಂಚರಿಸಬಹುದೆಂದು ತಿಳಿಸಿದ್ದಾರೆ.

ಕಾಂಗ್ರೆಸ್ಸಿಗರಿಗೆ ಎಚ್ಚರಿಕೆ

ಸ್ವಪಕ್ಷದವರನ್ನು ದೂರುವುದು ನಿಲ್ಲಬೇಕು

ಕಾಂಗ್ರೆಸ್ ಕಾರ್ಯಕರ್ತರಲ್ಲಿ ಸಾರ್ವಜನಿಕ ಹಿತಕ್ಕೆ ಸಂಬಂಧಪಟ್ಟ ಪ್ರಮುಖ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಬರುವುದು ಸಹಜ. ಅದನ್ನು ಒಮ್ಮತದಿಂದ ತೀರ್ಮಾನಿಸುವುದು ಕೆಲವುಸಲ ಕಷ್ಟವಾಗುತ್ತದೆ. ಆದರೆ ಸಂಸ್ಥೆಯಲ್ಲಿಯೇ ಒಡಕಿಗೆ ಕಾರಣವಾಗುವಂತೆ ಕಾಂಗ್ರೆಸ್ಸಿಗರು ನಡೆಯಬಾರದು. ಒಬ್ಬ ಕಾಂಗ್ರೆಸ್ಸಿನವರು ಮತ್ತೊಬ್ಬ ಕಾಂಗ್ರೆಸ್ಸಿನವರನ್ನು ಬಹಿರಂಗವಾಗಿ ಟೀಕಿಸುವುದು ಅಸಹನೀಯ ಆದ್ದರಿಂದ ಪ್ರಮುಖ ಕಾಂಗ್ರೆಸ್ಸಿಗರು ಪತ್ರಿಕೆಗಳಲ್ಲಿ ಮತ್ತು ವೇದಿಕೆಗಳಲ್ಲಿ ಕಾಂಗ್ರೆಸ್ ಸರ್ಕಾರ ಮತ್ತು ಇತರ ಕಾಂಗ್ರೆಸ್ಸಿಗರನ್ನೂ ದೂಷಿಸುವುದನ್ನು ನಿಲ್ಲಿಸಬೇಕು ಎಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿಯವರು ಎಲ್ಲಾ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ, ಶಾಸನಸಭಾ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಎಚ್ಚರಿಕೆ ಪತ್ರವನ್ನೊಂದು ಕಳುಹಿಸಿದ್ದಾರೆ.

ಯುದ್ಧ ಖೈದಿಗಳ ವಿನಿಮಯ ಮುಕ್ತಾಯ

ಕೊರಿಯಾದಲ್ಲಿ ಯುದ್ಧ ಖೈದಿಗಳ ಬಿಡುಗಡೆಯ ವಿನಿಮಯ ಕೆಲಸವು ನಿನ್ನೆಯ ದಿನ ಮುಕ್ತಾಯವಾಯಿತು. ಉತ್ತರ ಕೊರಿಯನ್ನರು ಕೊನೆಯ ತಂಡವಾದ ೪೫ ಅಮೆರಿಕ ವಿಮಾನ ಪಡೆಯವರನ್ನು ಬಿಡುಗಡೆ ಮಾಡಿದರು. ಈ ದಳದವರನ್ನು ಯುದ್ಧ ಕಾಲದಲ್ಲಿ ಕ್ರಿಮಿ ಯುದ್ಧದಲ್ಲಿ ತೊಡಗಿದ್ದರೆಂದು ಬಂಧಿಸಲಾಗಿತ್ತು. ಈ ತಂಡದಲ್ಲಿ ೩ ಕರ್ನಲ್, ಒಬ್ಬ ಮೇಜರ್, ಒಬ್ಬ ಕ್ಯಾಪ್ಟನ್ ಮತ್ತು ೨೦ ಲೆಫ್ಟಿನೆಂಟ್‌ಗಳೂ ಇರುತ್ತಾರೆ. ಕ್ರಿಮಿ ಯುದ್ಧವು ನಡೆಯಿತೆಂದು ಈ ತಂಡದವರು ಬರೆದು ಕೊಟ್ಟಿದ್ದರೆಂದು ಹಿಂದೆ ಉತ್ತರ ಕೊರಿಯನ್ನರು ಆಪಾದಿಸಿದ್ದರು.

ಅತ್ಯುಗ್ರವಾದ ಮಾನಸಿಕ ಹಿಂಸೆಯನ್ನು ತವರುಂಟುಮಾಡಿ ಈ ರೀತಿಯಾಗಿ ತಮ್ಮಿಂದ ಬರೆಸಿಕೊಂಡರೆಂದು ಈಗ ಬಿಡುಗಡೆಯಾದವರಲ್ಲಿ ಒಬ್ಬರು ಹೇಳಿದ್ದಾರೆ.

ತಮ್ಮಲ್ಲಿದ್ದ ಖೈದಿಗಳನ್ನೆಲ್ಲಾ ಬಿಡುಗಡೆ ಮಾಡಿರುವುದಾಗಿ ಉತ್ತರ ಕೊರಿಯನ್ನರು ಹೇಳಿದ್ದಾರೆ. ಆದರೆ ಎಲ್ಲರನ್ನೂ ಪೂರ್ಣವಾಗಿ ಬಿಟ್ಟಿಲ್ಲವೆಂದು ಅಮೆರಿಕನ್ನರು ಆಪಾದಿಸಿದ್ದಾರೆ.

ಇಲ್ಲಿಯವರೆಗೆ ಉಭಯ ಪಕ್ಷಗಳಿಂದ ಒಟ್ಟು ೮೯೦೦೦ ಯುದ್ಧ ಖೈದಿಗಳನ್ನು ಸ್ವದೇಶಕ್ಕೆ ಕಳುಹಿಸಲಾಗಿದೆ. ವಿಶ್ವಸಂಸ್ಥೆಯು ೭೬,೦೦೦, ಉತ್ತರಕೊರಿಯಾವು ೧೩,೦೦೦ ಖೈದಿಗಳನ್ನು ಬಿಡುಗಡೆ ಮಾಡಿವೆ.

ರಾಜಾಜಿ ಮಂತ್ರಿಮಂಡಲ ರಾಜೀನಾಮೆ ಕೊಡಬೇಕು

ತಮಿಳುನಾಡ ಪ್ರದೇಶ ಕಾಂಗ್ರೆಸ್ಸಿನ ಒತ್ತಾಯ

ಆಂಧ್ರಪ್ರಾಂತ್ಯ ರಚನೆಯಾಗಿ ಉಳಿಕೆಯ ಮದ್ರಾಸ್ ಪ್ರಾಂತ್ಯಕ್ಕೆ ಹೊಸ ಮಂತ್ರಿಮಂಡಲವನ್ನು ರಚಿಸಬೇಕೆಂದೂ, ಈಗಿರುವ ರಾಜಾಜಿ ಮಂತ್ರಿಮಂಡಲವು ರಾಜೀನಾಮೆ ಕೊಡಬೇಕೆಂದೂ ತಮಿಳುನಾಡು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಭಿಪ್ರಾಯಪಟ್ಟು ಈ ವಿಷಯದಲ್ಲಿ ಕೇಂದ್ರ ಕಾಂಗ್ರೆಸ್ ಹೈ ಕಮ್ಯಾಂಡಿಗೆ ಪತ್ರವನ್ನು ಬರೆದಿರುವುದಾಗಿ ತಿಳಿಯ ಬರುತ್ತದೆ.

ಈ ತೀರ್ಮಾನವನ್ನು ಕಾರ್ಯಕಾರಿ ಸಮಿತಿಯು ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ ಅಧಿಕೃತವಾಗಿ ತಿಳಿಸಿಲ್ಲ. ಆದಾಗ್ಯೂ ಈ ವಿಷಯವನ್ನು ರಾಜಾಜಿಯವರು ತಮ್ಮ ಮಂತ್ರಿಮಂಡಲದ ಸಹೋದ್ಯೋಗಿಗಳೊಡನೆ ಚರ್ಚಿಸುತ್ತಲಿರುವುದಾಗಿ ಹೇಳಲಾಗಿದೆ.

ಈ ವಿಷಯದಲ್ಲಿ ಅಂತ್ಯ ತೀರ್ಮಾನವನ್ನು ನಿರ್ಧರಿಸಲು ಉಳಿಕೆ ಮದ್ರಾಸಿನ ಕಾಂಗ್ರೆಸ್‌ಸದಸ್ಯರ ಸಭೆಯನ್ನು ಇದೇ ತಿಂಗಳು ೩ನೇ ವಾರದಲ್ಲಿ ಕರೆಯಲಾಗುವುದೆಂದೂ ತಿಳಿಯಬರುತ್ತದೆ.

ಶಾಸನರೀತ್ಯಾ ಉಳಿಕೆ ಮದರಾಸಿನ ಪ್ರಾಂತ್ಯದಲ್ಲಿ ಈಗಿರುವ ಮಂತ್ರಿಮಂಡಲ ರಾಜೀನಾಮೆ ಕೊಟ್ಟು ಹೊಸ ಮಂತ್ರಿಮಂಡಲವನ್ನು ರಚಿಸುವ ಅವಶ್ಯಕತೆಯಿಲ್ಲ ಆದಾಗ್ಯೂ ಸದಸ್ಯರ ಅಭಿಪ್ರಾಯವು ಮಾತ್ರ ಹೀಗಿರುವುದರಿಂದ ಹೊಸ ಮಂತ್ರಿಮಂಡಲ ರಚನೆಯಾಗಬಹುದು

ಪುನಃ ಶ್ರೀ ರಾಜಗೋಪಾಲಾಚಾರಿಯವರು ಪಕ್ಷದ ನಾಯಕರಾಗಿ ಚುನಾಯಿತರಾಗಿ ಮುಖ್ಯಮಂತ್ರಿಗಳಾಗಿರುವರೇ ಎಂಬ ಹೊಸ ಪ್ರಶ್ನೆಯು ಈಗ ಉದ್ಭವಿಸಲಿದೆ ಯೆಂದು ಹೇಳಲಾಗಿದೆ.

ರಾಜಕೀಯದಲ್ಲಿ ನೋಡುವರಿಗೆ ಸರ್ಕಾರವು ಜಮೀನುಗಳನ್ನು ಕೊಟ್ಟಿದ್ದುದನ್ನು ರಾಜಾಜಿಯವರು ಮುಖ್ಯಮಂತ್ರಿಗಳಾಗಿ ಬಂದಮೇಲೆ ಹಿಂದಕ್ಕೆ ತೆಗೆದುಕೊಂಡಾಗಿನಿಂದ ಕಾಂಗ್ರೆಸ್ಸಿಗರಲ್ಲಿ ಸ್ವಲ್ಪ ಅಸಮಾಧಾನ ಉಂಟಾಗಿದೆ. ಪ್ರಾದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜ ನಾದಾರ್ ಮತ್ತು ರಾಜಾಜಿಯವರಿಗೂ ಈ ವಿಷಯದಲ್ಲಿ ಭಿನ್ನಾಭಿಪ್ರಾಯ ತಲೆದೋರಿತು. ಪಕ್ಷದ ನಾಯಕರ ಚುನಾವಣೆಯಲ್ಲಿ ಈ ಭಿನ್ನತೆಯಿಂದ ಬದಲಾವಣೆಯೇನಾಗುವುದೆಂದು ಈಗ ಹೇಳಲು ಸಾಧ್ಯವಿಲ್ಲವಾಗಿದೆ.

ಅನಿರ್ಬಂಧ ಸಕ್ಕರೆಮಾರಾಟ

ಸ್ವತಂತ್ರ ಮಾರಾಟಕ್ಕಾಗಿ ಕೇಂದ್ರ ಸರಕಾರವು ಪುನಃ ಒಂದುಲಕ್ಷ ಟನ್ ಸಕ್ಕರೆಯನ್ನು ಹೊರಕ್ಕೆ ಕೊಟ್ಟಿದೆ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ರೆವಿನ್ಯೂ ಅಧಿಕಾರಿಗಳ ಸಭೆ

ಮೈಸೂರು ೭

ಮೈಸೂರು ಜಿಲ್ಲಾ ರೆವಿನ್ಯೂ ಅಧಿಕಾರಿಗಳ ಸಭೆಯು ನಿನ್ನೆ ರೆವಿನ್ಯೂ ಕಮೀಷನರ್ ಶ್ರೀ ನಾಗರಾಜರಾಯರ ಅಧ್ಯಕ್ಷತೆಯಲ್ಲಿ ನಡೆದು, ಕಂದಾಯ ಮತ್ತು ಇತರ ವಿಷಯಗಳನ್ನು ಚರ್ಚಿಸಲಾಯಿತೆಂದು ತಿಳಿದು ಬಂದಿದೆ.

ಕರ್ನಾಟಕ ಏಕೀಕರಣ ಸಭೆ

ಕರ್ನಾಟಕ ಏಕೀಕರಣ ಕ್ರಿಯಾಸಮಿತಿಯು ನಿನ್ನೆ ಬೆಂಗಳೂರಿನಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ನಡೆದು ಕರ್ನಾಟಕ ಪ್ರಾಂತ್ಯ ರಚನೆಯ ಸಾಧನೆ ಬಗ್ಗೆ ಚರ್ಚೆ ನಡೆಸಿತೆಂದು ತಿಳಿದು ಬಂದಿದೆ.

● ಭಾರತ-ಪಾಕೀಸ್ಥಾನ ಗಡಿಯಲ್ಲಿ ಭಾರಿಗುಂಪೊಂದು ೭ ಕೋಟಿ ರೂಗಳಷ್ಟು ವ್ಯಾಪಾರವನ್ನು ಕಳ್ಳಸಾಗಣೆಕೆಯ ಮೂಲಕ ಮಾಡಿದೆಯೆಂದೂ, ಈಗ ಅವರ ಪೈಕಿ ೯೦ ಜನರನ್ನು ದಸ್ತಗಿರಿಮಾಡಲಾಗಿದೆ ಯೆಂದೂ ಹೇಳಲಾಗಿದೆ.

ನಗರಾಭಿವೃದ್ಧಿ ಸಮಿತಿ, ಮೈಸೂರು

ಪ್ರಕಟಣೆ

●●●●

ಮೈಸೂರು ಸಿಟಿ ಚಾಮರಾಜಮೊಹಲ್ಲಾ ಆದಿಕರ್ನಾಟಕಪುರಂನಲ್ಲಿರುವ ನಗರಾಭಿವೃದ್ಧಿ ಸಮಿತಿಗೆ ಸೇರಿದ ೩೨ ನಿವೇಶನಗಳ ಪೈಕಿ ಬಗ್ಗೆ ಮನೆ ಅಥವಾ ಸೈಟುಗಳಿಲ್ಲದ, ಆದಿಕರ್ನಾಟಕಪುರದ ನಿವಾಸಿಗಳಾದ ಹರಿಜನರಿಂದ ವಿಧಾಯಕವಾದ ನಮೂನೆಯಲ್ಲಿ ತಾರೀಖು 21—9—53 ನೇ ಸೋಮವಾರ ಮಧ್ಯಾಹ್ನ ೩ ಗಂಟೆವರೆಗೆ ಅರ್ಜಿ ಸ್ವೀಕರಿಸಲಾಗುತ್ತದೆ. ಅರ್ಜಿ ಫಾರಂ ಗಳಿಗೆ 0—1—6 ಆಣೆ ಪಾವತಿಮಾಡಿ ಆಫೀಸಿನಲ್ಲಿ ಪಡೆಯಬಹುದು.

(ರುಜು) ಎಸ್. ಲಿಂಗಣ್ಣ

ಅಧ್ಯಕ್ಷರು.

ಅಪೇರ

6-9-53 ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು

ಅಂಬರ್

[ಹಿಂದಿ]

ಪಾತ್ರ:—ರಾಜ್‌ಕಪೂರ್, ನರ್ಗಿಸ್, ನಯಾಂಪಲ್ಲಿ.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೦

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೯

೮-೯-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮದ್ರಾಸ್ ಮಂತ್ರಿಮಂಡಲ ಪುನರ್ರಚನೆಯಿಲ್ಲ

ರಾಜಾಜಿಯವರೇ ಮುಖ್ಯಮಂತ್ರಿಗಳಾಗಿರುವರು

ಪಕ್ಷದ ಸಭೆ ಕರೆಯಬೇಕಾಗಿಲ್ಲವೆಂದು ನೆಹರೂ

ಹೊಸ ನಾಯಕರನ್ನು ಚುನಾಯಿಸಿ ಬೇರೆ ಮಂತ್ರಿ ಮಂಡಲವನ್ನು ರಚಿಸಲು ಶಾಸನಸಭೆಯ ಕಾಂಗ್ರೆಸ್‌ಪಕ್ಷದ ಸಭೆಯನ್ನು ತಾವು ಕರೆಯುವುದಿಲ್ಲವೆಂದು ಮದ್ರಾಸ್ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರೂ ಮತ್ತು ಮುಖ್ಯಮಂತ್ರಿಗಳೂ ಆದ ಶ್ರೀ ಸಿ. ರಾಜಗೋಪಾಲಾಚಾರಿಯವರು ಹೇಳಿಕೆಯಿತ್ತಿದ್ದಾರೆ.

ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸಭೆಯನ್ನು ಕರೆಯುವ ವಿಷಯದಲ್ಲಿ ಪಕ್ಷದ ಚೀಫ್ ವಿಪ್‌ರವರು ಮತ್ತು ತಮಿಳುನಾಡು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜ ನಾದಾರ್‌ರವರು ತಿಳಿಸಿದ ವಿಷಯದಲ್ಲಿ ಈಗಿನ ಮುಖ್ಯಮಂತ್ರಿತ್ವದಲ್ಲಿ ಬದಲಾವಣೆ ಮಾಡುವ ಉದ್ದೇಶವಿದೆಯೆಂದು ತಾವು ಅರಿತು ತುರ್ತು ಸಭೆಯನ್ನು ಕರೆಯುವ ನಿರ್ಧಾರವನ್ನು ತೆಗೆದುಕೊಂಡುದಾಗಿಯೂ, ಆದರೆ ಶ್ರೀ ಕಾಮರಾಜನಾದಾರ್‌ರವರು ತಮ್ಮನ್ನು ಭೇಟಿಮಾಡಿದಾಗ ಈಗಿನ ಮುಖ್ಯಮಂತ್ರಿಗಳ ಬದಲಾವಣೆಯ ಅಗತ್ಯವೇನೂ ಇಲ್ಲ, ಇದಕ್ಕಾಗಿ ತುರ್ತು ಸಭೆಯನ್ನು ಕರೆಯಬೇಕಾಗಿಲ್ಲವೆಂದು ಅವರು ತಮಗೆ ತಿಳಿಸಿದರು. ಅಲ್ಲದೆ ಈ ವಿಷಯವನ್ನು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರ ಗಮನಕ್ಕೆ ತರಲು ಸಭೆಯನ್ನು ಕರೆಯಬೇಕಾಗಿಲ್ಲವೆಂದು ನೆಹರೂರವರು ಸೂಚನೆಯನ್ನಿತ್ತರು. ಆದ್ದರಿಂದ ಪಕ್ಷದ ತುರ್ತು ಸಭೆಯನ್ನು ಕರೆಯುವ ವಿಷಯವನ್ನು ತ್ಯಜಿಸಲಾಗಿದೆ-ಎಂದು ರಾಜಾಜಿಯವರು ತಿಳಿಸಿದ್ದಾರೆ.

ಲಕ್ನೋ ವಿದ್ಯಾರ್ಥಿಗಳ ಸತ್ಯಾಗ್ರಹಕ್ಕೆ ಬೆಂಬಲ

ಮೈಸೂರು ೮

ಲಕ್ನೋ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳು ನಡೆಸುತ್ತಿರುವ ಸತ್ಯಾಗ್ರಹಕ್ಕೆ ಬೆಂಬಲ ನೀಡಲು ಮಹಾರಾಜಾ ಕಾಲೇಜು ವಿದ್ಯಾರ್ಥಿಗಳ ಸಂಘ ಶ್ರೀ ಟಿ. ವಿ. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ಸಮಾವೇಶಗೊಂಡಿತು. ಶ್ರೀಗಳಾದ ವೈದ್ಯನಾಥ್, ಆರ್. ಹೆಚ್. ಪಟೇಲ್, ಕೆ. ಪಿ. ಶಾಂತಮೂರ್ತಿ, ಕೆ. ಬಿ. ಶಿವಯ್ಯ ಇವರುಗಳು ಭಾಷಣ ಮಾಡಿ,-ಅಧಿಕಾರವರ್ಗದವರ ಆಡಳಿತ ನೀತಿಖಂಡನೆ ಹಾಗೂ ಸತ್ಯಾಗ್ರಹಕ್ಕೆ ಬೆಂಬಲ ಕೋರಿದರು.

ನಂತರ ಈ ಕೆಳಕಂಡ ನಿರ್ಣಯಗಳು ಸರ್ವಾನುಮತದಿಂದ ಒಪ್ಪಲಾಯಿತು.

ಮಹಾರಾಜಾಕಾಲೇಜಿನ ಈ ವಿದ್ಯಾರ್ಥಿಗಳು ಲಕ್ನೋ ವಿದ್ಯಾರ್ಥಿಗಳ ಹೋರಾಟವನ್ನು ಸತತವಾಗಿ ಪ್ರೇಕ್ಷಿಸುತ್ತಿದೆ. ಅವರ ಹೋರಾಟದಲ್ಲಿ ನಮ್ಮ ಪೂರ್ಣಬೆಂಬಲವನ್ನು ನಾವು ನೀಡಲು ಸಿದ್ಧರಿದ್ದೇವೆ. ಈ ಸಭೆ ಒಮ್ಮತದಿಂದ ಲಕ್ನೋ ವಿಶ್ವವಿದ್ಯಾನಿಲಯದ ಅಧಿಕಾರಿಗಳ ದುರಾಗ್ರಹವನ್ನು ಖಂಡಿಸುತ್ತದೆ. ವಿದ್ಯಾರ್ಥಿಗಳ ನ್ಯಾಯವಾದ ಬೇಡಿಕೆಗಳಿಗೆ ಬೆಂಬಲ ನೀಡಿ ಅವರಿಗೆ ಸಹಕಾರ ನೀಡಲು ಸಿದ್ಧರಿರುವ ಲಕ್ನೋ ಕಾಲೇಜಿನ ಅಧ್ಯಾಪಕರುಗಳಿಗೆ ಈ ಸಭೆ ತನ್ನ ಕೃತಜ್ಞತಾ ಪೂರಿತ ನೆನಕೆಗಳನ್ನು ಸಲ್ಲಿಸುತ್ತದೆ.

ಮಹಾರಾಜಾಕಾಲೇಜಿನ ವಿದ್ಯಾರ್ಥಿ ಸಂಘವನ್ನು ಮುಚ್ಚಿರುವುದು ಖಂಡನೀಯ. ಯಾವುದೋ ಒಂದು ತಿರುಳಿಲ್ಲದ ವಾದವನ್ನು ಹೂಡಿ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ನಮ್ಮ ನ್ಯಾಯಬದ್ಧವಾದ ಹಕ್ಕುಗಳನ್ನು ಕಸಿದುಕೊಂಡಿರುವುದನ್ನು ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ಬಂದಿದೆ. ಅಧಿಕಾರಿಗಳ ಸ್ವೇಚ್ಛಾವೃತ್ತಿಯನ್ನು ಈ ಸಭೆ ಖಂಡಿಸುತ್ತದೆ. ಅದಲ್ಲದೆ ನಮ್ಮ ವಿದ್ಯಾರ್ಥಿ ಸಂಘಸ್ಥಾಪನೆಗೆ ವಿಶ್ವವಿದ್ಯಾನಿಲಯದ ಮೇಲೆ ಒತ್ತಾಯ ತರಲು ಈಸಭೆ ನಿರ್ಧರಿಸಿ ಇದಕ್ಕಾಗಿ ೧೫ ಜನ ವಿದ್ಯಾರ್ಥಿಗಳನ್ನೊಳಗೊಂಡ ಕ್ರಿಯಾ ಸಮಿತಿಯನ್ನು ರಚಿಸಲು ತೀರ್ಮಾನಿಸುತ್ತದೆ.

ಭಾರತ-ಪಾಕ್ ಮಧ್ಯಸ್ಥಿಕೆಗೆ ಬರ್ಮಾ ಪ್ರಧಾನಿ

ಭಾರತ ಮತ್ತು ಪಾಕೀಸ್ತಾನಗಳ ನಡುವೆ ಇರುವ ವಿವಾದಗಳನ್ನು ಬಗೆಹರಿಸುವುದಕ್ಕೆ ತಮ್ಮ ಮೈಯುಕ್ತಿಕ ನೆರವು ನೀಡಲು ಸಿದ್ಧವಿರುವುದಾಗಿ ಬರ್ಮಾ ಪ್ರಧಾನಿಯವರು ತಿಳಿಸಿದ್ದಾರೆ.

ಆಹಾರ ಹತೋಟಿ ರದ್ದು

ಆಹಾರ ವಸ್ತುಗಳ ಮೇಲೆ ಸಾಗಾಣಿಕೆ ನಿರ್ಬಂಧ ಮುಂತಾದ ಎಲ್ಲಾ ರೀತಿಯ ಹತೋಟಿಗಳನ್ನು ಮದ್ರಾಸ್ ಸರ್ಕಾರವು ರದ್ದುಗೊಳಿಸಲು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ವೇದಗಳಲ್ಲಿ ಉಚ್ಚಶಿಕ್ಷಣ ವ್ಯವಸ್ಥೆ

ವೇದಗಳಲ್ಲಿ ಉಚ್ಚಶಿಕ್ಷಣವನ್ನು ಕೊಡಲು ಕಾಂಚಿ ಕಾಮಕೋಟಿ ಪೀಠದ ಶಂಕರಾಚಾರ್ಯ ಸ್ವಾಮಿಗಳವರ ಆಶ್ರಯದಲ್ಲಿ ತಂಜಾವೂರು ಜಿಲ್ಲೆಯ ತಿರುವಿಡಮರುದೂರ್ ಎಂಬಲ್ಲಿ ಒಂದು ಹೊಸ ಮಹಾಪಾಠಶಾಲೆಯನ್ನು ಸ್ಥಾಪಿಸಲಾಗಿದೆ. ಈ ಪಾಠಶಾಲೆಯಲ್ಲಿ ಉಚಿತವಾಗಿ ಶಿಕ್ಷಣ, ವಸತಿ ಮತ್ತು ಊಟ ಸೌಕರ್ಯಗಳನ್ನು ಏರ್ಪಡಿಸಲಾಗುತ್ತದೆ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡುವುದಲ್ಲದೆ ಗೃಹಸ್ಥ ವಿದ್ಯಾರ್ಥಿಗಳಿಗೆ ತಮ್ಮ ಸಂಸಾರಗಳನ್ನು ನಡೆಸಲು ಸಹ ಈ ಸಂಸ್ಥೆಯು ಧನಸಹಾಯ ಮಾಡುತ್ತದೆ.

ನಿರುದ್ಯೋಗ ದಿನಾಚರಣೆ

ಮೈಸೂರು ೮

ರಾಜಧಾನಿಯ ಜನಸಂಘದ ಆಶ್ರಯದಲ್ಲಿ ಮೊನ್ನೆ ದಿನ ಟೌನ್ ಹಾಲ್ ಮೈದಾನದಲ್ಲಿ ನಿರುದ್ಯೋಗ ದಿನಾಚರಣೆಯನ್ನು ಶ್ರೀ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ದೇಶದಲ್ಲಿ ನಿರುದ್ಯೋಗತನವನ್ನು ನಿವಾರಿಸಲು, ಸರ್ಕಾರದವರು ಕೂಡಲೇ ಒಂದು ನಿರ್ದಿಷ್ಟ ಕಾರ್ಯ ಕ್ರಮ ಕೈಗೊಳ್ಳಬೇಕು. ವಿದ್ಯಾವಂತ ನಿರುದ್ಯೋಗ ಪರಿಹರಿಸಲು ಪ್ರಾಥಮಿಕ ವಿದ್ಯಾಭ್ಯಾಸ ಕಡ್ಡಾಯ ಮಾಡಬೇಕು. ಕೈಗಾರಿಕೆ ಮತ್ತು ಗೃಹ ಕೈಗಾರಿಕೆಗಳಿಗೆ ವಿಶೇಷ ಉತ್ತೇಜನ ಕೊಡಬೇಕು. ಪ್ರತಿ ಶಾಲೆಯಲ್ಲೂ ವೃತ್ತಿ ಶಿಕ್ಷಣ ಕೊಡಬೇಕು. ಉನ್ನತಾಧಿಕಾರಿಗಳ ಸಂಬಳ ಕಡಮೆ ಮಾಡಿ, ಅದರಿಂದ ಉಳಿತಾಯ ಹಣದಿಂದ ಹೊಸ ಉದ್ಯಮಗಳನ್ನು ಕಲ್ಪಿಸಬೇಕು--ಇವೇ ಮುಂತಾದ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ದೇಶಾದ್ಯಂತ ಒಂದೇ ಲಿಪಿ ಇರಬೇಕು

ದೇಶಾದ್ಯಂತ ಒಂದೇ ಲಿಪಿಯಿರಬೇಕೆಂಬ ವಿಷಯವನ್ನು ಚರ್ಚಿಸಲು ಇದೇ ೨೬, ೨೯ನೇ ತಾರೀಖುಗಳಲ್ಲಿ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳ ಪ್ರತಿನಿಧಿಗಳು ನೈನಿಟಾಲ್‌ನಲ್ಲಿ ಸಭೆ ಸೇರಲಿರುವರೆಂದು ತಿಳಿಯಬರುತ್ತದೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತ್‌ರವರು ಈ ಸಭೆಯನ್ನು ಕರೆದಿರುವರು.

ಭಾರತ ಉಪ ರಾಷ್ಟ್ರಪತಿ ಡಾ|| ರಾಧಾಕೃಷ್ಣನ್ ಮತ್ತು ವಿದ್ಯಾಸಚಿವ ಮೌಲಾನಾ ಆಜಾದರು ಇದರಲ್ಲಿ ಭಾಗವಹಿಸುವರು.

ದಾವಣಗೆರೆಯಲ್ಲಿ ಪೋಲೀಸ್ ಡಿ. ಐ. ಜಿ. ಕಛೇರಿ

ಬೆಂಗಳೂರು ೮

ಬಳ್ಳಾರಿಯ ಕೆಲವು ಭಾಗಗಳು ಮೈಸೂರಿಗೆ ಸೇರುವುದರಿಂದ ದಾವಣಗೆರೆಯಲ್ಲಿ ಒಂದು ಪೋಲೀಸ್ ಡಿ.ಐ.ಜಿ. ಯವರ ಕಛೇರಿಯನ್ನು ಸ್ಥಾಪಿಸಲಾಗುವುದೆಂದು ಮೈಸೂರು ಜಿಲ್ಲಾ ಪೋಲೀಸ್ ಅಧಿಕಾರಿಗಳಾದ ಶ್ರೀ ಕೆ.ಎಸ್. ಕೃಷ್ಣಮೂರ್ತಿಯವರನ್ನು ಅಲ್ಲಿಗೆ ವರ್ಗಾಯಿಸಲಾಗುವುದೆಂದು ತಿಳಿಯಬರುತ್ತದೆ.

ಅಕ್ರಮ ಲೈಸನ್ಸ್ ಕೊಟ್ಟಿದ್ದಕ್ಕೆ ಸಚಿವರ ಪದಚ್ಯುತಿ

೫ ವರ್ಷಗಳ ಹಿಂದೆ ಗಣಿಯೊಂದನ್ನು ನಡೆಸಲು ಅಕ್ರಮವಾಗಿ ರಹದಾರಿ ಕೊಟ್ಟ ಆಪಾದನೆ ಮೇಲೆ ಬರ್ಮಾದ ಸ್ಥಳೀಯ ಸಂಸ್ಥೆ ಸಚಿವರನ್ನು ಆಸ್ಥಾನದಿಂದ ಪದಚ್ಯುತಿ ಮಾಡಲಾಗಿದೆ. ಈ ಅಕ್ರಮ ರಹದಾರಿ ಪಡೆದ ಲಕ್ಷಾಧೀಶನು ದಸ್ತಗಿರಿಯಾಗಿ ಈಗ ಬಂಧನದಲ್ಲಿದ್ದಾನೆ.

ಕಾನೂನು ರೀತ್ಯಾ ಸಚಿವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಯಬರುತ್ತದೆ.

ಆಂಧ್ರ ಕಛೇರಿಗಳು ಬಳ್ಳಾರಿಯಲ್ಲಿ

ಸ್ಥಳಾಭಾವದಿಂದ ಹೊಸ ಆಂಧ್ರ ಪ್ರಾಂತ್ಯದ ಕೆಲವು ಪ್ರಾದೇಶಿಕ ಕಛೇರಿಗಳು ಬಳ್ಳಾರಿಯಲ್ಲಿಯೇ ಸ್ವಲ್ಪಕಾಲ ಇರುವುದಾಗಿ ತಿಳಿಯಬರುತ್ತದೆ.

ಹೊಗೆಸೊಪ್ಪು ಕೊಳ್ಳುವವರೇ ಇಲ್ಲ

ಸುಮಾರು ೪೦ ದಶಲಕ್ಷ ಪೌಂಡುಗಳಷ್ಟು ಹೊಗೆಸೊಪ್ಪು ಮಾರಾಟವಾಗದೆ ಬೆಳೆಯುವವರಲ್ಲಿಯೂ, ವ್ಯಾಪಾರಗಾರರಲ್ಲಿಯೂ ಉಳಿದುಹೋಗಿ ಬಹಳ ತೊಂದರೆಯಾಗಿರುವ ವಿಷಯದಲ್ಲಿ ಪಾರ್ಲಿಮೆಂಟಿನ ೫ ಜನ ಆಂಧ್ರ ಸದಸ್ಯರು ಕೇಂದ್ರ ವ್ಯವಸಾಯ ಸಚಿವರನ್ನು ಭೇಟಿಮಾಡಿ ಆಂಧ್ರ ವ್ಯಾಪಾರಿಗಳ ಕುಂದು ಕೊರತೆಗಳನ್ನು ನಿವೇದಿಸಿಕೊಂಡರು.

ನಿರಾಶ್ರಿತರಿಗಾಗಿ ೧೧,೦೦೦ ರೂಗಳ ದಾನ

ಪಾಕೀಸ್ತಾನದಲ್ಲಿರುವ ನಿರಾಶ್ರಿತರ ವಸತಿಗಾಗಿ ಪಾಕೀಸ್ತಾನದಲ್ಲಿರುವ ರಷ್ಯಾ ರಾಯಭಾರಿಯವರು ೧೧೦೦೦ರೂಪಾಯಿಗಳ ದಾನ ಮಾಡಿದ್ದಾರೆ.

ಪ್ರಮಾಣ ಸ್ವೀಕಾರ

ಕೇಂದ್ರ ಹಿರಿಯ ಶಾಸನ ಸಭೆಗೆ ಚುನಾಯಿತರಾಗಿರುವ ಶ್ರೀ ವಿ. ಕೆ. ಕೃಷ್ಣ ಮೆನನ್‌ರವರು ನಿನ್ನೆಯ ದಿನ ಪ್ರಮಾಣ ಸ್ವೀಕಾರ ಮಾಡಿ ಸಭೆಯಲ್ಲಿ ಹಾಜರಿದ್ದರು.

ಸಂಗೀತ ಕಛೇರಿ

ಮೈಸೂರು ೮

ಸಂತೇಪೇಟೆ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಮಹೋತ್ಸವದ ಅಂಗವಾಗಿ ಈದಿನ ಸಂಜೆ ೭-೩೦ಕ್ಕೆ ಶ್ರೀಮತಿ ಜಲಜಾಕ್ಷಮ್ಮನವರ ಹಾಡುಗಾರಿಕೆ, ಶ್ರೀ ಹೆಚ್. ವಿ. ಕೃಷ್ಣರಾಯರವರ ಪಿಟೀಲು ಮತ್ತು ಶ್ರೀ ಯಂ. ಆರ್. ರಾಜಪ್ಪನವರ ಮೃದಂಗದೊಡನೆ ಸಂಗೀತ ಕಛೇರಿಯನ್ನು ಏರ್ಪಡಿಸಿರುತ್ತೆ.

ಮೈಸೂರು ಕಾಂಗ್ರೆಸ್ ಬಿಕ್ಕಟ್ಟು ಪರಿಹಾರ

ಕಾಂಗ್ರೆಸ್ಸಿನವರಲ್ಲಿಯೇ ಅಪಪ್ರಚಾರ ಕೂಡದು

ಶಾಸನ ಸಭಾ ಕಾಂಗ್ರೆಸ್ ಪಕ್ಷದಲ್ಲಿ ತೀರ್ಮಾನ

ಬೆಂಗಳೂರು ೭

ಮೈಸೂರು ಮಂತ್ರಿಮಂಡಲದ ವಿಷಯದಲ್ಲಿ ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆಯಿಂದ ಉಂಟಾಗಿದ್ದ ಬಿಕ್ಕಟ್ಟು ಎಲ್ಲವೂ ಸೌಹಾರ್ದ್ಯಯುತವಾಗಿ ಮೊನ್ನೆಯದಿನ ಪರಿಹಾರವಾಯಿತು.

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ೪ ಮತ್ತು ೫ ನೇ ತಾರೀಖುಗಳಲ್ಲಿ ಸಭೆ ಸೇರಿ, ಕಳೆದವಾರ ಎಂ.ಪಿ.ಸಿ.ಸಿ. ಅಧ್ಯಕ್ಷರು ಪತ್ರಿಕಾ ಸಮ್ಮೇಳನದಲ್ಲಿ ಮುಖ್ಯಮಂತ್ರಿಯವರ ಆಡಳಿತ ವಿಷಯದಲ್ಲಿ ಮಾಡಿದ್ದ ಆಪಾದನೆಗಳ ಬಗ್ಗೆ ಚರ್ಚೆ ಪ್ರಾರಂಭವಾಗಿ, ಶ್ರೀ ಕೆ. ಹನುಮಂತಯ್ಯನವರು ಕೂಡಲೇ ತಮ್ಮ ಮೇಲಿನ ವಿಶ್ವಾಸದ ಮತವನ್ನು ಪಡೆಯಬೇಕೆಂದು ತಿಳಿಸಲಾಯಿತು. ಈ ವಿಷಯದಲ್ಲಿ ವಿಪುಲ ಚರ್ಚೆ ನಡೆಯಿತು ಕೆಲವರು ಮತಪಡೆಯಬೇಕೆಂದೂ ಮತ್ತೆ ಕೆಲವರು ಆತುರಾತುರದಿಂದ ಮತ ಪಡೆಯುವುದು ಸೂಕ್ತವಲ್ಲವೆಂದೂ ತಿಳಿಸಿದರು.

ಈ ನಡುವೆ ಸದಸ್ಯರು ತಮ್ಮ ತಮ್ಮಲ್ಲಿಯೇ ಚರ್ಚೆಗಳನ್ನು ನಡೆಸಿದರು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ. ವೀರಣ್ಣಗೌಡರು ಈ ವಿಷಯದಲ್ಲಿ ಮಾತನಾಡುತ್ತಾ ಶ್ರೀ ಹನುಮಂತಯ್ಯನವರ ಮಂತ್ರಿಮಂಡಲದ ಮೇಲೆ ಅವಿಶ್ವಾಸವನ್ನು ತರುವ ಅಭಿಪ್ರಾಯವು ತಮ್ಮದಲ್ಲವೆಂದು ವಿವರಣೆಯನ್ನಿತ್ತರು. ಈಗಲೇ ಮತಪಡೆದು ಅನಾವಶ್ಯಕವಾದ ಕಹಿ ಪ್ರಸಂಗವುಂಟುಮಾಡಿದರೆ ತಾವು ಉಪವಾಸ ಮಾಡುವುದಾಗಿ ಶ್ರೀ ಎಂ. ವಿ. ರಾಮರಾಯರು ತಿಳಿಸಿದರು.

ಕಾಂಗ್ರೆಸ್ ಪಕ್ಷದ ಹಿತದೃಷ್ಟಿಯಿಂದ ಕಾಂಗ್ರೆಸ್ಸಿನವರಲ್ಲಿ ಸೌಹಾರ್ದ್ಯವು ಅತ್ಯಗತ್ಯವೆಂದು ಒಬ್ಬರನ್ನ ಒಬ್ಬರು ಪತ್ರಿಕೆಗಳ ಮೂಲಕ ಅಥವ ಬಹಿರಂಗವಾಗಿ ದೂಷಿಸಕೂಡದೆಂದೂ ಲೋಪದೋಷಗಳು ಏನಾದ್ದರೂ ಪಕ್ಷದಲ್ಲಿಯೇ ಚರ್ಚಿಸಿ ಒಮ್ಮತಕ್ಕೆ ಬರಬೇಕೆಂದೂ ಅಭಿಪ್ರಾಯವು ಕೊನೆಗೆ ಹೊರಬಿತ್ತು ಅದರಂತೆ ನಿರ್ಣಯವನ್ನು ಮಾಡಿ ವಿಶ್ವಾಸ ಪಡೆಯುವ ಪ್ರಸಂಗವನ್ನು ಅಲ್ಲಿಯೇ ಮುಕ್ತಾಯವಾಗಿ ಮಧುರ ವಾತಾವರಣದಿಂದ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಖಾನ್ ಸಾಹೇಬರ ಮೇಲಿನ ಪ್ರತಿಬಂಧಕ ರದ್ದು

ಗಡಿನಾಡಿನ ಮಾಜಿ ಮುಖ್ಯಮಂತ್ರಿ ಡಾ॥ ಖಾನ್ ಸಾಹೇಬರ ಚಲನವಲನಗಳ ಬಗ್ಗೆ ಪಾಕೀಸ್ತಾನ ಸರ್ಕಾರದವರು ಇತ್ತೀಚೆಗೆ ಹಾಕಿದ್ದ ಪ್ರತಿಬಂಧಕಾಜ್ಞೆಗಳನ್ನು ರದ್ದುಮಾಡಿ,ಅವರು ಹಜಾರಾ ಜಿಲ್ಲೆಯಲ್ಲಿ ಎಲ್ಲಿಬೇಕಾದರೂ ಸಂಚರಿಸಬಹುದೆಂದು ತಿಳಿಸಿದ್ದಾರೆ.

ಕಾಂಗ್ರೆಸ್ಸಿಗರಿಗೆ ಎಚ್ಚರಿಕೆ

ಸ್ವಪಕ್ಷದವರನ್ನು ದೂರುವುದು ನಿಲ್ಲಬೇಕು

ಕಾಂಗ್ರೆಸ್ ಕಾರ್ಯಕರ್ತರಲ್ಲಿ ಸಾರ್ವಜನಿಕ ಹಿತಕ್ಕೆ ಸಂಬಂಧಪಟ್ಟ ಪ್ರಮುಖ ವಿಷಯಗಳಲ್ಲಿ ಭಿನ್ನಾಭಿಪ್ರಾಯ ಬರುವುದು ಸಹಜ. ಅದನ್ನು ಒಮ್ಮತದಿಂದ ತೀರ್ಮಾನಿಸುವುದು ಕೆಲವುಸಲ ಕಷ್ಟವಾಗುತ್ತದೆ. ಆದರೆ ಸಂಸ್ಥೆಯಲ್ಲಿಯೇ ಒಡಕಿಗೆ ಕಾರಣವಾಗುವಂತೆ ಕಾಂಗ್ರೆಸ್ಸಿಗರು ನಡೆಯಬಾರದು. ಒಬ್ಬ ಕಾಂಗ್ರೆಸ್ಸಿನವರು ಮತ್ತೊಬ್ಬ ಕಾಂಗ್ರೆಸ್ಸಿನವರನ್ನು ಬಹಿರಂಗವಾಗಿ ಟೀಕಿಸುವುದು ಅಸಹನೀಯ ಆದ್ದರಿಂದ ಪ್ರಮುಖ ಕಾಂಗ್ರೆಸ್ಸಿಗರು ಪತ್ರಿಕೆಗಳಲ್ಲಿ ಮತ್ತು ವೇದಿಕೆಗಳಲ್ಲಿ ಕಾಂಗ್ರೆಸ್ ಸರ್ಕಾರ ಮತ್ತು ಇತರ ಕಾಂಗ್ರೆಸ್ಸಿಗರನ್ನೂ ದೂಷಿಸುವುದನ್ನು ನಿಲ್ಲಿಸಬೇಕು ಎಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿಯವರು ಎಲ್ಲಾ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ, ಶಾಸನಸಭಾ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಎಚ್ಚರಿಕೆ ಪತ್ರವನ್ನೊಂದು ಕಳುಹಿಸಿದ್ದಾರೆ.

ಯುದ್ಧ ಖೈದಿಗಳ ವಿನಿಮಯ ಮುಕ್ತಾಯ

ಕೊರಿಯಾದಲ್ಲಿ ಯುದ್ಧ ಖೈದಿಗಳ ಬಿಡುಗಡೆಯ ವಿನಿಮಯ ಕೆಲಸವು ನಿನ್ನೆಯ ದಿನ ಮುಕ್ತಾಯವಾಯಿತು. ಉತ್ತರ ಕೊರಿಯನ್ನರು ಕೊನೆಯ ತಂಡವಾದ ೪೫ ಅಮೆರಿಕ ವಿಮಾನ ಪಡೆಯವರನ್ನು ಬಿಡುಗಡೆ ಮಾಡಿದರು. ಈ ದಳದವರನ್ನು ಯುದ್ಧಕಾಲದಲ್ಲಿ ಕ್ರಿಮಿ ಯುದ್ಧದಲ್ಲಿ ತೊಡಗಿದರೆಂದು ಬಂಧಿಸಲಾಗಿತ್ತು. ಈ ತಂಡದಲ್ಲಿ ೩ ಕರ್ನಲ್, ಒಬ್ಬ ಮೇಜರ್, ಒಬ್ಬ ಕ್ಯಾಪ್ಟನ್ ಮತ್ತು ೨೦ ಲೆಫ್ಟಿನೆಂಟ್‌ಗಳೂ ಇದ್ದರು. ಕ್ರಿಮಿ ಯುದ್ಧವು ನಡೆಯಿತೆಂದು ಈ ತಂಡದವರು ಬರೆದು ಕೊಟ್ಟಿದ್ದರೆಂದು ಹಿಂದೆ ಉತ್ತರ ಕೊರಿಯನ್ನರು ಆಪಾದಿಸಿದ್ದರು.

ಅತ್ಯುಗ್ರವಾದ ಮಾನಸಿಕ ಹಿಂಸೆಯನ್ನು ತವಗುಂಟುಮಾಡಿ ಈ ರೀತಿಯಾಗಿ ತಮ್ಮಿಂದ ಬರೆಸಿಕೊಂಡರೆಂದು ಈಗ ಬಿಡುಗಡೆಯಾದವರಲ್ಲಿ ಒಬ್ಬರು ಹೇಳಿದ್ದಾರೆ.

ತಮ್ಮಲ್ಲಿದ್ದ ಖೈದಿಗಳನ್ನೆಲ್ಲಾ ಬಿಡುಗಡೆ ಮಾಡಿರುವುದಾಗಿ ಉತ್ತರ ಕೊರಿಯನ್ನರು ಹೇಳಿದ್ದಾರೆ. ಆದರೆ ಎಲ್ಲರನ್ನು ಪೂರ್ಣವಾಗಿ ಬಿಟ್ಟಿಲ್ಲವೆಂದು ಅಮೆರಿಕನ್ನರು ಆಪಾದಿಸಿದ್ದಾರೆ.

ಇಲ್ಲಿಯವರೆಗೆ ಉಭಯ ಪಕ್ಷಗಳಿಂದ ಒಟ್ಟು ೮೯೦೦೦ ಯುದ್ಧಖೈದಿಗಳನ್ನು ಸ್ವದೇಶಕ್ಕೆ ಕಳುಹಿಸಲಾಗಿದೆ. ವಿಶ್ವಸಂಸ್ಥೆಯು ೭೬೦೦೦, ಉತ್ತರಕೊರಿಯಾವು ೧೩೦೦೦ ಖೈದಿಗಳನ್ನು ಬಿಡುಗಡೆ ಮಾಡಿವೆ.

ರಾಜಾಜಿ ಮಂತ್ರಿಮಂಡಲ ರಾಜೀನಾಮೆ ಕೊಡಬೇಕು

ತಮಿಳುನಾಡು ಪ್ರದೇಶ ಕಾಂಗ್ರೆಸ್ಸಿನ ಒತ್ತಾಯ

ಆಂಧ್ರಪ್ರಾಂತ್ಯ ರಚನೆಯಾಗಿ ಉಳಿಕೆಯ ಮದ್ರಾಸ್ ಪ್ರಾಂತ್ಯಕ್ಕೆ ಹೊಸ ಮಂತ್ರಿಮಂಡಲವನ್ನು ರಚಿಸಬೇಕೆಂದೂ, ಈಗಿರುವ ರಾಜಾಜಿ ಮಂತ್ರಿಮಂಡಲವು ರಾಜೀನಾಮೆ ಕೊಡಬೇಕೆಂದೂ ತಮಿಳುನಾಡು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಭಿಪ್ರಾಯಪಟ್ಟು, ಈ ವಿಷಯದಲ್ಲಿ ಕೇಂದ್ರ ಕಾಂಗ್ರೆಸ್ ಹೈಕಮ್ಯಾಂಡಿಗೆ ಪತ್ರವನ್ನು ಬರೆದಿರುವುದಾಗಿ ತಿಳಿಯಬರುತ್ತದೆ.

ಈ ತೀರ್ಮಾನವನ್ನು ಕಾರ್ಯಕಾರಿ ಸಮಿತಿಯು ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ ಅಧಿಕೃತವಾಗಿ ತಿಳಿಸಿಲ್ಲ. ಆದಾಗ್ಯೂ ಈ ವಿಷಯವನ್ನು ರಾಜಾಜಿಯವರು ತಮ್ಮ ಮಂತ್ರಿಮಂಡಲದ ಸಹೋದ್ಯೋಗಿಗಳೊಡನೆ ಚರ್ಚಿಸುತ್ತಲಿರುವುದಾಗಿ ಹೇಳಲಾಗಿದೆ.

ಈ ವಿಷಯದಲ್ಲಿ ಅಂತ್ಯ ತೀರ್ಮಾನವನ್ನು ನಿರ್ಧರಿಸಲು ಉಳಿಕೆ ಮದ್ರಾಸಿನ ಕಾಂಗ್ರೆಸ್ ಸದಸ್ಯರ ಸಭೆಯನ್ನು ಇದೇ ಮಾಹೆ ೩ನೇ ವಾರದಲ್ಲಿ ಕರೆಯಲಾಗುವುದೆಂದೂ ತಿಳಿಯಬರುತ್ತದೆ.

ಶಾಸನರೀತ್ಯಾ ಉಳಿಕೆ ಮದರಾಸಿನ ಪ್ರಾಂತ್ಯದಲ್ಲಿ ಈಗಿರುವ ಮಂತ್ರಿಮಂಡಲ ರಾಜೀನಾಮೆ ಕೊಟ್ಟು ಹೊಸ ಮಂತ್ರಿ ಮಂಡಲವನ್ನು ರಚಿಸುವ ಆವಶ್ಯಕತೆಯಿಲ್ಲ ಆದಾಗ್ಯೂ ಸದಸ್ಯರ ಅಭಿಪ್ರಾಯವು ಮಾತ್ರ ಹೀಗಿರುವುದರಿಂದ ಹೊಸ ಮಂತ್ರಿಮಂಡಲ ರಚನೆಯಾಗಬಹುದು

ಪುನಃ ಶ್ರೀ ರಾಜಗೋಪಾಲಾಚಾರಿಯವರು ಪಕ್ಷದ ನಾಯಕರಾಗಿ ಚುನಾಯಿತರಾಗಿ ಮುಖ್ಯಮಂತ್ರಿಗಳಾಗಿರುವರೇ ಎಂಬ ಹೊಸ ಪ್ರಶ್ನೆಯು ಈಗ ಉದ್ಭವಿಸಲಿದೆಯೆಂದು ಹೇಳಲಾಗಿದೆ.

ರಾಜಕೀಯದಲ್ಲಿ ನೋಡುವರಿಗೆ ಸರ್ಕಾರವು ಜಮೀನುಗಳನ್ನು ಕೊಟ್ಟಿದ್ದುದನ್ನು ರಾಜಾಜಿಯವರು ಮುಖ್ಯಮಂತ್ರಿಗಳಾಗಿ ಬಂದಮೇಲೆ ಹಿಂದಕ್ಕೆ ತೆಗೆದುಕೊಂಡಾಗಿನಿಂದ ಕಾಂಗ್ರೆಸ್ಸಿಗರಲ್ಲಿ ಸ್ವಲ್ಪ ಅಸಮಾಧಾನ ಉಂಟಾಗಿದೆ. ಪ್ರಾದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜ ನಾದಾರ್ ಮತ್ತು ರಾಜಾಜಿಯವರಿಗೂ ಈ ವಿಷಯದಲ್ಲಿ ಭಿನ್ನಾಭಿಪ್ರಾಯ ತಲೆದೋರಿತು. ಪಕ್ಷದ ನಾಯಕರ ಚುನಾವಣೆಯಲ್ಲಿ ಈ ಭಿನ್ನತೆಯಿಂದ ಬದಲಾವಣೆಯೇನಾಗುವುದೆಂದು ಈಗ ಹೇಳಲು ಸಾಧ್ಯವಿಲ್ಲವಾಗಿದೆ.

ಅನಿರ್ಬಂಧ ಸಕ್ಕರೆ ಮಾರಾಟ

ಸ್ವತಂತ್ರ ಮಾರಾಟಕ್ಕಾಗಿ ಕೇಂದ್ರ ಸರಕಾರವು ಪುನಃ ಒಂದುಲಕ್ಷ ಟನ್ ಸಕ್ಕರೆಯನ್ನು ಹೊರಕ್ಕೆ ಕೊಟ್ಟಿದೆ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ರೆವಿನ್ಯೂ ಅಧಿಕಾರಿಗಳ ಸಭೆ

ಮೈಸೂರು ೭

ಮೈಸೂರು ಜಿಲ್ಲಾ ರೆವಿನ್ಯೂ ಅಧಿಕಾರಿಗಳ ಸಭೆಯು ನಿನ್ನೆ ರೆವಿನ್ಯೂ ಕಮೀಷನರ್ ಶ್ರೀ ನಾಗರಾಜರಾಯರ ಅಧ್ಯಕ್ಷತೆಯಲ್ಲಿ ನಡೆದು, ಕಂದಾಯ ಮತ್ತು ಇತರ ವಿಷಯಗಳನ್ನು ಚರ್ಚಿಸಲಾಯಿತೆಂದು ತಿಳಿದುಬಂದಿದೆ.

ಕರ್ನಾಟಕ ಏಕೀಕರಣ ಸಭೆ

ಕರ್ನಾಟಕ ಏಕೀಕರಣ ಕ್ರಿಯಾಸಮಿತಿಯು ನಿನ್ನೆ ಬೆಂಗಳೂರಿನಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ನಡೆದು ಕರ್ನಾಟಕ ಪ್ರಾಂತ್ಯ ರಚನೆಯ ಸಾಧನೆ ಬಗ್ಗೆ ಚರ್ಚೆ ನಡೆಸಿತೆಂದು ತಿಳಿದುಬಂದಿದೆ.

● ಭಾರತ-ಪಾಕೀಸ್ಥಾನ ಗಡಿಯಲ್ಲಿ ಭಾರಿಗುಂಪೊಂದು ೬ ಕೋಟಿ ರೂಗಳಷ್ಟು ವ್ಯಾಪಾರವನ್ನು ಕಳ್ಳಸಾಗಣಿಕೆಯ ಮೂಲಕ ಮಾಡಿದೆಯೆಂದೂ, ಈಗ ಅವರ ಪೈಕಿ ೯೨ ಜನರನ್ನು ದಸ್ತಗಿರಿಮಾಡಲಾಗಿದೆಯೆಂದೂ ಹೇಳಲಾಗಿದೆ.

ನಗರಾಭಿವೃದ್ಧಿ ಸಮಿತಿ, ಮೈಸೂರು

ಪ್ರಕಟಣೆ

●●●●

ಮೈಸೂರು ಸಿಟಿ ಚಾಮರಾಜಮೊಹಲ್ಲಾ ಆದಿಕರ್ನಾಟಕಪುರಂನಲ್ಲಿರುವ ನಗರಾಭಿವೃದ್ಧಿ ಸಮಿತಿಗೆ ಸೇರಿದ ೨೨ ನಿವೇಶನಗಳ ಪೈಕಿ ಬಗ್ಗೆ ಮನೆ ಅಥವಾ ಸೈಟುಗಳಿಲ್ಲದ, ಆದಿಕರ್ನಾಟಕಪುರದ ನಿವಾಸಿಗಳಾದ ಹರಿಜನರಿಂದ ವಿಧಾಯಕವಾದ ನಮೂನೆಯಲ್ಲಿ ತಾರೀಖು 21—9—53 ನೇ ಸೋಮವಾರ ಮಧ್ಯಾಹ್ನ ೩ ಗಂಟೆವರೆಗೆ ಅರ್ಜಿ ಸ್ವೀಕರಿಸಲಾಗುತ್ತದೆ. ಅರ್ಜಿ ಫಾರಂ ಗಳಿಗೆ 0—1—6 ಆಣೆ ಪಾವತಿಮಾಡಿ ಆಫೀಸಿನಲ್ಲಿ ಪಡೆಯಬಹುದು.

(ರುಜು) ಎಸ್. ಲಿಂಗಣ್ಣ
ಅಧ್ಯಕ್ಷರು.

ಅಪೇರ

6-9-53 ರಿಂದ ಆಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು

ಅಂಬರ್

[ಹಿಂದಿ]

ಪಾತ್ರ:—ರಾಜ್‌ಕಪೂರ್, ನರ್ಗಿಸ್, ನಯಾಂಪಲ್ಲಿ.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೯

೮-೯-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮದ್ರಾಸ್ ಮಂತ್ರಿಮಂಡಲ ಪುನರ್ರಚನೆಯಿಲ್ಲ

ರಾಜಾಜಿಯವರೇ ಮುಖ್ಯಮಂತ್ರಿಗಳಾಗಿರುವರು

ಪಕ್ಷದ ಸಭೆ ಕರೆಯಬೇಕಾಗಿಲ್ಲವೆಂದು ನೆಹರೂ

ಹೊಸ ನಾಯಕರನ್ನು ಚುನಾಯಿಸಿ ಬೇರೆ ಮಂತ್ರಿ ಮಂಡಲವನ್ನು ರಚಿಸಲು ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸಭೆಯನ್ನು ತಾವು ಕರೆಯುವುದಿಲ್ಲವೆಂದು ಮದ್ರಾಸ್ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರೂ ಮತ್ತು ಮುಖ್ಯಮಂತ್ರಿಗಳೂ ಆದ ಶ್ರೀ ಸಿ. ರಾಜಗೋಪಾಲಾಚಾರಿಯವರು ಹೇಳಿಕೆಯಿತ್ತಿದ್ದಾರೆ.

ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸಭೆಯನ್ನು ಕರೆಯುವ ವಿಷಯದಲ್ಲಿ ಪಕ್ಷದ ಚೀಫ್ ವ್ಹಿಫ್‌ರವರು ಮತ್ತು ತಮಿಳುನಾಡು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜ ನಾದಾರ್‌ರವರು ತಿಳಿಸಿದ ವಿಷಯದಲ್ಲಿ ಈಗಿನ ಮುಖ್ಯಮಂತ್ರಿಸ್ಥಾನದಲ್ಲಿ ಬದಲಾವಣೆ ಮಾಡುವ ಉದ್ದೇಶವಿದೆಯೆಂದು ತಾವು ಅರಿತು ತುರ್ತು ಸಭೆಯನ್ನು ಕರೆಯುವ ನಿರ್ಧಾರವನ್ನು ತೆಗೆದುಕೊಂಡುದುದಾಗಿಯೂ, ಆದರೆ ಶ್ರೀ ಕಾಮರಾಜನಾದಾರ್‌ರವರು ತಮ್ಮನ್ನು ಭೇಟಿಮಾಡಿದಾಗ ಈಗಿನ ಮುಖ್ಯಮಂತ್ರಿಗಳ ಬದಲಾವಣೆಯ ಅಗತ್ಯವೇನೂ ಇಲ್ಲ, ಇದಕ್ಕಾಗಿ ತುರ್ತು ಸಭೆಯನ್ನು ಕರೆಯಬೇಕಾಗಿಲ್ಲವೆಂದು ಅವರು ತಮಗೆ ತಿಳಿಸಿದರು. ಅಲ್ಲದೆ ಈ ವಿಷಯವನ್ನು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರ ಗಮನಕ್ಕೆ ತರಲು ಸಭೆಯನ್ನು ಕರೆಯಬೇಕಾಗಿಲ್ಲವೆಂದು ನೆಹರೂರವರು ಸೂಚನೆಯನ್ನಿತ್ತರು. ಆದ್ದರಿಂದ ಪಕ್ಷದ ತುರ್ತು ಸಭೆಯನ್ನು ಕರೆಯುವ ವಿಷಯವನ್ನು ತ್ಯಜಿಸಲಾಗಿದೆ-ಎಂದು ರಾಜಾಜಿಯವರು ತಿಳಿಸಿದ್ದಾರೆ.

ವೇದಗಳಲ್ಲಿ ಉಚ್ಚಶಿಕ್ಷಣ ವ್ಯವಸ್ಥೆ

ವೇದಗಳಲ್ಲಿ ಉಚ್ಚಶಿಕ್ಷಣವನ್ನು ಕೊಡಲು ಕಾಂಚಿ ಕಾಮಕೋಟಿ ಪೀಠದ ಶಂಕರಾಚಾರ್ಯ ಸ್ವಾಮಿಗಳವರ ಆಶ್ರಯದಲ್ಲಿ ತಂಜಾವೂರು ಜಿಲ್ಲೆಯ ತಿರುವಿಡಮರುದೂರ್ ಎಂಬಲ್ಲಿ ಒಂದು ಹೊಸ ಮಹಾಪಾಠಶಾಲೆಯನ್ನು ಸ್ಥಾಪಿಸಲಾಗಿದೆ. ಈ ಪಾಠಶಾಲೆಯಲ್ಲಿ ಉಚಿತವಾಗಿ ಶಿಕ್ಷಣ,ವಸತಿ ಮತ್ತು ಊಟ ಸೌಕರ್ಯಗಳನ್ನು ಏರ್ಪಡಿಸಲಾಗುತ್ತದೆ ವಿದ್ಯಾರ್ಥಿಗಳಿಗೆ ವೇತನವನ್ನು ಕೊಡುವುದಲ್ಲದೆ ಗೃಹಸ್ಥ ವಿದ್ಯಾರ್ಥಿಗಳಿಗೆ ತಮ್ಮ ಸಂಸಾರಗಳನ್ನು ನಡೆಸಲು ಸಹ ಈ ಸಂಸ್ಥೆಯು ಧನಸಹಾಯ ಮಾಡುತ್ತದೆ.

ಲಕ್ನೋ ವಿದ್ಯಾರ್ಥಿಗಳ ಸತ್ಯಾಗ್ರಹಕ್ಕೆ ಬೆಂಬಲ

ಮೈಸೂರು ೮

ಲಕ್ನೋ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳು ನಡೆಸುತ್ತಿರುವ ಸತ್ಯಾಗ್ರಹಕ್ಕೆ ಬೆಂಬಲ ನೀಡಲು ಮಹಾರಾಜಾ ಕಾಲೇಜು ವಿದ್ಯಾರ್ಥಿಗಳ ಸಂಘ ಶ್ರೀ ಟಿ. ವಿ. ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ಸಮಾವೇಶಗೊಂಡಿತು. ಶ್ರೀಗಳಾದ ವೈದ್ಯನಾಥ್, ಆರ್. ಹೆಚ್. ಪಟೇಲ್, ಕೆ. ಪಿ. ಶಾಂತಮೂರ್ತಿ, ಕೆ. ಬಿ. ಶಿವಯ್ಯ ಇವರುಗಳು ಭಾಷಣ ಮಾಡಿ,-ಅಧಿಕಾರವರ್ಗದವರ ಆಡಳಿತ ನೀತಿಖಂಡನೆ ಹಾಗೂ ಸತ್ಯಾಗ್ರಹಕ್ಕೆ ಬೆಂಬಲ ಕೋರಿದರು.

ನಂತರ ಈ ಕೆಳಕಂಡ ನಿರ್ಣಯಗಳು ಸರ್ವಾನುಮತದಿಂದ ಒಪ್ಪಲಾಯಿತು.

ಮಹಾರಾಜಾಕಾಲೇಜಿನ ಈ ವಿದ್ಯಾರ್ಥಿಗಳು ಲಕ್ನೋ ವಿದ್ಯಾರ್ಥಿಗಳ ಹೋರಾಟವನ್ನು ಸತತವಾಗಿ ಪ್ರೇಕ್ಷಿಸುತ್ತಿದೆ. ಅವರ ಹೋರಾಟದಲ್ಲಿ ನಮ್ಮ ಪೂರ್ಣಬೆಂಬಲವನ್ನು ನಾವು ನೀಡಲು ಸಿದ್ಧರಿದ್ದೇವೆ. ಈ ಸಭೆ ಒಮ್ಮತದಿಂದ ಲಕ್ನೋ ವಿಶ್ವವಿದ್ಯಾನಿಲಯದ ಅಧಿಕಾರಿಗಳ ದುರಾಗ್ರಹವನ್ನು ಖಂಡಿಸುತ್ತದೆ. ವಿದ್ಯಾರ್ಥಿಗಳ ನ್ಯಾಯವಾದ ಬೇಡಿಕೆಗಳಿಗೆ ಬೆಂಬಲ ನೀಡಿ ಅವರಿಗೆ ಸಹಕಾರ ನೀಡಲು ಸಿದ್ಧರಿರುವ ಲಕ್ನೋ ಕಾಲೇಜಿನ ಅಧ್ಯಾಪಕರುಗಳಿಗೆ ಈ ಸಭೆ ತನ್ನ ಕೃತಜ್ಞತಾ ಪೂರಿತ ನೆನಕೆಗಳನ್ನು ಸಲ್ಲಿಸುತ್ತದೆ.

ಮಹಾರಾಜಾಕಾಲೇಜಿನ ವಿದ್ಯಾರ್ಥಿ ಸಂಘವನ್ನು ಮುಚ್ಚಿರುವುದು ಖಂಡನೀಯ. ಯಾವುದೋ ಒಂದು ತಿರುಳಿಲ್ಲದ ವಾದವನ್ನು ಹೂಡಿ ಮೈಸೂರು ವಿಶ್ವವಿದ್ಯಾನಿಲಯದ ಅಧಿಕಾರಿಗಳು ನಮ್ಮ ನ್ಯಾಯಬದ್ಧವಾದ ಹಕ್ಕುಗಳನ್ನು ಕಸಿದುಕೊಂಡಿರುವುದನ್ನು ಎಲ್ಲಾ ವಿದ್ಯಾರ್ಥಿಗಳ ಗಮನಕ್ಕೆ ಬಂದಿದೆ. ಅಧಿಕಾರಿಗಳ ಸ್ವೇಚ್ಛಾವೃತ್ತಿಯನ್ನು ಈ ಸಭೆ ಖಂಡಿಸುತ್ತದೆ. ಅದಲ್ಲದೆ ನಮ್ಮ ವಿದ್ಯಾರ್ಥಿ ಸಂಘಸ್ಥಾಪನೆಗೆ ವಿಶ್ವವಿದ್ಯಾನಿಲಯದ ಮೇಲೆ ಒತ್ತಾಯ ತರಲು ಈ ಸಭೆ ನಿರ್ಧರಿಸಿ ಇದಕ್ಕಾಗಿ ೧೫ ಜನ ವಿದ್ಯಾರ್ಥಿಗಳನ್ನೊಳಗೊಂಡ ಕ್ರಿಯಾ ಸಮಿತಿಯನ್ನು ರಚಿಸಲು ತೀರ್ಮಾನಿಸುತ್ತದೆ.

ಭಾರತ-ಪಾಕ್ ಮಧ್ಯಸ್ಥಿಕೆಗೆ ಬರ್ಮಾ ಪ್ರಧಾನಿ

ಭಾರತ ಮತ್ತು ಪಾಕೀಸ್ತಾನಗಳ ನಡುವೆ ಇರುವ ವಿವಾದಗಳನ್ನು ಬಗೆಹರಿಸುವುದಕ್ಕೆ ತಮ್ಮ ವೈಯುಕ್ತಿಕ ನೆರವು ನೀಡಲು ಸಿದ್ಧವಿರುವುದಾಗಿ ಬರ್ಮಾ ಪ್ರಧಾನಿಯವರು ತಿಳಿಸಿದ್ದಾರೆ.

ಆಹಾರ ಹತೋಟಿ ರದ್ದು

ಆಹಾರ ವಸ್ತುಗಳ ಮೇಲೆ ಸಾಗಾಣಿಕೆ ನಿರ್ಬಂಧ ಮುಂತಾದ ಎಲ್ಲಾ ರೀತಿಯ ಹತೋಟಿಗಳನ್ನು ಮದ್ರಾಸ್ ಸರ್ಕಾರವು ರದ್ದುಗೊಳಿಸಲು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ನಿರುದ್ಯೋಗ ದಿನಾಚರಣೆ

ಮೈಸೂರು ೮

ರಾಜಧಾನಿಯ ಜನಸಂಘದ ಆಶ್ರಯದಲ್ಲಿ ಮೊನ್ನೆ ದಿನ ಟೌನ್ ಹಾಲ್ ಮೈದಾನದಲ್ಲಿ ನಿರುದ್ಯೋಗ ದಿನಾಚರಣೆಯನ್ನು ಶ್ರೀ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ದೇಶದಲ್ಲಿ ನಿರುದ್ಯೋಗತನವನ್ನು ನಿವಾರಿಸಲು, ಸರ್ಕಾರದವರು ಕೂಡಲೇ ಒಂದು ನಿರ್ದಿಷ್ಟ ಕಾರ್ಯ ಕ್ರಮ ಕೈಗೊಳ್ಳಬೇಕು. ವಿದ್ಯಾವಂತ ನಿರುದ್ಯೋಗ ಪರಿಹರಿಸಲು ಪ್ರಾಥಮಿಕ ವಿದ್ಯಾಭ್ಯಾಸ ಕಡ್ಡಾಯ ಮಾಡಬೇಕು. ಕೈಮಗ್ಗ ಮತ್ತು ಗೃಹ ಕೈಗಾರಿಕೆಗಳಿಗೆ ವಿಶೇಷ ಉತ್ತೇಜನ ಕೊಡಬೇಕು. ಪ್ರತಿ ಶಾಲೆಯಲ್ಲೂ ವೃತ್ತಿ ಶಿಕ್ಷಣ ಕೊಡಬೇಕು. ಉನ್ನತಾಧಿಕಾರಿಗಳ ಸಂಬಳ ಕಡಮೆ ಮಾಡಿ, ಅದರಿಂದ ಉಳಿತಾಯ ಹಣದಿಂದ ಹೊಸ ಉದ್ಯಮಗಳನ್ನು ಕಲ್ಪಿಸಬೇಕು--ಇವೇ ಮುಂತಾದ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ದೇಶಾದ್ಯಂತ ಒಂದೇ ಲಿಪಿ ಇರಬೇಕು

ದೇಶಾದ್ಯಂತ ಒಂದೇ ಲಿಪಿಯಿರಬೇಕೆಂಬ ವಿಷಯವನ್ನು ಚರ್ಚಿಸಲು ಇದೇ ೨೮, ೨೯ನೇ ತಾರೀಖುಗಳಲ್ಲಿ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳ ಪ್ರತಿನಿಧಿಗಳು ನೈನಿಟಾಲ್‌ನಲ್ಲಿ ಸಭೆ ಸೇರಲಿರುವರೆಂದು ತಿಳಿಯಬರುತ್ತದೆ. ಉತ್ತರ ಪ್ರದೇಶದ ಮುಖ್ಯಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತ್‌ರವರು ಈ ಸಭೆಯನ್ನು ಕರೆದಿರುವರು.

ಭಾರತ ಉಪ ರಾಷ್ಟ್ರಪತಿ ಡಾ॥ ರಾಧಾಕೃಷ್ಣನ್ ಮತ್ತು ವಿದ್ಯಾಸಚಿವ ಮೌಲಾನಾ ಆಜಾದರು ಇದರಲ್ಲಿ ಭಾಗವಹಿಸುವರು.

ದಾವಣಗೆರೆಯಲ್ಲಿ ಪೋಲಿಸ್ ಡಿ. ಐ. ಜಿ. ಕಛೇರಿ

ಬೆಂಗಳೂರು ೮

ಬಳ್ಳಾರಿಯ ಕೆಲವು ಭಾಗಗಳು ಮೈಸೂರಿಗೆ ಸೇರುವುದರಿಂದ ದಾವಣಗೆರೆಯಲ್ಲಿ ಒಂದು ಪೋಲೀಸ್ ಡಿ.ಐ.ಜಿ. ಯವರ ಕಛೇರಿಯನ್ನು ಸ್ಥಾಪಿಸಲಾಗುವುದೆಂದು ಮೈಸೂರು ಜಿಲ್ಲಾ ಪೋಲೀಸ್ ಅಧಿಕಾರಿಗಳಾದ ಶ್ರೀ ಕೆ.ಎಸ್. ಕೃಷ್ಣಮೂರ್ತಿಯವರನ್ನು ಅಲ್ಲಿಗೆ ವರ್ಗಾಯಿಸಲಾಗುವುದೆಂದು ತಿಳಿಯಬರುತ್ತದೆ.

ಅಕ್ರಮ ಲೈಸನ್ಸ್ ಕೊಟ್ಟಿದ್ದಕ್ಕೆ ಸಚಿವರ ಪದಚ್ಯುತಿ

೫ ವರ್ಷಗಳ ಹಿಂದೆ ಗಣಿಯೊಂದನ್ನು ನಡೆಸಲು ಅಕ್ರಮವಾಗಿ ರಹದಾರಿ ಕೊಟ್ಟ ಆಪಾದನೆ ಮೇಲೆ ಬರ್ಮಾದ ಸ್ಥಳೀಯ ಸಂಸ್ಥೆ ಸಚಿವರನ್ನು ಆಸ್ಥಾನದಿಂದ ಪದಚ್ಯುತಿ ಮಾಡಲಾಗಿದೆ. ಈ ಅಕ್ರಮ ರಹದಾರಿ ಪಡೆದ ಲಕ್ಷಾಧೀಶನು ದಸ್ತಗಿರಿಯಾಗಿ ಈಗ ಬಂಧನದಲ್ಲಿದ್ದಾನೆ.

ಕಾನೂನು ರೀತ್ಯಾ ಸಚಿವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಯಬರುತ್ತದೆ.

ಆಂಧ್ರ ಕಛೇರಿಗಳು ಬಳ್ಳಾರಿಯಲ್ಲಿ

ಸ್ಥಳ ಅಭಾವದಿಂದ ಹೊಸ ಆಂಧ್ರ ಪ್ರಾಂತ್ಯದ ಕೆಲವು ಪ್ರಾದೇಶಿಕ ಕಛೇರಿಗಳು ಬಳ್ಳಾರಿಯಲ್ಲಿಯೇ ಸ್ವಲ್ಪಕಾಲ ಇರುವುದಾಗಿ ತಿಳಿಯಬರುತ್ತದೆ.

ಹೊಗೆಸೊಪ್ಪು ಕೊಳ್ಳುವವರೇ ಇಲ್ಲ

ಸುಮಾರು ೪೦ ದಶಲಕ್ಷ ಪೌಂಡುಗಳಷ್ಟು ಹೊಗೆಸೊಪ್ಪು ಮಾರಾಟವಾಗದೆ ಬೆಳೆಯುವವರಲ್ಲಿಯೂ, ವ್ಯಾಪಾರಗಾರರಲ್ಲಿಯೂ ಉಳಿದುಹೋಗಿ ಬಹಳ ತೊಂದರೆಯಾಗಿರುವ ವಿಷಯದಲ್ಲಿ ಪಾರ್ಲಿಮೆಂಟಿನ ೫ ಜನ ಆಂಧ್ರ ಸದಸ್ಯರು ಕೇಂದ್ರ ವ್ಯವಸಾಯ ಸಚಿವರನ್ನು ಭೇಟಿಮಾಡಿ ಆಂಧ್ರ ವ್ಯಾಪಾರಿಗಳ ಕುಂದು ಕೊರತೆಗಳನ್ನು ನಿವೇದಿಸಿಕೊಂಡರು.

ನಿರಾಶ್ರಿತರಿಗಾಗಿ ೧೨೦೦೦ ರೂಗಳ ದಾನ

ಪಾಕೀಸ್ತಾನದಲ್ಲಿರುವ ನಿರಾಶ್ರಿತರ ವಸತಿಗಾಗಿ ಪಾಕೀಸ್ತಾನದಲ್ಲಿರುವ ರಷ್ಯಾ ರಾಯಭಾರಿಯವರು ೧೨೦೦೦ರೂಪಾಯಿಗಳ ದಾನ ಮಾಡಿದ್ದಾರೆ.

ಪ್ರಮಾಣ ಸ್ವೀಕಾರ

ಕೇಂದ್ರ ಹಿರಿಯ ಶಾಸನ ಸಭೆಗೆ ಚುನಾಯಿತರಾಗಿರುವ ಶ್ರೀ ವಿ ಕೆ. ಕೃಷ್ಣ ಮೆನನ್‌ರವರು ನಿನ್ನೆಯ ದಿನ ಪ್ರಮಾಣ ಸ್ವೀಕಾರ ಮಾಡಿ ಸಭೆಯಲ್ಲಿ ಹಾಜರಿದ್ದರು.

ಸಂಗೀತ ಕಛೇರಿ

ಮೈಸೂರು ೮

ಸಂತೆಪೇಟೆ ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಮಹೋತ್ಸವದ ಅಂಗವಾಗಿ ಈದಿನ ಸಂಜೆ ೭-೩೦ಕ್ಕೆ ಶ್ರೀಮತಿ ಜಲಜಾಕ್ಷಮ್ಮನವರ ಹಾಡುಗಾರಿಕೆ, ಶ್ರೀ ಹೆಚ್. ವಿ. ಕೃಷ್ಣರಾಯರವರ ಪಿಟೀಲು ಮತ್ತು ಶ್ರೀ ಯಂ. ಆರ್. ರಾಜಪ್ಪನವರ ಮೃದಂಗದೊಡನೆ ಸಂಗೀತ ಕಛೇರಿಯನ್ನು ಏರ್ಪಡಿಸಿರುತ್ತೆ.

ಆಂಧ್ರಕ್ಕೆ ಮುಖ್ಯಮಂತ್ರಿ ಯಾರು ?

ಪ್ರಕಾಶಂರವರೋ ಅಥವಾ ಸಂಜೀವರೆಡ್ಡಿಯವರೋ ?

ಮುಂದಿನ ತಿಂಗಳು ಒಂದನೇ ತಾರೀಖು ಪ್ರಾರಂಭವಾಗಲಿರುವ ಆಂಧ್ರಪ್ರಾಂತ್ಯದಲ್ಲಿ ಮಂತ್ರಿಮಂಡಲವನ್ನು ರಚಿಸುವ ವಿಷಯದಲ್ಲಿ ಆಂಧ್ರಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವರೆಡ್ಡಿ ಮತ್ತು ಪ್ರಜಾಸೋಷಲಿಸ್ಟ್ ನಾಯಕ ಶ್ರೀ ಟಿ. ಪ್ರಕಾಶಂರವರು ದೆಹಲಿಯಲ್ಲಿ ಪ್ರಧಾನಿ ನೆಹರೂ ಮತ್ತು ಇತರ ಪ್ರಮುಖ ಸಚಿವರುಗಳೊಡನೆ ಮಾತುಕತೆಗಳನ್ನು ನಡೆಸುತ್ತಲಿದ್ದಾರೆ. ಹೊಸ ಪ್ರಾಂತ್ಯದಲ್ಲಿ ಸಮ್ಮಿಶ್ರ ಮಂತ್ರಿ ಮಂಡಲವನ್ನು ರಚಿಸಬೇಕೆಂದು ಎಲ್ಲಾ ಪಕ್ಷಗಳ ಆಶಯವಾಗಿದೆ. ಇದಕ್ಕೆ ಎಲ್ಲರೂ ಸಮ್ಮತಿಸಿರುವುದಾಗಿ ತಿಳಿಯಬರುತ್ತದೆ.

ಈ ವಿಷಯದಲ್ಲಿ ಶ್ರೀಗಳಾದ ಸಂಜೀವರೆಡ್ಡಿ ಮತ್ತು ಪ್ರಕಾಶಂರವರು ಸಹ ತಮ್ಮ ಅಭಿಮತವನ್ನು ವ್ಯಕ್ತಪಡಿಸಿ ಹೇಗಾದರೂ ಮಾಡಿ ಸಮ್ಮಿಶ್ರ ಮಂತ್ರಿಮಂಡಲವನ್ನು ರಚಿಸಲಾಗುತ್ತದೆಯೇ ವಿನಹ ಹೊಸ ಪ್ರಾಂತ್ಯವನ್ನು ಗವರ್ನರ್ ಆಡಳಿತದಿಂದ ಪ್ರಾರಂಭಿಸಲು ತಾವು ಅವಕಾಶ ಕೊಡುವುದಿಲ್ಲವೆಂದು ತಿಳಿಸಿದ್ದಾರೆ. ಆದರೆ ಈಗ ನಾಯಕರ ಮುಂದಿರುವ ಪ್ರಶ್ನೆ ಯಾರು ಮುಖ್ಯಮಂತ್ರಿಯಾಗಬೇಕು ಎನ್ನುವುದು ಸಮ್ಮಿಶ್ರ ಸರ್ಕಾರವಾದರೂ ಶಾಸನಸಭೆಯಲ್ಲಿ ಬಹುಮತವಿರುವ ಕಾಂಗ್ರೆಸ ಪಕ್ಷದ ನಾಯಕರೇ ಮುಖ್ಯಮಂತ್ರಿಯಾಗಿರಬೇಕೆಂಬ ಕೆಲವರ ವಾದ. ತಾವೇ ಮುಖ್ಯಮಂತ್ರಿಯಾಗಿರಬೇಕೆಂದು ಶ್ರೀ ಸಂಜೀವರೆಡ್ಡಿಯವರ ಆಶಯವೆಂದು ಕಾಣಬರುತ್ತೆ. ಇದು ಕೆಲವು ಕಾಂಗ್ರೆಸ್ಸಿಗರಿಗೆ ಇಷ್ಟವಿಲ್ಲ. ಪ್ರಜಾ ಸೋಷಲಿಸ್ಟ್ ನಾಯಕ ಶ್ರೀ ಟಿ. ಪ್ರಕಾಶಂರವರು ಮುಖ್ಯಮಂತ್ರಿ ಆಗಬೇಕೆಂದು ಕೆಲವು ಕಾಂಗ್ರೆಸ್ ಮತ್ತು ಇತರ ಪಕ್ಷಗಳ ಅಭಿಪ್ರಾಯ. ತಾವು ಮುಖ್ಯಮಂತ್ರಿ ಆಗಬೇಕೆಂಬ ಆಶಯವು ಶ್ರೀ ಟಿ. ಪ್ರಕಾಶಂರವರಿಗೂ ಇರುವಂತೆ ಕಾಣುತ್ತದೆ. ಶ್ರೀ ಪ್ರಕಾಶಂರವರು ಕೇವಲ ಸಚಿವರ ಸ್ಥಾನವನ್ನು ಒಪ್ಪುವಂತೆ ಕಾಣಲಿಲ್ಲ. ಕಾಂಗ್ರೆಸ್ಸೇತರರು ಮುಖ್ಯಮಂತ್ರಿಯಾಗುವ ಪ್ರಶ್ನೆಯೇ ಇಲ್ಲವೆಂದು ಶ್ರೀ ಸಂಜೀವರೆಡ್ಡಿಯವರು ಹೇಳುತ್ತಿದ್ದಾರೆ. ಎಲ್ಲಾ ಪಕ್ಷಗಳಿಗೂ ಸಮ್ಮತವಾಗುವ ನಾಯಕರು ಮುಖ್ಯಮಂತ್ರಿಯಾಗಬೇಕೆಂದು ಶ್ರೀ ಪ್ರಕಾಶಂರವರು ಹೇಳುತ್ತಿದ್ದಾರೆ. ಮುಖ್ಯಮಂತ್ರಿ ಪದವಿಗೆ ಈ ಇಬ್ಬರ ನಡುವೆ ಸ್ಪರ್ಧೆಯಿದೆ. ಶ್ರೀ ಟಿ. ಪ್ರಕಾಶಂರವರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳದಿದ್ದರೆ ಆಂಧ್ರದಲ್ಲಿ ಆಂದೋಳನವಾಗುವುದೆಂಬ ಹೆದರಿಕೆಯೇ ನಾಯಕರನ್ನು ಕಾಡುತ್ತಿದೆ. ಅಂತ್ಯ ತೀರ್ಮಾನವು ಪ್ರಧಾನಿ ನೆಹರೂರವರಿಗೆ ಸೇರಿದೆ. ಅದು ಹೇಗೆ ಆಗುವುದೆಂಬುವುದು ಸದ್ಯದಲ್ಲೇ ಹೊರಬೀಳುವ ನಿರೀಕ್ಷೆಯಿದೆ.

● ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಕ್ಕೆ ತರಲು ತಿರುವಾಂಕೂರ್-ಕೊಚ್ಚಿ ಸರ್ಕಾರವು ಸ್ಥಳೀಯ ಅಭಿವೃದ್ಧಿ ಜಿಲ್ಲಾ ಸಮಿತಿಗಳನ್ನು ರಚಿಸಿದೆ.

ಕರ್ಣಾಟಕದ ಬಗ್ಗೆ ಕೇಂದ್ರದ ಉದಾಸೀನ

ಕ್ರಿಯಾ ಸಮಿತಿಯ ವಿಷಾದ

ಕರ್ನಾಟಕ ಪ್ರಾಂತ್ಯರಚನೆಯ ಬಗ್ಗೆ ಪ್ರಧಾನಿ ನೆಹರೂ ಮತ್ತು ಕೇಂದ್ರಗೃಹ ಸಚಿವರುಗಳ ಉದಾಸೀನ ಧೋರಣೆಯ ಬಗ್ಗೆ ಅಸಮಾಧಾನವನ್ನು ಸೂಚಿಸುವ ನಿರ್ಣಯವನ್ನು ಮೊನ್ನೆ ಬೆಂಗಳೂರಿನಲ್ಲಿ ನಡೆದ ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕ್ರಿಯಾಸಮಿತಿಯ ಸಭೆಯು ಮಾಡಿದೆ.

ಆಂಧ್ರಪ್ರಾಂತ್ಯ ನಿರ್ಮಾಣದ ಹೊತ್ತಿಗಾದರೂ ಕರ್ಣಾಟಕದ ಬಗ್ಗೆ ಯಾವ ಭರವಸೆಯೂ ಕೇಂದ್ರದಿಂದ ಬರದಿದ್ದಲ್ಲಿ ಸೂಕ್ತ ಕ್ರಮ ಕೈಗೊಳ್ಳಲು ಪರಿಷತ್ತಿನ ವಿಶೇಷ ಸಮ್ಮೇಳನ ಕರೆಯಬೇಕೆಂದೂ ನಿರ್ಧರಿಸಲಾಯಿತು.

ನಿರುದ್ಯೋಗ ಪರಿಹರಿಸಲು ಕಾರ್ಮಿಕರ ಸಲಹೆ

ಭಾರತದಲ್ಲಿ ನಿರುದ್ಯೋಗ ಸಮಸ್ಯೆಯು ವಿಷಮಿಸದಂತೆ, ಕೈಗಾರಿಕಾ ಸಂಸ್ಥೆಗಳಲ್ಲಿ ನೌಕರರ ಖೋತಾ ನಿಲ್ಲಿಸುವುದನ್ನು ಕೇಂದ್ರ ಸರ್ಕಾರವು ತಡೆಯಬೇಕೆಂದೂ, ಮತ್ತು ಸಮಸ್ಯೆ ಪರಿಹರಿಸಲು ಕೈಗಾರಿಕೆ,ಕಾರ್ಮಿಕ ಮತ್ತು ಸರ್ಕಾರ ಪ್ರತಿನಿಧಿಗಳ ಸಮ್ಮೇಳನವನ್ನು ಕೂಡಲೇ ನಡೆಸಬೇಕೆಂದೂ ಹಿಂದೂ ಮಜ್ದೂರ್ ಸಭೆಗೆ ಸೇರಿದ ೨೫ ಕಾರ್ಮಿಕ ಸಂಘದ ಪ್ರತಿನಿಧಿಗಳು ಒತ್ತಾಯಮಾಡಿದ್ದಾರೆ.

ಹೆಚ್ಚುಹೆಚ್ಚಾಗಿ ರಸ್ತೆ,ರೈಲ್ವೆ, ನೀರಾವರಿ ಯೋಜನೆ ಮತ್ತು ಗೃಹನಿರ್ಮಾಣ,ಮತ್ತು ಭೂಸೈನ್ಯ ಇವೇ ಮುಂತಾದ ಕಾರ್ಯಗಳನ್ನು ಕೈಗೊಳ್ಳುವುದರಿಂದ ನಿರುದ್ಯೋಗ ಕಡಮೆ ಆಗುವುದೆಂದೂ ಅವರು ಸಲಹೆ ಮಾಡಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೭—೯—೧೯೫೩

ಬತ್ತ	ರೂ. ಆ	ರೂ. ಆ
ಕಡಲೇಕಾಯಿ	೧೪—೨	೫೫—೬
ಎಳ್ಳು	೪೨—೨	೮೩—೪
ಹುರುಳಿ	೪೬—೧೦	೪೭—೬
ಹೆಸರು	೫೫—	—
ಹರಳು	—	—
ಅಲಸಂದೆ	೬೬—೧೦	೬೫—
ಹೊಂಗೆಬೀಜ	—	—
ಅವರೆ	—	—
ಉದ್ದು	—	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	—	—
ಸೀಗೆಕಾಯಿ	—	—
ಬೆಲ್ಲ	—	—
ತೆಂಗಿನಕಾಯಿ	೧೪೬	೨೩೩

ದೇಶದಲ್ಲಿ ಅಕ್ಕಿ ಸಾಕಾದಷ್ಟಿದೆ

ಪಾರ್ಲಿಮೆಂಟಿನಲ್ಲಿ ಆಹಾರ ಸಚಿವರ ವಿವರಣೆ

ಈಗ ದೇಶದಲ್ಲಿ ಅಕ್ಕಿ ಸಾಕಾದಷ್ಟಿದೆ. ಆದ್ದರಿಂದ ಈ ಸಾಲಿನಲ್ಲಿ ಅಕ್ಕಿ ಬೇಡವೆಂದು ಬರ್ಮಾ ಸರ್ಕಾರಕ್ಕೆ ತಿಳಿಸಿರುವುದಾಗಿ ಕೇಂದ್ರ ಆಹಾರಸಚಿವ ಶ್ರೀ ಕಿದ್ವಾಯಿಯವರು ಶಾಸನಸಭೆಯಲ್ಲಿ ಹೇಳಿದ್ದಾರೆ. ಅಕ್ಕಿಯನ್ನು ಮಣ ಒಂದಕ್ಕೆ ೧೬ ರೂಪಾಯಿಗಳಂತೆ ಸರಬರಾಜು ಮಾಡಬೇಕೆಂದು ಹಾಗೆ ಕೊಟ್ಟಲ್ಲಿ ೧೦ ಲಕ್ಷ ಟನ್ ಅಕ್ಕಿಯನ್ನು ಕೊಳ್ಳುವುದಾಗಿ ತಿಳಿಸಲಾಗಿತ್ತು ಬರ್ಮಾ ಅದಕ್ಕೆ ಒಪ್ಪಲಿಲ್ಲ. ಭಾರತದ ವಸ್ತುಗಳಿಗೆ ನಾವು ವಿಶೇಷ ದುಬಾರಿ ಬೆಲೆಯನ್ನು ಹೇಳಿದೆವೆಂದು ಕೆಲವೆಡೆ ಪ್ರಕಟವಾಗಿರುವುದು ಶುದ್ಧ ಸುಳ್ಳು ಉಭಯತ್ರರಿಗೂ ಅನುಕೂಲವಾದ ಮತ್ತು ಇತರ ದೇಶಗಳಿಗಿಂತ ಅಗ್ಗವಾಗಿ ನಮ್ಮ ಬೆಲೆಯನ್ನು ತಿಳಿಸಲಾಗಿತ್ತು. ಬರ್ಮಾ ವಾಣಿಜ್ಯ ಸಚಿವರ ವಿಷಯದಲ್ಲಿ ಅಗೌರವರೀತಿ ವರ್ತಿಸಲಾಯಿತೆಂಬ ಅಪಾದನೆ ಆಧಾರ ರಹಿತವಾದುದು. ಈ ಬಗ್ಗೆ ಅವರು ಒಂದು ಹೇಳಿಕೆಯನ್ನು ಕೊಡುವಂತೆ ಬರ್ಮಾ ಪ್ರಧಾನಿಯವರಿಗೆ ಪತ್ರ ಬರೆಯಲಾಗಿದೆ--ಎಂದು ಅವರು ತಿಳಿಸಿದ್ದಾರೆ.

ಭಾರತೀಯ ಸೋಪು ಕೈಗಾರಿಕೆಗೆ ರಕ್ಷಣೆ

ಭಾರತದಲ್ಲಿ ವರ್ಷಕ್ಕೆ ಉತ್ಪನ್ನವಾಗಲು ಸಾಧ್ಯವಿರುವ ಸಾಬೂನಿನ ಒಟ್ಟು ಪ್ರಮಾಣ ೩,೭೦,೦೦೦ ಟನ್ನುಗಳು ಅದರಲ್ಲಿ ೧,೯೩,೫೦೦ ಟನ್ನು ಕಾರ್ಖಾನೆಗಳಿಂದಲೂ ಉಳಿದುದು ಗೃಹ ಕೈಗಾರಿಕೆಗಳಿಂದಲೂ ಆಗಲು ಸಾಧ್ಯವಾಗಿದೆ. ವಿದೇಶಿ ಲಿವರ್ ಕಂಪೆನಿಯವರು ಭಾರತದಲ್ಲಿರುವ ತಮ್ಮ ಸೋಪು ಕಾರ್ಖಾನೆಯನ್ನು ಬಡಾಯಿಸಲು ಹೊರಗಿನಿಂದ ಯಂತ್ರಗಳನ್ನು ತರಿಸಲು ಅವಕಾಶ ಕೊಟ್ಟರೆ ಭಾರತೀಯ ತಯಾರಿಕೆಗಾರರಿಗೆ ತುಂಬಾ ಕಷ್ಟವಾಗುವುದರಿಂದ ಅದನ್ನು ನಿರಾಕರಿಸಲಾಗುವುದು--ಎಂದು ಕೇಂದ್ರ ವಾಣಿಜ್ಯ ಸಚಿವರು ರಾಜ್ಯಪರಿಷತ್ತಿನಲ್ಲಿ ತಿಳಿಸಿದ್ದಾರೆ.

ಭೂದಾನ ಸಂಗ್ರಹಣಾಕಾರ್ಯ

ಭಾರತದಲ್ಲಿ ನಡೆಯುತ್ತಿರುವ ಭೂದಾನ ಯಜ್ಞದಲ್ಲಿ ಭೂಸಂಗ್ರಹಣಾ ಕಾರ್ಯವನ್ನು ಆಚಾರ್ಯ ವಿನೋಬಭಾವೆಯವರು ಪ್ರಶಂಸಿಸಿದ್ದಾರೆ. ಈ ಕಾರ್ಯವು ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ೨೨ ಲಕ್ಷ ೬೦ ಸಾವಿರ ಎಕರೆಗಳಷ್ಟು ಭೂಮಿಯನ್ನು ಸಂಗ್ರಹಿಸಲಾಗಿದೆ. ೧೯೫೭ರ ವೇಳೆಗೆ ೫ ಕೋಟಿ ಎಕರೆಗಳಷ್ಟು ವಸೂಲ್ಮಾಡುವ ಗುರಿಯನ್ನು ಮುಟ್ಟಲಾಗುವುದೆಂದು ಅವರು ಭರವಸೆ ವ್ಯಕ್ತಪಡಿಸಿದ್ದಾರೆ.

ಸೂಯೆಜ್ ಕಾಲುವೆ ಪರಿಸ್ಥಿತಿ ಅತ್ಯುಗ್ರವಾಗಿದೆ

ಸೂಯೆಜ್ ಕಾಲುವೆ ವಿಷಯದಲ್ಲಿ ಈಜಿಪ್ಟ ಮತ್ತು ಬ್ರಿಟನ್ನುಗಳ ನಡುವೆ ಪರಿಸ್ಥಿತಿಯು ಅತ್ಯುಗ್ರವಾಗಿರುವುದಾಗಿ ಈಜಿಪ್ಟ ರಕ್ಷಣಾ ಸಚಿವರು ಹೇಳಿರುವುದಾಗಿ ತಿಳಿಯಬರುತ್ತದೆ.

ವಿದೇಶೀ ಸ್ವಾಸ್ತ್ಯಗಳು ತಪ್ಪಬೇಕು

ಪಾರ್ಲಿಮೆಂಟಿನಲ್ಲಿ ನೆಹರೂ ಹೇಳಿಕೆ

ಮಾಹೆಯಂತಹ ವಿದೇಶೀ ಸ್ವಾಸ್ತ್ಯಗಳು ಇರುವವರೆಗೆ ಘಟನೆಗಳು ತಪ್ಪುವುದಿಲ್ಲ ಭಾರತದಲ್ಲಿ ಯಾವ ವಿದೇಶೀ ಸ್ವಾಸ್ತ್ಯಕ್ಕೂ ಸ್ಥಾನವಿಲ್ಲ ಇಂತಹ ಪ್ರಸಂಗಗಳು ಮುಂದುವರಿಯುವುದನ್ನು ನಾವು ಇನ್ನೂ ಸಹಿಸಲಾರೆವು. ಕೂಡಲೇ ಅವುಗಳು ಭಾರತಕ್ಕೆ ಸೇರಬೇಕು ಎಂದು ಪ್ರಧಾನಿ ನೆಹರೂರವರು ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಮಾಹೆಯಿಂದ ಅನೇಕ ಫ್ರೆಂಚ್ ಭಾರತ ಜನರನ್ನು ಭಾರತಕ್ಕೆ ಗಡೀಪಾರ್ ಮಾಡಲಾಗಿದೆ. ಈ ವಿಷಯದಲ್ಲಿ ನಮ್ಮ ಅಕ್ಷೇಪಣೆಯನ್ನು ಫ್ರೆಂಚ್ ಸರ್ಕಾರಕ್ಕೆ ತಿಳಿಸಲಾಗಿದೆ. ಅಲ್ಲಿಯ ಸರ್ಕಾರಕ್ಕೆ ಕೆಲವು ಗೂಂಡಾಗಳು ನೆರವುನೀಡುತ್ತಾ ನ್ಯಾಯವಾದ ರೀತಿಯ ಬೇಡಿಕೆ ಸಲ್ಲಿಸುತ್ತಲಿರುವ ಪ್ರಜೆಗಳಿಗೆ ವಿಶೇಷ ತೊಂದರೆ ಕೊಡುತ್ತಿದ್ದಾರೆ. ಇವುಗಳನ್ನು ತಪ್ಪಿಸಲು ಭಾರತ ಸರ್ಕಾರವು ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಶ್ರೀ ನೆಹರೂ ತಿಳಿಸಿದ್ದಾರೆ.

ಯುವಕರಿಗೆ ಸೈನಿಕ ಶಿಕ್ಷಣ ವ್ಯವಸ್ಥೆ

ಯುವಕರಿಗೆ ಸೈನಿಕ ಶಿಕ್ಷಣ ಕೊಡುವ ವ್ಯವಸ್ಥೆ ವಿಚಾರದಲ್ಲಿ ಪ್ರಧಾನಿ ನೆಹರೂ ಮತ್ತು ಸಚಿವ ಶ್ರೀ ತ್ಯಾಗಿಯವರು ಪಾರ್ಲಿಮೆಂಟಿನ ಹಲವಾರು ಸದಸ್ಯರೊಡನೆ ಸಮಾಲೋಚನೆ ನಡೆಸಿದರೆಂದೂ; ಅಲ್ಲದೆ ಟೆರಿಟೋರಿಯಲ್ ಸೈನ್ಯ ಪಡೆಯನ್ನು ತೆರೆಯುವುದರಿಂದ ಅನೇಕರು ಸೈನಿಕ ಶಿಕ್ಷಣ ಪಡೆಯಲು ಅವಕಾಶವಾಗುವುದೆಂದೂ ತಿಳಿದುಬಂದಿದೆ. ಅಂತಹ ವ್ಯವಸ್ಥೆಗಾಗಿ ಪಾರ್ಲಿಮೆಂಟಿನ ಮುಂದೆ ಒಂದು ಮಸೂದೆಯನ್ನು ತರಲಾಗುವುದೆಂದು ಗೊತ್ತಾಗಿದೆ.

ಪ್ರಭಾ 11-9-53 ನೇ ಶುಕ್ರವಾರದಿಂದ ದಿನವಹಿ 3 ಪ್ರದರ್ಶನಗಳು
ದೇವದಾಸ್ ಮತ್ತು ಛೋಟಿಬಾಯ್ ಗಳಿಗಿಂತ ಹೆಚ್ಚು ಮನಮುಟ್ಟುವ ಕಥೆ—
ಜೆಚ್. ಎಂ. ಫಿಲ್ಮ್ಸ್ ರವರ
--ಛೋಟಿಮಾ-- [ಹಿಂದಿ]
(ಶರತ್‌ಚಂದ್ರ ಚಟರ್ಜಿಯವರ "ಬಿಂದೂರ್ ಛೇಲಿ" ಎಂಬ ಕಥೆಯ ಅನುವಾದ)
ಪಾತ್ರ:--ಮಿರಾಮಿತ್ರ, ಅಶಿತ್‌ಬರಾನ್, ಮಾಲಿನಾ,ಪಹರಿಸನ್ಯಾಲ್ ಮತ್ತು ಪಕೂರ್
ಸಂಗೀತ:-ಪಂಕಜ್‌ಮಲ್ಲಿಕ್.
ಬೆಳಗಿನ ಪ್ರದರ್ಶನ 11-9-53 ರಿಂದ ಮೂರು ದಿನಗಳು
ಪಂಕಜ್‌ಮಲ್ಲಿಕ್, ಭಾರತಿ ನಟಿಸಿರುವ ನ್ಯೂ ಥಿಯೇಟರ್ಸ್‌ರವರ "ಡಾಕ್ಟರ್"

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮
ಸಮಾಚಾರ
ದಿನಪತ್ರಿಕೆ ಸಂಪುಟ ೪ ಸಂಚಿಕೆ ೨೦
೯-೯-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕುದುರೆ ಜೂಜುಕೋರರಿಗೆ ಶಿಕ್ಷೆ

ಮೈಸೂರು ೯

ರಾಜಧಾನಿಯ ದೇವರಾಜ ಮಾರ್ಕೆಟ್ಟಿನ ಪಿಂಗಾಣಿ ಸಾಮಾನು ವರ್ತಕರಾದ ಎಂ. ಅಬ್ದುಲ್ ಖಾದರ್ ಎಂಬುವರ ಅಂಗಡಿಯಲ್ಲಿ ಕಳೆದ ೫ ನೇ ತಾರೀಖು ಕುದುರೆ ಜೂಜಿನ ಬಗ್ಗೆ ಬಕೆಟ್ ಷಾಪು ನಡೆಸುತ್ತಿದ್ದುದನ್ನು ಬಿ. ಡಿವಿಜನ್ ಪೋಲಿಸ್ ಇನ್ಸ್‌ಪೆಕ್ಟರ್ ಶ್ರೀ ಆಂದಿಯಪ್ಪನವರು ಪತ್ತೆಮಾಡಿ ೧೧-೯-೦ ರೂಗಳನ್ನು ವಶಪಡಿಸಿಕೊಂಡು ಇವರ ಮೇಲೆ ಮೊಕದ್ದಮೆ ಹೂಡಿದ್ದರು.

ಅಬ್ದುಲ್ ಖಾದರ್ ಮತ್ತು ಅಕ್ತಾರ್ ಮೊಹಿದ್ದೀನರವರಿಗೆ ತಲಾ ೨೦ ರೂ. ಜುಲ್ಮಾನೆ, ಅಂಗಡಿ ಮಾಲೀಕ ಅಬ್ದುಲ್ ಖಾದರಿಗೆ ಒಂದುತಿಂಗಳು ಸಜಾ, ೨೦೦ ರೂ. ಜುಲ್ಮಾನೆ ತಪ್ಪಿದಲ್ಲಿ ಮತ್ತೊಂದು ತಿಂಗಳು ಸಜಾವನ್ನು ದ್ವಿತೀಯ ನ್ಯಾಯಾಧೀಶರು ನಿನ್ನೆ ವಿಧಿಸಿದರು.

ಸಚಿವರಲ್ಲಿ ಆಯುರ್ವೇದ ವಿದ್ಯಾರ್ಥಿಗಳ ನಿಯೋಗ

ಮೈಸೂರು ೯

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜ್ ವಿದ್ಯಾರ್ಥಿಗಳು ಮೊನ್ನೆ ಸಲ್ಲಿಸಿದ ಮನವಿಯ ವಿಚಾರದಲ್ಲಿ ನಿನ್ನೆ ದಿನ ಕಾಲೇಜಿನ ಪ್ರಿನ್ಸಿಪಾಲ್ ಮತ್ತು ವಿದ್ಯಾರ್ಥಿಗಳ ಪ್ರತಿನಿಧಿಗಳನ್ನು ಬರಮಾಡಿಕೊಂಡು ಕಾಲೇಜಿನ ಅಭಿವೃದ್ಧಿ ಕಾರ್ಯಕ್ರಮವನ್ನು ಕೂಡಲೇ ಕೈಗೊಳ್ಳುವುದಾಗಿಯೂ, ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸುವುದಾಗಿಯೂ ಆಶ್ವಾಸನೆ ಇತ್ತರೆಂದು ಗೊತ್ತಾಗಿದೆ.

ವಿದ್ಯಾರ್ಥಿಗಳ ಪ್ರತಿನಿಧಿಗಳು ನಿನ್ನೆದಿವಸ ವಿದ್ಯಾಸಚಿವರನ್ನೂ, ಆರೋಗ್ಯಮಂತ್ರಿಗಳನ್ನೂ ಕಂಡು ನಾಲ್ಕುವರ್ಷಗಳಿಂದಲೂ, ಕೋರುತ್ತಿರುವ ಬೇಡಿಕೆಗಳು ಸಂಬಂಧಪಟ್ಟವರ ತೀವ್ರ ಗಮನಕ್ಕೆ ಬಾರದುದನ್ನು ಹೇಳಿ ಸರಿಯಾದ ಸೌಲಭ್ಯಗಳನ್ನು ಒದಗಿಸಿಕೊಡುವಂತೆ ಮನವಿ ಮಾಡಿಕೊಂಡಿದ್ದಕ್ಕೆ ಶೀಘ್ರದಲ್ಲೇ ಕಾರ್ಯಕ್ರಮ ಕೈಗೊಳ್ಳುವುದಾಗಿ ಭರವಸೆ ಇತ್ತಿದ್ದಾರೆಂದು ಗೊತ್ತಾಗಿದೆ.

ಗೌರಿ ಗಣೇಶ ಹಬ್ಬಕ್ಕೆ ಅಂಗಡಿ ಕಾನೂನು ಇಲ್ಲ

ಮೈಸೂರು ೯

ಗೌರಿ ಮತ್ತು ಗಣೇಶ ಹಬ್ಬಕ್ಕಾಗಿ ಸಾರ್ವಜನಿಕರು ಸಾಮಗ್ರಿಗಳನ್ನು ಕೊಳ್ಳುವುದಕ್ಕೆ ಅನುಕೂಲವಾಗುವಂತೆ ಇದೇ ಶುಕ್ರವಾರ ಮತ್ತು ಶನಿವಾರ ದಿನಗಳಲ್ಲಿ ಅಂಗಡಿಯವರು ಪೂರಾ ತೆರೆದಿರಲು ಅಂಗಡಿ ಕಾನೂನು ಬಗ್ಗೆ ವಿನಾಯಿತಿ ಕೊಡಲಾಗಿದೆಯೆಂದು ಮೈಸೂರು ಜಿಲ್ಲಾಧಿಕಾರಿಗಳು ಆಜ್ಞೆಮಾಡಿದ್ದಾರೆ.

ಆಂಧ್ರ ಕಾಂಗ್ರೆಸ್‌ನಲ್ಲಿ ಸಹ ಸದಸ್ಯತ್ವ ಸಾಧ್ಯವಿಲ್ಲ

ಪ್ರಜಾಸೋಷಲಿಸ್ಟ್ ಪಕ್ಷದ ಹೇಳಿಕೆ

ನೂತನ ಆಂಧ್ರಪ್ರಾಂತ್ಯದಲ್ಲಿ ರಚನೆಯಾಗುವ ಸರ್ಕಾರದಲ್ಲಿ ಪ್ರಜಾಸೋಷಲಿಸ್ಟ್ ಪಕ್ಷವು ಯಾವ ರೀತಿ ಸಹಕರಿಸಬೇಕೆಂಬ ವಿಷಯವನ್ನು ಪಕ್ಷದ ಕಾರ್ಯ ನಿರ್ವಾಹಕ ಮಂಡಲಿಯವರು ಸದ್ಯದಲ್ಲೇ ಸಭೆ ಸೇರಿ ವಿಷಯವನ್ನು ಪರಿಶೀಲಿಸುವರೆಂದು ಪಕ್ಷದ ಕಾರ್ಯದರ್ಶಿ ಶ್ರೀ ಗೋರೆಯವರು ತಿಳಿಸಿದ್ದಾರೆ. ಯಾವ ಸದಸ್ಯರೂ ಎರಡು ರಾಜಕೀಯ ಪಕ್ಷದಲ್ಲಿ ಸದಸ್ಯರಾಗಿರಲು ಸಾಧ್ಯವಿಲ್ಲ. ತಮ್ಮ ಪಕ್ಷದವರು ಕಾಂಗ್ರೆಸ್ ಪಕ್ಷದಲ್ಲಿ ಸಹ ಸದಸ್ಯನಾಗಿರಲು ಮಾರ್ಗವೇಯಿಲ್ಲ. ಆರೀತಿಯಾಗಿ ಇರಲು ಪಕ್ಷವು ಶ್ರೀ ಟಿ. ಪ್ರಕಾಶಂರವರಿಗೆ ಅನುಮತಿಯನ್ನು ನೀಡಿಲ್ಲವೆಂದು ಅವರು ತಿಳಿಸಿದ್ದಾರೆ.

ಆಂಧ್ರಪ್ರಾಂತ್ಯದ ಮಂತ್ರಿಮಂಡಲ ವಿಷಯನಾಗಿ ಶ್ರೀ ಸಂಜೀವರೆಡ್ಡಿಯವರು ಮದರಾಸಿನಲ್ಲಿ ನಿನ್ನೆ ಮಾತನಾಡುತ್ತಾ ಸರ್ಕಾರ ರಚನೆಯಲ್ಲಿ ಕಾಂಗ್ರೆಸ್ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಇತರ ಪಕ್ಷದವರು ಸಹಕರಿಸಿದರೆ ಸಮ್ಮಿಶ್ರ ಸರ್ಕಾರ ರಚನೆಯಾಗುವುದು. ಆದರೆ ಮುಖ್ಯಮಂತ್ರಿಗಳು ಕಾಂಗ್ರೆಸ್ಸಿಗರೇ ಇರಬೇಕು ಅಲ್ಲದೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಮತ್ತು ಮುಖ್ಯಮಂತ್ರಿ ಒಬ್ಬರೇ ಆಗಿರಬಾರದು ಎಂದು ಹೇಳಿದ್ದಾರೆ.

ಅಖಿಲಭಾರತ ಪ್ರಾಥಮಿಕ ಉಪಾಧ್ಯಾಯರ ಸಮ್ಮೇಳನ

ಅಖಿಲಭಾರತ ಪ್ರಾಥಮಿಕ ಉಪಾಧ್ಯಾಯರ ಪ್ರಥಮ ಸಮ್ಮೇಳನವು ನಾಗಪುರದಲ್ಲಿ ಡಿಸೆಂಬರ್ ತಿಂಗಳಿನಲ್ಲಿ ನಡೆಯುವುದು. ಪ್ರಧಾನಿ ನೆಹರೂರವರು ಅದರ ಪ್ರಾರಂಭೋತ್ಸವ ನಡೆಸುವರು. ಕೇಂದ್ರದ ವ್ಯವಸಾಯಸಚಿವ ಡಾ|| ಪಂಜಾಬ್‌ರಾವ್ ದೇಶಮುಖರನ್ನು ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಚುನಾಯಿಸಲಾಗಿದೆ. ಹತ್ತು ವರ್ಷಕ್ಕಿಂತ ಕಡಮೆ ವಯಸ್ಸಿನ ೧೦ಸಾವಿರ ಮಂದಿ ಬಾಲಕ ಬಾಲಕಿಯರ ಪೆರೇಡ್ ಒಂದನ್ನು ಆಗ ಏರ್ಪಡಿಸಲಾಗುವುದು.

೨ ಲಕ್ಷ ರೂ. ದೇವರ ಆಭರಣಗಳ ಕಳುವು

ಹೈದರಾಬಾದ್ ಸಂಸ್ಥಾನದ ಅದಿಲಬಾದ್ ಜಿಲ್ಲೆಯ ಮಹೂರ್‌ನಲ್ಲಿರುವ ಶ್ರೀ ದತ್ತಾತ್ರೇಯ ದೇವಸ್ಥಾನದಲ್ಲಿ ೨ ಲಕ್ಷ ರೂ. ಬೆಲೆಬಾಳುವ ಆಭರಣಗಳ ಕಳವು ಆಗಿದೆಯೆಂದೂ, ಚಿನ್ನದ ದೇವರನ್ನೂ ಸಹ ಅಪಹರಿಸಲಾಗಿದೆಯೆಂದೂ ವರದಿಯಾಗಿದೆ.

ಸಂಸ್ಥಾನದಲ್ಲಿ ಹೊಸ ಚುನಾವಣೆ ಆಗಬೇಕು

ಪ್ರಜಾಸೋಷಲಿಸ್ಟ್‌ಪಕ್ಷದ ಒತ್ತಾಯ

ಬೆಂಗಳೂರು ೯

ಮೈಸೂರು ಸಂಸ್ಥಾನದ ಪ್ರಜಾಸೋಷಲಿಸ್ಟ್ ಪಕ್ಷದ ಕಾರ್ಯನಿರ್ವಾಹಕ ಸಮಿತಿ ಸಭೆಯು ಮೊನ್ನೆ ಬೆಂಗಳೂರಿನಲ್ಲಿ ನಡೆದು ಕಾಂಗ್ರೆಸ್ ಪಕ್ಷದಲ್ಲಿ ಒಡಕು ಉಂಟಾಗಿ ರಾಜಕೀಯ ಗೊಂದಲವಾಗಿರುವುದರ ಬಗ್ಗೆ ತೀವ್ರ ಕಳವಳವನ್ನು ವ್ಯಕ್ತಪಡಿಸಿ, ಕೂಡಲೇ ಸಂಸ್ಥಾನದಲ್ಲಿ ಚುನಾವಣೆ ನಡೆಯಬೇಕೆಂದು ನಿರ್ಣಯಮಾಡಿದೆ. ಈಗ ಆಡಳಿತದಲ್ಲಿರುವ ಪಕ್ಷವು ತಮ್ಮ ಕಾರ್ಯವನ್ನು ಸಮರ್ಪಕವಾಗಿ ನಡೆಸದೆ ಜನರ ಮನ್ನಣೆಯನ್ನು ಕಳೆದುಕೊಂಡು, ವೃಥಾ ಅಧಿಕಾರಲಾಲಸೆಗಾಗಿ ಹವಣಿಸುತ್ತಿದ್ದಾರೆಂದೂ ಸಭೆಯು ಅಭಿಪ್ರಾಯಪಟ್ಟಿದೆ.

ಈಗ ಸರ್ಕಾರದ ಸಾಂಸ್ಕೃತಿಕ ಪ್ರಚಾರಕಾರ್ಯವು ಕಾಂಗ್ರೆಸ್ಸಿಗಳು ಈಗಿನ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಜನರಲ್ಲಿ ಮರೆಸುವುದಕ್ಕಾಗಿ ಪ್ರಚಾರ ಕಟ್ಟೆಗಳಾಗಿರುವುದರಿಂದ ಅದರಲ್ಲಿ ಭಾಗವಹಿಸಕೂಡದೆಂದೂ ಸಮಿತಿಯು ತೀರ್ಮಾನಿಸಿದೆ.

ಸಚಿವರುಗಳ ವಾಪಸು

ಮೈಸೂರು ೯

ಕಳೆದ ೩ ದಿನಗಳಿಂದ ರಾಜಧಾನಿಯಲ್ಲಿದ್ದ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈದಿನ ಬೆಳಗ್ಗೆ ಬೆಂಗಳೂರಿಗೆ ಪ್ರಯಾಣ ಬೆಳೆಸಿದರು ಅವರು ಇದೇ ೧೩ನೇ ತಾರೀಖು ರಾತ್ರಿ ರೈಲಿನಲ್ಲಿ ಮದರಾಸಿಗೆ ತೆರಳಿ,-ಬಳ್ಳಾರಿ ವರ್ಗಾವಣೆ ವಿಚಾರದಲ್ಲಿ ಶ್ರೀ ರಾಜಾಜಿಯವರೊಡನೆ ಮಾತುಕತೆ ನಡೆಸುವರು. ಇದೇ ೨೧ ನೇ ತಾರೀಖು ದೆಹಲಿಗೆ ತೆರಳಿ ಪ್ರಧಾನಿಯವರೊಡನೆ ಮೈಸೂರಿನ ರಾಜಕೀಯದ ಬಗ್ಗೆ ಮಾತುಕತೆ ನಡೆಸುವರು.

ಗೃಹಸಚಿವ ಶ್ರೀ ಸಿದ್ದವೀರಪ್ಪ ಮತ್ತು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಈದಿನ ಬೆಳಗ್ಗೆ ಭದ್ರಾವತಿಗೆ ಪ್ರಯಾಣ ಬೆಳೆಸಿದರು.

ಸಚಿವರುಗಳಾದ ಶ್ರೀ ಚನ್ನಯ್ಯ ಮತ್ತು ಕಡಿದಾಳ್ ಮಂಜಪ್ಪನವರು ಬೆಂಗಳೂರಿಗೆ ಈದಿನ ಹಿಂತಿರುಗಿದರು.

ಜಿಲ್ಲಾಬೋರ್ಡುಗಳ ಚುನಾವಣೆ ಆಗಬೇಕು

ಮೈಸೂರು ಜಿಲ್ಲಾಬೋರ್ಡು ಅಧ್ಯಕ್ಷರ ಒತ್ತಾಯ

ಮೈಸೂರು ೯

ಮೈಸೂರು ಜಿಲ್ಲಾಬೋರ್ಡು ಸಭೆಯು ನಿನ್ನೆ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಜಿಲ್ಲೆಯಲ್ಲಿ ಡಾ|| ಮೋದಿಯವರು ಈ ತಿಂಗಳು ಮಧ್ಯಭಾಗದಿಂದ ಕೈಗೊಳ್ಳುವ ಉಚಿತ ನೇತ್ರಚಿಕಿತ್ಸೆಗಾಗಿ ಖರ್ಚಾಗುವ ಹಣವನ್ನು ಬೋರ್ಡಿನವರು ಕೊಡಬೇಕೆಂದು ತೀರ್ಮಾನಿಸಲಾಯಿತು. ಪುರಸಭೆಗಳು ಮತ್ತು ಸರ್ಕಾರದವರು ಇದಕ್ಕೆ ಸಹಾಯ ಮಾಡಬೇಕೆಂದೂ ಮನವಿಮಾಡಲಾಯಿತು.

ಗುಂಡ್ಲುಪೇಟೆ ತಾಲ್ಲೂಕು ನೇನಕಟ್ಟೆ, ಮತ್ತು ಟಿ. ನರಸೀಪುರ ತಾಲ್ಲೂಕು ಕೊಡಗಹಳ್ಳಿಗಳಲ್ಲಿ ಆಸ್ಪತ್ರೆ ತೆರೆಯಬೇಕೆಂದೂ ನಿರ್ಧರಿಸಲಾಯಿತು. ಹೆಗ್ಗಡದೇವನಕೋಟೆ ತಾಲ್ಲೂಕು ಸರಗೂರಿನಲ್ಲಿ ಕಟ್ಟಲಾಗುವ ಹೆರಿಗೆ ಆಸ್ಪತ್ರೆಗೆ ೧೦ ಸಾವಿರ ರೂಪಾಯಿಗಳ ಗ್ರಾಂಟು ಮತ್ತು ಚಾಮರಾಜನಗರ ತಾಲ್ಲೂಕು ಕುದೇರಿನ ಹೆರಿಗೆ ಆಸ್ಪತ್ರೆಗೆ ೭ ಸಾವಿರ ರೂ. ಗ್ರಾಂಟು ಕೊಡಲಾಯಿತು.

ಬೋರ್ಡಿನ ಚಟುವಟಿಕೆ ಬಗ್ಗೆ ಅಧ್ಯಕ್ಷರು ಪ್ರಾರಂಭದಲ್ಲಿ ಮಾತನಾಡುತ್ತಾ-ಜಿಲ್ಲೆಯಲ್ಲಿ ಪ್ಲೇಗ್ ಮತ್ತು ಕಾಲರಾ ನಿವಾರಣಾ ಕಾರ್ಯಕ್ರಮ ಯಶಸ್ವಿಯಾಗಿ ನಡೆದು ೧೦ ಸಾವಿರ ರೂ ಖರ್ಚಿನಿಂದ ಡಿ. ಡಿ. ಟಿ. ದ್ರಾವಕವನ್ನು ಉಪಯೋಗಿಸಿದುದರಿಂದ ಆ ಕಾಹಿಲೆಗಳನ್ನು ಹತೋಟಿಗೆ ತರಲಾಗಿದೆಯೆಂದು ತಿಳಿಸಿದರು. ಈಗ ಬೋರ್ಡಿನ ಆಡಳಿತದಲ್ಲಿ ೬೩೫ ಮೈಲಿಗಳಷ್ಟು ರಸ್ತೆ ಇದ್ದು ಅವನ್ನು ನೋಡಿಕೊಳ್ಳಲು ೨ ಲಕ್ಷ ರೂ. ಖರ್ಚಾಗುವುದರಿಂದ ಪಂಚಾಯಿತಿಗಳು ಹಣಸಹಾಯ ಮಾಡಬೇಕೆಂದು ಅಧ್ಯಕ್ಷರು ಕೋರಿದರು.

ಈಗಿನ ಜಿಲ್ಲಾಬೋರ್ಡ್ ಕಳೆದ ೬ ವರ್ಷ ೪ ತಿಂಗಳುಗಳಿಂದ ಇರುವುದರಿಂದ ಕೂಡಲೇ ಚುನಾವಣೆ ಆಗಬೇಕೆಂದೂ ಅವರು ತಿಳಿಸಿದರು.

ಚುನಾವಣೆ ತಕರಾರು ಅರ್ಜಿ ವಜಾ

ಮೈಸೂರು ೯

ರಾಜಧಾನಿಯ ಶ್ರೀ ಕನ್ನಿಕಾಪರಮೇಶ್ವರಿ ಸಹಕಾರ ಸಂಘದ ಕಾರ್ಯಕಾರಿಸಮಿತಿಯ ಚುನಾವಣೆಯು ಕ್ರಮಬದ್ಧವಾಗಿಲ್ಲವೆಂದು ಶ್ರೀ ಜಿ. ವಿ. ನರಸಿಂಹಸ್ವಾಮಿಶೆಟ್ಟಿಯವರು ಸಲ್ಲಿಸಿದ್ದ ತಕರಾರು ಅರ್ಜಿಯನ್ನು ಅಸಿಸ್ಟೆಂಟ್‌ರಿಜಿಸ್ಟ್ರಾರ್ ರವರು ತಳ್ಳಿಹಾಕಿ, ಚುನಾವಣೆ ಕ್ರಮಬದ್ಧವಾಗಿದೆಯೆಂದು ಆಜ್ಞೆ ಮಾಡಿದ್ದಾರೆ.

ದೇಶದಲ್ಲಿ ಆಹಾರ ಪರಿಸ್ಥಿತಿ ಉತ್ತಮವಾಗಿದೆ

ಅನೇಕ ಪ್ರಾಂತ್ಯಗಳಲ್ಲಿ ಅತ್ಯಧಿಕ ಆಹಾರ ಉತ್ಪನ್ನ

ದೇಶದಲ್ಲಿ ಆಹಾರ ಪರಿಸ್ಥಿತಿಯು ಅತ್ಯುತ್ತಮವಾಗಿದೆ. ನಿಯಂತ್ರಣ ರದ್ದು, ಸ್ವತಂತ್ರ ಮಾರಾಟ ಮುಂತಾದುವನ್ನು ಜಾರಿಗೆ ತಂದ ಮೇಲೆ ಪರಿಸ್ಥಿತಿ ದಿನೇ ದಿನೇ ಉತ್ತಮವಾಗುತ್ತಿದೆ. ಅಲ್ಲದೆ ಈ ಸಾಲಿನಲ್ಲಿ ಅಕ್ಕಿ, ಜೋಳ, ಬಾರ್ಲಿ ಮುಂತಾದ ಆಹಾರ ಬೆಳೆಗಳು ಕಳೆದ ಯಾವ ವರ್ಷದಲ್ಲೂ ಆಗದಷ್ಟು ಅಧಿಕ ಪ್ರಮಾಣದಲ್ಲಿ ಆಗಿದೆ. ಗೋಧಿ ಮತ್ತು ಭತ್ತದ ಬೆಳೆಯ ವಿಸ್ತೀರ್ಣವು ವಿಶೇಷವಾಗಿ ಹೆಚ್ಚಿದೆ. ಪ್ರಾಂತ್ಯಗಳಲ್ಲಿ ಆಹಾರ ದಾಸ್ತಾನು ವಿಪರೀತವಾಗಿದೆ ಆದ್ದರಿಂದ ವಿದೇಶಗಳಿಂದ ಆಹಾರ ಆಮದು ಪ್ರಮಾಣವನ್ನು ಕಡಮೆ ಮಾಡಲಾಗುತ್ತದೆ. ಸದ್ಯಕ್ಕೆ ಬರ್ಮಾದಿಂದ ಅಕ್ಕಿ ತರಿಸುವುದಿಲ್ಲ. ದೇಶದಲ್ಲಿ ೯ ರಾಜ್ಯಗಳು ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಾಗಿ ಆಹಾರವನ್ನು ಬೆಳೆದಿವೆ ಎಂದು ಕೇಂದ್ರ ವ್ಯವಸಾಯ ಸಚಿವ ಡಾ॥ ಪಂಜಾಬ್‌ರಾವ್ ದೇಶಮುಖ್ ರವರು ನಿನ್ನೆಯ ದಿನ ಪ್ರಸಾರ ಭಾಷಣವೊಂದನ್ನು ಮಾಡುತ್ತ ತಿಳಿಸಿದ್ದಾರೆ.

ಈಗಿನ ಪರಿಸ್ಥಿತಿಯಲ್ಲಿ ವ್ಯಾಪಾರಗಾರರು ಗ್ರಾಹಕರ ಅವಶ್ಯಕತೆ ಬಗ್ಗೆ ಉತ್ತಮ ರೀತಿಯಲ್ಲಿ ವರ್ತಿಸಬೇಕಾದುದು ಅತ್ಯಗತ್ಯವೆಂದು ಅವರು ಹೇಳಿದ್ದಾರೆ.

ಸಂಜೀವರೆಡ್ಡಿ ನಾಯಕರಾಗಿರಲು ಅನರ್ಹರು

ಶ್ರೀ ಸಂಜೀವರೆಡ್ಡಿಯವರು ಆಂಧ್ರದ ಸಮ್ಮಿಶ್ರ ಪಕ್ಷನಾಯಕರಾಗಿರಲು ಅನರ್ಹರು ಎಂಬುದು ತಮ್ಮ ಪಕ್ಷದ ಸ್ಪಷ್ಟವಾದ ಮತ್ತು ಖಚಿತವಾದ ಅಭಿಪ್ರಾಯವೆಂದು ಕೃಷಿಕ ಲೋಕ ಪಕ್ಷದ ಕಾರ್ಯದರ್ಶಿ ಶ್ರೀ ಎನ್. ವಿ. ನಾಯ್ಡು ರವರು ಹೇಳಿಕೆಯಿತ್ತಿದ್ದಾರೆ. ಹಾಗೇನಾದರೂ ಅವರು ಮುಖ್ಯಮಂತ್ರಿಯಾದಲ್ಲಿ ಪೆಪ್ಸುವಿನಂತೆ ಗೌರ್ನರ್ ಆಡಳಿತ ಬರುವುದು ಖಂಡಿತ ಎಂದು ಅವರು ಹೇಳಿದ್ದಾರೆ.

ಹರತಾಳ ಆಚರಿಸಿದ್ದಕ್ಕೆ ೧೯೬ ಜನರ ದಸ್ತಗಿರಿ

ಮನೆಕೆಲಸಿಗೆ ಮತ್ತು ಆಕ್ಯಾಯ ವಿಧಿಸಿದ್ದಕ್ಕೆ ಹರತಾಳವನ್ನು ಆಚರಿಸಿದ್ದಕ್ಕಾಗಿ ಇಲ್ಲಿಯವರೆಗೆ ಜೈಪುರದಲ್ಲಿ ೧೯೬ ಜನರ ದಸ್ತಗಿರಿಗಳಾಗಿವೆ.

ವಿಜ್ಞಾನಶಾಸ್ತ್ರ ಪ್ರಯೋಗಕ್ಕೆ ಕೇಂದ್ರದ ನೆರವು

ವಿಜ್ಞಾನಶಾಸ್ತ್ರಗಳಲ್ಲಿ ಪ್ರಯೋಗಗಳನ್ನು ನಡೆಸಲು ಪ್ರಾರಂಭಿಸಿ ದ್ರವ್ಯಾನುಕೂಲವಿಲ್ಲದೆ ಅವುಗಳನ್ನು ಮುಂದುವರಿಸಲು ತೊಂದರೆಯಾಗಿರುವವರಿಗೆ ಕೇಂದ್ರ ಸರ್ಕಾರವು ಧನಸಹಾಯ ಮಾಡಲು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಬಳ್ಳಾರಿ ವಿಲನೀಕರಣ ಮಹೋತ್ಸವ

ಬೆಂಗಳೂರು ೯

ಅಕ್ಟೋಬರ್ ಒಂದನೇ ತಾರೀಖಿನ ದಿನ ಬಳ್ಳಾರಿ ವಿಲನೀಕರಣ ಮಹೋತ್ಸವವನ್ನು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಡೆಸುವರೆಂದು ತಿಳಿಯಬರುತ್ತದೆ.

ಶ್ರಮದಾನ ಚಳುವಳಿ

ಆಚಾರ್ಯ ವಿನೋಬಾಭಾವೆಯವರು ನಡೆಸುತ್ತಲಿರುವ ಭೂದಾನ ಚಳುವಳಿಯಂತೆಯೇ ಉತ್ತರ ಪ್ರದೇಶದಲ್ಲಿ ಶ್ರಮದಾನ ಚಳುವಳಿಯನ್ನು ನಡೆಸಲು ಸಂಘಗಳನ್ನು ಸ್ಥಾಪಿಸಲಾಗಿದೆ. ಈ ಸಂಘಗಳಲ್ಲಿ ಸದಸ್ಯರಾಗುವವರು ವಾರಕ್ಕೆ ೨ ಗಂಟೆಕಾಲವಾದರೂ ಸ್ವಯಂಸೇವೆಯನ್ನು ಮಾಡಬೇಕಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೮—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೮—	೨೬—೨
ಎಳ್ಳು	೬೦—೨	೮೩—೨
ಕುಸುಬೆ	೪೭—೬	೪೭—೧೨
ಹೆಸರು	—	—
ಹುರಳು	—	—
ಅಲಸಂದೆ	೬೨—೨	—
ಹೊಂಗೆಬೀಜ	—	—
ಅವರೆ	—	—
ಉದ್ದು	—	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	೫—೮	೭—೮
ಸೀಗೆಕಾಯಿ	೬—೧೨	೭—೩
ಬೆಲ್ಲ	—	—
ತೆಂಗಿನಕಾಯಿ	೧೯೪	೨೭೦

ಬಳ್ಳಾರಿ ಬಗ್ಗೆ ಈಗಿನ ನೀತಿ ಬದಲಾವಣೆಯಿಲ್ಲ

ಹಿರಿಯ ಶಾಸನಸಭೆಯಲ್ಲಿ ಡಾ॥ ಕಟ್ಜು ಹೇಳಿಕೆ

ಕರ್ನೂಲನ್ನು ಆಂಧ್ರಪ್ರಾಂತ್ಯದ ರಾಜಧಾನಿಯಾಗಿ ಮುಂದುವರಿಸಿಕೊಂಡು ಬರುವ ವಿಷಯದಲ್ಲಿ ಕೇಂದ್ರವು ನೈತಿಕವಾದ ಒತ್ತಾಯ ಹಾಕುವುದಾಗಿಯೂ, ಬಳ್ಳಾರಿ ಬಗ್ಗೆ ಸರ್ಕಾರ ಒಂದು ತೀರ್ಮಾನಕ್ಕೆ ಬಂದಿರುವುದನ್ನು ಬದಲಾಯಿಸುವುದಿಲ್ಲ ಕೇಂದ್ರ ಗೃಹಸಚಿವ ಡಾ॥ ಕಟ್ಜುರವರು ಹಿರಿಯ ಶಾಸನಸಭೆಯಲ್ಲಿ ಆಂಧ್ರ ಮಸೂದೆ ವಿಷಯದಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಭಾಷಾವಾರು ಪ್ರಾಂತ್ಯ ರಚನೆಗೆ ಆಂಧ್ರ ಪ್ರಾಂತ್ಯವು ಮಾರ್ಗದರ್ಶಕವಾಗಿದೆ. ಇದು ಉತ್ತಮವಾಗಿ ಕೆಲಸ ಮಾಡಿದಲ್ಲಿ ಆಗ ಇತರ ಪ್ರಾಂತ್ಯಗಳ ರಚನೆಯು ಸುಗಮವಾಗಿ ನಡೆಯುತ್ತದೆ. ಹೊಸ ಭಾಷಾವಾರು ಪ್ರಾಂತ್ಯ ರಚನೆಯಿಂದ ಕೇಂದ್ರಸರ್ಕಾರದ ವೆಚ್ಚವು ಹೆಚ್ಚುವುದಾದರೆ ಆಗ ಈ ಕಾರ್ಯವನ್ನೇ ನಿರಾಕರಿಸಬೇಕಾಗುತ್ತದೆ. ಈ ಪ್ರಾಂತ್ಯಗಳ ರಚನೆ ಮುನ್ನ ಅವು ಕೇಂದ್ರ ಸರ್ಕಾರದ ಆರ್ಥಿಕ ಸ್ಥಿತಿಯಮೇಲೆ ಏನು ಪರಿಣಾಮವನ್ನುಂಟು ಮಾಡುವುದೆಂಬುದನ್ನು ಚೆನ್ನಾಗಿ ಪರಿಶೀಲಿಸಬೇಕಾಗಿದೆ. ಅಲ್ಲದೆ ಪ್ರಾಂತ್ಯ ವಿಂಗಡನೆ ಕಾಲದಲ್ಲಿ ಭಾಷೆಗಳ ಜೊತೆಗೆ ಪ್ರದೇಶಗಳ ಐತಿಹಾಸಿಕ ಹಿನ್ನೆಲೆ ಆರ್ಥಿಕ ಪರಿಸ್ಥಿತಿ ಮುಂತಾದುವನ್ನು ಗಮನಿಸಬೇಕಾಗಿದೆ. ಆದಕ್ಕಾಗಿಯೇ ಈ ವಿಷಯಗಳನ್ನು ಕೂಲಂಕುಶವಾಗಿ ಪರಿಶೀಲಿಸಲು ವಿಶೇಷಾಧಿಕಾರವುಳ್ಳ ಮಂಡಲಿಯನ್ನು ಸದ್ಯದಲ್ಲೇ ನೇಮಿಸಲಾಗುತ್ತದೆ-ಎಂದು ಡಾ॥ ಕಟ್ಜುರವರು ತಿಳಿಸಿದ್ದಾರೆ.

ಮದುವೆಗಳು ರಿಜಿಸ್ಟರ್ ಆಗಬೇಕು

ಬೊಂಬಾಯಿ ಸರ್ಕಾರವು ಒಂದು ಆಜ್ಞೆಯನ್ನು ಹೊರಡಿಸಿ, ಪ್ರಾಂತ್ಯದಲ್ಲಿ ನಡೆಯುವ ಎಲ್ಲಾ ಮದುವೆಗಳು ರಿಜಿಸ್ಟರ್ ಆಗಬೇಕೆಂದು ತಿಳಿಸಿದೆ. ಹಾಗೆ ರಿಜಿಸ್ಟರ್ ಮಾಡಿಸದಿದ್ದಲ್ಲಿ ಅದು ಅಪರಾಧವಾಗುತ್ತದೆ.

ಅಕ್ಕಿ ದಾಸ್ತಾನುಗಾರರ ಮೇಲೆ ಕ್ರಮ

ಮಲಬಾರಿನಲ್ಲಿ ಅನೇಕರು ಅಕ್ಕಿಯನ್ನು ದಾಸ್ತಾನು ಮಾಡಿ ಅಧಿಕ ಲಾಭ ಪಡೆಯುತ್ತಿರುವುದನ್ನು ನಿಲ್ಲಿಸಲು ಮದ್ರಾಸ್ ಸರ್ಕಾರದವರು ಅವರ ಬಳಿ ಇರುವ ದಾಸ್ತಾನನ್ನು ವಶಪಡಿಸಿಕೊಳ್ಳಲು ನಿರ್ಧರಿಸಿದ್ದಾರೆ

ಭಾರತಕ್ಕೆ ಕಾಮೆಟ್ ವಿಮಾನ

ಗಂಟೆಗೆ ೫೦೦ ಮೈಲಿಗಳ ವೇಗದಲ್ಲಿ ಚಲಿಸುವ ಮತ್ತು ೧೫೪ ಮಂದಿ ಪ್ರಯಾಣಿಕರನ್ನು ಒಯ್ಯುವ ೩ ಕಾಮೆಟ್ ವಿಮಾನಗಳನ್ನು ೧೯೫೬-೫೭ರಲ್ಲಿ ಭಾರತ ಸರ್ಕಾರವು ಬ್ರಿಟನ್ನಿನಿಂದ ಕೊಳ್ಳುವುದೆಂದೂ, ಒಂದು ವಿಮಾನಕ್ಕೆ ೭,೭೫,೦೦೦ರೂ. ಬೆಲೆಯೆಂದು ಹೇಳಲಾಗಿದೆ.

ವಿಶ್ವ ಸಂಸ್ಥೆ ಅಧಿವೇಶನಕ್ಕೆ ಭಾರತ ನಿಯೋಗ

ವಿಶ್ವಸಂಸ್ಥೆಯ ಅಧಿವೇಶನದಲ್ಲಿ ಭಾಗವಹಿಸಲು ಭಾರತ ನಿಯೋಗವು ಶ್ರೀಮತಿ ವಿಜಯಲಕ್ಷ್ಮಿಯವರ ನಾಯಕತ್ವದಲ್ಲಿ ಈ ದಿನ ನ್ಯೂಯಾರ್ಕಿಗೆ ಪ್ರಯಾಣ ಮಾಡುತ್ತದೆ. ಈ ನಿಯೋಗದಲ್ಲಿ ಶ್ರೀ ವಿ. ಕೆ. ಕೃಷ್ಣಮೆನನ್‌ರವರು ಸಹ ಇದ್ದಾರೆ.

ರೈಲ್ವೆ ವರಮಾನದಲ್ಲಿ ಕಡಮೆ

ಭಾರತ ರೈಲ್ವೆ ವರಮಾನದಲ್ಲಿ ಕಳೆದ ವರ್ಷ ಇಳಿಮುಖವಾಯಿತೆಂದು ಕೇಂದ್ರ ರೈಲ್ವೆ ಸಚಿವರು ತಿಳಿಸಿದ್ದಾರೆ. ೧೯೫೧-೫೨ರಲ್ಲಿ ೨೭೫.೨೮ ಕೋಟಿ ರೂ. ವರಮಾನವಿದ್ದು, ೧೯೫೨-೫೩ರಲ್ಲಿ ೨೬೯.೭೯ ಕೋಟಿ ರೂಗಳು ಬಂದಿತೆಂದು ತಿಳಿಸಲಾಗಿದೆ.

ಅಗ್ಗವಾಗಿ ಸಿಕ್ಕುತ್ತದೆ !   ಅಗ್ಗವಾಗಿ ಸಿಕ್ಕುತ್ತದೆ !

ಗೌರಿಹಬ್ಬಕ್ಕಾಗಿ ಸರಕುತೀರಿಕೆಯ ಅಮೋಘ ಮಾರಾಟ !

2-9—53 ರಿಂದ   12—9—53 ರ ವರೆಗೆ

ವಿಪರೀತ ಕಡಮೆ ಬೆಲೆ ! ಶೇಕಡ ೫೦ ರಷ್ಟು ಕಡಮೆ ! ಹತ್ತಿ ಬಟ್ಟೆ ಬೆಲೆಯದರದಲ್ಲೇ ಶುದ್ಧವಾದ ರೇಷ್ಮೆಯ ಷರ್ಟಿಂಗ್ ಮತ್ತು ಕೋಟಿಂಗ್‌ಗಳು.

ಮೊದಲು ಬಂದವರಿಗೆ ಪ್ರಥಮ ಅವಕಾಶ........

ಈ ಕೆಳಕಂಡ ಷೋ ರೂಮುಗಳಿಗೆ ಭೇಟಿಕೊಡಿ——

೧. ಮೈಸೂರು ಸರ್ಕಾರಿ ರೇಷ್ಮೆ ಕಾರ್ಖಾನೆ,
ಮಾನಂದವಾಡಿ ರಸ್ತೆ ಮೈಸೂರು.

೨. ಮೈಸೂರು ಆರ್ಟ್ಸ್ ಅಂಡ್ ಕ್ರಾಫ್ಟ್ಸ್ ಡಿಪೋ,
ಮಹಾತ್ಮಾ ಗಾಂಧಿ ರಸ್ತೆ, ಬೆಂಗಳೂರು.

ಮೈಸೂರು ಸರ್ಕಾರಿ ರೇಷ್ಮೆ ಕಾರ್ಖಾನೆ, ಮೈಸೂರು.

ಅಪೇರ

11--9--53 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಮಲ್ಲೇಶ್ವರಿ

[ತೆಲುಗು]

ಪಾತ್ರ:—ಎನ್. ಟಿ. ರಾಮರಾವ್, ಭಾನುಮತಿ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪   **ಸಮಾಚಾರ**   ದಿನಪತ್ರಿಕೆ
ರಿಜಿಸ್ಟರ್   ಸಂಪುಟ ೪
ನಂ. ಎಂ. ೫೩೧೮   ಸಂಚಿಕೆ ೨೧

೧೦-೯-೧೯೫೩ ನೇ ಗುರುವಾರ]   ★   ಸಂಪಾದಕರು:—ಜಿ. ಎಲ್. ಸ್ವಾಮಿ

ರೈಲ್ವೆ ನೌಕರರ ಕುಂದು ಕೊರತೆಗಳು

ಮೈಸೂರು ೧೦

ದಕ್ಷಿಣಭಾರತ ರೈಲ್ವೆ ನೌಕರರ ಸಂಘದ ಮೈಸೂರು ವರ್ಕ್‌ಷಾಪ್ ಶಾಖೆಯ ನೌಕರರ ಬಹಿರಂಗ ಸಭೆಯು ನಿನ್ನೆ ಸಂಜೆ ವರ್ಕ್‌ಷಾಪ್ ಆವರಣದಲ್ಲಿ ಶ್ರೀ ಕೆ.ಎನ್. ಎಸ್. ಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರು ರೈಲ್ವೆಯನ್ನು ಕೇಂದ್ರ ಸರಕಾರವು ೧-೪-೫೦ ರಲ್ಲಿ ತನ್ನ ಆಡಳಿತಕ್ಕೆ ವಶಪಡಿಸಿಕೊಂಡು ಸಂಬಳಸಾರಿಗೆ ಮತ್ತು ಇತರ ಸೌಲಭ್ಯಗಳನ್ನು ಕೇಂದ್ರ ರೈಲ್ವೆ ಮಟ್ಟಕ್ಕೆ ಏರಿಸಿರುವುದಾಗಿ ಒಪ್ಪಿಕೊಂಡು ಈಗ ಆರೀತಿ ಮಾಡದೆ ನೌಕರರಿಗೆ ತುಂಬಾ ಅನ್ಯಾಯವನ್ನು ಮಾಡಲಾಗಿದೆ. ವರ್ಕ್‌ಷಾಪಿನಲ್ಲಿ ಅನೇಕ ನೌಕರರು ೧೦-೨೦ ವರ್ಷಗಳಿಂದಲೂ ಕೆಲಸಮಾಡುತ್ತಿದ್ದರೂ ಅವರ ಸ್ಥಿತಿಗತಿಗಳನ್ನು ಉತ್ತಮಪಡಿಸದೆ ಇತ್ತೀಚೆಗೆ ಬಂದವರನ್ನು ಸೀನಿಯರ್ ಆಗಿ ಮಾಡಲಾಗಿದೆ. ಸರ್ವಿಸ್ ವೇಟೇಜ್, ಪ್ರಾವಿಡೆಂಟ್ ಫಂಡ್, ಬೋನಸ್, ಸೀನಿಯಾರಿಟಿ ಪ್ರಕಾರ ಹುದ್ದೆ, ಹುಂಗಾಮಿ ನೌಕರರ ಖಾಯಂ, ಓವರ್ ಟೈಮ್ ಮತ್ತು ರಾತ್ರಿ ಕಾಲದ ಭತ್ಯ, ಜನರಲ್ ಭಡ್ತಿ, ಮನೆ ಬಾಡಿಗೆ ಭತ್ಯ ಇವೇ ಮುಂತಾದ ವಿಚಾರಗಳಲ್ಲಿ ಕೇಂದ್ರಸರ್ಕಾರವು ಮೈಸೂರಿನಲ್ಲಿರುವ ರೈಲ್ವೆ ನೌಕರರಿಗೆ ತುಂಬಾ ಅನ್ಯಾಯಮಾಡಿದ್ದಾರೆ. ಈ ಬಗ್ಗೆ ಹಿಂದಿನ ತಿಂಗಳು ನೌಕರರ ಸಂಘದವರು ಮದರಾಸಿಗೆ ಹೋಗಿ ಅಧಿಕಾರಿಗಳಲ್ಲಿ ಮನವಿ ಮಾಡಿಕೊಂಡು ಯಾವ ಪರಿಹಾರವೂ ದೊರೆಕಿಲ್ಲದಿರುವುದು ವಿಷಾದಕರ. ನೌಕರರುಗಳು ಸಂಘಟಿತರಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕು--ಎಂದು ಅಧ್ಯಕ್ಷರು ತಿಳಿಸಿದರು.

ಸದ್ಯದಲ್ಲೇ ದೆಹಲಿಯಲ್ಲಿ ಸೇರಲಿರುವ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ಮುಂದೆ ರೈಲ್ವೆ ನೌಕರರ ವೇಟೇಜ್ ಮತ್ತು ಸೆಂಟ್ರಲ್ ಪೇ ಕಮಿಷನ್ ಶಿಫಾರಸುಗಳ ವಿಚಾರ ಬರುವುದೆಂದೂ, ಮೈಸೂರಿನ ಪರವಾಗಿ ಶ್ರೀ ಕೆ. ಎನ್. ಎಸ್. ಮೂರ್ತಿಯವರು ಹಾಜರಿರುವರೆಂದೂ ಸಭೆಯಲ್ಲಿ ತಿಳಿಸಲಾಯಿತು.

ಶ್ರೀಮನ್ಮಹಾರಾಜರು ವಾಪಸು

ಮೈಸೂರು ೧೦

ದಕ್ಷಿಣ ಭಾರತದ ಪ್ರವಾಸ ಮುಗಿಸಿಕೊಂಡು ಈದಿನ ಮಧ್ಯಾಹ್ನ ಶ್ರೀಮನ್ಮಹಾರಾಜರವರು ರಾಜಧಾನಿಗೆ ಹಿಂತಿರುಗಿದರು. ಅವರು ನಿನ್ನೆ ಮದರಾಸಿನಲ್ಲಿ ಮುಖ್ಯಮಂತ್ರಿ ಶ್ರೀ ರಾಜಾಜಿಯವರ ಗೃಹಕ್ಕೆ ಭೇಟಿಯಿತ್ತು ಅವರೊಡನೆ ಮಾತುಕತೆ ನಡೆಸಿದರು.

ಪ್ರಾಚೀನ ವಸ್ತುಸಂಗ್ರಹಾಲಯಕ್ಕೆ ಅಪಾರ ನಷ್ಟ

ಪಾಕೀಸ್ತಾನ್‌ನಲ್ಲಿರುವ ಇಂಡಸ್ ನದಿಯಲ್ಲಿ ಇತ್ತೀಚೆಗೆ ಪ್ರವಾಹ ಬಂದು ಅತಿ ಪ್ರಾಚೀನ ಮೊಹೆಂಜೊದಾರ್ ವಸ್ತು ಸಂಗ್ರಾಲಯಕ್ಕೆ ಅಪಾರ ನಷ್ಟ ಉಂಟಾಗಿದೆಯೆಂದೂ ಅಲ್ಲಿದ್ದ ೫ ಸಾವಿರ ವರ್ಷಗಳ ಪ್ರಾಚೀನವಾದ ೪ ಅಡಿ ಉದ್ದದ ಆನೆಕೊಂಬು ನುಚ್ಚುನೂರಾಗಿದೆಯೆಂದೂ 1½ ಲಕ್ಷ ರೂ. ಗಳಷ್ಟು ಅನೇಕ ಸಾಮಾಗ್ರಿಗಳು ನಾಶವಾಗಿವೆಯೆಂದೂ ವರದಿಯಾಗಿದೆ.

ಪ್ರಪಂಚದ ಅರ್ಧಜನರು ಅನಕ್ಷರಸ್ಥರು

ವಿಶ್ವದಲ್ಲಿರುವ ಅರ್ಧ ಭಾಗದ ಗಂಡಸರು ಮತ್ತು ಹೆಂಗಸರಿಗೆ ಓದುಬರಹ ಬರುವುದಿಲ್ಲವೆಂದೂ, ಪ್ರಪಂಚದ ಅರ್ಧಭಾಗದ ಮಕ್ಕಳ ಜನ ಸಂಖ್ಯೆಗೆ ಶಾಲೆಗಳೇ ಇಲ್ಲವೆಂದೂ ವಿಶ್ವಸಂಸ್ಥೆಯ ವರದಿಯು ತಿಳಿಸಿರುತ್ತದೆ. ಕೆಲವು ರಾಷ್ಟ್ರಗಳಲ್ಲಿ ಶಾಲಾ ಕಟ್ಟಡಗಳು ನಿರ್ಮಿತವಾಗುವುದಕ್ಕಿಂತಲೂ ಹೆಚ್ಚಾಗಿ ಮಕ್ಕಳ ಜನನ ವಿಶೇಷವಾಗಿ ಅನಕ್ಷರಸ್ಥರು ಹೆಚ್ಚುತ್ತಿದ್ದಾರೆಂದು ತಿಳಿಸಲಾಗಿದೆ. ಏಷ್ಯಾ, ರಷ್ಯಾ, ಆಫ್ರಿಕ, ಲ್ಯಾಟಿನ್ ಅಮೆರಿಕ ಮತ್ತು ಫೆಸಿಫಿಕ್ ದ್ವೀಪಗಳಲ್ಲಿ ಶಾಲೆಗಳ ಪರಿಸ್ಥಿತಿ ತುಂಬಾ ಶೋಚನೀಯವೆಂದೂ, ವಿಶ್ವದಲ್ಲಿ ಕೋಟ್ಯಾಂತರ ಜನರು ಕೆಳಮಟ್ಟದಲ್ಲಿ ಜೀವಿಸುತ್ತಿರುವುದು ಅತೃಪ್ತಿ ಮತ್ತು ಅಶಾಂತಿಗೆ ಕಾರಣವಾಗಿ ವಿಶ್ವದ ಶಾಂತಿಗೇ ಧಕ್ಕೆ ಉಂಟಾಗಿದೆಯೆಂದೂ ವರದಿಯಲ್ಲಿ ಎಚ್ಚರಿಕೆ ಕೊಡಲಾಗಿದೆ.

ಹಿಂದುಳಿದ ರಾಷ್ಟ್ರಗಳು ಪ್ರಬುದ್ಧಮಾನಕ್ಕೆ ಬರಬೇಕಾದರೆ ಕಡ್ಡಾಯ ಮತ್ತು ಉಚಿತ ವಿದ್ಯಾಭ್ಯಾಸ ಪದ್ಧತಿ ಜಾರಿಗೆ ಬರಬೇಕು--ಎಂದು ಸಲಹೆ ಮಾಡಲಾಗಿದೆ.

ಏಕೀಕರಣಕ್ಕಾಗಿ ವಿದ್ಯಾರ್ಥಿಗಳ ಮುಷ್ಕರ

ಕರ್ನಾಟಕ ಏಕೀಕರಣವಾಗಬೇಕೆಂದು ಒತ್ತಾಯಪಡಿಸಲು ರಾಯಚೂರಿನ ಶಾಲಾ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕಳೆದ ೪-೫ ದಿನಗಳಿಂದ ಮುಷ್ಕರ ಹೂಡಿ, ಮೆರವಣಿಗೆ ಪ್ರದರ್ಶನ ಮಾಡುತ್ತಿದ್ದಾರೆ.

ಕೊರಿಯಾ ಯುದ್ಧದ ಫಲ

ಯುದ್ಧದ ಪರಿಣಾಮವಾಗಿ ಕೊರಿಯಾದಲ್ಲಿ ಈಗ ಒಂದು ಲಕ್ಷ ಅನಾಥ ಮಕ್ಕಳು, ೩ ಲಕ್ಷ ವಿಧವೆಯರು, ೩೦ ಸಾವಿರ ಅಂಗಹೀನರು ಇರುವುದಾಗಿ ಇತ್ತೀಚೆಗೆ ಸಂಗ್ರಹಿಸಿದ ಅಂಕಿ ಅಂಶಗಳಿಂದ ತಿಳಿಯಬರುತ್ತದೆ.

ಶಾಂತಿಮಾರ್ಗವೇ ಕಾರ್ಮಿಕರ ಅಭ್ಯುದಯ

ಕಬ್ಬಿಣ ಕಾರ್ಖಾನೆ ಕಾರ್ಮಿಕರ ಮೇಲ್ಪಂಕ್ತಿ

ಭದ್ರಾವತಿ, ೧೦

ಇಲ್ಲಿನ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಕಾರ್ಮಿಕರಿಗೂ ಮತ್ತು ಅಧಿಕಾರ ವರ್ಗದವರಿಗೂ ಶಾಂತಿಸ್ಥಾಪನೆಯ ಕರಾರು ಆಗಿ ಕಾರ್ಮಿಕರು ಇನ್ನು ೩ ವರ್ಷಕಾಲ ಯಾವ ಬೇಡಿಕೆಗಳನ್ನು ಮಂಡಿಸುವುದಿಲ್ಲವೆಂದು ಒಪ್ಪಿರುವ ಸಂಬಂಧದಲ್ಲಿ ನೆನ್ನೆ ಸಂಜೆ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಾರಂಭ ನಡೆಯಿತು. ಕಾರ್ಮಿಕ ಸಚಿವ ಶ್ರೀ ಎ. ಜಿ. ರಾಮಚಂದ್ರ ರಾಯರು ಅದರಲ್ಲಿ ಭಾಗ ವಹಿಸಿದ್ದರು

ಈ ಕಾರ್ಖಾನೆಯ ಇತಿಹಾಸದಲ್ಲಿ ಒಂದು ನವಯುಗ ಪ್ರಾರಂಭವಾಗಿದೆ. ಇಲ್ಲಿನ ಕಾರ್ಮಿಕರು ಇತರ ಕೆಲಸಗಾರರಿಗೆ ಒಂದು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಹೋರಾಟ ಮತ್ತು ಘರ್ಷಣೆಯ ಮನೋವೃತ್ತಿಯು ಕೈಗಾರಿಕಾ ಅಭಿವೃದ್ಧಿಗೆ ಧಕ್ಕೆ ತರುವುದು ಅದನ್ನು ಬಿಟ್ಟು ಶಾಂತಿಯಿಂದ ವರ್ತಿಸಿದರೆ ಹೆಚ್ಚು ಲಾಭದಾಯಕವೆಂಬ ಅಂಶವನ್ನು ದೇಶಕ್ಕೆ ಇಲ್ಲಿನ ಕಾರ್ಮಿಕರು ತೋರಿಸಿಕೊಟ್ಟಿದ್ದಾರೆ. ೧೯೪೨ರಲ್ಲಿ ಹೊರತು ಮತ್ತಾವಾಗಲೂ ಈ ಕಾರ್ಖಾನೆಯಲ್ಲಿ ಮುಷ್ಕರ ನಡೆದಿಲ್ಲ ಇದು ವಿಶೇಷ ಗಮನಾರ್ಹವಾದ ಮತ್ತು ಸಂತೋಷವಾದ ಸಂಗತಿ. ಕಾರ್ಮಿಕರಿಗೆ ವಸತಿ, ವೈದ್ಯ ಮತ್ತು ಇತರ ಎಲ್ಲ ಸೌಲಭ್ಯ ಹೆಚ್ಚಿಸಲು ಸರ್ಕಾರ ಕಾರ್ಯಕ್ರಮ ಕೈಗೊಳ್ಳುವುದು ಎಂದು ಸಚಿವ ಶ್ರೀ ಸಿದ್ದವೀರಪ್ಪನವರು ತಿಳಿಸಿದರು.

ಕೆಲಸಗಾರರಲ್ಲಿ ಮತ್ತು ಆಡಳಿತವರ್ಗದಲ್ಲಿ ಮಧುರ ಬಾಂಧವ್ಯ ನೆಲಸಿ ಉಭಯತ್ರರು ಮಾತೃಭೂಮಿಯ ಅಭ್ಯುದಯಕ್ಕಾಗಿ ದುಡಿಯಬೇಕೆಂದು ಸಚಿವ ಶ್ರೀ ರಾಮಚಂದ್ರರಾಯರು ಹೇಳಿದರು. ಟ್ರೇಡ್ ಯೂನಿಯನ್‌ಗಳು ಕಾರ್ಮಿಕರ ಹಕ್ಕನ್ನುಮಾತ್ರವೇ ಮನಸ್ಸಿನಲ್ಲಿಟ್ಟುಕೊಂಡು ರಾಷ್ಟ್ರದ ಸಂಪದಭಿವೃದ್ಧಿಯ ಸಂಬಂಧವಾಗಿ ತಮ್ಮ ಮೇಲಿರುವ ಕರ್ತವ್ಯಗಳಿಗೆ ಗಮನಕೊಡದೆ ಹಕ್ಕುಗಳಾಗಿಯೇ ಹೋರಾಡುವುದನ್ನು ಬಿಟ್ಟು ದೇಶದ ಅಭಿವೃದ್ಧಿ ಸಾಧನೆಗೆ ನೆರವು ನೀಡಬೇಕೆಂದು ಅವರು ಮನವಿ ಮಾಡಿದರು.

ಸಂಸ್ಥಾನದಲ್ಲಿ ಕಾಲರಾ

ಬೆಂಗಳೂರು ೧೦

ಸೆಪ್ಟೆಂಬರ್ ೩ನೇ ತಾರೀಖಿಗೆ ಮುಕ್ತಾಯವಾಗುವ ವಾರದಲ್ಲಿ ಸಂಸ್ಥಾನದಲ್ಲಿ ಕಾಲರಾ ರೋಗವು ೧೫೦ ಜನರಿಗೆ ತಗುಲಿ ೭೨ ಮಂದಿ ಸತ್ತಿರುವುದಾಗಿ ತಿಳಿಯಬರುತ್ತದೆ. ದೊಡ್ಡಬಳ್ಳಾಪುರ, ಮುಳಬಾಗಿಲು, ಬಾಗೇಪಲ್ಲಿ, ಬಂಗಾರಪೇಟೆ, ಮದ್ದೂರು, ರಾಮನಗರ ಮತ್ತು ಶ್ರೀನಿವಾಸಪುರಗಳಲ್ಲಿ ಕಾಲರಾ ರೋಗ ವರದಿಯಾಗಿದೆ.

ಅಮಲ್ದಾರರಿಗೆ ಬಡ್ತಿ

ಅಮಲ್ದಾರರುಗಳಾದ ಶ್ರೀಗಳಾದ ಎಸ್. ಎಚ್. ಪಾಳೇಗಾರ್, ಟಿ. ಪದ್ಮಾಜಿರಾವ್, ಎಂ. ಎಸ್. ಪರಮಶಿವಯ್ಯ, ಇವರನ್ನು ಅಸಿಸ್ಟೆಂಟ್ ಕಮಿಷನರಾಗಿ ಬಡ್ತಿ ಮಾಡಲಾಗಿದೆ.

ಸರ್ಕಾರದ ಉಪಕಾರ್ಯದರ್ಶಿ

ಸೆಕ್ರೆಟರಿಯೇಟಿನ ಸೂಪರಿಂಟೆಂಡೆಂಟರಾದ ಶ್ರೀ ಎಂ.ವಿ. ಕೃಷ್ಣರವರನ್ನು ಮತ್ತು ಲ್ಯಾಂಡ್ಸ್ ರಿಕಾರ್ಡ್ಸ್ ಕಮಿಷನರ್. ಅಸಿಸ್ಟೆಂಟ್ ಶ್ರೀ ರಘುನಾಥರಾವ್ ಮಾನೆಯವರನ್ನು ಸರ್ಕಾರದ ಉಪಕಾರ್ಯದರ್ಶಿಗಳಾಗಿ ನೇಮಿಸಲಾಗಿದೆ.

ಸ್ತ್ರೀಯರ ಬಗ್ಗೆ ಅಸಭ್ಯ ವರ್ತನೆ ಅಪರಾಧ

ಮಹಿಳೆಯರ ವಿಚಾರದಲ್ಲಿ ಅಸಭ್ಯವಾದ ಹಾಸ್ಯ ನುಡಿಗಳನ್ನಾಡುವುದು ಮತ್ತು ತುಚ್ಛವಾದ ರೀತಿಯಲ್ಲಿ ವರ್ತಿಸುವವರನ್ನು ವಾರೆಂಟ್ ಇಲ್ಲದೆ ದಸ್ತಗಿರಿಮಾಡಿ ಅವರನ್ನು ಶಿಕ್ಷೆಗೆ ಗುರಿಪಡಿಸಲು ಕಾನೂನು ತಿದ್ದುಪಡಿ ಮಸೂದೆಯನ್ನು ಪಾಕೀಸ್ತಾನ ಸರ್ಕಾರದವರು ಪಾರ್ಲಿಮೆಂಟಿನ ಮುಂದೆ ತರಲಿದ್ದಾರೆ.

ನೆಹರೂ ದಕ್ಷಿಣ ಭಾರತ ಪ್ರವಾಸ

ಅಕ್ಟೋಬರ್ ಒಂದನೇ ತಾರೀಖು ಕರ್ನೂಲಿನಲ್ಲಿ ಪ್ರಧಾನಿ ನೆಹರೂರವರು ಆಂಧ್ರಪ್ರಾಂತ್ಯದ ಪ್ರಾರಂಭೋತ್ಸವವನ್ನು ನೆರವೇರಿಸಿ ಆದಿನವೇ ಹೈದರಾಬಾದಿಗೆ ಹೋಗುವರು ಮಾರನೇದಿನ ಅವರು ಮದರಾಸಿಗೆ ಬಂದು ಅನಂತರ ಮಧುರೆ, ಕೃಷ್ಣಕೊಯಮತ್ತೂರು ಭವಾನಿ ಮುಂತಾದ ಸ್ಥಳಗಳಿಗೆ ಭೇಟಿಯಿತ್ತು ೫ ನೇ ತಾರೀಖು ದೆಹಲಿಗೆ ಹಿಂತಿರುಗುವರು.

ಬರೋಡ ಆಕಾಶವಾಣಿ ಬಂದ್

ಅಹಮದಾಬಾದಿನಲ್ಲಿ ೫೦ ಕಿಲೋವಾಟ್ಸ್ ಪ್ರಸಾರ ಯಂತ್ರವನ್ನು ಸ್ಥಾಪಿಸಿದ ಕೂಡಲೇ ಬರೋಡಾದಲ್ಲಿರುವ ಆಕಾಶವಾಣಿ ಕೇಂದ್ರವನ್ನು ಮುಚ್ಚಲಾಗುವುದೆಂದು ತಿಳಿಯಬರುತ್ತದೆ.

ಕಾಶ್ಮೀರದಲ್ಲಿ ಅಮೆರಿಕನ್ನರ ಚಟುವಟಿಕೆ

ಅಮೆರಿಕಾ ರಾಯಭಾರಿಗೆ ಕಾಶ್ಮೀರ ರಾಜ್ಯಾಂಗ ಸಭೆ ಅಧ್ಯಕ್ಷರ ಉತ್ತರ

ಅಂತರ ರಾಷ್ಟ್ರೀಯ ವೇಶದಲ್ಲಿ ವಿದೇಶೀಯರು ಯಾವ ರೀತಿ ವರ್ತಿಸುತ್ತಲಿದ್ದಾರೆಂದು ತಿಳಿದಿರುವ ಕಾಶ್ಮೀರ ಪ್ರಜೆಗಳ ನಡುವೆ ಕರಾಚಿಯಲ್ಲಿರುವ ಅಮೆರಿಕಾ ರಾಯಭಾರಿಯ ಬೇಳೆ ಬೇಯುವುದಿಲ್ಲ--ಎಂದು ಕಾಶ್ಮೀರ ರಾಜ್ಯಾಂಗ ಸಭೆಯ ಅಧ್ಯಕ್ಷ ಗುಲಾಂ ಮಹಮದ್ ಸಾದಿಕ್‌ರವರು ಇತ್ತೀಚೆಗೆ ಒಂದು ಹೇಳಿಕೆಯನ್ನಿತ್ತಿದ್ದಾರೆ.

ಕಾಶ್ಮೀರದಲ್ಲಿ ನಡೆಯುತ್ತಿರುವ ನಿಜಸ್ಥಿತಿಯನ್ನು ಮರೆಮಾಚಿ ಜನರ ಗಮನವನ್ನು ಬೇರೆ ಎಳೆಯಲು ಅಮೆರಿಕಾದ ಮೇಲೆ ಸುಳ್ಳು ಆಪಾದನೆಗಳನ್ನು ಮಾಡಲಾಗುತ್ತಿದೆ ಎಂದು ಪಾಕೀಸ್ತಾನದಲ್ಲಿರುವ ಅಮೆರಿಕಾ ರಾಯಭಾರಿಯವರು ಕಾಶ್ಮೀರದ ವಿಷಯದಲ್ಲಿ ಒಂದು ಹೇಳಿಕೆಯನ್ನಿತ್ತಿದ್ದರು.

ಕಾಶ್ಮೀರ ಕಣಿವೆಯಲ್ಲಿ ಅಮೆರಿಕನ್ನರು ಕಾಲಕಳೆಯುತ್ತಾ ಪ್ರೇಕ್ಷಕರಂತೆ ಇದ್ದರೆ ಅಥವಾ ಇನ್ನೇನಾದರೂ ವಿಶೇಷ ಚಟುವಟಿಕೆಗಳಲ್ಲಿ ಭಾಗ ವಹಿಸಿದ್ದರೆ ಎಂಬ ವಿಷಯವು ವಿಶ್ವದ ಜನತೆಯು ತನ್ನ ಮುಂದೆ ಬರಲಿರುವ ನಿದರ್ಶನಗಳಿಂದ ತೀರ್ಮಾನಿಸಬಹುದು ಎಂದು ಮಿ॥ ಸಿದ್ದಿಕ್‌ರವರು ಹೇಳಿದ್ದಾರೆ.

ರಾಜಾಜಿ-ನಾದಾರ್‌ರವರ ಭಿನ್ನಾಭಿಪ್ರಾಯ ತಾತ್ಕಾಲಿಕ

ಮದ್ರಾಸಿನಲ್ಲಿ ಮುಖ್ಯಮಂತ್ರಿ ರಾಜಾಜಿಯಾಗಿರದೆ ಮತ್ತಾರಾದರು ಇದ್ದರೆ ಪರಿಸ್ಥಿತಿಯು ತೀರ ಹದಗೆಡುತ್ತಿತ್ತು. ಈಗ ರಾಜಾಜಿ ಮತ್ತು ಶ್ರೀ ಕಾಮರಾಜ ನಾದರ್‌ರವರ ಭಿನ್ನತೆಯು ತಾತ್ಕಾಲಿಕವಾದುದು. ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಉಭಯತ್ರರಲ್ಲೂ ಶಕ್ತಿ ಸಾಮರ್ಥ್ಯಗಳಿವೆಯೆಂದು ಆಂಧ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಂಜೀವರೆಡ್ಡಿಯವರು ಹೇಳಿದ್ದಾರೆ.

ಭಾರತಕ್ಕೆ ಪಾಕೀಸ್ತಾನ ಯೋಜನಾ ಸಮಿತಿ ಅಧ್ಯಕ್ಷ

ಭಾರತದ ಅಭಿವೃದ್ಧಿ ಯೋಜನೆಗಳನ್ನು ಪರಿಶೀಲಿಸಲು ಪಾಕೀಸ್ತಾನ ಯೋಜನಾ ಸಮಿತಿಯ ಅಧ್ಯಕ್ಷರಾದ ಜಹೀದ್ ಹುಸೇನ್‌ರವರು ಈವಾರದಲ್ಲಿ ದೆಹಲಿಗೆ ಆಗಮಿಸುವರೆಂದು ತಿಳಿಯಬರುತ್ತದೆ. ಈ ಯೋಜನೆ ತಯಾರಿಸಿದವರು ಮತ್ತು ಕಾರ್ಯಗತ ಮಾಡುತ್ತಿರುವವರೊಡನೆ ಅವರು ಸಮಾಲೋಚನೆ ನಡೆಸುತ್ತಾರೆ.

ತುಂಗಭದ್ರ ಯೋಜನೆಯ ಸಮ್ಮೇಳನ

ತುಂಗಭದ್ರಯೋಜನೆಯ ಸಂಬಂಧವಾಗಿ ಇದೇ ೧೫ನೇ ತಾರೀಖು ಮದ್ರಾಸ್, ಮೈಸೂರು ಮತ್ತು ಹೈದರಾಬಾದ್ ಪ್ರತಿನಿಧಿಗಳ ಸಮ್ಮೇಳನವೊಂದು ಜರುಗಲಿದೆಯೆಂತಿಳಿಯಬರುತ್ತದೆ.

ಪ್ರಜಾಸೋಷಲಿಸ್ಟ್‌ಪಕ್ಷ ಸಭೆ

ನೂತನ ಆಂಧ್ರಪ್ರಾಂತ್ಯ ಸರ್ಕಾರ ರಚನೆಯಲ್ಲಿ ಪ್ರಜಾಸೋಷಲಿಸ್ಟ್ ಪಕ್ಷವು ಯಾವ ರೀತಿ ಸಹಕರಿಸಬೇಕೆಂಬ ವಿಷಯವನ್ನು ತೀರ್ಮಾನಿಸಲು ಪಕ್ಷದ ಸಭೆಯು ಈದಿನ ಮದ್ರಾಸಿನಲ್ಲಿ ನಡೆಯುವುದೆಂದು ತಿಳಿಯಬರುತ್ತದೆ. ಈ ಪಕ್ಷದ ನಾಯಕರಾದ ಶ್ರೀ ಟಿ. ಪ್ರಕಾಶಂರವರು ತಮ್ಮ ಪಕ್ಷವನ್ನು ಬಿಟ್ಟು ಕಾಂಗ್ರೆಸ್ ಸೇರುವುದು ಅಥವಾ ಪಕ್ಷದಲ್ಲಿಯೇ ಇದ್ದುಕೊಂಡು ಕಾಂಗ್ರೆಸ್ಸಿನ ಸಹ ಸದಸ್ಯರಾಗುವ ವಿಷಯವು ಇತ್ಯರ್ಥವಾಗುವುದಾಗಿ ಹೇಳಲಾಗಿದೆ.

ಡಾ॥ ಮುಸಾದಿಕ್‌ರ ವಿಚಾರಣೆ

ಇರಾನಿನ ಮಾಜಿ ಪ್ರಧಾನಿ ಡಾ॥ ಮುಸಾದಿಕ್‌ರನ್ನು ಒಂದು ಕೋರ್ಟ್ ಮಾರ್ಷಲ್ ಮತ್ತೊಂದು ಸುಪ್ರೀಂ ಕೋರ್ಟ್ ಮುಂದೆ ವಿಚಾರಣೆ ನಡೆಸಲಾಗುವುದೆಂದು ಕೋರ್ಟ್ ಮಾರ್ಷಲ್‌ನಲ್ಲಿ ಅವರಿಗೆ ಮರಣದಂಡನೆ ವಿಧಿಸದಿದ್ದರೆ ಅವರ ಮೇಲೆ ಸಿವಿಲ್ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತದೆಂದೂ ಹೇಳಲಾಗಿದೆ.

ದೆಹಲಿ-ಶ್ರೀನಗರ ನಡುವೆ ವಿಮಾನಯಾನ

ಕಾಶ್ಮೀರದಲ್ಲಿ ಪ್ರವಾಸಿಗರ ಸಂಖ್ಯೆಯನ್ನು ಹೆಚ್ಚಿಸಿ, ಅವರಿಗೆ ವಿಶೇಷ ಅನುಕೂಲ ಕಲ್ಪಿಸುವುದಕ್ಕಾಗಿ ದೆಹಲಿ ಮತ್ತು ಶ್ರೀನಗರಗಳ ನಡುವೆ ದಿನವೂ ವಿಮಾನ ಸಂಚಾರ ವ್ಯವಸ್ಥೆಯನ್ನು ಏರ್ಪಡಿಸಿ ಅದಕ್ಕೆ ಈಗಿರುವ ದರ ೧೫೫ ರೂಗಳನ್ನು ೧೨೦ಕ್ಕೆ ಇಳಿಸಲಾಗುತ್ತದೆ. ಈ ಹೊಸ ದರವು ಇದೇ ೧೬ನೇ ತಾರೀಖಿನಿಂದ ಜಾರಿಗೆ ಬರಲಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೯—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೦—	೨೭—
ಎಳ್ಳು	೬೮—೬	೮೨—೧೦
ಹುರುಳಿ	೪೭—	—
ಹೆಸರು	—	—
ಹವಳು	—	—
ಅಲಸಂದೆ	—	—
ಹೊಂಗೆಬೀಜ	೨೨—	—
ಅವರೆ	—	—
ಉದ್ದು	—	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಿಸೇಹಣ್ಣು	೬—೯	—
ಸೀಗೆಕಾಯಿ	೬—೨	—
ಬೆಲ್ಲ	—	—
ತೆಂಗಿನಕಾಯಿ	೧೮೬	೨೫೮

ಪಾರ್ಲಿಮೆಂಟಿಗೆ ಸೈಕಲ್ ಮೇಲೆ

ಪಾರ್ಲಿಮೆಂಟಿನ ಸದಸ್ಯರಾದ ಶ್ರೀ ಪಿ. ದಾಮೋದರನ್‌ರವರು ಮೊನ್ನೆದಿನ ಸಭೆಗೆ ಸೈಕಲ್‌ಮೇಲೆ ಆಗಮಿಸಿದರೆಂದೂ, ಈರೀತಿ ಪಾರ್ಲಿಮೆಂಟ್ ಸದಸ್ಯರು ಸೈಕಲ್‌ಮೇಲೆ ಬರುವುದು ಪ್ರಥಮವೆಂದೂ ಹೇಳಲಾಗಿದೆ.

ಜಿಲ್ಲಾ ಸಮಿತಿಗಳ ನೇಮಕ

ಗೋದಾವರಿ ನದಿ ಪ್ರವಾಹದಿಂದ ನೊಂದವರಿಗೆ ಪರಿಹಾರವನ್ನು ಒದಗಿಸುವುದಕ್ಕೆ ಧನಸಂಗ್ರಹಣೆ ಮುಂತಾದ ಕಾರ್ಯಗಳನ್ನು ಮಾಡಲು ಜಿಲ್ಲಾ ಸಮಿತಿಗಳನ್ನು ರಚಿಸಲಾಗಿದೆ.

೯೦೦ ದಸ್ತಗಿರಿಗಳು

ಪರ್ಶಿಯಾದಲ್ಲಿ ಮಾರ್ಷಲ್ ಜಹೇದಿಯವರು ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡಾಗಿನಿಂದ ಇಲ್ಲಿಯವರೆವಿಗೆ ವಿರೋಧ ಪಕ್ಷದ ೯೦೦ ಜನರನ್ನು ದಸ್ತಗಿರಿ ಮಾಡಿರುವುದಾಗಿ ತಿಳಿಯಬರುತ್ತದೆ.

ಗೋದಾವರಿ ಪ್ರವಾಹ ಪರಿಹಾರಕ್ಕೆ ಚಂದಾ

ಗೋದಾವರಿನದಿ ಪ್ರವಾಹದಲ್ಲಿ ನೊಂದವರ ಪರಿಹಾರಕ್ಕಾಗಿ ಹೈದರಾಬಾದಿನ ಎಲ್ಲಾ ಸಚಿವರು ಮತ್ತು ಶಾಸನ ಸಭಾ ಸದಸ್ಯರು ತಮ್ಮ ಒಂದು ದಿನದ ವೇತನವನ್ನು ಕೊಡಲು ನಿರ್ಧರಿಸಿದ್ದಾರೆಂದು ತಿಳಿಯಬರುತ್ತದೆ.

ಔಷಧಿಗಳಮೇಲೆ ತೆರಿಗೆ ವಜಾ

ಭಾರತದಲ್ಲಿ ತಯಾರಾಗುವ ಔಷಧಿಗಳ ಮೇಲೆ ಕಾಶ್ಮೀರ ಸರ್ಕಾರವು ವಿಧಿಸುತ್ತಲಿದ್ದ ಆಮದು ತೆರಿಗೆಯನ್ನು ಇನ್ನು ಮುಂದೆ ವಸೂಲ್ಮಾಡುವುದನ್ನು ನಿಲ್ಲಿಸಿರುವುದಾಗಿ ಅಧಿಕೃತವಾಗಿ ಪ್ರಕಟಿಸಿದೆ.

ವಾರ್ತಾ ಶಾಖಾಧಿಕಾರಿಗಳ ಸಮ್ಮೇಳನ

ಸಂಸ್ಥಾನ ಸರ್ಕಾರಗಳ ಮತ್ತು ವಾರ್ತಾಧಿಕಾರಿಗಳ ಸಮ್ಮೇಳನವು ಇದೇ ೧೮ ನೇ ತಾರೀಖು ದೆಹಲಿಯಲ್ಲಿ ನಡೆಯುವುದು. ನ್ಯಾಯಾಂಗಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಮತ್ತು ಶ್ರೀ ಸತ್ಯೇರವರು ಅದರಲ್ಲಿ ಭಾಗವಹಿಸುವರು.

ಬರ್ಮಾ ಸಾಲ

ಭಾರತದಿಂದ ಬರ್ಮಾವು ಪಡೆದಿರುವ ಸಾಲದ ಪೈಕಿ ಇನ್ನೂ ೬೭ಕೋಟಿ ರೂಪಾಯಿಗಳನ್ನೂ ಕೊಡಬೇಕಾಗಿದೆಯೆಂದೂ ಈ ವಿಷಯದಲ್ಲಿ ಇದೇ ನವಂಬರ್ ಮಾಹೆಯಲ್ಲಿ ಮಾತುಕತೆ ಪ್ರಾರಂಭವಾಗುವುದೆಂದು ಕೇಂದ್ರ ಅರ್ಥಿಕ ಸಚಿವ ಶ್ರೀ ದೇಶಮುಖ್‌ರವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಚೈನಾದೊಡನೆ ಸಿಂಹಳ ವ್ಯಾಪಾರ

ಚೈನಾದಿಂದ ಸಿಂಹಳವು ಕಮ್ಮಿಯ ದರದಲ್ಲಿ ಅಕ್ಕಿಯನ್ನು ಪಡೆಯಲು ಚೈನಾಕ್ಕೆ ಸರಬರಾಜು ಮಾಡುವ ರಬ್ಬರ್ ಬೆಲೆಯನ್ನು ಸಿಂಹಳ ಸರ್ಕಾರ ಇಳಿಸುವುದಾಗಿ ತಿಳಿಯಬರುತ್ತದೆ.

ಪೋಲೀಸ್ ಮುಖ್ಯಾಧಿಕಾರಿಗಳ ಸಭೆ

ದಕ್ಷಿಣ ಭಾರತದ ರೈಲುಗಳಲ್ಲಿ ಇತ್ತೀಚೆಗೆ ದುಷ್ಕೃತ್ಯಗಳು ವಿಶೇಷವಾಗುತ್ತಿರುವ ವಿಷಯದಲ್ಲಿ ಮದ್ರಾಸ್, ಮೈಸೂರು, ಹೈದರಾಬಾದ್ ಮತ್ತು ತಿರುವಾಂಕೂರ್ ಕೊಚ್ಚಿನ್ನಿನ ಪೋಲೀಸ್ ಮುಖ್ಯಾಧಿಕಾರಿಗಳ ಸಭೆಯೊಂದು ಮದ್ರಾಸ್‌ನಲ್ಲಿರುವ ದಕ್ಷಿಣ ಭಾರತ ರೈಲ್ವೆ ಜನರಲ್ ಮ್ಯಾನೇಜರವರ ಕಛೇರಿಯಲ್ಲಿ ಮೊನ್ನೆಯ ದಿನ ನಡೆಯಿತು. ಕೇಂದ್ರ ಸರ್ಕಾರದ ಇಂಟಲಿಜೆನ್ಸ್ ಬ್ಯೂರೋವಿನ ಡೈರೆಕ್ಟರ್ ಜನರಲ್‌ರವರು ಈ ಸಭೆಯನ್ನು ಕರೆದಿದ್ದರು.

ಮಾಜಿ ಸೈನಿಕರ ಪ್ರತಿಜ್ಞೆ

ದೇಶದಮೇಲೆ ಆಕ್ರಮಣವಾದಲ್ಲಿ ತಮ್ಮ ಕೊನೆಯ ರಕ್ತ ವಿರುವವರೆಗೂ ತಾವು ಅದನ್ನು ಎದುರಿಸಿ ದೇಶವನ್ನು ರಕ್ಷಿಸುವುದಾಗಿ ಕಾಶ್ಮೀರದಲ್ಲಿ ಮಾಜಿ ಸೈನಿಕ ಸಂಘದ ೫೦೦೦೦ ಸದಸ್ಯರು ಪ್ರತಿಜ್ಞೆಯನ್ನು ಮಾಡಿ ಭಕ್ಷಿ ಗುಲಾಂಮಹಮದ್‌ರವರ ಹೊಸ ಸರ್ಕಾರವನ್ನು ಅದರ ಸುಧಾರಣೆಗಳನ್ನು ಸ್ವಾಗತಿಸಿದ್ದಾರೆ.

ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷಣ

ವಿದ್ಯಾರ್ಥಿಗಳು ತಾವು ಓದುವ ಕಾಲದಲ್ಲಿ ದೈಹಿಕ ದುಡಿಮೆ ಮತ್ತು ಸಾಮಾಜಿಕ ಶಿಕ್ಷಣವನ್ನು ಪಡೆಯಲು ಕೇಂದ್ರ ಸರ್ಕಾರವು ಒಂದು ಯೋಜನೆಯನ್ನು ಪ್ರಕಟಿಸಿ ಪ್ರಾಂತ್ಯಗಳ ಅವಗಾಹನೆಗೆ ಕಳುಹಿಸಲಾಗಿದೆಯೆಂದು ಕೇಂದ್ರ ಸರ್ಕಾರದವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ರಣಜಿತ್
11-9-53 ರಿಂದ ಅಮೋಘ ಪ್ರಾರಂಭ
ಗೀತಾಬಾಲಿ, ಗುರುದತ್ ನಟಿಸಿರುವ
ಬಾಜ್ BaaZ
13—9—53 ನೇ ಭಾನುವಾರ ಸ್ಪೆಷಲ್
ಬೆಳಗಿನ ಪ್ರದರ್ಶನ ವಿರುತ್ತೆ

ಹೊಸದಾಗಿ ಬಂದಿದೆ
ರ್‍ಯಾಲಿ, ಬಿ.ಎಸ್.ಎ. ಸೈಕಲ್‌ಗಳು, ಮಕ್ಕಳ ಟ್ರೈಸಿಕಲ್‌ಗಳು ಮತ್ತು ಗಾಡಿಗಳು.
ಶಾರದ ಸೈಕಲ್ ಮತ್ತು ವಾಚ್ ಸ್ಟೋರ್ಸ್, ದೊಡ್ಡಗಡಿಯಾರ ಚೌಕ,
ಮೈಸೂರು.

ರಾಜಕಮಲ್
11-9-53 ರಿಂದ ಅಮೋಘ 3 ನೇ ವಾರ
ಚಂಡಿರಾಣಿ
[ತೆಲುಗು]

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೨೨

೧೧-೯-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಜನರಿಗೆ ಬೇಡವೆಂದ ದಿನವೇ ಅಧಿಕಾರ ತ್ಯಜಿಸುವೆನು

ಮುಖ್ಯಮಂತ್ರಿ ಹನುಮಂತಯ್ಯನವರ ಸ್ಪಷ್ಟ ಹೇಳಿಕೆ

ಬೆಂಗಳೂರು ೧೧

ಮಂತ್ರಿಪದವಿಗೆ ಬರುವವನ ಪಾಡು ಪರೀಕ್ಷೆಗೆ ಕುಳಿತುಕೊಳ್ಳಲು ಸಿದ್ಧಮಾಡಿಕೊಳ್ಳಲು ವಿದ್ಯಾರ್ಥಿಗಳ ಪಾಡಿನಂತೆ. ಅದರಂತೆ ಮಂತ್ರಿಯ ಮೇಲೆ ಒಂದೇ ಸಮನೆ ಭಾರಗಳು ೩೬೫ ದಿನಗಳು ಇರುವುದು. ಮಂತ್ರಿಸ್ಥಾನದಲ್ಲಿರುವವನ ಮೇಲಿನ ಭಾರವು ಅಪ್ರಮಾಣವಾದ್ದು, ಆದ್ದರಿಂದ ಈ ಸ್ಥಾನ ಬಿಟ್ಟು ಹೊರಟುಹೋಗುವಂತಾದರೆ, ಹೊರಟು ಹೋಗುವದಿನ ನಾನು ಬಹಳ ಸಂತೋಷದಿಂದಿರುವೆನು ವಿದ್ಯಾರ್ಥಿಗಳಿಗೆ ರಜಾಸಿಕ್ಕಿದರೆ ಎಷ್ಟು ಸಂತೋಷವಾಗುವುದೋ ನನಗೆ ಅಷ್ಟು ಸಂತೋಷವುಂಟಾಗುವುದು. ಮಂತ್ರಿಪದವಿ ಹೋಯಿತಲ್ಲಾ ಎಂದು ನಾನು ವ್ಯಸನ ಪಡುವುದಿಲ್ಲ. ಇಂದು ನಾನು ಆಡಳಿತದಲ್ಲಿ ಮುಂದುವರಿಯುತ್ತಿದ್ದರೆ ಅದಕ್ಕೆ ಜನಗಳಿಗೆ ನಾನು ಬೇಕಾಗಿರುವುದು. ಜನತೆಗೆ ನಾನು ಬೇಡವೆಂದು ಕಂಡ ತಕ್ಷಣ ನಾನು ಮುಖ್ಯಮಂತ್ರಿ ಪದವಿಯನ್ನು ಬಹಳ ಸಂತೋಷದಿಂದ ಬಿಟ್ಟು ಬಿಡಲು ಸಿದ್ಧನಿದ್ದೇನೆ—ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಉಪಾಧ್ಯಾಯರುಗಳ ಸಂಘದಲ್ಲಿ ತಿಳಿಸಿದ್ದಾರೆ.

ಭಾರತಕ್ಕೆ ೪೦ ಕೋಟಿ ರೂ. ಉಳಿತಾಯ

ಬರ್ಮಾದಿಂದ ಈ ವರ್ಷ ಅಕ್ಕಿಯನ್ನು ತರಿಸಿಕೊಳ್ಳದೆಹೋದ್ದರಿಂದ ಭಾರತಕ್ಕೆ ೪೦ ಕೋಟಿ ರೂ. ಉಳಿತಾಯವಾಯಿತೆಂದು ಕೇಂದ್ರ ಆಹಾರಶಾಖೆಯ ಉಪಸಚಿವರು ತಿಳಿಸಿರುತ್ತಾರೆ.

ಕೊರಿಯಾ ಯುದ್ಧಖೈದಿಗಳ ದಂಗೆ

ಕೊರಿಯಾದ ನಿಸ್ಸೇನೀಕೃತ ಪ್ರದೇಶದಲ್ಲಿರುವ ಶಾಂತಿ ಶಿಬಿರದಲ್ಲಿರುವ ೫೦೦ ಮಂದಿ ಕಮ್ಯೂನಿಸ್ಟ್ ವಿರುದ್ಧ ಉತ್ತರ ಕೊರಿಯನ್ ಯುದ್ಧಖೈದಿಗಳು ದಂಗೆ ಏಳಲು ಯತ್ನಿಸಿರುವುದನ್ನು ಭಾರತೀಯ ಸೈನಿಕರು ಅಡಗಿಸಿದರೆಂದು ವರದಿಯಾಗಿದೆ.

ಭಾರತಕ್ಕೆ ಇಂಡೊನೇಷ್ಯ ಸಹಾಯ

ಭಾರತದ ಕ್ಷಾಮಪೀಡಿತ ಜನರ ಸಹಾಯಕ್ಕಾಗಿ ಇಂಡೊನೇಷ್ಯ ರೆಡ್‌ಕ್ರಾಸ್ ಸಂಸ್ಥೆಯು ೮೬.೬೦ ಕಿಲೋಗಳಷ್ಟು ಆಹಾರಧಾನ್ಯಗಳನ್ನು ಕಳುಹಿಸಿದೆ.

ಸೆಕೆಂಡರಿ ವಿದ್ಯಾಭ್ಯಾಸ ವರದಿ ಪರಿಶೀಲನೆ

ಬೆಂಗಳೂರು ೧೦

ಸೆಕೆಂಡರಿ ವಿದ್ಯಾಭ್ಯಾಸ ಸುಧಾರಣೆ ಬಗ್ಗೆ ಡಾ॥ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರ ಸಮಿತಿಯವರು ಮಾಡಿರುವ ಶಿಫಾರಸನ್ನು ಮೈಸೂರು ವಿದ್ಯಾ ಸುಧಾರಣಾ ಸಮಿತಿಯವರು ಶೀಘ್ರದಲ್ಲಿಯೇ ಸೇರಿ ಪರಿಶೀಲಿಸಿದಮೇಲೆ ಸುಧಾರಣೆಗಳನ್ನು ಕಾರ್ಯಗತಮಾಡಲಾಗುವುದೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿದ್ದಾರೆ.

ಆಂಧ್ರದ ಪ್ರಧಾನಿ ಕಾಂಗ್ರೆಸ್ಸಿಗರೇ ಆಗಬೇಕು

ಆಂಧ್ರ ಶಾಸನಸಭೆಯಲ್ಲಿನ ಕಾಂಗ್ರೆಸ್ ಸದಸ್ಯರ ಸಂಖ್ಯೆಯ ದೃಷ್ಟಿಯಿಂದ ಆಂಧ್ರದ ಪ್ರಧಾನಿಯು ಕಾಂಗ್ರೆಸ್ಸೇತರರಾಗಿರಕೂಡದೆಂದು ಪ್ರಧಾನಿ ನೆಹರೂರವರು ಸ್ಪಷ್ಟವಾಗಿ ತಮಗೆ ತಿಳಿಸಿದರೆಂದು ಶ್ರೀ ಪ್ರಕಾಶಂರವರು ನಿನ್ನೆ ಮದರಾಸಿನಲ್ಲಿ ನಡೆದ ವಿಧಾನ ಸಭೆಯ ಪ್ರಜಾಸೋಷಲಿಸ್ಟ್ ಪಕ್ಷದ ಸಭೆಯಲ್ಲಿ ತಿಳಿಸಿರುತ್ತಾರೆ.

ಆಂಧ್ರ ಪ್ರಾಂತ್ಯದಲ್ಲಿ ಸುಭದ್ರ ಸರ್ಕಾರವನ್ನು ರಚಿಸುವ ದೃಷ್ಟಿಯಿಂದ ಶ್ರೀ ಪ್ರಕಾಶಂರನ್ನು ಪಕ್ಷದ ಕಟ್ಟುಪಾಡುಗಳಿಂದ ಬಿಟ್ಟುಕೊಟ್ಟು ಅವರನ್ನು ಪ್ರಧಾನಿಯನ್ನಾಗಿ ಮಾಡುವ ವಿಚಾರವು ಸಭೆಯಲ್ಲಿ ಚರ್ಚೆ ಆಯಿತು. ಸಭೆಯು ಈ ದಿನವೂ ನಡೆಯಲಿದೆ.

ಬೊಂಬಾಯಿನಲ್ಲಿ ಗೋಧಿ ಹತೋಟಿ ರದ್ದು

ಬೊಂಬಾಯಿ ಪ್ರಾಂತದಲ್ಲಿ ಮುಂದಿನ ತಿಂಗಳು ೧ ನೇ ತಾರೀಖಿನಿಂದ ಗೋಧಿ ಮೇಲಿನ ಹತೋಟಿಯನ್ನು ರದ್ದು ಮಾಡಲಾಗುವುದೆಂದು ಕೇಂದ್ರ ಆಹಾರ ಸಚಿವರು ತಿಳಿಸಿದ್ದಾರೆ.

ಪಟೇಲರ ಭಾಷಣ ಮಾಲೆ

ಅಖಿಲಭಾರತ ರೇಡಿಯೋ ಮೂಲಕ ಪ್ರಮುಖರಿಂದ ಪಟೇಲರ ಭಾಷಣ ಮಾಲೆಯನ್ನು ಏರ್ಪಡಿಸುವ ಯೋಜನೆ ಪರಿಶೀಲನೆಯಲ್ಲಿದೆಯೆಂದು ಕೇಂದ್ರ ವಾರ್ತಾಶಾಖಾ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ದಸರಾ ಸಮಾರಂಭಗಳು ಮಾಮೂಲಿನಂತೆ ನಡೆಯುವುವು

ಮೈಸೂರು ಸರ್ಕಾರದ ಪ್ರಕಟಣೆ

ಮೈಸೂರು ೧೧

ಮೈಸೂರಿನಲ್ಲಿ ಎಂದಿನಂತೆ ದಸರಾ ಉತ್ಸವಗಳೂ ಮತ್ತು ಜಂಬೂಸವಾರಿ ನಡೆಯುವುವೆಂದು ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ.

ದಸರಾ ಮಹೋತ್ಸವವು ಮುಂದಿನ ತಿಂಗಳು ೮ ನೇ ತಾರೀಖಿನಿಂದ ಪ್ರಾರಂಭವಾಗಿ, ೧೮ ನೇ ತಾರೀಖು ಜಂಬೂಸವಾರಿ ನಡೆಯುವುದು.

ಕಾಶ್ಮೀರ ಹೋರಾಟಕ್ಕೆ ಜನಸಂಘದ ಬೆಂಬಲ

ಕಾಂಗ್ರೆಸ್ ಮತ್ತು ಪ್ರಧಾನಿ ನೆಹರೂರವರ ಬಗ್ಗೆ ತಮ್ಮ ಪಕ್ಷದವರಲ್ಲಿ ಎಷ್ಟು ಭಿನ್ನಾಭಿಪ್ರಾಯವಿದ್ದರೂ ಕೂಡ ಪಾಕೀಸ್ಥಾನವು ಕಾಶ್ಮೀರದಮೇಲೆ ಯುದ್ಧ ಹೂಡಿದರೆ ನೆಹರೂ ಸರ್ಕಾರಕ್ಕೆ ತಮ್ಮ ಸಂಪೂರ್ಣ ಬೆಂಬಲ ನೀಡುವುದಾಗಿ ಅಖಿಲ ಭಾರತ ಜನಸಂಘದ ಅಧ್ಯಕ್ಷರು ಭರವಸೆ ಇತ್ತಿದ್ದಾರೆ.

ರೈಲ್ವೆ ಲಂಚ ವಿಚಾರಣಾ ಸಮಿತಿ

ಭಾರತದ ರೈಲ್ವೆಯಲ್ಲಿ ಲಂಚರುಷುವತ್ತನ್ನು ತಡೆಗಟ್ಟಲು ಕೇಂದ್ರ ಸರ್ಕಾರದವರು ಶ್ರೀ ಹೀರಾನಾಥ್ ಕುಂಜ್ರುರವರ ಅಧ್ಯಕ್ಷತೆಯಲ್ಲಿ ಒಂದು ವಿಚಾರಣಾಸಮಿತಿಯನ್ನು ನೇಮಿಸಿದ್ದಾರೆ.

ಶಾಲಾ ಬಾಲಕರಿಗೆ ಪುಸ್ತಕಗಳ ಹಂಚಿಕೆ

೪ ಸಾವಿರ ಮಂದಿ ಬಡ ಮತ್ತು ಹರಿಜನ ಶಾಲಾ ಬಾಲಕರಿಗೆ ಕಾಶಿ ಪುರಸಭೆಯವರು ೧೦ ಸಾವಿರ ರೂ. ಖರ್ಚಿನಲ್ಲಿ ಸ್ಲೇಟು, ಪುಸ್ತಕಗಳನ್ನು ದಾನ ಮಾಡಿದ್ದಾರೆ.

★ ಭಾರತದಲ್ಲಿ ೨೦ ಲಕ್ಷಮಂದಿ ಕುರುಡರಿರುವರೆಂದು ಅಂದಾಜು ಮಾಡಲಾಗಿದೆ,

ಸೂಚನೆ

ವಿನಾಯಕನ ಚೌತಿ ಪ್ರಯುಕ್ತ ನಾಳೆ "ಸಮಾಚಾರ" ಪತ್ರಿಕೆ ಪ್ರಕಟವಾಗುವುದಿಲ್ಲ.

—ವ್ಯವಸ್ಥಾಪಕ.

ಯಾತ್ರಿಕನನ್ನು ಆನೆ ಸಿಗಿಯಿತು

ಕನಕಪುರ ತಾಲ್ಲೂಕು ಸಾತನೂರಿಗೆ ೧೦ ಮೈಲಿಯಲ್ಲಿರುವ ಮುತ್ತತ್ತಿಯಲ್ಲಿ ನಡೆಯುತ್ತಿದ್ದ ಜಾತ್ರೆಗೆ ನಾಗರಸನ ಕೋಟೆ ಕೃಷ್ಣೇಗೌಡ ಎಂಬಾತನು ಹೋಗಿ ಹಿಂತಿರುಗುತ್ತಿದ್ದಾಗ ವಿಶ್ರಾಂತಿಗಾಗಿ ಅಲ್ಲಿಯ ಹೊಳೆಪಕ್ಕದಲ್ಲಿ ಮಲಗಿದ್ದನು ಕೋಪಗೊಂಡ ಆನೆಯೊಂದು ಅಲ್ಲಿಗೆ ಘರ್ಜಿಸುತ್ತಾ ಬಂದು ಮೇಲೆ ಬಿದ್ದು ಆತನನ್ನು ಸಿಗಿದುಹಾಕಿತೆಂದೂ ಹಿಂದೆ ಬರುತ್ತಿದ್ದ ಗುಂಪು ಈ ಭಯಾನಕ ದೃಶ್ಯವನ್ನು ನೋಡಿ ಹೆದರಿ ಓಡಿಹೋದ ಆನೆಯು ಹೊರಟುಹೋದ ಮೇಲೆ ಈಚೆಗೆ ಬಂದರೆಂದು ತಿಳಿಯಬರುತ್ತದೆ.

ಕರ್ನಾಟಕ ವಿಶ್ವವಿದ್ಯಾನಿಲಯದ ಘಟಿಕೋತ್ಸವ

ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾನಿಲಯದ ಘಟಿಕೋತ್ಸವವು ಮುಂದಿನ ತಿಂಗಳು ೨೬ ನೇ ತಾರೀಖು ನಡೆಯುತ್ತದೆ ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣರವರು ಈ ಸಮಾರಂಭದಲ್ಲಿ ಭಾಷಣ ಮಾಡುತ್ತಾರೆ.

ಅಧಿಕೃತ ವಿರೋಧಪಕ್ಷ

ಪಾರ್ಲಿಮೆಂಟಿನಲ್ಲಿ ಒಂದು ಅಧಿಕೃತ ವಿರೋಧಪಕ್ಷವನ್ನು ರಚಿಸಲು ಪ್ರಜಾಸೋಷಲಿಸ್ಟ್ ನಾಯಕ ಆಚಾರ್ಯ ಕೃಪಲಾನಿಯವರು ಪ್ರಯತ್ನಿಸುತ್ತಿರುವುದಾಗಿ ತಿಳಿಯಬರುತ್ತದೆ.

ವಿಶ್ವೇಶ್ವರಯ್ಯನವರ ೯೩ನೇ ವರ್ಧಂತಿ

ಡಾ॥ ಎಂ. ವಿಶ್ವೇಶ್ವರಯ್ಯನವರ ೯೩ನೆಯ ವರ್ಧಂತ್ಯುತ್ಸವವನ್ನು ಇದೇ ೧೫ನೇ ತಾರೀಖು ಆಚರಿಸಲು ಬೊಂಬಾಯಿನ ಜನರು ವ್ಯವಸ್ಥೆ ಮಾಡುತ್ತಿದ್ದಾರೆ.

ಪ್ರಕಾಶಂ ಆಂಧ್ರದ ಮುಖ್ಯಮಂತ್ರಿ

ಶ್ರೀ ಟಿ. ಪ್ರಕಾಶಂರವರು ಪ್ರಜಾಸೋಷಲಿಸ್ಟ್ ಪಕ್ಷವನ್ನು ತ್ಯಜಿಸಿ, ಕಾಂಗ್ರೆಸ್ಸಿಗೆ ಸೇರಿ ಹೊಸ ಆಂಧ್ರಪ್ರಾಂತ್ಯದ ಮುಖ್ಯಮಂತ್ರಿಯಾಗುವರೆಂದು ನಂಬಲರ್ಹವಾದ ಸುದ್ದಿ ಬಂದಿದೆ.

ಒಂದೂವರೆ ಕೋಟಿ ರೂ. ಖಾದಿ ಅಭಿವೃದ್ಧಿ ಯೋಜನೆ

ಭಾರತದಲ್ಲಿ ಖಾದಿ ಅಭಿವೃದ್ಧಿಗಾಗಿ ಅಖಿಲಭಾರತ ಖಾದಿ ಮತ್ತು ಗ್ರಾಮ ಕೈಗಾರಿಕಾ ಬೋರ್ಡು ಒಂದು ಯೋಜನೆ ತಯಾರಿಸಿದೆ. ಅದರಂತೆ ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಗಾಗಿ ೫೧೪ ಲಕ್ಷ ರೂ, ಖಾದಿ ತಯಾರಿಕಾ ಮತ್ತು ಮಾರಾಟ ಕೇಂದ್ರಗಳ ಸ್ಥಾಪನೆಗೆ ೧.೪೩ ಕೋಟಿ ರೂಗಳು ಖರ್ಚು ಮಾಡಬೇಕೆಂದೂ ಶಿಫಾರಸು ಮಾಡಲಾಗಿದೆ.

ವಿದೇಶ ಪ್ರವಾಸದಲ್ಲಿ ರಾಜರುಗಳ ದುಂದು ವೆಚ್ಚ

ಭಾರತದ ಸಂಸ್ಥಾನಗಳ ಅನೇಕ ರಾಜರುಗಳು ವಿದೇಶಿ ಪ್ರವಾಸಗಳಲ್ಲಿ ದುಂದು ವೆಚ್ಚ ಮಾಡುತ್ತಿರುವ ವಿಚಾರವು ಕೇಂದ್ರ ಹಿರಿಯ ಶಾಸನ ಸಭೆಯ ಮುಂದೆ ಬಂದಾಗ ಪರದೇಶಕ್ಕೆ ಹೋಗುವವರಿಗೆ ಹಣ ಮಂಜೂರು ಮಾಡುವಾಗ ಯಾವ ತಾರತಮ್ಯವೂ ಇಲ್ಲವೆಂದೂ, ಆದರೆ ಅವರವರ ದರ್ಜೆಗನುಸಾರವಾಗಿ ಹಣ ಖರ್ಚುಮಾಡಲು ಅನುಮತಿ ಕೊಡಲಾಗುವುದೆಂದೂ, ಹಿಂದೆ ಕೆಲವು ರಾಜರುಗಳು ಪರದೇಶಗಳಲ್ಲಿ ಹಣ ಇಟ್ಟಿದ್ದುದನ್ನು ಈಗ ಅಲ್ಲಿ ಖರ್ಚು ಮಾಡಬಹುದೆಂದೂ ಕೇಂದ್ರ ಹಣಕಾಸಿನ ಉಪಸಚಿವರು ತಿಳಿಸಿದರು.

ಇತ್ತೀಚೆಗೆ ೯ ರಾಜರುಗಳಿಗೆ ವಿದೇಶಕ್ಕೆ ಹೋಗಲು ರಹದಾರಿ ಕೊಡಲಾಯಿತು. ಅವರಲ್ಲೈಕಿ ಮೈಸೂರು ಮಹಾರಾಜರಿಗೆ ೪ ಸಾವಿರ ಪೌಂಡ್, ಸಿರ್‌ಮುರ್ ರಾಜರಿಗೆ ೨ ಸಾವಿರ ಪೌಂಡ್, ರೇವಾ ಮಹಾರಾಜರಿಗೆ ೩ ಸಾವಿರಪೌಂಡ್, ಬಿರಾರ್ ರಾಜಕುಮಾರರಿಗೆ ೫ ಸಾವಿರ ಪೌಂಡು, ಮಹಾರಾಣಿ ಸೇತು ಪಾರ್ವತಿಬಾಯಿಯವರಿಗೆ ೪೩೫೦ ಪೌಂಡ್ ಖರ್ಚುಮಾಡಲು ಅನುಮತಿ ಕೊಡಲಾಯಿತೆಂದು ತಿಳಿಸಲಾಯಿತು.

ಪ್ರಾಥಮಿಕಉಪಾಧ್ಯಾಯರ ಅಭಿವೃದ್ಧಿಗೆ ಪ್ರವಾಸ ಯೋಜನೆ

ಪ್ರಾಥಮಿಕ ಉಪಾಧ್ಯಾಯರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಮತ್ತು ಫೋರ್ಡ್ ಫೌಂಡೇಷನ್‌ರವರು ಸೇರಿ ಒಂದು ಪ್ರವಾಸ ಯೋಜನೆಯನ್ನು ತಯಾರಿಸಿ, ಅದರಂತೆ ಭಾರತ ಮತ್ತು ಇತರ ದೇಶದ ವಿದ್ಯಾ ಪ್ರವೀಣರು ಭಾರತ, ಡೆನ್‌ಮಾರ್ಕ್, ಬ್ರಿಟನ್ ಮತ್ತು ಅಮೆರಿಕಗಳಲ್ಲಿ ೧೬ ವಾರಗಳ ಪ್ರವಾಸ ಮಾಡಲು ವ್ಯವಸ್ಥೆ ಮಾಡಿದ್ದಾರೆ.

ಡಾ|| ಮೊಸಾದಿಕ್‌ರ ವಿಚಾರಣೆ

ಇರಾನಿನ ಮಾಜಿ ಪ್ರಧಾನಿ ಡಾ|| ಮೊಸಾದಿಕ್‌ರ ವಿಚಾರಣೆಯು ಬಹಿರಂಗವಾಗಿಯೇ ನಡೆಯುವುದೆಂದು ತಿಳಿಸಲಾಗಿದೆ.

ಪಾಕೀಸ್ತಾನದಲ್ಲಿ ಅಪಪ್ರಚಾರ ನಿಲ್ಲಿಸಲು ಪ್ರಧಾನಿ ಭರವಸೆ

ಭಾರತ--ಪಾಕೀಸ್ತಾನ್ ಒಪ್ಪಂದಕ್ಕೆ ಹಾನಿಯನ್ನು ತರುವಂತಹ ಪ್ರಚಾರವನ್ನು ಪಾಕೀಸ್ಥಾನದವರು ನಡೆಸಬಾರದೆಂದು ಮನವಿ ಮಾಡುತ್ತೇನೆ--ಎಂದು ಪಾಕ್ ಪ್ರಧಾನಿ ಮಹಮದಾಲಿಯವರು ತಿಳಿಸಿದ್ದಾರೆ.

ವಿಶ್ವಸಂಸ್ಥೆಯ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸುವ ಶ್ರೀಮತಿ ವಿಜಯಲಕ್ಷ್ಮಿಯವರಿಗೆ ಪಾಕೀಸ್ತಾನವು ಬೆಂಬಲ ನೀಡುವುದಾಗಿಯೂ ಅವರು ಹೇಳಿದ್ದಾರೆ.

ಕಾಶ್ಮೀರದ ಜನಮತಗಣನಾಧಿಕಾರಿ ಅಡ್ಮಿರಲ್ ನಿಮಿಟ್ಜ್‌ರವರು ರಾಜೀನಾಮೆ ಇತ್ತಿರುವುದರ ಬಗ್ಗೆ ತಮಗೆ ವಾರ್ತೆ ಬಂದಿಲ್ಲವೆಂದೂ ಅವರು ನುಡಿದಿದ್ದಾರೆ.

ಪಾಕೀಸ್ತಾನ ಪ್ರಧಾನಿಯವರ ನೆಹರೂರವರಿಗೆ ಮೊನ್ನೆಯದಿನ ಮತ್ತೊಂದು ಪತ್ರ ಬರೆದು ನೆಹರೂರವರು ಪಾಕೀಸ್ತಾನದ ಅಪಪ್ರಚಾರವುಂಟಾದ ವಿಷಯಗಳಲ್ಲಿ ಪ್ರಸ್ತಾಪ ಮಾಡಿದ್ದರ ಬಗ್ಗೆ ಉತ್ತರ ಕೊಟ್ಟಿದ್ದಾರೆಂದು ತಿಳಿದುಬಂದಿದೆ.

ಬರ್ಮಾದಿಂದ ಭಾರತಕ್ಕೆ ೬೭ ಕೋಟಿ ರೂ. ಸಾಲ ಬರಬೇಕು

ಬರ್ಮಾ ಸರ್ಕಾರವು ಭಾರತಕ್ಕೆ ೬೭ ಕೋಟಿ ರೂ.ಗಳ ಹಿಂದಿನ ಸಾಲವನ್ನು ಕೊಡಬೇಕಾಗಿದೆ. ೧೯೪೨ರಿಂದ ಅದರ ಪಾವತಿ ನಿಂತುಹೋಗಿದೆ. ಈ ವಿಚಾರದಲ್ಲಿ ಮುಂದಿನ ನವೆಂಬರ್ ತಿಂಗಳಿನಲ್ಲಿ ಎರಡು ರಾಷ್ಟ್ರಗಳಿಗೆ ಮಾತುಕತೆ ಪ್ರಾರಂಭವಾಗುವುದು.

-ಮೈಸೂರು ಪೇಟೆಧಾರಣೆ-

ತಾರೀಖು ೧೦—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೭—೪	೨೫—೧೦
ಎಳ್ಳು	೬೫—	೮೩—೧೪
ಹುರುಳಿ	೪೭—೧೨	೪೭—೧೪
ಹೆಸರು	—	—
ಹರಳು	೩೮—	—
ಅಲಸಂದೆ	೭೦—	೭೨—೮
ಹೊಂಗೆಬೀಜ	—	—
ಅವರೆ	—	—
ಉದ್ದು	—	—
ಹುಚ್ಚೆಳ್ಳು	—	—
ಮೆಣಸಿನಕಾಯಿ	—	—
ಹುಣಸೇಹಣ್ಣು	—	—
ಸೀಗೆಕಾಯಿ	—	—
ಬೆಲ್ಲ	—	—
ತೆಂಗಿನಕಾಯಿ	೬೩	೨೫೬

ವಿದ್ಯಾಗಣಪತಿ ಮಹೋತ್ಸವ

ರಾಜಧಾನಿಯ ಜಗನ್ಮೋಹನಬಂಗಲೆ ಬಳಿ ಇರುವ ಮಾದರಿ ಶಾಲೆಯಲ್ಲಿ ಇದೇ ೧೨ ರಿಂದ ೧೬ನೇ ತಾರೀಖಿನವರೆಗೆ ವಿದ್ಯಾಗಣಪತಿ ಮಹೋತ್ಸವದ ಅಂಗವಾಗಿ ಪ್ರತಿದಿನ ಸಂಜೆ ಹರಿಕಥೆ ಮತ್ತು ಸಂಗೀತ ಏರ್ಪಡಿಸಲಾಗಿದೆ. ನಾಳೆ ಮಧ್ಯಾಹ್ನ ೩ ರಿಂದ ವಿದ್ವಾನ್ ನದೀಪುರಂ ಶ್ರೀನಿವಾಸರಂಗಾಚಾರ್ಯರಿಂದ ಹರಿಕಥೆ ಮತ್ತು ಸಂಜೆ ೫ರಿಂದ ಶ್ರೀ ಎಂ. ಎ. ನರಸಿಂಹಾಚಾರ್ಯರ ಪಾರ್ಟಿಯವರಿಂದ ಸಂಗೀತಗಳು ನಡೆಯುವುವು.

ಪ್ರವಾಹದ ಹಾವಳಿಗೆ ಖಾಯಂ ಕ್ರಮ ಅಗತ್ಯ

ಭಾರತದಲ್ಲಿ ಉಂಟಾಗುತ್ತಿರುವ ಪ್ರವಾಹದ ಹಾವಳಿಯನ್ನು ಖಾಯಂ ಆಗಿ ತಡೆಗಟ್ಟಲು ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕೆಂದು ಶ್ರೀ ಜೈಪ್ರಕಾಶ್ ನಾರಾಯಣ್‌ರವರು ಮನವಿ ಮಾಡಿದ್ದಾರೆ. ಪ್ರತಿ ವರ್ಷವೂ ಪರಿಹಾರಕ್ಕೆ ಖರ್ಚುಮಾಡುವ ಹಣಕ್ಕಿಂತಲೂ ಖಾಯಂ ಕೆಲಸಗಳಿಗೆ ಒಟ್ಟು ಖರ್ಚು ಕಡಮೆ ಆಗುವುದೆಂದೂ ಅವರ ಅಭಿಪ್ರಾಯಪಟ್ಟಿದ್ದಾರೆ.

ಬಿಹಾರಿನಲ್ಲಿ ೩೦ ಕೋಟಿ ರೂ. ಹಾನಿ ಉಂಟಾಗಿದೆಯೆಂದೂ ಅವರು ಹೇಳಿದ್ದಾರೆ.

ಜನರ ರಕ್ಷಣೆಗಾಗಿ ವಾಹನಗಳ ಬಂದ್

ಮದರಾಸಿನ ಕೆಲವು ಪ್ರಮುಖ ರಸ್ತೆಗಳಲ್ಲಿ ವಿಶೇಷ ಜನಸಂದಣಿಯಿರುವ ಸಮಯದಲ್ಲಿ ಅಂದರೆ ಬೆಳಿಗ್ಗೆ ೯ ರಿಂದ ೧೧ ಮತ್ತು ಸಂಜೆ ೫ರಿಂದ ೮ ಗಂಟೆವರೆಗೆ ಸೈಕಲ್ ಹೊರತು ಮಿಕ್ಕ ವಾಹನಗಳ ಸಂಚಾರವನ್ನು ಪ್ರತಿಬಂಧಿಸುವ ವಿಚಾರವನ್ನು ಮದರಾಸ್ ಸರ್ಕಾರದವರು ಆಲೋಚಿಸುತ್ತಿದ್ದಾರೆಂದು ಹೇಳಲಾಗಿದೆ.

ಪ್ರವಾಹ ಪರಿಹಾರಕ್ಕೆ ಅಮೆರಿಕದ ಸಹಾಯ

ಗಂಗಾ ಮತ್ತು ಗೋದಾವರಿ ಪ್ರವಾಹಗಳಿಂದ ನೊಂದವರ ಸಹಾಯಕ್ಕಾಗಿ ಅಮೆರಿಕದ ರೆಡ್‌ಕ್ರಾಸ್ ಸಂಸ್ಥೆ ೧೨ ಲಕ್ಷ ಪೌಂಡುಗಳಷ್ಟು ಹಾಲಿನ ಪುಡಿಯನ್ನೂ, ೧೦ ಸಾವಿರ ಡಾಲರುಗಳಷ್ಟು ಔಷಧಿಗಳನ್ನೂ ಕಳುಹಿಸಲಿದೆ.

ಕಂದಾಯ ಮಾಫಿ

ಕೋಲಾರದ ತಾಲ್ಲೂಕಿನ ೨೨೩ ಕೆರೆಗಳ ಅಚ್ಚುಕಟ್ಟಿನ ಭಾಗದಲ್ಲಿ ಮಳೆ ಆಗದೆ ನೊಂದ ರೈತರಿಗೆ ೧೯೬೮೭—೫—೬ ರೂ. ಕಂದಾಯ ಮಾಫಿಯನ್ನ ಸರ್ಕಾರ ಮಂಜೂರು ಮಾಡಿದೆ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಬಳ್ಳಾರಿಗೆ ಮೈಸೂರಿನ ಗೆಜಟೆಡ್ ಅಧಿಕಾರಿಗಳು

ಮುಂದಿನ ತಿಂಗಳು ೧ನೇತಾರೀಖಿನಿಂದ ಮೈಸೂರಿಗೆ ಸೇರಲಿರುವ ಬಳ್ಳಾರಿಗೆ ಕೆಲವು ಗೆಜಟೆಡ್ ಅಧಿಕಾರಿಗಳನ್ನು ಮಾತ್ರ ಇಲ್ಲಿಂದ ಕಳುಹಿಸಲಾಗುವುದೆಂದೂ ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ಅಧಿಕಾರಿ, ಜಿಲ್ಲಾ ವಿದ್ಯಾಧಿಕಾರಿ ಮತ್ತು ಜಿಲ್ಲಾ ನ್ಯಾಯಾಧೀಶರುಗಳನ್ನು ನೇಮಿಸಲಾಗುವುದೆಂದೂ ಅಲ್ಲಿರುವ ಕೆಳದರ್ಜೆ ನೌಕರರಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲವೆಂದೂ ತಿಳಿದುಬಂದಿದೆ.

ಗೃಹ ನಿರ್ಮಾಣ ಕಾರ್ಯದಲ್ಲಿ ಎನ್.ಸಿ.ಸಿ.ಗಳ ಸಹಾಯ

ಮದರಾಸಿನ ಅತಿ ಜನಸಂದಣಿ ಪ್ರದೇಶಗಳಲ್ಲಿ ಮನೆಗಳನ್ನು ಕಟ್ಟಲು ನ್ಯಾಷನಲ್ ಕೇಡೆಟ್ ದಳದವರು ಸಹಾಯಮಾಡುವುದಾಗಿ ಅಲ್ಲಿನ ಕಾರ್ಪೊರೇಷನ್ನಿಗೆ ತಿಳಿಸಲಾಗಿದೆ. ಇವರಿಂದ ಕಾರ್ಪೊರೇಷನ್‌ಗೆ ಚೆಟ್‌ಪುಟ್‌ನಲ್ಲಿ ಕಟ್ಟುವ ನೂತನ ಕಾಲೋನಿಯ ಖರ್ಚಿನಲ್ಲಿ ೧೬ ಸಾವಿರ ರೂ. ಉಳಿತಾಯವಾಗುವುದೆಂದು ಹೇಳಲಾಗಿದೆ.

ಮೈಸೂರಿಗೆ ವಿಶ್ವಸಂಸ್ಥೆಯಿಂದ ೨೦ ಟ್ರಕ್ಕುಗಳು

ಮೈಸೂರು ಸಂಸ್ಥಾನದಲ್ಲಿ ಮಲೇರಿಯಾ ಮುಂತಾದ ಖಾಯಿಲೆಗಳನ್ನು ತಡೆಗಟ್ಟಲು ಅನುಕೂಲವಾಗುವಂತಹ ೨೦ ಟ್ರಕ್ಕುಗಳನ್ನು ವಿಶ್ವ ಆರೋಗ್ಯ ಸಂಸ್ಥೆಯವರು ಮೈಸೂರಿಗೆ ಕೊಟ್ಟಿದ್ದಾರೆ. ಅವುಗಳನ್ನು ಮೊನ್ನೆ ಮೈಸೂರಿನ ಪ್ರತಿನಿಧಿಗಳು ಬೊಂಬಾಯಿನಲ್ಲಿ ಸ್ವೀಕರಿಸಿದರು.

ಭೂಕಂಪದಿಂದ ೩೫ ಜನರ ಮರಣ

ಸೈಪ್ರೆಸ್‌ನ ಪಾಫೋಸ್ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ಭಾರಿ ಭೂಕಂಪವಾಗಿ ೩೫ ಜನರು ಸತ್ತರೆಂದೂ, ನೂರಾರು ಜನರಿಗೆ ಗಾಯಗಳಾಗಿದೆಯೆಂದೂ ವರದಿಯಾಗಿದೆ.

ಅಪೇರ
11--9--53 ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ಮಲ್ಲೇಶ್ವರಿ
[ತೆಲುಗು]
ಪಾತ್ರ:—ಎನ್. ಟಿ. ರಾಮರಾವ್, ಭಾನುಮತಿ.

ರಣಜಿತ್
11-9-53 ರಿಂದ ಅಮೋಘ ಪ್ರಾರಂಭ
ಗೀತಾಬಾಲಿ, ಗುರುದತ್ ನಟಿಸಿರುವ
ಬಾಜ್ BaaZ
13—9—53 ನೇ ಭಾನುವಾರ ಸ್ಪೆಷಲ್ ಬೆಳಗಿನ ಪ್ರದರ್ಶನ ವಿರುಕ್ತಿ

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೨೩

೧೪-೯-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ವಿಶಾಲಾಂಧ್ರ ಕೂಡಲೇ ಸ್ಥಾಪಿಸಬೇಕು

ಆಂಧ್ರ ಮಹಾಸಭಾಧಿವೇಶನದಲ್ಲಿ ತೀರ್ಮಾನ

ಆಂಧ್ರ ಮಹಾಸಭೆಯ ಅಧಿವೇಶನವು ಶ್ರೀ ಕಾಳೇಶ್ವರರಾವ್‌ರವರ ಅಧ್ಯಕ್ಷತೆಯಲ್ಲಿ ನಡೆದು ಕೇಂದ್ರ ಸರ್ಕಾರವು ಹೈದರಾಬಾದನ್ನು ರಾಜಧಾನಿಯನ್ನಾಗಿ ಮಾಡಿ ಸಾಧ್ಯವಾದಷ್ಟು ಜಾಗ್ರತೆಯಾಗಿ ವಿಶಾಲಾಂಧ್ರವನ್ನು ರಚನೆ ಮಾಡಬೇಕೆಂಬ ನಿರ್ಣಯವನ್ನು ಮಾಡಿದೆ.

ಹೈದರಾಬಾದ್‌ನಲ್ಲಿರುವ ತೆಲಂಗಾಣದ ೯ ಜಿಲ್ಲೆಗಳನ್ನು ಈ ಕೂಡಲೇ ನೂತನ ಆಂಧ್ರ ಪ್ರಾಂತ್ಯಕ್ಕೆ ಸೇರಿಸಬೇಕೆಂಬ ಮತ್ತೊಂದು ನಿರ್ಣಯವನ್ನು ಮಾಡಿದೆ.

ವಿಶ್ವವಿದ್ಯಾನಿಲಯ ಆಡಳಿತದಲ್ಲಿ ಸಂಘಗಳು ಪ್ರವೇಶಿಸಕೂಡದು

ವಿದ್ಯಾರ್ಥಿಗಳಿಗೆ ನೆಹರೂ ಹಿತೋಕ್ತಿ

ವಿಶ್ವವಿದ್ಯಾನಿಲಯದ ಸಂಘಗಳು ಆಡಳಿತಗಾರರಿಗೆ ಒಂದು ವಿರೋಧ ಸಂಸ್ಥೆಯಾಗಿರಕೂಡದು. ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಅದು ಪ್ರವೇಶಿಸಬಾರದು. ವಿಶ್ವವಿದ್ಯಾನಿಲಯದ ಸಂಘಗಳು ಸ್ವಂತ ಇಚ್ಛೆಯಿಂದ ಸ್ಥಾಪಿತವಾಗಿ ಕೆಲವು ಪರಿಮಿತಿಯಲ್ಲಿ ತನ್ನ ಅಧಿಕಾರಿ ವರ್ಗವನ್ನು ಚುನಾಯಿಸಿಕೊಂಡು ಸ್ವತಂತ್ರವಾಗಿರಬೇಕು-ಎಂದು ಪ್ರಧಾನಿ ನೆಹರೂರವರು ಲಕ್ನೋ ವಿಶ್ವವಿದ್ಯಾನಿಲಯದಲ್ಲಿ ಇತ್ತೀಚೆಗೆ ವಿದ್ಯಾರ್ಥಿಗಳಿಗೂ ಅಧಿಕಾರಿ ವರ್ಗದವರಿಗೂ ಉಂಟಾಗಿರುವ ಬಿಕ್ಕಟ್ಟಿನ ವಿಷಯವಾಗಿ ಪ್ರಸ್ತಾಪಿಸಿ ಹೇಳಿದ್ದಾರೆ.

ಶೀಲ ಸ್ವಭಾವ, ಶಿಸ್ತು, ಸಹಕಾರ ಮನೋಭಾವ ಮತ್ತು ವಿದ್ಯಾರ್ಜನೆಗೆ ಶಿಕ್ಷಣ ಕೇಂದ್ರಗಳಾಗಿರುವ ಸಂಸ್ಥೆಗಳಲ್ಲಿ ಈ ರೀತಿಯ ಅವ್ಯವಸ್ಥೆಯುಂಟಾಗುತ್ತಲಿದ್ದರೆ ಸುಮ್ಮನೆ ಕುಳಿತಿರಲು ಸಾಧ್ಯವಿಲ್ಲ. ಈಗಿನ ವಿದ್ಯಾಭ್ಯಾಸ ಕ್ರಮದಲ್ಲಿ ತೀವ್ರ ಬದಲಾವಣೆಗಳು ಅತ್ಯಗತ್ಯವಾದರೆ ಕೂಡಲೇ ಸುಧಾರಣೆಗಳು ನಡೆಯಬೇಕು. ಈಗಾಗಲೇ ಸುಧಾರಣಾ ಸಮಿತಿ ಮುಂತಾದುವುಗಳನ್ನು ರಚಿಸಿ ವರದಿ ಮುಂತಾದುವನ್ನು ಪಡೆದಿದ್ದಾಗಿದೆ.

ಈಗ ಕಾರ್ಯತಃ ಮುಂದಿನ ಬದಲಾವಣೆ ನಡೆಯಬೇಕಾಗಿದೆ ಎಂದು ಶ್ರೀ ನೆಹರೂರವರು ಹೇಳಿದ್ದಾರೆ.

ಪಾಕೀಸ್ತಾನ ಯಾರಮೇಲೂ ಆಕ್ರಮಣ ಮಾಡುವುದಿಲ್ಲ

ಪಾಕೀಸ್ತಾನಕ್ಕೆ ಯಾರಮೇಲೂ ಆಕ್ರಮಣ ಮಾಡುವ ಉದ್ದೇಶವಿಲ್ಲವೆಂದು ಅಲ್ಲಿನ ಗೌರ್ನರ್ ಜನರಲ್ಲರು ಸ್ಪಷ್ಟವಾಗಿ ತಿಳಿಸಿದ್ದಾರೆ.

ಪಾಕೀಸ್ತಾನವು ತನ್ನ ಸ್ವಾತಂತ್ರ್ಯವನ್ನು ಕಾಪಾಡಲೂ ಮತ್ತು ತನ್ನ ರಕ್ಷಣೆಗಾಗಿಮಾತ್ರ ಸೇನಾಬಲವನ್ನು ಹೆಚ್ಚಿಸುತ್ತಿದೆಯೆಂದೂ, ಸೈನಿಕರು ರಾಜಕೀಯ ಗೊಂದಲಕ್ಕೆ ಒಳಗಾಗದೆ ದೇಶದ ರಕ್ಷಣೆಗಾಗಿ ದುಡಿಯಬೇಕೆಂದೂ ಅವರು ವಾಯುವ್ಯಸರಹದ್ದಿನ ಪ್ರಾಂತ್ಯದ ಮಿಲಿಟರಿ ಅಕಾಡೆಮಿಯಲ್ಲಿ ತಿಳಿಸಿದ್ದಾರೆ.

ನೆಹರೂರಲ್ಲಿ ಕನ್ನಡಿಗರ ನಿಯೋಗ

ಪಾರ್ಲಿಮೆಂಟಿನ ಕನ್ನಡ ಸದಸ್ಯರ ನಿಯೋಗವೊಂದು ಶ್ರೀ ನಿಜಲಿಂಗಪ್ಪನವರ ನಾಯಕತ್ವದಲ್ಲಿ ಈದಿನ ಪ್ರಧಾನಿ ನೆಹರೂರನ್ನು ಭೇಟಿಮಾಡಿ, ಕರ್ನಾಟಕ ಪ್ರಾಂತ್ಯ ರಚನೆ ಬಗ್ಗೆ ಕೂಡಲೇ ಘೋಷಣೆ ಆಗಬೇಕೆಂದು ಒತ್ತಾಯಪಡಿಸಲಿರುವರೆಂದು ತಿಳಿದುಬಂದಿದೆ. ಇದೇರೀತಿ ಮೈಸೂರಿನ ಸದಸ್ಯರೂಕೂಡ ಅವರನ್ನು ಭೇಟಿಮಾಡಿ ಬೊಂಬಾಯಿನ ಕರ್ನಾಟಕ ಪ್ರದೇಶವು ಮೈಸೂರಿನಲ್ಲಿ ವಿಲೀನ ಆಗುವ ಬಗ್ಗೆ ಮೈಸೂರಿನವರು ಸ್ವಾಗತಿಸುವರೆಂದು ತಿಳಿಸುವರೆಂದೂ ಹೇಳಲಾಗಿದೆ.

ಪಾರ್ಲಿಮೆಂಟ್ ಸದಸ್ಯರ ಕ್ರಿಕೆಟ್ ಪಂದ್ಯ

ಕಳೆದ ಶನಿವಾರ ಮತ್ತು ಭಾನುವಾರಗಳಲ್ಲಿ ಪ್ರಧಾನಿ ನೆಹರೂ ಮತ್ತು ಉಪರಾಷ್ಟ್ರಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರ ಪಕ್ಷಗಳಿಗೆ ದೆಹಲಿಯಲ್ಲಿ ಆದ ಕ್ರಿಕೆಟ್ ಪಂದ್ಯದಲ್ಲಿ ಪ್ರಧಾನಿ ಪರಿಹಾರ ನಿಧಿಗೆ ಒಂದು ಲಕ್ಷ ರೂ. ಸಂಗ್ರಹವಾಗಿದೆಯೆಂದು ತಿಳಿದುಬಂದಿದೆ. ಕ್ರಿಕೆಟ್ ಸ್ಕೋರ್ ಪುಸ್ತಕ ತಮ್ಮ ಸಹಿ ಹಾಕಿದ ಎರಡು ಕ್ರಿಕೆಟ್ ಬ್ಯಾಟುಗಳು ಮತ್ತು ಟಾಸ್ ಮಾಡಿದ ಚಿನ್ನದ ನಾಣ್ಯಗಳನ್ನು ನೆಹರೂರವರು ಆಟ ಮುಗಿದ ನಂತರ ಹರಾಜು ಮಾಡಿ ೧೫೫೦೦ ರೂ.ಗಳನ್ನು ಗಳಿಸಿದರು.

ಪ್ರಪಂಚದ ಅರ್ಧ ಜನರಿಗೆ ಅರೆಹೊಟ್ಟೆ ಆಹಾರ

ಎರಡನೇ ಯುದ್ಧದನಂತರ ಜನಸಂಖ್ಯೆ ಏರಿಕೆಗೆ ತಕ್ಕಂತೆ ಆಹಾರೋತ್ಪತ್ತಿ ಆಗದೆ, ಪ್ರಪಂಚದ ಅರ್ಧ ಜನಸಂಖ್ಯೆಗೆ ಅರೆಹೊಟ್ಟೆ ಆಹಾರವಾಗಿದೆಯೆಂದು ವಿಶ್ವ ಸಂಸ್ಥೆಯ ಆಹಾರ ಮತ್ತು ವ್ಯವಸಾಯ ಸಮಿತಿ ವರದಿ ಮಾಡಿದೆ.

ಕಾಂಗ್ರೆಸ್ ಸರ್ಕಾರಕ್ಕೆ ಕಾಂಗ್ರೆಸ್ಸಿಗರೇ ವಿರೋಧ ಪಕ್ಷ

ತಿರುವಾಂಕೂರ್--ಕೊಚ್ಚಿ ಪ್ರಾಂತ್ಯದಲ್ಲಿ ತಮಿಳು ನಾಡು ಕಾಂಗ್ರೆಸ್ ನಿರ್ಧಾರ

ತಿರುವಾಂಕೂರು-ಕೊಚ್ಚಿನಲ್ಲಿ ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷಕ್ಕೆ ೧೬ ತಿಂಗಳಿಂದ ಬೆಂಬಲ ನೀಡುತ್ತಲಿದ್ದ ಶಾಸನ ಸಭೆಯ ತಮಿಳುನಾಡು ಕಾಂಗ್ರೆಸ್ ಸದಸ್ಯರು ಬೆಂಬಲ ನೀಡುವುದನ್ನು ನಿಲ್ಲಿಸಿ ಇನ್ನು ಮುಂದೆ ಈಗಿನ ಸರ್ಕಾರಕ್ಕೆ ವಿರೋಧಪಕ್ಷವಾಗಿ ವರ್ತಿಸಲು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ. ಈ ಪ್ರಾಂತ್ಯದಲ್ಲಿ ತಮಿಳು ಭಾಷೆಯನ್ನಾಡುವ ೮ ತಾಲ್ಲೂಕುಗಳ ಪ್ರತ್ಯೇಕ ಕಾಂಗ್ರೆಸ್ ಸಮಿತಿಯನ್ನು ರಚಿಸಬೇಕೆಂಬ ಇವರ ಬೇಡಿಕೆಗೆ ಪುರಸ್ಕಾರ ಸಿಕ್ಕಲಿಲ್ಲವಾಗಿ ನಿನ್ನೆಯದಿನ ಈ ಪಕ್ಷದವರು ನಾಗರಕೋಯಿಲ್‌ನಲ್ಲಿ ಸಭೆ ನಡೆಸಿ ಈ ತೀರ್ಮಾನಕ್ಕೆ ಬಂದಿದ್ದಾರೆ.

ಈಗ ಶಾಸನ ಸಭೆಯಲ್ಲಿರುವ ವಿರೋಧ ಪಕ್ಷವು ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ತಂದರೆ ಅದಕ್ಕೆ ತಮಿಳು ನಾಡು ಕಾಂಗ್ರೆಸ್ ಬೆಂಬಲನೀಡುವುದಾಗಿ ತಿಳಿಯಬರುತ್ತದೆ.

ಈಗಿನ ಸರ್ಕಾರದಲ್ಲಿ ಈ ಪಕ್ಷಕ್ಕೆ ಸೇರಿ ರೆವಿನ್ಯೂ ಸಚಿವರಾಗಿರುವ ಶ್ರೀ ಚಿದಂಬರನಾದರ್‌ರವರು ಮಂತ್ರಿ ಪದವಿಗೆ ರಾಜೀನಾಮೆಯನ್ನು ಕೊಡಲು ನಿರ್ಧರಿಸಿದ್ದಾರೆ.

ಈ ಪ್ರಾಂತ್ಯದ ಶಾಸನ ಸಭಾಧಿವೇಶನವು ಇದೇ ೨೨ ನೇ ತಾರೀಖು ಸಮಾವೇಶಗೊಳ್ಳಲಿದೆ.

ಕಾಂಗ್ರೆಸ್ ಸಂಸ್ಥೆಯವರೇ ಕಾಂಗ್ರೆಸ್ ಸರ್ಕಾರಕ್ಕೆ ವಿರೋಧವಾಗಿ ವರ್ತಿಸುವಂತಾದುದು ಜನರಲ್ಲಿ ಆಶ್ಚರ್ಯವನ್ನುಂಟುಮಾಡಿದೆ. ಈ ಪ್ರಾಂತ್ಯದ ಕಾಂಗ್ರೆಸ್ಸಿಗರ ಪೂರ್ಣಬೆಂಬಲವಿಲ್ಲದಿದ್ದರೆ ಈಗಿರುವ ಕಾಂಗ್ರೆಸ್ ಸರ್ಕಾರಕ್ಕೆ ಪೂರ್ಣ ಬೆಂಬಲವಿಲ್ಲದೆ ಹೋಗುತ್ತದೆ.

ಈ ಪ್ರಾಂತ್ಯದ ಮುಂದಿನ ಭವಿಷ್ಯವೇನೆಂಬುದು ತಿಳಿಯುವುದೇ ಈಗ ಕಷ್ಟವಾಗಿದೆ. ಸ್ಥಿರ ಸರ್ಕಾರ ಸ್ಥಾಪನೆಗೆ ಈಗ ಗುರುತರವಾದ ತೊಂದರೆಯುಂಟಾಗಿದೆ.

● ಆಚಾರ್ಯ ವಿನೋಬಾಭಾವೆಯವರ ೫೯ ನೇ ಜನ್ಮದಿನೋತ್ಸವದ ಸಮಾರಂಭದ ಅಂಗವಾಗಿ ಮೊನ್ನೆ ದಿನ ೧೦೦ ಮಂದಿ ಜಮೀನಿಲ್ಲದ ರೈತರಿಗೆ ಜಮೀನುಗಳನ್ನು ಅಲಹಾಬಾದ್ ಸಮಿತಿಯವರು ಹಂಚಿದರು.

ಮುಖ್ಯಮಂತ್ರಿಗಳು ಮದರಾಸಿಗೆ

ಬೆಂಗಳೂರಿಗೆ ೧೪

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ರಾತ್ರಿ ಮದರಾಸಿಗೆ ಪ್ರಯಾಣ ಬೆಳೆಸಿದರು. ಈದಿನ ಅವರು ಮುಖ್ಯಮಂತ್ರಿ ಶ್ರೀ ರಾಜಾಜಿಯವರನ್ನು ಭೇಟಿ ಮಾಡಿ ಮೈಸೂರಿಗೆ ೧ ನೇ ತಾರೀಖಿನಿಂದ ಸೇರಲಿರುವ ಬಳ್ಳಾರಿಯ ಸಂಬಂಧದಲ್ಲಿ ಮಾತುಕತೆ ನಡೆಸುವರು. ಮುಂದಿನ ತಿಂಗಳು ೧ ನೇ ತಾರೀಖಿಗೆ ಮುಂಚಿತವಾಗಿಯೇ ಬಳ್ಳಾರಿಗೆ ಮೈಸೂರಿನ ಕೆಲವು ಅಧಿಕಾರಿಗಳನ್ನು ವರ್ಗಮಾಡುವ ಬಗ್ಗೆ ಮದರಾಸ್ ಸರ್ಕಾರದ ಒಪ್ಪಿಗೆ ಪಡೆಯಲಿದ್ದಾರೆಂದೂ ಹೇಳಲಾಗಿದೆ. ಅವರು ಸಚಿವ ಡಾ|| ನಾಗನಗೌಡರನ್ನು ಭೇಟಿ ಮಾಡಲಿದ್ದಾರೆ.

ಎಂ. ಪಿ. ಸಿ. ಸಿ. ಅಧಿವೇಶನ

ಚಿನ್ನದ ಗಣಿಯಲ್ಲಿ ಎಂ. ಪಿ. ಸಿ. ಸಿ. ಅಧಿವೇಶನವು ಅಕ್ಟೋಬರ್ ೩, ೪, ೫ ನೇ ತಾರೀಖುಗಳಲ್ಲಿ ನಡೆಯುತ್ತದೆ.

೩೧೩ ಆನೆಗಳ ಬೇಟೆ

ಬರುವ ೬ ತಿಂಗಳಲ್ಲಿ ಅಸ್ಸಾಂ ಕಾಡಿನಲ್ಲಿ ೩೧೩ ಆನೆಗಳನ್ನು ಬೇಟೆಯಾಡುವ ಕಾರ್ಯಕ್ರಮವನ್ನು ತಯಾರಿಸುವುದಾಗಿ ತಿಳಿಯಬರುತ್ತದೆ.

ರೈಲ್ವೆ ಅಪಘಾತ

ಹೈದರಾಬಾದಿನ ಬಳಿ ಮೊಹಮುದ್‌ಬಾದ್ ಮತ್ತು ಬಿನಾರ್ ನಡುವೆ ನಿನ್ನೆ ಮಧ್ಯಾಹ್ನ ೧೨--೪೫ ಗಂಟೆ ವೇಳೆಯಲ್ಲಿ ರೈಲು ಕಂಬಿ ತಪ್ಪಿ ಬಿದ್ದು ಒಬ್ಬನು ಸತ್ತು ೩ ಜನರಿಗೆ ತೀವ್ರಗಾಯಗಳಾದುವೆಂದು ತಿಳಿಯಬರುತ್ತದೆ.

ಪ್ರಾರಂಭ ಭಾಷಣ

ಮೈಸೂರು ೧೪

ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನ ಜೂನಿಯರ್ ಬಿ. ಎ. ಹಾಲಿನಲ್ಲಿ ವಿಶ್ವವಿದ್ಯಾನಿಲಯದ ಐತಿಹಾಸಿಕ ಸಂಘದ ಪ್ರಾರಂಭ ಭಾಷಣವನ್ನು ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳಾದ ಡಾ|| ಮಂಜುನಾಥ್‌ರವರು ಮಾಡುತ್ತಾರೆ.

ಭಾರತದಲ್ಲಿ ಫ್ರೆಂಚ್ ಸ್ವಾಸ್ತ್ಯಗಳು

ಇದರ ಹಕ್ಕಿನ ಬಗ್ಗೆ ವಿಶ್ವನ್ಯಾಯಾಲಯದಲ್ಲಿ

ಫ್ರೆಂಚರ ಮೊಕದ್ದಮೆ ?

ಭಾರತದಲ್ಲಿರುವ ಫ್ರೆಂಚ್ ಸ್ವಾಸ್ತ್ಯಗಳು ಭಾರತ ಸರ್ಕಾರಕ್ಕೆ ಸೇರಬೇಕೆಂದು ಅಧಿಕೃತವಾಗಿ ಪ್ರಧಾನಿ ನೆಹರೂರವರು ಫ್ರಾನ್ಸ್ ಸರ್ಕಾರವನ್ನು ಕೇಳಿದಲ್ಲಿ, ಅದರ ಇತ್ಯರ್ಥದ ಬಗ್ಗೆ ಫ್ರೆಂಚ್ ಸರ್ಕಾರವು ಹೇಗ್‌ನಲ್ಲಿರುವ ವಿಶ್ವ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುವುದೆಂದು ತಿಳಿಯಬರುತ್ತದೆ.

ವಿಶ್ವದಲ್ಲಿ ಐದುವರೆ ಲಕ್ಷ ಸ್ಕೌಟುಗಳು

ಬಾಲ ಚಮೂದಳದವರು ೧೯೫೭ರಲ್ಲಿ ತಮ್ಮ ರಜತ ಮಹೋತ್ಸವವನ್ನು ಆಚರಿಸಲಿರುವರು. ವರ್ಷ ವರ್ಷವೂ ಈ ದಳದ ಸಂಖ್ಯೆಯು ಅಧಿಕಗೊಳ್ಳುತ್ತಿದೆ. ಈಗ ವಿಶ್ವದಲ್ಲಿ ಒಟ್ಟು ೫,೫೬೧,೯೯೩, ಬಾಲ ಚಮೂಗಳಿರುವರು. ಕಳೆದ ೨ ವರ್ಷಗಳಲ್ಲಿ ೪೦೧, ೭೪೬ ಬಾಲಕರು ಹೆಚ್ಚಾಗಿ ಈ ದಳಕ್ಕೆ ಸೇರಿದ್ದಾರೆ. ಪ್ರಪಂಚವೆಲ್ಲಾ ಅಮೆರಿಕಾದಲ್ಲಿ ಇವರ ಸಂಖ್ಯೆಯು ಅತ್ಯಧಿಕವಾಗಿದೆ:- ೩,೧೮೩,೨೬೬. ಬ್ರಿಟನ್‌ನಲ್ಲಿ ೪೮೭,೧೯೭ ಜನರಿರುವರು. ಭಾರತದಲ್ಲಿ ಒಟ್ಟು ೩೬೯, ೭೧೪ ಬಾಲ ಚಮೂಗಳಿರುವರು.

ಜನಸಂಘ-ಹಿಂದೂ ಮಹಾಸಭೆ ವಿಲನೀಕರಣ

ಜನಸಂಘ, ರಾಮರಾಜ್ಯ ಪರಿಷತ್ತು ಮತ್ತು ಹಿಂದೂ ಮಹಾ ಸಭೆಗಳ ವಿಲನೀಕರಣವನ್ನು ತಾವು ಒಪ್ಪುವುದಾಗಿ ಜನಸಂಘದ ಅಧ್ಯಕ್ಷರು ಹೇಳಿಕೆಯನ್ನಿತ್ತಿದ್ದಾರೆ. ಹಿಂದೂ ಮಹಾ ಸಭಾಧ್ಯಕ್ಷರು ಸಹ ಇದನ್ನು ಒಪ್ಪಿರುವಾಗ ಅದರ ಕಾರ್ಯ ಸಮಿತಿಯು ಒಪ್ಪದಿರುವುದು ಶೋಚನೀಯವೆಂದು ಅವರು ತಿಳಿಸಿದ್ದಾರೆ.

ಪ್ರವಾಹಗಳ ಹತೋಟಿ ಕ್ರಮ ಅರಿಯಲು ಚೈನಾಕ್ಕೆ ಭಾರತ ಇಂಜನಿಯರು

ನದಿಗಳ ಪ್ರವಾಹದಿಂದ ಉಂಟಾಗುವ ತೊಂದರೆಯನ್ನು ತಪ್ಪಿಸುವ ವಿಷಯದಲ್ಲಿ ಭಾರತದ ಇಬ್ಬರು ಇಂಜನಿಯರುಗಳು ಚೈನಾಕ್ಕೆ ಹೋಗಿ ಅಲ್ಲಿ ಯಾವರೀತಿಯಾಗಿ ಪ್ರವಾಹವನ್ನು ತಡೆಗಟ್ಟುವ ಕಾರ್ಯ ಮಾಡಿರುವರೆಂದು ಪರಿಶೀಲಿಸಿಕೊಂಡು ಬರಲಿರುವರೆಂದು ತಿಳಿಯಬರುತ್ತದೆ.

ಚೈನಾದಲ್ಲಿ ಹಳದಿ ನದಿಯಲ್ಲಿ ಹಿಂದೆ ಬರುತ್ತಿದ್ದಂತೆಯೇ ಭಾರತದಲ್ಲಿ ಕೋಸಿನದಿಯಲ್ಲಿ ಪ್ರವಾಹವು ಪದೇಪದೇ ಬಂದು ವಿಶೇಷ ನಷ್ಟ ಮತ್ತು ತೊಂದರೆಯನ್ನುಂಟುಮಾಡುತ್ತಿದೆ.

ಚೀಣೀಯರು ಹಳದಿ ನದಿಯ ಪ್ರವಾಹವನ್ನು ಹತೋಟಿಗೆತಂದು ತೊಂದರೆಗಳನ್ನು ತಪ್ಪಿಸಲು ಅನೇಕ ಕಾರ್ಯಗಳನ್ನು ಮಾಡಿರುತ್ತಾರೆ. ಅವುಗಳನ್ನು ನಮ್ಮ ಇಂಜನಿಯರುಗಳು ಪರಿಶೀಲಿಸಿಕೊಂಡುಬಂದು ಅದೇ ರೀತಿ ಕೆಲಸಗಳನ್ನು ಇಲ್ಲಿ ನಡೆಸಲು ಅನುಕೂಲವಾಗುವುದೆಂದು ಹೇಳಲಾಗಿದೆ.

ಸ್ವಾಮಿ ಸೀತಾರಾಂರ ಉಪವಾಸ

ಆಂಧ್ರಪ್ರಾಂತ್ಯ ರಚನೆಯಾಗುವುದಕ್ಕೆ ಒಂದುದಿನ ಮುಂಚಿತವಾಗಿ, ಅಂದರೆ ಇದೇ ೩೦ನೇ ತಾರೀಖು ಅಲ್ಲಿನ ಸ್ವಾಮಿ ಸೀತಾರಾಂರವರು ೮ ದಿನಗಳ ಉಪವಾಸವನ್ನು ಆಚರಿಸಲು ನಿರ್ಧರಿಸಿದ್ದಾರೆ. ಈಗ ಸ್ಥಾಪಿಸಲ್ಪಡುವ ಆಂಧ್ರಪ್ರಾಂತ್ಯವು ನಿಜವಾದ ಪ್ರಾಂತ್ಯವಲ್ಲವೆಂದೂ, ಅದು ಕೇಂದ್ರ ಸರಕಾರ ಕೊಟ್ಟಿರುವ ಕೇವಲ ಹಂದ ಮಾಡಿದ ವಸ್ತುವೆಂದೂ, ಇದರಿಂದ ಸಾಮಾನ್ಯ ಜನರಿಗೆ ಯಾವ ಪ್ರಯೋಜನವೂ ಆಗುವುದಿಲ್ಲವೆಂದೂ ಅವರು ತಿಳಿಸಿದ್ದಾರೆ. ಪ್ರಾಂತ್ಯ ರಚನೆಯಾಗುವುದಕ್ಕೆ ಮುಂಚೆ ಚುನಾವಣೆ ಆಗಬೇಕು, ಆಡಳಿತ ವೆಚ್ಚದಲ್ಲಿ ಖೋತಾ ಆಗಬೇಕು, ಇವೇ ಮುಂತಾದ ಸುಧಾರಣೆಗಳ ಬಗ್ಗೆ ತಾವು ಕಳೆದ ೬ ತಿಂಗಳಿನಿಂದ ಒತ್ತಾಯಪಡಿಸುತ್ತಿದ್ದರೂ, ಅವು ಫಲಕಾರಿಯಾಗದಿದ್ದುದರಿಂದ ತಾವು ಉಪವಾಸ ವ್ರತ ಕೈಗೊಳ್ಳುವುದಾಗಿ ಅವರು ತಿಳಿಸಿದ್ದಾರೆ.

ಬೊಂಬಾಯಿನಲ್ಲಿ ಹಿರಿಯ ಶಾಸನಸಭೆ ಬೇಡ

ಬೊಂಬಾಯಿ ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ಸಭೆ ಸೇರಿ ಅಲ್ಲಿಯ ಹಿರಿಯ ಶಾಸನಸಭೆಯನ್ನು ರದ್ದುಗೊಳಿಸುವ ವಿಷಯವನ್ನು ಚರ್ಚಿಸಿದರೆಂದು ತಿಳಿಯಬರುತ್ತದೆ. ಹಿರಿಯ ಶಾಸನಸಭೆಯನ್ನು ರದ್ದುಗೊಳಿಸಬೇಕೆಂದು ಅನೇಕರು ಅಭಿಪ್ರಾಯಪಟ್ಟಿರುವುದಾಗಿ ತಿಳಿಯಬರುತ್ತದೆ. ಈ ವಾರದಲ್ಲಿ ಈ ವಿಷಯದಲ್ಲಿ ಖಾಸಗೀ ನಿರ್ಣಯವೊಂದು ಕಿರಿಯ ಸಭೆಯಲ್ಲಿ ಚರ್ಚೆಗೆ ಬರಲಿದೆ.

ಭಾರತದೊಡನೆ ಹಗೆತನ ಪ್ರಶ್ನೆಯಿಲ್ಲ

ಪಾಕೀಸ್ತಾನ ವಿದೇಶಾಂಗಸಚಿವ ಜಫರುಲ್ಲಾಖಾನರವರು ಭಾರತ-ಪಾಕೀಸ್ತಾನಗಳ ಸಂಬಂಧವಾಗಿ ಲಂಡನ್‌ನಲ್ಲಿ ಮಾತನಾಡುತ್ತಾ ಭಾರತದೊಡನೆ ಪಾಕೀಸ್ತಾನವು ಹಗೆತನ ಕಟ್ಟಿಕೊಳ್ಳುವ ಪ್ರಶ್ನೆಯೇ ಇಲ್ಲ, ಈಚೆಗೆ ನೆಹ್ರೂ ಮತ್ತು ಮಹಮದಾಲಿಯವರ ಸ್ನೇಹಮಯ ಸಮಾಗಮನವೇ ಅದಕ್ಕೆ ನಿದರ್ಶನವೆಂದು ಹೇಳಿದ್ದಾರೆ.

ಹೆಚ್ಚು ಭಾವಿಗಳಿಗಾಗಿ ಪ್ರಧಾನಿಯ ಮನವಿ

ಹೆಚ್ಚು ಭಾವಿಗಳನ್ನು ತೆಗೆಯಿರಿ ಎಂಬ ಆಚಾರ್ಯ ವಿನೋಬಾಭಾವೆಯವರ ನೂತನ ಪ್ರಚಾರದಲ್ಲಿ ಪ್ರತಿಯೊಬ್ಬ ರೈತನೂ ಸಹಕರಿಸಬೇಕೆಂದು ಪ್ರಧಾನಿ ನೆಹರೂ ವಿನೋಬಾಭಾವೆಯವರ ೫೯ನೇ ಜನ್ಮೋತ್ಸವದ ಸಂಬಂಧದಲ್ಲಿ ಮನವಿಮಾಡಿದ್ದಾರೆ.

ಕೊರಿಯಾ ಶಾಂತಿ ಸಮ್ಮೇಳನದಲ್ಲಿ ಭಾರತ

ಇರಲೇ ಬೇಕು

ವಿಶ್ವ ಸಂಸ್ಥೆ ಮಹಾಕಾರ್ಯದರ್ಶಿಗೆ ಚೀಣಾ ಪ್ರಧಾನಿ ತಂತಿ

ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿಯವರಿಗೆ ಚೈನಾ ಪ್ರಧಾನಿ ಚವ್ವೆನ್‌ಲೇಯವರು ಒಂದು ಕೇಬಲ್ ತಂತಿಯನ್ನು ಕಳುಹಿಸಿ ಕೊರಿಯಾ ಶಾಂತಿ ಸಮ್ಮೇಳನದಲ್ಲಿ ಭಾರತವು ಇದ್ದೇ ಇರಬೇಕು. ಕೊರಿಯಾದ ಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಭಾರತವು ಈಗಾಗಲೇ ಪ್ರಮುಖ ಪಾತ್ರವನ್ನು ವಹಿಸಿ ವಿಶ್ವಶಾಂತಿ ಸ್ಥಾಪನೆಗೇ ಸಹಾಯಕವಾಗುತ್ತಿದೆ ಎಂದು ತಿಳಿಸಿದ್ದಾರೆ.

ಕೊರಿಯಾದ ಈ ಶಾಂತಿ ಸಮ್ಮೇಳನವು ಒಂದು ಚಕ್ರ ಗೋಷ್ಠಿಯಂತಿರಬೇಕು. ಅಲ್ಲದೆ ತಟಸ್ಥ ರಾಷ್ಟ್ರಗಳಾದ ರಷ್ಯಾ, ಇಂಡೊನೇಷಿಯಾ, ಪಾಕೀಸ್ತಾನ ಮತ್ತು ಬರ್ಮಾಗಳೂ ಸಹ ಇದರಲ್ಲಿ ಭಾಗವಹಿಸಬೇಕು ಎಂದು ಅವರು ತಿಳಿಸಿದ್ದಾರೆ.

ಈ ಸಲಹೆಗಳನ್ನು ಒಪ್ಪಲು ಸಾಧ್ಯವಿಲ್ಲವೆಂದು ಅಮೆರಿಕಾ ವಿದೇಶಾಂಗ ಉಪ ಸಚಿವರು ತಿಳಿಸುವುದಾಗಿ ಹೇಳಲಾಗಿದೆ.

ಆಕಾಶವಾಣಿ ಸಲಹಾ ಸಮಿತಿ

ಮೈಸೂರು ೧೪

ಮೈಸೂರು ಆಕಾಶವಾಣಿಯ ಕಾರ್ಯಕ್ರಮ ಸಲಹಾ ಸಮಿತಿಯನ್ನು ಕೇಂದ್ರ ಸರ್ಕಾರದವರು ರಚಿಸಿದ್ದಾರೆ. ಆ ಸಮಿತಿಯಲ್ಲಿ ಶ್ರೀಗಳಾದ ಎಂ.ವಿ. ರಾಮರಾವ್, ಟಿ. ಮಾದಯ್ಯ ಗೌಡ, ಹೆಚ್.ಸಿ. ದಾಸಪ್ಪ ಜಿ. ವೆಂಕಟಾಚಲಂ, ಡಾ॥ ಎಂ ವಿ. ಗೋಪಾಲಸ್ವಾಮಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಟಿ. ಚೌಡಯ್ಯ ಮತ್ತು ಡಾ॥ ಜಿ.ಟಿ. ಕಾಳೆ ಇವರಿರುವರು.

ವಾರ್ಷಿಕೋತ್ಸವ

ಮೈಸೂರು ೧೪

ರಾಜಧಾನಿಯ ಶ್ರೀ ವರಲಕ್ಷ್ಮಿ ಸಂಗೀತ ಮಂದಿರದ ೮ನೇ ವಾರ್ಷಿಕೋತ್ಸವವು ನಾಳೆ ಸಂಜೆ ೫-೩೦ ಗಂಟೆಗೆ ಸಹಕಾರಭವನದಲ್ಲಿ ಮುಖ್ಯ ವಿದ್ಯಾಧಿಕಾರಿ ಶ್ರೀ ಜೆ.ಬಿ. ಮಲ್ಲಾರಾಧ್ಯರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಬ್ರಹ್ಮಪುತ್ರ ನದಿಯಲ್ಲಿ ಪ್ರವಾಹ

ಬ್ರಹ್ಮಪುತ್ರನದಿಯಲ್ಲಿ ಪ್ರವಾಹವು ವಿಶೇಷವಾಗಿ ಬಂದು ಲಕ್ಷ್ಮೀಪುರಂ ಜಿಲ್ಲೆಯಲ್ಲಿ ೯ ಗ್ರಾಮಗಳು ನೀರಿನ ಪಾಲಾಗಿರುವುದಾಗಿ ತಿಳಿಯಬರುತ್ತದೆ. ಇದರಿಂದ ೧೦೦೦ ಸಂಸಾರಗಳು ಮನೆಮಠಗಳನ್ನು ಕಳೆದುಕೊಂಡಿದ್ದಾರೆ. ೪ ಜನರು ಸತ್ತಿರುವುದಾಗಿ ವರದಿಯಾಗಿದೆ.

ಡಲ್ಸ್ ಅಮೆರಿಕಾ ಶ್ರೇಷ್ಠ ನ್ಯಾಯಾಧೀಶರೇ?

ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಿ॥ ಜಾನ್‌ಫಾಸ್ಟರ್ ಡಲ್ಸ್‌ರನ್ನು ಅಮೆರಿಕದ ಸುಪ್ರೀಂಕೋರ್ಟಿನ ಶ್ರೇಷ್ಠನ್ಯಾಯಾಧೀಶರಾಗಿ ನೇಮಿಸಲಾಗುವುದೆಂದು ಹೇಳಲಾಗುತ್ತಿದೆ.

ಬೆಂಗಳೂರು-ಮಂಗಳೂರು ವಿಮಾನ ಸಂಚಾರ

ಮುಂದಿನ ತಿಂಗಳು ಒಂದನೇ ತಾರೀಖಿನಿಂದ ಬೆಂಗಳೂರು-ಮಂಗಳೂರು ನಡುವೆ ವಿಮಾನ ಸಂಚಾರವು ಪುನರಾರಂಭವಾಗುವುದು.

೧೫ ಲಕ್ಷ ರೂ. ಸೂಯೇಜ್ ಫಾರಂ ಸ್ಥಾಪನೆ

ಮದರಾಸಿನ ಪೆರಂಬೂರಿನ ಬಳಿ ೨೦೦ ಎಕರೆ ಪ್ರದೇಶದಲ್ಲಿ ಒಂದು ಸೂಯೇಜ್ ಫಾರಂ ಸ್ಥಾಪಿಸಲು ೧೫ ಲಕ್ಷ ರೂ. ಯೋಜನೆಯನ್ನು ಕೇಂದ್ರ ಸರ್ಕಾರ ಮಂಜೂರು ಮಾಡಿದೆ.

ಭಾರತದಲ್ಲಿ ಫೌಂಟೆನ್‌ಪೆನ್ ತಯಾರಿಕೆ

ಜಪಾನಿನ ಕಂಪೆನಿಯೊಂದರ ಸಹಾಯದಿಂದ ಭಾರತದಲ್ಲಿ ಫೌಂಟೆನ್‌ಪೆನ್ನುಗಳನ್ನು ತಯಾರಿಸುವ ಕಾರ್ಖಾನೆಯನ್ನು ಸ್ಥಾಪಿಸಲಾಗುವುದೆಂದು ಹೇಳಲಾಗಿದೆ.

ಅಕ್ಕಿ ತರಿಸಲು ವರ್ತಕರಿಗೆ ರಹದಾರಿ

ಅಕ್ಕಿಯನ್ನು ವಿದೇಶಗಳಿಂದ ತರಿಸಲು ವರ್ತಕರಿಗೆ ರಹದಾರಿಯನ್ನು ಕೊಡಲು ಭಾರತ ಸರ್ಕಾರವು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಭಾರತಕ್ಕೆ ಜರ್ಮ ನಿಯೋಗ

ಭಾರತದಲ್ಲಿ ಅರ್ಥಿಕ ಪರಿಸ್ಥಿತಿಯನ್ನು ಪರಿಶೀಲಿಸಲು ಜರ್ಮನಿಯಿಂದ ೫ ಸದಸ್ಯರ ನಿಯೋಗವೊಂದು ಇಲ್ಲಿಗೆ ಆಗಮಿಸಿದೆ.

ಅಪೇರ

11--9--53 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಮಲ್ಲೇಶ್ವರಿ

[ತೆಲುಗು]

ಪಾತ್ರ: —ಎನ್. ಟಿ. ರಾಮರಾವ್, ಭಾನುಮತಿ.

ಪ್ರಕಾಶಕರು ಮತ್ತು ಮುದ್ರಕರು.

ಜಿ. ಎಲ್. ಸ್ವಾಮಿ.

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೨೪

೧೫-೯-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ರಾಜಧಾನಿಯಲ್ಲಿ ಠಕ್ಕು ಚಕ್ರಬಂಧ ಸ್ಪರ್ಧೆ

ಮಾಲೀಕರ ದಸ್ತಗಿರಿ

ಮೈಸೂರು ೧೫

ರಾಜಧಾನಿಯ ನರಸಿಂಹರಾಜಮೊಹಲ್ಲಾದಲ್ಲಿ "ಹರಿಚಂದ್ರನ್ ಚಕ್ರಸ್ಪರ್ಧೆ" ಎಂಬ ಹೆಸರಿನಲ್ಲಿ ಮೈಸೂರು ಸರ್ಕಾರದ ರಹದಾರಿ ಇಲ್ಲದೆ ಠಕ್ಕು ಸ್ಪರ್ಧೆಯನ್ನು ಕಳೆದ ಏಪ್ರಲ್ ೧ ನೇ ತಾರೀಖಿನಿಂದ ನಡೆಸುತ್ತಿದ್ದ ಸೇಲಂ ಜಿಲ್ಲೆ ಕೃಷ್ಣಗಿರಿಯ ಎಸ್. ನಟರಾಜ ಎಂಬುವರನ್ನು ನಗರದ ಕ್ರೈಂಬ್ರಾಂಚ್ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಹೆಚ್. ಎನ್. ಎ. ಗೌಡ ಮತ್ತು ಸಬ್ ಇನ್ಸ್‌ಪೆಕ್ಟರ್ ಶ್ರೀ ಮಹಂತದೇವರು ಪತ್ತೆಮಾಡಿ ಅವನನ್ನು ಮೊನ್ನೆ ದಸ್ತಗಿರಿ ಮಾಡಿದ್ದಾರೆ. ಅವರ ಕಛೇರಿಯನ್ನು ಶೋಧಿಸಿ ಅನೇಕ ಹಸ್ತ ಪತ್ರಿಕೆಗಳನ್ನು ವಶಪಡಿಸಿಕೊಂಡಿದ್ದಾರೆ.

ಆಪಾದಿತರು ಮದರಾಸ್ ಸರ್ಕಾರದಿಂದ ರಿಜಿಸ್ಟರ್ಡ್ ಆಗಿದೆಯೆಂದು ಹಸ್ತಪತ್ರಿಕೆಗಳನ್ನು ಪ್ರಕಟಿಸಿ, ೨ ಆಣೆ ಕೂಪನ್ನಲ್ಲಿ ಚಕ್ರಬಂಧ ಸ್ಪರ್ಧೆ ಕಳುಹಿಸುವವರಿಗೆ ೫ ಸಾವಿರ ರೂ. ಬಹುಮಾನ ಕೊಡುವುದಾಗಿ ತಿಳಿಸಿ ಸಾವಿರಾರು ಜನರಿಗೆ ಮೋಸ ಪಡಿಸುತ್ತಿರುವರೆಂದು ಪೊಲೀಸರಿಗೆ ದೂರು ಬಂದಿತ್ತು.

ಅದರಮೇಲೆ ಪೊಲೀಸರು ಆತನನ್ನು ದಸ್ತಗಿರಿ ಮಾಡಿ, ನಗರದ ಮೊದಲನೆ ನ್ಯಾಯಾಧೀಶರ ಮುಂದೆ ನಿನ್ನೆ ಹಾಜರ್ಪಡಿಸಿ, ಆತನ ಮೇಲೆ ಮೈಸೂರು ಲಾಟರಿ ಕಾನೂನಿನ ೮ ಮತ್ತು ೯ ನೇ ವಿಧಿಗಳ ಮೇಲೆ ಮೊಕದ್ದಮೆ ದಾಖಲು ಮಾಡಿದ್ದಾರೆ.

ಬಳ್ಳಾರಿಯಲ್ಲಿ ಪಾನನಿರೋಧ ರದ್ದಾಗುವುದಿಲ್ಲ

ಮುಖ್ಯಮಂತ್ರಿ ಹನುಮಂತಯ್ಯನವರ ಹೇಳಿಕೆ

ಮೈಸೂರು ಸಂಸ್ಥಾನಕ್ಕೆ ಮುಂದಿನ ತಿಂಗಳು ೧ ನೇ ತಾರೀಖಿನಿಂದ ಸೇರಲಿರುವ ಬಳ್ಳಾರಿಯ ೭ ತಾಲ್ಲೂಕುಗಳಲ್ಲಿ ಈಗಿರುವ ಪಾನನಿರೋಧವನ್ನು ಮುಂದುವರಿಸಿಕೊಂಡು ಬರಲಾಗುವುದು. ಬಳ್ಳಾರಿಯನ್ನು ಒಂದು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಲಾಗುವುದು-ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಮದರಾಸಿನಲ್ಲಿ ತಿಳಿಸಿದ್ದಾರೆ. ಅವರು ಮುಖ್ಯಮಂತ್ರಿ ಶ್ರೀ ರಾಜಾಜಿಯವರೊಡನೆ ೯೦ ನಿಮಿಷಗಳ ಕಾಲ ಮಾತುಕತೆ ನಡೆಸಿದರು. ಸಚಿವರುಗಳಾದ ಶ್ರೀ ಸಿ. ಸುಬ್ರಹ್ಮಣ್ಯಂ ಮತ್ತು ಡಾ॥ ನಾಗನಗೌಡರೂ ಹಾಜರಿದ್ದರು.

ತುಂಗಭದ್ರಾ ಯೋಜನೆ ಚರ್ಚೆ

ಬೆಂಗಳೂರು ೧೫

ತುಂಗಭದ್ರಾ ಯೋಜನೆ ಸಂಬಂಧಪಟ್ಟ ವಿಷಯಗಳ ಬಗ್ಗೆ ರೆವೆನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ನಿನ್ನೆಯ ದಿನ ಒಂದು ಸಭೆಯು ನಡೆಯಿತು. ಇದರಲ್ಲಿ ಇಂಜನಿಯರಿಂಗ್ ಮತ್ತು ವಿದ್ಯುತ್ ಇಲಾಖಾ ಹಿರಿಯ ಅಧಿಕಾರಿಗಳು ನಿವೃತ್ತ ಚೀಫ್ ಇಂಜನಿಯರ್ ಶ್ರೀ ಎಂ. ನರಸಿಂಹಯ್ಯನವರು ಭಾಗವಹಿಸಿದ್ದರು.

ಇದೇ ೧೮ನೇ ತಾರೀಖು ದೆಹಲಿಯಲ್ಲಿ ಮೈಸೂರು,ಹೈದರಾಬಾದ್,ಮದ್ರಾಸ್ ಸರಕಾರಗಳ ಪ್ರತಿನಿಧಿಗಳ ಸಭೆಯಲ್ಲಿ ಪ್ರಸ್ತಾಪಿಸಬೇಕಾದ ವಿಷಯಗಳ ಬಗ್ಗೆ ಚರ್ಚೆ ನಡೆಯಿತು.

ಮೈಸೂರು ಸಚಿವ ಸಂಪುಟಕ್ಕೆ ಡಾ॥ ನಾಗನಗೌಡರು

ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆಯದಿನ ಮದರಾಸಿನಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ಮದ್ರಾಸಿನಲ್ಲಿ ವ್ಯವಸಾಯಸಚಿವರಾಗಿರುವ ಡಾ॥ ನಾಗನಗೌಡರನ್ನು ಮೈಸೂರಿನ ಮಂತ್ರಿಮಂಡಲಕ್ಕೆ ಸೇರಿಸಿಕೊಳ್ಳುವ ವಿಷಯವು ತೀವ್ರ ಆಲೋಚನೆಯಲ್ಲಿರುವುದಾಗಿ ತಿಳಿಸಿದರು.

ಡಾ॥ ನಾಗನಗೌಡರು ಬಳ್ಳಾರಿಯಿಂದ ಮದ್ರಾಸ್ ಶಾಸನಸಭೆಗೆ ಚುನಾಯಿತರಾಗಿದ್ದಾರೆ.

ಅಕ್ಟೋಬರ್ ಒಂದನೇ ತಾರೀಖಿನಿಂದ ಈ ಜಿಲ್ಲೆಯ ೭ ತಾಲ್ಲೂಕುಗಳ ಪ್ರತಿನಿಧಿಗಳು ಮೈಸೂರು ಶಾಸನಸಭಾ ಸದಸ್ಯರಾಗುತ್ತಾರೆ. ಅವರಲ್ಲಿ ಡಾ॥ ನಾಗನಗೌಡರೂ ಒಬ್ಬರು

೪೫ ಗಿರಣಿಗಳ ಮೇಲೆ ಮೊಕದ್ದಮೆ

ಪಂಚೆ ತಯಾರಿಕೆ ಬಗ್ಗೆ ಸರ್ಕಾರದ ಬಟ್ಟೆ ಹತೋಟಿ ಆಜ್ಞೆಯನ್ನು ಉಲ್ಲಂಘಿಸಿದ ಆಪಾದನೆ ಮೇಲೆ ೪೫ ಬಟ್ಟೆ ಗಿರಣಿಗಳಮೇಲೆ ಮೊಕದ್ದಮೆಯನ್ನು ಹೂಡಲು ಪ್ರಾಂತ್ಯ ಸರ್ಕಾರಗಳಿಗೆ ಕೇಂದ್ರವು ಆದೇಶ ನೀಡಿರುವುದಾಗಿ ಲೋಕ ಸಭೆಯಲ್ಲಿ ಕೈಗಾರಿಕಾ ಸಚಿವ ಶ್ರೀ ಟಿ.ಟಿ. ಕೃಷ್ಣಮಾಚಾರಿಯವರು ಹೇಳಿದ್ದಾರೆ.

ಆಹಾರ ಧಾನ್ಯಗಳ ಪುನರ್ವಿಂಗಡನೆ

ಎಂ. ತರಗತಿ ಕಾರ್ಡುದಾರರಿಗೆ ಹೆಚ್ಚಿನ ಅಕ್ಕಿ, ಗೋಧಿ

ಮೈಸೂರು ೧೫

ರಾಗಿ, ಜೋಳ ಮುಂತಾದ ಧಾನ್ಯಗಳ ಸರಬರಾಜು ಸಾಕಷ್ಟಿಲ್ಲವಾಗಿ ಎಂ. ಕಾರ್ಡುದಾರರಿಗೆ ಕೊಡುತ್ತಿರುವ ಆಹಾರ ಪ್ರಮಾಣವನ್ನು ಈ ದಿನದಿಂದ ಪುನರ್ವಿಂಗಡನೆ ಮಾಡಲಾಗಿದೆ.

ಅಕ್ಕಿ,ಗೋಧಿ ಮತ್ತು ಮಿಲೆಟ್ಸ್‌ಗಳನ್ನೆಲ್ಲಾ ಈ ಕಾರ್ಡುದಾರರಿಗೆ ತಲಾ ೪ ಔನ್ಸ್‌ಗಳಂತೆ ಕೊಡಲಾಗುತ್ತದೆ ಒಟ್ಟು ೧೨ಔನ್ಸ್ ಪ್ರಮಾಣದಲ್ಲಿ ಬದಲಾವಣೆಯಿಲ್ಲ ಹಿಂದೆ ಅಕ್ಕಿ ೩ ಔನ್ಸ್,ಗೋಧಿ ೨ ಔನ್ಸ್ ಮತ್ತು ಮಿಲೆಟ್ಸ್ ೭ ಔನ್ಸ್ ಕೊಡಲಾಗುತ್ತಿತ್ತು.

ಪಾರ್ಡಿ ಸತ್ಯಾಗ್ರಹಿಗಳಿಗೆ ಚಿತ್ರಹಿಂಸೆ

ಹುಲ್ಲುಗಾವಲಿನ ಜಮೀನುಗಳಲ್ಲಿ ಆಹಾರಧಾನ್ಯಗಳನ್ನು ಬೆಳೆಯಬೇಕೆಂದು ಸೂರತ್ತಿನ ಪಾರ್ಡಿಯ ಜೇಡ್ ರೈತರ ಸತ್ಯಾಗ್ರಹ ಸಂಬಂಧದಲ್ಲಿ ದಸ್ತಗಿರಿಯಾಗಿ ಶಿಕ್ಷೆಗೆ ಒಳಗಾದವರನ್ನು ಅಮಾನುಷ ಚಿತ್ರಹಿಂಸೆಗೆ ಗುರಿಪಡಿಸಲಾಗುತ್ತಿದೆಯೆಂದು ಈಗ ನಾಸಿಕ್ ಜೈಲಿನಲ್ಲಿರುವ ಶ್ರೀ ಅಶೋಕಮೆಹ್ತಾರವರು ಬೊಂಬಾಯಿ ಸರ್ಕಾರಕ್ಕೆ ಪ್ರತಿಭಟನಾಪತ್ರ ಬರೆದಿದ್ದಾರೆ. ಭಾಗತ್ ಸತ್ಯಾಗ್ರಹದಲ್ಲಿ ಶಿಕ್ಷೆಗೆ ಒಳಗಾದವರನ್ನು ಕೈಗೆ ಹಗ್ಗ ಕಟ್ಟಿ ಪಾರ್ಡಿಯಿಂದ ಸಬರ್ಮತಿಗೆ ಎಳೆದು ಕೊಂಡು ಹೋಗಲಾಯಿತೆಂದು ಅವರು ಆಪಾದಿಸಿದ್ದಾರೆ.

ಅಂಚೆ ಇಲಾಖೆಯಲ್ಲಿ ಹಣದ ದುರುಪಯೋಗ

ಅಂಚೆ ಇಲಾಖೆಯಲ್ಲಿ ೧೯೫೦-೫೧ ನೇ ಸಾಲಿನಲ್ಲಿ ಹಣ ದುರುಪಯೋಗದ ೬೪೮ ಪ್ರಸಂಗಗಳು ನಡೆದು ಒಟ್ಟು ೮,೧೯,೬೩೭ ರೂ. ನಷ್ಟವಾಗಿರುವುದಾಗಿ ಪಾರ್ಲಿಮೆಂಟ್‌ನಲ್ಲಿ ಮಂಡಿಸಿದ ಲೆಕ್ಕಪತ್ರಗಳಿಂದ ತಿಳಿಯಬರುತ್ತದೆ.

ಅಂತರ ರಾಷ್ಟ್ರೀಯ ಕಾರ್ಮಿಕ ಪ್ರಾದೇಶಿಕ ಸಮ್ಮೇಳನ

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಏಷ್ಯಾ ಪ್ರಾದೇಶಿಕ ಸಮ್ಮೇಳನವು ರಂಗೂನ್ ನಗರದಲ್ಲಿ ಪ್ರಾರಂಭವಾಗಿದೆ. ಭಾರತ ಪ್ರತಿನಿಧಿಯಾದ ಕೇಂದ್ರ ಕಾರ್ಮಿಕರ ಉಪಸಚಿವ ಆಬಿದ್ ಅಲಿಯವರನ್ನು ಸಮ್ಮೇಳನದ ಉಪಾಧ್ಯಕ್ಷರನ್ನಾಗಿ ಚುನಾಯಿಸಲಾಗಿದೆ.

ಕರ್ಣಾಟಕ ಪ್ರಾಂತ್ಯರಚನೆಗೆ ಒತ್ತಾಯ

ಪಾರ್ಲಿಮೆಂಟಿನಲ್ಲಿರುವ ಕನ್ನಡ ಸದಸ್ಯರು ಕರ್ಣಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರ ನಾಯಕತ್ವದಲ್ಲಿ ಪ್ರಧಾನಿ ಶ್ರೀ ನೆಹರೂ ಬಳಿ ನಿನ್ನೆಯ ದಿನ ನಿಯೋಗ ಹೋಗಿ ಕರ್ಣಾಟಕ ಪ್ರಾಂತ್ಯವನ್ನು ಕೂಡಲೇ ರಚಿಸಬೇಕೆಂದು ಒತ್ತಾಯಪಡಿಸಿದರೆಂದು ತಿಳಿಯಬರುತ್ತದೆ.

ಬಾಡಿಗೆ ಹತೋಟಿ ಕಾನೂನು ತಿದ್ದುಪಡಿ

ಬಾಡಿಗೆ ಹತೋಟಿ ಕಾನೂನನ್ನು ಬೊಂಬಾಯಿ ಶಾಸನಸಭೆಯು ತಿದ್ದುಪಡಿ ಮಾಡಿದೆ. ಇದರಂತೆ ೧೯೪೦ ರಲ್ಲಿ ಇದ್ದ ಬಾಡಿಗೆಯನ್ನು ಶೇಕಡ ೫ರಿಂದ ೫೦ ರಷ್ಟು ಹೆಚ್ಚಿಸಲು ಇದರಲ್ಲಿ ಅವಕಾಶ ಕಲ್ಪಿಸಲಾಗಿದೆ.

ಗಾಂಧೀಜಿ ರುಜುವಿಗೆ ೧೬ ಪೌಂಡ್ ಬೆಲೆ

ಮಹಾತ್ಮ ಗಾಂಧಿಯವರ ಹಸ್ತಾಕ್ಷರಕ್ಕೆ ಲಂಡನ್ನಿನಲ್ಲಿ ೧೫ ಪೌಂಡುಗಳ ಬೆಲೆ ಇದೆ. ಅಷ್ಟೇ ಬೆಲೆಯು ರಷ್ಯದ ಮಾಲಟೋವ್, ಮಾರ್ಷಲ್ ಟಿಟೋ ಮತ್ತು ವಿಂಡ್ಸರ್ ಡ್ಯೂಕ್‌ಗಳಿಗೂ ಇದೆ. ರಾಣಿ ಎಲಿಜಬೆತ್ ರುಜುವಿಗೆ ೨೮ ಪೌಂಡ್ ಬೆಲೆ ಇದೆ.

ಸ್ವದೇಶಕ್ಕೆ ಹಿಂತಿರುಗದ ಸೈನ್ಯದವರು

ವಿಶ್ವಸಂಸ್ಥೆ ಸೈನ್ಯವು ಕೊರಿಯಾದಲ್ಲಿ ಸ್ವದೇಶಕ್ಕೆ ಹಿಂತಿರುಗಲು ಇಷ್ಟಪಡದ ಒಟ್ಟು ೪೮೦೦ ಉತ್ತರಕೊರಿಯಾ ಮತ್ತು ಚೈನಾ ಸೈನಿಕರನ್ನು ಭಾರತ ಸೈನ್ಯದ ವಶಕ್ಕೆ ಇಲ್ಲಿಯವರೆಗೆ ಒಪ್ಪಿಸಿರುವುದಾಗಿ ತಿಳಿಯಬರುತ್ತದೆ.

ಬಂಗಾಳದಲ್ಲಿ ೪೦ ಲಕ್ಷ ಟನ್ ಅಕ್ಕಿ ಬೆಳೆ

ಕಳೆದ ೧೦ ವರ್ಷಗಳಿಂದ ಆಗದಷ್ಟು ಅಕ್ಕಿಯು ಪೈರು ಈ ವರ್ಷ ಬಂಗಾಳದಲ್ಲಿ ಬೆಳೆಯಲಾಗಿದೆಯೆಂದೂ, ಅದು ೪೦ ಲಕ್ಷ ಟನ್ನುಗಳಷ್ಟು ಆಗಿದೆಯೆಂದೂ ಅಂದಾಜು ಮಾಡಲಾಗಿದೆ.

ಆಂಧ್ರಪ್ರಾಂತ್ಯ ಮಸೂದೆಗೆ ಒಪ್ಪಿಗೆ

ಪಾರ್ಲಿಮೆಂಟಿನ ಉಭಯ ಸಭೆಗಳು ಅಂಗೀಕರಿಸಿರುವ ಆಂಧ್ರಪ್ರಾಂತ್ಯ ಮಸೂದೆಗೆ ರಾಷ್ಟ್ರಾಧ್ಯಕ್ಷರು ತಮ್ಮ ಒಪ್ಪಿಗೆಯನ್ನಿತ್ತಿದ್ದಾರೆ.

ಆಂಧ್ರದಲ್ಲಿ ಸಮ್ಮಿಶ್ರ ಸರ್ಕಾರ

ಶ್ರೀ ಪ್ರಕಾಶಂ ರಚಿಸಲು ಅವಕಾಶ

ಆಂಧ್ರದಲ್ಲಿ ಪ್ರಜಾಪ್ರಭುತ್ವ ಸಿದ್ಧಾಂತದ ಮೇಲೆ ಸುಭದ್ರವಾದ ಸಮ್ಮಿಶ್ರ ಸರ್ಕಾರವನ್ನು ಶ್ರೀ ಟಿ. ಪ್ರಕಾಶಂರವರು ರಚಿಸಲು ಅನುಕೂಲವಾಗುವಂತೆ ಅವರನ್ನು ಪಕ್ಷದ ಜವಾಬ್ದಾರಿಗಳಿಂದ ಬಿಟ್ಟುಕೊಡಲು ಮದರಾಸಿನಲ್ಲಿ ಕಳೆದ ೩-೪ ದಿನಗಳಿಂದ ನಡೆದ ಆಂಧ್ರ ಶಾಸನ ಸಭೆಯ ಪ್ರಜಾಸೋಷಲಿಸ್ಟ್ ಪಕ್ಷದ ಸಭೆಯವರು ನಿರ್ಧರಿಸಿದ್ದಾರೆ. ಅವರು ನಾಳೆ ದೆಹಲಿಗೆ ಪ್ರಯಾಣ ಮಾಡಿ ಅಲ್ಲಿ ಅಖಿಲಭಾರತ ಪ್ರಜಾಸೋಷಲಿಸ್ಟ್ ಪಕ್ಷದ ಕಾರ್ಯಕಾರಿ ಸಮಿತಿಯಲ್ಲಿ ಮೇಲ್ಕಂಡ ನಿರ್ಧಾರಕ್ಕೆ ಬೆಂಬಲ ಪಡೆಯಲಿದ್ದಾರೆ.

ಕೈಮಗ್ಗದವರಿಗೆ ನೆರವು

ಕೈಮಗ್ಗದವರಿಗೆ ನೆರವು ನೀಡಲು ಬೊಂಬಾಯಿ ಸರ್ಕಾರವು ೨೦ ಲಕ್ಷ ರೂಪಾಯಿಗಳ ವೆಚ್ಚದ ಒಂದು ಯೋಜನೆಯನ್ನು ತಯಾರಿಸಿದೆ. ನೇಕಾರರಿಗೆ ಪರಸ್ಪರ ಸಹಕಾರ ಸಂಘಗಳ ಮೂಲಕ ಹಣ ಸಾಲ ಕೊಡುವುದು, ನೂಲನ್ನು ಕಡಮೆ ದರದಲ್ಲಿ ಒದಗಿಸುವುದು ಇವೆಲ್ಲಾ ಇದರಲ್ಲಿ ಅಡಕವಾಗಿದೆ.

ಕೊರಿಯಾ ಶಾಂತಿಸಮ್ಮೇಳನ

ಕೊರಿಯಾ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಲು ವಿಶ್ವಸಂಸ್ಥೆಯು ಮಾಡಿರುವ ಸಲಹೆಯನ್ನು ಉತ್ತರ ಕೊರಿಯಾ ಮತ್ತು ಚೈನಾ ಸರ್ಕಾರಗಳು ತಿರಸ್ಕರಿಸಿರುವುದಾಗಿ ತಿಳಿಯಬರುತ್ತದೆ. ವಿಶ್ವಸಂಸ್ಥೆ ಚುನಾಯಿಸಿರುವ ರಾಷ್ಟ್ರಗಳ ಪಟ್ಟಿ ಸಮರ್ಪಕವಾಗಿಲ್ಲವೆಂದು ಅವು ತಿಳಿಸಿವೆ.

ಹಿಂದುಳಿದವರಿಗಾಗಿ ಪ್ರತ್ಯೇಕ ಸಚಿವಶಾಖೆ ಬೇಕು

ಹಿಂದುಳಿದವರ ಅಭಿವೃದ್ಧಿ ಕಾರ್ಯಗಳನ್ನು ಜಾಗ್ರತೆಯಾಗಿ ಕಾರ್ಯರೂಪಕ್ಕೆ ತರಲು ಅನುಕೂಲವಾಗುವಂತೆ ಕೇಂದ್ರ ಸರ್ಕಾರವು ಒಂದು ಪ್ರತ್ಯೇಕ ಸಚಿವ ಶಾಖೆ ಏರ್ಪಡಿಸಬೇಕೆಂದು ಲೋಕಸಭೆ ಸದಸ್ಯರೂ ಅಖಿಲ ಭಾರತ ನಿಮ್ನವರ್ಗ ಫೆಡರೇಷನ್ನಿನ ಕಾರ್ಯದರ್ಶಿಗಳೂ ಆದ ಶ್ರೀ ರಾಜಭೋಜ್‌ರವರು ಹೇಳಿದ್ದಾರೆ.

● ಫಿಜಿ ದ್ವೀಪದಲ್ಲಿ ಮೊನ್ನೆದಿನದ ಭೂಕಂಪವುಂಟಾಗಿ ೩೦ ಜನರು ಮಡಿದು ಅನೇಕರಿಗೆ ಗಾಯಗಳಾಗಿರುವುದಾಗಿ ವರದಿಯಾಗಿದೆ.

ಅಮೆರಿಕಾ ನೀತಿಯ ಬಗ್ಗೆ ಆಟ್ಲೀಯವರ ಟೀಕೆ

ಏಷ್ಯಾದಲ್ಲೆಲ್ಲಾ ಅತ್ಯಂತ ಹಿರಿಯ ಮತ್ತು ಪ್ರಬಲ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತಕ್ಕೆ ಕೊರಿಯಾ ಶಾಂತಿ ಸಮ್ಮೇಳನದಲ್ಲಿ ಸ್ಥಾನವನ್ನು ಕಲ್ಪಿಸದಿರುವುದು ವಿಷಾದಕರ. ಅಲ್ಲಿ ನಡೆದ ಯುದ್ಧ ಅಮೆರಿಕಾ ಮತ್ತು ಕಮ್ಯೂನಿಸ್ಟರ ನಡುವೆಯಲ್ಲ ಅಥವಾ ಸಿಂಗ್‌ಮನ್‌ರೀಯವರಿಗಾಗಿ ನಡೆದಿಲ್ಲ. ವಿಶ್ವಸಂಸ್ಥೆಯು ಕಮ್ಯೂನಿಸ್ಟ ಚಟುವಟಿಕೆಗಳ ವಿರುದ್ಧ ಹೋರಾಡಿ ಶಾಂತಿ ಸ್ಥಾಪನೆಗಾಗಿ ನಡೆದ ಯುದ್ಧ ಎಂದು ಬ್ರಿಟನ್ನಿನ ಮಾಜಿ ಪ್ರಧಾನಿ ಮತ್ತು ಲೇಬರ್ ಪಕ್ಷದ ನಾಯಕ ಆಟ್ಲೀಯವರು ಕೊರಿಯಾ ಶಾಂತಿ ಸಮ್ಮೇಳನ ರಚನೆಯ ಬಗ್ಗೆ ಟೀಕಿಸಿದ್ದಾರೆ.

ಅವರು ಅಮೆರಿಕಾ ನೀತಿಯನ್ನು ಟೀಕಿಸುತ್ತಾ, ಅಮೆರಿಕನ್ನಿನ ನೀತಿಯನ್ನು ಒಪ್ಪದಿರುವವರನ್ನೆಲ್ಲಾ ವಿರೋಧಪಕ್ಷದೊಡನೆ ಸೇರಿಸುವ ಕ್ರಮವು ತೀರ ಅಸಹನೀಯ, ಅಮೆರಿಕನ್ನರ ನೀತಿಗಳಿಗೆಲ್ಲಾ ನಾವು ಬೆಂಬಲ ನೀಡುವುದು ಸಾಧ್ಯವಿಲ್ಲ ಎಂದು ಅವರು ಹೇಳಿದ್ದಾರೆ.

ಪಾಕೀಸ್ತಾನ ಕಾಶ್ಮೀರದಿಂದ ಸೇನೆ ವಾಪಸು ಮಾಡಬೇಕು

ಕಾಶ್ಮೀರದಲ್ಲಿ ನಿಷ್ಪಕ್ಷ ಮತ್ತು ಸ್ವತಂತ್ರ ಜನಮತಗಣನೆ ನಡೆಯಬೇಕೆಂಬುದಕ್ಕೆ ನಾವು ಜಾಚೂ ಒಪ್ಪುತ್ತೇವೆ. ಆದರೆ ಪಾಕೀಸ್ತಾನವು ಬಲವಂತವಾಗಿ ಆಕ್ರಮಿಸಿರುವ ಪ್ರದೇಶಗಳಿಂದ ಸೇನೆಯನ್ನು ವಾಪಸು ಪಡೆಯಬೇಕು—ಎಂದು ಅಪರ ಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರು ಅಲ್ಲಿನ ರಾಷ್ಟ್ರೀಯ ಸಮ್ಮೇಳನದ ಪ್ರಾರಂಭೋತ್ಸವದಲ್ಲಿ ತಿಳಿಸಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೪—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—	೨೫—೧೪
ಎಳ್ಳು	೬೦— ೨	೮೩—೧೪
ಹುರುಳಿ	೪೭—೧೦	—
ಅಲಸಂದೆ	೭೪—೪	—
ತೆಂಗಿನಕಾಯಿ	೨೦೦	೨೩೭

ಆಹಾರ ವಸ್ತುಗಳ ಆಮದಿಗೆ ಖಾಸಗಿಯವರಿಗೆ ಅನುಮತಿ

ಕೇಂದ್ರ ಸರ್ಕಾರದ ನಿರ್ಧಾರ

ಬ್ರೆಡ್, ಬಿಸ್ಕತ್ ಮುಂತಾದ ಆಹಾರ ವಸ್ತುಗಳ ತಯಾರಿಕೆಗೆ ಬೇಕಾಗುವ ಗೋಧಿ, ಜೋಳ ಮುಂತಾದುವುಗಳ ಹಿಟ್ಟನ್ನು ವಿದೇಶಗಳಿಂದ ತರಿಸಿಕೊಳ್ಳಲು ರೇಷನ್ ವ್ಯವಸ್ಥೆ ಜಾರಿಯಲ್ಲಿ ಇಲ್ಲದಿರುವ ಪ್ರಾಂತ್ಯಗಳಲ್ಲಿ ಖಾಸಗಿಯವರಿಗೆ ಅನುಮತಿಯನ್ನು ನೀಡಲು ಭಾರತ ಸರ್ಕಾರವು ನಿರ್ಧರಿಸಿದೆ.

ಅಕ್ಕಿಯನ್ನೂ ಇದೇ ರೀತಿ ತರಿಸಿಕೊಳ್ಳಲು ಕೇಂದ್ರ ಅನುಮತಿ ನೀಡಲು ಕಳೆದ ವಾರ ನಿರ್ಧರಿಸಿತು.

ರಾಷ್ಟ್ರಾಧ್ಯಕ್ಷರು ಅಸ್ವಸ್ಥ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದ್‌ರವರು ಅಸ್ವಸ್ಥರಾಗಿರುವುದರಿಂದ ಅವರು ಸಿಮ್ಲಾ ಮತ್ತು ಹಿಮಾಚಲ ಪ್ರದೇಶಗಳ ಪ್ರವಾಸವನ್ನು ಕೈಗೊಳ್ಳಬಾರದೆಂದು ಅವರ ವೈದ್ಯರ ಸೂಚನೆಮೇರೆ ಅದನ್ನು ರದ್ದುಮಾಡಲಾಗಿದೆ.

೧೮೦ ಮಂದಿಯ ದಸ್ತಗಿರಿ

ಕಾನ್ಪುರದಲ್ಲಿ ೧೪೪ ನೇ ವಿಧಿಯನ್ನು ಉಲ್ಲಂಘಿಸಿದ ಅಪಾದನೆ ಮೇಲೆ ೧೦೦ ಜನ ಪ್ರಜಾಸೋಷಲಿಸ್ಟ್ ಕಾರ್ಯಕರ್ತರನ್ನು ದಸ್ತಗಿರಿ ಮಾಡಲಾಗಿದೆಯೆಂದು ತಿಳಿಯಬರುತ್ತದೆ.

ಲಂಡನ್ನಿನಲ್ಲಿ ಗಾಂಧಿಸ್ಮಾರಕ

ಮಹಾತ್ಮ ಗಾಂಧಿಯವರು ಹಿಂದೆ ರೌಂಡ್ ಟೇಬಲ್ ಸಮ್ಮೇಳನಕ್ಕೆ ಬಂದಾಗ ಇಳಿದುಕೊಂಡಿದ್ದ ಲಂಡನ್ನಿನ ಈಸ್ಟ್ ಎಂಡ್ ಪ್ರದೇಶದಲ್ಲಿ ಒಂದು ಸ್ಮಾರಕವನ್ನು ಸ್ಥಾಪಿಸಲು ಲಂಡನ್ನಿನ ಕೌಂಟಿ ಕೌನ್ಸಿಲು ನಿರ್ಧರಿಸಿದೆ. ಅದೇರೀತಿ ಶ್ರೀ ಜಿನ್ನಾರವರ ಸ್ಮಾರಕವನ್ನೂ ಏರ್ಪಡಿಸಲಾಗುವುದು.

ಟೆಕ್ನಿಕಲ್ ಶಿಕ್ಷಣ ಪರಿಶೀಲನಾ ಸಮಿತಿ

ಮೈಸೂರು ೧೫

ಭಾರತ ಸರ್ಕಾರದವರಿಂದ ಡಾ|| ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟಿರುವ ಟೆಕ್ನಿಕಲ್ ಶಿಕ್ಷಣಪರಿಶೀಲನಾ ಸಮಿತಿಯವರು ಮೈಸೂರು ಸಂಸ್ಥಾನದಲ್ಲಿ ಇದೇ ೨೫ರಿಂದ ೩ನೇತಾ|| ವರೆಗೆ ಪ್ರವಾಸ ಮಾಡುವರು. ೨೫ ಬೆಂಗಳೂರು, ೨೮ ಮೈಸೂರು, ೩೦ ಹಾಸನ, ೧ ದಾವಣಗೆರೆ, ೨ ಭದ್ರಾವತಿ, ೩ ಚಿಂತಾಮಣಿಗಳಿಗೆ ಭೇಟಿಕೊಡುವರು.

ರಫ್ತಿನ ಸುಂಕದಲ್ಲಿ ಇಳಿತಾಯ

ಗೋಣಿನಾರು, ಚೀಲ ಮುಂತಾದುವುಗಳ ಮೇಲೆ ಭಾರತ ಸರ್ಕಾರವು ವಿಧಿಸುತ್ತಲಿದ್ದ ರಫ್ತಿನ ಸುಂಕವನ್ನು ೨೭೫ ರೂಪಾಯಿಗಳಿಂದ ೧೫೦ ರೂಪಾಯಿಗಳಿಗೆ ಇಳಿಸಲಾಗಿದೆ. ಇದು ಇಂದಿನಿಂದ ಜಾರಿಗೆ ಬಂದಿರುತ್ತದೆ. ವಿದೇಶಗಳಲ್ಲಿ ಈ ವಸ್ತುಗಳ ವ್ಯಾಪಾರವು ಸುಗಮವಾಗಿ ನಡೆಯಲೆಂದು ಈ ಇಳಿತಾಯವನ್ನು ಮಾಡಲಾಗಿದೆ.

ಸಾರ್ವತ್ರಿಕ ರಜಾ

ನೂತನ ಆಂಧ್ರಪ್ರಾಂತ್ಯ ರಚನೆಯಾಗಲಿರುವ ಅಕ್ಟೋಬರ್ ಒಂದನೇ ತಾರೀಖು ಆ ಪ್ರಾಂತ್ಯದಾದ್ಯಂತ ಸಾರ್ವತ್ರಿಕ ರಜಾದಿನವನ್ನಾಗಿ ಘೋಷಿಸಲಾಗಿದೆ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

Mysore Dasara Exhibition 1953

(8TH OCTOBER TO 25TH OCTOBER 1953 INCLUSIVE)

As the Dasara festivities are as usual celebrated during this year also, including the Dasara Raja Sabha and Royal Procession, the Exhibition will be very largely attended by visitors from all over the country.

Last date for receipt of applications for stalls has been extended upto .... 20th September 53

" for receipt of exhibits for Fine Arts & Crafts Section. .... 1st October 53

" for receipt of exhibits for Ladies Section (From Ladies' & Ladies' Institutions only) .... 1st October 53

" for receipt of tenders for :—

1) Supply of washington lights, 2) Bicycle stand contract, 3) Supply of Rosettes, 4) Loud speaker arrangements, 5) Monopoly rights for poster publicity in the Exhibition premises. 6) Opening Restaurants in the Exhibitionn Main Buildings and Jeevanarayanakatte grounds, 7) Opening Milk Bars in the Main Exhibition Buildings and Jeevanarayanakatte.— 21st Septr. 53

For any other particulars, please apply to:—

Mysore, 13th Sept. 53

THE SECRETARY,
Mysore Dasara Exhibition Committee, Mysore.

ಪ್ರಭಾ ಅಮೋಘಪ್ರಾರಂಭ........18—9—53 ರಿಂದ ದಿನ 3 ಆಟಗಳು
ದೇವಕಿಬೋಸ್‌ರವರ --ರತ್ನದೀಪಂ-- [ತಮಿಳು]
ಪಾತ್ರ:—ಅನಂತಗುಪ್ತ, ಅಭಿಭಟ್ಟಾಚಾರ್ಯ, ಮಂಜುಷೆ, ಮೊಲಿನಾ, ಪಹಾಸನ್ಯಾಲ್, ಛಾಯಾದೇವಿ ಮತ್ತು ಹರಿಕೆ
★ ಸಂಗೀತ:—ರಾಬಿನ್ ಚಟರ್ಜಿ. ★ ದಿಗ್ದರ್ಶನ:—ದೇವಕಿಬೋಸ್.
ಕಡೆಯ ೩ ದಿನಗಳು ಹೆಚ್.ಎಂ. ಫಿಲ್ಮ್ಸ್‌ರವರ --ಛೋಟಿಮಾ--
Morning Shows ;-Double Programme from 18-9-53 for 3 days
Laurell, Hardey in "SAPS at SEA" & "JUNGLE HERO"

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೨೫

೧೬-೯-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕೊಚ್ಚಿನ್ ಬಳಿ ಗೋಳಿಬಾರು

ಇಬ್ಬರ ಮರಣ, ೧೫ ಜನರಿಗೆ ಗಾಯ

ಕೊಚ್ಚಿನ್ನ ಮಟ್ಟಂಚೆರಿಬಜಾರ್ ಎಂಬಲ್ಲಿ ನಿನ್ನೆಯ ದಿನ ಪೋಲೀಸಿನವರು ಗುಂಪೊಂದನ್ನು ಚದುರಿಸಲು ಗುಂಡು ಹಾರಿಸಿದುದರ ಪರಿಣಾಮವಾಗಿ ಇಬ್ಬರು ಸತ್ತು ೧೫ ಜನರಿಗೆ ಗಾಯಗಳಾದುವೆಂದು ತಿಳಿಯಬರುತ್ತದೆ. ಬಂದರಿನಿಂದ ಸಾಮಾನುಗಳನ್ನು ಇಳಿಸುವ ವಿಷಯದಲ್ಲಿ ಎರಡು ಕಾರ್ಮಿಕ ವಿರೋಧ ಪಕ್ಷದವರಲ್ಲಿ ಘರ್ಷಣೆಯುಂಟಾಗಿ ಗುಂಪು ಹತೋಟಿ ಮೀರಿ ವರ್ತಿಸಿದ್ದರಿಂದ ಪೋಲೀಸರು ಲಾಠಿ ಪ್ರಹಾರ ಮಾಡಿದರು. ಅದು ಪ್ರಯೋಜನವಾಗದೆ, ಗುಂಪು ಪೋಲೀಸರ ಮೇಲೆ ಕಲ್ಲು ಮುಂತಾದುವನ್ನು ಎಸೆಯಲು ಗುಂಡು ಹಾರಿಸಲಾಯಿತು. ೪ ಕೂಲಿಗಾರರ ಮುಖಂಡರನ್ನೂ ದಸ್ತಗಿರಿ ಮಾಡಿರುವುದಾಗಿ ತಿಳಿಯಬರುತ್ತದೆ.

ತಿರುವಾಂಕೂರ್ ಸಚಿವರ ರಾಜೀನಾಮೆ

ತಿರುವಾಂಕೂರ್--ಕೊಚ್ಚಿನ್ ಪ್ರಾಂತ್ಯದ ರೆವೆನ್ಯೂ ಸಚಿವರಾದ ಶ್ರೀ ಚಿದಂಬರ ನಾಡಾರ್‌ರವರು ತಮ್ಮ ಮಂತ್ರಿಪದವಿಗೆ ರಾಜಿನಾಮೆಯನ್ನು ಕೊಟ್ಟಿರುವುದನ್ನು ಅಲ್ಲಿಯ ರಾಜಪ್ರಮುಖರು ಅಂಗೀಕರಿಸಿದ್ದಾರೆ.

ತಿರುವಾಂಕೂರಿನ ತಮಿಳುನಾಡು ಕಾಂಗ್ರೆಸ್ಸು ಸರ್ಕಾರಕ್ಕೆ ಬೆಂಬಲವನ್ನು ನೀಡುವುದನ್ನು ಹಿಂತಕ್ಕೆ ತೆಗೆದುಕೊಂಡಿರುವುದರಿಂದ ಆ ಪಕ್ಷಕ್ಕೆ ಸೇರಿದ ಇವರು ರಾಜೀನಾಮೆಯನ್ನು ಇತ್ತಿದ್ದಾರೆ.

೧೪೮ ವರ್ಷ ವೃದ್ಧನ ಮರಣ

ಮೆಕ್ಸಿಕೋವಿನ ಕ್ಯುರಿ ಟಾರೋ ಎಂಬಲ್ಲಿ ೧೪೮ ವರ್ಷ ವಯಸ್ಸಿನ ಮಾರ್ಸೆಲಿಪಿನಾ ಎಂಬ ವಶುಪಾಲನಾವೃತ್ತಿಯಲ್ಲಿದ್ದ ವೃದ್ಧನು ಮೃತನಾದನು ಆತನ ಹಿರಿಯ ಮಗನಿಗೆ ೧೨೫ ವರ್ಷ ವಯಸ್ಸು ಆತನ ಸಂತತಿಯಲ್ಲಿ ಈಗ ೨೦೦ ಜನರಿರುವರೆಂದು ಹೇಳಲಾಗಿದೆ.

ಮೈಸೂರಿಗೆ ೨೫೦೦ ಟನ್ ಗೋಧಿ

ಮದರಾಸ್ ಬಂದರಿಗೆ ಬಂದ ಬೋಕಾಡಾಸಿ ನೌಕೆಯಿಂದ ೨೫೦೦ ಟನ್ ಗೋಧಿಯನ್ನು ಮೈಸೂರಿಗಾಗಿ ಇಳಿಸಿ ಉಳಿಕೆಯನ್ನು ಕಲ್ಕತ್ತಗೆ ಕಳುಹಿಸಲಾಗಿದೆ.

ಪುರಸಭಾ ಕಛೇರಿಯಲ್ಲಿ ೨೩೬೩೪ ರೂ ದರೋಡೆ

ಶಸ್ತ್ರಸಜ್ಜಿತರಾದ ೫ ಜನ ಪಠಾಣರು ಶನಿವಾರ ದಿನ ಲಾಹೋರ್ ಪುರಸಭಾ ಕಛೇರಿಗೆ ನುಗ್ಗಿ ಕ್ಯಾಷಿಯರ್‌ನಿಂದ ೧೫೬೩೪ ರೂಪಾಯಿಗಳನ್ನು ಕಸಿದುಕೊಂಡು ಪರಾರಿಯಾದರು.

ಕಾಶ್ಮೀರದಬಗ್ಗೆ ಪಾಕೀಸ್ಥಾನ ಸರ್ಕಾರದ ಅಪಪ್ರಚಾರ

ಕಾಶ್ಮೀರದ ಇತ್ತೀಚಿನ ಗಲಭೆಗಳಲ್ಲಿ ೧೦೦ ಜನ ಮಹಿಳೆಯರು ಸೇರಿ ೧೫೦೦ ಮುಸ್ಲಿಮರು ಹ್ಯತರಾದರು ಎಂಬುದಾಗಿ ನಾನಾರೀತಿಯ ನಿರಾಧಾರವಾದ ಸುದ್ದಿಗಳನ್ನು ಇರಾನಿನಲ್ಲಿರುವ ಪಾಕೀಸ್ತಾನ ರಾಯಭಾರಿ ಕಛೇರಿಯು ತನ್ನ ಪತ್ರಿಕೆಯಲ್ಲಿ ಪ್ರಕಟಿಸಿದೆ. ಇರಾನಿನಲ್ಲಿರುವ ಭಾರತ ರಾಯಭಾರಿ ಕಛೇರಿಯು ಇದನ್ನು ಅಲ್ಲಿಯ ಸರ್ಕಾರದ ಗಮನಕ್ಕೆತಂದು ಪ್ರತಿಭಟನೆ ವ್ಯಕ್ತಪಡಿಸಿದೆ.

ಕಾಶ್ಮೀರ ವ್ಯವಹಾರದಲ್ಲಿ ಅಮೆರಿಕ ಕೈವಾಡ

ಅಖಿಲ ಭಾರತ ಹಿಂದೂ ಮಹಾಸಭೆ ಕಾರ್ಯದರ್ಶಿ ಶ್ರೀ ದೇಶಪಾಂಡೆಯವರು ಬೊಂಬಾಯಿನಲ್ಲಿ ಮಾತನಾಡುತ್ತ ಕಾಶ್ಮೀರ ವ್ಯವಹಾರದಲ್ಲಿ ಅಮೆರಿಕದ ಕೈವಾಡವಿತ್ತೆಂಬುದರ ಬಗ್ಗೆ ತಮ್ಮಲ್ಲಿ ಖಚಿತವಾದ ನಿದರ್ಶನವಿರುವುದಾಗಿ ತಿಳಿಸಿದ್ದಾರೆ.

ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಿ|| ಡಲ್ಸ್‌ರವರು ಭಾರತಕ್ಕೆ ಬಂದಾಗ ಷೇಕ್ ಅಬ್ದುಲ್ಲಾರವರಿಗೆ ಅಮೆರಿಕಾಧ್ಯಕ್ಷ ಐಸನ್‌ಹೂವರ್‌ರವರಿಂದ ಒಂದು ಗುಪ್ತ ಪತ್ರವನ್ನು ತಂದು ತಲುಪಿಸಿದರೆಂದೂ, ಅನಂತರ ಷೇಕ್‌ಅಬ್ದುಲ್ಲಾ ತಮ್ಮ ನೀತಿ ಬದಲಾಯಿಸಿದರೆಂದೂ ಆರೋಪಿಸಿದ್ದಾರೆ.

ಪೆಪ್ಸುವಿನಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತದ ವಿಸ್ತರಣೆ

ಪೆಪ್ಸುವಿನಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತವನ್ನು ಇನ್ನೂ ೬ ತಿಂಗಳುಕಾಲ ಮುಂದುವರಿಸಲು ಕೇಂದ್ರ ಗೃಹಸಚಿವ ಡಾ|| ಕಟ್ಜುರವರ ಒಂದು ನಿರ್ಣಯವನ್ನು ಮಂಡಿಸಿದ್ದಾರೆ. ಈ ನಿರ್ಣಯವನ್ನು ಕಟುವಾಗಿ ಡಾ|| ಅಂಬೇಡ್ಕರ್ ಟೀಕಿಸಿ ಇದು ಶುದ್ಧ ಅವಮಾನವೆಂದು ಹೇಳಿದ್ದಾರೆ.

ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ ಮೆಲ್ಮನೆಗೆ ನಾಮಕರಣವಾದ ಸದಸ್ಯರನ್ನು ಮದ್ರಾಸ್ ಮುಖ್ಯಮಂತ್ರಿ ಪರಾಜಿತವ್ಯಕ್ತಿಯನ್ನೂ ಬೊಂಬಾಯಿನ ಮುಖ್ಯಮಂತ್ರಿಯನ್ನಾಗಿ ನೇಮಿಸಿದುದು ರಾಜ್ಯಾಂಗಕ್ಕೆ ಅವಮಾನ ಪ್ರಸಂಗಗಳೆಂದು ಟೀಕಿಸಿದ್ದಾರೆ.

● ಸೂರತ್‌ಗೆ ೬೦ ಮೈಲಿ ದೂರದಲ್ಲಿ ನಡೆಯುತ್ತಿರುವ ಪಾರ್ಡಿ ಭೂ ಸತ್ಯಾಗ್ರಹ ಸಂಬಂಧದಲ್ಲಿ ನಿನ್ನೆಯದಿನ ೧೦೬ ಜನರನ್ನು ದಸ್ತಗಿರಿಮಾಡಿ ಅವರಿಗೆ ಶಿಕ್ಷೆಯನ್ನು ವಿಧಿಸಲಾಯಿತೆಂದು ತಿಳಿಯಬರುತ್ತದೆ.

ಬೆಂಕಿ ಅನಾಹುತ

ಮೈಸೂರು ೧೬

ಅಶೋಕ ರಸ್ತೆಯಲ್ಲಿ ದೊಡ್ಡ ಗಡಿಯಾರದ ಬಳಿ ಇರುವ 'ನಿರ್ಮಲಾ ಬಿಲ್ಡಿಂಗ್ಸ್' ನಲ್ಲಿ ಶ್ರೀನಿವಾಸ ವಾಲ್ಕನೈಸಿಂಗ್ ವರ್ಕ್ಸ್ ಎಂಬಲ್ಲಿ ಈ ಬೆಳಿಗ್ಗೆ ೧೧--೩೦ ಗಂಟೆ ವೇಳೆಯಲ್ಲಿ ಬೆಂಕಿ ಅನಾಹುತದಿಂದ ಸುಮಾರು ೧೮ ವರ್ಷ ವಯಸ್ಸಿನ ಶ್ರೀನಿವಾಸ್ ಎಂಬ ಯುವಕನಿಗೆ ಗಾಯಗಳಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲಾದನು ಅಗ್ನಿ ಶಮನ ದಳದವರು ಸ್ಥಳಕ್ಕೆ ಕೂಡಲೇ ಬಂದು ಬೆಂಕಿಯನ್ನು ಆರಿಸಿದರು. ಆ ಹುಡುಗನು ಕೆಲಸ ಮಾಡುತ್ತಿದ್ದಾಗ ಸೀಮೆಯೆಣ್ಣೆ ಒಲೆಯು ಸಿಡಿದು ಬೆಂಕಿ ಹತ್ತಿಕೊಂಡಿತೆಂದೂ, ಹತ್ತಿರದಲ್ಲಿದ್ದ ಟೈರು ಟ್ಯೂಬುಗಳಿಗೂ ಬೆಂಕಿ ತಗುಲಿತೆಂದು ಹೇಳಲಾಗಿದೆ ಸುಮಾರು ೫೦೦ ರೂಗಳ ನಷ್ಟವಾಗಿರಬಹುದೆಂದು ಊಹಿಸಲಾಗಿದೆ.

ಜೂಜಾಟಕ್ಕೆ ಶಿಕ್ಷೆ

ಮೈಸೂರು ೧೬

ಇಟ್ಟಿಗೆ ಗೂಡಿನ ಸಾರಂಗಪಾಣಿ ಟ್ರಂಕ ಕಾರ್ಖಾನೆಯಲ್ಲಿ ಜೂಜಾಡುತ್ತಿದ್ದ ವೇಣುಗೋಪಾಲ್, ಕೃಷ್ಣ, ಲೋಕನಾಥನ್, ಚಲುವರಾಜು, ವಹಾಬ್ ಮತ್ತು ಗಣೇಶ್ ಎಂಬುವವರನ್ನು ನಜರ್‌ಬಾದ್ ಪೋಲೀಸಿನವರು ಪತ್ತೆ ಹಚ್ಚಿ ಅವರಲ್ಲಿದ್ದ ೩೦ ರೂಪಾಯಿಗಳನ್ನು ವಶಪಡಿಸಿಕೊಂಡು ಅವರನ್ನು ದಸ್ತಗಿರಿ ಮಾಡಿ ಮೊಕದ್ದಮೆ ಹೂಡಿದ್ದರು. ನಿನ್ನೆಯ ದಿನ ನಗರದ ನ್ಯಾಯಾಧೀಶರು ಅಪಾದಿತರಿಗೆ ತಲಾ ೨೦ ರೂ ಜುಲ್ಮಾನೆ ಮತ್ತು ಕೋರ್ಟು ಏಳುವವರೆಗೆ ಸಜಾ ವಿಧಿಸಿದರು. ಜೂಜಾಟಕ್ಕೆ ಮನೆಯನ್ನು ಕೊಟ್ಟ ವಹಾಬ್‌ರಿಗೆ ಒಂದು ತಿಂಗಳು ಸಾದಾ ಸಜಾ, ೨೦೦ ರೂ. ಜುಲ್ಮಾನೆ, ತಪ್ಪಿದರೆ ಇನ್ನೊಂದು ತಿಂಗಳು ಸಜಾವನ್ನು ವಿಧಿಸಿದರು.

ಲಾ ಕಾಲೇಜಿಗೆ ಸೇರಲು ಅಭ್ಯರ್ಥಿಗಳು

ಮೈಸೂರು ೧೬

ಶಾರದವಿಲಾಸ ಕಾಲೇಜಿನಲ್ಲಿ ನ್ಯಾಯಶಸ್ತ್ರ ಶಿಕ್ಷಣಕ್ಕೆ ಸೇರಲು ೧೭೭ ಜನರು ಅರ್ಜಿ ಹಾಕಿಕೊಂಡಿರುವುದಾಗಿಯೂ, ಅವರಲ್ಲಿ ೧೨ ಮಹಿಳೆಯರಿರುವುದಾಗಿ ತಿಳಿಯಬರುತ್ತದೆ. ಕಾಲೇಜ್ ಸೇರಲು ಅರ್ಜಿಗಳು ಮದರಾಸ್, ಕೊಡಗು, ತಿರುವಾಂಕೂರ್--ಕೊಚ್ಚಿ, ಆಂಧ್ರ ಮತ್ತು ಮೈಸೂರು ಪ್ರಾಂತ್ಯಗಳಿಂದ ಬಂದಿವೆ.

ಪ್ರವಾಹದಲ್ಲಿ ನೊಂದವರಿಗೆ ಅಹಾರ

ಗೋದಾವರಿ ಜಲಪ್ರವಾಹದಲ್ಲಿ ನೊಂದವರಿಗೆ ಹಂಚಲು ಕೇಂದ್ರ ಸರ್ಕಾರವು ೩೦೦೦ ಟನ್ ಅಕ್ಕಿಯನ್ನು ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ವಿಶ್ವೇಶ್ವರಯ್ಯನವರ ಜಯಂತ್ಯುತ್ಸವ

ಮೈಸೂರು ೧೬

ಸಾರ್ವಜನಿಕ ವಿದ್ಯಾರ್ಥಿನಿಲಯ ಸಂಘದ ಆಶ್ರಯದಲ್ಲಿ ನಿನ್ನೆಯದಿನ "ಡಾ|| ಎಂ. ವಿಶ್ವೇಶ್ವರಯ್ಯ" ನವರ ೯೩ ನೇ ಜಯಂತಿಯನ್ನು ನಿಲಯದ ವಾರ್ಡನ್ ಟಿ. ಕೆ. ವಿರೂಪಾಕ್ಷಪ್ಪನವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಶ್ರೀಗಳಾದ ಅನಂತಮೂರ್ತಿ, ಕೃಷ್ಣಮೂರ್ತಿ, ನಂಜುಂಡರಾವ್ ಅನಂತಯ್ಯನವರುಗಳು, ವಿಜಯ ಪತ್ರಿಕೆಯ ಸಂಪಾದಕ ಶ್ರೀ ರಾಮಣ್ಣನವರು ಡಾ. ಎಂ. ವಿಶ್ವೇಶ್ವರಯ್ಯನವರನ್ನು ಪ್ರಶಂಸಿಸಿ ಅವರು ದೇಶಕ್ಕೂ ಮಿಗಿಲಾಗಿ ಆಧುನಿಕ ಮೈಸೂರಿಗೆ ಸಲ್ಲಿಸಿರುವ ಸೇವೆಯನ್ನು ಕೊಂಡಾಡಿದರು. ಅವರಿಗೆ ದೇವರು ಆಯುರಾರೋಗ್ಯ ಐಶ್ವರ್ಯ ಮತ್ತು ಸೂರ್ಕಾಲ ಬಾಳ್ವಿಕೆಯನ್ನೂ ಕೋರಿದಮೇಲೆ ಕಾರ್ಯದರ್ಶಿ ಶ್ರೀವರ್ಮಾ ಅನಂತಯ್ಯನವರ ವಂದನಾರ್ಪಣೆನಡೆದು ವಿದ್ಯಾಗಣಪತಿಯ ಪೂಜೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ವಿಶ್ವವಿದ್ಯಾನಿಲಯ ಸಂಘ ಸ್ಥಾಪನೆ

ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳ ಕ್ರಿಯಾ ಸಮಿತಿಯವರು ನಿನ್ನೆಯದಿನ ಸಭೆಸೇರಿ ಇದೇ ೨೫ ನೇ ತಾರೀಖಿನೊಳಗೆ ವಿಶ್ವವಿದ್ಯಾನಿಲಯದ ಸಂಘವನ್ನು ಸ್ಥಾಪಿಸವಂತೆ ವಿಶ್ವವಿದ್ಯಾನಿಲಯದ ಅಧಿಕಾರವರ್ಗದವರನ್ನು ಕೇಳಬೇಕೆಂದೂ, ಇದಕ್ಕಾಗಿ ಸಂಸ್ಥಾನದಲ್ಲಿರುವ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳ ಸಹಕಾರವನ್ನು ಪಡೆಯಲು ಆಯಾಸ್ಥಳಕ್ಕೆ ಪ್ರವಾಸ ಹೋಗಬೇಕೆಂದು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಸಾರ್ವತ್ರಿಕ ಚುನಾವಣೆ

ತಿರುವಾಂಕೂರ್-ಕೊಚ್ಚಿ ಪ್ರಾಂತ್ಯದಲ್ಲಿ ತಮಿಳು ನಾಡು ಕಾಂಗ್ರೆಸ್ಸಿಗರ ಬೆಂಬಲವು ಸರ್ಕಾರಕ್ಕೆ ತಪ್ಪಿದುದರಿಂದ ಈಗಿನ ಮಂತ್ರಿಮಂಡಲವು ಇದೇ ೨೨ನೇ ತಾರೀಖು ನಡೆಯಲಿರುವ ಶಾಸನ ಸಭೆಯಲ್ಲಿ ವಿಶ್ವಾಸವನ್ನು ಕೋರುವುದೆಂದು ತಿಳಿಯಬರುತ್ತದೆ. ಸಭೆಯು ವಿಶ್ವಾಸವನ್ನು ವ್ಯಕ್ತಪಡಿಸದಿದ್ದಲ್ಲಿ ಶಾಸನ ಸಭೆಯನ್ನು ರದ್ದುಗೊಳಿಸಿ ಸಾರ್ವತ್ರಿಕ ಚುನಾವಣೆ ನಡೆಯುವಂತಾಗುವುದೆಂದು ಹೇಳಲಾಗಿದೆ. ೧೦೯ ಸದಸ್ಯರಿರುವ ಶಾಸನ ಸಭೆಯಲ್ಲಿ ಈಗ ೫೭ ಜನ ವಿರೋಧ ಪಕ್ಷದಲ್ಲಿದ್ದಾರೆ.

● ವಿಶ್ವಸಂಸ್ಥೆಯ ೮ ನೇ ಮಹಾಧಿವೇಶನಕ್ಕೆ ಭಾರತದ ಪ್ರತಿನಿಧಿಯಾದ ಶ್ರೀಮತಿ ವಿಜಯಲಕ್ಷ್ಮಿಯವರು ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ನಿನ್ನೆಯ ದಿನ ಈ ಚುನಾವಣೆಯು ನಡೆದು, ಪರವಾಗಿ ೩೭, ವಿರೋಧವಾಗಿ ೨೨ ರಾಷ್ಟ್ರಗಳು ಮತ ನೀಡಿದುವು.

ಹನುಮಂತಯ್ಯನವರ ಬಗ್ಗೆ ರಾಜಾಜಿ ಪ್ರಶಂಸೆ

"ಶ್ರೀ ಹನುಮಂತಯ್ಯನವರು ಒಬ್ಬ ವಿಶೇಷರೀತಿಯ ವ್ಯಕ್ತಿ. ಅವರು ಮೈಸೂರಿನ ಮುಖ್ಯಮಂತ್ರಿಯಾಗಿರುವುದು ಅತ್ಯಂತ ಸಂತೋಷಕರವಾದುದು. ಅವರು ಈ ಸ್ಥಾನದಲ್ಲಿ ಇನ್ನೂ ಬಹಳಕಾಲವಿದ್ದು, ಈಗಿನ ರಾಜಕೀಯದ ರೂಢಿಯಿರುವಂತೆ ಜನರು ಇವರನ್ನು ಅಧಿಕಾರದಿಂದ ತೆಗೆದುಹಾಕದೆ ಅವರ ಗುಣ, ಶಕ್ತಿ ಮತ್ತು ಕಾರ್ಯತತ್ಪರತೆಯ ಪ್ರಯೋಜನವನ್ನು ಹೊಂದುವರೆಂದು ನಾನು ಆಶಿಸುತ್ತೇನೆ." ಎಂದು ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮದ್ರಾಸಿನಲ್ಲಿ ನಡೆದ ಒಂದು ಸತ್ಕಾರಕೂಟದಲ್ಲಿ ಶ್ರೀ ಹನುಮಂತಯ್ಯನವರನ್ನು ಪ್ರಶಂಸಿಸಿದ್ದಾರೆ.

"ಜನರನ್ನು ದೈವಪರಾಯಣರಾಗಿ ಮಾಡುವುದರಲ್ಲಿ ಶ್ರೀ ಹನುಮಂತಯ್ಯನವರು ತಮ್ಮ ಪೂರ್ಣ ಹೃದಯವನ್ನರಿತು ಶ್ರಮಿಸುತ್ತಿದ್ದಾರೆ. ನಮ್ಮ ಜನತೆಯು ದೈವಪರಾಯಣರಾಗದಿದ್ದರೆ ನಮ್ಮ ದೇಶಕ್ಕೆ ಭವಿಷ್ಯ ಆಶೆಯು ಇಲ್ಲ. ಶ್ರೀ ಹನುಮಂತಯ್ಯನವರ ಕೆಲಸದಲ್ಲಿ ನನ್ನ ಹಾರ್ದಿಕ ಸಹಾನುಭೂತಿಯಿದೆ." ಎಂದು ರಾಜಾಜಿ ಹೇಳಿದ್ದಾರೆ.

ನೆಹರೂ ವಿಖ್ಯಾದ ನಾಯಕ

ಭಾರತ ಪ್ರಧಾನಿ ನೆಹರೂರವರು ವಿಖ್ಯಾದ ಮಹಾನಾಯಕ. ಅಂತಹವರ ಆಡಳಿತವಿರುವ ಭಾರತದೊಡನೆ ಪೂರ್ಣವಾಗಿ ನೇಪಾಳವು ಸಹಕರಿಸಿ ತನ್ನ ಪ್ರಗತಿಯನ್ನು ಸಾಧಿಸುವುದು ಎಂದು ಅಲ್ಲಿಯ ಪ್ರಧಾನಿ ಎಂ. ಪಿ. ಕೊಯಿರಾಲಾರವರು ನಿನ್ನೆಯ ದಿನ ಕಲ್ಕತ್ತಾದಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

● ೨೮ ವರ್ಷದ ಯುವಕನೊಬ್ಬನು ೧೫೦ ಗಂಟೆಗಳ ನಿರಂತರ ಸೈಕಲ್ ಸವಾರಿಯನ್ನು ನಿನ್ನೆ ಹೈದರಾಬಾದಿನಲ್ಲಿ ಪ್ರಾರಂಭಿಸಿದ್ದಾರೆ.

ಪಂಚವಾರ್ಷಿಕ ಯೋಜನೆಯ ಪ್ರಚಾರಕಾರ್ಯ

ಭಾರತ ಸರ್ಕಾರವು ಕೈಗೊಂಡಿರುವ ಪಂಚವಾರ್ಷಿಕ ಯೋಜನೆಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರಮಾಡಿ ಇನ್ನೂ ಯಶಸ್ವಿಯಾಗಿ ಕೆಲಸ ನಡೆಯುವಂತೆ ಮಾಡಲು ಲೋಕಸಭೆಯು ಈ ಸಾಲಿಗೆ ೫೮ ಲಕ್ಷರೂಗಳ ವೆಚ್ಚವನ್ನು ಮಂಜೂರ್ಮಾಡಿದೆ.

ಈ ಪ್ರಚಾರ ಕಾರ್ಯಕ್ಕಾಗಿ ಒಟ್ಟು ಒಂದು ಕೋಟಿ ೪೮ ಲಕ್ಷ ರೂಪಾಯಿಗಳ ಯೋಜನೆಯನ್ನು ತಯಾರಿಸಲಾಗಿದೆ. ಈ ಸಂಬಂಧದಲ್ಲಿ ಕೇಂದ್ರ ಪ್ರಸಾರ ಶಾಖಾಸಚಿವ ಡಾ|| ಬಿ. ವಿ. ಕೇಸ್ಕರ್‌ರವರು ಮಾತನಾಡುತ್ತಾ ಪ್ರಾಂತ್ಯ ಸರ್ಕಾರಗಳ ಪ್ರತಿನಿಧಿಗಳೊಡನೆ ಸಮಾಲೋಚನೆ ನಡೆಯಿಸಿ ಕಾರ್ಯಕ್ರಮವನ್ನು ತಯಾರಿಸಲಾಗುವುದೆಂದು ತಿಳಿಸಿದ್ದಾರೆ.

ಈಜಿಪ್ಟಿನಲ್ಲಿ ವಿದೇಶೀಯರ ಅಪಪ್ರಚಾರ

ಈಜಿಪ್ಟಿನಲ್ಲಿ ವಿದೇಶೀಯರ ಸುಮಾರು ೩೦೦ ಸಾವಿರ ಈಜಿಪ್ಟ್ ಪೌಂಡುಗಳಷ್ಟು ಹಣವನ್ನು ವ್ಯಯಮಾಡಿ ಸರ್ಕಾರದ ವಿರುದ್ಧ ಅಪಪ್ರಚಾರ ಕೈಗೊಂಡು ನಾನಾ ರೀತಿಯ ಅಮಾನುಷ ಕೃತ್ಯಗಳನ್ನು ನಡೆಸಿರುವುದಾಗಿ ಆಪಾದಿಸಲಾಗಿದೆ.

ಆಂಧ್ರಪ್ರಾಂತ್ಯಕ್ಕೆ ೭ ಸಚಿವರು

ಆಂಧ್ರ ಮಂತ್ರಿ ಮಂಡಲದಲ್ಲಿ ಪ್ರಾಯಶಃ ೭ ಮಂತ್ರಿಗಳಿರುವರೆಂದು ಶ್ರೀ ಟಿ. ಪ್ರಕಾಶಂರವರು ಬೇಗಂಪೇಟೆ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಡನೆ ಮಾತನಾಡುತ್ತಾ ತಿಳಿಸಿದ್ದಾರೆ.

ನೈಸರ್ಗಿಕ ಬಣ್ಣಗಳಲ್ಲಿ

ಬೇಕ್‌ಲೈಟ್ ಸಾಮಾನುಗಳಲ್ಲಿ

ಮೈಸೂರೈಟ್ ಮತ್ತು ಐವರೈಟ್

ಅಸಮಾನವಾದ ದರ್ಜೆಗೆ ಸೇರಿದ್ದು

ಕುಡಿಯುವ ಪಾತ್ರೆಗಳು, ಬಟ್ಟಲುಗಳು, ಬಶಿಗಳು, ಕ್ಷೌರದ ದೊನ್ನೆಗಳು, ಸಿಗರೇಟು ಬೂದಿಯನ್ನು ಹಾಕುವ ತಬಕಗಳು, ಟೇಬಲ್ ಅಲಂಕರಿಸುವ ಕೌಶಲ್ಯದ ಸಾಮಾನುಗಳು, ಅಂಗಶೃಂಗಾರ ಪದಾರ್ಥಗಳನ್ನಿಡುವ ಸಾಮಾನುಗಳು, ವಿಧವಿಧವಾದ ಸಮೂಹಗಳಲ್ಲಿ ಮತ್ತು ಆಕರ್ಷಕ ಬಣ್ಣಗಳಲ್ಲಿ

ತಯಾರಿಸಲ್ಪಡುವುವು.

ಅಚ್ಚು ಮಾಡಿದ ಮೈಸೂರೈಟ್ ಸಾಮಾನುಗಳು

ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ,

ಮೈಸೂರು ರೋಡ್, ಬೆಂಗಳೂರು-೨

ಮದ್ರಾಸಿನ ೬ ಮಂತ್ರಿಗಳ ರಾಜಿನಾಮೆ

ಮದ್ರಾಸ್ ಮಂತ್ರಿ ಮಂಡಲದಲ್ಲಿರುವ ೫ ಆಂಧ್ರ ಮತ್ತು ಒಬ್ಬ ಕನ್ನಡ ಸಚಿವರುಗಳು ತಮ್ಮ ಸ್ಥಾನಕ್ಕೆ ರಾಜಿನಾಮೆಯನ್ನು ನಿನ್ನೆಯ ದಿನ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಚಾರಿಯವರಿಗೆ ಸಲ್ಲಿಸಿದರು. ಹೊಸ ಆಂಧ್ರ ರಾಜ್ಯ ಸ್ಥಾಪನೆಯಾಗಲಿರುವುದರಿಂದ ಇವರು ಈ ರೀತಿ ಮಾಡಿದ್ದಾರೆ.

ಆಂಧ್ರರಾದ ಶ್ರೀಗಳಾದ ಕೃಷ್ಣರಾವ್, ರಂಗರೆಡ್ಡಿ, ಸಂಜೀವಯ್ಯ, ಶಂಕರರೆಡ್ಡಿ, ಎಸ್. ಬಿ.ಪಿ. ಪಟ್ಟಾಭಿರಾಮರಾವ್‌ರುಗಳೂ ಕನ್ನಡಿಗರಾದ ಶ್ರೀ ಡಾ|| ನಾಗನಗೌಡ್‌ರವರು ರಾಜಿನಾಮೆಯಿತ್ತಿರುವವರು.

ಆಕ್ಟೋಬರ್ ಒಂದನೇ ತಾರೀಖಿನವರೆಗೆ ಇವರು ಕೆಲಸದಲ್ಲಿ ಮುಂದುವರಿಯುವರು.

ಸ್ವತ್ತಿನ ತೆರಿಗೆ ಮಸೂದೆ ಅಂಗೀಕಾರ

ಕಳೆದ ಒಂದು ವಾರದಿಂದ ಚರ್ಚೆಯಾಗುತ್ತಲಿದ್ದ ಸ್ವತ್ತಿನ ತೆರಿಗೆ ಮಸೂದೆಯನ್ನು ಲೋಕಸಭೆಯು ನಿನ್ನೆಯ ದಿನ ಅಂಗೀಕರಿಸಿತು.

ಈ ಸಂದರ್ಭದಲ್ಲಿ ಕೇಂದ್ರ ಆರ್ಥಿಕ ಸಚಿವ ಶ್ರೀ ದೇಶಮುಖ್‌ರವರು ಮಾತನಾಡುತ್ತ ಬ್ರಿಟನ್ನಿನಲ್ಲಿ ಈ ರೀತಿಯ ತೆರಿಗೆ ಕ್ರಮವು ಹೇಗೆ ನಡೆಯುತ್ತಿದೆ ಎಂಬುದನ್ನು ಪರಿಶೀಲಿಸಿಕೊಂಡು ಬರಲು ೬ ಜನರ ನಿಯೋಗವೊಂದು ಸದ್ಯದಲ್ಲೇ ಲಂಡನ್ನಿಗೆ ಹೋಗಲಿದೆಯೆಂದು ತಿಳಿಸಿದರು.

ವಿಶ್ವ ಸಂಸ್ಥೆಯಲ್ಲಿ ಚೈನಾಕ್ಕೆ ಸ್ಥಾನ

ವಿಶ್ವಸಂಸ್ಥೆಯಲ್ಲಿ ಚೈನಾಕ್ಕೆ ಪ್ರಾತಿನಿಧ್ಯ ಕೊಡಬೇಕೆಂಬ ವಿಷಯವನ್ನು ಇನ್ನು ಒಂದು ವರ್ಷಕಾಲ ಮುಂದಕ್ಕೆ ಹಾಕಲು ವಿಶ್ವಸಂಸ್ಥೆಯ ಮಹಾಧಿವೇಶನವು ತೀರ್ಮಾನಿಸಿದೆ. ಈ ನಿರ್ಣಯವನ್ನು ಅಮೆರಿಕಾ ಮಂಡಿಸಿ, ಬ್ರಿಟನ್ ಅನುಮೋದಿಸಿತು ೪೪ ರಾಷ್ಟ್ರಗಳ ಪರವಾಗಿ ೧೦ ರಾಷ್ಟ್ರಗಳು ವಿರೋಧವಾಗಿ ಮತನೀಡಿದವು. ಈ ನಿರ್ಣಯಕ್ಕೆ ವಿರೋಧವಾಗಿ ಮತನೀಡಿದವರಲ್ಲಿ ಭಾರತವೂ ಒಂದು.

-ಮೈಸೂರು ಪೇಟೆಧಾರಣೆ-

ತಾರೀಖು ೧೫—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೨—	೫೩—೬
ಎಳ್ಳು	೭೯—	೮೪—೨
ಹುರುಳಿ	೪೭—೮	೪೮—೧೨
ಅಲಸಂದೆ	೬೫—೮	—
ಹುಣಸೇಹಣ್ಣು	೫—೮	೭—೧೩
ಸೀಗೆಕಾಯಿ	೬—೧೨	—
ಬೆಲ್ಲ	೮—	—
ತೆಂಗಿನಕಾಯಿ	೨೩೭	೨೭೮

ಬಿ.ಎಂ. ಶ್ರೀನಿವಾಸಯ್ಯನವರ ನಿಧನ

ಬೆಂಗಳೂರು ೧೬

ಸುಪ್ರಸಿದ್ಧ ದಾನಿಗಳೂ, ಬಿ.ಎಂ.ಎಸ್. ಇಂಜನಿಯರಿಂಗ್ ಕಾಲೇಜಿನ ಸಂಸ್ಥಾಪಕರು, ಪ್ರಜಾಮತ ಮತ್ತು ಜನವಾಣಿ ಪತ್ರಿಕೆಗಳ ಮಾಲೀಕರು ಆದ ಶ್ರೀ ಬಿ.ಎಂ. ಶ್ರೀನಿವಾಸಯ್ಯನವರು ನಿನ್ನೆ ಸಂಜೆ ೪-೩೦ ಗಂಟೆ ವೇಳೆಯಲ್ಲಿ ಹೃದಯ ಕ್ರಿಯೆ ನಿಂತು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀಯುತರು ಮೊನ್ನೆಯ ದಿನ ಮೈಸೂರಿಗೆ ಆಗಮಿಸಿ ತಮ್ಮ ಕಾಲೇಜಿನ ಆಡಳಿತ ಬಗ್ಗೆ ವಿಶ್ವವಿದ್ಯಾನಿಲಯದವರಲ್ಲಿ ಚರ್ಚೆ ನಡೆಸಿ ರಾತ್ರಿ ಬೆಂಗಳೂರಿಗೆ ಹಿಂತಿರುಗಿದರು. ನಿನ್ನೆ ಬೆಳಗ್ಗೆ ಅವರು ತಮ್ಮ ಫ್ಯಾಕ್ಟರಿಯಾದ 'ಮೈಸೂರು ಕೆಮಿಕಲ್ಸ್ ಮತ್ತು ಸೋಪ್ ವರ್ಕ್ಸ್' ಗೆ ಹೋಗಿದ್ದು ಏಕಾಏಕಿ ಸಂಕಟವುಂಟಾಗಿ ಜ್ಞಾನ ತಪ್ಪಿ ಬಿದ್ದರೆಂದು, ಮನೆಗೆ ಅವರನ್ನು ಕರೆತಂದು ಎಷ್ಟು ಚಿಕಿತ್ಸೆ ನಡೆಸಿದರೂ ನಿಷ್ಫಲವಾಗಿ ಅವರು ಮರಣಹೊಂದಿದರು.

ಶ್ರೀಯುತರು ಮೈಸೂರು ಸಂಸ್ಥಾನದಲ್ಲದೆ ಬೊಂಬಾಯಿನಲ್ಲೂ ಪ್ರಖ್ಯಾತರಾಗಿದ್ದರು. ಲಕ್ಷಾಂತರ ರೂಪಾಯಿಗಳನ್ನು ನಾನಾ ಸಂಘ ಸಂಸ್ಥೆಗಳಿಗೆ ದಾನ ಮಾಡಿ ಅವುಗಳ ಪ್ರಗತಿಗೆ ಕಾರಣರಾಗಿದ್ದರು.

ಈ ನಿಧನ ವಾರ್ತೆ ನಗರದಲ್ಲಿ ಹರಡಿದೊಡನೆಯೇ ಸಾವಿರಾರು ಜನರು ಅವರ ಮನೆಗೆ ಭೇಟಿಯಿತ್ತು ತಮ್ಮ ಅಂತ್ಯ ಪ್ರಣಾಮವನ್ನು ಸಲ್ಲಿಸಿದರು. ಸಚಿವರುಗಳೂ, ನಾನಾ ರಾಜಕೀಯ ಪಕ್ಷ ಮುಖಂಡರೂ ಕಾಲೇಜಿನ ವಿದ್ಯಾರ್ಥಿಗಳು ಅವರ ನಿವಾಸಕ್ಕೆ ಹೋಗಿದ್ದರು.

ಇವರಿಗೆ ವೃದ್ಧ ಮಾತೆ, ಪತ್ನಿ ಮತ್ತು ಏಕಮಾತ್ರ ಪುತ್ರರು ಇರುವರು.

● ಆಂಧ್ರ ಸರ್ಕಾರಕ್ಕೆ ಸಂಬಂಧಪಟ್ಟ ಕಾಗದ ಪತ್ರಗಳನ್ನು ಮದ್ರಾಸ್‌ನಿಂದ ರೈಲಿನ ೫೫ ವ್ಯಾಗನ್‌ಗಳಲ್ಲಿ ಕರ್ನೂಲಿಗೆ ಕಳುಹಿಸಲಾಗುವುದೆಂದು ತಿಳಿಯಬರುತ್ತದೆ.

ಅಪೇರ

11--9--53 ರಿಂದ ಆಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು

ಮಲ್ಲೇಶ್ವರಿ

[ತೆಲುಗು]

ಪಾತ್ರ:—ಎನ್. ಟಿ. ರಾಮರಾವ್, ಭಾನುಮತಿ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೨೫

೧೭-೯-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಆಂಧ್ರದಲ್ಲಿ ಸುಭದ್ರ ಸರ್ಕಾರದ ಬಗ್ಗೆ ಬಿಕ್ಕಟ್ಟು

ಪ್ರಕಾಶಂರು ಕಾಂಗ್ರೆಸ್ ಸಹಸದಸ್ಯರಾಗಲು ಅವಕಾಶವಿಲ್ಲ

ಪ್ರಜಾ ಸೋಷಲಿಸ್ಟ ಪಕ್ಷದ ತೀರ್ಮಾನ

ಕಾಂಗ್ರೆಸ್ ಪಕ್ಷದವರೇ ಹೊಸ ಆಂಧ್ರ ಪ್ರಾಂತ್ಯದಲ್ಲಿ ಮಂತ್ರಿಮಂಡಲವನ್ನು ರಚಿಸಬೇಕು,ಎಂದು ಆಂಧ್ರಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯ ಕಾರಿ ಸಮಿತಿ ಸಭೆಯು ನಿನ್ನೆಯದಿನ ಶ್ರೀ ಎನ್. ಸಂಜೀವರೆಡ್ಡಿಯವರ ಅಧ್ಯಕ್ಷತೆಯಲ್ಲಿ ಮದ್ರಾಸ್‌ನಲ್ಲಿ ಸೇರಿ ನಿರ್ಣಯವನ್ನು ಮಾಡಿದೆ.

ಈ ಸಂಬಂಧದಲ್ಲಿ ಪಕ್ಷದ ಕಾರ್ಯದರ್ಶಿಯವರು ಒಂದು ಪ್ರಕಟಣೆಯನ್ನುಹೊರಡಿಸಿ ಕಾಂಗ್ರೆಸ್ಸಿಗೆ ಶ್ರೀ ಪ್ರಕಾಶಂರವರು ಸೇರುವುದನ್ನು ಸ್ವಾಗತಿಸುತ್ತೇವೆ. ಯಾವ ರೀತಿ ಹೇಗೆ ಸೇರಬೇಕೆಂಬುದು ವ್ಯಕ್ತಶಃ ಅವರಿಗೆ ಸೇರಿದೆ ಎಂದು ಹೇಳಿಸಿದ್ದಾರೆ.

ಪ್ರಜಾ ಸೋಷಲಿಸ್ಟ್ ಪಕ್ಷದ ಕೇಂದ್ರ ಕಾರ್ಯ ಕಾರಿ ಸಮಿತಿಯು ದೆಹಲಿಯಲ್ಲಿ ನಿನ್ನೆಯ ದಿನ ಸಭೆ ಸೇರಿ ಶ್ರೀ ಪ್ರಕಾಶಂರವನ್ನು ಆಂಧ್ರಶಾಖೆಯು ಪಕ್ಷ ಜವಾಬ್ದಾರಿಯಿಂದ ಬಿಡುಗಡೆ ಮಾಡಿರುವುದನ್ನು ತೀವ್ರವಾಗಿ ಟೀಕಿಸಿದೆ. ಪಕ್ಷದಲ್ಲಿನ್ನು ಕೊಂಡು ಅದರ ಜವಾಬ್ದಾರಿಯಿಂದ ಬಿಡುಗಡೆಯಾಗುವುದೆಂದರೆ ಅರ್ಥವಿಲ್ಲ. ಪಕ್ಷದಲ್ಲಿದ್ದುಕೊಂಡು ಇನ್ನೊಂದುಪಕ್ಷದ ಸಹ ಸದಸ್ಯರಾಗುವುದೂ ಸಾಧ್ಯವಿಲ್ಲ. ಆಂಧ್ರ ಶಾಸನ ಸಭೆಯ ಎಲ್ಲಾ ಪಕ್ಷದವರೂ ಒಟ್ಟಿಗೆ ಸೇರಿ ಒಬ್ಬ ನಾಯಕರನ್ನು ಚುನಾಯಿಸಬೇಕು ಎಂದು ತಿಳಿಸಿದೆ.

ಶ್ರೀ ಪ್ರಕಾಶಂರವರು ಕಾಂಗ್ರೆಸ್ಸಿನ ಸಹ ಸದಸ್ಯರಾಗುವುದಾಗಲೀ ಅಥವ ಅವರನ್ನು ಪಕ್ಷದ ಜವಾಬ್ದಾರಿಯಿಂದ ಬಿಡುಗಡೆ ಮಾಡುವುದಾಗಲೀ ಸಾಧ್ಯವೇ ಇಲ್ಲವೆಂದು ಪಕ್ಷವು ನಿರ್ಣಯಮಾಡಿದೆ.

ಈ ವಿಷಯದಲ್ಲಿ ಪಕ್ಷದ ನಾಯಕರಾದ ಆಚಾರ್ಯ ಕೃಪಲಾನಿಯವರು ಮಾತನಾಡುತ್ತಾ ಶ್ರೀ ಟಿ. ಪ್ರಕಾಶಂರವರಿಗೆ ಪಕ್ಷವು ಮೂರು ವಿಷಯದಲ್ಲಿ ಸ್ವಾತಂತ್ರವನ್ನು ಕೊಡಲಾಗಿದೆ. ಅವು ಯಾವುವೆಂದರೆ ಕಾಂಗ್ರೆಸ್ಸಿನೊಡನೆ ಅವರು ಸಹಕರಿಸುವುದು, ಕಾಂಗ್ರೆಸ್ ಮತ್ತು ಪ್ರಜಾಸೋಷಲಿಸ್ಟ್ ಪಕ್ಷದ ಒಪ್ಪಿಗೆಯ ಕಾರ್ಯಕ್ರಮ ಅವಲ್ಲಿ ಆಗ ಮಿಶ್ರ ಸರ್ಕಾರವನ್ನು ಆಂಧ್ರದಲ್ಲಿ ರಚಿಸುವುದು, ಇದು ವಿನಹ ಅವರು ಕಾಂಗ್ರೆಸ್ ಸಹ ಸದಸ್ಯರಾಗುವುದಕ್ಕೆ ಅವಕಾಶವೇ ಇಲ್ಲವೆಂದು ತಿಳಿಸಿದ್ದಾರೆ.

ಕಮ್ಯೂನಿಸ್ಟ್ ಪಕ್ಷದ ಶ್ರೀ ಸುಂದರಯ್ಯನವರು ಒಂದು ಹೇಳಿಕೆಯನ್ನಿತ್ತು. ಆಂಧ್ರ ಶಾಸನ ಸಭೆಯಲ್ಲಿ ಕಾಂಗ್ರೆಸ್ಸಿಗೆ ವಿರೋಧವಾಗಿರುವ ಎಲ್ಲಾ ಪಕ್ಷಗಳೂ ಕಮ್ಯೂನಿಸ್ಟ್ ಪಕ್ಷದೊಡನೆ ಸಹಕರಿಸಿ, ಸರ್ಕಾರವನ್ನು ರಚಿಸಬೇಕೆಂದು ತಿಳಿಸಿದ್ದಾರೆ.

ಕೃಷಿಕ್ ಪಕ್ಷದವರು ಸಹ ಸಭೆ ನಡೆಸಿ ತಾವು ಕಾಂಗ್ರೆಸ್ಸಿನೊಡನೆ ಸಹಕರಿಸಬೇಕೇ ಎಂಬ ವಿಷಯವನ್ನು ಚರ್ಚಿಸುತ್ತಲಿದ್ದಾರೆ.

ಅಂತು ಆಂಧ್ರಪ್ರಾಂತ್ಯಕ್ಕೆ ಸುಭದ್ರವಾದ ಸರ್ಕಾರವನ್ನು ರಚಿಸುವ ವಿಷಯದಲ್ಲಿ ಬಿಕ್ಕಟ್ಟು ಹೆಚ್ಚುತ್ತಲಿದೆ. ಶ್ರೀ ಟಿ. ಪ್ರಕಾಶಂರವರು ಪ್ರಜಾಸೋಷಲಿಸ್ಟ್ ಪಕ್ಷವನ್ನು ತ್ಯಜಿಸಿ ಕಾಂಗ್ರೆಸ್ ಸೇರಿದರೆ ಆಗ ಬಿಕ್ಕಟ್ಟು ತಪ್ಪಬಹುದೆಂದು ಊಹಿಸಲಾಗಿದೆ. ಈ ವಾರದಲ್ಲಿ ಅಂತ್ಯತೀರ್ಮಾನವೊಂದು ಆಗಬೇಕಾಗಿದೆ. ಒಮ್ಮತವೇರ್ಪಡದಿದ್ದರೆ ಗೌರ್ನರ್ ಆಡಳಿತದಿಂದ ಹೊಸ ಪ್ರಾಂತ್ಯ ರಚನೆಯಾಗಬೇಕಾಗುವುದು.

ಮಂತ್ರಿಮಂಡಲ ಮೇಲೆ ಅವಿಶ್ವಾಸ ನಿರ್ಣಯ

ಮಧ್ಯಪ್ರದೇಶದಲ್ಲಿ ಪಂಡಿತ ರವಿಶಂಕರ ಶುಕ್ಲರವರ ಮಂತ್ರಿಮಂಡಲದ ಮೇಲೆ ಅಲ್ಲಿಯ ವಿರೋಧ ಪಕ್ಷದವರು ಶಾಸನಸಭೆಯಲ್ಲಿ ಒಂದು ಅವಿಶ್ವಾಸ ನಿರ್ಣಯವನ್ನು ಮಂಡಿಸಿದ್ದಾರೆ.

ಜನಪದ ಅಭಿವೃದ್ಧಿ ಯೋಜನೆಗಳು

ಬೊಂಬಾಯಿನಲ್ಲಿ ಮುಂದಿನ ತಿಂಗಳು ೨ನೇ ತಾರೀಖು ೧೫ ಜನಪದ ಅಭಿವೃದ್ಧಿ ವಿಭಾಗ ಕೇಂದ್ರಗಳನ್ನು ಸ್ಥಾಪಿಸಲಿದೆ. ರಾಷ್ಟ್ರೀಯ ವಿಸ್ತರಣ ಅಭಿವೃದ್ಧಿ ಯೋಜನಾ ಅಂಗವಾಗಿ ಇವುಗಳನ್ನು ಸ್ಥಾಪಿಸಲಾಗುತ್ತದೆ.

ಮದ್ರಾಸಿನ ೫೦೦೦ ಹಳ್ಳಿಗಳಲ್ಲಿ ಸಹ ರಾಷ್ಟ್ರೀಯ ವಿಸ್ತರಣ ಯೋಜನಾ ಪ್ರಕಾರ ಕಾರ್ಯವನ್ನು ಪ್ರಾರಂಭಿಸಲಾಗುತ್ತದೆ. ಈ ಕೆಲಸಗಳು ೩ ವರ್ಷ ಕಾಲ ನಡೆಯುತ್ತವೆ. ಇದಕ್ಕಾಗಿ ಕೇಂದ್ರವು ೨೫ ಲಕ್ಷ ರೂಪಾಯಿಗಳನ್ನು ಕೊಡಲಿದೆ. ಇದರಲ್ಲಿ ೨೨೦೦ ಹಳ್ಳಿಗಳು ಹೊಸ ಆಂಧ್ರಕ್ಕೆ ಸೇರಲಿವೆ.

★ ೫ ಸದಸ್ಯ ಭಾರತೀಯ ಪರ್ವತಾರೋಹಣ ತಂಡವೊಂದು ಹಿಮಾಲಯ ಪರ್ವತದಲ್ಲಿ ೨೩೯೯೦ ಅಡಿ ಎತ್ತರವಿರುವ ಮುಕುಟ ಶಿಖರವನ್ನು ಹತ್ತಲು ಪ್ರಯತ್ನಿಸುವುದಾಗಿ ತಿಳಿಯಬರುತ್ತದೆ.

ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಚುನಾವಣೆ

ಮೈಸೂರು ೧೭

ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಚುನಾವಣಾ ವೇಳಾಪಟ್ಟಿಯು ಈರೀತಿ ಇದೆಯೆಂದು ಚುನಾವಣಾಧಿಕಾರಿಗಳಾದ ಶ್ರೀ ಅಗರಂ ರಂಗಯ್ಯನವರು ತಿಳಿಸಿರುತ್ತಾರೆ:—

ಸದಸ್ಯರಪಟ್ಟಿ ಪ್ರಕಟಣೆ ಇದೇ ೨೦ನೇ ತಾರೀಖು; ನಾಮಪತ್ರಗಳ ಸ್ವೀಕರಣೆ ೨೪ ಮತ್ತು ೨೫ನೇ ತಾರೀಖು ಬೆಳಗ್ಗೆ ೧೦ರಿಂದ ೧ ಘಂಟೆವರೆಗೆ; ನಾಮಪತ್ರಗಳ ಪ್ರಕಟಣೆ ೨೫ ಮಧ್ಯಾಹ್ನ ೩ ಘಂಟೆಗೆ; ನಾಮಪತ್ರಗಳ ಪರಿಶೀಲನೆ ೨೬ ಬೆಳಗ್ಗೆ ೧೦ ಘಂಟೆಗೆ; ಉಮೇದುವಾರರ ಅಪ್ಪೈರುಪಟ್ಟಿ ಪ್ರಕಟಣೆ ೨೬ನೇ ತಾರೀಖು ಮಧ್ಯಾಹ್ನ ೩ ಘಂಟೆಗೆ; ಉಮೇದುವಾರಿಕೆ ವಾಪಸು ೨೭ಸಂಜೆ ೫; ಉಮೇದುವಾರರ ಆಖೈರುಪಟ್ಟಿ ೨೭ ಮಧ್ಯಾಹ್ನ ೧ ಘಂಟೆ; ಚುನಾವಣೆ ೩೦ ನೇ ತಾರೀಖು ಬೆಳಗ್ಗೆ ೯ ರಿಂದ ೧, ಮಧ್ಯಾಹ್ನ ೨ ರಿಂದ ೫ ಘಂಟೆವರುವಿಗೆ. ಎಣಿಕೆ ಮತ್ತು ಫಲಿತಾಂಶ ಅದೇಸಂಜೆ ೫ ಘಂಟೆಗೆ.

ಬೊಂಬಾಯಿನಲ್ಲಿ ಕೈಮಗ್ಗ ಕೈಗಾರಿಕೆ ಯೋಜನೆ

ಬೊಂಬಾಯಿ ಪ್ರಾಂತ್ಯದ ಧಾರವಾಡ, ಬೆಳಗಾಂ, ನಾಸಿಕ್, ಬಿಜಾಪುರ, ಷೋಲಾಪುರ, ಬೊಂಬಾಯಿ ನಗರ ಮುಂತಾದ ೨೦೦ ಪ್ರದೇಶಗಳಲ್ಲಿ ಕೈಮಗ್ಗದ ಕೇಂದ್ರಗಳನ್ನು ಸ್ಥಾಪಿಸಲು ಬೊಂಬಾಯಿ ಸರ್ಕಾರ ನಿರ್ಧರಿಸಿದೆ. ಈ ಯೋಜನೆಪ್ರಕಾರ ಪ್ರತಿ ಕೇಂದ್ರದಲ್ಲೂ ೧೦೦ ಮಂದಿ ನೌಕರರಿಗೆ ಉದ್ಯೋಗ ಕಲ್ಪಿಸಲಾಗುವುದು. ಇವುಗಳಿಗೆ ಕೈಮಗ್ಗದ ಸಹಕಾರ ಸಂಘಗಳ ಮೂಲಕ ಹಣ ಒದಗಿಸಲಾಗುವುದು. ಒಟ್ಟು ಈ ಯೋಜನೆಗೆ ೨೨,೨೨,೦೦೦ ರೂ. ಗಳು ಖರ್ಚಾಗುವುದು.

ಅಲಹಬಾದ್ ವಿದ್ಯಾರ್ಥಿಗಳ ಸತ್ಯಾಗ್ರಹ ಮುಕ್ತಾಯ

ಕಳೆದ ಒಂದು ತಿಂಗಳಿನಿಂದ ಅಲಹಾಬಾದ್ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ತಮ್ಮ ಸಂಘದ ವಿಚಾರದಲ್ಲಿ ನಡೆಸುತ್ತಿದ್ದ ಸತ್ಯಾಗ್ರಹವು ಉಭಯ ಪಕ್ಷಗಳ ಸೌಹಾರ್ದ ಮಾತು ಕತೆಗಳಿಂದ ಮೊನ್ನೆ ದಿನ ಮುಕ್ತಾಯವಾಯಿತು. ಕಳೆದ ೮ನೇ ತಾರೀಖಿನಿಂದ ಉಪವಾಸ ಕೈಗೊಂಡಿದ್ದ ೩ ಮಂದಿ ವಿದ್ಯಾರ್ಥಿಗಳು ಕೂಡ ಉಪವಾಸವನ್ನು ನಿಲ್ಲಿಸಿದರು. ವಿಶ್ವವಿದ್ಯಾನಿಲಯದ ಸಂಘದ ವಿಚಾರದಲ್ಲಿ ಆಡಳಿತಗಾರರ ಕೈವಾಡವಿರದೆ ವಿದ್ಯಾರ್ಥಿಗಳಿಗೆ ಹೆಚ್ಚು ಸ್ವಾತಂತ್ರವಿರಬೇಕೆಂದು ವಿದ್ಯಾರ್ಥಿಗಳು ಸತ್ಯಾಗ್ರಹ ಹೂಡಿದ್ದರು.

ಸಂಗೀತ ಕಲೆಗೆ ಹೆಚ್ಚು ಗಮನ ಕೊಡಬೇಕು

ಮೈಸೂರು ೧೭

ರಾಜಧಾನಿಯ ಶ್ರೀ ವರಲಕ್ಷ್ಮಿ ಸಂಗೀತ ಮಂದಿರದ ೮ನೇ ವಾರ್ಷಿಕೋತ್ಸವವು ಮೊನ್ನೆ ದಿನ ಸಹಕಾರ ಭವನದಲ್ಲಿ ಶ್ರೇಷ್ಠ ವಿದ್ಯಾಧಿಕಾರಿಗಳಾದ ಶ್ರೀ ಜೆ.ಬಿ ಮಲ್ಲಾರಾಧ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತ.

ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ. ರಾಮಸ್ವಾಮಿಯವರು ಸ್ವಾಗತ ಬಯಸಿದ ನಂತರ ಸ್ಥಾಪಕರುಗಳಾದ ಮೈಸೂರು ಸಹೋದರರ ಪರವಾಗಿ ಶ್ರೀ ಸತ್ಯನಾರಾಯಣರವರು ವರದಿಯನ್ನು ಒಪ್ಪಿಸಿ, ಸಂಸ್ಥೆಗೆ ಸರ್ಕಾರದವರು ಹಣ ಸಹಾಯ ಮಾಡಬೇಕೆಂದೂ, ಮತ್ತು ದೆಹಲಿಯಲ್ಲಿರುವ ಕೇಂದ್ರ ರಾಷ್ಟ್ರೀಯ ಸಂಗೀತ ಅಕಡೆಮಿಗೆ ಅಫಿಲಿಯೇಟ್ ಮಾಡಲು ಸರ್ಕಾರ ಸಹಾಯ ಮಾಡಬೇಕೆಂದೂ ಕೋರಿದರು.

ಶ್ರೀ ಜೆ. ಬಿ. ಮಲ್ಲಾರಾಧ್ಯರು ಭಾಷಣ ಮಾಡಿ, ಮೈಸೂರು ಸಹೋದರರು ಸಂಗೀತ ಕಲಾಭಿವೃದ್ಧಿಗಾಗಿ ಸಲ್ಲಿಸುತ್ತಿರುವ ಸೇವೆಯನ್ನು ಪ್ರಶಂಸಿಸಿದರು. ಈಗ ವಿದ್ಯಾಭ್ಯಾಸಪದ್ಧತಿಯಲ್ಲಿ ಸಂಗೀತಕಲೆಗೆ ಪ್ರಾಮುಖ್ಯತೆ ಇಲ್ಲದಿರುವಬಗ್ಗೆ ಅವರು ತಮ್ಮ ವಿಷಾದವನ್ನು ವ್ಯಕ್ತಪಡಿಸಿ, ಈ ಕಲೆಗೆ ಸರ್ಕಾರ ಮತ್ತು ಖಾಸಗೀಯವರು ಹೆಚ್ಚು ಪ್ರೋತ್ಸಾಹ ಕೊಡಬೇಕೆಂದು ತಿಳಿಸಿದರು. ಸಂಗೀತವನ್ನು ವೈಜ್ಞಾನಿಕ ರೀತಿಯಲ್ಲಿ ಹೇಳಿಕೊಡಬೇಕೆಂದೂ, ಸಂಗೀತಗಾರರು ದ್ರವ್ಯಾರ್ಜನೆಯನ್ನೇ ಮುಖ್ಯವಾದ ಗುರಿಯಾಗಿಟ್ಟುಕೊಳ್ಳದೆ ಕಲೆಯ ಅಭಿವೃದ್ಧಿಗಾಗಿ ದುಡಿಯಬೇಕೆಂದು ತಿಳಿಸಿದರು. ಮೈಸೂರು ಸರ್ಕಾರದವರು ಕೈಗೊಂಡಿರುವ ಸಂಸ್ಕೃತಿ ಪ್ರಚಾರ ಕಾರ್ಯದಲ್ಲಿ ಇಂತಹ ಸಂಗೀತ ಮಂದಿರಗಳು ಹೆಚ್ಚು ಸೇವೆ ಸಲ್ಲಿಸಲು ಅವಕಾಶವಾಗುವುದೆಂದು ತಿಳಿಸಿ, ಸಂಸ್ಥೆಯ ಪುರೋಭಿವೃದ್ಧಿಗಾಗಿ ತಮ್ಮ ಕೈಲಾದ ಸಹಾಯವನ್ನು ಮಾಡುವುದಾಗಿ ಅವರು ಭರವಸೆ ಇತ್ತರು.

ಹೆಚ್ಚಾಗಿ ಖಾದಿ ಉಪಯೋಗಿಸಬೇಕು

ಮುಂದಿನ ೨ನೇ ತಾರೀಖು ಗಾಂಧೀ ಜಯಂತಿಯ ದಿನ ಪ್ರತಿಯೊಬ್ಬರೂ ಖಾದಿಯನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಬೇಕೆಂದು ಪ್ರಧಾನಿ ನೆಹರೂ ಮನವಿ ಮಾಡಿದ್ದಾರೆ. ಇದರಿಂದ ದೇಶದಲ್ಲಿ ಉಂಟಾಗಿರುವ ಭೀಕರ ನಿರುದ್ಯೋಗ ಸಮಸ್ಯೆ ಸ್ವಲ್ಪ ಮಟ್ಟಿಗೆ ಪರಿಹಾರವಾಗುವುದೆಂದು ಅವರು ತಿಳಿಸಿದ್ದಾರೆ.

ನಿಧನ

ಬೆಂಗಳೂರು ೧೭

ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಎಂ.ಆರ್. ಶ್ರೀನಿವಾಸಮೂರ್ತಿಯವರು ನಿನ್ನೆ ರಾತ್ರಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಮೈಸೂರಿನಲ್ಲಿ ರಾಷ್ಟ್ರೀಯ ವಿಸ್ತರಣ ಯೋಜನಾ ಕೇಂದ್ರ

ಈ ಸಾಲಿನಲ್ಲಿ ೭ ಕೇಂದ್ರಗಳ ಸ್ಥಾಪನೆ

ರಾಷ್ಟ್ರೀಯ ವಿಸ್ತರಣ ಯೋಜನೆಯ ಪ್ರಕಾರ ಮೈಸೂರುಸಂಸ್ಥಾನದಲ್ಲಿ ಅಕ್ಟೋಬರ್ ೨ನೇ ತಾರೀಖು ೭ ಜಿಲ್ಲೆಗಳಲ್ಲಿ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುತ್ತದೆ.

ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕು, ಬೆಂಗಳೂರು ಜಿಲ್ಲೆಯ ಕನಕಪುರ, ಹಾಸನ ಜಿಲ್ಲೆಯ ಹೊಳೇನರಸೀಪುರ, ಅರಕಲಗೂಡು ತಾಲ್ಲೂಕುಗಳು, ಚಿತ್ರದುರ್ಗ ಜಿಲ್ಲೆಯ ಹರಿಹರ ಮತ್ತು ದಾವಣಗೆರೆ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ಮತ್ತು ನರಸಿಂಹರಾಜಪುರ, ಕೋಲಾರ ಜಿಲ್ಲೆಯ ಸಿಡ್ಲಘಟ್ಟ ಮತ್ತು ತುಮಕೂರು ಜಿಲ್ಲೆಯ ತುರುವೇಕೆರೆ ತಾಲ್ಲೂಕುಗಳಲ್ಲಿ ಈ ಕಾರ್ಯಗಳು ಪ್ರಾರಂಭವಾಗುತ್ತವೆ ಇದೇ ರೀತಿಯಾಗಿ ಐದು ವರ್ಷಗಳಲ್ಲಿ ೨೭ ಕೇಂದ್ರಗಳನ್ನು ಸ್ಥಾಪಿಸಲು ಕೇಂದ್ರದ ಅನುಮತಿಯನ್ನು ಕೇಳಲಾಗಿದೆ.

ಈ ಕಾರ್ಯಕ್ಕಾಗಿ ಒಟ್ಟು ೭೫ ಲಕ್ಷ ರೂಪಾಯಿಗಳು ಪ್ರಾರಂಭ ವೆಚ್ಚವಾಗುತ್ತದೆ. ಇದರಲ್ಲಿ ಶೇಕಡ ೭೫ ರಷ್ಟನ್ನು ಕೇಂದ್ರವು ಕೊಡುತ್ತದೆ.

ಭಾರತಾದ್ಯಂತ ಈ ರೀತಿಯಾದ ಒಟ್ಟು ೯೦೦ ಕೇಂದ್ರಗಳು ಸ್ಥಾಪಿಸುವ ಯೋಜನೆ ಇದೆ. ೫೩--೫೪ರಲ್ಲಿ ೧೮೦, ೫೪--೫೫ರಲ್ಲಿ ೨೭೦ ಮತ್ತು ೫೫--೫೬ರಲ್ಲಿ ೪೫೦ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ.

ಪೆಪ್ಸುವಿನಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತಕ್ಕೆ ಒಪ್ಪಿಗೆ

ಪೆಪ್ಸು ಪ್ರಾಂತ್ಯದಲ್ಲಿ ಇನ್ನೂ ೬ ತಿಂಗಳ ಕಾಲ ರಾಷ್ಟ್ರಾಧ್ಯಕ್ಷರ ಆಡಳಿತವು ಮುಂದುವರಿಯಲು ಕೇಂದ್ರ ಗೃಹ ಸಚಿವರು ಮಂಡಿಸಿದ ನಿರ್ಣಯವನ್ನು ಪ್ರಜಾ ಸಭೆಯು ಅಂಗೀಕರಿಸಿದೆ.

ಸತ್ಕಾರಕೂಟ

ಮದ್ರಾಸ್ ಮುಖ್ಯಮಂತ್ರಿ ಮತ್ತು ಆಂಧ್ರಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ನಿನ್ನೆಯದಿನ ಮದ್ರಾಸ್‌ನಲ್ಲಿ ಒಂದು ಸಂಯುಕ್ತ ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಮದರಾಸಿನ ಗೌರ್ನರ್ ಮತ್ತು ಆಂಧ್ರದ ವಿಶೇಷಾಧಿಕಾರಿ ಶ್ರೀ ತ್ರಿವೇದಿ ಮುಂತಾದವರು ಇದರಲ್ಲಿ ಭಾಗವಹಿಸಿದ್ದರು. ಈ ಸತ್ಕಾರ ಕೂಟದಲ್ಲಿ ಅನೇಕರು ಮಾತನಾಡುತ್ತಾ ಹೊಸ ಆಂಧ್ರಪ್ರಾಂತ್ಯಕ್ಕೆ ಶುಭವನ್ನು ಕೋರಿದರು.

ಕಾರ್ಮಿಕರಿಗೆ ವಸತಿ ಸೌಕರ್ಯ

ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸಮಾಡುವ ಕಾರ್ಮಿಕರಿಗಾಗಿ ೧೯೫೩--೫೪ ರಲ್ಲಿ ವಸತಿಗೃಹಗಳ ನಿರ್ಮಾಣಕ್ಕಾಗಿ ವಿವಿಧ ಪ್ರಾಂತ್ಯಗಳು ಕಳುಹಿಸುವ ಸುಮಾರು ೩೪.೫ ಲಕ್ಷ ರೂಪಾಯಿಗಳ ಯೋಜನೆಗಳಿಗೆ ಕೇಂದ್ರ ಸರ್ಕಾರವು ಒಪ್ಪಿಗೆಯನ್ನಿತ್ತಿದೆ.

ಇಲ್ಲಿಯವರೆಗೆ ೩೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ೧೮೦೨ ಮನೆಗಳನ್ನು ಕಟ್ಟಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೬—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—೧೨	೨೭—೨
ಎಳ್ಳು	೮೧—೬	೮೮—೨
ಹುರುಳಿ	೪೭—	೪೮—೮
ಅಲಸಂದೆ	೬೫—೮	—
ಬೆಲ್ಲ	೮—	—
ತೆಂಗಿನಕಾಯಿ	೨೪೬	೨೭೫

ಸ್ವದೇಶಕ್ಕೆ ಹಿಂತಿರುಗಲು ಇಷ್ಟಪಡದ ಚೈನಾ ಕಮ್ಯೂನಿಸ್ಟ ಖೈದಿಗಳನ್ನು ಕೊರಿಯಾದ ಸೈನಿಕನೊಬ್ಬನು ಉಸ್ತುವಾರಿ ನೋಡಿಕೊಳ್ಳುತ್ತಿರುವ ದೃಶ್ಯ.

ವಿಶ್ವೇಶ್ವರಯ್ಯನವರ ಗ್ರಾಮಾಭಿವೃದ್ಧಿ ಯೋಜನೆ

ಸಂಸ್ಥಾನಾದ್ಯಂತ ಜಾರಿಗೆ ತರಲು ಸರ್ಕಾರದ ಯೋಚನೆ

ಬೆಂಗಳೂರು ೧೭

ಡಾ|| ಎಂ. ವಿಶ್ವೇಶ್ವರಯ್ಯನವರ ಗ್ರಾಮಾಭಿವೃದ್ಧಿ ಯೋಜನೆಯನ್ನು ಮೈಸೂರು ಸಂಸ್ಥಾನಾದ್ಯಂತ ಮುಂದಿನ ವರ್ಷ ಜಾರಿಗೆ ತರಬೇಕೆಂದು ಸರ್ಕಾರ ಆಲೋಚಿಸುತ್ತಿದೆಯೆಂದು ಕೈಗಾರಿಕಾ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ತಿಳಿಸಿರುತ್ತಾರೆ.

ಮೂರುವರ್ಷಗಳಿಂದ ಕೆಲವು ಪ್ರದೇಶದಲ್ಲಿ ಜಾರಿಯಲ್ಲಿರುವ ಈ ಯೋಜನೆಯ ಪ್ರಕಾರ ೨೭ ಲಕ್ಷ ರೂಗಳ ಬಂಡವಾಳದಿಂದ ೯೦ ಲಕ್ಷ ರೂ. ಉತ್ಪನ್ನವಾಗಿದೆಯೆಂದೂ, ನಾಲ್ಕನೇ ವರ್ಷದಲ್ಲಿ ೧.೫೦ ಕೋಟಿ ರೂಗಳ ಉತ್ಪನ್ನವಾಗಬಹುದೆಂದೂ ತಿಳಿಸಲಾಗಿದೆ. ಕೇಂದ್ರ ಗ್ರಾಮಾಂತರ ಕೈಗಾರಿಕಾಭಿವೃದ್ಧಿ ಸಹಕಾರ ಬ್ಯಾಂಕು ೯ ತಿಂಗಳಲ್ಲಿ 4½ ಲಕ್ಷ ರೂ. ಬಂಡವಾಳ ಶೇಖರಿಸಿರುವುದಾಗಿಯೂ, ಸಹಕಾರ ಇಲಾಖೆಯು ಕಳೆದ ೧೦ ವರ್ಷಗಳಲ್ಲಿ ಸಾಧಿಸಿದ ಕೆಲಸವನ್ನು ಈ ಬ್ಯಾಂಕು ಈ ಅಲ್ಪ ಕಾಲದಲ್ಲಿ ಗಳಿಸಿದೆಯೆಂದೂ ಸಚಿವರು ತಿಳಿಸಿದರು.

ಡಾ|| ವಿಶ್ವೇಶ್ವರಯ್ಯನವರ ೯೩ನೇ ವರ್ಷ ವರ್ಧಂತ್ಯುತ್ಸವದ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿ, ಅವರಿಂದ ಯಾವ ಯೋಜನೆ ಅಥವ ಸಲಹೆ ಬರಲಿ ಅವನ್ನು ಮೈಸೂರು ಸರ್ಕಾರದವರು ಜಾರಿಗೆ ತರಲು ಮನಸ್ಸು ಮಾಡಿದ್ದಾರೆಂದೂ ಸಚಿವರು ಹೇಳಿದರು.

ಅಖಿಲಭಾರತ ಸಂಸ್ಕೃತ ಸಮ್ಮೇಳನ

ಅಖಿಲಭಾರತ ಸಂಸ್ಕೃತ ಸಮ್ಮೇಳನವು ಇದೇ ಮಾರ್ಚಿ ೨೩ನೇ ತಾರೀಖು ಅಂಬಾಲಾದಲ್ಲಿ ನಡೆಯುತ್ತದೆ. ಮಾಜಿ ಕಾಂಗ್ರೆಸ್ ಅಧ್ಯಕ್ಷ ಬಾಬು ಪುರುಷೋತ್ತಮದಾಸ್ ಟಾಂಡನ್ನರು ಅದನ್ನು ಉದ್ಘಾಟಿಸುವರು.

ಉಸ್ತುವಾರಿ ಸೈನ್ಯದ ಖರ್ಚಿಗೆ ೬೦ ಲಕ್ಷ ರೂ.

ಕೊರಿಯಾಕ್ಕೆ ತೆರಳಿರುವ ಭಾರತದ ಉಸ್ತುವಾರಿ ಸೈನ್ಯದ ವೆಚ್ಚಕ್ಕಾಗಿ ೬೦ ಲಕ್ಷ ರೂಪಾಯಿಗಳನ್ನು ಪಾರ್ಲಿಮೆಂಟು ಮಂಜೂರು ಮಾಡಿದೆ

ಬಟ್ಟೆ ವ್ಯಾಪಾರ ಬಗ್ಗೆ ಸರ್ಕಾರಿ ಪ್ರಕಟಣೆ

ಬೆಂಗಳೂರು ೧೭

ಕಳೆದ ಜುಲೈ ೧೦ ನೇ ತಾರೀಖಿನಿಂದ ಎಲ್ಲಾ ತರಹದ ಬಟ್ಟೆ ಮತ್ತು ನೂಲಿನ ಬೆಲೆ ಮತ್ತು ಹಂಚಿಕೆಯ ಮೇಲೆ ಇದ್ದ ಹತೋಟಿಯನ್ನು ರದ್ದುಗೊಳಿಸಿದ್ದಾಗ್ಯೂ, ಮಿಲ್ ಬಟ್ಟೆ, ಪವರ್‌ಲೂಮ್ ಬಟ್ಟೆ ಮತ್ತು ನೂಲು ಮುಂತಾದುವುಗಳ, ಸಾಗಾಣಿಕೆಯಮೇಲ್ಲಿರುವ ಹತೋಟಿಯನ್ನು ರದ್ದುಗೊಳಿಸಿಲ್ಲವೆಂದು ಮೈಸೂರು ಸರ್ಕಾರದವರು ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದಾರೆ.

ಬಟ್ಟೆ ಮತ್ತು ನೂಲಿನ ವ್ಯಾಪಾರಕ್ಕೆ ರಹದಾರಿ ಕೊಡುವ ಪದ್ಧತಿಯನ್ನು ಜಾರಿಯಲ್ಲಿಯೇ ಇದೆ.

ಗಿರಣಿಗಳು ತಾವು ಕಳುಹಿಸುವ ಬಟ್ಟೆ ಮತ್ತು ನೂಲನ್ನು ಪ್ಯಾಕ್ ಮಾಡಲು ಯಾವ ಬೆಲೆಯನ್ನು ಬೇಕಾದರೂ ಹಾಕಬಹುದು ವ್ಯಾಪಾರಸ್ಥರಿಗೆ ಗಿರಣಿಗಳು ಎಷ್ಟು ಪ್ರಮಾಣದಲ್ಲಿ ಬೇಕಾದರೂ ಬಟ್ಟೆ ಅಥವಾ ಹತ್ತಿಯನ್ನು ಮಾರಬಹುದು.

ಗಿರಣಿಗಳು ಸರಿಯಾದ ಕಾರಣವಿಲ್ಲದೆ ಬಟ್ಟೆ ಅಥವ ನೂಲನ್ನು ಯಾರಿಗೂ ಮಾರಲು ನಿರಾಕರಿಸಕೂಡದು.

ಬೆಲೆ ಮತ್ತು ಹಂಚಿಕೆ ಹತೋಟಿ ತೆಗೆದಿರುವುದರಿಂದ ಮಿಲ್ ಬಟ್ಟೆಯ ಮೇಲೆ ಶೇಕಡ ½ ದಂತೆ ವಿಧಿಸುತ್ತಲಿದ್ದ ಸೆಂಟೇಜನ್ನು ಈಗ ವಸೂಲ್ಮಾಡುತ್ತಿಲ್ಲ, ಅದ್ದರಿಂದ ಲೈಸೆನ್ಸುದಾರರು ಈ ಮೇಲೆ ಸಿವಿಲ್ ಸಪ್ಲೈ ಡೈರೆಕ್ಟರ ರುಜುವನ್ನು ಇನ್ನುಮುಂದೆ ಪಡೆಯಬೇಕಾದ ಅವಶ್ಯಕವಿಲ್ಲವೆಂದೂ ಇದರಲ್ಲಿ ತಿಳಿಸಲಾಗಿದೆ.

ರಣಜಿತ್
11-9-53 ರಿಂದ ಅಮೋಘ ಪ್ರಾರಂಭ
ಗೀತಾಬಾಲಿ, ಗುರುದತ್ ನಟಿಸಿರುವ
ಬಾಜ್ BaaZ

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ರಾಜಕಮಲ್, ಮೈಸೂರು
೧೮--೯--೫೩ ರಿಂದ ಅಮೋಘ ಪ್ರಾರಂಭ
ಅಸೋಸಿಯೇಟೆಡ್ ಪ್ರೊಡ್ಯೂಸರ್ಸ್‌ರವರ: —
--ಆ ಶ್ರೈ ಮ ಗ ನ್-- [ತಮಿಳು]
ಭೂಮಿಕೆ:....ಪದ್ಮಿನಿ, ಟಿ. ಎಸ್. ಸರೋಜ, ಗಿರಿಜಾ, ಟಿ. ಎಸ್. ಬಾಲಯ್ಯ
ಗಣೇಶ್, ಪಿ. ಆರ್. ಪಂತಲು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೩೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೨೭

೧೮-೯-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತದಲ್ಲಿರುವ ವಿದೇಶೀ ಸ್ವಾಸ್ಥೆಗಳು ಯುದ್ಧದ ನೆಲೆಯಾಗಗೊಡೆವು

ಕಾಶ್ಮೀರ ಮತಗಣನಾಧಿಕಾರಿ ಮಹಾರಾಷ್ಟ್ರಗಳಿಂದ ಬೇಡ

ಪಾರ್ಲಿಮೆಂಟಿನಲ್ಲಿ ನೆಹರೂ ಹೇಳಿಕೆ

ಕಾಶ್ಮೀರ ವಿವಾದ ಬಗೆ ಹರಿಯಬೇಕಾದರೆ ಮಹಾರಾಷ್ಟ್ರಗಳ ಕೈವಾಡವು ಅಲ್ಲಿ ಇರಬಾರದು ಅಡ್ಮಿರಲ್ ನಿಮಿಟ್ಸ್‌ರವರು ಶ್ಲಾಘ್ಯನೀಯ ವ್ಯಕ್ತಿ ಆದಾಗ್ಯೂ ಕಾಶ್ಮೀರದಲ್ಲಿ ಜನಮತಗಣನಾಧಿಕಾರಿಯಾಗಿ ಮಹಾರಾಷ್ಟ್ರಗಳ ಒಬ್ಬ ವ್ಯಕ್ತಿಬೇಡ ಯೂರೋಪ್ ಏಷ್ಯಾಗಳಲ್ಲಿ ಅನೇಕ ಸಣ್ಣ ಪುಟ್ಟ ರಾಷ್ಟ್ರಗಳಿವೆ. ಆ ಪೈಕಿ ಒಬ್ಬರನ್ನು ಈ ಕಾರ್ಯಕ್ಕೆ ಆರಿಸುವುದು ಸಾಧು ಎಂದು ತಾವು ಪಾಕ್ ಪ್ರಧಾನಿ ಮಹಮದ್ ಆಲಿಯವರಿಗೆ ಸ್ಪಷ್ಟವಾಗಿ ತಿಳಿಸಿರುವುದಾಗಿ ಪ್ರಧಾನಿ ನೆಹರೂರವರು ನಿನ್ನೆಯ ಪಾರ್ಲಿಮೆಂಟಿನಲ್ಲಿ ಭಾರತದ ವಿದೇಶಾಂಗ ನೀತಿ ಬಗ್ಗೆ ಮಾತನಾಡುತ್ತಾ ಹೇಳಿದ್ದಾರೆ.

ಕೊರಿಯಾ ರಾಜಕೀಯ ಸಮ್ಮೇಳನ

ಕೊರಿಯಾ ರಾಜಕೀಯ ಸಮ್ಮೇಳನದಲ್ಲಿ ಭಾರತಕ್ಕೆ ಸ್ಥಾನ ಬೇಡವೆಂದು ಅಮೆರಿಕಾ ಮತ್ತು ಅವುಗಳಿಗೆ ಸೇರಿದ ರಾಷ್ಟ್ರಗಳು ಮಾತ್ರ ಮತ ನೀಡಿವೆ. ಏಷ್ಯಾಕ್ಕೆ ಸಂಬಂಧ ಪಟ್ಟ ಪ್ರಶ್ನೆಯೊಂದರಲ್ಲಿ ಏಷ್ಯಾಕ್ಕೆ ಸಂಬಂಧ ಪಡದ ರಾಷ್ಟ್ರಗಳಲ್ಲಿ ಅಭಿರುಚಿ ಹೇಗೆ ಹುಟ್ಟುತ್ತದೆ? ಭಾರತಕ್ಕೆ ಆ ಸಮ್ಮೇಳನದಲ್ಲಿ ಇರಬೇಕೆಂಬ ಆಸೆಯಿಲ್ಲ. ಎಂದು ನೆಹರೂ ಹೇಳಿದ್ದಾರೆ.

ವಿಶ್ವಸಂಸ್ಥೆಯಲ್ಲಿ ಚೀನಾಕ್ಕೆ ಸ್ಥಾನ

ವಿಶ್ವಸಂಸ್ಥೆಯಲ್ಲಿ ಕಮ್ಯೂನಿಸ್ಟ ಚೀನಾಕ್ಕೆ ಸ್ಥಾನ ದೊರಿಯಲೇಬೇಕು ಎಂದು ನೆಹರೂ ಹೇಳಿದ್ದಾರೆ.

ವಿದೇಶಿ ಸ್ವಾಸ್ಥ್ಯಗಳು ಯುದ್ಧ ನೆಲೆಯಾಗಗೊಡೆವು

ಭಾರತದಲ್ಲಿರುವ ವಿದೇಶಿ ಸ್ವಾಸ್ಥಗಳ ವಿಷಯವಾಗಿ ಪ್ರಧಾನಿ ಪ್ರಸ್ತಾಪಿಸಿ ವಿಶ್ವದ ಯಾವೆಡೆಯಲ್ಲಿ ಯುದ್ಧವಾದರೂ ಭಾರತದಲ್ಲಿರುವ ವಿದೇಶೀ ಸ್ವಾಸ್ಥ್ಯಗಳು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಯುದ್ಧದ ನೆಲೆಯಾಗಲು ಭಾರತವು ಅವಕಾಶ ಕೊಡುವುದಿಲ್ಲವೆಂದು ತಿಳಿಸಿದ್ದಾರೆ.

ದಕ್ಷಿಣ ಅಫ್ರಿಕ ವರ್ಣಭೇದ ನೀತಿ

ದಕ್ಷಿಣ ಅಫ್ರಿಕಾ ವರ್ಣಭೇದ ನೀತಿಯು ಜಗತ್ತಿಗೇ ಅಪಾಯಕರವೆಂದು ಶ್ರೀ ನೆಹರೂ ಹೇಳಿದ್ದಾರೆ.

ರೈಲಿನಲ್ಲಿ ಒಂದನೇ ತರಗತಿ ರದ್ದು

ಕಳೆದ ಸಾಲಿನ ಅಕ್ಟೋಬರ್ ಒಂದನೇ ತಾರೀಖಿನ ದಿನ ೧೬೦೦ ರೈಲುಗಳಲ್ಲಿ ಒಂದನೇ ತರಗತಿಯು ಇದ್ದುದು ಈ ಸಾಲಿನ ಅಕ್ಟೋಬರ್ ಒಂದನೇ ತಾರೀಖಿನ ವೇಳೆಗೆ ಕೇವಲ ೧೬ ರೈಲುಗಳಲ್ಲಿ ಮಾತ್ರ ಇರುವುದಾಗಿ ತಿಳಿಯಬರುತ್ತದೆ.

ಮದ್ರಾಸ್--ಬೊಂಬಾಯಿ ಮೇಲ್, ಬೆಂಗಳೂರು--ಪೂನಾ ಮೇಲ್, ಡರ್ಕಕ್ವೀನ್, ಬೊಂಬಾಯಿ--ಪಂಜಾಬ್ ಮೇಲ್ ಡೆಹರಾಡೂನ್ ಎಕ್ಸ್‌ಪ್ರೆಸ್ ಮುಂತಾದ ೧೬ ರೈಲುಗಳಲ್ಲಿ ಮಾತ್ರ ಒಂದನೇ ತರಗತಿ ಪ್ರಯಾಣಕ್ಕೆ ಗಾಡಿಗಳು ಇರುತ್ತವೆ.

ಮಣಿಲಾಲ್ ಗಾಂಧಿಯವರಿಗೆ ಜೈಲುವಾಸ

ದಕ್ಷಿಣ ಅಫ್ರಿಕಾದಲ್ಲಿ ವರ್ಣಭೇದ ಶಾಸನವನ್ನು ಉಲ್ಲಂಘಿಸಿದರೆಂಬ ಆಪಾದನೆ ಮೇಲೆ ೫೦ ದಿನ ಕಾರಾಗೃಹ ಶಿಕ್ಷೆಯಾಗಿ ಅದರ ಮೇಲೆ ಅಪೀಲು ಹೂಡಿರುವುದನ್ನು ಮಣಿಲಾಲ್ ಗಾಂಧಿಯವರು ಹಿಂದಕ್ಕೆ ತೆಗೆದುಕೊಂಡು ಜೈಲುವಾಸವನ್ನು ಅನುಭವಿಸಲು ಜೊಹಾನ್ಸ್ ಬರ್ಗನಲ್ಲಿ ಪೋಲೀಸರ ವಶವಾದರೆಂದು ತಿಳಿಯಬರುತ್ತದೆ.

ಪಾರ್ಲಿಮೆಂಟ್ ಸದಸ್ಯರಿಗೆ ಧ್ವನಿ ಪರೀಕ್ಷೆ ನಡೆಯಬೇಕು

ರಾಜ್ಯ ಪರಿಷತ್ತಿನ ಸದಸ್ಯರು ಸಭೆಯಲ್ಲಿ ಹಾಕುವ ಪ್ರಶ್ನೆಗಳು ಅಸ್ಪಷ್ಟವಾಗಿ ಕೇಳುತ್ತಿರುವುದರಿಂದಲೂ ಮತ್ತು ಮೂಲ ಪ್ರಶ್ನೆಯಿಂದ ದೂರವಿರುತ್ತಾವುದರಿಂದ ಪಾರ್ಲಿಮೆಂಟ್ ಸದಸ್ಯರಿಗೆ ಧ್ವನಿ ಪರೀಕ್ಷೆಯನ್ನು ಏರ್ಪಡಿಸುವುದು ಅಗತ್ಯವೆಂದು ರಾಜ್ಯ ಪರಿಷತ್ತಿನ ಅಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ಹೇಳಿದ್ದಾರೆ.

ಕಾಶ್ಮೀರ ಪ್ರಶ್ನೆ

ಕಾಶ್ಮೀರದ ವಿಷಯವಾಗಿ ಅವರು ಪ್ರಸ್ತಾಪಿಸುತ್ತ, ಕಾಶ್ಮೀರದ ಭವಿಷ್ಯವನ್ನು ಕಾಶ್ಮೀರಿಗಳೇ ನಿರ್ಧರಿಸಿಕೊಳ್ಳಬೇಕು. ಅದನ್ನು ಸರಿಯಾದ ವಾತಾವರಣದಲ್ಲಿ ನಡೆಸಬೇಕಾಗಿದೆ ಎಂದು ತಿಳಿಸಿದ್ದಾರೆ.

ಪ್ರಪಂಚದಲ್ಲಿ ಭೂಕಂಪದ ಬಗ್ಗೆ ಭವಿಷ್ಯ

ಪ್ರಪಂಚದ ಅನೇಕ ಪ್ರದೇಶಗಳಲ್ಲಿ ಮುಂದಿನ ೩ ತಿಂಗಳಿನಲ್ಲಿ ಭಾರಿ ಭೂಕಂಪ ಸಂಭವಿಸುವುದೆಂದು, ಉತ್ತರ ಭಾರತದಲ್ಲೂ ಸಾಮಾನ್ಯ ಭೂಕಂಪಗಳಾಗುವುದೆಂದು ಭಾರತದ ಜ್ಯೋತಿಷ್ಯ ಡಾ|| ನಾಯಿಡುರವರು ತಿಳಿಸಿದ್ದಾರೆ.

ಶಾಸನಭವನ ನಾಟಕಶಾಲೆಯಾಗಲಿ

ಮದ್ರಾಸ್ ಸರ್ಕಾರಿ ಭವನದ ಬಳಿ ಇರುವ ಹೊಸ ಶಾಸನ ಭವನವನ್ನು ರಾಷ್ಟ್ರೀಯ ನಾಟಕಶಾಲೆಯನ್ನಾಗಿ ಪರಿವರ್ತಿಸಿ ಎಂದು ಮದ್ರಾಸಿನ ನಾಟಕ ಸಮಿತಿಯ ಕಾರ್ಯ ಸಮಿತಿಯು ಸರ್ಕಾರವನ್ನು ಕೋರುವ ನಿರ್ಣಯ ಮಾಡಿದೆ. ಇದಕ್ಕಾಗಿ ಸಂಬಂಧ ಪಟ್ಟ ಮಂತ್ರಿಗಳ ಬಳಿ ನಿಯೋಗ ಹೋಗಲಿದೆ.

ಗಡಿ ನಿರ್ಧರಣ ವಿಷಯ ಸಂಗ್ರಹಣೆ

ಆಂಧ್ರ ಪ್ರಾಂತಕ್ಕೆ ಸಂಬಂಧಪಟ್ಟ ಗಡಿ ನಿರ್ಧರಣ ವಿಷಯಗಳನ್ನು ಸಂಗ್ರಹಿಸಿ, ಕೇಂದ್ರಸರ್ಕಾರವು ನೇಮಿಸಲಿರುವ ಗಡಿ ನಿರ್ಧರಣಸಮಿತಿಗೆ ಒಪ್ಪಿಸಲು ಆಂಧ್ರಪ್ರದೇಶ ಕಾಂಗ್ರೆಸ್ ಸಮಿತಿಯು ವಿಷಯಸಂಗ್ರಹಣೆಗಾಗಿ ೭ ಜನರ ಒಂದು ಸಮಿತಿಯನ್ನು ರಚಿಸಿದೆ.

ಕಛೇರಿಗಳ ಕಾಲ ಬದಲಾವಣೆ

ಕರಾಚಿಯಲ್ಲಿ ಕೇಂದ್ರಸರ್ಕಾರಿ ಕಛೇರಿಯನ್ನು ಬೆಳಗ್ಗೆ ೯ ಗಂಟೆಯಿಂದ ಸಂಜೆ ೪--೩೦ ವರೆಗೆ ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ. ನಡುವೆ ಅರ್ಧಗಂಟೆ ವಿರಾಮವಿರುತ್ತದೆ. ಶುಕ್ರವಾರ ೯ ರಿಂದ ೧೨, ಶನಿವಾರ ೯ ರಿಂದ ೧--೩೦ ವರೆಗೆ ಕಛೇರಿ ನಡೆಯುವುದು.

ಗ್ರಾಮ ಕಾಂಗ್ರೆಸ್ ಸಮಿತಿಗಳ ರಚನೆ

ತಮಿಳುನಾಡಿನಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಸುಭದ್ರಗೊಳಿಸಲು ಪ್ರತಿಯೊಂದು ಹಳ್ಳಿಯಲ್ಲೂ ,ಒಂದು ಕಾಂಗ್ರೆಸ್ ಸಮಿತಿಯನ್ನು ರಚಿಸುವ ಕಾರ್ಯವನ್ನು ತಮಿಳುನಾಡು ಕಾಂಗ್ರೆಸ್ ಪ್ರಾರಂಭಿಸಿದೆ. ಈಗಾಗಲೇ ಈ ರೀತಿಯ ೫೦೦ ಸಮಿತಿಗಳನ್ನು ರಚಿಸಲಾಗಿದೆ.

ಜಾವಾ ಸಕ್ಕರೆ

ಜಾವಾದಿಂದ ಮದರಾಸಿಗೆ ೭೮೮೨ ಟನ್ ಸಕ್ಕರೆಯನ್ನು ಒಂದು ಹಡಗು ಹೊತ್ತು ತಂದಿದೆ. ಅದನ್ನೆಲ್ಲಾ ಮದರಾಸ್ ಪ್ರಾಂತ್ಯದ ಉಪಯೋಗಕ್ಕೆ ಕೊಡಲಾಗುತ್ತದೆ.

ಮೈಸೂರು ವಸ್ತುಗಳಿಗೆ ವಿದೇಶದಲ್ಲಿ ಗಿರಾಕಿಗಳು

ಬೆಂಗಳೂರು ೧೮

ಭಾರತದ ಗ್ರಾಮ ಕೈಗಾರಿಕೆ ವಸ್ತುಗಳಿಗೆ ವಿದೇಶದಲ್ಲಿ ವಿಶೇಷವಾಗಿ ಗಿರಾಕಿಯಿರುವುದರಿಂದ ಮೈಸೂರು ಸಂಸ್ಥಾನದ ಗ್ರಾಮ ಕೈಗಾರಿಕೆ ವಸ್ತುಗಳ ಮಟ್ಟವನ್ನು ಉನ್ನತ ಸ್ಥಿತಿಗೇರಿಸಲು ಮೈಸೂರುವಾಣಿಜ್ಯ ಸಂಸ್ಥೆಯವರು ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡಬೇಕೆಂದು ಕೈಗಾರಿಕಾ ಮತ್ತು ವಾಣಿಜ್ಯ ಡೈರೆಕ್ಟರಾದ ಶ್ರೀ ಗಣಪತಿಅಯ್ಯರ್‌ರವರು ನಿನ್ನೆಯ ದಿನ ಆ ಸಂಘದ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತ ತಿಳಿಸಿದರು.

ರಾಜಕೀಯ ಬಂದಿಗಳ ಬಿಡುಗಡೆ ಒತ್ತಾಯ

ನೂತನ ಆಂಧ್ರ ಪ್ರಾಂತ್ಯ ಸ್ಥಾಪಿತವಾಗುವ ಅಕ್ಟೋಬರ್ ೧ ನೇ ತಾರೀಖು ಆಂಧ್ರದ ಎಲ್ಲಾ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಬೇಕೆಂದು ಆಂಧ್ರದ ಕಮ್ಯೂನಿಸ್ಟ್ ಪಕ್ಷವು ಒತ್ತಾಯಮಾಡಿದೆ.

ಕಬ್ಬಿನ ಸಿಪ್ಪೆಯಿಂದ ಕಾಗದ ತಯಾರಿಕೆ

ಹೈದರಾಬಾದಿನ ನಿಜಾಮುದಾಬಾದಿನಲ್ಲಿ ಪೋಲಾಗುತ್ತಿರುವ ಕಬ್ಬಿನ ಸಿಪ್ಪೆಯಿಂದ ಕಾಗದ ತಯಾರಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸಲು ಅದರ ಸರ್ಕಾರ ಯೋಚಿಸುತ್ತಿದೆಯೆಂದು ಇತ್ತೀಚೆಗೆ ಬ್ರಿಟನ್ ಮತ್ತು ಯೂರೋಪಿಗೆ ಭೇಟಿ ಇತ್ತ ಸಚಿವ ಡಾ|| ಮೇಲ್ಕೋಟೆಯವರು ತಿಳಿಸುತ್ತಾರೆ. ಜರ್ಮನಿಯ ಒಂದು ಕಾರ್ಖಾನೆಯಲ್ಲಿ ಈ ರೀತಿ ಕಾಗದವನ್ನು ತಯಾರಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಭಾರತಕ್ಕೆ ಚೀಣೀ ಆರೋಗ್ಯ ಮಂತ್ರಿ ಭೇಟಿ

ಭಾರತದ ಸರ್ಕಾರ ಸ್ವಾಗತದಮೇಲೆ ಚೀಣಾದ ಆರೋಗ್ಯ ಸಚಿವ ಮೇಡಂ ಲೀಯವರು ಇದೇ ನವಂಬರ್‌ನಲ್ಲಿ ಇಲ್ಲಿಗೆ ಭೇಟಿ ಕೊಡಲಿದ್ದಾರೆ.

ಪ್ರವಾಹದಿಂದ ೩೫ ಕೋಟಿ ರೂಪಾಯಿಗಳ ನಷ್ಟ

ಇತ್ತೀಚೆಗೆ ಬಿಹಾರಿನಲ್ಲಿ ಆದ ಪ್ರವಾಹದ ಅನಾಹುತದಿಂದ ಒಟ್ಟು ೩೫ ಕೋಟಿಗಳಷ್ಟು ನಷ್ಟ ಸಂಭವಿಸಿದೆಯೆಂದು ಅಂದಾಜು ಮಾಡಲಾಗಿದೆ.

ವಿಶ್ವವಿದ್ಯಾನಿಲಯದ ಉಪಾಧ್ಯಾಯರ ಸಮ್ಮೇಳನ

ಅಖಿಲ ಭಾರತ ವಿಶ್ವವಿದ್ಯಾನಿಲಯದ ಉಪಾಧ್ಯಾಯರುಗಳ ಸಮ್ಮೇಳನವು ಮುಂದಿನ ತಿಂಗಳು ನಾಗಪುರದಲ್ಲಿ ನಡೆಯುವುದು.

ತಿರುವಾಂಕೂರಿನಲ್ಲಿ ವಿರೋಧ ಪಕ್ಷದವರು ಹೊಸಸರ್ಕಾರ ರಚಿಸಬೇಕು

ಕಮ್ಯೂನಿಸ್ಟ್ ಪಕ್ಷದ ಮನವಿ

ತಿರುವಾಂಕೂರ್-ಕೊಚ್ಚಿ ಶಾಸನ ಸಭೆಯಲ್ಲಿರುವ ವಿರೋಧಪಕ್ಷದವರೆಲ್ಲರೂ ಎಲ್ಲರಿಗೂ ಒಪ್ಪುವ ಕಾರ್ಯಕ್ರಮವನ್ನು ತಯಾರಿಸಿಕೊಂಡು ಒಂದು ಮಿಶ್ರಮಂತ್ರಿ ಮಂಡಲವನ್ನು ರಚಿಸಿ ಈಗಿರುವ ಕಾಂಗ್ರೆಸ್ ಮಂತ್ರಿಮಂಡಲವನ್ನು ಹೊರದೂಡಬೇಕು ಎಂದು ಕಮ್ಯೂನಿಸ್ಟ್ ಪಕ್ಷ ಸಮಿತಿಯು ವಿರೋಧಪಕ್ಷಗಳ ಸಹಕಾರವನ್ನು ಕೋರಿದೆ.

ಪ್ರಜಾಸೋಷಲಿಸ್ಟ್ ಪಕ್ಷದ ನಾಯಕ ಶ್ರೀ ತಾನುಪಿಳ್ಳೆಯವರು ಈ ವಿಷಯದಲ್ಲಿ ಮಾತನಾಡುತ್ತಾ ತಮ್ಮ ಪಕ್ಷವು ಕಮ್ಯೂನಿಸ್ಟರೊಡನೆ ಸೇರುವುದಿಲ್ಲವೆಂದೂ ಶಾಸನ ಸಭೆಯಲ್ಲಿ ಕಾಂಗ್ರೆಸ್ ವಿಶ್ವಾಸ ನಿರ್ಣಯವನ್ನು ತಂದಲ್ಲಿ ತಮ್ಮ ಪಕ್ಷವು ಅದನ್ನು ವಿರೋಧಿಸುವುದೆಂದೂ ಹೇಳಿದ್ದಾರೆ.

ನೈಜಾಮರ ಪುತ್ರನ ವಾಸಗೃಹಕ್ಕೆ ೩೫೦೦ ರೂ. ಬಾಡಿಗೆ

ಹೈದರಾಬಾದಿನ ನೈಜಾಮರ ಶ್ರೀ ನ್ಯ ಪುತ್ರ ಬೀರಾರ್ ರಾಜಕುಮಾರರು ವಾಸ ಮಾಡುವ ಅರಮನೆಯು ಸರ್ಕಾರಿ ಕಟ್ಟಡ ವಾದ್ದರಿಂದ ಅದಕ್ಕೆ ಮಾಸೆಯಾನ ೩೫೦೦ ರೂಪಾಯಿಗಳ ಬಾಡಿಗೆಯನ್ನು ನಿರ್ಧರಿಸಲಾಗಿದೆ. ಅವರು ಈ ಬಾಡಿಗೆ ಬಾಬ್ತು ೧,೨೫,೦೦೦ ರೂಪಾಯಿಗಳ ಬಾಕಿಯನ್ನು ಸರ್ಕಾರಕ್ಕೆ ಕೊಡಬೇಕಾಗಿದೆ. ಈ ಬಾಕಿಯನ್ನು ಕೂಡಲೇ ಕೊಡಬೇಕೆಂದು ಅವರಿಗೆ ಒತ್ತಾಯಮಾಡುತ್ತಿರುವುದಾಗಿ ಅಲ್ಲಿಯ ರೆವಿನ್ಯೂ ಸಚಿವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಕಾಶ್ಮೀರ ತಂತಿ ಇಲಾಖೆ ಭಾರತ ಆಡಳಿತಕ್ಕೆ

ಕಾಶ್ಮೀರ ಸರ್ಕಾರದ ತಂತಿ ಇಲಾಖೆಯನ್ನು ಭಾರತ ಸರ್ಕಾರವು ತನ್ನ ಆಡಳಿತಕ್ಕೆ ಮೊನ್ನೆಯದಿನ ತೆಗೆದುಕೊಂಡಿರುವುದಾಗಿ ತಿಳಿಯಬರುತ್ತದೆ. ಈ ಕಾರ್ಯಕ್ಕೆ ಕಾಶ್ಮೀರಾದ್ಯಂತ ಸ್ವಾಗತ ದೊರಕಿದೆ.

ಈ ಸಂಬಂಧದಲ್ಲಿ ಉಭಯ ಸರ್ಕಾರಗಳ ನಡುವೆ ತೀರ್ಮಾನವಾಗಿದ್ದರೂ ಅದ ಕಾರ್ಯಗತವಾಗದೆ ಕಾಶ್ಮೀರ ಸರ್ಕಾರವೇ ಆ ಇಲಾಖೆಯನ್ನು ನಡೆಸುತ್ತಲಿತ್ತು.

ಷೇಕ್ ಅಬ್ದುಲ್ಲಾರ ಬಿಡುಗಡೆ ಇಲ್ಲ

ದೇಶದ ಹಿತದೃಷ್ಟಿಯಿಂದ ಷೇಕ್ ಅಬ್ದುಲ್ಲಾರವರನ್ನು ಬಂಧನದಿಂದ ಬಿಡುಗಡೆಮಾಡುವುದು ಸೂಕ್ತವಲ್ಲವೆಂದು ಕಾಶ್ಮೀರ ಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರು ತಿಳಿಸಿದ್ದಾರೆ.

ಸಂತಾಪ ಸೂಚಕ ಸಭೆ

ಮೈಸೂರು ೧೮

ದಿವಂಗತ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಗಳ ಆತ್ಮಕ್ಕೆ ಶಾಂತಿಯನ್ನು ಕೋರಲು ಕರ್ಣಾಟಕ ಸಂಘದ ಆಶ್ರಯದಲ್ಲಿ ಸಂತಾಪಸೂಚಕ ಸಭೆಯನ್ನು ನಾಳೆ ಶನಿವಾರ ಸಂಜೆ ೬ ಗಂಟೆಗೆ ಸದ್ವಿದ್ಯಾಪಾಠಶಾಲೆಯಲ್ಲಿ ಏರ್ಪಡಿಸಲಾಗಿದೆ ಪುರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸುತ್ತಾರೆ. ಶ್ರೀಗಳಾದ ಕೆ.ವಿ. ರಾಘವಾಚಾರ್ ಮತ್ತು ಎ. ಎಸ್. ವೀರಪ್ಪ ಮೊದಲಾದವರು ಮಾತನಾಡುತ್ತಾರೆ.

ಮಹಾಮಂಗಳಾರತಿ

ಮೈಸೂರು, ೧೮

ಶಾರದಾವಿಲಾಸ ಹೈಸ್ಕೂಲಿಗೆ ಸೇರಿರುವ ವಾಣಿಜ್ಯಶಾಲೆಯಲ್ಲಿ ಗಣಪತಿ ಮಹಾಮಂಗಳಾರತಿಯು ನಾಳೆ ಸಂಜೆ ೫ ಘಂಟೆಗೆ ನಡೆಯುತ್ತದೆ.

ಚೈನಾಕ್ಕೆ ಮತ್ತೊಂದು ಮನವಿ

ಕೊರಿಯಾ ಯುದ್ಧದಲ್ಲಿ ಪಾತ್ರವಹಿಸಿದ್ದ ೧೬ ರಾಷ್ಟ್ರಗಳು ನಿನ್ನೆಯದಿನ ಮತ್ತೊಂದು ಸಭೆಯನ್ನು ನಡೆಸಿ, ಕೊರಿಯಾ ಶಾಂತಿ ಸಮ್ಮೇಳನದ ವಿಷಯದಲ್ಲಿ ಕಾಲ ಮತ್ತು ಸ್ಥಳ ನಿರ್ದಿಷ್ಟಮಾಡಿ ಉತ್ತರ ಕೊರಿಯಾ ಮತ್ತು ಚೈನಾಕ್ಕೆ ಕಳುಹಿಸಿರುವ ಸಲಹೆಯನ್ನು ಅವು ಪುನರ್ವಿಮರ್ಶಿಸುವಂತೆ ಮತ್ತೊಂದುಬಾರಿ ಕೇಳುವಂತೆ ಅಮೇರಿಕಾಕ್ಕೆ ಅಧಿಕಾರವನ್ನು ಕೊಡುವ ನಿರ್ಧಾರವನ್ನು ಮಾಡಿದೆ.

ಹೈದರಾಬಾದ್ ವಿಭಜನೆ ಈಗ ಕೂಡದು

ವಿಭಜನೆಯಾದಲ್ಲಿ ಪಂಚವಾರ್ಷಿಕ ಯೋಜನೆ ಕಾರ್ಯಗತವಾಗುವುದಿಲ್ಲ

ಹೈದರಾಬಾದ್ ಕಾಂಗ್ರೆಸ್ ನಾಯಕರ ಅಭಿಪ್ರಾಯ

ಹೈದರಾಬಾದ್ ಪ್ರಾಂತ್ಯವನ್ನು ಈಗಲೇ ವಿಭಜನೆ ಮಾಡಿದರೆ ಅನೇಕ ನೂತನ ಸಮಸ್ಯೆಗಳು ಉದ್ಭವಿಸುತ್ತವೆ. ಸರ್ಕಾರವು ಕೈಗೊಂಡಿರುವ ಪಂಚವಾರ್ಷಿಕ ಯೋಜನೆ ಕಾರ್ಯಗತಮಾಡಲು ಸಾಧ್ಯವಾಗುವುದಿಲ್ಲ. ಅಲ್ಲದೆ ದಕ್ಷಿಣ ಭಾರತದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ವಿಶೇಷವಾಗಿ ಧಕ್ಕೆಯುಂಟಾಗುತ್ತದೆ ಎಂದು ಹೈದರಾಬಾದಿನ ಕಾಂಗ್ರೆಸ್ ನಾಯಕರೂ ಮತ್ತು ಮಾಜಿ ಸಚಿವರೂ ಆದ ಶ್ರೀ ಜಿ. ರಾಮಾಚಾರ್ ರವರು ಒಂದು ಹೇಳಿಕೆಯನ್ನಿತ್ತಿದ್ದಾರೆ.

ಹೆಂಡತಿ ಮಕ್ಕಳ ಖೂನಿ

ವಿಚಾರಣೆ ನಡೆಯುತ್ತಿರುವ ಒಂದು ಖೂನಿ ಮೊಕದ್ದಮೆಯಲ್ಲಿ ತನಗೆ ಮರಣ ದಂಡನೆಯಾಗುವುದು ನಿಜವೆಂದು ಊಹಿಸಿದ ಇನಾಬೂರಿನ ಪಡಯಾಚಿ ಎಂಬುವವನು ತನ್ನನ್ನು ಗಲ್ಲಿಗೆ ಹಾಕಿದರೆ ಸಂಸಾರವನ್ನು ನೋಡಿಕೊಳ್ಳುವವರಿಲ್ಲದಂತಾಗುವುದೆಂದು ಹೆಂಡತಿ ಮತ್ತು ಮಗಳನ್ನು ಖೂನಿಮಾಡಿ, ತಾನೇ ನೇರವಾಗಿ ಪೋಲೀಸರ ಬಳಿಗೆ ಹೋಗಿ ವರವಾಗಿರುವುದಾಗಿ ಹೇಳಲಾಗಿದೆ. ಇನ್ನೊಬ್ಬ ಮಗಳ ಸ್ಥಿತಿ ಚಿಂತಾಜನಕವಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೭—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—೨	೨೭
ಎಳ್ಳು	೬೫—	೯೦—೧೦
ಹುರುಳಿ	೪೬—೬	೪೮—೧೨
ಅಲಸಂದೆ	೭೧—೪	೭೬—೮
ತೆಂಗಿನಕಾಯಿ	೨೪೮	೨೯೪

ಹೋಟೆಲು ಕೆಲಸಗಾರರ ಪ್ರತಿಭಟನೆ

ಮೈಸೂರು ೧೮

ರಾಜಧಾನಿಯ ಸಿಯೋ ಹೋಟೆಲ್ ಕೆಲಸಗಾರರ ಸಂಘದ ಸುಮಾರು ನೂರು ಜನ ಸದಸ್ಯರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ನಂತರ ಸಭೆ ನಡೆಸಿ "ವೆಲ್‌ಕಂ ಹೋಟೆಲಿನ"ಲ್ಲಿ ವಿನಾಕಾರಣ ಕೆಲಸಗಾರರನ್ನು ತೆಗೆದುಹಾಕಿದ ಬಗ್ಗೆ ಪ್ರತಿಭಟನೆ ಸೂಚಿಸಿದರು. ಮತ್ತು ಕೂಡಲೇ ಕೆಲಸಕ್ಕೆ ತೆಗೆದುಕೊಳ್ಳುವಂತೆ ಒತ್ತಾಯ ಮಾಡುವ ನಿರ್ಣಯವನ್ನು ಅಂಗೀಕರಿಸಿತು.

ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್

ಬೆಂಗಳೂರು ೧೮

ತುಮಕೂರು ಡಿವಿಜನ್ನಿನ ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ ಶ್ರೀ ಸಿ. ನಾರಾಯಣಶೆಟ್ಟಿಯವರನ್ನು ಬಳ್ಳಾರಿಯ ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ರಾಗಿ ನೇಮಿಸಲಾಗಿದೆ.

ವಾರ್ತಾ ಸಚಿವರು ದೆಹಲಿಗೆ

ಬೆಂಗಳೂರು ೧೮

ವಾರ್ತಾಸಚಿವರಾದ ಶ್ರೀ ರಾಮಚಂದ್ರರಾಯರು ಮತ್ತು ವಾರ್ತಾ ಶಾಖಾ ಮುಖ್ಯಾಧಿಕಾರಿ ಶ್ರೀ ಬಿ. ಎನ್. ಸರ್ದಾರವರು ನಿನ್ನೆಯದಿನ ದೆಹಲಿಗೆ ತೆರಳಿದರು.

ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆ

ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ಇದೇ ೨೪ನೇ ತಾರೀಖು ಮಧ್ಯಾಹ್ನ ೩-೩೦ ಗಂಟೆಗೆ ಬೆಂಗಳೂರಿನಲ್ಲಿ ಸೇರುವುದೆಂದು ತಿಳಿದುಬಂದಿದೆ.

ಅಪೇರ

18-9-53 ರಿಂದ 2 ನೇ ವಾರ

ಪ್ರತಿದಿನ ಮೂರು ಆಟಗಳು

ಮಲ್ಲೇಶ್ವರಿ

[ತೆಲುಗು]

ಪಾತ್ರ:—ಎನ್. ಟಿ. ರಾಮರಾವ್,

ಭಾನುಮತಿ.

ಇತ್ತೀಚೆಗೆ ಗ್ರೀಸಿನ ಅನೇಕ ಪ್ರದೇಶಗಳಲ್ಲಿ ಭಾರಿ ಭೂಕಂಪ ಸಂಭವಿಸಿ ಸಾವಿರಾರು ಮನೆಗಳೂ ನಾಶವಾಗಿ, ಅನೇಕರು ಸತ್ತರು. ಚಿತ್ರದಲ್ಲಿ ಅಂಗೋಸ್ಟಲಿ ಎಂಬಲ್ಲಿ ಭಾರಿ ಭವನಗಳು ನಾಶವಾಗಿ ಬಿದ್ದಿರುವುದನ್ನು ಕಾಣಬಹುದು.

ಪ್ರಕಾಶಕರು ಮತ್ತು ಮುದ್ರಕರು.

ಜಿ. ಎಲ್. ಸ್ವಾಮಿ.

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೪೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೨೭

೧೯-೯-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕೇಂದ್ರಸರ್ಕಾರದ ಉನ್ನತ ಅಧಿಕಾರಿಯ ವಜಾ

ಕೇಂದ್ರಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯಶಾಖೆಯ ಕಾರ್ಯದರ್ಶಿಗಳಾಗಿದ್ದು ಹಲವಾರು ಆಪಾದನೆಗಳಮೇಲೆ ಇತ್ತೀಚೆಗೆ ವಿಚಾರಣೆ ನಡೆದ ಪರಿಣಾಮವಾಗಿ ಶ್ರೀ ಎಸ್. ಎ. ವೆಂಕಟರಾಮರನ್ನು ಕೇಂದ್ರ ಸರಕಾರವು ಕೆಲಸದಿಂದ ವಜಾಮಾಡಿರುವುದಾಗಿ ತಿಳಿಯಬರುತ್ತದೆ.

ನೇಣುಹಾಕಿಕೊಂಡು ಆತ್ಮಹತ್ಯೆ

ಮೈಸೂರು ೧೯

ಸುಬ್ಬರಾಯನಕೆರೆ ಬಳಿಯಿರುವ ಕುರುಬಗೇರಿಯಲ್ಲಿ ಒಕ್ಕಲಿಗರ ಜಾತಿಯ ಬಸವಯ್ಯ ಎಂಬ ೩೦ ವರ್ಷದ ಯುವಕನು ನಿನ್ನೆ ರಾತ್ರಿ ತನ್ನ ಕೊಠಡಿಯಲ್ಲಿ ನೇಣು ಹಾಕಿಕೊಂಡು ಸತ್ತನೆಂದು ತಿಳಿಯಬರುತ್ತದೆ. ಲಕ್ಷ್ಮೀಪುರಂ ಪೋಲೀಸಿನವರು ತನಿಖೆ ನಡೆಸುತ್ತಲಿದ್ದಾರೆ.

ಅಪೀಲಿನಲ್ಲಿ ಆಪಾದಿತರ ಬಿಡುಗಡೆ

ಕೃಷ್ಣರಾಜನಗರ ತಾಲ್ಲೂಕು ಕಾರಗಹಳ್ಳಿ ಕೊಪ್ಪಲ್ ಎಂಬಲ್ಲಿ ಶಿವಲಿಂಗಪ್ಪ ಮತ್ತು ಇತರ ೪ ಜನರು ಲಲಿತಮ್ಮ ಎಂಬುವವಳನ್ನು ಕರೆದುಕೊಂಡುಹೋಗಿ ಬಲಾತ್ಕಾರ ವಿವಾಹಕ್ಕೆ ಪ್ರಯತ್ನಿಸಿದರೆಂಬ ಆಪಾದನೆಮೇಲೆ ಮೈಸೂರಿನ ಅಸಿಸ್ಟೆಂಟ್ ಸೆಷನ್ಸ್ ನ್ಯಾಯಾಧೀಶರು ಆಪಾದಿತರಿಗೆ ವಿಧಿಸಿದ್ದ ೩ ತಿಂಗಳು ಕಠಿಣಸಜಾ ಮತ್ತು ೮೦೦ ರೂ ಜುಲ್ಮಾನೆಯಮೇಲಿನ ಅಪೀಲಿನಲ್ಲಿ ಮೊನ್ನೆಯ ದಿನ ಆಡಿಷನಲ್ ಜಿಲ್ಲಾ ನ್ಯಾಯಾಧೀಶರು ಶಿಕ್ಷೆಯನ್ನು ರದ್ದುಗೊಳಿಸಿ ಆಪಾದಿತರನ್ನು ಖುಲಾಸೆಮಾಡಿದರು.

ನಗರ ಕಾಂಗ್ರೆಸ್ ಚುನಾವಣಾ ಸಮಿತಿ

ಮೈಸೂರು ೧೯

ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಚುನಾವಣಾ ವೇಳಾ ಪಟ್ಟಿಯು ಈರೀತಿ ಇದೆಯೆಂದು ಚುನಾವಣಾಧಿಕಾರಿಗಳಾದ ಶ್ರೀ ಕೆ. ಪುಟ್ಟಸ್ವಾಮಿಯವರು ತಿಳಿಸಿರುತ್ತಾರೆ.

ಸದಸ್ಯರ ಪಟ್ಟಿ ಪ್ರಕಟಣೆ ಇದೇ ೨೦ನೇ ತಾರೀಖು ನಾಮಪತ್ರಗಳ ಸ್ವೀಕಾರ ೨೪ ಮತ್ತು ೨೫ನೇ ತಾರೀಖು ಬೆಳಗ್ಗೆ ೧೦ ರಿಂದ ೧ ಘಂಟೆವರೆಗೆ; ನಾಮಪತ್ರಗಳ ಪ್ರಕಟಣೆ ೨೫ನೇ ಮಧ್ಯಾಹ್ನ ೩ ಗಂಟೆಗೆ; ನಾಮಪತ್ರಗಳ ಪರಿಶೀಲನೆ ೨೬ನೇ ತಾ|| ಬೆಳಗ್ಗೆ ೧೦ ಘಂಟೆಗೆ, ಉಮೇದುವಾರರ ಅಖೈರು ಪಟ್ಟಿ ಪ್ರಕಟಣೆ ೨೬ನೇ ತಾರೀಖು ಮಧ್ಯಾಹ್ನ ೩ ಘಂಟೆಗೆ; ಉಮೇದುವಾರಿಕೆ ವಾಪಸು ೨೭ ಸಂಜೆ ೫; ಉಮೇದುವಾರರ ಅಖೈರು ಪಟ್ಟಿ ೨೭ ಸಂಜೆ ೬ ಘಂಟೆ; ಚುನಾವಣೆ ೩೦ನೇ ತಾರೀಖು ಬೆಳಗ್ಗೆ ೯ ರಿಂದ ೧, ಮಧ್ಯಾಹ್ನ ೨ರಿಂದ ೫ ಘಂಟೆವರೆಗೆ, ಎಣಿಕೆ ಮತ್ತು ಫಲಿತಾಂಶ ಅದೇ ಸಂಜೆ ೫-೩೦ ಘಂಟೆಗೆ. ಎಂ. ಪಿ. ಸಿ.ಸಿ.ಗೆ ವರದಿ ಅಕ್ಟೋಬರ್ ೧.

ಕೊರಿಯಾಕ್ಕೆ ಭಾರತ ಸೈನ್ಯ

ಇಂದಿನಿಂದ ಕೊರಿಯಾಕ್ಕೆ ವಿಮಾನದಲ್ಲಿ ಇನ್ನೂ ೬೦೦ ಭಾರತ ಸೈನ್ಯವನ್ನು ಕಳುಹಿಸಲಾಗುವುದೆಂದು ರಕ್ಷಣಾ ಸಚಿವ ಶಾಖೆಯು ಪ್ರಕಟಿಸಿದೆ.

ಸಚಿವರ ಮನೆಯಲ್ಲಿ ಕಳ್ಳತನ

ಮದ್ರಾಸ್ ಆರ್ಥಿಕಸಚಿವ ಶ್ರೀ ಸುಬ್ರಹ್ಮಣ್ಯಂರವರ ಮನೆಯಲ್ಲಿ ಕೆಲವು ಹೂವಿನ ಕುಂಡಗಳ ಕಳವನ್ನು ಪತ್ತೆ ಹಚ್ಚಲು ಪೋಲೀಸ್ ನಾಯಿಗಳ ಸಹಾಯವನ್ನು ಪಡೆಯಲಾಗುತ್ತಿದೆ. ಕೆಲವುದಿನಗಳ ಹಿಂದೆ ಅವರ ಮನೆಯಲ್ಲಿ ಒಂದು ಕೈ ಗಡಿಯಾರ ಕಳುವಾಯಿತ್ತು.

ಅಂಧ ವಿದ್ಯಾರ್ಥಿಗಳಿಗೆ ಪ್ರೌಢಶಿಕ್ಷಣ

ಅಂಧ ವಿದ್ಯಾರ್ಥಿಗಳು ಪ್ರೌಢಶಿಕ್ಷಣವನ್ನು ಪಡೆಯಲು ಭಾರತ ಸರ್ಕಾರವು ಅವರಿಗೆ ವಿದ್ಯಾರ್ಥಿವೇತನವನ್ನು ಕೊಡಲು ನಿರ್ಧರಿಸಿದೆ. ಎ. ಮತ್ತು ಬಿ ವಿಭಾಗ ಪ್ರಾಂತ್ಯಗಳ ಸಲಹೆಯನ್ನು ಪಡೆದು ವೇತನವನ್ನು ಕೊಡಲಾಗುತ್ತದೆ.

ಅಮೇರಿಕಾಬಳಿ ಅಣುಶಕ್ತಿ ಬಾಂಬುಗಳು

ಅಮೇರಿಕಾದಬಳಿ ಇರುವ ವಿಮಾನಗಳು ಮತ್ತು ವಿಮಾನ ಚಾಲಕರಿಗಿಂತ ಅಧಿಕಸಂಖ್ಯೆಯಲ್ಲಿ ಅಣುಶಕ್ತಿ ಬಾಂಬುಗಳಿರುವುದಾಗಿ ಡೆಮೊಕ್ರಾಟಿಕ್ ಪಕ್ಷದ ಸದಸ್ಯರೊಬ್ಬರು ಹೇಳಿದ್ದಾರೆ.

ಮುಖರ್ಜಿ ನಿಧನ ಬಗ್ಗೆ ತನಿಖೆಯಿಲ್ಲ

ಶ್ರೀನಗರದಲ್ಲಿ ಬಂಧನದಲ್ಲಿದ್ದಾಗ ಡಾ|| ಶ್ಯಾಮಪ್ರಸಾದ್ ಮುಖರ್ಜಿಯವರು ನಿಧನರಾದ ಬಗ್ಗೆ ತನಿಖೆ ನಡೆಸಬೇಕೆಂದು ಶ್ರೀ ಎನ್.ಸಿ. ಚಟರ್ಜಿಯವರು ಲೋಕಸಭೆಯಲ್ಲಿ ಮಾಡಿದ ಸಲಹೆಯನ್ನು ಕೇಂದ್ರ ಗೃಹ ಸಚಿವ ಡಾ|| ಕಟ್ಜುರವರು ತಿರಸ್ಕರಿಸಿದರು

೩ ತಿಂಗಳಲ್ಲಿ ೩೬ ಕೋಟಿ ರೂ ಸುಂಕ ವಸೂಲಿ

ಭಾರತದಲ್ಲಿ ೧೯೫೩-೫೪ನೇ ಸಾಲಿನ ೩ ತಿಂಗಳಲ್ಲಿ ಒಳದೇಶದ ವ್ಯಾಪಾರ ಮತ್ತು ಸಮುದ್ರ ವ್ಯಾಪಾರದ ಸುಂಕಗಳಿಂದ ವರಮಾನವು ೩೬ ಕೋಟಿ ೬೪ ಲಕ್ಷ ರೂಗಳು ಬಂದಿರುತ್ತದೆ.

ಸಮಾಚಾರ ಸಚಿವರ ಸಮ್ಮೇಳನ

ಪ್ರಾಂತ್ಯ ಮತ್ತು ಕೇಂದ್ರ ಸರ್ಕಾರಗಳ ಸಮಾಚಾರ ಸಚಿವರುಗಳ ಸಮ್ಮೇಳನವು ನಿನ್ನೆಯದಿನ ನವದೆಹಲಿಯಲ್ಲಿ ಪ್ರಾರಂಭವಾಯಿತು. ಪ್ರಧಾನಿ ನೆಹರೂರವರು ಈ ಸಮ್ಮೇಳನವನ್ನು ಉದ್ಘಾಟಿಸುತ್ತಾ ಸರ್ಕಾರಗಳು ಸಾರ್ವಜನಿಕರ ಸಂಪರ್ಕವನ್ನು ವಿಶೇಷವಾಗಿ ಹೊಂದುವಂತೆ ಕೆಲಸಮಾಡಬೇಕು. ಪಂಚವಾರ್ಷಿಕ ಮತ್ತು ಜನಪದ ಯೋಜನೆಗಳನ್ನು ಜನರಲ್ಲಿ ವಿಶೇಷವಾಗಿ ಪ್ರಚಾರ ಮಾಡಬೇಕೆಂದು ತಿಳಿಸಿದರು.

ತಂದೆ ಜಾಮೀನು ಕೊಡದಿದ್ದಕ್ಕೆ ಮಗನ ಆತ್ಮಹತ್ಯೆ

ಚಲನಚಿತ್ರ ತಾರೆಯ ಕೈಗಡಿಯಾರ ಕದ್ದನೆಂಬ ಆಪಾದನೆಮೇಲೆ ದಸ್ತಗಿರಿಯಾಗಿದ್ದ ಅಕ್ತರ್‌ಹುಸೇನ್ ಮುಸ್ತಫಾ ಹುಸೇನ್ ಎಂಬುವವನನ್ನು ಪೋಲೀಸಿನವರು ದಸ್ತಗಿರಿಮಾಡಿದಾಗ ಆತನನ್ನು ಜೇಲ್‌ನಿಂದ ಬಿಡಲು ತಂದೆಯು ಜಾಮೀನು ಕೊಡಲಿಲ್ಲವೆಂದು ಅಪರಾಧಿಯು ಜೈಲಿನಲ್ಲಿಯೇ ಒಟ್ಟಿಗೆ ಬೆಂಕಿಯನ್ನು ಹತ್ತಿಸಿಕೊಂಡು ಆತ್ಮಹತ್ಯ ಮಾಡಿಕೊಂಡ ಪ್ರಕರಣವು ಬೊಂಬಾಯಿನಲ್ಲಿ ವರದಿಯಾಗಿದೆ.

೪೬ ಲಕ್ಷ ರೂ. ಅಭಿವೃದ್ಧಿ ಯೋಜನೆ

ಅಕ್ಟೋಬರ್ ೩ ನೇ ತಾರೀಖು ಬೊಂಬಾಯಿ ಪ್ರಾಂತ್ಯದಲ್ಲಿ ೪೬ ಲಕ್ಷ ರೂಪಾಯಿಗಳ ವೆಚ್ಚದ ೧೫೦೦ ಯೋಜನೆಗಳನ್ನು ಪ್ರಾರಂಭಿಸಲಾಗುತ್ತದೆ. ನೀರಿನ ಸರಬರಾಜು, ಗ್ರಾಮಾಂತರ ರಸ್ತೆ ನಿರ್ಮಾಣ, ಕಟ್ಟಡಗಳ ನಿರ್ಮಾಣ ಮುಂತಾದುವೆಲ್ಲವೂ ಇದರಲ್ಲಿ ಸೇರಿವೆ. ಈ ಕಾರ್ಯಗಳನ್ನೆಲ್ಲಾ ಮುಂದಿನ ಮಾರ್ಚಿ ವೇಳೆಗೆ ಪೂರ್ಣಗೊಳಿಸುವ ವ್ಯವಸ್ಥೆಯಿದೆ.

ವಿದೇಶಗಳಿಂದ ಯಂತ್ರ ಸಾಮಗ್ರಿ

ಭಾರತವು ವಿದೇಶಗಳಿಂದ ೫೨-೫೩ನೇ ಸಾಲಿನಲ್ಲಿ ೮೨ ಕೋಟಿ ೮೭ ರೂಪಾಯಿಗಳ ಬೆಲೆ ಯಂತ್ರ ಸಾಮಗ್ರಿಗಳನ್ನು ತರಿಸಿಕೊಂಡಿವೆ.

ಉಚಿತ ಶಸ್ತ್ರಚಿಕಿತ್ಸೆ

ಕಾಶ್ಮೀರದ ಸರ್ಕಾರಿ ವೈದ್ಯಶಾಲೆಗಳಲ್ಲೆಲ್ಲಾ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ನಡೆಸಲು ಸರ್ಕಾರವು ಆಜ್ಞೆಯನ್ನಿತ್ತಿದೆ.

ಡಿಸೆಂಬರ್ ೭ ರಲ್ಲಿ ಪುರಸಭೆಯ ಚುನಾವಣೆ

ಮೈಸೂರು ೧೯

ಮುಂದಿನ ವರ್ಷ ಜನವರಿ ಒಂದನೇ ತಾರೀಖಿನಿಂದ ಪುನರ್ರಚಿತವಾಗಬೇಕಾಗುವ ಪುರಸಭೆಗೆ ಚುನಾವಣೆಯು ಡಿಸೆಂಬರ್ ೭ ನೇ ತಾರೀಖು ಸೋಮವಾರ ನಡೆಯುತ್ತದೆ.

ಈ ಬಗ್ಗೆ ರಿಟರ್ನಿಂಗ್ ಅಧಿಕಾರಿಗಳು ತಾತ್ಕಾಲಿಕ ವೇಳಾಪಟ್ಟಿಯನ್ನು ಪ್ರಕಟಿಸಿದ್ದಾರೆ.

ಮತದಾರರ ಪಟ್ಟಿ ಪ್ರಕಟಣೆ ಅಕ್ಟೋಬರ್ ೮, ಆ ಬಗ್ಗೆ ತಕರಾರು ಸ್ವೀಕಾರ ಅದೇ ೨೨ ನೇ ತಾ||, ಅಂತ್ಯಪಟ್ಟಿ ಪ್ರಕಟಣೆ ಅಕ್ಟೋಬರ್ ೩೧ ಉಮೇದುವಾರಿಕೆ ಅರ್ಜಿ ಸ್ವೀಕಾರ ನವಂಬರ್ ೧೬, ಅರ್ಜಿ ವಾಪಸ್ಸು ೨೦, ಉಮೇದುವಾರರ ಪಟ್ಟಿ ಪ್ರಕಟಣೆ ನ. ೨೧. ಚುನಾವಣೆ ಡಿಸೆಂಬರ್ ೭, ಮತಎಣಿಕೆ ಡಿ. ೮, ಫಲಿತಾಂಶ ಪ್ರಕಟಣೆ ಡಿ. ೮.

ಅಕಾಡೆಮಿಕ್ ಕೌನ್ಸಿಲ್ ಸಭೆ

ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸಭೆಯು ಇದೇಮಾಹೆ ೩೦ನೇ ತಾರೀಖು ಮಧ್ಯಾಹ್ನ ೧೨ ಗಂಟೆಗೆ ಕ್ರಾಫರ್ಡ್ ಹಾಲಿನಲ್ಲಿ ನಡೆಯುತ್ತದೆ.

ಶಿಕ್ಷಣ ಸುಧಾರಣಾ ಸಮಿತಿಯ ವರದಿಯನ್ನು ಅಂದು ಪರಿಶೀಲಿಸಲಾಗುತ್ತದೆಯೆಂದು ತಿಳಿಯಬರುತ್ತದೆ.

ವಾರ್ಷಿಕೋತ್ಸವ

ಮೈಸೂರು ೧೯

ತಮಿಳುನಾಡು ಬಟ್ಟೆ ವ್ಯಾಪಾರಿಗಳ ವಾರ್ಷಿಕೋತ್ಸವವು ನಾಳೆ ಸಂಜೆ ೪ ಗಂಟೆಗೆ ಚಾಮುಂಡೇಶ್ವರಿ ಭವನದಲ್ಲಿ ನಡೆಯುತ್ತದೆ. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಹೆಚ್.ಕೆ. ವೀರಣ್ಣಗೌಡರು ಅಧ್ಯಕ್ಷತೆ ವಹಿಸುವರು.

ಪ್ರಜಾಸಭೆ ಅನಿರ್ದಿಷ್ಟಕಾಲ ಮುಂದಕ್ಕೆ

ಕೇಂದ್ರ ಪ್ರಜಾಸಭೆಯು ನಿನ್ನೆಯದಿನ ಸ್ವಲ್ಪಹೊತ್ತು ನಡೆದು ಅನಿರ್ದಿಷ್ಟವಾಗಿ ಮುಂದಕ್ಕೆ ಹಾಕಲಾಗಿದೆ.

ಪ್ರಜಾಸಭೆಯು ಕಳೆದ ೭ ವಾರಗಳಿಂದ ನಡೆಯುತ್ತಿತ್ತು. ಈ ಕಾಲದಲ್ಲಿ ಸರ್ಕಾರವು ಸುಮಾರು ೨೨೦೦ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದೆ. ಆಂಧ್ರಪ್ರಾಂತ್ಯ ಮಸೂದೆ ಮತ್ತು ಸ್ವತ್ತಿನ ತೆರಿಗೆ ಮಸೂದೆಗಳು ಸಭೆಯು ಅಂಗೀಕರಿಸಿದ್ದರಲ್ಲಿ ಮುಖ್ಯವಾದುವು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ

ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಈದಿನ ದೆಹಲಿಯಲ್ಲಿ ಪ್ರಾರಂಭವಾಗುತ್ತದೆ. ಸಭೆಯು ೨ ದಿನ ಕಾಲ ನಡೆಯುವುದೆಂದು ಹೇಳಲಾಗಿದೆ.

ತಿರುವಾಂಕೂರಿನಲ್ಲಿ ವಿರೋಧ ಪಕ್ಷದವರು ಹೊಸಸರ್ಕಾರ ರಚಿಸಬೇಕು

ಕಮ್ಯೂನಿಸ್ಟ್ ಪಕ್ಷದ ಮನವಿ

ತಿರುವಾಂಕೂರ್--ಕೊಚ್ಚಿ ಶಾಸನ ಸಭೆಯಲ್ಲಿರುವ ವಿರೋಧಪಕ್ಷದವರೆಲ್ಲರೂ ಎಲ್ಲರಿಗೂ ಒಪ್ಪುವ ಕಾರ್ಯಕ್ರಮವನ್ನು ತಯಾರಿಸಿಕೊಂಡು ಒಂದು ಮಿಶ್ರಮಂತ್ರಿ ಮಂಡಲವನ್ನು ರಚಿಸಿ ಈಗಿರುವ ಕಾಂಗ್ರೆಸ್ ಮಂತ್ರಿಮಂಡಲವನ್ನು ಹೊರದೂಡಬೇಕು ಎಂದು ಕಮ್ಯೂನಿಸ್ಟ್ ಪಕ್ಷ ಸಮಿತಿಯು ವಿರೋಧಪಕ್ಷಗಳ ಸಹಕಾರವನ್ನು ಕೋರಿದೆ.

ಪ್ರಜಾಸೋಷಲಿಸ್ಟ್ ಪಕ್ಷದ ನಾಯಕ ಶ್ರೀ ತಾನುಪಿಳ್ಳೆಯವರು ಈ ವಿಷಯದಲ್ಲಿ ಮಾತನಾಡುತ್ತಾ ತಮ್ಮ ಪಕ್ಷವು ಕಮ್ಯೂನಿಸ್ಟ್‌ರೊಡನೆ ಸೇರುವುದಿಲ್ಲವೆಂದೂ ಶಾಸನ ಸಭೆಯಲ್ಲಿ ಕಾಂಗ್ರೆಸ್ ವಿಶ್ವಾಸ ನಿರ್ಣಯವನ್ನು ತಂದಲ್ಲಿ ತಮ್ಮ ಪಕ್ಷವು ಅದನ್ನು ವಿರೋಧಿಸುವುದೆಂದೂ ಹೇಳಿದ್ದಾರೆ.

ನೈಜಾಮರ ಪುತ್ರನ ವಾಸಗೃಹಕ್ಕೆ ೪೫೦೦ ರೂ. ಬಾಡಿಗೆ

ಹೈದರಾಬಾದಿನ ನೈಜಾಮರ ಶ್ರೀ ಸ್ವಪುತ್ರ ಬೇರಾರ್ ರಾಜಕುಮಾರರು ವಾಸ ಮಾಡುವ ಅರಮನೆಯು ಸರ್ಕಾರಿ ಕಟ್ಟಡವಾದ್ದರಿಂದ ಅದಕ್ಕೆ ಮಾಸೆಯಾನ ೪೫೦೦ ರೂಪಾಯಿಗಳ ಬಾಡಿಗೆಯನ್ನು ನಿರ್ಧರಿಸಲಾಗಿದೆ. ಅವರು ಈ ಬಾಡಿಗೆ ಬಾಬ್ತು ೧, ೨೫, ೦೦೦ ರೂಪಾಯಿಗಳ ಬಾಕಿಯನ್ನು ಸರ್ಕಾರಕ್ಕೆ ಕೊಡಬೇಕಾಗಿದೆ. ಈ ಬಾಕಿಯನ್ನು ಕೂಡಲೇ ಕೊಡಬೇಕೆಂದು ಅವರಿಗೆ ಒತ್ತಾಯಮಾಡುತ್ತಿದ್ದುದಾಗಿ ಅಲ್ಲಿಯ ರೆವಿನ್ಯೂ ಸಚಿವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಕಾಶ್ಮೀರ ತಂತಿ ಇಲಾಖೆ ಭಾರತ ಆಡಳಿತಕ್ಕೆ

ಕಾಶ್ಮೀರ ಸರ್ಕಾರದ ತಂತಿ ಇಲಾಖೆಯನ್ನು ಭಾರತ ಸರ್ಕಾರವು ತನ್ನ ಆಡಳಿತಕ್ಕೆ ಮೊನ್ನೆಯದಿನ ತೆಗೆದುಕೊಂಡಿರುವುದಾಗಿ ತಿಳಿಯಬರುತ್ತದೆ. ಈ ಕಾರ್ಯಕ್ಕೆ ಕಾಶ್ಮೀರದ್ಯಂತ ಸ್ವಾಗತ ದೊರೆತಿದೆ.

ಈ ಸಂಬಂಧದಲ್ಲಿ ಉಭಯ ಸರ್ಕಾರಗಳ ನಡುವೆ ತೀರ್ಮಾನವಾಗಿದ್ದೂ ಅದ ಕಾರ್ಯಗತವಾಗದೆ ಕಾಶ್ಮೀರ ಸರ್ಕಾರವೇ ಆ ಇಲಾಖೆಯನ್ನು ನಡೆಸುತ್ತಲಿತ್ತು.

ಷೇಕ್ ಅಬ್ದುಲ್ಲಾರ ಬಿಡುಗಡೆ ಇಲ್ಲ

ದೇಶದ ಹಿತದೃಷ್ಟಿಯಿಂದ ಷೇಕ್‌ಅಬ್ದುಲ್ಲಾರವರನ್ನು ಬಂಧನದಿಂದ ಬಿಡುಗಡೆಮಾಡುವುದು ಸೂಕ್ತವಲ್ಲವೆಂದು ಕಾಶ್ಮೀರ ಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರು ತಿಳಿಸಿದ್ದಾರೆ.

ಸಂತಾಪ ಸೂಚಕ ಸಭೆ

ಮೈಸೂರು ೧೮

ದಿವಂಗತ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಗಳ ಆತ್ಮಕ್ಕೆ ಶಾಂತಿಯನ್ನು ಕೋರಲು ಕರ್ನಾಟಕ ಸಂಘದ ಆಶ್ರಯದಲ್ಲಿ ಸಂತಾಪಸೂಚಕ ಸಭೆಯನ್ನು ನಾಳೆ ಶನಿವಾರ ಸಂಜೆ ೬ ಗಂಟೆಗೆ ಸದ್ವಿದ್ಯಾಪಾಠಶಾಲೆಯಲ್ಲಿ ಏರ್ಪಡಿಸಲಾಗಿದೆ ಪುರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸುತ್ತಾರೆ. ಶ್ರೀಗಳಾದ ಕೆ.ವಿ. ರಾಘವಾಚಾರ್ ಮತ್ತು ಎ. ಎಸ್. ವೀರಪ್ಪ ಮೊದಲಾದವರು ಮಾತನಾಡುತ್ತಾರೆ.

ಮಹಾಮಂಗಳಾರತಿ

ಮೈಸೂರು, ೧೮

ಶಾರದಾವಿಲಾಸ ಹೈಸ್ಕೂಲಿಗೆ ಸೇರಿರುವ ವಾಣಿಜ್ಯಶಾಲೆಯಲ್ಲಿ ಗಣಪತಿ ಮಹಾಮಂಗಳಾರತಿಯು ನಾಳೆ ಸಂಜೆ ೫ ಘಂಟೆಗೆ ನಡೆಯುತ್ತದೆ.

ಚೈನಾಕ್ಕೆ ಮತ್ತೊಂದು ಮನವಿ

ಕೊರಿಯಾ ಯುದ್ಧದಲ್ಲಿ ಪಾತ್ರವಹಿಸಿದ್ದ ೧೬ ರಾಷ್ಟ್ರಗಳು ನಿನ್ನೆಯದಿನ ಮತ್ತೊಂದು ಸಭೆಯನ್ನು ನಡೆಸಿ, ಕೊರಿಯಾ ಶಾಂತಿ ಸಮ್ಮೇಳನದ ವಿಷಯದಲ್ಲಿ ಕಾಲ ಮತ್ತು ಸ್ಥಳ ನಿರ್ದಿಷ್ಟಮಾಡಿ ಉತ್ತರ ಕೊರಿಯಾ ಮತ್ತು ಚೈನಾಕ್ಕೆ ಕಳುಹಿಸಿರುವ ಸಲಹೆಯನ್ನು ಅವು ಪುನರ್ವಿಮರ್ಶಿಸುವಂತೆ ಮತ್ತೊಂದುಬಾರಿ ಕೇಳುವಂತೆ ಅಮೆರಿಕಾಕ್ಕೆ ಅಧಿಕಾರವನ್ನು ಕೊಡುವ ನಿರ್ಧಾರವನ್ನು ಮಾಡಿದೆ.

ಇತ್ತೀಚೆಗೆ ಗ್ರೀಸಿನ ಅನೇಕ ಪ್ರದೇಶಗಳಲ್ಲಿ ಭಾರಿ ಭೂಕಂಪ ಸಂಭವಿಸಿ ಸಾವಿರಾರು ಮನೆಗಳೂ ನಾಶವಾಗಿ, ಅನೇಕರು ಸತ್ತರು. ಚಿತ್ರದಲ್ಲಿ ಅಂಗೋಸ್ಟಲಿ ಎಂಬಲ್ಲಿ ಭಾರಿ ಭವನಗಳು ನಾಶವಾಗಿ ಬಿದ್ದಿರುವುದನ್ನು ಕಾಣಬಹುದು.

ಹೈದರಾಬಾದ್ ವಿಭಜನೆ ಈಗ ಕೂಡದು

ವಿಭಜನೆಯಾದಲ್ಲಿ ಪಂಚವಾರ್ಷಿಕ ಯೋಜನೆ ಕಾರ್ಯಗತನಾಗುವುದಿಲ್ಲ

ಹೈದರಾಬಾದ್ ಕಾಂಗ್ರೆಸ್ ನಾಯಕರ ಅಭಿಪ್ರಾಯ

ಹೈದರಾಬಾದ್ ಪ್ರಾಂತ್ಯವನ್ನು ಈಗಲೇ ವಿಭಜನೆ ಮಾಡಿದರೆ ಅನೇಕ ನೂತನ ಸಮಸ್ಯೆಗಳು ಉದ್ಭವಿಸುತ್ತವೆ. ಸರ್ಕಾರವು ಕೈಗೊಂಡಿರುವ ಪಂಚವಾರ್ಷಿಕ ಯೋಜನೆ ಕಾರ್ಯಗತಮಾಡಲು ಸಾಧ್ಯವಾಗುವುದಿಲ್ಲ. ಅಲ್ಲದೆ ದಕ್ಷಿಣ ಭಾರತದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ವಿಶೇಷವಾಗಿ ಧಕ್ಕೆಯುಂಟಾಗುತ್ತದೆ ಎಂದು ಹೈದರಾಬಾದಿನ ಕಾಂಗ್ರೆಸ್ ನಾಯಕರೂ ಮತ್ತು ಮಾಜಿ ಸಚಿವರೂ ಆದ ಶ್ರೀ ಜಿ. ರಾಮಾಚಾರ್ ರವರು ಒಂದು ಹೇಳಿಕೆಯನ್ನಿತ್ತಿದ್ದಾರೆ.

ಹೆಂಡತಿ ಮಕ್ಕಳ ಖೂನಿ

ವಿಚಾರಣೆ ನಡೆಯುತ್ತಿರುವ ಒಂದು ಖೂನಿ ಮೊಕದ್ದಮೆಯಲ್ಲಿ ತನಗೆ ಮರಣ ದಂಡನೆಯಾಗುವುದು ನಿಜವೆಂದು ಊಹಿಸಿದ ಇನುಬೂರಿನ ಪಡಯಾಚಿ ಎಂಬುವವನು ತನ್ನನ್ನು ಗಲ್ಲಿಗೆ ಹಾಕಿದರೆ ಸಂಸಾರವನ್ನು ನೋಡಿಕೊಳ್ಳುವವರಿಲ್ಲದಂತಾಗುವುದೆಂದು ಹೆಂಡತಿ ಮತ್ತು ಮಗಳನ್ನು ಖೂನಿಮಾಡಿ, ತಾನೇ ನೇರವಾಗಿ ಪೊಲೀಸರ ಬಳಿಗೆ ಹೋಗಿ ವರವಾಗಿರುವುದಾಗಿ ಹೇಳಲಾಗಿದೆ. ಇನ್ನೊಬ್ಬ ಮಗಳ ಸ್ಥಿತಿ ಚಿಂತಾಜನಕವಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೭—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—೨	೨೭
ಎಳ್ಳು	೬೫—	೯೦—೧೦
ಹುರುಳಿ	೪೬—೬	೪೮—೧೨
ಅಲಸಂದೆ	೭೧—೪	೭೬—೮
ತೆಂಗಿನಕಾಯಿ	೨೪೮	೨೯೪

ಹೋಟೆಲು ಕೆಲಸಗಾರರ ಪ್ರತಿಭಟನೆ

ಮೈಸೂರು ೧೮

ರಾಜಧಾನಿಯ ಸಿಯೋ ಹೋಟೆಲ್ ಕೆಲಸಗಾರರ ಸಂಘದ ಸುಮಾರು ನೂರು ಜನ ಸದಸ್ಯರು ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ನಂತರ ಸಭೆ ನಡೆಸಿ "ವೆಲ್‌ಕಂ ಹೋಟೆಲಿನ"ಲ್ಲಿ ವಿನಾಕಾರಣ ಕೆಲಸಗಾರರನ್ನು ತೆಗೆದುಹಾಕಿದ ಬಗ್ಗೆ ಪ್ರತಿಭಟನೆ ಸೂಚಿಸಿದರು. ಮತ್ತು ಕೂಡಲೇ ಕೆಲಸಕ್ಕೆ ತೆಗೆದುಕೊಳ್ಳುವಂತೆ ಒತ್ತಾಯ ಮಾಡುವ ನಿರ್ಣಯವನ್ನು ಅಂಗೀಕರಿಸಿತು.

ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್

ಬೆಂಗಳೂರು ೧೮

ತುಮಕೂರು ಡಿವಿಜನ್ನಿನ ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ ಶ್ರೀ ಸಿ. ನಾರಾಯಣಶೆಟ್ಟಿಯವರನ್ನು ಬಳ್ಳಾರಿಯ ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ರಾಗಿ ನೇಮಿಸಲಾಗಿದೆ.

ವಾರ್ತಾ ಸಚಿವರು ದೆಹಲಿಗೆ

ಬೆಂಗಳೂರು ೧೮

ವಾರ್ತಾಸಚಿವರಾದ ಶ್ರೀ ರಾಮಚಂದ್ರರಾಯರು ಮತ್ತು ವಾರ್ತಾ ಶಾಖಾ ಮುಖ್ಯಾಧಿಕಾರಿ ಶ್ರೀ ಬಿ. ಎಸ್. ಸರ್ಮರವರು ನಿನ್ನೆಯದಿನ ದೆಹಲಿಗೆ ತೆರಳಿದರು.

ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆ

ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ಇದೇ ೨೪ನೇ ತಾರೀಖು ಮಧ್ಯಾಹ್ನ ೩--೫೦ ಗಂಟೆಗೆ ಬೆಂಗಳೂರಿನಲ್ಲಿ ಸೇರುವುದೆಂದು ತಿಳಿದುಬಂದಿದೆ.

ಅಪೇರ

18--9--53 ರಿಂದ 2 ನೇ ವಾರ

ಪ್ರತಿದಿನ ಮೂರು ಆಟಗಳು

ಮಲ್ಲೇಶ್ವರಿ

[ತೆಲುಗು]

ಪಾತ್ರ:—ಎನ್. ಟಿ. ರಾಮರಾವ್, ಭಾನುಮತಿ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೨೭

೧೯-೯-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕೇಂದ್ರಸರ್ಕಾರದ ಉನ್ನತ ಅಧಿಕಾರಿಯ ವಜಾ

ಕೇಂದ್ರಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯಶಾಖೆಯ ಕಾರ್ಯದರ್ಶಿಗಳಾಗಿದ್ದು ಹಲವಾರು ಆಪಾದನೆಗಳಮೇಲೆ ಇತ್ತೀಚೆಗೆ ವಿಚಾರಣೆ ನಡೆದ ಪರಿಣಾಮವಾಗಿ ಶ್ರೀ ಎಸ್. ಎ. ವೆಂಕಟರಾಮರನ್ನು ಕೇಂದ್ರ ಸರಕಾರವು ಕೆಲಸದಿಂದ ವಜಾಮಾಡಿರುವುದಾಗಿ ತಿಳಿಯಬರುತ್ತದೆ.

ನೇಣುಹಾಕಿಕೊಂಡು ಆತ್ಮಹತ್ಯೆ

ಮೈಸೂರು ೧೯

ಸುಬ್ಬರಾಯನಕೆರೆ ಬಳಿಯಿರುವ ಕುರುಬಗೇರಿಯಲ್ಲಿ ಒಕ್ಕಲಿಗರ ಜಾತಿಯ ಬಸವಯ್ಯ ಎಂಬ ೩೦ ವರ್ಷದ ಯುವಕನು ನಿನ್ನೆ ರಾತ್ರಿ ತನ್ನ ಕೊಠಡಿಯಲ್ಲಿ ನೇಣು ಹಾಕಿಕೊಂಡು ಸತ್ತನೆಂದು ತಿಳಿಯಬರುತ್ತದೆ. ಲಕ್ಷ್ಮೀಪುರಂ ಪೋಲೀಸಿನವರು ತನಿಖೆ ನಡೆಸುತ್ತಲಿದ್ದಾರೆ.

ಅಪೀಲಿನಲ್ಲಿ ಆಪಾದಿತರ ಬಿಡುಗಡೆ

ಕೃಷ್ಣರಾಜನಗರ ತಾಲ್ಲೂಕು ಕಾರಗಹಳ್ಳಿ ಕೊಪ್ಪಲ್ ಎಂಬಲ್ಲಿ ಶಿವಲಿಂಗಪ್ಪ ಮತ್ತು ಇತರ ೪ ಜನರು ಲಲಿತಮ್ಮ ಎಂಬುವವಳನ್ನು ಕರೆದುಕೊಂಡುಹೋಗಿ ಬಲಾತ್ಕಾರ ವಿವಾಹಕ್ಕೆ ಪ್ರಯತ್ನಿಸಿದರೆಂಬ ಆಪಾದನೆಮೇಲೆ ಮೈಸೂರಿನ ಅಸಿಸ್ಟೆಂಟ್ ಸೆಷನ್ಸ್ ನ್ಯಾಯಾಧೀಶರು ಆಪಾದಿತರಿಗೆ ವಿಧಿಸಿದ್ದ ೩ ತಿಂಗಳು ಕಠಿಣಸಜಾ ಮತ್ತು ೮೦೦ ರೂ ಜುಲ್ಮಾನೆಯಮೇಲಿನ ಅಪೀಲಿನಲ್ಲಿ ಮೊನ್ನೆಯ ದಿನ ಆಡಿಶನಲ್ ಜಿಲ್ಲಾ ನ್ಯಾಯಾಧೀಶರು ಶಿಕ್ಷೆಯನ್ನು ರದ್ದುಗೊಳಿಸಿ ಆಪಾದಿತರನ್ನು ಖುಲಾಸೆಮಾಡಿದರು.

ನಗರ ಕಾಂಗ್ರೆಸ್ ಚುನಾವಣಾ ಸಮಿತಿ

ಮೈಸೂರು ೧೯

ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಚುನಾವಣಾ ವೇಳಾ ಪಟ್ಟಿಯು ಈರೀತಿ ಇದೆಯೆಂದು ಚುನಾವಣಾಧಿಕಾರಿಗಳಾದ ಶ್ರೀ ಕೆ. ಪುಟ್ಟಸ್ವಾಮಿಯವರು ತಿಳಿಸಿರುತ್ತಾರೆ.

ಸದಸ್ಯರ ಪಟ್ಟಿ ಪ್ರಕಟಣೆ ಇದೇ ೨೦ನೇ ತಾರೀಖು ನಾಮಪತ್ರಗಳ ಸ್ವೀಕಾರ ೨೪ ಮತ್ತು ೨೫ನೇ ತಾರೀಖು ಬೆಳಿಗ್ಗೆ ೧೦ ರಿಂದ ೧ ಘಂಟೆವರೆಗೆ; ನಾಮಪತ್ರಗಳ ಪ್ರಕಟಣೆ ೨೫ನೇ ಮಧ್ಯಾಹ್ನ ೩ ಗಂಟೆಗೆ; ನಾಮಪತ್ರಗಳ ಪರಿಶೀಲನೆ ೨೬ನೇ ತಾ॥ ಬೆಳಿಗ್ಗೆ ೧೦ ಘಂಟೆಗೆ, ಉಮೇದುವಾರರ ಆಖೈರು ಪಟ್ಟಿ ಪ್ರಕಟಣೆ ೨೬ನೇ ತಾರೀಖು ಮಧ್ಯಾಹ್ನ ೩ ಘಂಟೆಗೆ; ಉಮೇದುವಾರಿಕೆ ವಾಪಸು ೨೭ ಸಂಜೆ ೫; ಉಮೇದುವಾರರ ಆಖೈರು ಪಟ್ಟಿ ೨೭ ಸಂಜೆ ೬ ಘಂಟೆ; ಚುನಾವಣೆ ೩೦ನೇ ತಾರೀಖು ಬೆಳಿಗ್ಗೆ ೯ ರಿಂದ ೧, ಮಧ್ಯಾಹ್ನ ೨ರಿಂದ ೫ ಘಂಟೆವರೆಗೆ, ಎಣಿಕೆ ಮತ್ತು ಫಲಿತಾಂಶ ಅದೇ ಸಂಜೆ ೫-೩೦ ಘಂಟೆಗೆ. ಎಂ. ಪಿ. ಸಿ.ಸಿ.ಗೆ ವರದಿ ಅಕ್ಟೋಬರ್ ೧.

ಕೊರಿಯಾಕ್ಕೆ ಭಾರತ ಸೈನ್ಯ

ಇಂದಿನಿಂದ ಕೊರಿಯಾಕ್ಕೆ ವಿಮಾನದಲ್ಲಿ ಇನ್ನೂ ೬೦೦ ಭಾರತ ಸೈನ್ಯವನ್ನು ಕಳುಹಿಸಲಾಗುವುದೆಂದು ರಕ್ಷಣಾ ಸಚಿವ ಶಾಖೆಯು ಪ್ರಕಟಿಸಿದೆ.

ಸಚಿವರ ಮನೆಯಲ್ಲಿ ಕಳ್ಳತನ

ಮದ್ರಾಸ್ ಆರ್ಥಿಕಸಚಿವ ಶ್ರೀ ಸುಬ್ರಹ್ಮಣ್ಯಂರವರ ಮನೆಯಲ್ಲಿ ಕೆಲವು ಹೂವಿನ ಕುಂಡಗಳ ಕಳವನ್ನು ಪತ್ತೆ ಹಚ್ಚಲು ಪೋಲೀಸ್ ನಾಯಿಗಳ ಸಹಾಯವನ್ನು ಪಡೆಯಲಾಗುತ್ತಿದೆ. ಕೆಲವುದಿನಗಳ ಹಿಂದೆ ಅವರ ಮನೆಯಲ್ಲಿ ಒಂದು ಕೈ ಗಡಿಯಾರ ಕಳುವಾಯಿತು.

ಅಂಧ ವಿದ್ಯಾರ್ಥಿಗಳಿಗೆ ಪ್ರೌಢಶಿಕ್ಷಣ

ಅಂಧ ವಿದ್ಯಾರ್ಥಿಗಳು ಪ್ರೌಢಶಿಕ್ಷಣವನ್ನು ಪಡೆಯಲು ಭಾರತ ಸರ್ಕಾರವು ಅವರಿಗೆ ವಿದ್ಯಾರ್ಥಿವೇತನವನ್ನು ಕೊಡಲು ನಿರ್ಧರಿಸಿದೆ. ಎ. ಮತ್ತು ಬಿ ವಿಭಾಗ ಪ್ರಾಂತ್ಯಗಳ ಸಲಹೆಯನ್ನು ಪಡೆದು ವೇತನವನ್ನು ಕೊಡಲಾಗುತ್ತದೆ.

ಅಮೆರಿಕಾಬಳಿ ಅಣುಶಕ್ತಿ ಬಾಂಬುಗಳು

ಅಮೆರಿಕಾದಬಳಿ ಇರುವ ವಿಮಾನಗಳು ಮತ್ತು ವಿಮಾನ ಚಾಲಕರಿಗಿಂತ ಅಧಿಕಸಂಖ್ಯೆಯಲ್ಲಿ ಅಣುಶಕ್ತಿ ಬಾಂಬುಗಳಿರುವುದಾಗಿ ಡೆಮೊಕ್ರಾಟಿಕ್ ಪಕ್ಷದ ಸದಸ್ಯರೊಬ್ಬರು ಹೇಳಿದ್ದಾರೆ.

ಮುಖರ್ಜಿ ನಿಧನ ಬಗ್ಗೆ ತನಿಖೆಯಿಲ್ಲ

ಶ್ರೀನಗರದಲ್ಲಿ ಬಂಧನದಲ್ಲಿದ್ದಾಗ ಡಾ॥ ಶ್ಯಾಮಪ್ರಸಾದ್ ಮುಖರ್ಜಿಯವರು ನಿಧನರಾದ ಬಗ್ಗೆ ತನಿಖೆ ನಡೆಸಬೇಕೆಂದು ಶ್ರೀ ಎನ್.ಸಿ. ಚಟರ್ಜಿಯವರು ಲೋಕಸಭೆಯಲ್ಲಿ ಮಾಡಿದ ಸಲಹೆಯನ್ನು ಕೇಂದ್ರ ಗೃಹ ಸಚಿವ ಡಾ॥ ಕಟ್ಜುರವರು ತಿರಸ್ಕರಿಸಿದರು

೩ ತಿಂಗಳಲ್ಲಿ ೩೬ ಕೋಟಿ ರೂ ಸುಂಕ ವಸೂಲಿ

ಭಾರತದಲ್ಲಿ ೧೯೫೩--೫೪ನೇ ಸಾಲಿನ ೩ ತಿಂಗಳಲ್ಲಿ ಒಳದೇಶದ ವ್ಯಾಪಾರ ಮತ್ತು ಸಮುದ್ರ ವ್ಯಾಪಾರದ ಸುಂಕಗಳಿಂದ ವರಮಾನವು ೩೬ ಕೋಟಿ ೬೪ ಲಕ್ಷ ರೂಗಳು ಬಂದಿರುತ್ತದೆ.

ಸಮಾಚಾರ ಸಚಿವರ ಸಮ್ಮೇಳನ

ಪ್ರಾಂತ್ಯ ಮತ್ತು ಕೇಂದ್ರ ಸರ್ಕಾರಗಳ ಸಮಾಚಾರ ಸಚಿವರುಗಳ ಸಮ್ಮೇಳನವು ನಿನ್ನೆಯದಿನ ನವದೆಹಲಿಯಲ್ಲಿ ಪ್ರಾರಂಭವಾಯಿತು. ಪ್ರಧಾನಿ ನೆಹರೂರವರು ಈ ಸಮ್ಮೇಳನವನ್ನು ಉದ್ಘಾಟಿಸುತ್ತಾ ಸರ್ಕಾರಗಳು ಸಾರ್ವಜನಿಕರ ಸಂಪರ್ಕವನ್ನು ವಿಶೇಷವಾಗಿ ಹೊಂದುವಂತೆ ಕೆಲಸಮಾಡಬೇಕು. ಪಂಚವಾರ್ಷಿಕ ಮತ್ತು ಜನಪದ ಯೋಜನೆಗಳನ್ನು ಜನರಲ್ಲಿ ವಿಶೇಷವಾಗಿ ಪ್ರಚಾರ ಮಾಡಬೇಕೆಂದು ತಿಳಿಸಿದರು.

ತಂದೆ ಜಾಮೀನು ಕೊಡದಿದ್ದಕ್ಕೆ ಮಗನ ಆತ್ಮಹತ್ಯೆ

ಚಲನಚಿತ್ರ ತಾರೆಯ ಕೈಗಡಿಯಾರ ಕದ್ದನೆಂಬ ಆಪಾದನೆಮೇಲೆ ದಸ್ತಗಿರಿಯಾಗಿದ್ದ ಅಕ್ತರ್‌ಹುಸೇನ್ ಮುಸ್ತಫಾ ಹುಸೇನ್ ಎಂಬುವವನನ್ನು ಪೋಲೀಸಿನವರು ದಸ್ತಗಿರಿಮಾಡಿದಾಗ ಅತನನ್ನು ಜೇಲ್‌ಮೇಲೆ ಬಿಡಲು ತಂದೆಯು ಜಾಮೀನು ಕೊಡಲಿಲ್ಲವೆಂದು ಅಪರಾಧಿಯು ಜೈಲಿನಲ್ಲಿಯೇ ಒಟ್ಟಿಗೆ ಬೆಂಕಿಯನ್ನು ಹತ್ತಿಸಿಕೊಂಡು ಆತ್ಮಹತ್ಯ ಮಾಡಿಕೊಂಡ ಪ್ರಕರಣವು ಬೊಂಬಾಯಿನಲ್ಲಿ ವರದಿಯಾಗಿದೆ.

೪೬ ಲಕ್ಷ ರೂ. ಅಭಿವೃದ್ಧಿ ಯೋಜನೆ

ಅಕ್ಟೋಬರ್ ೩ ನೇ ತಾರೀಖು ಬೊಂಬಾಯಿ ಪ್ರಾಂತ್ಯದಲ್ಲಿ ೪೬ ಲಕ್ಷ ರೂಪಾಯಿಗಳ ವೆಚ್ಚದ ೧೫೦೦ ಯೋಜನೆಗಳನ್ನು ಪ್ರಾರಂಭಿಸಲಾಗುತ್ತದೆ. ನೀರಿನ ಸರಬರಾಜು, ಗ್ರಾಮಾಂತರ ರಸ್ತೆ ನಿರ್ಮಾಣ, ಕಟ್ಟಡಗಳ ನಿರ್ಮಾಣ ಮುಂತಾದುವೆಲ್ಲವೂ ಇದರಲ್ಲಿ ಸೇರಿವೆ. ಈ ಕಾರ್ಯಗಳೆಲ್ಲಾ ಮುಂದಿನ ಮಾರ್ಚಿ ವೇಳೆಗೆ ಪೂರ್ಣಗೊಳಿಸುವ ವ್ಯವಸ್ಥೆಯಿದೆ.

ವಿದೇಶಗಳಿಂದ ಯಂತ್ರ ಸಾಮಗ್ರಿ

ಭಾರತವು ವಿದೇಶಗಳಿಂದ ೫೨--೫೩ನೇ ಸಾಲಿನಲ್ಲಿ ೮೨ ಕೋಟಿ ೮೭ ರೂಪಾಯಿಗಳ ಬೆಲೆ ಯಂತ್ರ ಸಾಮಗ್ರಿಗಳನ್ನು ತರಿಸಿಕೊಂಡಿವೆ.

ಉಚಿತ ಶಸ್ತ್ರಚಿಕಿತ್ಸೆ

ಕಾಶ್ಮೀರದ ಸರ್ಕಾರಿ ವೈದ್ಯಶಾಲೆಗಳಲ್ಲೆಲ್ಲಾ ಶಸ್ತ್ರಚಿಕಿತ್ಸೆಯನ್ನು ಉಚಿತವಾಗಿ ನಡೆಸಲು ಸರ್ಕಾರವು ಆಜ್ಞೆಯನ್ನಿತ್ತಿದೆ.

ಡಿಸೆಂಬರ್ ೭ ರಲ್ಲಿ ಪುರಸಭೆಯ ಚುನಾವಣೆ

ಮೈಸೂರು ೧೯

ಮುಂದಿನ ವರ್ಷ ಜನವರಿ ಒಂದನೇ ತಾರೀಖಿನಿಂದ ಪುನರ್ರಚಿತವಾಗಬೇಕಾಗುವ ಪುರಸಭೆಗೆ ಚುನಾವಣೆಯು ಡಿಸೆಂಬರ್ ೭ ನೇ ತಾರೀಖು ಸೋಮವಾರ ನಡೆಯುತ್ತದೆ.

ಈ ಬಗ್ಗೆ ರಿಟರ್ನಿಂಗ್ ಅಧಿಕಾರಿಗಳು ತಾತ್ಕಾಲಿಕ ವೇಳಾಪಟ್ಟಿಯನ್ನು ಪ್ರಕಟಿಸಿದ್ದಾರೆ.

ಮತದಾರರ ಪಟ್ಟಿ ಪ್ರಕಟಣೆ ಅಕ್ಟೋಬರ್ ೮, ಆ ಬಗ್ಗೆ ತಕರಾರು ಸ್ವೀಕಾರ ಅದೇ ೨೨ ನೇ ತಾ॥, ಅಂತ್ಯಪಟ್ಟಿ ಪ್ರಕಟಣೆ ಅಕ್ಟೋಬರ್ ೩೧ ಉಮೇದುವಾರಿಕೆ ಅರ್ಜಿ ಸ್ವೀಕಾರ ನವಂಬರ್ ೧೬, ಅರ್ಜಿ ವಾಪಸ್ಸು ೨೦, ಉಮೇದುವಾರರ ಪಟ್ಟಿ ಪ್ರಕಟಣೆ ನ. ೨೧, ಚುನಾವಣೆ ಡಿಸೆಂಬರ್ ೭, ಮತಎಣಿಕೆ ಡಿ. ೮, ಫಲಿತಾಂಶ ಪ್ರಕಟಣೆ ಡಿ. ೮.

ಅಕಾಡೆಮಿಕ್ ಕೌನ್ಸಿಲ್ ಸಭೆ

ಮೈಸೂರು ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್ ಸಭೆಯು ಇದೇಮಾಹೆ ೩೦ನೇ ತಾರೀಖು ಮಧ್ಯಾಹ್ನ ೧೨ ಗಂಟೆಗೆ ಕ್ರಾಫರ್ಡ್ ಹಾಲಿನಲ್ಲಿ ನಡೆಯುತ್ತದೆ.

ಶಿಕ್ಷಣ ಸುಧಾರಣಾ ಸಮಿತಿಯ ವರದಿಯನ್ನು ಅಂದು ಪರಿಶೀಲಿಸಲಾಗುತ್ತದೆಯೆಂದು ತಿಳಿಯಬರುತ್ತದೆ.

ವಾರ್ಷಿಕೋತ್ಸವ

ಮೈಸೂರು ೧೯

ತಮಿಳುನಾಡು ಬಟ್ಟೆ ವ್ಯಾಪಾರಿಗಳ ವಾರ್ಷಿಕೋತ್ಸವವು ನಾಳೆ ಸಂಜೆ ೪ ಗಂಟೆಗೆ ಚಾಮುಂಡೇಶ್ವರಿ ಭವನದಲ್ಲಿ ನಡೆಯುತ್ತದೆ. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಹೆಚ್.ಕೆ. ವೀರಣ್ಣಗೌಡರು ಅಧ್ಯಕ್ಷತೆ ವಹಿಸುವರು.

ಪ್ರಜಾಸಭೆ ಅನಿರ್ದಿಷ್ಟಕಾಲ ಮುಂದಕ್ಕೆ

ಕೇಂದ್ರ ಪ್ರಜಾಸಭೆಯು ನಿನ್ನೆಯದಿನ ಸ್ವಲ್ಪಹೊತ್ತು ನಡೆದು ಅನಿರ್ದಿಷ್ಟವಾಗಿ ಮುಂದಕ್ಕೆ ಹಾಕಲಾಗಿದೆ.

ಪ್ರಜಾಸಭೆಯು ಕಳೆದ ೭ ವಾರಗಳಿಂದ ನಡೆಯುತ್ತಿತ್ತು. ಈ ಕಾಲದಲ್ಲಿ ಸರ್ಕಾರವು ಸುಮಾರು ೨೨೦೦ ಪ್ರಶ್ನೆಗಳಿಗೆ ಉತ್ತರವನ್ನು ಕೊಟ್ಟಿದೆ. ಆಂಧ್ರಪ್ರಾಂತ್ಯ ಮಸೂದೆ ಮತ್ತು ಸ್ವತ್ತಿನ ತೆರಿಗೆ ಮಸೂದೆಗಳು ಸಭೆಯು ಅಂಗೀಕರಿಸಿದ್ದರಲ್ಲಿ ಮುಖ್ಯವಾದುವು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ

ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಈದಿನ ದೆಹಲಿಯಲ್ಲಿ ಪ್ರಾರಂಭವಾಗುತ್ತದೆ. ಸಭೆಯು ೨ ದಿನ ಕಾಲ ನಡೆಯುವುದೆಂದು ಹೇಳಲಾಗಿದೆ.

ತಿರುವಾಂಕೂರ್--ಕೊಚ್ಚಿ ಮಂತ್ರಿಮಂಡಲದಮೇಲೆ ಅವಿಶ್ವಾಸನಿರ್ಣಯ

ಇದೇ ೨೩ನೇ ತಾರೀಖು ಸಮಾವೇಶ ಗೊಳ್ಳುವ ಶಾಸನ ಸಭಾಧಿವೇಶನದಲ್ಲಿ ತಿರುವಾಂಕೂರ್-ಕೊಚ್ಚಿಯ ಕಾಂಗ್ರೆಸ್ ಸರ್ಕಾರವು ಸಭೆಯ ವಿಶ್ವಾಸವನ್ನು ಕೋರುವುದಾಗಿ ಮುಖ್ಯಮಂತ್ರಿಯವರು ತಿಳಿಸಿದ್ದಾರೆ. ಯುನೈಟೆಡ್ ಡೆಮೋಕ್ರಾಟಿಕ್ ಫ್ರಂಟಿನ ಪಕ್ಷವು ಮಂತ್ರಿಮಂಡಲದಮೇಲೆ ಒಂದು ಅವಿಶ್ವಾಸ ನಿರ್ಣಯವನ್ನು ಅದೇ ದಿನ ಮಂಡಿಸಲಿರುವುದಾಗಿ ಆ ಪಕ್ಷದ ನಾಯಕ ಶ್ರೀ ಥಾಮಸ್‌ರವರು ಹೇಳಿದ್ದಾರೆ.

ಪ್ರಜಾ ಸೋಷಲಿಸ್ಟ್ ಪಕ್ಷವು ವಿಶ್ವಾಸ ನಿರ್ಣಯವನ್ನು ವಿರೋಧಿಸುವುದಾಗಿ ಅವರ ನಾಯಕರು ತಿಳಿಸಿದ್ದಾರೆ.

೧೧೯ ಸದಸ್ಯರಿರುವ ಈ ಶಾಸನಸಭೆಯಲ್ಲಿ ಕಾಂಗ್ರೆಸ್ಸಿನ ೫೧ ಸದಸ್ಯರು ಇದ್ದಾರೆ. ಸ್ವತಂತ್ರರು ಸರ್ಕಾರಕ್ಕೆ ಬೆಂಬಲ ನೀಡಿದರೆ ಆಗ ಸರ್ಕಾರವನ್ನು ವಿಸರ್ಜಿಸುವ ಅವಶ್ಯಕತೆಯಿರುವುದಿಲ್ಲ.

ಹಾಗೇನಾದರೂ ಅವಿಶ್ವಾಸ ನಿರ್ಣಯವಾದಲ್ಲಿ ಮರು ಚುನಾವಣೆಗಳನ್ನು ತಾವು ಧೈರ್ಯವಾಗಿ ಎದುರಿಸುವುದಾಗಿ ಕಾಂಗ್ರೆಸ್ ಪಕ್ಷದ ನಾಯಕರು ತಿಳಿಸಿದ್ದಾರೆ.

ನಿರಾಶ್ರಿತರ ಸಹಾಯಕ್ಕಾಗಿ ಕ್ರಿಕೆಟ್ ಪಂದ್ಯ

ನಿರಾಶ್ರಿತರ ಸಹಾಯಕ್ಕಾಗಿ ಪಾಕೀಸ್ತಾನ ಪಾರ್ಲಿಮೆಂಟಿನ ಸದಸ್ಯರು ಒಂದು ಕ್ರಿಕೆಟ್ ಪಂದ್ಯವನ್ನು ಆಡಲು ನಿರ್ಧರಿಸಿದ್ದಾರೆ ಪ್ರಧಾನಿ ಮಹಮದ್ ಆಲಿಯವರ ಟೀಮಿಗೂ ರಾಜ್ಯಾಂಗಸಭಾಧ್ಯಕ್ಷ ತಮಿಜುದ್ದೀನ್‌ರವರ ಟೀಮಿಗೂ ಪಂದ್ಯ ನಡೆಯಲಿದೆ.

ಟಿ. ಪ್ರಕಾಶಂ ಕಾಂಗ್ರೆಸ್ ಸೇರಲಿ

ಆಂಧ್ರಪ್ರಾಂತ್ಯದಲ್ಲಿ ಸುಭದ್ರವಾದ ಸರಕಾರವನ್ನು ರಚಿಸುವುದು ಅತ್ಯಾವಶ್ಯಕವಾದ್ದರಿಂದ ಶ್ರೀ ಟಿ. ಪ್ರಕಾಶಂರವರು ಕಾಂಗ್ರೆಸ್ ಸಂಸ್ಥೆಯನ್ನು ಸೇರಬೇಕು. ೪೦ ವರ್ಷಗಳಿಂದ ಕಾಂಗ್ರೆಸ್‌ನಲ್ಲಿ ದುಡಿದಿರುವ ಆ ಪ್ರಸಿದ್ಧ ವ್ಯಕ್ತಿಯು ಪುನಹ ಕಾಂಗ್ರೆಸ್ ಸೇರಿದರೆ ತಪ್ಪಿಲ್ಲ ಎಂದು ಲೋಕಸಭೆಯ ಉಪಾಧ್ಯಕ್ಷರಾದ ಶ್ರೀ ಅನಂತಶಯನಂ ಅಯ್ಯಂಗಾರ್‌ರವರು ಒಂದು ಹೇಳಿಕೆಯನ್ನಿತ್ತಿದ್ದಾರೆ.

ಗೋಧಿ ಬೆಳೆ ದ್ವಿಗುಣ

ಮಧ್ಯಭಾರತದಲ್ಲಿ ಗೋಧಿಯ ಬೆಳೆಯು ೫೨--೫೩ ನೇ ಸಾಲಿನಲ್ಲಿ ಕಳೆದ ಸಾಲಿಗಿಂತ ದ್ವಿಗುಣವಾಗಿದೆ. ೫೧--೫೨ ಸಾಲಿನಲ್ಲಿ ೧.೪೧ ಲಕ್ಷ ಟನ್‌ಗಳು ಉತ್ಪತ್ತಿಯಾದುವು ೫೨--೫೩ ರಲ್ಲಿ ೨.೭೭ ಲಕ್ಷ ಟನ್‌ಗಳ ಬೆಳೆಯಾಗಿದೆಯೆಂದು ತಿಳಿಯಬರುತ್ತದೆ.

ತುಂಗಭದ್ರಾಯೋಜನೆ ಬಗ್ಗೆ ಚರ್ಚೆ

ತುಂಗಭದ್ರಾ ಯೋಜನೆಯ ವಿಷಯದಲ್ಲಿ ಮದರಾಸ್, ಹೈದರಾಬಾದ್, ಮೈಸೂರು ಮತ್ತು ಕೇಂದ್ರಸರ್ಕಾರಗಳ ಪ್ರತಿನಿಧಿಗಳ ಸಭೆಯು ನಿನ್ನೆಯದಿನ ದೆಹಲಿಯಲ್ಲಿ ಪ್ರಾರಂಭವಾಯಿತು. ಮುಂದಿನ ತಿಂಗಳು ಒಂದನೇ ತಾರೀಖಿನೊಳಗೆ ಈ ವಿಷಯದಲ್ಲಿ ರಾಷ್ಟ್ರಾಧ್ಯಕ್ಷರ ಆಜ್ಞೆಯು ಹೊರಬೀಳಬೇಕಾಗಿದೆ. ಇದಕ್ಕಾಗಿ ತಯಾರಿಸುವ ಕರಡು ಆಜ್ಞೆಯನ್ನು ನಿನ್ನೆ ಪರಿಶೀಲಿಸಲಾಯಿತೆಂದೂ ಅದರಲ್ಲಿ ಕೆಲವು ತಿದ್ದುಪಡಿಗಳನ್ನು ಸೂಚಿಸಲಾಗಿದೆಯೆಂದೂ ತಿಳಿಯಬರುತ್ತದೆ. ಸಭೆಯು ಈದಿನವೂ ನಡೆಯುತ್ತದೆ. ಈ ಯೋಜನೆ ಮುಂದುವರಿಸಲು ಆರ್ಥಿಕಸ್ಥಿತಿ ಮತ್ತು ನೀರಾವರಿ, ವಿದ್ಯುಚ್ಛಕ್ತಿ ಇವುಗಳಿಗೆ ಸಂಬಧಪಟ್ಟ ವಿಷಯಗಳ ಬಗ್ಗೆ ಆಜ್ಞೆಯು ಹೊರಬೀಳಬೇಕಾಗಿದೆ.

ಮೈಸೂರು ಸರ್ಕಾರದ ಪರವಾಗಿ ಮರಾಮತ್ ಶಾಖಾ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ಈ ಸಭೆಯಲ್ಲಿ ಭಾಗವಹಿಸುತ್ತಲಿದ್ದಾರೆ.

ಹೊಸ ಆಂಧ್ರಪ್ರಾಂತ್ಯದ ಗೌರ್ನರ್

ಆಂಧ್ರಪ್ರಾಂತ್ಯದ ವಿಶೇಷಾಧಿಕಾರಿಯಾಗಿ ಕೆಲಸ ಮಾಡುತ್ತಿರುವ ಶ್ರೀ ಚಂದೂಲಾಲ್ ತ್ರಿವೇದಿಯವರನ್ನು ರಾಷ್ಟ್ರಾಧ್ಯಕ್ಷರು ಹೊಸ ಆಂಧ್ರಪ್ರಾಂತ್ಯದ ಪ್ರಥಮ ಗೌರ್ನರ್ ಆಗಿ ನೇಮಿಸಿದ್ದಾರೆ. ಈ ಬಗ್ಗೆ ನಿನ್ನೆಯ ದಿನ ದೆಹಲಿಯಲ್ಲಿ ಒಂದು ವಿಶೇಷ ಪ್ರಕಟಣೆ ಹೊರಬಿದ್ದಿದೆ.

ಈಜಿಪ್ಟಿನಲ್ಲಿ ಅಶಾಂತಿ ಕಲ್ಪಿಸಲು ವಿದೇಶಿಗಳ ಪತ್ರ

ಈಜಿಪ್ಟಿನಲ್ಲಿ ಅಶಾಂತಿ ಮತ್ತು ಭಯ ಉಂಟುಮಾಡಲು ಕೆಲವು ವಿದೇಶಿ ರಾಷ್ಟ್ರಗಳು ಸುಮಾರು ೨,೭೦,೦೦೦ ಪೌಂಡುಗಳಷ್ಟು ಹಣವನ್ನು ಖರ್ಚು ಮಾಡಿರುವುದೆಂಬುದನ್ನು ಕಾಗದ ಪತ್ರಗಳು ತಮ್ಮಲ್ಲಿದೆಯೆಂದು ಈಜಿಪ್ಟ್ ಸರ್ಕಾರ ತಿಳಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೮—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೨—೨	೨೫—೧೦
ಎಳ್ಳು	೭೯—೧೪	೯೦—೨
ಹುರುಳಿ	೪೫—೮	೪೬—೮
ಅಲಸಂದೆ	೫೨—	೬೧—೧೦
ಬೆಲ್ಲ	೮—	—
ತೆಂಗಿನಕಾಯಿ	೨೫೨	೨೫೩

ಎಂ. ಪಿ. ಸಿ. ಸಿ. ಸಭೆ
ಯುವಕ ಕಾಂಗ್ರೆಸ್ ಸಮ್ಮೇಳನ

ಬೆಂಗಳೂರು ೧೯

ಕೆ. ಜಿ. ಎಫ್. ನಲ್ಲಿ ಮುಂದಿನ ತಿಂಗಳು ೩, ೪, ಮತ್ತು ೫ ನೇ ತಾ|| ಎಂ. ಪಿ. ಸಿ. ಸಿ. ಸಭೆ ನಡೆಯುವುದಷ್ಟೆ. ಅದರ ಅಂಗವಾಗಿ ರಾಜಕೀಯದಲ್ಲಿ ನೊಂದವರ ಮತ್ತು ಯುವಕ ಕಾಂಗ್ರೆಸ್ಸಿನ ಸಮ್ಮೇಳನವನ್ನು ನಡೆಸಲಾಗುವುದು.

ಯುವಜನ ಸಮ್ಮೇಳನವು ೩ ನೇ ತಾ|| ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಕೆ. ಪಿ. ಸಿ. ಸಿ. ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಸಮ್ಮೇಳನವನ್ನು ಉದ್ಘಾಟಿಸುವರು. ಕೇಂದ್ರದ ಉತ್ಪಾದನಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಭಾಷಣ ಮಾಡುವರು.

ರಾಜಕೀಯದಲ್ಲಿ ನೊಂದವರ ಸಮ್ಮೇಳನವು ಅಸೆಂಬ್ಲಿ ಸ್ಪೀಕರ್ ಶ್ರೀ ಹೆಚ್. ಸಿದ್ಧಯ್ಯನವರ ಅಧ್ಯಕ್ಷತೆಯಲ್ಲಿ ೫ ನೇ ತಾ|| ನಡೆಯುತ್ತದೆ. ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಸಮ್ಮೇಳನವನ್ನು ಉದ್ಘಾಟಿಸುವರು. ಎಂ.ಪಿ.ಸಿ.ಸಿ. ಕಾರ್ಯದರ್ಶಿ ಶ್ರೀ ಟಿ. ಮರಿಯಪ್ಪನವರು ಭಾಷಣ ಮಾಡುವರು.

ಶ್ರೀ ಕೆ. ಸಿ. ರೆಡ್ಡಿ ಪ್ರವಾಸ

ಬೆಂಗಳೂರು ೧೯

ಕೇಂದ್ರ ಉತ್ಪಾದನಾ ಶಾಖಾಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಈದಿನ ಬೆಂಗಳೂರಿಗೆ ಬರಲಿರುವರು. ಅವರು ಕೆಲವುದಿನ ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

"ಪತ್ರಿಕೋದ್ಯಮಿ" ಪತ್ರಿಕೆಯ ಆರಂಭೋತ್ಸವ

ಮೈಸೂರು ೧೯

ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಸಂಘದ ಆಶ್ರಯದಲ್ಲಿ ಪ್ರಕಟಿಸಲಾಗುವ "ಪತ್ರಿಕೋದ್ಯಮಿ" ಪತ್ರಿಕೆಯ ಆರಂಭೋತ್ಸವವು ಇದೇ ಸೋಮವಾರ ಸಂಜೆ ೫-೩೦ ಘಂಟೆಗೆ ಮಹಾರಾಜ ಕಾಲೇಜಿನಲ್ಲಿ ಪ್ರೊ|| ಎಸ್.ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಪ್ರೊ|| ಕೆ.ವಿ. ಪುಟ್ಟಪ್ಪನವರು ಉದ್ಘಾಟನೆಯನ್ನು ಮಾಡುತ್ತಾರೆ.

ಅಪೇರ

18--9--53 ರಿಂದ 2 ನೇ ವಾರ

ಪ್ರತಿದಿನ ಮೂರು ಆಟಗಳು

ಮಲ್ಲೇಶ್ವರಿ

[ತೆಲುಗು]

ಪಾತ್ರ:—ಎನ್. ಟಿ. ರಾಮರಾವ್, ಭಾನುಮತಿ.

ರಣಜಿತ್

18 9–53 ರಿಂದ 2 ನೇ ವಾರ

ಗೀತಾಬಾಲಿ, ಗುರುದತ್ ನಟಿಸಿರುವ

ಬಾಜ್ BaaZ

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

City Municipal Offices, Mysore

Dated 22nd August 1953.

ABSTRACT NOTIFICATION

Sealed tenders are invited for the supply of materials mentioned below required by the Municipal Commissioner for amelioration of depressed class people in Mysore City. They will be received up to 4 p. m. on Monday the 28th September 1953.

1. Jungle wood rafters made out of any one of the following varieties of Wood:— Mathi, Nandi, Honne, Halasu, Bevu, Bilavaru, Tholasalu, Gandagudda 2¼" x 4" section and in length of 8' to 12' 1000 C. ft.
2. Jungle Wood reapers made out of any one of the above varieties of Wood 2' x 1' section. 100000 R. ft.
3. Mangalore pattern roofing tiles (First class variety) 50000
4. Ridge tiles to suit the above roofing tiles 3000

Each tender should be accompanied with a chellan for having remitted Rs. 200/— as earnest money in the Municipal Treasury.

For further particulars and detailed notification please contact the Municipal Engineer, City Municipal Council, Mysore in person or by addressing him with sufficient postage stamps for a reply.

SD. N. LAKSHMANA RAU,
Municipal Commissioner.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೪

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೨೮

೨೧-೯-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾಂಗ್ರೆಸ್ಸಿನಲ್ಲಿ ಬಣ್ಣ ಬದಲಾಯಿಸುವವರು ಹೆಚ್ಚುತ್ತಿದ್ದಾರೆ

ಕಾಂಗ್ರೆಸ್ ಅಧ್ಯಕ್ಷ ವೀರಣ್ಣಗೌಡರ ಹೇಳಿಕೆ

ಮೈಸೂರು ೨೧

ನಗರದ ತಮಿಳುನಾಡು ಬಟ್ಟೆ ವರ್ತಕರ ಸಂಘದ ೯ನೇ ವಾರ್ಷಿಕೋತ್ಸವವು ನಿನ್ನೆ ಸಂಜೆ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರ ಅಧ್ಯಕ್ಷತೆಯಲ್ಲಿ ಜರುಗಿತು.

ಸಂಘದ ಅಧ್ಯಕ್ಷರಾದ ಶ್ರೀ ಪಿ. ನಂಜಪ್ಪ ಮೊದಲಿಯಾರ್‌ರವರು ಸ್ವಾಗತ ಬಯಸಿ, ಒಂದು ಬಿನ್ನವತ್ತಳೆಯನ್ನು ಅರ್ಪಿಸಿದರು. ಮೈಸೂರಿನಿಂದ ಕೊಯಮತ್ತೂರಿಗೆ ನೇರವಾಗಿ ಬಸ್ ಸೌಕರ್ಯ, ಆಕ್ಟ್ರಾಯ್ ಮತ್ತು ಮಾರಾಟತೆರಿಗೆ ಪಜಾ, ಕಾಂಗ್ರೆಸ್ಸಿನಲ್ಲಿ ಅಶಿಸ್ತಿಗರನ್ನು ತೆಗೆದುಹಾಕುವುದು ಇವೇ ಮುಂತಾದ ವಿಷಯಗಳು ಆ ಬಿನ್ನವತ್ತಳೆಯಲ್ಲಿ ತಿಳಿಸಲಾಗಿತ್ತು.

ಶ್ರೀ ವೀರಣ್ಣಗೌಡರು ಭಾಷಣಮಾಡಿ, ಇತ್ತೀಚೆಗೆ ಕಾಂಗ್ರೆಸ್ ಸಂಸ್ಥೆಯಲ್ಲಿ ಸ್ವಾರ್ಥಿಗಳು, ಬಣ್ಣ ಬದಲಾಯಿಸುವವರು ಹೆಚ್ಚಾಗಿ, ಸಂಸ್ಥೆಯು ಅಧೋಗತಿಗೆ ಇಳಿಯುತ್ತಿದೆಯೆಂದೂ, ಕಾಂಗ್ರೆಸ್ ಅಧ್ಯಕ್ಷರ ಪ್ರಥಮ ಕಾರ್ಯವು ಅಂತಹವರನ್ನು ಹೊರಗೆಡುಹುದೆಂದೂ, ಅದಕ್ಕೆ ತಾವು ಸರ್ವ ಶ್ರಮವಹಿಸುವುದಾಗಿಯೂ ತಿಳಿಸಿದರು.

ಭಾಷಾವಾರು ಪ್ರಾಂತ್ಯ ವಿಚಾರವಾಗಿ ಪ್ರಸ್ತಾಪಿಸುತ್ತಾ, ಭಾರತದಲ್ಲಿ ಆಡಳಿತ ಮತ್ತು ಭಾಷಾವಾರು ಅಭಿವೃದ್ಧಿಗಾಗಿ ಪ್ರಾಂತ್ಯಗಳು ಅಗತ್ಯವೆಂದೂ, ಆದರೆ ಅದಕ್ಕಾಗಿ ಚಳುವಳಿ ಹೂಡಕೂಡದೆಂದೂ ಕೇಂದ್ರಸರ್ಕಾರವು ಸದ್ಯದಲ್ಲೇ ಕಮೀಷನ್ ನೇಮಿಸುವುದರಿಂದ ಜನರು ತಾಳ್ಮೆಯಿಂದಿರಬೇಕೆಂದೂ ಅವರು ಸಲಹೆಮಾಡಿದರು.

ರಾಜಪ್ರಮುಖರುಗಳ ಭವಿಷ್ಯ

ರಾಜಪ್ರಮುಖರುಗಳ ಭವಿಷ್ಯವನ್ನು, ಕೇಂದ್ರಸರ್ಕಾರದವರು ರಚಿಸಲಿರುವ ಸಂಸ್ಥಾನಗಳ ಗಡಿನಿರ್ಮಾಣದ ಹೈಪವರ್ ಕಮೀಷನ್‌ರವರು ಪರಿಶೀಲಿಸುವರೆಂದು ಹೇಳಲಾಗಿದೆ. ಅನೇಕ ರಾಜಪ್ರಮುಖರುಗಳು ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂದೂ ಇನ್ನೂ ಅನೇಕರು ರಾಜಕೀಯದಲ್ಲಿ ತಲೆಹಾಕುತ್ತಿರುವರೆಂದೂ, ಆದ್ದರಿಂದ ಆ ಸ್ಥಾನವನ್ನೇ ರದ್ದುಗೊಳಿಸಬೇಕೆಂದೂ, ಹಲವಾರು ದೂರುಗಳು ಬರುತ್ತಿರುವುದನ್ನು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಅವುಗಳನ್ನು ಪರಿಶೀಲಿಸಿ, ಮೇಲ್ಕಂಡ ತೀರ್ಮಾನಕ್ಕೆ ಬಂದಿರುವುದಾಗಿಯೂ ತಿಳಿದ ಬಂದಿದೆ.

ಪಾಕ್ ಗೂಢಾಚಾರರಿಗೆ ಶಿಕ್ಷೆ

ಪಾಕೀಸ್ತಾನಕ್ಕೆ ಸೇರಿದ ಸೋನೆ ಸರ್ದಾರ್ ಮತ್ತು ಪೇಶ್ ಅಬುಸ್ ಸತ್ತಾರ್ ಎಂಬುವರು ೧೯೫೧ನೇ ಜೂನ್ ತಿಂಗಳಿನಲ್ಲಿ ಪಶ್ಚಿಮ ಬಂಗಾಳಕ್ಕೆ ಆಗಮಿಸಿ ಗೂಢಚಾರರಾಗಿ ಭಾರತದ ಸುಭದ್ರತೆಗೆ ಧಕ್ಕೆ ತರುವಂತಹ ಕೆಲಸದಲ್ಲಿ ತೊಡಗಿದ್ದು ಅನೇಕ ರಹಸ್ಯ ಸಮಾಚಾರಗಳನ್ನು ಪಾಕೀಸ್ತಾನಕ್ಕೆ ಕಳುಹಿಸುತ್ತಿದ್ದರೆಂದು ಅವರನ್ನು ಪೋಲೀಸರು ದಸ್ತಗಿರಿ ಮಾಡಿದ್ದರು. ಈಗ ಅಲಿಪುರ್ ನ್ಯಾಯಾಧೀಶರು ಅವರಿಗೆ ತಲಾ ೨ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಿದ್ದಾರೆ.

ಪ್ರಾಂತ್ಯಗಳ ವಿಂಗಡನೆಗೆ ಚಳುವಳಿ ಕೂಡದು

ಎ. ಐ. ಸಿ. ಸಿ. ಸೂಚನೆ

ಆಂಧ್ರ ಪ್ರಾಂತ ಉದ್ಘಾಟನೆ

ಆಂಧ್ರ ಪ್ರಾಂತ್ಯವನ್ನು ಪ್ರಧಾನಿ ನೆಹರೂರವರು ಅಕ್ಟೋಬರ್ ಒಂದನೇ ತಾರೀಖು ಬೆಳಿಗ್ಗೆ ೮-೪೫ ಘಂಟೆಗೆ ಉದ್ಘಾಟಿಸುವರು. ಈ ಸಮಾರಂಭವು ಕರ್ನೂಲಿನಲ್ಲಿ ಒಂದು ಶಾಲಾ ಸಭಾಂಗಣದಲ್ಲಿ ನಡೆಯುತ್ತದೆ. ಅದೇ ಬೆಳಿಗ್ಗೆ ೭ ಘಂಟೆಗೆ ನೂತನ ಗೌರ್ನರ್ ಶ್ರೀ ತ್ರಿವೇದಿಯವರು ಶಾಸನ ಸಭಾಭವನದಲ್ಲಿ ಪ್ರಮಾಣ ಸ್ವೀಕಾರ ಮಾಡುವರು. ಅನಂತರ ರಾಜ್ಯಭವನದಲ್ಲಿ ಮಂತ್ರಿಮಂಡಲ ಅಧಿಕಾರ ಸ್ವೀಕಾರ ಮಾಡುತ್ತದೆ.

ಆಂಧ್ರರಮೇಲೆ ಮೊಕದ್ದಮೆ ವಾಪಸ್ಸು

ಆಂಧ್ರಪ್ರಾಂತ್ಯ ಚಳುವಳಿಯಲ್ಲಿ ಭಾಗವಹಿಸಿದರೆಂಬ ಆಪಾದನೆಮೇಲೆ ಈಗ ೩೦೧ ಜನರಮೇಲಿರುವ ಮೊಕದ್ದಮೆಗಳನ್ನು ತಕ್ಷಣ ಹಿಂದಕ್ಕೆ ತೆಗೆದುಕೊಳ್ಳುವಂತೆ ಮದರಾಸ್ ಸರ್ಕಾರವು ಆಜ್ಞೆಮಾಡಿದೆ.

ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ನಡೆದು ಪ್ರಾಂತ್ಯಗಳ ವಿಂಗಡನೆ, ಗಡಿ ನಿರ್ಧಾರ ಮುಂತಾದುವಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಿತು.

ದೇಶಾದ್ಯಂತ ಪ್ರಾಂತ್ಯಗಳ ವಿಂಗಡನೆ, ಗಡಿ ನಿರ್ಧಾರ ಮುಂತಾದ ನಾನಾ ವಿಷಯಗಳನ್ನು ಪರಿಶೀಲಿಸಿ ಸರ್ಕಾರಕ್ಕೆ ಸೂಕ್ತ ಸಲಹೆಯನ್ನು ಕೊಡಲು ಒಂದು ಹೈಪವರ್ ಕಮೀಷನ್ನನ್ನು ಸ್ಥಾಪಿಸಲಾಗುವುದರಿಂದ ಸಾರ್ವಜನಿಕರು ಈ ಬಗ್ಗೆ ಚಳುವಳಿಯನ್ನು ನಡೆಸುವುದು ಅನಾವಶ್ಯಕ ಮಂಡಲಿಯವರು ತಮ್ಮ ಕಾರ್ಯವನ್ನು ನಡೆಸಲು ಶಾಂತಿ ವಾತಾವರಣವಿರುವಂತೆ ವ್ಯವಸ್ಥೆ ಮಾಡಬೇಕು ಎಂಬ ನಿರ್ಣಯವನ್ನು ಸಭೆಯು ಅಂಗೀಕರಿಸಿತು

ದೇಶದಲ್ಲಿ ನ್ಯಾಯ ಮತ್ತು ಭೂ ಸುಧಾರಣೆ, ಮೈಸೂರು, ರಾಜಾಸ್ತಾನ, ಪಂಜಾಬ್, ಹೈದರಾಬಾದ್ ಮುಂತಾದ ಸಂಸ್ಥಾನಗಳ ರಾಜಕೀಯಗಳನ್ನು ಸಮಿತಿಯು ಪರಿಶೀಲಿಸಿತೆಂದೂ ತಿಳಿಯಬಂದಿದೆ.

ಶಾಸನ ಸಭಾಧ್ಯಕ್ಷರು ಪಕ್ಷದಿಂದ ದೂರವಿರಬೇಕು

ಶಾಸನ ಸಭಾಧ್ಯಕ್ಷರುಗಳು ಪಕ್ಷಗಳಿಂದ ದೂರವಿರುವ ವಿಚಾರವು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಚರ್ಚಿಸಿ, ಸಾಮಾನ್ಯ ವಿಷಯಗಳಲ್ಲಿ ಅವರು ಪಕ್ಷದೊಡನೆ ಸಂಬಂಧ ಹರಿಸಬಹುದೆಂದು ಆದರೆ ಅವರು ಪಕ್ಷದಿಂದ ದೂರವಿರುವುದು ಒಳ್ಳೆಯದೆಂದು ತೀರ್ಮಾನಿಸಿರುವುದಾಗಿ ಹೇಳಲಾಗಿದೆ.

ಭಾರತದ ವಶಕ್ಕೆ ಯುದ್ಧ ಖೈದಿಗಳು

ಕೊರಿಯಾದಲ್ಲಿರುವ ಭಾರತದ ಮೇಲ್ವಿಚಾರಕ ಸೈನ್ಯದ ವಶಕ್ಕೆ ವಿಶ್ವಸಂಸ್ಥೆ ಸೈನ್ಯವು ಇಲ್ಲಿಯವರೆಗೆ ಸ್ವದೇಶಕ್ಕೆ ಹಿಂತಿರುಗಲು ಇಷ್ಟಪಡದ ೧೭೪೯೧ ಚೈನಾ ಮತ್ತು ಉತ್ತರ ಕೊರಿಯಾ ಯುದ್ಧಖೈದಿಗಳನ್ನು ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ರೈತರಿಗೆ ಅಕ್ಕಿ ಸಾಗುವಳಿ ಶಿಕ್ಷಣ

ಉತ್ತಮ ತರಹದ ಅಕ್ಕಿಯನ್ನು ಬೆಳೆಯಲು ರೈತರಿಗೆ ಶಿಕ್ಷಣವನ್ನು ಕೊಡಲು ಕಟಕ್‌ನಲ್ಲಿ ಅಕ್ಕಿ ಸಾಗುವಳಿ ಶಿಕ್ಷಣ ಕೇಂದ್ರವನ್ನು ಸ್ಥಾಪಿಸಲಾಗುತ್ತದೆ.

ಆಂಧ್ರಪ್ರಾಂತ್ಯ ಬಿಕ್ಕಟ್ಟಿನ ಪರಿಹಾರವೇ ?

ಶ್ರೀ ಟಿ. ಪ್ರಕಾಶಂ ಸ್ವತಂತ್ರರಾಗಿ ಸರ್ಕಾರ ರಚಿಸಲು ಸಲಹೆ

ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ನಡೆಯುತ್ತಲಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಸಭೆಯು ಆಂಧ್ರ ಪ್ರಾಂತ್ಯದಲ್ಲಿ ಸ್ಥಿರವಾದ ಸರ್ಕಾರವನ್ನು ರಚಿಸುವ ವಿಷಯದಲ್ಲಿ ದೀರ್ಘವಾಗಿ ಸಮಾಲೋಚನೆ ನಡೆಸಿ ಒಂದು ತೀರ್ಮಾನಕ್ಕೆ ಬಂದಿರುವುದಾಗಿ ತಿಳಿಯಬರುತ್ತದೆ.

ಆಂಧ್ರ ನಾಯಕ ಶ್ರೀ ಟಿ. ಪ್ರಕಾಶಂರವರು ಕಾಂಗ್ರೆಸ್ ಪಕ್ಷವನ್ನು ಸೇರಬೇಕೆಂಬ ಒತ್ತಾಯವಿಲ್ಲ. ಅವರು ಯಾವ ರಾಜಕೀಯ ಪಕ್ಷವನ್ನೂ ಸೇರದೆ ಸ್ವತಂತ್ರರಾಗಿ ಕಾಂಗ್ರೆಸ್, ಪ್ರಜಾಸೋಷಲಿಸ್ಟ್ ಮತ್ತು ಇತರ ಪಕ್ಷಗಳ ಸಹಕಾರವನ್ನು ಪಡೆದು ಸಮ್ಮಿಶ್ರ ಸರ್ಕಾರವನ್ನು ರಚಿಸಲು ಯಾವ ಅಭ್ಯಂತರವೂ ಇಲ್ಲ. ಅಂತ್ಯ ತೀರ್ಮಾನವನ್ನು ಶ್ರೀ ಟಿ. ಪ್ರಕಾಶಂರವರು ಕೈಗೊಳ್ಳಬೇಕಾಗಿದೆ-ಎಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧರಿಸಿ, ಈ ವಿಷಯದಲ್ಲಿ ಶ್ರೀ ಟಿ. ಪ್ರಕಾಶಂರವರಿಗೆ ತಿಳಿಸಲಾಗಿದೆಯೆಂದು ಗೊತ್ತಾಗಿದೆ.

ನಗರಾರೋಗ್ಯ

ಮೈಸೂರು ೨೧

ಇದೇ ೧೫ನೇ ತಾರೀಖಿಗೆ ಮುಕ್ತಾಯವಾದ ಪಕ್ಷದಲ್ಲಿ ನಗರದಲ್ಲಿ ಎಲ್ಲಿಯೂ ಪ್ಲೇಗು, ಸಿಡುಬು ಮತ್ತು ಕಾಲರಾ ರೋಗಗಳಿರಲಿಲ್ಲ. ೧೩೮ ಮನೆಗಳಿಗೆ ಸೈನೋಗ್ಯಾಸ್, ೨೧೫ ಪ್ರಾಥಮಿಕ ಮತ್ತು ೨೭೯ ಪುನಃ ಟೀಕಿ, ೨೧ ಕಾಲರಾ ನಿರೋಧ ಇನಾಕ್ಯುಲೇಷನ್ ಮಾಡಲಾಯಿತು

ಈ ಪಕ್ಷದಲ್ಲಿ ಡಿಪ್ತೀರಿಯ ರೋಗವು ೧೧ ಜನಕ್ಕೆ ತಗುಲಿತು. ಟೈಫಾಯಿಡ್ ೬ ಜನಕ್ಕೆ ತಗುಲಿ ಒಂದು ಮರಣವಾಯಿತು. ೧೨೭ ಡಿಪ್ತೀರಿಯ ವಿರೋಧ ಮತ್ತು ೧೦೧ ಟೈಫಾಯಿಡ್ ವಿರೋಧ ಇನಾಕ್ಯುಲೇಷನ್ ಮಾಡಲಾಗಿದೆ.

● ಅಸ್ಸಾಂನಲ್ಲಿ ೩ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಒಂದು ಸೆಣಬು ಪರಿಶೋಧನಾ ಕೇಂದ್ರವನ್ನು ಸ್ಥಾಪಿಸಲಾಗುವುದೆಂದು ತಿಳಿಯಬರುತ್ತದೆ.

ತಿರುವಾಂಕೂರ್-ಕೊಚ್ಚಿಯಲ್ಲಿ ರಾಜಕೀಯ ಬಿಕ್ಕಟ್ಟು

ತಿರುವಾಂಕೂರ್--ಕೊಚ್ಚಿ ಪ್ರಾಂತ್ಯದ ಶಾಸನಸಭೆಯಲ್ಲಿರುವ ಪ್ರಜಾಸೋಷಲಿಸ್ಟ್ ಪಕ್ಷವು ೨೨ ನೇ ತಾ॥ ನಡೆಯಲಿರುವ ಸಭೆಯ ಅಧಿವೇಶನದಲ್ಲಿ ಕಾಂಗ್ರೆಸ್ ಸರಕಾರದ ಮೇಲೆ ಅವಿಶ್ವಾಸ ನಿರ್ಣಯವೊಂದನ್ನು ಮಂಡಿಸಲಿರುವುದಾಗಿ ಆ ಪಕ್ಷದ ನಾಯಕ ಶ್ರೀ ತಾನು ಪಿಳ್ಳೆಯವರು ತಿಳಿಸಿದ್ದಾರೆ.

ಅದೇ ದಿನ ಶಾಸನ ಸಭೆಯಲ್ಲಿ ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷವು ಸಭೆಯ ವಿಶ್ವಾಸವನ್ನು ಕೇಳಲು ನಿರ್ಧರಿಸಿದೆ. ಹಾಗೇನಾದರೂ ವಿಶ್ವಾಸವು ದೊರೆಯದಿದ್ದರೆ ಶಾಸನ ಸಭೆಯನ್ನು ರದ್ದುಗೊಳಿಸಿ, ಪುನಃ ಚುನಾವಣೆ ನಡೆಸುವಂತೆ ರಾಜಪ್ರಮುಖರಿಗೆ ಸಲಹೆ ನೀಡಲಾಗುವುದೆಂದು ಮುಖ್ಯಮಂತ್ರಿಯವರು ತಿಳಿಸಿದ್ದಾರೆ. ಚುನಾವಣೆಗಳಾಗಿ ಹೊಸ ಸರ್ಕಾರ ರಚನೆಯಾಗುವವರೆಗೆ ಈಗಿರುವ ಸರ್ಕಾರವೇ ತಾತ್ಕಾಲಿಕ ಸರ್ಕಾರವಾಗಿ ಮುಂದುವರಿಯುವುದು ಎಂದೂ ಅವರು ಹೇಳಿದ್ದಾರೆ.

ಪ್ರಜಾಸೋಷಲಿಸ್ಟ್ ಪಕ್ಷದ ಶ್ರೀ ತಾನು ಪಿಳ್ಳೆಯವರು ಮುಖ್ಯಮಂತ್ರಿಯವರ ಈ ನಿಲುವನ್ನು ಉಗ್ರವಾಗಿ ಟೀಕಿಸಿ ಶಾಸನ ಸಭೆಯನ್ನು ರದ್ದುಗೊಳಿಸುವ ಸಲಹೆಯನ್ನು ಕೊಡುವ ಹಕ್ಕು ಮುಖ್ಯಮಂತ್ರಿಯವರಿಗೆ ಇಲ್ಲವೆಂದೂ ವಿರೋಧಪಕ್ಷದವರೇನಾದರೂ ಸರ್ಕಾರವನ್ನು ರಚಿಸಲು ತಕ್ಕ ಸಹಕಾರ ಪಡೆದಲ್ಲಿ ಅವರಿಗೆ ಅವಕಾಶವನ್ನು ಕಲ್ಪಿಸಬೇಕೆಂದೂ, ರಾಜ್ಯಾಂಗವೇನೂ ಮುರಿದುಬೀಳುವ ಸಂಭವವಿಲ್ಲವಾದ್ದರಿಂದ ರಾಷ್ಟ್ರಾಧ್ಯಕ್ಷರ ಆಡಳಿತವು ಸಹ ಪ್ರಾಂತ್ಯದಲ್ಲಿ ಪ್ರಾರಂಭವಾಗುವ ಅವಶ್ಯಕತೆಯೇನೂ ಇಲ್ಲವೆಂದು ಅವರು ಹೇಳಿದ್ದಾರೆ.

೬ ಜನ ಪಂಡಾಗಳ ಬಂಧನ

ಆಚಾರ್ಯ ವಿನೋಬಾಭಾವೆಯವರು ಮೊನ್ನೆಯದಿನ ಬಿಹಾರಿನ ದೇವಘರ್ ಎಂಬಲ್ಲಿ ಹರಿಜನ ಅನುಯಾಯಿಗಳೊಡನೆ ಅಲ್ಲಿಯ ವೈದ್ಯನಾಥ ದೇವಾಲಯಕ್ಕೆ ಪ್ರವೇಶ ಮಾಡುವ ಸಮಯದಲ್ಲಿ ಅವರ ಮೇಲೆ ದೇವಸ್ಥಾನದ ಪೂಜಾರಿಗಳು ಬಿದ್ದು ಆಚಾರ್ಯವಿನೋಬಾಭಾವೆ ಮತ್ತು ಇತರರನ್ನು ದೊಣ್ಣೆಗಳಿಂದ ಹೊಡೆದು ಗಾಯಗೊಳಿಸಿದುದರ ಪರಿಣಾಮವಾಗಿ ಪೋಲೀಸಿನವರು ೬ ಜನ ಪಂಡಾಗಳನ್ನು ದಸ್ತಗಿರಿ ಮಾಡಿದ್ದಾರೆ.

ಇವರುಗಳ ಮೇಲೆ ಉಗ್ರ ಕಾರ್ಯಕ್ರಮ ತೆಗೆದುಕೊಳ್ಳಲು ಸರ್ಕಾರವು ನಿರ್ಧರಿಸಿದೆ. ಈ ಕೃತ್ಯವನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತಿತರರು ಖಂಡಿಸಿದ್ದಾರೆ.

ಎನ್. ಸಿ. ಸಿ. ದಳ

ಭಾರತದ ನಾನಾ ಶಾಲಾ ಕಾಲೇಜುಗಳಲ್ಲಿ ಒಟ್ಟು ೭೫೦೦೦ ಎನ್. ಸಿ. ಸಿ. ದಳದವರು ಶಿಕ್ಷಣ ಪಡೆಯುತ್ತಿರುವುದಾಗಿ ತಿಳಿಯಬರುತ್ತದೆ. ಇವರಲ್ಲಿ ೫೦೦೦ ಜನ ಬಾಲಕಿಯರಿರುವರು.

ಮೈಸೂರಿಗೆ ಮತ್ತೊಬ್ಬ ಸಚಿವರು

ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯ ಪರಿಶೀಲನೆ

ಬೆಂಗಳೂರು ೨೧

ಬಳ್ಳಾರಿ ಜಿಲ್ಲೆಯು ಮೈಸೂರಿಗೆ ಸೇರುವುದರಿಂದ ಮೈಸೂರಿನ ಪ್ರಾಂತ್ಯ ವಿಸ್ತರಣೆ ಹೆಚ್ಚುವುದರಿಂದ ಈಗಿನ ಮಂತ್ರಿ ಮಂಡಲವನ್ನು ವಿಸ್ತರಿಸಿ ಮತ್ತೊಬ್ಬ ಮಂತ್ರಿಯನ್ನು ತೆಗೆದುಕೊಳ್ಳಲಾಗುವುದೆಂದು ಈ ವಿಷಯವನ್ನು ನಿನ್ನೆಯದಿನ ದೆಹಲಿಯಲ್ಲಿ ನಡೆದ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ಪರಿಶೀಲಿಸಿತೆಂದು ತಿಳಿಯಬರುತ್ತದೆ.

ಎಕರೆಗೆ ೬೦ ಮಣ ಅಕ್ಕಿ ಬೆಳೆ

ಬೊಂಬಾಯಿ ಪ್ರಾಂತ್ಯದ ಲಾಲ್‌ಬಾಗ್ ಕೊಲಬಾ ಜಿಲ್ಲೆಯಲ್ಲಿ ಒಂದೆಡೆ ೧೬ ಎಕರೆ ಜಮೀನಿನಲ್ಲಿ ಎಕರೆ ಒಂದಕ್ಕೆ ೬೦ ಮಣ ಅಕ್ಕಿಯು ಉತ್ಪತ್ತಿಯಾಗುವ ನಿರೀಕ್ಷೆಯಿರುವುದಾಗಿ ತಿಳಿಯಬರುತ್ತದೆ ಜಪಾನ್ ಸಾಗುವಳಿ ಕ್ರಮವನ್ನು ಅನುಸರಿಸಲಾಗುತ್ತಿದೆ. ಸಾಮಾನ್ಯವಾಗಿ ಒಂದು ಎಕರೆಗೆ ೯ ಮಣ ಅಕ್ಕಿ ಬೆಳೆಯುವುದು.

ರಾಷ್ಟ್ರೀಯ ಸಂಶೋಧನಾ ಕೇಂದ್ರ

ದೆಹಲಿಗೆ ನೂರು ಮೈಲಿ ದೂರದಲ್ಲಿ ಪಿಲಾನಿ ಎಂಬಲ್ಲಿ ಪ್ರಧಾನಿ ನೆಹರೂರವರು ಈ ದಿನ ರಾಷ್ಟ್ರೀಯ ಸಂಶೋಧನಾ ಕೇಂದ್ರ ಒಂದನ್ನು ಉದ್ಘಾಟಿಸುವರು. ಇದರ ವೆಚ್ಚವು ಸುಮಾರು ೨೫ ಲಕ್ಷ ರೂಪಾಯಿಗಳಾಗುತ್ತವೆ. ಇದರಪೈಕಿ ೨೧ ಲಕ್ಷ ರೂಪಾಯಿಗಳನ್ನು ಬಿರ್ಲಾ ಸಂಸ್ಥೆಯು ಕೊಡಲಿದೆ.

ಐ. ಎ. ಎಸ್. ಪರೀಕ್ಷೆಗೆ ಪಂಚವಾರ್ಷಿಕಯೋಜನೆ ಪಾಠ

ಸಚಿವರ ಸಮ್ಮೇಳನದಲ್ಲಿ ತೀರ್ಮಾನ

ಕೇಂದ್ರ ಮತ್ತು ಪ್ರಾಂತ್ಯಗಳ ಸಮಾಚಾರ ಸಚಿವರುಗಳ ಸಮ್ಮೇಳನವು ಮೊನ್ನೆಯದಿನ ದೆಹಲಿಯಲ್ಲಿ ತನ್ನ ಎರಡುದಿನಗಳ ಅಧಿವೇಶನವನ್ನು ಮುಕ್ತಾಯಗೊಳಿಸಿ ಅನೇಕ ಮುಖ್ಯ ತೀರ್ಮಾನಗಳನ್ನು ಮಾಡಿರುವುದಾಗಿ ತಿಳಿಯಬರುತ್ತದೆ. ವಿಶೇಷವಾಗಿ ಪಂಚವಾರ್ಷಿಕ ಯೋಜನೆಯ ಪ್ರಚಾರ ಕಾರ್ಯ ವಿಚಾರವಾಗಿ ಅನೇಕ ನಿರ್ಧಾರಗಳನ್ನು ಮಾಡಿರುವುದಾಗಿ ಹೇಳಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಈ ಯೋಜನೆಗಳನ್ನು ಜನರಿಗೆ ತಿಳಿಸಲು ಸೂಕ್ತ ಕಾರ್ಯಕ್ರಮಗಳನ್ನು ಏರ್ಪಡಿಸುವುದು, ನೃತ್ಯ, ಸಂಗೀತ, ನಾಟಕ ಮುಂತಾದವುಗಳಿಗೆ ಗ್ರಾಮಗಳಲ್ಲಿ ಪ್ರೋತ್ಸಾಹ ನೀಡುವುದು, ಚಲನಚಿತ್ರ ಪ್ರದರ್ಶನಕ್ಕೆ ವ್ಯವಸ್ಥೆ ಮಾಡುವುದು, ಸಾಧ್ಯವಾದಷ್ಟು ಅಧಿಕಸಂಖ್ಯೆಯಲ್ಲಿ ಗ್ರಾಮಾಂತರಗಳಲ್ಲಿ ರೇಡಿಯೋ ಸೆಟ್ಟುಗಳನ್ನು ಇಡುವುದು ಮುಂತಾದುವು ತೀರ್ಮಾನವಾದವೆಂದು ಹೇಳಲಾಗಿದೆ.

ಪಂಚವಾರ್ಷಿಕ ಯೋಜನೆಗೆ ಸಂಬಂಧಪಟ್ಟ ಪಾಠಗಳನ್ನು ಐ. ಎ. ಎಸ್. ಪರೀಕ್ಷೆ ಮತ್ತು ಸಂಸ್ಥಾನಗಳ ಹುದ್ದೆಗಳಿಗಾಗಿ ಸಂಬಂಧಪಟ್ಟ ಪರೀಕ್ಷೆಗಳಲ್ಲಿ ಸೇರಿಸಬೇಕೆಂದು ನಿರ್ಧಾರವಾಗಿರುವುದಾಗಿ ಗೊತ್ತಾಗಿದೆ.

ಮಾಜಿ ಅರಸರಿಗೆ ರಾಜಾದಾಯ ಖೋತಾ?

ಮಾಜಿ ಅರಸರಿಗೆ ಕೇಂದ್ರ ಸರ್ಕಾರವು ಕೊಡುತ್ತಿರುವ ರಾಜಾದಾಯವನ್ನು ಕಡಮೆಮಾಡುವ ವಿಷಯದಲ್ಲಿ ಅನೇಕ ಮಹಾರಾಜರೊಡನೆ ವ್ಯವಹಾರ ನಡೆಸುತ್ತಲಿರುವುದಾಗಿ ತಿಳಿಯಬರುತ್ತದೆ.

ನೆಹರೂ--ಪ್ರಕಾಶಂ ಭೇಟಿ

ಆಂಧ್ರ ಪ್ರಾಂತ್ಯದಲ್ಲಿ ಸ್ಥಿರವಾದ ಸರ್ಕಾರವನ್ನು ರಚಿಸುವ ವಿಷಯದಲ್ಲಿ ಆಂಧ್ರ ನಾಯಕ ಶ್ರೀ ಟಿ. ಪ್ರಕಾಶಂರವರು ನಿನ್ನೆಯದಿನ ಪ್ರಧಾನಿ ನೆಹರೂರವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಿದರು. ಆ ಸಮಯದಲ್ಲಿ ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎನ್. ಸಂಜೀವರೆಡ್ಡಿ, ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಬಲವಂತರಾವ್ ಮೆಹ್ತಾ ಮುಂತಾದವರಿದ್ದರು.

ಭೇಟಿ ನಡೆದನಂತರ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಬಲವಂತರಾವ್ ಮೆಹ್ತಾರವರು ಮಾತನಾಡುತ್ತಾ ಆಂಧ್ರದಲ್ಲಿ ಸರ್ಕಾರ ರಚನೆ ವಿಷಯದಲ್ಲಿ ಕಾಂಗ್ರೆಸ್ಸಿನ ನಿಲುವನ್ನು ಶ್ರೀ ಟಿ. ಪ್ರಕಾಶಂರವರಿಗೆ ಖಚಿತವಾಗಿ ತಿಳಿಸಲಾಗಿದೆ. ಇನ್ನು ತೀರ್ಮಾನಕ್ಕೆ ಬರುವುದು ಅವರಿಗೆ ಸೇರಿದೆ ಎಂದು ಹೇಳಿದ್ದಾರೆ ಶ್ರೀ ನೆಹರೂರೊಡನೆ ಭೇಟಿಯಾದನಂತರ ಶ್ರೀ ಟಿ. ಪ್ರಕಾಶಂರವರು ಆಹಾರ ಸಚಿವ ಶ್ರೀ ಕಿದ್ವಾಯಿಯವರನ್ನು ಭೇಟಿ ಮಾಡಿದ್ದರೆಂದು ತಿಳಿಯಬರುತ್ತದೆ. ಈದಿನ ಶ್ರೀ ಪ್ರಕಾಶಂ ಮದರಾಸಿಗೆ ಹಿಂತಿರುಗುವ ನಿರೀಕ್ಷೆಯಿದೆ.

ಅಜಾದ್ ಕಾಶ್ಮೀರ ಪರಿಸ್ಥಿತಿ

ಪಾಕೀಸ್ತಾನ ಆಡಳಿತದಲ್ಲಿರುವ ಅಜಾದ್ ಕಾಶ್ಮೀರ ಸರ್ಕಾರದ ಆರ್ಥಿಕ ಸಚಿವರಾಗಿದ್ದು ಕೆಲಸಬಿಟ್ಟ ಮಹಾಆದ ಹಮೀದುಲ್ಲಾರವರು ಮಾತನಾಡುತ್ತಾ ಅಜಾದ್ ಕಾಶ್ಮೀರದಲ್ಲಿ ಸರ್ಕಾರಕ್ಕೆ ಸ್ವಲ್ಪವೂ ಸ್ವಾತಂತ್ರವಿಲ್ಲ. ಅದು ಪಾಕೀಸ್ತಾನದ ಕೈಗೊಂಬೆಯಾಗಿದೆ. ಪಾಕೀಸ್ತಾನದಲ್ಲಿರುವ ಕಾಶ್ಮೀರ ಶಾಖೆಯ ಗುಮಾಸ್ತನಿಗಿಂತಲೂ ಅಜಾದ್ ಕಾಶ್ಮೀರ ಅಧ್ಯಕ್ಷರ ಸ್ಥಿತಿ ಕೀಳಾಗಿದೆಯೆಂದು ಅವರು ಟೀಕಿಸಿದ್ದಾರೆ.

★ ಭೂಪಾಲಿನ ನವಾಬರು ತಮ್ಮ ಅರಮನೆಯಲ್ಲಿರುವ ನೌಕರರಿಗೆಲ್ಲಾ ಖಾದಿ ಬಟ್ಟೆಯನ್ನು ಕೊಡಲು ನಿರ್ಧರಿಸಿ ವರ್ಷಕ್ಕೆ ೧೦ ಸಾವಿರ ರೂಪಾಯಿಗಳ ಖಾದಿಯನ್ನು ಕೊಳ್ಳಲು ನಿರ್ಧರಿಸಿದ್ದಾರೆ.

ಮೈಸೂರು ದಸರಾ ವಸ್ತು ಪ್ರದರ್ಶನ

೧೯೫೩

(ತಾ॥ ೮—೧೦—೫೩ರಿಂದ ತಾ॥ ೨೫—೧೦—೫೩ರ ವರೆಗೆ)

ಕಲಾಭಿಮಾನಿಗಳಲ್ಲಿ ವಿನಂತಿ:—

ಈ ವರ್ಷದ ದಸರಾ ವಸ್ತುಪ್ರದರ್ಶನದ ಅಂಗವಾಗಿ ಎಂದಿನಂತೆ

1) ದೇವರನಾಮ
2) i) ಹಾಡುಗಾರಿಕೆ (ಜೂನಿಯರ್)
   ii) ಹಾಡುಗಾರಿಕೆ (ಸೀನಿಯರ್)
3) ಆಧುನಿಕ ಗೀತೆಗಳು
4) ಸಿನಿಮಾ ಹಾಡುಗಳು
5) ನೃತ್ಯ (ಜೂನಿಯರ್, ಸೀನಿಯರ್)
6) ಲಾವಣಿ
7) ಭಾರತವಾಚನ ಮುಂತಾದ ಸ್ಪರ್ಧೆಗಳನ್ನು ಈವರ್ಷವು ಏರ್ಪಡಿಸಲಾಗಿದೆ

ಸ್ಪರ್ಧಿಸಲು ಇಚ್ಛೆಯುಳ್ಳವರು ತಾ॥ ೨೮-೯-೫೩ರ ಒಳಗಾಗಿ ದಸರಾವಸ್ತುಪ್ರದರ್ಶನ ಕಾರ್ಯದರ್ಶಿಯವರ ಕಛೇರಿಗೆ ತಾವು ಸೇರಲಿಚ್ಛಿಸುವ ಸ್ಪರ್ಧೆಗಳಿಗೂ ಬೇರೆ ಬೇರೆ ಅರ್ಜಿಗಳನ್ನು ಕಳುಹಿಸಬೇಕಾಗಿ ವಿನಂತಿ. ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನು ವಿನಿಯೋಗಿಸಲಾಗುವುದು.

ಕಾರ್ಯದರ್ಶಿ
ದಸರಾ ವಸ್ತುಪ್ರದರ್ಶನ

ಅಪೇರ

18--9--53 ರಿಂದ 2 ನೇ ವಾರ
ಪ್ರತಿದಿನ ಮೂರು ಆಟಗಳು

ಮಲ್ಲೇಶ್ವರಿ

[ತೆಲುಗು]
ಪಾತ್ರ:—ಎನ್. ಟಿ. ರಾಮರಾವ್,
ಭಾನುಮತಿ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೨೯

೨೨-೯-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಸಂಸ್ಥಾನದಲ್ಲಿ ರಾಗಿ, ಜೋಳ ಸಾಕಷ್ಟಿಲ್ಲ

ಅದರ ಬದಲು ಅಕ್ಕಿ ಕೊಡಲಾಗುತ್ತದೆ

ಪತ್ರಿಕಾ ಸಮ್ಮೇಳನದಲ್ಲಿ ಆಹಾರ ಸಚಿವರ ಹೇಳಿಕೆ

ಬೆಂಗಳೂರು ೨೨

ಸಂಸ್ಥಾನದಲ್ಲಿ ಈಚೆಗೆ ಮಳೆಯಾಗಿರುವುದರಿಂದ ಒಟ್ಟಿನಲ್ಲಿ ಆಹಾರ ಪರಿಸ್ಥಿತಿಯು ಉತ್ತಮವಾಗಿದೆ. ಅಕ್ಕಿಯ ಪರಿಸ್ಥಿತಿಯು ಚೆನ್ನಾಗಿದೆ. ಆದರೆ ರಾಗಿ, ಜೋಳದ ದಾಸ್ತಾನು ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ. ಕೇಂದ್ರ ಸರ್ಕಾರವನ್ನು ತುರ್ತು ಸಹಾಯ ಕೇಳಲಾಗಿದೆ. ರಾಗಿ, ಜೋಳವಿಲ್ಲವೆಂದು ಯಾರೂ ಭೀತಿಪಡಬೇಕಾಗಿಲ್ಲ. ಅದರ ಬದಲು ಅಕ್ಕಿಯನ್ನು ಕೊಡಲಾಗುತ್ತದೆ. ಈಗಿನ ಸ್ಥಿತಿಯಲ್ಲಿ ತಲಾ ದಿನ ಒಂದಕ್ಕೆ ೧೦--೧೨ ಔನ್ಸುಗಳಷ್ಟು ಅಕ್ಕಿಯನ್ನು ಬೇಕಾದರೂ ಕೊಡುವ ಸ್ಥಿತಿಯಲ್ಲಿ ದಾಸ್ತಾನಿದೆ ಎಂದು ಆಹಾರ ಸಚಿವ ಶ್ರೀ ಸಿದ್ದವೀರಪ್ಪನವರು ನಿನ್ನೆಯ ದಿನ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಆಹಾರ ದಾಸ್ತಾನಿನ ಬಗ್ಗೆ ವಿವರವನ್ನು ಕೊಡುತ್ತಾ ನಿನ್ನೆಯದಿನ ಅಕ್ಕಿ ೪,೭೨,೮೫೦ ಪಲ್ಲಾ ಗೋಧಿ ಮತ್ತು ಗೋಧಿ ಪದಾರ್ಥಗಳು ೫೭೬೪೩ ಪಲ್ಲಾ, ರಾಗಿ ಮತ್ತು ಜೋಳ ೧,೦೪,೮೯೩ ಪಲ್ಲಾ ಇದೆ. ಈಗಿನ ಅಕ್ಕಿ ದಾಸ್ತಾನು ೧೦--೧೨ ತಿಂಗಳಿಗಾಗುವಷ್ಟು ರಾಗಿ, ಜೋಳ ಕೇವಲ ಒಂದು-ಒಂದೂವರೆ ತಿಂಗಳಿಗಾಗುವಷ್ಟು ಇದೆ ಎಂದು ಸಚಿವರು ತಿಳಿಸಿದರು.

ಅಭಾವ ಪ್ರದೇಶಗಳಲ್ಲಿ ಗೋಧಿಯನ್ನು ಸೇರಿಗೆ ೦-೬-೨ ರೂನಂತೆ ಮಾರಲು ಯೋಚಿಸಲಾಗುತ್ತಿದೆ ಎಂದು ತಿಳಿಸಿದರು

ಆಹಾರಶಾಖಾ ಡೈರೆಕ್ಟರ್‌ರವರು ಸಂಸ್ಥಾನದಲ್ಲಿ ನಡೆದ ಪರಿಹಾರಕಾರ್ಯಗಳ ವಿವರಣೆಯನ್ನೀಯುತ್ತಾ ಇಲ್ಲಿಯವರೆಗೆ ಈ ಕಾರ್ಯಗಳಿಗಾಗಿ ಒಂದು ಕೋಟಿ ರೂಪಾಯಿಗಳ ವೆಚ್ಚ ಮಾಡಲಾಗಿದೆ. ಆಹಾರ ಹಕೋಟೆ ತೆಗೆದಿದ್ದರೂ ೧೭೦೦೦ ಡಿಪೋಗಳಿವೆ. ನಾನಾ ಪ್ರದೇಶಗಳಲ್ಲಿ ೩೦೦ ಗಂಜೀ ಕೇಂದ್ರಗಳಿವೆ. ಈಗಾಗಲೇ ಈ ಪ್ರದೇಶಗಳಲ್ಲಿ ೨,೫೦,೯೧೪ ರೂ. ಕಂದಾಯ ವಿನಾಯಿತಿ ಕೊಡಲಾಗಿದೆ. ಇನ್ನೂ ೯೧೦೦೦ ರೂ ವಿನಾಯಿತಿ ಕೊಡುವ ಯೋಚನೆಯಿದೆ ಎಂದು ಶ್ರೀ ಕೆ.ಪಿ. ರಾಮನಾಥಯ್ಯನವರು ತಿಳಿಸಿದರು.

ಮುಂದಿನ ವರ್ಷದ ಆಹಾರ ಧಾನ್ಯ ಸಂಗ್ರಹಣೆ ವಿಷಯವಾಗಿ ಅವರು ಪ್ರಸ್ತಾಪಿಸಿ, ಈಗಲೇ ಅದನ್ನು ಹೇಳಲು ಸಾಧ್ಯವಿಲ್ಲ. ಕೇಂದ್ರ ಸರ್ಕಾರದ ಸ್ಥಿತಿಗತಿ ಮತ್ತು ನೀತಿಯನ್ನು ನೋಡಿಕೊಂಡು ಅನಂತರ ತೀರ್ಮಾನಿಸಲಾಗುತ್ತದೆ ಎಂದು ಹೇಳಿದರು.

ಪತ್ರಿಕೆಗಳು ಘನತೆ ಗಾಂಭೀರ್ಯಗಳಿಂದ ಕೂಡಿರಬೇಕು

ಮೈಸೂರು ೨೨

ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮಿ ಸಂಘದ ಪತ್ರಿಕೆಯ ಪ್ರಾರಂಭೋತ್ಸವವನ್ನು ನಿನ್ನೆಯದಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ ಕೆ. ವಿ. ಪುಟ್ಟಪ್ಪನವರು ನೆರವೇರಿಸಿದರು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎಸ್. ವಿ. ರಂಗಣ್ಣನವರು ಅಧ್ಯಕ್ಷತೆ ವಹಿಸಿದ್ದರು.

ಈ ಸಂದರ್ಭದಲ್ಲಿ ಶ್ರೀ ಕೆ. ವಿ. ಪುಟ್ಟಪ್ಪನವರು ಮಾತನಾಡುತ್ತಾ ಪತ್ರಿಕೆಗಳನ್ನು ಸಾಧ್ಯವಾದಷ್ಟುಮಟ್ಟಿಗೆ ಉತ್ತಮದರ್ಜೆಯಲ್ಲಿ ನಡೆಸುತ್ತಾ ಸತ್ಯಾಂಶಕ್ಕೆ ದೂರವಿಲ್ಲದೆ, ಜನರ ಮನಸ್ಸನ್ನು ಒಳ್ಳೆಯರೀತಿಯಲ್ಲಿ ವಿಕಸಿತವಾಗುವಂತೆ ಬರವಣಿಗೆ ಮತ್ತು ಸುದ್ದಿಗಳನ್ನು ಕೊಡುವುದು ಪತ್ರಿಕೆಯವರ ಆದ್ಯ ಕರ್ತವ್ಯವೆಂದು ತಿಳಿಸಿದರು.

ಪತ್ರಿಕೆಗಳಲ್ಲಿ ಇತ್ತೀಚೆಗೆ ಬರುತ್ತಿರುವ ನಾನಾ ಸುದ್ದಿಗಳನ್ನು ವೀಕ್ಷಿಸಿದಲ್ಲಿ ಪ್ರಪಂಚವು ಕೆಟ್ಟುಹೋಗಿದೆಯೇ ಎಂದು ಭಾಸವಾಗುತ್ತದೆ. ಅಂತಹ ಸುದ್ದಿಗಳಿಗೆ ಪತ್ರಿಕೆಗಳು ಪ್ರಾಮುಖ್ಯತೆ ಕೊಡಬೇಕಾದರೂ ಜನರಲ್ಲಿ ಸತ್ಪರಿಣಾಮ ವುಂಟಾಗುವ ರೀತಿಯಲ್ಲಿ ಅವುಗಳನ್ನು ಚಿತ್ರಿಸಬೇಕು ಅಲ್ಲದೆ ಪಾಶ್ಚಿಮಾತ್ಯ ಪತ್ರಿಕೆಗಳು ಆಯಾ ದೇಶಗಳ ಸಂಸ್ಕೃತಿ, ಸಾಹಿತ್ಯ ಮುಂತಾದುವುಗಳಿಗೆ ಹೇಗೆ ಪ್ರಚಾರಕಾರ್ಯವನ್ನು ನಡೆಸುತ್ತಲಿವೆಯೋ ಹಾಗೆಯೇ ನಮ್ಮ ಪತ್ರಿಕೆಗಳು ನಡೆದಲ್ಲಿ ಜನತೆಯಲ್ಲಿ ಸುಸಂಸ್ಕೃತಿಯುಂಟಾಗುವುದರಲ್ಲಿ ಸಂದೇಹವಿಲ್ಲ ಎಂದು ಅವರು ತಿಳಿಸಿದರು

ಅಧ್ಯಕ್ಷತೆ ವಹಿಸಿದ್ದ ಶ್ರೀ ರಂಗಣ್ಣನವರು ಮಾತನಾಡುತ್ತಾ ಪತ್ರಿಕೆಗಳನ್ನು ನಡೆಸುವುದು ಅಷ್ಟು ಸುಲಭವಲ್ಲ ಸುದ್ದಿ ಮುಂತಾದುವನ್ನು ಪ್ರಕಟಿಸುವಾಗ ನಿಜಾಂಶ, ಶೈಲಿ ಮತ್ತು ಘನತೆ ಗಾಂಭೀರ್ಯಗಳಿಂದ ಕೂಡಿದ ಬರವಣಿಗೆಯಲ್ಲಿ ಸಂಕ್ಷೇಪವಾಗಿ ಕೊಟ್ಟು ವಾಚಕರ ಮನಸ್ಸನ್ನು ಆಕರ್ಷಣೆ ಮಾಡುವಂತಿರಬೇಕೆಂದು ಹೇಳಿದರು.

○ ಸಿಂಹಳವು ತನಗೆ ಬೇಕಾಗುವ ಟೆಲಿಫೋನ್ ಯಂತ್ರಗಳನ್ನು ಭಾರತ ಮತ್ತು ಜಪಾನುಗಳಿಂದ ಕೊಳ್ಳುವುದಾಗಿ ಅಲ್ಲಿಯ ಅಂಚೆ ಮತ್ತು ತಂತಿ [illegible] ಹೇಳಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷರ ಮೇಲೆ ನಿರ್ಬಂಧಾಜ್ಞೆ

ಸರ್ಕಾರಿ ನೌಕರರಲ್ಲಿ ಅಸಮಾಧಾನ ಮೂಡಲು ಯತ್ನಿಸಿದ ಆಪಾದನೆ

ನೇಪಾಳದಲ್ಲಿ ಕಾಂಗ್ರೆಸ್ ಅಧ್ಯಕ್ಷರೂ ಮಾಜಿ ಗೃಹಸಚಿವರೂ ಆದ ಶ್ರೀ ಬಿ. ಪಿ. ಕೊಯಿರಾಲಾರವರಮೇಲೆ ನೇಪಾಳ ಸರಕಾರವು ಒಂದು ನಿರ್ಬಂಧಾಜ್ಞೆಯನ್ನು ಹೊರಡಿಸಿ ಅವರು ಖಟ್ಮಂಡುವಿನ ಕಣಿವೆಯ ಮಿತಿಯೊಳಗೇ ಇರಬೇಕೆಂದು ಸೂಚಿಸಿದೆಯಲ್ಲದೆ ಅವರು ಇನ್ನ ಒಂದುವಾರದೊಳಗಾಗಿ ಖಟ್ಮಂಡು ನಗರದ ನ್ಯಾಯಾಧೀಶರ ಮುಂದೆ ಹಾಜರಾಗಬೇಕೆಂದೂ ಸೂಚಿಸಲಾಗಿದೆ.

ಸರ್ಕಾರಿ ನೌಕರರಲ್ಲಿ ಅಸಮಾಧಾನವನ್ನುಂಟುಮಾಡುವ ಕೆಲವು ಹಸ್ತಪತ್ರಿಕೆಗಳನ್ನು ಅವರು ಹಂಚಿದರೆಂಬುದೇ ಇವರ ಮೇಲಿನ ಆಪೋಪಣೆಯೆಂದು ಹೇಳಲಾಗಿದೆ.

ಶ್ರೀ ಬಿ. ಪಿ. ಕೊಯಿರಾಲಾರವರು ಅಲ್ಲಿಯ ಪ್ರಧಾನಿ ಎಂ. ಪಿ. ಕೊಯಿರಾಲಾರವರ ಸಹೋದರರು.

ಸುಭಾಷರ ಜನ್ಮಗೃಹದಲ್ಲಿ ಸೇವಾಸದನ ಸ್ಥಾಪನೆ

ಕಟಕ್‌ನಲ್ಲಿ ಸುಭಾಷ್‌ಚಂದ್ರಬೋಸ್‌ರವರು ಜನಿಸಿದ ಮನೆಯನ್ನು ಅಸ್ಸಾಂ ಸರಕಾರವು ಕೊಂಡುಕೊಂಡು ಅವರ ಹೆಸರಿನಲ್ಲಿ ಒಂದು ಸೇವಾಸದನವನ್ನು ಸ್ಥಾಪಿಸಲು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ವಿನೋಬಾಭಾವೆಯವರ ಉದಾರತ್ವ

ದೇವಘರ್‌ನಲ್ಲಿ ಆಚಾರ್ಯ ವಿನೋಬಾಭಾವೆಯವರು ದೇವಸ್ಥಾನದಲ್ಲಿ ಪ್ರವೇಶಮಾಡುತ್ತಿದ್ದಾಗ ಅಲ್ಲಿಯ ಪೂಜಾರಿಗಳು ತಮ್ಮ ಮತ್ತು ತಮ್ಮ ಅನುಯಾಯಿಗಳಮೇಲೆ ಕೈಮಾಡಿದ ವಿಷಯವನ್ನು ಪ್ರಸ್ತಾಪಿಸಿ ಈ ಘಟನೆಯಲ್ಲಿ ಯಾರನ್ನೂ ಶಿಕ್ಷಿಸಕೂಡದು ಎಂದು ತಿಳಿಸಿದ್ದಾರೆ.

ಮಹಮದ್ ಅಲಿ ಮುಸ್ಲಿಂ ಲೀಗ್ ನಾಯಕರು

ಪಾಕೀಸ್ತಾನದ ಶಾಸನಸಭೆಯ ಮುಸ್ಲಿಂ ಲೀಗಿನ ನಾಯಕರಾಗಿ ಪ್ರಧಾನಿ ಮಹಮದ್ ಅಲಿಯವರು ಚುನಾಯಿತರಾಗಿದ್ದಾರೆ.

ಪ್ರಧಾನಿ ಪಟ್ಟದಿಂದ ವಜಾ ಆದಮೇಲೆ ಕ್ವಾಜಾನಾಜಿಮುದ್ದೀನರು ಮುಸ್ಲಿಂ ಲೀಗ್ ನಾಯಕತ್ವಕ್ಕೆ ರಾಜೀನಾಮೆಯನ್ನಿತ್ತಿದ್ದರು.

ನಿರುದ್ಯೋಗ ವಿವರ ಸಂಗ್ರಹಣೆ

ದೇಶದಲ್ಲಿ ನಿರುದ್ಯೋಗದ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಲು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಎಲ್ಲಾ ಪ್ರಾದೇಶಿಕ ಕಾಂಗ್ರೆಸ್ ಸಮಿತಿ,ಕಾರ್ಯಕರ್ತರು ಮುಂತಾದವರಿಂದ ವಿವರಗಳನ್ನು ಕೇಳಿದೆ.

ಪ್ರಜಾಸೋಷಲಿಸ್ಟ್ ಪಕ್ಷ ಸಭೆ

ಆಂಧ್ರಪ್ರಾಂತ್ಯದಲ್ಲಿ ಸರ್ಕಾರವನ್ನು ರಚಿಸುವ ವಿಷಯದಲ್ಲಿ ಅಂತ್ಯತೀರ್ಮಾನಕ್ಕೆ ಬರಲು ಶಾಸನಸಭೆಯ ಪ್ರಜಾಸೋಷಲಿಸ್ಟ್ ಪಕ್ಷದ ಸದಸ್ಯರ ಸಭೆಯು ಇದೇ ೨೪ನೆ ತಾರೀಖು ಮದ್ರಾಸಿನಲ್ಲಿ ನಡೆಯುವುದೆಂದು ಹೇಳಲಾಗಿದೆ.

ಅಮೆರಿಕಾ ಜನಸಂಖ್ಯೆ ೧೬ ಕೋಟಿ

ಇದೇಸಾಲಿನ ಆಗಸ್ಟ್ ೧೦ರ ಎಣಿಕೆಯಂತೆ ಅಮೆರಿಕಾದ ಜನಸಂಖ್ಯೆಯು ೧೬೦,೦೦೦,೦೦೦. ೧೯೫೦ರಲ್ಲಿ ಜನಸಂಖ್ಯೆ ೧೫೦,೬೯೭,೮೬೧ ಇತ್ತು. ಇವರಲ್ಲಿ ೧೫,೮೦೦,೦೦೦ ನೀಗ್ರೋಜನರಿರುವರು.

ನಿರುದ್ಯೋಗಿಗಳಿಗೆ ನೆರವು

ಪ್ರಾಂತ್ಯದಲ್ಲಿರುವ ನಿರುದ್ಯೋಗಿಗಳು ಸಣ್ಣಪುಟ್ಟ ಕೈಗಾರಿಕೆಗಳನ್ನು ಸ್ಥಾಪಿಸಲು ಭೂಪಾಲ್ ನವಾಬರು ಒಂದುಲಕ್ಷ ರೂಪಾಯಿಗಳ ಬಡ್ಡಿಯಿಲ್ಲದ ಸಾಲವನ್ನು ಕೊಡಲು ನಿರ್ಧರಿಸಿರುವುದಾಗಿ ತಿಳಿಯ ಬಂದಿದೆ.

ಕರ್ನೂಲಿಗೆ ರಾಜಾಜಿ

ಅಕ್ಟೋಬರ್ ಒಂದನೇ ತಾರೀಖು ನಡೆಯಲಿರುವ ಆಂಧ್ರ ಪ್ರಾಂತ್ಯ ಪ್ರಾರಂಭೋತ್ಸವದಲ್ಲಿ ಭಾಗವಹಿಸಲು ಮದ್ರಾಸ್ ಮುಖ್ಯ ಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಕರ್ನೂಲಿಗೆ ಅಕ್ಟೋಬರ್ ಒಂದರಂದು ಶ್ರೀ ನೆಹರೂರೊಡನೆ ಹೋಗುವರು.

ಹೈದರಾಬಾದ್ ಮುಖ್ಯ ಮಂತ್ರಿಯವರು ಈ ಸಮಾರಂಭದಲ್ಲಿ ಭಾಗವಹಿಸಲು ಹೋಗುವರೆಂದು ತಿಳಿಯಬರುತ್ತದೆ.

ಭಾರತ ಚಲನಚಿತ್ರಗಳ ಮೇಲೆ ಪಾಕ್ ನಿರ್ಬಂಧ ರದ್ದು

ಪಾಕೀಸ್ಥಾನದಲ್ಲಿ ಸರ್ಕಾರವು ಭಾರತದಿಂದ ಚಲನಚಿತ್ರಗಳನ್ನು ತರಿಸುವುದನ್ನು ಪ್ರತಿಬಂಧಿಸಿದ್ದುದರಿಂದ ಅಲ್ಲಿಯ ಚಲನಚಿತ್ರ ಮಂದಿರಗಳು ನಿನ್ನೆಯಿಂದ ತಮ್ಮ ಮಂದಿರಗಳನ್ನು ಅನಿರ್ದಿಷ್ಟಕಾಲ ಮುಚ್ಚಿದುದರ ಪರಿಣಾಮವಾಗಿ ಈಗ ಪಾಕೀಸ್ತಾನ ಸರ್ಕಾರವು ಈ ನಿರ್ಬಂಧವನ್ನು ರದ್ದುಗೊಳಿಸಿದೆ.

ಭಾರತದಿಂದ ಚಲನಚಿತ್ರಗಳನ್ನು ಬಾಡಿಗೆಯಮೇಲೆ ಪಾಕೀಸ್ತಾನ ಚಿತ್ರಮಂದಿರಗಳು ತರಿಸಿಕೊಳ್ಳಬಹುದೆಂದು ಈಗ ಆಜ್ಞೆ ಮಾಡಲಾಗಿದೆ.

ಹೈದರಾಬಾದಿನಲ್ಲಿ ನೀರಾವರಿ ಯೋಜನೆ

ಹೈದರಾಬಾದಿನಲ್ಲಿ ೫ ಪ್ರಮುಖ ನೀರಾವರಿ ಯೋಜನೆಗಳ ಕಾರ್ಯವನ್ನು ಅಲ್ಲಿಯ ಸರ್ಕಾರವು ೩ ಕೋಟಿ ೧೫ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಪ್ರಾರಂಭಿಸಿದೆ. ಇದರಿಂದ ೪೨೦೦೦ ಎಕರೆ ಜಮೀನಿಗೆ ನೀರಿನ ಸೌಕರ್ಯ ದೊರೆಯುತ್ತದೆ ಎಂದು ಅಲ್ಲಿಯ ಆಹಾರ ಸಚಿವರು ತಿಳಿಸಿದ್ದಾರೆ.

ಆ ಪ್ರಾಂತ್ಯದ ಆಹಾರ ಪರಿಸ್ಥಿತಿಯ ವಿಷಯವಾಗಿ ಅವರು ಪ್ರಸ್ತಾಪಿಸಿ, ಪ್ರಾಂತ್ಯದಲ್ಲಿ ಕರೀಫ್ ಮತ್ತು ರಾಬಿ ಫಸಲುಗಳು ಸಮರ್ಪಕವಾಗಿವೆ. ಕಳೆದ ಸಾಲುಗಳಿಗಿಂತ ಈಗ ಹೆಚ್ಚಿನ ಆಹಾರ ವಸ್ತುಗಳ ಉತ್ಪನ್ನವಾಗುವುದೆಂದು ಅವರು ಹೇಳಿದ್ದಾರೆ

ದಕ್ಷಿಣ ಭಾರತದಲ್ಲಿ ಉಪ್ಪಿನ ಉತ್ಪನ್ನ ಕೇಂದ್ರ

ತಿರುವಾಂಕೂರ್-ಕೊಚ್ಚಿ ಪ್ರಾಂತ್ಯದಲ್ಲಿ ಉಪ್ಪಿನ ಕೈಗಾರಿಕಾ ಕೇಂದ್ರವೊಂದನ್ನು ಸ್ಥಾಪಿಸಲಾಗುವುದೆಂದು ಕೇಂದ್ರ ಉತ್ಪಾದನಾಸಚಿವ ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿರುವುದಾಗಿ ವರದಿಯಾಗಿದೆ. ಶ್ರೀಯುತರು ಈಗ ಆ ಪ್ರಾಂತ್ಯದಲ್ಲಿ ಪ್ರವಾಸ ನಡೆಸುತ್ತಲಿದ್ದಾರೆ. ಆಲ್ವೆಯಲ್ಲಿರುವ ರಸಾಯನಿಕ ಗೊಬ್ಬರ ಕಾರ್ಖಾನೆಯನ್ನೂ ಸಹ ೩ ಕೋಟಿ ರೂಪಾಯಿಗಳ ವೆಚ್ಚದಲ್ಲಿ ವಿಸ್ತರಿಸಲಾಗುವುದೆಂದೂ ಅವರು ತಿಳಿಸಿದ್ದಾರೆ

ಪ್ರಭಾ ಇಂದಿನಿಂದ 3 ದಿನಗಳು
ದಿನವಹಿ 3 ಪ್ರದರ್ಶನಗಳು
ಬಾಂಬೆಟಾಕೀಸ್‌ರವರ
'ಮ ಶಾ ಲ್'
ಪಾತ್ರ: ಅಶೋಕ್‌ಕುಮಾರ್, ಸುಮಿತ್ರ,
ದಿಗ್ದರ್ಶನ:- ನಿತಿನ್‌ಬೋಸ್,
ಸಂಗೀತ:- ಎಸ್. ಡಿ. ಬರ್ಮನ್.
25-9-53ರಿಂದ "ಅಲ್ ದಿ ಸರ್ಕಸ್ ಏರೀನ" ವರ್ಣರಂಜಿತ ಚಿತ್ರ,
ಬೆಳಗಿನ ಪ್ರದರ್ಶನ 25-9-53 ರಿಂದ 3 ದಿನಗಳು. ನರ್ಗಿಸ್, ಶ್ಯಾಮ್ ನಟಿಸಿರುವ "ಫೋಟೋ ಗ್ರಾಫ"

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಹೊಸಪೇಟೆಯ ರೆವಿನ್ಯೂ ಅಧಿಕಾರಿಗಳು

ಬೆಂಗಳೂರು ೨೨

ನಂಜನಗೂಡು ಸಬ್‌ಡಿವಿಜನ್ ಅಧಿಕಾರಿಗಳಾದ ಶ್ರೀ ಎನ್. ನರಸಿಂಹರಾವ್‌ರನ್ನು ಬಳ್ಳಾರಿಯ ಹೊಸಪೇಟೆಯ ರೆವಿನ್ಯೂ ಡಿವಿಜನಲ್ ಆಫೀಸರಾಗಿ ನೇಮಿಸಲಾಗಿದೆ. ಇವರ ಜಾಗಕ್ಕೆ ಕೋಲಾರದ ಸಬ್‌ಡಿವಿಜನ್ ಆಫೀಸರ್ ಶ್ರೀ ಎ. ಮುನಿಸ್ವಾಮಿಗೌಡರನ್ನು ವರ್ಗಾಯಿಸಲಾಗಿದೆ.

ಪಾಕ್ ಸಿನಿಮಾಗಳ ಬಂದ್

ಭಾರತದ ಚಲನಚಿತ್ರಗಳ ಕೊರತೆಯಿಂದ ಕರಾಚಿಯಲ್ಲಿ ಉರ್ದುಚಿತ್ರಗಳನ್ನು ಪ್ರದರ್ಶಿಸುತ್ತಿದ್ದ ಎಲ್ಲಾ ಸಿನಿಮಾ ಮಂದಿರಗಳನ್ನು ನಿನ್ನೆಯಿಂದ ಮುಚ್ಚಲು ಕರಾಚಿ ಚಲನಚಿತ್ರ ಸಂಘದವರು ನಿರ್ಧರಿಸಿದ್ದಾರೆ. ಪಾಕ್ ಸರ್ಕಾರದವರು ಭಾರತದ ಚಿತ್ರಗಳ ಮೇಲೆ ಪ್ರತಿಬಂಧಕ ಹಾಕಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ರಷ್ಯದ ವಜಾ ಆದ ಮಂತ್ರಿ ಅಮೇರಿಕಾದಲ್ಲಿ?

ರಷ್ಯಾದ ಮಂತ್ರಿ ಪದವಿಯಿಂದ ವಜಾ ಆದ ಬೆರಿಯಾರವರು ರಷ್ಯದಿಂದ ಪರಾರಿಯಾಗಿ ಅಮೇರಿಕಾದಲ್ಲಿ ಎಲ್ಲಿಯೋ ಒಂದೆಡೆ ನೆಲಸಿ, ತಮ್ಮ ದೇಶದ ಗುಪ್ತ ವಿಚಾರಗಳನ್ನೆಲ್ಲಾ ಹೊರಗೆಡವುತ್ತಿರುವುದಾಗಿ ವದಂತಿ ಹಬ್ಬಿದೆ. ಇದರ ಬಗ್ಗೆ ಸರಿಯಾದ ಸಮರ್ಥನೆ ಎಲ್ಲೂ ದೊರೆತಿಲ್ಲ.

ಜಿಲ್ಲಾ ಕೇಂದ್ರಗಳಿಗೆ ಟೆಲಿಫೋನ್ ವ್ಯವಸ್ಥೆ

ಜಿಲ್ಲಾ ಕೇಂದ್ರಗಳಿಗೆಲ್ಲಾ ಟೆಲಿಫೋನ್ ಮತ್ತು ಟೆಲಿಗ್ರಾಫ್ ವ್ಯವಸ್ಥೆಗಳನ್ನು ಏರ್ಪಡಿಸಲು ಅಂಚೆ ಮತ್ತು ತಂತಿ ಇಲಾಖೆಯು ನಿರ್ಧರಿಸಿದೆ. ಈ ಇಲಾಖೆಯು ನಡೆಸಬೇಕಾಗಿರುವ ಅಭಿವೃದ್ಧಿ ಕಾರ್ಯಗಳಲ್ಲಿ ಇದು ಮುಖ್ಯವಾದುದಾಗಿದೆ.

ಎಷ್ಟು ನಷ್ಟವುಂಟಾದರೂ ಗಮನಿಸದೆ ಜಿಲ್ಲಾ ಕೇಂದ್ರಗಳಲ್ಲಿ ಟೆಲಿಫೋನ್ ಮತ್ತು ಟೆಲಿಗ್ರಾಫ್ ಸೌಕರ್ಯವನ್ನು ಕಲ್ಪಿಸಲಾಗುತ್ತದೆ. ನಷ್ಟವು ಸಂಭವಿಸದೆ ಇತರ ಕಡೆಗಳಲ್ಲಿ ಟೆಲಿಫೋನ್ ವ್ಯವಸ್ಥೆಯನ್ನೂ ಮಾಡಲಾಗುತ್ತದೆ.

ಖಾದಿ ಪರಿಶೋಧನಾಕೇಂದ್ರ

ಬೊಂಬಾಯಿನ ಬಳಿ ಒಂದು ಖಾದಿ ಗ್ರಾಮಕೈಗಾರಿಕೆಗಳ ಪರಿಶೋಧನಾ ಕೇಂದ್ರವನ್ನು ಸ್ಥಾಪಿಸಲು ಅಖಿಲ ಭಾರತ ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಸಮಿತಿಯು ನಿರ್ಧರಿಸಿದೆ.

ಚರ್ಮದ ಕೈಗಾರಿಕೆಗೆ ಸಂಬಂಧಪಟ್ಟ ಕೇಂದ್ರಗಳನ್ನು ಸಹ ಈ ಸಮಿತಿಯು ದೇಶದಲ್ಲಿ ಸ್ಥಾಪಿಸಲು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ರಾಗಿ, ಜೋಳಕ್ಕಾಗಿ ಕೇಂದ್ರಕ್ಕೆ ತಂತಿ

ಮಾತುಕತೆಗಳಿಗಾಗಿ ಆಹಾರ ಡೈರೆಕ್ಟರ್ ದೆಹಲಿಗೆ

ಬೆಂಗಳೂರು ೨೨

ಸಂಸ್ಥಾನದಲ್ಲಿ ರಾಗಿ, ಜೋಳಗಳ ಪರಿಸ್ಥಿತಿಯು ತೀರ ವಿಷಮವಾಗಿದೆ ಕೂಡಲೇ ಅವುಗಳ ಸರಬರಾಜನ್ನು ಮಾಡಬೇಕು ಎಂದು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕೇಂದ್ರ ಆಹಾರ ಸಚಿವ ಕಿದ್ವಾಯಿ.ಯವರಿಗೆ ನಿನ್ನೆಯ ದಿನ ತಂತಿ ಕಳುಹಿಸಿರುವುದಾಗಿ ತಿಳಿಯಬರುತ್ತದೆ.

ಮುಂದಿನತಿಂಗಳು ಮಧ್ಯಭಾಗದೊಳಗಾಗಿ ಕೇಂದ್ರದ ಸಹಾಯ ಬಾರದಿದ್ದಲ್ಲಿ ಪರಿಸ್ಥಿತಿಯು ಹತೋಟಿ ಮೀರುವುದೆಂದು ಹೇಳಲಾಗಿದೆ.

ಕೇಂದ್ರದಿಂದ ರಾಗಿ ಮತ್ತು ಜೋಳವನ್ನು ಪಡೆಯಲು ಆಹಾರ ಡೈರೆಕ್ಟರ್ ಶ್ರೀ ಕೆ. ಪಿ. ರಾಮನಾಥಯ್ಯನವರು ನಿನ್ನೆಯ ದಿನ ದೆಹಲಿಗೆ ತೆರಳಿದರೆಂದು ತಿಳಿಯಬರುತ್ತದೆ.

ಬಳ್ಳಾರಿಯಲ್ಲಿ ಆಹಾರ ಪರಿಸ್ಥಿತಿಯನ್ನು ತಿಳಿದುಕೊಂಡು ಬರಲು ಆಹಾರಶಾಖೆಯ ಅಸಿಸ್ಟೆಂಟ್ ಡೈರೆಕ್ಟರು ಶ್ರೀ ಶ್ರೀನಿವಾಸಾಚಾರ್‌ರವರು ಸದ್ಯದಲ್ಲೇ ಅಲ್ಲಿಗೆ ತೆರಳಲಿರುವರು.

-ಮೈಸೂರು ಪೇಟೆಧಾರಣೆ-

ತಾರೀಖು ೨೧—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೫—	೨೩ ೪
ಎಳ್ಳು	೬೦—೮	೮೯—೧೪
ಹುರುಳಿ	೪೮—	೪೮—೬
ಅಲಸಂದೆ	೭೧—೪	೭೫—
ತೆಂಗಿನಕಾಯಿ	೨೨೧	೨೭೩

ಇದರ ಪರಿಚಯವಿದೆಯೇ !!
ಒಂಟಿ ಪೆಟ್ಟಿಗೆಗಳಲ್ಲಿರುವ
ಮೈಸೂರು--
--ಸಾಬೂನು
ಸಂಪೂರ್ಣವಾಗಿ ಶುದ್ಧವಾದ, ಯಾವ ಬೆರಕೆಯೂ, ಅಪಾಯಕರ ರಸಾಯನಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮವಾದ ಒಗೆಯುವ ಸಾಬೂನು. ಯಾವ ಶ್ರಮವಿಲ್ಲದೆಯೇ ಶುಭ್ರವಾಗಿ ತೊಳೆಯುತ್ತದೆ. ತೊಂದರೆ, ಶ್ರಮ, ಕಾಲ, ಹಣ ಉಳಿಸುತ್ತದಲ್ಲದೆ, ಸಂಪೂರ್ಣ ತೃಪ್ತಿಯನ್ನೂ ಕೊಡುತ್ತದೆ.
ಒಂದು ಪೆಟ್ಟಿಯನ್ನು ಬಳಸಿನೋಡಿ.
ಎಲ್ಲ ಕಡೆಯೂ ಸಿಗುತ್ತದೆ.
ಗವರ್ನಮೆಂಟ್ ಸೋಪ್--
ಫ್ಯಾಕ್ಟರಿ. ಬೆಂಗಳೂರು.
ಐ. ಎಸ್. ಟಿ. ಎಂ. ಎ. ಮೆಂಬರು

ಇತ್ತೀಚೆಗೆ ಗ್ರೀಸಿನಲ್ಲಿ ಭೂಕಂಪವುಂಟಾಗಿ ಸಾವಿರಾರು ಜನರು ಮನೆ ಮಠಗಳನ್ನು ಕಳೆದುಕೊಂಡು ಅನೇಕರು ಸತ್ತರು. ಇವರಿಗೆ ಪರಿಹಾರ ಕಾರ್ಯಗಳಲ್ಲಿ ತೊಡಗಿದ್ದ ಲೇಡಿ ಮೌಂಟ್‌ಬೇಟನ್‌ರವರು ನೊಂದ ಮಹಿಳೆಯೊಬ್ಬಳನ್ನು ಸಂತೈಸುತ್ತಲಿರುವ ದೃಶ್ಯ.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೩೩೧೦

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೩೦

೨೩-೯-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಜಿಲ್ಲಾಬೋರ್ಡಿಗೆ ಪ್ರತ್ಯಕ್ಷ ಚುನಾವಣೆ

ಎಂ. ಪಿ. ಸಿ. ಸಿ. ಶಿಫಾರಸು

ಬೆಂಗಳೂರು ೨೨

ಸಂಸ್ಥಾನದ ಜಿಲ್ಲಾ ಬೋರ್ಡುಗಳಿಗೆ ಪ್ರತ್ಯಕ್ಷ(ನೇರ) ಚುನಾವಣಾ ಪದ್ಧತಿ ಇರಬೇಕೆಂದು ನಿನ್ನೆ ಶ್ರೀ ವೀರಣ್ಣಗೌಡರ ಅಧ್ಯಕ್ಷತೆಯಲ್ಲಿ ನಡೆದ ಎಂ.ಪಿ.ಸಿ.ಸಿ. ಸಭೆಯು ಶಿಫಾರಸು ಮಾಡಿದೆ.

ವಿಶ್ವಸಂಸ್ಥೆಗೆ ಅಧ್ಯಕ್ಷರಾಗಿ ಚುನಾಯಿತರಾಗಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನು ಅಭಿನಂದಿಸಲಾಯಿತು.

ಶ್ರೀಗಳಾದ ಬಿ. ಎಂ. ಶ್ರೀನಿವಾಸಯ್ಯ ಮತ್ತು ಎಂ.ಆರ್. ಶ್ರೀನಿವಾಸಮೂರ್ತಿಯವರ ನಿಧನಕ್ಕಾಗಿ ಸಂತಾಪ ಸೂಚಕ ನಿರ್ಣಯಗಳನ್ನು ಸಭೆ ಅಂಗೀಕರಿಸಿತು.

ಭೂದಾನ ಯಜ್ಞ ಚಳುವಳಿ

ಮೈಸೂರು ೨೨

ಬರುವ ಅಕ್ಟೋಬರ್ ೨ನೇ ತಾರೀಖು ಗಾಂಧಿ ಜಯಂತಿಯ ದಿನ ನಂಜನಗೂಡು ತಾಲ್ಲೂಕಿನಲ್ಲಿ ಭೂದಾನ ಯಜ್ಞ ಚಳುವಳಿ ಪ್ರಾರಂಭವಾಗಲಿದೆ. ಅಂದಿನಿಂದ ಎರಡು ವಾರ ಪರ್ಯಂತ ಸದರಿ ತಾಲ್ಲೂಕಿನಲ್ಲಿ ಭೂದಾನ ಕಾರ್ಯಕರ್ತರ ಅನೇಕ ತಂಡಗಳು ಪಾದಯಾತ್ರೆ ಕೈಗೊಂಡು ಭೂದಾನ ಪ್ರಚಾರ ಮತ್ತು ಶೇಖರಣೆಗೆ ಹೊರಡಲಿದೆ ಈ ಅವಧಿಯ ಮೊದಲನೆಯ ವಾರ ಕೆಲವು ತಂಡಗಳೂ ಎರಡನೆಯ ವಾರ ಇನ್ನೂ ಕೆಲವು ತಂಡಗಳೂ ಪ್ರವಾಸ ಹೊರಡುವುವು ಪಾದಯಾತ್ರೆಯಲ್ಲಿ ಭಾಗವಹಿಸಲು ಅಪೇಕ್ಷಿಸುವ ಉತ್ಸಾಹಿಗಳೆಲ್ಲರೂ ದಯಮಾಡಿ ತಮ್ಮ ಹೆಸರು, ವಿಳಾಸ ಇತ್ಯಾದಿ ವಿವರಗಳನ್ನು ಮೈಸೂರು ದಿವಾನ್ಸ್ ರಸ್ತೆ ಡೋರ್ ನಂ ೨೮೫ ರಲ್ಲಿರುವ ಜಿಲ್ಲಾ ಭೂದಾನ ಕಾರ್ಯಾಲಯದಲ್ಲಾಗಲಿ, ಲಕ್ಷ್ಮೀವಿಲಾಸ ಅಗ್ರಹಾರದಲ್ಲಿರುವ "ಚೇತನ" ಪುಸ್ತಕಾಲಯದಲ್ಲಾಗಲಿ, ನಂಜನಗೂಡು. ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಎಂ. ಕೃಷ್ಣಯ್ಯನವರಿಗಾಗಲಿ ತಿಳಿಸಬೇಕಾಗಿ ಪ್ರಾರ್ಥಿಸಲಾಗಿದೆ.

ಸ್ವತ್ತಿನ ತೆರಿಗೆ ಮಸೂದೆ

ಸ್ವತ್ತಿನ ತೆರಿಗೆ ಮಸೂದೆಯನ್ನು ಕೇಂದ್ರ ಉಭಯ ಶಾಸನ ಸಭೆಗಳು ಅಂಗೀಕರಿಸಿವೆ.

ಈ ಹೊಸತೆರಿಗೆ ವಿಧಿಸುವುದರಿಂದ ೧೫ ಕೋಟಿ ರೂಪಾಯಿಗಳು ಉತ್ಪತ್ತಿಯಾಗುತ್ತವೆಯೆಂದು ಹೇಳಲಾಗಿದೆ. ಈ ಹಣವನ್ನೆಲ್ಲಾ ಆಯಾ ಪ್ರಾಂತ್ಯಗಳ ಅಭಿವೃದ್ಧಿ ಕಾರ್ಯಗಳಿಗಾಗಿ ಉಪಯೋಗಿಸಲಾಗುತ್ತದೆ.

ನಗರದಲ್ಲಿ ಗೋವಧೆ ನಿಲ್ಲಿಸಲು ಒತ್ತಾಯ

ಪುರಸಭೆಯಲ್ಲಿ ನಿರ್ಣಯ

ಮೈಸೂರು ೨೨

ಮೈಸೂರು ನಗರದಲ್ಲಿ ಗೋವಧೆಯು ದಿನೇದಿನೇ ಹೆಚ್ಚಾಗಿ ನಡೆಯುತ್ತಿರುವುದನ್ನು ತಡೆಗಟ್ಟಲು ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದೂ ಮತ್ತು ಅಂತಹವರಿಗೆ ಉಗ್ರ ಶಿಕ್ಷೆ ವಿಧಿಸಬೇಕೆಂದೂ ಪ್ರಾರ್ಥಿಸುವ ನಿರ್ಣಯವನ್ನು ಶ್ರೀ ಚೌಡಯ್ಯನವರು ಇದೇ ೨೮ನೇ ತಾರೀಖು ಸೋಮವಾರ ಮಧ್ಯಾಹ್ನ ನಡೆಯಲಿರುವ ಪುರಸಭೆಯಲ್ಲಿ ಮಂಡಿಸಲಿದ್ದಾರೆ.

ಮೈಸೂರು ನಗರಕ್ಕೆ ಗೋಮಾಂಸವು ಬರದಂತೆ ಸರ್ಕಾರದವರು ಪ್ರತಿಬಂಧಕ ಹಾಕಬೇಕೆಂದೂ ಶ್ರೀ ಬಿ. ಜಿ. ದಾಸ್‌ರವರು ಮತ್ತೊಂದು ನಿರ್ಣಯ ತರಲಿದ್ದಾರೆ.

ಕನ್ನೇಗೌಡನ ಕೊಪ್ಪಲಿನಲ್ಲಿ ನೀರು ಸರಬರಾಜು ವ್ಯವಸ್ಥೆ ಅಭಿವೃದ್ಧಿಗಾಗಿ ೧೫೧೧೦ ರೂ. ಅಂದಾಜನ್ನು ಸರ್ಕಾರ ಮಂಜೂರು ಮಾಡಿದೆ.

ಮಕ್ಕಳಿಗೆ ನಾಯಿಕೆಮ್ಮು ಮತ್ತು ಡಿಪ್ತೀರಿಯಾ ರೋಗ ಬರದಂತೆ ೬೭೦೦ ರೂಪಾಯಿಗಳ ನಿವಾರಣಾ ಯೋಜನೆಯನ್ನು ಸರಕಾರ ಮಂಜೂರುಮಾಡಿದೆ.

ಬಡ ವಿದ್ಯಾರ್ಥಿಗಳ ಉಚಿತ ಆಹಾರ ಸವಲತ್ತಿಗೆ ಹೆಚ್ಚು ಹಣ ಸಹಾಯ ಮಾಡಬೇಕೆಂಬ ಪುರಸಭೆಯ ನಿರ್ಧಾರವನ್ನು ಸರ್ಕಾರ ತಿರಸ್ಕರಿಸಿದೆ.

ಹುಮಾಯೂನ್ ಕಬೀರ್ ಅಮೆರಿಕಾಕ್ಕೆ

ಅಮೆರಿಕಾದಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ವಿಷಯಗಳನ್ನು ಚರ್ಚಿಸಲು ನ್ಯೂಯಾರ್ಕ್‌ನಲ್ಲಿ ಸೇರಲಿರುವ ವಿದ್ಯಾಭ್ಯಾಸ ಪರಿಣಿತರ ಸಮಿತಿಯಲ್ಲಿ ಭಾಗ ವಹಿಸಲು ಭಾರತದ ವಿದ್ಯಾಭ್ಯಾಸ ಶಾಖಾ ಕಾರ್ಯದರ್ಶಿ ಶ್ರೀ ಹುಮಾಯೂನ್ ಕಬೀರ್ ರವರು ಅಲ್ಲಿಗೆ ತೆರಳುವ ಮಾರ್ಗದಲ್ಲಿ ಲಂಡನ್ನಿಗೆ ಹೋಗಿದ್ದಾರೆ.

ಅಮೆರಿಕಾದಲ್ಲಿ ವಿದ್ಯಾಭ್ಯಾಸ ಅಭಿವೃದ್ಧಿಗಾಗಿ ಸಲಹೆಗಾರರನ್ನಾಗಿ ಅವರನ್ನು ಆಹ್ವಾನಿಸಲಾಗಿದೆ.

ಅಮೆರಿಕಾ ಉಪಾಧ್ಯಕ್ಷ ಭಾರತಕ್ಕೆ

ಅಮೆರಿಕಾ ಉಪಾಧ್ಯಕ್ಷರಾದ ರಿಚರ್ಡ್ ಎಂ. ನಿಕ್ಸನ್‌ರವರು ಮುಂದಿನ ನವಂಬರ್ ೨೯ನೇ ತಾರೀಖು ಭಾರತಕ್ಕೆ ಆಗಮಿಸುವರೆಂದು ತಿಳಿಯಬರುತ್ತದೆ.

ಪ್ರಕಾಶಂ ಇಲ್ಲದ ಆಂಧ್ರ ಸರ್ಕಾರದಲ್ಲಿ ಸುಭದ್ರತೆಯಿಲ್ಲ

ಲೋಕ ಸಭೆಯ ಉಪಾಧ್ಯಕ್ಷರ ಹೇಳಿಕೆ

ಆಂಧ್ರದ ಎಲ್ಲಾ ಪಕ್ಷದವರೂ ಶ್ರೀ ಟಿ. ಪ್ರಕಾಶಂರವರ ನಾಯಕತ್ವವನ್ನು ಒಪ್ಪಿರುವುದರಿಂದ ಅವರಿಲ್ಲದೆ ಆಂಧ್ರಪ್ರಾಂತ್ಯ ಸರಕಾರವು ಸುಭದ್ರವಾಗಿರುವುದಿಲ್ಲ-ಎಂದು ಲೋಕಸಭೆಯ ಉಪಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರ್‌ರವರು ಹೇಳಿರುವರು.

ಪಕ್ಷದ ರಾಜಕೀಯವನ್ನು ತೊರೆದು ಅದಕ್ಕಿಂತ ಮಿಗಿಲಾದ ಆಂಧ್ರಪ್ರಾಂತ್ಯವನ್ನು ಹೆಚ್ಚು ಪಾದುದೆಂದು ಎಲ್ಲರೂ ತೋರಿಸಬೇಕಾಗಿದೆ. ಶ್ರೀ ಪ್ರಕಾಶಂರವರು ಯಾವ ರಾಜಕೀಯ ಪಕ್ಷವನ್ನೂ ಸೇರದೆ ಸ್ವತಂತ್ರವಾಗಿದ್ದರೆ ಮಾತ್ರ ಆಗ ಸುಭದ್ರ ಸರ್ಕಾರವನ್ನು ರಚಿಸಲು ಅವರು ನಾಯಕರಾಗಬಹುದು-ಎಂದು ಶ್ರೀ ಅನಂತಶಯನಂರವರು ಹೇಳಿದ್ದಾರೆ.

'ಕಿಡಿ' ಪತ್ರಿಕೆ ಮೇಲೆ ಕಂಟೆಂಪ್ಟ್ ಆಫ್ ಕೋರ್ಟ್ ಮೊಕದ್ದಮೆ

ಬೆಂಗಳೂರು ೨೨

ಕಿಡಿ ಪತ್ರಿಕೆ ಸಂಪಾದಕರಾದ ಶ್ರೀ ಪಿ. ಶೇಷಪ್ಪ ಮತ್ತು ಮುದ್ರಕ ಶ್ರೀ ಎಂ.ಎಸ್. ಚಿಂತಾಮಣಿಯವರಮೇಲೆ ಕಂಟೆಂಪ್ಟ್ ಆಫ್ ಕೋರ್ಟ್ ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಮ್ಯಾಜಿಸ್ಟ್ರೇಟರು ಸಲ್ಲಿಸಿದ ಅರ್ಜಿಯನ್ನು ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಸ್ವೀಕರಿಸಿ, ಹೈಕೋರ್ಟು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಂಬಂಧಪಟ್ಟ ದಾಖಲೆಗಳನ್ನು ಅಲ್ಲಿಗೆ ಒಪ್ಪಿಸಲಾಗುವುದೆಂದು ತೀರ್ಮಾನಿಸಿದ್ದಾರೆ.

ಶ್ರೀಗಳಾದ ಶೇಷಪ್ಪ ಮತ್ತು ಚಿಂತಾಮಣಿಯವರಮೇಲೆ ಪತ್ರಿಕಾ ಕಾನೂನಿನ ಪ್ರಕಾರ ನಡೆಯುತ್ತಿರುವ ಮೊಕದ್ದಮೆ ನ್ಯಾಯಾಲಯದ ಮುಂದಿದ್ದಾಗ ೫-೪-೫೩ರ ಪತ್ರಿಕೆಯಲ್ಲಿ ಬರೆದಿದ್ದ ಲೇಖನವು ಕಂಟೆಂಪ್ಟ್ ಆಫ್ ಕೋರ್ಟ್ ಆಗುವುದೆಂದು ಜಿಲ್ಲಾಧಿಕಾರಿಗಳು ತಮ್ಮ ಅರ್ಜಿಯಲ್ಲಿ ನಮೂದಿಸಿದ್ದಾರೆ.

● ಪಾರ್ಲಿಮೆಂಟಿನ ಮಹಿಳಾ ಸದಸ್ಯರಾದ ಶ್ರೀಮತಿ ಅಮ್ಮುಸ್ವಾಮಿನಾಥನ್, ತೆಹರಿ ಘರ್ವಾಲಿನ ರಾಜಮಾತಾ ಮತ್ತು ಬೇಗಂ ಅಜೀಜ್ ರಸೂಲ್‌ರು ಕೂಡಿದ ನಿಯೋಗವೊಂದು ಇದೇ ೨೮ನೇ ತಾರೀಖು ಜಪಾನಿಗೆ ತೆರಳಿ ಮೂರು ವಾರ ಕಾಲ ಪ್ರವಾಸ ಮಾಡುವುದು.

ಮೈಸೂರು ಶ್ರೇಷ್ಠ ನ್ಯಾಯಾಲಯಕ್ಕೆ ಮತ್ತೊಬ್ಬ ನ್ಯಾಯಾಧೀಶರು

ಬೆಂಗಳೂರು ೨೨

ರಾಜ್ಯಾಂಗ ಪ್ರಕಾರ ನಿಗದಿಯಾಗಿರುವಂತೆ ಮೈಸೂರು ಶ್ರೇಷ್ಠ ನ್ಯಾಯಾಲಯಕ್ಕೆ ಮತ್ತೊಬ್ಬ ನ್ಯಾಯಾಧೀಶರನ್ನು ಕೊಡಬೇಕೆಂದು ಶ್ರೇಷ್ಠ ನ್ಯಾಯಾಲಯವು ಮೈಸೂರು ಸರ್ಕಾರವನ್ನು ಕೇಳಿರುವುದಾಗಿ ತಿಳಿಯಬರುತ್ತದೆ.

ಈಗ ಶ್ರೇಷ್ಠ ನ್ಯಾಯಾಲಯದಲ್ಲಿ ೫ ನ್ಯಾಯಾಧೀಶರಿರುವರು. ರಾಜ್ಯಾಂಗದಂತೆ ೬ ಜನಕ್ಕೆ ಅವಕಾಶವಿದೆ. ಇನ್ನೊಬ್ಬರ ಅವಶ್ಯಕವಿಲ್ಲವೆಂದು ಶ್ರೇಷ್ಠ ನ್ಯಾಯಾಲಯವು ಕಳೆದ ಸಾಲಿನಲ್ಲಿ ಸರ್ಕಾರಕ್ಕೆ ತಿಳಿಸಿತ್ತು. ಆದರೆ ಈಗ ಬಳ್ಳಾರಿಜಿಲ್ಲೆಯ ಭಾಗಗಳು ಮೈಸೂರಿಗೆ ಸೇರುವುದರಿಂದಲೂ ಕೊಡಗಿನ ವ್ಯಾಪ್ತಿಗೆ ಇಲ್ಲಿಗೆ ಸೇರುವುದರಿಂದಲೂ ಮೈಸೂರು ಶ್ರೇಷ್ಠ ನ್ಯಾಯಾಲಯದ ಕಾರ್ಯವು ಹೆಚ್ಚಿದೆ. ಆದ್ದರಿಂದ ಮತ್ತೊಬ್ಬ ನ್ಯಾಯಾಧೀಶರನ್ನು ಕೇಳಲಾಗಿದೆ. ಈ ವಿಷಯವನ್ನು ಮಂತ್ರಿಮಂಡಲವು ಪರಿಶೀಲಿಸುತ್ತಿರುವುದಾಗಿ ತಿಳಿಯಬರುತ್ತದೆ.

ಶಾಸನ ಸಭಾ ಸದಸ್ಯರ ಫುಟ್‌ಬಾಲ್ ಪಂದ್ಯ

ಗೋದಾವರಿ ಪ್ರವಾಹ ಪರಿಹಾರ ನಿಧಿಗೆ ಹೈದರಾಬಾದಿನಲ್ಲಿ ಮುಂದಿನ ತಿಂಗಳು ೩ನೇ ತಾರೀಖು. ಸಂಸ್ಥಾನದ ಶಾಸನ ಸಭಾ ಸದಸ್ಯರ ಮತ್ತು ಮುಖ್ಯಮಂತ್ರಿ ತಂಡಗಳಿಗೆ ಫುಟ್‌ಬಾಲ್ ಪಂದ್ಯ ನಡೆಯುವುದು. ಕೇಂದ್ರ ಗೃಹ ಸಚಿವರು ಪಂದ್ಯದ ಆರಂಭೋತ್ಸವ ನೆರವೇರಿಸುವರು.

ಪೋಲೀಸರಿಂದ ಮ್ಯಾಜಿಸ್ಟ್ರೇಟರ ದಸ್ತಗಿರಿ

ಆಜಾದ್ ಕಾಶ್ಮೀರದ ಮೀರ್‌ಪುರ್ ಜಿಲ್ಲೆಯ ಕೋಟ್ಲೀಲ್ ಎಂಬಲ್ಲಿ ಸಬ್ ಡಿವಿಜನಲ್ ಮ್ಯಾಜಿಸ್ಟ್ರೇಟರು ಇನ್ನು ೩ ಮ್ಯಾಜಿಸ್ಟ್ರೇಟರೊಡನೆ ಪೋಲೀಸ್ ಠಾಣೆಗೆ ಭೇಟಿಯಿತ್ತಾಗ ಪೋಲೀಸಿನವರು ಅವರನ್ನು ದಸ್ತಗಿರಿ ಮಾಡಿದರೆಂದು ಹೇಳಲಾಗಿದೆ. ಈ ಸಂದರ್ಭದಲ್ಲಿ ಆಜಾದ್ ಕಾಶ್ಮೀರ ಸರ್ಕಾರವು ಕೆಲವು ಅಧಿಕಾರಿಗಳನ್ನು ಕೆಲಸದಿಂದ ಸಸ್ಪೆಂಡ್ ಮಾಡಿದೆ.

ಭಾರತ-ಬ್ರಿಟನ್ ವ್ಯಾಪಾರ

ಬ್ರಿಟನ್ ಈಸಾರಿ ಮೊದಲನೆ ೭ ತಿಂಗಳುಗಳಲ್ಲಿ ಕೊಂಡ ಟೀಯಲ್ಲಿ ೧೩೯,೭೫೩,೦೦೦ ಪೌಂಡುಗಳಷ್ಟನ್ನು ಭಾರತದಿಂದಲೇ ಪಡೆದು ಅದಕ್ಕಾಗಿ ೨೧,೧೭೬,೦೦೦ ಪೌಂಡುಗಳನ್ನು ಕೊಟ್ಟಿರುವುದಾಗಿ ಭಾರತ-ಬ್ರಿಟನ್ ವ್ಯಾಪಾರದ ವರದಿಯಿಂದ ತಿಳಿಯಬರುತ್ತದೆ.

ಭಾರತದಿಂದ ಬ್ರಿಟನ್ ಟೀಯನ್ನೇ ಅಲ್ಲದೆ ಚರ್ಮದ ಸಾಮಾನುಗಳು, ಸೆಣಬು ವಸ್ತುಗಳು, ಹೊಗೆಸೊಪ್ಪು, ಉಣ್ಣೆ, ಹತ್ತಿ ಮತ್ತು ಹತ್ತಿಯ ವೇಸ್ಟ್, ಮ್ಯಾಂಗನೀಸ್ ಮುಂತಾದ ನಾನಾ ಉಪಯುಕ್ತ ವಸ್ತುಗಳನ್ನು ಭಾರತದಿಂದಲೇ ಅಧಿಕ ಪ್ರಮಾಣದಲ್ಲಿ ಪಡೆಯುತ್ತಿದೆ.

ಜುಲೈಗೆ ಮುಕ್ತಾಯವಾದ ೭ ತಿಂಗಳಲ್ಲಿ ಬ್ರಿಟನ್ ೮,೨೭೫,೦೦೦ ಪೌಂಡುಗಳ ಬೆಲೆಯ ಚರ್ಮದ ವಸ್ತುಗಳು, ೨,೫೪೬,೦೦೦ ಪೌಂಡುಗಳ ಬೆಲೆಯ ೭೦,೮೯೩,೦೦೦ ಚದುರಗಜಗಳಷ್ಟು ಸೆಣಬು ವಸ್ತುಗಳು ೧,೫೯೬,೦೦೦ ಪೌಂಡುಗಳ ಬೆಲೆಯ ಗೋಣಿಚೀಲಗಳು, ೯೬೩,೦೦೦ ಪೌಂಡುಗಳ ಚಾಪೆಗಳನ್ನು ಕೊಂಡಿದೆ.

ಬ್ರಿಟನ್ ಕೊಳ್ಳುವ ಹೊಗೆಸೊಪ್ಪಿನಲ್ಲಿ ೩,೮೦೪,೦೦೦ ಪೌಂಡುಗಳ ಬೆಲೆಯಷ್ಟನ್ನು ಭಾರತದಿಂದಲೇ ತರಿಸಿಕೊಂಡಿದೆ. ಇದಲ್ಲದೆ ೨,೮೫೫,೦೦೦ ಪೌಂಡುಗಳ ಬೆಲೆಯ ಉಣ್ಣೆ ಮತ್ತು ಅದರ ವಸ್ತುಗಳನ್ನೂ ಸಹ ಭಾರತವು ಬ್ರಿಟನ್ನಿಗೆ ಕಳುಹಿಸಿದೆ.

ಬ್ರಿಟನ್ ಕೊಳ್ಳುವ ಮ್ಯಾಂಗನೀಸಿನಲ್ಲಿ ಮೂರನೇ ಒಂದುಭಾಗದಷ್ಟು ಭಾರತದಿಂದಲೇ ಅಲ್ಲಿಗೆ ಸರಬರಾಜು ಆಗಿದೆ. ಇದಕ್ಕಾಗಿ ಬ್ರಿಟನ್ ೧,೫೪೧,೦೦೦ ಪೌಂಡುಗಳನ್ನು ಕೊಟ್ಟಿದೆ. ಇದಲ್ಲದೆ ಬ್ರಿಟನ್ ಎಣ್ಣೆ ಬೀಜಗಳು, ಮತ್ತು ಇತರ ಅನೇಕ ಸುಮಾರು ೫,೭೫೩,೦೦೦ ಪೌಂಡುಗಳ ಬೆಲೆಯ ವಸ್ತುಗಳನ್ನು ಭಾರತದಿಂದ ತರಿಸಿಕೊಂಡಿದೆ.

ಬ್ರಿಟನ್ ಭಾರತಕ್ಕೆ ಸರಬರಾಜುಮಾಡಿರುವ ವಸ್ತುಗಳಲ್ಲಿ ಮೂರನೇ ಒಂದುಭಾಗವು ಯಂತ್ರಸಾಮಗ್ರಿಗಳಾಗಿವೆ. ಜುಲೈ ಅಂತ್ಯದವರೆಗೆ ಬ್ರಿಟನ್ ಭಾರತಕ್ಕೆ ಸುಮಾರು ೨೦,೬೯೯,೦೦೦ ಪೌಂಡುಗಳಷ್ಟು ಬೆಲೆಬಾಳುವ ಯಂತ್ರಸಾಮಗ್ರಿಗಳನ್ನು ಕಳುಹಿಸಿದೆ. ಇದರಲ್ಲಿ ಬಟ್ಟೆಯಂತ್ರಗಳೇ ೪,೪೩೩,೦೦೦ ಪೌಂಡುಗಳಷ್ಟು ಆಗಿವೆ.

ಬ್ರಿಟನ್ ಭಾರತಕ್ಕೆ ಕಳುಹಿಸಿರುವ ಚಲಿಸುವ ಯಂತ್ರಗಳ ಬೆಲೆಯು ೯,೦೪೪,೦೦೦ ಪೌಂಡುಗಳು. ಅವುಗಳಲ್ಲಿ ೮೬ ರೈಲ್ವೆ ಇಂಜಿನ್‌ಗಳು, ೨೦೧೨ ಮೋಟಾರುಕಾರುಗಳು, ೩೭೨ ವ್ಯವಸಾಯ ಟ್ರಾಕ್ಟರುಗಳು, ೫೮೬೮ ಬೈಸಿಕಲ್‌ಗಳು ಸೇರಿವೆ.

ಇದಲ್ಲದೆ ಭಾರತವು ಬ್ರಿಟನ್ನಿನಿಂದ ೭,೨೬೮,೦೦೦ ಪೌಂಡುಗಳ ಬೆಲೆಯ ವಿದ್ಯುಚ್ಛಕ್ತಿ ಸಲಕರಣೆಗಳನ್ನು ತರಿಸಿಕೊಂಡಿದೆ.

ಒಟ್ಟಿನಲ್ಲಿ ಈ ವರ್ಷದ ಮೊದಲನೆ ೭ ತಿಂಗಳುಗಳಲ್ಲಿ ಬ್ರಿಟನ್ ಭಾರತಕ್ಕೆ ೬೬,೮೬೯,೦೦೦ ಪೌಂಡುಗಳ ಬೆಲೆಬಾಳುವಷ್ಟು ವಸ್ತುಗಳನ್ನು ಕಳುಹಿಸಿ, ೫೮,೨೫೪,೦೦೦ ಪೌಂಡುಗಳಷ್ಟು ವಸ್ತುಗಳನ್ನು ತರಿಸಿಕೊಂಡಿದೆ.

ಹರಿಜನ ದಿನ

ಮುಂದಿನತಿಂಗಳು ೪ನೇ ತಾರೀಖು ಬೊಂಬಾಯಿ ಪ್ರಾಂತ್ಯದಾದ್ಯಂತ ಹರಿಜನ ದಿನವನ್ನು ಆಚರಿಸಲಾಗುತ್ತದೆ.

ತಿರುವಾಂಕೂರ್-ಕೊಚ್ಚಿಯಲ್ಲಿ ಕಾಮರಾಜನಾದಾರ್ ಸಂಧಾನ

ಕಾಂಗ್ರೆಸ್ ಸರ್ಕಾರ ಮತ್ತು ತಮಿಳುನಾಡು ಕಾಂಗ್ರೆಸ್ ಭಿನ್ನತೆ ಪರಿಹಾರಕ್ಕಾಗಿ

ತಮಿಳು ಭಾಷೆಯ ಕೆಲವು ತಾಲ್ಲೂಕುಗಳಿಗೆ ಪ್ರತ್ಯೇಕ ಪ್ರದೇಶ ಕಾಂಗ್ರೆಸ್ ರಚಿಸಬೇಕೆಂಬ ಸಲಹೆಯನ್ನು ತಿರಸ್ಕರಿಸಿದುದರಿಂದ ತಮಿಳು ನಾಡು ಕಾಂಗ್ರೆಸ್ ಸಮಿತಿಯು ತಿರುವಾಂಕೂರಿನಲ್ಲಿ ಕಾಂಗ್ರೆಸ್ ಸರ್ಕಾರಕ್ಕೆ ತನ್ನ ಬೆಂಬಲವನ್ನು ಕೊಡುವುದನ್ನು ನಿಲ್ಲಿಸಿದುದರ ಪರಿಣಾಮವಾಗಿ ಉಂಟಾಗಿರುವ ಉಗ್ರ ಪರಿಸ್ಥಿತಿಯ ಬಗ್ಗೆ ಉಭಯತ್ರರ ನಡುವೆ ಸಂಧಾನ ನಡೆಸಿ, ಭಿನ್ನತೆಯನ್ನು ಹೋಗಲಾಡಿಸಲು ತಮಿಳು ನಾಡು ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಕಾಮರಾಜ ನಾದಾರ್‌ರವರು ನಿನ್ನೆಯ ದಿನ ದೆಹಲಿಯಿಂದ ತಿರುವನಂತಪುರಕ್ಕೆ ಆಗಮಿಸಿದರು. ಕೂಡಲೇ ಅವರು ಸರ್ಕಾರದಲ್ಲಿರುವ ಕಾಂಗ್ರೆಸ್ ಸಚಿವರು ಅಲ್ಲಿಯ ತಮಿಳು ನಾಡು ಕಾಂಗ್ರೆಸ್ಸಿನ ನಾಯಕರು ಮುಂತಾದವರನ್ನು ಭೇಟಿ ವಿಚಾರ ವಿನಿಮಯ ನಡೆಸಿದರೆಂದು ತಿಳಿಯಬರುತ್ತದೆ.

ಈ ನಡುವೆ ನಿನ್ನೆಯ ದಿನ ಪ್ರಾರಂಭವಾದ ಪ್ರಾಂತ್ಯದ ಶಾಸನ ಸಭೆಯಲ್ಲಿ ಕಾಂಗ್ರೆಸ್ ಸರ್ಕಾರವು ಒಂದು ವಿಶ್ವಾಸ ಕೋರುವ ನಿರ್ಣಯವನ್ನು ಮಂಡಿಸಿದೆ. ಇದನ್ನು ಈ ದಿನ ಚರ್ಚೆಗೆ ತೆಗೆದುಕೊಳ್ಳಲಾಗುತ್ತದೆ. ಈ ವಿಶ್ವಾಸ ನಿರ್ಣಯವು ನಿರ್ಧಾರವಾಗುವುದರೊಳಗಾಗಿ ತಮಿಳುನಾಡು ಕಾಂಗ್ರೆಸ್ಸಿಗರೊಡನೆ ಶ್ರೀ ನಾದಾರ್‌ರವರು ಸಂಧಾನ ನಡೆಸಿ ಪುನಃ ಕಾಂಗ್ರೆಸ್ ಸರ್ಕಾರಕ್ಕೆ ಆ ಪಕ್ಷದ ಸದಸ್ಯರ ಬೆಂಬಲವನ್ನು ಪಡೆಯಲು ಯತ್ನಿಸುತ್ತಲಿರುವುದಾಗಿ ತಿಳಿಯಬರುತ್ತದೆ. ಈಗಾಗಲೇ ವಿರೋಧದಲ್ಲಿರುವ ಪ್ರಜಾ ಸೋಷಲಿಸ್ಟ್ ಪಕ್ಷ, ಡೆಮೊಕ್ರಾಟಿಕ್ ಫ್ರಂಟ್ ಮುಂತಾದುವು ಕಾಂಗ್ರೆಸ್ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ತರಬೇಕೆಂದು ತೀರ್ಮಾನಿಸಿರುವುದಾಗಿ ಹೇಳಲಾಗಿದೆ. ಇವರಿಗೆ ತಮಿಳುನಾಡು ಕಾಂಗ್ರೆಸ್ಸಿಗರೂ ಬೆಂಬಲವಿತ್ತರೆ ಆಗ ಆಡಳಿತವು ಕುಸಿದು ಬೀಳುವ ಸಂಭವವಿದೆ. ಇದನ್ನು ತಪ್ಪಿಸಲು ಶ್ರೀ ನಾದಾರ್‌ರವರು ಸಂಧಾನ ನಡೆಸುತ್ತಲಿದ್ದಾರೆ.

ಹೈದರಾಬಾದಿಗೆ ಕೇಂದ್ರದ ನೆರವು

ಹೈದರಾಬಾದಿನಲ್ಲಿ ನೀರಾವರಿ ಕೆಲಸಗಳನ್ನು ಕೈಕೊಳ್ಳಲು ೩ ಕೋಟಿ ರೂಪಾಯಿಗಳ ಸಾಲವನ್ನು ಭಾರತ ಸರ್ಕಾರವು ಕೊಡಲಿದೆಯೆಂದು ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೨—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೩—	೨೨—
ಎಳ್ಳು	೬೬—೮	೮೬—
ಹುರುಳಿ	೪೭—೭	೪೭—೧೪
ಅಲಸಂದೆ	೭೨—೨	೭೪—೧೦
ಹುಣಸೇಹಣ್ಣು	೭—೩	೮—೧೦
ತೆಂಗಿನಕಾಯಿ	೨೩೧	೨೬೮

ಪ್ರಕಾಶಂ ಪ್ರಜಾಸೋಷಲಿಸ್ಟ್ ಪಕ್ಷ ತ್ಯಜಿಸುವರೇ?

ಪ್ರಜಾಸೋಷಲಿಸ್ಟ್ ಪಕ್ಷದ ನಾಯಕ ಶ್ರೀ ಟಿ. ಪ್ರಕಾಶಂರವರು ಆಂಧ್ರಪ್ರಾಂತ್ಯ ರಚನೆ ವಿಷಯದಲ್ಲಿ ದೆಹಲಿಯಲ್ಲಿ ಕಾಂಗ್ರೆಸ್ ಮತ್ತು ಪ್ರಜಾಸೋಷಲಿಸ್ಟ್ ಪಕ್ಷದ ನಾಯಕರನ್ನು ಭೇಟಿಮಾಡಿಕೊಂಡು ಮದರಾಸಿಗೆ ಹಿಂತಿರುಗಿದನಂತರ ತಮ್ಮ ಪಕ್ಷದ ಎಲ್ಲಾ ಸದಸ್ಯರನ್ನೂ ಅನಧಿಕೃತವಾಗಿ ಭೇಟಿಮಾಡಿ ಸಮಾಲೋಚನೆಯನ್ನು ನಿನ್ನೆಯದಿನ ನಡೆಸಿದರೆಂದು ಹೇಳಲಾಗಿದೆ.

ಶ್ರೀಯುತರು ಪ್ರಜಾಸೋಷಲಿಸ್ಟ್ ಪಕ್ಷಕ್ಕೂ ಸಹ ರಾಜೀನಾಮೆಯನ್ನಿತ್ತು ಸ್ವತಂತ್ರರಾಗಿಯೇ ಇದ್ದುಕೊಂಡು ಆಂಧ್ರದಲ್ಲಿ ಸುಭದ್ರವಾದ ಮಿಶ್ರಸರ್ಕಾರವನ್ನು ರಚಿಸುವರೆಂದು ಹೇಳಲಾಗಿದೆ.

ನಾಳೆಯದಿನ ಪ್ರಜಾಸೋಷಲಿಸ್ಟ್ ಪಕ್ಷದ ಕಾರ್ಯಕಾರಿಸಮಿತಿ ಸಭೆಯು ನಡೆದು ಈ ವಿಷಯದಲ್ಲಿ ಅಂತ್ಯತೀರ್ಮಾನಕ್ಕೆ ಬರಲಿದೆ.

ಬೀಹಾರ್ ಸರ್ಕಾರಕ್ಕೆ ವಿನೋಬಭಾವೆ ಎಚ್ಚರಿಕೆ

ಬೀಹಾರಿನಲ್ಲಿ ಇತ್ತೀಚೆಗೆ ಸರ್ಕಾರವು ಜಾರಿಗೆ ತಂದಿರುವ ಭೂದಾನಯಜ್ಞ ಕಾನೂನನ್ನು ಕೂಡಲೇ ತಿದ್ದುಪಡಿ ಮಾಡದಿದ್ದಲ್ಲಿ ತಾವು ಪಡೆದಿರುವ ಜಮೀನುಗಳೆಲ್ಲಾ ಅವನ್ನು ದಾನಮಾಡಿದವರಿಗೆ ಹಿಂದಕ್ಕೆ ಕೊಟ್ಟು ತಾವು ಬೀಹಾರ್ ಪ್ರಾಂತ್ಯವನ್ನು ಬಿಟ್ಟು ಹೊರಟುಹೋಗುವುದಾಗಿ ಆಚಾರ್ಯ ವಿನೋಬಭಾವೆಯವರು ಅಲ್ಲಿಯ ಸರ್ಕಾರಕ್ಕೆ ಎಚ್ಚರಿಸಿರುವುದಾಗಿ ತಿಳಿಯಬರುತ್ತದೆ.

ಬೀಹಾರ ಸರ್ಕಾರದ ಹೊಸ ಶಾಸನ ಪ್ರಕಾರ ಭೂದಾನ ಸಮಿತಿಗಳ ರಚನೆಬಗೆಗೆ ಅಧಿಕಾರವನ್ನು ಸರ್ಕಾರವು ಪಡೆಯುತ್ತದೆ. ಇದನ್ನು ಆಚಾರ್ಯ ವಿನೋಬಾಭಾವೆಯವರು ವಿರೋಧಿಸಿದ್ದಾರೆ.

ನೇಕಾರರಿಗೆ ಸರ್ಕಾರದ ನೆರವು

ಹೈದರಾಬಾದ್ ಪ್ರಾಂತ್ಯದಲ್ಲಿ ಕೈಮಗ್ಗದವರ ಅಭಿವೃದ್ಧಿಗಾಗಿ ಅಲ್ಲಿಯ ಸರ್ಕಾರವು ಹದಿನೈದುವರೆ ಲಕ್ಷ ರೂಪಾಯಿಗಳ ಸಾಲವನ್ನು ಕೊಟ್ಟಿರುವುದಾಗಿ ತಿಳಿಯಬರುತ್ತದೆ. ಅವರ ಅಭಿವೃದ್ಧಿ ಬಗ್ಗೆ ಒಂದು ಸಲಹಾ ಸಮಿತಿಯನ್ನೂ ಸಹ ನೇಮಿಸಲಾಗಿದೆ.

ಸಿಡಿಲು ಬಡಿದು ೩೦೦ ಕುರಿಗಳ ನಾಶ

ಕಳೆದವಾರದಲ್ಲಿ ಉಂಟಾದ ಸಿಡಿಲಿನಿಂದ ಹಿಮಾಲಯ ಪರ್ವತದ ಬಳಿ ಇದ್ದ ೯೦೦ ಆಡು ಮತ್ತು ಕುರಿಗಳಲ್ಲಿ ೩೦೦ ಸತ್ತು ಹೋದುವೆಂದು ತಿಳಿಯಬರುತ್ತದೆ.

ನಿಯೋ ಹೋಟಿಲ್ ಕೆಲಸಗಾರರ ಸಂಘ

ಮೈಸೂರು ೨೩

ನಗರದ ವೆಲ್‌ಕಂ ಹೋಟಿಲ್ ಮಾಲೀಕರು ವಿನಾ ಕಾರಣವಾಗಿ ದಾಸಿ ಎಂಬ ಕೆಲಸಗಾರನನ್ನು ತೆಗೆದುಹಾಕಿದ ವಿಷಯದಲ್ಲಿ ನಿನ್ನೆ ಅಂಗಡಿ ಕಾನೂನಿನ ಇನ್ಸ್‌ಪೆಕ್ಟರವರ ಸಮ್ಮುಖದಲ್ಲಿ ಮಾಲೀಕರಿಗೂ, ನಿಯೋ ಕೆಲಸಗಾರರ ಸಂಘದವರಿಗೂ ತೀರ್ಮಾನವಾಗಿ ತೆಗೆದು ಹಾಕಿದ ಕೆಲಸಗಾರನಿಗೆ ಎರಡು ತಿಂಗಳ ಸಂಬಳ ಕೊಡಬೇಕೆಂದು ಇತ್ಯರ್ಥವಾಯಿತು.

ಹಾಲೆಂಡಿನಿಂದ ಭಾರತಕ್ಕೆ ಟೆಲಿಫೋನ್ ಕೇಬಲ್‌ಗಳು

ಭಾರತವು ಹಾಲೆಂಡಿನಿಂದ ೮೦ ಲಕ್ಷ ರೂಪಾಯಿಗಳ ಬೆಲೆ ಬಾಳುವ ೩೦೦೦ ಟನ್‌ಗಳಷ್ಟು ಟೆಲಿಫೋನ್ ಕೇಬಲ್‌ಗಳನ್ನು ಕೊಳ್ಳಲು ಉಭಯತ್ರರ ನಡುವೆ ಒಪ್ಪಂದವಾಗಿರುವುದಾಗಿ ತಿಳಿಯಬರುತ್ತದೆ.

ಭಾಷಾ ಆಧಾರದ ಮೇಲೆ ಪ್ರಾಂತ್ಯ ರಚನೆ ಕೂಡದು

ಆಡಳಿತ ದೃಷ್ಟಿಯಿಂದ ಪ್ರಾಂತ್ಯಗಳನ್ನು ಪುನರ್ವಿಂಗಡನೆ ಮಾಡಬೇಕೆ ವಿನಃ ಭಾಷಾ ಆಧಾರ ಮೇಲೆ ಮಾಡಕೂಡದು. ಹಾಗೆ ಮಾಡಿದಲ್ಲಿ ಅದರಿಂದ ಉಂಟಾಗುವ ಅಪಘಾತ ಅಷ್ಟಿಷ್ಟಲ್ಲ ಎಂದು ಮೈಸೂರು ವಿಧಾನಸಭೆಯ ಸದಸ್ಯ ಶ್ರೀ ಭೀಮಪ್ಪ ನಾಯಕರು ಹೇಳಿದ್ದಾರೆ.

ಯಾರೂ ಯಾರ ಮುಂದೆಯೂ ತಲೆ ತಗ್ಗಿಸಬೇಕಾಗಿಲ್ಲ

ಕೆಲವರು ತಮ್ಮಲ್ಲಿ ಭಕ್ತಿಯನ್ನು ಸೂಚಿಸಲು ಕಾಲುಗಳನ್ನು ಮುಟ್ಟುವುದನ್ನು ಪ್ರಧಾನಿ ನೆಹರೂರವರು ಖಂಡಿಸಿ, ಸ್ವತಂತ್ರ ಭಾರತದಲ್ಲಿ ಯಾರೂ ಯಾರಿಗೂ ತಲೆ ತಗ್ಗಿಸಬೇಕಾದುದಿಲ್ಲವೆಂದು ಹೇಳಿದ್ದಾರೆ.

ಅಪೇರ
22-9-53 ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ನಾದನ್
[ಹಿಂದಿ]
ಪಾತ್ರ:—ದೇವಾನಂದ್, ಮಧುಬಾಲ

ರಣಜಿತ್
25-9-53 ರಿಂದ ಅಮೋಘ ಪ್ರಾರಂಭ
ಮುಮ್ತಾಜ್‌ಶಾಂತಿ, ಸುರೇಶ್ ನಟಿಸಿರುವ
ಜಮಾನಿಕಿ ಹವ [ಹಿಂದಿ]

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೩೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೩೧

೨೪-೯-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಏಷ್ಯಾವನ್ನು ರಾಜಕೀಯ ಕ್ರೀಡಾರಂಗವಾಗಲವಕಾಶ ಕೊಡೆವು

ಭದ್ರತಾ ಸಮಿತಿಯಲ್ಲಿ ಭಾರತವು ಸ್ಥಾನ ಅಪೇಕ್ಷಿಸುವುದಿಲ್ಲ

ಕೇಂದ್ರ ಹಿರಿಯ ಶಾಸನಸಭೆಯಲ್ಲಿ ಪ್ರಧಾನಿ ನೆಹರೂ ಹೇಳಿಕೆ

ಪಾಶ್ಚಿಮಾತ್ಯ ರಾಷ್ಟ್ರಗಳು ಏಷ್ಯಾವನ್ನು ರಾಜಕೀಯ ವ್ಯವಹಾರ ಮತ್ತು ಘರ್ಷಣೆಗಳಿಗೆ ಕ್ರೀಡಾರಂಗವನ್ನು ಮಾಡಿಕೊಳ್ಳುವುದನ್ನು ಏಷ್ಯಾ ರಾಷ್ಟ್ರಗಳು ಸಹಿಸಲಾರವು ಎಂದು ಪ್ರಧಾನಿ ನೆಹರೂರವರು ನಿನ್ನೆಯದಿನ ಹಿರಿಯ ಶಾಸನ ಸಭೆಯಲ್ಲಿ ಭಾರತದ ವಿದೇಶಾಂಗ ನೀತಿಯ ವಿಷಯದಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಕೊರಿಯಾ ರಾಜಕೀಯ ಸಮ್ಮೇಳನದಲ್ಲಿ ಪರಸ್ಪರ ಯುದ್ಧದಲ್ಲಿ ತೊಡಗಿದ್ದ ರಾಷ್ಟ್ರಗಳಲ್ಲದೆ ಇತರ ತಟಸ್ಥ ರಾಷ್ಟ್ರಗಳೂ ಭಾಗವಹಿಸಬೇಕು ಏಷ್ಯಾಕ್ಕೆ ಸಂಬಂಧಪಟ್ಟ ಅನೇಕ ಪ್ರಮುಖ ವಿಷಯಗಳು ಇಲ್ಲಿ ಚರ್ಚೆಗೆ ಬರಲಿವೆ ಆ ಸಮಸ್ಯೆಗಳನ್ನು ಏಷ್ಯೇತರರು ನಿರ್ಧರಿಸುವುದು ಸಾಧುವಲ್ಲ ಅಮೆರಿಕಾ ಮತ್ತು ಯೂರೋಪುಗಳು ಏಷ್ಯಾವನ್ನು ಉಪೇಕ್ಷಿಸಿದಲ್ಲಿ ಅದು ಅವರಿಗೇ ಹಾನಿ ಎಂದು ಶ್ರೀ ನೆಹರೂ ಎಚ್ಚರಿಸಿದರು.

ಅವರು ಭದ್ರತಾ ಸಮಿತಿಯ ವಿಷಯವಾಗಿ ಪ್ರಸ್ತಾಪಿಸುತ್ತಾ ಭಾರತವು ಭದ್ರತಾ ಸಮಿತಿಯಲ್ಲಿರಲು ಇಚ್ಛಿಸುವುದಿಲ್ಲ ಅದಕ್ಕಾಗಿ ಉಮೇದುವಾರಿಕೆ ಸಲ್ಲಿಸುವುದಿಲ್ಲ ಇನ್ನು ಮುಂದೆ ಭದ್ರತಾ ಸಮಿತಿಯಲ್ಲಿ ಫಾರ್ಮೋಸಾ ಮತ್ತು ಲೆಬನಾನ್ ರಾಷ್ಟ್ರಗಳು ಏಷ್ಯಾದ ಪ್ರತಿನಿಧಿಗಳಾಗುವರು. ಫಾರ್ಮೋಸಾವು ಚೈನಾ ರಾಷ್ಟ್ರವನ್ನು ಪ್ರತಿನಿಧಿಸುವುದೆಂಬುದು ವಿಚಿತ್ರವಾಗಿದೆ. ಎಂದು ಅವರು ತಿಳಿಸಿದರು.

ಚೀಣಿ ಜನತಾಸರ್ಕಾರದ ವಿಷಯವಾಗಿ ಅವರು ಮಾತನಾಡುತ್ತಾ ಭಾರತವು ಚೀಣಾದೊಡನೆ ಶಾಂತಿ ಸೌಹಾರ್ದ, ಸ್ನೇಹ ಬಾಂಧವ್ಯವನ್ನು ಹೊಂದಿದೆ ಟಿಬೆಟ್ಟಿನಲ್ಲಿ ಭಾರತವು ಇನ್ನೂ ಸ್ನೇಹವನ್ನು ಹೆಚ್ಚಿಸಲು ಸಾಂಸ್ಕೃತಿಕ, ವಾಣಿಜ್ಯ ಮತ್ತು ಅಂಚೆ, ತಂತಿಸೌಕರ್ಯಗಳ ಬಗ್ಗೆ ಮಾತುಕತೆ ನಡೆಸಲು ಚೀಣಾಕ್ಕೆ ಆಹ್ವಾನವನ್ನು ಕೊಡಲಾಗಿದೆಯೆಂದು ನೆಹರೂರವರು ತಿಳಿಸಿದರು.

ಕಾಶ್ಮೀರದ ವಿಷಯವಾಗಿ ಅವರು ಪ್ರಸ್ತಾಪಿಸುತ್ತಾ ಇತ್ತೀಚೆಗೆ ಕಾಶ್ಮೀರದಲ್ಲಿ ನಡೆದ ರಾಷ್ಟ್ರೀಯ ಸಮ್ಮೇಳನದ ಕಾರ್ಯಕಲಾಪಗಳನ್ನು ನೋಡಿದರೆ ಭಕ್ಷೀ ಸರ್ಕಾರಕ್ಕೆ ಅಲ್ಲಿಯ ಜನತೆಯ ಪೂರ್ಣ ಬೆಂಬಲವಿದೆಯೆಂಬುದರಲ್ಲಿ ಅನುಮಾನವೇ ಕಾಣಬರುವುದಿಲ್ಲ. ಪಾಕೀಸ್ತಾನವು ಇತ್ತೀಚೆಗೆ ತನ್ನ ಪತ್ರಿಕೆಗಳಲ್ಲಿ ಬೇಜವಾಬ್ದಾರಿಯುತವಾಗಿ ವರ್ತಿಸುತ್ತಲಿದ್ದರೂ ಅದನ್ನು ನಾವು ಗಮನಿಸಿಲ್ಲವೆಂದು ತಿಳಿಸಿದ್ದಾರೆ.

ಕೊರಿಯಾದಲ್ಲಿ ಶಾಂತಿಗಾಗಿ ಹೋಗಿರುವ ಮೇಲ್ವಿಚಾರಕ ಪಡೆಯು ಅಲ್ಲಿ ಎಲ್ಲರ ಮೆಚ್ಚುಗೆಯನ್ನು ಪಡೆದು ಉತ್ತಮ ಸೇವೆ ಸಲ್ಲಿಸುತ್ತಿರುವುದಾಗಿ ಅವರು ತಿಳಿಸಿದರು.

ಬಳ್ಳಾರಿ ಜಿಲ್ಲೆಗೆ ಮೈಸೂರು ಅಧಿಕಾರಿಗಳು

ಬೆಂಗಳೂರು ೨೪

ಬಳ್ಳಾರಿ ಜಿಲ್ಲೆಗೆ ಕೆಳಗೆ ಕಂಡ ಅಧಿಕಾರಿಗಳನ್ನು ವರ್ಗಾಯಿಸಲಾಗಿದೆ:—

ದಾವಣಗೆರೆಯ ಶ್ರೀ ಎಂ. ಕೆಂಪರಾಮಯ್ಯನವರನ್ನು ಹೊಸಪೇಟೆಯ ಸಬ್ ಡಿವಿಜನ್ ಪೋಲೀಸ್ ಎ. ಎಸ್. ಪಿ., ಬೆಂಗಳೂರಿನ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ ಎಸ್. ನೀಲಕಂಠಾರಾಧ್ಯ ಬಳ್ಳಾರಿ ಜಿಲ್ಲೆಯ ಪಾನನಿರೋಧ ಅಧಿಕಾರಿ, ಲಂಚನಿರೋಧ ಶಾಖೆಯ ಶ್ರೀ ಬಿ. ಮುನಿಗೌಡರು ಬಳ್ಳಾರಿಜಿಲ್ಲಾ ಡಿ.ಎಸ್.ಪಿ. ಯವರಿಗೆ ಹೆಡ್‌ಕ್ವಾರ್ಟರ್ಸ್ ಅಸಿಸ್ಟೆಂಟ್ ಬೆಂಗಳೂರಿನ ಅಸಿಸ್ಟೆಂಟ್ ಇಂಜನಿಯರ್ ಶ್ರೀ ಹೆಚ್. ಎನ್. ಸುಬ್ಬರಾಯರು ಬಳ್ಳಾರಿಜಿಲ್ಲೆಯ ಎಕ್ಸಿಕ್ಯೂಟಿವ್ ಇಂಜನಿಯರ್, ಹಿರಿಯೂರಿನ ಶ್ರೀ ಎಸ್. ಸಿ. ಕಂಜಾಕ್ಷಿ ಕುಮಾರ್, ಬೆಂಗಳೂರಿನ ಶ್ರೀ ಸಿ. ಜಿ. ವೆಂಕಟರಾವ್, ಚಿಕ್ಕಬಳ್ಳಾಪುರದ ಶ್ರೀ ಎ. ಬಿ. ರಮಾನಂದ್ ಮತ್ತು ಕನಕಪುರದ ಶ್ರೀ ಎಂ. ಟಿ. ಶ್ರೀನಿವಾಸ ಅಯ್ಯಂಗಾರ್ ಬಳ್ಳಾರಿ ಜಿಲ್ಲೆಯ ನಾಲ್ಕು ಡಿವಿಜನ್ ಅಸಿಸ್ಟೆಂಟ್ ಇಂಜನಿಯರುಗಳು.

ರಾಜಾದಾಯ ಕಡಿಮೆ ಮಾಡಿಕೊಳ್ಳಲು ಒಪ್ಪಿಗೆಯೇ

ತಮಗೆ ಸರ್ಕಾರವು ಕೊಡುತ್ತಿರುವ ರಾಜಾದಾಯವನ್ನು ಕಡಿಮೆಮಾಡಿಕೊಳ್ಳಲು ಪ್ರಧಾನಿಯವರ ಸಲಹೆಯನ್ನು ರಾಜಸ್ಥಾನದ ಮಾಜಿ ರಾಜಕುಮಾರರು ಸ್ವಾಗತಿಸಿರುವುದಾಗಿ ತಿಳಿಯಬರುತ್ತದೆ.

ಸೌರಾಷ್ಟ್ರದ ರಾಜಪ್ರಮುಖರಾದ ಜಾಂಸಾಹೇಬರು ಸದ್ಯದಲ್ಲೇ ಎಲ್ಲಾ ಮಾಜಿ ಕುಮಾರರ ಸಭೆ ಕರೆದು ಈ ವಿಷಯವನ್ನು ಚರ್ಚಿಸಲಿರುವರೆಂದು ಹೇಳಲಾಗಿದೆ.

ಗಾಂಧಿ ಜಯಂತಿ ಸಪ್ತಾಹ

ಮೈಸೂರು ೨೪

ನಾಳೆಯಿಂದ ಅಕ್ಟೋಬರ್ ೨ನೇ ತಾರೀಖಿನವರೆಗೆ ಗಾಂಧೀ ಜಯಂತಿ ಸಪ್ತಾಹದ ಅಂಗವಾಗಿ, ನಾಳೆಸಂಜೆ ೬ ಘಂಟೆಗೆ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಸಭೆ ನಡೆಯುವುದು. ಪ್ರಾರ್ಥನೆ, ಸಾಮೂಹಿಕ ಸೂತ್ರಯಜ್ಞ, ಗೀತಾ ಪಠಣ, ಗಾಂಧೀ ಸಾಹಿತ್ಯವಾಚನ, ಸರ್ವೋದಯ ಸಿದ್ಧಾಂತದ ಬಗ್ಗೆ ಪ್ರಶ್ನೋತ್ತರಗಳು ಜರುಗುವುವು.

ಇದೇರೀತಿ ಕಾರ್ಯಕ್ರಮಗಳು ವಿವಿಧ ಮೊಹಲ್ಲಾಗಳ ಸೇವಾಸಂಸ್ಥೆಗಳ ಆಶ್ರಯದಲ್ಲಿ ನಡೆಯುತ್ತದೆ ಎಂದು ನಗರದ ಸರ್ವೋದಯ. ಕಾರ್ಯಕರ್ತರು ತಿಳಿಸಿರುತ್ತಾರೆ.

ದೇವಾಲಯಕ್ಕೆ ಹರಿಜನರ ಪ್ರವೇಶ

ದೇವಘರ್‌ನಲ್ಲಿರುವ ಶಿವದೇವಾಲಯಕ್ಕೆ ಬೀಹಾರಿನ ಮುಖ್ಯಮಂತ್ರಿ ಶ್ರೀ ಕೃಷ್ಣಸಿನ್ಹರವರು ಇದೇ ೨೬ನೇ ತಾರೀಖು ಒಂದು ದೊಡ್ಡ ಹರಿಜನರ ಗುಂಪಿನೊಡನೆ ಪ್ರವೇಶಿಸಲು ಹೋಗಲು ನಿರ್ಧರಿಸಿದ್ದಾರೆಂದು ತಿಳಿಯಬರುತ್ತದೆ. ಕಳೆದವಾರ ಇಲ್ಲಿಗೆ ಆಚಾರ್ಯ ವಿನೋಬಾಭಾವೆಯವರು ಹೋದಾಗ ಅವರ ಪ್ರವೇಶವನ್ನು ಅಲ್ಲಿಯ ಪೂಜಾರಿಗಳು ಅಡ್ಡಿಪಡಿಸಿ ಅವರಮೇಲೆ ಧಾಳಿ ನಡೆಸಿದ್ದರು.

ಮೈಸೂರು ಕಾಂಗ್ರೆಸ್ ಭಿನ್ನಾಭಿಪ್ರಾಯ

ಎಂ. ಪಿ. ಸಿ. ಸಿ. ಯಲ್ಲಿ ಪರಿಶೀಲನೆ

ಇತ್ತೀಚೆಗೆ ಕಾಂಗ್ರೆಸ್ ಅಧ್ಯಕ್ಷರಿಗೂ ಮತ್ತು ಮುಖ್ಯಮಂತ್ರಿಗಳಿಗೂ ನಡೆದ ಟೀಕೆ, ಸಂವಾದ ಮತ್ತು ಭಿನ್ನಾಭಿಪ್ರಾಯಗಳ ವಿಷಯವು ನಿನ್ನೆ ಮೈಸೂರು ಪ್ರಾದೇಶ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಚರ್ಚೆಗೆ ಬಂದು, ಈ ಸಂಬಂಧದಲ್ಲಿ ಬಂದಿರುವ ೩-೪ ನಿರ್ಣಯಗಳನ್ನು ಚಿನ್ನದಗಣಿಯಲ್ಲಿ ನಡೆಯುವ ಎಂ. ಪಿ. ಸಿ. ಸಿ. ಪರಿಶೀಲನೆಗೆ ಬಿಡಬೇಕೆಂದು ನಿರ್ಧರಿಸಲಾಯಿತೆಂದು ತಿಳಿದುಬಂದಿದೆ.

ವಿದ್ಯುಚ್ಛಕ್ತಿ ಪ್ರಗತಿ

ಬೆಂಗಳೂರು ೨೪

ಕಳೆದ ಮಾಹೆಯಲ್ಲಿ ವಿದ್ಯುಚ್ಛಕ್ತಿ ಪ್ರಗತಿಯ ಬಗ್ಗೆ ಸರ್ಕಾರವು ಒಂದು ಪ್ರಕಟನೆಯನ್ನಿತ್ತಿದೆ.

ಈ ತಿಂಗಳಿನಲ್ಲಿ ೪ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ. ಹೀಟಿಂಗ್‌ಗೆ ೬೦, ಪವರ್ ೫೦, ವ್ಯವಸಾಯಕ್ಕೆ ೮೩, ಮತ್ತು ೮೦೦ ಮನೆಗಳಿಗೆ ವಿದ್ಯುಚ್ಛಕ್ತಿಯನ್ನು ಹೊಸದಾಗಿ ಕೊಡಲಾಗಿದೆ. ಅಲ್ಲದೆ ಹೊಸದಾಗಿ ೨೬೨ ಬೀದಿ ದೀಪಗಳನ್ನು ಹಾಕಲಾಗಿದೆ ಎಂದು ಈ ವರದಿಯಿಂದ ತಿಳಿಯಬರುತ್ತದೆ.

ನಂಜನಗೂಡು ಬಳಿ ಬಸ್ ಅನಾಹುತ

ಓರ್ವ ಮಹಿಳೆಯ ಮರಣ

ಮೈಸೂರು ೨೪

ಚಾಮರಾಜನಗರದಿಂದ ಮೈಸೂರಿಗೆ ಬರುತ್ತಿದ್ದ ಸರ್ಕಾರಿ ಬಸ್ಸೊಂದು ನಿನ್ನೆ ಬೆಳಿಗ್ಗೆ ೯ ಗಂಟೆ ಸಮಯದಲ್ಲಿ ಚಿನ್ನದಹುಂಡಿ ಗ್ರಾಮದ ಬಳಿ ಅನಾಹುತಕ್ಕೆ ಒಳಗಾಗಿ ಓರ್ವ ಮಹಿಳೆಯು ಸ್ಥಳದಲ್ಲಿಯೇ ಮೃತಳಾದಳೆಂದು ತಿಳಿಯಬರುತ್ತದೆ.

ಬಸ್ಸು ರಸ್ತೆಯಲ್ಲಿ ೧೦೫ನೇ ಮೈಲಿ ಕಲ್ಲಿನಬಳಿ ಬರುತ್ತಿದ್ದಾಗ ಅಲ್ಲಿ ಹೋಗುತ್ತಿದ್ದ ೫-೬ ಮಹಿಳೆಯರು ಬಸ್ಸಿನ ಶಬ್ದವನ್ನು ಕೇಳಿ ಪಕ್ಕಕ್ಕೆ ಹೋದರೆಂದೂ ಅದರಲ್ಲಿ ಬಸಮ್ಮ ಎಂಬ ೩೦-೩೫ ವರ್ಷದವಳು ರಸ್ತೆಯ ಒಂದುಕಡೆಯಿಂದ ಮತ್ತೊಂದುಕಡೆಗೆ ಹೋಗಲು ಪ್ರಯತ್ನಿಸಿದಾಗ ಬಸ್ಸಿಗೆ ಅವಳು ಸಿಕ್ಕಿ ಸತ್ತುಹೋದಳೆಂದು ಹೇಳಲಾಗಿದೆ.

೩೦ ಲಕ್ಷ ಎಕರೆ ಜಹಗೀರಿ ಸರ್ಕಾರಿ ವಶ

ಬೊಂಬಾಯಿ ಪ್ರಾಂತ್ಯದಲ್ಲಿ ಜಾಗೀರ್‌ದಾರಿ ರದ್ದಿನ ಶಾಸನ ಜಾರಿಗೆ ಬಂದರೆ ಅಲ್ಲಿಯ ಸರ್ಕಾರವು ೩೦ ಲಕ್ಷ ಎಕರೆ ಜಹಗೀರಿ ಭೂಮಿಯನ್ನು ತನ್ನ ವಶಪಡಿಸಿಕೊಳ್ಳುವುದೆಂದು ತಿಳಿಯಬರುತ್ತದೆ.

ಜಹಗೀರುಗಳ ರದ್ದಿಗೆ ಬೆಂಬಲ

ಬೊಂಬಾಯಿ ಸಂಸ್ಥಾನದಲ್ಲಿ ಜಹಗೀರುಗಳನ್ನು ಸಂಪೂರ್ಣವಾಗಿ ರದ್ದುಮಾಡುವ ಮಸೂದೆಗೆ ಅಲ್ಲಿನ ಶಾಸನಸಭೆಯಲ್ಲಿ ಎಲ್ಲ ಪಕ್ಷದ ಸದಸ್ಯರೂ ಬೆಂಬಲವಿತ್ತಿದ್ದಾರೆ.

ಬ್ರಿಟನ್ನಿನ ಅಣುಶಕ್ತಿ ಪರಿಣತರು ಭಾರತಕ್ಕೆ

ಬ್ರಿಟನ್ನಿನ ಅಣುಶಕ್ತಿಯ ಪ್ರವೀಣರಾದ ಪ್ರೊಫೆಸರ್ ಹೆಚ್. ಎಸ್. ಡಬ್ಲ್ಯು ಮ್ಯಾಸ್ಸಿಯವರು ಮುಂದಿನ ತಿಂಗಳು ಭಾರತಕ್ಕೆ ಭೇಟಿ ಕೊಡುವರೆಂದು ತಿಳಿಯಬರುತ್ತದೆ.

ಚಲನಚಿತ್ರ ಮಂದಿರಗಳ ಹರತಾಳ

ಕರಾಚಿಯಲ್ಲಿ ಪಾಕೀಸ್ತಾನ ಸರ್ಕಾರವಿರುದ್ಧವಾಗಿ ಚಲನಚಿತ್ರ ಮಂದಿರಗಳು ಪ್ರಾರಂಭಿಸಿರುವ ಹರತಾಳವು ಮುಂದುವರಿಯುತ್ತಿರುವುದಾಗಿ ತಿಳಿಯಬರುತ್ತದೆ.

ಸಿಂಹಳ-ಚೈನಾ ಒಪ್ಪಂದ

ಸಿಂಹಳ-ಚೈನಾಗಳ ನಡುವೆ ಅಕ್ಕಿ ಮತ್ತು ರಬ್ಬರ್ ವಿನಿಮಯ ಬಗ್ಗೆ ಒಪ್ಪಂದವು ಸಹಿಯಾಗಿದೆಯೆಂದು ತಿಳಿಯಬರುತ್ತದೆ.

● ಚಲನಚಿತ್ರ ಕೈಗಾರಿಕೆಯಮೇಲೆ ತೆರಿಗೆ ಹೊರೆಯನ್ನು ಕಡಿಮೆ ಮಾಡಬೇಕೆಂದು ಮೈಸೂರು ಚಲನಚಿತ್ರ ವಾಣಿಜ್ಯಸಂಸ್ಥೆಯ ಅಧ್ಯಕ್ಷರು ತೆರಿಗೆ ವಿಚಾರಣಾ ಸಮಿತಿಗೆ ಪತ್ರ ಬರೆದಿದ್ದಾರೆ.

ತಿರುವಾಂಕೂರ್-ಕೊಚ್ಚಿಯ ಶಾಸನಸಭೆ ರದ್ದು

ಹೊಸ ಚುನಾವಣೆ ನಡೆಯಲು ರಾಜಪ್ರಮುಖರ ಆಜ್ಞೆ

ಶಾಸನಸಭೆಯಲ್ಲಿ ಕಾಂಗ್ರೆಸ್ ಪಕ್ಷ ವಿಶ್ವಾಸ ಗಳಿಸದಿದ್ದುದೇ ಕಾರಣ

ತಿರುವಾಂಕೂರ್-ಕೊಚ್ಚಿ ಶಾಸನಸಭೆಯ ಆಡಳಿತದಲ್ಲಿರುವ ಕಾಂಗ್ರೆಸ್ ಪಕ್ಷವು ಮಂಡಿಸಿದ ವಿಶ್ವಾಸಸೂಚಕ ನಿರ್ಣಯವನ್ನು ನಿನ್ನೆಯದಿನ ಸಭೆಯು ತಿರಸ್ಕರಿಸಿ, ಶ್ರೀ ಜಾರ್ಜರವರ ಮಂತ್ರಿಮಂಡಲಕ್ಕೆ ಸೋಲುಂಟಾಯಿತು. ಪರವಾಗಿ ೫೧, ವಿರೋಧವಾಗಿ ೫೬ ಮತಗಳು ಬಂದುವು.

ನಿರ್ಣಯದ ಪರವಾಗಿ ಕಾಂಗ್ರೆಸ್ಸಿನ ೪೭ ಮತ್ತು ಸ್ವತಂತ್ರರ ೪ ಸದಸ್ಯರು ಮತನೀಡಿದರು. ನಿರ್ಣಯಕ್ಕೆ ವಿರೋಧವಾಗಿ ಯುನೈಟೆಡ್ ಫ್ರಂಟಿನ ೩೨, ತಮಿಳುನಾಡು ಕಾಂಗ್ರೆಸ್ಸಿನ ೯, ಪ್ರಜಾಸೋಷಲಿಸ್ಟ್ ಪಕ್ಷದ ೧೦, ಸ್ವತಂತ್ರರು ೫ ಜನ ಮತನೀಡಿದರು. ಒಬ್ಬ ಸದಸ್ಯರು ತಟಸ್ಥರಾಗಿದ್ದರು.

ನಿರ್ಣಯ ಬಿದ್ದು ಹೋದೊಡನೆಯೇ ಸಭಾಧ್ಯಕ್ಷರು ಅಧಿವೇಶನವನ್ನು ಅನಿರ್ದಿಷ್ಟ ಕಾಲ ಮುಂದಕ್ಕೆ ಹಾಕಿದರು.

ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಜಾರ್ಜರವರು ಮಾತನಾಡುತ್ತಾ, ಈಗಿನ ಶಾಸನಸಭೆಯನ್ನು ರದ್ದುಗೊಳಿಸಿ ಹೊಸ ಚುನಾವಣೆಗಳನ್ನು ನಡೆಸುವಂತೆ ತಾವು ರಾಜಪ್ರಮುಖರಿಗೆ ಸಲಹೆ ನೀಡುವುದಾಗಿ ತಿಳಿಸಿದರು.

ಯುನೈಟೆಡ್ ಫ್ರಂಟಿನ ಪಕ್ಷದ ನಾಯಕ ಶ್ರೀ ಥಾಮಸ್‌ರವರು ಇದನ್ನು ವಿರೋಧಿಸಿ ವಿರೋಧ ಪಕ್ಷದವರು ಸರ್ಕಾರವನ್ನು ರಚಿಸಲು ಅವಕಾಶ ನೀಡಬೇಕೆಂದು ತಿಳಿಸಿದರು. ಪ್ರಜಾ ಸೋಷಲಿಸ್ಟ್ ಪಕ್ಷದವರು ಮಾತನಾಡುತ್ತಾ ಈಗಿನ ಸಂದರ್ಭದಲ್ಲಿ ಸ್ಥಿರ ಸರ್ಕಾರವನ್ನು ರಚಿಸಲು ಯಾವ ಪಕ್ಷದಿಂದಲೂ ಅಸಾಧ್ಯವೆಂದೂ ಚುನಾವಣೆಗಳನ್ನು ನಡೆಸುವುದೇ ಉತ್ತಮವೆಂದೂ ಹೇಳಿದರು.

ತಿರುವಾಂಕೂರ್-ಕೊಚ್ಚಿಯ ರಾಜಪ್ರಮುಖರು ನಿನ್ನೆಯದಿನ ಒಂದು ಪ್ರಕಟಣೆಯನ್ನು ಹೊರಡಿಸಿ, ಸುಭದ್ರವಾದ ಸರ್ಕಾರವನ್ನು ರಚಿಸುವುದಕ್ಕಾಗಿ, ತಾವು ಈಗಿನ ಶಾಸನಸಭೆಯನ್ನು ರದ್ದುಗೊಳಿಸಿ, ಶಾಸನಸಭೆಗೆ ಪುನಃ ಚುನಾವಣೆಯಾಗುವಂತೆ ಆಜ್ಞೆ ಮಾಡಿರುವುದಾಗಿ ತಿಳಿಸಿದ್ದಾರೆ. ಅಲ್ಲಿಯವರೆಗೆ ಈಗಿರುವ ಕಾಂಗ್ರೆಸ್ ಸರ್ಕಾರವೇ ಮೇಲ್ವಿಚಾರಕ ಸರ್ಕಾರವಾಗಿ ಕೆಲಸಮಾಡುವುದೆಂದು ತಿಳಿಸಲಾಗಿದೆ.

ಗಾಂಧಿ ಸ್ಮಾರಕಕ್ಕೆ ಅಮೆರಿಕದ ಸಹಾಯ

ವಾಷಿಂಗ್‌ಟನ್ನಿನಲ್ಲಿ ಗಾಂಧೀ ಸ್ಮಾರಕವನ್ನು ಕಟ್ಟಲು ಅಮೆರಿಕ ಸರ್ಕಾರವು ೫೦೦ ಲಕ್ಷ ರೂಪಾಯಿ ಬೆಲೆಬಾಳುವ ಆರು ಎಕರೆ ಪ್ರದೇಶವನ್ನು ಅಲ್ಲಿನ ಇಂಡಿಯಾ ಲೀಗ್ ಸಂಸ್ಥೆಗೆ ಕೊಟ್ಟಿದೆ. ಇನ್ನೆರಡು ವರ್ಷಗಳಲ್ಲಿ ಈ ಸ್ಮಾರಕವನ್ನು ಸಾರ್ವಜನಿಕ ಚಂದಾದಿಂದ ಕಟ್ಟಲಾಗುವುದು.

ಗಾಂಧಿಸ್ಮಾರಕ ನಿಧಿಯ ಆಶ್ರಯದಲ್ಲಿ ಪ್ರಬಂಧಸ್ಪರ್ಧೆ

ಮೈಸೂರು ೨೪

ವಿದ್ಯಾರ್ಥಿಗಳಲ್ಲಿ ಗಾಂಧಿ ಸಾಹಿತ್ಯದ ಅಧ್ಯಯನ ಹಾಗೂ ಬರವಣಿಗೆಯನ್ನು ಪ್ರೋತ್ಸಾಹಿಸುವುದಕ್ಕಾಗಿ ಗಾಂಧಿಸ್ಮಾರಕ ನಿಧಿಯ ಮೈಸೂರು ಸಂಸ್ಥಾನ ಶಾಖೆಯ ಆಶ್ರಯದಲ್ಲಿ ಒಂದು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಹೈಸ್ಕೂಲು ಮತ್ತು ಕಾಲೇಜುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರು ಸ್ಪರ್ಧೆಯಲ್ಲಿ ಭಾಗವಹಿಸಬಹುದಾಗಿದೆ. ಹೈಸ್ಕೂಲು ವಿದ್ಯಾರ್ಥಿಗಳಿಗಾಗಿ ನಾಲ್ಕು ಬಹುಮಾನಗಳನ್ನೂ ಕಾಲೇಜು ವಿದ್ಯಾರ್ಥಿಗಳಿಗಾಗಿ ನಾಲ್ಕು ಬಹುಮಾನಗಳನ್ನು ವಿದ್ಯಾರ್ಥಿನಿಯರಿಗಾಗಿ ವಿಶೇಷ ಬಹುಮಾನವನ್ನೂ ಮೀಸಲಾಗಿಡಲಾಗಿದೆ. ವಿದ್ಯಾರ್ಥಿ ವಿದ್ಯಾರ್ಥಿನಿಯರು ಈ ಕೆಳಕಂಡ ಯಾವುದಾದರೊಂದು ವಿಷಯದಮೇಲೆ ಕನ್ನಡದಲ್ಲಿ ಪ್ರಬಂಧ ಬರೆಯಬೇಕು.

ಗಾಂಧಿ ತತ್ವದ ತಳಹದಿ–ವಿಕೇಂದ್ರೀಕರಣ ಮತ್ತು ಸ್ವಪರಿಪೂರ್ಣತೆ, ಗಾಂಧಿ ತತ್ವದಲ್ಲಿ ಖಾದಿ ಗ್ರಾಮೋದ್ಯೋಗಗಳ ಸ್ಥಾನ, ಅಹಿಂಸೆಯ ಶಾಂತಸಾಮಾಜಿಕ ಜೀವನದ ತಳಹದಿ, ಸತ್ಯಾಗ್ರಹ--ಆಚಾರ ವಿಚಾರ, ಸತ್ಯ ನ್ಯಾಯಗಳು ಸಾಮಾಜಿಕ ಶಾಂತಿಗೆ ಆಧಾರ, ಸತ್ಯ, ಅಹಿಂಸೆ, ಸಾಧನಶುದ್ಧಿ-- ಗಾಂಧಿ ತತ್ವದ ಆಧಾರ ಸ್ತಂಭಗಳು.

ಪ್ರಬಂಧಗಳನ್ನು ನವೆಂಬರ್ ಮೂವತ್ತನೇ ತಾರೀಖಿನೊಳಗಾಗಿ ಸಂಚಾಲಕರು, ಗಾಂಧಿ ಸ್ಮಾರಕ ನಿಧಿ, ಕಸ್ತೂರಿಬಾ ಗ್ರಾಮ, ಅರಸೀಕೆರೆ--ಈ ವಿಳಾಸಕ್ಕೆ ಕಳುಹಿಸಿಕೊಡತಕ್ಕದ್ದು. ಪ್ರಬಂಧವು ಸ್ವಂತದ್ದಾಗಿದ್ದು ಫೂಲ್ಸ್‌ಕೇಪ್ ಇಪ್ಪತ್ತು ಪುಟಕ್ಕೆ ಮೀರಿರಬಾರದು. ಸ್ಪರ್ಧಿಗಳು ತಾವು ವ್ಯಾಸಂಗ ಮಾಡುವ ಶಾಲೆ ಅಥವಾ ಕಾಲೇಜಿನ ಹೆಸರು, ವಿಳಾಸ ತಿಳಿಸಬೇಕು.

ಶಾಲಾ ಕಾಲೇಜುಗಳ ವಿದ್ಯಾರ್ಥಿನಿಯರು ಅಧಿಕ ಸಂಖ್ಯೆಯಲ್ಲಿ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಬೇಕಾಗಿ ಸಂಚಾಲಕಿಯರಾದ ಶ್ರೀಮತಿ ಯಶೋಧರಾ ದಾಸಪ್ಪನವರು ಕೋರಿದ್ದಾರೆ.

ದಸರಾ ಉತ್ಸವಗಳಿಗಾಗಿ ಸಮಿತಿ

ಈ ವರ್ಷದ ನವರಾತ್ರಿ ಉತ್ಸವಗಳ ಕಾರ್ಯಕ್ರಮಗಳಬಗ್ಗೆ ಸರ್ಕಾರದವರು ನ್ಯಾಯಾಂಗ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದಾರೆ. ಹುಜೂರ್ ಸೆಕ್ರೆಟರಿಗಳು, ದರ್ಬಾರ್ ಬಕ್ಷಿ ಮತ್ತು ಶ್ರೀಕಂಠ ಕಾರುಬಾರಿ ಅದರ ಸದಸ್ಯರು.

ಅಸ್ಪೃಶ್ಯತಾ ನಿವಾರಣೆಗೆ ಕೇಂದ್ರದ ನೆರವು

ಮೈಸೂರು ಸಂಸ್ಥಾನದಲ್ಲಿ ಅಸ್ಪೃಶ್ಯತಾ ನಿವಾರಣೆಯ ಕೆಲಸಕಾರ್ಯಕ್ಕಾಗಿ ಕೇಂದ್ರ ಸರ್ಕಾರವು 2½ ಲಕ್ಷ ರೂ.ಗಳ ಗ್ರಾಂಟನ್ನು ಕೊಟ್ಟಿದೆ.

ಈ ವಿಚಾರದಲ್ಲಿ ಕಮೀಷನರ್ ಶ್ರೀ ಹೊನ್ನಯ್ಯನವರು ಬೆಂಗಳೂರಿನಲ್ಲಿ ಒಂದು ಸಭೆ ಕರೆದು ಸಂಸ್ಥಾನದಲ್ಲಿ ಹರಿಜನರ ಅಭಿವೃದ್ಧಿಗಾಗಿರುವ ನಾನಾ ಸಂಸ್ಥೆಗಳಿಗೆ ಹಣ ಕೊಡುವುದು, ಅವರಿಗೆ ವ್ಯವಸಾಯ ಕಾಲೋನಿಗಳನ್ನು ತೆರೆಯುವುದು ಇವೇ ಮುಂತಾದ ವಿಷಯಗಳಲ್ಲಿ ಸದಸ್ಯರ ಸಲಹೆ ಕೇಳಿದರು.

ಖಾಸಗೀ ಸಂಸ್ಥೆಗಳಿಗೆ ಈ ಕಾರ್ಯಕ್ಕಾಗಿ ಗ್ರಾಂಟು ಕೊಡುವುದು ಸೂಕ್ತವಲ್ಲವೆಂದೂ, ಸರ್ಕಾರ ಅಧಿಕಾರಿಗಳನ್ನುಳ್ಳ ಜಿಲ್ಲಾ ಸಮಿತಿಗಳನ್ನು ರಚಿಸಬೇಕೆಂದೂ, ಜಿಲ್ಲೆಗಳಲ್ಲಿ ಪ್ರತ್ಯೇಕ ಹರಿಜನ ಹಾಸ್ಟಲುಗಳನ್ನು ತೆರೆಯಬೇಕೆಂದೂ, ಅಸ್ಪೃಶ್ಯತಾ ನಿವಾರಣೆಗಾಗಿ ಹೆಚ್ಚು ಪ್ರಚಾರ ನಡೆಯಬೇಕೆಂದೂ ಸದಸ್ಯರು ಸಲಹೆ ಇತ್ತರು.

ಅಧಿಕಾರಿ ನಿವೃತ್ತಿ ಬಗ್ಗೆ ಬೊಂಬಾಯಿ ಶ್ರೇಷ್ಠ ನ್ಯಾಯಾಲಯದ ಆಜ್ಞೆ

ಬೊಂಬಾಯಿನಲ್ಲಿ ಟೆಲಿಫೋನ್ ಸಬ್ ಇನ್ಸ್‌ಪೆಕ್ಟರಾಗಿದ್ದ ಶ್ರೀ ಮೋಹನಸಿಂಗ್ ಗಂದಸಿಂಗ್ ಎಂಬುವವರನ್ನು ಅಲ್ಲಿಯ ಟೆಲಿಫೋನ್ ಇಂಜನಿಯರು ಕಡ್ಡಾಯವಾಗಿ ನಿವೃತ್ತಿಗೊಳಿಸಿದ ಆಜ್ಞೆಯನ್ನು ಬೊಂಬಾಯಿ ಶ್ರೇಷ್ಠ ನ್ಯಾಯಾಲಯವು ರದ್ದುಗೊಳಿಸಿದೆ.

ಶ್ರೀ ಮೋಹನ್‌ಸಿಂಗ್‌ರವರು ಕಮ್ಯೂನಿಸ್ಟ್ ಪಕ್ಷದ ಸದಸ್ಯರಾಗಿ, ಅದರಿಂದ ರಾಷ್ಟ್ರೀಯ ಹಿತರಕ್ಷಣೆಗೆ ಧಕ್ಕೆ ಬರುವುದೆಂದು ಆಪಾದಿಸಿ ಅವರನ್ನು ಕಡ್ಡಾಯವಾಗಿ ಕೆಲಸದಿಂದ ನಿವೃತ್ತಿಗೊಳಿಸಿದ್ದರು.

ಆದರೆ ಶ್ರೀ ಮೋಹನ್‌ಸಿಂಗ್‌ರವರ ನಡವಳಿಕೆಗಳು ರಾಷ್ಟ್ರೀಯ ರಕ್ಷಣೆಗೆ ಧಕ್ಕೆ ತರುವುದೆಂಬುದಕ್ಕೆ ಟೆಲಿಫೋನ್ ಇಂಜನಿಯರು ತಕ್ಕ ರುಜುವಾತು ಕೊಡದೆ ಶ್ರೀ ಮೋಹನ್‌ಸಿಂಗ್‌ರನ್ನು ನಿವೃತ್ತಿಗೊಳಿಸಲು ಆಜ್ಞೆಮಾಡಿದುದು ನ್ಯಾಯಾಂಗಕ್ಕೆ ವಿರೋಧವೆಂದು ಶ್ರೇಷ್ಠ ನ್ಯಾಯಾಲಯವು ತೀರ್ಪಿನಲ್ಲಿ ತಿಳಿಸಿದೆ.

ಲಂಚಕ್ಕಾಗಿ ಡಾಕ್ಟರಿಗೆ ಶಿಕ್ಷೆ

ಲಂಚದ ಆಪಾದನೆಗಾಗಿ ಶಿವಮೊಗ್ಗಾದ ಡಾ॥ ಕೆ.ನಾರಾಯಣರಾಯರಿಗೆ ಬೊಂಬಾಯಿನ ವಿಶೇಷ ನ್ಯಾಯಾಧೀಶರು ಒಂದು ದಿನ ಕಾರಾಗೃಹ ವಾಸ ಮತ್ತು ೨೦೦ ರೂ. ಜುಲ್ಮಾನೆಯನ್ನು ವಿಧಿಸಿದ್ದಾರೆ. ತಮ್ಮ ಹೆಸರನ್ನು ರಿಜಿಸ್ಟರ್ ಮಾಡಿಕೊಳ್ಳಬೇಕೆಂಬ ಅರ್ಜಿಗೆ ಮೆಡಿಕಲ್ ಟ್ರಿಬ್ಯೂನಲ್ ಮಾನ್ಯತೆ ಕೊಡದಿದ್ದುದರಿಂದ ಆಪಾದಿತರು ಬೊಂಬಾಯಿನ ಟ್ರಿಬ್ಯೂನಲ್ ವಿಳಾಸವನ್ನು ಪಡೆದು ೧೦೦ ರೂ. ಹಣವನ್ನು ಕಳುಹಿಸಿ ತಮ್ಮ ಅರ್ಜಿಯನ್ನು ಪುನಃ ಪರಿಶೀಲಿಸಬೇಕೆಂದು ಕೋರಿದ್ದರು. ಈ ವಿಚಾರವನ್ನು ಅಲ್ಲಿನ ಲಂಚನಿರೋಧ ಶಾಖೆಗೆ ಕಳುಹಿಸಿ, ತಪಾಸಣೆಯಮೇಲೆ ಮೊಕದ್ದಮೆ ಹೂಡಲಾಗಿತ್ತು.

ಹರಿಜನ ಸಪ್ತಾಹ

ಇಂದಿನಿಂದ ಅಕ್ಟೋಬರ್ ೨ನೇ ತಾರೀಖಿನವರೆಗೆ ಹರಿಜನ ಸಪ್ತಾಹ ಸಮಾರಂಭವನ್ನು ಶ್ರದ್ಧಾಸಕ್ತಿಯಿಂದ ಸಂಸ್ಥಾನಾದ್ಯಂತ ಆಚರಿಸಬೇಕೆಂದು ಮೈಸೂರು ಸಂಸ್ಥಾನದ ಹರಿಜನಸೇವಕ ಸಂಘದವರು ಮನವಿ ಮಾಡಿದ್ದಾರೆ. ಇದರ ಅಂಗವಾಗಿ ಹರಿಜನ ದೇವಾಲಯಪ್ರವೇಶ, ಸವರ್ಣೀಯರ ಮತ್ತು ಹರಿಜನರ ಸಂಯುಕ್ತ ಭಜನ ಕೂಟಗಳು, ಮೆರವಣಿಗೆ, ಸಾರ್ವಜನಿಕ ಸಭೆ, ಹರಿಜನ ಕೇರಿಗೆ ಭೇಟಿ ಮತ್ತು ಸ್ವಚ್ಛತಾಕಾರ್ಯ ಮುಂತಾದ ಕಾರ್ಯಕ್ರಮ ಕೈಕೊಳ್ಳಬೇಕೆಂದು ಕೋರಲಾಗಿದೆ.

ಬೆಲ್ಲದ ದರ ಹತೋಟಿ

ಬೆಲ್ಲದ ದರವು ಇತ್ತೀಚೆಗೆ ಹೆಚ್ಚುತ್ತಿರುವುದನ್ನು ತಡೆಗಟ್ಟಲು ದರ ಹತೋಟಿಯನ್ನು ಜಾರಿಗೆ ತರಲು ಕೇಂದ್ರ ಸರ್ಕಾರವು ಯೋಚಿಸುತ್ತಿದೆಯೆಂದು ಮೈಸೂರಿನ ಗೃಹ ಸಚಿವರು ತಿಳಿಸಿದ್ದಾರೆ. ಕೆಲವು ತಿಂಗಳಿನ ಹಿಂದೆ ವೀಸೆ ಒಂದಕ್ಕೆ ೧೨ ಆಣೆ ಇದ್ದ ದರವು ಈಗ ೧--೪--೦ ರೂ.ಗೆ ಏರಿದೆ.

ಮತೀಯ ಲಾಂಛನಕ್ಕೆ ನಿಷೇಧ

ಮತೀಯ ಅಥವ ವರ್ಣಸಂಬಂಧವಾದ ಲಾಂಛನಗಳನ್ನು "ಟ್ರೇಡ್ ಮಾರ್ಕ್"ಗಳಾಗಿ ಉಪಯೋಗಿಸಕೂಡದೆಂದು ಸಿಂಹಳ ಸರ್ಕಾರವು ಒಂದು ಆಜ್ಞೆಯನ್ನು ಹೊರಡಿಸಲಿದೆಯೆಂದು ತಿಳಿಯಬರುತ್ತದೆ

ರಾಜಕಮಲ್
25-9-53 ರಿಂದ ಅಮೋಘ 2 ನೇ ವಾರ
ಅಸೋಸಿಯೇಟೆಡ್ ಪ್ರೊಡ್ಯೂಸರ್ಸ್‌ರವರ:-
-ಆಶೈಮಗನ್-
[ತಮಿಳು]
ಪಾತ್ರ:— ಪದ್ಮಿನಿ, ಬಿ. ಎಸ್. ಸರೋಜ, ಗಿರಿಜಾ, ಟಿ. ಎಸ್. ಬಾಲಯ್ಯ, ಗಣೇಶ್, ಪಿ. ಆರ್. ಪಂತಲು.

ಅಪೇರ
22--9--53 ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ನಾದನ್
[ಹಿಂದಿ]
ಪಾತ್ರ:—ದೇವಾನಂದ್, ಮಧುಬಾಲ

ರಣಜಿತ್
25-9-53 ರಿಂದ ಅಮೋಘ ಪ್ರಾರಂಭ
ಮನ್ಮೋಹನ್‌ಶಾಂತಿ, ಸುರೇಶ್ ನಟಿಸಿರುವ
ಜಮಾನಿಕಿ ಹವ
[ಹಿಂದಿ]

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೫೧೦

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೩೩

೨೫-೯-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ದೇಶದಲ್ಲಿ ಆಹಾರ ಪರಿಸ್ಥಿತಿ ಉತ್ತಮವಾಗಿದೆ

ವಿದೇಶಗಳಿಂದ ಆಮದು ಪ್ರಮಾಣ ಖೋತಾ

ಕೇಂದ್ರ ಆಹಾರಸಚಿವ ಕಿದ್ವಾಯಿಯವರ ಹೇಳಿಕೆ

ದೇಶದಲ್ಲಿ ಆಹಾರ ಪರಿಸ್ಥಿತಿಯು ಕಳೆದ ಸಾಲುಗಳಿಗಿಂತ ಅತ್ಯುತ್ತಮವಾಗಿದೆ. ಈ ಸಾಲಿನಲ್ಲಿ ಮದ್ರಾಸ್ ತಿರುವಾಂಕೂರ್-ಕೊಚ್ಚಿ ಪ್ರಾಂತ್ಯಗಳಲ್ಲಿ ಸುಲಭ ದರದಲ್ಲಿ ಗೋಧಿಯನ್ನು ಕೊಡುವಂತೆ ವ್ಯವಸ್ಥೆ ಮಾಡಲಾಗಿದೆ. ಈಗ ಜನರು ಎಷ್ಟುಬೇಕಾದರೂ ಗೋಧಿಯನ್ನು ಉಪಯೋಗಿಸಬಹುದು ಯಾವ ನಿರ್ಬಂಧವೂ ಇಲ್ಲ. ವಿದೇಶಗಳಿಂದ ತರಿಸಿಕೊಳ್ಳುತ್ತಿದ್ದ ಗೋಧಿಯ ಪ್ರಮಾಣವನ್ನು ೫೦ ಲಕ್ಷ ಟನ್ನುಗಳಿಂದ ೧೦ ಲಕ್ಷ ಟನ್ನುಗಳಿಗೆ ಇಳಿಸಲಾಗಿದೆ. ಕೇಂದ್ರದ ಬಳಿಯೇ ಈಗ ೭ ಲಕ್ಷ ಟನ್ನು ಗೋಧಿ ದಾಸ್ತಾನಿದೆ ಎಂದು ಆಹಾರಸಚಿವ ಕಿದ್ವಾಯಿಯವರು ಹೇಳಿದ್ದಾರೆ.

ಭಾರತದಲ್ಲಿರುವ ಅಕ್ಕಿ ಬೆಲೆಗಿಂತ ಕಡಮೆದರದಲ್ಲಿ ಬರ್ಮಾ ಅಕ್ಕಿಯನ್ನು ಕೊಡುವುದಾದರೆ ಭಾರತವು ೧೫ ಲಕ್ಷ ಟನ್ ಅಕ್ಕಿಯನ್ನು ಕೊಳ್ಳಲು ಸಿದ್ಧವಾಗಿದೆ ಎಂದು ಅವರು ತಿಳಿಸಿದ್ದಾರೆ.

ಬಾಡಿಗೆದಾರರ ಸಂಘ ಸ್ಥಾಪನೆ

ಮೈಸೂರು ೨೫

ತಾ॥ ೨೪-೯-೫೩ನೇ ಗುರುವಾರ ಸಂಜೆ ಮೈಸೂರು ನಗರದ ಕೃಷ್ಣರಾಜ ಮೊಹಲ್ಲಾ ವನೆ ಬಾಡಿಗೆದಾರರ ಸಭೆ ಮೋಹನ ಮುದ್ರಣಾಲಯದಲ್ಲಿ ಶ್ರೀ ಎ. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸೇರಿ ಬಾಡಿಗೆದಾರರ ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ಒಂದು ಸಂಘದವನ್ನು ಸ್ಥಾಪಿಸತಕ್ಕದೆಂದೂ ಅದರ ಹೆಸರು "ಮೈಸೂರು ಸಿಟಿ ಕೃಷ್ಣರಾಜಮೊಹಲ್ಲಾ ಬಾಡಿಗೆದಾರರ ಸಂಘ" ವೆಂದಿರತಕ್ಕದ್ದೆಂದು ತೀರ್ಮಾನಿಸಲಾಯಿತು.

ಸಂಘದ ಕಾರ್ಯಕಾರಿ ಸಮಿತಿಗೆ ಶ್ರೀಗಳಾದ ಡಾ॥ ಸೂರ್ಯನಾರಾಯಣರಾಯರು ಅಧ್ಯಕ್ಷರು, ಹಿ. ಕಾ. ಸುಬ್ಬರಾವ್ ಕಾರದರ್ಶಿ, ಎ. ನಾರಾಯಣರಾವ್, ಬಿ. ಎನ್. ಕೃಷ್ಣಪ್ಪ, ಎಂ. ಎ. ಮಂಜುನಾಥ್, ಕೆ. ಶ್ರೀನಿವಾಸಯ್ಯಂಗಾರ್, ಎಸ್.ಎಸ್.ಶಾಸ್ತ್ರಿ ಸದಸ್ಯರಾಗಿ ಚುನಾಯಿತರಾದರು.

ಸಂಘದ ನಿಯಮಾವಳಿಯನ್ನು ರಚಿಸಲು ಐದುಜನ ಸದಸ್ಯರುಳ್ಳ ಒಂದು ಉಪಸಮಿತಿ ರಚಿಸಲಾಯಿತು.

ಮಹಿಳಾ ಉಳಿತಾಯ ಯೋಜನೆ

ಮೈಸೂರು ೨೫

ಸಂಸ್ಥಾನದ ಮಹಿಳಾ ಪರಿಷತ್ತಿನ ಆಶ್ರಯದಲ್ಲಿ ನಡೆಯಲಿರುವ ಮಹಿಳಾ ಉಳಿತಾಯ ಯೋಜನಾ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಣಿಯವರು ಅಕ್ಟೋಬರ್ ಒಂದನೇ ತಾರೀಖು ಜಗನ್ಮೋಹನ ಬಂಗಲೆಯಲ್ಲಿ ನೆರವೇರಿಸುವರು ಮಹಿಳಾ ಸಮ್ಮೇಳನದ ಅಧ್ಯಕ್ಷಣಿ ಶ್ರೀಮತಿ ರಾಜಕುಮಾರಿ ಲೀಲಾವತಿಯವರು ಅಧ್ಯಕ್ಷತೆ ವಹಿಸುತ್ತಾರೆ.

ವಿಶ್ವವಿದ್ಯಾನಿಲಯದ ಹಿಂದಿ ಸಂಘದ ಪ್ರಾರಂಭೋತ್ಸವ

ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನ ಜೂನಿಯರ್ ಬಿ. ಎ. ಹಾಲಿನಲ್ಲಿ ಹೈದರಾಬಾದ್ ಉಸ್ಮೇನಿಯಾ ವಿಶ್ವವಿದ್ಯಾನಿಲಯದ ಪ್ರಧ್ಯಾಪಕರಾದ ಶ್ರೀ ವಿನಯಮೋಹನ ಶರ್ಮ ವಿದ್ಯಾಲಂಕಾರ್‌ರವರು ವಿಶ್ವವಿದ್ಯಾನಿಲಯದ ಹಿಂದಿ ಸಂಘದ ಪ್ರಾರಂಭ ಭಾಷಣವನ್ನು ಮಾಡುತ್ತಾರೆ. ಪ್ರೊಫೆಸರ್ ವಿ. ಎಲ್. ಡಿಸೌಜಾರವರು ಅಧ್ಯಕ್ಷತೆ ವಹಿಸುತ್ತಾರೆ.

ಮದ್ರಾಸಿನ ಮಹಿಳೆಯರ ಕ್ರಿಶ್ಚಿಯನ್ ಕಾಲೇಜಿನ ಹಿಂದಿ ಉಪಾಧ್ಯಾಯರಾದ ಶ್ರೀ ಎಸ್. ಆರ್. ಶಾಸ್ತ್ರಿಯವರು 'ದಕ್ಷಿಣ ಭಾರತ ವಿಶ್ವವಿದ್ಯಾನಿಲಯಗಳಲ್ಲಿ ಹಿಂದಿ ಸ್ಥಾನ ಎಂಬ ವಿಷಯದಲ್ಲಿ ಭಾಷಣವನ್ನು ಮಾಡುತ್ತಾರೆ.

ಅಧಿಕಾರಿಗಳು ಸಾಮಾನ್ಯ ಜನರ ಸಂಪರ್ಕ ಪಡೆಯಬೇಕು

ಪ್ರಧಾನಿ ನೆಹರೂ ಹಿತೋಕ್ತಿ

ಸರ್ಕಾರಿ ಅಧಿಕಾರಿಗಳು ತಮ್ಮ ಕಾರ್ಯನಿರ್ವಹಣೆಯಲ್ಲಿ ಭಾರತದ ಸಾಮಾನ್ಯ ಪ್ರಜೆಯ ನಿಕಟ ಬಾಂಧವ್ಯವನ್ನು ಹೆಚ್ಚಿಸಿಕೊಳ್ಳಬೇಕು ಅದಿಲ್ಲದಿದ್ದರೆ ಸಾಮಾನ್ಯ ಪ್ರಜೆಗೆ ಪ್ರಯೋಜನವಾಗುವುದಿಲ್ಲ ಸಾಮಾನ್ಯ ಕಾರ್ಮಿಕ ಮತ್ತು ರೈತರ ಸಮಸ್ಯೆಗಳ ಪರಿಹಾರ ಹುಡುಕುವಾಗ ಅಧಿಕಾರದ ಬಿಗುಮಾನವಿರಬಾರದು ಎಂದು ಪ್ರಧಾನಿ ನೆಹರೂರವರು ನಿನ್ನೆಯದಿನ ವ್ಯವಸಾಯ ಮತ್ತು ಸಹಕಾರ ಶಾಖೆಯ ಸಚಿವರ ಸಮ್ಮೇಳನವನ್ನು ಉದ್ಘಾಟಿಸುತ್ತ ತಿಳಿಸಿದರು.

ದೇಶದ ಪ್ರಗತಿಯನ್ನು ಮಂತ್ರಿಗಳು ಮತ್ತು ಅಧಿಕಾರಿಗಳ ನೀತಿ ವಿವರಣೆಗಳಿಂದ ತಿಳಿಯಲು ಸಾಧ್ಯವೇ ಇಲ್ಲ ಭಾರತೀಯ ರೈತನ ಸಾಮಾನ್ಯ ಸ್ವರೂಪ,ಧರಿಸುವಬಟ್ಟೆ. ತಿನ್ನುವ ಆಹಾರ ವಾಸಗೃಹ ಅತನ ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ ಬಗ್ಗೆ ಏನು ಕ್ರಮ ಕೈಗೊಳ್ಳಲಾಗುತ್ತಿದೆ. ಎಂಬುದನ್ನು ಎಲ್ಲಾ ಅಧಿಕಾರಿಗಳೂ ಪರಿಶೀಲಿಸಬೇಕು ಎಂದು ಶ್ರೀ ನೆಹರೂರವರು ಹೇಳಿದರು.

ವಿದೇಶೀ ಶಿಕ್ಷಣ ವಿಷಯವಾಗಿ ಅವರು ಪ್ರಸ್ತಾಪಿಸಿ, ವಿಶೇಷ ಶಿಕ್ಷಣಕ್ಕಾಗಿ ಅಮೇರಿಕಾ, ಇಂಗ್ಲೆಂಡ್ ಮುಂತಾದುವಕ್ಕೆ ತೆರಳಿ ಹಿಂತಿರುಗಿದೊಡನೆಯೇ ಅಧಿಕಾರಿಗಳು ಹೆಚ್ಚಿನ ಸಂಬಳ ಅಪೇಕ್ಷಿಸುತ್ತಾರೆ. ಅವರದೇ ಒಂದು ಹೊಸ ಜಾತಿಯಾಗುತ್ತದೆ. ಆಗ ಅವರು ಸಾಮಾನ್ಯ ಜನರೊಡನೆ ಬೆರೆಯುವುದಿಲ್ಲ. ಅಂತಹ ವಿದ್ಯೆಯಿಂದೇನೂ ಪ್ರಯೋಜನವಿಲ್ಲ ಎಂದು ಪ್ರಧಾನಿಯವರು ತಿಳಿಸಿದರು.

ಎಂ. ಪಿ. ಸಿ. ಸಿ. ಅಧಿವೇಶನ ಮುಂದುವರಿಯುವುದೇ ?

ಮೈಸೂರು ೨೫

ಮುಂದಿನ ತಿಂಗಳು ೩,೪ ರಂದು ಚೆನ್ನದಗಣೆಯಲ್ಲಿ ನಡೆಯಲಿರುವ ಎಂ.ಪಿ.ಸಿ.ಸಿ. ಅಧಿವೇಶನವನ್ನು ಅಕ್ಟೋಬರ್ ೩ ನೇ ವಾರಕ್ಕೆ ಮುಂದುವರಿಸಬೇಕೆಂದು ಕೆಲವು ಶಾಸನಸಭೆ ಕಾಂಗ್ರೆಸ್‌ನ ಸದಸ್ಯರ ಪ್ರಾರ್ಥನೆಯನ್ನು ಪರಿಶೀಲಿಸಲು ಇದೇ ೨೭ನೇ ತಾರೀಖು ಭಾನುವಾರ ಮೈಸೂರಿನಲ್ಲಿ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಲಿರುವುದೆಂದು ತಿಳಿದುಬಂದಿದೆ.

ಮುಖ್ಯ ಮಂತ್ರಿಗಳ ಪತ್ರಿಕಾಗೋಷ್ಠಿ

ಬೆಂಗಳೂರು ೨೪

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ಸಂಜೆ ರಾಜಧಾನಿಗೆ ಆಗಮಿಸಿ ನಾಳೆಯದಿನ ಶ್ರೀಮನ್ಮಹಾರಾಜರನ್ನು ಭೇಟಿಮಾಡುವರೆಂದು ತಿಳಿಯಬರುತ್ತದೆ. ಶ್ರೀಯುತರು ಅಕ್ಟೋಬರ್ ೧ನೇ ತಾರೀಖು ಕರ್ನೂಲಿಗೆ ತೆರಳಿ ಮಾರನೇ ದಿನ ಬಳ್ಳಾರಿಗೆ ಹೋಗುವುದಾಗಿ ಈ ದಿನ ಬೆಳಿಗ್ಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸಂಸ್ಥಾನದಲ್ಲಿ ನ್ಯಾಯಾಂಗ ಮತ್ತು ಕಾರ್ಯಾಂಗವನ್ನು ಬೇರ್ಪಡಿಸಲು ಯೋಜನೆ ತಯಾರಾಗಿ ಅದು ಮಂತ್ರಿಮಂಡಲದ ಪರಿಶೀಲನೆಯಲ್ಲಿರುವುದಾಗಿ ತಿಳಿಸಿದರು.

ತುಂಗಭದ್ರಾ ಯೋಜನೆಯ ವಿಷಯವಾಗಿ ಅವರು ಪ್ರಸ್ತಾಪಿಸಿ, ಈ ವಿಷಯದಲ್ಲಿ ಇನ್ನೂ ಅಂತ್ಯತೀರ್ಮಾನ ಆಗಿಲ್ಲವೆಂದೂ ತಾವು ಸಹ ನಿನ್ನೆಯದಿನ ಕೇಂದ್ರ ಕೈಗಾರಿಕಾ ಸಚಿವ ಶ್ರೀ ಕೃಷ್ಣಮಾಚಾರಿಯವರೊಡನೆ ಮಾತುಕತೆಯನ್ನು ಟೆಲಿಫೋನಿನಲ್ಲಿ ನಡೆಸುದುದಾಗಿ ತಿಳಿಸಿದರು.

ಬಳ್ಳಾರಿಗೆ ಮುಖ್ಯಮಂತ್ರಿಗಳು

ಬೆಂಗಳೂರು ೨೫

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಕ್ಟೋಬರ್ ಒಂದನೇ ತಾ॥ ಕರ್ನೂಲಿಗೆ ತೆರಳಿ ಅಲ್ಲಿ ಆಂಧ್ರಪ್ರಾಂತ್ಯ ಆರಂಭೋತ್ಸವದಲ್ಲಿ ಭಾಗವಹಿಸಿ ಮಾರನೇ ದಿನ ಬಳ್ಳಾರಿಯಲ್ಲಿ ನಡೆಯಲಿರುವ ನಾನಾ ಸಮಾರಂಭಗಳಲ್ಲಿ ಭಾಗವಹಿಸಲು ಹೋಗುವರೆಂದು ತಿಳಿಯಬರುತ್ತದೆ.

ಅವರು ಅಕ್ಟೋಬರ್ ೩ ನೇ ತಾರೀಖು ಅಲ್ಲಿಂದ ಕೆ. ಜಿ. ಎಫ್. ಗೆ ತೆರಳುವರು.

ಕರ್ನಾಟಕ ಪ್ರಾಂತ್ಯಕ್ಕಾಗಿ ಚಳುವಳಿ

ಅಕ್ಟೋಬರ್ ಅಂತ್ಯದೊಳಗೆ ಘೋಷಣೆಯಿಲ್ಲದಿದ್ದರೆ

ಸತ್ಯಾಗ್ರಹ

ಸಂಯುಕ್ತ ಕರ್ನಾಟಕ ಪ್ರಾಂತ್ಯ ರಚನೆ ಬಗ್ಗೆ ಕೇಂದ್ರ ಸರ್ಕಾರವು ಅಕ್ಟೋಬರ್ ಕೊನೆಯೊಳಗೆ ನಿರ್ದಿಷ್ಟ ಘೋಷಣೆಯನ್ನು ಹೊರಡಿಸದಿದ್ದರೆ ಕನ್ನಡ ಭಾಷಾ ಪ್ರದೇಶಗಳಲ್ಲಿ ಸಾಮೂಹಿಕ ಸತ್ಯಾಗ್ರಹವನ್ನು ಹೂಡುವುದಾಗಿ, ಕರ್ನಾಟಕ ಏಕೀಕರಣ ಸಮಿತಿಯ ಕ್ರಿಯಾಸಮಿತಿಯು ತೀರ್ಮಾನಿಸಿದೆ.

ಹೈದರಾಬಾದ್ ವಿಭಜನೆಯಾಗುವ ಮುನ್ನ ವಿವಾದಾಸ್ಪದ ವಿಲ್ಲದ ಕನ್ನಡ ಪ್ರದೇಶಗಳನ್ನು ಸೇರಿಸಿ ಕರ್ನಾಟಕ ಪ್ರಾಂತ್ಯ ರಚನೆಯಾಗಬೇಕೆಂದು ಸಮಿತಿ ತೀರ್ಮಾನಿಸಿದೆ. ಬಳ್ಳಾರಿ ಬಗ್ಗೆ ಕೇಂದ್ರದ ತೀರ್ಮಾನವು ಅನ್ಯಾಯವಾಗಿದೆಯೆಂದೂ ಆಂಧ್ರ ಮತ್ತು ಮೈಸೂರು ಗಡಿ ನಿರ್ಧಾರಕ ಸಮಿತಿಯನ್ನು ನೇಮಿಸಿ ಈ ವಿಷಯ ಪರಿಶೀಲಿಸಬೇಕೆಂದು ಸಮಿತಿ ನಿರ್ಣಯಮಾಡಿದೆ.

ಟಿ. ಪ್ರಕಾಶಂರವರನ್ನು ಪಕ್ಷದಿಂದ ಬಿಡುಗಡೆ ಮಾಡಲೇಬೇಕು

ಮದರಾಸ್ ಪಿ. ಎಸ್. ಪಿ. ಪಕ್ಷದ ನಿರ್ಣಯ

ಮದ್ರಾಸಿನ ಪ್ರಜಾಸೋಷಲಿಸ್ಟ್ ಪಕ್ಷದ ಸಭೆಯು ನಿನ್ನೆಯದಿನ ನಡೆದು ಆಂಧ್ರ ಪ್ರಾಂತ್ಯರಚನೆಗಾಗಿ ಶ್ರೀ ಟಿ. ಪ್ರಕಾಶಂರವರನ್ನು ಪಕ್ಷದ ಕಟ್ಟುಪಾಡುಗಳಿಂದ ಬಿಡುಗಡೆ ಮಾಡಬೇಕೆಂದು ಹಿಂದೆ ಮಾಡಿದ್ದ ನಿರ್ಣಯವನ್ನೇ ಪುನಃ ಸಮರ್ಥಿಸಿತೆಂದು ತಿಳಿಯಬರುತ್ತದೆ. ರಾಷ್ಟ್ರೀಯ ಕಾರ್ಯನಿರ್ವಾಹಕ ಮಂಡಲಿಯು ಈ ನಿರ್ಣಯವನ್ನು ಪುನಃ ಪರಿಶೀಲಿಸಿ ತನ್ನ ನಿಲುವನ್ನು ಬದಲಾಯಿಸಿಕೊಂಡು ಶ್ರೀ ಪ್ರಕಾಶಂರವರನ್ನು ಬಿಡುಗಡೆ ಮಾಡಬೇಕೆಂಬ ಮತ್ತೊಂದು ನಿರ್ಣಯವನ್ನು ಸಭೆಯಲ್ಲಿ ಮಾಡಲಾಯಿತೆಂದು ಗೊತ್ತಾಗಿದೆ.

ಕೇಂದ್ರ ಪ್ರಜಾಸೋಷಲಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಗೋರೆಯವರು ಸಹ ಈ ಸಭೆಯಲ್ಲಿ ಹಾಜರಿದ್ದರೆಂದೂ ತಿಳಿಯಬರುತ್ತದೆ. ಸಭೆಯು ಮುಕ್ತಾಯದ ಮೇಲೆ ಅವರು ಮಾತನಾಡುತ್ತಾ ಮದ್ರಾಸ್ ಶಾಖೆಯ ನಿರ್ಧಾರವನ್ನು ರಾಷ್ಟ್ರೀಯ ಕಾರ್ಯನಿರ್ವಾಹಕ ಮಂಡಲಿಯಲ್ಲಿ ಮಂಡಿಸಿ ಅವರ ಅಭಿಪ್ರಾಯವನ್ನು ಪಡೆದು ಅಂತ್ಯತೀರ್ಮಾನವನ್ನು ಕೊಡಲಾಗುವುದೆಂದು ತಿಳಿಸಿದ್ದಾರೆ.

ದೇವಾಲಯಕ್ಕೆ ಹರಿಜನರ ಪ್ರವೇಶಕ್ಕೆ ಸಮ್ಮತಿ

ದೇವಘರ್‌ನಲ್ಲಿರುವ ವೈದ್ಯನಾಥ ದೇವಾಲಯಕ್ಕೆ ಇಂದಿನಿಂದ ಹರಿಜನರನ್ನು ಯಾವ ನಿರ್ಬಂಧವೂ ಇಲ್ಲದೆ ಬಿಡಬೇಕೆಂದು ಅಲ್ಲಿಯ ಪಂಡಾಗಳು ಸಭೆ ನಡೆಸಿ ತೀರ್ಮಾನಿಸಿರುವುದಾಗಿ ತಿಳಿಯಬರುತ್ತದೆ.

ಕಳೆದವಾರ ಆಚಾರ್ಯ ವಿನೋಬ ಭಾವೆಯವರ ಮೇಲೆ ಕೆಲವು ಪಂಡಾಗಳು ಧಾಳಿ ನಡೆಸಿದ್ದನ್ನು ಈ ಸಭೆಯಲ್ಲಿ ಖಂಡಿಸಲಾಯಿತು.

ಈ ಧಾಳಿ ಸಂಬಂಧದಲ್ಲಿ ನಿನ್ನೆಯದಿನವೂ ೧೨ ಜನರ ದಸ್ತಗಿರಿಗಳಾದುವು. ಇಲ್ಲಿಯವರೆಗೆ ೨೨ ದಸ್ತಗಿರಿಗಳಾಗಿರುವುದಾಗಿ ಹೇಳಲಾಗಿದೆ.

ಹೈದರಾಬಾದಿನಲ್ಲಿ ೧೮ ಜಿಲ್ಲೆಗಳು

ಹೈದರಾಬಾದಿನಲ್ಲಿ ಹಾಲಿ ಇರುವ ೧೬ ಜಿಲ್ಲೆಗಳನ್ನು ಅಕ್ಟೋಬರ್ ಒಂದನೇ ತಾರೀಖಿನಿಂದ ೧೮ ಜಿಲ್ಲೆಗಳನ್ನಾಗಿ ಪರಿವರ್ತಿಸಲಾಗುವುದೆಂದು ತಿಳಿಯಬರುತ್ತದೆ.

ಹಾಲಿ ಇರುವ ವಾರಂಗಲ್ ಜಿಲ್ಲೆಯನ್ನು ಎರಡು ಜಿಲ್ಲೆಗಳನ್ನಾಗಿ ಮಾಡಲಾಗುತ್ತದೆ.

ಜಪಾನ್ ಪದ್ಧತಿ ಸಾಗುವಳಿ

ಹೈದರಾಬಾದಿನಲ್ಲಿ ಸುಮಾರು ೭೭೦೦೦ ಎಕರೆ ಜಮೀನಿನಲ್ಲಿ ಜಪಾನ್ ಪದ್ಧತಿಯಂತೆ ಸಾಗುವಳಿ ಮಾಡುತ್ತಿರುವುದಾಗಿ ತಿಳಿಯಬರುತ್ತದೆ.

ಕಬ್ಬಿನ ಕನಿಷ್ಠ ಬೆಲೆಯಲ್ಲಿ ಏರಿಕೆ

ಸಕ್ಕರೆ ಬೆಲೆ ಏರುವುದಿಲ್ಲ: ಬೆಲ್ಲದ ಮೇಲೆ ಹತೋಟಿಯಿಲ್ಲ

೫೩-೫೪ನೇ ಸಾಲಿನಲ್ಲಿ ಕಬ್ಬಿನ ಬೆಲೆಯನ್ನು ಮಣ ಒಂದಕ್ಕೆ ೨ ಆಣೆಯಂತೆ ಹೆಚ್ಚಿಸಲು ಕೇಂದ್ರ ಸರ್ಕಾರವು ನಿರ್ಧರಿಸಿ ಬೆಲೆಯನ್ನು ನಿರ್ಧಿಮಾಡಿದೆ. ಹೀಗೆ ಹೆಚ್ಚಿಸುವುದರಿಂದ ಸಕ್ಕರೆ ಬೆಲೆಯ ಮಣ ಒಂದಕ್ಕೆ ಒಂದು ರೂಪಾಯಿ ನಾಲ್ಕಾಣೆ ಏರಬೇಕಾಗುತ್ತದೆ. ಇದನ್ನು ತಪ್ಪಿಸಿ ಈಗಿರುವ ದರದಂತೆಯೇ ಸಕ್ಕರೆಯನ್ನು ಮಾರಲು ಸರಕಾರವು ಈಗ ವಸೂಲ್ಮಾಡುತ್ತಿರುವ ಒಂದು ರೂಪಾಯಿ ಸುಂಕವನ್ನು ಇನ್ನುಮುಂದೆ ವಸೂಲ್ಮಾಡುವುದಿಲ್ಲ. ಗಿರಣಿಗಳು ತಮಗೆ ಬರುವ ಲಾಭದಲ್ಲಿ ಮಣ ಒಂದಕ್ಕೆ ೪ ಆಣೆಯನ್ನು ಬಿಡಲು ಒಪ್ಪಿವೆ. ಇದರಿಂದ ರೈತರಿಗೆ ಕಬ್ಬಿಗೆ ಹೆಚ್ಚಿನ ಬೆಲೆ ದೊರೆಯುತ್ತದೆ. ಆದರೆ ಸಕ್ಕರೆ ಬೆಲೆಯುಮಾತ್ರ ಏರುವುದಿಲ್ಲ.

ಇವಲ್ಲದೆ ಸಕ್ಕರೆ ಮೇಲೆ ಯಾವರೀತಿಯ ಹತೋಟಿಯನ್ನೂ ವಿಧಿಸುವುದಿಲ್ಲ. ಆದರೆ ಗಿರಣಿಗಳಿಂದ ಸಕ್ಕರೆಯ ರವಾನೆಯನ್ನು ಮಾತ್ರ ಹತೋಟಿಗೆ ಒಳಪಡಿಸಲಾಗುತ್ತದೆ.

ಬೆಲ್ಲ ಮತ್ತು ಕಲ್ಲುಸಕ್ಕರೆಯ ಮೇಲೂ ಯಾವರೀತಿಯಾದ ಹತೋಟಿಯನ್ನೂ ವಿಧಿಸುವುದಿಲ್ಲವೆಂದು ಸರ್ಕಾರವು ತನ್ನ ಹೊಸ ನೀತಿಯನ್ನು ನಿರ್ಧರಿಸಿದೆ.

ಆಂಧ್ರದಲ್ಲಿ ಕಾಂಗ್ರೆಸ್ ಸರ್ಕಾರವೇ ರಚನೆ ಆಗುವುದು

ಶ್ರೀ ಸಂಜೀವರೆಡ್ಡಿಯವರ ಹೇಳಿಕೆ

ಆಂಧ್ರಪ್ರಾಂತ್ಯದಲ್ಲಿ ಸರ್ಕಾರ ರಚನೆ ವಿಷಯವಾಗಿ ಆಂಧ್ರಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎನ್. ಸಂಜೀವರೆಡ್ಡಿಯವರು ಮಾತನಾಡುತ್ತಾ, ಕಾಂಗ್ರೆಸ್ ನಾಯಕತ್ವದಲ್ಲಿಯೇ ಹೊಸ ಸರ್ಕಾರವು ರಚನೆಯಾಗುವುದೆಂದು ತಮಗೆ ಪೂರ್ಣ ಭರವಸೆಯಿರುವುದಾಗಿ ಅವರು ಹೇಳಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೨—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೮—೪	೨೨—
ಎಳ್ಳು	೭೫—	೮೮—೧೪
ಹುರುಳಿ	೪೭—	೪೮—
ಅಲಸಂದಿ	—	—
ಹುಣಸೇಹಣ್ಣು	೭—೧೫	೯—೩
ಸೀಗೆಕಾಯಿ	೭—೩	—
ತೆಂಗಿನಕಾಯಿ	೨೩೩	[illegible]

ತಿರುವಾಂಕೂರಿನ ರಾಜಕೀಯ

ಸರ್ಕಾರದ ನಿಲುವು ಪ್ರಜಾಪ್ರಭುತ್ವಕ್ಕೆ ಅಪಹಾಸ್ಯ ಮಾಡುವಂತಿದೆ

ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷರ ಟೀಕೆ

ತಿರುವಾಂಕೂರು-ಕೊಚ್ಚಿ ಪ್ರಾಂತ್ಯದಲ್ಲಿ ರಾಜಪ್ರಮುಖರು ಶಾಸನಸಭೆಯನ್ನು ರದ್ದುಗೊಳಿಸಿ ಚುನಾವಣೆ ನಡೆಯುವಂತೆ ಆಜ್ಞೆ ಮಾಡಿರುವುದರಿಂದ ಚುನಾವಣೆಗಳನ್ನು ನಡೆಸಲು ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳುವಂತೆ ಅಲ್ಲಿಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿರುವುದಾಗಿ ಅಲ್ಲಿಯ ಮುಖ್ಯಮಂತ್ರಿ ಶ್ರೀ ಜಾನ್‌ರವರು ಹೇಳಿದ್ದಾರೆ.

ಈ ಸಂದರ್ಭದಲ್ಲಿ ತಮಿಳುನಾಡು ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ರಾಮಸ್ವಾಮಿಪಿಳ್ಳೆಯವರು ಮಾತನಾಡುತ್ತಾ ಶಾಸನಸಭೆಯನ್ನು ರದ್ದುಗೊಳಿಸಿ ಪರಾಜಯವಾದ ಸರ್ಕಾರವನ್ನೇ ಮುಂದುವರಿಸಿ ಪ್ರಜಾಪ್ರಭುತ್ವವನ್ನು ಅಪಹಾಸ್ಯಗೊಳಿಸಲಾಗಿದೆಯೆಂದು ಟೀಕಿಸಿದ್ದಾರೆ.

ಕೇಂದ್ರ ಕಮ್ಯೂನಿಸ್ಟ್ ಪಕ್ಷವೂ ಸಹ ಒಂದು ಹೇಳಿಕೆಯನ್ನಿತ್ತು ಕಾಂಗ್ರೆಸ್ ಸರಕಾರಕ್ಕೆ ಸೋಲುಂಟಾಗಿರುವುದಾಗಿ ವಿರೋಧಪಕ್ಷದವರು ಹೊಸ ಸರ್ಕಾರವನ್ನು ರಚಿಸಲು ಸಿದ್ಧವಿದ್ದಾಗ ಶಾಸನಸಭೆಯನ್ನು ರಾಜಪ್ರಮುಖರು ರದ್ದುಗೊಳಿಸಿದುದು ಆಕ್ಷೇಪಣೀಯವೆಂದು ಹೇಳಿದ್ದಾರೆ.

ಭಾರತ-ಜಪಾನ್ ತಾಂತ್ರಿಕ ಒಪ್ಪಂದ

ಭಾರತದಲ್ಲಿ ಸರ್ಕಾರವು ಹೊಸದಾಗಿ ಸ್ಥಾಪಿಸಲಿರುವ ಉಕ್ಕಿನ ಕಾರ್ಖಾನೆಯ ಸಂದರ್ಭದಲ್ಲಿ ಭಾರತಕ್ಕೆ ಬಂದಿರುವ ಕೈಗಾರಿಕಾ ನಿಯೋಗವೊಂದು ಮಾತುಕತೆಗಳನ್ನು ಪ್ರಾರಂಭಿಸಿರುವುದಾಗಿ ಹೇಳಲಾಗಿದೆ. ಭಾರತ ಮತ್ತು ಜಪಾನ್ ನಡುವೆ ತಾಂತ್ರಿಕ ಒಪ್ಪಂದವಾಗುವ ವಿಷಯವನ್ನು ಚರ್ಚಿಸಲಾಗುತ್ತಿದೆಯೆಂದು ತಿಳಿಯಬರುತ್ತದೆ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ,
ಸಮಾಚಾರ ಪ್ರೆಸ್, ಮೈಸೂರು.

ಕೊಳಲು ವಾದನ

ಮೈಸೂರು ೨೫

ನಾಳೆ ರಾತ್ರಿ ೯-೩೦ ಗಂಟೆಗೆ ಪ್ರಖ್ಯಾತ ಕೊಳಲು ವಿದ್ವಾಂಸರಾದ ಶ್ರೀ ಪನ್ನಾಲಾಲ್ ಘೋಷ್‌ರವರು ಅಖಿಲಭಾರತ ರೇಡಿಯೋ ದಿನ ರಾಷ್ಟ್ರೀಯ ಕಾರ್ಯಕ್ರಮದ ಅಂಗವಾಗಿ ಕೊಳಲು ಕಛೇರಿಯನ್ನು ನಡೆಸುತ್ತಾರೆ.

★ ಇದೇ ೨೧ನೇ ತಾರೀಖು ಶ್ರೀ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಸ್ಕೂಲ್‌ನ ಅರಸು ವಿದ್ಯಾರ್ಥಿ ಸಂಘದ ಪ್ರಾರಂಭೋತ್ಸವವನ್ನು ಹಿರಿಯ ಶಾಸನಸಭೆ ಸದಸ್ಯ ಶ್ರೀ ಎಂ.ಪಿ.ಎಲ್. ಶಾಸ್ತ್ರಿಯವರು ನೆರವೇರಿಸಿದರು. ಸರ್ದಾರ್ ಕೆ. ಬಸವರಾಜೇ ಅರಸುರವರು ಅಧ್ಯಕ್ಷತೆ ವಹಿಸಿದ್ದರು.

ಅಪೇರ
25--9--53 ರಿಂದ ಅನೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ವೇಲೆಕಾರಿ [ತಮಿಳು] ಮಗಳ್
ಪಾತ್ರ:—ಲಕ್ಷ್ಮೀರಾಜಂ,
ಎ. ಟಿ. ರಾಮರಾವ್

ರಣಜಿತ್
25-9-53 ರಿಂದ ಅಮೋಘ ಪ್ರಾರಂಭ
ಮಮ್ತಾಜ್‌ಶಾಂತಿ, ಸುರೇಶ್ ನಟಿಸಿರುವ
ಜಮಾನಿಕಿ ಹವ [ಹಿಂದಿ]

ಮೈಸೂರು ದಸರಾ
ವಸ್ತುಪ್ರದರ್ಶನ ೧೯೫೩
(ತಾ|| ೮—೧೦—೫೩ರಿಂದ ೨೫—೧೦—೫೩ರ ವರೆಗೆ)
—: ಕಲಾವಿಭಾಗದಲ್ಲಿ ವಿಜ್ಞಪ್ತಿ :—
ಈ ವರ್ಷ ವಸ್ತುಪ್ರದರ್ಶನದ ಅಂಗವಾಗಿ ಎಂದಿನಂತೆ ಗ್ರಾಮಕಲೆಗಳಿಗೆ ಉತ್ತೇಜನ ಕೊಡುವುದಕ್ಕೋಸ್ಕರ ಸುಗ್ಗಿಯ ಕುಣಿತ, ಯಕ್ಷಗಾನ, ಕುಣಿತ, ಕೋಲಾಟ, ಸೂತ್ರದ ಬೊಂಬೆ ಆಟ, ಪಟ್ಟಾವರಸೆ, ಕತ್ತಿ ವರಸೆ, ಗ್ರಾಮಸಾಹಿತ್ಯ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುವುದು.
ಇವುಗಳಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಲಿಖಿತಮೂಲಕ ತಾ|| ೨-೧೦-೫೩ರ ಒಳಗಾಗಿ ಈ ಕೆಳಗೆ ಕಂಡ ವಿಳಾಸಕ್ಕೆ ಪತ್ರ ಬರೆದುಕೊಳ್ಳಬೇಕಾಗಿ ವಿಜ್ಞಪ್ತಿ.
ಕಾರ್ಯದರ್ಶಿ
ದಸರಾ ವಸ್ತುಪ್ರದರ್ಶನ ಸಮಿತಿ, ಮೈಸೂರು

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೩೩

೨೬-೯-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪ್ರಜಾಸೋಷಲಿಸ್ಟ್ ಪಕ್ಷಕ್ಕೆ ಪ್ರಕಾಶಂ ರಾಜೀನಾಮೆ

ಆಂಧ್ರಪ್ರಾಂತ್ಯ ಮಂತ್ರಿಮಂಡಲ ರಚನೆಗೆ ಬಿಕ್ಕಟ್ಟು ಪರಿಹಾರ

ಕಳೆದ ಎರಡುವಾರಗಳಿಂದ ಆಂಧ್ರಪ್ರಾಂತ್ಯದಲ್ಲಿ ಸ್ಥಿರವಾದ ಸರ್ಕಾರವನ್ನು ರಚಿಸುವುದರಲ್ಲಿ ಶ್ರೀ ಪ್ರಕಾಶಂರವರು ಪ್ರಮುಖ ಪಾತ್ರವನ್ನು ವಹಿಸುವ ವಿಷಯದಲ್ಲಿ ಆದ ಸಮಾಲೋಚನೆಗಳು ನಿನ್ನೆಯದಿನ ಅಂತಿಮ ಘಟ್ಟವನ್ನು ತಲುಪಿದೆಯೆಂದು ತಿಳಿಯಬರುತ್ತದೆ. ಶ್ರೀ ಟಿ. ಪ್ರಕಾಶಂರವರು ಪ್ರಜಾಸೋಷಲಿಸ್ಟ್ ಪಕ್ಷಕ್ಕೆ ರಾಜೀನಾಮೆಯನ್ನು ಬೊಂಬಾಯಿ ಮತ್ತು ದೆಹಲಿಯಲ್ಲಿರುವ ಪಕ್ಷದ ಕಛೇರಿಗಳಿಗೆ ಕಳುಹಿಸಿರುವುದಾಗಿ ಹೇಳಲಾಗಿದೆ.

ಶ್ರೀಯುತರು ಸ್ವತಂತ್ರವಾಗಿದ್ದುಕೊಂಡು, ಯಾವ ರಾಜಕೀಯ ಪಕ್ಷವನ್ನೂ ಸೇರದೆ ಶಾಸನ ಸಭೆಯ ವಿವಿಧ ಪಕ್ಷಗಳಿಂದ ಆರಿಸಿಕೊಂಡು ಒಂದು ಸಮ್ಮಿಶ್ರ ಸರ್ಕಾರವನ್ನು ರಚಿಸಲಿದ್ದಾರೆ.

ಪಕ್ಷದ ಕಟ್ಟುಪಾಡುಗಳಿಂದ ಅವರನ್ನು ಬಿಡುಗಡೆ ಮಾಡಬೇಕೆಂದು ಮೊನ್ನೆಯದಿನ ಪ್ರಜಾಸೋಷಲಿಸ್ಟ್ ಪಕ್ಷವು ಮದ್ರಾಸಿನಲ್ಲಿ ಮಾಡಿದ ನಿರ್ಧಾರದ ಬಗ್ಗೆ ಪ್ರಧಾನ ಕಾರ್ಯದರ್ಶಿಯವರು ಬೊಂಬಾಯಿಗೆ ತೆರಳಿ ಪಕ್ಷದನಾಯಕ ಆಚಾರ್ಯ ಕೃಪಲಾನಿಯವರೊಡನೆ ಮಾತುಕತೆ ನಡೆಸುತ್ತಲಿದ್ದಾರೆ.

ಪ್ರಜಾಸೋಷಲಿಸ್ಟ್ ಪಕ್ಷವು ಈ ವಿಷಯದಲ್ಲಿ ಈದಿನ ಒಂದು ಅಧಿಕೃತ ಪ್ರಕಟಣೆಯನ್ನು ಹೊರಡಿಸುವ ನಿರೀಕ್ಷೆಯಿದೆ.

ನಿರುದ್ಯೋಗ ಪರಿಹಾರಕ್ಕೆ ೧೦ ವರ್ಷ ಬೇಕು

ದೇಶದಲ್ಲಿ ನಿರುದ್ಯೋಗವು ಪೂರ್ಣವಾಗಿ ಪರಿಹಾರವಾಗಬೇಕಾದರೆ ೧೦ ವರ್ಷಗಳ ಕಾಲ ಬೇಕಾಗುತ್ತದೆ ಎಂದು ಅರ್ಥಿಕ ಸಚಿವ ಶ್ರೀ ದೇಶಮುಖ್‌ರವರು ಗೋಹತಿಯಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಭೂದಾನ ಸಂಗ್ರಹಣೆ

ಹೈದರಾಬಾದಿನಲ್ಲಿ ನಡೆಯುತ್ತಿರುವ ಭೂದಾನ ಯಜ್ಞ ಚಳುವಳಿಯಲ್ಲಿ ಇಲ್ಲಿಯವರೆಗೆ ೬,೭೦೪೦ ಎಕರೆ ಭೂಮಿಯನ್ನು ಸಂಗ್ರಹಿಸಿರುವುದಾಗಿ ತಿಳಿಯಬರುತ್ತದೆ.

ಸ್ವಶಕ್ತಿಯಿಂದಲೇ ನೀರಾವರಿ ಕೆಲಸ

ಉತ್ತರ ಪ್ರದೇಶದಲ್ಲಿ ಜನರು ಸ್ವಶಕ್ತಿಯಿಂದಲೇ ೯೬ ಮೈಲಿ ಉದ್ದದ ನೀರಾವರಿ ಕಾಲುವೆಯನ್ನು ತೆಗೆಯಲು ಕೆಲಸವನ್ನು ಪ್ರಾರಂಭಿಸಿದ್ದಾರೆ.

ಮುಖ್ಯಮಂತ್ರಿಗಳು ನಾಳೆ ರಾಜಧಾನಿಗೆ

ಮೈಸೂರು ೨೬

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈದಿನ ಇಲ್ಲಿಗೆ ಬರಬೇಕಾಗಿದ್ದ ಕಾರ್ಯಕ್ರಮವು ರದ್ದಾಗಿ ಅವರು ನಾಳೆ ಬೆಳಿಗ್ಗೆ ಆಗಮಿಸುವರು. ೧೦ ಗಂಟೆಗೆ ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿ ಬಳ್ಳಾರಿಗೆ ಅಕ್ಟೋಬರ್ ೨ ನೇ ತಾರೀಖು ರಾಜಪ್ರಮುಖರು ಭೇಟಿಕೊಡುವ ವಿಷಯವನ್ನು ಚರ್ಚಿಸುವರೆಂದು ತಿಳಿದು ಬಂದಿದೆ. ೧೧ ಗಂಟೆಗೆ ಅವರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯಲ್ಲಿ ಭಾಗವಹಿಸುವರು.

ಜಿಲ್ಲಾ ಕಾಂಗ್ರೆಸ್ ಚುನಾವಣೆ

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಮೈಸೂರು, ಕೃಷ್ಣರಾಜನಗರ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿ ಮಾತ್ರ ಚುನಾವಣೆ ನಡೆಯಿತು. ಮಿಕ್ಕ ತಾಲ್ಲೂಕುಗಳಲ್ಲಿ ಅವಿರೋಧ ಆಯ್ಕೆ ನಡೆದಿದೆ.

ಪದವೀಧರರ ಆಶ್ಚರ್ಯ ಉತ್ತರಗಳು

ಡಾ|| ರಾಜೇಂದ್ರಪ್ರಸಾದರು ಭಾರತದ ಶ್ರೇಷ್ಠ ನ್ಯಾಯಾಧೀಶರು, ಸಾಮೂಹಿಕ ಯೋಜನೆಯು ಕೋಮುವಾರು ಭೇದವನ್ನು ಅಡಗಿಸಲು ಕೈಗೊಂಡಿರುವ ಯೋಜನೆ, ಪೆಪ್ಸುವಿನಲ್ಲಿ ೫೦೦ ಸಂಸ್ಥಾನಗಳು ಐಕ್ಯವಾಗಿವೆ, ಭಾರತದ 'ಎ' ಸಂಸ್ಥಾನಗಳೆಂದರೆ ದಕ್ಷಿಣ ಭಾರತ, ಹಿಮಾಲಯ ಪ್ರದೇಶ ಮತ್ತು ಟಿಬೆಟ್, ಪಂಜಾಬಿನ ಜನಸಂಖ್ಯೆ ೪೦ಕೋಟಿ— ಇಂತಹ ಆಶ್ಚರ್ಯ ಉತ್ತರಗಳನ್ನು ಮಧ್ಯಪ್ರದೇಶ ಮೋಗಾದ ಪದವೀಧರರು ಉಪಾಧ್ಯಾಯರ ಶಿಕ್ಷಣ ಕಾಲೇಜಿನ ಪ್ರವೇಶ ಪರೀಕ್ಷೆಯಲ್ಲಿ ಕೊಟ್ಟಿದ್ದಾರೆ.

ಬಳ್ಳಾರಿಗೆ ಜಿಲ್ಲಾ ನ್ಯಾಯಾಧೀಶರು

ಮೈಸೂರಿನ ಪ್ರಿನ್ಸಿಪಾಲ್ ಜಿಲ್ಲಾ ಮತ್ತು ಸೆಷನ್ಸ್ ಜಡ್ಜರಾದ ಶ್ರೀ ಜಿ. ಪಟೇಲ್‌ರವರನ್ನು ಬಳ್ಳಾರಿಯ ಜಿಲ್ಲಾ ನ್ಯಾಯಾಧೀಶರಾಗಿ ವರ್ಗಾಯಿಸಲು ಸರ್ಕಾರವು ನಿರ್ಧರಿಸಿದೆಯೆಂದು ತಿಳಿಯಬಂದಿದೆ.

ಮಂತ್ರಿಮಂಡಲದ ವಿಸ್ತರಣೆ

ಬೆಂಗಳೂರು ೨೬

ಮೈಸೂರು ಮಂತ್ರಿಮಂಡಲದ ವಿಸ್ತರಣೆಯ ವಿಷಯವು ತೀವ್ರ ಪರಿಶೀಲನೆಯಲ್ಲಿದೆಯೆಂದೂ ಅಕ್ಟೋಬರ್ ೧ ನೇ ತಾರೀಖಿನೊಳಗಾಗಿ ಒಂದು ನಿರ್ದಿಷ್ಟ ತೀರ್ಮಾನಕ್ಕೆ ಬರಲಾಗುವುದೆಂದೂ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿದ್ದಾರೆ.

ಶ್ರೀ ಕೆ. ಶೇಷಗಿರಿರಾಯರನ್ನು ಬಳ್ಳಾರಿಯ ಜಿಲ್ಲಾಧಿಕಾರಿಗಳಾಗಿ ನೇಮಿಸಲಾಗುವುದೆಂದೂ ಅವರು ಹೇಳಿದ್ದಾರೆ.

ಶಾಸನಸಭೆಯ ವಿಶೇಷ ಅಧಿವೇಶನ

ಬೆಂಗಳೂರು ೨೬

ಜಿಲ್ಲಾಬೋರ್ಡುಗಳಿಗೆ ನೇರವಾದ ಚುನಾವಣೆಯನ್ನು ಮಾಡುವಂತೆ ಈಗಿನ ಕಾನೂನನ್ನು ತಿದ್ದುಪಡಿ ಮಾಡಲು ಶಾಸನಸಭೆಯ ವಿಶೇಷ ಅಧಿವೇಶನವೊಂದು ಮುಂದಿನ ನವೆಂಬರ್‌ನಲ್ಲಿ ನಡೆಯುವುದೆಂದು ಹೇಳಲಾಗಿದೆ.

ಕಾರ್ಯನಿರತ ಪತ್ರಿಕೋದ್ಯೋಗಿ ದಿನ

ಪತ್ರಿಕೋದ್ಯೋಗಿಗಳು ಕಾರ್ಮಿಕರೆಂದು ಪರಿಗಣಿಸಲ್ಪಡಬೇಕೆಂದು ಭಾರತ ಸರ್ಕಾರವು ಕಾನೂನು ಮಾಡಬೇಕೆಂದು ಒತ್ತಾಯಪಡಿಸಲು ನಾಳೆ ದೇಶಾದ್ಯಂತ ಕಾರ್ಯನಿರತ ಪತ್ರಿಕೋದ್ಯೋಗಿಗಳ ದಿನವನ್ನು ಆಚರಿಸಬೇಕೆಂದು ನಿರ್ಧರಿಸಲಾಗಿದೆ.

ರಾಜಪ್ರಮುಖರ ಅಧಿಕಾರ ಕಾಲಾವಧಿ ಮಿತಿ

ರಾಜಪ್ರಮುಖರ ಅಧಿಕಾರ ಕಾಲಾವಧಿಯನ್ನು ಅನಿಶ್ಚಿತವಾಗಿ ಮುಂದುವರಿಸದೆ ಮಿತಿಗೊಳಿಸಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರ ಅಭಿಪ್ರಾಯವೆಂದು ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರು ತಿಳಿಸಿದ್ದಾರೆ.

ಭೀಕರ ಬಿರುಗಾಳಿ

ನಿನ್ನೆಯ ದಿನ ಜಪಾನಿನ ಕೆಲವು ನಗರಗಳಲ್ಲಿ ಭಯಂಕರವಾದ ಬಿರುಗಾಳಿಯುಂಟಾಗಿ ಸುಮಾರು ೧೦೦ ಜನರು ಸತ್ತುಹೋದರೆಂದೂ ಕೆಲವರು ಪತ್ತೆಯಿಲ್ಲದೆ ಹೋಗಿ ಅನೇಕರು ಮನೆ ಮಠಗಳನ್ನು ಕಳೆದುಕೊಂಡಿರುವುದಾಗಿಯೂ ತಿಳಿಯಬರುತ್ತದೆ.

ಅಕ್ಟೋಬರ್ ೧ ಸಾರ್ವತ್ರಿಕ ರಜಾ

ಬಳ್ಳಾರಿಯು ಮೈಸೂರಿಗೆ ಸೇರುವ ಅಕ್ಟೋಬರ್ ೧ ನೇ ತಾರೀಖು ಸಂಸ್ಥಾನಾದ್ಯಂತ ಸಾರ್ವತ್ರಿಕ ರಜಾ ವೆಂದು ಸರ್ಕಾರ ಆಜ್ಞೆಮಾಡಿದೆ.

ತುಂಗಭದ್ರಾ ಯೋಜನೆ ಬಗ್ಗೆ ಸಮಾಲೋಚನೆ

ಬೆಂಗಳೂರು ೨೬

ತುಂಗಭದ್ರಾ ಯೋಜನೆಯನ್ನು ತ್ವರಿತವಾಗಿ ಪೂರೈಸಲು ಭಾರತ ಸರ್ಕಾರದ ನೀರಾವರಿ ಶಾಖಾ ಕಾರ್ಯದರ್ಶಿ ಶ್ರೀ ಶಿವಶಂಕರ್‌ರವರು ಆಂಧ್ರದ ಗೌರ್ನರಾಗಲಿರುವ ಶ್ರೀ ತ್ರಿವೇದಿ ಮತ್ತು ಮದ್ರಾಸ್ ಸರ್ಕಾರದೊಡನೆ ಮಾತುಕತೆ ನಡೆಸಲು ಈದಿನ ಮದ್ರಾಸಿಗೆ ಆಗಮಿಸಲಿರುವರೆಂದು ತಿಳಿಯಬರುತ್ತದೆ. ಅವರು ಅಲ್ಲಿ ತಮ್ಮ ಮಾತುಕತೆಗಳನ್ನು ಪೂರೈಸಿಕೊಂಡು ಬೆಂಗಳೂರಿಗೂ ಸಹ ಆಗಮಿಸಿ ಮೈಸೂರು ಮಂತ್ರಿಮಂಡಲದೊಡನೆ ಮಾತುಕತೆ ನಡೆಸುವರು.

ಸಂತಾಪಸೂಚಕ ಸಭೆ

ಶ್ರೀ ಬಿ. ಎಂ ಶ್ರೀನಿವಾಸಯ್ಯನವರ ನಿಧನದ ಬಗ್ಗೆ ನಿನ್ನೆಯದಿನ ಬಸವನಗುಡಿಯ ಕೃಷ್ಣರಾವ್ ಪಾರ್ಕಿನಲ್ಲಿ ಬೆಂಗಳೂರಿನ ಮೇಯರ್‌ರವರು ಒಂದು ಸಂತಾಪಸೂಚಕ ಸಭೆಯನ್ನು ಡಾ|| ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು. ಮುಖ್ಯಮಂತ್ರಿಯೇ ಆದಿಯಾಗಿ ಅನೇಕ ಮಹನೀಯರು ಶ್ರೀ ಶ್ರೀನಿವಾಸಯ್ಯನವರ ಗುಣಕಥನ ಮಾಡಿ ಅವರ ನಿಧನದಿಂದ ದೇಶಕ್ಕೆ ಅಪಾರ ನಷ್ಟವೆಂದು ನುಡಿದರು.

ಕನ್ನಡ ನಾಯಕರುಗಳ ಸಮ್ಮೇಳನ

ಕರ್ಣಾಟಕ ಏಕೀಕರಣ ವಿಷಯವನ್ನು ಪರಿಶೀಲಿಸಲು ಎಲ್ಲ ಕನ್ನಡ ನಾಯಕರ ಮತ್ತು ವಿಧಾನ ಮಂಡಲಗಳ ಕನ್ನಡ ಸದಸ್ಯರ ಸಮ್ಮೇಳನವನ್ನು ಹೈದರಾಬಾದಿನಲ್ಲಿ ಮುಂದಿನ ತಿಂಗಳು ೪ ಮತ್ತು ೫ ರಲ್ಲಿ ನಡೆಸಲು ಗುಲ್ಬರ್ಗಾ ಜಿಲ್ಲಾಕಾಂಗ್ರೆಸ್ ಸಮಿತಿ ನಿರ್ಧರಿಸಿದೆ.

ಗೋಧಿ ಹಂಚಿಕೆ ಬಗ್ಗೆ ನಿರ್ಬಂಧ ತಪ್ಪಿತು

ಪೆಪ್ಸು ಮತ್ತು ಪಂಜಾಬ್ ವಿನಹ ಮಿಕ್ಕೆಲ್ಲ ಪ್ರಾಂತ್ಯಗಳಲ್ಲಿ ವರ್ತಕರಿಗಾಗಲಿ ಗ್ರಾಹಕರಿಗಾಗಲಿ ಎಷ್ಟುಬೇಕಾದರೂಗೋಧಿಯನ್ನು ಕೊಡಬಹುದೆಂದು ಕೇಂದ್ರಸರ್ಕಾರವು ಪ್ರಾಂತ್ಯಗಳಿಗೆ ಸೂಚನೆಯನ್ನಿತ್ತಿದೆ. ಆದರೆ ಸಂಸ್ಥಾನಗಳನಡುವೆ ಇರುವ ಸಾಗಾಣಿಕೆ ನಿರ್ಬಂಧವುಮಾತ್ರ ಇದ್ದೇ ಇರುತ್ತದೆ.

ಸೌಂದರ್ಯೋದ್ಯಾನ ಕಾಶ್ಮೀರ

ಮೈಸೂರು ೨೬

ಆಕಾಶವಾಣಿಯಲ್ಲಿ ಇದೇ ೨೮ನೇ ತಾ|| ಸೋಮವಾರ ರಾತ್ರಿ ೭-೩೦ ಗಂಟೆಗೆ ಹುಜೂರ್ ಸೆಕ್ರೆಟರಿಗಳಾದ ಶ್ರೀ ಹೆಚ್. ಎನ್ ಪಾಳೇಗಾರ್‌ರವರು ಸೌಂದರ್ಯೋದ್ಯಾನ ಕಾಶ್ಮೀರ ಎಂಬ ವಿಷಯದಲ್ಲಿ ಕನ್ನಡದಲ್ಲಿ ಭಾಷಣ, ಅದೇ ರಾತ್ರಿ ೯-೪೫ಕ್ಕೆ ಪ್ರೊಫೆಸರ್ ನೀಲಕಂಠ ಶಾಸ್ತ್ರಿಯವರು ಸ್ವಾತಂತ್ರ ಚಳುವಳಿಯ ಕೆಲವು ವಿಷಯ ಎಂಬ ವಿಷಯದಲ್ಲಿ ಇಂಗ್ಲೀಷಿನಲ್ಲಿ ಭಾಷಣ ಮಾಡುತ್ತಾರೆ.

೩೦೫ ಭೂ ಮಹಿಳಾ ಸತ್ಯಾಗ್ರಹಿಗಳ ಬಂಧನ

೨೨೬ ಮಹಿಳೆಯರಿಗೆ ಜೈಲುವಾಸ

ಸೂರತ್ ಜಿಲ್ಲೆಯ ಪಾರ್ಡಿ ತಾಲ್ಲೂಕಿನಲ್ಲಿ ನಡೆಯುತ್ತಿರುವ ಭೂ ಸತ್ಯಾಗ್ರಹದ ಸಂಬಂಧವಾಗಿ ೩೦೫ ಮಹಿಳೆಯರು ಅಲ್ಲಿಯ ಒಂದು ಹಳ್ಳಿಯ ಜಮೀನನ್ನು ಪ್ರವೇಶಿಸಿ ಉತ್ತು ಬಿತ್ತನೆ ಹಾಕಲು ಪ್ರಯತ್ನಿಸುತ್ತಲಿದ್ದಾಗ ಪೊಲೀಸಿನವರು ಅವರುಗಳನ್ನೆಲ್ಲಾ ದಸ್ತಗಿರಿ ಮಾಡಿದರು. ಅವರ ಪೈಕಿ ೨೨೬ ಮಹಿಳೆಯರಿಗೆ ಮ್ಯಾಜಿಸ್ಟ್ರೇಟರು ತಲಾ ೨೫ ರೂ. ಜುಲ್ಮಾನೆಯನ್ನು ವಿಧಿಸಿದರು. ಅದನ್ನು ಯಾರೂ ಕೊಡದೆ ಜೈಲುವಾಸವನ್ನು ಅನುಭವಿಸಲು ಹೋದರೆಂದು ತಿಳಿಯಬರುತ್ತದೆ.

ಈ ಸಂದರ್ಭದಲ್ಲಿ ಪ್ರಜಾಸೋಷಲಿಸ್ಟ ಪಕ್ಷದ ನಾಯಕ ಆಚಾರ್ಯ ಕೃಪಲಾನಿಯವರು ಮಾತನಾಡುತ್ತಾ ಈ ಭೂ ಚಳುವಳಿ ಸಂಬಂಧದಲ್ಲಿ ತಾವು ಬೊಂಬಾಯಿ ಮುಖ್ಯಮಂತ್ರಿ ಶ್ರೀ ಮುರಾರ್ಜಿ ದೇಶಾಯಿಯವರನ್ನು ಭೇಟಿಮಾಡಿ ವಿಚಾರ ವಿನಿಮಯ ಮಾಡಲು ಸಿದ್ಧವಿರುವುದಾಗಿ ತಿಳಿಸಿದ್ದಾರೆ.

ಅಕ್ಟೋಬರ್ ಒಂದನೇ ತಾ॥ 'ಬಳ್ಳಾರಿ ದಿನ'

ಅಂದು ಸಂಸ್ಥಾನಾದ್ಯಂತ ಸಾರ್ವತ್ರಿಕ ರಜಾ

ಮೈಸೂರು ಶಾಸನಸಭೆಯ ಕಾಂಗ್ರೆಸ್ ಪಕ್ಷ ಸಭೆಯು ಮೊನ್ನೆಯ ದಿನ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಬಳ್ಳಾರಿ ದಿನವನ್ನು ಯಾವರೀತಿ ಆಚರಿಸಬೇಕೆಂಬ ವಿಷಯವು ಸಭೆಯಲ್ಲಿ ಚರ್ಚಿಸಲಾಯಿತೆಂದು ತಿಳಿಯಬರುತ್ತದೆ. ಅಕ್ಟೋಬರ್ ಒಂದನೇ ತಾರೀಖು ಬಳ್ಳಾರಿ ದಿನವನ್ನು ಆಚರಿಸಬೇಕೆಂದೂ ಅಂದು ಸಂಸ್ಥಾನಾದ್ಯಂತ ರಜಾದಿನವನ್ನಾಗಿ ಘೋಷಿಸಬೇಕೆಂದೂ ತೀರ್ಮಾನಿಸಿರುವುದಾಗಿ ಹೇಳಲಾಗಿದೆ.

ಜಿಲ್ಲಾ ಬೋರ್ಡುಗಳ ಚುನಾವಣೆ ವಿಷಯವೂ ಸಹ ಚರ್ಚೆಗೆ ಬಂದು ಜಿಲ್ಲಾ ಬೋರ್ಡುಗಳಿಗೆ ನೇರವಾದ ಚುನಾವಣೆಯನ್ನು ವಯಸ್ಕರ ಮತದಾನ ಪದ್ಧತಿಪ್ರಕಾರ ನಡೆಯಬೇಕೆಂದೂ ತೀರ್ಮಾನಿಸಲಾಗಿದೆ.

ಸಂತೋಷಾತಿರೇಕದಿಂದ ಮರಣ

ಫುಟ್ ಬಾಲ್ ಪಂದ್ಯದಲ್ಲಿ ಅನೇಕ ವರ್ಷಗಳಿಂದ ಸ್ಪರ್ಧಿಸುತ್ತಲಿದ್ದರೂ ಒಮ್ಮೆಯೂ ಬಹುಮಾನ ಪಡೆಯದ ಬ್ರಿಟನ್ನಿನ ಜಾರ್ಜ್ ಎಲ್ಲಿಸ್ ಎಂಬ ೫೫ ವರ್ಷ ವಯಸ್ಸಿನ ರೈಲ್ವೆ ಟಿಕೆಟ್ ಕಲೆಕ್ಟರೊಬ್ಬನಿಗೆ ಈ ವಾರದಲ್ಲಿ ಏಕಕಾಲದಲ್ಲಿ ೫ ಬಹುಮಾನಗಳು ಬಂದುವು. ಇದರಿಂದ ಅವನಿಗೆ ೭೫,೦೦೦ ಪೌಂಡುಗಳು ಬರುವುದು. ಈ ಸಂತೋಷಾತಿರೇಕದಿಂದ ಅವನು ಕಳೆದ ೨೨ನೇ ತಾರೀಖು ಹಠಾತ್ತನೆ ಸತ್ತನು.

ಕರ್ನಾಟಕ ಪ್ರಾಂತ್ಯರಚನೆ ತಡವಾಗುವುದಿಲ್ಲವೆಂದು ಶ್ರೀ ನಿಜಲಿಂಗಪ್ಪನವರು

ಕರ್ನಾಟಕ ಪ್ರಾಂತ್ಯರಚನೆಯ ಕಾರ್ಯವು ಆದಷ್ಟು ತ್ವರಿತವಾಗಿ ನಡೆಯುವುದಾಗಿ ತಮಗೆ ಪೂರ್ಣಭರವಸೆಯಿದೆಯೆಂದು ಕೆ. ಪಿ. ಸಿ. ಸಿ. ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಹೇಳಿದ್ದಾರೆ.

ಈ ವಿಷಯದಲ್ಲಿ ಶ್ರೀ ನಿಜಲಿಂಗಪ್ಪನವರು ಪ್ರಧಾನಿ ನೆಹರೂರನ್ನು ಭೇಟಿಮಾಡಿ ವಿಚಾರ ವಿನಿಮಯ ನಡೆಸಿದರು. ಕರ್ನಾಟಕ ಪ್ರಾಂತ್ಯರಚನೆಯ ಕಾರ್ಯವು ಅಷ್ಟು ಕಷ್ಟತರವಲ್ಲವಾದಾಗ್ಯೂ ಸದ್ಯದಲ್ಲೇ ಪ್ರಾಂತ್ಯಗಳ ಪುನರ್ವಿಂಗಡನೆ ಪ್ರಶ್ನೆಯನ್ನು ಪರಿಶೀಲಿಸಲು ವಿಶೇಷಾಧಿಕಾರದ ಮಂಡಲಿಯನ್ನು ನೇಮಿಸುವುದರಿಂದ ಅದು ಈ ವಿಷಯವನ್ನು ಸಮಗ್ರ ಪರಿಶೀಲಿಸುವುದಾಗಿ ಶ್ರೀ ನೆಹರೂರವರು ಭರವಸೆ ಯಿತ್ತಿರುವುದಾಗಿ ಶ್ರೀ ನಿಜಲಿಂಗಪ್ಪನವರು ತಿಳಿಸಿದ್ದಾರೆ.

ಅಖಂಡ ಕರ್ನಾಟಕ ನಿರ್ಮಾಣವನ್ನು ಮಂಡಲಿಯು ಪ್ರಥಮವಾಗಿ ಪರಿಶೀಲಿಸಿ ಬೇಗ ಇತ್ಯರ್ಥ ಮಾಡುವುದಾಗಿ ತಮಗೆ ಭರವಸೆಯಿರುವುದಾಗಿ ಶ್ರೀ ನಿಜಲಿಂಗಪ್ಪನವರು ತಿಳಿಸಿದ್ದಾರೆ.

ಭೂ ಸುಧಾರಣೆ ಮಸೂದೆ

ಹೈದರಾಬಾದ್ ಶಾಸನಸಭೆಯು ಭೂ ಸುಧಾರಣಾ ಮಸೂದೆಯನ್ನು ಅಂಗೀಕರಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು. ೨೫—೯—೧೯೫೩

ಬೆಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೦—	೨೧ ೧೨
ಎಳ್ಳು	೭೪—೨	೮೭—೧೪
ಹುರುಳಿ	—	೪೮—
ಅಲಸಂದೆ	೬೮—೨	—
ಹುಣಸೇಹಣ್ಣು	೭—೧೨	೮ ೧೫
ಸೀಗೆಕಾಯಿ	—	—
ತೆಂಗಿನಕಾಯಿ	೧೫೯	೨೬೬

ಭಾರತ-ಪಾಕೀಸ್ತಾನ ಪಾರ್ಲಿಮೆಂಟ್ ಸದಸ್ಯರ ಕ್ರಿಕೆಟ್ ಪಂದ್ಯ

ಪಾಕೀಸ್ತಾನದ ಪಾರ್ಲಿಮೆಂಟ್ ಸದಸ್ಯರೊಡನೆ ಭಾರತ ಪಾರ್ಲಿಮೆಂಟ್ ಸದಸ್ಯರು ಕ್ರಿಕೆಟ್ ಪಂದ್ಯವನ್ನು ಆಡಲು ಅಲ್ಲಿಂದ ಬಂದಿದ್ದ ಆಹ್ವಾನವನ್ನು ಪ್ರಧಾನಿ ನೆಹ್ರೂರವರು ಸ್ವೀಕರಿಸಿ ಡಿಸೆಂಬರ್ ಮಾಹೆಯಲ್ಲಿ ಅದನ್ನು ಕರಾಚಿಯಲ್ಲಿ ಆಡಬಹುದೆಂದು ಸೂಚಿಸಿರುವುದಾಗಿ ತಿಳಿಯಬರುತ್ತದೆ.

ಪಾಕೀಸ್ತಾನದ ಪಾರ್ಲಿಮೆಂಟ್ ಸದಸ್ಯರು ಭಾರತಕ್ಕೆ ಬಂದು ಇಲ್ಲಿಯೇ ಕ್ರಿಕೆಟ್ ಪಂದ್ಯವನ್ನು ಆಡಲು ಪ್ರಧಾನಿ ನೆಹರೂರವರು ಆಹ್ವಾನಿಸಿದ್ದಾರೆ.

ಗಾಂಧೀ ಜಯಂತಿ ಸಪ್ತಾಹ

ಮೈಸೂರು ೨೬

ಗಾಂಧೀ ಜಯಂತಿ ಸಪ್ತಾಹದ ಅಂಗವಾಗಿ ನಾಳೆ ಕೃಷ್ಣಮೂರ್ತಿ ಪುರಂ ವನಿತಾ ಸದನದಲ್ಲಿ ಸಂಜೆ ೬ರಿಂದ ೭ ಗಂಟೆವರೆಗೆ ಸಾಮೂಹಿಕ ಪ್ರಾರ್ಥನೆ, ಸೂತ್ರಯಜ್ಞ, ಗೀತಾಪಠಣ, ಗಾಂಧೀಜಿ ಮತ್ತು ವಿನೋಬರವರ ಬರಹಗಳ ವಾಚನ ಮತ್ತು ಸರ್ವೋದಯ ಸಿದ್ಧಾಂತ ಪ್ರಶ್ನೆ ಮುಂತಾದ ಕಾರ್ಯಕ್ರಮಗಳು ನಡೆಯುವುವು.

ಧರ್ಮರಾಯರ ಪಟ್ಟಾಭಿಷೇಕ

ರಾಜಧಾನಿಯ ನಜರ್‌ಬಾದ್ ಮಹಾರಾಷ್ಟ್ರ ಬೀದಿಯಲ್ಲಿರುವ ಶ್ರೀ ಮರುಗಾದೇವಿ ಅಮ್ಮನವರ ದೇವಸ್ಥಾನದಲ್ಲಿ ನಾಳೆ ಸಂಜೆ ೬ ಗಂಟೆಗೆ ಕೀರ್ತನ ಶಿರೋಮಣಿ ಶ್ರೀ ವಿ. ರಾಮಸ್ವಾಮಿ ನಾಯ್ಡುರವರಿಂದ ಧರ್ಮರಾಯರ ಪಟ್ಟಾಭಿಷೇಕ ಕೀರ್ತನೆ ನಡೆಯುವುದು. ದರ್ಬಾರ ಭಕ್ಷಿ ಶ್ರೀ ಹೆಚ್. ಎಲ್. ದೇವರಾಜೆ ಅರಸಿನವರು ಅಧ್ಯಕ್ಷತೆ ವಹಿಸುವರು.

ಗಂಟೆಗೆ ೭೩೭·೭ ಮೈಲಿ ವೇಗದ ವಿಮಾನ

ಬ್ರಿಟನ್ನಿನ ಜೆಟ್ ವಿಮಾನವೊಂದು ಗಂಟೆಗೆ ೭೩೭·೭ ಮೈಲಿಗಳ ವೇಗದಲ್ಲಿ ಚಲಿಸಿ ವಿಶ್ವದ ದಾಖಲೆಯನ್ನು ಮಾಡಿರುವುದಾಗಿ ತಿಳಿಯಬರುತ್ತದೆ.

ತಕರಾರು ಅರ್ಜಿ

ಮೈಸೂರು ೨೬

ರಾಜಧಾನಿಯ ಗೃಹ ನಿರ್ಮಾಣ ಸಹಕಾರ ಸಂಘದ ೫೨-೫೩ನೇ ಸಾಲಿಗೆ ಶ್ರೀ ಎ. ಕೃಷ್ಣಮೂರ್ತಿರಾಯರು ಡೈರೆಕ್ಟರಾಗಿ ಚುನಾಯಿತರಾಗಿರುವುದು ಕ್ರಮಬದ್ಧವಾಗಿದೆಯೆಂದು ಮೈಸೂರು ಡಿವಿಜನ್ ಅಸಿಸ್ಟೆಂಟ್ ರಿಜಿಸ್ಟ್ರಾರು ತೀರ್ಮಾನವಿತ್ತಿದ್ದಾರೆ.

ಡಾ॥ ಮೋದಿಯವರ ನೇತ್ರಚಿಕಿತ್ಸೆ

ಮೈಸೂರು ೨೬

ಮೈಸೂರು ಜಿಲ್ಲೆಯಲ್ಲಿ ಕಳೆದ ೧೫ರಿಂದ ೨೫ನೇ ತಾರೀಖಿನವರೆಗೆ ಡಾ॥ ಮೋದಿಯವರು ಪ್ರವಾಸ ಮಾಡಿ, ಉಚಿತವಾಗಿ ನೇತ್ರಚಿಕಿತ್ಸೆಯನ್ನು ನಡೆಸಿ, ಈಗ ಹಿಂತಿರುಗಿದ್ದಾರೆ. ಒಟ್ಟು ೮೦೩ ಮಂದಿಯನ್ನು ಪರೀಕ್ಷಿಸಿ, ೨೧೧೨ ಜನರಿಗೆ ಔಷಧಿಯನ್ನು ಕೊಟ್ಟಿದ್ದಾರೆ. ೧೬೦೩ ಮಂದಿಗೆ ಆಪರೇಷನ್ ಆಗಬೇಕೆಂದು ಸಲಹೆ ಇತ್ತು, ಅದನ್ನು ಮುಂದಿನ ತಿಂಗಳು ನಡೆಸಲಿದ್ದಾರೆ. ಟಿ. ನರಸೀಪುರ, ಯಳಂದೂರು, ಚಾಮರಾಜನಗರ, ಗುಂಡ್ಲುಪೇಟೆ, ಹೆಗ್ಗಡದೇವನಕೋಟೆ, ಹುಣಸೂರು, ಪಿರಿಯಾಪಟ್ಟಣ ಮತ್ತು ಕೃಷ್ಣರಾಜನಗರ ತಾಲ್ಲೂಕುಗಳಲ್ಲಿ ಅವರು ಪ್ರವಾಸಮಾಡಿದರು.

ಅಪೇರ

25--9--53 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ವೇಲೆಕಾರಿ ಮಗಳ್ [ತಮಿಳು]

ಪಾತ್ರ:—ಲಕ್ಷ್ಮೀರಾಜಂ, ಎ. ಟಿ. ರಾಮರಾವ್

....೧೨ ವರ್ಷಕ್ಕೆ ಒಳಪಟ್ಟ ಹುಡುಗರಿಗೆ ರಿಯಾಯಿತಿ ಪ್ರವೇಶಧರ....

ಪ್ರಭಾ ಅಮೋಘಪ್ರಾರಂಭ.......25—9—53 ರಿಂದ ದಿನ 3 ಆಟಗಳು ಸೋವಿಯಟ್ ಫಿಲ್ಮ್ಸ್‌ನವರ ಅದ್ಭುತ ಸಾಹಸ ಚಮತ್ಕಾರಗಳಿಂದಲೂ, ಭಯಾನಕ ದೃಶ್ಯಗಳಿಂದಲೂ ಕೂಡಿದ, ಪ್ರತಿಯೊಬ್ಬರೂ ತಪ್ಪದೆ ನೋಡಬೇಕಾದ ಏಕೈಕ ವರ್ಣರಂಜಿತ ಸರ್ಕಸ್ ಚಿತ್ರ.

★ ಆನ್ ದಿ ಸರ್ಕಸ್ ಎರೀನ ★

ಇದರ ಜೊತೆಯಲ್ಲಿ ವಿಶೇಷ ಆಕರ್ಷಣೆ....

1) ಫಿಷರ್‌ಮನ್ ಅಂಡ್ ದಿ ಫಿಷ್. ★ 2) ದಿ ಅಂಟ್ ಅಂಡ್ ದಿ ಎಲಿಫೆಂಟ್.

3) ಬಿಹೈಂಡ್ ದಿ ಬಿಗ್ ಟಾಪ್, ದಿ ಗ್ರೇಟೆಸ್ಟ್ ಷೋ ಆನ್ ಅರ್ತ್

ಬೆಳಗಿನ ಪ್ರದರ್ಶನ 25-9-53 ರಿಂದ 3 ದಿನಗಳು.

ಜಾನ್, ಹ್ಯಾಲ್ ನಟಿಸಿರುವ "ಫೋಟೋಗ್ರಾಫ್"

ರಣಜಿತ್

25-9-53 ರಿಂದ ಅಮೋಘ ಪ್ರಾರಂಭ

ಮುಮ್ತಾಜ್‌ಶಾಂತಿ, ಸುರೇಶ್ ನಟಿಸಿರುವ

ಜಮಾನೆಕಿ ಹವ [ಹಿಂದಿ]

ಪ್ರಕಾಶಕರು ಮತ್ತು ಮುದ್ರಕರು.

ಜಿ. ಎಲ್. ಸ್ವಾಮಿ.

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೩೪

೨೮-೯-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪ್ರಕಾಶಂರವರು ಕಾಂಗ್ರೆಸ್ಸಿಗೆ ಸೇರಿದರು

ಆಂಧ್ರ ಮಂತ್ರಿಮಂಡಲ ರಚಿಸಲು ಅನುಕೂಲ ವಾತಾವರಣ

ಆಂಧ್ರ ನಾಯಕ ಶ್ರೀ ಟಿ. ಪ್ರಕಾಶಂರವರು ಪ್ರಜಾಸೋಷಲಿಸ್ಟ ಪಕ್ಷಕ್ಕೆ ರಾಜೀನಾಮೆ ಇತ್ತು ಈಗ ಕಾಂಗ್ರೆಸ್ಸಿಗೆ ಸಹ ಸದಸ್ಯರಾಗಿ ಸೇರಿದ್ದಾರೆ. ಇದರಿಂದ ಆಂಧ್ರದಲ್ಲಿ ಸುಭದ್ರ ಸರ್ಕಾರ ರಚಿಸುವ ಬಗ್ಗೆ ಉಂಟಾದ ಬಿಕ್ಕಟ್ಟು ಪರಿಹಾರವಾಗಿ, ಈಗ ಅವರು ಮಂತ್ರಿಮಂಡಲ ರಚಿಸಲು ಅನುಕೂಲ ವಾತಾವರಣ ಉಂಟಾಗಿದೆ.

ಈಗ ಶ್ರೀ ಪ್ರಕಾಶಂರವರು ಮಂತ್ರಿಮಂಡಲದ ರಚನೆ ಬಗ್ಗೆ ಆಂಧ್ರ ನಾಯಕರೊಡನೆ ಸಮಾಲೋಚನೆ ನಡೆಸುತ್ತಲಿರುವರು. ಈಗ ಅವರು ಕರ್ನೂಲಿಗೆ ಪ್ರಯಾಣ ಬೆಳಸಿರುವರು.

ಪ್ರಜಾಸೋಷಲಿಸ್ಟ ಪಕ್ಷಕ್ಕೆ ರಾಜೀನಾಮೆ ಕೊಟ್ಟ ಮೇಲೆ ಆ ಪಕ್ಷದಿಂದಲೇ ದೊರಕಿದ ಶಾಸನಸಭಾ ಸ್ಥಾನಕ್ಕೂ ಶ್ರೀ ಪ್ರಕಾಶಂರು ರಾಜೀನಾಮೆ ಕೊಡಬೇಕಾದುದು ಧರ್ಮ ಎಂದು ಪ್ರಜಾ ಸೋಷಲಿಸ್ಟ ಪಕ್ಷದ ಕಾರ್ಯದರ್ಶಿಯವರು ಒತ್ತಾಯಪಡಿಸಿದ್ದಾರೆ.

ಆಂಧ್ರ ಕಾಂಗ್ರೆಸ್ ಶಾಸನಸಭೆಯ ಸದಸ್ಯರ ಸಭೆಯು ನಾಳೆ ಕರ್ನೂಲಿನಲ್ಲಿ ಸೇರಿ ಪ್ರಕಾಶಂರವರನ್ನು ಮುಖ್ಯಮಂತ್ರಿಗಳನ್ನಾಗಿ ಆರಿಸಲಾಗುವುದೆಂದು ಹೇಳಲಾಗಿದೆ.

ಹಿಂದೀ ಪ್ರಚಾರಕ ಸಭೆ

ಮೈಸೂರು ೨೮

ಮೈಸೂರು ಹಿಂದೀ ಪ್ರಚಾರಕ ಸಭೆಯ ವಾರ್ಷಿಕ ಅಧಿವೇಶನವು ನಿನ್ನೆ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಅಧ್ಯಕ್ಷತೆಯಲ್ಲಿ ನಡೆದು, ಮುಂದಿನ ಸಾಲಿಗೆ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀಗಳಾದ ಪಿ. ಗೋಪಾಲಕೃಷ್ಣ ಶೆಟ್ಟಿ ಮತ್ತು ಕೆ.ವಿ. ಶ್ರೀನಿವಾಸಮೂರ್ತಿರವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಸಚ್ಚಿದಾನಂದರನ್ನು ಕಾರ್ಯದರ್ಶಿಯನ್ನಾಗಿಯೂ, ಶ್ರೀ ಎಸ್. ಶ್ರೀರಂಗಾಚಾರ್ಯರನ್ನು ಖಜಾಂಚಿಯನ್ನಾಗಿಯೂ ಚುನಾಯಿಸಲಾಯಿತು.

ಗಾಂಧೀ ಜಯಂತಿ ಸಪ್ತಾಹ

ಗಾಂಧೀ ಜಯಂತಿ ಸಪ್ತಾಹದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಲಷ್ಕರ್ ಮೊಹಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಸಾಮೂಹಿಕ ಪ್ರಾರ್ಥನೆ ಮುಂತಾದ ಕಾರ್ಯಕ್ರಮಗಳು ನಡೆಯುವುವು.

★ ಭಾಷಾವಾರು ಪ್ರಾಂತ್ಯಗಳ ರಚನೆಯಿಂದ ದೇಶವು ಚೂರು ಚೂರಾಗುತ್ತದೆ ಎಂದು ಹೇಳುವುದು ಶುದ್ಧ ತಪ್ಪು ಎಂದು ಮಧ್ಯಪ್ರದೇಶದ ಗೌರ್ನರ್ ಡಾ॥ ಪಟ್ಟಾಭಿ ಸೀತಾರಾಮಯ್ಯನವರು ಹೇಳಿದ್ದಾರೆ.

ಎಂ.ಪಿ.ಸಿ.ಸಿ. ಅಧಿವೇಶನ ಅಕ್ಟೋಬರ್ ೪

ಮೈಸೂರು ೨೮

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆಯು ಶ್ರೀ ವೀರಣ್ಣಗೌಡರ ಅಧ್ಯಕ್ಷತೆಯಲ್ಲಿ ನಿನ್ನೆ ಬೆಳಗ್ಗೆ ಶ್ರೀ ಚೆನ್ನಯ್ಯನವರ ಗೃಹದಲ್ಲಿ ಸೇರಿತ್ತು, ಬೇರೆ ಕಾರ್ಯಗಳ ನಿಮಿತ್ತ ಎಂ.ಪಿ.ಸಿ.ಸಿ. ಸಭೆಯನ್ನು ಮುಂದಕ್ಕೆ ಹಾಕಬೇಕೆಂದು ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರಿಂದ ಬಂದ ಕೋರಿಕೆ ಪತ್ರವನ್ನು ಪರಿಶೀಲಿಸಿ, ಕೋಲಾರದ ರಾಬರ್ಟ್‌ಸನ್ ಪೇಟೆಯಲ್ಲಿ ಮುಂದಿನ ತಿಂಗಳು ೩ನೇ ತಾರೀಖು ನಡೆಯಬೇಕಾಗಿದ್ದ ಎಂ.ಪಿ.ಸಿ.ಸಿ. ಸಭೆಯನ್ನು ಒಂದು ದಿನ ಮುಂದಕ್ಕೆ ಹಾಕಬೇಕೆಂದು ನಿರ್ಧರಿಸಲಾಯಿತು.

ಈ ಸಂಬಂಧದಲ್ಲಿ ಏರ್ಪಡಿಸಿರುವ ಯುವಕ ಸಮ್ಮೇಳನವು ೩ನೇ ತಾರೀಖು ನಡೆಯುವುದು.

ಎಂ.ಪಿ.ಸಿ.ಸಿ. ಅಧಿವೇಶನದಲ್ಲಿ ಭಾಗವಹಿಸುವಿರಾ ಎಂದು ಶ್ರೀ ಹನುಮಂತಯ್ಯನವರನ್ನು ಪತ್ರಿಕಾ ಪ್ರತಿನಿಧಿಗಳು ಕೇಳಲಾಗಿ, ಅದಕ್ಕೆ ಈಗ ನಿರ್ಧಾರವಾದ ಉತ್ತರವನ್ನು ಕೊಡಲಾರೆ, ಎಲ್ಲವೂ ತಮಗೆ ದೊರಕುವ ಕಾಲಾವಕಾಶವನ್ನವಲಂಬಿಸಿದೆ ಎಂದು ಹೇಳಿದರು.

ಬಳ್ಳಾರಿಗೆ ರಾಜಪ್ರಮುಖರ ಭೇಟಿಇಲ್ಲ

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಬೆಳಗ್ಗೆ ರಾಜ ಪ್ರಮುಖರನ್ನು ಅರಮನೆಯಲ್ಲಿ ಭೇಟಿಮಾಡಿ, ಬಳ್ಳಾರಿಯು ಮೈಸೂರಿಗೆ ಸೇರುವ ಸಂಬಂಧದ ಸಮಾರಂಭದಲ್ಲಿ ಅವರು ಅಲ್ಲಿಗೆ ಭೇಟಿ ಕೊಡಬೇಕೆಂಬ ಸ್ವಾಗತಸಮಿತಿಯವರ ಆಹ್ವಾನದ ವಿಷಯದಲ್ಲಿ ಮಾತುಕತೆ ನಡೆಸಿದರೆಂದೂ; ಆದರೆ ಅಲಸ್ಯದ ಕಾರಣ ಅಕ್ಟೋಬರ್ ೨ನೇ ತಾರೀಖು ಬಳ್ಳಾರಿಗೆ ಹೋಗಲು ಸಾಧ್ಯವಿಲ್ಲವೆಂದು ಶ್ರೀಮನ್ಮಹಾರಾಜರು ತಿಳಿಸಿದರೆಂದೂ ಹೇಳಲಾಗಿದೆ.

ಸಂತಾಪ ಸೂಚಕ ಸಭೆ

ನಾಳೆ ಸಂಜೆ ೬-೩೦ ಗಂಟೆಗೆ ಟೌನ್ ಹಾಲಿನಲ್ಲಿ ಶ್ರೀ ಡಿ.ಎಂ. ಶ್ರೀನಿವಾಸಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಿಸಲು ಸಭೆ ನಡೆಯುವುದು. ಶ್ರೀ ಎಸ್ ಚೆನ್ನಯ್ಯನವರು ಅಧ್ಯಕ್ಷತೆ ವಹಿಸುವರು.

ಚೀನಾದಲ್ಲಿ ಸೋಮಾರಿಗಳೇ ಇಲ್ಲ

ಸೌಹಾರ್ದ ನಿಯೋಗದ ಸದಸ್ಯರ ಹೇಳಿಕೆ

ಮೈಸೂರು ೨೮

ಇತ್ತೀಚೆಗೆ ಚೀನಾಕ್ಕೆ ಭೇಟಿ ಇತ್ತಿದ್ದ ಕಲಾವಿದ ಸೌಹಾರ್ದ ನಿಯೋಗದ ಶ್ರೀ ದೇವೇಂದ್ರಪ್ಪನವರು ಮೊನ್ನೆದಿನ ಇಲ್ಲಿನ ಭಾರತ-ಚೀನಾ ಸಂಘದ ಆಶ್ರಯದಲ್ಲಿ ಪತ್ರಿಕಾಸಮ್ಮೇಳನ ಕರೆದು ತಮ್ಮ ಪ್ರವಾಸದ ಅನುಭವವನ್ನು ವಿವರಿಸಿದರು.

ನಿಯೋಗದವರು ಚೀನಾದಲ್ಲಿ ಸುಮಾರು ೧೨ ಸಾವಿರ ಮೈಲಿಗಳಷ್ಟು ಪ್ರವಾಸಮಾಡಿದರು ಎಲ್ಲಿ ಹೋದರೂ ಅಲ್ಲಿ ಅವರಿಗೆ ರಾಜಮಹಾರಾಜರುಗಳಿಗೆ ಕೊಡುವ ಅದ್ಭುತ ಸ್ವಾಗತ ದೊರೆಯಿತು. ಅಲ್ಲಿನ ಹೆಂಗಸರು, ಗಂಡಸರು ಯಾವಾಗಲೂ ಹಸನ್ಮುಖರಾಗಿ ಒಂದು ನಿಮಿಷವನ್ನೂ ವ್ಯರ್ಥಮಾಡದೆ ಯಾವುದಾದರೂ ಒಂದು ಕೆಲಸದಲ್ಲಿ ನಿರತರಾಗಿರುವುದು ಕಂಡುಬಂತು. ಅಲ್ಲಿ ಭಿಕ್ಷುಕರೇ ಇಲ್ಲ ಯಾವ ಆಸ್ಪತ್ರೆಯನ್ನು ನೋಡಿದರೂ ಅಲ್ಲಿ ಹಾಸಿಗೆಗಳು ಖಾಲಿ ಆಗಿದ್ದವು. ಅಲ್ಲಿನ ಜನರು ವ್ಯಾಯಾಮ ಮಾಡಿ ದೃಢಕಾಯರಾಗಿರುವುದೇ ಇದಕ್ಕೆ ಕಾರಣ ದೇಶದಲ್ಲಿ ಎಲ್ಲಿ ನೋಡಿದರೂ ಕೈಗಾರಿಕೆ ಮತ್ತು ವ್ಯವಸಾಯ ಅಭಿವೃದ್ಧಿ ವಿಶೇಷವಾಗಿ ಕಾಣಬಂತು.

ಎಷ್ಟು ದೂರ ಕಣ್ಣು ಹೋಗುವುದೋ ಅಷ್ಟು ದೂರ ತುಂಬಿದ ಪೈರುಗಳು ಕಾಣುತ್ತಿದ್ದವು ಇದರಿಂದ ಅವರ ಆರ್ಥಿಕಸ್ಥಿತಿ ಬಹಳ ಮಟ್ಟಿಗೆ ಉತ್ತಮಗೊಂಡಿದೆ. ಪೂರ್ವ ಆಚಾರಕ್ಕೂ ಲಲಿತಕಲೆಗೂ ಸರ್ಕಾರದವರು ವಿಶೇಷ ಪ್ರೋತ್ಸಾಹ ಕೊಡುತ್ತಿದ್ದಾರೆ--ಎಂದು ಅವರು ತಿಳಿಸಿದರು.

ರೈಲ್ವೆ ಸೌಹಾರ್ದ ವಾರಾಚರಣೆ

ಭಾರತ ರೈಲುಗಳಲ್ಲಿ ಪ್ರಯಾಣಮಾಡುವ ಲಕ್ಷಾಂತರ ಮಂದಿ ಪ್ರಯಾಣಿಕರ ಮತ್ತು ವ್ಯಾಪಾರಿಗಳ ಬಗ್ಗೆ ಸೌಹಾರ್ದ ಮನೋಭಾವನೆಯನ್ನು ವ್ಯಕ್ತಪಡಿಸಲು ಭಾರತಾದ್ಯಂತ ರೈಲ್ವೆ ಕೆಲಸಗಾರರು ಅಕ್ಟೋಬರ್ ೨ ರಿಂದ ೯ ನೇ ತಾರೀಖಿನವರೆಗೆ ಸೌಹಾರ್ದ ವಾರಾಚರಣೆಯನ್ನು ಆಚರಿಸುವರೆಂದು ಅಧಿಕೃತವಾಗಿ ತಿಳಿಸಲಾಗಿದೆ.

ರೀಟಾ ಹೇವರ್ತಳ ಪುನರ್ವಿವಾಹ

ಆಗಾಖಾನರವರ ಪುತ್ರ ಅಲಿಖಾನರವರೊಡನೆ ವಿವಾಹವಿಚ್ಛೇದನವನ್ನು ಮಾಡಿಕೊಂಡ ಮೂರನೇದಿನವೇ ಸಿನಿಮಾ ತಾರೆ ರೀಟಾ ಹೇವರ್ತಳು ಡಿಕ್ ಹೇಮ್ಸ್ ಎಂಬಾತನನ್ನು ವಿವಾಹವಾದಳು.

★ ಕಾಶಿ ಬಳಿ ಒಂದು ದೋಣಿಯು ಗಂಗಾ ನದಿಯಲ್ಲಿ ನಿನ್ನೆಯ ದಿನ ಮುಳುಗಿ ಅದರಲ್ಲಿದ್ದ ೨೦ ಜನರ ಪೈಕಿ ಒಬ್ಬನು ಮಾತ್ರ ಸತ್ತು, ಇತರರು ಬದುಕಿಬಂದರೆಂದು ತಿಳಿಯಬರುತ್ತದೆ.

ಮುಖ್ಯಮಂತ್ರಿಗಳಲ್ಲಿ ವಿದ್ಯಾರ್ಥಿಗಳ ಮನವಿ

ಮೈಸೂರು ೨೮

ಮಹಾರಾಜಾ ಕಾಲೇಜಿನ ಕ್ರಿಯಾಸಮಿತಿಯ ೮ ಸದಸ್ಯರು ಈ ಬೆಳಗ್ಗೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನು ಭೇಟಿಮಾಡಿ ಕಾಲೇಜು ಯೂನಿಯನ್ನಿನ ಪುನರ್ರಚನೆ ವಿಷಯದಲ್ಲಿ ಮನವಿ ಸಲ್ಲಿಸಿ ತಮ್ಮ ಕುಂದುಕೊರತೆಗಳನ್ನು ನಿವೇದಿಸಿಕೊಂಡರು.

ರಾಜಕೀಯದಲ್ಲಿ ವ್ಯವಹರಿಸುವಂತೆ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಲ್ಲಿ ವ್ಯವಹರಿಸಬಾರದೆಂದು ಸಂಘದ ಚುನಾವಣೆ ಮುಂತಾದವಕ್ಕೆ ಪ್ರಾಶಸ್ತ್ಯ ಕೊಟ್ಟು ಹಣವನ್ನು ವೃಥಾ ವ್ಯಯಮಾಡುವುದು, ಕೋಮುವಾರು ನೀತಿ ಅನುಸರಿಸುವುದು ಸರಿಯಲ್ಲವೆಂದು ಮುಖ್ಯ ಮಂತ್ರಿಗಳು ಸಲಹೆಯಿತ್ತು, ಅವರು ಸಲ್ಲಿಸಿರುವ ಮನವಿಯನ್ನು ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳಿಗೆ ಕಳುಹಿಸಿ ಅನಂತರ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರೆಂದು ಗೊತ್ತಾಗಿದೆ.

೨೨ ತಿಂಗಳಲ್ಲಿ ೩ ಮಕ್ಕಳು

ಲಂಡನ್ನಿನ ಓರ್ವ ಮಹಿಳೆಯು ೨೨ ತಿಂಗಳು ೨ ದಿನಗಳಲ್ಲಿ ಮೂರುಸಲ ಪ್ರಸವಿಸಿ ಮೂರು ಮಕ್ಕಳನ್ನು ಪಡೆದು ವಿಶ್ವದ ದಾಖಲೆಯನ್ನು ಮಾಡಿರುವುದಾಗಿ ವರದಿಯಾಗಿದೆ.

ಪಾಕ್ ಪತ್ರಿಕೆಗಳ ಆರ್ಥಿಕ ಮುಗ್ಗಟ್ಟು

ಭಾರತ ಚಲನಚಿತ್ರಗಳ ಆಮದನ್ನು ಪಾಕೀಸ್ಥಾನವು ನಿಷೇಧಿಸಿರುವುದರಿಂದ ಭಾರತೀಯ ಚಲನಚಿತ್ರಗಳಿಂದ ಪಾಕ್ ಪತ್ರಿಕೆಗಳಿಗೆ ಬರುತ್ತಿದ್ದ ಜಾಹಿರಾತುಗಳು ನಿಂತುಹೋದುದರ ಪರಿಣಾಮವಾಗಿ ಆ ಪತ್ರಿಕೆಗಳಿಗೆ ಆರ್ಥಿಕ ದುಃಸ್ಥಿತಿ ಉಂಟಾಗಿದೆಯೆಂದು ಪಾಕ್ ವೃತ್ತಪತ್ರಿಕಾ ಸಂಘದ ಅಧ್ಯಕ್ಷರು ಹೇಳಿದ್ದಾರೆ.

ಜೋಗಿಗೆ ಕೇಂದ್ರ ಆರೋಗ್ಯ ಸಚಿವರ ಭೇಟಿ

ಕೇಂದ್ರ ಸರ್ಕಾರದ ಆರೋಗ್ಯ ಸಚಿವ ರಾಜಕುಮಾರಿ ಅಮೃತ ಕೌರ್‌ರವರು ಮುಂದಿನ ತಿಂಗಳು ೧೧ ನೇ ತಾರೀಖು ಕರ್ನಾಟಕ ಪ್ರವಾಸ ಕೈಗೊಳ್ಳುವರು.

ಅಗಅವರು ಬೆಳಗಾಂ, ಹುಬ್ಬಳ್ಳಿ ಮುಂತಾದಕಡೆ ಭೇಟಿ ಕೊಡುವುದಲ್ಲದೆ ಹರಿಹರದಲ್ಲಿರುವ ಮಿರ್ಜಾಟೂಲ್ ಫ್ಯಾಕ್ಟರಿಗೂ ಭೇಟಿಯಿತ್ತು ಅನಂತರ ಜೋಗ್‌ಗೆ ಹೋಗುತ್ತಾರೆ. ಅದೇ ೧೬ನೇ ತಾರೀಖು ಬೊಂಬಾಯಿಗೆ ಹೋಗುವರೆಂದು ತಿಳಿಯಬರುತ್ತದೆ.

ಹಣ್ಣು, ತರಕಾರಿಗಳ ರಕ್ಷಣಾ ಕಾರ್ಖಾನೆ

ಸ್ಥಾಪಿಸಲು ಮೈಸೂರು ಸರ್ಕಾರದ ನಿರ್ಧಾರ

ಮೈಸೂರು ೨೮

ಸಂಸ್ಥಾನದಲ್ಲಿ ಹೇರಳವಾಗಿ ದೊರೆಯತಕ್ಕ ಹಣ್ಣು ತರಕಾರಿಗಳನ್ನು ಕೆಡದಂತೆ ದೀರ್ಘಕಾಲ ಭದ್ರಪಡಿಸುವ ಕೈಗಾರಿಕಾ ಕಾರ್ಖಾನೆಯೊಂದನ್ನು ಶೀಘ್ರದಲ್ಲಿಯೇ ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ—ಎಂದು ಕೈಗಾರಿಕಾ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ಮೊನ್ನೆ ರಾತ್ರಿ ಅಖಿಲ ಭಾರತ ಮೈಸೂರು ರೇಡಿಯೋ ಕೇಂದ್ರದಿಂದ ಮಾಡಿದ ಭಾಷಣದಲ್ಲಿ ತಿಳಿಸಿದ್ದಾರೆ.

ಕಚ್ಛಾಫಿಲಂಗಳು ಮತ್ತು ಛಾಯಾಚಿತ್ರದ ಸಾಮಗ್ರಿಗಳನ್ನು ತಯಾರುಮಾಡಲು ೩ ಕೋಟಿ ರೂ. ಖರ್ಚಿನಲ್ಲಿ ಒಂದು ಕಂಪೆನಿಯನ್ನು ಕೇಂದ್ರ ಸರ್ಕಾರದ ನೆರವಿನಿಂದ ಸ್ಥಾಪಿಸಲು ಉದ್ದೇಶಿಸಲಾಗಿದೆ. ೬.೫ ಕೋಟಿ ರೂಗಳಲ್ಲಿ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಬಡಾವಣೆ, ೧ ಕೋಟಿ ರೂ. ಖರ್ಚಿನಲ್ಲಿ ೬೦ ಸಾವಿರ ಟನ್ ಎಲೆಕ್ಟ್ರೋ ಪೋರ್ಸಲೈನ್ ಸಾಮಾನುಗಳ ತಯಾರಿಕೆ ಯೋಜನೆ ಕೈಗೊಳ್ಳಲಾಗುವುದೆಂದು ಅವರು ಹೇಳಿದ್ದಾರೆ.

ಗ್ರಾಮಾಂತರ ಪ್ರದೇಶಗಳಲ್ಲಿ ಜನರು ತಾವಾಗಿ ಕಾರ್ಯೋನ್ಮುಖರಾಗಿ ಕೈಗಾರಿಕೆಗಳಲ್ಲಿ ತೊಡಗುವಂತಾಗಲು ಡಾ|| ಎಂ. ವಿಶ್ವೇಶ್ವರಯ್ಯನವರ ಗ್ರಾಮಾಂತರ ಕೈಗಾರಿಕಾ ಅಭಿವೃದ್ಧಿ ಯೋಜನೆಯನ್ನು ಮುಂದಿನ ವರ್ಷ ಸಂಸ್ಥಾನದ ಎಲ್ಲ ಜಿಲ್ಲೆಗಳಲ್ಲಿಯೂ ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆ. ಇದರಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನು ಮುಂದೆ ನಿರುದ್ಯೋಗವೇ ಇಲ್ಲದಂತಾಗಲು ಅವಕಾಶವಾಗುವುದು—ಎಂದು ಸಚಿವರು ಆಶಿಸಿದ್ದಾರೆ.

ನಿರುದ್ಯೋಗ ಸಮಸ್ಯೆಯ ವಿಚಾರವಾಗಿ ಅವರು ಪ್ರಸ್ತಾಪಿಸಿ, ಇದು ದೇಶದಲ್ಲೇ ಕಳವಳವನ್ನುಂಟುಮಾಡಿದೆಯೆಂದು ಹೇಳಿದ್ದಾರೆ. ನಿರುದ್ಯೋಗಿಗಳಾಗಿರುವ ಲಕ್ಷಾಂತರ ಜನರಿಗೆ ನಿರುದ್ಯೋಗವನ್ನು ಕಲ್ಪಿಸಿಕೊಡುವುದು ಕೇವಲ ಸರ್ಕಾರದ ಜವಾಬ್ದಾರಿಯೇ ಆಗಿದೆಯೇ ಎಂಬ ವಿಷಯ ಮತ್ತು ಕೈಗಾರಿಕಾ ಅಭಿವೃದ್ಧಿ ಸಾಧನೆಯು ಕೇವಲ ಸರ್ಕಾರಿ ಸಂಸ್ಥೆಗಳ ಮೂಲಕವೇ ನೆರವೇರಬೇಕೆ ಅಥವ ಖಾಸಗಿ ಉದ್ಯಮಗಳಿಗೆ ಸಾಕಷ್ಟು ಪ್ರೋತ್ಸಾಹವನ್ನು ಸರ್ಕಾರ ಕೊಡುವುದರ ಮೂಲಕ ಸಹಾಯ ಮಾಡಬೇಕೆ ಎಂಬುದು ಚರ್ಚಾಸ್ಪದವಾಗಿದೆ. ಆದರೂ ಕೈಗಾರಿಕೆಗಳು ಬೆಳೆದು ಅಭಿವೃದ್ಧಿ ಹೊಂದುವುದಕ್ಕೆ ತಕ್ಕ ಸನ್ನಿವೇಶವನ್ನು ಕಲ್ಪಿಸಿಕೊಡುವುದು ಮತ್ತು ಅವಕ್ಕೆ ಎಲ್ಲ ಸೌಕರ್ಯಗಳನ್ನು ಒದಗಿಸುವುದು ಸರ್ಕಾರ ಕರ್ತವ್ಯವೆಂದು ಸರ್ವ ಸಮ್ಮತವಾದ ಅಂಶ. ಅದಕ್ಕಾಗಿ ಮೈಸೂರು ಸರ್ಕಾರದವರು ಮೊದಲಿನಿಂದಲೂ ಕಾರ್ಯಕ್ರಮಕೈಗೊಂಡಿದ್ದಾರೆ-ಎಂದು ಶ್ರೀ ಸಿದ್ದವೀರಪ್ಪನವರು ತಿಳಿಸಿದ್ದಾರೆ.

ಮಾರ್ಕೆಟ್ ಮತ್ತು ಫಲಪುಷ್ಪಗಳ ಪ್ರದರ್ಶನ

ಮೈಸೂರು ೨೮

ಮುಂದಿನ ತಿಂಗಳು ೧೫ನೇ ತಾರೀಖು ಗುರುವಾರದ ದಿನ ದೇವರಾಜ ಮಾರ್ಕೆಟ್ಟಿನಲ್ಲಿ ಮಾರ್ಕೆಟ್ ಮತ್ತು ಫಲಪುಷ್ಪದ ಪ್ರದರ್ಶನಗಳನ್ನು ಎಂದಿನಂತೆ ಪೌರಸಭೆಯು ಏರ್ಪಡಿಸಿದೆ. ಮೈಸೂರು ನಗರದಲ್ಲಿ ಉತ್ತಮ ತರದ ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯುವುದಕ್ಕೂ ನಮ್ಮಲ್ಲಿ ಬೆಳೆಯದಿರುವ ತರಕಾರಿ ಮತ್ತು ಹಣ್ಣುಗಳನ್ನು ಹೊರಗಡೆಯಿಂದ ತರಿಸುವುದಕ್ಕೂ ಉತ್ತೇಜನ ಕೊಡಲು ಈ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಆಹಾರ ಅಭಾವವನ್ನು ಕಮ್ಮಿ ಮಾಡಿಕೊಳ್ಳುವುದಕ್ಕೂ ಮತ್ತು ಆರೋಗ್ಯವನ್ನು ಕಾಪಾಡಿಕೊಳ್ಳುವುದಕ್ಕೂ ಉತ್ತಮ ತರಹದ ತರಕಾರಿ ಮತ್ತು ಹಣ್ಣುಗಳನ್ನು ನಾವು ಈಗ ಹೆಚ್ಚಾಗಿ ಉಪಯೋಗಿಸಬೇಕಾಗಿದೆ. ಈ ದೃಷ್ಟಿಯಿಂದ ಈ ಪ್ರದರ್ಶನವು ಬಹಳ ಅವಶ್ಯಕವಾಗಿದೆ. ಬೆಳೆಯುವವರಿಗೆ ಉತ್ತೇಜನ ಕೊಡಲು ಈ ಪ್ರದರ್ಶನದಲ್ಲಿ ಉತ್ತಮ ತರಹದ ಪದಾರ್ಥಗಳಿಗೆ ಬಹುಮಾನವನ್ನು ಹಂಚಬೇಕೆಂದು ಪೌರಸಭೆಯು ತೀರ್ಮಾನಿಸಿದೆ. ಎಲ್ಲರೂ ಈ ಕಾರ್ಯಕ್ಕೆ ಸಹಕಾರ ಮತ್ತು ಧನಸಹಾಯವನ್ನು ನೀಡಬೇಕು-ಎಂದು ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಕೋರಿರುತ್ತಾರೆ.

ಮೊಹಲ್ಲಾ ದಿನಾಚರಣೆ

ಮೈಸೂರು ೨೮

ಮೈಸೂರು ಪುರಸಭೆಯ ಆಶ್ರಯದಲ್ಲಿ ನಜರ್‌ಬಾದ್ ಮೊಹಲ್ಲಾ ದಿನಾಚರಣೆಯನ್ನು ನಾಳೆಯದಿನ ಆಚರಿಸಲಾಗುತ್ತದೆ.

ಈ ದಿನಾಚರಣೆಯ ಅಂಗವಾಗಿ ಬೆಳಗ್ಗೆ ೬-೩೦ ರಿಂದ ೯-೩೦ ರ ವರೆಗೆ ಮೊಹಲ್ಲಾ ನಿರ್ಮಲೀಕರಣ, ದೇವೀಹಾಕುವುದು, ಮಕ್ಕಳ ಮತ್ತು ಗರ್ಭಿಣಿಯವರ ಪರೀಕ್ಷೆ ಮತ್ತು ಆರೋಗ್ಯ ವಿಚಾರದಲ್ಲಿ ಸಲಹೆಗಳನ್ನು ಕೊಡಲಾಗುತ್ತದೆ. ಸಂಜೆ ೬ ಗಂಟೆಗೆ ಬಾಡೀಗಾರ್ಡ್ ಆಫೀಸಿಗೆ ಸೇರುವ ಆವರಣದಲ್ಲಿ ಪುರಸಭಾಧ್ಯಕ್ಷರ ನೇತೃತ್ವದಲ್ಲಿ ಒಂದು ಬಹಿರಂಗ ಸಭೆ ನಡೆಯುತ್ತದೆ.

೨೮ ದಸ್ತಗಿರಿಗಳು

ದೇವಘರ್ ದೇವಾಲಯದಲ್ಲಿ ಆಚಾರ್ಯ ವಿನೋಬಾಭಾವೆಯವರ ಮೇಲೆ ಅಲ್ಲಿಯ ಪಂಡಾಗಳು ನಡೆಸಿದ ಧಾಳಿಯ ಪರಿಣಾಮವಾಗಿ ಇಲ್ಲಿಯವರೆಗೆ ೨೮ ಜನರ ದಸ್ತಗಿರಿಗಳಾಗಿವೆ.

ನಿನ್ನೆಯದಿನ ಮುಖ್ಯಮಂತ್ರಿ ಶ್ರೀ ಕೃಷ್ಣಸಿಂಹರವರು ಸುಮಾರು ೫೦೦ ಜನ ಹರಿಜನರೊಡನೆ ದೇವಸ್ಥಾನವನ್ನು ಪ್ರವೇಶಿಸಿ ಪೂಜೆ ನಡೆಸಿದರು.

ಕೂಡಲೇ ಗಡಿ ನಿರ್ಧಾರ ಸಮಿತಿ ಆಗಬೇಕು

ಅಖಿಲ ಭಾರತ ಭಾಷಾವಾರು ಸಮ್ಮೇಳನದ ಒತ್ತಾಯ

ಕಳೆದ ಮೂರು ದಿನಗಳಿಂದ ಬರೋಡಾ ಬಳಿ ವಲ್ಲಭನಗರದಲ್ಲಿ ನಡೆಯುತ್ತಲಿದ್ದ ಅಖಿಲಭಾರತ ಭಾಷಾವಾರು ಸಮ್ಮೇಳನವು ನಿನ್ನೆಯದಿನ ಮುಕ್ತಾಯವಾಯಿತು.

ಆಂಧ್ರಪ್ರಾಂತ್ಯ ರಚನೆಯನ್ನು ಸಮ್ಮೇಳನವು ಸ್ವಾಗತಿಸುತ್ತಾ ಕೂಡಲೇ ಗಡಿನಿರ್ಧಾರ ಸಮಿತಿಯನ್ನು ನೇಮಿಸಬೇಕು. ವಿಶಾಲಾಂಧ್ರದ ಹೋರಾಟವು ಮುಂದುವರಿಯಬೇಕು. ಹೈದರಾಬಾದನ್ನು ಕೂಡಲೇ ವಿಭಜಿಸಬೇಕು-ಎಂಬ ನಿರ್ಣಯಗಳನ್ನು ಅನುಮೋದಿಸಿದೆ.

ವಿದ್ಯಾಸಚಿವರಲ್ಲಿ ವಿದ್ಯಾರ್ಥಿಗಳ ನಿಯೋಗ

ಮೈಸೂರು ೨೮

ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಕ್ರಿಯಾ ಸಮಿತಿಯವರು ಶ್ರೀ ಆರ್. ವೈದ್ಯನಾಥರ ನೇತೃತ್ವದಲ್ಲಿ ನಿನ್ನೆ ವಿದ್ಯಾಸಚಿವ ಶ್ರೀ ಎ.ಜಿ. ರಾಮಚಂದ್ರರಾಯರನ್ನು ಭೇಟಿಮಾಡಿ, ವಿಶ್ವವಿದ್ಯಾನಿಲಯದ ಯೂನಿಯನ್ನನ್ನು ಪುನರ್‌ರಚಿಸಲು ಸಹಾಯ ಮಾಡಬೇಕೆಂದು ಒತ್ತಾಯಪಡಿಸಿದರು.

ವಿಶ್ವವಿದ್ಯಾನಿಲಯದವರು ವಿದ್ಯಾರ್ಥಿಗಳ ಮೇಲೆ ಹಾಕಿರುವ ಆರೋಪಣೆಗಳನ್ನು ಹೋಗಲಾಡಿಸಲು ವಿದ್ಯಾರ್ಥಿಗಳೇ ತಮ್ಮದೇ ರಾಜ್ಯಾಂಗವನ್ನು ಏರ್ಪಡಿಸಿ, ಸಂಘದ ನ್ಯೂನಾತಿರಿಕ್ತಗಳನ್ನು ಸರಿಪಡಿಸಬೇಕೆಂದು ಸಚಿವರು ಸಲಹೆ ಕೊಟ್ಟರೆಂದು ತಿಳಿದುಬಂದಿದೆ.

ಜಿಲ್ಲಾ ಕಾಂಗ್ರೆಸ್ ಸಮಿತಿ

ಮೈಸೂರು ೨೮

ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಈ ಕೆಳಕಂಡಂತೆ ಅವಿರೋಧ ಆಯ್ಕೆ ನಡೆದಿದೆ:—

ಹೆಗ್ಗಡದೇವನಕೋಟೆ ತಾ|| ಶ್ರೀಗಳಾದ ಕೆ. ಪುಟ್ಟಸ್ವಾಮಿ ಎಲ್. ನಂಜುಂಡರಾವ್, ಯಳಂದೂರು- ಆರ್. ಸುಬ್ಬರಾವ್. ಹುಣಸೂರು- ಹೆಚ್. ಆರ್. ಸೀತಾರಾಮಯ್ಯ, ಡಿ. ದೇವರಾಜೇ ಅರಸ್ ಟಿ. ನರಸೀಪುರ ಎಸ್. ಚೆನ್ನೇಗೌಡ, ಪುಟ್ಟಹೊನ್ನಪ್ಪ. ಚಾ|| ನಗರ-ಎಂ. ಮಲ್ಲಣ್ಣ, ಎಸ್. ನಂಜುಂಡಶೆಟ್ಟಿ. ಪಿರಿಯಾಪಟ್ಟಣ- ಪಿ. ಕೆ. ಪುಟ್ಟರಾಜಪ್ಪ, ಪಿ. ಆರ್. ರಾಜಾರಾವ್. ಗುಂಡಲಪೇಟೆ- ಕೆ. ಸಿದ್ದನಾಯ್ಕ, ಜಿ. ವಿ. ಕೃಷ್ಣಮೂರ್ತಿ.

ಡಾ|| ಮುಖರ್ಜಿಯವರ ನಿಧನ ಬಗ್ಗೆ ತನಿಖೆ

ಡಾ|| ಶ್ಯಾಮಪ್ರಸಾದ್ ಮುಖರ್ಜಿಯವರ ನಿಧನದ ವಿಷಯದಲ್ಲಿ ತನಿಖೆಯನ್ನು ನಡೆಸಲು ಜನಸಂಘವು ಯಾವ ಪಕ್ಷಕ್ಕೂ ಸೇರದ ಕೆಲವು ಗಣ್ಯ ವ್ಯಕ್ತಿಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಿಸಲಿದೆಯೆಂದು ಆ ಪಕ್ಷದ ಕಾರ್ಯದರ್ಶಿಗಳು ತಿಳಿಸಿದ್ದಾರೆ.

ಮಾಜಿ ಸಚಿವ ಸ್ತ್ರೀ ವೇಷದಲ್ಲಿ

ಇರಾನಿನ ಮಾಜಿ ವಿದೇಶಾಂಗ ಸಚಿವ ಫತೇಮಿಯವರು ಸ್ತ್ರೀ ವೇಷವನ್ನು ಧರಿಸಿಕೊಂಡು ಟೆಹರಾನ್‌ನಲ್ಲಿಯೇ ಓಡಾಡುತ್ತಾ ಯಾರ ಕೈಗೂ ಸಿಕ್ಕದೆ ಇದ್ದಾರೆಂದು ಅವರನ್ನು ಹಿಡಿದು ಕೊಟ್ಟವರಿಗೆ ೧೦೦೦೦ ತೋಮಾನುಗಳನ್ನು ಕೊಡಲಾಗುವುದೆಂದು ಜಹೇದಿ ಸರ್ಕಾರವು ಪ್ರಕಟಿಸಿದೆ.

ಕಾರ್ಯನಿರತಪತ್ರಿಕೋದ್ಯೋಗಿ ದಿನಾಚರಣೆ

ಭಾರತದ ನಾನಾ ಭಾಗಗಳಲ್ಲಿ ಕಾರ್ಯನಿರತ ಪತ್ರಿಕೋದ್ಯೋಗಿಗಳ ದಿನಾಚರಣೆಯು ನಡೆದು ತಾವು ಕೈಗಾರಿಕಾ ವಿವಾದ ಶಾಸನವ್ಯಾಪ್ತಿಗೆ ಒಳಪಡುವಂತೆ ಸರ್ಕಾರವು ತಕ್ಕ ಶಾಸನವನ್ನು ಮಾಡಬೇಕೆಂದು ಒತ್ತಾಯ ಮಾಡುವ ನಿರ್ಧಾರಗಳನ್ನು ಮಾಡಲಾಯಿತು.

ಕೊರಿಯಾಕ್ಕೆ ಭಾರತದ ಯೋಧರು

ಕೊರಿಯಾದಲ್ಲಿ ಯುದ್ಧ ಖೈದಿಗಳ ವಿನಿಮಯ ಕಾರ್ಯದಲ್ಲಿ ತೊಡಗಿರುವ ಭಾರತ ಸೈನ್ಯದ ಜೊತೆಗೆ ಪುನಃ ಮತ್ತೆ ೬೦೦ ಯೋಧರನ್ನು ಅಮೆರಿಕಾದ ವಿಶೇಷ ವಿಮಾನಗಳಲ್ಲಿ ಟೋಕಿಯೋವಿಗೆ ಕಳುಹಿಸಲಾಯಿತು

ರಾಜಕಮಲ್
25-9-53 ರಿಂದ ಅಮೋಘ 2 ನೇ ವಾರ
-ಆಶೈಮಗನ್- [ತಮಿಳು]

ಅಪೇರ
25--9--53 ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ವೇಲೆಕಾರಿ ಮಗಳ್ [ತಮಿಳು]
ಪಾತ್ರ:—ಲಕ್ಷ್ಮೀರಾಜಂ, ಎ. ಟಿ. ರಾಮರಾವ್

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೩೫

೨೯-೯-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ನಗರದಲ್ಲಿ ಗೋವಧೆ ನಿಲ್ಲಿಸಬೇಕೆಂದು ಪುರಸಭೆಯ ನಿರ್ಣಯ

ಮೈಸೂರು ೨೯

ಮೈಸೂರು ನಗರದಲ್ಲಿ ಗೋವಧೆಯು ದಿನೇ ದಿನೇ ಹೆಚ್ಚಾಗಿ ನಡೆಯುತ್ತಿರುವ ಕಾರಣದಿಂದ ಅದನ್ನು ತಡೆಗಟ್ಟಲು ಸರ್ಕಾರದವರು ಸೂಕ್ತ ಕಾರ್ಯಕ್ರಮ ತೆಗೆದುಕೊಂಡು, ಗೋವಧೆ ಮಾಡುವವರಿಗೆ ಕಠಿಣ ಶಿಕ್ಷೆ ವಿಧಿಸಬೇಕೆಂದು ಪ್ರಾರ್ಥಿಸುವ ಶ್ರೀ ಚೌಡಯ್ಯನವರ ನಿರ್ಣಯವು ನಿನ್ನೆ ನಡೆದ ಪುರಸಭೆಯ ಅಧಿವೇಶನದಲ್ಲಿ ಸರ್ವಾನುಮತದಿಂದ ಅಂಗೀಕಾರವಾಯಿತು.

ಈ ಸಂಬಂಧದಲ್ಲಿ ಶ್ರೀ ಎ. ವೆಂಕಟೇಶಯ್ಯನವರು ಒಂದು ತಿದ್ದುಪಡಿ ಸೂಚಿಸಿ, ಗೋವಧೆಯನ್ನು ನಿಲ್ಲಿಸಲು ಬಲಾತ್ಕಾರ ಕಾನೂನು ಮಾಡುವುದರಿಂದ ಮುಸ್ಲಿಂ ಬಾಂಧವರಿಗೆ ನೋವು ಉಂಟುಮಾಡಿದಂತೆ ಆಗುವುದೆಂದೂ, ಗಾಂಧಿ ತತ್ವದಮೇಲೆ ಅವರ ಮನೋಭಾವನೆಯನ್ನು ಬದಲಾಯಿಸಬೇಕೆಂದೂ ತಿಳಿಸಿದರು. ಆದರೆ ತಿದ್ದುಪಡಿಯು ಬಿದ್ದುಹೋಯಿತು.

ಮೈಸೂರು ನಗರದಲ್ಲಿ ಆವರಣದಲ್ಲಿರುವ ಬೆಂಗಳೂರು-ನೀಲಗಿರಿ ರಸ್ತೆಯನ್ನು ಕಾಂಕ್ರೀಟ್ ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಬೇಕೆಂದು ಶ್ರೀ ಎಂ. ಎ. ಶ್ರೀನಿವಾಸಯ್ಯಂಗಾರ್ಯರು ಸೂಚಿಸಿದ ನಿರ್ಣಯವು ಅಂಗೀಕೃತವಾಯಿತು.

ಜಂಬೂಸವಾರಿಯು ವಾಪಸು ನಗರದ ಅಶೋಕಾರಸ್ತೆಯ ಮೂಲಕ ಬರಬೇಕೆಂದು ಶ್ರೀ ಮುದ್ದಯ್ಯನವರು ಪ್ರಾರಂಭದಲ್ಲಿ ಅಧ್ಯಕ್ಷರಲ್ಲಿ ಮನವಿ ಮಾಡಿಕೊಂಡರು. ಅದು ಸರ್ಕಾರಕ್ಕೆ ಸಂಬಂಧಪಟ್ಟದ್ದು ಎಂದು ಅಧ್ಯಕ್ಷರು ಉತ್ತರವಿತ್ತರು.

ನಗರದಲ್ಲಿ ಭಿಕ್ಷುಕರ ವಸತಿಗೃಹವಿದ್ದರೂ ನಗರದ ಬೀದಿಗಳಲ್ಲಿ ಅವರ ಕಾಟವು ವಿಶೇಷವಾಗಿದೆಯೆಂದೂ, ಆದ್ದರಿಂದ ಸರ್ಕಾರದವರು ಕೂಡಲೇ ಗಮನಕೊಟ್ಟು ಹೆಚ್ಚು ಹಣ ಸಹಾಯ ಮಾಡಬೇಕೆಂದೂ, ಭಿಕ್ಷುಕರನ್ನು ಹಿಡಿದು, ಅವರಲ್ಲಿ ದೃಢಕಾಯದವರಿಂದ ಶ್ರಮವಾದ ಕೆಲಸಗಳನ್ನು ಮಾಡಿಸಬೇಕೆಂದೂ ಶ್ರೀಗಳಾದ ಟಿ. ನರಸಿಂಹಯ್ಯಂಗಾರ್, ಸೀತಾರಾಮಯ್ಯ, ಪುಟ್ಟಸ್ವಾಮಿ ಮತ್ತು ಇತರ ಸದಸ್ಯರುಗಳು ತಿಳಿಸಿದರು.

ಭಿಕ್ಷುಕರ ವಸತಿಗೃಹಕ್ಕೆ ಕಳೆದ ೨ ತಿಂಗಳಿನಿಂದ ಸರ್ಕಾರದ ಗ್ರಾಂಟೇ ಬಂದಿಲ್ಲ. ಆದರೂ ಪುರಸಭೆಯವರು ಹಣ ಮುಂಗಡವಾಗಿ ಕೊಟ್ಟು, ಎಷ್ಟು ಸಾಧ್ಯವೋ ಅಷ್ಟನ್ನು ಮಾಡಲಾಗುತ್ತಿದೆ. ಸರ್ಕಾರದವರು ಹೆಚ್ಚು ಹಣ ಸಹಾಯ ಮಾಡಿದ ಹೊರತು, ಭಿಕ್ಷುಕರ ಕಾಟ ತಡೆಗಟ್ಟಲು ಸಾಧ್ಯವಿಲ್ಲವೆಂದು ಅಧ್ಯಕ್ಷರು ಹೇಳಿದರು.

ಮೈಸೂರು ನಗರದಲ್ಲಿ ಲೈಸೆನ್ಸ್ ಪಡೆದ ಮೂರು ಗೋಮಾಂಸ ಮಾರಾಟದ ಅಂಗಡಿಗಳಿವೆ. ನಗರದಲ್ಲಿ ಗೋವಧೆ ಪ್ರತಿಬಂಧಕವಿದ್ದರೂ, ಗೋಮಾಂಸವನ್ನು ಹೊರಗಿನಿಂದ ತರಿಸಲು ಅವಕಾಶವಿದೆ. ಅದು ಮದ್ರಾಸ್ ಪ್ರಾಂತ್ಯದ ಗೂಡಲೂರಿನಿಂದ ಬರುತ್ತಿದೆ-ಎಂದು ಅಧ್ಯಕ್ಷರು ಶ್ರೀ ಚೌಡಯ್ಯನವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

ಬಳ್ಳಾರಿ ಜಿಲ್ಲಾ ನ್ಯಾಯಾಧೀಶರು

ಮೈಸೂರು ೨೯

ಮೈಸೂರಿನ ಪ್ರಿನ್ಸಿಪಲ್ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಜಿ. ನಟರಾಜನ್‌ರವರನ್ನು ಬಳ್ಳಾರಿ ಜಿಲ್ಲಾ ನ್ಯಾಯಾಧೀಶರಾಗಿ ನೇಮಿಸಲಾಗಿದೆ.

ಮೈಸೂರಿನ ಅಡಿಷನಲ್ ಜಿಲ್ಲಾ ನ್ಯಾಯಾಧೀಶ ಶ್ರೀ ಕೆ. ವಿಶ್ವೇಶ್ವರಯ್ಯನವರನ್ನು ಪ್ರಿನ್ಸಿಪಾಲ್ ಜಡ್ಜರಾಗಿಯೂ, ಸಬಾರ್ಡಿನೇಟ್ ಜಡ್ಜ್ ಶ್ರೀ ಡಿ. ಗುರುನಂಜಯ್ಯನವರನ್ನು ಮೈಸೂರಿನ ಅಡಿಷನಲ್ ಜಿಲ್ಲಾ ಜಡ್ಜರಾಗಿಯೂ ನೇಮಿಸಲಾಗಿದೆ,

ಬಳ್ಳಾರಿಯಲ್ಲಿ ವಿವಿಧೋತ್ಸವಗಳು

ಬಳ್ಳಾರಿ ಜಿಲ್ಲೆಯ ೭ ತಾಲ್ಲೂಕುಗಳು ಮೈಸೂರಿಗೆ ಸೇರುವ ಸಂಬಂಧದಲ್ಲಿ ಅಕ್ಟೋಬರ್ ೧ ಮತ್ತು ೨ನೇ ತಾರೀಖುಗಳಲ್ಲಿ ವಿವಿಧೋತ್ಸವವನ್ನು ಬಳ್ಳಾರಿಯಲ್ಲಿ ಏರ್ಪಡಿಸಲಾಗಿದೆ.

ಅಕ್ಟೋಬರ್ ಒಂದನೇ ತಾರೀಖು ಬೆಳಗ್ಗೆ ದೇವಾಲಯ, ಮಸೀದಿ ಮತ್ತು ಚರ್ಚುಗಳಲ್ಲಿ ಪ್ರಾರ್ಥನೆ ಮತ್ತು ವಿಶೇಷ ಪೂಜೆ ಮತ್ತು ಮಧ್ಯಾಹ್ನ ಬಡಬಗ್ಗರಿಗೆ ಅನ್ನದಾನ ನಡೆಯುವುವು.

೨ನೇ ತಾರೀಖು ಬೆಳಗ್ಗೆ ೮-೩೦ ಗಂಟೆಗೆ ಧ್ವಜ ವಂದನೆ ಮತ್ತು ಪೆರೇಡ್. ಸಂಜೆ ೫ ಗಂಟೆಗೆ ಸ್ವಾಗತ ಸಮಾರಂಭ. ಅದರಲ್ಲಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಭಾಗವಹಿಸುವರು.

ಬೊಂಬಾಯಿನಲ್ಲಿ ನಾಟಕ ಅಭಿವೃದ್ಧಿ ಯೋಜನೆ

ನಾಟಕ ಮಂದಿರಗಳನ್ನು ಸ್ಥಾಪಿಸಲು ಸರ್ಕಾರದ ನಿರ್ಧಾರ

ನಾಟಕ ಕಲಾಭಿವೃದ್ಧಿಗಾಗಿ ಕೆಲವು ಪ್ರದೇಶಗಳಲ್ಲಿ ಆಧುನಿಕ ಥಿಯೇಟರುಗಳನ್ನು ಸ್ಥಾಪಿಸಲು ಬೊಂಬಾಯಿ ಸರ್ಕಾರದವರು ಯೋಜನೆ ಕೈಗೊಳ್ಳಲಿದ್ದಾರೆ. ಬೊಂಬಾಯಿ, ಪೂಣೆ ಅಹಮದಾಬಾದ್. ಸೂರತ್, ನಾಸಿಕ್, ಬೆಳಗಾಂ, ಧಾರ್ವಾಡ. ಮತ್ತು ಇತರ ನಗರಗಳ ಬಳಿ ನಿವಾಸಿಗಳ ಪ್ರದೇಶಗಳಲ್ಲಿ ನಾಟಕ ಸಂಗೀತ ಮುಂತಾದ ಮನರಂಜಿತ ಕಾರ್ಯಗಳಿಗಾಗಿ ಮಂದಿರಗಳನ್ನು ಕಟ್ಟಲಾಗುವುದು. ಮನರಂಜಿತ ತೆರಿಗೆಯಿಂದ ವರ್ಷಕ್ಕೆ ೩ ಲಕ್ಷ ರೂ.ಗಳನ್ನು ಮೀಸಲಾಗಿಟ್ಟು, ಅದನ್ನು ನಾಟಕಾಭಿವೃದ್ಧಿ ಮತ್ತು ನಾಟಕ ಪ್ರಬಂಧ ಸ್ಪರ್ಧೆಗಳಿಗಾಗಿ ಉಪಯೋಗಿಸಲಾಗುವುದು.

ನಾಟಕ ಕಲೆಯಲ್ಲಿ ತೊಡಗಿದ್ದು ಕಷ್ಟದಲ್ಲಿರುವವರಿಗೆ ಸಹಾಯ ಮಾಡಲು ಈ ವರ್ಷ ೧ ಲಕ್ಷ ರೂ. ಸರ್ಕಾರ ಮಂಜೂರು ಮಾಡಿದೆ. ಈ ಹಣದಲ್ಲಿ ಅಂತರ ಹೈಸ್ಕೂಲು ಮತ್ತು ಅಂತರ ಕಾಲೇಜುಗಳಲ್ಲಿ ನಾಟಕ ಸ್ಪರ್ಧೆಗಳಿಗೆ ಬಹುಮಾನ ಕೊಡಲಾಗುವುದು.

ರೇಷನ್ ಡಿಪೋ ರಜಾ

ಮೈಸೂರು ೨೯

ನಗರದಲ್ಲಿರುವ ಎಲ್ಲಾ ರೇಷನ್ ಡಿಪೋಗಳಿಗೆ ಅಕ್ಟೋಬರ್ ೨ನೇ ತಾರೀಖು ಮಹಾತ್ಮಾ ಗಾಂಧಿ ಜನ್ಮದಿನ, ೭ನೇ ತಾ|| ಮಹಾಲಯ ಅಮಾವಾಸ್ಯೆ ಮತ್ತು ೧೮ನೇ ತಾ|| ವಿಜಯದಶಮಿ ಪ್ರಯುಕ್ತ ಪೂರ್ತಾ ರಜಾ ಕೊಡಲಾಗಿದೆ ೧೯ನೇ ತಾ|| ಬೆಳಗ್ಗೆ ಮಾತ್ರ ತೆರೆಯಲಾಗುತ್ತದೆ.

ಶ್ರೀಮನ್ಮಹಾರಾಜರ ಅ|| ಕಾರ್ಯದರ್ಶಿ

ಬೆಂಗಳೂರು ಜಿಲ್ಲಾಧಿಕಾರಿಗಳ ಅಡಿಷನಲ್ ಅಸಿಸ್ಟೆಂಟರಾದ ಶ್ರೀ ಗುರುಮೂರ್ತಿ ಶಾಸ್ತ್ರಿಯವರನ್ನು ಶ್ರೀಮನ್ಮಹಾರಾಜರವರ ಅಸಿಸ್ಟೆಂಟ್ ಕಾರ್ಯದರ್ಶಿಯನ್ನಾಗಿ ಸರ್ಕಾರ ನೇಮಿಸಿದೆ

ಗೋಧಿ ಹಿಟ್ಟಿನ ರಫ್ತು

ಕಳೆದ ೧೨ ವರ್ಷಗಳಿಂದ ಭಾರತದಲ್ಲಿ ನಿಂತ ಹೋಗಿದ್ದ ಗೋಧಿ ಹಿಟ್ಟಿನ ರಫ್ತನ್ನು ಈಗ ಪ್ರಾರಂಭಿಸಲಾಗಿದೆಯೆಂದು ತಿಳಿಯಬರುತ್ತದೆ. ಸದ್ಯಕ್ಕೆ ಇದನ್ನು ಬರ್ಮಾ ಮತ್ತು ಪರ್ಷಿಯಾ ಕೊಲ್ಲಿಗೆ ಕಳುಹಿಸಲಾಗುತ್ತದೆ.

ಉಡುಗೊರೆಗಳ ಮೇಲೆ ಸುಂಕ

ಫ್ರೆಂಚ್ ಪಾತಗೆ ಪೋಸ್ಟ್ ಮೂಲಕ ಕಳುಹಿಸಲಿರುವ ಎಲ್ಲಾ ಉಡುಗೊರೆಗಳ ಮೇಲೆ ಸುಂಕವನ್ನು ವಿಧಿಸಲು ಭಾರತ ಸರ್ಕಾರವು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ತುಂಗಭದ್ರಾ ಯೋಜನೆ

ಕೇಂದ್ರ ಸರ್ಕಾರದ ನೀರಾವರಿ ಇಲಾಖಾ ಕಾರ್ಯದರ್ಶಿ ಶ್ರೀ ಟಿ. ಶಿವಶಂಕರ್‌ರವರು ನಿನ್ನೆ ರೆವಿನ್ಯೂ ಸಚಿವರೊಡನೆ ತುಂಗಭದ್ರ ಯೋಜನೆ ಆಡಳಿತ ಬಗ್ಗೆ ಮಾತುಕತೆ ನಡೆಸಿದರು. ಈ ದಿನ ಮುಖ್ಯ ಮಂತ್ರಿಗಳೊಡನೆ ಮಾತುಕತೆ ನಡೆಸುವರು.

ಕರ್ನಾಟಕ ಪ್ರಾಂತ್ಯ ಚಳುವಳಿ ಬಂಧಿತರ ಬಿಡುಗಡೆಗೆ ಒತ್ತಾಯ

ಕರ್ನಾಟಕ ಪ್ರಾಂತ್ಯ ರಚನೆ ಚಳುವಳಿಯಲ್ಲಿ ದಸ್ತಗಿರಿಯಾದವರನ್ನೆಲ್ಲಾ ಕೂಡಲೇ ಬಿಡುಗಡೆಯಾಗಬೇಕೆಂದು ಅಖಿಲ ಭಾರತ ಫಾರ್ವರ್ಡ್ ಬ್ಲಾಕಿನ ಪ್ರಧಾನ ಕಾರ್ಯದರ್ಶಿಯವರು ಒತ್ತಾಯ ಮಾಡಿದ್ದಾರೆ.

ಮಂತ್ರಿ ಮಂಡಲದ ಮೇಲಿನ ಅವಿಶ್ವಾಸ ನಿರ್ಣಯಕ್ಕೆ ಸೋಲು

ಮಧ್ಯ ಪ್ರದೇಶದ ಶಾಸನ ಸಭೆಯಲ್ಲಿ ವಿರೋಧ ಪಕ್ಷದವರು ಕಾಂಗ್ರೆಸ್ ಸರ್ಕಾರದ ಮೇಲೆ ಮಂಡಿಸಿದ್ದ ಅವಿಶ್ವಾಸ ನಿರ್ಣಯವು ೧೫೦–೧೯ ಮತಗಳಿಂದ ಬಿದ್ದುಹೋಯಿತು,

ಭೂ ಹಿಡುವಳಿ ಬಗ್ಗೆ ಅಂಕಿ ಅಂಶ ಶೇಖರಣೆ

ಪ್ರಾಂತ್ಯಗಳಲ್ಲಿ ಭೂ ಹಿಡುವಳಿ ಬಗ್ಗೆ ಅಧಿಕೃತವಾಗಿ ಅಂಕಿ ಅಂಶಗಳನ್ನು ಶೇಖರಿಸಬೇಕೆಂದು ಭಾರತ ಸರ್ಕಾರವು ಪ್ರಾಂತ್ಯ ಸರ್ಕಾರಗಳಿಗೆ ಸೂಚನೆಯನ್ನು ಕೊಡಲಿರುವುದೆಂದು ತಿಳಿಯಬರುತ್ತದೆ.

ಒಂದು ಸಂಸಾರಕ್ಕೆ ೫೦-೬೦ ಎಕರೆಗಳಿಗಿಂತ ಹೆಚ್ಚಾಗಿ ಭೂಮಿ ಇರಬಾರದೆಂದು ಈಗಿನ ಅಭಿಪ್ರಾಯವಾಗಿದೆ,

ಬ್ರಿಟನ್-ಈಜಿಪ್ಟ್ ವಿವಾದ ಮುಕ್ತಾಯ

ಸೂಯೆಜ್ ಕಾಲುವೆ ವಿವಾದ ಪರಿಹಾರದ ಬಗ್ಗೆ ಬ್ರಿಟನ್ ಮಾಡಿರುವ ಸಲಹೆಗಳನ್ನು ಈಜಿಪ್ಟ್ ಒಪ್ಪಿರುವುದಾಗಿ ತಿಳಿಯಬರುತ್ತದೆ.

ತಿರುವಾಂಕೂರ್ ಕೊಚ್ಚಿಯಲ್ಲಿ ವಿರೋಧ ಚಳುವಳಿ

ಪ್ರಜಾ ಸೋಷಲಿಸ್ಟ್ ಪಕ್ಷದ ಮನವಿ

ಶಾಸನಸಭೆಯನ್ನು ರದ್ದುಗೊಳಿಸಿದ್ದರೂ ಕಾಂಗ್ರೆಸ್ ಸರ್ಕಾರವನ್ನು ಮುಂದುವರಿಸುತ್ತಲಿರುವುದನ್ನು ಪ್ರತಿಭಟಿಸಲು ತಿರುವಾಂಕೂರು-ಕೊಚ್ಚಿ ಪ್ರಾಂತ್ಯದಾದ್ಯಂತ ಪ್ರಜಾ ಸೋಷಲಿಸ್ಟ್ ಪಕ್ಷವು ಚಳುವಳಿಯನ್ನು ಹೂಡಲು ನಿರ್ಧರಿಸಿ, ಜನತೆಯು ಇದರಲ್ಲಿ ಭಾಗವಹಿಸಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಬೇಕೆಂದು ಕೋರಿದೆ.

ಈಗಿನ ಸರ್ಕಾರವು ಮುಂದವರಿಯುವುದರಿಂದ ನ್ಯಾಯವಾದ ರೀತಿಯಲ್ಲಿ ಚುನಾವಣೆಯು ನಡೆಯುವುದು ಅಸಾಧ್ಯವೆಂದು ಒಂದು ನಿರ್ಣಯವನ್ನು ಆ ಪಕ್ಷವು ಮಾಡಿದೆ.

ಗ್ರಾಮಸೇವಕರ ತರಪೇತು

ಭಾರತದಲ್ಲಿರುವ ೩೪ ಕ್ಷೇತ್ರಗಳಲ್ಲಿ ಜುಲೈ ಮಾಸದವರೆಗೆ ಸುಮಾರು ೨೦೦೦ ಗ್ರಾಮಸೇವಕರಿಗೆ ಸಾಮುದಾಯಕ ಯೋಜನೆ ಕಾರ್ಯಗಳಲ್ಲಿ ತರಪೇತು ಕೊಡಲಾಗಿದೆಯೆಂದೂ ಇನ್ನೂ ೨೦೦೦ ಜನರು ತರಪೇತು ಪಡೆಯಲು ಪ್ರಾರಂಭಿಸಿರುವುದಾಗಿ ತಿಳಿಯಬರುತ್ತದೆ.

ವಿಶ್ವವು ಪಾಠ ಕಲಿಯಲಿ

ದೇವಘರ್ ದೇವಾಲಯದಲ್ಲಿ ಆಚಾರ್ಯ ವಿನೋಬಾಭಾವೆಯವರು ಹರಿಜನರೊಡನೆ ದೇವಸ್ಥಾನಕ್ಕೆ ಪ್ರವೇಶಿಸಿದಾಗ ಅಲ್ಲಿಯ ಪೂಜಾರಿಗಳು ನಡೆಸಿದ ಥಳಿಯನ್ನು ಅಮೆರಿಕಾದ ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯು ಖಂಡಿಸಿ, ಇದರಿಂದ ಭಾರತವಲ್ಲದೆ ವಿಶ್ವವೂ ಪಾಠವನ್ನು ಕಲಿತುಕೊಳ್ಳಬೇಕಾಗಿದೆ-ಎಂದು ತಿಳಿಸಿದೆ.

ಮಹಾರಾಷ್ಟ್ರ ಪ್ರಾಂತ್ಯ ರಚನೆ

ಬೊಂಬಾಯಿ, ಮಧ್ಯ ಪ್ರದೇಶ ಮತ್ತು ಹೈದರಾಬಾದಿನಲ್ಲಿರುವ ಮಹಾರಾಷ್ಟ್ರ ಭಾಷೆಯಾಗಿರುವ ಭಾಗಗಳನ್ನೆಲ್ಲಾ ಒಟ್ಟುಗೂಡಿಸಿ ಬೊಂಬಾಯಿ ನಗರವನ್ನು ಒಳಗೊಂಡ ಒಂದು ಪ್ರತ್ಯೇಕ ಮಹಾರಾಷ್ಟ್ರ ಪ್ರಾಂತ್ಯವನ್ನು ರಚಿಸಬೇಕೆಂದು ಕಳೆದ ೨ ದಿನಗಳಲ್ಲಿ ಈ ಪ್ರಾಂತ್ಯಗಳ ಮಹಾರಾಷ್ಟ್ರ ಪ್ರಮುಖರು ಸಭೆ ನಡೆಸಿ ಒಮ್ಮತದಿಂದ ತೀರ್ಮಾನಿಸಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೮—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೨—	೨೩—
ಎಳ್ಳು	೬೨—೧೪	೮೧—
ಹುರುಳಿ	೪೪—೮	೪೬—೮
ಅಲಸಂದೆ	೬೦—೪	೬೭—
ಹುಣಸೇಹಣ್ಣು	೭—೧೧	೯—೫
ಸೀಗೆಕಾಯಿ	೭—೪	—
ತೆಂಗಿನಕಾಯಿ	೧೨೪	೨೬೨
ಮೆಣಸಿನಕಾಯಿ	೩೮—	೪೧—೨

ರಾಷ್ಟ್ರಾಭಿವೃದ್ಧಿ ಕಾರ್ಯ ವಿಸ್ತರಣೆ ಯೋಜನೆ

ಮೈಸೂರು ೨೯

ಮುಂದಿನ ತಿಂಗಳು ೨ನೇ ತಾರೀಖು ಬೆಳಿಗ್ಗೆ ೧೦ ಗಂಟೆಗೆ ಜಿಲ್ಲಾಧಿಕಾರಿ ಶ್ರೀ ಎಂ. ಎಸ್. ಸ್ವಾಮಿನಾಥರವರು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಕೈಗೊಳ್ಳಲಿರುವ ರಾಷ್ಟ್ರಾಭಿವೃದ್ಧಿ ಕಾರ್ಯ ವಿಸ್ತರಣ ಯೋಜನೆಯ ಪ್ರಾರಂಭೋತ್ಸವವನ್ನು ಗುಂಡ್ಲುಪೇಟೆಯಲ್ಲಿ ನೆರವೇರಿಸುವರು. ಶಾಸನಸಭಾ ಸದಸ್ಯ ಶ್ರೀ ಹೆಚ್. ಕೆ. ಶಿವರುದ್ರಪ್ಪನವರು ಅಧ್ಯಕ್ಷತೆ ವಹಿಸುವರು.

ಗಾಂಧೀ ಜಯಂತಿ ಸಪ್ತಾಹ

ರಾಜಧಾನಿಯ ಮಂಡಿಮೊಹಲ್ಲಾದ ವಿದ್ಯಾವರ್ಧಕ ಶಾಲೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಗಾಂಧೀ ಜಯಂತಿ ಸಪ್ತಾಹದ ಅಂಗವಾಗಿ ಪ್ರಾರ್ಥನೆ ಮುಂತಾದ ಕಾರ್ಯಕ್ರಮಗಳು ನಡೆಯುವುವು.

ಪ್ರಾರಂಭೋತ್ಸವ

ಪ್ರಥಮದರ್ಜೆ ಕಾಲೇಜ್ ಕರ್ನಾಟಕ ಸಂಘದ ಪ್ರಾರಂಭೋತ್ಸವವನ್ನು ನಾಳೆ ಸಂಜೆ ೫-೧೫ ಗಂಟೆಗೆ ಪ್ರೊಫೆಸರ್ ಎಸ್. ವಿ. ರಂಗಣ್ಣನವರು ನೆರವೇರಿಸುವರು ಶ್ರೀ ಡಿ. ಎಲ್. ನರಸಿಂಹಾಚಾರ್ಯರು ಅಧ್ಯಕ್ಷತೆ ವಹಿಸುವರು.

ಪ್ರಾಂತ್ಯ ವಿಂಗಡನೆಗೆ ಕೇಂದ್ರ ಸರ್ಕಾರ ಒಪ್ಪಿದೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿಯ ಹೇಳಿಕೆ

ತಿರುವಾಂಕೂರ್ ಕೊಚ್ಚಿಯಲ್ಲಿ ನೂತನ ಸರ್ಕಾರ

ಮುಂದಿನ ಫೆಬ್ರವರಿಯಲ್ಲಿ ಅಧಿಕಾರಕ್ಕೆ ಬರುವುದು

ತಿರುವಾಂಕೂರ್-ಕೊಚ್ಚಿ ಪ್ರಾಂತ್ಯದಲ್ಲಿ ರಾಜಪ್ರಮುಖರ ಆಜ್ಞೆಯಂತೆ ಚುನಾವಣೆಗಳನ್ನು ನಡೆಸಲು ಈಗಾಗಲೇ ಸಿದ್ಧತೆಗಳಾಗುತ್ತಿವೆ. ಡಿಸೆಂಬರ್ ಮಾಹೆಯಲ್ಲಿ ಚುನಾವಣೆಗಳು ನಡೆದು ಬರುವ ವರ್ಷ ಫೆಬ್ರವರಿ ಅಂತ್ಯದಲ್ಲಿ ಹೊಸ ಸರ್ಕಾರವು ಅಧಿಕಾರವನ್ನು ಸ್ವೀಕಾರ ಮಾಡುತ್ತದೆ ಎಂದು ಅಲ್ಲಿನ ರೆವಿನ್ಯೂ ಸಚಿವ ಶ್ರೀ ಗೋವಿಂದ ಮೆನನ್‌ರವರು ಹೇಳಿದ್ದಾರೆ.

ಅಲ್ಲಿಯವರೆಗೆ ಈಗಿರುವ ಕಾಂಗ್ರೆಸ್ ಸರ್ಕಾರವು ಮುಂದುವರಿಯುತ್ತದೆ.

ಸರ್ಕಾರಿ ನೌಕರರಿಗೆ ೩೦ನೇ ತಾರೀಖು ಸಂಬಳ

ಬೆಂಗಳೂರು ೨೯

ಸರ್ಕಾರಿ ಕಛೇರಿಗಳು, ಸರ್ಕಾರಿ ಕೈಗಾರಿಕಾ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಸೆಪ್ಟಂಬರ್ ತಿಂಗಳ ಸಂಬಳವನ್ನು ಸೆಪ್ಟಂಬರ್ ೩೦ನೇ ತಾರೀಖು ಕೊಡುವಂತೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ.

ಇತ್ತೀಚೆಗೆ ಕಾಂಗ್ರೆಸ್ ಕಾರ್ಯ ಸಮಿತಿ ಸಭೆಯಲ್ಲಿ ದೇಶದಲ್ಲಿ ಪ್ರಾಂತ್ಯಗಳನ್ನು ಪುನರ್ವಿಂಗಡನೆಯ ವಿಷಯವಾಗಿ ಚರ್ಚೆ ನಡೆಯಿತಷ್ಟೆ. ಈ ವಿಷಯದಲ್ಲಿ ಅಖಿಲ ಭಾರತ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಅಗರವಾಲರವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಕಾಂಗ್ರೆಸ್ ಮತ್ತು ಕೇಂದ್ರ ಸರ್ಕಾರವು ಪ್ರಾಂತ್ಯಗಳ ಪುನರ್ವಿಂಗಡನೆಯಾಗಬೇಕೆಂಬುದನ್ನು ತತ್ವಶಃ ಒಪ್ಪಿದೆ. ಇವನ್ನು ನಿರ್ಧರಿಸಲು ಒಂದು ಪರಿಣಿತ ಸಮಿತಿಯನ್ನು ನೇಮಿಸಲಾಗುತ್ತದೆ. ಆಡಳಿತ ಸೌಕರ್ಯ, ಭಾಷೆ, ರಾಷ್ಟ್ರೀಯ ಭದ್ರತೆ, ಆರ್ಥಿಕ ಪರಿಸ್ಥಿತಿ ಮುಂತಾದುವನ್ನೆಲ್ಲಾ ಕೂಲಂಕಷವಾಗಿ ಪರಿಶೀಲಿಸಿ ಅನಂತರ ಪ್ರಾಂತ್ಯಗಳ ವಿಂಗಡನೆಯನ್ನು ರೂಪಿಸುವುದು ಅತ್ಯಾವಶ್ಯಕವೆಂದು ಅವರು ತಮ್ಮ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಸಮಿತಿ ಅಧ್ಯಕ್ಷತೆಗೆ ರಾಜೀನಾಮೆ

ಆಂಧ್ರ ಪ್ರಾಂತ್ಯದ ಮಂತ್ರಿಮಂಡಲವನ್ನು ಸೇರುವ ಉದ್ದೇಶದಿಂದ ಆಂಧ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷಸ್ಥಾನಕ್ಕೆ ಶ್ರೀ ಎನ್. ಸಂಜೀವರೆಡ್ಡಿಯವರು ರಾಜೀನಾಮೆ ಕೊಡುವರೆಂದು ತಿಳಿಯಬರುತ್ತದೆ.

ಎ. ಪಿ. ಸಿ. ಸಿ.ಯ ಮಹಾಸಭೆ ಮತ್ತು ಕಾರ್ಯಕಾರಿ ಸಮಿತಿ ಸಭೆ ಕರ್ನೂಲಿನಲ್ಲಿ ನಾಳೆಯದಿನ ಸೇರಲಿವೆ. ಆಗ ಶ್ರೀ ಸಂಜೀವರೆಡ್ಡಿಯವರು ತಮ್ಮ ರಾಜೀನಾಮೆಯನ್ನು ಸಲ್ಲಿಸುವರೆಂದು ಹೇಳಲಾಗಿದೆ.

ಆಂಧ್ರ ಮಂತ್ರಿಮಂಡಲದ ರಚನೆಯಲ್ಲಿ ಇಲ್ಲಿಯವರೆಗೆ ನಡೆದಿರುವ ಮಾತುಕತೆಗಳನ್ನು ಆಗ ಅವರು ಸಭೆಯ ಗಮನಕ್ಕೆ ತರಲಿರುವರು.

ಭಾರತ ಪ್ರಜಾ ಸಭೆಯು ಮುಂದಿನ ಅಧಿವೇಶನವು ನವೆಂಬರ್ ೧೬ನೇ ತಾರೀಖು ಪ್ರಾರಂಭವಾಗುವುದಾಗಿ ತಿಳಿಯಬರುತ್ತದೆ.

ಮೈಸೂರು ದಸರಾ ವಸ್ತುಪ್ರದರ್ಶನ ೧೯೫೩

(ತಾ|| ೯—೧೦—೫೩ರಿಂದ ತಾ|| ೨೫—೧೦—೫೩ರವರೆಗೆ)

ಈ ವರ್ಷ ದಸರಾ ವಸ್ತುಪ್ರದರ್ಶನದ ಮಹಿಳಾವಿಭಾಗದ ಅಂಗವಾಗಿ ಈ ಕೆಳಗೆ ಕಂಡ ಸ್ಪರ್ಧೆಗಳನ್ನು ಸ್ತ್ರೀಯರಿಗಾಗಿ ಏರ್ಪಡಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸಲು ಇಷ್ಟಪಡುವವರು ತಾ|| ೬—೧೦—೫೩ ರೊಳಗೆ ದಸರಾ ವಸ್ತುಪ್ರದರ್ಶನದ ಕಾರ್ಯದರ್ಶಿಗಳಿಗೆ ತಲಪುವಂತೆ ಲಿಖಿತಮೂಲಕ ತಿಳಿಸಬೇಕಾಗಿ ವಿನಂತಿ.

ಈ ಸ್ಪರ್ಧೆಗಳಿಗೆ ಪ್ರವೇಶಧನವಿಲ್ಲ.

(1) **ತಿಂಡಿ ತಯಾರಿಕೆ ಸ್ಪರ್ಧೆ:**— ಸಿಹಿ, ಖಾರ ಮತ್ತು ಉಪ್ಪು ಪ್ರತಿಯೊಂದರಲ್ಲಿಯೂ ಒಂದೊಂದು ತಿಂಡಿಯನ್ನು ಮನೆಯಲ್ಲಿ ಮಾಡಿಕೊಂಡು ಸ್ಪರ್ಧೆಗಿಳಿಸುವುದಕ್ಕಾಗಿ ತಾ|| ೧೨—೧೦—೫೩ರ ಮಧ್ಯಾಹ್ನ ಮೂರುಗಂಟೆಗೆ ವಸ್ತುಪ್ರದರ್ಶನಕ್ಕೆ ತೆಗೆದುಕೊಂಡುಬಂದು ಮಹಿಳಾವಿಭಾಗದಲ್ಲಿಡಬೇಕು. ಈ ಸ್ಪರ್ಧೆಯಲ್ಲಿ ಭಾಗವಹಿಸುವವರು ತಾ|| ೬—೧೦—೫೩ ರಲ್ಲಿ ತಿಳಿಸಬೇಕು.

(2) **ರಂಗೋಲೆ ಸ್ಪರ್ಧೆ**—(a) ಬಣ್ಣದರಂಗೋಲೆ (b) ಎಳೆರಂಗೋಲೆ ತಾ|| ೧೩—೧೦—೫೩ರ ಮೂರುಗಂಟೆಗೆ ಸ್ಪರ್ಧೆ ಮಹಿಳಾವಿಭಾಗದಲ್ಲಿ ನಡೆಸಲಾಗುವುದು.

(3) **ಜಡೆ ಶೃಂಗಾರ ಸ್ಪರ್ಧೆ:**—

(a) ಹೂವಿನಿಂದ ಕೂಡಿದ ಜಡೆ ಶೃಂಗಾರ. (b) ಹೂವಿಲ್ಲದ ಜಡೆ ಶೃಂಗಾರ. ತಾ|| ೧೫ ೧೦—೫೩ರ ಮೂರುಗಂಟೆಗೆ ಸ್ಪರ್ಧೆ ಮಹಿಳಾವಿಭಾಗದಲ್ಲಿ ನಡೆಸಲಾಗುವುದು.

ಕಾರ್ಯದರ್ಶಿ
ದಸರಾ ವಸ್ತುಪ್ರದರ್ಶನ ೧೯೫೩, ಮೈಸೂರು.

ಅಪೇರ
25--9--53 ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ವೇಲೆಕಾರಿ ಮಗಳ್
[ತಮಿಳು]
ಪಾತ್ರ:—ಲಕ್ಷ್ಮೀರಾಜಂ,
ಎ. ಟಿ. ರಾಮರಾವ್

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೩೭

೩೦-೯-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪುರಸಭೆಯ ಆಡಳಿತ ವರದಿ

ಮೈಸೂರು ೩೦

ಪುರಸಭೆಯ ವಿಶೇಷ ಅಧಿವೇಶನವು ಈ ಮಧ್ಯಾಹ್ನ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ೧೯೫೨-೫೩ನೇ ಪುರಸಭಾಯ ಆಡಳಿತ ವರದಿಯನ್ನು ಪರಿಶೀಲಿಸಿತು. ವಿವರಗಳನ್ನು ನಾಳೆ ಕೊಡಲಾಗುವುದು.

ಬಳ್ಳಾರಿ ವೈದ್ಯಾಧಿಕಾರಿಗಳು

ಮೈಸೂರು ೩೦

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾದ ಡಾ|| ರಾಜಣ್ಣನವರನ್ನು ಬಳ್ಳಾರಿಯ ಮೆಡಿಕಲ್ ಆಫೀಸರಾಗಿ ವರ್ಗಾಯಿಸಲಾಗಿದೆ. ಅವರು ಈ ದಿನ ಬಳ್ಳಾರಿಗೆ ಪ್ರಯಾಣ ಬೆಳೆಸುವರು.

ದರ್ಬಾರ್ ಭಕ್ಷಿಯವರಿಗೆ ಜೀವದಾನ

ಮೈಸೂರು ೩೦

ಶ್ರೀಮನ್ಮಹಾರಾಜರವರ ಎ. ಡಿ. ಸಿ. ಮತ್ತು ದರ್ಬಾರು ಭಕ್ಷಿಗಳಾದ ಶ್ರೀ ದೇವರಾಜೇ ಅರಸಿನವರು ನಾಳೆಯಿಂದ ನಿವೃತ್ತರಾಗಬೇಕಾಗಿದ್ದು, ಅವರಿಗೆ ಒಂದು ವರ್ಷ ಕಾಲ ಜೀವದಾನ ದೊರೆತಿದೆ.

ಬಳ್ಳಾರಿ ಮೈಸೂರಿಗೆ ಸೇರಿಸಿದ್ದು ನ್ಯಾಯ

ಮದರಾಸ್ ಹೈಕೋರ್ಟಿನಲ್ಲಿ ತೀರ್ಪು

ಬಳ್ಳಾರಿಯ ೭ ತಾಲ್ಲೂಕುಗಳನ್ನು ಮೈಸೂರಿಗೆ ಭಾರತ ಸರ್ಕಾರವು ವರ್ಗಾಯಿಸಿರುವುದು ನ್ಯಾಯಬದ್ಧವಲ್ಲವೆಂದು ಬಳ್ಳಾರಿ ಪುರಸಭಾಧ್ಯಕ್ಷರಾದ ಶ್ರೀ ಮುಲ್ಲಂಗಿ ದೊಡ್ಡಬಸಪ್ಪನವರು ಮದ್ರಾಸ್ ಹೈಕೋರ್ಟಿನಲ್ಲಿ ಹೂಡಿದ್ದ ರಿಟ್ ಅರ್ಜಿಯನ್ನು ನ್ಯಾಯಾಧೀಶರು ವಜಾ ಮಾಡಿದ್ದಾರೆ.

ಭಾರತದ ರಾಜ್ಯಾಂಗದ ಮೂರನೇ ಕಲಮಿಗೆ ಈ ವರ್ಗವು ವಿರುದ್ಧವಾಗಿದೆಯೆಂದೂ ಆದ್ದರಿಂದ ಆಂಧ್ರ ಕಾನೂನಿನಲ್ಲಿ ಅದಕ್ಕೆ ಅವಕಾಶ ಕೊಟ್ಟಿರುವುದು ನ್ಯಾಯ ಬಾಹಿರವೆಂದು ಘೋಷಿಸಬೇಕೆಂದು ಪ್ರಾರ್ಥಿಸಲಾಗಿತ್ತು. ಹಾಗೆ ಘೋಷಿಸಲು ಅವಕಾಶವೇ ಇಲ್ಲವೆಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ.

ರಾಷ್ಟ್ರಾಧ್ಯಕ್ಷರು ಬೊಂಬಾಯಿಗೆ

ನೌಕಾದಿನಾಚರಣೆಯಲ್ಲಿ ಭಾಗವಹಿಸಲು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರವರು ಮುಂದಿನ ತಿಂಗಳು ೧೦ ನೇ ತಾರೀಖು ಬೊಂಬಾಯಿಗೆ ಭೇಟಿ ಕೊಡಲಿರುವರು ಆಗ ಪ್ರಧಾನಿ ನೆಹರೂರವರು ಸಹ ಅಲ್ಲಿಗೆ ಹೋಗುವರೆಂದು ತಿಳಿಯಬರುತ್ತದೆ.

ಮೈಸೂರು ಮಂತ್ರಿಮಂಡಲ ವಿಸ್ತರಣೆ

ಅಕ್ಟೋಬರ್ ಒಂದರನಂತರ ಪ್ರಕಟಣೆ

ಬೆಂಗಳೂರು ೩೦

ಮಂತ್ರಿಮಂಡಲದ ಸಭೆಯು ನಿನ್ನೆ ದಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಇನ್ನೊಬ್ಬ ಸಚಿವರನ್ನು ತೆಗೆದುಕೊಳ್ಳುವ ವಿಷಯವು ಚರ್ಚೆಯಾಗಿ ಒಂದು ನಿರ್ಧಾರಕ್ಕೆ ಬಂದಿರುವುದಾಗಿ ತಿಳಿಯಬರುತ್ತದೆ.

ಮಂತ್ರಿಮಂಡಲ ಸಭೆಯು ಮುಗಿದ ನಂತರ ಮುಖ್ಯಮಂತ್ರಿಗಳು ಈ ವಿಷಯವನ್ನು ಹೊರಗೆಡಹುತ್ತಾ ಈಬಗ್ಗೆ ಪ್ರಕಟಣೆ ಅಕ್ಟೋಬರ್ ಒಂದನೇ ತಾರೀಖಿನ ನಂತರ ಹೊರಬೀಳುವುದೆಂದು ತಿಳಿಸಿದರು.

ತುಂಗಭದ್ರಾ ಜಲಾಶಯದ ಆಡಳಿತ

ಬೆಂಗಳೂರು ೩೦

ಕಳೆದ ೩ ದಿನಗಳಿಂದ ಕೇಂದ್ರ ನೀರಾವರಿ ಶಾಖಾ ಕಾರ್ಯದರ್ಶಿ ಶ್ರೀ ಟಿ. ಶಿವಶಂಕರ್‌ರವರು ಮೈಸೂರು ಮಂತ್ರಿಮಂಡಲದೊಡನೆ ತುಂಗಭದ್ರಾ ಜಲಾಶಯದ ಆಡಳಿತದ ಬಗ್ಗೆ ನಡೆಸುತ್ತಿದ್ದ ಮಾತುಕತೆಯು ಮುಕ್ತಾಯವಾಗಿ- ಯಾವ ತೀರ್ಮಾನಕ್ಕೂ ಬರಲಾಗಲಿಲ್ಲವೆಂದೂ, ಈ ಬಗ್ಗೆ ರಾಷ್ಟ್ರಪತಿಗಳೇ ನಿರ್ದೇಶನ ಕೊಡಲಿರುವರೆಂದೂ ಹೇಳಲಾಗಿದೆ.

ಚೀಣಾದ ವಾರ್ಷಿಕೋತ್ಸವ

ಜನತಾ ಚೀಣಾದ ನಾಲ್ಕನೇ ವಾರ್ಷಿಕೋತ್ಸವದ ಸಂಬಂಧದಲ್ಲಿ ನಾಳೆ ಸಂಜೆ ೬ ಗಂಟೆಗೆ ಟೌನ್ ಹಾಲಿನಲ್ಲಿ ಭಾರತ-ಚೀಣಾ ಸ್ನೇಹ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆ ನಡೆಯುವುದು. ಶ್ರೀ ದೇವೇಂದ್ರಪ್ಪನವರು ತಮ್ಮ ಚೀಣಾ ಪ್ರವಾಸದ ಅನುಭವ ತಿಳಿಸುವರು.

ಲಂಡನ್ನಿನಲ್ಲಿ ಗಾಂಧಿ ಭಾವಚಿತ್ರ ಅನಾವರಣ

ಲಂಡನ್ನಿನ ಈಸ್ಟ್ ಎಂಡ್ ನಲ್ಲಿರುವ ಕಿಂಗ್ಸ್ಲಿಯಲ್ಲಿ ಅಕ್ಟೋಬರ್ ೨ ನೇ ತಾ|| ಮಹಾತ್ಮಾ ಗಾಂಧಿಯವರ ಭಾವಚಿತ್ರ ಅನಾವರಣ ಮಾಡಲಾಗುತ್ತದೆ.

ಸಚಿವಶಾಖೆ ಬದಲಾವಣೆ

ನಾಳೆಯಿಂದ ಮದ್ರಾಸ್‌ನ ಆರ್ಥಿಕ ಸಚಿವ ಶ್ರೀ ಸುಬ್ರಹ್ಮಣ್ಯಂರವರು ವಿದ್ಯಾ ಸಚಿವ, ಶ್ರೀ ಎ. ಬಿ. ಶೆಟ್ಟಿರು ವ್ಯವಸಾಯ ಸಚಿವ ಮತ್ತು ರಾಮಸ್ವಾಮಿ ರಾಜರು ಮರಾಮತ್ ಶಾಖಾ ಸಚಿವರಾಗುತ್ತಾರೆ.

ಸರ್ಕಾರಿ ಆಜ್ಞೆ

ಬೆಂಗಳೂರು ೩೦

ಮಹಾರಾಜಾ ಕಾಲೇಜಿನ ಇತಿಹಾಸ ಲೆಕ್ಚರರ್ ಆದ ಡಾ|| ಎಂ. ಶೇಷಾದ್ರಿಯವರನ್ನು ಭಾರತೀಯ ಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರಾಗಿ ನೇಮಿಸಲಾಗಿದೆ.

ಮಾರಾಟತೆರಿಗೆ ಅಧಿಕಾರಿಗಳಾದ ಶ್ರೀ ಬಿ. ಮುನಿವೆಂಕಟಯ್ಯನವರನ್ನು ಅಮಲ್ದಾರ ದರ್ಜೆಯಿಂದ ಅಸಿಸ್ಟೆಂಟ್ ಕಮೀಷನರ ದರ್ಜೆಗೆ ಬಡ್ತಿ ಕೊಡಲಾಗಿದೆ.

ಕಾಫಿ ಕೈಗಾರಿಕೆ

ಕಾಫಿ ಕೈಗಾರಿಕೆಗೆ ಸಂಬಂಧಪಟ್ಟ ವಿಷಯಗಳನ್ನು ಕೇಂದ್ರ ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಕಾರ್ಯದರ್ಶಿ ಶ್ರೀ ಹೆಚ್. ವಿ. ಆರ್. ಐಯ್ಯಂಗಾರ್‌ರವರು ಕಾಫಿ ಬೋರ್ಡಿನವರೊಡನೆ ಮಾತುಕತೆ ನಡೆಸುತ್ತಲಿರುವುದಾಗಿ ಗೊತ್ತಾಗಿದೆ.

ಮಾರಾಟ ತೆರಿಗೆ ಸಮಿತಿ ವರದಿ

ಬೆಂಗಳೂರು ೩೦

ಮಾರಾಟ ತೆರಿಗೆ ವಿಮರ್ಶೆಗಾಗಿ ನೇಮಿತವಾಗಿರುವ ಸಮಿತಿಯು ತನ್ನ ವರದಿಯನ್ನು ಮುಂದಿನ ತಿಂಗಳು ಸರ್ಕಾರಕ್ಕೆ ಒಪ್ಪಿಸುವುದೆಂದು ತಿಳಿಯಬರುತ್ತದೆ.

ನೆಹರೂ--ಮಹಮದ್ ಅಲಿ ಪತ್ರವ್ಯವಹಾರ

ಭಾರತ-ಪಾಕೀಸ್ತಾನಗಳ ಪ್ರಧಾನಿಗಳ ನಡುವೆ ಪುನಃ ಪತ್ರ ವ್ಯವಹಾರವು ನಡೆಯುತ್ತಲಿರುವುದಾಗಿ ತಿಳಿಯಬರುತ್ತದೆ. ಉಭಯ ರಾಷ್ಟ್ರಗಳ ನಡುವೆಯಿರುವ ನಾನಾ ಸಮಸ್ಯೆಗಳ ಪರಿಹಾರ ಬಗ್ಗೆ ಈ ಪತ್ರ ವ್ಯವಹಾರಗಳೆಂದು ಹೇಳಲಾಗುತ್ತಿದೆ.

ನಾಳೆ ಬ್ಯಾಂಕುಗಳಿಗೆ ರಜಾ

ಬಳ್ಳಾರಿಯು ಮೈಸೂರಿಗೆ ಸೇರುವ ಸಮಾರಂಭ ಆಚರಣೆಗಾಗಿ ನಾಳೆಯದಿನ ಬ್ಯಾಂಕುಗಳಿಗೂ ಸಹಾ ಮೈಸೂರು ಸರ್ಕಾರವು ರಜಾದಿನವನ್ನಾಗಿ ಘೋಷಿಸಿದೆ.

ಕಾಲರಾ ಹಾವಳಿ

ಬೀಹಾರಿನಲ್ಲಿ ಕಳೆದ ಒಂದು ವಾರದಲ್ಲಿ ಕಾಲರಾ ಹಾವಳಿಯಿಂದ ೨೫೭ ಜನರು ಸತ್ತಿರುವುದಾಗಿ ವರದಿಯಾಗಿದೆ.

ಬಳ್ಳಾರಿಯ ಜಿಲ್ಲಾಧಿಕಾರಿಗಳೇ ಜಿಲ್ಲಾ ಮ್ಯಾಜಿಸ್ಟ್ರೇಟರು

ಬೆಂಗಳೂರು ೩೦

ನ್ಯಾಯಾಂಗ ಮತ್ತು ಆಡಳಿತಾಂಗ ಪ್ರತ್ಯೇಕ ಕತೆಯಿಂದ ಸೀತಿಯಿಂದ ಬಳ್ಳಾರಿಯಲ್ಲಿ ಒಬ್ಬ ಜಿಲ್ಲಾ ಮ್ಯಾಜಿಸ್ಟ್ರೇಟರ್ ಮತ್ತು ಕಲೆಕ್ಟರ್ ಇಬ್ಬರ ಹುದ್ದೆಯು ಇದೆ. ಬಳ್ಳಾರಿಯು ಮೈಸೂರಿಗೆ ಸೇರುವುದರಿಂದ ಇತರ ಜಿಲ್ಲೆಗಳಲ್ಲಿರುವಂತೆಯೇ ಈಗ ಅಲ್ಲಿ ನೇಮಕವಾಗುವ ಜಿಲ್ಲಾಧಿಕಾರಿಗಳೇ ಜಿಲ್ಲಾ ಮ್ಯಾಜಿಸ್ಟ್ರೇಟರಾಗಿರುತ್ತಾರೆ.

ಮೈಸೂರು ಸಂಸ್ಥಾನದಲ್ಲಿಯೂ ನ್ಯಾಯಾಂಗ ಮತ್ತು ಆಡಳಿತಾಂಗ ಪ್ರತ್ಯೇಕತೆಯ ಯೋಜನೆ ತಯಾರಾಗಿ ಸರ್ಕಾರದ ಪರಿಶೀಲನೆಯಲ್ಲಿದೆ ಯೋಜನೆಯು ಪೂರ್ಣವಾದೊಡನೆಯೇ ಎಲ್ಲಾ ಜಿಲ್ಲೆಗಳಿಗೂ ಇವನ್ನು ಅನ್ವಯಿಸಲಾಗುತ್ತದೆ ಎಂದು ಸರ್ಕಾರಿ ಪ್ರಕಟಣೆ ತಿಳಿಸುತ್ತದೆ.

ಪುರಸಭಾ ಚುನಾವಣೆಗೆ ಉಮೇದುವಾರಿಕೆ

ಮೈಸೂರು ೩೦

ಇದೇ ಡಿಸೆಂಬರ್ ತಿಂಗಳಿನಲ್ಲಿ ನಡೆಯಲಿರುವ ಪೌರಸಭೆ ಚುನಾವಣೆಗೆ ಉಮೇದುವಾರರಾಗಿ ನಿಲ್ಲಲು ಅಭಿಪ್ರಾಯವುಳ್ಳ ರಾಜಕೀಯ ಪಕ್ಷಗಳ ಪ್ರಮುಖರೂ, ಸ್ವತಂತ್ರ ಅಭಿಪ್ರಾಯವುಳ್ಳವರೂ ಮುಂದಿನ ತಿಂಗಳು ೪ ನೇ ತಾರೀಖು ಭಾನುವಾರ ಮಧ್ಯಾಹ್ನ ೪ ಘಂಟೆಗೆ ಮೈಸೂರು ಹಳ್ಳದಕೇರಿ, ಡೋರ್ ನಂ. ೨೮೯೨-೯೩ ನೇ ಆನಂದಾ ಪವರ್‌ಪ್ರೆಸ್ ಆವರಣದಲ್ಲಿ ನಡೆಯಲಿರುವ ಸಂಯುಕ್ತ ಪ್ರತಿಪಕ್ಷ ಸಂಘದ ಸಭೆಗೆ ದಯಮಾಡಿಸಿ ತಮ್ಮ ಸಲಹೆ ಸಹಕಾರಗಳನ್ನು ನೀಡಿ ವಿಚಾರ ವಿಮರ್ಶೆ ಮಾಡಿ ಒಂದು ನಿರ್ದಿಷ್ಟ ಕಾರ್ಯಕ್ರಮ ಕೈಗೊಳ್ಳಲು ಬರಬೇಕಾಗಿ ಸಂಚಾಲಕರಾದ ಶ್ರೀಗಳಾದ ಎ. ವೆಂಕಟೇಶಯ್ಯ, ಎಂ. ಎಸ್. ಚಂದ್ರಶೇಖರ ಜೋಯಿಸ್, ಬಿ. ಲಕ್ಷ್ಮೀನಾರಾಯಣಪ್ಪ ಪ್ರಾರ್ಥಿಸುತ್ತಾರೆ.

ವಿಮಾನ ಅಂಚೆ ಸೌಕರ್ಯ

ನಾಳೆಯಿಂದ ಮಂಗಳೂರಿಗೆ ಅಂಚೆಯನ್ನು ವಿಮಾನ ಮೂಲಕ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತದೆ. ಬೆಂಗಳೂರಿನಲ್ಲಿ ಬೆಳಗ್ಗೆ ಹಾಕಿದ ಅಂಚೆಯು ಅದೇ ಸಂಜೆ ಮಂಗಳೂರನ್ನು ಸೇರುತ್ತದೆ.

ಅಫೀಮು ಸೇದುವವರು ರಿಜಿಸ್ಟರ್ ಆಗಬೇಕು

ಅಫೀಮು ಸೇದುವವರು ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕೆಂದು ತಿರುವಾಂಕೂರ್-ಕೊಚ್ಚಿ ಸರ್ಕಾರವು ಆಜ್ಞೆ ಮಾಡಿದೆ.

೧೫೦ ವರ್ಷಗಳಿಂದ ಅಗಲಿದ ಬಳ್ಳಾರಿ ಪುನಃ ಮೈಸೂರಿಗೆ

೧೫೪ ವರ್ಷಗಳ ಹಿಂದೆ ಚರಿತ್ರಾತ್ಮಕ ಕಾರಣಗಳಿಂದ ಮೈಸೂರು ತಾಯಿಯನ್ನು ಅಗಲಿದ ಬಳ್ಳಾರಿಯ ೭ ತಾಲ್ಲೂಕಿನ ಮಕ್ಕಳು ಪುನಃ ಈಗ ತಮ್ಮ ತಾಯಿನಾಡನ್ನು ಆದರದಿಂದ ಅಪ್ಪಿಕೊಳ್ಳುವ ಆನಂದದ ದಿನ ಒದಗಿದೆ.

ಇಂತಹ ಆನಂದದ ಸುಯೋಗವು ನಾಳೆಯದಿನ ನಡೆಯಲಿರುವುದರಿಂದ ಬಳ್ಳಾರಿ ಜಿಲ್ಲೆಯ ಸಂಕ್ಷಿಪ್ತ ಚರಿತ್ರೆಯನ್ನು ನಮ್ಮ ವಾಚಕರಿಗೆ ಪರಿಚಯ ಮಾಡಿಕೊಡಲು ಬಯಸುತ್ತೇವೆ—[ಸಂ]

ನೂರಾರುವರ್ಷಗಳಿಂದ ಪ್ರಸಿದ್ಧ ಕನ್ನಡ ವಿಜಯನಗರ ಸಾಮ್ರಾಜ್ಯಕ್ಕೆ ಬಳ್ಳಾರಿಯ ಹೆಚ್ಚು ಭಾಗ ಸೇರಿತ್ತು. ಚರಿತ್ರಾರ್ಹವಾದ ಹಂಪೆಯು ಅದಕ್ಕೆ ರಾಜಧಾನಿಯಾಗಿತ್ತು. ಅನೇಕ ವರ್ಷಗಳು ಬಳ್ಳಾರಿ ಜಿಲ್ಲೆಯು ಪಾಳೇಗಾರರ ಆಡಳಿತದಲ್ಲಿದ್ದು ನಂತರ ಟಿಪ್ಪುಸುಲ್ತಾನನು ಅದನ್ನು ತನ್ನ ಆಡಳಿತಕ್ಕೆ ವಶಪಡಿಸಿಕೊಂಡನು. ೧೭೯೯ರಲ್ಲಿ ಮೈಸೂರು ಯುದ್ಧದಲ್ಲಿ ಅದು ಮದರಾಸ್ ಪ್ರಾಂತ್ಯಕ್ಕೆ ಸೇರಿಹೋಯಿತು.

ಈಗ ಆಂಧ್ರ ಪ್ರಾಂತ್ಯ ರಚನೆಯ ವಿಷಯವು ಬಂದು ಬಹು ಮಂದಿ ಕನ್ನಡಿಗರಿರುವ ಬಳ್ಳಾರಿ ಜಿಲ್ಲೆಯ ಏಳು ತಾಲ್ಲೂಕುಗಳಾದ ಬಳ್ಳಾರಿ, ಸಿರುಗುಪ್ಪೆ, ಹರಪನಹಳ್ಳಿ, ಹೊಸಪೇಟೆ, ಹಡಗಲಿ, ಕೂಡಲಿಗಿ ಮತ್ತು ಸಂಡೂರು ಮೈಸೂರಿಗೆ ಸೇರಬೇಕೆಂದು ಕೇಂದ್ರ ಸರ್ಕಾರ ನಿರ್ಧರಿಸಿತು.

ಮೈಸೂರಿಗೆ ಸೇರುವ ಏಳು ತಾಲ್ಲೂಕುಗಳ ಒಟ್ಟು ವಿಸ್ತೀರ್ಣ ೩೮೨೧ ಚದರ ಮೈಲಿಗಳು. ಅದರಲ್ಲಿ ಒಟ್ಟು ೫೪೧ ಹಳ್ಳಿಗಳಿವೆ. ಮತ್ತು ಜನಸಂಖ್ಯೆ ಒಟ್ಟು ೭,೭೩,೭೧೨. ಅಂದರೆ ಈಗ ಅವುಗಳು ಸೇರುವುದರಿಂದ ಮೈಸೂರು ಸಂಸ್ಥಾನದ ವಿಸ್ತೀರ್ಣವು ೩೩,೩೧೦ ಚದರ ಮೈಲಿಗಳಾಗಿ, ಜನಸಂಖ್ಯೆ ೯೮,೪೮,೭೮೪ ಆಗುವುದು.

ಸಿರುಗುಪ್ಪೆ ೪೦೩ ಚದರಮೈಲಿ, ೭೪,೯೭೭ ಜನ. ಹೊಸಪೇಟೆ ೩೮೪ ಚದುರ ಮೈಲಿ, ೧,೩೩,೨೩೮ ಜನ. ಸಂಡೂರು ೪೮೧ ಚ. ಮೈಲಿ, ೫೨,೫೭೩ ಜನಸಂಖ್ಯೆ. ಹಡಗಲಿ ೫೪೭ ಚ. ಮೈಲಿ, ೧೦೧,೯೭೧ ಜನ. ಹರಪನಹಳ್ಳಿ ೬೧೧ ಚ. ಮೈಲಿ, ೧,೧೭,೬೩೩ ಜನ. ಕೂಡ್ಲಿಗಿ ೭೦೩ ಚ. ಮೈಲಿ, ೧,೦೮,೪೬೨ ಜನ. ಬಳ್ಳಾರಿ ೬೫೨ ಚ. ಮೈಲಿ, ೧,೮೪,೯೨೯ ಜನಸಂಖ್ಯೆ.

ಈ ಪ್ರದೇಶದಲ್ಲಿ ಚಿನ್ನ, ಮ್ಯಾಂಗ್ನೀಸ್, ಕಬ್ಬಿಣ ಮುಂತಾದ ಖನಿಜಗಳು ದೊರೆಯುತ್ತವೆ, ತುಂಗಭದ್ರಾ ಜಲಾಶಯವು ಈ ಭಾಗದಲ್ಲಿರುವುದರಿಂದ ಸುಮಾರು ಎರಡೂವರೆ ಲಕ್ಷ ಎಕರೆ ಜಮೀನು ಸಾಗುವಳಿಗೆ ಬರುವುದು.

ಈ ಏಳು ತಾಲ್ಲೂಕುಗಳ ಉತ್ಪತ್ತಿಯು ೬೬ ಲಕ್ಷ ರೂ. ಇಮ್ಮ, ಖರ್ಚು ೮೬ ಲಕ್ಷ ರೂ. ಗಳಿವೆ. ಅಂದರೆ ಸದ್ಯಕ್ಕೆ ಮೈಸೂರಿಗೆ ವರ್ಷಕ್ಕೆ ೨೦ ಲಕ್ಷ ರೂ. ಖರ್ಚಾಗುವುದು. ಆದರೆ ತುಂಗಭದ್ರಾ ಜಲಾಶಯವು ಪೂರ್ತಿಯಾದನಂತರ, ಆ ಪ್ರದೇಶವು ಫಲವತ್ತಾಗಿ ಆದಾಯ ಬರುವುದು.

ಬಳ್ಳಾರಿ ಸೇರ್ಪಡೆಯ ಸಮಾರಂಭ

ಮೈಸೂರು ೩೦

ಕರ್ನಾಟಕ ಸಂಘ ಮತ್ತು ಬಳ್ಳಾರಿ ವಿದ್ಯಾರ್ಥಿ ಸಂಘಗಳ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಡಾ॥ ಎಂ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಸೇರ್ಪಡೆ ದಿನಾಚರಣೆಯನ್ನು ಆಚರಿಸಲಾಗುತ್ತದೆ.

ಕಾಂಗ್ರೆಸ್ ಪಕ್ಷ ಸಭೆ

ಆಂಧ್ರ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯು ನಿನ್ನೆಯ ದಿನ ಕರ್ನೂಲಿನಲ್ಲಿ ನಡೆಯಿತು. ಈ ಸಭೆಯಲ್ಲಿ ಪಕ್ಷದ ಸಹ ಸದಸ್ಯರಾದ ಶ್ರೀ ಟಿ. ಪ್ರಕಾಶಂರವರು ಭಾಗವಹಿಸಿದ್ದರು. ಅವರಿಗೆ ಸದಸ್ಯರೆಲ್ಲರೂ ಸುಸ್ವಾಗತವನ್ನು ಕೋರಿದರು.

ಹೊಸ ಮಂತ್ರಿ ಮಂಡಲ ಮುಂತಾದ ಹಲವಾರು ಪ್ರಮುಖ ವಿಷಯಗಳ ಬಗ್ಗೆ ಚರ್ಚೆ ನಡೆಯಿತೆಂದು ತಿಳಿಯಬರುತ್ತದೆ.

ಜನರ ಮೂಢತ್ವ

ಅಕೋಲಾ ಎಂಬಲ್ಲಿ ಕಾಲರಾ ರೋಗ ತಗುಲಿದ್ದ ಮಹಿಳೆಯೊಬ್ಬಳು ಆ ರೋಗವನ್ನು ಊರಿನಲ್ಲೆಲ್ಲಾ ಹರಡುವಳೆಂದು ಮೂಢಭ್ರಾಂತಿಯಿಂದ ಆ ಗ್ರಾಮದ ಜನರು ಅವಳನ್ನು ಹೊಡೆದು ಕೊಂದುಹಾಕಿದರೆಂದು ಹೇಳಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೯—೯—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೯—೨	೨೦—೧೨
ಎಳ್ಳು	೬೮—೨	೮೩—
ಹುರುಳಿ	೪೫—೮	—
ಹುಣಸೇಹಣ್ಣು	೭—	೯—೪
ತೆಂಗಿನಕಾಯಿ	೧೭೩	೨೩೮

ಆಂಧ್ರ ಮಂತ್ರಿಮಂಡಲದ ಪ್ರಕಟಣೆ ಇಂದು

ಸಂಜೀವರೆಡ್ಡಿಯವರೇ ಶಾಸನ ಸಭಾ ನಾಯಕರು

ಆಂಧ್ರಪ್ರಾಂತ್ಯದಲ್ಲಿ ನೂತನ ಸರ್ಕಾರ ರಚನೆ ವಿಷಯದಲ್ಲಿ ಈ ರಾತ್ರಿ ಅಂತ್ಯತೀರ್ಮಾನವಾಗುವುದೆಂದು ತಿಳಿಯಬರುತ್ತದೆ. ನಾಳೆಯದಿನ ಬೆಳಗ್ಗೆ ಶ್ರೀ ಚಂದೂಲಾಲ್ ತ್ರಿವೇದಿಯವರು ಗೌರ್ನರ್ ಆಗಿ ಅಧಿಕಾರ ಸ್ವೀಕಾರಮಾಡಿದನಂತರ ಅವರು ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಸಂಜೀವರೆಡ್ಡಿಯವರನ್ನು ಮಂತ್ರಿಮಂಡಲ ರಚಿಸುವಂತೆ ಆಹ್ವಾನಿಸಿ, ಅವರ ಸಲಹೆಮೇರೆ ಕಾಂಗ್ರೆಸ್ಸಿಗೆ ಸಹ ಸದಸ್ಯರಾಗಿ ಸೇರಿರುವ ಶ್ರೀ ಟಿ. ಪ್ರಕಾಶಂರವರನ್ನು ಮಂತ್ರಿಮಂಡಲ ರಚಿಸಲು ಅನಂತರ ಆಹ್ವಾನವೀಯುವರೆಂದು ಹೇಳಲಾಗಿದೆ ಕೂಡಲೇ ಶ್ರೀ ಟಿ. ಪ್ರಕಾಶಂರವರು ತಮ್ಮ ಮಂತ್ರಿಮಂಡಲದ ಪಟ್ಟಿಯನ್ನು ಗೌರ್ನರ್‌ರಿಗೆ ಒಪ್ಪಿಸಿ ಎಲ್ಲಾ ಸಚಿವರು ಪ್ರಮಾಣ ಸ್ವೀಕರಿಸುವರೆಂದು ತಿಳಿಯಬರುತ್ತದೆ.

ಶ್ರೀ ಸಂಜೀವ ರೆಡ್ಡಿಯವರು ಶಾಸನ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿಯೇ ಇದ್ದುಕೊಂಡು ಮಂತ್ರಿ ಮಂಡಲದಲ್ಲಿ ಸಚಿವರಾಗಿರುವರು. ಪಕ್ಷದ ನಾಯಕರೇ ಮಂತ್ರಿ ಮಂಡಲವನ್ನು ರಚಿಸಬೇಕೆಂಬ ಪದ್ಧತಿಯು ಈಗ ಇಲ್ಲಿ ಕಡ್ಡಾಯವಾಗಿ ಒತ್ತಾಯ ಮಾಡಲಾಗುವುದಿಲ್ಲ.

ಶ್ರೀ ಪ್ರಕಾಶಂರವರು ತಮ್ಮ ಮಂತ್ರಿ ಮಂಡಲದಲ್ಲಿ ಕಾಂಗ್ರೆಸ್, ಪ್ರಜಾಸೋಷಲಿಸ್ಟ್ ಮತ್ತು ಕೃಷಕ್‌ಲೋಕ ಪಕ್ಷದ ಸದಸ್ಯರನ್ನು ಸೇರಿಸಿಕೊಂಡು ಸಮ್ಮಿಶ್ರ ಸರ್ಕಾರವನ್ನು ರಚಿಸಿಕೊಳ್ಳುವರು.

೧೫೦೦ ಉಪಾಧ್ಯಾಯರ ನೇಮಕ

ಆಯೋಜನಾ ಸಮಿತಿಯ ಸಲಹೆಯಂತೆ ಹೈದರಾಬಾದಿನಲ್ಲಿ ನಿರುದ್ಯೋಗ ಸಮಸ್ಯೆ ಪರಿಹಾರಕ್ಕಾಗಿ ೧೫೦೦ ಉಪಾಧ್ಯಾಯರುಗಳನ್ನು ಅಲ್ಲಿಯ ಸರ್ಕಾರವು ನೇಮಿಸಿಕೊಳ್ಳಲು ನಿರ್ಧರಿಸಿದೆ.

ಪ್ರಾಂತ್ಯದಲ್ಲಿ ವಿದ್ಯಾಭ್ಯಾಸ ಪ್ರಗತಿ ಕಾರ್ಯವನ್ನು ಕೈಗೂಡಿಸಲು ಸರ್ಕಾರವು ಈಗಾಗಲೇ ೫೫೦೦ ಉಪಾಧ್ಯಾಯರನ್ನು ನೇಮಿಸಿಕೊಳ್ಳಲು ಸರ್ಕಾರವು ತೀರ್ಮಾನಿಸಿತ್ತು. ಈಗ ಇದರ ಜೊತೆಗೆ ಮತ್ತೆ ೧೫೦೦ ಜನರನ್ನು ನೇಮಿಸಿಕೊಳ್ಳಲಾಗುತ್ತದೆ.

ಐ. ಎ. ಎಸ್.ಗೆ ಮೈಸೂರು ಅಧಿಕಾರಿಗಳು

ಬೆಂಗಳೂರು ೩೦

ಜಿಲ್ಲಾಧಿಕಾರಿಗಳ ದರ್ಜೆಯಲ್ಲಿರುವ ಶ್ರೀಗಳಾದ ಕೆ. ಮಹಮದ್‌ಅಹಮದ್, ಆರ್. ಜೆ. ರೇಗೋ ಮತ್ತು ಎಲ್. ಮುನಿಸ್ವಾಮಿಯವರನ್ನು ಐ. ಎ. ಎಸ್. ಅಧಿಕಾರಿ ವರ್ಗಕ್ಕೆ ಸೇರಿಸಲಾಗಿದೆ ಎಂದು ತಿಳಿಯಬರುತ್ತದೆ.

ಕರ್ನೂಲಿನಲ್ಲಿ ವಿಮಾನ ನಿಲ್ದಾಣ

ಆಂಧ್ರ ಸರ್ಕಾರವು ಕರ್ನೂಲಿನಲ್ಲಿ ವಿಮಾನ ನಿಲ್ದಾಣವನ್ನು ಏರ್ಪಡಿಸಬೇಕೆಂದು ತೀರ್ಮಾನ ಮಾಡಿದರೆ ಕೇಂದ್ರ ಸರ್ಕಾರವು ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡುವ ವಿಚಾರದಲ್ಲಿ ಪರಿಶೀಲಿಸುವುದಾಗಿ ಕೇಂದ್ರ ಸರ್ಕಾರದ ವಿಮಾನಯಾನ ಡೈರೆಕ್ಟರ್ ಜನರಲ್‌ರವರು ಹೇಳಿದ್ದಾರೆ.

ಭೂದಾನ ಕಾರ್ಯಕ್ಕೆ ೫೦೦ ಸ್ವಯಂಸೇವಕರು

ಬೀಹಾರಿನಲ್ಲಿ ಭೂದಾನ ಕಾರ್ಯವನ್ನು ಯಶಸ್ವಿಯಾಗಿ ಮಾಡಲು ಅಲ್ಲಿಯ ಸರ್ವಸೇವಕ ಸಂಘವು ಇನ್ನೂ ೫೦೦ ಜನ ಸ್ವಯಂಸೇವಕರನ್ನು ಆ ಕಾರ್ಯಕ್ಕಾಗಿ ಪ್ರಾಂತ್ಯದಾದ್ಯಂತ ಕಳುಹಿಸಲಿದೆ.

ಅಕಾಲಿ ದಳಕ್ಕೆ ೯೦೦ ಜನರ ರಾಜೀನಾಮೆ

ಅಕಾಲಿ ದಳಕ್ಕೆ ಸೇರಿದ್ದ ೯೦೦ ಜನ ಸದಸ್ಯರು ಶ್ರೀ ಪೇರ್ ಬಲವಂತಸಿಂಗ್‌ರವರ ನಾಯಕತ್ವದಲ್ಲಿ ಡೆಹಲಿಯಲ್ಲಿ ಆ ಪಕ್ಷಕ್ಕೆ ರಾಜೀನಾಮೆಯಿತ್ತಿರುವುದಾಗಿ ತಿಳಿಯಬರುತ್ತದೆ. ಪಕ್ಷದ ನಾಯಕರಾದ ಶ್ರೀ ತಾರಾಸಿಂಗ್‌ರವರೊಡನೆ ಇವರಿಗೆ ಭಿನ್ನಾಭಿಪ್ರಾಯವುಂಟಾದ ದರ ಪರಿಣಾಮವಾಗಿ ರಾಜಿನಾಮೆ ಕೊಡಲಾಗಿದೆ.

ಪ್ರಭಾ ಅಮೋಘಪ್ರಾರಂಭ........2—10—53 ರಿಂದ ದಿನ 3 ಆಟಗಳು
ಚಂದೂಸ್ಸುಡಿಯೊರವರ ಇಂಪಾದ ಸಂಗೀತದಿಂದ ಕೂಡಿದ ಅತ್ಯುತ್ತಮ ಹಿಂದಿ ಚಿತ್ರ.

-- ನಯನಾ --

ಪಾತ್ರ:....ಅಭಿಭಟ್ಟಾಚಾರ್ಯ, ಗೀತಾಬಾಲಿ, ಮಂಜೂ, ಲೀಲಾಮಿಶ್ರ ಮತ್ತು ರಮೇಶ್‌ಸಿಂಹ.
ಸಂಗೀತ:—ಮನ್ನಾ ಡೆ. ★ ದಿಗ್ದರ್ಶನ:—ರವೀಂದ್ರ.

ಬೆಳಗಿನ ಪ್ರದರ್ಶನ 1-10-53 ರಿಂದ 4 ದಿನಗಳು.
ದೇವಾನಂದ್, ಗೀತಾಬಾಲಿ ನಟಿಸಿರುವ ನವಕೇತನರವರ "ಬಾಜಿ."

ರಣಜಿತ್
1-10-53 ರಿಂದ ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು.
ಮೀನಾಕುಮಾರಿ, ಈಶ್ವರಲಾಲ್, ದುರ್ಗಾ ಕೋಟೆ, ನಿರೂಪರಾಯ್ ನಟಿಸಿರುವ
-- ನೌಲಖಾಹಾರ್ --
[ಹಿಂದಿ]

ಪ್ರಕಾಶಕರು ಮತ್ತು ಮುದ್ರಕರು.
...ಸ್ವಾಮಿ...
...ಪ್ರೆಸ್, ...

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೩೭

೧-೧೦-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ನೂತನ ಆಂಧ್ರ ಪ್ರಾಂತ್ಯ ಉದ್ಘಾಟನೆ

ಪ್ರಕಾಶಂ ಮಂತ್ರಿಮಂಡಲದ ಅಧಿಕಾರ ಸ್ವೀಕಾರ

ಭಾರತದಲ್ಲಿ ೨೮ ನೇ ಪ್ರಾಂತ್ಯವಾಗಿ ನೂತನ ಆಂಧ್ರ ಪ್ರಾಂತ್ಯವನ್ನು ಈ ದಿನ ಬೆಳಗ್ಗೆ ೯ ಗಂಟೆ ವೇಳೆಯಲ್ಲಿ ಕರ್ನೂಲಿನಲ್ಲಿ ಪ್ರಧಾನಿ ನೆಹರೂರವರು ವಿಧಿವತ್ತಾಗಿ ಉದ್ಘಾಟಿಸಿದರು. ಭಾರತದ ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್, ಗೃಹ ಸಚಿವ ಡಾ॥ ಕಟ್ಜು, ಮೈಸೂರು, ಮದರಾಸ್ ಮತ್ತು ಹೈದರಾಬಾದಿನ ಮುಖ್ಯಮಂತ್ರಿಗಳೇ ಆದಿಯಾಗಿ ಸಾವಿರಾರು ಜನರು ಈ ಸಮಾರಂಭದಲ್ಲಿ ಭಾಗವಹಿಸಿದ್ದರು ಆಂಧ್ರ ರಾಜ್ಯದ ನಾನಾ ಮೂಲೆಗಳಿಂದ ಸಹಸ್ರಾರು ಜನರು ಕರ್ನೂಲ್ ನಗರವನ್ನು ಸೇರಿ ಅಲ್ಲಿಯ ಎಲ್ಲಾ ಉತ್ಸವಗಳಲ್ಲಿ ಭಾಗವಹಿಸಿದ್ದರು.

ಇದಕ್ಕೆ ಪೂರ್ವಭಾವಿ ಈ ಬೆಳಗ್ಗೆ ೭ ಗಂಟೆಗೆ ನೂತನ ಗೌರ್ನರ್ ಶ್ರೀ ಚಂದೂಲಾಲ್ ತ್ರಿವೇದಿಯವರು ಮದ್ರಾಸಿನ ಶ್ರೇಷ್ಠ ನ್ಯಾಯಾಧೀಶರ ಸಮ್ಮುಖದಲ್ಲಿ ಪ್ರಮಾಣವಚನ ಪೂರ್ವಕ ಅಧಿಕಾರವನ್ನು ವಹಿಸಿಕೊಂಡರು ಅದಾದನಂತರ ನೂತನ ಮಂತ್ರಿ ಸಂಪುಟದ ೫ ಜನ ಸಚಿವರು ಮುಖ್ಯಮಂತ್ರಿಯಾಗಿ ಶ್ರೀ ಟಿ ಪ್ರಕಾಶಂ ಉಪ ಮುಖ್ಯಮಂತ್ರಿಯಾಗಿ ಶ್ರೀ ಎನ್. ಸಂಜೀವರೆಡ್ಡಿ ಮತ್ತು ಸಚಿವರುಗಳಾಗಿ ಶ್ರೀಗಳಾದ ಕೋಟರೆಡ್ಡಿ, ಟಿ. ವಿಶ್ವನಾಥಂ ಮತ್ತು ಡಿ. ಸಂಜೀವಯ್ಯನವರು ಅಧಿಕಾರ ಸ್ವೀಕರಿಸಿದರು.

ನೂತನ ಆಂಧ್ರ ರಾಜ್ಯಕ್ಕೆ ಶುಭವನ್ನು ಕೋರಿ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ್ ಪ್ರಧಾನಿ ನೆಹರೂ, ಡಾ॥ ಪಟ್ಟಾಭಿ ಸೀತಾರಾಮಯ್ಯ ಮತ್ತು ಇನ್ನು ಅನೇಕ ನಾಯಕರು ಸಂದೇಶಗಳನ್ನು ಕಳುಹಿಸಿದ್ದರು. ಈ ಮಹೋತ್ಸವವು ಕರ್ನೂಲಿನಲ್ಲಲ್ಲದೆ ಪ್ರಾಂತ್ಯದ ಎಲ್ಲಾ ಜಿಲ್ಲಾ ಕೇಂದ್ರಗಳನ್ನು ಧ್ವಜವಂದನೆ, ಮೆರವಣಿಗೆ ಮುಂತಾದ ಕಾರ್ಯಕ್ರಮಗಳಿಂದ ನಡೆದುವು.

ದೆಹಲಿಯಲ್ಲಿಯೂ ಈ ಸಂಬಂಧದಲ್ಲಿ ಈ ಸಂಜೆ ಒಂದು ಸಮಾರಂಭವು ನಡೆಯಲಿದೆ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದ್‌ರವರು ಅದರಲ್ಲಿ ಭಾಗವಹಿಸುವರು. ಬೊಂಬಾಯಿನಲ್ಲಿರುವ ಸುಮಾರು ೩ ಲಕ್ಷ ಆಂಧ್ರರು ಅಲ್ಲಿಯೂ ಅನೇಕ ಕಾರ್ಯಕ್ರಮಗಳನ್ನು ಸಂತೋಷೋತ್ಸವಗಳನ್ನು ನಡೆಸಿದರು.

ಮೈಸೂರು ನಗರದಲ್ಲಿರುವ ಆಂಧ್ರ ವಿದ್ಯಾರ್ಥಿಗಳು ಮತ್ತು ಇತರರು ಈ ಸಂತೋಷ ಸಮಾರಂಭವನ್ನು ಆಚರಿಸಿದರು.

ಬಳ್ಳಾರಿಯ ವಿದ್ಯಾಧಿಕಾರಿ

ಬೆಂಗಳೂರು ೧

ಕೋಲಾರದಲ್ಲಿ ವಿದ್ಯಾಧಿಕಾರಿಗಳಾದ ಶ್ರೀ ಬಿ. ಮರಿರಾಜ್‌ರನ್ನು ಬಳ್ಳಾರಿಯ ಜಿಲ್ಲಾ ವಿದ್ಯಾಧಿಕಾರಿಗಳಾಗಿ ನೇಮಿಸಲಾಗಿದೆ.

ಸಿಮೆಂಟಿನ ಬೆಲೆ

ಬೆಂಗಳೂರು ೧

ಸಿಮೆಂಟಿನ ಬೆಲೆಯನ್ನು ಟನ್ ಒಂದಕ್ಕೆ ೭೧ರೂ, ಅದರ ಪ್ಯಾಕಿಂಗಿಗೆ ೧೧-೯-೦ ರೂ ಮೀರದಂತೆ, ಸರ್ಕಾರದವರು ಬೆಲೆಯನ್ನು ನಿರ್ಧರಿಸಿದ್ದಾರೆ. ಈ ಬೆಲೆಯು ಇಂದಿನಿಂದ ಡಿಸೆಂಬರ್ ಅಂತ್ಯದವರೆಗೂ ಜಾರಿಯಲ್ಲಿರುತ್ತದೆ.

ತುಂಗಭದ್ರಾ ಮಂಡಲಿ ನೇಮಕ

ತುಂಗಭದ್ರಾ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಮತ್ತು ಅವುಗಳ ಉಸ್ತುವಾರಿ, ಅಲ್ಲಿಯ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿ ಮತ್ತು ನೀರಿನ ಸರಬರಾಜು ಮುಂತಾದ ಕೆಲಸಗಳನ್ನೆಲ್ಲಾ ನೋಡಿಕೊಳ್ಳಲು ರಾಷ್ಟ್ರಾಧ್ಯಕ್ಷರು ಒಂದು ಮಂಡಲಿಯನ್ನು ನೇಮಿಸಿದ್ದಾರೆ. ಈ ಮಂಡಲಿಯಲ್ಲಿ ಮೈಸೂರು ಮತ್ತು ಆಂಧ್ರದ ಪ್ರತಿನಿಧಿಗಳು ಸೇರಿ ಒಟ್ಟು ೬ ಸದಸ್ಯರಿರುತ್ತಾರೆ.

ಈ ಯೋಜನೆಯನ್ನು ಕಾರ್ಯ ರೂಪಕ್ಕೆ ತರಲು ಮೈಸೂರು ಮತ್ತು ಆಂಧ್ರ ಸರ್ಕಾರಗಳು ಒಂದು ತೀರ್ಮಾನಕ್ಕೆ ಬಂದು ಹಣವನ್ನು ಒದಗಿಸಕೊಳ್ಳಬೇಕಾಗಿದೆ. ಹಾಗೆ ಸರಿಯಾದ ತೀರ್ಮಾನಕ್ಕೆ ಬಾರದಿದ್ದರೆ ರಾಷ್ಟ್ರಾಧ್ಯಕ್ಷರೇ ಈ ಬಗ್ಗೆ ಆಜ್ಞೆ ಕೊಡುವರು.

ಚೈನಾಕ್ಕೆ ಭಾರತದ ಸಂದೇಶ

ಚೈನಾವು ಈ ದಿನ ಆಚರಿಸಲಿರುವ ನಾಲ್ಕನೇ ವಾರ್ಷಿಕೋತ್ಸವದ ಸಂಬಂಧದಲ್ಲಿ ಭಾರತ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದ್ ಮತ್ತು ಪ್ರಧಾನಿ ನೆಹರೂರವರು ಶುಭ ಸಂದೇಶಗಳನ್ನು ಕಳುಹಿಸಿದ್ದಾರೆ.

ಪೂನಾದಲ್ಲಿ ರೇಡಿಯೋ ಕೇಂದ್ರ

ಪೂನಾದಲ್ಲಿ ಅಖಿಲಭಾರತ ರೇಡಿಯೋ ವಿಶ ಪ್ರಸಾರ ಕೇಂದ್ರವು ನಾಳೆಯ ದಿನ ಪ್ರಾರಂಭವಾಗುತ್ತದೆ.

ದಸರಾದಲ್ಲಿ ನೀರು ಕೆಲಸಗಾರರ ಮುಷ್ಕರ

ಮೈಸೂರು ೧

ರಾಜಧಾನಿಯ ವಾಣಿವಿಲಾಸ ನೀರು ಕೇಂದ್ರದ ಕೆಲಸಗಾರರ ಬೇಡಿಕೆಗಳ ಬಗ್ಗೆ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸಲು ನಿನ್ನೆ ಲೇಬರ್ ಕಮಿಷನರ ಸಮ್ಮುಖದಲ್ಲಿ ಕೆಲಸಗಾರರ ಮತ್ತು ಸರ್ಕಾರದ ಪ್ರತಿನಿಧಿಗಳ ಸಭೆ ನಡೆದು ಯಾವ ತೀರ್ಮಾನಕ್ಕೂ ಬರಲಾಗಲಿಲ್ಲ ಆದ್ದರಿಂದ ಕೆಲಸಗಾರರು ನಿನ್ನೆ ಸಂಜೆ ಮೆರವಣಿಗೆ ನಡೆಸಿ, ನಂತರ ಶ್ರೀ ಮೀರ್ ನೂರ್ ಹುಸೇನರ ಅಧ್ಯಕ್ಷತೆಯಲ್ಲಿ ಸರ್ವಸದಸ್ಯರ ಸಭೆ ಸೇರಿ, ದಸರಾದಲ್ಲಿ ಮುಷ್ಕರ ಹೂಡಬೇಕೆಂದು ನಿರ್ಧರಿಸಲಾಯಿತೆಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ತಾಲ್ಲೂಕು ಮತ್ತು ನಗರ ಕಾಂಗ್ರೆಸ್ ಚುನಾವಣೆ

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಸ್ಪರ್ಧೆ ಇದ್ದ ಮೂರು ತಾಲ್ಲೂಕುಗಳಿಗೆ ನಿನ್ನೆ ಚುನಾವಣೆ ನಡೆಯಿತು. ನಂಜನಗೂಡಿನಿಂದ ಶ್ರೀಗಳಾದ ಟಿ. ವೆಂಕಟರಮಣ ಮತ್ತು ಕೆ. ನರಸೇಗೌಡ, ಕೃಷ್ಣರಾಜನಗರದಿಂದ ಶ್ರೀಗಳಾದ ಶ್ರೀಕಂಠಶೆಟ್ಟಿ ಮತ್ತು ನಂಜುಂಡಪ್ಪ, ಮೈಸೂರು ತಾಲ್ಲೂಕಿನಿಂದ ಶ್ರೀಗಳಾದ ಕೆಂಪೇಗೌಡ ಮತ್ತು ಚಿನ್ನಸ್ವಾಮಿ ಚುನಾಯಿತರಾದರು.

ಮೈಸೂರು ನಗರ ಕಾಂಗ್ರೆಸ್ ಸಮಿತಿಗೆ ಉತ್ತರದಿಂದ ಟಿ. ವೆಂಕಟರಮಣಯ್ಯ, ಜಿ. ಜನಾರ್ಧನನಾಯ್ಡು, ಎ. ಶಿವಣ್ಣ, ದಕ್ಷಿಣಕ್ಕೆ ಶ್ರೀಗಳಾದ ಕೆ. ಎಸ್. ಸತ್ಯನಾರಾಯಣ ರಾವ್, ಬಿ. ಎನ್. ಕೆಂಗೇಗೌಡ ಮತ್ತು ಎಂ. ಗೋಪಾಲರಾವ್ ಅವಿರೋಧವಾಗಿ ಚುನಾಯಿತರಾದರು.

ಕಾಂಗ್ರೆಸ್ಸಿನೊಡನೆ ಕೃಷಿಕ ಪಕ್ಷದ ಅಸಹಕಾರ

ಕಾಂಗ್ರೆಸ್ಸಿನೊಡನೆ ಕೃಷಕ ಲೋಕ ಪಕ್ಷದವರು ಸಹಸದಸ್ಯರಾಗಿದ್ದುಕೊಂಡು ನೀಡುತ್ತಿದ್ದ ಸಹಕಾರವನ್ನು ನಿಲ್ಲಿಸಲು ತೀರ್ಮಾನಿಸಿ, ಸಹಸದಸ್ಯತ್ವಕ್ಕೆ ಎಲ್ಲರೂ ರಾಜೀನಾಮೆ ಕೊಟ್ಟಿರುವುದಾಗಿ ಪಕ್ಷದ ನಾಯಕ ಶ್ರೀ ಎನ್. ಜಿ. ರಂಗಾರವರು ತಿಳಿಸಿದ್ದಾರೆ.

ಸೂಚನೆ

ಗಾಂಧಿ ಜಯಂತಿ ಪ್ರಯುಕ್ತ ನಾಳೆ ಸಮಾಚಾರ ಪತ್ರಿಕೆ ಪ್ರಕಟವಾಗುವುದಿಲ್ಲ.

ಮಹಿಳಾ ಆರ್ಥಿಕ ಉಳಿತಾಯ ಯೋಜನೆ

ಮೈಸೂರು ೧

ಕೇಂದ್ರ ಸರ್ಕಾರದವರು ಪಂಚವಾರ್ಷಿಕ ಯೋಜನೆಗಾಗಿ ಕೈಗೊಂಡಿರುವ ಮಹಿಳೆಯರ ಆರ್ಥಿಕ ಉಳಿತಾಯ ಯೋಜನೆ ಆರಂಭೋತ್ಸವವನ್ನು ಈ ಸಂಜೆ ಜಗನ್ಮೋಹನ ಬಂಗಲೆಯಲ್ಲಿ ಮಹಾರಾಣಿ ಶ್ರೀಮತಿ ತ್ರಿಪುರಸುಂದರಮ್ಮಣ್ಣಿಯವರು ನೆರವೇರಿಸಿದರು,

ಮೈಸೂರು ಮಹಿಳಾ ಪರಿಷತ್ತಿನ ಅಧ್ಯಕ್ಷಿಣಿ ಶ್ರೀಮತಿ ರಾಜಕುಮಾರಿ ಲೀಲಾವತಿಯವರು ಅಧ್ಯಕ್ಷತೆ ವಹಿಸಿದ್ದರು.

ಸಂತಾಪ ಸೂಚಕ ಸಭೆ

ಬಿ.ಎಂ ಶ್ರೀನಿವಾಸಯ್ಯನವರ ನಿಧನ ಬಗ್ಗೆ ಸಂತಾಪ ಸೂಚಿಸಲು ಈ ದಿನ ಸಂಜೆ ೬-೩೦ ಗಂಟೆಗೆ ಒಂಟಿಕೊಪ್ಪಲಿನ ಚಲುವಾಂಬಾ ಪಾರ್ಕಿನಲ್ಲಿ ಶ್ರೀ ಹೆಚ್.ಎಲ್. ದೇವರಾಜೆ ಅರಸಿನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯುವುದು. ಶ್ರೀಮತಿ ಎಸ್. ರತ್ನಮ್ಮನವರಿಂದ ಭಜನೆ ಮತ್ತು ಶ್ರೀಗಳಾದ ಹೆಚ್.ಸಿ. ದಾಸಪ್ಪ ಮತ್ತು ವೈ.ಜಿ. ಕೃಷ್ಣಮೂರ್ತಿಗಳಿಂದ ಭಾಷಣ ಏರ್ಪಡಿಸಲಾಗಿದೆ.

ಆಕಾಶವಾಣಿ ಕಾರ್ಯಕ್ರಮ

ಮಹಾತ್ಮ ಗಾಂಧಿ ಜಯಂತಿ ಪ್ರಯುಕ್ತ ನಾಳೆ ಆಕಾಶವಾಣಿಯಲ್ಲಿ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಬೆಳಗ್ಗೆ ೭-೦ ವೈಷ್ಣವ ಜನತೋ, ೭-೦೫ ಭಜಗೋವಿಂದಂ, ೭-೨೦ ರಾಮನಾಮ, ೨-೦ ಗಾಂಧಿ ಮತ್ತು ಕಸ್ತೂರಿಬಾ--ಎಂ. ಆರ್. ಲಕ್ಷಮ್ಮ. ಸಂ೬..೧೫ ಹಾಡುಗಳು, ೬-೩೦ ಗಾಂಧಿ ಜಯಂತಿ.. ಭಾಷಣ..ಟಿ. ವೆಂಕಟರಮಣಯ್ಯ, ೭-೩೦ ಗಾಂಧೀಜಿಯ ಪ್ರಮಾಣವಚನಗಳು, ಸಿದ್ಧವನಹಳ್ಳಿ ಕೃಷ್ಣಶರ್ಮ, ೯-೧೫ ಭೂದಾನಯಜ್ಞ, ಶಂತದ್ಗಿರಿರಾವ್ ಮತ್ತು ಹೆಚ್. ಸಿ. ದಾಸಪ್ಪ, ಎನ್. ಭದ್ರಯ್ಯ ಮತ್ತು ಕಾವೇರಮ್ಮನವರಿಂದ ಭಾಷಣ.

ಗಾಂಧಿ ಜಯಂತಿ ಯೋಗ್ಯ ರೀತಿಯಲ್ಲಿ ಆಚರಿಸಿ

ಬೆಂಗಳೂರು ೧

ನಾಳೆಯ ದಿನ ಗಾಂಧಿ ಜಯಂತಿಯನ್ನು ಎಲ್ಲಾ ಕಾಂಗ್ರೆಸ್ ಸಮಿತಿಗಳೂ ಕಾಂಗ್ರೆಸ್ಸಿಗರೂ ಯೋಗ್ಯ ರೀತಿಯಲ್ಲಿ ನಡೆಸಬೇಕೆಂದು ಎಂ.ಪಿ.ಸಿ.ಸಿ. ಕಾರ್ಯದರ್ಶಿ ಶ್ರೀ ಟಿ. ಮರಿಯಪ್ಪನವರು ಮನವಿ ಮಾಡಿದ್ದಾರೆ.

ಬಳ್ಳಾರಿ ಜಿಲ್ಲೆ ಮೈಸೂರಿಗೆ ಸೇರಿತು

ಬಳ್ಳಾರಿ ಕನ್ನಡಿಗರಿಗೆ ಮತ್ತು ಆಂಧ್ರರಿಗೆ ಮುಖ್ಯಮಂತ್ರಿ ಹನುಮಂತಯ್ಯನವರ ಶುಭಾಶಯ

ಬಳ್ಳಾರಿ ಜಿಲ್ಲೆಯ ೭ ತಾಲ್ಲೂಕುಗಳು ಇಂದು ಮೈಸೂರಿಗೆ ಸೇರುವ ಮತ್ತು ಆಂಧ್ರ ಪ್ರಾಂತ್ಯ ರಚನೆಯ ಶುಭ ಸಮಾರಂಭದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಶುಭಾಶಯವನ್ನು ಕೋರಿ ಈರೀತಿ ತಿಳಿಸಿದ್ದಾರೆ:—

ಬಳ್ಳಾರಿಯ ೭ ತಾಲ್ಲೂಕುಗಳ ಮೈಸೂರು ಸಂಸ್ಥಾನಕ್ಕೆ ಇಂದು ಸೇರುತ್ತವೆ. ನಮ್ಮೆಲ್ಲರಿಗೂ ಸಂತೋಷದಾಯಕವಾದ ಶುಭದಿನವಿದು. ಮೈಸೂರಿನವರಿಗೆ ತಮ್ಮ ಸಂಸ್ಥಾನವನ್ನು ವಿಸ್ತರಿಸಬೇಕೆಂಬ ಹಂಬಲವೇನೂ ಇಲ್ಲ. ಬಹುಕಾಲದಿಂದ ಬಯಸುತ್ತಿದ್ದ ಆಡಳಿತ ಸೌಕರ್ಯವು ಸಿದ್ಧಿಸಿತು ಎಂಬುದೇ ಸಂತೋಷಕ್ಕೆ ಮುಖ್ಯ ಕಾರಣ. ಅಲ್ಲಿ ಇಲ್ಲಿ ಕೊಂಚ ಪ್ರದೇಶ ಒಂದು ಸಂಸ್ಥಾನದಿಂದ ಮತ್ತೊಂದು ಸಂಸ್ಥಾನಕ್ಕೆ ಸೇರಿದರೆ ಅದು ಕೇವಲ ಆಡಳಿತ ಸೌಕರ್ಯಕ್ಕಾಗಿ. ಈ ಸೇರುವಿಕೆಯು ಒಂದು ಸಂಸ್ಥಾನದ ಲಾಭ, ಮತ್ತೊಂದರ ನಷ್ಟ, ಎನ್ನುವ ಭಾವನೆಯೇ ಈಗ ಸಲ್ಲದು. ನಾವು ಸಂಕಲ್ಪ ಮಂತ್ರ ಹೇಳುವಾಗ ಭಾರತದ ನದಿಗಳಾದ "ಗಂಗೇಚ ಯಮುನೇ ಚೈವ ಗೋದಾವರಿ ಸರಸ್ವತಿ" ಎಂದು ಮುಂತಾಗಿ ಹೇಳಿ ಭಾರತದ ಸಾಂಸ್ಕೃತಿಕ ಐಕ್ಯತೆಯನ್ನು ಜಪಿಸುತ್ತೇವೆ. ೧೯೪೭ನೆಯ ಆಗಸ್ಟ್ ೧೫ ರಿಂದೀಚೆಗೆ ಆ ಐಕ್ಯತೆಯು ರಾಜಕೀಯ ಮತ್ತು ಭೌಗೋಳಿಕ ರೂಪವನ್ನು ತಳೆದು ಆಸೇತು ಹಿಮಾಚಲ ಪರ್ಯಂತ ಅಜೇಯವಾಗಿ ನಿಂತಿದೆ. ಈ ಐಕ್ಯತೆಯು ಹಿಂದೆ ಎಂದೂ ಸಾಧ್ಯವಾಗದಿದ್ದ ಮಹಾತ್ಸಾಧನೆ. ಇದಕ್ಕೆ ಎಂದೂ, ಯಾರಿಂದಲೂ, ಯಾವ ಕಾರಣದಿಂದಲೂ, ಲೋಪ ಬಾರದಂತೆ ಕಾಪಾಡುವುದು ಪ್ರತಿಯೊಬ್ಬ ಭಾರತೀಯನ ಪವಿತ್ರ ಕರ್ತವ್ಯ, ಈ ದೃಷ್ಟಿಯಿಂದ ಸಂಸ್ಥಾನಗಳ ಗಡಿಗಳ ಬದಲಾವಣೆಗಳು ಆಡಳಿತ ಸೌಕರ್ಯಕ್ಕಾಗಿ ಮಾತ್ರ ಆಗುತ್ತವೆ; ಅವು ಪ್ರಾಂತಗಳ ನಿರ್ಮಾಣವೂ ಅಲ್ಲ, ಹಂಚಿಕೆಯೂ ಅಲ್ಲ ಎಂಬುದು ಸುಸ್ಪಷ್ಟವಾಗುತ್ತದೆ.

ಬಳ್ಳಾರಿಯ ೭ ತಾಲ್ಲೂಕುಗಳ ಮಹಾಜನರು ಸ್ವಪ್ರೇರಿತರಾಗಿ ಮೈಸೂರು ಸಂಸ್ಥಾನದೊಡನೆ ಸೇರಬೇಕೆಂದು ಬಯಸಿದುದು ಅವರಲ್ಲಿ ಬಹುಕಾಲದಿಂದ ಬೆಳೆದು ಬಂದಿರುವ ಸಹಜ ಬಂಧು ಪ್ರೇಮವನ್ನು ವ್ಯಕ್ತಪಡಿಸುತ್ತದೆ. ಮೈಸೂರಿನ ಜನರು ಆನಂದ ಬಾಷ್ಪಯುತರಾಗಿ, ಸೋದರ ಪ್ರೇಮದಿಂದ ಬಿಗಿದ ಕಂಠವುಳ್ಳವರಾಗಿ, ಚಾಚಿದ ಬಾಹುಗಳಿಂದ ಅವರನ್ನು ಬರಮಾಡಿಕೊಳ್ಳುತ್ತಿದ್ದಾರೆ. ಪ್ರೀತಿ ಪ್ರೇಮಗಳೇ ಮಾನವ ಜೀವನದ ಸೌಭಾಗ್ಯ ಸೌರಭ. ಆ ಸೌರಭವು ಸೂಸಿ ಉಭಯತ್ರರ ಹೃದಯಗಳನ್ನು ಹಿಗ್ಗಿಸಿರುವ ಹೆಮ್ಮೆಯ ದಿನವಿದು.

ಈ ಏಳು ತಾಲ್ಲೂಕಿನ ಜನರಿಗೂ ನಾವು ಪ್ರೀತ್ಯಾದರಯುತವಾದ ಸ್ವಾಗತವನ್ನು ನೀಡುತ್ತೇವೆ. ಇನ್ನು ಮುಂದೆ ಇವರು ನೆರೆಮನೆಯವರಲ್ಲ ನಮ್ಮ ಮನೆಯವರೇ. ಮೈಸೂರು ಸಂಸ್ಥಾನದಲ್ಲಿ ಅವರಿಗೆ ಸರಿಸಮಾನವಾದ ಹಕ್ಕುಬಾಧ್ಯತೆಗಳುಂಟು. ನಾವೆಲ್ಲರೂ ಕಷ್ಟಸುಖಗಳನ್ನು ಸಮನಾಗಿ, ಸಮಾಧಾನಯುತರಾಗಿ ಹಂಚಿ ಅನುಭವಿಸಬೇಕು. ಸೌಹಾರ್ದಯುತವಾದ ಒಟ್ಟುಕುಟುಂಬದಂತೆ ವಿಸ್ತರಿಸಿದ ಮೈಸೂರು ಸಂಸ್ಥಾನವು ಬಾಳಲಿ, ಬೆಳೆಯಲಿ ಎಂಬುದೇ ನಮ್ಮ ಪ್ರಾರ್ಥನೆ ಈ ಮಧುರ ಭಾವನೆಯನ್ನು ನಾವು ಹೊಸದಾಗಿ ಕಲ್ಪಿಸಿಕೊಳ್ಳಬೇಕಾದದ್ದೇನೂ ಇಲ್ಲ. ನಾವೆಲ್ಲರೂ ಹಿಂದೆ ಒಂದಾಗಿದ್ದವರೆಂದೂ, ಒಂದೇ ಸಂಸ್ಕೃತಿಯುಳ್ಳವರೆಂದೂ ಚರಿತ್ರೆಯು ಸಾರುತ್ತದೆ.

ಇದುವರೆಗೂ ಹೇಳಿದುದೆಲ್ಲವೂ ಬಳ್ಳಾರಿ ಕನ್ನಡಿಗರಿಗೆ ಹೇಗೋ ತೆಲುಗರಿಗೂ ಹಾಗೆಯೇ ಅನ್ವಯಿಸುತ್ತದೆ. ತೆಲುಗು ಮಾತನಾಡುವವರಿಗೆ ತುಂಬುಹೃದಯದಿಂದ ನಾವು ಸ್ವಾಗತವನ್ನು ನೀಡುತ್ತೇವೆ: ಅವರ ಪ್ರೀತಿಯನ್ನು ಬಯಸುತ್ತೇವೆ. ಒಂದು ಸಂಸ್ಥಾನದ ಆಡಳಿತವು ಸುಸೂತ್ರವಾಗಿ ನಡೆಯಬೇಕಾದರೆ ಸರ್ವಸಾಮಾನ್ಯವಾದ ಭಾಷೆಯೊಂದಿರಲೇಬೇಕು ಅದರ ಉಳಿದ ಅನುಕೂಲಗಳೆಲ್ಲವನ್ನೂ ಮರೆತು ಇದೊಂದಕ್ಕೇ ಪ್ರಾಶಸ್ತ್ಯ ಕೊಟ್ಟು ವಾತಾವರಣವನ್ನು ಮಲಿನಮಾಡಬಾರದು. ಬಳ್ಳಾರಿಯಲ್ಲಿರುವ ನಮ್ಮ ತೆಲುಗು ಸಹೋದರರು ನಮ್ಮೊಡನೆ ಸೇರುವಾಗ "ಇವರೂ ನಮ್ಮ ಬಳಗ" ಎಂಬ ಭಾವನೆಯಿಂದಲೇ ಸೇರಲಿ ಅವರೆಲ್ಲರೂ ನಮ್ಮವರೆಂಬ ಭಾವನೆ ನಮಗೆ ಇದ್ದೇ ಇದೆ.

ಮಹಾಪ್ರಧಾನರಾದ ನೆಹರೂರವರಿಂದ ಈ ಶುಭ ಸಮಯದಲ್ಲಿ ಉದ್ಘಾಟಿಸಲ್ಪಡಲಿರುವ ಆಂಧ್ರಪ್ರಾಂತ್ಯಕ್ಕೆ ಮೈಸೂರಿನ ಪರವಾಗಿ ಸ್ನೇಹಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸುತ್ತೇನೆ. ನಾವು ಎರಡು ಕಡೆಯಿಂದಲೂ ಕೈಚಾಚಿ ಸ್ನೇಹಸ್ಪರ್ಶದ ಸುಖವನ್ನು ಸಹಜವಾಗಿ ಅನುಭವಿಸಬಹುದು. ಆಂಧ್ರದಲ್ಲಿ ಅದಿರೂಢನಾಗಿರುವ ಶ್ರೀ ತಿರುಪತಿ ವೆಂಕಟರಮಣಸ್ವಾಮಿಗೆ ಎರಡು ಸಂಸ್ಥಾನಗಳಲ್ಲೂ ಲಕ್ಷೋಪಲಕ್ಷ ಮಂದಿ ಭಕ್ತರಿದ್ದಾರೆ. ಆ ಸ್ವಾಮಿಯು ಈ ಸಂಸ್ಥಾನಗಳ ಸ್ನೇಹ ಸೌಹಾರ್ದಗಳನ್ನು ಬೆಳಸಿ ಕಾಪಾಡಲೆಂದು ಪ್ರಾರ್ಥಿಸುತ್ತೇನೆ.

ಗಾಂಧಿ ಜನ್ಮದಿವ ಕಸಾಯಿ ಶಾಲೆ ಬಂದ್

ಮಹಾತ್ಮರ ಜನ್ಮ ದಿನವಾದ ನಾಳೆಯ ದಿನ ಪ್ರಾಂತ್ಯದಲ್ಲಿಯವ ಎಲ್ಲಾ ಕಸಾಯಿ ಶಾಲೆಗಳನ್ನೂ ಮುಚ್ಚಬೇಕೆಂದು ಮಧ್ಯ ಪ್ರದೇಶ ಸರ್ಕಾರವು ಆಜ್ಞೆ ಮಾಡಿದೆ.

ವಿಶಾಲಾಂಧ್ರ ರಚನೆಯಾಗಬೇಕು

ಎ. ಪಿ. ಸಿ. ಸಿ. ನಿರ್ಣಯ

ಇಂಟರ್ ಶಿಕ್ಷಣ ವಿಶ್ವವಿದ್ಯಾನಿಲಯದಿಂದ ಬೇರ್ಪಡೆ

ಅಕೆಡಮಿಕ್ ಕೌನ್ಸಿಲಿನ ವಿರೋಧ

ಮೈಸೂರು ೧

ಮೈಸೂರು ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲಿನ ಸಭೆಯು ನಿನ್ನೆ ಡಾ॥ ಬಿ.ಎಲ್. ಮಂಜುನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ಶ್ರೀ ಬಿ.ಎಂ. ಶ್ರೀನಿವಾಸಯ್ಯನವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯ ಮಾಡಲಾಯಿತು.

ಅನಂತರ ಸಭೆಯು ವಿದ್ಯಾ ಸುಧಾರಣಾ ಸಮಿತಿಯ ವರದಿಯನ್ನು ಚರ್ಚಿಸಿತು.

ಇಂಟರ್ ಮೀಡಿಯೆಟ್ ಕೋರ್ಸನ್ನು ವಿಶ್ವವಿದ್ಯಾನಿಲಯದಿಂದ ಬೇರ್ಪಡಿಸಿ ಸರಕಾರದ ವಿದ್ಯಾ ಇಲಾಖೆಗೆ ಸೇರಿಸಬೇಕೆಂಬ ಸುಧಾರಣಾ ಸಮಿತಿಯ ಶಿಫಾರ್ಸಿಗೆ ಅನೇಕ ಸದಸ್ಯರು ವಿರೋಧ ವ್ಯಕ್ತಪಡಿಸಿದರು.

ಶ್ರೀಗಳಾದ ನೀಲಕಂಠಶಾಸ್ತ್ರಿ, ಎ. ಟಿ. ಶ್ರೀನಿವಾಸ್ ಮುಂತಾದವರು ಮಾತನಾಡಿ ಇದರಿಂದ ಅನೇಕ ತೊಂದರೆಗಳು ಉದ್ಭವಿಸುವುದೆಂದೂ, ಇಂಟರ್ ಶಿಕ್ಷಣದ ದರ್ಜೆಯು ಉತ್ತಮಗೊಳ್ಳದೆ ಇನ್ನೂ ಕೆಳದರ್ಜೆಗೆ ಇಳಿಯುವುದೆಂದೂ ತಿಳಿಸಿದರು. ಈಗ ಇಂಟರ್‌ನಲ್ಲಿರುವ ಉಪಾಧ್ಯಾಯರುಗಳು ಬೇರ್ಪಡೆಯಿಂದ ತಮ್ಮ ಮುಂದಿನ ಅಭಿವೃದ್ಧಿಗೇ ಅಂತಕವುಂಟಾಗುವುದೆಂದು ಶಂಕಿಸುತ್ತಿದ್ದಾರೆಂದೂ, ಹೆಚ್ಚು ಸಂಖ್ಯೆಯುಳ್ಳಿರುವ ಈ ಉಪಾಧ್ಯಾಯರ ಅಭಿಪ್ರಾಯಕ್ಕೆ ಮನ್ನಣೆ ದೊರೆಯಬೇಕೆಂದೂ ಅವರುಗಳು ಹೇಳಿದರು.

ಓಟಿಗೆ ಹಾಕಿದಾಗ, ಮೂವರು ಹೊರತು ಮಿಕ್ಕ ಸದಸ್ಯರೆಲ್ಲರೂ ವಿರೋಧಿಸಿದರು.

ಇಂಟರ್ ದರ್ಜೆಯಲ್ಲಿ ಕನ್ನಡವನ್ನು ಶಿಕ್ಷಣ ಮಾಧ್ಯಮವಾಗಿ ಜಾರಿಗೆ ತರಬೇಕೆಂಬ ಸುಧಾರಣಾ ಸಲಹೆಯ ಮೇಲೆ ಚರ್ಚೆ ಬಂದಾಗ, ಶ್ರೀಗಳಾದ ಎಲ್. ಶ್ರೀಕಂಠಯ್ಯ, ನಾಡಿಗ ಕೃಷ್ಣಮೂರ್ತಿ, ಎನ್. ಶ್ರೀನಿವಾಸಮೂರ್ತಿ, ವೆಂಕಟಾಚಾರ್ ಮುಂತಾದವರು ಮಾತನಾಡಿ, ಭಾರತವು ಸ್ವಾತಂತ್ರವಾದರೂ, ಇನ್ನೂ ಪರಭಾಷೆಯನ್ನೇ ಇಟ್ಟುಗೊಂಡಿರುವುದು ನಾಚಿಕೆಗೇಡು ಸ್ವಾತಂತ್ರ್ಯವಾಗಿರುವ ಅನೇಕ ಪಶ್ಚಿಮಾತ್ಯ ದೇಶಗಳಲ್ಲಿ ಮಾತೃಭಾಷೆಯಲ್ಲಿಯೇ ಎಲ್ಲ ವ್ಯವಹಾರ ಮತ್ತು ಶಿಕ್ಷಣ ಕೊಡಲಾಗುತ್ತದೆ ಇದರಿಂದ ಆ ದೇಶಗಳು ಯಾವರೀತಿಯಲ್ಲೂ ಹಿಂದೆ ಉಳಿದಿಲ್ಲ. ಎಷ್ಟು ತೊಡಕುಗಳಿದ್ದರೂ ನಾವು ನಮ್ಮ ಮಾತೃಭಾಷೆಗೆ ಪುರಸ್ಕಾರ ಕೊಡಲೇ ಬೇಕು--ಎಂದು ತಿಳಿಸಿದರು.

ಶ್ರೀಗಳಾದ ಎಂ. ಎಸ್. ರಾಮಸ್ವಾಮಿ, ಡಾ॥ ಲಿಂಗರಾಜು ಮುಂತಾದವರು ಮಾತನಾಡಿ, ಅದನ್ನು ಕೂಡಲೇ ಜಾರಿಗೆ ತರಲು ಅನೇಕ ತೊಂದರೆಗಳಿರುವುದರಿಂದ ಅದು ಸಾಧುವಲ್ಲವೆಂದು ತಿಳಿಸಿದರು.

ಕೂಡಲೇ ಅದನ್ನು ಜಾರಿಗೆ ತರಬೇಕೆಂಬ ಸಲಹೆಗೆ ವಿರೋಧವಾಗಿ ಓಟು ಮಾಡಲಾಯಿತು.

ಸುಧಾರಣಾ ಸಮಿತಿಯ ಶಿಫಾರ್ಸನ್ನು ಜಾರಿಗೆ ತರಲು ಈಗಿನ ವಿಶ್ವವಿದ್ಯಾನಿಲಯದ ಕಾನೂನನ್ನು ತಿದ್ದುಪಡಿ ಮಾಡಬೇಕೆಂಬ ಸಲಹೆಗೆ ಪುರಸ್ಕಾರ ದೊರೆಯಿತು.

ಆಂಧ್ರ ಪ್ರದೇಶ ಕಾಂಗ್ರೆಸ್ಸಿನ ಸರ್ವ ಸದಸ್ಯರ ಸಭೆಯು ನಿನ್ನೆಯದಿನ ಕರ್ನೂಲಿನಲ್ಲಿ ಶ್ರೀ ಎನ್. ಸಂಜೀವರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಂಧ್ರದ ತಾತ್ಕಾಲಿಕ ರಾಜಧಾನಿಯಾಗಿ ಕರ್ನೂಲನ್ನು ಏರ್ಪಡಿಸಲು ಆಂಧ್ರಶಾಸನ ಸಭಾಸದಸ್ಯರ ತೀರ್ಮಾನವನ್ನು ಸಭೆಯು ಅನುಮೋದಿಸಿತು ಹೈದರಾಬಾದನ್ನು ರಾಜಧಾನಿಯಾಗಿ ವಿಶಾಲಾಂಧ್ರವನ್ನು ಜಾಗ್ರತೆಯಾಗಿ ರಚಿಸಬೇಕೆಂಬ ನಿರ್ಣಯವನ್ನೂ ಮಾಡಲಾಯಿತು.

ಆಹಾರ ಹತೋಟಿ ರದ್ದು

ಅಕ್ಕಿಯನ್ನು ಬಿಟ್ಟು ಉಳಿದ ಎಲ್ಲಾ ಆಹಾರ ಪದಾರ್ಥಗಳ ಮೇಲೆ ದೇಶಾದ್ಯಂತ ಇರುವ ಹತೋಟಿಯನ್ನು ಪೂರ್ಣವಾಗಿ ಈವರ್ಷದಾಖೈರುನೊಳಗೆ ರದ್ದುಗೊಳಿಸಲು ಸಾಧ್ಯವಾಗುವುದೆಂದು ಕೇಂದ್ರವ್ಯವಸಾಯ ಸಚಿವ ಡಾ॥ ದೇಶಮುಖ್‌ರವರು ಹೇಳಿದ್ದಾರೆ.

ತೇನ್ ಸಿಂಗ್‌ಗೆ ಬಹುಮಾನ

ಹಿಮಾಲಯ ಪರ್ವತಾರೋಹಿ ಶ್ರೀ ತೇನ್ ಸಿಂಗ್‌ಗೆ ಪರ್ಷಿಯ ಷಾರವರು ಬಹುಮಾನ ಕೊಡಲಿರುವರೆಂದು ತಿಳಿಯುಬರುತ್ತದೆ.

ರಾಜಕಮಲ್
25-9-53 ರಿಂದ ಅಮೋಘ 2 ನೇ ವಾರ
-ಆಶೈಮಗನ್-
[ತಮಿಳು]

ರಣಜಿತ್
1-10-53 ರಿಂದ ಅಮೋಘ ಪ್ರಾರಂಭ
ದಿನವೂ 3 ಪ್ರದರ್ಶನಗಳು
ಮೀನಾಕುಮಾರಿ, ಈಶ್ವರಲಾಲ್, ದುರ್ಗಾಕೋಟೆ, ನಿರೂಪ್‌ರಾಯ್ ನಟಿಸಿರುವ
-- ಫೌಲಬಾಹಾರ್ --
[ಹಿಂದಿ]

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎರ್. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೩೮

೩-೧೦-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ರಾಷ್ಟ್ರಾಭಿವೃದ್ಧಿ ಕಾರ್ಯ ವಿಸ್ತರಣ ಯೋಜನೆ

ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಪ್ರಾರಂಭ

ಮೈಸೂರು ೩

ಹಳ್ಳಿಗಳ ಪುನರುದ್ಧಾರಕ್ಕಾಗಿ ಕೇಂದ್ರ ಸರ್ಕಾರದವರು ಕೈಗೊಂಡಿರುವ ರಾಷ್ಟ್ರಾಭಿವೃದ್ಧಿ ಕಾರ್ಯ ವಿಸ್ತರಣ ಯೋಜನೆಯನ್ನು ನಿನ್ನೆ ಸಂಸ್ಥಾನದ ೭ ಪ್ರದೇಶಗಳಲ್ಲಿ ಜಾರಿಗೆ ತರಲಾಯಿತು. ಈ ಯೋಜನೆಯನ್ನು ಮೈಸೂರು ಜಿಲ್ಲೆಯ ಗುಂಡ್ಲುಪೇಟೆ ತಾಲ್ಲೂಕಿನಲ್ಲೂ ಪ್ರಾರಂಭಿಸಲಾಯಿತು.

ಈ ಸಂಬಂಧದಲ್ಲಿ ಗುಂಡ್ಲುಪೇಟೆಯ ಸಿನಿಮಾ ಮಂದಿರದಲ್ಲಿ ನಿನ್ನೆ ಒಂದು ಸಮಾರಂಭವನ್ನು ಏರ್ಪಡಿಸಲಾಗಿತ್ತು, ಗುಂಡ್ಲುಪೇಟೆ ತಾಲ್ಲೂಕಿನ ಸಾವಿರಾರು ಮಂದಿ ಉತ್ಸವಕ್ಕೆ ಆಗಮಿಸಿದ್ದರು. ಜಿಲ್ಲಾಧಿಕಾರಿ ಶ್ರೀ ಎಂ.ಎಸ್. ಸ್ವಾಮಿನಾಥರವರು ಅಧ್ಯಕ್ಷತೆ ವಹಿಸಿದ್ದರು. ಶಾಸನ ಸಭೆಯ ಸದಸ್ಯ ಶ್ರೀ ಹೆಚ್.ಕೆ. ಶಿವರುದ್ರಪ್ಪನವರು ಪ್ರಾರಂಭೋತ್ಸವ ನಡೆಸಿದರು.

ಪ್ರಾರಂಭದಲ್ಲಿ ಯೋಜನೆಯ ಅಧಿಕಾರಿಗಳಾದ ಎಸ್.ಡಿ.ಓ. ಶ್ರೀ ಹೆಚ್.ಎಲ್. ನಾಗೇಗೌಡರು ಸ್ವಾಗತ ಭಾಷಣ ಮಾಡಿ, ಯೋಜನೆಯ ಉದ್ದೇಶ ಮತ್ತು ವಿವರಗಳನ್ನು ತಿಳಿಸಿದರು. ಅದು ೩ ವರ್ಷದ ಯೋಜನೆ. ಅದಕ್ಕಾಗಿ ೬೫ ಲಕ್ಷ ರೂ. ಖರ್ಚಾಗುವುದು; ಕೇಂದ್ರ ಸರ್ಕಾರವು ೪೫ ಲಕ್ಷ ರೂಗಳನ್ನು ಕೊಟ್ಟಿದೆ. ಮಿಕ್ಕ ಹಣವನ್ನು ಮೈಸೂರು ಸರ್ಕಾರ ಕೊಡಲಿದೆ. ನೂರು ಹಳ್ಳಿಗಳುಳ್ಳ ಒಂದು ತಾಲ್ಲೂಕಿನ ಪ್ರಕಾರ, ೭ ತಾಲ್ಲೂಕುಗಳಲ್ಲಿ ಈ ಯೋಜನೆಯನ್ನು ಕಾರ್ಯಗತ ಮಾಡಲಾಗುವುದು. ಗುಂಡ್ಲುಪೇಟೆ ತಾಲ್ಲೂಕಿಗೆ ಏಳೂವರೆ ಲಕ್ಷ ರೂ.ಗಳನ್ನು ಮೂರು ವರ್ಷ ಕಾಲದಲ್ಲಿ ಖರ್ಚುಮಾಡಲಾಗುವುದು. ಹೆಚ್ಚು ಆಹಾರ ಬೆಳೆ, ಹಳ್ಳಿಗಳ ಅಭಿವೃದ್ಧಿ, ನೀರಾವರಿ ಯೋಜನೆ, ಆಸ್ಪತ್ರೆ, ರಸ್ತೆ, ಚರಂಡಿ, ಶಾಲೆ ಮುಂತಾದ ಕಾರ್ಯಗಳನ್ನು ಎಲ್ಲಾ ಇಲಾಖೆಗಳ ಸಹಕಾರದಿಂದ ಕೈಗೊಳ್ಳಲಾಗುವುದು. ಇದಕ್ಕಾಗಿ ಪ್ರತ್ಯೇಕ ಅಧಿಕಾರಿಗಳು ಇರುವರು. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಈ ಯೋಜನೆಯು ಯಶಸ್ವಿಯಾಗಿ ಪ್ರಥಮ ಸ್ಥಾನ ಪಡೆದಿದೆ. ಕೇಂದ್ರ ಸರ್ಕಾರವು ಇದನ್ನು ಸಾಮೂಹಿಕ ಯೋಜನೆಯಲ್ಲಿ ಸೇರಿಸಿ, ೧೫ ಲಕ್ಷ ರೂ. ಕೊಡುವರು. ಆದ್ದರಿಂದ ಈ ಕಾರ್ಯದಲ್ಲಿ ತಾಲ್ಲೂಕಿನ ಪ್ರಜೆಗಳೆಲ್ಲರೂ ಸಹಕರಿಸಿ, ತಮ್ಮ ಪ್ರದೇಶಗಳ ಅಭಿವೃದ್ಧಿ ಕಾರ್ಯಕ್ಕಾಗಿ ದುಡಿಯಬೇಕೆಂದು ಅವರು ಮನವಿಮಾಡಿದರು.

ಸಚಿವ ಶ್ರೀ ಕಡಿದಾಳ್, ಶ್ರೀಗಳಾದ ಟಿ. ಮರಿಯಪ್ಪ, ಟಿ. ವೆಂಕಟರಮಣಯ್ಯ ಮುಂತಾದವರಿಂದ ಬಂದ ಸಂದೇಶಗಳನ್ನು ಓದಲಾಯಿತು.

ಅನಂತರ ಶ್ರೀ ಶಿವರುದ್ರಪ್ಪನವರು ಆರಂಭೋತ್ಸವವನ್ನು ನಡೆಸಿ ಇಂತಹ ಯೋಜನೆಯನ್ನು ಪೂಜ್ಯ ಗಾಂಧಿಜೀಯವರ ಜಯಂತಿಯ ಪವಿತ್ರ ದಿವಸದಲ್ಲಿ ಪ್ರಾರಂಭಿಸಿರುವುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು.

ರೈತ ಜನಾಂಗದವರ ಸಮಗ್ರ ಜೀವನ ಮಟ್ಟವನ್ನು ಉನ್ನತಪಡಿಸುವ ಈ ಯೋಜನೆಯು ಜನಪ್ರದವಾಗಲು ತಾಲ್ಲೂಕಿನ ಎಲ್ಲ ಜನಗಳು ಸಹಕರಿಸುವುದು ಅತ್ಯಗತ್ಯ. ಈ ಕಾರ್ಯದ ನಿರ್ವಹಣೆಯನ್ನು ಈಗಾಗಲೇ ಹೆಚ್ಚು ಕೆಲಸವಿರುವ ಸಬ್‌ಡಿವಿಜನ್ ಅಧಿಕಾರಿಗಳಿಗೆ ಕೊಟ್ಟಿರುವುದು ಸರಿಯಲ್ಲ. ಪ್ರತ್ಯೇಕ ಅಧಿಕಾರಿಯನ್ನು ನೇಮಿಸಬೇಕು--ಎಂದು ಅವರು ಹೇಳಿದರು.

ನಂಜನಗೂಡಿನ ಶ್ರೀ ವಿಶ್ವೇಶ್ವರಗೌಡ, ಶ್ರೀ ಡಿ. ಕೆ. ನಂಜುಂಡಯ್ಯ, ಪಶುಪಾಲನೆ ಶಾಖೆಯ ಶ್ರೀ ನಾರಾಯಣಮೂರ್ತಿ ಮುಂತಾದವರ ಭಾಷಣವಾಡಿ, ಈ ಯೋಜನೆಗೆ ಎಲ್ಲರ ಸಹಕಾರವನ್ನು ಕೋರಿದರು.

ಜಿಲ್ಲಾಧಿಕಾರಿಗಳು ಭಾಷಣ ಮಾಡಿ ಈ ಸಮಾರಂಭದಲ್ಲಿ ತೋರಿರುವ ಜನರ ಉತ್ಸಾಹವನ್ನು ಶ್ಲಾಘಿಸಿದರು. ಇಂತಹ ಗ್ರಾಮಗಳ ಪುನರುದ್ಧಾರ ಕಾರ್ಯವು ಬರಿ ಸರ್ಕಾರದಿಂದ ಸಾಧ್ಯವಿಲ್ಲ. ಜನ ಸಾಮಾನ್ಯರ ಸಹಕಾರ ಮತ್ತು ಆಶೀರ್ವಾದದಿಂದ ಮಾತ್ರ ಸಾಧ್ಯ. ಈ ಕಾರ್ಯದಲ್ಲಿ ಜನರು ಊರು, ಹಳ್ಳಿ ಎಂಬ ಭೇದಭಾವನೆಯನ್ನು ತೊರೆದು, ಇಡೀ ತಾಲ್ಲೂಕಿನ ಅಭ್ಯುದಯಕ್ಕಾಗಿ ದುಡಿಯುವುದಾಗಿ ಈ ಪವಿತ್ರದಿನ ಸಂಕಲ್ಪ ಮಾಡಬೇಕು--ಎಂದು ಜಿಲ್ಲಾಧಿಕಾರಿಗಳು ಕೋರಿದರು.

ಗುಂಡ್ಲುಪೇಟೆ ಪುರಸಭೆಯ ಅಧ್ಯಕ್ಷ ಶ್ರೀ ಅಬ್ದುಲ್ ಗಫಾರ್ ಖಾನರು ವಂದನೆಯನ್ನು ಅರ್ಪಿಸಿದರು.

ಈ ಸಮಯದಲ್ಲಿ ಶ್ರೀ ಗಫಾರ್ ಖಾನರು ಸಾವಿರಾರು ಬಡಜನರಿಗೆ ಅನ್ನದಾನ ಮಾಡಿದರು.

ಸಂಜೆ ಗುಂಡ್ಲುಪೇಟೆ ಸಮೀಪದಲ್ಲಿರುವ ಹೊಸೂರು ಗ್ರಾಮದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಇತರರು ಹೊಸ ರಸ್ತೆ ನಿರ್ಮಾಣ, ಕೊಳ ತೋಡುವುದು ಮುಂತಾದ ಕಾರ್ಯದಲ್ಲಿ ತೊಡಗಿದ್ದರು ಅನಂತರ ಹಳ್ಳಿಯ ಜನರಿಂದ ಕುಣಿತ ಮತ್ತು ಇತರ ಕಾರ್ಯಕ್ರಮಗಳು ನಡೆದುವು ಶ್ರೀ ಮಾಯಿಗೌಡರಿಂದ ಭಾರತ ಸವಾಕನ ಮತ್ತು ವಯಸ್ಕರ ಶಿಕ್ಷಣ ಸಮಿತಿಯಿಂದ ಚಲನಚಿತ್ರ ಪ್ರದರ್ಶನ ನಡೆಯಿತು. ಮಕ್ಕಳಿಗೆ ಶ್ರೀ ಶಿವರುದ್ರಪ್ಪನವರು ಸಿಹಿ ವಿನಿಯೋಗ ಮಾಡಿದರು.

ನಾಳೆ ನೀರು ನಿಲ್ಲುತ್ತದೆ

ಮೈಸೂರು ೩

ನಾಳೆ ಬೆಳಿಗ್ಗೆ ೮-೧೫ರಿಂದ ಮಧ್ಯಾಹ್ನ ೪-೧೫ ರವರೆಗೆ ವಿದ್ಯುಚ್ಛಕ್ತಿ ಸರಬರಾಜು ನಿಲ್ಲುವುದರಿಂದ ಆ ಕಾಲದಲ್ಲಿ ನೀರಿನ ಸರಬರಾಜು ಇರುವುದಿಲ್ಲ.

ಹಿಂದಿ ತರಗತಿ

ರಾಜಧಾನಿಯ ಗೋಕಲೆ ಹಿಂದಿ ವಿದ್ಯಾಲಯದವರು ಉಚಿತವಾಗಿ ಹಿಂದೀ ತರಗತಿಗಳನ್ನು ಪ್ರತಿ ದಿನ ಸಂಜೆ ರಾಮಾನುಜಾ ರೋಡಿನಲ್ಲಿರುವ ೧೯೩೭ನೇ ನಂಬರು ಮಾಡಲ್ ಹೌಸಿನಲ್ಲಿ ನಡೆಸಲು ಏರ್ಪಡಿಸಿದ್ದಾರೆ. ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾಗಿ ತರಗತಿಗಳನ್ನು ನಡೆಸಲಾಗುತ್ತೆ. ತರಗತಿಗೆ ಸೇರಲು ಕಡೆಯ ದಿನ ೧೫ನೇ ಅಕ್ಟೋಬರ್.

ಚೈನಾ ಯುದ್ಧ ಖೈದಿಗಳ ಗಲಭೆ

ಕೊರಿಯಾದಲ್ಲಿ ಯುದ್ಧ ಖೈದಿಗಳ ಮೇಲ್ವಿಚಾರಣೆಯಲ್ಲಿರುವ ಭಾರತ ಸೈನ್ಯವು ನಿನ್ನೆಯ ದಿನ ಚೀಣಿಯರ ಗಲಭೆಯನ್ನು ತಡೆಗಟ್ಟಲು ಎರಡನೆಬಾರಿ ಗುಂಡು ಹಾರಿಸಿದುದರ ಪರಿಣಾಮವಾಗಿ ಇಬ್ಬರು ಸತ್ತು ೫ ಜನರಿಗೆ ಗಾಯಗಳಾಗಿರುವುದಾಗಿ ವರದಿಯಾಗಿದೆ.

ಮೊನ್ನೆಯದಿನ ಗಲಭೆಯಲ್ಲಿ ಗುಂಡು ಹಾರಿಸಿದಾಗ ಒಬ್ಬ ಸತ್ತು ೩ ಜನರಿಗೆ ಗಾಯಗಳಾದುವು.

ಸಿನಿಮಾಗಳ ಪ್ರತಿಭಟನೆ ಮುಕ್ತಾಯ

ಭಾರತ ಚಲನಚಿತ್ರಗಳನ್ನು ತರಿಸಿಕೊಳ್ಳಲು ಪಾಕೀಸ್ತಾನ ಸರಕಾರವು ವಿಧಿಸಿದ್ದ ಆಜ್ಞೆಯನ್ನು ಪ್ರತಿಭಟಿಸಿ ಕರಾಚಿಯಲ್ಲಿ ಮುಚ್ಚಲಾಗಿದ್ದ ಎಲ್ಲಾ ಚಲನಚಿತ್ರ ಮಂದಿರಗಳನ್ನು ನಿನ್ನೆಯಿಂದ ತೆರೆಯಲಾಗಿದೆಯೆಂದು ತಿಳಿಯಬರುತ್ತದೆ.

ಭತ್ತದ ಶೇಖರಣೆ ವಜಾ

ಪಶ್ಚಿಮ ಬಂಗಾಳದಲ್ಲಿ ಇದೇ ೧೪ನೇ ತಾರೀಖಿನಿಂದ ಭತ್ತದ ಶೇಖರಣೆ ಆಜ್ಞೆಯನ್ನು ಸರ್ಕಾರ ರದ್ದುಮಾಡಿದೆ. ಇನ್ನು ಮುಂದೆ ಸರ್ಕಾರದವರು ಬಹಿರಂಗ ಮಾರ್ಕೆಟ್ಟಿನಲ್ಲಿ ಭತ್ತ ಕೊಳ್ಳುವರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು

ಸಂಸ್ಥಾನದ ಕನ್ನಡ ಸಾಹಿತ್ಯ ಪರಿಷತ್ತಿಗೆ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್ಯರನ್ನು ಅಧ್ಯಕ್ಷರನ್ನಾಗಿ ಚುನಾಯಿಸಲಾಗಿದೆ.

೧೫ನೇ ತಾರೀಖು ನೀರಿನ ಕೆಲಸಗಾರರ ಮುಷ್ಕರ

ಮೈಸೂರು ೩

ವಾಣಿವಿಲಾಸ ನೀರಿನ ಕೆಲಸಗಾರರ ಬೇಡಿಕೆಗಳನ್ನು ಈಡೇರಿಸುವ ಬಗ್ಗೆ ನಿನ್ನೆ ಅಧಿಕಾರ ವರ್ಗದವರಿಗೂ ಕಾರ್ಮಿಕರಿಗೂ ಪುನಃ ನಡೆದ ಸಂಧಾನವು ವಿಫಲವಾಗಿ ಇದೇ ೧೫ನೇ ತಾರೀಖಿನಿಂದ ಕೆಲಸಗಾರರು ಮುಷ್ಕರ ಹೂಡುವುದಾಗಿ ಅಧಿಕಾರವರ್ಗದವರಿಗೆ ನೋಟೀಸ್ ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ನಿನ್ನೆ ಸಂಜೆ ಶ್ರೀ ಮಿರ್ ನೂರ್ ಹುಸೇನ್‌ರವರ ಅಧ್ಯಕ್ಷತೆಯಲ್ಲಿ ಸಭೆ ನಡೆದು ಈ ತೀರ್ಮಾನವನ್ನು ಮಾಡಿತು.

ಬಳ್ಳಾರಿ ಆಂಧ್ರರ ದೌರ್ಜನ್ಯ

ಬಳ್ಳಾರಿಯು ಮೈಸೂರಿಗೆ ಸೇರುವ ಶುಭ ಸಮಯದಲ್ಲಿ ಮೊನ್ನೆ ಸಂಜೆ ಬಳ್ಳಾರಿಯ ಕನ್ನಡಿಗರು ಏರ್ಪಡಿಸಿದ್ದ ಮೆರವಣಿಗೆಯ ಮೇಲೆ ಅಲ್ಲಿನ ಆಂಧ್ರರು ಕಲ್ಲುಗಳನ್ನು ಎಸೆದು ಗಲಭೆ ನಡೆಸಿದರೆಂದೂ, ಇದರಿಂದ ೯ ಜನರಿಗೆ ಗಾಯವಾಯಿತೆಂದೂ, ವರದಿ ಬಂದಿದೆ. ಸಮಾರಂಭದ ಚಪ್ಪರಕ್ಕೆ ಬೆಂಕಿ ಹತ್ತಿಸಲು ಪ್ರಯತ್ನ ನಡೆದಿತ್ತು. ಅದಕ್ಕಾಗಿ ಸೀಮೆಎಣ್ಣೆ ಮತ್ತು ಪೆಟ್ರೋಲ್ ತುಂಬಿದ್ದ ಫ್ಯೂಸ್ ಬಲ್ಬು ಅಲ್ಲಿ ಅಸ್ಫೋಟನೆಯಾಗಿ ಕಾವಲುಗಾರನೊಬ್ಬನಿಗೆ ತೀವ್ರ ಗಾಯವಾಗಿ ಅಲ್ಲಿನು ಸತ್ತುಹೋದನು.

ಬಳ್ಳಾರಿಯ 'ರೈತ' ಪತ್ರಿಕೆಯ ಸಂಪಾದಕರಾದ ಶ್ರೀ ಚನ್ನಬಸಪ್ಪನವರ ಮನೆ ಮುಂದೆ ಪುಂಡರು ಗಲಭೆ ನಡೆಸಿದರೆಂದು ಹೇಳಲಾಗಿದೆ.

ಬಳ್ಳಾರಿಯಲ್ಲಿ ಉತ್ಸಾಹ ಸಮಾರಂಭ

ಬಳ್ಳಾರಿಯ ೮ ತಾಲ್ಲೂಕುಗಳು ಮೈಸೂರಿಗೆ ಸೇರಿದ ಶುಭಸಮಯದಲ್ಲಿ ನಿನ್ನೆ ಬಳ್ಳಾರಿಯಲ್ಲಿ ನಡೆದ ಸಮಾರಂಭಗಳಲ್ಲಿ ಸಾವಿರಾರು ಕನ್ನಡಿಗರ ಜನರು ಸಂತೋಷದಿಂದ ಭಾಗವಹಿಸಿದ್ದರು.

ನಿನ್ನೆ ಬೆಳಿಗ್ಗೆ ಅಲ್ಲಿನ ಪೋಲೀಸ್ ಮೈದಾನದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಧ್ವಜಾರೋಹಣ ಮಾಡಿದರು. ಸಂಜೆ ನಡೆದ ಬಹಿರಂಗ ಸಮಾರಂಭದಲ್ಲಿ ೩೦ ಸಾವಿರ ಜನರು ಸೇರಿದ್ದರು.

ಈ ಸಮಯದಲ್ಲಿ ಬಳ್ಳಾರಿ ಜನರಿಗೆ ಶ್ರೀಮನ್ಮಹಾರಾಜರು ಸಂತೋಷ ವ್ಯಕ್ತಪಡಿಸಿ ಕಳುಹಿಸಿದ್ದ ಸಂದೇಶವನ್ನು ಓದಲಾಯಿತು.

ಮುಖ್ಯಮಂತ್ರಿಗಳು ಭಾಷಣಮಾಡಿ, ಭಾಷಾಭಿಮಾನಗಳು ದೇಶದ ಐಕ್ಯತೆಗೆ ಧಕ್ಕೆ ತರಬಾರದು, ರಾಷ್ಟ್ರದ ಹಿತ ಬಹಳ ಮುಖ್ಯ, ಅದನ್ನು ಭಾರತದ ಎಲ್ಲ ಪ್ರಜೆಗಳೂ ಅರಿತು, ಸಹಕರಿಸಬೇಕು-ಎಂದು ತಿಳಿಸಿದರು.

ಮಹಿಳೆಯ ಜೋಪಾನಸದ್ಗುಣ ರಾಷ್ಟ್ರದ ಅಭಿವೃದ್ಧಿಗೆ ಅಳವಡಿಸಬೇಕು

ಉಳಿತಾಯ ಯೋಜನೆಯ ಸಮಾರಂಭದಲ್ಲಿ

ಮಹಾರಾಣಿಯವರ ಮನವಿ

ಮೈಸೂರು ೩

ನಮ್ಮ ರಾಷ್ಟ್ರನಾಯಕರು ಹೋರಾಡಿ, ಸ್ವಾತಂತ್ರ್ಯವನ್ನು ಗಳಿಸಿದರು. ನಮಗೆ ಅವರು ತೋರಿಸಿದ ಮಾರ್ಗದಿಂದ ಒಂದು ಸ್ಫೂರ್ತಿ ದೊರೆತು ನವಚೈತನ್ಯ ಉದಯಿಸಿದೆ. ಆದರೆ ಕೇವಲ ರಾಜಕೀಯ ಸ್ವಾತಂತ್ರ್ಯವು ನಮ್ಮ ಅಪೇಕ್ಷೆಗಳನ್ನು ಈಡೇರಿಸಿಲ್ಲ. ಈ ಸ್ವಾತಂತ್ರ್ಯವನ್ನು ಉಳಿಸಿಕೊಂಡು ರಾಷ್ಟ್ರವನ್ನು ಸ್ವಾವಲಂಬಿಯಾಗುವಂತೆ ಮಾಡುವುದಕ್ಕೆ, ದೇಶದ ಎಲ್ಲಾ ಪ್ರಜೆಗಳೂ, ಅದರಲ್ಲೂ ಮಹಿಳೆಯರೂ ನೆರವಾಗಬೇಕಾದುದು ಅತ್ಯಾವಶ್ಯಕ. ನಮ್ಮ ಮನೆಯನ್ನು ನಾವು ಅಚ್ಚುಕಟ್ಟುಮಾಡಿಕೊಳ್ಳದೆ ಇನ್ನಾರಾದರೂ ಬಂದು ಮಾಡಲಿ ಎಂದು ಸುಮ್ಮನಿರಬಹುದೇ ? ಸ್ತ್ರೀಯರಲ್ಲಿ ಸಹಜವಾಗಿರತಕ್ಕ ಜೋಪಾನಮಾಡಿರುವ ಸದ್ಗುಣವನ್ನು ಈ ರಾಷ್ಟ್ರೋನ್ನತಿಯ ಕಾರ್ಯಕ್ಕೆ ಅಳವಡಿಸಿ ಇಂದಿನಿಂದಲೇ ಅದಕ್ಕೆ ದೃಢಸಂಕಲ್ಪಮಾಡಿ ಆದರ್ಶರಾಗುವರೆಂದು ನಂಬಿದ್ದೇವೆ-ಎಂದು ಮಹಾರಾಣಿಯವರು ಮೊನ್ನೆ ಇಲ್ಲಿ ರಾಷ್ಟ್ರದ ಉಳಿತಾಯ ಯೋಜನಾ ಪ್ರಾರಂಭೋತ್ಸವದಲ್ಲಿ ತಿಳಿಸಿದರು.

ಗ್ರಾಮಗಳಲ್ಲಿ ವಾಸಿಸುವ ಕೃಷಿಕಗೃಹಿಣಿಯರೇ ನೂರಕ್ಕೆ ಎಂಭತ್ತರಷ್ಟಿದ್ದಾರೆ. ಅವರಲ್ಲಿ ಬಹುಮಂದಿ ಅನಕ್ಷರಸ್ಥೆಯರು. ಅವರು ವಿದ್ಯಾವತಿಯರಲ್ಲದಿದ್ದರೂ, ಬುದ್ಧಿವಂತಿಕೆಯಿಂದ ಬಲು ಚೆನ್ನಾಗಿ ಸಂಸಾರ ನಿರ್ವಹಣೆಯನ್ನು ಮಾಡುತ್ತಿರುವರು ಇವರ ಮೂಲಶಕ್ತಿ, ನಮ್ಮಲ್ಲಿರತಕ್ಕ ನಿರ್ವಹಣಾ ಚತುರತೆಯೇ ವಿನಾ ಶಾಲಾಕಾಲೇಜುಗಳಿಂದ ಅಲ್ಲ.

ಸಂಸಾರ ನಿರ್ವಹಣೆ, ಮಕ್ಕಳ ಪೋಷಣೆ ಇಷ್ಟು ಮಾತ್ರ ಗೃಹಿಣಿಯರ ಕರ್ತವ್ಯವೆಂದರೆ ಸಾಲದು. ಸದಾಚಾರ, ದೈವಭಕ್ತಿ, ಅತಿಥಿಬಂಧುಗಳ ಸತ್ಕಾರ, ಸಮಾಜ ಸೇವೆ ಮುಂತಾದ ಹಲವು ಕರ್ತವ್ಯಗಳು ಅವರ ಪಾಲಿಗೆ ಬಂದಿವೆ. ಮಕ್ಕಳನ್ನು ಸತ್ಪ್ರಜೆಗಳನ್ನಾಗಿ ಮಾಡುವ ಹೊಣೆ ಅವರದು. ಇವರ ಜೊತೆಗೆ ರಾಷ್ಟ್ರೋದ್ಧಾರ, ದೇಶಾಭಿಮಾನ, ರಾಜ್ಯಾಡಳಿತ, ಅವಶ್ಯಬಿದ್ದರೆ ಸಂಗ್ರಾಮ ನಿರ್ವಾಹ ಮುಂತಾದ ಮಹಾಕಾರ್ಯಗಳನ್ನು ಯಶಸ್ವಿಯಾಗಿ ನೆರವೇರಿಸಿದ ಮಹಾನುಭಾವೆಯರು ಭರತಖಂಡದ ಇತಿಹಾಸದಲ್ಲಿ ವಿರಾಜಮಾನರಾಗಿದ್ದಾರೆ. ರಾಷ್ಟ್ರವೆಂಬ ರಥವನ್ನು ಸಾಗಿಸುವುದರಲ್ಲಿ ಪುರುಷರು ಪಡೆದಿರುವ ನಿರ್ವಾಹ ಶಕ್ತಿಗೆ ಸಮನಾದ ಶಕ್ತಿಯನ್ನು ಮಹಿಳೆಯರೂ ಪಡೆದಿರಬೇಕು. ರಾಷ್ಟ್ರೋದ್ಧಾರದಂಥ ಮಹಾಕಾರ್ಯದಲ್ಲಿ ಅವರ ಸಹಾಯ ಅವಶ್ಯಕವಾಗಿ ಬೇಕೇ ಬೇಕು ಅಂಥ ಮಹಿಳೆಯರನ್ನು ಪಡೆದಿರುವುದು ರಾಷ್ಟ್ರದ ಭಾಗ್ಯ.

ಪ್ರತಿಸಂಸಾರದಲ್ಲೂ ನೀವು ಯಥಾಶಕ್ತಿ ಅಲ್ಪಸ್ವಲ್ಪ ಉಳಿತಾಯಮಾಡಿದರೆ "ಹನಿಗೂಡಿದರೆ ಹಳ್ಳ" ಎಂಬಂತೆ ಅದೇ ಅಪಾರವಾದ ನಿಧಿಯಾಗುವುದು. ಆರ್ಥಿಕ ಉಳಿತಾಯವೇ ನಿಮ್ಮ ಸಮಿತಿಯ ಏಕೈಕ ಧ್ಯೇಯವಾಗಿರುವುದರಿಂದ ನಿಮ್ಮೆಲ್ಲರ ಮನಃಪೂರ್ವಕವಾದ ಪ್ರಯತ್ನವು ಈ ಯೋಜನೆಯ ಸಾಫಲ್ಯಕ್ಕೆ ನೆರವಾಗುವುದೆಂಬುದೇ ನಮ್ಮ ನಿರೀಕ್ಷೆಯಾಗಿದೆ. "ತೊಟ್ಟಿಲನ್ನು ತೂಗುವ ಕೈಯೇ ಪ್ರಪಂಚವನ್ನು ಆಳುವ ಶಕ್ತಿ" ಎಂಬ ಗಾದೆಯಿರುವುದನ್ನು ನಾವು ಗಮನಿಸಬೇಕು.

ನೀವು ನಿಮ್ಮ ವ್ಯವಹಾರಗಳಲ್ಲಿ ಹೆಜ್ಜೆಹೆಜ್ಜೆಗೂ ಎಚ್ಚರಿಕೆಯಿಂದಿರುತ್ತಿದ್ದರೆ ಮಿತವ್ಯಯವು ಸಾಧ್ಯವಿದೆ. ಈ ರೀತಿ ಗೃಹಿಣಿಯರ ಪ್ರಯತ್ನಗಳಿಂದ ಮಿತವ್ಯಯವು ರೂಢಿಗೆ ಬಂದರೆ, ಆ ಸಂಸಾರವು ಕ್ರಮೇಣ ತಮ್ಮ ಸಂಪಾದನೆಯಲ್ಲಿ ಸ್ವಲ್ಪಸ್ವಲ್ಪ ಉಳಿತಾಯ ಮಾಡುವುದಕ್ಕೂ ಸಾಧ್ಯವಾಗುವುದು

ಇಂಥ ಮಹಿಳಾ ಪರಿಷತ್ತುಗಳೂ ಅವುಗಳ ಸೇವಾಕ್ಷೇತ್ರಗಳೂ ವಿಸ್ತಾರಗೊಂಡು ಮಹಿಳೆಯರ ಮೇಲ್ಮೆಗೆ ಸಾಧನವಾಗಲೆಂದು ಹಾರೈಸುತ್ತೇನೆ-ಎಂದು ಹೇಳಿದರು.

ದೇಶಾದ್ಯಂತ ಗಾಂಧಿ ಜಯಂತಿ

ರಾಷ್ಟ್ರೀಯ ವಿಸ್ತರಣ ಯೋಜನಾ ಉದ್ಘಾಟನೆ

ಭಾರತಾದ್ಯಂತ ಮಹಾತ್ಮ ಗಾಂಧಿಯವರ ೮೪ನೇ ಜನ್ಮ ದಿನೋತ್ಸವವನ್ನು ಅತ್ಯಂತ ವೈಭವದಿಂದ ನಿನ್ನೆಯದಿನ ಆಚರಿಸಲಾಯಿತು. ದೇಶದ ಎಲ್ಲಾ ಪ್ರಮುಖ ಪಟ್ಟಣಗಳಲ್ಲಿ ಈ ಜಯಂತಿಯ ಅಂಗವಾಗಿ ಮಾಮೂಲಿನಂತೆ ಸಾಮೂಹಿಕ ಪ್ರಾರ್ಥನೆ, ಸೂತ್ರಯಜ್ಞ ಮುಂತಾದುವು ನಡೆದುವು.

ಇದಕ್ಕಿಂತ ಮುಖ್ಯವಾಗಿ ಮಹಾತ್ಮ ಗಾಂಧಿಯವರಿಂದ ಸೂಚಕವಾದ ರಚನಾತ್ಮಕ ಕಾರ್ಯಗಳಲ್ಲಿ ಅನೇಕವನ್ನು ಆಚರಣೆಗೆ ತರಲಾಯಿತು.

ಕಳೆದ ಸಾಲಿನಲ್ಲಿ ಇದೇದಿನ ದೇಶಾದ್ಯಂತ ಜನಪದ ಯೋಜನೆಯನ್ನು ಪ್ರಾರಂಭಿಸಲಾಯಿತು.

ನಿನ್ನೆಯದಿನ ಭಾರತದಲ್ಲಿ ನಾನಾಕಡೆ ರಾಷ್ಟ್ರೀಯ ಅಭಿವೃದ್ಧಿ ಯೋಜನಾ ಕಾರ್ಯಗಳನ್ನು ಗ್ರಾಮಜೀವನ ಅಭಿವೃದ್ಧಿಗಾಗಿ ಉದ್ಘಾಟಿಸಲಾಯಿತು. ವಿದ್ಯಾಭ್ಯಾಸ, ಆರೋಗ್ಯ ನೈರ್ಮಲ್ಯ, ಸಮಾಜ ಶಿಕ್ಷಣ ನಿರುದ್ಯೋಗ ಪರಿಹಾರಗಳೇ ಈ ಯೋಜನೆಯ ಪ್ರಮುಖ ಕಾರ್ಯಗಳು.

ಪಂಚವಾರ್ಷಿಕ ಯೋಜನೆಯ ಅಂಗವಾಗಿ ನಿರುದ್ಯೋಗವನ್ನು ಪರಿಹರಿಸಲು ೮೦೦೦೦ ಮಂದಿ ಉಪಾಧ್ಯಾಯರನ್ನು ನೇಮಿಸಿ ದೇಶದಲ್ಲಿ ಅನಕ್ಷರತೆಯನ್ನು ಹೋಗಲಾಡಿಸುವ ಕಾರ್ಯವನ್ನು ಪ್ರಾರಂಭಿಸಲಾಗಿದೆ.

ನಿನ್ನೆಯದಿನದಿಂದ ಗಾಂಧಿ ಜಯಂತಿ ಆಚರಣೆ ಕಾಲದಲ್ಲಿ ಸುಮಾರು ಒಂದು ಕೋಟಿ ರೂಪಾಯಿಗಳಷ್ಟು ಖಾದಿಯನ್ನು ಮಾರುವ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಎಲ್ಲಾ ಪ್ರಾಂತ್ಯಗಳಲ್ಲಿ ಪೋಲೀಸ್ ಮುಂತಾದ ಅಧಿಕಾರಿಗಳೂ ಸಹ ತಮ್ಮ ಸ್ವಂತ ಉಪಯೋಗಕ್ಕೆ ಖಾದಿಯನ್ನು ಉಪಯೋಗಿಸುವಂತೆ ಮನವಿ ಮಾಡಲಾಗುತ್ತಿದೆ. ಇದಕ್ಕೆ ಪುರಸ್ಕಾರವೂ ದೊರೆಯುತ್ತಿದೆ.

ದೆಹಲಿಯಲ್ಲಿ ನಿನ್ನೆಯದಿನ ಸಾವಿರಾರು ಜನರು ರಾಜಘಾಟಿನಲ್ಲಿರುವ ಮಹಾತ್ಮರ ಸಮಾಧಿಗೆ ಭೇಟಿಯಿತ್ತು ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿ ಸಾಮೂಹಿಕ ಪ್ರಾರ್ಥನೆ ಮತ್ತು ಸೂತ್ರಯಜ್ಞದಲ್ಲಿ ಭಾಗವಹಿಸಿದ್ದರು.

ರಾಷ್ಟ್ರಾಧ್ಯಕ್ಷರು ಮತ್ತು ಕೊಲಂಬೋ ಯೋಜನಾ ಸಮ್ಮೇಳನದಲ್ಲಿ ಭಾಗವಹಿಸುತ್ತಲಿರುವ ೧೬ ರಾಷ್ಟ್ರಗಳ ಮತ್ತು ವಿಶ್ವಸಂಸ್ಥೆಯ ಪ್ರತಿನಿಧಿಗಳೂ ಸಹ ಮಹಾತ್ಮರ ಸಮಾಧಿಗೆ ಭೇಟಿಯಿತ್ತು ಪುಷ್ಪಗಳನ್ನು ಅರ್ಪಿಸಿದರು.

ಭಾರತದಲ್ಲೇ ಅಲ್ಲದೆ ವಿದೇಶಗಳಲ್ಲೂ ಭಾರತೀಯರು ಮತ್ತು ಅವರ ಹಿತೈಷಿಗಳು ಗಾಂಧಿ ಜಯಂತಿಯನ್ನು ಆಚರಿಸಿದರು.

ಲಂಡನ್ನಿನಲ್ಲಿ ೧೯೩೧ರಲ್ಲಿ ಮಹಾತ್ಮ ಗಾಂಧಿಯವರು ೨ನೇ ಚಕ್ರಗೋಷ್ಠಿಯ ಕಾಲದಲ್ಲಿ ಬಿಡಾರಮಾಡಿದ್ದ ಕಿಂಗ್ಸ್ಲೆ ಹಾಲಿನಲ್ಲಿ ಅವರ ಭಾವಚಿತ್ರವನ್ನು ಭಾರತ ಹೈಕಮೀಷನರ್ ಶ್ರೀ ಬಿ.ಜಿ. ಖೇರ್‌ರವರು ಅನಾವರಣ ಮಾಡಿದರು.

ಉಪಾಧ್ಯಾಯರ ಸಮ್ಮೇಳನ

ಅಖಿಲಭಾರತ ಉಪಾಧ್ಯಾಯರುಗಳ ಸಮ್ಮೇಳನವೊಂದು ನಿನ್ನೆಯದಿನ ದೆಹಲಿಯಲ್ಲಿ ಪ್ರಾರಂಭವಾಯಿತು. ವಿದ್ಯಾರ್ಥಿಗಳಲ್ಲಿ ಅವಿಧೇಯತೆ, ಮತ್ತು ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ನಡುವೆ ಘರ್ಷಣೆ ಮುಂತಾದುವನ್ನು ತಪ್ಪಿಸಿ, ಉಪಾಧ್ಯಾಯರ ವಿದ್ಯಾರ್ಥಿಗಳ ಸಂಬಂಧವು ಮಧುರವಾಗಿ ಬೆಳೆಯಬೇಕು. ಅಂತಹ ವಾತಾವರಣವನ್ನು ಕಲ್ಪಿಸುವುದು ಉಪಾಧ್ಯಾಯರ ಕರ್ತವ್ಯ ಎಂದು ತಿಳಿಸಿ ರಾಷ್ಟ್ರಾಧ್ಯಕ್ಷರು ಒಂದು ಸಂದೇಶವನ್ನು ಕಳುಹಿಸಿದ್ದರು.

ಸಂಗೀತ ಕಛೇರಿ

ರಾಜಧಾನಿಯ ಕಾಶಿಪತಿಲಾಯದಲ್ಲಿರುವ ಗಣಪತಿ ಮಂದಿರದಲ್ಲಿ ಈದಿನ ಸಂಜೆ ೬-೩೦ ಗಂಟೆಗೆ ವಿದ್ವಾನ್ ಡಿ. ಎಂ. ಮುನಿವೆಂಕಟಪ್ಪನವರಿಂದ ಸಂಗೀತ ಕಛೇರಿ ಏರ್ಪಡಿಸಲಾಗಿದೆ.

ರಣಜಿತ್

1-10-53 ರಿಂದ ಅಮೋಘ ಪ್ರಾರಂಭ

ದಿನವಹಿ 3 ಪ್ರದರ್ಶನಗಳು

ಮೀನಾಕುಮಾರಿ, ಈಶ್ವರಲಾಲ್, ದುರ್ಗಾಖೋಟೆ, ನಿರೂಪರಾಯ್ ನಟಿಸಿರುವ

-- ನೌಲಖಾಹಾರ್ --

[ಹಿಂದಿ]

ಪ್ರಕಾಶಕರು ಮತ್ತು ಮುದ್ರಕರು.

ಜಿ. ಎಲ್. ಸ್ವಾಮಿ.

ಸಮಾಚಾರ ಪ್ರೆಸ್, ಮೈಸೂರು.

R8-S. 58/53-54

ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಿಂದ

ತಾ|| 3—10—53

ನೋಟಿಫಿಕೇಷನ್

ವಿಜಯದಶಮೀ ದಿವಸ ಮಹಾಸ್ವಾಮಿಯವರ ಮೆರವಣಿಗೆಯನ್ನು ನೋಡಲು ಮಾಮೂಲಿನಂತೆ ದೇವರಾಜ ಮಾರ್ಕೆಟ್ ಮಹಡಿಯಮೇಲೆ ಅವಕಾಶ ಕಲ್ಪಿಸಿರುತ್ತೆ.

ಈ ಬಾಬನ್ನು 5—10—53ನೇ ಸೋಮವಾರ ದೇವರಾಜ ಮಾರ್ಕೆಟ್ ಆಫೀಸಿನಲ್ಲಿ ಏಲಂ ಪಡಿಸಲಾಗುತ್ತೆ. ಇಷ್ಟವುಳ್ಳವರು ಹರಾಜು ಇಸ್ತಿಹಾರು ಷರತ್ತಿಗೆ ಒಳಪಟ್ಟು ಹರಾಜಿನಲ್ಲಿ ಪಡೆಯಬಹುದು. ಹೆಚ್ಚಿನ ವಿಷಯವನ್ನು ಮೇಲ್ಕಂಡ ಆಫೀಸಿನಲ್ಲಿ ತಿಳಿಯಬಹುದು.

(ಸಹಿ) ಜಿ. ತಿಮ್ಮಯ್ಯ

ರೆವಿನ್ಯೂ ಆಫೀಸರ್.

TENDER NOTIFICATION

Tenders for running a Canteen during the Exhibition in the Eastern Wing of the Exhibition Building are invited with a deposit of Rs. 100/- Last date for receipt of tender:-5th October, 1953 at 3 P. M.

For further Particulars contact:

The General Secretary,

DASARA EXHIBITION, Mysore.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೪೯

೫-೧೦-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾಂಗ್ರೆಸ್ಸಿನ ಭಿನ್ನತೆ ಚರ್ಚಿಸಲು ವಿಶೇಷ ಅಧಿವೇಶನ

ಎಂ. ಪಿ. ಸಿ. ಸಿ. ಯಲ್ಲಿ ನಿರ್ಧಾರ

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧಿವೇಶನವು ನಿನ್ನೆ ಕೋಲಾರದ ಬಂಗಾರಪೇಟೆಯಲ್ಲಿ ಶ್ರೀ ಹೆಚ್. ಕೆ. ವೀರಣ್ಣಗೌಡರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿ, ಆ ದಿನವೇ ಮುಕ್ತಾಯಗೊಂಡಿತು.

ಪ್ರಾಂತ್ಯಗಳ ಪುನರ್ವಿಂಗಡನೆ ಸಂಬಂಧದಲ್ಲಿ ಕೇಂದ್ರ ಸರ್ಕಾರವು ಒಂದು ಕಮಿಷನ್ ನೇಮಿಸಲಿರುವುದರಿಂದ ಇನ್ನು ಮುಂದೆ ಭಾಷಾವಾರು ಪ್ರಾಂತ್ಯಗಳ ಬಗ್ಗೆ ಉಪವಾಸ, ಸತ್ಯಾಗ್ರಹ ಮುಂತಾದ ಉಗ್ರ ಕಾರ್ಯಕ್ರಮಗಳನ್ನು ಯಾರು ಕೈಗೊಳ್ಳಕೂಡದೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಿಳಿಸಿದರು.

ದೇಶದ ಮುಂದಿರುವ ನಿರುದ್ಯೋಗ ಸಮಸ್ಯೆಯನ್ನು ಅವರು ಪ್ರಸ್ತಾಪಿಸಿ, ಪ್ರತಿಯೊಬ್ಬರು ತನ್ನ ಶಕ್ತ್ಯಾನುಸಾರ ದುಡಿದರೆ ಆರ್ಥಿಕ ಜೀವನ ಮಟ್ಟ ಉತ್ತಮಗೊಳ್ಳುವುದೆಂದೂ, ಇದರಿಂದ ನಿರುದ್ಯೋಗ ಕಡಮೆ ಆಗುವುದೆಂದೂ, ಕೇಂದ್ರ ಸರ್ಕಾರ ಈ ಬಗ್ಗೆ ಕೈಗೊಂಡಿರುವ ಪಂಚವಾರ್ಷಿಕ ಯೋಜನೆ ಮುಂತಾದ ಕಾರ್ಯಕ್ರಮಗಳಲ್ಲಿ ಜನರು ಸಹಕರಿಸಬೇಕೆಂದೂ ಅವರು ಮನವಿ ಮಾಡಿದರು.

ದೇಶದಲ್ಲಿ ನಿರುದ್ಯೋಗದ ಹೊರೆಯನ್ನು ಕಡಮೆ ಮಾಡಲು ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಮತ್ತು ಪ್ರಾಂತೀಯ ಸರ್ಕಾರಗಳನ್ನು ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು.

ಮೈಸೂರು ಮುಖ್ಯ ಮಂತ್ರಿಗಳು ಕಾಂಗ್ರೆಸ್ ಸಂಸ್ಥೆ ಮತ್ತು ಸದಸ್ಯರ ಬಗ್ಗೆ ಟೀಕೆ ಮಾಡಿದುದು ಮತ್ತು ಕಾಂಗ್ರೆಸ್ ಅಧ್ಯಕ್ಷರು ಮುಖ್ಯಮಂತ್ರಿಗಳ ಬಗ್ಗೆ ಟೀಕೆ ಮಾಡಿದುದು ಈ ವಿಚಾರಗಳನ್ನು ಚರ್ಚಿಸಲು ಎಂ.ಪಿ.ಸಿ.ಸಿ. ವಿಶೇಷ ಅಧಿವೇಶನವು ಬೆಂಗಳೂರಿನಲ್ಲಿ ಅಕ್ಟೋಬರ್ ೩೧ನೇ ತಾರೀಖು ನಡೆಯಬೇಕೆಂದು ಅಧ್ಯಕ್ಷರು ಮಂಡಿಸಿದ ನಿರ್ಣಯ ಅಂಗೀಕೃತವಾಯಿತು.

ಬಳ್ಳಾರಿಯ ೭ ತಾಲ್ಲೂಕುಗಳು ಮೈಸೂರಿಗೆ ಸೇರಿದ ಮತ್ತು ನೂತನ ಆಂಧ್ರಪ್ರಾಂತ್ಯ ಪ್ರಾರಂಭಗಳ ಬಗ್ಗೆ ಶುಭಾಶಯ ಕೋರುವ ನಿರ್ಣಯವನ್ನು ಮಾಡಲಾಯಿತು

ವಿಶ್ವಸಂಸ್ಥೆಗೆ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು ಅಧ್ಯಕ್ಷರಾಗಿ ಚುನಾಯಿತರಾದುದಕ್ಕೆ ಅವರನ್ನು ಅಭಿವಂದಿಸಲಾಯಿತು.

ಪಾನನಿರೋಧವನ್ನು ಸಂಸ್ಥಾನದ ಎಲ್ಲ ಭಾಗಗಳಿಗೂ ವಿಸ್ತರಿಸಬೇಕೆಂಬ ನಿರ್ಣಯವು ಅಂಗೀಕೃತವಾಯಿತು.

ರಾಜಕೀಯದಲ್ಲಿ ನೊಂದವರಿಗೆ ಪರಿಹಾರ

ಮೈಸೂರು ರಾಜಕೀಯದಲ್ಲಿ ಭಾಗವಹಿಸಿ ಅದರಿಂದ ತೊಂದರೆಗೀಡಾದವರಿಗೆ ಪರಿಹಾರ ಒದಗಿಸಲು ಕೂಡಲೇ ಸರ್ಕಾರ ಮತ್ತು ಕಾಂಗ್ರೆಸ್ ಸೂಕ್ತ ವ್ಯವಸ್ಥೆ ಮಾಡಬೇಕೆಂದು ನಿನ್ನೆ ಬಂಗಾರಪೇಟೆಯಲ್ಲಿ ನಡೆದ ಸಂಸ್ಥಾನದ ರಾಜಕೀಯದಲ್ಲಿನೊಂದವರ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಗಿದೆ. ಶ್ರೀ ಹೆಚ್. ಸಿದ್ದಯ್ಯನವರು ಸಮ್ಮೇಳನದ ಆರಂಭೋತ್ಸವವನ್ನು ನಡೆಸಿದರು. ಶ್ರೀ ಟಿ. ಮರಿಯಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ವಿಶ್ವದಲ್ಲೇ ಭಾರಿ ಮೋಟಾರು

ಸುಮಾರು ೮೫ ಲಕ್ಷ ಫ್ರಾಂಕುಗಳ ಬೆಲೆ ಬಾಳುವ ಅತ್ಯಂತ ಉತ್ತಮ ರೀತಿಯ ಮೋಟಾರುಕಾರನ್ನು ಸೌದಿ ಅರೇಬಿಯಾ ದೊರೆಗೆ ಮುಂದಿನವಾರ ಬಹುಮಾನಕೊಡಲು ಪ್ಯಾರಿಸ್‌ನಲ್ಲಿ ಒಂದು ಮೋಟಾರು ಕಂಪೆನಿಯ ೫೦ ಜನ ಕಾರ್ಮಿಕರು ರಾತ್ರಿ ಹಗಲು ಅದರ ತಯಾರಿಕೆಯಲ್ಲಿ ತೊಡಗಿರುವುದಾಗಿ ವರದಿಯಾಗಿದೆ.

ಈ ಮೋಟಾರು ಸುಮಾರು ೭೨ ಅಡಿ ಉದ್ದವಿದ್ದು ಅದರಲ್ಲಿಯೇ ವಾಸದ ಎಲ್ಲಾ ವ್ಯವಸ್ಥೆಗಳನ್ನು ಏರ್ಪಡಿಸಲಾಗಿದೆ. ಆ ವಾಹನವು ಚಲಿಸುವಾಗ ದೊರೆಯ ಅಂಗರಕ್ಷಕರು ಸಹ ಅದರಲ್ಲಿ ಹೊರಗಡೆ ಇರಲು ವ್ಯವಸ್ಥೆಯಿದೆ.

ಬೆಂಗಳೂರು ಕೇಂದ್ರಕ್ಕೆ ಸೇರಬೇಕಂತೆ

ವಿವಿಧ ಭಾಷೆ ಮಾತನಾಡುವ ಜನರಿರುವ ಬೆಂಗಳೂರು, ಬೊಂಬಾಯಿ, ಕಲ್ಕತ್ತ, ಮದ್ರಾಸ್, ನಾಗಪುರ, ಹೈದರಾಬಾದ್ ಮತ್ತು ಅಮೃತಸರ ಮುಂತಾದ ನಗರಗಳನ್ನು ಕೇಂದ್ರ ಆಡಳಿತಕ್ಕೆ ಒಳಪಡಿಸಬೇಕೆಂದು ಅಖಿಲಭಾರತ ಭಾಷಾವಾರು ಪ್ರಾಂತ್ಯ ಸಮ್ಮೇಳನದ ಅಧ್ಯಕ್ಷ ಡಾ|| ಲಂಕಾಸುಂದರಂರವರು ಸಲಹೆ ಮಾಡಿದ್ದಾರೆ.

ಡಾ|| ಮೊಸಾದಿಕ್‌ರಿಗೆ ಮರಣ ದಂಡನೆ ವಿಧಿಸಿ

ಪರ್ಷಿಯಾ ಮಾಜಿ ಪ್ರಧಾನಿ ಡಾ|| ಮುಸಾದಿಕ್‌ರವರು ಷಾರವರ ಆಜ್ಞೆಯನ್ನು ಉಲ್ಲಂಘಿಸಿ ದೇಶದ್ರೋಹ ಕೆಲಸದಲ್ಲಿ ತೊಡಗಿದ್ದರಿಂದ ಅವರಿಗೆ ಮರಣದಂಡನೆಯನ್ನು ವಿಧಿಸಬೇಕೆಂದು ಪರ್ಷಿಯಾ ಸೈನ್ಯದ ಪ್ರಾಸಿಕ್ಯೂಟರ್‌ರವರು ನ್ಯಾಯಾಸ್ಥಾನದಲ್ಲಿ ತಿಳಿಸಿದ್ದಾರೆ.

ಕಮ್ಯೂನಿಸ್ಟರಾದರೆ ಮರಣದಂಡನೆ

ಇರಾನಿನಲ್ಲಿ ಕಮ್ಯೂನಿಸ್ಟ ಚಟುವಟಿಕೆಯಲ್ಲಿ ತೊಡಗುವವರಿಗೆ ಮರಣದಂಡನೆಯನ್ನು ವಿಧಿಸಲಾಗುವುದೆಂದು ಅಲ್ಲಿಯ ಮಿಲಿಟರಿ ಅಧಿಕಾರಿಗಳು ಪ್ರಕಟಿಸಿದ್ದಾರೆ.

ದನಗಳ ಪ್ರದರ್ಶನ

ಮೈಸೂರು ೫

ಇದೇ ೧೯ ನೇ ತಾರೀಖು ನಗರದ ಪೀಪಲ್ಸ್ ಪಾರ್ಕಿನಲ್ಲಿ ದನಕರುಗಳ ಪ್ರದರ್ಶನವೊಂದು ನಡೆದು ಉತ್ತಮ ರಾಸುಗಳಿಗೆ ಬಹುಮಾನವನ್ನು ಕೊಡಲಾಗುತ್ತದೆ.

ಗಂಟೆಗೆ ೭೫೩.೪ ಮೈಲಿ ವೇಗದ ವಿಮಾನ

ಗಂಟೆಗೆ ೭೫೩.೪ ಮೈಲಿ ವೇಗದಲ್ಲಿ ಚಲಿಸುವ ವಿಮಾನವೊಂದನ್ನು ಅಮೆರಿಕಾವು ಕಂಡುಹಿಡಿದು ವಿಶ್ವದ ದಾಖಲೆಯನ್ನು ಮುಂದಿರುವುದಾಗಿ ತಿಳಿಯಬರುತ್ತದೆ.

ಕಾಂಗ್ರೆಸ್ ಕೆಲಸಗಾರರು ಪ್ರಚಾರ ಕಾರ್ಯಕ್ಕೆ

ಸರ್ಕಾರದವರು ಕೈಗೊಂಡಿರುವ ಅನೇಕ ಸಾಮಾಜಿಕ ಅಭಿವೃದ್ಧಿ ಯೋಜನೆಗಳನ್ನು ಪ್ರಚುರ ಪಡಿಸಲು ಮತ್ತು ಸರ್ಕಾರಕ್ಕೂ ಮತ್ತು ಜನರಿಗೂ ಸಂಪರ್ಕ ಏರ್ಪಡಿಸಲು ಪೂರ್ವ ಕಾಲದ ಕಾಂಗ್ರೆಸ್ ಕೆಲಸಗಾರರನ್ನು ನೇಮಿಸಿಕೊಳ್ಳಬೇಕೆಂದು ತಮಿಳುನಾಡು ಕಾಂಗ್ರೆಸ್ ಕೆಲಸಗಾರರ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಗಿದೆ.

ದಸರಾ ವಸ್ತುಪ್ರದರ್ಶನ

ಮೈಸೂರು ದಸರಾ ವಸ್ತುಪ್ರದರ್ಶನವನ್ನು ಅಕ್ಟೋಬರ್ ೮ನೇ ತಾರೀಖು ಸಂಜೆ ೫ಗಂಟೆಗೆ ವಿಧಾನ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಕೆ. ಟಿ. ಭಾಷ್ಯಂರವರು ನೆರವೇರಿಸುವರು.

ಮಲಂಪೂಜಾ ಯೋಜನೆ ಪರಿಶೀಲನೆ

ಮಲಬಾರ್ ಕ್ಷೇತ್ರದಲ್ಲಿರುವ ಮಲಂಪೂಜಾ ಯೋಜನೆಯ ಕಾರ್ಯಗಳನ್ನು ನಿನ್ನೆ ಪ್ರಧಾನಿ ನೆಹರೂರವರು ಪರಿಶೀಲಿಸಿದರು.

ಸಂಸ್ಥಾನದ ೫ ಜಿಲ್ಲೆಗಳಲ್ಲಿ ಪಾನನಿರೋಧವು ಯಶಸ್ವಿಯಾಗಿ ನಡೆಯದೆ ಕಳ್ಳಭಟ್ಟಿ ತಯಾರಿಕೆ ಹೆಚ್ಚಾಗಿ ಜನರ ಆರೋಗ್ಯ ಕೆಡುತ್ತಿರುವುದರಿಂದ ಅದನ್ನು ರದ್ದುಮಾಡಬೇಕೆಂಬ ಶ್ರೀ ಮುನಿವೀರಪ್ಪನವರ ನಿರ್ಣಯವು ಚರ್ಚೆಗೆಬಂದು ವಾಪಸು ತೆಗೆದುಕೊಳ್ಳಲಾಯಿತು.

ಶ್ರೀಗಳಾದ ಬಿ. ಎಂ. ಶ್ರೀನಿವಾಸಯ್ಯ ಮತ್ತು ಎಂ. ಎನ್. ಶ್ರೀನಿವಾಸಮೂರ್ತಿಗಳ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು.

ಭಿಕ್ಷಾ ಸತ್ಯಾಗ್ರಹ

ಮೈಸೂರು ೫

ವಾಣಿವಿಲಾಸ ನೀರಿನ ನಿವೃತ್ತ ಕೆಲಸಗಾರರು ೭ನೇ ತಾರೀಖಿನಿಂದ 'ಭಿಕ್ಷಾ ಸತ್ಯಾಗ್ರಹ"ವನ್ನು ನಡೆಸಲು ನಿರ್ಧರಿಸಿರುವುದಾಗಿ ಸಂಘದ ಕಾರ್ಯದರ್ಶಿಯವರು ತಿಳಿಸುತ್ತಾರೆ. ಆದಿನ ಅವರು ನಗರದ ಬೀದಿಗಳಲ್ಲೆಲ್ಲಾ ಭಿಕ್ಷೆಯನ್ನು ಬೇಡುತ್ತಾರೆ.

೧೯೪೭ ರಲ್ಲಿ ಮೈಸೂರು ಸರ್ಕಾರದವರು ಈ ಕೆಲಸಗಾರರಿಗೆ ಪೆನ್‌ಷನ್ ಕೊಡಬೇಕೆಂದು ತೀರ್ಮಾನಿಸಿದ್ದರೂ ಪುರಸಭೆಯವರು ತಮ್ಮ ಭಾಗದ ಹಣವನ್ನು ಇನ್ನು ಕೊಟ್ಟಿಲ್ಲವಾಗಿ, ಆ ನಿವೃತ್ತ ನೌಕರರು ಈರೀತಿ ಕ್ರಮನಡೆಸಲಿರುವರು ಈ ಬಗ್ಗೆ ಪುರಸಭಾಧ್ಯಕ್ಷರಿಗೆ ತಿಳುವಳಿಕೆ ಪತ್ರವನ್ನು ಸಹ ಅವರು ಕಳುಹಿಸಿರುವುದಾಗಿ ತಿಳಿಯಬರುತ್ತದೆ.

ಎಂ. ವಿ. ಕೃಷ್ಣಪ್ಪನವರು ಮೈಸೂರಿಗೆ

ಬೆಂಗಳೂರು ೫

ಕೇಂದ್ರ ಆಹಾರ ಉಪಸಚಿವ ಶ್ರೀ ಎಂ. ವಿ. ಕೃಷ್ಣಪ್ಪನವರು ಇದೇ ೮ನೇ ತಾರೀಖು ಮೈಸೂರಿಗೆ ಆಗಮಿಸಿ ಒಂದುವಾರಕಾಲ ಸಂಸ್ಥಾನದಲ್ಲಿರುವರು. ಅಗ್ಗೆ ಮಂಡ್ಯದಲ್ಲಿ ಅವರು ಸಾಹಿತ್ಯ ಮತ್ತು ಕಲಾ ಪ್ರದರ್ಶನವನ್ನು ಪ್ರಾರಂಭಿಸಲಿರುವರು.

ಓಟಿನ ಸ್ವಾತಂತ್ರ್ಯವಿಲ್ಲ

ಗೇಣಿದಾರರ ಮಸೂದೆಯು ಶಾಸನಸಭೆಯಲ್ಲಿ ಚರ್ಚೆಗೆ ಬಂದಾಗ ತಮಗೆ ಓಟಿನ ಸ್ವಾತಂತ್ರವನ್ನು ಕೊಡಬೇಕೆಂದು ಹೈದರಾಬಾದಿನ ಕಾಂಗ್ರೆಸ್ ಶಾಸನಸಭಾಸದಸ್ಯರು ಪ್ರಧಾನಿ ನೆಹರೂರವರಿಗೆ ಮನವಿಮಾಡಿದ್ದಕ್ಕೆ ಇಂತಹ ಮುಖ್ಯ ಮಸೂದೆಗಳು ಚರ್ಚೆಗೆ ಬಂದಾಗ ಪಕ್ಷದ ಸದಸ್ಯರು ಓಟಿನ ಸ್ವಾತಂತ್ರ್ಯವನ್ನು ಕೇಳುವ ಸ್ವಾತಂತ್ರ್ಯವಿದ್ದರೆ ಯಾವ ಪಕ್ಷವಾಗಲಿ ಪಕ್ಷ ಸರ್ಕಾರವಾಗಲಿ ಕೆಲಸ ಮಾಡುವುದು ಸಾಧ್ಯವಿಲ್ಲ-ಎಂದು ನೆಹರೂ ಉತ್ತರವಿತ್ತಿದ್ದಾರೆ.

ಆಂಧ್ರದಲ್ಲಿರುವುದು ಏಕಪಕ್ಷ ಸರ್ಕಾರವಲ್ಲ

ಆಂಧ್ರದಲ್ಲಿ ಈಗ ಸ್ಥಾಪಿತವಾಗಿರುವುದು ಏಕಪಕ್ಷ ಸರ್ಕಾರವಲ್ಲ. ಅದು ಸಮ್ಮಿಶ್ರವಾದುದು ಎಂದು ಅಲ್ಲಿನ ಆರ್ಥಿಕಸಚಿವ ಶ್ರೀ ಟಿ ವಿಶ್ವನಾಥಂರವರು ಹೇಳಿದ್ದಾರೆ. ಅವರು ಅಲ್ಲಿಯ ಪ್ರಜಾಸೋಷಲಿಸ್ಟ ಪಕ್ಷದ ಅಧ್ಯಕ್ಷರು.

ಕಾಶ್ಮೀರ ರಾಷ್ಟ್ರೀಯ ಸಮ್ಮೇಳನಾಧ್ಯಕ್ಷ

ಕಾಶ್ಮೀರ ರಾಷ್ಟ್ರೀಯ ಸಮ್ಮೇಳನಾಧ್ಯಕ್ಷರಾಗಿ ಅಲ್ಲಿಯ ಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ರಾಜಸಭೆಯಲ್ಲಿ ಆಸನಗಳ ವ್ಯತ್ಯಾಸಬೇಡ

ನವರಾತ್ರಿ ಮಹೋತ್ಸವದ ಅಂಗವಾಗಿ ಈವರ್ಷ ನಡೆಯುವ ರಾಜಸಭೆಯಲ್ಲಿ ಮುಖ್ಯಮಂತ್ರಿಗಳಿಗೆ ಎತ್ತರವಾದ ಆಸನವನ್ನು ಮತ್ತು ಶ್ರೇಷ್ಠ ನ್ಯಾಯಾಧೀಶರಿಗೆ ಇದಕ್ಕಿಂತ ಸ್ವಲ್ಪ ಕಮ್ಮಿಯಾದ, ಕೆಳ ಮತ್ತು ಮೇಲುಮನೆ ಅಧ್ಯಕ್ಷರುಗಳಿಗೆ ಅದಕ್ಕಿಂತ ಸ್ವಲ್ಪ ಕಮ್ಮಿಯಾದ ಆಸನವನ್ನು, ಉಳಿದ ಮಂತ್ರಿಗಳಿಗೆ ಅದಕ್ಕಿಂತ ಕಮ್ಮಿಯಾದ ಆಸನವನ್ನು ಹಾಕುವಂತೆ ಈ ಮೇಲ್ಕಂಡ ಸಮಿತಿಯವರು ತೀರ್ಮಾನಿಸಿರುವಂತೆ ತಿಳಿಯಬರುತ್ತದೆ. ಈ ವಿಚಾರ ಮುಖ್ಯ ಮಂತ್ರಿಗಳಾದ ಶ್ರೀ ಹನುಮಂತಯ್ಯನವರಿಗೆ ಸರಿ ತಿಳಿಸಿರುವಂತೆ ಕಾಣುವುದಿಲ್ಲ ಈ ಕೂಡಲೇ ಮಾನ್ಯ ಮುಖ್ಯ ಮಂತ್ರಿಗಳು-ಈ ಸಮಿತಿಯ ತೀರ್ಮಾನವನ್ನು ವಿರೋಧಿಸಿ ಹಿಂದಿನ ವರ್ಷ ನಡೆದಂತೆ ಆ ಮಾದರಿಯಲ್ಲಾಗಲೀ ಅಥವಾ ಹಿಂದಿನ ಮಾಮೂಲು ಮೇರೆ ಕೆಳಗಡೆಯೇ ಕೂತು ಕೊಳ್ಳುವಂತೆಯಾಗಲೀ ಹುಕುಂ ಮಾಡುವುದು ಒಳ್ಳೆಯದೆಂದು ಕನ್ನಡಿಗರ ಪರವಾಗಿ ನಾನು ಪ್ರಾರ್ಥಿಸುತ್ತೇನೆ. ಇದು ಪ್ರಜಾಯುಗ. ಪ್ರಜೆಗಳ ಅಭಿಪ್ರಾಯಕ್ಕೆ ಮೀರಿ, ಸರ್ಕಾರ ಮತ್ತು ಪಕ್ಷವೇ ಆಗಲೀ, ಸಮಿತಿಯೇ ಆಗಲಿ, ನಡೆದುಕೊಳ್ಳುವುದು ಸರಿಯಾದ ಮಾರ್ಗವಲ್ಲ. ಪ್ರಜಾಭಿಪ್ರಾಯವನ್ನು ಬಿಟ್ಟು ಮುಖ್ಯ ಮಂತ್ರಿಗಳಿಗೆ ಒಂದು ತರಹ ಶ್ರೇಷ್ಠ ನ್ಯಾಯಾಧೀಶರಿಗೆ ಇನ್ನೊಂದು ತರಹ,ಶಾಸನ ಸಭಾ ಅಧ್ಯಕ್ಷರುಗಳಿಗೆ ಮತ್ತೊಂದು ತರಹ ಮತ್ತು ಬಾಕಿ-ಮಂತ್ರಿಗಳಿಗೆ ಬೇರೆ ತರಹ ಕುರ್ಚಿಗಳನ್ನು ಏರ್ಪಡಿಸುವುದು ರಾಜಸಭೆಯ ಭೂಷಣಕ್ಕಾಗಲೀ ಸಂಸ್ಥೆಗಾಗಲೀ, ಸರ್ಕಾರಕ್ಕಾಗಲೀ, ಶ್ರೀ ಚಾಮುಂಡಾಂಬಿಕೆಯ ಅನುಗ್ರಹವು ಎಂದಿಗೂ ದೊರೆಯುವುದಿಲ್ಲವೆಂದು ನನ್ನ ಅಭಿಪ್ರಾಯ.- ಎಂ. ಆರ್. ಸಿ. ಬಸಪ್ಪ.

ಹೋಟೇಲು ಕೆಲಸಗಾರರಿಗೆ ತೊಂದರೆ

ರಾತ್ರಿ ೧೧ ಗಂಟೆ ವೇಳೆ ಯಾವ ಹೋಟೆಲುಗಳೂ ತೆರೆದಿರಕೂಡದೆಂಬ ಬೊಂಬಾಯಿ ಸರ್ಕಾರದ ಆಜ್ಞೆಯಿಂದ ಸುಮಾರು ೩ ಸಾವಿರ ಮಂದಿ ಹೋಟೆಲ್ ಕೆಲಸಗಾರರು ನಿರುದ್ಯೋಗಿಗಳಾಗುವರೆಂದು ಅಂದಾಜು ಮಾಡಲಾಗಿದೆ. ಬೊಂಬಾಯಿ ಸರ್ಕಾರದ ಪಾನ ನಿರೋಧ ಮತ್ತು ಹೋಟೆಲುಗಳ ಮೇಲಿನ ಕಾಲಾವಧಿ ನಿಗದಿ ನೀತಿಯಿಂದ ಈಗಾಗಲೇ ೮ ಸಾವಿರ ಮಂದಿ ಹೋಟೆಲ್ ಕೆಲಸಗಾರರಿಗೆ ಕೆಲಸವಿಲ್ಲದಂತೆ ಆಗಿದೆ.

ಶ್ರೇಷ್ಠ ನ್ಯಾಯಾಧೀಶರುಗಳ ಸಮ್ಮೇಳನ

ಎ. ಮತ್ತು ಬಿ. ವಿಭಾಗಗಳ ಸಂಸ್ಥಾನಗಳ ಶ್ರೇಷ್ಠ ನ್ಯಾಯಾಧೀಶರುಗಳ ಸಮ್ಮೇಳನವು ದೆಹಲಿಯಲ್ಲಿ ಮುಂದಿನ ತಿಂಗಳು ೧೬ ಮತ್ತು ೧೭ನೇ ತಾರೀಖುಗಳಲ್ಲಿ ಭಾರತದ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಎಂ. ಪತಂಜಲಿಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನಡೆಯುವುದೆಂದು ತಿಳಿದುಬರುತ್ತದೆ.

ರಂಗೂನಿನಲ್ಲಿ ವಿದ್ಯಾರ್ಥಿಗಳ ಮೇಲೆ ಗೋಲಿಬಾರು

ಐವರಿಗೆ ತೀವ್ರ ಗಾಯ

ಅಕ್ಟೋಬರ್ ತಿಂಗಳು ಪೂರ್ತಾ ರಜಾ ಕೊಡದೇ ಇದ್ದುದಕ್ಕಾಗಿ ವಿದ್ಯಾರ್ಥಿಗಳು ನಡೆಸಿದ ಪ್ರದರ್ಶನವನ್ನು ಅಡಗಿಸಲು ಪೋಲೀಸರು ಗುಂಡು ಹಾರಿಸಿದರೆಂದೂ, ಇದರಿಂದ ಐವರಿಗೆ ಗಾಯವಾಯಿತೆಂದೂ ವರದಿ ಆಗಿದೆ. ರಜಾಕ್ಕಾಗಿ ಕಮ್ಯೂನಿಸ್ಟರಿಂದ ಪ್ರೇರೇಪಿತರಾದ ವಿದ್ಯಾರ್ಥಿಗಳು ಮುಷ್ಕರ ಹೂಡಿ ರಂಗೂನಿನಲ್ಲಿ ಪ್ರದರ್ಶನ ನಡೆಸಿದರು.

ಈ ಸಂಬಂಧದಲ್ಲಿ ಸರ್ಕಾರ ಹಾಕಿದ್ದ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಕಾಲೇಜುಗಳಮುಂದೆ ಪಿಕೆಟ್ ಮಾಡಿದರು. ಅವರನ್ನು ಓಡಿಸಲು ಎಲ್ಲ ಪ್ರಯತ್ನಗಳೂ ವಿಫಲವಾದ್ದರಿಂದ ಪೋಲೀಸರು ಗುಂಡು ಹಾರಿಸಿದರು.

ಕೇಂದ್ರ ಉಪಸಚಿವರ ನಿಧನ

ಕೇಂದ್ರ ಸರ್ಕಾರದ ಕಾಮಗಾರಿ ಮತ್ತು ವಸತಿ ನಿರ್ಮಾಣ ಶಾಖೆಯ ಉಪಸಚಿವ ಶ್ರೀ ಸುರೇಶನಾಥ ಬರಾಗುಹೈರವರು ನಿನ್ನೆಯ ದಿನ ಕಲ್ಕತ್ತಾದಲ್ಲಿ ನಿಧನರಾದರು. ಅವರಿಗೆ 'ಅಪೆಂಡಿಸೈಟಿಸ್'ಗೆ ಶಸ್ತ್ರ ಚಿಕಿತ್ಸೆ ನಡೆದ., ಸ್ವಲ್ಪ ಗಂಟೆಗಳ ನಂತರ ಅವರು ನಿಧನರಾದರು.

ಅವರ ಮೃತ ದೇಹವನ್ನು ಈ ದಿನ ದೆಹಲಿಗೆ ತಂದು ಅಂತ್ಯಕ್ರಿಯೆ ನಡೆಸಲಾಗುತ್ತದೆ.

ಏಕೀಕರಣ ಸತ್ಯಾಗ್ರಹಿಗಳ ಜಾಥ

ಕರ್ನಾಟಕ ಏಕೀಕರಣಕ್ಕಾಗಿ 'ಹುಬ್ಬಳ್ಳಿ ಚಲೋ' ಸತ್ಯಾಗ್ರಹಿಗಳ ಜಾಥ ಹುಬ್ಬಳ್ಳಿಗೆ ಬರಲಾರಂಭಿಸಿವೆ. 'ಕರ್ನಾಟಕ ನಿರ್ಮಾಣವಾಗುವವರೆಗೂ ತಮ್ಮ ಹೋರಾಟ' ಎಂಬ ಮಂತ್ರದ ಘೋಷಣೆಗಳನ್ನು ಮಾಡಿಕೊಂಡು ಪ್ರಥಮ ಜಾಥ ಮೊನ್ನೆಯದಿನ ಆಗಮಿಸಿತು.

ಪುನಃ ಪ್ರವಾಹ

ಭಾರಿ ಮಳೆಯ ಪರಿಣಾಮವಾಗಿ ಅಸ್ಸಾಂನಲ್ಲಿ ಬ್ರಹ್ಮಪುತ್ರ, ಲೋಹಿತ, ಮತ್ತು ದಿಬಾಂಗ್ ನದಿಗಳಲ್ಲಿ ವಿಶೇಷ ಪ್ರವಾಹ ಉಂಟಾಗಿ, ಕಳೆದ ತಿಂಗಳಿನಲ್ಲಿ ಅನಾಹುತಕ್ಕೀಡಾಗಿದ್ದ ೩೫ ಗ್ರಾಮಗಳು ಪುನಃ ತೊಂದರೆಗೆ ಸಿಕ್ಕಿವೆ.

ಪ್ರವಾಹದಿಂದ ೩೫ ಕೋಟಿ ರೂ. ನಷ್ಟ

ಬಿಹಾರಿನಲ್ಲಿ ಇತ್ತೀಚೆಗೆ ಸಂಭವಿಸಿದ ಪ್ರವಾಹದ ಹಾವಳಿಯಿಂದ ಒಟ್ಟು ೩೫ ಕೋಟಿ ರೂ. ಗಳಷ್ಟು ನಷ್ಟ ಉಂಟಾಗಿದೆಯೆಂದು ಅಖಿಲಭಾರತ ಕಾಂಗ್ರೆಸ್ ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ನೂತನ ರಾಜಧಾನಿ

ಪಂಜಾಬಿನ ನೂತನ ರಾಜಧಾನಿಯಾಗಿ ಚಂಡಿಗಢ್ ನಗರವನ್ನು ಇದೇ ೭ನೇ ತಾರೀಖು ರಾಷ್ಟ್ರಾಧ್ಯಕ್ಷರು ಉದ್ಘಾಟಿಸುವರು.

ಐ. ಎ. ಎಸ್‌ಗೆ

ಬೆಂಗಳೂರು ೫

ಶ್ರೀಗಳಾದ ಎಂ. ವೀರರಾಜ ಅರಸ್, ಸಿ. ಎಸ್. ಶೇಷಾದ್ರಿ, ಆನಂದಕೃಷ್ಣ, ಎಲ್. ನರಸಿಂಹರಾವ್, ವಿ. ಬೈರಪ್ಪ, ಕೆ. ಮಹಮದ್ ಅಹಮದ್, ಎಂ. ಎಸ್. ಶಂಕರರಾವ್, ಎಂ. ಡಿ. ಶಿವನಂಜಪ್ಪ ಟಿ. ವಿ. ರೆಡ್ಡಿ, ಎಲ್. ಮುನಿಸ್ವಾಮಿ ಮತ್ತು ಆರ್. ಜೆ. ರೀಗೋರವರುಗಳನ್ನು ಐ. ಎ. ಎಸ್. ಪ್ರೊಬೇಷನರಾಗಿ ನೇಮಿಸಲಾಗಿದೆ.

ಮನರಂಜನ ತೆರಿಗೆ

ಬೆಂಗಳೂರು ೫

ಪ್ರತಿ ಒಂದೂವರೆ ಆಣೆಯಿಂದ ೮ ಆಣೆವರೆಗೆ ೪ ಕಾಸುಗಳಂತೆಯೂ, ೮ ಆಣೆಗೆ ಮೇಲ್ಪಟ್ಟು ಶೇಕಡ ಹದಿನೆಂಟೂಮುಕ್ಕಾಲರಂತೆಯೂ ಮನರಂಜನ ತೆರಿಗೆಯನ್ನು ಸರಕಾರದವರು ನಿಗದಿಮಾಡಿದ್ದಾರೆ.

ಮುಖ್ಯಮಂತ್ರಿಗಳ ಪ್ರವಾಸ

ಬೆಂಗಳೂರು ೫

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇದೇ ೧೩ ನೇ ತಾರೀಖಿನಿಂದ ೨೦ ನೇ ತಾರೀಖಿನವರೆಗೆ ಮೈಸೂರು ಮತ್ತು ಮಂಡ್ಯಾ ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು.

ಬಳ್ಳಾರಿ ದಿನ

ಇದೇ ೧ ನೇ ತಾ॥ ನಂಜನಗೂಡು ತಾಲ್ಲೂಕು ಹೆಮ್ಮರಗಾಲದ ಗ್ರಾಮಪಂಚಾಯಿತಿಯ ವಿ. ಪಿ. ಛೇರ್ಮನ್ ಶ್ರೀ ಹೆಚ್. ವಿ. ವೀರಭದ್ರಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ "ಬಳ್ಳಾರಿಯ ಸೇರ್ಪಡಿಕೆಯು" ಕರ್ನಾಟಕವನ್ನೊಳಗೊಂಡ ಮೈಸೂರು ರಚನೆ ಯಾಗಲಿ ಎಂದು ಆಶಿಸಿ ತೀರ್ಮಾನಿಸಿದ ನಿರ್ಣಯದ ನಕಲನ್ನು ಮೈಸೂರು ಶ್ರೀಮನ್ಮಹಾರಾಜರವರಿಗೂ ಮತ್ತು ಮುಖ್ಯ ಸಚಿವರಿಗೂ ಕಳುಹಿಸಲಾಯಿತು.

ರಾಷ್ಟ್ರೀಯ ಅಭಿವೃದ್ಧಿ ಮಂಡಲಿ

ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸಭೆಯು ಈದಿನ ಪ್ರಧಾನಿ ನೆಹರೂರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಗಿದೆ. ಆಯೋಜನಾ ಸಮಿತಿ ಸದಸ್ಯರು ಮತ್ತು ಎಲ್ಲಾ ಪ್ರಾಂತ್ಯದ ಮುಖ್ಯಮಂತ್ರಿಗಳೂ ಇದರಲ್ಲಿ ಭಾಗವಹಿಸುವರು. ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮ, ಭೂಸುಧಾರಣೆ, ನಿರುದ್ಯೋಗ ಪರಿಹಾರ ಮುಂತಾದ ಪ್ರಮುಖ ಸಮಸ್ಯೆಗಳನ್ನು ಇಲ್ಲಿ ಚರ್ಚಿಸಲಿರುವರೆಂದು ತಿಳಿಯಬರುತ್ತದೆ.

ಪತ್ರಿಕಾ ಸಮ್ಮೇಳನ

ಮೈಸೂರು ೫

ದಸರಾ ವಸ್ತುಪ್ರದರ್ಶನ ಸಮಿತಿಯ ಪ್ರಧಾನ ಕಾರ್ಯದರ್ಶಿಯವರು ನಾಳೆ ಬೆಳಿಗ್ಗೆ ೧೧ ಗಂಟೆಗೆ ಒಂದು ಪತ್ರಿಕಾ ಸಮ್ಮೇಳನವನ್ನು ಕರೆದಿರುತ್ತಾರೆ.

ಪ್ಲಾಸ್ಟಿಕ್ ಬೈಸಿಕಲ್

ಅಮ್‌ಸ್ಟರ್‌ಡಾಂನಲ್ಲಿ ಡಚ್ ಇಂಜನೀಯರೊಬ್ಬರು ಪ್ಲಾಸ್ಟಿಕ್ ಬೈಸಿಕಲ್ಲೊಂದನ್ನು ತಯಾರಿಸಿದ್ದಾರೆ ಇದು ಕೇವಲ ೧೩ ಪೌಂಡುಗಳ ತೂಕವಿದೆ.

ಇದೇರೀತಿಯಾದ ಬೈಸಿಕಲ್ಲನ್ನು ಅಧಿಕ ಸಂಖ್ಯೆಯಲ್ಲಿ ತಯಾರಿಸಲು ಅಮೆರಿಕಾದ ಪ್ಲಾಸ್ಟಿಕ್ ಕಂಪೆನಿಯೊಂದು ಪರಿಶೀಲಿಸುತ್ತಿರುವುದಾಗಿ ತಿಳಿಯಬರುತ್ತದೆ.

ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ರವರ ನಿಧನ

ಭಾರತ ರಾಜ್ಯಾಂಗದ ನಿರ್ಮಾಪಕರಲ್ಲೊಬ್ಬರಾದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ರವರು ತಮ್ಮ ೭೧ ನೇ ವಯಸ್ಸಿನಲ್ಲಿ ಮೊನ್ನೆಯದಿನ ಮದ್ರಾಸಿನಲ್ಲಿ ನಿಧನ ಹೊಂದಿದರು. ಅವರು ೧೯೦೭ ರಲ್ಲಿ ಮದ್ರಾಸಿನಲ್ಲಿ ವಕೀಲರಾಗಿ ೧೯೫೫ ರಿಂದ ೪೪ ರವರೆಗೆ ಅವಿಚ್ಛಿನ್ನವಾಗಿ ೨೦ ವರ್ಷಕಾಲ ಮದ್ರಾಸಿನ ಅಡ್ವೋಕೇಟ್ ಜನರಲ್ ಆಗಿದ್ದರು. ಅಲ್ಲದೆ ಹಲವಾರುಸಾರ್ವಜನಿಕ ಸಂಸ್ಥೆಗಳಲ್ಲೂ ಸಹ ಇವರುಸೇವೆಗೈದಿದ್ದರು. ಅವರು ಭಾರತದ ರಾಜ್ಯಾಂಗ ಸಭೆಯ ಸದಸ್ಯರಾಗಿದ್ದು ಅನೇಕ ಸೇವೆ ಸಲ್ಲಿಸಿದ್ದರು. ಇವರಿಗೆ ಪತ್ನಿ, ೩ ಗಂಡು ಮಕ್ಕಳೂ, ನಾಲ್ವರು ಹೆಣ್ಣುಮಕ್ಕಳೂ ಇದ್ದಾರೆ.

ಇವರ ನಿಧನಕ್ಕಾಗಿ ಪ್ರಧಾನಿ ನೆಹರೂ, ರಾಜಾಜಿ ಮುಂತಾದ ದೇಶದ ಅನೇಕ ನಾಯಕರು ಸಂತಾಪವನ್ನು ವ್ಯಕ್ತಪಡಿಸಿ ದೇಶಕ್ಕೆ ಇವರ ನಿಧನದಿಂದ ಅಪಾರ ನಷ್ಟ ಉಂಟಾಯಿತೆಂದು ಹೇಳಿದ್ದಾರೆ.

ಪಂಚಾಪಕೇಶಶಾಸ್ತ್ರಿಯವರ ನಿಧನ

ಮದ್ರಾಸ್ ಶ್ರೇಷ್ಠ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ಶ್ರೀ ಎಸ್. ಪಂಚಾಪಕೇಶ ಶಾಸ್ತ್ರಿಯವರು ಮೊನ್ನೆ ದಿನ ರಾತ್ರಿ ಬೊಂಬಾಯಿನಲ್ಲಿ ನಿಧನರಾದರು.

ಅವರು ಬ್ಯಾಂಕು ನೌಕರರ ವಿವಾದ ಕಮೀಷನ್ನಿನ ಅಧ್ಯಕ್ಷರಾಗಿದ್ದರು.

ನ್ಯಾಯಾಂಗ ಸುಧಾರಣೆ

ದೇಶದಾದ್ಯಂತ ನ್ಯಾಯಾಂಗ ಸುಧಾರಣೆಯನ್ನು ಮಾಡಲು ಮುಂದಿನ ಪಾರ್ಲಿಮೆಂಟ್ ಅಧಿವೇಶನದಲ್ಲಿ ಒಂದು ಮಸೂದೆಯನ್ನು ತರಲಾಗುವುದೆಂದು ಕೇಂದ್ರ ಗೃಹ ಸಚಿವರು ಹೈದರಾಬಾದಿನಲ್ಲಿ ತಿಳಿಸಿದ್ದಾರೆ.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೫೦೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೪೦

೫-೧೦-೧೯೫೪ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ದಸರಾ ವಸ್ತು ಪ್ರದರ್ಶನ

ಹೆಚ್ಚು ಆಕರ್ಷಣೀಯ ಮಾಡಲು ಸಿದ್ಧತೆ

ಮೈಸೂರು ೫

ಈ ಸಾಲಿನಲ್ಲಿ ಮೈಸೂರು ದಸರಾ ವಸ್ತುಪ್ರದರ್ಶನವನ್ನು ವಿಶೇಷ ಆಕರ್ಷಣೀಯವಾಗಿ ಮತ್ತು ಉಪಯುಕ್ತವಾಗಿ ಇರುವಂತೆ ಅನೇಕ ಮಾರ್ಪಾಡುಗಳನ್ನು ಮಾಡಿರುವ ವಿಷಯಗಳನ್ನು ವಿಶದೀಕರಿಸಲು ಪ್ರದರ್ಶನ ಸಮಿತಿಯವರು ಈ ಬೆಳಿಗ್ಗೆ ಒಂದು ಪತ್ರಿಕಾ ಸಮ್ಮೇಳನವನ್ನು ಏರ್ಪಡಿಸಿದ್ದರು.

ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ವಿ. ಎಸ್. ಕೃಷ್ಣಯ್ಯರ್‌ರವರು ಇಲ್ಲಿಯವರೆಗೆ ನಡೆದಿರುವ ಕಾರ್ಯಕಲಾಪಗಳನ್ನು ವಿವರಿಸಿದರು.

ಈ ಸಾಲಿನಲ್ಲಿ ಸಮಿತಿಯ ಸಂಯುಕ್ತ ಉಪಾಧ್ಯಕ್ಷರನ್ನಾಗಿ ಪಾಸಗಿಯವರನ್ನು ನೇಮಿಸಿ ಸರ್ಕಾರವು ಈ ಪ್ರದರ್ಶನವು ಸಾಧ್ಯವಾದಷ್ಟು ಸಾರ್ವಜನಿಕರ ಸಹಕಾರದಿಂದಲೇ ನಡೆಯಬೇಕೆಂಬ ನೀತಿಯಿಂದ ಪ್ರಾರಂಭಿಸಲಾಗಿದೆ.

ಈ ಸಾಲಿನ ಪ್ರದರ್ಶನದಲ್ಲಿ ಕುಟೀರ ಕೈಗಾರಿಕೆಗಳ ಪ್ರದರ್ಶನಕ್ಕೆ ವಿಶೇಷವಾಗಿ ವ್ಯವಸ್ಥೆ ಮಾಡಲಾಗಿದೆ.

ಕುಶಲಕಲೆಗಳ ವಿಭಾಗದಲ್ಲಿ ಈ ಬಾರಿ ಮೈಸೂರು ಸಂಸ್ಥಾನದಿಂದಲ್ಲದೆ ಇತರ ಪ್ರಾಂತ್ಯಗಳಿಂದ ಸಾವಿರಾರು ಚಿತ್ರಪಟಗಳು ಬಂದಿವೆ. ಈ ಶಾಖೆಯು ವಿಶೇಷವಾಗಿ ಆಕರ್ಷಣೀಯವಾಗಿರುತ್ತದೆ.

ಮಹಿಳಾ ವಿಭಾಗದಲ್ಲಿ ಸಹ ಉತ್ತಮ ತರಹದ ಆಹಾರ ತಯಾರಿಕೆ ಮುಂತಾದುವನ್ನು ಪ್ರದರ್ಶಿಸಲಾಗುತ್ತದೆ.

ಬೆಂಗಳೂರಿನಲ್ಲಿರುವ ಹಿಂದೂಸ್ತಾನ್ ವಿಮಾನ ಕಾರ್ಖಾನೆ, ಟೆಲಿಫೋನ್ ಕಾರ್ಖಾನೆ ಮುಂತಾದ ಪ್ರಮುಖ ಕೈಗಾರಿಕಾ ಸಂಸ್ಥೆಗಳು ಭಾಗವಹಿಸುವುವು. ಹಿಂದೂಸ್ತಾನ ವಿಮಾನ ಕಾರ್ಖಾನೆಯು ತಯಾರಿಸುವ ಹೊಸತರಹದ ಬಸ್‌ಗಳನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ, ಅಲ್ಲಿ ಹೊಸದಾಗಿ ತಯಾರಾದ ವಿಮಾನಗಳ ಮಾಡೆಲ್ ಪ್ರದರ್ಶನವನ್ನೂ ಏರ್ಪಡಿಸಲಾಗಿದೆ.

ಮೊಟಾರ್‌ಗಳ ರೇಂಜು,ಗುಮಟ್ಯು,ವರಿಯುರ ಶಿಕ್ಷಣ ಸಮಿತಿ, ರಾಮಕೃಷ್ಣಾಶ್ರಮ ಮುಂತಾದ ಸಂಸ್ಥೆಗಳಿಗೆ ಉಚಿತವಾಗಿ ಸ್ಟಾಲುಗಳನ್ನು ಕೊಡಲಾಗಿದೆ.

ವ್ಯವಸಾಯ ಮತ್ತು ಫಲಪುಷ್ಪ ಇಲಾಖೆಯವರು ಹೊಸ ಹೊಸ ರೀತಿಯ ಬೆಳೆಯ ಪ್ರದರ್ಶನವನ್ನು ಏರ್ಪಡಿಸಿರುತ್ತಾರೆ. ಜಪಾನ್ ರೀತಿಯಲ್ಲಿ ಬತ್ತದ ಸಾಗುವಳಿ ಕ್ರಮವನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ. ಇದರಿಂದ ರೈತರಿಗೆ ವಿಶೇಷ ಉಪಯೋಗ ವುಂಟಾಗುತ್ತದೆ.

ಇದಲ್ಲದೆ ಸರ್ವೋದಯ ಸಮಾಜ ಭೂದಾನಯಜ್ಞ ಇವುಗಳಿಗೆ ಸಂಬಂಧಪಟ್ಟ ವಿಷಯಗಳನ್ನು ತಿಳಿಸಲು ಒಂದು ಪ್ರತ್ಯೇಕ ವಿಭಾಗವನ್ನು ಏರ್ಪಡಿಸಲಾಗಿದೆ.

ಕೇಂದ್ರ ಸರ್ಕಾರದವರು ಕೈಗೊಂಡಿರುವ ರಾಷ್ಟ್ರೀಯ ಉಳಿತಾಯ ಯೋಜನೆ, ಮಿತಸಂತಾನ ಯೋಜನೆ ಮುಂತಾದುವುಗಳನ್ನು ಪ್ರಚುರಪಡಿಸಲು ವ್ಯವಸ್ಥೆ ಮಾಡಿದೆ.

ಭಾರತದ ಮತ್ತು ಮೈಸೂರಿನ ಸಂಸ್ಕೃತಿ, ಚರಿತ್ರೆ, ಕಲೆ ಮುಂತಾದುವುಗಳನ್ನು ದೃಶ್ಯರೂಪದಲ್ಲಿ ಅಲಂಕೃತವಾದ ಲಾರಿಗಳಮೂಲಕ ಪ್ರದರ್ಶಿಸಲಾಗುತ್ತೆ.

ಕುಸ್ತಿ, ರಾತ್ರಿಕಾಲದಲ್ಲಿ ಫ್ಲಡ್‌ಲೈಟ್, 'ಮಿಸ್ಟರ್ ಮೈಸೂರು' ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ. ಮಕ್ಕಳ ದಿನಾಚರಣೆಯನ್ನೂ ನಡೆಸಲಾಗುವುದು.

ಪ್ರದರ್ಶನವು ಇದೇ ೮ ನೇ ತಾರೀಖಿನಿಂದ ೧೫ ದಿನಗಳು ನಡೆಯುವುದು. ೮ನೇ ತಾರೀಖು ಮಧ್ಯಾಹ್ನ ೪ ಗಂಟೆಗೆ ಶ್ರೀ ಕೆ. ಟಿ. ಭಾಷ್ಯಂರವರು ಅದರ ಪ್ರಾರಂಭೋತ್ಸವವನ್ನು ನೆರವೇರಿಸುವರು.

ಆಂಧ್ರಕ್ಕೆ ಮತ್ತಿಬ್ಬರು ಸಚಿವರು

ಆಂಧ್ರ ಮಂತ್ರಿ ಮಂಡಲಕ್ಕೆ ಎಸ್.ಬಿ. ಪಿ. ಪಟ್ಟಾಭಿರಾಮರಾವ್, ಪಿ. ತಿಮ್ಮರೆಡ್ಡಿಯವರು ಮತ್ತಿಬ್ಬರು ಸಚಿವರುಗಳಾಗಿ ನೇಮಕವಾಗಿ ನಿನ್ನೆಯ ದಿನ ಅವರು ಅಧಿಕಾರವನ್ನು ಸ್ವೀಕರಿಸಿದರು ಶ್ರೀ ಪಟ್ಟಾಭಿರಾಮರಾಯರು ಕಾಂಗ್ರೆಸ್‌ನವರು ಮತ್ತು ಶ್ರೀ ತಿಮ್ಮರೆಡ್ಡಿಯವರು ಕೃಷಿಕ ಲೋಕ ಪಕ್ಷಕ್ಕೆ ಸೇರಿದವರು.

ಪತ್ರಿಕಾಮಂಡಲಿಯ ಸಾಕ್ಷ್ಯ

ಪತ್ರಿಕಾ ಮಂಡಲಿಯು ಮೌಖಿಕ ಸಾಕ್ಷ್ಯವನ್ನು ತೆಗೆದುಕೊಳ್ಳಲು ನಿನ್ನೆಯಿಂದ ಪ್ರಾರಂಭಿಸಿದೆ. ಈ ಮೊಕದ್ದಮೆಯವರಿಗೆ ಪತ್ರಿಕೆಯಲ್ಲಿಯೇ ಸಾಕ್ಷ್ಯವನ್ನು ಪಡೆದು ಪಂಚ ಲಕ್ಷ್ಮಣ, ದೇವದಾಸ್, ಮುಂತಾದವರು ನೂತನ ಪತ್ರಿಕೆಗಳ ಪ್ರತಿನಿಧಿಗಳು.

ಫಸ್ಟ್‌ಗ್ರೇಡ್ ಕಾಲೇಜಿನ ರಜತ ಮಹೋತ್ಸವ

ಮೈಸೂರು ೫

ಮೈಸೂರು ಫಸ್ಟ್‌ಗ್ರೇಡ್ ಕಾಲೇಜಿನ ರಜತಮಹೋತ್ಸವವು ಬರುವ ಜನವರಿ ತಿಂಗಳಿನಲ್ಲಿ ೩ ದಿನಗಳ ಕಾಲ ನಡೆಯಲು ಕಾರ್ಯಕ್ರಮ ಏರ್ಪಡಿಸಲಾಗಿದೆ. ಕಾಲೇಜಿನ ಹಳೇ ವಿದ್ಯಾರ್ಥಿಗಳಾದ ಶ್ರೀಮನ್ಮಹಾರಾಜರವರು ಪ್ರಾರಂಭೋತ್ಸವ ನೆರವೇರಿಸುವರು ಈ ಸಂಬಂಧದಲ್ಲಿ ಮಹೋತ್ಸವದ ಸಮಿತಿಯವರು ನಿನ್ನೆ ಸಂಜೆ ಒಂದು ಪತ್ರಿಕಾ ಸಮ್ಮೇಳನವನ್ನ ನಡೆಸಿ, ಕಾಲೇಜಿನ ಹಳೇ ವಿದ್ಯಾರ್ಥಿಗಳೆಲ್ಲರೂ ಈ ಮಹೋತ್ಸವವು ಯಶಸ್ವಿಯಾಗಿ ನಡೆಯಲು ಉದಾರವಾಗಿ ಸಹಾಯಮಾಡಿ ಸಹಕರಿಸಬೇಕೆಂದು ಮನವಿ ಮಾಡಿದರು.

ಅಲ್ಲಾಡಿ ಬಗ್ಗೆ ಸಂತಾಪ

ಮೈಸೂರು ೫

ರಾಜಧಾನಿಯ ವಕೀಲರ ಸಂಘದವರು ನಿನ್ನೆ ಶ್ರೀ ಹೆಚ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಭಾರತದ ಸುಪ್ರಸಿದ್ಧ ವಕೀಲರಾದ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ರವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯ ಮಾಡಿದರು.

ಅಂತರರಾಷ್ಟ್ರೀಯ ಕುಸ್ತಿ ಪ್ರದರ್ಶನ

ಇದೇ ದಸರಾ ಮಹೋತ್ಸವ ಕಾಲದಲ್ಲಿ ಇಂಗ್ಲೆಂಡ್, ಅಮೆರಿಕಾ, ಪಾಕೀಸ್ತಾನ ಮುಂತಾದ ಕಡೆಯ ಪೈಲ್ವಾನ್‌ರುಗಳ ಕುಸ್ತಿ ಪಂದ್ಯವು ದೊಡ್ಡಕೆರೆ ಮೈದಾನದಲ್ಲಿ ನಡೆಯುತ್ತದೆ.

ವಿದ್ಯುಚ್ಛಕ್ತಿ ಕೆಲಸಗಾರರ ಮುಷ್ಕರ

ಪಾಟ್ನದಲ್ಲಿ ೬೦೦ ಮಂದಿ ವಿದ್ಯುಚ್ಛಕ್ತಿ ಕೆಲಸಗಾರರು ಮುಷ್ಕರವನ್ನು ಹೂಡಿರುವುದನ್ನು ಇನ್ನೂ ಮುಂದುವರಿಸುತ್ತಲೇ ಇದ್ದಾರೆ.

ಮಹಿಳಾ ಡಾಕ್ಟರ್ ವರ್ಗ

ಬೆಂಗಳೂರು ೫

ಬೆಂಗಳೂರು ವಾಣೀವಿಲಾಸ ಆಸ್ಪತ್ರೆಯಲ್ಲಿರುವ ಮಹಿಳಾ ಡಾಕ್ಟರ್ ಶ್ರೀಮತಿ ಸುಂದರಂರವರನ್ನು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಗೆ ವರ್ಗಾಯಿಸಲಾಗಿದೆ.

ಕೃಷಿಕಲೋಕ ಪಕ್ಷದ ಅಸಹಕಾರ

ಆಂಧ್ರ ಮಂತ್ರಿಮಂಡಲಕ್ಕೆ ಕೃಷಿಕಲೋಕ ಪಕ್ಷದ ಶ್ರೀ ತಿಮ್ಮರೆಡ್ಡಿಯವರನ್ನು ಸಚಿವರನ್ನಾಗಿ ಆರಿಸಿರುವುದರಬಗ್ಗೆ ಅಲ್ಲಿಯ ಕೃಷಿಕಪಕ್ಷದ ಕಾರ್ಯಸಮಿತಿಯು ಒಂದು ಹೇಳಿಕೆಯನ್ನಿತ್ತು ಅವರನ್ನು ಪಕ್ಷದ ಪರವಾಗಿ ತೆಗೆದುಕೊಳ್ಳದೆ ವೈಯುಕ್ತಿಕವಾಗಿ ತೆಗೆದುಕೊಂಡಿರುವುದನ್ನು ಟೀಕಿಸಿದೆ. ಮಂತ್ರಿಮಂಡಲಕ್ಕೆ ಪಕ್ಷವು ಸಹಕಾರವನ್ನು ನೀಡಬಾರದೆಂದು ತೀರ್ಮಾನಿಸಿದೆ. ಶ್ರೀ ತಿಮ್ಮಾರೆಡ್ಡಿಯವರನ್ನು ಪಕ್ಷದ ಸದಸ್ಯತ್ವದಿಂದ ಸಸ್ಪೆಂಡ್ ಮಾಡಿರುವುದಾಗಿ ತಿಳಿಯಬರುತ್ತದೆ.

ಸರ್ಕಾರಕ್ಕೆ ಕಾಂಗ್ರೆಸ್ ಸದಸ್ಯರ ಬೆಂಬಲವಿಲ್ಲ

ಹೈದರಾಬಾದಿನ ಶಾಸನಸಭೆಯ ಕಾಂಗ್ರೆಸ್‌ಪಕ್ಷದ ೨೦ ಸದಸ್ಯರು ಅಲ್ಲಿಯ ಕಾಂಗ್ರೆಸ್ ಸರ್ಕಾರಕ್ಕೆ ಬೆಂಬಲವನ್ನು ಕೊಡುವುದಿಲ್ಲವೆಂದು ನಾಯಕರಿಗೆ ಪತ್ರ ಬರೆದಿರುವುದಾಗಿ ತಿಳಿಯಬರುತ್ತದೆ. ಈಗಿನ ಮಂತ್ರಿಮಂಡಲದಮೇಲೆ ಒಂದು ಲಂಚದ ಆಪಾದನೆಯನ್ನು ವಿಚಾರಣೆ ನಡೆಸಲು ನಿರಾಕರಿಸಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಸೂಚನೆ

ಮಹಾಲಯ ಅಮಾವಾಸ್ಯೆ ಪ್ರಯುಕ್ತ ನಾಳೆದಿನ ಸಮಾಚಾರ ಪತ್ರಿಕೆಯ ಕಾರ್ಯಾಲಯಕ್ಕೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ.

ಮೈಸೂರು ಸಿಟಿ ಮುನಿಸಿಪಾಲಿಟಿ

ಪ್ರಕಟಣೆ

1954ನೇ ಇಸವಿ ಜನವರಿ ಮಾಹೆ ತಾರೀಖು ಒಂದರಿಂದ ಜಾರಿಗೆ ಬರುವ ಹಾಗೆ ಅನ್ವಯವಾಗಲಿರುವ ಮೈಸೂರು ಪೌರಸಭೆಯ ಸದಸ್ಯರನ್ನು ಚುನಾಯಿಸಲು ತಯಾರಿಸಿರುವ ಮತದಾರರ ಪಟ್ಟಿಯನ್ನು ಸಿಟಿ ಮುನಿಸಿಪಲ್ ಆಫೀಸಿನಲ್ಲೂ ಮತ್ತು 40 ವಿಭಾಗಗಳಲ್ಲೂ ತಾರೀಖು 8—10—53ನೇ ದಿವಸ ಸಾರ್ವಜನಿಕರ ತಿಳುವಳಿಕೆ ಬಗ್ಗೆ ಪ್ರಕಟಿಸಲಾಗುತ್ತೆ. ಪ್ರತಿ ವಿಭಾಗದಲ್ಲಿಯೂ ಯಾವ್ಯಾವ ಸ್ಥಳದಲ್ಲಿ ಸದರಿ ಪಟ್ಟಿಯನ್ನು ಪ್ರಕಟಿಸಲಾಗುತ್ತೆಂಬುದನ್ನು ಮುನಿಸಿಪಲ್ ಆಫೀಸ್ ನೋಟೀಸ್ ಬೋರ್ಡಿನಲ್ಲಿ ನೋಡಿ ತಿಳಿಯಬಹುದು.

(ಸಹಿ) ಎ. ಅಣ್ಣಯ್ಯರಾಜ್.
ಮುನಿಸಿಪಲ್ ಕಮೀಷನರ್ ಮತ್ತು ರಿಟರ್ನಿಂಗ್ ಆಫೀಸರ್.

ಮೈಸೂರು ತಾ. 5—10—53

ಪಾಕೀಸ್ತಾನ ರಾಜ್ಯಾಂಗದ ಬಗ್ಗೆ ಶ್ರೀ ಮೋರ್ಚ್ಚನ

ರಾಷ್ಟ್ರಾಧ್ಯಕ್ಷರು ಮತ್ತು ಪ್ರಧಾನಿ ಒಂದೇ ವಲಯದವರಾಗಿರಕೂಡದು

ಪಾಕೀಸ್ತಾನದಲ್ಲಿ ನೂತನ ರಾಜ್ಯಾಂಗವನ್ನು ರಚಿಸುವ ವಿಷಯದಲ್ಲಿ ಪೂರ್ವ ಮತ್ತು ಪಶ್ಚಿಮ ಪಾಕೀಸ್ತಾನದ ನಾಯಕರ ನಡುವೆ ಒಮ್ಮತವುಂಟಾಗಿರುವುದಾಗಿ ತಿಳಿಯಬರುತ್ತದೆ.

ಕೇಂದ್ರದಲ್ಲಿ ಎರಡು ಶಾಸನಸಭೆಗಳು ಇರಬೇಕು. ಹಿರಿಯ ಸಭೆಯಲ್ಲಿ ೫೦ ಜನ ಕಿರಿಯಸಭೆಯಲ್ಲಿ ೩೦೦ ಸದಸ್ಯರಿರಬೇಕು, ಅದರಲ್ಲಿ ೧೬೫ ಸ್ಥಾನಗಳು ಪೂರ್ವ ಪಾಕೀಸ್ತಾನಕ್ಕೆ ಇರಬೇಕು. ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ಯಾವಾಗಲೂ ಸಂಯುಕ್ತ ಸಭೆಯಲ್ಲಿ ಪರಿಶೀಲಿಸಬೇಕು ಮತ್ತು ರಾಷ್ಟ್ರಾಧ್ಯಕ್ಷರ ಚುನಾವಣೆಯೂ ಸಹ ಸಂಯುಕ್ತ ಸಭೆಯಲ್ಲಿ ನಡೆಯಬೇಕು. ದೇಶದಲ್ಲಿ ಪೂರ್ವ ಮತ್ತು ಪಶ್ಚಿಮ ಪಾಕೀಸ್ತಾನಗಳೆಂಬ ಎರಡು ವಲಯಗಳಿರುವುದರಿಂದ ರಾಷ್ಟ್ರಾಧ್ಯಕ್ಷ ಮತ್ತು ಪ್ರಧಾನಿಗಳು ಒಂದು ವಲಯಕ್ಕೆ ಸೇರಿದವರಾಗಿರಕೂಡದು ಎಂಬೀ ಪ್ರಮುಖ ವಿಷಯಗಳು ಈ ತೀರ್ಮಾನದಲ್ಲಿ ಅಡಕವಾಗಿರುವುದಾಗಿ ಗೊತ್ತಾಗಿದೆ.

ಅಂತ್ಯ ಸಂಸ್ಕಾರ

ಮೊನ್ನೆಯದಿನ ಕಲ್ಕತ್ತಾದಲ್ಲಿ ನಿಧನರಾದ ಕೇಂದ್ರ ಕಾಮಗಾರಿ ಮತ್ತು ವಸತಿ ನಿರ್ಮಾಣಶಾಖೆಯ ಉಪಸಚಿವ ಶ್ರೀ ಸುರೇಶನಾಥ ಬುರಾಗುಹೈನವರ ಕಳೇಬರವನ್ನು ನಿನ್ನೆಯದಿನ ದೆಹಲಿಗೆ ವಿಶೇಷ ವಿಮಾನದಲ್ಲಿ ತರಲಾಯಿತು.

ಕೇಂದ್ರ ಸರ್ಕಾರದ ಸಚಿವರಾದಿಯಾಗಿ ಅನೇಕರು ಅವರ ಮನೆಗೆ ಭೇಟಿಯಿತ್ತು ಅಂತ್ಯದರ್ಶನವನ್ನು ಮಾಡಿದಮೇಲೆ ಸಮಸ್ತ ರಾಜಮರ್ಯಾದೆಗಳೊಡನೆ ಅಂತ್ಯಸಂಸ್ಕಾರವನ್ನು ಮಾಡಲಾಯಿತು.

ಇವರ ಗೌರವವಾಗಿ ದೆಹಲಿಯಲ್ಲಿ ಎಲ್ಲಾ ಸರ್ಕಾರಿ ಕಟ್ಟಡಗಳಮೇಲೆ ಅರ್ಧಮಟ್ಟಕ್ಕೆ ರಾಷ್ಟ್ರಧ್ವಜವನ್ನ ಹಾರಿಸಲಾಗಿತ್ತು. ಮಧ್ಯಾಹ್ನ ಎಲ್ಲಾ ಕಛೇರಿಗಳಿಗೆ ರಜಾ ಕೊಡಲಾಗಿತ್ತು.

ಮುಖ್ಯಮಂತ್ರಿಗಳು ದೆಹಲಿಗೆ

ಬೆಂಗಳೂರು ೬

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆಯ ಬೆಳಗ್ಗೆ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಮಾಡಿದರು. ಅವರೊಡನೆ ಅವರ ಆಪ್ತ ಕಾರ್ಯದರ್ಶಿ ಶ್ರೀ ಜಿ.ವಿ.ಕೆ. ರಾವ್‌ರವರೂ ಸಹ ತೆರಳಿದ್ದಾರೆ. ಪ್ರಧಾನಿ ನೆಹರೂರವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸಭೆಯಲ್ಲಿ ಭಾಗವಹಿಸಲು ಮುಖ್ಯಮಂತ್ರಿಗಳು ಅಲ್ಲಿಗೆ ಹೋಗಿರುವರು.

ಪ್ರಾಥಮಿಕ ಶಿಕ್ಷಣ ಸುಧಾರಣೆ ಜಾರಿ

ವರ್ಷಕ್ಕೆ ೧೦೦ ಮೂಲಶಿಕ್ಷಣ ಶಾಲೆಗಳು

ಮೈಸೂರು ೬

ಪ್ರಾಂತ್ಯದಲ್ಲಿ ಪ್ರತಿವರ್ಷವೂ ೧೦೦ ಮೂಲಶಿಕ್ಷಣ ಪ್ರಾಥಮಿಕ ಶಾಲೆಗಳನ್ನು ತೆರೆಯುವಂತೆ ಸಂಸ್ಥಾನದ ವಿದ್ಯಾಭ್ಯಾಸ ಸುಧಾರಣಾ ಸಮಿತಿಯು ನಿರ್ಧರಿಸಿ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನವನ್ನು ಕೊಡುವಂತೆ ತೀರ್ಮಾನಿಸಿದೆ ಎಂದು ವಿದ್ಯಾಶಾಖಾ ಮುಖ್ಯಾಧಿಕಾರಿ ಶ್ರೀ ಜೆ. ಬಿ. ಮಲ್ಲಾರಾಧ್ಯರವರು ನಿನ್ನೆಯದಿನ ಆಕಾಶವಾಣಿಯಲ್ಲಿ ಸಂಸ್ಥಾನದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಎಂಬ ವಿಷಯದಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಇನ್ನು ಮುಂದೆ ಪ್ರಾಥಮಿಕ ಶಿಕ್ಷಣವನ್ನು ೬ ವರ್ಷಕಾಲ ನಡೆಯುವಂತೇರ್ಪಡಿಸಬೇಕು. ಅಲ್ಲಿ ಅಮರ ಶ್ಲೋಕ ಮುಂತಾದುವನ್ನೆಲ್ಲಾ ಹೇಳಿಕೊಡಬೇಕು ಎಂದು ತಿಳಿಸಿದರು.

ಉಪಾಧ್ಯಾಯರ ನೇಮಕದ ವಿಷಯದಲ್ಲಿ ಅವರು ಪ್ರಸ್ತಾಪಿಸಿ ಪ್ರಾಥಮಿಕ ಶಾಲೆಗಳಿಗೆ ಲೋಯರ್ ಸೆಕೆಂಡರಿ ಪರೀಕ್ಷೆ ಆದ ಉಪಾಧ್ಯಾಯರನ್ನು ನೇಮಿಸಿಕೊಳ್ಳುವುದಕ್ಕೆ ಬದಲು ಇನ್ನು ಮುಂದೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಾದವರನ್ನು ನೇಮಿಸಿಕೊಳ್ಳಬೇಕು. ಮತ್ತು ತಕ್ಕ ಟ್ರೈನಿಂಗ್ ಸಹ ಆಗಿರಬೇಕು ಎಂಬುದನ್ನು ಪ್ರಥಮವಾಗಿ ನಮೂದಿಸಲಾಗುತ್ತದೆ ಅಲ್ಲದೆ ಅವರ ಜೀವನಕ್ಕೆ ತಕ್ಕಂತೆ ಅವರಿಗೆ ವೇತನವನ್ನೂ ಸಹ ಕೊಡಬೇಕೆಂದು ವಿದ್ಯಾ ಸುಧಾರಣಾ ಸಮಿತಿಯು ಸಲಹೆ ನೀಡಿರುವುದನ್ನು ಅವರು ತಿಳಿಸಿದರು.

ಭಕ್ಷಿ ಸರ್ಕಾರದಲ್ಲಿ ವಿಶ್ವಾಸ ಸೂಚನೆ

ನಿನ್ನೆಯದಿನ ಕಾಶ್ಮೀರದಲ್ಲಿ ಶಾಸನ ಸಭೆಯ ಅಧಿವೇಶನವು ನಡೆದು ಈಗಿನ ಭಕ್ಷೀಗುಲಾಂ ಮಹಮದ್‌ರವರ ಸರ್ಕಾರದಲ್ಲಿ ಪೂರ್ಣ ವಿಶ್ವಾಸವನ್ನು ವ್ಯಕ್ತಪಡಿಸುವ ನಿರ್ಣಯವನ್ನು ಅವಿರೋಧವಾಗಿ ಮಾಡಲಾಯಿತು.

-ಮೈಸೂರು ಪೇಟೆಧಾರಣೆ-

ತಾರೀಖು ೫—೧೦—೧೯೫೪

ಸಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—	೨೧—೮
ಎಳ್ಳು	೬೯—	೭೯—
ಹುರುಳಿ	೩೬—	೩೮—೪
ಮೆಣಸಿನಕಾಯಿ	೪೦—೪	೪೧—೧೨
ಹುಣಸೇಹಣ್ಣು	೪—	೮—
ತೆಂಗಿನಕಾಯಿ	೧೫೮	೨೬೯

ಡಾ॥ ನಾಗನಗೌಡರು ಮೈಸೂರಿನ ಸಚಿವರಾದರು

ನಿನ್ನೆ ರಾಜಪ್ರಮುಖರ ಸಮ್ಮುಖದಲ್ಲಿ ಅಧಿಕಾರ ಸ್ವೀಕಾರ

ಮೈಸೂರು ೬

ಕಳೆದ ಮಾಹೆ ಅಂತ್ಯದವರೆಗೆ ಮದ್ರಾಸ್ ಸರ್ಕಾರದಲ್ಲಿ ವ್ಯವಸಾಯ ಸಚಿವರಾಗಿದ್ದ ಡಾ॥ ನಾಗನಗೌಡರು ನಿನ್ನೆಯದಿನ ಸಂಜೆ ಶ್ರೀಮನ್ಮಹಾರಾಜರ ಸಮ್ಮುಖದಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿ ಮೈಸೂರು ಸಚಿವ ಸಂಪುಟಕ್ಕೆ ವ್ಯವಸಾಯ ಮಂತ್ರಿಗಳಾಗಿ ಸೇರಿದರು ಅವರು ಬಳ್ಳಾರಿ ಜಿಲ್ಲೆಯವರು.

ನಿನ್ನೆ ಮಧ್ಯಾಹ್ನ ಬೆಂಗಳೂರಿನಲ್ಲಿ ಶ್ರೀಮನ್ಮಹಾರಾಜರು ಡಾ॥ ನಾಗನಗೌಡರನ್ನು ಈ ಮಧ್ಯಾಹ್ನದಿಂದ ವ್ಯವಸಾಯ ಮಂತ್ರಿಗಳನ್ನಾಗಿ ನೇಮಿಸಿದ್ದಾರೆ ಎಂದು ಒಂದು ಸರ್ಕಾರಿ ಪ್ರಕಟಣೆ ಹೊರಬಿತ್ತು.

ಡಾ॥ ನಾಗನಗೌಡರು ಸಂಜೆ ವೇಳೆಗೆ ಮೈಸೂರಿಗೆ ಆಗಮಿಸಿದರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ದೆಹಲಿಗೆ ಪ್ರಯಾಣಮಾಡಿರುವುದರಿಂದ ಶ್ರೀ ಗೌಡರ ಜೊತೆಯಲ್ಲಿ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಆಗಮಿಸಿದ್ದರು.

ಪ್ರಮಾಣಸ್ವೀಕಾರ ಸಮಯದಲ್ಲಿ ಅವರು ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಎನ್. ಪುಟ್ಟರಂಗಸ್ವಾಮಿಯವರು ಹಾಜರಿದ್ದರು.

ನಿನ್ನೆ ರಾತ್ರಿಯೇ ಅವರು ಬೆಂಗಳೂರಿಗೆ ಹಿಂತಿರುಗಿದರು.

ಸೂತ್ರ ಗೊಂಬೆ ಆಟ ಪ್ರದರ್ಶನ

ಮೈಸೂರು ೬

ಈಸಂಜೆ ೭ಗಂಟೆಗೆ ಡಿ.ಸುಬ್ಬಯ್ಯ ರಸ್ತೆಯಲ್ಲಿರುವ 'ಸಾಧ್ವಿ' ಪತ್ರಿಕೆಯ ಕಛೇರಿ ಮಹಡಿಮೇಲೆ ಜೋಧಪುರದ ಸುಪ್ರಸಿದ್ಧ ಸೂತ್ರಗೊಂಬೆ ಆಟಗಾರರಾದ ಶ್ರೀ ಶ್ಯಾಮಲಾಲ್‌ರ ಮತ್ತು ಅವರ ಪಾರ್ಟಿಯವರು ಅಕ್ಬರ್-ಬೀರ್‌ಬಲ್ ದರ್ಬಾರ್ ಎಂಬ ನೃತ್ಯ ಪ್ರದರ್ಶಿಸುತ್ತಾರೆ. ಸರ್ವರೂ ದಯಮಾಡಿಸಬೇಕೆಂದು ಕೋರಲಾಗಿದೆ.

ಅಂತ್ಯಗೌರವ

ನಿನ್ನೆಯದಿನ ಭಾರತ ಶ್ರೇಷ್ಠ ನ್ಯಾಯಾಲಯದಲ್ಲಿ ದಿವಂಗತ ಶ್ರೀ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್‌ರವರಿಗೆ ಗೌರವವನ್ನು ಸಲ್ಲಿಸಿದರು. ಶ್ರೇಷ್ಠ ನ್ಯಾಯಾಮೂರ್ತಿ ಶ್ರೀ ಪತಂಜಲಿಶಾಸ್ತ್ರಿ ಮತ್ತು ಇತರರು ದಿವಂಗತರ ಗುಣಗಾನ ಮಾಡಿದರು.

ಕೇಂದ್ರದಿಂದ ೬೦ ಲಕ್ಷ ರೂ. ಸಾಲ

ಸಣ್ಣ ನೀರಾವರಿ ಕೆಲಸಗಳಿಗಾಗಿ ಮದ್ರಾಸ್ ಸರ್ಕಾರಕ್ಕೆ ಕೇಂದ್ರವು ೬೦ ಲಕ್ಷ ರೂ.ಗಳ ಸಾಲವನ್ನು ಮಂಜೂರ್ಮಾಡಿರುವುದಾಗಿ ತಿಳಿಯಬರುತ್ತದೆ.

ವಿದೇಶಿ ವಸಾಹತುಗಳು ಹೋಗಬೇಕು

ಯಾವವ್ಯಕ್ತಿಯಿಂದಲೇ ಆಗಲಿ ಭಾರತದಲ್ಲಿರುವ ವಿದೇಶೀಯರ ವಸಾಹತುಗಳು ಹೋಗಲೇ ಬೇಕೆಂದು ಪ್ರಧಾನಿ ನೆಹರೂರವರು ಪಾಲಘಾಟಿನ ಬಹಿರಂಗ ಸಭೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಇಂತಹ ವಸಾಹತುಗಳಿಂದ ಜನರಿಗೆ ಕಿರುಕುಳ ಮತ್ತು ವಿಶೇಷ ಕಷ್ಟವುಂಟಾಗುತ್ತಿದೆ. ಆದರೆ ಈ ಪ್ರಶ್ನೆ ದೊಡ್ಡರಾಷ್ಟ್ರಗಳಲ್ಲಿ ಸಿಕ್ಕಿಕೊಂಡಿರುವುದರಿಂದ ಶಾಂತರೀತಿಯಿಂದ ಅದನ್ನು ಬಗೆಹರಿಸಬೇಕು ಎಂದು ಅವರು ತಿಳಿಸಿದರು.

ದೇಶದ ೩೬ ಕೋಟಿ ಜನರಿಗೆ ಅನ್ನ, ಬಟ್ಟೆ, ವಸತಿ, ವಿದ್ಯೆ ಮತ್ತು ವೈದ್ಯಚಿಕಿತ್ಸೆ ಒದಗಿಸಲು ಪಂಚವಾರ್ಷಿಕ ಯೋಜನೆ ತಯಾರಿಸಲಾಗಿದೆ. ಅದಕ್ಕಾಗಿ ಜನರು ಶ್ರಮಪಟ್ಟು ಕೆಲಸಮಾಡಿ ರಾಷ್ಟ್ರದ ಸಂಪತ್ತನ್ನು ಹೆಚ್ಚಿಸಬೇಕು ಎಂದು ಪ್ರಧಾನಿ ಮನವಿ ಮಾಡಿದ್ದಾರೆ.

ಕರ್ಣಾಟಕ ಪ್ರಾಂತ್ಯಕ್ಕಾಗಿ ಆಮರಣಾಂತ ಉಪವಾಸ

ಕರ್ಣಾಟಕ ಪ್ರಾಂತರಚನೆಯ ಬಗ್ಗೆ ನಾಯಕರು ವಿಶೇಷ ಶ್ರಮಿಸುತ್ತಿಲ್ಲವಾದ್ದರಿಂದ ಅವರ ಹೃದಯ ಪರಿವರ್ತನೆ ಮಾಡಲು ಇದೇ ೪ ನೇ ತಾರೀಖಿನಿಂದ ಶ್ರೀ ಈಶ್ವರಪ್ಪ ಹೊನ್ನಗುಡಿಯವರು ಗದುಗಿನಲ್ಲಿ ಬೊಂಬಾಯಿ ಶಾಸನಸಭಾ ಸದಸ್ಯ ಶ್ರೀ ದೊಡ್ಡಮೇಟಿಯವರ ಮನೆಮುಂದೆ ಆಮರಣಾಂತ ಉಪವಾಸ ಪ್ರಾರಂಭಿಸಿದ್ದಾರೆ.

ವಿದ್ಯಾರ್ಥಿಗಳ ಮುಷ್ಕರ ಮುಕ್ತಾಯ

ಲಕ್ನೋ ವಿಶ್ವವಿದ್ಯಾನಿಲಯದಲ್ಲಿ ೩೬ ದಿನಗಳಿಂದ ವಿದ್ಯಾರ್ಥಿಗಳು ನಡೆಸುತ್ತಲಿದ್ದ ಮುಷ್ಕರವು ನಿನ್ನೆಯದಿನ ಮುಕ್ತಾಯವಾಗಿ ಅಧಿಕ ಸಂಖ್ಯೆಯಲ್ಲಿ ಅವರು ಕಾಲೇಜುಗಳಿಗೆ ಹೋಗಿದ್ದಾರೆಂದು ತಿಳಿಯಬರುತ್ತದೆ.

ದಕ್ಷಿಣ ಭಾರತ ಪ್ರವಾಸ ಮುಕ್ತಾಯ

ಪ್ರಧಾನಿ ನೆಹರೂರವರು ಕಳೆದ ೫ ದಿನಗಳಿಂದ ಕೈಗೊಂಡಿದ್ದ ದಕ್ಷಿಣ ಭಾರತ ಪ್ರವಾಸವನ್ನು ಮುಗಿಸಿಕೊಂಡು ಹೈದರಾಬಾದಿನ ಮೂಲಕ ಮದ್ರಾಸ್‌ನಿಂದ ದೆಹಲಿಗೆ ನಿನ್ನೆ ಮಧ್ಯಾಹ್ನ ಹಿಂತಿರುಗಿದರು.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಪೋ॥ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೪೧

೭-೧೦-೧೯೫೪ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಲ್ಕತ್ತದಲ್ಲಿ ನಗರ ಪಿತೃಗಳ ಬಂಧನ

ನೌಕರರೇ ಅವರನ್ನು ೮ ಗಂಟೆ ಕಾಲ ಕೂಡಿಹಾಕಿದ್ದರು

ಕಲ್ಕತ್ತಾ ನಗರದಲ್ಲಿಯ ಕಾರ್ಪೋರೇಷನ್ ನೌಕರರು ಒಂದು ತಿಂಗಳು ಸಂಬಳವನ್ನು ಮುಂಗಡವಾಗಿ ಕೊಡಬೇಕು ಮತ್ತು ಕಳೆದ ೧೯೪೮ರ ಮುಷ್ಕರದ ಸಂಬಳವನ್ನು ಕೊಡಬೇಕೆಂದು ಮುಷ್ಕರವನ್ನು ಹೂಡಿ ಕಾರ್ಪೋರೇಷನ್ ಸದಸ್ಯರನ್ನೆಲ್ಲಾ ಸ್ವಲ್ಪಕಾಲ ಬಂಧಿಸಿದ ವಿಚಿತ್ರ ಪ್ರಕರಣ ವರದಿಯಾಗಿದೆ.

ಇದೇ ಸೋಮವಾರ ಕಾರ್ಪೋರೇಷನ್ ಸಭೆಯು ನಡೆದು ಅದರಲ್ಲಿ ೮೦ ಸದಸ್ಯರು ಭಾಗವಹಿಸುತ್ತಲಿರುವಾಗ ಸಂಜೆ ೬ ಗಂಟೆ ವೇಳೆಯಲ್ಲಿ ಅಲ್ಲಿಯ ಸುಮಾರು ೮೦೦೦ ನೌಕರರು ಸಭಾಭವನವನ್ನು ಮುತ್ತಿ ಅದಕ್ಕೆ ಬೀಗಗಳನ್ನು ಹಾಕಿ, ಎಲ್ಲರೂ ಅಲ್ಲಿಯೇ ಕುಳಿತರು ರಾತ್ರಿ ೨ ಗಂಟೆಯಾದರೂ ಅವರು ಬೀಗಗಳನ್ನು ತೆಗೆದು ಸದಸ್ಯರನ್ನು ಹೊರಕ್ಕೆ ಬಿಡಲಿಲ್ಲ.

ಪುರಸಭಾಧಿಕಾರಿಗಳು ಬಹಳ ಶ್ರಮಪಟ್ಟು ಕಾರ್ಮಿಕ ಬೇಡಿಕೆಗಳನ್ನು ಈಡೇರಿಸಲು ಭರವಸೆಯಿತ್ತಮೇಲೆ ಕಾರ್ಮಿಕರೆಲ್ಲರೂ ಚದುರಿ, ಬೀಗಗಳನ್ನು ತೆಗೆದು ಸದಸ್ಯರನ್ನು ಹೊರಕ್ಕೆಬಿಟ್ಟರು.

ದಸರಾಕಾಲದಲ್ಲಿ ಅಂಗಡಿ ಕಾನೂನು ರದ್ದು

ಮೈಸೂರು ೮

ದಸರಾ ಮಹೋತ್ಸವ ಕಾಲದಲ್ಲಿ ಅಂದರೆ ಇಂದಿನಿಂದ ಅಕ್ಟೋಬರ್ ೨೫ ನೇ ತಾ॥ ವರೆಗೆ ಮೈಸೂರು ನಗರದಲ್ಲಿ ಅಂಗಡಿ ಮತ್ತು ನೌಕರರ ಕಾನೂನಿನ ಶಾಸನದ ಕೆಲವು ನಿಬಂಧನೆಗಳನ್ನು ತಾತ್ಕಾಲಿಕವಾಗಿ ಕೆಲವು ಷರತ್ತುಗಳಮೇಲೆ ರದ್ದುಗೊಳಿಸಿ ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಎ. ಎಸ್. ಸ್ವಾಮಿನಾಥನ್‌ರವರು ಆಜ್ಞೆ ಹೊರಡಿಸಿದ್ದಾರೆ.

ಷರತ್ತುಗಳು ಈರೀತಿ ಇವೆ:—

ಯಾವ ಕೆಲಸಗಾರನನ್ನೂ ಪ್ರತಿದಿನವೂ ೧೨ ಗಂಟೆಗಿಂತ ಹೆಚ್ಚಿನಕಾಲ ಕೆಲಸಕ್ಕೆ ನೇಮಿಸಿಕೊಳ್ಳಬಾರದು. ಕೆಲಸಗಾರರಿಗೆ ೪ ಗಂಟೆ ಕೆಲಸದ ನಂತರ ಅರ್ಧಗಂಟೆಯ ವಿರಾಮವನ್ನು ಕೊಡಬೇಕು. ಕೆಲಸದ ಮತ್ತು ವಿರಾಮದ ಕಾಲವು ಒಟ್ಟು ಹದಿಮೂರುವರೆ ಗಂಟೆಗೆ ಮೀರಕೂಡದು.

ಸಾಮಾನ್ಯ ಕೆಲಸದ ಕಾಲಕ್ಕಿಂತ ಹೆಚ್ಚು ಕಾಲ ಕೆಲಸ ಮಾಡುವವರಿಗೆ ಸಾಮಾನ್ಯ ವೇತನದ ಎರಡರಷ್ಟು ಸಂಬಳವನ್ನು ಆ ಕಾಲಕ್ಕೆ ಕೊಡಬೇಕು. ಈ ಕಾಲದಲ್ಲಿ ಕೊಡಬೇಕಾಗಿದ್ದ ರಜಾದಿನಕ್ಕೆ ಬದಲಾಗಿ ಅವರಿಗೆ ಬೇರೆದಿನ ರಜಾ ಕೊಡಬೇಕು.

ಶ್ರೀ ಕೆ.ಸಿ. ರೆಡ್ಡಿಯವರು ಮೈಸೂರಿನಲ್ಲಿ

ಮೈಸೂರು ೮

ಕೇಂದ್ರ ಸರ್ಕಾರದ ಉತ್ಪಾದನ ಶಾಖಾ ಸಚಿವ ಶ್ರೀ ಕೆ.ಸಿ. ರೆಡ್ಡಿಯವರು ನಿನ್ನೆ ಮಧ್ಯಾಹ್ನ ರಾಜಧಾನಿಗೆ ಭದ್ರಾವತಿಯಿಂದ ಆಗಮಿಸಿದರು. ಅನಂತರ ಕೈಗಾರಿಕಾ ಸಚಿವ ಶ್ರೀ ಸಿದ್ಧವೀರಪ್ಪ, ಮಾಜಿ ಸಚಿವ ಶ್ರೀ ಹೆಚ್.ಸಿ. ದಾಸಪ್ಪ ಮತ್ತು ಶ್ರೀ ಎಲ್. ಎಸ್. ವೆಂಕಾಜಿರಾವ್ ಮುಂತಾದವರೊಡನೆ ಬೆಳಗೊಳದ ಕೃತಕ ಗೊಬ್ಬರ ಕಾರ್ಖಾನೆಗೆ ಭೇಟಿಯಿತ್ತಿದ್ದರು.

ಈ ದಿನ ಬೆಳಗ್ಗೆ ಸಚಿವರು ಅರಮನೆಯಲ್ಲಿ ನಡೆದ ರಾಜಸಭೆಗೆ ದಯಮಾಡಿಸಿದ್ದರು.

ಈ ಮಧ್ಯಾಹ್ನ ಅವರು ರಾವ್.ಕೃಷ್ಣಾಶ್ರಮಕ್ಕೆ ಭೇಟಿಯಿತ್ತು, ದಸರಾ ವಸ್ತುಪ್ರದರ್ಶನ ಪ್ರಾರಂಭೋತ್ಸವದಲ್ಲಿ ಭಾಗವಹಿಸಿದ್ದರು ಅನಂತರ ಬೆಂಗಳೂರಿಗೆ ಈ ಸಂಜೆ ಪ್ರಯಾಣ ಮಾಡುವರೆಂದು ತಿಳಿಯಬರುತ್ತದೆ.

ಅಕ್ಕಿ ರಫ್ತಿಗೆ ರಹದಾರಿ

ಬೆಂಗಳೂರು ೮

ಲಘುನಾಣ್ಯ ಪ್ರದೇಶಗಳಿಂದ ಅಕ್ಕಿಯನ್ನು ತರಿಸಿಕೊಳ್ಳಲು ರಹದಾರಿಯನ್ನು ಕೊಡಲು ಭಾರತ ಸರ್ಕಾರವು ಅರ್ಜಿಗಳನ್ನು ಸ್ವೀಕರಿಸಲು ನಿರ್ಧರಿಸಿದೆ. ಅರ್ಜಿಗಳನ್ನು ಹೊಸದೆಹಲಿಯಲ್ಲಿರುವ ರಫ್ತಿನ ಚೀಫ್ ಕಂಟ್ರೋಲರ್‌ರವರಿಗೆ ಸಲ್ಲಿಸಬೇಕು.

ನೂತನ ರಾಜಧಾನಿ ಉದ್ಘಾಟನೆ

ಪಂಜಾಬಿಗೆ ನೂತನ ರಾಜಧಾನಿಯನ್ನಾಗಿ ರಾಷ್ಟ್ರಪತಿ ಡಾ॥ ರಾಜೇಂದ್ರಪ್ರಸಾದ್‌ರವರು ಚಂಡೀಘರ್‌ನ್ನು ಉದ್ಘಾಟಿಸಿದರು. ಭಾರತದಲ್ಲೆಲ್ಲಾ ನೂತನ ರೀತಿಯಿಂದ ಕಟ್ಟಿದ ನಗರವಾಗಿರುವುದಾಗಿ ಅವರು ತಿಳಿಸುತ್ತಾ ಅದರ ರಚನೆ ಬಗ್ಗೆ ಇಂಜನಿಯರುಗಳು ವಹಿಸಿದ ಪಾತ್ರವನ್ನು ಪ್ರಶಂಸಿಸಿದರು.

ವ್ಯವಸಾಯ ಭೂಮಿ

ಭಾರತದಲ್ಲಿ ಈಸಾಲಿನಲ್ಲಿ ಒಟ್ಟು ೧೧ ಕೋಟಿ ಎಕರೆ ಜಮೀನು ವ್ಯವಸಾಯದಲ್ಲಿರುವುದಾಗಿ ತಿಳಿಯಬರುತ್ತದೆ. ಕಳೆದ ಸಾಲಿಗಿಂತ ಈ ಸಾಲಿನಲ್ಲಿ ಶೇಕಡ 8½ ಎಷ್ಟು ಅಧಿಕವಾಗಿದೆ.

ನಗರದಲ್ಲಿ ಗರಡಿಯುವರ ವಿರೋಧ ಪ್ರದರ್ಶನ

ನಗರ ಕಾಂಗ್ರೆಸ್ ಅಧ್ಯಕ್ಷ ಚನ್ನಯ್ಯನವರ ಮೇಲೆ ಧಾಳಿ

ಮೈಸೂರು ೮

ಈ ರಾತ್ರಿಯಿಂದ ಅರಮನೆಯ ಮುಂದೆ ನಡೆಯಲಿರುವ ಕುಸ್ತಿ ಪಂದ್ಯಗಳಲ್ಲಿ, ಮಾಮೂಲಿಗೆ ವಿರೋಧವಾಗಿ ಹರಿಜನರು ಭಾಗವಹಿಸುವುದನ್ನು ಪ್ರತಿಭಟಿಸಿ ನಗರದ ಮತ್ತು ಸುತ್ತ ಮುತ್ತಲಿನ ಪಡುವಾರಹಳ್ಳಿ ಕನ್ನೇಗೌಡನಕೊಪ್ಪಲು, ಕುಂಬಾರಕೊಪ್ಪಲು ಕ್ಯಾತಮಾರನಹಳ್ಳಿ ಮುಂತಾದ ಪ್ರದೇಶಗಳಲ್ಲಿಯ ಗರಡಿಯವರು ಈ ಬೆಳಗ್ಗೆ ಕ್ರಾಫರ್ಡ್ ಭವನದ ಒಳ ಸಭೆ ನಡೆಸಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿದರು. ಇವರಲ್ಲಿ ಸುಮಾರು ೫-೬ಸಾವಿರ ಜನರು ಸೇರಿದ್ದರು.

ಅನಂತರ ದಿವಂಗತ ಶ್ರೀ ಕೃಷ್ಣರಾಜ ಒಡೆಯರ ಚಿತ್ರದೊಡನೆ ಮೆರವಣಿಗೆಯು ಶ್ರೀರಾಂಪೇಟೆಯಲ್ಲಿ ಹೊರಟಿತು. ದಾರಿ ಉದ್ದಕ್ಕೂ ಬಲವಂತವಾಗಿ ಕೆಲವು ಅಂಗಡಿಗಳನ್ನು ಮುಚ್ಚಲಾಯಿತು. ಕೆಲವು ಮಾಲೀಕರು ತಾವಾಗಿಯೇ ಹೆದರಿ ಮುಚ್ಚಿದರು. ಗುಂಪು ಸ್ವಲ್ಪ ಹತೋಟಿ ಮೀರಿದಂತೆ ಕಾಣಬರುತ್ತಿತ್ತು. 'ಹನುಮಂತಯ್ಯನವರಿಗೆ ಧಿಕ್ಕಾರ" "ಚೆನ್ನಯ್ಯನವರಿಗೆ ಧಿಕ್ಕಾರ" "ಕಾಂಗ್ರೆಸ್ಸಿಗೆ ಧಿಕ್ಕಾರ" "ಮಹಾರಾಜರಿಗೆ ಜೈ" ಎಂಬ ಘೋಷಣೆಗಳು ಕೇಳಿಬರುತ್ತಿತ್ತು.

ಸ್ವಲ್ಪಹೊತ್ತಿನಲ್ಲಿಯೇ ಗುಂಪು ಮಾರ್ಕೆಟ್ಟಿನಬಳಿ ಬಂತು. ಆ ಸಮಯಕ್ಕೆ ಸರಿಯಾಗಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚೆನ್ನಯ್ಯನವರು ಅಲ್ಲಿಗೆ ಬಂದರು. ಅವರನ್ನು ಹೊಡೆದು ತುಳಿದು ಮೈಮೇಲಿದ್ದ ಬಟ್ಟೆ ಬಟ್ಟೆ ಬರೆಗಳನ್ನು ಹರಿದು ಅವರ ಕೈಗಡಿಯಾರ ಮುಂತಾದುವನ್ನು ಅಪಹರಣ ಮಾಡಲಾಯಿತು. ಹತ್ತಿರವಿದ್ದ ಶ್ರೀಗಳಾದ ಶಿವಣ್ಣ, ಸತ್ಯನಾರಾಯಣರಾವ್, ಮುಂತಾದ ಕೆಲವರಿಗೆ ಏಟು ಬಿದ್ದವು. ಆದರೆ ಮತ್ತೆ ಕೆಲವರು ಅವರನ್ನು ಕಾರೊನೇಷನ್ ಜ್ಯೂಯಲರಿ ಅಂಗಡಿಗೆ ಕರೆದೊಯ್ದು ರಕ್ಷಿಸಿದರು.

ಈವಿಷಯವು ತಿಳಿದ ಮೇಲೆ ಪೊಲೀಸರ ಸಣ್ಣ ತಂಡವೊಂದು ಬಂತು ಅವರಿಗೂ ಪ್ರಹಾರಗಳಾದುವು ಅನಂತರ ಜಿಲ್ಲಾ ಮ್ಯಾಜಿಸ್ಟ್ರೇಟ್ ಶ್ರೀ ಎಂ. ಎಸ್. ಸ್ವಾಮಿನಾಥ್, ಸಿಟಿ ಮ್ಯಾಜಿಸ್ಟ್ರೇಟ್ ಶ್ರೀ ಶಿವನಂದಪ್ಪ, ಡಿ. ಎಸ್. ಪಿ. ಶ್ರೀ ಕೃಷ್ಣಮೂರ್ತಿಯವರು ಪೊಲೀಸ್ ವ್ಯಾನುಗಳೊಡನೆ ಸ್ಥಳಕ್ಕೆ ಧಾವಿಸಿದರು ಅಷ್ಟರೊಳಗೆ ಆ ಗುಂಪು ಚದುರಿ,ಫುಟ್‌ಪಾತ್‌ಗಳಲ್ಲಿ ಪ್ರೇಕ್ಷಕರು ಸೇರಿದರು. ಶ್ರೀ ಚನ್ನಯ್ಯನವರು ಸುರಕ್ಷಿತವಾಗಿ ಮನೆಯನ್ನು ಸೇರಿದರು.

ಇತ್ತ ಗುಂಪು ಪುರಭವನದ ಬಳಿ ಹೋಗಿ ಅಲ್ಲಿರುವ ಧ್ವಜಸ್ತಂಭಕ್ಕೆ ಮಹಾರಾಜರ ಚಿತ್ರಪಟವನ್ನು ತಗುಲಿಹಾಕಿತು. ಜಿಲ್ಲಾಧಿಕಾರಿಗಳು ಅಲ್ಲಿಗೆ ಹೋಗಿ ಮುಖಂಡರನ್ನು ಬರಮಾಡಿಕೊಂಡು 'ರಾಜ್ಯಾಂಗ ಬದ್ಧರಾಗಿ ಎಲ್ಲರೂ ನಡೆಯಬೇಕು' ಎಲ್ಲರಿಗೂ ಸಮಾನ ಹಕ್ಕಿದೆ ಎಂದು ಹೇಳುವಾಗ ಜನರು ಅದಕ್ಕೆ ವಿಶೇಷ ಕಿವಿಗೊಡದೆ 'ಹರಿಜನರು, ಕುಸ್ತಿ ಮಟ್ಟಿಗೆ ಬರಲೇಕೂಡದು, ಇಲ್ಲವಿದ್ದರೆ ಈ ಬಾರಿ ಈ ಪಂದ್ಯಗಳನ್ನು ನಿಲ್ಲಿಸಿ' ಎಂದು ಹಟ ಹಿಡಿದರು. ಈ ವಿಷಯವನ್ನು ಚರ್ಚಿಸಿ ಅಂತ್ಯತೀರ್ಮಾನವನ್ನು ಕೊಡುವುದಾಗಿ ಜಿಲ್ಲಾಧಿಕಾರಿಗಳು ತಮ್ಮ ಸಹಚರರೊಡನೆ ಹೊರಟುಹೋದರು. ಗುಂಪು ಅಲ್ಲೇ ನಿಂತಿತು. ಸುತ್ತಲೂ ರಿಸರ್ವ್ ಪೋಲೀಸ್ ಪಡೆಯು ಬಂದೂಕಗಳಿಂದ ಕಾವಲಾಗಿ ಅಲ್ಲಿಯೇ ಉಳಿಯಿತು.

ಜಿಲ್ಲಾಧಿಕಾರಿಗಳು ಈ ವಿಷಯವನ್ನು ದೀರ್ಘವಾಗಿ ಗೃಹಸಚಿವರೊಡನೆ ಚರ್ಚಿಸಿದನಂತರ ತಾತ್ಕಾಲಿಕವಾಗಿ ಈದಿನ ಕುಸ್ತಿ ಪಂದ್ಯವನ್ನು ನಿಲ್ಲಿಸುವ ನಿರ್ಧಾರವಾಯಿತು ಇದನ್ನು ಎಲ್ಲಾ ಮುಖಂಡರಿಗೆ ತಿಳಿಸಿದ ಮೇಲೆ ಗುಂಪು ಪುರಭವನ ಮೈದಾನದಿಂದ ಚದುರಿತು.

ದಸರಾ ಮಹೋತ್ಸವಾರಂಭ

ಈ ಬೆಳಗ್ಗೆ ಶ್ರೀಮನ್ಮಹಾರಾಜರು ಮಂಗಳಸ್ನಾನಗಳನ್ನು ಮಾಡಿ, ಇಷ್ಟದೇವತಾ ಪೂಜೆ ನಡೆದ ನಂತರ ಸಕಲ ರಾಜಮರ್ಯಾದೆಗಳೊಡನೆ ಸರಿಯಾಗಿ ೮-೩೦ ಗಂಟೆಗೆ ದರ್ಬಾರ್ ಹಾಲಿಗೆ ಆಗಮಿಸಿ, ಸಿಂಹಾಸನಕ್ಕೂ ಪೂಜೆಗೈದು ಫಲಪೂಜೆ ಮುಂತಾದ ಕರ್ಮಗಳನ್ನು ಆಚರಿಸಿ ಸರಿಯಾಗಿ ೯-೪ ಗಂಟೆಗೆ ಸಿಂಹಾಸನಾರೂಢರಾದರು. ಆ ಸಮಯಕ್ಕೆ ಸರಿಯಾಗಿ ಅರಮನೆ ಬತೇರಿಯಿಂದ ೨೧ ಕುಶಾಲುತೋಪುಗಳನ್ನು ಹಾರಿಸಲಾಯಿತು.

ಅನಂತರ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಮೇದಪ್ಪ, ವಿಧಾನ ಸಭೆಯ ಅಧ್ಯಕ್ಷ ಶ್ರೀ ಹೆಚ್. ಸಿದ್ಧಯ್ಯ, ವಿಧಾನ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ.ಟಿ. ಭಾಷ್ಯಂ ಅರಸುಮನೆತನದವರು, ಸರದಾರರು ಮುಂತಾದವರು ಮಹಾರಾಜರಿಗೆ ನಜರನ್ನು ಒಪ್ಪಿಸಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ವಿನಹಾ ಮಿಕ್ಕ ಸಚಿವರುಗಳಾದ ಶ್ರೀಗಳಾದ ಸಿದ್ಧವೀರಪ್ಪ, ಎ. ಜಿ. ರಾಮಚಂದ್ರರಾವ್, ಟಿ. ಚನ್ನಯ್ಯ, ಡಾ॥ ನಾಗನಗೌಡರು, ಕೇಂದ್ರ ಸಚಿವ ಶ್ರೀ ಕೆ.ಸಿ. ರೆಡ್ಡಿಯವರು ಆಗಮಿಸಿದ್ದರು.

ನಿರುದ್ಯೋಗ ಪರಿಹಾರಕ್ಕೆ ನೂತನ ಯೋಜನೆ

ಹೊಸ ತೆರಿಗೆಗಳನ್ನು ಹಾಕಲು ಸೂಚನೆ

ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ ವಿವರಣೆ

ದೇಶದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಪರಿಶೀಲಿಸಲು ೧೫೦-೧೭೫ ಕೋಟಿ ರೂಪಾಯಿಗಳ ಹೊಸ ಯೋಜನೆಗಳನ್ನು ತಯಾರಿಸಿ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗುವುದೆಂದು ಆಯೋಜನಾ ಸಮಿತಿಯ ಉಪಾಧ್ಯಕ್ಷ ಶ್ರೀ ವಿ. ಟಿ. ಕೃಷ್ಣಮಾಚಾರಿಯವರು ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ ನಿನ್ನೆಯ ದಿನ ತಿಳಿಸಿದರು.

ಇದಕ್ಕೆ ಸಂಬಂಧಪಟ್ಟವರ ಪತ್ರಗಳನ್ನು ಎಲ್ಲಾ ಪ್ರಾಂತ್ಯಗಳಿಗೆ ಕಳುಹಿಸಲಾಗುವುದೆಂದು ಈ ಯೋಜನೆಗಳನ್ನು ಪ್ರಾಂತ್ಯಗಳು ಕೆಲವು ಷರತ್ತುಗಳೊಡನೆ ಪಾಲಿಸಿದಲ್ಲಿ ಅದಕ್ಕೆ ತಕ್ಕ ನೆರವು ನೀಡಲಾಗುವುದೆಂದು ಅವರು ಹೇಳಿದರು.

ಪಂಚವಾರ್ಷಿಕ ಯೋಜನೆಯ ಕಾರ್ಯಗಳನ್ನು ನಡೆಸಲು ಕೆಲವು ತೆರಿಗೆಯನ್ನು ವಿಧಿಸಬೇಕೆಂದೂ, ಈಗ ವಿಧಿಸಿರುವ ನೀರಿನ ತೆರಿಗೆಯನ್ನು ಹೆಚ್ಚಿಸಬೇಕೆಂದೂ ಅಲ್ಲದೆ ಸಾರ್ವಜನಿಕ ಸಾಲಗಳಿಂದ ಈ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ಅವರು ಹೇಳಿದರು. ನಿರುದ್ಯೋಗ ನಿವಾರಣೆಗೆ ಈ ಹೊಸ ಯೋಜನೆಯಲ್ಲಿ ಮನೆವಸತಿ, ಕೈಗಾರಿಕಾ ಆರ್ಥಿಕ ಮಂಡಲಿ ನೇಮಕ, ರಸ್ತೆ ನಿರ್ಮಾಣ, ಔದ್ಯೋಗಿಕ ಶಿಕ್ಷಣ ಮುಂತಾದ ಕೆಲಸಗಳು ಸೇರಿವೆಯೆಂದು ಶ್ರೀ ಕೃಷ್ಣಮಾಚಾರಿಯವರು ವಿವರಿಸಿದರು.

ಪಂಚವಾರ್ಷಿಕ ಯೋಜನೆ ಪುನರ್ಪರಿಶೀಲನೆ

ಆಂಧ್ರ ಮತ್ತು ಮದರಾಸ್ ಪ್ರತ್ಯೇಕವಾದುದರ ಪರಿಣಾಮವಾಗಿ ಮದ್ರಾಸ್ ಪ್ರಾಂತ್ಯಕ್ಕೆ ಸಂಬಂಧಪಟ್ಟ ಪಂಚವಾರ್ಷಿಕ ಯೋಜನೆಯನ್ನು ಪುನರ್ಪರಿಶೀಲಿಸಬೇಕೆಂದು ಮದ್ರಾಸಿನ ಆರ್ಥಿಕಸಚಿವ ಶ್ರೀ ಸುಬ್ರಹ್ಮಣ್ಯಂರವರು ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ ಒತ್ತಾಯ ಮಾಡಿದ್ದಾರೆ.

ರಾಷ್ಟ್ರೀಯ ಅಭಿವೃದ್ಧಿ ಮಂಡಲಿ ಸಭೆ ಮುಕ್ತಾಯ

ಕಳೆದ ಎರಡು ದಿನಗಳಿಂದ ಶ್ರೀ ನೆಹ್ರೂರವರ ಅಧ್ಯಕ್ಷತೆಯಲ್ಲಿ ನಡೆಯುತ್ತಲಿದ್ದ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸಮ್ಮೇಳನವು ನಿನ್ನೆದಿನ ಮುಕ್ತಾಯವಾಯಿತು.

ಶ್ರೀ ನೆಹರೂರವರು ಮುಕ್ತಾಯಭಾಷಣವನ್ನು ಮಾಡುತ್ತಾ ಸರ್ಕಾರವನ್ನು ನಡೆಸುವವರು ಹೆಚ್ಚಾಗಿ ಗ್ರಾಮಾಂತರ ಜನರ ಸಂಪರ್ಕವನ್ನು ಪಡೆಯಬೇಕೆಂದು ಒತ್ತಿ ಹೇಳಿದರು.

ಕಾರ್ಮಿಕ ಬೆಂಬಲ

ಮೈಸೂರು ೮

ನಿಯೋ ಹೋಟೆಲ್ ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಸಂಘದ ಅಧ್ಯಕ್ಷರಾದ ಶ್ರೀ ರಂಗನಾಥ್‌ರವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ಮೈಸೂರು ನಗರದಲ್ಲಿ ನಡೆಯುತ್ತಲಿರುವ ನಲ್ಲಿ ಕೆಲಸಗಾರರ ಮುಷ್ಕರಕ್ಕೆ ಮತ್ತು ಪ್ರತಿಭಟನಾ ಸತ್ಯಾಗ್ರಹಕ್ಕೆ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಲಾಯಿತು. ಕಾರ್ಮಿಕ ಮುಖಂಡರು ಕೆಲವರು ಮಾತನಾಡಿ ಕೆಲವು ಹೋಟೆಲು ಮಾಲೀಕರು ತಮ್ಮ ಕೆಲಸಗಾರರ ಮೇಲೆ ನಡೆಸುತ್ತಿರುವ ಅನ್ಯಾಯ ದಬ್ಬಾಳಿಕೆಯನ್ನು ಖಂಡಿಸಿದರು.

ಕನ್ನಡಿಗರ ಸಂಘ

ಮೈಸೂರು ೮

ಕೊಯಮತ್ತೂರು ಜಿಲ್ಲಾ ಗೋಪಿಶೆಟ್ಟಿಪಾಳ್ಯದ ತಾಲ್ಲೂಕು ತಾಳವಾಡಿ ಫಿರ್ಕ ಕನ್ನಡಿಗರ ಸಂಘದ ಪ್ರಾರಂಭೋತ್ಸವವನ್ನು ಇದೇ ೧೧ನೇ ತಾರೀಖು ಭಾನುವಾರ ಮಧ್ಯಾಹ್ನ ೧೨ ಗಂಟೆಗೆ ಮೈಸೂರು ಶಾಸನಸಭಾಸದಸ್ಯ ಶ್ರೀ ಎಂ. ಮಾದಪ್ಪನವರ ಅಧ್ಯಕ್ಷತೆಯಲ್ಲಿ ಪಾರ್ಲಿಮೆಂಟ್ ಸದಸ್ಯ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ನೆರವೇರಿಸುವರು.

ಸ್ವಯಂಸೇವಕ ಶಿಕ್ಷಕ ಶಿಕ್ಷಣ ವರ್ಗ

ಮೈಸೂರು ೮

ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಶ್ರಯದಲ್ಲಿ ನಾಳೆಯಿಂದ ೧೫ನೇ ತಾರೀಖಿನ ವರೆಗೆ ಶಿಕ್ಷಕ ಶಿಕ್ಷಣವನ್ನು ಶಾರದಾವಿಲಾಸ ಪ್ರೌಢಶಾಲೆಯಲ್ಲಿ ಕೊಡಲಾಗುತ್ತದೆ. ಈ ಸಮಾರಂಭದ ಸಮಾರೋಪವು ೧೫ನೇ ತಾರೀಖು ಸಂಜೆ ೫-೩೦ ಗಂಟೆಗೆ ಶ್ರೀಯುತ ಜಗನ್ನಾಥರಾವ್ ಜೋಷಿಯವರಿಂದ ನಡೆಯುತ್ತದೆ.

ಸಾಮಾಜಿಕ ಸಂಸ್ಥೆಗಳಿಗೆ ನೆರವು

ದೇಶದ ಪ್ರಗತಿಗೆ ಸಂಬಂಧಪಟ್ಟ ನಾನಾ ಕಾರ್ಯಗಳನ್ನು ನಡೆಸುವ ಸಾಮಾಜಿಕ ಸಂಸ್ಥೆಗಳಿಗೆ ಕೇಂದ್ರ ಸರ್ಕಾರವು ದ್ರವ್ಯಸಹಾಯವನ್ನು ನೀಡಲು ನಿರ್ಧರಿಸುವುದರಿಂದ ಅಂತಹ ಸಂಸ್ಥೆಗಳು ಕೇಂದ್ರಸರ್ಕಾರವು ರಚಿಸಿರುವ ಸಾಮಾಜಿಕ ಯೋಗಕ್ಷೇಮ ಮಂಡಲಿಯ ಕಾರ್ಯದರ್ಶಿಯವರಿಗೆ ತಮ್ಮ ಅರ್ಜಿಗಳನ್ನು ಕಳುಹಿಸಬಹುದು.

ಪಾಕೀಸ್ತಾನ ರಾಜ್ಯಾಂಗ ಬಗ್ಗೆ ನಿರ್ಧಾರ

ಮುಸ್ಲಿಂ ರಾಜ್ಯವಾಗಬೇಕೆಂದು ಲೀಗ್ ಸದಸ್ಯರು

ಪಾಕೀಸ್ತಾನವು ತನ್ನ ನೂತನ ರಾಜ್ಯಾಂಗವನ್ನು ತಮ್ಮ ಪವಿತ್ರಮತ ಗ್ರಂಥವಾದ ಕೊರಾನನ್ನು ಅನುಸರಿಸಬೇಕೆಂದು ಪ್ರಧಾನಿ ಮಹಮುದ್‌ಅಲಿಯವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯಾಂಗ ಸಭೆಯ ಮುಸ್ಲಿಂ ಲೀಗ್ ಪಕ್ಷವು ನಿರ್ಧರಿಸಿದೆ.

ಪಾಕೀಸ್ತಾನವು ಭಾರತದಂತೆ ಜಾತ್ಯಾತೀತ ರಾಜ್ಯವಾಗಬೇಕೆಂದು ಕೆಲವು ಪ್ರಮುಖ ನಾಯಕರು ಹೇಳುತ್ತಲಿದ್ದುದು ಈಗ ವಿಫಲವಾಗಿ ಕೇವಲ 'ಮುಸ್ಲಿಂರಾಜ್ಯ' ವಾದಂತಾಗುತ್ತದೆ.

ಮಹಿಳೆಯರ ಉಳಿತಾಯ ಯೋಜನೆ

ದೇಶದ ನಾನಾ ಭಾಗಗಳಲ್ಲಿ ನಿನ್ನೆಯ ದಿನ ಮಹಿಳೆಯರ ಉಳಿತಾಯ ಯೋಜನೆಯನ್ನು ಉದ್ಘಾಟಿಸಲಾಯಿತು. ದೆಹಲಿಯಲ್ಲಿ ಪಾಟಿಯಾಲಾ ಮಹಾರಾಣಿಯವರು, ಬೊಂಬಾಯಿನಲ್ಲಿ ಅಲ್ಲಿಯ ಗೌರ್ನರ್ ಶ್ರೀ ಬಾಜಪೈಯವರು ಪ್ರಾರಂಭಿಸಿದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ

ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯ ಸದಸ್ಯರು ಅನೌಪಚಾರಿಕವಾಗಿ ದೆಹಲಿಯಲ್ಲಿ ಸಭೆ ಸೇರಿ, ಹೈದರಾಬಾದ್, ತಿರುವಾಂಕೂರ್-ಕೊಚ್ಚಿ, ಪೆಪ್ಸು ಮುಂತಾದ ಪ್ರಾಂತ್ಯಗಳಲ್ಲಿಯ ಈಗಿನ ರಾಜಕೀಯ ಪರಿಸ್ಥಿತಿಯನ್ನು ಚರ್ಚಿಸಿದರೆಂದು ತಿಳಿದು ಬರುತ್ತದೆ.

ರಫ್ತಿನ ತೆರಿಗೆ ರದ್ದು

ಕಟ್ಟಡಗಳನ್ನು ಕಟ್ಟಲು ಉಪಯೋಗಿಸುವ ಕಬ್ಬಿಣ ಮತ್ತು ಉಕ್ಕಿನ ವಸ್ತುಗಳ ಮೇಲಿನ ರಫ್ತಿನ ತೆರಿಗೆಯನ್ನು ಕೇಂದ್ರ ಸರ್ಕಾರದವರು ರದ್ದುಗೊಳಿಸಿದ್ದಾರೆ.

ಭೂದಾನ ಚಳುವಳಿಯಲ್ಲಿ ರಾಜಕೀಯವಿಲ್ಲ

ಭೂದಾನ ಚಳುವಳಿಯಲ್ಲಿ ಕಾಂಗ್ರೆಸ್, ಪ್ರಜಾಸೋಷಲಿಸ್ಟ್ ಎಂಬ ಪಕ್ಷ ಭೇದಗಳನ್ನು ಯಾಕೆ ತರುವರೆಂಬುದು ಅರ್ಥವಿಲ್ಲವಾಗಿದೆ. ಇದು ಯಾವ ರಾಜಕೀಯಕ್ಕೂ ಸೇರಿದ್ದಲ್ಲ. ಬೀಹಾರಿನಲ್ಲಿ ಭೂಸಮಸ್ಯೆಯು ಪೂರ್ಣವಾಗುವವರೆಗೆ ತಾವು ಅಲ್ಲಿಂದ ಕದಲುವುದಿಲ್ಲ, ನನ್ನ ಕಾರ್ಯವನ್ನು ಪೂರ್ಣ ಮಾಡುತ್ತೇನೆ ಅಥವಾ ಇಲ್ಲಿಯೇ ಸಾಯುತ್ತೇನೆ-ಎಂದು ಆಚಾರ್ಯ ವಿನೋಬಾಭಾವೆಯವರು ಭಾಗಲ್ಪುರದಲ್ಲಿ ಮಾತನಾಡುತ್ತಾ ಶಪಥವನ್ನು ಮಾಡಿದರು.

ಈ ಚಳುವಳಿಯು, ಭಾವೆ ಚಳುವಳಿಯಲ್ಲ ಅಥವ ಯಾವ ವ್ಯಕ್ತಿಯದೂ ಅಲ್ಲ. ದೇವರಿಗೆ ಸೇರಿದ್ದು. ೨ ವರುಷದೊಳಗೆ ಕೇವಲ ೨೦ ಸಾವಿರ ಎಕರೆ ಭೂಮಿಯನ್ನು ಸಂಗ್ರಹಿಸಲಾಯಿತು. ೫ಕೋಟಿ ಎಕರೆಯನ್ನು ಸಂಗ್ರಹಿಸುವವರೆಗೆ ಸುಮ್ಮನಿರುವುದಿಲ್ಲವೆಂದು ನಿರ್ಧರಿಸಲಾಯಿತು. ಇದು ಸೋಜಿಗವೆಂದು ಅನೇಕರಿಗೆ ಕಾಣಬಂತು. ಆದರೆ ಈಗ ೨೦ಲಕ್ಷ ಎಕರೆಗಳನ್ನು ಸಂಗ್ರಹಿಸಲಾಗಿದೆ. ಇದು ದೇವರ ಮಹಾತ್ಮೆ ಎಂದು ಅವರು ಹೇಳಿದ್ದಾರೆ.

★ ಅಮೋಘಪ್ರಾರಂಭ ★
ಶ್ರೀರಾಜರಾಜೇಶ್ವರಿ ನಾಟಕಮಂಡಲಿ
ವಿಜಯವಾಡ
-- ಮೈಸೂರು ಟೌನ್‌ಹಾಲಿನಲ್ಲಿ --
10-10-53ನೇ ರಾತ್ರಿ 10ಗಂಟೆಗೆ
- ಮೈಸೂರು ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ
ತಾರಾಶಶಾಂಕ
(ತೆಲುಗು)
ಎಂಬ ನಾಟಕವನ್ನು ಅಭಿನಯಿಸುತ್ತಾರೆ.
ಪಾತ್ರ:-ಚಲನಚಿತ್ರದಲ್ಲಿ ಖ್ಯಾತಿಪಡೆದ ಶ್ರೀ ಪಿ. ಸೂರ್ಯಬಾಬು, ರಾಜೇಶ್ವರಿದೇವಿ ಮತ್ತು ಇತರ ಪ್ರಸಿದ್ಧ ನಟ ನಟಿಯರು.

ಅಮೋಘ ಪ್ರಾರಂಭ
ನಾಟಕರತ್ನ ಜಿ.ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ
ಥಿಯೇಟ್ರಿಕಲ್ ಕಂಪೆನಿ (ರಿ)
9—10—53 ರಿಂದ ರಾತ್ರಿ 10 ಗಂಟೆಗೆ
ಶಿವರಾಂಪೇಟೆಯ ರತ್ನಾವಳಿ
ಥಿಯೇಟರಿನಲ್ಲಿ
ಸಾಹುಕಾರ
ಎಂಬ ಸಾಮಾಜಿಕ ನಾಟಕವನ್ನು
ವಿಧಾನಸಭೆಯ ಅಧ್ಯಕ್ಷ ಶ್ರೀ ಹೆಚ್. ಸಿದ್ದಯ್ಯ ಬಿ. ಎ., ಎಲ್. ಎಲ್. ಬಿ. ಯವರ ಘನ ಅಧ್ಯಕ್ಷತೆಯಲ್ಲಿ
ಅಭಿನಯಿಸುವರು

ರಾಜಕಮಲ್
9-10-53 ರಿಂದ 4 ನೇ ಕಡೇವಾರ
-ಆಶೈಮಗನ್-
[ತಮಿಳು]

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೪೨

೯-೧೦-೧೯೫೩ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮೈಸೂರಿನಲ್ಲಿ ಗೋಲೀಬಾರು

೪ ಮಂದಿ ಮರಣ; ೧೩ ಜನರಿಗೆ ಗಾಯ

ಮೈಸೂರು ೯

ನಗರದಲ್ಲಿ ನಿನ್ನೆ ಗರಡಿಗಳ ಸುಮಾರು ೫ ಸಾವಿರ ಮಂದಿ ಅರಮನೆ ಮುಂದೆ ನಡೆಯುವ ಕುಸ್ತಿಗಳಲ್ಲಿ ಹರಿಜನರು ಭಾಗವಹಿಸಕೂಡದೆಂದು ಪ್ರದರ್ಶನ ನಡೆಸಿದರು. ಈ ಸಂಬಂಧದಲ್ಲಿ ನಿನ್ನೆ ಸಂಜೆ ೫-೩೫ ಗಂಟೆ ಸಮಯದಲ್ಲಿ ಅರಮನೆ ದಕ್ಷಿಣ ಭಾಗದ ಗೇಟಿನ ಬಳಿ ಪ್ರದರ್ಶನಕಾರರನ್ನು ಚದುರಿಸಲು ಪೊಲೀಸರು ಗುಂಡು ಹಾರಿಸಿದರು. ಅದರ ಪರಿಣಾಮವಾಗಿ ಇಬ್ಬರು ಅಲ್ಲೇ ಸತ್ತುಹೋದರು. ಮತ್ತೊಬ್ಬನು ಆಸ್ಪತ್ರೆಗೆ ಸಾಗಿಸುತ್ತಿರುವಾಗ್ಗೆ ಮರಣಹೊಂದಿದನು. ೧೩ ಜನರಿಗೆ ಗಾಯವಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ದಾಖಲು ಮಾಡಲ್ಪಟ್ಟಿದ್ದಾರೆ. ಅವರಲ್ಲಿ ಒಬ್ಬರು ಈ ದಿನ ಬೆಳಗ್ಗೆ ಮರಣಹೊಂದಿದರು.

ಪ್ರದರ್ಶನಕಾರರು ನಿನ್ನೆ ಸಂಜೆ ೫ ಗಂಟೆ ವರೆವಿಗೂ ಟೌನ್‌ಹಾಲ್ ಮೈದಾನದಲ್ಲಿ ಕುಳಿತಿದ್ದರು. ಜಿಲ್ಲಾಧಿಕಾರಿ ಶ್ರೀ ಎಂ.ಎ. ಸ್ವಾಮಿನಾಥರವರು ಆ ಸಮಯದಲ್ಲಿ ಅಲ್ಲಿಗೆ ಆಗಮಿಸಿ, ಆ ದಿನ ಕುಸ್ತಿ ನಡೆಯುವುದಿಲ್ಲವೆಂದು, ಎಲ್ಲರೂ ಶಾಂತಿ ರೀತಿಯಲ್ಲಿ ಹೊರಟುಹೋಗಬೇಕೆಂದು ಮನವಿ ಮಾಡಿಕೊಂಡರು. ಅದಕ್ಕೆ ನಾಯಕರುಗಳು ಒಪ್ಪಿಕೊಂಡರು. ಈ ಮಧ್ಯೆ ಅರಮನೆ ಹತ್ತಿರ ಹರಿಜನ ಪೈಲ್ವಾನರು ಬರುತ್ತಿದ್ದಾರೆಂದು ಯಾರೋ ತಿಳಿಸಿದ ಕೂಡಲೇ ಪ್ರದರ್ಶನಕಾರರು ಗುಂಪುಗಳಾಗಿ ಅರಮನೆಯ ನಾಲ್ಕು ಗೇಟುಗಳ ಕಡೆ ಧಾವಿಸಿದರು. ದಕ್ಷಿಣ ಭಾಗದ ಗೇಟಿನ ಮುಂದೆ ಹೊರ ಪ್ರದರ್ಶನಕಾರರು ರಸ್ತೆಯ ಪಕ್ಕದಲ್ಲಿದ್ದ ಮರಗಳ ಕೊಂಬೆಗಳನ್ನು ಕಿತ್ತುಕೊಂಡು ದೊಣ್ಣೆಗಳನ್ನಾಗಿ ಮಾಡಿಕೊಂಡು ಹೋಗುತ್ತಿದ್ದ ದೃಶ್ಯ ಕಂಡುಬಂತು. ಈ ಮಧ್ಯೆ ಪೋಲೀಸರು ಅಲ್ಲಿದ್ದ ಹರಿಜನರನ್ನು ವ್ಯಾನಿನಲ್ಲಿ ತುಂಬಿ ಕಳುಹಿಸಿದರು. ಆಗ ಪ್ರದರ್ಶನಕಾರರು ಗಲಭೆಮಾಡಿ ದೊಣ್ಣೆಗಳನ್ನು ಬೀಸುವುದಕ್ಕೆ ಪ್ರಾರಂಭಿಸಿದರು. ಆಗ ಅನೇಕ ಪೋಲೀಸರಿಗೂ, ಮುನಿಸಿಪಲ್ ಕಮೀಷನರ್ ಶ್ರೀ ಲಕ್ಷ್ಮಣರಾವ್, ಡಿ. ಎಸ್. ಪಿ. ಶ್ರೀ ಕೃಷ್ಣಮೂರ್ತಿ ರವರಿಗೂ ಸ್ವಲ್ಪ ಏಟು ಬಿದ್ದಿತು. ಜಿಲ್ಲಾಧಿಕಾರಿಗಳು, ನಗರದ ನ್ಯಾಯಾಧೀಶರು ಮತ್ತು ಇತರ ಅಧಿಕಾರಿಗಳೂ ಎಷ್ಟು ಸಮಾಧಾನಹೇಳಿದರೂ ಪ್ರದರ್ಶನಕಾರರು ಕೇಳದೆ ಉದ್ರೇಕಗೊಂಡು ಅರಮನೆಕಡೆ ನುಗ್ಗಲು ಯತ್ನಿಸಿದರು. ಆಗ ಪೋಲೀಸರು ಅವರನ್ನು ಚದುರಿಸಲು ಗುಂಡು ಹಾರಿಸಿದರು.

ಸಂಜೆ ೬ ಘಂಟೆವೇಳೆಗೆ ಪರಿಸ್ಥಿತಿಯು ಹತೋಟಿಗೆ ಬಂದಿತು. ಅರಮನೆ ದಕ್ಷಿಣ ಭಾಗದಲ್ಲಿದ್ದ ಗುಂಪು ಚದುರಿತು. ಅನಂತರ ಯಾವ ಘಟನೆಯೂ ನಡೆಯಲಿಲ್ಲ.

ಯಥಾವಿಧಿಯಾಗಿ ಸಂಜೆ ೭ ಘಂಟೆಗೆ ಅರಮನೆಯಲ್ಲಿ ದರ್ಬಾರ ನಡೆಯಿತು. ಆದರೆ ಹೆಚ್ಚಾಗಿ ಆಹ್ವಾನಿತರು, ಪ್ರೇಕ್ಷಕರು ಬರಲಿಲ್ಲ.

ದೇಶದ ಅಭ್ಯುದಯ ಸ್ವಪ್ರಯತ್ನದಿಂದಲೇ ಸಾಧ್ಯ

ಎನ್.ಸಿ.ಸಿ. ಸಮಾರಂಭದಲ್ಲಿ ವಿದ್ಯಾ ಸಚಿವರ ಹಿತೋಕ್ತಿ

ಮೈಸೂರು ೯

ಮೈಸೂರು, ಬೆಂಗಳೂರು ಮತ್ತು ತಿರುವಾಂಕೂರು-ಕೊಚ್ಚಿ ಕಾಲೇಜುಗಳ ೩೦೦ ಮಂದಿ ನ್ಯಾಷನಲ್ ಕ್ಯಾಡೆಟ್ ದಳದವರು ನಿನ್ನೆ ಮಂಡ್ಯ ಜಿಲ್ಲೆ ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ೧೫ ಮೈಲಿ ರಸ್ತೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದರು. ಒಂದು ಲಕ್ಷ ರೂ.ಗಳು ಖರ್ಚಾಗುವ ಈ ರಸ್ತೆಯನ್ನು ಹಳ್ಳಿಯ ಜನಗಳ ಸಹಕಾರದಿಂದ ಕೇವಲ ೧೫ ಸಾವಿರ ರೂ.ಗಳ ವೆಚ್ಚದಲ್ಲಿ ಎನ್.ಸಿ.ಸಿ.ಯವರು ಕಟ್ಟಲಿರುವ ಸ್ವಪ್ರಯತ್ನದ ಈ ಕಾರ್ಯವನ್ನು ಸಂಸ್ಥಾನದ ವಿದ್ಯಾ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಉದ್ಘಾಟಿಸಿದರು.

ಲಿಂಗಾಪುರ, ಮಾಕವಳ್ಳಿ, ಹೆಗ್ಗಡಹಳ್ಳಿ, ಬೆಳ್ಳಿಬೆಟ್ಟ ಕಾವಲು, ಕುಪ್ಪಹಳ್ಳಿ, ಬಂಡಿಹೊಳೆ, ಲಕ್ಷ್ಮೀಪುರ, ಶಿರನೇನಹಳ್ಳಿ, ಕುರನೇಹಳ್ಳಿ, ಹರಿಹರಪುರ ಗ್ರಾಮಗಳ ನಿವಾಸಿಗಳು ಸೇವಾಕಾಂಕ್ಷೆಯಿಂದಲೂ ಮತ್ತು ತ್ಯಾಗಬುದ್ಧಿಯಿಂದಲೂ ಕೆಲಸ ಮಾಡಲು ಮುಂದೆ ಬಂದಿರುವುದಕ್ಕಾಗಿ ಸಚಿವರು ಅವರನ್ನು ಅಭಿನಂದಿಸಿದರು. ಈ ಹಳ್ಳಿಗಳಿಗೆ ರಸ್ತೆ ಮಾರ್ಗವೇ ಇಲ್ಲದೆ, ಮಳೆಗಾಲದಲ್ಲಿ ಯಾವ ಸಂಪರ್ಕವೂ ಇರದೆ ಜನರು ಕಷ್ಟಜೀವನದಲ್ಲಿರುವುದು ಮುಂದೆ ರಸ್ತೆ ನಿರ್ಮಾಣದಿಂದ ನಿರ್ಮೂಲವಾಗುವುದು. ಗ್ರಾಮಜೀವನವು ಪುನರುಜ್ಜೀವನ ಹೊಂದುವುದು, ನಮ್ಮ ದೇಶೋನ್ನತಿ ಸಾಧನೆಯು ಪುನರ್ಸ್ಪರ್ಶವನ್ನು ಹೊಂದುವುದು ಈ ಬಗೆಯ ಸ್ವಪ್ರಯತ್ನದಿಂದಲೇ; ಇಂತಹ ಮೇಲ್ಪಂಕ್ತಿಯು ದೇಶಕ್ಕೆ ಮಾರ್ಗದರ್ಶಕವಾಗುವುದು ಎಂದು ಸಚಿವರು ತಿಳಿಸಿದರು. ನೆರೆ ಪ್ರಾಂತ್ಯದಿಂದ ಎನ್.ಸಿ.ಸಿ.ಯವರು ಬಂದು ಸಹಾಯ ಮಾಡುತ್ತಿರುವುದು ಅವರ ಶಿಸ್ತು ಮತ್ತು ತ್ಯಾಗ ಎಲ್ಲರಿಗೂ ಮಾದರಿಯಾಗಿದೆ. ಇದರಿಂದ ಭಾರತೀಯರೆಲ್ಲರೂ ಒಂದೇ ಎಂದು ತಿಳಿದಂತಾಗುವುದು. ಈ ರೀತಿ ಎಲ್ಲರೂ ಸಹಕರಿಸಿ ಶ್ರಮಿಸಿದರೆ ದೇಶವು ಅಭಿವೃದ್ಧಿ ಹೊಂದುವುದು-ಎಂದು ಸಚಿವರು ಆಶಿಸಿದರು.

ಪ್ರಾರಂಭದಲ್ಲಿ ಶಾಸನಸಭಾ ಸದಸ್ಯ ಶ್ರೀ ಎಸ್. ಎಂ. ಲಿಂಗಪ್ಪ, ಎನ್. ಸಿ. ಸಿ. ಡೈರೆಕ್ಟರ್ ಲೆ. ಕ. ವೀರೇಂದ್ರಸಿಂಗ್‌ರವರು ಸ್ವಾಗತ ಬಯಸಿದರು. ಹಳ್ಳಿಯ ಜನರ ಪರವಾಗಿ ಸಚಿವರಿಗೆ ಬಿನ್ನವತ್ತಳೆ ಅರ್ಪಿಸಿ, ಈ ಪ್ರದೇಶಕ್ಕೆ ವಿದ್ಯುಚ್ಛಕ್ತಿ, ಬಸ್‌ವ್ಯವಸ್ಥೆ, ಮಾಧ್ಯಮಿಕ ಶಾಲೆಗೆ ಕಟ್ಟಡ, ಗೃಹ ಕೈಗಾರಿಕೆ ಮತ್ತು ಸಂಸ್ಕೃತಿಕ ಕೇಂದ್ರ ಮುಂತಾದ ಸೌಕರ್ಯ ಒದಗಿಸಬೇಕೆಂದು ಪ್ರಾರ್ಥಿಸಲಾಯಿತು.

ಸಂಸ್ಥಾನದ ಪ್ರತಿಯೊಂದು ಗ್ರಾಮಕ್ಕೂ ವಿದ್ಯುಚ್ಛಕ್ತಿ ಮುಂತಾದ ಎಲ್ಲ ಸೌಕರ್ಯಗಳನ್ನು ಇನ್ನು ೫ ವರ್ಷಗಳೊಳಗಾಗಿ ಒದಗಿಸಬೇಕೆಂಬುದೇ ಸರ್ಕಾರದ ಧ್ಯೇಯ ಮತ್ತು ಅದಕ್ಕಾಗಿ ಕಾರ್ಯಕ್ರಮ ಕೈಗೊಳ್ಳಲಾಗುತ್ತಿವೆ. ಜನರು ಈ ಯೋಜನೆಗಳು ಯಶಸ್ವಿಯಾಗಲು ಸಹಕರಿಸಬೇಕೆಂದು ಸಚಿವರು ತಿಳಿಸಿದರು.

ನಗರದಲ್ಲಿ ಪುನಃ ಪರಿಸ್ಥಿತಿ ಬಿಗಡಾಯಿಸಿತು

ರಾಗಿ ಮೆದೆಗಳಿಗೆ ಬೆಂಕಿ

ಮೈಸೂರು ೯

ನಿನ್ನೆದಿನ ನಗರದಲ್ಲಿ ನಡೆದ ವಿಷಾದ ಘಟನೆಯ ಸಂಬಂಧವಲ್ಲಿ ಈದಿನ ಬೆಳಗ್ಗೆ ಕನ್ನೇಗೌಡನ ಕೊಪ್ಪಲು ಮತ್ತು ಆದಿಕರ್ನಾಟಕ ಪುರದಲ್ಲಿ ಪರಿಸ್ಥಿತಿಯು ಬಿಗಡಾಯಿಸಿ, ಅಲ್ಲಿನ ಜನರೆಲ್ಲರೂ ಲಾಠಿ, ದೊಣ್ಣೆಗಳಿಂದ ಸಜ್ಜಿತರಾಗಿ ಕುಳಿತಿದ್ದರು.

ಈಮುನ್ನ ಬೆಳಗಿನಜಾವ ಜಯನಗರದ ಬಳಿ ಇರುವ ಕೊಪ್ಪಲಿನವರಿಗೆ ಸೇರಿದ ಕೆಲವು ರಾಗಿ ಮೆದೆಗಳಿಗೆ ಆದಿಕರ್ನಾಟಕ ಪುರದವರು ಬೆಂಕಿ ಇಟ್ಟರೆಂದೂ, ಕೆಲವು ರಾಸುಗಳನ್ನು ಅಪಹರಿಸಿದರೆಂದೂ ಕೇಳಲಾಗಿದೆ. ಅದರ ಪರಿಣಾಮವಾಗಿ ಕೊಪ್ಪಲಿನ ಜನರೆಲ್ಲರೂ ಉದ್ರೇಕಗೊಂಡು ವಿವಿಧ ಆಯುಧಗಳೊಡನೆ ಸಿದ್ಧರಾದರೆಂದೂ, ಅದೇರೀತಿ ಆದಿಕರ್ನಾಟಕ ಪುರದಲ್ಲೂ ಜನರು ಸಿದ್ಧತೆಗಳು ನಡೆದುವೆಂದು ತಿಳಿದು ಬರುತ್ತದೆ. ಈ ಪ್ರದೇಶಗಳಲ್ಲಿ ಬಲವಾದ ಪೋಲೀಸ್ ಪಹರೆಯನ್ನು ಹಾಕಲಾಗಿದೆ.

ಜಿಲ್ಲಾಧಿಕಾರಿ ಶ್ರೀ ಸ್ವಾಮಿನಾಥ, ಪೋಲೀಸ್ ಐ. ಜಿ. ಶ್ರೀ ಬಾಬುರೆಡ್ಡಿ ಮುಂತಾದ ಅಧಿಕಾರಿಗಳು ಸ್ಥಳಕ್ಕೆಹೋಗಿ ಉಭಯ ಪಕ್ಷದ ನಾಯಕರೊಡನೆ ಮಾತುಕತೆ ನಡೆಸಿ ಗಲಭೆಗಳು ನಡೆಯದಂತೆ ಸಮಾಧಾನ ಹೇಳಿದರು. ಈ ಸಂಜೆಯವರೆಗೂ ಯಾವ ವಿಷಾದ ಘಟನೆಯೂ ನಡೆಯದೆ ಪರಿಸ್ಥಿತಿ ಶಾಂತಿಯಾಗಿತ್ತು.

ಮಾಜಿ ದೊರೆ ಕಾಂಗ್ರೆಸ್ ಸೇರಿದರು

ಉತ್ತಮ ಕೆಲಸವನ್ನು ಮಾಡುವ ಶಕ್ತಿಯಿರುವ ಸಂಸ್ಥೆಯು ಕಾಂಗ್ರೆಸ್ ಒಂದೇ ಎಂದು ಭಾವಿಸಿ ತಾವು ಆ ಸಂಸ್ಥೆಯನ್ನು ಸೇರುವುದಾಗಿ ಹೇಳಿ, ಕಂಕೇರದ ಮಾಜಿ ಮಹಾರಾಜರಾದ ಶ್ರೀ ಭಾನುಪ್ರತಾಪ್ ದೇವ್‌ರವರು ಕಾಂಗ್ರೆಸ್ಸನ್ನು ಸೇರಿದ್ದಾರೆ.

ಅವರು ಮಧ್ಯಪ್ರದೇಶದ ಶಾಸನ ಸಭೆಯಲ್ಲಿ ಸ್ವತಂತ್ರ ಸದಸ್ಯರಾಗಿದ್ದರು.

ಸಂಗೀತ ಸ್ಪರ್ಧೆ

ಮೈಸೂರು ಮಹಾರಾಜಾ ಕಾಲೇಜು ಮಿತ್ರಮೇಳದ ಆಶ್ರಯದಲ್ಲಿ ಮೈಸೂರು ನಗರದ ನಾನಾ ಕಾಲೇಜು ವಿದ್ಯಾರ್ಥಿಗಳಿಗಾಗಿ ಏರ್ಪಡಿಸಿದ್ದ ವಿವಿಧ ಸಂಗೀತ ಸ್ಪರ್ಧೆಗಳನ್ನು ಅಕ್ಟೋಬರ್ ೩೦ನೇ ತಾರೀಖಿಗೆ ಮುಂದೆ ಹಾಕಲ್ಪಟ್ಟಿದೆ. ಭಾಗವಹಿಸಲಪೇಕ್ಷಿಸುವವರು ಪ್ರತಿ ವಿಭಾಗಕ್ಕೆ ಪ್ರವೇಶಧನ ಒಂದು ರೂಪಾಯಿಯನ್ನು ಅಕ್ಟೋಬರ್ ೨೫ರ ಒಳಗಾಗಿ ಕಳುಹಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ.

● ಭಾರತ ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣರವರು ಈ ತಿಂಗಳಿನಲ್ಲಿ ತುಂಗಭದ್ರಾ ಯೋಜನೆಯನ್ನು ಪರಿಶೀಲಿಸಲಿರುವರೆಂದು ತಿಳಿಯಬರುತ್ತದೆ.

ಡಾ|| ಮೊಸಾದಿಕ್‌ರವರ ವಿಚಾರಣೆ

ಪರ್ಷಿಯಾದ ಮಾಜಿ ಪ್ರಧಾನಿ ಡಾ|| ಮುಸಾದಿಕ್‌ರವರ ವಿಚಾರಣೆಯು ಇದೇ ಮಾಹೆ ೧೫ನೇ ತಾರೀಖು ಪ್ರಾರಂಭವಾಗುವುದಾಗಿ ಗೊತ್ತಾಗಿದೆ.

ಷಾರವರ ಆಜ್ಞೆಯನ್ನು ಉಲ್ಲಂಘಿಸಿದುದು ಮತ್ತು ಪಾರ್ಲಿಮೆಂಟನ್ನು ವಿಸರ್ಜಿಸಿದ್ದ ಅವರ ಮೇಲಿನ ಗುರುತರವಾದ ಆಪಾದನೆಗಳು.

ಅಧಿಕಬಟ್ಟೆ ಶೇಖರಣೆಯಿಂದ ನಿರುದ್ಯೋಗ

ಅಹಮದಾಬಾದಿನಲ್ಲಿ ಗಿರಣಿಗಳಲ್ಲಿ ಬಟ್ಟೆಶೇಖರಣೆ ವಿಶೇಷವಾಗಿರುವುದರಿಂದ ೧೪ ಗಿರಣಿಗಳಲ್ಲಿ ಕೆಲವು ಷಿಫ್ಟ್‌ಗಳನ್ನು ನಿಲ್ಲಿಸಿವೆ ಅದರ ಪರಿಣಾಮವಾಗಿ ೧೦ ಸಾವಿರಕ್ಕೂ ಹೆಚ್ಚು ಜನರಿಗೆ ಕೆಲಸವಿಲ್ಲದಂತಾಗಿದೆಯೆಂದು ತಿಳಿಯಬರುತ್ತದೆ.

ರಾಜಧಾನಿಯ ಪೌರಸಭೆ ಪ್ರತಿಪಕ್ಷ ರಚನೆ

ಮೈಸೂರು ೮

ಇದೇ ೬ನೇ ತಾ॥ ಮೈಸೂರು ಪೌರಸಭೆಯ ಪ್ರತಿಪಕ್ಷಗಳ ಸಂಯುಕ್ತ ಸಭೆಯ ಕಾರ್ಯಕಲಾಪಗಳು ಶ್ರೀ ಎ. ವೆಂಕಟೇಶಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟವು.

ಅಧ್ಯಕ್ಷರು ಪೌರಸಭೆಯಲ್ಲಿ ಕಳೆದ ೩ ವರ್ಷಗಳಿಂದ ನಡೆದ ವಿಚಾರಗಳನ್ನು ವಿವರಿಸಿದರು. ಶ್ರೀ ಮಹಮುದ್‌ಸೇಟ್‌ರವರು ಅಧಿಕಾರ ಪಕ್ಷದ ಮತ್ತು ಪ್ರತಿಪಕ್ಷಗಳ ಆಡಳಿತ ವ್ಯವಸ್ಥೆಯನ್ನು ತೀವ್ರವಾಗಿ ಖಂಡಿಸುತ್ತಾ ಮುಂದಿನ ಸಂಯುಕ್ತ ಪ್ರತಿಪಕ್ಷವು ಸುವ್ಯವಸ್ಥಿತವಾಗಿ ನಡೆಯಬೇಕಾದ ರೀತಿನೀತಿಗಳನ್ನು ವಿವರಿಸಿದರು. ಲೋಕಸಭಾ ಸದಸ್ಯರಾದ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಮಾತನಾಡಿ ಪ್ರತಿಪಕ್ಷದ ಸಂಘಟನೆಯಿಂದ ಮುಂದಿನ ಆಡಳಿತ ಉತ್ತಮವಾಗಿ ನಡೆಯಬೇಕಾದ ಅನೇಕ ಸಲಹೆಗಳನ್ನು ಹೇಳಿದನಂತರ ಸಭೆಯು ಸರ್ವಾನುಮತದಿಂದ ಈ ಕೆಳಗೆ ಕಂಡ ಸದಸ್ಯರನ್ನೊಳಗೊಂಡ ಸಮಿತಿ ಚುನಾಯಿಸಲಾಯಿತು.

ಶ್ರೀಗಳಾದ ಎ. ವೆಂಕಟೇಶಯ್ಯನವರು ಅಧ್ಯಕ್ಷರು, ಮಹಮದ್ ಸೇಟ್ ಉಪಾಧ್ಯಕ್ಷರು, ಎಂ. ಎಸ್. ಗುರುಪಾದಸ್ವಾಮಿ, ಎಂ. ಆರ್. ಶ್ರೀನಿವಾಸಯ್ಯಂಗಾರ್, ಡಾ॥ ಬಿ. ಜಿ. ದಾಸ್, ಎಂ. ಎಸ್. ಚಂದ್ರಶೇಖರ ಜೋಯಿಸ್, ಎಂ. ಎಸ್. ತಿಮ್ಮಯ್ಯ ಇವರುಗಳನ್ನು ಸದಸ್ಯರನ್ನಾಗಿಯೂ ಶ್ರೀ ಬಿ. ಲಕ್ಷ್ಮೀನಾರಣಪ್ಪ, ಜೆ. ಸ್ವಾಮಿದಾಸ್ ಇವರುಗಳನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು.

ನಗರಾರೋಗ್ಯ

ಕಳೆದಮಾಹೆ ಅಂತ್ಯದ ಪಕ್ಷದಲ್ಲಿ ಮೈಸೂರು ನಗರದಲ್ಲಿ ಪ್ಲೇಗು, ಕಾಲರಾ ಮತ್ತು ಸಿಡುಬು ರೋಗಗಳಿರಲಿಲ್ಲ. ಆದಾಗ್ಯೂ ೧೨೩೬ ಮನೆಗಳಿಗೆ ಸೈನೋಗ್ಯಾಸ್, ೧೨ ಕಾಲರಾ ನಿರೋಧ ಇನ್ನಾಕ್ಯುಲೇಷನ್, ೧೯೬ ಪ್ರಾಥಮಿಕ ಮತ್ತು ೬೨೧ ಪುನಃ ದೇವಿ ಹಾಕಲಾಯಿತು.

ಡಿಫ್ತೀರಿಯಾ ರೋಗವು ೧೧ ಜನರಿಗೆ ತಗುಲಿ ೬ ಮರಣಗಳಾದುವು. ಟೈಫಾಯಿಡ್ ರೋಗವು ಇಬ್ಬರಿಗೆ ತಗುಲಿತು. ೯೩ ಡಿಫ್ತೀರಿಯಾ ನಿರೋಧ ಮತ್ತು ೨೦ ಟೈಫಾಯಿಡ್ ನಿರೋಧ ಇನಾಕ್ಯುಲೇಷನ್ ಮಾಡಲಾಯಿತು ಎಂದು ನಗರಾರೋಗ್ಯ ಅಧಿಕಾರಿಗಳ ವರದಿ ತಿಳಿಸುತ್ತದೆ.

ದಸರಾ ವಸ್ತುಪ್ರದರ್ಶನ ಆರಂಭ

ಮೈಸೂರು ೯

ಮೈಸೂರು ದಸರಾ ವಸ್ತುಪ್ರದರ್ಶನದ ಪ್ರಾರಂಭೋತ್ಸವವನ್ನು ವಿಧಾನ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ. ಟಿ. ಭಾಷ್ಯಂರವರು ನಿನ್ನೆ ಮಧ್ಯಾಹ್ನ ೪ ಗಂಟೆಯಲ್ಲಿ ಜೀವನರಾಯನ ಕಟ್ಟೆ ಥಿಯೇಟರಿನಲ್ಲಿ ನಡೆಸಿದರು ಈ ಸಮಾರಂಭಕ್ಕೆ ಮೈಸೂರಿನ ಸಚಿವರುಗಳಾದ ಶ್ರೀಗಳು ಸಿದ್ದವೀರಪ್ಪ, ಟಿ. ಚನ್ನಯ್ಯ, ಕಡಿದಾಳ್, ನಾಗಣ್ಣಗೌಡ, ಮತ್ತು ಕೇಂದ್ರ ಉತ್ಪಾದನಾ ಸಚಿವ ಶ್ರೀ ಕೆ.ಸಿ. ರೆಡ್ಡಿ ಮುಂತಾದವರು ಆಗಮಿಸಿದ್ದರು.

ವಸ್ತುಪ್ರದರ್ಶನ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿಯವರು ಎಲ್ಲರನ್ನೂ ಸ್ವಾಗತಿಸಿ ಈ ಸಾಲಿನ ಪ್ರದರ್ಶನದ ಬಗ್ಗೆ ವಿವರಗಳನ್ನಿತ್ತರು.

ಅನಂತರ ಶ್ರೀ ಕೆ. ಟಿ. ಭಾಷ್ಯಂರವರು ಮಾತನಾಡುತ್ತಾ ಈರೀತಿ ಹೇಳಿದರು:—

ಮೈಸೂರುನಗರದಲ್ಲಿ ನಡೆಯುತ್ತಿರುವ ವಸ್ತುಪ್ರದರ್ಶನವು ಆಯಾ ವರ್ಷಗಳಲ್ಲಿ ನಡೆಸಿರುವ ವ್ಯವಸಾಯ ಕೈಗಾರಿಕೆ ವಾಣಿಜ್ಯ ಮತ್ತು ಸಾಮಾಜಿಕ ಪ್ರಗತಿಗಳನ್ನು ಪ್ರತಿವರ್ಷವೂ ಪರಿಶೀಲಿಸುವುದಕ್ಕೆ ಸಾಧಕವಾಗುತ್ತದೆ. ನಮ್ಮ ದೇಶದಲ್ಲಿ ಬೇಕಾದಷ್ಟು ಕಚ್ಚಾ ಸಾಮಾನುಗಳು ತಯಾರಿಸಲು ಪ್ರವೀಣರು ಮತ್ತು ಸಾಕಾದಷ್ಟು ಜನರಿರುವಾಗ ನಾವು ವಿದೇಶೀ ವಸ್ತುಗಳನ್ನು ಕೊಳ್ಳುವುದು, ದೇಶದಲ್ಲಿ ನಿರುದ್ಯೋಗ ಹೆಚ್ಚುತ್ತಿರುವುದು ವಿಷಾದಕರ. ಸ್ವಲ್ಪಬೆಲೆ ಹೆಚ್ಚಾದರೂ ನಾವುಗಳು ಸ್ವದೇಶೀ ವಸ್ತುಗಳನ್ನೇ ಕೊಂಡು ನಮ್ಮ ಸಹೋದರರೇ ಆ ಹಣವನ್ನು ತಿಂದು, ಉದ್ಯೋಗದಲ್ಲಿ ನಿರತರಾಗುವಂತೆ ನಾವು ಮಾಡಬೇಕು ದೇಶದಲ್ಲಿ ಬೇಕಾದಷ್ಟು ಹತ್ತಿಯಿದೆ ಕೈಮಗ್ಗ ಮತ್ತು ಖಾದಿ ಕೈಗಾರಿಕೆಯನ್ನು ಇನ್ನು ಉತ್ತೇಜನಗೊಳಿಸುವ ಕಾರ್ಯದಲ್ಲಿ ನಾವುತೊಡಗಬೇಕು ನಮ್ಮ ಯುವಕರು ನಾನಾ ರೀತಿಯ ಗೃಹ ಕೈಗಾರಿಕೆಗಳಲ್ಲಿ ತೊಡಗುವಂತೆ ಉತ್ತೇಜನ ವಾತಾವರಣವನ್ನು ಕಲ್ಪಿಸಬೇಕಾಗಿದೆ ಇದಕ್ಕಾಗಿ ಒಂದು ಕೈಗಾರಿಕಾ ಆರ್ಥಿಕ ಮಂಡಲಿಯನ್ನು ಸ್ಥಾಪಿಸಬೇಕು.

ನಮ್ಮ ಪ್ರಾಂತ್ಯದಲ್ಲಿ ವಿದ್ಯುಚ್ಛಕ್ತಿಯು ವಿಶೇಷವಾಗಿರುವುದರಿಂದ ಅದರ ಉಪಯೋಗವನ್ನು ಎಲ್ಲರೂ ಮಾಡಿಕೊಳ್ಳಬೇಕು.

ವ್ಯವಸಾಯದಲ್ಲಿ ಈಚೆಗೆ ಜಪಾನ್ ಪದ್ಧತಿಯ ಕ್ರಮದಿಂದ ಹೆಚ್ಚು ಉತ್ಪನ್ನವಾಗಿ ರೈತರಿಗೆ ಹೆಚ್ಚಿಗೆಹಣ ದೊರೆಯುತ್ತದೆ ಕೇವಲ ೫೦ ರೂ. ಗಳನ್ನು ಹೆಚ್ಚಾಗಿ ವೆಚ್ಚ ಮಾಡಿ ಈ ಪದ್ಧತಿಯಲ್ಲಿ ಬೆಳೆ ಬೆಳೆದರೆ ೨೦ ಪಲ್ಲಾ ಬೆಳೆಯುವಕಡೆ ೩೦ ಪಲ್ಲಾ ಬೆಳೆಯಬಹುದು.

ಈಗ ಕೃಷ್ಣರಾಜಸಾಗರದಿಂದ ವ್ಯವಸಾಯಕ್ಕೆ ಅನುಕೂಲವಾಗಿದೆ. ಈ ರೀತಿಯ ಹಲವಾರು ಅಣೆಕಟ್ಟುಗಳನ್ನು ಸರ್ಕಾರವು ನಿರ್ಮಿಸಬೇಕು. ಮತ್ತು ವ್ಯವಸಾಯ ಮಂಡಲಿಯನ್ನು ನೇಮಿಸಬೇಕು ಅದರಿಂದ ರೈತರಿಗೆ ನೆರವು ನೀಡಲನುಕೂಲವಾಗುತ್ತದೆ. ಇದಲ್ಲದೆ ವ್ಯವಸಾಯ ಮುಂತಾದ ಬಾಬುಗಳಲ್ಲಿ ಪರಿಶೋಧನೆಗಳನ್ನು ನಡೆಸಬೇಕು ಇಂತಹ ಅಭಿವೃದ್ಧಿ ಕಾರ್ಯಗಳಲ್ಲಿ ಎಲ್ಲರೂ ತೊಡಗಿ ದೇಶದ ಬಡತನವನ್ನು ನಿರ್ಮೂಲ ಮಾಡಬೇಕು.

ಕಾರ್ಯದರ್ಶಿ ಶ್ರೀ ವಿ.ಎಸ್. ಕೃಷ್ಣ ಅಯ್ಯರ್‌ರವರು ವಂದನೆಯನ್ನು ಅರ್ಪಿಸಿದರು.

ಮದ್ರಾಸ್ ಮಂತ್ರಿಮಂಡಲ ವಿಸ್ತರಣೆ ಪ್ರಶ್ನೆ

ಮದ್ರಾಸ್ ಮಂತ್ರಿಮಂಡಲದ ವಿಸ್ತರಣೆ ವಿಷಯದಲ್ಲಿ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮಾತನಾಡುತ್ತಾ ಇನ್ನೂ ಈ ಬಗ್ಗೆ ಯಾವ ನಿರ್ಧಾರವೂ ಆಗಿಲ್ಲವೆಂದು ತಿಳಿಸುತ್ತ ಮದ್ರಾಸಿನ ವಿಸ್ತೀರ್ಣವು ಈಗ ಕಡಮೆಯಾಗಿರುವುದರಿಂದ ಮಂತ್ರಿಮಂಡಲವನ್ನು ವಿಸ್ತರಿಸಬೇಕೆ ಅಥವ ಈಗಿರುವವರೇ ಕಷ್ಟಪಟ್ಟು ಕೆಲಸ ಮಾಡಿದಲ್ಲಿ ಇನ್ನಾರನ್ನೂ ಸೇರಿಸಿಕೊಳ್ಳದೆ ಕೆಲಸ ನಡೆಸಬಹುದಲ್ಲವೆ? ಎಂದು ಪ್ರಶ್ನಿಸಿದರು.

★ ಅಮೋಘಪ್ರಾರಂಭ ★
ಶ್ರೀರಾಜರಾಜೇಶ್ವರಿ ನಾಟಕಮಂಡಲಿ
ವಿಜಯವಾಡ
.. ಮೈಸೂರು ಟೌನ್‌ಹಾಲಿನಲ್ಲಿ ..
10-10-53ನೇ ರಾತ್ರಿ 10ಗಂಟೆಗೆ
ಮೈಸೂರು ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ
ತಾರಾಶಶಾಂಕ
(ತೆಲುಗು)
ಎಂಬ ನಾಟಕವನ್ನು ಅಭಿನಯಿಸುತ್ತಾರೆ.
ಪಾತ್ರ:—ಚಲನಚಿತ್ರದಲ್ಲಿ ಖ್ಯಾತಿಪಡೆದ ಶ್ರೀ ಪಿ. ಸೂರ್ಯಬಾಬು, ರಾಜೇಶ್ವರಿದೇವಿ ಮತ್ತು ಇತರ ಪ್ರಸಿದ್ಧ ನಟ ನಟಿಯರು.

ಒಕ್ಕಲುತನ ಮಸೂದೆ ಬಗ್ಗೆ ವಿಚಾರ ವಿನಿಮಯ

ಸರ್ಕಾರಕ್ಕೆ ಒಕ್ಕಲುತನ ಮಸೂದೆಯ ವಿಷಯದಲ್ಲಿ ಪೂರ್ಣ ಬೆಂಬಲವನ್ನು ನೀಡಲು ನಿರಾಕರಿಸಿರುವ ಹೈದರಾಬಾದ್ ಶಾಸನಸಭೆಯ ಕೆಲವು ಕಾಂಗ್ರೆಸ್ ಸದಸ್ಯರು ವಿಷಯವನ್ನು ವಿವರವಾಗಿ ಆಯೋಜನಾ ಮಂಡಲಿಯವರೊಡನೆ ಚರ್ಚಿಸಿ ನಿರ್ಧಾರ ಕೈಬಿಡಲು ಅವಕಾಶವನ್ನು ಕಲ್ಪಿಸುವುದಕ್ಕಾಗಿ ಹೈದರಾಬಾದ್ ಶಾಸನ ಸಭಾಧಿವೇಶನವನ್ನು ಮೊನ್ನೆಯದಿನ ಮುಕ್ತಾಯಗೊಳಿಸಲಾಯಿತು ಇನ್ನು ಸ್ವಲ್ಪ ದಿನಗಳಲ್ಲಿಯೇ ಈ ವಿಷಯವನ್ನು ಚರ್ಚಿಸಲು ವಿಶೇಷ ಅಧಿವೇಶನವನ್ನು ಕರೆಯಲಾಗುವುದೆಂದು ಅಲ್ಲಿಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ನೇತ್ರ ಚಿಕಿತ್ಸೆ

ಡಾ॥ ಎಂ.ಸಿ. ಮೋದಿಯವರು ಕಳೆದ ತಿಂಗಳಿನಲ್ಲಿ ಮಂಡ್ಯ ಜಿಲ್ಲೆಯಲ್ಲಿಯೇ ಜಯಪ್ರದವಾಗಿ ೩೧೬ ಶಸ್ತ್ರ ಚಿಕಿತ್ಸೆಗಳನ್ನು ಮತ್ತು ೨೦೮೬ ನೇತ್ರ ಪರೀಕ್ಷೆಗಳನ್ನು ನಡೆಸಿದ್ದಾರೆ.

ಅಮೋಘ ಪ್ರಾರಂಭ
ನಾಟಕರತ್ನ ಜಿ.ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)
9—10—53 ರಿಂದ ರಾತ್ರಿ 10 ಗಂಟೆಗೆ
ಶಿವರಾಂಪೇಟೆಯ ರತ್ನಾವಳಿ ಥಿಯೇಟರಿನಲ್ಲಿ
ಸಾಹುಕಾರ
ಎಂಬ ಸಾಮಾಜಿಕ ನಾಟಕವನ್ನು
ವಿಧಾನಸಭೆಯ ಅಧ್ಯಕ್ಷ ಶ್ರೀ ಹೆಚ್. ಸಿದ್ದಯ್ಯ ಬಿ. ಎ., ಎಲ್. ಎಲ್. ಬಿ. ಯವರ ಘನ ಅಧ್ಯಕ್ಷತೆಯಲ್ಲಿ
ಅಭಿನಯಿಸುವರು

ರಣಜಿತ್
9 10-53 ರಿಂದ ಅಮೋಘಪ್ರಾರಂಭ
ದಿನವಹಿ 3 ಪ್ರದರ್ಶನಗಳು
ನರ್ಗಿಸ್, ರಾಜಕಪೂರ್ ನಟಿಸಿರುವ
ಆಶಿಯಾನ
[ಹಿಂದಿ]

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು

ಪ್ರಭಾ 10—10—53 ನೇ ಶನಿವಾರದಿಂದ ಅಮೋಘಪ್ರಾರಂಭ ದಿನವಹಿ ಮೂರು ಆಟಗಳು
ಮಾಡರನ್‌ಥಿಯೇಟರ್ಸ್‌ರವರ ಕನ್ನಡ ಚಿತ್ರಪ್ರೇಮಿಗಳ ಮನದಣಿಸುವ ಮಹೋನ್ನತ ಜಾನಪದ ಕಥಾ ಚಿತ್ರ.
ಮಂಗಳಗೌರಿ
★ ತಾರೆಗಣ:—ಹರಿಣಿ, ಇಂದುಶೇಖರ್, ಬಾಲಕೃಷ್ಣ ಮತ್ತು ಜಯಶ್ರೀ ★

ಪೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೪೩

೧೦-೧೦-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ನಗರದ ಕೆಲವು ಪ್ರದೇಶಗಳಲ್ಲಿ ಪ್ರತಿಬಂಧಕಾಜ್ಞೆ

ಮೈಸೂರು ೧೦

ನಗರಕ್ಕೆ ಸೇರಿದ ಕನ್ನೇಗೌಡನ ಕೊಪ್ಪಲು, ಆದಿಕರ್ನಾಟಕಪುರ, ಪಡುವಾರಹಳ್ಳಿ, ಕ್ಯಾತಮಾನಹಳ್ಳಿ, ಹೊಸಬಂಡೀಕೇರಿ ಮತ್ತು ಕುಂಬಾರಕೊಪ್ಪಲು ಪ್ರದೇಶಗಳಲ್ಲಿ ಅಕ್ಟೋಬರ್ ೯ ರಿಂದ ೨೫ನೇ ತಾರೀಖಿನವರೆಗೆ ೧೪೪ನೇ ಸೆಕ್ಷನನ್ನು ಜಿಲ್ಲಾ ಮ್ಯಾಜಿಸ್ಟ್ರೇಟರು ಜಾರಿಮಾಡಿದ್ದಾರೆ. ಈ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆ ಅಥವಾ ೫ ಮತ್ತು ಅದಕ್ಕಿಂತ ಹೆಚ್ಚಾಗಿ ಜನರು ಸೇರಕೂಡದೆಂದು ಪ್ರತಿಬಂಧಿಸಲಾಗಿದೆ.

ಅರಮನೆ ಮುಂದೆ ನಡೆಯುವ ಕುಸ್ತಿಯಲ್ಲಿ ಹರಿಜನರು ಭಾಗವಹಿಸಬಹುದೆಂಬ ತೀರ್ಮಾನದ ಬಗ್ಗೆ ಹರಿಜನರು ಮತ್ತು ಇತರ ಕೋಮಿನವರಿಗೆ ಘರ್ಷಣೆ ಭಾವನೆ ಉಂಟಾಗಿ ಸಾರ್ವಜನಿಕ ಶಾಂತಿಗೆ ಭಂಗ ಬರುವುದರಿಂದ ಈರೀತಿ ಪ್ರತಿಬಂಧಕಾಜ್ಞೆ ಜಾರಿ ಮಾಡಲಾಗಿದೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆಯಲ್ಲಿ ತಿಳಿಸಲಾಗಿದೆ.

ಕುಸ್ತಿ ನಡೆಯಲಿಲ್ಲ ಪರಿಸ್ಥಿತಿ ಶಾಂತವಾಗಿದೆ

ನಿನ್ನೆ ಮಧ್ಯಾಹ್ನದಮೇಲೆ ನಗರದಲ್ಲಿ ಯಾವ ಘಟನೆಯೂ ನಡೆಯದೆ ಪರಿಸ್ಥಿತಿ ಶಾಂತವಾಗಿತ್ತು ಅರಮನೆ ಮುಂದೆ ನಿನ್ನೆ ಯೂ ಸಹ ಕುಸ್ತಿ ನಡೆಯಲಿಲ್ಲ.

ಕನ್ನೇಗೌಡನ ಕೊಪ್ಪಲು, ಆದಿಕರ್ನಾಟಕ ಪುರ ಮುಂತಾದ ಪ್ರದೇಶಗಳಲ್ಲಿ ಬಲವಾದ ಪೋಲೀಸ್ ಪಹರೆಯನ್ನು ಹಾಕಲಾಗಿದೆ.

ಈದಿನ ಬೆಳಿಗ್ಗೆ ನಗರದ ಗರಡಿಯವರು ಮುಖ್ಯಮಂತ್ರಿ ನಿವಾಸದ ಜಲದರ್ಶಿನಿ ಭವನದ ಮುಂಭಾಗದ ಮೈದಾನದಲ್ಲಿ ಸಭೆ ನಡೆಸಿ, ಅರಮನೆ ಮುಂದೆ ಕುಸ್ತಿ ನಡೆಯುವ ವಿಷಯದಲ್ಲಿ ತಮ್ಮ ಮುಂದಿನ ನಿಲುವೇನೆಂಬುದನ್ನು ಚರ್ಚಿಸಿದರೆಂದು ತಿಳಿಯಬರುತ್ತದೆ.

ಹರಿಜನರಿಗೆ ಕುಸ್ತಿಗೆ ಅವಕಾಶ ಕೊಡಬೇಕು

ಈ ಮಧ್ಯಾಹ್ನ ಶ್ರೀ ಎಸ್. ಚನ್ನಯ್ಯನವರ ಗೃಹದಲ್ಲಿ ಗರಡಿಯಜವಾನರುಗಳು ಪುನಃ ಸೇರಿ ಈ ವಿಷಯದಲ್ಲಿ ದೀರ್ಘವಾದ ಚರ್ಚೆಯನ್ನು ನಡೆಸಿ, ಅರಮನೆಯ ಮುಂದೆ ನಡೆಯುವ ಕುಸ್ತಿ ಪಂದ್ಯಗಳಲ್ಲಿ ಪ್ರತ್ಯೇಕ ಅಖಾಡಾಮಾಡಿ ಭಾನುವಾರ ಮತ್ತು ಸೋಮವಾರಗಳಲ್ಲಿ ಹರಿಜನರಿಗೂ ಅವಕಾಶವನ್ನು ಕಲ್ಪಿಸಬೇಕೆಂದು ತೀರ್ಮಾನಿಸಿರುವುದಾಗಿ ಗೊತ್ತಾಗಿದೆ.

ವಸ್ತುಪ್ರದರ್ಶನ ಲಲಿತಕಲೆ ಬಹುಮಾನ

ಮೈಸೂರು ೧೦

ದಸರಾ ವಸ್ತು ಪ್ರದರ್ಶನದ ಲಲಿತ ಕಲೆಗಳ ವಿಭಾಗದಲ್ಲಿ ಬೊಂಬಾಯಿನ ಶ್ರೀ ಎಸ್. ಎಲ್. ಹಾಲ್‌ದಾನಕರ್‌ರವರ 'ಅಮೀರಿ ಇ ಫಕೀರಿ' ಎಂಬ ಚಿತ್ರಕ್ಕೆ ಶ್ರೀಮನ್ಮಹಾರಾಜರವರ ಬೆಳ್ಳಿಕಪ್ಪು ಬಹುಮಾನವೂ, ಮೈಸೂರಿನ ಕಲಾವಿದ ಶ್ರೀ ಎಂ. ವೀರಪ್ಪನವರ 'ಗಣಪತಿ ಮೆರವಣಿಗೆ' ಎಂಬ ಚಿತ್ರಕ್ಕೆ ವಸ್ತು ಪ್ರದರ್ಶನ ಸಮಿತಿಯ ಚಿನ್ನದ ಪದಕವೂ ದೊರೆತಿದೆ.

ಮಕ್ಕಳ ಪ್ರವಾಸ ರೈಲು

ಇದೇ ೧೪ನೇ ತಾರೀಖು ದೆಹಲಿಯಿಂದ ೮೦೦ ಮಕ್ಕಳನ್ನು ಒಳಗೊಂಡ ಒಂದು ವಿಶೇಷ ರೈಲು ಹೊರಟು ಅನೇಕ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಡುವದು. ಅಲಿಘರ್, ಕಾನ್ಪುರ, ಲಕ್ನೋ, ಅಲಹಾಬಾದ್, ಕಾಶಿ, ಪಾಟ್ನ, ಕಲ್ಕತ್ತಾ, ಸಾಂಚಿ, ನಾಗಪುರ, ಗ್ವಾಲಿಯಾರ್, ಪೂರಿ, ವಿಶಾಖಪಟ್ಟಣ, ಆಗ್ರಾ ಮುಂತಾದ ಸ್ಥಳಗಳಿಗೆ ಭೇಟಿ ಕೊಟ್ಟು ದೆಹಲಿಗೆ ಮುಂದಿನ ತಿಂಗಳು ೪ನೇ ತಾರೀಖು ವಾಪಸು ಬರವುದು.

ಕೊಲೊಂಬೋ ಯೋಜನಾ ಸಮಿತಿ ಅಧಿವೇಶನ

ಕೊಲೊಂಬೋ ಯೋಜನೆಯ ತಾಂತ್ರಿಕ ಮತ್ತು ಸಹಕಾರ ಮಂಡಲಿಯ ನೀತಿ ನಿರ್ಧಾರಣ ಸಮಿತಿಯ ಅಧಿವೇಶನವು ನಿನ್ನೆಯದಿನ ದೆಹಲಿಯಲ್ಲಿ ಪ್ರಾರಂಭವಾಯಿತು.

ಸಿಡಿಲಿನಿಂದ ೫ ಜನರ ಮರಣ

ಕಳೆದವಾರ ತಿರುವಾಂಕೂರ್_ಕೊಚ್ಚಿನ ಅಲಪ್ಪೆಯೆಂಬಲ್ಲಿ ಸಿಡಿಲು ಬಡಿದು ಒಂದು ಅಂಗಡಿಯಲ್ಲಿ ಇಸ್ಪೀಟು ಆಡುತ್ತ ಕುಳಿತಿದ್ದವರಲ್ಲಿ ೫ ಜನರು ಸತ್ತು ೬ ಮಂದಿಗೆ ಗಾಯಗಳಾದುವೆಂದು ತಿಳಿಯಬರುತ್ತದೆ.

ಭಾರತಕ್ಕೆ ಚೀನಾ ಸೌಹಾರ್ದ್ಯ ನಿಯೋಗ

ಮುಂದಿನ ತಿಂಗಳಿನಲ್ಲಿ ಭಾರತಕ್ಕೆ ಚೀನಾದಿಂದ ಸೌಹಾರ್ದ್ಯ ನಿಯೋಗವೊಂದು ಬರುವುದಾಗಿ ತಿಳಿಯಬರುತ್ತದೆ.

ಗೋಲಿಬಾರಿನಿಂದ ೪ ಜನರ ಮರಣ; ೫ ಮಂದಿಗೆ ಗಾಯ

ಸರ್ಕಾರದ ಅಧಿಕೃತ ಪ್ರಕಟಣೆ

ಮೈಸೂರು ೧೦

ರಾಜಧಾನಿಯಲ್ಲಿ ನೊನ್ನೆ ಸಂಜೆ ನಡೆದ ಗೋಲಿಬಾರು ಪ್ರಕರಣದ ಸಂಬಂಧವಬಗ್ಗೆ ನಿನ್ನೆ ರಾತ್ರಿ ೯ ಗಂಟೆಯಲ್ಲಿ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗಳು ಒಂದು ಅಧಿಕೃತ ಪ್ರಕಟಣೆಯನ್ನು ಹೊರಡಿಸಿ, ಗೋಲಿಬಾರಿನಿಂದ ಇಬ್ಬರು ಸ್ಥಳದಲ್ಲಿ ಮತ್ತಿಬ್ಬರು ಆಸ್ಪತ್ರೆಯಲ್ಲಿ ಸತ್ತರೆಂದೂ ೫ ಮಂದಿಗೆ ಗುಂಡಿನೇಟಿನಿಂದ ಗಾಯವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆಂದೂ, ತಿಳಿಸಿದ್ದಾರೆ.

ಹರಿಜನರು ಕುಸ್ತಿಯಲ್ಲಿ ಭಾಗವಹಿಸುವುದನ್ನು ಪ್ರತಿಭಟಿಸಲು ಹಿಂದೂ ಜಟ್ಟಿಗಳು ಪ್ರದರ್ಶನ ಮತ್ತು ಗಲಭೆಯನ್ನು ನಡೆಸಿ, ಸಂಜೆ ೫-೩೦ ಗಂಟೆಗೆ ಅರಮನೆಯ ದಕ್ಷಿಣ ಭಾಗದ ಗೇಟಿನಲ್ಲಿದ್ದ ಹರಿಜನರ ಮೇಲೆ ಬಿದ್ದರು, ಹರಿಜನರನ್ನು ಪೋಲೀಸ್ ವ್ಯಾನಿನಲ್ಲಿ ಕರೆದೊಯ್ಯುವುದನ್ನು ಸಹ ತಡೆಗಟ್ಟಿದರು. ಪೋಲೀಸರ ಮತ್ತು ಇತರ ಮೇಲೆ ಕಲ್ಲು ಮತ್ತು ದೊಣ್ಣೆಗಳನ್ನು ಬೀರಲು ಪ್ರಾರಂಭಿಸಿದರು ಜಿಲ್ಲಾಧಿಕಾರಿ ಮತ್ತು ಇತರ ಅಧಿಕಾರಿಗಳು ಪ್ರದರ್ಶನಕಾರರಿಗೆ ಎಷ್ಟು ಸಮಾಧಾನ ಹೇಳಿದರೂ ಕೇಳದೆ, ಇನ್ನೂ ಉದ್ರೇಕಗೊಂಡು ಗಲಭೆ ಮಾಡಲು ಪ್ರಾರಂಭಿಸಿದರು. ಪೋಲೀಸರು ಗುಂಪನ್ನು ಚದುರಿಸಲು ಲಾಠಿ ಪ್ರಯೋಗಿಸಿದರು. ಆದಕ್ಕೂ ಅವರು ಚದುರದೆ ಅರಮನೆ ಕಡೆ ನುಗ್ಗಲು ಪ್ರಯತ್ನಿಸಿದರು. ಇದರಿಂದ ಗುಂಡು ಹಾರಿಸಬೇಕಾಯಿತು. ೧೦ ರೌಂಡುಗಳನ್ನು ಹಾರಿಸಲಾಯಿತು. ಅನಂತರ ಗುಂಪು ಚದುರಿ ಪರಿಸ್ಥಿತಿಯು ಹತೋಟಿಗೆ ಬಂದಿತು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮದ್ರಾಸಿಗೆ ಹೊಸ ಸಚಿವರು

ಮದ್ರಾಸ್ ಮಂತ್ರಿಮಂಡಲಕ್ಕೆ ಶ್ರೀಗಳಾದ ಎಂ. ಭಕ್ತವತ್ಸಲಂ, ಕೆ.ರಾಜಾರಾಂ ಮತ್ತು ಶ್ರೀಮತಿ ಜ್ಯೋತಿ ವೆಂಕಟಾಚಲಂರವರನ್ನು ಹೊಸದಾಗಿ ಸೇರಿಸಿಕೊಳ್ಳಲಾಗಿದೆ. ಅವರುಗಳೆಲ್ಲರೂ ನಿನ್ನೆಯದಿನ ಗೌರ್ನರ್ ಶ್ರೀ ಶ್ರೀಪ್ರಕಾಶರ ಸಮ್ಮುಖದಲ್ಲಿ ಅಧಿಕಾರವನ್ನು ಸ್ವೀಕರಿಸಿದರು.

ದೇಶದಲ್ಲಿ ಹತ್ತಿಬೆಳೆ

ಈ ಸಾಲಿನಲ್ಲಿ ಭಾರತದಲ್ಲಿ ಒಟ್ಟು ೧೧,೬೦೫,೦೦೦ ಎಕರೆ ಪ್ರದೇಶದಲ್ಲಿ ಹತ್ತಿ ಬೆಳೆಯಲಾಗಿದೆಯೆಂದು ತಿಳಿಯಬರುತ್ತದೆ. ಕಳೆದ ಸಾಲಿಗಿಂತ ಈಸಲ ೯ ಲಕ್ಷಕ್ಕಿಂತ ಹೆಚ್ಚಿನ ಎಕರೆಗಳಲ್ಲಿ ಈ ಬೆಳೆಯಿದೆ.

ಶಾಸನಸಭಾಧ್ಯಕ್ಷರ ಸಮ್ಮೇಳನ

ಬೆಂಗಳೂರು ೧೦

ಈ ತಿಂಗಳು ೨೩ರಿಂದ ೨೬ರವರೆಗೆ ಗ್ವಾಲಿಯರ್‌ನಲ್ಲಿ ಭಾರತದ ಎಲ್ಲಾ ಶಾಸನಸಭೆಗಳ ಅಧ್ಯಕ್ಷರುಗಳ ಸಮ್ಮೇಳನವು ನಡೆಯುತ್ತದೆ. ಮೈಸೂರಿನ ವಿಧಾನಸಭೆಯ ಅಧ್ಯಕ್ಷ ಶ್ರೀ ಹೆಚ್. ಸಿದ್ದಯ್ಯ ಮತ್ತು ವಿಧಾನ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ. ಟಿ. ಭಾಷ್ಯಂರವರು ಇದರಲ್ಲಿ ಭಾಗವಹಿಸುವರು.

ಮಾಂಡ್ಲಾ ಜಿಲ್ಲೆಗೆ ಮೈಸೂರು ಮಹಾರಾಜರು

ಇದೇ ಮಾಹೆ ೨೧ನೇ ತಾರೀಖು ಮೈಸೂರಿನ ರಾಜಪ್ರಮುಖರು ಮಾಂಡ್ಲಾ ಜಿಲ್ಲೆಗೆ ತೆರಳಿ ಅಲ್ಲಿರುವ ಸುಪ್ರಸಿದ್ಧ ಪ್ರಾಣಿ ಸಂರಕ್ಷಣಾ ಕೇಂದ್ರದಲ್ಲಿ ಒಂದು ವಾರಕಾಲವಿರುವರೆಂದು ತಿಳಿಯಬರುತ್ತದೆ.

ಕೇಂದ್ರ ಆರ್ಥಿಕ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರೂ ಆಗ ಅಲ್ಲಿಗೆ ಹೋಗುವರು.

ನವಂಬರ್‌ನಲ್ಲಿ ಪ್ರಾಂತ್ಯ ವಿಂಗಡನಾಸಮಿತಿ ರಚನೆ

ಪ್ರಾಂತ್ಯಗಳ ವಿಂಗಡನೆ ಬಗ್ಗೆ ಕೇಂದ್ರ ಸರ್ಕಾರವು ಉನ್ನತ ಮಂಡಲಿಯನ್ನು ಇದೇ ನವಂಬರ್ ತಿಂಗಳಾದಮೇಲೆ ರಚಿಸುವುದೆಂದು ಕೇಂದ್ರ ಗೃಹಶಾಖಾ ಉಪಸಚಿವ ಶ್ರೀ ಬಿ. ಎನ್. ದಾತಾರ ರವರು ತಿಳಿಸಿದ್ದಾರೆ

ರಾಜೇಂದ್ರಪ್ರಸಾದ್, ನೆಹ್ರೂ ಬೊಂಬಾಯಿನಲ್ಲಿ

ಬೊಂಬಾಯಿನಲ್ಲಿ ಈದಿನ ಪ್ರಾರಂಭವಾದ ನೌಕಾ ಪ್ರದರ್ಶನದಲ್ಲಿ ಭಾಗವಹಿಸಲು ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದ್ ಮತ್ತು ಪ್ರಧಾನಿ ನೆಹರೂರವರು ಅಲ್ಲಿಗೆ ಆಗಮಿಸಿದ್ದಾರೆ.

ಕಲಾ ಪ್ರದರ್ಶನಾರಂಭ

ಕೇಂದ್ರ ಆಹಾರ ಉಪಸಚಿವ ಶ್ರೀ ಎಂ. ವಿ. ಕೃಷ್ಣಪ್ಪನವರು ನಿನ್ನೆಯದಿನ ಮಂಡ್ಯದಲ್ಲಿ ಅಖಿಲಭಾರತ ಕಲಾ ಮತ್ತು ಛಾಯಾ ಗ್ರಹಣ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಿದರು.

'ಧನಲಕ್ಷ್ಮಿ' ಬೆಂಗಳೂರಿನಲ್ಲಿ

ಸುಮಾರು ಒಂದು ವರ್ಷದಿಂದ ಅನ್ನ ನೀರಿಲ್ಲದೆ ವಾಸಿಸುತ್ತಲಿರುವ ಕೊಡಗಿನ ಕನ್ಯೆ "ಧನಲಕ್ಷ್ಮಿ" ಯು ವೈದ್ಯಕೀಯ ಪರೀಕ್ಷೆಗಾಗಿ ಬೆಂಗಳೂರಿಗೆ ಆಗಮಿಸಿದ್ದಾಳೆ ಈಕೆಯ ವೈದ್ಯ ಪರೀಕ್ಷೆಗಾಗಿ ಕೇಂದ್ರ ಸರಕಾರವು ಹಣ ಮಂಜೂರುಮಾಡಿದೆ.

ಕರ್ಣಾಟಕ ಪ್ರಾಂತ್ಯ ಸದ್ಯದಲ್ಲೇ

ಕೇಂದ್ರ ಉಪಸಚಿವರ ಹೇಳಿಕೆ

ಇನ್ನು ಕೆಲವು ತಿಂಗಳುಗಳಲ್ಲೇ ಕರ್ಣಾಟಕ ಪ್ರಾಂತ್ಯ ರಚನೆ ಆಗಲಿದೆಯೆಂದು ಕೇಂದ್ರಸರ್ಕಾರದ ಉಪಸಚಿವ ಶ್ರೀ ಬಿ. ಎನ್. ದಾತಾರ್‌ರವರು ಹೈದರಾಬಾದಿನಲ್ಲಿ ನಾಡಹಬ್ಬದ ಪ್ರಾರಂಭೋತ್ಸವದಲ್ಲಿ ತಿಳಿಸಿದ್ದಾರೆ.

ಕ್ರೀಡಾ ಸ್ಪರ್ಧೆ

ಮೈಸೂರು ೧೦

ದಸರಾವಸ್ತುಪ್ರದರ್ಶನದ ಅಂಗವಾಗಿ, ಜೀವನರಾಯನಕಟ್ಟೆಯಲ್ಲಿ ನಿನ್ನೆ ಕ್ರೀಡಾ ಸ್ಪರ್ಧೆಗಳು ಪ್ರಾರಂಭವಾದುವು. ಕೊಕ್ಕೋ ಸ್ಪರ್ಧೆಯಲ್ಲಿ ಮೂರು ಆಟಗಳು ನಡೆದವು. ಮಹಾರಾಜ್ ಕಾಲೇಜ್ ಎ. ಟೀಮಿನವರು ಫ್ರೆಂಡ್ಸ್‌ಯೂನಿಯನ್‌ರವರನ್ನು ೨೭೦-೧೩೦ ಪಾಯಿಂಟುಗಳಿಂದ ಸೋಲಿಸಿದರು. ಸೈನ್ಸ್ ಆರ್ಚರ್ಸ್ ಅರಸು ಬೋರ್ಡಿಂಗ್‌ನವರನ್ನು ೨೦೦-೧೩೦ ಗಳಿಂದ ಸೋಲಿಸಿದರು.

ಮಹಾರಾಜಾಕಾಲೇಜಿನ ಬಿರವರು ಅನಾಥಾಲಯದ ಸಾಹಿತ್ಯ ಸಂಘವನ್ನು ೨೮೦-೧೯೦ ಗಳಿಂದ ಜಯಹೊಂದಿದರು.

ಡಾ॥ ನಾಗನಗೌಡರು ಮಂಡ್ಯಕ್ಕೆ ಭೇಟಿ

ವ್ಯವಸಾಯಸಚಿವ ಡಾ॥ ನಾಗನಗೌಡರು ನಿನ್ನೆ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರೊಡನೆ ಮಂಡ್ಯಕ್ಕೆ ಭೇಟಿಯಿತ್ತು ಅಲ್ಲಿಯ ವಿಶ್ವೇಶ್ವರಯ್ಯ ನಾಲಾ ಧಾರಂ ಮತ್ತು ಫೋರ್ಡ್ ಫೌಂಡೇಷನ್ನಿನ ಕಾರ್ಯಗಳನ್ನು ಪರಿಶೀಲಿಸಿ ರಾಜಧಾನಿಗೆ ಹಿಂತಿರುಗಿದರು.

ನೇತ್ರಶಿಬಿರ

ಮೈಸೂರು ೧೦

ಡಾ॥ ಮೋದಿಯವರು ನಿನ್ನೆಯದಿನ ಮಂಡ್ಯದಲ್ಲಿ ತಮ್ಮ ಎರಡನೇ ನೇತ್ರಚಿಕಿತ್ಸೆ ಶಿಬಿರವನ್ನು ಆರಂಭಿಸಿದ್ದಾರೆ.

ಎಂ. ವಿ. ಕೃಷ್ಣಪ್ಪನವರು

ಕೇಂದ್ರಸರ್ಕಾರದ ಆಹಾರ ಉಪಸಚಿವ ಶ್ರೀ ಎಂ. ವಿ. ಕೃಷ್ಣಪ್ಪನವರು ನಿನ್ನೆದಿನ ಬೆಂಗಳೂರಿಗೆ ಆಗಮಿಸಿ ಮಂಡ್ಯಕ್ಕೆ ಪ್ರಯಾಣಮಾಡಿದರು.

ನ್ಯಾಯಾಂಗ ಸುಧಾರಣೆ

ದೇಶದಲ್ಲಿ ನ್ಯಾಯವನ್ನು ದೊರಕಿಸುವುದರಲ್ಲಿ ವಿಳಂಬವುಂಟಾಗದಂತೆ ಕೆಲವು ನ್ಯಾಯಾಂಗ ಸುಧಾರಣೆಗಳನ್ನು ಮಾಡಬೇಕಾಗಿದೆ. ಈ ವಿಷಯದಲ್ಲಿ ಸಾರ್ವಜನಿಕರ ಅಭಿಪ್ರಾಯವನ್ನು ಸದ್ಯದಲ್ಲೇ ಸಂಗ್ರಹಿಸಿ ಮುಂದಿನವರ್ಷದ ಮಧ್ಯಭಾಗದಲ್ಲಿ ಒಂದು ಶಾಸನವನ್ನು ತರಲಾಗುತ್ತದೆ ಎಂದು ಕೇಂದ್ರ ಉಪಸಚಿವ ಶ್ರೀ ದಾತಾರ್‌ರವರು ಹೇಳಿದ್ದಾರೆ.

ನುಚ್ಚಿನ ಹರಾಜು

ಬೆಂಗಳೂರು ೧೦

ಮಧ್ಯಪ್ರದೇಶ ಸರ್ಕಾರವು ತನ್ನ ಪ್ರಾಂತ್ಯದ ಬಿಲಾಸ್‌ಪುರ ಮತ್ತು ಚಂದಾ ಜಿಲ್ಲೆಯಲ್ಲಿರುವ ಅಕ್ಕಿಯ ನುಚ್ಚನ್ನು ಹರಾಜು ಹಾಕಲು ನಿರ್ಧರಿಸಿದೆ.

ಚಂದಾ ಜಿಲ್ಲೆಯಲ್ಲಿರುವ ಸುಮಾರು ೧೧೦ ಟನ್‌ಗಳಷ್ಟು ನುಚ್ಚನ್ನು ಇದೇ ೧೨ನೇ ತಾರೀಖು ಹರಾಜು ಹಾಕಲಾಗುತ್ತದೆ. ಅದರ ಬಗ್ಗೆ ವಿವರಗಳನ್ನು ಪಡೆಯಲಿಚ್ಛಿಸುವವರು ಚಂದಾ ಡೆಪ್ಯುಟಿ ಕಮೀಷನರ್‌ರಿಗೆ ಬರೆದುಕೊಳ್ಳಬಹುದೆಂದು ಮೈಸೂರು ಸರ್ಕಾರದ ಪತ್ರಿಕಾ ಪ್ರಕಟಣೆಯೊಂದು ತಿಳಿಸುತ್ತದೆ.

ತಿರುವಾಂಕೂರ್-ಕೊಚ್ಚಿಗೆ ಮೈಸೂರಿನ ಅಕ್ಕಿ

ಬೆಂಗಳೂರು ೧೦

ತಿರುವಾಂಕೂರು-ಕೊಚ್ಚಿ ಸಂಸ್ಥಾನಕ್ಕೆ ಮೈಸೂರಿನಿಂದ ಅಕ್ಕಿ ತರಿಸಿಕೊಳ್ಳುವ ವಿಷಯದಲ್ಲಿ ಅಲ್ಲಿಯ ಕೆಲವು ಅಧಿಕಾರಿಗಳು ಮಾತುಕತೆಗಳಿಗಾಗಿ ಇಲ್ಲಿಗೆ ಆಗಮಿಸಿರುವುವುದಾಗಿ ತಿಳಿಯಬರುತ್ತದೆ.

ಕೆ.ಸಿ.ರೆಡ್ಡಿಯವರ ಪ್ರಯಾಣ

ಬೆಂಗಳೂರು ೧೦

ಕೇಂದ್ರ ಉತ್ಪಾದನಾ ಸಚಿವ ಶ್ರೀ ಕೆ.ಸಿ. ರೆಡ್ಡಿಯವರು ನಿನ್ನೆಯದಿನ ಇಲ್ಲಿಂದ ಮದರಾಸಿಗೆ ಪ್ರಯಾಣಮಾಡಿದರು.

ಕೊರಿಯಾ ಪರಿಸ್ಥಿತಿ ಪರಿಶೀಲನೆ

ಕೊರಿಯಾದಲ್ಲಿ ಇಂದಿನ ಪರಿಸ್ಥಿತಿಯನ್ನು ಪರಿಶೀಲಿಸಲು ಭಾರತದಲ್ಲಿರುವ ಅಮೆರಿಕಾ ರಾಯಭಾರಿಯವರು ಮುಂದಿನ ಭಾನುವಾರ ಅಲ್ಲಿಗೆ ತೆರಳಿ ಮೂರು ವಾರಗಳ ಕಾಲ ಪ್ರವಾಸ ಮಾಡುವರೆಂದು ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೯—೧೦—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೧೪	೨೨—
ಎಳ್ಳು	೬೭—	೪೦—
ಹರಳು	೩೫—	—
ಹುರಳಿ	೩೬—೮	೩೯—೧೪
ಅಲಸಂದೆ	೫೬—೧೦	—
ಮೆಣಸಿನಕಾಯಿ	೩೭—	೪೧—೧೪
ಹುಣಸೇಹಣ್ಣು	೬—೧೫	೭—೨
ಸೀಗೆಕಾಯಿ	೬—೧೫	—
ಬೆಲ್ಲ	೮—	—
ತೆಂಗಿನಕಾಯಿ	೧೩೧	೨೦೫

ಸಿಂಗ್‌ಮನ್‌ರೀರ ನೀತಿಗೆ ಪ್ರಧಾನಿ ನೆಹರೂ ಪ್ರತಿಭಟನೆ

ಅಮೆರಿಕದ ಅಧ್ಯಕ್ಷರಿಗೆ ಪತ್ರ

ಕೊರಿಯಾ ಯುದ್ಧ ಕೈದಿಗಳ ಮೇಲ್ವಿಚಾರಣೆಯಲ್ಲಿರುವ ಭಾರತೀಯ ಸೈನ್ಯದ ಮೇಲೆ ದಕ್ಷಿಣ ಕೊರಿಯಾ ಅಧ್ಯಕ್ಷ ರೀರವರು ಯಾವ ಕಾರ್ಯಕ್ರಮವನ್ನು ತೆಗೆದುಕೊಳ್ಳದಂತೆ ಅವರನ್ನು ತಡೆಗಟ್ಟಬೇಕೆಂದು ಪ್ರಧಾನಿ ನೆಹರೂ ಅಮೆರಿಕದ ಅಧ್ಯಕ್ಷ ಐಸೆನ್‌ಹೋವರ್‌ರವರಿಗೆ ಪತ್ರ ಬರೆದು ರೀರವರ ರೀತಿಯನ್ನು ಖಂಡಿಸಿದ್ದಾರೆಂದೂ ತಿಳಿದು ಬಂದಿದೆ.

ಈ ಸಂದರ್ಭದಲ್ಲಿ ಪ್ರಧಾನಿ ನೆಹರೂ ಬೊಂಬಾಯಿನಲ್ಲಿ ಮಾತನಾಡುತ್ತಾ, ಕೊರಿಯಾ ಯುದ್ಧದಲ್ಲಿ ವಿಶ್ವಸಂಸ್ಥೆಯ ಪರವಾಗ ಭಾಗವಹಿಸಿದ್ದ ೧೫-೧೬ ರಾಷ್ಟ್ರಗಳು ಸಿಂಗ್‌ಮನ್‌ರೀರವರ ಈಗಿನ ನೀತಿಯ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಬೇಕೆಂದು ತಿಳಿಸಿದ್ದಾರೆ.

ವಾಲಿಬಾಲ್ ಪಂದ್ಯ

ಮೈಸೂರು ೧೦

ದಸರಾ ವಸ್ತುಪ್ರದರ್ಶನದ ಕ್ರೀಡಾಸ್ಪರ್ಧೆಯಲ್ಲಿ ಈದಿನ ವಾಲೀಬಾಲ್ ಪಂದ್ಯದಲ್ಲಿ ಸ್ಟಾರ್ ಕ್ಲಬ್ಬಿನವರು ಶಾರದಾವಿಲಾಸ ಕಾಲೇಜನ್ನು ೧೫-೧೦ ಪಾಯಿಂಟುಗಳಿಂದಲೂ, ಮೆಡಿಕಲ್ ಕಾಲೇಜು ಸೋಷಿಯಲ್ ಕ್ಲಬ್ಬನ್ನು ೧೫-೧೩, ೧೫-೭ ಪಾಯಿಂಟುಗಳಿಂದಲೂ ಸೋಲಿಸಿದರು.

ಕಾಮನ್‌ವೆಲ್ತ್ ಕ್ರಿಕೆಟ್ ಪಂದ್ಯ

ಭಾರತಕ್ಕೆ ಆಗಮಿಸಿರುವ ಕಾಮನ್‌ವೆಲ್ತ್ ಕ್ರಿಕೆಟ್ ಆಟಗಾರರು ಈದಿನ ಬೊಂಬಾಯಿನಲ್ಲಿ ಭಾರತ ಕ್ರಿಕೆಟ್ ಆಟಗಾರರೊಡನೆ ತಮ್ಮ ಪ್ರಥಮ ಆಟವನ್ನು ಪ್ರಾರಂಭಿಸಿದರು ಇದು ೩ ದಿನಗಳ ಕಾಲ ನಡೆಯುತ್ತದೆ.

ಪಂಚವಾರ್ಷಿಕ ಯೋಜನೆ ಕಾರ್ಯ ಪ್ರದರ್ಶನ

ಪಂಚವಾರ್ಷಿಕ ಯೋಜನೆಗೆ ಸಂಬಂಧಪಟ್ಟ ಕಾರ್ಯಗಳನ್ನು ತೋರಿಸಲು ದೆಹಲಿಯಲ್ಲಿ ಇದಕ್ಕೆ ಸಂಬಂಧಪಟ್ಟ ಒಂದು ಚಿತ್ರಪ್ರದರ್ಶನವನ್ನು ನಿನ್ನೆಯದಿನ ಉದ್ಘಾಟಿಸಲಾಗಿದೆ.

ನಾಟಕರತ್ನ ಜಿ.ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ
ಥಿಯೇಟ್ರಿಕಲ್ ಕಂಪನಿ (ರಿ)
10-10-53 ರಿಂದ ರಾತ್ರಿ 10 ಗಂಟೆಗೆ
ಶಿವರಾಂಪೇಟೆಯ ರತ್ನಾವಳಿ ಥಿಯೇಟರಿನಲ್ಲಿ
ಸಾಹುಕಾರ
ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

★ ಅಮೋಘಪ್ರಾರಂಭ ★
ಶ್ರೀರಾಜರಾಜೇಶ್ವರಿ ನಾಟಕಮಂಡಲಿ
ವಿಜಯವಾಡ
-- ಮೈಸೂರು ಟೌನ್‌ಹಾಲಿನಲ್ಲಿ --
10-10-53ನೇ ರಾತ್ರಿ 10ಗಂಟೆಗೆ
ಮೈಸೂರು ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ
ತಾರಾಶಶಾಂಕ
(ತೆಲುಗು)
ಎಂಬ ನಾಟಕವನ್ನು ಅಭಿನಯಿಸುತ್ತಾರೆ.
ಪಾತ್ರ:-- ಚಲನಚಿತ್ರದಲ್ಲಿ ಖ್ಯಾತಿಪಡೆದ ಶ್ರೀ ಪಿ. ಸೂರ್ಯಬಾಬು, ರಾಜೇಶ್ವರಿದೇವಿ ಮತ್ತು ಇತರ ಪ್ರಸಿದ್ಧ ನಟ ನಟಿಯರು.

ರಣಜಿತ್
9-10-53 ರಿಂದ ಅಮೋಘಪ್ರಾರಂಭ
ದಿನವಹಿ 3 ಪ್ರದರ್ಶನಗಳು
ನರ್ಗಿಸ್, ರಾಜಕಪೂರ್ ನಟಿಸಿರುವ
ಆಶಿಯಾನ
[ಹಿಂದಿ]

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಪ್ರಭಾ ೧೦-೧೦-೫೩ ನೇ ಶನಿವಾರದಿಂದ ಅಮೋಘಪ್ರಾರಂಭ ದಿನ 3 ಆಟಗಳು
ಮಾಡರನ್ ಥಿಯೇಟರ್ಸ್‌ರವರ ಕನ್ನಡ ಚಿತ್ರಪ್ರೇಮಿಗಳ ಮನಸೆಳೆಯುವ ಮಹೋನ್ನತ ಪಾವನದ ಕಥಾ ಚಿತ್ರ.
★ ಮಂಗಳಗೌರಿ ★
ತಾರಾಗಣ:— ಹರಿಣಿ, ಇಂದುಶೇಖರ್, ಬಾಲಕೃಷ್ಣ ಮತ್ತು ಜಯಶ್ರೀ

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೪೪

೧೨-೧೦-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಅಧಿಕಬೆಲೆ ನಿರೀಕ್ಷಿಸಕೂಡದು

ವರ್ತಕರಿಗೆ ಕೇಂದ್ರಸಚಿವರ ಎಚ್ಚರಿಗೆ

ಬೆಂಗಳೂರು, ೧೨

ಈ ವರ್ಷದ ಸುಗ್ಗಿ ಆರಂಭವಾಗುವುದರೊಳಗಾಗಿ ಆಹಾರ ಧಾನ್ಯಗಳ ಬೆಲೆ ಇಳಿಮುಖವಾಗುವುದೆಂದು ಕೇಂದ್ರ ಆಹಾರ ಉಪಸಚಿವ ಶ್ರೀ ಎಂ.ವಿ. ಕೃಷ್ಣಪ್ಪನವರು ತಿಳಿಸಿದ್ದಾರೆ. ಈ ಕಾರಣದಿಂದ ವರ್ತಕರು ಮತ್ತು ರೈತರು ಅಧಿಕಬೆಲೆ ನಿರೀಕ್ಷಿಸದೆ ತಮ್ಮಲ್ಲಿರುವ ಧಾನ್ಯಗಳನ್ನು ವಿಲೇವಾರಿ ಮಾಡಬೇಕೆಂದೂ ಅವರು ಎಚ್ಚರಿಕೆ ಕೊಟ್ಟಿದ್ದಾರೆ.

೫೨-೫೩ ರಲ್ಲಿ ದ್ವಿದಳಧಾನ್ಯಗಳ ಬೆಳೆದ ಪ್ರದೇಶ ೨ ಕೋಟಿ ಎಕರೆಯೆಂದೂ, ಇದು ಹೊಸ ರಿಕಾರ್ಡ್ ಎಂದೂ, ಕಳೆದ ವರ್ಷಕ್ಕಿಂತ ೫೦ಲಕ್ಷ ಎಕರೆ ಹೆಚ್ಚಾಗಿದೆಯೆಂದೂ ಅವರು ಹೇಳಿದ್ದಾರೆ. ಹೊರದೇಶಗಳಿಂದ ಆಹಾರ ತರಿಸಲು ನಮ್ಮ ದೇಶದಿಂದ ಹೋಗುತ್ತಿದ್ದ ೧೨೦ ಕೋಟಿ ರೂಗಳನ್ನು ಈ ವರ್ಷ ಮಿಗಿಸಲಾಗಿದೆ. ಈಗ ಅಕ್ಕಿ ಮತ್ತು ಗೋಧಿ ಪರಿಸ್ಥಿತಿ ವಿಶೇಷವಾಗಿ ಉತ್ತಮಗೊಂಡಿದೆ ಮೈಸೂರಿನಲ್ಲಿ ಈಗ ೧೦ ಸಾವಿರ ಟನ್ ದ್ವಿದಳಧಾನ್ಯ ದಾಸ್ತಾನು ಇದೆ. ಮಧ್ಯ ಪ್ರದೇಶದಿಂದ ೧೦ ಸಾವಿರ ಟನ್, ರಾಜಾಸ್ಥಾನದಿಂದ ೫ ಸಾವಿರ ಟನ್ ಇನ್ನು ೩ ತಿಂಗಳಿನಲ್ಲಿ ಬರಲಿವೆ. ಅಷ್ಟರಲ್ಲಿ ರಾಗಿಮಾರಾಟಕ್ಕೆ ಬರುವುದು ಈ ಕಾರಣಗಳಿಂದ ಬಹಿರಂಗ ಮಾರ್ಕೆಟ್ಟಿನಲ್ಲಿ ಆಹಾರ ಧಾನ್ಯಗಳ ಬೆಲೆ ಕಡಮೆ ಆಗುವುದು ಖಂಡಿತ-ಎಂದು ಅವರು ತಿಳಿಸಿದ್ದಾರೆ

ತಾಳವಾಡಿ ಮೈಸೂರಿಗೆ ಸೇರಲು ಇಚ್ಛೆ

ಕೊಯಮತ್ತೂರು ಜಿಲ್ಲೆಯ ಗೋಪಿಚೆಟ್ಟಿ ಪಾಳ್ಯದ ತಾಳವಾಡಿ ತಾಲ್ಲೂಕಿನ ಕನ್ನಡ ಜನರು ನಿನ್ನೆ ಶ್ರೀ ಮಾದಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಅದನ್ನು ಮೈಸೂರಿಗೆ ಸೇರಿಸುವುದಕ್ಕೆ ಕೇಂದ್ರ ಸರ್ಕಾರ ಕೂಡಲೇ ಕಾರ್ಯಕ್ರಮ ಕೈಗೊಳ್ಳಬೇಕೆಂದು ಒಮ್ಮತದ ತೀರ್ಮಾನ ಮಾಡಲಾಯಿತು. ಪಾರ್ಲಿಮೆಂಟ್ ಸದಸ್ಯ ಶ್ರೀ ಎಂ.ಎಸ್. ಗುರುಪಾದಸ್ವಾಮಿಯವರು ಭಾಷಣ ಮಾಡಿದರು.

ಖಾದಿ ಅಭಿವೃದ್ಧಿ ಯೋಜನೆ

ಖಾದಿ ಮತ್ತು ಗ್ರಾಮ ಕೈಗಾರಿಕೆಗಳ ಅಭಿವೃದ್ಧಿಗಾಗಿ ತಯಾರಿಸಿರುವ ಪಂಚವಾರ್ಷಿಕ ಯೋಜನೆಯಿಂದ ೪೦ ಲಕ್ಷ ಜನರಿಗೆ ಉದ್ಯೋಗ ದೊರೆಯುವುದೆಂದು ಅಖಿಲ ಭಾರತ ಖಾದಿ ಅಭಿವೃದ್ಧಿ ಬೋರ್ಡಿನ ಅಧ್ಯಕ್ಷರು ತಿಳಿಸಿದ್ದಾರೆ.

ದಸರಾ ವಿಶೇಷ ಆಹ್ವಾನಿತರು

ಮೈಸೂರು ೧೨

ಮದ್ರಾಸ್ ಗವರ್ನರ್ ಶ್ರೀಪ್ರಕಾಶ, ಆಂಧ್ರ ಗವರ್ನರ್ ತ್ರಿವೇದಿ, ಬೀಹಾರ್ ಗವರ್ನರ್ ಶ್ರೀ ದಿವಾಕರ್, ಮದ್ರಾಸ್, ಬೊಂಬಾಯಿ, ಹೈದರಾಬಾದ್ ಮತ್ತು ಕೊಡಗಿನ ಮುಖ್ಯಮಂತ್ರಿಗಳಾದ ಶ್ರೀ ಸಿ. ರಾಜಗೋಪಾಲಾಚಾರಿ, ಮೊರಾರ್ಜಿ ದೇಸಾಯ್, ರಾಮಕೃಷ್ಣರಾವ್, ಮತ್ತು ಪುನಾಚಾ, ಕೇಂದ್ರಸರ್ಕಾರದ ಹಣಕಾಸಿನ ಸಚಿವ ಶ್ರೀ ಸಿ. ಡಿ ದೇಶಮುಖ್ ಮತ್ತು ಅವರ ಪತ್ನಿ, ಕೇಂದ್ರ ಸರ್ಕಾರದ ಉಪಸಚಿವರುಗಳಾದ ಶ್ರೀ ಕೃಷ್ಣಪ್ಪ, ಸರದಾರ್ ಸುರ್ಜಿತ್‌ಸಿಂಗ್, ಕೇಂದ್ರ ಹಿರಿಯ ಸಭೆಯ ಉಪಾಧ್ಯಕ್ಷ ಶ್ರೀ ಎಸ್. ವಿ. ಕೃಷ್ಣಮೂರ್ತಿರಾವ್, ಮದರಾಸಿನ ಕೈಗಾರಿಕಾ ಸಚಿವ ಡಾ॥ ಯು. ಕೃಷ್ಣರಾವ್, ಮದರಾಸ್ ಮಾಜಿ ಮೇಯರ್ ಶ್ರೀ ಜಂಗಲರಾಯರ್ ಮುಂತಾದ ೫೦ಮಂದಿಯನ್ನು ದಸರಾ ಹಬ್ಬಕ್ಕೆ ವಿಶೇಷ ಆಹ್ವಾನಿತರನ್ನಾಗಿ ಸರ್ಕಾರವು ಆಹ್ವಾನಿಸಿದೆ.

ಕೇಂದ್ರ ಆಹಾರ ಉಪಸಚಿವ

ಮೈಸೂರು ೧೨

ಕೇಂದ್ರ ಆಹಾರ ಉಪಸಚಿವ ಶ್ರೀ ಎಂ. ವಿ. ಕೃಷ್ಣಪ್ಪನವರು ನಿನ್ನೆ ಸಂಜೆ ದಸರಾ ವಸ್ತುಪ್ರದರ್ಶನಕ್ಕೆ ಭೇಟಿ ಇತ್ತಿದ್ದರು. ಅವರು ಈದಿನ ಮಂಗಳೂರಿಗೆ ತೆರಳಿ, ೧೬ನೇ ತಾರೀಖು ಮೈಸೂರಿಗೆ ಬರುವರು. ೧೯ನೇ ತಾರೀಖು ಕರ್ನೂಲಿಗೆ ಪ್ರಯಾಣ ಬೆಳೆಸುವರು.

ಕೇಂದ್ರ ರಕ್ಷಣಾ ಉಪಸಚಿವ

ಕೇಂದ್ರ ಸರ್ಕಾರದ ರಕ್ಷಣಾ ಉಪಸಚಿವ ಸರ್ದಾರ್ ಸುರ್ಜಿತ್‌ಸಿಂಗ್‌ರವರು ರಾಜಧಾನಿಗೆ ಇದೇ ೧೬ನೇ ತಾರೀಖು ಆಗಮಿಸುವರು. ಮಾರನೇ ದಿನ ಕೃಷ್ಣರಾಜಪೇಟೆ ತಾಲ್ಲೂಕಿನ ಹೇಮಗಿರಿಯಲ್ಲಿ ನಡೆಯುತ್ತಿರುವ ಎನ್.ಸಿ.ಸಿ. ಕ್ಯಾಂಪಿಗೆ ಭೇಟಿ ಕೊಡುವರು. ೧೯ನೇ ತಾರೀಖು ಬೆಂಗಳೂರಿಗೆ ಭೇಟಿಕೊಟ್ಟು ಹೈದರಾಬಾದಿಗೆ ಪ್ರಯಾಣ ಬೆಳೆಸುವರು.

ರಾಷ್ಟ್ರಾಧ್ಯಕ್ಷರು ದೆಹಲಿಗೆ

ನೌಕಾ ಸೈನ್ಯದ ಆಚರಣೆಯಲ್ಲಿ ಭಾಗವಹಿಸಲು ಬೊಂಬಾಯಿಗೆ ತೆರಳಿದ್ದ ರಾಷ್ಟ್ರಾಧ್ಯಕ್ಷರು ಈದಿನ ದೆಹಲಿಗೆ ಹಿಂತಿರುಗಿದರು.

ಕರ್ಣಾಟಕ ಏಕೀಕರಣಕ್ಕೆ ಕಮ್ಯೂನಿಸ್ಟರ ಬೆಂಬಲ

ಭಾರತ ಕಮ್ಯೂನಿಸ್ಟ್ ಪಕ್ಷದ ಕರ್ಣಾಟಕ ಪ್ರಾಂತ್ಯಸಮಿತಿಯ ಸಭೆಯು ಬೆಂಗಳೂರಿನಲ್ಲಿ ಸೇರಿ, ಕರ್ಣಾಟಕ ಏಕೀಕರಣದ ಚಳುವಳಿಗೆ ತಮ್ಮ ಪಕ್ಷದ ಸಂಪೂರ್ಣ ಬೆಂಬಲ ನೀಡುವುದಾಗಿ ನಿರ್ಣಯ ಮಾಡಲಾಗಿದೆ ಭಾಷಾವಾರು ಪ್ರಾಂತ್ಯ ರಚನೆ ತತ್ವವನ್ನು ಅಲ್ಲಗಳೆದು ನೇಮಿತವಾಗುವ ಕೇಂದ್ರ ಗಡಿ ಕಮಿಷನ್ ಕರ್ಣಾಟಕ ಏಕೀಕರಣವನ್ನು ಹಿಂದೂಡುವುದಕ್ಕೆ ಮತ್ತು ನಿರಾಕರಿಸುವುದಕ್ಕೂ ಕೇಂದ್ರ ಸರ್ಕಾರವು ಹೂಡಿರುವ ಕುತಂತ್ರವೆಂದು ಸಭೆಯು ಅಭಿಪ್ರಾಯಪಟ್ಟಿದೆ.

ಫಲಪುಷ್ಪಗಳ ಪ್ರದರ್ಶನ

ಮೈಸೂರು ೧೨

ಇದೇ ೧೫ನೇ ತಾರೀಖು ಗುರುವಾರ ಸಂಜೆ ೪-೩೦ ಗಂಟೆಗೆ ನಗರದ ದೇವರಾಜಾ ಮಾರ್ಕೆಟ್ಟಿನಲ್ಲಿ ಪುರಸಭೆಯ ಆಶ್ರಯದಲ್ಲಿ ಏರ್ಪಟ್ಟಿರುವ ಫಲಪುಷ್ಪಗಳ ಪ್ರದರ್ಶನದ ಬಹುಮಾನ ವಿನಿಯೋಗವನ್ನು ಗೃಹಸಚಿವ ಶ್ರೀ ಸಿದ್ದವೀರಪ್ಪನವರು ನೆರವೇರಿಸುತ್ತಾರೆ.

ಹಣ ದುರುಪಯೋಗಕ್ಕಾಗಿ ದಸ್ತಗಿರಿ

ಮೈಸೂರು, ೧೨

ನಗರದ ದ್ವಿತೀಯ ಮ್ಯಾಜಿಸ್ಟ್ರೇಟ್ ಕೋರ್ಟಿನ ಮುಖ್ಯ ಗುಮಾಸ್ತ ಶ್ರೀ ಎನ್ ವಿ. ರಾಬರ್ಟ್ಸ್ ಎಂಬುವರು ಸರ್ಕಾರಕ್ಕೆ ಸೇರಿದ ೪೦೦ ರೂ.ಗಳನ್ನು ದುರುಪಯೋಗ ಪಡಿಸಿಕೊಂಡರೆಂಬ ಆಪಾದನೆ ಮೇಲೆ ಅವರನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ಈದಿನವೂ ಕುಸ್ತಿ ಇಲ್ಲ

ಅರಮನೆಮುಂದೆ ಕುಸ್ತಿ ನಡೆಯುವ ವಿಷಯದಲ್ಲಿ ಇನ್ನು ಯಾವ ತೀರ್ಮಾನವೂ ಆಗಲಿಲ್ಲವಾಗಿ ಈ ದಿನವು ಕುಸ್ತಿ ನಡೆಯುವುದಿಲ್ಲವೆಂದು ತಿಳಿಯಬರುತ್ತದೆ. ಇಂದಿನ ಪರಿಸ್ಥಿತಿಯಲ್ಲಿ ಈಸಲ ದಸರಾ ಮಹೋತ್ಸವಕಾಲದಲ್ಲಿ ಕುಸ್ತಿಯನ್ನು ಸಂಪೂರ್ಣವಾಗಿ ನಿಲ್ಲಿಸಲಾಗುತ್ತದೆ ಎಂದು ಹೇಳಲಾಗುತ್ತಿದೆ.

ನಗರಕ್ಕೆ ಮುಖ್ಯ ಮಂತ್ರಿಗಳ ಆಗಮನ

ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ದಿನ ಮಧ್ಯಾಹ್ನ ರಾಜಧಾನಿಗೆ ಆಗಮಿಸಿದರು.

ಊರುಗಳ ಹೆಸರು ಬದಲಾವಣೆ ಬೇಡ

ಗ್ರಾಮ ಮತ್ತು ಪಟ್ಟಣಗಳ ಹೆಸರುಗಳನ್ನು ಬದಲಾಯಿಸುವುದಕ್ಕೆ ಪ್ರೋತ್ಸಾಹವನ್ನು ಕೊಡಬಾರದು-ಎಂದು ಕೇಂದ್ರ ಸರ್ಕಾರವು ಬೀಹಾರ್ ಸರ್ಕಾರಕ್ಕೆ ಒಂದು ಸೂಚನೆಯನ್ನು ಕೊಡುತ್ತಾ ಸಾಕಷ್ಟು ಕಾರಣಗಳಿದ್ದರೆ ಮಾತ್ರ ಹೆಸರು ಬದಲಾಯಿಸಬೇಕೆಂದೂ, ಹಾಗೆ ಬದಲಾಯಿಸುವಾಗ ಗೃಹಸಚಿವ ಶಾಖೆಗೆ ವಿಷಯವನ್ನು ತಿಳಿಸಬೇಕೆಂದೂ ಸೂಚನೆಯಲ್ಲಿ ಹೇಳಲಾಗಿದೆ.

ಹಿಂದಿ-ಹಿಂದೂಸ್ತಾನಿ

ಭಾರತ ದೇಶಭಾಷೆಯನ್ನು ಹಿಂದಿ ಅಥವ ಹಿಂದೂಸ್ತಾನಿ ಎಂಬ ಯಾವ ಹೆಸರಿನಿಂದ ಬೇಕಾದರೂ ಕರೆಯಬಹುದು ಆದರ ಅಭಿವೃದ್ಧಿ ಬಗ್ಗೆ ಪ್ರಾದೇಶಿಕ ಭಾಷೆಗಳಲ್ಲಿರುವ ಸಂಸ್ಕೃತ ಪದಗಳನ್ನು ಉಪಯೋಗಿಸಿಕೊಳ್ಳಬೇಕು ಹಿಂದಿ ಭಾಷೆಗೆ ಸಂಸ್ಕೃತ ಭಾಷೆಯೇ ಆಧಾರ ಆದರಂತೆ ಇದರ ದೇಶಭಾಷೆಗಳಲ್ಲೆಲ್ಲಾ ಸಂಸ್ಕೃತವಿದೆಯೆಂದು ರಾಷ್ಟ್ರಾಧ್ಯಕ್ಷರು ಬೊಂಬಾಯಿನಲ್ಲಿ ಹೇಳಿದ್ದಾರೆ.

ಕೊಲೊಂಬೋ ಯೋಜನಾ ಸಮಿತಿ ಅಧಿವೇಶನ

೧೬ ರಾಷ್ಟ್ರಗಳ ಸಚಿವರು ಮತ್ತು ೩ ಅಂತರರಾಷ್ಟ್ರೀಯ ಸಂಸ್ಥೆಗಳ ಪ್ರತಿನಿಧಿಗಳ ಕೊಲಂಬೋ ಯೋಜನಾ ಸಮಿತಿ ಸಭೆಯು ನಾಳೆದಿನ ದೆಹಲಿಯಲ್ಲಿ ಪ್ರಾರಂಭವಾಗಲಿದೆ. ಪ್ರಧಾನಿ ನೆಹರೂರವರು ಇದನ್ನು ಪ್ರಾರಂಭಿಸುವರು.

ರೈಲ್ವೆ ನೌಕರರ ನೇಮಕಮಂಡಲಿ ರಚನೆ

ರೈಲ್ವೆ ಇಲಾಖೆಯ ನಾನಾ ಭಾಗಗಳಿಗೆ ನೇಮಕ ಮಾಡಿಕೊಳ್ಳುವ ಕಾರ್ಯವನ್ನು ತ್ವರಿತಗೊಳಿಸಲು ಈಗಿರುವ ಎರಡು ರೈಲ್ವೆ ಸರ್ವಿಸ್ ಕಮೀಷನ್ ಜೊತೆಗೆ ಮತ್ತೆರಡನ್ನು ರಚಿಸಲಾಗುತ್ತದೆ. ಈ ಹೊಸ ಮಂಡಲಿಗಳು ಮದ್ರಾಸ್ ಮತ್ತು ಅಲಹಾಬಾದಿನಲ್ಲಿ ಇರುತ್ತವೆ.

ಬಟ್ಟೆರಫ್ತಿಗೆ ಅವಕಾಶ

ದೇಶದ ಉಪಯೋಗಕ್ಕಾಗಿ ತಯಾರಿಸುವ ಬಟ್ಟೆಯನ್ನು ರಫ್ತುಮಾಡಲು ಭಾರತ ಸರ್ಕಾರವು ಅನುಮತಿ ನೀಡಿ ಆಜ್ಞೆ ಹೊರಡಿಸಿದೆ.

ಸಮಾಚಾರ

ತಾ॥ ೧೨—೧೦—೫೩ನೇ ಸೋಮವಾರ

ನಿಷ್ಪಕ್ಷಪಾತ ವಿಚಾರಣೆ ನಡೆಯಲಿ

ಮೈಸೂರು ಅರಮನೆಯ ಮುಂದೆ ಕುಸ್ತಿ ಆಡಲು ಹರಿಜನರಿಗೆ ಅವಕಾಶವನ್ನು ಕಲ್ಪಿಸುವ ಬಗ್ಗೆ ಮೊನ್ನೆ ಶನಿವಾರ ಶ್ರೀ ಚನ್ನಯ್ಯನವರ ಮನೆಯಲ್ಲಿ ಸವರ್ಣ ಹಿಂದೂಗಳು ಸೇರಿ ಒಪ್ಪಿ ಒಂದು ತೀರ್ಮಾನಕ್ಕೆ ಬಂದರೆಂಬ ಸಂತೋಷವಾದ ಸುದ್ದಿ ನಗರದಲ್ಲಿ ಭೀತರಾಗಿದ್ದ ಜನರ ಮನಸ್ಸಿಗೆ ಸ್ವಲ್ಪ ಸಮಾಧಾನ ಮಾಡಿತ್ತು.

ಆದರೆ ಈ ವಿಷಯದಲ್ಲಿ ಪುನಃ ಭಿನ್ನಾಭಿಪ್ರಾಯ ಮೂಡಿ, ಈ ನಿರ್ಧಾರವನ್ನು ಕಾರ್ಯರೂಪಕ್ಕೆ ತರಲು ಅಡಚಣೆ ಉಂಟಾಗಿ ನಿನ್ನೆ ದಿನ ಸಂಜೆ ಕುಸ್ತಿ ನಡೆಯಲಿಲ್ಲ. ಹರಿಜನರು ಪ್ರತ್ಯೇಕ ಅಖಾಡಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ. ಇದರಿಂದ ಪುನಃ ಪರಿಸ್ಥಿತಿಯು ಬಿಗಡಾಯಿಸಿದಂತಾಗಿದೆ. ಇದೇ ವಾತಾವರಣವು ಮುಂದುವರಿದರೆ ಪುನಃ ವಿಷಾದ ಘಟನೆಗಳು ನಡೆಯಲು ಅವಕಾಶ ವಿರುತ್ತದೆ. ಅದನ್ನು ತಪ್ಪಿಸಲು ಕೂಡಲೇ ಸರ್ಕಾರದವರು ಉಭಯಪಕ್ಷದವರೊಡನೆ ಸಂಧಾನ ನಡೆಸಿ ಒಂದು ಸಮಾಧಾನಕರವಾದ ತೀರ್ಮಾನಕ್ಕೆ ಬರಬೇಕಾದುದು ಅತ್ಯಾವಶ್ಯಕ.

ಸ್ವತಂತ್ರಭಾರತದಲ್ಲಿ ಜಾತ್ಯಾತೀತವಾದ ರಾಜ್ಯಾಂಗವು ಜಾರಿಯಲ್ಲಿರುವಾಗ ದೇಶದಲ್ಲಿ ಎಲ್ಲಾ ಪ್ರಜೆಗಳಿಗೂ ಸಮಾನವಾದ ಹಕ್ಕುಂಟು. ಇವನ್ನು ವಿರೋಧಿಸುವವರನ್ನು ಮತ್ತು ಇದಕ್ಕೆ ಅಡ್ಡಿ ಬರುವವರನ್ನು ಸರಕಾರದವರು ತೀವ್ರ ದೃಷ್ಟಿಯಿಂದ ನೋಡಿಕೊಳ್ಳಬೇಕಾದುದು ಎಲ್ಲ ಸರ್ಕಾರಗಳ ಪ್ರಮುಖ ಕರ್ತವ್ಯ. ಆದರೆ ಬದಲಾವಣೆಗಳನ್ನು ಕಾರ್ಯತಹ ಆಚರಣೆಗೆ ತರುವಾಗ ಜನರ ಮನಸ್ಸು ಉದ್ರೇಕಗೊಳ್ಳದಂತೆ ಅವರನ್ನು ಪರಿವರ್ತನೆ ಮಾಡಬೇಕಾದುದೂ ಅದೇ ಸರ್ಕಾರದ ಕರ್ತವ್ಯ. ಅಂತಹ ಸುಧಾರಣೆಗಳನ್ನು ಜಾರಿಗೆ ತರುವಾಗ ಕಹಿ ವಾತಾವರಣವನ್ನು ಕಲ್ಪಿಸಿಕೊಳ್ಳಬಾರದು.

ದಸರಾ ಕಾಲದಲ್ಲಿ ಹರಿಜನರಿಗೆ ಅರಮನೆಯ ಮುಂದೆ ಕುಸ್ತಿಗೆ ಅವಕಾಶ ಕಲ್ಪಿಸಬೇಕೆಂಬ ವಿಷಯವು ಅನೇಕವರ್ಷಗಳಿಂದ ಜಿಜ್ಞಾಸೆಯಲ್ಲಿರುವ ವಿಷಯವಾಗಿದೆ. ಸರ್ಕಾರದವರು ಈ ಬಗ್ಗೆ ಸಂಬಂಧಪಟ್ಟ ಎಲ್ಲಾ ಪಕ್ಷಗಳ ಮತ್ತು ಸಂಸ್ಥೆಗಳ ಪ್ರತಿನಿಧಿಗಳೊಡನೆ ವಿಚಾರ ವಿನಿಮಯ ನಡೆಸಿ ಅನಂತರ ಸುವ್ಯವಸ್ಥಿತ ರೀತಿಯಲ್ಲಿ ಏರ್ಪಾಡು ಮಾಡಬೇಕಾಗಿತ್ತು. ಅದನ್ನು ಬಿಟ್ಟು ಏಕಾಏಕಿ ಈ ಪದ್ಧತಿಯನ್ನು ಜಾರಿಗೆ ತರಲು ನಿರ್ಧರಿಸಿದ್ದು ಈಗ ನಡೆದ ಘಟನೆಗಳಿಗೆಲ್ಲಾ ಕಾರಣವಾಯಿತೆಂದು ವಿಷಾದದಿಂದ ಹೇಳಬೇಕಾಗಿದೆ.

ಆದಾಗ್ಯೂ ಸ್ಥಳೀಯ ಅಧಿಕಾರಿಗಳು ಜಾಗರೂಕತೆಯಿಂದ ವರ್ತಿಸಿ ಪರಿಸ್ಥಿತಿಯನ್ನು ಆದಿನ ಬೆಳಿಗ್ಗೆಯೇ ತಹಬಂದಿಗೆ ತರಲು ಅವಕಾಶವಿತ್ತು. ದಸರಾ ಪ್ರಾರಂಭದ ಹಿಂದಿನ ದಿನಗಳಲ್ಲೇ ಈ ವಿಷಯದಲ್ಲಿ ಗರಡಿಯವರಲ್ಲಿ ಭಿನ್ನಾಭಿಪ್ರಾಯ ಮೂಡಿ, ಒಳಗೊಳಗೇ ಸಭೆ ಚರ್ಚೆ ಮುಂತಾದುವುಗಳನ್ನು ನಡೆಸುತ್ತಿದ್ದು ಆದಿನ ಬೆಳಿಗ್ಗೆ ಕ್ರಾಫರ್ಡ್ ಭವನದ ಬಳಿ ಬಹಿರಂಗ ಸಭೆ ನಡೆಸಿದಾಗಲೇ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕಾಗಿತ್ತು. ಹಾಗೆ ಆಗಿದ್ದರೆ ಕಾಂಗ್ರೆಸ್ ಕಛೇರಿಯ ಬಳಿ ಘಟನೆ ಮತ್ತು ಸಂಜೆ ಗೋಲಿಬಾರು ಪ್ರಕರಣವೇ ಇರುತ್ತಿರಲಿಲ್ಲ. ಆದೇದಿನ ಮಧ್ಯಾಹ್ನ ೧ ಗಂಟೆ ವೇಳೆಯಲ್ಲಿ ಅಧಿಕಾರಿಗಳು ಗುಂಪಿನ ಮುಖಂಡರೊಡನೆ ಮಾತನಾಡುತ್ತಿದ್ದಾಗ ಸದ್ಯಕ್ಕೆ ಕುಸ್ತಿ ನಿಲ್ಲಿಸಿ ಎಂಬ ಮುಖಂಡರ ಬೇಡಿಕೆಯನ್ನು ಪರಿಶೀಲಿಸಲು ಕಾಲಾವಕಾಶ ಕೇಳಿ ಅವರನ್ನು ಪುರಭವನದ ಮೈದಾನದಲ್ಲೇ ಕೂಳಿಹಾಕಿ, ೩ ಗಂಟೆಗೆ ತೀರ್ಮಾನವಾದ ಕುಸ್ತಿ ರದ್ದಿನ ವಿಷಯವನ್ನು ೫ ಗಂಟೆಗೆ ತಿಳಿಸಿದುದರ ಬದಲು ಕೂಡಲೇ ಅವರಿಗೆ ಹೇಳಿದ್ದರೆ ಸಂತೋಷದಿಂದ ಗುಂಪು ಚದುರಿಹೋಗುತ್ತಿತ್ತು. ಆಗಲೇ ಆದಿಕರ್ನಾಟಕರು ಕುಸ್ತಿಯಿಲ್ಲವೆಂಬ ಅಂಶವನ್ನು ತಿಳಿಸಿದ್ದರೆ ಯಾವ ಘಟನೆಗೂ ವಿರಾಗವಿರಲಿಲ್ಲ. ಅಧಿಕಾರಿಗಳ ಈ ವರ್ತನೆಯನ್ನು ಸಾರ್ವಜನಿಕರು, ಸರ್ಕಾರದವರೂ ಮೆಚ್ಚುತ್ತಿದ್ದರೇ ಹೊರತು ಅವರು ಯಾವರೀತಿಯಾದ ಆಕ್ಷೇಪಣೆಗೂ ಗುರಿಯಾಗುತ್ತಿರಲಿಲ್ಲ. ದೈವಸಂಕಲ್ಪದಲ್ಲಿ ದಸರಾದಿನ ರಕ್ತಪಾತವಾಗಿ ನರಬಲಿಯಾಗಬೇಕೆಂದಿರುವಾಗ ಯಾರೇನು ಮಾಡಿಯಾರು?

ಮತ್ತೊಂದು ವಿಷಾದಕರವಾದ ಸಂಗತಿ ಏನೆಂದರೆ ಸರ್ಕಾರದವರು ಇಲ್ಲಿ ನಡೆದ ಘಟನೆಗಳ ಬಗ್ಗೆ ಕೂಡಲೇ ತಕ್ಕ ಅಧಿಕೃತ ಪ್ರಕಟಣೆಯನ್ನು ಹೊರಡಿಸದೆ ಅನೇಕ ರೀತಿಯ ಊಹಾಪೋಹಕ್ಕೆ ಎಡೆಗೊಟ್ಟಿದುದು.

ಸರ್ಕಾರವೇ ಮೈಸೂರು ನಗರದಲ್ಲಿರುವಾಗ ಘಟನೆ ನಡೆದ ರಾತ್ರಿ ಅಥವಾ ಮಾರನೇ ಬೆಳಗ್ಗೆ ಅಧಿಕೃತ ಪ್ರಕಟಣೆಯನ್ನು ಹೊರಡಿಸಬಹುದಾಗಿತ್ತು.

ಹಾಗೆ ಮಾಡದೆ ಘಟನೆ ನಡೆದ ೨೭ ಗಂಟೆಗಳ ಮೇಲೆ ಪತ್ರಿಕಾ ಪ್ರಕಟಣೆ ಹೊರಡಿಸಿ ಅದನ್ನು ನಗರದ ಪತ್ರಿಕೆಗಳಿಗೆ ಮಾರನೇ ದಿನ ಬೆಂಗಳೂರಿನಿಂದ ಕಳುಹಿಸಿರುವುದು ಅತ್ಯಂತ ಆಶ್ಚರ್ಯವಾಗಿದೆ. ಮೈಸೂರಿನಲ್ಲಿ ನಡೆದ ಘಟನೆ ಬಗ್ಗೆ ಮೈಸೂರಿನಲ್ಲೇ ಬಿಡಾರ ಮಾಡಿರುವ ಸರ್ಕಾರವು ಇಲ್ಲಿ ಒಂದು ಪತ್ರಿಕಾ ಪ್ರಕಟಣೆ ಹೊರಡಿಸಿ ೨ ದಿನಗಳನಂತರ ಬೆಂಗಳೂರಿನಿಂದ ಮೈಸೂರು ಪತ್ರಿಕೆಗಳಿಗೆ ಕಳುಹಿಸುವ 'ರೆಡ್‌ಟೇಪಿಸಂ'ಗೆ ಕಾರಣವೇನು ? ಇಷ್ಟು ಕಾಲಾತೀತವಾಗಿ ಅಧಿಕೃತ ಪ್ರಕಟಣೆ ಹೊರಡಿಸಿದ್ದರೂ, ಅದರಲ್ಲಿ ಸತ್ತವರ ಮತ್ತು ಗಾಯಗೊಂಡವರ ಬಗ್ಗೆ ಅವರ ಹೆಸರು ಮತ್ತು ಇತರ ವಿವರಗಳನ್ನು ಕೊಡದೆ, ಕೇವಲ ಅಂಕಿಗಳನ್ನು ಮಾತ್ರ ನಮೂದಿಸಿರುವುದು ವಿಷಾದಕರ. ಅಧಿಕಾರಿಗಳ ಸಾವಧಾನ ನಡವಳಿಕೆಯಿಂದ ಕಾಂಗ್ರೆಸ್ ಸರ್ಕಾರ ಮತ್ತು ಸಂಸ್ಥೆಗೆ ಕೆಟ್ಟ ಹೆಸರು ಬರುತ್ತಿದೆಯೇ ವಿನಃ ಮತ್ತೇನೂ ಇಲ್ಲ.

ಮಕ್ಕಳ ಪ್ರದರ್ಶನ

ಮೈಸೂರು ೧೨

ಈ ವರ್ಷದ ದಸರಾ ವಸ್ತುಪ್ರದರ್ಶನದ ಅಂಗವಾಗಿ ಇದೇ ೨೧ನೇ ತಾ॥ ಬುಧವಾರದ ದಿವಸ ಮಕ್ಕಳ ಪ್ರದರ್ಶನವನ್ನು ಜೀವನರಾಯನ ಕಟ್ಟೆಯಲ್ಲಿರುವ ರಂಗ ಮಂಟಪದಲ್ಲಿ ಬೆಳಿಗ್ಗೆ ೮-೩೦ ಗಂಟೆಗೆ ನಡೆಸಲು ಏರ್ಪಡಿಸಲಾಗಿದೆ.

೧೮ ತಿಂಗಳೊಳಗಿರುವ ಮಕ್ಕಳು ಈ ಪ್ರದರ್ಶನದಲ್ಲಿ ಭಾಗವಹಿಸಬಹುದು. ಭಾಗವಹಿಸುವ ಪ್ರತಿ ಮಗುವಿನೊಡನೆ ಬರುವ ತಾಯಿ ಅಥವಾ ಪೋಷಕರೊಬ್ಬರಿಗೆ ಮಾತ್ರ ಆ ದಿನ ಜೀವನರಾಯನ ಕಟ್ಟೆಗೆ ಪ್ರವೇಶ ಉಚಿತ. ಪ್ರದರ್ಶನಕಾಲದಲ್ಲಿ ವೈದ್ಯರು ಮಕ್ಕಳ ತೂಕ, ಎತ್ತರ, ಆರೋಗ್ಯ ಇವುಗಳನ್ನು ಪರೀಕ್ಷಿಸಿ ಸೂಕ್ತವಾದ ಸಲಹೆಗಳನ್ನು ಕೊಡುತ್ತಾರೆ. ಜಯಶೀಲರಾದ ಮಕ್ಕಳಿಗೆ ವಸ್ತುಪ್ರದರ್ಶನ ಸಮಿತಿಯವರು ಬಹುಮಾನಗಳನ್ನು ಹಂಚುವರು.

ವಿದ್ಯುಚ್ಛಕ್ತಿ ತಗುಲಿ ಮರಣ

ಮೈಸೂರು ೧೨

ದಸರಾ ವಸ್ತು ಪ್ರದರ್ಶನದಲ್ಲಿ ಕೆಲಸದ ಮೇಲಿದ್ದ ಮಾದ ಎಂಬ ಜಾಡಮಾಲಿಗೆ ನಿನ್ನೆ ಬೆಳಿಗ್ಗೆ ಪ್ರದರ್ಶನದ ಆವರಣದಲ್ಲಿ ನೆಲದ ಮೇಲೆ ಬಿದ್ದಿದ್ದ ವಿದ್ಯುಚ್ಛಕ್ತಿ ತಂತಿ ತಗುಲಿದದರಿಂದ ಅತನು ಕೂಡಲೇ ಸತ್ತುಹೋದನು.

ಅರಮನೆ ಕೆಳದರ್ಜೆ ನೌಕರಿಗೆ ಬಡ್ತಿ

ಅರಮನೆ ಕೆಳದರ್ಜೆ ನೌಕರರಿಗೆಲ್ಲಾ ಕಳೆದ ಒಂದನೇ ತಾರೀಖಿನಿಂದ ೨ ರೂಪಾಯಿಗಳ ಹೆಚ್ಚಿನ ಸಂಬಳವನ್ನು ಶ್ರೀಮನ್ಮಹಾರಾಜರು ಮಂಜೂರ್ಮಾಡಿರುತ್ತಾರೆ.

ಮೈಸೂರು ನಗರದಲ್ಲಿ ಇಂತಹ ವಿಷಾದ ಘಟನೆ ನಡೆದು ಜನರಲ್ಲಿ ಸರ್ಕಾರದ ಮೇಲೆ ಉಂಟಾಗಿರುವ ಒಂದು ತರಹ ಕೆಟ್ಟ ಮನೋಭಾವ ತಪ್ಪಲು ಅವಕಾಶವಾಗುವಂತೆ ಕೂಡಲೇ ಒಂದು ನಿಷ್ಪಕ್ಷಪಾತವಾದ ವಿಚಾರಣಾ ಸಮಿತಿಯನ್ನು ಸರ್ಕಾರನೇಮಿಸಬೇಕೆಂದು ಒತ್ತಾಯ ಮಾಡುತ್ತೇವೆ.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ
ಥಿಯೇಟ್ರಿಕಲ್ ಕಂಪೆನಿ (ರಿ)
12-10-53 ನೇ ರಾತ್ರಿ 10 ಗಂಟೆಗೆ
ಶಿವರಾಂಪೇಟೆಯ ರತ್ನಾವಳಿ
ಥಿಯೇಟರಿನಲ್ಲಿ
ಹೇಮರೆಡ್ಡಿ--
--ಮಲ್ಲಮ್ಮ
ಎಂಬ ಸಾಮಾಜಿಕ ನಾಟಕವನ್ನು
ಅಭಿನಯಿಸುವರು

ಅಗ್ಗದ ಬೆಲೆಯಲ್ಲಿ ಗೋಧಿ

ಬೆಂಗಳೂರು ೧೨

ಮಣಕ್ಕೆ ೧೮ ರೂಪಾಯಿಗಳಂತೆ ಭಾರತ ಸರ್ಕಾರವು ಮೈಸೂರಿಗೆ ೨೦೦೦೦ ಟನ್‌ಗಳಷ್ಟು ಗೋಧಿಯನ್ನು ಅಗ್ಗದ ಬೆಲೆಯಲ್ಲಿ ಕೊಡಲು ನಿರ್ಧರಿಸಿದೆ. ಇದನ್ನು ಇದೇ ಬೆಲೆಯಲ್ಲಿಯೇ ಅಭಾವ ಪ್ರದೇಶಗಳಲ್ಲಿ ಬಡ ಜನರಿಗೆ ಮಾರಬೇಕು. ಅಲ್ಲದೆ ಅದನ್ನು ಹಿಟ್ಟಾಗಿ ಪರಿವರ್ತಿಸಬಾರದು. ಇದಕ್ಕೆ ಸಂಬಂಧಪಟ್ಟ ಇತರ ವೆಚ್ಚಗಳನ್ನು ಮೈಸೂರುಸರ್ಕಾರವು ವಹಿಸಿಕೊಳ್ಳುತ್ತದೆ. ಈ ನಿಯಮಗಳಮೇಲೆ ೨೦೦೦೦ ಟನ್ ಗೋಧಿಯನ್ನು ಆಹಾರ ಶಾಖಾ ಡೈರೆಕ್ಟರ್‌ರವರು ಅಭಾವ ಪ್ರದೇಶಗಳಿಗೆ ಸರಬರಾಜು ಮಾಡುತ್ತಾರೆ. ಈ ಪ್ರದೇಶದ ಜನರು ಅತ್ಯಧಿಕ ಪ್ರಮಾಣದಲ್ಲಿ ತಮಗೆ ಬೇಕಾದಷ್ಟನ್ನು ಕೊಂಡು ಅದರ ಪ್ರಯೋಜನವನ್ನು ಪಡೆಯುವರೆಂದು ನಂಬಿದೆ-ಎಂಬುದಾಗಿ ಸರ್ಕಾರದವರು ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿದ್ದಾರೆ.

ವಿದ್ಯಾಧಿಕಾರಿಗಳ ನೇಮಕ

ಮೈಸೂರು ೧೨

ಮಹಾರಾಜಾ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ಕೃಷ್ಣಸ್ವಾಮಯ್ಯಂಗಾರ್‌ರನ್ನು ಮೈಸೂರು ಜಿಲ್ಲಾ ವಿದ್ಯಾಧಿಕಾರಿಗಳನ್ನಾಗಿ ನೇಮಿಸಿ, ಆ ಸ್ಥಾನದಲ್ಲಿರುವ ಶ್ರೀ ಎಲ್. ತಿಮ್ಮಯ್ಯನವರನ್ನು ಬಳ್ಳಾರಿ ಜಿಲ್ಲಾ ವಿದ್ಯಾಧಿಕಾರಿಗಳನ್ನಾಗಿ ವರ್ಗಾಯಿಸಲಾಗಿದೆ. ತುಮಕೂರಿನ ಹೈಸ್ಕೂಲ್ ಹೆಡ್‌ಮಾಸ್ಟರ್ ಶ್ರೀ ಜಿ. ಆರ್. ರಂಗಸ್ವಾಮಿಯವರನ್ನು ಮಂಡ್ಯ ಜಿಲ್ಲಾಧಿಕಾರಿಗಳನ್ನಾಗಿ ನೇಮಿಸಲಾಗಿದೆ.

★ ಅಮೋಘಪ್ರಾರಂಭ ★
10-10-53 ರಿಂದ ರಾತ್ರಿ 10 ಗಂಟೆಗೆ
ಶ್ರೀರಾಜರಾಜೇಶ್ವರಿ ನಾಟಕಮಂಡಲಿ
ವಿಜಯವಾಡ
-- ಮೈಸೂರು ಟೌನ್‌ಹಾಲಿನಲ್ಲಿ --
ಮೈಸೂರು ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ
ತಾರಾಶಶಾಂಕ
(ತೆಲುಗು)
ಎಂಬ ನಾಟಕವನ್ನು ಅಭಿನಯಿಸುತ್ತಾರೆ.
ಪಾತ್ರ:-- ಚಲನಚಿತ್ರದಲ್ಲಿ ಖ್ಯಾತಿಪಡೆದ ಶ್ರೀ ಪಿ. ಸೂರ್ಯಬಾಬು, ರಾಜೇಶ್ವರಿದೇವಿ ಮತ್ತು ಇತರ ಪ್ರಸಿದ್ಧ ನಟ ನಟಿಯರು.

ಪ್ರಭಾ ದಸರಾ ಹಬ್ಬದ ಪ್ರಯುಕ್ತ
ವಿಶೇಷ ಬೆಳಗಿನ ಪ್ರದರ್ಶನ ೧೮-೧೦-೫೩
ರಿಂದ ಪ್ರತಿದಿನ ಬೆಳಿಗ್ಗೆ ೧೦-೩೦ಕ್ಕೆ
ವಿ. ಶಾಂತಾರಾಂರವರ ● ಪರ್‌ಛಾಯ್ ●
ಪಾತ್ರ:- ಜಯಶ್ರೀ, ಶಾಂತಾರಾಂ, ಸಂಧ್ಯ

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋ॥ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೪೫

೧೪-೧೦-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಸಕ್ಕರೆ ಬೆಲೆ ಏರಿತು

ಮೂರು ಪೌಂಡಿಗೆ ಒಂದು ರೂ. ಮೂರಾಣೆವರೆ

ಬೆಂಗಳೂರು ೧೩

ಸಂಸ್ಥಾನದಲ್ಲಿ ಡಿಪೋಗಳ ಮೂಲಕ ಮಾರಾಟ ಮಾಡುವ ಸಕ್ಕರೆ ಬೆಲೆಯನ್ನು ಜಿಲ್ಲಾ ಕೇಂದ್ರಗಳಲ್ಲಿ ೩ ಪೌಂಡುಗಳಿಗೆ ರೂ. ೧—೩—೬, ತಾಲ್ಲೂಕು ಕೇಂದ್ರಗಳಲ್ಲಿ ರೂ. ೧—೪—೬ ಮತ್ತು ಒಳಪ್ರದೇಶಗಳಲ್ಲಿ ರೂ. ೧—೫—೦ ಯಂತೆ ನಿಗದಿ ಮಾಡಲಾಗಿದೆ.

ಹೋಲ್‌ಸೇಲ್ ದರ ಮೂಟೆಗೆ ಜಿಲ್ಲಾ ಕೇಂದ್ರಗಳಲ್ಲಿ ೯೧ ರೂ, ತಾಲ್ಲೂಕು ಕೇಂದ್ರಗಳಲ್ಲಿ ೯೫—೧೦ ೯ ಮತ್ತು ಒಳಪ್ರದೇಶಗಳಲ್ಲಿ ೯೮ ರೂ.

ಈ ಹೊಸ ಬೆಲೆಯು ಇದೇ ತಿಂಗಳು ೧೫ ನೇ ತಾರೀಖಿನಿಂದ ಜಾರಿಗೆ ಬರುತ್ತದೆ.

ಕಳೆದ ಸಾಲಿನಲ್ಲಿ ಮಳೆ ಬಾರದೆ ಮಂಡ್ಯದಲ್ಲಿ ಸಕ್ಕರೆ ದಾಸ್ತಾನು ಕಡಮೆಯಾಗಿ, ಈಗ ಉತ್ತರಭಾರತದಿಂದ ಸಕ್ಕರೆ ತರಿಸಬೇಕಾಗಿದೆ ಆದ್ದರಿಂದ ಖರ್ಚು ಹೆಚ್ಚಾಗುತ್ತದೆ ಅದಕ್ಕಾಗಿ ಬೆಲೆಯನ್ನು ಏರಿಸಬೇಕಾಗಿದೆ ಎಂಬ ವಿವರಣೆಯನ್ನು ಸರ್ಕಾರ ಕೊಟ್ಟಿದೆ.

ತಂದೆಯ ವಿಚಿತ್ರ ವರ್ತನೆ

೩ ಮಕ್ಕಳನ್ನು ನದಿಗೆ ಎಸೆದ ಪ್ರಸಂಗ

ಮಥುರೆಯ ಮದನ್‌ಸಿಂಗ್ ಎಂಬುವನು ವಿಚಿತ್ರ ರೀತಿಯಿಂದ ವರ್ತಿಸಿ ತನ್ನ ಮೂರು ಮಕ್ಕಳನ್ನು ಶ್ರೀರಂಗದಲ್ಲಿ ಕಾವೇರಿ ನದಿಗೆ ಎಸೆದ ಪ್ರಸಂಗ ವರದಿಯಾಗಿದೆ.

ಈ ಸಂಬಂಧದಲ್ಲಿ ಆತನು ಪೋಲೀಸರಿಗೆ ಈ ರೀತಿ ತಿಳಿಸಿದ್ದಾನೆ. :—

ನಾನು ಒಂದು ದಿನ ತೆಂಗಿನಕಾಯನ್ನು ಒಡೆದು ಬೆಂಕಿಗೆ ಹಾಕಿದೆನು, ಕೂಡಲೇ ಬೆಂಕಿಯಲ್ಲಿ ಒಂದು ಮೂರ್ತಿಯು ಕಾಣಿಸಿಕೊಂಡು ನನ್ನನ್ನು ಮಕ್ಕಳೊಡನೆ ಹಿಂಬಾಲಿಸುವಂತೆ ತಿಳಿಸಿತು. ಅದರ ಪ್ರಕಾರ ನನ್ನ ನಾಲ್ಕು ಮಕ್ಕಳೊಡನೆ ಶ್ರೀರಂಗಕ್ಕೆ ಹೋದೆ. ಆಗ ರಾತ್ರಿ ೧೦ ಗಂಟೆ ಆಗಿತ್ತು. ಮೂರ್ತಿಯ ಆಜ್ಞೆ ಪ್ರಕಾರ, ಅಲ್ಲಿನ ಕಾವೇರಿ ನದಿಯ ಸೇತುವೆಯ ಮಧ್ಯಪ್ರದೇಶಕ್ಕೆ ಹೋಗಿ ನನ್ನ ಹಿರಿಯ ಮಗಳನ್ನು ಹಿಂದೆ ನಿಲ್ಲುವಂತೆ ಹೇಳಿದೆ. ನಂತರ ನನ್ನ ಮೂರು ಮಕ್ಕಳೊಡನೆ ಮುಂದೆ ಹೋಗಿ ಅವುಗಳನ್ನು ನೀರಿನಲ್ಲಿ ಎಸೆದೆ. ಕೂಡಲೇ ಮೂರ್ತಿಯು ತಾನು ಹೇಳಿದ ಕೆಲಸವನ್ನು ಮಾಡಿಯವುದಾಗಿ ತಿಳಿಸಿ ಮಾಯವಾಯಿತು. ನಂತರ ನಾನು ಹಿರಿಯ ಮಗಳೊಡನೆ ವಾಪಸು ಬಂದೆನು.

ಈಗ ಪೋಲೀಸರು ಆತನನ್ನು ದಸ್ತಗಿರಿ ಮಾಡಿ, ಮಕ್ಕಳ ಪತ್ತೆ ಹಚ್ಚಲು ಹುಡುಕುತ್ತಿದ್ದಾರೆ.

ಸಮಾಜ ಮತ್ತು ರಾಜ್ಯಾಂಗ ರಕ್ಷಣೆ ಮಾಡಬೇಕು

ರಾಜಪ್ರಮುಖರಿಗೆ ತಗಡೂರರ ಮನವಿ

ಮೈಸೂರು ೧೩

ಅರಮನೆ ಮುಂದೆ ಹರಿಜನರು ಕುಸ್ತಿಯಲ್ಲಿ ಭಾಗವಹಿಸುವ ವಿಚಾರದಲ್ಲಿ ಶ್ರೀ ತಗಡೂರು ರಾಮಚಂದ್ರರಾಯರು ರಾಜಪ್ರಮುಖರಿಗೆ ಈ ಕೆಳಕಂಡ ಪತ್ರವನ್ನು ಬರೆದಿದ್ದಾರೆ:—

ರಾಜ್ಯಾಂಗದ ೧೭ನೇ ವಿಧಿಯ ಮೇರೆ ಅಸ್ಪೃಶ್ಯತೆಯನ್ನು ತೆಗೆದುಹಾಕಿರುವುದರಿಂದ ಮತ್ತು ಅದರ ಆಚರಣೆಯನ್ನು ಯಾವ ರೂಪದಲ್ಲೂ ನಿಷಿದ್ಧಗೊಳಿಸಿರುವುದರಿಂದಲೂ ಮತ್ತು ಈ ರೀತಿ ರಾಜ್ಯಾಂಗದ ಮೂರನೇಭಾಗದಲ್ಲಿ ಕೊಡಲ್ಪಟ್ಟ ಹಕ್ಕನ್ನು ೩೫೨ನೇ ವಿಧಿ ಮೇರೆ ಇಡೀ ಹಿಂದೂಸ್ಥಾನಕ್ಕೇ ವಿಪತ್ತು ಒದಗಿದ ಕಾಲದಲ್ಲಿ ಮಾತ್ರ ರಾಷ್ಟ್ರಾಧ್ಯಕ್ಷರು ತಮಗಿರುವ ವಿಶೇಷ ಅಧಿಕಾರ ಚಲಾಯಿಸಿ ಅಮಾನತ್ತು ಮಾಡಲು ಅಧಿಕಾರ ಇರುವುದರಿಂದಲೂ ಮತ್ತು ಸಾಮಾನ್ಯ ಕಾಲದಲ್ಲಿ ರಾಜ್ಯಾಂಗಕ್ಕೆ ಬರುವ ಧಕ್ಕೆಗಳನ್ನು ಸಾಮರ್ಥ್ಯದಿಂದ ೧೫೯ನೇ ವಿಧಿ ಪ್ರಕಾರ ಎದುರಿಸುವ ಜವಾಬ್ದಾರಿಯು ಪ್ರಾಂತ್ಯಕ್ಕೆ ಸೇರಿದ್ದಾದ್ದರಿಂದಲೂ ಈ ವಿಚಾರದಲ್ಲಿ ರಾಜ್ಯ ಪಾಲಕರೂ ಮತ್ತು ಅವರ ಅಧಿಕಾರ ತಂಡದವರೂ ರಾಜ್ಯಾಂಗಕ್ಕೆ ಬದ್ಧವಾದ ದೃಢನೀತಿಯನ್ನು ಅನುಸರಿಸುವುದು ಅತ್ಯಂತ ಅವಶ್ಯಕ. ಸಮಾಜ ಮತ್ತು ರಾಜ್ಯಾಂಗದ ರಕ್ಷಣೆಗೆ ಪೂರ್ಣ ಗಮನ ಕೊಡುತ್ತೀರೆಂದು ನಂಬಿದ್ದೇನೆ.

ಎಗ್. ಜಿ. ಓಗಳ ಸಮ್ಮೇಳನ

ಮೈಸೂರು ೧೩

ಮೈಸೂರು ಸರ್ಕಾರದ ಎಗ್. ಜಿ. ಓಗಳ ಸಮ್ಮೇಳನವು ಶಿವಮೊಗ್ಗದಲ್ಲಿ ಇದೇ ೨೫ ನೇ ತಾರೀಖು ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ವಿಜಯಲಕ್ಷ್ಮೀ ಪಂಡಿತರಿಗೆ ಆಹ್ವಾನ

ವಿಶ್ವಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮೀ ಪಂಡಿತರು ತಮ್ಮ ದೇಶಗಳಿಗೆ ಭೇಟಿ ಕೊಡಬೇಕೆಂದು ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಇಂಡೋನೇಷಿಯಾ, ಸಿಲೋನ್, ಯುಗೋಸ್ಲೇವಿಯಾ, ಬರ್ಮಾ ಮುಂತಾದ ರಾಷ್ಟ್ರಗಳು ಆಹ್ವಾನವಿತ್ತಿವೆ.

ಹರಿಜನರಿಗೆ ಪ್ರತ್ಯೇಕ ಅಖಾಡ ನಿರ್ಮಿಸಲು ಸರ್ಕಾರ ಸಿದ್ಧವಿಲ್ಲ

ಸಚಿವ ಶ್ರೀ ರಾಮಚಂದ್ರರಾಯರ ಸ್ಪಷ್ಟ ಹೇಳಿಕೆ

ಮೈಸೂರು ೧೩

ಅರಮನೆ ಮುಂದೆ ಕುಸ್ತಿ ನಡೆಯುವ ವಿಚಾರದಲ್ಲಿ ಹರಿಜನರಿಗೂ ಮತ್ತು ಸವರ್ಣ ಹಿಂದುಗಳಿಗೂ ಈಗ ಉಂಟಾಗಿರುವ ವಿವಾದವನ್ನು ಬಗೆಹರಿಸಲು ಈ ದಿನ ಬೆಳಗ್ಗೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಮ್ಮ ಜಲದರ್ಶಿನಿ ನಿವಾಸದಲ್ಲಿ ಶಾಸನ ಸಭೆಗಳ ಮೈಸೂರು ಪ್ರತಿನಿಧಿಗಳ ಮತ್ತು ಇತರ ಮುಖಂಡರ ಸಭೆಯೊಂದರಲ್ಲಿ ದೀರ್ಘ ಸಮಾಲೋಚನೆ ನಡೆಸಿದರು. ಶ್ರೀಗಳಾದ ಕೆ. ಟಿ. ಭಾಷ್ಯಂ, ಹೆಚ್. ಸಿದ್ದಯ್ಯ, ಹೆಚ್. ಸಿ. ದಾಸಪ್ಪ, ಬಿ. ನಾರಾಯಣಸ್ವಾಮಿ, ಪಾಲಳ್ಳಿ ಸೀತಾರಾಮಯ್ಯ, ಟಿ. ಎಸ್. ರಾಜಗೋಪಾಲಯ್ಯಂಗಾರ್, ಶ್ರೀಮತಿ ಯಶೋಧರ ದಾಸಪ್ಪ ಮುಂತಾದವರು ಸಭೆಯಲ್ಲಿ ಭಾಗವಹಿಸಿದ್ದರು.

ಪ್ರತ್ಯೇಕ ಅಖಾಡವನ್ನು ಏರ್ಪಡಿಸಿ, ಸವರ್ಣ ಹಿಂದೂಗಳನ್ನು, ಹರಿಜನರನ್ನು ಪ್ರತ್ಯೇಕ ಮಾಡುವುದು ರಾಜ್ಯಾಂಗಕ್ಕೆ ವಿರೋಧವಾದುದು ಆದ್ದರಿಂದ ಹಾಗೆ ಮಾಡಲು ಸಾಧ್ಯವಿಲ್ಲ ಉಭಯಪಕ್ಷದವರೂ ಸೌಹಾರ್ದದಿಂದ ಒಂದು ತೀರ್ಮಾನಕ್ಕೆ ಬರಬೇಕಾಗಿದೆ ಹಾಗೆ ಬಾರದಿದ್ದಲ್ಲಿ ಕುಸ್ತಿಸಂಸ್ಥೆಯನ್ನು ನಿಲ್ಲಿಸುವುದೇ ಉತ್ತಮವೆಂದು ಸಭೆಯಲ್ಲಿ ಅಭಿಪ್ರಾಯ ಪಡಲಾಯಿತೆಂದು ತಿಳಿಯಬರುತ್ತದೆ.

ಸಭೆಯಲ್ಲಿ ಆದ ತೀರ್ಮಾನದ ಬಗ್ಗೆ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರನ್ನು ಪತ್ರಿಕಾ ಪ್ರತಿನಿಧಿಗಳು ಕೇಳಲಾಗಿ, ಅವರು ಏನನ್ನೂ ಹೇಳಲು ನಿರಾಕರಿಸಿದರು.

ವಿದ್ಯಾಸಚಿವರೂ ಮತ್ತು ರಾಜಸಭಾ ಸಮಿತಿಯ ಅಧ್ಯಕ್ಷರೂ ಆದ ಶ್ರೀ ಎ. ಜಿ. ರಾಮಚಂದ್ರರಾಯರನ್ನು ಪತ್ರಿಕಾ ಪ್ರತಿನಿಧಿಗಳು ನೋಡಲಾಗಿ, ಹರಿಜನರಿಗೆ ಪ್ರತ್ಯೇಕ ಅಖಾಡ ನಿರ್ಮಿಸಲು ಸರ್ಕಾರವು ಸಿದ್ಧವಿಲ್ಲವೆಂದು ತಿಳಿಸಿದರು.

ಈಗಿರುವ ಕಹಿ ವಾತಾವರಣದಲ್ಲಿ ಜಂಬೂಸವಾರಿಯನ್ನು ನಡೆಸಕೂಡದೆಂದು ಜನರು ಅಭಿಪ್ರಾಯ ಪಡುತ್ತಿದ್ದಾರಲ್ಲ ಅದರ ಮೇಲೆ ಸರ್ಕಾರದ ಅಭಿಪ್ರಾಯವೇನು ಎಂದು ಕೇಳಲಾಗಿ ಈಗಿನ ವಾತಾವರಣದಲ್ಲಿ ಅಂತಹ ಅಭಿಪ್ರಾಯ ಹುಟ್ಟುವುದು ತಪ್ಪೇನಿಲ್ಲವೆಂದು ತಿಳಿಸಿದರು.

ವಿವಾದಾಸ್ಪದವಾಗಿರುವ ಉಭಯಪಕ್ಷಗಳ ನಾಯಕರನ್ನೂ ಕರೆಸಿಕೊಂಡು ಮುಖ್ಯಮಂತ್ರಿಗಳು ಸಮಾಲೋಚನೆ ಮಾಡುತ್ತಿದ್ದಾರೆ.

ಗೋಲಿಬಾರ್‌ನಲ್ಲಿ ಮಡಿದವರ ಬಗ್ಗೆ ಸಂತಾಪ

ಬೆಂಗಳೂರು ೧೩

ಮೈಸೂರಿನಲ್ಲಿ ಇತ್ತೀಚೆಗೆ ನಡೆದ ಗೋಲಿಬಾರಿನಲ್ಲಿ ಮಡಿದವರಿಗೆ ಸಂತಾಪವನ್ನು ಸೂಚಿಸಿ ಬೆಂಗಳೂರು ಕಾರ್ಪೋರೇಷನ್ ಒಂದು ನಿರ್ಣಯ ಮಾಡಿದೆ.

ಮಕ್ಕಳ ಕ್ಷೇಮಾಭಿವೃದ್ಧಿ ಸಮಿತಿ

ವಿಶ್ವಸಂಸ್ಥೆಯ ಸಾಮಾಜಿಕ ಕ್ಷೇಮಾಭಿವೃದ್ಧಿ ಸಮಿತಿಯಿಂದ ರಚಿಸಲ್ಪಟ್ಟ ಮಕ್ಕಳ ಅಭಿವೃದ್ಧಿ ವಿಚಾರಣಾ ಸಮಿತಿಯವರು ಇದೇ ೨೦ನೇ ತಾರೀಖಿನಿಂದ ಮದ್ರಾಸ್, ಬೆಂಗಳೂರು, ಹೈದ್ರಾಬಾದ್ ಮತ್ತು ತಿರುವಾಂಕೂರು-ಕೊಚ್ಚಿಗಳಿಗೆ ಭೇಟಿ ಕೊಡಲಿರುವರು.

ಕರಾಚಿಯಲ್ಲಿ ರಿಕ್ಷಾಗಳ ರದ್ದು

ಮುಂದಿನ ಸಾಲಿನಿಂದ ಕರಾಚಿಯಲ್ಲಿರುವ ಸುಮಾರು ೩೦೦೦ ರಿಕ್ಷಾಗಳನ್ನು ರದ್ದುಗೊಳಿಸಲಾಗುವುದೆಂದು ಪಾಕೀಸ್ತಾನದ ಗೃಹಸಚಿವರು ಹೇಳಿದ್ದಾರೆ. ಈ ವಿಷಯದಲ್ಲಿ ಅವರು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತ ಮಾನವನನ್ನು ಮಾನವ ಎಳೆಯುವುದು ತೀರಾ ಅನ್ಯಾಯವೆಂದು ತಿಳಿಸಿದ್ದಾರೆ.

ಬೈಸಿಕಲ್ ಮತ್ತು ಸಕ್ಕರೆ ಅಭಿವೃದ್ಧಿ ಸಮಿತಿ

ಬೈಸಿಕಲ್ ಮತ್ತು ಸಕ್ಕರೆ ಕೈಗಾರಿಕಾಭಿವೃದ್ಧಿಯ ವಿಷಯದಲ್ಲಿ ಕೇಂದ್ರ ಸರ್ಕಾರವು ಸದ್ಯದಲ್ಲೇ ಸಮಿತಿಗಳನ್ನು ರಚಿಸಲಿದೆಯೆಂದು ಕೇಂದ್ರ ಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ತಿಳಿಸಿದ್ದಾರೆ.

ಡಾ॥ ಮೊಸಾದಿಕ್ ಮಕ್ಕಳ ದಸ್ತಗಿರಿ

ಪರ್ಷಿಯಾ ಮಾಜಿ ಪ್ರಧಾನಿ ಡಾ॥ ಮುಸಾದಿಕ್‌ರವರ ಇಬ್ಬರು ಮಕ್ಕಳಾದ ಗುಲಾಂ ಹುಸೇನ್ ಮೊಸಾದಿಕ್ ಮತ್ತು ಅಹಮದ್ ಮೊಸಾದಿಕ್‌ರವರನ್ನು ಈಚೆಗೆ ದಸ್ತಗಿರಿ ಮಾಡಲಾಗಿದೆಯೆಂದು ತಿಳಿಯಬರುತ್ತದೆ.

ಕುಸ್ತಿ ನಡೆಯುವ ಸಂಭವವಿಲ್ಲ

ರಾಜಪ್ರಮುಖರೊಡನೆ ಮುಖ್ಯ ಮಂತ್ರಿಗಳ

ದೀರ್ಘ ಸಮಾಲೋಚನೆ

ಮೈಸೂರು ೧೩

ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ತಮ್ಮ ದೆಹಲಿ ಪ್ರವಾಸವನ್ನು ಮುಗಿಸಿಕೊಂಡು ನಿನ್ನೆ ೧೨ ಗಂಟೆಗೆ ರಾಜಧಾನಿಗೆ ಆಗಮಿಸಿದ ಕೂಡಲೆ ನಗರದಲ್ಲಿ ನಡೆದ ವಿಷಾದ ಘಟನೆಗಳ ಬಗ್ಗೆ ತಮ್ಮ ಸಹೋದ್ಯೋಗಿಗಳಿಂದ ವಿವರಗಳನ್ನು ಪಡೆದರು.

ಶ್ರೀ ಎಸ್. ಚೆನ್ನಯ್ಯನವರ ಯೋಗಕ್ಷೇಮವನ್ನು ವಿಚಾರಿಸಿ, ಈಗ ಉಂಟಾಗಿರುವ ಕಹಿ ವಾತಾವರಣವನ್ನು ಹೋಗಲಾಡಿಸಲು ಅವರೊಡನೆ ದೀರ್ಘ ಮಾತುಕತೆ ನಡೆಸಿದರು.

ಸಂಜೆ ೩ಗಂಟೆಕಾಲ ಮತ್ತು ರಾತ್ರಿ ೯ ಗಂಟೆಗೆ ಮಂತ್ರಿಮಂಡಲದ ಸಭೆ ನಡೆದು ಕುಸ್ತಿ ನಡೆಸಬೇಕೇ ಎಂಬ ವಿಚಾರವನ್ನು ಚರ್ಚಿಸಲಾಯಿತು. ನಿನ್ನೆ ರಾತ್ರಿಯವರೆಗೂ ಯಾವ ಅಂತ್ಯತೀರ್ಮಾನಕ್ಕೆ ಬಂದಿರಲಿಲ್ಲ

ಈ ಮಧ್ಯೆ ಮುಖ್ಯಮಂತ್ರಿಗಳು ಎರಡು ಬಾರಿ ರಾಜಪ್ರಮುಖರನ್ನು ನೋಡಿ ಈ ವಿಚಾರದಲ್ಲಿ ಮಾತುಕತೆ ನಡೆಸಿದರೆಂದು ತಿಳಿಯಬರುತ್ತದೆ.

ಇಂತಹ ವಾತಾವರಣದಲ್ಲಿ ಕುಸ್ತಿಯನ್ನು ನಡೆಸುವುದು ಸಾಧ್ಯವಲ್ಲವೆಂದು ಶ್ರೀಮನ್ಮಹಾರಾಜರವರು ಅಭಿಪ್ರಾಯ ಪಟ್ಟಿರುವರೆಂದೂ, ಅದೇ ರೀತಿ ಇನ್ನು ೫ ದಿನಗಳು ಕುಸ್ತಿ ನಡೆಯುವ ಸಂಭವವಿಲ್ಲವೆಂದೂ ಹೇಳಲಾಗಿದೆ.

ನಗರದಲ್ಲಿ ವಿಷಾದಕರವಾದ ಘಟನೆ ನಡೆದು ಜನರಲ್ಲಿ ಒಂದು ತರಹ ಮನೋಭಾವ ಉಂಟಾಗಿರುವಾಗ, ಜಂಬೂಸವಾರಿ ನಡೆಯುವುದು ಸೂಕ್ತವೇ ಎಂದು ಜನರು ಮಾತನಾಡಿಕೊಳ್ಳುತ್ತಿದ್ದಾರೆ.

ಆಂಧ್ರದ ರಾಜಧಾನಿ

ಆಂಧ್ರಪ್ರಾಂತ್ಯದ ರಾಜಧಾನಿಯಾಗಿ ಕರ್ನೂಲ್ ಇರುತ್ತದೆಯೇ ವಿನಹ ಅದರ ಬದಲಾವಣೆ ಪ್ರಶ್ನೆಯೇ ಇಲ್ಲವೆಂದು ಅಲ್ಲಿಯ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ಹೇಳಿದ್ದಾರೆ.

೩೫ ವರ್ಷಗಳಿಂದ ಇದ್ದ ಪ್ರತಿಬಂಧಕಾಜ್ಞೆ ರದ್ದು

ಫ್ರೆಂಚ್ ಭಾರತದಲ್ಲಿ ೧೯೧೮ ರಿಂದ ಉಪ್ಪಿನ ತಯಾರಿಕೆ, ಆಮದು ಮತ್ತು ಮಾರಾಟಗಳ ಮೇಲಿದ್ದ ಪ್ರತಿಬಂಧಕಗಳನ್ನು ಈಗ ತೆಗೆದು ಹಾಕಲಾಗಿದೆ.

ಶಾಸನಸಭಾಧಿವೇಶನ

ಹೊಸದಾಗಿ ಇದೇ ಒಂದನೇ ತಾರೀಖು ಸ್ಥಾಪಿತವಾದ ಆಂಧ್ರಪ್ರಾಂತ್ಯದ ಪ್ರಥಮ ಶಾಸನಸಭಾಧಿವೇಶನವು ಮುಂದಿನ ತಿಂಗಳು ೨೬ ನೇ ತಾರೀಖು ಪ್ರಾರಂಭವಾಗುತ್ತದೆ.

ಹರಿಜನರಿಗೆ ಪ್ರತ್ಯೇಕ ಅಖಾಡಾ ಬೇಡ

ಮೈಸೂರು ೧೩

ದಸರಾ ಮಹೋತ್ಸವ ಕಾಲದಲ್ಲಿ ಅರಮನೆಯ ಮುಂದೆ ಪ್ರತ್ಯೇಕ ಅಖಾಡಾದಲ್ಲಿ ಹರಿಜನರು ಕುಸ್ತಿಯಾಡಲು ಒಪ್ಪಂದ ಆಗಿದೆ ಎಂಬ ಅಭಿಪ್ರಾಯ ಬರುವಂತೆ ಹೇಳಿಕೆಗಳು ಮತ್ತು ಸಮಾಚಾರಗಳು ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಹರಿಜನರು ಹಾಗೆ ಪ್ರತ್ಯೇಕ ಅಖಾಡಾದಲ್ಲಿ ಕುಸ್ತಿ ಮಾಡಲು ಒಪ್ಪಿಲ್ಲವೆಂಬ ಅಂಶವನ್ನು ಸಾರ್ವಜನಿಕರಲ್ಲಿ ಖಚಿತಪಡಿಸಬೇಕಾಗಿದೆ. ಹರಿಜನರಿಗೆ ಪ್ರತ್ಯೇಕ ಅಖಾಡಾವನ್ನು ರಚಿಸುವುದು ರಾಜ್ಯಾಂಗಕ್ಕೆ ವಿರೋಧ ಪ್ರತ್ಯೇಕ ಅಖಾಡಾದಲ್ಲಿ ಕುಸ್ತಿ ಮಾಡಲು ಹರಿಜನರು ಎಂದಿಗೂ ಒಪ್ಪುವುದಿಲ್ಲ-ಎಂದು ಸಂಸ್ಥಾನದ ಆದಿಕರ್ನಾಟಕ ಅಭಿವೃದ್ಧಿ ಸಂಘದ ಕಾರ್ಯದರ್ಶಿ ಶ್ರೀ ಎಸ್. ಎಂ. ಸಿದ್ದಯ್ಯನವರು ತಿಳಿಸಿರುತ್ತಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೩—೧೦—೧೯೫೩

	ರೂ. ಆ	ರೂ. ಆ
ಕಡಲೇಕಾಯಿ	೧೩—	೨೨ ೪
ಎಳ್ಳು	೫೦—	೮೦—೮
ಹರಳು	—	—
ಹುರಳಿ	೩೯—೪	೩೯—೧೨
ಅಲಸಂದೆ	೪೨—	೪೨—
ಮೆಣಸಿನಕಾಯಿ	೩೬—೧೨	೪೧—
ಹುಣಸೇಹಣ್ಣು	೪—೨	—
ಸೀಗೆಕಾಯಿ	೫—೮	—
ಬೆಲ್ಲ	—	—
ತೆಂಗಿನಕಾಯಿ	೧೪೬	೨೭೪

ಶ್ರೀ ರಾಜರಾಜೇಶ್ವರೀ ನಾಟಕ ಮಂಡಲಿ

ವಿಜಯವಾಡ

-- ಮೈಸೂರು ಟೌನ್ ಹಾಲಿನಲ್ಲಿ --

ಈದಿನ ರಾತ್ರಿ ೧೦ ಘಂಟೆಗೆ

ತಾರಾಶಶಾಂಕ

(ತೆಲುಗು)

ಎಂಬ ನಾಟಕವನ್ನು ಅಭಿನಯಿಸುತ್ತಾರೆ.

ಪಾತ್ರ:—ಚಲನಚಿತ್ರದಲ್ಲಿ ಖ್ಯಾತಿಪಡೆದ ಶ್ರೀ ಪಿ. ಸೂರ್ಯಬಾಬು, ರಾಜೇಶ್ವರಿದೇವಿ ಮತ್ತು ಇತರ ಪ್ರಸಿದ್ಧ ನಟ ನಟಿಯರು.

ಪ್ರಕಾಶಕರು ಮತ್ತು ಮುದ್ರಕರು.

ಜಿ. ಎಲ್. ಸ್ವಾಮಿ.

ಸಮಾಚಾರ ಪ್ರೆಸ್, ಮೈಸೂರು.

ಸಿಂಹಳ ಪ್ರಧಾನಿ ಸೇನಾನಾಯಿಕೆ ರಾಜಿನಾಮೆ

ಕೋಟಿವಾಲಾ ನೂತನ ಪ್ರಧಾನಿ

ಸಿಂಹಳ ಪ್ರಧಾನಿ ಡಡ್ಲಿ ಸೇನಾನಾಯಿಕೆಯವರು ನಿನ್ನೆಯದಿನ ತಮ್ಮ ರಾಜೀನಾಮೆಯನ್ನು ಅಲ್ಲಿಯ ಗೌರ್ನರ್ ಜನರಲ್‌ರವರಿಗೆ ಒಪ್ಪಿಸಿದರು ಅದೇ ಮಂತ್ರಿ ಮಂಡಲದಲ್ಲಿ ಸಂಚಾರ ಶಾಖಾ ಸಚಿವರಾಗಿದ್ದ ಶ್ರೀ ಜಾನ್ ಕೋಟಿವಾಲರಿಗೆ ಸರ್ಕಾರ ರಚಿಸಲು ಆಹ್ವಾನವನ್ನು ನೀಡಲಾಯಿತು.

ಶ್ರೀ ಸೇನಾನಾಯಿಕೆಯವರು ಇತ್ತೀಚೆಗೆ ದೇಹಾಲಸ್ಯದಿಂದ ಕೂಡಿ ವಿಶ್ರಾಂತಿ ಪಡೆಯುತ್ತಿದ್ದರು. ಅವರಿಗೆ ದೇಹಸ್ಥಿತಿಯು ಇನ್ನು ಉತ್ತಮಗೊಂಡಿಲ್ಲ ಅವರ ಕೆಲಸದ ಶ್ರಮದ ಪರಿಣಾಮವೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಅವರು ಸದ್ಯದಲ್ಲೇ ವಿದೇಶಿ ಪ್ರವಾಸ ಕೈಗೊಳ್ಳುವರು.

ನೂತನ ಪ್ರಧಾನಿ ಕೋಟಿವಾಲಾರವರು ನಾಳೆಯದಿನ ತಮ್ಮ ನೂತನ ಮಂತ್ರಿಮಂಡಲವನ್ನು ಪ್ರಕಟಿಸಿ ಅಧಿಕಾರ ಸ್ವೀಕರಿಸುವರೆಂದು ತಿಳಿಯಬಂದಿದೆ.

ಕೊಬರಿ ಆಮದು

ಈ ಸಾಲಿನಲ್ಲಿ ಕೊಬರಿಯ ಆಮದನ್ನು ೫೦ ಸಾವಿರ ಟನ್‌ಗಳಿಗೆ ಮಿತಿಗೊಳಿಸಬೇಕೆಂದು ಕೈಗಾರಿಕಾ ಮಂಡಲಿಯು ಭಾರತ ಸರ್ಕಾರಕ್ಕೆ ಸಲಹೆ ನೀಡಿದೆ.

ಇದರ ಪರಿಚಯವಿದೆಯೆ !!

ಒಂಟಿ ಪೆಟ್ಟಿಗೆಗಳಲ್ಲಿರುವ

ಮೈಸೂರು--

--ಸಾಬೂನು

●●●●

ಸಂಪೂರ್ಣವಾಗಿ ಶುದ್ಧವಾದ, ಯಾವ ಬೆರಕೆಯೂ, ಅಪಾಯಕರ ರಸಾಯನಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮವಾದ ಒಗೆಯುವ ಸಾಬೂನು. ಯಾವ ಶ್ರಮವಿಲ್ಲದೆಯೇ ಶುಭ್ರವಾಗಿ ತೊಳೆಯುತ್ತದೆ. ತೊಂದರೆ, ಶ್ರಮ, ಕಾಲ, ಹಣ ಮಿಗಿಸುತ್ತದಲ್ಲದೆ, ಸಂಪೂರ್ಣ ತೃಪ್ತಿಯನ್ನೂ ಕೊಡುತ್ತದೆ.

★ ● ● ★

ಒಂದು ಪೆಟ್ಟಿಯನ್ನು ಬಳಸಿನೋಡಿ.

ಎಲ್ಲ ಕಡೆಯೂ ಸಿಗುತ್ತದೆ.

....

ಗವರ್ನಮೆಂಟ್ ಸೋಪ್--

ಫ್ಯಾಕ್ಟರಿ. ಬೆಂಗಳೂರು.

ಡಿ. ಎಸ್. ಟಿ. ಎಂ. ಎ. ಮುಂಬಯಿ

ಗೋಧಿ ತಿನ್ನುವುದರಿಂದ ಮಿತ ಸಂತಾನವೇ ?

ಅಕ್ಕಿಯನ್ನು ತಿನ್ನುವ ಪ್ರದೇಶಗಳಲ್ಲಿ ಜನ ಸಂಖ್ಯೆ ಹೆಚ್ಚಾಗಿದ್ದು, ಗೋಧಿ ಉಪಯೋಗಿಸುವ ಕಡೆ ಅದು ಕಡಮೆ ಆಗಿರುವುದು, ಗೋಧಿ ತಿನ್ನುವುದರಿಂದ ಮಿತ ಸಂತಾನಕ್ಕೆ ಸಹಾಯವಾಗುವುದೇ ಎಂಬುದನ್ನು ವೈಜ್ಞಾನಿಕ ಸಂಶೋಧನೆಗೆ ಬಿಡಲಾಗುವುದೆಂದು ಕೇಂದ್ರ ಆಹಾರ ಉಪಸಚಿವ ಶ್ರೀ ಕೃಷ್ಣಪ್ಪನವರು ತಿಳಿಸಿದ್ದಾರೆ.

ಈ ವಿಷಯ ದೃಢಪಟ್ಟಲ್ಲಿ, ಗೋಧಿ ಹೆಚ್ಚಿಗೆ ಬೆಳೆಯಿರಿ ಎಂಬ ಪ್ರಚಾರ ಕೈಗೊಳ್ಳಲಾಗುವುದೆಂದು ಅವರು ತಿಳಿಸಿದ್ದಾರೆ.

ಗುಮಾಸ್ತರ ಚೇಷ್ಟೆ

ಪಾಕೀಸ್ತಾನ ವಿದೇಶಾಂಗ ಕಛೇರಿಯ ಮೂವರು ಗುಮಾಸ್ತರು ಸೇರಿ ಲಂಡನ್ನಿನಲ್ಲಿರುವ ಪಾಕೀಸ್ತಾನ ರಾಯಭಾರಿ ಕಛೇರಿಗೆ ಕಾಗದಪತ್ರಗಳನ್ನು ಕಳುಹಿಸುವ ಚೀಲದಲ್ಲಿ ಆ ರಾಯಭಾರಿ ಶ್ರೀ ಎಂ.ಎ.ಎಚ್. ಇಸ್ಪಾನಿಯವರನ್ನು ಕೆಲಸದಿಂದ ವಜಾಮಾಡಿರುವುದಾಗಿ ಒಂದು ಕೃತಕ ಪತ್ರವನ್ನು ಕಳುಹಿಸಿದ್ದುದು ಪತ್ತೆಯಾಗಿ ಅವರನ್ನು ದಸ್ತಗಿರಿ ಮಾಡಲಾಗಿದೆ. ವಿದೇಶಾಂಗ ಕಾರ್ಯದರ್ಶಿ ಮಿ॥ ಜೆ. ಎ. ರಹೀಂರವರ ರುಜುವನ್ನು ಆ ಗುಮಾಸ್ತರುಗಳು ಫೋರ್ಜ್‌ಮಾಡಿ ಆ ಪತ್ರವನ್ನು ಕಳುಹಿಸಿದ್ದರು.

ಟ್ರೀಸ್ಟಿ ಬಗ್ಗೆ ಬಿಕ್ಕಟ್ಟು

ಟ್ರೀಸ್ಟಿಯ ಕ್ಷೇತ್ರವನ್ನು ಇಟಲಿಗೆ ಒಪ್ಪಿಸಿರುವ ಅಮೆರಿಕ ಮತ್ತು ಬ್ರಿಟನ್‌ಗಳ ನಿರ್ಧಾರವನ್ನು ಯುಗೋಸ್ಲೇವಿಯ ಪ್ರತಿಭಟಿಸಿ, ಇಟಲಿ ಸೈನ್ಯಗಳು ಟ್ರೀಸ್ಟಿಗೆ ಕಾಲಿಟ್ಟ ತಕ್ಷಣವೇ ಯುಗೋಸ್ಲೇವಿಯಾ ಸೈನ್ಯ ಪಡೆಯು ಪ್ರವೇಶಿಸುವುದೆಂದು ಅದರ ಅಧ್ಯಕ್ಷರು ಎಚ್ಚರಿಕೆ ಕೊಟ್ಟಿದ್ದಾರೆ.

ನಾಟಕರತ್ನ ಜಿ.ಹೆಚ್. ವೀರಣ್ಣನವರ

ಶ್ರೀ ಚೆನ್ನಬಸವೇಶ್ವರ ಗುಬ್ಬಿ

ಥಿಯೇಟ್ರಿಕಲ್ ಕಂಪನಿ (ರಿ)

.13--10--53 ನೇ ರಾತ್ರಿ 10 ಗಂಟೆಗೆ

ಶಿವರಾಂಪೇಟೆಯ ರತ್ನಾವಳಿ

ಥಿಯೇಟರಿನಲ್ಲಿ

ಚಲನಚಿತ್ರದಲ್ಲಿ ಖ್ಯಾತಿ ಪಡೆದ ನಾಟಕರತ್ನ ಜಿ. ಹೆಚ್. ವೀರಣ್ಣ, ಜಯಮ್ಮ ಮತ್ತು ಲಕ್ಷಮ್ಮ ನಟಿಸಿರುವ

ಹೇಮರೆಡ್ಡಿ--

--ಮಲ್ಲಮ್ಮ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಫೋನ್ ೫೭೪

ರಿಜಿಸ್ಟರ್

ನಂ. ಎಂ. ೫೩೦೮

ಸಮಾಚಾರ

ದಿನಪತ್ರಿಕೆ

ಸಂಪುಟ ೪

ಸಂಚಿಕೆ ೪೭

೧೪-೧೦-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಎ. ಜಿ. ಆರ್. ಮದ್ರಾಸಿಗೆ

ಮೈಸೂರು ೧೩

ಶಿಕ್ಷಣ ಸಚಿವರಾದ ಶ್ರೀ ಎ. ಜಿ. ರಾಮಚಂದ್ರರಾಯರು ಇದೇ ೨೫ನೇ ತಾ॥ ಮದ್ರಾಸಿಗೆ ಪ್ರಯಾಣಮಾಡಿ, ಅಲ್ಲಿ ನಡೆಯಲಿರುವ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಪದವೀದಾನ ಸಮಾರಂಭದಲ್ಲಿ ಭಾಷಣ ಮಾಡುತ್ತಾರೆ.

ಸಂಸ್ಕೃತ ಪಂಡಿತರಿಗೆ ಪ್ರಶಸ್ತಿ

ಈದಿನ ನಡೆಯಲಿರುವ ರಾಜಸಭೆಯಲ್ಲಿ ಸಂಸ್ಕೃತ ವಿದ್ವತ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವವರಿಗೆ ಪ್ರಶಸ್ತಿಗಳನ್ನು ಕೊಡುತ್ತಾರೆ. ಶ್ರೀ ಬಿ. ವೆಂಕಟೇಶಾಚಾರ್ಯರವರು ಉತ್ತೀರ್ಣರಾದ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುತ್ತಾರೆ.

ನೆಹರೂ ಮೇಲೆ ಆಪಾದನೆ

ತಾಟಸ್ಥ್ಯದಿಂದ ದೂರವಿರುವ ರಾಜ್ಯವಾದ ಭಾರತಕ್ಕೆ ನೆಹರೂ ನಾಯಕರಾಗಿದ್ದಾರೆ. ಅವರು ಕಮ್ಯೂನಿಸ್ಟರ ಪಕ್ಷಪಾತಿ ಎಂಬುದು ಅವರ ಈಚಿನ ಬೊಂಬಾಯಿನಲ್ಲಿ ಮಾಡಿದ ಭಾಷಣದಿಂದ ಗೊತ್ತಾಗುತ್ತದೆ ಎಂದು ದಕ್ಷಿಣ ಕೊರಿಯಾ ಆಪಾದಿಸಿದೆ.

ಸಿಂಹಳ ನೂತನ ಸಚಿವರ ಮಂಡಲಿ

ಸಿಂಹಳದಲ್ಲಿ ನೇಮಕವಾಗಿರುವ ನೂತನ ಪ್ರಧಾನಿ ಕೋಟಿಲವಾಲಾರವರು ಅಲ್ಲಿಯ ಗೌರ್ನರ್ ಜನರಲ್‌ರಿಗೆ ತಮ್ಮ ಮಂತ್ರಿಮಂಡಲದ ಹೆಸರನ್ನು ಒಪ್ಪಿಸಿದ್ದಾರೆ. ಅದರಲ್ಲಿ ಹಿಂದಿನ ಮಂತ್ರಿಮಂಡಲದಲ್ಲಿರುವ ಎಲ್ಲಾ ಸಚಿವರೂ,ಹೊಸದಾಗಿ ಶ್ರೀ ಕಾಂತಯ್ಯ ವೈದ್ಯನಾಥ ಎಂಬುವರೂ ಇದ್ದಾರೆ.

ಕೊರಿಯಾ ಐಕ್ಯತೆ ಬಗ್ಗೆ ಸಿಂಗ್‌ಮನ್‌ರೀ

ವಿಶ್ವಸಂಸ್ಥೆಯು ಕೊರಿಯಾ ಐಕ್ಯತೆಯ ಕಾರ್ಯವನ್ನು ಶಾಂತರೀತಿಯಿಂದ ನಡೆಸದಿದ್ದರೆ ಆ ಕಾರ್ಯವನ್ನು ತಾವೇ ಮಾಡುವುದಾಗಿ ದಕ್ಷಿಣ ಕೊರಿಯಾ ಅಧ್ಯಕ್ಷ ಸಿಂಗ್‌ಮನ್‌ರೀಯವರು ತಿಳಿಸಿದ್ದಾರೆ.

ತಿರುವಾಂಕೂರ್-ಕೊಚ್ಚಿನಲ್ಲಿ ಚುನಾವಣೆಗಳು

ತಿರುವಾಂಕೂರ್-ಕೊಚ್ಚಿಯ ಪ್ರಾಂತ್ಯದಲ್ಲಿ ಶಾಸನಸಭೆ ಚುನಾವಣೆಗಳು ಮುಂದಿನವರ್ಷ ಪ್ರಾರಂಭದಲ್ಲಿ ನಡೆಯುವಂತೆ ಕೇಂದ್ರಸರ್ಕಾರವು ವ್ಯವಸ್ಥೆ ಮಾಡುತ್ತಿರುವುದಾಗಿ ಹೇಳಲಾಗಿದೆ.

ಜಂಬೂಸವಾರಿ ಈಸಲ ರದ್ದು

ಈಸಂಜೆ ಅಧಿಕೃತ ಪ್ರಕಟಣೆ ಹೊರಬೀಳಲಿದೆ

ಸಂಯುಕ್ತ ಕರ್ಣಾಟಕಕ್ಕೆ ಮೈಸೂರು ಅಡ್ಡಿ ಬರುವುದಿಲ್ಲ

ಮುಖ್ಯಮಂತ್ರಿ ಹನುಮಂತಯ್ಯನವರ ಹೇಳಿಕೆ

ಸಂಯುಕ್ತ ಕರ್ಣಾಟಕ ಪ್ರಾಂತ್ಯವಾಗಬೇಕೆಂಬುದು ಎಲ್ಲ ಕನ್ನಡಿಗರ ಆಶೆ.ಅದಕ್ಕೆ ಮೈಸೂರು ಸರ್ಕಾರವು ಅಡ್ಡಿ ಬರುವುದಿಲ್ಲ. ಆದರೆ ಏಕೀಕರಣ ಪರವಾಗಿ ಅಥವ ವಿರೋಧವಾಗಿ ಮೈಸೂರು ಚಳುವಳಿ ನಡೆಸುವುದಿಲ್ಲ. ಯಾವುದೇ ಕನ್ನಡ ಪ್ರದೇಶವು ಮೈಸೂರಿಗೆ ಸೇರಲು ಇಚ್ಛಿಸಿದರೆ ಅದಕ್ಕೆ ಮೈಸೂರಿನ ಸ್ವಾಗತ ಇದೆ..ಎಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹೈದರಾಬಾದಿನ ಬದರಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

ಮದ್ರಾಸ್, ಬೊಂಬಾಯಿ, ಹೈದರಾಬಾದ್ ಮತ್ತು ಕೊಡಗು ಶಾಸನ ಸಭೆಗಳ ಕನ್ನಡಿಗ ಸದಸ್ಯರೆಲ್ಲರೂ ಒಟ್ಟಿಗೆ ಸೇರಿ ಈ ಏಕೀಕರಣಕ್ಕೆ ದುಡಿಯಬೇಕೆಂದು ಅವರು ಸಲಹೆ ಮಾಡಿದ್ದಾರೆ.

ಅಂತರ ವಿಶ್ವವಿದ್ಯಾನಿಲಯ ಬೋರ್ಡಿನ ಸಮ್ಮೇಳನ

ಭಾರತ ಅಂತರ ವಿಶ್ವವಿದ್ಯಾನಿಲಯ ಬೋರ್ಡಿನ ೨೯ನೇ ವಾರ್ಷಿಕ ಹಾಗೂ ಎರಡನೇ ಪಂಚವಾರ್ಷಿಕ ಸಮ್ಮೇಳನಗಳು ಡಿಸೆಂಬರ್ ೨೧ರಿಂದ ೨೪ರವರೆಗೆ ಮೈಸೂರಿನಲ್ಲಿ ನಡೆಯುವುದೆಂದು ತಿಳಿಯಬರುತ್ತದೆ. ಇದರಲ್ಲಿ ಭಾರತ, ಬರ್ಮಾ ಮತ್ತು ಸಿಂಹಳ ವಿಶ್ವವಿದ್ಯಾನಿಲಯ ಪ್ರತಿನಿಧಿಗಳು ಭಾಗವಹಿಸುವರು.

ಭೂದಾನ ಯಜ್ಞಕ್ಕೆ ಸಂಗ್ರಹಣೆ

ರಾಜಾಸ್ಥಾನದಲ್ಲಿ ಭೂದಾನ ಯಜ್ಞಕ್ಕಾಗಿ ಈಗಾಗಲೇ ೨೦ ಸಾವಿರ ಎಕರೆ ಜಮೀನನ್ನು ಸಂಗ್ರಹಿಸಿರುವುದಾಗಿ ತಿಳಿಯಬರುತ್ತದೆ.

ಯುದ್ಧ ಬಂದಿಗಳಿಗೆ ವಿವರಣೆ

ಕೊರಿಯಾ ತಟಸ್ಥ ಪ್ರದೇಶದಲ್ಲಿ ಕಮ್ಯೂನಿಸ್ಟರು ಇಂದಿನಿಂದ ಯುದ್ಧಬಂದಿಗಳಿಗೆ ಪೂರ್ಣ ವಿವರಣೆ ಕೊಡುವ ಕಾರ್ಯವನ್ನು ಪ್ರಾರಂಭಿಸಲಿದ್ದಾರೆ.

ಮೈಸೂರು ೧೪

ಅರಮನೆ ಮುಂದೆ ಹರಿಜನರು ಮತ್ತು ಸವರ್ಣ ಹಿಂದೂಗಳು ಕಸ್ತಿಯಲ್ಲಿ ಭಾಗವಹಿಸುವ ಬಗ್ಗೆ ಉಂಟಾಗಿರುವ ಬಿಕ್ಕಟ್ಟನ್ನು ಬಗೆಹರಿಸಲು ನಡೆಸಿದ ಸಮಾಲೋಚನೆಗಳು ಫಲಕಾರಿಯಾಗದಿದ್ದರಿಂದ, ಇಂತಹ ಕಹಿ ವಾತಾವರಣದಲ್ಲಿ ಇದೇ ೧೮ ನೇ ತಾರೀಖು ನಡೆಯಬೇಕಾಗಿದ್ದ ಜಂಬೂಸವಾರಿಯನ್ನು ನಡೆಸುವುದು ಸೂಕ್ತವಲ್ಲವೆಂದು ಮೈಸೂರು ಮಂತ್ರಿಮಂಡಲದವರು ಭಾವಿಸಿ, ಅದನ್ನು ರದ್ದುಮಾಡಿದ್ದಾರೆಂದು ಖಚಿತವಾಗಿ ತಿಳಿದುಬಂದಿದೆ. ಅರಮನೆ ಮುಂದೆ ಕುಸ್ತಿಯನ್ನೂ ಸಹ ರದ್ದು ಮಾಡಲಾಗಿದೆ.

ಈ ವಿಚಾರದಲ್ಲಿ ಸರ್ಕಾರದ ಅಧಿಕೃತ ಪ್ರಕಟಣೆಯು ಈ ಸಂಜೆಯೊಳಗಾಗಿ ಹೊರಬೀಳಲಿದೆ.

ಆಕಾಶವಾಣಿಯಲ್ಲಿ ಕವಿ ಸಮ್ಮೇಳನ

ಮೈಸೂರು ೧೪

ಇದೇ ೧೬ನೇ ತಾರೀಖು ರಾತ್ರಿ ೯-೧೫ ಗಂಟೆಗೆ ಆಕಾಶವಾಣಿಯಲ್ಲಿ ಪ್ರೊಫೆಸರ್ ಕೆ. ವಿ. ಪುಟ್ಟಪ್ಪನವರ ನೇತೃತ್ವದಲ್ಲಿ "ಕವಿ ಸಮ್ಮೇಳನ" ಎಂಬ ವಿಶೇಷ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಶ್ರೀಗಳಾದ ಎಸ್. ವಿ. ಪರಮೇಶ್ವರಭಟ್ಟ, ಕಯ್ಯಾರ್ ಕಿಞ್ಞಣ್ಣರಾಯ್,ಎಸ್.ಅನಂತನಾರಾಯಣ. ರಾಮಚಂದ್ರಶರ್ಮ, ಜಿ ವರದರಾಜರಾವ್ ಮುಂತಾದವರು "ನವರಾತ್ರಿ"ಯ ವಿಷಯದಲ್ಲಿ ರಚಿಸಿರುವ ಕವನವನ್ನು ಓದುತ್ತಾರೆ.

ಮುಖ್ಯಮಂತ್ರಿಯವರು ಬೆಂಗಳೂರಿಗೆ

ಮೈಸೂರು ೧೪

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ಮಧ್ಯಾಹ್ನ ಬೆಂಗಳೂರಿಗೆ ಪ್ರಯಾಣ ಮಾಡಿದರು. ನಾಳೆ ಅಲ್ಲಿ ನಡೆಯಲಿರುವ ಜಿಲ್ಲಾ ಕಾಂಗ್ರೆಸ್ ಚುನಾವಣೆಯಲ್ಲಿ ಭಾಗವಹಿಸಲು ತೆರಳಿದರೆಂದು ತಿಳಿಯಬರುತ್ತದೆ.

ಕೇಂದ್ರ ಸಚಿವರ ಬದಲಾವಣೆಯಿಲ್ಲ

ಕೇಂದ್ರ ಮಂತ್ರಿಮಂಡಲದಲ್ಲಿ ಕೆಲವು ಬದಲಾವಣೆಗಳಾಗುವುವೆಂದು ಇತ್ತೀಚೆಗೆ ಹೊರಟಿದ್ದ ಸುದ್ದಿಯು ನಿರಾಧಾರವಾದುದೆಂದು ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಬೊಂಬಾಯಿನಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಸಭೆಗಳ ಮೇಲೆ ನಿರ್ಬಂಧ

ಕಳೆದವಾರ ಮಧುರೆ ನಗರದಲ್ಲಿ ನಡೆದ ಚೂರಿ ಹೊಡೆದಾಟದ ಪರಿಣಾಮವಾಗಿ ಅಲ್ಲಿ ೧೪೪ನೇ ಸೆಕ್ಷನನ್ನು ಜಾರಿಮಾಡಿ, ಸಭೆ ಮೆರವಣಿಗೆಗಳನ್ನು ನಿಷೇಧಿಸಲಾಗಿದೆ.

ರಾಯಲು ಸೀಮೆಯಲ್ಲಿ ಉತ್ತಮ ಬೆಳೆ

ಕಳೆದ ಹಲವಾರು ತಿಂಗಳುಗಳಿಂದ ಕ್ಷಾಮ ಪೀಡಿತವಾಗಿದ್ದ ರಾಯಲು ಸೀಮೆಯು ಈಗ ಸಮೃದ್ಧಿ ಮಳೆಯನ್ನು ಪಡೆದು ಉತ್ತಮ ಫಸಲನ್ನು ಕಾಣುತ್ತಿರುವುದಾಗಿ ತಿಳಿಯಬರುತ್ತದೆ.

ಒಂದು ಎಕರೆಗೆ ೧೩೩೭೨ ಪೌಂಡು ಭತ್ತ

ಹೈದರಾಬಾದ್ ಪ್ರಾಂತ್ಯದ ಮಹಬೂಬ್ ಜಿಲ್ಲೆಯ ಧರ್ಮಪುರಂ ಹೇಮರೆಡ್ಡಿ ಎಂಬುವವರು ಜಪಾನ್ ಪದ್ಧತಿಯನ್ನು ಅನುಸರಿಸಿ ಎಕರೆಯೊಂದಕ್ಕೆ ೧೦,೩೭೨ ಪೌಂಡುಗಳ ಬತ್ತವನ್ನು ಬೆಳೆದಿದ್ದಾರೆ.

ಹಿರಾಕುಡ್ ಅಣೆಕಟ್ಟು ಪರಿಶೀಲನೆ

ಭಾರತ ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರು ನಿನ್ನೆಯದಿನ ಸಾಂಬಲ್‌ಪುರದಲ್ಲಿ ೧೦೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಲಾಗುತ್ತಿರುವ ಹಿರಾಕುಡ್ ಅಣೆಕಟ್ಟನ್ನು ಪರಿಶೀಲಿಸಿದರು.

ರಷ್ಯಾ-ಜಪಾನ್ ಬಂದಿಗಳ ವಿನಿಮಯ

ರಷ್ಯಾದಲ್ಲಿರುವ ಜಪಾನ್ ಯುದ್ಧ ಬಂದಿಗಳ ವಿನಿಮಯ ವಿಚಾರವನ್ನು ಚರ್ಚಿಸಲು ರಷ್ಯಾವು ಜಪಾನನ್ನು ಆಹ್ವಾನಿಸಿರುವುದಾಗಿ ಗೊತ್ತಾಗಿದೆ.

ವಿದೇಶಾಂಗ ಸಚಿವರ ಸಮ್ಮೇಳನ

ವಿಶ್ವದ ಪ್ರಮುಖ ವಿಷಯಗಳನ್ನು ಚರ್ಚಿಸಲು ಬ್ರಿಟನ್ ವಿದೇಶಾಂಗ ಕಾರ್ಯದರ್ಶಿ ಮಿ॥ ಈಡನ್‌ರವರು ಅಮೆರಿಕಾ ಮತ್ತು ಫ್ರಾನ್ಸಿನ ವಿದೇಶಾಂಗ ಸಚಿವರನ್ನು ಒಂದು ಸಮ್ಮೇಳನಕ್ಕೆ ಆಹ್ವಾನಿಸಿರುವುದಾಗಿ ತಿಳಿಯಬರುತ್ತದೆ. ಈ ಸಮ್ಮೇಳನವು ಲಂಡನ್ನಿನಲ್ಲಿ ಶುಕ್ರವಾರ ಪ್ರಾರಂಭವಾಗಲಿದೆ.

ಷೇಕ್ ಅಬ್ದುಲ್ಲಾ ವಜಾ ಕ್ರಮವಾಗಿದೆ

ಸ್ವತಂತ್ರ ಕಾಶ್ಮೀರ ಚಳುವಳಿಯ ವಾದವನ್ನು ಹೂಡಿದ್ದ ಷೇಕ್ ಅಬ್ದುಲ್ಲಾರವರನ್ನು ಕಾಶ್ಮೀರ ಸದರ್-ಇ-ರಿಯಾಸತ್‌ರವರು ಮುಖ್ಯಮಂತ್ರಿತ್ವದಿಂದ ತೆಗೆದು ಹಾಕಿದುದು ಸಕಾಲಿಕ ಕ್ರಮವೆಂದೂ ಇಲ್ಲದಿದ್ದರೆ ವಿಶೇಷ ದುಷ್ಪರಿಣಾಮ ಉಂಟಾಗುತ್ತಿತ್ತೆಂದೂ ಕಾಶ್ಮೀರದ ಈಗಿನ ಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರು ಹೇಳಿದ್ದಾರೆ.

ದಕ್ಷಿಣ ಕೊರಿಯಾ ನೀತಿಯ ಬಗ್ಗೆ ಅಮೆರಿಕಾ ಕಳವಳ

ಸಿಂಗ್‌ಮನ್ ರೀಯವರಿಗೆ ಐಸೆನ್‌ಹೋವರ್‌ರವರ ಪತ್ರ

ಕೊರಿಯಾದಲ್ಲಿರುವ ತಟಸ್ಥ ರಾಷ್ಟ್ರಗಳ ಸಮಿತಿಯ ಅಧ್ಯಕ್ಷತೆಯಲ್ಲಿ ಮತ್ತು ಸ್ವದೇಶಕ್ಕೆ ಹಿಂತಿರುಗದ ಯುದ್ಧ ಕೈದಿಗಳ ಮೇಲ್ವಿಚಾರಣೆ ಕಾರ್ಯದಲ್ಲಿ ತೊಡಗಿರುವ ಭಾರತ ಸೈನ್ಯದ ಮೇಲೆ ದಕ್ಷಿಣ ಕೊರಿಯಾ ಸರ್ಕಾರವು ಅನುಸರಿಸುತ್ತಲಿರುವ ನೀತಿಯ ಬಗ್ಗೆ ಅಮೆರಿಕಾಧ್ಯಕ್ಷ ಐಸೆನ್‌ಹೋವರ್‌ರವರು ದಕ್ಷಿಣ ಕೊರಿಯಾ ಅಧ್ಯಕ್ಷ ಸಿಂಗ್‌ಮನ್ ರೀಯವರಿಗೆ ಒಂದು ಪತ್ರವನ್ನು ಬರೆದು ತಮ್ಮ ಕಳವಳವನ್ನು ವ್ಯಕ್ತಪಡಿಸಿದ್ದಾರೆ.

ಶಾಂತಿ ಸಂಧಾನದಲ್ಲಿ ತೊಡಗಿರುವ ಈಗಿನ ಕಾರ್ಯದಲ್ಲಿ ಕೊರಿಯಾದಲ್ಲಿ ತಾಟಸ್ಥ್ಯ ರಾಷ್ಟ್ರಗಳ ಮೇಲ್ವಿಚಾರಕ ಮಂಡಲಿಯು ತನ್ನ ಕೆಲಸಕಾರ್ಯಗಳನ್ನು ಸುಗಮವಾಗಿ ನಡೆಸುವಂತಹ ವಾತಾವರಣ ಕಲ್ಪಿಸಬೇಕೆಂದು ಐಸೆನ್‌ಹೋವರ್‌ರವರು ಸಿಂಗ್‌ಮನ್ ರೀಯವರನ್ನು ಕೋರಿದ್ದಾರೆಂದು ತಿಳಿಯಬರುತ್ತದೆ.

ಪ್ರವಾಹ ಪ್ರದೇಶಗಳಿಗೆ ಭೇಟಿ

ಭಾರತದ ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ಪ್ರವಾಹಕ್ಕೆ ಒಳಗಾದ ಗೋದಾವರಿ ಜಿಲ್ಲಾ ಪ್ರದೇಶಗಳಿಗೆ ಭೇಟಿ ಕೊಡಲಿರುವರು.

ಹೊಸ ತಂತಿ ಕಛೇರಿಗಳು

ಭಾರತದಲ್ಲಿ ಈ ಸಾಲಿನಲ್ಲಿ ಇನ್ನು ೩,೦೦೦ ಅಂಚೆ ಕಛೇರಿಗಳನ್ನು ಹೊಸದಾಗಿ ತೆರೆಯಲಾಗುವುದೆಂದು ಅಂಚೆ ಮತ್ತು ತಂತಿ ಇಲಾಖೆ ಡೈರೆಕ್ಟರ್ ಜನರಲ್‌ರವರು ತಿಳಿಸಿದ್ದಾರೆ.

೧೦ ಲಕ್ಷ ರೂ ಸಾಲ

ಬೆಂಗಳೂರು ೧೪

ಬೆಂಗಳೂರು ನಗರದಲ್ಲಿ ಒಳಚರಂಡಿ ವ್ಯವಸ್ಥೆ ಮತ್ತು ನೀರಿನ ಮೀಟರುಗಳನ್ನು ಕೊಳ್ಳಲು ಮೈಸೂರು ಬ್ಯಾಂಕಿನಲ್ಲಿ ೧೦ ಲಕ್ಷ ರೂಪಾಯಿಗಳ ಓವರ್ ಡ್ರಾಫ್ಟ್ ತೆಗೆಯಲು ಅಲ್ಲಿಯ ಕಾರ್ಪೊರೇಷನ್ ನಿರ್ಧರಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೩—೧೦—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—೪	೨೪—
ಎಳ್ಳು	೭೪—೧೩	೭೯—೧೪
ಹುರಳಿ	—	—
ಹುರಳಿ	೩೯—೧೪	೪೦—೨
ಹೆಸರು	೪೩—	—
ಉದ್ದು	೬೦—	—
ಹುಣಸೇಹಣ್ಣು	೫—೧೧	೮—೬
ಸೀಗೆಕಾಯಿ	೫—೮	—
ತೆಂಗಿನಕಾಯಿ	೧೪೬	೨೬೫
ಬೆಲ್ಲ	—	—

ರಣಜಿತ್

16-10-53 ರಿಂದ ಅಮೋಘ ಪ್ರಾರಂಭ

ದಿನವಹಿ 3 ಪ್ರದರ್ಶನಗಳು

ಕಾರ್ದಾರ್‌ರವರ ಹಿಂದಿ ಚಿತ್ರ.

★ ದಿಲೇ ನಾದಾನ್ ★

ಪಾತ್ರ:-ಪೀಸ್ ಕನ್ವಾರ್, ಶ್ಯಾಮ್, ಹಿನ್ನಲೆ ಸಂಗೀತಗಾರರಾದ ತಲತ್‌ಮಹಮುದ್

ಬೆಳಗಿನ ಪ್ರದರ್ಶನ:--17, 18 ನೇ ತಾರೀಖು ೧೦--೩೦ ಗಂಟೆಗೆ

ಹೈದರಾಬಾದ್ ಆಡಳಿತದಲ್ಲಿ ಬಿಕ್ಕಟ್ಟು

ಕಾಂಗ್ರೆಸ್ಸಿಗರ ಒಳಜಗಳವೇ ಕಾರಣ

ಭಾರತ-ಸಿಂಹಳ ಬಿಕ್ಕಟ್ಟು

ಭಾರತ ಮತ್ತು ಸಿಂಹಳಗಳ ನಡುವೆ ಇರುವ ಬಿಕ್ಕಟ್ಟು ನೂತನ ಪ್ರಧಾನಿ ಕೋಟೆಲವಾಲಾರವರಿಂದ ಪರಿಹಾರವಾಗುವುದೆಂದು ಈಗ ಆಶಿಸಲಾಗಿದೆ.

ನಾಟಕರತ್ನ ಜಿ.ಹೆಚ್. ವೀರಣ್ಣನವರ ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)

14--10--53 ನೇ ರಾತ್ರಿ 10 ಗಂಟೆಗೆ ಶಿವರಾಂಪೇಟೆಯ ರತ್ನಾವಳಿ ಥಿಯೇಟರಿನಲ್ಲಿ

ಚಲನಚಿತ್ರದಲ್ಲಿ ಖ್ಯಾತಿ ಪಡೆದ ನಾಟಕರತ್ನ ಜಿ. ಹೆಚ್. ವೀರಣ್ಣ, ಜಯಮ್ಮ ಮತ್ತು ಲಕ್ಷಮ್ಮ ನಟಿಸಿರುವ

ಹೇಮರೆಡ್ಡಿ--

--ಮಲ್ಲಮ್ಮ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಶ್ರೀ ರಾಜರಾಜೇಶ್ವರೀ ನಾಟಕ ಮಂಡಲಿ ವಿಜಯವಾಡ

-- ಮೈಸೂರು ಟೌನ್‌ಹಾಲಿನಲ್ಲಿ --

ಈದಿನ ರಾತ್ರಿ ೧೦ ಘಂಟೆಗೆ

ತಾರಾಶಶಾಂಕ

(ತೆಲುಗು)

ಎಂಬ ನಾಟಕವನ್ನು ಅಭಿನಯಿಸುತ್ತಾರೆ. ಪಾತ್ರ:—ಚಲನಚಿತ್ರದಲ್ಲಿ ಖ್ಯಾತಿಪಡೆದ ಶ್ರೀ ಪಿ. ಸೂರ್ಯಬಾಬು, ರಾಜೇಶ್ವರಿದೇವಿ ಮತ್ತು ಇತರ ಪ್ರಸಿದ್ಧ ನಟ ನಟಿಯರು.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಹೈದರಾಬಾದಿನಲ್ಲಿ ಇತ್ತೀಚೆಗೆ ಕಾಂಗ್ರೆಸ್ಸಿಗರಲ್ಲಿ ಒಳಜಗಳಗಳು ಉಗ್ರ ಸ್ವರೂಪವನ್ನು ತಾಳುತ್ತಿರುವುದಾಗಿ ಹೇಳಲಾಗಿದೆ. ಹಿಂದೆ ಮಂತ್ರಿಮಂಡಲದಲ್ಲಿದ್ದ ಮೂವರು ಸಚಿವರು ತಮ್ಮ ಬೆಂಬಲಿಗರೊಡನೆ ಸೇರಿ ಈಗಿನ ಕಾಂಗ್ರೆಸ್ ಮಂತ್ರಿಮಂಡಲದ ಮೇಲೆ ಅವಿಶ್ವಾಸವನ್ನು ಪರೋಕ್ಷವಾಗಿ ವ್ಯಕ್ತಪಡಿಸಿದ್ದಾರೆ. ಈ ವಿಷಯವನ್ನು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರಿಗೂ ತಿಳಿಸಲಾಗಿದೆ. ಪರಿಸ್ಥಿತಿಯು ಹೇಗಾದರೂ ಸುಧಾರಿಸಿ ಮಧುರ ವಾತಾವರಣವುಂಟಾಗಲೆಂದು ಹಿರಿಯ ಕಾಂಗ್ರೆಸ್ಸಿಗರು ಅನೇಕ ಪ್ರಯತ್ನಗಳನ್ನು ನಡೆಸಿದರು. ಇವೆಲ್ಲವೂ ವಿಫಲವಾದಂತೆ ಕಾಣುತ್ತದೆ. ಗೇಣೀದಾರರ ಮಸೂದೆಯನ್ನು ಸರ್ಕಾರವು ಶಾಸನಸಭೆಯಮುಂದೆ ಇಡಲು ಯತ್ನಿಸಿದಾಗ ಆ ಪಕ್ಷಕ್ಕೆ ಸೇರಿದವರೇ ಅದಕ್ಕೆ ವಿರೋಧವನ್ನು ವ್ಯಕ್ತಪಡಿಸಿದರು. ಓಟಿನ ಹಕ್ಕಿನ ಸ್ವಾತಂತ್ರ ಬೇಕೆಂದು ಕೇಳಿದರು. ಆದರೆ ಕಾಂಗ್ರೆಸ್ ಅಧ್ಯಕ್ಷರ ಸಮ್ಮತ ದೊರೆಯಲಿಲ್ಲ.

ಈ ನಡುವೆ ಮಂತ್ರಿಮಂಡಲದಲ್ಲಿ ಹೊರಬಿದ್ದವರ ವಿಚಾರಣೆಯು ನಡೆಯಬೇಕೆಂದು ಮತ್ತೊಂದು ಸಲಹೆ ಬೇರೆ ಹೊರಬಿದ್ದಿದೆ. ಅಂತೂ ಒಟ್ಟಿನಲ್ಲಿ ಅಲ್ಲಿಯ ಪರಿಸ್ಥಿತಿಯು ತೀರಾ ಹದಗೆಟ್ಟಿರುವಂತೆ ಭಾಸವಾಗುತ್ತದೆ. ಈ ಕಾಂಗ್ರೆಸ್ಸಿಗರ ಒಳಜಗಳದಲ್ಲಿ ಅಲ್ಲಿಯ ಕಾಂಗ್ರೆಸ್ ಸರ್ಕಾರಕ್ಕೆ ಧಕ್ಕೆ ಬಂದು ಕೊನೆಗೆ ರಾಜಪ್ರಮುಖರ ಆಡಳಿತ ಪ್ರಾರಂಭವಾಗಬೇಕಾಗಬಹುದೆಂದು ಕೆಲವು ರಾಜಕಾರಣಿಗಳು ಅಭಿಪ್ರಾಯ ಪಡುತ್ತಿದ್ದಾರೆ.

ಅಶೋಕ ಚಕ್ರ ಪ್ರಶಸ್ತಿ

ಕಳೆದ ಮಾಹೆ ೨೫ನೇ ತಾ|| ಕೊರಿಯಾದ ಹಿಂದ್ ನಗರದಲ್ಲಿ, ಚೀನೀ ಸೈನಿಕರು ಭಾರತದವರ ಮೇಲೆ ಬಿದ್ದು ಧಾಳಿ ನಡೆಸಲೆತ್ನಿಸಿದಾಗ ಲ್ಯಾನ್ಸ್ ನಾಯಕ್ ಥಾಕೂರ್‌ಸಿಂಗ್‌ರವರು ಅತ್ಯಂತ ಧೈರ್ಯದಿಂದ ಮೇಜರ್ ಗ್ರವಾಲ್‌ರನ್ನು ರಕ್ಷಿಸಲು ತೋರಿಸಿದ ಅದ್ಭುತ ಕಾರ್ಯಕ್ಕಾಗಿ ರಾಷ್ಟ್ರಾಧ್ಯಕ್ಷರು ಶ್ರೀ ಥಾಕೂರ್‌ಸಿಂಗ್‌ರವರಿಗೆ ತೃತೀಯವರ್ಗದ ಅಶೋಕ ಚಕ್ರವನ್ನು ದಯಪಾಲಿಸಿದ್ದಾರೆ.

ಮೈಸೂರು ಸರ್ಕಾರ

ಸಂಕ್ಷಿಪ್ತ ಪ್ರಕಟಣೆ

1953–54 ನೇ ಸಾಲಿನಲ್ಲಿ ಕೆಳಗೆ ಕಂಡ ಕೂಪುಗಳಲ್ಲಿ ಗಂಧದ ಮರಗಳನ್ನು ಕಡಿಯುವುದು, ಅವುಗಳನ್ನು ಸಂಗ್ರಹಿಸುವುದು ಮತ್ತು ಮೈಸೂರುಸೌತಿನ ರೈಲ್ವೆ ಸೈಡಿಂಗಿನಲ್ಲಿರುವ ಗಂಧದ ಎಣ್ಣೆ ಕಾರ್ಖಾನೆಗೆ ಸಾಗಿಸುವಬಗ್ಗೆ ಮೊಹರಾದ ಟೆಂಡರುಗಳನ್ನು 1953 ನೇ ಅಕ್ಟೋಬರ್ 23 ನೇ ತಾರೀಖು ಶುಕ್ರವಾರದವರೆಗೆ ಆಹ್ವಾನಿಸಲಾಗಿದೆ.

ರೇಂಜು	ಕೂಪಿನ ಹೆಸರು	ಮರಗಳು ದೊರೆಯುವ ಪ್ರಮಾಣದ ಅಂದಾಜು
ಚಾಮರಾಜನಗರ	1) ಗುಡಿ ಸರ್ಕಲ್, ಕೊಮಾರಮತ್ತಿ ಪ್ರದೇಶ	500 ಟನ್ನು
	2) ಬೇಡಗುಳಿ (ಮರಮುಟ್ಟುಗಳ ಕೂಪ್) 1952--53	500 ,,
	3) ಮರಪಲ ಕೂಪ್	500 ,,
	ಒಟ್ಟು	1,500 ,,

ಪ್ರತಿ ಟೆಂಡರಿನೊಂದಿಗೆ 200 ರೂ. ಅನ್ನು ನಗದು ಠೇವಣಿಯಾಗಿ ಕಳುಹಿಸಬೇಕು.

ಹೆಚ್ಚಿನ ವಿವರಗಳನ್ನು 1953 ನೇ ಅಕ್ಟೋಬರ್ 15 ಮತ್ತು 22ನೇ ತಾರೀಖುಗಳ ಗೆಜೆಟ್ಟಿನಲ್ಲಿ ನೋಡಬಹುದು ಅಥವಾ ಕೆಲಸದ ದಿನ ಮತ್ತು ವೇಳೆಗಳಲ್ಲಿ ಮೈಸೂರು ಗಂಧದ ಎಣ್ಣೆ ಕಾರ್ಖಾನೆಯ ಜನರಲ್ ಮ್ಯಾನೇಜರ ಕಛೇರಿಯಲ್ಲಿ ಪಡೆಯಬಹುದು.

ಜಿ. ತಿಪ್ಪೇಸ್ವಾಮಿ, ಜನರಲ್ ಮ್ಯಾನೇಜರ್,
ಸರ್ಕಾರಿ ಗಂಧದೆಣ್ಣೆ ಕಾರ್ಖಾನೆ, ಮೈಸೂರು.

ದಸರಾದಲ್ಲಿ ವಿಮಾನ ವಿಹಾರ

★ ಮೈಸೂರು ಏರೋಡ್ರೋಂನಲ್ಲಿ ★

8—10—53 ರಿಂದ ★ **26—10—53** ರ ವರೆಗೆ

ನಮ್ಮ ಹೊಸ ೪ ಸೀಟರ್ ವಿಮಾನದಲ್ಲಿ ಹಾರಾಡಿ ಸಂತೋಷಪಡಿರಿ

ದರ:—ಕೇವಲ ೫ ರೂಪಾಯಿ

ಗೌರ್ನಮೆಂಟ್ ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲ್, ಬೆಂಗಳೂರು.

ಪೋ೯ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೪೭

೧೫-೧೦-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಹೈದರಾಬಾದು ಕೇಂದ್ರದ ಎರಡನೇ ರಾಜಧಾನಿಯೆ ?

ಹೈದರಾಬಾದನ್ನು ಕೇಂದ್ರ ಸರ್ಕಾರದ ಎರಡನೇ ರಾಜಧಾನಿಯನ್ನಾಗಿ ಮಾಡಲು ಯೋಚಿಸಲಾಗುತ್ತಿದೆಯೆಂದೂ, ಅದು ಕಾರ್ಯಗತವಾದರೆ ಸುಪ್ರೀಂ ಕೋರ್ಟು ಮತ್ತು ಇತರ ಕೆಲವು ಕಛೇರಿಗಳನ್ನು ಅಲ್ಲಿಗೆ ವರ್ಗಾಯಿಸಲಾಗುವುದೆಂದೂ ಹೇಳಲಾಗಿದೆ.

(ಹಿಂದಿನ ಪುಟದಿಂದ)

ಸರ್ಕಾರದವರು ಮುಂದಕ್ಕೆ ಹಾಕಲು ಅವಕಾಶವಿಲ್ಲ. ಆದ್ದರಿಂದ ಈ ವರ್ಷ ರಾಜಸಭಾ ಸಮಿತಿಯವರು ಹರಿಜನರು ಕುಸ್ತಿಯಲ್ಲಿ ಭಾಗವಹಿಸಬೇಕೆಂದು ನಿರ್ಧರಿಸಿದರು.

ಆದರೆ ಕೆಲವರು ಅದು ತಮ್ಮ ಹಕ್ಕೆಂದು ವಾದಿಸಿ ಗಲಭೆ ನಡೆಸಿದರ ಪರಿಣಾಮವಾಗಿ ಅಕ್ಟೋಬರ್ ೮ನೇ ತಾ|| ಗೋಲಿಬಾರು ಪ್ರಕರಣ ನಡೆಯಿತು. ಅದರ ಮೇಲೆ ಆದಿನ ಕುಸ್ತಿ ನಡೆಯಲಿಲ್ಲ.

ಎರಡು ಪಕ್ಷದವರಿಗೂ ಸೌಹಾರ್ದ ಉಂಟುಮಾಡಲು ಎಷ್ಟು ಪ್ರಯತ್ನಗಳನ್ನು ಮಾಡಿದರೂ ಅದು ಸಫಲವಾಗದೆ ಒಂದೇ ಅಖಾಡ ಇರಬೇಕೆಂಬ ಪ್ರಶ್ನೆ ಇತ್ಯರ್ಥವಾಗಲಿಲ್ಲ.

ಇಂತಹ ಸನ್ನಿವೇಶದಲ್ಲಿ ಕುಸ್ತಿಗಳನ್ನು ಮತ್ತು ಜಂಬೂಸವಾರಿಯನ್ನು ಈವರ್ಷ ರದ್ದು ಮಾಡುವುದೇ ಸಾಧುವೆಂದು ರಾಜಪ್ರಮುಖರು ಅಭಿಪ್ರಾಯಪಟ್ಟರು. ಮುಖ್ಯಮಂತ್ರಿಗಳು ದೆಹಲಿಯ ಪ್ರವಾಸದಿಂದ ಹಿಂತಿರುಗಿದ ಮೇಲೆ ಈ ವಿಚಾರದಲ್ಲಿ ರಾಜಪ್ರಮುಖರೊಡನೆ ಮತ್ತು ಇತರ ನಾಯಕರೊಡನೆ ಸಮಾಲೋಚನೆ ನಡೆಸಿದರು. ಸರ್ಕಾರದವರು ಈ ವಿಚಾರವನ್ನು ಕೂಲಂಕುಶವಾಗಿ ಪರಿಶೀಲಿಸಿ, ಶ್ರೀಮನ್ಮಹಾರಾಜರವರ ಅಭಿಲಾಷೆಯನ್ನು ಮನ್ನಿಸಿ, ಜಂಬೂಸವಾರಿ ಮತ್ತು ಕುಸ್ತಿಗಳನ್ನು ಈ ವರ್ಷ ರದ್ದುಮಾಡಲು ಒಪ್ಪಿದರು.

ಎರಡು ಪಕ್ಷದವರಿಗೂ ಸೌಹಾರ್ದ ಉಂಟಾಗಲು ಸರ್ವ ಪ್ರಯತ್ನ ನಡೆಸಲಾಗುವುದೆಂದು ಸರ್ಕಾರ ಆಶಿಸಿದ್ದಾರೆ ಮತ್ತು ಕುಸ್ತಿಗಳಲ್ಲಿ ಭಾಗವಹಿಸುವವರು ತಮ್ಮದೇ ಹಕ್ಕು ಎಂಬುದನ್ನು ಬಿಟ್ಟು ಎಲ್ಲರಿಗೂ ಸರ್ವ ಸಮನಾದ ಹಕ್ಕು ಇದೆ ಎಂಬುದನ್ನು ಅರಿಯಬೇಕೆಂದು ಮನವಿ ಮಾಡಿದ್ದಾರೆ.

ಏಲಕ್ಕಿ ಮಾರ್ಕೆಟ್

ಹಾಸನ ಜಿಲ್ಲೆ ಸಕಲೇಶಪುರದಲ್ಲಿ ಮುಂದಿನ ತಿಂಗಳಿನಿಂದ ಏಲಕ್ಕಿ ಮಾರ್ಕೆಟ್ಟನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆ.

ಕೇಂದ್ರ ವ್ಯವಸಾಯ ಮತ್ತು ವಿದ್ಯುಚ್ಛಕ್ತಿ ಮಂಡಲಿ ಸಭೆ

ಕೇಂದ್ರ ವ್ಯವಸಾಯ ಮತ್ತು ವಿದ್ಯುಚ್ಛಕ್ತಿ ಮಂಡಲಿಯ ಸಭೆಯು ದೆಹಲಿಯಲ್ಲಿ ಇದೇ ೨೬ ನೇ ತಾರೀಖು ಪ್ರಾರಂಭವಾಗಲಿದೆ. ಪ್ರಧಾನಿ ನೆಹರೂರವರು ಇದನ್ನು ಉದ್ಘಾಟಿಸುತ್ತಾರೆ.

ಈ ಸಂಬಂಧದಲ್ಲಿ ನದೀ ಕಣಿವೆ ಮತ್ತು ಇತರ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಇಂಜನಿಯರುಗಳ ಸಮ್ಮೇಳನ ಮತ್ತು ವಿಚಾರಗೋಷ್ಠಿ ನಡೆಯುತ್ತದೆ.

ಐ. ಪಿ. ಎಸ್. ಅಧಿಕಾರಿಗಳ ಖಾಯಂ

ಮೈಸೂರಿನ ಪೋಲೀಸ್ ಅಧಿಕಾರಿಗಳಾದ ಶ್ರೀಗಳು ಎಸ್. ಎ. ಮಾಚಯ್ಯ, ಎನ್. ವಿ. ಬಾಬುರೆಡ್ಡಿ, ಸಿ. ಚಾಂಡಿ, ಕೆ. ಎಸ್. ಕೃಷ್ಣಮೂರ್ತಿ, ಎ. ಖಾದರ್ ಅಲಿ, ಎ. ಪಿ. ರತ್ನರಾಜಯ್ಯ, ವಿ. ಎಸ್. ನರಸಿಂಹಾಚಾರ್, ಎಂ. ಮಹದೇವಪ್ಪ ಮತ್ತು ಬಿ. ಪಿ. ರೇವಣ್ಣನವರನ್ನು ೧೯೫೧ರ ಜನವರಿ ೨೬ ರಿಂದ ಐ. ಪಿ. ಎಸ್. ಸರ್ವೀಸಿನಲ್ಲಿ ಖಾಯಂ ಮಾಡಲಾಗಿದೆ.

ಕರ್ನಾಟಕ ಏಕೀಕರಣ ಸ್ಥಾನಬದ್ಧರ ಬಿಡುಗಡೆ

ಅಖಂಡ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಶ್ರೀಗಳಾದ ಚನ್ನಪ್ಪ, ಓಂಕಾರಮಟ, ಆರ್. ಎಸ್. ಪಾಟೀಲ ಮತ್ತು ಬೆಳವಾಡಿ ಎಂಬುವರು ತಮ್ಮನ್ನು ಬಂಧನದಲ್ಲಿಟ್ಟಿರುವುದು ಅಕ್ರಮವೆಂದು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟು ಪರಿಶೀಲಿಸಿ ಅವರನ್ನು ಬಿಡುಗಡೆ ಮಾಡಬೇಕೆಂದು ಆಜ್ಞೆ ಮಾಡಿದೆ.

ಟೈಮ್ಸ್ ಆಫ್ ಇಂಡಿಯಾ ಮಾಜಿ ಸಂಪಾದಕರ ದಾವಾ

ತಮ್ಮನ್ನು ೩ ವರ್ಷಕಾಲ ನೇಮಿಸಿ ಕೊಂಡು ಮಧ್ಯದಲ್ಲಿಯೇ ಕೆಲಸದಿಂದ ವಜಾ ಮಾಡಿದರೆಂದು ಬೊಂಬಾಯಿನ ಟೈಮ್ಸ್ ಪತ್ರಿಕೆಯ ಮಾಲೀಕರಾದ ಶ್ರೀ ಡಾಲ್ಮಿಯಾರವರ ಮೇಲೆ ಆ ಪತ್ರಿಕೆಯ ಮಾಜಿ ಸಂಪಾದಕ ಶ್ರೀ ಫಿರೋಜ್‌ಚಂದ್ ಎಂಬುವವರು ೧,೦೩,೧೫೫ ರೂಪಾಯಿಗಳಿಗೆ ದಾವಾ ಹಾಕಿದ್ದಾರೆ.

ಬ್ಯಾಸ್ಕೆಟ್‌ಬಾಲ್ ಪಂದ್ಯ

ಮೈಸೂರು ೧೫

ದಸರಾ ವಸ್ತು ಪ್ರದರ್ಶನದ ಬ್ಯಾಸ್ಕೆಟ್ ಬಾಲ್ ಪಂದ್ಯದಲ್ಲಿ ನಿನ್ನೆ ಸಂಜೆ ಯಂಗ್ ಸ್ಟರ್ಸ್ ಕ್ಲಬ್ಬಿನವರು ನಂಜನಗೂಡಿನ ರಿಕ್ರಿಯೇಷನ್ ಕ್ಲಬ್ 'ಬಿ' ರವರನ್ನು ೨೦ ಪಾಯಿಂಟುಗಳಿಂದ ಸೋಲಿಸಿದರು.

ಕೆಲಸದಿಂದ ಡಿಬಾರ್

ತಪ್ಪು ವಯಸ್ಸನ್ನು ಕೊಟ್ಟರೆಂದು ಹಾಸನ ಜಿಲ್ಲೆ ಹಳ್ಳಿಮೈಸೂರಿನ ಮಾಧ್ಯಮಿಕ ಶಾಲಾ ಉಪಾಧ್ಯಾಯರಾದ ಶ್ರೀ ಕೆ. ಆರ್. ಸುಬ್ಬರಾಯರನ್ನು ಎರಡು ವರ್ಷಗಳ ಕಾಲ ಕೆಲಸದಿಂದ ಡಿಬಾರ್ ಮಾಡಲಾಗಿದೆಯೆಂದು ಸರ್ಕಾರ ಪ್ರಕಟಿಸುತ್ತಿದೆ.

ಸ್ವಾತಂತ್ರ್ಯ ಇತಿಹಾಸ ರಚನೆಗೆ ಸಮಿತಿ

ಭಾರತದ ಸ್ವಾತಂತ್ರ್ಯ ಇತಿಹಾಸ ರಚನೆ ಸಂಬಂಧದಲ್ಲಿ ಸಾಹಿತ್ಯವನ್ನು ಸಂಗ್ರಹಿಸಲು ಮೈಸೂರಿನಲ್ಲಿ ಶ್ರೀಗಳಾದ ಟಿ. ಟಿ. ಶರ್ಮ, ಹೆಚ್. ಕೆ. ವೀರಣ್ಣಗೌಡ, ಡಿ. ಎಂ. ಸಿದ್ದಯ್ಯ, ಟಿ. ಸಿದ್ದಲಿಂಗಯ್ಯ ಮತ್ತು ಪಿ. ಆರ್. ರಾಮಯ್ಯನವರೊಳಗೊಂಡ ಒಂದು ಸಮಿತಿಯನ್ನು ರಚಿಸಲಾಗಿದೆ.

ಹೊಸ ವಿದ್ಯುತ್ ಕೇಂದ್ರ

ಬೆಂಗಳೂರು ನಗರದ ಬಳಿ ೪೫ ಸಾವಿರ ಕಿಲೋವಾಟ್ ವಿದ್ಯುಚ್ಛಕ್ತಿ ಉತ್ಪಾದನಾ ಕೇಂದ್ರವೊಂದನ್ನು ಸ್ಥಾಪಿಸಲು ಸರ್ಕಾರ ಯೋಜನೆ ತಯಾರಿಸುತ್ತಿದೆಯೆಂದು ಹೇಳಲಾಗಿದೆ.

ಕಾವೇರಿನದಿಯಲ್ಲಿ ನೀರು ಕಡಿಮೆ ಆಗಿ ವಿದ್ಯುಚ್ಛಕ್ತಿ ಉತ್ಪನ್ನ ತೊಂದರೆ ಆಗುವುದನ್ನು ತಪ್ಪಿಸಲು ಈ ಯೋಜನೆ ಕೈಗೊಳ್ಳಲಾಗುವುದು.

ಪ್ರಬಂಧ ಸ್ಪರ್ಧೆ

'ಭಾರತ-ಪಾಕೀಸ್ತಾನ ಸೌಹಾರ್ದ' ವಿಷಯದಲ್ಲಿ ಉತ್ತಮ ಲೇಖನವನ್ನು ಬರೆದ ವಿದ್ಯಾರ್ಥಿಗಳಿಗೆ ೭೦ ರೂ.,೫೦ ರೂ ಮತ್ತು ೩೦ರೂ.ಗಳ ಮೂರು ಬಹುಮಾನವನ್ನು ಕೊಡಲು ಭಾರತದಲ್ಲಿರುವ ಪಾಕೀಸ್ತಾನ ಹೈ ಕಮಿಷನರ್ ಒಂದು ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ.

ಚರ್ಚಿಲರಿಗೆ ನೋಬೆಲ್ ಬಹುಮಾನ

ಬ್ರಿಟನ್ನಿನ ಪ್ರಧಾನಿ ಚರ್ಚಿಲರಿಗೆ ಈ ವರ್ಷದ ಸಾಹಿತ್ಯ ವಿಭಾಗದ ನೋಬೆಲ್ ಪಾರಿತೋಷಕವನ್ನು ಕೊಡಲು ಸ್ವೀಡನ್ನಿನ ಅಕೆಡೆಮಿ ನಿರ್ಧರಿಸಿದೆ.

ಎಂ. ಪಿ. ಸಿ. ಸಿ. ಸಹ ಕಾರ್ಯದರ್ಶಿ

ಬೆಂಗಳೂರು ೧೫

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಸಹ ಕಾರ್ಯದರ್ಶಿಗಳನ್ನಾಗಿ ರಾಮನಗರದ ನ್ಯಾಯವಾದಿಗಳಾದ ಶ್ರೀ ಕೆ. ಸುಬ್ಬರಾಯರನ್ನು ನೇಮಿಸಲಾಗಿದೆ.

ಸಿಂಹಳ ಪ್ರಧಾನಿಗೆ ಸಂಬಳವಿಲ್ಲ

ಸಿಂಹಳದ ನೂತನ ಪ್ರಧಾನಿ ಸರ್‌ಜಾನ್ ಕೋಟಿಲ್ವಾಲಾರವರು ತಮ್ಮ ಸಂಬಳವನ್ನು ತೆಗೆದುಕೊಳ್ಳುವುದಿಲ್ಲವೆಂದು ಹೇಳಲಾಗಿದೆ. ಇವರ ಸಂಬಳ ವರ್ಷಕ್ಕೆ ೧೮ ಸಾವಿರ ರೂಪಾಯಿಗಳು ಮತ್ತು ಭತ್ಯ ೧೮ ಸಾವಿರ ಇವನ್ನೂ ಸಹ ಅವರು ಬಿಟ್ಟುಬಿಡುವರು.

ಕರ್ನಾಟಕ ಸತ್ಯಾಗ್ರಹಿಗಳಿಗೆ ಶಿಕ್ಷೆ

ಅಖಂಡ ಕರ್ನಾಟಕ ರಾಜ್ಯ ನಿರ್ಮಾಣದ ಬಗ್ಗೆ ಹುಬ್ಬಳ್ಳಿಗೆ ಹೈದರಾಬಾದಿನಿಂದ ಬಂದ ಎರಡನೇ ತಂಡದ ಆರುಮಂದಿ ಸತ್ಯಾಗ್ರಹಿಗಳಿಗೆ ೧೪ ದಿನಗಳ ಸಾದಾ ಸಜ ವನ್ನು ವಿಧಿಸಲಾಗಿದೆ.

ಭಾರತಕ್ಕೆ ಬ್ರಿಟನ್ನಿನಿಂದ ಸಾಲ

ಕೊಲಂಬೋ ಯೋಜನೆಗೊಳಪಟ್ಟ ಪ್ರದೇಶಗಳ ಅಭಿವೃದ್ಧಿಗಾಗಿ ವಿಶ್ವ ಬ್ಯಾಂಕು ಬ್ರಿಟನ್ನಿಗೆ ಕೊಡಲಿರುವ ೬ ಕೋಟಿ ಪೌಂಡುಗಳ ಪೈಕಿ, ೫೦ ಲಕ್ಷ ಪೌಂಡುಗಳನ್ನು ಭಾರತಕ್ಕೆ ಕೊಡಲು ಬ್ರಿಟನ್ ನಿರ್ಧರಿಸಿದೆ.

ರೈತರಿಗೆ ಸಾಲ ಒದಗಿಸಲು ಸಹಕಾರ ಬ್ಯಾಂಕು

ರೈತರಿಗೆ ವ್ಯವಸಾಯಕ್ಕಾಗಿ ಸಾಲ ಒದಗಿಸಲು ರಿಜರ್ವ್ ಬ್ಯಾಂಕಿನಿಂದ ಪಡೆದ ಹಣವನ್ನು ವಿನಿಯೋಗಿಸಲು ಮಂಡ್ಯದಲ್ಲಿ ಒಂದು ಸಹಕಾರ ಬ್ಯಾಂಕನ್ನು ಸ್ಥಾಪಿಸಲಾಗಿದೆ.

ನಿರುದ್ಯೋಗಿಗಳಿಗೆ ಉದ್ಯೋಗ

ಆಂಧ್ರ ಪ್ರಾಂತ್ಯರಚನೆಯಾದುದರಿಂದ ಮದ್ರಾಸ್ ಪ್ರಾಂತ್ಯದಲ್ಲಿ ಕೆಲಸವನ್ನು ಕಳೆದುಕೊಂಡಿರುವವರಿಗೆಲ್ಲಾ ಕೆಲಸವನ್ನು ಕೊಡಿಸಲು ಪ್ರಯತ್ನಿಸುವುದಾಗಿ ಪ್ರಧಾನಿ ನೆಹರೂರವರು ಮದ್ರಾಸ್ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದಾರೆ.

● ಆಂಧ್ರ ಪ್ರಾಂತ್ಯರಚನೆಯಾದುದರಿಂದ ಮದ್ರಾಸ್ ಸರ್ಕಾರವು ತನ್ನ ನಾನಾ ಇಲಾಖೆಗಳನ್ನು ಪುನರ್ರಚಿಸಲಾಗುವುದೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ.

ಇಂದಿನಿಂದ ಸ್ವತ್ತಿನ ತೆರಿಗೆ ಕಾನೂನು ಜಾರಿ

ಮರಣಾನಂತರ ವರ್ಗಾವಣೆಯಾಗುವ ಆಸ್ತಿಯ ಮೇಲೆ ತೆರಿಗೆ

ಕೇಂದ್ರ ಉಭಯ ಶಾಸನ ಸಭೆಗಳು ಒಪ್ಪಿಗೆಯಿತ್ತಿರುವ ಸ್ವತ್ತಿನ ತೆರಿಗೆ ಕಾನೂನು ಇಂದಿನಿಂದ ಜಮ್ಮು, ಕಾಶ್ಮೀರ ವಿನಹ ಭಾರತದ ಇತರ ಭಾಗಗಳಲ್ಲೆಲ್ಲಾ ಜಾರಿಗೆ ಬಂದಿದೆ.

ಈ ಶಾಸನದ ಪ್ರಕಾರ ಒಬ್ಬ ಮನುಷ್ಯನು ಸತ್ತನಂತರ ಇತರರಿಗೆ ವರ್ಗಾವಣೆಯಾಗುವ ಆತನ ಆಸ್ತಿಯ ಮೇಲೆ ಈ ತೆರಿಗೆಯನ್ನು ವಿವಿಧ ದರಗಳಲ್ಲಿ ವಸೂಲ್ಮಾಡಲಾಗುತ್ತದೆ. ಈ ತೆರಿಗೆಯು ಸಾಮಾನ್ಯವಾಗಿ ೫೦ ಸಾವಿರ ರೂಪಾಯಿಗಳಿಗೆ ಮೇಲ್ಪಟ್ಟ ಆಸ್ತಿಗೆ ಅನ್ವಯಿಸುತ್ತದೆ. ಚರ ಮತ್ತು ಸ್ಥಿರ ಆಸ್ತಿಗಳೂ ಈ ಕಾನೂನಿನ ಮಿತಿಗೆ ಒಳಪಟ್ಟಿವೆ.

ಮಲೆನಾಡಿನ ಅಭಿವೃದ್ಧಿಗೆ ಕೇಂದ್ರದ ಆಸಕ್ತಿ

ಕರ್ನಾಟಕದಲ್ಲಿ ಪ್ರವಾಸ ಮಾಡುತ್ತಿರುವ ಕೇಂದ್ರ ಆರೋಗ್ಯ ಸಚಿವ ಶ್ರೀಮತಿ ರಾಜಕುಮಾರಿ ಅಮೃತ್‌ಕೌರರು ನಿನ್ನೆ ಶಿವಮೊಗ್ಗಾಕ್ಕೆ ಭೇಟಿ ಇತ್ತಿದ್ದರು. ಮಲೆನಾಡಿನ ಪರಿಸ್ಥಿತಿ ಮತ್ತು ಅಲ್ಲಿ ಮಲೇರಿಯಾದಿಂದ ಉಂಟಾಗುತ್ತಿರುವ ಕಷ್ಟಗಳನ್ನು ತಾವು ಅರಿತಿರುವುದಾಗಿಯೂ, ಅವರ ನಿವಾರಣೆಗೆ ಕೇಂದ್ರ ಸರ್ಕಾರ ಮತ್ತು ಪ್ರಪಂಚ ಆರೋಗ್ಯ ಸಂಸ್ಥೆಗಳು ವಿಶೇಷ ಶ್ರಮಿಸುತ್ತಿರುವುದಾಗಿಯೂ ಅವರು ತಿಳಿಸಿದರು.

ಶ್ರೀಮತಿ ಕೌರರು ಮೈಸೂರು ಸಚಿವ ಡಾ|| ನಾಗನಗೌಡರೊಡನೆ ಭದ್ರಾವತಿ ಮತ್ತು ಜೋಗಿಗೂ ಭೇಟಿ ಇತ್ತಿದ್ದರು.

ಪಾಕ್‌ಗೌರ್ನರ್ ಜನರಲ್‌ರ ವಿದೇಶ ಪ್ರವಾಸ

ಪಾಕೀಸ್ತಾನ ಗೌರ್ನರ್ ಜನರಲ್‌ರಾದ ಗುಲಾಂ ಮಹಮದ್‌ರವರು ೬ ವಾರಗಳ ಕಾಲದ ವಿದೇಶ ಪ್ರವಾಸಕ್ಕಾಗಿ ಕರಾಚಿಯಿಂದ ಸೋಮವಾರ ಪ್ರಯಾಣ ಮಾಡಲಿರುವರೆಂದು ತಿಳಿಯಬರುತ್ತದೆ. ಅವರು ಮಧ್ಯ ಪ್ರಾಚ್ಯ, ಯೂರೋಪ್, ಅಮೆರಿಕಾಗಳಿಗೆ ಭೇಟಿಕೊಡುವರು. ಅಮೆರಿಕಾದಲ್ಲಿ ಅಧ್ಯಕ್ಷ ಐಸೆನ್‌ಹೋವರ್‌ರವರನ್ನು ಭೇಟಿ ಮಾಡುವರೆಂದೂ ತಿಳಿಯಬರುತ್ತದೆ.

ಅಣುಶಸ್ತ್ರ ಅಸ್ಫೋಟನೆ

ಆಸ್ಟ್ರೇಲಿಯಾದ ಒಂದು ಪ್ರದೇಶದಲ್ಲಿ ಬ್ರಿಟಿಷ್ ಸರ್ಕಾರವು ಅಣುಶಸ್ತ್ರ ಅಸ್ಫೋಟನೆಯನ್ನು ನಡೆಸುವುದಾಗಿ ತಿಳಿಯಬರುತ್ತದೆ.

ಲಂಡನ್ನಿನಲ್ಲಿ ಮೈಸೂರು ಟ್ರೇಡ್ ಏಜೆಂಟರು

ಬೆಂಗಳೂರು ೧೫

ಲಂಡನ್ನಿನಲ್ಲಿ ಮೈಸೂರಿನ ಟ್ರೇಡ್ ಏಜೆಂಟರಾಗಿ ಶ್ರೀ ವಿಜಯರಾಘವರೆಡ್ಡಿಯವರನ್ನು ನೇಮಿಸಲಾಗಿದೆ. ಈಗ ಆಸ್ಥಾನದಲ್ಲಿರುವ ಶ್ರೀ ಕೆ. ನಾರಾಯಣಸ್ವಾಮಿಯವರು ಹಿಂತಿರುಗಿದನಂತರ ವಾಣಿಜ್ಯ ಮತ್ತು ಕೈಗಾರಿಕೆ ಶಾಖಾ ಡೈರಕ್ಟರಾಗಿ ಅವರು ಅಧಿಕಾರ ವಹಿಸಿಕೊಳ್ಳುತ್ತಾರೆ.

ತಿರುವಾಂಕೂರಿನಲ್ಲಿ ಚುನಾವಣಾ ಪ್ರಚಾರ

ಮುಂದಿನ ಜನವರಿಯಲ್ಲಿ ತಿರುವಾಂಕೂರ್-ಕೊಚ್ಚಿಯಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗಳ ಪ್ರಚಾರಕ್ಕಾಗಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ಅಲ್ಲಿಗೆ ಹೋಗಿ ೧೦ ದಿನಗಳ ಕಾಲ ಪ್ರವಾಸವನ್ನು ಕೈಗೊಳ್ಳುವರೆಂದು ತಿಳಿಯಬಂದಿದೆ.

ಕಾಂಗ್ರೆಸ್ ಸಂಸ್ಥೆಯು ಅಧಿಕ ಸಂಖ್ಯೆಯಲ್ಲಿ ಮತಗಳಿಸುವಂತೆ ಪ್ರಚಾರ ಮಾಡಲು ಶ್ರೀ ನೆಹರೂ ಅಲ್ಲದೆ ಬೊಂಬಾಯಿ ಮುಖ್ಯಮಂತ್ರಿ ಶ್ರೀ ಮೊರಾರ್ಜಿ ದೇಸಾಯಿ, ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯ ಮುಂತಾದವರೂ ಭಾಗವಹಿಸುವರು.

ಭಾರತಕ್ಕೆ ವಿಶ್ವಬ್ಯಾಂಕಿನ ಸಾಲ

ದೇಶದಲ್ಲಿ ನಡೆಯಬೇಕಾಗಿರುವ ಅಭಿವೃದ್ಧಿ ಕಾರ್ಯಗಳಿಗಾಗಿ ಭಾರತಕ್ಕೆ ವಿಶ್ವ ಬ್ಯಾಂಕ್ ೫೦ ಲಕ್ಷ ಡಾಲರುಗಳ ಸಾಲವನ್ನು ಮಂಜೂರ್ಮಾಡಿರುವುದಾಗಿ ತಿಳಿಯಬರುತ್ತದೆ. ದಾಮೋದರ ಕಣಿವೆಯೋಜನೆ ಮತ್ತು ಹೊಸ ಉಕ್ಕಿನ ಕಾರ್ಖಾನೆಯ ಸ್ಥಾಪನೆಗಾಗಿ ಈ ಹಣವನ್ನು ಉಪಯೋಗಿಸಲಾಗುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೪—೧೦—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—	೨೨—೧೪
ಎಳ್ಳು	೭೨—೧೪	೭೮—೧೨
ಹರಳು	—	—
ಹುರಳಿ	೩೮—೮	—
ಮೆಣಸಿನಕಾಯಿ	೩೯—೨	೪೨—೨
ಕೊಂಗಿಣಕಾಯಿ	೧೪೬	೨೬೧

ಎಲ್ಲಜನರಿಗೂ ಸಮನಾದ ಹಕ್ಕು ಇರಬೇಕು

ಕುಸ್ತಿ ಬಿಕ್ಕಟ್ಟಿನ ವಿಚಾರದಲ್ಲಿ ಸರ್ಕಾರದ ಮನವಿ

ಜಂಬೂಸವಾರಿ, ಕುಸ್ತಿರದ್ದಿನ ಬಗ್ಗೆ ಸರ್ಕಾರದ ಪ್ರಕಟಣೆ

ಮೈಸೂರು ೧೫

ಈ ಸಾರಿ ಅರಮನೆ ಮುಂದೆ ಕುಸ್ತಿ ಮತ್ತು ೧೮ನೇ ತಾರೀಖು ಜಂಬೂಸವಾರಿಗಳನ್ನು ರದ್ದು ಮಾಡಿರುವ ಬಗ್ಗೆ ಸರ್ಕಾರದವರು ನಿನ್ನೆ ರಾತ್ರಿ ೮-೩೦ ಗಂಟೆಗೆ ಒಂದು ಅಧಿಕೃತ ಪ್ರಕಟಣೆಯನ್ನು ಹೊರಡಿಸಿ ಈ ರೀತಿ ತಿಳಿಸಿದ್ದಾರೆ.

ದಸರಾ ಹಬ್ಬದಲ್ಲಿ ಅರಮನೆ ಮುಂದೆ ಕುಸ್ತಿಗಳನ್ನು ನಡೆಸುವುದು ಬಹಳ ಹಿಂದಿನ ಕಾಲದಿಂದ ಬಂದಿದೆ. ಆದರೆ ಈ ಕುಸ್ತಿಗಳಲ್ಲಿ ಹರಿಜನರು ಭಾಗವಹಿಸಲು ಕೆಲವು ಜನರ ಜಾತಿ ಭೇದಭಾವದಿಂದ ಅವಕಾಶ ವಿರಲಿಲ್ಲ. ಇಂತಹ ಕೆಲವರು ಕುಸ್ತಿ ಮಾಡುವುದು ತಮ್ಮದೇ ಆದ ಒಂದು ಹಕ್ಕೆಂಬ ಮನೋಭಾವ ಬೆಳೆಸಿಕೊಂಡು ಬಂದರು. ಇತ್ತೀಚಿನ ಕೆಲವು ವರ್ಷಗಳಿಂದ ಅಂತಹ ಹಕ್ಕನ್ನು ಅವರು ತ್ಯಜಿಸಬೇಕೆಂದು ಪ್ರಯತ್ನ ಮಾಡಲಾಗುತ್ತಿತ್ತು.

ಗಾಂಧಿಜೀಯವರ ಪ್ರಯತ್ನದಿಂದ ಅಸ್ಪೃಶ್ಯತೆ ನಿವಾರಣೆಯು ರಾಜ್ಯಾಂಗದಲ್ಲಿ ನಮೂದಿಸಲಾಯಿತು. ಇದರಿಂದ ಭಾರತದ ಜನರು ಹರಿಜನರಿಗೆ ಸಮಾನ ಹಕ್ಕನ್ನು ಕೊಡುವುದು ರಾಜ್ಯಾಂಗದ ಪ್ರಕಾರ ಬದ್ಧ. ಆಳಿದ ಮಹಾಸ್ವಾಮಿಯವರ ಕಾಲದಲ್ಲಿ ಅರಮನೆ ಒಳಗೆ ಹರಿಜನರನ್ನು ಯಾವ ಪ್ರತಿಬಂಧಕವೂ ಇಲ್ಲದೆ ಬಿಡಲಾಯಿತು.

ಮೈಸೂರಿನಲ್ಲಿ ಹರಿಜನರನ್ನು ಕುಸ್ತಿಯಲ್ಲಿ ತರಪೇತು ಮಾಡಿದವರು ಸವರ್ಣ ಹಿಂದೂಗಳ ಪೈಲ್ವಾನರು ಮತ್ತು ಸವರ್ಣ ಹಿಂದೂಗಳಿಗೂ ಮತ್ತು ಹರಿಜನರಿಗೂ ಕುಸ್ತಿಗಳು ದಸರಾವಸ್ತು ಪ್ರದರ್ಶನದಲ್ಲಿ ಅನೇಕ ವರ್ಷಗಳಿಂದ ನಡೆಯುತ್ತಿರುವುದು ಅಭಿನಂದನಾರ್ಹವಾದುದು.

ಕಳೆದ ವರ್ಷ ಅರಮನೆಮುಂದೆ ಹರಿಜನರು ಕುಸ್ತಿಗಳಲ್ಲಿ ಭಾಗವಹಿಸಬೇಕೆಂದು ಪ್ರಯತ್ನ ನಡೆಸಲಾಯಿತು.

ಇಂತಹ ಹೊಸ ಪದ್ಧತಿಗೆ ಅನುಸರಿಸಿಕೊಳ್ಳಲು ಇನ್ನು ಸ್ವಲ್ಪ ಕಾಲ ಕೊಡಬೇಕೆಂದು ಗರಡಿಯವರು ಸರ್ಕಾರಕ್ಕೆ ಮನವಿ ಮಾಡಿಕೊಂಡರು. ಮತ್ತು ಮುಂದಿನವರ್ಷ ಹರಿಜನರು ಕುಸ್ತಿಯಲ್ಲಿ ಸಮನಾಗಿ ಭಾಗವಹಿಸಲು ಅವಕಾಶ ಮಾಡಲಾಗುವುದೆಂದು ಕೆಲವು ಪ್ರಮುಖ ನಾಯಕರುಗಳು ಸರ್ಕಾರಕ್ಕೆ ಭರವಸೆ ಕೊಟ್ಟಿದ್ದರು.

ರಾಜ್ಯಾಂಗದ ನಿಯಮಗಳನ್ನು ಪಾಲಿಸಿಕೊಂಡು ಬರುವುದು ಸರ್ಕಾರದ ಹೊಣೆ ಮತ್ತು ಕರ್ತವ್ಯ. ಹರಿಜನರ ಹಕ್ಕನ್ನು

[ಮುಂದಿನ ಪುಟ ನೋಡಿ]

ಆಹಾರ ಪರಿಸ್ಥಿತಿ ಉತ್ತಮ

ಪ್ರಾಂತ್ಯದಲ್ಲಿ ಅನೇಕಕಡೆ ಮಳೆ ಬಿದ್ದಿದರ ಪರಿಣಾಮವಾಗಿ ಬೆಳೆಯು ಚೆನ್ನಾಗಿ ಆಗುತ್ತಿದೆ. ಇದರಿಂದ ಪರಿಸ್ಥಿತಿಯು ಉತ್ತಮವಾಗಿ ಆಹಾರ ವಸ್ತುಗಳ ಬೆಲೆಯು ಇಳಿಯುತ್ತಿರುವುದಾಗಿ ಮದ್ರಾಸ್ ಆಹಾರ ಸಚಿವ ಶ್ರೀ ಸುಬ್ರಹ್ಮಣ್ಯಂ ಹೇಳಿದ್ದಾರೆ.

ರಾಜಕಮಲ್, ಮೈಸೂರು

16-10-53 ರಿಂದ ಪ್ರತಿದಿನ 3 ಆಟಗಳು

ಗುಬ್ಬಿಕರ್ನಾಟಕ ಪ್ರೊಡಕ್ಷನ್ಸ್‌ರವರ:....

ಸತಿಶೋಧನೆ

ಶ್ರೀ [ತಮಿಳು]

ತಾರಾಗಣ:—ಟಿ. ಎಸ್. ಬಾಲಯ್ಯ, ಹೊನ್ನಪ್ಪಭಾಗವತರ್, ಜಿ.ಹೆಚ್.ವೀರಣ್ಣ ಪಂಡರೀಬಾಯ್, ಬಿ. ಜಯಮ್ಮ.

ನಾಟಕರತ್ನ ಜಿ. ಹೆಚ್. ವೀರಣ್ಣನವರ ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)

15--10--53 ನೇ ರಾತ್ರಿ 10 ಗಂಟೆಗೆ ಶಿವರಾಂಪೇಟೆಯ ರತ್ನಾವಳಿ ಥಿಯೇಟರಿನಲ್ಲಿ

ಚಲನಚಿತ್ರದಲ್ಲಿ ಖ್ಯಾತಿ ಪಡೆದ ನಾಟಕರತ್ನ ಜಿ. ಹೆಚ್. ವೀರಣ್ಣ, ಜಯಮ್ಮ ಮತ್ತು ಲಕ್ಷಮ್ಮ ನಟಿಸಿರುವ

ಕುರುಕ್ಷೇತ್ರ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಶ್ರೀ ರಾಜರಾಜೇಶ್ವರೀ ನಾಟಕ ಮಂಡಲಿ ವಿಜಯವಾಡ

-- ಮೈಸೂರು ಟೌನ್‌ಹಾಲಿನಲ್ಲಿ --

ಈದಿನ ರಾತ್ರಿ ೧೦ ಘಂಟೆಗೆ

ತಾರಾಶಶಾಂಕ

(ತೆಲುಗು)

ಎಂಬ ನಾಟಕವನ್ನು ಅಭಿನಯಿಸುತ್ತಾರೆ.

ಪಾತ್ರ:—ಚಲನಚಿತ್ರದಲ್ಲಿ ಖ್ಯಾತಿಪಡೆದ ಶ್ರೀ ಪಿ. ಸೂರ್ಯಬಾಬು, ರಾಜೇಶ್ವರಿದೇವಿ ಮತ್ತು ಇತರ ಪ್ರಸಿದ್ಧ ನಟ ನಟಿಯರು.

ಪ್ರಕಾಶಕರು ಮತ್ತು ಮುದ್ರಕರು.

ಜಿ. ಎಲ್. ಸ್ವಾಮಿ.

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೩೦೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೪೮

೧೬-೧೦-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ತುಂಗಭದ್ರಾ ಯೋಜನೆಗೆ ೪೬ ಲಕ್ಷ ರೂಪಾಯಿಗಳ ಸಾಲ

ಕೇಂದ್ರದಿಂದ ಮೈಸೂರಿಗೆ ೨೦ಲಕ್ಷ ರೂಪಾಯಿಗಳು ಬಂದಿವೆ

ಬೆಂಗಳೂರು ೧೬

ತುಂಗಭದ್ರಾ ಯೋಜನೆಯ ಕಾರ್ಯಕ್ಕಾಗಿ ಮೈಸೂರು ಸರ್ಕಾರವು ವೆಚ್ಚಮಾಡಬೇಕಾಗಿರುವ ೪೬ ಲಕ್ಷರೂಪಾಯಿಗಳನ್ನು ಕೇಂದ್ರ ಸರ್ಕಾರವು ಸಾಲರೂಪದಲ್ಲಿ ಸಹಾಯ ನೀಡಲು ತೀರ್ಮಾನಿಸಿದೆ. ಈ ಕೆಲಸಕ್ಕಾಗಿ ಮೊದಲನೆ ಕಂತು ೨೦ ಲಕ್ಷ ರೂಪಾಯಿಗಳನ್ನು ಈಗ ಮೈಸೂರು ಸರ್ಕಾರಕ್ಕೆ ಕೊಟ್ಟಿರುವುದಾಗಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆಯ ದಿನ ಇಲ್ಲಿ ತಿಳಿಸಿದರು.

ಈ ಯೋಜನೆಗಾಗಿ ಮದ್ರಾಸ್ ಸರ್ಕಾರವು ಈ ಸಾಲಿನಲ್ಲಿ ೪೨ ಲಕ್ಷ ರೂಪಾಯಿ ನೀರಾವರಿ ಮತ್ತು ೪ ಲಕ್ಷವನ್ನು ವಿದ್ಯುಚ್ಛಕ್ತಿ ಕಾರ್ಯಗಳಿಗಾಗಿ ವೆಚ್ಚಮಾಡುವ ಅಂದಾಜು ಹಾಕಿತ್ತು. ಬಳ್ಳಾರಿ ಜಿಲ್ಲೆಯು ಮೈಸೂರಿಗೆ ಸೇರಿದುದರ ಪರಿಣಾಮವಾಗಿ ಆ ವೆಚ್ಚವು ಈಗ ಮೈಸೂರಿನ ಮೇಲೆ ಬಿದ್ದಿತು. ಸಂಸ್ಥಾನದ ಇಂದಿನ ಆರ್ಥಿಕ ಸ್ಥಿತಿಯಲ್ಲಿ ಈ ವೆಚ್ಚದ ಹೊರೆಯನ್ನು ಹೊರಲು ಮೈಸೂರು ಸಿದ್ಧವಿಲ್ಲವೆಂದು ಕೇಂದ್ರವು ಅರಿತು ಈಗ ಆ ಹಣವನ್ನು ಸಾಲದ ರೂಪದಲ್ಲಿ ಕೊಡಲು ಒಪ್ಪಿದೆ. ಈಗ ೨೦ ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದರಿಂದ ಉಳಿದ ೨೬ ಲಕ್ಷಗಳನ್ನು ಇನ್ನು ಎರಡು ತಿಂಗಳುಗಳ ಕಂತಿನಲ್ಲಿ ಕೊಡುತ್ತದೆಯೆಂದು ಅವರು ತಿಳಿಸಿದರು.

ಭತ್ತ ಕುಟ್ಟುವ ಕೈಗಾರಿಕೆ ಅಭಿವೃದ್ಧಿ ಯೋಜನೆ

ಭತ್ತವನ್ನು ಮಿಲ್ಲುಗಳಿಗೆ ಹಾಕದೆ ಕೈಯಿಂದಲೇ ಕುಟ್ಟುವುದನ್ನು ಪ್ರಚಾರ ಮಾಡಲು ಅಖಿಲ ಭಾರತ ಖಾದಿ ಮತ್ತು ಗ್ರಾಮಕೈಗಾರಿಕೆಗಳ ಸಮಿತಿಯು ಯೋಜನೆ ತಯಾರಿಸಿದೆ.

ಭಾರತಾದ್ಯಂತ ೨೦೦ ಬೆಳೆಯುವವರ ಸಹಕಾರ ಸಂಘಗಳನ್ನು ಸ್ಥಾಪಿಸಿ, ಅದರ ಮೂಲಕ ಭತ್ತ ಕುಟ್ಟುವ ಕೈಗಾರಿಕೆಗೆ ಪ್ರೋತ್ಸಾಹ ಕೊಡಲಾಗುವುದು. ಇಂತಹ ಸಹಕಾರ ಸಂಘ ಸ್ಥಾಪಿಸಲು ೨,೭೫,೦೦೦ ರೂ. ಗ್ರಾಂಟನ್ನು ಕೇಂದ್ರಸರ್ಕಾರವು ಕೊಟ್ಟಿದೆ.

ವಿಶೇಷ ವಿದ್ಯಾರ್ಥಿವೇತನ

ಮದ್ರಾಸ್ ವಿಶ್ವವಿದ್ಯಾನಿಲಯದಲ್ಲಿ ರಾಜನೀತಿ ಶಾಸ್ತ್ರವನ್ನು ಅಭ್ಯಾಸಿಸಲು ಎರಡು ವೇತನಗಳನ್ನು ವಿರ್ಪಡಿಸಲಾಗಿದೆ. ಇದಕ್ಕೆ ಸುಮಾರು ೫೦೦೦ ರೂಪಾಯಿಗಳ ವೆಚ್ಚವಾಗುತ್ತದೆ.

ವಸ್ತು ಪ್ರದರ್ಶಕರ ಸಂಘ

ಮೈಸೂರು ೧೬

ಅಖಿಲ ಭಾರತ ವಸ್ತು ಪ್ರದರ್ಶಕರ ಸಂಘದ ಸಭೆಯು ನಿನ್ನೆ ದಸರಾ ವಸ್ತುಪ್ರದರ್ಶನಾಲಯದಲ್ಲಿ ನಡೆದು ಶ್ರೀ ಮಹದೇವಸ್ವಾಮಿಯವರನ್ನು ಅಧ್ಯಕ್ಷರನ್ನಾಗಿಯೂ ಶ್ರೀಗಳಾದ ಕೆ. ಎಸ್. ಗುರುಮೂರ್ತಿ ಮತ್ತು ಸಿ.ಎ. ರಾಮರವರನ್ನು ಉಪಾಧ್ಯಕ್ಷರನ್ನಾಗಿಯೂ ಚುನಾಯಿಸಲಾಯಿತು.

ಭೂದಾನಯಜ್ಞ ಕಾರ್ಯಕರ್ತರ ಸಭೆ

ಮೈಸೂರು ೧೬

ಇದೇ ೨೪ನೇ ತಾರೀಖು ಮೈಸೂರು ಜಿಲ್ಲೆ ಭೂದಾನಯಜ್ಞ ಕಾರ್ಯಕರ್ತರ ಸಭೆ ನಡೆಯುವುದು.

ನಂಜನಗೂಡಿನ ತಾಲ್ಲೂಕಿನಿಂದ ಇಲ್ಲಿಯವರೆಗೆ ೫೦ ಎಕರೆ ಜಮೀನು ಭೂದಾನ ಯಜ್ಞಕ್ಕಾಗಿ ಬಂದಿದೆ.

ಕಾಫಿ ತೋಟದ ಕೆಲಸಗಾರರ ಉಪವಾಸ

ನೀಲಗಿರಿ ಕಾಫಿತೋಟದ ಕೆಲಸಗಾರರು ತಮಗೆ ಬೋನಸ್ ಕೊಡಬೇಕೆಂದು ಉಪವಾಸ ಮುಷ್ಕರ ಹೂಡಿದ್ದಾರೆ. ಕಳೆದವರ್ಷದ ಲಾಭದಲ್ಲಿ ಶೇಕಡ ಹನ್ನೆರಡನೇ ಒಂದು ಭಾಗವನ್ನು ತಮಗೆ ಬೋನಸ್ಸಾಗಿ ಕೊಡಬೇಕೆಂದು ಕೆಲಸಗಾರರು ಕೇಳುತ್ತಿದ್ದಾರೆ.

ಮಂತ್ರಿಗಳ ಬಿನ್ನವತ್ತಳೆಗೆ ೧೫ ರೂ.

ಮಂತ್ರಿಗಳಿಗೆ ಬಿನ್ನವತ್ತಳೆಗಳನ್ನು ಒಪ್ಪಿಸಬೇಕಾದರೆ ಅದಕ್ಕಾಗಿ ೧೫ ರೂಗಳಿಗಿಂತ ಹೆಚ್ಚಾಗಿ ವೆಚ್ಚಮಾಡಕೂಡದೆಂದು ಬೊಂಬಾಯಿ ಸರ್ಕಾರವು ತನ್ನ ಪ್ರಾಂತ್ಯದಲ್ಲಿರುವ ಎಲ್ಲಾ ಪುರಸಭೆಗಳಿಗೂ ಸೂಚನೆಯನ್ನಿತ್ತಿದೆ.

ವಿದ್ಯಾವಂತ ನಿರುದ್ಯೋಗಿಗಳಿಗೆ ಶಿಕ್ಷಣ ಶಿಬಿರಗಳು

ಸಂಸ್ಥಾನದಲ್ಲಿರುವ ವಿದ್ಯಾವಂತ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲು ಶಿಕ್ಷಣ ಶಿಬಿರಗಳನ್ನು ತೆರೆಯಬೇಕೆಂದು ಹೈದರಾಬಾದ್ ಸರ್ಕಾರ ಆಜ್ಞೆಮಾಡಿದೆ.

ಸೂಚನೆ

ಆಯುಧ ಪೂಜೆಪ್ರಯುಕ್ತ ನಾಳೆ ನಮ್ಮ ಕಾರ್ಯಾಲಯಕ್ಕೆ ರಜಾ. ಪತ್ರಿಕೆ ಪ್ರಕಟವಾಗುವುದಿಲ್ಲ.

ಸಂಪಾದಕ.

ಮಳೆಯಿಂದ ಭತ್ತದ ಫಸಲಿಗೆ ನಷ್ಟ

ಕಳೆದ ತಿಂಗಳಿನಲ್ಲಿ ವಿಪರೀತ ಮಳೆ ಬಂದು ಹಾಸನದ ಹತ್ತಿರ ಇರುವ ಮೂರು ಕೆರೆಗಳು ಕೋಡಿ ಬಿದ್ದುದರಿಂದ ಸುಮಾರು ೩೦೦ ಎಕರೆ ಭತ್ತದ ಫಸಲು ನೀರಿನಲ್ಲಿ ಮುಳಗಿ ೧ ಲಕ್ಷ ರೂ. ನಷ್ಟ ಸಂಭವಿಸಿರುವುದಾಗಿ ಅಂದಾಜು ಮಾಡಲಾಗಿದೆ.

ಮೊನ್ನೆ ದಿನ ಹಾಸನದಲ್ಲಿ ವಿಶೇಷ ಮಳೆ ಆದ್ದರಿಂದ ಹಾಸನ-ಮಂಗಳೂರು ಮತ್ತು ಚಿಕ್ಕಮಂಗಳೂರು ಮಾರ್ಗಕ್ಕೆ ಅಡಚಣೆ ಉಂಟಾಗಿ, ಬಸ್ ಸಂಚಾರ ನಿಂತುಹೋಗಿದೆ.

ಮರುವಸತಿ ಕಾರ್ಯಗಳು

ಹೈದರಾಬಾದ್ ಸರ್ಕಾರವು ಮರುವಸತಿ ಕಾರ್ಯಗಳಿಗಾಗಿ ಇಲ್ಲಿಯವರೆಗೆ ಸುಮಾರು ಒಂದು ಕೋಟಿ ರೂಪಾಯಿಗಳನ್ನು ವೆಚ್ಚಮಾಡಿರುವುದಾಗಿ ತಿಳಿಯಬರುತ್ತದೆ. ಈ ಕಾರ್ಯಕ್ಕಾಗಿ ಕೇಂದ್ರ ಸರ್ಕಾರವು ಪ್ರಕೃತದಲ್ಲಿ ೫ ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿದೆ.

ಕಡ್ಡಾಯ ಪ್ರಾಥಮಿಕ ಶಿಕ್ಷಣ

ಹೈದರಾಬಾದ್ ಪ್ರಾಂತ್ಯದಾದ್ಯಂತ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಏರ್ಪಡಿಸಲು ಅಲ್ಲಿಯ ಸರ್ಕಾರವು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಕ್ಷಮ ದಾನ

ಸರ್ಕಾರಿ ವಿರುದ್ಧ ಚಟುವಟಿಕೆಗಳಲ್ಲಿ ಭಾಗವಹಿಸಿದ್ದರೆಂಬ ಅಪಾದನೆ ಮೇಲೆ ಶಿಕ್ಷೆಗಳಾಗಿದ್ದ ಅಥವಾ ಒಳಗಾಗಲಿದ್ದ ಸುಮಾರು ೬೦೦೦ ಸರ್ಕಾರಿ ನೌಕರರಿಗೆ ಸಿಂಹಳ ನೂತನ ಪ್ರಧಾನಿಯವರು ಕ್ಷಮ ದಾನವನ್ನು ನೀಡಿದ್ದಾರೆ

ಭಾಷಾವಾರು ಪ್ರಾಂತ್ಯ ಪರಿಶೀಲನಾ ಕಮೀಷನ್

ಭಾರತದ ಪ್ರಾಂತ್ಯಗಳನ್ನು ಭಾಷೆ, ಸಂಸ್ಕೃತಿ, ಆರ್ಥಿಕ ಮತ್ತು ಆಡಳಿತ ಸೌಲಭ್ಯಗಳಿಗನುಗುಣವಾಗಿ ಹಂಚುವ ಪ್ರಶ್ನೆಯನ್ನು ಪರಿಶೀಲಿಸಲು ಕೇಂದ್ರಸರ್ಕಾರವು ಒಂದು ಹೈಪವರ್ ಕಮೀಷರ್ ರಚಿಸುವುದೆಂದೂ, ಅದು ಸಣ್ಣದಾಗಿದ್ದರೂ ನಿಸ್ವಾರ್ಥಿಗಳೂ ನಿಷ್ಪಕ್ಷಪಾತಿಗಳೂ ಜನತೆಯಲ್ಲಿ ವಿಶ್ವಾಸ ನಂಬಿಕೆ ಇರುವ ಸದಸ್ಯರು ಇರುವರೆಂದೂ ಡಾ|| ರಾಧಾಕೃಷ್ಣನ್‌ರವರು ತಿಳಿಸಿದ್ದಾರೆ.

★ ಮುಂದಿನ ಜನವರಿ ೨ನೇ ತಾರೀಖು ಹೈದರಾಬಾದಿನಲ್ಲಿ ನಡೆಯುವ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಆರಂಭೋತ್ಸವವನ್ನು ಪ್ರಧಾನಿ ನೆಹರೂ ನೆರವೇರಿಸುವರು.

ವಿದ್ಯಾರ್ಥಿವೇತನ ಕಡಮೆ ಮಾಡಿದ್ದಕ್ಕೆ ಉಪವಾಸ

ಶಿಕ್ಷಣ ಕಾಲದಲ್ಲಿ ತಮಗೆ ಕೊಡುತ್ತಿದ್ದ ೧೦೦ ರೂಪಾಯಿಗಳ ವೇತನವನ್ನು ೬೦ ರೂಗಳಿಗೆ ಇಳಿಸಿದ್ದಕ್ಕಾಗಿ ತಾವುಗಳು ಉಪವಾಸವನ್ನು ಆಚರಿಸುವುದಾಗಿ ಮಂಡ್ಯದಲ್ಲಿರುವ ವಿಶ್ವೇಶ್ವರಯ್ಯಸಾಲಾ ಪೈಲಟ್ ಟ್ರೇನಿಂಗ್ ಮತ್ತು ಅಭಿವೃದ್ಧಿ ಯೋಜನೆಯ ೬೦ ವಿದ್ಯಾರ್ಥಿಗಳು ಸರ್ಕಾರಕ್ಕೆ ನೋಟೀಸ್ ಕೊಟ್ಟಿದ್ದಾರೆಂದು ತಿಳಿಯಬರುತ್ತದೆ. ಈದಿನ ಉಪವಾಸ ಪ್ರಾರಂಭವಾಗಲಿದೆ.

ಕರಾಚಿ ಪ್ರತ್ಯೇಕ ಪ್ರಾಂತ್ಯ ಆಗಬೇಕು

ಪಾಕೀಸ್ತಾನ್ ರಾಜಧಾನಿಯಾದ ಕರಾಚಿಯನ್ನು ಸ್ವತಂತ್ರ ಪ್ರಾಂತ್ಯವನ್ನಾಗಿ ಘೋಷಿಸಬೇಕೆಂದು ಒತ್ತಾಯಪಡಿಸಲು ಇದೇ ೨೫ ನೇ ತಾರೀಖು ಸಾರ್ವತ್ರಿಕ ಮುಷ್ಕರ ಹೂಡಬೇಕೆಂದು ಅಲ್ಲಿನ ಪೌರರ ಜಂಟಿ ಸಮಿತಿಯು ನಿರ್ಧರಿಸಿದೆ.

ಭಾರತ-ಪಾಕ್ ಪ್ರಧಾನಿಗಳ ಭೇಟಿ

ದೆಹಲಿಯ ಒಪ್ಪಂದದಂತೆ ಕಾಶ್ಮೀರದ ಜನಮತ ಗಣನೆಯ ಆಡಳಿತಾಧಿಕಾರಿಯು ಮುಂದಿನ ಏಪ್ರಿಲ್ ತಿಂಗಳಿನಲ್ಲಿ ಅಧಿಕಾರ ಸ್ವೀಕರಿಸುವುದಕ್ಕೆ ಮುಂಚೆ ಭಾರತ-ಪಾಕ್ ಪ್ರಧಾನಿಗಳ ಸಭೆ ನಡೆಯುವುದೆಂದು ಹೇಳಲಾಗಿದೆ.

ಕ್ಷೇತ್ರ ವಿಭಜನಾ ಸಮಿತಿ

ಕೇಂದ್ರ ಸರ್ಕಾರದಿಂದ ನಿಯಮಿಸಲ್ಪಟ್ಟಿರುವ ಕ್ಷೇತ್ರ ವಿಭಜನಾ ಕಮೀಷನ್ ಇದೇ ೨೭ನೇ ತಾರೀಖು ಬೆಂಗಳೂರಿಗೆ ಆಗಮಿಸಿ ವಿಧಾನಸಭೆಯ ಕ್ಷೇತ್ರಗಳನ್ನು ವಿಂಗಡಿಸುವ ಬಗ್ಗೆ ಸಭೆ ನಡೆಸುವುದು.

೨೫ ಗಂಟೆಗಳಲ್ಲಿ ೪೦೩೮ ಮೈಲಿ ಪ್ರಯಾಣ

ಲಂಡನ್ನಿನಿಂದ ರೋಮ್‌ನಗರಕ್ಕೆ ಮಾರಿಸ್ ಮೈನರ್ ಕಾರಿನಲ್ಲಿ ೨೫ ಗಂಟೆಗಳಲ್ಲಿ ಪ್ರಯಾಣ ಮಾಡಲಾಗಿದೆ. ದೂರ ೪೦೩೮ ಮೈಲಿಗಳು.

ಧಾರ್ಮಿಕ ಸ್ವಾತಂತ್ರ್ಯ

ಸಿಂಹಳದಲ್ಲಿ ಎಲ್ಲಾ ಧರ್ಮಗಳಿಗೂ ಪೂರ್ಣ ಸ್ವಾತಂತ್ರ್ಯ ಕೊಡುವುದಾಗಿ ಅಲ್ಲಿಯ ನೂತನ ಪ್ರಧಾನಿ ಕೊಟೆಲ್ವಾಲಾರವರು ತಿಳಿಸಿದ್ದಾರೆ.

ಮಾಜಿ ಸಚಿವರ ಮರಣ

ದಸರಾ ಮಹೋತ್ಸವಕ್ಕೆ ವಿಶೇಷ ಆಹ್ವಾನಿತರಾಗಿ ಇಲ್ಲಿಗೆ ಬರುತ್ತಿದ್ದ ಹೈದರಾಬಾದಿನ ಮಾಜಿ ಸಚಿವ ಶ್ರೀ ಜಿ. ರಾಮಾಚಾರ್‌ರವರು ಹಠಾತ್ತನೆ ನೆನ್ನೆಯದಿನ ಬೆಂಗಳೂರಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ಬೆರಕೆ ಮಾಡುವುದನ್ನು ವರ್ತಕರು ನಿಲ್ಲಿಸಬೇಕು

ಮಾರ್ಕೆಟ್ ಪ್ರದರ್ಶನದಲ್ಲಿ ಸಚಿವರ ಮನವಿ

ಮೈಸೂರು ೧೬

ಪುರಸಭೆಯ ಆಶ್ರಯದಲ್ಲಿ ದೇವರಾಜಾ ಮಾರ್ಕೆಟ್ಟಿನಲ್ಲಿ ಏರ್ಪಡಿಸಿದ್ದ ಮಾರ್ಕೆಟ್ ಪ್ರದರ್ಶನದ ಬಹುಮಾನ ವಿನಿಯೋಗವನ್ನು ನಿನ್ನೆ ಸಂಜೆ ಗೃಹ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ನೆರವೇರಿಸಿದರು.

ವಿವಿಧ ತರಕಾರಿಗಳು, ಹಣ್ಣು, ತೆಂಗಿನಕಾಯಿ, ಪುಷ್ಪ, ಆಟದ ಸಾಮಾನು, ಸುಗಂಧ ದ್ರವ್ಯ, ಚಾಪೆ, ಗೂಡೆ, ಮೀನು, ಮಾಂಸ, ಕೋಳಿ ಮತ್ತು ಮೊಟ್ಟೆ ಮುಂತಾದ ವಸ್ತುಗಳನ್ನು ಪ್ರದರ್ಶಿಸಲಾಗಿತ್ತು.

ಉತ್ತಮ ವಸ್ತುಗಳನ್ನು ಪ್ರದರ್ಶಿಸಿದವರಿಗೆ ಸುಮಾರು ೬೦-೭೦ ಬಹುಮಾನಗಳನ್ನು ಕೊಡಲಾಯಿತು.

ಪುರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಸ್ವಾಗತ ಬಯಸಿ, ಇಂತಹ ಪ್ರದರ್ಶನಗಳಿಂದ ಮಾರ್ಕೆಟ್ಟುಗಳಲ್ಲಿ ಒಳ್ಳೆಯ ವಸ್ತುಗಳನ್ನು ಮಾರಾಟಕ್ಕೆ ಇಡುವುದಲ್ಲದೆ ಆವರಣವನ್ನು ಸ್ವಚ್ಛವಾಗಿ ಇಡಲು ಅವಕಾಶ ವಾಗುವುದೆಂದೂ, ಪ್ರದರ್ಶನ ಆದನಂತರ ಇದೇ ರೀತಿಯಾಗಿ ತಮ್ಮ ಆವರಣಗಳನ್ನು ಸ್ವಚ್ಛವಾಗಿ ಇಟ್ಟುಕೊಂಡಿರಬೇಕೆಂದೂ, ಇದಕ್ಕೆ ಸಾರ್ವಜನಿಕರೂ ಸಹಕರಿಸಬೇಕೆಂದೂ ತಿಳಿಸಿದರು. ಬಹುಮಾನ ವಿನಿಯೋಗಕ್ಕಾಗಿ ನಗರದ ಅನೇಕ ಗಣ್ಯಮಹನೀಯರುಗಳು ಸಹಾಯ ಮಾಡಿದ್ದಕ್ಕಾಗಿ ಅವರನ್ನು ಅಧ್ಯಕ್ಷರು ವಂದಿಸಿದರು.

ಸಚಿವರು ಬಹುಮಾನ ವಿನಿಯೋಗ ಮಾಡಿ, ಮಾರ್ಕೆಟ್ ಪ್ರದರ್ಶನಗಳ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಉತ್ತಮ ದರ್ಜೆಯ ತರಕಾರಿ ಮತ್ತು ಹಣ್ಣುಗಳನ್ನು ಯಾವರೀತಿ ಬೆಳೆದು ತಮ್ಮ ಆಹಾರವನ್ನು ಪುಷ್ಟಿಕರಿಸುವುದನ್ನು ತಿಳಿಯಲು ಇದರಿಂದ ಅವಕಾಶವಾಗುವುದೆಂದೂ ಈ ವಿಚಾರದಲ್ಲಿ ಸರ್ಕಾರದ ಫಲಪುಷ್ಪ ಇಲಾಖೆಯವರು ಹೆಚ್ಚು ಶ್ರಮಿಸುತ್ತಿರುವರೆಂದೂ, ಈ ಸದಾವಕಾಶವನ್ನು ಸಾರ್ವಜನಿಕರು ಉಪಯೋಗಿಸಿಕೊಳ್ಳಬೇಕೆಂದೂ ಸಚಿವರು ತಿಳಿಸಿದರು.

ಭಾರತದ ವಸ್ತುಗಳಲ್ಲಿ ಶ್ರೇಷ್ಠದರ್ಜೆ ಇಲ್ಲ ಎಂಬುದು ಸರ್ವಸಾಮಾನ್ಯವಾಗಿದೆ. ಆಹಾರ ಮತ್ತು ಇತರ ವಸ್ತುಗಳ ಬೆರಕೆಗೆ ಪ್ರಥಮ ಬಹುಮಾನ ಕೊಡುವುದಾದರೆ ಅದು ಭಾರತಕ್ಕೆ ಸಲ್ಲುವುದೆಂದು ಒಬ್ಬ ಪ್ರಮುಖರು ಹೇಳಿದ್ದಾರೆ. ಇದರಿಂದ ಎಲ್ಲರೂ ತಲೆತಗ್ಗಿಸುವಂತಾಗಿದೆ. ಅದನ್ನು ನಿರ್ಮೂಲಮಾಡಿ ಉತ್ತಮ ದರ್ಜೆಯ ವಸ್ತುಗಳನ್ನು ಮಾರಾಟ ಮಾಡಲು ವರ್ತಕರು ಸಹಕರಿಸಿ ಶೀಲವಂತರಾಗಬೇಕೆಂದು ಸಚಿವರು ಮನವಿ ಮಾಡಿದರು.

ಕೇಂದ್ರ ಆಹಾರ ಉಪ ಸಚಿವರ ಆಗಮನ

ಮೈಸೂರು ೧೬

ಕೇಂದ್ರ ಆಹಾರ ಉಪಸಚಿವ ಶ್ರೀ ಎಂ. ವಿ. ಕೃಷ್ಣಪ್ಪನವರು ನಿನ್ನೆ ರಾಜಧಾನಿಗೆ ಆಗಮಿಸಿದರು. ಅವರು ಈದಿನ ಅಥವ ನಾಳೆ ಮಠಕೇರಿಗೆ ಭೇಟಿ ಇತ್ತು, ಕೊಡಗು ಸಂಸ್ಥಾನವು ಹೊರಕ್ಕೆ ಅಕ್ಕಿ ಸರಬರಾಜು ಮಾಡುವ ವಿಷಯದಲ್ಲಿ ಮಾತುಕತೆ ನಡೆಸುವರು. ಮೈಸೂರು ಮತ್ತು ಇತರ ಕಡೆಗಳಿಗೆ ಈಗ ಕೊಡಗು ಸುಮಾರು ೮-೧೦ ಸಾವಿರ ಟನ್ ಅಕ್ಕಿಯನ್ನು ಕಳುಹಿಸುತ್ತಿದೆ.

ಕಾಂಗ್ರೆಸ್ ಪಕ್ಷದಿಂದ ಉಚ್ಚಾಟನೆ

ಪಂಜಾಬ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದಿಂದ ಅಲ್ಲಿಯ ಮಾಜಿ ಸಚಿವ ಶ್ರೀ ಶ್ರೀರಾಮಶರ್ಮ ಮತ್ತು ಇತರ ಮೂವರನ್ನು ತೆಗೆದು ಹಾಕಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೫—೧೦—೧೯೫೩

ಪಲ್ಲ	ರೂ. ಅ	ರೂ. ಅ
ಕಡಲೇಕಾಯಿ	೧೩—೪	೨೧—೮
ಎಳ್ಳು	೭೩—೧೪	೮೧—೧೨
ಹರಳು	—	—
ಹುರಳಿ	೩೪—೮	೩೮—೧೨
ಮೆಣಸಿನಕಾಯಿ	೩೮—೪	೪೧—
ಹುಣಿಸೇಹಣ್ಣು	೬—೮	—
ತೆಂಗಿನಕಾಯಿ		

ಲಕ್ಕವಳ್ಳಿ ಯೋಜನೆಗೆ ಕೇಂದ್ರದ ನೆರವು

೨ ಲಕ್ಷ ಎಕರೆ ಜಮೀನು ವ್ಯವಸಾಯಕ್ಕೆ ಅನುಕೂಲ

ಚಿಕ್ಕಮಗಳೂರು ಜಿಲ್ಲೆಯಲ್ಲಿ ಭದ್ರಾ ನದಿಗೆ ಅಣೆಕಟ್ಟನ್ನು ಕಟ್ಟಲಾಗುವ ಲಕ್ಕವಳ್ಳಿ ಯೋಜನೆಯ ಕಾರ್ಯವನ್ನು ರಾಷ್ಟ್ರೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿಕೊಳ್ಳಲು ಕೇಂದ್ರ ಸರ್ಕಾರವು ನಿರ್ಧರಿಸಿರುವುದಾಗಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿದ್ದಾರೆ.

ಇದಕ್ಕಾಗಿ ಕೇಂದ್ರ ಸರ್ಕಾರವು ೩ ಕೋಟಿ ರೂಪಾಯಿಗಳನ್ನು ಮೈಸೂರು ಸರ್ಕಾರಕ್ಕೆ ಕೊಡಲಿದೆ. ಈ ಯೋಜನೆಯು ಪೂರ್ಣವಾದರೆ ೨ ಲಕ್ಷ ಎಕರೆ ಜಮೀನು ವ್ಯವಸಾಯಕ್ಕೆ ಅನುಕೂಲವಾಗುತ್ತದೆ.

ಕೃಪಲಾನಿ ಮದ್ರಾಸಿನಲ್ಲಿ

ಪ್ರಜಾಸೋಷಲಿಸ್ಟ್ ಪಕ್ಷದ ನಾಯಕ ಆಚಾರ್ಯ ಕೃಪಲಾನಿಯವರು ತಮ್ಮ ಪಕ್ಷದ ಸದಸ್ಯರೊಡನೆ ವಿಚಾರವಿನಿಮಯಕ್ಕಾಗಿ ಮದ್ರಾಸಿಗೆ ಆಗಮಿಸಲಿರುವರು.

ರಣಜಿತ್

16-10-53 ರಿಂದ ಅಮೋಘಪ್ರಾರಂಭ

ದಿನವಹಿ 3 ಪ್ರದರ್ಶನಗಳು

ಕಾರ್ದಾರ್‌ರವರ ಹಿಂದಿ ಚಿತ್ರ.

★ ದಿ ಲೇ ನಾ ದಾ ನ್ ★

ಪಾತ್ರ:-ಪೀಸ್ ಕನ್ವಾರ್, ಶ್ಯಾಮ್, ಹಿನ್ನಲೆ ಸಂಗೀತಗಾರರಾದ ತಲತ್‌ಮಹಮದ್

ಬೆಳಗಿನ ಪ್ರದರ್ಶನ:--17, 18 ನೇ ತಾರೀಖು ೧೦--೩೦ ಗಂಟೆಗೆ

ಪ್ರಕಾಶಕರು ಮತ್ತು ಮುದ್ರಕರು.

ಜಿ. ಎಲ್. ಸ್ವಾಮಿ.

ಸಮಾಚಾರ ಪ್ರೆಸ್, ಮೈಸೂರು.

ವಿಶ್ವೇಶ್ವರಯ್ಯ ಯೋಜನೆ ಎಲ್ಲಾ ಜಿಲ್ಲೆಗಳಲ್ಲೂ ಜಾರಿಗೆ ತರಲಾಗುವುದು

ಬೆಂಗಳೂರು ೧೬

ಸಂಸ್ಥಾನದ ಕೆಲವು ಜಿಲ್ಲೆಗಳಲ್ಲಿ ಮಾತ್ರ ಈಗ ಜಾರಿಯಲ್ಲಿರುವ ವಿಶ್ವೇಶ್ವರಯ್ಯ ಯೋಜನೆಯನ್ನು ಎಲ್ಲಾ ಜಿಲ್ಲೆಗಳಿಗೂ ಸದ್ಯದಲ್ಲಿಯೇ ಜಾರಿಗೆ ತರಲಾಗುವುದೆಂದೂ ಈ ಕಾರ್ಯಕ್ಕಾಗಿ ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಲಾಗುವುದೆಂದೂ ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ಸಂಸ್ಥಾನದಲ್ಲಿ ಕುಟೀರ ಕೈಗಾರಿಕೆಗಳಿಗೆ ನೆರವು

ಸಂಸ್ಥಾನದಲ್ಲಿ ಕುಟೀರ ಕೈಗಾರಿಕೆಗಳ ಅಭಿವೃದ್ಧಿಗಾಗಿ ಕೇಂದ್ರಮಂಡಲಿಯು ೬ ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿರುವುದಾಗಿ ತಿಳಿಯಬರುತ್ತದೆ.

ಮಕ್ಕಳ ದಿನಾಚರಣೆ

ಮೈಸೂರು ೧೬

ದಸರಾ ವಸ್ತುಪ್ರದರ್ಶನದ ಅಂಗವಾಗಿ "ಮಕ್ಕಳ ದಿನ" ವನ್ನು ಇದೇ ೨೨ ನೇ ತಾರೀಖು ಸಂಜೆ ಏರ್ಪಡಿಸಿದೆ. ಶಿಶುವಿಹಾರದ ಮಕ್ಕಳಿಂದ ಆಟಪಾಟಗಳು, ನಾಟಕ, ನೃತ್ಯ, 'ಮಕ್ಕಳ ನೃತ್ಯಗಾನ', ವ್ಯಾಯಾಮ ಪ್ರದರ್ಶನ, ಕೋಲಾಟ ಇನ್ನೂ ಇತರ ಮನರಂಜನೆಯ ಕಾರ್ಯಕ್ರಮಗಳು ಜರುಗಲಿವೆ.

ಇದಲ್ಲದೆ ೨ ವರ್ಷ ವಯಸ್ಸಿನಿಂದ ೬ ವರ್ಷ ವಯಸ್ಸಿನ ಒಳಗೆ ಇರುವ ಮಕ್ಕಳಿಗಾಗಿಯೇ ವಿವಿಧ ವೇಷಸ್ಪರ್ಧೆ (Fancy dress) ಏರ್ಪಡಿಸಿದೆ. ಸಾರ್ವಜನಿಕರು ತಮ್ಮ ಮಕ್ಕಳ ವಿವಿಧ ವೇಷ ಸ್ಪರ್ಧೆಯಿಂದಲೂ ಈ ಉತ್ಸವವನ್ನು ಶೋಭಾಯಮಾನಗೊಳಿಸಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ.

ನಾಟಕರತ್ನ ಜಿ. ಹೆಚ್. ವೀರಣ್ಣನವರ ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪನಿ (ರಿ)

16--10--53 ನೇ ರಾತ್ರಿ 10 ಗಂಟೆಗೆ ಶಿವರಾಂಪೇಟೆಯ ರತ್ನಾವಳಿ ಥಿಯೇಟರಿನಲ್ಲಿ

ಚಲನಚಿತ್ರದಲ್ಲಿ ಖ್ಯಾತಿ ಪಡೆದ ನಾಟಕ ರತ್ನ ಜಿ. ಹೆಚ್. ವೀರಣ್ಣ, ಜಯಮ್ಮ ಮತ್ತು ಲಕ್ಷಮ್ಮ ನಟಿಸಿರುವ

ಕುರುಕ್ಷೇತ್ರ

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು

ಮೈಸೂರು ಸರ್ಕಾರ

ಸಂಕ್ಷಿಪ್ತ ಪ್ರಕಟಣೆ

1953–54 ನೇ ಸಾಲಿನಲ್ಲಿ ಕೆಳಗೆ ಕಂಡ ಕೂಪುಗಳಲ್ಲಿ ಗಂಧದ ಮರಗಳನ್ನು ಕಡಿಯುವುದು, ಅವುಗಳನ್ನು ಸಂಗ್ರಹಿಸುವುದು ಮತ್ತು ಮೈಸೂರುಸೌತಿನ ರೈಲ್ವೆ ಸೈಡಿಂಗಿನಲ್ಲಿರುವ ಗಂಧದ ಎಣ್ಣೆ ಕಾರ್ಖಾನೆಗೆ ಸಾಗಿಸುವಬಗ್ಗೆ ಮೊಹರಾದ ಟೆಂಡರುಗಳನ್ನು 1953 ನೇ ಅಕ್ಟೋಬರ್ 23 ನೇ ತಾರೀಖು ಶುಕ್ರವಾರದವರೆಗೆ ಆಹ್ವಾನಿಸಲಾಗಿದೆ.

ರೇಂಜು	ಕೂಪಿನ ಹೆಸರು	ಮರಗಳು ದೊರೆಯುವ ಪ್ರಮಾಣದ ಅಂದಾಜು
ಚಾಮರಾಜನಗರ	1) ಗುಡಿ ಸರ್ಕಲ್, ಕೊಮಾರಮತ್ತಿ ಪ್ರದೇಶ	500 ಟನ್ನು
	2) ಬೇಡಗುಳಿ (ಮರಮುಟ್ಟುಗಳ ಕೂಪ್) 1952--53	500 ,,
	3) ಮರಪಲ ಕೂಪ್	500 ,,
	ಒಟ್ಟು	1,500 ,,

ಪ್ರತಿ ಟೆಂಡರಿನೊಡನೆ 200 ರೂ. ಅಷ್ಟು ನಗದು ಠೇವಣಿಯಾಗಿ ಕಳುಹಿಸಬೇಕು.

ಹೆಚ್ಚಿನ ವಿವರಗಳನ್ನು 1953 ನೇ ಅಕ್ಟೋಬರ್ 15 ಮತ್ತು 22ನೇ ತಾರೀಖುಗಳ ಗೆಜೆಟ್ಟಿನಲ್ಲಿ ನೋಡಬಹುದು ಅಥವಾ ಕೆಲಸದ ದಿನ ಮತ್ತು ವೇಳೆಗಳಲ್ಲಿ ಮೈಸೂರು ಗಂಧದ ಎಣ್ಣೆ ಕಾರ್ಖಾನೆಯ ಜನರಲ್ ಮ್ಯಾನೇಜರ ಕಛೇರಿಯಲ್ಲಿ ಪಡೆಯಬಹುದು.

ಪಿ. ತಿಪ್ಪೇಸ್ವಾಮಿ, ಜನರಲ್ ಮ್ಯಾನೇಜರ್,
ಸರ್ಕಾರಿ ಗಂಧದೆಣ್ಣೆ ಕಾರ್ಖಾನೆ, ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೫೧

೨೨-೧೦-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಹೈದರಾಬಾದ್ ಕಾಂಗ್ರೆಸ್ ಬಿಕ್ಕಟ್ಟು ಪರಿಹಾರ ಯತ್ನ

ಹೈದರಾಬಾದ್ ಕಾಂಗ್ರೆಸ್ಸಿನಲ್ಲಿ ಉಂಟಾಗಿರುವ ಭಿನ್ನತೆಯನ್ನು ಹೋಗಲಾಡಿಸಲು ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡ್ ವಲಯಗಳಲ್ಲಿ ಸಮಾಲೋಚನೆ ಪ್ರಾರಂಭವಾಗಿವೆ.

ಹೈದರಾಬಾದಿನ ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾವ್, ಗೃಹಸಚಿವ ಶ್ರೀ ಡಿ.ಜಿ. ಬಿಂದು ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಮಾನಂದತೀರ್ಥರವರು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಬಲವಂತರಾವ್ ಮೆಹ್ತಾ, ಶ್ರೀ ಅಗರವಾಲಾ, ಶ್ರೀ ಶ್ರೀನಿವಾಸ ಮಲ್ಯರವರನ್ನು ಭೇಟಿಮಾಡಿದ್ದರು. ಶ್ರೀ ಬಿಂದೂರವರು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರನ್ನು ಭೇಟಿಮಾಡಿದ್ದರು.

ಈಗಿನ ಮಾತುಕತೆಗಳ ಪರಿಣಾಮವಾಗಿ ಭಿನ್ನತೆಯೆಲ್ಲವೂ ಬಗೆಹರಿಯುವುದೆಂಬ ಆಶಾಭಾವನೆ ಮೂಡಿದೆ. ಈದಿನ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ವಿಷಯವನ್ನು ಪರಿಶೀಲಿಸಲಿದೆ. ಹೈದರಾಬಾದಿನ ಮತ್ತಿಬ್ಬರು ಮಂತ್ರಿಗಳಾದ ಶ್ರೀ ರಂಗರೆಡ್ಡಿ ಮತ್ತು ಚೆನ್ನರೆಡ್ಡಿಯವರೂ ದೆಹಲಿಗೆ ಹೋಗಲಿರುವರು.

ಕೊಡಗಿನಲ್ಲಿ ವಿಶೇಷ ಬತ್ತದ ಪೈರು

ಈ ವರ್ಷ ಕೊಡಗಿನಲ್ಲಿ ೬೨ ಸಾವಿರ ಟನ್‌ಗಳಷ್ಟು ಬತ್ತ ಬೆಳೆಯಲಾಗಿದೆಯೆಂದೂ ಸಂಸ್ಥಾನಕ್ಕೆ ಬೇಕಾಗುವ ೪೦ ಸಾವಿರ ಟನ್‌ಗಳನ್ನು ಬಿಟ್ಟು, ಮಿಕ್ಕವನ್ನು ಹೊರಕ್ಕೆ ಸರಬರಾಜು ಮಾಡಲಾಗುವುದೆಂದೂ ಅಲ್ಲಿನ ಮುಖ್ಯಮಂತ್ರಿ ಶ್ರೀ ಪೂಣಾಚಾರವರು ತಿಳಿಸಿದ್ದಾರೆ.

ದೀಪಾವಳಿ ಉಡುಗೊರೆ

ಕೊರಿಯಾದಲ್ಲಿರುವ ಭಾರತ ಪಡೆಯವರಿಗೆ ದೀಪಾವಳಿಹಬ್ಬದ ಉಡುಗೊರೆ ಹಣದ ನಿಧಿಗೆ ಕೊಡಗು ಸರ್ಕಾರ ೧ ಸಾವಿರ ರೂ. ಗಳನ್ನು ಕೊಟ್ಟಿದೆ.

ಉಪವಾಸ ಮುಕ್ತಾಯ

ಮಂಡ್ಯದ ಬಳಿ ಇರುವ ವ್ಯವಸಾಯ ಕೇಂದ್ರದಲ್ಲಿ ಶಿಕ್ಷಣ ಪಡೆಯುತ್ತಿರುವವರು ತಮ್ಮ ವೇತನವನ್ನು ಕಡಮೆಮಾಡಿದುದಕ್ಕಾಗಿ ನಡೆಸುತ್ತಲಿದ್ದ ಉಪವಾಸ ಮುಷ್ಕರವು ನಿನ್ನೆ ನಿಲ್ಲಿಸಲಾಯಿತು. ಸ್ಥಳೀಯ ಮುಖಂಡರು ಈ ವಿಷಯದಲ್ಲಿ ಸರ್ಕಾರದೊಡನೆ ವ್ಯವಹರಿಸಿ ಸಮಸ್ಯೆ ಬಗೆಹರಿಸಲು ಭರವಸೆಯಿತ್ತಿದ್ದರಿಂದ ಮುಷ್ಕರ ನಿಂತಿತು.

ಜಿಲ್ಲಾ ನ್ಯಾಯಾಧೀಶರುಗಳ ವರ್ಗ

ಮೈಸೂರು ೨೨

ಬೆಂಗಳೂರಿನ ಜಿಲ್ಲಾ ಜಡ್ಜರಾದ ಶ್ರೀ ಹೊಂಬೇಗೌಡರನ್ನು ಮೈಸೂರಿನ ಪ್ರಿನ್ಸಿಪಾಲ್ ಜಿಲ್ಲಾ ಜಡ್ಜರಾಗಿಯೂ, ಮೈಸೂರಿನ ಶ್ರೀ ಟಿ. ಗುರುನಂಜಯ್ಯನವರನ್ನು ಬೆಂಗಳೂರಿನ ತೃತೀಯ ಅಡಿಷನಲ್ ಜಿಲ್ಲಾ ಜಡ್ಜರಾಗಿಯೂ ವರ್ಗಾಯಿಸಲಾಗಿದೆ.

ಎನ್.ಸಿ.ಸಿ. ಶಿಬರಕ್ಕೆ ರಾಜಪ್ರಮುಖರ ಭೇಟಿ

ಮೈಸೂರು ೨೨

ಕೃಷ್ಣರಾಜಪೇಟೆ ಹೇಮಗಿರಿಯಲ್ಲಿ ನಡೆಯುತ್ತಿರುವ ನ್ಯಾಷನಲ್ ಕ್ಯಾಡೆಟ ರವರ ಗ್ರಾಮಸೇವಾ ಶಿಬರದ ಮುಕ್ತಾಯ ಸಮಾರಂಭವು ಇದೇ ೨೬ನೇ ತಾರೀಖು ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯುವುವೆಂದು ಗೊತ್ತಾಗಿದೆ.

ಮೈಸೂರು ಪುರಸಭೆಯ ಮೇಲೆ ದಾವಾ

ಮೈಸೂರು ಪುರಸಭೆಯವರು ಮನೆ ಕಂದಾಯ ಮತ್ತು ನೀರಿನ ತೆರಿಗೆಗಳನ್ನು ವಿಧಿಸಿರುವುದು ಕಾನೂನಿಗೆ ವಿರುದ್ಧವಾಗಿದೆಯೆಂದು ಶ್ರೀ ತಗಡೂರು ರಾಮಚಂದ್ರರಾಯರು ಮತ್ತು ಶ್ರೀ ರಾಮಯ್ಯರವರು ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟಿನವರು ಸ್ವೀಕರಿಸಿದ್ದಾರೆ.

ಹೇಮಾವತಿ ನದಿಯಲ್ಲಿ ವಿದ್ಯಾರ್ಥಿಯ ದುರಂತ

ಬೆಂಗಳೂರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿ ಶ್ರೀ ಸಿ. ವೆಂಕಟರಮಣ ಎಂಬುವರು ಕೃಷ್ಣರಾಜಪೇಟೆ ಹೇಮಗಿರಿಯಲ್ಲಿ ನಡೆಯುತ್ತಿರುವ ಎನ್.ಸಿ.ಸಿ.ಯವರ ರಸ್ತೆ ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದು, ಕಳೆದ ೧೬ನೇ ತಾರೀಖು ಹೇಮಾವತಿ ನದಿಯಲ್ಲಿ ಅಕಸ್ಮಾತ್ ಕಾಲುಜಾರಿ ಮುಳುಗಿಹೋದರೆಂದು ವರದಿಯಾಗಿದೆ.

ಗಾಂಧೀ ವಿಚಾರ ಕೇಂದ್ರ

ದೆಹಲಿಯಲ್ಲಿ ಗಾಂಧೀ ವಿಚಾರ ಕೇಂದ್ರವನ್ನು ಸ್ಥಾಪಿಸಲು ಕೇಂದ್ರ ಸರ್ಕಾರದವರು ನಿರ್ಧರಿಸಿದ್ದಾರೆ.

ಇನ್ನೂ ಒಂದು ವಾರ ಪ್ರತಿಬಂಧಕಾಜ್ಞೆ

ನಗರದ ಕೆಲವು ಪ್ರದೇಶಗಳಲ್ಲಿ ಜಾರಿ

ಮೈಸೂರು ೨೨

ನಗರದ ಕನ್ನೇಗೌಡನ ಕೊಪ್ಪಲು, ಆದಿಕರ್ನಾಟಕಪುರ, ಪಡುವಾರಹಳ್ಳಿ, ಕ್ಯಾತಮಾನಹಳ್ಳಿ, ಕುಂಬಾರಕೊಪ್ಪಲು, ಹಳೇಬಂಡೀಕೇರಿ ಮುಂತಾದ ಪ್ರದೇಶಗಳಲ್ಲಿ ಕಳೆದ ೯ನೇ ತಾರೀಖಿನಿಂದ ಸಭೆ, ಮೆರವಣಿಗೆ ಮುಂತಾದುವುಗಳನ್ನು ನಿಷೇಧಿಸಿ ೧೪೪ನೇ ವಿಧಿ ಪ್ರಕಾರ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿದ್ದನ್ನು ನಿನ್ನೆಯಿಂದ ಇನ್ನೂ ಒಂದುವಾರ ಮುಂದುವರಿಸಿ ಜಿಲ್ಲಾ ಮ್ಯಾಜಿಸ್ಟ್ರೇಟರು ಆಜ್ಞೆ ಹೊರಡಿಸಿದ್ದಾರೆ. ಈ ಪ್ರದೇಶಗಳಲ್ಲಿ ಉಭಯಪಕ್ಷಗಳ ನಡುವೆ ಇನ್ನೂ ಸೌಹಾರ್ದ ಮನೋಭಾವ ಉಂಟಾಗಿಲ್ಲವಾದರಿಂದ ಈ ಪ್ರತಿಬಂಧಕಾಜ್ಞೆಯನ್ನು ಮುಂದುವರಿಸಲಾಗಿದೆ.

ಮಕ್ಕಳ ಪ್ರದರ್ಶನದಲ್ಲಿ ಬಹುಮಾನ

ಮೈಸೂರು ೨೨

ಮೈಸೂರು ದಸರಾ ವಸ್ತುಪ್ರದರ್ಶನವಲ್ಲಿ ನಿನ್ನೆ ನಡೆದ ಮಕ್ಕಳ ಪ್ರದರ್ಶನದಲ್ಲಿ ಜರ್ವೀರ್‌ಜ ಎಂಬ ಒಂದುವರ್ಷದ ಒಳಗಾಗಿರುವ ಮಗುವು ಚಾಂಪಿಯನ್ ಬಹುಮಾನವನ್ನು ಪಡೆದಿದೆ. ೬ ತಿಂಗಳ ವಯಸ್ಸಿನ ಕೆಳಗಿನ ಮಕ್ಕಳಲ್ಲಿ ಮಹಮದ್ ಖಾಸಿಂ ಎಂಬ ಮಗು ಒಂದನೇ ಬಹುಮಾನ, ಓಂಪ್ರಕಾಶ್ ೨ ನೇ ಬಹುಮಾನ ಮತ್ತು ಜಗಜೀವನರಾವ್ ಎಂಬ ಮಗು ೩ ನೇ ಬಹುಮಾನವನ್ನೂ, ೬ ತಿಂಗಳ ಮೇಲ್ಪಟ್ಟು ೧೨ ತಿಂಗಳೊಳಗಿನವುದರಲ್ಲಿ ಜರ್ವೀರ್‌ಜ ಒಂದನೇ ಬಹುಮಾನ, ರೇಣುಕಾಪ್ರಸಾದ್ ೨ ನೇ ಬಹುಮಾನ ಮತ್ತು ರಾಜೇಶ್ವರ ೩ ನೇ ಬಹುಮಾನವನ್ನು ಪಡೆದುವು. ೧೨ ತಿಂಗಳ ಮೇಲ್ಪಟ್ಟು ೧೮ ತಿಂಗಳೊಳಗಿರುವ ಮಕ್ಕಳಲ್ಲಿ ರಮಾನಂದ ಒಂದನೇ ಬಹುಮಾನ, ಶ್ರೀನಿವಾಸ ರಾಜೇಅರಸ್ ೨ ನೇ ಬಹುಮಾನ ಮತ್ತು ವೆಂಕಟ ೩ ನೇ ಬಹುಮಾನವನ್ನು ಪಡೆದವು.

ಬೆಟ್ಟದ ಜಾತ್ರೆ

ನಿನ್ನೆ ಬೆಳಿಗ್ಗೆ ಶ್ರೀ ಚಾಮುಂಡೇಶ್ವರೀ ಅಮ್ಮನವರ ರಥೋತ್ಸವವು ಬೆಟ್ಟದಮೇಲೆ ಯಾವ ಗಲಭೆಯೂ ಇಲ್ಲದೆ ಮಾಮೂಲಿನಂತೆ ವಿಜೃಂಭಣೆಯಿಂದ ಜರುಗಿತು. ೭-೪೫ ಗಂಟೆಗೆ ಶ್ರೀಮನ್ಮಹಾರಾಜರವರು ಬೆಟ್ಟಕ್ಕೆ ದಯಮಾಡಿಸಿ, ರಥೋತ್ಸವದಲ್ಲಿ ಭಾಗವಹಿಸಿದ್ದರು. ವಿಶೇಷ ಪೋಲೀಸ್ ಬಂದೋಬಸ್ತು ವ್ಯವಸ್ಥೆ ಮಾಡಲಾಗಿತ್ತು.

ವಯಸ್ಕರ ಶಿಕ್ಷಣ ಸಮಿತಿ ಅಧಿಕಾರವರ್ಗ

ಮೈಸೂರು ೨೨

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಗೆ ಶ್ರೀ ಟಿ. ಮಾವಯ್ಯಗೌಡರನ್ನು ಅಧ್ಯಕ್ಷರನ್ನಾಗಿಯೂ ಡಾ|| ಎಂ. ಸಿದ್ದಲಿಂಗಯ್ಯನವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಎ. ಕೃಷ್ಣಮೂರ್ತಿರಾವ್ ರವರನ್ನು ಖಜಾಂಚಿಯಾಗಿಯೂ ಈ ಸಾಲಿಗೆ ಚುನಾಯಿಸಲಾಯಿತು.

ಇದೇ ೨೬ನೇ ತಾರೀಖು ನಡೆಯುವ ಸಭೆಯಲ್ಲಿ ಕಾರ್ಯದರ್ಶಿಯವರನ್ನು ನೇಮಿಸಲಾಗುವುದು.

ಮೈಸೂರು ಸಾಬು ಆಗಮನ

ಹಾಲಿವುಡ್ಡಿನ ಸುಪ್ರಸಿದ್ದ ನಟ ಮೈಸೂರು ಸಾಬುವು ಈಗ ಭಾರತಕ್ಕೆ ಆಗಮಿಸಿದ್ದಾನೆ. ೧೭ ವರ್ಷಗಳ ಹಿಂದೆ ಲಂಡನ್ನಿನ ಅಲೆಕ್ಸಾಂಡರ್ ಕೋರ್ಡ್ ಚಿತ್ರಕಂಪೆನಿಯ "ಎಲಿಫೆಂಟ್ ಬಾಯ್" ಎಂಬ ಚಿತ್ರದಲ್ಲಿ ಭಾಗವಹಿಸಲು ಆತನನ್ನು ಆರಿಸಲಾಯಿತು. ಮೈಸೂರಿನ ಬಿಳಿಗಿರಿರಂಗನ ಬೆಟ್ಟದಲ್ಲಿ ಆತನು ತನ್ನ ಚಿಕ್ಕವಯಸ್ಸಿನಲ್ಲಿ ಆನೆಗಳ ಮೇಲೆ ಸವಾರಿಮಾಡುವುದನ್ನು ಕಂಡು, ಅಲೆಕ್ಸಾಂಡರ್ ರವರು ಲಂಡನ್ನಿಗೆ ಕರೆದೊಯ್ದರು. ಅಲ್ಲಿ ಆತನನ್ನು ತರಪೇತು ಮಾಡಿದರು. ಅನೇಕ ಚಿತ್ರಗಳಲ್ಲಿ ಆತನು ಪಾತ್ರವಹಿಸಿ, ಅಮೆರಿಕದ ಹಾಲಿವುಡ್ಡಿನ ಸುಪ್ರಸಿದ್ಧ ನಟನಾದನು.

ಕೇವಲ ಅವಿದ್ಯಾವಂತ ಅರಣ್ಯ ಹುಡುಗನಾದ ಸಾಬು ಈಗ ಪ್ರಪಂಚದಲ್ಲೇ ಹೆಸರುವಾಸಿಯಾಗಿದ್ದಾನೆ.

ಬೊಂಬಾಯಿನ ಕಿಶೋರುಸಾಹು ಚಿತ್ರದಲ್ಲಿ ಆತನು ಈಗ ಭಾಗವಹಿಸಲು ನಾಲ್ಕು ತಿಂಗಳು ಭಾರತದಲ್ಲಿ ಇರುವನು. ಆತನ ಪತ್ನಿ ಮತ್ತು ಎರಡೂವರೆ ವರ್ಷದ ಮಗು ಸಹ ಬಂದಿದ್ದಾರೆ.

ಇನ್ನು ಕೆಲವುದಿನಗಳಲ್ಲೇ ಆತನು ಮೈಸೂರಿಗೆ ಆಗಮಿಸಿ ತಮ್ಮ ಸಂಬಂಧಿಗಳನ್ನು ಕಾಣಲಿರುವನು.

ರೆವಿನ್ಯೂ ಬೋರ್ಡು ರದ್ದು

ಮದ್ರಾಸ್ ಪ್ರಾಂತ್ಯವನ್ನು ಮೂರು ವಿಭಾಗಗಳಾಗಿ ಮಾಡಿ ಅಲ್ಲಿಗೆ ಡಿವಿಜನಲ್ ಕಮಿಷನರನ್ನು ನೇಮಿಸಿ ಈಗಿರುವ ರೆವಿನ್ಯೂ ಬೋರ್ಡನ್ನು ರದ್ದುಗೊಳಿಸಲಾಗುವುದೆಂದು ತಿಳಿಯಬರುತ್ತದೆ.

೧೯೫೩-೫೪ ರಲ್ಲಿ ಅಕ್ಕಿಯ ಆಮದು ಇಲ್ಲ

ಕೇಂದ್ರ ಆಹಾರ ಸಚಿವರ ಹೇಳಿಕೆ

ದೇಶದಲ್ಲಿ ಈಗ ಅಕ್ಕಿಯ ಪರಿಸ್ಥಿತಿಯು ಬಹಳ ಉತ್ತಮಗೊಂಡಿದೆ ಅನೇಕ ಪ್ರಾಂತ್ಯಗಳಲ್ಲಿ ಬತ್ತದ ಬೆಳೆಯು ನಿರೀಕ್ಷಿಸಿದ್ದಕ್ಕಿಂತ ಹೆಚ್ಚಾಗಿ ಆಗಿದೆ. ಕೇಂದ್ರ ಸರ್ಕಾರವು ಸಹ ಅಕ್ಕಿ ದಾಸ್ತಾನನ್ನು ಮಾಡುವುದಿಲ್ಲ ಪ್ರಾಂತ್ಯಗಳೇ ಈ ಕೆಲಸದಲ್ಲಿ ತೊಡಗಿವೆ ಅತ್ಯುಗ್ರ ಪರಿಸ್ಥಿತಿ ಉಂಟಾದಾಗ ಬರ್ಮಾದಿಂದ ಅಕ್ಕಿಯನ್ನು ತರಿಸಿಕೊಳ್ಳಲಾಗುತ್ತದೆ ಎಂದು ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಹೇಳಿದ್ದಾರೆ.

ಪರಿಸ್ಥಿತಿ ಉತ್ತಮವಾಗಿದ್ದರೂ ಸಧ್ಯಕ್ಕೆ ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಅಕ್ಕಿ ರವಾನೆ ಮೇಲಿರುವ ಹತೋಟಿಯನ್ನು ತೆಗೆಯುವುದಿಲ್ಲವೆಂದೂ ಅವರು ಹೇಳಿದ್ದಾರೆ.

ಭಾರತದ ಆಸ್ಪತ್ರೆಗಳಿಗೆ 'ಕೇರ್' ಸಂಸ್ಥೆಯ ನೆರವು

ಅಮೆರಿಕದ ಸಾರ್ವಜನಿಕ ಆರೋಗ್ಯ ಸಂಘದ ಮಾಜಿ ಅಧ್ಯಕ್ಷರಾಗಿರುವ ಡಾ|| ಚಾರ್ಲ್ಸ್ ಎಫ್ ವಿಲಿನ್‌ಸ್ಕೀಯವರು ಕೇರ್ ಸಂಸ್ಥೆಯ ಮೂಲಕ ಭಾರತ ಮತ್ತು ಇತರ ಆಗ್ನೇಯ ಏಷ್ಯಾ ರಾಷ್ಟ್ರಗಳ ಆಸ್ಪತ್ರೆಗಳಿಗೆ ಸಲಕರಣೆಗಳನ್ನು ಒದಗಿಸಲು ೭೭,೫೦,೦೦೦ ಡಾಲರುಗಳ ಸಂಗ್ರಹಣಾ ಕಾರ್ಯದಲ್ಲಿ ತೊಡಗಿದ್ದಾರೆ. ವಿಶ್ವಸಂಸ್ಥೆಯ ಆರೋಗ್ಯ ಸಂಘದ ಆಶ್ರಯದಲ್ಲಿ ಈ ಕಾರ್ಯ ನಡೆಯುತ್ತಿದೆ. ಹಾಸಿಗೆ, ವೈದ್ಯಕೀಯ ಸಲಕರಣೆ ಮುಂತಾದುವುಗಳ ಕೊರತೆಯಿರುವ ಭಾರತ ಮತ್ತು ನೆರೆರಾಷ್ಟ್ರಗಳ ಸುಮಾರು ೩೦೦ ವೈದ್ಯ ಸಂಸ್ಥೆಗಳಿಗೆ ಇದರಿಂದ ಸಹಾಯ ನೀಡಲಾಗುತ್ತದೆ.

ಕೊರಿಯಾದಲ್ಲಿ ಭಾರತ ಸೈನಿಕರಿಗೆ ದೀಪಾವಳಿ ಬಹುಮಾನ

ಕೊರಿಯಾ ಯುದ್ಧ ಖೈದಿಗಳ ಮೇಲ್ವಿಚಾರಕ ಕೆಲಸದಲ್ಲಿ ತೊಡಗಿರುವ ಭಾರತ ಸೈನ್ಯ ದಳದವರಿಗೆ ದೀಪಾವಳಿ ಉಡುಗೊರೆಗಾಗಿ ಇಲ್ಲಿಯವರೆಗೆ ೮೦೯೫೫ ರೂ.ಗಳನ್ನು ಭಾರತದಲ್ಲಿ ಸಂಗ್ರಹಿಸಿರುವುದಾಗಿ ತಿಳಿಯಬರುತ್ತದೆ. ಆ ಹಬ್ಬದ ವೇಳೆಗೆ ಅವರಿಗೆ ಬಟ್ಟೆ ಮತ್ತು ಇತರ ವಸ್ತುಗಳನ್ನು ಕೊಂಡು ಕಳಿಹಿಸುವುದಲ್ಲದೆ ಸುಮಾರು ೨೦೦೦ ಪೌಂಡುಗಳಷ್ಟು ಸಿಹಿ ತಿಂಡಿಯನ್ನೂ ಕಳುಹಿಸಲಾಗುತ್ತದೆ.

ಮದ್ರಾಸ್‌ನಲ್ಲಿ ವಿಶೇಷ ಮಳೆ

ಮದ್ರಾಸ್‌ನಲ್ಲಿ ನಿನ್ನೆ ಮತ್ತು ಮೊನ್ನೆ ವಿಶೇಷವಾಗಿ ಮಳೆಬಂದು ಅನೇಕ ರಸ್ತೆಗಳು ನೀರಿನಿಂದ ಮುಳುಗಿಹೋಗಿದ್ದುವು. ನಿನ್ನೆಗೆ ಮುಕ್ತಾಯವಾದ ೨೦ ಗಂಟೆಗಳಲ್ಲಿ ೬ ಅಂಗುಲ ಮಳೆ ಬಂದಿತೆಂದು ತಿಳಿಯಬರುತ್ತದೆ.

ರಾಜಕಮಲ್, ಮೈಸೂರು

23--10--53 ರಿಂದ 2 ನೇ ವಾರ

--ಸತ್ಯಶೋಧನೆ--[ಶ ಮಿ ಟು]

ತಾರಾಗಣ:—ಬಿ. ಜಯಮ್ಮ

ಹೊನ್ನಪ್ಪ ಭಾಗವತರ್, ಜಿ.ಹೆಚ್. ವೀರಣ್ಣ

ಬಹುಮಾನ ವಿನಿಯೋಗ

ಮೈಸೂರು ೨೨

ದಸರಾ ವಸ್ತುಪ್ರದರ್ಶನದ ಬಹುಮಾನ ವಿನಿಯೋಗ ಸಮಾರಂಭವು ಅಕ್ಟೋಬರ್ ೨೪ ನೇ ತಾರೀಖು ಬೆಳಿಗ್ಗೆ ೮-೪೫ ಕ್ಕೆ ನೆರವೇರುತ್ತದೆ ಗೃಹಸಚಿವ ಶ್ರೀ ಸಿದ್ದವೀರಪ್ಪನವರು ಬಹುಮಾನ ವಿನಿಯೋಗ ಮಾಡುತ್ತಾರೆ.

ಟಿಬೆಟ್ ಬಗ್ಗೆ ಭಾರತ-ಚೈನಾ ಮಾತುಕತೆ

ಭಾರತ-ಟಿಬೆಟ್ ನಡುವೆ ಸಂಚಾರ, ಅಂಚೆವ್ಯವಸ್ಥೆ ಮುಂತಾದ ವಿಷಯಗಳಲ್ಲಿ ಚರ್ಚೆ ನಡೆಸಲು ಭಾರತವು ಮಾಡಿದ್ದ ಸಲಹೆಯನ್ನು ಚೈನಾ ಜನತಾಸರ್ಕಾರವು ಒಪ್ಪಿ ಮುಂದಿನ ಡಿಸೆಂಬರ್‌ನಲ್ಲಿ ಪೀಕಿಂಗ್‌ನಲ್ಲಿ ಈ ಬಗ್ಗೆ ಸಮ್ಮೇಳನ ನಡೆಯಬಹುದೆಂದು ತಿಳಿಸಿರುವುದಾಗಿ ಗೊತ್ತಾಗಿದೆ.

ಕುಶಲ ಕಲೆಗಳ ಸಂಸ್ಥೆ

ಭಾರತ ಸರ್ಕಾರವು ದೇಶದಲ್ಲಿ ಕುಶಲ ಕಲೆಗಳಿಗಾಗಿ ಉತ್ತೇಜನ ಕೊಡುವ ಉದ್ದೇಶದಿಂದ ಒಂದು ಕೇಂದ್ರ ಸಂಸ್ಥೆಯನ್ನು ಸಧ್ಯದಲ್ಲೇ ಸ್ಥಾಪಿಸಲಿದೆ.

ನಾಟಕರತ್ನ ಜಿ.ಹೆಚ್. ವೀರಣ್ಣನವರ

ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)

22--10--53 ನೇ ರಾತ್ರಿ 10 ಗಂಟೆಗೆ

ಶಿವರಾಂಪೇಟೆಯ ರತ್ನಾವಳಿ ಥಿಯೇಟರಿನಲ್ಲಿ

ಚಲನಚಿತ್ರದಲ್ಲಿ ಖ್ಯಾತಿ ಪಡೆದ ನಾಟಕ ರತ್ನ ಜಿ. ಹೆಚ್. ವೀರಣ್ಣ, ಜಯಮ್ಮ ಮತ್ತು ಲಕ್ಷ್ಮಮ್ಮ ನಟಿಸಿರುವ

ಕುರುಕ್ಷೇತ್ರ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

-ಮೈಸೂರು ಪೇಟೆಧಾರಣೆ-

ತಾರೀಖು ೨೧—೧೦—೧೯೫೩

ಪಲ್ಲ	ರೂ. ಅ	ರೂ. ಅ
ಕಡಲೇಕಾಯಿ	೧೨—೨	೨೩—೪
ಎಳ್ಳು	೭೮—	೮೩—೬
ಹುರಳಿ	—	—
ತೊಗರಿ	೩೬—೨	೩೬—೬
ಹೆಸರು	೩೧—	೪೩—೨
ಅಲಸಂದೆ	೩೦—	೬೬—
ಮೆಣಸಿನಕಾಯಿ	೪೦—	೪೨—೧೯
ಹುಣಸೇಹಣ್ಣು	೮—	—
ತೆಂಗಿನಕಾಯಿ	—	—

ಕಾಡುಕುರುಬರ ನಿವಾಸಕ್ಕೆ ಭೇಟಿ

ಮೈಸೂರು ೨೨

ಅಖಿಲ ಭಾರತ ರೆಡ್‌ಕ್ರಾಸ್ ಸಂಸ್ಥೆಯ ಮೈಸೂರು ಶಾಖೆ ಕಾರ್ಯದರ್ಶಿ ಶ್ರೀಮತಿ ಲಕ್ಷ್ಮೀದೇವಿ ಕೃಷ್ಣಪ್ಪನವರು ಜಿಲ್ಲಾ ಅರಣ್ಯಾಧಿಕಾರಿ ಶ್ರೀ ಗುಲಾಬ್‌ಸಿಂಗ್‌ರೊಡನೆ ಮೊನ್ನೆದಿನ ಕಾಕನಕೋಟೆ ಅರಣ್ಯದಲ್ಲಿರುವ ಕಾಡುಕುರುಬರ ಸ್ಥಿತಿಗತಿಗಳನ್ನು ತಿಳಿಯಲು ಅಲ್ಲಿಗೆ ಭೇಟಿ ಇತ್ತಿದ್ದರು. ಅವರು ವಾಸಿಸುವ ಗುಡಿಸಲುಗಳಿಗೆ ಭೇಟಿ ಇತ್ತು ಹೆಂಗಸರು, ಗಂಡಸರು ಮತ್ತು ಮಕ್ಕಳಿಗೆ ಬಟ್ಟೆಗಳನ್ನು ಹಂಚಿದರು ಸರ್ಕಾರದವರು ಒದಗಿಸಿರುವ ಸೌಲಭ್ಯಗಳನ್ನು ಅವರು ಸದುಪಯೋಗಪಡಿಸಿಕೊಂಡು, ತಮ್ಮ ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗಳನ್ನು ಉತ್ತಮಪಡಿಸಿಕೊಳ್ಳಬೇಕೆಂದೂ, ಮಕ್ಕಳನ್ನು ಶಾಲೆಗೆ ಕಳುಹಿಸಬೇಕೆಂದೂ ಶ್ರೀಮತಿಯವರು ಉಪದೇಶಿಸಿದರು.

ಪ್ರಕಾಶಕರು ಮತ್ತು ಮುದ್ರಕರು.

ಜಿ. ಎಲ್. ಸ್ವಾಮಿ.

ಸಮಾಚಾರ ಪ್ರೆಸ್, ಮೈಸೂರು.

ಬಹಿರಂಗ ಸಭೆ

ಮೈಸೂರು ೨೨

ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಮಂಗಳೂರಿನ ಶ್ರೀ ಬಿ. ವಿ. ಕಕ್ಕಿಲಾಯರವರು 'ಸ್ವತಂತ್ರ ಭಾರತದ ಆರು ವರ್ಷಗಳು' ಎಂಬ ವಿಷಯದಲ್ಲಿ ಭಾಷಣ ಮಾಡುವರು.

ಗೋಲ್ವಾಲ್ಕರ್ ಭೇಟಿ

ಮೈಸೂರು ೨೦

ಆರ್. ಎಸ್. ಎಸ್. ಸಂಸ್ಥೆಯ ನಾಯಕ ಶ್ರೀ ಗುರೂಜಿ ಗೋಲ್ವಾಲ್ಕರ್‌ರವರು ತಮ್ಮ ಕರ್ನಾಟಕದ ಪ್ರವಾಸವನ್ನು ಮುಗಿಸಿಕೊಂಡು ರಾಜಧಾನಿಗೆ ಇದೇ ೩೦ ನೇ ತಾರೀಖು ಆಗಮಿಸುವರು.

ರಣಜಿತ್

16-10-53 ರಿಂದ ಅಮೋಘಪ್ರಾರಂಭ

ದಿನವಹಿ 3 ಪ್ರದರ್ಶನಗಳು

ಕಾರ್ದಾರ್‌ರವರ ಹಿಂದಿ ಚಿತ್ರ.

★ ದಿಲೇ ನಾದಾನ್ ★

ಪಾತ್ರ:-ಪೀಸ್ ಕನ್ವಾರ್, ಶ್ಯಾಮ್, ಹಿನ್ನಲೆ ಸಂಗೀತಗಾರರಾದ ತಲತ್‌ಮಹಮದ್

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು!

ಬಹುಕಾಲ ಬಾಳಿಕೆಬರುವವು!

ನಿಪುಣರಾದ ಕೆಲಸಗಾರರ ಮೇಲ್ವಿಚಾರಣೆಯಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು!!!

★★★★★

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಪಳಿಗಳು (FLATS) ದುಂಡು ಮತ್ತು ಚದುರ ಸಲಾಕಿಗಳು (ROUNDS & SQUARES) ಕೋನ ಕಂಬಿಗಳು (ANGLES) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (REINFORCING RODS) ಮತ್ತು ಬೇಲುಪಟ್ಟಿಗಳು (HOOPS)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು

ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರಖಾನೆ, ಭದ್ರಾವತಿ.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೦೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೫೪

೨೬-೧೦-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ದೇಶಭಾಷೆ ಪ್ರಗತಿಗೆ ಎಲ್ಲರೂ ನೆರವಾಗಬೇಕು

ಎಲ್ಲಾ ಭಾಷೆಗಳಲ್ಲಿರುವ ಸಾಮಾನ್ಯ ಪದಗಳು ಹಿಂದಿಯಲ್ಲಿ ಸೇರಿಸಬೇಕು

ವಿದ್ಯಾಸಚಿವ ರಾಮಚಂದ್ರರಾಯರ ಸಲಹೆ

ದೇಶದಲ್ಲಿರುವ ಐಕ್ಯತೆಯನ್ನು ಶಕ್ತಿಗೊಳಿಸಲು ಒಂದೇ ಭಾಷೆಯಿರುವುದು ಅವಶ್ಯಕ. ಅಖಿಲಭಾರತ ವಿಷಯಗಳಲ್ಲಿ ಸಂಸ್ಕೃತ, ಪ್ರಾಕೃತ ಅಥವ ಪಾಲಿ ಭಾಷೆಯನ್ನು ಉಪಯೋಗಿಸುತ್ತಲಿರುವುದು ನಮ್ಮದೇಶದ ವಾಡಿಕೆಯಾಗಿದೆ. ಹಿಂದಿಭಾಷೆಯು ಸಂಸ್ಕೃತ ಭಾಷೆಯಿಂದಲೇ ಹುಟ್ಟಿರುವ ಭಾಷೆ. ಯುದ್ಧಕಾಲದಲ್ಲಿ ಸಹ ಬ್ರಿಟಿಷರು ಹಿಂದಿಯಲ್ಲಿ ಪತ್ರಿಕೆಯನ್ನು ಪ್ರಕಟಿಸುತ್ತಲಿದ್ದರು ಹಿಂದಿ ಈ ಭಾಷೆಯನ್ನು ಮಾತನಾಡುವರು ನಮ್ಮ ದೇಶದಲ್ಲಿ ಅಧಿಕ ಸಂಖ್ಯೆಯಲ್ಲಿರುವರು ಉರ್ದು ಅಥವ ಹಿಂದೂಸ್ತಾನಿಯೂ ಸಹ ಹಿಂದಿಯೇ ಆಗಿರುತ್ತದೆ. ಆದ್ದರಿಂದ ಹಿಂದಿಭಾಷೆಯು ನಮ್ಮ ದೇಶಭಾಷೆಯನ್ನಾಗಿ ನಿರ್ಧರಿಸಲಾಗಿದೆ. ಎಂದು ಮೈಸೂರು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ನಿನ್ನೆಯದಿನ ಮದ್ರಾಸ್‌ನಲ್ಲಿ ದಕ್ಷಿಣಭಾರತ ಹಿಂದಿ ಪ್ರಚಾರ ಸಭೆಯ ೮ ನೇ ಘಟಿಕೋತ್ಸವದಲ್ಲಿ ಮಾತನಾಡುತ್ತಾ ಹೇಳಿದರು.

ಹಿಂದೀಭಾಷೆಯು ಪ್ರಾಂತೀಯ ಭಾಷೆಗಳ ಪ್ರತಿಸ್ಪರ್ಧಿಯೆಂದು ಅನೇಕರ ಅಭಿಪ್ರಾಯ ಅದು ನಿಜವಲ್ಲ. ದೇಶದಲ್ಲಿ ಇವೆಲ್ಲವೂ ಇರಲೇಬೇಕು. ಭಾರತದ ಜನತೆಯ ವಿವಿಧ ಅವಶ್ಯಕತೆಗೆ ಅವು ಬೇಕು. ಪ್ರಾಂತೀಯ ಮತ್ತು ರಾಷ್ಟ್ರ ಭಾಷೆಯನ್ನು ನಾವು ಬೆಳೆಸುವುದು ನಮ್ಮ ಕರ್ತವ್ಯ. ಅದಕ್ಕಾಗಿಯೇ ಪ್ರಾಂತ್ಯಗಳಲ್ಲಿ ಪ್ರಾಂತೀಯ ಭಾಷೆಯಲ್ಲಿ ಬೋಧಕ ಮಾಧ್ಯಮವಾಗಿಯೂ, ದೇಶ ಭಾಷೆಯನ್ನು ಕಡ್ಡಾಯವಾಗಿಯೂ ಇರುವಂತೆ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು. ವಿಶ್ವವಿದ್ಯಾನಿಲಯಗಳಲ್ಲಿ ಪ್ರಾಂತೀಯ ಭಾಷೆಯನ್ನು ಶಿಕ್ಷಣ ಮಾಧ್ಯಮವನ್ನಾಗಿ ಈಗಲೇ ಮಾಡಲು ಸಾಧ್ಯವಿಲ್ಲ. ನಮ್ಮ ಪ್ರಾಂತೀಯ ಮತ್ತು ರಾಷ್ಟ್ರೀಯ ಭಾಷೆಯನ್ನು ಅಭಿವೃದ್ಧಿ ಮಾಡಿ ಅನಂತರ ಅವುಗಳನ್ನು ಶಿಕ್ಷಣ ಮಾಧ್ಯಮವನ್ನಾಗಿ ಮಾಡಲು ಮುಂದಾಗಬೇಕಾಗಿದೆ. ಈಗ ಇಂಗ್ಲೀಷ್ ಭಾಷೆಗೆ ಯಾವ ಸ್ಥಾನವಿದೆಯೋ ಆ ಸ್ಥಾನವನ್ನು ನಾವು ನಮ್ಮ ಭಾಷೆಗಳಿಗೆ ಕಲ್ಪಿಸಬೇಕು.

ಹಿಂದೀ ಭಾಷೆಯನ್ನು ಇನ್ನೂ ಸುಲಭವಾಗಿ ಮಾಡಬೇಕಾಗಿದೆ. ಭಾರತ ಜನತೆಯು ಭಾಷೆಗೆ ಈಗ ಪ್ರಮುಖ ಸ್ಥಾನವನ್ನು ಕೊಡುತ್ತಿದೆ. ಅದನ್ನು ಪ್ರಚಾರ ಸಭೆಗಳು, ಸಾಹಿತ್ಯ ಪರಿಷತ್ತುಗಳು ಮತ್ತು ಗ್ರಂಥಕರ್ತರು ಅರಿತು ನೆರವು ನೀಡಬೇಕು.

ಉತ್ತರ ಭಾರತದಲ್ಲಿ ಹಿಂದೀ ಭಾಷೆ ಮತ್ತು ಇತರ ಭಾಷೆಗಳಲ್ಲಿ ತಾಂತ್ರಿಕ ಪದಗಳೆಲ್ಲವೂ ಒಂದೇ ಆಗಿರುತ್ತದೆ. ಹಾಗೆ ಎಲ್ಲಾ ಭಾಷೆಗಳಲ್ಲೂ ಇರುವ ಸಾಮಾನ್ಯ ಪದಗಳನ್ನು ಹಿಂದಿಯಲ್ಲಿ ಸೇರಿಸಿಕೊಳ್ಳಬೇಕು ಎಂದು ಸಚಿವರು ತಿಳಿಸಿದರು.

ಮಹಾತ್ಮಗಾಂಧಿಯವರು ತಮ್ಮ ಮಕ್ಕಳಾದ ದೇವದಾಸ್ ಗಾಂಧಿಯವರ ನೇತೃತ್ವದಲ್ಲಿ ಸ್ಥಾಪಿಸಿದ ಈ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಕಾರ್ಯಗಳನ್ನು ಪ್ರಶಂಸಿಸಿದರು.

ಹೈದರಾಬಾದಿಗೆ ನೆಹರೂ ಭೇಟಿ

ಅಖಿಲಭಾರತ ವಿಜ್ಞಾನ ಕಾಂಗ್ರೆಸ್ ಅಧಿವೇಶನವನ್ನು ಉದ್ಘಾಟಿಸಲು ಪ್ರಧಾನಿ ನೆಹರೂರವರು ಮುಂದಿನ ಜನವರಿಯಲ್ಲಿ ಹೈದರಾಬಾದಿಗೆ ಭೇಟಿಯಿತ್ತು, ಅಲ್ಲಿ ೨ ದಿನಗಳಕಾಲ ಇರುವರೆಂದು ತಿಳಿಯಬರುತ್ತದೆ.

● ದೇಶದಲ್ಲಿ ನಿರುದ್ಯೋಗವನ್ನು ಪರಿಹಾರ ಮಾಡಲು ಕೇಂದ್ರ ಸರ್ಕಾರದ ಯೋಜನೆಗಳನ್ನು ಅಖಿಲ ಭಾರತ ಟ್ರೇಡ್‌ಯೂನಿಯನ್ ಕಾಂಗ್ರೆಸ್ ಸ್ವಾಗತಿಸಿದೆ.

ಗೋಲಿಬಾರ್ ಬಗ್ಗೆ ವಿಚಾರಣಾ ಸಮಿತಿ ನೇಮಿಸಬೇಕು

ನಗರ ಕಾಂಗ್ರೆಸ್ ಸಮಿತಿಯ ಒತ್ತಾಯ

ಮೈಸೂರು ೨೬

ಪುನರ್ರಚಿತವಾದ ನಗರ ಕಾಂಗ್ರೆಸ್ ಸಮಿತಿ ಸಭೆಯು ನಿನ್ನೆಯದಿನ ಶ್ರೀ ಎಸ್. ಚೆನ್ನಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಇದೇ ಮಾಹೆ ೮ನೇ ತಾರೀಖು ದಸರಾ ಪ್ರಾರಂಭದ ದಿನ ಗೋಲೀಬಾರು ನಡೆದು ಅದರಲ್ಲಿ ನಿಧನಹೊಂದಿದವರಿಗೆ ಸಂತಾಪವನ್ನು ಸೂಚಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಆ ದುಃಖವನ್ನು ಸಹಿಸಿಕೊಳ್ಳಲು ಭಗವಂತನು ಅವರುಗಳ ಕುಟುಂಬದವರಿಗೆ ಶಕ್ತಿಯನ್ನು ಕೊಡುವಂತೆ ಪ್ರಾರ್ಥಿಸುವ ನಿರ್ಣಯವನ್ನು ಮಾಡಿತು.

ಈ ಸಂದರ್ಭದಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರು ಇತ್ತಿರುವ ಹೇಳಿಕೆಯನ್ನು ಸಮಿತಿಯು ಪುಷ್ಟೀಕರಿಸಿ, ನಿಷ್ಪಕ್ಷಪಾತ ವಿಚಾರಣಾ ಸಮಿತಿಯನ್ನು ನೇಮಿಸಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನೂ ಮಾಡಿತು.

ಇವಕ್ಕೆ ಮುನ್ನ ಹೊಸ ಸಮಿತಿಗೆ ಶ್ರೀ ಚನ್ನಯ್ಯನವರು ಅಧ್ಯಕ್ಷರಾಗಿರಬೇಕೆಂದು ಶ್ರೀ ಜನಾರ್ದನನಾಯ್ಡುರವರು ಮಂಡಿಸಿದ ನಿರ್ಣಯವನ್ನು ಶ್ರೀ ಕೆಂಗೇಗೌಡರು ಸಮರ್ಥಿಸಿದಮೇಲೆ ಸರ್ವಾನುಮತದಿಂದ ಅಂಗೀಕಾರವಾಯಿತು. ಇತರ ಅಧಿಕಾರಿ ವರ್ಗದವರ ನೇಮಕದ ವಿಷಯದಲ್ಲಿ ಅಧ್ಯಕ್ಷರವರೇ ಸೂಕ್ತ ಕಾರ್ಯಕ್ರಮ ನಡೆಸುವಂತೆ ತೀರ್ಮಾನಿಸಲಾಯಿತು.

ಮುಂಬರುವ ಪುರಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್‌ನ ಕಾರ್ಯಕ್ರಮದ ವಿಷಯದಲ್ಲಿ ಎಂ. ಪಿ. ಸಿ. ಸಿ. ಯಿಂದ ಬಂದಿದ್ದ ಪತ್ರವನ್ನು ಸಭೆಯಲ್ಲಿ ಪರಿಶೀಲಿಸಿ ಅದಕ್ಕಾಗಿ ರಚಿಸಬೇಕಾಗಿರುವ ಅಡ್ ಹಾಕ್ ಸಮಿತಿಯ ವಿಷಯದಲ್ಲಿ ಅಧ್ಯಕ್ಷರು ಪಾರ್ಲಿಮೆಂಟರಿ ಸಮಿತಿಯೊಡನೆ ವ್ಯವಹರಿಸಿ ಸೂಕ್ತ ಕಾರ್ಯ ನಡೆಸಬೇಕೆಂದೂ ತೀರ್ಮಾನಿಸಲಾಯಿತು.

ಎಂ. ಪಿ. ಸಿ. ಸಿ. ವಿಶೇಷ ಅಧಿವೇಶನವಿಲ್ಲ

ಬೆಂಗಳೂರು ೨೬

ಮೈಸೂರು ಮಂತ್ರಿಮಂಡಲದ ಬಗ್ಗೆ ಚರ್ಚೆ ನಡೆಸಲು ಪ್ರದೇಶ ಕಾಂಗ್ರೆಸ್ ಸಮಿತಿಯು ವಿಶೇಷ ಅಧಿವೇಶನವನ್ನು ನಡೆಸಬೇಕೆಂದು ರಾಬರ್ಟ್ಸನ್‌ಪೇಟೆಯಲ್ಲಿ ಆದ ಸೂಚನೆಯಂತೆ ನವೆಂಬರ್ ಒಂದನೇವಾರದಲ್ಲಿ ಅಧಿವೇಶನವೇನೂ ನಡೆಯುವುದಿಲ್ಲವೆಂದು ಹೇಳಲಾಗಿದೆ.

ಮಂತ್ರಿಮಂಡಲಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕೇಂದ್ರ ಪಾರ್ಲಿಮೆಂಟರಿ ಸಮಿತಿಯು ಪರಿಶೀಲಿಸುತ್ತಲಿದೆಯೆಂದೂ ಈಬಗ್ಗೆ ಕಾರ್ಯಕಾರಿ ಸಮಿತಿಯಲ್ಲಾಗಲೀ ಸರ್ವಸದಸ್ಯರ ಸಭೆಯಲ್ಲಾಗಲೀ ಚರ್ಚೆ ಅನಾವಶ್ಯಕವೆಂದು ಎಂ. ಪಿ. ಸಿ. ಸಿ. ಯ ಅಧ್ಯಕ್ಷರಿಂದ ಪತ್ರ ಬಂದಿದೆಯೆಂದು ಹೇಳಲಾಗಿದೆ.

ಬಟ್ಟೆಮೇಲಿನ ರಫ್ತು ಸುಂಕದ ರದ್ದು

ಮಿಾಡಿಯಂ ಬಟ್ಟೆಯಮೇಲೆ ವಿಧಿಸಲಾಗುತ್ತಿದ್ದ ಶೇಕಡ ೧೦ರಷ್ಟು ರಫ್ತು ಸುಂಕವನ್ನು ರದ್ದುಗೊಳಿಸಲಾಗಿದೆಯೆಂದು ಸೂಪರ್ ಫೈನ್ ಬಟ್ಟೆಯಮೇಲಿನ ಸುಂಕವನ್ನು ೩ ಆಣೆ ೩ ಪೈಗಳಿಂದ ಎರಡು ಆಣೆಗೆ ಇಳಿಸಲಾಗಿದೆಯೆಂದು ಕೇಂದ್ರ ಸರ್ಕಾರ ಪ್ರಕಟಿಸಿದೆ.

ಸಂಯುಕ್ತ ಕರ್ಣಾಟಕ ರಚನೆ ಬಗ್ಗೆ ಹನುಮಂತಯ್ಯನವರ ಸಲಹೆ

ಉಪವಾಸ, ಸತ್ಯಾಗ್ರಹ ಬೇಡ

ಕರ್ನಾಟಕದಲ್ಲಿರುವ ಎಲ್ಲಾ ಶಾಸನ ಸಭಾಸದಸ್ಯರು ಒಂದು ಸಭೆಯನ್ನು ನಡೆಸಿ ಸಂಯುಕ್ತ ಕರ್ನಾಟಕ ರಚನೆ ಬಗ್ಗೆ ಒಂದು ಒಮ್ಮತಕ್ಕೆ ಬಂದು ಆ ಸಲಹೆಯನ್ನು ಕೇಂದ್ರ ಸರ್ಕಾರವು ರಚಿಸಲಿರುವ ಹೈಪವರ್ ಮಂಡಲಿಯ ಮುಂದೆ ಮಂಡಿಸಬೇಕೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹರಪನಹಳ್ಳಿಯಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಉಪವಾಸ, ಸತ್ಯಾಗ್ರಹ ಮುಂತಾದ ತೀವ್ರ ವಿಧಾನಗಳಿಂದ ಭಾವಾವೇಶ ಭಿನ್ನತೆ ಹೆಚ್ಚಾಗಿ ದೇಶದ ಸಂಘಟನೆಗೆ ಕುಂಠಿತವಾಗುತ್ತದೆ. ಸೌಹಾರ್ದ, ಸಹಕಾರ ಮಾರ್ಗಗಳಿಂದ ಕರ್ನಾಟಕ ಏಕೀಕರಣವನ್ನು ನಾವು ಸಾಧಿಸಬೇಕು ಎಂದು ಮುಖ್ಯಮಂತ್ರಿಗಳು ತಿಳಿಸಿದರು. ಶ್ರೀ ಯುತರು ವ್ಯವಸಾಯ ಸಚಿವ ಶ್ರೀ ನಾಗನಗೌಡರು ಮತ್ತು ಕೆಲವು ಶಾಸನಸಭಾ ಸದಸ್ಯರೊಡನೆ ಬಳ್ಳಾರಿ ಜಿಲ್ಲೆಯಲ್ಲಿ ಈಗ ಪ್ರವಾಸವನ್ನು ಕೈಗೊಂಡಿದ್ದಾರೆ.

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು

ಮೈಸೂರು ೨೬

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಮುಂದಿನ ಸಾಲಿನ ಅಧ್ಯಕ್ಷರಾಗಿ ಶ್ರೀ ಕೆ. ಪುಟ್ಟಸ್ವಾಮಿಯವರು ಚುನಾಯಿತರಾಗಿದ್ದಾರೆ. ಶ್ರೀಗಳಾದ ಪಿ. ವೆಂಕಟರಮಣ ಉಪಾಧ್ಯಕ್ಷ ಮತ್ತು ಸೂರ್ಯನಾರಾಯಣ ರಾಯರು ಕಾರ್ಯದರ್ಶಿಗಳು.

ಧರ್ಮವೇ ನಮ್ಮ ಭಾರತೀಯ ಸಂಸ್ಕೃತಿಯ ಅಡಿಗಲ್ಲು

ಆಸ್ಪತ್ರೆಯ ಪ್ರಾರಂಭೋತ್ಸವದಲ್ಲಿ ದಾನಿಗಳಿಗೆ ರಾಜಪ್ರಮುಖರ ಕರೆ

ಮೈಸೂರು ೨೬

ರಾಜಧಾನಿಯ ವಾಣಿವಿಲಾಸ ಮೊಹಲ್ಲಾದಲ್ಲಿ ನೂತನವಾಗಿ ಕಟ್ಟಲಾಗಲಿರುವ ಲಕ್ಷ್ಮೀದೇವಮ್ಮ ಎ. ಶಂಕರಶೆಟ್ಟಿಯವರ ಹೆರಿಗೆ ಮತ್ತು ಜನರಲ್ ಆಸ್ಪತ್ರೆಯ ಪ್ರಾರಂಭೋತ್ಸವವನ್ನು ನಿನ್ನೆ ದಿನ ಬೆಳಗ್ಗೆ ಶ್ರೀಮನ್ಮಹಾರಾಜರವರು ನೆರವೇರಿಸಿದರು.

ಪ್ರಾರ್ಥನೆಯಾದನಂತರ, ಪುರಸಭಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಸ್ವಾಗತ ಭಾಷಣ ಮಾಡಿ, ಆಸ್ಪತ್ರೆಯ ಕಟ್ಟಡಕ್ಕಾಗಿ ೫೦ ಸಾವಿರ ರೂಪಾಯಿಗಳನ್ನು ಉದಾರವಾಗಿ ಕೊಟ್ಟ ಶ್ರೀ ಎ.ಶಂಕರಶೆಟ್ಟರು ಮತ್ತು ೨೩ ಸಾವಿರ ರೂಪಾಯಿಗಳನ್ನು ಕೊಟ್ಟ ಸರ್ಕಾರದವರನ್ನೂ ಅಭಿನಂದಿಸಿದರು.

ಅನಂತರ ಶ್ರೀಗಳಾದ ಶ್ರೀ ಎ. ಶಂಕರಶೆಟ್ಟರ ಪರವಾಗಿ ಶ್ರೀಮನ್ಮಹಾರಾಜರಿಗೆ ರಜತ ಕರಂಡದಲ್ಲಿ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು.

ಪುರಸಭಾ ಕಮೀಷನರ್ ಶ್ರೀ ಲಕ್ಷ್ಮಣರಾಯರು ಶ್ರೀಗಳಾದ ಕೆ. ಸಿ. ರೆಡ್ಡಿ, ಕಡಿದಾಳ್‌ಮಂಜಪ್ಪ ಮುಂತಾದವರಿಂದ ಬಂದ ಸಂದೇಶಗಳನ್ನು ಓದಿದರು.

ಅನಂತರ ಶ್ರೀಮನ್ಮಹಾರಾಜರವರು ಭಾಷಣಮಾಡಿ ಈ ರೀತಿ ತಿಳಿಸಿದರು.—

ಗರ್ಭಿಣಿಯರ ಸಹಾಯಕ್ಕಾಗಿ ಮತ್ತು ರೋಗಿಗಳ ಚಿಕಿತ್ಸೆಗಾಗಿ ಅನೇಕಕಡೆ ಆಸ್ಪತ್ರೆಗಳು ಏರ್ಪಟ್ಟಿದ್ದರೂ ಅವು ಇನ್ನೂ ಸಾಲದಾಗಿವೆ. ಆದುದರಿಂದ ಇಂಥ ಆಸ್ಪತ್ರೆಗಳ ಅವಶ್ಯಕತೆಯಿರುವ ಸ್ಥಳಗಳಲ್ಲಿ ಅವುಗಳನ್ನು ಏರ್ಪಡಿಸಲು ನಮ್ಮ ನಾಡಿನಲ್ಲಿರತಕ್ಕ ಶ್ರೀಮಂತರು ಇನ್ನೂ ಹೆಚ್ಚುಹೆಚ್ಚಾಗಿ ಶ್ರೀ ಶಂಕರಶೆಟ್ಟಿಯವರಂತೆ ಮುಂದೆಬಂದು ಸಹಾಯ ಮಾಡಬೇಕಾದುದು ಅಗತ್ಯ ಎಂಬುದನ್ನು ನಾವು ಹೇಳಬೇಕಾಗಿಯೇ ಇಲ್ಲ. ಈ ವಿಚಾರದಲ್ಲಿ ಶ್ರೀ ಶಂಕರಶೆಟ್ಟರ ಮೇಲ್ಪಂಕ್ತಿಯು ಅನುಕರಣೀಯವಾಗಿದೆ. ರೋಗಪೀಡಿತರ ಬೇನೆಯನ್ನು ಪರಿಹರಿಸಿ ಅವರನ್ನು ಆರೋಗ್ಯಸ್ಥಿತಿಗೆ ತರುವುದಕ್ಕೆ ಬೇಕಾದ ವೈದ್ಯಸಹಾಯವನ್ನು ಒದಗಿಸಲು ಧನಸಹಾಯ ಮಾಡುವುದು ಅತ್ಯಂತ ಶ್ರೇಷ್ಠವಾದ ಧರ್ಮಕಾರ್ಯಗಳಲ್ಲಿ ಒಂದಾಗಿದೆ. ಧರ್ಮಕಾರ್ಯಗಳಲ್ಲಿ ಪ್ರವೃತ್ತಿಯು ನಮ್ಮ ದೇಶದ ಜನರಲ್ಲಿ ಸಹಜವಾಗಿ ನೆಲೆಗೊಂಡಿರತಕ್ಕ ಗುಣವಾಗಿದೆ. ಕೆರೆಕಟ್ಟೆಗಳನ್ನು ಕಟ್ಟಿಸುವುದು, ತೋಪುಗಳನ್ನು ಮತ್ತು ಸಾಲುಮರಗಳನ್ನು ಹಾಕಿಸುವುದು, ದೇವ ಮಂದಿರಗಳನ್ನು ನಿರ್ಮಿಸುವುದು ಇವೇ ಮುಂತಾದ ಪುಣ್ಯಕಾರ್ಯಗಳನ್ನು ನಮ್ಮ ಭಾರತೀಯರು ಪೂರ್ವದಿಂದಲೂ ನಡೆಯಿಸಿಕೊಂಡು ಬಂದಿದ್ದಾರೆ. ಈಗಿನ ಕಾಲದಲ್ಲಿ ಅನೇಕ ಧರ್ಮಾತ್ಮರು ಸ್ಕೂಲುಗಳು, ಆಸ್ಪತ್ರೆಗಳು ಮುಂತಾದುವುಗಳನ್ನು ಒದಗಿಸಲು ಉದಾರವಾಗಿ ಧನಸಹಾಯ ಮಾಡುತ್ತ ಬಂದಿದ್ದಾರೆ. ಜನೋಪಕಾರಕ್ಕಾಗಿ ಮಾಡತಕ್ಕ ಧರ್ಮವು ಪುಣ್ಯದಾಯಕವೆಂಬ ಭಾವನೆಯು ನಮ್ಮ ದೇಶದ ಜನರ ಮನಸ್ಸಿನಲ್ಲಿ ಬೇರೂರಿದೆ. ಧರ್ಮವೇ ನಮ್ಮ ಭಾರತೀಯ ಸಂಸ್ಕೃತಿಯ ಅಡಿಗಲ್ಲು ಎಂದು ಹೇಳಿದರೆ ಏನೂ ತಪ್ಪಾಗಲಾರದು.

ಜನಗಳು ನೆಮ್ಮದಿಯಿಂದ ಸುಖವಾಗಿ ಬಾಳಲು ಬೇಕಾದ ಸೌಕರ್ಯಗಳನ್ನು ಒದಗಿಸಿ, ಸಹಾಯ ಮಾಡಲು ನಮ್ಮ ಸರ್ಕಾರದವರು ಯಾವಾಗಲೂ ಸಿದ್ಧರಾಗಿಯೇ ಇರುವರೆಂಬ ವಿಚಾರವನ್ನು ನಾವು ಒತ್ತಿ ಹೇಳಬೇಕಾದುದಿಲ್ಲ. ಇನ್ನು ಈ ಆಸ್ಪತ್ರೆಗೆ ಸಂಬಂಧಪಟ್ಟ ಸಾಮಾನು ಸಲಕರಣೆಗಳಿಗೆ ಹಣವನ್ನು ಪೌರಸಭೆಯವರು ಒದಗಿಸಿದ್ದಾರೆ. ಅಲ್ಲದೆ, ವರ್ಷವರ್ಷವೂ ಔಷಧಿ ಮತ್ತು ರೋಗಿಗಳ ಆಹಾರಕ್ಕಾಗಿ ತಗಲುವ ೮೦೦೦ ರೂಪಾಯಿಗಳ ಆವೃತ್ತ ವೆಚ್ಚವನ್ನು ವಹಿಸಲು ಪೌರಸಭೆಯವರು ಕೈಗೊಂಡಿರತಕ್ಕ ಈ ಕಾರ್ಯವು ಶ್ಲಾಘನೀಯವಾಗಿದೆ.

ಭಾಷಣ

ಮೈಸೂರು, ೨೬

ನೇತ್ರ ವೈದ್ಯರಾದ ಡಾ॥ ಮೋದಿಯವರು ಈ ಸಂಜೆ ೫-೩೦ ಘಂಟೆಗೆ ಆಯುರ್ವೇದ ಮತ್ತು ಯುನಾನಿ ಕಾಲೇಜಿನಲ್ಲಿ 'ನೇತ್ರಚಿಕಿತ್ಸೆ' ವಿಷಯದಲ್ಲಿ ಭಾಷಣ ಮಾಡುತ್ತಾರೆ.

ಶಿಕ್ಷಣ ಪರಿಗಣಿತರ ತಂಡ ವಿದೇಶಕ್ಕೆ

ಭಾರತೀಯ ಮತ್ತು ವಿದೇಶೀಯರನ್ನೊಳಗೊಂಡ ಶಿಕ್ಷಣ ಪರಿಗಣಿತರ ತಂಡವೊಂದು ಭಾರತದಿಂದ ಸ್ವಿಟ್ಸರ್‌ಲೆಂಡಿಗೆ ಸದ್ಯದಲ್ಲೇ ತೆರಳಲಿದೆ.

ಟ್ರೇನಿಂಗ್ ಕಾಲೇಜುಗಳು ಮತ್ತು ಸೆಕೆಂಡರಿ ವಿದ್ಯಾ ಶಾಲೆಗಳಲ್ಲಿ ಶಿಕ್ಷಣಕ್ರಮವನ್ನು ಅವರು ಅರಿತುಕೊಂಡು ಬರಲು ಈ ಪ್ರವಾಸವನ್ನು ಭಾರತ ಸರ್ಕಾರ ಏರ್ಪಡಿಸಿದೆ.

ಈ ತಂಡವು ಬ್ರಿಟೆನ್ ಅಮೆರಿಕಾ ಮುಂತಾದ ರಾಷ್ಟ್ರಗಳಲ್ಲೂ ಪ್ರವಾಸಮಾಡಿ ಅಲ್ಲಿಯ ವಿದ್ಯಾ ಪದ್ಧತಿಯನ್ನು ಅರಿತುಕೊಂಡು ಬರುತ್ತದೆ. ಕೇಂದ್ರ ಸರ್ಕಾರವು ಇತ್ತೀಚೆಗೆ ಸೆಕೆಂಡರಿ ವಿದ್ಯಾಭ್ಯಾಸ ಸುಧಾರಣಾ ಸಮಿತಿಯನ್ನು ನೇಮಿಸಿ, ಅದು ಮಾಡಿರುವ ಸಲಹೆಗಳ ಆಧಾರದಲ್ಲಿ ಈ ತಂಡವು ವಿಷಯ ಸಂಗ್ರಹಣೆಯನ್ನು ಮಾಡುತ್ತದೆಯೆಂದು ಹೇಳಲಾಗಿದೆ.

ಆಟೋ ಸೈಕಲ್ ಕಾರ್ಖಾನೆ

ಆಟೋ ಸೈಕಲ್ ತಯಾರಿಕಾ ಕಾರ್ಖಾನೆಯೊಂದನ್ನು ಭಾರತದ ಬಂಡವಾಳವನ್ನು ಪಡೆದು ಸ್ಥಾಪಿಸುವ ವಿಷಯವನ್ನು ತಮ್ಮ ಕಂಪೆನಿಯು ಪರಿಶೀಲಿಸುತ್ತಿರುವುದಾಗಿ ಡಚ್ ಕಂಪೆನಿಯೊಂದರ ಮ್ಯಾನೇಜಿಂಗ್ ಡೈರೆಕ್ಟರಾದ ಮಿ॥ ಡಬ್ಲ್ಯು ಕವ್ವೇ ರವರು ಹೇಳಿದ್ದಾರೆ. ಭಾರತದಲ್ಲಿಯೇ ಈ ಸೈಕಲ್ ತಯಾರಿಕೆಯಾದರೆ ಅದರ ಬೆಲೆಯು ಕೇವಲ ೫೦೦ ರೂಗಳಾಗುತ್ತದೆ, ಅಲ್ಲದೆ ಒಂದು ಗ್ಯಾಲನ್ ಪೆಟ್ರೋಲ್‌ಗೆ ೨೦೦ ಮೈಲಿಗಳಷ್ಟು ದೂರ ಚಲಿಸಬಹುದೆಂದು ಅವರು ತಿಳಿಸಿದ್ದಾರೆ,

೮೦೦೦೦ ಮಾಜಿ ಸೈನೀಕರಿಗೆ ಉದ್ಯೋಗ

೮೦೦೦೦ ಮಾಜಿ ಸೈನೀಕರಿಗೆ ಉದ್ಯೋಗವನ್ನು ಕಲ್ಪಿಸಲು ಕೇಂದ್ರ ವಿದ್ಯಾಶಾಖೆಯು ಒಂದು ಹೊಸ ಯೋಜನೆಯನ್ನು ತಯಾರಿಸಿರುವುದಾಗಿ ತಿಳಿಯಬರುತ್ತದೆ. ಇವರನ್ನು ಉಪಾಧ್ಯಾಯರುಗಳಾಗಿ ನೇಮಿಸಿಕೊಳ್ಳಲಾಗುತ್ತದೆ.

ದೇಶದಲ್ಲಿ ಹೊಸ ಶಾಲೆಗಳ ಸ್ಥಾಪನೆ, ಈಗಿರುವ ಶಾಲೆಗಳ ವಿಸ್ತರಣೆ, ಪಟ್ಟಣಗಳಲ್ಲಿ ಸಾಮಾಜಿಕ ಶಿಕ್ಷಣ ಶಾಲೆಗಳ ಸ್ಥಾಪನೆ ಇವೆಲ್ಲವೂ ಈ ಯೋಜನೆಯಲ್ಲಿ ಅಡಕವಾಗಿವೆ. ಈ ಸಾಲಿನಲ್ಲಿ ೩೦೦೦೦ ಉಪಾಧ್ಯಾಯರ ನೇಮಕ ಮುಂದಿನ ಸಾಲಿನಲ್ಲಿ ೫೦೦೦೦ ಉಪಾಧ್ಯಾಯರ ನೇಮಕವನ್ನು ಮಾಡಿಕೊಳ್ಳಲಾಗುತ್ತದೆ.

ಶ್ರೀ ಅಂಬಾಳ್ ಅಂಡ್ ಕೋ.,

ಉತ್ತಮ ದರ್ಜೆಯ ನಶ್ಯದ ತಯಾರಕರು

ಪೋಸ್ಟುಬಾಕ್ಸ್ ನಂ. ೩, ಮದರಾಸ್ ೧.

ಭಾರತಾದ್ಯಂತ ಖ್ಯಾತಿಪಡೆದು ಅನೇಕ ವರ್ಷಗಳಿಂದ ನಡೆಯಿಸುತ್ತಿರುವ ನಾನಾ ವಸ್ತುಪ್ರದರ್ಶನಗಳಲ್ಲಿ ಚಿನ್ನದ ಪದಕಗಳು ಮತ್ತು ವಿವಿಧ ಬಹುಮಾನಗಳನ್ನು ಪಡೆದಿರುವ "ಅಂಬಾಳ್ ನಶ್ಯ"ಕ್ಕೆ ಈ ಸಲವೂ ದಸರಾ ವಸ್ತುಪ್ರದರ್ಶನದಲ್ಲಿ ಚಿನ್ನದ ಪದಕ ಮತ್ತು ವಿಶೇಷ ಬಹುಮಾನ ಬೆಳ್ಳಿ ಕಪ್ಪು ಸಹ ದೊರೆತಿರುತ್ತದೆ.

ಈ ನಶ್ಯವು ಎಷ್ಟು ಸರ್ವೋತ್ಕೃಷ್ಟವಾದುದೆಂಬುದು ಇದರಿಂದಲೇ ವ್ಯಕ್ತವಾಗುತ್ತದೆ.

ಅಂಬಾಳ್ ಆಫೀಸರ್ಸ್ ನಶ್ಯವು ಒಂದು ವಿಶೇಷ ವೈಶಿಷ್ಟ್ಯ.

ಮೈಸೂರು ದಸರಾ ವಸ್ತುಪ್ರದರ್ಶನದ ಹೆಚ್. ಬ್ಲಾಕಿನಲ್ಲಿ ೨೫ ನೇ ನಂಬರ್ ಸ್ಟಾಲಿನಲ್ಲಿ ಇದು ಇದೆ.

ಪ್ರತಿದಿನವೂ ಹೊಸದಾದ ಅಂಬಾಳ್ ನಶ್ಯವು ಅಂಚೆಯಮೂಲಕ ಮೈಸೂರಿಗೆ ತರಿಸಿ ದೇವರಾಜಮಾರ್ಕೆಟ್ ೧೫೪ ನೇ ನಂಬರ್ ಮಳಿಗೆಯಲ್ಲಿ ಬಿಕರಿ ಮಾಡಲಾಗುತ್ತಿದೆ. Advt.

ಬೀಡಿ ಸೇದದಿದ್ದುದಕ್ಕೆ ಕೊಲೆ

ಚೋಟಾ ಉದಯ ಪುರದ ಬಳಿ ಪಾಡ್ಲಿಯಾ ಎಂಬ ಗ್ರಾಮದಲ್ಲಿ ದಸರಾಮೇಳಕ್ಕೆ ಬಿಲ್ಲು ಬಾಣಗಳನ್ನು ಧರಿಸಿಕೊಂಡು ಅಲಂಕೃತವಾಗಿ ಹೋಗಿದ್ದ ನಾಸಿಂಗ್ ನಾನಾ ಎಂಬುವವನು ಎಷ್ಟು ಬಲವಂತ ಮಾಡಿದರೂ ತನ್ನ ತಮ್ಮನು ಬೀಡಿ ಸೇದಲಿಲ್ಲವೆಂದು ಕೋಪಗೊಂಡು ಆತನನ್ನು ಬಾಣದಿಂದ ಹೊಡೆದು ಕೊಂದುಹಾಕಿದನೆಂದು ಹೇಳಲಾಗಿದೆ.

ಆಚಾರ್ಯ ವಿನೋಬಭಾವೆಯವರ ನೂತನ ಉದ್ಯಮ

ತಾವು ಪ್ರಾರಂಭಿಸಿದ್ದ ಭೂದಾನಯಜ್ಞ ಚಳುವಳಿಯು ಯಶಸ್ವಿಯಾಗಿ ಭಾರತಾದ್ಯಂತ ಅನೇಕರು ಭೂದಾನ ಸಂಗ್ರಹಣ ಕಾರ್ಯದಲ್ಲಿ ತೊಡಗಿರುವುದರಿಂದ ಇನ್ನು ಮುಂದೆ ತಾವು ಈ ಕಾರ್ಯವನ್ನು ನಿಲ್ಲಿಸಿ ಸರ್ವೋದಯ ಪ್ರಚಾರಕಾರ್ಯದಲ್ಲಿ ತೊಡಗುವುದಾಗಿ ತಿಳಿಸಿದ್ದಾರೆ.

ದೆಹಲಿ-ಕಾಶ್ಮೀರ ಒಪ್ಪಂದ

ಕಳೆದವರ್ಷ ಭಾರತ ಮತ್ತು ಕಾಶ್ಮೀರ ಸರ್ಕಾರಗಳ ನಡುವೆ ಆದ ದೆಹಲಿ-ಕಾಶ್ಮೀರ ಒಪ್ಪಂದವನ್ನು ಇನ್ನು ೩-೪ ತಿಂಗಳೊಳಗಾಗಿ ಅಕ್ಷರಶಃ ಜಾರಿಗೆ ತರಲು ಸೂಕ್ತ ಕಾರ್ಯಕ್ರಮವನ್ನು ಕಾಶ್ಮೀರ ರಾಜ್ಯಾಂಗ ಸಭೆಯು ಮಾಡುವುದಾಗಿ ಆ ಸಭೆಯ ಅಧ್ಯಕ್ಷರಾದ ಮಹಮುದ್ ಸಾದಿಕ್‌ರವರು ಹೇಳಿದ್ದಾರೆ.

೩ ದಿನಗಳಲ್ಲಿ ೬ ಮೈಲಿ ರಸ್ತೆ ನಿರ್ಮಾಣ

ಗುಜರಾತಿನ ಮೇಹನಾವ ಜಿಲ್ಲೆಯಲ್ಲಿ ಗುಜರಾತ್ ಕಾಂಗ್ರೆಸ್ ಸೇವಾದಳದವರು ೩ ದಿನಗಳಲ್ಲಿ ೬ ಮೈಲಿಗಳ ರಸ್ತೆಯನ್ನು ನಿರ್ಮಿಸಲು ನಿರ್ಧರಿಸಿ ಈ ಕಾರ್ಯವನ್ನು ಮುಂದಿನತಿಂಗಳು ಪ್ರಾರಂಭಿಸಲಿರುವರು.

ಆಡಳಿತ ಪುನರ್ವ್ಯವಸ್ಥೆ

ಮದರಾಸು ಸರ್ಕಾರವು ತನ್ನ ಕೇಂದ್ರ ಆಡಳಿತಬಾಬುಗಳನ್ನು ಪುನರ್ವವಸ್ಥೆಗೊಳಿಸಿ, ಈಗಿರುವ ೧೨ ಇಲಾಖೆಗಳನ್ನು ೯ ಕ್ಕೆ ಇಳಿಸಿವೆ.

ನಾಟಕರತ್ನ ಜಿ.ಹೆಚ್. ವೀರಣ್ಣನವರ ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)

26--10--53 ನೇ ರಾತ್ರಿ 10 ಗಂಟೆಗೆ ಶಿವರಾಂಪೇಟೆಯ ರತ್ನಾವಳಿ ಥಿಯೇಟರಿನಲ್ಲಿ

ಚಲನಚಿತ್ರದಲ್ಲಿ ಖ್ಯಾತಿ ಪಡೆದ ನಾಟಕರತ್ನ ಜಿ. ಹೆಚ್. ವೀರಣ್ಣ, ಜಯಮ್ಮ ಮತ್ತು ಲಕ್ಷಮ್ಮ ನಟಿಸಿರುವ

ಕುರುಕ್ಷೇತ್ರ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಪೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೫೫

೨೭-೧೦-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಸಮಾಜ ಸೇವೆಯೇ ಸಾರ್ವಜನಿಕರ ಪವಿತ್ರವಾದ ಕರ್ತವ್ಯ

ಎನ್. ಸಿ. ಸಿ. ರಸ್ತೆ ಪ್ರಾರಂಭೋತ್ಸವದಲ್ಲಿ ರಾಜಪ್ರಮುಖರ ಹೇಳಿಕೆ

ಮೈಸೂರು ೨೭

ನ್ಯಾಷನಲ್ ಕ್ಯಾಡೆಟ್ಟಿನ ೩೦೦ ಮಂದಿ ವಿದ್ಯಾರ್ಥಿಗಳು ಗ್ರಾಮಸ್ಥರ ಸಹಕಾರದಿಂದ ಕೃಷ್ಣರಾಜಪೇಟೆ ತಾಲ್ಲೂಕಿನ ಹೇಮಗಿರಿಯಿಂದ ಅಕ್ಕಿ ಹೆಬ್ಬಾಳು ರೈಲ್ವೆ ಸ್ಟೇಷನವರೆಗೆ ನಿರ್ಮಿಸಿದ ೧೪ ಮೈಲಿ ನೂತನ ರಸ್ತೆಯ ಪ್ರಾರಂಭೋತ್ಸವವನ್ನು ನಿನ್ನೆ ಶ್ರೀಮನ್ಮಹಾರಾಜರವರು ನೆರವೇರಿಸಿದರು.

ಸಮಾರಂಭಕ್ಕೆ ಗೃಹಸಚಿವ ಶ್ರೀ ಹೆಚ್. ಸಿದ್ದವೀರಪ್ಪ, ವಿಶ್ವವಿದ್ಯಾ ನಿಲಯದ ಉಪಸ್ಥಾನ ಪತಿ ಡಾ॥ ಬಿ ಎಲ್. ಮಂಜುನಾಥ್, ರಾಜಪ್ರಮುಖ ಆಪ್ತಕಾರ್ಯದರ್ಶಿ ಶ್ರೀ ಸಫಿದಾರಾಷ, ಡಿ. ಐ. ಜಿ. ಶ್ರೀ ಸಿಂಧ್ಯ ಮತ್ತು ಸಾವಿರಾರು ಗ್ರಾಮಸ್ಥರು ದಯಮಾಡಿಸಿದ್ದರು.

ರಾಜಪ್ರಮುಖರು ಆಗಮಿಸಿದೊಡನೆಯೇ ಎನ್. ಸಿ. ಸಿ. ಯವರು ಗೌರವರಕ್ಷೆಯನ್ನು ಒಪ್ಪಿಸಿದರು. ಅನಂತರ ಕೃಷ್ಣರಾಜಪೇಟೆ ತಾಲ್ಲೂಕಿನ ಜನರ ಪರವಾಗಿ ಶ್ರೀಮನ್ಮಹಾರಾಜರವರಿಗೆ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ೮-೧೦ ಗ್ರಾಮಗಳಿಗೆ ಸಂಚಾರ ಸೌಕರ್ಯವನ್ನು ಒದಗಿಸಲು ಎನ್. ಸಿ. ಸಿ ಯವರು ಮತ್ತು ಸರ್ಕಾರದವರು ಮುಂದೆ ಬಂದು ಈ ಕಾರ್ಯವನ್ನು ಕೈಗೊಂಡಿದುದಕ್ಕಾಗಿ ಅವರುಗಳಿಗೆ ವಂದನೆಯನ್ನು ಅರ್ಪಿಸಿ, ಈ ಪ್ರದೇಶಗಳ ಅಭಿವೃದ್ಧಿಗಾಗಿ ವಿದ್ಯುಚ್ಛಕ್ತಿ ಮಂಜೂರು ಮಾಡಬೇಕೆಂದು ಪ್ರಾರ್ಥಿಸಲಾಯಿತು.

ಎನ್. ಸಿ. ಸಿ. ದಳದ ನಾಯಕ ಕ॥ ದಯಾಳ್‌ರವರು ಸ್ವಾಗತ ಬಯಸಿ ತಮಗೆ ಸುತ್ತಮುತ್ತಲಿನ ಸುಮಾರು ೫೦೦ ಮಂದಿ ಗ್ರಾಮಸ್ಥರು ಸಹಕರಿಸಿ ರಸ್ತೆ ಕೆಲಸದಲ್ಲಿ ತೊಡಗಿದ್ದುದಕ್ಕಾಗಿ ಗ್ರಾಮಸ್ಥರನ್ನು ವಂದಿಸಿದರು. ಒಂದು ಲಕ್ಷ ರೂ. ಖರ್ಚಾಗುತ್ತಿದ್ದುದನ್ನು ಕೇವಲ ೫ ಸಾವಿರ ರೂಗಳನ್ನು ವೆಚ್ಚಮಾಡಿ ಸ್ವಪ್ರಯತ್ನದಿಂದಲೇ ಇಂತಹ ಭಾರಿ ರಸ್ತೆ ನಿರ್ಮಾಣ ಮಾಡಿರುವುದು ಭಾರತದಲ್ಲಿ ಇದೇ ಪ್ರಥಮಯೋಜನೆಯೆಂದೂ, ಇಂತಹ ಜನರ ಮತ್ತು ದಳದ ಸಹಕಾರವು ಇನ್ನುಮುಂದೆ ದೇಶಕ್ಕೆ ಹೆಚ್ಚು ಫಲಕಾರಿಯಾಗಬೇಕೆಂದೂ ಅವರು ತಿಳಿಸಿದರು.

ರಾಜಪ್ರಮುಖರ ಭಾಷಣ

ಅನಂತರ ಶ್ರೀಮನ್ಮಹಾರಾಜರವರು ಭಾಷಣಮಾಡಿ ಈರೀತಿ ತಿಳಿಸಿದರು:—

'ಸಮಾಜ ಸೇವೆಯು ನಾಗರೀಕ ಜೀವನದ ಪ್ರಥಮ ಅವಶ್ಯಕತೆ ಮತ್ತು ಸರ್ಕಾರದ, ಹಾಗೂ ಸಾರ್ವಜನಿಕರ ಪವಿತ್ರವಾದ ಕರ್ತವ್ಯ. ಸಮಾಜ ಸೇವೆಯಲ್ಲಿ ಅನೇಕ ವಿಧಗಳಿವೆ. ಎಲ್ಲರೂ ಒಟ್ಟಾಗಿ ಸೇರಿ ಸಹಕರಿಸಿ ಕಾರ್ಯವನ್ನು ನಡೆಯಿಸುವುದರಿಂದ ಸಮಾಜದಲ್ಲಿ ಐಕಮತ್ಯವುಂಟಾಗಲು ಕಾರಣವಾಗುತ್ತದೆ. ಎಲ್ಲಾ ಗ್ರಾಮಸ್ಥರೂ, ತರಪೇತು ಹೊಂದುತ್ತಿರುವ ತರುಣರೂ ಸಹ ಒಟ್ಟಾಗಿ ಸೇರಿ ನಿರ್ಮಿಸಿರುವ ಶ್ರೀ ರಂಗನಾಥ ಸ್ವಾಮಿ ರಸ್ತೆಯು ಸಹಕಾರ ಮತ್ತು ಸ್ವಸಹಾಯ ತತ್ವದ ಮಾದರಿಯಾಗಿದೆ. ಈ ಮಾದರಿಯನ್ನು ನಮ್ಮ ದೇಶದಲ್ಲೇ ಎಲ್ಲರೂ ಅನುಸರಿಸಲೆಂದು ನಾವು ಆಶಿಸುತ್ತೇವೆ.

ಸ್ವಪ್ರಯತ್ನದಿಂದ, ಇಂತಹ ಮಹಾತ್ಕಾರ್ಯವನ್ನು ಮಾಡಿರುವುದು ಉತ್ತಮವಾದ ಭವಿಷ್ಯವನ್ನು ಸೂಚಿಸುತ್ತದೆ. ಏತಕ್ಕೆಂದರೆ ಸರ್ಕಾರದ ಯೋಜನೆಗಳ ಫಲವೆಲ್ಲಾ ಪ್ರಜೆಗಳ ಪ್ರಯತ್ನ, ಸಹಕಾರ, ಉತ್ಸಾಹ ಮತ್ತು ಸ್ವಾವಲಂಬನೆಗಳನ್ನು ಅನುಸರಿಸುತ್ತದೆ. ಉತ್ತಮವಾದ ರಸ್ತೆಗಳೇ ವ್ಯವಸಾಯ, ಆರೋಗ್ಯ, ನೈರ್ಮಲ್ಯ, ವಿದ್ಯಾಭ್ಯಾಸ ಮತ್ತು ದೇಶದ ಇತರ ಭಾಗಗಳೊಂದಿಗೆ ಸಹಕಾರ,- ಇವುಗಳ ಅಭಿವೃದ್ಧಿಗೆ ಕಾರಣವಾಗುತ್ತದೆ. ದೇಶಸೇವೆಗಾಗಿ ಒಂದು ಲಕ್ಷ ರೂಪಾಯಿಗೆ ಮೀರತಕ್ಕ ಈ ರಸ್ತೆಯ ನಿರ್ಮಾಣದಿಂದ ನಮ್ಮ ನಾಗರೀಕರಿಗೆ ಮಹದುಪಕಾರವಾಗಿದೆ. ಇಂತಹ ಸ್ವಾವಲಂಬನ ಪ್ರಯತ್ನಗಳು ನಮ್ಮದೇಶದ ಇತರ ಭಾಗಗಳಲ್ಲಿ ಮಾಡುವುದರಿಂದ ಸಾಮಾಜಿಕ ಸೇವೆಯಲ್ಲಿ ಇತರರಿಗೆ ಉದಾಹರಣೆಯಾಗಿರುವುದಲ್ಲದೆ ಹೆಮ್ಮೆ ಪಡತಕ್ಕ ಅಂಶವೂ ಆಗಿರುತ್ತದೆ.

ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸದಲ್ಲಿ ಸಮಾಜ ಸೇವೆಯು ಒಂದು ವಿಷಯವೆನಿಸಿದೆ. ಸಮಾಜ ಸೇವೆಯನ್ನು ಮಾಡತಕ್ಕ ಚೈತನ್ಯವನ್ನು ಅಭಿವೃದ್ಧಿಪಡಿಸುವುದೇ ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸದ ಗುರಿ. ವಿಶ್ವವಿದ್ಯಾನಿಲಯದವರು ಏಕಾಂತದಲ್ಲಿರದೆ ಜನರಲ್ಲಿ ಕಲೆತು ಸಹಕರಿಸಿ ಕೆಲಸ ಮಾಡಿದರೆ ಅಂತಹ ಸಮಾಜಸೇವೆಯ ಬೆಲೆ ಅಮೂಲ್ಯವಾದುದು. ಕೇಂದ್ರ ಸರ್ಕಾರದ ರಕ್ಷಣಾಭಾಗದಿಂದ ರಚಿತವಾದ ಈ ಶಿಬಿರವು ಅತ್ಯುತ್ತಮವಾದ ಸಹಕಾರತತ್ವದ ಮಾದರಿ ರಾಷ್ಟ್ರಕ್ಕೆ ಸಂಬಂಧಪಟ್ಟ ಯಾವಸಂಸ್ಥೆಯೇ ಆಗಲಿ ಜನಗಳ ನಿತ್ಯಜೀವನಕ್ಕೆ ಸಂಬಂಧಪಟ್ಟ ಹೊರತು ಅದರ ಉದ್ದೇಶವು ಅಷ್ಟು ಪ್ರಶಂಸನೀಯವಾಗಿರುವುದಿಲ್ಲ. ಗ್ರಾಮಸ್ಥರೊಂದಿಗೆ ಸೇರಿ ಇಂಥಾ ಅಭಿವೃದ್ಧಿ ಕಾರ್ಯಗಳನ್ನು ಮಾಡುವುದರಿಂದ, ಈ ನ್ಯಾಷನಲ್ ಕ್ಯಾಡೆಟ್ ಕೋರ್ ಸಂಸ್ಥೆಯು ಇನ್ನೂ ಅಭಿವೃದ್ಧಿ ಹೊಂದುತ್ತದೆ. ಇಂತಹ ಸಮಾಜ ಸುಧಾರಣೆಯ ಶಿಬಿರಗಳು ರಾಷ್ಟ್ರೀಯ ಕ್ಷೇಮಕ್ಕೂ ಮತ್ತು ಅಭಿವೃದ್ಧಿಗೂ ತಳಹದಿಯಾಗಿವೆ.

ಈ ಪ್ರದೇಶದಲ್ಲಿರತಕ್ಕ ತರೀ ಜಮೀನುಗಳ ಬಹುಭಾಗವು ನಮ್ಮ ದೇಶದ ಚರಿತ್ರೆಯಲ್ಲಿ ಮೊದಲನೆಯ ಸಲವಾಗಿ ಜಪಾನೀ ಕ್ರಮವನ್ನು ಅನುಸರಿಸಿ ಭತ್ತವನ್ನು ಬೆಳೆಯುತ್ತಿರುವುದನ್ನು ಬಹಳ ಆಶಾದಾಯಕವಾಗಿದೆ. ವಿದ್ಯುಚ್ಛಕ್ತಿ ದೀಪವು ಬೇಕೆಂದು ನೀವು ಕೇಳುತ್ತೀರಿ. ನಮ್ಮ ಸರ್ಕಾರವು ಈ ಪ್ರಾರ್ಥನೆಯನ್ನು ಔದಾರ್ಯದಿಂದ ಪರಿಶೀಲಿಸುವುದೆಂದು ಭಾವಿಸುತ್ತೇವೆ. ಮತ್ತು ಈ ವಿದ್ಯುಚ್ಛಕ್ತಿಯ ಪರಿಣಾಮವಾಗಿ ನಿಮ್ಮ ನಿತ್ಯಜೀವನದ ಇತರ ಕಾರ್ಯಕ್ರಮಗಳಲ್ಲೂ ಬಹಳ ಅನುಕೂಲವಾಗಲೆಂದು ಹಾರೈಸುತ್ತೇವೆ.'

ಎನ್. ಸಿ. ಸಿ. ದಳದವರ ಸಂಗಡ ಕೆಲಸ ಮಾಡಿದ ಗ್ರಾಮಸ್ಥರಿಗೂ ಮತ್ತು ದಳದವರಿಗೂ ಶ್ರೀಮನ್ಮಹಾರಾಜರು ಭೋಜನ ಏರ್ಪಡಿಸಿದ್ದರು.

ಭಾಷಣ

ಮೈಸೂರು, ೨೭

ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮಿ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫-೩೦ ಘಂಟೆಗೆ, ಬೊಂಬಾಯಿನಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಸುದ್ದಿ ಸಂಪಾದಕರಾದ ಶ್ರೀ ಹೆಚ್. ವೈ. ಶಾರದಾಪ್ರಸಾದ್ ರವರು "ಪತ್ರಿಕೋದ್ಯಮಿಯ ಸಲಕರಣಗಳು," ಎಂಬ ವಿಷಯದಲ್ಲಿ ಭಾಷಣ ಮಾಡುತ್ತಾರೆ.

ಜನತೆಯ ಕರ್ತವ್ಯ

ದೇಶದಲ್ಲಿ ಕಾನೂನು ವ್ಯವಸ್ಥೆ ಮತ್ತು ಪರಿಪಾಲನೆ ಸಾಧಿಸಬೇಕಾದರೆ ಪ್ರತಿಯೊಬ್ಬ ಪ್ರಜೆಯೂ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಉನ್ನತ ಪ್ರಗತಿಗಾಗಿ ಶ್ರಮಿಸಬೇಕು ಎಂದು ಭಾರತ ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರು ತಿಳಿಸಿರುವರು.

ಪತ್ರಿಕೋದ್ಯೋಗಿಗಳಿಗೆ ಅಪಮಾನ

ಮೈಸೂರು ೨೭

ನಿನ್ನೆ ಕೃಷ್ಣರಾಜಪೇಟೆ ಹೇಮಗಿರಿಯಲ್ಲಿ ಎನ್. ಸಿ. ಸಿ. ಸಮಾಜ ಶಿಬಿರ ಸಮಾರಂಭೋತ್ಸವದಲ್ಲಿ ಶ್ರೀಮನ್ಮಹಾರಾಜರವರು ದಯಮಾಡಿಸಿದ್ದ ಸಮಯದಲ್ಲಿ ಅಲ್ಲಿಗೆ ಮೈಸೂರು ಮತ್ತು ಮಂಡ್ಯ ಪತ್ರಿಕಾ ಪ್ರತಿನಿಧಿಗಳು ಆಹ್ವಾನದ ಮೇಲೆ ಅಲ್ಲಿಗೆ ತೆರಳಿದ್ದರು. ಸಮಾರಂಭವು ಮುಗಿದಮೇಲೆ ಎನ್. ಸಿ ಸಿ., ಗ್ರಾಮಸ್ಥರು ಮತ್ತು ಆಹ್ವಾನಿತರಿಗೆ ಶ್ರೀಮನ್ಮಹಾರಾಜರು ಏರ್ಪಡಿಸಿದ್ದ ಭೋಜನಕೂಟಕ್ಕೆ ಪತ್ರಿಕಾಪ್ರತಿನಿಧಿಗಳನ್ನು ಜಿಲ್ಲಾಧಿಕಾರಿಗಳು ಆಹ್ವಾನದ ಮೇಲೆ ಬರಮಾಡಿಕೊಂಡು, ಆಸ್ಥಳದಲ್ಲಿ ಅವರಿಗೆ ಯಾವ ವ್ಯವಸ್ಥೆಯನ್ನೂ ಮಾಡದೆ ಪತ್ರಿಕಾಕರ್ತರು ಅಲ್ಲೇ ನಿಂತುಕೊಂಡು ಇತರರ ಊಟಮಾಡುತ್ತಿರುವುದನ್ನು ನೋಡಬೇಕಾದ ದುರಾದೃಷ್ಟ ಪರಿಸ್ಥಿತಿಗೆ ಬಂದು ಅವರುಗಳು ಹಿಂತಿರುಗಬೇಕಾಯಿತು. ಯಾವ ಸೌಕರ್ಯವೂ ಇಲ್ಲದ ನಿರ್ಜನ ಪ್ರದೇಶದಲ್ಲಿ ಆಹ್ವಾನದ ಮೇಲೆ ಬಂದಿದ್ದ ಪತ್ರಿಕೋದ್ಯೋಗಿಗಳು ಬಿಸಿಲಿನಲ್ಲಿ ಬಳಲಿ ಹಸಿದುಕೊಂಡು ಸಂಜೆಗೆ ತಮ್ಮ ಊರುಗಳಿಗೆ ಹಿಂತಿರುಗಬೇಕಾಯಿತು.

ವ್ಯವಸ್ಥಾಪಕರಾದ ಮಂಡ್ಯದ ಜಿಲ್ಲಾಧಿಕಾರಿ ಶ್ರೀ ಬಿ. ಬೀರಪ್ಪನವರು ಪತ್ರಿಕಾಕರ್ತರನ್ನು ಆಹ್ವಾನಿಸಿ, ಈ ರೀತಿ ಅಪಮಾನ ಪಡಿಸಿದುದು ಅತ್ಯಂತ ಶೋಚನೀಯ.

ತಾಂತ್ರಿಕ ನಿಪುಣರ ಅವಶ್ಯಕತೆ

ಮುಂದಿನ ೫ ಅಥವಾ ೧೦ ವರ್ಷಗಳಲ್ಲಿ ದೇಶದ ನಾನಾ ಯೋಜನೆಗಳನ್ನು ಕಾರ್ಯಗತಮಾಡಲು ಅಗತ್ಯವಾದ ತಾಂತ್ರಿಕ ನಿಪುಣರನ್ನು ಕೂಡಿಸುವ ದೀರ್ಘವಾದ ಯೋಜನೆಯನ್ನು ತಯಾರಿಸಬೇಕಾಗಿದೆ. ಎಂದು ಪ್ರಧಾನಿ ನೆಹರೂರವರು ನೀರಾವರಿ ಮತ್ತು ವಿದ್ಯುತ್ ಕೇಂದ್ರ ಮಂಡಲಿಯ ೨೪ನೇ ವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸುತ್ತಾ ನಿನ್ನೆಯದಿನ ತಿಳಿಸಿದರು.

ಶಾಸನ ಸಭಾಧ್ಯಕ್ಷರುಗಳ ಸಮ್ಮೇಳನ ಮುಕ್ತಾಯ

ಭಾರತದ ಎಲ್ಲಾ ಶಾಸನಸಭೆಗಳ ಅಧ್ಯಕ್ಷರುಗಳ ಸಮ್ಮೇಳನವು ೩ ದಿನಗಳಿಂದ ಗ್ವಾಲಿಯರ್‌ನಲ್ಲಿ ನಡೆಯುತ್ತಲಿದ್ದು ನಿನ್ನೆ ಮುಕ್ತಾಯವಾಯಿತು.

ಭಾರತದಲ್ಲಿ ೨೩೧ ಬ್ಯಾಂಕುಗಳು ಮುಚ್ಚುವಸ್ಥಿತಿಯಲ್ಲಿವೆ

ಠೇವಣಿದಾರರ ಪರಿಹಾರದ ಬಗ್ಗೆ ಆರ್ಡಿನೆನ್ಸ್

ಭಾರತದಲ್ಲಿ ಇತ್ತೀಚಿನ ಪರಿಶೀಲನೆ ಪ್ರಕಾರ ೨೩೧ ಬ್ಯಾಂಕುಗಳು ಮುಚ್ಚುವ ಪರಿಸ್ಥಿತಿಯಲ್ಲಿವೆ. ಅವುಗಳಲ್ಲಿ ಮಧ್ಯಮ ವರ್ಗದವರ ಠೇವಣಿ ಹಣವೇ ಸುಮಾರು ೩೦ ಕೋಟಿ ರೂಪಾಯಿಗಳಷ್ಟು ಇವೆ. ಈ ಠೇವಣಿದಾರರಿಗೆ ಪರಿಹಾರವನ್ನು ಕೊಡುವ ವಿಷಯದಲ್ಲಿ ಅವರ ಹಿತಾಸಕ್ತಿಗಳನ್ನು ಕಾಪಾಡಲು ಕೇಂದ್ರ ಸರ್ಕಾರವು ಒಂದು ಆರ್ಡಿನೆನ್ಸ್ ಹೊರಡಿಸಿದೆ. ಈ ಆಜ್ಞೆ ಪ್ರಕಾರ ಆ ಬ್ಯಾಂಕುಗಳ ಆಡಳಿತವನ್ನು ಕೇಂದ್ರವು ವಹಿಸಿಕೊಳ್ಳುವ ಅಧಿಕಾರ ವಿರುತ್ತದೆ.

ಮಿಡಲ್ ಸ್ಕೂಲ್ ಪರೀಕ್ಷೆ ರದ್ದು

ಬೆಂಗಳೂರು ೨೭

ಈ ವರ್ಷದಿಂದ ಮಿಡಲ್ ಸ್ಕೂಲ್ ಪರೀಕ್ಷೆ (ಲೋವರ್ ಸೆಕೆಂಡರಿ) ಮತ್ತು ಅಪ್ಪರ್‌ಪ್ರೈಮರಿ ಪರೀಕ್ಷೆ ರದ್ದಾಗಿರುವುದಾಗಿ ಸೂಚಿಸಿ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ.

ಮದ್ರಾಸಿಗೆ ಗಿರಣಿ ಬಟ್ಟೆಗಳ ರವಾನೆ ಬೇಡ

ಮುಖ್ಯಮಂತ್ರಿ ರಾಜಾಜಿ ಸಲಹೆ

ತಮ್ಮ ಸಲಹೆಯಂತೆ ಸೀರೆ ಮತ್ತು ಪಂಚೆಗಳ ತಯಾರಿಕೆಯನ್ನು ಕೈಮಗ್ಗದವರಿಗೆ ಮೀಸಲಾಗಿಡಲು ಸಾಧ್ಯವಿಲ್ಲದಿದ್ದರೆ ತಮ್ಮ ಪ್ರಾಂತ್ಯಕ್ಕೆ ಗಿರಣಿ ಪಂಚೆ ಮತ್ತು ಸೀರೆಗಳ ರವಾನೆಯನ್ನಾದರೂ ನಿಲ್ಲಿಸಬೇಕೆಂದು ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿರುವುದಾಗಿ ತಿಳಿಸಿದ್ದಾರೆ.

ಗುತ್ತಿಗೆ ಮಸೂದೆ ಪರಿಶೀಲನೆ

ಹೈದರಾಬಾದಿನಲ್ಲಿ ಗುತ್ತಿಗೆ ಮಸೂದೆಯನ್ನು ಪರಿಶೀಲಿಸಲು ಶಾಸನಸಭೆಯ ವಿಶೇಷ ಅಧಿವೇಶನವನ್ನು ಡಿಸೆಂಬರ್ ಮೊದಲನೇ ವಾರದಲ್ಲಿ ಕರೆಯಲಾಗುವುದೆಂದು ಅಲ್ಲಿಯ ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಹೇಳಿದ್ದಾರೆ.

ಹೈದರಾಬಾದಿನಲ್ಲಿದ್ದ ಕಾಂಗ್ರೆಸ್ ಬಿಕ್ಕಟ್ಟಿನ ವಿಷಯವನ್ನು ಪರಿಶೀಲಿಸಲು ಪಾರ್ಲಿಮೆಂಟರಿ ಸಮಿತಿಯು ಮಾಡಿರುವ ವಿಷಯವಾಗಿ ಅವರು ಪ್ರಸ್ತಾಪಿಸುತ್ತಾ ಕೆಲವು ಕಾಂಗ್ರೆಸ್ ಶಾಸನಸಭಾಸದಸ್ಯರು ಮಂತ್ರಿಮಂಡಲದಮೇಲೆ ಮಾಡಿದ್ದ ಆರೋಪಣೆಗಳು ನಿರಾಧಾರವಾದುವೆಂದು ವಿಮುಕ್ತಗೊಳಿಸಿರುವುದರಿಂದ ಇನ್ನು ಮುಂದಿನ ಕಾರ್ಯಗಳು ಸುಗಮವಾಗಿ ನಡೆಯುವುವೆಂದು ಅವರು ತಿಳಿಸುತ್ತಾ ತಮ್ಮ ಮಂತ್ರಿಮಂಡಲದ ಪುನರ್ರಚನೆ ಪ್ರಶ್ನೆಯೇನೂ ಇಲ್ಲವೆಂದು ತಿಳಿಸಿದ್ದಾರೆ.

ಕೃಷ್ಣರಾಜೇಂದ್ರ ಸೊಸೈಟಿ ಡೈರೆಕ್ಟರುಗಳು

ಮೈಸೂರು ೨೭

ಶ್ರೀ ಕೃಷ್ಣರಾಜೇಂದ್ರ ಪರಸ್ಪರ ಸಹಾಯ ಸಂಘದ ಡೈರೆಕ್ಟರುಗಳ ಚುನಾವಣೆ ನಡೆದು ಈ ಕೆಳಗೆ ಕಂಡವರು ಚುನಾಯಿತರಾಗಿರುವರು:—

ಶ್ರೀಗಳಾದ ಬಿ. ಆರ್. ನಾಯ್ಡು, ಟಿ. ಎಸ್. ಸುಬ್ಬರಾವ್, ಕೆ. ಸೀತೂರಾಮರ್, ಕೆ. ಆರ್. ವೀರಭದ್ರಪ್ಪ, ಎಂ. ಮಾದರಾಜ ಅರಸ್. ಬಿ. ಎಂ. ಚಂದ್ರಶೇಖರಯ್ಯ, ಎ. ವಿ. ಶ್ರೀನಿವಾಸಮೂರ್ತಿ, ಟಿ. ನಾರಾಯಣ ಅಯ್ಯಂಗಾರ್, ವೈ. ಚಂದ್ರಶೇಖರ ಶಾಸ್ತ್ರಿ, ಬಿ. ನಾರಾಯಣಶಾಸ್ತ್ರಿ. ಕೆ ಎಲ್. ಗೋವಿಂದರಾವ್, ಹೆಚ್. ಕೃಷ್ಣಮೂರ್ತಿ, ಎಂ. ಎಸ್. ಶಿವನಂಜಪ್ಪ, ಎಂ. ಬಿ. ಬಸವರಾಜ್ ಮತ್ತು ಎಸ್. ರಾಮಾಶಾಸ್ತ್ರಿ.

ಖದ್ದರ್ ಪರಸ್ಪರ ಸಹಾಯ ಸಂಘ ಚುನಾವಣೆ

ಮೈಸೂರು ೨೭

ಖದ್ದರ್ ಪರಸ್ಪರ ಸಹಾಯ ಸಂಘದ ಡೈರೆಕ್ಟರುಗಳ ಚುನಾವಣೆಯು ನಡೆದು ಈ ಕೆಳಗೆ ಕಂಡವರು ಚುನಾಯಿತರಾಗಿದ್ದಾರೆ.

ಶ್ರೀ ಎಸ್. ಶ್ರೀರಂಗಾಚಾರ್ ಅಧ್ಯಕ್ಷರು, ಶ್ರೀ ಆರ್. ಶ್ರೀನಿವಾಸಾಚಾರ್ ಉಪಾಧ್ಯಕ್ಷರು, ಶ್ರೀ ಹೆಚ್. ಎಸ್. ಶಾಮಶಾಸ್ತ್ರಿ ಕಾರ್ಯದರ್ಶಿ, ಸದಸ್ಯರಾಗಿ ಶ್ರೀಗಳಾದ ಎ. ಎ. ದೊರೆಸ್ವಾಮಯ್ಯಂಗಾರ್, ಕೆ. ರಾಮಕೃಷ್ಣ, ಡಾ|| ಬಿ. ಎಸ್. ಸೂರ್ಯನಾರಾಯಣರಾವ್, ಪಿ. ವಿ. ಪದ್ಮನಾಭರಾವ್, ಬಿ. ಪದ್ಮನಾಭಾಚಾರ್, ಪಿ. ಗೋಪಾಲಕೃಷ್ಣಶೆಟ್ಟಿ, ಜಿ. ಸಚ್ಚಿದಾನಂದ, ಹೆಚ್. ಕೆ. ಕುಮಾರಸ್ವಾಮಿ, ಎಂ. ಜಂಬುನಾಥ್, ಕೆ. ಎಸ್. ನಾರಾಯಣಸ್ವಾಮಿ, ಎಂ. ಎಲ್. ಕೃಷ್ಣಮೂರ್ತಿ ಮತ್ತು ಎಂ. ಬಿ. ಮಹದೇವಯ್ಯ.

-ಮೈಸೂರು ಪೇಟೆಧಾರಣೆ-

ತಾರೀಖು ೨೬—೧೦—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೦—	೨೩—
ಎಳ್ಳು	೭೯—	೮೧—೧೪
ಹರಳು	೪೦—೩	—
ಹುರಳಿ	೩೮—೪೧	—
ಹೆಸರು	೪೧—೮	೫೩—೪
ಅಲಸಂದೆ	೪೩—	೬೭—೧೦
ಹುಣಸೇಹಣ್ಣು	೭—೯	೭—೧೩
ಮೆಣಸಿನಕಾಯಿ	೧೧—೩	೩೮—೬
ತೆಂಗಿನಕಾಯಿ	೨೦೧	೨೮೦

ಪಂಚೆಗಳ ತಯಾರಿಕೆ ಬಗ್ಗೆ ನೂತನ ಆರ್ಡಿನೆನ್ಸ್

ನಿಗದಿ ಮಾಡಿರುವುದಕ್ಕಿಂತ ಹೆಚ್ಚಾಗಿ ತಯಾರಿಸಕೂಡದು

ಗಿರಣಿಗಳು ನಿಗದಿಮಾಡಿರುವ ಪ್ರಮಾಣಕ್ಕಿಂತ ಹೆಚ್ಚಾಗಿ ಪಂಚೆಗಳನ್ನು ತಯಾರಿಸಕೂಡದು ಹಾಗೆ ತಯಾರಿಸಿದಲ್ಲಿ ಅವುಗಳಮೇಲೆ ಹೆಚ್ಚಿಗೆ ಸುಂಕವನ್ನು ವಿಧಿಸಲಾಗುತ್ತದೆ ಎಂಬ ಆಜ್ಞೆಯನ್ನು ಒಳಗೊಂಡ ಆರ್ಡಿನೆನ್ಸನ್ನು ಕೇಂದ್ರಸರ್ಕಾರವು ನಿನ್ನೆಯದಿನ ಹೊರಡಿಸಿದೆ

೧೯೫೧ ನೇ ಏಪ್ರಲ್‌ನಿಂದ ೧೯೫೨ ನೇ ಮಾರ್ಚಿಯೊಳಗೆ ತಯಾರಿಸುತ್ತಲಿದ್ದ ಪ್ರಮಾಣದಲ್ಲಿ ಶೇಕಡ ೬೦ ರಷ್ಟನ್ನು ಮಾತ್ರ ಈಗ ಗಿರಣಿಗಳು ತಯಾರಿಸಬೇಕೆಂದು ಈ ಆಜ್ಞೆಯಲ್ಲಿ ಸಮೂದಿಸಲಾಗಿದೆ.

ವಿಶಾಲಾಂಧ್ರ ಸ್ಥಾಪನೆ

ಪ್ರಧಾನಿ ನೆಹರೂರವರು ಈಗ ಸ್ಥಾಪಿಸಿರುವ ಆಂಧ್ರಕ್ಕೆ ಉಳಿಕೆ ಭಾಗಗಳನ್ನು ಸೇರಿಸಿ ವಿಶಾಲಾಂಧ್ರವನ್ನು ರಚನೆ ಮಾಡುವುದಾಗಿ ತಮಗೆ ಪೂರ್ಣ ನಂಬಿಕೆಯಿದೆಯೆಂದು ಆಂಧ್ರಪ್ರಾಂತ್ಯ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ಹೇಳಿದ್ದಾರೆ.

ಸ್ವಾತಂತ್ರ್ಯವನ್ನು ಗಳಿಸಿದಾಗ ಮತ್ತು ಅನಂತರ ಶ್ರೀ ನೆಹರೂರವರು ತಪ್ಪು ಹಾದಿಯನ್ನು ಹಿಡಿದಿರುವಂತೆ ತಾವು ತಿಳಿದಿದ್ದರೆಂದೂ ಆದರೆ ಶ್ರೀ ನೆಹರೂರವರು ಮಹಾತ್ಮ ಗಾಂಧಿಯವರ ಮಾರ್ಗವನ್ನೇ ಅನುಸರಿಸುತ್ತಲಿರುವುದರಿಂದ ಅವರ ನಾಯಕತ್ವದಲ್ಲಿ ನಾವು ಪ್ರಗತಿ ಸಾಧಿಸಿದ್ದೇವೆಂದು ಶ್ರೀ ಪ್ರಕಾಶಂ ಹೇಳಿದ್ದಾರೆ.

ಪ್ರತ್ಯೇಕತೆ ಮನೋಭಾವ ಬೇಡ

ಜನರು ತಾವು ಆಂಧ್ರರು, ಕನ್ನಡಿಗರು, ಮೈಸೂರಿನವರು, ಹೈದರಾಬಾದಿನವರು, ಎಂಬುದಾಗಿ ಯೋಚಿಸುವುದನ್ನು ಇನ್ನು ಮುಂದೆ ತ್ಯಜಿಸಿ, ತಾವು ಭಾರತೀಯರು ಎಂದು ಭಾವಿಸಿಕೊಳ್ಳಬೇಕು-ಎಂದು ಭಾರತದ ಉಪ ರಾಷ್ಟ್ರಪತಿ ಡಾ|| ರಾಧಾಕೃಷ್ಣರವರು ಹೊಸಪೇಟೆ ಪೌರಸಭೆಯ ಬಿನ್ನವತ್ತಳೆಗೆ ಉತ್ತರವಾಗಿ ತಿಳಿಸಿದ್ದಾರೆ.

ವಿಶೇಷ ಮುನಿಸಿಫ್ ಕೋರ್ಟು ರದ್ದು

ಬೆಂಗಳೂರು ೨೭

ಮೈಸೂರು ನಗರದಲ್ಲಿರುವ ವಿಶೇಷ ಪ್ರಥಮದರ್ಜೆಯ ಮುನಿಸಿಫ್ ಕೋರ್ಟು ಮುಂದಿನತಿಂಗಳು ಒಂದನೇ ತಾರೀಖಿನಿಂದ ರದ್ದುಗೊಳಿಸಲಾಗಿದೆಯೆಂದು ಸರ್ಕಾರ ಆಜ್ಞೆ ಇತ್ತಿದೆ.

ಕಾರ್ಮಿಕರಿಗೆ ನೆರವು

ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿದಾಗ ಅವರಿಗೆ ಪರಿಹಾರವನ್ನು ಕೊಡುವ ಬಗ್ಗೆ ಕೇಂದ್ರ ಸರ್ಕಾರವು ಒಂದು ಹೊಸ ಆರ್ಡಿನೆನ್ಸನ್ನು ಹೊರಡಿಸಿದೆ.

ಗೋಲ್ವಾಲ್ಕರ್‌ರ ಭಾಷಣ

ಮೈಸೂರು, ೨೭

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಿಸಂಘ ಚಾಲಕರಾದ ಶ್ರೀ ಮಾಧವರಾವ್ ಸದಾಶಿವ ಗೋಲ್ವಾಲ್ಕರ್ ಗುರೂಜಿಯವರು ಇದೇ ೩೦ನೇ ತಾ|| ಶುಕ್ರವಾರ ಸಂಜೆ ೬-೩೦ ಗಂಟೆಗೆ ಪುರಭವನದ ಮೈದಾನದಲ್ಲಿ ಭಾಷಣ ಮಾಡುತ್ತಾರೆ. ಶ್ರೀ ಜಿ. ಆರ್. ಜೋಸ್ಯರ್‌ರವರು ಅಧ್ಯಕ್ಷತೆ ವಹಿಸುವರು.

ಕಾಂಗ್ರೆಸ್ ಸದಸ್ಯ ಸಂಗ್ರಹಣೆ

ಬೆಂಗಳೂರು ೨೭

ಕಾಂಗ್ರೆಸ್ಸಿಗೆ ಸದಸ್ಯರನ್ನು ಕೂಡಿಸುವುದಕ್ಕೆ ಡಿಸೆಂಬರ್ ೩೧ ನೇ ತಾರೀಖು ಕೊನೆಯದಿನವಾದುದರಿಂದ ತೀವ್ರವಾಗಿ ಈ ಸದಸ್ಯ ಸಂಗ್ರಹ ಕೆಲಸವನ್ನು ಮಾಡಬೇಕೆಂದು ಎಂ. ಪಿ. ಸಿ. ಸಿ. ಕಾರ್ಯದರ್ಶಿಗಳಾದ ಶ್ರೀ ಟಿ. ಮರಿಯಪ್ಪನವರು ಪ್ರಾರ್ಥಿಸಿದ್ದಾರೆ.

ಬಳ್ಳಾರಿಯಲ್ಲಿ ನೂತನ ಕಾಲೇಜ್

ಬಳ್ಳಾರಿ ಜಿಲ್ಲೆಯಲ್ಲಿ ಒಂದು ಇಂಜನೀಯರಿಂಗ್ ಅಥವ ಆರ್ಟ್ಸ್ ಕಾಲೇಜನ್ನು ಸದ್ಯದಲ್ಲೇ ಸ್ಥಾಪಿಸಲು ಸರ್ಕಾರ ಯೋಚಿಸುತ್ತಿದೆಯೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹೊಸಪೇಟೆಯ ಪುರಸಭೆಯವರು ಇತ್ತ ಸ್ವಾಗತ ಸಮಾರಂಭದಲ್ಲಿ ತಿಳಿಸಿದ್ದಾರೆ.

★ ಈಗ ಕರ್ನಾಟಕ ಪ್ರಾಂತ ಕಾಂಗ್ರೆಸ್ ಸಮಿತಿಗೆ ಸೇರಿರುವ ಬಳ್ಳಾರಿ ಜಿಲ್ಲಾ ಕಾಂ|| ಇನ್ನು ಮುಂದೆ ಮೈಸೂರು ಪ್ರದೇಶ ಕಾಂಗ್ರೆಸ್ಸಿನಲ್ಲಿ ಸೇರಬೇಕೆಂದು ಅಲ್ಲಿನ ಬಳ್ಳಾರಿ ಜಿಲ್ಲಾ ಕಾಂಗ್ರೆಸ್ ಸಮಿತಿ ನಿರ್ಧರಿಸಿದೆ.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ
ಥಿಯೇಟ್ರಿಕಲ್ ಕಂಪೆನಿ (ರಿ)
27--10--53 ನೇ ರಾತ್ರಿ 10 ಗಂಟೆಗೆ
ಶಿವರಾಂಪೇಟೆಯ ರತ್ನಾವಳಿ
ಥಿಯೇಟರಿನಲ್ಲಿ
ಚಲನಚಿತ್ರದಲ್ಲಿ ಖ್ಯಾತಿ ಪಡೆದ ನಾಟಕ
ರತ್ನ ಜಿ. ಹೆಚ್. ವೀರಣ್ಣ, ಜಯಮ್ಮ
ಮತ್ತು ಲಕ್ಷ್ಮಮ್ಮ ನಟಿಸಿರುವ
ಕುರುಕ್ಷೇತ್ರ
ಎಂಬ ಸಾಮಾಜಿಕ ನಾಟಕವನ್ನು
ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೬೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೫೬

೨೮-೧೦-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ವರ್ಷಕ್ಕೆ ೧೦ ಲಕ್ಷ ಜನರಿಗೆ ಉದ್ಯೋಗ

ಪಂಚವಾರ್ಷಿಕ ಯೋಜನೆಗೆ ಹೆಚ್ಚು ಪ್ರಚಾರ

ಕೇಂದ್ರ ಸರ್ಕಾರದ ನೂತನ ಯೋಜನೆ

ದೇಶದಲ್ಲಿ ವರ್ಷಕ್ಕೆ ಐದುಲಕ್ಷ ಜನರಿಗೆ ಉದ್ಯೋಗವನ್ನು ಕಲ್ಪಿಸಲು ಯೋಜನೆಯನ್ನು ಪ್ರಾರಂಭಮಾಡಿ ಕ್ರಮೇಣ ಅದನ್ನು ೧೦ ಲಕ್ಷಕ್ಕೆ ಏರಿಸುವ ಧ್ಯೇಯವನ್ನು ಇಟ್ಟುಕೊಂಡು ಆ ಯೋಜನಾ ಸಮಿತಿಯು ತನ್ನ ಎರಡನೇ ಪಂಚವಾರ್ಷಿಕ ಯೋಜನೆಯನ್ನು ತಯಾರಿಸುತ್ತಲಿರುವುದಾಗಿ ಹೇಳಲಾಗಿದೆ. ದೇಶದಲ್ಲಿ ವಿದ್ಯಾವಂತರು ಹೆಚ್ಚಾಗುತ್ತಾ ನಿರುದ್ಯೋಗವು ಏರುತ್ತಿರುವುದನ್ನು ತಪ್ಪಿಸಲು ಉತ್ಪನ್ನವನ್ನೂ ಹೆಚ್ಚಿಸಿ ಆಗ ನಿರುದ್ಯೋಗಿಗಳಿಗೆ ಉದ್ಯೋಗವನ್ನು ಕಲ್ಪಿಸುವುದೇ ಆಯೋಜನಾ ಸಮಿತಿಯ ಧ್ಯೇಯವಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಯ ಅಭಿವೃದ್ಧಿಪಡಿಸಲು ಸೂಕ್ತ ಕ್ರಮವನ್ನು ಕೈಗೊಳ್ಳಲಾಗುತ್ತದೆ. ವಿಶೇಷವಾಗಿ ದೊರೆಯುತ್ತಿರುವ ಕಚ್ಚಾವಸ್ತುಗಳ ಉಪಯೋಗವನ್ನು ಹೆಚ್ಚಿಸಲಾಗುತ್ತದೆ. ಕೈಗಾರಿಕಾಭಿವೃದ್ಧಿಯಲ್ಲಿ ಸಾಧ್ಯವಾದಷ್ಟು ಜನಶಕ್ತಿಯನ್ನು ಉಪಯೋಗಿಸುವ ಮಾರ್ಗವನ್ನು ಕಂಡುಹಿಡಿಯಲಾಗುತ್ತದೆ

ಇದಲ್ಲದೆ ಈಗಿನ ಪಂಚವಾರ್ಷಿಕ ಯೋಜನಾ ಕಾರ್ಯಗಳನ್ನು ಜನರಿಗೆ ತಿಳಿಸಲು ದೆಹಲಿಯಲ್ಲಿ ಒಂದು ಖಾಯಂ ವಸ್ತುಪ್ರದರ್ಶನವನ್ನು ಪ್ರಾಂತ್ಯದ ಪ್ರಮುಖ ಪ್ರದೇಶಗಳಲ್ಲಿ ಆಯಾ ಪ್ರಾಂತ್ಯಗಳಿಗೆ ಮತ್ತು ಕೇಂದ್ರಕ್ಕೆ ಸಂಬಂಧಪಟ್ಟ ಕಾರ್ಯಗಳ ವಸ್ತುಪ್ರದರ್ಶನವನ್ನು ಏರ್ಪಡಿಸಿ ಪಂಚವಾರ್ಷಿಕ ಯೋಜನೆಗೆ ಹೆಚ್ಚು ಪ್ರಚಾರವನ್ನು ಮಾಡಲಾಗುತ್ತದೆ.

ಶಾಲಾ ಕಾಲೇಜುಗಳಲ್ಲಿ ಪಂಚವಾರ್ಷಿಕ ಯೋಜನೆಯ ಪಾಠವನ್ನು ಕಡ್ಡಾಯವಾಗಿ ಎಲ್ಲರೂ ಕಲಿಯುವ ವ್ಯವಸ್ಥೆ ಮಾಡಲಾಗುವುದಲ್ಲದೆ. ಐ. ಎ. ಎಸ್, ಐ. ಎಫ್. ಎಸ್ ಮತ್ತು ಪ್ರಾಂತ್ಯಗಳ ನೌಕರರುಗಳಿಗೆ ಸಹ ಇದನ್ನು ಕಡ್ಡಾಯವಾಗಿ ಕಲಿಯುವಂತೆ ಮಾಡಲಾಗುತ್ತದೆ.

ಪಂಚವಾರ್ಷಿಕ ಯೋಜನೆಯ ಪ್ರಚಾರ ಕಾರ್ಯಕ್ಕಾಗಿಯೇ ೪೫ ಲಕ್ಷ ರೂಪಾಯಿಗಳನ್ನು ಇನ್ನುಮುಂದೆ ವೆಚ್ಚಮಾಡಲಾಗುವುದು.

● ಮೈಸೂರು ಜಿಲ್ಲಾ ಬೋರ್ಡಿನ ಸಾಮಾನ್ಯಸಭೆಯು ಮುಂದಿನ ತಿಂಗಳು ೯ ನೇ ತಾರೀಖು ಸೋಮವಾರ ಮಧ್ಯಾಹ್ನ ಒಂದು ಘಂಟೆಗೆ ಜಿಲ್ಲಾ ಭವನದಲ್ಲಿ ನಡೆಯುತ್ತದೆ.

ಹಾಲು ಪರೀಕ್ಷಾ ಕೇಂದ್ರ ಸ್ಥಾಪನೆಗೆ ಒತ್ತಾಯ

ಪುರಸಭೆಯಲ್ಲಿ ನಿರ್ಣಯ ಪರಿಶೀಲನೆ

ಮೈಸೂರು ೨೮

ನಗರದ ಪುರಸಭೆಯ ಅಧಿವೇಶನವು ಇದೇ ೩೦ ನೇ ತಾರೀಖು ಮಧ್ಯಾಹ್ನ ೪ ಗಂಟೆಗೆ ನಡೆಯುವುದು.

ಸಾರ್ವಜನಿಕರ ಆರೋಗ್ಯರಕ್ಷಣೆ ದೃಷ್ಟಿಯಿಂದ ನಗರದಲ್ಲಿ ಒಂದು ಹಾಲು ಪರೀಕ್ಷಾ ಕೇಂದ್ರವನ್ನು ಪುರಸಭೆಯವರು ತೆರೆಯಬೇಕು. ಸಾರ್ವಜನಿಕರಿಗೆ, ಆಸ್ಪತ್ರೆಗಳಿಗೆ ಮತ್ತು ಹೋಟೇಲುಗಳಿಗೆ ಸರಬರಾಜಾಗುವ ಹಾಲು ಮೊದಲು ಈ ಕೇಂದ್ರದಲ್ಲಿ ಪರೀಕ್ಷಿಸಲ್ಪಡಬೇಕು-ಎಂದು ನಿರ್ಣಯವನ್ನು ಶ್ರೀ ಎಂ. ಆರ್. ಶ್ರೀನಿವಾಸಅಯ್ಯಂಗಾರ್ಯರು ಮಂಡಿಸಲಿದ್ದಾರೆ.

ಸಯ್ಯೇಜ್ ಫಾರಂನ ಪಕ್ಕದಲ್ಲಿರುವ ಪುರಸಭೆಗೆ ಸೇರಿದ ೪೦೦ ಎಕರೆ ಭೂಮಿಯನ್ನು ಆದಿಕರ್ನಾಟಕ ಪುರದ ನಿರಾಶ್ರಿತ ವೀಳೆಯದೆಲೆ ತೋಟಗಾರರಿಗೆ ವ್ಯವಸಾಯಕ್ಕಾಗಿ ಉಚಿತವಾಗಿ ಕೊಡಬೇಕೆಂದು ಶ್ರೀ ಜಿ. ಲಿಂಗಯ್ಯನವರು ನಿರ್ಣಯ ತಂದಿದ್ದಾರೆ.

ಡಿಫ್ತೀರಿಯಾ ಕಾಹಿಲೆ ರೋಗಿಗಳಿಗಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಒಂದು ಹೊಸ ವಾರ್ಡು ತೆರೆಯಬೇಕು. ಮೈಸೂರು ನಗರ ಮತ್ತು ಸಂಸ್ಥಾನಕ್ಕೆ ಗೋಮಾಂಸ ಸರಬರಾಜಾಗದಂತೆ ನಿಷೇಧಾಜ್ಞೆಯನ್ನು ಸರ್ಕಾರ ಹೊರಡಿಸಿ ಗೋವಧೆಯನ್ನು ನಿಲ್ಲಿಸಬೇಕು-ಎಂಬ ನಿರ್ಣಯಗಳನ್ನು ಶ್ರೀ ಬಿ. ಜಿ. ದಾಸ್ ಕಳುಹಿಸಿದ್ದಾರೆ.

ಕಲ್ಯಾಣಭವನದ ಪ್ರಾರಂಭೋತ್ಸವ

ಮೈಸೂರು ೨೮

ರಾಜಧಾನಿಯ ಬ್ರಾಹ್ಮಣ ಧರ್ಮ ಸಹಾಯ ಸಭೆಯವರು ತ್ಯಾಗರಾಜ ರಸ್ತೆಯಲ್ಲಿ ನೂತನವಾಗಿ ಕಟ್ಟಿಸಿರುವ ಕಲ್ಯಾಣ ಭವನದ ಪ್ರತಿಷ್ಠಾಪನಾ ಮಹೋತ್ಸವವು ಮುಂದಿನತಿಂಗಳು ೧ನೇ ತಾರೀಖು ಬೆಳಿಗ್ಗೆ ೧೦ ಗಂಟೆಗೆ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು.

ಸತ್ಕಾರ

ಮೈಸೂರು, ೨೮

ಲಂಡನ್ನಿನಲ್ಲಿ ಮೈಸೂರಿನ ಟ್ರೇಡ್ ಏಜೆಂಟರಾಗಿ ನೇಮಕವಾಗಿರುವ ಶ್ರೀ ಹೆಚ್. ಜಿ. ವಿಜಯರಾಘವ ರೆಡ್ಡಿಯವರಿಗೆ ನಗರದ ಪ್ರಮುಖರು ನಿನ್ನೆಯದಿನ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಶ್ರೀಗಳಾದ ಎಸ್. ಲಿಂಗಣ್ಣ, ಟಿ. ವೆಂಕಟರಮಣಯ್ಯ, ಎಂ. ಆರ್ ಸಿ. ಬಸಪ್ಪ ಮುಂತಾದವರು ಮಾತನಾಡಿ ಶ್ರೀ ರೆಡ್ಡಿಯವರಿಗೆ ಅವರ ನೂತನ ಉದ್ಯಮದಲ್ಲಿ ಯಶಸ್ಸನ್ನೂ ಸುಖ ಪ್ರಯಾಣವನ್ನೂ ಕೋರಿದರು.

ವೀವಿಂಗ್ ಫ್ಯಾಕ್ಟರಿ ಕಾರ್ಮಿಕರಿಗೆ ಪರಿಹಾರ

ಮೈಸೂರು ನಗರದ ಪವರ್‌ಲೂಂ ಕೆಲಸಗಾರರ ಸಂಘದವರಿಗೂ ಶ್ರೀ ಜಯಲಕ್ಷ್ಮಿ ವೀವಿಂಗ್ ಕಾರ್ಖಾನೆಯ ಮಾಲೀಕರಿಗೂ ಕಾರ್ಖಾನೆಯನ್ನು ಮುಚ್ಚಿರುವ ಬಗ್ಗೆ ಇಂಡಸ್ಟ್ರೀಯಲ್ ಟ್ರಿಬ್ಯುನಲ್‌ಮುಂದೆ ನಡೆಯುತ್ತಿದ್ದ ವ್ಯವಹಾರವು ಲೇಬರ್ ಕಮೀಷನರ್‌ರವರ ಸಲಹೆಯ ಮೇರೆ ಸದರಿ ಮಾಲೀಕರು ತಮ್ಮಲ್ಲಿ ಕೆಲಸಮಾಡುತ್ತಿದ್ದ ಕೆಲಸಗಾರರಿಗೆ ಪ್ರತಿ ವರ್ಷವೂ ಒಂದು ತಿಂಗಳ ಸಂಬಳದಂತೆ ಅವರವರ ಸರ್ವೀಸಿನಮೇಲೆ ಪರಿಹಾರ ಕೊಟ್ಟು ಈಗ್ಗೆ ೧೦ ತಿಂಗಳಿಂದ ನಡೆಯುತ್ತಿದ್ದ ವ್ಯವಹಾರವನ್ನು ತೀರ್ಮಾನಮಾಡಿಕೊಂಡಿರುತ್ತಾರೆ.

ನಂದಿ ದೇವಸ್ಥಾನ ಕೇಂದ್ರ ಆಡಳಿತ

ಬೆಂಗಳೂರಿಗೆ ೪೦ ಮೈಲಿ ದೂರವಿರುವ ನಂದಿಬೆಟ್ಟದಮೇಲಿರುವ ಶ್ರೀ ಯೋಗನಂದೀಶ್ವರ ಸ್ವಾಮಿ ದೇವಸ್ಥಾನ ಮತ್ತು ಅಲ್ಲಿನ ಟೀಪೂಸುಲ್ತಾನನ ಅರಮನೆಗಳನ್ನು ಕೇಂದ್ರ ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳಲಾಗಿದೆ

ಸೈನಿಕರಿಗೆ ಕಾಫಿಉಡುಗೊರೆ

ಕೊರಿಯಾ ಯುದ್ಧ ಖೈದಿಗಳ ಮೇಲ್ವಿಚಾರಕದಲ್ಲಿರುವ ಭಾರತೀಯ ಸೈನಿಕರಿಗೆ ದೀಪಾವಳಿ ಹಬ್ಬದ ಸಮಯಕ್ಕಾಗಿ ಒಂದು ಟನ್ ಕಾಫಿ ಬೀಜವನ್ನು ಕಳುಹಿಸಲು ಭಾರತದ ಕಾಫಿ ಬೋರ್ಡ್ ನಿರ್ಧರಿಸಿದೆ.

ಖಾದಿ ಮತ್ತು ಗ್ರಾಮ ಕೈಗಾರಿಕಾ ಮಂಡಲಿ

ಮದ್ರಾಸ್ ಪ್ರಾಂತ್ಯದಲ್ಲಿ ಖಾದಿ ಮತ್ತು ಗ್ರಾಮಕೈಗಾರಿಕೆಗಳ ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಅಲ್ಲಿಯ ಸರ್ಕಾರವು ೯ ಸದಸ್ಯರ ಒಂದು ಮಂಡಲಿಯನ್ನು ರಚಿಸಿದೆ.

ರೈಲ್ವೆ ಪ್ರಯಾಣೀಕರಿಗೆ ಸೌಕರ್ಯಗಳು

ರೈಲ್ವೆ ಪ್ರಯಾಣೀಕರಿಗೆ ಇನ್ನು ೨-೩ ವರ್ಷಗಳಲ್ಲಿ ವಿಶೇಷಸೌಲಭ್ಯಗಳನ್ನು ಕಲ್ಪಿಸಲು ತಕ್ಕವ್ಯವಸ್ಥೆಯನ್ನು ಮಾಡುತ್ತಿರುವುದಾಗಿ ಕೇಂದ್ರ ರೈಲ್ವೆ ಸಚಿವರಾದ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ತಿಳಿಸಿದ್ದಾರೆ.

ಇನ್ನು ೩ ವರ್ಷಗಳಲ್ಲಿ ಎಲ್ಲಾ ೩ ನೇ ತರಗತಿ ರೈಲುಗಾಡಿಗಳಿಗೆ ಫ್ಯಾನ್‌ಗಳನ್ನು ಹಾಕಲಾಗುತ್ತದೆ. ಒಂದನೇ ತರಗತಿ ರದ್ದಾಗಿರುವುದರಿಂದ ೨ ನೇ ತರಗತಿ ಪ್ರಯಾಣೀಕರಿಗೆ ಇನ್ನೂ ಹೆಚ್ಚಿಗೆ ಸೌಕರ್ಯಗಳನ್ನು ಕಲ್ಪಿಸಲಾಗುತ್ತದೆ. ಪಂಚವಾರ್ಷಿಕ ಯೋಜನೆಯ ಪ್ರಕಾರ ಈಗ ತರಿಸಲಿರುವ ೭೫೦ ರೈಲ್ವೆ ಇಂಜನ್ನುಗಳ ಜೊತೆಗೆ ಇನ್ನೂ ೭೫೦ ಇಂಜನ್ನುಗಳನ್ನೂ ತರಿಸಿಕೊಳ್ಳಲಾಗುತ್ತದೆ. ಪ್ರಯಾಣೀಕರ ಮತ್ತು ವಸ್ತು ಸಾಗಾಣಿಕೆಗೆ ಗಾಡಿಗಳನ್ನು ಅಧಿಕ ಸಂಖ್ಯೆಯಲ್ಲಿ ಒದಗಿಸಲಾಗುತ್ತದೆ. ಇದರಿಂದ ಸಂಚಾರ ಮತ್ತು ಸಾಮಾನು ಸಾಗಾಣಿಕೆಗೆ ಸಹಾಯಕವಾಗುತ್ತದೆ ಎಂದು ಸಚಿವರು ಹೇಳಿದ್ದಾರೆ.

ಸಚಿವರಿಗೆ ಮೋಸಮಾಡಲು ಪ್ರಯತ್ನ

ಪಶ್ಚಿಮ ಬಂಗಾಳದ ಆರೋಗ್ಯ ಸಚಿವರಾದ ಶ್ರೀಮತಿ ರೇಣುಕಾರಾಯರವರ ಸಹಿಯನ್ನು ಮಾಡಿ ४೦೦೦ ರೂ. ಗಳ ಚೆಕ್ಕನ್ನು ಕಲ್ಕತ್ತಾ ಇಂಪೀರಿಯಲ್ ಬ್ಯಾಂಕಿನಲ್ಲಿ ಹಣವನ್ನು ತೆಗೆದುಕೊಳ್ಳಲು ಯತ್ನಿಸಿದ ಪ್ರಧಾನ ಎಂಬುವವನನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ.

ಶ್ರೀಮತಿ ರೇಣುಕಾರಾಯ್‌ರವರ ಪತಿ ಬಂಗಾಳ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಯಾಗಿದ್ದಾರೆ. ಅವರ ಸೇವಕನೇ ಪ್ರಧಾನ.

ಪ್ರಾಂತ್ಯಗಳ ನಡುವೆ ವ್ಯಾಪಾರಕ್ಕೆ ಮಾರಾಟ ತೆರಿಗೆ ಪರಿಶೀಲನೆ

ಪ್ರಾಂತ್ಯಗಳ ನಡುವೆ ವ್ಯಾಪಾರ ಮತ್ತು ಅವಕ್ಕೆ ಸಂಬಂಧಪಟ್ಟಂತೆ ಮಾರಾಟತೆರಿಗೆಯನ್ನು ವಿಧಿಸುವ ವಿಷಯವನ್ನು ಚರ್ಚಿಸಲು ಎಲ್ಲಾ ಪ್ರಾಂತ್ಯಗಳ ಆರ್ಥಿಕ ಕಾರ್ಯದರ್ಶಿಗಳ ಸಮ್ಮೇಳನವನ್ನು ಸದ್ಯದಲ್ಲಿಯೇ ಕರೆಯಲಾಗುವುದೆಂದು ಕೇಂದ್ರ ಸರ್ಕಾರದ ಆರ್ಥಿಕ ಉಪಸಚಿವ ಶ್ರೀ ಷಾರವರು ಹೇಳಿದ್ದಾರೆ.

★ ಬ್ರಿಟಿಷ್ ಗಯಾನದ ಮಾಜಿ ಪ್ರಧಾನಿ ಡಾ|| ಜಡ್ಡಿ ಜಗನ್ ಮತ್ತು, ಅವರ ಸಹೋದ್ಯೋಗಿ ಬರ್ನ್ಸ್‌ಹಾನ್ ರವರು ಸದ್ಯದಲ್ಲಿಯೇ ಭಾರತಕ್ಕೆ ಆಗಮಿಸಿ, ಇಲ್ಲಿ ಸ್ವಾತಂತ್ರ್ಯ ಚಳುವಳಿ ಹೇಗೆ ನಡೆಯಿತೆಂಬುದನ್ನು ಅರಿತುಕೊಂಡು ಅದೇರೀತಿ ತಮ್ಮ ರಾಷ್ಟ್ರದಲ್ಲೂ ಚಳುವಳಿ ನಡೆಸಲು ಸಾಧ್ಯತೆಯನ್ನು ಪರಿಶೀಲಿಸುವರೆಂದು ಹೇಳಲಾಗಿದೆ.

ಸುಗ್ಗಿಯ ನಂತರ ಹೊಸ ಆಹಾರ ನೀತಿ

ಡಿಸೆಂಬರ್‌ನಲ್ಲಿ ಆಹಾರಸಚಿವರ ಸಮ್ಮೇಳನ

ದೇಶದಲ್ಲಿ ಮಳೆಯು ಚೆನ್ನಾಗಿ ಆಗುತ್ತಿರುವುದರಿಂದ ಆಹಾರದ ಪರಿಸ್ಥಿತಿಯು ಉತ್ತಮಗೊಳ್ಳುತ್ತಿದೆ. ಈ ಸಾಲಿನಲ್ಲಿ ಅಧಿಕ ಬೆಳೆಯಾಗುವ ನಿರೀಕ್ಷೆಯಿದೆ. ಆಹಾರ ವಸ್ತುಗಳನ್ನು ಬೆಳೆಯಲು ಜಪಾನಿ ವಿಭಾಗವನ್ನು ಅನುಸರಿಸುತ್ತಲಿರುವುದರಿಂದಲೂ, ಕೃತಕ ಗೊಬ್ಬರವನ್ನು ಹೆಚ್ಚಾಗಿ ಉಪಯೋಗಿಸುತ್ತಲಿರುವುದರಿಂದಲೂ, ಅಧಿಕ ಆಹಾರ ಉತ್ಪನ್ನವಾಗುವ ನಿರೀಕ್ಷೆಯಿದೆ. ಈ ಸಾಲಿನಲ್ಲಿ ಸುಗ್ಗಿಯ ನಂತರ ಆಹಾರದ ಹೊಸ ನೀತಿಯನ್ನು ಪರಿಶೀಲಿಸಲಾಗುತ್ತದೆ. ಆಗ ಆಹಾರ ಅವ ದಿನ ನೀತಿಯನ್ನು ನಿರ್ಧರಿಸಲಾಗುತ್ತದೆ. ಅದಕ್ಕಾಗಿ ಮುಂದಿನ ಡಿಸೆಂಬರ್‌ನಲ್ಲಿ ಆಹಾರ ಸಚಿವರುಗಳ ಸಮ್ಮೇಳನ ನಡೆಯುತ್ತದೆ-- ಎಂದು ಕೇಂದ್ರ ಆಹಾರ ಉಪಸಚಿವ ಶ್ರೀ ಎಂ. ವಿ. ಕೃಷ್ಣಪ್ಪನವರು ಹೇಳಿದ್ದಾರೆ.

ದಕ್ಷಿಣ ಭಾರತದಲ್ಲಿ ಮದ್ರಾಸ್, ಆಂಧ್ರ, ಹೈದರಾಬಾದ್ ಮತ್ತು ಮೈಸೂರುಗಳಲ್ಲಿ ಮಳೆಯು ಸಮೃದ್ಧಿಯಾಗಿ ಆಗಿರುವುದರಿಂದ ಅಲ್ಲಿ ಆಹಾರ ಬೆಲೆಯು ಇಳಿಮುಖವಾಗುತ್ತಿದೆ. ಮದ್ರಾಸ್‌ನಲ್ಲಿ ಈಗ ವರ್ತಕರ ಬಳಿ ಸುಮಾರು ೨ ಲಕ್ಷ ಟನ್ ಅಕ್ಕಿ ದಾಸ್ತಾನು ಇದೆ. ಬೆಲೆ ಇಳಿಮುಖವಾಗುತ್ತಿರುವ ಸಮಯದಲ್ಲಿ ಕಡಮೆಬೆಲೆಯಲ್ಲಿ ಅವರು ಆಹಾರ ಕೊಂಡು ದಾಸ್ತಾನು ಮಾಡಕೂಡದೆಂದು ಅವರು ವರ್ತಕರಿಗೆ ಎಚ್ಚರಿಸಿದ್ದಾರೆ.

ಇದೇ ವಿಷಯದಲ್ಲಿ ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮಾತನಾಡುತ್ತಾ ಆಹಾರ ಬೆಲೆ ಇಳಿಮುಖವಾಗುತ್ತಿರುವುದು ಜನರಿಗೆ ಸಂತೋಷವನ್ನುಂಟುಮಾಡುತ್ತಿದೆ. ಆದರೆ ಕಾಳಸಂತೆಕೋರರು ವ್ಯಸನಪಡುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಜಮೀನ್ದಾರರಿಗೆ ಪರಿಹಾರ

ಜಮೀನ್ದಾರಿ ಶಾಸನ ಪ್ರಕಾರ ಸರ್ಕಾರವು ವಹಿಸಿಕೊಳ್ಳುವ ಜಮೀನುಗಳಿಗೆ ಪರಿಹಾರವನ್ನು ಕೊಡುವ ವಿಷಯದಲ್ಲಿ ಮದ್ರಾಸ್ ಸರ್ಕಾರವು ಹಣವನ್ನು ಕಾಗದಪತ್ರಗಳ ರೂಪದಲ್ಲಿ ಕೊಡಲು ಪರಿಶೀಲನೆ ನಡೆಸುತ್ತಿರುವುದಾಗಿ ತಿಳಿಯಬರುತ್ತದೆ.

ವಿಭಜನೆಗೆ ಮುನ್ನ ಮದ್ರಾಸ್ ಸರ್ಕಾರವು ಜಮೀನ್ದಾರರಿಗೆ ಸುಮಾರು 12½ ಕೋಟಿ ರೂಪಾಯಿಗಳ ಪರಿಹಾರವನ್ನು ಕೊಡಬೇಕಾಗಿತ್ತು. ಆದರೆ ಈಗ ಕೇವಲ ೪ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಈ ಬಾಬಿಗಾಗಿ ನ್ಯಾಯಮಂಡಲಿಗಳಲ್ಲಿ ೩ ಕೋಟಿ ರೂಪಾಯಿಗಳ ಠೇವಣಿಯನ್ನು ಇಟ್ಟಿರುವುದಾಗಿ ಹೇಳಲಾಗಿದೆ.

ದೀಪಾವಳಿ ಬಹುಮಾನ

ಕೊರಿಯಾದಲ್ಲಿರುವ ಭಾರತ ಸೈನಿಕರಿಗೆ ದೀಪಾವಳಿ ಉಡುಗೊರೆಗಳನ್ನು ಕೊಡಲು ಇಲ್ಲಿಯವರೆಗೆ ೧,೫೪,೦೦೦ ರೂಪಾಯಿಗಳನ್ನು ಸಾರ್ವಜನಿಕರು ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಮೈಸೂರು ಸಂಸ್ಥಾನದ ಮೋಟಾರು ಕೆಲಸಗಾರರ ಸಮ್ಮೇಳನ

ಮೈಸೂರು, ೨೮

ಮೈಸೂರು ಸಂಸ್ಥಾನದ ಮೋಟಾರು ಕೆಲಸಗಾರರ ಸಮ್ಮೇಳನವು ಮುಂದಿನ ಮಾಹೆ ೧ ನೇ ತಾರೀಖು ಭಾನುವಾರ ಬೆಳಿಗ್ಗೆ ೯ ಘಂಟೆಗೆ ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಕಛೇರಿಯಲ್ಲಿ ನಡೆಯುವುದು.

ಸಂಸ್ಥಾನದಲ್ಲಿ ಮೋಟಾರು ಕೆಲಸಗಾರರ ಸಾಮೂಹಿಕ ವ್ಯವಹಾರಗಳಲ್ಲಿ ಒಂದು ಗೊತ್ತಾದ ಕಾರ್ಯವಿಧಾನವನ್ನು ಕಂಡುಹಿಡಿದು ಕೆಲಸಕಾರ್ಯಗಳನ್ನು ನಡೆಸಲು ಒಂದು ಕೇಂದ್ರಸಂಘ ಅಥವಾ ಫೆಡರೇಷನ್ ಸ್ಥಾಪಿಸುವ ವಿಚಾರವನ್ನು ಈ ಸಭೆಯಲ್ಲಿ ಪರಿಶೀಲಿಸಬೇಕಾಗುತ್ತದೆ. ಆದ್ದರಿಂದ ಸಂಸ್ಥಾನದ ಮೋಟಾರು ಕೆಲಸಗಾರರು ಹಾಗೂ ಕೆಲಸಗಾರರ ಸಂಘಗಳು ಈ ಸಮ್ಮೇಳನದಲ್ಲಿ ಭಾಗವಹಿಸಬೇಕಾಗಿ ವ್ಯವಸ್ಥಾಪಕರು ಪ್ರಾರ್ಥಿಸುತ್ತಾರೆ.

ಎನ್. ಜಿ. ಓ.ಗಳ ಸಮ್ಮೇಳನ

ಶಿವಮೊಗ್ಗದಲ್ಲಿ ಇದೇ ೩೧ ನೇ ತಾರೀಖು ನಡೆಯಬೇಕಾಗಿದ್ದು ಅನಿವಾರ್ಯದಿಂದ ನಿಂತುಹೋದ ಎನ್. ಜಿ. ಓಗಳ ಸಮ್ಮೇಳನವು ಡಿಸೆಂಬರ್ ತಿಂಗಳ ಅಂತ್ಯ ಅಥವಾ ಜನವರಿ ಮೊದಲನೇ ವಾರದಲ್ಲಿ ನಡೆಯಲಾಗುವುದೆಂದು ತಿಳಿಯಬರುತ್ತದೆ.

ವಾರ್ಷಿಕೋತ್ಸವ

ಮೈಸೂರು ೨೮

ಮೈಸೂರು ಸಂಸ್ಥಾನದ ಮೋಟಾರು ಕೆಲಸಗಾರರ ೬ ನೇ ವಾರ್ಷಿಕೋತ್ಸವವು ಮುಂದಿನ ತಿಂಗಳು ಒಂದನೇ ತಾರೀಖು ಸಂಜೆ ೫ ಗಂಟೆಗೆ ಪುರಭವನದಲ್ಲಿ ಕಾರ್ಮಿಕ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯುವುದು. ಶಾಸನ ಸಭಾಸದಸ್ಯ ಶ್ರೀ ಕೆ. ಪಟ್ಟಾಭಿರಾಮನ್‌ರವರು ಉದ್ಘಾಟಿಸುವರು.

ಸಾಹಿತ್ಯ ಸ್ಪರ್ಧೆ

ರಾಜಧಾನಿಯ ಚಾಮುಂಡಿಪುರದಲ್ಲಿರುವ ಸಿ. ಆರ್. ಎಸ್. ಮಂಡಲಿಯವರು ವಿಶ್ವ ಕವಿ ರವೀಂದ್ರರ ಚಿರ ನೆನಪಿಗಾಗಿ ಒಂದು ಸಾಹಿತ್ಯ ಸ್ಪರ್ಧೆಯನ್ನು ಮುಂದಿನ ತಿಂಗಳು ೨೦ನೇ ತಾರೀಖು ನಡೆಸಲಿದ್ದಾರೆ. ಭಾಗವಹಿಸುವವರು ಮುಂದಿನ ೧೫ನೇ ತಾರೀಖಿನೊಳಗಾಗಿ ಆರು ಆಣೆ ಪ್ರವೇಶ ಶುಲ್ಕದೊಡನೆ ಲೇಖನವನ್ನು ಕಳುಹಿಸಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೭—೧೦—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೨—	೨೧—೧೦
ಎಳ್ಳು	೭೬—೪	೮೦—೧೪
ಹರಳು	೩೬—೧೨	೩೮—
ಹುರಳಿ	೩೬—೧೦	೩೭—೧೪
ಹೆಸರು	೩೧—	೩೯—೪
ಅಲಸಂದೆ	೪೦—	೬೩—೪
ಉದ್ದು	೫೧—೨	—
ಹುಣಸೇಹಣ್ಣು	೭—೧೫	೮—೧೨
ಮೆಣಸಿನಕಾಯಿ	೧೫—೨	೩೫—೪
ಸೀಗೆಕಾಯಿ	೬—೧	೭—೫
ತೆಂಗಿನಕಾಯಿ	—	—

ಮಾಜಿ ನರೇಂದ್ರರ ಸಭೆ

ಮಾಜಿ ರಾಜರುಗಳು ತಮ್ಮ ರಾಜಾದಾಯದಲ್ಲಿ ಸ್ವಲ್ಪ ಭಾಗವನ್ನು ಬಿಟ್ಟುಕೊಡಬೇಕೆಂದು ಪ್ರಧಾನಿ ನೆಹರೂರವರು ಮಾಡಿರುವ ಮನವಿಯನ್ನು ಪರಿಶೀಲಿಸಲು ಬೊಂಬಾಯಿನಲ್ಲಿ ಕೆಲವು ಮಾಜಿ ನರೇಂದ್ರರು ಸಭೆ ನಡೆಸಿ ವಿಷಯವನ್ನು ಚರ್ಚಿಸಿದರೆಂದು ತಿಳಿಯಬರುತ್ತದೆ.

ಸಭೆಯು ಮುಗಿದನಂತರ ನವಾನಗರದ ಜಾಂಸಾಹೇಬರು ಪತ್ರಿಕಾ ವರದಿಗಾರರೊಡನೆ ಮಾತನಾಡುತ್ತಾ ವಿಷಯ ಚರ್ಚೆ ನಡೆಯಿತೆಂದೂ ಆದರೆ ಯಾವ ತೀರ್ಮಾನವೂ ಆಗಲಿಲ್ಲವೆಂದು ತಿಳಿಸಿದರು.

ಸಭೆಯಲ್ಲಿ ಭಾಗವಹಿಸಿದ್ದ ಜಯಪುರದ ಮಹಾರಾಜರು ಮಾತನಾಡುತ್ತಾ ಪ್ರಧಾನಿ ನೆಹರೂರವರ ಪತ್ರವನ್ನು ತಪ್ಪಾಗಿ ಅರ್ಥಮಾಡಲಾಗಿದೆ. ರಾಜಾದಾಯವನ್ನು ಕಡಮೆಮಾಡಿಕೊಳ್ಳಬೇಕೆಂಬ ಸಲಹೆಯೇನೂ ಇಲ್ಲ. ದೇಶದಲ್ಲಿ ನಡೆಯಬೇಕಾಗಿರುವ ಪಂಚವಾರ್ಷಿಕಯೋಜನೆಯಲ್ಲಿ ಮಾಜಿ ನರೇಂದ್ರರು ತಮ್ಮ ತಮ್ಮ ಸಂಸ್ಥಾನಗಳಲ್ಲಿಯ ಕಾರ್ಯಗಳಿಗೆ ಯಾವರೀತಿ ಆರ್ಥಿಕ ಮತ್ತು ಇತರ ನೆರವು ನೀಡಬೇಕೆಂಬ ವಿಷಯ ಇದರಲ್ಲಿ ಅಡಕವಾಗಿದೆಯೆಂದೂ ಆ ಬಗ್ಗೆ ಪರಿಶೀಲನೆ ನಡೆಯಲಾಗುತ್ತಿದೆಯೆಂದು ತಿಳಿಸಿದರು. ರಾಜಾಸ್ಥಾನದಲ್ಲಿರುವ ಮಾಜಿ ರಾಜರ ಸಭೆಯನ್ನೊಂದನ್ನು ತಾವು ಸದ್ಯದಲ್ಲೇ ಏರ್ಪಡಿಸಿ ಅಲ್ಲಿ ವಿಷಯಗಳನ್ನು ಕೂಲಂಕುಶವಾಗಿ ಪರಿಶೀಲಿಸಲಾಗುತ್ತದೆಯೆಂದೂ ಅವರು ತಿಳಿಸಿದ್ದಾರೆ.

ಇಂದ್ರ ಧನುಸ್

ಎ. ಐ. ಆರ್. ಮೈಸೂರು ಕೇಂದ್ರದಲ್ಲಿ ಇದೇ ೩೦ ನೇ ತಾರೀಖು ರಾತ್ರಿ ೯-೩೦ ಗಂಟೆಗೆ 'ಇಂದ್ರಧನುಸ್' ಎಂಬ ಹಿಂದಿಯ ವಿಶೇಷ ಕಾರ್ಯಕ್ರಮವನ್ನು ಪ್ರಸಾರಮಾಡಲಾಗುತ್ತದೆ.

ಡಾ॥ ರಾಜನ್‌ರವರ ನಿಧನ

ಮದ್ರಾಸಿನ ಮಾಜಿ ಸಚಿವರಾಗಿದ್ದ ಡಾ॥ ಟಿ.ಎಸ್. ಎಸ್. ರಾಜನ್‌ರವರು ನಿನ್ನೆ ಮಧ್ಯಾಹ್ನ ತಿರುಚಿರಪಳ್ಳಿಯಲ್ಲಿ ನಿಧನರಾದರು. ಅವರಿಗೆ ೬೫ ವರ್ಷಗಳಾಗಿದ್ದುವು.

ನೈಸರ್ಗಿಕ ಬಣ್ಣಗಳಲ್ಲಿ

ಬೇಕ್‌ಲೈಟ್ ಸಾಮಾನುಗಳಲ್ಲಿ
ಮೈಸೂರೈಟ್ ಮತ್ತು ಐವರೈಟ್
ಅಸಮಾನವಾದ ದರ್ಜೆಗೆ ಸೇರಿದ್ದು

ಕುಡಿಯುವ ಪಾತ್ರೆಗಳು, ಬಟ್ಟಲುಗಳು, ಬಶಿಗಳು, ಕ್ಷೌರದ ದೊನ್ನೆಗಳು,
ಸಿಗರೇಟು ಬೂದಿಯನ್ನು ಹಾಕುವ ತಬಕಗಳು, ಟೇಬಲ್ ಅಲಂಕರಿಸುವ
ಕೌಶಲ್ಯದ ಸಾಮಾನುಗಳು, ಅಂಗಶೃಂಗಾರ ಪದಾರ್ಥಗಳನ್ನಿಡುವ
ಸಾಮಾನುಗಳು, ವಿಧವಿಧವಾದ ನಮೂನೆಗಳಲ್ಲಿ
ಮತ್ತು ಆಕರ್ಷಕ ಬಣ್ಣಗಳಲ್ಲಿ
ತಯಾರಿಸಲ್ಪಡುವುವು.

ಅಚ್ಚುಮಾಡಿದ ಮೈಸೂರೈಟ್ ಸಾಮಾನುಗಳು
ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ,
ಮೈಸೂರು ರೋಡ್, ಬೆಂಗಳೂರು ೨

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ
ಥಿಯೇಟ್ರಿಕಲ್ ಕಂಪೆನಿ (ರಿ)
28--10--53 ನೇ ರಾತ್ರಿ 10 ಗಂಟೆಗೆ
ಶಿವರಾಂಪೇಟೆಯ ರತ್ನಾವಳಿ
ಥಿಯೇಟರಿನಲ್ಲಿ
ಚಲನಚಿತ್ರದಲ್ಲಿ ಖ್ಯಾತಿ ಪಡೆದ ನಾಟಕರತ್ನ ಜಿ. ಹೆಚ್. ವೀರಣ್ಣ, ಜಯಮ್ಮ
ಮತ್ತು ಲಕ್ಷ್ಮಮ್ಮ ನಟಿಸಿರುವ
ಅಡ್ಡದಾರಿ
ಎಂಬ ಸಾಮಾಜಿಕ ನಾಟಕವನ್ನು
ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೫೭

೨೯-೧೦-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭೂದಾನ ಕಾನೂನು ಜಾರಿಗೆ ಬರಬೇಕು

ಮೈಸೂರು ಭೂದಾನಯಜ್ಞ ಸಮ್ಮೇಳನದಲ್ಲಿ ಒತ್ತಾಯ

ಬಿಹಾರ್ ಮತ್ತು ಮಧ್ಯಪ್ರದೇಶಗಳಲ್ಲಿ ಇರುವಂತೆ ಮೈಸೂರು ಸಂಸ್ಥಾನದಲ್ಲೂ ಭೂದಾನ ಕಾನೂನನ್ನು ಜಾರಿಗೆ ತರಬೇಕೆಂದು ಶಿವಮೊಗ್ಗದಲ್ಲಿ ನಡೆದ ಭೂದಾನ ಯಜ್ಞ ಸಮ್ಮೇಳನದಲ್ಲಿ ಒತ್ತಾಯ ಮಾಡುವ ನಿರ್ಣಯ ಮಾಡಲಾಗಿದೆ.

ಭೂದಾನ ಯಜ್ಞವು ದೇಶದಲ್ಲಿ ಯಶಸ್ವಿಯಾದರೆ ಎಲ್ಲ ಸಮಸ್ಯೆಗಳೂ ಬಗೆಹರಿಯುವುದೆಂದೂ ಇದನ್ನು ಅಹಿಂಸಾಮಾರ್ಗದಿಂದಲೇ ಯಶಸ್ವಿಗೊಳಿಸಬೇಕೆಂದೂ ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ಸಮ್ಮೇಳನದ ಪ್ರಾರಂಭೋತ್ಸವ ಮಾಡುತ್ತ ತಿಳಿಸಿದ್ದಾರೆ.

ಶಿವಮೊಗ್ಗ ಜಿಲ್ಲೆಯಲ್ಲಿ ೧೭ ಸಾವಿರ ಎಕರೆ ಜಮೀನನ್ನು ಸಂಗ್ರಹಿಸಬೇಕೆಂದು ನಿರ್ಧರಿಸಲಾಗಿದೆಯೆಂದೂ, ಆದರೆ ಕೇವಲ ೫೩ ಎಕರೆ ಮಾತ್ರ ಇಲ್ಲಿಯವರೆಗೆ ವಸೂಲಾಗಿದೆಯೆಂದೂ ಅಲ್ಲಿ ತಿಳಿಸಲಾಯಿತು.

ಆಂಧ್ರ ಅನ್ನದಾತ ಪ್ರದೇಶವಾಗಿದೆ

ಈ ವರ್ಷ ಭಾರತದಲ್ಲೇ ಹೆಚ್ಚು ಆಹಾರ ಧಾನ್ಯವನ್ನು ಬೆಳೆದ ಪ್ರದೇಶವೆಂದರೆ ಆಂಧ್ರ ಸಂಸ್ಥಾನವೆಂದೂ, ಈಗ ಅದು ಭಾರತಕ್ಕೆ ಅನ್ನದಾತವಾಗಿದೆಯೆಂದೂ ಕೇಂದ್ರ ಆಹಾರ ಉಪಸಚಿವ ಶ್ರೀ ಎಂ.ವಿ. ಕೃಷ್ಣಪ್ಪನವರು ತಿಳಿಸಿದ್ದಾರೆ. ಅಲ್ಲಿ ಈ ವರ್ಷ ೫ ಲಕ್ಷ ಟನ್ ಅಕ್ಕಿ ಸಂಗ್ರಹವಾಗಿ, ಅದರಲ್ಲಿ ೩ ಲಕ್ಷ ಟನ್ ಅನ್ನು ಮದ್ರಾಸಿಗೆ ಕೊಡಲಾಗಿದೆ. ಅಸ್ಸಾಂ ಎರಡನೇ ಸ್ಥಾನವನ್ನು ಪಡೆದಿದೆ.

೧೦ ಸಾವಿರ ರೂ. ವಿದ್ಯಾರ್ಥಿ ವೇತನಗಳು

ಗುಡ್ಡಗಾಡು, ಬುಡಕಟ್ಟು ಮತ್ತು ಹಿಂದುಳಿದ ಜನಾಂಗ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಕೇಂದ್ರ ಸರ್ಕಾರವು ಮುಂದಿನ ಸಾಲಿಗೆ ೧೦ ಸಾವಿರ ರೂ. ವೇತನಗಳನ್ನು ಮಂಜೂರ್ಮಾಡಿರುವುದಾಗಿ ತಿಳಿಯಬರುತ್ತದೆ.

ರಾಡಾರ್ ಶಿಕ್ಷಣ ಕೇಂದ್ರ

ನೌಕಾಧಿಕಾರಿಗಳಿಗೆ ಶಿಕ್ಷಣವನ್ನು ಕೊಡುವ ಉದ್ದೇಶದಿಂದ ರಾಡಾರ್ ಶಿಕ್ಷಣ ಕೇಂದ್ರವೊಂದನ್ನು ಈಗ ಬೊಂಬಾಯಿನಲ್ಲಿ ಉದ್ಘಾಟಿಸಲಾಗುತ್ತದೆ. ಈ ಕೇಂದ್ರವು ಆಗ್ನೇಯ ಏಷ್ಯಾದಲ್ಲೆಲ್ಲಾ ಪ್ರಪ್ರಥಮವಾದುದೆಂದು ಹೇಳಲಾಗಿದೆ.

ಕೇಂದ್ರ ಅಡಿಕೆ ಸಂಶೋಧನಾ ಕೇಂದ್ರ ಸ್ಥಾಪಿಸಲು ನಿರ್ಧಾರ

ಬೆಂಗಳೂರು, ೨೯

ಅಡಿಕೆಬೆಳೆಯ ಪ್ರಗತಿಗಾಗಿ ಅಖಿಲಭಾರತ ವ್ಯಾಪ್ತಿಯುಳ್ಳ ಒಂದು ಸಂಶೋಧನಾ ಕೇಂದ್ರವನ್ನು ಸ್ಥಾಪಿಸಲು ಪ್ರಯತ್ನ ನಡೆಯುತ್ತಿದೆಯೆಂದೂ, ದಕ್ಷಿಣ ಜಿಲ್ಲೆಯ ವಿಠ್ಠಲ ಎಂಬ ಸ್ಥಳವು ಅದಕ್ಕೆ ಉತ್ತಮವಾಗಿದೆ ಎಂದು ಭಾವಿಸಲಾಗಿದೆಯೆಂದೂ, ಆಯಾಯ ಎಲ್ಲ ಪ್ರಾಂತೀಯ ಸರ್ಕಾರಗಳ ಸಲಹೆ ಕೇಳಿ ಅನಂತರ ಸ್ಥಳವನ್ನು ನಿರ್ಧರಿಸಲಾಗುವುದೆಂದೂ ಇಲ್ಲಿ ನಡೆದ ಕೇಂದ್ರ ಅಡಿಕೆ ಸಮಿತಿಯ ಐದನೆ ವಾರ್ಷಿಕೋತ್ಸವದಲ್ಲಿ ಅದರ ಅಧ್ಯಕ್ಷರಾದ ಶ್ರೀ ವಾನ್ಲೆಯವರು ತಿಳಿಸಿದ್ದಾರೆ.

ತಿರುವಾಂಕೂರು-ಕೊಚ್ಚಿ ಮತ್ತು ಮೈಸೂರುಗಳಲ್ಲಿ ಪ್ರಾದೇಶಿಕ ಸಂಶೋಧನಾಲಯಗಳನ್ನು ತೆರೆಯಲಾಗಿದೆಯೆಂದೂ, ಇಂತಹ ಕೇಂದ್ರಗಳನ್ನು ಬೊಂಬಾಯಿನಲ್ಲೂ ಸದ್ಯದಲ್ಲೇ ಸ್ಥಾಪಿಸಲಾಗುವುದೆಂದೂ, ಅಡಿಕೆ ರೋಗಗಳ ಬಗ್ಗೆ ಸಂಶೋಧನೆ ನಡೆಸಲು ಬೊಂಬಾಯಿ ಮತ್ತು ದಕ್ಷಿಣ ಜಿಲ್ಲೆಗಳಲ್ಲಿ ಮತ್ತೆರಡು ಕೇಂದ್ರಗಳನ್ನು ರಚಿಸಲಾಗುವುದೆಂದೂ ಅವರು ತಿಳಿಸಿದ್ದಾರೆ.

ಕೇಂದ್ರ ಅಡಿಕೆ ಸಂಶೋಧನಾಲಯವನ್ನು ಮೈಸೂರಿನಲ್ಲೇ ಸ್ಥಾಪಿಸಬೇಕೆಂದು ತಾವು ಒತ್ತಾಯಮಾಡುವುದಿಲ್ಲವೆಂದೂ ಆದರೆ ಅದನ್ನು ಇಲ್ಲಿ ರಚಿಸಬೇಕೆಂಬ ಅಭಿಲಾಷೆಯೇನಾದರೂ ಇದ್ದರೆ ಅದಕ್ಕೆ ಮೈಸೂರು ಸುಸ್ವಾಗತನೀಡಿ, ಎಲ್ಲ ಸೌಕರ್ಯ ಒದಗಿಸುವುದೆಂದೂ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಪ್ರಾರಂಭ ಭಾಷಣದಲ್ಲಿ ತಿಳಿಸಿದ್ದಾರೆ.

ಕೇಂದ್ರ ಆಡಳಿತ ಶಿಕ್ಷಣಶಾಲೆ

ಭಾರತ ಸರ್ಕಾರದ ಯೋಜನೆ

ಭಾರತದಲ್ಲಿ ಉದ್ಯೋಗಕ್ಕೆ ಸೇರಿಸಿಕೊಳ್ಳುವ ವ್ಯವಸ್ಥೆಯನ್ನು ಉತ್ತಮಪಡಿಸಲು ಕೇಂದ್ರ ಪಬ್ಲಿಕ್ ಸರ್ವೀಸ್ ಕಮಿಷನನ್ನು ಪುನರ್ವ್ಯವಸ್ಥೆಗೊಳಿಸಲಾಗುವುದೆಂದೂ ಮತ್ತು ಒಂದು ಕೇಂದ್ರ ಆಡಳಿತ ಶಿಕ್ಷಣ ಶಾಲೆಯನ್ನು ಸ್ಥಾಪಿಸಲಾಗುವುದೆಂದೂ ಹೇಳಲಾಗಿದೆ.

ಪೋಲೀಸ್ ಇನ್ಸ್‌ಪೆಕ್ಟರಿಗೆ ಚೂರಿ ಇರಿತ

ಮೈಸೂರು ೨೯

ಹುಣಸೂರು ತಾಲ್ಲೂಕು ಪೋಲಿಸ್ ಇನ್ಸ್‌ಪೆಕ್ಟರ್ ಶ್ರೀ ಸೈಯದ್ ಅಹಮದ್ ಹುಸೇನ್‌ರವರಿಗೆ ಮೊನ್ನೆ ರಾತ್ರಿ ಅಲ್ಲಿನ ಮುಸಾಫರ್ ಖಾನೆಯ ಬಳಿ ಸಾಬುಲಾಲ್ ಎಂಬುವನು ಚೂರಿಯಿಂದ ಇರಿದು ತೀವ್ರ ಗಾಯಗೊಳಿಸಿದನೆಂದು ವರದಿಯಾಗಿದೆ. ಇನ್ಸ್‌ಪೆಕ್ಟರಿಗೆ ೯ ಭಾಗಗಳಲ್ಲಿ ಗಾಯಗಳಾಗಿವೆಯೆಂದೂ, ಅವರನ್ನು ಇಲ್ಲಿನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲು ಮಾಡಲಾಯಿತೆಂದೂ ಹೇಳಲಾಗಿದೆ. ಅವರು ಈಗ ಗುಣಮುಖರಾಗುತ್ತಿದ್ದಾರೆ.

ಅಪರಾಧಿಯನ್ನು ಈಗ ದಸ್ತಗಿರಿಮಾಡಿ ಆತನಮೇಲೆ ೩೦೭ ಸೆ॥ ಪ್ರಕಾರ ಕೇಸು ರಿಜಿಸ್ಟರ್ ಮಾಡಲಾಗಿದೆ.

ಮೈಸೂರು ಬ್ಯಾಂಕು ರಿಜರ್ವ್‌ಬ್ಯಾಂಕು ಪ್ರತಿನಿಧಿ

ಮುಂದಿನ ತಿಂಗಳು ೧ ನೇ ತಾರೀಖಿನಿಂದ ಮೈಸೂರುಬ್ಯಾಂಕು ಸಂಸ್ಥಾನದಲ್ಲಿ ರಿಜರ್ವ್‌ಬ್ಯಾಂಕಿನ ಪ್ರತಿನಿಧಿಯಾಗಿರುವ ಬಗ್ಗೆ ರಾಜಪ್ರಮುಖರಿಗೂ ರಿಜರ್ವ್ ಬ್ಯಾಂಕಿಗೂ ಒಪ್ಪಂದದ ಸಹಿ ಆಯಿತೆಂದು ಪ್ರಕಟಣೆ ಹೊರಡಿಸಲಾಗಿದೆ.

ಸಂಸ್ಥಾನದ ಅನೇಕ ಕೆರೆಗಳಿಗೆ ಜಖಂ

ವಿಶೇಷವಾಗಿ ಪೈರುಗಳಿಗೆ ನಷ್ಟ

ಮೈಸೂರು ಸಂಸ್ಥಾನದಲ್ಲಿ ಈಗ ಅತಿ ಹೆಚ್ಚಾಗಿ ಮಳೆ ಬಂದು ಅನೇಕ ಕೆರೆಗಳು ಒಡೆದು, ಪೈರು ಗದ್ದೆಗಳು ನೀರಿನಲ್ಲಿ ಮುಳುಗಿವೆ. ಹಾಸನದ ಹತ್ತಿರವಿರುವ ೩ ಕೆರೆಗಳು ಕಳೆದ ವಾರ ಒಡೆದು ತುಂಬಾ ನಷ್ಟವುಂಟಾಯಿತು. ಈಗ ಪುನಃ ಕಡೂರು ತಾಲ್ಲೂಕಿನ ಪಂಚನಹಳ್ಳಿ ಮತ್ತು ಅರಸೀಕೆರೆ ತಾಲ್ಲೂಕಿನಲ್ಲಿ ಒಟ್ಟು ೬ ಕೆರೆಗಳಿಗೆ ಜಖಂ ಆಗಿದೆ. ಇದರಿಂದ ನೂರಾರು ಎಕರೆಗಳು ನೀರಿನ ಪಾಲಾಗಿದೆ. ರಸ್ತೆ ಸಂಚಾರಕ್ಕೆ ಅಡಚಣೆ ಉಂಟಾಗಿದೆ. ಚಿತ್ರದುರ್ಗದ ನಂಗೇನಹಳ್ಳಿ ಕೆರೆ ಬಂಡೆಯಲ್ಲಿ ಬಿರುಕಾಗಿ ನೀರು ಹೊರಕ್ಕೆ ನುಗ್ಗಿದೆ. ಒಂದು ಫರ್ಲಾಂಗ್ ರಸ್ತೆ ಕೊಚ್ಚಿಹೋಗಿದೆ. ಸುಮಾರು ೫೦ ಸಾವಿರ ರೂ.ಗಳಷ್ಟು ಪೈರು ಮತ್ತು ಇತರ ವಸ್ತುಗಳಿಗೆ ನಷ್ಟ ಸಂಭವಿಸಿದೆ.

○ ಮೈಸೂರು ಸಂಸ್ಥಾನದ ಕಾಂಗ್ರೆಸ್ ಸಮಿತಿಗಳೆಲ್ಲವೂ ಮುಂದಿನ ತಿಂಗಳು ೧೭ನೇ ತಾರೀಖು ತಕ್ಕರೀತಿಯಲ್ಲಿ ಲಾಲಾಲಜಪತ್ ರಾಯ್‌ರವರ ೨೫ನೇ ಪುಣ್ಯದಿನವನ್ನು ಆಚರಿಸಬೇಕೆಂದು ಎಂ. ಪಿ. ಸಿ. ಸಿ. ಯ ಕಾರ್ಯದರ್ಶಿಯವರು ಪ್ರಾರ್ಥಿಸುತ್ತಾರೆ.

ಪತ್ರಿಕೋದ್ಯಮಿಯ ಅರ್ಹತೆಗಳು

ಮೈಸೂರು ೨೯

ಬೊಂಬಾಯಿನ 'ಇಂಡಿಯನ್ ಎಕ್ಸ್‌ಪ್ರೆಸ್' ಪತ್ರಿಕೆಯ ವಾರ್ತಾ ಸಂಪಾದಕರಾದ ಶ್ರೀ ಹೆಚ್. ವೈ. ಶಾರದಾ ಪ್ರಸಾದ್‌ರವರು ನಿನ್ನೆ ಸಂಜೆ ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮಿ ಸಂಘದ ಆಶ್ರಯದಲ್ಲಿ ಪತ್ರಿಕೋದ್ಯಮಿಯ ಸಲಕರಣೆಗಳು ಎಂಬ ವಿಷಯದಲ್ಲಿ ಭಾಷಣಮಾಡಿದರು.

ಭಾರತಕ್ಕೆ ಸ್ವಾತಂತ್ರ ಬಂದವೇಳೆ ಪತ್ರಿಕೆಗಳ ಜವಾಬ್ದಾರಿ ಹೆಚ್ಚಿದೆ. ಜನರಿಗೆ ತಿಳಿವಳಿಕೆ ಕೊಟ್ಟು ಅವರನ್ನು ಪ್ರಗತಿಮಾರ್ಗದಲ್ಲಿ ಇಡುವುದು ಈಗ ಪತ್ರಿಕೋದ್ಯಮಿಯ ಹೊಣೆ ಆಗಿದೆ. ಅದಕ್ಕೆ ಆತನಿಗೆ ಶಬ್ದ ಸಂಪತ್, ಜನಜೀವನ, ಸರ್ಕಾರ, ಆಡಳಿತ ಮುಂತಾದ ವಿಷಯಗಳಲ್ಲಿ ವಿಶೇಷ ಜ್ಞಾನ ಇರಬೇಕು. ಇವಲ್ಲದೆ ಮುಖ್ಯವಾಗಿ ಆತನಿಗೆ ಕುತೂಹಲ ಇದ್ದೇ ಇರಬೇಕು ಅದಿಲ್ಲದಿದ್ದರೆ ಆತನು ಪತ್ರಿಕೋದ್ಯೋಗಿಯಾಗಲಾರನು-ಎಂದು ಅವರು ತಿಳಿಸಿದರು.

● ಕೇಂದ್ರ ಹಣಕಾಸಿನ ಉಪಸಚಿವ ಶ್ರೀ ಮಣಿಲಾಲ್ ಸಿ ಷಾರವರು ನಿನ್ನೆ ರಾಜಧಾನಿಗೆ ಆಗಮಿಸಿ, ಕೇಂದ್ರ ಆಹಾರ ಸಂಶೋಧನಾಲಯ ಮತ್ತು ಇತರ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಇತ್ತು ಸಂಜೆ ಬೆಂಗಳೂರಿಗೆ ಹಿಂತಿರುಗಿದರು.

ನಿರುದ್ಯೋಗ ನಿವಾರಣೆಗೆ ಕಮ್ಯೂನಿಸ್ಟರ ಒತ್ತಾಯ

ಬೆಂಗಳೂರು ೨೯

ದೇಶದಲ್ಲಿ ನಿರುದ್ಯೋಗವನ್ನು ತಡೆಗಟ್ಟಲು ಮಾಲೀಕರು ಕಾರ್ಖಾನೆಗಳನ್ನು ಬಂದುಮಾಡಕೂಡದೆಂದೂ, ಕಾರ್ಮಿಕರುಗಳನ್ನು ಕೆಲಸದಿಂದ ವಜಾಮಾಡದಂತೆ ಮಾಲೀಕರ ಮೇಲೆ ಸರ್ಕಾರ ನಿರ್ಬಂಧ ಹಾಕಬೇಕೆಂದೂ, ನಿರುದ್ಯೋಗಿಗಳ ಪರಿಹಾರಕ್ಕೆ ೫ ಕೋಟಿ ರೂ. ವಿನಿಯೋಗಿಸಲಾಗಬೇಕೆಂದೂ, ಒತ್ತಾಯಪಡಿಸುವ ನಿರ್ಣಯವನ್ನು ಇಲ್ಲಿ ನಡೆದ ಬೆಂಗಳೂರು ಜಿಲ್ಲಾ ಕಮ್ಯೂನಿಸ್ಟ್ ಪಕ್ಷದ ಸಮ್ಮೇಳನದಲ್ಲಿ ಮಾಡಲಾಗಿದೆ.

ಕರ್ನಾಟಕ ಪ್ರಾಂತ್ಯದ ವಿಷಯದಲ್ಲಿ ಕೇಂದ್ರವು ತೋರುತ್ತಿರುವ ಧೋರಣೆಯನ್ನು ಖಂಡಿಸಿ ಕೂಡಲೇ ಅದನ್ನು ರಚಿಸಬೇಕು-ಎಂದು ಒತ್ತಾಯಪಡಿಸುವ ನಿರ್ಣಯವೂ ಅಂಗೀಕೃತವಾಯಿತು.

ಪತ್ರಿಕಾ ಸ್ವಾತಂತ್ರ್ಯವನ್ನು ಕಸಿಯಲು ಸರ್ಕಾರದವರು ಪತ್ರಿಕೆಗಳ ಮೇಲೆ ಕೈಗೊಂಡಿರುವ ನೀತಿಯನ್ನು ಪ್ರತಿಭಟಿಸಿ, ಅದಕ್ಕೆ ಧಕ್ಕೆ ಬರದಂತೆ ಎಲ್ಲ ಪಕ್ಷಗಳೂ ಚಳುವಳಿ ನಡೆಸಬೇಕೆಂದು ಕೋರುವ ಮತ್ತೊಂದು ನಿರ್ಣಯವನ್ನು ಅಂಗೀಕರಿಸಲಾಯಿತು.

ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಅಧಿಕಾರ

ತಾಲ್ಲೂಕು ಬೋರ್ಡುಗಳ ರಚನೆ

ಮದ್ರಾಸ್ ಸರ್ಕಾರದ ಪರಿಶೀಲನೆ

ಅನೇಕ ವರ್ಷಗಳ ಹಿಂದೆ ಮದರಾಸ್ ಪ್ರಾಂತ್ಯದಲ್ಲಿದ್ದು ವಜಾ ಆದ ತಾಲ್ಲೂಕು ಬೋರ್ಡುಗಳನ್ನು ಪುನಃ ರಚಿಸುವ ವಿಷಯವನ್ನು ಅಲ್ಲಿಯ ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ತಿಳಿಯಬರುತ್ತದೆ. ಇದನ್ನು ರಚನೆ ಮಾಡಿದಲ್ಲಿ ಈಗಿರುವ ಜಿಲ್ಲಾ ಬೋರ್ಡುಗಳು ಜಿಲ್ಲಾ ಕೌನ್ಸಿಲುಗಳಾಗುತ್ತದೆ. ತಾಲ್ಲೂಕು ಬೋರ್ಡುಗಳಿಗೆ ಚುನಾಯಿಸಿದವರು ಮತ್ತು ಆಯಾ ಜಿಲ್ಲಾ ಶಾಸನಸಭಾ ಸದಸ್ಯರು ಈ ಜಿಲ್ಲಾ ಕೌನ್ಸಿಲುಗಳ ಸದಸ್ಯರಾಗುತ್ತಾರೆ ಈ ಹೊಸ ವ್ಯವಸ್ಥೆಯಿಂದ ಗ್ರಾಮಾಂತರ ಆಡಳಿತದಲ್ಲಿ ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಅಧಿಕಾರವನ್ನು ಕೊಟ್ಟಂತಾಗುತ್ತದೆ.

ಪ್ರಾದೇಶಿಕ ಸೈನ್ಯದ ವಾರ್ಷಿಕೋತ್ಸವ

ರಾಷ್ಟ್ರದಲ್ಲಿ ಎರಡನೇ ರಕ್ಷಣಾ ವ್ಯೂಹವೆನಿಸಿಕೊಂಡಿರುವ ಪ್ರಾದೇಶಿಕ ಸೈನ್ಯದ ೪ನೇ ವಾರ್ಷಿಕೋತ್ಸವವು ಈದಿನ ದೇಶಾದ್ಯಂತ ನಡೆಯಲ್ಲಿದೆ. ಇದರ ಅಂಗವಾಗಿ ಪೆರೇಡುಗಳು, ಆಟಪಾಟಗಳು ಎಲ್ಲವೂ ನಡೆಯುವುವು.

ಈ ಪ್ರಾದೇಶಿಕ ಸೈನ್ಯವು ಪ್ರಥಮ ದರ್ಜೆಯ ರಾಷ್ಟ್ರೀಯ ಸೇನೆಯಂತಲ್ಲ. ಇದಕ್ಕೆ ಯಾರುಬೇಕಾದರೂ ಸೇರಬಹುದು. ಖಾಸಗಿ, ಸರ್ಕಾರಿ ನೌಕರಿಯಲ್ಲಿರುವವರು, ಕಾರ್ಮಿಕರು ಎಲ್ಲರೂ ಇದಕ್ಕೆ ಸೇರಬಹುದು. ವಿರಾಮ ಕಾಲದಲ್ಲಿ ಶಿಕ್ಷಣವನ್ನು ಕೊಡಲಾಗುತ್ತದೆ. ಜರೂರು ಪರಿಸ್ಥಿತಿಯ ಕಾಲದಲ್ಲಿ ದೇಶದ ರಕ್ಷಣೆಗೆ ಈ ಸೈನ್ಯವು ಉಪಯುಕ್ತವಾಗುತ್ತದೆ.

ಸ್ವೀಕಾರ:—

'ವರಪುತ್ರರು'

ಮೈಸೂರು ಮರಿಮಲ್ಲಪ್ಪ ಮಾಧ್ಯಮಿಕ ಶಾಲೆಯ ಅಧ್ಯಾಪಕರಾದ ಶ್ರೀ ಎ.ಬಿ. ಚನ್ನಬಸಪ್ಪನವರು ಬರೆದಿರುವ "ವರಪುತ್ರರು" ಎಂಬ ಸಣ್ಣ ಗ್ರಂಥವನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಈ ಸಣ್ಣ ಪುಸ್ತಕವು ಒಂದು ಕಾಲ್ಪನಿಕ ಕಥೆಯಾದರೂ ಐತಿಹಾಸಿಕ ಸೇರಿ ಅದಕ್ಕೆ ಕಳೆ ಕಟ್ಟಿದೆ. ಶೈಲಿಯು ಸರಳವಾಗಿದೆ. ಗ್ರಂಥಕರ್ತರು ತಿಳಿಸಿರುವಂತೆ ಕಥೆಯಲ್ಲಿ ಕಂಡುಬರುವ ತಿಳಿಯಾದ ನಡತೆಯು ಜನಾಂಗದಲ್ಲಿ ಅಂಕುರಿಸಿ, ಹಿಂದೂ-ಮುಸಲ್ಮಾನರು ಸೌಹಾರ್ದ ಸ್ನೇಹಭಾವದಲ್ಲಿ ನಡೆದುಕೊಂಡು ಬರಲೆಂದೇ ಎಲ್ಲರ ಆಶಯ. ಇವರ ಸಾಹಿತ್ಯ ಸೇವೆ ಇನ್ನೂ ಬೆಳೆದು ಪ್ರಕಾಶಕ್ಕೆ ಬರಲೆಂದು ನಮ್ಮ ಹಾರೈಕೆ. ಬೆಲೆ ಕೇವಲ ಎರಡಾಣೆ.

ಕಾಂಗ್ರೆಸ್ ಪಾರ್ಲಿಮೆಂಟರಿ ಉಪಸಮಿತಿಗಳು

ಮೈಸೂರು ಮತ್ತು ಬೆಂಗಳೂರುನಗರಗಳಲ್ಲಿ ನಡೆಯುವ ಪುರಸಭಾ ಚುನಾವಣೆ ಸಂಬಂಧದಲ್ಲಿ ಈ ಕೆಳಗೆ ಕಂಡ ಉಪಸಮಿತಿಗಳನ್ನು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಪಾರ್ಲಿಮೆಂಟರಿ ಸಮಿತಿ ನೇಮಿಸಿದೆ:—

ಮೈಸೂರುನಗರ—ಶ್ರೀಗಳಾದ ಎಸ್ ಚೆನ್ನಯ್ಯ, ಬಿ. ನಾರಾಯಣ ಸ್ವಾಮಿ ಮತ್ತು ಟಿ. ವೆಂಕಟರಮಣಯ್ಯ.

ಬೆಂಗಳೂರುನಗರ—ಶ್ರೀಗಳಾದ ಕೆ. ಆರ್. ಮಾಧವರಾವ್, ಆರ್. ಸುಬ್ಬಣ್ಣ, ಹೆಚ್. ಬತನಲಾಲ್, ಎಸ್. ನಾರಾಯಣ ಚೆಟ್ಟಿ, ಸಿದ್ದಪ್ಪನಹಳ್ಳಿ ಕೃಷ್ಣಶರ್ಮ, ಎಲ್. ಎಸ್. ವೆಂಕೋಜಿರಾವ್ ಮತ್ತು ಎಂ.ಪಿ.ಸಿ.ಸಿ. ಕಾರ್ಯದರ್ಶಿ.

ಆಹಾರಾಧಿಕಾರಿಗಳ ಸಮ್ಮೇಳನ

ದಕ್ಷಿಣ ಭಾರತದಲ್ಲಿ ಅದರಲ್ಲೂ ಮೈಸೂರು, ಮದ್ರಾಸ್, ತಿರುವಾಂಕೂರ್-ಕೊಚ್ಚಿ ಮತ್ತು ಆಂಧ್ರದಲ್ಲಿ ಈಗಿನ ಆಹಾರ ಪರಿಸ್ಥಿತಿಯನ್ನು ಪರಿಶೀಲಿಸಲು ಆಪ್ರಾಂತ್ಯಗಳ ಆಹಾರಾಧಿಕಾರಿಗಳ ಸಭೆಯೊಂದು ಈದಿನ ಕೇಂದ್ರ ಆಹಾರ ಉಪಸಚಿವ ಶ್ರೀ ಎಂ.ವಿ. ಕೃಷ್ಣಪ್ಪನವರು ಅಧ್ಯಕ್ಷತೆಯಲ್ಲಿ ಮದ್ರಾಸಿನಲ್ಲಿ ಸೇರಿದೆ.

ಜಿಲ್ಲಾಬೋರ್ಡು ಸಭೆ

ಮೈಸೂರು ಜಿಲ್ಲಾ ಬೋರ್ಡಿನ ಸಭೆಯು ಮುಂದಿನ ತಿಂಗಳು ೯ ನೇ ತಾರೀಖು ಮಧ್ಯಾಹ್ನ ೧ ಗಂಟೆಗೆ ರಾಜಧಾನಿಯಲ್ಲಿ ನಡೆಯುವುದು.

-ಮೈಸೂರು ಪೇಟೆಧಾರಣೆ-

ತಾರೀಖು ೨೮—೧೦—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೦—೨	೨೨—೮
ಎಳ್ಳು	೬೦—೨	೮೧—೧೦
ಅಲಸಂದೆ	೩೮—	೬೧—೧೪
ಹರಳು	೩೬—೮	—
ಹುರಳಿ	—	—
ಹೆಸರು	೩೬—೬	೩೯—೨
ಉದ್ದು	—	—
ಹುಣಸೇಹಣ್ಣು	೯—	೯—೩
ಮೆಣಸಿನಕಾಯಿ	೧೨—೨	೩೮—೪
ಸೀಗೆಕಾಯಿ	೬—೪	—
ತೆಂಗಿನಕಾಯಿ	೧೬೬—	೨೬೨—

ಆಹಾರಧಾನ್ಯಗಳ ಬೆಲೆ ಇಳಿಯುತ್ತಿದೆ

ಈವರ್ಷ ಭಾರತದ ಎಲ್ಲ ಪ್ರಾದೇಶಗಳಲ್ಲೂ ಸಮೃದ್ಧಿಯಾಗಿ ಬೆಳೆ ಆಗಿ ಹೆಚ್ಚು ಆಹಾರ ಬೆಳೆ ಆಗಿರುವುದರಿಂದ ಅದರ ಬೆಲೆಯು ಇಳಿಯುತ್ತಿದೆ. ದಕ್ಷಿಣ ಭಾರತದಲ್ಲಿ ಈಗಾಗಲೇ ಶೇಕಡ ೫೦-೬೦ ರಷ್ಟು ಬೆಲೆ ಕಡಮೆ ಆಗಿದೆ. ಮೈಸೂರಿನಲ್ಲಿ ಇದಕ್ಕಿಂತಲೂ ಹೆಚ್ಚಾಗಿ ಬೆಲೆ ಇಳಿದು ಬೆಳೆದವರಿಗೆ ನಷ್ಟ ಉಂಟಾಗುವ ಸಂಭವ ಒದಗಿದೆ. ಬೆಳೆದವರ ಮತ್ತು ಕೊಳ್ಳುವವರ ದೃಷ್ಟಿಯನ್ನು ಮನದಲ್ಲಿಟ್ಟುಕೊಂಡು ಈಗ ಬೆಲೆ ನಿಗಧಿಮಾಡಬೇಕಾಗಿದೆ.

ಈ ವಿಚಾರವನ್ನು ಈದಿನ ಮದ್ರಾಸಿನಲ್ಲಿ ನಡೆಯುವ ಆಹಾರಾಧಿಕಾರಿಗಳ ಸಭೆಯಲ್ಲಿ ಪರಿಶೀಲಿಸಲಾಗುವುದು. ಈ ಸಮಯವನ್ನು ಉಪಯೋಗಿಸಿಕೊಂಡು ಕೆಲವ ವರ್ತಕರು ಹೆಚ್ಚುಹೆಚ್ಚಾಗಿ ಧಾನ್ಯವನ್ನು ಕೊಂಡು ಶೇಖರಿಸುತ್ತಿರುವುದು ಕಂಡುಬರುತ್ತಿದೆ. ಆರೀತಿ ಮಾಡಿದರೆ ಉಗ್ರ ಕ್ರಮ ಕೈಗೊಳ್ಳಲಾಗುವುದೆಂದು ಅವರಿಗೆ ಎಚ್ಚರಿಕೆ ಕೊಡಲಾಗಿದೆ-ಎಂದು ಕೇಂದ್ರ ಆಹಾರ ಉಪಸಚಿವ ಶ್ರೀ ಎಂ. ವಿ. ಕೃಷ್ಣಪ್ಪನವರು ತಿಳಿಸಿದ್ದಾರೆ.

ಅಖಿಲ ಭಾರತ ಶಿಕ್ಷಣ ಸಮ್ಮೇಳನ

ಅಖಿಲ ಭಾರತ ಶಿಕ್ಷಣ ಸಮ್ಮೇಳನವು ಡಿಸೆಂಬರ್ ಕೊನೆಯವಾರದಲ್ಲಿ ಕಲ್ಕತ್ತಾದಲ್ಲಿ ನಡೆಯುತ್ತದೆ.

ಅಖಿಲ ಭಾರತ ಟ್ರೈನಿಂಗ್ ಕಾಲೇಜುಗಳ ಸಮ್ಮೇಳನವು ಮುಂಬರುವ ಫೆಬ್ರವರಿ ೫ರಿಂದ ೭ರ ವರೆಗೆ ಅಲಿಘರ್‌ನಲ್ಲಿ ನಡೆಯುವುದು.

ಮದ್ರಾಸ್ ಶಾಸನಸಭಾ ಅಧಿವೇಶನ

ಮದ್ರಾಸ್ ಕಿರಿಯ ಶಾಸನಸಭಾಧಿವೇಶನವು ಡಿಸೆಂಬರ್ ತಿಂಗಳಲ್ಲಿ ನಡೆಯುತ್ತದೆ. ಮುಂದಿನ ೬ ತಿಂಗಳ ವೆಚ್ಚದ ಬಜೆಟ್ಟನ್ನು ಮುಂದಿಡಲಾಗುವುದು.

ರಾಜಕಮಲ್, ಮೈಸೂರು

30--10--53 ರಿಂದ ಅಮೋಘ ಪ್ರಾರಂಭ

ಪ್ರತಿದಿನ 3 ಆಟಗಳು

ಶೋಭಾರವರ:—

ಪರೋಪ-
-ಕಾರಂ

(ತೆಲಗು)

ಭೂಮಿಕೆ:—ಜಿ. ವರಲಕ್ಷ್ಮಿ, ಸಾವಿತ್ರಿ, ಮುಕ್ಕಾಮಲ, ರೇಲಂಗಿ.

ನಾಟಕರತ್ನ ಜಿ. ಹೆಚ್. ವೀರಣ್ಣನವರ ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)

29--10--53 ನೇ ರಾತ್ರಿ 10 ಗಂಟೆಗೆ ಶಿವರಾಂಪೇಟೆಯ ರತ್ನಾವಳಿ ಥಿಯೇಟರಿನಲ್ಲಿ

ಚಲನಚಿತ್ರದಲ್ಲಿ ಖ್ಯಾತಿ ಪಡೆದ ನಾಟಕರತ್ನ ಜಿ. ಹೆಚ್. ವೀರಣ್ಣ, ಜಯಮ್ಮ ಮತ್ತು ಲಕ್ಷ್ಮಮ್ಮ ನಟಿಸಿರುವ

ಅಡ್ಡದಾರಿ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ರಣಜಿತ್

30-10-53 ರಿಂದ ದಿನವಹಿ 3 ಆಟಗಳು

ಸುರೈಯ, ಸುರೇಶ್ ನಟಿಸಿರುವ

ಗೂಂಜ್ (ಹಿಂದಿ)

ಸಹಾಯಕವರ್ಗ- ಮಜ್ನು, ರಣಧೀರ್

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ.
ಸಮಾಚಾರ ಪ್ರೆಸ್, ಮೈಸೂರು.

ರಾಷ್ಟ್ರೀಯ ಮಲೇರಿಯಾ ನಿವಾರಣಾ ಯೋಜನೆ

ಬೆಂಗಳೂರು, ೨೯

ಸಂಸ್ಥಾನಾದ್ಯಂತ ಮಲೇರಿಯಾ ಹತೋಟಿ ಕಾರ್ಯಕ್ರಮವನ್ನು ಕೈಗೊಳ್ಳಲು ಮುಂದಿನ ತಿಂಗಳು ೪ ನೇ ತಾರೀಖು ಎಲ್ಲಪ್ರದೇಶಗಳಲ್ಲೂ ಯೋಜನೆಯನ್ನು ಉದ್ಘಾಟಿಸಲಾಗುವುದು. ಈ ಸಂಬಂಧದಲ್ಲಿ ನಡೆಯುವ ಪ್ರಚಾರ ಸಭೆಗಳಲ್ಲಿ ಸಾರ್ವಜನಿಕರು ಸಹಕರಿಸಬೇಕೆಂದು ಸರ್ಕಾರದ ಪ್ರಕಟಣೆ ಕೋರಿದೆ.

ಈ ನಿವಾರಣಾ ಕಾರ್ಯಕ್ರಮವನ್ನು ವಿಸ್ತರಿಸುವುದಕ್ಕೆ ಭಾರತ ಸರ್ಕಾರವು ಸಹಾಯ ಮಾಡಿದೆ. ಸಂಸ್ಥಾನಕ್ಕೆ ೫ ರಾಷ್ಟ್ರೀಯ ಮಲೇರಿಯಾ ಹತೋಟಿ ಕೇಂದ್ರಗಳನ್ನು ಭಾರತ ಸರ್ಕಾರ ಒದಗಿಸಿದೆ. ಸಂಸ್ಥಾನದಲ್ಲಿ ಕನಿಷ್ಠಪಕ್ಷ ೧೦ ಲಕ್ಷ ಮನೆಗಳಿಗೆ ವರ್ಷಕ್ಕೆ ಒಂದೆರಡುಬಾರಿ ಡಿ. ಡಿ. ಟಿ. ದ್ರಾವಕವನ್ನು ಪ್ರಯೋಗಿಸಲಾಗುವುದು ಮತ್ತು ಈಗ ರಕ್ಷಣೆಪಡೆಯುತ್ತಿದ್ದ ೧೨ ಲಕ್ಷ ಜನರಿಗೆ ಬದಲಾಗಿ ೫೦ ಲಕ್ಷ ಮಂದಿ ಮುಂದೆ ರಕ್ಷಣೆ ಪಡೆಯುವರು ಎಂದು ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ.

ಸುಧಾ-ವಿಶೇಷ ಸಂಚಿಕೆ

ರಾಜಧಾನಿಯಿಂದ ಶ್ರೀ ದೇ.ನಾ. ಅಶ್ವತ್ಥನಾರಾಯಣರಾಯರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ 'ಸುಧಾ' ತ್ರೈಮಾಸಿಕ ಪತ್ರಿಕೆಯ ದಸರಾ ವಿಶೇಷ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಅನೇಕ ಉಪಯುಕ್ತ ಲೇಖನಗಳನ್ನೊಳಗೊಂಡ ಈ ಸಂಚಿಕೆಯು ವಿಶೇಷ ಆಕರ್ಷಣೀಯವಾಗಿದೆ. ಬೆಲೆ ೩ ಆಣೆ.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೫೮

೩೦-೧೦-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ರಾಜಸಭೆ ಮುಂದೆ ಕುಸ್ತಿ ನಿಲ್ಲಿಸಿದ್ದು ತಪ್ಪು

ಹೈಕೋರ್ಟಿನಲ್ಲಿ ಸರ್ಕಾರದ ಮೇಲೆ ರಿಟ್ ಅರ್ಜಿ

ಮೈಸೂರು ೩೦

ದಸರಾ ಸಮಯದಲ್ಲಿ ರಾಜಸಭೆಯ ಮುಂದೆ ನಡೆಯಬೇಕಾಗಿದ್ದ ಕುಸ್ತಿ ಪಂದ್ಯಗಳನ್ನು ನಿಲ್ಲಿಸಿದ್ದು ರಾಜ್ಯಾಂಗಕ್ಕೆ ವಿರೋಧವೆಂದು ರಾಜ ಸಭಾ ಸಮಿತಿ ಅಧ್ಯಕ್ಷ ಶ್ರೀ ಎ. ಜಿ. ರಾಮಚಂದ್ರರಾಯರು ಮತ್ತು ಮೈಸೂರು ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಗಳ ಮೇಲೆ ಶ್ರೀ ತಗಡೂರು ರಾಮಚಂದ್ರರಾಯರು ಹೈಕೋರ್ಟಿನಲ್ಲಿ ಒಂದು ರಿಟ್ ಅರ್ಜಿಯನ್ನು ನಿನ್ನೆ ಸಲ್ಲಿಸಿ ರಾಜ್ಯಾಂಗದ ೨೨೬ ನೇ ವಿಧಿ ಪ್ರಕಾರ ಘೋಷಣೆ, ಆರ್ಡರು ಅಥವ ಇತರ ಸೂಕ್ತ ನಿರ್ದೇಶ ಕೊಡಬೇಕೆಂದು ಪ್ರಾರ್ಥಿಸಿದ್ದಾರೆ.

ಅರ್ಜಿದಾರರು ಈ ರೀತಿ ನಮೂದಿಸಿದ್ದಾರೆ:—

ರಾಜಸಭೆಯ ಮುಂಭಾಗದಲ್ಲಿ ನಡೆಯಬೇಕಾಗಿದ್ದ ಕುಸ್ತಿಯನ್ನು ನಿಲ್ಲಿಸಿದ್ದರಿಂದ ಹಂಜನರ ಮೂಲಭೂತ ಹಕ್ಕಿಗೆ ಧಕ್ಕೆ ಬಂದು ರಾಜ್ಯಾಂಗದ ೧೪, ೧೫ ಮತ್ತು ೧೭ ವಿಧಿಗಳು ಉಲ್ಲಂಘನೆಯಾಗಿದೆ ಯೆಂಬುದು ಪ್ರಮಾಣ ಪತ್ರಿಕೆಯಿಂದ ವೇದ್ಯವಾಗುತ್ತದೆ. ಸರ್ಕಾರದವರು ಹೊರಡಿಸಿರುವ ಎರಡು ಪ್ರೆಸ್ಸುನೋಟುಗಳನ್ನು ಕೋರ್ಟು ಅವಗಾಹನೆಗೆ ಹಾಜರ್ಮಾಡಿದೆ.

ಆದ್ದರಿಂದ ಈ ಅರ್ಜಿಯನ್ನು ಪರಿಶೀಲಿಸಿ ಸರ್ಕಾರದವರು ಕುಸ್ತಿಯನ್ನೆ ನಿಲ್ಲಿಸಿದ್ದ ತೀರ್ಮಾನವು ಅಸಿಂಧುವೆಂದು ಘೋಷಿಸಬೇಕಾಗಿಯೂ ಮತ್ತು ರಾಜ್ಯಾಂಗವನ್ನೇ ಕಾಪಾಡುವಂತೆ ಸೂಕ್ತ ಆಜ್ಞೆಯನ್ನು ಮಾಡಬೇಕಾಗಿಯೂ ಪ್ರಾರ್ಥನೆ.

ಈ ಪ್ರಮಾಣ ಪತ್ರಿಕೆಯಲ್ಲಿ ನಮೂದಿಸಿರುವ ವಿಷಯಗಳಿಂದ ಅನೇಕ ರಾಜ್ಯಾಂಗ ಪ್ರಶ್ನೆಗಳು ಉದ್ಭವಿಸಿರುವುದರಿಂದಲೂ ಮತ್ತು ಆರ್ಟಿಕಲ್ ೧೯೮ ರ ಪ್ರಕಾರ ರಾಜಾಂಗವನ್ನು ಪಾಲಿಸುವುದು ರಾಜ್ಯಪಾಲಕರ ಕರ್ತವ್ಯವಾದ್ದರಿಂದಲೂ ಈ ರಾಜ್ಯಾಂಗದ ಪ್ರಶ್ನೆಗಳನ್ನು ವಾದಿಸುವುದಕ್ಕಾಗಿ ಅರ್ಜಿದಾರರ ಪರವಾಗಿ ಸರ್ಕಾರದಿಂದ ವಕೀಲರನ್ನು ನೇಮಕ ಮಾಡಿ "ಲೀಗಲ್" ಏಡ್ ಕೊಡುವಂತೆ ಸರ್ಕಾರಕ್ಕೆ ಆಜ್ಞೆ ಮಾಡಬೇಕು.

ಇಸ್ರೇಲಿಗೆ ಅಮೆರಿಕದ ಸಹಾಯ

ಯಹೂದಿ ರಾಜ್ಯದ ಆರ್ಥಿಕ ನೆರವಿಗಾಗಿ ಅಮೆರಿಕ ೨೬೦ ಲಕ್ಷ ಡಾಲರುಗಳ ಸಹಾಯವನ್ನು ನೀಡಲು ನಿರ್ಧರಿಸಿದೆ.

ಗೋಲಿಬಾರು ಪ್ರಕರಣದಲ್ಲಿ ಒಬ್ಬನ ಮೇಲೆ ಮೊಕದ್ದಮೆ

ಮೈಸೂರು ೩೦

ರಾಜಧಾನಿಯ ಬೆಂಕಿನವಾಬ್ ರಸ್ತೆಯಲ್ಲಿ ವಾಸವಾಗಿರುವ ವೆಲ್ಲೂರಿನ ತಂಗವೇಲು ಎಂಬುವನನ್ನು ಪೋಲೀಸರು ದಸ್ತಗಿರಿ ಮಾಡಿ, ಆತನ ಮೇಲೆ ೧೪೪, ೧೪೮, ೪೨೬ ಮತ್ತು ೩೦೭ ವಿಧಿ ಪ್ರಕಾರ ನಗರ ನ್ಯಾಯಾಧೀಶರ ಮುಂದೆ ಮೊಕದ್ದಮೆ ಹೂಡಿದ್ದಾರೆ.

ಕಳೆದ ೮ನೇ ತಾರೀಖು ಅರಮನೆ ಮುಂದೆ ಕುಸ್ತಿ ನಡೆಯಬೇಕಾಗಿದ್ದ ಸಂಬಂಧದಲ್ಲಿ ಗಲಭೆ ಮತ್ತು ಗೋಲಿಬಾರು ಆದ ಪ್ರಸಂಗದಲ್ಲಿ ತನಗೆ ಗಾಯವಾಗಿರುವುದೋ ಎಂಬಂತೆ ನಟಿಸುತ್ತಾ ನೆಲದ ಮೇಲೆ ತಂಗವೇಲು ಉರುಳಿ ಬಿದ್ದಿದ್ದನ್ನು ಪೋಲೀಸರು ಕಂಡು ಆತನನ್ನು ಆಸ್ಪತ್ರೆಗೆ ಸಾಗಿಸಿದರು. ಆದರೆ ಅಲ್ಲಿ ಪರೀಕ್ಷೆ ನಡೆದಾಗ ಆತನಿಗೆ ಯಾವ ಗಾಯವೂ ಆಗಿತ್ತಿಲ್ಲವೆಂದೂ, ಅದು ಆತನ ಕಪಟನಾಟಕವೆಂದು ಹೇಳಲಾಗಿದೆ.

ಸಮಾರಂಭ ಮುಂದಕ್ಕೆ ಹೋಯಿತು

ರಾಜಧಾನಿಯ ಬ್ರಾಹ್ಮಣ ಧರ್ಮ ಸಹಾಯ ಸಭಾ ಕಲ್ಯಾಣ ಭವನದ ಮಹೋತ್ಸವವು ನವೆಂಬರ್ ೧ನೇ ತಾರೀಖು ಭಾನುವಾರ ನಡೆಯಬೇಕಾಗಿದ್ದು, ಸಚಿವ ಶ್ರೀ ಎ.ಜಿ. ರಾಮಚಂದ್ರರಾಯರವರ ಅನಾರೋಗ್ಯದ ನಿಮಿತ್ತ ಈ ಉತ್ಸವವನ್ನು ಮತ್ತೊಂದು ದಿನ ನಡೆಸಲಾಗುವುದೆಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಜಿಲ್ಲಾ ಖಜಾನೆಗೆ ನಾಳೆದಿನ ರಜಾ

ಮೈಸೂರು ೩೦

ಮೈಸೂರು ಜಿಲ್ಲಾ ಖಜಾನೆಯ ವ್ಯವಹಾರವನ್ನು ಮೈಸೂರು ಬ್ಯಾಂಕಿಗೆ ನವೆಂಬರ್ ೧ನೇ ತಾರೀಖಿನಿಂದ ವರ್ಗಾಯಿಸುವ ಸಂಬಂಧದಲ್ಲಿ ನಾಳೆದಿನ ಜಿಲ್ಲಾ ಖಜಾನೆಗೆ ರಜಾ ಕೊಡಲಾಗಿದೆಯೆಂದು ಖಜಾನಾಧಿಕಾರಿಗಳು ತಿಳಿಸಿರುತ್ತಾರೆ.

ನವೆಂಬರ್ ೨ ಮತ್ತು ೩ನೇ ತಾರೀಖು ಬೆಳಿಗ್ಗೆ ೮ರಿಂದ ೧೨ ಗಂಟೆ ವರೆಗೆ ಪೇಪರ್ ಬಡಾವಣೆ ಮಾಡಲಾಗುವುದೆಂದೂ ತಿಳಿಸಲಾಗಿದೆ

ಮೈಸೂರು ಅರಮನೆ ಜನರಿಗೆ ತೆರದಿರಲಿ

ಮೈಸೂರು ರಾಜಪ್ರಮುಖರು ವಾಸವಾಗಿರುವ ಅರಮನೆಯು ಯಾರೊಬ್ಬರ ಆಸ್ತಿಯಲ್ಲ. ಇದು ದೇಶದ ಸಂಪತ್ತು. ಅದರಲ್ಲೂ ಎಲ್ಲಾ ಬಡಜನಗಳು ಮೈ ಬೆವರನ್ನು ಸುರಿಸಿ ಕಟ್ಟಿರುವುದು. ಆದ್ದರಿಂದ ಯಾರೊಬ್ಬರ ತೊಂದರೆಯೂ ಇಲ್ಲದಂತೆ ಮಹಾಜನಗಳು ಯಾವಕಾಲದಲ್ಲೂ ಹೋಗಿ ಬರಲು ಅವಕಾಶವಿರಬೇಕು. ಈ ವಿಷಯದಲ್ಲಿ ನಮ್ಮ ಸರ್ಕಾರದವರು ಮತ್ತು ರಾಜಪ್ರಮುಖರು ಮೇಲ್ಕಂಡ ವಿಷಯವನ್ನು ಕೂಡಲೆ ಜಾರಿಗೆ ತಂದು ಮಹಾಜನಗಳ ವಿಶ್ವಾಸಕ್ಕೆ ಪಾತ್ರರಾಗುತ್ತಾರೆಂದು ಆಶಿಸುತ್ತೇನೆ-ಎಂದು ಶ್ರೀ ಎ. ಎಸ್. ಕೃಷ್ಣಮೂರ್ತಿಯವರು ಮನವಿಮಾಡಿದ್ದಾರೆ.

ನ್ಯಾಯಾಧೀಶರುಗಳ ವರ್ಗ

ಮೈಸೂರು ನಗರದ ಅಡಿಷನಲ್ ಸಬಾರ್ಡಿನೇಟ್ ನ್ಯಾಯಾಧೀಶರಾದ ಶ್ರೀ ಪಿ.ಸಿ. ರಾಮಚಂದ್ರನ್‌ರನ್ನು ಮೈಸೂರು ಸಬಾರ್ಡಿನೇಟ್ ನ್ಯಾಯಾಧೀಶರಾಗಿಯೂ, ಮಂಡ್ಯ ಮುನ್ಸೀಫ್ ಶ್ರೀ ವಿ. ನರಸಿಂಹಮೂರ್ತಿಯವರನ್ನು ಮೈಸೂರಿನ ಅಡಿಷನಲ್ ಸಬಾರ್ಡಿನೇಟ್ ಜಡ್ಜರಾಗಿಯೂ ವರ್ಗಾಯಿಸಲಾಗಿದೆ.

ವಿವಾಹಕ್ಕೆ ಒಪ್ಪಿಸಲು ಬಾಂಬು

ಕಲ್ಕತ್ತದ ಯುವಕನೊಬ್ಬನು ತಾನು ಪ್ರೀತಿಸುತ್ತಿದ್ದ ಯುವತಿಯ ವಿವಾಹಕ್ಕೆ ಆಕೆಯ ತಂದೆಯನ್ನು ಒಪ್ಪಿಸಲು ಆತನ ಮೇಲೆ ಬಾಂಬನ್ನು ಎಸೆದನೆಂದೂ, ದೈವಶಾತ್ ಅದು ಗೋಡೆಗೆ ತಗುಲಿ ಯಾರಿಗೂ ಅಪಾಯವಾಗಲಿಲ್ಲವೆಂದೂ ವರದಿಯಾಗಿದೆ ಈಗ ಆ ಯುವಕನನ್ನು ಬಂಧಿಸಲಾಗಿದೆ.

ಕಡ್ಡಾಯ ಸಂಸ್ಕೃತ ಶಿಕ್ಷಣ

ಮೆಟ್ರಿಕ್ಯುಲೇಷನ್ ಮಟ್ಟದವರಿಗೆ ಸಂಸ್ಕೃತವನ್ನು ಕಡ್ಡಾಯವಾಗಿ ಮಧ್ಯಭಾರತ, ರಾಜಾಸ್ತಾನ್, ಮಹಾಕೋಸಲ, ಬಿಹಾರ್ ಮತ್ತು ಉತ್ತರ ಪ್ರದೇಶಗಳ ಎಲ್ಲಾ ಶಾಲೆಗಳಲ್ಲೂ ಬೋಧಿಸಬೇಕೆಂದು ಪಾರ್ಲಿಮೆಂಟಿನ ಡೆಪ್ಯೂಟಿ ಸ್ಪೀಕರ್ ಶ್ರೀ ಅನಂತಶಯನಂ ಅಯ್ಯಂಗಾರ್ ತಿಳಿಸಿದ್ದಾರೆ.

ರೋಮಿಗೆ ಮೈಸೂರು ಸಚಿವರು

ಮುಂದಿನತಿಂಗಳು ೨೩ನೇ ತಾರೀಖಿನಿಂದ ರೋಮಿನಲ್ಲಿ ನಡೆಯುವ ಎಫ್. ಎ. ಓ. ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಮೈಸೂರು ಆಹಾರ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ಹೋಗುವರೆಂದು ತಿಳಿದುಬಂದಿದೆ.

ನುಗು ಜಲಾಶಯಕ್ಕೆ ೫೦ ಲಕ್ಷ ರೂ. ಸಹಾಯ

ಮೈಸೂರು ೩೦

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಕಟ್ಟಲಾಗುತ್ತಿರುವ ನುಗು ಜಲಾಶಯಕ್ಕೆ ಕೇಂದ್ರ ಸರ್ಕಾರದವರು ೫೦ ಲಕ್ಷ ರೂ.ಗಳ ಸಾಲವನ್ನು ಮಂಜೂರು ಮಾಡಿದ್ದಾರೆ. ಈ ಸಾಲಕ್ಕೆ ಮೊದಲನೆ ೫ ವರ್ಷಕ್ಕೆ ಯಾವ ಬಡ್ಡಿಯೂ ಇರದೆ, ೩೦ ವರ್ಷಗಳಲ್ಲಿ ಅದನ್ನು ತೀರಿಸಬೇಕೆಂದು ಕರಾರು ಹಾಕಲಾಗಿದೆ.

ಗೋದಾವರಿ ಪ್ರವಾಹದಿಂದ ೯೧ ಜನರ ಮರಣ

ಇತ್ತೀಚೆಗೆ ಗೋದಾವರಿ ನದಿಯಲ್ಲಿ ಉಂಟಾದ ಪ್ರವಾಹದ ಹಾವಳಿಯಿಂದ ಸುಮಾರು ೯೧ಮಂದಿ ಸತ್ತುಹೋದರೆಂದೂ, ೧,೬೦,೦೦೦ ಎಕರೆ ಜಮೀನು ನೀರಿನಲ್ಲಿ ಮುಳುಗಿಹೋದವೆಂದೂ ಅಂದಾಜುಮಾಡಲಾಗಿದೆ. ಇಲ್ಲಿಯವರೆಗೆ ಸೇತುವೆ ಮತ್ತು ಇತರ ಪರಿಹಾರ ಕಾರ್ಯಕೆ ೫೦ಲಕ್ಷ ರೂ. ಖರ್ಚುಮಾಡಲಾಗಿದೆ.

ಮಕ್ಕಳ ಬದಲು ಹೆಚ್ಚು ಆಹಾರ ಬೆಳೆಯಿರಿ

ಹೆಚ್ಚು ಮಕ್ಕಳ ಬದಲು ಆಹಾರ ಬೆಳೆಯಿರಿ ಎಂದು ಕೇಂದ್ರ ಆಹಾರ ಉಪಸಚಿವ ಶ್ರೀ ಎಂ. ವಿ. ಕೃಷ್ಣಪ್ಪನವರು ಕರ್ನೂಲಿನಲ್ಲಿ ಯುವಕರಿಗೆ ಮನವಿಮಾಡಿದ್ದಾರೆ. ಅಕ್ಕಿ ತಿನ್ನುವುದರಿಂದ ಸಂತಾನ ಶಕ್ತಿ ಹೆಚ್ಚುವುದೆಂದೂ, ಆದ್ದರಿಂದ ದಕ್ಷಿಣ ಭಾರತ ಜನರು ಗೋಧಿ ಉಪಯೋಗಿಸಬೇಕೆಂದೂ ಅವರು ಹೇಳಿದ್ದಾರೆ.

ಮಹದೇಶ್ವರ ಜಾತ್ರೆ ಯಾತ್ರಿಕರಿಗೆ ಸೂಚನೆ

ಕೊಳ್ಳೇಗಾಲದ ಬಳಿ ಇರುವ ಮಹದೇಶ್ವರ ಬೆಟ್ಟದಲ್ಲಿ ಮುಂದಿನ ತಿಂಗಳು ೨ನೇ ತಾರೀಖಿನಿಂದ ಆರಂಭವಾಗಲಿರುವ ಜಾತ್ರೆಗೆ ಹೋಗುವ ಯಾತ್ರಿಕರೆಲ್ಲರೂ ಮುಂಚಿತವಾಗಿ ಕಾಲರಾ ಇನಾಕ್ಯುಲೇಷನ್ ಮಾಡಿಸಿಕೊಂಡು ಹೋಗಬೇಕೆಂದು ಆಜ್ಞೆಯನ್ನು ಮಾಡಲಾಗಿದೆ.

ಅಂತರ ರಾಷ್ಟ್ರೀಯ ವಕೀಲರ ಸಮ್ಮೇಳನ

ಅಂತರ ರಾಷ್ಟ್ರೀಯ ವಕೀಲರ ಸಮ್ಮೇಳನವು ಡಿಸೆಂಬರ್ ೨೮ನೇ ತಾರೀಖು ದೆಹಲಿಯಲ್ಲಿ ನಡೆಯುವುದು. ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಪ್ರಾರಂಭೋತ್ಸವ ನೆರವೇರಿಸುವರು. ಇಂತಹ ಸಮ್ಮೇಳನವು ಏಷ್ಯಾ ರಾಷ್ಟ್ರದಲ್ಲಿ ನಡೆಯುವುದು. ಇದೇ ಮೊಟ್ಟಮೊದಲು.

ಸಂಸ್ಥಾನದ ನೀರಾವರಿ ಯೋಜನೆಗಳು

ಮೈಸೂರು ಸಂಸ್ಥಾನದ ಒಟ್ಟು ವಿಸ್ತೀರ್ಣ ೩೩ ಸಾವಿರದ ೩೧೦ ಚದುರಮೈಲಿಗಳು. ಇವರಲ್ಲಿ ಹೊಸದಾಗಿ ಬಂದಿರುವ ಬಳ್ಳಾರಿಯ ೭ ತಾಲ್ಲೂಕುಗಳೂ ಸೇರಿವೆ. ಜನಸಂಖ್ಯೆಯು ೧ ಕೋಟಿಯನ್ನು ಸಮೀಪಿಸುತ್ತಿದೆ. ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೭೦ ರಷ್ಟು ಮಂದಿ ವ್ಯವಸಾಯವನ್ನೇ ತಮ್ಮ ಜೀವನೋಪಾಯಕ್ಕಾಗಿ ಅವಲಂಬಿಸಿರುತ್ತಾರೆ.

ಮೈಸೂರು ಸಂಸ್ಥಾನದಲ್ಲಿ ವ್ಯವಸಾಯದ ಅಭಿವೃದ್ಧಿಗೆ ಬೇಕಾದ ನೈಸರ್ಗಿಕ ಸೌಕರ್ಯಗಳನ್ನು ಪ್ರಕೃತಿ ದೇವಿಯು ಯತೇಚ್ಛವಾಗಿಯೂ, ಒದಗಿಸಿರುತ್ತಾಳೆ. ಮೈಸೂರು ಸರ್ಕಾರದವರು ಹಿಂದಿನಿಂದಲೂ, ನೀರಾವರಿ ಯೋಜನೆಗಳಿಗೆ ಹೆಚ್ಚು ಗಮನವನ್ನು ಕೊಡುತ್ತಾ ಬಂದಿರುತ್ತಾರೆ.

ನಾಲ್ಕು ಪ್ರದೇಶಗಳು

ಮೈಸೂರು ದೇಶವನ್ನು ಮುಖ್ಯವಾದ ನಾಲ್ಕು ನದಿಗಳ ದೃಷ್ಟಿಯಿಂದ ನಾಲ್ಕು ಪ್ರದೇಶಗಳನ್ನಾಗಿ ವಿಭಾಗಿಸಬಹುದು ಉತ್ತರದಲ್ಲಿ ತುಂಗಭದ್ರ, ದಕ್ಷಿಣದಲ್ಲಿ ಕಾವೇರಿ, ಪೂರ್ವದಲ್ಲಿ ಎರಡು ಪಿನಾಕಿನಿಗಳು ಮತ್ತು ಪಾಲಾರ್, ಪಶ್ಚಿಮದ ಬೆಟ್ಟಗುಡ್ಡ ಪ್ರದೇಶದಲ್ಲಿ ಶರಾವತಿ ಮತ್ತು ನೇತ್ರಾವತಿ ನದಿಗಳು.

ತುಂಗಾ ಅಣೆಕಟ್ಟು

ತುಂಗಾನದಿಗೆ ಶಿವಮೊಗ್ಗಾ ಜಿಲ್ಲೆಯ ಸಕ್ರೆಬೈಲು ಸಮೀಪ ಸುಮಾರು ಎರಡು ಕೋಟಿ ಮೂವತ್ತು ಲಕ್ಷ ರೂಪಾಯಿಗಳ ಖರ್ಚಿನಿಂದ ಅಣೆಕಟ್ಟೊಂದನ್ನು ನಿರ್ಮಿಸಲಾಗಿದೆ ಈವರ್ಷ ಅಣೆಕಟ್ಟಿನ ಕೆಲಸವು ಪೂರೈಸಿದೆ. ಸುಮಾರು ೩೦ ಮೈಲಿಗಳಷ್ಟು ದೂರ ನಾಲೆಯ ಕೆಲಸ ನಡೆದಿದೆ. ಈ ಜಲಾಶಯದಿಂದ ಸುಮಾರು ೨೧ ಸಾವಿರದ ೫೦೦ ಎಕರೆ ಜಮೀನು ಸಾಗುವಳಿಗೆ ಬರಬಹುದೆಂದು ನಿರೀಕ್ಷಿಸಲಾಗಿದೆ. ಈ ವರ್ಷವೇ ಸುಮಾರು ನಾಲ್ಕುಸಾವಿರ ಎಕರೆ ಜಮೀನಿಗೆ ನೀರನ್ನೊದಗಿಸಲು ಏರ್ಪಾಡು ಮಾಡಲಾಗಿದೆ.

ಲಕ್ಕವಳ್ಳಿ ಜಲಾಶಯ

ಚಿಕ್ಕಮಗಳೂರು ಜಿಲ್ಲೆಯಲ್ಲಿ ಲಕ್ಕವಳ್ಳಿಯ ಹತ್ತಿರ ಭದ್ರಾನದಿಗೆ ಕಟ್ಟನ್ನು ಕಟ್ಟಿ ಒಂದು ವಿಶಾಲ ಜಲಾಶಯವನ್ನು ನಿರ್ಮಿಸುವ ಕೆಲಸವು ನಡೆಯುತ್ತಾ ಇದೆ ಈ ಜಲಾಶಯಕ್ಕೆ ಸುಮಾರು ೧೫ ಕೋಟಿ ರೂಪಾಯಿಗಳು ಬೇಕಾಗಬಹುದು. ಇದರಿಂದ ಶಿವಮೊಗ್ಗ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸುಮಾರು ಎರಡೂವರೆ ಲಕ್ಷ ಜಮೀನುಸಾಗುವಳಿಗೆ ಬರಬಹುದೆಂದು ನಿರೀಕ್ಷಿಸಲಾಗಿದೆ.

ಕಾವೇರಿ ಪ್ರದೇಶದ

ಕಾವೇರಿಯ ಪ್ರದೇಶದಲ್ಲಿ ಪರಿಸ್ಥಿತಿಯು ಬಹಳಮಟ್ಟಿಗೆ ಸುಧಾರಿಸಿದೆ. ಕೆರೆ ಮತ್ತು ನದಿಗಳಿಂದ ತೆಗೆದಿರುವ ಹಳೇ ಕಾಲುವೆಗಳಿಂದಲೂ, ಕೆಲವು ಅಣೆಕಟ್ಟುಗಳಿಂದಲೂ ಸುಮಾರು ಒಂದುಲಕ್ಷದ ಹದಿನೈದುಸಾವಿರ ಎಕರೆಗಳಷ್ಟು ಭೂಮಿಯು ಸಾಗುವಳಿಯಾಗುತ್ತಲಿದೆ. ಜೊತೆಗೆ ಕೃಷ್ಣರಾಜಸಾಗರದ ಜಲಾಶಯದಿಂದ ಒಂದುಲಕ್ಷದ ೧೦ ಸಾವಿರ ಎಕರೆ ಭೂಮಿಗೆ ನೀರನ್ನೊದಗಿಸಲಾಗುತ್ತಿದೆ. ಕಪಿನಿ ನದಿಯ ಉಪನದಿಯಾದ ನುಗು ಅಥವಾ ಬೃಗು ನದಿಗೆ ಸುಮಾರು ಎರಡುಕೋಟಿ ನಲವತ್ತ ಮೂರು ಲಕ್ಷ ರೂಪಾಯಿಗಳ ಖರ್ಚಿನಲ್ಲಿ ಅಣೆಕಟ್ಟನ್ನು ಕಟ್ಟುವ ಕೆಲಸವು ಬಹಳ ತ್ವರಿತವಾಗಿ ನಡೆಯುತ್ತಲಿದೆ ಬರುವ ಜೂನ್ ಜುಲೈರಿನೊಳಗಾಗಿ ಅಣೆಕಟ್ಟಿನ ಕೆಲಸವು ಪೂರೈಸಲಿದೆ. ೧೯೫೫ನೇ ಇಸವಿ ಅಖೈರೊಳಗಾಗಿ ಈ ಜಲಾಶಯದ ಕಾಲುವೆಯ ಕೆಲಸವು ಕೂಡ ಪೂರ್ತಿಯಾಗಲಿದೆ. ಈ ಜಲಾಶಯದಿಂದ ಸುಮಾರು ಇಪ್ಪತ್ತುಸಾವಿರ ಎಕರೆಗೆ ನೀರು ಒದಗಿಸಬಹುದೆಂದು ನಿರೀಕ್ಷಿಸಲಾಗಿದೆ.

೧೯೫೭—೫೮ರಲ್ಲಿ ಪ್ರಾರಂಭವಾಗಿ ಈ ವರ್ಷ ಪೂರ್ತಿಯಾಗಿರುವ ಮೈಸೂರುದೇಶದಲ್ಲೇ ಅತಿ ದೊಡ್ಡ ಪಿಕ್ ಅಪ್ ಎನಿಸಿಕೊಂಡಿರುವ "ಹೆಬ್ಬಳ್ಳಪಿಕ್ ಅಪ್" ನಾಲೆಯಿಂದ ಈ ವರ್ಷ ಆರು ಸಾವಿರ ಎಕರೆಗೆ ನೀರನ್ನೊದಗಿಸಲಾಗಿದೆ.

ಸಣ್ಣ ಕೆರೆಗಳ ಜೀರ್ಣೋದ್ಧಾರದ ಕಾರ್ಯವೂಕೂಡ ಬಹಳಮಟ್ಟಿಗೆ ನಡೆದಿದೆ. ಈ ಎಲ್ಲಾ ಕಾರ್ಯಗಳ ಪರಿಣಾಮವಾಗಿ ಈ ವರ್ಷ ಸುಮಾರು ೧೫ ಸಾವಿರ ಎಕರೆ ಜಮೀನಿಗೆ ಹೊಸದಾಗಿ ನೀರನ್ನೊದಗಿಸಲಾಗಿದೆ. ಜೊತೆಗೆ ಸುಮಾರು ೩೬ ಸಾವಿರ ಎಕರೆಗಳಷ್ಟು ಹಳೆ ಅಚ್ಚುಕಟ್ಟಿಗೆ ಸಮರ್ಪಕವಾಗಿ ನೀರನ್ನೊದಗಿಸುವ ಏರ್ಪಾಡು ಮಾಡಲಾಯಿತು.

ನಮ್ಮ ಸಂಸ್ಥಾನದಲ್ಲಿ ೨೬೬೮ ದೊಡ್ಡ ಕೆರೆಗಳೂ ೨೨,೨೨೮ ಸಣ್ಣ ಕೆರೆಗಳೂಇವೆ. ಇವುಗಳಲ್ಲಿ ೬೦೦ ದೊಡ್ಡ ಕೆರೆಗಳೂ ಮತ್ತು ೧೬ ಸಾವಿರ ಸಣ್ಣ ಕೆರೆಗಳೂ ಸರಿಯಾದ ಸ್ಥಿತಿಯಲ್ಲಿಲ್ಲ. ಈ ಕೆರೆಗಳನ್ನು ದುರಸ್ತು ಮಾಡಬೇಕಾದರೆ ಸುಮಾರು ೧೨ ಕೋಟಿ ರೂಪಾಯಿಗಳು ಬೇಕಾಗಬಹುದು. ಅಲ್ಲದೆ ಇದುವರೆಗೆ ದುರಸ್ತಾಗಿರುವ ಕೆರೆಗಳನ್ನು ಸರಿಯಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಕಕ್ಕ ಬಗ್ಗೆಯೂ, ನೀರಿನ ಹಂಚಿಕೆಯ ವ್ಯವಸ್ಥೆಯನ್ನು ಸರಿಪಡಿಸತಕ್ಕ ಬಗ್ಗೆಯೂ ಸುಮಾರು ೮ ಕೋಟಿ ರೂಪಾಯಿಗಳು ಬೇಕಾಗಬಹುದು.

ನುಗು ಜಲಾಶಯ

ನುಗು ಜಲಾಶಯದಿಂದ ೨೦ ಸಾವಿರ ಎಕರೆಗಳಷ್ಟು ಜಮೀನನ್ನು ಸಾಗುವಳಿ ಮಾಡಬಹುದಾಗಿದೆ ಅಲ್ಲದೆ ದಂಡಾವತಿ ಅಂಬಿಗೊಳ, ಜಂಬದಳ್ಳ, ಶಾರಕ, ಎಣ್ಣೆಹೊಳೆ, ಮುಂತಾದ ಹೊಸ ಜಲಾಶಯಗಳನ್ನು ನಿರ್ಮಿಸಿದರೆ ಸುಮಾರು ೩೦ಸಾವಿರ ಎಕರೆಗಳಷ್ಟು ಜಮೀನು ಸಾಗುವಳಿಗೆ ಬರಬಹುದಾಗಿದೆ. ಮೇಲ್ಕಂಡ ಹಳೆಯ ಜಲಾಶಯಗಳನ್ನು ಉತ್ತಮಪಡಿಸುವಬಗ್ಗೆಯೂ ಸುಮಾರು ೭೦ ಕೋಟಿ ರೂಪಾಯಿಗಳು ಬೇಕಾಗಬಹುದು—ಎಂದು ರೆವಿನ್ಯೂಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ಅಖಿಲ ಭಾರತ ಮೈಸೂರು ರೇಡಿಯೋ ಕೇಂದ್ರದಿಂದ ಮಾಡಿದಭಾಷಣದಲ್ಲಿ ತಿಳಿಸಿದ್ದಾರೆ.

ಪೊಲೀಸ್ ಸಬ್‌ಇನ್ಸ್‌ಪೆಕ್ಟರಿಗೆ ಇರಿತ

ಬೆಂಗಳೂರು ಸಿವಿಲ್ ಸ್ಟೇಷನ್ನಿನ ಸಬ್ ಇನ್ಸ್‌ಪೆಕ್ಟರ್ ಶ್ರೀ ಹೆಚ್. ನಾರಾಯಣರೆಡ್ಡಿಯವರನ್ನು ಮೊನ್ನೆ ರಾತ್ರಿ ಸಿಟಿ ಮಾರ್ಕೆಟ್ ಬಳಿ ದೊರೆಸ್ವಾಮಿ ಎಂಬುವನು ಇರಿದು ತೀವ್ರ ಗಾಯಗೊಳಿಸಿದನೆಂದೂ, ಈಗ ಇನ್ಸ್‌ಪೆಕ್ಟರು ಆಸ್ಪತ್ರೆಯಲ್ಲಿ ಉತ್ತಮಗೊಳ್ಳುತ್ತಿರುವರೆಂದೂ ವರದಿಯಾಗಿದೆ. ಯಾವುದೊ ಕಳುವು ಮಾಲು ಪತ್ತೆಸಂಬಂಧದಲ್ಲಿ ಇನ್ಸ್‌ಪೆಕ್ಟರು ಮಾರ್ಕೆಟ್ ಬಳಿ ತನಿಖೆ ನಡೆಸುತ್ತಿದಾಗ್ಗೆ ದೊರೆಸ್ವಾಮಿ ಎಂಬುವನು ಬಂದು ಚೂರಿಯಿಂದ ಅವರನ್ನು ಇರಿದನೆಂದೂ, ಕೂಡಲೇ ಆತನನ್ನು ಬಂದಿಸಲಾಯಿತೆಂದೂ ಹೇಳಲಾಗಿದೆ.

ಕೈಮಗ್ಗದವರಿಗೆ ಸಹಾಯ

ಕೈಮಗ್ಗ ನೇಯ್ಗೆಯವರ ಸಹಾಯಕ್ಕೆ ಮದರಾಸಿಗೆ ಕೇಂದ್ರಸರ್ಕಾರವು ೭೫ ಲಕ್ಷ ರೂ. ಗಳನ್ನು ಸದ್ಯದಲ್ಲೇ ಕೊಡಲಿದೆಯೆಂದೂ, ಈ ಹಣವನ್ನು ಕೈಮಗ್ಗದ ಸಹಕಾರ ಸಂಘಗಳ ಮೂಲಕ ಕೈಮಗ್ಗದವರಿಗೆ ಕೊಡಲಾಗುವುದೆಂದೂ ಮದ್ರಾಸಿನ ಕೈಗಾರಿಕಾಸಚಿವರು ತಿಳಿಸಿದ್ದಾರೆ.

ಈಗಿರುವ ಕೈಮಗ್ಗದ ಸಹಕಾರ ಸಂಘಗಳಿಗೆ ಎರಡೂವರೆಲಕ್ಷ ರೂ. ಮತ್ತು ಹೊಸ ಸಹಕಾರ ಸಂಘಗಳಿಗೆ ಏಳೂವರೆಲಕ್ಷ ರೂ. ಗಳನ್ನು ಸರ್ಕಾರ ವೆಚ್ಚಮಾಡುವುದೆಂದೂ ಕೈಮಗ್ಗದ ಬಟ್ಟೆಗಳ ರಫ್ತನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುವುದೆಂದೂ ಅವರು ತಿಳಿಸಿದ್ದಾರೆ.

ವಿದ್ಯುಚ್ಛಕ್ತಿ ಸರಬರಾಜು

ಮೈಸೂರು ಸಂಸ್ಥಾನದಲ್ಲಿ ಕಳೆದತಿಂಗಳು ಒಟ್ಟು ೮೯೨ ವಿದ್ಯುತ್ ದೀಪಗಳು, ೭೭ ಹೀಟಿಂಗ್, ೬೫ ಪವರ್, ೭೧ ನೀರಾವರಿ, ೧೭೮ ರಸ್ತೆದೀಪಗಳು ಮತ್ತು ೩ ಹಳ್ಳಿಗಳಿಗೆ ದೀಪ ಕೊಡಲಾಯಿತೆಂದು ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ.

ಅದರ ಪೈಕಿ, ಮೈಸೂರು ಜಿಲ್ಲೆಯಲ್ಲಿ ೨ ಮತ್ತು ಬೆಂಗಳೂರು ಜಿಲ್ಲೆಯಲ್ಲಿ ೧ ಹಳ್ಳಿಗಳಿಗೆ ವಿದ್ಯುತ್ ದೀಪಗಳನ್ನು ಕೊಡಲಾಯಿತು.

ರಸ್ತೆಯಮೇಲೆ ಮೀನುಗಳ ಬೇಟೆ

ಬೆಂಗಳೂರಿನಲ್ಲಿ ಮೊನ್ನೆ ಮಧ್ಯಾಹ್ನ ವಿಪರೀತ ಮಳೆ ಆದ್ದರಿಂದ ಲಾಲ್‌ಬಾಗಿನ ಕೆರೆಯಲ್ಲಿ ನೀರು ಉಕ್ಕಿ ಪಕ್ಕದ ರಸ್ತೆಯಮೇಲೆ ನೀರುಹರಿಯತೊಡಗಿ, ಸಂಚಾರಕ್ಕೆಅಡಚಣೆ ಉಂಟಾಯಿತೆಂದೂ, ಆದರೆ ಸಂಜೆಯಿಂದ ರಾತ್ರಿಯವರೆಗೂ ಟಾರ್ ರಸ್ತೆಯಮೇಲೆ ಕೊಚ್ಚಿಬಂದ ಮೀನುಗಳ ಶಿಕಾರಿ ನಡೆಯಿತೆಂದೂ ಹೇಳಲಾಗಿದೆ.

ಗೂಡ್ಸ್ ರೈಲಿಗೆ ಅಪಘಾತ

ಬೆಂಗಳೂರು—ಅರಸೀಕೆರೆ ನಿಟ್ಟೂರು ಮತ್ತು ಗುಬ್ಬಿ ರೈಲ್ವೆ ನಿಲ್ದಾಣಗಳ ನಡುವೆ ಮೊನ್ನೆ ಬೆಳಗ್ಗೆ ಗುಡ್ಸ್ ರೈಲಿನ ೨೧ ವ್ಯಾಗನ್ನುಗಳು ಕಂಬಿ ತಪ್ಪಿ ಉರುಳಿದವೆಂದೂ, ಆದರೆ ಯಾವ ಸಾವು ನೋವುಗಳೂ ಸಂಭವಿಸಲಿಲ್ಲವೆಂದೂ ವರದಿಯಾಗಿದೆ. ರೈಲ್ವೆ ಮಾರ್ಗಕ್ಕೆ ಸ್ವಲ್ಪ ಜಖಂ ಆಯಿತು. ೨೪ ಘಂಟೆಗಳ ನಂತರ ಪುನಃ ರೈಲು ಓಡಾಟ ಪ್ರಾರಂಭವಾಯಿತು.

● ಭಾರತದ ಪ್ರವಾಹದಲ್ಲಿ ನೊಂದವರ ಪರಿಹಾರಕ್ಕಾಗಿ ಪ್ರಧಾನಿ ನೆಹರೂರವರ ನಿಧಿಗೆ ರಷ್ಯದ ರೆಡ್ ಕ್ರಾಸ್ ಸಂಸ್ಥೆಯವರು ೩ ಲಕ್ಷ ರೂ.ಗಳನ್ನು ಕೊಟ್ಟಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೯—೧೦—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೮—೮	೨೦—೪
ಎಳ್ಳು	೬೯—೨	೮೦—೧೦
ಹರಳು	೩೮—	—
ಹುರಳಿ	೩೫—೧೦	೩೭—೧೨
ಹೆಸರು	೩೬—೪	೪೦—೪
ಅಲಸಂದೆ	೪೮—೨	೬೨—೨
ಹುಣಸೇಹಣ್ಣು	೬—	೯—೧೩
ಮೆಣಸಿನಕಾಯಿ	೨೦—೧೦	೩೫—೪
ಸೀಗೆಕಾಯಿ	—	—
ತೆಂಗಿನಕಾಯಿ	—	—
ಉದ್ದು	—	—

ಬಟ್ಟೆ ಗಂಟು ಸಿಕ್ಕಿದೆ

ರಾಜಧಾನಿಯ ವಾಣೀವಿಲಾಸ ಮೊಹಲ್ಲಾದಲ್ಲಿರುವ ಅಖಿಲಭಾರತ ರೇಡಿಯೋ ಕೇಂದ್ರದಬಳಿ ೧೭ನೇ ತಾ॥ ಮಧ್ಯಾಹ್ನ 4½ ಘಂಟೆ ಸಮಯದಲ್ಲಿ ಯಾರೋ ಒಂದು ಒಗೆದ ಬಟ್ಟೆ ಗಂಟೊಂದನ್ನು ಕೆಡವಿ ಹೋಗಿದ್ದುದನ್ನು ರೇಡಿಯೋ ಕೇಂದ್ರದವರು ಕಂಡು ಅದನ್ನು "ಸಮಾಚಾರ" ಪತ್ರಿಕಾ ಕಛೇರಿಗೆ ತಲುಪಿಸಿದ್ದಾರೆ. ಸಂಬಂಧಪಟ್ಟವರು ತಕ್ಕ ರುಜುವಾತು ಮತ್ತು ಈ ಪ್ರಕಟಣೆಯ ಜಾಹಿರಾತು ಖರ್ಚನ್ನು ಕೊಟ್ಟು ಮಾಲನ್ನು ಪಡೆಯಬಹುದು.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ
ಥಿಯೇಟ್ರಿಕಲ್ ಕಂಪೆನಿ (ರಿ)
30--10--53ನೇ ರಾತ್ರಿ 10 ಗಂಟೆಗೆ
ಶಿವರಾಂಪೇಟೆಯಲ್ಲಿರುವ ರತ್ನಾವಳಿ ಥಿಯೇಟರಿನಲ್ಲಿ
ಚಲನಚಿತ್ರದಲ್ಲಿ ಖ್ಯಾತಿ ಪಡೆದ ನಾಟಕರತ್ನ ಜಿ. ಹೆಚ್. ವೀರಣ್ಣ, ಜಯಮ್ಮ ಮತ್ತು ಲಕ್ಷಮ್ಮ ನಟಿಸಿರುವ
ಅಡ್ಡದಾರಿ
ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೨೯

೩೧-೧೦-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕೋತಿ ಕಾಟದಿಂದ ನಗರದ ಶಾಲೆ ಬಂದ್

ಮೈಸೂರು ೩೧

ರಾಜಧಾನಿಯ ಚಾಮುಂಡಿ ಬಡಾವಣೆಯಲ್ಲಿರುವ ಸೆಂಟ್ ಮೇರಿ ಕಾನ್‌ವೆಂಟ್ ಹೈಸ್ಕೂಲಿನ ಬಳಿ ಈಗ ಒಂದೆರಡು ದಿನಗಳಿಂದ ಭಾರಿ ಕೋತಿಯೊಂದು ಗಲಾಟೆ ಮಾಡುತ್ತಿದ್ದು ಅಲ್ಲಿನ ಶಾಲಾ ಬಾಲಕೀಯರೆಲ್ಲರಿಗೂ ಗಾಭರಿ ಮಾಡುತ್ತಿದೆಯೆಂದೂ, ನಿನ್ನೆದಿನ ಪುನಃ ಆ ಕೋತಿಯು ಶಾಲೆಗೆ ನುಗ್ಗಿ ಮಕ್ಕಳಮೇಲೆ ಬೀಳುವುದಕ್ಕೆ ಉಪಕ್ರಮಿಸಲು, ಶಾಲೆಯನ್ನೇ ಮುಚ್ಚಬೇಕಾಯಿತೆಂದೂ ಅವರ ವ್ಯವಸ್ಥಾಪಕರು ತಿಳಿಸಿರುತ್ತಾರೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕಾರ್ಯಕ್ರಮ ತೆಗೆದುಕೊಂಡು ಕೋತಿಗಳ ಹಾವಳಿಯನ್ನು ತಪ್ಪಿಸುವರೆಂದು ನಂಬಲಾಗಿದೆ.

ದಕ್ಷಿಣ ಆಫ್ರಿಕದ ವರ್ಣನೀತಿ ಖಂಡನೆ

ಭಾರತದಲ್ಲಿ ಈಗ ಪ್ರವಾಸ ಮಾಡುತ್ತಿರುವ ದಕ್ಷಿಣ ಆಫ್ರಿಕಾದ ಡರ್ಬಾನಿನ 'ಲೀಡರ್' ಪತ್ರಿಕೆಯ ವಿಶೇಷ ಬಾತ್ಮೀದಾರರಾದ ಶ್ರೀ ಪಿ. ಬಿ. ಸಿಂಗ್‌ರವರನ್ನು ನಗರದ ಕಾರ್ಯನಿರತ ಪತ್ರಿಕೋದ್ಯೋಗಿಗಳು ನಿನ್ನೆದಿನ ಸತ್ಕರಿಸಿದರು.

ಈ ಸಂಬಂಧದಲ್ಲಿ ಶ್ರೀ ಸಿಂಗ್‌ರವರು ದಕ್ಷಿಣ ಆಫ್ರಿಕಾದಲ್ಲಿ ಸರ್ಕಾರದವರು ಅನುಸರಿಸುತ್ತಿರುವ ವರ್ಣಬೇಧ ನೀತಿಯನ್ನು ಖಂಡಿಸಿ ಇದರಿಂದ ಅಲ್ಲಿ ಹುಟ್ಟಿ ಬೆಳೆದು ದೇಶದ ಪ್ರಗತಿಗೆ ಕಾರಣರಾಗಿರುವ ಭಾರತೀಯರ ಮತ್ತು ಇತರ ಕಪ್ಪು ಜನಾಂಗದವರ ಕಷ್ಟನಷ್ಟಗಳನ್ನು ನಿವಾರಿಸಿದರೂ ಅಲ್ಲಿ ಭಾರತೀಯರು ಜೀವಿಸುವುದೇ ಕಷ್ಟವಾಗಿದೆಯೆಂದೂ, ಸರ್ಕಾರದವರ ಗ್ರೂಪ್ ಏರಿಯಾ ಕಾನೂನು ಇಪ್ಪರಲ್ಲಿಯೇ ಜಾರಿಗೆ ಬರಲಿದೆಯೆಂದೂ, ಅದರಿಂದ ಒಂದೂವರೆ ಲಕ್ಷಮಂದಿ ಭಾರತೀಯರ ಉದ್ಯಮಕ್ಕೆ ವಿಪತ್ತು ಉಂಟಾಗುವುದೆಂದೂ ಅವರು ಹೇಳಿದರು.

ಈ ವರ್ಣಬೇಧ ನೀತಿಯನ್ನು ಖಂಡಿಸಿ ಭಾರತ ಸರ್ಕಾರದವರ ಸಹಾನುಭೂತಿ ಮತ್ತು ಸಹಾಯಕ್ಕೆ ಅವರ ವಂದನೆ ಅರ್ಪಿಸಿ, ಈ ಚಳುವಳಿಗೆ ಭಾರತದ ಜನರು ಬೆಂಬಲ ನೀಡಬೇಕೆಂದು ಮನವಿ ಮಾಡಿಕೊಂಡರು.

● ಮುಂದಿನತಿಂಗಳು ೨ ನೇ ತಾ॥ ಸೋಮವಾರ ಸಂಜೆ ೬ ಘಂಟೆಗೆ ಮಾದರೀಶಾಲೆಯಲ್ಲಿ ಮೈಸೂರು ನಗರ ಮತ್ತು ತಾಲ್ಲೂಕಿನಲ್ಲಿ ನಡೆಯಲಿರುವ ಭೂದಾನಯಜ್ಞ ಪ್ರವಾಸದಲ್ಲಿ ಭಾಗವಹಿಸಲು ಇಚ್ಛೆಯುಳ್ಳ ಕಾರ್ಯಕರ್ತರ ಮತ್ತು ಇತರ ಹಿತೈಷಿಗಳ ಸಭೆಯನ್ನು ಏರ್ಪಡಿಸಲಾಗಿದೆ.

ನಗರದ ಖಜಾನೆಯಲ್ಲಿ ಬದಲಾವಣೆ

ಮೈಸೂರು, ೩೧

ಮೈಸೂರು ನಗರದಲ್ಲಿರುವ ಖಜಾನೆಗಳ ವ್ಯವಹಾರವು ನಾಳೆಯಿಂದ ರಿಸರ್ವ್ ಬ್ಯಾಂಕ್ ಪ್ರತಿನಿಧಿಯಾಗಿರುವ ಮೈಸೂರು ಬ್ಯಾಂಕಿನ ಹತೋಟಿಗೆ ಒಳಪಡುವುದರಿಂದ ಈ ಕೆಳಗೆ ಕಂಡ ಬದಲಾವಣೆಗಳನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಇನ್ನುಮುಂದೆ ತಾಲ್ಲೂಕು ಖಜಾನೆಯಲ್ಲಿ ಪೆನ್ಷನ್ ಕೊಡುವುದಿಲ್ಲ. ಪೆನ್ಷನ್‌ದಾರರಿಗೆ ಜಿಲ್ಲಾ ಖಜಾನೆಯಲ್ಲಿ ಮಾತ್ರ ಪಾವತಿಮಾಡಲಾಗುತ್ತದೆ. ಪೆನ್ಷನನ್ನು ತಿಂಗಳ ಕೊನೆಯದಿನ ಮತ್ತು ಮೊದಲನೆಯ ಎರಡು ದಿನಗಳಲ್ಲಿ ಕೊಡಲು ಏರ್ಪಾಡು ಮಾಡಲಾಗಿದೆ. ಉಳಿದ ದಿನಗಳಲ್ಲಿ ಮೈಸೂರು ಬ್ಯಾಂಕ್‌ನಲ್ಲಿ ಪೆನ್ಷನ್ ಪಡೆಯಬಹುದು. ಆದ್ದರಿಂದ ಪೆನಷನ್‌ದಾರರು ತಮ್ಮ ಪೆನ್ಷನ್ ಫಾರಂಗಳನ್ನು ಎರಡುದಿನ ಮುಂಚಿತವಾಗಿ ಜಿಲ್ಲಾ ಟ್ರೆಜರಿಗೆ ಕಳುಹಿಸಬೇಕು.

ಮೈಸೂರು ಸರ್ಕಾರದ ಇಲಾಖೆಗಳ ಮತ್ತು ಅಖಿಲ ಭಾರತ ರೇಡಿಯೋ ಚೆಕ್ಕುಗಳಿಗೆ ಮೈಸೂರು ಬ್ಯಾಂಕಿನಲ್ಲಿ ನೇರವಾಗಿ ಹಣ ಕೊಡಲಾಗುತ್ತದೆ.

ಮಾರಾಟತೆರಿಗೆ, ಆದಾಯತೆರಿಗೆ, ಅಬ್ಕಾರಿ ತೆರಿಗೆ, ಇನ್ಸೂರೆನ್ಸ್, ಕೋರ್ಟು ಡಿಪಾಜಿಟ್ ಅವುಗಳ ಹಣವನ್ನು ನೇರವಾಗಿ ಬ್ಯಾಂಕಿನಲ್ಲಿ ಕಟ್ಟಬೇಕು.

ಸೇವಿಂಗ್ಸ್ ಬ್ಯಾಂಕ್ ಕ್ಯಾಷ್ ವ್ಯವಹಾರವನ್ನು ಮಾತ್ರ ಜಿಲ್ಲಾ ಟ್ರೆಜರಿಯಲ್ಲಿ ನಡೆಸಲಾಗುವುದು.

ಭೂಕಂದಾಯ, ಎಕ್ಸೈಸ್, ರೆವಿನ್ಯೂ ಡಿಪಾಜಿಟ್, ಗ್ರಾಮಪಂಚಾಯಿತಿ ಇವುಗಳ ಹಣಕಾಸಿನ ವ್ಯವಹಾರಮಾತ್ರ ತಾಲ್ಲೂಕು ಟ್ರೆಜರಿಯಲ್ಲೇ ಮುಂದುವರಿಯುವುದು.

ಸಿಂಹಳದ ಮಾಜಿ ಪ್ರಧಾನಿ

ಮೈಸೂರು ೩೧

ಸಿಲೋನಿನ ಮಾಜಿ ಪ್ರಧಾನಿ ಶ್ರೀ ಡಡ್ಲಿ ಸೇನಾನಾಯಕೆರವರು ನಿನ್ನೆ ಸಂಜೆ ರಾಜಧಾನಿಗೆ ಆಗಮಿಸಿದರು ಅವರು ಈದಿನ ಕೃಷ್ಣರಾಜಸಾಗರ ಮತ್ತು ಇತರ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಇತ್ತು ನಾಳೆ ಉದಕಮಂಡಲಕ್ಕೆ ಪ್ರಯಾಣ ಬೆಳೆಸುತ್ತಾರೆ.

○ ಮೈಸೂರು ಮಹಾರಾಜಾ ಕಾಲೇಜಿನ ಸೋಷಿಯಲ್ ಸೈನ್ಸ್ ಸೆಮಿನಾರಿನ ಪ್ರಾರಂಭ ಭಾಷಣವನ್ನು ನವಂಬರ್ ೨ ನೇ ತಾ॥ ಸಂಜೆ ೫-೩೦ ಗಂಟೆಗೆ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಡಾ॥ ಕೆ. ಬಿ. ವೈ. ತೋಟಪ್ಪನವರು ಮಾಡುವರು.

ಗೋಲಿಬಾರಿನಲ್ಲಿ ನೊಂದವರಿಗೆ ಸಹಾನುಭೂತಿ

ಪುರಸಭೆಯಲ್ಲಿ ನಿರ್ಣಯ

ಮೈಸೂರು ೩೧

ನಗರದ ಪುರಸಭೆಯ ಅಧಿವೇಶನವು ನಿನ್ನೆ ಸಂಜೆ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕಳೆದ ೮ನೇ ತಾರೀಖು ಅರಮನೆಯ ಹತ್ತಿರ ಗೋಲಿಬಾರು ನಡೆದ ಪ್ರಸಂಗದಲ್ಲಿ ಮೃತರಾದ ಮತ್ತು ನೊಂದವರಿಗೆ ಸಹಾನುಭೂತಿ ವ್ಯಕ್ತಪಡಿಸುವ ನಿರ್ಣಯವನ್ನು ಮಾಡಲಾಯಿತು. ಮೃತರಾದ ಸಂಸಾರದವರಿಗೆ ಪರಿಹಾರ ಕೊಡಲು ೧೫೦೦ ರೂ. ಗಳನ್ನು ಪುರಸಭೆಯವರು ಮಂಜೂರು ಮಾಡಬೇಕೆಂದು ಶ್ರೀ ಬಿ.ಜಿ. ದಾಸ್‌ರವರು ಸೂಚಿಸಿದರು. ಆದರೆ ಅದಕ್ಕೆ ಕೆಲವು ಕಾನೂನು ಅಡಚಣೆ ಇದೆಯೆಂದೂ, ಸರ್ಕಾರವು ಮಂಜೂರು ಮಾಡಬೇಕೆಂದೂ ಅಧ್ಯಕ್ಷರು ತಿಳಿಸಿದಮೇಲೆ ಅದನ್ನು ವಾಪಸು ತೆಗೆದುಕೊಳ್ಳಲಾಯಿತು.

ಕೃಷ್ಣರಾಜ ಮೊಹಲ್ಲಾದಲ್ಲಿರುವ ಕಾಶೀಪತಿಲಾಯ ಎಂಬ ಹೆಸರನ್ನು ಕಾಶೀಪತಿ ಅಗ್ರಹಾರ ಎಂದು ಬದಲಾಯಿಸಬೇಕೆಂದು ಶ್ರೀ ಚೌಡಯ್ಯನವರು ಸೂಚಿಸಿದ ನಿರ್ಣಯವು ಅಂಗೀಕೃತವಾಯಿತು.

ಆದಿಕರ್ನಾಟಕ ಪುರದಲ್ಲಿ ಒಳಚರಂಡಿ ವ್ಯವಸ್ಥೆಯನ್ನು ಕೂಡಲೇ ಏರ್ಪಡಿಸಬೇಕೆಂಬ ಶ್ರೀ ಜಿ. ಲಿಂಗಯ್ಯನವರ ನಿರ್ಣಯವನ್ನೂ ಅಂಗೀಕರಿಸಲಾಯಿತು.

ನಗರದಲ್ಲಿ ಪುರಸಭೆಯವರು ಒಂದು ಹಾಲಿನ ಪರೀಕ್ಷಾ ಕೇಂದ್ರವನ್ನು ಸ್ಥಾಪಿಸಬೇಕೆಂಬ ಶ್ರೀ ಎಂ.ಆರ್. ಶ್ರೀನಿವಾಸ ಅಯ್ಯಂಗಾರ್ಯರ ನಿರ್ಣಯವನ್ನು ವಾಪಸು ಮಾಡಲಾಯಿತು. ಈ ಯೋಜನೆ ಎಷ್ಟು ಹಣ ಖರ್ಚು ಮತ್ತು ಇತರ ವಿವರಗಳನ್ನು ಕೊಟ್ಟಿಲ್ಲವೆಂದು ಸದಸ್ಯರು ತಿಳಿಸಿದ ಮೇಲೆ ಅದನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು

ಮೈಸೂರು ನಗರ ಮತ್ತು ಸಂಸ್ಥಾನಕ್ಕೆ ಗೋಮಾಂಸ ಬರದಂತೆ ಸರ್ಕಾರ ನಿರ್ಬಂಧ ಹಾಕಬೇಕೆಂಬ ಶ್ರೀ ಬಿ.ಜಿ. ದಾಸ್ ನಿರ್ಣಯವು ಪುರಸಭೆಯ ಬೈಲಾಗಳಿಗೆ ವಿರುದ್ಧವಾಗಿದೆಯೆಂದೂ ಶ್ರೀ ಟಿ. ನರಸಿಂಹಯ್ಯಂಗಾರ್ಯರು ಕ್ರಿಯಾಲೋಪ ಎತ್ತಿದುವನ್ನು ಅಧ್ಯಕ್ಷರು ಎತ್ತಿ ಹಿಡಿದು, ನಿರ್ಣಯವನ್ನು ತಳ್ಳಿಹಾಕಿದರು.

ಪ್ರಾರಂಭದಲ್ಲಿ ಶ್ರೀ ಎ. ವೆಂಕಟೇಶಯ್ಯನವರು ಬೆಂಗಳೂರಿನ ವಿಶ್ವಕರ್ನಾಟಕ ಪತ್ರಿಕೆಯಲ್ಲಿ ಮೈಸೂರು ಪುರಸಭೆ ಚುನಾವಣೆಯು ಮುಂದುವರೆಯುವುದೆಂದು ಪ್ರಕಟವಾಗಿರುವ ವಿಚಾರವನ್ನು ಅಧ್ಯಕ್ಷರ ಗಮನಕ್ಕೆ ತಂದರು. ಆ ಸುದ್ದಿ ಸರಿಯಾದುದಲ್ಲವೆಂದೂ, ಪುರಸಭಾ ಚುನಾವಣೆ ಮುಂದುವರಿಯುವುದಿಲ್ಲವೆಂದೂ, ಅಧ್ಯಕ್ಷರು ತಿಳಿಸಿದರು.

ಭೂದಾನ ಯಜ್ಞ ಕಾಲ್ನಡಗೆಯ ಪ್ರವಾಸ

ಮೈಸೂರು ೩೧

ನವೆಂಬರ್ ೪ನೇ ತಾ॥ ನಿಂದ ಶನಿವಾರದವರೆಗೆ ಮೈಸೂರು ನಗರ ಮತ್ತು ತಾಲ್ಲೂಕಿನಲ್ಲಿಯೂ, ೧೫ನೇ ತಾ॥ ಭಾನುವಾರದಿಂದ ೨೫ನೇ ತಾ॥ ಬುಧವಾರದವರೆಗೆ ನಂಜನಗೂಡು ತಾಲ್ಲೂಕಿನಲ್ಲಿಯೂ, ಅನಂತರ ೨೭ನೇ ತಾ॥ ಶುಕ್ರವಾರದಿಂದ ೨ ವಾರಪರ್ಯಂತ ನರಸೀಪುರ ತಾಲ್ಲೂಕಿನಲ್ಲಿಯೂ ಭೂದಾನ ಯಜ್ಞ ಕಾಲ್ನಡಗೆಯ ಪ್ರವಾಸವನ್ನು ಏರ್ಪಡಿಸುತ್ತೆ. ಪ್ರವಾಸದಲ್ಲಿ ಭೂದಾನ ಕಾರ್ಯಕರ್ತರ ಇನ್ನಿತರ ಹಿತೈಷಿಗಳ ಅನೇಕ ತಂಡಗಳು ಪಾದಯಾತ್ರೆ ಕೈಗೊಂಡು ಭೂದಾನ ಪ್ರಚಾರ ಮತ್ತು ಶೇಖರಣೆಗೆ ಹೊರಡಲಿವೆ. ಪ್ರವಾಸದಲ್ಲಿಭಾಗವಹಿಸಲಪೇಕ್ಷಿಸುವ, ಹಾಗೂ ಇನ್ನಿತರ ರೀತಿಯಲ್ಲಿ ಸಹಕಾರ ನೀಡಲಿರುವ ಮಹನೀಯರೂ ಮತ್ತು ಸಂಸ್ಥೆಗಳೂ ದಯಮಾಡಿ ತಮ್ಮ ತಮ್ಮ ಹೆಸರು, ವಿಳಾಸ ಇತ್ಯಾದಿ ವಿವರಗಳನ್ನು ಮೈಸೂರು ದಿವಾನ್ಸ್‌ರಸ್ತೆಯಲ್ಲಿರುವ ಜಿಲ್ಲಾ ಭೂದಾನಯಜ್ಞ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ಪ್ರಾರ್ಥಿಸಲಾಗಿದೆ.

ಭೂಮಿಯಿಲ್ಲದ ರೈತರಿಗೆ ಭೂಮಿ ಕೊಡಿಸಿ ಅಹಿಂಸಾತ್ಮಕವಾಗಿ ದೇಶದ ಭೂಸಮಸ್ಯೆಯನ್ನು ಬಿಡಿಸಲು ಮಹಾತ್ಮಾ ಗಾಂಧಿಯವರ ಪಟ್ಟ ಶಿಷ್ಯ ಸಂತ ವಿನೋಬಾರವರ ನೇತೃತ್ವದಲ್ಲಿ ದೇಶಾದ್ಯಂತ ನಡೆಯುತ್ತಾ ಈಗಾಗಲೇ ೨೨ಲಕ್ಷ ಎಕರೆಗೆ ಮೇಲ್ಪಟ್ಟು ಭೂದಾನ ಸಂಗ್ರಹಿಸಿರುವ ಈ ಮಹಾ ಆಂದೋಳನದಲ್ಲಿ ಸರ್ವರೂ ಭಾಗವಹಿಸಬೇಕೆಂದು ಜಿಲ್ಲಾ ವ್ಯವಸ್ಥಾಪಕರಾದ ಶ್ರೀ ಎಸ್. ಎ. ಮಂಜುನಾಥರವರು ಮನವಿಮಾಡಿದ್ದಾರೆ.

ಹುಲಿಗಳ ಕಾಟ

ಚಿತ್ರದುರ್ಗದ ಹುಲ್ಲೂರು ಗುಡ್ಡಗಳಲ್ಲಿ ಹುಲಿಗಳ ಕಾಟ ವಿಪರೀತವಾಗಿ ಜನ ಮತ್ತು ಜಾನುವಾರುಗಳನ್ನು ತಿಂದುಹಾಕುತ್ತಿವೆಯೆಂದೂ, ಮೊನ್ನೆಯದಿನ ಯುವಕನೊಬ್ಬನ ಆಹುತಿಯಾಯಿತೆಂದೂ ವರದಿಯಾಗಿದೆ.

ನಗರದಲ್ಲಿ ಇತ್ತೀಚೆಗೆ ಮಳೆ ವಿಪರೀತವಾಗಿ ಬರುತ್ತಿದ್ದು, ಅನೇಕ ಪ್ರದೇಶಗಳಲ್ಲಿ ರಸ್ತೆ ಅವ್ಯವಸ್ಥೆ ಆಗಿವೆ. ಮನೆ ಗೋಡೆಗಳು ಬೀಳುತ್ತಿವೆ. ನೀರುನಿಂತು ಕೊಚ್ಚೆ ಆಗಿ ರೋಗ ಉಪದ್ರವಗಳು ಹರಡಲಿದೆ. ನಗರದ ಆರೋಗ್ಯ ರಕ್ಷಿಸಲು ಕೂಡಲೇ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕು—ಎಂದು ಶ್ರೀಗಳಾದ ಮುದ್ದಯ್ಯ, ಮೀರ್‌ನೂರ್ ಹುಸೇನ್, ಶ್ರೀನಿವಾಸ ಅಯ್ಯಂಗಾರ್ ಮುಂತಾದವರು ಒತ್ತಾಯ ಮಾಡಿದರು. ಸೂಕ್ತ ವ್ಯವಸ್ಥೆ ಮಾಡುವುದಾಗಿ ಅಧ್ಯಕ್ಷರು ಭರವಸೆ ಕೊಟ್ಟರು.

ಲಕ್ನೋದಲ್ಲಿ ವಿದ್ಯಾರ್ಥಿಗಳ ಬಂಧನ

ಆಸ್ಪತ್ರೆಗೆ ಉಪವಾಸ ಸತ್ಯಾಗ್ರಹಿಗಳ ರವಾನೆ

ವಿಶ್ವವಿದ್ಯಾನಿಲಯ ಸಂಘಸ್ಥಾಪನೆ ವಿಷಯದಲ್ಲಿ ಲಕ್ನೋದಲ್ಲಿ ನಡೆಯುತ್ತಿರುವ ವಿದ್ಯಾರ್ಥಿಗಳ ಚಳುವಳಿಯು ನಿನ್ನೆ ಸ್ವಲ್ಪ ಉಗ್ರರೂಪವನ್ನು ತಾಳಿತು. ಉಪವಾಸ ಸತ್ಯಾಗ್ರಹವನ್ನು ನಡೆಸುತ್ತಲಿದ್ದವರನ್ನು ಪೊಲೀಸಿನವರು ಆಸ್ಪತ್ರೆಗೆ ಸಾಗಿಸಿದರು. ವಿದ್ಯಾರ್ಥಿಗಳು ಪೊಲೀಸರ ಮೇಲೆ ಧಾಳಿ ನಡೆಸಲು ಯತ್ನಿಸಿದರಿಂದ ೧೦೦ ಕ್ಕಿಂತ ಹೆಚ್ಚು ಜನರನ್ನು ದಸ್ತಗಿರಿ ಮಾಡಿರುವುದಾಗಿ ತಿಳಿಯಬರುತ್ತದೆ.

ಕೆರೆ ಅನಾಹುತದಿಂದ ೪ ಲಕ್ಷ ರೂ. ನಷ್ಟ

ಚಿತ್ರದುರ್ಗ ಜಿಲ್ಲೆಯ ಜಗಳೂರಿನ ಬಳಿ ೨೮ ಲಕ್ಷ ರೂ. ಖರ್ಚಿನಲ್ಲಿ ಕಟ್ಟಲಾಗಿದ್ದ ಸಂಗೇನಹಳ್ಳಿಯ ನೂತನ ಕೆರೆಯ ಏರಿಯು ೪೨೦೦ ಅಡಿಗಳಷ್ಟು ವಿಪರೀತ ಮಳೆಯಿಂದ ಒಡೆದುಹೋಗಿ, ೫೦೦ ಎಕರೆ ಜಮೀನು ನೀರಿನಪಾಲಾಗಿದೆ. ಅದರ ಹತ್ತಿರ ಇಡಲಾಗಿದ್ದ ಅನೇಕ ಇಂಜನೀಯರಿಂಗ್ ಇಲಾಖೆ ಸಲಕರಣೆಗಳೂ ಕೊಚ್ಚಿಹೋಗಿವೆ. ಇದರಿಂದ ೪ ಲಕ್ಷ ರೂ. ನಷ್ಟವುಂಟಾಗಿದೆ.

ಭಿಕ್ಷುಕರ ಕಾಟ ತಪ್ಪಿಸಲು ಯತ್ನ

ಭಾರತದ ರೈಲ್ವೆಗಳಲ್ಲಿ ಭಿಕ್ಷುಕರ ಕಾಟವನ್ನು ನಿಲ್ಲಿಸಲು ರೈಲ್ವೆ ಅಧಿಕಾರಿಗಳು ಸರ್ವ ಪ್ರಯತ್ನ ಮಾಡಬೇಕೆಂದೂ, ಆದರೆ ಈ ಕಾರ್ಯದಲ್ಲಿ ಪೊಲೀಸರು ಉಗ್ರ ಕ್ರಮ ಕೈಗೊಳ್ಳಬೇಕೆಂದೂ ದೆಹಲಿಯಲ್ಲಿ ನಡೆದ ರೈಲ್ವೆ ಉಪಯೋಗಿಸುವವರ ಸಲಹಾಸಮಿತಿಯಲ್ಲಿ ನಿರ್ಣಯ ಮಾಡಲಾಗಿದೆ. ಈಬಗ್ಗೆ ಸಂಸ್ಥಾನಗಳು ಸೂಕ್ತ ಕಾನೂನನ್ನು ಜಾಂಗೆ ತರಬೇಕೆಂದೂ ಸಲಹೆಮಾಡಿದೆ.

ಟಿಕೆಟ್ ಇಲ್ಲದ ಪ್ರಯಾಣ ಮಾಡುವುದನ್ನು ನಿಲ್ಲಿಸಲು ಸಾರ್ವಜನಿಕರು ಅಧಿಕಾರಿಗಳೊಡನೆ ಸಹಕರಿಸಬೇಕೆಂದೂ ಮನವಿ ಮಾಡಲಾಯಿತು.

ಕಲ್ಕತ್ತಾದ ಪಾಕ್ ಕಛೇರಿ ಮೇಲೆ ಗುಂಡು

ಕಲ್ಕತ್ತಾದಲ್ಲಿರುವ ಪಾಕೀಸ್ತಾನದ ಡೆಪ್ಯುಟಿ ಹೈಕಮೀಷನರ ಕಛೇರಿಮೇಲೆ ಮೊನ್ನೆಯದಿನ ಬೆಳಿಗ್ಗೆ ಯಾರೋ ಪುಂಡರು ಗುಂಡುಹಾರಿಸಿದರೆಂದೂ, ಆದರೆ ಯಾರಿಗೂ ಗಾಯವಾಗಲಿಲ್ಲವೆಂದೂ ವರದಿಯಾಗಿದೆ.

ಕಛೇರಿ ಮುಂದೆ ಇದ್ದ ಕಾರೊಂದಕ್ಕೆ ಮಾತ್ರ ಗುಂಡು ತಗುಲಿತು. ಮತ್ತು ಕಟ್ಟಡದ ಅನೇಕ ಭಾಗಗಳಲ್ಲಿ ೧೦ ತೋಟಾಗಳು ಬಿದ್ದಿದ್ದವೆಂದೂ ಹೇಳಲಾಗಿದೆ. ಈ ಅಕೃತ್ಯ ನಡೆಸಿದವನನ್ನು ಪತ್ತೆಹಚ್ಚಲು ಪೊಲೀಸರು ತರದೂದು ನಡೆಸುತ್ತಿದಾರೆ

ಸ್ಥಾನಪಲ್ಲಟರ ಆಸ್ತಿ ಒಪ್ಪಂದ ಉಲ್ಲಂಘನೆ

೧೯೪೮ನೇ ಸಾಲಿನ ಪಾಕ್-ಭಾರತ ಸ್ಥಾನಪಲ್ಲಟರ ಆಸ್ತಿ ಒಪ್ಪಂದವನ್ನು ಯಾರು ಉಲ್ಲಂಘಿಸಿದರೆಂಬುದನ್ನು ಪರಿಶೀಲಿಸಲು ನಿಷ್ಪಕ್ಷಪಾತಿಗಳಿಂದ ವಿಚಾರಣೆ ನಡೆದು ಅದನ್ನು ಉಭಯ ರಾಷ್ಟ್ರಗಳು ಒಪ್ಪಿಕೊಳ್ಳಬೇಕೆಂಬ ಭಾರತ ಸರ್ಕಾರದ ಪುನರ್‌ವ್ಯವಸ್ಥೆ ಶಾಖಾ ಸಚಿವರ ಸಲಹೆಯನ್ನು ಕೆಲವು ಷರತ್ತುಗಳಮೇಲೆ ಪಾಕೀಸ್ಥಾನವು ಒಪ್ಪಿದೆ.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು

ಮುಂದಿನ ಡಿಸೆಂಬರ್ ತಿಂಗಳಿನಲ್ಲಿ ಕನ್ನಡ ಜಿಲ್ಲೆಯ ಕುಮಟದಲ್ಲಿ ನಡೆಯಲಿರುವ ೩೬ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಶ್ರೀ ವಿ. ಸೀತಾರಾಮಯ್ಯನವರನ್ನು ಚುನಾಯಿಸಲಾಗಿದೆ.

೧೯೫೩ ನೇ ನೊಬೆಲ್ ಬಹುಮಾನ

೧೯೫೩ ನೇ ಸಾಲಿನ ನೊಬೆಲ್ ಬಹುಮಾನವನ್ನು ಅಮೆರಿಕಾದ ಮಾಜಿ ಸೆಕ್ರೆಟರಿ ಆಫ್ ಸ್ಟೇಟ್ ಜಾರ್ಜ್ ಮಾರ್ಷಲ್‌ರವರಿಗೆ ಕೊಡಲಾಗಿದೆ.

ರಾಷ್ಟ್ರಾಧ್ಯಕ್ಷರು ದೆಹಲಿಗೆ

ಅಮೃತಸರಕ್ಕೆ ತೆರಳಿದ್ದ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದ್‌ರವರು ದೆಹಲಿಗೆ ಹಿಂತಿರುಗಿದರು.

ಅಸ್ಪೃಶ್ಯತೆ ಬಗ್ಗೆ ಪ್ರಚಾರ

ಅಸ್ಪೃಶ್ಯತೆಯ ವಿಷಯದಲ್ಲಿ ಪ್ರಚಾರವನ್ನು ನಡೆಸಲು ಕೇಂದ್ರ ಸರ್ಕಾರವು ಹೈದರಾಬಾದಿಗೆ ೨ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ.

ದೀಪಾವಳಿ ಉಡುಗೊರೆ

ಕೊರಿಯಾದಲ್ಲಿರುವ ಭಾರತ ಸೈನಿಕರಿಗೆ ಹಂಚಲು ಭಾರತ ಸರ್ಕಾರವು ೩೦೦೦ ಪೌಂಡುಗಳ ಸಿಹಿ ತಿಂಡಿಯನ್ನು ವಿಮಾನದಲ್ಲಿ ಕಳುಹಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೩೦—೧೦—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೦—	೨೧—೮
ಎಳ್ಳು	೭೭—೮	೮೦—೬
ಹರಳು	೩೭—	೩೭—೪
ಹುರಳಿ	೩೬—೧೨	—
ಹೆಸರು	೩೬—೧೪	೩೯—೪
ಅಲಸಂದೆ	೪೭—೮	೬೦—೮
ಹುಣಸೇಹಣ್ಣು	೫—೧	೯—೬
ಸೀಗೆಕಾಯಿ	೬—೧೫	—
ಮೆಣಸಿನಕಾಯಿ	೧೪—೬	೩೬—೪
ತೆಂಗಿನಕಾಯಿ	೨೦೧—	೨೭೯

ಕರ್ಣಾಟಕ ಪ್ರಾಂತ್ಯ ರಚನೆಗೆ ಚಳುವಳಿ ಬೇಡ

ಕೆ. ಪಿ. ಸಿ. ಸಿ. ಯಲ್ಲಿ ನಿರ್ಣಯ

ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯು ಹುಬ್ಬಳ್ಳಿಯಲ್ಲಿ ಶ್ರೀ ಎಸ್. ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ನಿನ್ನೆ ಸಭೆಸೇರಿ ಕರ್ನಾಟಕ ಪ್ರಾಂತ್ಯರಚನೆಗಾಗಿ ಕಾರ್ಯಕ್ರಮವನ್ನು ನಡೆಸಬೇಕೆಂದು ಕಳೆದ ಏಪ್ರಿಲ್‌ಮಾಹೆಯಲ್ಲಿ ತೀರ್ಮಾನಿಸಿದಂತೆ ಚಳುವಳಿಯು ಈಗ ಅನಗತ್ಯವೆಂದೂ, ನಮ್ಮ ಬೇಡಿಕೆಯನ್ನು ಶಾಂತರೀತಿಯಲ್ಲಿ ಕೇಂದ್ರವು ನಿಯಮಿಸಲಿರುವ ಹೈಪರ್ ಕಮೀಷನ್ ಮುಂದೆ ಮಂಡಿಸಬೇಕೆಂದೂ ನಿರ್ಧರಿಸಿದೆ.

ಪ್ರಧಾನಿ ನೆಹರೂರವರು ಕರ್ನಾಟಕ ಪ್ರಾಂತರಚನೆಯನ್ನು ಒಪ್ಪಿ ಆ ಬಗ್ಗೆ ತಮ್ಮ ಭಾವನೆಯನ್ನು ಇತ್ತು ಪತ್ರವನ್ನು ಬರೆದಿರುವುದನ್ನು ಶ್ರೀ ನಿಜಲಿಂಗಪ್ಪನವರು ಸಭೆಯಲ್ಲಿ ಓದಿದರು. ಕರ್ನಾಟಕ ಪ್ರಾಂತ ರಚನೆಯು ನಿರ್ವಿವಾದವಾದುದೆಂದೂ ಮೈಸೂರಿನಬಗ್ಗೆ ಕೆಲವು ತೊಡಕುಗಳಿರುವುದರಿಂದ ಅದನ್ನು ಹೇಗೆ ಬಗೆಹರಿಸಬೇಕೆಂಬುದನ್ನು ಪರಿಶೀಲಿಸಬೇಕಾಗಿದೆ ಎಂದೂ ಶ್ರೀ ನೆಹರೂ ಆ ಪತ್ರದಲ್ಲಿ ತಿಳಿಸಿದ್ದಾರೆ.

ಸಿಂಹಳ ಪ್ರಧಾನಿಗೆ ನೆಹರೂ ಆಹ್ವಾನ

ಸಿಂಹಳದಲ್ಲಿರುವ ಭಾರತೀಯರ ಪೌರತ್ವ ವಿಷಯವನ್ನು ಚರ್ಚಿಸಲು ದೆಹಲಿಗೆ ಬರಬೇಕೆಂದು ಸಿಂಹಳದ ಪ್ರಧಾನಿ ಕೋಟಲವಾಲಾರವರಿಗೆ ಭಾರತಪ್ರಧಾನಿ ನೆಹರೂರವರು ಒಂದು ಆಹ್ವಾನ ಪತ್ರವನ್ನು ಕಳುಹಿಸಿರುವುದಾಗಿ ತಿಳಿಯಬರುತ್ತದೆ.

ಸಮಾರಂಭ ಮುಂದುವರಿದಿದೆ

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ವಾರ್ಷಿಕೋತ್ಸವವು ನಾಳೆ ದಿನ ಏರ್ಪಾಡಾಗಿತ್ತಷ್ಟೆ. ಆದರೆ ಕಾರ್ಮಿಕ ಮಂತ್ರಿಗಳಾದ ಶ್ರೀ ಎ. ಜಿ. ರಾಮಚಂದ್ರರಾಯರ ಅನಾರೋಗ್ಯದ ಪ್ರಯುಕ್ತ ಸಮಾರಂಭವನ್ನು ಮುಂದುವರಿಸಲಾಗಿದೆ.

ಪ್ರಾಂತಗಳ ಪುನರ್ವಿಂಗಡನೆ ಕಮೀಷನ್

ಭಾರತದ ಪ್ರಾಂತಗಳ ಪುನರ್ವಿಂಗಡನೆ ಬಗ್ಗೆ ಸಲಹೆನೀಡಲು ಒಂದು ಹೈಪವರ್ ಕಮೀಷನ್ನಿನ ನೇಮಕದ ಪ್ರಕಟಣೆಯು ಮುಂದಿನ ತಿಂಗಳು ಅಥವ ಡಿಸೆಂಬರ್‌ನಲ್ಲಿ ಹೊರಬೀಳಲಿದೆಯೆಂದು ಕೇಂದ್ರ ಗೃಹಸಚಿವರು ತಿಳಿಸಿದ್ದಾರೆ.

ಸೇತುವೆ ಕಟ್ಟಲು ಬ್ಯಾಂಕಿನವರ ಸಾಲ

ಮಂಗಳೂರು ಮತ್ತು ಉಡುಪಿ ಮಾರ್ಗಗಳಲ್ಲಿ ೩ ದೊಡ್ಡ ಸೇತುವೆಗಳನ್ನು ನಿರ್ಮಿಸಲು ೩ ಲಕ್ಷ ರೂ ಸಾಲವನ್ನು ಕೊಡುವುದಾಗಿ ಉಡುಪಿಯ ಬ್ಯಾಂಕುಗಳು ಮದ್ರಾಸ್ ಸರ್ಕಾರಕ್ಕೆ ತಿಳಿಸಿವೆ.

ಪುರಸಭೆಯ ಮತದಾರರ ಪಟ್ಟಿ

ಮೈಸೂರು ೩೧

ಮುಂದಿನ ಜನವರಿ ೧ ನೇ ತಾರೀಖಿನಿಂದ ಪುನಸ್ರಚಿತವಾಗಲಿರುವ ನಗರದ ಪುರಸಭೆಯ ಸದಸ್ಯರನ್ನು ಚುನಾಯಿಸಲು ತಯಾರಿಸಿರುವ ೪೦ ಡಿವಿಜನ್‌ಗಳ ಮತದಾರರ ಆಖೈರುಪಟ್ಟಿಯನ್ನು ಈದಿನ ಪುರಸಭೆಯ ಕಛೇರಿ ಮತ್ತು ಆಯಾ ಡಿವಿಜನ್‌ಗಳಲ್ಲಿಯೂ ಪ್ರಕಟಿಸಲಾಗಿದೆಯೆಂದು ಮುನಿಸಿಪಲ್ ಕಮೀಷನರ್ ಮತ್ತು ಚುನಾವಣಾಧಿಕಾರಿಗಳಾದ ಶ್ರೀ ಲಕ್ಷ್ಮಣರಾಯರು ತಿಳಿಸಿದ್ದಾರೆ.

ವಿಮಾನ ಅಪಘಾತದಿಂದ ೧೯ ಮಂದಿ ಮರಣ

ಸಿಡ್ನಿಯಿಂದ ಸಾನ್‌ಫ್ರಾನ್ಸಿಸ್ಕೋವಿಗೆ ಹೋಗುತ್ತಿದ್ದ ಬ್ರಿಟಿಷ್ ಪ್ರಯಾಣಿಕರ ವಿಮಾನವೊಂದು ಅಪಘಾತಕ್ಕೆ ಒಳಗಾಗಿ ೧೯ ಜನ ಪ್ರಯಾಣಿಕರೆಲ್ಲರೂ ಸತ್ತುಹೋದರೆಂದೂ ವರದಿಯಾಗಿದೆ.

ಮಂಜು ಮುಚ್ಚಿದ ಬೆಟ್ಟಕ್ಕೆ ಅದು ಡಿಕ್ಕಿ ಹೊಡೆದು ವಿಮಾನ ಭಸ್ಮವಾಯಿತೆಂದು ಗೊತ್ತಾಗಿದೆ.

ರಣಜಿತ್
ತಾ॥ 31—10—53 ರಿಂದ 3 ನೇ ವಾರ
ಕಾರ್ದಾರ್‌ರವರ ಹಿಂದಿ ಚಿತ್ರ.
★ ದಿಲೇ ನಾದಾನ್ ★
ಪಾತ್ರ:- ಪೀಸ್ ಕನ್ವಾರ್, ಶ್ಯಾಮ್, ಹಿನ್ನಲೆ ಸಂಗೀತಗಾರರಾದ ತಲತ್‌ಮಹಮುದ್

ನಾಟಕರತ್ನ ಜಿ.ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ
ಥಿಯೇಟ್ರಿಕಲ್ ಕಂಪನಿ (ರಿ)
31--10--53ನೇ ರಾತ್ರಿ 10 ಗಂಟೆಗೆ
ಮತ್ತು 1--11--53ನೇ ಭಾನುವಾರ
ಸಂಜೆ 6–30 ಕ್ಕೆ ಮ್ಯಾಟನಿ ಇರುತ್ತೆ.
ಶಿವರಾಂಪೇಟೆಯಲ್ಲಿರುವ ರತ್ನಾವಳಿ ಥಿಯೇಟರಿನಲ್ಲಿ
ಅಡ್ಡದಾರಿ
ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೬೦

೨-೧೧-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮಂತ್ರಿಮಂಡಲದ ಮೇಲೆ ಟೀಕಿಸಲು ಹಕ್ಕುಂಟು

ಕಾಂಗ್ರೆಸ್ ಅಧ್ಯಕ್ಷ ವೀರಣ್ಣ ಗೌಡರ ಹೇಳಿಕೆ

ಬೆಂಗಳೂರು ೨

ಮೈಸೂರು ಮಂತ್ರಿಮಂಡಲವನ್ನು ತಾವು ಆಗಾಗ ಟೀಕಿಸುವುದನ್ನು ಜನರು ತಪ್ಪಾಗಿ ಭಾವಿಸಿ ಯಾವಾಗಲೂ ಮುಖ್ಯ ಮಂತ್ರಿಗಳೊಡನೆ ತಾವು ಜಗಳವಾಡುತ್ತಾರೆಂದು ತಿಳಿದಿರುವುದು ತಪ್ಪು ಅಭಿಪ್ರಾಯ. ಸಾರ್ವಜನಿಕರಿಂದ ಆರಿಸಲ್ಪಟ್ಟ ಮಂತ್ರಿಗಳು ತಪ್ಪು ಹಾದಿಯಲ್ಲಿದ್ದರೆ, ಅವರನ್ನು ಸರಿಯಾದ ಮಾರ್ಗದಲ್ಲಿ ಹೋಗುವಂತೆ ಹೇಳಲು ಪ್ರತಿಯೊಬ್ಬರಿಗೂ ಹಕ್ಕಿದೆ-ಎಂದು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್.ಕೆ. ವೀರಣ್ಣ ಗೌಡರು ನಿನ್ನೆ ಇಲ್ಲಿ ನಡೆದ ಒಂದು ಸಮಾರಂಭದಲ್ಲಿ ತಿಳಿಸಿದ್ದಾರೆ.

ಯಾರಾದರೂ ಸರ್ಕಾರವನ್ನು ಟೀಕಿಸಿದರೆ ಅವನ್ನು ಬೆಕ್ಕುಗಳು ನಾಯಿಗಳು ಕಚ್ಚಾಡಿದಂತೆ ಎಂದು ನಂಬಬಾರದು. ತಾವು ಮತ್ತು ಮುಖ್ಯಮಂತ್ರಿಗಳೂ ಸದಾ ಜಗಳವಾಡುತ್ತಿರುತ್ತಾರೆಂದು ಕೆಲವರು ಆರೋಪಿಸುತ್ತಿದ್ದಾರೆ. ಅದು ನಿಜವಾದ ಸಂಗತಿ ಅಲ್ಲ. ತಾವು ಮಂತ್ರಿಮಂಡಲವನ್ನು ಟೀಕಿಸಿದರೂ, ಇತರ ಸಂಸ್ಥಾನಗಳಿಗೆ ಹೋಲಿಸದರೆ ಮೈಸೂರಿನವರು ಅವರಿಗಿಂತ ಹೆಚ್ಚು ಸುಖವಾಗಿರುವುದು ನಿಜ-ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

೨ ಸಾವಿರ ಮಂದಿ ವೈದ್ಯರಿಗೆ ಕೆಲಸವಿಲ್ಲ

ಪಶ್ಚಿಮ ಬಂಗಾಳದಲ್ಲಿ ೨ ಸಾವಿರ ಮಂದಿ ವೈದ್ಯರುಗಳಿಗೆ ಉದ್ಯೋಗವಿಲ್ಲದೆ ಕಾಲ ಕಳೆಯುತ್ತಿದ್ದಾರೆಂದು ಅಖಿಲಭಾರತ ವೈದ್ಯ ಸಂಘದ ಬಂಗಾಳ ಶಾಖೆಯವರು ನಡೆಸಿದ ಸಂಗ್ರಹಣೆ ತನಿಖೆಯಿಂದ ಗೊತ್ತಾಗಿದೆ. ಕಾಯಿಲೆಗಳು ಹೆಚ್ಚಿ, ಅನೇಕ ಜನರು ಸಾಯುತ್ತಿದ್ದರೂ, ಜನರ ಬಡತನ, ವೈದ್ಯರ ಹಣ ಕಾಸಿನ ಪರಿಸ್ಥಿತಿಗಳಿಂದ ಅನೇಕ ವೈದ್ಯರು ಕೆಲಸವಿಲ್ಲದೆ ಇದ್ದಾರೆಂದು ಹೇಳಲಾಗಿದೆ.

ಜಪಾನ್‌ನಿಂದ ರೈಲ್ವೆ ಇಂಜನ್‌ಗಳು

೭೫ ರೈಲ್ವೆ ಇಂಜನ್ನುಗಳನ್ನು ಜಪಾನಿನಿಂದ ತರಿಸಲು ಭಾರತದ ರೈಲ್ವೆಯವರು ನಿರ್ಧರಿಸಿದ್ದಾರೆ. ಇದೂ ಅಲ್ಲದೆ ಜರ್ಮನಿಯಿಂದ ೭೫, ಆಸ್ಟ್ರಿಯಾದಿಂದ ೬೦, ಕೆನಡಾದಿಂದ ೧೦೦ ಇಂಜನ್ನುಗಳನ್ನು ತರಿಸಲು ಒಪ್ಪಂದವಾಗಿದೆ.

ಗ್ವಾಲಿಯರ್ ರಾಜರ ಮೇಲೆ ದಾವಾ

ಮಧ್ಯ ಭಾರತದ ರಾಜಪ್ರಮುಖರಾದ ಗ್ವಾಲಿಯರ್ ಮಹಾರಾಜರಮೇಲೆ ಅವರ ಮಾವನೆಂದು ಹೇಳಿಕೊಂಡಿರುವ ಥಾಕೂರ್ ಮಹೇಂದ್ರಸಿಂಗ್ ಎಂಬುವರು ದೆಹಲಿಯ ಕೋರ್ಟಿನಲ್ಲಿ ಒಂದು ದಾವಾ ಮಾಡಿದ್ದಾರೆ. ತಮಗೆ ಮಹಾರಾಣಿಯ ತಂದೆಗೆ ಸಂಪ್ರದಾಯಕ್ಕೆ ಅನುಗುಣವಾಗಿ ದೊರೆಯಬೇಕಾದ ಸ್ಥಾನಮಾನ ಮತ್ತು ವರ್ಷಕ್ಕೆ ೨೧ ಸಾವಿರ ರೂ. ಮಾಸಾಶನ ದೊರೆಯಬೇಕೆಂದು ಕೇಳಿದ್ದಾರೆ.

ಇನ್ನೊಂದು ದಾವಾದಲ್ಲಿ ಗ್ವಾಲಿಯರ್ ಮಹಾರಾಜರ ಮಕ್ಕಳು ವರ್ಷಕ್ಕೆ ೫೦ಲಕ್ಷ ರೂ ಬಡ್ಡಿ ಬರುವ ಜೊಂಬಾಯಿನ ಸ್ವತ್ತನ್ನೂ ಮತ್ತು ಸಂಸ್ಥಾನದ ರಿಜರ್ವ್ ನಿಧಿಯ ಒಂದು ಕೋಟಿ ೬೦ ಲಕ್ಷ ರೂ. ಗಳನ್ನೂ ಭಾರತ ಮತ್ತು ಮಧ್ಯಭಾರತ ಸರಕಾರಗಳಿಗೆ ಮಹಾರಾಜರು ಪರಭಾರೆ ಮಾಡಿರುವುದು ಅಕ್ರಮವೆಂದೂ, ಅದು ಪಿತ್ರಾರ್ಜಿತವಾದ ಆಸ್ತಿಯೆಂದೂ, ಇದರಿಂದ ತಮಗೆ ಹಕ್ಕು ಇದೆಯೆಂದೂ ತಿಳಿಸಿದ್ದಾರೆ.

ಕಾವೇರಿ ಜನ್ಮಸ್ಥಾನದಲ್ಲಿ ಜಾತ್ರೆ ನಡೆಯಬೇಕು

ಉತ್ತರ ದೇಶದವರಿಗೆ ಗಂಗೆ ಮತ್ತು ಯಮುನಾ ನದಿಗಳು ಎಷ್ಟು ಶ್ರೇಷ್ಠವೋ ಅಷ್ಟೇ ದಕ್ಷಿಣದವರಿಗೆ ಕಾವೇರಿ ನದಿಯು ಸಹ. ಆದ್ದರಿಂದ ಕಾವೇರಿ ಜನ್ಮಸ್ಥಳವಾದ ಕೊಡಗಿನಲ್ಲಿ ಪ್ರತಿವರ್ಷವೂ ಭಾರಿ ಜಾತ್ರೆ ನಡೆಸಿ ಯಾತ್ರಿಕರನ್ನು ಆಕರ್ಷಿಸಲು ಸರ್ಕಾರ ವ್ಯವಸ್ಥೆ ಮಾಡಬೇಕೆಂದು ಕೇಂದ್ರ ಗೃಹಸಚಿವ ಡಾ॥ ಖಟ್ಜುರವರು ಅಲ್ಲಿಗೆ ಮೊನ್ನೆದಿನ ಭೇಟಿ ಇತ್ತಾಗ ಸಲಹೆ ಮಾಡಿದ್ದಾರೆ.

ಅಶೋಕ ಮೆಹ್ತಾರಿಗೆ ೧೬ ತಿಂಗಳ ಶಿಕ್ಷೆ

ಸೂರತ್ ಜಿಲ್ಲೆಯ ಪಾರ್ಡಿ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರೆಂಬ ಆಪಾದನೆಯ ಮೇಲೆ ಅಖಿಲ ಭಾರತ ಪ್ರಜಾ ಸೋಷಲಿಸ್ಟ್ ಪಕ್ಷದ ನಾಯಕ ಶ್ರೀ ಅಶೋಕಮೆಹ್ತಾರಿಗೆ ಅಲ್ಲಿನ ನ್ಯಾಯಾಧೀಶರು ೧೬ ತಿಂಗಳು ಸಾದಾಸಜಾ ಮತ್ತು ೫೦ ರೂ. ಜುಲ್ಮಾನೆ ವಿಧಿಸಿದ್ದಾರೆ.

ನಂಜನಗೂಡಿನ ರಸ್ತೆಯಲ್ಲಿ ದರೋಡೆ

೬ ಜನರ ದಸ್ತಗಿರಿ

ಮೈಸೂರು ೨

ಗುಂಡ್ಲುಪೇಟೆ, ನಂಜನಗೂಡು, ಸುತ್ತಮುತ್ತಲಿನಿಂದ ಮೈಸೂರಿಗೆ ವ್ಯಾಪಾರಕ್ಕಾಗಿ ಬಂದಿದ್ದ ಹಳ್ಳಿಯವರು ೧೦-೧೨ ಗಾಡಿಗಳಲ್ಲಿ ಮೊನ್ನೆರಾತ್ರಿ ವಾಪಸಾಗುತ್ತಿದ್ದಾಗ, ಮೈಸೂರು--ನಂಜನಗೂಡು ರಸ್ತೆಯ ಮಾರ್ಗದಲ್ಲಿರುವ ಮರಸೆಹಳ್ಳಿಯ ಬಳಿ ಸುಮಾರು ೮ ಗಂಟೆ ಸಮಯದಲ್ಲಿ ಯಾರೋ ಗಾಡಿಗಳ ಮೇಲೆ ಕಲ್ಲುಗಳನ್ನು ಎಸೆದು, ೩೦–೪೦ ರೂ. ಬೆಲೆಬಾಳುವ ಸಕ್ಕರೆ, ಕಾಫಿಪುಡಿ, ಮೆಣಸಿನಕಾಯಿ ಮುಂತಾದ ಸಾಮಗ್ರಿಗಳನ್ನು ದರೋಡೆ ಮಾಡಿಕೊಂಡು ಪರಾರಿಯಾದರೆಂದೂ ವರದಿಯಾಗಿದೆ. ಅದೇ ಸಮಯದಲ್ಲಿ ಗುಂಡ್ಲುಪೇಟೆಗೆ ಹೋಗುತ್ತಿದ್ದ ಸರ್ಕಾರಿ ಬಸ್ಸೊಂದು ಘಟನೆಯ ಸ್ಥಳದಲ್ಲಿ ಅದನ್ನು ಕೇಳಿ ನಿಲ್ಲಿಸಿದಾಗ ಅದರಮೇಲೂ ಕೆಲವು ಕಲ್ಲುಗಳು ಬಿದ್ದವೆಂದು ಹೇಳಲಾಗಿದೆ.

ವರ್ತಮಾನ ಬಂದಕೂಡಲೇ ಡಿ.ಎಸ್.ಪಿ. ಶ್ರೀ ಕೃಷ್ಣಮೂರ್ತಿಯವರು ಶಸ್ತ್ರ ಪೊಲೀಸ್ ದಳದೊಡನೆ ಧಾವಿಸಿ, ಗಾಡಿಯವರನ್ನು ಸುರಕ್ಷಿತವಾಗಿ ನಂಜನಗೂಡಿಗೆ ಕಳುಹಿಸಿಕೊಟ್ಟರು. ಅಕ್ಕಪಕ್ಕದ ಹಳ್ಳಿಗಳಿಗೆ ಹೋಗಿ ಅವರು ತನಿಖೆ ನಡೆಸಿ, ನಿನ್ನೆ ಬೆಳಗಿನಝಾವದಲ್ಲಿ ಮರಸೆ ಹಳ್ಳಿಗೆ ಸೇರಿದ ೬ ಜನರನ್ನು ಈ ಸಂಬಂಧದಲ್ಲಿ ದಸ್ತಗಿರಿ ಮಾಡಿದರು.

ಈಗ ಮೈಸೂರು ಟೋಲ್‌ಗೇಟ್ ಮತ್ತು ಕಡಕೊಳ ಮಾರ್ಗದಲ್ಲಿ ಶಸ್ತ್ರ ಪೊಲೀಸ್ ಪಹರೆಯನ್ನು ಹಾಕಲಾಗಿದೆ.

ರೈಲಿನಿಂದ ಕಳಚಿ ೩ ಗಾಡಿಗಳು ಓಡಿದ ಪ್ರಸಂಗ

ಮೈಸೂರು ೨

ಮೊನ್ನೆರಾತ್ರಿ ಬೆಂಗಳೂರಿನಿಂದ ಹೊರಟ ಪ್ಯಾಸೆಂಜರ್ ರೈಲು ಇಲ್ಲಿಗೆ ನಿನ್ನೆ ಬೆಳಿಗ್ಗೆ ೬ ಘಂಟೆಗೆ ಬದಲು ೯ ಘಂಟೆಗೆ ಬಂದಿತು. ರೈಲಿಗೆ ಲಗತ್ತಿಸಬೇಕಾಗಿದ್ದ ಮೂರನೇ ತರಗತಿಯ ೩ ಗಾಡಿಗಳು ಷಂಟಿಂಗ್ ಮಾಡುತ್ತಿದ್ದಾಗ ಕಳಚಿಕೊಂಡು, ರಭಸದಿಂದ ಹೊರಟು ಕೆಂಗೇರಿದಾಟಿ ಹೆಜ್ಜಾಲಕ್ಕೆ ಸ್ವಲ್ಪ ಹಿಂದೆ ಬಂದು ನಿಂತಿತೆಂದೂ, ಆದರೆ ಯಾರಿಗೂ ಅಪಾಯವಾಗಲಿಲ್ಲವೆಂದೂ, ಆ ಗಾಡಿಗಳನ್ನು ವಾಪಸು ಬೆಂಗಳೂರಿಗೆ ತಂದು, ರೈಲನ್ನು ಬಿಟ್ಟದ್ದೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ.

ಕನ್ನೇಗೌಡನ ಕೊಪ್ಪಲಿನಲ್ಲಿ ಪುನಃ ಜನರ ಸಭೆ

ಮೈಸೂರು ೨

ನಗರದ ಹರಿಜನರಿಗೂ ಸವರ್ಣಹಿಂದೂಗಳಿಗೂ ಇನ್ನುಮುಂದೆ ಸ್ನೇಹ ಸೌಹಾರ್ದ ಮನೋಭಾವದಿಂದ ಇರಬೇಕೆಂದು ಮೊನ್ನೆ ಸಂಜೆ ಒಂದು ಒಪ್ಪಂದಕ್ಕೆ ಬರಲಾಯಿತಷ್ಟೆ. ಆದರೆ ನಿನ್ನೆ ಬೆಳಿಗ್ಗೆ ಕನ್ನೇಗೌಡನ ಕೊಪ್ಪಲಿನಲ್ಲಿ ಸುಮಾರು ೨೦೦-೩೦೦ ಮಂದಿ ಜನರು ಸೇರಿ ಶನಿವಾರ ರಾತ್ರಿ ನಡೆದ ಯಾವುದೋ ಹೆಂಗಸಿನ ಪ್ರಕರಣದ ವಿಷಯವಾಗಿ ಚರ್ಚಿಸುತ್ತಲಿದ್ದು ವೈಷಮ್ಯ ಉಂಟಾಗುವುದರಲ್ಲಿತ್ತೆಂದು ಹೇಳಲಾಗಿದೆ. ಕೂಡಲೇ ಅಧಿಕಾರಿಗಳು ಸ್ಥಳಕ್ಕೆ ಹೋಗಿ ಅವರುಗಳಿಗೆ ಸಮಾಧಾನ ಹೇಳಿದಮೇಲೆ ಜನರು ವಾಪಸಾದರೆಂದೂ, ಮತ್ತಾವ ಘಟನೆಯೂ ನಡೆಯಲಿಲ್ಲವೆಂದೂ ಹೇಳಲಾಗಿದೆ. ಈಗ ಆ ಪ್ರದೇಶಗಳಲ್ಲಿ ಪೊಲೀಸ್ ಪಹರೆಯನ್ನು ಮುಂದುವರಿಸಲಾಗಿದೆ.

ಕಾಗದ ಕಾರ್ಖಾನೆ ಕೆಲಸಗಾರರ ಪ್ರದರ್ಶನ

ನಂಜನಗೂಡಿನ ಬಳಿ ಇರುವ ಕಾವೇರಿ ಕಾಗದ ಕಾರ್ಖಾನೆಯ ಸುಮಾರು ೧೫೦ ಮಂದಿ ಕೆಲಸಗಾರರು ನಿನ್ನೆ ಬೆಳಿಗ್ಗೆ ರಾಜಧಾನಿಗೆ ಆಗಮಿಸಿ, ತಮಗೆ ಸಂಬಳ ಕೊಟ್ಟಿಲ್ಲವೆಂದೂ, ಕಾರ್ಖಾನೆಯನ್ನು ಲಾಕ್ ಔಟ್" ಮಾಡುವುದಾಗಿ ಮಾಲೀಕರು ಹೆದರಿಸುತ್ತಿರುವರೆಂದೂ ಹೇಳಿಕೊಂಡು ಲೇಬರ್ ಕಛೇರಿ ಮುಂದೆ ಪ್ರದರ್ಶನ ನಡೆಸಲು ಆರಂಭಿಸಿದರು. ಕೂಡಲೇ ಪೊಲೀಸರು ಶ್ರೀ ಟಿ. ಎಸ್. ಸುಬ್ಬಣ್ಣನವರೊಡನೆ ಅಲ್ಲಿಗೆ ಹೋಗಿ ಅವರಿಗೆ ಸಮಾಧಾನ ಹೇಳಿ, ಕಾರ್ಖಾನೆಯ ಮ್ಯಾನೇಜರಲ್ಲಿಗೆ ಕರೆದುಕೊಂಡುಹೋಗಿ ಅಲ್ಲಿ ಮಾತುಕತೆಗಳು ನಡೆದುವು. ಕೆಲಸಗಾರರಿಗೆ ಸಂಬಳ ಕೊಟ್ಟು ಅವರುಗಳನ್ನು ಕೆಲಸಕ್ಕೆ ಸೇರಿಸಿಕೊಳ್ಳುವುದಾಗಿ ಮ್ಯಾನೇಜರ್ ಭರವಸೆ ಕೊಟ್ಟದ್ದರಿಂದ, ಅವರೆಲ್ಲರೂ ಶಾಂತರೀತಿಯಿಂದ ತಮ್ಮ ಊರಿಗೆ ವಾಪಸಾದರು.

○ ಸೈಕಲ್ ಸವಾರಿಯೊಬ್ಬನಿಂದ ೧ ರೂ. ಲಂಚ ಪಡೆದರೆಂದು ಸೂರತ್ತಿನ ಇಬ್ಬರು ಪೊಲೀಸ್ ಕಾನ್ಸ್ಟೇಬಲರುಗಳನ್ನು ಕೆಲಸದಿಂದ ವಜಾ ಮಾಡಲಾಗಿದೆ.

ಲಕ್ನೋ ನಗರದಲ್ಲಿ ೬೦ ಗಂಟೆ ಕರ್ಫ್ಯೂ

ವಿದ್ಯಾರ್ಥಿಗಳ ಮೇಲೆ ಪೋಲೀಸರ ಗುಂಡು

ಈಗ ಪರಿಸ್ಥಿತಿ ಉತ್ತಮಗೊಳ್ಳುತ್ತಿದೆ

ಲಕ್ನೋ ನಗರದಲ್ಲಿ ಪರಿಸ್ಥಿತಿಯು ಉಲ್ಬಣವಾಗುತ್ತಾ ಬರಲು ನಿನ್ನೆ ಸಂಜೆ ೫ ಗಂಟೆಗೆ ೬೦ ಗಂಟೆಗಳ ಕಾಲದ ಕರ್ಫ್ಯೂವನ್ನು ವಿಧಿಸಲಾಯಿತು. ಅನಂತರ ಯಾವ ಘಟನೆಗಳೂ ನಡೆಯದೆ ನಗರವೆಲ್ಲಾ ಶಾಂತವಾಯಿತು.

ಇದಕ್ಕೆ ಮೊದಲು ನಗರದಲ್ಲಿ ವಿದ್ಯಾರ್ಥಿಗಳು ಎಲ್ಲಾ ಚಳುವಳಿಗಳಲ್ಲಿ ಭಾಗವಹಿಸುವುದನ್ನು ನಿಲ್ಲಿಸಿದರು.

ಪರಿಸ್ಥಿತಿಯು ನಗರದ ಗುಂಡಾಗಳ ಕೈಗೆ ಹೋಯಿತು. ಅಂಚೆಕಛೇರಿಗಳಿಗೆ ಬೆಂಕಿಯಿಡುವುದು, ಟೆಲಿಫೋನ್ ಕೇಂದ್ರಗಳ ಧಾಳಿ, ಟೆಲಿಫೋನ್ ಮತ್ತು ವಿದ್ಯುಚ್ಛಕ್ತಿ ತಂತಿಗಳನ್ನು ಕತ್ತರಿಸುವುದು ಮುಂತಾದವೆಲ್ಲಾ ಪ್ರಾರಂಭವಾದುವಲ್ಲದೆ ಜೈಲು ಉಗ್ರಾಣಕ್ಕೆ ಜನರು ನುಗ್ಗಿ ಲೂಟಿ ಮಾಡಿದರು. ಪೋಲೀಸಿನವರ ಮೇಲೆ ಧಾಳಿ ನಡೆಸಿದರು. ರಕ್ಷಣೆಗಾಗಿ ಪೋಲೀಸಿನವರು ಗುಂಡುಹಾರಿಸಲಾಯಿತು. ಇದರಿಂದ ೬೦ ಜನರಿಗೆ ಗಾಯಗಳಾದುವು. ಅವರಲ್ಲಿ ಒಬ್ಬನು ಆಸ್ಪತ್ರೆಯಲ್ಲೇ ಸತ್ತನು. ಯಾವ ಕಾಂಗ್ರೆಸ್ಸಿನವ ಸಿಕ್ಕಿದರೂ ಅವನಿಗೆ ಹೊಡೆಯುತ್ತಿದ್ದರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಅಲುಗುರೈ ಶಾಸ್ತ್ರಿಯವರ ಮೇಲೆ ಧಾಳಿ ನಡೆಯಿತು. ನಿನ್ನೆಯ ದಿನ ೧೦೭ ಜನರ ದಸ್ತಗಿರಿಗಳಾಗಿವೆಯೆಂದು ತಿಳಿದುಬರುತ್ತದೆ. ಗಲಭೆಗಳನ್ನು ತಡೆಯಲು ಕರ್ಫ್ಯೂವನ್ನು ವಿಧಿಸಲಾಯಿತು, ಅನಂತರ ಪರಿಸ್ಥಿತಿಯು ಉತ್ತಮಗೊಂಡಿತು.

ಇದಕ್ಕೆ ಮುಂಚೆ ಶನಿವಾರ ಇಬ್ಬರು ಉಪವಾಸ ಸತ್ಯಾಗ್ರಹಿಗಳನ್ನು ಆಸ್ಪತ್ರೆಗೆ ಬಲವಂತದಿಂದ ಸಾಗಿಸಿದುದನ್ನು ಪ್ರತಿಭಟಿಸಿ, ಅಲ್ಲಿನ ೧೦ ಸಾವಿರ ಮಂದಿ ವಿದ್ಯಾರ್ಥಿಗಳು ಪ್ರತಿಭಟನೆ ಗಲಭೆ ಮಾಡಿದರು. ೩ ಗಂಟೆಗಳ ಕಾಲ ಪೋಲೀಸರಿಗೂ ವಿದ್ಯಾರ್ಥಿಗುಂಪಿನವರಿಗೂ ಭಾರಿ ಕದನ ನಡೆಯಿತು. ಗುಂಪನ್ನು ಚದುರಿಸಲು ಪೋಲೀಸರು ಲಾಠಿ, ಟೀಯರ್ ಗ್ಯಾಸ್ ಪ್ರಯೋಗ ಮಾಡಿ, ಅನಂತರ ಗುಂಡು ಹಾರಿಸಿದರು.

ದೇಶದ ಸಂಘಟನೆಗೆ ಗುರೂಜಿರವರ ಕರೆ

ಮೈಸೂರು ೨

ಆರ್. ಎಸ್. ಎಸ್. ನಾಯಕ ಶ್ರೀ ಗುರೂಜಿ ಗೋಲ್ವಾಲ್ಕರ್ ರವರು ಮೊನ್ನೆ ರಾಜಧಾನಿಗೆ ಆಗಮಿಸಿದರು. ಸಂಜೆ ೬ ಗಂಟೆಗೆ ರತ್ನಾವಳಿ ಥಿಯೇಟರಿನಲ್ಲಿ ನಡೆದ ಸಾರ್ವಜನಿಕರ ಸಭೆಯಲ್ಲಿ ಶ್ರೀ ಗುರೂಜಿ ಭಾಷಣಮಾಡಿ, ದೇಶದ ಪ್ರಗತಿಗಾಗಿ ಹಿಂದೂಗಳೆಲ್ಲರೂ ಸುಸಂಘಟಿತರಾಗಿರಬೇಕೆಂದು ಮನವಿ ಮಾಡಿದರು. ಈ ಕಾರ್ಯದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದವರು ಕೈಗೊಂಡಿರುವ ಕಾರ್ಯದನ್ನು ವಿವರಿಸಿ ಎಲ್ಲರೂ ಸಹಕಾರ ನೀಡಬೇಕೆಂದು ಕೋರಿದರು. ಶ್ರೀ ಜಿ. ಆರ್. ಜೋಸ್ಯರು ಅಧ್ಯಕ್ಷತೆ ವಹಿಸಿದ್ದರು.

ಚುನಾವಣೆಗೆ ನಿಲ್ಲಲು ಕಾಂಗ್ರೆಸ್ಸಿಗರಿಗೆ ನಿಯಮ

ಮೈಸೂರು ೨

ನಗರದ ಪುರಸಭೆಗೆ ಕಾಂಗ್ರೆಸ್ ಟಿಕೆಟ್ಟಿನ ಮೇಲೆ ನಿಲ್ಲಲು ಇಷ್ಟವುಳ್ಳ ಉಮೇದುವಾರರು ನವಂಬರ್ ೬ ನೇ ತಾರೀಖು ಸಂಜೆ ೫ ಗಂಟೆ ಒಳಗಾಗಿ ತಮ್ಮ ಅರ್ಜಿಗಳನ್ನು ನಗರ ಕಾಂಗ್ರೆಸ್ ಕಛೇರಿಯಲ್ಲಿರುವ ಆಡ್ ಹಾಕ್ ಸಮಿತಿಗೆ ಕಳುಹಿಸಬೇಕು ಸಮಿತಿಯವರು ಗೊತ್ತುಮಾಡಲ್ಪಟ್ಟ ಫಾರಂನಲ್ಲಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು ಅರ್ಜಿಯ ಜೊತೆಗೆ ೨೫ ರೂ. ಫೀಜು ಮತ್ತು ಚುನಾವಣೆ ಮುಂಗಡ ಹಣವಾಗಿ ೧೨೫ ರೂಗಳನ್ನೂ ಕೊಡಬೇಕು. ತಿರಸ್ಕರಿಸಲ್ಪಟ್ಟ ಅರ್ಜಿಗಳಿಗೆ ಯಾವ ಕಾರಣದಿಂದಲೇ ಆಗಲಿ ಅರ್ಜಿಯ ಫೀಜನ್ನು ವಾಪಸ್ಸು ಮಾಡುವುದಿಲ್ಲ. ಚುನಾವಣೆ ಮುಂಗಡ ಹಣವನ್ನು ಮಾತ್ರ ವಾಪಸು ಮಾಡಲಾಗುವುದು. ಪಾರ್ಲಿಮೆಂಟರಿ ಸಮಿತಿಯು ಉಮೇದುವಾರರನ್ನು ಆರಿಸುವ ಅಖೈರು ತಾರೀಖು ೧೦. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯನಿರ್ವಾಹಕ ಸಮಿತಿಯವರಿಗೆ ಅಪೀಲು ೧೩ ನೇ ತಾರೀಖು ಕೊನೆಯ ತೀರ್ಮಾನ ೧೪ ನೇ ತಾರೀಖು ಎಂದು ಸಂಚಾಲಕ ಶ್ರೀ ಟಿ. ವೆಂಕಟರಮಣಯ್ಯನವರು ತಿಳಿಸುತ್ತಾರೆ.

ಭಾರತದ ವಿಶ್ವವಿದ್ಯಾನಿಲಯಗಳಿಗೆ ಅಮೇರಿಕದ ಸಹಾಯ

ಭಾರತಕ್ಕೆ ಅಮೆರಿಕೆವು ಗೋಧಿ ಕೊಳ್ಳಲು ಕೊಟ್ಟಿದ್ದ ಸಾಲದಿಂದ ಉಳಿತಾಯವಾದ ೧೦ ಲಕ್ಷ ಡಾಲರುಗಳ ಬಡ್ಡಿ ಹಣವನ್ನು ಭಾರತದ ವಿಶ್ವವಿದ್ಯಾನಿಲಯಗಳಿಗೆ ಪುಸ್ತಕ ಮತ್ತು ಇತರ ಯಂತ್ರ ಸಲಕರಣೆಗಳಿಗಾಗಿ ಉಪಯೋಗಿಸಬೇಕೆಂದು ಅಮೆರಿಕ ತಿಳಿಸಿದೆ ಇದೂ ಅಲ್ಲದೆ ಎರಡು ರಾಷ್ಟ್ರಗಳ ವಿದ್ಯಾರ್ಥಿಗಳ ವಿನಿಮಯಕ್ಕೂ ಆ ಹಣವನ್ನು ಉಪಯೋಗಿಸಬೇಕೆಂದೂ ತಿಳಿಸಲಾಗಿದೆ.

ಶಾಂತಿ ಸಮಾಚಾರ್ ದಿನಪತ್ರಿಕೆ

ಕೊರಿಯಾದಲ್ಲಿರುವ ಶಾಂತಿ ನಗರದಲ್ಲಿ ಭಾರತ ಸೈನ್ಯವು ತನ್ನ ದೇಶದ ಶಾಂತಿ ಸಮಾಚಾರ್ ಎಂಬ ದಿನಪತ್ರಿಕೆಯನ್ನು ನಿನ್ನೆಯಿಂದ ಪ್ರಾರಂಭಿಸಿದೆ.

ಹೊಸ ದೆಹಲಿಗೆ ಬರಲು ಸಿಂಹಳ ಪ್ರಧಾನಿಯ ನಿರಾಕರಣೆ

ವಲಸೆಗಾರರ ಪ್ರಶ್ನೆ ಪರಿಶೀಲಿಸಿದ ನಂತರ ಯೋಚನೆ

ಸಿಂಹಳದಲ್ಲಿ ಇರುವ ಭಾರತೀಯರ ಪೌರತ್ವ ಹಕ್ಕಿನ ವಿಷಯವನ್ನು ಚರ್ಚಿಸಲು ಹೊಸ ದೆಹಲಿಗೆ ಬರಬೇಕೆಂದು ಪ್ರಧಾನಿ ನೆಹರೂರವರು ಸಿಂಹಳಪ್ರಧಾನಿ ಕೋಟೀಲವಾಲಾರವರಿಗೆ ಇತ್ತ ಆಹ್ವಾನವನ್ನು ಅವರು ಸದ್ಯಕ್ಕೆ ನಿರಾಕರಿಸಿರುವುದಾಗಿ ತಿಳಿಯಬರುತ್ತದೆ.

ಸಿಂಹಳಕ್ಕೆ ವಲಸೆಗಾರರು ಬರುತ್ತಿರುವ ಪ್ರಶ್ನೆಯನ್ನು ತಾವು ಕೂಲಂಕೂಶವಾಗಿ ಪರಿಶೀಲಿಸಿ, ಇದನ್ನು ತಡೆಗಟ್ಟಲು ಭಾರತ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂಬುದು ತಮಗೆ ಮನವರಿಕೆ ಆದಾಗ ಈ ಆಹ್ವಾನವನ್ನು ಸ್ವೀಕರಿಸುವುದಾಗಿ ಅವರು ಹೇಳಿರುವುದಾಗಿ ತಿಳಿಯಬರುತ್ತದೆ.

ಹರಿಜನ-ಹಿಂದೂಗಳಿಗೂ ಸೌಹಾರ್ದ

ಮುಖಂಡರ ಸಭೆಯಲ್ಲಿ ತೀರ್ಮಾನ

ಮೈಸೂರು ೨

ದಸರಾ ಮಹೋತ್ಸವದಲ್ಲಿ ಅರಮನೆ ಮುಂದೆ ಹರಿಜನರು ಕುಸ್ತಿಯಲ್ಲಿ ಭಾಗವಹಿಸುವ ವಿಚಾರದಲ್ಲಿ ಎರಡು ಕೋಮಿನವರಿಗೂ ಘರ್ಷಣೆ ಆಗಿ ವೈಷಮ್ಯ ಉಂಟಾಗಿರುವುದನ್ನು ಹೋಗಲಾಡಿಸಲು ಮೊನ್ನೆ ಶನಿವಾರ ನಗರ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚೆನ್ನಯ್ಯನವರ ಗೃಹದಲ್ಲಿ ಕನ್ನೇಗೌಡನ ಕೊಪ್ಪಲು, ಆದಿಕರ್ಣಾಟಕಪುರ ಮುಂತಾದ ಪ್ರದೇಶಗಳ ೪೦ ಮಂದಿ ನಾಯಕರುಗಳ ಸಭೆ ಸೇರಿದ್ದಿತು. ಶ್ರೀಗಳಾದ ಚೆನ್ನಯ್ಯ, ಕೆ. ಪುಟ್ಟಸ್ವಾಮಿ ಮತ್ತು ಎಸ್. ಲಿಂಗಣ್ಣನವರು ಅವರುಗಳಿಗೆ ಹಿತೋಕ್ತಿ ಹೇಳಿ, ಎಲ್ಲರೂ ಅಣ್ಣತಮ್ಮಂದಿರಂತೆ ಇನ್ನುಮುಂದೆ ವರ್ತಿಸಬೇಕೆಂದೂ ತಿಳಿಸಿದರು.

೩ ಗಂಟೆಗಳ ಕಾಲ ಚರ್ಚೆ ನಡೆದು, ಇನ್ನು ಮುಂದೆ ಎರಡು ಕೋಮಿನವರೂ ಸ್ನೇಹ ಸೌಹಾರ್ದಗಳಿಂದ ಇರಬೇಕೆಂದು ನಿರ್ಧರಿಸಲಾಯಿತು.

ಮುಂದೆ ಹರಜನರು ಅರಮನೆ ಮುಂದೆ ಕುಸ್ತಿಯಲ್ಲಿ ಭಾಗವಹಿಸುವ ಬಗ್ಗೆ ಇಷ್ಟರಲ್ಲೇ ನಡೆಯುವ ನಗರ ಗರಡಿ ಸಂಘದ ಸಭೆಯಲ್ಲಿ ನಿರ್ಧಾರಕ್ಕೆ ಬರಬೇಕೆಂದೂ ತೀರ್ಮಾನಿಸಲಾಯಿತು.

ಸತ್ಕಾರ ಕೂಟ

ರಾಜಧಾನಿಯ ವರಲಕ್ಷ್ಮೀ ಸಂಗೀತ ಮಂದಿರದವರು ಕಳೆದ ಶನಿವಾರ ಸಂಜೆ ಚೀಣಾ ಪ್ರವಾಸದಿಂದ ಹಿಂದಿರುಗಿರುವ ಶ್ರೀ ಬಿ. ದೇವೇಂದ್ರಪ್ಪನವರ ಗೌರವಾರ್ಥವಾಗಿ ಒಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು. ಶ್ರೀ ಕೆ. ಕೃಷ್ಣಸ್ವಾಮಿಅಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ಸಹೋದರರು ಸ್ವಾಗತ ಬಯಸಿದರು.

ನಾಟಕರತ್ನ ಜಿ.ಹೆಚ್. ವೀರಣ್ಣನವರ ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)

2--11--53ನೇ ರಾತ್ರಿ 10 ಗಂಟೆಗೆ

ಶಿವರಾಂಪೇಟೆಯಲ್ಲಿರುವ ರತ್ನಾವಳಿ ಥಿಯೇಟರಿನಲ್ಲಿ

ಅಡ್ಡದಾರಿ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ರಾಜಾಜಿ ಮೇಲೆ ಮದ್ರಾಸ್ ಕಾಂಗ್ರೆಸ್ಸಿಗರ ಆರೋಪಣೆ

ಪ್ರಧಾನಿ ನೆಹರೂರವರಿಂದ ತಿರಸ್ಕಾರ

ಮದ್ರಾಸಿನ ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ಅಲ್ಲಿನ ಕಾಂಗ್ರೆಸ್ ಪಕ್ಷದ ನಾಯಕರಾಗಿ ಅಧಿಕಾರದಲ್ಲಿರುವುದು ಪ್ರಜಾಪ್ರಭುತ್ವಕ್ಕೆ ವಿರೋಧವೆಂದು ಮದ್ರಾಸ್ ಶಾಸನಸಭೆಯ ಕಾಂಗ್ರೆಸ್ ಪಕ್ಷದ ೪೦ ಮಂದಿ ಸದಸ್ಯರು ರಾಜಾಜಿ ಮೇಲೆ ಕೆಲವು ಆಪಾದನೆಗಳನ್ನು ಹೊರಿಸಿ ಪ್ರಧಾನಿ ನೆಹರೂರವರಿಗೆ ಕಳುಹಿಸಿದ್ದ ಪತ್ರವನ್ನು ಈಗ ನೆಹರೂ ತಿರಸ್ಕರಿಸಿ, ರಾಜಾಜಿ ನಾಯಕರಾಗಿರುವುದು ರಾಜ್ಯಾಂಗಕ್ಕೆ ವಿರೋಧವಲ್ಲವೆಂದೂ, ಅವರ ಆಡಳಿತದಿಂದ ಮದ್ರಾಸ್ ಉತ್ತಮಗೊಂಡಿದೆಯೆಂದೂ ಉತ್ತರ ಬರೆದಿದ್ದಾರೆ.

ರಣಜಿತ್

5—11—53 ರಿಂದ ಅಮೋಘಪ್ರಾರಂಭ

ನಾದಿರಾ, ಅಶೋಕ್‌ಕುಮಾರ್ ನಟಿಸಿರುವ

★ ನಗ್ಮಾ ★ (ಹಿಂದಿ)

ಹೊಸದಾಗಿ ಬಂದಿದೆ

ರ್‍ಯಾಲಿ ಕಂಪೆನಿಯವರ ರಾಬಿನ್‌ಹುಡ್ ಸೈಕಲ್‌ಗಳು, ಮಕ್ಕಳ ಟ್ರೈಸಿಕಲ್‌ಗಳು ಮತ್ತು ಗಾಡಿಗಳು.

ಶಾರದಾ ಸೈಕಲ್ ಮತ್ತು ವಾಚ್ ಸ್ಟೋರ್ಸ್, ದೊಡ್ಡಗಡಿಯಾರ ಚೌಕ ಮೈಸೂರು.

ಪ್ರಕಾಶಕರು ಮತ್ತು ಮುದ್ರಕರು:

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೬೧

೩-೧೧-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕೆರೆಗಳು ಒಡೆದು ೫೦ ಲಕ್ಷ ರೂ. ನಷ್ಟ

೬ ಸಾವಿರ ಎಕರೆ ನೀರಿನಲ್ಲಿ ಮುಳಗಿದೆ

ಮೈಸೂರು ಸಂಸ್ಥಾನದಲ್ಲಿ ಕಳೆದ ತಿಂಗಳು ಉಂಟಾದ ವಿಪರೀತ ಮಳೆಯಿಂದ ೧೨ ಭಾರಿ ಮತ್ತು ಸಣ್ಣ ಕೆರೆಗಳು ಒಡೆದು, ಒಟ್ಟು ೫೦ ಲಕ್ಷ ರೂ. ನಷ್ಟವಾಗಿದೆಯೆಂದು ಅಂದಾಜುಮಾಡಲಾಗಿದೆ.

ಮೈಸೂರು ಜಿಲ್ಲೆಯ ಚಾಮರಾಜನಗರದ ಕೆರೆ, ಮಂಡ್ಯ ಜಿಲ್ಲೆಯ, ನೆಲ್ಲಹಳ್ಳಿ ಕೆರೆ, ಚಿತ್ರದುರ್ಗ ಜಿಲ್ಲೆಯಲ್ಲಿ ನೇರಳೆ ಕೆರೆ, ಬಲ್ಲಾಳ ಸಮುದ್ರ, ಸಂಗೇನ ಹಳ್ಳಿ ಮತ್ತು ಕಪ್ಪನ ಹಳ್ಳಿ ಕೆರೆಗಳು, ಹಾಸನ ಜಿಲ್ಲೆಯಲ್ಲಿ ಕನಕನಕಟ್ಟೆ, ಕೀರ್ತನ ಕೆರೆ, ಹುಣಸೆ ಕೆರೆ, ಮತ್ತು ಚಿಕ್ಕಮಗಳೂರಿನಲ್ಲಿ ಬೆಳವಾಡಿ, ಸನಗಸಂದ್ರ ಮತ್ತು ಪಂಚಹಳ್ಳಿ ಕೆರೆಗಳಿಗೆ ಅಪಾಯ ಒದಗಿದೆ. ಮೇಲ್ಕಂಡ ಪ್ರದೇಶಗಳಲ್ಲಿ ೫-೬ ಸಾವಿರ ಎಕರೆ ಬೆಳೆದ ಪೈರು ನೀರಿನಲ್ಲಿ ಮುಳುಗಿಹೋಗಿವೆ. ೧ ಸಾವಿರ ಎಕರೆಯ ಭತ್ತದ ಪೈರಿಗೆ ನಷ್ಟವಾಗಿದೆ.

ಎಲ್ಲಾ ಕೆರೆಗಳನ್ನು ರಿಪೇರಿ ಮಾಡುವ ಕೆಲಸ ಪ್ರಾರಂಭವಾಗಿದೆ.

ಸುಂದರ ರಾಮರಾಯರ ನಿಧನ

ಮೈಸೂರು ೩

ಉತ್ತರ ಪ್ರದೇಶದಲ್ಲಿ ಅಕೌಂಟೆಂಟ್ ಜನರಲ್ ಆಗಿದ್ದ ಮೈಸೂರಿನವರಾದ ಶ್ರೀ ಸಿ. ಸುಂದರ ರಾಮರಾಯರು ರಜಾದ ಮೇಲೆ ಇಲ್ಲಿಗೆ ಆಗಮಿಸಿದ್ದರಷ್ಟೆ. ಅವರು ಮೊನ್ನೆ ದಿನ ಶ್ರೀರಂಗಪಟ್ಟಣಕ್ಕೆ ಹೋಗಿ ಅಲ್ಲಿ ಶ್ರೀರಂಗಸ್ವಾಮಿ ದರ್ಶನ ಪಡೆದುಕೊಂಡು ವಾಪಸು ರೈಲಿಗೆ ಬರುತ್ತಿದ್ದಾಗ ಸಮೀಪದ ಮೈದಾನದಲ್ಲಿ ಹೃದಯ ಕ್ರಿಯೆ ನಿಂತು ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಅವರ ಬಂಧುಗಳು ಕೂಡಲೇ ಇಲ್ಲಿಂದ ತೆರಳಿ ಅವರ ಕಳೇಬರವನ್ನು ರಾಜಧಾನಿಗೆ ತಂದು ನಿನ್ನೆ ಮಧ್ಯಾಹ್ನ ಅಂತಕ್ರಿಯೆ ನಡೆಸಿದರು.

ದಿವಂಗತರಿಗೆ ಪತ್ನಿಯೂ ಮತ್ತು ೭ ಮಂದಿ ಮಕ್ಕಳೂ ಇದ್ದಾರೆ. ಮೈಸೂರು ಪುರಸಭೆಯ ಆರೋಗ್ಯ ಇಲಾಖೆಯಲ್ಲಿದ್ದು ಇತ್ತೀಚೆಗೆ ಕೇಂದ್ರ ಸರ್ಕಾರದ ಹುದ್ದೆಗೆ ಹೋಗಿರುವ ಶ್ರೀ ಸಿ. ಆನಂದರಾವ್ ರಾವ್ ರವರು ದಿವಂಗತರ ತಮ್ಮಂದಿರು.

ಕೃಷ್ಣರಾಜೇಂದ್ರ ಸೊಸೈಟಿ ಅಧಿಕಾರವರ್ಗ

ಮೈಸೂರು ೩

ಶ್ರೀಕೃಷ್ಣರಾಜೇಂದ್ರ ಸೊಸೈಟಿಯ ಅಧಿಕಾರವರ್ಗದ ಆಯ್ಕೆಯು ನಡೆದು ಶ್ರೀ ವೈ. ಚಂದ್ರಶೇಖರ ಶಾಸ್ತ್ರಿಯವರು ಅಧ್ಯಕ್ಷ ಶ್ರೀ ಟಿ. ಚಂದ್ರಶೇಖರಯ್ಯ ಉಪಾಧ್ಯಕ್ಷ ಮತ್ತು ಶ್ರೀ ಟಿ. ಎನ್. ಸುಬ್ಬರಾವ್ ಕಾರ್ಯದರ್ಶಿಗಳಾಗಿ ಚುನಾಯಿತರಾಗಿದ್ದಾರೆ.

ಕರ್ನಾಟಕ ನಿಯೋಗದವರಿಗೆ ಭರವಸೆ

ಪ್ರಾಂತ್ಯ ಪುನರ್ ವಿಂಗಡನೆ ಬಗ್ಗೆ ಮುಂದಿನ ತಿಂಗಳಿನೊಳಗಾಗಿ ಒಂದು ಹೈಪವರ್ ಕಮೀಷನ್ ನೇಮಿಸಲಾಗುವುದೆಂದೂ, ಅದು ತನ್ನ ವರದಿಯನ್ನು ೯ ತಿಂಗಳಿನೊಳಗಾಗಿ ಒಪ್ಪಿಸುವುದೆಂದೂ ಆದ್ದರಿಂದ ಸಮಿತಿಯು ವರದಿ ಒಪ್ಪಿಸುವವರೆಗೆ ಶಾಂತರೀತಿಯಲ್ಲಿ ಕನ್ನಡಿಗರು ಇರಬೇಕೆಂದೂ ಕೇಂದ್ರ ಗೃಹಸಚಿವ ಡಾ॥ ಕೆ.ಎನ್. ಖಟ್ಜು ರವರು ಮಂಗಳೂರಿನಲ್ಲಿ ಕರ್ನಾಟಕ ಪ್ರಾಂತ್ಯ ನಿಯೋಗದವರಿಗೆ ತಿಳಿಸಿದ್ದಾರೆ.

ನೇಪಾಳದ ಮಂತ್ರಿಮಂಡಲ

ನೇಪಾಳದ ಎಂ. ಪಿ. ಕೊಯಿರಾಲಾರ ಮಂತ್ರಿಮಂಡಲದಲ್ಲಿ ನಾಲ್ಕು ಸ್ಥಾನಗಳನ್ನು ಸ್ವೀಕರಿಸಲು ಅಲ್ಲಿನ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಒಪ್ಪಿದೆ.

ವಿದ್ಯಾರ್ಥಿಗಳಿಗೆ ಪ್ರಧಾನಿಯ ಎಚ್ಚರಿಕೆ

ಲಕ್ನೋ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ದುಂಡಾವರ್ತನೆಯನ್ನು ಪ್ರಧಾನಿ ನೆಹರೂರವರು ತೀವ್ರವಾಗಿ ಖಂಡಿಸಿ, ಅಗತ್ಯಬಿದ್ದರೆ ಕಾಲೇಜುಗಳನ್ನೆಲ್ಲಾ ಮುಚ್ಚಿ ಬೀಗ ಹಾಕಿಬಿಡುವುದಾಗಿ ಎಚ್ಚರಿಕೆ ಇತ್ತಿದ್ದಾರೆ

ವಿದ್ಯೆ ಕಲಿತು ಉತ್ತಮ ವ್ಯಕ್ತಿತ್ವ ಬೆಳಸಿಕೊಳ್ಳಲು ವಿದ್ಯಾರ್ಥಿಗಳನ್ನು ವಿಶ್ವವಿದ್ಯಾನಿಲಯಕ್ಕೆ ಕಳುಹಿಸಲಾಗುತ್ತಿದೆಯೋ ಅಥವ ತೀರಾ ಅಶಿಸ್ತಿನ ಕೃತ್ಯಗಳಿಗೆ ಕೈಹಾಕಲು ಕಳುಹಿಸಲುಗುತ್ತಿದೆಯೋ ಎಂದು ಅವರು ಕೇಳಿದ್ದಾರೆ ಈಗಿನ ಯುವಕರು ಮುಂದಿನ ರಾಷ್ಟ್ರದ ನಾಯಕರು ಈಗ ಇಂತಹ ಅಶಿಸ್ತಿನ ಕೃತ್ಯಗಳನ್ನೆಸಗುವವರು ಮುಂದೆ ಯಾವರೀತಿ ರಾಷ್ಟ್ರದ ಆಡಳಿತವನ್ನು ನಿರ್ವಹಿಸಬಲ್ಲರು. ಯಾವುದಕ್ಕಾದರೂ ಉಪವಾಸ ಮುಷ್ಕರ ಹೂಡಿಬಿಡುವುದು ಒಂದು ಫ್ಯಾಷನ್ ಮತ್ತು ತಮಾಷೆ ಆಗಿಬಿಟ್ಟಿದೆ. ಅವಶ್ಯಕತೆಯಿದ್ದರೆ ಈಗಿರುವ ವಿಶ್ವವಿದ್ಯಾನಿಲಯಗಳನ್ನು ಮುಚ್ಚಿ ಹೊಸ ವಿದ್ಯಾಲಯಗಳನ್ನು ಆರಂಭಿಸಿ ಮೂಲಶಿಕ್ಷಣಗಳ ಪದ್ಧತಿಗೆ ಹೆಚ್ಚು ಬೆಂಬಲ ಕೊಡಲಾಗುವುದು-ಎಂದು ನೆಹ್ರೂ ತಿಳಿಸಿದ್ದಾರೆ.

ಅಮೆರಿಕದಲ್ಲಿ ಮಹಿಳಾ ಕೆಲಸಗಾರರು

ಅಮೇರಿಕದ ಮಹಿಳೆಯರಲ್ಲಿ ೫೦ ಸಾವಿರ ಪತ್ರಿಕೋದ್ಯೋಗಿಗಳು, ೭ ಸಾವಿರ ಇಂಜನಿಯರು, ೧೧ ಸಾವಿರ ಡಾಕ್ಟರು ಮತ್ತು ೬ ಸಾವಿರ ಲಾಯರುಗಳು ಇದ್ದಾರೆಂದೂ, ೧೯೦ ಲಕ್ಷ ಮಂದಿ ಮಹಿಳೆಯರು ಕಾರ್ಮಿಕ ಸಂಸ್ಥೆಯ ಸದಸ್ಯರೆಂದೂ ಅಂದಾಜು ಮಾಡಲಾಗಿದೆ. ಈಗ ಅಲ್ಲಿನ ಕಾಂಗ್ರೆಸ್ಸಿನಲ್ಲಿ ೧೨ ಮಹಿಳೆಯರು ಇದ್ದಾರೆ.

ನೋಟಿನ ಬಣ್ಣದ ಬದಲಾವಣೆ

ಒಂದು ರೂಪಾಯಿನ ನೋಟಿನ ಈಗಿನ ಕಂದು ಬಣ್ಣವನ್ನು ಕೆನ್ನೀಲಿ ಬಣ್ಣಕ್ಕೆ ಇನ್ನು ಮುಂದೆ ಬದಲಾಯಿಸಲಾಗುವುದೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ.

ಆಂಧ್ರದಲ್ಲಿ ರಾಜಕೀಯ ಬಂದಿಗಳಿಲ್ಲ

ಹೊಸ ಆಂಧ್ರಪ್ರಾಂತ್ಯದಲ್ಲಿ ಯಾವ ರಾಜಕೀಯ ಖೈದಿಗಳೂ ಇಲ್ಲವೆಂದು ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂ ತಿಳಿಸಿದ್ದಾರೆ.

○ ಬೀಹಾರ್ ಪ್ರವಾಸವನ್ನು ಮುಗಿಸಿಕೊಂಡು ನಿನ್ನೆಯ ದಿನ ಪ್ರಧಾನಿ ನೆಹರೂರವರು ದೆಹಲಿಗೆ ಹಿಂತಿರುಗಿದರು.

ಜಪಾನ್ ಕಂಪೆನಿಯೊಡನೆ ಸದ್ಯದಲ್ಲೇ ಒಪ್ಪಂದ

ಮೈಸೂರು ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಇನ್ಸುಲೇಟರುಗಳನ್ನು ತಯಾರಿಸಲು ಜಪಾನಿನ ಕಂಪೆನಿಯೊಂದರಲ್ಲಿ ಮೈಸೂರು ಸರ್ಕಾರ ಸದ್ಯದಲ್ಲೇ ಒಪ್ಪಂದ ಮಾಡಿಕೊಳ್ಳಲಿದೆಯೆಂದು ಅಲ್ಲಿ ಪ್ರವಾಸ ಮಾಡುತ್ತಿರುವ ಕೈಗಾರಿಕಾ ಶಾಖೆ ಡೈರೆಕ್ಟರ್ ಶ್ರೀ ಇ ವಿ. ಗಣಪತಿ ಅಯ್ಯರ್ ತಿಳಿಸಿದ್ದಾರೆ ಮೇಲ್ಕಂಡ ಯೋಜನೆಗೆ ೫೦ ಲಕ್ಷ ರೂ. ಖರ್ಚಾಗುವುದೆಂದು ಹೇಳಲಾಗಿದೆ.

ಆಧುನಿಕ ರೀತಿಯ ಆಸ್ಪತ್ರೆ

ಅಸ್ಸಾಂನ ಇಂಫಾಲಿನಲ್ಲಿ ಭಾರತ ಸರಕಾರದ ಆರೋಗ್ಯ ಸಚಿವ ರಾಜಕುಮಾರಿ ಅಮೃತಕೌರ್‌ರವರು ಒಂದು ನೂತನ ಆಸ್ಪತ್ರೆಯನ್ನು ಪ್ರಾರಂಭಮಾಡಿದರು.

ಈ ಆಸ್ಪತ್ರೆಯನ್ನು ಒಂದು ಕೋಟಿ ರೂಪಾಯಿಗಳ ವೆಚ್ಚದಲ್ಲಿ ಅತ್ಯಾಧುನಿಕ ರೀತಿಯಲ್ಲಿ ಕಟ್ಟಲಾಗಿದೆ. ಇದರಲ್ಲಿ ೫೦೦ ಹಾಸಿಗೆಗಳಿವೆ. ೮೦೦ ಹಾಸಿಗೆಗಳನ್ನು ಹಾಕಲು ವ್ಯವಸ್ಥೆಯನ್ನು ಮಾಡಲಾಗಿದೆ.

ಸೌಹಾರ್ದ ಪಡೆಯ ಮೇಲೆ ಧಾಳಿ

ಭಾರತ ಸರ್ಕಾರದ ನೂರು ಮಂದಿಯ ಸೌಹಾರ್ದ ಗುಂಪೊಂದು ಅಸ್ಸಾಮಿನ ಅರಣ್ಯ ಗುಡ್ಡಗಳ ಪ್ರದೇಶದಲ್ಲಿರುವ ಟಾಗಿನ್ ಜನಾಂಗದ ಅಭಿವೃದ್ಧಿ ಬಗ್ಗೆ ಅಲ್ಲಿ ಪ್ರವಾಸ ಮಾಡುತ್ತಿರುವಾಗ್ಗೆ ಅವರುಗಳ ಮೇಲೆ ಅರಣ್ಯವಾಸಿಗಳು ಏಕಾಏಕಿ ಬಿದ್ದು ೩ ಜನರನ್ನು ಕೊಂದರೆಂದೂ, ಅನೇಕರಿಗೆ ಗಾಯವಾಗಿದೆಯೆಂದೂ, ಅಲ್ಲಿಯ ಈಶಾನ್ಯಗಡಿ ಏಜನ್ಸಿ ಕಛೇರಿ ಪ್ರಕಟಿಸಿದೆ. ಆದರೆ ಈ ಘರ್ಷಣೆಗಳಿಂದ ೭೦ ಜನ ಸತ್ತರೆಂದು ಹೇಳಲಾಗುತ್ತಿದೆ

ಭಾರತ ಸೈನ್ಯಕ್ಕೆ ಹೆಚ್ಚಿಗೆ ಕಾಶ್ಮೀರಿಗಳು

ಭಾರತ ಸೈನ್ಯಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಕಾಶ್ಮೀರಿಗಳನ್ನು ಸೇರಿಸಿಕೊಳ್ಳಲಾಗುತ್ತದೆಯೆಂದೂ, ಅಲ್ಲಿರುವ ರಾಷ್ಟ್ರೀಯ ಕೇಡೆಟ್‌ದಳವನ್ನು ಭಾರತ ಕೇಡೆಟ್‌ದಳದೊಡನೆ ಐಕ್ಯಗೊಳಿಸಲಾಗುವುದೆಂದು ರಕ್ಷಣ ಶಾಖಾ ಸಚಿವ ಶ್ರೀ ಮಹಾವೀರತ್ಯಾಗಿಯವರು ಹೇಳಿದ್ದಾರೆ.

ಸಕ್ಕರೆ ಮೇಲಿನ ವಿಶೇಷ ತೆರಿಗೆ ರದ್ದು

ಈ ಸಾಲಿನಲ್ಲಿ ಬೆಳೆದ ಕಬ್ಬಿನಿಂದ ತಯಾರಾದ ಸಕ್ಕರೆ ಮೇಲೆ ಮಣಕ್ಕೆ ಒಂದು ರೂ ನಂತೆ ವಿಧಿಸಲಾಗಿದ್ದ ವಿಶೇಷ ಎಕ್ಸೈಸ್ ತೆರಿಗೆಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ.

ಪಾಕೀಸ್ತಾನ್ ಇಸ್ಲಾಮಿಕ್ ರಿಪಬ್ಲಿಕ್

ಪಾಕೀಸ್ತಾನವು 'ಇಸ್ಲಾಮಿಕ್ ರಿಪಬ್ಲಿಕ್ ಆಫ್ ಪಾಕೀಸ್ತಾನ್' ಎಂದು ಆಗಬೇಕೆಂದು ಅಲ್ಲಿಯ ರಾಜ್ಯಾಂಗಸಭೆಯು ತೀರ್ಮಾನಿಸಿದೆ.

ಟೆಸ್ಟ್ ಪಂದ್ಯ ರದ್ದು

ಭಾರತ ಮತ್ತು ಸಿಲ್ವರ್‌ಜ್ಯೂಬಿಲಿ ಟೀಮುಗಳಿಗೆ ಇದೇ ೫ನೇ ತಾರೀಖಿನಿಂದ ನಡೆಯಬೇಕಾಗಿದ್ದ ಟೆಸ್ಟ್ ಪಂದ್ಯವು ಅಲ್ಲಿಯ ಅಶಾಂತ ಪರಿಸ್ಥಿತಿಯಿಂದ ರದ್ದುಗೊಳಿಸಲಾಗಿದೆ.

ಬೌದ್ಧ ಸನ್ಯಾಸಿ ಆಗಬೇಕಂತೆ

ಸಿಲೋನಿನ ಮಾಜಿ ಪ್ರಧಾನಿ ಸೇನಾನಾಯಕೆ ಬಯಕೆ

(ನಮ್ಮ ವಿಶೇಷ ಪ್ರತಿನಿಧಿಯಿಂದ)

ಮೈಸೂರು ೩

ನಾನು ಯಾವ ರಾಜಕೀಯಕ್ಕಾಗಿಯೂ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಲಿಲ್ಲ. ಕೇವಲ ಅನಾರೋಗ್ಯ ನಿಮಿತ್ತವಾಗಿಯೇ. ಈ ಬಗ್ಗೆ ನಾನಾ ಜನರು ನಾನಾ ಪತ್ರಿಕೆಗಳು ಅನೇಕ ಊಹಾಪೋಹೆಗಳನ್ನು ಹೇಳುತ್ತಿವೆ.

ನನ್ನ ಬಳಿ ಅತ್ಯುತ್ತಮವಾದ ೩,೦೦೦ ಹಸುಗಳು, ೫೦೦೦ ರಾಸುಗಳು, ೨-೩ ಎಸ್ಟೇಟುಗಳು ಎಲ್ಲವೂ ಇವೆ. ನಾನು ಬ್ರಹ್ಮಚಾರಿ, ರಾಷ್ಟ್ರದ ಅತ್ಯುನ್ನತ ಸ್ಥಾನವನ್ನೂ ಪಡೆದಿದ್ದಾಯಿತು ನಾನು ಪ್ರಪಂಚದ ಸುಖ ಸೌಖ್ಯಗಳನ್ನು ಅನುಭವಿಸಿದ್ದಾಯಿತು. ನನ್ನ ಈಗಿನ ಮತ್ತು ಕೊನೆಯ ಅಭಿಲಾಷೆಯೇನೆಂದರೆ ನಾನು ಬೌದ್ಧ ಸನ್ಯಾಸಿಯಾಗಬೇಕೆಂಬುದು-ಎಂದು ಸಿಂಹಳದ ಮಾಜಿ ಪ್ರಧಾನಿ ಡಾ॥ ಡಡ್ಲಿ ಸೇನಾನಾಯಕೆಯವರು ನಮ್ಮ ವಿಶೇಷ ಪ್ರತಿನಿಧಿಯು ಕೃಷ್ಣರಾಜಸಾಗರದಲ್ಲಿ ಅವರನ್ನು ಭೇಟಿ ಮಾಡಿದಾಗ ತಿಳಿಸಿದರು.

ಪ್ರಧಾನಿ ನೆಹ್ರೂ ವಿಷಯವಾಗಿ ಅವರನ್ನು ಕೇಳಲಾಗಿ ಶ್ರೀ ನೆಹರೂರವರು ಭಾರತದ ಶ್ರೇಷ್ಠ ನಾಯಕರು ಅವರು ವಿಶ್ವಶಾಂತಿ ಸ್ಥಾಪನೆಯಲ್ಲಿ ಅಗ್ರಸ್ಥಾನವನ್ನು ಪಡೆಯುವುದರಲ್ಲಿ ಸಂದೇಹವಿಲ್ಲ. ಸ್ವಲ್ಪಕಾಲ ದೆಹಲಿಯಲ್ಲಿ ವಿಶ್ರಾಂತಿ ಪಡೆಯಲು ನನ್ನನ್ನು ಅವರು ಆಹ್ವಾನಿಸಿದ್ದರು. ಆದರೆ ಹವಾಮಾನದ ಅನಾನುಕೂಲತೆಯಿಂದ ಹೋಗಲು ಸಾಧ್ಯವಾಗಲಿಲ್ಲವೆಂದು ಶ್ರೀ ಸೇನಾನಾಯಕೆಯವರು ಹೇಳಿದರು.

ಮುಂದೆ ಮೈಸೂರಿಗೆ ಭೇಟಿ ಇತ್ತಾಗ ತಾವು ಸನ್ಯಾಸಿಯಾಗಿ ಬರುವುದಾಗಿ ಅವರು ಕೊನೆಯಲ್ಲಿ ತಿಳಿಸಿದರು.

ಶ್ರೀ ಡಡ್ಲಿ ಸೇನಾನಾಯಿಕೆಯವರು ವಿಶ್ರಾಂತಿಗಾಗಿ ತಮ್ಮ ಸಹೋದರ ಮತ್ತು ಇತರರೊಡನೆ ಕೃಷ್ಣರಾಜಸಾಗರಕ್ಕೆ ಬಂದು ಅಲ್ಲಿ ತಂಗಿದ್ದು ಊಟಿಗೆ ಪ್ರಯಾಣ ಬೆಳಸಿದರು.

ಲಕ್ನೋದಲ್ಲಿ ಪರಿಸ್ಥಿತಿ ಉತ್ತಮಗೊಳ್ಳುತ್ತಿದೆ

ಲಕ್ನೋ ನಗರದಲ್ಲಿ ಪರಿಸ್ಥಿತಿಯು ಉತ್ತಮಗೊಳ್ಳುತ್ತಿರುವುದಾಗಿ ತಿಳಿಯಬರುತ್ತದೆ. ನಿನ್ನೆ ಬೆಳಗ್ಗೆ ಗೂಂಡಾಗಳು ಒಂದು ಅಂಚೆ ಕಛೇರಿಗೆ ಬೆಂಕಿಯನ್ನಿಟ್ಟರು. ಕೆಲವೆಡೆ ಟೆಲಿಫೋನ್ ಮತ್ತು ವಿದ್ಯುಚ್ಛಕ್ತಿ ತಂತಿಗಳನ್ನು ಕತ್ತರಿಸಿದರು. ಕರ್ಫ್ಯೂವನ್ನು ಅನೇಕ ಕಡೆ ಜನರು ಉಲ್ಲಂಘಿಸಿದರು. ಈ ಕೃತ್ಯಗಳಿಗಾಗಿ ನಿನ್ನೆಯದಿನ ೩೧೪ ಜನರ ದಸ್ತಗಿರಿಗಳಾದವು. ಸಂಜೆಯಿಂದ ಯಾವ ಘಟನೆಗಳೂ ನಡೆಯಲಿಲ್ಲ.

ಪೊಲೀಸಿನವರ ಕೃತ್ಯಗಳನ್ನು ಪ್ರತಿಭಟಿಸಲು ಭೂಪಾಲ್, ಗ್ವಾಲಿಯರ್, ಹೈದರಾಬಾದ್, ಅಲಹಾಬಾದ್ ಮುಂತಾದೆಡೆ ಸಭೆ ಮತ್ತು ಹರತಾಳ ನಡೆದುವು.

ಫಸ್ಟ್‌ಗ್ರೇಡ್ ಕಾಲೇಜಿನ ರಜತಮಹೋತ್ಸವ

ಮೈಸೂರು ೩

ರಾಜಧಾನಿಯ ಫಸ್ಟ್‌ಗ್ರೇಡ್ ಕಾಲೇಜಿನ ರಜತಮಹೋತ್ಸವದಲ್ಲಿ ಭಾಗವಹಿಸಬೇಕೆಂದು ಸಾವಿರಾರು ಹಳೇ ವಿದ್ಯಾರ್ಥಿಗಳನ್ನು ಖುದ್ದಾಗಿ ನೋಡಲು ಅಸಾಧ್ಯವಾದ್ದರಿಂದ. ಹಳೇ ವಿದ್ಯಾರ್ಥಿಗಳೆಲ್ಲರೂ ಸಹಕರಿಸಿ ತಾವೇ ತಮ್ಮ ಚಂದಾ ಹಣವನ್ನು ಖಜಾಂಜಿ ಡಾ॥ ಷಡಾಕ್ಷರಸ್ವಾಮಿಯವರಿಗೆ ಕಳುಹಿಸಬೇಕೆಂದು ಅದರ ಸಮಿತಿಯವರು ಒಂದು ಮನವಿಯನ್ನು ಹೊರಡಿಸಿದ್ದಾರೆ.

ಇಂಜನಿಯರುಗಳಿಗೆ ಧಾರ್ಮಿಕ ನಾಯಕರ ಸ್ಥಾನ

ಭಾರತ ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣರವರು ಇಂಜನಿಯರುಗಳ ಸಮ್ಮೇಳನದಲ್ಲಿ ಮಾತನಾಡುತ್ತಾ ದೇಶದ ಪ್ರಗತಿಗೆ ಅಡ್ಡಿಯಾಗಿರುವ ಭೂಗೋಳಿಕ ಅಡಚಣೆಗಳನ್ನೆಲ್ಲಾ ಇಂಜನಿಯರುಗಳು ನಿರ್ಮೂಲಗೊಳಿಸಬೇಕು ಇಂಜನಿಯರುಗಳು ದೇಶದಲ್ಲಿ ಅದ್ಭುತ ಸೇವೆಯನ್ನು ಸಲ್ಲಿಸುತ್ತಲಿದ್ದಾರೆ. ಅವರಿಗೆ ಸಮಾಜದಲ್ಲಿ ಉತ್ತಮ ಸ್ಥಾನ ದೊರೆಯಬೇಕು. ಧಾರ್ಮಿಕ ನಾಯಕರಿಗೆ ಕೊಡುವಸ್ಥಾನವನ್ನು ಅವರಿಗೆ ಕೊಡಬೇಕು ಎಂದು ತಿಳಿಸಿದ್ದಾರೆ.

ಗ್ರಾಮಗಳಿಗೆ ಆರೋಗ್ಯ ಅಧಿಕಾರಿಗಳು

ಗ್ರಾಮಾಂತರ ಪ್ರದೇಶಗಳಿಗೆ ಆರೋಗ್ಯ ಅಧಿಕಾರಿಗಳನ್ನು ಒದಗಿಸಲು ಮದ್ರಾಸ್ ಸರ್ಕಾರದವರು ಮುಂದಿನವರ್ಷದಿಂದ ತರಪೇತು ಶಿಕ್ಷಣ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ನಿರ್ಧರಿಸಿದ್ದಾರೆ. ಎಸ್. ಎಸ್. ಎಲ್. ಸಿ. ಮಾಡಿದ ವಿದ್ಯಾರ್ಥಿಗಳಿಗೆ ೨ ವರ್ಷ ತರಪೇತು ಕೊಟ್ಟು ನಂತರ ಅವರನ್ನು ಗ್ರಾಮಗಳಿಗೆ ಕಳುಹಿಸಲಾಗುವುದು.

-ಮೈಸೂರು ಪೇಟೆಧಾರಣೆ-

ತಾರೀಖು ೨—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೦—	೨೧—೮
ಎಳ್ಳು	೬೫—	೪೦—೪
ಹರಳು	೩೪—	೩೫—
ಹುರಳಿ	೨೯—೬	೩೫—೧೪
ಹೆಸರು	೩೭—೧೪	೩೯—೬
ಅಲಸಂದೆ	೩೫—	೫೭—೬
ಹುಣಸೇಹಣ್ಣು	೭—	೯—೮
ಸೀಗೆಕಾಯಿ	—	—
ಮೆಣಸಿನಕಾಯಿ	೧೭—೧೨	೩೭—೧೦
ತೆಂಗಿನಕಾಯಿ	೧೭೦—	೨೨೦

ಕೋಮುವಾರು ಭೇದ ಹೆಚ್ಚುತ್ತಿದೆ

ರಾಜಾಜಿ ಹೇಳಿಕೆ

ದಕ್ಷಿಣ ಭಾರತದಲ್ಲಿ ಜಾತಿಭೇದಗಳ ತೊಂದರೆ ಮತ್ತು ಸ್ವಜನ ಪಕ್ಷಪಾತ ವಿಶೇಷವಾಗಿದೆ. ಇದನ್ನೆಲ್ಲಾ ತೊಡೆದು ಹಾಕಬೇಕೆಂದಿರುವ ಕಾಂಗ್ರೆಸ್ ಸಂಸ್ಥೆಯಲ್ಲಿರುವವರೂ ಸಹ ಇದಕ್ಕೆ ಉತ್ತೇಜನ ಕೊಡುವುದು, ಜಾತಿಗಳ ಆಧಾರದಮೇಲೆ ಸೌಲಭ್ಯ ಮತ್ತು ಹಕ್ಕುಗಳನ್ನು ಕೇಳುವುದು ವ್ಯಸನಕರ. ಇದು ರಾಜ್ಯಾಂಗಕ್ಕೆ ವಿರೋಧ. ನಾನು ಜೀವಂತನಾಗಿ ಅಧಿಕಾರದಲ್ಲಿರುವವರೆಗೂ ಇದನ್ನು ತಡೆಗಟ್ಟಲು ಯತ್ನಿಸಿ, ಇದಕ್ಕೆಲ್ಲಾ ಅವಕಾಶಕೊಡದೆ ಇರುತ್ತೇನೆ. ಕಾಂಗ್ರೆಸ್ ಅಧ್ಯಕ್ಷರು ಸಹ ಈ ವಿಷಯದಲ್ಲಿ ತೀವ್ರ ಗಮನವನ್ನು ಕೊಡಬೇಕು ಎಂದು ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ತಿಳಿಸಿ ತಮ್ಮ ಪ್ರಾಂತ್ಯದಲ್ಲಿ ಕೆಲವು ಕಾಂಗ್ರೆಸ್ಸಿಗರ ಕೋಮುವಾರು ನೀತಿಯನ್ನು ಖಂಡಿಸಿದ್ದಾರೆ.

ಕಾರ್ತಿಕ ಮಾಸದ ಜಾತ್ರೆ

ಟಿ ನರಸೀಪುರ ತಾಲ್ಲೂಕು ಬನ್ನೂರು ಹೋಬಳಿ ಕೊಡಗಹಳ್ಳಿ ಗ್ರಾಮದ ಅರವಟ್ಟಿಗೆ ಕೊಪ್ಪಲಿನ ಶ್ರೀ ಮಹದೇಶ್ವರಸ್ವಾಮಿಯ ಕಾರ್ತಿಕ ಮಾಸದ ಜಾತ್ರೆಯು ಇದೇ ೫ ರಿಂದ ೯ ನೇ ತಾರೀಖಿನವರೆಗೆ ನಡೆಯುವುದು ಭಕ್ತಾದಿಗಳು ಭಾಗವಹಿಸಬೇಕೆಂದು ಕೋರಲಾಗಿದೆ.

ಇದರ ಪರಿಚಯವಿದೆಯೆ !!

ಒಂಟಿ ಪೆಟ್ಟಿಗೆಗಳಲ್ಲಿರುವ

ಮೈಸೂರು--

--ಸಾಬೂನು

●●●●

ಸಂಪೂರ್ಣವಾಗಿ ಶುದ್ಧವಾದ, ಯಾವ ಬೆರಕೆಯೂ, ಅಪಾಯಕರ ರಸಾಯನಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮವಾದ ಒಗೆಯುವ ಸಾಬೂನು. ಯಾವ ಶ್ರಮವಿಲ್ಲದೆಯೇ ಶುಭ್ರವಾಗಿ ತೊಳೆಯುತ್ತದೆ. ತೊಂದರೆ, ಶ್ರಮ, ಕಾಲ, ಹಣ ಮಿಗಿಸುತ್ತದಲ್ಲದೆ, ಸಂಪೂರ್ಣ ತೃಪ್ತಿಯನ್ನೂ ಕೊಡುತ್ತದೆ.

★ ● ● ★

ಒಂದು ಪೆಟ್ಟಿಯನ್ನು ಬಳಸಿನೋಡಿ.
ಎಲ್ಲ ಕಡೆಯೂ ಸಿಗುತ್ತದೆ.

....

ಗವರ್ನಮೆಂಟ್ ಸೋಪ್--
ಫ್ಯಾಕ್ಟರಿ. ಬೆಂಗಳೂರು.
ಐ. ಎಸ್. ಟಿ. ಎಂ. ಎ. ಮೆಂಬರು

ಮಲೇರಿಯಾ ಹತೋಟಿ ಯೋಜನೆ

ಮೈಸೂರು ೩

ಇದೇ ೪ನೇ ತಾರೀಖು ಬುದವಾರ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಆರೋಗ್ಯ ಸಚಿವ ಶ್ರೀ ಟಿ. ಚನ್ನಯ್ಯನವರು ರಾಷ್ಟ್ರೀಯ ಮಲೇರಿಯಾ ಹತೋಟಿ ಯೋಜನೆಯ ಆರಂಭೋತ್ಸವವನ್ನು ನೆರವೇರಿಸುವರು. ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸುವರು.

ಭಾರತಕ್ಕೆ ವಿದೇಶಗಳಿಂದ ರೈಲ್ವೆ ಇಂಜನ್‌ಗಳು

ಭಾರತ ಸರ್ಕಾರವು ತನ್ನ ಪಂಚವಾರ್ಷಿಕ ಯೋಜನೆಯಪ್ರಕಾರ ಇನ್ನು ೩ ವರ್ಷಗಳಲ್ಲಿ ೭೫೦ ರೈಲ್ವೆ ಇಂಜನ್‌ಗಳನ್ನು ಕೊಳ್ಳಲು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ. ಈ ಸಾಲಿನಲ್ಲಿ ಜಪಾನ್, ಆಸ್ಟ್ರಿಯಾ ಮತ್ತು ಪಶ್ಚಿಮ ಜರ್ಮನಿಯಿಂದ ೪೦೦ ಇಂಜನ್‌ಗಳನ್ನು ತರಿಸಿಕೊಳ್ಳಲಾಗುತ್ತದೆ. ಇವುಗಳ ಬೆಲೆಯು ೧೫ ಕೋಟಿ ರೂಪಾಯಿಗಳಾಗುತ್ತವೆ. ಇನ್ನೆರಡು ವರ್ಷಗಳಲ್ಲಿ ಉಳಿದ ೩೫೦ ಇಂಜನ್‌ಗಳನ್ನು ತರಿಸಲಾಗುತ್ತದೆ.

ಇಂಜನ್‌ಗಳನ್ನು ಅಲ್ಲದೆ ರೈಲ್ವೆ ವ್ಯಾಗನ್‌ಗಳನ್ನೂ ತರಿಸಿಕೊಳ್ಳಲಾಗುತ್ತದೆ. ದೇಶದಲ್ಲಿ ಈಗ ತಯಾರಾಗುತ್ತಿರುವ ಜೊತೆಗೆ ವಿದೇಶಗಳಿಂದ ತರಿಸಿಕೊಳ್ಳಲಾಗುತ್ತದೆ.

ಕೊರಿಯಾದಿಂದ ವಾಪಸಾಗವುದಿಲ್ಲ

ಕೊರಿಯಾ ಯುದ್ಧ ಖೈದಿಗಳ ಮೇಲ್ವಿಚಾರಕದಲ್ಲಿರುವ ಭಾರತದ ಸೈನ್ಯವು ತಮ್ಮ ಸಾಮರ್ಥ್ಯವಿದ್ದಷ್ಟು ಕಾರ್ಯವನ್ನು ನಿರ್ವಹಿಸದೆ ಬಿಡುವುದಿಲ್ಲ ಮತ್ತು ಹಿಂದಿರುಗುವುದಿಲ್ಲ ಎಂದು ಪ್ರಧಾನಿ ನೆಹರೂ ಸ್ಪಷ್ಟಪಡಿಸಿದ್ದಾರೆ.

ಎ.ಐ.ಸಿ.ಸಿ. ಅಧಿವೇಶನ

ಎ.ಐ.ಸಿ.ಸಿ. ಅಧಿವೇಶನವು ಮುಂದಿನ ಜನವರಿ ೨೦ ರಿಂದ ೨೪ ರವರೆಗೆ ಕಲ್ಕತ್ತದ ಬಳಿ ಕಲ್ಯಾಣಿ ಎಂಬಲ್ಲಿ ನಡೆಯುತ್ತದೆ

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ
ಥಿಯೇಟ್ರಿಕಲ್ ಕಂಪೆನಿ (ರಿ)
3--11--53ನೇ ರಾತ್ರಿ 10 ಗಂಟೆಗೆ
ಶಿವರಾಂಪೇಟೆಯಲ್ಲಿರುವ ರತ್ನಾವಳಿ
ಥಿಯೇಟರಿನಲ್ಲಿ

ಅಡ್ಡದಾರಿ

ಎಂಬ ಸಾಮಾಜಿಕ ನಾಟಕವನ್ನು
ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋಸ್ಟ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೬೨

೪-೧೧-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪಾಕೀಸ್ತಾನಕ್ಕೆ ಅಮೆರಿಕದ ಮಿಲಿಟರಿ ನೆರವು?

ಈಬಗ್ಗೆ ವಾಷಿಂಗ್‌ಟನ್ನಲ್ಲಿ ಸಮಾಲೋಚನೆ

ಪಾಕೀಸ್ತಾನಕ್ಕೆ ಅಮೆರಿಕಾವು ಎರಡೂವರೆ ಕೋಟಿ ಡಾಲರುಗಳ ಮಿಲಿಟರಿ ಸಹಾಯವನ್ನು ನೀಡಲು ನಿರ್ಧರಿಸಿರುವುದಾಗಿ ಹೇಳಲಾಗುತ್ತಿದೆ. ಅಮೆರಿಕಾಕ್ಕೆ ತೆರಳಿರುವ ಪಾಕೀಸ್ತಾನದ ಗೌರ್ನರ್ ಜನರಲ್ ಗುಲಾಂಮಹಮದ್‌ರವರಿಗೂ ಅಮೆರಿಕಾದ ಉನ್ನತ ಅಧಿಕಾರಿಗಳಿಗೂ ಈ ವಿಷಯದಲ್ಲಿ ವಾಷಿಂಗ್‌ಟನ್ನಲ್ಲಿ ಸಮಾಲೋಚನೆ ನಡೆದು ಒಂದು ಒಪ್ಪಂದವಾಗುವುದೆಂದು ತಿಳಿಯಬರುತ್ತದೆ.

ಕಾನ್ಪುರದಲ್ಲಿ ಗಲಭೆ ಮತ್ತು ಲೂಟಿ

ಲಕ್ನೋ ವಿದ್ಯಾರ್ಥಿಗಳ ಮೇಲೆ ಗುಂಡು ಹಾರಿಸಿದುದನ್ನು ಪ್ರತಿಭಟಿಸಲು ಕಾನ್ಪುರದಲ್ಲಿ ಮುಷ್ಕರ,ಹರಿತಾಳ ಮತ್ತು ಗಲಭೆಗಳು ನಡೆದುವು. ಎಲ್ಲಾ ಅಂಗಡಿ ಮತ್ತು ಸಿನಿಮಾಗಳನ್ನು ಮುಚ್ಚಲಾಗಿತ್ತು. ವಿದ್ಯಾರ್ಥಿಗಳ ಗುಂಪು ಜಲ್ಲಾ ಕೋರ್ಟುಗಳನ್ನು ಮುಚ್ಚಿ, ಕಲ್ಲು ಬೀರಿ, ಅನೇಕ ಸರ್ಕಾರಿ ನೌಕರರ ಮೇಲೆ ಧಾಳಿ ನಡೆಸಿದರು.ಕಾಗದ ಪತ್ರಗಳನ್ನು ಸುಡಲು ಯತ್ನಿಸಿದರು.ಅನೇಕ ಕೈಗಾರಿಕೆ ಪ್ರದೇಶಗಳಲ್ಲಿ ಪುಂಡರು ಎರಡು ಕಡೆ ಬೆಂಕಿ ಇಟ್ಟರು. ಅಂಚೆ ಕಛೇರಿಗೆ ಬೆಂಕಿಯಿಡಲು ಪ್ರಯತ್ನಿಸಲಾಯಿತು. ಅನೇಕ ಅಂಗಡಿಗಳನ್ನು ಲೂಟಿ ಮಾಡಲಾಯಿತು.ಅಂಚೆವ್ಯಾನು ಮತ್ತು ಎರಡು ಬಸ್ಸುಗಳನ್ನು ನಾಶಪಡಿಸಿದರು. ಟೆಲಿಫೋನ್ ಮತ್ತು ವಿದ್ಯುತ್ ತಂತಿಗಳನ್ನ ಕಿತ್ತುಹಾಕಿದರು.

ಕಾರುಗಳ ಅಪಘಾತದಿಂದ ವರ್ಷಕ್ಕೆ ೨೫೦೦ ಜನರ ಸಾವು

ಪ್ರತಿವರ್ಷವೂ ರಸ್ತೆಗಳಲ್ಲಿ ಮೋಟಾರು ವಾಹನಗಳ ಅಪಘಾತದಿಂದ ೨೫೦೦ ಮಂದಿ ಸಾಯುತ್ತಿರುವರೆಂದೂ, ೧೪ ಸಾವಿರ ಮಂದಿಗೆ ಗಾಯಗಳಾಗುತ್ತಿವೆಯೆಂದೂ ಅಂದಾಜು ಮಾಡಲಾಗಿದೆ. ರಸ್ತೆಗಳನ್ನು ಸುರಕ್ಷಿತವಾಗಿ ಮಾಡಲು ಸರ್ಕಾರ ಎಷ್ಟು ಪ್ರಯತ್ನಿಸಿದರೂ ಫಲಕಾರಿಯಾಗುವುದಿಲ್ಲ. ಅದಕ್ಕೆ ಹೆಚ್ಚು ಸಾರ್ವಜನಿಕರ ಸಹಕಾರ ಬೇಕು-ಎಂದು ಕೇಂದ್ರ ರೈಲ್ವೆ ಸಚಿವರು ತಿಳಿಸಿದ್ದಾರೆ.

★ ಬೆಂಗಳೂರಿಗೆ ಆಗಮಿಸಿದ್ದ ಕೇಂದ್ರ ಆಹಾರ ಉಪಸಚಿವ ಶ್ರೀ ಎಂ.ವಿ. ಕೃಷ್ಣಪ್ಪನವರು ನಿನ್ನೆಯದಿನ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಬೆಳೆಸಿದರು.

ರಾಜಪ್ರಮುಖರಲ್ಲಿ ಭೂದಾನ ಸಮಿತಿನಿಯೋಗ

ಮೈಸೂರು ೪

ಮೈಸೂರು ನಗರದಲ್ಲಿ ವಿನೋಬಾಭಾವೆಯವರ ಭೂದಾನಯಜ್ಞ ಚಳುವಳಿಯ ಅಂಗವಾಗಿ ಇದೇ ೮ ನೇ ತಾರೀಖು ಭಾನುವಾರ ರಾಜಪ್ರಮುಖರನ್ನು ಭೂದಾನ ಯಜ್ಞದ ಕಾರ್ಯಕರ್ತರ ತಂಡವು ಭೇಟಿ ಮಾಡಲಿದೆ.

ಗಫಾರ್‌ಖಾನರ ಬಿಡುಗಡೆಗೆ ಜನರ ಸಹಿ ಪತ್ರ

ಖಾನ್‌ಅಬ್ದುಲ್ ಗಫಾರ್‌ಖಾನರನ್ನು ಪಾಕೀಸ್ತಾನ ಸರ್ಕಾರವು ಬಂಧನದಲ್ಲಿಟ್ಟಿರುವುದು ಅಕ್ರಮವೆಂದು ತಿಳಿಸಿ, ಈ ವಿಚಾರವನ್ನು ವಿಶ್ವಸಂಸ್ಥೆ ಮುಂದೆ ತರಲು ೨೦ ಲಕ್ಷ ಜನರ ಸಹಿಯನ್ನು ಪಡೆಯಲು ಖುದಾಯ್‌ಇಂದ್‌ಮತ್ ಸಂಘದ ಅಧ್ಯಕ್ಷ ಮೌಲಾನಾ ಮಹಮದ್ ಅಕ್ಬರ್‌ರವರು ಭಾರತ ಮತ್ತು ಪಾಕೀಸ್ತಾನದಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಇಲ್ಲಿಯವರೆಗೆ ೬ ಸಾವಿರ ಸಹಿಗಳನ್ನು ಪಾಕೀಸ್ತಾನದಲ್ಲಿ ಪಡೆಯಲಾಗಿದೆ.

ಭಾರತ್ ಸ್ಕೌಟಿನ ಅಧಿಕಾರವರ್ಗ

ಭಾರತ್ ಸ್ಕೌಟ್ ಮತ್ತು ಗೈಡ್ಸ್ ರಾಷ್ಟ್ರೀಯ ಕೌನ್ಸಿಲಿನ ಸಭೆಯು ದೆಹಲಿಯಲ್ಲಿ ನಡೆದು, ಶ್ರೀ ಮಂಗಳದಾಸ್ ಎಂ. ಪಕ್ವಾಸ್‌ರನ್ನು ಅಧ್ಯಕ್ಷರನ್ನಾಗಿಯೂ,ಡಾ॥ ಹೃದಯನಾಥ್ ಖುನ್ಸ್ರುರನ್ನು ಕಮೀಷನರನ್ನಾಗಿಯೂ, ಜಸ್ಟೀಸ್ ವಿವಿನ್‌ಬೋಸರನ್ನು ಚೀಫ್ ಕಮೀಷನರನ್ನಾಗಿಯೂ, ಶ್ರೀಮತಿ ಹೆಚ್. ಎ. ಕ್ಲಾಪ್ಸನ್‌ರನ್ನು ಗೈಡ್ಸ್ ಚೀಫ್ ಕಮೀಷನರಾಗಿಯೂ ಮತ್ತು ಶ್ರೀ ರಾಮ್‌ಬಾಜ್ ಪಾಯ್‌ರನ್ನು ವ್ಯವಸ್ಥಾಪಕ ಕಮೀಷನರಾಗಿಯೂ ಚುನಾಯಿಸಲಾಗಿದೆ.

ರಾಷ್ಟ್ರೀಯ ಉಳಿತಾಯ ಯೋಜನೆ

ಮಹಿಳಾ ರಾಷ್ಟ್ರೀಯ ಉಳಿತಾಯ ಯೋಜನೆಗೆ ಮೈಸೂರು ಬ್ಯಾಂಕಿನವರು ೧ಲಕ್ಷ ರೂ ಕೊಡಲು ಒಪ್ಪಿದ್ದಾರೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿದ್ದಾರೆ.

ಲಕ್ನೋ ನಗರದಲ್ಲಿ ವಿದ್ಯಾರ್ಥಿಗಳ ಪ್ರದರ್ಶನ

ಕೆಲವು ನಾಯಕರ ಪ್ರತಿಮೆಗಳ ದಹನ

ಲಕ್ನೋ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ನಿನ್ನೆಯದಿನ ಬೆಳಗ್ಗೆ ಅಲ್ಲಿಯ ಛಾನ್ಸಲರ್ ಶ್ರೀ ಕೆ. ಎಂ. ಮುನ್ಷಿ, ವೈಸ್ ಛಾನ್ಸಿಲರ್ ಆಚಾರ್ಯ ಜುಗಲ್ ಕಿಶೋರ್ ಮತ್ತು ಕೆಲವರ ಪ್ರತಿಮೆಗಳನ್ನು ವಿಶ್ವವಿದ್ಯಾನಿಲಯದ ಬಳಿ ದಹನ ಮಾಡಿದರು.

ಆದರೆ ನಗರದಲ್ಲಿ ಅಂತಹ ಭಾರಿ ಘಟನೆಗಳಾವುವೂ ನಡೆಯಲಿಲ್ಲ. ಸುಮಾರು ೬ ಲಕ್ಷ ಜನಸಂಖ್ಯೆ ಇರುವ ನಗರವು ನಿರ್ಜನ ಪ್ರದೇಶದಂತಿದೆ. ಸಶಸ್ತ್ರ ಪೊಲೀಸಿನವರು ನಗರದಲ್ಲೆಲ್ಲಾ ಪಹರೆ ನಡಸುತ್ತಲಿದ್ದಾರೆ.

ರಾಜಾಜಿ ಸಂಪುಟಕ್ಕೆ ಜನತೆ ಬೆಂಬಲವಿಲ್ಲವೆಂದು ವರದರಾಜಲುನಾಯ್ಡು

ಕೆಲವು ವಿಧಾನಸಭೆಯ ಕಾಂಗ್ರೆಸ್ ಸದಸ್ಯರು ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರ ಮೇಲೆ ದೂರನ್ನು ಕಾಂಗ್ರೆಸ್ ಅಧ್ಯಕ್ಷ ನೆಹರೂರವರಿಗೆ ಕೊಟ್ಟ ಅದು ಹುರುಳಿಲ್ಲದ್ದು ಎಂದು ಶ್ರೀ ನೆಹರೂರವರು ತಿಳಿಸಿದಮೇಲೆ ಶ್ರೀ ರಾಜಾಜಿಯವರು ಹೇಳಿಕೆ ಕೊಟ್ಟಿರುವುದಕ್ಕೆ ವಿಧಾನಸಭೆಯ ಸದಸ್ಯರಾದ ಡಾ॥ ವರದರಾಜಲುನಾಯ್ಡುರವರು ಒಂದು ಹೇಳಿಕೆಯನ್ನು ಕೊಟ್ಟು ತಾವು ಆ ಆಪಾದನೆಗಳನ್ನು ರುಜುವಾತುಪಡಿಸಲು ಸಿದ್ಧವಿರುವುದಾಗಿಯೂ, ರಾಜಾಜಿ ಸಂಪುಟಕ್ಕೆ ಜನತೆಯ ಬೆಂಬಲವಿಲ್ಲವೆಂದೂ ಹೇಳಿದ್ದಾರೆ.

ಜಪಾನ್ ರೀತ್ಯಾ ಭತ್ತದ ವ್ಯವಸಾಯ

ಬೆಂಗಳೂರು ೪

ಬೆಂಗಳೂರು ಜಿಲ್ಲೆಯಲ್ಲಿ ಜಪಾನ್‌ಪದ್ಧತಿಯನ್ನು ಅನುಸರಿಸಿ ಬೆಳೆಯುತ್ತಿರುವ ಭತ್ತದ ಫಸಲು ಯಶಸ್ವಿಯಾಗಿ ಬರುತ್ತಿರುವುದಾಗಿ ಜಿಲ್ಲಾ ವ್ಯವಸಾಯಾಧಿಕಾರಿಗಳು ತಿಳಿಸಿರುತ್ತಾರೆ ಈ ಜಿಲ್ಲೆಯಲ್ಲಿ ಜಪಾನ್ ಪದ್ಧತಿ ರೀತಿಯಾಗಿ ೨೫೦೦ ಎಕರೆಗಳಲ್ಲಿ ಬತ್ತದ ವ್ಯವಸಾಯ ನಡೆದಿದೆ.

ಸರ್ಕಾರಿ ಆಜ್ಞೆ

ಬೆಂಗಳೂರು ಜಿಲ್ಲಾ ಎಕ್ಸೈಜುಅಧಿಕಾರಿಗಳಾದ ಶ್ರೀ ಜೆ. ಟಿ. ವಿಶ್ವನಾಥ ರವರನ್ನು ಎಕ್ಸೈಜ್‌ಕಮಿಷನರ ಅಸಿಸ್ಟೆಂಟರನ್ನಾಗಿ ನೇಮಿಸಲಾಗಿದೆ.

ಪ್ರತಿಭಟನಾ ಸಭೆ

ಮೈಸೂರು ೪

ಮೈಸೂರು ಮಹಾರಾಜಾ ಕಾಲೇಜು ಮತ್ತು ಫಸ್ಟ್‌ಗ್ರೇಡ್ ಕಾಲೇಜಿನ ಸುಮಾರು ೨೫೦-೩೦೦ ವಿದ್ಯಾರ್ಥಿಗಳು ಈ ದಿನ ಶ್ರೀ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿಲಕ್ನೋ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ನ್ಯಾಯಬದ್ಧ ಬೇಡಿಕೆಗಳ ಬಗ್ಗೆ ವಿಶ್ವವಿದ್ಯಾನಿಲಯ ಮತ್ತು ಸರ್ಕಾರದ ನೀತಿಯನ್ನು ಖಂಡಿಸಿ ಅಲ್ಲಿಯ ಗೋಲೀಬಾರಿನಲ್ಲಿ ಮಡಿದವರಿಗೆ ಸಂತಾಪವನ್ನು ಸೂಚಿಸಿರುವರೂ ನಿರ್ಣಯಗಳನ್ನು ಮಾಡಿದರು.

ಚೀಫ್ ಇಂಜನಿಯರ ಮೇಲೆ ಮೊಕದ್ದಮೆ

ಬೆಂಗಳೂರು ೪

ಜುಲೈ ೧೧ನೇ ತಾರೀಖು ಕೆಂಗೇರಿಯ ಬಳಿ ಸರ್ಕಾರಿ ಜೀಪನ್ನು ಅತಿ ವೇಗದಿಂದ ನಡೆಸಿದರೆಂಬ ಮತ್ತು ಇತರ ಆಪಾದನೆ ಮೇಲೆ ಬೆಂಗಳೂರು ದಕ್ಷಿಣ ತಾಲ್ಲೂಕು ಪೊಲೀಸಿನವರು ಸರ್ಕಾರ ಚೀಫ್ ಇಂಜನಿಯರ್ ಶ್ರೀ ಎಸ್. ಗಂಗಾಧರರವರ ಮೇಲೆ ಬೆಂಗಳೂರು ನಗರ ಮ್ಯಾಜಿಸ್ಟ್ರೇಟರ ಮುಂದೆ ಮೊಕದ್ದಮೆ ಹೂಡಿದ್ದಾರೆ.

ಶ್ರೀಯುತರ ಮೇಲೆ ಸೆಕ್ಷನ್ ೨೭೯.೩೩೭ ಮತ್ತು ೩೦೪ (ಎ) ಪ್ರಕಾರ ಛಾರ್ಜ್ ಷೀಟ್ ಹಾಕಲಾಗಿದೆ ಇದೇ ೨೩ನೇ ತಾರೀಖಿನಿಂದ ಮೊಕದ್ದಮೆ ವಿಚಾರಣೆ ಪ್ರಾರಂಭವಾಗುತ್ತದೆ.

ಪೆಪ್ಸುವಿನಲ್ಲಿ ಚುನಾವಣೆ

ರಾಷ್ಟ್ರಾಧ್ಯಕ್ಷರ ಆಡಳಿತವು ಜಾರಿಯಲ್ಲಿರುವ ಪೆಪ್ಸೂವಿನಲ್ಲಿ ಮುಂದಿನ ವರ್ಷ ಫೆಬ್ರವರಿ ಮಾಹೆಯಲ್ಲಿ ಚುನಾವಣೆಗಳು ನಡೆಯುತ್ತವೆಂದು ತಿಳಿಯ ಬರುತ್ತದೆ.

ಭಾರತದಲ್ಲಿ ವಿಮಾನ ಯಂಜನ್‌ಗಳ ತಯಾರಿಕೆ

ವಿಮಾನಗಳಿಗೆ ಬೇಕಾಗುವ ಇಂಜನ್‌ಗಳನ್ನು ಇನ್ನು ಮುಂದೆ ಭಾರತದಲ್ಲಿಯೇ ತಯಾರಿಸಲಾಗುವುದೆಂದು ರಕ್ಷಣಾ ಶಾಖಾ ಸಚಿವ ಶ್ರೀ ಮಹಾವೀರತ್ಯಾಗಿಯವರು ಹೇಳಿದ್ದಾರೆ.

ಮದ್ರಾಸಿನಲ್ಲಿ ಭಾರಿ ನೀರಾವರಿ ಯೋಜನೆಗಳು

ಕೇಂದ್ರದಿಂದ ನಾಲ್ಕುಕೋಟಿ ೨೦ ಲಕ್ಷ ರೂ. ಸಾಲ

ಎಕರೆ ಒಂದಕ್ಕೆ ೭೦೦ ರೂ. ಅಭಿವೃದ್ಧಿ ತೆರಿಗೆ ವಿಧಿಸಲು ನಿರ್ಧಾರ

ಮದ್ರಾಸ್ ಪ್ರಾಂತ್ಯದಲ್ಲಿ ೪ಕೋಟಿ ೨೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕೊಯಮತ್ತೂರು ಜಿಲ್ಲೆಯಲ್ಲಿ ಅಮರಾವತಿ ಮತ್ತು ತಿರುಚನಾಪಳ್ಳಿಯಲ್ಲಿ ವೈಗೀನದಿಗೆ ಅಣೆಕಟ್ಟುಗಳನ್ನು ಕಟ್ಟಿ ಭಾರೀ ನೀರಾವರಿ ಯೋಜನೆಗಳನ್ನು ಕೈಗೊಳ್ಳಲು ವ್ಯವಸ್ಥೆ ಮಾಡಿದೆ. ಇದಕ್ಕಾಗಿ ರೈತರಿಗೆ ಎಕರೆ ಒಂದಕ್ಕೆ ೭೦೦ ರೂಪಾಯಿಗಳ ಅಭಿವೃದ್ಧಿ ತೆರಿಗೆಯನ್ನು ವಿಧಿಸಲಾಗುತ್ತದೆ. ಇದನ್ನು ೧೦ ವರ್ಷಗಳಲ್ಲಿ ವಸೂಲ್ಮಾಡಲಾಗುತ್ತದೆ. ಇದಕ್ಕಾಗಿ ವೆಚ್ಚವಾಗುವ ಹಣವನ್ನೆಲ್ಲಾ ಕೇಂದ್ರ ಸರ್ಕಾರವು ಸಾಲದ ರೂಪದಲ್ಲಿ ಕೊಡಲಿದೆ. ಈ ಕಾರ್ಯವು ನಾಲ್ಕು ವರ್ಷಗಳಲ್ಲಿ ಪೂರೈಸಲಾಗುವುದೆಂದು ತಿಳಿಯಬರುತ್ತದೆ.

ಪಂಜಾಬ್ ರಾಜ್ಯ

ಪಂಜಾಬ್ ರಾಜ್ಯ ಸ್ಥಾಪನೆಯ ವಿಷಯದಲ್ಲಿ ಇತ್ತೀಚೆಗೆ ನಡೆಯುತ್ತಿರುವ ಚಳುವಳಿ ಮತ್ತು ಉಪವಾಸ ಸತ್ಯಾಗ್ರಹದ ವಿಷಯವಾಗಿ ಪ್ರಧಾನಿ ನೆಹರೂರವರು ಪಾರ್ಲಿಮೆಂಟ್ ಸದಸ್ಯ ಸರ್ದಾರ್ ಅಜಿತ್‌ಸಿಂಗ್‌ರಿಗೆ ಪತ್ರವೊಂದನ್ನು ಬರೆದು ಈ ಪ್ರಶ್ನೆಯನ್ನು ಕೇಂದ್ರ ಸರ್ಕಾರವು ನೇಮಿಸಲಿರುವ ಹೈಪವರ್ ಕಮೀಷನ್ ಅವಗಾಹನೆಗೆ ತರಬೇಕು. ಅವರು ಅದನ್ನು ಪರಿಶೀಲಿಸಿ, ರಚನೆ ಬಗ್ಗೆ ಸರ್ಕಾರಕ್ಕೆ ವರದಿ ಕಳುಹಿಸಿದರೆ ಆಗ ಸರ್ಕಾರವು ಅದನ್ನು ಪರಿಶೀಲಿಸುತ್ತದೆ. ಈ ಹೊಸಪ್ರಾಂತ್ಯ ಅವಶ್ಯಕತೆ ಕಂಡುಬಂದಲ್ಲಿ ಆಗ ವಿಷಯವನ್ನು ಪಾರ್ಲಿಮೆಂಟಿನ ಮುಂದೆ ತರಲಾಗುತ್ತದೆ. ಸುಮ್ಮನೆ ಉಪವಾಸ, ಸತ್ಯಾಗ್ರಹಗಳಿಂದ ಪ್ರಯೋಜನ ವೇನೂ ಇಲ್ಲ ಅಂತಹ ಬೆದರಿಕೆಗಳಿಗೆ ಸರ್ಕಾರವು ಬಗ್ಗುವುದಿಲ್ಲ-ಎಂದು ತಿಳಿಸಿದ್ದಾರೆ.

ಪಂಚವಾರ್ಷಿಕ ಯೋಜನೆ

ಭಾರತದ ಪಂಚವಾರ್ಷಿಕ ಯೋಜನೆಯಲ್ಲಿ ನೀರಾವರಿ ಮತ್ತು ವಿದ್ಯುಚ್ಛಕ್ತಿ ಕೆಲಸಗಳು ಮುಂದುವರಿಯುತ್ತಿದ್ದು, ಇಲ್ಲಿಯವರೆಗೆ ೧೪ ಲಕ್ಷ ೨೦ ಸಾವಿರ ಎಕರೆ ಜಮೀನುಗಳು ಸಾಗುವಳಿಗೆ ಬರಲು ನೀರಾವರಿ ಅನುಕೂಲತೆ ಕಲ್ಪಿಸಲಾಗಿದೆ. ೩೧೫೦೦ ಕಿಲೋವಾಟ್ ಅಷ್ಟು ವಿದ್ಯುಚ್ಛಕ್ತಿ ಹೆಚ್ಚು ಉತ್ಪನ್ನವಾಗಿದೆ.

ಮದ್ರಾಸಿನ ನೂತನ ನ್ಯಾಯಮೂರ್ತಿಗಳು

ಮದ್ರಾಸಿನ ಶ್ರೇಷ್ಠ ನ್ಯಾಯಾಸ್ಥಾನಕ್ಕೆ ಅಲ್ಲಿಯ ನ್ಯಾಯವಾದಿಗಳಾದ ಶ್ರೀಗಳಾದ ಎನ್. ರಾಜಗೋಪಾಲಯ್ಯಂಗಾರ್ ಮತ್ತು ಉಮಾಮಹೇಶ್ವರನ್ ಎಂಬುವರನ್ನು ನ್ಯಾಯಮೂರ್ತಿಗಳಾಗಿ ನೇಮಿಸಿರುವುದಾಗಿ ತಿಳಿಯಬರುತ್ತದೆ.

ಟ್ರಾಕ್ಟರುಗಳನ್ನು ಕೊಳ್ಳಲು ರೈತರಿಗೆ ಸಾಲ

ಬೆಂಗಳೂರು ೪

ರೈತರು ಟ್ರಾಕ್ಟರುಗಳನ್ನು ಕೊಳ್ಳಲು ಸಹಾಯ ಮಾಡುವುದಕ್ಕಾಗಿ ಭಾರತ ಸರ್ಕಾರವು ಮೈಸೂರು ಸರ್ಕಾರಕ್ಕೆ ಎರಡೂವರೆ ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿದೆ.

ಒಬ್ಬ ರೈತನು ಒಂದು ಟ್ರಾಕ್ಟರು ಮತ್ತು ಒಂದು ನೇಗಿಲನ್ನು ೧೨೦೦೦ ರೂಪಾಯಿಗಳ ಬೆಲೆಗೆ ಮೀರದಂತೆ ಕೊಳ್ಳಬಹುದು. ಅದರ ಬೆಲೆಯ ಎಂಟನೇ ಒಂದು ಭಾಗದಷ್ಟು ಹಣ ಆತನು ಠೇವಣಿಯಿಟ್ಟು, ಉಳಿಕೆಯ ಹಣವನ್ನು ಶೇ|| ೫ರಷ್ಟು ಬಡ್ಡಿಯಂತೆ ೭ ಸಾಲಿಯಾನಾ ಕಂತುಗಳಲ್ಲಿ ತೀರಿಸಬೇಕು. ಅದಕ್ಕಾಗಿ ಆತನು ಆ ಟ್ರಾಕ್ಟರು ಮತ್ತು ನೇಗಿಲಿನ ಬೆಲೆಯ ಎರಡರಷ್ಟು ಬೆಲೆಬಾಳುವ ಆಸ್ತಿಯನ್ನು ಸೆಕ್ಯೂರಿಟಿಯಾಗಿ ಕೊಡಬೇಕಾಗಿದೆ. ಇದಲ್ಲದೆ ಇನ್ನು ಎರಡು ಸ್ವಂತ ಸೆಕ್ಯೂರಿಟಿಗಳನ್ನು ಸಹ ಕೊಡಬೇಕಾಗಿದೆ.

ಇದಕ್ಕೆ ಸಂಬಂಧ ಪಟ್ಟ ನಿಬಂಧನೆ ಮುಂತಾದುವನ್ನು ಕಾಲಾನುಕ್ರಮವಾಗಿ ಪ್ರಕಟಿಸಲಾಗುತ್ತದೆ ಎಂದು ಸರ್ಕಾರಿ ಪ್ರಕಟಣೆಯೆಂದು ತಿಳಿಸುತ್ತದೆ.

ಹೊಸ ರಾಜಧಾನಿಗೆ ೪೯ ಲಕ್ಷ ರೂ. ವೆಚ್ಚ

ಆಂಧ್ರಪ್ರಾಂತ್ಯಕ್ಕೆ ಕರ್ನೂಲನ್ನು ರಾಜಧಾನಿಯನ್ನಾಗಿ ಮಾಡಲು ಇಲ್ಲಿಯವರೆಗೆ ೪೯.೪೧ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಿರುವುದಾಗಿ ಅಲ್ಲಿಯ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ತಿಳಿಸಿದ್ದಾರೆ.

○ ಮುಂದಿನ ಜನವರಿ ಮಾಹೆಯಲ್ಲಿ ಹೈದರಾಬಾದಿನಲ್ಲಿ ಅಖಿಲಭಾರತ ವಸ್ತು ಪ್ರದರ್ಶನವೊಂದನ್ನು ಏರ್ಪಡಿಸಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೩—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೨—೮	೨೨—೪
ಎಳ್ಳು	೭೦—೪	೭೫—೨
ಹರಳು	೩೫—೮	೩೮—೨
ಹುರಳಿ	೩೨—೮	—
ಹೆಸರು	೩೨—	೩೯—೮
ಅಲಸಂದೆ	೩೮—೪	೫೯—೨
ಹುಣಸೇಹಣ್ಣು	೭—೫	೯—೧೩
ಸೀಗೆಕಾಯಿ	೬—೮	—
ಮೆಣಸಿನಕಾಯಿ	೧೨—೨	೩೫—
ತೆಂಗಿನಕಾಯಿ	೨೩೦—	೨೮೮

ಈ ಸಾಲಿನಲ್ಲಿ ಅಧಿಕ ಆಹಾರ ಉತ್ಪನ್ನ

ಕಳೆದ ಸಾಲಿಗಿಂತ ೫೦ ಲಕ್ಷ ಟನ್‌ಗಳಷ್ಟು ಹೆಚ್ಚಿದೆ

ದೇಶದಲ್ಲಿ ೫೨-೫೩ ನೇ ಸಾಲಿನಲ್ಲಿ ಆಹಾರ ಧಾನ್ಯಗಳ ಉತ್ಪನ್ನವು ಕಳೆದ ಸಾಲಿಗಿಂತ ೫೦ ಲಕ್ಷ ಟನ್‌ಗಳಷ್ಟು ಹೆಚ್ಚಿರುವುದಾಗಿ ವರದಿಯಾಗಿದೆ.

೧೯೪೯-೫೦ ಕ್ಕಿಂತ ೧೬ ಲಕ್ಷ ಟನ್‌ಗಳಷ್ಟು ಹೆಚ್ಚಿರುವುದಾಗಿಯೂ, ಈ ಹೆಚ್ಚು ಬೆಳೆಯು ಒರಿಸ್ಸಾ, ಉತ್ತರಪ್ರದೇಶ, ಹೈದರಾಬಾದ್, ರಾಜಾಸ್ಥಾನ್, ಪೆಪ್ಸು, ಪಶ್ಚಿಮ ಬಂಗಾಳಗಳಲ್ಲಿ ಆಗಿರುವುದಾಗಿ ಹೇಳಲಾಗಿದೆ

ಪಾಕೀಸ್ತಾನದಲ್ಲಿ ನಾಣ್ಯ ಬದಲಾವಣೆ

ಅದಕ್ಕಾಗಿ ಜನತಾಭಿಪ್ರಾಯ ಸಂಗ್ರಹಣೆ

ಪಾಕೀಸ್ತಾನದಲ್ಲಿ ಈಗಿರುವ ನಾಣ್ಯ ರೂಪವನ್ನು ಬದಲಾಯಿಸಿ ರೂಪಾಯಿಯನ್ನು ೧೦೦ ಭಾಗಗಳಾಗಿ ವಿಂಗಡಿಸಬೇಕೆಂಬ ಸರ್ಕಾರದ ನಿರ್ಧಾರದ ಬಗ್ಗೆ ಜನರು ತಮ್ಮ ಅಭಿಪ್ರಾಯವನ್ನು ಸರ್ಕಾರಕ್ಕೆ ತಿಳಿಸಬೇಕೆಂದು ಕೋರಲಾಗಿದೆ. ಸರ್ಕಾರದ ನೀತಿ ಬದಲಾವಣೆಯಲ್ಲಿ ಜನತಾಭಿಪ್ರಾಯವನ್ನು ಅಲ್ಲಿ ಕೇಳುತ್ತಿರುವುದು ಇದು ಪ್ರಥಮ ನಿದರ್ಶನವಾಗಿದೆ.

ಮಹಾರಾಜರ ರೇಡಿಯೋ ಭಾಷಣ

ಶ್ರೀಮನ್ಮಹಾರಾಜರವರು ಈದಿನ ರಾತ್ರಿ ೯-೩೦ ಗಂಟೆಗೆ ಅಖಿಲಭಾರತ ರೇಡಿಯೋ ಮೈಸೂರು ಕೇಂದ್ರದಿಂದ ರಾಷ್ಟ್ರೀಯ ಮಲೇರಿಯಾ ಹತೋಟಿ ಯೋಜನೆ ಎಂಬ ವಿಷಯದಲ್ಲಿ ಭಾಷಣ ಮಾಡುತ್ತಾರೆ.

ಭೂಮಿ ಹಂಚಿಕೆ

ಹೈದರಾಬಾದ್ ಪ್ರಾಂತ್ಯದಲ್ಲಿ ಇಲ್ಲಿಯವರೆಗೆ ಸಂಗ್ರಹಿಸಿರುವ ಭೂಮಿಯನ್ನೆಲ್ಲಾ ಜನರಿಗೆ ಹಂಚಲು ಅಲ್ಲಿಯ ಭೂದಾನ ಸಮಿತಿಯು ಒಂದು ಯೋಜನೆಯನ್ನು ತಯಾರಿಸಿ ಆಚಾರ್ಯ ವಿನೋಬ ಭಾವೆಯವರ ಒಪ್ಪಿಗೆಗೆ ಕಳುಹಿಸಿರುವುದಾಗಿ ತಿಳಿಯಬರುತ್ತದೆ.

ಹೊಸದಾಗಿ ಬಂದಿದೆ

ರ್‍ಯಾಲಿ ಕಂಪೆನಿಯವರ ರಾಬಿನ್‌ಹುಡ್ ಸೈಕಲ್‌ಗಳು, ಮಕ್ಕಳ ಟ್ರೈಸಿಕಲ್‌ಗಳು ಮತ್ತು ಗಾಡಿಗಳು.

ಶಾರದಾ ಸೈಕಲ್ ಮತ್ತು ವಾಚ್ ಸ್ಟೋರ್ಸ್, ದೊಡ್ಡಗಡಿಯಾರ ಚೌಕ ಮೈಸೂರು.

ರೈತರಿಗೆ ಲಾಯರುಗಳು ಸಹಾಯ ನೀಡಬೇಕು

ಭಾರತದಲ್ಲಿ ವ್ಯವಸಾಯಗಾರನಿಗೆ ತನ್ನ ಉದ್ಯಮವನ್ನು ಉತ್ತಮ ಪಡಿಸಿಕೊಳ್ಳಲು ಸಾಕಷ್ಟು ಹಣ ಸಿಕ್ಕುತ್ತಿಲ್ಲ. ಈ ಕೊರತೆಯನ್ನು ಸಹಕಾರ ಚಳುವಳಿ ಮುಖಾಂತರ ಪರಿಹರಿಸಿಕೊಳ್ಳಬೇಕು. ಈ ಕೆಲಸದಲ್ಲಿ ಲಾಯರುಗಳು ಹೆಚ್ಚು ಸಹಾಯ ಮಾಡಬಹುದು ಹಳ್ಳಿಗಳಲ್ಲಿ ವ್ಯವಸಾಯಗಾರರು ಅವರಲ್ಲಿಯೇ ವ್ಯವಸ್ಥೆಗೊಳ್ಳುವಂತೆ ತಕ್ಕ ಸಲಹೆಗಳನ್ನು ನೀಡಿ ಅವರೇ ಸಹಕಾರ ಸಂಘಗಳನ್ನು ಸ್ಥಾಪಿಸಿಕೊಳ್ಳಲು ಸಹಾಯ ಮಾಡಬಹುದು. ಅಲ್ಲದೆ ಸ್ವಸಹಾಯದ ಪದ್ಧತಿಯನ್ನು ಆಚರಿಸುವಂತೆ ಗ್ರಾಮಸ್ಥರಿಗೆ ತಕ್ಕ ತಿಳುವಳಿಕೆ ಕೊಡಬಹುದು-ಎಂದು ವ್ಯವಸಾಯ ಸಚಿವ ಡಾ|| ನಾಗನಗೌಡರು ಬೆಂಗಳೂರು ಲಾ ಕಾಲೇಜಿನ ಆರಂಭ ಭಾಷಣ ಮಾಡುತ್ತಾ ತಿಳಿಸಿದ್ದಾರೆ.

೫೦೦೦೦ ರೂ. ದೀಪಾವಳಿ ಬಹುಮಾನ

ಕೊರಿಯಾದಲ್ಲಿರುವ ಭಾರತ ಸೈನ್ಯದವರಿಗೆ ದೀಪಾವಳಿ ಉಡುಗೊರೆಯಾಗಿ ಬೊಂಬಾಯಿ ಪ್ರಾಂತ್ಯವು ೫೦ ಸಾವಿರ ರೂಪಾಯಿಗಳನ್ನು ಕೊಟ್ಟಿದೆ.

ದೀಪಾವಳಿಗೆ ಸಕ್ಕರೆ

ದೀಪಾವಳಿ ಹಬ್ಬದ ಪ್ರಯುಕ್ತ ಕೇಂದ್ರ ಸರ್ಕಾರವು ೨೧೦೦೦ ಟನ್‌ಗಳಷ್ಟು ಸಕ್ಕರೆಯನ್ನು ಬಹಿರಂಗ ಪೇಟೆಯಲ್ಲಿ ಮಾರಲು ಕೊಟ್ಟಿರುವುದಾಗಿ ತಿಳಿಯಬರುತ್ತದೆ.

● ಪ್ರಧಾನಿಯವರ ಪರಿಹಾರ ನಿಧಿಗೆ ಇಲ್ಲಿಯವರೆಗೆ ೭ ಲಕ್ಷ ೫೩ ಸಾವಿರ ರೂಪಾಯಿಗಳು ವಸೂಲಾಗಿರುದಾಗಿ ತಿಳಿಯಬರುತ್ತದೆ

ನಾಟಕರತ್ನ ಜಿ.ಹೆಚ್. ವೀರಣ್ಣನವರ ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)

4-11-53ನೇ ರಾತ್ರಿ 10 ಗಂಟೆಗೆ ಶಿವರಾಂಪೇಟೆಯಲ್ಲಿರುವ ರತ್ನಾವಳಿ ಥಿಯೇಟರಿನಲ್ಲಿ

ಅಡ್ಡದಾರಿ

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪ | ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ | ಸಂಪುಟ ೪ | ಸಂಚಿಕೆ ೭೩

೫-೧೧-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಹೈದರಾಬಾದ್ ಕಾಂಗ್ರೆಸ್ ಬಿಕ್ಕಟ್ಟು ಪರಿಹಾರವಾಗಿಲ್ಲ

ಮತ್ತೆ ಕಾಂಗ್ರೆಸ್ ಅಧ್ಯಕ್ಷ ನೆಹರೂರವರಿಗೆ ಮನವಿ

ಹೈದರಾಬಾದಿನಲ್ಲಿ ಬಿ. ರಾಮಕೃಷ್ಣರಾಯರ ಮಂತ್ರಿಮಂಡಲದ ಮೇಲೆ ಅಲ್ಲಿಯ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ೨೫ ಜನ ಸದಸ್ಯರು ಕೆಲವು ಆರೋಪಣೆಗಳನ್ನು ಮಾಡಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರ ಗಮನಕ್ಕೆ ತಂದಿದ್ದು, ಅವು ನಿರಾಧಾರವಾದುದು ಎಂದು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ನಿರ್ಧರಿಸಿ ಸಚಿವರುಗಳನ್ನು ಆರೋಪಣೆಗಳಿಂದ ವಿಮುಕ್ತಗೊಳಿಸಿತ್ತಷ್ಟೆ.

ಆದರೆ ಅವರುಗಳು ಮಾಡಿರುವ ಆರೋಪಣೆಗಳೆಲ್ಲವೂ ನಿಜವೆಂದೂ ಅವುಗಳನ್ನು ತಾವು ಸ್ಥಿರಪಡಿಸುವುದಾಗಿಯೂ ತಿಳಿಸಿ ಅದೇ ಸದಸ್ಯರು ಪುನಃ ಕಾಂಗ್ರೆಸ್ ಅಧ್ಯಕ್ಷರಿಗೆ ಪತ್ರ ಬರೆದು ಪಾರ್ಲಿಮೆಂಟರಿ ಸಮಿತಿಯು ತನ್ನ ಹಿಂದಿನ ನಿರ್ಧಾರವನ್ನು ಪುನರ್ವಿಮರ್ಶಿಸಬೇಕೆಂದು ಕೋರಿದ್ದಾರೆಂದು ತಿಳಿಯಬರುತ್ತದೆ.

ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರವರು ಕಾಂಗ್ರೆಸ್ ಹೈಕಮ್ಯಾಂಡಿನ ತೀರ್ಮಾನವನ್ನು ವಿರೋಧಿಸಬಾರದೆಂದು ಹೇಳುತ್ತಿರುವುದು ಅನೇಕರನ್ನು ಕೆರಳಿಸಿದೆ. ಅವರ ನೀತಿಯ ಬಗ್ಗೆಯ ಹಲವರಲ್ಲಿ ವಿರೋಧ ಬೆಳೆಯುತ್ತಿರುವುದಾಗಿ ಹೇಳಲಾಗಿದೆ.

ಕಾರ್ಮಿಕ ಗೃಹ ನಿರ್ಮಾಣಕ್ಕೆ ಕೇಂದ್ರದ ನೆರವು

ಕಾರ್ಮಿಕರಿಗಾಗಿ ಅಕ್ಟೋಬರ್ ಮಾಹೆಯಲ್ಲಿ ೨೨೦೦ ವಸತಿ ಗೃಹಗಳನ್ನು ಕಟ್ಟಲು ಕೇಂದ್ರ ಸರ್ಕಾರವು ೪೯ ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿತ್ತು. ಆ ಹಣವನ್ನು ಮೈಸೂರು ಗೃಹನಿರ್ಮಾಣ ಮಂಡಲಿ ಮತ್ತು ಇತರ ಪ್ರಾಂತ್ಯಗಳು ಸ್ವೀಕರಿಸಿ ಗೃಹನಿರ್ಮಾಣ ಕಾರ್ಯದಲ್ಲಿ ತೊಡಗಿರುವುದಾಗಿ ವರದಿಯಾಗಿದೆ.

ದೀಪಾವಳಿ ಮಹೋತ್ಸವ

ಯಾದವ ಸಂಘದ ಆಶ್ರಯದಲ್ಲಿ ಚಾಮರಾಜ ಮೊಹಲ್ಲ ಗೊಲ್ಲಗೇರಿ ೨೪೮ನೇ ನಂಬರ್ ಮನೆಯಲ್ಲಿ ಈದಿನ ಸಂಜೆ ೬ ಗಂಟೆಗೆ ಶ್ರೀ ಕೃಷ್ಣಪರಮಾತ್ಮನ ಪೂಜೆ ಮತ್ತು ದೀಪಾವಳಿ ಮಹೋತ್ಸವವು ಸಹ ನಡೆಯುತ್ತದೆ.

ಗುತ್ತಿಗೆದಾರರಿಗೆ ನೆರವು ನೀಡಲು ಆರ್ಡಿನೆನ್ಸ್

ಬೆಂಗಳೂರು ೫

ಸರ್ಕಾರದವರು ೧೯೫೩ ನೇ ಗೇಣಿಗಾರರ ಕಾನೂನಿನಲ್ಲಿ ತಿದ್ದುಪಡಿ ಮಾಡಿ ಒಂದು ಆರ್ಡಿನೆನ್ಸ್‌ನ್ನು ಹೊರಡಿಸಿದ್ದಾರೆ.

ಈ ಕಾನೂನಿಗೆ ಒಂದು ಹೊಸ ವಿಧಿಯನ್ನು ಈಗ ಸೇರಿಸಿ ಅದರಂತೆ ಯಾವ ಜಮೀನ್ದಾರರೂ ಅಥವಾ ಆಕಿನ ಕಡೆಯವನು ಗುತ್ತಿಗೆದಾರರಿಂದ ಜಮೀನನ್ನು ತಪ್ಪಿಸಕೂಡದೆಂದು ವಿಧಾಯಿಸಲಾಗಿದೆ. ಹಾಗೆ ಮಾಡಿದ್ದಲ್ಲಿ ಗುತ್ತಿಗೆದಾರರಿಗೆ ಪರಿಹಾರವನ್ನು ಕೊಡಬೇಕಾಗುತ್ತದೆ.

ಕೈಮಗ್ಗದವರಿಗೆ ಪಂಚೆ ಸೀರೆ ತಯಾರಿಕೆ

ಬಣ್ಣದ ಸೀರೆ ಮತ್ತು ಧೋತಿಗಳ ತಯಾರಿಕೆಯನ್ನು ಕೈಮಗ್ಗದವರಿಗೇ ಮೀಸಲಾಗಿರಿಸಬೇಕೆಂದು ಆಂಧ್ರ ಸರ್ಕಾರವು ಕೇಂದ್ರಕ್ಕೆ ಸಲಹೆಯನ್ನು ಮಾಡಿರುವುದಾಗಿ ತಿಳಿಯಬರುತ್ತದೆ.

ಕೈಮಗ್ಗದವರಿಗೆ ನೆರವು ನೀಡಲು ಆಂಧ್ರ ಸರ್ಕಾರವು ಈ ನಿಲುವನ್ನು ತೆಗೆದುಕೊಂಡಿದೆ.

ಲಕ್ನೋ ನಗರ ಶಾಂತವಾಗಿದೆ

ಲಕ್ನೋದಲ್ಲಿ ನಿನ್ನೆಯದಿನ ಯಾವ ಘಟನೆಗಳೂ ನಡೆಯದೆ ನಗರವು ಶಾಂತವಾಗಿತ್ತೆಂದು ವರದಿಯಾಗಿದೆ. ಜಿಲ್ಲಾ ಮ್ಯಾಜಿಸ್ಟ್ರೇಟರು ವಿಧಿಸಿದ್ದ ಕರ್ಫ್ಯೂ ಆಜ್ಞೆಯು ರದ್ದಾಗಿದೆ. ಅಲ್ಲಲ್ಲಿ ಅಂಗಡಿಗಳು ತೆರೆದು ವ್ಯಾಪಾರ ಪ್ರಾರಂಭವಾಗಿದೆ. ದೀಪಾವಳಿ ಹಬ್ಬದ ಸಡಗರವು ಈಗ ಸ್ವಲ್ಪ ಪ್ರಾರಂಭವಾದಂತೆ ಕಾಣಬರುತ್ತಿದೆ

ಹಸಿವಿನ ಮೆರವಣಿಗೆ

ಸೀರೆ ಮತ್ತು ಪಂಚೆ ತಯಾರಿಕೆಯನ್ನು ಕೈಮಗ್ಗದವರಿಗೆ ಮೀಸಲಾಗಿಡಬೇಕೆಂದು ಹಾಗೆ ಮಾಡದಿದ್ದರೆ ತಾವು ಸತ್ಯಾಗ್ರಹವನ್ನು ಆಚರಿಸುವುದಾಗಿ ಆಂಧ್ರಪ್ರಾಂತ್ಯ ಕೈಮಗ್ಗದವರು ಪ್ರಧಾನಿ ನೆಹರೂರವರಿಗೆ ಮನವಿ ಸಲ್ಲಿಸಿದ್ದಾರೆ.

ಈ ಸಂಬಂಧದಲ್ಲಿ ನವಂಬರ್ ೧೬ ರಿಂದ ೨೫ ರವರೆಗೆ "ಹಸಿವಿನ ಮೆರವಣಿಗೆ"ಯನ್ನು ವಿಜಯವಾಡದಲ್ಲಿ ನಡೆಸಲಾಗುತ್ತದೆ.

ಅಕ್ಕಿ ಗೋಧಿ ದರ ಇಳಿಯುವುದೇ?

ಬೆಂಗಳೂರು ೫

ಇತ್ತೀಚೆಗೆ ಪ್ರಾಂತ್ಯದಲ್ಲಿ ಆಹಾರ ಧಾನ್ಯ ಬೆಳೆಯು ಉತ್ತಮವಾಗಿ ಆಗುತ್ತಿರುವುದರಿಂದ ಅಕ್ಕಿ ಮತ್ತು ಗೋಧಿಯ ಮಾರಾಟ ಬೆಲೆಯನ್ನು ಇಳಿಸಲು ಮೈಸೂರು ಸರ್ಕಾರವು ನಿರ್ಧರಿಸಿ, ಕೇಂದ್ರ ಸರ್ಕಾರದ ಅನುಮತಿಯನ್ನು ಕೇಳಿರುವುದಾಗಿ ತಿಳಿಯಬರುತ್ತದೆ. ಸದ್ಯದಲ್ಲಿಯೇ ಈ ಅನುಮತಿಯು ಬರುವ ನಿರೀಕ್ಷೆಯಿದೆ.

ಭೂದಾನ ಯಜ್ಞ ಸಪ್ತಾಹ ಪ್ರಾರಂಭ

ಮೈಸೂರು ೫

ಆಚಾರ್ಯ ವಿನೋಬಾ ಭಾವೆಯವರ ಆದರ್ಶ ಮೇಲ್ಪಂಕ್ತಿಯನ್ನನುಸರಿಸಿ ಇದೇ ೮ನೇ ತಾರೀಖು ಭಾನುವಾರದಿಂದ ಒಂದು ವಾರ ಕಾಲ ಮೈಸೂರು ನಗರದಲ್ಲಿರುವ ಜಮೀನ್ದಾರರನ್ನು ಭೇಟಿ ಮಾಡಿ ಭೂಮಿಯನ್ನು ದಾನವಾಗಿ ಕೇಳಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಶ್ರದ್ಧೆ ಹಾಗೂ ಆಸಕ್ತಿಯುಳ್ಳ ಕಾರ್ಯಕರ್ತರೆಲ್ಲರೂ ಅಂದು ಬಿಡಾರ ರಾಮಕೃಷ್ಣಪ್ಪನವರ ರಾಮಮಂದಿರದ ರಸ್ತೆಯಲ್ಲಿರುವ ಮಹಿಳಾ ಸದನದ ಬಳಿ ಪ್ರಾತಃಕಾಲ ೭ ಘಂಟೆಗೆ ಸೇರಬೇಕಾಗಿ ಪ್ರಾರ್ಥನೆ.

ಮೈಸೂರಿನ ನಾಗರೀಕರೂ ಸಹ ಉದಾರವಾಗಿ ಭೂದಾನ ಮಾಡಬೇಕೆಂದು ವ್ಯವಸ್ಥಾಪಕರು ಪ್ರಾರ್ಥಿಸಿರುತ್ತಾರೆ.

> **ದೀಪಾವಳಿ ಶುಭಾಶಯಗಳು**
>
> ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸಮಾಚಾರ ಪತ್ರಿಕೆಯು ತನ್ನ ಓದುಗರರಿಗೆ, ಚಂದಾದಾರರಿಗೆ, ಬರಹಗಾರರಿಗೆ, ಜಾಹೀರಾತುದಾರರಿಗೆ, ಹಾಗೂ ಸಮಸ್ತ ಜನರಿಗೂ ತನ್ನ ಹೃತ್ಪೂರ್ವಕ ದೀಪಾವಳಿ ಶುಭಾಶಯಗಳನ್ನು ಕೋರುತ್ತದೆ.

ಪೋಲೀಸರ ಮೇಲಿನ ದೂರು ಬುಡವಿಲ್ಲದ್ದು

ಕಳೆದ ಜುಲೈ ೨೨ನೇ ತಾರೀಖು ಕಲ್ಕತ್ತಾದಲ್ಲಿ ಪತ್ರಿಕೋದ್ಯೋಗಿಗಳ ಮೇಲೆ ಪೋಲೀಸಿನವರು ಧಾಳಿ ನಡೆಸಿದರೆಂಬ ಬಗ್ಗೆ ವಿಚಾರಣೆಯನ್ನು ನಡೆಸಿ ನ್ಯಾಯಮೂರ್ತಿ ಶ್ರೀ ಪಿ.ಬಿ. ಮುಖರ್ಜಿಯವರ ಸಮಿತಿಯು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಪೋಲೀಸಿನವರ ಮೇಲಿನ ದೂರು ಬುಡವಿಲ್ಲದ್ದು ಎಂದು ತಿಳಿಸಿದ್ದಾರೆ.

ಅಖಿಲ ಕರ್ನಾಟಕ ರಾಜ್ಯ ಪರಿಷತ್ತಿನ ಅಧಿವೇಶನ

ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಮೂರನೇ ಅಧಿವೇಶನವು ಡಿಸೆಂಬರ್ ೩ನೇ ತಾರೀಖಿನಿಂದ ಹಂಪೆಯಲ್ಲಿ ನಡೆಯುತ್ತದೆ.

ನಿಮ್ಮ ವರ್ಗದ ಅಭಿವೃದ್ಧಿಗೆ ಸಹಾಯ

ಮೈಸೂರು ಸಂಸ್ಥಾನದಲ್ಲಿ ನಿಮ್ಮ ವರ್ಗದ ಅಭಿವೃದ್ಧಿಗಾಗಿ ಮಂಜೂರಾಗಿರುವ ಎರಡೂವರೆ ಲಕ್ಷ ರೂ. ಹಣವನ್ನು ಕೆಳಗೆ ಕಂಡಂತೆ ಹಂಚಲು ಸರ್ಕಾರದ ಆಜ್ಞೆ ಆಗಿದೆ ಕೈಗಾರಿಕಾ ಸಂಸ್ಥೆಗಳಲ್ಲಿ ತರಪೇತು ಕೊಡಲು ೩೦ ಸಾವಿರ ರೂ. ವಿಮಾನ ಕಾರ್ಖಾನೆ, ಟೆಲಿಫೋನ್ ಕಾರ್ಖಾನೆ, ಕಬ್ಬಿಣದ ಕಾರ್ಖಾನೆಗಳಲ್ಲಿ ಉದ್ಯೋಗ ದೊರಕುವುದನ್ನು ತರಪೇತು ಕೊಡಲು ೧೦ ಸಾವಿರ ರೂ ಅಸ್ಪೃಶ್ಯತೆ ವಿರುದ್ಧ ಪ್ರಚಾರಕ್ಕಾಗಿ ಒಂದು ಲಕ್ಷ ರೂ. ದನ,ಕೋಳಿ ಮುಂತಾದ ಸಂಪತ್ತನ್ನು ಅಭಿವೃದ್ಧ ಪಡಿಸಲು ತಲಾ ೩೦೦ ರೂ. ಸಾಲ ಕೊಡಲು ೫ ಸಾವಿರ ರೂ. ಕೂಲಿ ಕೆಲಸಗಾರರಿಗೆ ಅಗತ್ಯವಾದ ಸಲಕರಣೆ ಕೊಳ್ಳಲು ತಲಾ ೫೦೦ ರೂ. ಸಾಲಕ್ಕಾಗಿ ೫೦ ಸಾವಿರ ರೂ.ಗಳು.

ಕುತುಬ್‌ಮಿನಾರಿನಿಂದ ಆತ್ಮಹತ್ಯ

ನವದೆಹಲಿಯಲ್ಲಿ ಸುಪ್ರಸಿದ್ಧ ಕುತುಬ್ ಮಿನಾರ್ ಗೋಪುರದ ಮೇಲ್ಭಾಗದಿಂದ ಈ ವರ್ಷ ೭ ಮಂದಿ ಪುರುಷರು ಮತ್ತು ಮಹಿಳೆಯರು ಕೆಳಕ್ಕೆ ದುಮುಕಿ ಆತ್ಮಹತ್ಯ ಮಾಡಿಕೊಂಡಿದ್ದಾರೆಂದು ತಿಳಿಸಲಾಗಿದೆ. ಅದರಮೇಲೆ ಒಂಟಿಯಾಗಿ ಹತ್ತುವುದನ್ನು ನಿಷೇಧಿಸಿದ್ದರೂ ಜನರ ಜೊತೆಯಲ್ಲಿ ಹೋಗಿ ಅಲ್ಲಿಂದ ಬಿದ್ದು ಪ್ರಾಣ ಕಳೆದುಕೊಳ್ಳುವುದನ್ನು ತಡೆಯಲು ಸಾಧ್ಯವಿಲ್ಲವೆಂದು ದೆಹಲಿ ಪ್ರಾಂತ್ಯದ ಮುಖ್ಯಮಂತ್ರಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳ ಮುಷ್ಕರ ನಿಂತಿತು

ಲಕ್ನೋ ವಿಶ್ವವಿದ್ಯಾನಿಲಯದ ೨ ಸಾವಿರಮಂದಿ ವಿದ್ಯಾರ್ಥಿಗಳು ಸಭೆಸೇರಿ, ತಮ್ಮ ಸತ್ಯಾಗ್ರಹ ಚಳುವಳಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕೆಂದು ನಿರ್ಧರಿಸಿದ್ದಾರೆ.

ಪ್ರಾದೇಶ ಭಾಷೆಗಳಿಗೆಲ್ಲಾ ಒಂದೇ ಲಿಪಿ ಇರಬೇಕು

ಕೇಂದ್ರ ಗೃಹಸಚಿವ ಡಾ॥ ಖಟ್ಜುರವರ ಸಲಹೆ

ಭಾರತದಲ್ಲಿರುವ ಎಲ್ಲಾ ದೇಶಭಾಷೆಗಳೂ ಸಾಮಾನ್ಯವಾದ ಒಂದು ಲಿಪಿಯನ್ನು ಉಪಯೋಗಿಸುವುದರಿಂದ ಜ್ಞಾನ ಪ್ರಸಾರ ಕಾರ್ಯಕ್ಕೆ ವಿಶೇಷವಾಗಿ ಸಹಾಯವಾಗುವುದಲ್ಲದೆ ದೇಶದ ಐಕ್ಯತೆಗೆ ನೆರವಾಗುತ್ತದೆ. ಆ ರೀತಿಯಿರುವುದು ದೇವನಾಗರೀ ಲಿಪಿ. ಸಾಮಾನ್ಯವಾಗಿ ದೇಶದಲ್ಲಿರುವ ಎಲ್ಲಾ ಭಾಷೆಗಳೂ ಸಂಸ್ಕೃತದಿಂದಲೇ ಹುಟ್ಟಿವೆ. ಆದ್ದರಿಂದ ದೇವನಾಗರೀ ಲಿಪಿಯನ್ನು ಎಲ್ಲಾ ಭಾಷೆಗಳಿಗೂ ಅನ್ವಯಿಸುವಂತೆ ಮಾಡುವುದು ಉತ್ತಮ-ಎಂದು ಕೇಂದ್ರ ಗೃಹಸಚಿವ ಡಾ॥ ಖಟ್ಜುರವರು ಹೇಳಿದ್ದಾರೆ.

ರೈಲ್ವೆ ಪ್ರಯಾಣೀಕರ ಪ್ರತಿಭಟನೆ

ಭಾನುವಾರ ರಾತ್ರಿ ಪೂರಿಯಿಂದ ಹೌರಾಕ್ಕೆ ಹೋಗುತ್ತಿದ್ದ ಪ್ರಯಾಣೀಕರ ರೈಲಿನಲ್ಲಿ ದೀಪವಿಲ್ಲದೆ ಹೋದುದರಿಂದ ರೈಲಿನ ಚಲನವನ್ನೇ ಪ್ರಯಾಣೀಕರು ೫ ಗಂಟೆಗಳ ಕಾಲ ನಿಲ್ಲಿಸಿದುದು ವರದಿಯಾಗಿದೆ. ನಿಲ್ದಾಣದ ಅಧಿಕಾರಿಗಳನ್ನು ಪ್ರಯಾಣೀಕರು ಎಷ್ಟು ಪ್ರಾರ್ಥಿಸಿದರೂ ಅವರು ಕಿವಿಗೊಡಲಿಲ್ಲ. ಪ್ರಯಾಣೀಕರು ಕೂಡಲೇ ಬಾಲಸೂರಿನ ಜಿಲ್ಲಾ ನ್ಯಾಯಾಧೀಶರಿಗೆ ಫೋನ್ ಮಾಡಿದರು. ಅವರು ಸ್ಥಳಕ್ಕೆ ಧಾವಿಸಿ, ೪೪ ಸೀಮೆಎಣ್ಣೆ ದೀಪಗಳನ್ನು ತರಿಸುವಂತೆ ಆಜ್ಞಾಪಿಸಿ ಅವನ್ನು ಎಲ್ಲಾ ಗಾಡಿಗಳಲ್ಲೂ ಹಾಕಿದಮೇಲೆ ರೈಲು ಹೊರಟಿತು. ರೈಲಿನಲ್ಲಿ ಶಸ್ತ್ರ ಪೋಲೀಸರೂ ಪ್ರಥಮ ದರ್ಜೆ ನ್ಯಾಯಾಧೀಶರು ಮುಂದಕ್ಕೆ ರಕ್ಷಣೆಗಾಗಿ ಪ್ರಯಾಣಮಾಡಿದರು.

ಗಿರಣಿಗಳಿಗೆ ಹೆಚ್ಚಿಗೆ ಹತ್ತಿ

ದೇಶದಲ್ಲಿ ಇತ್ತೀಚೆಗೆ ಹತ್ತಿಯ ಬೆಳೆಯು ಉತ್ತಮಗೊಳ್ಳುತ್ತಿರುವುದರಿಂದ ಗಿರಣಿಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಹತ್ತಿಯನ್ನು ಒದಗಿಸಲಾಗುತ್ತದೆ. ಆದರೆ ಇದು ದಕ್ಷಿಣ ಭಾರತಕ್ಕೆ ಅನ್ವಯಿಸುವುದಿಲ್ಲ.

-ಮೈಸೂರು ಪೇಟೆಧಾರಣೆ-

ತಾರೀಖು. ೪—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೩—೪	೨೨—
ಎಳ್ಳು	೬೦—	೭೭—
ಹರಳು	೩೪—೧೦	—
ಹುರಳಿ	೩೦—	೩೪—೨
ಹೆಸರು	೨೯—೨	೩೭—೧೨
ಅಲಸಂದೆ	೩೯—	೫೭—೪
ಹುಣಸೇಹಣ್ಣು	೧೧—	೨೫—೧೪
ಸೀಗೆಕಾಯಿ	೭—೬	—
ಮೆಣಸಿನಕಾಯಿ	—	—
ತೆಂಗಿನಕಾಯಿ	೧೮೪—	೩೧೧

ಪ್ರಧಾನಿ ನೆಹರೂ ರವರಿಗೆ ಮಹಮುದಾಲಿ ಪತ್ರ

ಪಾಕಿಸ್ತಾನದ ಪ್ರಧಾನಿ ಮಹಮುದ್ ಅಲಿಯವರು ಭಾರತ ಪ್ರಧಾನಿ ನೆಹರುರವರಿಗೆ ಬರೆದ ಪತ್ರವೊಂದು ಅವರಿಗೆ ನಿನ್ನೆಯದಿನ ತಲುಪಿತೆಂದು ತಿಳಿಯಬರುತ್ತದೆ. ಪತ್ರದ ವಿವರಗಳು ಇನ್ನೂ ಹೊರಬಿದ್ದಿಲ್ಲ.

ಆಹಾರ ಪಡಿತರ ರದ್ದು

ಸಿಂಹಳದಲ್ಲಿ ಆಹಾರ ಪಡಿತರವನ್ನು ಪೂರ್ಣವಾಗಿ ರದ್ದುಗೊಳಿಸುವ ವಿಷಯವನ್ನು ಅಲ್ಲಿಯ ಸರ್ಕಾರವು ಪರಿಶೀಲಿಸುತ್ತಿರುವುದಾಗಿ ತಿಳಿಯಬರುತ್ತದೆ.

ರಣಜಿತ್
5—11—53 ರಿಂದ ಅಮೋಘಪ್ರಾರಂಭ
ನಾದಿರಾ, ಅಶೋಕ್‌ಕುಮಾರ್ ನಟಿಸಿರುವ
★ ನಗ್ಮ ★
(ಹಿಂದಿ)

ರಾಜಕಮಲ್, ಮೈಸೂರು
6--11--53 ರಿಂದ 2 ನೇ ವಾರ
ಪ್ರತಿದಿನ 3 ಆಟಗಳು
ಶೋಭಾರವರ:—
ಪರೋಪ-ಕಾರಂ
(ತೆಲುಗು)
ಭೂಮಿಕೆ:—ಜಿ. ವರಲಕ್ಷ್ಮಿ, ಸಾವಿತ್ರಿ, ಮುಕ್ಕಾಮುಲ, ರೇಲಂಗಿ.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)
5--11--53ರಿಂದ ರಾತ್ರಿ 10 ಗಂಟೆಗೆ
ಭಾನುವಾರ ಸಂಜೆ 6--30 ಗಂಟೆಗೆ
ಶಿವರಾಂಪೇಟೆಯಲ್ಲಿರುವ ರತ್ನಾವಳಿ ಥಿಯೇಟರಿನಲ್ಲಿ
ಹೇಮರೆಡ್ಡಿ--ಮಲ್ಲಮ್ಮ
ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಮಲೇರಿಯಾ ನಿರ್ಮೂಲ ಮಾಡಲು ಯೋಜನೆ

ಆರೋಗ್ಯ ಸಚಿವರಿಂದ ಪ್ರಾರಂಭ

ಮೈಸೂರು ೫

ಸಂಸ್ಥಾನದಲ್ಲಿ ಕೇಂದ್ರ ಸರ್ಕಾರದ ನೆರವಿನೊಡನೆ ಕೈಗೊಂಡಿರುವ ನೂತನ ರಾಷ್ಟ್ರೀಯ ಮಲೇರಿಯಾ ಹತೋಟಿ ಯೋಜನೆಯ ಪ್ರಾರಂಭೋತ್ಸವವನ್ನು ನಿನ್ನೆ ಸಂಜೆ ಟೌನ್ ಹಾಲಿನಲ್ಲಿ ಆರೋಗ್ಯ ಸಚಿವ ಶ್ರೀ ಟಿ. ಚನ್ನಯ್ಯನವರು ನೆರವೇರಿಸಿದರು ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಸ್ವಾಗತ ಬಯಸಿದರು.

ಶ್ರೀಮನ್ಮಹಾರಾಜರವರು, ಮದ್ರಾಸ್, ಬೊಂಬಾಯಿ ಮತ್ತು ಒರಿಸ್ಸಾ ಆರೋಗ್ಯ ಸಚಿವರು ಮತ್ತು ಇತರರುಗಳಿಂದ ಬಂದ ಸಂದೇಶವನ್ನು ಓದಲಾಯಿತು.

ಆರೋಗ್ಯ ಡೈರೆಕ್ಟರಾದ ಡಾ॥ ಟಿ. ಚಂದ್ರಶೇಖರಯ್ಯನವರು ಸಂಸ್ಥಾನದಲ್ಲಿ ಇಲ್ಲಿಯವರೆಗೆ ನಡೆಸಿರುವ ಮಲೇರಿಯಾ ನಿವಾರಣಾ ಕ್ರಮವನ್ನು ವಿವರಿಸಿದರು.

ಇಲ್ಲಿಯವರೆಗೆ ೧೭೫ ಆರೋಗ್ಯ ಕೇಂದ್ರಗಳನ್ನು ತೆರೆದು, ಸುಮಾರು ೨೦ ಲಕ್ಷ ಮಂದಿ ಈ ರೋಗದಿಂದ ಪಾರಾಗಲು ಸೌಕರ್ಯ ಒದಗಿಸಿದೆ. ಇನ್ನು ಮುಂದೆ ನಡೆಯಲಿರುವ ಈಭಾರಿ ಯೋಜನೆಗೆ ಸಾರ್ವಜನಿಕರು ಸಹಕಾರ ನೀಡಬೇಕೆಂದು ಅವರು ಕೋರಿದರು.

ಸಚಿವರ ಭಾಷಣ

ಅನಂತರ ಸಚಿವ ಶ್ರೀ ಟಿ. ಚನ್ನಯ್ಯನವರು ಭಾಷಣಮಾಡಿ ಮಲೇರಿಯಾ ನಿವಾರಣೆಯ ಅತ್ಯಗತ್ಯವನ್ನು ಒತ್ತಿ ಹೇಳಿದರು.

ಭಾರತದಲ್ಲಿ ಪ್ರತಿವರ್ಷ ೭ ಕೋಟಿ ೫೦ ಲಕ್ಷ ಮಂದಿ ಮಲೇರಿಯಾದಿಂದ ನರಳುತ್ತಲಿದ್ದಾರೆ ಭಾರತದ ಕೆಲವು ಪ್ರದೇಶಗಳಲ್ಲಿ ಮಲೇರಿಯಾ ಹಾವಳಿಯಿಂದ ಅನೇಕ ಗ್ರಾಮಗಳು, ನಗರಗಳು ಹಾಳಾಗಿವೆ. ಸಾಗುವಳಿಗೆ ಅನುಕೂಲವಾದ ಲಕ್ಷಾಂತರ ಎಕರೆ ಜಮೀನುಗಳು ಪಾಳುಬಿದ್ದಿವೆ ಭಾರತದಲ್ಲಿ ಖಾಹಿಲೆಗಳಿಂದ ಪ್ರತಿವರ್ಷ ಮರಣಕ್ಕೀಡಾಗುವ ಸುಮಾರು ೫೦ ಲಕ್ಷ ಜನರಲ್ಲಿ ಅರ್ಧ ಮಂದಿ ಮಲೇರಿಯಾದಿಂದ ಸಾಯುವರೆಂದು ಗೊತ್ತಾಗಿದೆ. ಮಲೇರಿಯಾದಿಂದ ಆರ್ಥಿಕವಾಗಿ ನಮ್ಮ ದೇಶಕ್ಕೆ ಪ್ರತಿವರ್ಷ ಅನೇಕ ಕೋಟಿ ರೂಪಾಯಿಗಳ ನಷ್ಟವಾಗುತ್ತಿದೆ. ಮೈಸೂರು ಸಂಸ್ಥಾನದ ಹತ್ತು ಜಿಲ್ಲೆಗಳ ಪೈಕಿ ೬ ಜಿಲ್ಲೆಗಳಲ್ಲಿ ಈ ವ್ಯಾಧಿ ಹರಡಿದೆ.

ನಮ್ಮ ದೇಶದಲ್ಲಿ ಮಲೇರಿಯಾವನ್ನು ನಿರ್ಮೂಲಗೊಳಿಸಲು ಅನುಸರಿಸಬೇಕಾದ ಕಾರ್ಯಕ್ರಮವು ಸುಮಾರು ೪೨ ವರ್ಷಗಳ ಹಿಂದೆ ಅಂದರೆ ೧೯೧೧ ರಲ್ಲಿ ಪ್ರಾರಂಭವಾಯಿತು. ೧೯೪೪ ರಲ್ಲಿ ಡಿ.ಡಿ.ಟಿ. ಪ್ರಯೋಗ ಪ್ರಾರಂಭವಾದ ಕೆಲವು ವಾರಗಳಲ್ಲಿಯೇ ಪ್ರದೇಶದ ನಿವಾಸಿಗಳಲ್ಲಿ ಮಲೇರಿಯಾ ರೋಗದ ಹರಡುವಿಕೆ ಮತ್ತು ಮರಣ ಸಂಖ್ಯೆ ಕಡಿಮೆ ಬಿದ್ದು, ಜನರ ಆರೋಗ್ಯ ಸ್ಥಿತಿ ಉತ್ತಮಗೊಂಡಿದೆ.

ಅಲ್ಲದೆ ಅವರ ಆರ್ಥಿಕ ಸ್ಥಿತಿಗಳೂ ಕೂಡ ಬಹಳಮಟ್ಟಿಗೆ ಉತ್ತಮಗೊಂಡಿವೆ. ಜನಗಳ ಸಂಖ್ಯೆಯು ಹೆಚ್ಚಿದೆ; ಮತ್ತು ಮರಣಗಳ ಸಂಖ್ಯೆಯು ಕಡಮೆಯಾಗಿದೆ. ಪ್ರಸವ ಕಾಲದಲ್ಲಿ ಮೃತಪಡತಕ್ಕ ತಾಯಿಯರ ಸಂಖ್ಯೆಯು ಪ್ರತಿ ಒಂದು ಸಾವಿರ ಜನನ ಸಂದರ್ಭಗಳಲ್ಲಿ ೫೦ರಿಂದ ೬೦ರಷ್ಟು ಹೆಚ್ಚಾಗಿದ್ದುದು ಈಗ ೧೪ ಅಥವಾ ೧೫ಕ್ಕೆ ಇಳಿದಿದೆ. ಅದು ಇನ್ನೂ ಕಡಮೆಯಾಗುತ್ತ ಬರುತ್ತಿದೆ. ವರ್ಷವೊಂದಕ್ಕೆ ತಲಾ ವೆಚ್ಚ ಮಾಡಲಾದ ಪ್ರತಿಯೊಂದು ರೂಪಾಯಿಗೆ ೯೩ ರೂಪಾಯಿಗಳಷ್ಟು ಪ್ರತಿಫಲವು ದೊರೆತಿರುವುದಾಗಿ ಸಕಲೇಶಪುರದ ಮಲೇರಿಯಾ ಪರಿಶೀಲನೆಯ ಕೇಂದ್ರದಲ್ಲಿ ನಡೆಯಿಸಿದ ಪರಿಶೀಲನೆಗಳಿಂದ ಕಂಡುಬಂದಿರುತ್ತದೆ.

ಈಗ ಭಾರತ ಸರ್ಕಾರದವರು ಭಾರತ-ಅಮೆರಿಕಾ ಆರೋಗ್ಯ ಸಹಾಯ ನಿಧಿಯಿಂದ ಮೈಸೂರು ಸಂಸ್ಥಾನಕ್ಕೆ ಸಹಾಯ ದ್ರವ್ಯಕೊಟ್ಟಿರುವುದರಿಂದ ಸಂಸ್ಥಾನಾದ್ಯಂತ ಮಲೇರಿಯಾನಿವಾರಣಾ ಯೋಜನೆಯನ್ನು ಆಚರಣೆಗೆ ತರುವುದು ಸಾಧ್ಯವಾಗಿರುತ್ತದೆ. ಈ ಸಹಾಯದ್ರವ್ಯ ಮೂರೂವರೆವರ್ಷಗಳ ಕಾಲ ಕೊಡಲ್ಪಡುವುದೆಂದೂ ಆ ತರುವಾಯ ಯೋಜನೆಯಂತೆ ಅವಶ್ಯಕವಾದ ಕಾರ್ಯವನ್ನು ಸಂಸ್ಥಾನ ಸರ್ಕಾರ ತಮ್ಮ ಖರ್ಚಿನಿಂದ ನಡೆಸಬೇಕೆಂದೂ ಗೊತ್ತಾಗಿರುತ್ತದೆ. ಈ ಹೊಸ ಕಾರ್ಯಕ್ರಮದಿಂದ ಸಂಸ್ಥಾನದಲ್ಲಿ ಪ್ರತಿವರ್ಷ ಸುಮಾರು ೧೦ ಲಕ್ಷ ಮನೆಗಳನ್ನು ವರ್ಷಕ್ಕೆ ಒಂದೆರಡುಬಾರಿ ಡಿ.ಡಿ.ಟಿ. ಯಿಂದ ಶುದ್ಧಿಗೊಳಿಸಿ ೫೦ಲಕ್ಷ ಜನರಿಗೆ ಈ ಕೆಟ್ಟ ವ್ಯಾಧಿಯಿಂದ ರಕ್ಷಣೆ ಕೊಡುವುದು ಸಾಧ್ಯವಾಗುತ್ತದೆ.

ಈ ಯೋಜನೆಯು ಸಂಸ್ಥಾನಾದ್ಯಂತ ಮಲೇರಿಯಾದ ಸೂಚನೆಯಿರುವ ಎಲ್ಲಾ ಪ್ರದೇಶಗಳಲ್ಲಿಯೂ ಏಕಕಾಲದಲ್ಲಿ ಆಚರಣೆಗೆ ತರಲ್ಪಡುತ್ತದೆ. ಮಲೇರಿಯಾ ಮತ್ತು ಪ್ಲೇಗ್ ರೋಗಗಳನ್ನು ಮೈಸೂರಿನ ಭೂಪಟದಿಂದ ಸಂಪೂರ್ಣವಾಗಿ ತೊಡೆದುಹಾಕುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಇದರಿಂದ ಸಂಸ್ಥಾನದ ಜನರ ಆರೋಗ್ಯ, ಸಂಪತ್ತು ಹೆಚ್ಚಿ, ತನ್ಮೂಲಕ ವಿದ್ಯೆ ಮತ್ತು ಆರ್ಥಿಕ ಸಂಪತ್ತು ಬೆಳೆಯುವಂತಾಗುವುದು—ಎಂದು ಸಚಿವರು ತಿಳಿಸಿದರು.

ಇದೇ ರೀತಿಯ ಸಮಾರಂಭವು ಸಂಸ್ಥಾನಾದ್ಯಂತ ನಿನ್ನೆ ನಡೆಯಿತು. ರಾಮನಗರದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಪ್ರಾರಂಭೋತ್ಸವ ನಡೆಸಿ, ಈ ಕಾರ್ಯದಲ್ಲಿ ಜನತೆಯು ಸಹಕಾರ ನೀಡಬೇಕೆಂದು ಕೋರಿದರು.

ಪೋರ್ಟ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೭೪

೬-೧೧-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಆರೋಗ್ಯ ರಕ್ಷಣೆಗಾಗಿ ವರ್ಷಕ್ಕೆ ೪೩ ಲಕ್ಷ ರೂ. ಖರ್ಚು

ಮೈಸೂರು ೬

ಸಂಸ್ಥಾನದಲ್ಲಿ ೧೯೪೭ರಲ್ಲಿ ೬೩ ಆರೋಗ್ಯ ಕೇಂದ್ರಗಳಿದ್ದು, ಈಗ ೧೭೫ ಇವೆ. ೧೯೪೭-೪೮ರಲ್ಲಿ ಆರೋಗ್ಯ ಮತ್ತು ವೈದ್ಯ ಇಲಾಖೆಗೇಗೆ ೪೮.೫೭ ಲಕ್ಷ ರೂ. ವೆಚ್ಚ ಮಾಡಲಾಯಿತು. ೧೯೫೦-೫೧ರಲ್ಲಿ ೧೨೦.೩೮ ಲಕ್ಷ ರೂ. ಖರ್ಚಾಯಿತು. ಈ ವರ್ಷ ೧೩೦.೬೨ ಲಕ್ಷ ರೂ. ಒದಗಿಸಲಾಗಿದೆ. ಆರೋಗ್ಯ ಇಲಾಖೆಗೆ ಮಾತ್ರ ೪೭-೪೮ರಲ್ಲಿ ೧೦.೬೧ ಲಕ್ಷ ರೂ. ಖರ್ಚಾಗುತ್ತಿದ್ದು, ಈಗ ೪೨.೬೮ ಲಕ್ಷಕ್ಕೆ ಏರಿದೆ. ಇದರ ಜೊತೆಗೆ ಸ್ಥಳೀಯ ಮತ್ತು ಸಾರ್ವಜನಿಕ ಸಂಸ್ಥೆಗಳೂ ಹಣವನ್ನು ಖರ್ಚು ಮಾಡುತ್ತಿವೆ. ಆರೋಗ್ಯ ಇಲಾಖೆಯ ಕೆಲಸ ದಿನದಿನಕ್ಕೆ ವೃದ್ಧಿಯಾಗುತ್ತಿದ್ದು, ಅವರು ಮಾಡಿರುವ ಕೆಲಸಕ್ಕೆ ಸರ್ಕಾರದ ಮೆಚ್ಚಿಕೆ ಇದೆ-ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೊನ್ನೆ ರಾಮನಗರದಲ್ಲಿ ರಾಷ್ಟ್ರೀಯ ಮಲೇರಿಯಾ ಯೋಜನೆಯ ಪ್ರಾರಂಭೋತ್ಸವದಲ್ಲಿ ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಭಾರತದಾದ್ಯಂತ ಸ್ಥಾಪಿಸಿರುವ ೯೦ ಮುಖ್ಯ ಮಲೇರಿಯಾ ನಿವಾರಣಾ ಕೇಂದ್ರಗಳಪೈಕಿ, ೫ ಮುಖ್ಯ ಕೇಂದ್ರಗಳು ಮೈಸೂರು ಸಂಸ್ಥಾನದಲ್ಲಿರುವುವು. ಇವಕ್ಕೆ ಭಾರತ ಸರ್ಕಾರ ಪ್ರತಿವರ್ಷ ೨೫ ಲಕ್ಷ ರೂ ಗಳಂತೆ ಮೂರು ವರ್ಷಗಳ ಕಾಲ ಹಣ ಒದಗಿಸುವುದು.

ಪ್ರತಿ ಮುಖ್ಯ ಕೇಂದ್ರವನ್ನೂ ನಾಲ್ಕು ಭಾಗವಾಗಿ ವಿಂಗಡಿಸಿ, ಪ್ರತಿಭಾಗಕ್ಕೂ ಒಬ್ಬ ಸೀನಿಯರ್ ಹೆಲ್ತ್ ಇನ್ಸ್‌ಪೆಕ್ಟರ್, ಒಬ್ಬ ಜೂನಿಯರ್ ಇನ್ಸ್‌ಪೆಕ್ಟರ್, ಡಿ.ಡಿ.ಟಿ. ಗಾಗಿ ೩೨ ಮಂದಿ ಸಿಬ್ಬಂದಿ, ಒಂದು ಮೋಟಾರ್ ಲಾರಿ ಮತ್ತು ಇತರ ಉಪಕರಣಗಳನ್ನು ಕೊಡಲಾಗಿದೆ. ೧೦ ಲಕ್ಷ ಪ್ರಜಾಸಂಖ್ಯೆಯನ್ನೊಳಗೊಂಡ ಪ್ರತಿ ಮುಖ್ಯ ಕೇಂದ್ರಕ್ಕೂ ಒಬ್ಬ ಆರೋಗ್ಯ ಅಧಿಕಾರಿ ಇರುವರು. ಈ ಯೋಜನೆ ಪ್ರಕಾರ ಸುಮಾರು ೧೦ ಲಕ್ಷ ಮನೆಗಳಿಗೆ ಡಿ.ಡಿ.ಟಿ. ಪ್ರಯೋಗ ಮಾಡಿ ಮಲೇರಿಯಾ ರೋಗವನ್ನು ಸಂಪೂರ್ಣವಾಗಿ ಹತೋಟಿಗೆ ತರಲಾಗುವುದು.

ಹೈದರಾಬಾದ್ ಸಾಲಕ್ಕೆ ಮೈಸೂರಿನಿಂದ ಚಂದಾ

ಹೈದರಾಬಾದ್ ಸರ್ಕಾರವು ಇತ್ತೀಚೆಗೆ ಎತ್ತಿದ 3½ ಕೋಟಿ ರೂಪಾಯಿಗಳ ಸಾಲಕ್ಕೆ ಮೈಸೂರು ಸರ್ಕಾರವು ೧೨ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ ಹೈದರಾಬಾದ್ ನೈಜಾಮರು ೭೩ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಭೂದಾನ ಯಜ್ಞ ಪ್ರವಾಸ

ಮೈಸೂರು ೮

ಇದೇ ೮ನೇ ತಾರೀಖಿನಿಂದ ೧೪ ನೇ ತಾರೀಖಿನವರೆ ಮೈಸೂರ ತಾಲ್ಲೂಕಿನಲ್ಲಿ ಭೂದಾನ ಯಜ್ಞ ಪ್ರಚಾರ ಮತ್ತು ಸಂಗ್ರಹಣೆಗಾಗಿ ಕಾರ್ಯಕರ್ತರ ತಂಡವೊಂದು ಪ್ರವಾಸ ಮಾಡಲಿದೆ. ೯ನೇ ತಾ॥ ವರುಣ ೧೦ ಆಯದಹಳ್ಳಿ, ೧೧ ದೇವಲಾಪುರ ಮತ್ತು ಕೊಂಡನಹಳ್ಳಿ, ೧೨ ಕಡಕೊಳ, ೧೩ ತಳೂರು, ೧೪ ಉದ್ಬೂರು ಗ್ರಾಮಗಳಿಗೆ ಭೇಟಿ ಕೊಡುವರು.

ಗ್ರಾಮಸ್ಥರೆಲ್ಲರೂ ಈ ಕಾರ್ಯದಲ್ಲಿ ಸಹಕರಿಸಿ ಭೂಮಿಯನ್ನು ರೈತರಿಗೆ ದಾನ ಮಾಡಬೇಕೆಂದು ಮೈಸೂರು ಭೂದಾನ ಯಜ್ಞ ಸಮಿತಿಯವರು ಪ್ರಾರ್ಥಿಸಿದ್ದಾರೆ.

ಇದೇ ೮ನೇ ತಾರೀಖು ಬೆಳಗ್ಗೆ ಮಹಿಳಾ ಸದನದ ಬಳಿ ನಡೆಯುವ ಸರ್ವೋದಯ ಸಮಾಜದ ಪ್ರಾರ್ಥನೆ ಸಭೆಗೆ ಕಾರ್ಯಕರ್ತರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ.

ಕಾಶ್ಮೀರ ಮಂತ್ರಿಮಂಡಲ ವಿಸ್ತರಣೆ

ಕಾಶ್ಮೀರ ರಾಜ್ಯಾಂಗ ಸಭೆಯ ಅಧ್ಯಕ್ಷರಾದ ಗುಲಾಂ ಮಹಮದ್ ಸಾದಿಕ್ ರವರು ಕಾಶ್ಮೀರದ ಸಚಿವರಾಗಿಯೂ, ಲಡಕ್ಕಿನ ಲಾಮಾಗಳಾದ ಕುಶಿಕ್ ಬಕುಲ ಮತ್ತು ಇನ್ನೂ ಮೂರುಜನರು ಉಪಸಚಿವರುಗಳಾಗಿಯೂ ನೇಮಕವಾಗಿದ್ದಾರೆ. ಈ ಹೊಸ ಸಚಿವರು ಮತ್ತು ಉಪಸಚಿವರುಗಳು ಈದಿನ ಅಧಿಕಾರ ಸ್ವೀಕರಿಸುತ್ತಾರೆ

ಭಾರತ ಸೈನ್ಯಕರಿಗೆ ವಿಶೇಷ ಪ್ರಸಾರ

ಪ್ರತಿದಿನ ಮಧ್ಯಾಹ್ನ ೪ ಗಂಟೆಯಿಂದ ೪-೩೦ ಗಂಟೆಯವರೆಗೆ ಅಖಿಲ ಭಾರತ ರೇಡಿಯೋ ಕೇಂದ್ರವು ಕೊರಿಯಾದಲ್ಲಿರುವ ಭಾರತ ಸೈನ್ಯದವರಿಗಾಗಿ ವಿಶೇಷ ಪ್ರಸಾರವನ್ನು ಮಾಡಲು ವ್ಯವಸ್ಥೆ ಮಾಡಿದೆ. ಈದಿನ ಮಧ್ಯಾಹ್ನ ಈ ಪ್ರಸಾರವನ್ನು ಪ್ರಧಾನಿ ನೆಹರೂರವರು ಪ್ರಾರಂಭಿಸುವರು.

ಆಂಧ್ರ ಸರ್ಕಾರಕ್ಕೆ ಕೃಷಕ ಲೋಕಪಕ್ಷದ ನೆರವು

ಆಂಧ್ರಪ್ರಾಂತ್ಯದಲ್ಲಿರುವ ಶ್ರೀ ಪ್ರಕಾಶಂರವರ ಪಿ.ಶ್ರ ಸರ್ಕಾರಕ್ಕೆ ಕೃಷಕಲೋಕ ಪಕ್ಷವು ತನ್ನ ಸಹಕಾರವನ್ನು ನೀಡುವ ವಿಷಯವು ಈಗ ಶ್ರೀ ಟಿ. ಪ್ರಕಾಶಂ ಮತ್ತು ಆ ಪಕ್ಷದ ನಾಯಕರಾದ ಶ್ರೀ ಲಚ್ಚಣ್ಣನವರ ನಡುವೆ ಚರ್ಚೆಯಲ್ಲಿರುವುದಾಗಿ ತಿಳಿಯಬರುತ್ತದೆ. ಈ ಪಕ್ಷದ ನಾಯಕರು ಆಂಧ್ರಮಂತ್ರಿ ಮಂಡಲವನ್ನು ಸೇರುವ ನಿರೀಕ್ಷೆಯಿದೆ.

ಮೈಸೂರಿನಲ್ಲಿ ಪ್ರಾಣಿ ರಕ್ಷಣಾ ಉದ್ಯಾನವನ ಸ್ಥಾಪನೆ

ಕೇಂದ್ರ ಅರಣ್ಯ ಪ್ರಾಣಿ ಸಂರಕ್ಷಣಾ ಸಮಿತಿಯ ನಿರ್ಧಾರ

ಮೈಸೂರು, ಮದ್ರಾಸ್. ಆಂಧ್ರ, ಬೊಂಬಾಯಿ, ಅಸ್ಸಾಂ, ಮಧ್ಯ ಪ್ರದೇಶ, ಮಧ್ಯಭಾರತ, ರಾಜಾಸ್ಥಾನ, ಸೌರಾಷ್ಟ್ರ, ಯು.ಪಿ. ಮತ್ತು ವಿಂಧ್ಯ ಪ್ರದೇಶಗಳಲ್ಲಿ ರಾಷ್ಟ್ರೀಯ ಉದ್ಯಾನ ವನಗಳನ್ನು ೪೦ ಲಕ್ಷ ರೂ.ಗಳ ಖರ್ಚಿನಲ್ಲಿ ಸ್ಥಾಪಿಸಬೇಕೆಂದು ಅರಣ್ಯ ಪ್ರಾಣಿಗಳ ಸಂರಕ್ಷಣಾ ಕೇಂದ್ರ ಸಮಿತಿಯು ನಾಗಪುರದಲ್ಲಿ ವ್ಯವಸಾಯ ಸಚಿವರ ಅಧ್ಯಕ್ಷತೆಯಲ್ಲಿ ಸೇರಿ ನಿರ್ಧರಿಸಿದೆ. ಈಗ ಉತ್ತರ ಪ್ರದೇಶದಲ್ಲಿರುವ ನ್ಯಾಷನಲ್ ಪಾರ್ಕ್ ಒಂದು ಬಿಟ್ಟರೆ ಅರಣ್ಯ ಪ್ರಾಣಿಗಳ ರಕ್ಷಣೆಗಾಗಿ ದೇಶದಲ್ಲಿ ಬೇರೆ ರಾಷ್ಟ್ರೀಯ ಉದ್ಯಾನವಗಳೇ ಇಲ್ಲ.

ಹಿಂದಿ ಸ್ಪರ್ಧೆ

ಮೈಸೂರು ೬

ರಾಜಧಾನಿಯ ಜಯನಗರದಲ್ಲಿರುವ ಶಿಶುಸಾಹಿತ್ಯ ಸಂಘಕ್ಕೆ ಪುರಸಭಾ ಸದಸ್ಯರಾದ ಡಾ॥ ಪಿ. ಡಿ. ಕೃಷ್ಣಸ್ವಾಮಿಯವರು ತಮ್ಮ ತಾಯಿ ಶ್ರೀಮತಿ ರಂಗನಾಯಕಮ್ಮನವರ ಹೆಸರಿನಲ್ಲಿ ಒಂದು ರೋಲಿಂಗ್ ಕಪ್ಪು ಮತ್ತು ಎರಡು ಬೆಳ್ಳಿ ಕಪ್ಪುಗಳನ್ನು ಹಿಂದಿ ಸ್ಪರ್ಧೆಗಾಗಿ ಕೊಟ್ಟಿದ್ದಾರೆ. ಇದೇ ೨೨ ನೇ ತಾರೀಖು ಭಾನುವಾರ ಬೆಳಗ್ಗೆ ಆ ಸ್ಪರ್ಧೆಯು ನಡೆಯುವುದು. ಸ್ಪರ್ಧೆಯಲ್ಲಿ ಭಾಗವಹಿಸುವವರು ಶಾಲೆ, ಕಾಲೇಜ್ ಅಥವ ಸಂಘದಮೂಲಕ ಅರ್ಜಿ ಕಳುಹಿಸಬೇಕೆಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ನಗರಾರೋಗ್ಯ

ಕಳೆದ ಮಾಹೆ ೩೧ನೇ ತಾರೀಖಿಗೆ ಮುಕ್ತಾಯವಾದ ಪಕ್ಷದಲ್ಲಿ ನಗರದಲ್ಲಿ ಎಲ್ಲಿಯೂ ಸಿಡುಬು, ಕಾಲರಾ ರೋಗವಿರಲಿಲ್ಲ ಹುಣಸೂರಿನಿಂದ ಒಂದು ಪ್ಲೇಗು ರೋಗ ತಗಲಿದ ರೋಗಿಯು ಸತ್ತನು, ಆದಾಗ್ಯೂ ೧೨೪೭ ಮನೆಗಳಿಗೆ ಸೈನೋಗ್ಯಾಸ್. ೨೧೮ ಪ್ರಾಥಮಿಕ ಮತ್ತು ೪೮೨ ಪುನರ್ ದೇವಿ, ೧೦ ಕಾಲರಾ ನಿರೋಧ ಇನಾಕ್ಯುಲೇಷನ್ ಮಾಡಲಾಯಿತು.

ಡಿಫ್ತೀರಿಯಾ ರೋಗವು ೭ ಜನರಿಗೆ ತಗುಲಿ ಒಂದು ಮರಣವಾಯಿತು. ೯ ಜನರಿಗೆ ಟೈಫಾಯಿಡ್ ರೋಗವು ತಗಲಿತ್ತು. ೭೫ ಡಿಫ್ತೀರಿಯಾ ವಿರೋಧ ಮತ್ತು ೧೫ ಟೈಫಾಯಿಡ್ ವಿರೋಧ ಇನಾಕ್ಯುಲೇಷನ್‌ಗಳನ್ನು ಮಾಡಲಾಯಿತು.

ಮೈಸೂರು ಕಲಾವಿದರಿಗೆ ಪಾಕೀಸ್ಥಾನದ ಆಹ್ವಾನ

ಪಾಕೀಸ್ತಾನದ ಹೈದರಾಬಾದಿನಲ್ಲಿ ಮುಂದಿನ ತಿಂಗಳು ೫ ನೇ ತಾರೀಖಿನಿಂದ ನಡೆಯಲಿರುವ ಅಂತರ ಡೋಮಿನಿಯನ್ ಸಂಗೀತ ಸಮ್ಮೇಳನದಲ್ಲಿ ಭಾಗವಹಿಸಲು ಬೆಂಗಳೂರಿನ ಪ್ರಖ್ಯಾತ ನೃತ್ಯಕಲಾವಿದರಾದ ಶ್ರೀ ಯು. ಎಸ್. ಕೃಷ್ಣರಾವ್ ಮತ್ತು ಶ್ರೀಮತಿ ಚಂದ್ರಭಾಗಾದೇವಿಯವರನ್ನು ಆಹ್ವಾನಿಸಲಾಗಿದೆ. ಈ ತಿಂಗಳ ಕೊನೆಯಲ್ಲಿ ಅವರು ಪಾಕೀಸ್ಥಾನಕ್ಕೆ ಹೋಗುವರು.

ನಗರ ಕಾಂಗ್ರೆಸ್ ಸಮಿತಿಗಳ ಅಧಿಕಾರ ವರ್ಗ

ಮೈಸೂರು ೬

ಮೈಸೂರುನಗರದ ಉತ್ತರ ಮತ್ತು ದಕ್ಷಿಣ ಭಾಗದ ಕಾಂಗ್ರೆಸ್ ಸಮಿತಿಗಳ ಅಧಿಕಾರ ವರ್ಗದ ಚುನಾವಣೆಯು ನಿನ್ನೆ ರಾತ್ರಿ ನಡೆದು ಕೆಳಗೆ ಕಂಡವರು ಚುನಾಯಿತರಾಗಿದ್ದಾರೆ.

ದಕ್ಷಿಣಭಾಗ-ಅಧ್ಯಕ್ಷರು ಶ್ರೀ ಬಿ. ನಾರಾಯಣಸ್ವಾಮಿ. ಉಪಾಧ್ಯಕ್ಷರು ಶ್ರೀ ಎ. ಕೃಷ್ಣಮೂರ್ತಿರಾವ್- ಕಾರ್ಯದರ್ಶಿ ಶ್ರೀ ಎನ್. ಗೋಪಾಲರಾವ್. ಖಜಾಂಚಿ ಶ್ರೀ ಯು. ಎಲ್. ರಾಮಚಂದ್ರರಾವ್.

ಉತ್ತರಭಾಗ-ಅಧ್ಯಕ್ಷರು ಶ್ರೀ ಎಸ್. ಲಿಂಗಣ್ಣ. ಉಪಾಧ್ಯಕ್ಷರು ಶ್ರೀ ಎಂ. ಜಿ. ವೆಂಕಟಪ್ಪ. ಕಾರ್ಯದರ್ಶಿ ಶ್ರೀ ಕೆಂಗೇಗೌಡರು.

ಬೌದ್ಧ ಸಮ್ಮೇಳನ

ಮುಂದಿನ ತಿಂಗಳು ಬರ್ಮಾ ರಾಜಧಾನಿ ರಂಗೂನಲ್ಲಿ ಬೌದ್ಧ ಸಮ್ಮೇಳನವೊಂದು ನಡೆಯುತ್ತದೆ. ಅದರಲ್ಲಿ ಭಾಗವಹಿಸುವಂತೆ ೧೨ ಏಷ್ಯ ರಾಷ್ಟ್ರಾಧ್ಯಕ್ಷರುಗಳಿಗೂ ಪ್ರಧಾನಿಗಳಿಗೂ ಆಹ್ವಾನ ನೀಡಲಾಗಿದೆ. ಭಾರತ ರಾಷ್ಟ್ರಾಧ್ಯಕ್ಷರು ಮತ್ತು ಪ್ರಧಾನಿಯವರಿಗೂ ಈ ಆಹ್ವಾನ ಬಂದಿದೆ.

ಸೂಚನೆ

"ಬಲಿಪಾಡ್ಯಮಿ" ಪ್ರಯುಕ್ತ ನಾಳೆ ನಮ್ಮ ಕಾರ್ಯಾಲಯಕ್ಕೆ ರಜಾ ಕೊಡಲಾಗಿದೆ. ಆದ್ದರಿಂದ 'ಸಮಾಚಾರ' ಪತ್ರಿಕೆ ಪ್ರಕಟವಾಗುವುದಿಲ್ಲ.

ವ್ಯವಸ್ಥಾಪಕ.

ಗೋಧಿ ಮತ್ತು ಒರಟು ಧಾನ್ಯಗಳ ನಿಯಂತ್ರಣ ರದ್ದು

ಕೇಂದ್ರ ಸರ್ಕಾರದ ನಿರ್ಧಾರ

ದೇಶದಲ್ಲಿ ಆಹಾರ ಪರಿಸ್ಥಿತಿ ಉತ್ತಮಗೊಳ್ಳುತ್ತಿರುವುದರಿಂದ ದೇಶದಾದ್ಯಂತ ಗೋಧಿ ಮತ್ತು ಒರಟು ಧಾನ್ಯಗಳಮೇಲಿನ ನಿಯಂತ್ರಣವನ್ನು ಭಾರತ ಸರ್ಕಾರವು ರದ್ದುಗೊಳಿಸಲು ನಿರ್ಧರಿಸಿ, ಈ ಬಗ್ಗೆ ಒಂದು ಆಜ್ಞೆಯನ್ನು ಹೊರಡಿಸಿದೆ. ಆದರೆ ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯದ ನಡುವೆ ಇರುವ ಸಾಗಾಣಿಕೆ ನಿರ್ಬಂಧವುಮಾತ್ರ ಮುಂದುವರಿಯುತ್ತದೆ.

ಆಸ್ಫೋಟನಾ ವಸ್ತು ತಯಾರಿಕೆ ಕಾರ್ಖಾನೆ

ದೇಶದಲ್ಲಿ ಗಣಿಗಳ ಕಾರ್ಯ ಮತ್ತು ನೀರಾವರಿ, ವಿದ್ಯುಚ್ಛಕ್ತಿ ಮುಂತಾದ ನಾನಾ ಕೆಲಸಗಳಿಗೆ ಬೇಕಾಗುವಂತಹ ಡೈನಮೆಟ್ ಮುಂತಾದ ಆಸ್ಫೋಟಕ ವಸ್ತುಗಳನ್ನು ತಯಾರಿಸಲು ಬೀಹಾರ್‌ನಲ್ಲಿ ಒಂದು ಆಸ್ಫೋಟಕ ವಸ್ತು ತಯಾರಿಕೆ ಕಾರ್ಖಾನೆಯನ್ನು ಸದ್ಯದಲ್ಲೇ ಭಾರತ ಸರ್ಕಾರವು ಸ್ಥಾಪಿಸಲು ನಿರ್ಧರಿಸಿದೆ. ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪೆನಿಯೊಂದಿಗೆ ಒಪ್ಪಂದಕ್ಕೆ ಬಂದು ೪ ಕೋಟಿ ರೂ. ಗಳ ಬಂಡವಾಳದಲ್ಲಿ ಈ ಕಾರ್ಖಾನೆಯನ್ನು ಸ್ಥಾಪಿಸಲಾಗುತ್ತದೆ. ವಿದೇಶಗಳಿಂದ ಈ ವಸ್ತುಗಳನ್ನು ತರಿಸಿಕೊಳ್ಳುವುದನ್ನು ಈ ಕಾರ್ಖಾನೆಯಲ್ಲಿ ಉತ್ಪನ್ನವು ಪ್ರಾರಂಭವಾದೊಡನೆಯೇ ನಿಲ್ಲಿಸಲಾಗುತ್ತೆ.

ಲಕ್ನೋ ಪರಿಸ್ಥಿತಿ ಉತ್ತಮವಾಗಿದೆ

ಲಕ್ನೋ ನಗರದಲ್ಲಿ ಶಾಂತಿ ಸ್ಥಾಪನೆಯಾಗಿದೆ. ಅಲ್ಲಿ ಕರ್ಫ್ಯೂ ವಿಧಿಸಿದ್ದುದನ್ನು ಪೂರ್ಣವಾಗಿ ರದ್ದುಮಾಡಲಾಗಿದೆ. ಯಾವ ಘಟನೆಗಳೂ ನಡೆಯಲಿಲ್ಲ. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಸಭೆ ಸೇರಿ ಮುಂದಿನ ಸೋಮವಾರದತನಕ ಈಗಿರುವ ನಿರ್ಬಂಧಾಜ್ಞೆಯನ್ನು ಮುರಿಯಬಾರದೆಂದು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ. ಗಲಭೆ ಸಮಯದಲ್ಲಿ ದಸ್ತಗಿರಿಯಾದವರಲ್ಲಿ ಅನೇಕರನ್ನು ಬಿಡುಗಡೆ ಮಾಡಲಾಗಿದೆ.

ಹೊಸ ಜನಪದ ಯೋಜನಾ ಕ್ಷೇತ್ರಗಳು

ದೇಶದ ೧೯ ಪ್ರಾಂತ್ಯಗಳಲ್ಲಿ ಇನ್ನೂ ೫೩ ಜನಪದ ಯೋಜನಾ ಕ್ಷೇತ್ರಗಳಲ್ಲಿ ಕೆಲಸವನ್ನು ಪ್ರಾರಂಭಿಸಲು ಆಯೋಜನಾ ಸಮಿತಿಯು ಒಪ್ಪಿಗೆಯನ್ನಿತ್ತಿದೆ. ೪೦ ಲಕ್ಷ ಜನಸಂಖ್ಯೆಯುಳ್ಳ ೫೩೦೦ ಹಳ್ಳಿಗಳು ಈ ಯೋಜನಾ ಕ್ಷೇತ್ರಗಳ ಪರಿಮಿತಿಗೆ ಒಳಪಡುತ್ತವೆ. ಈ ೫೩ ಯೋಜನೆಗಳಿಗೆ ೩ ವರ್ಷಗಳಲ್ಲಿ ಸುಮಾರು ೮ ಕೋಟಿ ರೂಪಾಯಿಗಳು ವೆಚ್ಚವಾಗುತ್ತವೆ.

ಬಾವುಟ ದಿನಾಚರಣೆ

ಭಾರತದ ರೆಡ್‌ಕ್ರಾಸ್ ಸಂಸ್ಥೆಯ ಆಶ್ರಯದಲ್ಲಿ ನಿನ್ನೆಯ ದಿನ ದೇಶಾದ್ಯಂತ ಬಾವುಟ ದಿನವನ್ನು ಆಚರಿಸಲಾಯಿತು. ಧ್ವಜಗಳನ್ನು ಮಾರಿ ಹಣವನ್ನು ಸಂಗ್ರಹಿಸುವ ಕಾರ್ಯವು ಪ್ರಾರಂಭವಾಯಿತು. ಈ ರೀತಿ ಸಂಗ್ರಹವಾಗುವ ಹಣವನ್ನು ದೀನ ದರಿದ್ರರ ಔಷಧೋಪಚಾರಗಳಿಗೆ ವಿನಿಯೋಗಿಸಲಾಗುತ್ತದೆ.

ಪ್ರಶ್ನಾವಳಿ

ರೈಲ್ವೆಯಲ್ಲಿ ಲಂಚಕೊರತನ ಮುಂತಾದ ದುಷ್ಕಾರ್ಯಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ನೇಮಿಸಿರುವ ಸಮಿತಿಯು ಒಂದು ಪ್ರಶ್ನಾವಳಿಯನ್ನು ತಯಾರಿಸಿ ದೇಶಾದ್ಯಂತ ಜನರ ಉತ್ತರಗಳನ್ನು ಪಡೆಯಲಿದೆ.

ಭಾರತ ಸೈನ್ಯಕ್ಕೆ ದೀಪಾವಳಿ ಸಂದೇಶ

ಕೊರಿಯಾದಲ್ಲಿರುವ ಭಾರತ ಸೈನ್ಯಕ್ಕೆ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದ್ ಮತ್ತು ಪ್ರಧಾನಿ ನೆಹರೂರವರು ಶುಭಸಂದೇಶಗಳನ್ನು ಕಳುಹಿಸಿದ್ದಾರೆ. ರಕ್ಷಣಶಾಖಾ ಸಚಿವ ಶ್ರೀ ಮಹವೀರ ತ್ಯಾಗಿಯವರೂ ಸಂದೇಶವನ್ನು ನೀಡಿದ್ದಾರೆ.

ವಿಮಾ ಇಲಾಖೆಗೆ ಸಹ ಕಾರ್ಯದರ್ಶಿ

ಮೈಸೂರು ಸರ್ಕಾರದ ವಿಮಾ ಇಲಾಖೆಗೆ ಮತ್ತೊಬ್ಬ ಕಾರ್ಯದರ್ಶಿಯನ್ನು ನೇಮಿಸಿಕೊಳ್ಳಲಾಗುವುದೆಂದು ತಿಳಿಯಬರುತ್ತದೆ. ಏಜೆನ್ಸಿ ವ್ಯವಸ್ಥೆ ಮತ್ತು ವ್ಯವಸಾಯ, ಪಶುವೈದ್ಯ ವಿಮಾ ಯೋಜನೆಗೆ ಸಂಬಂಧಪಟ್ಟ ಕಾರ್ಯಗಳನ್ನು ನೋಡಿಕೊಳ್ಳಲು ಈ ಹೊಸ ನೇಮಕ ಮಾಡಲಾಗುತ್ತದೆ.

ಲಿಯಾಕತ್‌ರ ಕೊಲೆ ವಿದೇಶೀಯರ ಒಳಸಂಚು

ಪಾಕಿಸ್ತಾನದಲ್ಲಿ ಪ್ರಧಾನಿ ಯಾಗಿದ್ದ ಲಿಯಕತ್ ಅಲಿಖಾನರ ಕೊಲೆಯು ವಿದೇಶಗಳಲ್ಲಿ ನಡೆದ ಒಳಸಂಚಿನ ಪರಿಣಾಮವೆಂದೂ ಅದರ ಬಗ್ಗೆ ವಿವರಗಳನ್ನು ಕೊಡಲು ಅಂತರ ರಾಷ್ಟ್ರೀಯ ದೃಷ್ಟಿಯಿಂದ ಹಿತವಲ್ಲವೆಂದು ಪಾಕೀಸ್ತಾನ ಆಂತರಿಕ ಶಾಖಾ ಸಚಿವ ಗುರ್ಮಾನಿಯವರು ಹೇಳಿದ್ದಾರೆ.

ಸ್ವೀಕಾರ

ದೀಪಾವಳಿ ಹಬ್ಬದ ಸಮಯದಲ್ಲಿ ರಾಜಧಾನಿಯ ಒಲಂಪಿಯಾ ಚಿತ್ರಮಂದಿರ ಮತ್ತು ಜಯಲಕ್ಷ್ಮೀ ಬ್ಯಾಂಗಲ್ಸ್ ಸ್ಟೋರ್ಸ್‌ರವರು ಕಳುಹಿಸಿರುವ ಶುಭಾಶಯವನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ.

ಪ್ರವಾಹಕ್ಕೀಡಾದವರಿಗೆ ಅಮೆರಿಕದ ನೆರವು

ಅಮೆರಿಕಾ ರೆಡ್‌ಕ್ರಾಸ್‌ನ ಶ್ಲಾಘನೀಯ ಕಾರ್ಯ

ಭಾರತಾದ್ಯಂತ ಪ್ರವಾಹಕ್ಕೀಡಾದವರಿಗೆ ಸಹಾಯವಾಗುವಂತೆ ಅಮೆರಿಕಾ ರೆಡ್‌ಕ್ರಾಸ್ ಸಂಸ್ಥೆಯು ೧೦ ಸಾವಿರ ಡಾಲರು ಬೆಲೆಬಾಳುವ ಔಷಧಿ ಸಾಮಾನುಗಳನ್ನು ಕಳುಹಿಸಿದೆ. ಅಲ್ಲದೆ ಅಲ್ಲಿಯ ಜೂನಿಯರ್ ರೆಡ್‌ಕ್ರಾಸ್ ಸಂಸ್ಥೆಯು ಮಕ್ಕಳ ನಿಧಿಯಿಂದ ೧೦ ಸಾವಿರ ಡಾಲರುಗಳ ನಿಧಿಯನ್ನೂ ಕಳುಹಿಸಿದೆ. ಸಿರಿಯ ಸರ್ಕಾರವು ಸಹ ಅಲ್ಲಿಯ ಒಂದು ಸಾವಿರ ಪೌಂಡುಗಳ ದ್ರವ್ಯದ ನೆರವನ್ನು ನೀಡಿದೆ. ಇದೆಲ್ಲಾ ಭಾರತದಲ್ಲಿರುವ ರೆಡ್‌ಕ್ರಾಸಿಗೆ ಬಂದು ಸೇರಿದೆ.

ಪ್ರಾಂತ್ಯದ ಗೌರ್ನರುಗಳು ಮುಸ್ಲಿಂರಾಗಿರಬೇಕು

ಎಲ್ಲಾ ಪ್ರಾಂತ್ಯಗಳ ಗೌರ್ನರುಗಳು ಮುಸ್ಲಿಂರಾಗಿಯೇ ಇರಬೇಕೆಂಬ ಸೂಚನೆಯನ್ನು ಪಾಕೀಸ್ತಾನ ರಾಜ್ಯಾಂಗ ಸಭೆಯು ಅನುಮೋದಿಸಿದೆ. ಅಲ್ಲಿಯ ರಾಜ್ಯಾಂಗ ಪ್ರಕಾರ ಅಲ್ಪಸಂಖ್ಯಾತ ಹಿಂದೂಗಳಿಗೆ ಯಾವ ಉನ್ನತ ಪದವಿಯು ದೊರೆಯುವುದಕ್ಕೆ ಆಸ್ಪದವೇ ಇಲ್ಲದಂತೆ ರಾಜ್ಯಾಂಗವನ್ನು ರಚಿಸಲಾಗುತ್ತಿದೆ.

ಹೊಸದಾಗಿ ಬಂದಿದೆ

ರ್‍ಯಾಲಿ ಕಂಪೆನಿಯವರ ರಾರ್ಜಿಹುಡ್ ಸೈಕಲ್‌ಗಳು, ಮಕ್ಕಳ ಟ್ರೈಸಿಕಲ್‌ಗಳು ಮತ್ತು ಗಾಡಿಗಳು.

ಶಾರದಾ ಸೈಕಲ್ ಮತ್ತು ವಾಚ್ ಸ್ಟೋರ್ಸ್, ದೊಡ್ಡಗಡಿಯಾರ ಚೌಕ ಮೈಸೂರು.

ನಾಟಕರತ್ನ ಜಿ. ಹೆಚ್. ವೀರಣ್ಣನವರ ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)

6--11--53ರಿಂದ ರಾತ್ರಿ 10 ಗಂಟೆಗೆ

ಭಾನುವಾರ ಸಂಜೆ 6--30 ಗಂಟೆಗೆ

ಶಿವರಾಂಪೇಟೆಯಲ್ಲಿರುವ ರತ್ನಾವಳಿ ಥಿಯೇಟರಿನಲ್ಲಿ

ಹೇಮರೆಡ್ಡಿ-- ಮಲ್ಲಮ್ಮ

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ದೇಶೀಯ ವೈದ್ಯವೃತ್ತಿಗೆ ಪ್ರೋತ್ಸಾಹ ಅಗತ್ಯ

ಮೈಸೂರು ೬

ನಮ್ಮ ದೇಶೀಯ ವೈದ್ಯತನಕ್ಕೆ ಈಗ ಸಾಕಾದಷ್ಟು ಪ್ರೋತ್ಸಾಹ ದೊರೆಯುತ್ತಿಲ್ಲ ಮೈಸೂರಿನಲ್ಲಿ ಆಯುರ್ವೇದ ಮತ್ತು ಯುನಾನಿ ಕಾಲೇಜಿನಲ್ಲಿ ಕಳೆದ ನಾಲ್ಕು ವರ್ಷಗಳಿಂದ ವಿದ್ಯಾರ್ಥಿಗಳು ಸಂಖ್ಯೆಯಲ್ಲಿ ಹೆಚ್ಚಿರುವುದಾದರೂ ಸೌಲಭ್ಯ ಮಾತ್ರ ಏನೇನೂ ಇಲ್ಲದಂತಾಗಿ ವಿದ್ಯಾರ್ಥಿಗಳಿಗೆ ಪಾಠಮಾಡುವುದೇ ಕಷ್ಟವಾಗಿದೆ. ಸಾಕಾದಷ್ಟು ಸಲಕರಣೆಗಳಿಲ್ಲ, ಜಾಗವಿಲ್ಲ. ಇದರ ಕಡೆ ಸಂಬಂಧಪಟ್ಟವರ ಗಮನ ಅತ್ಯಗತ್ಯ ಎಂದು ಇಲ್ಲಿಯ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಪ್ರಿನ್ಸಿಪಾಲರಾದ ಡಾ॥ ಸಿ. ದ್ವಾರಕನಾಥರವರು ಮೊನ್ನೆಯ ದಿನ ಕಾಲೇಜ್ ಆವರಣದಲ್ಲಿ ನಡೆದ ಶ್ರೀ ಧನ್ವಂತರಿ ಮತ್ತು ಆಬುಅಲಿಸೀನಾ ಸಪ್ತಾಹದ ಪ್ರಾರಂಭೋತ್ಸವ ಸಮಾರಂಭದಲ್ಲಿ ಭಾಷಣ ಮಾಡುತ್ತಾ ದೇಶೀಯ ವೈದ್ಯ ಪದ್ಧತಿ ಇತರ ಯಾವ ಪದ್ಧತಿಗೂ ಕಡಿಮೆಯಾಗಿಲ್ಲವೆಂದೂ ಇತ್ತೀಚೆಗೆ ಆಯುರ್ವೇದ ಮತ್ತು ಅಲೋಪತಿ ಮಧ್ಯೆ ತಿಕ್ಕಾಟ ಪ್ರಾರಂಭವಾಗಿ ಅಲೋಪತಿ ಪದ್ಧತಿ ಪ್ರಬಲವಾಗಿ ಆಯುರ್ವೇದ ಕುಂಟುತ್ತಿದೆಯೆಂದು ಹೇಳಿದರು

ಈ ಸಮಾರಂಭವನ್ನು ಆಯುರ್ವೇದ ಮತ್ತು ಯುನಾನಿ ಪದವೀಧರ ಸಂಘ ಮತ್ತು ಕಾಲೇಜ್ ಅಧ್ಯಾಪಕವರ್ಗದವರು ಏರ್ಪಡಿಸಿದ್ದರು. ಪ್ರಾರ್ಥನೆಯಾದನಂತರ ಕಾಲೇಜಿನ ಅಧ್ಯಾಪಕರಾದ ಡಾ॥ ಲಕ್ಷ್ಮೀನಾರಾಯಣರವರು ಸ್ವಾಗತ ಭಾಷಣಮಾಡುತ್ತಾ ಆಯುರ್ವೇದ ವೈದ್ಯರಿಗಿರುವ ತೊಂದರೆಗಳನ್ನು ವಿವರಿಸಿದರು. ಇಲ್ಲಿ ನಾವು ೪ ವರ್ಷ ಕಷ್ಟಪಟ್ಟು ಓದಿ ಹೋದರೂ ಸರಿಯಾದ ಪ್ರೋತ್ಸಾಹವಿಲ್ಲ. ಇದನ್ನು ಪರಿಹರಿಸಲು ಎಲ್ಲರ ಪ್ರಯತ್ನ ಸಹಕಾರ ಅಗತ್ಯವೆಂದು ಹೇಳಿದರು.

ಡಾ॥ ನಾರಾಯಣರಾವ್‌ರವರು ಸಪ್ತಾಹದ ಆರಂಭೋತ್ಸವವನ್ನು ನೆರವೇರಿಸುತ್ತ ಆಯುರ್ವೇದ ಮತ್ತು ಯುನಾನಿ ವೈದ್ಯಪದ್ಧತಿಗೆ ನಮ್ಮ ದೇಶದಲ್ಲಿ ಹೆಚ್ಚಿನ ಪ್ರೋತ್ಸಾಹ ದೊರಕಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಿದರು.

ರಣಜಿತ್

5—11—53 ರಿಂದ ಅಮೋಘಪ್ರಾರಂಭ

ನಾದಿರಾ, ಅಶೋಕ್‌ಕುಮಾರ್ ನಟಿಸಿರುವ

★ ನಗ್ಮ ★ (ಹಿಂದಿ)

ಫೋನ್ ೫೭೪ · ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ · ಸಂಪುಟ ೪ · ಸಂಚಿಕೆ ೬೫

೯-೧೧-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಚುನಾವಣಾ ಅಪೀಲಿನಲ್ಲಿ ಶ್ರೀ ಚೆನ್ನಬಸಪ್ಪನವರಿಗೆ ಜಯ

ಶಾಸನಸಭೆಗೆ ಪಿರಿಯಾಪಟ್ಟಣದಿಂದ ನೂತನ ಉಪ ಚುನಾವಣೆಗೆ ಆಜ್ಞೆ

ಶ್ರೀ ಎಸ್. ಎಂ. ಮರಿಯಪ್ಪನವರಿಗೆ ಆರು ವರ್ಷಕಾಲ ಅನರ್ಹತೆ

[ಸ್ವಂ. ಸು.] ಬೆಂಗಳೂರು ೯

ಮೈಸೂರು ಜಿಲ್ಲಾ ಪಿರಿಯಾಪಟ್ಟಣ ತಾಲ್ಲೂಕು ಕ್ಷೇತ್ರದಿಂದ ಮೈಸೂರು ಶಾಸನಸಭೆಗೆ ಶ್ರೀ ಎಸ್. ಎಂ. ಮರಿಯಪ್ಪನವರು ಚುನಾಯಿತರಾಗಿದ್ದುದು ಅಕ್ರಮವೆಂದು ಅದೇ ತಾಲ್ಲೂಕಿನ ಶ್ರೀ ಶಂಕರೇಗೌಡರು ಚುನಾವಣಾ ಕಮೀಷನ್ ಮುಂದೆ ಹೂಡಿದ್ದ ತಕರಾರು ಅರ್ಜಿ ಮೇಲೆ ಅದು ದೀರ್ಘಕಾಲ ವಿಚಾರಣೆ ನಡೆದು, ಈದಿನ ತೀರ್ಪು ಹೊರಬಿದ್ದು. ಚುನಾವಣೆಯು ಅಕ್ರಮವೆಂದೂ ಪುನಃ ಉಪಚುನಾವಣೆ ನಡೆಯಬೇಕೆಂದೂ, ಆಜ್ಞೆ ಮಾಡಲಾಗಿದೆ ಇದೂ ಅಲ್ಲದೆ ಶ್ರೀ ಎಸ್.ಎಂ. ಮರಿಯಪ್ಪನವರು ಇನ್ನು ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲಲು ಅನರ್ಹರೆಂದೂ ಕಮೀಷನ್‌ರವರು ಆಜ್ಞೆ ಮಾಡಿದ್ದಾರೆ.

ಕಮೀಷನ್ನಿನ ಶ್ರೀಗಳಾದ ರಾಮಲಿಂಗಯ್ಯ, ಹೆಚ್. ಹೊಂಬೇಗೌಡ ಮತ್ತು ಇಕ್ಬಾಲ್ ಹುಸೇನರವರು ಒಮ್ಮತದ ತೀರ್ಮಾನವನ್ನು ಇತ್ತಿದ್ದಾರೆ.

ಗೋಸಂವರ್ಧನ ವಾರದಿನಾಚರಣೆ

ಮೈಸೂರು ೯

ಗೋ ಸಂವರ್ಧನವಾರ ದಿನಾಚರಣೆಯ ಆರಂಭೋತ್ಸವವು ಮೊನ್ನೆ ದಿನ ಇಲ್ಲಿನ ಪಶು ವೈದ್ಯಶಾಲಾ ಆವರಣದಲ್ಲಿ ನಡೆಯಿತು. ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸಿ, ಹಸುಗಳ ರಕ್ಷಣೆಯ ಅವಶ್ಯಕತೆಯನ್ನು ಒತ್ತಿ ಹೇಳಿದರು. ಸುಮಾರು ೧೫೦-೨೦೦ ಗೋವುಗಳನ್ನು ಅಲಂಕರಿಸಿ, ಅವುಗಳಿಗೆ ಪೂಜೆ ಮಾಡಿ ಅನಂತರ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಲಾಯಿತು ನಗರದ ಗೋವರ್ಧನ ಸಮಿತಿ ಮತ್ತು ಪ್ರಾಣಿದಯಾ ಸಂಸ್ಥೆಯವರೂ ಇದರಲ್ಲಿ ಭಾಗವಹಿಸಿದ್ದರು.

ದೇಶದಲ್ಲಿ ಗೋಸಂಪತ್ತನ್ನು ಒಂದು ಯೋಜಿತ ರೀತಿಯಲ್ಲಿ ಅಭಿವೃದ್ಧಿ ಪಡಿಸಲು ಕಾರ್ಯಕ್ರಮವೇನೆಂಬುದನ್ನು ಕೇಂದ್ರ ಸರ್ಕಾರದ ಉತ್ಪಾದನಾ ಕಮೀಷನರ್ ಮತ್ತು ಆಹಾರ ಮತ್ತು ವ್ಯವಸಾಯ ಶಾಖೆ ಕಾರ್ಯದರ್ಶಿಗಳಾದ ಸರ್ದಾರ್ ದಾತಾರ್ ಸಿಂಗ್‌ರವರು ಮೊನ್ನೆಯದಿನ ಅಖಿಲಭಾರತ ರೇಡಿಯೋವಿನಲ್ಲಿ "ಗೋಸಂವರ್ಧನ ವಾರದ" ಆರಂಭೋತ್ಸವ ಮಾಡುತ್ತಾ ತಿಳಿಸಿದ್ದಾರೆ.

ಈ ವಾರದಲ್ಲಿ ದನಗಳ ಪ್ರದರ್ಶನ, ಪ್ರಚಾರ, ಉತ್ತಮ ರಾಸುಗಳ ಬಹುಮಾನ ವಿನಿಯೋಗ ಮುಂತಾದ ಕಾರ್ಯಗಳು ನಡೆಯುತ್ತವೆ.

ಪಂಚವಾರ್ಷಿಕ ಯೋಜನೆಯಲ್ಲೂ ಗೋಸಂರಕ್ಷಣೆಗೆ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ೩ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೧೬೦ ಗೋಸದನಗಳನ್ನು ಕಟ್ಟಲಾಗುತ್ತದೆ. ಅಲ್ಲಿ ಗೋವುಗಳ ರಕ್ಷಣೆ ಮುಂತಾದ ಕಾರ್ಯಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಸಲಾಗುವುದೆಂದು ಅವರು ತಿಳಿಸಿದ್ದಾರೆ.

ಡಾ॥ ಮೋದಿ ಬೊಂಬಾಯಿನಲ್ಲಿ

ನೇತ್ರ ವೈದ್ಯರಾದ ಡಾ॥ ಮೋದಿಯವರು ತಮ್ಮ ನೇತ್ರದಾನ ಯಜ್ಞವನ್ನು ಬೊಂಬಾಯಿ ಪ್ರಾಂತ್ಯದ ಹಿರೆಕೆರೂರಿನಲ್ಲಿ ಪ್ರಾರಂಭಿಸಿದ್ದಾರೆ. ಅಲ್ಲಿ ಅವರು ೧೫ ದಿನಗಳು ಇರುತ್ತಾರೆ.

ಭೂದಾನ ಯಜ್ಞ ಪ್ರವಾಸ

ಮೈಸೂರು ೯

ನಂಜನಗೂಡು ತಾಲ್ಲೂಕಿನಲ್ಲಿ ಭೂದಾನ ಪ್ರಚಾರ ಮತ್ತು ಸದರಿತಾಲ್ಲೂಕಿನಲ್ಲಿ ಸಂಗ್ರಹಿಸಬೇಕಾಗಿರುವ ಎರಡು ಸಾವಿರ ಎಕರೆ ಭೂದಾನದ ಪ್ರಾಪ್ತಿಗಾಗಿ ಎರಡನೆಯಬಾರಿ ಪ್ರವಾಸವನ್ನು ಇದೇ ತಿಂಗಳು ೧೫ನೇ ತಾ॥ ಭಾನುವಾರದಿಂದ ಹತ್ತುದಿನಗಳಪರ್ಯಂತ ಏರ್ಪಡಿಸಿರುತ್ತೆ. ಈ ಅವಧಿಯಲ್ಲಿ ನಂಜನಗೂಡು ತಾಲ್ಲೂಕಿನ ಪ್ರಮುಖ ಕಾರ್ಯಕರ್ತರ ಗುಂಪು ಕಾಲ್ನಡಿಗೆ ಪ್ರವಾಸ ಹೊರಟು ಗೋಳೂರು, ಗೀಕಳ್ಳಿ, ಮುಳ್ಳೂರು ಹೊರಳವಾಡಿ, ಸರಗೂರು, ನಗರ್ಲೆ, ಬಿಳಿಗೆರೆ, ಹನಿಯಂಬಳ್ಳಿ, ಕಲ್ಮಳ್ಳಿ, ಕುಪ್ಪರಹಳ್ಳಿ, ಸುತ್ತೂರು, ಜೀಮಾರಹಳ್ಳಿ, ಬೆಳಗಾಲೆ, ತಾಯೂರು, ಗೆಜ್ಜಗನಹಳ್ಳಿ, ಕಾಹಳ್ಳಿ, ಕಲ್ಕುಂದ, ಬೋಗಯ್ಯನಹುಂಡಿ, ಚಿನ್ನಳ್ಳಿ, ತಗಡೂರು, ಮಡಳ್ಳಿ, ಅಳಗಂಚಿ, ಈ ಗ್ರಾಮಗಳಿಗೆ ಭೇಟಿ ಕೊಡುವರು.

ತಾಲ್ಲೂಕಿನ ಮಹಾಜನರೆಲ್ಲರೂ ಈ ಮಹಾಕಾರ್ಯವನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಸಂಘಟಕರು ಪ್ರಾರ್ಥಿಸಿರುತ್ತಾರೆ.

ಲಾಲ್ ಬಹದ್ದೂರ್ ಶಾಸ್ತ್ರಿಯವರು ಮದ್ರಾಸಿನಲ್ಲಿ

ರೈಲ್ವೆ ಮತ್ತು ಸಾಗಾಣಿಕೆಯ ಕೇಂದ್ರ ಸಚಿವರಾದ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಮದ್ರಾಸಿಗೆ ಆಗಮಿಸಿದ್ದಾರೆ. ಅವರು ನಿನ್ನೆಯ ದಿನ ದಕ್ಷಿಣ ಭಾರತ ರೈಲ್ವೆ ಕೆಲಸಗಾರರ ಸಂಘದ ಅಧಿಕಾರ ವರ್ಗದವರನ್ನು ಭೇಟಿಮಾಡಿ ಕೆಲಸಗಾರರ ಬೇಡಿಕೆಗಳ ವಿಷಯವನ್ನು ಅನೌಪಚಾರಿಕವಾಗಿ ಚರ್ಚಿಸಿದರೆಂದು ತಿಳಿಯಬರುತ್ತದೆ.

ಶಾಸನಸಭಾ ಸದಸ್ಯತ್ವ ಪುನರ್ವಿಂಗಡನೆ

ಬೆಂಗಳೂರು ೯

ಕೇಂದ್ರ ಪಾರ್ಲಿಮೆಂಟ್ ಮತ್ತು ಮೈಸೂರು ಶಾಸನ ಸಭಾ ಸದಸ್ಯತ್ವ ಕ್ಷೇತ್ರ ವಿಂಗಡನಾ ಕಮಿಷನರವರು ಮೈಸೂರು ಸಂಸ್ಥಾನ ಶಾಸನ ಸಭೆಯಲ್ಲಿ ೧೧೭ ಸ್ಥಾನಗಳ, ಪಾರ್ಲಿಮೆಂಟಿನಲ್ಲಿ ಮೈಸೂರಿಗೆ ೧೩ ಸ್ಥಾನಗಳು ಇರುವಂತೆ ನಿಗದಿ ಮಾಡಿ ಸಲಹೆ ಮಾಡಿದ್ದಾರೆ. ಈ ಸಂಬಂಧವಲ್ಲಿ ಮೈಸೂರು ಸರ್ಕಾರವು ವಿಶೇಷ ಗೆಜೆಟ್ ಪ್ರಕಟಣೆಯನ್ನಿತ್ತಿದೆ. ಈ ವಿಷಯದಲ್ಲಿ ಸಲಹೆ ಮತ್ತು ಆಕ್ಷೇಪಣೆಗಳನ್ನು ದೆಹಲಿಯಲ್ಲಿರುವ ಡಿಲಿಮಿಟೇಷನ್ ಕಮಿಷನ್ನಿನ ಕಾರ್ಯದರ್ಶಿಯವರಿಗೆ ಇದೇ ೨೫ನೇ ತಾರೀಖಿನೊಳಗಾಗಿ ತಿಳಿಸಬೇಕಾಗಿದೆ.

ಈ ಕಮಿಷನ್ನಿನವರು ಇದೇ ೩೦ನೇ ತಾರೀಖು ಬೆಂಗಳೂರಿನಲ್ಲಿರುವ ಶಾಸನ ಸಭಾ ಭವನದಲ್ಲಿ ಬೆಳಿಗ್ಗೆ ೧೦ ಗಂಟೆಗೆ ಒಂದು ಬಹಿರಂಗ ಸಭೆಯನ್ನು ಕರೆದಿತ್ತಾರೆ. ಅಗ್ಗೆ ಬಂದಿರುವ ಸಲಹೆ ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಲಾಗುತ್ತದೆ.

ವಿದ್ಯಾಸಚಿವರು ದೆಹಲಿಗೆ

ಕೇಂದ್ರ ಶಿಕ್ಷಣ ಸಲಹಾ ಸಮಿತಿಯ ಸಭೆಯಲ್ಲಿ ಭಾಗವಹಿಸಲು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ನಿನ್ನೆಯ ದಿನ ದೆಹಲಿಗೆ ಪ್ರಯಾಣ ಮಾಡಿದರು.

ಉಪಾಧ್ಯಾಯರಿಗೆ ಸಂಬಳ ಕೊಡಲು ಸಾಲ

ಚಿತ್ತೂರು ಜಿಲ್ಲಾ ಬೋರ್ಡು ಆಡಳಿತದಲ್ಲಿರುವ ಉಪಾಧ್ಯಾಯರಿಗೆ ಸಂಬಳವನ್ನು ಕೊಡಲು ಹಣವಿಲ್ಲದೆ ಆಂಧ್ರ ಸರ್ಕಾರವು ೫೦ ಸಾವಿರ ರೂಪಾಯಿಗಳ ಸಾಲವನ್ನು ಮಂಜೂರ್ಮಾಡಿದೆ.

ಡಿಫ್ತೀರಿಯಾ ರೋಗ ನಿವಾರಣಾ ಯೋಜನೆ

ಮೈಸೂರು ನಗರದಲ್ಲಿ ಪ್ರಾರಂಭ

ಮೈಸೂರು ೯

ಡಿಫ್ತೀರಿಯಾ ಎಂಬ ಗಂಟಲುರೋಗವು ಇತ್ತೀಚೆಗೆ ನಗರದಲ್ಲಿ ಹೆಚ್ಚುತ್ತಿರುವುದು ಕಂಡುಬಂದಿರುವುದರಿಂದ ೧ರಿಂದ ೫ವರ್ಷದ ಮಕ್ಕಳಿಗೆ ಆ ರೋಗವು ಬಾರದಂತೆ ಮುಂಜಾಗ್ರತೆ ಯೋಜನೆಯನ್ನು ಪುರಸಭೆಯವರು ಕೈಗೊಳ್ಳಲು ನಿರ್ಧರಿಸಿದ್ದಾರೆ. ಈ ಕೆಲಸವನ್ನು ನಗರದ ಎಲ್ಲಾ ಶಿಶು ಸಂರಕ್ಷಣಾ ಕೇಂದ್ರ, ಶಿಶುವಿಹಾರ, ನರ್ಸರೀ ಶಾಲೆಗಳಲ್ಲಿ ಪ್ರಾರಂಭಿಸಿ, ಒಂದುವರುಷದ ಲಾಗಾಯ್ತು ೧೦ ವರ್ಷದ ಒಳಗಿರುವ ಮಕ್ಕಳಿಗೆಲ್ಲಾ ಮೂರು ಡಿಫ್ತೀರಿಯಾ ವ್ಯಾಕ್ಸಿನೇಷನ್ ಇಂಜಕ್ಷನ್ ಕೊಡಲಾಗುವುದು. ಈ ಯೋಜನೆಯ ಪ್ರಾರಂಭೋತ್ಸವವು ಇದೇ ೧೧ನೇ ತಾರೀಖು ಬುಧವಾರ ಬೆಳಿಗ್ಗೆ ೯ ಗಂಟೆಗೆ ವಾಣಿವಿಲಾಸ ರಸ್ತೆಯಲಿರುವ ಗುಣಾಂಬಾ ಟ್ರಸ್ಟ್ ಭವನದಲ್ಲಿ ನಡೆಯುವುದು

ರೈತ ಸಂಘ

ಹೈದರಾಬಾದ್ ಪ್ರಾಂತ್ಯದಲ್ಲಿ ವ್ಯವಸಾಯ ಪ್ರಗತಿ ಕಾರ್ಯಗಳಲ್ಲಿ ತೊಡಗಲು ಒಂದು ಕೇಂದ್ರ ರೈತ ಸಂಘವನ್ನು ಸ್ಥಾಪಿಸಲಾಗುವುದೆಂದು ಅಲ್ಲಿಯ ವ್ಯವಸಾಯ ಸಚಿವರು ಹೇಳಿದ್ದಾರೆ. ಈ ಸಂಘವು ರಾಜಕೀಯದಿಂದ ದೂರವಾಗಿದ್ದು ಕೇವಲ ವ್ಯವಸಾಯ ಅಭಿವೃದ್ಧಿ ಕಾರ್ಯಗಳಲ್ಲಿಯೇ ತೊಡಗುತ್ತದೆ. ರೈತರು, ವಿಜ್ಞಾನಿಗಳು, ಪಶುವೈದ್ಯರು ಮುಂತಾದವರು ಈ ಸಂಘದ ಸದಸ್ಯರಾಗಲವಕಾಶವಿದೆ.

ಲಕ್ನೋ ಪರಿಸ್ಥಿತಿ ಶಾಂತವಾಗಿದೆ

ಕಳೆದ ಎರಡು ವಾರಗಳಿಂದ ಉಲ್ಬಣ ಪರಿಸ್ಥಿತಿಯಲ್ಲಿದ್ದ ಲಕ್ನೋ ನಗರವು ಈಗ ಶಾಂತ ಪರಿಸ್ಥಿತಿಯಲ್ಲಿದೆ. ನಿತ್ಯ ಜೀವನವು ಮಾಮೂಲಿನಂತೆ ನಡೆಯುತ್ತಿದೆ. ಶಾಲಾ ಕಾಲೇಜುಗಳೆಲ್ಲವೂ ಪುನಃ ಆರಂಭವಾಗಿವೆ. ವಿಶ್ವವಿದ್ಯಾನಿಲಯ ಸಂಘ ಸ್ಥಾಪನೆ ವಿಷಯದಲ್ಲಿ ಕಾಲೇಜಿನ ಪ್ರಾಧ್ಯಾಪಕರ ಮತ್ತು ವಿದ್ಯಾರ್ಥಿಗಳ ನಡುವೆ ಸಂಧಾನಗಳು ನಡೆಯುತ್ತಿವೆ. ಒಂದೆರಡು ದಿನಗಳಲ್ಲಿಯೇ ಎಲ್ಲವೂ ಶಾಂತರೀತಿಯಿಂದ ನಿರ್ಧಾರವಾಗುವ ನಿರೀಕ್ಷೆಯಿರುವುದಾಗಿ ಹೇಳಲಾಗಿದೆ

ಗೋಧಿ ಮತ್ತು ಒರಟು ಧಾನ್ಯಗಳ ನಿಯಂತ್ರಣ ರದ್ದು

ಕೇಂದ್ರ ಸರ್ಕಾರದ ನಿರ್ಧಾರ

ದೇಶದಲ್ಲಿ ಆಹಾರ ಪರಿಸ್ಥಿತಿ ಉತ್ತಮಗೊಳ್ಳುತ್ತಿರುವುದರಿಂದ ದೇಶದಾದ್ಯಂತ ಗೋಧಿ ಮತ್ತು ಒರಟು ಧಾನ್ಯಗಳಮೇಲಿನ ನಿಯಂತ್ರಣವನ್ನು ಭಾರತ ಸರ್ಕಾರವು ರದ್ದುಗೊಳಿಸಲು ನಿರ್ಧರಿಸಿ, ಈ ಬಗ್ಗೆ ಒಂದು ಆಜ್ಞೆಯನ್ನು ಹೊರಡಿಸಿದೆ. ಆದರೆ ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯದ ನಡುವೆ ಇರುವ ಸಾಗಾಣಿಕೆ ನಿರ್ಬಂಧವುಮಾತ್ರ ಮುಂದುವರಿಯುತ್ತದೆ.

ಆಸ್ಫೋಟನಾ ವಸ್ತು ತಯಾರಿಕೆ ಕಾರ್ಖಾನೆ

ದೇಶದಲ್ಲಿ ಗಣಿಗಳ ಕಾರ್ಯ ಮತ್ತು ನೀರಾವರಿ, ವಿದ್ಯುಚ್ಛಕ್ತಿ ಮುಂತಾದ ನಾನಾ ಕೆಲಸಗಳಿಗೆ ಬೇಕಾಗುವಂತಹ ಡೈನಮೆಟ್ ಮುಂತಾದ ಆಸ್ಫೋಟಕ ವಸ್ತುಗಳನ್ನು ತಯಾರಿಸಲು ಬೀಹಾರ್‌ನಲ್ಲಿ ಒಂದು ಆಸ್ಫೋಟಕ ವಸ್ತು ತಯಾರಿಕೆ ಕಾರ್ಖಾನೆಯನ್ನು ಸದ್ಯದಲ್ಲೇ ಭಾರತ ಸರ್ಕಾರವು ಸ್ಥಾಪಿಸಲು ನಿರ್ಧರಿಸಿದೆ. ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪೆನಿಯೊಂದಿಗೆ ಒಪ್ಪಂದಕ್ಕೆ ಬಂದು ೪ ಕೋಟಿ ರೂ. ಗಳ ಬಂಡವಾಳದಲ್ಲಿ ಈ ಕಾರ್ಖಾನೆಯನ್ನು ಸ್ಥಾಪಿಸಲಾಗುತ್ತದೆ. ವಿದೇಶಗಳಿಂದ ಈ ವಸ್ತುಗಳನ್ನು ತರಿಸಿಕೊಳ್ಳುವುದನ್ನು ಈ ಕಾರ್ಖಾನೆಯಲ್ಲಿ ಉತ್ಪನ್ನವು ಪ್ರಾರಂಭವಾದೊಡನೆಯೇ ನಿಲ್ಲಿಸಲಾಗುತ್ತೆ.

ಲಕ್ನೋ ಪರಿಸ್ಥಿತಿ ಉತ್ತಮವಾಗಿದೆ

ಲಕ್ನೋ ನಗರದಲ್ಲಿ ಶಾಂತಿ ಸ್ಥಾಪನೆಯಾಗಿದೆ. ಅಲ್ಲಿ ಕರ್ಫ್ಯೂ ವಿಧಿಸಿದ್ದುದನ್ನು ಪೂರ್ಣವಾಗಿ ರದ್ದುಮಾಡಲಾಗಿದೆ. ಯಾವ ಘಟನೆಗಳೂ ನಡೆಯಲಿಲ್ಲ. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಸಭೆ ಸೇರಿ ಮುಂದಿನ ಸೋಮವಾರದತನಕ ಈಗಿರುವ ನಿರ್ಬಂಧಾಜ್ಞೆಯನ್ನು ಮುರಿಯಬಾರದೆಂದು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ. ಗಲಭೆ ಸಮಯದಲ್ಲಿ ದಸ್ತಗಿರಿಯಾದವರಲ್ಲಿ ಅನೇಕರನ್ನು ಬಿಡುಗಡೆ ಮಾಡಲಾಗಿದೆ.

ಹೊಸ ಜನಪದ ಯೋಜನಾ ಕ್ಷೇತ್ರಗಳು

ದೇಶದ ೧೯ ಪ್ರಾಂತ್ಯಗಳಲ್ಲಿ ಇನ್ನೂ ೫೩ ಜನಪದ ಯೋಜನಾ ಕ್ಷೇತ್ರಗಳಲ್ಲಿ ಕೆಲಸವನ್ನು ಪ್ರಾರಂಭಿಸಲು ಆಯೋಜನಾ ಸಮಿತಿಯು ಒಪ್ಪಿಗೆಯನ್ನಿತ್ತಿದೆ. ೪೦ ಲಕ್ಷ ಜನಸಂಖ್ಯೆಯುಳ್ಳ ೫೩೦೦ ಹಳ್ಳಿಗಳು ಈ ಯೋಜನಾ ಕ್ಷೇತ್ರಗಳ ಪರಿಮಿತಿಗೆ ಒಳಪಡುತ್ತವೆ. ಈ ೫೩ ಯೋಜನೆಗಳಿಗೆ ೩ ವರ್ಷಗಳಲ್ಲಿ ಸುಮಾರು ೮ ಕೋಟಿ ರೂಪಾಯಿಗಳು ವೆಚ್ಚವಾಗುತ್ತವೆ.

ಬಾವುಟ ದಿನಾಚರಣೆ

ಭಾರತದ ರೆಡ್‌ಕ್ರಾಸ್ ಸಂಸ್ಥೆಯ ಆಶ್ರಯದಲ್ಲಿ ನಿನ್ನೆಯ ದಿನ ದೇಶಾದ್ಯಂತ ಬಾವುಟ ದಿನವನ್ನು ಆಚರಿಸಲಾಯಿತು. ಧ್ವಜಗಳನ್ನು ಮಾರಿ ಹಣವನ್ನು ಸಂಗ್ರಹಿಸುವ ಕಾರ್ಯವು ಪ್ರಾರಂಭವಾಯಿತು. ಈ ರೀತಿ ಸಂಗ್ರಹವಾಗುವ ಹಣವನ್ನು ದೀನ ದರಿದ್ರರ ಔಷಧೋಪಚಾರಗಳಿಗೆ ವಿನಿಯೋಗಿಸಲಾಗುತ್ತದೆ.

ಪ್ರಶ್ನಾವಳಿ

ರೈಲ್ವೆಯಲ್ಲಿ ಲಂಚಕೊರತನ ಮುಂತಾದ ದುಷ್ಕೃತ್ಯಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ನೇಮಿಸಿರುವ ಸಮಿತಿಯು ಒಂದು ಪ್ರಶ್ನಾವಳಿಯನ್ನು ತಯಾರಿಸಿ ದೇಶಾದ್ಯಂತ ಜನರ ಉತ್ತರಗಳನ್ನು ಪಡೆಯಲಿದೆ.

ಭಾರತ ಸೈನ್ಯಕ್ಕೆ ದೀಪಾವಳಿ ಸಂದೇಶ

ಕೊರಿಯಾದಲ್ಲಿರುವ ಭಾರತ ಸೈನ್ಯಕ್ಕೆ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದ್ ಮತ್ತು ಪ್ರಧಾನಿ ನೆಹರೂರವರು ಶುಭಸಂದೇಶಗಳನ್ನು ಕಳುಹಿಸಿದ್ದಾರೆ. ರಕ್ಷಣಶಾಖಾ ಸಚಿವ ಶ್ರೀ ಮಹವೀರ ತ್ಯಾಗಿಯವರೂ ಸಂದೇಶವನ್ನು ನೀಡಿದ್ದಾರೆ.

ವಿಮಾ ಇಲಾಖೆಗೆ ಸಹ ಕಾರ್ಯದರ್ಶಿ

ಮೈಸೂರು ಸರ್ಕಾರದ ವಿಮಾ ಇಲಾಖೆಗೆ ಮತ್ತೊಬ್ಬ ಕಾರ್ಯದರ್ಶಿಯನ್ನು ನೇಮಿಸಿಕೊಳ್ಳಲಾಗುವುದೆಂದು ತಿಳಿಯಬರುತ್ತದೆ. ಏಜೆನ್ಸಿ ವ್ಯವಸ್ಥೆ ಮತ್ತು ವ್ಯವಸಾಯ, ಪಶುವೈದ್ಯ ವಿಮಾ ಯೋಜನೆಗೆ ಸಂಬಂಧಪಟ್ಟ ಕಾರ್ಯಗಳನ್ನು ನೋಡಿಕೊಳ್ಳಲು ಈ ಹೊಸ ನೇಮಕ ಮಾಡಲಾಗುತ್ತದೆ.

ಲಿಯಾಕತ್‌ರ ಕೊಲೆ ವಿದೇಶೀಯರ ಒಳಸಂಚು

ಪಾಕಿಸ್ತಾನದಲ್ಲಿ ಪ್ರಧಾನಿ ಯಾಗಿದ್ದ ಲಿಯಕತ್‌ಅಲಿಖಾನರ ಕೊಲೆಯು ವಿದೇಶಗಳಲ್ಲಿ ನಡೆದ ಒಳಸಂಚಿನ ಪರಿಣಾಮವೆಂದೂ ಅದರ ಬಗ್ಗೆ ವಿವರಗಳನ್ನು ಕೊಡಲು ಅಂತರ ರಾಷ್ಟ್ರೀಯ ದೃಷ್ಟಿಯಿಂದ ಹಿತವಲ್ಲವೆಂದು ಪಾಕೀಸ್ತಾನ ಆಂತರಿಕ ಶಾಖಾ ಸಚಿವ ಗುರ್ಮಾನಿಯವರು ಹೇಳಿದ್ದಾರೆ.

ಸ್ವೀಕಾರ

ದೀಪಾವಳಿ ಹಬ್ಬದ ಸಮಯದಲ್ಲಿ ರಾಜಧಾನಿಯ ಒಲಂಪಿಯಾ ಚಿತ್ರಮಂದಿರ ಮತ್ತು ಜಯಲಕ್ಷ್ಮೀ ಬ್ಯಾಂಗಲ್ಸ್ ಸ್ಟೋರ್ಸ್‌ರವರು ಕಳುಹಿಸಿರುವ ಶುಭಾಶಯವನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ.

ಪ್ರವಾಹಕ್ಕೀಡಾದವರಿಗೆ ಅಮೆರಿಕದ ನೆರವು

ಅಮೆರಿಕಾ ರೆಡ್‌ಕ್ರಾಸ್‌ನ ಶ್ಲಾಘನೀಯ ಕಾರ್ಯ

ಭಾರತಾದ್ಯಂತ ಪ್ರವಾಹಕ್ಕೀಡಾದವರಿಗೆ ಸಹಾಯವಾಗುವಂತೆ ಅಮೆರಿಕಾ ರೆಡ್‌ಕ್ರಾಸ್ ಸಂಸ್ಥೆಯು ೧೦ ಸಾವಿರ ಡಾಲರು ಬೆಲೆಬಾಳುವ ಔಷಧಿ ಸಾಮಾನುಗಳನ್ನು ಕಳುಹಿಸಿದೆ. ಅಲ್ಲದೆ ಅಲ್ಲಿಯ ಜೂನಿಯರ್ ರೆಡ್‌ಕ್ರಾಸ್ ಸಂಸ್ಥೆಯು ಮಕ್ಕಳ ನಿಧಿಯಿಂದ ೧೦ ಸಾವಿರ ಡಾಲರುಗಳ ನಿಧಿಯನ್ನೂ ಕಳುಹಿಸಿದೆ. ಸಿಂಧ್ಯರ್ ಸರ್ಕಾರವು ಸಹ ಅಲ್ಲಿಯ ಒಂದು ಸಾವಿರ ಪೌಂಡುಗಳ ದ್ರವ್ಯದ ನೆರವನ್ನು ನೀಡಿದೆ. ಇದೆಲ್ಲಾ ಭಾರತದಲ್ಲಿರುವ ರೆಡ್‌ಕ್ರಾಸಿಗೆ ಬಂದು ಸೇರಿದೆ.

ಪ್ರಾಂತ್ಯದ ಗೌರ್ನರುಗಳು ಮುಸ್ಲಿಂರಾಗಿರಬೇಕು

ಎಲ್ಲಾ ಪ್ರಾಂತ್ಯಗಳ ಗೌರ್ನರುಗಳು ಮುಸ್ಲಿಂರಾಗಿಯೇ ಇರಬೇಕೆಂಬ ಸೂಚನೆಯನ್ನು ಪಾಕೀಸ್ತಾನ ರಾಜ್ಯಾಂಗ ಸಭೆಯು ಅನುಮೋದಿಸಿದೆ. ಅಲ್ಲಿಯ ರಾಜ್ಯಾಂಗ ಪ್ರಕಾರ ಅಲ್ಪಸಂಖ್ಯಾತ ಹಿಂದೂಗಳಿಗೆ ಯಾವ ಉನ್ನತ ಪದವಿಯು ದೊರೆಯುವುದಕ್ಕೆ ಆಸ್ಪದವೇ ಇಲ್ಲದಂತೆ ರಾಜ್ಯಾಂಗವನ್ನು ರಚಿಸಲಾಗುತ್ತಿದೆ.

ಹೊಸದಾಗಿ ಬಂದಿದೆ

ರ್‍ಯಾಲಿ ಕಂಪೆನಿಯವರ ರಾರ್ಜಿಹುಡ್ ಸೈಕಲ್‌ಗಳು, ಮಕ್ಕಳ ಟ್ರೈಸಿಕಲ್‌ಗಳು ಮತ್ತು ಗಾಡಿಗಳು.

ಶಾರದಾ ಸೈಕಲ್ ಮತ್ತು ವಾಚ್ ಸ್ಟೋರ್ಸ್, ದೊಡ್ಡಗಡಿಯಾರ ಚೌಕ ಮೈಸೂರು.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)
6--11--53ರಿಂದ ರಾತ್ರಿ 10 ಗಂಟೆಗೆ
ಭಾನುವಾರ ಸಂಜೆ 6--30 ಗಂಟೆಗೆ
ಶಿವರಾಂಪೇಟೆಯಲ್ಲಿರುವ ರತ್ನಾವಳಿ ಥಿಯೇಟರಿನಲ್ಲಿ
ಹೇಮರೆಡ್ಡಿ-- ಮಲ್ಲಮ್ಮ
ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ದೇಶೀಯ ವೈದ್ಯವೃತ್ತಿಗೆ ಪ್ರೋತ್ಸಾಹ ಅಗತ್ಯ

ಮೈಸೂರು ೬

ನಮ್ಮ ದೇಶೀಯ ವೈದ್ಯತನಕ್ಕೆ ಈಗ ಸಾಕಾದಷ್ಟು ಪ್ರೋತ್ಸಾಹ ದೊರೆಯುತ್ತಿಲ್ಲ ಮೈಸೂರಿನಲ್ಲಿ ಆಯುರ್ವೇದ ಮತ್ತು ಯುನಾನಿ ಕಾಲೇಜಿನಲ್ಲಿ ಕಳೆದ ನಾಲ್ಕು ವರ್ಷಗಳಿಂದ ವಿದ್ಯಾರ್ಥಿಗಳು ಸಂಖ್ಯೆಯಲ್ಲಿ ಹೆಚ್ಚಿರುವುದಾದರೂ ಸೌಲಭ್ಯ ಮಾತ್ರ ಏನೇನೂ ಇಲ್ಲದಂತಾಗಿ ವಿದ್ಯಾರ್ಥಿಗಳಿಗೆ ಪಾಠಮಾಡುವುದೇ ಕಷ್ಟವಾಗಿದೆ. ಸಾಕಾದಷ್ಟು ಸಲಕರಣೆಗಳಿಲ್ಲ, ಜಾಗವಿಲ್ಲ. ಇದರ ಕಡೆ ಸಂಬಂಧಪಟ್ಟವರ ಗಮನ ಅತ್ಯಗತ್ಯ- ಎಂದು ಇಲ್ಲಿಯ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಪ್ರಿನ್ಸಿಪಾಲರಾದ ಡಾ॥ ಸಿ. ದ್ವಾರಕನಾಥರವರು ಮೊನ್ನೆಯ ದಿನ ಕಾಲೇಜ್ ಆವರಣದಲ್ಲಿ ನಡೆದ ಶ್ರೀ ಧನ್ವಂತರಿ ಮತ್ತು ಅಬುಅಲಿಸೇನಾ ಸಪ್ತಾಹದ ಪ್ರಾರಂಭೋತ್ಸವ ಸಮಾರಂಭದಲ್ಲಿ ಭಾಷಣ ಮಾಡುತ್ತಾ ದೇಶೀಯ ವೈದ್ಯಪದ್ಧತಿ ಇತರ ಯಾವ ಪದ್ಧತಿಗೂ ಕಡಿಮೆಯಾಗಿಲ್ಲವೆಂದೂ ಇತ್ತೀಚೆಗೆ ಆಯುರ್ವೇದ ಮತ್ತು ಅಲೋಪತಿ ಮಧ್ಯೆ ತಿಕ್ಕಾಟ ಪ್ರಾರಂಭವಾಗಿ ಅಲೋಪತಿ ಪದ್ಧತಿ ಪ್ರಬಲವಾಗಿ ಆಯುರ್ವೇದ ಕುಂಟುತ್ತಿದೆಯೆಂದು ಹೇಳಿದರು

ಈ ಸಮಾರಂಭವನ್ನು ಆಯುರ್ವೇದ ಮತ್ತು ಯುನಾನಿ ಪದವೀಧರ ಸಂಘ ಮತ್ತು ಕಾಲೇಜ್ ಅಧ್ಯಾಪಕವರ್ಗದವರು ಏರ್ಪಡಿಸಿದ್ದರು. ಪ್ರಾರ್ಥನೆಯಾದನಂತರ ಕಾಲೇಜಿನ ಅಧ್ಯಾಪಕರಾದ ಡಾ॥ ಲಕ್ಷ್ಮೀನಾರಾಯಣರವರು ಸ್ವಾಗತ ಭಾಷಣಮಾಡುತ್ತಾ ಆಯುರ್ವೇದ ವೈದ್ಯರಿಗಿರುವ ತೊಂದರೆಗಳನ್ನು ವಿವರಿಸಿದರು. ಇಲ್ಲಿ ನಾವು ೪ ವರ್ಷ ಕಷ್ಟಪಟ್ಟು ಓದಿ ಹೋದರೂ ಸರಿಯಾದ ಪ್ರೋತ್ಸಾಹವಿಲ್ಲ. ಇದನ್ನು ಪರಿಹರಿಸಲು ಎಲ್ಲರ ಪ್ರಯತ್ನ ಸಹಕಾರ ಅಗತ್ಯವೆಂದು ಹೇಳಿದರು.

ಡಾ॥ ನಾರಾಯಣರಾವ್‌ರವರು ಸಪ್ತಾಹದ ಆರಂಭೋತ್ಸವವನ್ನು ನೆರವೇರಿಸುತ್ತ ಆಯುರ್ವೇದ ಮತ್ತು ಯುನಾನಿ ವೈದ್ಯಪದ್ಧತಿಗೆ ನಮ್ಮ ದೇಶದಲ್ಲಿ ಹೆಚ್ಚಿನ ಪ್ರೋತ್ಸಾಹ ದೊರಕಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಿದರು.

ರಣಜಿತ್
5—11—53 ರಿಂದ ಅಮೋಘಪ್ರಾರಂಭ
ನಾದಿರಾ, ಅಶೋಕ್‌ಕುಮಾರ್ ನಟಿಸಿರುವ
★ ನಗ್ಮ ★
(ಹಿಂದಿ)

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೬೫

೯-೧೧-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಚುನಾವಣಾ ಅಪೀಲಿನಲ್ಲಿ ಶ್ರೀ ಚೆನ್ನಬಸಪ್ಪನವರಿಗೆ ಜಯ

ಶಾಸನಸಭೆಗೆ ಪಿರಿಯಾಪಟ್ಟಣದಿಂದ ನೂತನ ಉಪ ಚುನಾವಣೆಗೆ ಆಜ್ಞೆ

ಶ್ರೀ ಎಸ್. ಎಂ. ಮರಿಯಪ್ಪನವರಿಗೆ ಆರು ವರ್ಷಕಾಲ ಅನರ್ಹತೆ

[ಸ್ವಂ. ಸು.] ಬೆಂಗಳೂರು ೯

ಮೈಸೂರು ಜಿಲ್ಲಾ ಪಿರಿಯಾಪಟ್ಟಣ ತಾಲ್ಲೂಕು ಕ್ಷೇತ್ರದಿಂದ ಮೈಸೂರು ಶಾಸನಸಭೆಗೆ ಶ್ರೀ ಎಸ್. ಎಂ. ಮರಿಯಪ್ಪನವರು ಚುನಾಯಿತರಾಗಿದ್ದುದು ಅಕ್ರಮವೆಂದು ಅದೇ ತಾಲ್ಲೂಕಿನ ಶ್ರೀ ಶಂಕರೇಗೌಡರು ಚುನಾವಣಾ ಕಮೀಷನ್ ಮುಂದೆ ಹೂಡಿದ್ದ ತಕರಾರು ಅರ್ಜಿ ಮೇಲೆ ಅದು ದೀರ್ಘಕಾಲ ವಿಚಾರಣೆ ನಡೆದು, ಈದಿನ ತೀರ್ಪು ಹೊರಬಿದ್ದು. ಚುನಾವಣೆಯು ಅಕ್ರಮವೆಂದೂ ಪುನಃ ಉಪಚುನಾವಣೆ ನಡೆಯಬೇಕೆಂದೂ, ಆಜ್ಞೆ ಮಾಡಲಾಗಿದೆ ಇದೂ ಅಲ್ಲದೆ ಶ್ರೀ ಎಸ್.ಎಂ. ಮರಿಯಪ್ಪನವರು ಇನ್ನು ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲಲು ಅನರ್ಹರೆಂದೂ ಕಮೀಷನ್‌ರವರು ಆಜ್ಞೆ ಮಾಡಿದ್ದಾರೆ-

ಕಮೀಷನ್ನಿನ ಶ್ರೀಗಳಾದ ರಾಮಲಿಂಗಯ್ಯ, ಹೆಚ್. ಹೊಂಬೇಗೌಡ ಮತ್ತು ಇಕ್ಬಾಲ್ ಹುಸೇನರವರು ಒಮ್ಮತದ ತೀರ್ಮಾನವನ್ನು ಇತ್ತಿದ್ದಾರೆ.

ಗೋಸಂವರ್ಧನ ವಾರ ದಿನಾಚರಣೆ

ಮೈಸೂರು ೯

ಗೋ ಸಂವರ್ಧನವಾರ ದಿನಾಚರಣೆಯ ಆರಂಭೋತ್ಸವವು ಮೊನ್ನೆ ದಿನ ಇಲ್ಲಿನ ಪಶು ವೈದ್ಯಶಾಲಾ ಆವರಣದಲ್ಲಿ ನಡೆಯಿತು. ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸಿ, ಹಸುಗಳ ರಕ್ಷಣೆಯ ಅವಶ್ಯಕತೆಯನ್ನು ಒತ್ತಿ ಹೇಳಿದರು. ಸುಮಾರು ೧೫೦-೨೦೦ ಗೋವುಗಳನ್ನು ಅಲಂಕರಿಸಿ, ಅವುಗಳಿಗೆ ಪೂಜೆ ಮಾಡಿ ಅನಂತರ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಲಾಯಿತು ನಗರದ ಗೋವರ್ಧನ ಸಮಿತಿ ಮತ್ತು ಪ್ರಾಣಿದಯಾ ಸಂಸ್ಥೆಯವರೂ ಇದರಲ್ಲಿ ಭಾಗವಹಿಸಿದ್ದರು.

ದೇಶದಲ್ಲಿ ಗೋಸಂಪತ್ತನ್ನು ಒಂದು ಯೋಜಿತ ರೀತಿಯಲ್ಲಿ ಅಭಿವೃದ್ಧಿಪಡಿಸಲು ಕಾರ್ಯಕ್ರಮವೇನೆಂಬುದನ್ನು ಕೇಂದ್ರ ಸರ್ಕಾರದ ಉತ್ಪಾದನಾ ಕಮೀಷನರ್ ಮತ್ತು ಆಹಾರ ಮತ್ತು ವ್ಯವಸಾಯ ಶಾಖೆ ಕಾರ್ಯದರ್ಶಿಗಳಾದ ಸರ್ದಾರ್ ದಾತಾರ್ ಸಿಂಗ್‌ರವರು ಮೊನ್ನೆಯದಿನ ಅಖಿಲಭಾರತ ರೇಡಿಯೋವಿನಲ್ಲಿ "ಗೋಸಂವರ್ಧನ ವಾರದ" ಆರಂಭೋತ್ಸವ ಮಾಡುತ್ತಾ ತಿಳಿಸಿದ್ದಾರೆ.

ಈ ವಾರದಲ್ಲಿ ದನಗಳ ಪ್ರದರ್ಶನ, ಪ್ರಚಾರ, ಉತ್ತಮ ರಾಸುಗಳ ಬಹುಮಾನ ವಿನಿಯೋಗ ಮುಂತಾದ ಕಾರ್ಯಗಳು ನಡೆಯುತ್ತವೆ.

ಪಂಚವಾರ್ಷಿಕ ಯೋಜನೆಯಲ್ಲೂ ಗೋಸಂರಕ್ಷಣೆಗೆ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ೩ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೧೬೦ ಗೋಸದನಗಳನ್ನು ಕಟ್ಟಲಾಗುತ್ತದೆ. ಅಲ್ಲಿ ಗೋವುಗಳ ರಕ್ಷಣೆ ಮುಂತಾದ ಕಾರ್ಯಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಸಲಾಗುವುದೆಂದು ಅವರು ತಿಳಿಸಿದ್ದಾರೆ.

ಡಾ॥ ಮೋದಿ ಬೊಂಬಾಯಿನಲ್ಲಿ

ನೇತ್ರ ವೈದ್ಯರಾದ ಡಾ॥ ಮೋದಿಯವರು ತಮ್ಮ ನೇತ್ರದಾನ ಯಜ್ಞವನ್ನು ಬೊಂಬಾಯಿ ಪ್ರಾಂತ್ಯದ ಹಿರೆಕೆರೂರಿನಲ್ಲಿ ಪ್ರಾರಂಭಿಸಿದ್ದಾರೆ. ಅಲ್ಲಿ ಅವರು ೧೫ ದಿನಗಳು ಇರುತ್ತಾರೆ.

ಭೂದಾನ ಯಜ್ಞ ಪ್ರವಾಸ

ಮೈಸೂರು ೯

ನಂಜನಗೂಡ ತಾಲ್ಲೂಕಿನಲ್ಲಿ ಭೂದಾನ ಪ್ರಚಾರ ಮತ್ತು ಸದರಿತಾಲ್ಲೂಕಿನಲ್ಲಿ ಸಂಗ್ರಹಿಸಬೇಕಾಗಿರುವ ಎರಡು ಸಾವಿರ ಎಕರೆ ಭೂದಾನದ ಪ್ರಾಪ್ತಿಗಾಗಿ ಎರಡನೆಯಬಾರಿ ಪ್ರವಾಸವನ್ನು ಇದೇ ತಿಂಗಳು ೧೫ನೇ ತಾ॥ ಭಾನುವಾರದಿಂದ ಹತ್ತುದಿನಗಳಪರ್ಯಂತ ಏರ್ಪಡಿಸಿರುತ್ತೆ. ಈ ಅವಧಿಯಲ್ಲಿ ನಂಜನಗೂಡು ತಾಲ್ಲೂಕಿನ ಪ್ರಮುಖ ಕಾರ್ಯಕರ್ತರ ಗುಂಪು ಕಾಲ್ನಡಿಗೆ ಪ್ರವಾಸ ಹೊರಟು ಗೋಳೂರು, ಗೀಕಳ್ಳಿ, ಮುಳ್ಳೂರು ಹೊರಳವಾಡಿ, ಸರಗೂರು, ಸಗರ್ಲೆ, ಬಿಗ್ಗರೆ, ಹನಿಯಂಬಳ್ಳಿ, ಕಲ್ಮಳ್ಳಿ, ಕುಪ್ಪರಹಳ್ಳಿ, ಸುತ್ತೂರು, ಜೀಮಾರಹಳ್ಳಿ, ಬೆಳಗಾಲೆ, ತಾಯೂರು, ಗೆಜ್ಜಗನಹಳ್ಳಿ, ಕಾಹಳ್ಳಿ, ಕಲ್ಮುಂದ, ಬೋಗಯ್ಯನಹುಂಡಿ, ಚಿನ್ನಳ್ಳಿ, ತಗಡೂರು, ಮಡಳ್ಳಿ, ಅಳಗಂಚಿ, ಈ ಗ್ರಾಮಗಳಿಗೆ ಭೇಟಿ ಕೊಡುವುದು.

ತಾಲ್ಲೂಕಿನ ಮಹಾಜನರೆಲ್ಲರೂ ಈ ಮಹಾಕಾರ್ಯವನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಸಂಘಟಕರು ಪ್ರಾರ್ಥಿಸಿರುತ್ತಾರೆ.

ಲಾಲ್ ಬಹದ್ದೂರ್ ಶಾಸ್ತ್ರಿಯವರು ಮದ್ರಾಸಿನಲ್ಲಿ

ರೈಲ್ವೆ ಮತ್ತು ಸಾಗಾಣಿಕೆಯ ಕೇಂದ್ರ ಸಚಿವರಾದ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಮದ್ರಾಸಿಗೆ ಆಗಮಿಸಿದ್ದಾರೆ. ಅವರು ನಿನ್ನೆಯ ದಿನ ದಕ್ಷಿಣ ಭಾರತ ರೈಲ್ವೆ ಕೆಲಸಗಾರರ ಸಂಘದ ಅಧಿಕಾರ ವರ್ಗದವರನ್ನು ಭೇಟಿ ಮಾಡಿ ಕೆಲಸಗಾರರ ಬೇಡಿಕೆಗಳ ವಿಷಯವನ್ನು ಅನೌಪಚಾರಿಕವಾಗಿ ಚರ್ಚಿಸಿದರೆಂದು ತಿಳಿಯಬರುತ್ತದೆ.

ಶಾಸನಸಭಾ ಸದಸ್ಯತ್ವ ಪುನರ್ವಿಂಗಡನೆ

ಬೆಂಗಳೂರು ೯

ಕೇಂದ್ರ ಪಾರ್ಲಿಮೆಂಟ್ ಮತ್ತು ಮೈಸೂರು ಶಾಸನ ಸಭಾ ಸದಸ್ಯತ್ವ ಕ್ಷೇತ್ರ ವಿಂಗಡನಾ ಕಮಿಷನರವರು ಮೈಸೂರು ಸಂಸ್ಥಾನ ಶಾಸನ ಸಭೆಯಲ್ಲಿ ೧೧೭ ಸ್ಥಾನಗಳ, ಪಾರ್ಲಿಮೆಂಟಿನಲ್ಲಿ ಮೈಸೂರಿಗೆ ೧೩ ಸ್ಥಾನಗಳು ಇರುವಂತೆ ನಿಗದಿ ಮಾಡಿ ಸಲಹೆ ಮಾಡಿದ್ದಾರೆ. ಈ ಸಂಬಂಧದಲ್ಲಿ ಮೈಸೂರು ಸರ್ಕಾರವು ವಿಶೇಷ ಗೆಜೆಟ್ ಪ್ರಕಟಣೆಯನ್ನಿತ್ತಿದೆ. ಈ ವಿಷಯದಲ್ಲಿ ಸಲಹೆ ಮತ್ತು ಆಕ್ಷೇಪಣೆಗಳನ್ನು ದೆಹಲಿಯಲ್ಲಿರುವ ಡಿಲಿಮಿಟೇಷನ್ ಕಮಿಷನ್ನಿನ ಕಾರ್ಯದರ್ಶಿಯವರಿಗೆ ಇದೇ ೨೫ನೇ ತಾರೀಖಿನೊಳಗಾಗಿ ತಿಳಿಸಬೇಕಾಗಿದೆ.

ಈ ಕಮಿಷನ್ನಿನವರು ಇದೇ ೩೦ನೇ ತಾರೀಖು ಬೆಂಗಳೂರಿನಲ್ಲಿರುವ ಶಾಸನ ಸಭಾ ಭವನದಲ್ಲಿ ಬೆಳಗ್ಗೆ ೧೦ ಗಂಟೆಗೆ ಒಂದು ಬಹಿರಂಗ ಸಭೆಯನ್ನು ಕರೆದಿತ್ತಾರೆ. ಆಗ್ಗೆ ಬಂದಿರುವ ಸಲಹೆ ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಲಾಗುತ್ತದೆ.

ವಿದ್ಯಾಸಚಿವರು ದೆಹಲಿಗೆ

ಕೇಂದ್ರ ಶಿಕ್ಷಣ ಸಲಹಾ ಸಮಿತಿಯ ಸಭೆಯಲ್ಲಿ ಭಾಗವಹಿಸಲು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ನಿನ್ನೆಯ ದಿನ ದೆಹಲಿಗೆ ಪ್ರಯಾಣ ಮಾಡಿದರು.

ಉಪಾಧ್ಯಾಯರಿಗೆ ಸಂಬಳ ಕೊಡಲು ಸಾಲ

ಚಿತ್ತೂರು ಜಿಲ್ಲಾ ಬೋರ್ಡು ಆಡಳಿತದಲ್ಲಿರುವ ಉಪಾಧ್ಯಾಯರಿಗೆ ಸಂಬಳವನ್ನು ಕೊಡಲು ಹಣವಿಲ್ಲದೆ ಆಂಧ್ರ ಸರ್ಕಾರವು ೫೦ ಸಾವಿರ ರೂಪಾಯಿಗಳ ಸಾಲವನ್ನು ಮಂಜೂರ್ಮಾಡಿದೆ.

ಡಿಫ್ತೀರಿಯಾ ರೋಗ ನಿವಾರಣಾ ಯೋಜನೆ

ಮೈಸೂರು ನಗರದಲ್ಲಿ ಪ್ರಾರಂಭ

ಮೈಸೂರು ೯

ಡಿಫ್ತೀರಿಯಾ ಎಂಬ ಗಂಟಲುರೋಗವು ಇತ್ತೀಚೆಗೆ ನಗರದಲ್ಲಿ ಹೆಚ್ಚುತ್ತಿರುವುದು ಕಂಡುಬಂದಿರುವುದರಿಂದ ೧ರಿಂದ ೫ ವರ್ಷದ ಮಕ್ಕಳಿಗೆ ಆ ರೋಗವು ಬಾರದಂತೆ ಮುಂಜಾಗ್ರತೆ ಯೋಜನೆಯನ್ನು ಪುರಸಭೆಯವರು ಕೈಗೊಳ್ಳಲು ನಿರ್ಧರಿಸಿದ್ದಾರೆ. ಈ ಕೆಲಸವನ್ನು ನಗರದ ಎಲ್ಲಾ ಶಿಶು ಸಂರಕ್ಷಣಾ ಕೇಂದ್ರ, ಶಿಶುವಿಹಾರ, ನರ್ಸರೀ ಶಾಲೆಗಳಲ್ಲಿ ಪ್ರಾರಂಭಿಸಿ, ಒಂದುವರುಷದ ಲಾಗಾಯ್ತು ೧೦ ವರ್ಷದ ಒಳಗಿರುವ ಮಕ್ಕಳಿಗೆಲ್ಲಾ ಮೂರು ಡಿಫ್ತೀರಿಯಾ ವ್ಯಾಕ್ಸಿನೇಷನ್ ಇಂಜಕ್ಷನ್ ಕೊಡಲಾಗುವುದು. ಈ ಯೋಜನೆಯ ಪ್ರಾರಂಭೋತ್ಸವವು ಇದೇ ೧೧ನೇ ತಾರೀಖು ಬುಧವಾರ ಬೆಳಗ್ಗೆ ೯ ಗಂಟೆಗೆ ವಾಣಿವಿಲಾಸ ರಸ್ತೆಯಲಿರುವ ಗುಣಾಂಬಾ ಟ್ರಸ್ಟ್ ಭವನದಲ್ಲಿ ನಡೆಯುವುದು

ರೈತ ಸಂಘ

ಹೈದರಾಬಾದ್ ಪ್ರಾಂತ್ಯದಲ್ಲಿ ವ್ಯವಸಾಯ ಪ್ರಗತಿ ಕಾರ್ಯಗಳಲ್ಲಿ ತೊಡಗಲು ಒಂದು ಕೇಂದ್ರ ರೈತ ಸಂಘವನ್ನು ಸ್ಥಾಪಿಸಲಾಗುವುದೆಂದು ಅಲ್ಲಿಯ ವ್ಯವಸಾಯ ಸಚಿವರು ಹೇಳಿದ್ದಾರೆ. ಈ ಸಂಘವು ರಾಜಕೀಯದಿಂದ ದೂರವಾಗಿದ್ದು ಕೇವಲ ವ್ಯವಸಾಯ ಅಭಿವೃದ್ಧಿ ಕಾರ್ಯಗಳಲ್ಲಿಯೇ ತೊಡಗುತ್ತದೆ. ರೈತರು, ವಿಜ್ಞಾನಿಗಳು, ಪಶುವೈದ್ಯರು ಮುಂತಾದವರು ಈ ಸಂಘದ ಸದಸ್ಯರಾಗಲವಕಾಶವಿದೆ.

ಲಕ್ನೋ ಪರಿಸ್ಥಿತಿ ಶಾಂತವಾಗಿದೆ

ಕಳೆದ ಎರಡು ವಾರಗಳಿಂದ ಉಲ್ಬಣ ಪರಿಸ್ಥಿತಿಯಲ್ಲಿದ್ದ ಲಕ್ನೋ ನಗರವು ಈಗ ಶಾಂತ ಪರಿಸ್ಥಿತಿಯಲ್ಲಿದೆ. ನಿತ್ಯ ಜೀವನವು ಮಾಮೂಲಿನಂತೆ ನಡೆಯುತ್ತಿದೆ. ಶಾಲಾ ಕಾಲೇಜುಗಳೆಲ್ಲವೂ ಪುನಃ ಆರಂಭವಾಗಿವೆ. ವಿಶ್ವವಿದ್ಯಾನಿಲಯ ಸಂಘ ಸ್ಥಾಪನೆ ವಿಷಯದಲ್ಲಿ ಕಾಲೇಜಿನ ಪ್ರಾಧ್ಯಾಪಕರ ಮತ್ತು ವಿದ್ಯಾರ್ಥಿಗಳ ನಡುವೆ ಸಂಧಾನಗಳು ನಡೆಯುತ್ತಿವೆ. ಒಂದೆರಡು ದಿನಗಳಲ್ಲಿಯೇ ಎಲ್ಲವೂ ಶಾಂತರೀತಿಯಿಂದ ನಿರ್ಧಾರವಾಗುವ ನಿರೀಕ್ಷೆಯಿರುವುದಾಗಿ ಹೇಳಲಾಗಿದೆ

ಗೋಧಿ ಮತ್ತು ಒರಟು ಧಾನ್ಯಗಳ ನಿಯಂತ್ರಣ ರದ್ದು

ಕೇಂದ್ರ ಸರ್ಕಾರದ ನಿರ್ಧಾರ

ದೇಶದಲ್ಲಿ ಆಹಾರ ಪರಿಸ್ಥಿತಿ ಉತ್ತಮಗೊಳ್ಳುತ್ತಿರುವುದರಿಂದ ದೇಶದಾದ್ಯಂತ ಗೋಧಿ ಮತ್ತು ಒರಟು ಧಾನ್ಯಗಳಮೇಲಿನ ನಿಯಂತ್ರಣವನ್ನು ಭಾರತ ಸರ್ಕಾರವು ರದ್ದುಗೊಳಿಸಲು ನಿರ್ಧರಿಸಿ, ಈ ಬಗ್ಗೆ ಒಂದು ಆಜ್ಞೆಯನ್ನು ಹೊರಡಿಸಿದೆ. ಆದರೆ ಒಂದು ಪ್ರಾಂತ್ಯದಿಂದ ಮತ್ತೊಂದು ಪ್ರಾಂತ್ಯದ ನಡುವೆ ಇರುವ ಸಾಗಾಣಿಕೆ ನಿರ್ಬಂಧವುಮಾತ್ರ ಮುಂದುವರಿಯುತ್ತದೆ.

ಆಸ್ಫೋಟನಾ ವಸ್ತು ತಯಾರಿಕೆ ಕಾರ್ಖಾನೆ

ದೇಶದಲ್ಲಿ ಗಣಿಗಳ ಕಾರ್ಯ ಮತ್ತು ನೀರಾವರಿ, ವಿದ್ಯುಚ್ಛಕ್ತಿ ಮುಂತಾದ ನಾನಾ ಕೆಲಸಗಳಿಗೆ ಬೇಕಾಗುವಂತಹ ಡೈನಮೆಟ್ ಮುಂತಾದ ಆಸ್ಫೋಟಕ ವಸ್ತುಗಳನ್ನು ತಯಾರಿಸಲು ಬೀಹಾರ್‌ನಲ್ಲಿ ಒಂದು ಆಸ್ಫೋಟಕ ವಸ್ತು ತಯಾರಿಕೆ ಕಾರ್ಖಾನೆಯನ್ನು ಸದ್ಯದಲ್ಲೇ ಭಾರತ ಸರ್ಕಾರವು ಸ್ಥಾಪಿಸಲು ನಿರ್ಧರಿಸಿದೆ. ಇಂಪೀರಿಯಲ್ ಕೆಮಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ಕಂಪೆನಿಯೊಂದಿಗೆ ಒಪ್ಪಂದಕ್ಕೆ ಬಂದು ೪ ಕೋಟಿ ರೂ. ಗಳ ಬಂಡವಾಳದಲ್ಲಿ ಈ ಕಾರ್ಖಾನೆಯನ್ನು ಸ್ಥಾಪಿಸಲಾಗುತ್ತದೆ. ವಿದೇಶಗಳಿಂದ ಈ ವಸ್ತುಗಳನ್ನು ತರಿಸಿಕೊಳ್ಳುವುದನ್ನು ಈ ಕಾರ್ಖಾನೆಯಲ್ಲಿ ಉತ್ಪನ್ನವು ಪ್ರಾರಂಭವಾದೊಡನೆಯೇ ನಿಲ್ಲಿಸಲಾಗುತ್ತೆ.

ಲಕ್ನೋ ಪರಿಸ್ಥಿತಿ ಉತ್ತಮವಾಗಿದೆ

ಲಕ್ನೋ ನಗರದಲ್ಲಿ ಶಾಂತಿ ಸ್ಥಾಪನೆಯಾಗಿದೆ. ಅಲ್ಲಿ ಕರ್ಫ್ಯೂ ವಿಧಿಸಿದ್ದುದನ್ನು ಪೂರ್ಣವಾಗಿ ರದ್ದುಮಾಡಲಾಗಿದೆ. ಯಾವ ಘಟನೆಗಳೂ ನಡೆಯಲಿಲ್ಲ. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಸಭೆ ಸೇರಿ ಮುಂದಿನ ಸೋಮವಾರದತನಕ ಈಗಿರುವ ನಿರ್ಬಂಧಾಜ್ಞೆಯನ್ನು ಮುರಿಯಬಾರದೆಂದು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ. ಗಲಭೆ ಸಮಯದಲ್ಲಿ ದಸ್ತಗಿರಿಯಾದವರಲ್ಲಿ ಅನೇಕರನ್ನು ಬಿಡುಗಡೆ ಮಾಡಲಾಗಿದೆ.

ಹೊಸ ಜನಪದ ಯೋಜನಾ ಕ್ಷೇತ್ರಗಳು

ದೇಶದ ೧೯ ಪ್ರಾಂತ್ಯಗಳಲ್ಲಿ ಇನ್ನೂ ೫೩ ಜನಪದ ಯೋಜನಾ ಕ್ಷೇತ್ರಗಳಲ್ಲಿ ಕೆಲಸವನ್ನು ಪ್ರಾರಂಭಿಸಲು ಆಯೋಜನಾ ಸಮಿತಿಯು ಒಪ್ಪಿಗೆಯನ್ನಿತ್ತಿದೆ. ೪೦ ಲಕ್ಷ ಜನಸಂಖ್ಯೆಯುಳ್ಳ ೫೩೦೦ ಹಳ್ಳಿಗಳು ಈ ಯೋಜನಾ ಕ್ಷೇತ್ರಗಳ ಪರಿಮಿತಿಗೆ ಒಳಪಡುತ್ತವೆ. ಈ ೫೩ ಯೋಜನೆಗಳಿಗೆ ೩ ವರ್ಷಗಳಲ್ಲಿ ಸುಮಾರು ೮ ಕೋಟಿ ರೂಪಾಯಿಳು ವೆಚ್ಚವಾಗುತ್ತವೆ.

ಬಾವುಟ ದಿನಾಚರಣೆ

ಭಾರತದ ರೆಡ್‌ಕ್ರಾಸ್ ಸಂಸ್ಥೆಯ ಆಶ್ರಯದಲ್ಲಿ ನಿನ್ನೆಯ ದಿನ ದೇಶಾದ್ಯಂತ ಬಾವುಟ ದಿನವನ್ನು ಆಚರಿಸಲಾಯಿತು. ಧ್ವಜಗಳನ್ನು ಮಾರಿ ಹಣವನ್ನು ಸಂಗ್ರಹಿಸುವ ಕಾರ್ಯವು ಪ್ರಾರಂಭವಾಯಿತು. ಈ ರೀತಿ ಸಂಗ್ರಹವಾಗುವ ಹಣವನ್ನು ಧೀನದರಿದ್ರರ ಔಷಧೋಪಚಾರಗಳಿಗೆ ವಿನಿಯೋಗಿಸಲಾಗುತ್ತದೆ.

ಪ್ರಶ್ನಾವಳಿ

ರೈಲ್ವೆಯಲ್ಲಿ ಲಂಚಕೊರತನ ಮುಂತಾದ ದುಷ್ಕಾರ್ಯಗಳನ್ನು ಪರಿಶೀಲಿಸಲು ಕೇಂದ್ರ ಸರ್ಕಾರವು ನೇಮಿಸಿರುವ ಸಮಿತಿಯು ಒಂದು ಪ್ರಶ್ನಾವಳಿಯನ್ನು ತಯಾರಿಸಿ ದೇಶಾದ್ಯಂತ ಜನರ ಉತ್ತರಗಳನ್ನು ಪಡೆಯಲಿದೆ.

ಭಾರತ ಸೈನ್ಯಕ್ಕೆ ದೀಪಾವಳಿ ಸಂದೇಶ

ಕೊರಿಯಾದಲ್ಲಿರುವ ಭಾರತ ಸೈನ್ಯಕ್ಕೆ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದ್ ಮತ್ತು ಪ್ರಧಾನಿ ನೆಹರೂರವರು ಶುಭಸಂದೇಶಗಳನ್ನು ಕಳುಹಿಸಿದ್ದಾರೆ. ರಕ್ಷಣಶಾಖಾ ಸಚಿವ ಶ್ರೀ ಮಹವೀರ ತ್ಯಾಗಿಯವರೂ ಸಂದೇಶವನ್ನು ನೀಡಿದ್ದಾರೆ.

ವಿಮಾ ಇಲಾಖೆಗೆ ಸಹ ಕಾರ್ಯದರ್ಶಿ

ಮೈಸೂರು ಸರ್ಕಾರದ ವಿಮಾ ಇಲಾಖೆಗೆ ಮತ್ತೊಬ್ಬ ಕಾರ್ಯದರ್ಶಿಯನ್ನು ನೇಮಿಸಿಕೊಳ್ಳಲಾಗುವುದೆಂದು ತಿಳಿಯಬರುತ್ತದೆ. ಏಜೆನ್ಸಿ ವ್ಯವಸ್ಥೆ ಮತ್ತು ವ್ಯವಸಾಯ, ಪಶುವೈದ್ಯ ವಿಮಾ ಯೋಜನೆಗೆ ಸಂಬಂಧಪಟ್ಟ ಕಾರ್ಯಗಳನ್ನು ನೋಡಿಕೊಳ್ಳಲು ಈ ಹೊಸ ನೇಮಕ ಮಾಡಲಾಗುತ್ತದೆ.

ಲಿಯಾಕತ್‌ರ ಕೊಲೆ ವಿದೇಶೀಯರ ಒಳಸಂಚು

ಪಾಕಿಸ್ತಾನದಲ್ಲಿ ಪ್ರಧಾನಿ ಯಾಗಿದ್ದ ಲಿಯಕತ್ ಅಲಿಖಾನರ ಕೊಲೆಯು ವಿದೇಶಗಳಲ್ಲಿ ನಡೆದ ಒಳಸಂಚಿನ ಪರಿಣಾಮವೆಂದೂ ಅದರ ಬಗ್ಗೆ ವಿವರಗಳನ್ನು ಕೊಡಲು ಅಂತರರಾಷ್ಟ್ರೀಯ ದೃಷ್ಟಿಯಿಂದ ಹಿತವಲ್ಲವೆಂದು ಪಾಕೀಸ್ತಾನ ಆಂತರಿಕ ಶಾಖಾ ಸಚಿವ ಗುರ್ಮಾನಿಯವರು ಹೇಳಿದ್ದಾರೆ.

ಸ್ವೀಕಾರ

ದೀಪಾವಳಿ ಹಬ್ಬದ ಸಮಯದಲ್ಲಿ ರಾಜಧಾನಿಯ ಒಲಂಪಿಯಾ ಚಿತ್ರಮಂದಿರ ಮತ್ತು ಜಯಲಕ್ಷ್ಮೀ ಬ್ಯಾಂಗಲ್ಸ್ ಸ್ಟೋರ್ಸ್‌ರವರು ಕಳುಹಿಸಿರುವ ಶುಭಾಶಯವನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ.

ಪ್ರವಾಹಕ್ಕೀಡಾದವರಿಗೆ ಅಮೆರಿಕದ ನೆರವು

ಅಮೆರಿಕಾ ರೆಡ್‌ಕ್ರಾಸ್‌ನ ಶ್ಲಾಘನೀಯ ಕಾರ್ಯ

ಭಾರತಾದ್ಯಂತ ಪ್ರವಾಹಕ್ಕೀಡಾದವರಿಗೆ ಸಹಾಯವಾಗುವಂತೆ ಅಮೆರಿಕಾ ರೆಡ್ ಕ್ರಾಸ್ ಸಂಸ್ಥೆಯು ೧೦ ಸಾವಿರ ಡಾಲರು ಬೆಲೆಬಾಳುವ ಔಷಧಿ ಸಾಮಾನುಗಳನ್ನು ಕಳುಹಿಸಿದೆ. ಅಲ್ಲದೆ ಅಲ್ಲಿಯ ಜೂನಿಯರ್ ರೆಡ್‌ಕ್ರಾಸ್ ಸಂಸ್ಥೆಯು ಮಕ್ಕಳ ನಿಧಿಯಿಂದ ೧೦ ಸಾವಿರ ಡಾಲರುಗಳ ನಿಧಿಯನ್ನೂ ಕಳುಹಿಸಿದೆ. ಸಿರಿಯ ಸರ್ಕಾರವು ಸಹ ಅಲ್ಲಿಯ ಒಂದು ಸಾವಿರ ಪೌಂಡುಗಳ ದ್ರವ್ಯದ ನೆರವನ್ನು ನೀಡಿದೆ. ಇದೆಲ್ಲಾ ಭಾರತದಲ್ಲಿರುವ ರೆಡ್‌ಕ್ರಾಸಿಗೆ ಬಂದು ಸೇರಿದೆ.

ಪ್ರಾಂತ್ಯದ ಗೌರ್ನರುಗಳು ಮುಸ್ಲಿಂರಾಗಿರಬೇಕು

ಎಲ್ಲಾ ಪ್ರಾಂತ್ಯಗಳ ಗೌರ್ನರುಗಳು ಮುಸ್ಲಿಂರಾಗಿಯೇ ಇರಬೇಕೆಂಬ ಸೂಚನೆಯನ್ನು ಪಾಕೀಸ್ತಾನ ರಾಜ್ಯಾಂಗ ಸಭೆಯು ಅನುಮೋದಿಸಿದೆ. ಅಲ್ಲಿಯ ರಾಜ್ಯಾಂಗ ಪ್ರಕಾರ ಅಲ್ಪಸಂಖ್ಯಾತ ಹಿಂದೂಗಳಿಗೆ ಯಾವ ಉನ್ನತ ಪದವಿಯು ದೊರೆಯುವುದಕ್ಕೆ ಆಸ್ಪದವೇ ಇಲ್ಲದಂತೆ ರಾಜ್ಯಾಂಗವನ್ನು ರಚಿಸಲಾಗುತ್ತಿದೆ.

ಹೊಸದಾಗಿ ಬಂದಿದೆ

ರ್‍ಯಾಲಿ ಕಂಪೆನಿಯವರ ರಾರ್ಜಿಹುಡ್ ಸೈಕಲ್‌ಗಳು, ಮಕ್ಕಳ ಟ್ರೈಸಿಕಲ್‌ಗಳು ಮತ್ತು ಗಾಡಿಗಳು.

ಶಾರದಾ ಸೈಕಲ್ ಮತ್ತು ವಾಚ್ ಸ್ಟೋರ್ಸ್, ದೊಡ್ಡಗಡಿಯಾರ ಚೌಕ ಮೈಸೂರು.

ನಾಟಕರತ್ನ ಜಿ. ಹೆಚ್. ವೀರಣ್ಣನವರ ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)

6--11--53ರಿಂದ ರಾತ್ರಿ 10 ಗಂಟೆಗೆ

ಭಾನುವಾರ ಸಂಜೆ 6--30 ಗಂಟೆಗೆ

ಶಿವರಾಂಪೇಟೆಯಲ್ಲಿರುವ ರತ್ನಾವಳಿ ಥಿಯೇಟರಿನಲ್ಲಿ

ಹೇಮರೆಡ್ಡಿ-- ಮಲ್ಲಮ್ಮ

ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ದೇಶೀಯ ವೈದ್ಯವೃತ್ತಿಗೆ ಪ್ರೋತ್ಸಾಹ ಅಗತ್ಯ

ಮೈಸೂರು ೬

ನಮ್ಮ ದೇಶೀಯ ವೈದ್ಯತನಕ್ಕೆ ಈಗ ಸಾಕಾದಷ್ಟು ಪ್ರೋತ್ಸಾಹ ದೊರೆಯುತ್ತಿಲ್ಲ ಮೈಸೂರಿನಲ್ಲಿ ಆಯುರ್ವೇದ ಮತ್ತು ಯುನಾನಿ ಕಾಲೇಜಿನಲ್ಲಿ ಕಳೆದ ನಾಲ್ಕು ವರ್ಷಗಳಿಂದ ವಿದ್ಯಾರ್ಥಿಗಳು ಸಂಖ್ಯೆಯಲ್ಲಿ ಹೆಚ್ಚಿರುವುದಾದರೂ ಸೌಲಭ್ಯ ಮಾತ್ರ ಏನೇನೂ ಇಲ್ಲದಂತಾಗಿ ವಿದ್ಯಾರ್ಥಿಗಳಿಗೆ ಪಾಠಮಾಡುವುದೇ ಕಷ್ಟವಾಗಿದೆ. ಸಾಕಾದಷ್ಟು ಸಲಕರಣೆಗಳಿಲ್ಲ, ಜಾಗವಿಲ್ಲ. ಇದರ ಕಡೆ ಸಂಬಂಧಪಟ್ಟವರ ಗಮನ ಅತ್ಯಗತ್ಯ-ಎಂದು ಇಲ್ಲಿಯ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಸಿ. ದ್ವಾರಕನಾಥರವರು ಮೊನ್ನೆಯ ದಿನ ಕಾಲೇಜ್ ಆವರಣದಲ್ಲಿ ನಡೆದ ಶ್ರೀ ಧನ್ವಂತರಿ ಮತ್ತು ಅಬುಅಲಿಸೇನಾ ಸಪ್ತಾಹದ ಪ್ರಾರಂಭೋತ್ಸವ ಸಮಾರಂಭದಲ್ಲಿ ಭಾಷಣ ಮಾಡುತ್ತಾ, ದೇಶೀಯ ವೈದ್ಯಪದ್ಧತಿ ಇತರ ಯಾವ ಪದ್ಧತಿಗೂ ಕಡಿಮೆಯಾಗಿಲ್ಲವೆಂದೂ ಇತ್ತೀಚೆಗೆ ಆಯುರ್ವೇದ ಮತ್ತು ಅಲೋಪತಿ ಮಧ್ಯೆ ತಿಕ್ಕಾಟ ಪ್ರಾರಂಭವಾಗಿ ಅಲೋಪತಿ ಪದ್ಧತಿ ಪ್ರಬಲವಾಗಿ ಆಯುರ್ವೇದ ಕುಂಟುತ್ತಿದೆಯೆಂದು ಹೇಳಿದರು

ಈ ಸಮಾರಂಭವನ್ನು ಆಯುರ್ವೇದ ಮತ್ತು ಯುನಾನಿ ಪದವೀಧರ ಸಂಘ ಮತ್ತು ಕಾಲೇಜ್ ಅಧ್ಯಾಪಕವರ್ಗದವರು ಏರ್ಪಡಿಸಿದ್ದರು. ಪ್ರಾರ್ಥನೆಯಾದನಂತರ ಕಾಲೇಜಿನ ಅಧ್ಯಾಪಕರಾದ ಡಾ|| ಲಕ್ಷ್ಮೀನಾರಾಯಣರವರು ಸ್ವಾಗತ ಭಾಷಣಮಾಡುತ್ತಾ ಆಯುರ್ವೇದ ವೈದ್ಯರಿಗಿರುವ ತೊಂದರೆಗಳನ್ನು ವಿವರಿಸಿದರು. ಇಲ್ಲಿ ನಾವು ೪ ವರ್ಷ ಕಷ್ಟಪಟ್ಟು ಓದಿ ಹೋದರೂ ಸರಿಯಾದ ಪ್ರೋತ್ಸಾಹವಿಲ್ಲ. ಇದನ್ನು ಪರಿಹರಿಸಲು ಎಲ್ಲರ ಪ್ರಯತ್ನ ಸಹಕಾರ ಅಗತ್ಯವೆಂದು ಹೇಳಿದರು.

ಡಾ|| ನಾರಾಯಣರಾವ್‌ರವರು ಸಪ್ತಾಹದ ಆರಂಭೋತ್ಸವವನ್ನು ನೆರವೇರಿಸುತ್ತ ಆಯುರ್ವೇದ ಮತ್ತು ಯುನಾನಿ ವೈದ್ಯಪದ್ಧತಿಗೆ ನಮ್ಮ ದೇಶದಲ್ಲಿ ಹೆಚ್ಚಿನ ಪ್ರೋತ್ಸಾಹ ದೊರಕಬೇಕಾದ ಆವಶ್ಯಕತೆಯನ್ನು ಒತ್ತಿ ಹೇಳಿದರು.

ರಣಜಿತ್

5—11—53 ರಿಂದ ಅಮೋಘಪ್ರಾರಂಭ

ನಾದಿರಾ, ಅಶೋಕ್‌ಕುಮಾರ್ ನಟಿಸಿರುವ

★ ನಗ್ಮ ★

(ಹಿಂದಿ)

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೬೫

೯-೧೧-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಚುನಾವಣಾ ಅಪೀಲಿನಲ್ಲಿ ಶ್ರೀ ಚೆನ್ನಬಸಪ್ಪನವರಿಗೆ ಜಯ

ಶಾಸನಸಭೆಗೆ ಪಿರಿಯಾಪಟ್ಟಣದಿಂದ ನೂತನ ಉಪ ಚುನಾವಣೆಗೆ ಆಜ್ಞೆ

ಶ್ರೀ ಎಸ್. ಎಂ. ಮರಿಯಪ್ಪನವರಿಗೆ ಆರು ವರ್ಷಕಾಲ ಅನರ್ಹತೆ

[ಸ್ವಂ. ಸು.] ಬೆಂಗಳೂರು ೯

ಮೈಸೂರು ಜಿಲ್ಲಾ ಪೆರಿಯಾಪಟ್ಟಣ ತಾಲ್ಲೂಕು ಕ್ಷೇತ್ರದಿಂದ ಮೈಸೂರು ಶಾಸನಸಭೆಗೆ ಶ್ರೀ ಎಸ್. ಎಂ. ಮರಿಯಪ್ಪನವರು ಚುನಾಯಿತರಾಗಿದ್ದುದು ಅಕ್ರಮವೆಂದು ಅದೇ ತಾಲ್ಲೂಕಿನ ಶ್ರೀ ಶಂಕರೇಗೌಡರು ಚುನಾವಣಾ ಕಮೀಷನ್ ಮುಂದೆ ಹೂಡಿದ್ದ ತಕರಾರು ಅರ್ಜಿ ಮೇಲೆ ಅದು ದೀರ್ಘಕಾಲ ವಿಚಾರಣೆ ನಡೆದು, ಈದಿನ ತೀರ್ಪು ಹೊರಬಿದ್ದು. ಚುನಾವಣೆಯು ಅಕ್ರಮವೆಂದೂ ಪುನಃ ಉಪಚುನಾವಣೆ ನಡೆಯಬೇಕೆಂದೂ, ಆಜ್ಞೆ ಮಾಡಲಾಗಿದೆ ಇದೂ ಅಲ್ಲದೆ ಶ್ರೀ ಎಸ್.ಎಂ. ಮರಿಯಪ್ಪನವರು ಇನ್ನು ಆರು ವರ್ಷಗಳ ಕಾಲ ಚುನಾವಣೆಗೆ ನಿಲ್ಲಲು ಅನರ್ಹರೆಂದೂ ಕಮೀಷನ್‌ರವರು ಆಜ್ಞೆ ಮಾಡಿದ್ದಾರೆ-

ಕಮೀಷನ್ನಿನ ಶ್ರೀಗಳಾದ ರಾಮಲಿಂಗಯ್ಯ, ಹೆಚ್. ಹೊಂಬೇಗೌಡ ಮತ್ತು ಇಕ್ಬಾಲ್ ಹುಸೇನರವರು ಒಮ್ಮತದ ತೀರ್ಮಾನವನ್ನು ಇತ್ತಿದ್ದಾರೆ.

ಗೋಸಂವರ್ಧನ ವಾರದಿನಾಚರಣೆ

ಮೈಸೂರು ೯

ಗೋ ಸಂವರ್ಧನವಾರ ದಿನಾಚರಣೆಯ ಆರಂಭೋತ್ಸವವು ಮೊನ್ನೆ ದಿನ ಇಲ್ಲಿನ ಪಶು ವೈದ್ಯಶಾಲಾ ಆವರಣದಲ್ಲಿ ನಡೆಯಿತು. ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸಿ, ಹಸುಗಳ ರಕ್ಷಣೆಯ ಆವಶ್ಯಕತೆಯನ್ನು ಒತ್ತಿ ಹೇಳಿದರು. ಸುಮಾರು ೧೫೦-೨೦೦ ಗೋವುಗಳನ್ನು ಅಲಂಕರಿಸಿ, ಅವುಗಳಿಗೆ ಪೂಜೆ ಮಾಡಿ ಅನಂತರ ಮೆರವಣಿಗೆಯಲ್ಲಿ ತೆಗೆದುಕೊಂಡು ಹೋಗಲಾಯಿತು. ನಗರದ ಗೋವರ್ಧನ ಸಮಿತಿ ಮತ್ತು ಪ್ರಾಣಿದಯೆ ಸಂಸ್ಥೆಯವರೂ ಇದರಲ್ಲಿ ಭಾಗವಹಿಸಿದ್ದರು.

ದೇಶದಲ್ಲಿ ಗೋಸಂಪತ್ತನ್ನು ಒಂದು ಯೋಜಿತ ರೀತಿಯಲ್ಲಿ ಅಭಿವೃದ್ಧಿಪಡಿಸಲು ಕಾರ್ಯಕ್ರಮವೇನೆಂಬುದನ್ನು ಕೇಂದ್ರ ಸರ್ಕಾರದ ಉತ್ಪಾದನಾ ಕಮೀಷನರ್ ಮತ್ತು ಆಹಾರ ಮತ್ತು ವ್ಯವಸಾಯ ಶಾಖೆ ಕಾರ್ಯದರ್ಶಿಗಳಾದ ಸರ್ದಾರ್ ದಾತಾರ್ ಸಿಂಗ್‌ರವರು ಮೊನ್ನೆಯದಿನ ಅಖಿಲಭಾರತ ರೇಡಿಯೋವಿನಲ್ಲಿ "ಗೋಸಂವರ್ಧನ ವಾರದ" ಆರಂಭೋತ್ಸವ ಮಾಡುತ್ತಾ ತಿಳಿಸಿದ್ದಾರೆ.

ಈ ವಾರದಲ್ಲಿ ದನಗಳ ಪ್ರದರ್ಶನ, ಪ್ರಚಾರ, ಉತ್ತಮ ದಾಸುಗಳ ಬಹುಮಾನ ವಿನಿಯೋಗ ಮುಂತಾದ ಕಾರ್ಯಗಳು ನಡೆಯುತ್ತವೆ.

ಪಂಚವಾರ್ಷಿಕ ಯೋಜನೆಯಲ್ಲೂ ಗೋಸಂರಕ್ಷಣೆಗೆ ಪ್ರಾಮುಖ್ಯತೆಯನ್ನು ಕೊಡಲಾಗಿದೆ. ೩ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೧೬೦ ಗೋಸದನಗಳನ್ನು ಕಟ್ಟಲಾಗುತ್ತದೆ. ಅಲ್ಲಿ ಗೋವುಗಳ ರಕ್ಷಣೆ ಮುಂತಾದ ಕಾರ್ಯಗಳನ್ನು ಸುವ್ಯವಸ್ಥಿತ ರೀತಿಯಲ್ಲಿ ನಡೆಸಲಾಗುವುದೆಂದು ಅವರು ತಿಳಿಸಿದ್ದಾರೆ.

ಡಾ|| ಮೋದಿ ಬೊಂಬಾಯಿನಲ್ಲಿ

ನೇತ್ರ ವೈದ್ಯರಾದ ಡಾ|| ಮೋದಿಯವರು ತಮ್ಮ ನೇತ್ರದಾನ ಯಜ್ಞವನ್ನು ಬೊಂಬಾಯಿ ಪ್ರಾಂತ್ಯದ ಹಿರೆಕೆರೂರಿನಲ್ಲಿ ಪ್ರಾರಂಭಿಸಿದ್ದಾರೆ. ಅಲ್ಲಿ ಅವರು ೧೫ ದಿನಗಳು ಇರುತ್ತಾರೆ.

ಭೂದಾನ ಯಜ್ಞ ಪ್ರವಾಸ

ಮೈಸೂರು ೯

ನಂಜನಗೂಡು ತಾಲ್ಲೂಕಿನಲ್ಲಿ ಭೂದಾನ ಪ್ರಚಾರ ಮತ್ತು ಸದರಿತಾಲ್ಲೂಕಿನಲ್ಲಿ ಸಂಗ್ರಹಿಸಬೇಕಾಗಿರುವ ಎರಡು ಸಾವಿರ ಎಕರೆ ಭೂದಾನದ ಪ್ರಾಪ್ತಿಗಾಗಿ ಎರಡನೆಯಬಾರಿ ಪ್ರವಾಸವನ್ನು ಇದೇ ತಿಂಗಳು ೧೫ನೇ ತಾ|| ಭಾನುವಾರದಿಂದ ಹತ್ತುದಿನಗಳಪರ್ಯಂತ ಏರ್ಪಡಿಸಿರುತ್ತೆ. ಈ ಅವಧಿಯಲ್ಲಿ ನಂಜನಗೂಡು ತಾಲ್ಲೂಕಿನ ಪ್ರಮುಖ ಕಾರ್ಯಕರ್ತರ ಗುಂಪು ಕಾಲ್ನಡಿಗೆ ಪ್ರವಾಸ ಹೊರಟು ಗೋಳೂರು, ಗೀಕಳ್ಳಿ, ಮುಳ್ಳೂರು ಹೊರಳವಾಡಿ, ಸರಗೂರು, ನಗರ್ಲೆ, ಬಿಳ್ಗೆರೆ, ಹನಿಯುಂಬಳ್ಳಿ, ಕಲ್ಮಳ್ಳಿ, ಕುಪ್ಪರಹಳ್ಳಿ, ಸುತ್ತೂರು, ಜೀಮಾರಹಳ್ಳಿ, ಬೆಳಗಾಲೆ, ತಾಯೂರು, ಗೆಜ್ಜಗನಹಳ್ಳಿ, ಕಾಹಳ್ಳಿ, ಕಲ್ಮುಂದ, ಜೋಗಯ್ಯನಹುಂಡಿ, ಚಿನ್ನಳ್ಳಿ, ತಗಡೂರು, ಮಡಳ್ಳಿ, ಅಳಗಂಚಿ, ಈ ಗ್ರಾಮಗಳಿಗೆ ಭೇಟಿ ಕೊಡುವುದು.

ತಾಲ್ಲೂಕಿನ ಮಹಾಜನರೆಲ್ಲರೂ ಈ ಮಹಾಕಾರ್ಯವನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲಾ ಸಂಘಟಕರು ಪ್ರಾರ್ಥಿಸಿರುತ್ತಾರೆ.

ಲಾಲ್ ಬಹದ್ದೂರ್ ಶಾಸ್ತ್ರಿಯವರು ಮದ್ರಾಸಿನಲ್ಲಿ

ರೈಲ್ವೆ ಮತ್ತು ಸಾಗಾಣಿಕೆಯ ಕೇಂದ್ರ ಸಚಿವರಾದ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಮದ್ರಾಸಿಗೆ ಆಗಮಿಸಿದ್ದಾರೆ. ಅವರು ನಿನ್ನೆಯ ದಿನ ದಕ್ಷಿಣ ಭಾರತ ರೈಲ್ವೆ ಕೆಲಸಗಾರರ ಸಂಘದ ಅಧಿಕಾರ ವರ್ಗದವರನ್ನು ಭೇಟಿ ಮಾಡಿ ಕೆಲಸಗಾರರ ಬೇಡಿಕೆಗಳ ವಿಷಯವನ್ನು ಅನೌಪಚಾರಿಕವಾಗಿ ಚರ್ಚಿಸಿದರೆಂದು ತಿಳಿಯಬರುತ್ತದೆ.

ಶಾಸನಸಭಾ ಸದಸ್ಯತ್ವ ಪುನರ್ವಿಂಗಡನೆ

ಬೆಂಗಳೂರು ೯

ಕೇಂದ್ರ ಪಾರ್ಲಿಮೆಂಟ್ ಮತ್ತು ಮೈಸೂರು ಶಾಸನ ಸಭಾ ಸದಸ್ಯತ್ವ ಕ್ಷೇತ್ರ ವಿಂಗಡನಾ ಕಮಿಷನರವರು ಮೈಸೂರು ಸಂಸ್ಥಾನ ಶಾಸನ ಸಭೆಯಲ್ಲಿ ೧೧೭ ಸ್ಥಾನಗಳ, ಪಾರ್ಲಿಮೆಂಟನಲ್ಲಿ ಮೈಸೂರಿಗೆ ೧೩ ಸ್ಥಾನಗಳು ಇರುವಂತೆ ನಿಗದಿ ಮಾಡಿ ಸಲಹೆ ಮಾಡಿದ್ದಾರೆ. ಈ ಸಂಬಂಧದಲ್ಲಿ ಮೈಸೂರು ಸರ್ಕಾರವು ವಿಶೇಷ ಗೆಜೆಟ್ ಪ್ರಕಟಣೆಯನ್ನಿತ್ತಿದೆ. ಈ ವಿಷಯದಲ್ಲಿ ಸಲಹೆ ಮತ್ತು ಆಕ್ಷೇಪಣೆಗಳನ್ನು ದೆಹಲಿಯಲ್ಲಿರುವ ಡಿಲಿಮಿಟೇಷನ್ ಕಮಿಷನ್ನಿನ ಕಾರ್ಯದರ್ಶಿಯವರಿಗೆ ಇದೇ ೨೫ನೇ ತಾರೀಖಿನೊಳಗಾಗಿ ತಿಳಿಸಬೇಕಾಗಿದೆ.

ಈ ಕಮಿಷನ್ನಿನವರು ಇದೇ ೩೦ನೇ ತಾರೀಖು ಬೆಂಗಳೂರಿನಲ್ಲಿರುವ ಶಾಸನ ಸಭಾ ಭವನದಲ್ಲಿ ಬೆಳಿಗ್ಗೆ ೧೦ ಗಂಟೆಗೆ ಒಂದು ಬಹಿರಂಗ ಸಭೆಯನ್ನು ಕರೆದಿತ್ತಾರೆ. ಅಗ್ಗೆ ಬಂದಿರುವ ಸಲಹೆ ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಲಾಗುತ್ತದೆ.

ವಿದ್ಯಾಸಚಿವರು ದೆಹಲಿಗೆ

ಕೇಂದ್ರ ಶಿಕ್ಷಣ ಸಲಹಾ ಸಮಿತಿಯ ಸಭೆಯಲ್ಲಿ ಭಾಗವಹಿಸಲು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ನಿನ್ನೆಯ ದಿನ ದೆಹಲಿಗೆ ಪ್ರಯಾಣ ಮಾಡಿದರು.

ಉಪಾಧ್ಯಾಯರಿಗೆ ಸಂಬಳ ಕೊಡಲು ಸಾಲ

ಚಿತ್ತೂರು ಜಿಲ್ಲಾ ಬೋರ್ಡು ಆಡಳಿತದಲ್ಲಿರುವ ಉಪಾಧ್ಯಾಯರಿಗೆ ಸಂಬಳವನ್ನು ಕೊಡಲು ಹಣವಿಲ್ಲದೆ ಆಂಧ್ರ ಸರ್ಕಾರವು ೫೦ ಸಾವಿರ ರೂಪಾಯಿಗಳ ಸಾಲವನ್ನು ಮಂಜೂರ್ಮಾಡಿದೆ.

ಡಿಫ್ತೀರಿಯಾ ರೋಗ ನಿವಾರಣಾ ಯೋಜನೆ

ಮೈಸೂರು ನಗರದಲ್ಲಿ ಪ್ರಾರಂಭ

ಮೈಸೂರು ೯

ಡಿಫ್ತೀರಿಯಾ ಎಂಬ ಗಂಟಲುರೋಗವು ಇತ್ತೀಚೆಗೆ ನಗರದಲ್ಲಿ ಹೆಚ್ಚುತ್ತಿರುವುದು ಕಂಡುಬಂದಿರುವುದರಿಂದ ೧ರಿಂದ ೫ವರ್ಷದ ಮಕ್ಕಳಿಗೆ ಆ ರೋಗವು ಬಾರದಂತೆ ಮುಂಜಾಗ್ರತೆ ಯೋಜನೆಯನ್ನು ಪುರಸಭೆಯವರು ಕೈಗೊಳ್ಳಲು ನಿರ್ಧರಿಸಿದ್ದಾರೆ. ಈ ಕೆಲಸವನ್ನು ನಗರದ ಎಲ್ಲಾ ಶಿಶು ಸಂರಕ್ಷಣಾ ಕೇಂದ್ರ, ಶಿಶುವಿಹಾರ, ನರ್ಸರೀ ಶಾಲೆಗಳಲ್ಲಿ ಪ್ರಾರಂಭಿಸಿ, ಒಂದುವರುಷದಲಾಗಾಯ್ತು ೧೦ ವರ್ಷದ ಒಳಗಿರುವ ಮಕ್ಕಳಿಗೆಲ್ಲಾ ಮೂರು ಡಿಫ್ತೀರಿಯಾ ವ್ಯಾಕ್ಸಿನೇಷನ್ ಇಂಜಕ್ಷನ್ ಕೊಡಲಾಗುವುದು. ಈ ಯೋಜನೆಯ ಪ್ರಾರಂಭೋತ್ಸವವು ಇದೇ ೧೧ನೇ ತಾರೀಖು ಬುಧವಾರ ಬೆಳಿಗ್ಗೆ ೯ ಗಂಟೆಗೆ ವಾಣಿವಿಲಾಸ ರಸ್ತೆಯಲ್ಲಿರುವ ಗುಣಾಂಬಾ ಟ್ರಸ್ಟ್ ಭವನದಲ್ಲಿ ನಡೆಯುವುದು

ರೈತ ಸಂಘ

ಹೈದರಾಬಾದ್ ಪ್ರಾಂತ್ಯದಲ್ಲಿ ವ್ಯವಸಾಯ ಪ್ರಗತಿ ಕಾರ್ಯಗಳಲ್ಲಿ ತೊಡಗಲು ಒಂದು ಕೇಂದ್ರ ರೈತ ಸಂಘವನ್ನು ಸ್ಥಾಪಿಸಲಾಗುವುದೆಂದು ಅಲ್ಲಿಯ ವ್ಯವಸಾಯ ಸಚಿವರು ಹೇಳಿದ್ದಾರೆ. ಈ ಸಂಘವು ರಾಜಕೀಯದಿಂದ ದೂರವಾಗಿದ್ದು ಕೇವಲ ವ್ಯವಸಾಯ ಅಭಿವೃದ್ಧಿ ಕಾರ್ಯಗಳಲ್ಲಿಯೇ ತೊಡಗುತ್ತದೆ. ರೈತರು, ವಿಜ್ಞಾನಿಗಳು, ಪಶುವೈದ್ಯರು ಮುಂತಾದವರು ಈ ಸಂಘದ ಸದಸ್ಯರಾಗಲವಕಾಶವಿದೆ.

ಲಕ್ನೋ ಪರಿಸ್ಥಿತಿ ಶಾಂತವಾಗಿದೆ

ಕಳೆದ ಎರಡು ವಾರಗಳಿಂದ ಉಲ್ಬಣ ಪರಿಸ್ಥಿತಿಯಲ್ಲಿದ್ದ ಲಕ್ನೋ ನಗರವು ಈಗ ಶಾಂತ ಪರಿಸ್ಥಿತಿಯಲ್ಲಿದೆ. ನಿತ್ಯ ಜೀವನವು ಮಾಮೂಲಿನಂತೆ ನಡೆಯುತ್ತಿದೆ. ಶಾಲಾ ಕಾಲೇಜುಗಳೆಲ್ಲವೂ ಪುನಃ ಆರಂಭವಾಗಿವೆ. ವಿಶ್ವವಿದ್ಯಾನಿಲಯ ಸಂಘ ಸ್ಥಾಪನೆ ವಿಷಯದಲ್ಲಿ ಕಾಲೇಜಿನ ಪ್ರಾಧ್ಯಾಪಕರ ಮತ್ತು ವಿದ್ಯಾರ್ಥಿಗಳ ನಡುವೆ ಸಂಧಾನಗಳು ನಡೆಯುತ್ತಿವೆ. ಒಂದೆರಡು ದಿನಗಳಲ್ಲಿಯೇ ಎಲ್ಲವೂ ಶಾಂತರೀತಿಯಿಂದ ನಿರ್ಧಾರವಾಗುವ ನಿರೀಕ್ಷೆಯಿರುವುದಾಗಿ ಹೇಳಲಾಗಿದೆ

ಮತೀಯ ಚಳುವಳಿಗೆ ಸರ್ಕಾರ ಹೆದರುವುದಿಲ್ಲ

ಪ್ರಧಾನಿ ನೆಹರೂರವರ ಘೋಷಣೆ

ಜಾತೀಯ ಭಿನ್ನತೆಗಳನ್ನು ಕಲ್ಪಿಸಿಕೊಂಡು ಚಳುವಳಿಯನ್ನು ನಡೆಸುವುದು ಮತ್ತು ಪ್ರಾಂತೀಯತೆಯ ಮನೋಭಾವವನ್ನು ಕೂಡಿಸುವುದು ದೇಶದ ಪ್ರಗತಿಗೆ ಮತ್ತು ಐಕ್ಯತೆಗೆ ಧಕ್ಕೆ ತರುತ್ತವೆ. ಜಾತೀಯತೆಯ ವಾದಿಗಳ ಭೇದಭಾವನೆ ಮತ್ತು ಚಳುವಳಿಗೆ ಭಾರತ ಸರ್ಕಾರವು ಹೆದರುವುದಿಲ್ಲ. ದೇಶದಲ್ಲಿ ಅನೇಕ ಭಾಷೆಗಳನ್ನು ಆಡುವ ಜನರಿದ್ದಾರೆ. ಆದಾಗ್ಯೂ ಈ ೩೬ ಕೋಟಿ ಜನರೂ ಭಾರತೀಯರೆಂದು ತಿಳಿದುಕೊಳ್ಳಬೇಕು ಎಂಬುದಾಗಿ ಪ್ರಧಾನಿ ನೆಹರೂರವರು ನಿನ್ನೆಯದಿನ ಲೂಧಿಯಾನಾದಲ್ಲಿ ಸಾರ್ವತ್ರಿಕ ಸಭೆಯಲ್ಲಿ ಭಾಷಣಮಾಡುತ್ತಾ ಜಾತೀಯವಾದಿಗಳಿಗೆ ಎಚ್ಚರಿಸಿದ್ದಾರೆ.

ಮತವು ಕೇವಲ ವೈಯುಕ್ತಿಕವಾದುದು. ಅದನ್ನು ರಾಜಕೀಯದೊಡನೆ ಬೆರೆಸಬಾರದು. ಮತೀಯ ಬದಲಾವಣೆಗಳನ್ನು ಬರೀ ಶಾಸನಗಳಿಂದ ಜಾರಿಗೆ ತರಲು ಸಾಧ್ಯವಿಲ್ಲ. ನಮ್ಮ ಸಾಮಾಜಿಕ ಕ್ಷೇತ್ರಗಳಲ್ಲಿ ಬದಲಾವಣೆಯಾಗಬೇಕು. ಆದರೆ ಜಾತೀಯ ಮತ್ತು ಪ್ರಾಂತೀಯತೆಗಳಲ್ಲಿ ಸರ್ಕಾರವು ಯಾವ ಭೇದಭಾವವನ್ನೂ ತೋರಿಸುವುದಿಲ್ಲ. ಎಲ್ಲರೂ ಭಾರತದ ಐಕ್ಯತೆಯ ಕಡೆಗೆ ತಮ್ಮ ಗಮನವನ್ನು ಕೊಡಬೇಕು-ಎಂದು ಪ್ರಧಾನಿ ನೆಹರೂರವರು ಹೇಳಿದ್ದಾರೆ.

ಭಾರತ ಪಾಕೀಸ್ತಾನ ಪೊಲೀಸ್ ದಳಗಳ ಸಂಯುಕ್ತ ಪೆರೇಡ್

ಪ್ರಧಾನಿ ನೆಹರೂರವರು ಮೊನ್ನೆಯ ದಿನ ಪಂಜಾಬಿನ ಫಿರೋಜ್‌ಪುರ್ ಎಂಬಲ್ಲಿರುವ ರಣಜಿತ್‌ಸಿಂಗ್‌ರವರ ಕೋಟೆಯಬಳಿ ಭಾರತ ಮತ್ತು ಪಾಕೀಸ್ತಾನ ಪೊಲೀಸ್‌ದಳದವರು ಸಂಯುಕ್ತವಾಗಿ ನಡೆಸಿದ ಪೊಲೀಸ್ ಕವಾಯಿತು ಮತ್ತು ಆಟ ಪಾಟಗಳನ್ನು ವೀಕ್ಷಿಸಿದರು. ಭಾರತಕ್ಕೆ ಸೇರಿರುವ ಪಂಜಾಬಿನ ಮತ್ತು ಪಾಕೀಸ್ಥಾನಕ್ಕೆ ಸೇರಿರುವ ಪಶ್ಚಿಮ ಪಂಜಾಬಿನ ಸುಮಾರು ೧೦೦೦ ಪೊಲೀಸಿನವರು ಇದರಲ್ಲಿ ಭಾಗವಹಿಸಿದ್ದರು ಈ ರೀತಿಯಾಗಿ ಸಂಯುಕ್ತ ಪೆರೆಡ್ ಮತ್ತು ಆಟಪಾಟಗಳಲ್ಲಿ ಎರಡು ರಾಷ್ಟ್ರಗಳವರು ಸೇರಿದ್ದುದ ಇದೇ ಪ್ರಥಮಬಾರಿ. ಭಾರತದಲ್ಲಿರುವ ಪಾಕೀಸ್ತಾನ ಹೈಕಮೀಷನರ್ ಪಶ್ಚಿಮ ಪಂಜಾಬಿನ ಮಂತ್ರಿಗಳು, ಗೌರ್ನರುಗಳು ಎಲ್ಲರೂ ಇದನ್ನು ವೀಕ್ಷಿಸಿದರು ಪಾಕೀಸ್ಥಾನದ ಪೊಲೀಸಿನವರಿಗೆ ಅದ್ಭುತ ಸ್ವಾಗತ ದೊರೆಯಿತು.

ಡಾ॥ ಮುಸಾದಿಕ್‌ರವರ ವಿಚಾರಣೆ

ಪರ್ಷಿಯಾ ಮಾಜಿ ಪ್ರಧಾನಿ ಡಾ॥ ಮುಸಾದಿಕ್‌ರವರ ಮೇಲಿನ ದೇಶ ದ್ರೋಹದ ಆಪಾದನೆಗಳ ವಿಚಾರಣೆಯು ನಿನ್ನೆಯ ದಿನ ಪ್ರಾರಂಭವಾಯಿತು.

ಮಕ್ಕಳ ದಿನಾಚರಣೆ

ಮೈಸೂರು ೯

ದೇಶದ ನಾನಾಭಾಗಗಳಲ್ಲಿ ನಡೆಯುವಂತೆ ಪುರಸಭೆಯ ಆಶ್ರಯದಲ್ಲಿ ಮೈಸೂರು ನಗರದಲ್ಲಿಯೂ ಇದೇ ೧೪ನೇ ತಾರೀಖು ಮಕ್ಕಳ ದಿನಾಚರಣೆಯು ನಡೆಯುತ್ತದೆ ಆದಿನ ಸಂಜೆ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಮಕ್ಕಳ ವಿವಿಧ ವಿನೋದಾವಳಿ, ಆಟ ಪಾಟಗಳು, ಸ್ಪರ್ಧೆಗಳು ಮುಂತಾದುವುಗಳನ್ನೆಲ್ಲಾ ಏರ್ಪಡಿಸಲಾಗಿದೆ. ಇದರಲ್ಲಿ ಭಾಗವಹಿಸಲಿಚ್ಛಿಸುವ ಪಾಠಶಾಲೆಗಳು ಇದೇ ೧೨ ನೇ ತಾರೀಖಿನೊಳಗಾಗಿ ಮುನಿಸಿಪಲ್ ಕಮೀಷನರಿಗೆ ತಿಳಿಸಬೇಕೆಂದು ಕೋರಲಾಗಿದೆ.

ಪ್ರಾದೇಶಿಕ ಸೈನ್ಯ ಸಲಹಾ ಸಮಿತಿ

ಬೆಂಗಳೂರು ೯

ಮೈಸೂರು ಸಂಸ್ಥಾನದಲ್ಲಿ ಪ್ರಾದೇಶಿಕ ಸೈನ್ಯ ರಚನೆ ವಿಷಯದಲ್ಲಿ ಕೇಂದ್ರ ಸರ್ಕಾರವು ಒಂದು ಸಲಹಾ ಸಮಿತಿಯನ್ನು ರಚಿಸಿದೆ. ಈ ಸಮಿತಿಗೆ ಸಂಸ್ಥಾನದ ಗೃಹಸಚಿವರು ಅಧ್ಯಕ್ಷರು, ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ, ರೆವಿನ್ಯೂ ಮತ್ತು ಗೃಹಶಾಖೆ ಕಾರ್ಯದರ್ಶಿಗಳು, ಬೆಂಗಳೂರು ಸಬ್ ಏರಿಯಾ ಕಮ್ಯಾಂಡರ್, ವಿಶ್ವವಿದ್ಯಾನಿಲಯದ ಉಪಸ್ಥಾನಪತಿ, ವಿದ್ಯಾಇಲಾಖಾ ಮುಖ್ಯಾಧಿಕಾರಿ, ಮೈಸೂರು ವಾಣಿಜ್ಯಸಂಘದ ಅಧ್ಯಕ್ಷರು, ಮಿನರ್ವ ಮಿಲ್ ಮತ್ತು ಬೆಂಗಳೂರಿನ ಕಾರ್ಟ, ಉಲ್ಲನ್ ಗಿರಣಿಯ ಜನರಲ್ ಮ್ಯಾನೇಜರುಗಳು. ಪ್ರಾದೇಶ ಕಾಂಗ್ರೆಸ್ ಅಧ್ಯಕ್ಷರು, ಶಾಸನಸಭಾ ಸದಸ್ಯರುಗಳಾದ ಶ್ರೀಗಳಾದ ಎ ಜಿ. ರಾಮರಾವ್, ಡಿ. ವೆಂಕಟೇಶ್, ಬೆಂಗಳೂರಿನ ಮೇಯರ್, ವಿಮಾನ ಕಾರ್ಖಾನೆ ಮತ್ತು ಟೆಲಿಫೋನ್ ಕಾರ್ಖಾನೆಗಳ ಜನರಲ್ ಮ್ಯಾನೇಜರುಗಳು ಈ ಸಮಿತಿಯ ಸದಸ್ಯರಾಗಿರುತ್ತಾರೆ. ಈ ಸಮಿತಿಯು ೨ ವರ್ಷಗಳ ಕಾಲ ಕೆಲಸ ಮಾಡುತ್ತದೆ.

ಆಂಧ್ರಪ್ರಾಂತ್ಯದ ನೂತನ ಸಚಿವರು

ಆಂಧ್ರಪ್ರಾಂತ್ಯದಲ್ಲಿ ಕೃಷಕಲೋಕ ಪಕ್ಷದ ನಾಯಕರಾದ ಶ್ರೀ ಲಚ್ಚಣ್ಣನವರು ಪ್ರಾಂತ್ಯದ ನೂತನ ಸಚಿವರಾಗಿ ನೇಮಕವಾಗಿ ಅಧಿಕಾರವನ್ನು ಸ್ವೀಕರಿಸಿದರು ಈಗಿನ ಶ್ರೀ ಟಿ ಪ್ರಕಾಶಂರವರ ಮಿಶ್ರ ಮಂಡಲದಲ್ಲಿ ಕಾಂಗ್ರೆಸ್, ಪ್ರಜಾಸೋಷಲಿಸ್ಟ್ ಮತ್ತು ಕೃಷಕಲೋಕ ಪಕ್ಷದ ಪ್ರತಿನಿಧಿಗಳು ಇರುವುದರಿಂದ ಸರ್ಕಾರದ ಆಡಳಿತದಲ್ಲಿ ಈ ಪಕ್ಷಗಳು ಸಹಕಾರ ದೊರೆತಂದಾಗಿದೆ. ಇದರಿಂದ ಶಾಸನ ಸಭೆಯಲ್ಲಿ ಸರ್ಕಾರಕ್ಕೆ ಬಹುಮತ ಸಿಕ್ಕಿದೆ.

ತಿರುವನಂತಪುರದಲ್ಲಿ ಪ್ರತಿಬಂಧಕಾಜ್ಞೆ

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಚಳುವಳಿಯೇ ಕಾರಣ

ವಿಶ್ವವಿದ್ಯಾನಿಲಯ ಸಂಘಸ್ಥಾಪನೆ ವಿಷಯದಲ್ಲಿ ತಿರುವಾಂಕೂರ್-ಕೊಚ್ಚಿಯ ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳು ಚಳುವಳಿ ಮತ್ತು ಉಪವಾಸ ಮುಷ್ಕರವನ್ನು ಪ್ರಾರಂಭಿಸಿರುವುದರಿಂದ ನಗರದಲ್ಲಿ ಅಶಾಂತಿ ಉಂಟಾಗುವುದೆಂದು ತಿರುವಾಂಕೂರಿನ ಜಿಲ್ಲಾ ಮ್ಯಾಜಿಸ್ಟ್ರೇಟರು ನಗರದಾದ್ಯಂತ ಒಂದುವಾರ ಕಾಲ ೧೪೪ ನೇ ಸೆಕ್ಷನ್ ಜಾರಿಮಾಡಿ, ಸಭೆ ಮೆರವಣಿಗೆ ಮುಂತಾದುವನ್ನು ಬಹಿಷ್ಕರಿಸಿದ್ದಾರೆ.

ಈ ಸಂಬಂಧದಲ್ಲಿ ಅಲ್ಲಿಯ ಸರ್ಕಾರವು ಒಂದು ಪತ್ರಿಕಾ ಪ್ರಕಟಣೆಯನ್ನು ಹೊರಡಿಸಿ, ಈ ಕಾಲೇಜು ಸಂಘದ ಸಣ್ಣ ವಿಷಯದ ಹಿಂಬದಿಯಲ್ಲಿ ಕೆಲವು ದೃಷ್ಟರ ಕೈವಾಡವಿದೆಯೆಂದು ಸರ್ಕಾರದ ಗಮನಕ್ಕೆ ಬಂದಿದೆ ಅಂತಹವರಮೇಲೆ ಸರ್ಕಾರವು ಉಗ್ರಕ್ರಮಗಳನ್ನು ಕೈಗೊಂಡು ಶಾಂತಿ ಕದಡದಂತೆ ನೋಡಿಕೊಳ್ಳುತ್ತದೆ ಎಂದು ಎಚ್ಚರಿಸಿದೆ.

ಇಂಜನಿಯರುಗಳಿಗೆ ನೆಹರೂ ಹಿತೋಕ್ತಿ

ನವಭಾರತ ನಿರ್ಮಾಣದಲ್ಲಿ ಭಾರತದ ಇಂಜನಿಯರುಗಳು ಪ್ರಮುಖ ಪಾತ್ರವನ್ನು ವಹಿಸಿಕೊಳ್ಳಬೇಕಾಗಿದೆ ಬರೀ ಸಲಹೆ ಮತ್ತು ಆಜ್ಞೆಗಳನ್ನು ಕೊಡುವುದು ಅವರ ಪ್ರಮುಖ ಕೆಲಸವಲ್ಲ ತಾವೇ ಸ್ವತಃ ಕೆಲಸ ಮಾಡಿ ದೇಶದ ಪ್ರಗತಿಗೆ ನೆರವಾಗಬೇಕು ಎಂದು ಪಂಜಾಬ್‌ನ ನಾಂಗಲ್ ಕಾಲುವೆ ಪ್ರದೇಶಗಳಲ್ಲಿ ಭೇಟಿಯಿತ್ತಾಗ ಪ್ರಧಾನಿ ನೆಹರೂ ಹಿತ ನುಡಿದಿದ್ದಾರೆ.

ನೆಹರೂರವರಿಗೆ ಯುದ್ಧ ಖೈದಿಯ ಬಹುಮಾನ

ಕೊರಿಯಾದಲ್ಲಿ ಯುದ್ಧ ಖೈದಿಯೊಬ್ಬನು ತಾನು ಬರೆದ ಕೆಲವು ಕಲಾಕೃತಿಗಳನ್ನು ಪ್ರಧಾನಿ ನೆಹರೂರವರಿಗೆ ಬಹುಮಾನವಾಗಿ ಅಲ್ಲಿರುವ ಜನರಲ್ ತಿಮ್ಮಯ್ಯನವರ ಮೂಲಕ ಕಳುಹಿಸಿದ್ದಾನೆ.

ಮತ್ತೊಬ್ಬ ಖೈದಿಯು ತಾನು ಬರೆದ ಜನರಲ್ ತಿಮ್ಮಯ್ಯನವರ ಚಿತ್ರವನ್ನು ಅವರಿಗೇ ಬಹುಮಾನವಾಗಿ ಕೊಟ್ಟಿದ್ದಾನೆ. ಇದರ ಕುರುಹಾಗಿ ಜನರಲ್ ತಿಮ್ಮಯ್ಯನವರು ಈ ಎರಡು ಖೈದಿಗಳಿಗೂ ಸುಂದರವಾದ ಗಂಧದ ಪೆಟ್ಟಿಗೆಗಳನ್ನು ಅದರ ಸವಿನೆನಪಿಗಾಗಿ ಕೊಟ್ಟಿದ್ದಾರೆ.

೧೮೦೦೦ ರೂ. ಸಹಾಯ

ತಿರುವಾಂಕೂರ್-ಕೊಚ್ಚಿ ಪ್ರಾಂತ್ಯದಲ್ಲಿ ಪ್ರವಾಹಗಳಿಂದ ತೊಂದರೆಗೀಡಾದವರ ಸಹಾಯಕ್ಕಾಗಿ ಪ್ರಧಾನಿ ನೆಹರೂರವರು ತಮ್ಮ ಪರಿಹಾರ ನಿಧಿಯಿಂದ ತಿರುವಾಂಕೂರ್-ಕೊಚ್ಚಿಯ ಮುಖ್ಯ ಮಂತ್ರಿಯವರಿಗೆ ೧೮೦೦೦ ರೂಪಾಯಿಗಳನ್ನು ಕಳುಹಿಸಿದ್ದಾರೆ.

ಸಹಕಾರ ದಿನಾಚರಣೆ

ಮೈಸೂರು ೯

ಮೈಸೂರು ಜಿಲ್ಲಾ ಸಹಕಾರ ಪ್ರಚಾರ ಸಂಘದ ಆಶ್ರಯದಲ್ಲಿ ೩೧ನೇ ಅಂತರರಾಷ್ಟ್ರೀಯ ಮತ್ತು ಅಖಿಲಭಾರತ ಸಹಕಾರ ದಿನಾಚರಣೆಯು ಮೈಸೂರು ಚಾಮರಾಜ ರಸ್ತೆಯಲ್ಲಿರುವ ಶ್ರೀ ನರಸಿಂಹರಾಜ ಸ್ಮಾರಕ ಭವನದಲ್ಲಿ ಮೊನ್ನೆಯದಿನ ನಡೆಯಿತು. ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಅಧ್ಯಕ್ಷತೆ ವಹಿಸಿದ್ದರು. ಕುಮಾರಿ ವಸಂತರವರಿಂದ ಪ್ರಾರ್ಥನೆಯಾದನಂತರ ಜಿಲ್ಲಾ ಸಂಘದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಎಂ. ಎ. ದೊರಸ್ವಾಮಯ್ಯಂಗಾರ್ಯರು, ಎಂ. ರಾಮುಸ್ವಾಮಿ, ವೈ. ಶ್ರೀನಿವಾಸಯ್ಯ ಇವರುಗಳು ಭಾಷಣ ಮಾಡಿ ಸಹಕಾರ ತತ್ವದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಸ್ವಾಮಿನಾಥನ್‌ರವರು ಸಹಕಾರ ಚಳುವಳಿ ಜನಗಳ ಪ್ರೇರಣೆಯಿಂದಲೇ ಹಬ್ಬಬೇಕೆಂದೂ, ಸಹಕಾರ ತತ್ವದವಿಸ್ತರಣೆಯಿಂದಲೇ ಪ್ರಪಂಚ ಶಾಂತಿ ಸೌಹಾರ್ದಗಳು ಸಾಧ್ಯವೆಂದೂ, ನಿಸ್ವಾರ್ಥರ ಸೇವೆ ಅದಕ್ಕೆ ಅವಶ್ಯಕವೆಂದೂ ನಾಯಕತ್ವವು ಬೇಕೆಂದೂ ಒತ್ತಿ ಹೇಳಿದರು.

ಬಿಲಾಸ್‌ಪುರ ಹಿಮಾಚಲ ಪ್ರದೇಶದೊಡನೆ ಐಕ್ಯ

ಚೀಫ್ ಕಮೀಷನರ್ ಆಡಳಿತದಲ್ಲಿರುವ ಬಿಲಾಸ್‌ಪುರ ಪ್ರಾಂತ್ಯವನ್ನು ಸದ್ಯದಲ್ಲಿಯೇ ಹಿಮಾಚಲ ಪ್ರದೇಶ ಪ್ರಾಂತ್ಯದೊಡನೆ ಐಕ್ಯಗೊಳಿಸಲಾಗುವುದೆಂದು ತಿಳಿಯಬರುತ್ತದೆ.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ
ಥಿಯೇಟ್ರಿಕಲ್ ಕಂಪೆನಿ (ರಿ)
9--11--53ರಿಂದ ರಾತ್ರಿ 10 ಗಂಟೆಗೆ
ಶಿವರಾಂಪೇಟೆಯಲ್ಲಿರುವ ರತ್ನಾವಳಿ
ಥಿಯೇಟರಿನಲ್ಲಿ
ಹೇಮರೆಡ್ಡಿ--
ಮಲ್ಲಮ್ಮ
ಎಂಬ ಪೌರಾಣಿಕ ನಾಟಕವನ್ನು
ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೬೬

೧೦-೧೧-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ರಾಷ್ಟ್ರದ ಅಭ್ಯುದಯಕ್ಕೆ ಎಲ್ಲರೂ ದುಡಿಯಿರಿ

ಸಂಕುಚಿತ ಮನೋಭಾವನೆಯನ್ನು ತ್ಯಜಿಸಿ

ಜನತೆಗೆ ಪ್ರಧಾನಿ ನೆಹರೂ ಮನವಿ

ಅಖಂಡಭಾರತ ಎಂಬ ಘೋಷಣೆ, ಪಾಕೀಸ್ತಾನದೊಡನೆ ಯುದ್ಧ ಎಂಬ ಕೂಗು ಬರೀ ಮಕ್ಕಳಾಟಿಕೆಯ ಕೂಗುಗಳು. ಭಾರತಕ್ಕೆ ಯಾವ ರಾಷ್ಟ್ರದಮೇಲೂ ಯುದ್ಧ ಬೇಕಿಲ್ಲ. ಭಾರತವು ಶಾಂತಿಪ್ರಿಯ ರಾಷ್ಟ್ರ ವಿಶ್ವದಲ್ಲಿ ಶಾಂತಿ ಸ್ಥಾಪನೆಯಾಗಬೇಕೆಂಬುದೇ ಭಾರತದ ಆಕಾಂಕ್ಷೆ ಅದಕ್ಕಾಗಿಯೇ ದುಡಿಯುತ್ತಿದೆ ಎಂದು ಪ್ರಧಾನಿ ನೆಹರೂರವರು ಜಲಂಧರಿನಲ್ಲಿ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಭಾರತವು ಒಂದು ಅಭ್ಯುದಯ ರಾಷ್ಟ್ರವಾಗಿರುವಂತೆ ಮಾಡಬೇಕಾದುದು ಜನತೆಯ ಕರ್ತವ್ಯ. ದೇಶದಲ್ಲಿ ಬಡತನವನ್ನು ಹೋಗಲಾಡಿಸುವುದು ಸರ್ಕಾರದ ಜನರ ಪ್ರಥಮ ಕರ್ತವ್ಯವಾಗಿರುತ್ತದೆ. ಜಾತೀಯ ಪ್ರಾಂತೀಯ ಮುಂತಾದ ಸಂಕುಚಿತ ಮನೋಭಾವನೆಗಳನ್ನು ಜನರು ಮರೆತು ಭಾರತದ ಐಕ್ಯತೆಯ ಕಡೆಗೆ ಗಮನವನ್ನು ಕೊಡಬೇಕು. ದೇಶದ ಪ್ರಗತಿಗಾಗಿ ಪಂಚವಾರ್ಷಿಕ ಯೋಜನೆಯ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಜನರೆಲ್ಲರೂ ಇದನ್ನು ಕಾರ್ಯರೂಪಕ್ಕೆ ತರಲು ಸಾಕಷ್ಟು ಶ್ರಮಿಸಬೇಕು. ದೇಶದಲ್ಲಿರುವ ವಿನಾಶಾತ್ಮಕ ವ್ಯಕ್ತಿಗಳನ್ನು ನಿರ್ಮೂಲನಮಾಡಬೇಕು ಆಗ ದೇಶವು ಬಲಾಢ್ಯವಾಗುತ್ತದೆ. ವಿಶ್ವರಾಷ್ಟ್ರಗಳಲ್ಲಿ ಭಾರತಕ್ಕೂ ಸೂಕ್ತ ಸ್ಥಾನ ದೊರೆಯುತ್ತದೆ. ಜನರು ಆತ್ಮಸಾಕ್ಷಿಯಾಗಿ ನಿಷ್ಠೆಯಿಂದ ಕೆಲಸ ಮಾಡಿದರೆ ಮಾತ್ರ ಇದು ಸಾಧ್ಯ ಇಲ್ಲದಿದ್ದಲ್ಲಿ ಅತ್ಯಂತ ಶ್ರಮಪಟ್ಟು ಗಳಿಸಿದ ಸ್ವಾತಂತ್ರವು ಕಳೆದುಹೋಗುತ್ತದೆ ಆದ್ದರಿಂದ ಜನರು ಜಾಗೃತರಾಗಿ ನಿಷ್ಠೆಯಿಂದ ಶ್ರಮಿಸಿ ದೇಶದ ಪ್ರಗತಿ ಮತ್ತು ಗೌರವವನ್ನು ಕಾಪಾಡಬೇಕು ಎಂದು ಶ್ರೀ ನೆಹರೂರವರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ.

ತಿದ್ದುಪಡಿ

ಮೈಸೂರು ಶಾಸನಸಭೆಗೆ ಪಿರಿಯಾಪಟ್ಟಣದಿಂದ ನಡೆದ ಚುನಾವಣೆ ಅಕ್ರಮವೆಂದು ನಿನ್ನೆ ಪ್ರಕಟಿಸಿರುವ ಸುದ್ದಿಯಲ್ಲಿ, ಚುನಾವಣಾ ಕಮೀಷನ್ನಿನ ಅಧ್ಯಕ್ಷ ಶ್ರೀ ರಾಮಲಿಂಗಯ್ಯನವರೆಂದು ತಪ್ಪಾಗಿ ಬಿದ್ದಿದೆ. ಅದನ್ನು ಶ್ರೀ ಕಂದಸ್ವಾಮಿ ಪಿಳ್ಳೆಯೆಂದು ಓದಿಕೊಳ್ಳಬೇಕಾಗಿ ವಿನಂತಿ.

ಗೋಲಿಬಾರಿನಲ್ಲಿ ನೊಂದವರಿಗೆ ಪರಿಹಾರ ವಿನಿಯೋಗ

ಮೈಸೂರು ೧೦

ಕಳೆದ ತಿಂಗಳು ೮ನೇ ತಾರೀಖು ಅರಮನೆ ಬಳಿ ನಡೆದ ಗೋಲಿಬಾರು ಪ್ರಕರಣದಲ್ಲಿ ಮಡಿದ ಮತ್ತು ನೊಂದವರಿಗೆ ಪರಿಹಾರವಾಗಿ ಶ್ರೀಮನ್ಮಹಾರಾಜರವರು ಕೊಟ್ಟ ೩ ಸಾವಿರ ರೂ.ಗಳನ್ನು ಈ ಕೆಳಗೆ ಕಂಡಂತೆ ಹಂಚಲಾಗಿದೆ:—

ಸತ್ತವರಾದ ಮಹದೇವಯ್ಯ, ನರಸಿಂಹರಾಜು ಮತ್ತು ಮುದ್ದಬಸಪ್ಪರವರ ಸಂಸಾರದವರಿಗೆ ತಲಾ ೨೫೦ ರೂ. ಕೊಡಲಾಗಿದೆ. ಮಡಿದ ಮತ್ತೊಬ್ಬನ ವಿವರ ತಿಳಿದಿಲ್ಲವಾಗಿ ಅತನ ಬಾಬ್ತು ಹಣವನ್ನು ವಿಲೇವಾರಿ ಮಾಡಿಲ್ಲ.

ಗೋಲಿಬಾರಿನಲ್ಲಿ ಗಾಯಗೊಂಡ ಶ್ರೀಗಳಾದ ನಂಜಯ್ಯ, ಕೆಂಚಯ್ಯ, ನಿಂಗಯ, ಸಾಧು ಸಿದ್ದಯ್ಯ, ಅನ್ವಾರ್‌ರವರಿಗೆ ತಲಾ ೧೦೦ ರೂ. ಕೊಡಲಾಗಿದೆ.

ಗಲಭೆಯಲ್ಲಿ ಗಾಯಗೊಂಡ ೨೨ ಮಂದಿ ಹುಡುಗರಿಗೆ ತಲಾ ೫೦ ರೂ.ಹಂಚಲಾಗಿದೆ.

ಗಲಭೆಯಲ್ಲಿ ನೊಂದ ಪೊಲೀಸ್ ಸಿಬ್ಬಂದಿಗೆ ಒಟ್ಟು ೪೦೦ ರೂ.ಗಳನ್ನು ಹಂಚಲು ಸರ್ಕಾರದ ಅನುಮತಿ ಕೇಳಲಾಗಿದೆ.

ಪಂಜಾಬ್ ಪ್ರಾಂತ್ಯರಚನೆಗೆ ಚಳುವಳಿ

ಪಂಜಾಬ್ ಪ್ರಾಂತ್ಯರಚನೆಗಾಗಿ ಚಳುವಳಿಯನ್ನು ನಡೆಸಲೇ ಬೇಕಾಗಿದೆ. ಈ ಪ್ರಾಂತ್ಯರಚನೆಯಿಂದ ಪಂಜಾಬೀ ಭಾಷೆಯನ್ನು ಮಾತನಾಡುವವರಿಗೆ ಈಗ ಆಗಿರುವ ಅನ್ಯಾಯವು ನಿವಾರಣೆಯಾದಂತಾಗುತ್ತದೆ ಎಂದು ಪೆಪ್ಸುವಿನ ಮಾಜಿ ಮುಖ್ಯಮಂತ್ರಿ ಸರ್ದಾರ್ ಜ್ಞಾನ್‌ಸಿಂಗ್ ರಾರೇವಾಲಾರವರು ಹೇಳಿದ್ದಾರೆ.

ಈ ಸಂಬಂಧದಲ್ಲಿ ಪಾಟಿಯಾಲಾದಲ್ಲಿರುವ ಶಿರೋಮಣಿ ಅಕಾಲಿ ದಳದ ಕಾರ್ಯಸಮಿತಿಯು ಪ್ರಧಾನಿ ನೆಹರೂರವರ ಭವನದ ಮುಂದೆ ಆಮರಣಾಂತ ಉಪವಾಸವನ್ನು ಮಾಡಲು ಹೆಚ್ಚಿನ ಜಾಥಾಗಳನ್ನು ಕಳುಹಿಸಬೇಕೆಂದು ನಿರ್ಧಾರ ಮಾಡಿದೆ.

ಮೈಸೂರು ಜಿಲ್ಲೆಗೆ ಕಮ್ಯೂನಿಟಿ ಪ್ರಾಜೆಕ್ಟ್

ಜಿಲ್ಲಾಬೋರ್ಡಿನ ಒತ್ತಾಯ

ಮೈಸೂರು ೧೦

ಮೈಸೂರು ಜಿಲ್ಲಾ ಬೋರ್ಡಿನ ಸಭೆಯು ನಿನ್ನೆ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಟಿ. ನರಸೀಪುರದ ಗ್ರಾಮ ವಿದ್ಯೋದಯ ಫೌಂಡೇಶನ್‌ಗೆ ೫೦೦ ರೂ. ಸಹಾಯ ದ್ರವ್ಯವನ್ನು ೧೯೫೩-೫೪ ನೇ ಸಾಲಿಗೆ ಮುಂದುವರಿಸಬೇಕೆಂದು ತೀರ್ಮಾನಿಸಲಾಯಿತು.

ಹುಣಸೂರು ಮತ್ತು ಕೃಷ್ಣರಾಜನಗರದ ಮಧ್ಯೆ ಇರುವ ಗಾವುಡಗೆರೆಯಲ್ಲಿ ಒಂದು ಹೆರಿಗೆ ಆಸ್ಪತ್ರೆಯ ಕಟ್ಟಡಕ್ಕಾಗಿ ಬೋರ್ಡು ಸದಸ್ಯರಾದ ಶ್ರೀ ಸುಬ್ಬರಾಯರು ೩೦ ಸಾವಿರ ರೂ. ಉದಾರ ದಾನಕ್ಕಾಗಿ ಅವರನ್ನು ಅಭಿನಂದಿಸಿ, ಈ ಬಗ್ಗೆ ಸರ್ಕಾರದವರು ಮಂಜೂರಾತಿ ಕೊಡಬೇಕೆಂದು ಪ್ರಾರ್ಥಿಸಲಾಯಿತು.

ತಲಕಾಡಿನಲ್ಲಿ ೩೦ ಸಾವಿರ ರೂ. ಖರ್ಚಿನಲ್ಲಿ ಒಂದು ಹೆರಿಗೆ ಆಸ್ಪತ್ರೆಯನ್ನು ಕಟ್ಟಲು ಸರ್ಕಾರ ಅನುಮತಿ ಕೊಡಬೇಕೆಂದೂ, ಪ್ರಾರ್ಥಿಸಿ, ಅದಕ್ಕಾಗಿ ೧೦ ಸಾವಿರ ರೂ.ಗಳನ್ನು ಬೋರ್ಡು ಮಂಜೂರ್ಮಾಡಿತು. ಇವಕ್ಕೆ ಶ್ರೀ ಜಗದೀಶ್‌ಮೂರ್ತಿಯವರು ೧೦ ಸಾವಿರ ರೂ ಉದಾರ ಸಹಾಯಕ್ಕಾಗಿ ಅವರನ್ನು ಅಭಿನಂದಿಸಲಾಯಿತು.

ಕಾಗಲವಾಡಿ ಗ್ರಾಮಸ್ಥರು ೪ ಸಾವಿರ ರೂ. ಬೆಲೆಬಾಳುವ ಜಾಗವನ್ನು ಮುಫತ್ತಾಗಿ ಕೊಟ್ಟಿರುವುದರಿಂದ ಚಂಡಕವಾಡಿ ಜಂಕ್ಷನ್‌ನಲ್ಲಿ ಒಂದು ಏ ಕ್ಲಾಸ್ ಬಸ್‌ಸ್ಟಾಂಡನ್ನು ಕಟ್ಟಿಸಬೇಕೆಂದು ನಿರ್ಧರಿಸಲಾಯಿತು.

ಮೈಸೂರು ನಗರದ ಪಶು ವೈದ್ಯಶಾಲೆಗೆ ಜಿಲ್ಲಾಬೋರ್ಡಿನವರು ಕೊಡುತ್ತಿದ್ದ ಗ್ರಾಂಟನ್ನು ನಿಲ್ಲಿಸಬೇಕೆಂದು ಹಿಂದೆ ಬೋರ್ಡಿನವರು ಮಾಡಿದ್ದ ತೀರ್ಮಾನವನ್ನು ಸರ್ಕಾರದವರು ತಿರಸ್ಕರಿಸಿದ್ದನ್ನು ರಿಕಾರ್ಡು ಮಾಡಲಾಯಿತು.

ಮೈಸೂರು ಜಿಲ್ಲೆಯಲ್ಲಿ ಹತ್ತಿ ವ್ಯಾಪಾರದ ಮೇಲೆ ಮಾರ್ಕೆಟ್ ಶಾಸನವನ್ನು ಜಾರಿಗೆ ತರುವ ಬಗ್ಗೆ ಬೋರ್ಡಿನ ಅಭಿಪ್ರಾಯ ತಿಳಿಸಬೇಕೆಂದು ಬಂದ ಸರ್ಕಾರದ ಪತ್ರ ಪರಿಶೀಲನೆಗೆ ಬಂದು, ಈ ಬಗ್ಗೆ ವಿವರಗಳನ್ನು ವರ್ತಕರಿಂದ ಪಡೆದನಂತರ ತಮ್ಮ ಅಭಿಪ್ರಾಯ ಸೂಚಿಸಬೇಕೆಂದು ನಿರ್ಧರಿಸಲಾಯಿತು.

ಮೈಸೂರು ಜಿಲ್ಲೆಗೆ ಪಿರಿಯಾಪಟ್ಟಣ ಮತ್ತು ಹೆಗ್ಗಡದೇವನಕೋಟೆ ತಾಲ್ಲೂಕುಗಳಲ್ಲಿ ಅನೇಕ ಗ್ರಾಮಗಳು ಅನಾರೋಗ್ಯಸ್ಥಳವಲ್ಲದೆ ಮಲೆನಾಡು ಮತ್ತು ಹಿಂದುಳಿದ ಪ್ರದೇಶಗಳಾಗಿರುವುದರಿಂದ ಅಲ್ಲಿ ಕಮ್ಯೂನಿಟಿ ಪ್ರಾಜೆಕ್ಟನ್ನು ಜಾರಿಗೆ ತರಬೇಕೆಂದು ಶ್ರೀ ಪಿ. ವೆಂಕಟಸುಬ್ಬಯ್ಯನವರ ನಿರ್ಣಯವನ್ನು ಸಂಸ್ಥಾನದ ಅಭಿವೃದ್ಧಿ ಕಮೀಷನರಿಗೆ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು

ಹುಣಸೂರಿನಲ್ಲಿ ೭೫ ಸಾವಿರ ರೂ. ಖರ್ಚಿನಲ್ಲಿ ಕಟ್ಟಲಾಗುವ ಹೆರಿಗೆ ಆಸ್ಪತ್ರೆಗೆ ಬೋರ್ಡಿನ ೩೦ ಸಾವಿರ ರೂ. ಕಂಟ್ರಿಬ್ಯೂಷನ್ ಕೊಡಬೇಕೆಂದು ತೀರ್ಮಾನಿಸಲಾಯಿತು.

ಪ್ರಾರಂಭದಲ್ಲಿ, ಅಧ್ಯಕ್ಷರು ಬೋರ್ಡಿನ ಕೆಲಸ ಕಾರ್ಯಗಳನ್ನು ವಿವರಿಸಿದರು. ಹೆಗ್ಗಡದೇವನ ಕೋಟೆ ತಾಲ್ಲೂಕು ಬಾಡಿಬಡಗದಲ್ಲಿ ಕಾಡು ಕುರುಬರ ಅಭಿವೃದ್ಧಿಗಾಗಿ ಕೈಗೊಂಡಿರುವ ೧ ಲಕ್ಷ ರೂ. ಗೃಹ ಯೋಜನೆಯ ಕಾರ್ಯವು ಯಶಸ್ವಿಯಾಗಿ ನಡೆಯುತ್ತಿದೆಯೆಂದು ತಿಳಿಸಿದರು.

ಮೈಸೂರು ಜಿಲ್ಲೆಯಲ್ಲಿ ಡಾ॥ ಮೋದಿಯವರು ನಡೆಸಿದ ನೇತ್ರ ಚಿಕಿತ್ಸೆಯಿಂದ ಸುಮಾರು ೧೦ ಸಾವಿರ ಜನರಿಗೆ ಉಪಯೋಗವಾಯಿತೆಂದೂ, ಸದ್ಯದಲ್ಲೇ ಮೈಸೂರು ಅಥವ ನಂಜನಗೂಡಿನಲ್ಲಿ ಅವರ ಆಪರೇಷನ್ ಶಿಬಿರವೊಂದನ್ನು ತೆರೆಯಲಾಗುವುದೆಂದೂ ತಿಳಿಸಿದರು.

ಶ್ರೇಷ್ಠನ್ಯಾಯಾಧೀಶರುಗಳ ಸಮ್ಮೇಳನ

ಇದೇ ೧೬ ಮತ್ತು ೧೭ ನೇ ತಾರೀಖುಗಳಲ್ಲಿ ದೆಹಲಿಯಲ್ಲಿ ಭಾರತದ ಪ್ರಾಂತ್ಯ ಶ್ರೇಷ್ಠ ನ್ಯಾಯಾಲಯಗಳ ಮುಖ್ಯ ನ್ಯಾಯಾಧೀಶರ ಸಮ್ಮೇಳನವು ನಡೆಯುತ್ತದೆ ಮೈಸೂರಿನ ಮುಖ್ಯ ನ್ಯಾಯಾಧೀಶರಾದ ಶ್ರೀ ಮೇದಪ್ಪನವರು ಅದರಲ್ಲಿ ಭಾಗವಹಿಸಲು ಇದೇ ೧೪ ನೇ ತಾರೀಖು ಪ್ರಯಾಣ ಮಾಡುತ್ತಾರೆ.

ಭಾರತದಲ್ಲಿರುವ ಫ್ರೆಂಚ್ ವಸಾಹತುಗಳು

ಭಾರತದಲ್ಲಿರುವ ಫ್ರೆಂಚ್ ವಸಾಹತುಗಳು ಯಾವ ಷರತ್ತೂ ಇಲ್ಲದೆ ಭಾರತಕ್ಕೆ ಫ್ರೆಂಚ್ ಸರ್ಕಾರವು ಕೂಡಲೇ ವರ್ಗಾಯಿಸಬೇಕೆಂದು ಪ್ರಸಿದ್ಧ ಫ್ರೆಂಚ್ ಗ್ರಂಥಕರ್ತರಾದ ರೈಮುಂಡ್‌ರವರು ಹೇಳಿದ್ದಾರೆ.

ರಾಜವಂಶದವರ ಆಸ್ತಿಗೆ ಮುಟ್ಟುಗೋಲು

ಈಜಿಪ್ಟಿನ ಮಾಜಿ ರಾಜರವಂಶಕ್ಕೆ ಸೇರಿದವರ ಆಸ್ತಿ ಪಾಸ್ತಿಗಳನ್ನೆಲ್ಲಾ ಅಲ್ಲಿಯ ಕ್ರಾಂತಿಕಾರಕ ಸರ್ಕಾರವು ತನ್ನ ವಶಪಡಿಸಿಕೊಳ್ಳುವುದಾಗಿ ಪ್ರಕಟಿಸಿದೆ.

ಪರ್ಶಿಯಾದಲ್ಲಿ ಮುಸಾದಿಕ್‌ರ ವಿಚಾರಣೆ

ತಾವು ಇನ್ನೂ ಅಧಿಕೃತವಾಗಿ ಪ್ರಧಾನಿಯೆಂದು ಅವರ ವಾದ

ತಮ್ಮನ್ನು ಬಿಡುಗಡೆ ಮಾಡಿದರೆ ಆತ್ಮಹತ್ಯ ಮಾಡಿಕೊಳ್ಳುವುದಾಗಿ ಮುಸಾದಿಕ್

ಪರ್ಶಿಯಾದಲ್ಲಿ ಷಾರವರ ವಿರುದ್ಧವಾಗಿ ವರ್ತಿಸಿ ಅವರ ಸರ್ಕಾರವನ್ನು ಬುಡಮೇಲುಮಾಡಲು ಯತ್ನಿಸಿದರೆಂಬ ಆಪಾದನೆಯಮೇಲೆ ಅಲ್ಲಿಯ ಮಾಜಿ ಪ್ರಧಾನಿ ಡಾ|| ಮುಸಾದಿಕ್‌ರವರ ವಿಚಾರಣೆಯು ಮಿಲಿಟರಿ ನ್ಯಾಯಾಲಯದಲ್ಲಿ ಮೊನ್ನೆಯಿಂದ ಪ್ರಾರಂಭವಾಯಿತು. ಅವರು ಕೋರ್ಟಿನೊಳಗೆ ಬಂದೊಡನೆಯೇ ಕುಸಿದುಬಿದ್ದರು. ನಂತರ ಚೇತರಿಸಿಕೊಂಡು ತಮ್ಮನ್ನು ವಿಚಾರಣೆ ನಡೆಸಲು ಈ ನ್ಯಾಯಾಲಯಕ್ಕೆ ಹಕ್ಕಿಲ್ಲವೆಂದೂ ತಾವು ಇನ್ನೂ ಅಧಿಕೃತವಾಗಿ ಪ್ರಧಾನಿಯಾಗಿಯೇ ಇರುವುದಾಗಿಯೂ ಅವರು ತಿಳಿಸಿದರು.

ಅನಂತರ ಪರ್ಶಿಯಾದಲ್ಲಿ ಉಂಟಾಗಿರುವ ತೊಂದರೆಗಳಿಗೆಲ್ಲಾ ಬ್ರಿಟನ್ನೇ ಕಾರಣವೆಂದೂ ತಾವು ಯಾವರೀತಿಯಾದ ರಾಜದ್ರೋಹವನ್ನು ಎಸಗಿಲ್ಲವೆಂದೂ ಅವರು ತಿಳಿದರು.

ತಮ್ಮನ್ನು ವಿಚಾರಣೆ ನಡೆಸಲು ಅಧಿಕಾರವಿಲ್ಲದ ನ್ಯಾಯಾಸ್ಥಾನವನ್ನು ತಾವು ಬಹಿಷ್ಕರಿಸುವುದಾಗಿಯೂ, ತಮ್ಮನ್ನು ಬಿಡುಗಡೆ ಮಾಡಿದರೆ ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಕೆಂದಿರುವುದಾಗಿಯೂ ತಿಳಿಸಿದ್ದಾರೆ. ವಿಚಾರಣೆಯು ಮುಂದುವರಿಯುತ್ತಲಿದೆ.

ನೆಹರೂರನ್ನು ಭೇಟಿ ಮಾಡಲು ಸಿಂಹಳ ಪ್ರಧಾನಿ ಕಾತುರತೆ

ಸಿಂಹಳದಲ್ಲಿರುವ ಭಾರತೀಯರ ಪೌರತ್ವ ಹಕ್ಕುಗಳ ಬಗ್ಗೆ ಭಾರತ ಪ್ರಧಾನಿ ನೆಹರೂರವರನ್ನು ಸಾಧ್ಯವಾದಷ್ಟು ಬೇಗ ತಾವು ಭೇಟಿ ಮಾಡಲು ಕಾತುರರಾಗಿರುವುದಾಗಿ ಸಿಂಹಳ ಪ್ರಧಾನಿ ಕೊಟೇಲವಾಲಾರವರು ತಮ್ಮ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಸಾವಿರಾರು ವರ್ಷಗಳಿಂದ ಇರುವ ಸಿಂಹಳಕ್ಕೆ ಜನರ ಅಕ್ರಮ ಪ್ರವೇಶವನ್ನು ತಪ್ಪಿಸಲು ಎಲ್ಲಾ ಕಾರ್ಯಕ್ರಮಗಳನ್ನೂ ತೆಗೆದುಕೊಳ್ಳುವುದಾಗಿ ಅವರು ತಿಳಿಸಿದ್ದಾರೆ.

ಬಂಧಿತರ ಬಿಡುಗಡೆ

ಕಳೆದ ೨ ವಾರಗಳಿಂದ ಲಕ್ನೋ ನಗರದಲ್ಲಿ ಉಂಟಾದ ಗಲಭೆಗಳ ಪರಿಣಾಮವಾಗಿ ದಸ್ತಗಿರಿಯಾಗಿದ್ದ ಸುಮಾರು ೬೦೦ ಜನರ ಪೈಕಿ ಇಲ್ಲಿಯವರೆಗೆ ೪೩೮ ಜನರನ್ನು ಬಿಡುಗಡೆ ಮಾಡಿರುವುದಾಗಿ ತಿಳಿಯಬರುತ್ತದೆ ಅವರಲ್ಲಿ ವಿದ್ಯಾರ್ಥಿಗಳೇ ಹೆಚ್ಚಾಗಿದ್ದಾರೆ.

ಭಾರತಕ್ಕೆ ವಿದೇಶೀ ಪರಿಣಿತರ ತಂಡ

ದೇಶದಲ್ಲಿ ಕಿರಿಯ ಕೈಗಾರಿಕೆಗಳ ಅಭಿವೃದ್ಧಿ ಬಗ್ಗೆ ಸಲಹೆ ನೀಡಲು ವಿದೇಶೀಯರ ಪರಿಣಿತರ ತಂಡವೊಂದು ಸದ್ಯದಲ್ಲೇ ಭಾರತಕ್ಕೆ ಬರಲಿದೆಯೆಂದು ತಿಳಿಯಬರುತ್ತದೆ.

ಕಮ್ಯೂನಿಸ್ಟರ ಸಲಹೆಗೆ ಪ್ರಜಾಸೋಷಲಿಸ್ಟ್ ಪಕ್ಷದ ತಿರಸ್ಕಾರ

ತಿರುವಾಂಕೂರ್-ಕೊಚ್ಚಿನ್ ಪ್ರಾಂತ್ಯದಲ್ಲಿ ವಿರೋಧ ಪಕ್ಷಗಳೆಲ್ಲವೂ ಸಂಯುಕ್ತ ಕಾರ್ಯಕ್ರಮವನ್ನು ತಯಾರಿಸಿಕೊಂಡು ಕಾಂಗ್ರೆಸ್ಸಿಗೆ ವಿರೋಧವಾಗಿ ಚುನಾವಣೆಗಳಲ್ಲಿ ಸ್ಪರ್ಧಿಸಬೇಕೆಂದೂ ಪ್ರಜಾಸೋಷಲಿಸ್ಟ್ ಪಕ್ಷವೂ ಸಹ ಇದಕ್ಕೆ ಒಪ್ಪಬೇಕೆಂದೂ ಕಮ್ಯೂನಿಸ್ಟ್ ನಾಯಕ ಶ್ರೀ ಎ. ಕೆ. ಗೋಪಾಲನ್‌ರವರ ಸಲಹೆಯನ್ನು ಕೇಂದ್ರ ಪ್ರಜಾಸೋಷಲಿಸ್ಟ್ ಪಕ್ಷವು ತಿರಸ್ಕರಿಸಿರುವುದಾಗಿಯೂ ಪ್ರಜಾಸೋಷಲಿಸ್ಟ್ ಪಕ್ಷವು ಮತ್ಯಾವ ಪಕ್ಷದೊಡನೆ ಸೇರುವುದಿಲ್ಲವೆಂದೂ ಆ ಪಕ್ಷದ ಕಾರ್ಯದರ್ಶಿಯವರು ತಿಳಿಸಿದ್ದಾರೆ

ಗಂಟೆಗೆ ೩೦೦೦ ಮೈಲಿ ಚಲಿಸುವ ವಿಮಾನ

ಗಂಟೆಗೆ ೩೦೦೦ ಮೈಲಿ ಚಲಿಸುವುದಕ್ಕೆ ಆಗುವಂತಹ ವಿಮಾನವೊಂದನ್ನು ಫ್ರೆಂಚ್ ಇಂಜನಿಯರ್ ರೇನೆ ಡೇಡು ಎಂಬುವವರು ನಿರ್ಮಿಸುತ್ತಲಿರುವುದಾಗಿ ಹೇಳಲಾಗಿದೆ. ಇಷ್ಟು ವೇಗದಲ್ಲಿ ವಿಮಾನವು ಚಲಿಸುವಾಗ ಪ್ಯಾರಾಚ್ಯೂಟಿನಿಂದ ಸಾಮಾನ್ಯವಾಗಿ ಇಳಿಯುವಂತೆ ಇದರಿಂದ ಇಳಿಯಲು ಅಸಾಧ್ಯವಾಗುತ್ತದೆಯಾದ್ದರಿಂದ ಚಾಲಕನು ಕ್ಯಾಬಿನ್ ಸಮೇತ ಕೆಳಗೆ ಇಳಿಯುವಂತೆ ವ್ಯವಸ್ಥೆ ಮಾಡಲಾಗುತ್ತಿದೆಯೆಂದು ತಿಳಿಯಬರುತ್ತದೆ. ಈ ಇಂಜನಿಯರ ಪ್ರಯತ್ನವು ಸಫಲವಾದಲ್ಲಿ ವಿಶ್ವದಲ್ಲಿ ಇದು ಪ್ರಥಮ ಅತ್ಯಂತ ವೇಗದ ವಿಮಾನ ಚಲನೆಯ ದಾಖಲೆಯಾಗುತ್ತದೆ.

● ಸಿಂಹಳಕ್ಕೆ ಅಕ್ರಮವಾಗಿ ಪ್ರವೇಶ ಮಾಡುವ ಭಾರತೀಯರ ಬಗ್ಗೆ ಪರಿಶೀಲನೆ ನಡೆಸಲು ಮದ್ರಾಸಿನ ಪೊಲೀಸ್ ಮುಖ್ಯಾಧಿಕಾರಿಯವರು ಕೊಲೊಂಬೋವಿಗೆ ತೆರಳಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೯—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೧—೨	೧೯—
ಎಳ್ಳು	೭೦—	೭೩—
ಹರಳು	೩೫—	೪೯—
ಹೆಸರು	೩೫—	೩೭—
ಅಲಸಂದೆ	೪೧—೨	೫೬—
ಹುಣಸೇಹಣ್ಣು	೯—೭	೯—೧೫
ಮೆಣಸಿನಕಾಯಿ	೧೮—೧೪	೩೭—
ತೆಂಗಿನಕಾಯಿ	೨೪೧—	೨೭೧

ತ್ರಿ ರಾಷ್ಟ್ರ ನಾಯಕರ ಸಮ್ಮೇಳನ

ಬರ್ಮುಡಾದಲ್ಲಿ ನಡೆಯುವ ನಿರೀಕ್ಷೆ

ಅಂತರ ರಾಷ್ಟ್ರೀಯ ವಿಷಯಗಳ ಚರ್ಚೆಗಾಗಿ ಮೂರು ಮಹಾರಾಷ್ಟ್ರಗಳ ಸಮ್ಮೇಳನವೊಂದು ಸದ್ಯದಲ್ಲಿಯೇ ಬರ್ಮುಡಾದಲ್ಲಿ ನಡೆಯಲು ಸಿದ್ಧತೆಗಳಾಗುತ್ತಿರುವುದಾಗಿ ತಿಳಿಯಬರುತ್ತದೆ. ಬ್ರಿಟನ್ನಿನ ಪ್ರಧಾನಿ ಚರ್ಚಿಲ್, ಅಮೆರಿಕಾಧ್ಯಕ್ಷ ಜನರಲ್ ಐಸೆನ್ ಹೋವರ್ ಮತ್ತು ಫ್ರಾನ್ಸಿನ ಪ್ರಧಾನಿ ಲಾರೆಲ್ ಇವರು ಈ ಸಮ್ಮೇಳನದಲ್ಲಿ ಭಾಗವಹಿಸಲಿರುವರೆಂದು ಹೇಳಲಾಗಿದೆ.

ಮನೆ ಖಾಲಿಮಾಡೆಂದರೆ ಆತ್ಮಹತ್ಯ

ತಾನು ವಾಸಮಾಡುತ್ತಿರುವ ಮನೆಯನ್ನು ಕೂಡಲೇ ಖಾಲಿ ಮಾಡಬೇಕೆಂದು ಮನೇ ಮಾಲೀಕನು ಒತ್ತಾಯಪಡಿಸಿದ್ದರಿಂದ ಬೇಸರಗೊಂಡು ಬೊಂಬಾಯಿನಲ್ಲಿ ವಾಸವಾಗಿದ್ದ ಮಾಜಿ ನೌಕಾಧಿಕಾರಿ ಪೆಸ್ತೋನ್‌ಜಿ ದಾದಾಭಾಯಿ ಎಂಬುವವರು ಗುಂಡು ಹೊಡೆದುಕೊಂಡು ಆತ್ಮಹತ್ಯ ಮಾಡಿಕೊಂಡರೆಂದು ವರದಿಯಾಗಿದೆ.

ಭಾರತ ಪಾಕೀಸ್ಥಾನ ಅಧಿಕಾರಿಗಳ ಸಮ್ಮೇಳನ

ಭಾರತ ಮತ್ತು ಪಾಕೀಸ್ತಾನಗಳ ನಡುವಿನ ರೈಲ್ವೆ ಸಾಗಾಣಿಕೆ ಮತ್ತು ಇತರ ವಿಷಯಗಳಿಗೆ ಸಂಬಂಧ ಪಟ್ಟ ವಿಚಾರಗಳಲ್ಲಿ ಚರ್ಚೆ ನಡೆಸಲು ಉಭಯ ಸರ್ಕಾರಗಳ ಅಧಿಕಾರಿಗಳ ಸಭೆಯೊಂದು ಇದೇ ೧೬ನೇ ತಾರೀಖು ಪ್ರಾರಂಭವಾಗುವುದಾಗಿ ತಿಳಿಯಬರುತ್ತದೆ.

ಪೆಪ್ಸುವಿನಲ್ಲಿ ಚುನಾವಣೆಗಳು

ರಾಷ್ಟ್ರಾಧ್ಯಕ್ಷರ ಆಡಳಿತದಲ್ಲಿರುವ ಪೆಪ್ಸು ಪ್ರಾಂತ್ಯದಲ್ಲಿ ಮಹಾ ಚುನಾವಣೆಗಳು ಇನ್ನೂ ೩-೪ ತಿಂಗಳೊಳಗಾಗಿ ನಡೆಯುವುದೆಂದು ಪ್ರಧಾನಿ ನೆಹರೂರವರು ಹೇಳಿದ್ದಾರೆ. ಈ ಪ್ರಾಂತ್ಯವು ರಾಷ್ಟ್ರಾಧ್ಯಕ್ಷರ ಆಡಳಿತಕ್ಕೆ ಬಂದ ಮೇಲೆ ಪರಿಸ್ಥಿತಿಯು ಉತ್ತಮಗೊಂಡಿರುವುದಾಗಿಯೂ ಅವರು ಹೇಳಿದ್ದಾರೆ.

ತಿರುವಾಂಕೂರಿನಲ್ಲಿ ವಿದ್ಯಾರ್ಥಿಗಳ ದಸ್ತಗಿರಿ

ಪೊಲೀಸರ ವಿರುದ್ಧ ಘೋಷಣೆಗಳನ್ನು ಮಾಡಿದರೆಂದೂ, ಗಲಭೆ ನಡೆಸಿದರೆಂದೂ ತಿರುವನಂತಪುರದಲ್ಲಿ ೧೧ ಮಂದಿ ಕಾಲೇಜ್ ವಿದ್ಯಾರ್ಥಿಗಳನ್ನು ದಸ್ತಗಿರಿ ಮಾಡಲಾಗಿದೆ. ಮಹಾತ್ಮಗಾಂಧಿ ಕಾಲೇಜ್ ವಿದ್ಯಾರ್ಥಿಯೊಬ್ಬನು ವಿಶ್ವವಿದ್ಯಾನಿಲಯದ ಕಛೇರಿ ಮುಂದೆ ನುಗ್ಗಿ ಉಪವಾಸ ಮುಷ್ಕರ ಹೂಡಲು ಯತ್ನಿಸಿದ್ದಕ್ಕಾಗಿ ಆತನನ್ನು ಬಂಧಿಸಲಾಯಿತು.

ಶಾಸನಸಭೆಗೆ ಮೈಸೂರಿನಿಂದ ೩ ಸ್ಥಾನಗಳು

ಮೈಸೂರು ಶಾಸನಸಭೆಗೆ ಮೈಸೂರುನಗರದಿಂದ ಇದುವರೆವಿಗೆ ೨ ಸ್ಥಾನಗಳಿದ್ದುದನ್ನು ಈಗ ಡೀಲಿಮಿಟೇಷನ್ ಸಮಿತಿಯವರು ೩ ಕ್ಕೆ ಏರಿಸಿದ್ದಾರೆ. ನಗರವನ್ನು ದಕ್ಷಿಣ ಪಶ್ಚಿಮ ಮತ್ತು ಪೂರ್ವ ಕ್ಷೇತ್ರಗಳನ್ನಾಗಿ ವಿಂಗಡಿಸಲಾಗಿದೆ.

ಬೆಂಗಳೂರು ನಗರದಿಂದ ಇದುವರೆವಿಗೆ ಇದ್ದ ೭ ಸ್ಥಾನಗಳನ್ನು ೯ ಕ್ಕೆ ಹೆಚ್ಚಿಸಲಾಗಿದೆ.

ಸ್ಥಾನಬದ್ಧ ಖೈದಿಗಳಿಲ್ಲ

ಹೈದರಾಬಾದ್‌ನಲ್ಲಿ ಸ್ಥಾನಬದ್ಧ ಖೈದಿಗಳಾರು ಇಲ್ಲವೆಂದು ತಿಳಿಯಬರುತ್ತದೆ ಪೊಲೀಸ್ ಕಾರ್ಯಾಚರಣೆಯ ಕಾಲದಲ್ಲಿ ೬೦೦೦ ಕ್ಕಿಂತ ಹೆಚ್ಚು ಸ್ಥಾನಬದ್ಧ ಖೈದಿಗಳಿದ್ದರು ಕಳೆದ ೭ ನೇ ತಾರೀಖು ಕೊನೆಯ ಖೈದಿಯ ಬಿಡುಗಡೆಯಾಯಿತು.

ವಿವಾಹ ಮಹೋತ್ಸವ

ರಾಜಧಾನಿಯ ಸಂತೇಪೇಟೆ ವರ್ತಕರಾದ ಶ್ರೀ ನಾಗರಾಜಶೆಟ್ಟಿಯವರು ತಮ್ಮ ಪುತ್ರಿ ಶ್ರೀಮತಿ ಶಾಂತಕುಮಾರಿಯನ್ನು ಬೆಂಗಳೂರಿನ ಶ್ರೀ ಎ. ಕೆ. ಮುದ್ದರಾಮ ಶೆಟ್ಟಿಯವರ ತಮ್ಮಂದಿರು ಶ್ರೀ ಸತ್ಯನಾರಾಯಣ ಶೆಟ್ಟಿಯವರಿಗೆ ಕೊಟ್ಟು ವಿವಾಹವನ್ನು ನಿನ್ನೆ ಇಲ್ಲಿ ನೆರವೇರಿಸಿದರು.

● ವಿಶ್ವಸಂಸ್ಥೆಯ ಅಧ್ಯಕ್ಷ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಮುಂದಿನ ಜನವರಿ ತಿಂಗಳಿನಲ್ಲಿ ಭಾರತಕ್ಕೆ ಬರುವಾಗ್ಗೆ ಸಿಂಹಳಕ್ಕೂ ಭೇಟಿ ಕೊಡುವರೆಂದು ತಿಳಿಯಬರುತ್ತದೆ

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ
ಥಿಯೇಟ್ರಿಕಲ್ ಕಂಪೆನಿ (ರಿ)
10--11--53ರಿಂದ ರಾತ್ರಿ 10 ಗಂಟೆಗೆ
ಶಿವರಾಂಪೇಟೆಯಲ್ಲಿರುವ ರತ್ನಾವಳಿ
ಥಿಯೇಟರಿನಲ್ಲಿ
ಹೇಮರೆಡ್ಡಿ--ಮಲ್ಲಮ್ಮ
ಎಂಬ ಪೌರಾಣಿಕ ನಾಟಕವನ್ನು
ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೦

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೬೭

೧೧-೧೧-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮಿಲಿಟರಿ ಕೋರ್ಟಿನಲ್ಲಿ ಮುಸಾದಿಕ್‌ರ ಅಳು

ಪರ್ಶಿಯಾ ಮಾಜಿ ಪ್ರಧಾನಿ ಡಾ|| ಮುಸಾದಿಕ್‌ರವರ ವಿಚಾರಣೆಯು ಟೆಹರಾನಿನಲ್ಲಿ ೫ ಜನ ಸದಸ್ಯರಿರುವ ಮಿಲಿಟರಿ ನ್ಯಾಯಾಲಯದಲ್ಲಿ ಪ್ರಾರಂಭವಾಗಿದೆ.

ಡಾ|| ಮುಸಾದಿಕ್‌ರವರು ನ್ಯಾಯವಾಗಿ ನಾನು ಇನ್ನೂ ಪ್ರಧಾನಿಯಾಗಿದ್ದೇನೆ. ಷಾರವರು ನನ್ನನ್ನು ವಜಾಮಾಡಲು ಅಧಿಕಾರವೇ ಇಲ್ಲ. ನಿಮ್ಮ ಪ್ರಧಾನಿಯ ವಿಚಾರಣೆಯನ್ನು ನಡೆಸಲು ನಿಮ್ಮ ನ್ಯಾಯಾಲಯಕ್ಕೆ ಹಕ್ಕಿಲ್ಲ ಎಂದು ಅಳುತ್ತಾ ತಮ್ಮ ವಾದವನ್ನು ಪ್ರಾರಂಭಿಸಿದರು.

ಅನಂತರ ಅವರು ಚೇತರಿಸಿಕೊಂಡು ಏಕಪ್ರಕಾರ ೩ ಗಂಟೆಕಾಲ ಮಾತನಾಡಿದರು. ಆಗ ಈರೀತಿ ಹೇಳಿದರು.

ನನ್ನ ಕಡೆಯ ನ್ಯಾಯವಾದಿಯು ನನಗೆ ಸಂಬಂಧಪಟ್ಟ ವಿಷಯಗಳನ್ನು ಗುಟ್ಟಾಗಿ ನ್ಯಾಯಾಲಯಕ್ಕೆ ತಿಳಿಸಿ ನನಗೆ ಮೋಸಮಾಡಿದ್ದಾನೆ. ಆದ್ದರಿಂದ ಆತನು ನನ್ನ ಕಡೆಯ ನ್ಯಾಯವಾದಿಯಲ್ಲ. ಇಲ್ಲಿರುವ ವಿಚಾರಣಾ ಮಂಡಲಿಯಲ್ಲಿರುವ ಕೆಲವರನ್ನು ಹಿಂದೆ ನಾನು ಕೆಲಸದಿಂದ ನಿವೃತ್ತಿಮಾಡಿದ್ದೆ ಅವರು ಪುನಃ ಇಲ್ಲಿರುವುದಕ್ಕೆ ಅಧಿಕಾರವಿಲ್ಲ.

ಅಪರ ಕಡೆಯ ನ್ಯಾಯವಾದಿಯು ಮತ್ತು ಮಂಡಲಿಯ ಅಧ್ಯಕ್ಷರು ಕುರಾನ್ ಗ್ರಂಥವನ್ನು ಹಿಡಿದುಕೊಂಡು ಈ ಆಪಾದನೆಗಳು ಸುಳ್ಳೆಂದು ಹೇಳಿದರು. ಮಂಡಲಿಯ ಅಧ್ಯಕ್ಷರು ಮಾತನಾಡುತ್ತಾ 'ನನ್ನ ದೈವಭಕ್ತಿ ಮತ್ತು ಸತ್ಯಸಂಧತೆಯನ್ನು ಗಮನಿಸಿ ಷಾರವರು ನನ್ನನ್ನು ಈ ಮಂಡಲಿಯ ಅಧ್ಯಕ್ಷತೆ ಸ್ಥಾನಕ್ಕೆ ನೇಮಿಸಿದ್ದಾರೆ. ತಪ್ಪಿತಸ್ಥನಲ್ಲದವನಿಗೆ ಶಿಕ್ಷೆ ಕೊಡಬೇಕೆಂದು ತಾವು ಕೇಳುವುದಿಲ್ಲವೆಂದು ಷಾರವರು ನನಗೆ ತಿಳಿಸಿದ್ದಾರೆ ಎಂದು ಪ್ರಮಾಣಪೂರ್ವಕವಾಗಿ ತಿಳಿಸಿದರು.

ಮೊಸಾದಿಕ್:— ನಿಮ್ಮ ಇಷ್ಟ ಬಂದರೆ ನನ್ನನ್ನು ಮರಣದಂಡನೆಗೆ ಗುರಿಮಾಡಿ. ನನಗೆ ಕ್ಷಮೆ ಬೇಕಾಗಿಲ್ಲ. ನಾನು ಸಾಯುವವರೆಗೆ ಕಾರಾಗೃಹದಲ್ಲಿಯೇ ಇರುತ್ತೇನೆ. ನನ್ನನ್ನು ಬಿಡುಗಡೆ ಮಾಡಿದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ.

ಈ ನಡುವೆ ಮಿಲಿಟರಿ ಪ್ರಾಸಿಕ್ಯೂಟರ್ ಮಾತನಾಡುತ್ತಾ, ಡಾ|| ಮುಸಾದಿಕ್‌ರವರು ಕೋರ್ಟಿನ ಘನತೆಯನ್ನು ಗಮನಿಸದೆ ಹೆಚ್ಚುಪಟ್ಟೆ ಮಾತನಾಡುತ್ತಿದ್ದಾರೆ. ಅದನ್ನು ತಪ್ಪಿಸಬೇಕೆಂದರು.

ಡಾ|| ಮುಸಾದಿಕ್:— ಈ ಕೆಲಸಕ್ಕೆ ಅವರು ಅನರ್ಹ. ಅವರು ಅನಕ್ಷರಸ್ಥರು. ನ್ಯಾಯಾಧೀಶರುಗಳನ್ನು ಕುರಿತು ನಿಮಗೂ ನ್ಯಾಯಬುದ್ಧಿಯೇ ಇಲ್ಲಎಂದರು.

ಅಧ್ಯಕ್ಷರು:— ನಿಮಗೆ ನ್ಯಾಯವಾದ ವಿಚಾರಣೆಯು ನಡೆಯುತ್ತದೆ.

ಮುಸಾದಿಕ್‌ರವರು ಅಳುವುದಕ್ಕೆ ಪ್ರಾರಂಭಿಸಿದರು. ಗಟ್ಟಿಯಾಗಿ ಅಳುತ್ತಲೇ ಹೀಗೆ ಹೇಳಿದರು.

ನನ್ನ ವಿಷಯದಲ್ಲಿ ಏನಾಗುವುದೆಂದು ಪ್ರಪಂಚವು ಇತ್ತ ಕಡೆ ವೀಕ್ಷಿಸುತ್ತಲಿದೆ. ನಾನು ನಿರಾಪರಾಧಿ, ಅನೇಕ ಕಡೆ ನಾನು ಜಯಶೀಲನಾಗಿದ್ದೇನೆ ನೀವು ೫ ಜನ ನನ್ನ ಮೇಲೆ ದೋಷಾರೋಪಣೆ ಮಾಡಲು ಸಾಧ್ಯವೆ. ನನ್ನನ್ನು ಕೊಲ್ಲಲು ಅನೇಕರು ಸಿದ್ಧವಿದ್ದಾರೆ ಜೈಲಿನಲ್ಲಿದ್ದರೂ ಕೊಲ್ಲುವರು ಹೊರಗೆ ಹೋದರೂ ಕೊಲ್ಲುವರು.

ಅಧ್ಯಕ್ಷರು:— ನಿಮಗಿಂತಲೂ ನಾವು ದೇಶಪ್ರೇಮಿಗಳು ಕೋರ್ಟಿನ ಅಧಿಕಾರಿಗಳಿಗೆ ಅಪಮಾನ ಮಾಡಬಾರದು.

ಮುಸಾದಿಕ್:— ನಾನು ನ್ಯಾಯವಾಗಿಯೂ ಪ್ರಧಾನಿ. ನನ್ನ ಕರ್ತವ್ಯಗಳನ್ನು ಮಾಡಲು ಈಗ ಅಡ್ಡಿಪಡಿಸುವವರನ್ನು ನ್ಯಾಯಾಲಯವು ಶಿಕ್ಷಿಸಬೇಕು ಎಂದು ಮನಸೋಇಷ್ಟ ಮಾತನಾಡಲಾರಂಭಿಸಿದರು.

ಕಚ್ಚಾಫಿಲಂ ಕೈಗಾರಿಕೆ

ಬೆಂಗಳೂರು ೧೧

ಮೈಸೂರು ಸಂಸ್ಥಾನದಲ್ಲಿ ಆದಷ್ಟು ಜಾಗ್ರತೆಯಾಗಿ ಕಚ್ಚಾಫಿಲಂ ಕೈಗಾರಿಕೆಯನ್ನು ಪ್ರಾರಂಭಿಸಿದರೆ ಅದನ್ನು ಜಪಾನಿಗೆ ರಫ್ತುಮಾಡಲು ಅವಕಾಶವಾಗುತ್ತದೆ. ಇದರಿಂದ ದೇಶದ ವಾಣಿಜ್ಯ ಪರಿಸ್ಥಿತಿ ಉತ್ತಮಗೊಳ್ಳುತ್ತದೆ ಎಂದು ಕೈಗಾರಿಕೆ ಮತ್ತು ವಾಣಿಜ್ಯ ಡೈರೆಕ್ಟರ್ ಶ್ರೀ ಇ.ವಿ. ಗಣಪತಿ ಅಯ್ಯರ್‌ರವರು ಜಪಾನ್ ಪ್ರವಾಸ ಮುಗಿಸಿಕೊಂಡು ಬಂದು ತಿಳಿಸಿದ್ದಾರೆ.

ಹಾಸುಕಂಬಳಿ ಕೈಗಾರಿಕೆ ಅಭಿವೃದ್ಧಿ

ಮೈಸೂರಿಗೆ ಕೇಂದ್ರದ ಸಹಾಯ

ಮೈಸೂರು ಸಂಸ್ಥಾನದಲ್ಲಿ ಹಾಸುಕಂಬಳಿ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು ಕೇಂದ್ರಸರ್ಕಾರ ಮೂರುವರೆ ಲಕ್ಷ ರೂಗಳನ್ನು ಕೊಟ್ಟಿದೆ. ಗೃಹ ಕೈಗಾರಿಕೆಗಳಿಗಾಗಿ ಕೇಂದ್ರ ಸರ್ಕಾರ ಒಟ್ಟು ೬ ಲಕ್ಷ ರೂಗಳನ್ನು ಮಂಜೂರುಮಾಡಿದೆ. ಅದರಲ್ಲಿ ಚಾಪೆ ಹೆಣೆಯುವ ಕೈಗಾರಿಕೆಗೆ ೧೩ ಸಾವಿರ ರೂ, ಮಡಿಕೆ ಕುಡಿಕೆಗಳ ಕೈಗಾರಿಕೆಗೆ ೨೧ ಸಾವಿರ ರೂ ಕೊಡಲಾಗಿದೆ.

ವೆಲ್ಲೂರಿ ಬಳಿ ಮದ್ರಾಸ್ ಮತ್ತು ಮೈಸೂರು ಸರ್ಕಾರಗಳು ತೆರೆಯಲಿರುವ ಹಾಸುಕಂಬಳಿ ಕೇಂದ್ರಕ್ಕೆ ಸರ್ಕಾರ ಮಂಜೂರಾತಿ ಕೊಟ್ಟಿದೆ. ಅದಕ್ಕೆ ೧೧.೩೦ ಲಕ್ಷ ರೂಗಳು ಖರ್ಚಾಗುವುದು.

ಅಮೆರಿಕದ ಸಿಯಾಟಲ್‌ನಲ್ಲಿ ಮುಂದಿನ ಜನವರಿಯಲ್ಲಿ ನಡೆಯುವ ವಸ್ತುಪ್ರದರ್ಶನದಲ್ಲಿ ಭಾರತ ಭಾಗವಹಿಸಲು ೪೭ ಸಾವಿರ ರೂ. ಮಂಜೂರಾಗಿದೆ. ಅದರಲ್ಲಿ ಮೈಸೂರಿನ ವಸ್ತುಗಳನ್ನು ಪ್ರದರ್ಶಿಸಲಾಗುವುದು.

ಸಿಂಹಳ-ಭಾರತ ಪ್ರಧಾನಿಗಳ ಭೇಟಿ

ಮುಂದಿನ ಜನವರಿ ಮಧ್ಯಭಾಗದಲ್ಲಿ ತಾವು ದೆಹಲಿಗೆ ಪ್ರಯಾಣ ಬೆಳಸಿ ಪ್ರಧಾನಿ ನೆಹರೂರವರನ್ನು ಭೇಟಿಮಾಡಲು ಇಷ್ಟಪಡುವುದಾಗಿ ಸಿಂಹಳ ಪ್ರಧಾನಿ ಸರ್ ಜಾನ್ ಕೊಟೇಲವಾಲಾರವರು ತಿಳಿಸಿರುತ್ತಾರೆ. ಸಿಂಹಳದಲ್ಲಿರುವ ಭಾರತೀಯರ ವಿಷಯಗಳನ್ನು ಚರ್ಚಿಸುವುದಕ್ಕೆ ಆ ಭೇಟಿ ಸಹಾಯವಾಗುವುದಲ್ಲದೆ ಭಾರತ ನಾಯಕರೊಡನೆ ವೈಯುಕ್ತಿಕ ಸಂಪರ್ಕವನ್ನು ತಾವು ಪಡೆಯಲು ಅವಕಾಶ ದೊರೆಯುವುದಾಗಿ ಅವರು ಹೇಳಿದ್ದಾರೆ. ಸಿಂಹಳ ಮತ್ತು ಭಾರತದ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ಅನ್ಯೋನ್ಯತೆ ಭಾವನೆಯಿಂದ ಪರಿಹಾರಮಾಡಿಕೊಳ್ಳಲು ಸಾಧ್ಯವೆಂದೂ ಅವರು ಅಭಿಪ್ರಾಯಪಟ್ಟದ್ದಾರೆ.

ಭೂದಾನ ಯಜ್ಞ ಸಂಗ್ರಹಣೆ

ಶ್ರೀ ಶಂಕರಲಾಲ್ ದೇವ್‌ರವರು ಕೇರಳದಲ್ಲಿ ಪ್ರವಾಸವನ್ನು ನಡೆಸಿ ಇಲ್ಲಿಯವರೆಗೆ ೧೦ ಸಾವಿರ ಎಕರೆ ಜಮೀನನ್ನು ಭೂದಾನ ಯಜ್ಞ ಅಂಗವಾಗಿ ಸಂಗ್ರಹಿಸಿದ್ದಾರೆ.

ಬಟ್ಟೆ ರಫ್ತಿನ ಪರಿಣಿತರ ಸಮಿತಿ

ದೇಶದಲ್ಲಿ ಬಟ್ಟೆ ರಫ್ತಿನ ಬಗ್ಗೆ ಸಂಶೋಧನೆಯನ್ನು ನಡೆಸಿ, ಆ ಉದ್ಯಮವನ್ನು ಉತ್ತಮಗೊಳಿಸಲು ಖಾಸಗಿ ಪರಿಣಿತರ ಸಮಿತಿಯೊಂದನ್ನು ರಚಿಸಬೇಕೆಂದು ಕೇಂದ್ರ ಕೈಗಾರಿಕಾಸಚಿವ ಶ್ರೀ ಕೃಷ್ಣಮಾಚಾರಿಯವರು ಹೇಳಿದ್ದಾರೆ

ಶಾಸನ ಸಭಾಧಿವೇಶನ

ಬೆಂಗಳೂರು ೧೧

ಡಿಸೆಂಬರ್ ೭ ನೇ ತಾರೀಖು ಶಾಸನ ಸಭಾಧಿವೇಶನವು ಬೆಂಗಳೂರಿನಲ್ಲಿ ಪ್ರಾರಂಭವಾಗುತ್ತದೆ.

ಪತ್ರಿಕಾ ಸಂಪಾದಕರಿಗೆ ಶಿಕ್ಷೆ

ಕೋಮುವಾರು ದ್ವೇಷ ಮತ್ತು ವೈರತ್ವವನ್ನು ಪ್ರಚೋದಿಸುವಂತಹ ಬರವಣಿಗೆಗಳನ್ನು ಪ್ರಕಟಿಸಿದರೆಂಬ ಆಪಾದನೆಮೇಲೆ ಕಾನ್ಪುರದ 'ರಿಯಾಸತ್' ಎಂಬ ಉರ್ದು ಪತ್ರಿಕೆಯ ಸಂಪಾದಕರಿಗೂ ಮತ್ತು ಮುದ್ರಕ ಪ್ರಕಾಶಕರಿಗೂ ಕಾನ್ಪುರದ ನಗರ ಮ್ಯಾಜಿಸ್ಟ್ರೇಟರು ತಲಾ ಒಂದುವರ್ಷ ಕಠಿಣ ಸಜಾ ವಿಧಿಸಿದ್ದಾರೆ.

ಕುಮಾರ ಪ್ರೆಸ್ ಮಾಲೀಕರ ಖುಲಾಸೆ

ಮೈಸೂರು, ನ. ೧೧

ರಾಜಧಾನಿಯ ಕುಮಾರಾ ಪ್ರೆಸ್ ಮಾಲೀಕರು ಮತ್ತು ಮುದ್ರಣಕಾರರೂ ಆದ ಶ್ರೀ ಹೆಚ್. ಕೆ. ಕುಮಾರಸ್ವಾಮಿ ಮತ್ತು ಶ್ರೀ ಕೆ. ಸುಬ್ಬಣ್ಣನವರು ಪ್ರೆಸ್ಸಿನ ಹೆಸರಿಲ್ಲದೆ ಹಸ್ತ ಪತ್ರಿಕೆಗಳನ್ನು ಪ್ರಕಟಿಸಿದರೆಂಬ ಆಪಾದನೆ ಮೇಲೆ ನಗರ ನ್ಯಾಯಾಧೀಶರು ವಿಧಿಸಿದ್ದ ತಲಾ ೨೫೦ ರೂ. ಜುಲ್ಮಾನೆ ತಪ್ಪಿದರೆ ಒಂದು ತಿಂಗಳು ಸಾದಾ ಶಿಕ್ಷೆಯನ್ನು ಜಿಲ್ಲಾ ನ್ಯಾಯಾಧೀಶರಾದ ಶ್ರೀ ಹೊಂಬೇಗೌಡರು ಅಪೀಲಿನಲ್ಲಿ ನಿನ್ನೆ ವಜಾ ಮಾಡಿ, ಆಪಾದಿತರನ್ನು ಖುಲಾಸೆ ಮಾಡಿದ್ದಾರೆ.

ಬೊಂಬಾಯಿನಲ್ಲಿ ಹೆಚ್ಚು ಬತ್ತದ ಬೆಳೆ

ಬೊಂಬಾಯಿ ಪ್ರಾಂತ್ಯದಲ್ಲಿ ಈ ಸಾಲಿನಲ್ಲಿ ಕಳೆದ ಸಾಲಿಗಿಂತ ಶೇಕಡ ೨೫ರಷ್ಟು ಹೆಚ್ಚಾಗಿ ಬತ್ತದ ಬೆಳೆಯಾಗಿರುವುದಾಗಿ ತಿಳಿಯಬರುತ್ತದೆ.

ಕಳೆದ ವರ್ಷ ೯ ಲಕ್ಷ ೩೯ ಸಾವಿರ ಟನ್‌ಗಳಷ್ಟು ಬತ್ತವನ್ನು ಬೆಳೆಯಲಾಗಿತ್ತು. ಈ ಸಾಲಿನಲ್ಲಿ ೧೨ ಲಕ್ಷ ಟನ್‌ಗಳಷ್ಟು ಬೆಳೆಯಾಗುವುದಾಗಿ ಹೇಳಲಾಗಿದೆ.

ಮದರಾಸ್ ಶಾಸನಸಭಾ ಕಾಂಗ್ರೆಸ್ ಪರಿಸ್ಥಿತಿ ಉತ್ತಮವಾಗಿಲ್ಲ

ಮದರಾಸ್ ಶಾಸನಸಭಾ ಕಾಂಗ್ರೆಸ್ ಪಕ್ಷದ ಈಚಿನ ಬಿಕ್ಕಟ್ಟು ದುಃಖಕರವಾಗಿದೆ ಯಾರೊಬ್ಬರೂ ಸದ್ಯದ ಸ್ಥಿತಿಯಲ್ಲಿ ಪತ್ರಿಕೆಗಳಿಗೆ ಹೇಳಿಕೆಗಳನ್ನು ಕೊಡಲನುಗ್ಗಬಾರದು ಎಂದು ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜನಾಡಾರ್‌ರವರು ಹೇಳಿದ್ದಾರೆ.

ಟ್ರಾಂವೇ ಕಂಪೆನಿ ಮೇಲೆ ದಾವಾ

ಮದ್ರಾಸ್ ಟ್ರಾಂವೇ ಕಂಪೆನಿಯವರಿಂದ ಸರ್ಕಾರಕ್ಕೆ ಬರಬೇಕಾಗಿದ್ದ ೯,೨೬,೦೦೦ ರೂಗಳ ವಿದ್ಯುಚ್ಛಕ್ತಿ ಬಾಕಿಯನ್ನು ವಸೂಲು ಮಾಡಲು, ಮದರಾಸ್ ಸರ್ಕಾರದವರು ಹೈಕೋರ್ಟಿನಲ್ಲಿ ಒಂದು ದಾವಾ ಹೂಡಿದ್ದಾರೆ.

ಆಂಧ್ರ ಸಚಿವರುಗಳ ಸಂಬಳ

ನೂತನವಾಗಿ ರಚಿತವಾದ ಆಂಧ್ರ ಪ್ರಾಂತ್ಯದಲ್ಲಿ ಮಂತ್ರಿಗಳಿಗೆ ೧೦೦೦ ರೂಪಾಯಿಗಳ ಸಂಬಳವನ್ನು ನಿರ್ಧರಿಸಲಾಗಿದೆ.

ಅಕ್ಕಿ ಹೆಚ್ಚುವರಿ ಪ್ರಾಂತ್ಯಗಳು ಹೆಚ್ಚು ಆಹಾರ ಸಂಗ್ರಹಿಸಬೇಕು

ವಿದೇಶಗಳಿಂದ ಅಕ್ಕಿ ರಫ್ತನ್ನು ನಿಲ್ಲಿಸಲಾಗುತ್ತದೆ

ಆಹಾರ ಕಾರ್ಯದರ್ಶಿಯವರ ಸಮ್ಮೇಳನದಲ್ಲಿ ಉಪಸಚಿವರ ವಿವರಣೆ

ದೇಶದಲ್ಲಿ ಅಕ್ಕಿ ಹೆಚ್ಚುವರಿ ಪ್ರಾಂತ್ಯಗಳಾದ ಕೊಡಗು, ಆಂಧ್ರ, ಉತ್ತರಪ್ರದೇಶ, ಮಧ್ಯಪ್ರದೇಶ, ವಿಂಧ್ಯಪ್ರದೇಶ, ಒರಿಸ್ಸಾ ಮುಂತಾದ ೭ ಪ್ರಾಂತ್ಯಗಳ ಆಹಾರ ಶಾಖಾ ಕಾರ್ಯದರ್ಶಿಗಳ ಸಮ್ಮೇಳನವೊಂದು ನಿನ್ನೆಯದಿನ ನವದೆಹಲಿಯಲ್ಲಿ ಪ್ರಾರಂಭವಾಯಿತು. ಕೇಂದ್ರ ಸರ್ಕಾರದ ಆಹಾರ ಉಪಸಚಿವರಾದ ಶ್ರೀ ಎಂ. ವಿ. ಕೃಷ್ಣಪ್ಪನವರು ಅಧ್ಯಕ್ಷತೆಯನ್ನು ವಹಿಸಿದ್ದರು. ಈ ಹೆಚ್ಚುವರಿ ಪ್ರಾಂತ್ಯಗಳಲ್ಲಿ ಅಕ್ಕಿಯನ್ನು ಸಂಗ್ರಹಿಸಿ, ಕೊರತೆ ಪ್ರದೇಶಗಳಿಗೆ ಸರಬರಾಜು ಮಾಡುವ ವಿಷಯದಲ್ಲಿ ವಿಚಾರ ವಿನಿಮಯ ನಡೆಸಲು ಈ ಸಮ್ಮೇಳನವು ಸೇರಿದೆ.

ಈ ಸಭೆಯನ್ನುದ್ದೇಶಿಸಿ, ಉಪಸಚಿವರು ಮಾತನಾಡುತ್ತಾ ಕಳೆದ ಸಾಲಿನಲ್ಲಿ ಹೆಚ್ಚುವರಿ ಪ್ರದೇಶಗಳು ೩ ಲಕ್ಷ ಟನ್ನುಗಳನ್ನು ಅಕ್ಕಿಯನ್ನು ಸಂಗ್ರಹಿಸಿ, ಈ ಸಾಲಿನಲ್ಲಿ ೮ ಲಕ್ಷ ಟನ್ನುಗಳನ್ನು ಸಂಗ್ರಹಿಸಿರುವುದು ಸ್ತುತ್ಯಾರ್ಹವಾದುದು. ಇದೇ ರೀತಿಯಾಗಿ ಮುಂದಿನ ಸುಗ್ಗಿಯ ಕಾಲದಲ್ಲಿ ಶೇಖರಣೆಯನ್ನು ಮಾಡಿ ಕೊರತೆ ಪ್ರದೇಶಗಳಿಗೆ ಒದಗಿಸಿದರೆ ವಿದೇಶಗಳಿಂದ ಅಕ್ಕಿ ರಫ್ತನ್ನು ಪೂರ್ಣವಾಗಿ ನಿಲ್ಲಿಸಲವಕಾಶವಾಗುತ್ತದೆ. ಇದಕ್ಕೆ ಎಲ್ಲರೂ ಸಹಕರಿಸಬೇಕೆಂದು ಕೋರಿದರು.

ಭಾಷಣ

ಮೈಸೂರು ೧೧

ಹಳೇ ಅಗ್ರಹಾರದ ಸಿನಿಮಾ ಎದುರು ಮೈದಾನದಲ್ಲಿ ನಾಳೆದಿನ ಸಂಜೆ ೬ ಗಂಟೆಗೆ ಆರ್. ಎಸ್. ಎಸ್. ನ ಆಶ್ರಯದಲ್ಲಿ ಗೋಹತ್ಯಾ ನಿರೋಧ ಚಳುವಳಿಯ ಅಂಗವಾಗಿ ಸಂಘದ ಕರ್ನಾಟಕ ಪ್ರಾಂತ ಪ್ರಚಾರಕರಾದ ಶ್ರೀ ಯಾದವರಾವ್ ಜೋಷಿಯವರು ಭಾಷಣ ಮಾಡುವರು. ಶ್ರೀ ಗೋಪಾಲ ಶಾಸ್ತ್ರಿಯವರು ಅಧ್ಯಕ್ಷತೆ ವಹಿಸುವರು.

-ಮೈಸೂರು ಪೇಟೆಧಾರಣೆ-

ತಾರೀಖು ೧೦—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೨—೮	೨೨—೮
ಎಳ್ಳು	೬೪—೧೪	೭೫—೨
ಹರಳು	೩೪—೧೪	೩೯—
ಹುರಳಿ	೩೭—೨	೩೮—
ಹೆಸರು	೩೩—	೩೮—೪
ಅಲಸಂದೆ	೪೦—೨	೫೬—
ಹುಣಸೇಹಣ್ಣು	೯—	೧೦—೪
ಸೀಗೆಕಾಯಿ	೭—೨	—
ಮೆಣಸಿನಕಾಯಿ	೧೫—೧೪	೩೭—೮
ಬೆಲ್ಲ	೮—	—
ತೆಂಗಿನಕಾಯಿ	೧೫೧—	೨೪೦

ಕೆಸರೆ ಬ್ಲಾಕಿನಲ್ಲಿ ನೀರಿನ ತೊಂದರೆ

ಮೈಸೂರು ಸಿಟಿ ನರಸಿಂಹರಾಜ ಮೊಹಲ್ಲಾದ ಕೆಸರೆ ಬ್ಲಾಕಿನಲ್ಲಿ ೨ ಬೀದಿಗಳಿವೆ ಒಂದು ಬೀದಿಯಲ್ಲಿ ನಲ್ಲಿಯನ್ನು ಇಟ್ಟಿರುವುದು ಸರಿಯಷ್ಟೆ. ಇನ್ನೊಂದು ಬೀದಿಯಲ್ಲಿ ನಲ್ಲಿ ಇಲ್ಲದೆ ಅಲ್ಲಿಂದ ಬಳಸಿಕೊಂಡು ನೀರು ತರಲು ಜನಗಳಿಗೆ ತುಂಬಾ ತೊಂದರೆಯಾಗಿರುತ್ತೆಂದು ಅನೇಕವೇಳೆ ತಗಾದೆ ಅರ್ಜಿಗಳನ್ನು ಕೊಟ್ಟು ಖುದ್ದು ಅಜಮಾಯಿಸಿಮಾಡಿ ಕುರಿಮುಂದಿಗೆ ಲೈನ್ ಹಾಕುವಾಗ ನಮ್ಮ ಮೊಹಲ್ಲಾಕ್ಕೆ ೩ ಅಂಗುಲದ ಪೈಪು ಹಾಕಿಸಿ ಆಕಡೆಬೀದಿಗೂ ಸಹ ನಲ್ಲಿಯನ್ನು ಇಡಿಸಿಕೊಡುತ್ತೇವೆಂದು ಪ್ರೆಸಿಡೆಂಟ್ ಸಾಹೇಬರು ಅಪ್ಪಣೆ ಕೊಡಿಸಿದಲಾಗಾಯ್ತು ನಮ್ಮ ಮೊಹಲ್ಲಾದಕಡೆ ಗಮನವಿಡದೆ ಆರ್ಡರಾಗಿರುವ ೩ ಅಂಗುಲದ ಪೈಪನ್ನೂ ಸಹ ಅಲ್ಲಿರುವ ೨೦ ಮನೆಗಳಿಗೆ ಏತಕ್ಕೆಂದು ಉದಾಸೀನಮಾಡಿ ನಮ್ಮ ಬಡ ಜನಗಳ ಮೇಲೆ ಗಮನವಿಡದೆ ಅದನ್ನು ಕ್ಯಾನ್ಸಲ್ ಮಾಡಿರುತ್ತಾರೆಂದು ತಿಳಿಯಬರುತ್ತೆ.

ನಮ್ಮ ಮೊಹಲ್ಲಾದಲ್ಲಿ ಸುಮಾರು ೫೦೦ ಜನಸಂಖ್ಯೆ ಉಳ್ಳದ್ದಾಗಿರುತ್ತೆ ಒಂದೇಬೀದಿಯಲ್ಲಿ ನಲ್ಲಿ ಇಟ್ಟಿರುವುದರಿಂದ ಈ ಬೀದಿಯವರು ಆಕಡೆ ಬೀದಿಗೆ ನೀರು ತರಲು ಹೋಗಬೇಕಾದರೆ ಮಧ್ಯೆ ನಲ್ಲಿಗಳಿಲ್ಲದೆ ತುಂಬಾ ತೊಂದರೆಗೀಡಾಗಿರುತ್ತೆ. ಅನೇಕ ವೇಳೆ ಪ್ರೆಸಿಡೆಂಟರ ಮತ್ತು ಕಮೀಷನರವರ ಗಮನಕ್ಕೆ ತಂದಾಗ್ಯೂ ಕೂಡ ಈಕಡೆ ಗಮನವಿಡದೆ ಕೇಳಿದಾಗಲೆಲ್ಲಾ ಬಂದ ಪ್ರೆಸಿಡೆಂಟರುಗಳು ಆಗಲಿ ಎಂದು ಸಬೂಬನ್ನು ಹೇಳುತ್ತಿದ್ದಾರೆಯೇ ವಿನಃ ಯಾವ ಕೆಲಸವನ್ನೂ ಸಹ ಮಾಡಿರುವುದಿಲ್ಲ ಇಂತಾ ಅಧಿಕಾರಿಗಳು ಬಡ ಜನಗಳ ತೊಂದರೆ ವಿಚಾರಣೆ ಮಾಡಲಾರರೇ ಎಂಬ ಈ ವಿಷಯವನ್ನು ಸಾರ್ವಜನಿಕರ ಗಮನಕ್ಕೆ ತರಲಾಗಿದೆ.

ಯಜಮಾನ ಗುರುಸಿದ್ದಪ್ಪ.

ನಾಟಕರತ್ನ ಜಿ. ಹೆಚ್. ವೀರಣ್ಣನವರ

ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)

11--11--53ರಿಂದ ರಾತ್ರಿ 10 ಗಂಟೆಗೆ

ಮೈಸೂರು ಟೌನ್‌ಹಾಲಿನಲ್ಲಿ

ಸಾಹುಕಾರ

ಎಂಬ ಸಾಮಾಜಿಕ ನಾಟಕವನ್ನು

ಅಭಿನಯಿಸುವರು

ಮೂರನೇ ತರಗತಿ ರೈಲ್ವೆ ಪ್ರಯಾಣಿಕರಿಗೆ ಸೌಲಭ್ಯಗಳು

೫೩—೫೪ ರಲ್ಲಿ ಒಂದುಕೋಟಿ ರೂ. ವೆಚ್ಚಮಾಡುವುದಾಗಿ ರೈಲ್ವೆ ಸಚಿವರು

ದಕ್ಷಿಣ ಭಾರತದ ರೈಲ್ವೆಗಳಲ್ಲಿ ಮೂರನೇ ತರಗತಿಯಲ್ಲಿ ಪ್ರಯಾಣಮಾಡುವವರಿಗೆ ಸೌಕರ್ಯಗಳನ್ನು ಕಲ್ಪಿಸುವುದಕ್ಕಾಗಿ ಭಾರತ ಸರ್ಕಾರವು ೫೩--೫೪ ನೇ ಸಾಲಿನಲ್ಲಿ ಒಂದುಕೋಟಿ ರೂಪಾಯಿಗಳನ್ನೂ, ೫೪--೫೫ ನೇ ಸಾಲಿನಲ್ಲಿ ೫೫ ಲಕ್ಷ ರೂಪಾಯಿಗಳನ್ನು ವೆಚ್ಚಮಾಡುವುದಾಗಿ ಕೇಂದ್ರ ರೈಲ್ವೆ ಸಚಿವ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಮದ್ರಾಸಿನಲ್ಲಿ ತಿಳಿಸುತ್ತಾರೆ. ವೆಲ್ಲಿಪುರಂ ಮತ್ತು ಮದ್ರಾಸ್‌ಗಳ ನಡುವೆ ೯೦ ಮೈಲಿ ದೂರ ವಿದ್ಯುಚ್ಛಕ್ತಿ ರೈಲನ್ನು ಹಾಕಲು ಸರ್ಕಾರವು ಪರಿಶೀಲಿಸುತ್ತಲಿರುವುದಾಗಿಯೂ, ಮದ್ರಾಸ್ ಸರಕಾರವು ಇವಕ್ಕೆ ಬೇಕಾಗುವಷ್ಟು ವಿದ್ಯುತ್ತನ್ನು ಸರಬರಾಜು ಮಾಡಲು ಒಪ್ಪಿದೆಯೆಂದೂ ಅವರು ತಿಳಿಸಿದ್ದಾರೆ.

ಸೆನೆಟ್ ಸಭೆ

ಮೈಸೂರು ೧೧

ಮುಂದುವರಿದ ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯು ಇದೇ ೧೬ನೇ ತಾರೀಖು ಸೋಮವಾರ ೧೨ ಗಂಟೆಗೆ ಕ್ರಾಫರ್ಡ್ ಭವನದಲ್ಲಿ ನಡೆಯುತ್ತದೆ.

ಪ್ರಕಾಶಕರು ಮತ್ತು ಮುದ್ರಕರು:

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್, ಮೈಸೂರು.

ತ್ರಿರಾಷ್ಟ್ರ ನಾಯಕರ ಸಮ್ಮೇಳನ

ಮುಂದಿನತಿಂಗಳು ೪ ನೇ ತಾರೀಖು ಪ್ರಾರಂಭ

ಮುಂದಿನತಿಂಗಳು ೪ನೇ ತಾರೀಖಿನಿಂದ ೮ ನೇ ತಾರೀಖಿನವರೆಗೆ ಬರ್ಮುಡಾದಲ್ಲಿ ಬ್ರಿಟಿಷ್ ಪ್ರಧಾನಿ ಚರ್ಚಿಲ್, ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರು ಮತ್ತು ಫ್ರಾನ್ಸಿನ ಪ್ರಧಾನಿ ಲೇನಿಯಲ್ ರವರ ಸಮ್ಮೇಳನವು ನಡೆಯುವುದೆಂದು ಅಧಿಕೃತವಾಗಿ ಪ್ರಕಟಿಸಲಾಗಿದೆ. ಈ ಸಂದರ್ಭದಲ್ಲಿ ಆ ದೇಶಗಳ ವಿದೇಶಾಂಗ ಸಚಿವರು ಹಾಜರಿರುತ್ತಾರೆ. ಜರ್ಮನಿಯ ಭವಿಷ್ಯದ ವಿಷಯವಾಗಿ ರಷ್ಯಾವನ್ನು ಬಿಟ್ಟು ಈ ಮೂರು ರಾಷ್ಟ್ರಗಳೇ ವಿಷಯವನ್ನು ಚರ್ಚಿಸಿ ತೀರ್ಮಾನಿಸಿರುವುದಾಗಿ ತಿಳಿಯಬರುತ್ತದೆ.

ಆಗ್ರಾದಲ್ಲಿ ಶಾಲಾ ಕಾಲೇಜುಗಳ ಬಂದು

ಲಕ್ನೋದಲ್ಲಿ ನಡೆದ ವಿಶ್ವವಿದ್ಯಾನಿಲಯದಲ್ಲಿ ನಡೆದ ಘಟನೆಗಳ ಪರಿಣಾಮವಾಗಿ ಆಗ್ರಾದಲ್ಲಿಯೂ ವಿದ್ಯಾರ್ಥಿಗಳ ಮುಷ್ಕರ ಮುಂತಾದವು ಪ್ರಾರಂಭವಾಗಿರುವುದರಿಂದ ಅಲ್ಲಿಯ ಎಲ್ಲಾ ಶಾಲಾ ಕಾಲೇಜುಗಳನ್ನು ಮುಚ್ಚಲಾಗಿದೆ.

ನೈಸರ್ಗಿಕ ಬಣ್ಣಗಳಲ್ಲಿ

ಬೇಕ್‌ಲೈಟ್ ಸಾಮಾನುಗಳಲ್ಲಿ

ಮೈಸೂರೈಟ್ ಮತ್ತು ಐವರೈಟ್

ಅಸಮಾನವಾದ ದರ್ಜೆಗೆ ಸೇರಿದ್ದು

ಕುಡಿಯುವ ಪಾತ್ರೆಗಳು, ಬಟ್ಟಲುಗಳು, ಬಸಿಗಳು, ಕ್ಷೌರದ ದೊನ್ನೆಗಳು, ಸಿಗರೇಟು ಬೂದಿಯನ್ನು ಹಾಕುವ ತಟ್ಟೆಗಳು, ಟೇಬಲ್ ಅಲಂಕರಿಸುವ ಕೌಶಲ್ಯದ ಸಾಮಾನುಗಳು, ಅಂಗಶೃಂಗಾರ ಪದಾರ್ಥಗಳನ್ನಿಡುವ ಸಾಮಾನುಗಳು, ವಿಧವಿಧವಾದ ನಮೂನೆಗಳಲ್ಲಿ ಮತ್ತು ಆಕರ್ಷಕ ಬಣ್ಣಗಳಲ್ಲಿ

ತಯಾರಿಸಲ್ಪಡುವುವು.

ಅಚ್ಚು ಮಾಡಿದ ಮೈಸೂರೈಟ್ ಸಾಮಾನುಗಳು

ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ,

ಮೈಸೂರು ರೋಡ್, ಬೆಂಗಳೂರು-೨

ಪೋಸ್ಟ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೭೪

೧೨-೧೧-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮದ್ರಾಸ್‌ನಲ್ಲಿ ಕಾಂಗ್ರೆಸ್ ಬಿಕ್ಕಟ್ಟು

ವಿಷಯ ಪರಿಶೀಲನೆಗೆ ೧೪ ನೇ ತಾರೀಖು ಶಾಸನಸಭಾ ಕಾಂಗ್ರೆಸ್ ಪಕ್ಷಸಭೆ

ಮದ್ರಾಸ್ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸಲು ಕಾಂಗ್ರೆಸ್ಸಿನ ಶಾಸನ ಸಭೆಯ ಒಂದು ಗುಂಪು ಪ್ರಯತ್ನವನ್ನು ನಡೆಸುತ್ತಲಿದೆ. ಈ ಸಂದರ್ಭದಲ್ಲಿ ರಾಜಾಜಿಯ ಮೇಲೆ ಈ ಸದಸ್ಯರು ಹಲವಾರು ಆರೋಪಣೆಗಳನ್ನು ಮಾಡಿ ಕಾಂಗ್ರೆಸ್ ಅಧ್ಯಕ್ಷ ನೆಹರೂರವರಿಗೆ ಕಳುಹಿಸಿದ್ದರು. ಆ ಆರೋಪಣೆಗಳನ್ನು ಶ್ರೀ ನೆಹರೂರವರು ತಳ್ಳಿಹಾಕಿ ರಾಜಾಜಿಯವರೇ ಮದ್ರಾಸ್ ಮುಖ್ಯಮಂತ್ರಿಗಳಾಗಿ ಮುಂದುವರಿಯಬೇಕೆಂದು ಕಾಂಗ್ರೆಸ್ಸಿಗರಿಗೆ ತಿಳಿಸಿದ್ದರು.

ಇದರಿಂದ ರಾಜಾಜಿ ವಿರೋಧಿಗಳಿಗೆ ತೃಪ್ತಿಯಾಗದೆ ಕೂಡಲೇ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯನ್ನು ಅವರು ಕರೆಯಬೇಕೆಂದು ಒತ್ತಾಯ ಪಡಿಸಿದರು. ಅದರಂತೆ ರಾಜಾಜಿಯವರು ಪಕ್ಷದ ಸಭೆಯನ್ನು ಇದೇ ೧೪ನೇ ತಾರೀಖು ಏರ್ಪಡಿಸಿದ್ದಾರೆ. ಈ ಸಭೆಯಲ್ಲಿ ವಿರೋಧಿಗಳು ರಾಜಾಜಿಯವರ ನೀತಿಯ ಬಗ್ಗೆ ಅವಿಶ್ವಾಸವನ್ನು ವ್ಯಕ್ತಪಡಿಸುವರೆಂದು ಹೇಳಲಾಗಿದೆ.

೧೪೧ ಸದಸ್ಯರಿರುವ ಶಾಸನ ಸಭೆಯಲ್ಲಿ ತಮ್ಮ ಕಡೆ ೭೦ ಜನರ ಬೆಂಬಲ ಈಗ ಇದೆಯೆಂದೂ ಇನ್ನೂ ಕೆಲವರು ತಮ್ಮ ಗುಂಪನ್ನು ಸೇರುವರೆಂದೂ ವಿರೋಧಪಕ್ಷದವರು ಹೇಳುತ್ತಿದ್ದಾರೆ.

ತಮ್ಮ ಮೇಲಿನ ಆರೋಪಣೆಗಳೆಲ್ಲವೂ ನಿರಾಧಾರವಾದುದೆಂದೂ ಈ ಅಪಪ್ರಚಾರ ಮತ್ತು ಆರೋಪಣೆಗಳು ಕೆಲವು ಸ್ವಾಭಿಮಾನಿಗಳಾದ ಕಾಂಗ್ರೆಸ್ಸಿಗರ ಪಿತೂರಿಯೆಂದು ಸಭೆಯಲ್ಲಿ ರಾಜಾಜಿಯವರು ವ್ಯಕ್ತಪಡಿಸಲು ಸಿದ್ಧವಿರುವುದಾಗಿ ಹೇಳಲಾಗಿದೆ.

ಹಾಗೇನಾದರೂ ತಮ್ಮ ಮೇಲೆ ಪಕ್ಷದ ಅವಿಶ್ವಾಸ ನಿರ್ಣಯವು ಪಾಸಾದರೆ ತಾವು ರಾಜೀನಾಮೆಯನ್ನು ಕೊಟ್ಟು, ಈಗಿನ ಶಾಸನ ಸಭೆಯನ್ನು ರದ್ದುಗೊಳಿಸಿ, ಚುನಾವಣೆಗಳನ್ನು ನಡೆಸುವಂತೆ ಗೌರ್ನರ್‌ರಿಗೆ ತಾವು ಸಲಹೆ ನೀಡುವುದಾಗಿ ರಾಜಾಜಿಯವರು ನಿರ್ಧರಿಸಿರುವುದಾಗಿ ಅವರ ಹತ್ತಿರದ ವೃತ್ತಗಳಿಂದ ತಿಳಿಯಬರುತ್ತದೆ.

ಪುರಸಭಾ ಚುನಾವಣೆಗೆ ಕಾಂ॥ ಉಮೇದುವಾರರು

ಬೆಂಗಳೂರು ೧೨

ಮೈಸೂರು ಪುರಸಭೆಗೆ ಮುಂದಿನ ತಿಂಗಳು ೭ನೇ ತಾರೀಖು ನಡೆಯಲಿರುವ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರಾಗಿ ಸ್ಪರ್ಧಿಸಲು ೪೦ ವಾರ್ಡುಗಳ ಪೈಕಿ ೨೭ ವಾರ್ಡುಗಳಿಗೆ ಈ ಕೆಳಗೆಕಂಡವರನ್ನು ಎಂ. ಪಿ. ಸಿ. ಸಿ. ಪಾರ್ಲಿಮೆಂಟರಿ ಸಮಿತಿ ಆಯ್ಕೆಮಾಡಿದೆ.

ಶ್ರೀ ಜಿ. ಎಸ್. ರಾಮಕೃಷ್ಣಯ್ಯ ೧ನೇ ವಾರ್ಡು, ಶ್ರೀ ಕೆ. ಸಿದ್ದಯ್ಯ ೨ನೇ ವಾರ್ಡು, ಶ್ರೀ ಟಿ.ಎನ್. ಸುಬ್ಬರಾವ್ ೫ನೇ ವಾರ್ಡು, (?) ಶ್ರೀ ಬಿ. ರಾಮಣ್ಣ ೬ನೇ ವಾರ್ಡು, ಶ್ರೀ ಪಿ. ಸೀತಾರಾಮಯ್ಯ ೭ನೇ ವಾರ್ಡು, ಶ್ರೀ ಜನಾರ್ಧನನಾಯ್ಡು ೯ನೇ ವಾರ್ಡು, ಶ್ರೀ ಎ. ಕೃಷ್ಣಮೂರ್ತಿರಾವ್ ೧೧ ನೇ ವಾರ್ಡು, ಶ್ರೀ ಎನ್. ಶ್ರೀನಿವಾಸ ೧೩ ನೇ ವಾರ್ಡು, ಶ್ರೀ ಎಸ್. ಕೆಂಪೇಗೌಡ ೧೪ನೇ ವಾರ್ಡು, ಶ್ರೀ ಟಿ. ನರಸಿಂಹ ಅಯ್ಯಂಗಾರ್ ೧೬ನೇ ವಾರ್ಡು, ಶ್ರೀ ಚೌಡಯ್ಯನವರು ೧೮ನೇ ವಾರ್ಡು, ಶ್ರೀ ಎಂ. ಸಿದ್ದಲಿಂಗಪ್ಪ ೧೯ನೇ ವಾರ್ಡು, ಶ್ರೀ ಯು. ಎಲ್. ರಾಮಚಂದ್ರರಾವ್ ೨೦ ನೇ ವಾರ್ಡು, ಶ್ರೀ ಬಿ. ಎಲ್. ರಾಮಸ್ವಾಮಿ ಶೆಟ್ಟಿ ೨೧ನೇ ವಾರ್ಡು, ಶ್ರೀ ಟಿ.ಸಿ. ಗೌಡ ೨೨ನೇ ವಾರ್ಡು, ಶ್ರೀ ಬಿ.ಎನ್. ಕೆಂಗೇಗೌಡ ೨೩ನೇ ವಾರ್ಡು, ಶ್ರೀ ಪಿ.ಡಿ. ಕೃಷ್ಣಸ್ವಾಮಿ ೨೪ನೇ ವಾರ್ಡು, ಶ್ರೀ ಎಸ್. ಲಕ್ಷ್ಮೀನರಸಿಂಹಯ್ಯ ೨೫ನೇ ವಾರ್ಡು, ಶ್ರೀ ಕೆ ಪುಟ್ಟಸ್ವಾಮಿ ೨೬ನೇ ವಾರ್ಡು, ಶ್ರೀ ಜಿ. ಆರ್. ರಂಗಸ್ವಾಮಯ್ಯ ೨೭ ನೇ ವಾರ್ಡು, ಶ್ರೀ ಎಂ. ಕೆ. ಲಿಂಗಯ್ಯ ೨೮ನೇ ವಾರ್ಡು, ಶ್ರೀ ಡಿ. ವೆಂಕಟಯ್ಯ ೩೦ನೇ ವಾರ್ಡು, ಶ್ರೀ ಎಸ್. ಶ್ರೀಕಂಠಯ್ಯ ೩೫ನೆ ವಾರ್ಡು, ಶ್ರೀ ಟಿ. ಮಹದೇವಪ್ಪ ೩೬ ನೇ ನೇವಾರ್ಡು, ಟಿ.ವೆಂಕಟರಮಣಯ್ಯ ೩೭ನೇ ವಾರ್ಡು, ಶ್ರೀ ಶ್ರೀ ಎಸ್. ಲಿಂಗಣ್ಣ ೩೯ನೇ ನೇ ವಾರ್ಡು, ಎಂ. ವೆಂಕಟಲಿಂಗಯ್ಯ ೪೦ ನೇ ವಾರ್ಡು.

ಉಳಿದ ವಾರ್ಡುಗಳಲ್ಲಿ ಯೋಗ್ಯರಾದ ಉಮೇದುವಾರರನ್ನು ಆರಿಸುವ ಕಾರ್ಯವನ್ನು ಮೈಸೂರು ಪೌರಸಭೆಯ ಅಡ್‌ಹಾಕ್ ಸಮಿತಿಗೆ ಅಧಿಕೃತವಾಗಿ ಕೊಡಲಾಗಿದೆ.

ಡಿಫ್ತೀರಿಯಾ ನಿವಾರಣಾ ಯೋಜನೆ ಪ್ರಾರಂಭ

ಮೈಸೂರು ೧೨

ನಗರದಲ್ಲಿ ಇತ್ತೀಚೆಗೆ ಮಕ್ಕಳಲ್ಲಿ ಹೆಚ್ಚುತ್ತಿರುವ ಡಿಫ್ತೀರಿಯಾ ರೋಗವನ್ನು ತಡೆಗಟ್ಟಲು ಪುರಸಭೆಯವರು ಕೈಗೊಂಡಿರುವ ಡಿಫ್ತೀರಿಯಾ ನಿವಾರಣಾ ಯೋಜನೆಯ ಪ್ರಾರಂಭೋತ್ಸವವನ್ನು ನಿನ್ನೆ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಗುಣಾಂಬ ಟ್ರಸ್ಟ್ ಆವರಣದಲ್ಲಿ ನೆರವೇರಿಸಿದರು.

ಒಂದರಿಂದ ೧೦ ವರ್ಷದ ಮಕ್ಕಳಿಗೆ ಈ ರೋಗವು ಬರುವುದನ್ನು ನಿಲ್ಲಿಸಲು ತಾವು ಕೈಗೊಂಡಿರುವ ಯೋಜನೆಯಲ್ಲಿ ಸಾರ್ವಜನಿಕರು ಸಹಕರಿಸಿ ಅದು ಫಲಕಾರಿಯಾಗುವಂತೆ ಮಾಡಬೇಕೆಂದು ಅಧ್ಯಕ್ಷರು ಮನವಿ ಮಾಡಿಕೊಂಡರು.

ಪುರಸಭೆಯ ಆರೋಗ್ಯ ಅಧಿಕಾರಿಗಳಾದ ಶ್ರೀ ವೆಂಕಟಾಚಲಂರವರು ಭಾಷಣ ಮಾಡಿ ನಗರದಲ್ಲಿರುವ ಶಿಶುವಿಹಾರ, ಹಾಲಿನ ಕೇಂದ್ರ ಮುಂತಾದ ೯ ಪ್ರದೇಶಗಳಲ್ಲಿ ಈ ಯೋಜನೆಯ ಕೇಂದ್ರಗಳನ್ನು ತೆರೆದು, ಅಲ್ಲಿ ಪ್ರತ್ಯೇಕ ವೈದ್ಯರನ್ನು ನೇಮಿಸಲಾಗಿದೆಯೆಂದೂ, ನಗರದ ಎಲ್ಲಾ ಮಕ್ಕಳಿಗೂ ೨ ಬಾರಿ ವ್ಯಾಕ್ಸಿನ್ ಇಂಜೆಕ್ಷನ್ ಕೊಡಲಾಗುವುದೆಂದೂ, ಈ ಕಾರ್ಯದಲ್ಲಿ ಪ್ರತಿಯೊಬ್ಬ ತಂದೆತಾಯಿಗಳೂ ಸಹಕರಿಸಬೇಕೆಂದೂ ತಿಳಿಸಿದರು. ನಗರದ ಎಲ್ಲಾ ಪ್ರೈಮರಿ ಶಾಲೆಗಳಲ್ಲೂ ಈ ಕಾರ್ಯಕ್ರಮ ಕೈಗೊಳ್ಳಲಾಗುವುದೆಂದೂ ಅವರು ತಿಳಿಸಿದರು.

(ಈ ಆಯ್ಕೆ ವಿಷಯದಲ್ಲಿ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ನಿನ್ನೆ ಬೆಳಿಗ್ಗೆ ಅಂತ್ಯ ನಿರ್ಧಾರಕ್ಕೆ ಬಂದು ಬೆಂಗಳೂರಿನಲ್ಲಿ ಎಂ. ಪಿ. ಸಿ. ಸಿ ಕಛೇರಿಯಲ್ಲಿ ನಿನ್ನೆ ರಾತ್ರಿ ಪಟ್ಟಿಯನ್ನು ಪ್ರಕಟಿಸಿತು.

ಎಂ. ಪಿ. ಸಿ. ಸಿ. ಅಧ್ಯಕ್ಷರು ಮತ್ತು ಪಾರ್ಲಿಮೆಂಟರಿ ಸಮಿತಿಯ ಇತರ ಕೆಲವು ಸದಸ್ಯರು ನಿನ್ನೆಯದಿನವೇ ಮೈಸೂರಿಗೆ ಆಗಮಿಸಿದರು.

ನಿನ್ನೆರಾತ್ರಿ ೯-೩೦ ಗಂಟೆ ವೇಳೆಯಲ್ಲಿ ಮೈಸೂರುನಗರ ಕಾಂಗ್ರೆಸ್ ಕಛೇರಿಯಲ್ಲಿ ಕೇವಲ ೧೭ ಹೆಸರುಳ್ಳ ಪಟ್ಟಿಯನ್ನು ತಿರಸ್ಕಾರವಾದ ಕೆಲವು ಅರ್ಜಿದಾರರ ಹೆಸರನ್ನು ಪ್ರಕಟಿಸಲಾಯಿತು.

ನಿನ್ನೆರಾತ್ರಿ ಬೆಂಗಳೂರು ಎಂ.ಪಿ.ಸಿ.ಸಿ. ಕಛೇರಿಯಲ್ಲಿ ೨೭ ಹೆಸರುಗಳನ್ನು ಪ್ರಕಟಿಸಿ ಚುನಾವಣೆ ನಡೆಯಲಿರುವ ಮೈಸೂರು ನಗರದಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ಕೇವಲ ೧೭ ಹೆಸರನ್ನು ಮಾತ್ರ ಪ್ರಕಟಿಸಿರುವುದು ಆಶ್ಚರ್ಯವಾಗಿದೆ. ಇದಕ್ಕೆ ಕಾರಣ ವೇನೂ ತಿಳಿಯದಾಗಿದೆ. ಸಂ.)

ಗೋಸಂವರ್ಧನ ಸಪ್ತಾಹ ಮುಕ್ತಾಯ ಸಮಾರಂಭ

ಮೈಸೂರು ೧೨

ಮೈಸೂರು ಪಶುಪಾಲನೆ ಇಲಾಖೆಯ ಆಶ್ರಯದಲ್ಲಿ ನಡೆಯುತ್ತಿರುವ ಗೋಸಂವರ್ಧನ ಸಪ್ತಾಹದ ಮುಕ್ತಾಯ ಸಮಾರಂಭ ನಾಳೆಸಂಜೆ ೫-೩೦ ಗಂಟೆಗೆ ಜೀವಣ್ಣರಾಯನಕಟ್ಟೆ ಹತ್ತಿರವಿರುವ ಪಶುವೈದ್ಯಶಾಲಾ ಆವರಣದಲ್ಲಿ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಆಗ್ರಾದ ವಿದ್ಯಾರ್ಥಿಗಳ ಮುಷ್ಕರ

ಲಕ್ನೋ ವಿಶ್ವವಿದ್ಯಾನಿಲಯದ ಸಂಘದ ಬಗ್ಗೆ ವಿದ್ಯಾರ್ಥಿಗಳಿಗೂ ಅಧಿಕಾರಿಗಳಿಗೂ ಭಿನ್ನಭಿಪ್ರಾಯಉಂಟಾಗಿ, ವಿದ್ಯಾರ್ಥಿಗಳ ಚಳುವಳಿ ಪ್ರಾರಂಭವಾಗಿ ಗಲಭೆ ಮತ್ತು ಗೋಲಿಬಾರು ಪ್ರಕರಣವಾಯಿತಷ್ಟೆ. ಈಗ ಅಲ್ಲಿನ ವಿದ್ಯಾರ್ಥಿಗಳು ಚಳುವಳಿನಿಲ್ಲಿಸಿ ಕಾಲೇಜುಗಳಿಗೆಹೋಗಲು ನಿರ್ಧರಿಸಿದ್ದಾರೆ.

ಆದರೆ ನಿನ್ನೆ ಆಗ್ರಾ ನಗರದ ಕಾಲೇಜು ಮತ್ತು ಶಾಲೆಗಳ ವಿದ್ಯಾರ್ಥಿಗಳು ಗಲಭೆ ನಡೆಸಿ ಮುಷ್ಕರ ಹೂಡಿದ್ದರಿಂದ ಎಲ್ಲಾ ಶಾಲೆ ಮತ್ತು ಕಾಲೇಜುಗಳನ್ನು ಒಂದುವಾರ ಮುಚ್ಚಲಾಗಿದೆ.

ಮೈಸೂರು ಬ್ಯಾಂಕಿನಲ್ಲಿ ಸರ್ಕಾರದ ಪ್ರತಿನಿಧಿ

ರಿಸರ್ವ್‌ಬ್ಯಾಂಕ್, ಮೈಸೂರುಬ್ಯಾಂಕ್ ಮತ್ತು ಮೈಸೂರು ಸರ್ಕಾರಗಳ ನಡುವೆ ಆದ ಒಪ್ಪಂದದ ಪ್ರಕಾರ ಮೈಸೂರು ಬ್ಯಾಂಕಿನ ಆಡಳಿತ ಸಮಿತಿಯಲ್ಲಿ ಇರಲು ಸರ್ಕಾರದ ಆರ್ಥಿಕ ಕಾರ್ಯದರ್ಶಿಯವರಾದ ಶ್ರೀ ಎನ್. ಮಾಧವರಾಯರವರನ್ನು ನೇಮಿಸಲಾಗಿದೆ.

ಭಾರತದಲ್ಲಿ ೩೪ ಮೆಡಿಕಲ್ ಶಾಲೆಗಳು

ಭಾರತದಲ್ಲಿ ೩೪ ವೈದ್ಯಶಿಕ್ಷಣ ಶಾಲೆಗಳಿದ್ದು ಪ್ರಪಂಚದಲ್ಲಿ ನಾಲ್ಕನೇ ಸ್ಥಾನ ಪಡೆದಿದೆ. ಅಮೆರಿಕದಲ್ಲಿ ೭೯, ರಷ್ಯಾದಲ್ಲಿ ೬೧, ಜರ್ಮನಿ ೪೬, ಬ್ರಿಟನ್ ೨೭ ಮತ್ತು ಇಟಲಿ ೨೧ ಮೆಡಿಕಲ್ ಶಾಲೆಗಳು ಇವೆಯೆಂದು ಹೇಳಲಾಗಿದೆ.

ಆದಿವಾಸಿಗಳ ಅಭ್ಯುದಯ

ದೇಶದಲ್ಲಿ ಆದಿವಾಸಿಗಳ ಅಭ್ಯುದಯಕ್ಕಾಗಿ ಕೇಂದ್ರ ಸರ್ಕಾರವು ಪ್ರತಿವರ್ಷವೂ ೨ ಕೋಟಿ ಮತ್ತು ಪ್ರಾಂತ್ಯ ಸರ್ಕಾರಗಳು ೩ ಕೋಟಿ ರೂಪಾಯಿಗಳನ್ನೂ ವೆಚ್ಚಮಾಡುತ್ತಿರುವುದಾಗಿ ತಿಳಿಯಬರುತ್ತದೆ.

ಪಾಕೀಸ್ತಾನದ ಮತೀಯ ನೀತಿ ಖಂಡನೆ

ಪಾಕೀಸ್ತಾನಕ್ಕೆ ಟರ್ಕಿಯ ಎಚ್ಚರಿಕೆ

ಪಾಕೀಸ್ತಾನದ ಇಂಧಿನ ಮತೀಯ ನೀತಿಯು ಪಾಕೀಸ್ತಾನಕ್ಕೆ ಅಲ್ಲದೆ ಭಾರತ, ಏಷ್ಯಾ ಮತ್ತು ಮಧ್ಯಪ್ರಾಚ್ಯಗಳಿಗೇ ಹಾನಿಕರವಾಗಿದೆ. ನಾವು ೫೦೦ ವರ್ಷಗಳ ಹಿಂದೆ ಮುಸ್ಲಿಂ ಮತೀಯ ರಾಜ್ಯವನ್ನು ಕಟ್ಟಲು ಪ್ರಯತ್ನಿಸಿ ವಿಫಲವಾದೆವು. ಈಗ ಆ ಕಾರ್ಯವನ್ನು ಪಾಕೀಸ್ತಾನವು ಮಾಡಲು ಹೊರಟಿರುವುದು ವಿಷಾದಕರ ಎಂದು ತುರ್ಕಿ ದೇಶದ ಪ್ರಮುಖ ನಾಯಕರು ಪಾಕೀಸ್ತಾನವು ಇತ್ತೀಚೆಗೆ ತನ್ನ ರಾಷ್ಟ್ರವು ಇಸ್ಲಾಮಿಕ್ ರಿಪಬ್ಲಿಕ್ ಆಗಬೇಕೆಂದು ತೀರ್ಮಾನಿಸಿರುವುದನ್ನು ತೀವ್ರವಾಗಿ ಖಂಡಿಸಿದ್ದಾರೆ.

ಅಲ್ಲಿಯ ಪ್ರಮುಖ ಪಕ್ಷವಾದ ರಿಪಬ್ಲಿಕ್ ಪಕ್ಷದ ಸೆಕ್ರೆಟರಿ ಜನರಲ್‌ರವರು ಈ ವಿಷಯವನ್ನು ಉಗ್ರವಾಗಿ ಟೀಕಿಸುತ್ತಾ ಜಾತೀಯ ರಾಷ್ಟ್ರವಾಗಿ ಪಾಕೀಸ್ತಾನವು ಇರಲು ಆಧುನಿಕ ಪ್ರಪಂಚದಲ್ಲಿ ಅದಕ್ಕೆ ಸ್ಥಾನವೇ ಇಲ್ಲ. ಮತೀಯ ವಿಚಾರಗಳಿಗೆ ಸಂಬಂಧಪಟ್ಟ ಪವಿತ್ರ ಕುರಾನ್ ಗ್ರಂಥವನ್ನು ರಾಜಕೀಯಕ್ಕೆ ತಂದಿರುವುದು ಅತ್ಯಂತ ಶೋಚನೀಯ ಎಂದು ತಿಳಿಸಿರುವರು. ಮತ್ತೊಬ್ಬ ನಾಯಕರು ಮಾತನಾಡುತ್ತಾ ಟರ್ಕಿಗೆ ಪಾಕೀಸ್ತಾನದಮೇಲೆ ಇದ್ದ ವಿಶ್ವಾಸವನ್ನು ಈಗಿನ ತನ್ನ ವರ್ತನೆಯಿಂದ ಪಾಕೀಸ್ತಾನವು ಕಳೆದುಕೊಳ್ಳುತ್ತಿರುವುದಾಗಿ ಹೇಳಿದ್ದಾರೆ.

ಕೇವಲ ಸ್ವಲ್ಪ ಸಂಖ್ಯೆಯಲ್ಲಿ ಹಿಂದುಗಳಿದ್ದು ೬ ಕೋಟಿ ಮುಸ್ಲಿಮರಿರುವ ಪಾಕೀಸ್ತಾನವು ಭಾರತದಲ್ಲಿ ೪ ಕೋಟಿ ಮುಸ್ಲಿಮರಿರುವರೆಂಬುದನ್ನು ಮರೆತಿರುವಂತೆ ಕಾಣುತ್ತದೆ ಎಂದು ತಿಳಿಸಿದ್ದಾರೆ.

ಹಿಂದಿಯ ದಿನ

ಹಿಂದಿಯನ್ನು ರಾಷ್ಟ್ರಭಾಷೆಯನ್ನಾಗಿ ಮಾಡಿದುದರ ಜ್ಞಾಪಕಾರ್ಥವಾಗಿ ಪ್ರತಿವರ್ಷವೂ ಸೆಪ್ಟಂಬರ್ ೧೪ ನೇ ತಾರೀಖಿನ ದಿನವನ್ನು 'ಹಿಂದಿ ದಿನ'ವನ್ನಾಗಿ ಆಚರಿಸಲು ನಿರ್ಧರಿಸಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೧—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—	೨೨—೮
ಎಳ್ಳು	೬೯—೪	೭೧—೪
ಹರಳು	೩೬—೮	—
ಹುರಳಿ	—	—
ಹೆಸರು	೩೫—೧೨	೩೬—೧೨
ಅಲಸಂದೆ	೨೭—೪	೫೬—೧೨
ಹುಣಸೇಹಣ್ಣು	೮—೧೨	೯—೧೦
ಸೀಗೆಕಾಯಿ	—	—
ಮೆಣಸಿನಕಾಯಿ	೧೭—೧೪	೩೭—೪
ಬೆಲ್ಲ	—	—
ತೆಂಗಿನಕಾಯಿ	೨೪೦—	೨೭೫

ಹಿಂದೀ ಭಾಷೆ ಕಲಿಯಲು ಒತ್ತಾಯ ಬೇಡ

ಮದ್ರಾಸ್ ಗೌರ್ನರ್‌ರವರ ಸಲಹೆ

ಹಿಂದಿಯನ್ನು ಒತ್ತಾಯಪಡಿಸಿದರೆ ದಕ್ಷಿಣ ಭಾರತದಲ್ಲಿ ಅದಕ್ಕೆ ತೀವ್ರ ಪ್ರತಿಭಟನೆಯಿದೆ. ಉತ್ತರದವರು ದಕ್ಷಿಣದವರ ಮೇಲೆ ಹಾಗೆ ಒತ್ತಾಯಪಡಿಸಲು ಹೊರಟರೆ ದಕ್ಷಿಣ ಭಾರತದಲ್ಲಿ ಹಿಂದಿ ಭಾಷೆಯ ಪ್ರಗತಿಯಾಗುವುದಿಲ್ಲ. ಆದ್ದರಿಂದ ಪ್ರೀತಿಯಿಂದ ಹಿಂದಿ ಭಾಷೆಯನ್ನು ಕಲಿಯುವಂತೆ ವ್ಯವಸ್ಥೆ ಮಾಡಬೇಕೆಂದು ಮದ್ರಾಸಿನ ಗೌರ್ನರ್ ಶ್ರೀ ಶ್ರೀಪ್ರಕಾಶರವರು ನಾಗಪುರದಲ್ಲಿ ಅಖಿಲ ಭಾರತ ರಾಷ್ಟ್ರಭಾಷಾ ಪ್ರಚಾರ ಸಮ್ಮೇಳನವನ್ನು ಉದ್ಘಾಟಿಸುತ್ತಾ ಹೇಳಿದರು.

ಭಾರತಕ್ಕೆ ಚೈನಾ ರೆಡ್‌ಕ್ರಾಸ್ ಸಹಾಯ

ಚೈನಾ ರೆಡ್‌ಕ್ರಾಸ್ ಸಂಸ್ಥೆಯು ಭಾರತದ ಪ್ರಧಾನಿಯವರ ಪರಿಹಾರ ನಿಧಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದೆ. ಈ ಹಣವನ್ನು ನಿನ್ನೆಯದಿನ ಭಾರತದಲ್ಲಿರುವ ಚೈನಾ ರಾಯಭಾರಿಯವರು ಭಾರತ ಸರ್ಕಾರಕ್ಕೆ ಕೊಟ್ಟರು.

ಪ್ರಾಥಮಿಕ ಶಾಲಾ ಉಪಾಧ್ಯಾಯರ ನೇಮಕ

ಬೊಂಬಾಯಿ ಪ್ರಾಂತ್ಯದಲ್ಲಿ ಇನ್ನು ೩ ವರ್ಷಗಳಲ್ಲಿ ೧೦೦೦೦ ಶಾಲಾ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳುವುದಾಗಿ ಹೇಳಲಾಗಿದೆ.

ಹೈಪವರ್ ಕಮೀಷನ್

ಭಾರತದ ಪ್ರಾಂತ್ಯಗಳ ಗಡಿ ಪುನರ್ವಿಮರ್ಶೆ ಬಗ್ಗೆ ನೇಮಿತವಾಗಲಿರುವ ಕೇಂದ್ರ ಹೈಪವರ್ ಕಮೀಷನ್ನಿಗೆ ಪ್ರಜಾಸೋಷಲಿಸ್ಟ್ ನಾಯಕ ಶ್ರೀ ಜಯಪ್ರಕಾಶ್ ನಾರಾಯಣ್ ಮತ್ತು ಉತ್ತರ ಪ್ರದೇಶದ ಮುಖ್ಯಮಂತ್ರಿ ಪಂಡಿತ ಗೋವಿಂದ ವಲ್ಲಭ ಪಂತ್‌ರವರನ್ನು ಸದಸ್ಯರನ್ನಾಗಿ ನೇಮಿಸಬಹುದೆಂದು ಹೇಳಲಾಗಿದೆ.

ಸಿಂಹಳಕ್ಕೆ ವಿದೇಶೀ ಗೌರ್ನರ್ ಜನರಲ್ ಏಕೆ?

ಪ್ರಧಾನಿ ಕೋಟಿಲವಾಲಾರವರ ಪ್ರಶ್ನೆ

ಕಾಮನ್ವೆಲ್ತ್ ರಾಷ್ಟ್ರಗಳಲ್ಲಿ ಒಂದಾಗಿರುವ ಸಿಂಹಳಕ್ಕೆ ವಿದೇಶೀಯರೊಬ್ಬರು ಗೌರ್ನರ್ ಜನರಲ್‌ರಾಗಿ ಯಾಕೆ ಇರಬೇಕೆಂದೂ, ಬ್ರಿಟಿಷ್ ರಾಷ್ಟ್ರಪತಾಕೆಯನ್ನೂ, ಬ್ರಿಟಿಷ್ ರಾಷ್ಟ್ರಗೀತೆಯನ್ನೂ ಸಿಂಹಳ ಸರ್ಕಾರವು ಏಕೆ ಉಪಯೋಗಿಸಬೇಕೆಂದೂ ಅಲ್ಲಿಯ ಗೌರ್ನರ್ ಜನರಲ್ ಲಾರ್ಡ್ ಸ್ಯಾಲಿಶ್‌ಬರಿಯವರನ್ನು ಸಿಂಹಳ ಪ್ರಧಾನಿ ಕೇಳಿರುವುದಾಗಿ ತಿಳಿಯಬರುತ್ತದೆ.

ಸಿಂಹಳದಲ್ಲಿ ಬ್ರಿಟಿಷ್ ಧ್ವಜ ಮತ್ತು ಬ್ರಿಟಿಷ್ ರಾಷ್ಟ್ರಗೀತೆಯನ್ನು ಉಪಯೋಗಿಸುವುದನ್ನು ಅಲ್ಲಿಯ ಸರ್ಕಾರವು ಈಗ ನಿಲ್ಲಿಸಿರುವುದಾಗಿ ಹೇಳಲಾಗಿದೆ.

ಗೌರ್ನರುಗಳ ಪಾತ್ರವೇನು?

ಭಾರತದ ರಾಜ್ಯಾಂಗ ಪ್ರಕಾರ ಈಗಿನ ಪ್ರಾಂತ್ಯ ಗೌರ್ನರುಗಳನ್ನು ಕೇಳುವವರೇ ಇಲ್ಲ. ಇಷ್ಟವಿಲ್ಲದಿದ್ದರೂ ಜನರ ಬಿನ್ನವತ್ತಳೆಗಳನ್ನು ಅವರು ಸ್ವೀಕರಿಸಬೇಕಾಗಿದೆ. ಹಿಂದಿನ ಕಾಲದಲ್ಲಿ ಬಿನ್ನವತ್ತಳೆಗಳನ್ನು ಕೊಡುವಾಗ್ಗೆ ಪೂರ್ವಭಾವಿ ತಿಳಿಸಲಾಗುತ್ತಿತ್ತು. ಅದಕ್ಕೆ ತಕ್ಕ ಉತ್ತರಗಳನ್ನೂ ತಯಾರಿಸಲಾಗುತ್ತಿತ್ತು. ಹಿಂದಿನ ಗೌರ್ನರುಗಳ ಬೇಡಿಕೆಗಳಿಗೆ ಅಧಿಕಾರವಾಣಿಯಿಂದ 'ಹೌದು''ಇಲ್ಲ' ಎಂದು ಹೇಳುತ್ತಿದ್ದರು. ಈಗಿನ ಗೌರ್ನರುಗಳು ಏನನ್ನೂ ಹೇಳುವುದಕ್ಕಾಗುವುದಿಲ್ಲ. ಈಗಿನ ರಾಜ್ಯಾಂಗ ರೀತ್ಯಾ ಗೌರ್ನರುಗಳು ಏನು ತಾನೆ ಮಾಡಿಯಾರು? ಎಂದು ಮದ್ರಾಸ್ ಗೌರ್ನರ್ ಶ್ರೀ ಶ್ರೀ ಪ್ರಕಾಶರವರು ನಾಗಪುರದಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಭಾರತದಲ್ಲಿರುವ ಪ್ರಾಂತ್ಯಗಳಲ್ಲೆಲ್ಲಾ ಅಸ್ಸಾಂ ಪ್ರಾಂತ್ಯದ ಗೌರ್ನರ್‌ಗೆ ಮಾತ್ರ ನಿರ್ದಿಷ್ಟ ಕಾರ್ಯಗಳಿವೆ. ಗಡಿ ರಕ್ಷಣಾ ವಿಷಯಗಳಲ್ಲಿ ಅವರಿಗೆ ಪೂರ್ಣಾಧಿಕಾರವಿದೆ. ಅಲ್ಲಿಯ ಮುಖ್ಯಮಂತ್ರಿಯು ಈ ವಿಷಯದಲ್ಲಿ ಅವರನ್ನು ತೊಂದರೆ ಪಡಿಸುವಂತಿಲ್ಲ ಎಂದು ತಿಳಿಸಿದರು.

● ಪಾಕೀಸ್ತಾನದಿಂದ ಜಪಾನು ೩೦೦೦೦ ಟನ್ ಅಕ್ಕಿಯನ್ನು ಕೊಳ್ಳಲು ಉಭಯ ಸರ್ಕಾರಗಳ ನಡುವೆ ಒಪ್ಪಂದಕ್ಕೆ ಕರಾಚಿಯಲ್ಲಿ ಸಹಿಯಾಗಿದೆ.

ಜನಸಂಘದ ಕಾರ್ಯದರ್ಶಿ ಮೈಸೂರಿಗೆ

ಮೈಸೂರು ೧೨

ಭಾರತೀಯಜನಸಂಘದ ಪ್ರಧಾನಕಾರ್ಯದರ್ಶಿಗಳಾದ ಶ್ರೀ ದೀನದಯಾಳ್ ಉಪಾಧ್ಯಾಯರು ಇದೇತಿಂಗಳು೨೩ನೇ ತಾ॥ನಿಂದ ಕರ್ನಾಟಕ ಪ್ರಾಂತ್ಯದಲ್ಲಿ ಪ್ರಚಾರ ಪ್ರವಾಸ ಮಾಡುವರು. ಇದೇಸಂದರ್ಭದಲ್ಲಿ ಅವರು ಮೈಸೂರಿಗೆ ಆಗಮಿಸುತ್ತಾರೆ.

ಕಳುವಿಗಾಗಿ ಪದವೀಧರನಿಗೆ ಶಿಕ್ಷೆ

ಬಸ್ಸಿನಲ್ಲಿ ಹೋಗುತ್ತಿದ್ದ ಪ್ರಯಾಣಿಕರ ಜೇಬಿನಿಂದ ೩ ರೂ. ಕಳವು ಮಾಡಿದನೆಂದು ಕಲ್ಕತ್ತಾದ ಪದವೀಧರನೊಬ್ಬನಿಗೆ ಅಲ್ಲಿನ ನ್ಯಾಯಾಧೀಶರು ೩ ತಿಂಗಳು ಕಠಿಣಶಿಕ್ಷೆ ವಿಧಿಸಿದ್ದಾರೆ. ಅಲಹಾಬಾದ್ ವಿಶ್ವವಿದ್ಯಾನಿಲಯದಲ್ಲಿ ಬಿ. ಎ. ಪದವಿ ಪಡೆದಿರುವುದಾಗಿ ಅಪಾದಿತನು ತಿಳಿಸಿ ಕೋರ್ಟಿನಲ್ಲಿ ತಾನೇ ಮೊಕದ್ದಮೆಯನ್ನು ವಾದಿಸಿದನು.

ಕೌನ್ಸಿಲ್ ಆಫ್ ಸ್ಟೇಟ್ ಸಭೆ

ದೆಹಲಿಯಲ್ಲಿ ಕೌನ್ಸಿಲ್ ಆಫ್ ಸ್ಟೇಟ್ಸ್ ಸಭೆಯ ಅಧಿವೇಶನವು ಇದೇ ಮಾಹೆ ೨೩ ನೇ ತಾರೀಖು ಪ್ರಾರಂಭವಾಗುತ್ತದೆ.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)
12--11--53 ನೇ ರಾತ್ರಿ 10 ಗಂಟೆಗೆ
ಮೈಸೂರು ಟೌನ್‌ಹಾಲಿನಲ್ಲಿ
ಸಾಹುಕಾರ
ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ರಾಜಕಮಲ್, ಮೈಸೂರು
13--11--53 ರಿಂದ ಪ್ರಾರಂಭ
ಪ್ರತಿದಿನ 3 ಆಟಗಳು
ಅವರ್ ಇಂಡಿಯಾ ಪಿಕ್ಚರ್ಸ್‌ರವರ
ಎನ್ ವೀಡು
[ತಮಿಳು]
ಪಾತ್ರ: ವಿ. ನಾಗಯ್ಯ, ಟಿ.ಎಸ್. ಬಾಲಯ್ಯ, ಟಿ. ಆರ್. ರಾಜಕುಮಾರಿ.

ಪ್ರಭಾ ★ ಅಮೋಘ ಪ್ರಾರಂಭ 14—11—53 ರಿಂದ ದಿನ 3 ಆಟಗಳು
ರಾಜಕಮಲ್‌ರವರ ದುರಾಸೆ, ನೋವು, ದ್ವೇಷ ಮತ್ತು ತ್ಯಾಗ ಇವೆಲ್ಲದರ ಕತೆ! ಶ್ರೀ ವಿ. ಶಾಂತಾರಾಂರವರ ಅಮೋಘ ಕಲಾಕೃತಿ:--
★ ಸುರಂಗ್ ★ [ಹಿಂದಿ]
ಪಾತ್ರ:— ಶೀಲಾರಮಣಿ, ಶಶಿಕಲಾ, ಉಲ್ಹಾಸ್, ಕೇಶವರಾವ್ ದಾತೆ ಮತ್ತು ವಿನೋದ್ ಕುಮಾರ್. ಸಂಗೀತ:—ಶಿವರಾಂಕೃಷ್ಣ. ದಿಗ್ದರ್ಶನ:—ವಿ. ಶಾಂತಾರಾಂ.
○ ಬೆಳಗಿನ ಪ್ರದರ್ಶನ 13—11—53 ರಿಂದ 3 ದಿನಗಳು ○
ಸುಲೋಚನ ಚಟರ್ಜಿ, ಶೇಖರ್ ಮತ್ತು ಗೋಪ್ ನಟಿಸಿರುವ "ಬಹೂರಾಣಿ"

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೭೯

೧೩-೧೧-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ನಗರದ ೫೬ ಜನರ ಮೇಲೆ ಮೊಕದ್ದಮೆ

★ ದಸರಾದಿನ ನಡೆದ ಗಲಭೆ ಮತ್ತು ಗೋಲೀಬಾರು ಪ್ರಕರಣದ ಸಂಬಂಧದಲ್ಲಿ ★

ಮೈಸೂರು ೧೩

ಕಳೆದ ತಿಂಗಳು ೮ ನೇ ತಾರೀಖು ನಗರದಲ್ಲಿ ಹರಿಜನರಿಗೂ ಮತ್ತು ಸವರ್ಣ ಹಿಂದೂಗಳಿಗೂ ಅರಮನೆ ಮುಂದೆ ಕುಸ್ತಿಯ ವಿಚಾರದಲ್ಲಿ ಭಿನ್ನಾಭಿಪ್ರಾಯ ಉಂಟಾಗಿ ಗಲಭೆ ಮತ್ತು ಗೋಲೀಬಾರು ನಡೆದ ಪ್ರಕರಣದಲ್ಲಿ ಪೊಲೀಸರು ಒಟ್ಟು ೫೬ ಜನರ ಮೇಲೆ ಮೊಕದ್ದಮೆ ಹೂಡಿ, ಅವರುಗಳ ಚಾರ್ಜ್ ಶೀಟನ್ನು ನಗರದ ನ್ಯಾಯಾಧೀಶರ ಕೋರ್ಟಿನಲ್ಲಿ ದಾಖಲ್ಮಾಡಿದ್ದಾರೆ.

ಅಕ್ಟೋಬರ್ ೮ನೇ ತಾರೀಖು ಸಂಜೆ ಗಲಭೆ, ದೊಂಬಿ ಮುಂತಾದವುಗಳಿಗೆ ಕಾರಣರೆಂದು ವೆಂಕಟಸುಬ್ಬ ಶರ್ಮ ಮತ್ತು ಇತರ ೪೩ ಮಂದಿ ಮೇಲೆ ಪ್ರಥಮ ನ್ಯಾಯಾಧೀಶರ ಕೋರ್ಟಿನಲ್ಲಿ ಐ ಪಿ ಸಿ. ೧೪೩,೧೪೮,೧೪೯,೪೨೬ ೩೦೭ ಸೆಕ್ಷನ್‌ಗಳ ಪ್ರಕಾರ ಮೊಕದ್ದಮೆ ಹೂಡಲಾಗಿದೆ.

ಅದೇ ದಿನ ಮಧ್ಯಾಹ್ನ ಸಯ್ಯಾಜಿರಾವ್ ರಸ್ತೆಯಲ್ಲಿ ಗಲಭೆ ಮತ್ತು ಹೊಡೆದಾಟ ನಡೆಸಿದರೆಂಬ ಆಪಾದನೆ ಮೇಲೆ ವೆಂಕಟಸುಬ್ಬ ಶರ್ಮ, ಚನ್ನೇಗೌಡ ಮುಂತಾದ ೧೧ ಜನರ ಮೇಲೆ ಐ.ಪಿ.ಸಿ. ೧೪೩,೧೪೯,೩೫೩,೩೨೩ ಸೆಕ್ಷನ್‌ಗಳ ಪ್ರಕಾರ ಮೇಲ್ಕಂಡ ಕೋರ್ಟಿನಲ್ಲಿ ಕೇಸು ದಾಖಲು ಮಾಡಲಾಗಿದೆ.

ಅಕ್ಟೋಬರ್ ೯ ನೇ ತಾರೀಖು ಕನ್ನೇಗೌಡನ ಕೊಪ್ಪಲಿನ ಹತ್ತಿರವಿದ್ದ ರಾಗಿಮೆದೆಗೆ ಬೆಂಕಿ ಹಚ್ಚಿದರೆಂಬ ಆಪಾದನೆ ಮೇಲೆ ಆದಿಕರ್ನಾಟಕರಪುರದ ಪಾಪ, ತಿಕ್ಕೋಜಿ ಮತ್ತು ಗಟ್ಟೊಡೀ ಎಂಬ ೩ ಜನರ ಮೇಲೆ ೪೨೬,೪೩೫,೧೪೩,೧೪೪,೧೪೭ ಮತ್ತು ೧೪೮ನೇ ಸೆಕ್ಷನ್ ಪ್ರಕಾರ ದ್ವಿತೀಯ ಮ್ಯಾಜಿಸ್ಟ್ರೇಟರ ಮುಂದೆ ಮೊಕದ್ದಮೆ ಹೂಡಲಾಗಿದೆ.

ಹರಿಜನರಿಗೆ ಸೇರಿದ್ದ ೪೦ ಆಡುಗಳನ್ನು ದೇವನೂರಿನ ಬಳಿ ಕಳವು ಮಾಡಿದರೆಂಬ ಆಪಾದನೆ ಮೇಲೆ ಮ್ಮನಹಳ್ಳಿಯ ದೇವ ಮತ್ತು ೧೦ ಮಂದಿಯ ಮೇಲೆ ಮೊಕದ್ದಮೆಯನ್ನು ಎರಡನೇ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ದಾಖಲು ಮಾಡಲಾಗಿದೆ.

ಟೆಹರಾನಿನಲ್ಲಿ ಗಲಭೆಗಳು

ಟೆಹರಾನಿನಲ್ಲಿ ಮಾಜಿ ಪ್ರಧಾನಿ ಡಾ॥ ಮುಸಾದಿಕ್‌ರವರ ವಿಚಾರಣೆ ನಡೆಯುತ್ತಿರುವುದನ್ನು ಪ್ರತಿಭಟಿಸಿ ಗಲಭೆಗಳು ಪ್ರಾರಂಭವಾಗಿವೆ. ನಿನ್ನೆಯದಿನ ನಗರದಾದ್ಯಂತ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರು ಮೆರವಣಿಗೆ, ಹರತಾಳ ಮುಂತಾದುವನ್ನು ನಡೆಸಿದರು. ಕೂಡಲೇ ಡಾ॥ ಮುಸಾದಿಕ್‌ರನ್ನು ಬಿಡುಗಡೆ ಮಾಡಬೇಕೆಂದೂ ಅವರು ಇನ್ನೂ ಅಧಿಕೃತವಾಗಿ ಪ್ರಧಾನಿಗಳೆಂದೂ ಜನರು ಘೋಷಿಸುತ್ತಾ ಅನೇಕ ಕಡೆ ಗಲಭೆಗಳನ್ನು ನಡೆಸಿದರು. ಸೈನಿಕರು ಒಂದೆಡೆ ಗುಂಡು ಹಾರಿಸಿದುದರ ಪರಿಣಾಮವಾಗಿ ಇಬ್ಬರು ಸತ್ತರು. ನೂರಾರು ಜನರ ದಸ್ತಗಿರಿಗಳಾಗಿರುವುದಾಗಿ ತಿಳಿಯಬರುತ್ತದೆ.

ಕಳೆದ ತಿಂಗಳು ಕಾಲರಾದಿಂದ ೬೩೦ ಜನರ ಮರಣ

ಸಂಸ್ಥಾನದಲ್ಲಿ ಕಳೆದ ಜನೈರಿಯಿಂದ ಅಕ್ಟೋಬರ್ ಕೊನೆಯವರೆವಿಗೆ ಒಟ್ಟು ೧೬೭೯ ಮಂದಿಗೆ ಕಾಲರಾ ತಗಲಿ ೭೦೮ ಜನರು ಮರಣಹೊಂದಿದರು. ಬಳ್ಳಾರಿಜಿಲ್ಲೆಯಲ್ಲೇ ೨೫೦ ಮಂದಿಗೆ ಕಾಲರಾ ತಗಲಿ ೯೦ ಮಂದಿ ಸತ್ತರು. ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಈ ರೋಗದ ಉಪದ್ರವ ಹೆಚ್ಚಾಗಿತ್ತು. ಕಳೆದ ತಿಂಗಳಿನಲ್ಲಿ ೬೩೦ ಮಂದಿ ಸತ್ತರು ಎಂದು ಆರೋಗ್ಯ ಶಾಖಾ ಡೈರೆಕ್ಟರ್ ಡಾ॥ ಟಿ. ಚಂದ್ರಶೇಖರಯ್ಯನವರು ತಿಳಿಸಿದ್ದಾರೆ.

ಮಲೇರಿಯಾ ನಿವಾರಣೆಗೆ ೨೬ ಲಕ್ಷ ರೂ. ಖರ್ಚು

ಮೈಸೂರು ಸಂಸ್ಥಾನದಲ್ಲಿ ಮಲೇರಿಯಾ ನಿವಾರಣೆಗಾಗಿ ಸರ್ಕಾರ ೧೮ ಲಕ್ಷ ರೂ. ಗಳನ್ನು ಒದಗಿಸುತ್ತಿತ್ತು. ಈಗಿನ ರಾಷ್ಟ್ರೀಯ ಮಲೇರಿಯಾ ಹತೋಟಿ ಯೋಜನೆ ಪ್ರಕಾರ ಸಂಸ್ಥಾನ ಸರ್ಕಾರವು ಪ್ರತಿವರ್ಷ ೧೧ ಲಕ್ಷ ರೂ. ಮತ್ತು ಕೇಂದ್ರ ಸರ್ಕಾರ ೧೫ ಲಕ್ಷ ರೂ. ಒದಗಿಸುವುದು. ಇದರಿಂದ ಸುಮಾರು ೫೦ ಲಕ್ಷಜನಕ್ಕೆ ರಕ್ಷಣೆ ಕೊಡಲಾಗುವುದು-ಎಂದು ಆರೋಗ್ಯ ಶಾಖಾ ಡೈರೆಕ್ಟರು ತಿಳಿಸಿದ್ದಾರೆ.

ಮೇಯರುಗಳ ಸಮ್ಮೇಳನ

ಭಾರತ, ಸಿಂಹಳ, ಬರ್ಮಾ ಮತ್ತು ಪಾಕೀಸ್ತಾನ ಪುರಸಭಾ ಮೇಯರುಗಳ ಸಮ್ಮೇಳನವೊಂದು ಮುಂದಿನ ಜನವರಿಯಲ್ಲಿ ಬೊಂಬಾಯಿನಲ್ಲಿ ನಡೆಯುವುದೆಂದು ತಿಳಿಯಬರುತ್ತದೆ.

ಮೇಲ್ ಗಾಡಿ ೫ ಗಂಟೆ ತಡ

ಮೈಸೂರು ೧೩

ಮೈಸೂರಿನಿಂದ ಈ ದಿನ ಬೆಳಗಿನಜಾವ ಹೊರಟ ಗೂಡ್ಸ್ ರೈಲಿನ ಎಂಜನ್ ರಾಮನಗರದ ಬಳಿ ಕಂಬಿಯ ಹೊರಗಡೆ ಹೊರಳಿದುದರಿಂದ ರೈಲ್ವೆ ಲೈನಿಗೆ ಜಖಂ ಆಯಿತೆಂದೂ, ಇದರಿಂದ ರೈಲ್ವೆ ಸಂಚಾರಕ್ಕೆ ತೊಂದರೆಯಾಗಿ, ೧೨ ಗಂಟೆಗೆ ಲೈನನ್ನು ಸರಿಪಡಿಸಲಾಯಿತೆಂದೂ ವರದಿಯಾಗಿದೆ. ಈ ಅಪಘಾತದಿಂದ ಬೆಂಗಳೂರಿನಿಂದ ಇಲ್ಲಿಗೆ ೧೧-೨೦ಕ್ಕೆ ಬರಬೇಕಾಗಿದ್ದ ಮೇಲ್ ಗಾಡಿ ೪-೩೦ ಗಂಟೆಗೆ ಬಂದಿತು.

ಮಿಾಡಿಯಂ ಅಕ್ಕಿ ಮತ್ತು ಜೋಳ ದಾಸ್ತಾನಿಲ್ಲ

ಮೈಸೂರು ೧೩

ಮಿಾಡಿಯಂ ತರಗತಿಯ ಅಕ್ಕಿಯ ದಾಸ್ತಾನು ಸಾಕಷ್ಟು ಇಲ್ಲವಾದ್ದರಿಂದ ರೇಷನ್‌ದಾರರಿಗೆ ಈ ಅಕ್ಕಿಯನ್ನು ಕೇವಲ ಶೇಕಡ ೨೫ ರಷ್ಟು ಮಾತ್ರ ಕೊಡಲಾಗುತ್ತದೆ.

ಜೋಳದ ದಾಸ್ತಾನು ಬರುವವರೆಗೆ ಬುಲೆಟ್ಸ್ ರೇಷನ್‌ನನ್ನು ಪೂರ್ತಿ ರಾಗಿ ರೂಪದಲ್ಲೇ ಕೊಡಲಾಗುತ್ತದೆ, ಎಂದು ನಗರ ರೇಷನಿಂಗ್ ಅಧಿಕಾರಿಗಳು ಪ್ರಕಟಿಸಿದ್ದಾರೆ.

ವಿಶ್ವವಿದ್ಯಾನಿಲಯದ ಫಲಿತಾಂಶ

ಮೈಸೂರು ೧೩

ಮೈಸೂರು ವಿಶ್ವವಿದ್ಯಾನಿಲಯದ ಸೆಪ್ಟಂಬರ್ ಪರೀಕ್ಷೆಯ ಫಲಿತಾಂಶಗಳು ಇದೇ ತಿಂಗಳು ೧೯ ನೇ ತಾರೀಖು ಬೆಳಿಗ್ಗೆ ೧೧ ಗಂಟೆಗೆ ಪ್ರಕಟವಾಗುತ್ತದೆ.

ಕ್ಯಾಂಪ್ ಫೈರ್

ಮೈಸೂರು ೧೩

ನಾಳೆ ಸಂಜೆ ಪುರಭವನ ಮೈದಾನದಲ್ಲಿ ಮಕ್ಕಳ ದಿನಾಚರಣೆಯು ನಡೆದ ಮೇಲೆ ನಗರ ಸ್ಕೌಟು ಸಂಸ್ಥೆಯ ಆಶ್ರಯದಲ್ಲಿ ಒಂದು 'ಕ್ಯಾಂಪ್ ಫೈರ್' ಪ್ರದರ್ಶನ ನಡೆಯುತ್ತದೆ.

ಮಕ್ಕಳಿಗೆ ಮೃಗಾಲಯಕ್ಕೆ ಉಚಿತ ಪ್ರವೇಶ

ಮೈಸೂರು ೧೩

ಪುರಸಭೆಯ ಆಶ್ರಯದಲ್ಲಿ ನಾಳೆ ನಡೆಯಲಿರುವ ಮಕ್ಕಳ ದಿನಾಚರಣೆಯ ಸಂಬಂಧದಲ್ಲಿ ನಾಳೆ ಬೆಳಿಗ್ಗೆ ೮ ರಿಂದ ೧೨ ಗಂಟೆವರೆಗೆ ಮೃಗಾಲಯಕ್ಕೆ ನಗರದ ಎಲ್ಲ ಮಕ್ಕಳಿಗೂ ಉಚಿತ ಪ್ರವೇಶವನ್ನು ಏರ್ಪಡಿಸಲಾಗಿದೆ

ಆಂಧ್ರ ಸರ್ಕಾರಕ್ಕೆ ಶಾಸನ ಸಭೆಯ ಬಹುಮತ ಬೆಂಬಲ

ಆಂಧ್ರದಲ್ಲಿಈಗಿರುವ ರಾಜಧಾನಿಯನ್ನು ಬದಲಾಯಿಸುವ, ಅಥವಾ ಅದಕ್ಕೆ ಸಂಬಂಧಪಟ್ಟ ಯಾವ ವಿಷಯವೂ ಸರ್ಕಾರದ ಪರಿಶೀಲನೆಯಲ್ಲಿಲ್ಲ. ಈಗಾಗಲೇ ಕರ್ನೂಲ್ ನಗರದ ಅಭಿವೃದ್ಧಿಗಾಗಿ ೫೦ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ ಎಂದು ಆಂಧ್ರದ ಉಪ ಮುಖ್ಯ ಮಂತ್ರಿ ಶ್ರೀ ಎನ್. ಸಂಜೀವರೆಡ್ಡಿಯವರು ತಿಳಿಸಿದ್ದಾರೆ.

ಆಂಧ್ರ ಶಾಸನ ಸಭೆಯಲ್ಲಿ ಸರ್ಕಾರಕ್ಕಿರುವ ಬೆಂಬಲದ ವಿಷಯವಾಗಿ ಅವರು ಪ್ರಸ್ತಾಪಿಸಿ, ಶಾಸನ ಸಭೆಯ ೧೪೦ ಸದಸ್ಯರಲ್ಲಿ ೯೦ ಜನರ ಬೆಂಬಲವು ತಮ್ಮ ಸರ್ಕಾರಕ್ಕೆ ಇರುವುದಾಗಿ ಹೇಳಿದ್ದಾರೆ.

ಸ್ವತ್ತಿನ ತೆರಿಗೆಬಗ್ಗೆ ಶಿಕ್ಷಣ

ಭಾರತದಲ್ಲಿ ಸ್ವತ್ತಿನತೆರಿಗೆಯನ್ನು ವಿಧಿಸಬೇಕೆಂದು ಈಚೆಗೆ ಶಾಸನವಾಗಿರುವುದರಿಂದ ಅದಕ್ಕೆಸಂಬಂಧಪಟ್ಟ ವಿಷಯಗಳನ್ನರಿತುಕೊಂಡು ಆ ವಿಷಯದಲ್ಲಿ ಪೂರ್ಣ ಶಿಕ್ಷಣವನ್ನು ಪಡೆಯಲು ಸರ್ಕಾರದ ವರಮಾನ ತೆರಿಗೆ ಶಾಖೆಯ ೬ ಜನ ಅಧಿಕಾರಿಗಳನ್ನು ಬ್ರಿಟನ್ನಿಗೆ ಕಳುಹಿಸಲಾಗುವುದೆಂದು ತಿಳಿಯಬರುತ್ತದೆ.

ಸಹಸ್ರ ಚಂದ್ರದರ್ಶನ ಶಾಂತಿ

ರಾಜಧಾನಿಯ ರಾಮಚಂದ್ರ ಬುಕ್‌ಡಿಪೋವಿನ ಮಾಲೀಕರಾದ ಶ್ರೀ ಎ. ವಿ ಹೊನ್ನಪ್ಪಶೆಟ್ಟಿಯವರ ತೀರ್ಥರೂಪರಾದ ಶ್ರೀ ಎಂ. ಆರ್. ವೆಂಕಟೇಶಶೆಟ್ಟಿಯವರಿಗೆ ಸಹಸ್ರ ಚಂದ್ರದರ್ಶನ ಶಾಂತಿಯು ಶ್ರೀ ಚಲುವರಾಯಶೆಟ್ಟಿಯವರ ಛತ್ರದಲ್ಲಿ ನಾಳೆ ಬೆಳಿಗ್ಗೆ ೧೧ ಗಂಟೆಗೆ ನಡೆಯುತ್ತದೆ.

ಪೆಪ್ಸುನ್ಯಾಯಾಲಯದ ಶ್ರೇಷ್ಠ ನ್ಯಾಯಧೀಶರು

ಶ್ರೀ ಕೇಶೋರಾಂ ಪಾಸ್ಸಿಯವರನ್ನು ರಾಷ್ಟ್ರಾಧ್ಯಕ್ಷರು ಪೆಪ್ಸುವಿನ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರನ್ನಾಗಿ ನೇಮಿಸಿದ್ದಾರೆ.

ರಾಜೀನಾಮೆ

ಮದ್ರಾಸ್ ಶ್ರೇಷ್ಠ ನ್ಯಾಯಲಯದ ನ್ಯಾಯಮೂರ್ತಿಗಳಾದ ಶ್ರೀ ರಾಘವರಾವ್‌ರವರು ಅನಾರೋಗ್ಯನಿಮಿತ್ತ ತಮ್ಮ ಹುದ್ದೆಗೆ ರಾಜೀನಾಮೆಯಿತ್ತಿದ್ದಾರೆ. ಅದನ್ನು ರಾಷ್ಟ್ರಾಧ್ಯಕ್ಷರು ಅಂಗೀಕರಿಸಿರುವರು.

ಮೈಸೂರು ಜಿಲ್ಲೆಯಲ್ಲಿ ಇಂಟರ್ ಕಾಲೇಜುಗಳು

ಖಾಸಗೀಯವರಿಂದ ತೆರೆಯಲು ಪ್ರಯತ್ನ

ಮೈಸೂರು ೧೩

ಟಿ. ನರಸೀಪುರದ ಗ್ರಾಮ ವಿದ್ಯೋದಯ ಸಂಘದ ಆಶ್ರಯದಲ್ಲಿ ರಚಿತವಾಗಿರುವ ಸಮಿತಿಯು ಇದೇ ೧೦ ನೇ ತಾರೀಖು ಮೈಸೂರು ಜಿಲ್ಲಾಬೋರ್ಡ್ ಅಧ್ಯಕ್ಷ ಶ್ರೀ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಮೈಸೂರು ಜಿಲ್ಲೆಯ ಎರಡು ಸಬ್‌ಡಿವಿಜನ್ನುಗಳಲ್ಲಿ ಒಂದೊಂದು ಇಂಟರ್‌ಮೀಡಿಯೆಟ್ ಕಾಲೇಜನ್ನು ಸ್ಥಾಪಿಸುವ ವಿಷಯವನ್ನು ಪರಿಶೀಲಿಸಿತು.

ನಂಜನಗೂಡು ಸಬ್‌ಡಿವಿಜನ್ನಿನ ನಂಜನಗೂಡು, ಟಿ. ನರಸೀಪುರ, ದೇವನೂರು, ಚಾಮರಾಜನಗರ, ಕಬ್ಬಹಳ್ಳಿ ಮತ್ತು ಸಂತೇಮರಳ್ಳಿ ಈ ಊರುಗಳಲ್ಲಿ ಒಂದರಲ್ಲಿ, ಮೈಸೂರು ಸಬ್‌ಡಿವಿಜನ್ನಿಗೆ ಸೇರಿದ ಹುಣಸೂರು, ಕೃಷ್ಣರಾಜನಗರ, ಚುಂಚನಕಟ್ಟೆ ಈ ಊರುಗಳಲ್ಲಿ ಮತ್ತೊಂದು ಇಂಟರ್ ಮೀಡಿಯೆಟ್ ಕಾಲೇಜನ್ನು ಸ್ಥಾಪಿಸುವ ವಿಷಯವನ್ನು ಚರ್ಚಿಸಲಾಯಿತು.

ಈ ಪ್ರದೇಶಗಳಲ್ಲಿ ಕಾಲೇಜನ್ನು ಸ್ಥಾಪಿಸಲಿರುವ ಸೌಕರ್ಯ ಮುಂತಾದ ವಿಷಯಗಳನ್ನು ಅಧ್ಯಕ್ಷರು ಪರಿಶೀಲಿಸಿ ವಿವರಗಳನ್ನು ಡಿಸೆಂಬರ್ ೨ ನೇ ತಾರೀಖು ನಡೆಯಲಿರುವ ಸಭೆಯ ಮುಂದೆ ತರಬೇಕೆಂದು ಅಧ್ಯಕ್ಷರನ್ನು ಕೋರುವ ನಿರ್ಣಯವನ್ನು ಅನುಮೋದಿಸಲಾಯಿತು.

ಸಿಂಹಳದಲ್ಲಿ ಬ್ರಿಟಿಷ್ ಗೌರ್ನರ್

ಸಿಂಹಳದಲ್ಲಿ ಗೌರ್ನರ್ ಜನರಲ್ ಆಗಿ ವಿದೇಶೀಯರು ಯಾಕೇ ಇರಬೇಕೆಂದು ತಾವು ಅಲ್ಲಿಯ ಗೌರ್ನರ್ ಜನರಲ್‌ರಾದ ಲಾರ್ಡ್ ಸ್ಯಾಲಿಸ್‌ಬರಿಯವರನ್ನು ಕೇಳಿಲ್ಲವೆಂದೂ ತಾವು ಅವರಿಗೆ ಬರೆದ ಸ್ನೇಹಪೂರಿತ ಪತ್ರಕ್ಕೆ ತಪ್ಪು ಕಲ್ಪನೆಯನ್ನು ಕೊಡಲಾಗಿದೆಯೆಂದೂ ಬ್ರಿಟಿಷರೇ ಸಾಧ್ಯವಾದಷ್ಟು ವರ್ಷ ಇಲ್ಲಿ ಗೌರ್ನರ್ ಜನರಲ್ ಆಗಿರಬೇಕೆಂದು ತಾವು ಪತ್ರದಲ್ಲಿ ಬರೆದಿರುವುದಾಗಿಯೂ ಸಿಂಹಳ ಪ್ರಧಾನಿಯವರು ಇತ್ತೀಚೆಗೆ ಒಂದು ಹೇಳಿಕೆಯನ್ನಿತ್ತಿದ್ದಾರೆ.

ರಾಣಿ ಎಲಿಜಬೆತ್‌ರವರು ಸಿಂಹಳಕ್ಕೆ ಭೇಟಿ ಕೊಡುವಾಗ ಮತ್ತು ಇತರ ವಿಶೇಷ ಸಂದರ್ಭಗಳಲ್ಲಿ ಸಿಂಹಳ ಧ್ವಜ ಮತ್ತು ರಾಷ್ಟ್ರಗೀತೆಯೊಡನೆ ಬ್ರಿಟಿಷ್ ಧ್ವಜ ಮತ್ತು ರಾಷ್ಟ್ರಗೀತೆಯನ್ನು ಉಪಯೋಗಿಸಲಾಗುವುದೆಂದೂ ಅವರು ಹೇಳಿದ್ದಾರೆ.

ಹರಿಜನ ದಿನ

ಬೀಹಾರ್ ಪ್ರಾಂತ್ಯದಲ್ಲಿ ನವೆಂಬರ್ ೨೯ ನೇ ತಾರೀಖಿನದಿನ ಪ್ರತಿವರ್ಷವೂ ಹರಿಜನ ದಿನವನ್ನಾಗಿ ಆಚರಿಸಲು ನಿರ್ಧರಿಸಲಾಗಿದೆ.

ಜನಸಂಖ್ಯೆ ಹೆಚ್ಚದಂತೆ ನೋಡಿಕೊಳ್ಳಬೇಕು

ಭಾರತದ ಜನಸಂಖ್ಯೆಯನ್ನು ಮಿತಗೊಳಿಸಿ, ಅದು ಹೆಚ್ಚದಂತೆ ಕಾರ್ಯಕ್ರಮ ಕೈಗೊಳ್ಳಬೇಕೆಂದೂ, ಅಪೇಕ್ಷೆಯಿಲ್ಲದ ಗರ್ಭೋತ್ಪತ್ತಿಗಳು ಆಗದಂತೆ ವ್ಯವಸ್ಥೆ ಮಾಡಬೇಕೆಂದೂ, ಅದರ ಜೊತೆಗೆ ಆಹಾರ ಧಾನ್ಯಗಳ ಉತ್ಪತ್ತಿಯನ್ನು ಹೆಚ್ಚಿಸಬೇಕೆಂದೂ, ಭಾರತದ ಜನಗಣತಿ ಕಮೀಷನರ್ ಶ್ರೀ ಆರ್. ಎ. ಗೋಪಾಲಸ್ವಾಮಿಯವರು ತಮ್ಮ ವರದಿಯಲ್ಲಿ ಸಲಹೆ ಮಾಡಿದ್ದಾರೆ.

ಕಳೆದ ೩೦ ವರ್ಷಗಳಾದಷ್ಟೆ ಪ್ರಮಾಣದಲ್ಲಿ ಮುಂದಿನ ೩೦ ವರ್ಷಗಳ ಕಾಲ ಭಾರತದ ಜನತೆಗೆ ಆಹಾರ ದೊರಕುವುದಾದರೆ ೧೯೫೧ರಲ್ಲಿ ೩೬ ಕೋಟಿ ಇರುವ ಜನಸಂಖ್ಯೆ ೧೯೬೧ರಲ್ಲಿ ೪೬ ಕೋಟಿ, ೧೯೭೧ರಲ್ಲಿ ೪೧ ಕೋಟಿ ಮತ್ತು ೧೯೮೧ರಲ್ಲಿ ೫೨ ಕೋಟಿಗೂ ಹೆಚ್ಚುವುದು. ಆದರೆ ಇಂದಿನ ಸೌಕರ್ಯಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಅಷ್ಟು ಪ್ರಮಾಣದಲ್ಲಿ ಆಹಾರ ಬೆಳೆ ದೊರಕುವುದೆಂಬ ನಿರೀಕ್ಷೆ ಇಲ್ಲ.

ಆಹಾರದ ತೀವ್ರಾಭಾವ ಸಂಭವಿಸಿ ೧೯೮೧ಕ್ಕೆ ಹಿಂದಿನ ೩೦ ವರ್ಷಗಳ ಅವಧಿಯಲ್ಲಿ ಆದಂತೆ ಕ್ಷಾಮ ಡಾಮರಗಳು ಸಂಭವಿಸಿ ಜನಸಂಖ್ಯೆಯನ್ನು ತಡೆಗಟ್ಟಲು ದಾರಿಯಾಗುವುದು. ಆದರೆ ಈ ಕ್ಷಾಮಗಳನ್ನು ನಿವಾರಿಸಲು ಆಹಾರದ ಉತ್ಪನ್ನವನ್ನು ಅಗತ್ಯ ಮಟ್ಟದಲ್ಲಿರಿಸಬೇಕಾದರೆ ಪಂಚವಾರ್ಷಿಕ ಯೋಜನೆಗಿಂತ ಹೆಚ್ಚಿನ ಪ್ರಮಾಣದಲ್ಲಿ ವ್ಯವಸಾಯ ಉತ್ಪನ್ನ ಅಗತ್ಯ. ಜನನ ಸಂಖ್ಯೆ ಮರಣ ಸಂಖ್ಯೆಗೆ ಸಮಾನವಾಗಿರುವಂತೆ ನೋಡಿಕೊಳ್ಳಬೇಕು-ಎಂದು ಅವರು ತಿಳಿಸಿದ್ದಾರೆ.

ಗುಲಾಂ ಮಹಮದ್ ಐಸೆನ್ ಹೋವರ್ ಭೇಟಿ

ಪಾಕೀಸ್ತಾನದ ಗೌರ್ನರ್ ಜನರಲ್ ಗುಲಾಂ ಮಹಮದ್‌ರವರು ನಿನ್ನೆಯದಿನ ವಾಷಿಂಗ್‌ಟನ್ನಲ್ಲಿ ಅಮೆರಿಕಾಧ್ಯಕ್ಷ ಐಸೆನ್ ಹೋವರ್‌ರವರನ್ನು ಭೇಟಿ ಮಾಡಿದ್ದರೆಂದು ತಿಳಿಯಬರುತ್ತದೆ. ಪಾಕೀಸ್ತಾನಕ್ಕೆ ಅಮೆರಿಕಾವು ಸೈನ್ಯ ನೆರವಿಗಾಗಿ ದ್ರವ್ಯ ಸಹಾಯ ಮಾಡುವ ವಿಷಯದಲ್ಲಿ ಉಭಯತ್ರರ ನಡುವೆ ಸಂಧಾನ ನಡೆಯಲು ಇದು ಪ್ರಥಮ ಘಟ್ಟವೆಂದ ಹೇಳಲಾಗುತ್ತಿದೆ.

ಕೈಗಾರಿಕಾ ಮಂಡಲಿ ರಚನೆ

ಹೈದರಾಬಾದಿನಲ್ಲಿ ಒಂದು ಕೋಟಿ-ರೂಪಾಯಿಗಳ ಬಂಡವಾಳದ ಒಂದು ಕೈಗಾರಿಕಾ ಕಾರ್ಪೊರೇಷನನ್ನು ರಚಿಸಲಾಗುವುದೆಂದು ತಿಳಿಯಬರುತ್ತದೆ.

ಜಪಾನಿ ವಿಧಾನದಲ್ಲಿ ಬತ್ತದ ಸಾಗುವಳಿ

ಹೈದರಾಬಾದಿನಲ್ಲಿ ಅತ್ಯುತ್ತಮ ಫಲ

ಹೈದರಾಬಾದ್ ಪ್ರಾಂತ್ಯದಲ್ಲಿ ಜಪಾನಿ ಪದ್ಧತಿಯನ್ನು ಅನುಸರಿಸಿ ಬತ್ತದ ಸಾಗುವಳಿ ಕಾರ್ಯವನ್ನು ಒಂದು ಲಕ್ಷ ಎಕರೆಗಳಲ್ಲಿ ನಡೆಸಲಾಗುತ್ತಿದೆ. ಇದರಿಂದ ಅತ್ಯುತ್ತಮ ಫಲಿತಾಂಶವು ಬರುವ ನಿರೀಕ್ಷೆಯಿದೆ. ಸಾಮಾನ್ಯವಾಗಿ ಆಗುವ ಬೆಳೆಗಿಂತ ೫ರಷ್ಟು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಾಗುತ್ತಿದೆ. ಇದರಿಂದ ಆ ಪ್ರಾಂತ್ಯವು ಸ್ವಯಂಪೂರ್ಣವಾಗುವುದಲ್ಲದೆ, ಇತರ ಪ್ರಾಂತ್ಯಗಳಿಗೆ ಸಹ ಅಕ್ಕಿಯನ್ನು ಒದಗಿಸಲು ಸಾಧ್ಯವಾಗುತ್ತದೆ. ಭಾರತದ ಇನ್ನಾವ ಪ್ರಾಂತ್ಯದಲ್ಲಿಯೂ ಇಲ್ಲಿ ನಡೆಯುತ್ತಿರುವಷ್ಟು ಅಧಿಕ ವಿಸ್ತೀರ್ಣದಲ್ಲಿ ಜಪಾನೀ ವಿಧಾನದಲ್ಲಿ ಬತ್ತದ ಸಾಗುವಳಿ ನಡೆಯುತ್ತಿಲ್ಲವೆಂದು ಹೇಳಲಾಗಿದೆ.

ಭಾರತ-ಪಾಕೀಸ್ತಾನ ಖೈದಿಗಳ ವಿನಿಮಯ

೧೯೪೭ ನೇ ಅಕ್ಟೋಬರ್‌ನಿಂದ ೧೯೪೯ ಜನವರಿ ನಡುವೆ ಕಾಶ್ಮೀರದಲ್ಲಿ ಆದ ಕದನದಲ್ಲಿ ಕೈಸೆರೆ ಹಿಡಿದಿದ್ದ ಖೈದಿಗಳನ್ನು ಉಭಯ ಸರ್ಕಾರಗಳು ಇದೇ ೨೦ ನೇ ತಾರೀಖು ವಿನಿಮಯ ಮಾಡಿಕೊಳ್ಳುವುದಾಗಿ ತಿಳಿಯಬರುತ್ತದೆ. ಸುಮಾರು ೧೫೦ ಯುದ್ಧ ಖೈದಿಗಳ ವಿನಿಮಯ ನಡೆಯುವುದಾಗಿ ಹೇಳಲಾಗಿದೆ. ಭಾರತ-ಪಾಕೀಸ್ತಾನ ಪ್ರಧಾನಿಗಳ ನಡುವೆ ಆದ ಒಪ್ಪಂದದ ಪರಿಣಾಮವಾಗಿ ಈ ವಿನಿಮಯ ಕಾರ್ಯ ನಡೆಯುತ್ತದೆ

ವ್ಯವಸಾಯ ಕಾಲೇಜು ಸ್ಥಾಪನೆ

ಹೈದರಾಬಾದಿನಲ್ಲಿ ಆಧುನಿಕ ರೀತಿ ಉತ್ತಮ ವ್ಯವಸಾಯ ಕಾಲೇಜೊಂದನ್ನು ಸ್ಥಾಪಿಸಲು ಅಲ್ಲಿಯ ಸರ್ಕಾರವು ನಿರ್ಧರಿಸಿ ಅದಕ್ಕಾಗಿ ೧೦ ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿದೆ.

-ಮೈಸೂರು ಪೇಟೆಧಾರಣೆ-

ತಾರೀಖು, ೧೨—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೩—೧೨	೨೨ —
ಎಳ್ಳು	೫೪—೨	೬೭—೧೪
ಹರಳು	೩೩—೧೪	೩೨—೨
ಹುರಳಿ	೩೬—೮	—
ಹೆಸರು	೩೩—೧೪	೩೭—
ಅಲಸಂದೆ	೩೭—	೫೫—೧೦
ಮೆಣಸಿನಕಾಯಿ	೧೬—	೩೬—೧೪
ಹುಣಸೇಹಣ್ಣು	೭ ೧	೧೦—೩
ಸೀಗೆಕಾಯಿ	೫—	೬—೧೨
ಬೆಲ್ಲ	—	—
ತೆಂಗಿನಕಾಯಿ	—	

ಪಾಕೀಸ್ತಾನದಲ್ಲಿ ಮುಸ್ಲಿಂ ಅಲ್ಲದವರು ಗೌರ್ನರ್ ಆಗಬಹುದು

ಪಾಕೀಸ್ತಾನದಲ್ಲಿ ಪ್ರಾಂತ್ಯದ ಗೌರ್ನರ್‌ಗಳಾಗಿ ಮುಸ್ಲಿಮೇತರರು ಇರಬಹುದೆಂಬ ರಾಜ್ಯಾಂಗ ತಿದ್ದುಪಡಿಯನ್ನು ಅಲ್ಲಿಯ ರಾಜ್ಯಾಂಗ ಸಭೆಯು ಅನುಮೋದಿಸಿರುವುದಾಗಿ ತಿಳಿಯಬರುತ್ತದೆ.

ಆದರೆ ರಾಷ್ಟ್ರದ ಅಧಿಪತಿಯು ಮಾತ್ರ ಮುಸ್ಲಿಮರೇ ಆಗಿರಬೇಕು

ಪ್ರಾಂತ್ಯಗಳಲ್ಲಿ ಮುಸ್ಲಿಂ ಮತ್ತು ಮುಸ್ಲಿಂಮೇತರರು ಸ್ವೀಕರಿಸಬೇಕಾದ ಬೇರೆ ಬೇರೆ ರೀತಿಯ ಪ್ರಮಾಣ ವಚನಗಳನ್ನು ಸಹ ನಿರ್ಧರಿಸಲಾಗಿದೆ.

ಈಜಿಪ್ಟ್-ಭಾರತ ವ್ಯಾಪಾರ

ಈಜಿಪ್ಟ್ ಮತ್ತು ಸಿಂಹಳಗಳ ನಡುವೆ ವ್ಯಾಪಾರ ಒಪ್ಪಂದ ವಿಷಯದಲ್ಲಿ ಒಂದು ಈಜಿಪ್ಟ್ ನಿಯೋಗವು ಸಿಂಹಳಕ್ಕೆ ಹೋಗುವ ದಾರಿಯಲ್ಲಿ ಬೊಂಬಾಯಿಗೆ ಆಗಮಿಸಿದೆ. ಈ ನಿಯೋಗದ ನಾಯಕರು ಅಲ್ಲಿ ಮಾತನಾಡುತ್ತಾ ಭಾರತದೊಡನೆ ಈಜಿಪ್ಟ್ ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳುವ ವಿಷಯದಲ್ಲಿ ಮತ್ತೊಂದು ನಿಯೋಗವು ಮುಂದಿನ ತಿಂಗಳು ಭಾರತಕ್ಕೆ ಬರುವುದಾಗಿ ತಿಳಿಸಿದ್ದಾರೆ.

ರಣಜಿತ್
12—11—53 ರಿಂದ 2ನೇ ವಾರ
ನಾದಿರಾ, ಅಶೋಕ್‌ಕುಮಾರ್ ನಟಿಸಿರುವ
★ ನಗ್ಮ ★
(ಹಿಂದಿ)

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)
13--11--53 ನೇ ರಾತ್ರಿ 10 ಗಂಟೆಗೆ
ಮೈಸೂರು ಟೌನ್‌ಹಾಲಿನಲ್ಲಿ
ಸಾಹುಕಾರ
ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೭೦

೧೪-೧೧-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತದಾದ್ಯಂತ ನೆಹರೂ ವರ್ಧಂತ್ಯುತ್ಸವ

ಮೈಸೂರು ೧೪

ಪ್ರಧಾನಿ ನೆಹರೂರವರ ೬೪ ನೇ ವರ್ಧಂತಿ ಸಂಬಂಧದಲ್ಲಿ ಈದಿನ ಬೆಳಿಗ್ಗೆ ರಾಜಧಾನಿಯ ಸುಬ್ಬರಾಯನ ಕೆರೆ ಮೈದಾನದಲ್ಲಿ ಭಾರತ್ ಸೇವಾದಳದವರು ಧ್ವಜಾರೋಹಣ ಸಮಾರಂಭವನ್ನು ಶ್ರೀ ಪಿ. ಗೋಪಾಲಕೃಷ್ಣಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು.

ದೆಹಲಿಯಲ್ಲಿ ಉತ್ಸವವು ಅತಿ ವಿಜೃಂಭಣೆಯಿಂದ ನಡೆಯಿತು. ಸುಮಾರು ೫೦ ಸಾವಿರ ಮಕ್ಕಳು ರಾಷ್ಟ್ರೀಯ ಸ್ಟೇಡಿಯಂನಲ್ಲಿ ನಡೆದ ಸಮಾರಂಭದಲ್ಲಿ ಶ್ರೀ ನೆಹ್ರೂರವರನ್ನು ಸ್ವಾಗತಿಸಿ, ಶುಭಾಶಯವನ್ನು ಕೋರಿದರು. ಸುಮಾರು ೩ ಸಾವಿರ ಮಕ್ಕಳು ಪೆರೇಡ್ ನಡೆಸಿ ಗೌರವ ರಕ್ಷೆ ಸಲ್ಲಿಸಿದರು.

ಮಕ್ಕಳ ವ್ಯಾಯಾಮಪ್ರದರ್ಶನ, ವಿವಿಧ ಸ್ಪರ್ಧೆಗಳೂ ನಡೆದುವು. ನೆಹರೂರವರು ಮಕ್ಕಳೊಡನೆ ೨ ಗಂಟೆಗಳಕಾಲ ಆನಂದದಿಂದ ಕಳೆದರು. ಭಾರತ ಮತ್ತು ವಿಶ್ವದ ಇತರ ಪ್ರದೇಶಗಳಲ್ಲೂ ಅವರ ಜನ್ಮದಿನವನ್ನು ಆಚರಿಸಲಾಯಿತು.

ತಿರುವಾಂಕೂರಿನಲ್ಲಿ ಕಾಂಗ್ರೆಸ್ ಪ್ರಚಾರ

ಈ ಕಾರ್ಯಕ್ಕೆ ಬೊಂಬಾಯಿನ ಎಸ್. ಕೆ. ಪಾಟೀಲ್ ನಾಯಕತ್ವ

ತಿರುವಾಂಕೂರ್-ಕೊಚ್ಚಿಯಲ್ಲಿ ಸದ್ಯದಲ್ಲಿಯೇ ನಡೆಯಲಿರುವ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ ಸಂಸ್ಥೆಯ ಪರವಾಗಿ ಪ್ರಚಾರ ಕಾರ್ಯಗಳನ್ನು ನಡೆಸುವ ಪೂರ್ಣ ಜವಾಬ್ದಾರಿಯನ್ನು ಬೊಂಬಾಯಿನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲರು ವಹಿಸಿಕೊಳ್ಳಬೇಕೆಂದು ತಿರುವಾಂಕೂರ್-ಕೊಚ್ಚಿಯ ಪ್ರದೇಶ ಕಾಂಗ್ರೆಸ್ ಸಮಿತಿ ಮನವಿ ಮಾಡಿದೆ.

ಈ ವಿಷಯದಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರೊಡನೆ ಮಾತುಕತೆ ನಡೆಸಲು ಶ್ರೀ ಎಸ್. ಕೆ. ಪಾಟೀಲ್‌ರವರು ಬೊಂಬಾಯಿನಿಂದ ಸದ್ಯದಲ್ಲೇ ದೆಹಲಿಗೆ ತೆರಳಲಿರುವರೆಂದು ತಿಳಿಯಬರುತ್ತದೆ.

ಗ್ರಾಮಕೈಗಾರಿಕೆ ಯೋಜನೆ

ಬೆಂಗಳೂರು, ನ. ೧೪

ಗ್ರಾಮಕೈಗಾರಿಕಾ ಯೋಜನೆಯನ್ನು ಸಂಸ್ಥಾನದಾದ್ಯಂತ ಜಾರಿಗೆ ತರಲು ಒಬ್ಬ ಪ್ರತ್ಯೇಕ ಕಮೀಷನರನ್ನು ನೇಮಿಸಲಾಗುವುದೆಂದು ತಿಳಿಯಬರುತ್ತದೆ.

ರಾಸುಗಳ ಅಭಿವೃದ್ಧಿ ಅತ್ಯಗತ್ಯ

ಗೋಸಂವರ್ಧನ ಸಪ್ತಾಹದಲ್ಲಿ ಒತ್ತಾಯ

ಮೈಸೂರು ೧೪

ರಾಜಧಾನಿಯಲ್ಲಿ ಪಶುಪಾಲನೆ ಇಲಾಖೆಯ ಆಶ್ರಯದಲ್ಲಿ ನಡೆಯುತ್ತಿದ್ದ ಗೋ ಸಂವರ್ಧನ ವಾರ ದಿನಾಚರಣೆಯ ಸಪ್ತಾಹವು ನಿನ್ನೆಗೆ ಮುಕ್ತಾಯವಾಯಿತು. ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಗೋ ಪ್ರದರ್ಶನದಲ್ಲಿನ ಉತ್ತಮ ರಾಸುಗಳಿಗೆ ಬಹುಮಾನವನ್ನು ನಿನ್ನೆ ಸಂಜೆ ಪಶುವೈದ್ಯಶಾಲೆಯ ಆವರಣದಲ್ಲಿ ವಿನಿಯೋಗಿಸಿದರು.

ಪಶುವೈದ್ಯಶಾಲೆಯ ಡಾ|| ಹೆಚ್. ವಿ. ಬಿ. ಅಯ್ಯಂಗಾರ್ಯರು ಸ್ವಾಗತ ಬಯಸಿ, ಸಂಸ್ಥಾನಾದ್ಯಂತ ಗೋ ಸಂಪತ್ತನ್ನು ಅಭಿವೃದ್ಧಿಪಡಿಸಲು ಕೈಗೊಂಡಿರುವ ಕಾರ್ಯವನ್ನು ವಿವರಿಸಿದರು. ಪಶುವೈದ್ಯ ಶಾಖೆಯ ಡೈರೆಕ್ಟರ್ ಡಾ|| ನಾರಾಯಣಸ್ವಾಮಿ ನಾಯುಡುರವರಿಂದ ಬಂದ ಸಂದೇಶವನ್ನು ಓದಿದರು.

ಅನಂತರ ಅಸಿಸ್ಟೆಂಟ್ ಡೈರೆಕ್ಟರ್ ಡಾ|| ಜಿ. ನಾರಾಯಣಮೂರ್ತಿಯವರು ಭಾಷಣ ಮಾಡಿ, ದೇಶದಲ್ಲಿ ರಾಸುಗಳ ಅಭಿವೃದ್ಧಿಯ ಅತ್ಯಗತ್ಯವನ್ನು ತಿಳಿಸಿದರು. ಸಂಸ್ಥಾನದಲ್ಲಿರುವ ೧೮ ಸಾವಿರ ಗ್ರಾಮಗಳಿಗೂ ಒಂದೊಂದು ಬೀಜದ ಹೋರಿಯನ್ನು ಕೊಡಲು ಸಾಧ್ಯವಿಲ್ಲ. ಆದ್ದರಿಂದ ಇತ್ತೀಚೆಗೆ ವೈಜ್ಞಾನಿಕರು ಕಂಡು ಹಿಡಿದಿರುವ ಕೃತಕ ಗರ್ಭೋತ್ಪತ್ತಿ ಸೀರಂನನ್ನು ಪ್ರಯೋಗಿಸುವುದರಿಂದ ಉತ್ತಮ ರಾಸುಗಳು ಹುಟ್ಟುವುದೆಂದು, ಅವನ್ನು ಗ್ರಾಮದವರು ಹೆಚ್ಚಾಗಿ ತಮ್ಮ ರಾಸುಗಳಿಗೆ ಉಪಯೋಗಿಸಬೇಕೆಂದೂ ಕೋರಿದರು. ದೇಶದಲ್ಲಿ ಗೋ ಸಂಪತ್ತನ್ನು ಹೆಚ್ಚಿಸುವುದಲ್ಲದೆ, ಅವುಗಳ ರಕ್ಷಣೆ ಬಗ್ಗೆ ಸಾರ್ವಜನಿಕರು ಹೆಚ್ಚು ಆಸಕ್ತಿ ವಹಿಸಬೇಕೆಂದೂ ತಿಳಿಸಿದರು.

ಅನಂತರ ಅಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಸುಮಾರು ೫೦ ಬಹುಮಾನಗಳನ್ನು ವಿನಿಯೋಗಿಸಿ, ದೇಶದ ಗೋ ಸಂಪತ್ತನ್ನು ಹೆಚ್ಚಿಸಿ ಅವನ್ನು ಕಾಪಾಡುವುದು ಪ್ರತಿಯೊಬ್ಬ ಪ್ರಜೆಯ ಪ್ರಥಮ ಕರ್ತವ್ಯವೆಂದು ತಿಳಿಸಿದರು.

ಅಚ್ಚರಿ ಕನ್ಯೆ ಗುಟ್ಟು ರಟ್ಟಾಯಿತು

ಕೊಡಗಿನ ಧನಲಕ್ಷ್ಮಿಯು ನಿರಾಹಾರಿ ಅಲ್ಲ

ಆಹಾರ ಎಲ್ಲರಂತೆ ಸ್ವೀಕರಿಸುತ್ತಿದ್ದಾಳೆ—ವೈದ್ಯರ ವರದಿ

ಬೆಂಗಳೂರು ೧೪

ಕಳೆದ ೧೬ ತಿಂಗಳುಗಳಿಂದಲೂ ಆಹಾರವನ್ನೂ ಪಾನೀಯವನ್ನೂ ಸೇವಿಸಿಲ್ಲವೆಂದು 'ಅಚ್ಚರಿ ಕನ್ಯೆ' ಎಂದು ಹೆಸರು ಗಳಿಸಿದ್ದ ಕೊಡಗಿನ ಧನಲಕ್ಷ್ಮಿಯಲ್ಲಿ ಯಾವ ರೀತಿಯ ಅಚ್ಚರಿಯೂ ಇಲ್ಲ. ಅವಳು ಎಲ್ಲರಂತೆಯೇ ಆಹಾರವನ್ನು ಸ್ವೀಕರಿಸುತ್ತಾಳೆ ಬರೀ ಕೆಲವು ಸ್ವಾರ್ಥಿಗಳು ಅವಳು ಆಹಾರವನ್ನು ಸ್ವೀಕರಿಸದೆ ಜೀವಂತಳಾಗಿದ್ದಾಳೆಂದು ಪ್ರಚಾರ ನಡೆಸುತ್ತಾರೆ ಎಂದು ಸಂಸ್ಥಾನದ ವೈದ್ಯ ಶಾಖೆಯ ಮುಖ್ಯಾಧಿಕಾರಿಗಳಾದ ಡಾ|| ರಾಮಲಿಂಗರೆಡ್ಡಿಯವರು ನಿನ್ನೆ ನಡೆಸಿದ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಈ ವಿಷಯದಲ್ಲಿ ಸೂಕ್ತ ಪರೀಕ್ಷೆಯನ್ನು ನಡೆಸಲು ಕೇಂದ್ರಸರ್ಕಾರವು ಮಾಡಿದ್ದ ವ್ಯವಸ್ಥೆಯ ಮೇರೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಧನಲಕ್ಷ್ಮಿಯ ಪರೀಕ್ಷೆಯು ೩೪ ದಿನಗಳು ನಡೆಸಿದನಂತರ ವೈದ್ಯರು ಈ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕೊಡಗಿನಿಂದ ಈಕೆಯು ವಿಕ್ಟೋರಿಯಾ ಆಸ್ಪತ್ರೆಗೆ ಬಂದೊಡನೆಯೇ ಆಕೆಯನ್ನು ಯನ್ನು ವಿಶೇಷ ವಾರ್ಡಿನಲ್ಲಿಡಲಾಯಿತು ಆಕೆಗೆ ಯಾವರೀತಿಯಾದ ಆಹಾರ ಪಾನಿಯವನ್ನು ಕೊಡದಂತೆಯೂ ಆಕೆಯನ್ನು ಯಾರೂ ಭೇಟಿಮಾಡದಂತೆಯೂ ಕಟ್ಟಾಜ್ಞೆ ಮಾಡಲಾಗಿತ್ತು. ಆ ವಾರ್ಡಿನಲ್ಲಿ ಕೇವಲ ಸ್ವಲ್ಪ ನೀರನ್ನು ಮಾತ್ರ ಇಡಲಾಗಿತ್ತು. ಆಕೆಯು ೩ ದಿನಗಳು ಆಹಾರ ಪಾನೀಯವನ್ನು ತೆಗೆದುಕೊಳ್ಳಲಿಲ್ಲ. ಅವಳ ತೂಕವು ದಿನೇದಿನೇ ೨-೩ ಪೌಂಡುಗಳಷ್ಟು ಕಡಮೆಯಾಗುತ್ತಾ ಬಂದಿತು ೩ನೇ ದಿನ ಅವಳ ಹಸಿವು ತಡೆಯಲಾರದೆ ೭-೮ ಔನ್ಸ್ ನೀರನ್ನು ಕುಡಿದಳು ಅನಂತರ ಅವಳ ಪ್ರಾರ್ಥನೆಮೇಲೆ ಕಾಫಿ ಮತ್ತು ಆಹಾರವನ್ನು ಕೊಡಲಾಯಿತು. ಅಂದಿನಿಂದ ಇಲ್ಲಿಯವರೆಗೆ ಎಲ್ಲರಂತೆ ಆಹಾರವನ್ನು ತೆಗೆದುಕೊಳ್ಳುತ್ತಿದ್ದಾಳೆ ಅದನ್ನು ಜೀರ್ಣಿಸಿಕೊಳ್ಳುತ್ತಿದ್ದಾಳೆ. ಆಕೆಯ ತೂಕ ಮೊದಲಿನಂತೆಯೇ ಆಗಿದೆ. ಅವಳು ಹಿಂದೆ ಯಾವುದೊ ರಹಸ್ಯಸ್ಥಳದಲ್ಲಿ ಆಹಾರವನ್ನು ತೆಗೆದುಕೊಳ್ಳುತ್ತಲಿದ್ದಳೆಂದು ಕಾಣುತ್ತದೆ. ಸದ್ಯದಲ್ಲಿಯೇ ಆಕೆಯನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗುತ್ತದೆ-ಎಂದು ಡಾ|| ರಾಮಲಿಂಗರೆಡ್ಡಿಯವರು ಪತ್ರಿಕಾಗೋಷ್ಠಿಯಲ್ಲಿ ವಿವರಣೆಯನ್ನಿತ್ತರು.

ಧನಲಕ್ಷ್ಮಿಯ ಮಲತಾಯಿ ಬೇರೆ ವಾಸಿಸುತ್ತಿದ್ದುದರಿಂದ ಎಲ್ಲ ಮನೆಗೆಲಸಗಳನ್ನು ತಾನೇಮಾಡಿಕೊಂಡು ತನ್ನ ತಂದೆ ೫ ಮಕ್ಕಳನ್ನು ನೋಡಿಕೊಳ್ಳುತ್ತಿದ್ದು ತಾನು ಯಾವ ಆಹಾರವನ್ನಾಗಲೀ ತಿಂಡಿಯನ್ನಾಗಲೀ ತೆಗೆದುಕೊಳ್ಳುತ್ತಿರಲಿಲ್ಲವೆಂದು ಆಕೆಯು ತನ್ನ ತಂದೆಗೆ ತಿಳಿಸಿದ್ದುದನ್ನು ಅವರು ನಂಬಿದ್ದರೆಂದು ಊಹಿಸಲಾಗಿದೆ.

ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿ

ಬೆಂಗಳೂರು ೧೪

ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲು, ಮಲೆನಾಡು ಪ್ರದೇಶಗಳಲ್ಲಿ ಬಂಡವಾಳದ ಮೇಲೆ ಶೇಕಡ ಐದರಷ್ಟು ಆದಾಯವಿರಬೇಕೆಂದು ಸರ್ಕಾರ ನಿಗದಿಯಾಗಿದೆ.

ಕಾಂಗ್ರೆಸ್ ಅಧಿವೇಶನ

ಬರುವ ಜನವರಿಯಲ್ಲಿ ಕಲ್ಕತ್ತೆಯ ಬಳಿ ಕಲ್ಯಾಣ ನಗರದಲ್ಲಿ ನಡೆಯುವ ೫೯ ನೇ ಕಾಂಗ್ರೆಸ್ ಅಧಿವೇಶನಕ್ಕೆ ಬರುವವರ ಉಪಯೋಗಕ್ಕಾಗಿ ೨೦೦ ಸಂಸಾರಗಳ ವಸತಿ ಗೃಹಗಳನ್ನು ಏರ್ಪಡಿಸಲಾಗಿದೆ. ಪ್ರತಿಯೊಂದು ಮನೆಗೂ ೧೨೫ ರೂ. ಬಾಡಿಗೆ. ಅಪೇಕ್ಷಿಸುವವರ ಕೂಡಲೇ ಹಣವನ್ನು ಸ್ವಾಗತ ಸಮಿತಿ ಕಛೇರಿ, ಕಾಂಗ್ರೆಸ್ ಭವನ, ಚೌರಂಘಿ ರಸ್ತೆ, ಕಲ್ಕತ್ತ-೨೦ ರವರಿಗೆ ಕಳುಹಿಸಬೇಕೆಂದು ತಿಳಿಸಲಾಗಿದೆ.

ಬೊಂಬಾಯಿನಲ್ಲಿ ನಿರುದ್ಯೋಗ ಪರಿಹಾರ ಯೋಜನೆ

ಬೊಂಬಾಯಿ ನಗರದಲ್ಲಿ ನಿರುದ್ಯೋಗ ಪರಿಹಾರಕ್ಕಾಗಿ ೩ ಕೋಟಿ ರೂ. ಯೋಜನೆಯೊಂದನ್ನು ಅಲ್ಲಿನ ಕಾರ್ಪೊರೇಷನ್ ತಯಾರಿಸಿದೆ. ಅದಕ್ಕೆ ಬೊಂಬಾಯಿ ಮತ್ತು ಕೇಂದ್ರ ಸರ್ಕಾರಗಳ ಸಹಕಾರ ದೊರೆಯುವುದೆಂದು ನಿರೀಕ್ಷಿಸಲಾಗಿದೆ. ನಗರದಲ್ಲಿರುವ ೫೦ ಸಾವಿರ ನಿರುದ್ಯೋಗಿಗಳಿಗೆ ಕೆಲಸ ಒದಗಿಸಲು ಗೃಹನಿರ್ಮಾಣ, ತಗ್ಗಿನ ಪ್ರದೇಶಗಳನ್ನು ಮುಚ್ಚುವುದು, ಗುಡ್ಡಗಳನ್ನು ತೆಗೆದುಹಾಕುವುದು, ಗಲೀಜು ತೆಗೆಯುವುದು ಮುಂತಾದ ಕಾರ್ಯಕ್ರಮಗಳು ಈ ಯೋಜನೆಯಲ್ಲಿ ಅಡಕವಾಗಿವೆ.

● ಕಳೆದ ವರ್ಷ ಭಾರತದಲ್ಲಿ ಕಾಲರಾದಿಂದ ೨ ಲಕ್ಷ, ರಕ್ತಭೇದಿಯಿಂದ ೨,೨೦,೦೦೦, ಟೈಫಾಯಿಡ್ ಮತ್ತು ಇತರ ಖಾಯಿಲೆಯಿಂದ ೩೩ ಲಕ್ಷ ಜನರು ಸತ್ತಿರುವರೆಂದು ಪ್ರಪಂಚಸಂಸ್ಥೆಯ ಆರೋಗ್ಯ ವರದಿಯಿಂದ ವ್ಯಕ್ತಪಟ್ಟಿದೆ.

ರೈಲು ಗಾಡಿಮೇಲೆ ವಿದ್ಯಾರ್ಥಿಗಳ ದೌರ್ಜನ್ಯ

ಅಲಹಾಬಾದಿಗೆ ೬೫ ಮೈಲಿ ದೂರದಲ್ಲಿರುವ ಮಲ್ವಾನ್ ರೈಲ್ವೆ ನಿಲ್ದಾಣದಲ್ಲಿ ವಿದ್ಯಾರ್ಥಿಗಳ ಗುಂಪೊಂದು ಅಲ್ಲಿನ ರೈಲು ಗಾಡಿಯೊಂದನ್ನು ನಿಲ್ಲಿಸಿ ಸ್ಟೇರ್ಷ ಮತ್ತು ರೈಲಿನ ಕಿಟಕಿ ಗಾಜುಗಳನ್ನೆಲ್ಲಾ ಒಡೆದು ಕಲ್ಲುಗಳನ್ನು ಎಸೆದು ಗಲಭೆ ನಡೆಸಿದರೆಂದೂ, ಇವರಿಂದ ಅನೇಕರಿಗೆ ಗಾಯಗಳಾದುವೆಂದೂ ವರದಿಯಾಗಿದೆ.

ಗ್ರಾಮ ಶಾಲೆಗಳಿಗೆ ಉಪಾಧ್ಯಾಯರ ಕಡ್ಡಾಯ ನೇಮಕವಿಲ್ಲ

ಗ್ರಾಮಾಂತರ ಪ್ರದೇಶಗಳ ಶಾಲೆಗಳಲ್ಲಿ ಉಪಾಧ್ಯಾಯರಾಗಿ ಕೆಲಸ ಮಾಡಲು ಬಲವಂತವಾಗಿ ಅವರುಗಳನ್ನು ನೇಮಿಸಿಕೊಳ್ಳಬೇಕೆಂಬ ಹೈದರಾಬಾದ್ ಸರ್ಕಾರ ಮತ್ತು ಇತರ ಕೆಲವು ಸಂಸ್ಥೆಗಳ ಸಲಹೆಯನ್ನು ಕೇಂದ್ರಸರ್ಕಾರದ ವಿದ್ಯಾ ಸಲಹಾಬೋರ್ಡಿನವರು ತಿರಸ್ಕರಿಸಿದ್ದಾರೆ.

ರಣಜಿತ್

12—11—53 ರಿಂದ 2 ನೇ ವಾರ

ನಾದಿರಾ, ಅಶೋಕ್‌ಕುಮಾರ್ ನಟಿಸಿರುವ

★ ನಗ್ಮ ★

(ಹಿಂದಿ)

ಪ್ರಕಾಶಕರು ಮತ್ತು ಮುದ್ರಕರು

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್, ಮೈಸೂರು.

ಮೈಸೂರಿಗೆ ಶ್ರೀ ಅಹೋಬಿಲ ಮಠದ ಸ್ವಾಮಿಗಳ ಭೇಟಿ

ಮೈಸೂರು ೧೪

ಶ್ರೀ ಅಹೋಬಿಲ ಮಠದ ಸ್ವಾಮಿಗಳು ಅಖಿಲ ಭಾರತ ಸಂಚಾರವನ್ನು ಪೂರೈಸಿಕೊಂಡು ಇದೇ ೨೨ನೇ ತಾರೀಖು ಮೈಸೂರು ನಗರಕ್ಕೆ ಆಗಮಿಸಲಿರುವರು ಶ್ರೀಗಳವರಿಗೆ ಸೂಕ್ತ ಸ್ವಾಗತ ನೀಡಲು ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ ಅಧ್ಯಕ್ಷ ಮತ್ತು ಶ್ರೀ ಎಸ್. ರಂಗಾಚಾರ್ ಕಾರ್ಯದರ್ಶಿಗಳಾಗಿರುವ ಶ್ರೀ ಮಠದ ಶಿಷ್ಯರ ಮತ್ತು ಪುರ ಜನರ ಒಂದು ಸ್ವಾಗತ ಸಮಿತಿಯನ್ನು ರಚಿಸಲಾಗಿದೆ. ಸ್ವಾಗತ ಸಮಾರಂಭಕ್ಕೆ ಪುರಜನರೆಲ್ಲರೂ ಸಹಕರಿಸಿ, ಉದಾರವಾಗಿ ಧನ ಸಹಾಯ ಮಾಡಬೇಕೆಂದು ಸ್ವಾಗತ ಸಮಿತಿಯವರು ಕೋರುತ್ತಾರೆ.

ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರ ಆಫೀಸ್

ಟೆಂಡರ್ ನೋಟಿಫಿಕೇಷನ್

1. ಈ ಕೆಳಗೆ ನಮೂದಿಸಿರುವ ಕೆಲಸಗಳಿಗಾಗಿ ಮೊಹರಾದ ಟೆಂಡರುಗಳನ್ನು ಮೈಸೂರು ಜಿಲ್ಲಾಬೋರ್ಡ್ ಅಧ್ಯಕ್ಷರವರ ಕಛೇರಿಯಲ್ಲಿ ಇದೇ 19—11—1953 ನೇ ಮಧ್ಯಾಹ್ನ ನಾಲ್ಕು ಘಂಟೆ ವರೆವಿಗೆ ಸ್ವೀಕರಿಸಲಾಗುವುದು.

2. ಈ ಕೆಳಗೆ ನಮೂದಿಸಿರುವ ಕೆಲಸಗಳು 1954ನೇ ಮಾರ್ಚಿಯೊಳಗೆ ಪೂರೈಸಬೇಕು.

3. ಟೆಂಡರುಗಳನ್ನು ಈಗ ಮಂಜೂರಾಗಿರುವ ಎಸ್ಟಿಮೇಟಿಗೆ ಹೆಚ್ಚಾಗಿ ಅಥವಾ ಕಡಮೆಯಾಗಿ ಶೇಕಡವಾರು ಆಧಾರದ ಮೇಲೆ ಕೊಡಬೇಕು.

4. ಈಗ ಎಸ್ಟಿಮೇಟಿನಲ್ಲಿ ತಿಳಿಯಪಡಿಸದ ಐಟಮ್‌ಗಳಿಗೆ ಈಗ ಜಾರಿಯಲ್ಲಿರುವ ಮಂಜೂರಾದ ಷೆಡ್ಯೂಲ್ ದರಗಳನ್ನು ಕೊಡಲಾಗುವುದು ಅಥವಾ ಆ ಕೆಲಸ ನಡೆಯುವಾಗ ಲೆಖ್ಖಾಚಾರ ಹಾಕಿ (Data) ಆಧಾರದ ಮೇಲೆ ನಿಷ್ಕರ್ಷಿಸಲಾಗುವ ದರ ಕೊಡಲಾಗುವುದು.

5. ಪ್ರತಿ ಕೆಲಸಕ್ಕೂ ಅಪೇಕ್ಷಿಸಿರುವ ಮುಂಗಡ ಹಣವನ್ನು ಟ್ರೆಜರಿಯಲ್ಲಿ ಕಟ್ಟಿ ಆ ಚಲನ್ನಿನೊಂದಿಗೆ ಪ್ರತಿಯೊಂದು ಟೆಂಡರನ್ನು ಕೊಡಬೇಕು.

6. ಕೆಲಸದ ಬಗ್ಗೆ ಒಪ್ಪಂದ ಆದ ತಾರೀಖುಲಾಗಾಯ್ತು ಕೆಲಸಕಾರ್ಯಗಳ ಬಗ್ಗೆ ಪ್ರೋಗ್ರೆಸ್ ತೋರಿಸಬೇಕು. ಹಾಗಿಲ್ಲದ ಪಕ್ಷದಲ್ಲಿ ಮುಂಗಡ ಹಣವನ್ನು ಪರ್‌ಫೀಟ್ ಮಾಡಿಕೊಳ್ಳಲಾಗುವುದು. ಮುನ್ನೆಚ್ಚರಿಕೆ ಕೊಡದೆ ಕಂಟ್ರಾಕ್ಟನ್ನು ವಜಾಮಾಡಲಾಗುವುದು ಅಲ್ಲದೆ ಟೆಂಡರುದಾರನ ಜವಾಬ್ದಾರಿಯಮೇಲೆ ಉಳಿದ ಕೆಲಸ ನಡೆಸಲಾಗುವುದು.

7. ಈ ಕೆಲಸಗಳಿಗೆ ಬೇಕಾಗುವ ಕಂಟ್ರೋಲ್ ಪದಾರ್ಥಗಳನ್ನು ಜಿಲ್ಲಾಬೋರ್ಡ್ ಕಛೇರಿ ಮೂಲಕ ಸಪ್ಲೈಮಾಡಿಸಿ ಹಣದ ಪಾವತಿ ಬಗ್ಗೆ ಬರುವ ಬಿಲ್‌ಗಳಲ್ಲಿ ಮೇಲ್ಕಂಡ ಪದಾರ್ಥಗಳ ಬೆಲೆಯನ್ನು ವಜಾ ಮಾಡಿಕೊಳ್ಳಲಾಗುವುದು.

8. ಅಂಗೀಕರಿಸಲ್ಪಟ್ಟ ಟೆಂಡರುದಾರನು ತನ್ನ ಕೆಲಸ ಆರಂಭಿಸುವ ಮುನ್ನ ಆದಾಯ ತೆರಿಗೆ ಪಾವತಿ ಮಾಡಿದ್ದರ ಸರ್ಟಿಫಿಕೇಟನ್ನು ಅಥವಾ ವೆರಿಫಿಕೇಷನ್ ಸರ್ಟಿಫಿಕೇಟನ್ನು ಹಾಜರ್ಪಡಿಸಬೇಕು.

9. ಟೆಂಡರುಗಳನ್ನು ಕಾರಣ ಕೊಡದೆ ಸ್ವೀಕರಿಸುವ ಅಥವಾ ನಿರಾಕರಿಸುವ ಹಕ್ಕು ಜಿಲ್ಲಾಬೋರ್ಡ್ ಅಧ್ಯಕ್ಷರವರಿಗೆ ಸೇರಿದೆ.

10. ದರಗಳ ಅಥವಾ ಇನ್ನಾವುದೇ ವಿಷಯದಲ್ಲಿ ವ್ಯವಹಾರ ಉದ್ಭವಿಸಿದರೆ ಜಿಲ್ಲಾ ಬೋರ್ಡಿನ ತೀರ್ಮಾನವೇ ಅಖೈರು ತೀರ್ಮಾನವಾಗಿರುತ್ತದೆ.

11. ಈ ಕೆಳಗೆ ನಮೂದಿಸಿದ ಕೆಲಸಗಳ ಪ್ಲಾನುಗಳನ್ನೂ ಎಸ್ಟಿಮೆಂಟ್‌ಗಳನ್ನೂ ಮತ್ತು ಇತರ ವಿವರಗಳನ್ನೂ ಜಿಲ್ಲಾ ಬೋರ್ಡ್ ಕಛೇರಿಯಲ್ಲಿ ರಜಾ ಇಲ್ಲದಿರುವ ಯಾವ ದಿವಸದಲ್ಲಾದರೂ ಆಫೀಸ್ ಕಾಲದಲ್ಲಿ ನೋಡಬಹುದು.

ಕ್ರಮಸಂಖ್ಯೆ	ವಿವರ	ಎಸ್ಟಿಮೇಟ್ ಹಣ	ಮುಂಗಡ ಹಣ
1	ಬೆಟ್ಟದಪುರದ ವೆಟರ್ನರಿ ಆಸ್ಪತ್ರೆಯಲ್ಲಿ ಒಂದು ಡ್ರೆಸ್ಸಿಂಗ್ ಷೆಡ್ ಕಟ್ಟುವುದು.	1350	70
2	ಗುಂಡ್ಲುಪೇಟೆ ತಾಲ್ಲೋಕು ಕಬ್ಬಹಳ್ಳಿಯಲ್ಲಿ ಒಂದು ವೆಟರ್ನರಿ ಆಸ್ಪತ್ರೆ ಕಟ್ಟುವುದು.	7500	375
3	ನಂಜನಗೂಡು ತಾಲ್ಲೋಕು ತಗಡೂರಿನಲ್ಲಿ ಈಗ ಇರುವ ಡಿಪೋ ಕಟ್ಟಡವನ್ನು ಆಸ್ಪತ್ರೆಯನ್ನಾಗಿ ಪರಿವರ್ತಿಸಿ ಕಟ್ಟುವುದು.	1250	65
4	ನಂಜನಗೂಡು ಮತ್ತು ತಗಡೂರು ರಸ್ತೆಯ 1/6 ರಲ್ಲಿ ಕಲ್‌ವರ್ಟ್ ಕಟ್ಟುವುದು.	1160	60
5	ಪಿರಿಯಾಪಟ್ಟಣ ತಾಲ್ಲೋಕು ಗಾಳಿಗೆಕೆರೆ ಹಳ್ಳದಲ್ಲಿ ಒಂದು ಕಾಸ್‌ವೆ ಕಟ್ಟುವುದು.	3000	150

ಟಿ. ಪಿ. ಬೋರಯ್ಯ,
(ಫಾರ್) ಅಧ್ಯಕ್ಷರು,
ಮೈಸೂರು ಜಿಲ್ಲಾ ಬೋರ್ಡ್.

ಬೊಂಬಾಯಿನಲ್ಲಿ ೨ ಸಾವಿರ ಬಾಲಕರ ಶಾಲೆಗಳು

ಬೊಂಬಾಯಿ ಸಂಸ್ಥಾನದಲ್ಲಿ ಒಬ್ಬರೇ ಉಪಾಧ್ಯಾಯರಿರುವ ೨ ಸಾವಿರ ಪ್ರೈಮರಿ ಶಾಲೆಗಳನ್ನು ತೆರೆಯಲು ಕೇಂದ್ರ ಸರ್ಕಾರ ಅನುಮತಿ ಇತ್ತಿದೆ. ೨೦೦ ಜನಸಂಖ್ಯೆಗಿಂತ ಕಡಮೆಯಿರುವ ಹಳ್ಳಿಗಳಲ್ಲಿ ಇಂತಹ ಪಾಠಶಾಲೆಗಳನ್ನು ತೆರೆಯಲಾಗುವುದು. ಇಂತಹ ಪ್ರತಿ ಶಾಲೆಗೂ ವರ್ಷಕ್ಕೆ ಒಂದು ಸಾವಿರ ರೂ. ಖರ್ಚಾಗುವುದು. ಮೊದಲನೆ ವರ್ಷದಲ್ಲಿ ಈ ಖರ್ಚನ್ನು ಕೇಂದ್ರವು ಶೇಕಡ ೭೫ ರಷ್ಟು, ಉಳಿದುದನ್ನು ಸಂಸ್ಥಾನ ಸರ್ಕಾರ ವಹಿಸಿಕೊಳ್ಳುವುದು.

-ಮೈಸೂರು ಪೇಟೆಧಾರಣೆ-

ತಾರೀಖು ೧೩—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೫—	೨೨—
ಎಳ್ಳು	೭೦—೧೨	೭೧—
ಹರಳು	೩೫—೪	೩೭—
ಹುಚ್ಚೆಳ್ಳು	೪೯—	—
ಹುರಳಿ	೩೬—೪	೩೬—೧೨
ಹೆಸರು	೩೪—೨	೪೧—
ಅಲಸಂದೆ	೩೩—೮	೫೬—೧೨
ಉದ್ದು	೬೦—	೬೪—
ಮೆಣಸಿನಕಾಯಿ	೧೨—	೩೭—೪
ಹುಣಸೇಹಣ್ಣು	೭—೧	೯—೧೫
ಬೆಲ್ಲ	೬—	—
ತೆಂಗಿನಕಾಯಿ	೨೫೧—	೨೯೫

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)
14--11--53 ನೇ ರಾತ್ರಿ 10 ಗಂಟೆಗೆ
ಮೈಸೂರು ಟೌನ್‌ಹಾಲಿನಲ್ಲಿ

ಸಾಹುಕಾರ

ಎಂಬ ಸಾಮಾಜಿಕ ನಾಟಕವನ್ನು
ಅಭಿನಯಿಸುವರು

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೪

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೭೧

೧೬-೧೧-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪಾಕೀಸ್ತಾನ-ಅಮೆರಿಕ ರಕ್ಷಣಾ ಒಪ್ಪಂದ

ತೀವ್ರ ಕಳವಳ ಮತ್ತು ಪರಿಣಾಮ ಉಂಟಾಗುತ್ತದೆ—

ಪ್ರಧಾನಿ ನೆಹರೂರವರ ಹೇಳಿಕೆ

ಪಾಕೀಸ್ಥಾನವು ಸ್ವತಂತ್ರ ರಾಷ್ಟ್ರ. ತನ್ನ ದೇಶದಲ್ಲಿ ಸೈನ್ಯ ವಿಸ್ತರಣೆ ವಿದೇಶೀ ಸೈನ್ಯಗಳನ್ನು ಇಟ್ಟುಕೊಳ್ಳುವುದು ಅವರಿಗೆ ಸೈನ್ಯ ನೆಲೆಗಳನ್ನು ಕಲ್ಪಿಸುವುದು ಮುಂತಾದ ವಿಷಯಗಳಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಪಡೆದಿದೆ. ಆದಾಗ್ಯೂ ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವೆ ರಕ್ಷಣಾ ಒಪ್ಪಂದವಾಗುವುದೆಂಬ ವಿಷಯದಲ್ಲಿ ಪಾಕೀಸ್ತಾನ ಮತ್ತು ಅಮೆರಿಕಾಗಳಲ್ಲಿ ಹೊರಟಿರುವ ಸುದ್ದಿಯನ್ನು ಗಮನಿಸಿದರೆ ಈ ಒಪ್ಪಂದವು ಪಾಕೀಸ್ತಾನವೊಂದೇ ಅಲ್ಲ, ಭಾರತ ಮತ್ತು ದಕ್ಷಿಣ ಏಷ್ಯಾದಮೇಲೂ ತೀವ್ರ ಪರಿಣಾಮವನ್ನು ಉಂಟುಮಾಡುತ್ತದೆ. ಈ ಪರಿಣಾಮಗಳು ಭಾರತಕ್ಕೂ ವಿಶೇಷವಾಗಿ ಸಂಬಂಧಪಟ್ಟವು ಈ ರಕ್ಷಣಾ ಒಪ್ಪಂದ ವಿಷಯದಲ್ಲಿ ಭಾರತದಲ್ಲಿ ತೀವ್ರ ಕಳವಳವುಂಟಾಗಿದೆ ಎಂದು ಪ್ರಧಾನಿ ನೆಹರೂರವರು ಪಾಕೀಸ್ತಾನ-ಅಮೆರಿಕಾ ನಡುವಿನ ರಕ್ಷಣಾ ಒಪ್ಪಂದ ವಿಷಯದಲ್ಲಿ ಪತ್ರಿಕಾಸಮ್ಮೇಳನವೊಂದರಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಪಾಕೀಸ್ತಾನವು ಮುಸ್ಲಿಂ ಗಣರಾಜ್ಯವಾಗಿರಬೇಕೆಂದು ಇತ್ತೀಚೆಗೆ ಅಲ್ಲಿಯ ರಾಜ್ಯಾಂಗ ಸಭೆಯು ತೀರ್ಮಾನಿಸಿರುವುದನ್ನು ಶ್ರೀ ನೆಹರೂರವರು ಪ್ರಸ್ತಾಪಿಸಿ, ಈ ವಿಷಯದಲ್ಲಿಯೂ ಪಾಕೀಸ್ತಾನವು ತನ್ನಿಷ್ಟ ಬಂದಂತೆ ತೀರ್ಮಾನವನ್ನು ಮಾಡಿಕೊಳ್ಳಬಹುದು. ಆದಾಗ್ಯೂ ಭಾರತದ ಪ್ರಜೆಗಳ ಮೇಲೆ ಅದು ತೀವ್ರ ಪರಿಣಾಮವನ್ನು ಉಂಟುಮಾಡುತ್ತದೆ. ಪಾಕೀಸ್ಥಾನದ ವಿಷಯವನ್ನು ಮಾನವೀಯತೆ ಮತ್ತು ಮಿತ್ರತ್ವ ದೃಷ್ಟಿಯಿಂದ ಪರಿಗಣಿಸಬೇಕಾಗಿದೆ. ಮಾನವೀಯತೆ ದೃಷ್ಟಿಯಿಂದ ಪರಿಶೀಲಿಸಿದಲ್ಲಿ ದೇಶದ ಪ್ರಜೆಗಳಿಗೆ ಸಮಾನ ಹಕ್ಕನ್ನು ಕೊಡದೆ ಅಲ್ಪಸಂಖ್ಯಾತರನ್ನು ಕೀಳುದೃಷ್ಟಿಯಿಂದ ನೋಡುವುದು ಅಥವಾ ಅವರಲ್ಲಿ ಆ ಮನೋಭಾವ ಕಲ್ಪನೆಯಾಗುವಂತೆ ವರ್ತಿಸುವುದು ವ್ಯಥೆಯನ್ನುಂಟುಮಾಡುತ್ತದೆ. ಇದರಿಂದ ವಿಶೇಷ ದುಷ್ಪರಿಣಾಮಗಳುಂಟಾಗುತ್ತವೆ. ಮಿತ್ರತ್ವದೃಷ್ಟಿಯಿಂದ ಪರಿಶೀಲಿಸಿದಲ್ಲಿ ಈ ನೀತಿಯಿಂದ ದೇಶದಲ್ಲಿ ಬಿಕ್ಕಟ್ಟು ಮತ್ತು ಕ್ಲೇಶಗಳು ಹೆಚ್ಚುತ್ತವೆ. ಭಾರತದಲ್ಲಿ ಸಹ ಜಾತೀಯ ಮನೋಭಾವವುಳ್ಳವರು ಈ ನೀತಿಯನ್ನು ಅಪಪ್ರಚಾರಕ್ಕಾಗಿ ಉಪಯೋಗಿಸುವರು. ಆಗ ಭಾರತದಲ್ಲಿಯೂ ದ್ವೇಷ ಮುಂತಾದುವು ಹುಟ್ಟುತ್ತವೆ ಎಂದು ತಿಳಿಸಿದರು.

ಮಕ್ಕಳ ದಿನಾಚರಣೆ

ಮೈಸೂರು ೧೬

ಪುರಸಭೆಯ ಆಶ್ರಯದಲ್ಲಿ ಮೊನ್ನೆದಿನ ಟೌನ್‌ಹಾಲ್ ಮೈದಾನದಲ್ಲಿ ಮಕ್ಕಳ ದಿನಾಚರಣೆ ಆಚರಿಸಲಾಯಿತು. ನಗರದ ಶಿಶುವಿಹಾರ ಮತ್ತು ಇತರ ಪ್ರೈಮರಿ ಶಾಲೆಗಳ ಸುಮಾರು ೨ ಸಾವಿರ ಮಂದಿ ಮಕ್ಕಳು ಅದರಲ್ಲಿ ಭಾಗವಹಿಸಿದ್ದರು. ಮಕ್ಕಳಿಂದ ವಿವಿಧ ಪ್ರದರ್ಶನಗಳು ನಡೆದುವು ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಮಕ್ಕಳಿಗೆ ಬಹುಮಾನ ವಿನಿಯೋಗಿಸಿದರು. ಬಾಣಬಿರುಸುಗಳಿಂದ ಮಕ್ಕಳನ್ನು ಸಂತೋಷಗೊಳಿಸಲಾಯಿತು.

ನಂತರ ನಗರದ ಸ್ಕೌಟುಗಳ ರ್‍ಯಾಲಿ ಮತ್ತು ಕ್ಯಾಂಪ್‌ಫೈರ್ ನಡೆದುವು. ವಿದ್ಯಾ ಇಲಾಖಾ ಮುಖ್ಯಾಧಿಕಾರಿ ಶ್ರೀ ಜೆ. ಬಿ. ಮಲ್ಲಾರಾಧ್ಯರು ಭಾಷಣಮಾಡಿ, ಇಂತಹ ಪಂಡಿತ ನೆಹರೂರವರ ೬೪ ನೇ ವರ್ಧಂತಿಯ ಶುಭದಿನದಲ್ಲಿ ಸ್ಕೌಟುಗಳೆಲ್ಲರೂ ಅವರ ಮೇಲ್ಪಂಕ್ತಿಯನ್ನು ಅನುಸರಿಸಿ ದೇಶದ ಪ್ರಗತಿಗಾಗಿ ಸೇವೆ ಸಲ್ಲಿಸಬೇಕೆಂದು ತಿಳಿಸಿದರು.

ಅವರು ಕಾಶ್ಮೀರದ ವಿಷಯವಾಗಿ ಪ್ರಸ್ತಾಪಿಸಿ ಅಲ್ಲಿಯ ರಾಜ್ಯಾಂಗಸಭೆ ಮತ್ತು ರಾಷ್ಟ್ರೀಯ ಪರಿಷತ್ತಿನಲ್ಲಿ ಇತ್ತೀಚೆಗೆ ಸಂಘಟನೆ ಹೆಚ್ಚುತ್ತಿದೆ, ದೇಶ ಪ್ರಗತಿಗೆ ಅವರು ಶ್ರಮಿಸುತ್ತಲಿರುವುದು ಕಾಣಬರುತ್ತಿದೆ ಎಂದು ಹೇಳಿದರು.

ವಿದೇಶಗಳ ರಾಜಕೀಯ ಪರಿಸ್ಥಿತಿ ವಿಷಯವಾಗಿ ಶ್ರೀ ನೆಹರೂರವರು ಪ್ರಸ್ತಾಪಿಸುತ್ತಾ ವಿಶ್ವದ ಅನೇಕ ಭಾಗಗಳಲ್ಲಿರುವ ವಸಾಹತುಗಳಲ್ಲಿ ವಿದೇಶೀಯರ ಆಡಳಿತವು ಬಿಗಿಯಾಗುತ್ತಿದೆ ಇದು ಪ್ರಗತಿ ಮಾರ್ಗವಲ್ಲ. ಇದನ್ನು ಭಾರತವು ಸಮರ್ಥಿಸುವುದಿಲ್ಲ. ವಿಶ್ವದ ಪ್ರಮುಖ ಸಮಸ್ಯೆಗಳನ್ನು ಪರಿಹಾರ ಮಾಡಲು ಮಹಾರಾಷ್ಟ್ರಗಳು ಒಂದೇ ಕಾರ್ಯಕ್ರಮವನ್ನು ತಯಾರಿಸದೆ ನಾಯಕರುಗಳು ಪರಸ್ಪರ ಕಲೆತು ವಿಚಾರ ವಿನಿಮಯ ನಡೆಸಿದರೆ ಆಗ ಉತ್ತಮ ಫಲಿತಾಂಶಗಳು ಉಂಟಾಗುತ್ತದೆ ಎಂದು ಹೇಳಿದರು.

ಪುರಸಭಾ ಚುನಾವಣೆಗೆ ಉಮೇದುವಾರರು

೪೦ ಸ್ಥಾನಗಳಿಗೆ ಒಟ್ಟು ೧೧೫ ಸ್ಪರ್ಧಿಗಳು

ಮೈಸೂರು ೧೬

ಮೈಸೂರು ಪುರಸಭೆಗೆ ಮುಂದಿನ ತಿಂಗಳು ೭ನೇ ತಾರೀಖು ನಡೆಯಲಿರುವ ಚುನಾವಣೆಗೆ ಉಮೇದುವಾರಿಕೆ ಸಲ್ಲಿಸಲು ಈ ದಿನವೇ ಕೊನೆದಿನವಾದ್ದರಿಂದ, ಕೆಳಗೆ ಕಂಡವರು ತಮ್ಮ ಉಮೇದುವಾರಿಕೆ ಅರ್ಜಿಗಳನ್ನು ಸಲ್ಲಿಸಿದ್ದಾರೆ:—

ಕಾಂಗ್ರೆಸ್ ಪರವಾಗಿ, ೪೦ ಸ್ಥಾನಗಳಲ್ಲಿ ೩೫ಕ್ಕೆ ಮಾತ್ರ ಸ್ಪರ್ಧಿಸಲು ನಿರ್ಧರಿಸಲಾಗಿದೆ. ಇನ್ನು ಉಳಿದ ೫ ಸ್ಥಾನಗಳಲ್ಲಿ, ೩೫ನೇ ವಾರ್ಡಿನಲ್ಲಿ ಸ್ವತಂತ್ರವಾಗಿ ನಿಲ್ಲುವ ಫಾ॥ ಆಡಿಯೋರವರಿಗೆ ಕಾಂಗ್ರೆಸ್ ಬೆಂಬಲ ನೀಡುವುದು. ಇತರ ೨೯, ೩೧, ೩೨ ಮತ್ತು ೩೮ ವಾರ್ಡುಗಳಲ್ಲಿ ಮುಸ್ಲಿಮರಿಗೆ ಬಿಡಲಾಗಿದೆ. ಕಾಂಗ್ರೆಸ್ ಪರವಾಗಿ ಕೆಳಕಂಡವರು ಅರ್ಜಿಗಳನ್ನು ಸಲ್ಲಿಸಿದ್ದಾರೆ:—

ಶ್ರೀ ಕೆ. ಸಿದ್ದಯ್ಯ ೧ನೇ ವಾರ್ಡ್, ಶ್ರೀ ಜಿ. ಎಸ್. ರಾಮಕೃಷ್ಣಯ್ಯ ೨ನೇ ವಾರ್ಡ್, ಶ್ರೀ ಎ. ಎನ್. ಸೂರ್ಯನಾರಾಯಣರಾವ್ ೩ ಶ್ರೀಎಂ.ಕೆ. ಲಿಂಗಯ್ಯ ೪ನೇ ವಾರ್ಡ್, ಶ್ರೀ ಟಿ. ಎನ್. ಸುಬ್ಬರಾವ್ ೫ನೇ ವಾರ್ಡ್, ಶ್ರೀ ಬಿ. ರಾಮಣ್ಣ ೬ನೇ ವಾರ್ಡ್, ಶ್ರೀ ಪಿ. ಸೀತಾರಾಮಯ್ಯ ೭ನೇ ವಾರ್ಡ್, ಶ್ರೀ ಜಿ. ನರಸಿಂಹಯ್ಯ ೮ನೇ ವಾರ್ಡ್, ಶ್ರೀ ಜನಾರ್ಧನ ನಾಯ್ಡು ೯ನೇ ವಾರ್ಡ್, ಕೆ.ಎಸ್. ಸೂರ್ಯನಾರಾಯಣರಾವ್ ೧೦ನೇ ವಾರ್ಡ್, ಶ್ರೀ ಎ. ಕೃಷ್ಣಮೂರ್ತಿರಾವ್ ೧೧ನೇ ವಾರ್ಡ್, ಶ್ರೀ ಕೆ. ಸತ್ಯನಾರಾಯಣ ರಾವ್ ೧೨ನೇ ವಾರ್ಡ್, ಶ್ರೀ ಎನ್. ಶ್ರೀನಿವಾಸ ೧೩ನೇ ವಾರ್ಡ್, ಶ್ರೀ ಎಸ್. ಕೆಂಪೇಗೌಡ ೧೪ನೇ ವಾರ್ಡ್, ಶ್ರೀ ವೆಂಕಟರಮಣಪ್ಪ ೧೫ನೇ ವಾರ್ಡ್, ಶ್ರೀ ಟಿ. ನರಸಿಂಹಯ್ಯಗಾರ್ ೧೬ನೇ ವಾರ್ಡ್, ಶ್ರೀ ಚಾಮುಂಡಯ್ಯ ೧೭ನೇ ವಾರ್ಡ್, ಶ್ರೀ ಚೌಡಯ್ಯ ೧೮ನೇ ವಾರ್ಡ್, ಶ್ರೀ ಎಂ. ಸಿದ್ದಲಿಂಗಪ್ಪ ೧೯ನೇ ವಾರ್ಡ್, ಶ್ರೀ ಯು.ಎಲ್. ರಾಮಚಂದ್ರ ರಾವ್ ೨೦ನೇ ವಾರ್ಡ್, ಶ್ರೀ ಬಿ.ಎಲ್. ರಾಮಸ್ವಾಮಿ.ಶೆಟ್ಟಿ ೨೧ನೇವಾರ್ಡ್, ಶ್ರೀ ಟಿ.ಸಿ. ಗೌಡ ೨೨ನೇ ವಾರ್ಡ್, ಶ್ರೀ ಬಿ.ಎನ್. ಕೆಂಗೇಗೌಡ ೨೩ನೇ ವಾರ್ಡ್, ಶ್ರೀ ಪಿ.ಡಿ. ಕೃಷ್ಣಸ್ವಾಮಿ ೨೪ನೇ ವಾರ್ಡ್, ಶ್ರೀ ಎಸ್. ಲಕ್ಷ್ಮೀ ನರಸಿಂಹಯ್ಯ ೨೫ನೇ ವಾರ್ಡ್, ಶ್ರೀ ಕೆ. ಪುಟ್ಟಸ್ವಾಮಿ ೨೬ನೇ ವಾರ್ಡ್, ಶ್ರೀ ಜಿ.ಆರ್. ರಂಗಸ್ವಾಮಯ್ಯ ೨೭ನೇ ವಾರ್ಡ್, ಶ್ರೀ ಎ.ಕೆ. ಲಿಂಗಯ್ಯ ೨೮ನೇ ವಾರ್ಡ್, ಶ್ರೀ ಡಿ. ವೆಂಕಟಯ್ಯ ೩೦ನೇ ವಾರ್ಡ್, ಶ್ರೀ ಕುಟಿನೋ ೩೪ನೇ ವಾರ್ಡ್, ಶ್ರೀ ಎಸ್. ಶ್ರೀಕಂಠಯ್ಯ ೩೫ನೇ ವಾರ್ಡ್, ಶ್ರೀ ಟಿ. ವೆಂಕಟರಮಣಯ್ಯ ೩೭ನೇ ವಾರ್ಡ್, ಶ್ರೀ ಎಸ್. ಲಿಂಗಣ್ಣ ೩೯ನೇ ವಾರ್ಡ್ ಮತ್ತು ಎಂ. ವೆಂಕಟ ಲಿಂಗಯ್ಯ ೪೦ನೇ ವಾರ್ಡ್ ಜೋಗಿ ಸಿದ್ದಯ್ಯ ೩೬

ಪ್ರಜಾಸೋಷಲಿಸ್ಟ್ ಪಕ್ಷದ ಪರವಾಗಿ ಈ ಕೆಳಗೆ ಕಂಡ ೨೯ ಮಂದಿ ಸ್ಪರ್ಧಿಸಿದ್ದಾರೆ.

ಶ್ರೀಗಳಾದ ಬಿ. ಆರ್. ನಂಜಪ್ಪ ೩ನೇ ವಾರ್ಡ್, ಟಿ. ನಾರಾಯಣಪ್ಪ ೪, ಎಂ. ಸಿ. ಮಹದೇವಸ್ವಾಮಿ ೫, ಬಿ. ಕೆ. ರಾಮಕೃಷ್ಣಯ್ಯ ೬, ಕೆ. ಕಾಳಯ್ಯ ೭, ಜಿ.ಆರ್. ಜೋಸ್ಯರ್ ೮, ಬಿ. ಆರ್. ನಾಯ್ಡು ೯, ಬಿ. ಜಿ. ದಾಸ್ ೧೦, ವೇದಾಂತ ಹೆಮ್ಮಿಗೆ ೧೧, ಸಿ. ಎನ್. ನಾರಾಯಣರಾವ್ ೧೨, ನರಸಿಂಹಯ್ಯ ೧೩, ಎನ್. ಜಿ. ಕೆಂಗೇಗೌಡ ೧೪, ಬೈರಪ್ಪ ೧೫, ಎ. ವೆಂಕಟೇಶಯ್ಯ ೧೬, ದೊಡ್ಡ ತಮ್ಮೇಗೌಡ ೧೭, ಎಂ. ಎನ್. ತಿಮ್ಮಯ್ಯ ೧೯, ಬಿ. ಕೆ. ಪುಟ್ಟಯ್ಯ ೨೧, ಎಂ. ಬಸಪ್ಪ ೨೨, ಬಿ. ಲಿಂಗಪ್ಪ ೨೩, ಹೆಚ್. ಎನ್. ಮುದ್ದಯ್ಯ ೨೪, ಎಸ್. ಗೋವಿಂದಯ್ಯ ೨೫, ಹೆಚ್. ಎಲ್. ಮಲ್ಲಾರಪ್ಪ ೨೬, ಎಂ. ಆರ್. ಶ್ರೀನಿವಾಸಯ್ಯಂಗಾರ್ ೩೪, ಎಸ್. ಸಂಜೀವಯ್ಯ ೩೫, ಸಿ. ದೊರಸ್ವಾಮಿ ೩೯.

ರಿಸರ್ವ್ ಸ್ಥಾನಗಳಿಗೆ:— ಶ್ರೀಗಳಾದ ಶ್ರೀನಿವಾಸ, ಎಸ್.ಎಸ್. ಸಿದ್ದಯ್ಯ, ಕುಮಾರ ಸ್ವಾಮಿ ಮತ್ತು ಚಿಕ್ಕ ಲಿಂಗಯ್ಯ

ಪುರಸಭೆಯಲ್ಲಿ ಚುನಾಯಿತರಾಗುವ ೪೦ ಸ್ಥಾನಗಳಿಗೆ ಒಟ್ಟು ೧೧೫ ಉಮೇದುವಾರರು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಕಾಂಗ್ರೆಸ್ಸಿನ ೩೫ ಮತ್ತು ಪ್ರಜಾ ಸೋಷಲಿಸ್ಟ್ ಪಕ್ಷದ ೨೯ ಉಮೇದುವಾರರು.

ಕಮ್ಯೂನಿಸ್ ಪಕ್ಷದ ಶ್ರೀ ಬೆಳ್ಳಿಯಪ್ಪ ೬ನೇ ವಾರ್ಡಿನಲ್ಲಿ, ಶ್ರೀ ಉಗ್ರಪ್ಪ ೨೬ನೇ ವಾರ್ಡಿನಲ್ಲಿ ಸ್ಪರ್ಧಿಸಿದ್ದಾರೆ.

ಉಳಿದವರೆಲ್ಲರೂ ಸ್ವತಂತ್ರರು

ಕಾಂಗ್ರೆಸ್ಸಿನ ಉಮೇದುವಾರರಾ ಶ್ರೀ ಚೌಡಯ್ಯ ೧೮ನೇವಾರ್ಡಿನಲ್ಲಿ ೩೮ ರಲ್ಲಿ ರಲ್ಲಿ ಖುರೈಷಿ ಮತ್ತು ೪೦ ರಲ್ಲಿ ವೆಂಕಟ ಲಿಂಗಯ್ಯನವರು ಅವಿರೋಧವಾಗಿ ಚುನಾಯಿತರಾಗಿದ್ದಾರೆ.

○ ಪಾಕೀಸ್ತಾನದಲ್ಲಿ ರಾಜ್ಯಾಂಗ ಸಭೆಯು ಪಾಕೀಸ್ತಾನವು ಮುಸ್ಲಿಂ ಗಣರಾಜ್ಯವಾಗಿರಬೇಕೆಂದು ತೀರ್ಮಾನಿಸಿರುವುದನ್ನು ಪಾಕಿಸ್ತಾನದ ಅನೇಕ ಮುಸ್ಲಿಂ ನಾಯಕರು ತೀವ್ರವಾಗಿ ಖಂಡಿಸಿದ್ದಾರೆ.

ಅಸ್ಪೃಶ್ಯತೆ ನಿರ್ಮೂಲಕ್ಕಾಗಿ ಸರ್ಕಾರದ ಆದೇಶ

ಕಾನೂನನ್ನು ಕಡ್ಡಾಯವಾಗಿ ಜಾರಿಗೆ ತರುವಂತೆ

ಜಿಲ್ಲಾಧಿಕಾರಿಗಳಿಗೆ ಸೂಚನೆ

ಬೆಂಗಳೂರು ೧೬

ಸಂಸ್ಥಾನದಲ್ಲಿ ಆದರಲ್ಲಿಯೂ ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ಪೃಶ್ಯತೆಯನ್ನು ನಿರ್ಮೂಲವಾಡಲು ಸರ್ಕಾರವು ಜಿಲ್ಲೆಯ ಅಧಿಕಾರಿಗಳಿಗೆ ನಿರ್ದಿಷ್ಟವಾದ ಸೂಚನೆಯನ್ನು ಕೊಟ್ಟಿರುವುದಾಗಿ ತಿಳಿಯಬರುತ್ತದೆ. ಈಗಾಗಲೇ ಅಸ್ಪೃಶ್ಯತಾ ಕಾನೂನು ಜಾರಿಯಲ್ಲಿದೆ. ಅದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕೆಂದು ಈಗ ಆಜ್ಞೆಯನ್ನು ಗ್ರಾಮಾಭಿವೃದ್ಧಿ ಶಾಖೆಯಿಂದ ಕೊಡಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಅಸ್ಪೃಶ್ಯತೆಯು ಇನ್ನೂ ನಾನಾ ರೀತಿಯಲ್ಲಿ ಇದ್ದೇ ಇವೆ. ಪ್ರತ್ಯೇಕ ಶಾಲೆಗಳು, ಸವರ್ಣ ಹಿಂದೂಗಳು ಮುಟ್ಟದ ಪ್ರತ್ಯೇಕ ಭಾವಿ, ಅವರ ವಾಸಸ್ಥಾನವು ಇತರರಿಗಿಂತ ದೂರವಾಗಿರುವುದು, ಸಾರ್ವಜನಿಕ ದೇವಾಲಯ ಮುಂತಾದುವಕ್ಕೆ ಅವರ ಪ್ರವೇಶಕ್ಕೆ ಅಡ್ಡಿ ಮುಂತಾದುವು ಈಗಲೂ ಇವೆ. ಇವುಗಳನ್ನೆಲ್ಲಾ ತಪ್ಪಿಸಬೇಕೆಂದು ದೇಶದ ಇತರ ಪ್ರಜೆಗಳು ತಮ್ಮತಮ್ಮಲ್ಲಿಯೇ ಯಾವ ರೀತಿಯಾದ ಅಡ್ಡಿ ಆಂತರವೂ ಇಲ್ಲದೆ ಹೇಗೆ ವಾಸಿಸುತ್ತಲಿರುವರೋ ಅದೇರೀತಿ ಹರಿಜನರೂ ಇರುವಂತೆ ವ್ಯವಸ್ಥೆ ಮತ್ತು ಮಾರ್ಪಾಟು ನಡೆಯಬೇಕೆಂದೂ ಸೂಚಿಸಲಾಗಿದೆ.

ಅಪೀಲು ತಿರಸ್ಕಾರ

ಬೆಂಗಳೂರು ೧೬

ಮೈಸೂರು ಪುರಸಭೆಗೆ ಕಾಂಗ್ರೆಸ್ ಉಮೇದುವಾರಿಕೆಯಲ್ಲಿ ಶ್ರೀಗಳಾದ ಎ. ರಾಮಣ್ಣ ಮತ್ತು ಸಿದ್ದರಾಮಣ್ಣನವರ ಅರ್ಜಿಗಳನ್ನು ಪಾರ್ಲಿಮೆಂಟರಿ ಸಮಿತಿಯು ನಿರಾಕರಿಸಿದುದರಮೇಲೆ ಹೂಡಿದ್ದ ಅಪೀಲನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಪರಿಶೀಲಿಸಿ ಅಪೀಲನ್ನು ತಿರಸ್ಕರಿಸಿದೆ.

ಟಿ. ಪ್ರಕಾಶಂ ಬೆಂಗಳೂರಿನಲ್ಲಿ

ಬೆಂಗಳೂರು ೧೬

ಆಂಧ್ರದ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ವಿಶ್ರಾಂತಿಗಾಗಿ ಬೆಂಗಳೂರಿಗೆ ಆಗಮಿಸಿದ್ದಾರೆ ಅವರು ನಾಳೆ ಕರ್ನೂಲಿಗೆ ಹಿಂತಿರುಗುವರು.

ಗೋಧಿಬೆಲೆಯಲ್ಲಿ ಇಳಿತಾಯ

ಪ್ರಾಂತ್ಯಗಳಿಗೆ ಕಳುಹಿಸುವ ಆಮದಾದ ಗೋಧಿಯ ಬೆಲೆಯನ್ನು ಕೇಂದ್ರ ಸರ್ಕಾರವು ಮಣ ಒಂದಕ್ಕೆ ಒಂದುರೂಪಾಯಿ ನಷ್ಟು ಇಳಿಸಿದೆ.

ನೆಹರೂ ವರ್ಧಂತಿ

ಮೈಸೂರು ೧೬

ಪಂಡಿತ ಜವಾಹರ್‌ಲಾಲ್ ನೆಹರುರವರ ೬೫ ನೆಯ ವರ್ಧಂತಿ ಸಮಾರಂಭವನ್ನು ಭಾರತ ಸೇವಾದಳದವರು ರಾಜಧಾನಿಯ ಟೀಚರ್ ಟ್ರೈನಿಂಗ್ ಕಾಲೇಜಿನ ಆವರಣದಲ್ಲಿ ಪ್ರಿನ್ಸಿಪಲ್‌ರವರ ಅಧ್ಯಕ್ಷತೆಯಲ್ಲಿ ನಡೆಸಿದರು ವಿಧಾನ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣಶೆಟ್ಟರವರು ನೆಹರುರವರ ದೇಶಸೇವೆ ಮತ್ತು ಅವರು ಸಾಧಿಸಿರುವ ಮಹತ್ ಕಾರ್ಯಗಳನ್ನು ವಿವರಿಸಿದರು ನೆಹರುರವರಿಗೆ ಭಗವಂತನು ಆಯುರಾರೋಗ್ಯವನ್ನು ಕೊಟ್ಟು ಚಿರಾಯುಮಾಗಿರಲಿ ಎಂದು ಕೋರಿದರು.

ಸಾರ್ವಜನಿಕ ವಿದ್ಯಾರ್ಥಿನಿಲಯ ಸಂಘದವರು ಶ್ರೀ ದಾವೂದ್‌ಷರೀಪ್‌ರವರ ಅಧ್ಯಕ್ಷತೆಯಲ್ಲಿ ಸಮಾರಂಭವನ್ನು ಆಚರಿಸಿದರು ಶ್ರೀ ಗೋಪಾಲಕೃಷ್ಣಶೆಟ್ಟಿಯವರು ಭಾಷಣಮಾಡಿದರು.

ಆಯುರ್ವೇದ ಕಾಲೇಜಿನ ಕ್ರಿಯಾಸಮಿತಿ

ಮೈಸೂರು ೧೬

ರಾಜಧಾನಿಯ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳು ಕಳೆದ ನಾಲ್ಕು ವರ್ಷದಿಂದ ತಮ್ಮ ಕುಂದುಕೊರತೆಗಳನ್ನು ಈಡೇರಿಸಬೇಕೆಂದು ಸರಕಾರದವರಲ್ಲಿ ಪ್ರಾರ್ಥಿಸುತ್ತಿದ್ದರೂ ಇಲ್ಲಿಯವರೆಗೆ ಯಾವ ಬೇಡಿಕೆಗಳೂ ಈಡೇರಿಲ್ಲವಾದುದರಿಂದ, ಮುಂದಿನ ಕಾರ್ಯಕ್ರಮ ಕೈಗೊಳ್ಳಲು ಕಾಲೇಜ್ ವಿದ್ಯಾರ್ಥಿಗಳು ಒಂದು ಕ್ರಿಯಾ ಸಮಿತಿಯನ್ನು ರಚಿಸಿದ್ದಾರೆ.

ಕಳೆದ ೧೩ನೇ ತಾರೀಖು ಆ ಕ್ರಿಯಾ ಸಮಿತಿಯ ಸಭೆಯು ನಡೆದು ತಮ್ಮ ಬೇಡಿಕೆಗಳನ್ನು ಪುನಃ ಸರ್ಕಾರದ ಮುಂದೆ ಇಡಲು ಮುಖ್ಯಮಂತ್ರಿ, ವಿದ್ಯಾ ಮತ್ತು ಆರೋಗ್ಯ ಸಚಿವರುಗಳು ತಮಗೆ ಭೇಟಿ ದಯಪಾಲಿಸಬೇಕೆಂದು ಕೋರುವ ನಿರ್ಣಯ ಮಾಡಲಾಯಿತು.

ಡಾನ್ ಪತ್ರಿಕೆಗೆ ಸರ್ಕಾರಿ ಪ್ರೋತ್ಸಾಹ ನಿಂತಿತು

ಹಲವಾರು ವರ್ಷಗಳಿಂದ ಮುಸ್ಲಿಂ ಲೀಗಿನ ಅಧಿಕೃತ ದಿನಪತ್ರಿಕೆಯಾಗಿಯೂ ಪಾಕೀಸ್ತಾನ ಸರ್ಕಾರ ಪರವಾದ ಪತ್ರಿಕೆಯೂ ಆಗಿದ್ದ ಡಾನ್ ಪತ್ರಿಕೆಗೆ ಪಾಕೀಸ್ತಾ ಸರ್ಕಾರವು ಎಲ್ಲಾ ಪ್ರೋತ್ಸಾಹ ಮತ್ತು ಸೌಲಭ್ಯಗಳನ್ನು ನಿಲ್ಲಿಸಿರುವುದಾಗಿ ತಿಳಿಯಬರುತ್ತದೆ.

ರಾಷ್ಟ್ರೀಯ ವಿಸ್ತರಣ ಯೋಜನಾ ಕಾರ್ಯ

ಭಾರತಾದ್ಯಂತ ಸುಮಾರು ೩ ಕೋಟಿ ೭೦ ಲಕ್ಷ ಜನಸಂಖ್ಯೆಯುಳ್ಳ ಸುಮಾರು ೪೬೦೦೦ ಗ್ರಾಮಗಳಲ್ಲಿ ರಾಷ್ಟ್ರೀಯ ವಿಸ್ತರಣಾ ಕಾರ್ಯವು ಅತ್ಯಂತ ಯಶಸ್ವಿಯಾಗಿ ನಡೆಯುತ್ತಿದುವುದಾಗಿ ತಿಳಿಯಬರುತ್ತದೆ ಈ ಕಾರ್ಯಕ್ಕಾಗಿ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳು ಎಷ್ಟು ದ್ರವ್ಯವನ್ನು ವೆಚ್ಚ ಮಾಡುತ್ತಲಿವೆಯೋ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಜನತೆಯು ನೆರವು ನೀಡುತ್ತಿದ್ದಾರೆ.

ಈ ಕಾರ್ಯವನ್ನು ಪ್ರಾರಂಭಿಸಿರುವುದರಿಂದ ಸುಮಾರು ೪೪೦೦೦ ನುರಿತ ಕೆಲಸಗಾರರಿಗೆ ಮತ್ತು ಇವರ ಸಹಾಯಕ್ಕಾಗಿ ಸುಮಾರು ೩ ಲಕ್ಷ ಜನ ಇತರರಿಗೆ ಉದ್ಯೋಗವನ್ನು ಕಲ್ಪಿಸಿದಂತಾಗುತ್ತದೆ.

ವಿಶ್ವನಾಥಂ-ಕೃಪಲಾನಿ ಭೇಟಿ

ನೂತನ ಆಂಧ್ರಪ್ರಾಂತ್ಯ ಮಂತ್ರಿಮಂಡಲದಲ್ಲಿ ಪ್ರಜಾಸೋಷಲಿಸ್ಟ್ ಪಕ್ಷವು ತನ್ನ ಪೂರ್ಣ ಸಹಕಾರವನ್ನು ನೀಡುವ ಉದ್ದೇಶದಿಂದ ಅಲ್ಲಿಯ ಪಕ್ಷದ ನಾಯಕರಾದ ಶ್ರೀ ಟಿ. ವಿಶ್ವನಾಥಂರವರು ಮಂತ್ರಿಮಂಡಲವನ್ನು ಸೇರಿದರಷ್ಟೆ. ಈ ವಿಷಯದಲ್ಲಿ ಇತ್ತೀಚೆಗೆ ತೀವ್ರ ಭಿನ್ನಾಭಿಪ್ರಾಯ ಮೂಡಿರುವುದರಿಂದ ಆಬಗ್ಗೆ ಸದ್ಯದಲ್ಲಿಯೇ ಶ್ರೀ ಟಿ. ವಿಶ್ವನಾಥಂರವರಿಗೂ ಪ್ರಜಾಸೋಷಲಿಸ್ಟ್ ಪಕ್ಷದ ಅಧ್ಯಕ್ಷ ಆಚಾರ್ಯ ಕೃಪಲಾನಿಯವರಿಗೂ ದೆಹಲಿಯಲ್ಲಿ ಮಾತುಕತೆ ನಡೆಯಲಿದೆಯೆಂದು ತಿಳಿಯಬರುತ್ತದೆ.

ಬ್ರಿಟಿಷ್ ಕಾಮನ್‌ವೆಲ್ತ್ ಸಚಿವ ಭಾರತದಲ್ಲಿ

ಬ್ರಿಟಿಷ್ ಕಾಮನ್‌ವೆಲ್ತ್ ಶಾಖೆಯ ಸಚಿವರಾದ ವೈಕೌಂಟ್ ಸ್ವಿಂಟನ್‌ರವರು ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಪ್ರವಾಸವನ್ನು ಕೈಗೊಂಡು ಈಗ ಭಾರತಕ್ಕೆ ಆಗಮಿಸಿದ್ದಾರೆ. ಅವರು ದೆಹಲಿಯಲ್ಲಿ ಕೇಂದ ಸರ್ಕಾರದ ಅತಿಥಿಗಳಾಗಿ ರಾಷ್ಟ್ರಪತಿ ಭವನದಲ್ಲಿ ತಂಗಿದ್ದಾರೆ. ಅವರು ೧೯ನೇ ತಾರೀಖಿನವರೆಗೆ ಭಾರತದಲ್ಲಿದ್ದು ಅನಂತರ ಕರಾಚಿಗೆ ತೆರಳುವರು ಅವರು ಈದಿನ ಬೆಳಗ್ಗೆ ರಾಜಘಾಟಿಗೆ ತೆರಳಿ ಮಹಾತ್ಮಾ ಗಾಂಧಿಯವರ ಸಮಾಧಿಗೆ ಪುಷ್ಪಗಳನ್ನು ಅರ್ಪಿಸಿದರು.

ಕರ್ಣಾಟಕ ಮಹಿಳಾ ಸಮ್ಮೇಳನ

ಇದೇ ೨೮ ಮತ್ತು ೨೯ನೇ ತಾರೀಖುಗಳಲ್ಲಿ ಕರ್ಣಾಟಕ ಮಹಿಳಾ ಸಮ್ಮೇಳನದ ಹತ್ತನೆ ಅಧಿವೇಶನವು ಮಂಗಳೂರಿನಲ್ಲಿ ಮೈಸೂರು ಸಚಿವ ಡಾ॥ ನಾಗನಗೌಡರ ಪತ್ನಿ ಡಾ॥ ಶ್ರೀಮತಿ ಸಾವಿತ್ರಿಬಾಯಿರವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಪಾರ್ಲಿಮೆಂಟ್ ಅಧಿವೇಶನ

ಭಾರತ ಪಾರ್ಲಿಮೆಂಟಿನ ೫ ನೇ ಅಧಿವೇಶನವು ದೆಹಲಿಯಲ್ಲಿ ಈದಿನ ಪ್ರಾರಂಭವಾಯಿತು.

ಸಾಯಿ ಮಂದಿರದ ಕಟ್ಟಡ ಪ್ರವೇಶ

ಮೈಸೂರು ೧೬

ರಾಜಧಾನಿಯ ಕಾಳಮ್ಮನಗುಡಿ ಬೀದಿಯಲ್ಲಿರುವ ಶ್ರೀ ಪ್ರಸನ್ನ ಸಾಯಿಮಂದಿರವನ್ನು ತ್ಯಾಗರಾಜಾರಸ್ತೆಯಲ್ಲಿರುವ ನೂತನ ಸ್ವಂತ ಕಟ್ಟಡಕ್ಕೆ ಇದೇ ೧೮ ನೇ ತಾರೀಖು ವರ್ಗಾಯಿಸುವ ಸಂಬಂಧದಲ್ಲಿ ಆದಿನದಿಂದ ೨೫ನೇ ತಾ॥ ವರೆಗೆ ಪ್ರತಿ ಬೆಳಗ್ಗೆ ಪೂಜೆ ಮತ್ತು ಸಂಜೆ ಉಪನ್ಯಾಸ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಮದ್ರಾಸಿನ ಜನಸಂಖ್ಯೆ ೧೫ ಲಕ್ಷ

೧೯೫೨ ನೇ ಸಾಲಿನಲ್ಲಿ ಮದರಾಸ್ ನಗರದ ಜನಸಂಖ್ಯೆಯು ೧೪,೮೪,೧೭೨ ಇತ್ತೆಂದು ಅಲ್ಲಿಯ ಅಂಕಿಅಂಶಗಳ ಇಲಾಖೆಯು ಪ್ರಕಟಿಸಿದೆ. ೧೯೫೧ ರಲ್ಲಿ ೧೪,೧೬,೯೫೬ ಇದ್ದು ಒಂದು ವರ್ಷದಲ್ಲಿಯೇ ಜನಸಂಖ್ಯೆಯು ೬೭ ಸಾವಿರದಷ್ಟು ಹೆಚ್ಚಿದೆ.

ಮದ್ರಾಸ್ ನ್ಯಾಯಾಧೀಶರಾಗಿ ನೇಮಕ

ಮದ್ರಾಸ್ ಶ್ರೇಷ್ಠ ನ್ಯಾಯಾಲಯಕ್ಕೆ ಅಲ್ಲಿಯ ನ್ಯಾಯವಾದಿಗಳಾದ ಶ್ರೀ ಉಮಾಮಹೇಶ್ವರಮ್ ಮತ್ತು ರಾಜಗೋಪಾಲಯ್ಯಂಗಾರ್‌ರನ್ನು ರಾಷ್ಟ್ರಾಧ್ಯಕ್ಷರು ನೇಮಿಸಿದ್ದಾರೆ.

ವನಸ್ಪತಿ ತುಪ್ಪಕ್ಕೆ ಪೌಷ್ಟಿಕ ಅಗತ್ಯ

ಇದೇ ಡಿಸೆಂಬರ್ ಒಂದನೇ ತಾರೀಖಿನಿಂದ ತಯಾರಿಸುವ ವನಸ್ಪತಿ ತುಪ್ಪಕ್ಕೆ ರಸಾಯನಿಕ 'ಎ' ವಿಟಮಿನ್ನನ್ನು ಸೇರಿಸಲೇಬೇಕೆಂದು ಕೇಂದ್ರ ಸರ್ಕಾರವು ಆಜ್ಞೆ ಹೊರಡಿಸಿದೆ.

ನೃತ್ಯ ಪ್ರೌಢಶಾಲೆ

ಮಣಿಪುರದಲ್ಲಿ ಭಾರತ ಸರ್ಕಾರವು ಒಂದು ನೃತ್ಯ ಪ್ರೌಢಶಾಲೆಯನ್ನು ಸ್ಥಾಪಿಸಲಿದೆ.

ಬಂದರು ವಿಸ್ತರಣಾಕಾರ್ಯ

ಮದರಾಸ್ ಬಂದರಿನ ವಿಸ್ತರಣ ಕಾರ್ಯಕ್ಕಾಗಿ ಕೇಂದ್ರ ಸರ್ಕಾರವು ೪॥ ಕೋಟಿ ರೂಪಾಯಿಗಳನ್ನು ಮಂಜೂರ್ಮಾಡಿದೆ.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)
16--11--53 ನೇ ರಾತ್ರಿ 10 ಗಂಟೆಗೆ
ಮೈಸೂರು ಟೌನ್‌ಹಾಲಿನಲ್ಲಿ
ನಾಟಕರತ್ನ ಜಿ. ಹೆಚ್. ವೀರಣ್ಣನವರು ಮತ್ತು ಜಯಮ್ಮನವರು ಅಭಿನಯಿಸುವರು
ಸದಾರಮೆ
ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೬

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೭೧

೧೭-೧೧-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಅಂತರ ಪ್ರಾಂತ್ಯಗಳಲ್ಲಿ ಸೌಹಾರ್ದ ಯೋಜನೆ

ಪ್ರತ್ಯೇಕತೆ ಮತ್ತು ಪ್ರಾಂತೀಯ ಮನೋಭಾವ ಹೋಗಲಾಡಿಸಲು

ಭಾರತದಲ್ಲಿ ಈಗ ಉಂಟಾಗುತ್ತಿರುವ ಪ್ರಾಂತೀಯ ಮತ್ತು ಪ್ರತ್ಯೇಕತೆ ಮನೋಭಾವಗಳನ್ನು ಹೋಗಲಾಡಿಸಿ, ಅಂತರ ಪ್ರಾಂತ್ಯಗಳಲ್ಲಿ ಸೌಹಾರ್ದ ಏರ್ಪಡಿಸಲು ಕೇಂದ್ರ ಸರ್ಕಾರದವರು ಒಂದು ಯೋಜನೆ ತಯಾರಿಸಿದ್ದಾರೆ. ಅದರ ಪ್ರಕಾರ ಒಂದು ಸಂಸ್ಥಾನದ ಕೆಲವು ವಿದ್ಯಾರ್ಥಿ ಮತ್ತು ಉಪಾಧ್ಯಾಯರುಗಳನ್ನು ರಜದ ಕಾಲದಲ್ಲಿ ಮತ್ತೊಂದು ಪ್ರಾಂತ್ಯಕ್ಕೆ ಕಳುಹಿಸಿ, ಉಭಯತ್ರರು ಸ್ನೇಹದಿಂದ ಕೆಲವು ದಿನಗಳು ಕಳೆದ. ವಿಚಾರ ವಿನಿಮಯ ಮಾಡಿಕೊಳ್ಳಲು ವ್ಯವಸ್ಥೆ ಮಾಡಲಾಗುವುದು.

ದೆಹಲಿ ಸಂಸ್ಥಾನವು ಇದಕ್ಕೆ ಒಪ್ಪುವುದಾದರೆ ಮುಂದಿನ ವರ್ಷ ಅದನ್ನು ಕಾರ್ಯರೂಪಕ್ಕೆ ತರಬೇಕೆಂದು ಕೇಂದ್ರ ಸರ್ಕಾರ ಸೂಚನೆ ಇತ್ತಿದೆ. ಸಂಚಾರದ ಖರ್ಚಿನ ಅರ್ಧಭಾಗವನ್ನು ಕೇಂದ್ರಸರ್ಕಾರ ವಹಿಸಿಕೊಳ್ಳುವುದು ಊಟ ಮತ್ತು ಇತರ ವ್ಯವಸ್ಥೆಗಳನ್ನು ಉಭಯ ಪ್ರಾಂತ್ಯಗಳೂ ವಹಿಸಿಕೊಳ್ಳಬೇಕಾಗುವುದು.

ಪ್ರಜಾಸಂಖ್ಯೆ ಅಪಾಯವೇನು ಹೆಚ್ಚುತ್ತಿಲ್ಲ

ಪ್ರಧಾನಿ ನೆಹರೂರ ಅಭಿಪ್ರಾಯ

ದೇಶದಲ್ಲಿ ಪ್ರಜಾಸಂಖ್ಯೆ ಹೆಚ್ಚುತ್ತಿರುವ ಬಗ್ಗೆ ಯಾವ ಕಳವಳವನ್ನು ಪಡಬೇಕಾಗಿಲ್ಲವೆಂದು ಪ್ರಧಾನಿ ಪಂಡಿತ ನೆಹರೂ ಅಭಿಪ್ರಾಯಪಟ್ಟಿದ್ದಾರೆ. ಈಗ ಜನಸಂಖ್ಯೆ ಹೆಚ್ಚುತ್ತಿರುವ ಶೇಕಡವಾರು ಅಪಾಯವೇನು ವಿಶೇಷವಲ್ಲ. ಒಟ್ಟಿನಲ್ಲಿ ದೇಶವು ದೊಡ್ಡದಾಗಿರುವುದರಿಂದ ಜನಸಂಖ್ಯೆಯೂ ಹೆಚ್ಚುತ್ತಿದೆ. ಕಾಲಕ್ರಮದಲ್ಲಿ ಅದು ಕಡಮೆಯಾಗುವುದು. ದೇಶದಲ್ಲಿ ಆಹಾರ ಉತ್ಪತ್ತಿಯೂ ಹೆಚ್ಚಾಗುವುದು--ಎಂದು ಅವರು ತಿಳಿಸಿದ್ದಾರೆ.

ವಿದ್ಯಾರ್ಥಿನಿಯರ ಉಡುಪು

ವಿದ್ಯಾರ್ಥಿನಿಯರು ಬಿಳಿಯ ಅಥವ ಕರಿಯ ಸಾದಾ ಸೀರೆ ಮತ್ತು ಪೂರ್ತಿ ತೋಳಿರುವ ಕುಪ್ಪಸಗಳನ್ನು ಮಾತ್ರ ಧರಿಸಿ ಕಾಲೇಜಿಗೆ ಬರಬೇಕೆಂದು ಪಾಕೀಸ್ತಾನದ ಚಿತ್ತಗಾಂಗಿನ ಕಾಲೇಜ್ ಪ್ರಿನ್ಸಿಪಾಲರು ಆಜ್ಞೆ ಮಾಡಿದ್ದಾರೆ.

★ ಬ್ರಿಟಿಷ್ ಗಯಾನ ಮಾಜಿ ಪ್ರಧಾನಿ ಡಾ॥ ಚಡ್ಡಿ ಜಗನ್‌ರವರು ಭಾರತಕ್ಕೆ ಇದೇ ಗುರುವಾರದ ದಿನ ಲಂಡನ್ನಿನಿಂದ ಹೊರಡುವರೆಂದು ತಿಳಿಯಬರುತ್ತದೆ.

ಪುರಸಭಾ ಚುನಾವಣೆ

ಸ್ವತಂತ್ರ ಉಮೇದುವಾರರು

ಮೈಸೂರು ೧೭

ಮೈಸೂರು ಪುರಸಭಾ ಚುನಾವಣೆಗೆ ಕೆಳಗೆ ಕಂಡವರು ಸ್ವತಂತ್ರರಾಗಿ ಉಮೇದುವಾರಿಕೆಯನ್ನು ಸಲ್ಲಿಸಿದ್ದಾರೆ:—

ಶ್ರೀಗಳಾದ ರಾಮಲಿಂಗಂ, ಕೆ. ಬಿ. ಶ್ರೀನಿವಾಸಯ್ಯ ಮತ್ತು ಗೋವಿಂದರಾಜು ೧ ನೇ ವಾರ್ಡ್, ಶ್ರೀ ಶ್ರೀಕಂಠಶರ್ಮ ೩, ಶ್ರೀ ಎಸ್. ಗೋಪಾಲಶಾಸ್ತ್ರಿ ೫, ಶ್ರೀಗಳಾದ ಮಹಮುದ್‌ಷರೀಫ್, ಹೆಚ್. ಕೆ. ಕೃಷ್ಣಮೂರ್ತಿ ಮತ್ತು ಕರಿಯಣ್ಣ ೭, ಶ್ರೀ ಸೇತುರಾಮ್ ೮, ಶ್ರೀಗಳಾದ ಮಹಮುದ್ ಬುಡನ್ ಮತ್ತು ಎಂ. ಆರ್. ಸುದರ್ಶನ್, ಶ್ರೀ ಎನ್. ಎಸ್ ನಾರಾಯಣಸ್ವಾಮಿ ೧೪, ಶ್ರೀ ಟಿ ಜಿ. ಲಕ್ಷ್ಮಣಮೊದಲಿಯಾರ್, ಮತ್ತು ಎಂ ರಾಮಕೃಷ್ಣಯ್ಯ ೧೬, ಶ್ರೀ ನಂಜೇಗೌಡ ೧೭, ಶ್ರೀ ಜಿ. ಎಸ್. ತಾಂಡವಮೂರ್ತಿ ೧೯, ಶ್ರೀಗಳಾದ ವೆಂಕಟಲಿಂಗಯ್ಯ, ಪಗ್ಗಪ್ಪ ಮತ್ತು ಟಿ. ಎಸ್. ರಾಜ್ ೨೦. ಶ್ರೀಗಳಾದ ಸಿದ್ದರರಾಮಶೆಟ್ಟಿ, ಟಿ. ವಿ. ಕೃಷ್ಣಮೂರ್ತಿ ಮತ್ತು ಕೆ. ವಿಶ್ವನಾಥ್ ೨೧, ಶ್ರೀ ರಾಮಲಿಂಗಯ್ಯ ೨೨, ಶ್ರೀಗಳಾದ ಈಶ್ವರ್ ಮತ್ತು ಶ್ರೀಕಂಠಪ್ಪ ೨೩, ಶ್ರೀಗಳಾದ ಬಿ. ಎಂ. ಸಬೀಲ್ ಮತ್ತು ಅಬ್ದುಲ್ ಷರೀಫ್ ೨೪, ಆಹಮುದಾಲಿಖಾನ್ ೨೫, ಶ್ರೀ ಮೀರ್‌ನೂರ್‌ಹುಸೇನ್ ೨೬, ಶ್ರೀಗಳಾದ ವಾರಿಸ್‌ಆಲಿ, ಅಬ್ದುಲ್ ಜಬ್ಬಾರ್‌ಖಾನ್, ಅಬ್ದುಲ್ ಖಾದರ್ ೨೭, ಶ್ರೀಗಳಾದ ಮಹಮುದ್ ಯಾಕೂಬ್, ಖಲಿಲುಲ್ಲಾ, ಅಬ್ದುಲ್ ಗಫಾರ್‌ಖಾನ್ ೨೯, ಶ್ರೀಗಳಾದ ಮಹಮದ್‌ಸೇಟ್, ಸಯದ್ ಅಬ್ದುಲ್ ರಹಿಮಾನ್ ೩೧, ಶ್ರೀಗಳಾದ ಅಜೀಜ್‌ಸೇಟ್, ಜಿ. ಆಹಮುದ್‌ಖಾನ್, ಬಿ. ಸುಬ್ಬಸಿಂಗ್ ೩೩, ಶ್ರೀಗಳಾದ ಪಾಷಾಸಾಬ್, ಅಹಮುದಾಲಿಖಾನ್, ಫಾ॥ಆಡಿಯೋ ೩೩, ಶ್ರೀಗಳಾದ ಗುರುಪಾದಂ, ಬಿ. ಸುಬ್ಬಣ್ಣ ೩೫, ಶ್ರೀ ಎಂ. ಮರಿಯಪ್ಪ ೩೬, ಮೀರ್‌ನೂರ್ ಹುಸೇನ್ ೩೭.

ರಿಸರ್ವ್‌ಸ್ಥಾನಕ್ಕೆ ಶ್ರೀಗಳಾದ ಎಸ್. ಎಂ. ಸಿದ್ದಯ್ಯ, ಪಿ. ಎಲ್. ಕುಮಾರಸ್ವಾಮಿ, ಚಿಕ್ಕಲಿಂಗಯ್ಯ ಮತ್ತು ಕೆ. ಬಿ. ಶ್ರೀನಿವಾಸಯ್ಯರವರು ಸ್ವತಂತ್ರರಾಗಿ ನಿಂತಿದ್ದಾರೆ.

ವಿಶ್ವವಿದ್ಯಾಲಯ ಮಟ್ಟದಲ್ಲಿ ಪ್ರತ್ಯೇಕ ಮಹಿಳಾ ಕಾಲೇಜ್ ಅಗತ್ಯವಿಲ್ಲ

ಸೆನೆಟ್ ಸಭೆಯಲ್ಲಿ ಅಭಿಪ್ರಾಯ

ಮೈಸೂರು ೧೭

ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯು ನಿನ್ನೆ ಕ್ರಾಫರ್ಡ್ ಭವನದಲ್ಲಿ ಡಾ॥ ಬಿ. ಎಲ್. ಮಂಜುನಾಥ್‌ರ ಅಧ್ಯಕ್ಷತೆಯಲ್ಲಿ ನಡೆದು, ವಿದ್ಯಾ ಸುಧಾರಣಾ ಸಮಿತಿಯ ಶಿಫಾರಸುಗಳನ್ನು ಪರಿಶೀಲಿಸಿತು.

ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಮಹಿಳೆಯರಿಗಾಗಿ ಪ್ರತ್ಯೇಕ ಕಾಲೇಜುಗಳ ಅವಶ್ಯಕತೆ ಈಗ ಕಡಮೆ ಆಗುತ್ತಿದೆ ಎಂಬ ವಿದ್ಯಾ ಸುಧಾರಣಾ ಸಮಿತಿಯ ಸಲಹೆಯನ್ನು ಸೆನೆಟ್ ಸಭೆಯು ಅಂಗೀಕರಿಸಿತು. ಮೈಸೂರು ಮಹಾರಾಣಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀಮತಿ ಜಯಲಕ್ಷ್ಮಮ್ಮಣ್ಣಿಯವರು ಅದನ್ನು ವಿರೋಧಿಸಿ, ಅಂತಹ ಪ್ರತ್ಯೇಕ ಕಾಲೇಜು ಮಹಿಳೆಯರಿಗೆ ಇರಬೇಕಾದ ಆವಶ್ಯಕತೆಯನ್ನು ತಿಳಿಸಿದರು.

ಸರ್ಕಾರಿ ಕೆಲಸಗಳಿಗೆ ಡಿಗ್ರಿ ಅರ್ಹತೆ ಇರಬೇಕೆಂಬುದನ್ನು ಒತ್ತಾಯ ಮಾಡಕೂಡದೆಂಬ ಸಮಿತಿಯ ಸಲಹೆಯನ್ನು ಸಭೆಯು ಅಂಗೀಕರಿಸಿತು.

ಈ ವಿಚಾರದಲ್ಲಿ ಉಪಸ್ಥಾನಪತಿಗಳಾದ ಡಾ॥ ಮಂಜುನಾಥ್‌ರವರು ಮಾತನಾಡಿ, ಸಾಮಾನ್ಯ ಕೆಲಸಗಳಿಗೆ ಪದವಿಗಳಿರಬೇಕೆಂದು ಸರ್ಕಾರ ಮತ್ತು ಇತರ ಸಂಸ್ಥೆಗಳು ಒತ್ತಾಯಮಾಡುತ್ತಿರುವುದರಿಂದ, ವಿಶ್ವವಿದ್ಯಾನಿಲಯದಲ್ಲಿ ವಿಶೇಷ ಹಣ ಪೋಲಾಗುತ್ತಿದೆಯೆಂದೂ, ಮೇಲ್ಕಂಡ ಸುಧಾರಣಾ ಸಮಿತಿಯ ಸಲಹೆಯನ್ನು ಒಪ್ಪುವುದರಿಂದ ವಿಶೇಷ ಹಣ ಉಳಿದು ಅದನ್ನು ಟೆಕ್ನಿಕಲ್ ಮುಂತಾದ ಕೋರ್ಸುಗಳಿಗೆ ಖರ್ಚುಮಾಡಬಹುದೆಂದು ತಿಳಿಸಿದರು.

ಇಂಟರ್‌ಮೀಡಿಯೆಟ್‌ನಲ್ಲಿ ಕನ್ನಡ ಮಾಧ್ಯಮವಾಗಿ ಕೂಡಲೇ ಜಾರಿಗೆ ತರಬೇಕೆಂಬ ಸಲಹೆಯನ್ನು ಸೆನೆಟ್ ಸಭೆಯು ಅಂಗೀಕರಿಸಿತು. ಅದಕ್ಕೆ ಪಠ್ಯಪುಸ್ತಕಗಳನ್ನು ಕೂಡಲೇ ತಯಾರಿಸಬೇಕೆಂದೂ ನಿರ್ಧರಿಸಲಾಯಿತು.

ಶ್ರೀಗಳಾದ ಮುಲ್ಕಾ ಗೋವಿಂದರೆಡ್ಡಿ ಮತ್ತು ಅಬ್ದುಲ್ ರಹಿಮಾನ್‌ರವರು ಅದನ್ನು ವಿರೋಧಿಸಿ, ಇದರಿಂದ ಮೈಸೂರಿನ ವಿದ್ಯಾರ್ಥಿಗಳು ಹೊರಗಡೆ ಹೋಗುವುದಕ್ಕೆ ಕಷ್ಟವಾಗುವುದೆಂದುತಿಳಿಸಿ, ಭಾಷಾವಾರು ಪ್ರಾಂತ್ಯ ಪುನರ್ ವಿಮರ್ಶನಾ ಸಮಿತಿಯ ವರದಿ ಬರುವವರೆಗೂ ಕಾಯಬೇಕೆಂದು ಅಭಿಪ್ರಾಯಪಟ್ಟರು.

ಅನಂತರ ಸಭೆಯು ವಿಶ್ವವಿದ್ಯಾನಿಲಯದ ವರದಿಯನ್ನು ಪರಿಶೀಲಿಸಿತು.

ಪುರಸಭೆಯಲ್ಲಿ ವಿಚಾರಣಾ ಕಛೇರಿ ಅವಶ್ಯಕತೆ

ಮೈಸೂರು ೧೭

ಪುರಸಭಾ ಚುನಾವಣೆಗೆ ಸಂಬಂಧಪಟ್ಟಂತೆ ಅನೇಕ ಬದಲಾವಣೆಗಳಾಗಿರುವುದರಿಂದ ಆ ಬಗ್ಗೆ ಜನರಿಗೆ ಬೇಕಾದ ವಿಷಯಗಳನ್ನು ತಿಳಿಸುವುದಕ್ಕಾಗಿ ಪುರಸಭೆಯಲ್ಲಿ ಕೂಡಲೇ ಒಂದು 'ವಿಚಾರಣಾ ಕಛೇರಿ' ಯನ್ನು ತೆರೆಯಬೇಕೆಂದು ಶ್ರೀ ಎಂ. ಎನ್. ಉಗ್ರಪ್ಪನವರು ಸಲಹೆಯಿತ್ತಿದ್ದಾರೆ.

ಲಾಟರಿ ಮತ್ತು ಸ್ಪರ್ಧೆ ತೆರಿಗೆ

ಮೈಸೂರು ೧೭

ಮೈಸೂರು ಲಾಟರಿ ಮತ್ತು ಬಹುಮಾನ ವಿನಿಯೋಗ ಹತೋಟಿ ಮತ್ತು ತೆರಿಗೆ ಶಾಸನದಂತೆ ಸರ್ಕಾರವು ಈ ತೆರಿಗೆಯನ್ನು ಶೇಕಡ ಹನ್ನೆರಡೂವರೆ ಎಂದು ನಿಗದಿಮಾಡಿದೆ.

ಭಾಷಾವಾರು ಪ್ರಾಂತ್ಯ ಚಳುವಳಿ ಕೂಡದು

ಕಾಂಗ್ರೆಸ್ಸಿಗರಿಗೆ ನೆಹರೂ ಸೂಚನೆ

ಪ್ರಾಂತ್ಯಗಳ ಪುನರ್ವಿಂಗಡನೆ ಪ್ರಶ್ನೆಯನ್ನು ಪರಿಶೀಲಿಸಲು ಕೇಂದ್ರಸರ್ಕಾರವು ಉನ್ನತಾಧಿಕಾರವುಳ್ಳ ಸಮಿತಿಯನ್ನು ರಚಿಸುವುದರಿಂದ ಭಾಷಾವಾರು ಪ್ರಾಂತ್ಯ ರಚನೆಗಾಗಿ ಚಳುವಳಿ ನಡೆಸುವುದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನಿರ್ಧಾರಕ್ಕೆ ವಿರುದ್ಧವಾಗುತ್ತದೆ. ಆದ್ದರಿಂದ ಅಂತಹ ಚಳುವಳಿ ನಡೆಸಕೂಡದೆಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ಎಲ್ಲಾ ಪ್ರದೇಶ ಕಾಂ॥ ಅಧ್ಯಕ್ಷರಿಗೆ ಬರೆದಿದ್ದಾರೆ.

● ಕೋಲಾರದಲ್ಲಿ ಅಕ್ಕಿಯನ್ನು ರೂಪಾಯಿಗೆ ೩ಸೇರಿನಂತೆ ಮಾರಲಾಗುತ್ತಿದೆ ಯೆಂದು ತಿಳಿಯಬರುತ್ತದೆ.

ಕಾಶ್ಮೀರದಲ್ಲಿ ಪರರಾಷ್ಟ್ರಗಳ ಸೈನ್ಯ ನೆಲೆಗೆ ಅವಕಾಶ ಕೊಡುವುದಿಲ್ಲ

ಮುಖ್ಯ ಮಂತ್ರಿ ಗುಲಾಂ ಮಹಮದ್‌ರವರ ಘೋಷಣೆ

ಗಿಲ್ಜಿಟ್ ಕಾಶ್ಮೀರದ ಒಂದು ಭಾಗ. ಅಲ್ಲಿ ಪರರಾಷ್ಟ್ರಗಳ ಸೈನ್ಯವನ್ನಿಡಲು ಅಥವಾ ಅದರ ನೆಲೆಯನ್ನಾಗಿ ಮಾಡಲು ಪಾಕೀಸ್ತಾನ ಸರ್ಕಾರಕ್ಕೆ ಯಾವ ರೀತಿಯಾದ ಹಕ್ಕಿಲ್ಲ. ಹಾಗೇನಾದರೂ ಪಾಕೀಸ್ತಾನ ವರ್ತಿಸಿದಲ್ಲಿ ಕಾಶ್ಮೀರಿಗಳು ಅದನ್ನು ಸಹಿಸುವುದಿಲ್ಲ. ಸಂಪೂರ್ಣವಾಗಿ ವಿರೋಧಿಸುತ್ತಾರೆ—ಎಂದು ಕಾಶ್ಮೀರ ಮುಖ್ಯಮಂತ್ರಿ ಭಕ್ಷಿ ಗುಲಾಂ ಮಹಮದ್‌ರವರು ಕಾಶ್ಮೀರದಲ್ಲಿ ಅಮೆರಿಕಾವು ಸೈನ್ಯ ನೆಲೆಗಳನ್ನು ಏರ್ಪಡಿಸಲು ಪಾಕೀಸ್ತಾನವು ಅವಕಾಶ ಕಲ್ಪಿಸುವುದೆಂಬ ಸುದ್ದಿಯ ಮೇಲೆ ಟೀಕಿಸುತ್ತಾ ತಿಳಿಸಿದ್ದಾರೆ.

ಅನೇಕ ಬಲಿದಾನಗಳನ್ನು ಮಾಡಿ ಕಾಶ್ಮೀರಿಗಳು ಸ್ವಾತಂತ್ರ್ಯವನ್ನು ಸಂಪಾದಿಸಿಕೊಂಡಿದ್ದಾರೆ. ಅದನ್ನು ಈಗ ಹಾಳು ಮಾಡಿಕೊಳ್ಳಲು ಜನತೆ ಸರ್ವಥಾ ಸಿದ್ಧವಿಲ್ಲ. ಕಾಶ್ಮೀರವನ್ನು ಪರ ರಾಷ್ಟ್ರಗಳ ಸೈನ್ಯದ ನೆಲೆ ಅಥವಾ ಯುದ್ಧದ ನೆಲೆಯನ್ನಾಗಿ ಮಾರ್ಪಡಿಸುವುದಕ್ಕೆ ಇಲ್ಲಿಯ ಜನತೆಯು ತೀವ್ರ ವಿರೋಧಿಸುತ್ತಾರೆ. ಅಲ್ಲದೆ ಪಾಕೀಸ್ತಾನವು ಸಾಮ್ರಾಜ್ಯ ಷಾಹಿ ರಾಷ್ಟ್ರಗಳೊಡನೆ ಸೇರುವುದಕ್ಕೆ ಯತ್ನಿಸುತ್ತಲಿರುವುದು ದುರದೃಷ್ಟವೆಂದೂ ಪ್ರಧಾನಿ ಗುಲಾಂ ಮಹಮದ್‌ರವರು ಹೇಳಿದ್ದಾರೆ.

ಮದ್ರಾಸಿನಲ್ಲಿರುವ ಆಂಧ್ರ ಕಛೇರಿಗಳು ಹೈದರಾಬಾದಿಗೆ

ಮದ್ರಾಸಿನಲ್ಲಿರುವ ಆಂಧ್ರ ಕಛೇರಿಗಳನ್ನೆಲ್ಲಾ ಹೈದರಾಬಾದ್ ನಗರಕ್ಕೆ ಬದಲಾಯಿಸುವ ವಿಷಯವನ್ನು ಆಂಧ್ರ ಮಂತ್ರಿಮಂಡಲವು ಪರಿಶೀಲಿಸುತ್ತಲಿರುವುದಾಗಿ ತಿಳಿಯಬರುತ್ತದೆ. ಈ ವಿಷಯವನ್ನು ಆಂಧ್ರ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ಬೆಂಗಳೂರಿನಲ್ಲಿ ತಿಳಿಸುತ್ತಾ, ಹೈದರಾಬಾದಿನ ಮೇಲೆ ಯಾವ ಪರಿಣಾಮವನ್ನು ಉಂಟುಮಾಡಲು ಈ ಯೋಜನೆಯೇನು ಇಲ್ಲ. ಈಗ ಮದ್ರಾಸಿನಲ್ಲಿ ಆಂಧ್ರ ಕಛೇರಿಗಳಿಗಾಗಿ ಮಾಹೆಯಾನಾ ೧೫೦೦೦ ರೂಪಾಯಿಗಳ ಬಾಡಿಗೆಯನ್ನು ಕೊಡಲಾಗುತ್ತಿದೆ ಅಲ್ಲದೆ ಮದ್ರಾಸಿನಲ್ಲಿ ಮನೆಗಳ ಅಭಾವವಿದೆ. ಹೈದರಾಬಾದಿನಲ್ಲಾದರೆ ಅನೇಕ ಮನೆಗಳು ಖಾಲಿ ಇವೆ. ಅಲ್ಲದೆ ಬಾಡಿಗೆಯೂ ಕಡಮೆಯಾಗಿದೆ ಆದ್ದರಿಂದ ಈ ವರ್ಗಾವಣೆ ವಿಷಯವನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

● ತುಮಕೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀ ಟಿ. ಸುಬ್ರಹ್ಮಣ್ಯಂರವರು ಚುನಾಯಿತರಾಗಿದ್ದಾರೆ.

OFFICE OF THE MUNICIPAL COMMISSIONER
CITY MUNICIPAL CONCIL, MYSORE.
Dated 11th November 1953. No. E, 1. PR 27/53-54

NOTIFICATION

Government have in their order No. L. 4557-59/C M 27-53-68 dated 18-7-53 sanctioned the byelaws framed under section 51 (1) (Z) of the City Municipalities Act regarding licensing, regulating and controlling of surveyors, plumbers and sanitary contractors. It is therefore notified to the public that plans prepared by unlicensed surveyors submitted to this office on and after the 1st December 1953 will not be considered. It is also notified to all concerned that licenses for the surveyors' plumbers and sanitary contractors will also be issued by this office in future and persons who do not possess license issued by this office and violating the conditions will be liable on conviction to a fine of Rs. 50/- Detailed information if any required in this regard my be had from the Municipal Engineer in person during office hours.

Sd. N. LAKSHMANA RAU
Municipal Commissioner

ಭಾರತಕ್ಕೆ ತಿಳಿಸದೆ ಅಮೆರಿಕಾ-ಪಾಕ್ ರಕ್ಷಣಾ ಒಪ್ಪಂದವಿಲ್ಲ

ಅಮೆರಿಕದ ಉನ್ನತಾಧಿಕಾರಿಗಳ ಹೇಳಿಕೆ

ಪಾಕೀಸ್ತಾನದ ಗೌರ್ನರ್ ಜನರಲ್‌ರವರು ಅಮೆರಿಕಾವಿಗೆ ತೆರಳಿ ಅಲ್ಲಿ ಅಧ್ಯಕ್ಷ ಐಸೆನ್‌ಹೋವರ್‌ರವರನ್ನು ಭೇಟಿಮಾಡಿ ಅವರೊಡನೆ ಉಭಯ ರಾಷ್ಟ್ರಗಳ ನಡುವೆ ರಕ್ಷಣಾ ಒಪ್ಪಂದದ ವಿಷಯದಲ್ಲಿ ಮಾತುಕತೆನಡೆಸುತ್ತಲಿದ್ದರೆಂಬ ಸುದ್ದಿಯು ಹೊರಬಿದ್ದೊಡನೆಯೇ ಅಮೇರಿಕಾದಲ್ಲಿರುವ ಭಾರತ ರಾಯಭಾರಿ ಕಛೇರಿಯವರು ಅಮೇರಿಕಾ ಸರ್ಕಾರದ ಸ್ಪಷ್ಟೀಕರಣವನ್ನು ಕೇಳಿದಾಗ ಈರೀತಿಯಾದ ಒಪ್ಪಂದ ಆಗುವ ವಿಷಯದಲ್ಲಿ ಯಾವ ತೀರ್ಮಾನವೂ ಆಗಿಲ್ಲವೆಂದೂ ಪರಿಶೋಧಕ ಮಾತು ನಡೆಯುತ್ತಿರುವುದಾಗಿಯೂ ತಿಳಿಸಿದ್ದಾರೆ ಹಾಗೇನಾದರೂ ಒಪ್ಪಂದವಾಗುವ ಸಂದರ್ಭ ಒದಗಿದರೆ ಭಾರತಕ್ಕೆ ವಿಷಯವನ್ನು ಪೂರ್ವಭಾವಿ ತಿಳಿಸಲಾಗುತ್ತದೆಯೆಂದೂ ಅಲ್ಲಿಯ ವಿದೇಶಾಂಗಕಛೇರಿ ಅಧಿಕಾರಿಗಳು ಉತ್ತರ ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಮಾರಾಟ ತೆರಿಗೆ ಪ್ರಶ್ನೆ ಪರಿಶೀಲನೆ

ರಾಜ್ಯಾಂಗದ ೨೮೬ನೇ ವಿಧಿಯನ್ನನುಸರಿಸಿ ಭಾರತ ಶ್ರೇಷ್ಠ ನ್ಯಾಯಾಲಯವು ಮಾರಾಟ ತೆರಿಗೆ ವಿಧಿಸಿರುವುದರಲ್ಲಿ ಪ್ರಾಂತ್ಯ ಸರ್ಕಾರಗಳಿಗಿರುವ ಅಧಿಕಾರ ವಿಷಯದಲ್ಲಿ ಈಚೆಗೆ ಇತ್ತಿರುವ ತೀರ್ಪನ್ನು ಪರಿಶೀಲಿಸಲು ಎಲ್ಲಾ ಪ್ರಾಂತ್ಯ ಸರ್ಕಾರದ ಆರ್ಥಿಕ ಶಾಖಾಧಿಕಾರಿಗಳೂ, ಕೇಂದ್ರ ಸರ್ಕಾರದ ಹಣಕಾಸಿನ ಇಲಾಖಾಧಿಕಾರಿಗಳೂ ದೆಹಲಿಯಲ್ಲಿ ಸಭೆ ಸೇರಿರುವರು.

ಮದ್ರಾಸಿನಲ್ಲಿ ಮತ್ತೊಂದು ಮಹಿಳಾ ಕಾಲೇಜು

ಮದ್ರಾಸಿನಲ್ಲಿ ಡಾ॥ ಅಳಗಪ್ಪ ಚೆಟ್ಟಿಯಾರ್‌ರವರು ಮತ್ತೊಂದು ಮಹಿಳಾ ಕಾಲೇಜನ್ನು ಸ್ಥಾಪಿಸಲಿರುವರೆಂದು ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು. ೧೬—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೩—	೧೯—೬
ಎಳ್ಳು	೭೨—೧೦	೭೯—೧೪
ಹರಳು	೩೯—೧೪	೩೭—೬
ಹುಚ್ಚೆಳ್ಳು	—	—
ಹುರಳಿ	೩೦—೪	೩೭—೧೦
ಹೆಸರು	೨೬—೪	೩೭—೧೪
ಅಲಸಂದೆ	೩೫—	೫೫—
ಉದ್ದು	೫೫—	—
ಮೆಣಸಿನಕಾಯಿ	೧೩—	೩೩—
ಹುಣಸೇಹಣ್ಣು	೮—೪	—
ಬೆಲ್ಲ	—	—
ತೆಂಗಿನಕಾಯಿ	೧೪೩—	೨೯೩

ಭಾರತ--ಪಾಕ್ ರೈಲ್ವೆ ಅಧಿಕಾರಿಗಳ ಸಭೆ

ರೈಲ್ವೆ ಸಾಗಾಣಿಕೆ ಮತ್ತು ರೈಲ್ವೆ ವಸ್ತುಗಳ ವಿಭಜನೆ ಮುಂತಾದ ವಿಷಯಗಳಿಗೆ ಸಂಬಂಧಪಟ್ಟಂತೆ ಭಾರತ ಪಾಕೀಸ್ತಾನ ಅಧಿಕಾರಿಗಳ ನಡುವೆ ಕರಾಚಿಯಲ್ಲಿ ಮಾತುಕತೆಗಳು ನಡೆಯುತ್ತಲಿವೆ.

ಪಾಕೀಸ್ತಾನ-ಅಮೆರಿಕಾ ಸೈನ್ಯ ಒಪ್ಪಂದಕ್ಕೆ ವಿರೋಧ

ಪಾಕೀಸ್ತಾನವು ಅಮೆರಿಕಾದೊಡನೆ ಸೈನ್ಯ ಒಪ್ಪಂದವನ್ನು ಮಾಡಿಕೊಳ್ಳುವುದೆಂಬ ವಿಷಯದಲ್ಲಿ ಪಾಕೀಸ್ತಾನದಲ್ಲಿರುವ ಕರಾಚಿಯ ಶಾಂತಿ ಮಂಡಲಿ, ಅವಾಮಿ ಲೀಗ್ ಮುಂತಾದುವು ತೀವ್ರವಾಗಿ ವಿರೋಧವನ್ನು ವ್ಯಕ್ತಪಡಿಸಿವೆ.

ಟಿ. ಪ್ರಕಾಶಂ ಬೆಂಗಳೂರಿನಲ್ಲಿ

ಆಂಧ್ರ ಪ್ರಾಂತ್ಯ ಮುಖ್ಯಮಂತ್ರಿ ಶ್ರೀ ಟಿ ಪ್ರಕಾಶಂರವರು ಬೆಂಗಳೂರಿಗೆ ಆಗಮಿಸಿದ್ದಾರೆ. ಕೈವಿಗ್ಗದವರಿಗೆ ಮೈಸೂರು ಸರ್ಕಾರವು ನೀಡಿರುವ ನೆರವು ಮತ್ತು ಇತರ ವಿಷಯಗಳನ್ನು ಅವರು ಪರಿಶೀಲಿಸುತ್ತಲಿರುವುದಾಗಿ ತಿಳಿಯಬರುತ್ತದೆ.

ಭೂದಾನ ಯಜ್ಞಕ್ಕೆ ಇಡೀ ಆಸ್ತಿ

ಹೈದರಾಬಾದ್ ಸಂಸ್ಥಾನದ ಲಾಸೂರು ಗ್ರಾಮದ ೯೦ ವರ್ಷದ ಸುನೂಬಾಯ್ ಕಿರ್ಪ ಎಂಬ ಕಣ್ಣುಕಾಣದ ವೃದ್ಧ ಮಹಿಳೆಯು ತನ್ನ ಇಡೀ ೬ ಎಕರೆ ಭೂಮಿ ಆಸ್ತಿಯನ್ನು ಭೂದಾನಯಜ್ಞಕ್ಕೆ ಕೊಟ್ಟಿದ್ದಾಳೆ.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)
17--11--53 ನೇ ರಾತ್ರಿ 10 ಗಂಟೆಗೆ
ಮೈಸೂರು ಟೌನ್‌ಹಾಲಿನಲ್ಲಿ
ನಾಟಕರತ್ನ ಜಿ. ಹೆಚ್. ವೀರಣ್ಣನವರು ಮತ್ತು ಜಯಮ್ಮನವರು ಅಭಿನಯಿಸುವರು
ಗುಲೇ-ಬಕಾವಲಿ
ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋ॰ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೭೨

೧೮-೧೧-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಖಾದಿ ಮತ್ತು ಕೈಮಗ್ಗದ ಕೈಗಾರಿಕೆಗೆ ಸಹಾಯ

ಖಾದಿ ಮತ್ತು ಕೈಮಗ್ಗದ ಕೈಗಾರಿಕೆ ಅಭಿವೃದ್ಧಿಗಾಗಿ ಮಿಲ್ ಬಟ್ಟೆಗಳ ಮೇಲೆ ಹಾಕಿರುವ ತೆರಿಗೆಯಿಂದ ಬಂದ ಹಣದ ಪೈಕಿ, ೨ ಕೋಟಿ ರೂಗಳನ್ನು ಖಾದಿ ಅಭಿವೃದ್ಧಿ ಮತ್ತು ೪ ಕೋಟಿ ರೂಪಾಯಿಗಳನ್ನು ಕೈಮಗ್ಗದ ಅಭಿವೃದ್ಧಿಗಾಗಿ ೧೯೫೩–೫೪ನೇ ಸಾಲಿಗೆ ಕೊಡಲಾಗಿದೆ.

ಅದರ ಪೈಕಿ ಮೈಸೂರಿಗೆ ೬.೧ ಲಕ್ಷ, ಮದರಾಸಿಗೆ ೧.೨೫ ಕೋಟಿ. ಬೊಂಬಾಯಿಗೆ ೨೮.೩೮ ಲಕ್ಷ, ಯು. ಪಿ. ಗೆ ೨೦.೩೮ ಲಕ್ಷ, ಬಿಹಾರಿಗೆ ೧೨.೧೪ ಲಕ್ಷ, ಒರಿಸ್ಸಾಗೆ ೫.೮೩ ಲಕ್ಷ, ಹೈದರಾಬಾದಿಗೆ ೧೨.೨೬ ಲಕ್ಷ, ತಿರುವಾಂಕೂರ್-ಕೊಚ್ಚಿಗೆ ೪.೭೫ ಲಕ್ಷ, ಸೌರಾಷ್ಟ್ರಕ್ಕೆ ೫೦ ಸಾವಿರ ಮತ್ತು ಭೂಪಾಲಿಗೆ ೧೩.೨೫೦ ರೂಪಾಯಿಗಳನ್ನು ಕೊಡಲಾಗಿದೆ.

ಭಾರತ ಸರ್ಕಾರದ ಎಲ್ಲಾ ಕಛೇರಿಗಳು ಇನ್ನುಮುಂದೆ ಕರ್ಟನ್, ಟವಲ್ ಮುಂತಾದ ವಸ್ತುಗಳಿಗೆ ಖದ್ದರನ್ನೇ ಉಪಯೋಗಿಸಬೇಕೆಂದು ಸೂಚನೆ ಕೊಡಲಾಗುವುದೆಂದು ಕೇಂದ್ರ ವಾಣಿಜ್ಯ ಸಚಿವರು ತಿಳಿಸಿದ್ದಾರೆ.

ರೋಮಿಗೆ ಆಹಾರ ಸಚಿವರ ಪ್ರಯಾಣ

ರೋಂನಲ್ಲಿ ನಡೆಯುವ ಪ್ರಪಂಚ ಆಹಾರ ಮತ್ತು ಸಂಸ್ಥೆಯ ಅಧಿವೇಶನದಲ್ಲಿ ಕೇಂದ್ರ ಸರ್ಕಾರದ ಪರವಾಗಿ ಭಾಗವಹಿಸಲು ಮೈಸೂರಿನ ಆಹಾರ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ನಾಳೆ ಬೆಳಗ್ಗೆ ಬೆಂಗಳೂರಿನಿಂದ ಪ್ರಯಾಣ ಮಾಡಿ, ೨೧ನೇ ತಾರೀಖು ವಾಯುವ್ಯಾಘ್ನ ವಿಮಾನದಲ್ಲಿ ಬೊಂಬಾಯಿನಿಂದ ರೋಮಿಗೆ ತೆರಳುವರು.

ಭಾರತ-ಟಿಬೆಟ್ ಸೌಹಾರ್ದ ಮಾತುಕತೆ

ಭಾರತ ಮತ್ತು ಟಿಬೆಟ್ ದೇಶಗಳ ನಡುವೆ ಸೌಹಾರ್ದ ಮಾತುಕತೆಗಳನ್ನು ನಡೆಸಲು ಪೀಕಿಂಗಿನಲ್ಲಿ ಸದ್ಯದಲ್ಲೇ ಒಂದು ಸಮ್ಮೇಳನ ನಡೆಸಲು ಚೀಣಾ ಸರ್ಕಾರ ಒಪ್ಪಿದೆಯೆಂದು ಪ್ರಧಾನಿ ನೆಹರೂ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಕಾರ್ಯನಿರತ ಪತ್ರಿಕೋದ್ಯೋಗಿ ಕಾರ್ಮಿಕರು

ಕಾರ್ಯನಿರತ ಪತ್ರಿಕೋದ್ಯೋಗಿಗಳನ್ನು ಕೈಗಾರಿಕಾ ವಿವಾದ ಶಾಸನ ಉದ್ದಿಶ್ಯಕ್ಕಾಗಿ ಅವರನ್ನು ಕಾರ್ಮಿಕರೆಂದು ಪರಿಗಣಿಸಲು ಸರ್ಕಾರ ಪರಿಶೀಲಿಸುತ್ತಿದೆಯೆಂದು ಕೇಂದ್ರ ಕಾರ್ಮಿಕ ಉಪಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಚುನಾವಣೆ ಪ್ರಚಾರದಲ್ಲಿ ಸರ್ಕಾರಿ ನೌಕರರ ಪಾತ್ರ

ಭಾಗವಹಿಸಕೂಡದೆಂದು ಕೇಂದ್ರಸರ್ಕಾರದ ಎಚ್ಚರಿಕೆ

ಸರ್ಕಾರಿ ನೌಕರರು ಚುನಾವಣೆ ಚಟುವಟಿಕೆಗಳಲ್ಲಿ ಭಾಗವಹಿಸಕೂಡದೆಂದು ನಿಷೇಧಿಸಿದೆ. ಇತ್ತೀಚೆಗೆ ಕೆಲವು ಸರ್ಕಾರಿ ಕಾರ್ಖಾನೆಗಳ ನೌಕರರು ರಜಾ ತೆಗೆದುಕೊಂಡು, ತಿರುವಾಂಕೂರ್-ಕೊಚ್ಚಿಯಲ್ಲಿ ನಡೆಯುವ ಚುನಾವಣಾ ಪ್ರಚಾರ ಕಾರ್ಯಕ್ಕಾಗಿ ಅಲ್ಲಿಗೆ ಹೋಗಿದ್ದಾರೆಂದು ವರದಿಯಾಗಿದೆ. ಈ ರೀತಿ ಸರ್ಕಾರಿ ನೌಕರರುಗಳು ಪ್ರಚಾರದಲ್ಲಿ ಭಾಗವಹಿಸುವುದಾದರೆ ಶಿಕ್ಷೆಗೆ ಒಳಗಾಗುವರು ಎಂದು ಕೇಂದ್ರ ಗೃಹ ಸಚಿವರು ಎಚ್ಚರಿಕೆ ಕೊಟ್ಟಿದ್ದಾರೆ.

ಕರ್ನಾಟಕದ ಬಗ್ಗೆ ಕೇಂದ್ರದಿಂದ ಭರವಸೆ ಇಲ್ಲ

ಕರ್ನಾಟಕ ಪರಿಷತ್ತಿನ ವಿಷಾದ

ಕರ್ನಾಟಕ ಪ್ರಾಂತ್ಯವನ್ನು ರಚಿಸಬೇಕೆಂದು ಕೇಂದ್ರ ಸರ್ಕಾರವನ್ನು ಅನೇಕ ರೀತಿಯಿಂದ ಪ್ರಾರ್ಥಿಸಿದರೂ, ಸರ್ಕಾರವು ಈ ಬಗ್ಗೆ ಯಾವ ನಿರ್ಧಾರಕ್ಕೂ ಬಾರದೆ. ಈ ವಿಷಯದಲ್ಲಿ ಹೈಪವರ್ ಕಮಿಷನನ್ನು ನೇಮಿಸುವುದಾಗಿ ಕರ್ನಾಟಕ ಮುಖಂಡರಿಗೆ ಕೇವಲ ಪತ್ರಗಳನ್ನು ಬರೆದಿರುವುದರಿಂದ ಕನ್ನಡದ ಜನತೆಗೆ ಯಾವ ಪ್ರಯೋಜನವೂ ಆಗಿಲ್ಲ-ಎಂದು ಹೊಸಪೇಟೆಯಲ್ಲಿ ಮೊನ್ನೆದಿನ ನಡೆದ ಅಖಿಲ ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ಕ್ರಿಯಾಸಮಿತಿಯು ಅಭಿಪ್ರಾಯಪಟ್ಟಿದೆ.

ಈ ಸಂಬಂಧದಲ್ಲಿ ಮುಂದಿನ ತಿಂಗಳು ಹಂಪೆಯಲ್ಲಿ ಸೇರಲಿರುವ ಪರಿಷತ್ತಿನ ಎರಡನೇ ಅಧಿವೇಶನಕ್ಕೆ ಕರ್ನಾಟಕದ ಎಲ್ಲ ರಾಜಕೀಯ ಪಂಗಡಗಳವರು ತಮ್ಮ ರಾಜಕೀಯ ಭೇದಭಾವಗಳನ್ನು ಬದಿಗೊತ್ತಿ ಸಮ್ಮೇಳನದಲ್ಲಿ ಭಾಗವಹಿಸಿ ಸಹಕರಿಸಬೇಕೆಂದೂ ಕೋರಲಾಗಿದೆ.

ಕಳೆದ ಸೆಪ್ಟೆಂಬರ್ ೨೧ರಲ್ಲಿ ಚಳುವಳಿ ನಡೆಸಬೇಕೆಂದು ಕೊಟ್ಟ ನಿರ್ದೇಶನವನ್ನು ಈಗ ವಾಪಸು ಪಡೆಯಬೇಕೆಂದು ನಿರ್ಧರಿಸಲಾಯಿತು.

೧೧ ಲಕ್ಷ ಟನ್ ಅಕ್ಕಿ ಹೆಚ್ಚು ಬೆಳೆ

ಭಾರತದಲ್ಲಿ ಹೆಚ್ಚು ಬೆಳೆಯುವ ಪ್ರದೇಶಗಳಿಂದ ಈವರ್ಷ ೧೧ ಲಕ್ಷ ಟನ್ ಅಕ್ಕಿಯನ್ನು ಹೊರಪ್ರಾಂತ್ಯಗಳಿಗೆ ಕಳುಹಿಸಲಾಗುವುದರಿಂದ, ಪರದೇಶಗಳಿಂದ ಅಕ್ಕಿ ತರಿಸಿಕೊಳ್ಳುವ ಅವಶ್ಯಕತೆ ಈವರ್ಷ ಇಲ್ಲವೆಂದು ದೆಹಲಿಯಲ್ಲಿ ಇತ್ತೀಚೆಗೆ ನಡೆದ ಆಹಾರ ಸಮ್ಮೇಳನದಲ್ಲಿ ತೀರ್ಮಾನವಾಗಿದೆ.

ಹೈದರಾಬಾದಿನ ಯೋಗಿನಿ

ಹೈದರಾಬಾದಿನ ಗುಡ್ಡದಲ್ಲಿ ಸನ್ಯಾಸಿಯಾಗಿ ಇರುವ ೨೦ ವರ್ಷದ ವಸಂತಕುಮಾರಿ ಎಂಬಾಕೆಯು ಕಳೆದ ೭ ವರ್ಷಗಳಿಂದ ನೀರು ಅಥವಾ ಆಹಾರ ತೆಗೆದುಕೊಳ್ಳದೆ ಜೀವಿಸುತ್ತಿರುವಳೆಂದೂ, ಆಕೆಯನ್ನು ಮುಖ್ಯಮಂತ್ರಿ ಶ್ರೀ ಕೆ ರಾಮಕೃಷ್ಣರಾವ್ ಮತ್ತು ಇತರ ಸಚಿವರುಗಳು ಭೇಟಿ ಮಾಡಿದ್ದರೆಂದು ವರದಿಯಾಗಿದೆ. ಮೊದಲಿನಿಂದಲೂ ಆಕೆಯು ಮೌನವ್ರತ ಆಚರಿಸುತ್ತಿರುವುದರಿಂದ ಸಚಿವರುಗಳು ಕೇಳಿದ ಪ್ರಶ್ನೆಗೆ ಸ್ಲೇಟಿನ ಮೇಲೆ ಬರೆದು ಉತ್ತರವಿತ್ತಳೆಂದೂ ಒಬ್ಬ ನಾಯಕರನ್ನೇ ಅನುಸರಿಸಬೇಕೆಂದು ಆಕೆಯು ಸಲಹೆ ಇತ್ತಳೆಂದೂ ಹೇಳಲಾಗಿದೆ.

ಸದಾನಂದರ ನಿಧನ

ಬೊಂಬಾಯಿನ "ಫ್ರಿಪ್ರೆಸ್ ಜರ್ನಲ್" ದಿನಪತ್ರಿಕೆಯ ಸಂಪಾದಕರಾದ ಶ್ರೀ ಎಸ್. ಸದಾನಂದ್‌ರವರು ನಿನ್ನೆ ದಿನ ಮದ್ರಾಸಿನಲ್ಲಿ ತಮ್ಮ ೫೩ನೇ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ.

ಮೂವತ್ತು ವರ್ಷಕ್ಕೂ ಹೆಚ್ಚಿನ ಕಾಲ ಕಷ್ಟ ಕಾರ್ಪಣ್ಯಗಳನ್ನು ಸಹಿಸಿ ಪತ್ರಿಕೋದ್ಯೋಗಿಗಳಲ್ಲಿ ಅವರು ನಿಜವಾಗಿಯೂ ನೆಪೋಲಿಯನ್ ಆಗಿದ್ದರೆಂದು ಶ್ರೀ ರಾಜಾಜಿಯವರು ಸಂತಾಪ ಸೂಚಿಸಿದ್ದಾರೆ.

ದೆಹಲಿಗೆ ಸಿಂಹಳ ಪ್ರಧಾನಿಯ ಭೇಟಿ

ಇಡೀ ಏಷ್ಯಾದಲ್ಲೇ ಪ್ರಥಮವಾಗಿ ದೆಹಲಿಯಲ್ಲಿ ಜನವರಿ ೨೦ನೇ ತಾರೀಖು ಸಮಾವೇಶಗೊಳ್ಳಲಿರುವ ಕಡಮೆ ವೆಚ್ಚದ ಗೃಹ ನಿರ್ಮಾಣ ಸಮ್ಮೇಳನದಲ್ಲಿ ಸಿಂಹಳದ ಪ್ರಧಾನಿ ಸರ್ ಕೋಟೆಲವಾಲರವರು ಭಾಗವಹಿಸುವರು. ಇದೇ ಸಮಯದಲ್ಲಿ ಅವರು ಪ್ರಧಾನಿ ನೆಹರೂರವರೊಡನೆ ಸಿಂಹಳ ಭಾರತೀಯರ ಸಮಸ್ಯೆ ಕುರಿತು ಮಾತುಕತೆ ನಡೆಸುವರೆಂದು ಹೇಳಲಾಗಿದೆ.

ಮದ್ರಾಸಿನಲ್ಲಿ ಹರಿಜನ ಮೇಯರ್

ಮದರಾಸ್ ಶಾಸನ ಸಭೆಯ ಕಾಂಗ್ರೆಸ್ ಹರಿಜನ ಸದಸ್ಯರಾದ ಶ್ರೀ ಬಿ. ಪರಮೇಶ್ವರನ್‌ರವರನ್ನು ಮದ್ರಾಸಿನ ಮೇಯರನ್ನಾಗಿ ಚುನಾಯಿಸಲಾಗಿದೆ.

ಅಮೆರಿಕಕ್ಕೆ ನೆಲೆಗಳನ್ನು ಕೊಡಲು ಪಾಕ್ ಸಿದ್ಧ

ಪಾಕೀಸ್ತಾನವನ್ನು ಬಲಗೊಳಿಸಲು ಶಸ್ತ್ರಾಸ್ತ್ರಗಳನ್ನು ಅಮೆರಿಕ ಒದಗಿಸುವುದಾದರೆ, ಪಾಕೀಸ್ತಾನ ಅಮೆರಿಕಾಕ್ಕೆ ಮಿಲಿಟರಿ ನೆಲೆಗಳನ್ನು ಕೊಡಲು ಸಿದ್ಧವಿದೆಯೆಂದು ಪಾಕ್ ಸರ್ಕಾರ ತಿಳಿಸಿದೆಯೆಂದು ಹೇಳಲಾಗಿದೆ.

ಪಾಕೀಸ್ತಾನದ ಸೈನ್ಯವನ್ನು ಸಂಪೂರ್ಣವಾಗಿ ತರಪೇತು ಮಾಡಲು ೫೦೦ ಲಕ್ಷ ಡಾಲರುಗಳು ವೆಚ್ಚವಾಗುವುದೆಂದೂ, ಕೈಬರ್ ಕಣಿವೆ ಮುಂತಾದ ಭಾಗಗಳಿಂದ ಆಕ್ರಮಣವನ್ನು ತಡೆಗಟ್ಟುವುದೇ ಪಾಕ್ ಸೈನ್ಯವನ್ನು ಬಲಗೊಳಿಸುವ ಉದ್ದೇಶವೆಂದೂ ಪಾಕೀಸ್ತಾನ ವಲಯಗಳು ತಿಳಿಸುತ್ತವೆ.

ಮೈಸೂರು ಶಾಸನ ಸಭೆ ಮುಂದಕ್ಕೆ

ಮುಂದಿನ ತಿಂಗಳು ಮೊದಲನೆ ವಾರದಲ್ಲಿ ನಡೆಯಬೇಕಾಗಿದ್ದ ಮೈಸೂರು ಶಾಸನ ಸಭೆಯು ಜನವರಿಯಲ್ಲಿ ನಡೆಯುವುದೆಂದು ತಿಳಿಯಬರುತ್ತದೆ. ಜಿಲ್ಲಾ ಬೋರ್ಡುಗಳನ್ನು ರದ್ದು ಮಾಡಿ, ತಾಲ್ಲೂಕು ಬೋರ್ಡುಗಳನ್ನು ರಚಿಸಬೇಕೆಂದು ಸಲಹೆ ಬಂದಿರುವುದರಿಂದ, ಅದನ್ನು ಪರಿಶೀಲಿಸಬೇಕಾಗಿರುವುದರಿಂದ ಅಧಿವೇಶನವನ್ನು ಮುಂದಕ್ಕೆ ಹಾಕಲಾಗಿದೆ.

ಮೈಸೂರು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಕಾರ್ಯಕಾರೀ ಸಮಿತಿಯು ನಾಳೆದಿನ ಬೆಂಗಳೂರಿನಲ್ಲಿ ಸೇರಲಿದೆ.

ಅಕ್ಕಿಯಲ್ಲಿ ಸ್ವಯಂಪೂರ್ಣತೆ

ಮೈಸೂರು ಮತ್ತು ಹೈದರಾಬಾದ್ ಸಂಸ್ಥಾನಗಳು ಈಗ ಅಕ್ಕಿಯ ವಿಷಯದಲ್ಲಿ ಸ್ವಯಂಪೂರ್ಣವಾಗಿವೆ ಎಂದು ಕೇಂದ್ರ ಆಹಾರ ಉಪ ಸಚಿವರು ತಿಳಿಸಿದ್ದಾರೆ.

ಮುಂದಿನ ವರ್ಷ ಅಕ್ಕಿ ಅಭಾವ ಕ್ಷೇತ್ರಗಳು ಬೇಡಿಕೆ ಸಲ್ಲಿಸುವ ಅಕ್ಕಿಯ ಮೊತ್ತ ಸುಮಾರು ೧೧ ಲಕ್ಷ ಟನ್ ಇದ್ದು, ಒಟ್ಟು ಆಂತರಿಕ ಅಕ್ಕಿ ಸಂಗ್ರಹ ೧೨ ಲಕ್ಷ ಟನ್ ಎಂದು ಅವರು ಹೇಳಿದ್ದಾರೆ.

ಭತ್ತದ ಬೆಳೆ ಎಲ್ಲಾ ಕಡೆಯಲ್ಲೂ ಚೆನ್ನಾಗಿರುವುದರಿಂದ ಅಕ್ಕಿಯ ಪಡಿತರವನ್ನು ಹೆಚ್ಚಿಸಲಾಗುವುದೆಂದೂ ಅವರು ತಿಳಿಸಿದ್ದಾರೆ.

ಕಾರ್ಪೊರೇಷನ್ ಕಾರ್ಮಿಕರ ಮುಷ್ಕರ

ಬೆಂಗಳೂರು ಕಾರ್ಪೊರೇಷನ್ ಕಾರ್ಮಿಕರ ಬಗ್ಗೆ ಕಳೆದ ಸೆಪ್ಟೆಂಬರ್‌ನಲ್ಲಿ ಆದ ಒಪ್ಪಂದದಂತೆ ಝಾಡಮಾಲಿಗಳಿಗೆ ಸಂಬಳದ ಬಾಕಿಯನ್ನು ಇನ್ನೂ ಕೊಟ್ಟಿಲ್ಲವಾದ್ದರಿಂದ, ಅದನ್ನು ಇದೇ ೨೦ರೊಳಗೆ ಕೊಡದಿದ್ದರೆ, ೨೩ನೇ ತಾರೀಖಿನಿಂದ ಮುಷ್ಕರ ಹೂಡಬೇಕೆಂದು ನಿರ್ಧರಿಸಲಾಗಿದೆ.

ಆಂಧ್ರದಲ್ಲಿರುವುದು ಸಮ್ಮಿಶ್ರ ಸರ್ಕಾರವಲ್ಲ

ಅದರಲ್ಲಿ ಪಿ. ಎಸ್. ಪಿ. ಪಕ್ಷ ಸೇರುವುದರಿಂದ ಪ್ರಯೋಜನವಿಲ್ಲ

ಪಕ್ಷದ ನಾಯಕ ಕೃಪಲಾನಿಯವರ ಹೇಳಿಕೆ

ಆಂಧ್ರ ಸರ್ಕಾರವನ್ನು ಪ್ರಜಾಸೋಷಲಿಸ್ಟ್ ಪಕ್ಷವು ಸೇರುವುದರಿಂದ ಯಾವ ಪ್ರಯೋಜನವೂ ಇಲ್ಲ. ಅದು ಸಮ್ಮಿಶ್ರ ಸರ್ಕಾರವೆನಿಸಿಕೊಳ್ಳಲಾರದು ಎಂದು ಆಚಾರ್ಯ ಕೃಪಲಾನಿಯವರು ತಮ್ಮ ಪಕ್ಷವು ಹೊಸ ಆಂಧ್ರ ಸರ್ಕಾರದೊಡನೆ ಸಹಕರಿಸುವ ವಿಷಯದಲ್ಲಿ ಅಂತ್ಯ ತೀರ್ಮಾನವನ್ನಿತ್ತಿದ್ದಾರೆ.

ನೂತನ ಆಂಧ್ರಪ್ರಾಂತ್ಯ ರಚನೆಯಲ್ಲಿ ಪ್ರಜಾಸೋಷಲಿಸ್ಟ್‌ಪಕ್ಷದ ಮದ್ರಾಸ್ ಶಾಖೆಯು ಹೊಸ ಸರ್ಕಾರಕ್ಕೆ ಬೆಂಬಲವನ್ನು ನೀಡಬೇಕೆಂದು ನಿರ್ಧರಿಸಿ ಶ್ರೀ ಟಿ. ವಿಶ್ವನಾಥಂರವರು ನೂತನ ಸಚಿವ ಮಂಡಲಿಯನ್ನು ಸೇರಿದ ವಿಷಯದಲ್ಲಿ ಪಕ್ಷದಲ್ಲಿಯೇ ತೀವ್ರ ಭಿನ್ನಾಭಿಪ್ರಾಯವು ತಲೆದೋರಿತ್ತಷ್ಟೆ. ಈ ವಿಷಯವನ್ನು ಪರಿಶೀಲಿಸಿ ಪಕ್ಷದ ನಾಯಕರಾದ ಆಚಾರ್ಯ ಕೃಪಲಾನಿಯವರು ಅಂತ್ಯ ತೀರ್ಮಾನವನ್ನು ಕೊಡಬೇಕೆಂದು ನಿರ್ಧರಿಸಿತು.

ಅದರಂತೆ ದೆಹಲಿಯಲ್ಲಿ ಕಳೆದ ೨ ದಿನಗಳಿಂದ ಆಚಾರ್ಯ ಕೃಪಲಾನಿಯವರಿಗೂ ಆಂಧ್ರ ಸಚಿವ ಶ್ರೀ ಟಿ. ವಿಶ್ವನಾಥಂರಿಗೂ ಮಾತುಕತೆಗಳು ನಡೆದು ಈ ತೀರ್ಮಾನವನ್ನು ಆಚಾರ್ಯ ಕೃಪಲಾನಿಯವರು ಇತ್ತಿದ್ದಾರೆ.

ಈಗ ರಚಿತವಾಗಿರುವುದು ಸಮ್ಮಿಶ್ರ ಸರ್ಕಾರವೆನಿಸಿಕೊಳ್ಳಲಾರದು ಅದು ಕೇವಲ ಕಾಂಗ್ರೆಸ್ ಪಕ್ಷದ್ದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಈ ತೀರ್ಮಾನದಿಂದ ಶ್ರೀ ಟಿ. ವಿಶ್ವನಾಥಂರವರು ಪಕ್ಷದ ಪ್ರತಿನಿಧಿಯಾಗಿ ಮಂತ್ರಿಮಂಡಲದಲ್ಲಿ ಮುಂದುವರಿಯಬಹುದೇ ಎಂಬ ಪ್ರಶ್ನೆಯು ಉದ್ಭವಿಸಿದೆ ಈ ವಿಷಯದಲ್ಲಿ ಶ್ರೀ ಟಿ. ವಿಶ್ವನಾಥಂರವರು ಒಂದು ಹೇಳಿಕೆಯನ್ನಿತ್ತು ಅದನ್ನು ತಮ್ಮ ಪಕ್ಷದ ಮತ್ತು ಶಾಸನಸಭೆಯ ತಮ್ಮ ಪಕ್ಷದ ಸದಸ್ಯರೊಡನೆ ವಿಚಾರ ವಿನಿಮಯ ನಡೆಸಿ ಅಂತ್ಯ ತೀರ್ಮಾನವನ್ನು ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.

ಶ್ರೀ ಟಿ. ಪ್ರಕಾಶಂರವರು ಪ್ರಜಾಸೋಷಲಿಸ್ಟ್ ಪಕ್ಷವನ್ನು ತ್ಯಜಿಸಿ, ಕಾಂಗ್ರೆಸ್ ಸೇರಿ ಮುಖ್ಯಮಂತ್ರಿಯಾದುದು ಸಾರ್ವಜನಿಕ ಜೀವನದ ಶುದ್ಧ ಧ್ಯೇಯಗಳಿಗೆ ಧಕ್ಕೆ ಎಂದೂ ಆಚಾರ್ಯ ಕೃಪಲಾನಿಯವರು ಹೇಳಿದ್ದಾರೆ.

○ ಭಾರತದ ವಿವಿಧ ಪ್ರದೇಶಗಳಲ್ಲಿ ಮುಂದಿನ ೩ ವರ್ಷಗಳಲ್ಲಿ ಕೊಳವೆ ಭಾವಿಗಳನ್ನು ತೊಡಲು ೨೪ ಕೋಟಿ ರೂಪಾಯಿಗಳನ್ನು ವೆಚ್ಚಮಾಡುವುದಾಗಿ ತಿಳಿಯಬರುತ್ತದೆ.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ

ಮೈಸೂರು ೧೮

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಇದೇ ೧೩ನೇ ತಾರೀಖು ಹುಣಸೂರು ಮತ್ತು ಪಿರಿಯಾಪಟ್ಟಣಗಳಿಗೆ ಭೇಟಿ ಇತ್ತು, ಕಾಂಗ್ರೆಸ್ ಸಮಿತಿಗಳ ವ್ಯವಸ್ಥೆ ಮತ್ತು ಕಾಂಗ್ರೆಸ್ ಸದಸ್ಯರನ್ನು ಕೂಡಿಸುವ ವಿಷಯದಲ್ಲಿ ಅಲ್ಲಿನ ಜನರೊಡನೆ ಮಾತುಕತೆ ನಡೆಸಿದರು

ಕಾಂಗ್ರೆಸ್ ಕಾರ್ಯಕರ್ತರು ಸಕ್ರಿಯಾ ಸದಸ್ಯರಾಗಲು ೧೦ ರೂ. ಶುಲ್ಕ ಕೊಡಬೇಕಾಗಿರುವುದರಿಂದ ಅದು ಅನೇಕರಿಗೆ ಕಷ್ಟವಾಗಿದೆಯೆಂದೂ, ಅದನ್ನು ತಪ್ಪಿಸಬೇಕೆಂದೂ ಹುಣಸೂರಿನಲ್ಲಿ ಮನವಿ ಮಾಡಿಕೊಳ್ಳಲಾಯಿತು. ಜಿಲ್ಲಾ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಅದನ್ನು ಪರಿಶೀಲಿಸುವುದಾಗಿ ಅಧ್ಯಕ್ಷರು ಭರವಸೆ ಇತ್ತರು.

ಪಿರಿಯಾಪಟ್ಟಣದಲ್ಲಿ ಅಧ್ಯಕ್ಷರಿಗೆ ಅಭೂತ ಪೂರ್ವ ಸ್ವಾಗತ ದೊರೆಯಿತು. ಅಲ್ಲಿನ ಬಸ್ ನಿಲ್ದಾಣದಲ್ಲಿ ಅವರು ಭಾಷಣ ಮಾಡಿ, ಪ್ರಜಾಧಿಕಾರ ಚೆನ್ನಾಗಿ ನಡೆಯಬೇಕಾದರೆ ಪ್ರಜೆಗಳು ಜಾಗೃತರಾಗಿರಬೇಕೆಂದೂ, ಇಂದಿನ ಪ್ರಜಾ ಸರ್ಕಾರವು ಪ್ರಜೆಗಳ ಅಭಿಮತದಂತೆ ನಡೆಯುತ್ತಿದೆಯೆಂದೂ ತಿಳಿಸಿ, ಮಹಾಜನರು ಕಾಂಗ್ರೆಸ್ಸಿಗೆ ಸೇರಬೇಕೆಂದೂ ಕೋರಿದರು.

-ಮೈಸೂರು ಪೇಟೆಧಾರಣೆ-

ತಾರೀಖು ೧೭—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—	೧೯—೮
ಎಳ್ಳು	೭೦—	೭೫—
ಹರಳು	೩೨—೧೦	೪೦—೨
ಹುಚ್ಚೆಳ್ಳು	—	—
ಹುರಳಿ	೩೬—೧೦	೩೮—
ಹೆಸರು	೩೦—೨	೩೮—೨
ಅಲಸಂದೆ	೩೫—	೫೩—೮
ಉದ್ದು	೫೭—೧೨	—
ಮೆಣಸಿನಕಾಯಿ	೧೪—೧೪	೩೨—೧೦
ಹುಣಸೇಹಣ್ಣು	೯—೨	೯—೧೪
ಬೆಲ್ಲ	—	—
ಸೀಗೇಕಾಯಿ	೬—೯	೬—೧೩
ತೆಂಗಿನಕಾಯಿ	೧೪೩—	೨೬೮

ಆಂಧ್ರ ಮಂತ್ರಿಮಂಡಲದಲ್ಲಿ ತಿಕ್ಕಾಟ

ರಾಜಧಾನಿ ವಿಷಯದಲ್ಲಿ ಮಂತ್ರಿಗಳಲ್ಲೇ ಭಿನ್ನಾಭಿಪ್ರಾಯ

ಈಗಿನ ಆಂಧ್ರ ಸಚಿವ ಮಂಡಲಿಯಲ್ಲಿ ಪ್ರಾಂತ್ಯದ ರಾಜಧಾನಿಯು ಕರ್ನೂಲ್ ನಗರವೇ ಇರಬೇಕೇ ಅಥವ ಗುಂಟೂರು-ವಿಜಯವಾಡಾ ಆಗಬೇಕೇ ಎಂಬ ವಿಷಯದಲ್ಲಿ ತೀವ್ರ ಭಿನ್ನಾಭಿಪ್ರಾಯ ತಲೆದೋರಿರುವಂತೆ ತಿಳಿಯಬರುತ್ತದೆ.

ಈಗತಾನೇ ಮಂತ್ರಿಪದವಿಯನ್ನು ಸ್ವೀಕರಿಸಿದ ಕೃಷಕ ಲೋಕ ಪಕ್ಷದ ಪ್ರತಿನಿಧಿ ಶ್ರೀ ಲಚ್ಚಣ್ಣನವರು ಗುಂಟೂರು, ವಿಜಯವಾಡ ಆಗಬೇಕೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಉಪಮುಖ್ಯಮಂತ್ರಿ ಮತ್ತು ಆಂಧ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಆದ ಶ್ರೀ ಎನ್. ಸಂಜೀವರೆಡ್ಡಿಯವರು ಶ್ರೀ ಲಚ್ಚಣ್ಣನವರ ಅಭಿಪ್ರಾಯವನ್ನು ವಿರೋಧಿಸಿ, ಕರ್ನೂಲೇ ರಾಜಧಾನಿಯಾಗಿರಬೇಕೆಂದು ಮಂತ್ರಿಮಂಡಲದ ಅಭಿಪ್ರಾಯವಾಗಿದೆ. ಮಂತ್ರಿಮಂಡಲದಲ್ಲಿ ಯಾವ ಪಕ್ಷ ಇದ್ದರು ಒಮ್ಮತಾಭಿಪ್ರಾಯವಿರಬೇಕು. ಸ್ವಂತ ಅಭಿಪ್ರಾಯಕ್ಕೆ ಅಲ್ಲಿ ಎಡೆಯಿಲ್ಲ. ಹಾಗೆ ಏಕಾಭಿಪ್ರಾಯ ಮೂಡದಿದ್ದರೆ ಮಂತ್ರಿಮಂಡಲವನ್ನು ಯಾರಾದರೂ ತ್ಯಜಿಸಬೇಕಾಗುತ್ತದೆ ಎಂದು ತಿಳಿಸಿದ್ದಾರೆ.

ಇದು ಕೇವಲ ಶ್ರೀ ಸಂಜೀವ ರೆಡ್ಡಿಯವರ ವೈಯುಕ್ತಿಕ ಅಭಿಪ್ರಾಯವೆಂದೂ ತಮ್ಮ ನಿಲುವೇನೆಂಬುದನ್ನು ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರಿಗೆ ತಿಳಿಸಿ ತಾವು ಮಂತ್ರಿಮಂಡಲವನ್ನು ಸೇರಿರುವುದಾಗಿಯೂ ಶ್ರೀ ಲಚ್ಚಣ್ಣನವರು ಹೇಳಿದ್ದಾರೆ. ಅಂತೂ ರಾಜಧಾನಿ ವಿಷಯದಲ್ಲಿ ತೀವ್ರ ಭಿನ್ನತೆ ತಲೆದೋರಿದೆ.

ಈ ವಿಷಯವನ್ನು ಆಂಧ್ರ ಮಂತ್ರಿಮಂಡಲವು ಈ ದಿನ ಒಂದು ತ್ವರಿತ ಸಭೆಯನ್ನು ನಡೆಸಿ ಚರ್ಚಿಸಲಿದೆಯೆಂದು ತಿಳಿಯಬರುತ್ತದೆ.

ವಾಣಿಜ್ಯ ಒಪ್ಪಂದ

ಭಾರತ ಮತ್ತು ಜಕೋಸ್ಲೊವೇಕಿಯಾ ನಡುವೆ ವಾಣಿಜ್ಯ ಒಪ್ಪಂದಕ್ಕೆ ಉಭಯ ಸರ್ಕಾರಗಳ ನಡುವೆ ನಿನ್ನೆ ಸಹಿಯಾಯಿತು.

ಈ ಒಪ್ಪಂದ ಪ್ರಕಾರ ಭಾರತವು ಟೀ, ಸಾಂಬಾರ ಸಾಮಾನು, ಎಣ್ಣೆ, ಹೊಗೆಸೊಪ್ಪು, ಗ್ರಾಮಕೈಗಾರಿಕಾ ವಸ್ತುಗಳನ್ನು ಜಕೊಸ್ಲೊವೇಕಿಯಾವಿಗೆ ಒದಗಿಸಿ ಅಲ್ಲಿಂದ ಡೈಸೆಲ್ ಇಂಜನುಗಳು, ವೃತ್ತ ಪತ್ರಿಕೆಗಳಿಗೆ ಕಾಗದ, ಮೋಟಾರು ಬೈಸಿಕಲ್‌ಗಳು, ಟ್ರಾಕ್ಟರುಗಳು, ಹೊಲಿಗೆ ಯಂತ್ರಗಳು ಮುಂತಾದುವನ್ನು ತರಿಸಿಕೊಳ್ಳುತ್ತದೆ.

ಮಂತ್ರಿಗಳ ಕಾರ್ಯದರ್ಶಿಗೆ ಶಿಕ್ಷೆ

ಬೊಂಬಾಯಿನ ಆಹಾರ ಶಾಖಾ ಉಪ ಸಚಿವರ ಆಪ್ತ ಕಾರ್ಯದರ್ಶಿ ಶ್ರೀ ಪ್ರಭಾಕರ್ ವಿಠಲ್ ಕೇಡ್ಕರ್‌ರವರು ೩೦೦ರೂ. ಲಂಚ ಪಡೆದರೆಂಬ ಆಪಾದನೆ ಮೇಲೆ ಅವರಿಗೆ ಒಂದುವರ್ಷ ಕಠಿಣಶಿಕ್ಷೆಯನ್ನು ಅಲ್ಲಿನ ವಿಶೇಷ ನ್ಯಾಯಾಧೀಶರು ವಿಧಿಸಿದ್ದಾರೆ. ಇದ್ದಲಿನ ವರ್ತಕರೊಬ್ಬರಿಗೆ ವಜಾ ಆದ ರಹದಾರಿಯನ್ನು ಪುನಃ ಕೊಡಿಸುವುದಾಗಿ ಅವರಿಂದ ಲಂಚ ಪಡೆದರೆಂದು ಹೇಳಲಾಗಿತ್ತು.

ಪರಿಗಣಿತ ಕೋಮಿನವರಿಗೆ ಸ್ಥಾನಗಳು

ಹೈದರಾಬಾದಿನಿಂದ ಪಾರ್ಲಿಮೆಂಟಿಗೆ ವಿಧಾಯಕವಾಗಿರುವ ೨೫ ಸ್ಥಾನಗಳ ಪೈಕಿ ೫ನ್ನೂ, ರಾಜ್ಯ ಸಭೆಯಲ್ಲಿರುವ ೧೭೫ಸ್ಥಾನಗಳಲ್ಲಿ ೨೯ನ್ನು ಪರಿಗಣಿತ ಕೋಮಿನವರಿಗೆ ಮೀಸಲಾಗಿಡಲಾಗುತ್ತದೆಯೆಂದು ಕೇಂದ್ರ ಡಿಲಿಮಿಟೇಷನ್ ಮಂಡಲಿಯು ನಿರ್ಧರಿಸಿ, ಪ್ರಕಟಿಸಿದೆ.

ಗಫಾರ್‌ಖಾನರ ಮಗನ ಬಿಡುಗಡೆಗೆ ಅಜ್ಞಿ

ಖಾನ್ ಅಬ್ದುಲ್‌ಗಫಾರ್ ಖಾನರ ಮಗ ಖಾನ್ ವಾಲಿಖಾನರನ್ನು ಬಂಧನದಲ್ಲಿಟ್ಟಿರುವುದು ಅಕ್ರಮವೆಂದೂ, ಅವರನ್ನು ಕೂಡಲೇ ಬಿಡುಗಡೆ ಮಾಡಬೇಕೆಂದೂ ಪಾಕೀಸ್ತಾನದ ಫೆಡರಲ್ ಕೋರ್ಟಿಗೆ ಅಜ್ಞಿ ಮಾಡಿದೆ.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)
18--11--53 ನೇ ರಾತ್ರಿ 10 ಗಂಟೆಗೆ
ಮೈಸೂರು ಟೌನ್‌ಹಾಲಿನಲ್ಲಿ
ನಾಟಕರತ್ನ ಜಿ. ಹೆಚ್. ವೀರಣ್ಣನವರು ಮತ್ತು ಜಯಮ್ಮನವರು ಅಭಿನಯಿಸುವರು
ಅಡ್ಡದಾರಿ
ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು

ಪೋಸ್ಟ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೭೩

೧೯-೧೧-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪಾಕ್ ರಾಜ್ಯಾಂಗ ವಿರೋಧ ಪ್ರತಿಭಟನೆ

ಹಿಂದೂ ಅಲ್ಪ ಸಂಖ್ಯಾತರ ರಕ್ಷಣೆ ಬಗ್ಗೆ ಜನಸಂಘದ ಚಳುವಳಿ

ಪಾಕೀಸ್ತಾನದಲ್ಲಿರುವ ಹಿಂದೂ ಅಲ್ಪ ಸಂಖ್ಯಾತರಿಗೆ ಸೂಕ್ತ ರಕ್ಷಣೆ ಇಲ್ಲದಂತ ರಾಜ್ಯಾಂಗವನ್ನು ಪಾಕೀಸ್ತಾನ ಸರ್ಕಾರದವರು ತಯಾರಿಸುತ್ತಿರುವುದನ್ನು ಪ್ರತಿಭಟಿಸಲು ಅಖಿಲ ಭಾರತ ಜನ ಸಂಘದವರು ಚಳುವಳಿ ಹೂಡುವುದಾಗಿ ಅದರ ಕಾರ್ಯದರ್ಶಿಯವರು ತಿಳಿಸಿದ್ದಾರೆ. ಈ ಚಳುವಳಿಯು ಯಾವ ರೀತಿ ಇರುವುದೆಂಬುದನ್ನು ಅವರು ಹೊರಗೆಡಹಿಲ್ಲ. ಆದರೆ ಅದು ಹಿಂದೆ ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆದ ಸತ್ಯಾಗ್ರಹ ಚಳುವಳಿಯ ರೀತಿಯಲ್ಲಿ ಇರುವುದಿಲ್ಲವೆಂದು ಅವರು ಸ್ಪಷ್ಟಪಡಿಸಿದ್ದಾರೆ. ಪಾಕೀಸ್ತಾನದಲ್ಲಿ ಹಿಂದೂಗಳ ರಕ್ಷಣೆ ಬಗ್ಗೆ ಭಾರತದ ಜನರ ಮನವನ್ನು ಎಳೆಯುವುದೇ ಈ ಚಳುವಳಿಯ ಉದ್ದೇಶವೆಂದು ಅವರು ಹೇಳಿದ್ದಾರೆ. ಪಾಕೀಸ್ತಾನದಲ್ಲಿರುವ ಹಿಂದುಗಳು ತಮ್ಮ ಮತವನ್ನು ಬಿಟ್ಟು ಬಲಾತ್ಕಾರವಾಗಿ ಮುಸ್ಲಿಮರಾಗುವುದು ಅಥವ ಮನೆ ಮಠಗಳನ್ನು ಕಳೆದುಕೊಂಡು ಊರು ಬಿಡದಂತೆ ಅವರ ಹಕ್ಕು ಬಾಧ್ಯತೆಗಳನ್ನು ಕಾಪಾಡಬೇಕಾದುದು ಭಾರತ ಸರ್ಕಾರದ ಕರ್ತವ್ಯವೆಂದೂ ಅವರು ತಿಳಿಸಿದ್ದಾರೆ.

ಮೈಸೂರಿನಲ್ಲಿ ನಿರುದ್ಯೋಗ ಪರಿಹಾರ ಯೋಜನೆ

೭೫೦ ಮಂದಿ ಪ್ರೈಮರಿ ಶಾಲಾ ಉಪಾಧ್ಯಾಯರ ನೇಮಕ

ವಿದ್ಯಾವಂತರ ನಿರುದ್ಯೋಗವನ್ನು ಬಗೆಹರಿಸಲು ಕೇಂದ್ರ ಸರ್ಕಾರದವರು ಕೈಗೊಂಡಿರುವ ಯೋಜನೆ ಪ್ರಕಾರ, ಮೈಸೂರು ಸರ್ಕಾರದವರು ಎ. ಎಸ್. ಎಲ್. ಸಿ. ಮತ್ತು ಪದವಿ ಪಡೆದಿರುವ ೭೫೦ ಮಂದಿಗಳನ್ನು ಪ್ರೈಮರಿ ಶಾಲಾ ಉಪಾಧ್ಯಾಯರುಗಳಾಗಿ ನೇಮಿಸಿಕೊಳ್ಳಲು ನಿರ್ಧರಿಸಿದ್ದಾರೆ ಪ್ರಥಮ ವರ್ಷ ಈ ಖರ್ಚಿನಲ್ಲಿ ಶೇಕಡ ೭೫ ರಷ್ಟನ್ನು ಕೇಂದ್ರ ಸರ್ಕಾರ ವಹಿಸಿಕೊಳ್ಳುವುದು.

೮೦೦೦ ತೊಲಾ ಚಿನ್ನ ಪತ್ತೆ

ಗೋವಾದಿಂದ ಕಳ್ಳತನದಲ್ಲಿ ತರಲಾಗುತ್ತಿದ್ದೆಂದು ಹೇಳಲಾದ ಸುಮಾರು ೮೦೦೦ ತೊಲಾ ಚಿನ್ನವನ್ನು ಬೊಂಬಾಯಿನಲ್ಲಿ ಸುಂಕದ ಅಧಿಕಾರಿಗಳು ಪತ್ತೆಹಚ್ಚಿ ಚಿನ್ನವನ್ನು ವಶಪಡಿಸಿಕೊಂಡಿರುವುದಲ್ಲದೆ ಕೆಲವರ ದಸ್ತಗಿರಿಗಳನ್ನು ಮಾಡಿರುವುದಾಗಿ ವರದಿಯಾಗಿದೆ.

ಶ್ರೀ ಸಾಯಿ ಮಂದಿರದ ವರ್ಗಾವಣೆ

ಮೈಸೂರು ೧೯

ರಾಜಧಾನಿಯ ಕಾಳಮ್ಮನ ಬೀದಿಯಲ್ಲಿದ್ದ ಶ್ರೀ ಪ್ರಸನ್ನ ಸಾಯಿ ಮಂದಿರವನ್ನು ತ್ಯಾಗರಾಜ ರಸ್ತೆಯಲ್ಲಿರುವ ಸ್ವಂತ ಕಟ್ಟಡಕ್ಕೆ ನಿನ್ನೆ ವರ್ಗಾಯಿಸಲಾಯಿತು. ಈ ಸಂಬಂಧದಲ್ಲಿ ಶ್ರೀ ಸದ್ಗುರುಗಳವರ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ಈ ದಿನ ಸಂಜೆ ೭ ಗಂಟೆಗೆ ಶ್ರೀ ಹೆಚ್. ಎಲ್. ದೇವರಾಜೆ ಅರಸಿನವರ ಅಧ್ಯಕ್ಷತೆಯಲ್ಲಿ ಉಪನ್ಯಾಸ ಏರ್ಪಡಿಸಲಾಗಿದೆ.

ಜನಾರ್ದನನಾಯ್ಡು ಉಮೇದುವಾರಿಕೆ ವಾಪಸು

ಮೈಸೂರು ೧೯

ಮೈಸೂರು ಪುರಸಭಾ ಚುನಾವಣೆಗೆ ೯ನೇ ವಾರ್ಡಿನಿಂದ ಕಾಂಗ್ರೆಸ್ ಪರವಾಗಿ ಉಮೇದುವಾರಿಕೆ ಸಲ್ಲಿಸಿದ್ದ ಶ್ರೀ ಜಿ. ಜನಾರ್ದನ ನಾಯ್ಡುರವರು ತಮ್ಮ ಉಮೇದುವಾರಿಕೆಯನ್ನು ನಿನ್ನೆ ವಾಪಸು ಪಡೆದಿದ್ದಾರೆ.

ಏಕಘಟ್ಟದ ಮಾರಾಟ ತೆರಿಗೆ

ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿರುವ ವಿವಿಧ ಘಟ್ಟದ ಮಾರಾಟತೆರಿಗೆಯನ್ನು ರದ್ದುಮಾಡಿ, ಏಕಘಟ್ಟದ ಮಾರಾಟ ತೆರಿಗೆಯನ್ನು ವಿಧಿಸಬೇಕೆಂದು ಅದರ ಪರಿಶೀಲನಾ ಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿದೆ. ಸರ್ಕಾರಕ್ಕೆ ಈಗ ಮಾರಾಟ ತೆರಿಗೆಯಿಂದ ಬರುತ್ತಿರುವ ೧ ಕೋಟಿ ೪೦ ಲಕ್ಷ ರೂಗಳಿಗೆ ಈ ಸಲಹೆಗಳನ್ನು ಒಪ್ಪಿಕೊಳ್ಳುವುದರಿಂದ ಖೋತಾ ಆಗುವುದಿಲ್ಲವೆಂದು ಹೇಳಲಾಗಿದೆ.

ಬಳ್ಳಾರಿಗೆ ೩೦ ಪಶು ವೈದ್ಯಶಾಲೆ

ಬಳ್ಳಾರಿ ಜಿಲ್ಲೆಯಲ್ಲಿ ಮುಂದಿನ ಮೂರು ವರ್ಷಗಳಲ್ಲಿ ಇನ್ನೂ ೩೦ ಪಶು ವೈದ್ಯಶಾಲೆಗಳನ್ನು ತೆರೆಯಲು ಮೈಸೂರು ಸರ್ಕಾರ ನಿರ್ಧರಿಸಿದೆಯೆಂದು ಅಲ್ಲಿ ನಡೆದ ಗೋಸಂರಕ್ಷಣಾ ವಾರದಲ್ಲಿ ತಿಳಿಸಲಾಯಿತು.

ಮಲಾನ್ ನೀತಿಗೆ ಬ್ರಿಟನ್ನಿನ ಸಮರ್ಥನೆ ಇಲ್ಲ

ಭಾರತಕ್ಕೆ ಆಗಮಿಸಿರುವ ಬ್ರಿಟಿಷ್ ಕಾಮನ್ವೆಲ್ತ್ ಸಚಿವ ಲಾರ್ಡ್ ಸ್ವಿಂಟನ್‌ರವರು ನಿನ್ನೆಯದಿನ ದೆಹಲಿಯಲ್ಲಿ ಮಾತನಾಡುತ್ತ ಡಾ|| ಮಲಾನರ ವರ್ಣಭೇದ ನೀತಿಯನ್ನು ತಾವು ಒಪ್ಪುವುದಿಲ್ಲವೆಂದು ತಿಳಿಸಿದ್ದಾರೆ.

ಆ ವಿಷಯದಲ್ಲಿ ತಾವು ಏನುಮಾಡಲು ಸಾಧ್ಯವಿಲ್ಲವೆಂದೂ, ಕಾಮನ್ವೆಲ್ತ್ ರಾಷ್ಟ್ರಗಳಲ್ಲೇ ಸರಿಸಮಾನವಾದುದೆಂದೂ ಅವರು ಹೇಳಿದ್ದಾರೆ.

ಪ್ರಾಥಮಿಕ ಶಾಲಾ ಉಪಾಧ್ಯಾಯ ನೇಮಕ

ದೇಶದಲ್ಲಿ ೧೮ ಪ್ರಾಂತ್ಯಗಳು ನಿರುದ್ಯೋಗ ಪರಿಹಾರ ಯೋಜನೆಯಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರನ್ನು ನೇಮಿಸಿಕೊಳ್ಳುವ ಸಲಹೆಯನ್ನು ಒಪ್ಪಿರುವುದಾಗಿ ತಿಳಿಯಬರುತ್ತದೆ. ಈ ಕಾರ್ಯಕ್ಕಾಗಿ ಕೇಂದ್ರವು ೮ ಪ್ರಾಂತ್ಯಗಳಿಗೆ ೨॥ ಲಕ್ಷ ರೂಪಾಯಿ ಗ್ರಾಂಟನ್ನು ಮಂಜೂರ್ಮಾಡಿದೆ.

ವಿದ್ಯಾ ಪರಿಣಿತರ ಸಮಿತಿ

ಕೇಂದ್ರ ಸೆಕೆಂಡರಿ ವಿದ್ಯಾ ಸುಧಾರಣಾ ಸಮಿತಿಯವರ ಶಿಫಾರಸುಗಳನ್ನು ಜಾರಿಗೆ ತರುವ ಬಗ್ಗೆ ಭಾರತ ಸರ್ಕಾರದವರು ನೇಮಿಸಿರುವ ಪರಿಣಿತರ ಸಮಿತಿಗೆ ಮೈಸೂರು ವಿದ್ಯಾ ಇಲಾಖಾ ಮುಖ್ಯಾಧಿಕಾರಿ ಶ್ರೀ ಜೆ.ಬಿ. ಮಲ್ಲಾರಾಧ್ಯರನ್ನು ಸದಸ್ಯರನ್ನಾಗಿ ನೇಮಿಸಲಾಗಿದೆ.

ಕಾಲೇಜ್ ಸಂಘಗಳನ್ನು ತೆರೆಯಲು ಪುನಃ ಚಳುವಳಿ

ಮೈಸೂರು ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ಮುಚ್ಚಲ್ಪಟ್ಟಿರುವ ಸಂಘಗಳನ್ನು ಪುನಃ ಆರಂಭಿಸುವಂತೆ ಸೂಕ್ತ ಚಳುವಳಿ ಹೂಡಲು, ಬೆಂಗಳೂರಿನ ಹಲವು ಕಾಲೇಜುಗಳ ಪ್ರತಿನಿಧಿಗಳ ಒಂದು ಕ್ರಿಯಾ ಸಮಿತಿಯನ್ನು ರಚಿಸಲಾಗಿದೆ.

ಮಲೆನಾಡು ಅಭಿವೃದ್ಧಿ ಪರಿಶೀಲನಾ ಸಮ್ಮೇಳನ

ಭಾರತದ ಮಲೆನಾಡಿನ ಪ್ರದೇಶದ ಪ್ರತಿನಿಧಿಗಳ ಸಮ್ಮೇಳನವೊಂದು ಮುಂದಿನ ಜನವರಿ ತಿಂಗಳಿನಲ್ಲಿ ಶಿವಮೊಗ್ಗದಲ್ಲಿ ನಡೆಯಲು ಅಲ್ಲಿನ ಜಿಲ್ಲಾ ಬೋರ್ಡು ವ್ಯವಸ್ಥೆ ಮಾಡುತ್ತಿದೆ.

ಆಂಧ್ರದ ಶ್ರೇಷ್ಠ ನ್ಯಾಯಾಲಯ

ಆಂಧ್ರ ಸರ್ಕಾರವು ಪ್ರತ್ಯೇಕ ಶ್ರೇಷ್ಠ ನ್ಯಾಯಾಲಯವನ್ನು ಆದಷ್ಟು ಜಾಗ್ರತೆ ಸ್ಥಾಪಿಸಲು ನಿರ್ಧರಿಸಿದೆ.

ಪುರಸಭೆಯ ಚುನಾವಣಾ ಅರ್ಜಿ ಪರಿಶೀಲನೆ

೭ ಅರ್ಜಿಗಳು ತಿರಸ್ಕಾರ, ೩ ಉಮೇದುವಾರಿಕೆ ವಾಪಸ್ಸು

ಮೈಸೂರು ೧೯

ಪುರಸಭೆಯ ಚುನಾವಣೆಗೆ ಅರ್ಜಿಗಳನ್ನು ಸಲ್ಲಿಸಿದ್ದುದು ಈದಿನ ಪುರಸಭಾ ಕಮಿಷನರ್ ಮತ್ತು ರಿಟರ್ನಿಂಗ್ ಅಧಿಕಾರಿಗಳಾದ ಶ್ರೀ ಎನ್. ಲಕ್ಷ್ಮಣರಾವ್‌ರವರ ಮುಂದೆ ಪರಿಶೀಲನೆಗೆ ಬಂದು ಈ ಕೆಳಗೆ ಕಂಡ ೭ ಅರ್ಜಿಗಳು ತಿರಸ್ಕೃತವಾದುವು.

೧ ನೇ ವಾರ್ಡಿನ ಶ್ರೀಗಳಾದ ಕೆ. ಬಿ. ಶ್ರೀನಿವಾಸಯ್ಯ, ಗೋವಿಂದರಾಜ ಮತ್ತು ರಾಮಲಿಂಗಂರವರ ಅರ್ಜಿಗಳು. ೨೭ ನೇ ವಾರ್ಡಿನ ಶ್ರೀ ಮಲ್ಲಾರಪ್ಪ[ಪ್ರಜಾ]ಮತ್ತು ಎಂ. ಎನ್. ಉಗ್ರಪ್ಪನವರ ಅರ್ಜಿ. ೩೦ನೇ ವಾರ್ಡಿನ ಡಿ. ವೆಂಕಟಯ್ಯ (ಕಾಂ)ಮತ್ತು ೩೨ ನೇ ವಾರ್ಡಿನ ಶ್ರೀ ಸುಬ್ಬಸಿಂಗ್‌ರ ಅರ್ಜಿ.

ಇಲ್ಲಿಯವರೆಗೆ ೯ನೇ ವಾರ್ಡ್ ಶ್ರೀ ಜನಾರ್ದನನಾಯ್ಡು,(ಕಾಂ) ೭ ನೇ ವಾರ್ಡಿನಲ್ಲಿ ಹೆಚ್. ಕೆ. ಕೃಷ್ಣಮೂರ್ತಿ ಮತ್ತು ೨೪ನೇ ವಾರ್ಡಿನ ಜಿ. ವಿ. ಸಬೀಲ್‌ರವರು ತಮ್ಮ ಉಮೇದುವಾರಿಕೆ ವಾಪಸ್ಸು ಪಡೆದಿದ್ದಾರೆ.

ಮತ್ತೊಬ್ಬ ಚೀಫ್ ಇಂಜನಿಯರ ನೇಮಕವೇ

ಬೆಂಗಳೂರು ೧೯

ಮೈಸೂರು ಸಂಸ್ಥಾನದಲ್ಲಿ ಇತ್ತೀಚೆಗೆ ನೀರಾವರೀ ಕೆಲಸಗಳು ಹೆಚ್ಚುತ್ತಿರುವುದರಿಂದ ಈ ನೀರಾವರಿ ಯೋಜನೆಗಳ ಕಾರ್ಯಕ್ಕಾಗಿಯೇ ಪ್ರತ್ಯೇಕ ಚೀಫ್ ಇಂಜನಿಯರೊಬ್ಬರನ್ನು ನೇಮಿಸುವ ವಿಷಯವನ್ನು ನಿನ್ನೆ ಮಂತ್ರಿಮಂಡಲದ ಸಭೆಯಲ್ಲಿ ಚರ್ಚಿಸಲಾಯಿತೆಂದು ತಿಳಿಯಬರುತ್ತದೆ.

ಪಾಕೀಸ್ತಾನ ನಿಲುವಿನ ಖಂಡನೆ

ಪಾಕೀಸ್ತಾನವು ಅಮೆರಿಕಾದೊಡನೆ ಮಿಲಿಟರಿ ನೆರವು ಪಡೆಯಲು ಮತ್ತು ತನ್ನ ದೇಶದಲ್ಲಿ ವಿದೇಶಿ ಸೈನ್ಯ ನೆಲೆಗಳಿಗೆ ಸ್ಥಾನ ಕೊಡಲು ಯತ್ನಿಸುತ್ತಲಿರುವುದನ್ನು ಅಫ್ಘಾನಿಸ್ಥಾನ ಮತ್ತು ರಷ್ಯಾ ರಾಷ್ಟ್ರಗಳ ಪತ್ರಿಕೆಗಳು ತೀವ್ರವಾಗಿ ಟೀಕಿಸಿವೆ.

ಜೈಲಿನಲ್ಲಿ ಸತ್ಯಾಗ್ರಹಿಗಳ ಉಪವಾಸ ಮುಷ್ಕರ

ಬರೋಡಾ ಜೈಲಿನಲ್ಲಿರುವ ೩೮ ಮಂದಿ ಪಾರ್ಡಿ ಸತ್ಯಾಗ್ರಹಿಗಳು ತಮ್ಮನ್ನು ರಾತ್ರಿ ವೇಳೆಯಲ್ಲಿ ಬೀಗ ಹಾಕಿ ಬಂಧಿಸುವರೆಂದು ಪ್ರತಿಭಟಿಸಿ ಉಪವಾಸ ಮುಷ್ಕರವನ್ನು ಪ್ರಾರಂಭಿಸಿದ್ದಾರೆ.

ಪಾಕೀಸ್ತಾನಕ್ಕೆ ಮಿಲಿಟರಿ ಸಹಾಯ ಚರ್ಚೆ ನಡೆಯಲಿಲ್ಲ

ಅಮೆರಿಕಾವು ಯಾವ ಅಶಾಂತಿ ಕಾರ್ಯದಲ್ಲೂ ತೊಡಗುವುದಿಲ್ಲ

ಅಧ್ಯಕ್ಷ ಐಸೆನ್‌ಹೋವರ್‌ರವರ ಹೇಳಿಕೆ

ಪಾಕೀಸ್ತಾನ ಗೌರ್ನರ್ ಜನರಲ್‌ರವರಿಗೂ ತಮಗೂ ಭೇಟಿಯಾದಾಗ ಪಾಕೀಸ್ತಾನಕ್ಕೆ ಅಮೆರಿಕಾ ಮಿಲಿಟರಿ ಸಹಾಯವನ್ನು ನೀಡುವ ವಿಷಯದಲ್ಲಿ ವಿವರವಾದ ಚರ್ಚೆಯೇನೂ ಆಗಲಿಲ್ಲವೆಂದು ಅಮೆರಿಕಾಧ್ಯಕ್ಷ ಐಸೆನ್‌ಹೋವರ್‌ರವರು ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಪಾಕೀಸ್ತಾನಕ್ಕೆ ಸೈನ್ಯ ನೆರವು ನೀಡುವಾಗ ಸಮಗ್ರ ಭಾರತ ಅಥವ ಪಾಕೀಸ್ತಾನದ ನೆರೆ ರಾಷ್ಟ್ರಗಳಲ್ಲಿ ಅಶಾಂತಿ ಉಂಟಾಗುವ ಯಾವ ಕಾರ್ಯವನ್ನು ಅಮೆರಿಕಾವು ಕೈಗೊಳ್ಳುವುದಿಲ್ಲ. ಸಮಗ್ರ ಭಾರತದೊಡನೆ ಅಮೆರಿಕಾವು ಸ್ನೇಹ ಸಂಬಂಧವನ್ನು ಕಡಿದುಕೊಳ್ಳುವುದಿಲ್ಲ ಎಂದು ಜನರಲ್ ಐಸೆನ್‌ಹೋವರ್‌ರವರು ತಿಳಿಸಿದ್ದಾರೆ.

ಭಾರತ--ಅಮೆರಿಕಾ ಯುವಜನ ರೈತ ವಿನಿಮಯ ಕಾರ್ಯಕ್ರಮ

ಅಮೆರಿಕಾದ ಕೃಷಿ ವಿಸ್ತರಣ ಶಾಖೆಯೊಂದಿಗೆ ಸಮಾವೇಶಗೊಂಡಿರುವ ರಾಷ್ಟ್ರೀಯ ಫೌಂಡೇಷನ್ ಸಂಸ್ಥೆಯವರ ನೆರವಿನಿಂದ ಪ್ರಾರಂಭವಾಗಿರುವ ಭಾರತ–ಅಮೆರಿಕಾ ಯುವಜನ ರೈತ ವಿನಿಮಯ ಯೋಜನೆಯ ಕಾರ್ಯಕ್ರಮದಂತೆ ಇತ್ತೀಚೆಗೆ ಭಾರತದಿಂದ ೧೯ ಜನರ ರೈತ ತಂಡವೊಂದು ಅಮೆರಿಕಾದಲ್ಲಿ ೬ ತಿಂಗಳ ಕಾಲ ಸಂಚಾರ ಮಾಡಿ ಅನುಭವವನ್ನು ಪಡೆದು ಭಾರತಕ್ಕೆ ಹಿಂತಿರುಗಿದೆ.

ಮುಂದಿನ ಸಾಲಿನಲ್ಲಿಯೂ ಇದೇರೀತಿ ೨೫ ಸ್ಥಾನಗಳಿಗೆ ಭಾರತ ಸರ್ಕಾರ ಅರ್ಜಿಗಳನ್ನು ಡಿಸೆಂಬರ್ ೭ನೇ ತಾರೀಖಿನೊಳಗೆ ಸಂಸ್ಥಾನಗಳ ವ್ಯವಸಾಯ ಶಾಖಾ ಡೈರೆಕ್ಟರವರು ಅಥವಾ ದೆಹಲಿಯಲ್ಲಿರುವ ವ್ಯವಸಾಯ ಶಾಖಾ ಅಸಿಸ್ಟೆಂಟ್ ಡೈರೆಕ್ಟರವರ ಮೂಲಕ ಸ್ವೀಕರಿಸುತ್ತದೆ.

ಇದಕ್ಕೆ ಆರಿಸಲ್ಪಡುವವರು ಬರುವ ಬೇಸಿಗೆಯಲ್ಲಿ ಅಮೆರಿಕಾದ ರೈತ ಕುಟುಂಬಗಳೊಡನೆ ೫ ಅಥವಾ ೬ ತಿಂಗಳ ಕಾಲ ವಾಸಿಸಿ ಅವರೊಡನೆ ಕೆಲಸ ಮಾಡಬೇಕಾಗಿದೆ. ಪ್ರಯಾಣ ವೆಚ್ಚವನ್ನು ಫೌಂಡೇಷನವರು ನಿರ್ವಹಿಸುವರು ಇತರ ಬಾಬುಗಳಿಗಾಗಿ ಪ್ರತಿಯೊಬ್ಬನಿಗೂ ೧೨೦೦ ರಿಂದ ೨೦೦೦ ರೂಪಾಯಿಗಳ ಖಾಸಗಿ ಹಣ ಅವಶ್ಯಕ. ಅರ್ಜಿದಾರರು ೨೦ರಿಂದ ೨೮ ವರ್ಷದೊಳಗಿದ್ದು ಇಂಗ್ಲೀಷ್ ಭಾಷೆ ತಿಳಿದವರಾಗಿರಬೇಕು. ಸಮಾಜ ವಿಕಾಸ ಯೋಜನಾ ಪ್ರದೇಶಗಳಿಂದ ಬಂದ ಅರ್ಜಿಗಳಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯುವುದು.

ಮರಣದಂಡನೆ ಅಪೀಲಿಗೆ ತಡವಾಗಬಾರದು

ಶ್ರೇಷ್ಠನ್ಯಾಯಾಧೀಶರುಗಳ ಸಮ್ಮೇಳನದಲ್ಲಿ ನಿರ್ಧಾರ

ಭಾರತದ ಎ ಮತ್ತು ಬಿ ಸಂಸ್ಥಾನಗಳ ಶ್ರೇಷ್ಠ ನ್ಯಾಯಾಧೀಶರುಗಳ ಸಮ್ಮೇಳನವು ದೆಹಲಿಯಲ್ಲಿ ಸೇರಿತ್ತು. ಸಾಧ್ಯವಾದ ಮಟ್ಟಿಗೆ ಹೈಕೋರ್ಟುಗಳ, ಸಮಾನರೀತಿಯ ಕಾನೂನುಗಳನ್ನು ಅನುಸರಿಸಬೇಕೆಂದು ನಿರ್ಧರಿಸಲಾಯಿತು.

ಮರಣದಂಡನೆಗೆ ವಿಧಿಸಲ್ಪಟ್ಟ ರುವ ಮೊಕದ್ದಮೆಗಳಲ್ಲಿ ಸುಪ್ರೀಂ ಕೋರ್ಟಿಗೆ ಅಪೀಲು ಮಾಡಿಕೊಳ್ಳಲು ಅನುಮತಿಗೆ ಆಗುತ್ತಿರುವ ನಿಧಾನವನ್ನು ಕಡಮೆಮಾಡಿ, ಆ ಬಗ್ಗೆ ಬರುವ ಅರ್ಜಿಗಳನ್ನು ೧೫ ದಿನಗಳೊಳಗಾಗಿ ವಿಲೇವಾರಿ ಮಾಡಬೇಕೆಂದೂ ತೀರ್ಮಾನಿಸಲಾಯಿತು.

ಜಾಮೀನುಮೇಲೆ ಬಿಡುಗಡೆ ಮಾಡುವುದು, ರಾಜ್ಯಾಂಗದ ೨೦ ನೆಯ ವಿಧಿ ಮತ್ತು ೩೨ ನೆಯ ವಿಧಿಗಳ ರೀತ್ಯ ರಿಟ್ ಕೊಡುವುದ–ಇವುಗಳ ಬಗ್ಗೆ ಏಕಕಾಲದಲ್ಲಿ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟುಗಳಲ್ಲಿ ಅರ್ಜಿಗಳನ್ನು ಹಾಕುವುದನ್ನು ತಪ್ಪಿಸಬೇಕೆಂದೂ ಸಮ್ಮೇಳನ ಒಪ್ಪಿತು.

ಕಮ್ಯೂನಿಸ್ಟ್-ಪ್ರಜಾ ಸೋಷಲಿಸ್ಟ್ ವಿಲೀನವಿಲ್ಲ

ತಿರುವಾಂಕೂರ್—ಕೊಚ್ಚಿಯಲ್ಲಿ ನಡೆಯುವ ಸಾರ್ವತ್ರಿಕ ಚುನಾವಣೆಯಲ್ಲಿ ಕಮ್ಯೂನಿಸ್ಟ್ ಪಕ್ಷವು ಯಾವರೀತಿ ವಿಲೀನ ಅಥವಾ ಒಪ್ಪಂದ ಮಾಡಿಕೊಳ್ಳುವುದಿಲ್ಲ- ಎಂದು ಅಖಿಲ ಭಾರತ ಪಿ. ಎಸ್. ಪಿ. ಕಾರ್ಯದರ್ಶಿ ಸ್ಪಷ್ಟವಾಗಿ ಹೇಳಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೮—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೮	೨೧ ೮
ಎಳ್ಳು	೬೮—೨	೫೩—
ಹರಳು	೩೫—೨	೩೫—೧೦
ಹುಚ್ಚೆಳ್ಳು	—	—
ಹುರಳಿ	—	—
ಹೆಸರು	೩೨—೧೦	೩೮—೧೦
ಅಲಸಂದೆ	೩೯—	೫೩—೨
ಉದ್ದು	—	—
ಸೀಗೆಪುಡಿ	೬—೧೪	—
ಮೆಣಸಿನಕಾಯಿ	೧೨—	೩೦—೬
ತೆಂಗಿನಕಾಯಿ	೧೪೨—	೨೪೬

ಶ್ರೀ ಅಹೋಬಿಲ ಸ್ವಾಮಿಗಳ ಆಗಮನ

ಮೈಸೂರು ೧೯

ಶ್ರೀ ಶ್ರೀ ಅಹೋಬಿಲ ಸ್ವಾಮಿಗಳು ಇದೇ ೨೦ನೇ ತಾರೀಖು ಶುಕ್ರವಾರ ಸಂಜೆ ೫ ಗಂಟೆಗೆ ಮೈಸೂರು ಬನ್ನಿಮಂಟಪಕ್ಕೆ ಆಗಮಿಸಿ ಆ ರಾತ್ರಿ ಅಲ್ಲಿ ಬಿಡಾರ ಮಾಡುವರು ಮಾರನೇದಿನ ಬೆಳಗ್ಗೆ ೮ ಘಂಟೆಗೆ ಹಳೆಯ ಶ್ರೀರಂಗಪಟ್ಟಣದ ಉಕ್ಕಡದ ಬಳಿ ಶ್ರೀ ಶ್ರೀ ಸ್ವಾಮಿಗಳನ್ನು ರಾಜ, ಪೌರ ಮತ್ತು ಸಾರ್ವಜನಿಕ ಮರ್ಯಾದೆಗಳೊಡನೆ ಸ್ವಾಗತಿಸಲಾಗುವುದು. ಅಲ್ಲಿಂದ ಶ್ರೀ ಶ್ರೀಗಳವರು ಅಶೋಕಾರಸ್ತೆ, ದೊಡ್ಡ ಗಡಿಯಾರದ ಚೌಕ, ಗಾಂಧೀಚೌಕ, ಹಳೆಯ ಮೈಸೂರು ಬ್ಯಾಂಕ್ ರಸ್ತೆ, ಸಯ್ಯಾಜಿ ರಾವ್ ರಸ್ತೆ, ಜಗನ್ಮೋಹನ ಬಂಗಲೆಯ ಮುಂಭಾಗದಿಂದ ಕೃಷ್ಣವಿಲಾಸರಸ್ತೆ, ರಾಮವಿಲಾಸ ಅಗ್ರಹಾರ, ನ್ಯೂ ಸಯ್ಯಾಜಿ ರಾವ್ ರಸ್ತೆ, ಹೊಸ ಸ್ಪ್ಯಾಚೂಸ್ಕ್ವೇರ್ ಮತ್ತು ಸ್ಪ್ಯಾಚೂಸ್ಕ್ವೇರ್ ಬಳಿ ಅರಮನೆಯ ಉತ್ತರದ ಗೇಟ್ ಮೂಲಕ, ಅರಮನೆಗೆ ಬಿಜಯಮಾಡಿ ಮಹಾಸ್ವಾಮಿ ದೇವಸ್ಥಾನದಲ್ಲಿ ಬಿಡಾರ ಮಾಡುವರು.

ನೆಹರೂ-ಕೊಟೇಲವಾಲಾರ ಭೇಟಿ

ಭಾರತ ಪ್ರಧಾನಿ ನೆಹರೂ ಮತ್ತು ಸಿಂಹಳ ಪ್ರಧಾನಿ ಕೊಟೇಲವಾಲಾರವರ ಭೇಟಿಯು ದೆಹಲಿಯಲ್ಲಿ ಜನವರಿ ೧೫ ನೇ ತಾರೀಖು ನಡೆಯುವುದೆಂದು ತಿಳಿಯಬರುತ್ತದೆ. ಭಾರತ-ಸಿಂಹಳಗಳ ನಡುವೆ ಇರುವ ವಿವಾದಗ್ರಸ್ತ ವಿಷಯಗಳ ಚರ್ಚೆ ಆಗ ನಡೆಯುವುದು.

ನಾಟಕರತ್ನ ಜಿ. ಹೆಚ್. ವೀರಣ್ಣನವರ
ಶ್ರೀ ಚೆನ್ನಬಸವೇಶ್ವರ ಗುಬ್ಬಿ ಥಿಯೇಟ್ರಿಕಲ್ ಕಂಪೆನಿ (ರಿ)
19--11--53 ನೇ ರಾತ್ರಿ 10 ಗಂಟೆಗೆ
ಮೈಸೂರು ಟೌನ್‌ಹಾಲಿನಲ್ಲಿ
ನಾಟಕರತ್ನ ಜಿ. ಹೆಚ್. ವೀರಣ್ಣನವರು ಮತ್ತು ಜಯಮ್ಮನವರು ಅಭಿನಯಿಸುವರು
ಅಡ್ಡದಾರಿ
ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ನಗರದಲ್ಲಿ ವೃತ್ತಿ ಶಿಕ್ಷಣಾಲಯ

ಮೈಸೂರು ೧೯

ಮೈಸೂರು ನಗರದಲ್ಲಿ ಒಂದು ವೃತ್ತಿ ಶಿಕ್ಷಣಾಲಯವನ್ನು ಸ್ಥಾಪಿಸಲು ಸರ್ಕಾರ ಮಂಜೂರಾತಿ ನೀಡಿದೆ. ಅಲ್ಲಿ ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಸಿವಿಲ್ ಎಂಜನೀಯರಿಂಗ್ ಜೊತೆಗೆ ಗಡಿಯಾರಗಳ ತಯಾರಿಕೆ, ಟೌನ್ ಮತ್ತು ಗ್ರಾಮ ಸಂಯೋಜನೆ ಮತ್ತು ಶಿಲ್ಪಿಕಲೆಗಳಲ್ಲಿ ಶಿಕ್ಷಣ ಕೊಡಲಾಗುವುದು. ಈ ಶಾಲೆಗೆ ಈಗಾಗಲೇ ದಿವಂಗತ ಪೆರುಮಾಳ್ ಚೆಟ್ಟಿಯವರ ಉದಾರ ಸಹಾಯದಿಂದ ಕಟ್ಟಿರುವ ಭವ್ಯ ಕಟ್ಟಡವು ಇದೆ.

ಭಾರತೀಯ ಜನ ಸಂಘ

ಮೈಸೂರು ೧೯

ಅಖಿಲಭಾರತ ಭಾರತೀಯ ಜನ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ದೀನದಯಾಳ್ ಉಪಾಧ್ಯಾಯರು ಇದೇ ೨೭ ನೇ ತಾ॥ ಮಧ್ಯಾಹ್ನ ರಾಜಧಾನಿಗೆ ಆಗಮಿಸುವರು.

ಮತ್ತೊಂದು ಆಚ್ಚರಿ ಕನ್ಯೆ

ವಿಂಧ್ಯಪ್ರದೇಶದ ರಿವಾದಲ್ಲಿ ೩೫ ವರ್ಷದ ಅಂಗವಿಹೀನಳಾದ ಗೀತಾ ಎಂಬಾಕೆಯು ಕಳೆದ ೨೧ ವರ್ಷಗಳಿಂದ ನೀರು ಅಥವ ಆಹಾರವನ್ನು ತೆಗೆದುಕೊಂಡಿಲ್ಲವೆಂದೂ. ಈಗ ಆಕೆಯನ್ನು ವೈದ್ಯಪರೀಕ್ಷೆಗೆ ಗುರಿಪಡಿಸಲಾಗಿದೆಯೆಂದೂ ವರದಿಯಾಗಿದೆ.

ರಣಜಿತ್
20—11—53 ರಿಂದ
ವರ್ಣರಂಜಿತ ಚಿತ್ರ.
ಝಾನ್ಸಿಕಿರಾಣಿ
(ಹಿಂದಿ)
ಪಾತ್ರ:—ಮೆಹತಾಬ್, ಸೊಹ್ರಾಬ್ ಮೋದಿ

ರಾಜಕಮಲ್, ಮೈಸೂರು
20--11--53 ರಿಂದ 2 ನೇ ವಾರ
ಎನ್ ವೀಡು
ಪಾತ್ರ: ವಿ. ನಾಗಯ್ಯ, ಟಿ. ಎಸ್. ಬಾಲಯ್ಯ ಟಿ. ಆರ್. ರಾಜಕುಮಾರಿ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಒಲಂಪಿಯಾ 20—11—53 ರಿಂದ ಅಮೋಘ ಪ್ರಾರಂಭ
ಪ್ರತಿದಿನ 3 ಆಟಗಳು 3-15, 6-30, 9-45ಕ್ಕೆ
ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡಿ ತಯಾರಿಸಿದ ಭಾರತದ ಮಟ್ಟಮೊದಲನೆಯ
ಜಿ. ಪಿ. ಪ್ರೊಡಕ್ಷನ್ಸ್‌ರವರ ಗೇವಾ ವರ್ಣಮಯ ಚಿತ್ರ
॥ ಷಹಿನ್ - ಷಾ ॥
ಪಾತ್ರ: ಕಾಮಿನಿಕೌಶಲ್ಯ, ರಂಜನ್, ಕೆ. ಎನ್. ಸಿಂಗ್, ಮುಕ್ರಿ, ಕಕ್ಕೊ ಮತ್ತು ಅನೇಕ
ನಿರ್ದೇಶನ:—ಅಮಿಯಾ ಚಕ್ರವರ್ತಿ (ದಾಗ್, ಪತಿತ ಮತ್ತು ಬಾದಲ್ ಪ್ರಖ್ಯಾತಿ)
ಸಂಗೀತ—ಎಸ್. ಡಿ. ಬರ್ಮನ್
ಮೊದಲಹವಾರ ಹೆಂಗಸರಿಗೆ ಪ್ರತ್ಯೇಕ ಸ್ಥಳವಿಲ್ಲ
ಈ ಚಿತ್ರಕ್ಕೆ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ.
A Talam Release.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೭೪

೨೦-೧೧-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪುರಸಭಾ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರು

ಕಾಂಗ್ರೆಸ್ ಸಕ್ರಿಯಾ ಸದಸ್ಯರಲ್ಲವೆಂದು ಪ್ರತಿಭಟನೆ

ಮೈಸೂರು ೨೦

ಮೈಸೂರುನಗರದ ಕಾಂಗ್ರೆಸ್ ಕಾರ್ಯಕರ್ತರ ಸಭೆಯು ನಿನ್ನೆ ಶ್ರೀ ಟಿ. ಎಸ್. ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆಕಂಡ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು..

ಮೈಸೂರುನಗರದ ಪೌರಸಭಾ ಚುನಾವಣೆಗೆ ಕಾಂಗ್ರೆಸ್ ಪರವಾಗಿ ಆರಿಸಿರುವ ಉಮೇದುವಾರರ ಪೈಕಿ ಹೆಚ್ಚಿನವರು ಕಾಂಗ್ರೆಸ್ ಸಕ್ರಿಯಾ ಸದಸ್ಯರೂ ಸತತ ಖಾದೀಧಾರಿಗಳೂ ಆಗಿಲ್ಲವಾದುದರಿಂದ ಕಾಂಗ್ರೆಸ್ ನಿಯಮಾವಳಿಗೂ ಪ್ರತಿಜ್ಞಾ ಪತ್ರಕ್ಕೂ ತೀರಾ ವಿರೋಧವಾಗಿದೆ. ಅಷ್ಟೇ ಅಲ್ಲದೆ ಇವರು ಪ್ರತಿಗಾಮಿಗಳೂ ಆಗಿರುತ್ತಾರೆ. ಇದನ್ನು ನೋಡಿದರೆ ಕಾಂಗ್ರೆಸ್ಸಿನ ತತ್ವಕ್ಕಿಂತಲೂ ವ್ಯಕ್ತಿಗಳಿಗೆ ಪ್ರಾಮುಖ್ಯತೆ ಕೊಟ್ಟಾಂತಾಗಿದೆ ಈ ನೀತಿ ಕಾಂಗ್ರೆಸ್ ಸಂಸ್ಥೆಯ ಏಳಿಗೆಗೆ ಧಕ್ಕೆಯನ್ನುಂಟುಮಾಡಿದೆ. ಈ ಆಯ್ಕೆಗೆ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೂ ಭಾಗಿಗಳಾಗುವುದರಿಂದ ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷರಿಗೆ ಈ ಎಲ್ಲಾ ವಿಷಯಗಳನ್ನು ಕೂಲಂಕುಶವಾಗಿ ತಿಳಿಸಬೇಕು.

ವಿದ್ಯಾರ್ಥಿಗಳ ಉಪಯೋಗಕ್ಕೆ ಮಿಲಟರಿ ಗೃಹಗಳು

ಮೈಸೂರು ೨೦

ಮೈಸೂರು ಜೈಲಿನ ಬಳಿ ಇರುವ ಹಳೇ ಇನ್‌ಫೆಂಟ್ರಿಗೆ ಸೇರಿದ್ದ ೧೧೫ ಗೃಹಗಳನ್ನು ಕೇಂದ್ರ ಸೈನ್ಯ ಶಾಖೆಯವರಿಂದ ಕೊಂಡುಕೊಳ್ಳಲು ಅನುಮತಿ ದೊರೆತಿದೆಯೆಂದೂ ಅವುಗಳನ್ನು ದುರಸ್ತು ಪಡಿಸಿ, ವಿದ್ಯಾರ್ಥಿನಿಲಯಗಳಿಗೆ ಬಾಡಿಗೆ ಕೊಡಲು ಮೈಸೂರು ಸರ್ಕಾರ ನಿರ್ಧರಿಸಿದೆಯೆಂದೂ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಮೈಸೂರು-ಟಿ. ನರಸೀಪುರದ ರಸ್ತೆಯಲ್ಲಿರುವ ೧೧೧ ಮಿಲಟರಿ ಗೃಹಗಳನ್ನು ಸಹ ಪಡೆದು ಅವುಗಳನ್ನು ಸರ್ಕಾರಿ ನೌಕರರಿಗೆ ವಾಸಕ್ಕಾಗಿ ಕೊಡಲಾಗುವುದೆಂದೂ ಅವರು ಹೇಳಿದ್ದಾರೆ.

ಬೊಂಬಾಯಿ ಪ್ರಾಂತ್ಯದಲ್ಲಿ ೬೭ ಮಾತೃಭಾಷೆಗಳು

ಬೊಂಬಾಯಿ ಪ್ರಾಂತ್ಯದಲ್ಲಿ ೬೭ ಮಾತೃಭಾಷೆಗಳನ್ನು ಆಡುವ ಜನರಿರುವರೆಂದು ೧೯೫೧ನೇ ಜನಗಣತಿಯಿಂದ ತಿಳಿಯಬರುತ್ತದೆ.

ಪುರಸಭಾ ಉಮೇದುವಾರಿಕೆ ವಾಪಸು

ಮೈಸೂರು ೨೦

ಮೈಸೂರು ಪುರಸಭಾ ಚುನಾವಣೆಗೆ ಉಮೇದುವಾರಿಕೆಯನ್ನು ಈ ಕೆಳಗೆಕಂಡ ೧೧ ಜನ ಹಿಂದಕ್ಕೆ ತೆಗೆದುಕೊಂಡಿದ್ದಾರೆ.

ಶ್ರೀಗಳಾದ ಕೆ. ಕಾಳಯ್ಯ ೭ ನೇ ವಾರ್ಡು (ಪ್ರಜಾ), ಶ್ರೀಕಂಠಪ್ಪ ೨೩ (ಪ್ರಜಾ) ಅಬ್ದುಲ್ ಮರೀಫ್ (ಸ್ವ)೨೪ ಪಾಷಾಸಾಹೇಬ್ [ಸ್ವ]೩೩, ಮರಿಯಪ್ಪ (ಸ್ವ) ೩೬, ಎಂ. ರಾಮಕೃಷ್ಣಯ್ಯ [ಸ್ವ] ೧೬, ಎ. ಈಶ್ವರ್ [ಸ್ವ] ೨೫, ಅಬ್ದುಲ್ ಖಾದರ್ (ಸ್ವ) ೨೭ ಎ. ಎಸ್. ನಾರಾಯಣಸ್ವಾಮಿ ೧೪, [ಸ್ವ] ನರಸೇಗೌಡ ೧೭, (ಸ್ವ) ಎಂ. ಬಸಪ್ಪ ೨೪,]ಪ್ರಜಾ].

ಉಮೇದುವಾರಿಕೆ ವಾಪಸ್ಸು ತೆಗೆದುಕೊಳ್ಳಲು ಈದಿನವೇ ಕೊನೆಯದಾಗಿತ್ತು.

ನಗರಾರೋಗ್ಯ

ಇದೇ ೧೫ನೇ ತಾರೀಖಿಗೆ ಮುಕ್ತಾಯವಾದ ಪಕ್ಷದಲ್ಲಿ ಮೈಸೂರು ನಗರದಲ್ಲಿ ಪ್ಲೇಗು, ಸಿಡುಬು ಮತ್ತು ಕಾಲರಾ ರೋಗಗಳಿರಲಿಲ್ಲ. ೧೧೯೮ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಯಿತು. ೧೨೭ ಪ್ರಾಥಮಿಕ ಮತ್ತು ೩೯೬ ರಿವ್ಯಾಕ್ಸಿನೇಷನ್, ೨೯ ಕಾಲರಾ ನಿರೋಧ ಇನಾಕ್ಯುಲೇಷನ್‌ಗಳನ್ನು ಮಾಡಲಾಯಿತು. ಈ ಪಕ್ಷದಲ್ಲಿ ಡಿಫ್ತೀರಿಯಾ ರೋಗವು ಇಬ್ಬರಿಗೆ ತಗುಲಿತು. ಟೈಫಾಯಿಡ್‌ನಿಂದ ಒಂದು ಮರಣ ೧೧ನೇ ತಾರೀಖಿನಿಂದ ಡಿಫ್ತೀರಿಯಾ ನಿರೋಧ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ಈ ಪಕ್ಷದಲ್ಲಿ ೬೭೮ ಮಕ್ಕಳಿಗೆ ಡಿಫ್ತೀರಿಯಾ ಇನಾಕ್ಯುಲೇಷನ್ನು ಗುಣಾಂಬ ಶಿಶು ಸಂರಕ್ಷಣಾಲಯದಲ್ಲಿ ಮಾಡಲಾಯಿತು.

ಮಂತ್ರಿಮಂಡಲದ ವಿಸ್ತರಣೆ ಇಲ್ಲ

ಮೈಸೂರು ಮಂತ್ರಿ ಮಂಡಲದ ವಿಸ್ತರಣೆ ಬಗ್ಗೆ ಪಕ್ಷದ ಅಭಿಪ್ರಾಯ ಪಡೆಯಲು ಸಂಸ್ಥಾನದಲ್ಲಿ ಪ್ರವಾಸ ಮಾಡಲು ಯಾರೋ ಒಬ್ಬರನ್ನು ತಾವು ಕಳುಹಿಸಿರುವುದಾಗಿ ಬಂದಿರುವ ಸುದ್ದಿ ನಿರಾಧಾರವಾದುದೆಂದೂ, ತಾವು ವಿಸ್ತರಣೆ ವಿಷಯ ಯೋಚಿಸುತ್ತಿಲ್ಲವೆಂದೂ, ಅದು ಒಟ್ಟು ಪಕ್ಷದ ಅಭಿಪ್ರಾಯವನ್ನವಲಂಬಿಸಿದೆಯೆಂದೂ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಮುಂದಿನ ವರ್ಷದಿಂದ ವಿದ್ಯಾಸುಧಾರಣೆ

ಬೆಂಗಳೂರು ೨೦

ಮುಂದಿನವರ್ಷದಿಂದ ವಿದ್ಯಾಭ್ಯಾಸ ಸುಧಾರಣೆಯನ್ನು ಸಂಸ್ಥಾನದಲ್ಲಿ ಜಾರಿಗೆ ತರಲು ಸರ್ಕಾರ ನಿರ್ಧರಿಸಿದೆಯೆಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಸಂಸ್ಕೃತಿ ಪ್ರಚಾರ

ಸಂಸ್ಕೃತಿ ಪ್ರಚಾರದ ದೀರ್ಘಾವಧಿ ಕಾರ್ಯಕ್ರಮವನ್ನು ಸಿದ್ಧಗೊಳಿಸಲು ಶ್ರೀ ಕೆ. ಗುರುದತ್‌ರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ.

ಭಾಷಣ ಕಾರ್ಯಕ್ರಮಕ್ಕಾಗಿ ಶ್ರೀ ಜಿ. ಪಿ. ಮಲ್ಲಾರಾಧ್ಯರವರ ಅಧ್ಯಕ್ಷತೆಯಲ್ಲಿ ಮತ್ತೊಂದು ಸಮಿತಿ ರಚಿಸಲಾಗಿದೆ-ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ.

ಕೆರೆ ತನಿಖಾ ಸಮಿತಿ

ಚಿತ್ರದುರ್ಗ ಜಿಲ್ಲೆ ಜಗಳೂರು ತಾಲ್ಲೂಕಿನಲ್ಲಿ ೩೯ ಲಕ್ಷ ರೂ. ಖರ್ಚಿನಿಂದ ಇತ್ತೀಚೆಗೆ ನಿರ್ಮಿಸಿದ್ದ ಸಂಗೇನಹಳ್ಳಿ ಮತ್ತು ತುಪ್ಪದ ಹಳ್ಳಿ ಕೆರೆಗಳು ಕಳೆದ ತಿಂಗಳಿನ ವಿಪರೀತ ಮಳೆಯಿಂದ ಒಡೆದಹೋದ ಬಗ್ಗೆ ತನಿಖೆ ನಡೆಸಲು ನಿವೃತ್ತ ಇಂಜನಿಯರ್ ಶ್ರೀ ಸಿ. ಆರ್. ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಒಂದು ಖಾಸಗಿ ಸಮಿತಿಯನ್ನು ನೇಮಿಸಲಾಗಿದೆಯೆಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ನಿರ್ಮಾಣಕಾಲದಲ್ಲೇ ಏನೋ ದೋಷವಿರಬೇಕೆಂದು ಖಾಸಗೀ ಮಹನೀಯರುಗಳಿಂದ ದೂರು ಬಂದಿರುವುದು ನ್ಯಾಯವಾಗಿದೆಯೆಂದು ಸರ್ಕಾರ ಭಾವಿಸಿ, ಈರೀತಿ ತೀರ್ಮಾನಕ್ಕೆ ಬಂದಿರುವುದಾಗಿ ಅವರು ತಿಳಿಸಿದ್ದಾರೆ.

ಕಳೆದ ತಿಂಗಳಿನಲ್ಲಿ ಮಳೆಯಿಂದ ಒಡೆದುಹೋದ ಇತರ ಕೆರೆಗಳಿಂದ ಆಗಿರುವ ನಷ್ಟ ೧೦-೧೫ ಲಕ್ಷ ರೂ.ಗಳೆಂದು ಅಂದಾಜುಮಾಡಲಾಗಿದೆಯೆಂದೂ, ಅವುಗಳನ್ನು ಈಗಾಗಲೇ ದುರಸ್ತು ಪಡಿಸಲಾಗುತ್ತಿದೆಯೆಂದು ಅವರು ಹೇಳಿದ್ದಾರೆ.

ನೀರಾವರಿ ಯೋಜನೆಗಳು

ಭದ್ರಾ ನೀರಾವರಿ ಯೋಜನೆಗೆ ಕೇಂದ್ರದಿಂದ ೩೪ ಕೋಟಿ ರೂ. ಸಹಾಯ ದೊರಕಿದೆ. ಅದರ ಜೊತೆಗೆ ಮೈಸೂರು ಸರ್ಕಾರದವರು ೨ ಕೋಟಿ ೫ ಲಕ್ಷ ರೂ. ಖರ್ಚುಮಾಡಲಿರುವರು. ೧೯೫೬ರ ಅಂತ್ಯದ ವೇಳೆಗೆ ೫೦೫ ಲಕ್ಷ ರೂ. ಕೆಲಸವು ಮುಗಿದು, ಇಡಿ ಯೋಜನೆಯು ೧೯೫೮-೫೯ರ ಕೊನೆಗೆ ಮುಗಿಯುವುದು. ತುಂಗಾ ಮತ್ತು ನುಗು ಯೋಜನೆಗಳು ೧೯೫೬ರ ಮಾರ್ಚಿ ಅಂತ್ಯದೊಳಗೆ ಪೂರೈಸುವುದು–ಎಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಮತ್ತೊಂದು ಬೃಂದಾವನ

ಕೃಷ್ಣರಾಜಸಾಗರದಲ್ಲಿ ಇರುವುದಕ್ಕಿಂತ ದೊಡ್ಡ ಪ್ರಮಾಣದಲ್ಲಿ ಬೃಂದಾವನವನ್ನು ಭದ್ರಾ ನೀರಾವರೀ ಯೋಜನೆಯ ಪ್ರದೇಶದಲ್ಲಿ ನಿರ್ಮಿಸಲಾಗುವುದೆಂದೂ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಜಿಲ್ಲಾ ಬೋರ್ಡುಗಳು ರದ್ದಾಗಬೇಕು

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಶಿಫಾರಸು

ಬೆಂಗಳೂರು ೨೦

ಸಂಸ್ಥಾನದಲ್ಲಿರುವ ಜಿಲ್ಲಾ ಬೋರ್ಡುಗಳನ್ನು ರದ್ದುಮಾಡಿ, ಅದರ ಬದಲು ತಾಲ್ಲೂಕು ಬೋರ್ಡುಗಳನ್ನು ರಚಿಸಬೇಕೆಂದೂ, ಅವುಗಳ ಆಯ್ಕೆ ಆಗುವವರೆಗೂ ಈ ಬೋರ್ಡುಗಳ ಆಡಳಿತವನ್ನು ಜಿಲ್ಲಾಧಿಕಾರಿಗಳಿಗೆ ವಹಿಸಬೇಕೆಂದೂ ಮೈಸೂರು ಶಾಸನಸಭೆಯ ಕಾಂಗ್ರೆಸ್‌ಪಕ್ಷದ ಕಾರ್ಯಕಾರೀ ಸಮಿತಿ ಸಭೆಯು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ನಿಮ್ನವರ್ಗದ ಕಮಿಷನರ್

ಬೆಂಗಳೂರು ೨೦

ಸಹಕಾರ ಸಂಘಗಳ ರಿಜಿಸ್ಟ್ರಾರ್ ಆಗಿರುವ ಶ್ರೀ ರಾಚಯ್ಯನವರನ್ನು ನಿಮ್ನವರ್ಗ ಶಾಖೆಯ ಕಮಿಷನರಾಗಿ ನೇಮಿಸಲಾಗಿದೆ.

ಸಹಕಾರ ಶಾಖೆಯ ಸಹ ರಿಜಿಸ್ಟ್ರಾರ್ ರಾದ ಶ್ರೀಮರುದೇವೇಗೌಡರು ರಿಜಿಸ್ಟ್ರಾರರ ಕೆಲಸವನ್ನು ನೋಡಿಕೊಳ್ಳುವರು.

ಅನಂತಾಚಾರ್ ಸ್ಪೆಷಲ್ ಚೀಫ್ ಇಂಜನಿಯರ್

ಬೆಂಗಳೂರು ೨೦

ಕಾವೇರೀ ಸರ್ಕಲ್‌ಲ್ಲಿನ ಸೂಪರಿಂಟೆಂಡಿಂಗ್ ಇಂಜನಿಯರ್ ಶ್ರೀ ಹೆಚ್. ಅನಂತಾಚಾರ್‌ರನ್ನು ಸ್ಪೆಷಲ್ ಚೀಫ್ ಇಂಜನಿಯರಾಗಿ ನೇಮಿಸಲಾಗುವುದೆಂದು ತಿಳಿಯಬರುತ್ತದೆ.

ರಾಜಪ್ರಮುಖರ ಹುದ್ದೆ ರದ್ದಿನ ಸೂಚನೆ ಇಲ್ಲ

ರಾಜಪ್ರಮುಖ ಹುದ್ದೆ ರದ್ದಿನ ವಿಷಯದಲ್ಲಿ ವೈಯುಕ್ತಿಕವಾಗಿಯಾಗಲೀ ಅಥವ ಅಧಿಕಾರಿಯುತವಾಗಿಯಾಗಲೀ ತಮಗೆ ಕೇಂದ್ರದಿಂದ ಯಾವ ಸೂಚನೆಯೂ ಬಂದಿಲ್ಲವೆಂದೂ, ತಾವು ದೆಹಲಿಯಲ್ಲಿ ಪ್ರಧಾನಿಯನ್ನು ಕಂಡಾಗ ಈ ವಿಷಯದಲ್ಲಿ ಪ್ರಸ್ತಾಪವೇ ಬರಲಿಲ್ಲವೆಂದೂ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿದ್ದಾರೆ.

ಅಮೆರಿಕಾ-ಪಾಕೀಸ್ತಾನ ಮಿಲಿಟೆರಿ ನೆರವು ನಿರಾಧಾರ

ಪಾಕೀಸ್ತಾನ ಗೌರ್‍ನರ್ ಜನರಲ್‌ರ ಹೇಳಿಕೆ

ಪಾಕೀಸ್ತಾನವು ಅಮೆರಿಕಾದೊಡನೆ ಮಿಲಿಟರಿ ಒಪ್ಪಂದವನ್ನು ಮಾಡಿಕೊಂಡು ತನ್ನ ಸೈನ್ಯವನ್ನು ಹೆಚ್ಚಿಸಿಕೊಳ್ಳಲು ಆರ್ಥಿಕ ನೆರವನ್ನು ಪಡೆದು ಅದಕ್ಕೆ ಬದಲಾಗಿ ಪಾಕೀಸ್ತಾನದಲ್ಲಿ ಅಮೆರಿಕಾ ಸೈನ್ಯಗಳಿಗೆ ನೆಲೆಯನ್ನು ಕೊಡುವುದೆಂದೂ ಆ ಬಗ್ಗೆ ಪಾಕ್ ಗೌರ್‍ನರ್ ಜನರಲ್ ಮತ್ತು ಅಮೆರಿಕಾಧ್ಯಕ್ಷ ಐಸೆನ್ ಹೋವರ್‌ರವರ ನಡುವೆ ಮಾತುಕತೆಗಳು ನಡೆದುವೆಂದೂ ಹೊರಟಿರುವ ಸುದ್ದಿಯೆಲ್ಲವೂ ನಿರಾಧಾರವಾದುವೆಂದು ಪಾಕೀಸ್ತಾನದ ಗೌರ್‍ನರ್ ಜನರಲ್ ಗುಲಾಂ ಮಹಮದ್‌ರವರು ಲಂಡನ್ನಿನಲ್ಲಿ ತಿಳಿಸಿದ್ದಾರೆ.

ಈ ವಿಷಯದಲ್ಲಿ ಭಾರತ ಪ್ರಧಾನಿ ನೆಹರೂರವರು ದೆಹಲಿಯಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಇತ್ತ ಅಭಿಪ್ರಾಯದ ವಿಷಯವಾಗಿ ಪಾಕ್ ಗೌರ್‍ನರ್ ಜನರಲ್‌ರವರು ಪ್ರಸ್ತಾಪಿಸಿ, ಈ ವಿಷಯವನ್ನು ಸರಿಯಾಗಿ ತಿಳಿದುಕೊಳ್ಳದೆ ಶ್ರೀ ನೆಹರೂರವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದುದು ತಮಗೆ ಅತ್ಯಂತ ಆಶ್ಚರ್ಯವನ್ನುಂಟುಮಾಡಿರುವುದಾಗಿ ಹೇಳಿದ್ದಾರೆ.

ರೈಲ್ವೆ ಅಧಿಕಾರಿಗಳ ಮಾತುಕತೆ

ಭಾರತ ಮತ್ತು ಪಾಕೀಸ್ತಾನ ರೈಲ್ವೆ ಅಧಿಕಾರಿಗಳ ನಡುವೆ ಕರಾಚಿಯಲ್ಲಿ ಕಳೆದ ೨-೩ ದಿನಗಳಿಂದ ನಡೆಯುತ್ತಲಿದ್ದ ಮಾತುಕತೆಗಳು ಸೌಹಾರ್ದ್ಯಯುತವಾಗಿ ನಡೆದು ಉಭಯ ರಾಷ್ಟ್ರಗಳ ನಡುವೆ ಇದ್ದ ಅನೇಕ ವಿವಾದಗಳು ಪರಿಹಾರವಾದುವೆಂದು ತಿಳಿಯಬರುತ್ತದೆ. ಕಾರ್ಯಕ್ರಮ ಪಟ್ಟಿಯಲ್ಲಿದ್ದ ಇನ್ನೂ ಅನೇಕವಿಷಯಗಳು ಇತ್ಯರ್ಥವಾಗಲಿಲ್ಲವಾಗಿ ಈ ಅಧಿಕಾರಿಗಳು ಪುನಃ ಮುಂದಿನ ಜನವರಿಯಲ್ಲಿ ದೆಹಲಿಯಲ್ಲಿ ಸಭೆ ಸೇರಲಿರುವರೆಂದು ತಿಳಿಯಬರುತ್ತದೆ.

ಪಾಕೀಸ್ತಾನದಲ್ಲಿ ಅಲ್ಪ ಸಂಖ್ಯಾತರಿಗೆ ಸಮಾನ ಹಕ್ಕು

ಪಾಕೀಸ್ತಾನವು ತನ್ನ ನೂತನ ರಾಜ್ಯಾಂಗವನ್ನು ಅಲ್ಪಸಂಖ್ಯಾತರ ಹಿತಕ್ಕೆ ಧಕ್ಕೆ ತರುವ ರೀತಿಯಲ್ಲಿ ರಚಿಸುತ್ತಲಿದೆಯೆಂದು ಭಾರತ ಪ್ರಧಾನಿ ನೆಹರೂರವರು ಹೇಳಿರುವುದು ತಮ್ಮ ಮನಸ್ಸಿಗೆ ಬಹಳ ನೋವುಂಟಾಗಿರುವುದಾಗಿ ಪಾಕೀಸ್ತಾನದ ಗೌರ್‍ನರ್ ಜನರಲ್‌ರವರು ಹೇಳಿದ್ದಾರೆ.

ಪಾಕೀಸ್ತಾನದ ರಾಜ್ಯಾಂಗದಲ್ಲಿ ಬಹು ಸಂಖ್ಯಾತರಿಗೂ ಅಲ್ಪ ಸಂಖ್ಯಾತರಿಗೂ ಯಾವ ಭೇದಭಾವವನ್ನೂ ಕಲ್ಪಿಸಿಲ್ಲ. ಪಾಕೀಸ್ತಾನದ ಅಧಿಪತಿ ಮುಸ್ಲಿಂ ಆಗಿರಬೇಕೆಂದು ತೀರ್ಮಾನಿಸಿರುವ ವಿಷಯವಿನಹ ಮಿಕ್ಕವುಗಳಲ್ಲಿ ಯಾವ ತಾರತಮ್ಯವೂ ಇಲ್ಲವೆಂದು ಅವರು ಹೇಳಿದ್ದಾರೆ.

ಪತ್ರವ್ಯವಹಾರ:—

ವೇಶ್ಯೆಯರ ಹಾವಳಿ

ಮೈಸೂರು ಸಿಟಿ ಮಂಡಿ ಮೊಹಲ್ಲಾ ರಹಮಾನ್ ಸೇಟ್ ಗಲ್ಲಿಯಲ್ಲಿ ಈಗ್ಗೆ ಕೆಲವು ತಿಂಗಳುಗಳಿಂದಲೂ ವೇಶ್ಯೆಯರ ಉಪದ್ರವವು ವಿಪರೀತವಾಗಿ ಗೃಹಸ್ಥರ ವಾಸಕ್ಕೆ ತುಂಬಾ ತೊಂದರೆಯಾಗಿದೆ. ಅಲ್ಲದೆ ಇಲ್ಲಿ ವಾಸವಾಗಿರುವ ಯುವಕರುಗಳು ಈ ವೇಶ್ಯೆಯರ ಬಲೆಯಲ್ಲಿ ಬಿದ್ದು ತಮ್ಮ ಸರ್ವಸ್ವವನ್ನು ಹಾಳುಮಾಡಿಕೊಳ್ಳುವುದಲ್ಲದೆ ರೋಗಪೀಡಿತರಾಗಿ ನರಳಬೇಕಾದ ಸಂಭವ ಒದಗಿದೆ. ಆದ್ದರಿಂದ ಪೋಲೀಸ್ ಇಲಾಖೆಯವರು ಈ ಕಡೆ ಗಮನಕೊಟ್ಟು ಮೊಹಲ್ಲಾ ನಿವಾಸಿಗಳಿಗೆ ಈ ಉಪಟಳವನ್ನು ತಪ್ಪಿಸುವರೆಂದು ನಂಬಿರುತ್ತೇನೆ.

— ಮೊಹಲ್ಲಾ ನಿವಾಸಿ.

ಕಡಮೆ ಸಂಬಳದ ನೌಕರರಿಗೆ ಆರ್ಥಿಕ ನೆರವು

ಸರ್ಕಾರಿ ನೌಕರಿಯಲ್ಲಿ ಕಡಮೆ ಸಂಬಳ ಬರುತ್ತಿರುವವರಿಗೆ [ಮಾಹೆಯಾನ ೫೦ ರಿಂದ ೨೫೦ ರವರೆಗೆ] ಅಲ್ಪ ಉದ್ಯೋಗವನ್ನು ಕಲ್ಪಿಸಿ ಆರ್ಥಿಕ ನೆರವು ನೀಡುವ ಯೋಜನೆಯನ್ನು ಭಾರತ ಸರ್ಕಾರವು ತಯಾರಿಸಿದೆ.

ಈ ಯೋಜನೆ ಪ್ರಥಮವಾಗಿ ಇದೇ ಮಾಹೆ ೨೬ ನೇ ತಾರೀಖು ದೆಹಲಿಯಲ್ಲಿ ಪ್ರಾರಂಭವಾಗುತ್ತದೆ. ಈ ಸರ್ಕಾರಿ ನೌಕರರ ಮನೆಗಳಲ್ಲಿ ಗೃಹ ಕೈಗಾರಿಕೆ, ಗ್ರಾಮ ಕೈಗಾರಿಕೆ ಮುಂತಾದುವುಗಳನ್ನು ಸ್ಥಾಪಿಸಲು ಕೇಂದ್ರವು ಧನಸಹಾಯ ಮತ್ತು ಇತರ ಸೌಕರ್ಯಗಳನ್ನು ಕಲ್ಪಿಸುತ್ತದೆ ಇದೇ ರೀತಿ ಭಾರತದಾದ್ಯಂತ ಈ ಯೋಜನೆಯನ್ನು ವಿಸ್ತರಿಸಲಾಗುತ್ತದೆ.

೧ ಲಕ್ಷ ೩೦ ಸಾವಿರ ಎಕರೆ ಭೂದಾನ

ಆಚಾರ್ಯ ವಿನೋಬಭಾವೆಯವರ ಭೂದಾನ ಯಜ್ಞಕ್ಕೆ ಬೀಹಾರಿನಲ್ಲಿರುವ ದರ್ಭಾಂಗ ಮಹಾರಾಜರು ೧ ಲಕ್ಷ ೩೦ ಸಾವಿರ ಎಕರೆಗಳ ಭೂಮಿಯನ್ನು ದಾನವಾಗಿ ಕೊಟ್ಟಿದ್ದಾರೆ.

ಆಚಾರ್ಯ ವಿನೋಬಭಾವೆಯವರು ಭೂದಾನ ಯಜ್ಞ ಕಾರ್ಯವನ್ನು ಕೈಗೊಂಡಾಗಿನಿಂದ ಇಷ್ಟು ಅಧಿಕ ಪ್ರಮಾಣದಲ್ಲಿ ಯಾರೂ ಜಮೀನನ್ನು ಕೊಟ್ಟಿಲ್ಲ.

ಭೂದಾನ ಯಜ್ಞಕ್ಕಾಗಿ ಆಚಾರ್ಯ ವಿನೋಬಭಾವೆಯವರು ಇಲ್ಲಿಯವರೆಗೆ ೩೦ ಲಕ್ಷ ಎಕರೆಗಳಷ್ಟು ಭೂಮಿಯನ್ನು ಸಂಗ್ರಹಿಸಿದ್ದಾರೆ.

ಮಾಸ್ಕೋವಿಗೆ ಬ್ರಿಟಿಷ್ ಪ್ರಧಾನಿ ಚರ್ಚಿಲ್‌ರ ಭೇಟಿಯೇ ?

ಈ ಸಲಹೆಗೆ ಫ್ರಾನ್ಸಿನ ಬೆಂಬಲ

ಅಂತರ ರಾಷ್ಟ್ರೀಯ ಬಿಕ್ಕಟ್ಟನ್ನು ಪರಿಹಾರಮಾಡಲು ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರು ಮಾಸ್ಕೋವಿಗೆ ತೆರಳಿ ಅಲ್ಲಿ ರಷ್ಯಾ ಪ್ರಧಾನಿ ಮಾಲೆಂಕೋವ್‌ರನ್ನು ಭೇಟಿಮಾಡಿ ಮಾತುಕತೆ ನಡೆಸುವ ಆಲೋಚನೆಯಲ್ಲಿರುವುದಾಗಿ ಹೇಳಲಾಗುತ್ತಿದೆ.

ಬರ್ಮುಡಾದಲ್ಲಿ ನಡೆಯಲಿರುವ ತ್ರಿರಾಷ್ಟ್ರ ಸಮ್ಮೇಳನದಲ್ಲಿ ಮಿ|| ಚರ್ಚಿಲ್ಲರು ಈ ವಿಷಯವನ್ನು ಫ್ರಾನ್ಸ್ ಮತ್ತು ಅಮೆರಿಕಾಗಳಿಗೆ ತಿಳಿಸಿ ಆ ರಾಷ್ಟ್ರಗಳ ಬೆಂಬಲವನ್ನು ಕೋರುವರೆಂದು ತಿಳಿಯಬರುತ್ತದೆ.

ಈರೀತಿಯ ಭೇಟಿಗೆ ಫ್ರಾನ್ಸ್ ತನ್ನ ಬೆಂಬಲವನ್ನು ನೀಡುವುದೆಂದು ಹೇಳಲಾಗುತ್ತಿದೆ.

೫೩-೫೪ನೇ ಸಾಲಿನಲ್ಲಿ ಬತ್ತದ ಸಾಗುವಳಿ

೫೩—೫೪ನೇ ಸಾಲಿನಲ್ಲಿ ಬತ್ತದ ಸಾಗುವಳಿಯು ೬ ಕೋಟಿ ೭೪ ಲಕ್ಷ ೫೨ ಸಾವಿರ ಎಕರೆಗಳಲ್ಲಿ ನಡೆಯುತ್ತಿರುವುದಾಗಿ ಅಂದಾಜು ಮಾಡಲಾಗಿದೆ. ಕಳೆದ ಸಾಲಿಗಿಂತ ಈಗ ೨೦ ಲಕ್ಷ ೮೭ ಸಾವಿರ ಎಕರೆಗಳಷ್ಟು ಹೆಚ್ಚಾಗಿ ಈ ಸಾಲಿನಲ್ಲಿ ಸಾಗುವಳಿಯಲ್ಲಿದೆ.

ಹಿಂದೆ ಇಳುವರಿ ಪ್ರದೇಶಗಳಾಗಿದ್ದ ಮೈಸೂರು, ಹೈದರಾಬಾದ್, ಪೆಪ್ಸು, ಪಂಜಾಬ್, ಅಸ್ಸಾಂ ಪ್ರಾಂತ್ಯಗಳಲ್ಲಿ ಈಸಲ ಹೆಚ್ಚು ಬೆಳೆಯಾಗುತ್ತಿದೆ.

ಅಂತರ ಜಾತೀಯ ವಿವಾಹ ನಡೆಯಬೇಕು

ಪರಿಗಣಿತ ಮತ್ತು ಹಿಂದುಳಿದ ಕೋಮಿನ ಸಮಿತಿಯ ಅಧ್ಯಕ್ಷರಾದ ಕಾಕಾ ಕಾಲೇಲ್ಕರ್‌ರವರು ಇತ್ತೀಚೆಗೆ ಮಾತನಾಡುತ್ತಾ ಭಾರತದಲ್ಲಿ ಅಂತರ ಜಾತೀಯ ಮತ್ತು ಅಂತರ ಪ್ರಾಂತೀಯ ವಿವಾಹಗಳು ನಡೆಯಬೇಕೆಂದು ಸಲಹೆಯಿತ್ತಿದ್ದಾರೆ

-ಮೈಸೂರು ಪೇಟೆಧಾರಣೆ-

ತಾರೀಖು ೧೯—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೨—	೨೧—೮
ಎಳ್ಳು	೬೬—೮	೭೨—೨
ಹರಳು	೩೪—೧೦	೩೭—
ಹುರಳಿ	೩೬—೬	೩೭—೮
ಹೆಸರು	೩೩—೬	೪೦—
ಅಲಸಂದೆ	೨೬—೨	೫೯—೨
ಮೆಣಸಿನಕಾಯಿ	೧೩—೮	೨೮—೧೪
ತೆಂಗಿನಕಾಯಿ	೧೪೬—	೨೫೯
ಹುಣಸೇಹಣ್ಣು	೯—೧೨	—
ಬೆಲ್ಲ	೭—	—

ಅಸ್ಪೃಶ್ಯತೆ ತೊಡೆದು ಹಾಕಲು ಕೇಂದ್ರದ ಸೂಚನೆ

ಭಾರತಾದ್ಯಂತ ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಲು ತ್ವರಿತವಾಗಿ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸರಕಾರ ಸಂಸ್ಥಾನಗಳಿಗೆ ಕೆಲವು ಸಲಹೆಗಳನ್ನು ಸೂಚಿಸಿದೆಯೆಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ.

ರಾಷ್ಟ್ರೀಯ ಸಂಗೀತೋತ್ಸವ

ಭಾರತ ಸರ್ಕಾರವು ನೇಮಿಸಿರುವ ಸಂಗೀತ ನಾಟಕ ಅಕಡೆಮಿಯು ಮುಂದಿನ ಮಾರ್ಚಿಯಲ್ಲಿ ರಾಷ್ಟ್ರೀಯ ಸಂಗೀತೋತ್ಸವವನ್ನು ಏರ್ಪಡಿಸಿದೆ. ಇದರ ಅಂಗವಾಗಿ ಜನವರಿ ೨೭-೨೮ರಲ್ಲಿ ಜಾನಪದ ನೃತ್ಯಗಳನ್ನು ನಡೆಸುತ್ತದೆ. ಇದಲ್ಲದೆ ಮದ್ರಾಸ್ ಅಥವಾ ಬೊಂಬಾಯಿನಲ್ಲಿ ನೃತ್ಯ ಗೋಷ್ಠಿ ಮತ್ತು ಕಲ್ಕತ್ತಾದಲ್ಲಿ ನಾಟಕ ಗೋಷ್ಠಿಗಳ ವ್ಯವಸ್ಥೆ ಮಾಡಲಾಗುತ್ತದೆ. ನಾಟಕಗಳನ್ನು ಭಾರತದ ವಿವಿಧ ಭಾಷೆಗಳಲ್ಲಿ ಏರ್ಪಡಿಸಲಾಗುವುದು.

ಅಧ್ಯಾತ್ಮ ಪ್ರವಚನ

ರಾಜಧಾನಿಯ ಅಶೋಕರೋಡಿನಲ್ಲಿರುವ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ೨೨ ನೇ ತಾರೀಖು ಭಾನುವಾರದಲಾಗಾಯ್ತು ಪ್ರತಿದಿನ ಸಂಜೆ ೬ ರಿಂದ ೭ ಗಂಟೆಯವರೆವಿಗೆ ಶ್ರೀ ಬ್ರಹ್ಮನಿಷ್ಠ ಲಿಂಗಾನಂದ ಪರಮಹಂಸ ಭಾರತಿ ಸ್ವಾಮಿಗಳಿಂದ "ಶ್ರೀ ರಾಮಾಂಜನೇಯ ಸಂವಾದ"ಎಂಬ ಅಧ್ಯಾತ್ಮ ಪ್ರವಚನವು ನಡೆಸಲ್ಪಡುತ್ತದೆ.

ರಣಜಿತ್
20—11—53 ರಿಂದ
ವರ್ಣರಂಜಿತ ಚಿತ್ರ.
ಝಾನ್ಸಿಕಿರಾಣಿ
(ಹಿಂದಿ)
ಪಾತ್ರ:—ಮೆಹತಾಬ್, ಸೊರಬ್ ಮೋದಿ

ಪ್ರಭಾ★ ಜಯಪ್ರದ ೨ನೇ ವಾರ
21-11-53 ರಿಂದ ದಿನ ಮೂರು ಆಟ
ವಿ. ಶಾಂತಾರಾಂರವರ—
ಸುರಂಗ್
ಪಾತ್ರ:—ಶಶಿಕಲಾ, ಶೀಲಾರಮಣಿ, ಉಲ್ಹಾಸ್, ಮತ್ತು ಕೇಶವರಾವ್ ದಾತೆ.
ಬೆಳಗಿನ ಪ್ರದರ್ಶನ: 20-11-53 ರಿಂದ ಮೂರು ದಿನಗಳು
"ಮಿರಾಕ್ಯುಲಸ್ ಜರ್ನಿ" (ಸಿನಿಕಲರ್)

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೭೫

೨೧-೧೧-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತವು ಸಿಂಹಳ ಜನಕ್ಕೆ ತಾಯ್ನಾಡಿನಂತೆ

ಉಭಯ ರಾಷ್ಟ್ರಗಳ ಭಿನ್ನತೆಗಳೆಲ್ಲಾ ಸದ್ಯದಲ್ಲೇ ನಿವಾರಣೆಯಾಗುವುದು

ಭಾರತದಲ್ಲಿರುವ ಸಿಂಹಳದ ಹೈಕಮಿಷನರ್ ಹೇಳಿಕೆ

ಭಾರತ ಮತ್ತು ಸಿಂಹಳ ರಾಷ್ಟ್ರಗಳ ನಡುವೆ ಇರುವ ಪ್ರಮುಖ ವಿವಾದವು ಸಿಂಹಳದಲ್ಲಿರುವ ಭಾರತ ಜನಾಂಗದ ಪೌರತ್ವ ಹಕ್ಕು. ಈ ವಿಷಯವಾಗಿ ಹಿಂದೆ ಲಂಡನ್ನಿನಲ್ಲಿ ಉಭಯ ರಾಷ್ಟ್ರಗಳ ಪ್ರಧಾನಿಗಳ ನಡುವೆ ಮಾತುಗಳು ಪ್ರಾರಂಭವಾದುವು ಆಗ ಸ್ವಲ್ಪ ಪ್ರಗತಿಯನ್ನು ಸಾಧಿಸಲಾಯಿತು. ಸದ್ಯದಲ್ಲಿಯೇ ಭಾರತ ಪ್ರಧಾನಿ ನೆಹರೂ ಮತ್ತು ಸಿಂಹಳ ನೂತನ ಪ್ರಧಾನಿ ಕೊಟೇಲವಾಲಾರ ನಡುವೆ ಮಾತುಕತೆಗಳು ಮುಂದುವರಿಯುತ್ತವೆ. , ಭಿನ್ನಾಭಿಪ್ರಾಯಗಳು ಏನೇ ಇದ್ದರೂ ಭಾರತವು ಸಿಂಹಳ ಜನಕ್ಕೆ ತಾಯ್ನಾಡಿನಂತೆ ಇದೆ.

ಉಭಯ ಪ್ರಧಾನಿಗಳ ಮಾತುಕತೆಗಳಲ್ಲಿ ಎಲ್ಲ ವಿವಾದಗಳೂ ಪರಿಹಾರವಾಗುವುದರಲ್ಲಿ ಸಂದೇಹವಿಲ್ಲ ಎಂದು ಭಾರತದಲ್ಲಿರುವ ಸಿಂಹಳ ಹೈಕಮಿಷನರ್ ಹೇಳಿದ್ದಾರೆ.

ಸರ್ಕಾರವು ಬತ್ತವನ್ನು ಕೊಳ್ಳುವ ವ್ಯವಸ್ಥೆ

ಮೈಸೂರು ಜಿಲ್ಲೆಯಲ್ಲಿ ಡಿಪೋಗಳು

ಮೈಸೂರು ೨೧

೧೯೫೩—೫೪ನೇ ಸಾಲಿನಲ್ಲಿ ಬತ್ತವನ್ನು ಬೆಳೆದವರು ತಾವಾಗಿಯೇ ಸ್ವಇಚ್ಛೆಯಿಂದ ಸರ್ಕಾರಕ್ಕೆ ಕೊಡುವುದನ್ನು ಕೊಳ್ಳಲು ಮೈಸೂರು ಜಿಲ್ಲಾಧಿಕಾರಿಗಳು ಜಿಲ್ಲೆಯ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲೂ ಮತ್ತು ಕೆಲವು ರೈಸ್ ಮಿಲ್‌ಗಳಲ್ಲೂ ವ್ಯವಸ್ಥೆಯನ್ನು ಮಾಡಿದ್ದಾರೆ.

ಮೈಸೂರು ತಾಲ್ಲೂಕಿನ ಬತ್ತವನ್ನು ಮೈಸೂರು ನಗರದಲ್ಲಿರುವ ೯ ರೈಸ್ ಮಿಲ್‌ಗಳಿಗೆ ಕೊಡಬಹುದು. ಇದೇ ರೀತಿ ಕೃಷ್ಣರಾಜನಗರದಲ್ಲಿ ೧೫, ಹುಣಸೂರು ೨, ಹೆಗ್ಗಡದೇವನ ಕೋಟೆ ೧, ನಂಜನಗೂಡು ೫, ಟಿ.ನರಸೀಪುರ ೯ ಖಾಸಗಿ ರೈಸ್‌ಮಿಲ್‌ಗಳಲ್ಲಿಯೂ; ಪಿರಿಯಾಪಟ್ಟಣ ಗುಂಡ್ಲುಪೇಟೆ, ಚಾಮರಾಜನಗರ ಮತ್ತು ಯಳಂದೂರಿನಲ್ಲಿರುವ ಸರ್ಕಾರಿ ಡಿಪೋಗಳಿಗೆ ಭತ್ತವನ್ನು ಮಾರಬಹುದು. ಸರ್ಕಾರವು ನಿಗದಿ ಮಾಡಿರುವಂತೆ, ಒಂದನೇ ದರ್ಜೆ ಭತ್ತಕ್ಕೆ ಪಲ್ಲಾ ಒಂದಕ್ಕೆ ೨೨ ರೂ. ೨ನೇ ದರ್ಜೆಯ ಭತ್ತಕ್ಕೆ ೨೦ ರೂ. ನಂತೆ ಸ್ಥಳದಲ್ಲಿಯೇ ಹಣವನ್ನು ಕೊಡಲಾಗುತ್ತದೆ.

ಭತ್ತವನ್ನು ಬೆಳೆದವರಿಂದಮಾತ್ರ ಕೊಳ್ಳಲಾಗುವುದು. ತಮ್ಮ ಜಮೀನಿನಲ್ಲಿ ಬೆಳೆದ ಭತ್ತವನ್ನು ಮಾರುವವರು ತಮ್ಮ ಜಮೀನಿರುವ ಪ್ರದೇಶದ ರೆವಿನ್ಯೂ ಇನ್ಸ್‌ಪೆಕ್ಟರಿಂದ ಸರ್ಟಿಫಿಕೇಟ್ ತರಬೇಕು.

ಈ ಕೊಳ್ಳುವ ಡಿಪೋಗಳು ಇದೇ ೨೦ನೇ ತಾರೀಖಿನಿಂದ ಕೆಲಸಪ್ರಾರಂಭಿಸಿವೆ ಎಂದು ಮೈಸೂರು ಜಿಲ್ಲಾಧಿಕಾರಿಗಳು ಪ್ರಕಟಣೆಯನ್ನಿತ್ತಿದ್ದಾರೆ.

ನೀರಿನ ಸರಬರಾಜು

ಮೈಸೂರು೨೨

ರಾಜಧಾನಿಯಲ್ಲಿನಾಳೆಬೆಳಿಗ್ಗೆ ೭ ರಿಂದ ೮ ಗಂಟೆ ಮತ್ತು ಸಂಜೆ ೪ ರಿಂದ ೫ ಗಂಟೆವರೆಗೆ ವಿದ್ಯುಚ್ಛಕ್ತಿ ಸರಬರಾಜು ಇಲ್ಲದಿರುವುದರಿಂದ ನೀರು ನಿಲ್ಲುವುದೆಂದು ಪುರಸಭಾ ಕಮೀಷನರು ತಿಳಿಸಿರುತ್ತಾರೆ.

ಭಾರಿ ಕಾಡು ಕೋಣದ ಷಿಕಾರಿ

ಮೈಸೂರು ೨೧

ರಾಜಧಾನಿಗೆ ಮೊನ್ನೆದಿನ ಭೇಟಿ ಇತ್ತ ಬ್ರಿಟನ್ನಿನ ನೌಕಾ ಶಾಖೆಯ ಸಚಿವ ಸರ್ ರಾಡ್ರಿಕ್ಸ್ ಮೆಕ್ ಗ್ರಿಗಾರ್‌ರವರು ಕ್ಯಾತೇದೇವರ ಗುಡಿಗೆ ೪ ಮೈಲಿ ದೂರದಲ್ಲಿರುವ ಅತಿಕಟ್ಟೆ ಅರಣ್ಯದಲ್ಲಿ ಭಾರಿ ಕಾಡುಕೋಣವೊಂದನ್ನು ಷಿಕಾರಿ ಮಾಡಿದರು. ಅದು ೬ ಅಡಿ ೩ ಅಂಗುಲ ಎತ್ತರವಾಗಿದ್ದು, ಕೊಂಬು ೩೯ ಅಂಗುಲ ಉದ್ದವಾಗಿದೆ. ಅವರ ಜೊತೆಯಲ್ಲಿ ಮೈಸೂರು ಅರಣ್ಯಾಧಿಕಾರಿಗಳಾದ ಶ್ರೀ ಗುಲಾಬ್ ಸಿಂಗ್‌ರವರು ಇದ್ದರು.

ಗಡಿ ನಿರ್ಧಾರ ಕಮಿಷನ್ನಿನ ಸದಸ್ಯರು

ಭಾರತದ ಪ್ರಾಂತ್ಯ ಗಡಿ ಪುನರ್ ವಿಮರ್ಶೆಗಾಗಿ ನೇಮಿಸಲಿರುವ ಹೈ ಪವರ್ ಕಮಿಷನ್ನಿನಲ್ಲಿ ಭಾರತ ಶ್ರೇಷ್ಠ ನ್ಯಾಯಾಧೀಶ ಶ್ರೀ ಪತಂಜಲಿ ಶಾಸ್ತ್ರಿ, ಶ್ರೀ ಜಯಪ್ರಕಾಶ್ ನಾರಾಯಣ, ಗೋವಿಂದ ವಲ್ಲಭ ಪಂತ್, ಶ್ರೀ ಮಿರ್ಜಾ ಇಸ್ಮೇಲ್ ಮತ್ತು ಶ್ರೀ ಮಂಗಲದಾಸ್ ಪಕ್ವಾಸಾರವರುಗಳು ಇರುವರೆಂದು ಹೇಳಲಾಗಿದೆ.

ಶ್ರೀ ಅಹೋಬಿಲ ಸ್ವಾಮಿಗಳ ಆಗಮನ

ಮೈಸೂರು ೨೧

ಶ್ರೀ ಅಹೋಬಿಲ ಮಠದ ಸ್ವಾಮಿಗಳಾದ ಶ್ರೀವಣ್ ಶಠಕೋಪ ಶ್ರೀ ವೀರರಾಘವ ಶಠಕೋಪ ಯತೀಂದ್ರ ಮಹಾದೇಶಿಕ ಸ್ವಾಮಿಗಳು ನಿನ್ನೆ ಸಂಜೆ ಬನ್ನಿ ಮಂಟಪಕ್ಕೆ ಆಗಮಿಸಿ ಅಲ್ಲೇ ರಾತ್ರಿ ಬಿಡಾರ ಮಾಡಿದ್ದರು. ಅಲ್ಲಿ ಶ್ರೀಗಳವರನ್ನು ಮಾಜಿ ಸಚಿವ ಶ್ರೀ ಎಂ. ಶೇಷಾದ್ರಿ, ಸಬ್ ಡಿವಿಜನ್ ಅಧಿಕಾರಿ ಶ್ರೀ ಮುರ್ಷಿದ್ ಪೀರ್ ಮುಂತಾದ ಅಧಿಕಾರಿಗಳು. ಖಾಸಗೀಯವರು ಸ್ವಾಗತಿಸಿದರು.

ಈ ಬೆಳಿಗ್ಗೆ ಶ್ರೀಗಳವರು ರಾಜ, ಮತ್ತು ಪೌರ ಮರ್ಯಾದೆಗಳೊಡನೆ ರಾಜಧಾನಿಗೆ ಮೆರವಣಿಗೆಯಲ್ಲಿ ಆಗಮಿಸಿದರು. ಶ್ರೀರಂಗಪಟ್ಟಣದ ಉಕ್ಕಡದಬಳಿ ಮೈಸೂರು ಹಿರಿಯಶಾಸನಸಭಾಧ್ಯಕ್ಷ ಶ್ರೀ ಕೆ.ಟಿ. ಭಾಷ್ಯಂ, ಮೈಸೂರು ಜಿಲ್ಲಾಧಿಕಾರಿ ಶ್ರೀ ಸ್ವಾಮಿನಾಥನ್, ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯ, ಮುನಿಸಿಪಲ್ ಕಮಿಷನರ್ ಶ್ರೀ ಎನ್. ಲಕ್ಷ್ಮಣರಾವ್, ಸ್ವಾಗತ ಸಮಿತಿಯ ಶ್ರೀಗಳಾದ ಟಿ.ಎಸ್. ರಾಜಗೋಪಾಲಯ್ಯಂಗಾರ್, ಬಿ. ನಾರಾಯಣಸ್ವಾಮಿ, ಎಸ್. ರಂಗಾಚಾರ್ ಮತ್ತು ಇತರ ಪ್ರಮುಖಸ್ಥರು ಸ್ವಾಮಿಯವರನ್ನು ಸ್ವಾಗತಿಸಿದರು.

ಶ್ರೀಗಳವರು ಅನಂತರ ಅಹೋಬಿಲ ಮಠಕ್ಕೆ ಭೇಟಿಯಿತ್ತು, ಅಲ್ಲಿಂದ ಅರಮನೆಗೆ ತೆರಳಿದರು. ಅಲ್ಲಿ ಶ್ರೀಮನ್ಮಹಾರಾಜರವರು ಅವರನ್ನು ಸ್ವಾಗತಿಸಿ, ಪಾದಪೂಜೆ ನಡೆಸಿ ಕಿಲ್ಲತ್ತುಗಳೊಡನೆ ಮರ್ಯಾದೆಮಾಡಿ, ಗೌರವ ಸೂಚಿಸಿದರು.

ಶ್ರೀಗಳವರು ಅರಮನೆ ಕೋಟೆಯಲ್ಲಿರುವ ವರಹಾಸ್ವಾಮಿ ದೇವಸ್ಥಾನದಲ್ಲಿ ಬಿಡಾರ ಮಾಡಿದ್ದಾರೆ.

ಪುರಸಭೆಯಮೇಲೆ ದಾವಾ

ಮೈಸೂರು ೨೧

ಮೈಸೂರು ಪುರಸಭೆಯವರು ತಮ್ಮ ಮನೆಗೆ ಮೀಟರ್ ಹಾಕದೆ ಫ್ಲಾಟ್ ರೇಟ್ ಮೇರೆ ನೀರಿನ ಕಂದಾಯ ವಸೂಲು ಮಾಡುತ್ತಿರುವುದು ಅಕ್ರಮ ಮತ್ತು ರಾಜ್ಯಾಂಗ ಬಾಹಿರವಾದುದು. ಆದ್ದರಿಂದ ೧೯೫೨ ಆಪ್ರಿಲ್ ವರೆಗೆ ತಮ್ಮಿಂದಾ ವಸೂಲು ಮಾಡಿರುವ ಹಣವನ್ನು ವಾಪಸು ಕೊಡಿಸಬೇಕೆಂದು ಪ್ರಾರ್ಥಿಸಿ ಶ್ರೀ ತಗಡೂರು ರಾಮಚಂದ್ರರಾಯರು ನಗರದ ಮುನಿಸೀಫ್ ಕೋರ್ಟ್‌ನಲ್ಲಿ ನಿನ್ನೆ ದಾವಾ ಹೂಡಿದ್ದಾರೆ.

ವಿಮಾನ ಸಂಚಾರ ರದ್ದು

ಬೆಂಗಳೂರು-ಮಂಗಳೂರು ನಡುವೆ ಇರುವ ವಿಮಾನ ಸಂಚಾರ ವ್ಯವಸ್ಥೆಯನ್ನು ಇದೇ ೨೬ನೇ ತಾರೀಖಿನಿಂದ ರದ್ದುಗೊಳಿಸಲಾಗುವುದು.

ಇಂಟರ್ ಪರೀಕ್ಷೆ ಫಲಿತಾಂಶ

ಮೈಸೂರು ೨೧

ಇದೇ ಸೆಪ್ಟೆಂಬರ್ ಮಾಹೆಯಲ್ಲಿ ನಡೆದ ಇಂಟರ್‌ಮೀಡಿಯೆಟ್ ಪರೀಕ್ಷೆಗೆ ಶಾರದಾವಿಲಾಸ್ ಕಾಲೇಜಿನಿಂದ ೧೫೬ ವಿದ್ಯಾರ್ಥಿಗಳು ಕುಳಿತಿದ್ದು ೫೮ ಜನ ತೇರ್ಗಡೆಯಾಗಿದ್ದಾರೆ.

ಏಕಕಾಲದಲ್ಲಿ ೪ ಮಕ್ಕಳ ಜನನ

ಫ್ಲೋರಿಡಾ ವಿಶ್ವವಿದ್ಯಾನಿಲಯದಲ್ಲಿ ಓದುತ್ತಿರುವ ಅಬ್ಲಿ ಹಿಜಾಜ್ ಎಂಬ ೩೫ ವರ್ಷದ ಮುಸ್ಲಿಂ ವಿದ್ಯಾರ್ಥಿನಿಯು ೪ ಮಕ್ಕಳಿಗೆ ಜನನ ವಿತ್ತಿದ್ದಾಳೆ ಅದರಲ್ಲಿ ೩ ಹೆಣ್ಣುಮಕ್ಕಳು ಒಂದು ಗಂಡುಮಗು ಆಕೆಯ ಗಂಡನೂ ಅದೇ ಕಾಲೇಜಿನಲ್ಲಿ ಓದುತ್ತಿದ್ದಾನೆ ಆತನು ಜೋರ್ಡಾನ್ ದೇಶದವನು ಅವನ ಹೆಂಡತಿ ಪಾಲಸ್ಟೈನಿನವಳು. ಮಕ್ಕಳು ಅವಳು ಆರೋಗ್ಯದಿಂದಿದ್ದಾರೆ.

★ ಅಮೆರಿಕಾದ ಪೈಲಟ್ ಸ್ಕಾಟ್ ಕ್ರಾಸ್‌ಫೀಲ್ಡ್ ಎಂಬುವರು ಸ್ಕೈರಾಕೆಟ್ ಎಂಬ ವಿಮಾನವೊಂದನ್ನು ಗಂಟೆಯೊಂದಕ್ಕೆ ೧೨೭೨ ಮೈಲಿಗಳ ವೇಗದಲ್ಲಿ ನಡೆಸಿ ವಿಶ್ವದ ಹೊಸ ದಾಖಲೆಯನ್ನು ಮಾಡಿದ್ದಾರೆ.

[ಹಿಂದಿನ ಪುಟದಿಂದ]

೨೭ ನೇ ಡಿವಿಜನ್ ಶ್ರೀಗಳಾದ ಜಿ. ಆರ್. ರಂಗಸ್ವಾಮಯ್ಯ ಕಾಂ||, ವಾರಿಸ್ ಆಲಿ, ಎಸ್. ಅಬ್ದುಲ್ ಜಬ್ಬಾರ್ ಖಾನ್, ಸ್ವ||.

೨೯ ನೇ ಡಿವಿಜನ್ ಡಿವಿಜನ್ ಶ್ರೀಗಳಾದ ಮಹಮದ್ ಖಲೀಲುಲ್ಲಾ, ಎಂ. ಜೆ. ಮಹಮದ್ ಯಾಕುಬ್ ಮತ್ತು ಅಬ್ದುಲ್ ಗಫಾರ್ ಖಾನ್, ಸ್ವ||.

೩೧ ನೇ ಡಿವಿಜನ್ ಶ್ರೀಗಳಾದ ಮಹಮದ್ ಸೇಟ್ ಮತ್ತು ಸೈಯದ್ ಅಬ್ದುಲ್ ರಹಮಾನ್, ಸ್ವ||.

೩೨ ಶ್ರೀಗಳಾದ ಅಜೀಜ್ ಸೇಟ್ ಮತ್ತು ಜಿ. ಅಹಮದ್ ಖಾನ್ ಸ್ವ||.

೩೩ ಶ್ರೀಗಳಾದ ರಫಾದರ್ ಆಡಿಯೋ ಮತ್ತು ಅಹಮದ್ ಆಲಿಖಾನ್, ಸ್ವ||.

೩೪ ಶ್ರೀ ಜೆ. ಎ ಕುಟೀನೋ ಕಾಂ||. ಮತ್ತು ಎಂ. ಆರ್. ಶ್ರೀನಿವಾಸಯ್ಯಂಗಾರ್, ಪ್ರ ಸೋ||.

೩೫ ಶ್ರೀಗಳಾದ ಎಸ್. ಶ್ರೀಕಂಠಯ್ಯ ಕಾಂ||, ಎಸ್. ಸಂಜೀವಯ್ಯ, ಪ್ರ ಸೋ||, ಗುರುಪಾದನ್ ಮತ್ತು ಬಿ. ಸುಬ್ಬಣ್ಣ, ಸ್ವ||.

೩೬ ಶ್ರೀಗಳಾದ ಎಸ್. ಜೋಗಿಸಿದ್ದಯ್ಯ, ಕಾಂ|| ಮತ್ತು ಎಸ್. ಎಂ. ಸಿದ್ದಯ್ಯ, ಸ್ವ||.

೩೭ ಶ್ರೀಗಳಾದ ಟಿ. ವೆಂಕಟರಮಣಯ್ಯ, ಕಾಂ|| ಮತ್ತು ಮೀರ್ ನೂರ್ ಹುಸೇನ್, ಸ್ವ||.

೩೯ ಶ್ರೀಗಳಾದ ಎಸ್. ಲಿಂಗಣ್ಣ, ಕಾಂ|| ಡಾ|| ಸಿ. ದೊರೆಸ್ವಾಮಿ, ಪ್ರ ಸೋ||.

ಮೈಸೂರು ಸಂಸ್ಥಾನದಲ್ಲಿ ಪ್ರಮುಖ ನೀರಾವರಿ ಯೋಜನೆಗಳು

ಪಂಚವಾರ್ಷಿಕ ಯೋಜನೆ ಪ್ರಕಾರ ಮೈಸೂರು ಸಂಸ್ಥಾನದಲ್ಲಿ ಪ್ರಮುಖ ನೀರಾವರಿ ಯೋಜನೆಗಳಾದ ತುಂಗ ಅಣೆಕಟ್ಟು, ನುಗು ಜಲಾಶಯ ಮತ್ತು ಭದ್ರಾ ಜಲಾಶಯ ಕಾರ್ಯಗಳನ್ನು ಕಾರ್ಯರೂಪಕ್ಕೆ ತರುವ ಕೆಲಸಗಳು ಪ್ರಾರಂಭವಾಗಿವೆ.

ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಾ ಅಣೆಕಟ್ಟಿನ ಕೆಲಸವು ೨ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪ್ರಾರಂಭಿಸಲಾಗಿದೆ. ಇದರಿಂದ ೨೧ ಸಾವಿರ ಎಕರೆ ಜಮೀನಿಗೆ ನೀರಿನ ಸೌಕರ್ಯವುಂಟಾಗುತ್ತದೆ. ಈಗಾಗಲೇ ಅಣೆಕಟ್ಟಿನ ಕೆಲಸವು ಪೂರೈಸಲಾಗಿದೆ ಅಲ್ಲದೆ ೩೫೦೦ ಎಕರೆ ಜಮೀನಿಗೆ ನೀರನ್ನು ಒದಗಿಸಲು ೨೦ ಮೈಲಿಗಳ ಕಾಲುವೆ ನಿರ್ಮಾಣ ಕೆಲಸವು ನಡೆದಿದೆ. ಇಲ್ಲಿಯವರೆಗೆ ಈ ಕಾರ್ಯಕ್ಕಾಗಿ ಒಂದು ಕೋಟಿ ರೂಪಾಯಿಗಳನ್ನು ಖರ್ಚುಮಾಡಲಾಗಿದೆ. ಇನ್ನೂ ೨೦ ಮೈಲಿ ಉದ್ದದ ಕಾಲುವೆ ನಿರ್ಮಾಣ ಕೆಲಸವಾಗಬೇಕಾಗಿದೆ. ಇದು ೧೯೫೬ ನೇ ಮಾರ್ಚಿ ಅಂತ್ಯಕ್ಕೆ ಮುಗಿಯುತ್ತದೆ.

ನಂಜನಗೂಡು ತಾಲ್ಲೂಕಿನಲ್ಲಿ ನುಗು ನದಿಗೆ ೧೧೦ ಅಡಿ ಎತ್ತರದ ಅಣೆಕಟ್ಟನ್ನು ಕಟ್ಟಿ ನುಗು ಜಲಾಶಯವನ್ನು ನಿರ್ಮಿಸುವ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ. ಇದಕ್ಕಾಗಿ ೩ ಕೋಟಿ ೩೦ ಲಕ್ಷ ರೂಪಾಯಿಗಳು ಖರ್ಚಾಗುತ್ತದೆ. ಇದರಿಂದ ೨೨೦೦೦ ಎಕರೆ ಜಮೀನಿಗೆ ನೀರಿನ ಸೌಲಭ್ಯ ಒದಗುತ್ತದೆ. ಈಗಾಗಲೇ ಅಣೆಕಟ್ಟು ನಿರ್ಮಾಣ ಮತ್ತು ೧೨ ಮೈಲಿ ಕಾಲುವೆ ನಿರ್ಮಾಣ ಕೆಲಸವಾಗಿದೆ ಇನ್ನೂ ೨೫ ಮೈಲಿಯ ಕಾಲುವೆಯನ್ನು ತೆಗೆಯಬೇಕಾಗಿದೆ. ಈ ಕಾರ್ಯವೂ ೧೯೫೬ ನೇ ಮಾರ್ಚಿಯ ವೇಳೆಗೆ ಮುಕ್ತಾಯವಾಗುತ್ತದೆ.

ಸರ್ಕಾರವು ಕೈಗೊಂಡಿರುವ ನೀರಾವರೀ ಯೋಜನೆಗಳಲ್ಲೆಲ್ಲಾ ಭದ್ರಾ ಜಲಾಶಯ ನಿರ್ಮಾಣ ಕಾರ್ಯವು ಬಹಳ ಅಘಾಧವಾದುದು ಈ ಕೆಲಸಕ್ಕೆ ೧೭.೭೫ ಕೋಟಿ ರೂಪಾಯಿಗಳು ವೆಚ್ಚವಾಗುತ್ತದೆ. ೧೯೪೭ ಅಡಿ ಎತ್ತರದ ಅಣೆಕಟ್ಟನ್ನು ಕಟ್ಟಿ, ಎಡ ಬಲ ಕಾಲುವೆಗಳನ್ನು ತೆಗೆದು ಸುಮಾರು ಎರಡೂವರೆ ಲಕ್ಷ ಎಕರೆಗಳಿಗೆ ನೀರನ್ನು ಈ ಯೋಜನೆಯಿಂದ ಒದಗಿಸಲಾಗುತ್ತದೆ.

ಇಲ್ಲಿಯವರೆಗೆ ೧ ಕೋಟಿ ೨೦ ಲಕ್ಷ ರೂಪಾಯಿಗಳನ್ನು ಖರ್ಚುಮಾಡಿ ಕೆಲಸವನ್ನು ನಡೆಸಲಾಗಿದೆ. ಈ ಯೋಜನೆಯ ಪ್ರಥಮ ಘಟ್ಟದ ಕೆಲಸವನ್ನು ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗಿದೆ. ಇದಕ್ಕಾಗಿ ಭಾರತ ಸರ್ಕಾರವು ೩೦ ವರ್ಷಗಳಲ್ಲಿ ತೀರಿಸುವಂತೆ ೩ ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟಿರುತ್ತಾರೆ. ಮೊದಲನೆಯ ೫ ವರ್ಷದ ಕಂತುಗಳಿಗೆ ಬಡ್ಡಿಯಿಲ್ಲ. ನುಗು ಜಲಾಶಯ ಕಾರ್ಯಕ್ಕೂ ಇದೇರೀತಿ ೫೦ ಲಕ್ಷ ರೂಪಾಯಿಗಳನ್ನು ಕೇಂದ್ರಸರ್ಕಾರವು ಸಾಲವಾಗಿ ಕೊಟ್ಟಿದೆ.

ಮೈಸೂರು ಸರ್ಕಾರವು ಭದ್ರಾ ಜಲಾಶಯ ಕಾರ್ಯಕ್ಕೆ ೫ ಕೋಟಿ ೫ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ಕಾರ್ಯವನ್ನು ಮುಂದುವರಿಸಲಾಗುತ್ತದೆ ೧೯೫೭ ರ ವೇಳೆಗೆ ೩೦೦೦೦ ಎಕರೆ ಜಮೀನಿಗೆ ನೀರು ಒದಗಿಸಲಾಗುತ್ತದೆ.

ಈ ಪ್ರಮುಖ ನೀರಾವರೀ ಕಾರ್ಯಗಳನ್ನೆಲ್ಲಾ ನಡೆಸುವುದಕ್ಕಾಗಿ ಪ್ರತ್ಯೇಕ ಚೀಫ್ ಇಂಜನಿಯರನ್ನು ಮತ್ತು ತಕ್ಕ ಸಿಬ್ಬಂದಿಯನ್ನು ನೇಮಿಸಿ ಸಕಾಲಕ್ಕೆ ಸರಿಯಾಗಿ ಎಲ್ಲಾ ಕೆಲಸವನ್ನು ಪೂರೈಸಲು ವ್ಯವಸ್ಥೆಯನ್ನು ಮಾಡಲಾಗುತ್ತದೆ-ಎಂದು ಮೈಸೂರು ಸರ್ಕಾರದವರು ಒಂದು ಪತ್ರಿಕಾ ಪ್ರಕಟಣೆಯನ್ನಿತ್ತಿದ್ದಾರೆ.

ಭಾರತಕ್ಕೆ ಚಡ್ಡಿ ಜರ್ಗ

ಬ್ರಿಟಿಷ್ ಗಯಾನಾದ ಪದಚ್ಯುತ ಪ್ರಧಾನಿ ಡಾ॥ ಚಡ್ಡಿ ಜರ್ಗ ಮತ್ತು ಅವರ ಸಹೋದ್ಯೋಗಿಗಳಾದ ಶ್ರೀ ಬರ್ನ್ ಹಾಂ ವರು ನಿನ್ನೆ ಬೊಂಬಾಯಿಗೆ ಆಗಮಿಸಿದರು. ಲಂಡನ್ನಿನಿಂದ ಭಾರತಕ್ಕೆ ಅವರು ಬರುವುದಕ್ಕಾಗಿ ರಹದಾರಿಯನ್ನು ಕೊಡುವ ವಿಷಯದಲ್ಲಿ ಲಂಡನ್ನಿನಲ್ಲಿ ೨೪ ಗಂಟೆಗಳ ಕಾಲ ತಡವಾದ್ದರಿಂದ ಅವರ ಆಗಮನವು ನಿಧಾನವಾಯಿತು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ

ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಮುಂದಿನ ತಿಂಗಳು ೫ ಮತ್ತು ೬ನೇ ತಾರೀಖುಗಳಲ್ಲಿ ದೆಹಲಿಯಲ್ಲಿ ನಡೆಯುವುದು.

-ಮೈಸೂರು ಪೇಟೆಧಾರಣೆ-

ತಾರೀಖು. ೨೦—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೫—	೨೧ ೮
ಎಳ್ಳು	೬೬—	೭೦—೨
ಹರಳು	೩೬—೮	೪೦—೮
ಹುರಳಿ	೩೫ —	೩೭—
ಹೆಸರು	೩೦—೬	೩೭—
ಅಲಸಂದೆ	೩೦—	೫೦—
ಉಪ್ಪು	೪೯—೨	—
ಮೆಣಸಿನಕಾಯಿ	೧೨—೮	೩೦—೨
ತೆಂಗಿನಕಾಯಿ	೧೪೫—	೨೭೨

ಮೈಸೂರು ಪುರಸಭೆ ಚುನಾವಣೆ

೩೫ ಸ್ಥಾನಗಳಿಗೆ ೮೯ ಮಂದಿ ಉಮೇದುವಾರರು

ಮೈಸೂರು ೨೧

ಮುಂದಿನ ೭ನೇ ತಾ॥ ನಡೆಯಲಿರುವ ಮೈಸೂರು ಪುರಸಭೆಯ ಚುನಾವಣೆಗೆ ಅರ್ಜಿ ಸಲ್ಲಿಸಿದ್ದ ೧೧೫ ಮಂದಿ ಉಮೇದುವಾರರ ಪೈಕಿ, ೧೪ ಜನರು ವಾಪಸು ತೆಗೆದುಕೊಂಡು, ೭ ಜನರ ಅರ್ಜಿ ತಿರಸ್ಕರಿಸಲ್ಪಟ್ಟು ಮತ್ತು ೫ ಸ್ಥಾನಗಳಿಗೆ ಅವಿರೋಧ ಆಯ್ಕೆ ಆಗಿರುವುದರಿಂದ, ಉಳಿದ ೮೯ ಉಮೇದುವಾರರು ೩೫ ಸ್ಥಾನಗಳಿಗೆ ಸ್ಪರ್ಧಿಸಿದ್ದಾರೆ. ಅವರ ಪೈಕಿ, ಕಾಂಗ್ರೆಸ್ ೩೦, ಪಿ. ಎಸ್. ಪಿ. ೧೪, ಸ್ವತಂತ್ರರು ೩೯ ಮತ್ತು ಕಮ್ಯೂನಿಸ್ಟರು ೨ಮಂದಿ ಇದ್ದಾರೆ.

ಉಮೇದುವಾರರ ಆಖೈರು ಪಟ್ಟಿ ಈರೀತಿ ಇದೆ:—

೧ ನೇ ಡಿವಿಜನ್-ಶ್ರೀಗಳಾದ ಜಿ. ಎಸ್. ರಾಮಕೃಷ್ಣಯ್ಯ ಕಾಂ. ಎಂ. ಚಿಕ್ಕಲಿಂಗಯ್ಯ. ಸ್ವ.

೨ ಶ್ರೀಗಳಾದ ಕೆ. ಸಿದ್ದಯ್ಯ,ಕಾಂ. ಕೆ. ಬಿ. ಶ್ರೀನಿವಾಸಯ್ಯ,ಸ್ವ.

೩-ಶ್ರೀಗಳಾದ ಎ. ಎನ್. ಸೂರ್ಯನಾರಾಯಣರಾವ್,ಕಾಂ. ಬಿ.ಆರ್. ನಂಜಪ್ಪ ಪ್ರ. ಸೋ ಮತ್ತು ಶ್ರೀಕಂಠಶರ್ಮ, ಸ್ವ.

೪-ಶ್ರೀಗಳಾದ ಡಿ. ಲಿಂಗಯ್ಯ, ಕಾಂ. ಟಿ. ನಾರಾಯಣಪ್ಪ, ಪ್ರ. ಸೋ ಮತ್ತು ವಿ. ಎಲ್. ದಾಸಪ್ಪ,ಸ್ವ.

೫-ಶ್ರೀಗಳಾದ ಟಿ. ಎನ್. ಸುಬ್ಬರಾವ್ ಕಾಂ. ಎಂ ಸಿ. ಮಹದೇವಸ್ವಾಮಿ, ಸ್ವ. ಮತ್ತು ಎಸ್ ಗೋಪಾಲಶಾಸ್ತ್ರಿ ಸ್ವ.

೬-ಶ್ರೀಗಳಾದ ಬಿ. ರಾಮಣ್ಣ,ಕಾ. ಬಿ. ಕೆ. ರಾಮಕೃಷ್ಣಯ್ಯ, ಪ್ರ. ಸೋ. ಮತ್ತು ಬಿ. ಎ. ಬೆಳ್ಳಿಯಪ್ಪ, ಕಮ್ಯೂನಿಸ್ಟ್.

೭-ಶ್ರೀಗಳಾದ ಪಿ.ಸೀತಾರಾಮಯ್ಯ ಕಾಂ. ಕೆ. ಕರಿಯಣ್ಣ ಪ್ರ. ಸೋ. ಮಹಮದ್ ಹನೀಫ್, ಸ್ವ.

೮-ಶ್ರೀಗಳಾದ ಜಿ. ನರಸಿಂಹಯ್ಯ,ಕಾ. ಜಿ. ಆರ್. ಜೋಷ್ವರ್,ಪ್ರ. ಸೋ. ಮತ್ತು ಸೀತಾರಾಮನ್,ಸ್ವ.

೯-ಶ್ರೀಗಳಾದ ಬಿ. ಆರ್. ನಾಯ್ಡು, ಪ್ರ. ಸೋ. ಎಂ. ಬುಡನ್ ಕ್ಯಾಪ್ಟನ್, ಎಂ. ಆರ್. ಸುದರ್ಶನ್, ಸ್ವ.

೧೦-ಶ್ರೀಗಳಾದ ಕೆ. ಎಸ್. ಸೂರ್ಯನಾರಾಯಣರಾವ್, ಕಾಂ. ಡಾ॥ಬಿ ಜಿ ದಾಸ್, ಪ್ರ. ಸೋ.

೧೧-ಶ್ರೀಗಳಾದ ಎ. ಕೃಷ್ಣಮೂರ್ತಿ ರಾವ್,ಕಾಂ. ಮತ್ತು ವೇದಾಂತ ಹೆಮ್ಮಿಗೆ, ಪ್ರ. ಸೋ.

೧೨- ಶ್ರೀಗಳಾದ ಕೆ. ಎಸ್. ಸತ್ಯನಾರಾಯಣರಾವ್, ಕಾಂ. ನಾರಾಯಣರಾವ್, ಪ್ರ. ಸೋ.

೧೩-ಶ್ರೀಗಳಾದ ಎಲ್. ಶ್ರೀನಿವಾಸನ್. ಕಾಂ. ಮತ್ತು ನರಸಿಂಹಯ್ಯ, ಸ್ವ.

೧೪-ಶ್ರೀಗಳಾದ ಹೆಚ್. ಕೆಂಪೇಗೌಡ, ಕಾಂ. ಎನ್. ಜೆ. ಕೆಂಪೇಗೌಡ, ಸ್ವ.

೧೫- ಶ್ರೀಗಳಾದ ಎಸ್. ವೆಂಕಟರಮಣಯ್ಯ,ಕಾಂ. ಮತ್ತು ಎಸ್. ಭೈರಪ್ಪ,ಸ್ವ.

೧೬-ಶ್ರೀಗಳಾದ ಟಿ. ನರಸಿಂಹಯ್ಯಂಗಾರ್,ಕಾಂ. ಎ. ವೆಂಕಟೇಶಯ್ಯ ಪ್ರ.ಸೊ. ಮತ್ತು ಟಿ. ಜಿ. ಲಕ್ಷ್ಮಣಮೊದಲಿಯಾರ್, ಸ್ವ.

೧೭-ಶ್ರೀಗಳಾದ ಕೆ. ಚಾಮುಂಡಯ್ಯ, ಕಾಂ. ದೊಡ್ಡತಮ್ಮೇಗೌಡ, ಪ್ರ.ಸೋ.

೧೯- ಶ್ರೀಗಳಾದ ಎಂ. ಸಿದ್ದಲಿಂಗಪ್ಪ ಕಾಂ ಎಂ. ಎಲ್. ತಿಮ್ಮಯ್ಯ ಪ್ರ. ಸೋ. ಮತ್ತು ಬಿ. ಎಸ್. ತಾಂಡವಮೂರ್ತಿ,ಸ್ವ.

೨೦-ಶ್ರೀಗಳಾದ ಯು. ಎಲ್. ರಾಮಚಂದ್ರರಾವ್, ಕಾಂ. ಎಂ. ಸಿ. ವಗ್ಗಪ್ಪ, ಪ್ರ. ಸೋ. ಮತ್ತು ಟಿ.ಎ.ಎಸ್. ರಾಜ್. ಸ್ವ.

೨೧-ಶ್ರೀಗಳಾದ ಬಿ. ಎಲ್. ರಾಮಸ್ವಾಮಿಶೆಟ್ಟಿ, ಕಾಂ. ಸಿದ್ದರಾಮಶೆಟ್ಟಿ, ಟಿ. ವಿ. ಕೃಷ್ಣಮೂರ್ತಿ ಮತ್ತು ಕೆ.ವಿಶ್ವನಾಥ್, ಸ್ವ.

೨೨-ಶ್ರೀಗಳಾದ ಟಿ. ಚಂದ್ರಶೇಖರಗೌಡ,ಕಾಂ. ಬಿ. ಕೆ. ಪುಟ್ಟಯ್ಯ ಪ್ರ,ಸೊ. ಬಿ ರಾಮಲಿಂಗಯ್ಯ, ಸ್ವತಂತ್ರ.

೨೩ ಶ್ರೀ ಬಿ. ಎಲ್. ಕೆಂಗೇಗೌಡ, ಕಾ॥ ಮತ್ತು ಡಾ॥ ಬಿ ಲಿಂಗಪ್ಪ. ಪ್ರ. ಸೋ.

೨೪-ಶ್ರೀ ಪಿ. ಡಿ. ಕೃಷ್ಣಸ್ವಾಮಿ, ಕಾಂ. ಹೆಚ್. ಎಲ್. ಮುದ್ದಯ್ಯ, ಪ್ರ ಸೋ.

೨೫ ನೇ ಡಿವಿಜನ್ ಶ್ರೀ ಎಸ್. ಕೆ. ಲಕ್ಷ್ಮೀನರಸಿಂಹಯ್ಯ ಕಾಂ|. ಎಸ್. ಗೋವಿಂದಯ್ಯ, ಪ್ರ ಸೋ|. ಮತ್ತು ಅಹ್ಮದ್ ಅಲಿಖಾನ್, ಸ್ವ॥.

೨೬ ನೇ ಡಿವಿಜನ್ ಶ್ರೀಗಳಾದ ಕೆ. ಪುಟ್ಟಸ್ವಾಮಿ ಕಾಂ॥, ಎಂ.ಎಲ್. ಉಗ್ರಪ್ಪ, ಕಮ್ಯೂನಿಸ್ಟ್, ಮೀರ್ ನೂರ್ ಹುಸೇನ್, ಸ್ವ|.

[ಮುಂದಿನ ಪುಟ ನೋಡಿ]

ರಣಜಿತ್
20—11—53 ರಿಂದ
ವರ್ಣರಂಜಿತ ಚಿತ್ರ.
ಝೂನ್ಸಿಕಿರಾಣಿ
(ಹಿಂದಿ)
ಪಾತ್ರ:—ಮೆಹತಾಬ್, ಸೊರಬ್ ಮೋದಿ

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋ॥ ೫೭೪
ರಿಜಿಸ್ಟರ್
ನಂ. ಎಂ. ೩೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೭೬

೨೩-೧೧-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ವರ್ಣಪದ್ಧತಿ ತಪ್ಪಿದರೆಮಾತ್ರ ಅಸ್ಪೃಶ್ಯತೆ ನಿವಾರಣೆ

ಕೇಂದ್ರ ಸಂಪರ್ಕ ಶಾಖಾ ಸಚಿವರ ಹೇಳಿಕೆ

ಹಿಂದೂ ಸಮಾಜದಲ್ಲಿರುವ ವರ್ಣಪದ್ಧತಿಯನ್ನು ನಿರ್ಮೂಲ ಮಾಡಿದರೆ ದೇಶದಲ್ಲಿರುವ ಅಸ್ಪೃಶ್ಯತೆ ಸಮಸ್ಯೆಯು ಪರಿಹಾರವಾಗುತ್ತದೆ ಎಂದು ಬಿಕನೀರ್‌ನಲ್ಲಿ ಕೇಂದ್ರ ಸಂಪರ್ಕ ಶಾಖಾ ಸಚಿವ ಶ್ರೀ ಜಗಜೀವನರಾಂರವರು ಮಾತನಾಡುತ್ತಾ ತಿಳಿಸಿದ್ದಾರೆ.

ಭಾರತದಲ್ಲಿರುವ ಜನಸಂಖ್ಯೆಯಲ್ಲಿ ಏಳನೇ ಒಂದು ಭಾಗವು ಕೀಳ್ತರಗತಿಯವರಂತಿರುವುದು ರದ್ದಾಗಲೇಬೇಕು. ಭಾರತ ರಾಜ್ಯಾಂಗದಲ್ಲಿ ಅಸ್ಪೃಶ್ಯತೆಯು ನಿವಾರಣೆಯಾಗಿದ್ದರೂ ಅದು ಇನ್ನೂ ಗ್ರಾಮಾಂತರ ಪ್ರದೇಶಗಳಲ್ಲಿಯೇ ಅಲ್ಲದೆ ನಗರ ಪ್ರದೇಶಗಳಲ್ಲಿಯೂ ಸಹ ಆಚರಣೆಗೆ ಬರದೆ ತೀವ್ರ ರೂಪದಲ್ಲಿಯೇ ಇದೆ. ಅಸ್ಪೃಶ್ಯತೆಯನ್ನು ಕೇವಲ ಶಾಸನಗಳಿಂದ ನಿವಾರಿಸಲು ಸಾಧ್ಯವಿಲ್ಲ ಜನತೆಯ ಸಹಕಾರದಿಂದ ಮಾತ್ರ ಸಾಧ್ಯ ಎಂದು ಸಚಿವರು ಹೇಳಿದ್ದಾರೆ.

ನಿರುದ್ಯೋಗ ನಿವಾರಣೆಗೆ ಹೆಚ್ಚು ಬಂಡವಾಳ

ಭಾರತದಲ್ಲಿ ಈಗ ಉಂಟಾಗಿರುವ ನಿರುದ್ಯೋಗ ಸಮಸ್ಯೆಯನ್ನು ನಿವಾರಿಸಲು ಸಾರ್ವಜನಿಕರಿಂದ ಹೆಚ್ಚು ಬಂಡವಾಳ ಅಗತ್ಯವೆಂದೂ, ಅದಕ್ಕೆ ಈಗ ಅವಕಾಶವಿದೆಯೆಂದೂ ಕೇಂದ್ರ ಆರ್ಥಿಕ ಸಚಿವ ಶ್ರೀ ಸಿ.ಡಿ ದೇಶ್‌ಮುಖ್‌ರವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಪಂಚವಾರ್ಷಿಕ ಯೋಜನೆಯ ಪ್ರಮಾಣವನ್ನು ೧೭೫ ಕೋಟಿ ರೂ.ಗಳಿಂದ ಹೆಚ್ಚಿಸಬೇಕೆಂದು ನಿರ್ಧಾರವಾಗಿರುವುದರಿಂದ ಸಾರ್ವಜನಿಕ ವಿಭಾಗದಲ್ಲಿ ಮುಂದಿನ ೨ ವರ್ಷಗಳಲ್ಲಿ, ವರ್ಷಕ್ಕೆ ೬೨೫ ಕೋಟಿ ರೂ.ಗಳ ವೆಚ್ಚ ನಡೆಯುವುದೆಂದೂ, ಮೊದಲೆರಡು ವರ್ಷಗಳಲ್ಲಿ ವರ್ಷಕ್ಕೆ ೩೦೦ ಕೋಟಿ ರೂಪಾಯಿಗಳಿಗೂ ಸ್ವಲ್ಪ ಕಡಿಮೆಯೂ, ಈ ವರ್ಷ ೪೧೫ ಕೋಟಿ ರೂ. ಗಳ ಮಾತ್ರ ವೆಚ್ಚವಾಗಲಿರುವುದೆಂದೂ, ಅವರು ತಿಳಿಸಿದ್ದಾರೆ. ಇದರಿಂದ ಮುಂದಿನ ೨ ವರ್ಷಗಳಲ್ಲಿ ವೆಚ್ಚ ಹೆಚ್ಚಲಿದ್ದು, ಒಳನಾಡಿನಲ್ಲಿ ಹಣದ ವರಮಾನ ಹೆಚ್ಚುವುದೆಂದೂ ಉದ್ಯೋಗ ಹೆಚ್ಚುವುದೆಂದೂ ಅವರು ಹೇಳಿದ್ದಾರೆ.

ರಾಜಪ್ರಮುಖರು ದೆಹಲಿಗೆ

ಮೈಸೂರು ೨೩

ರಾಜಪ್ರಮುಖರು ನಿನ್ನೆಯದಿನ ರೈಲಿನಲ್ಲಿ ಬೆಂಗಳೂರು ಮಾರ್ಗವಾಗಿ ದೆಹಲಿಗೆ ಪ್ರಯಾಣ ಮಾಡಿದರು. ಅವರೊಡನೆ ಆಪ್ತ ಮತ್ತು ಹುಜೂರು ಕಾರ್ಯದರ್ಶಿಗಳೂ ತೆರಳಿದರು.

ಬೆಂಗಳೂರು ರೈಲ್ವೆ ನಿಲ್ದಾಣದಲ್ಲಿ ಮುಖ್ಯಮಂತ್ರಿಗಳು ಮತ್ತು ಇತರ ಪ್ರಮುಖರು ಬೀಳ್ಕೊಟ್ಟರು.

ರಾಜಪ್ರಮುಖರು ಇದೇ ೨೯ ನೇ ತಾ॥ ರಾಜಧಾನಿಗೆ ಹಿಂತಿರುಗುವರು

ಕಾಕನಕೋಟೆ ಕಾಡಿನಲ್ಲಿ ಖೆಡ್ಡ

ಮೈಸೂರು ೨೩

ಇಲ್ಲಿಗೆ ೪೯ ಮೈಲಿ ದೂರದಲ್ಲಿರುವ ಕಾಕನಕೋಟೆ ಅರಣ್ಯದಲ್ಲಿ ಮುಂದಿನ ತಿಂಗಳು ೨೮ ನೇ ತಾರೀಖು ಖೆಡ್ಡಾವನ್ನು ನಡೆಸಲು ಸರ್ಕಾರದವರು ವ್ಯವಸ್ಥೆಮಾಡಿ, ಅದಕ್ಕಾಗಿ ೯೯ ಸಾವಿರ ರೂಗಳನ್ನು ಮಂಜೂರು ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ಕಾರ್ಯಗಳು ಮೈಸೂರು ಜಿಲ್ಲಾ ಅರಣ್ಯಾಧಿಕಾರಿ ಶ್ರೀ ಗುಲಾಬ್ ಸಿಂಗ್‌ರವರ ನೇತೃತ್ವದಲ್ಲಿ ಬಿರುಸಿನಿಂದ ನಡೆಯುತ್ತಿದೆ.

ಪುರಸಭಾ ಚುನಾವಣಾ ಪ್ರಚಾರ

ಮೈಸೂರು ೨೩

ಮುಂದಿನ ತಿಂಗಳು ೭ನೇ ತಾರೀಖು ನಡೆಯಲಿರುವ ಮೈಸೂರು ಪುರಸಭೆಯ ಚುನಾವಣೆಯ ಸಂಬಂಧದಲ್ಲಿ ಕಾಂಗ್ರೆಸ್ ಉಮೇದುವಾರರ ಬಗ್ಗೆ ಪ್ರಚಾರ ಕಾರ್ಯದ ಆರಂಭೋತ್ಸವನ್ನು ನಾಳಿದ್ದು ಬುಧವಾರ ಸಂಜೆ ೭-೩೦ ಗಂಟೆಗೆ ಟೌನ್‌ಹಾಲಿನಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣಗೌಡರು ನೆರವೇರಿಸುವರು.

★ ನಗರ ಕಾಂಗ್ರೆಸ್ ಕಛೇರಿಗೆ ಪುರಸಭಾ ಚುನಾವಣೆ ಸಂಬಂಧದಲ್ಲಿ ಒಂದು ಟೆಲಿಫೋನ್ ಹಾಕಲಾಗಿದೆ ಫೋ. ೩೭೫.

ವಿದ್ಯಾರ್ಥಿಗಳು ಸಿನಿಮಾ ನೋಡಬಾರದು

ನಿಷೇಧಿಸಲು ಶಾಸನವು ಅಗತ್ಯವೆಂದು ಕೇಂದ್ರ ಸಚಿವರು

ಭಾರತದಲ್ಲಿ ಇಂದಿನ ಚಲನ ಚಿತ್ರಗಳು ಪ್ರಣಯ ಹಾಗೂ ಕಾಮ ಪ್ರದರ್ಶನದಿಂದ ಕೂಡಿದ್ದು ಅವುಗಳನ್ನು ವಿದ್ಯಾರ್ಥಿಗಳು ನೋಡುವುದರಿಂದ ಅವರ ಮನೋ ಬೆಳವಣಿಗೆಗೆ ಹಾನಿಕರವಾಗಿದೆ. ಆದ್ದರಿಂದ ೨೨ ವರ್ಷ ವಯಸ್ಸಿನ ಕೆಳಗಿರುವ ವಿದ್ಯಾರ್ಥಿಗಳು ಸಿನಿಮಾಗಳಿಗೆ ಹೋಗದಂತೆ ಕಾನೂನು ಜಾರಿಗೆ ತರುವ ಅಗತ್ಯವಿದೆ-ಎಂದು ಕೇಂದ್ರ ಗೃಹ ಸಚಿವ ಡಾ॥ ಕಟ್ಜುರವರು ಪಾಟಿಯಾಲಾ ವಿದ್ಯಾರ್ಥಿಗಳನ್ನು ದ್ದೇಶಿಸಿ ಭಾಷಣ ಮಾಡಿದಾಗ ತಿಳಿಸಿದ್ದಾರೆ.

ಮೈಸೂರು ಎನ್.ಸಿ.ಸಿ. ಬಗ್ಗೆ ಪ್ರಧಾನ ದಂಡನಾಯಕರ ಪ್ರಶಂಸೆ

ಮೈಸೂರು ೨೩

ಭಾರತದ ಸೈನ್ಯದ ಪ್ರಧಾನ ದಂಡನಾಯಕ ಜನರಲ್ ರಾಜೇಂದ್ರ ಸಿನ್ಹಜಿಯವರು ನಿನ್ನೆ ಮಧ್ಯಾಹ್ನ ೧-೩೦ ಗಂಟೆಗೆ ಉದಕಮಂಡಲದಿಂದ ಅವರ ಮಿಲಿಟರಿ ಸೆಕ್ರೆಟರಿ ಲೆ॥ ಕ॥ ರಣಬೀರ್ ಭಕ್ಷಿರವರೊಡನೆ ರಾಜಧಾನಿಗೆ ಆಗಮಿಸಿದರು. ಪ್ರಭುತ್ವ ಭವನದಲ್ಲಿ ಅವರನ್ನು ದಕ್ಷಿಣ ವಿಭಾಗದ ಎನ್. ಸಿ. ಸಿ. ದಳದ ನಾಯಕ ಕರ್ನಲ್ ದಯಾಳ್, ಜಿಲ್ಲಾಧಿಕಾರಿ ಶ್ರೀ ಸ್ವಾಮಿನಾಥ್, ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯ ಮತ್ತು ಪುರಸಭಾ ಕಮೀಷನರ್ ಶ್ರೀ ಎಲ್. ಲಕ್ಷ್ಮಣರಾವ್‌ರವರು ಸ್ವಾಗತಿಸಿದರು. ಅನಂತರ ಮೈಸೂರು ಎನ್. ಸಿ. ಸಿ. ದಳದವರು ಗೌರವ ರಕ್ಷೆಯನ್ನು ಸಲ್ಲಿಸಿದರು.

ಜನರಲ್ ರಾಜೇಂದ್ರಸಿನ್ಹಜಿಯವರನ್ನು ಪತ್ರಿಕಾಪ್ರತಿನಿಧಿಗಳು ಭೇಟಿಮಾಡಿದಾಗ, ಮೈಸೂರು ಎನ್. ಸಿ. ಸಿ. ಯವರ ಉತ್ಸಾಹ ಮತ್ತು ಚುರುಕುಗಳ ಬಗ್ಗೆ ಪ್ರಶಂಸೆ ಮಾಡಿದರು. ಇತ್ತೀಚೆಗೆ ಎನ್. ಸಿ. ಸಿ. ದಳದವರು ದೇಶದ ಸಾಮಾಜಿಕ ಕಾರ್ಯದಲ್ಲಿ ತೊಡಗಿರುವುದನ್ನು ಪ್ರಸ್ತಾಪಿಸಿ, ಅಂತಹ ಕಾರ್ಯವು ಶ್ಲಾಘನೀಯವಾದುದೆಂದೂ, ಆದರೆ ವಿದ್ಯಾರ್ಜನೆಯಲ್ಲಿರುವ ವಿದ್ಯಾರ್ಥಿಗಳನ್ನು ಇಂತಹ ಕಷ್ಟ ಕೆಲಸದಲ್ಲಿ ನಿರತರಾಗುವಂತೆ ಮಾಡುವುದಕ್ಕಿಂತ ಹಳ್ಳಿಯ ಮತ್ತು ಪಟ್ಟಣದ ಜನರೇ ಅದರಲ್ಲಿ ನಿರತರಾಗುವಂತೆ ಮಾಡಬೇಕೆಂದು ಅವರು ಅಭಿಪ್ರಾಯಪಟ್ಟರು

ಭಾರತದ ಸೈನಿಕರ ವಿಚಾರದಲ್ಲಿ ಪ್ರಶ್ನಿಸಲಾಗಿ, ಜನರಲ್ ಕಾರಿಯಪ್ಪನವರು ತಮಗೆ ಉತ್ತಮದರ್ಜೆಯ ಸೈನ್ಯವನ್ನು ಬಿಟ್ಟುಹೋಗಿದ್ದಾರೆಂದೂ, ಭಾರತದ ಸೈನಿಕರು ಉತ್ಸಾಹಭರಿತರಾಗಿದ್ದಾರೆಂದೂ, ಇತರ ದೊಡ್ಡ ದೇಶಗಳಿಗೆ ಹೋಲಿಸುವಷ್ಟು ತಮ್ಮ ಸೈನ್ಯ ಇಲ್ಲದಿದ್ದರೂ ಭಾರತದ ಪರಿಸ್ಥಿತಿಗೆ ತಮ್ಮ ಸೈನ್ಯವು ಪ್ರಗತಿ ಸಾಧಕವಾಗಿದೆಯೆಂದೂ ಅವರು ಹೇಳಿದರು.

ಕೊರಿಯಾ ಯುದ್ಧ ಖೈದಿಗಳ ಮೇಲ್ವಿಚಾರಕದಲ್ಲಿರುವ ಭಾರತದ ಸೈನಿಕರು ಮಾರ್ಚಿ ಅಂತ್ಯದಲ್ಲಿ ಹಿಂತಿರುಗಬಹುದೆಂದೂ ಅವರು ತಿಳಿಸಿದರು.

ಅವರು ನಿನ್ನೆ ಮಧ್ಯಾಹ್ನವೇ ಬೆಂಗಳೂರಿಗೆ ಹಿಂತಿರುಗಿದರು.

ಶ್ರೀ ಅಹೋಬಿಲ ಸ್ವಾಮಿಗಳು

ಮೈಸೂರು ೨೩

ಅರಮನೆ ಕೋಟೆಯಲ್ಲಿರುವ ವರಾಹಸ್ವಾಮಿ ದೇವಸ್ಥಾನದಲ್ಲಿ ಶ್ರೀ ಅಹೋಬಿಲ ಮಠದ ಸಂತಾನ ಗೋಪಾಲಕೃಷ್ಣ ಸ್ವಾಮಿಗಳಿಗೆ ಡೋಲೋತ್ಸವವು ಶ್ರೀಗಳ ಸ್ವಾಗತ ಸಮಿತಿಯ ಪರವಾಗಿ ವೈಭವದಿಂದ ನಡೆಸಲ್ಪಟ್ಟಿತು. ಶ್ರೀ ಶ್ರೀಗಳು 'ಶ್ರೀ ಅಹೋಬಿಲ ಮಠ ವೈಭವ' ಎಂಬ ಪುಸ್ತಕವನ್ನು ಮಂತ್ರಾಕ್ಷತೆಗಳೊಡನೆ ಅನುಗ್ರಹಿಸಿದರು. ಅನೇಕರು ಒಟ್ಟಿಗೆ ಸೇರಿ ಈಬಗೆಯ ಸಮಿತಿಗಳನ್ನು ರಚಿಸಿಕೊಂಡು ದೇವರ ಸೇವೆ ಮಾಡುವುದರ ವೈಶಿಷ್ಟ್ಯವನ್ನು ವಿವರಿಸಿ, ಮೈಸೂರು ನಗರವಾಸಿಗಳ ಆಸ್ತಿಕ್ಯವನ್ನು ಕೊಂಡಾಡಿದರು.. ಶ್ರೀ ಶ್ರೀಗಳು ರಮಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಅಹೋಬಿಲ ಮಠಕ್ಕೆ ಈದಿನ ಬೆಳಿಗ್ಗೆ ಬಿಜಯಮಾಡಿದರು.

ಸತ್ಕಾರಕೂಟ

ಮೈಸೂರು ವಾಣಿಜ್ಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೃಷ್ಣಮೂರ್ತಿಯವರ ಗೌರವಾರ್ಥವಾಗಿ ನಗರ ಬಟ್ಟೆ ವರ್ತಕರ ಸಂಘದವರು ನಿನ್ನೆಯದಿನ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಪಾಕೀಸ್ತಾನದಲ್ಲಿ ವ್ಯಾಪಾರಿಗಳ ಮುಷ್ಕರ

ಪಾಕೀಸ್ತಾನ ಸರ್ಕಾರವು ೪ ಕೋಟಿ ರೂಪಾಯಿಗಳ ಬೆಲೆಯ ಬಟ್ಟೆಯನ್ನು ಆಮದುಮಾಡಲು ನಿರ್ಧರಿಸಿರುವುದನ್ನು ಅಲ್ಲಿಯ ವ್ಯಾಪಾರಿಗಳು ಪ್ರತಿಭಟಿಸಿ ಮುಷ್ಕರವನ್ನು ಹೂಡಲು ನಿರ್ಧರಿಸಿರುವರೆಂದು ತಿಳಿಯಬರುತ್ತದೆ.

ಆಂಧ್ರ ಪ್ರಜಾಸೋಷಲಿಸ್ಟ್ ಪಕ್ಷದಲ್ಲಿ ಒಡಕು

ಶ್ರೀ ವಿಶ್ವನಾಥಂ ಮಂತ್ರಿಪದವಿಗೆ ರಾಜೀನಾಮೆ ಕೊಡಲು ಒತ್ತಾಯ

ವಿಷಯ ಪುನರ್ಪರಿಶೀಲಿಸಬೇಕೆಂದು ಶಾಸನ ಸಭಾ ಸದಸ್ಯರ ಮನವಿ

ಆಂಧ್ರ ಮಂತ್ರಿ ಮಂಡಲದಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷವು ಇರುವುದರಿಂದ ಪ್ರಯೋಜನವೇನೂ ಇಲ್ಲವೆಂದು ಆ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ಇತ್ತೀಚೆಗೆ ತೀರ್ಮಾನವನ್ನಿತ್ತರಷ್ಟೆ. ಅದರ ಮೇಲೆ ಪಕ್ಷದ ಕಾರ್ಯಕಾರಿ ಸಮಿತಿಯು ವಿಜಯವಾಡಾದಲ್ಲಿ ಸಭೆ ಸೇರಿ ಶ್ರೀ ಟಿ. ವಿಶ್ವನಾಥಂರವರು ಮಂತ್ರಿಮಂಡಲಕ್ಕೆ ರಾಜೀನಾಮೆಯನ್ನು ಕೂಡಲೇ ಕೊಡಬೇಕೆಂದು ತೀರ್ಮಾನಿಸಿತು. ಹಾಗೆ ಈ ತೀರ್ಮಾನಕ್ಕೆ ವಿರೋಧವಾಗಿ ನಡೆಯುವವರನ್ನು ಪಕ್ಷದಿಂದ ಉಚ್ಚಾಟನೆ ಮಾಡಬೇಕೆಂದೂ, ಶ್ರೀ ವಿಶ್ವನಾಥಂರವರು ರಾಜೀನಾಮೆ ಕೊಡದೆ ಇದ್ದರೆ ಪಕ್ಷವು ಅವರನ್ನು ತನ್ನ ಅಧ್ಯಕ್ಷರನ್ನಾಗಿ ಪರಿಗಣಿಸುವುದಿಲ್ಲವೆಂದೂ ತೀರ್ಮಾನಿಸಿತು.

ಈ ತೀರ್ಮಾನವನ್ನು ಪರಿಶೀಲಿಸಲು ಆಂಧ್ರ ಶಾಸನ ಸಭೆಯಲ್ಲಿರುವ ಪ್ರಜಾ ಸೋಷಲಿಸ್ಟ್ ಪಕ್ಷದ ೧೩ ಜನ ಸದಸ್ಯರು ನಿನ್ನೆಯದಿನ ಶ್ರೀ ವಿಶ್ವನಾಥಂರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯು ತನ್ನ ನಿರ್ಧಾರವನ್ನು ಪುನಃ ವಿಮರ್ಶಿಸಿ ಬದಲಾಯಿಸಬೇಕೆಂದೂ, ಈಗಿನ ವಾತಾವರಣದಲ್ಲಿ ಆಂಧ್ರ ಮಂತ್ರಿ ಮಂಡಲದಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷದ ಪ್ರತಿನಿಧಿಯಿರಬೇಕೆಂದೂ ನಿರ್ಣಯ ಮಾಡಿತು. ಪಕ್ಷದ ಕಾರ್ಯದರ್ಶಿ ಶ್ರೀ ರಾಜು ಮತ್ತು ೩-೪ ಜನರು ಇದನ್ನು ವಿರೋಧಿಸಿ ಸಭಾ ತ್ಯಾಗ ಮಾಡಿದರು. ಇತರರು ಒಮ್ಮತದಿಂದ ನಿರ್ಣಯವನ್ನು ಅನುಮೋದಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ

ಮೈಸೂರು ೨೩

ಮೈಸೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ. ಪುಟ್ಟಸ್ವಾಮಿಯವರು ಕಾರ್ಯದರ್ಶಿ ಶ್ರೀ ಡಿ. ಸೂರ್ಯನಾರಾಯಣ ಜೊತೆ ನಂಜನಗೂಡು, ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಹೆಗ್ಗಡದೇವನಕೋಟೆಗಳಿಗೆ ಕಳೆದ ೧೫ ಮತ್ತು ೧೯ನೇ ತಾರೀಖುಗಳಲ್ಲಿ ಭೇಟಿ ಇತ್ತಿದ್ದರು ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸುವುದು ಮತ್ತು ಸಂಸ್ಥೆ ಸಂಘಟನೆ ವಿಚಾರದಲ್ಲಿ ಅಲ್ಲಿನ ಕಾರ್ಯಕರ್ತರುಗಳೊಡನೆ ಮಾತುಕತೆ ನಡೆಸಿದರು.

ಕಲ್ಯಾಣಮಂಟಪದ ಮಹೋತ್ಸವ

ಮೈಸೂರು ೨೩

ಬ್ರಾಹ್ಮಣ ಧರ್ಮಸಹಾಯ ಸಭೆಯ 'ಕಲ್ಯಾಣಮಂಟಪದ' ಮಹೋತ್ಸವವನ್ನು ಇದೇ ಮಾಹೆ ೨೯ನೇ ತಾರೀಖು ಭಾನುವಾರ ಬೆಳಗ್ಗೆ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ನೆರವೇರಿಸುವರು.

ಸ್ಥಳೀಯ ಕಾಮಗಾರಿ ಕಾರ್ಯಗಳು

ಭಾರತ ವಿವಿಧ ಪ್ರಾಂತ್ಯಗಳಲ್ಲಿ ನಡೆಯುವಂತೆ ಆಯೋಜನಾ ಸಮಿತಿಯು ಇಲ್ಲಿಯವರೆಗೆ ಸುಮಾರು ೮ ಸಾವಿರ ಯೋಜನೆಗಳಿಗೆ ತನ್ನ ಅನುಮತಿಯನ್ನು ನೀಡಿದೆ. ಇವುಗಳಲ್ಲಿ ಅರ್ಧದಷ್ಟು ನೀರಾವರಿ ಕೆಲಸಗಳಿಗೆ ಸಂಬಂಧಪಟ್ಟವುಗಳಾಗಿವೆ. ಈ ಕೆಲಸಗಳಲ್ಲಿ ಸಾರ್ವಜನಿಕರು ಅಧಿಕ ಉತ್ಸಾಹದಿಂದ ಭಾಗವಹಿಸುತ್ತಲಿರುವರು ಸರ್ಕಾರವು ಜರೂರು ಅವಶ್ಯಕತೆಗಳಿಗೆ ಆರ್ಥಿಕ ಮತ್ತು ಇತರ ನೆರವನ್ನು ನೀಡುತ್ತಿದೆ. ಈ ಕೆಲಸಕ್ಕೆ ೧೫ ಕೋಟಿ ರೂಪಾಯಿಗಳನ್ನು ಮಂಜೂರ್ಮಾಡಲಾಗಿದೆ. ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಇಲ್ಲಿಯವರೆಗೆ ಕೆಲಸಗಳು ಸಾಗಿವೆ.

ಬಿ. ಎನ್. ರಾವ್ ದೇಹಸ್ಥಿತಿ

ಸ್ವಿಟ್ಸರ್‌ಲೆಂಡಿನ ಜೂರಿಚ್‌ನಲ್ಲಿ ಚಿಕಿತ್ಸೆ ಪಡೆಯುತ್ತಿರುವ ಅಂತರ ರಾಷ್ಟ್ರೀಯ ನ್ಯಾಯಾಲಯದ ನ್ಯಾಯಮೂರ್ತಿಗಳಾದ ಶ್ರೀ ಬಿ. ಎನ್. ರಾವ್‌ರವರ ದೇಹಸ್ಥಿತಿಯು ಕಳವಳಕ್ಕೀಡುಮಾಡಿತ್ತಷ್ಟೆ. ಅವರ ದೇಹಸ್ಥಿತಿಯಲ್ಲಿ ಯಾವ ಬದಲಾವಣೆಗಳೂ ಕಾಣದೆ ಒಂದೇ ರೀತಿಯಿರುವುದಾಗಿ ತಿಳಿಯಬರುತ್ತದೆ.

ವೈರ್‌ಲೆಸ್ ಟೆಲಿಗ್ರಾಫ್ ಸಂಪರ್ಕ

ದೆಹಲಿ ಮತ್ತು ನೇಪಾಳ ರಾಜಧಾನಿ ಖಟ್ಮಂಡು ನಡುವೆ ವೈರ್‌ಲೆಸ್ ಟೆಲಿಗ್ರಾಫ್ ವ್ಯವಸ್ಥೆಯನ್ನು ಮುಂದಿನ ತಿಂಗಳಿನಿಂದ ಏರ್ಪಡಿಸಲಾಗುವುದೆಂದು ತಿಳಿಯಬರುತ್ತದೆ.

ಬ್ರಿಟಿಷ್ ರಾಣಿಯ ಪ್ರವಾಸ

ವಿಶ್ವದ ಹಲವು ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಪ್ರವಾಸ ಕೈಗೊಳ್ಳಲು ಬ್ರಿಟನ್ನಿನ ರಾಣಿ ಎಲಿಜಬೆತ್‌ರವರು ತಮ್ಮ ಪತಿ ಡ್ಯೂಕ್ ಆಫ್ ಎಡಿನ್‌ಬರೋರವರೊಡನೆ ಈ ದಿನ ಲಂಡನ್ನಿನಿಂದ ಹೊರಡುವರು.

ಭಾಷಾವಾರು ವಿಭಜನೆ ತಡೆಗಟ್ಟಲು ಹೊಸ ಯೋಜನೆ

ಸದ್ಯಕ್ಕೆ ದೇಶದ ಐಕ್ಯತೆಗೆ ವಿಭಜನೆ ಕುಂದುಕವೆಂದು ಕೆಲವು ಪಾರ್ಲಿಮೆಂಟ್ ಸದಸ್ಯರ ಅಭಿಪ್ರಾಯ

ದೇಶದಾದ್ಯಂತ ನೂತನ ಚಳುವಳಿಗಾಗಿ ರಾಷ್ಟ್ರೀಯ ಐಕ್ಯತಾ ಕ್ಷೇತ್ರ

ದೇಶದ ನಾನಾ ಭಾಗಗಳಲ್ಲಿ ಭಾಷಾವಾರು ಪ್ರಾಂತ್ಯ ರಚನೆಯ ಬಗ್ಗೆ ಹುಟ್ಟಿರುವ ಆವೇಶವನ್ನು ತಡೆಗಟ್ಟಲು ಬೊಂಬಾಯಿನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಮತ್ತು ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಸ್. ಕೆ. ಪಾಟೀಲರವರ ನಾಯಕತ್ವದಲ್ಲಿ ಪಾರ್ಲಿಮೆಂಟ್ ಸದಸ್ಯರು ಒಂದು "ರಾಷ್ಟ್ರೀಯ ಐಕ್ಯತಾ ಕ್ಷೇತ್ರ"ವನ್ನು ರಚಿಸಿಕೊಂಡಿದ್ದಾರೆ. ದೇಶದಲ್ಲಿ ಪ್ರಮುಖವಾದ ಆರ್ಥಿಕ ಸ್ಥಿತಿ ಉತ್ತಮಗೊಳಿಸುವ ಸಮಯದಲ್ಲಿ ಜನರ ಮನಸ್ಸು ಈ ಪ್ರಾಂತ್ಯ ವಿಂಗಡನೆ ಕಡೆ ಸೆಳೆಯಲ್ಪಡುತ್ತಿದೆ ಈ ಭಾಷಾವಾರು ಪ್ರಾಂತ್ಯರಚನೆಯ ಪ್ರಶ್ನೆಯನ್ನು ಇನ್ನೂ ೧೫ ವರ್ಷಗಳ ಕಾಲವಾದರೂ ಮುಂದುವರಿಯಬೇಕು ಎಂದು ಈ ಪಕ್ಷದವರು ಅಭಿಪ್ರಾಯಪಟ್ಟಿದ್ದಾರೆ.

ಈ ವಿಷಯದಲ್ಲಿ ಇವರು ದೇಶಾದ್ಯಂತ ಚಳುವಳಿ ನಡೆಸಿ ಸದ್ಯದಲ್ಲಿಯೇ ರಚಿತವಾಗಲಿರುವ ಹೈಪವರ್ ಕಮೀಷನ್ನಿನ ಮುಂದೆ ತಮ್ಮ ನಿಲುವನ್ನು ಒತ್ತಾಯಮಾಡಲು ನಿರ್ಧರಿಸಿದ್ದಾರೆ.

ಹೀಗೆ ಮಾಡಿದಲ್ಲಿ ದೇಶದ ಪ್ರಗತಿ ಮತ್ತು ಐಕ್ಯತೆಯಲ್ಲಿ ಶ್ರಮಿಸುತ್ತಲಿರುವ ಪ್ರಧಾನಿ ನೆಹರೂರವರಿಗೆ ಬೆಂಬಲವಿತ್ತಂತೆ ಆಗುತ್ತದೆ. ದೇಶಾದ್ಯಂತ ಈ ಚಳುವಳಿ ಕಾರ್ಯದಲ್ಲಿ ಬರೀ ಕಾಂಗ್ರೆಸ್ಸಿಗರೇ ಅಲ್ಲದೆ ಎಲ್ಲಾ ಪಾರ್ಲಿಮೆಂಟ್ ಸದಸ್ಯರ ಬೆಂಬಲವನ್ನೂ ಪಡೆಯಲು ಯತ್ನಿಸಲಾಗಿದೆ.

ಈ ನೂತನ ಚಳುವಳಿ ಮಂಡಲಿಯ ಮದ್ರಾಸ್ ಶಾಖೆಯಲ್ಲಿ ಡಾ॥ ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರು ಕೆಲಸಮಾಡಲು ಒಪ್ಪಿರುವುದಾಗಿ ತಿಳಿಯಬರುತ್ತದೆ.

ಈರೀತಿಯ ಮಂಡಲಿಗಳು ದೇಶದ ಎಲ್ಲಾ ಭಾಗಗಳಲ್ಲೂ ರಚಿಸಲಾಗುವುದೆಂದು ಹೇಳಲಾಗಿದೆ.

ನೀರಾವರಿ ಕಾರ್ಯಗಳಲ್ಲಿ ಖೈದಿಗಳು

ಬೆಂಗಳೂರು ೨೩

ಸಂಸ್ಥಾನದ ಭಾರಿ ಜಲಾಶಯಗಳಲ್ಲಿ ಸೆಂಟ್ರಲ್ ಜೈಲಿನ ಖೈದಿಗಳ ಪೈಕಿ ೫೦ ಜನರನ್ನು ಕೆಲಸಮಾಡಿಸಿ, ಅದು ಯಶಸ್ವಿಯಾದರೆ ಇನ್ನೂ ಹೆಚ್ಚಿನ ಖೈದಿಗಳನ್ನು ಆ ಕೆಲಸಕ್ಕೆ ನೇಮಿಸಿಕೊಳ್ಳಲು ಸರ್ಕಾರ ಆಲೋಚಿಸುತ್ತಿದೆಯೆಂದು ನ್ಯಾಯಾಂಗಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಮೊನ್ನೆ ಸೆಂಟ್ರಲ್ ಜೈಲಿನ ವಿಮುಕ್ತ ಖೈದಿಗಳ ಸಹಾಯಕ ಸಂಘದ ವಾರ್ಷಿಕೋತ್ಸವದಲ್ಲಿ ತಿಳಿಸಿರುತ್ತಾರೆ.

ವಿದ್ಯುಚ್ಛಕ್ತಿ ಉತ್ಪಾದನೆಗೆ ವಾಯುಬಲ ಉಪಯೋಗ

ವಿದ್ಯುಚ್ಛಕ್ತಿ ಉತ್ಪತ್ತಿ ಮಾಡಲು ವಾಯುಬಲವನ್ನು ಉಪಯೋಗಿಸುವುದಕ್ಕಾಗಿ ಬೆಂಗಳೂರಿನ ಟಾಟಾ ವಿಜ್ಞಾನ ಮಂದಿರದ ಡೈರೆಕ್ಟರಾದ ಪ್ರೊಫೆಸರ್ ಥಾಕರ್‌ರವರು ಬ್ರಿಟನ್ನಿನಲ್ಲಿ ಈಗ ಒಂದು ವಾಯುಬಲ ಯಂತ್ರವನ್ನು ಕೊಂಡುಕೊಂಡಿದ್ದಾರೆ.

ಈ ಯಂತ್ರವನ್ನು ರಾಜಾಸ್ಥಾನದಲ್ಲಿ ಸ್ಥಾಪಿಸಲಾಗುತ್ತದೆಯೆಂದು ತಿಳಿಯಬರುತ್ತದೆ. ವಾಯು ಮತ್ತು ನೀರಿನ ಸೌಕರ್ಯಗಳಿರುವ ದೇಶದ ಇತರ ಪ್ರದೇಶಗಳಲ್ಲಿ ಇಂತಹ ಯಂತ್ರಗಳನ್ನು ಸ್ಥಾಪಿಸಿ, ವಿದ್ಯುಚ್ಛಕ್ತಿಯನ್ನು ಹೆಚ್ಚಾಗಿ ತಯಾರಿಸುವ ಯೋಜನೆಯನ್ನು ಕೈಗೊಳ್ಳಲಾಗುತ್ತದೆ. ಇದರಿಂದ ತಯಾರಾಗುವ ವಿದ್ಯುಚ್ಛಕ್ತಿಯನ್ನು ನೀರಾವರಿ ಕಾರ್ಯಗಳ ಉಪಯೋಗಕ್ಕೆ ಒದಗಿಸಿ ದೇಶದಲ್ಲಿ ವ್ಯವಸಾಯೋತ್ಪನ್ನವನ್ನು ಹೆಚ್ಚಿಸಲಾಗುತ್ತದೆ.

ಭಾರತಕ್ಕೆ ಅಮೆರಿಕಾ ಉಪಾಧ್ಯಕ್ಷರ ಭೇಟಿ

ಅಮೆರಿಕಾ ಉಪಾಧ್ಯಕ್ಷ ಮಿ॥ ನಿಕ್ಸನ್‌ರವರು ಇದೇ ಮಾಹೆ ೨೯ನೇ ತಾ॥ ಭಾರತಕ್ಕೆ ಬರಲಿರುವರು. ಅವರು ಇಲ್ಲಿ ಅನೇಕ ನಾಯಕರನ್ನು ಭೇಟಿಮಾಡಿ ಅನೇಕ ವಿಷಯಗಳನ್ನು ಅರಿತುಕೊಳ್ಳಲಿರುವರು. ದಕ್ಷಿಣ ಏಷ್ಯಾದಲ್ಲಿರುವ ಅನೇಕ ಬಿಕ್ಕಟ್ಟನ್ನು ಅವರು ಅರಿತುಕೊಂಡು ಅದರಬಗ್ಗೆ ಅವರು ಅಧ್ಯಕ್ಷ ಐಸೆನ್‌ಹೋವರರವರಿಗೆ ವರದಿಯನ್ನು ಒಪ್ಪಿಸುವರೆಂದು ಹೇಳಲಾಗಿದೆ.

ಆಂಧ್ರ ಶಾಸನಸಭಾ ಅಧ್ಯಕ್ಷತೆಗೆ ೭ ಅಭ್ಯರ್ಥಿಗಳು

ಆಂಧ್ರ ಶಾಸನಸಭೆಯ ಮೊದಲನೆಯ ಅಧಿವೇಶನವು ಈ ಮಧ್ಯಾನ್ಹ ಕರ್ನೂಲಿನಲ್ಲಿ ಹಂಗಾಮಿ ಅಧ್ಯಕ್ಷ ಶ್ರೀ ನರಸಿಂಹರಾವ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಈ ದಿನ ಸಭೆಯ ಖಾಯಂ ಅಧ್ಯಕ್ಷರ ಚುನಾವಣೆಯು ನಡೆಯಲಿದೆ. ಈ ಸ್ಥಾನಕ್ಕೆ ೭ ಸದಸ್ಯರು ಉಮೇದುವಾರಿಕೆಯನ್ನು ಸಲ್ಲಿಸಿದ್ದಾರೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೭೭

೨೪-೧೧-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ವಿದ್ವತ್ ಸಭೆ

ಮೈಸೂರು ೨೪

ಶ್ರೀ ಅಹೋಬಿಲ ಸ್ವಾಮಿಗಳವರು ನಿನ್ನೆಯದಿನ ರಮಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಶ್ರೀಗಳವರ ಮಠಕ್ಕೆ ಆಗಮಿಸಿ ಅಲ್ಲಿ ಬಿಡಾರವನ್ನು ಮಾಡಿದ್ದಾರೆ.

ನಿನ್ನೆಯಿಂದ ಶ್ರೀಗಳವರ ನೇತೃತ್ವದಲ್ಲಿ ವಿದ್ವತ್ ಸಭೆಯು ನಡೆಯಲಾರಂಭವಾಗಿದೆ. ಈ ಸಭೆಯು ಇಂದು ಮತ್ತು ನಾಳೆಯೂ ಮುಂದುವರಿಯುವುದು.

ನಿನ್ನೆಯದಿನ ಜ್ಯೋತಿಷ್ಯ ಮತ್ತು ವಿಶಿಷ್ಟಾದ್ವೈತ ವೇದಾಂತ ವಿಷಯಗಳಲ್ಲಿ ವಾಕ್ಯಾರ್ಥವು ನಡೆಯಿತು.

ಜ್ಯೋತಿಷ್ಯ ವಾಕ್ಯಾರ್ಥದಲ್ಲಿ ಶ್ರೀಗಳಾದ ಧರ್ಮಾಧಿಕಾರಿ ಕರೂರು ಶೇಷಾಚಾರ್, ಆಸ್ಥಾನವಿದ್ವಾನ್ ವೆಂಕಟರಮಣ ಜೋಯಿಸರು, ವಿದ್ವಾನ್ ಶ್ರೀನಿವಾಸ ಗೋಪಾಲಾಚಾರ್, ಪಂಡಿತ ಎಸ್. ರಂಗಾಚಾರ್ ಮತ್ತು ವಿದ್ವಾನ್ ನರಸಿಂಹಾಚಾರ್‌ರವರುಗಳೂ, ವಿಶಿಷ್ಟಾದ್ವೈತ ವೇದಾಂತ ವಾಕ್ಯಾರ್ಥದಲ್ಲಿ ಶ್ರೀಗಳಾದ ವಿದ್ವಾನ್ ಶ್ರೀನಿವಾಸ ಗೋಪಾಲಾಚಾರ್, ವಿದ್ವಾನ್ ರಾಜಗೋಪಾಲಾಚಾರ್ ಮುಂತಾದವರು ಭಾಗವಹಿಸಿದ್ದರು.

ಶ್ರೀಗಳವರು ಇನ್ನೂ ೨-೩ ದಿನಗಳು ನಗರದಲ್ಲಿರುವರೆಂದು ತಿಳಿಯಬರುತ್ತದೆ.

ಅಂತರ ರಾಷ್ಟ್ರೀಯ ಮೂಲ ಶಿಕ್ಷಣ ಕೇಂದ್ರ

ಮೈಸೂರು ೨೪

ವಿಶ್ವ ಸಂಸ್ಥೆಯ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಸ್ಥೆಯ ಆಶ್ರಯದಲ್ಲಿ ಮುಂದಿನ ತಿಂಗಳು ಮೊದಲನೇ ವಾರದಿಂದ ಮೈಸೂರಿಗೆ ೮ ಮೈಲಿ ದೂರದಲ್ಲಿರುವ ಇಲವಾಲ ಬಂಗಲೆಯಲ್ಲಿ ಅಂತರ ರಾಷ್ಟ್ರೀಯ ಮೂಲ ಶಿಕ್ಷಣ ಕಾರ್ಯಕರ್ತರ ಶಿಕ್ಷಣ ಕೇಂದ್ರವು ೧೦ ತಿಂಗಳಕಾಲ ನಡೆಯುವುದು. ಅದರಲ್ಲಿ ಯೂರೋಪಿನ ವಿವಿಧ ರಾಷ್ಟ್ರಗಳಿಂದ ೫೦ ಮಂದಿ ವಿದ್ಯಾರ್ಥಿಗಳು ಭಾಗವಹಿಸುವರು. ಭಾರತದಿಂದ ಇಬ್ಬರು ಪ್ರತಿನಿಧಿಗಳಿರುವರು ಯುನೆಸ್ಕೋ ಸಂಸ್ಥೆಯ ಮೂಲ ಶಿಕ್ಷಣ ಪ್ರವೀಣರಾದ ಮಿ| ಜಾನ್. ಬಿ. ಬವರ್ಸ್‌ರವರು ಕೇಂದ್ರದ ಡೈರೆಕ್ಟರಾಗಿರುವರು. ಭಾರತ ಸರ್ಕಾರದ ವಿದ್ಯಾ ಸಚಿವ ಶಾಖೆಯ ಶ್ರೀ ಎಂ. ವಿ. ಕೃಷ್ಣಸ್ವಾಮಿಗಳು ಮತ್ತು ಶ್ರೀ ಎನ್. ಭದ್ರಯ್ಯನವರು ಸಹಾಯಕರಾಗಿರುವರು.

ಬ್ರಿಟಿಷ್ ಗಯಾನ ಪ್ರಶ್ನೆ

ಬ್ರಿಟಿಷ್ ಗಯಾನ ಪ್ರಶ್ನೆಯನ್ನು ವಿಶ್ವ ಸಂಸ್ಥೆಯ ಮುಂದೆ ಭಾರತವು ಸೂಚಿಸುವುದಿಲ್ಲವೆಂದು ಪ್ರಧಾನಿ ನೆಹರೂರವರು ರಾಜ್ಯ ಪರಿಷತ್ತಿನಲ್ಲಿ ತಿಳಿಸಿದ್ದಾರೆ.

ಪಾಕ್ ಪ್ರಧಾನಿಗೆ ನೆಹ್ರೂ ಪತ್ರ

ಪಾಕೀಸ್ತಾನದಲ್ಲಿರುವ ಅಲ್ಪಸಂಖ್ಯಾತರ ದರ್ಜೆ ತಗ್ಗಬಾರದು

ಪಾಕೀಸ್ತಾನ ಮತ್ತು ಭಾರತಗಳಲ್ಲಿ ಅಲ್ಪಸಂಖ್ಯಾತರ ಪ್ರಶ್ನೆಗಳು ಒಂದಕ್ಕೊಂದು ಸೇರಿವೆ. ಪಾಕೀಸ್ತಾನದಲ್ಲಿ ಅಲ್ಪ ಸಂಖ್ಯಾತರಿಗೆ ಕೀಳುದರ್ಜೆಯನ್ನು ರಾಜ್ಯಾಂಗದಲ್ಲಿ ಕಲ್ಪಿಸಿದರೆ ಭಾರತದಲ್ಲಿರುವ ಕೋಮುವಾರು ಶಕ್ತಿಗಳು ಅದನ್ನು ದುರುಪಯೋಗಪಡಿಸಿಕೊಳ್ಳುವುದಕ್ಕೆ ಮಾರ್ಗವಾಗುತ್ತದೆ ಎಂಬರ್ಥ ಬರುವ ಪತ್ರವೊಂದನ್ನು ಪ್ರಧಾನಿ ನೆಹರೂರವರು ಪಾಕೀಸ್ತಾನ ಪ್ರಧಾನಿ ಮಹಮದ್ ಆಲಿಯವರಿಗೆ ಬರೆದಿರುವುದಾಗಿ ತಿಳಿಯಬರುತ್ತದೆ.

ಅಮೆರಿಕಾದಲ್ಲಿ ದುಷ್ಕೃತ್ಯ ಹೆಚ್ಚುತ್ತಿದೆ

ಅಮೆರಿಕಾದಲ್ಲಿ ದುಷ್ಕೃತ್ಯಗಳು ಹೆಚ್ಚಾಗುತ್ತಿದೆಯೆಂದು ಕಳೆದ ವರ್ಷದ ವರದಿಯಿಂದ ಕಂಡುಬಂದಿದೆ. ಕಳೆದ ವರ್ಷ ೧೮,೨೩,೧೩೦ ಅಪರಾಧಗಳು ನಡೆದು, ಈ ವರ್ಷ ಅವು ೨೦ ಲಕ್ಷಕ್ಕೆ ಏರಿವೆ ಪ್ರತಿಯೊಂದು ೮.೮ ನಿಮಿಷಕ್ಕೂ ಒಂದು ಕಳ್ಳತನ, ಪ್ರತಿ ೪೦ ನಿಮಿಷಗಳಿಗೂ ಒಂದೊಂದು ಕೊಲೆ ಮತ್ತು ಪ್ರತಿ ೨ ನಿಮಿಷಗಳಿಗೂ ಒಂದು ಮೋಟಾರು ಕಾರಿನ ಕಳುವು ನಡೆಯುತ್ತಿದೆಯೆಂದು ಹೇಳಲಾಗಿದೆ.

ಟಿ. ವಿಶ್ವನಾಥಂ ಕಾಂಗ್ರೆಸ್ ಸೇರುವರೆ ?

ಆಂಧ್ರ ಮಂತ್ರಿ ಮಂಡಲದಲ್ಲಿ ಪ್ರಜಾ ಸೋಷಲಿಸ್ಟ್ ಪಕ್ಷದ ಶ್ರೀ ಟಿ. ವಿಶ್ವನಾಥಂರವರು ಸೇರಿರುವ ವಿಷಯದಲ್ಲಿ ಪಕ್ಷದ ಭಿನ್ನಾಭಿಪ್ರಾಯವು ತೀವ್ರವಾಗಿ ಈಗ ಉಗ್ರಾವಸ್ಥೆಯನ್ನು ತಾಳಿದೆ ಅವರು ಕೂಡಲೆ ತಮ್ಮ ಮಂತ್ರಿ ಪದವಿಗೆ ರಾಜೀನಾಮೆ ಕೊಡದಿದ್ದರೆ ಅವರನ್ನು ಪಕ್ಷದ ಅಧ್ಯಕ್ಷರಂತೆ ಪರಿಗಣಿಸಲಾಗುವುದಿಲ್ಲವೆಂದು ಕಾರ್ಯ ಸಮಿತಿಯು ನಿರ್ಧಾರಮಾಡಿದೆ. ಈಗ ಶ್ರೀ ಟಿ. ವಿಶ್ವನಾಥಂ ಮತ್ತು ಅನುಯಾಯಿಗಳು ಪ್ರಜಾಸೋಷಲಿಸ್ಟ್ ಪಕ್ಷವನ್ನು ತ್ಯಜಿಸಿ, ಕಾಂಗ್ರೆಸ್ ಪಕ್ಷವನ್ನು ಸೇರುವರೆಂದು ಹೇಳಲಾಗುತ್ತಿದೆ. ಕಾಂಗ್ರೆಸ್ ಪಕ್ಷವನ್ನು ಅವರು ಸೇರಿ, ಮಂತ್ರಿಮಂಡಲದಲ್ಲಿ ಮುಂದುವರಿಯುವರೆಂದು ಗೊತ್ತಾಗಿದೆ.

ನೇಪಾಳಕ್ಕೆ ಭಾರತದ ನೆರವು

೧೯೫೧ರಿಂದ ನೇಪಾಳಕ್ಕೆ ಭಾರತವು ಪ್ರತಿ ವರ್ಷವೂ ೧೦ ಲಕ್ಷ ರೂಪಾಯಿಗಳನ್ನು ಕೊಡುತ್ತಿರುವ ಪದ್ಧತಿಯನ್ನು ತಪ್ಪಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಕೆಲವು ಸದಸ್ಯರಿತ್ತ ಸಲಹೆಯನ್ನು ಪ್ರಧಾನಿ ನೆಹರೂರವರು ತಿರಸ್ಕರಿಸಿದ್ದಾರೆ.

ವೈದ್ಯಕೀಯ ಸಂಶೋಧನೆಯ ಅವಶ್ಯಕತೆ

ದೇಶದಲ್ಲಿ ವೈದಕೀಯ ಮತ್ತು ಅದಕ್ಕೆ ಸಂಬಂಧ ಪಟ್ಟ ಸಂಶೋಧನೆ ತೀವ್ರವಾಗಿ ನಡೆಯಬೇಕಾಗಿದೆ. ಈ ಸಂಶೋಧನೆಗೆ ತಕ್ಕ ನೆರವು ನೀಡುವುದು ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳ ಕೆಲಸವಾಗಿರುತ್ತದೆ ವೈದ್ಯಕೀಯ ಸಂಶೋಧನೆಯು ಉತ್ತಮ ರೀತಿಯಲ್ಲಿ ನಡೆಯಬೇಕಾದರೆ ವೈದ್ಯಕೀಯ ಶಿಕ್ಷಣ ಅಭಿವೃದ್ಧಿಯು ಅತ್ಯಗತ್ಯವೆಂದು ಕೇಂದ್ರ ಆರೋಗ್ಯ ಸಚಿವ ರಾಜಕುಮಾರಿ ಅಮೃತಕೌರ್‌ರವರು ಗ್ವಾಲಿಯರ್‌ನಲ್ಲಿ ಮಾತನಾಡುತ್ತ ಹೇಳಿದ್ದಾರೆ.

ಭಾರತಕ್ಕೂ ಹಿಂದ್ ನಗರಕ್ಕೂ ವೈರ್‌ಲೆಸ್ ಸಂಪರ್ಕ

ಕೊರಿಯಾದಲ್ಲಿ ಭಾರತ ಸೈನಿಕರಿಗೆ ಇರುವ ಹಿಂದ್ ನಗರಕ್ಕೂ ಈಗ ವೈರ್‌ಲೆಸ್ ಸಂಪರ್ಕವನ್ನು ಏರ್ಪಡಿಸಲಾಗಿದೆ. ಕಳೆದ ಸೆಪ್ಟೆಂಬರ್‌ನಲ್ಲಿ ಈ ಕೆಲಸವು ಪ್ರಾರಂಭವಾಗಿ, ಭಾರತೀಯ ಸೈನಿಕರು ಅತಿ ಕಷ್ಟಪಟ್ಟು ಈ ಕಾರ್ಯವನ್ನು ಈಗ ಯಶಸ್ವಿಯಾಗಿ ಮಾಡಿದ್ದಾರೆ.

ಬೆಂಗಳೂರಿನಲ್ಲಿ ರಾಜಾಜಿ

ಮದರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ತಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸವನ್ನು ಮುಗಿಸಿಕೊಂಡು ನಿನ್ನೆ ಸಂಜೆ ಬೆಂಗಳೂರಿಗೆ ವಿಮಾನದಲ್ಲಿ ಆಗಮಿಸಿದರು. ಅವರನ್ನು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯ ಮತ್ತು ಇತರ ಸಚಿವರು ಸ್ವಾಗತಿಸಿದರು. ಈ ದಿನ ರಾತ್ರಿ ಅವರು ಮದ್ರಾಸಿಗೆ ಪ್ರಯಾಣ ಬೆಳೆಸುವರು.

ರೇಷ್ಮೆ ಮಾರ್ಕೆಟಿಂಗ್ ಸೊಸೈಟಿ ಆವಶ್ಯಕ

ಟಿ. ನರಸೀಪುರ ಪ್ರದೇಶದಲ್ಲಿ ಒಂದು ರೇಷ್ಮೆ ಮಾರ್ಕೆಟಿಂಗ್ ಸಹಕಾರ ಸಂಘವನ್ನು ಸ್ಥಾಪಿಸಿ, ಅದರ ಮೂಲಕ ರೇಷ್ಮೆ ಬಟ್ಟೆಗಳ ಮಾರಾಟಕ್ಕೆ ಅನುಕೂಲ ಕಲ್ಪಿಸಬೇಕೆಂದು ಮೈಸೂರು ರೇಷ್ಮೆ ಇಲಾಖಾ ಡೈರೆಕ್ಟರು ಟಿ. ನರಸೀಪುರ ಮತ್ತು ಇತರ ಪ್ರದೇಶಗಳ ರೇಷ್ಮೆ ಕೈಗಾರಿಕೆಯಲ್ಲಿ ತೊಡಗಿರುವವರ ಅಹವಾಲಿಗೆ ಉತ್ತರವಾಗಿ ಸಲಹೆಮಾಡಿದ್ದಾರೆ.

ಮಾರಾಟ ತೆರಿಗೆ ವಿನಾಯಿತಿ

ಮೈಸೂರು ೨೪

ತಮ್ಮ ಶಾಖೆ, ಏಜೆಂಟರು ಅಥವಾ ಹಂಚಿಕೆದಾರರಿಲ್ಲದೆ ನೇರವಾಗಿ ೧೯೫೧ನೇ ಏಪ್ರಿಲ್ ಒಂದನೇ ತಾರೀಖಿನಿಂದ ೧೯೫೩ನೇ ಮಾರ್ಚಿ ೩೧ರ ವರೆಗೆ ನಡೆಸಿದ ವ್ಯಾಪಾರಗಾರರಿಗೆ ಮಾರಾಟ ತೆರಿಗೆಯ ವಿನಾಯಿತಿ ಕೊಟ್ಟಿದೆಯೆಂದೂ ಏಜೆಂಟ್ ಅಥವಾ ಶಾಖೆಗಳ ಮೂಲಕ ನಡೆದ ವ್ಯಾಪಾರಕ್ಕೆ ಮಾತ್ರ ತೆರಿಗೆಯನ್ನು ಮಾಮೂಲಿನಂತೆ ವಸೂಲ್ಮಾಡಲಾಗುವುದೆಂದೂ ಸರ್ಕಾರವು ಪ್ರಕಟಿಸಿದೆ.

ಸ್ಪೆಷಲ್ ಚೀಫ್ ಇಂಜನಿಯರು

ಬೆಂಗಳೂರು ೨೩

ಶಿವಮೊಗ್ಗಾದಲ್ಲಿ ಸೂಪರಿಂಟೆಂಡಿಂಗ್ ಇಂಜನಿಯರಾದ ಶ್ರೀ ಕೆ. ಸುಬ್ಬರಾಯರನ್ನು ನೀರಾವರಿ ಕೆಲಸಗಳಿಗಾಗಿ ಸ್ಪೆಷಲ್ ಚೀಫ್ ಇಂಜನಿಯರಾಗಿ ನೇಮಿಸಿ ಸರ್ಕಾರಿ ಆಜ್ಞೆ ಹೊರಬಿದ್ದಿದೆ.

ಕಾರ್ಮಿಕರಿಗೆ ಗೃಹ ವಸತಿ ಯೋಜನೆ

ಕೇಂದ್ರ ಕೈಗಾರಿಕಾ ಗೃಹ ಯೋಜನೆ ಪ್ರಕಾರ, ಮೈಸೂರು ಸಂಸ್ಥಾನಕ್ಕೆ ಈ ವರ್ಷ ೨೩,೨೪,೪೮೦ ರೂ. ಸಬ್‌ಸಿಡಿ ಮತ್ತು ಅದೇ ಮೊತ್ತದ ಸಾಲವನ್ನು ಕೊಟ್ಟು, ಅದನ್ನು ೧೫೪೮ ಕಾರ್ಮಿಕರ ಮನೆಗಳನ್ನು ಕಟ್ಟಲು ವಿನಿಯೋಗಿಸಬೇಕೆಂದು ಸೂಚಿಸಲಾಗಿದೆಯೆಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ.

ಭಾರತಕ್ಕೆ ಹೊರಗಿನಿಂದ ಸಕ್ಕರೆ

ಭಾರತ ಸರ್ಕಾರವು ಹೊರಗಿನಿಂದ ಆಮದು ಮಾಡಿಕೊಂಡ ೯೭೦೦ ಟನ್ ಸಕ್ಕರೆಯು ಈಗ ಬೊಂಬಾಯಿಗೆ ಬಂದಿದೆ ಬರುವ ತಿಂಗಳು ಇನ್ನೂ ೪೩ ಸಾವಿರ ಟನ್ ಸಕ್ಕರೆ ಬರಲಿದೆ.

ಈಗ ಮೈಸೂರು ನಗರದಲ್ಲಿ ಸಕ್ಕರೆ ಬೆಲೆಯು ಏರುತ್ತಿದೆಯೆಂದು ತಿಳಿದುಬಂದಿದೆ.

ಹೋಮಿಯೊಪತಿ ಕಾಂಗ್ರೆಸ್ ಅಧಿವೇಶನ

ಇದೇ ೨೮ ನೇ ತಾರೀಖು ನವದೆಹಲಿಯಲ್ಲಿ ಹೋಮಿಯೋಪತಿ ಕಾಂಗ್ರೆಸ್ ಅಧಿವೇಶನವು ನಡೆಯುತ್ತದೆ ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರು ಅಧಿವೇಶನ ಉದ್ಘಾಟನೆಯನ್ನು ಮಾಡುತ್ತಾರೆ.

★ ಕಾಂಗ್ರೆಸ್ ಮತ್ತು ಪ್ರಜಾಸೋಷಲಿಸ್ಟ್ ಪಕ್ಷದ ಐಕ್ಯತೆಯು ಸದ್ಯಕ್ಕೆ ಆಗುವ ಸಾಧ್ಯತೆಯಿಲ್ಲವೆಂದು ಪ್ರಜಾಸೋಷಲಿಸ್ಟ್ ನಾಯಕ ಶ್ರೀ ಜಯಪ್ರಕಾಶ್ ನಾರಾಯಣರವರು ಹೇಳಿದ್ದಾರೆ.

ಆಂಧ್ರ ಶಾಸನ ಸಭಾಧಿವೇಶನಾರಂಭ

ಪೊಟ್ಟಿ ಶ್ರೀರಾಮುಲುರವರ ಭಾವಚಿತ್ರ ಅನಾವರಣ

ಸದಸ್ಯರಿಂದ ಪ್ರಮಾಣವಚನ ಸ್ವೀಕಾರ

ಆಂಧ್ರ ಶಾಸನಸಭೆಯ ಮೊದಲನೆಯ ಅಧಿವೇಶನವು ನಿನ್ನೆಯದಿನ ಹಂಗಾಮಿ ಅಧ್ಯಕ್ಷ ಶ್ರೀ ನರಸಿಂಹರಾವ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಮೊದಲು ಎಲ್ಲಾ ಸದಸ್ಯರ ಪ್ರಮಾಣವಚನ ಸ್ವೀಕಾರವಾಯಿತು. ಪ್ರಾರಂಭದಲ್ಲಿ ದಿವಂಗತ ಪೊಟ್ಟಿ ಶ್ರೀರಾಮುಲುರವರ ಭಾವಚಿತ್ರವನ್ನು ಸಭಾಭವನದಲ್ಲಿ ಅನಾವರಣ ಮಾಡಲಾಯಿತು.

ಪ್ರಮಾಣವಚನ ಸ್ವೀಕಾರವಾದನಂತರ ಖಾಯಂ ಅಧ್ಯಕ್ಷರ ಚುನಾವಣೆಯು ನಡೆಯಿತು.

ಕೆ.ಎಂ.ಪಿ.ಯ ಶ್ರೀ ಎನ್. ವೆಂಕಟರಾಮಯ್ಯನವರು ೭೬-೫೦ ಮತಗಳಿಂದ ಅಧ್ಯಕ್ಷರಾಗಿ ಚುನಾಯಿತರಾದರು. ಈ ಸ್ಥಾನಕ್ಕೆ ೭ ಜನ ಸ್ಪರ್ಧಿಸಿದ್ದರು ಅವರಲ್ಲಿ ೫ ಜನ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡರು ಸ್ವತಂತ್ರ ಉಮೇದುವಾರರಾದ ಶ್ರೀ ಕೆ. ಕೃಷ್ಣರಾವ್ ಮತ್ತು ಕೆ. ಎಂ. ಪಿ. ಪಕ್ಷದ ಶ್ರೀ ಎನ್. ವೆಂಕಟರಾಮಯ್ಯನವರ ನಡುವೆ ಸ್ಪರ್ಧೆ ನಡೆಯಿತು.

ಈದಿನ ಉಪಾಧ್ಯಕ್ಷರ ಚುನಾವಣೆ ನಡೆಯುತ್ತದೆ. ಉಪಾಧ್ಯಕ್ಷ ಸ್ಥಾನಕ್ಕೆ ಸರ್ಕಾರಿ ಪರ ಶ್ರೀಮತಿ ಕೋಟಮ್ಮರೆಡ್ಡಿಯವರನ್ನು ನಿಲ್ಲಿಸಲಾಗಿದೆ. ಇವರು ಕಾಂಗ್ರೆಸ್ ಪಕ್ಷದವರು ಇವರಲ್ಲದೆ ಇನ್ನೂ ೫ ಜನ ಉಮೇದುವಾರರು ಇರುವರು.

ಪಾರ್ಲಿಮೆಂಟ್ ಸದಸ್ಯರನ್ನು ಉದ್ದೇಶಿಸಿ ಡಾ॥ ಜರ್ಗ ಭಾಷಣ

ದೆಹಲಿಯಲ್ಲಿ ಪಾರ್ಲಿಮೆಂಟ್ ಸದಸ್ಯರನ್ನುದ್ದೇಶಿಸಿ ನಿನ್ನೆಯದಿನ ಬ್ರಿಟಿಷ್ ಗಯಾನದ ಪದಚ್ಯುತ ಪ್ರಧಾನಿ ಡಾ॥ ಜರ್ಗ ಮತ್ತು ಅವರ ಸಹೋದ್ಯೋಗಿ ಮಿ॥ ಬರ್‍ನ್ಹಾಂರವರು ಭಾಷಣ ಮಾಡಿದರು ಪ್ರಧಾನಿ ನೆಹರೂರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಬ್ರಿಟಿಷ್ ಗಯಾನದಲ್ಲಿ ಬ್ರಿಟಿಷ್ ಸಾಮ್ರಾಜ್ಯಶಾಹಿ ಆಡಳಿತವನ್ನೂ ಇದರಿಂದಅಲ್ಲಿ ಜನರಿಗೆ ಇರುವ ತೊಂದರೆಗಳನ್ನೂ ವಿವರಿಸಿದರು.

ಮಹಿಳಾ ಪೊಲೀಸರ ನೇಮಕ

ಬೀಹಾರಿನಲ್ಲಿ ಮಹಿಳಾ ಪೊಲೀಸರವರನ್ನು ನೇಮಿಸಿಕೊಳ್ಳುವ ಒಂದು ಹೊಸ ಯೋಜನೆಯನ್ನು ಅಲ್ಲಿಯ ಸರ್ಕಾರವು ತಯಾರಿಸಿದೆ. ಇದರಂತೆ ಕೆಲವು ಮಹಿಳೆಯರನ್ನು ನೇಮಿಸಿಕೊಂಡು ಪಾಟ್ನಾ ರೈಲ್ವೆ ನಿಲ್ದಾಣದಲ್ಲಿ ಕೆಲಸಕ್ಕೆ ಹಾಕಲಾಗುತ್ತದೆ.

ಉತ್ತರ ಕೊರಿಯಾಕ್ಕೆ ಚೈನಾದಿಂದ ಆರ್ಥಿಕ ದಾನ

ಚೈನಾ ಜನತಾ ಸರ್ಕಾರ ಮತ್ತು ಉತ್ತರ ಕೊರಿಯಾಗಳ ನಡುವೆ ಆರ್ಥಿಕ ಒಪ್ಪಂದವೊಂದು ಸಹಿಯಾಗಿರುವುದಾಗಿ ತಿಳಿಯಬರುತ್ತದೆ. ಈ ಒಪ್ಪಂದದ ಪ್ರಕಾರ ಚೀಣಾ ಉತ್ತರ ಕೊರಿಯಾಕ್ಕೆ ೧೧ಕೋಟಿ ೧೪ ಲಕ್ಷ ಸ್ಟರ್ಲಿಂಗ್‌ಗಳ ಹಣವನ್ನು ದಾನವಾಗಿ ಕೊಟ್ಟಿದೆ

ಆರ್ಥಿಕ ಮಂಡಲಿ ರಚನೆ

ತಿರುವಾಂಕೂರ್-ಕೊಚ್ಚಿ ಪ್ರಾಂತ್ಯದಲ್ಲಿ ೨ ಕೋಟಿ ರೂಪಾಯಿಗಳ ಅಧಿಕೃತ ಬಂಡವಾಳದಿಂದ ಒಂದು ಆರ್ಥಿಕ ಮಂಡಲಿಯನ್ನು ರಚಿಸಲಾಗಿದೆ. ಇದರಲ್ಲಿ ಅರ್ಧದಷ್ಟು ಹಣವನ್ನು ಸರ್ಕಾರವು ಚಂದಾ ರೂಪದಲ್ಲಿ ಕೊಡುತ್ತದೆ.

ಸೋಮನಾಥ ದೇವಸ್ಥಾನದ ಪುನರ್ರಚನೆ

ಸೌರಾಷ್ಟ್ರದಲ್ಲಿರುವ ಸೋಮನಾಥ ದೇವಾಲಯವನ್ನು ಹನ್ನೊಂದನೇ ಶತಮಾನದಲ್ಲಿದ್ದಂತೆಯೇ ಪುನಃ ರಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿ, ಅದರ ಕೆಲಸವು ಸದ್ಯದಲ್ಲೇ ಪ್ರಾರಂಭವಾಗಲಿದೆ. ಹಿಂದೆ ಆ ದೇವಸ್ಥಾನವನ್ನು ಕಟ್ಟಿದ ಶಿಲ್ಪಿಗಳ ವಂಶದವರೇ ಈಗ ಅದನ್ನು ನಿರ್ಮಿಸಲಿರುವರು. ಈ ಕೆಲಸ ಪೂರೈಸುವುದಕ್ಕೆ ೪-೫ ವರ್ಷಗಳು ಬೇಕಾಗುವುದೆಂದು ಹೇಳಲಾಗಿದೆ.

ಕೌನ್ಸಿಲ್ ಆಫ್ ಸ್ಟೇಟ್ ಅಧಿವೇಶನ

ದೆಹಲಿಯಲ್ಲಿ ನಿನ್ನೆಯದಿನ ಕೌನ್ಸಿಲ್ ಆಫ್ ಸ್ಟೇಟ್ ಅಧಿವೇಶನವು ಪ್ರಾರಂಭವಾಯಿತು.

-ಮೈಸೂರು ಪೇಟೆಧಾರಣೆ-

ತಾರೀಖು ೨೩—೧೧—೧೯೫೩

ಪಲ್ಲ	ರೂ. ಅ	ರೂ. ಅ
ಕಡಲೇಕಾಯಿ	೧೩—	೨೧—೮
ಎಳ್ಳು	೬೫—	೬೭—೬
ಹರಳು	೩೫—	೩೫—೧೨
ಹುಚ್ಚೆಳ್ಳು	೪೭—೨	—
ಹುರಳಿ	೩೭—೨	೩೮—೬
ಹೆಸರು	೨೯—೧೪	೩೯—೧೨
ಅಲಸಂದೆ	೩೫—	೫೫—೧೦
ಹುಣಸೇಹಣ್ಣು	೯—೮	೧೦—೫
ಮೆಣಸಿನಕಾಯಿ	೧೨—	೨೯—೧೦
ಸೀಗೇಕಾಯಿ	೬—೧	—
ತೆಂಗಿನಕಾಯಿ	೧೪೬—	೨೫೯

ಉಪವಾಸ ಕಾನೂನುರೀತ್ಯಾ ಅಪರಾಧವಾಗಬೇಕು

ಅದು ಆತ್ಮಹತ್ಯಕ್ಕೆ ಸಮಾನವಾದುದು

ಡಾ॥ ರಾಮಸ್ವಾಮಿಮೊದಲಿಯಾರ್‌ರವರ ಹೇಳಿಕೆ

ದೇಶದಲ್ಲಿ ಇತ್ತೀಚೆಗೆ ಭಾಷಾವಾರು ಪ್ರಾಂತ್ಯ ವಿಂಗಡನೆಯ ಹುಚ್ಚು ಹೆಚ್ಚುತ್ತಿದೆ. ಇದಕ್ಕಾಗಿ ಉಪವಾಸ ಮುಷ್ಕರದ ಆಯುಧವನ್ನು ಉಪಯೋಗಿಸಲಾಗುತ್ತಿದೆ. ಈಗಾಗಲೇ ಆಂಧ್ರ ಪ್ರಾಂತ್ಯ ರಚನೆಯನ್ನು ಮಾಡಿದುದೇ ಒಂದು ದೊಡ್ಡ ತಪ್ಪು. ಈ ರಚನೆಯಿಂದ ಅಲ್ಲಿಯ ಜನರಿಗೆ ಸುಖವೇನೂ ಇಲ್ಲ. ಈ ರೀತಿಯಾದ ಉಪವಾಸ ಮುಂತಾದ ಬೆದರಿಕೆಗಳಿಗೆ ನಮ್ಮ ಮಂತ್ರಿಗಳು ಮತ್ತು ಸರ್ಕಾರವು ಸೊಪ್ಪು ಹಾಕಬಾರದು. ಉಪವಾಸ ಸತ್ಯಾಗ್ರಹವನ್ನು ಮಾಡುವುದು ಆತ್ಮಹತ್ಯದಂತೆ ಪರಿಗಣಿಸಿ ಅದಕ್ಕೆ ಕಾನೂನು ರೀತ್ಯಾ ಶಿಕ್ಷೆಯನ್ನು ವಿಧಿಸಬೇಕು. ದೇಶದಲ್ಲಿದ್ದ ಸಣ್ಣ ಸಣ್ಣ ಚೂರುಗಳನ್ನೆಲ್ಲಾ ಈಗ ಸೇರಿಸಲಾಗಿದೆ. ಅದನ್ನು ರಾಜಕೀಯ ದೃಷ್ಟಿಯಿಂದ ಪುನಃ ಒಡೆಯುವುದು ಸರ್ವಥಾ ವಿಹಿತವಲ್ಲ ಎಂದು ಮೈಸೂರಿನ ಮಾಜಿ ದಿವಾನ್ ಮತ್ತು ತಿರುವಾಂಕೂರಿನ ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳಾದ ಡಾ॥ ಎ. ರಾಮಸ್ವಾಮಿ ಮೊದಲಿಯಾರ್‌ರವರು ಬೊಂಬಾಯಿನಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಇಂಗ್ಲೀಷ್ ಭಾಷೆಯ ವಿಷಯವಾಗಿ ಅವರು ಪ್ರಸ್ತಾಪಿಸುತ್ತಾ, ಈಗಿನ ಅಧುನಿಕ ಪ್ರಪಂಚದಲ್ಲಿ, ಇಂಗ್ಲೀಷ್ ಭಾಷೆಯನ್ನು ಕಲಿಯುವುದು ಅವಶ್ಯಗತ್ಯ. ಅವರ ಪ್ರಾದೇಶಿಕ ಭಾಷೆಗೆ ಧಕ್ಕೆ ತರದಂತೆ ಅದನ್ನು ಕಲಿಯಬೇಕೆಂದು ತಿಳಿಸಿದ್ದಾರೆ.

ವಿಶ್ವವಿದ್ಯಾನಿಲಯಗಳ ಶಿಕ್ಷಣದ ವಿಷಯವಾಗಿ ಅವರು ಪ್ರಸ್ತಾಪಿಸಿ, ಸರ್ಕಾರಿ ಉದ್ಯೋಗಗಳಿಗಾಗಿ ವಿಶ್ವವಿದ್ಯಾನಿಲಯಗಳಲ್ಲಿ ಪದವಿ ಪಡೆಯುವುದು ತಪ್ಪಬೇಕು. ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗುವವರ ಸಂಖ್ಯೆಯು ಅತ್ಯಧಿಕವಾಗುತ್ತಿದೆ. ಇದೂ ತಪ್ಪಬೇಕು. ವಿಶ್ವವಿದ್ಯಾನಿಲಯಗಳಲ್ಲಿ ಪ್ರವೇಶ ಮತ್ತು ಶಿಕ್ಷಣದಲ್ಲಿ ಮಿತಿ ಇರಬೇಕು ಎಂದು ಡಾ॥ ಮೊದಲಿಯಾರ್‌ರವರು ಹೇಳಿದ್ದಾರೆ.

ತೆರಿಗೆ ಮಂಡಲಿ ವರದಿ

ಮಾಜಿ ಆರ್ಥಿಕ ಸಚಿವ ಡಾಕ್ಟರ್ ಜಾನ್ ಮಥಾಯ್‌ರವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರವು ನೇಮಿಸಿದ್ದ ತೆರಿಗೆ ಮಂಡಲಿಯು ತನ್ನ ವರದಿಯನ್ನು ಮುಂದಿನ ಅಕ್ಟೋಬರ್ ಮಾಹೆಯಲ್ಲಿ ಒಪ್ಪಿಸಲಿದೆಯೆಂದು ಹೇಳಲಾಗಿದೆ.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಬೆಂಗಳೂರಿನಲ್ಲಿ ವಿಧಾನ ಸೌಧ

ಭಾರತದಲ್ಲೇ ಅತ್ಯಂತ ದೊಡ್ಡ ಭವನವೆಂದು ಹೇಳಲಾದ ಕಟ್ಟಡವನ್ನು ಬೆಂಗಳೂರಿನಲ್ಲಿ ೫೦ ಲಕ್ಷ ರೂ. ಗಳ ಖರ್ಚಿನಲ್ಲಿ ಶಾಸನಸಭೆಗಳಿಗಾಗಿ ಮೈಸೂರು ಸರ್ಕಾರವು ನಿರ್ಮಿಸುತ್ತಲಿದೆ.

ಹಳೇ ರೆಸಿಡೆನ್ಸಿಯ ೩೦ ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ೧೯೫೧ರಲ್ಲಿ ಪ್ರಾರಂಭಿಸಲ್ಪಟ್ಟ ಈ ಭವನದ ಕೆಲಸವು ೧೯೫೫ಕ್ಕೆ ಪೂರೈಸುವುದು. ಅದಕ್ಕೆ ೧೩೦ ಅಡಿ ಎತ್ತರದ ಒಂದು ಗೋಪುರ ಹಾಕಲಾಗುವುದು. ಭವನವು ೭೧೦ಅಡಿ ಉದ್ದ, ೩೫೦ ಅಡಿ ಅಗಲವಿರುವುದು. ೨೦೦ ಮಂದಿ ಸದಸ್ಯರು ಕುಳಿತುಕೊಳ್ಳಲು ಅವಕಾಶವಿರುವ ೧೩೫ ಅಡಿ ಉದ್ದ ಮತ್ತು ೧೨೫ ಅಡಿ ಅಗಲವಾದ ಒಂದು ದೊಡ್ಡ ಸಭಾಂಗಣ ಇರುವುದು.

೫ ಕೋಟಿ ರೂಗಳ ರೈಲ್ವೆ ಗಾಡಿಗಳ ಕಾರ್ಖಾನೆ

ಮದ್ರಾಸಿನ ಪೆರಂಬೂರು ರೈಲ್ವೆಗಾಡಿಗಳ ತಯಾರಿಕಾ ಕಾರ್ಖಾನೆಗೆ ಬೇಕಾಗಿರುವ ೨ ಕೋಟಿ ರೂ.ಗಳ ಯಂತ್ರ ಸಲಕರಣೆಗಳನ್ನು ವಿದೇಶೀಗಳಿಂದ ತರಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ೧೯೫೬-೫೭ ರ ಹೊತ್ತಿಗೆ ಕಾರ್ಖಾನೆಯಲ್ಲಿ ಕೆಲಸ ಪ್ರಾರಂಭವಾಗುವುದು. ವರ್ಷಕ್ಕೆ ೩೫೦ ಗಾಡಿಗಳನ್ನು ತಯಾರಿಸಲಾಗುವುದು. ಕಾರ್ಖಾನೆ ರಚಿಸಲು ಒಟ್ಟು ೫ ಕೋಟಿ ರೂಗಳು ಖರ್ಚಾಗುವುದು ಈ ಕಾರ್ಖಾನೆಯು ಇಡೀ ಏಷ್ಯಾದಲ್ಲೇ ದೊಡ್ಡದಾಗಿದ್ದು, ಪ್ರಪಂಚದಲ್ಲಿ ಎರಡನೇ ಸ್ಥಾನವನ್ನು ಪಡೆಯುವುದು.

ರಾಜಕೀಯದಿಂದ ನಿವೃತ್ತಿಯೇ ?

ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತಲಿರುವ ಪ್ರಧಾನಿ ಡಾ॥ ಮಲಾನರು ರಾಜಕೀಯದಿಂದ ನಿವೃತ್ತರಾಗುವರೆಂದು ಹೇಳಲಾಗುತ್ತಿದೆ.

ಆನೆಗಳನ್ನು ಉಳಿಸಲು ನೂತನ ವಿಧಾನ

ಸಿಂಹಳದಲ್ಲಿ ಇನ್ನು ೫೦ ವರ್ಷಗಳಲ್ಲಿ ಆನೆಗಳೇ ಇಲ್ಲದಂತಾಗುವುದೆಂದು ಪ್ರವೀಣರು ಅಭಿಪ್ರಾಯ ಪಟ್ಟಿದ್ದಾರೆ. ಇದನ್ನು ತಪ್ಪಿಸಲು ಕೃತಕ ಗರ್ಭೋತ್ಪತ್ತಿ ವಿಧಾನವನ್ನು ಕೈಗೊಂಡು,ಆನೆಗಳನ್ನು ಉಳಿಸಲು ಯೋಜನೆ ಮಾಡಲಾಗುತ್ತಿದೆ.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೭೮

೨೫-೧೧-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಅಂಚೆ ಇಲಾಖಾ ಸೌಹಾರ್ದ್ಯ ವಾರ

ಮುಂದಿನ ತಿಂಗಳು ೨೧ನೇ ತಾರೀಖಿನಿಂದ ಭಾರತಾದ್ಯಂತ ಅಂಚೆ ಇಲಾಖಾ ಸೌಹಾರ್ದ ವಾರವನ್ನು ಆಚರಿಸಲು ನಿರ್ಧರಿಸಿದೆ. ಅಂಚೆ ಇಲಾಖೆಯವರಿಗೂ ಮತ್ತು ಸಾರ್ವಜನಿಕರಿಗೂ ನಿಕಟ ಸಂಬಂಧವನ್ನು ಉಂಟುಮಾಡುವುದೇ ಈ ವ್ಯವಸ್ಥೆಯ ಮುಖ್ಯೋದ್ದೇಶವಾಗಿರುತ್ತದೆ

ಈ ವಾರದಲ್ಲಿ ಸಾರ್ವಜನಿಕರು ಅಂಚೆ, ತಂತಿ ಕಛೇರಿಗಳು, ಟೆಲಿಫೋನ್ ಕೇಂದ್ರಗಳು ಮುಂತಾದುವಕ್ಕೆ ಭೇಟಿಯಿತ್ತು ಅಲ್ಲಿಯ ಕೆಲಸಗಳನ್ನು ಖುದ್ದಾಗಿ ನೋಡಲವಕಾಶ ಕಲ್ಪಿಸಲಾಗುತ್ತದೆ.

ಕಾಶ್ಮೀರ ಕೇಂದ್ರ ಕಛೇರಿಯ ಮೇಲೆ ಭಾರತ ಧ್ವಜ

ಶ್ರೀನಗರದಲ್ಲಿ ಕಾಶ್ಮೀರ ಸರ್ಕಾರದ ಪ್ರಧಾನ ಕಛೇರಿಯ ಮೇಲೆ ಅಲ್ಲಿಯ ಧ್ವಜದ ಜೊತೆಯಲ್ಲಿ ಭಾರತ ಧ್ವಜವನ್ನು ಹಾಕಲಾರಂಭಿಸಲಾಗಿದೆಯೆಂದು ತಿಳಿಯಬರುತ್ತದೆ. ಹಿಂದೆ ಆದ ದೆಹಲಿ ಒಪ್ಪಂದವನ್ನು ಈಗ ಕಾರ್ಯರೂಪಕ್ಕೆ ತರಲಾಗಿದೆ.

ಆಂಧ್ರಶಾಸನ ಸಭೆಯ ಉಪಾಧ್ಯಕ್ಷರು

ಆಂಧ್ರ ಶಾಸನಸಭೆಯ ಉಪಾಧ್ಯಕ್ಷರ ಸ್ಥಾನದ ಚುನಾವಣೆಯು ನಿನ್ನೆಯದಿನ ನಡೆದು ಪ್ರಜಾಸೋಷಲಿಸ್ಟ್ ಪಕ್ಷದ ಶ್ರೀ ಸೂರ್ಯಚಂದ್ರರಾವ್‌ರವರು ಚುನಾಯಿತರಾದರು. ಅವರಿಗೆ ೭೬ ಮತಗಳು ಅವರ ಪ್ರತಿಸ್ಪರ್ಧಿ ಕಾಂಗ್ರೆಸ್ಸಿನ ಶ್ರೀ ನಾಗಭೂಷಣಂರವರಿಗೆ ೫೯ ಮತಗಳು ಬಂದುವು.

ಈಜಿಪ್ಟಿನಲ್ಲಿ ಬಂಡವಾಳ ಹಾಕಲು ಆಗಾಖಾನರು

ಈಜಿಪ್ಟಿನ ಪ್ರಧಾನಿ ನಗೀಬರ ಸರ್ಕಾರದ ಸೌಹಾರ್ದ ಸಂಕೇತಕ್ಕಾಗಿ ಆಗಾಖಾನರು ಅಲ್ಲಿ ೧೪ ಕೋಟಿ ರೂ.ಗಳ ಬಂಡವಾಳ ಹಾಕುವುದಾಗಿ ಸರ್ಕಾರಕ್ಕೆ ತಿಳಿಸಿದ್ದಾರೆಂದೂ, ಇದು ಹಿಂದೆ ೧೯೪೭ ರಲ್ಲಿ ಆಗಾಖಾನರು ಕೈರೋವಿನಲ್ಲಿ ಕೊಂಡ ಭೂಮಿ ಆಸ್ತಿಗಳ ಬಗ್ಗೆ ನಡೆಯುತ್ತಿದ್ದ ವ್ಯವಹಾರವು ಸೌಹಾರ್ದಯುತವಾಗಿ ಮುಕ್ತಾಯವಾದುದಕ್ಕೆಂದೂ ಹೇಳಲಾಗಿದೆ.

ಮೆಷಿನ್ ಟೂಲ್ ಕಾರ್ಖಾನೆ

ಬೆಂಗಳೂರಿನಲ್ಲಿ ಸ್ಥಾಪಿಸಲಾಗಿರುವ ಮೆಷಿನ್ ಟೂಲ್ ಕಾರ್ಖಾನೆಯು ಮುಂದಿನ ಆಗಸ್ಟ್ ತಿಂಗಳಿನ ಹೊತ್ತಿಗೆ ಕೆಲಸ ಪ್ರಾರಂಭಿಸುವುದೆಂದೂ, ಪ್ರಾರಂಭದಲ್ಲಿ ವರ್ಷಕ್ಕೆ ೪೦೦ ವಸ್ತುಗಳನ್ನು ತಯಾರಿಸಲಾಗುವುದೆಂದೂ ತಿಳಿದುಬಂದಿದೆ.

ವಜ್ರ ಪತ್ತೆ ಮಾಡಿದ ಬಾಲಕಿಗೆ ಬಹುಮಾನ

ಅನಂತಪುರದ ಜಿಲ್ಲೆಯ ಗೂಟಿ ತಾಲ್ಲೂಕಿನ ವಜ್ರಾಕರುವಿನ ಬಾಲಕಿಯೊಬ್ಬಳು ತನಗೆ ಸಿಕ್ಕಿದ ವಜ್ರವೊಂದನ್ನು ಅದು ವಿಪರೀತ ಬೆಲೆ ಬಾಳುವುದೆಂದು ತಿಳಿಯದೆ ೩ ರೂ.ಗೆ ಮಾರಿದಳು. ಈ ವಿಷಯ ಅಲ್ಲಿನ ಜಿಲ್ಲಾ ಕಲೆಕ್ಟರಿಗೆ ತಿಳಿದ ಕೂಡಲೇ ಆ ವಜ್ರದ ಬೆಲೆಯನ್ನು ವರ್ತಕರಿಂದ ೨೦ ಸಾವಿರ ರೂ.ವೆಂದು ನಿಗದಿ ಮಾಡಿಸಿ, ಆ ಬಾಲಕಿಗೆ ಈಗ ೧೬೦೦ ರೂ.ಗಳ ಬಹುಮಾನವನ್ನು ಕೊಟ್ಟಿದ್ದಾರೆ. ವಜ್ರಾಕರುವಿನ ಪ್ರದೇಶದಲ್ಲಿ ಮೊದಲಿನಿಂದಲೂ ವಜ್ರಗಳು ಸಿಕ್ಕುತ್ತಿವೆ.

ಪಾಕೀಸ್ತಾನಕ್ಕೆ ಸೌಹಾರ್ದ ನಿಯೋಗ

ಅಖಿಲ ಭಾರತ ಸ್ಥಳೀಯ ಸಂಸ್ಥೆಗಳ ಫೆಡರೇಷನ್ನಿನ ಸೌಹಾರ್ದ ನಿಯೋಗವೊಂದು ಪಾಕೀಸ್ತಾನದಲ್ಲಿ ೧೫ ದಿನಗಳು ಪ್ರವಾಸ ಮಾಡಲಿದೆ. ಅದರಲ್ಲಿ ಫೆಡರೇಷನ್ನಿನ ಅಧ್ಯಕ್ಷ ಶ್ರೀ ಆರ್. ಕೆ. ಸಿಂಘ್ವಿ, ಕಾರ್ಯದರ್ಶಿ ಶ್ರೀ ನರಸಿಂಹರಾವ್, ಮತ್ತು ಇತರ ಮೂರು ಸದಸ್ಯರಿರುವರು. ನಿಯೋಗದವರು ಬೊಂಬಾಯಿನಿಂದ ಈದಿನ ಕರಾಚಿಗೆ ಪ್ರಯಾಣ ಬೆಳೆಸುವರು.

ಬೆಂಗಳೂರಿಗೆ ಅಮೇರಿಕದ ಉಪಾಧ್ಯಕ್ಷರು

ಅಮೆರಿಕದ ಉಪಾಧ್ಯಕ್ಷ ಮಿ॥ ರಿಚರ್ಡ್ ನಿಕ್ಸನ್‌ರವರು ಬೆಂಗಳೂರಿಗೆ ಮುಂದಿನ ತಿಂಗಳು ೩ನೇ ತಾರೀಖು ಭೇಟಿ ಕೊಡುವರು. ಮಾರನೇದಿನ ಮದ್ರಾಸಿನ ಮೂಲಕ ದೆಹಲಿಗೆ ಪ್ರಯಾಣ ಬೆಳೆಸುವರು.

ಬರ್ಮಾಕ್ಕೆ ಭಾರತದ ನಿಯೋಗ

ಮೈಸೂರು ಮಾಜಿ ದಿವಾನರಾದ ಶ್ರೀ ಮಿರ್ಜಾ ಇಸ್ಮಾಯಿಲ್‌ರ ನಾಯಕತ್ವದಲ್ಲಿ ಕೇಂದ್ರಸರ್ಕಾರದ ಒಂದು ನಿಯೋಗವು ಮುಂದಿನ ತಿಂಗಳು ೧೫ ನೇ ತಾರೀಖು ಬರ್ಮಾಕ್ಕೆ ಹೋಗುವುದು. ಅಲ್ಲಿರುವ ಭಾರತೀಯರ ಭೂಮಿಗಳನ್ನು ಸರ್ಕಾರವು ವಶಪಡಿಸಿಕೊಂಡಿರುವ ವಿಚಾರದಲ್ಲಿ ಪರಿಹಾರ ಪಡೆಯಲು ನಿಯೋಗವು ಮಾತುಕತೆ ನಡೆಸುವುದು.

ಭೂದಾನ ಯಜ್ಞಕ್ಕೆ ದಾನ

ಮದ್ರಾಸ್ ಸಂಸ್ಥಾನ ತ್ರಿಚೂರಿಗೆ ಸೇರಿದ ಕುನ್ನುರಿಕುಲಂ ಎಂಬ ಊರಿನ ಕೋರ್ಮ ಎಂಬ ಹರಿಜನನೊಬ್ಬನು ತನಗೆ ಸೇರಿದ ೫೦ ಕುಂಟೆ ಭೂಮಿಯಲ್ಲವನ್ನೂ ಭೂದಾನ ಯಜ್ಞಕ್ಕೆ ದಾನಮಾಡಿದ್ದಾನೆ.

ಸಟ್ಟಾಜೂಜಿಗಾಗಿ ಜುಲ್ಮಾನೆ

ಮೈಸೂರು ೨೫

ರಾಜಧಾನಿಯ ಅನೇಸಾರೋಟ್ ಬೀದಿಯಲ್ಲಿ ನೊನ್ನೆ ಸಂಜೆ ಅಮೆರಿಕದ ಕಾರ್ಟೆ ಸಟ್ಟಾ ಬಗ್ಗೆ ಚೀಟಿ ಬರೆಯುತ್ತಿದ್ದಾರೆಂದು ಗಂಗಾಧರ ಮತ್ತು ಪುಟ್ಟಸ್ವಾಮಿಗಳ ಮೇಲೆ ದೇವರಾಜಾ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅವರಿಗೆ ತಲಾ ೫ ರೂ. ಜುಲ್ಮಾನೆಯನ್ನು ನಗರದ ನ್ಯಾಯಾಧೀಶರು ವಿಧಿಸಿದ್ದಾರೆ.

ವೇಶ್ಯೆಯರಿಗೆ ಜುಲ್ಮಾನೆ

ಮೊನ್ನೆರಾತ್ರಿ ಶಿವರಾಂಪೇಟೆ ಹೊಟೇಲಿನ ಹತ್ತಿರ ವ್ಯಭಿಚಾರಕ್ಕೆ ಪುಸಲಾಯಿಸುತ್ತಿದರೆಂದು ಮಹದೇವಮ್ಮ ಮತ್ತು ಕೆಂಪಮ್ಮ ಎಂಬುವರಿಗೆ ತಲಾ ೫ ರೂ. ಜುಲ್ಮಾನೆ ವಿಧಿಸಲಾಗಿದೆ.

ಕೃಷ್ಣರಾಜೇಂದ್ರ ಆಸ್ಪತ್ರೆ ಎದುರಿಗೆ ಒಂದು ಮನೆಯಲ್ಲಿ ವ್ಯಭಿಚಾರ ನಡೆಸುತ್ತಿದ್ದರೆಂದು ಲಕ್ಷ್ಮಿ,ಸಿದ್ದಿ ಎಂಬುವರಿಗೆ ತಲಾ ೫ ರೂ. ಶರ್ಮೈ ಎಂಬಾಕೆಗೆ ೨೦ ರೂ. ಜುಲ್ಮಾನೆ ವಿಧಿಸಲಾಗಿದೆ.

ಪ್ರಾಂತ್ಯ ವಿಂಗಡನಾ ಸಮಿತಿ

ಪ್ರಾಂತ್ಯ ಪುನರ್ವಿಂಗಡನೆ ಪ್ರಶ್ನೆಯನ್ನು ಪರಿಶೀಲಿಸಲು ಕೇಂದ್ರವು ನೇಮಿಸಬೇಕೆಂದಿರುವ ಹೈಪವರ್ ಕಮೀಷನ್ನಿನ ಅಧ್ಯಕ್ಷರಾಗಿ ಬೊಂಬಾಯಿನ ಹೈಕೋರ್ಟ್ ಮುಖ್ಯನ್ಯಾಯಾಧೀಶರಾದ ಶ್ರೀ ಚಾಗ್ಲಾರವರನ್ನು ನೇಮಿಸಬಹುದೆಂದು ಹೇಳಲಾಗುತ್ತಿದೆ ಈ ಸಮಿತಿಯನ್ನು ಈ ವರ್ಷದ ಅಂತ್ಯದೊಳಗೆ ರಚಿಸಲಾಗುತ್ತದೆ..

ಸಂಸ್ಕೃತ ರಾಷ್ಟ್ರಭಾಷೆಯಾಗಲಿ

ಇಂಗ್ಲೀಷಿನ ಪ್ರಾಮುಖ್ಯತೆಯನ್ನು ನಿವಾರಿಸಲು ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಮಾಡುವುದಕ್ಕಿಂತ ಸಂಸ್ಕೃತವನ್ನು ಮಾಡುವುದು ಉತ್ತಮವೆಂದು ಮದ್ರಾಸ್ ಗೌರ್ನರ್ ಶ್ರೀ ಶ್ರೀಪ್ರಕಾಶರವರು ಲಕ್ನೋದಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಶಿವಮೊಗ್ಗದಲ್ಲಿ ಸಕ್ಕರೆ ಕಾರ್ಖಾನೆ

ಶಿವಮೊಗ್ಗದಲ್ಲಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಲು ರಹದಾರಿಯನ್ನು ಕೊಡುವುದಾಗಿ ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ರಾಜ್ಯಪರಿಷತ್ತಿನಲ್ಲಿ ತಿಳಿಸಿದ್ದಾರೆ.

ದೇಶದಲ್ಲಿ ಸಕ್ಕರೆ ಉತ್ಪನ್ನ ಹೆಚ್ಚಬೇಕಾಗುವುದರಿಂದ ಈ ಕಾರ್ಖಾನೆಗಳ ಸ್ಥಾಪನೆಗೆ ಸರ್ಕಾರ ಪ್ರೋತ್ಸಾಹ ಕೊಡುವುದೆಂದು ಸಚಿವರು ಹೇಳಿದ್ದಾರೆ.

ಮಾವನಿಂದ ಸೊಸೆಯ ಕೊಲೆಯೆ ?

ಮೈಸೂರು ೨೫

ಮೈಸೂರಿಗೆ ೮ ಮೈಲಿ ದೂರದಲ್ಲಿರುವ ಬೀರೀಹುಂಡಿ ಎಂಬ ಗ್ರಾಮದಲ್ಲಿ ಲಿಂಗಾಯ್ತ ಜಾತಿಗೆ ಸೇರಿದ ತಮ್ಮಯ್ಯ ಉರುಫ್ ಬಸವಯ್ಯ ಎಂಬುವವನು ೧೮ ವರ್ಷದ ತನ್ನ ಸೊಸೆ ಪುಟ್ಟಮ್ಮ ಎಂಬುವವಳನ್ನು ಮೆಣಸಿನಕಾಯನ್ನು ಕುಯ್ದು ತರಲು ಹೊಲಕ್ಕೆ ಕಳುಹಿಸಿ, ಅಲ್ಲಿಯೇ ಆಕೆಯನ್ನು ಕೊಲೆಮಾಡಿದನೆಂದು ಹೇಳಲಾಗಿದೆ.

ತಾಲ್ಲೂಕು ಪೊಲೀಸಿನವರು ಆಪಾದಿತನನ್ನು ದಸ್ತಗಿರಿಮಾಡಿ ಮುಂದಿನ ತನಿಖೆ ನಡೆಸುತ್ತಲಿದ್ದಾರೆ

ರೈಲ್ವೆ ನೌಕರರಿಗೆ ಹೆಚ್ಚಿನ ಸೌಕರ್ಯಗಳು

ರೈಲ್ವೆ ಇಲಾಖೆಯಲ್ಲಿ ಉನ್ನತ ಅಧಿಕಾರಿಗಳ ನೇಮಕದ ವಿಷಯದಲ್ಲಿ ಕೇಂದ್ರ ಸರ್ಕಾರದ ನೀತಿಯನ್ನು ಸದ್ಯದಲ್ಲಿಯೇ ನಿರ್ಧರಿಸಲಾಗುವುದೆಂದು ರೈಲ್ವೆ ಸಚಿವ ಶ್ರೀ ಲಾಲಬಹದ್ದೂರ್ ಶಾಸ್ತ್ರಿಯವರು ಬೊಂಬಾಯಿನಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಕೆಲವು ಹುದ್ದೆಗಳನ್ನು ಬಿಟ್ಟು ಮಿಕ್ಕವುಗಳನ್ನು ಕೆಲಸದಲ್ಲಿರುವವರಿಗೇ ಕೊಡಬೇಕೆಂಬ ವಿಷಯವು ತಮಗೆ ತಿಳಿದಿರುವುದಾಗಿಯೂ ಅದನ್ನು ಸರ್ಕಾರವು ಪರಿಶೀಲಿಸುವುದೆಂದೂ ಸಚಿವರು ಹೇಳಿದ್ದಾರೆ.

ರೈಲ್ವೆಯಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವಾಗ ಇಲಾಖೆಯಲ್ಲಿ ಕೆಲಸ ಮಾಡುವವರ ಮಕ್ಕಳಿಗೆ ಪ್ರಾಶಸ್ತ್ಯ ಕೊಡಬೇಕೆಂಬ ನೌಕರರ ಕೋರಿಕೆಯ ವಿಷಯವಾಗಿ ಸಚಿವರು ಪ್ರಸ್ತಾಪಿಸುತ್ತಾ ಸರ್ಕಾರಿ ನೌಕರಿಯಲ್ಲಿ ಯಾರಿಗೂ ಯಾವ ರೀತಿಯಾದ ಪ್ರಾಶಸ್ತ್ಯವನ್ನು ಕೊಡುವುದು ರಾಜ್ಯಾಂಗಕ್ಕೆ ವಿರೋಧವೆಂದೂ, ಹಾಗೆ ವಿರೋಧವಾಗದ ರೀತಿಯಲ್ಲಿ ನೌಕರರಿಗೆ ಎಲ್ಲಾ ನೆರವು ನೀಡುವುದಾಗಿ ಸಚಿವರು ಹೇಳಿದ್ದಾರೆ.

ವಿಶ್ವದ ಜನರಲ್ಲಿ ಬಹು ಮಂದಿಗೆ ಆಹಾರವಿಲ್ಲ

ಪ್ರಪಂಚದಲ್ಲಿ ಶೇಕಡ ೬೦ರಷ್ಟು ಜನರು ಆಹಾರವಿಲ್ಲದೆ ಉಪವಾಸ ಬೀಳುತ್ತಿದ್ದಾರೆಂದೂ, ರಫ್ತು ಮಾಡುವ ರಾಷ್ಟ್ರಗಳಲ್ಲಿ ಬೆಳೆದ ಆಹಾರವೆಲ್ಲವೂ ಅಲ್ಲೇ ಸಂಗ್ರಹವಾಗುತ್ತಲೇ ಇದ್ದು, ಅಭಾವದಿಂದ ಕೂಡಿದ ದೇಶಗಳು ಹಾಗೆಯೇ ಇದೆಯೆಂದೂ ರೋಮಿನಲ್ಲಿ ಪ್ರಾರಂಭವಾದ ಎಫ್.ಎ.ಓ. ಸಮ್ಮೇಳನದಲ್ಲಿ ಬ್ರಜಿಲ್ ಪ್ರತಿನಿಧಿಗಳು ತಿಳಿಸಿದ್ದಾರೆ.

ಹೆಚ್ಚಾಗಿ ಆಹಾರ ತಿನ್ನುವವರ ಮತ್ತು ಆಹಾರ ಸಿಕ್ಕದೇ ಇರುವವರ ನಡುವೆ ಈಗ ಅಂತರ ಹೆಚ್ಚಾಗಿದೆಯೆಂದೂ ಅದರ ಡೈರೆಕ್ಟರು ಹೇಳಿದ್ದಾರೆ.

ಚಕ್ರಬಂಧ ಸ್ಪರ್ಧೆಗಳಿಗೆ ಬಹಿಷ್ಕಾರವೇ ?

ಇದಕ್ಕಾಗಿ ಶಾಸನ ರಚಿಸಲು ಕೇಂದ್ರದ ಪರಿಶೀಲನೆ

ಭಾರತಾದ್ಯಂತ 'ಕ್ರಾಸ್‌ವರ್ಡ್' ಮತ್ತು ಇತರ ಸ್ಪರ್ಧೆಗಳ ಮೇಲೆ ಬಹಿಷ್ಕಾರವನ್ನು ಹಾಕುವ ವಿಷಯವನ್ನು ಕೇಂದ್ರಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ಪಾರ್ಲಿಮೆಂಟಿನಲ್ಲಿ ಗೃಹಶಾಖೆಯ ಉಪಸಚಿವ ಶ್ರೀ ದಾತಾರ್‌ರವರು ತಿಳಿಸಿದ್ದಾರೆ.

ಮೂಲ ಶಿಕ್ಷಣ ಕೇಂದ್ರ

ಮೈಸೂರು ೨೫

ಯುನೆಸ್ಕೊ ವಿಶ್ವ ಸಂಸ್ಥೆಯು ಅಂತರರಾಷ್ಟ್ರೀಯ ಮೂಲ ಶಿಕ್ಷಣ ಕೇಂದ್ರವೊಂದನ್ನು ಈ ಡಿಸಂಬರ್ ಮೊದಲನೆ ವಾರದಲ್ಲಿ ಮೈಸೂರು ನಗರಕ್ಕೆ ೯ ಮೈಲಿ ದೂರದಲ್ಲಿರುವ ರಾಜ್ಯನಿಲಯದಲ್ಲಿ ಪ್ರಾರಂಭಿಸುವುದು. ಮೈಸೂರಿನಲ್ಲಿ ವಯಸ್ಕರ ಶಿಕ್ಷಣವು ವ್ಯವಸ್ಥಿತವಾಗಿ ನಡೆಯುತ್ತಿರುವುದನ್ನು ಮೆಚ್ಚಿ ಯುನೆಸ್ಕೊ ಈ ಕೇಂದ್ರವನ್ನು ಇಲ್ಲಿ ಸ್ಥಾಪಿಸಲಿದೆ. ಈ ಬಗೆಯ ಶಿಬಿರ ಇದೇ ಮೊದಲನೆಯದು. ಈ ಶಿಬಿರದಲ್ಲಿ ಯೂರೋಪಿನ ಮತ್ತು ಭಾರತದ ಸುಮಾರು ೧೫ನುಂದಿ ಯುವಕರು ಶಿಕ್ಷಣ ಪಡೆಯುವರು. ಈ ಶಿಬಿರದ ಯಶಸ್ವಿಗೆ ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಪೂರ್ಣ ನೆರವು ನೀಡುವುದು ಎಂದು ತಿಳಿಸಲಾಗಿದೆ.

ಅಕ್ಕಿ ರೇಷನ್ ಪೂರ್ಣವಾಗಿ ತೆಗೆಯುವುದಿಲ್ಲ

ದೇಶದಲ್ಲಿ ಬತ್ತದ ಬೆಳೆಯು ಈ ಸಾಲಿನಲ್ಲಿ ಕಳೆದ ಎಲ್ಲಾ ಸಾಲುಗಳಿಗಿಂತ ಉತ್ತಮವಾಗಿದೆ. ಆದಾಗ್ಯೂ ಅಕ್ಕಿ ರೇಷನನ್ನು ಸಂಪೂರ್ಣವಾಗಿ ರದ್ದುಗೊಳಿಸಲಾಗುವುದಿಲ್ಲ. ಸ್ವಲ್ಪ ಹತೋಟಿ ಮುಂದುವರಿಯುತ್ತದೆ ಎಂದು ರಾಜ್ಯ ಪರಿಷತ್ತಿನಲ್ಲಿ ಆಹಾರ ಉಪ ಸಚಿವ ಶ್ರೀ ಎಂ.ವಿ. ಕೃಷ್ಣಪ್ಪನವರು ಹೇಳಿದ್ದಾರೆ.

ಅಮರಾವತಿ ನೀರಾವರಿ ಯೋಜನೆ

ಮದ್ರಾಸ್ ಸರ್ಕಾರವು ಕೊಯಮುತ್ತೂರು ಜಿಲ್ಲೆಯಲ್ಲಿ ಕೈಗೊಂಡಿರುವ ಅಮರಾವತಿ ನೀರಾವರಿ ಯೋಜನೆಗಾಗಿ ೨ ಕೋಟಿ ೭೨ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಲು ಮಂಜೂರ್ಮಾಡಿದೆ. ಇದರಿಂದ ನೀರಿನ ಸೌಕರ್ಯ ಪಡೆಯುವವರ ಮೇಲೆ ವಿಶೇಷ ತೆರಿಗೆಯನ್ನು ವಿಧಿಸಲಾಗುತ್ತದೆ.

ಮಾಜಿ ರಾಜರುಗಳ ಸಮ್ಮೇಳನ

ರಾಜಧನವನ್ನು ಕಡಮೆ ಮಾಡಿಕೊಳ್ಳಬೇಕೆಂದು ಪ್ರಧಾನಿ ನೆಹರೂರವರ ಮನವಿಯನ್ನು ಪರಿಶೀಲಿಸಲು ಮಾಜಿ ರಾಜರುಗಳ ಸಮ್ಮೇಳನವೊಂದು ಬೊಂಬಾಯಿನಲ್ಲಿ ಮುಂದಿನ ತಿಂಗಳ ಆದಿಭಾಗದಲ್ಲಿ ನಡೆಯುವುದೆಂದು ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೪—೧೧—೧೯೫೩

	ರೂ.	ಆ	ರೂ.	ಆ
ಪಲ್ಲ				
ಕಡಲೇಕಾಯಿ	೧೫—೮		೨೧	೧೦
ಎಳ್ಳು	೬೫—		—	
ಹುರುಳಿ	೩೪—೪		೩೬—೨	
ಹುಚ್ಚೆಳ್ಳು	—		—	
ಹುರಳಿ	೩೪—೨		೩೬—೨	
ಹೆಸರು	೨೯—೧೦		೩೭—೧೨	
ಅಲಸಂದೆ	೩೦—		೫೩—೬	
ಹುಣಸೇಹಣ್ಣು	೮—೧೨		೧೦—೮	
ಮೆಣಸಿನಕಾಯಿ	೧೩—		೩೧—	
ಸೀಗೇಕಾಯಿ	—		—	
ತೆಂಗಿನಕಾಯಿ	೧೪೬—		೨೬೭	

ಆಂಧ್ರದ ಹೊಸ ಆಹಾರ ನೀತಿ

ಕೇಂದ್ರದ ಒಪ್ಪಿಗೆಗೆ ಕಳುಹಿಸಲಾಗಿದೆ

ಶಾಸನಸಭೆಯಲ್ಲಿ ಗೌರ್ನರ್ ಹೇಳಿಕೆ

ನೂತನ ಆಂಧ್ರ ರಾಜ್ಯದಲ್ಲಿ ಹೊಸ ಆಹಾರ ನೀತಿಯನ್ನು ರೂಪಿಸಲಾಗಿದೆ. ಅದನ್ನು ಕೇಂದ್ರದ ಒಪ್ಪಿಗೆಗೆ ಕಳುಹಿಸಲಾಗಿದೆ. ಈ ಪ್ರಾಂತ್ಯದಲ್ಲಿ ಹೆಚ್ಚುವರಿ ಧಾನ್ಯಗಳನ್ನು ಕೊರತೆ ಪ್ರದೇಶಗಳಿಗೆ ಕಳುಹಿಸಲಾಗುತ್ತದೆ-ಎಂದು ಅಲ್ಲಿಯ ಗೌರ್ನರ್ ಶ್ರೀ ಚಂದೂಲಾಲ್ ತ್ರಿವೇದಿಯವರು ನಿನ್ನೆಯ ದಿನ ಅಲ್ಲಿಯ ಶಾಸನಸಭೆಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಆಂಧ್ರಪ್ರಾಂತ್ಯದಲ್ಲಿ ಈ ಬೇಸಿಗೆಯಾದೊಡನೆಯೇ ಒಂದು ಪ್ರತ್ಯೇಕ ಶ್ರೇಷ್ಠ ನ್ಯಾಯಾಲಯವನ್ನು ರಚಿಸುವುದಕ್ಕಾಗಿ ಸರ್ಕಾರವು ಶಾಸನಸಭೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಲಿದೆಯೆಂದೂ, ಗೌರ್ನರ್ ತಮ್ಮ ಭಾಷಣದಲ್ಲಿ ತಿಳಿಸಿದರು.

ನೂತನವಾಗಿ ರಚಿತವಾಗಿರುವ ಈ ಪ್ರಾಂತ್ಯದಲ್ಲಿ ಎಲ್ಲಾ ಪಕ್ಷದವರೂ ಪ್ರಗತಿ ಮಾರ್ಗದಲ್ಲಿ ಕೆಲಸ ಮಾಡಬೇಕೆಂದು ಅವರು ಕೋರಿದರು.

ಪಂಚವಾರ್ಷಿಕ ಯೋಜನೆ ವಿಷಯವಾಗಿ ಅವರು ಪ್ರಸ್ತಾಪಿಸಿ ಇದರ ಪುನರ್ಪರಿಶೀಲನೆಗಾಗಿ ಕೇಂದ್ರವನ್ನು ಕೋರಲಾಗಿದೆ ಎಂದೂ ಅವರು ತಿಳಿಸಿದರು.

ತುಂಗಭದ್ರಾ ಯೋಜನೆ

ತುಂಗಭದ್ರಾ ಯೋಜನೆಯ ಕಾರ್ಯವು ಇಲ್ಲಿಯವರೆಗೆ ಪೂರೈಸಿರುವುದರಿಂದ ಹೈದರಾಬಾದ್ ಪ್ರಾಂತ್ಯದಲ್ಲಿ ೪೦೦೦ ಎಕರೆ ಜಮೀನಿಗೆ ನೀರನ್ನು ಒದಗಿಸಲಾಗಿದೆ. ಈ ವರ್ಷದಾಂತ್ಯದೊಳಗೆ ಇನ್ನೂ ೨೦೦೦ ಎಕರೆಗಳಿಗೆ ನೀರನ್ನು ಒದಗಿಸಲಾಗುವುದೆಂದು ತಿಳಿಯಬರುತ್ತದೆ.

ಅಂಚೆ ಸ್ಟಾಂಪುಗಳ ಶತಮಾನೋತ್ಸವ

ಮುಂದಿನ ವರ್ಷ ನವದೆಹಲಿಯಲ್ಲಿ ಅಂಚೆಸ್ಟಾಂಪುಗಳ ಶತಮಾನೋತ್ಸವವನ್ನು ನಡೆಸಲಾಗುತ್ತದೆ. ಈ ಸಂಬಂಧದಲ್ಲಿ ಭಾರತದ ಅಂಚೆ ಸ್ಟಾಂಪುಗಳ ಪ್ರದರ್ಶನವನ್ನು ಏರ್ಪಡಿಸಲಾಗುತ್ತದೆ.

ಕಾಫಿಯ ಮೇಲೆ ಸುಂಕ

ರಫ್ತು ಮಾಡುವ ಕಾಫಿಯ ಮೇಲೆ ಸುಂಕವನ್ನು ವಿಧಿಸುವ ಭಾರತ ಸರ್ಕಾರದ ನೀತಿಗೆ ಪಾರ್ಲಿಮೆಂಟ್ ತನ್ನ ಅನುಮತಿಯನ್ನು ನೀಡಿದೆ.

ಈ ಸಂಬಂಧದಲ್ಲಿ ಕೈಗಾರಿಕಾ ಸಚಿವರು ಮಾತನಾಡುತ್ತಾ ಕಾಫಿಯ ಬೆಲೆಯನ್ನು ಇಳಿಸಲು ಸರ್ಕಾರವು ಪರಿಶೀಲಿಸುತ್ತಿರುವುದಾಗಿ ಹೇಳಿದ್ದಾರೆ.

ಕರ್ಣಾಟಕರಾಜ್ಯನಿರ್ಮಾಣ ಪರಿಷತ್ತಿನ ಅಧಿವೇಶನ

ಬಳ್ಳಾರಿ ಜಿಲ್ಲೆಯ ಹಂಪೆಯಲ್ಲಿ ಅಖಂಡ ಕರ್ಣಾಟಕ ರಾಜ್ಯ ನಿರ್ಮಾಣ ಪರಿಷತ್ತಿನ ದ್ವಿತೀಯ ಅಧಿವೇಶನವು ಮುಂದಿನ ತಿಂಗಳು ೩ನೇ ತಾರೀಖು ನಡೆಯುವುದು. ಪ್ರತಿನಿಧಿಗಳ ಶುಲ್ಕ ೫ ರೂ. ಕನ್ನಡ ಪ್ರಾಂತ್ಯಾಭಿಮಾನಿಗಳು ನಮ್ಮ ಪ್ರಾಂತ್ಯದ ಜೀವಾಳದ ಪ್ರಶ್ನೆಯನ್ನು ಬಿಡಿಸುವ ಈ ಸಂಧಿ ಕಾಲದಲ್ಲಿ ಸಮಸ್ತ ಕನ್ನಡ ನಾಡಿನ ಜನತೆಯಿಂದ ಸಲಹೆ ಸೂಚನೆಗಳನ್ನು ಪಡೆದು ಮುನ್ನಡೆಯಲಿಕ್ಕೆ ಪರಿಷತ್ತಿಗೆ ಆಗಮಿಸಿ ಮಾರ್ಗದರ್ಶಕರಾಗಬೇಕೆಂದು ಸ್ವಾಗತ ಸಮಿತಿಯವರು ಪ್ರಾರ್ಥಿಸಿರುತ್ತಾರೆ.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು !

ಬಹುಕಾಲ ಬಾಳಿಕೆಬರುವವು !

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು !!!

★ ★ ★ ★ ★

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಹಳಿಗಳು (FLATS) ದುಂಡು ಮತ್ತು ಚದುರ ಸಲಾಕಿಗಳು (ROUNDS & SQUARES) ಕೋನ ಕಂಬಿಗಳು (ANGLES) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (REINFORCING RODS) ಮತ್ತು ಬೀಲುಪಟ್ಟಿಗಳು (HOOPS)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವವು

ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರಖಾನೆ, ಭದ್ರಾವತಿ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋನ್ ೫೭೪ | ರಿಜಿಸ್ಟರ್ | ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ | ಸಂಪುಟ ೪ | ಸಂಚಿಕೆ ೭೯

೨೬-೧೧-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾಂಗ್ರೆಸ್ಸಿನಿಂದಲೇ ದೇಶಕ್ಕೆ ಸಂಪತ್ತು

ಪುರಸಭಾ ಚುನಾವಣಾ ಪ್ರಚಾರದಲ್ಲಿ ಕಾಂಗ್ರೆಸ್ ಅಧ್ಯಕ್ಷರ ಹೇಳಿಕೆ

ಮೈಸೂರು ೨೬

ಮುಂದಿನ ೭ ನೇ ತಾರೀಖು ನಡೆಯಲಿರುವ ಪುರಸಭಾ ಚುನಾವಣೆ ಸಂಬಂಧದಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರು ಚುನಾವಣಾ ಪ್ರಚಾರದ ಪ್ರಾರಂಭೋತ್ಸವ ಮಾಡಿದರು.

ಪ್ರಾರಂಭದಲ್ಲಿ ಶ್ರೀ ಟಿ ವೆಂಕಟರಮಣಯ್ಯನವರು ಸ್ವಾಗತ ಬಯಸಿದರು.

ಶ್ರೀ ವೀರಣ್ಣಗೌಡರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ ಸಂಸ್ಥೆಯು ದೇಶಕ್ಕಾಗಿ ತ್ಯಾಗಮಾಡಿ ಹೋರಾಟ ನಡೆಸಿ ಸ್ವಾತಂತ್ರ್ಯಗಳಿಸಿದಮೇಲೆ, ಎಷ್ಟೋ ಕಷ್ಟಪರಂಪರೆಗಳನ್ನು ಎದುರಿಸಿ ಆಡಳಿತವನ್ನು ನಿರ್ವಹಿಸುತ್ತಿರುವುದನ್ನು ದೀರ್ಘವಾಗಿ ವಿವರಿಸಿ,ದೇಶದಲ್ಲಿ ಜನರಿಗೆ ಸುಖಸಂಪತ್ತು ಉಂಟಾಗಬೇಕಾದರೆ ಕಾಂಗ್ರೆಸ್ ಹೊರತು ವ ತ್ತಾವ ಸಂಸ್ಥೆಯೂ ಇಲ್ಲನೆಂದೂ ಸ್ಪಷ್ಟವಾಗಿ ಹೇಳಿದರು. ದೇಶವು ಇನ್ನೂ ಪ್ರಗತಿದಾಯಕವಾಗಲೆಂದು ಪಂಚವಾರ್ಷಿಕ ಯೋಜನೆಯನ್ನು ಕೈಗೊಳ್ಳಲಾಗಿದೆ ಇಂತಹ ಸಮಯದಲ್ಲಿ ಜನರು ಕಾಂಗ್ರೆಸ್ ಸರ್ಕಾರವನ್ನು ಕೈಬಿಟ್ಟರೆ ದೇಶಕ್ಕೆ ಹಾನಿ ಉಂಟಾಗುವುದು. ಆದ್ದರಿಂದ ಮಹಾಜನರು ಕಾಂಗ್ರೆಸ್ಸನ್ನು ಬಲಪಡಿಸಿ, ಅದರಿಂದ ಹೆಚ್ಚು ಅನುಕೂಲ ಪಡೆಯಲು ಸಹಾಯಕರಾಗಬೇಕು. ಕಾಂಗ್ರೆಸ್ಸು ಇಷ್ಟು ಅಲ್ಪಕಾಲದಲ್ಲಿ ನಡೆಸಿರುವ ಕಾರ್ಯವು ಇನ್ನಾವ ದೇಶದಲ್ಲೂ ನಡೆದಿಲ್ಲ ಕಾಂಗ್ರೆಸ್ಸನ್ನು ವಿರೋಧಿಸುವ ಯಾವ ಪಕ್ಷಗಳಿಗೂ ತ್ಯಾಗ ಅಥವ ಆಡಳಿತ ಅನುಭವ ಇಲ್ಲ. ಆದ್ದರಿಂದ ಪುರಜನರು ಕಾಂಗ್ರೆಸ್ ಉಮೇದುವಾರರಿಗೇ ಬೆಂಬಲ ಕೊಡಬೇಕು ಮತ್ತು ಕಾಂಗ್ರೆಸ್ ವಿರೋಧಿಸಿರುವ ಉಮೇದುವಾರರೆಲ್ಲರೂ ವಾಪಸು ತೆಗೆದುಕೊಂಡು ಸಹಕರಿಸಬೇಕು -ಎಂದು ಅಧ್ಯಕ್ಷರು ಮನವಿ ಮಾಡಿದರು.

ಕಾಂಗ್ರೆಸ್ಸಿಗೆ ಸದಸ್ಯರಾಗಲು ಮನವಿ

ಮೈಸೂರು ಜಿಲ್ಲೆಯ ಎಲ್ಲಾ ತಾಲ್ಲೋಕು ಕಾಂಗ್ರೆಸ್ ಸಮಿತಿಗಳಿಗೂ ಸದಸ್ಯರನ್ನು ಕೂಡಿಸಲು ಪುಸ್ತಕಗಳನ್ನು ತಲುಪಿಸಿರುತ್ತೆ. ದಯೆಯಿಟ್ಟು ಕಾರ್ಯಕರ್ತರು ಸಮಿತಿಗಳಿಂದ ಪುಸ್ತಕಗಳನ್ನು ಪಡೆದು ಜಿಲ್ಲೆಯಲ್ಲಿ ಸದಸ್ಯರನ್ನು ಕೂಡಿಸುವ ಕೆಲಸವನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ಪ್ರಾರ್ಥನೆ.-ಎಂದು ಕಾರ್ಯದರ್ಶಿಯವರು ತಿಳಿಸಿರುತ್ತಾರೆ.

ಪ್ರಧಾನಿಯೊಡನೆ ಮೈಸೂರು ರಾಜಪ್ರಮುಖರ ಭೇಟಿ

ಮೈಸೂರಿನ ರಾಜಪ್ರಮುಖರು ನಿನ್ನೆಯದಿನ ದೆಹಲಿಯಲ್ಲಿ ಪ್ರಧಾನಿ ನೆಹರೂರವರನ್ನು ಭೇಟಿಮಾಡಿ ಮೈಸೂರು ರಾಜಕೀಯದ ಬಗ್ಗೆ ಮಾತುಕತೆ ನಡೆಸಿದರೆಂದು ಹೇಳಲಾಗಿದೆ.

ಮೈಸೂರಿನ ಇಂದಿನ ರಾಜಕೀಯ ವಿಷಯದಲ್ಲಿ ಪ್ರಧಾನಿ ನೆಹರೂ ಮತ್ತು ಕೇಂದ್ರ ಸಚಿವ ಸಂಪುಟದಲ್ಲಿ ತೀವ್ರ ಪರಿಶೀಲನೆಯಿದ್ದು, ಈ ವಿಷಯ ಚರ್ಚೆಗಾಗಿ ಬಂದೀತೆಂದು ರಾಜಪ್ರಮುಖರಿಗೆ ಒಂದ ಆಹ್ವಾನದಮೇಲೆ ಅವರು ದೆಹಲಿಗೆ ತೆರಳಿದ್ದು ಈ ಸಮಾಲೋಚನೆ ನಡೆಯಿತೆಂದು ಹೇಳಲಾಗಿದೆ.

ಕೊಲೆ ಮೊಕದ್ದಮೆಯಲ್ಲಿ ೧೧ ಜನರ ಖುಲಾಸೆ

ಮೈಸೂರು ೨೬

ಮೈಸೂರು ತಾಲ್ಲೂಕು ಜಯಪುರ ಹೋಬಳಿ ದಾರೀಪುರ ಗ್ರಾಮದ ಕರೀಗೌಡ ಮತ್ತು ಚಲುವೇಗೌಡ ಎಂಬುವರನ್ನು ೧೯೫೨ನೇ ಸೆಪ್ಟೆಂಬರ್ ೧೪ನೇ ತಾರೀಖು ಪಾರ್ಟಿವ್ಯಾಜ್ಯಕ್ಕಾಗಿ ಕೊಲೆ ಮಾಡಿದರೆಂದು ಗೋಪಾಲಪುರದ ಮತ್ತು ದಾರೀಪುರದ ಕೆಂಗೇಗೌಡ,ಲಿಂಗಯ್ಯ ಮುಂತಾದ ೧೧ ಮಂದಿಯನ್ನು ಸೆಷನ್ಸಿಗೆ ಗುರಿ ಮಾಡಿಲಾಗಿತ್ತು. ಜಿಲ್ಲಾ ನ್ಯಾಯಾಧೀಶರಾದ ಶ್ರೀ ಹೆಚ್. ಹೊಂಬೇಗೌಡರು ಅವರನ್ನು ತಪ್ಪಿತಸ್ಥರಲ್ಲವೆಂದು ನಿನ್ನೆ ಖುಲಾಸೆ ಮಾಡಿದರು.

ಬಾಯಾಸ್ ಅಧ್ಯಕ್ಷರ ಆಗಮನ

ದೆಹಲಿಯಲ್ಲಿ ಇತ್ತೀಚೆಗೆ ನಡೆದ ಅಂತರರಾಷ್ಟ್ರೀಯ ಬಾಯಾಸ್ ಸಮ್ಮೇಳನದ ಅಧ್ಯಕ್ಷರಾದ ಮಿ॥ ಸಿ.ಎಂ. ರಿವೋರವರು ರಾಜಧಾನಿಗೆ ಈ ದಿನ ಆಗಮಿಸಿದರು. ಅವರು ಸಂಜೆ ೫-೩೦ ಗಂಟೆಗೆ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುವರು.

ಶಾಲೆಗಳಲ್ಲಿ ಪಂಚವಾರ್ಷಿಕ ಯೋಜನೆ ಪರಿಚಯ

ಮೈಸೂರು ೨೬

ಮೈಸೂರು ಸಂಸ್ಥಾನದ ಎಲ್ಲಾ ಮಿಡ್ಲ್ ಮತ್ತು ಹೈಸ್ಕೂಲುಗಳಲ್ಲಿ ಪಂಚವಾರ್ಷಿಕ ಯೋಜನೆಯ ವಿಷಯದ ವಿವರಗಳನ್ನು ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡಬೇಕೆಂದು ಸರ್ಕಾರ ಆಜ್ಞೆ ಮಾಡಿದೆಯೆಂದು ತಿಳಿದುಬಂದಿದೆ.

ಬತ್ತ ಮಾರಲು ಸರ್ಟಿಫಿಕೇಟ್ ಅನವಶ್ಯಕ

ಮೈಸೂರು ೨೬

ಬತ್ತ ಬೆಳೆದವರು ತಮ್ಮ ಜಮೀನಿರುವ ಪ್ರದೇಶದ ರೆವಿನ್ಯೂ ಇನ್ಸ್‌ಪೆಕ್ಟರಿಂದ ಸರ್ಟಿಫಿಕೇಟ್ ತಂದರೆ ಮಾತ್ರ ಸರ್ಕಾರದವರು ಬತ್ತವನ್ನು ಕೊಳ್ಳುವರು ಎಂದು ಮೈಸೂರು ಜಿಲ್ಲಾಧಿಕಾರಿಗಳು ಕಳೆದ ೧೦ನೇ ತಾರೀಖಿನಲ್ಲಿ ಹೊರಡಿಸಿದ್ದ ಸೂಚನೆಯನ್ನು ಈಗ ವಾಪಸು ತೆಗೆದುಕೊಳ್ಳಲಾಗಿದೆಯೆಂದು ಜಿಲ್ಲಾಧಿಕಾರಿಗಳು ತಿಳಿಸಿರುತ್ತಾರೆ.

ಕಾಂಗ್ರೆಸ್ ಕಾರ್ಯಕರ್ತರ ಸಭೆ

ಮೈಸೂರು ೨೬

ನಾಳೆ ಸಂಜೆ ೭-೩೦ ಗಂಟೆಗೆ ನಗರದ ಕಾಂಗ್ರೆಸ್ ಕಛೇರಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆ ಏರ್ಪಡಿಸಲಾಗಿದೆಯೆಂದೂ ಎಲ್ಲ ಕಾರ್ಯಕರ್ತರೂ ದಯಮಾಡಿಸಬೇಕೆಂದೂ ಶ್ರೀ ಟಿ ವೆಂಕಟರಮಣಯ್ಯನವರು ಕೋರುತ್ತಾರೆ

ಸ್ಕೌಟ್ ಕ್ಯಾಂಪ್

ಮೈಸೂರು ೨೬

ಇದೇ ೨೮ ಮತ್ತು ೨೯ನೇ ತಾರೀಖುಗಳಲ್ಲಿ ಸ್ಕೌಟ್ ಮತ್ತು ಕಬ್ ಮಾಸ್ಟರುಗಳ ಕ್ಯಾಂಪನ್ನು ನಂಜನಗೂಡಿನ ರೆಸಿಡೆನ್ಸಿಯತ ಮೈಸೂರು ನಗರದ ಸ್ಕೌಟ್ ಸಮಿತಿಯವರು ಏರ್ಪಡಿಸಿದ್ದಾರೆ.

ವಿಶ್ವವಿದ್ಯಾನಿಲಯದ ಘಟಿಕೋತ್ಸವ

ಮೈಸೂರು ೨೬

ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವವು ಮುಂದಿನ ಜನವರಿ ೮ನೇ ತಾರೀಖು ನಡೆಯುವುದು. ಡಾ॥ ರಾಧಾಕುಮುದ್ ಮುಖರ್ಜಿಯವರು ಭಾಷಣ ಮಾಡುವರು.

೮೩ ಕಾಂಗ್ರೆಸ್ಸಿಗರಿಗೆ ಪಕ್ಷದಿಂದ ಉಚ್ಚಾಟನೆ

ಇತ್ತೀಚೆಗೆ ನಡೆದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಅಧಿಕೃತ ಉಮೇದುವಾರರಿಗೆ ವಿರುದ್ಧವಾಗಿ ಸ್ಪರ್ಧಿಸಿದರೆಂಬ ಆಪಾದನೆ ಮೇಲೆ ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್ಸಿನಿಂದ ೮೩ ಜನರನ್ನು ಹೊರಗೆ ಹಾಕಲಾಗಿದೆ.

ಅಂಚೆ ನೌಕರರಿಗೆ ಖಾದಿ ಬಟ್ಟೆ

ದೇಶದಲ್ಲಿ ಇನ್ನೂ ೧೦೦೦೦ ಅಂಚೆ ಕಛೇರಿಗಳ ಸ್ಥಾಪನೆ

ಪಂಚವಾರ್ಷಿಕ ಯೋಜನೆಯಂತೆ ದೇಶದಲ್ಲಿ ಇನ್ನೂ ೧೦೦೦೦ ಅಂಚೆ ಕಛೇರಿಗಳನ್ನು ಮತ್ತು ೫೦೦ ಟೆಲಿಫೋನ್ ಕೇಂದ್ರಗಳನ್ನು ೧೯೫೬ರ ಅಂತ್ಯದೊಳಗೆ ಸ್ಥಾಪಿಸಲಾಗುತ್ತದೆ ಎಂದು ಅಂಚೆ ಮತ್ತು ತಂತಿ ಇಲಾಖಾ ಡೈರೆಕ್ಟರ್ ಜನರಲ್‌ರವರು ಬೊಂಬಾಯಿನಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ. ಇದಲ್ಲದೆ ಹಿಂದಿಯಲ್ಲಿ ಟೆಲಿಪ್ರಿಂಟರ್‌ವ್ಯವಸ್ಥೆಯನ್ನು ಜಾರಿಮಾಡಲು ಸೂಕ್ತ ಕೆಲಸಗಳು ನಡೆಯುತ್ತಿವೆ. ದೇಶದಲ್ಲಿ ಈಗಾಗಲೇ ೪೦೦ ತಂತಿ ಕಛೇರಿಗಳಲ್ಲಿ ಹಿಂದಿ ಭಾಷೆಯಲ್ಲಿ ತಂತಿಗಳನ್ನು ಸ್ವೀಕರಿಸಲಾಗುತ್ತಿದೆ. ಇದನ್ನು ಇನ್ನೂ ವಿಸ್ತರಿಸಲಾಗುತ್ತದೆ. ಸದ್ಯದಲ್ಲಿಯೇ ಅಂಚೆ ಮತ್ತು ತಂತಿ ಇಲಾಖೆ ಕೈಪಿಡಿಯನ್ನು ಪ್ರಕಟಿಸಲಾಗುತ್ತದೆ

೧೯೫೫ರ ಅಂತ್ಯದೊಳಗೆ ಇಲಾಖೆಯಲ್ಲಿರುವ ನೌಕರರಿಗೆ ಖಾದಿಯನ್ನು ಕೊಡುವ ವ್ಯವಸ್ಥೆಯನ್ನೂ ಮಾಡಲಾಗುವುದು ಎಂದು ಅವರು ತಿಳಿಸಿದ್ದಾರೆ.

ಬಾಲಕನನ್ನು ಶಿಕ್ಷಿಸಿದುದಕ್ಕೆ ಉಪಾಧ್ಯಾಯರ ಸಸ್ಪೆಂಡ್

ಪಾಲಘಾಟಿನ ಆಲನೂರಿನ ಮುಕ್ಕಳ ಶಾಲೆಯಲ್ಲಿ ಚೇಷ್ಟೆ ಮಾಡಿದ ೫ ವರ್ಷದ ಬಾಲಕನೊಬ್ಬನನ್ನು ಟೇಬಲ್ಲಿನ ಕೆಳಗೆ ನುಸಿಯುವಂತೆ ಉಪಾಧ್ಯಾಯರು ಅಪ್ಪಣೆ ಮಾಡಿದುದರಿಂದ ಆ ಮಗುವಿನ ತಲೆಯ ಮೇಲೆ ಮೊಳೆಯಿಂದ ಗಾಯವಾಯಿತೆಂದೂ ಈಗ ಆ ಶಿಕ್ಷೆಯನ್ನು ವಿಧಿಸಿದ ಇಬ್ಬರು ಉಪಾಧ್ಯಾಯರನ್ನು ಕೆಲಸದಿಂದ ತೆಗೆದು ಹಾಕಲಾಗಿದೆಯೆಂದೂ ವರದಿಯಾಗಿದೆ.

ಬೇಸಾಯ ಕಾರ್ಮಿಕರಿಗೆ ಕನಿಷ್ಠ ಕೂಲಿ

ಮೈಸೂರು ಸಂಸ್ಥಾನದ ಬೇಸಾಯ ಕೆಲಸಗಾರರ ಪೈಕಿ ಮಲೆನಾಡಿನವರಿಗೆ ದಿನಕ್ಕೆ ತಲಾ ಒಂದು ರೂಪಾಯಿ, ಮೈದಾನ ಪ್ರದೇಶದವರಿಗೆ ೧೪ ಆಣೆಯಂತೆ ಕನಿಷ್ಠ ಕೂಲಿಯನ್ನು ಈ ಬಗ್ಗೆ ನೇಮಿಸಿದ್ದ ಸಮಿತಿಯು ಶಿಫಾರಸು ಮಾಡಿದುದನ್ನು ಸರ್ಕಾರ ಒಪ್ಪಿದೆಯೆಂದು ತಿಳಿದುಬಂದಿದೆ.

ಭಾರತಕ್ಕೆ ೫೦ ಲಕ್ಷ ಪೌಂಡು ಸಾಲ

ದಾಮೋದರ ಕಣಿವೆ ಯೋಜನೆ ಮತ್ತು ದೇಶದಲ್ಲಿ ಹಿರಿಯ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು ಬ್ರಿಟನ್ ಭಾರತಕ್ಕೆ ೫೦ ಲಕ್ಷ ಪೌಂಡುಗಳ ಸಾಲಕೊಡುವ ವಿಷಯವನ್ನು ಭಾರತವು ಪರಿಶೀಲಿಸುತ್ತಲಿರುವುದಾಗಿ ಕೇಂದ್ರ ಆರ್ಥಿಕ ಸಚಿವರು ತಿಳಿಸುತ್ತಾರೆ.

ಖಾದಿ ಮತ್ತು ಕೈಮಗ್ಗ ಅಭಿವೃದ್ಧಿಗೆ ೭ ಕೋಟಿ ರೂಪಾಯಿಗಳು

ಪಾರ್ಲಿಮೆಂಟಿನಲ್ಲಿ ಕೈಗಾರಿಕಾ ಸಚಿವರ ಹೇಳಿಕೆ

ಗಿರಣಿಗಳು ನಿರ್ದಿಷ್ಟ ಪ್ರಮಾಣಕ್ಕಿಂತ ಹೆಚ್ಚಾಗಿ ಪಂಚೆಗಳನ್ನು ತಯಾರಿಸಿದರೆ ಅದಕ್ಕೆ ಅಧಿಕ ಸುಂಕ ವನ್ನು ವಿಧಿಸುವ ಮಸೂದೆಗೆ ಪಾರ್ಲಿಮೆಂಟ್ ತನ್ನ ಒಪ್ಪಿಗೆಯನ್ನು ಇತ್ತಿದೆ. ಈ ಸಂದರ್ಭದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು ಮಾತನಾಡುತ್ತಾ, ಈ ನಿರ್ದಿಷ್ಟ ಪ್ರಮಾಣವನ್ನು ವಿೀರವಿರಲೆಂದು ಈ ಮಸೂದೆಯನ್ನು ಮಾಡಲಾಗಿದೆ. ಈಗಾಗಲೇ ಕೈಮಗ್ಗದವರಿಗೆ ನೆರವು ನೀಡಲು ೨೨ ವಿಧ ಪ್ರಾಂತ್ಯ ಸರ್ಕಾರಗಳು ಮೂರುವರೆ ಕೋಟಿ ರೂಪಾಯಿಗಳ ಯೋಜನೆಯನ್ನು ತಯಾರಿಸಿ ಕೇಂದ್ರದ ಅನುಮತಿಗೆ ಕಳುಹಿಸಿವೆ. ಖಾದಿ ಮತ್ತು ಕೈಮಗ್ಗದ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ನಿಗದಿ ಮಾಡಿದ್ದ ೬೦ ಲಕ್ಷ ರೂಪಾಯಿಗಳನ್ನು ೭ ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ. ಮುಂದಕ್ಕೆ ಈ ಅರ್ಥಿಕ ನೆರವನ್ನು ಇನ್ನೂ ಹೆಚ್ಚಿಸಲಾಗುತ್ತದೆ. ವಿದೇಶಗಳಿಂದ ಸುಮಾರು ೪೧ ಲಕ್ಷ ರೂಪಾಯಿಗಳ ಬೆಲೆಯ ನೂಲನ್ನು ಆಮದು ಮಾಡಲಾಗಿದೆ. ೭೫ ಕೋಟಿ ಗಜ ಬಟ್ಟೆಯನ್ನು ರಫ್ತು ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಹೆಚ್ಚು ಬಟ್ಟೆ ದಾಸ್ತಾನು

ಉತ್ತರ ಪ್ರದೇಶದಲ್ಲಿರುವ ಬಟ್ಟೆ ಗಿರಣಿಗಳಲ್ಲಿ ಬಟ್ಟೆಯ ದಾಸ್ತಾನು ಅತ್ಯಧಿಕವಾಗಿ ಅದರ ವಿಲೇವಾರಿ ಬಗ್ಗೆ ಆಡಳಿತಗಾರರಿಗೂ ಸರ್ಕಾರಕ್ಕೂ ತಲೆನೋವು ಪುಟಾಗಿರುವುದಾಗಿ ಹೇಳಲಾಗುತ್ತಿದೆ. ಈ ದಾಸ್ತಾನು ಹಾಗೆಯೇ ಇರುವುದರಿಂದ ಗಿರಣಿಗಳಿಗೆ ವಿಶೇಷವಾಗಿ ನಷ್ಟ ಸಂಭವಿಸುತ್ತಿದೆ. ಅವಶ್ಯಕತೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿ ಕಾರ್ಮಿಕರಿರುವರು. ಸದ್ಯದಲ್ಲಿಯೇ ಅಲ್ಲಿ ಕಾರ್ಮಿಕರಿಗೂ ಸಹ ತೊಂದರೆ ರಿಯುಂಟಾಗುವ ಪರಿಸ್ಥಿತಿ ಒದಗಿದೆ.

ಸರ್ಕಾರವೇ ಮದ್ಯದಂಗಡಿ ತೆರೆಯುವುದು

ಮದ್ಯ ವ್ಯಾಪಾರದಲ್ಲಿ ಕಾಳಸಂತೆಯನ್ನು ತಪ್ಪಿಸಲು ಮಧ್ಯಪ್ರದೇಶ ಸರ್ಕಾರವು ಜಬ್ಬಲ್‌ಪುರದಲ್ಲಿ ಸರ್ಕಾರಿ ಮದ್ಯದ ಅಂಗಡಿಯನ್ನು ತೆರೆದಿರುವುದಾಗಿ ಅಲ್ಲಿಯ ಅರ್ಥಿಕ ಮತ್ತು ಅಬ್ಕಾರಿ ಸಚಿವರು ಹೇಳಿದ್ದಾರೆ.

ಅಲ್ಪಕಾಲದ ವೈದ್ಯಶಿಕ್ಷಣ

ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ನೆರವನ್ನು ನೀಡಲು ಅಲ್ಪಕಾಲದ ವೈದ್ಯಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕೆಂದು ಮದ್ರಾಸ್ ಕಾರ್ಮಿಕ ಮತ್ತು ಕೈಗಾರಿಕಾ ಸಚಿವರು ಹೇಳಿದ್ದಾರೆ.

ಪ್ರಜಾಸೋಷಲಿಸ್ಟ್ ಪಕ್ಷಕ್ಕೆ ಪ್ರತ್ಯೇಕ ಸ್ಥಾನ

ಆಂಧ್ರ ಶಾಸನ ಸಭೆಯಲ್ಲಿ ಪ್ರಜಾಸೋಷಲಿಸ್ಟ್ ಪಕ್ಷವನ್ನು ವಿರೋಧ ಪಕ್ಷವೆಂದು ಪರಿಗಣಿಸಿ ಆ ಪಕ್ಷದ ಸದಸ್ಯರಿಗೆ ಪ್ರತ್ಯೇಕ ಸ್ಥಾನವನ್ನು ಏರ್ಪಡಿಸಬೇಕೆಂದು ಆ ಪಕ್ಷದ ಕಾರ್ಯದರ್ಶಿ ಶ್ರೀ ರಾಜಾರಾವರು ಶಾಸನ ಸಭಾಧ್ಯಕ್ಷರನ್ನು ಕೋರಿದ್ದಾರೆ. ಅದೇ ಪಕ್ಷದಲ್ಲಿದ್ದ ಅರ್ಥಿಕ ಸಚಿವ ಶ್ರೀ ಟಿ. ವಿಶ್ವನಾಥರವರು ಮತ್ತು ಅವರ ೧೧ ಅನುಯಾಯಿಗಳು ಸರ್ಕಾರಿ ಪಕ್ಷದೊಡನೆ ಕುಳಿತುಕೊಳ್ಳುತ್ತಿರುವರು.

ಕಿರಿಯ ನೀರಾವರಿ ಯೋಜನೆಗೆ ನೆರವು

ಮದ್ರಾಸ್ ಪ್ರಾಂತ್ಯದಲ್ಲಿ ೧೯೫೨-೫೩ ನೇ ಸಾಲಿನಲ್ಲಿ ಕೈಗೊಳ್ಳಲಿರುವ ಹಳೆಯ ಮತ್ತು ಸುಮಾರು ೧೦೦೦೦ ಹೊಸ ಕಿರಿಯ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಲು ಆಯೋಜನಾ ಮಂಡಲಿಯು ಒಪ್ಪಿಗೆಯನ್ನು ನೀಡಿದೆ. ಇದಕ್ಕಾಗಿ ೭೫ ಲಕ್ಷ ರೂಪಾಯಿಗಳನ್ನು ಸಾಲವ ರೂಪದಲ್ಲಿ ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಸೌರಾಷ್ಟ್ರದಲ್ಲಿ ಸಿಮೆಂಟು ತಯಾರಿಕೆ

ಸೌರಾಷ್ಟ್ರದಲ್ಲಿ ಸಿಮೆಂಟನ್ನು ತಯಾರಿಸಲು ಖನಿಜ ವಸ್ತುಗಳು ಹೇರಳವಾಗಿ ದೊರೆಯುವುದೆಂದೂ ಅಲ್ಲಿ ಒಂದು ಸಿಮೆಂಟ್ ಕಾರ್ಖಾನೆಯನ್ನು ಸ್ಥಾಪಿಸಲು ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೫—೧೧—೧೯೫೩

ಪಲ್ಲ	ರೂ. ಅ	ರೂ. ಅ
ಕಡಲೇಕಾಯಿ	೧೧—೮	೨೨—೦
ಎಳ್ಳು	೬೦—೦	—
ಹುರುಳಿ	—	—
ಹುಚ್ಚೆಳ್ಳು	—	—
ಹುರಳಿ	೨೨—೦	೩೭—೦
ಹೆಸರು	೧೮—೧೨	೪೪—೦
ಉದ್ದು	೨೦—೦	—
ಅಲಸಂದೆ	೫೯—೨	೫೦—೨
ಹುಣಸೇಹಣ್ಣು	೧೧—೮	೧೦—೧೨
ಮೆಣಸಿನಕಾಯಿ	೧೫—೦	೬೦—೮
ಸೀಗೇಕಾಯಿ	—	—
ತೆಂಗಿನಕಾಯಿ	—	—

ಆಂಧ್ರ ರಾಜಧಾನಿ ವರ್ಗಾವಣೆ

ವರ್ತಕರ ಮತ್ತು ವಿದ್ಯಾರ್ಥಿಗಳಿಂದ ಪ್ರತಿಭಟನಾ ಹರತಾಳ

ಆಂಧ್ರದ ರಾಜಧಾನಿಯನ್ನು ಕರ್ನೂಲಿನಿಂದ ವಿಜಯವಾಡಾ-ಗುಂಟೂರಿಗೆ ವರ್ಗಾಯಿಸಬೇಕೆಂಬ ಇತ್ತೀಚಿನ ಚಳವಳಿಯನ್ನು ವಿರೋಧಿಸಿ ನಿನ್ನೆ ಕರ್ನೂಲಿನಲ್ಲಿ ಎಲ್ಲಾ ವರ್ತಕರು ತಮ್ಮ ಅಂಗಡಿಗಳನ್ನು ಮುಚ್ಚಿ ಹರತಾಳವನ್ನು ಆಚರಿಸಿದರು. ಶಾಲೆಗಳಿಗೆ ವಿದ್ಯಾರ್ಥಿಗಳು ಹೋಗದೆ ಅವರೂ ಸಹ ಈ ಹರತಾಳದಲ್ಲಿ ಭಾಗವಹಿಸಿದ್ದರು.

ಕರ್ನೂಲಿನಲ್ಲಿರುವ ಪುರಸಭಾಧ್ಯಕ್ಷರ ನೇತೃತ್ವದಲ್ಲಿ ರಚಿಸಲಾಗಿರುವ ಕ್ರಿಯಾಸಮಿತಿಯ ನಿರ್ಧಾರದಂತೆ ಈ ಹರತಾಳವನ್ನು ಆಚರಿಸಲಾಯಿತು.

ಆಂಧ್ರ ಶಾಸನಸಭೆಯಲ್ಲಿ ಮೊನ್ನೆಯ ದಿನ ಗೌರ್ನರ್‌ರವರು ಮಾಡಿದ ಭಾಷಣವು ಈದಿನ ಚರ್ಚೆಗೆ ಬಂದಿದೆ. ಅಂಧ್ರ ರಾಜಧಾನಿಯನ್ನು ಕರ್ನೂಲಿನಿಂದ ವಿಜಯವಾಡಾ-ಗುಂಟೂರಿಗೆ ಬದಲಾಯಿಸಬೇಕೆಂಬ ಹಲವಾರು ತಿದ್ದುಪಡಿಗಳನ್ನು ಈಗಾಗಲೇ ಸದಸ್ಯರು ಸೂಚಿಸಿರುವುದಾಗಿ ತಿಳಿಯಬರುತ್ತದೆ.

ಈ ವಿಷಯವನ್ನು ಚರ್ಚಿಸಲು ನಿನ್ನೆ ಶಾಸನಸಭೆಯ ಕಾಂಗ್ರೆಸ್‌ಪಕ್ಷದ ಸದಸ್ಯರು ಶ್ರೀ ಎ. ಸಂಜೀವರೆಡ್ಡಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದರು. ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರೂ ಇದರಲ್ಲಿ ಭಾಗವಹಿಸಿದ್ದರು.

ಅಲಹಬಾದ್ ಪುರಸಭೆಗೆ ನೆಹರೂ ದಾನ

ಅಲಹಾಬಾದ್ ಪುರಸಭೆಯವರು ಏರ್ಪಡಿಸಿರುವ ವಸ್ತು ಸಂಗ್ರಹಾಲಯದಲ್ಲಿ ಇಡಲು ಪ್ರಧಾನಿ ನೆಹರೂರವರು ತಮಗೆ ಇಲ್ಲಿಯವರೆಗೆ ಬಂದಿರುವ ಅನೇಕ ಬಹುಮಾನ ಮತ್ತು ಇತರ ಅಮೂಲ್ಯ ವಸ್ತುಗಳನ್ನು ಉಚಿತವಾಗಿ ಕಳುಹಿಸಿದ್ದಾರೆ. ಇದು ೩ ಟ್ರಕ್ಕುಗಳಷ್ಟು ಇವೆ.

ಭಾರತೀಯ ಜನಸಂಘ

ಮೈಸೂರು ೨೬

ಅಖಿಲಭಾರತೀಯ ಜನಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ದೀನದಯಾಳ್ ಉಪಾಧ್ಯಾಯರು ರಾಜಧಾನಿಗೆ ನಾಳೆ ಮಧ್ಯಾಹ್ನ ಆಗಮಿಸುವರು. ಸಂಜೆ ೬-೩೦ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ನಡೆಯುವ ಬಹಿರಂಗಸಭೆಯಲ್ಲಿ ಭಾಷಣ ಮಾಡುವರು. ಮಾರನೇ ದಿನ ಬೆಳಿಗ್ಗೆ ಬೆಂಗಳೂರಿಗೆ ಪ್ರಯಾಣ ಬೆಳೆಸುವರು.

ಇಂದ್ರಧನುಸ್

ನಾಳೆರಾತ್ರಿ ೯-೩೦ ಮೈಸೂರು ಆಕಾಶವಾಣಿಯಲ್ಲಿ 'ಇಂದ್ರಧನುಸ್' ಎಂಬ ಹಿಂದಿ ವಿವಿಧ ಕಾರ್ಯಕ್ರಮ ನಡೆಯುತ್ತದೆ.

ಕಾಂಗ್ರೆಸ್ ಅಧಿವೇಶನಕ್ಕೆ ವಿಮಾನಯಾನ ರಿಯಾಯಿತಿ

ಕಲ್ಕತ್ತಾ ಬಳಿ ಕಲ್ಯಾಣಿಯಲ್ಲಿ ಜನವರಿ ಮಾಹೆಯಲ್ಲಿ ನಡೆಯಲಿರುವ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನಕ್ಕೆ ವಿಮಾನದಲ್ಲಿ ಹೋಗುವವರಿಗೆ ದರಗಳಲ್ಲಿ ರಿಯಾಯತಿ ಕೊಡುವುದಾಗಿ ತಿಳಿಯಬರುತ್ತದೆ. ಮದ್ರಾಸ್, ಬೊಂಬಾಯಿ, ದೆಹಲಿ ಮುಂತಾದ ದೊಡ್ಡ ಪಟ್ಟಣಗಳಿಂದ ಈ ಅಧಿವೇಶನಕ್ಕೆ ಹೋಗುವವರು ಏಕ ಕಾಲದಲ್ಲಿ ೩೦ ಅಥವಾ ಅದಕ್ಕಿಂತ ಹೆಚ್ಚಾಗಿದ್ದರೆ ಅವರಿಗೆ ಹೋಗಿಬರಲು ಈಗಿನ ದರದಲ್ಲಿ 1½ ಯಷ್ಟು ಮಾತ್ರ ವಿಧಿಸಲಾಗುತ್ತದೆ.

೫೦೦ ಸ್ಥಾನಗಳಿಗೆ ೧೯೬೯ ಅಭ್ಯರ್ಥಿಗಳು

ಮುಂದಿನ ತಿಂಗಳು ೨೦ನೇ ತಾರೀಖು ನಡೆಯಲಿರುವ ತಿರುವಾಂಕೂರು ಕೊಚ್ಚಿನ್ನಿನ ಚುನಾವಣೆಗಾಗಿ ೫೦ ಸ್ಥಾನಗಳಿಗೆ ೧೯೬ ಜನ ಅಭ್ಯರ್ಥಿಗಳಿದ್ದಾರೆ.

ಪ್ರಭಾ 28—11—53 ರಿಂದ ದಿನ ಮೂರು ಆಟಗಳು

ಮೀನಾಕುಮಾರಿ (ಬೈಜುಬಾವ್ರ ಪ್ರಖ್ಯಾತಿ) ದಿಲೀಪ್‌ಕುಮಾರ್ ನಟಿಸಿರುವ ರಣಜಿತ್‌ರವರ ಹಿಂದಿ ಚಿತ್ರ.

-ಫುಟ್-ಪಾತ್-

ದಿಗ್ದರ್ಶನ:—ಜಿಯಾಸರ್‌ಹಾದಿ

(ಹಮ್‌ಲೋಗ್ ಪ್ರಖ್ಯಾತಿ)

ರಣಜಿತ್

27—11—53 ರಿಂದ

ಸುರಯ್ಯ ಮತ್ತು ಸುರೇಶ್ ನಟಿಸಿರುವ:....

ಗೂಂಜ್ Goonj

ಪಾತ್ರ:-ಸಪ್ರೂ,ರಣಧೀರ್ ಮತ್ತು ಮಜನು.

ಪ್ರಕಾಶಕರು ಮತ್ತು ಮುದ್ರಕರು:

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್, ಮೈಸೂರು.

ರಾಜಕಮಲ್, ಮೈಸೂರು

27 11—53 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು ಮಹಾತ್ಮಾರವರ

★ ಚಂಚಲಕುಮಾರಿ ★

[ಕನ್ನಡ]

ಭೂಮಿಕೆ:—ಪ್ರತಿಮಾದೇವಿ, ಕಾಮಿನಿ, ಇಂದುಶೇಖರ್, ಮುಸ್ತಫ್, ರಾಜೇಂದ್ರಸಿಂಗ್, ಜಿ. ಆರ್. ಸ್ವಾಮಿ...

ರಿಜಿಸ್ಟರ್ ನಂ. ಎಂ. ೫೧೧೧

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೮೦

೨೭-೧೧-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಚತುರ್ರಾಷ್ಟ್ರ ಸಮ್ಮೇಳನದಲ್ಲಿ ರಷ್ಯಾ ಭಾಗವಹಿಸಲು ಸಿದ್ಧ

ಪಶ್ಚಿಮರಾಷ್ಟ್ರಗಳ ಸಲಹೆಗೆ ರಷ್ಯಾ ಒಪ್ಪಿಗೆ

ಚತುರ್ರಾಷ್ಟ್ರ ಸಮ್ಮೇಳನದಲ್ಲಿ ರಷ್ಯಾವು ಭಾಗವಹಿಸಬೇಕೆಂಬ ಪಶ್ಚಿಮ ರಾಷ್ಟ್ರಗಳ ಸಲಹೆಯನ್ನು ರಷ್ಯಾವು ಒಪ್ಪಿರುವುದಾಗಿ ವರದಿಯಾಗಿದೆ.

ಈ ಒಪ್ಪಿಗೆ ಪತ್ರವನ್ನು ರಷ್ಯಾ ವಿದೇಶಾಂಗ ಶಾಖೆಯು ಮಾಸ್ಕೋ ನಲ್ಲಿರುವ ಅಮೆರಿಕಾ, ಬ್ರಿಟನ್ ಮತ್ತು ಫ್ರಾನ್ಸ್ ರಾಯಭಾರಿ ಕಛೇರಿಗಳಿಗೆ ಸಲ್ಲಿಸಿರುವುದಾಗಿ ಹೇಳಲಾಗಿದೆ.

ಖಜಾನೆ ಇಲಾಖೆ ಪುನರ್ರಚನೆ

ಬೆಂಗಳೂರು ೨೬

ಜಿಲ್ಲಾ ಮತ್ತು ತಾಲ್ಲೂಕು ಖಜಾನೆಗಳ ಪುನರ್ರಚನೆಯನ್ನು ಸರ್ಕಾರದವರು ಮಾಡಿ ಇಲ್ಲಿಯವರೆಗೆ ರೆವಿನ್ಯೂ ಮತ್ತು ಖಜಾನೆ ಇಲಾಖೆಯ ಏಕ್ಯತೆಯನ್ನು ತಪ್ಪಿಸಿ, ಅದನ್ನೇ ರೆವೆನ್ಯೂ ಕಮಿಷನರ್‌ರವರ ಆಡಳಿತದಲ್ಲಿ ಪ್ರತ್ಯೇಕ ಶಾಖೆಯನ್ನಾಗಿ ಮಾಡಿದ್ದಾರೆ.

ಈ ಹೊಸ ವ್ಯವಸ್ಥೆಯು ೧೯೫೪ ನೇ ಜನವರಿ ಒಂದನೇ ತಾರೀಖಿನಿಂದ ಜಾರಿಗೆ ಬರುತ್ತದೆ.

ಜಿಲ್ಲೆಗಳಲ್ಲಿ ಖಜಾನಾಧಿಕಾರಿಗಳು ಈಗಿರುವಂತೆಯೇ ರೆವೆನ್ಯೂ ಇಲಾಖೆಯವರಾಗಿರುತ್ತಾರೆ. ಇದಕ್ಕಾಗಿ ಅವರಿಗೆ ಮಾಹೆಯಾನಾ ೫೦ ರೂ ವಿಶೇಷ ಅಲೋಯನ್ಸ್ ಕೊಡಲಾಗುತ್ತದೆ.

ತಾಲ್ಲೂಕು ಕಛೇರಿಗಳಲ್ಲಿ ಶಿರಸ್ತೇದಾರರೇ ಈಗಿರುವ ಪದ್ಧತಿಯಂತೆ ರೆವೆನ್ಯೂ ಕೆಲಸದೊಡನೆ ಟ್ರೆಷರಿ ಕೆಲಸವನ್ನೂ ನೋಡಿಕೊಳ್ಳುತ್ತಾರೆ ಅವರಿಗೆ ಮಾಹೆಯಾನಾ ೧೦ ರೂ ಅಲೋಯನ್ಸ್ ಕೊಡಲಾಗುತ್ತದೆ. ಸಾಮಾನ್ಯವಾಗಿ ರೆವೆನ್ಯೂ ಇಲಾಖಾ ನೌಕರರನ್ನು ಇಲ್ಲಿಗಾಗಲೀ ಅಥವ ಈ ಇಲಾಖಾ ನೌಕರರನ್ನು ರೆವೆನ್ಯೂ ಇಲಾಖೆಗಾಗಲೀ ವರ್ಗಾಯಿಸುವುದಿಲ್ಲ.

ಕೇಂದ್ರ ಸಚಿವರೊಡನೆ ರಾಜಪ್ರಮುಖರ ಮಾತುಕತೆ

ದೆಹಲಿಯಲ್ಲಿ ಮೈಸೂರು ರಾಜಪ್ರಮುಖರು ಪ್ರಧಾನಿ ನೆಹರೂ, ಗೃಹ ಸಚಿವ ಡಾ॥ ಖಟ್ಜು ಮತ್ತು ಅರ್ಥಿಕ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರುಗಳನ್ನು ನಿನ್ನೆ ಕಂಡು ರಾಜಾಡಾಯ ಯೋಜನಾ ಮತ್ತು ರಾಜಪ್ರಮುಖುರುಗಳ ರದ್ದು ಈ ವಿಷಯಗಳಲ್ಲಿ ಮಾತುಕತೆ ನಡೆಸಿದರೆಂದು ಹೇಳಲಾಗಿದೆ.

ಹೆಚ್ಚಿಗೆ ಸಕ್ಕರೆ ಪಡಿತರ

ಮೈಸೂರು ೨೬

ಎ ತರಗತಿ ರೇಷನ್‌ದಾರರಿಗೆ ಈಗ ಕೊಡುತ್ತಿರುವ ಸಕ್ಕರೆ ಪ್ರಮಾಣವನ್ನು ಒಂದೂವರೆ ಪೌಂಡುಗಳಿಂದ ಎರಡೂ ಕಾಲು ಪೌಂಡಿಗೂ, ಬಿ ತರಗತಿಯವರಿಗೆ ಮುಕ್ಕಾಲು ಪೌಂಡಿನಿಂದ ೧॥ ಪೌಂಡಿಗೂ ಹೆಚ್ಚಿಸಲಾಗಿದೆ.

ಮುಖ್ಯ ಮಂತ್ರಿಗಳ ಮೇಲೆ ಟೀಕೆಯ ಕೈ

ಬೆಂಗಳೂರಿನಲ್ಲಿ ಕಟ್ಟಲಾಗುತ್ತಿರುವ 'ವಿಧಾನ ಸೌಧ'ಭವನದ ಕೆಲಸವನ್ನು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಪರಿಶೀಲನೆ ಮಾಡುತ್ತಿದ್ದಾಗ ಮಾಧು ಆಲಿಯಾಸ್ ಮಾಧವರಾವ್ ಎಂಬ ವೈದ್ಯ ಕೈಮುಷ್ಟಿಯಿಂದ ಮುಖ್ಯಮಂತ್ರಿಗಳ ಎದೆಯ ಮೇಲೆ ಹೊಡೆದನೆಂದೂ, ಅದರ ಪರಿಣಾಮವಾಗಿ ಎಡಗಡೆ ಕೆನ್ನೆಯ ಮೇಲೆ ಸ್ವಲ್ಪ ಗಾಯವಾಯಿತೆಂದೂ ಹೇಳಲಾಗಿದೆ. ತನ್ನ ಮೇಲೆ ಏಕೆ ಕೈ ಮಾಡಿದನೆಂದು ಮುಖ್ಯಮಂತ್ರಿಗಳು ಕೇಳಲಾಗಿ ತನಗೆ ಹಿಂದೆ ಅನ್ಯಾಯವಾಗಿದೆಯೆಂದೂ, ನ್ಯಾಯ ಸಲ್ಲಿಸಬೇಕೆಂದೂ ಪ್ರೈದಿಯ ಉತ್ತರವಿತ್ತನು.

ವಿಶ್ವ ಸರ್ಕಾರ ಸ್ಥಾಪನೆ

ಬಹಾಯಿಸ್ ಸಂಸ್ಥೆಯ ಪ್ರಯತ್ನ

ಮೈಸೂರು ೨೬

ಇಸ್ರೇಲಿನಲ್ಲಿರುವ ಅಂತರ ರಾಷ್ಟ್ರೀಯ ಬಹಾಯಿಸ್ ಸಂಸ್ಥೆಯ ಅಧ್ಯಕ್ಷರಾದ ಮಿ॥ ಚಾರ್ಲಿಸ್ ಮೇಸನ್ ರೆಮಿರವರು ಈ ದಿನ ಬೆಳಿಗ್ಗೆ ರಾಜಧಾನಿಯಲ್ಲಿ ಪತ್ರಿಕಾ ಗೋಷ್ಠಿಯನ್ನು ನಡೆಸಿ, ಸಂಸ್ಥೆಯ ಧ್ಯೇಯವನ್ನು ವಿವರಿಸಿದರು.

ಪ್ರಪಂಚದಲ್ಲಿ ಯುದ್ಧ ನಡೆಯದಂತೆ ಒಂದು ವಿಶ್ವ ಸರ್ಕಾರವನ್ನು ಸ್ಥಾಪಿಸುವುದೇ ಇದರ ಮುಖ್ಯ ಗುರಿ. ಇದಕ್ಕಾಗಿ ಪ್ರಪಂಚದ ಹಲವಾರು ಪ್ರದೇಶಗಳಲ್ಲಿ ಶಾಖೆಯನ್ನು ತೆರೆಯಲಾಗಿದೆ. ಇದು ರಾಜಕೀಯ ಗೊಂದಲಕ್ಕೆ ಒಳಗಾಗದೆ; ಕೇವಲ ಧಾರ್ಮಿಕ ಬೋಧನೆಗಾಗಿ ಹೊರಟಿದೆ.ಎಲ್ಲಾ ಮತಗಳೂ ಒಂದೇ ಎಂದು ತಿಳಿದು, ವಿಶ್ವದಲ್ಲಿ ನಿಶ್ಶಸ್ತ್ರೀಕರಣ ಆಗಿ ಶಾಂತಿ ನೆಲೆಗೊಳ್ಳುವಂತೆ ಪ್ರಚಾರ ಮಾಡುವುದೇ ಇದರ ಉದ್ದೇಶ ಈಗ ಪ್ರಪಂಚದಲ್ಲಿ ಜನರು ಯುದ್ಧದಿಂದ ಬೇಸತ್ತು ಬೆಂಗಾಡಾಗಿದ್ದಾರೆ. ಅವರ ಮನಸ್ಸಿಗೆ ಶಾಂತಿ ಬೇಕಾದರೆ ಎಲ್ಲಾ ದೇಶದವರೂ ಭಾತೃಗಳೆಂದು ತಿಳಿದು ಒಂದು ವಿಶ್ವ ಸರ್ಕಾರ ಸ್ಥಾಪಿಸುವುದರಿಂದಲೇ ಅದು ಸಾಧ್ಯ. ಇತ್ತೀಚೆಗೆ ದೆಹಲಿಯಲ್ಲಿ ನಡೆದ ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ ಭಾರತೀಯರಿಂದ ಇದಕ್ಕೆ ಪ್ರೋತ್ಸಾಹ ಮತ್ತು ಬೆಂಬಲ ದೊರೆಕಿತು. ಸಾರ್ವಜನಿಕರು ಈ ಕಾರ್ಯದಲ್ಲಿ ಸಹಕರಿಸಬೇಕು-ಎಂದು ಅವರು ತಿಳಿಸಿದರು.

ನಿನ್ನೆ ಸಂಜೆ ಅವರು ಮಹಾರಾಜಾ ಕಾಲೇಜಿನಲ್ಲಿ ಭಾಷಣ ಮಾಡಿದರು ಡಾ॥ ಪುರುಷೋತ್ತಂ ಅಧ್ಯಕ್ಷತೆ ವಹಿಸಿದ್ದರು.

ನಗರದ ಪ್ರೆಸ್ ಶೋಧನೆ

ಮೈಸೂರು ೨೬

ಕೊಡಗಿನ ವಿರಾಜಪೇಟೆಯಲ್ಲಿ ತಿರುವಾಂಕೂರಿಗೆ ಸೇರಿದ ಎ. ಆರ್. ಜೋಸೆಫ್ ಮತ್ತು ಇತರರು ಒಂದು ರೂ. ಖೋಟಾ ನಾಣ್ಯವನ್ನು ತಯಾರಿಸಿ ಅದನ್ನು ಅದೇ ಊರಿನಲ್ಲಿ ಚಲಾವಣೆಗೆ ಬಿಟ್ಟು ಅದರಿಂದ ಅಷ್ಟು ಲಾಭ ಬಾರಲಿಲ್ಲವಾದ್ದರಿಂದ ೧೦೦ ರೂಗಳ ಕರೆನ್ಸಿ ನೋಟುಗಳನ್ನು ತಯಾರಿಸಲು ಸಿದ್ಧತೆ ಮಾಡುತ್ತಿದ್ದಾಗ ಅಲ್ಲಿನ ಪೊಲೀಸರು ಆತನನ್ನು ದಸ್ತಗಿರಿ ಮಾಡಿದ್ದರು. ೧೦೦ ರೂಗಳ ಖೋಟಾ ನೋಟುಗಳನ್ನು ತಯಾರಿಸಲು ವಿರಾಜಪೇಟೆಯಲ್ಲಿ ಸಾಧ್ಯವಿಲ್ಲದೆ ಮೈಸೂರು ನಗರಕ್ಕೆ ಬಂದು ಮಂಡಿಮೊಹಲ್ಲಾದಲ್ಲಿರುವ ರಾಜಲಕ್ಷ್ಮಿ ಪ್ರಿಂಟಿಂಗ್‌ಪ್ರೆಸ್ ನವರೊಡನೆ ಈ ಗುಪ್ತ ವಿಚಾರವನ್ನು ಹೇಳಿದೆ, ಇನ್ನಾವ ಕೆಲಸಕ್ಕೊ ಪ್ರೆಸ್ ಬೇಕೆಂದು ಬಾಡಿಗೆ ಕರಾರು ಮಾಡಿಕೊಳ್ಳಲು ಜೋಸೆಫ್ ಪ್ರಯತ್ನ ಪಟ್ಟನೆಂದೂ, ೨ ಸಾವಿರ ರೂ ಮುಂಗಡ ಹಣ ಮತ್ತು ತಿಂಗಳಿಗೆ ೨೦೦ ರೂ. ಕೊಡಬೇಕೆಂದು ಮಾಲೀಕರು ತಿಳಿಸಿದಮೇಲೆ ಅಷ್ಟು ಹಣ ಕೊಡಲು ಆತನಿಗೆ ಸಾಧ್ಯವಿಲ್ಲದೆ ಹೊರಟು, ಹೋದನೆಂದೂ ಹೇಳಲಾಯಿತು.

ಈ ವಿಷಯವನ್ನು ಅಪರಾಧಿತನಿಂದಲೇ ತಿಳಿದು ವಿರಾಜಪೇಟೆ ಪೊಲೀಸ್ ಇನ್ಸ್‌ಪೆಕ್ಟರ್ ಶ್ರೀ ಅಪ್ಪಣ್ಣನವರು ಮಂಡಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಶ್ರೀ ಸಿ. ಆರ್. ನಾರಾಯಣ ಮೂರ್ತಿಯವರೊಡನೆ ರಾಜಲಕ್ಷ್ಮಿ ಪ್ರೆಸ್ಸನ್ನು ಮೊನ್ನೆದಿನ ಶೋಧಿಸಿ ಅಲ್ಲಿ ೮ ಸಾವಿರ ರೂ ಬೆಲೆ ಬಾಳುವ ಒಂದು ಕ್ಯಾಮರ ಮತ್ತು ಇತರ ದ್ರಾವಕಗಳನ್ನು ಪತ್ತೆ ಮಾಡಿ, ಅವುಗಳನ್ನು ವಶಪಡಿಸಿಕೊಂಡರೆಂದು ವರದಿಯಾಗಿದೆ.

ಪಾಕ್ ಅಮೆರಿಕಾ ಸೈನ್ಯ ಒಪ್ಪಂದ

ಇದು ನಡೆದರೆ ಯುದ್ಧ ವಿಷ್ಯಾಕ್ಕೆ ಹತ್ತಿರವಾದಂತೆ

ಪಾಕೀಸ್ತಾನ ಮತ್ತು ಅಮೆರಿಕ ನಡುವೆ ಸೈನ್ಯ ಒಪ್ಪಂದವಾಗುವುದೆಂಬ ವಿಷಯದಲ್ಲಿ ಭಾರತವು ಹೇಳಿರುವ ಅಭಿಪ್ರಾಯವನ್ನೇ ಏಷ್ಯಾದ ಇನ್ನೂ ಹಲವಾರು ರಾಷ್ಟ್ರಗಳು ವ್ಯಕ್ತಪಡಿಸಿ ಈ ರೀತಿಯ ಸೈನ್ಯ ಒಪ್ಪಂದ ವೇನಾದರೂ ಆದಲ್ಲಿ ಯುದ್ಧವನ್ನು ಏಷ್ಯಾಕ್ಕೆ ಹತ್ತಿರವಾಗಿ ತಂದಂತಾಗುತ್ತದೆ ಎಂದು ಹೇಳಿವೆ. ಈರೀತಿ ಅಭಿಪ್ರಾಯ ವ್ಯಕ್ತಪಡಿಸಿರುವ ರಾಷ್ಟ್ರಗಳಲ್ಲಿ ಸಿಂಹಳ, ಬರ್ಮಾ, ಇಂಡೋನೇಷ್ಯಾ ಮತ್ತು ಸಿರಿಯಾ ಸೇರಿವೆ.

ಮುನಿಸಿಪಲ್ ಆಫೀಸು, ಮೈಸೂರು

27—11—1953

ಪ್ರಕಟಣೆ

ಮುಂದಿನ ತಿಂಗಳು 7ನೇ ತಾರೀಖು (7—12—53) ದಿವಸ ನಡೆಯಲಿರುವ ಮುನಿಸಿಪಲ್ ಎಲೆಕ್ಷನ್ ಸಂಬಂಧದಲ್ಲಿ ಮತದಾರರು ತಮ್ಮ ಓಟನ್ನು ಕೊಡುವ ಚುನಾವಣಾ ಕೇಂದ್ರಗಳಿಗೆ ಹೋದಾಗ ಅವರ ಪರಿಚಯವು ಸುಲಭವಾಗಲು ಗುರುತಿನ ಚೀಟಿಯನ್ನು ಇದೇತಿಂಗಳು 29ನೇ ತಾರೀಖು ಭಾನುವಾರದಿಂದ ಮೊದಲ್ಗೊಂಡು ನಗರದ ಎಲ್ಲಾ ಭಾಗಗಳಲ್ಲಿ ಮನೆಮನೆಗೂ ಹೋಗಿ ಮತದಾರರಿಗೆ ಹಂಚುವ ಏರ್ಪಾಡಿಸಲಾಗಿದೆ.

ಮತದಾರರುಗಳು ಈ ಗುರುತಿನ ಚೀಟಿಯನ್ನು ಕಳೆಯದೆ ಜೋಪಾನವಾಗಿಟ್ಟುಕೊಂಡು ಚುನಾವಣೆಯ ದಿವಸ ಓಟು ಕೊಡುವ ಕೇಂದ್ರಗಳಲ್ಲಿ ನಿಯಮಿತವಾಗಿರುವ ಅಫೀಸರುಗಳಿಗೆ ಕೊಟ್ಟು, ಓಟಿನ ಚೀಟಿಯನ್ನು ಪಡೆದು ಚುನಾವಣಾ ಕೆಲಸವು ಸುಲಲಿತವಾಗಿ ನಡೆಯುವಂತೆ ಸಹಕರಿಸಬೇಕಾಗಿ ಪ್ರಾರ್ಥನೆ.

ಎ. ಲಕ್ಷ್ಮಣರಾವ್

ಮುನಿಸಿಪಲ್ ಕಮೀಷನರ್

ಮತ್ತು ರಿಟರ್ನಿಂಗ್ ಆಫೀಸರು.

ತಿರುವಾಂಕೂರ್-ಕೊಚ್ಚಿಯಲ್ಲಿ ಚುನಾವಣೆ

ಪ್ರಜಾಸೋಷಲಿಸ್ಟ್ ಮತ್ತು ಕಮ್ಯೂನಿಷ್ಟರ ಪಾತ್ರ

ತಿರುವಾಂಕೂರಿನಲ್ಲಿ ನಡೆಯಲಿರುವ ಮಹಾಚುನಾವಣೆಗಳಲ್ಲಿ ಕಮ್ಯೂನಿಸ್ಟ್ ಪಕ್ಷದೊಡನೆ ಪ್ರಜಾಸೋಷಲಿಸ್ಟ್ ಪಕ್ಷವು ಐಕ್ಯಗೊಂಡು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಈ ವಿಷಯದಲ್ಲಿ ಉಭಯ ಪಕ್ಷಗಳ ನಡುವೆ ಯಾವ ಒಪ್ಪಂದವೂ ಆಗಿಲ್ಲವೆಂದು ಪ್ರಜಾಸೋಷಲಿಸ್ಟ್ ಪಕ್ಷದ ನಾಯಕರು ಹೇಳಿದ್ದಾರೆ.

ಆದರೆ ಕಮ್ಯೂನಿಸ್ಟ್ ಪಕ್ಷದ ಸದಸ್ಯರು ಸ್ಪರ್ಧಿಸುವ ಪ್ರದೇಶದಲ್ಲಿ ಪ್ರಜಾಸೋಷಲಿಸ್ಟ್ ಪಕ್ಷವು ಸ್ಪರ್ಧಿಸುವುದಿಲ್ಲ ಅದೇರೀತಿ ಪ್ರಜಾಸೋಷಲಿಸ್ಟ್ ಪಕ್ಷವು ಸ್ಪರ್ಧಿಸುವ ಕಡೆ ಕಮ್ಯೂನಿಸ್ಟರು ಸ್ಪರ್ಧಿಸುವುದಿಲ್ಲ.

ಪ್ರಜಾಸೋಷಲಿಸ್ಟ್ ಪಕ್ಷಕ್ಕೆ ಎಲ್ಲಿ ಜಯವು ಲಭಿಸುವುದೆಂದು ಮನದಟ್ಟಾಗುತ್ತದೆಯೋ ಆ ಪ್ರದೇಶದಲ್ಲಿ ಮಾತ್ರ ತನ್ನ ಉಮೇದುವಾರರನ್ನು ನಿಲ್ಲಿಸುವುದು ಎಂದು ತಿಳಿಸಿದ್ದಾರೆ.

ಗೋ ರಕ್ಷಣೆ ಬಗ್ಗೆ ಕೇಂದ್ರದ ಸೂಚನೆ

ದೇಶದಲ್ಲಿ ಗೋ ಸಂಪತ್ತನ್ನು ಅಭಿವೃದ್ಧಿಪಡಿಸಲು ಹಾಲು ಕೊಡುವ ಹಸುಗಳು, ಕರುಗಳು ಮತ್ತು ಉಪಯೋಗಕ್ಕೆ ಬರುವ ಇತರ ದನಕರುಗಳನ್ನು ಮಾತ್ರ ಕೊಲೆ ಮಾಡದಂತೆ ಸಂಸ್ಥಾನ ಸರ್ಕಾರಗಳು ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೇಂದ್ರ ಸೂಚನೆ ಕೊಟ್ಟಿದೆಯೇ ಹೊರತು, ಸಂಪೂರ್ಣವಾಗಿ ಗೋಹತ್ಯವನ್ನು ನಿಷೇಧಿಸಬೇಕೆಂದು ತಿಳಿಸಿಲ್ಲವೆಂದೂ, ಸಂಪೂರ್ಣ ಗೋಹತ್ಯ ನಿಲ್ಲಿಸುವುದು ಸಾಧುವಲ್ಲವೆಂದೂ ತಿಳಿಸಲಾಗಿದೆಯೆಂದೂ ಪಾರ್ಲಿಮೆಂಟಿನಲ್ಲಿ ಸಚಿವರು ತಿಳಿಸಿದ್ದಾರೆ.

ಭಾರತಕ್ಕೆ ಬರಬೇಕಾದ ಬರ್ಮಾ ಸಾಲ

ಬರ್ಮಾ ಸರ್ಕಾರವು ಭಾರತಕ್ಕೆ ಕೊಡಬೇಕಾಗಿರುವ ಸುಮಾರು ೬೦ ಕೋಟಿ ರೂಪಾಯಿಗಳ ಸಾಲದ ವಿಷಯದಲ್ಲಿ ಅಲ್ಲಿಯ ಸರ್ಕಾರದೊಡನೆ ಮಾತುಕತೆ ನಡೆಸಲು ಕೇಂದ್ರ ಸರ್ಕಾರದ ಆರ್ಥಿಕ ಶಾಖಾ ಕಾರ್ಯದರ್ಶಿ ಶ್ರೀ ರಂಗಾಚಾರ್‌ರವರು ರಂಗೂನಿಗೆ ಹೋಗಿದ್ದಾರೆ.

೧೯೩೭ರಲ್ಲಿ ಬರ್ಮಾವು ಪ್ರತ್ಯೇಕವಾದಾಗ ಭಾರತವು ಅಲ್ಲಿ ಬಿಟ್ಟುಬಂದ ರೈಲ್ವೆ ಮತ್ತು ತಂತಿ ಮುಂತಾದ ಆಸ್ತಿಗಳ ಬೆಲೆಯೂ ಇದರಲ್ಲಿ ಸೇರಿದೆ.

ಉನ್ನತ ಶಿಕ್ಷಣಕ್ಕೆ ಅಡ್ಡಿ ಇಲ್ಲ

ವಿಶ್ವವಿದ್ಯಾನಿಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳ ಸಂಖ್ಯೆಯನ್ನು ಮಿತಿಗೊಳಿಸುವ ಉದ್ದೇಶ ಭಾರತ ಸರ್ಕಾರಕ್ಕಿಲ್ಲ–ಎಂದು ಪಾರ್ಲಿಮೆಂಟಿನಲ್ಲಿ ಶಿಕ್ಷಣ ಶಾಖಾ ಉಪಸಚಿವರು ತಿಳಿಸಿದ್ದಾರೆ.

ವಾರ್ಷಿಕೋತ್ಸವ

ಮೈಸೂರು ೨೭

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ೬ನೇ ವಾರ್ಷಿಕೋತ್ಸವವು ಇದೇ ೨೯ನೇ ತಾರೀಖು ಸಂಜೆ ೬ ಗಂಟೆಗೆ ಪುರಭವನದಲ್ಲಿ ನಡೆಯುತ್ತದೆ. ವಿದ್ಯಾ ಮತ್ತು ಕಾರ್ಮಿಕ ಸಚಿವ ಶ್ರೀ ಎ.ಜಿ.ರಾಮಚಂದ್ರರಾಯರು ಅಧ್ಯಕ್ಷತೆ ವಹಿಸುತ್ತಾರೆ. ಕಾಂಗ್ರೆಸ್ಸಿನ ಮಾಜಿ ಕಾರ್ಯದರ್ಶಿ ಮತ್ತು ಶಾಸನ ಸಭಾ ಸದಸ್ಯ ಶ್ರೀ ಕೆ. ಪಟ್ಟಾಭಿರಾಮರವರು ಆರಂಭ ಭಾಷಣ ಮಾಡುತ್ತಾರೆ.

ಆಂಧ್ರ ರಾಜಧಾನಿ ವರ್ಗಾವಣೆ ಬಗ್ಗೆ ಚರ್ಚೆ

ನಿನ್ನೆಯದಿನ ಕರ್ನೂಲ್‌ನಲ್ಲಿ ಆಂಧ್ರ ಶಾಸನ ಸಭಾಧಿವೇಶನದಲ್ಲಿ ಗೌರ್ನರ್ ಭಾಷಣವು ಚರ್ಚೆಗೆ ಬಂದಾಗ ಆಂಧ್ರ ರಾಜಧಾನಿಯನ್ನು ಕರ್ನೂಲಿನಿಂದ ವಿಜಯವಾಡಾ ಗುಂಟೂರಿಗೆ ಬದಲಾಯಿಸಬೇಕೆಂಬ ಹಲವಾರು ತಿದ್ದುಪಡಿಗಳು ಬಂದುವು. ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂ ಮತ್ತು ಆರ್ಥಿಕ ಸಚಿವ ಶ್ರೀ ಟಿ. ವಿಶ್ವನಾಥಂರವರು ಇದನ್ನು ವಿರೋಧಿಸಿ, ಗೌರ್ನರ್‌ರವರ ಭಾಷಣದಲ್ಲಿ ರಾಜಧಾನಿ ವಿಷಯವೇ ಇಲ್ಲದಿರುವಾಗ ಈ ತಿದ್ದುಪಡಿಗಳನ್ನು ತೆಗೆದುಕೊಳ್ಳಲಾಗದೆಂದು ತಿಳಿಸಿದರು ಆದಾಗ್ಯೂ ಸಭಾಧ್ಯಕ್ಷರು ಅವುಗಳನ್ನೂ ಸ್ವೀಕರಿಸಿ, ಚರ್ಚೆ ಪ್ರಾರಂಭವಾಯಿತು.

ಆಂಧ್ರ ರಾಜಧಾನಿಯನ್ನು ಬದಲಾಯಿಸುವ ವಿಷಯದಲ್ಲಿ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ಕಮ್ಯೂನಿಸ್ಟ್ ಪಕ್ಷವಿನಹ ಇತರ ಎಲ್ಲಾ ಪಕ್ಷಗಳ ಪ್ರಮುಖರೊಡನೆ ಚರ್ಚೆ ನಡೆಸಿ ಒಂದು ಸಂಯುಕ್ತ ನಿರ್ಧಾರಕ್ಕೆ ಬರಲು ಯತ್ನಿಸುತ್ತಲಿರುವುದಾಗಿ ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು. ೨೬—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೮	೨೧—೮
ಎಳ್ಳು	೬೦—೨	೬೩—
ಹರಳು	೩೪—	೩೫—೮
ಹುಚ್ಚೆಳ್ಳು	೪೦—	—
ಹುರಳಿ	೩೩—೮	೩೫—೮
ಹೆಸರು	೩೨—	೩೬—೧೨
ಉದ್ದು	೫೮—೧೦	—
ಅಲಸಂದೆ	೩೨—೨	೫೩—೨
ಹುಣಸೇಹಣ್ಣು	—	—
ಮೆಣಸಿನಕಾಯಿ	೧೨—	೩೦—೧೦
ಬೆಲ್ಲ	೬—	—

ಆಂಧ್ರ ಸರ್ಕಾರಕ್ಕೆ ಪಿ. ಎಸ್. ಪಿ. ಪೂರ್ಣ ಬೆಂಬಲ ನೀಡುತ್ತದೆ

ಆಚಾರ್ಯ ಕೃಪಲಾನಿಯವರ ಹೇಳಿಕೆ

ಆಂಧ್ರ ಮಂತ್ರಿಮಂಡಲದಲ್ಲಿ ಪ್ರಜಾಸೋಷಲಿಸ್ಟ್ ಪಕ್ಷವು ಇರುವುದರಿಂದ ಏನೂ ಪ್ರಯೋಜನವಿಲ್ಲವೆಂದು ಪಕ್ಷದ ರಾಷ್ಟ್ರೀಯ ಕಾರ್ಯಕಾರ ಸಮಿತಿಯು ನಿರ್ಧರಿಸಿದೆ. ಆದಾಗ್ಯೂ ಅಲ್ಲಿರುವ ಕಾಂಗ್ರೆಸ್ ಸರ್ಕಾರಕ್ಕೆ ಪ್ರಜಾಸೋಷಲಿಸ್ಟ್ ಪಕ್ಷವು ತನ್ನ ಪೂರ್ಣ ಬೆಂಬಲವನ್ನು ನೀಡುತ್ತದೆ. ಆಂಧ್ರದಲ್ಲಿರುವ ವಿಶೇಷ ಪರಿಸ್ಥಿತಿಗಾಗಿ ಈ ನಿಲುವನ್ನು ತಮ್ಮ ಪಕ್ಷವು ತೆಗೆದುಕೊಂಡಿದೆ. ಈಗ ಮಂತ್ರಿಮಂಡಲದಲ್ಲಿರುವ ಶ್ರೀ ಟಿ. ವಿಶ್ವನಾಥಂರವರು ಮಂತ್ರಿಮಂಡಲದಲ್ಲಿ ಮುಂದುವರೆಯುತ್ತಾರೆ.

ಅವರು ಪಕ್ಷಕ್ಕೆ ರಾಜೀನಾಮೆ ಕೊಡುವವರೆಗೆ ಅಥವಾ ಪಕ್ಷವು ಅವರನ್ನು ಹೊರದೂಡುವವರೆಗೆ ಅವರು ಪ್ರಜಾಸೋಷಲಿಸ್ಟ್ ಪಕ್ಷದ ಸದಸ್ಯರಾಗಿಯೇ ಇರುತ್ತಾರೆಂದು ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ಹೇಳಿದ್ದಾರೆ. ತಮ್ಮ ಪಕ್ಷವು ಕಾಂಗ್ರೆಸ್ ಸರ್ಕಾರಕ್ಕೆ ಯಾವರೀತಿಯಾದ ತೊಡಕನ್ನುಂಟುಮಾಡುವುದಿಲ್ಲವೆಂದೂ ಅವರು ಹೇಳಿದ್ದಾರೆ.

ಗೋದಾವರಿ ಪರಿಹಾರ ನಿಧಿಗೆ ನೆರವು

ಹೈದರಾಬಾದ್ ಪ್ರಾಂತ್ಯದಲ್ಲಿ ಗೋದಾವರಿ ಪರಿಹಾರ ನಿಧಿಗೆ ಪ್ರಧಾನಿ ನೆಹರೂರವರು ೨೦ ಸಾವಿರ ರೂಪಾಯಿಗಳನ್ನು ಕಳುಹಿಸಿದ್ದಾರೆ.

ಅಂತರ ರಾಷ್ಟ್ರೀಯ ಕುಸ್ತಿ ಸಂಸ್ಥೆಯವರು ೫ ಸಾವಿರ ರೂಪಾಯಿಗಳನ್ನು ಕೊಟ್ಟಿರುವರು.

ಆಂಧ್ರದಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ ರಚನೆ

ನೂತನ ಆಂಧ್ರ ಪ್ರಾಂತ್ಯದಲ್ಲಿ ಅಲ್ಲಿಯ ಗೌರ್ನರ್‌ರವರು ಪಬ್ಲಿಕ್ ಸರ್ವಿಸ್ ಕಮಿಷನ್ನನ್ನು ನೇಮಕ ಮಾಡಿದ್ದಾರೆ. ಈ ಕಮಿಷನ್ನಿಗೆ ಶ್ರೀ ವಿವೇಕಾನಂದಮೂರ್ತಿಯವರು ಅಧ್ಯಕ್ಷರು, ಶ್ರೀ ರಾಮಶೆಟ್ಟಿ ಮತ್ತು ಶ್ರೀ ವೆಂಕಟರಮಣನಾಯ್ಡುರವರು ಸದಸ್ಯರು.

ಸೆರೆಮನೆ ಸುಧಾರಣಾ ಸಮಿತಿ

ತಿರುವಾಂಕೂರ್-ಕೊಚ್ಚಿ ಪ್ರಾಂತ್ಯದಲ್ಲಿ ಸೆರೆಮನೆಗಳ ಸುಧಾರಣೆಗಾಗಿ ಸಲಹೆಮಾಡಲು ಅಲ್ಲಿಯ ಸರ್ಕಾರವು ಒಂದು ಸುಧಾರಣಾ ಸಮಿತಿಯನ್ನು ನೇಮಕಮಾಡಿದೆ.

ಬಿ. ಎನ್. ರಾವ್ ದೇಹಸ್ಥಿತಿ

ಸ್ವಿಟ್ಜರ್‌ಲೆಂಡಿನ ಜೂರಿಚ್‌ನಲ್ಲಿ ಚಿಕಿತ್ಸೆ ಪಡೆಯುತ್ತಲಿರುವ ಶ್ರೀ ಬಿ. ಎನ್. ರಾವ್‌ರವರ ದೇಹಸ್ಥಿತಿಯಲ್ಲಿ ಯಾವ ಬದಲಾವಣೆಗಳೂ ಕಂಡುಬಂದಿಲ್ಲವೆಂದು ತಿಳಿಯಬರುತ್ತದೆ.

ರೆವಿನ್ಯೂ ಸಚಿವರ ಪ್ರವಾಸ

ಬೆಂಗಳೂರು ೨೭

ರೆವಿನ್ಯೂ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರು ನಾಳೆಯಿಂದ ೩೦ನೇ ತಾರೀಖಿನವರೆಗೆ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡುತ್ತಾರೆ.

ಕಾಲರಾ ರೋಗದಿಂದ ೫೫ ಮರಣ

ನವೆಂಬರ್ ೧೯ಕ್ಕೆ ಮುಕ್ತಾಯವಾದ ವಾರದಲ್ಲಿ ಸಂಸ್ಥಾನದ ಹಲವುಕಡೆ ಕಾಲರಾ ರೋಗವು ಒಟ್ಟು ೧೩೩ ಜನರಿಗೆ ತಗುಲಿ ೫೫ ಮರಣಗಳಾದುವೆಂದು ಆರೋಗ್ಯ ಶಾಖಾ ವರದಿ ತಿಳಿಸುತ್ತದೆ.

ಕರ್ಣಾಟಕದ ಬಗ್ಗೆ ಅಭಿಪ್ರಾಯ ಸಂಗ್ರಹಣಾ ಸಮಿತಿ

ಭಾರತ ಸರ್ಕಾರವು ಸದ್ಯದಲ್ಲಿಯೇ ನೇಮಿಸಲಿರುವ ಹೈಪವರ್ ಕಮಿಷನ್ನಿನ ಮುಂದೆ ಕರ್ಣಾಟಕದ ಅಭಿಪ್ರಾಯವನ್ನು ಮಂಡಿಸಲು ನಾನಾ ವಿಷಯಗಳನ್ನು ಚರ್ಚಿಸಿ ತನ್ನ ವಾದವನ್ನು ಸಿದ್ಧಗೊಳಿಸಲು ಕರ್ಣಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ೬ ಜನರ ಸಮಿತಿಯನ್ನು ನೇಮಿಸಿದ್ದಾರೆ.

ಪ್ರೆಸ್ ಕಮಿಷನ್ ಮುಂದೆ ಸಾಕ್ಷ್ಯ

ಮದ್ರಾಸಿನಲ್ಲಿರುವ ಪ್ರೆಸ್ ಕಮಿಷನ್ನಿನ ಮುಂದೆ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ನಿನ್ನೆಯದಿನ ತಮ್ಮ ಅಭಿಪ್ರಾಯನನ್ನಿತ್ತರು. ಕಮಿಷನ್ನಿನವರು ಈದಿನ ಬೊಂಬಾಯಿಗೆ ಪ್ರಯಾಣ ಮಾಡುವರು.

ವುಡ್ ಲ್ಯಾಂಡ್ಸ್

27-11-53 ರಿಂದ ಅಮೋಘಪ್ರಾರಂಭ

ದಿನ 3 ಆಟಗಳು 2-45,6-30,10ಕ್ಕೆ

ಸಂಗೀತ ಪಿಕ್ಚರ್ಸ್‌ರವರ:—

★ ನಾಲ್ವರ್ ★ [ತಮಿಳು]

ಪಾತ್ರ:—ಕುಮಾರಿತಂಗಂ,ನಾಗರಾಜನ್, ಮುತ್ತುಲಕ್ಷ್ಮಿ, ಐಳುಮಲೈ, ಕುಮಾರಿ ಕಮಲ.

ಪ್ರಕಾಶಕರು ಮತ್ತು ಮುದ್ರಕರು

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೮೧

೨೮-೧೧-೧೯೫೩ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮೈಸೂರು ಮಂತ್ರಿಮಂಡಲದ ಮೇಲಿನ ಆಪಾದನೆ ಅಲ್ಪ

ಕಾರ್ಯಕ್ರಮ ಅನಗತ್ಯವೆಂದು ನೆಹರೂ

ಮೈಸೂರು ಕಾಂಗ್ರೆಸ್ಸಿನ ಮತ್ತು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಹಲವು ಸದಸ್ಯರು ಶ್ರೀ ಕೆ. ಹನುಮಂತಯ್ಯನವರ ಮಂತ್ರಿಮಂಡಲದ ಮೇಲೆ ಹೊರಿಸಿದ್ದ ಆಪಾದನೆಗಳು ಕೇವಲ ಅಲ್ಪವೆಂದೂ, ಅದರ ಬಗ್ಗೆ ಯಾವ ಕಾರ್ಯಕ್ರಮ ಕೈಗೊಳ್ಳಬೇಕಾದ ಅವಶ್ಯಕತೆ ಇಲ್ಲವೆಂದೂ ಅಖಿಲಭಾರತ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ತಿಳಿಸಿರುವ ಪತ್ರವೊಂದು ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರಿಗೆ ಬಂದಿರುವುದಾಗಿ ತಿಳಿದುಬಂದಿದೆ.

ಪಾಕೀಸ್ತಾನ--ಭಾರತ ಒಂದಾಗಲೇಬೇಕು

ಜನಸಂಘದ ನಿಲುವು

ಮೈಸೂರು ೨೮

ಅಖಿಲಭಾರತೀಯ ಜನಸಂಘದ ಕಾರ್ಯದರ್ಶಿ ಶ್ರೀ ದೀನದಯಾಳ್ ಉಪಾಧ್ಯಾಯರವರು ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಭಾಷಣ ಸಂಘದ ಚಟುವಟಿಕೆಯನ್ನು ವಿವರಿಸಿದರು.

ಅವರು ನಿನ್ನೆ ಮಧ್ಯಾಹ್ನ ಪತ್ರಿಕಾಗೋಷ್ಠಿಯನ್ನು ನಡೆಸಿ ಸಂಘದ ಹಲವಾರು ಧ್ಯೇಯಗಳನ್ನು ತಿಳಿಸಿದರು.

ಪಾಕೀಸ್ತಾನವನ್ನು ಇಸ್ಲಾಂ ರಾಷ್ಟ್ರವನ್ನಾಗಿ ರಾಜ್ಯಾಂಗ ಮಾಡುತ್ತಿರುವುದನ್ನು ಅವರು ತೀವ್ರವಾಗಿ ಖಂಡಿಸಿ ಇದರಿಂದ ಪಾಕೀಸ್ತಾನ ಮತ್ತು ಭಾರತದಲ್ಲಿರುವ ಅಲ್ಪಸಂಖ್ಯಾತರ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ಉಂಟಾಗುವುದೆಂದು ತಿಳಿಸಿದರು. ಈ ಬಗ್ಗೆ ಪ್ರಧಾನಿ ನೆಹರೂರವರ ನೀತಿಗೆ ತಮ್ಮ ಪಕ್ಷದ ಸಂಪೂರ್ಣ ಬೆಂಬಲವಿದೆಯೆಂದೂ ಅವರು ಹೇಳಿದರು.

ಈ ಸಂಬಂಧದಲ್ಲಿ ಅವರು ಪಾಕೀಸ್ತಾನ ಮತ್ತು ಭಾರತ ದೇಶದ ನಡುವೆ ಉಂಟಾಗಿರುವ ಸ್ನೇಹ ಮನೋಭಾವವನ್ನು ಪ್ರಸ್ತಾಪಿಸಿ, ಇದರಿಂದ ಮುಂದೆ ಎರಡು ರಾಷ್ಟ್ರಗಳು ಒಂದಾಗಬೇಕೆಂದೂ, ಜನಸಂಘವು ಮೊದಲಿನಿಂದಲೂ ಈ ವಿಭಜನೆಗೆ ವಿರೋಧ ವ್ಯಕ್ತಪಡಿಸಿದೆಯೆಂದೂ ಎರಡು ಐಕ್ಯವಾಗಲು ತಮ್ಮ ಸಂಘವು ಸರ್ವ ಪ್ರಯತ್ನ ಮಾಡುವುದೆಂದೂ ತಿಳಿಸಿದರು.

ಈಗ ದೇಶದಲ್ಲಿ ಉಂಟಾಗಿರುವ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕಾದರೆ, ಪಂಚವಾರ್ಷಿಕ ಯೋಜನೆಯಲ್ಲಿ ಅಡಕವಾಗಿರುವ ದೀರ್ಘ ಮತ್ತು ದೊಡ್ಡ ಯೋಜನೆಗಳಿಂದ ಸಾಧ್ಯವಿಲ್ಲವೆಂದೂ, ಗೃಹ ಕೈಗಾರಿಕೆಗಳಂತಹ ಸಣ್ಣ ಪುಟ್ಟ ಯೋಜನೆಗಳನ್ನು ಕೂಡಲೇ ಕೈಗೊಳ್ಳಬೇಕೆಂದೂ ಅವರು ಸಲಹೆ ಮಾಡಿದರು.

ಭಾಷೆಯ ಆಧಾರದಮೇಲೆ ಪ್ರಾಂತ್ಯ ವಿಂಗಡಣೆಗೆ ತಮ್ಮ ಪಕ್ಷವು ವಿರೋಧವಾಗಿದೆಯೆಂದೂ, ಆದರೆ ಈಗಿರುವ ಸಂಸ್ಥಾನಗಳ ವಿಂಗಡಣೆಯನ್ನು ಸಾಮಾಜಿಕ, ಸಾಂಸ್ಕೃತಿಕ ಹಾಗೂ ಆಡಳಿತ ಅನುಕೂಲಗಳ ಮೇಲೆ ಮಾಡಬೇಕೆಂದೂ ಅವರು ತಿಳಿಸಿದರು.

ಕಾನೂನಿನ ಮೂಲಕ ಭಾರತಾದ್ಯಂತ ಗೋಹತ್ಯೆ ನಿಷೇಧಿಸಬೇಕೆಂದೂ ಅವರು ಒತ್ತಾಯ ಮಾಡಿದರು.

ಖೈದಿಗಳ ವರ್ಗಾವಣೆಯಿಲ್ಲ

ಬೆಂಗಳೂರು ೨೮

ಇಲ್ಲಿಯ ಸೆಂಟ್ರಲ್ ಜೈಲಿನ ಖೈದಿಗಳನ್ನು ಬಳ್ಳಾರಿಗೆ ಸದ್ಯಕ್ಕೆ ವರ್ಗಾಯಿಸುವುದಿಲ್ಲವೆಂದು ಸರ್ಕಾರವು ತೀರ್ಮಾನಿಸಿರುವುದಾಗಿ ತಿಳಿಯಬರುತ್ತದೆ.

ಜಿಲ್ಲಾ ಬೋರ್ಡು ಅಧ್ಯಕ್ಷರುಗಳ ಸಮ್ಮೇಳನ

ಬೆಂಗಳೂರು ೨೮

ಶಾಸನ ಸಭೆಯ ಕಾಂಗ್ರೆಸ್ ಪಕ್ಷವು ಜಿಲ್ಲಾ ಬೋರ್ಡುಗಳನ್ನು ರದ್ದುಗೊಳಿಸಿ, ತಾಲ್ಲೂಕು ಬೋರ್ಡುಗಳನ್ನು ರಚಿಸಬೇಕೆಂದು ತೀರ್ಮಾನಿಸಿರುವುದನ್ನು ಪರಿಶೀಲಿಸಲು ಸಂಸ್ಥಾನದ ಎಲ್ಲಾ ಜಿಲ್ಲಾ ಬೋರ್ಡುಗಳ ಅಧ್ಯಕ್ಷರುಗಳ ಸಮ್ಮೇಳನವೊಂದು ಇದೇ ೩೦ನೇ ತಾರೀಖು ಬೆಂಗಳೂರಿನಲ್ಲಿ ನಡೆಯಲಿದೆ ಈ ಸಭೆಯನ್ನು ಬೆಂಗಳೂರು ಜಿಲ್ಲಾ ಬೋರ್ಡು ಅಧ್ಯಕ್ಷ ಶ್ರೀ ಹೆಚ್. ಆರ್. ಗುರುವಾರೆಡ್ಡಿಯವರು ಕರೆದಿರುವರು.

ಕಾಫಿ ಬೆಲೆಯಲ್ಲಿ ಇಳಿತಾಯ

ಬೆಂಗಳೂರು ೨೮

ಕಾಫಿ ಬೆಲೆಯನ್ನು ೧೧೨ ಪೌಂಡುಗಳ ತೂಕಕ್ಕೆ ೧೫ ರೂಪಾಯಿನಂತೆ ಇಳಿಸಲು ಇಂಡಿಯನ್ ಕಾಫಿ ಬೋರ್ಡಿನವರು ತೀರ್ಮಾನಿಸಿರುವುದಾಗಿ ಹೇಳಲಾಗಿದೆ.

ಬಹಿರಂಗ ಮಾರಾಟಕ್ಕಾಗಿ ಸಕ್ಕರೆ

ಈ ತಿಂಗಳಿನ ಅಂತ್ಯದವರೆಗೆ ಭಾರತದ ಸಕ್ಕರೆ ಕಂಪೆನಿಗಳಲ್ಲಿ ತಯಾರಾದ ಸಕ್ಕರೆಯನ್ನೆಲ್ಲಾ ಬಹಿರಂಗವಾಗಿ ಯಾವ ಅಡಚಣೆಯು ಇಲ್ಲದೆ ಸಾರ್ವಜನಿಕರಿಗೆ ಮಾರಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಸಕ್ಕರೆ ಬೆಲೆಯು ಏರದಂತೆ ಕೇಂದ್ರ ಸರ್ಕಾರವು ಪರದೇಶಗಳಿಂದ ಸಕ್ಕರೆಯನ್ನು ತರಿಸಿಕೊಂಡು ದಾಸ್ತಾನು ಮಾಡುತ್ತಿದೆ. ಈಗಾಗಲೇ ೧ ಲಕ್ಷ ಟನ್ ಸಕ್ಕರೆ ಬಂದಿದೆ. ಇನ್ನು ೪೫ ಸಾವಿರ ಟನ್ ಕೊಳ್ಳಲು ನಿರ್ಧರಿಸಲಾಗಿದೆ.

ಆಂಧ್ರ ರಾಜಧಾನಿ ಪ್ರಶ್ನೆ

ಕರ್ನೂಲಿನಲ್ಲಿ ಪ್ರಾರಂಭವಾದ ಆಂಧ್ರ ಶಾಸನಸಭೆಯಲ್ಲಿ ನಿನ್ನೆ ಗೌರ್ನರವರ ಭಾಷಣಕ್ಕೆ ಅಭಿನಂದಿಸುವ ವಿಷಯವು ಬಂದಾಗ ಆಂಧ್ರ ರಾಜಧಾನಿಯನ್ನು ವಿಜಯವಾಡಾ ಗುಂಟೂರಿಗೆ ವರ್ಗಾಯಿಸಬೇಕೆಂದು ಹಲವಾರು ಸದಸ್ಯರು ಸೂಚಿಸಿದ್ದ ತಿದ್ದುಪಡಿಗಳು ಚರ್ಚೆಗೆ ಬಂದುವು.

ಆ ಸಮಯದಲ್ಲಿ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ಮಾತನಾಡುತ್ತಾ ಕೇಂದ್ರ ಸರ್ಕಾರವು ರಚಿಸಲಿರುವ ಪ್ರಾಂತ್ಯ ವಿಂಗಡನಾ ಉನ್ನತ ಮಂಡಲಿಯು ಇನ್ನು ಮೂರು ವರ್ಷಗಳಲ್ಲಿ ವಿಶಾಲಾಂಧ್ರ ಪ್ರಶ್ನೆಯನ್ನು ಇತ್ಯರ್ಥಮಾಡಿದರೆ ಆಗ ಹೈದರಾಬಾದ್ ಆಂಧ್ರದ ಖಾಯಂ ರಾಜಧಾನಿಯಾಗುತ್ತದೆ ಹಾಗೆ ೩ ವರ್ಷಗಳಲ್ಲಿ ಈ ವಿಶಾಲಾಂಧ್ರ ಪ್ರಶ್ನೆ ಇತ್ಯರ್ಥವಾಗದಿದ್ದರೆ ವಿಜಯವಾಡಾ, ಗುಂಟೂರು ಅಥವಾ ವಾಲ್ಟೇರನ್ನು ಆಂಧ್ರದ ಖಾಯಂ ರಾಜಧಾನಿಯನ್ನಾಗಿ ಮಾಡಲು ಸರ್ಕಾರವು ಎಲ್ಲಾ ಸೂಕ್ತ ಕಾರ್ಯಗಳನ್ನು ತೆಗೆದುಕೊಳ್ಳುವುದಾಗಿ ತಿಳಿಸಿದರು.

ಈ ವಿಷಯದಲ್ಲಿ ನಿನ್ನೆದಿನ ಅಪೂರ್ಣ ಚರ್ಚೆ ನಡೆಯಿತು ಈದಿನವೂ ಚರ್ಚೆ ನಡೆಯುತ್ತದೆ. ಇದಕ್ಕೆ ಮುನ್ನ ಶ್ರೀ ಟಿ. ಪ್ರಕಾಶಂರವರು ಕಮ್ಯೂನಿಸ್ಟ್ ವಿನಹ ಮಿಕ್ಕೆಲ್ಲ ಪಕ್ಷದ ನಾಯಕರೊಡನೆ ರಾಜಧಾನಿ ಪ್ರಶ್ನೆಯನ್ನು ದೀರ್ಘವಾಗಿ ಚರ್ಚಿಸಿ ಈ ತೀರ್ಮಾನವನ್ನು ಮಾಡಿರುವುದಾಗಿ ತಿಳಿಯಬರುತ್ತದೆ.

ಈ ತೀರ್ಮಾನವು ಆಂಧ್ರ ರಾಜಧಾನಿ ವಿಷಯದಲ್ಲಿ ಇನ್ನೂ ಹೆಚ್ಚು ತೊಂದರೆಯನ್ನು ಉಂಟುಮಾಡುವುದೆಂದೂ ಹೊಸದಾಗಿ ವಾಲ್ಟೇರನ್ನು ಈ ಪ್ರಶ್ನೆಯಲ್ಲಿ ತಂದಿರುವುದು ಉದ್ದೇಶಪೂರ್ವಕ ಅಡಚಣೆಯನ್ನುಂಟ ಮಾಡುವುದನ್ನು ವ್ಯಕ್ತಪಡಿಸುತ್ತದೆಯೆಂದೂ ಕಮ್ಯೂನಿಸ್ಟ್ ಪಕ್ಷದವರು ಟೀಕಿಸುತ್ತಲಿರುವುದಾಗಿ ಗೊತ್ತಾಗಿದೆ.

ಎಸ್.ಎಸ್.ಎಲ್.ಸಿ. ಫಲಿತಾಂಶ

ಮೈಸೂರು ೨೮

ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶವು ಡಿಸೆಂಬರ್ ೪ನೇ ತಾರೀಖು ಪ್ರಕಟಣೆಯಾಗುವುದೆಂದು ತಿಳಿಯಬರುತ್ತದೆ.

ಮುಖ್ಯಮಂತ್ರಿಗಳ ಮೇಲೆ ಕೈಮಾಡಿದ ಪ್ರಸಂಗ

ಸರ್ಕಾರಿ ಪ್ರಕಟಣೆ

ಬೆಂಗಳೂರು ೨೭

ಮುಖ್ಯಮಂತ್ರಿಗಳು ವಿಧಾನ ಸೌಧವನ್ನು ಪರಿಶೀಲಿಸುತ್ತಿದ್ದಾಗ ನಡೆದ ಘಟನೆಯ ಬಗ್ಗೆ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿ ಈರೀತಿ ಹೇಳಿದ್ದಾರೆ.

ಈಗ ಕಟ್ಟಲಾಗುತ್ತಿರುವ ವಿಧಾನ ಸೌಧ ಭವನವನ್ನು ಮುಖ್ಯಮಂತ್ರಿಗಳು ನಿನ್ನೆ (೨೬-೧೧-೫೩) ಪರಿಶೀಲಿಸುತ್ತಿದ್ದಾಗ, ಖೈದಿಗಳ ಪೈಕಿ ಒಬ್ಬನು ಮುಖ್ಯಮಂತ್ರಿಗಳ ಮೇಲೆ ಕೈಮಾಡಿದನು. ಇದರಿಂದ ಮುಖ್ಯಮಂತ್ರಿಗಳಿಗೆ ಎಡಗಣ್ಣಿನ ಸಮೀಪದಲ್ಲಿ ಸ್ವಲ್ಪ ಏಟುಬಿತ್ತು. ಮುಖ್ಯಮಂತ್ರಿಗಳು ಈ ಪ್ರಸಂಗವನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ತಮ್ಮ ಪರಿಶೀಲನೆಯನ್ನು ಕಾರ್ಯಕ್ರಮದಂತೆ ನಡೆಸಿ, ಮುಕ್ತಾಯಗೊಳಿಸಿದರು.

ಈ ಸಂಬಂಧದಲ್ಲಿ ಕೆಲವು ಪತ್ರಿಕೆಗಳು ಪ್ರಕಟಿಸಿರುವಕಾರಣಗಳು ಕೇವಲ ಊಹಾಪೋಹಗಳಿಂದ ಕೂಡಿವೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ರಜಾ

ಸರ್ಕಾರದ ಮುಖ್ಯ ಪ್ರಕಟಣಾಧಿಕಾರಿಗಳಾದ ಶ್ರೀ ಬಿ. ಎನ್. ಶ್ರೀಸತ್ಯರವರಿಗೆ ಅವರು ಉಪಯೋಗಿಸಿಕೊಳ್ಳುವ ದಿನದಿಂದ ಒಂದು ತಿಂಗಳು ರಜಾ ಮಂಜೂರಾಗಿದೆ. ಆ ಕಾಲದಲ್ಲಿ ಉಪಪ್ರಕಟಣಾಧಿಕಾರಿಗಳಾದ ಶ್ರೀ ಡಿ.ಆರ್. ರಾಮಯ್ಯನವರು ಆ ಕಾರ್ಯವನ್ನು ನೋಡಿಕೊಳ್ಳುವರು.

ನೆಹರೂ ವರ್ಧಂತ್ಯುತ್ಸವ

ಮೈಸೂರು ೨೮

ಭಾರತ ಸೇವಾವಳದ ಮಹಿಳಾಶಾಖೆಯ ಆಶ್ರಯದಲ್ಲಿ ನಾಳೆ ಸಂಜೆ ೪-೩೦ ಗಂಟೆಗೆ ಮಹಾರಾಣಿ ಹೈಸ್ಕೂಲಿನ ಆವರಣದಲ್ಲಿ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಪಂಡಿತ ನೆಹರೂರವರ ೬೫ನೇ ವರ್ಧಂತ್ಯುತ್ಸವವು ನಡೆಯುತ್ತದೆ.

ಟಿಕೀಟಿಲ್ಲದೆ ೩೦೦ ಜನರ ಪ್ರಯಾಣ

ಮಚಲೀಪಟ್ಟಣ ಮತ್ತು ಹೈದರಾಬಾದಿನಿಂದ ವಿಜಯವಾಡಕ್ಕೆ ರೈಲಿನಲ್ಲಿ ಟಿಕೀಟಿಲ್ಲದೆ ಬಂದ ೩೦೦ ಜನರನ್ನು ಹಿಡಿದು ಅವರ ಮೇಲೆ ಮೊಕದ್ದಮೆ ಹೂಡಲಾಗಿದೆಯೆಂದು ತಿಳಿಯಬರುತ್ತದೆ.

○ ಮದ್ರಾಸ್ ಸರ್ಕಾರವು ಜಾರಿಗೆ ತಂದಿರುವ ನೂತನ ಪ್ರಾಥಮಿಕ ಶಿಕ್ಷಣ ಯೋಜನೆಯನ್ನು ಪರಿಶೀಲಿಸಲು ನೇಮಕವಾಗಿದ್ದ ಪರುಲೇಕರ್ ಸಮಿತಿಯು ಈ ಯೋಜನೆಯನ್ನು ಪ್ರಶಂಸಿಸಿ ಕೆಲವು ಶಿಫಾರ್ಸುಗಳನ್ನೂ ಮಾಡಿದೆ.

ಮಾಜಿ ನರೇಂದ್ರರ ರಾಜಾದಾಯ ಖೋತಾ ವಿಷಯ

ಮಾಜಿ ನರೇಂದ್ರರು ತಮ್ಮ ರಾಜಾದಾಯವನ್ನು ಖೋತಾಮಾಡಿಕೊಳ್ಳಬೇಕೆಂದು ಸರ್ಕಾರದ ಪರವಾಗಿ ಯಾರಿಗೂ ಬರೆದಿಲ್ಲ ವೈಯುಕ್ತಿಕವಾಗಿ ಈ ಸಲಹಾ ಪತ್ರವನ್ನು ಕಳುಹಿಸಲಾಗಿದೆ ಎಂದು ಪ್ರಧಾನಿ ನೆಹ್ರೂರವರು ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ. ಒಂದು ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ರಾಜಾದಾಯ ಪಡೆಯುತ್ತಿರುವವರಿಗೆ ಮಾತ್ರ ಪತ್ರ ಬರೆಯಲಾಗಿದೆ ಕೆಲವರಿಂದ ಜವಾಬು ಬಂದಿದೆ. ವಿಷಯಗಳು ಪರಿಶೀಲನೆಯಲ್ಲಿವೆ ಎಂದು ಶ್ರೀ ನೆಹರೂ ತಿಳಿಸಿದ್ದಾರೆ.

ವರದಕ್ಷಿಣೆ ನಿರೋಧ ಶಾಸನ ಅಗತ್ಯ

ದೇಶದಲ್ಲಿ ವರದಕ್ಷಿಣೆಯನ್ನು ತೆಗೆದುಕೊಳ್ಳುವುದು ಮತ್ತು ಕೊಡುವುದನ್ನು ತಪ್ಪಿಸಬೇಕೆಂದು ಪಾರ್ಲಿಮೆಂಟಿನಲ್ಲಿ ಶ್ರೀ ಮತಿ ಉಮಾ ನೆಹ್ರೂರವರು ಮಂಡಿಸಿದ್ದ ನಿರ್ಣಯವು ನಿನ್ನೆ ಸಭೆಯ ಮುಂದೆ ಬಂದಾಗ ಕೇಂದ್ರ ಕಾನೂನು ಶಾಖಾ ಸಚಿವ ಶ್ರೀ ಸಿ. ಸಿ. ಬಿಸ್ವಾಸ್‌ರವರು ಮಾತನಾಡುತ್ತಾ ಈ ವಿಷಯದಲ್ಲಿ ಸರ್ಕಾರವು ಸೂಕ್ತ ಶಾಸನವನ್ನು ಮಾಡಲಿದೆಯೆಂದು ಭರವಸೆಯನ್ನಿತ್ತ ಮೇಲೆ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು.

ಆಂಧ್ರ ಮಂತ್ರಿಮಂಡಲದಲ್ಲಿ ಪಿ. ಎಸ್. ಪಿ. ಪ್ರತಿನಿಧಿ ಬೇಡ

ಆಂಧ್ರ ಮಂತ್ರಿಮಂಡಲದಲ್ಲಿರುವ ತಮ್ಮ ಪಕ್ಷದ ಸದಸ್ಯರಾದ ಶ್ರೀ ಟಿ. ವಿಶ್ವನಾಥಂರವರು ಶದ್ಯದಲ್ಲಿಯೇ ರಾಷ್ಟ್ರೀಯ ಕಾರ್ಯಕಾರಿ ಮಂಡಲಿಯು ಮಾಡಿರುವ ನಿರ್ಧಾರವನ್ನು ಪಾಲಿಸುವರೆಂದು ತಾವು ಆಶಿಸುವುದಾಗಿ ಮದ್ರಾಸಿಗೆ ಆಗಮಿಸಿರುವ ಪ್ರಜಾ ಸೋಷಲಿಸ್ಟ್ ಪಕ್ಷದ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ತಿಳಿಸಿದ್ದಾರೆ.

ಆಂಧ್ರ ಮಂತ್ರಿಮಂಡಲವನ್ನು ಪ್ರಜಾ ಸೋಷಲಿಸ್ಟ್ ಪಕ್ಷವು ಸೇರುವುದರಿಂದ ಪ್ರಯೋಜನವೇನೂ ಇಲ್ಲವೆಂದು ಪಕ್ಷದ ರಾಷ್ಟ್ರೀಯ ಕಾರ್ಯಸಮಿತಿ ಹಿಂದೆ ನಿರ್ಧಾರ ಮಾಡಿತು. ಅದರಂತೆ ಶ್ರೀ ವಿಶ್ವನಾಥಂರವರು ತಮ್ಮ ನೀತಿಯನ್ನು ಈಗ ರೂಪಿಸಬೇಕಾಗಿದೆ.

ರಷ್ಯಾ ಭಾಷೆಯಲ್ಲಿ ಅರ್ಥಶಾಸ್ತ್ರ

೩೦೦೦ ವರ್ಷಗಳಿಗಿಂತಲೂ ಪುರಾತನವಾದ ಭಾರತದ ಅರ್ಥಶಾಸ್ತ್ರವನ್ನು ಸೋವಿಯೆಟ್ ಭಾಷಾ ಸಾಹಿತಿಗಳು ರಷ್ಯಾಭಾಷೆಗೆ ಭಾಷಾಂತರ ಮಾಡಿದ್ದಾರೆ. ಹಿಂದೆ ರಾಮಾಯಣ ಮತ್ತು ಮಹಾಭಾರತವನ್ನು ಭಾಷಾಂತರ ಗೊಳಿಸಿದ್ದರು ಈಗ ರಷ್ಯ-ಹಿಂದಿ ಮತ್ತು ರಷ್ಯ-ಉರ್ದು ನಿಘಂಟು ತಯಾರಿಸಲಾಗುತ್ತಿದೆ ಎಂದು ತಿಳಿಯಬರುತ್ತದೆ.

ಕರ್ನೂಲಿನಲ್ಲಿ ೧೪೪ ನೇ ಸೆಕ್ಷನ್ ಜಾರಿ

ಪ್ರದರ್ಶನಗಾರರಿಂದ ರೈಲುಗಳ ತಡೆ

ರಾಜಧಾನಿ ಬದಲಾವಣೆಯಾಗಕೂಡದೆಂದು ಹರತಾಳ

ಆಂಧ್ರ ರಾಜಧಾನಿಯನ್ನು ಕರ್ನೂಲಿನಿಂದ ಬೇರೇಕಡೆಗೆ ಬದಲಾಯಿಸಕೂಡದೆಂದು ಅಲ್ಲಿಯ ಜನರು ನಡೆಸುತ್ತಲಿರುವ ಚಳುವಳಿಯು ನಿನ್ನೆ ಸಹ ನಡೆಯಿತು ವಿದ್ಯಾರ್ಥಿಗಳು ನಿನ್ನೆಯೂ ಶಾಲೆಗಳಿಗೆ ಹೋಗಲಿಲ್ಲ ಮದ್ರಾಸಿನಿಂದ ಬಂದ ವೃತ್ತಪತ್ರಿಕೆಗಳೆಲ್ಲಾ ಕಿತ್ತು ಗುಂಪು ಸುಟ್ಟುಹಾಕಿತು. ಶಾಸನಸಭೆಗೆ ತೆರಳುತ್ತಿದ್ದ ಅನೇಕ ಸದಸ್ಯರ ಮೋಟಾರುಕಾರುಗಳನ್ನು ತಡೆದು ಅವುಗಳಮೇಲೆ ಕಲ್ಲುಗಳನ್ನು ಎಸೆದುವು ಪ್ರದರ್ಶನಕಾರರು ದಕ್ಷಿಣ ಭಾರತ ರೈಲ್ವೆಯ ಕೆಲವು ಗಾಡಿಗಳನ್ನು ತಡೆದರು.

ಕರ್ನೂಲಿನಲ್ಲಿ ಮೆರವಣಿಗೆ ಸಭೆ ಮುಂತಾದುವನ್ನು ಪ್ರತಿಬಂಧಿಸಿ, ೧೪೪ ನೇ ವಿಧಿಯನ್ನು ಒಂದು ವಾರ ಕಾಲ ಜಾರಿ ಮಾಡಲಾಗಿದೆ

ಲಂಚ ಪಡೆದಿದ್ದಕ್ಕೆ ೫ ವರ್ಷ ಕಠಿಣ ಶಿಕ್ಷೆ

ಒಬ್ಬವಿದ್ಯಾರ್ಥಿಯನ್ನು ಪ್ರಭಾಕರ ಪರೀಕ್ಷೆಯಿಂದ ಉತ್ತೀರ್ಣನನ್ನಾಗಿ ಮಾಡುವುದಾಗಿ ತಿಳಿಸಿ ಲಂಚವನ್ನು ಪಡೆದರೆಂಬ ಆಪಾದನೆ ಮೇಲೆ ಠೋತಾರ್‌ನಲ್ಲಿರುವ ಗಾಂಧಿ ಮಹಾವಿದ್ಯಾಲಯದ ಮಾಜಿ ಪ್ರಿನ್ಸಿಪಾಲ್‌ರಿಗೆ ಅಲ್ಲಿಯ ಸ್ಪೆಷಲ್ ಮ್ಯಾಜಿಸ್ಟ್ರೇಟರು ೫ ವರ್ಷ ಕಠಿಣಶಿಕ್ಷೆಯನ್ನು ವಿಧಿಸಿದ್ದಾರೆ. ಅದೇ ಆಪಾದನೆ ಮೇಲೆ ಮುಲಕ್ ರಾಜ್ ಎಂಬುವವರಿಗೆ 4½ ವರ್ಷ ಕಠಿಣ ಶಿಕ್ಷೆಯನ್ನು ವಿಧಿಸಲಾಗಿದೆ.

ಅವಿಶ್ವಾಸ ನಿರ್ಣಯ ತಿರಸ್ಕಾರ

ಸಿಂಹಳದಲ್ಲಿರುವ ಸರ್ ಕೊಟೇಲವಾಲಾ ಸರ್ಕಾರದ ಮೇಲೆ ವಿರೋಧ ಪಕ್ಷದವರು ಮಂಡಿಸಿದ್ದ ಅವಿಶ್ವಾಸ ನಿರ್ಣಯವು ೧೭-೫೦ ಮತಗಳಿಂದ ತಿರಸ್ಕೃತವಾಯಿತು.

ಈ ಸಂದರ್ಭದಲ್ಲಿ ಪ್ರಧಾನಿಯವರು ಮಾತನಾಡುತ್ತಾ ಸಿಂಹಳದಲ್ಲಿರುವ ಭಾರತೀಯರ ಪೌರತ್ವ ಹಕ್ಕು ಮುಂತಾದ ಈ ವಿಷಯಗಳನ್ನು ಇತ್ಯರ್ಥಮಾಡಲು ವಿರೋಧ ಪಕ್ಷದವರು ಸಹಕರಿಸಬೇಕೆಂದು ಕೋರಿದರು.

ಇತ್ತೀಚಿನ ಜನಗಣತಿ ಪ್ರಕಾರ ಸಿಂಹಳದಲ್ಲಿ ೭ ಲಕ್ಷ ೮೮ ಸಾವಿರ ಭಾರತೀಯರಿರುವರು. ಅಲ್ಲಿರುವ ಐರೋಪ್ಯರ ಸಂಖ್ಯೆಯು ೬ ಸಾವಿರ.

ಜಮೀನ್ದಾರಿ ರದ್ದು ಮಸೂದೆ

ಪಶ್ಚಿಮ ಬಂಗಾಳದಲ್ಲಿ ಜಮೀನ್ದಾರಿ ರದ್ದಿನ ಮಸೂದೆಗೆ ಅಲ್ಲಿಯ ಶಾಸನ ಸಭೆಯು ಅಂಗೀಕಾರವಿತ್ತಿದೆ.

ಡಾ|| ನಾಗನಗೌಡರು

ಮೈಸೂರು ೨೮

ವ್ಯವಸಾಯ ಸಚಿವರಾದ ಡಾ|| ನಾಗನಗೌಡರು ಈ ಸಂಜೆ ರಾಜಧಾನಿಗೆ ಆಗಮಿಸಿ ನಾಳೆ ಕಾಕನಕೋಟೆಗೆ ಪ್ರಯಾಣಮಾಡಿ ಅಲ್ಲಿ ನಡೆಯುತ್ತಿರುವ ಕೆಡ್ಡಾ ಕಾರ್ಯಕ್ರಮಗಳನ್ನು ಪರಿಶೀಲಿಸಿ ಮಾರನೇದಿನ ಹಿಂತಿರುಗುವರು.

ಭೂದಾನ ಹಂಚಿಕೆ

ಭೂದಾನ ಯಜ್ಞ ಸಂಬಂಧದಲ್ಲಿ ಇಲ್ಲಿಯವರೆಗೆ ೬೬೦೦ ಸಂಸಾರಗಳಿಗೆ ೩೮೦೦೦ ಎಕರೆಗಳನ್ನು ಹಂಚಿರುವುದಾಗಿ ತಿಳಿಯಬರುತ್ತದೆ.

ಇಲ್ಲಿಯವರೆಗೆ ೨೧ ಲಕ್ಷ ೮೦ ಸಾವಿರ ಎಕರೆಗಳಷ್ಟು ಜಮೀನನ್ನು ಸಂಗ್ರಹಿಸಲಾಗಿದೆ.

ಚತುರ್ರಾಷ್ಟ್ರ ಸಮ್ಮೇಳನ

ಚತುರ್ರಾಷ್ಟ್ರ ಸಮ್ಮೇಳನವು ಬರ್ಲಿನ್‌ನಲ್ಲಿ ನಡೆಯಬೇಕೆಂದು, ರಷ್ಯಾವು ಪಶ್ಚಿಮ ರಾಷ್ಟ್ರಗಳಿಗೆ ತಿಳಿಸಿವೆ.

ಚತುರ್ರಾಷ್ಟ್ರ ಸಮ್ಮೇಳನದಲ್ಲಿ ರಷ್ಯ ಭಾಗವಹಿಸಲು ಒಪ್ಪಿಗೆಯಿತ್ತಿರುವುದನ್ನು ಬ್ರಿಟನ್ ಮತ್ತು ಫ್ರಾನ್ಸ್ ಸ್ವಾಗತಿಸಿವೆ. ಅಮೆರಿಕವು ಅದನ್ನು ಟೀಕಿಸಿದೆ.

ಶ್ರೀ ಚಕ್ರವರ್ತಿಯವರ ಅನಾರೋಗ್ಯ

ಕೊರಿಯಾದಲ್ಲಿ ಯುದ್ಧ ಖೈದಿಗಳ ವಿನಿಮಯ ಮಂಡಲಿಯ ಅಧ್ಯಕ್ಷ ಲೆ|| ಜನರಲ್ ತಿಮ್ಮಯ್ಯನವರ ರಾಜಕೀಯ ಸಲಹೆಗಾರರಾದ ಶ್ರೀ ಬಿ. ಎನ್. ಚಕ್ರವರ್ತಿಯವರು ಅನಾರೋಗ್ಯ ನಿಮಿತ್ತ ಭಾರತಕ್ಕೆ ಹಿಂತಿರುಗಲಿದ್ದಾರೆ.

ಮದ್ರಾಸ್‌ನಲ್ಲಿ ಸಿಂಹಳ ಕಛೇರಿ

ಮುಂದಿನ ತಿಂಗಳಿನಿಂದ ಮದ್ರಾಸ್‌ನಲ್ಲಿ ಸಿಂಹಳ ಸರ್ಕಾರವು ಒಂದು ಸಮಾಚಾರ ಮತ್ತು ಪ್ರಯಾಣ ರಹದಾರಿಗೆ ಸಂಬಂಧಪಟ್ಟ ಕಛೇರಿಯನ್ನು ತೆರೆಯಲಿದೆ.

ನ್ಯಾಯಾಂಗ- ಕಾರ್ಯಾಂಗ ಬೇರ್ಪಡೆ

ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವ ಕಾರ್ಯವು ಮುಂದಿನ ಜುಲೈ ಮಾಹೆಯಿಂದ ಮದ್ರಾಸ್ ಪ್ರಾಂತ್ಯದ ತಂಜಾವೂರು, ಮಲಬಾರ್ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಿಸ್ತರಿಸಲಾಗುತ್ತದೆ.

ಅಭಾವ ಪರಿಹಾರಕ್ಕೆ ೨ ಕೋಟಿ ರೂ. ಸಹಾಯ

ಪ್ರವಾಹ ಮುಂತಾದ ತೊಂದರೆಗಳಿಗೀಡಾದವರಿಗೆ ಪರಿಹಾರ ಒದಗಿಸಲು ನಾನಾ ಪ್ರಾಂತ್ಯ ಸರ್ಕಾರಗಳಿಗೆ ೫೩-೫೪ನೇ ಸಾಲಿನಲ್ಲಿ ೨,೬೬,೦೭,೦೦೦ ರೂ.ಗಳನ್ನು ಕೇಂದ್ರ ಸರ್ಕಾರ ಕೊಡುವುದೆಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ.

ಇದರ ಪೈಕಿ, ಮೈಸೂರು ಸಂಸ್ಥಾನಕ್ಕೆ ೪ ಲಕ್ಷ ರೂ. ಗ್ರಾಂಟು ಮತ್ತು ೪೨ ಲಕ್ಷ ರೂ. ಸಾಲ ಕೊಡಲಾಗುವುದು.

ಪ್ರಯತ್ನ ವಿಫಲ

ಮಧ್ಯಹಿಮಾಲಯದಲ್ಲಿರುವ ಅನ್ನಪೂರ್ಣ ಎಂಬ ೨೬೦೦೦ ಎತ್ತರದ ಶಿಖರಕ್ಕೆ ಹತ್ತಲು ಹೊರಟ ೭ ಜನರ ಜರ್ಮನ ತಂಡವೊಂದು ಅಲ್ಲಿಯ ಬಿರುಗಾಳಿ ಮುಂತಾದುವನ್ನು ತಡೆಯಲಾರದೆ ವಿಫಲರಾಗಿ ಹಿಂತಿರುಗಿದ್ದಾರೆ.

೧೬೦೦೦ ಉಪಾಧ್ಯಾಯರ ನೇಮಕ

ವಿದ್ಯಾವಂತರಿಗೆ ಉದ್ಯೋಗವನ್ನು ಕಲ್ಪಿಸುವ ಯೋಜನೆಯ ಪ್ರಕಾರ ದೇಶದಲ್ಲಿ ಸದ್ಯಕ್ಕೆ ೧೧ ಪ್ರಾಂತ್ಯಗಳು ೧೬೦೦೦ ಉಪಾಧ್ಯಾಯರನ್ನು ನೇಮಿಸಿಕೊಳ್ಳಲಿದೆ.

ಬಟ್ಟೆ ದಾಸ್ತಾನಿನಿಂದ ಕಾರ್ಮಿಕರಿಗೆ ಕೆಲಸವಿಲ್ಲ

ಬಟ್ಟೆ ದಾಸ್ತಾನು ವಿಶೇಷವಾಗಿರುವುದರಿಂದ ಅಹಮದಾಬಾದ್ ಮತ್ತು ಕೆಲವು ಬಟ್ಟೆಗಿರಣಿಗಳಲ್ಲಿ ೪೫೦೦ ಜನ ಕಾರ್ಮಿಕರನ್ನು ತೆಗೆದುಹಾಕಲಾಗಿದೆ.

ಮೈಸೂರು ಶಾಸನಸಭೆ

ಮುಂದಿನ ಜನವರಿ ೧೧ನೇ ತಾರೀಖಿನಿಂದ ಬೆಂಗಳೂರಿನಲ್ಲಿ ಮೈಸೂರು ಶಾಸನಸಭೆಯ ಅಧಿವೇಶನ ಪ್ರಾರಂಭವಾಗುವುದು. ಸುಮಾರು ಎರಡು ವಾರ ನಡೆಯಬಹುದೆಂದು ಹೇಳಲಾಗಿದೆ.

ರಣಜಿತ್
27—11—53 ರಿಂದ
ಸುರಯ್ಯ ಮತ್ತು ಸುರೇಶ್ ನಟಿಸಿರುವ:....
ಗೂಂಜ್ Goonj
ಪಾತ್ರ:-ಸಪ್ರು,ರಣಧೀರ್ ಮತ್ತು ಮಜನು.

ವುಡ್ ಲ್ಯಾಂಡ್ಸ್
27-11-53 ರಿಂದ ಅಮೋಘಪ್ರಾರಂಭ
ದಿನ 3 ಆಟಗಳು 2-45,6-30,10ಕ್ಕೆ
ಸಂಗೀತ ಪಿಕ್ಚರ್ಸ್‌ರವರ:—
★ ನಾಲ್ವರ್ ★ [ತಮಿಳು]
ಪಾತ್ರ:-ಕುಮಾರಿತಂಗಂ,ನಾಗರಾಜನ್, ಮುತ್ತುಲಕ್ಷ್ಮಿ, ಏಳುಮಲೈ, ಕುಮಾರಿ ಕಮಲ.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೮೨

೩೦-೧೧-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಡಾ|| ನಾಗನಗೌಡರಿಂದ ಖೆಡ್ಡಾ ಕೆಲಸಕಾರ್ಯಗಳ ಪರಿಶೀಲನೆ

ಮೈಸೂರು ೩೦

ವ್ಯವಸಾಯ ಸಚಿವರಾದ ಡಾ|| ನಾಗನಗೌಡರು ನಿನ್ನೆದಿನ ಮೈಸೂರು ಜಿಲ್ಲಾ ಅರಣ್ಯಾಧಿಕಾರಿಗಳಾದ ಶ್ರೀ ಗುಲಾಬ್ ಸಿಂಗ್‌ರೊಡನೆ ಕಾಕನಕೋಟೆ ಅರಣ್ಯಕ್ಕೆ ಭೇಟಿ ಇತ್ತು ಮುಂದಿನ ತಿಂಗಳು ೨೮ ನೇ ತಾರೀಖು ನಡೆಯಲಿರುವ ಕೆಡ್ಡಾ ಬಗ್ಗೆ ಕೈಗೊಂಡಿರುವ ಕಾರ್ಯಗಳನ್ನು ಪರಿಶೀಲಿಸಿದರು. ಕಾಡಾನೆಗಳನ್ನು ಹಿಡಿದುಹಾಕುವ ರೋಪಿಂಗ್ ಸ್ಟಾಕೇಡಿನ ಗೇಟ್ ಪೂರ್ತಿಯಾಗಿ ಅದನ್ನು ಪಳಗಿದ ಆನೆಯಿಂದ ತೆರೆಯುವ ವಿಧಾನವನ್ನು ಅವರಿಗೆ ತೋರಿಸಲಾಯಿತು.

ಕಾಕನಕೋಟೆ ಅರಣ್ಯದ ೨೧೩೭ ಎಕರೆ ಪ್ರದೇಶದಲ್ಲಿ ಸಾಗುವಾನಿ ಮರಗಳನ್ನು ಬೆಳೆಸುತ್ತಿರುವುದನ್ನು ಸಚಿವರು ವೀಕ್ಷಿಸಿದರು. ಅನಂತರ ಅವರು ಬೆಂಗಳೂರಿಗೆ ಪ್ರಯಾಣ ಬೆಳಸಿದರು.

ಶ್ರೀ ಅಹೋಬಿಲಸ್ವಾಮಿಗಳು

ಮೈಸೂರು ೩೦

ಶ್ರೀ ಶ್ರೀ ಅಹೋಬಿಲ ಸ್ವಾಮಿಗಳು ಕಳೆದ ೨೨ ನೇ ತಾರೀಖಿನಿಂದ ರಾಜಧಾನಿಯಲ್ಲಿ ತಂಗಿದ್ದು ಅವರು ಮುಂದಿನತಿಂಗಳು ೪ನೇ ತಾರೀಖು ಮೇಲುಕೋಟೆಗೆ ಪ್ರಯಾಣ ಬೆಳೆಸುವರು.

ಶ್ರೀ ಅಹೋಬಿಲ ಮಠದ ಸ್ಥಾಪಕರಾದ ಶ್ರೀ ಆದಿವಣ್ ಶಠಕೋಪ ಯತೀಂದ್ರ ಮಹಾದೇಶಿಕರ್ ಮತ್ತು ಶ್ರೀ ನಿಗಮಾನಂದ ಮಹಾದೇಶಿಕರ್ ರವರ ಪ್ರತಿಷ್ಠಾ ಮಹೋತ್ಸವವು ಅತಿ ವಿಜೃಂಭಣೆಯಿಂದ ಕಳೆದ ೨೭ ನೇ ತಾರೀಖು ಸಮಸ್ತ ಮರ್ಯಾದೆಯೊಡನೆ ನಡೆಯಿತು.

ನೌಕರರಿಗೆ ಸಂಬಳ ಕೊಡಲು ಸಾಲ

ಅನಂತಪುರದ ಜಿಲ್ಲಾ ಬೋರ್ಡಿನವರು ತಮ್ಮ ನೌಕರರಿಗೆ ಸಂಬಳವನ್ನು ಕೊಡುವುದಕ್ಕಾಗಿ ಮದರಾಸ್ ಸರ್ಕಾರವು ೧೧,೩೦,೦೦೦ ರೂಪಾಯಿಗಳ ಸಾಲವನ್ನು ಮಂಜೂರ್ಮಾಡಿದೆ.

ದೇವಸ್ಥಾನಕ್ಕೆ ಹರಿಜನರ ಪ್ರವೇಶ

ಗಯಾದಲ್ಲಿರುವ ವಿಷ್ಣುಪಾದ ದೇವಸ್ಥಾನಕ್ಕೆ ನಿನ್ನೆಯದಿನ ಸುಮಾರು ೨೦೦೦ ಹರಿಜನರು ಪ್ರವೇಶಮಾಡಿ ಪೂಜೆಯನ್ನು ನಡೆಸಿದರು.

ಒರಿಸ್ಸಾದಿಂದ ಅಕ್ಕಿ ರವಾನೆ

ಈ ಸಾಲಿನಲ್ಲಿ ಒರಿಸ್ಸಾ ಪ್ರಾಂತ್ಯವು ಸುಮಾರು ಮೂರುವರೆ ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ಇಳುವರಿ ಪ್ರದೇಶಗಳಿಗೆ ಸರಬರಾಜು ಮಾಡುವುದಾಗಿ ತಿಳಿಸಿದೆ.

ಕಾರ್ಮಿಕ ಮತ್ತು ಮಾಲೀಕರಿಗೆ ಸೌಹಾರ್ದ ಬೆಳೆಯಬೇಕು

ಮೋಟಾರು ಕೆಲಸಗಾರರ ಸಂಘದ ಸಮಾರಂಭದಲ್ಲಿ

ಸಚಿವರ ಹಿತೋಕ್ತಿ

ಮೈಸೂರು ೩೦

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ೬ನೇ ವಾರ್ಷಿಕೋತ್ಸವವು ನಿನ್ನೆ ಸಂಜೆ ಟೌನ್ ಹಾಲಿನಲ್ಲಿ ಕಾರ್ಮಿಕ ಸಚಿವ ಶ್ರೀ ಎ ಜಿ ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀ ಎ. ರಾಮಣ್ಣನವರಿಂದ ಸ್ವಾಗತವಾದನಂತರ, ಶಾಸನ ಸಭಾ ಸದಸ್ಯರಾದ ಶ್ರೀ ಡಿ. ದೇವರಾಜೇ ಅರಸಿನವರು ಆರಂಭ ಭಾಷಣ ಮಾಡಿದರು. ಕಾರ್ಮಿಕರಿಗೂ ಮಾಲೀಕರಿಗೂ ಅನ್ಯೋನ್ಯತೆ ಬೆಳೆಯಬೇಕು. ಕಾರ್ಮಿಕರು ಸಹ ದೇಶದ ಆರ್ಥಿಕಾಭಿವೃದ್ಧಿಯನ್ನು ಗಮನದಲ್ಲಿಟ್ಟುಗೊಂಡು ಕರ್ತವ್ಯ ನಿಷ್ಠೆಯಿಂದ ತಮ್ಮ ಕೆಲಸವನ್ನು ನಿರ್ವಹಿಸಬೇಕು. ನಮ್ಮ ದೇಶಕ್ಕೆ ಬೇಕಾಗುವ ವಾಹನ ಮತ್ತು ಅವರ ಸಲಕರಣೆಗಾಗಿ ೫೦ ಕೋಟಿ ರೂಗಳು ಪರದೇಶಗಳಿಗೆ ಹೋಗುತ್ತಿದೆ. ಈ ಹಣ ಹೊರಕ್ಕೆ ಹೋಗದಂತೆ ಇಲ್ಲೇ ಸಲಕರಣೆಗಳನ್ನು ತಯಾರು ಮಾಡಬೇಕು. ಅಷ್ಟೇ ಅಲ್ಲದೆ ಕಾರ್ಮಿಕ ಮತ್ತು ಮಾಲೀಕರ ಘರ್ಷಣೆ ನಿಲ್ಲಬೇಕಾದರೆ, ಸರ್ಕಾರ ಖಾಸಗೀ ಮಾಲೀಕರು ಮತ್ತು ಕಾರ್ಮಿಕರು ಒಟ್ಟಿಗೆ ಸೇರಿ ವಾಹನ ಸಂಚಾರ ಕಾರ್ಪೊರೇಷನ್ ಸ್ಥಾಪಿಸಿ, ಅದರ ಮೂಲಕ ಬಸ್ಸುಗಳನ್ನು ಓಡಿಸುವುದು ಸುಗಮ ಮಾರ್ಗ. ಡ್ರೈವರುಗಳಿಗೆ ಸುವ್ಯವಸ್ಥೆ ಶಿಕ್ಷಣ ಕೊಡಲು ಒಂದು ಶಾಲೆ ತೆರೆಯಬೇಕು-ಕಾರ್ಮಿಕರು ಪ್ರಯಾಣಿಕರ ಸೌಕರ್ಯಗಳಿಗೆ ಹೆಚ್ಚು ಗಮನ ಕೊಡಬೇಕು-ಎಂದು ತಿಳಿಸಿದರು.

ಶ್ರೀ ದೇವುಡು ನರಸಿಂಹಶಾಸ್ತ್ರಿಗಳು ಮಾತನಾಡಿ, ದ್ವೇಷ, ಇತರರನ್ನು ದೂಷಿಸುವುದು ಮತ್ತು ಲಾಭದ ಆಸೆಗಳನ್ನು ಬಿಟ್ಟು, ಕಾರ್ಮಿಕರು ಮತ್ತು ಬಂಡವಾಳಗಾರರು ದೇಶದ ಪ್ರಗತಿಗಾಗಿ ದುಡಿಯಬೇಕೆಂದು ಮನವಿಮಾಡಿದರು.

ಸಚಿವ ಶ್ರೀ ರಾಮಚಂದ್ರರಾಯರು ಭಾಷಣಮಾಡಿ, ನಮ್ಮ ಕೈಗಾರಿಕೆಗಳನ್ನು ಪರದೇಶದೊಡನೆ ಹೋಲಿಸಿದರೆ ಲೋಪದೋಷಗಳು ಬಹಳವಾಗಿ ಇವೆ. ಇಷ್ಟೇ ಲೋಪದೋಷಗಳು ಕಾರ್ಮಿಕ ಮತ್ತು ಅಧಿಕಾರಿ ವರ್ಗದಲ್ಲೂ ಇವೆ ಅಧಿಕಾರಿಗಳ ದರ್ಪ ಮತ್ತು ಕಾರ್ಮಿಕರಲ್ಲಿರುವ ಲೋಪದೋಷಗಳು ಹೋದ ಹೊರತು ದೇಶ ಪ್ರಗತಿಗೆ ಬರುವುದಿಲ್ಲ. ಕಾರ್ಮಿಕರ ಬೇಡಿಕೆಗಳು ಸೌಹಾರ್ದ ಮನೋಭಾವದಿಂದ ಇತ್ಯರ್ಥವಾಗಬೇಕು, ಅದಕ್ಕಾಗಿ ಸರ್ಕಾರದವರು ಸೂಕ್ತಕ್ರಮ ತೆಗೆದುಕೊಳ್ಳುವರು. ಈಗ ವಾಹನಗಳ ಸಣ್ಣಪುಟ್ಟ ರಿಪೇರಿ ಕೆಲಸಗಳು ಹೊರಗೆ ನಡೆಯುತ್ತಿದೆ. ಇದನ್ನು ಮಾಲೀಕ ಮತ್ತು ಕಾರ್ಮಿಕ ಸಂಘಗಳು ಸೇರಿ ಒಂದು ವರ್ಕ್‌ಷಾಪ್ ಮೂಲಕ ನಡೆಸಿದರೆ ಎಷ್ಟೋ ಹಣವೂ ಉಳಿಯುವುದು. ಕಾರ್ಮಿಕರು ತಮ್ಮ ಕೆಲಸದಲ್ಲಿ ಹೆಚ್ಚಿನ ಆಸಕ್ತಿ ಹಾಗೂ ತರಪೇತ ಹೊಂದಬೇಕು. ಇದರಿಂದ ಮಾಲೀಕರಿಗೂ ಹೆಚ್ಚು ಖರ್ಚು ಕಡಮೆ ಆಗಿ ಉಭಯತ್ರರಿಗೂ ಲಾಭದಾಯಕವಾಗುವುದು ಕೇಂದ್ರ ಸರ್ಕಾರದ ನೆರವಿನಿಂದ ಮೈಸೂರು ಸರ್ಕಾರದವರು ಈಗ ೪೦ ಲಕ್ಷ ರೂ. ಖರ್ಚಿನಿಂದ ಕಾರ್ಮಿಕರಿಗೆ ವಸತಿ ಗೃಹ ಸೌಕರ್ಯ ಏರ್ಪಡಿಸುತ್ತಿದ್ದಾರೆ. ಈ ಉಪಯೋಗವನ್ನು ಮೋಟಾರು ಕೆಲಸಗಾರರು ಉಪಯೋಗಿಸಕೊಳ್ಳದಿರುವುದು ವಿಷಾದಕರ. ಈ ಬಗ್ಗೆ ಸೂಕ್ತ ಸಲಹೆ ಬಂದರೆ ಅವರಿಗೂ ಸಹಾಯ ಮಾಡಲಾಗುವುದು. ಸಂಘದ ಸಹಕಾರ ಸಂಘಕ್ಕೆ ಹೆಚ್ಚು ಪ್ರೋತ್ಸಾಹ ದೊರೆಯಬೇಕೆಂದು ತಿಳಿಸಿದರು.

ರಾಜಪ್ರಮುಖರು ರಾಜಧಾನಿಗೆ ವಾಪಸು

ಮೈಸೂರು ೩೦

ದೆಹಲಿಗೆ ತೆರಳಿದ್ದ ಶ್ರೀಮನ್ಮಹಾರಾಜರು ತಮ್ಮ ಪರಿವಾರದೊಡನೆ ನಿನ್ನೆಯ ರಾತ್ರಿ ಬೆಂಗಳೂರಿನಿಂದ ಕಾರಿನಲ್ಲಿ ರಾಜಧಾನಿಗೆ ಆಗಮಿಸಿದರು.

ನಿನ್ನೆ ಸಂಜೆ ಅಮೆರಿಕಾ ಉಪಾಧ್ಯಕ್ಷ ಮಿ|| ನಿಕ್ಸನ್‌ರವರು ಶ್ರೀಮನ್ಮಹಾರಾಜರವರನ್ನು ಬೆಂಗಳೂರು ಅರಮನೆಯಲ್ಲಿ ಭೇಟಿ ಮಾಡಿದ್ದರು

ನಿಕ್ಸನ್ನರ ನಿರ್ಗಮನ

ಬೆಂಗಳೂರು ೩೦

ಬೆಂಗಳೂರಿಗೆ ಆಗಮಿಸಿದ್ದ ಅಮೆರಿಕಾ ಉಪಾಧ್ಯಕ್ಷ ಮಿ|| ನಿಕ್ಸನ್‌ರವರು ನಿನ್ನೆಯ ದಿನ ಮುಖ್ಯಮಂತ್ರಿಯವರು ಏರ್ಪಡಿಸಿದ್ದ ಭೋಜನ ಕೂಟದಲ್ಲಿ ಭಾಗವಹಿಸಿ, ಅನಂತರ ವಿಮಾನದಲ್ಲಿ ದೆಹಲಿಗೆ ತೆರಳಿದರು.

ಅಮೆರಿಕಾಕ್ಕೆ ಆಕ್ರಮಣ ಉದ್ದೇಶವಿಲ್ಲ

ಬೆಂಗಳೂರು ೩೦

ಅಮೆರಿಕಾಕ್ಕೆ ಆಕ್ರಮಣ ಉದ್ದೇಶವೇನೂ ಇಲ್ಲ. ಶಾಂತಿಯಿಂದ ಜೀವಿಸಲು ಇಷ್ಟ ಪಡುವ ಎಲ್ಲಾ ಸ್ವತಂತ್ರ ರಾಷ್ಟ್ರಗಳೊಡನೆ ಸ್ನೇಹ ಭಾವದಿಂದ ಇರುವುದೇ ಅಮೆರಿಕಾ ವಿದೇಶಾಂಗ ನೀತಿಯಾಗಿದೆ ಎಂದು ಅಮೆರಿಕಾ ಉಪಾಧ್ಯಕ್ಷ ಮಿ|| ನಿಕ್ಸನ್‌ರವರು ನಿನ್ನೆಯ ದಿನ ರಾತ್ರಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಇತ್ತ ಔತಣ ಕೂಟದಲ್ಲಿ ಮಾತನಾಡುತ್ತಾ ಹೇಳಿದರು.

ಮುಖ್ಯಮಂತ್ರಿಗಳು ಮಿ|| ನಿಕ್ಸನ್‌ರನ್ನು ಸ್ವಾಗತಿಸುತ್ತಾ ಅಮೆರಿಕಾವು ಇಂದು ಬರೀ ಆಟಂಬಾಬ್ ಇತ್ಯಾದಿ ಶಸ್ತ್ರಾಸ್ತ್ರಗಳಿಂದ ಹಿರಿಮೆಗಳಿಸಿಲ್ಲ. ಮಾನವತೆ, ಭ್ರಾತೃತ್ವ ಸ್ವಾತಂತ್ರಪಾಲನೆ ಮುಂತಾದುವುಗಳಿಂದ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯಗಳ ಉನ್ನತ ಮಟ್ಟದಿಂದ ನಾಯಕತ್ವವಹಿಸಿದೆ. ಅಮೆರಿಕಾ ಪ್ರಜಾಪ್ರಭುತ್ವ ತತ್ವವನ್ನೆ ಭಾರತವು ಅನುಸರಿಸಿದೆ ಎಂದು ಹೇಳಿ ಮಿ|| ನಿಕ್ಸನ್‌ರ ಗುಣಗಾನ ಮಾಡಿದರು.

ಕ್ಷೇತ್ರ ವಿಭಜನಾ ಸಮಿತಿ

ಭಾರತ ಕ್ಷೇತ್ರ ವಿಭಜನಾ ಸಮಿತಿಯು ಶ್ರೀ ಚಂದ್ರಶೇಖರಯ್ಯರ್‌ರವರ ನೇತೃತ್ವದಲ್ಲಿ ಬೆಂಗಳೂರಿಗೆ ಆಗಮಿಸಿದೆ. ಇಂದಿನಿಂದ ರೆಸಿಡೆನ್ಸಿಯಲ್ಲಿ ಮೈಸೂರಿನ ಕ್ಷೇತ್ರ ವಿಭಜನಾ ವಿಷಯಗಳನ್ನು ಚರ್ಚಿಸುತ್ತದೆ.

ಶಾಂತಿ ಸಮ್ಮೇಳನ

ರಾಜ್ಯಪರಿಷತ್ತಿನ ಸದಸ್ಯ ಮತ್ತು ಪ್ರಸಿದ್ಧ ನಟರಾದ ಶ್ರೀ ಪೃಥ್ವಿರಾಜ್‌ಕಪೂರ್‌ರವರ ಅಧ್ಯಕ್ಷತೆಯಲ್ಲಿ ಮುಂದಿನ ತಿಂಗಳು ೧೫ ನೇ ತಾರೀಖು ದೆಹಲಿಯಲ್ಲಿ ಶಾಂತಿ ಸಮ್ಮೇಳನ ನಡೆಯಲಿದೆ. ಉಪರಾಷ್ಟ್ರಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ಸಮ್ಮೇಳನವನ್ನು ಉದ್ಘಾಟಿಸುತ್ತಾರೆ.

ಕರ್ನಾಟಕ ಪ್ರಾಂತ್ಯರಚನೆ

ಮಂಗಳೂರಿನಲ್ಲಿ ನಿನ್ನೆಯದಿನ ಮುಕ್ತಾಯವಾದ ಕರ್ನಾಟಕ ಮಹಿಳಾ ಸಮ್ಮೇಳನದಲ್ಲಿ ಬರುವ ಅಕ್ಟೋಬರ್ ನೊಳಗೆ ಕರ್ನಾಟಕಪ್ರಾಂತ್ಯರೂಪಗೊಳ್ಳಬೇಕೆಂದು ನಿರ್ಣಯವನ್ನು ಮಾಡಲಾಗಿದೆ.

ಅಂತರ ವಿಶ್ವವಿದ್ಯಾನಿಲಯ ಬೋರ್ಡ್ ಸಭೆ

ಅಂತರ ವಿಶ್ವವಿದ್ಯಾನಿಲಯ ಸಮಿತಿಯ ಈ ವರ್ಷದ ಸಭೆಗಳು ಮುಂದಿನತಿಂಗಳು ೨೪ ರಿಂದ ೨೮ ರವರೆಗೆ ಮೈಸೂರಿನಲ್ಲಿ ನಡೆಯುತ್ತದೆ.

ಕರ್ನೂಲಿನಲ್ಲಿ ಸತ್ಯಾಗ್ರಹವೇ ?

ಅನೇಕ ಕಡೆ ಗೂಂಡಾವೃತ್ತಿಗಳು

ಕರ್ನೂಲಿನಲ್ಲಿ ಆಂಧ್ರ ಸರ್ಕಾರವು ೧೪೪ನೇ ಸೆಕ್ಷನ್ ಜಾರಿಮಾಡಿ ಸಭೆ ಮೆರವಣಿಗೆ ಮುಂತಾದುವನ್ನು ನಿಷೇಧಿಸಿರುವುದನ್ನು ಆಂಧ್ರ ರಾಜಧಾನಿಯ ಕ್ರಿಯಾಸಮಿತಿಯು ವಿರೋಧಿಸಿ ಸತ್ಯಾಗ್ರಹವನ್ನು ಆಚರಿಸುವುದಾಗಿ ಹೇಳಿದೆ.

ಕರ್ನೂಲ್ ನಗರದಲ್ಲಿ ಇನ್ನೂ ಹರತಾಳವು ಮುಂದುವರಿಯುತ್ತಲೇ ಇದೆ.

ಆಂಧ್ರ ರಾಜಧಾನಿಯನ್ನು ಸ್ವಲ್ಪಕಾಲ ಕರ್ನೂಲಿನಿಂದ ವರ್ಗಾಯಿಸುವುದಿಲ್ಲವೆಂದೂ ಜನರು ಶಾಂತರೀತಿಯಿಂದ ವರ್ತಿಸಬೇಕೆಂದೂ ಸಚಿವರು ಮನವಿಮಾಡುತ್ತಿದ್ದಾರೆ.

ಗೂಂಡಾವೃತ್ತಿಯ ಕೃತ್ಯಗಳು ಇನ್ನೂ ಹಲವಾರು ಕಡೆ ನಡೆಯುತ್ತಿರುವುದಾಗಿ ಹೇಳಲಾಗಿದೆ.

ಶಾಸನಸಭಾ ಸದಸ್ಯರಿಗೆ ವೇತನ ಹುದ್ದೆ ಕೂಡದು

ಬೆಂಗಳೂರು ೩೦

ಶಿವಮೊಗ್ಗ ಜಿಲ್ಲೆಯಲ್ಲಿ ಜನಪದ ಯೋಜನೆಯ ಅಧ್ಯಕ್ಷರನ್ನಾಗಿ ಶ್ರೀ ಹೆಚ್.ಎಸ್. ರುದ್ರಪ್ಪನವರನ್ನು ಮತ್ತು ಕೋಲಾರದ ಚಿನ್ನದ ಗಣಿ ಕಂಪೆನಿಯಲ್ಲಿ ಸರ್ಕಾರಿ ಪರ ಶ್ರೀ ಎಸ್. ಹುಚ್ಚಮಾಸ್ತಿಗೌಡರನ್ನು ನೇಮಿಸಿರುವುದರ ಬಗ್ಗೆ ಪ್ರಧಾನಿ ನೆಹರೂರವರು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರಿಗೆ ಒಂದು ಪತ್ರವನ್ನು ಬರೆದು ಅವರಿಬ್ಬರೂ ಶಾಸನಸಭಾ ಸದಸ್ಯರಾಗಿರುವುದರಿಂದ ವೇತನ ಪಡೆಯುವ ಈ ಸ್ಥಾನಗಳಲ್ಲಿ ಅವರು ಮುಂದುವರೆಯಲು ಸಾಧ್ಯವಿಲ್ಲವೆಂದು ತಿಳಿಸಿರುವುದಾಗಿ ವರದಿಯಾಗಿದೆ.

ವಿದ್ಯಾ ಸುಧಾರಣೆ

ಸಂಸ್ಥಾನದಲ್ಲಿ ವಿದ್ಯಾ ಸುಧಾರಣೆಗಳನ್ನು ಮುಂದಿನವರ್ಷದಿಂದ ಜಾರಿಗೆ ತರುವುದಾಗಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹೇಳಿದ್ದಾರೆ. ಕೇಂದ್ರ ಸರ್ಕಾರದ ಪ್ರವೇಶವಿಲ್ಲದಿದ್ದರೆ ಈ ಸುಧಾರಣೆಗಳನ್ನು ಹಿಂದೆಯೇ ಜಾರಿಗೆ ತರಲಾಗುತ್ತಿತ್ತೆಂದೂ ಇನ್ನು ಕೇಂದ್ರ ಸರ್ಕಾರಕ್ಕಾಗಿ ಕಾಯಲು ಸಾಧ್ಯವಿಲ್ಲವೆಂದೂ ಅವರು ತಿಳಿಸಿದ್ದಾರೆ.

ಭಾರತ-ಪಾಕೀಸ್ತಾನ ಸಂಗೀತ ಸಮ್ಮೇಳನ

ಪಾಕೀಸ್ತಾನದ ಸಿಂಧ್ ಹೈದರಾಬಾದಿನಲ್ಲಿ ಡಿಸೆಂಬರ್ ೫ನೇ ತಾರೀಖಿನಿಂದ ಭಾರತ ಮತ್ತು ಪಾಕೀಸ್ತಾನ ಸಂಗೀತ ಸಮ್ಮೇಳನ ನಡೆಯುತ್ತದೆ. ಉಭಯ ದೇಶಗಳ ಅನೇಕ ಪ್ರಮುಖ ಸಂಗೀತಗಾರರು ಈ ಸಮ್ಮೇಳನದಲ್ಲಿ ಭಾಗವಹಿಸುವರು.

● ೩೬ನೇಯ. ಕನ್ನಡ ಸಾಹಿತ್ಯ ಸಮ್ಮೇಳನವು ಶ್ರೀ ವಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಕುಂಟಾದಲ್ಲಿ ಡಿಸೆಂಬರ್ ೨೬ನೇ ತಾರೀಖಿನಿಂದ ೩ ದಿನಗಳು ನಡೆಯುತ್ತದೆ.

ಕಲ್ಯಾಣಭವನದ ಆರಂಭೋತ್ಸವ

ಮೈಸೂರು ೩೦

ಮನುಷ್ಯನು ಜೀವಂತನಾಗಿರುವಾಗಲೂ ಅವನು ಸತ್ತನಂತರವೂ ನಡೆಯಬೇಕಾದ ನಾನಾ ಮತೀಯ ಕರ್ಮಗಳನ್ನು ನಡೆಸುವುದಕ್ಕೆ ಮೈಸೂರು ನಗರದಲ್ಲಿರುವ ಬ್ರಾಹ್ಮಣ ಧರ್ಮ ಸಹಾಯ ಸಭೆಯು ೩೫ ವರ್ಷಗಳಿಂದ ಸಲ್ಲಿಸಿ ಸೇವೆಯನ್ನು ಗೈಯುತ್ತಿರುವುದು ಅತ್ಯಂತ ಶ್ಲಾಘನೀಯ ಇಂತಹ ಸಂಸ್ಥೆಗಳು ದೇಶದಲ್ಲಿ ಹೆಚ್ಚಬೇಕು ಇದರಿಂದ ಮನುಷ್ಯನಲ್ಲಿ ಧಾರ್ಮಿಕ ಮನೋಭಾವವು ಬೆಳೆಯುವುದು ಎಂದು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ನಿನ್ನೆಯದಿನ ರಾಜಧಾನಿಯ ಬ್ರಾಹ್ಮಣ ಧರ್ಮ ಸಹಾಯ ಸಭೆಯವರು ತ್ಯಾಗರಾಜ ರಸ್ತೆಯಲ್ಲಿ ಕಟ್ಟಿರುವ ಕಲ್ಯಾಣಭವನದ ಆರಂಭೋತ್ಸವವನ್ನು ನೆರವೇರಿಸುತ್ತಾ ತಿಳಿಸಿದರು.

ಈ ಸಂದರ್ಭದಲ್ಲಿ ಸಚಿವರು ಕಳೆದ ೨೨ ವರ್ಷಗಳಿಂದಲೂ ಸಭೆಯ ಅಧ್ಯಕ್ಷರಾಗಿರುವ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ರವರ ಭಾವಚಿತ್ರವನ್ನು ಅನಾವರಣ ಮಾಡಿದರು.

ಪ್ರಾರಂಭದಲ್ಲಿ ಶ್ರೀಮತಿ ವ. ಹಾಲಕ್ಷ್ಮಿಯವರಿಂದ ಪ್ರಾರ್ಥನೆಯಾದನಂತರ ಶ್ರೀ ಎಂ. ರಾಮಸ್ವಾಮಿಯವರು ಸ್ವಾಗತ ವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು.

ಸಂಸ್ಥೆಯು ಕಳೆದ ೩೫ ವರ್ಷಗಳಿಂದ ಮಾಡಿರುವ ಸೇವೆಯನ್ನು ವಿವರಿಸಿ ಇಲ್ಲಿಯವರೆಗೆ ೮೦೦ ಅನಾಥ ಸಂಸ್ಕಾರ,೪೦೦೦ ಸನಾಥ ಸಂಸ್ಕಾರ ಮತ್ತು ೪೮ ವಟುಗಳಿಗೆ ಧರ್ಮೋಪನಯನ ಮಾಡಿರುವುದನ್ನು ವಿವರಿಸಿದರು.

ಅನಂತರ ಆಸ್ಥಾನ ಮಹಾ ವಿದ್ವಾನ್ ಶ್ರೀ ನಂಜನಗೂಡು ಶ್ರೀಕಂಠಶಾಸ್ತ್ರಿಗಳವರು, ಶ್ರೀ ಸುಬ್ರಹ್ಮಣ್ಯಅಯ್ಯರ್ ರವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿ ಅವರ ಉದಾರದಾನ ಧರ್ಮಪರೋಪಕಾರ ಬುದ್ಧಿಯನ್ನು ಕೊಂಡಾಡಿದರು

ನಂತರ ವಿದ್ಯಾಸಚಿವರು ಶ್ರೀ ಅಯ್ಯರ್ ರವರ ಭಾವಚಿತ್ರವನ್ನು ಅನಾವರಣ ಮಾಡಿದರು.

ಮಾಜಿ ನರೇಂದ್ರರ ಸಭೆ

ಮಾಜಿ ನರೇಂದ್ರರು ರಾಜಾದಾಯವನ್ನು ಕಡಮೆ ಮಾಡಿಕೊಳ್ಳುವ ವಿಷಯವನ್ನು ರಾಜಾಸ್ಥಾನದ ಮಾಜಿ ದೊರೆಗಳು ಜಯಪುರದಲ್ಲಿ ಸಭೆ ಸೇರಿ ಚರ್ಚಿಸಿದರೆಂದು ತಿಳಿಯಬರುತ್ತದೆ. ಪುನಃ ಅವರು ಇನ್ನೆರಡು ವಾರಗಳಲ್ಲಿ ಸಭೆ ಸೇರಿ ಅಂತ್ಯ ನಿರ್ಧಾರಕ್ಕೆ ಬರುವರೆಂದು ಹೇಳಲಾಗಿದೆ.

ಪಂಚವಾರ್ಷಿಕ ಯೋಜನೆ

ಪ್ರಾಂತ್ಯಗಳಿಗೆ ೨೨೭ ಕೋಟಿ ರೂ. ನೆರವು

ಪಂಚವಾರ್ಷಿಕ ಯೋಜನೆಯ ಪ್ರಥಮ ೩ ವರ್ಷಗಳಲ್ಲಿ ಭಾರತ ಸರ್ಕಾರವು ಎಲ್ಲಾ ಪ್ರಾಂತ್ಯಗಳಿಗೂ ೨೭೭ ಕೋಟಿ ರೂಪಾಯಿಗಳನ್ನು ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಇದರಲ್ಲಿ ೨೫೦ ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲೂ ೨೭ ಕೋಟಿ ರೂಪಾಯಿಗಳನ್ನು ಗ್ರಾಂಟುಗಳ ರೂಪದಲ್ಲೂ ಕೊಡಲಾಗಿದೆ. ಇದರ ಪೈಕಿ ೧೧೪ ಕೋಟಿ ರೂಪಾಯಿಗಳನ್ನು ನದೀಕಣಿವೆ ಯೋಜನೆಗಳಿಗೂ, ೪೨ ಕೋಟಿಯನ್ನು ಅಭಿವೃದ್ಧಿ ಕಾರ್ಯಗಳಿಗೆ,೨೯ ಕೋಟಿಯನ್ನು ನಿರಾಶ್ರಿತರ ಪುನರ್ವಸತಿಗಾಗಿ, ೨೨ ಕೋಟಿಯನ್ನು ಸಣ್ಣ ವ್ಯವಸಾಯಕಾರ್ಯಗಳಿಗೆ ಮತ್ತು ೨ ಕೋಟಿ ರೂಪಾಯಿಗಳನ್ನು ಕಾರ್ಮಿಕರ ವಸತಿ ನಿರ್ಮಾಣಕ್ಕಾಗಿ ಕೊಡಲಾಗಿದೆ.

ದಾಸಪ್ರಕಾಶ್ ಹೋಟೆಲ್ ಮುಂದೆ ಉಪವಾಸ ಸತ್ಯಾಗ್ರಹ

ಮೈಸೂರು ೩೦

ರಾಜಧಾನಿಯ ದಾಸಪ್ರಕಾಶ ಹೊಟೇಲಿನ ತಿಂಡಿ ಶಾಖೆಯನ್ನು ನಿನ್ನೆಯಿಂದ ಮುಚ್ಚಿ ೧೮ ಮಂದಿ ಕೆಲಸಗಾರರಿಗೆ ಉದ್ಯೋಗ ತಪ್ಪಿಸಿರುವುದನ್ನು ಪ್ರತಿಭಟಿಸಲು ಹೊಟೇಲು ಸಂಘದ ಸಲಹೆಗಾರರಾದ ಶ್ರೀ ಮೀರ್‌ನೂರ್ ಹುಸೇನರು ನಿನ್ನೆ ಬೆಳಿಗ್ಗೆ ೧೦ ಗಂಟೆಯಿಂದ ಹೊಟೇಲಿನ ಆವರಣದಲ್ಲಿ ಉಪವಾಸ ಪ್ರಾರಂಭಿಸಿದರು. ಹೊಟೇಲಿನ ಮಾಲೀಕರಾದ ಶ್ರೀ ಸೀತಾರಾಮರಾಯರು ತಮಗೆ ಹೆಚ್ಚು ನಷ್ಟವಾಗುತ್ತಿರುವುದರಿಂದ ಹೊಟೇಲನ್ನು ಮುಚ್ಚುತ್ತಿರುವುದಾಗಿಯೂ, ಈ ಬಗ್ಗೆ ಕಾನೂನಿನ ಪ್ರಕಾರ ಲೇಬರ್ ಆಫೀಸಿಗೆ ನೋಟೀಸ್ ಕೊಡಲಾಗಿತ್ತೆಂದೂ, ಕಾನೂನಿನ ಪ್ರಕಾರ ಕೆಲಸಗಾರರಿಗೆ ಏನು ಪರಿಹಾರ ದೊರೆಯಬೇಕೋ ಅದನ್ನು ಕೊಡುವುದಾಗಿ ತಿಳಿಸಿದರು. ಪ್ರಜಾ ಸೋಷಲಿಸ್ಟ್ ಪಕ್ಷದ ನಾಯಕ ಶ್ರೀ ಹುಚ್ಚೇಗೌಡರು ಮತ್ತು ಇತರರು ಎಷ್ಟು ಹೇಳಿದರೂ ಶ್ರೀ ಹುಸೇನ್‌ರು ಉಪವಾಸ ನಿಲ್ಲಿಸುವುದಿಲ್ಲವೆಂದು ತಿಳಿಸಿದರು.

ರಾತ್ರಿ ೧೧-೩೦ ಗಂಟೆಗೆ ಕೆಲಸಗಾರರಿಗೆ ಒಟ್ಟು ೩೩೦೦ ರೂಪಾಯಿಗಳ ಪರಿಹಾರ ಹಣ ಕೊಡುವುದಾಗಿ ಒಂದುಒಪ್ಪಂದವಾದ ಮೇಲೆ ಶ್ರೀ ಮೀರ್‌ನೂರ್‌ಹುಸೇನ್‌ರು ಉಪವಾಸವನ್ನು ಮುಕ್ತಾಯಗೊಳಿಸಿದರು.

ಮುಖರ್ಜಿ ನಿಧನ ಬಗ್ಗೆ ವಿಚಾರಣೆ ನಡೆಯಬೇಕು

ಡಾ|| ಶ್ಯಾಮಪ್ರಸಾದ್ ಮುಖರ್ಜಿಯವರ ನಿಧನದ ಬಗ್ಗೆ ಕಾಶ್ಮೀರ ಸರ್ಕಾರವು ಕೂಡಲೇ ವಿಚಾರಣೆಯನ್ನು ನಡೆಸಬೇಕೆಂದು ಪಶ್ಚಿಮ ಬಂಗಾಳ ಶಾಸನ ಸಭೆಯು ಒಂದು ನಿರ್ಣಯವನ್ನು ಮಾಡಿದೆ.

ನಿಕ್ಸನ್ ಬೆಂಗಳೂರಿನಲ್ಲಿ

ಬೆಂಗಳೂರು ೩೦

ಅಮೇರಿಕಾ ಉಪಾಧ್ಯಕ್ಷ ಮಿ|| ನಿಕ್ಸನ್‌ರವರು ನಿನ್ನೆಯದಿನ ಮದ್ರಾಸಿನಿಂದ ಬೆಂಗಳೂರಿಗೆ ಆಗಮಿಸಿದರು.

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇವರ ಗೌರವಾರ್ಥವಾಗಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಇದಕ್ಕೆ ಮುನ್ನ ಮಿ|| ನಿಕ್ಸನ್‌ರವರು ಮದ್ರಾಸಿನಲ್ಲಿ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿ ಮತ್ತು ಗೌರ್ನರ್ ಶ್ರೀ ಶ್ರೀಪ್ರಕಾಶರವರನ್ನು ಭೇಟಿಮಾಡಿದ್ದರು.

ಭಾರತಕ್ಕೆ ತಮ್ಮ ಭೇಟಿಯ ವಿಷಯವಾಗಿ ಅವರು ಸುದ್ದಿಗಾರರೊಡನೆ ಮಾತನಾಡುತ್ತಾ ಭಾರತಕ್ಕೆ ಅಮೇರಿಕಾಧ್ಯಕ್ಷರ ಶುಭಾಶಯಗಳನ್ನು ತಿಳಿಸಲು ಮತ್ತು ಭಾರತವನ್ನು ನೋಡಲು ತಾವು ಭೇಟಿಯಿತ್ತಿರುವುದಾಗಿ ಅವರು ತಿಳಿಸಿದರು.

ತಾವು ಈಗ ಕೈಗೊಂಡಿರುವ ವಿಶ್ವ ಪರ್ಯಟನೆಯು ಯಾವ ರಾಜಕೀಯಕ್ಕೂ ಸಂಬಂಧಿಸಿಲ್ಲವೆಂದು ಅವರು ತಿಳಿಸಿದರು.

ಮುಸಾದಿಕ್‌ರ ಉಪವಾಸ ಮುಷ್ಕರ

ಮಿಲಿಟರಿ ನ್ಯಾಯಾಲಯದಲ್ಲಿ ವಿಚಾರಣೆಗೊಳಗಾಗಿರುವ ಈಜಿಪ್ಟಿನ ಮಾಜಿ ಪ್ರಧಾನಿ ಡಾ|| ಮುಸಾದಿಕ್‌ರವರು ಉಪವಾಸ ಮುಷ್ಕರವನ್ನು ಪ್ರಾರಂಭಿಸಿರುವುದಾಗಿ ತಿಳಿಯಬರುತ್ತದೆ. ಈ ಉಪವಾಸದಿಂದ ತಮ್ಮ ಪ್ರಾಣವನ್ನು ನೀಗುವುದಾಗಿ ಅವರು ಮಿಲಿಟರಿ ನ್ಯಾಯಾಲಯಕ್ಕೆ ತಿಳಿಸಿರುವುದಾಗಿ ಹೇಳಲಾಗಿದೆ.

ಭಾರತ-ಸಿಂಹಳ ಪ್ರಧಾನಿಗಳ ಮಾತುಕತೆ

ಭಾರತ ಮತ್ತು ಸಿಂಹಳ ಪ್ರಧಾನಿಗಳ ಮಾತುಕತೆಗಳು ಜನವರಿ ೧೨ರಿಂದ ೧೮ರವರೆಗೆ ನಡೆಯಬಹುದೆಂದು ಪ್ರಧಾನಿ ನೆಹರೂರವರು ಸೂಚಿಸಿರುವುದಾಗಿ ತಿಳಿಯುತ್ತದೆ.

ಭೂದಾನ ಸಂಗ್ರಹಣೆ

ವಿನೋಬಾ ಭಾವೆಯವರ ಭೂದಾನ ಯಜ್ಞ ಸಂಬಂಧದಲ್ಲಿ ಇಲ್ಲಿಯವರೆಗೆ ೨೪ ಲಕ್ಷ ಎಕರೆ ಜಮೀನನ್ನು ಸಂಗ್ರಹಿಸಿರುವುದಾಗಿ ತಿಳಿಯಬರುತ್ತದೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೮೩

೧-೧೨-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಬೆಂಗಳೂರಿನಲ್ಲಿ ರಿಕ್ಷಾಗಳಿಗೆ ರಹದಾರಿ ರದ್ದು

ಕಾರ್ಪೊರೇಷನ್ ನಿರ್ಧಾರ

ಬೆಂಗಳೂರು ೧

ಬೆಂಗಳೂರು ಸಿವಿಲ್ ಪ್ರದೇಶದಲ್ಲಿ ಬಳಕೆಯಲ್ಲಿರುವ ಮನುಷ್ಯರೆಳೆಯುವ ರಿಕ್ಷಾಗಳಿಗೆ ರಹದಾರಿ ಕೊಡುವುದನ್ನು ಇನ್ನು ಮುಂದೆ ಕೊಡಕೂಡದೆಂದು ಇಲ್ಲಿಯ ಕಾರ್ಪೊರೇಷನ್ ತೀರ್ಮಾನಿಸಿದೆ.

ಪುರಸಭಾ ಚುನಾವಣಾ ಪ್ರಚಾರ

ಶ್ರೀ ಜೆ. ಬಿ. ಕೃಪಲಾನಿಯವರಿಂದ ಆರಂಭ

ಮೈಸೂರು ೧

ಪ್ರಜಾಸೋಷಲಿಸ್ಟ್ ಪಕ್ಷದ ನಾಯಕ ಆಚಾರ್ಯ ಜೆ. ಬಿ. ಕೃಪಲಾನಿಯವರು ಈ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ನಗರದ ಪುರಸಭೆ ಚುನಾವಣೆಯ ಸಂಬಂಧದಲ್ಲಿ ತಮ್ಮ ಪಕ್ಷದ ಪ್ರಚಾರ ಪ್ರಾರಂಭೋತ್ಸವವನ್ನು ನೆರವೇರಿಸುವರು. ಸಂಸ್ಥಾನದ ಪಕ್ಷದ ಕಾರ್ಯದರ್ಶಿ ಶ್ರೀ ಬಿ.ಕೆ. ಪುಟ್ಟರಾಮಯ್ಯನವರು ಅಧ್ಯಕ್ಷತೆ ವಹಿಸುವರು.

ಶ್ರೀ ಅಹೋಬಿಲ ಸ್ವಾಮಿಗಳು

ಮೈಸೂರು ೧

ಕಳೆದ ೧೦ ದಿನಗಳಿಂದ ರಾಜಧಾನಿಯಲ್ಲಿ ತಂಗಿರುವ ಶ್ರೀ ಶ್ರೀ ಅಹೋಬಿಲ ಸ್ವಾಮಿಗಳು ಇದೇ ೩ನೇ ತಾರೀಖು ಗುರುವಾರ ಮಧ್ಯಾಹ್ನ ೩ ಗಂಟೆಗೆ ಮೇಲುಕೋಟೆಗೆ ಪ್ರಯಾಣ ಬೆಳೆಸುವರು.

ತುಂಗಭದ್ರ ಅಣೆಕಟ್ಟೆಗೆ ಆಸ್ಟ್ರೇಲಿಯಾ ಯಂತ್ರಗಳು

ತುಂಗಭದ್ರಾ ನೀರಾವರಿ ಯೋಜನೆಗಾಗಿ ಆಸ್ಟ್ರೇಲಿಯಾ ದೇಶ ಉಚಿತವಾಗಿ ಕೊಟ್ಟಿರುವ ಲಕ್ಷಾಂತರ ರೂ.ಗಳ ಯಂತ್ರ ಸಲಕರಣೆಗಳು ಈಗ ಬೊಂಬಾಯಿಗೆ ಬಂದಿವೆ. ಅವುಗಳಲ್ಲಿ ೧೯ ಟನ್ ಭಾರವುಳ್ಳ ಎರಡು ಸ್ವಿಚ್ ಬೋರ್ಡುಗಳು, ೮ ಟ್ರಾಕ್ಟರುಗಳು, ಆರು ಜನರೇಟರುಗಳು ಇವೆ.

ಶಾಲೆಗಳಿಗೆ ಜಮೀನು ಕೊಡಿ

ಗ್ರಾಮಗಳಲ್ಲಿರುವ ಜನರು ತಮ್ಮ ಪ್ರದೇಶದಲ್ಲಿರುವ ಶಾಲೆಗಳಿಗೆ ೫-೧೦ ಎಕರೆ ಜಮೀನನ್ನು ಉಚಿತವಾಗಿ ಕೊಟ್ಟರೆ ಅದರಿಂದ ಬರುವ ಉತ್ಪತ್ತಿಯಿಂದ ಶಾಲಾ ಬಾಲಕರ ಮತ್ತು ಉಪಾಧ್ಯಾಯರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು. ಆದ್ದರಿಂದ ಗ್ರಾಮದಲ್ಲಿರುವ ಹಣವಂತರು ಈ ಕಾರ್ಯಕ್ಕೆ ನೆರವಾಗಬೇಕೆಂದು ಮದ್ರಾಸಿನ ಆರ್ಥಿಕ ಸಚಿವ ಶ್ರೀ ಸುಬ್ರಹ್ಮಣ್ಯಂರವರು ಕೋರಿದ್ದಾರೆ.

ವರ್ಷಕ್ಕೆ ೩ ಕೋಟಿ ಬ್ಲೇಡುಗಳ ತಯಾರಿಕೆ

ಪಾಕೀಸ್ತಾನದ ಸಿಂಧ್‌ನಲ್ಲಿರುವ ಒಂದು ಕಾರ್ಖಾನೆಯಲ್ಲಿ ವರ್ಷಕ್ಕೆ ೩ ಕೋಟಿ ಬ್ಲೇಡುಗಳನ್ನು ತಯಾರಿಸಲು ವ್ಯವಸ್ಥೆ ಮಾಡಲಾಗಿದೆ. ಈ ಕಾರ್ಖಾನೆಯಲ್ಲಿ ಕೆಲಸ ಮಾಡಲು ೪ ಜನ ಜರ್ಮನ್ ಪ್ರವೀಣರು ಆಗಮಿಸಿದ್ದಾರೆ.

ಕಾಫಿ ಕುಡಿಯುವವರು ಹೆಚ್ಚಿದ್ದಾರೆ

ಭಾರತದಲ್ಲಿ ಈಗ ಕಾಫಿ ಕುಡಿಯುವವರ ಸಂಖ್ಯೆ ಹೆಚ್ಚಿದೆಯೆಂದು ಅಂಕಿಅಂಶಗಳಿಂದ ವ್ಯಕ್ತವಾಗಿದೆ.೧೯೪೦ ರಲ್ಲಿ ೧೦ಸಾವಿರ ಟನ್ ಕಾಫಿಬೀಜ ಖರ್ಚಾಗುತ್ತಿದ್ದು, ೧೯೫೨ ರಲ್ಲಿ ೧೮ ಸಾವಿರ ಟನ್ನಿಗೆ ಏರಿದೆ. ಹತ್ತುವರ್ಷಗಳ ಹಿಂದೆ ೧೮೧೦೩೭ ಎಕರೆ ಕಾಫಿಬೆಳೆ ಇದ್ದು, ಹೋದ ವರ್ಷ ೨,೩೯,೯೭೬ ಎಕರೆಗಳಲ್ಲಿ ಕಾಫಿ ಬೆಳೆಯಲಾಯಿತು.

ಕರ್ನಾಟಕ ಮಹಿಳಾ ಸಮ್ಮೇಳನ

ಮಂಗಳೂರಿನಲ್ಲಿ ಕಳೆದ ೨೯ ನೇ ತಾ|| ಡಾ|| ಶ್ರೀಮತಿ ಸಾವಿತ್ರಿ ನಾಗನಗೌಡರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಮಹಿಳಾ ಸಮ್ಮೇಳನದಲ್ಲಿ ಕರ್ನಾಟಕ ಪ್ರಾಂತ್ಯ ರಚನೆ ಶೀಘ್ರದಲ್ಲೇ ಆಗಬೇಕು ಮತ್ತು ಹಿಂದೂ ಕೋಡ್ ಮಸೂದೆ ಪಾರ್ಲಿಮೆಂಟ್‌ನಲ್ಲಿ ಬೇಗ ಅಂಗೀಕೃತವಾಗಬೇಕು-ಎಂಬ ನಿರ್ಣಯಗಳನ್ನು ಅನುಮೋದಿಸಲಾಗಿದೆ.

ಭಾರತ-ರಷ್ಯಾ ಸೌಹಾರ್ದ ಸಂಘ

ಭಾರತ ಮತ್ತು ರಷ್ಯಾದೇಶಗಳ ಬಗ್ಗೆ ಹೆಚ್ಚು ಸೌಹಾರ್ದ ಮತ್ತು ನಿಕಟ ಸಂಬಂಧ ಏರ್ಪಡಿಸಲು ದೆಹಲಿಯಲ್ಲಿ ಒಂದು ಭಾರತ-ರಷ್ಯಾ ಸೌಹಾರ್ದ ಸಂಘವನ್ನು ಏರ್ಪಡಿಸಲಾಗಿದೆ.

ವಿಮಾನಯಾನ

ಭಾರತದಲ್ಲಿ ಈ ವರ್ಷಾರ್ಧದಲ್ಲಿ ೨೫.೦೦೦೦ ಪ್ರಯಾಣೀಕರು ವಿಮಾನಗಳಲ್ಲಿ ಸಂಚಾರವನ್ನೂ ಮಾಡಿದ್ದಾರೆ. ಈ ವಿಮಾನಗಳು ಸುಮಾರು ೯೯,೦೦,೦೦೦ ಮೈಲಿಗಳ ದೂರ ಚಲಿಸಿವೆ.

ಬರೋಡಾ ಮಹಾರಾಜರ ಒಡವೆಗಳು

ಬರೋಡಾ ಮಹಾರಾಜರಾದ ಪ್ರತಾಪಸಿಂಗ್ ಗಾಯಕವಾಡರು ಪದಚ್ಯುತರಾದಾಗ ಅವರ ಪತ್ನಿ ರಾಣಿ ಸೀತಾದೇವಿಯವರು ೮೦ ಲಕ್ಷ ರೂ. ಬೆಲೆಬಾಳುವ ಒಡವೆಗಳನ್ನು ಯೂರೋಪಿಗೆ ತೆಗೆದುಕೊಂಡು ಹೋದರೆಂದೂ, ಅವುಗಳು ತಮ್ಮ ಸ್ವಂತ ಆಸ್ತಿಯೆಂದೂ, ಅವನ್ನು ತಮಗೆ ಹಿಂತಿರುಗಿಸಬೇಕೆಂದೂ ಬರೋಡಾ ಮಹಾರಾಜರಾದ ಫತ್ತೇಸಿಂಗ್ ರವರು ಈಗ ಭಾರತ ಸರ್ಕಾರಕ್ಕೆ ಮನವಿಮಾಡಿದ್ದಾರೆ.

ಅಖಿಲ ಭಾರತ ಮಲೆನಾಡು ಸಮ್ಮೇಳನ

ಶಿವಮೊಗ್ಗ ಜಿಲ್ಲಾಬೋರ್ಡಿನ ಆಶ್ರಯದಲ್ಲಿ ನಡೆಯಲಿರುವ ಅಖಿಲ ಭಾರತ ಮಲೆನಾಡು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಒಪ್ಪಿರುವರೆಂದು ತಿಳಿಯಬರುತ್ತದೆ. ಕೇಂದ್ರ ವ್ಯವಸಾಯಸಚಿವ ಡಾ|| ದೇಶಮುಖ್ ಮತ್ತು ರೈಲ್ವೆ ಸಚಿವ ಶ್ರೀ ಲಾಲಬಹದ್ದೂರ್ ಶಾಸ್ತ್ರಿಯವರು ಇದರಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಲಾಯಕಾಲಿ ಜಮೀನು ನಿರಾಶ್ರಿತರಿಗೆ

ಈಗ ಪಾಕೀಸ್ಥಾನದಲ್ಲಿರುವ ಹೈದರಾಬಾದಿನ ಮಾಜಿ ಪ್ರಧಾನಿ ಮೀರ್ ಲಾಯಕಾಲಿಯವರಿಗೆ ಸೇರಿದ್ದ ೯೦೦ ಎಕರೆ ಕಬ್ಬಿನಬೆಳೆಯ ಜಮೀನಿನ ಬಹುಭಾಗವನ್ನು ನಿರಾಶ್ರಿತರಿಗೆ ಹಂಚಲಾಗಿದೆ. ಉಳಿದುದನ್ನು ಸದ್ಯದಲ್ಲೇ ಇದೇರೀತಿ ವಿನಿಯೋಗ ಮಾಡಲಾಗುತ್ತದೆ-ಎಂದು ತಿಳಿದುಬಂದಿದೆ

ಎನ್.ಸಿ.ಸಿ. ದಿನಾಚರಣೆ

ಭಾರತದಾದ್ಯಂತ ಇದೇ ೬ನೇ ತಾರೀಖು ರಾಷ್ಟ್ರೀಯ ಕ್ಯಾಡೆಟ್ ದಳದ ದಿನವನ್ನಾಗಿ ಆಚರಿಸಬೇಕೆಂದು ಸೂಚನೆ ಕೊಡಲಾಗಿದೆ. ಆ ದಿನ ಪೆರೇಡು ಮತ್ತು ಆಟ ಪಾಟಗಳ ಸ್ಪರ್ಧೆಗಳು ನಡೆಯುವುವು.

ಶಾಸನಸಭೆ ಸಂಯುಕ್ತ ಅಧಿವೇಶನ

ಬೆಂಗಳೂರು ೧

ಮೈಸೂರು ಶಾಸನಸಭೆಗಳ ಸಂಯುಕ್ತ ಅಧಿವೇಶನವು ಮುಂದಿನ ತಿಂಗಳು ೧೧ನೇ ತಾರೀಖು ಬೆಂಗಳೂರಿನಲ್ಲಿ ನಡೆಯುತ್ತದೆ. ಆದಿನ ಶ್ರೀಮನ್ಮಹಾರಾಜರು ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾರೆ.

ಇಸ್ತ್ರಿಪೆಟ್ಟಿಗೆ ಆರಿಸದಿದ್ದಕ್ಕೆ ಮರಣ

ಬೆಂಗಳೂರು ೧

ಗಾಂಧಿ ನಗರದ ಒಂದು ಲಾಂಡ್ರಿಯಲ್ಲಿ ಶ್ರಿ ಪಿ.ಎಸ್. ರಾಮಯ್ಯ ಮತ್ತು ಆತನ ಪತ್ನಿ ಗಂಗಮ್ಮ ಎಂಬುವವರು ಮೊನ್ನೆ ರಾತ್ರಿ ಬಹಳ ಹೊತ್ತಿನವರೆಗೆ ಬಟ್ಟೆ ಇಸ್ತ್ರಿ ಮಾಡುತ್ತಿದ್ದು, ಆ ಬೆಂಕಿಯನ್ನು ಆರಿಸದೇ ಹಾಗೆಯೇ ಮಲಗಿಕೊಂಡರೆಂದೂ ನಿನ್ನೆ ಮಧ್ಯಾಹ್ನ ಬಾಗಿಲನ್ನು ಒಡೆದು ನೋಡಲಾಗಿ ಗಂಗಮ್ಮನು ಮೃತಪಟ್ಟು ರಾಮಯ್ಯನು ಮರಣ ಶಯ್ಯೆಯಲ್ಲಿದ್ದನೆಂದು ಹೇಳಲಾಗಿದೆ. ರಾಮಯ್ಯನನ್ನು ಆಸ್ಪತ್ರೆಗೆ ದಾಖಲ್ಮಾಡಲಾಗಿದೆ.

ಕಾಂಗ್ರೆಸ್ ಮಹಾಧಿವೇಶನ

ಅಖಿಲಭಾರತ ಕಾಂಗ್ರೆಸ್ ಅಧಿವೇಶನವು ಮುಂದಿನ ತಿಂಗಳು ೩ ನೇ ವಾರದಲ್ಲಿ ಕಲ್ಕತ್ತಾಕ್ಕೆ ೪೦ ಮೈಲಿ ದೂರದಲ್ಲಿರುವ ಕಲ್ಯಾಣಿ ಎಂಬಲ್ಲಿ ನಡೆಯುತ್ತದೆ ಈ ಅಧಿವೇಶನದಲ್ಲಿ ಭಾಗವಹಿಸಲಿರುವ ೭೦೦೦ ಪ್ರತಿನಿಧಿಗಳು೩೫೦೦ ಸ್ವಯಂಸೇವಕರಲ್ಲದೆ ಸುಮಾರು ೪೦೦೦ ಸ್ಥಳೀಯ ಕಾಂಗ್ರೆಸ್ಸಿಗರು ಮತ್ತು ಪ್ರೇಕ್ಷಕರು ಕುಳಿತುಕೊಳ್ಳುವಂತೆ ಭಾರಿ ಚಪ್ಪರವನ್ನ ಹಾಕಲಾಗುತ್ತಿದೆ ಇದಲ್ಲದೆ ಕಾಂಗ್ರೆಸ್ ಅಧ್ಯಕ್ಷರು, ಕಾರ್ಯಸಮಿತಿ ಸದಸ್ಯರು, ಪ್ರಾಂತ್ಯದ ಮುಖ್ಯಮಂತ್ರಿಗಳು ಇವರುಗಳ ಬಿಡಾರಕ್ಕಾಗಿ ೧೭ ಮನೆಗಳನ್ನು ಕಟ್ಟಲಾಗುತ್ತಿದೆ.

ವಿದ್ಯಾರ್ಥಿಗಳ ಪರಿಹಾರ ನಿಧಿಗೆ ಸಹಾಯ

ಅಂತರ ರಾಷ್ಟ್ರೀಯ ವಿದ್ಯಾರ್ಥಿಗಳ ಪರಿಹಾರ ನಿಧಿಗಾಗಿ ೧೦ ಸಾವಿರ ಸ್ವಿಸ್ ಫ್ರಾಂಕುಗಳನ್ನು ವಿಶ್ವದ ವಿಶ್ವವಿದ್ಯಾನಿಲಯ ಸೆಮಿನಾರ್ ಸಂಸ್ಥೆ ಕೊಟ್ಟಿದೆ. ಸೆಮಿನಾರಿನ ವಾರ್ಷಿಕ ಅಧಿವೇಶನವು ಮುಂದಿನ ತಿಂಗಳು ಭಾರತದಲ್ಲಿ ನಡೆಯಲಿದೆ.

ಅಂತ್ಯಕ್ರಿಯೆ

ದಿವಂಗತ ಶ್ರಿ ಬಿ. ನರಸಿಂಗರಾಯರ ಅಂತ್ಯಕ್ರಿಯೆಯು ಈದಿನ ಜೂರಿಚ್‌ನಲ್ಲಿ ನಡೆಯುತ್ತದೆ. ಅವಶೇಷವನ್ನು ಅವರ ಸಹೋದರರು ವಿಶೇಷ ವಿಮಾನದಲ್ಲಿ ಭಾರತಕ್ಕೆ ತರಲಿರುವರು.

ಕರ್ನೂಲಿನಲ್ಲಿ ಸತ್ಯಾಗ್ರಹವೇ ?

ಅನೇಕ ಕಡೆ ಗೂಂಡಾವೃತ್ತಿಗಳು

ಕರ್ನೂಲಿನಲ್ಲಿ ಆಂಧ್ರ ಸರ್ಕಾರವು ೧೪೪ನೇ ಸೆಕ್ಷನ್ ಜಾರಿಮಾಡಿ ಸಭೆ ಮೆರವಣಿಗೆ ಮುಂತಾದುವನ್ನು ನಿಷೇಧಿಸಿರುವುದನ್ನು ಆಂಧ್ರ ರಾಜಧಾನಿಯ ಕ್ರಿಯಾಸಮಿತಿಯು ವಿರೋಧಿಸಿ ಸತ್ಯಾಗ್ರಹವನ್ನು ಆಚರಿಸುವುದಾಗಿ ಹೇಳಿದೆ.

ಕರ್ನೂಲ್ ನಗರದಲ್ಲಿ ಇನ್ನೂ ಹರತಾಳವು ಮುಂದುವರಿಯುತ್ತಲೇ ಇದೆ.

ಆಂಧ್ರ ರಾಜಧಾನಿಯನ್ನು ಸ್ವಲ್ಪಕಾಲ ಕರ್ನೂಲಿನಿಂದ ವರ್ಗಾಯಿಸುವುದಿಲ್ಲವೆಂದೂ ಜನರು ಶಾಂತರೀತಿಯಿಂದ ವರ್ತಿಸಬೇಕೆಂದೂ ಸಚಿವರು ಮನವಿಮಾಡುತ್ತಿದ್ದಾರೆ.

ಗೂಂಡಾವೃತ್ತಿಯ ಕೃತ್ಯಗಳು ಇನ್ನೂ ಹಲವಾರು ಕಡೆ ನಡೆಯುತ್ತಿರುವುದಾಗಿ ಹೇಳಲಾಗಿದೆ.

ಶಾಸನಸಭಾ ಸದಸ್ಯರಿಗೆ ವೇತನ ಹುದ್ದೆ ಕೂಡದು

ಬೆಂಗಳೂರು ೩೦

ಶಿವಮೊಗ್ಗ ಜಿಲ್ಲೆಯಲ್ಲಿ ಜನಪದ ಯೋಜನೆಯ ಅಧ್ಯಕ್ಷರನ್ನಾಗಿ ಶ್ರೀ ಹೆಚ್.ಎಸ್. ರುದ್ರಪ್ಪನವರನ್ನು ಮತ್ತು ಕೋಲಾರದ ಚಿನ್ನದ ಗಣಿ ಕಂಪೆನಿಯಲ್ಲಿ ಸರ್ಕಾರಿ ಪರ ಶ್ರೀ ಎನ್. ಹುಚ್ಚಮಾಸ್ತಿಗೌಡರನ್ನು ನೇಮಿಸಿರುವುದರ ಬಗ್ಗೆ ಪ್ರಧಾನಿ ನೆಹರೂರವರು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರಿಗೆ ಒಂದು ಪತ್ರವನ್ನು ಬರೆದು ಅವರಿಬ್ಬರೂ ಶಾಸನಸಭಾ ಸದಸ್ಯರಾಗಿರುವುದರಿಂದ ವೇತನ ಪಡೆಯುವ ಈ ಸ್ಥಾನಗಳಲ್ಲಿ ಅವರು ಮುಂದುವರೆಯಲು ಸಾಧ್ಯವಿಲ್ಲವೆಂದು ತಿಳಿಸಿರುವುದಾಗಿ ವರದಿಯಾಗಿದೆ.

ವಿದ್ಯಾ ಸುಧಾರಣೆ

ಸಂಸ್ಥಾನದಲ್ಲಿ ವಿದ್ಯಾ ಸುಧಾರಣೆಗಳನ್ನು ಮುಂದಿನವರ್ಷದಿಂದ ಜಾರಿಗೆ ತರುವುದಾಗಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹೇಳಿದ್ದಾರೆ. ಕೇಂದ್ರ ಸರ್ಕಾರದ ಪ್ರವೇಶವಿಲ್ಲದಿದ್ದರೆ ಈ ಸುಧಾರಣೆಗಳನ್ನು ಹಿಂದೆಯೇ ಜಾರಿಗೆ ತರಲಾಗುತ್ತಿತ್ತೆಂದೂ ಇನ್ನು ಕೇಂದ್ರ ಸರ್ಕಾರಕ್ಕಾಗಿ ಕಾಯಲು ಸಾಧ್ಯವಿಲ್ಲವೆಂದೂ ಅವರು ತಿಳಿಸಿದ್ದಾರೆ.

ಭಾರತ-ಪಾಕೀಸ್ತಾನ ಸಂಗೀತ ಸಮ್ಮೇಳನ

ಪಾಕೀಸ್ತಾನದ ಸಿಂಧ್ ಹೈದರಾಬಾದಿನಲ್ಲಿ ಡಿಸೆಂಬರ್ ೫ನೇ ತಾರೀಖಿನಿಂದ ಭಾರತ ಮತ್ತು ಪಾಕೀಸ್ತಾನ ಸಂಗೀತ ಸಮ್ಮೇಳನ ನಡೆಯುತ್ತದೆ. ಉಭಯ ದೇಶಗಳ ಅನೇಕ ಪ್ರಮುಖ ಸಂಗೀತಗಾರರು ಈ ಸಮ್ಮೇಳನದಲ್ಲಿ ಭಾಗವಹಿಸುವರು.

● ೩೬ನೇಯ. ಕನ್ನಡ ಸಾಹಿತ್ಯ ಸಮ್ಮೇಳನವು ಶ್ರೀ ವಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಕುಂಟಾದಲ್ಲಿ ಡಿಸೆಂಬರ್ ೨೬ನೇ ತಾರೀಖಿನಿಂದ ೩ ದಿನಗಳು ನಡೆಯುತ್ತದೆ.

ಕಲ್ಯಾಣಭವನದ ಆರಂಭೋತ್ಸವ

ಮೈಸೂರು ೩೦

ಮನುಷ್ಯನು ಜೀವಂತನಾಗಿರುವಾಗಲೂ ಅವನು ಸತ್ತನಂತರವೂ ನಡೆಯಬೇಕಾದ ನಾನಾ ಮತೀಯ ಕರ್ಮಗಳನ್ನು ನಡೆಸುವುದಕ್ಕೆ ಮೈಸೂರು ನಗರದಲ್ಲಿರುವ ಬ್ರಾಹ್ಮಣ ಧರ್ಮ ಸಹಾಯ ಸಭೆಯು ೩೫ ವರ್ಷಗಳಿಂದ ಶ್ರಮಿಸಿ ಸೇವೆಯನ್ನು ಗೈಯುತ್ತಿರುವುದು ಅತ್ಯಂತ ಶ್ಲಾಘನೀಯ ಇಂತಹ ಸಂಸ್ಥೆಗಳು ದೇಶದಲ್ಲಿ ಹೆಚ್ಚಬೇಕು ಇದರಿಂದ ಮನುಷ್ಯನಲ್ಲಿ ಧಾರ್ಮಿಕ ಮನೋಭಾವವು ಬೆಳೆಯುವುದು ಎಂದು ವಿದ್ಯಾಸಚಿವ ಶ್ರೀ ಎ ಜಿ. ರಾಮಚಂದ್ರರಾಯರು ನಿನ್ನೆಯದಿನ ರಾಜಧಾನಿಯ ಬ್ರಾಹ್ಮಣ ಧರ್ಮ ಸಹಾಯ ಸಭೆಯವರು ತ್ಯಾಗರಾಜ ರಸ್ತೆಯಲ್ಲಿ ಕಟ್ಟಿರುವ ಕಲ್ಯಾಣಭವನದ ಆರಂಭೋತ್ಸವವನ್ನು ನೆರವೇರಿಸುತ್ತಾ ತಿಳಿಸಿದರು.

ಈ ಸಂದರ್ಭದಲ್ಲಿ ಸಚಿವರು ಕಳೆದ ೨೨ ವರ್ಷಗಳಿಂದಲೂ ಸಭೆಯ ಅಧ್ಯಕ್ಷರಾಗಿರುವ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ರವರ ಭಾವಚಿತ್ರವನ್ನು ಅನಾವರಣ ಮಾಡಿದರು.

ಪ್ರಾರಂಭದಲ್ಲಿ ಶ್ರೀಮತಿ ವಿ. ಹಾಲಕ್ಷ್ಮಿಯವರಿಂದ ಪ್ರಾರ್ಥನೆಯಾದನಂತರ ಶ್ರೀ ಎಂ. ರಾಮಸ್ವಾಮಿಯವರು ಸ್ವಾಗತ ಬಿನ್ನವತ್ತಳೆಯನ್ನು ಅರ್ಪಿಸಿದರು.

ಸಂಸ್ಥೆಯು ಕಳೆದ ೩೫ ವರ್ಷಗಳಿಂದ ಮಾಡಿರುವ ಸೇವೆಯನ್ನು ವಿವರಿಸಿ ಇಲ್ಲಿಯವರೆಗೆ ೮೦೦ ಅನಾಥ ಸಂಸ್ಕಾರ,೪೦೦೦ ಸನಾಥ ಸಂಸ್ಕಾರ ಮತ್ತು ೪೮ ವಟುಗಳಿಗೆ ಧರ್ಮೋಪನಯನ ಮಾಡಿರುವುದನ್ನು ವಿವರಿಸಿದರು.

ಅನಂತರ ಆಸ್ಥಾನ ಮಹಾ ವಿದ್ವಾನ್ ಶ್ರೀ ನಂಜನಗೂಡು ಶ್ರೀಕಂಠಶಾಸ್ತ್ರಿಗಳವರು, ಶ್ರೀ ಸುಬ್ರಹ್ಮಣ್ಯಅಯ್ಯರ್ ರವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿ ಅವರ ಉದಾರದಾನ ಧರ್ಮಪರೋಪಕಾರ ಬುದ್ಧಿಯನ್ನು ಕೊಂಡಾಡಿದರು.

ನಂತರ ವಿದ್ಯಾಸಚಿವರು ಶ್ರೀ ಅಯ್ಯರ್ ರವರ ಭಾವಚಿತ್ರವನ್ನು ಅನಾವರಣ ಮಾಡಿದರು.

ಮಾಜಿ ನರೇಂದ್ರರ ಸಭೆ

ಮಾಜಿ ನರೇಂದ್ರರು ರಾಜಾದಾಯವನ್ನು ಕಡಮೆ ಮಾಡಿಕೊಳ್ಳುವ ವಿಷಯವನ್ನು ರಾಜಾಸ್ಥಾನದ ಮಾಜಿ ದೊರೆಗಳು ಜಯಪುರದಲ್ಲಿ ಸಭೆ ಸೇರಿ ಚರ್ಚಿಸಿದರೆಂದು ತಿಳಿಯಬರುತ್ತದೆ. ಪುನಃ ಅವರು ಇನ್ನೆರಡು ವಾರಗಳಲ್ಲಿ ಸಭೆ ಸೇರಿ ಅಂತ್ಯ ನಿರ್ಧಾರಕ್ಕೆ ಬರುವರೆಂದು ಹೇಳಲಾಗಿದೆ.

ಪಂಚವಾರ್ಷಿಕ ಯೋಜನೆ

ಪ್ರಾಂತ್ಯಗಳಿಗೆ ೨೨೭ ಕೋಟಿ ರೂ. ನೆರವು

ಪಂಚವಾರ್ಷಿಕ ಯೋಜನೆಯ ಪ್ರಥಮ ೩ ವರ್ಷಗಳಲ್ಲಿ ಭಾರತ ಸರ್ಕಾರವು ಎಲ್ಲಾ ಪ್ರಾಂತ್ಯಗಳಿಗೂ ೨೨೭ ಕೋಟಿ ರೂಪಾಯಿಗಳನ್ನು ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಇದರಲ್ಲಿ ೨೫೦ ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲೂ ೨೭ ಕೋಟಿ ರೂಪಾಯಿಗಳನ್ನು ಗ್ರಾಂಟುಗಳ ರೂಪದಲ್ಲೂ ಕೊಡಲಾಗಿದೆ. ಇವರ ಪೈಕಿ ೧೧೪ ಕೋಟಿ ರೂಪಾಯಿಗಳನ್ನು ನದೀಕಣಿವೆ ಯೋಜನೆಗಳಿಗೂ, ೪೨ ಕೋಟಿಯನ್ನು ಅಭಿವೃದ್ಧಿ ಕಾರ್ಯಗಳಿಗೆ, ೨೯ ಕೋಟಿಯನ್ನು ನಿರಾಶ್ರಿತರ ಪುನರ್ವಸತಿಗಾಗಿ, ೨೨ ಕೋಟಿಯನ್ನು ಸಣ್ಣ ವ್ಯವಸಾಯಕಾರ್ಯಗಳಿಗೆ ಮತ್ತು ೨ ಕೋಟಿ ರೂಪಾಯಿಗಳನ್ನು ಕಾರ್ಮಿಕರ ವಸತಿ ನಿರ್ಮಾಣಕ್ಕಾಗಿ ಕೊಡಲಾಗಿದೆ.

ದಾಸಪ್ರಕಾಶ್ ಹೋಟೆಲ್ ಮುಂದೆ ಉಪವಾಸ ಸತ್ಯಾಗ್ರಹ

ಮೈಸೂರು ೩೦

ರಾಜಧಾನಿಯ ದಾಸಪ್ರಕಾಶ ಹೊಟೇಲಿನ ತಿಂಡಿ ಶಾಖೆಯನ್ನು ನಿನ್ನೆಯಿಂದ ಮುಚ್ಚಿ ೧೮ ಮಂದಿ ಕೆಲಸಗಾರರಿಗೆ ಉದ್ಯೋಗ ತಪ್ಪಿಸಿರುವುದನ್ನು ಪ್ರತಿಭಟಿಸಲು ಹೊಟೇಲು ಸಂಘದ ಸಲಹೆಗಾರರಾದ ಶ್ರೀ ಮೀರ್‌ನೂರ್ ಹುಸೇನರು ನಿನ್ನೆ ಬೆಳಗ್ಗೆ ೧೦ ಗಂಟೆಯಿಂದ ಹೊಟೇಲಿನ ಆವರಣದಲ್ಲಿ ಉಪವಾಸ ಪ್ರಾರಂಭಿಸಿದರು. ಹೊಟೇಲಿನ ಮಾಲೀಕರಾದ ಶ್ರೀ ಸೀತಾರಾಮರಾಯರು ತಮಗೆ ಹೆಚ್ಚು ನಷ್ಟವಾಗುತ್ತಿರುವುದರಿಂದ ಹೊಟೇಲನ್ನು ಮುಚ್ಚುತ್ತಿರುವುದಾಗಿಯೂ, ಈ ಬಗ್ಗೆ ಕಾನೂನಿನ ಪ್ರಕಾರ ಲೇಬರ್ ಆಫೀಸಿಗೆ ನೋಟೀಸ್ ಕೊಡಲಾಗಿತ್ತೆಂದೂ, ಕಾನೂನಿನ ಪ್ರಕಾರ ಕೆಲಸಗಾರರಿಗೆ ಏನು ಪರಿಹಾರ ದೊರೆಯಬೇಕೋ ಅದನ್ನು ಕೊಡುವುದಾಗಿ ತಿಳಿಸಿದರು. ಪ್ರಜಾ ಸೋಷಲಿಸ್ಟ್ ಪಕ್ಷದ ನಾಯಕ ಶ್ರೀ ಹುಚ್ಚೇಗೌಡರು ಮತ್ತು ಇತರರು ಎಷ್ಟು ಹೇಳಿದರೂ ಶ್ರೀ ಹುಸೇನ್‌ರು ಉಪವಾಸ ನಿಲ್ಲಿಸುವುದಿಲ್ಲವೆಂದು ತಿಳಿಸಿದರು.

ರಾತ್ರಿ ೧೧-೩೦ ಗಂಟೆಗೆ ಕೆಲಸಗಾರರಿಗೆ ಒಟ್ಟು ೩೩೦೦ ರೂಪಾಯಿಗಳ ಪರಿಹಾರ ಹಣ ಕೊಡುವುದಾಗಿ ಒಂದುಒಪ್ಪಂದವಾದ ಮೇಲೆ ಶ್ರೀ ಮೀರ್‌ನೂರ್‌ಹುಸೇನ್‌ರು ಉಪವಾಸವನ್ನು ಮುಕ್ತಾಯಗೊಳಿಸಿದರು.

ಮುಖರ್ಜಿ ನಿಧನ ಬಗ್ಗೆ ವಿಚಾರಣೆ ನಡೆಯಬೇಕು

ಡಾ॥ ಶ್ಯಾಮಪ್ರಸಾದ್ ಮುಖರ್ಜಿಯವರ ನಿಧನದ ಬಗ್ಗೆ ಕಾಶ್ಮೀರ ಸರ್ಕಾರವು ಕೂಡಲೇ ವಿಚಾರಣೆಯನ್ನು ನಡೆಸಬೇಕೆಂದು ಪಶ್ಚಿಮ ಬಂಗಾಳ ಶಾಸನ ಸಭೆಯು ಒಂದು ನಿರ್ಣಯವನ್ನು ಮಾಡಿದೆ.

ನಿಕ್ಸನ್ ಬೆಂಗಳೂರಿನಲ್ಲಿ

ಬೆಂಗಳೂರು ೩೦

ಅಮೇರಿಕಾ ಉಪಾಧ್ಯಕ್ಷ ಮಿ॥ ನಿಕ್ಸನ್‌ರವರು ನಿನ್ನೆಯದಿನ ಮದ್ರಾಸಿನಿಂದ ಬೆಂಗಳೂರಿಗೆ ಆಗಮಿಸಿದರು.

ಮುಖ್ಯಮಂತ್ರಿ ಶ್ರೀ ಕೆ.ಹನುಮಂತಯ್ಯನವರು ಇವರ ಗೌರವಾರ್ಥವಾಗಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಇದಕ್ಕೆ ಮುನ್ನ ಮಿ॥ ನಿಕ್ಸನ್‌ರವರು ಮದ್ರಾಸಿನಲ್ಲಿ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿ ಮತ್ತು ಗೌರ್ನರ್ ಶ್ರೀ ಶ್ರೀಪ್ರಕಾಶರವರನ್ನು ಭೇಟಿಮಾಡಿದ್ದರು.

ಭಾರತಕ್ಕೆ ತಮ್ಮ ಭೇಟಿಯ ವಿಷಯವಾಗಿ ಅವರು ಸುದ್ದಿಗಾರರೊಡನೆ ಮಾತನಾಡುತ್ತಾ ಭಾರತಕ್ಕೆ ಅಮೇರಿಕಾಧ್ಯಕ್ಷರ ಶುಭಾಶಯಗಳನ್ನು ತಿಳಿಸಲು ಮತ್ತು ಭಾರತವನ್ನು ನೋಡಲು ತಾವು ಭೇಟಿಯಿತ್ತಿರುವುದಾಗಿ ಅವರು ತಿಳಿಸಿದರು.

ತಾವು ಈಗ ಕೈಗೊಂಡಿರುವ ವಿಶ್ವ ಪರ್ಯಟನೆಯು ಯಾವ ರಾಜಕೀಯಕ್ಕೂ ಸಂಬಂಧಿಸಿಲ್ಲವೆಂದು ಅವರು ತಿಳಿಸಿದರು.

ಮುಸಾದಿಕ್‌ರ ಉಪವಾಸ ಮುಷ್ಕರ

ಮಿಲಿಟರಿ ನ್ಯಾಯಾಲಯದಲ್ಲಿ ವಿಚಾರಣೆಗೊಳಗಾಗಿರುವ ಈಜಿಪ್ಟಿನ ಮಾಜಿ ಪ್ರಧಾನಿ ಡಾ॥ ಮುಸಾದಿಕ್‌ರವರು ಉಪವಾಸ ಮುಷ್ಕರವನ್ನು ಪ್ರಾರಂಭಿಸಿರುವುದಾಗಿ ತಿಳಿಯಬರುತ್ತದೆ. ಈ ಉಪವಾಸದಿಂದ ತಮ್ಮ ಪ್ರಾಣವನ್ನು ನೀಗುವುದಾಗಿ ಅವರು ಮಿಲಿಟರಿ ನ್ಯಾಯಾಲಯಕ್ಕೆ ತಿಳಿಸಿರುವುದಾಗಿ ಹೇಳಲಾಗಿದೆ.

ಭಾರತ-ಸಿಂಹಳ ಪ್ರಧಾನಿಗಳ ಮಾತುಕತೆ

ಭಾರತ ಮತ್ತು ಸಿಂಹಳ ಪ್ರಧಾನಿಗಳ ಮಾತುಕತೆಗಳು ಜನವರಿ ೧೨ರಿಂದ ೧೫ರವರೆಗೆ ನಡೆಯಬಹುದೆಂದು ಪ್ರಧಾನಿ ನೆಹರೂರವರು ಸೂಚಿಸಿರುವುದಾಗಿ ತಿಳಿಯುತ್ತದೆ.

ಭೂದಾನ ಸಂಗ್ರಹಣೆ

ವಿನೋಬಾ ಭಾವೆಯವರ ಭೂದಾನ ಯಜ್ಞ ಸಂಬಂಧದಲ್ಲಿ ಇಲ್ಲಿಯವರೆಗೆ ೨೪ ಲಕ್ಷ ಎಕರೆ ಜಮೀನನ್ನು ಸಂಗ್ರಹಿಸಿರುವುದಾಗಿ ತಿಳಿಯಬರುತ್ತದೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋ॥ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೮೩

೧-೧೨-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪುರಸಭಾ ಚುನಾವಣಾ ಪ್ರಚಾರ

ಶ್ರೀ ಜೆ. ಬಿ. ಕೃಪಲಾನಿಯವರಿಂದ ಆರಂಭ

ಮೈಸೂರು ೧

ಪ್ರಜಾಸೋಷಲಿಸ್ಟ್ ಪಕ್ಷದ ನಾಯಕ ಆಚಾರ್ಯ ಜೆ. ಬಿ. ಕೃಪಲಾನಿಯವರು ಈ ಸಂಜೆ ೬ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ನಗರದ ಪುರಸಭೆ ಚುನಾವಣೆಯ ಸಂಬಂಧದಲ್ಲಿ ತಮ್ಮ ಪಕ್ಷದ ಪ್ರಚಾರ ಪ್ರಾರಂಭೋತ್ಸವವನ್ನು ನೆರವೇರಿಸುವರು. ಸಂಸ್ಥಾನದ ಪಕ್ಷದ ಕಾರ್ಯದರ್ಶಿ ಶ್ರೀ ಬಿ.ಕೆ. ಪುಟ್ಟರಾಮಯ್ಯನವರು ಅಧ್ಯಕ್ಷತೆ ವಹಿಸುವರು.

ಶ್ರೀ ಅಹೋಬಿಲ ಸ್ವಾಮಿಗಳು

ಮೈಸೂರು ೧

ಕಳೆದ ೧೦ ದಿನಗಳಿಂದ ರಾಜಧಾನಿಯಲ್ಲಿ ತಂಗಿರುವ ಶ್ರೀ ಶ್ರೀ ಅಹೋಬಿಲ ಸ್ವಾಮಿಗಳು ಇದೇ ೩ನೇ ತಾರೀಖು ಗುರುವಾರ ಮಧ್ಯಾಹ್ನ ೩ ಗಂಟೆಗೆ ಮೇಲುಕೋಟೆಗೆ ಪ್ರಯಾಣ ಬೆಳೆಸುವರು.

ತುಂಗಭದ್ರ ಅಣೆಕಟ್ಟೆಗೆ ಆಸ್ಟ್ರೇಲಿಯಾ ಯಂತ್ರಗಳು

ತುಂಗಭದ್ರಾ ನೀರಾವರಿ ಯೋಜನೆಗಾಗಿ ಆಸ್ಟ್ರೇಲಿಯಾ ದೇಶ ಉಚಿತವಾಗಿ ಕೊಟ್ಟಿರುವ ಲಕ್ಷಾಂತರ ರೂ.ಗಳ ಯಂತ್ರ ಸಲಕರಣೆಗಳು ಈಗ ಬೊಂಬಾಯಿಗೆ ಬಂದಿವೆ. ಅವುಗಳಲ್ಲಿ ೧೯ ಟನ್ ಭಾರವುಳ್ಳ ಎರಡು ಸ್ವಿಚ್ ಬೋರ್ಡುಗಳು, ೮ ಟ್ರಾಕ್ಟರುಗಳು, ಆರು ಜನರೇಟರುಗಳು ಇವೆ.

ಶಾಲೆಗಳಿಗೆ ಜಮೀನು ಕೊಡಿ

ಗ್ರಾಮಗಳಲ್ಲಿರುವ ಜನರು ತಮ್ಮ ಪ್ರದೇಶದಲ್ಲಿರುವ ಶಾಲೆಗಳಿಗೆ ೫-೧೦ ಎಕರೆ ಜಮೀನನ್ನು ಉಚಿತವಾಗಿ ಕೊಟ್ಟರೆ ಅದರಿಂದ ಬರುವ ಉತ್ಪತ್ತಿಯಿಂದ ಶಾಲಾ ಬಾಲಕರ ಮತ್ತು ಉಪಾಧ್ಯಾಯರ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು. ಆದ್ದರಿಂದ ಗ್ರಾಮದಲ್ಲಿರುವ ಹಣವಂತರು ಈ ಕಾರ್ಯಕ್ಕೆ ನೆರವಾಗಬೇಕೆಂದು ಮದ್ರಾಸಿನ ಆರ್ಥಿಕ ಸಚಿವ ಶ್ರೀ ಸುಬ್ರಹ್ಮಣ್ಯಂರವರು ಕೋರಿದ್ದಾರೆ.

ವರ್ಷಕ್ಕೆ ೩ ಕೋಟಿ ಬ್ಲೇಡುಗಳ ತಯಾರಿಕೆ

ಪಾಕೀಸ್ತಾನದ ಸಿಂಧ್‌ನಲ್ಲಿರುವ ಒಂದು ಕಾರ್ಖಾನೆಯಲ್ಲಿ ವರ್ಷಕ್ಕೆ ೩ ಕೋಟಿ ಬ್ಲೇಡುಗಳನ್ನು ತಯಾರಿಸಲು ವ್ಯವಸ್ಥೆ ಮಾಡಲಾಗಿದೆ. ಈ ಕಾರ್ಖಾನೆಯಲ್ಲಿ ಕೆಲಸಮಾಡಲು ೪ ಜನ ಜರ್ಮನ್ ಪ್ರವೀಣರು ಆಗಮಿಸಿದ್ದಾರೆ.

ಬೆಂಗಳೂರಿನಲ್ಲಿ ರಿಕ್ಷಾಗಳಿಗೆ ರಹದಾರಿ ರದ್ದು

ಕಾರ್ಪೊರೇಷನ್ ನಿರ್ಧಾರ

ಬೆಂಗಳೂರು ೧

ಬೆಂಗಳೂರು ಸಿವಿಲ್ ಪ್ರದೇಶದಲ್ಲಿ ಬಳಕೆಯಲ್ಲಿರುವ ಮನುಷ್ಯರೆಳೆಯುವ ರಿಕ್ಷಾಗಳಿಗೆ ರಹದಾರಿ ಕೊಡುವುದನ್ನು ಇನ್ನು ಮುಂದೆ ಕೊಡಕೂಡದೆಂದು ಇಲ್ಲಿಯ ಕಾರ್ಪೊರೇಷನ್ ತೀರ್ಮಾನಿಸಿದೆ.

ಕಾಫಿ ಕುಡಿಯುವವರು ಹೆಚ್ಚಿದ್ದಾರೆ

ಭಾರತದಲ್ಲಿ ಈಗ ಕಾಫಿ ಕುಡಿಯುವವರ ಸಂಖ್ಯೆ ಹೆಚ್ಚಿದೆಯೆಂದು ಅಂಕಿಅಂಶಗಳಿಂದ ವ್ಯಕ್ತವಾಗಿದೆ.೧೯೪೦ ರಲ್ಲಿ ೧೦ಸಾವಿರ ಟನ್ ಕಾಫಿಬೀಜ ಖರ್ಚಾಗುತ್ತಿದ್ದು, ೧೯೫೨ ರಲ್ಲಿ ೧೮ ಸಾವಿರ ಟನ್ನಿಗೆ ಏರಿದೆ. ಹತ್ತುವರ್ಷಗಳ ಹಿಂದೆ ೧೮೧೦೩೭ ಎಕರೆ ಕಾಫಿಬೆಳೆ ಇದ್ದು, ಹೋದವರ್ಷ ೨,೩೯,೯೭೬ ಎಕರೆಗಳಲ್ಲಿ ಕಾಫಿ ಬೆಳೆಯಲಾಯಿತು.

ಕರ್ನಾಟಕ ಮಹಿಳಾ ಸಮ್ಮೇಳನ

ಮಂಗಳೂರಿನಲ್ಲಿ ಕಳೆದ ೨೯ ನೇ ತಾ॥ ಡಾ॥ ಶ್ರೀಮತಿ ಸಾವಿತ್ರಿ ನಾಗನಗೌಡರ ಅಧ್ಯಕ್ಷತೆಯಲ್ಲಿ ನಡೆದ ಕರ್ನಾಟಕ ಮಹಿಳಾ ಸಮ್ಮೇಳನವಲ್ಲಿ ಕರ್ನಾಟಕ ಪ್ರಾಂತ್ಯ ರಚನೆ ಶೀಘ್ರದಲ್ಲೇ ಆಗಬೇಕು ಮತ್ತು ಹಿಂದೂ ಕೋಡ್ ಮಸೂದೆ ಪಾರ್ಲಿಮೆಂಟ್‌ನಲ್ಲಿ ಬೇಗ ಅಂಗೀಕೃತವಾಗಬೇಕು—ಎಂಬ ನಿರ್ಣಯಗಳನ್ನು ಅನುಮೋದಿಸಲಾಗಿದೆ.

ಭಾರತ-ರಷ್ಯಾ ಸೌಹಾರ್ದ ಸಂಘ

ಭಾರತ ಮತ್ತು ರಷ್ಯಾದೇಶಗಳ ಬಗ್ಗೆ ಹೆಚ್ಚು ಸೌಹಾರ್ದ ಮತ್ತು ನಿಕಟ ಸಂಬಂಧ ಏರ್ಪಡಿಸಲು ದೆಹಲಿಯಲ್ಲಿ ಒಂದು ಭಾರತ-ರಷ್ಯಾ ಸೌಹಾರ್ದ ಸಂಘವನ್ನು ಏರ್ಪಡಿಸಲಾಗಿದೆ.

ವಿಮಾನಯಾನ

ಭಾರತದಲ್ಲಿ ಈ ವರ್ಷಾರ್ಧದಲ್ಲಿ ೨೨೦೦೦೦ ಪ್ರಯಾಣಿಕರು ವಿಮಾನಗಳಲ್ಲಿ ಸಂಚಾರವನ್ನೂ ಮಾಡಿದ್ದಾರೆ. ಈ ವಿಮಾನಗಳು ಸುಮಾರು ೯೯,೦೦,೦೦೦ ಮೈಲಿಗಳ ದೂರ ಚಲಿಸಿವೆ.

ಬರೋಡಾ ಮಹಾರಾಜರ ಒಡವೆಗಳು

ಬರೋಡಾ ಮಹಾರಾಜರಾದ ಪ್ರತಾಪಸಿಂಗ್ ಗಾಯಕವಾಡರು ಪದಚ್ಯುತರಾದಾಗ ಅವರ ಪತ್ನಿ ರಾಣಿ ಸೀತಾದೇವಿಯವರು ೮೦ ಲಕ್ಷ ರೂ. ಬೆಲೆಬಾಳುವ ಒಡವೆಗಳನ್ನು ಯೂರೋಪಿಗೆ ತೆಗೆದುಕೊಂಡು ಹೋದರೆಂದೂ, ಅವುಗಳು ತಮ್ಮ ಸ್ವಂತ ಆಸ್ತಿಯೆಂದೂ, ಅವನ್ನು ತನಗೆ ಹಿಂತಿರುಗಿಸಬೇಕೆಂದೂ ಬರೋಡಾ ಮಹಾರಾಜರಾದ ಫತ್ತೇಸಿಂಗ್ ರವರು ಈಗ ಭಾರತ ಸರ್ಕಾರಕ್ಕೆ ಮನವಿಮಾಡಿದ್ದಾರೆ.

ಅಖಿಲ ಭಾರತ ಮಲೆನಾಡು ಸಮ್ಮೇಳನ

ಶಿವಮೊಗ್ಗ ಜಿಲ್ಲಾಬೋರ್ಡಿನ ಆಶ್ರಯದಲ್ಲಿ ನಡೆಯಲಿರುವ ಅಖಿಲ ಭಾರತ ಮಲೆನಾಡು ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಲು ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಒಪ್ಪಿರುವರೆಂದು ತಿಳಿಯಬರುತ್ತದೆ. ಕೇಂದ್ರ ವ್ಯವಸಾಯಸಚಿವ ಡಾ॥ ದೇಶಮುಖ್ ಮತ್ತು ರೈಲ್ವೆ ಸಚಿವ ಶ್ರೀ ಲಾಲಬಹದ್ದೂರ್ ಶಾಸ್ತ್ರಿಯವರು ಇದರಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಲಾಯಕಾಲಿ ಜಮೀನು ನಿರಾಶ್ರಿತರಿಗೆ

ಈಗ ಪಾಕೀಸ್ಥಾನದಲ್ಲಿರುವ ಹೈದರಾಬಾದಿನ ಮಾಜಿ ಪ್ರಧಾನಿ ಮೀರ್ ಲಾಯಕಾಲಿಯವರಿಗೆ ಸೇರಿದ್ದ ೯೦೦ ಎಕರೆ ಕಬ್ಬಿನಬೆಳೆಯ ಜಮೀನಿನ ಬಹುಭಾಗವನ್ನು ನಿರಾಶ್ರಿತರಿಗೆ ಹಂಚಲಾಗಿದೆ. ಉಳಿದುದನ್ನು ಸದ್ಯದಲ್ಲೇ ಇದೇರೀತಿ ವಿನಿಯೋಗ ಮಾಡಲಾಗುತ್ತದೆ-ಎಂದು ತಿಳಿದುಬಂದಿದೆ

ಎನ್.ಸಿ.ಸಿ. ದಿನಾಚರಣೆ

ಭಾರತದಾದ್ಯಂತ ಇದೇ ೬ನೇ ತಾರೀಖು ರಾಷ್ಟ್ರೀಯ ಕ್ಯಾಡೇಟ್ ದಳದ ದಿನವನ್ನಾಗಿ ಆಚರಿಸಬೇಕೆಂದು ಸೂಚನೆ ಕೊಡಲಾಗಿದೆ. ಆ ದಿನ ಪೆರೇಡು ಮತ್ತು ಆಟ ಪಾಟಗಳ ಸ್ಪರ್ಧೆಗಳು ನಡೆಯುವುವು.

ಶಾಸನಸಭೆ ಸಂಯುಕ್ತ ಅಧಿವೇಶನ

ಬೆಂಗಳೂರು ೧

ಮೈಸೂರು ಶಾಸನಸಭೆಗಳ ಸಂಯುಕ್ತ ಅಧಿವೇಶನವು ಮುಂದಿನ ತಿಂಗಳು ೧೧ನೇ ತಾರೀಖು ಬೆಂಗಳೂರಿನಲ್ಲಿ ನಡೆಯುತ್ತದೆ. ಆದಿನ ಶ್ರೀಮನ್ಮಹಾರಾಜರು ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾರೆ.

ಇಸ್ತ್ರಿಪೆಟ್ಟಿಗೆ ಆರಿಸದಿದ್ದಕ್ಕೆ ಮರಣ

ಬೆಂಗಳೂರು ೧

ಗಾಂಧಿ ನಗರದ ಒಂದು ಲಾಂಡ್ರಿಯಲ್ಲಿ ಶ್ರೀ ಪಿ.ಎನ್. ರಾಮಯ್ಯ ಮತ್ತು ಆತನ ಪತ್ನಿ ಗಂಗಮ್ಮ ಎಂಬುವವರು ನೊನ್ನೆ ರಾತ್ರಿ ಬಹಳ ಹೊತ್ತಿನವರೆಗೆ ಬಟ್ಟೆ ಇಸ್ತ್ರಿ ಮಾಡುತ್ತಿದ್ದು, ಆ ಬೆಂಕಿಯನ್ನು ಆರಿಸದೇ ಹಾಗೆಯೇ ಮಲಗಿಕೊಂಡರೆಂದೂ ನಿನ್ನೆ ಮಧ್ಯಾಹ್ನ ಬಾಗಿಲನ್ನು ಒಡೆದು ನೋಡಲಾಗಿ ಗಂಗಮ್ಮನು ಮೃತಪಟ್ಟು ರಾಮಯ್ಯನು ಮರಣ ಶಯ್ಯೆಯಲ್ಲಿದ್ದನೆಂದು ಹೇಳಲಾಗಿದೆ. ರಾಮಯ್ಯನನ್ನು ಆಸ್ಪತ್ರೆಗೆ ದಾಖಲ್ಮಾಡಲಾಗಿದೆ.

ಕಾಂಗ್ರೆಸ್ ಮಹಾಧಿವೇಶನ

ಅಖಿಲಭಾರತ ಕಾಂಗ್ರೆಸ್ ಅಧಿವೇಶನವು ಮುಂದಿನ ತಿಂಗಳು ೩ ನೇ ವಾರದಲ್ಲಿ ಕಲ್ಕತ್ತಾಕ್ಕೆ ४೦ ಮೈಲಿ ದೂರದಲ್ಲಿರುವ ಕಲ್ಯಾಣಿ ಎಂಬಲ್ಲಿ ನಡೆಯುತ್ತದೆ ಈ ಅಧಿವೇಶನದಲ್ಲಿ ಭಾಗವಹಿಸಲಿರುವ ೭೦೦೦ ಪ್ರತಿನಿಧಿಗಳು೩೫೦೦ ಸ್ವಯಂಸೇವಕರಲ್ಲದೆ ಸುಮಾರು ೪೦೦೦೦ ಸ್ಥಳೀಯ ಕಾಂಗ್ರೆಸ್ಸಿಗರು ಮತ್ತು ಪ್ರೇಕ್ಷಕರು ಕುಳಿತುಕೊಳ್ಳುವಂತೆ ಭಾರಿ ಚಪ್ಪರವನ್ನು ಹಾಕಲಾಗುತ್ತಿದೆ ಇದಲ್ಲದೆ ಕಾಂಗ್ರೆಸ್ ಅಧ್ಯಕ್ಷರು, ಕಾರ್ಯಸಮಿತಿ ಸದಸ್ಯರು, ಪ್ರಾಂತ್ಯದ ಮುಖ್ಯಮಂತ್ರಿಗಳು ಇವರುಗಳ ಬಿಡಾರಕ್ಕಾಗಿ ೧೬ ಮನೆಗಳನ್ನು ಕಟ್ಟಲಾಗುತ್ತಿದೆ.

ವಿದ್ಯಾರ್ಥಿಗಳ ಪರಿಹಾರ ನಿಧಿಗೆ ಸಹಾಯ

ಅಂತರ ರಾಷ್ಟ್ರೀಯ ವಿದ್ಯಾರ್ಥಿಗಳ ಪರಿಹಾರ ನಿಧಿಗಾಗಿ ೧೦ ಸಾವಿರ ಸ್ವಿಸ್ ಫ್ರಾಂಕುಗಳನ್ನು ವಿಶ್ವದ ವಿಶ್ವವಿದ್ಯಾನಿಲಯ ಸೆಮಿನಾರ್ ಸಂಸ್ಥೆ ಕೊಟ್ಟಿದೆ. ಸೆಮಿನಾರಿನ ವಾರ್ಷಿಕ ಅಧಿವೇಶನವು ಮುಂದಿನ ತಿಂಗಳು ಭಾರತದಲ್ಲಿ ನಡೆಯಲಿದೆ.

ಅಂತ್ಯಕ್ರಿಯೆ

ದಿವಂಗತ ಶ್ರೀ ಬಿ. ನರಸಿಂಗರಾಯರ ಅಂತ್ಯಕ್ರಿಯೆಯು ಈದಿನ ಜೂರಿಚ್‌ನಲ್ಲಿ ನಡೆಯುತ್ತದೆ. ಅವಶೇಷವನ್ನು ಅವರ ಸಹೋದರರು ವಿಶೇಷ ವಿಮಾನದಲ್ಲಿ ಭಾರತಕ್ಕೆ ತರಲಿರುವರು.

ವಿವಿಧ ವಿನೋದಾವಳಿ

ಮೈಸೂರು ೨

ಮೈಸೂರು ನಗರದ ಸ್ಕೌಟ್ ಮಾಸ್ಟರು ಗಳ ಸಂಘದ ಸಹಾಯಾರ್ಥವಾಗಿ ಇದೇ ೧೨ ನೇ ತಾರೀಖು ಸಂಜೆ ೬-೩೦ ಗಂಟೆಗೆ ಟೌನ್‌ಹಾಲಿನಲ್ಲಿ ವಿವಿಧ ವಿನೋದಾವಳಿ ಏರ್ಪಡಿಸಲಾಗಿದೆ.

ಪಾಕೀಸ್ತಾನ ಅಮೆರಿಕಾ ಮಿಲಿಟರಿ ಒಪ್ಪಂದ ?

ಪಾಕೀಸ್ತಾನಕ್ಕೆ ಅಮೆರಿಕಾವು ಸೈನ್ಯಕ್ಕಾಗಿ ನೆರವು ನೀಡುವ ಮತ್ತು ಪಾಕೀಸ್ತಾನದಲ್ಲಿ ಅಮೆರಿಕಾವು ಯುದ್ಧ ನೆಲೆಗಳನ್ನು ಸ್ಥಾಪಿಸುವ ವಿಷಯದಲ್ಲಿ ಅಮೆರಿಕಾಧ್ಯಕ್ಷರು, ಸೆಕ್ರೆಟರಿ ಆಫ್ ಸ್ಟೇಟ್, ಪ್ರಮುಖ ನಾಯಕರು ಮತ್ತು ಪತ್ರಿಕೆಗಳು ಮತ್ತು ಪಾಕ್ ಗೌರ್‍ನರ್ ಜನರಲ್‌ರವರು ಹೇಳಿರುವ ಹೇಳಿಕೆಗಳು, ಲೇಖನಗಳು ಎಲ್ಲವೂ ವಿರೋಧಾಭಾಸದಿಂದ ಕೂಡಿವೆ ತಮಗೂ ಪಾಕ್ ಗೌರ್‍ನರ್ ಜನರಲ್‌ರವರಿಗೂ ಭೇಟಿ ನಡೆದಾಗ ವಿಷಯವು ವಿವರವಾಗಿ ಚರ್ಚೆಯಾಗಲಿಲ್ಲವೆಂದು ಅಮೆರಿಕಾಧ್ಯಕ್ಷ ಐಸೆನ್‌ಹೋವರ್ ಹೇಳಿರುವರು ಅಂದರೆ ವಿಷಯವು ಚರ್ಚೆಯಾಯಿತೆಂದು ನಿಖರವಾಗಿ ತಿಳಿಯಬರುತ್ತದೆ. ಆದರೆ ಈ ವಿಷಯದಲ್ಲಿ ಸಂಧಾನವೇನೂ ನಡೆದಿಲ್ಲ ಮುಂದೆ ನಡೆಯುವುದಿಲ್ಲವೆಂದು ಹೇಳಲಾಗುವುದಿಲ್ಲವೆಂದು ವಿದೇಶಾಂಗ ಕಾರ್ಯದರ್ಶಿ ಡಲ್ಲೆಸ್‌ರು ಹೇಳಿದ್ದಾರೆ. ಪಾಕೀಸ್ತಾನದ ಗೌರ್‍ನರ್ ಜನರಲ್‌ರವರು ಈ ವರದಿಗಳೆಲ್ಲಾ ನಿರಾಧಾರವಾದವೆಂದೂ ಸತ್ಯಕ್ಕೆದೂರವೆಂದೂ ಹೇಳಿದ್ದಾರೆ. ಇವನ್ನೆಲ್ಲಾ ಪರಿಶೀಲಿಸಿದರೆ ವಿಷಯ ಚರ್ಚೆಯಾಗಿರಬಹುದು, ಅಂತ್ಯ ತೀರ್ಮಾನವಾಗಿಲ್ಲವೆನ್ನಬಹುದು ಎಂದು ಪ್ರಧಾನಿ ನೆಹರೂರವರು ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ಅಮೆರಿಕಾ ಪಾಕೀಸ್ಥಾನ ಮಿಲಿಟರಿ ಒಪ್ಪಂದ ವಿಷಯವಾಗಿ ಮಾತನಾಡುತ್ತಾ ಹೇಳಿದ್ದಾರೆ. ಭಾರತವು ಈ ವಿಷಯದಲ್ಲಿ ತನ್ನ ಕಳವಳವನ್ನು ವ್ಯಕ್ತಪಡಿಸಿದೆ. ಇನ್ನೂ ಕಾದುನೋಡುವುದೆಂದು ಪ್ರಧಾನಿ ಹೇಳಿರುವರು.

ಭಾರತಕ್ಕೆ ಚೈನಾ ನಿಯೋಗ

ಭಾರತ-ಚೈನಾ ಸೌಹಾರ್ದ್ಯ ಸಂಘದ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಈ ತಿಂಗಳು ೭ನೇ ತಾರೀಖು, ಚೈನಾದಿಂದ ಒಂದು ಅನಧಿಕೃತ ಸೌಹಾರ್ದ್ಯ ನಿಯೋಗವೊಂದು ಭಾರತಕ್ಕೆ ಬರಲಿರುವುದಾಗಿ ತಿಳಿಯಬರುತ್ತದೆ. ಸಾಮಾಜಿಕ ಶಾಖೆಯ ಉಪಸಚಿವರು ಈ ನಿಯೋಗದ ನಾಯಕರಾಗಿರುವರು.

-ಮೈಸೂರು ಪೇಟೆಧಾರಣೆ-

ತಾರೀಖು ೩೦—೧೧—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೮	೨೦—
ಎಳ್ಳು	೬೨—	—
ಹುಚ್ಚೆಳ್ಳು	೪೨—	—
ಹುರಳಿ	೩೦—೧೪	೩೩—೧೦
ಹೆಸರು	೩೦—	೩೮—
ಉದ್ದು	೫೧—೧೦	—
ಅಲಸಂದೆ	೩೪—೬	೫೦—
ಹುಣಸೇಹಣ್ಣು	೯—೧೨	—
ಮೆಣಸಿನಕಾಯಿ	೧೩—	೨೮—
ತೆಂಗಿನಕಾಯಿ	೧೭೬—	೨೪೬—

ಕೋರಿಯಾ ರಾಜಕೀಯ ಸಮ್ಮೇಳನ ದೆಹಲಿಯಲ್ಲಿ ನಡೆಯುವುದೇ ?

ಕೊರಿಯಾ ರಾಜಕೀಯ ಸಮ್ಮೇಳನವು ದೆಹಲಿಯಲ್ಲಿ ನಡೆಯಬೇಕೆಂದು ಉತ್ತರ ಕೊರಿಯಾ ಮತ್ತು ಚೈನಾ ಪ್ರತಿನಿಧಿಗಳು ಈಗ ನಡೆಯುತ್ತಿರುವ ಮಾತುಕತೆಗಳಲ್ಲಿ ಸಲಹೆ ಮಾಡಿರುವುದಾಗಿ ಹೇಳಲಾಗಿದೆ.

ವಿಶ್ವ ಸಂಸ್ಥೆಯು ಸಹ ಈ ಸಲಹೆಗೆ ಒಪ್ಪುವುದಾಗಿ ಅಮೆರಿಕಾ ಪ್ರತಿನಿಧಿ ಹೇಳಿದ್ದಾರೆ. ಈ ಸಮ್ಮೇಳನವು ಮುಂದಿನ ತಿಂಗಳು ೨೮ ನೇ ತಾರೀಖು ನಡೆಯುವ ಸಂಭವವಿದೆ.

ಮೈಸೂರು ಪುರಸಭಾ ಕಛೇರಿ

ತಾರೀಖು 24-11-53

....

Tender Notification

ಈಮೂಲಕ ತಿಳಿಯಪಡಿಸುವುದೇನೆಂದರೆ:-

1954-55 (1—2—1954 ರಿಂದ 31—1—1955) ನೇ ಸಾಲಿಗೆ ಬೇಕಾಗುವ ಈ ಕೆಳಗೆ ವಿವರಿಸಿರುವ ಸಾಮಾನುಗಳನ್ನು ಮೈಸೂರು ಮುನಿಸಿಪಾಲಿಟಿಗೆ ಸಪ್ಲೈಮಾಡಲು ಮೊಹರಾದ ಟೆಂಡರುಗಳನ್ನು (Sealed tenders with samples in sealed bottles) ಸ್ಯಾಂಪಲ್‌ಗಳೊಡನೆ 1953 ನೆ ಇಸವಿ **ಡಿಸೆಂಬರ್ ಮಾಹೆ ತಾ॥23 ಬುಧವಾರ ಮಧ್ಯಾಹ್ನ 4 ಗಂಟೆವರಿವಿಗೂ** (on or before 23rd December 1953 up to 4 p. m.) ಮುನಿಸಿಪಲ್ ಕಮೀಷನರ್‌ರವರಿಂದ ಸ್ವೀಕರಿಸಲಾಗುತ್ತದೆ.

ಅಪೇಕ್ಷೆಯುಳ್ಳವರು ಈ ಕೆಳಗೆ ನಮೂದಿಸಿರುವಂತೆ ಟೆಂಡರು ಡಿಪಾಜಿಟ್ ಹಣವನ್ನು ಮುನಿಸಿಪಲ್ ಖಜಾನೆಗೆ ಜಮಾ ಮಾಡಿ ಅಲ್ಲಿಂದ ಪಡೆದ ಸರ್ಟಿಫೈಡ್ ಚಲನ್ (certified challan) ಸಮೇತ ತಮ್ಮ ಟೆಂಡರುಗಳನ್ನು ಕಳುಹಿಸತಕ್ಕದ್ದು. ಹೆಚ್ಚಿಗೆ ವಿವರಗಳನ್ನು ಆಫೀಸ್ ವೇಳೆಯಲ್ಲಿ ಮೊಕ್ತ ಪಡೆಯಬಹುದು ಮತ್ತು ನೋಟೀಸ್ ಬೋರ್ಡಿನಲ್ಲಿಯೂ ಕಾಣಬಹುದು.

ಬಾಬು	ಡಿಪಾಜಿಟ್
1) ಹುರುಳಿ ಸುಮಾರು 500 ರಿಂದ 1000 ಪಲ್ಲ	ರೂ. 300-0-0
ಉಪ್ಪು ಸುಮಾರು 50 ಪಲ್ಲ	
2) ಒಣಗಿದ ನೆಲ್ಲು ಹುಲ್ಲು 800 ಟನ್	ರೂ. 300-0-0

[sd]N. LAKSHMANRAU.
Commissioner,
City Municipal Council,
Mysore.

ಬಿ. ಎನ್. ರಾವ್ ನಿಧನ

ಅಂತರ ರಾಷ್ಟ್ರೀಯ ನ್ಯಾಯಾಲಯದ ನ್ಯಾಯಮೂರ್ತಿಗಳಾಗಿದ್ದ ಶ್ರೀ ಬೆನಗಲ್ ನರಸಿಂಗರಾಯರು ನಿನ್ನೆಯ ದಿನ ಸ್ವಿಟ್ಜರ್‌ಲೆಂಡಿನ ಜೂರಿಜ್‌ನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಕೆಲವು ತಿಂಗಳುಗಳಿಂದ ರೋಗಗ್ರಸ್ತರಾಗಿ ಅಲ್ಲಿಯ ವೈದ್ಯಶಾಲೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಅವರ ಸ್ಥಿತಿಯು ನಿರಾಶಾದಾಯಕವಾದುದೆಂದು ತಿಳಿದೊಡನೆಯೇ ಅವರ ಸಹೋದರರಾದ ರಿಜರ್ವ್ ಬ್ಯಾಂಕ್ ಗೌರ್‍ನರ್ ಶ್ರೀ ಬಿ. ರಾಮರಾಯರು, ಪಾರ್ಲಿಮೆಂಟ್ ಸದಸ್ಯ ಶ್ರೀ ಬಿ. ಶಿವರಾಯರು ಅಲ್ಲಿಗೆ ತೆರಳಿ ಅಲ್ಲಿಯೇ ಇದ್ದರು. ಶ್ರೀ ಬಿ. ಎನ್. ರಾವ್‌ರವರಿಗೆ ೬೬ ವರ್ಷ ವಯಸ್ಸಾಗಿತ್ತು.

ಶ್ರೀ ಬಿ. ನರಸಿಂಗರಾಯರು ಮದರಾಸ್ ಪ್ರಾಂತ್ಯದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನಿಸಿದ ಅಚ್ಚ ಕನ್ನಡಿಗರು. ಅವರು ಭಾರತ ಸರ್ಕಾರದಲ್ಲಿ ಅನೇಕ ಪ್ರಮುಖ ಹುದ್ದೆಗಳಲ್ಲಿದ್ದು ಸ್ವಾತಂತ್ರ್ಯ ಬಂದನಂತರ ವಿಶ್ವ ಸಂಸ್ಥೆಯಲ್ಲಿ ಭಾರತ ಪ್ರತಿನಿಧಿಯಾಗಿ ಅಮೋಘವಾದ ಸೇವೆಯನ್ನು ಸಲ್ಲಿಸಿದರು. ವಿಶ್ವದಲ್ಲೆಲ್ಲಾ ಭಾರತದ ಕೀರ್ತಿಯು ಅವರ ಪ್ರತಿಭೆಯಿಂದ ಇಮ್ಮಡಿಯಾಯಿತು. ಅನಂತರ ಅವರನ್ನು ಅಂತರ ರಾಷ್ಟ್ರೀಯ ನ್ಯಾಯಾಲಯದ ನ್ಯಾಯಾಧೀಶರಾಗಿ ಚುನಾಯಿಸಲಾಯಿತು.

ಶ್ರೀಯುತರು ಕಲ್ಕತ್ತಾ ಹೈಕೋರ್ಟಿನ ನ್ಯಾಯಾಧೀಶರಾಗಿಯೂ, ಭಾರತ ರಾಜ್ಯಾಂಗ ಸಲಹೆಗಾರರಾಗಿಯೂ, ಸೇವೆಯನ್ನು ಸಲ್ಲಿಸಿದರು. ರಾಜ್ಯಾಂಗ ವಿಚಾರಗಳಲ್ಲಿ ಅವರು ವಿಶ್ವದಲ್ಲೇ ಅತ್ಯಂತ ಪ್ರಖ್ಯಾತರಲ್ಲೊಬ್ಬರು. ಅವರು ಕಾಶ್ಮೀರದ ಮುಖ್ಯ ಮಂತ್ರಿಯಾಗಿದ್ದುದರಿಂದ ಅಲ್ಲಿ ಎಲ್ಲಾ ಶಾಲಾ ಕಾಲೇಜುಗಳನ್ನು ನಿನ್ನೆ ಮುಚ್ಚಲಾಗಿತ್ತು.

ಶ್ರೀ ಬಿ.ಎನ್. ರಾವ್‌ರವರಿಗೆ ದೇಶ ವಿದೇಶಗಳಿಂದ ನಾನಾ ಪ್ರಮುಖರು ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದ್ದಾರೆ. ದೆಹಲಿಯಲ್ಲಿ ನಿನ್ನೆಯ ದಿನ ಉಭಯ ಶಾಸನ ಸಭೆಗಳು ಅವರ ಗುಣಗಾನ ಮಾಡಿ ಒಂದು ನಿಮಿಷ ಮೌನವನ್ನು ಆಚರಿಸಿತು. ರಾಷ್ಟ್ರಾಧ್ಯಕ್ಷರು, ಮದ್ರಾಸ್ ಮುಖ್ಯಮಂತ್ರಿಗಳು, ವಿಶ್ವ ಸಂಸ್ಥೆಯಲ್ಲಿ ಭಾರತ, ಬ್ರಿಟನ್, ಪರ್ಶಿಯಾ ಮುಂತಾದ ದೇಶಗಳ ಪ್ರತಿನಿಧಿಗಳು ದಿವಂಗತರ ವಿಷಯದಲ್ಲಿ ಉತ್ತಮ ರೀತಿಯಲ್ಲಿ ಮಾತನಾಡಿ ಅವರ ನಿಧನದ ಬಗ್ಗೆ ತಮ್ಮ ಅನುತಾಪವನ್ನು ವ್ಯಕ್ತಪಡಿಸಿದ್ದಾರೆ.

ಸ್ಕೌಟ್ ಶಿಕ್ಷಣ ಶಿಬಿರ

ಮೈಸೂರು ೧

ಮೈಸೂರು ನಗರದ ಸ್ಕೌಟ್ ಮತ್ತು ಕಬ್ ಮಾಸ್ಟರ್ ಶಿಕ್ಷಣ ಶಿಬಿರವು ನಂಜನಗೂಡಿನಲ್ಲಿ ಕಳೆದ ೨೮-೨೯ನೇ ತಾರೀಖುಗಳಲ್ಲಿ ನಡೆಯಿತು.

ಶಿಬಿರದ ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಮೈಸೂರು ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ವಹಿಸಿದ್ದರು.

ಪ್ರಾರ್ಥನೆ ಮತ್ತು ಸ್ವಾಗತ ಭಾಷಣಗಳಾದನಂತರ ಕ್ಯಾಂಪ್ ಆಫೀಸರ್ ಶ್ರೀ ಡಿ. ಕೃಷ್ಣಸ್ವಾಮಿಯವರು ಶಿಬಿರದ ವರದಿಯನ್ನೊಪ್ಪಿಸಿದರು. ಅಧ್ಯಕ್ಷರು ಅನಂತರ ಪ್ರಶಸ್ತಿ ಪತ್ರಗಳನ್ನು ಹಂಚಿದರು.

ಸ್ಕೌಟ್ ಕಮೀಷನರ್ ಶ್ರೀ ಬಿ. ಟಿ. ಶ್ರೀನಿವಾಸಯ್ಯಂಗಾರ್ಯರು ವಂದನೆ ಅರ್ಪಿಸಿದರು.

ಮೈಸೂರು ಜಿಲ್ಲಾ ಬೋರ್ಡಿನ ಎಕ್ಸಿಕ್ಯುಟಿವ್ ಆಫೀಸರ್

ಮೈಸೂರು ಎರಡನೇ ಸಿಟಿಮ್ಯಾಜಿಸ್ಟ್ರೇಟರಾದ ಶ್ರೀ ಟಿ. ಬಿ. ನಂಜರಾಜೇಅರಸ್‌ರವರನ್ನು ಮೈಸೂರು ಜಿಲ್ಲಾ ಬೋರ್ಡಿನ ಚೀಫ್ ಎಕ್ಸಿಕ್ಯುಟಿವ್ ಆಫೀಸರಾಗಿ ನೇಮಿಸಲಾಗಿದೆ.

ಬಿ. ಎನ್. ರಾವ್‌ರ ಗೌರವಾರ್ಥವಾಗಿ ಪುರಸಭೆ ಮುಂದುವರಿಯಿತು

ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ಸಮಾವೇಶಗೊಂಡಿದ್ದ ಪುರಸಭೆಯ ಅಧಿವೇಶನವು ಅಂತರ ರಾಷ್ಟ್ರೀಯ ನ್ಯಾಯಾಲಯದ ಜಡ್ಜರಾಗಿದ್ದ ಭಾರತದ ಶ್ರೀ ಬಿ. ಎನ್. ರಾವ್‌ರವರ ನಿಧನದ ಬಗ್ಗೆ ಸಂತಾಪ ಸೂಚಕ ನಿರ್ಣಯವನ್ನು ಮಾಡಿ, ಅವರ ಗೌರವಾರ್ಥವಾಗಿ ಯಾವ ಕಾರ್ಯಕಲಾಪಗಳನ್ನು ನಡೆಸದೆ ಸಭೆಯನ್ನು ಮುಂದಕ್ಕೆ ಹಾಕಲಾಯಿತು.

———

ಆಂಧ್ರ ಶಾಸನಸಭೆಯಲ್ಲಿ ರಾಜಧಾನಿ ಪ್ರಶ್ನೆ

ಆಂಧ್ರ ಶಾಸನಸಭೆಯಲ್ಲಿ ನಿನ್ನೆಯದಿನ ರಾಜಧಾನಿಯನ್ನು ಕರ್ನೂಲಿನಿಂದ ಬೇರೇ ಕಡೆಗೆ ವರ್ಗಾಯಿಸುವ ವಿಷಯವು ಚರ್ಚೆಗೆ ಬಂದಿತು.

ಕಾಂಗ್ರೆಸ್ ಸದಸ್ಯರೊಬ್ಬರು ರಾಜಧಾನಿಯನ್ನು ೧೯೫೬ನೇ ಅಕ್ಟೋಬರ್ ವೇಳೆಗೆ ಕರ್ನೂಲಿನಿಂದ ವಿಶಾಖಪಟ್ಟಣಕ್ಕೆ ಬದಲಾಯಿಸಬೇಕೆಂದು ಮಂಡಿಸಿದ್ದ ನಿರ್ಣಯವು ಚರ್ಚೆಗೆ ಬಂದು ದೀರ್ಘ ಚರ್ಚೆ ನಡೆದು ಕೊನೆಗೆ ಅದು ತಿರಸ್ಕಾರವಾಯಿತು.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋ: ೫೭೪
ರಿಜಿಸ್ಟರ್
ನಂ. ಎಂ. ೩೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೮೪

೨-೧೨-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪೌರ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳ ಗೊಂದಲ ಇರಕೂಡದು

ಕಾಂಗ್ರೆಸ್ ಆಡಳಿತದಿಂದ ದೇಶ ಅಧೋಗತಿಗೆ ಇಳಿದಿದೆ

ಆಚಾರ್ಯ ಕೃಪಲಾನಿಯವರ ಹೇಳಿಕೆ

ಮೈಸೂರು ೨

ಪ್ರಜಾಸೋಷಲಿಸ್ಟ್ ಪಕ್ಷದ ನಾಯಕ ಆಚಾರ್ಯ ಜೆ. ಬಿ. ಕೃಪಲಾನಿಯವರು ನಿನ್ನೆ ರಾತ್ರಿ ಟೌನ್‌ಹಾಲ್ ಮೈದಾನದಲ್ಲಿ ನಗರದ ಪುರಸಭಾ ಚುನಾವಣೆಗೆ ಸ್ಪರ್ಧಿಸುವ ಪ್ರಜಾಸೋಷಲಿಸ್ಟ ಪಕ್ಷದ ಉಮೇದವಾರರ ಪರವಾಗಿ ಪ್ರಚಾರ ಆರಂಭೋತ್ಸವ ನೆರವೇರಿಸಿದರು.

ಸಂಸ್ಥಾನದ ಪ್ರಜಾಸೋಷಲಿಸ್ಟ್ ಪಕ್ಷದ ಅಧ್ಯಕ್ಷ ಶ್ರೀ ಬಿ. ಹುಚ್ಚೇಗೌಡರು ಸ್ವಾಗತ ಬಯಸಿದರು.

ಶ್ರೀ ಕೃಪಲಾನಿಯವರು ಭಾಷಣಮಾಡಿ ಕಾಂಗ್ರೆಸ್ ಮತ್ತು ಅದರ ಸರ್ಕಾರಗಳ ನೀತಿ,ಆಡಳಿತಮುಂತಾದವನ್ನು ಉಗ್ರವಾಗಿ ಟೀಕಿಸಿ, ಕಾಂಗ್ರೆಸ್ ಆಡಳಿತದಿಂದ ದೇಶವು ಅಧೋಗತಿಗೆ ಇಳಿದಿದೆಯೆಂದು ತಿಳಿಸಿದರು.

ಪುರಸಭಾ ಚುನಾವಣೆಗಳಲ್ಲಿ ಉಮೇದುವಾರರನ್ನು ರಾಜಕೀಯ ಪಕ್ಷಗಳ ಆಧಾರದಮೇಲೆ ನಿಲ್ಲಿಸಕೂಡದು ಪೌರರಿಗೆ ಹೆಚ್ಚು ಅನುಕೂಲಗಳನ್ನು ಕಲ್ಪಿಸುವುದೇ ಮುಖ್ಯ ಕೆಲಸವಾದ್ದರಿಂದ ಪುರಸಭೆಗಳಲ್ಲಿ ರಾಜಕೀಯಪಕ್ಷಗಳ ಗೊಂದಲ ಇರಕೂಡದು. ಈಗ ಪಕ್ಷದ ಆಧಾರದಮೇಲೆ ನಿಲ್ಲಿಸಿರುವ ಉಮೇದುವಾರರನ್ನು ಕಾಂಗ್ರೆಸ್ ವಾಪಸು ತೆಗೆದುಕೊಳ್ಳುವುದಾದರೆ ತಮ್ಮ ಪಕ್ಷದ ಉಮೇದುವಾರರನ್ನೂ ವಾಪಸು ತೆಗೆದುಕೊಳ್ಳಲು ತಾವು ಸಿದ್ಧವಾಗಿದ್ದೇವೆ. ಆದರೆ ಕಾಂಗ್ರೆಸ್ ತನ್ನ ಅಧಿಕಾರಲಾಲಸೆಯಿಂದ ಆರೀತಿ ಮಾಡುವುದಿಲ್ಲವೆಂದು ವ್ಯಥಪಟ್ಟರು ಆದ್ದರಿಂದಲೇ ತಮ್ಮ ಪಕ್ಷದವರೂ ಸಹ ಅದೇರೀತಿ ವರ್ತಿಸಿ ಚುನಾವಣೆಯಲ್ಲಿ ಹೋರಾಡಬೇಕಾಗಿದೆ. ಮೈಸೂರು ನಗರದ ಜನರು ಕಣ್ಣುಮುಚ್ಚಿಕೊಂಡು ತಮಗೆ ಬೇಡದವರನ್ನು ಚುನಾಯಿಸುವುದು ಸರ್ವಥಾ ಸರಿಯಲ್ಲ.ತಮಗೆ ಯಾರಲ್ಲಿವಿಶ್ವಾಸವಿದ್ದು ಅವರು ತಮಗೆ ಸೌಕರ್ಯ ಕಲ್ಪಿಸುವರೆಂದ ನಂಬಿಕೆ ಇದ್ದವರಿಗೆಮಾತ್ರ ಬೆಂಬಲ ನೀಡಬೇಕು ಎಂದು ತಿಳಿಸಿದರು.

ಪ್ರಾರಂಭದಲ್ಲಿ ಆಚಾರ್ಯರು ತಮಗೆ ಗೌರ್‍ನರ್ ಪದವಿ ದೊರಕಿದ್ದರೂ ಅದನ್ನು ನಿರಾಕರಿಸಿದರೆಂದು ತಿಳಿಸಿದ ವಿಷಯವನ್ನು ಪ್ರಸ್ತಾಪಿಸಿ ಭಾರತಕ್ಕೆ ಸ್ವಾತಂತ್ರ ಬಂದ ಮೇಲೆ ಬ್ರಿಟಿಷರಂತೆಯೇ ಗವರ್ನರ್ ಪದವಿಯನ್ನು ಉಳಿಸಿಕೊಂಡು ಬಂದಿರುವುದು ಹಾಸ್ಯಾಸ್ಪದವೆಂದೂ, ಈಗಿನ ಗೌರ್‍ನರುಗಳಿಗೆ ಯಾವ ಅಧಿಕಾರವೂ ಇಲ್ಲದೆ, ಅವರಿಂದ ಯಾವ ಪ್ರಯೋಜನವೂ ಇಲ್ಲದೆ, ಬರೀ ತಮಾಷೆಗಾಗಿ ಇರುವುದು ವಿಷಾದಕರವೆಂದೂ ಟೀಕಿಸಿದರು.

ಭಾರತದಿಂದ ಬ್ರಿಟಿಷರನ್ನು ಓಡಿಸುವುದಕ್ಕೆ ಗಾಂಧಿಜೀಯವರು ಹೋರಾಡಿದುದು ದೇಶದ ಜನರಿಗೆ ಸುಖ ಉಂಟಾಗಲೆಂದು. ಆದರೆ ಈಗ ಏಳು ವರ್ಷಗಳ ಕಾಂಗ್ರೆಸ್ ಆಡಳಿತದಲ್ಲಿ ಜನರಿಗೆ ಯಾವ ಸುಖವೂ ಉಂಟಾಗದೆ, ಅವರ ಕಷ್ಟಗಳು ದಿನೇ ದಿನಕ್ಕೆ ಹೆಚ್ಚಾಗುತ್ತಿದೆ.

ಬಟ್ಟೆ ಉತ್ಪತ್ತಿ ಹೆಚ್ಚಾಗಿದೆ ಎಂದು ಬಡಾಯಿ ಕೊಚ್ಚುತ್ತಿದ್ದಾರೆ, ಆದರೆ ಬೆಲೆ ವಿಪರೀತವಾಗಿ, ಒಬ್ಬ ಹೆಂಗಸು ೫ ವರ್ಷದಲ್ಲಿ ಒಂದು ಸೀರೆಯನ್ನು ಕೊಳ್ಳುವುದಕ್ಕೂ ಸಾಧ್ಯವಿಲ್ಲವಾಗಿದೆ ವಿದ್ಯಾಭ್ಯಾಸ ತೆಗೆದುಕೊಂಡರೆ, ಉಚಿತ ಪ್ರಾಥಮಿಕ ವಿದ್ಯಾಭ್ಯಾಸ ಇರಬೇಕೆಂದು ರಾಜ್ಯಾಂಗದಲ್ಲಿ ನಮೂದಿಸಿದ್ದರೂಸಹ ಬಾಲಕರು ಈಗ ಫೀಜು ಕೊಡಬೇಕಾದ ಪ್ರಸಂಗ ಬಂದಿದೆ ಆಡಳಿತದಲ್ಲಿ ಬಿಗಿತಪ್ಪಿ, ಎಲ್ಲಿನೋಡಿದರೂ ಲಂಚ ರುಷುವತ್ತು ತಲೆ ಆಡಿಸುತ್ತಿದೆ.

ಹಿಂದೆ ಪ್ರಾಂತೀಯ ಅಥವ ಭಾಷಾ ಮನೋಭಾವನೆ ಇತ್ತಿಲ್ಲ. ಈಗ ಎಲ್ಲಿನೋಡಿದರೂ ತಮ್ಮ ಭಾಷೆ ಮತ್ತು ತಮ್ಮ ಪ್ರಾಂತ್ಯವೇ ಹೆಚ್ಚಾಗಿದೆ.ಕ್ಷಾಮದ ಗಂಡಾಂತರ ಬಂದರೆ ಅದಕ್ಕೆ ಗಮನವೇ ಇಲ್ಲವಾಗಿದೆ. ಆಹಾರಕ್ಕಿಂತಲೂ ಭಾಷೆಯೇ ಪ್ರಾಮುಖ್ಯವಾಗಿಬಿಟ್ಟಿದೆ.

ಇದರ ಜೊತೆಗೆ ಎಲ್ಲ ವಿಷಯದಲ್ಲೂ ಕೋಮುವಾರು ತಾಂಡವಾಡುತ್ತಿವೆ. ಇದಕ್ಕಿಂತ ಹೆಚ್ಚಿನ ವಕ್ರಮನೋಭಾವ ಯಾವ ದೇಶದಲ್ಲೂ ಉಂಟಾಗಿಲ್ಲ.

ಹಿಂದಿನಕಾಲದಲ್ಲಿ ಉಪಾಧ್ಯಾಯರನ್ನು ಗುರುಗಳಂತೆ ಭಾವಿಸಿ ಅವರು ತಂದೆಗಿಂತಲೂ ಹೆಚ್ಚೆಂದು ವಿದ್ಯಾರ್ಥಿಗಳು ಪೂಜಿಸುತ್ತಿದ್ದರು ಈಗ ಉಪಾಧ್ಯಾಯರಿಗೆ ಪುರಸ್ಕಾರವೇ ಇಲ್ಲವೆ, ವಿದ್ಯಾರ್ಥಿಗಳು ಅವರನ್ನು ಹೊಡೆಯುವ ಕಾಲವೂ ಬಂದಿದೆ ಇದಕ್ಕೆ ಉಪಾಧ್ಯಾಯರೇ ಕಾರಣ. ಹಿಂದೆ ಉಪಾಧ್ಯಾಯರು ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳೆಂದು ಭಾವಿಸಿ ಪ್ರೀತಿಸುತ್ತಿದ್ದರು. ಶಾಲೆಯಲ್ಲಿ ವ್ಯಾಸಂಗಮಾಡುತ್ತಿರುವ ಯುವಕರ ಮೇಲೆ ಪೊಲೀಸರು ನುಗ್ಗಿ ಲಾಠಿ ಪ್ರಯೋಗ ಮತ್ತು ಗುಂಡುಹಾರಿಸುವುದನ್ನು ಶಾಲಾ ಅಧಿಕಾರಿಗಳು ಅವಕಾಶ ಕೊಡುವುದು ಇನ್ನಾವ ದೇಶದಲ್ಲೂ ಕಂಡು ಬಂದಿಲ್ಲ. ವಿದ್ಯಾರ್ಥಿಗಳ ಮನೋಭಾವವನ್ನು ಸರಿಯಾಗಿ ತಿಳಿದು ಕೊಳ್ಳದೆ ಇರುವುದರಿಂದಲೇ ಇಂತಹ ಘಟನೆಗಳು ನಡೆಯುತ್ತಿವೆ. ವಿದ್ಯಾರ್ಥಿಗಳನ್ನು ಸುಮ್ಮನೆ ನಿಂದಿಸುವುದರಿಂದ ಪ್ರಯೋಜನವಿಲ್ಲ. ಉಪಾಧ್ಯಾಯರು ಸರಿಯಾಗಿ ವರ್ತಿಸಿದರೆ ಅವರ ಶಿಷ್ಯಂದಿರೂ ಕೂಡ ಅವರ ಮಾತನ್ನು ಕೇಳುತ್ತಾರೆ.

ಜನರಲ್ಲಿ ಧಾರ್ಮಿಕ ಮನೋಭಾವ ಮಾಯವಾಗಿ, ನೀತಿಯನ್ನು ಮರೆತು, ಒಬ್ಬರೊಬ್ಬರನ್ನು ನಂಬುವುದೇ ತಪ್ಪಿ ಸ್ವಾರ್ಥತೆ ಹೆಚ್ಚಾಗಿದೆ. ಇಂತಹ ಪರಿಸ್ಥಿತಿಗೆ ಕಾಂಗ್ರೆಸ್ ಆಡಳಿತವೇ ಕಾರಣ-ಎಂದು ಆಚಾರ್ಯರು ಹೇಳಿದರು.

ಪಿ. ಎಸ್. ಪಿ ಸದಸ್ಯ ಮತ್ತು ಶಾಸನ ಸಭೆಯ ವಿರೋಧಪಕ್ಷದ ನಾಯಕ ಶ್ರೀ ಮಹಮದ್ ಇಮಾಂರವರೂ ಭಾಷಣ ಮಾಡಿ, ತಮ್ಮ ಪಕ್ಷದ ಉಮೇದುವಾರರಿಗೆ ಬೆಂಬಲ ನೀಡಬೇಕೆಂದು ಕೋರಿದರು.

ಟಿ. ನಾರಾಯಣಪ್ಪನವರ ನಿಧನ

ಮೈಸೂರು ೨

ಮೈಸೂರು ಪುರಸಭೆಯ ಸದಸ್ಯರೂ ಮತ್ತು ಅಬ್ಕಾರಿ ಕಂಟ್ರಾಕ್ಟರೂ ಆಗಿದ್ದ ಶ್ರೀ ಟಿ. ನಾರಾಯಣಪ್ಪನವರು ನಿನ್ನೆ ಮಧ್ಯರಾತ್ರಿ ಹೃದಯ ವೇದನೆಯಿಂದ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ೫೮ ವರ್ಷ ವಯಸ್ಸಾಗಿತ್ತು ಅವರಿಗೆ ಪತ್ನಿಯೂ ಮತ್ತು ದತ್ತು ಪುತ್ರ ಇದ್ದಾರೆ.

ದಿವಂಗತರು ಇದೇ ೭ ನೇ ತಾ॥ ನಡೆಯಲಿರುವ ಪುರಸಭಾ ಚುನಾವಣೆಗೆ ಕೃಷ್ಣರಾಜಮೊಹಲ್ಲಾ ೫ ನೇ ವಾರ್ಡಿನಿಂದ ಪ್ರಜಾಸೋಷಲಿಸ್ಟ್ ಪಕ್ಷದ ಉಮೇದುವಾರರಾಗಿ ಸ್ಪರ್ಧಿಸಿದ್ದರು.

ಮೃತರ ಗೌರವಾರ್ಥವಾಗಿ ಪುರಸಭೆಯ ಕಛೇರಿಯನ್ನು ಈದಿನ ಮುಚ್ಚಲಾಗಿತ್ತು.

ಎಂ. ಶಾಮಣ್ಣನವರ ನಿಧನ

ಬೆಂಗಳೂರು ೨

ಮೈಸೂರು ಸರ್ಕಾರದ ಹಣಕಾಸಿನ ಶಾಖೆಯ ಕಾರ್ಯದರ್ಶಿಯಾಗಿದ್ದು ರಜಾದಮೇಲಿದ್ದ ಶ್ರೀ ಎಂ. ಶಾಮಣ್ಣನವರು ಈದಿನ ಬೆಳಗ್ಗೆ ತಮ್ಮ ಗೃಹದಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರಿಗೆ ೫೬ ವರ್ಷ ವಯಸ್ಸಾಗಿತ್ತು. ಅವರು ಸಲ್ಲಿಸಿದ್ದ ಉತ್ತಮ ಸೇವೆಗಾಗಿ ಸರ್ಕಾರದವರು ಕಳೆದಸಾಲಿನಲ್ಲಿ ಒಂದುವರ್ಷ ಅವರಿಗೆ ಜೀವದಾನ ಕೊಟ್ಟಿದ್ದರು ದಿವಂಗತರು ಈದಿನ ತಮ್ಮ ಹುದ್ದೆಯಿಂದ ನಿವೃತ್ತರಾಗಬೇಕಾಗಿತ್ತು. ಅವರಿಗೆ ೪ ಹೆಣ್ಣುಮಕ್ಕಳೂ ಮತ್ತು ಒಬ್ಬಮಗನೂ ಇದ್ದಾರೆ.

ಅಹೋಬಿಲ-ಪರಕಾಲ ಮಠಾಧಿಪತಿಗಳ ಭೇಟಿ

ಮೈಸೂರು ೨

ರಾಜಧಾನಿಯಲ್ಲಿರುವ ಶ್ರೀ ಅಹೋಬಿಲ ಸ್ವಾಮಿಗಳು ಈದಿನ ಬೆಳಗ್ಗೆ ೧೦ ಗಂಟೆಗೆ ಪರಕಾಲ ಮಠಕ್ಕೆ ಭೇಟಿಯಿತ್ತು, ಅಲ್ಲಿಯ ಹಯಗ್ರೀವ ದೇವರ ಸೇವೆಯನ್ನು ನಡೆಸಿ, ಪರಕಾಲಸ್ವಾಮಿಗಳೊಡನೆ ಸಂಭಾಷಣೆ ನಡೆಸಿದರು.

ಈ ರಾತ್ರಿ ೮ ಗಂಟೆಗೆ ಶ್ರೀ ಪರಕಾಲ ಸ್ವಾಮಿಯವರು ಶ್ರೀ ಅಹೋಬಿಲ ಮಠಕ್ಕೆ ಭೇಟಿಕೊಡುವರು.

ಈ ಮಠಾಧಿಪತಿಗಳ ಭೇಟಿಯು ಉಭಯತ್ರರ ಆಹ್ವಾನದಮೇಲೆ ನಡೆಯಿತೆಂದು ತಿಳಿದ ಬಂದಿದೆ.

ವ್ಯಾಗನ್ ಹರಿದು ರೈಲ್ವೆ ನೌಕರರ ದುರಂತ

ಮೈಸೂರು ೨

ರೈಲ್ವೆ ವರ್ಕ್‌ಷಾಪಿನಲ್ಲಿ ಡಿಪೋ ಸ್ಟೋರ್ ಕೀಪರ್ ಆದ ವಿ. ಬಿ. ವೇಣುಗೋಪಾಲ್‌ರವರು ಈದಿನ ಬೆಳಗ್ಗೆ ೮-೩೦ ಗಂಟೆಯ ಸಮಯದಲ್ಲಿ ಚಲಿಸುತ್ತಿದ್ದ ವ್ಯಾಗನ್ನಿಗೆ ಸಿಕ್ಕಿ ಸ್ಥಳದಲ್ಲೇ ಮೃತಪಟ್ಟ ವಿಷಾದ ಘಟನೆ ವರದಿಯಾಗಿದೆ.

ವರ್ಕ್‌ಷಾಪಿನ ಆವರಣದಲ್ಲಿ ಈ ಬೆಳಗ್ಗೆ ವ್ಯಾಗನ್ನುಗಳನ್ನು ಓಡಾಡಿಸುತ್ತಿದ್ದಾಗ ಅವರು ರೈಲ್ವೆ ಲೈನನ್ನು ದಾಟಲು ಹೋಗಿ ಎಡವಿ ಬಿದ್ದರೆಂದೂ, ಆಗ ಅವರ ಮೇಲೆ ವ್ಯಾಗನ್ ಹರಿದು ಅಪಘಾತಕ್ಕೆ ಒಳಗಾದರೆಂದೂ ಹೇಳಲಾಗಿದೆ.

ಬಟ್ಟೆ ಗಿರಣಿಯವರ ಹರತಾಳ

ಬೀಹಾರ್ ಪ್ರಾಂತ್ಯದಲ್ಲಿ ಗಿರಣಿಗಳಲ್ಲಿ ಮಾರಾಟವಾಗುವ ಬಟ್ಟೆ ಮತ್ತು ನೂಲಿನ ಮೇಲೆ ಮಾರಾಟ ತೆರಿಗೆಯನ್ನು ನಿನ್ನೆಯಿಂದ ವಿಧಿಸಲು ಸರ್ಕಾರವು ಆಜ್ಞೆಮಾಡಿರುವುದನ್ನು ವಿರೋಧಿಸಿ ಅಲ್ಲಿಯ ೩೩ ಗಿರಣಿ ಮಾಲೀಕರು ನಿನ್ನೆಯದಿನ ಅವುಗಳನ್ನು ಮುಚ್ಚಿ ಹರತಾಳವನ್ನು ನಡೆಸಿದರು.

ಅಸ್ಪೃಶ್ಯತೆನಿವಾರಣೆಗೆ ನೆರವು

ದೇಶದಲ್ಲಿ ಅಸ್ಪೃಶ್ಯತೆಯನ್ನು ನಿವಾರಿಸಲು ಶ್ರಮಿಸುವ ಸಂಸ್ಥೆಗಳಿಗೆ ಆರ್ಥಿಕ ನೆರವು ನೀಡುವ ವಿಷಯಗಳನ್ನು ಕೇಂದ್ರಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ತಿಳಿಯಬರುತ್ತದೆ.

○ ಪ್ರಾಂತ್ಯದ ಎಲ್ಲಾ ಜಿಲ್ಲಾ ಬೋರ್ಡು ಅಧ್ಯಕ್ಷರ ಸಭೆಯು ನಿನ್ನೆಯದಿನ ನಡೆದು ಜಿಲ್ಲಾ ಬೋರ್ಡುಗಳನ್ನು ರದ್ದು ಮಾಡುವ ವಿಷಯವನ್ನು ಚರ್ಚಿಸಿತು. ಪುನಃ ಸಭೆಯು ೫ ನೇ ತಾರೀಖು ಮೈಸೂರಿನಲ್ಲಿ ಸೇರುವುದು.

ಮೈಸೂರು ಅಕ್ಕಿಯಲ್ಲಿ ಸ್ವಯಂಪೂರ್ಣವಾಗಿದೆ

ಕೇಂದ್ರದಿಂದ ಮುಂದಿನವರ್ಷ ಅಕ್ಕಿ ಸರಬರಾಜಿಲ್ಲ

ಮೈ ಸೂ ರು ಮತ್ತು ಹೈದರಾಬಾದ್ ಪ್ರಾಂತ್ಯಗಳು ಮುಂದಿನವರ್ಷಕ್ಕೆ ಅಕ್ಕಿಯಲ್ಲಿ ಸ್ವಯಂಪೂರ್ಣವಾಗಿದೆ. ಕೇಂದ್ರದಿಂದ ತಮಗೆ ಅಕ್ಕಿ ಬೇಕೆಂದು ಮನವಿ ಬಂದಿಲ್ಲವಾಗಿ ಅಲ್ಲಿಗೆ ಮುಂದಿನವರ್ಷ ಕೇಂದ್ರವು ಅಕ್ಕಿ ಸರಬರಾಜು ಮಾಡುವುದಿಲ್ಲ ಎಂದು ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ತಿಳಿಸಿದ್ದಾರೆ.

ಆಂಧ್ರ ಮತ್ತು ಮದ್ರಾಸ್ ಪ್ರಾಂತ್ಯಗಳು ಒಟ್ಟಿನಲ್ಲಿ ಸ್ವಯಂಪೂರ್ಣವಾಗಿವೆ. ಬೊಂಬಾಯಿ, ತಿರುವಾಂಕೂರ್-ಕೊಚ್ಚಿ ಮತ್ತು ಪಶ್ಚಿಮ ಬಂಗಾಳಗಳಿಗೆ ಕೇಂದ್ರವು ಆಹಾರವನ್ನು ಸರಬರಾಜು ಮಾಡಲಾಗುತ್ತದೆ. ಬೊಂಬಾಯಿನಲ್ಲಿ ಅಕ್ಕಿ ಪಡಿತರವನ್ನು ಈಗ ಕೊಡುತ್ತಿರುವ ೪ ಔನ್ಸ್‌ಗಳನ್ನು ೬ ಔನ್ಸ್‌ಗಳಿಗೆ ಹೆಚ್ಚಿಸಲಾಗುತ್ತದೆ. ವಿದೇಶಗಳಿಂದ ಅಕ್ಕಿಯನ್ನು ತರಿಸಿಕೊಳ್ಳುವುದಿಲ್ಲ ೧೦೦ ವರ್ಷಗಳಲ್ಲಿ ಅಕ್ಕಿಯನ್ನು ಭಾರತ ಆಮದು ಮಾಡಿಕೊಳ್ಳದಿರುವುದು ಇದೇ ಪ್ರಥಮ-ಎಂದೂ ಸಚಿವರು ತಿಳಿಸಿದ್ದಾರೆ. ವಿದೇಶಗಳಲ್ಲಿ ಪೈಪೋಟಿಯಿಂದ ಅಕ್ಕಿಯು ಕಡಮೆ ಬೆಲೆಗೇನಾದರೂ ದೊರೆತರೆ ಆಗ ಸ್ವಲ್ಪ ಅಕ್ಕಿಯನ್ನು ತರಿಸಿಕೊಳ್ಳಲಾಗುತ್ತದೆ ಎಂದೂ ಅವರು ತಿಳಿಸಿದರು.

ಗೋಧಿಯ ವಿಷಯವಾಗಿ ಅವರು ಪ್ರಸ್ತಾಪಿಸಿ ಈಗ ೬ ಲಕ್ಷ ಟನ್ ದಾಸ್ತಾನಿದೆ. ಇನ್ನೂ ೧೦ ಲಕ್ಷ ಟನ್ ತರಿಸಲು ನಿರ್ಧಾರವಾಗಿದ್ದರೂ ಅದನ್ನು ತರಿಸಿಕೊಂಡಿಲ್ಲವೆಂದು ಅವರು ಹೇಳಿದ್ದಾರೆ.

ಚುನಾವಣಾ ಕ್ಷೇತ್ರ ನಿರ್ಧಾರ ಸಮಿತಿ ಸಭೆ

ಬೆಂಗಳೂರು ೨

ಕೇಂದ್ರಸರ್ಕಾರವು ನೇಮಿಸಿರುವ ಚುನಾವಣಾಕ್ಷೇತ್ರ ನಿರ್ಧಾರಸಮಿತಿಯು ನಿನ್ನೆಯ ದಿನ ರೆಸಿಡೆನ್ಸಿಯಲ್ಲಿ ಸಭೆಸೇರಿ ಲೋಕಸಭೆ ಮತ್ತು ವಿಧಾನಸಭೆಯ ಚುನಾವಣೆ ಕ್ಷೇತ್ರಗಳ ಸಂಬಂಧದಲ್ಲಿ ಬಂದಿದ್ದ ಆಕ್ಷೇಪಣೆಗಳನ್ನು ಪರಿಶೀಲಿಸಿತು. ಈ ದಿನವೂ ಸಮಿತಿ ಸಭೆ ಸೇರುತ್ತದೆ.

ಚಿತ್ತರಂಜನ್ ರೈಲ್ವೆ ಕಾರ್ಖಾನೆ

ಕಲ್ಕತ್ತಾಬಳಿ ಭಾರತ ಸರ್ಕಾರವು ಸ್ಥಾಪಿಸಿರುವ ಚಿತ್ತರಂಜನ ರೈಲ್ವೆ ಕಾರ್ಖಾನೆಯ ಕಾರ್ಯಗಳಿಗಾಗಿ ಇಲ್ಲಿಯವರಿಗೆ ೧೪ ಕೋಟಿ ರೂಪಾಯಿಗಳು ವೆಚ್ಚವಾಗಿದೆ ಇದರಪೈಕಿ ೫ ಕೋಟಿ ರೂಪಾಯಿಗಳು ಯಂತ್ರ ಸಾಮಗ್ರಿಗಳಿಗೂ ಉಳಿದ ಹಣವು ಕಟ್ಟಡಗಳಿಗಾಗಿಯೂ ವೆಚ್ಚವಾಗಿದೆ. ಇದೇ ಏಪ್ರಿಲ್‌ವರೆಗೆ ಈ ಕಾರ್ಖಾನೆಯಲ್ಲಿ ೪ ಕೋಟಿ ರೂಪಾಯಿಗಳ ಉತ್ಪಾದನೆಯಾಗಿದೆ.

ಬಿ. ಎನ್. ರಾವ್ ಅಂತ್ಯಕ್ರಿಯೆ

ಜೂರಿಚ್‌ನಲ್ಲಿ ನಿಧನ ಹೊಂದಿದ ಶ್ರೀ ಬಿ. ಎನ್. ರಾವ್‌ರವರ ಅಂತ್ಯಕ್ರಿಯೆಯು ನಿನ್ನೆಯದಿನ ಅಲ್ಲಿಯೇ ನಡೆಯಿತು. ಆ ಸಮಯದಲ್ಲಿ ಅವರ ಸಹೋದರರುಗಳಾದ ಶ್ರೀ ರಾಮರಾವ್, ಶ್ರೀ ಶಿವರಾವ್, ಸ್ವಿಟ್ಸರ್‌ಲ್ಯಾಂಡ್ ಮತ್ತು ಸ್ವೀಡನ್‌ಗಳಲ್ಲಿಯ ಭಾರತ ರಾಯಭಾರಿಗಳು, ವಿಶ್ವನ್ಯಾಯಾಲಯದ ರಿಜಿಸ್ಟ್ರಾರರು ಮುಂತಾದ ಸುಮಾರು ೧೦೦ ಜನರು ಹಾಜರಿದ್ದರು.

ಅವರ ಅವಶೇಷಗಳನ್ನು ಅವರ ಸಹೋದರರು ಭಾರತಕ್ಕೆ ತರಲಿರುವರು.

ನಿಕ್ಸನ್-ನೆಹರೂ ಭೇಟಿ

ಅಮೆರಿಕಾ ಉಪಾಧ್ಯಕ್ಷ ಮಿ॥ ನಿಕ್ಸನ್‌ರವರು ನಿನ್ನೆಯದಿನ ಪ್ರಧಾನಿ ನೆಹರೂರವರನ್ನು ಭೇಟಿಮಾಡಿ ಸುಮಾರು ೨೦ ನಿಮಿಷ ಕಾಲ ಮಾತುಕತೆ ನಡೆಸಿದರೆಂದು ತಿಳಿಯಬರುತ್ತದೆ.

ಅನಂತರ ಅವರು ಭಾರತ ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರನ್ನು ಭೇಟಿಮಾಡಿದ್ದರು.

ಹಿಂದ್‌ನಗರದಲ್ಲಿ ರೇಡಿಯೋ ಸ್ಟೇಷನ್

ಕೊರಿಯಾದಲ್ಲಿ ಯುದ್ಧಖೈದಿಗಳ ವಿನಿಮಯ ಕಾರ್ಯದಲ್ಲಿ ತೊಡಗಿರುವ ಭಾರತದ ಸೈನಿಕರ ಉಪಯೋಗಕ್ಕಾಗಿ ಅವರು ಬಿಡಾರಮಾಡಿರುವ ಹಿಂದ್‌ನಗರದಲ್ಲಿ ಒಂದು ರೇಡಿಯೋ ಕಾರ್ಯಾಲಯವನ್ನು ಸ್ಥಾಪಿಸಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧—೧೨—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—	೨೨—೧೨
ಎಳ್ಳು	೬೩—೨	೬೫—೧೪
ಹರಳು	೩೨—	೩೭—೨
ಹುಚ್ಚೆಳ್ಳು	೪೫—೧೨	೪೬—
ಅವರೆ	—	—
ಹುರಳಿ	೩೧—೧೦	೩೪—೬
ಹೆಸರು	೨೫—	೩೮—೧೦
ಅಲಸಂದೆ	೩೩—	೫೧—೧೨
ಉದ್ದು	—	—
ಹುಣಸೇಹಣ್ಣು	೯—೧೪	೧೦—೧೪
ಮೆಣಸಿನಕಾಯಿ	—	—
ಸೀಗೆಕಾಯಿ	೬—	—
ತೆಂಗಿನಕಾಯಿ	೧೫೦—	೨೭೬—

ಆಂಧ್ರ ಶಾಸನಸಭೆಯಲ್ಲಿ ಸರ್ಕಾರಕ್ಕೆ ಸೋಲು

ಸಚಿವರ ಸಂಬಳ ೫೦೦ ರೂ. ಇರಬೇಕು

ಆಂಧ್ರ ಶಾಸನಸಭೆಯಲ್ಲಿ ನಿನ್ನೆಯದಿನ ಸಚಿವರ ಸಂಬಳವನ್ನು ೧೦೦೦ ರೂಪಾಯಿಗಳಿಂದ ೫೦೦ ರೂಪಾಯಿಗಳಿಗೆ ಇಳಿಸಬೇಕೆಂಬ ಒಂದು ನಿರ್ಣಯವು ಚರ್ಚೆಗೆ ಬಂದಾಗ ಅದರ ಪರವಾಗಿ ೫೩ ಸದಸ್ಯರೂ ವಿರೋಧವಾಗಿ ೫೨ ಜನರು ಮತನೀಡಿ ಕೇವಲ ಒಂದು ಓಟಿನಿಂದ ನಿರ್ಣಯಕ್ಕೆ ಜಯ ಲಭಿಸಿ ಸರ್ಕಾರಕ್ಕೆ ಸೋಲುಂಟಾಯಿತು.

ಸಿಂಹಳ ಪ್ರಧಾನಿ ಭಾರತಕ್ಕೆ

ಭಾರತ ಪ್ರಧಾನಿ ನೆಹರೂರವರ ಭೇಟಿಗಾಗಿ ಸಿಂಹಳ ಪ್ರಧಾನಿ ಸರ್ ಕೊಟೇಲವಾಲಾರವರು ಜನವರಿ ೧೫ನೇ ತಾರೀಖು ಭಾರತಕ್ಕೆ ಆಗಮಿಸುವರೆಂದು ತಿಳಿಯಬರುತ್ತದೆ.

ಅವರ ಜೊತೆಯಲ್ಲಿ ಅಲ್ಲಿಯ ಗೃಹ ಮತ್ತು ಕೈಗಾರಿಕಾ ಸಚಿವರುಗಳೂ ಬರುವರೆಂದು ಹೇಳಲಾಗಿದೆ.

ಪ್ರೆಸ್ ಕಮಿಷನ್

ಭಾರತ ಸರ್ಕಾರವು ರಚಿಸಿರುವ ಪ್ರೆಸ್ ಕಮೀಷನ್ ಮದ್ರಾಸಿನಲ್ಲಿ ತನ್ನ ಕಾರ್ಯಕಲಾಪಗಳನ್ನು ಪೂರೈಸಿಕೊಂಡು ಬೊಂಬಾಯಿನಲ್ಲಿ ತನ್ನ ಕೆಲಸಗಳನ್ನು ಆರಂಭಿಸಿದೆ.

ಹೆಚ್ಚುವರಿ ಧಾನ್ಯ ಕೇಂದ್ರಕ್ಕೆ

ಹೈದರಾಬಾದಿನಲ್ಲಿ ಹೆಚ್ಚುವರಿಯಿರುವ ೫೦ ಸಾವಿರ ಟನ್ ಜವಾರ್ ಧಾನ್ಯವನ್ನು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿರುವುದಾಗಿ ಅಲ್ಲಿಯ ಆಹಾರಸಚಿವರು ತಿಳಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ

ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್.ಕೆ. ವೀರಣ್ಣಗೌಡರು ಇದೇ ೭ನೇ ತಾರೀಖಿನಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಒಂದುವಾರಕಾಲ ಪ್ರವಾಸ ಮಾಡಲಿರುವರು.

ಕಾಶ್ಮೀರದಲ್ಲಿ ಭಾರಿ ಆಸ್ಪತ್ರೆ

ಕಾಶ್ಮೀರದಲ್ಲಿ ೫೦೦ ಹಾಸಿಗೆಗಳುಳ್ಳ ಭಾರಿ ಆಸ್ಪತ್ರೆಯನ್ನು ತೆರೆಯಲು ಭಾರತ ಸರ್ಕಾರವು ಸುಮಾರು $1\frac{1}{2}$ ಲಕ್ಷ ರೂಪಾಯಿಗಳ ಸಲಕರಣೆಗಳನ್ನು ಒದಗಿಸಿದೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಕಾಂಗ್ರೆಸ್ಸಿಗೇ ಓಟುಕೊಡಿ



ಇದೇ 7—12—53ನೇ ಸೋಮವಾರ ನಡೆಯುವ ಮೈಸೂರು ಪೌರಸಭಾಚುನಾವಣೆಯಲ್ಲಿ ದಯವಿಟ್ಟು ಈಕೆಳಗೆಕಂಡ ಕಾಂಗ್ರೆಸ್ ಉಮೇದುವಾರರಿಗೆ ಮಹಾಜನರು ತಮ್ಮ ಓಟನ್ನು ಕೊಡಬೇಕಾಗಿ ಪ್ರಾರ್ಥನೆ.

ಕಾಂಗ್ರೆಸ್ ಚುನಾವಣಾ ಸಮಿತಿ

ಡಿವಿಜನ್ ನಂ.
೧. ಜಿ. ಎಸ್. ರಾಮಕೃಷ್ಣಯ್ಯ
೨. ಎ. ಎನ್. ಸೂರ್ಯನಾರಾಯಣರಾವ್
೩. ಕೆ. ಸಿದ್ದಯ್ಯ
೪. ಡಿ. ಲಿಂಗಪ್ಪ
೫. ಟಿ. ಎನ್. ಸುಬ್ಬರಾವ್
೬. ಬಿ. ರಾಮಣ್ಣ
೭. ಪಾಲಹಳ್ಳಿ ಸೀತಾರಾಮಯ್ಯ
೮. ಜಿ. ನರಸಿಂಹಯ್ಯ
೯. ಎಂ. ಆರ್. ಸುದರ್ಶನ್
೧೦. ಕೆ. ಎಸ್. ಸೂರ್ಯನಾರಾಯಣರಾವ್
೧೧. ಎ. ಕೃಷ್ಣಮೂರ್ತಿರಾವ್
೧೨. ಕೆ. ಎಸ್. ಸತ್ಯನಾರಾಯಣರಾವ್
೧೩. ಎನ್. ಶ್ರೀನಿವಾಸನ್
೧೪. ಹೆಚ್. ಕೆಂಪೇಗೌಡ
೧೫. ಎಸ್. ವೆಂಕಟರಮಣಯ್ಯ
೧೬. ಟಿ. ನರಸಿಂಹ ಅಯ್ಯಂಗಾರ್
೧೭. ಕೆ. ಚಾಮುಂಡಯ್ಯ
೧೯. ಎಂ. ಸಿದ್ದಲಿಂಗಪ್ಪ
೨೦. ಯು. ಎಲ್. ರಾಮಚಂದ್ರರಾವ್
೨೧. ಬಿ. ಎಲ್. ರಾಮಸ್ವಾಮಿ ಶೆಟ್ಟರು
೨೨. ಟಿ. ಚಂದ್ರಶೇಖರ ಗೌಡರು
೨೩. ಬಿ. ಎನ್. ಕೆಂಗೇಗೌಡರು
೨೪ ಡಾ॥ ಪಿ. ಡಿ. ಕೃಷ್ಣಸ್ವಾಮಿ
೨೫. ಎಸ್. ಕೆ. ಲಕ್ಷ್ಮೀನರಸಿಂಹಯ್ಯ
೨೬. ಕೆ. ಪುಟ್ಟಸ್ವಾಮಿ
೨೭. ಜಿ. ಆರ್. ರಂಗಸ್ವಾಮಯ್ಯ
೩೪. ಜಿ. ಎ. ಕುಟಿನೋ
೩೫. ಎಸ್. ಶ್ರೀಕಂಠಯ್ಯ
೩೬. ಜೋಗಿಸಿದ್ದಯ್ಯ
೩೭. ಟಿ. ವೆಂಕಟರಮಣಯ್ಯ
೩೯. ಎಸ್. ಲಿಂಗಣ್ಣ

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೮೫

೩-೧೨-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಸೀಮೆಎಣ್ಣೆ ಬೆಲೆ ನಿನ್ನೆಯಿಂದ ಇಳಿಯಿತು

ದೇಶದಲ್ಲಿ ಪೆಟ್ರೋಲಿಯಂ ವಸ್ತುಗಳು ಹೆಚ್ಚಾಗಿ ದೊರೆಯುತ್ತಿರುವುದರಿಂದ ಕೇಂದ್ರ ಸರ್ಕಾರದವರು ಡಿಸೆಂಬರ್ ೩ ನೇ ತಾರೀಖಿನಿಂದ ಈ ಕೆಲವು ವಸ್ತುಗಳ ಬೆಲೆಯನ್ನು ಈರೀತಿ ಇಳಿಸಿದ್ದಾರೆ:—

ಸೀಮೆಯೆಣ್ಣೆ ೮ ಗ್ಯಾಲನ್‌ಗಳ ಯೂನಿಟ್ಟಿಗೆ ೦-೬-೬ ಆಣೆಯಿಂದ ೦-೯-೦ಆಣೆಯವರೆಗೆ.

ಮೋಟಾರ್ ಸ್ಪಿರಿಟ್ ಗ್ಯಾಲನ್‌ಗೆ ೬ ಕಾಸು.

ವೇಪರೈಸಿಂಗ್ ಎಣ್ಣೆ ಗ್ಯಾಲನ್‌ಗೆ ೩ ಕಾಸು.

ಡೈಸೆಲ್ ಎಣ್ಣೆ ಗ್ಯಾಲನ್‌ಗೆ ಒಂದು ಆಣೆಯಿಂದ ೧ ಆಣೆ ೩ ಪೈ.

ಸಾಮಾನ್ಯ ಡೈಸಲ್ ಎಣ್ಣೆ ಟನ್‌ಗೆ ೩ ರೂ ರಿಂದ ೪ ರೂ ೭ ಆಣೆ ವರೆಗೆ.

ಫರ್ನೇಸ್ ಎಣ್ಣೆ ಟನ್‌ಗೆ ೩ ರೂ ೧೦ ಆಣೆಯಿಂದ ೬ ರೂ ೨ ಆಣೆ ವರೆಗೆ.

ಭಾರತ-ರಷ್ಯಾ ವ್ಯಾಪಾರ ಒಪ್ಪಂದ

ಭಾರತ ಮತ್ತು ರಷ್ಯಾ ರಾಷ್ಟ್ರಗಳ ನಡುವೆ ೫ವರ್ಷದ ವ್ಯಾಪಾರ ಒಪ್ಪಂದಕ್ಕೆ ನಿನ್ನೆ ದೆಹಲಿಯಲ್ಲಿ ಸಹಿಯಾಯಿತು,

ಈ ಒಪ್ಪಂದದ ಪ್ರಕಾರ ಭಾರತವು ರಷ್ಯಾಕ್ಕೆ ಟೀ, ಕಾಫಿ, ಹೊಗೆಸೊಪ್ಪು, ವನಸ್ಪತಿ, ಉಣ್ಣೆ ಮುಂತಾದ ವಸ್ತುಗಳನ್ನು ರಫ್ತು ಮಾಡುವುದು.

ರಷ್ಯಾವು ಇದಕ್ಕೆ ಬದಲಾಗಿ ಗೋಧಿ, ಬಾರ್ಲಿ, ಸಾಗುವಾನಿ, ಕಾಗದ, ಉಕ್ಕಿನ ವಸ್ತುಗಳು, ಔಷಧಿ ಮುಂತಾದ ಸಾಮಾನುಗಳನ್ನು ರಫ್ತು ಮಾಡುತ್ತದೆ.

ಈ ಸಂಬಂಧದಲ್ಲಿ ಭಾರತದಲ್ಲಿ ರಷ್ಯದ ಒಬ್ಬ ವ್ಯಾಪಾರ ಅಧಿಕಾರಿಯನ್ನು ನೇಮಿಸಲಾಗುತ್ತದೆ.

ಭದ್ರಾವತಿಗೆ ವಿಮಾನ ನಿಲ್ದಾಣ

ಮೈಸೂರು ಸಂಸ್ಥಾನದಲ್ಲಿ ಭಾರಿ ಕಬ್ಬಿಣ ಮತ್ತು ಉಕ್ಕಿನ ಕೇಂದ್ರವಾದ ಭದ್ರಾವತಿಯಲ್ಲಿ ಒಂದು ವಿಮಾನ ನಿಲ್ದಾಣವನ್ನು ರಚಿಸಲು ಕೇಂದ್ರಸರ್ಕಾರ ಮಂಜೂರುಮಾಡಿದೆಯೆಂದೂ, ಇನ್ನು ೨-೩ ತಿಂಗಳಿನಲ್ಲಿ ಅದು ಸಿದ್ಧವಾಗುವುದೆಂದೂ ತಿಳಿದುಬಂದಿದೆ.

ಕಾನೂನು ಉಲ್ಲಂಘನೆಗೆ ಜುಲ್ಮಾನೆ

ಮೈಸೂರು ೩

ಅಂಗಡಿ ಕಾನೂನು ಉಲ್ಲಂಘನೆಗಾಗಿ ದಿನಸಿ ಅಂಗಡಿಯ ಶ್ರೀ ಪಿ. ಯೂಸೂಫ್ ಎಂಬುವವರ ಮೇಲೆ ಮೈಸೂರು ನಗರ ಇನ್ಸ್‌ಪೆಕ್ಟರು ಹೂಡಿದ್ದ ಮೊಕದ್ದಮೆಯಲ್ಲಿ ಎರಡನೇ ಸಿಟಿ ಮ್ಯಾಜಿಸ್ಟ್ರೇಟರು ೧೦ ರೂ. ಜುಲ್ಮಾನೆಯನ್ನು ವಿಧಿಸಿದ್ದಾರೆ.

ಬಹಿರಂಗ ಸಭೆ

ಮೈಸೂರು ೩

ನಗರ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ ನಾಳೆ ಸಂಜೆ ೬-೩೦ ಗಂಟೆಗೆ ಟೌನ್ ಹಾಲಿನಲ್ಲಿ ಬಹಿರಂಗ ಸಭೆ ಏರ್ಪಡಿಸಲಾಗಿದೆ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಶ್ರೀ ಟಿ. ಸುಬ್ರಹ್ಮಣ್ಯಂರವರು ಪುರಸಭಾ ಚುನಾವಣೆಯ ಕಾಂಗ್ರೆಸ್ ಪ್ರಚಾರ ಭಾಷಣ ಮಾಡುವರು. ಸರ್ವರಿಗೂ ಆಹ್ವಾನವಿದೆಯೆಂದು ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ಮುಖ್ಯಮಂತ್ರಿಗಳು ಮೇಲುಕೋಟೆಯಲ್ಲಿ

ಮೈಸೂರು ೩

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೊನ್ನೆ ಸಂಜೆ ಇಲ್ಲಿಗೆ ಆಗಮಿಸಬೇಕಾದ್ದನ್ನು ರದ್ದುಮಾಡಿ ಬೆಂಗಳೂರಿನಿಂದ ಮೇಲುಕೋಟೆಗೆ ತೆರಳಿ ಅಲ್ಲಿ ಮೊಕ್ಕಾಂ ಮಾಡಿರುವುದಾಗಿ ತಿಳಿಯಬರುತ್ತದೆ.

ಪುರಸಭಾ ಸದಸ್ಯರಿಗೆ ಬಹಿಷ್ಕಾರ

ರಾಜಕೋಟೆಗೆ ೬೦ ಮೈಲಿ ದೂರದಲ್ಲಿರುವ ಬನವಾವ್ ಎಂಬ ಪುರಸಭೆಯಲ್ಲಿ ಧೋಬಿಘಾಟಿಗೆ ಹೆಚ್ಚಿಗೆ ನೀರನ್ನು ಒದಗಿಸುವ ಮನವಿಗೆ ಪುರಸಭೆಯು ಮನ್ನಣೆ ಕೊಡದಿರುವುದರಿಂದ ಪುರಸಭಾ ಸದಸ್ಯರ ಬಟ್ಟೆಗಳನ್ನು ಯಾರೂ ಒಗೆಯಕೂಡದು ಎಂದು ಅಲ್ಲಿಯ ಧೋಬಿಗಳು ನಿಷ್ಕರ್ಷೆ ಮಾಡಿ ಅವರಿಗೆ ಬಹಿಷ್ಕಾರ ಹಾಕಿದ್ದಾರೆ.

ಪುರಸಭೆಯಲ್ಲಿರುವ ಕೆಳದರ್ಜೆ ನೌಕರರು ಸಹ ಪುರಸಭಾ ಸದಸ್ಯರು ಹೇಳುವ ಯಾವ ಕೆಲಸವನ್ನೂ ಮಾಡುವುದಿಲ್ಲವೆಂದು ನಿರ್ಧರಿಸಿದ್ದಾರೆಂದು ತಿಳಿಯಬರುತ್ತದೆ.

ಮಂತ್ರಿಮಂಡಲಕ್ಕೆ ಸೋಲಾದರೂ ರಾಜೀನಾಮೆ ಇಲ್ಲ

ಮೊನ್ನೆಯದಿನ ಆಂಧ್ರಶಾಸನ ಸಭೆಯಲ್ಲಿ ಮಂತ್ರಿಗಳಿಗೆ ೧೦೦೦ ರೂಪಾಯಿಗಳ ಬದುಲು ೫೦೦ ರೂಪಾಯಿಗಳ ಸಂಬಳವಿರಬೇಕೆಂದು ವಿರೋಧ ಪಕ್ಷದವರು ಮಂಡಿಸಿದ್ದ ನಿರ್ಣಯವು ಅಂಗೀಕಾರವಾಗಿ ಸರ್ಕಾರಕ್ಕೆ ಸೋಲುಂಟಾಯಿತಷ್ಟೆ. ಹೀಗೆ ಸೋಲಾದ್ದರಿಂದ ಮಂತ್ರಿಮಂಡಲವು ರಾಜಿನಾಮೆ ಕೊಡುವುದೇ ಎಂಬ ವಿಷಯದಲ್ಲಿ ಅಲ್ಲಿಯ ನ್ಯಾಯಾಂಗ ಶಾಖಾಸಚಿವ ಶ್ರೀ ಟಿ ವಿಶ್ವನಾಥಂರವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ಮಂತ್ರಿಗಳಿಗೆ ಸಂಬಳ ೧೦೦೦ ರೂ ಅಥವ ೫೦೦ ರೂಗಳೇ ಎಂಬುದು ಅಷ್ಟು ಮುಖ್ಯವಲ್ಲ. ಈ ಸಂದರ್ಭದಲ್ಲಿ ಮಂತ್ರಿಮಂಡಲದ ರಾಜೀನಾಮೆ ಪ್ರಶ್ನೆಯೇ ಇಲ್ಲವೆಂದು ತಿಳಿಸಿದ್ದಾರೆ.

ಮಂತ್ರಿಗಳಿಗಿಂತ ಕಾರ್ಯದರ್ಶಿಗೇ ಹೆಚ್ಚು ಸಂಬಳ

ಆಂಧ್ರ ಮಂತ್ರಿಮಂಡಲದಲ್ಲಿ ಎಲ್ಲರಿಗೂ ೫೦೦ ರೂಪಾಯಿಗಳಿರಬೇಕೆಂದು ಅಲ್ಲಿಯ ಶಾಸನಸಭೆಯು ತೀರ್ಮಾನಮಾಡಿದೆಯಷ್ಟೆ ಮುಖ್ಯ ಪಾರ್ಲಿಮೆಂಟರಿ ಕಾರ್ಯದರ್ಶಿಗೆ ೬೦೦ ರೂ ಸಂಬಳ ಮತ್ತು ಇತರ ಪಾರ್ಲಿಮೆಂಟರಿ ಕಾರ್ಯದರ್ಶಿಗಳಿಗೆ ೫೦೦ ಸಂಬಳ ಎಂದೂ ಅದು ತೀರ್ಮಾನಿಸಿದೆ.

ಈ ವಿಚಿತ್ರ ತೀರ್ಮಾನಗಳಿಂದ ಮಂತ್ರಿಗಳಿಗಿಂತ ಮುಖ್ಯಪಾರ್ಲಿಮೆಂಟರಿ ಕಾರ್ಯದರ್ಶಿಗೆ ಹೆಚ್ಚು ಸಂಬಳ ಕೊಡಬೇಕಾಗುತ್ತದೆ.

ಕೇಂದ್ರದ ಮಾಜಿ ಅಧಿಕಾರಿಗೆ ಶಿಕ್ಷೆ

ಉತ್ತರಪ್ರದೇಶದಲ್ಲಿ ಕೇಂದ್ರ ಸರ್ಕಾರದ ಕಬ್ಬಿಣ ಮತ್ತು ಉಕ್ಕಿನ ಡೆಪ್ಯೂಟಿ ಕಂಟ್ರೋಲರಾಗಿದ್ದ ಶ್ರೀ ಆರ್. ಚಾರಿಯವರು ೧೯೪೬ ರಲ್ಲಿ ರಹದಾರಿ ಕೊಡಲು ಲಂಚ ಪಡೆದರೆಂಬ ಆಪಾದನೆಮೇಲೆ ಅವರಿಗೆ ಕಾನ್‌ಪುರದ ನ್ಯಾಯಾಧೀಶರು ೪ವರ್ಷ ಕಠಿಣ ಶಿಕ್ಷೆ ಮತ್ತು ೨೦ ಸಾವಿರ ರೂ. ಗಳ ಜುಲ್ಮಾನೆಯನ್ನು ವಿಧಿಸಿದ್ದಾರೆ.

ರಾಜೇಂದ್ರ ಪ್ರಸಾದರಿಗೆ ೬೯ ವರ್ಷ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದ್‌ರಿಗೆ ಈದಿನ ೬೯ನೇ ವರ್ಷ ವರ್ಧಂತಿಯು ಸಂಬಂಧದಲ್ಲಿ ದೆಹಲಿಯಲ್ಲಿ ಪೆರೇಡು ಸತ್ಕಾರಕೂಟ ಮುಂತಾದ ವಿಶೇಷ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಬೆಂಗಳೂರಿಗೆ ಸಾಬು

ಮೈಸೂರು ೩

ಸುಪ್ರಸಿದ್ಧ ಹಾಲಿವುಡ್‌ನ ನಟ ಮೈಸೂರುಸಾಬು ಈದಿನ ತಮ್ಮ ಪತ್ನಿಪುತ್ರರೊಂದಿಗೆ ಬೆಂಗಳೂರಿಗೆ ಆಗಮಿಸುವ ನಿರೀಕ್ಷೆ ಇದೆ

ಮುಸಾದಿಕ್‌ರಿಗೆ ಕುಸ್ತಿ ಹಂಬಲು

ದೇಶದ್ರೋಹದ ಆಪಾದನೆಯಮೇಲೆ ಮಿಲಿಟರಿ ನ್ಯಾಯಾಲಯದಲ್ಲಿ ವಿಚಾರಣೆಗೊಳಗಾಗಿರುವ ಇರಾನಿನ ಮಾಜಿ ಪ್ರಧಾನಿ ಡಾ॥ ಮುಸಾದಿಕ್‌ರವರು ಸರ್ಕಾರದ ಪ್ರಾಸಿಕ್ಯೂಟರನ್ನು ಕುಸ್ತಿಗೆ ಕರೆದು ತಾವು ಖಂಡಿತ ಗೆಲ್ಲುವುದಾಗಿ ಸವಾಲು ಹಾಕಿದರು.

ಸಿಂಹಳ ಪ್ರಧಾನಿ ಕರಾಚಿಗೆ

ಭಾರತಕ್ಕೆ ಆಗಮಿಸಲಿರುವ ಸಿಂಹಳ ಪ್ರಧಾನಿ ಕೋಟಲವಾಲಾರವರು ಪಾಕ್ ಪ್ರಧಾನಿಯ ಆಹ್ವಾನವನ್ನು ಮನ್ನಿಸಿ ಕರಾಚಿಗೂ ಹೋಗುವರೆಂದು ತಿಳಿಯಬರುತ್ತದೆ.

ಪಾಕೀಸ್ತಾನಕ್ಕೆ ರಷ್ಯಾ ಪ್ರತಿಭಟನೆ

ಪಾಕೀಸ್ತಾನದಲ್ಲಿ ಅಮೆರಿಕಾಕ್ಕೆ ನೆಲೆಗಳನ್ನು ಸ್ಥಾಪಿಸಲವಕಾಶವೀಯುವದೆಂಬುದರ ವಿಷಯದಲ್ಲಿ ರಷ್ಯಾವು ಪಾಕೀಸ್ತಾನಕ್ಕೆ ಪ್ರತಿಭಟನೆ ಸೂಚಿಸಿ ಪತ್ರ ಬರೆದಿದೆ.

ಅಮೆರಿಕಾ ಸ್ಟೇಟ್ ಇಲಾಖೆಯ ವಕ್ತಾರರೊಬ್ಬರು ಈ ವಿಷಯದಲ್ಲಿ ಮಾತನಾಡುತ್ತಾ ಪಾಕೀಸ್ತಾನದಲ್ಲಿ ಅಮೆರಿಕ ಸೈನ್ಯ ನೆಲೆಗಳನ್ನು ಏರ್ಪಡಿಸುವ ಪ್ರಯತ್ನ ವೇನೂ ಇಲ್ಲವೆಂದು ಹೇಳಿದ್ದಾರೆ.

ರಿಕ್ಷಾಗಳಿಗೆ ನಿಷೇಧ

ಬೆಂಗಳೂರು ಕಾರ್ಪೊರೇಷನ್ ಆವರಣದಲ್ಲಿ ರಿಕ್ಷಾಗಳನ್ನು ಉಪಯೋಗಿಸಲು ಮುಂದಿನ ಸಾಲಿನಿಂದ ರಹದಾರಿ ಕೊಡಕೂಡದೆಂದು ಕಾರ್ಪೊರೇಷನ್ ನಿರ್ಧರಿಸಿದೆ.

ಬೆಂಗಳೂರಿಗೆ ಚೆಡ್ಡಿ ಜಗನ್

ಬ್ರಿಟಿಷ್ ಗಯಾನದ ಪದಚ್ಯುತ ಪ್ರಧಾನಿ ಡಾ॥ ಚೆಡ್ಡಿ ಜಗನ್ ಮತ್ತು ಮಿ॥ ಬರ್ನ್ಸ್‌ಹ್ಯಾಂರವರು ಇದೇ ೧೧ ನೇ ತಾರೀಖು ಬೆಂಗಳೂರಿಗೆ ಆಗಮಿಸುವರು.

ಹರಿಕಥೆ

ಈ ರಾತ್ರಿ ೯ ಗಂಟೆಗೆ ರಮಾವಿಲಾಸ ಅಗ್ರಹಾರದಲ್ಲಿ ಕೀರ್ತನ ಕೇಸರಿ ಹರಿಕಥಾ ವಿದ್ವಾನ್ ಶ್ರೀ ಹರಿಸರ್ವೋತ್ತಮದಾಸ್‌ರವರಿಂದ 'ಭಕ್ತ ಕುಂಬಾರ' ಎಂಬ ಹರಿಕಥೆ ನಡೆಯುತ್ತದೆ.

ಟ್ರಾಂವೆ ಕಂಪೆನಿ ಮೇಲೆ ದಾವ

ಈಗ ಕೆಲಸವು ನಿಂತುಹೋಗಿರುವ ಮದ್ರಾಸ್ ಟ್ರಾಂವೆ ಕಂಪೆನಿಯಿಂದ ತನಗೆ ಕೊಡಬೇಕಾದ ಹಣದ ಬಾಕಿಗಾಗಿ ಕೋರ್ಟಿನಲ್ಲಿ ಮದ್ರಾಸ್ ಸರ್ಕಾರವು ದಾವ ಹೂಡಿ, ಹಣಕ್ಕಾಗಿ ಟ್ರಾಂವೆ ಕಂಪೆನಿಯ ಆಸ್ತಿಪಾಸ್ತಿಗಳನ್ನು ಜಫ್ತಿಮಾಡಬೇಕೆಂದು ಸಲ್ಲಿಸಿದ್ದ ಅರ್ಜಿಯನ್ನು ಅಲ್ಲಿಯ ಶ್ರೇಷ್ಠ ನ್ಯಾಯಾಲಯವು ತಿರಸ್ಕರಿಸಿದೆ.

೨೦೦೦ ಉಪಾಧ್ಯಾಯರ ನೇಮಕ

ಬೊಂಬಾಯಿನ ಸರ್ಕಾರವು ವಿದ್ಯಾವಂತ ನಿರುದ್ಯೋಗದವರಿಗೆ ಕೆಲಸವನ್ನು ಕಲ್ಪಿಸುವ ಯೋಜನೆಯ ಪ್ರಕಾರ ಈಸಾಲಿನಲ್ಲಿ ೨೦೦೦ ಉಪಾಧ್ಯಾಯರನ್ನು ನೇಮಿಸಿಕೊಳ್ಳಲಿವೆಯೆಂದು ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು, ೨—೧೨—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೮	೨೦—೮
ಎಳ್ಳು	೬೭—೧೨	—
ಹರಳು	೩೩—೭	೩೪—೧೦
ಹುಚ್ಚೆಳ್ಳು	೪೫—	೪೬—೨
ಅವರೆ	—	—
ಹುರಳಿ	೩೩—೬	೩೪—೬
ಹೆಸರು	೨೭—	೩೯—೧೪
ಅಲಸಂದೆ	೩೩—೧೦	೪೯—೨
ಉಪ್ಪು	೫೦—೨	೬೧—೧೦
ಹುಣಸೇಹಣ್ಣು	೧೧—೮	—
ಮೆಣಸಿನಕಾಯಿ	೧೫—೮	೩೦—೧೪
ಸೀಗೆಕಾಯಿ	—	—
ತೆಂಗಿನಕಾಯಿ	೧೫೩—	೨೩೩—

ನಾಜಿ ಜಿಲ್ಲಾ ನ್ಯಾಯಾಧೀಶರಿಗೆ ಗುಮಾಸ್ತಗಿರಿ

ಗುಜರಾತಿನ ಮಾನವದೂರ್ ಸಂಸ್ಥಾನದಲ್ಲಿ ೧೪ ವರ್ಷಕಾಲ ಒಂದನೇ ದರ್ಜೆ ಮ್ಯಾಜಿಸ್ಟ್ರೇಟ್, ಸಿವಿಲ್ ನ್ಯಾಯಾಧೀಶರು ಮತ್ತು ಸೆಷನ್ಸ್ ಮತ್ತು ಜಿಲ್ಲಾನ್ಯಾಯಾಧೀಶರಾಗಿದ್ದ ಅಧಿಕಾರಿಗಳು ಈಗ ಬೊಂಬಾಯಿ ಪುರಸಭೆಯಲ್ಲಿ ಒಂದು ಶಾಖೆಯ ಹೆಡ್‌ಕ್ಲಾರ್ಕ್ ಆಗಿ ನೇಮಕವಾಗಿದ್ದಾರೆ ಈ ವಿಷಯವನ್ನು ಬೊಂಬಾಯಿ ಪುರಸಭೆಗೆ ಅಲ್ಲಿಯ ಕಮೀಷನರ್ ತಿಳಿಸುತ್ತಾ ೪೮ ವರ್ಷದ ಈ ನ್ಯಾಯ ಪದವೀಧರರು, ಮನವಾರ್ ಸಂಸ್ಥಾನವು ಪಾಕೀಸ್ತಾನಕ್ಕೆ ಸೇರುವುದೆಂಬುದನ್ನು ಅರಿತು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟರೆಂದೂ, ಜಾಹಿರಾತು ಮಾಡಿದ್ದ ಈ ಪುರಸಭಾಹುದ್ದೆಗೆ ಅವರು ಅರ್ಜಿ ಸಲ್ಲಿಸಿದ್ದುದರಿಂದ ಅವರನ್ನು ನೇಮಕ ಮಾಡಿಕೊಳ್ಳಲಾಯಿತೆಂದು ತಿಳಿಸಿದ್ದಾರೆ. ಅವರಿಗೆ ೨೨೦ ರೂ ಸಂಬಳ ಕೊಡಲಾಗುತ್ತಿದೆ.

ಉಸ್ಮಾನಿಯಾ ನಾಣ್ಯ ಛಲಾವಣೆ

ಹೈದರಾಬಾದ್ ಸರ್ಕಾರವು ತನ್ನ ಪ್ರಾಂತ್ಯದಲ್ಲಿ ಭಾರತ ನಾಣ್ಯ ಛಲಾವಣೆಯನ್ನು ಇತರ ಪ್ರಾಂತ್ಯಗಳಂತೆ ಪ್ರಾರಂಭಿಸಿರುವುದರಿಂದ ಇಲ್ಲಿಯವರೆಗೆ ೨೨ ಕೋಟಿ ರೂಪಾಯಿಗಳ ಉಸ್ಮಾನಿಯಾ ನಾಣ್ಯವನ್ನು ಹಿಂದಕ್ಕೆ ತೆಗೆದುಕೊಂಡಿರುವುದಾಗಿ ತಿಳಿಯಬರುತ್ತದೆ.

ಭಾರತ ಆಸ್ಟ್ರಿಯಾ ಸಂಧಾನ

ಭಾರತ ಮತ್ತು ಆಸ್ಟ್ರಿಯಾ ದೇಶಗಳ ನಡುವೆ ವ್ಯಾಪಾರ ನಡೆಸಲು ಉಭಯ ರಾಷ್ಟ್ರಗಳ ಪ್ರತಿನಿಧಿಗಳ ನಡುವೆ ಸಂಧಾನ ನಡೆಯುತ್ತಿದೆಯೆಂದು ತಿಳಿಯಬರುತ್ತದೆ.

ನೈಸರ್ಗಿಕ ಬಣ್ಣಗಳಲ್ಲಿ

ಬೇಕ್‌ಲೈಟ್ ಸಾಮಾನುಗಳಲ್ಲಿ
ಮೈಸೂರೈಟ್ ಮತ್ತು ಐವರೈಟ್
ಅಸಮಾನವಾದ ದರ್ಜೆಗೆ ಸೇರಿದ್ದು

ಕುಡಿಯುವ ಪಾತ್ರೆಗಳು, ಬಟ್ಟಲುಗಳು, ಬಶಿಗಳು, ಕ್ಷೌರದ ದೊನ್ನೆಗಳು, ಸಿಗರೇಟು ಬೂದಿಯನ್ನು ಹಾಕುವ ತಟಕಗಳು, ಟೇಬಲ್ ಅಲಂಕರಿಸುವ ಕೌಶಲ್ಯದ ಸಾಮಾನುಗಳು, ಅಂಗಶೃಂಗಾರ ಪದಾರ್ಥಗಳನ್ನಿಡುವ ಸಾಮಾನುಗಳು, ವಿಧವಿಧವಾದ ನಮೂನೆಗಳಲ್ಲಿ ಮತ್ತು ಆಕರ್ಷಕ ಬಣ್ಣಗಳಲ್ಲಿ

ತಯಾರಿಸಲ್ಪಡುವುವು.

ಅಚ್ಚುಮಾಡಿದ ಮೈಸೂರೈಟ್ ಸಾಮಾನುಗಳು

ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ,
ಮೈಸೂರು ರೋಡ್, ಬೆಂಗಳೂರು-೨

ಪಾಕೀಸ್ತಾನ-ಅಮೆರಿಕಾ ಮಿಲಿಟರಿ ಒಪ್ಪಂದ

ಈ ವಿಷಯವೆಲ್ಲಾ ಸುಳ್ಳೆಂದು ಪಾಕ್ ಪ್ರಧಾನಿ

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವೆ ಮಿಲಿಟರಿ ಒಪ್ಪಂದ ವಿಷಯದಲ್ಲಾಗಲೀ, ಪಾಕೀಸ್ತಾನದಲ್ಲಿ ಅಮೆರಿಕಾಕ್ಕೆ ಸೈನ್ಯನೆಲೆಗಳನ್ನು ಕೊಡುವ ವಿಷಯದಲ್ಲಾಗಲೀ ತನಗೂ ಮತ್ತು ಅಧ್ಯಕ್ಷ ಐಸೆನ್‌ಹೋವರ್‌ರವರಿಗೂ ಯಾವ ಮಾತುಕತೆಗಳೂ ನಡೆದಿಲ್ಲ. ಈ ಸುದ್ದಿ ನಿರಾಧಾರವಾದುದು ಎಂದ. ಪಾಕೀಸ್ತಾನ ಗೌರ್ನರ್ ಜನರಲ್‌ರವರು ಸ್ಪಷ್ಟವಾಗಿ ತಿಳಿಸಿದ್ದಾಗ್ಯೂ ಭಾರತದಲ್ಲಿ ಈ ವಿಷಯದ ಬಗ್ಗೆ ನಾನಾ ರೀತಿಯ ಟೀಕೆಗಳು ಬರುತ್ತಿರುವುದು ಆಶ್ಚರ್ಯವಾಗಿದೆ. ಪರರಾಷ್ಟ್ರಗಳಿಗೆ ಪಾಕೀಸ್ತಾನದಲ್ಲಿ ನೆಲೆಗಳನ್ನು ಕೊಡುವ ವಿಷಯದಲ್ಲಿ ಇಲ್ಲಿಯವರೆಗೆ ಯಾವಾಗಲೂ ಎಲ್ಲಿಯೂ ಮಾತುಕತೆಗಳು ನಡೆದಿಲ್ಲ ಅಲ್ಲದೆ ಪಾಕೀಸ್ತಾನವು ಯಾವ ದೇಶದೊಡನೆ ಯಾವ ರೀತಿಯಾವ ಒಪ್ಪಂದವನ್ನು ಬೇಕಾದರೂ ಸ್ವತಂತ್ರವಾಗಿ ಮಾಡಿಕೊಳ್ಳುವ ಹಕ್ಕಿದೆ ಪಾಕೀಸ್ತಾನದ ಒಳ ಅಥವ ವಿದೇಶಾಂಗ ನೀತಿಯಲ್ಲಿ ಪರಕೀಯರು ಪ್ರವೇಶಿಸುವುದನ್ನು ಪಾಕೀಸ್ತಾನವು ಸಹಿಸುವುದಿಲ್ಲ--ಎಂದು ಪಾಕ್ ಪ್ರಧಾನಿ ಮಿ॥ ಮಹಮದ್ ಅಲಿಯವರು ಪ್ರಸಾರ ಭಾಷಣವನ್ನು ಮಾಡುತ್ತಾ ತಿಳಿಸಿದ್ದಾರೆ.

ಅವರು ಪಾಕ್ ರಾಜ್ಯಾಂಗ ವಿಷಯವಾಗಿ ಪ್ರಸ್ತಾಪಿಸುತ್ತಾ, ಪಾಕೀಸ್ಥಾನವು ಮುಸ್ಲಿಂ ರಾಜ್ಯವಾಗಿರುವುದರಿಂದ ಕೊರಾನಿನಲ್ಲಿ ಹೇಳಿರುವಂತೆ ರಾಷ್ಟ್ರದ ಎಲ್ಲಾ ಜನರಿಗೂ ಸಮಾನ ಹಕ್ಕು, ಸ್ವಾತಂತ್ರ, ಮತ್ತು ನ್ಯಾಯವಿರುತ್ತದೆ. ಈ ಬಗ್ಗೆ ಪಾಕೀಸ್ತಾನದಲ್ಲಿರುವ ಅಲ್ಪಸಂಖ್ಯಾತರಿಗೆ ಯಾವ ತೊಂದರೆಯೂ ಇಲ್ಲ ಪಾಕ್ ಅಧಿಪತಿಯು ಮುಸ್ಲಿಂ ಆಗಿರಬೇಕೆಂಬ ಮಾತ್ರಕ್ಕೆ ಅಲ್ಪಸಂಖ್ಯಾತರಿಗೆ ಎಲ್ಲಿಯೂ ಸ್ಥಾನವಿಲ್ಲವೆಂಬುದು ಅರ್ಥವಲ್ಲ. ರಾಜ್ಯಾಡಳಿತವೆಲ್ಲವೂ ಮಂತ್ರಿಮಂಡಲಕ್ಕೆ ಸೇರಿದೆ. ಮಂತ್ರಿಮಂಡಲದಲ್ಲಿ ಯಾವ ಕೋಮಿನವರು ಬೇಕಾದರೂ ಇರಬಹುದು ಆದ್ದರಿಂದ ಅಲ್ಪಸಂಖ್ಯಾತರು ಶಂಕೆ ಪಡಬೇಕಾಗಿಲ್ಲ--ಎಂದು ಅವರು ಹೇಳಿದ್ದಾರೆ.

ರಣಜಿತ್
3—12—53 ರಿಂದ
ರೇಲ್-ಕ-ಡಿಬ್ಬ
(ಹಿಂದಿ)
ಪಾತ್ರ:--ಮಧುಬಾಲ, ಶಮ್ಮಿ ಕಪೂರ್, ಸಜ್ಜನ್ ಮತ್ತು ಓಂಪ್ರಕಾಶ್.

ರಾಜಕಮಲ್, ಮೈಸೂರು
4--12--53 ರಿಂದ 2 ನೇ ವಾರ
ಚಂಚಲಕುಮಾರಿ
ಭೂಮಿಕೆ:- ಪ್ರತಿಮಾದೇವಿ, ಕಾಮಿನಿ, ಇಂದುಶೇಖರ್, ಜಿ. ಆರ್. ಸ್ಯಾಂಡೋ

ಕಾಂಗ್ರೆಸ್ಸಿಗೇ ಓಟುಕೊಡಿ



ಇದೇ 7—12—53ನೇ ಸೋಮವಾರ ನಡೆಯುವ ಮೈಸೂರು ಪೌರಸಭಾಚುನಾವಣೆಯಲ್ಲಿ ದಯವಿಟ್ಟು ಈಕೆಳಗಿನ ಕಾಂಗ್ರೆಸ್ ಉಮೇದುವಾರರಿಗೆ ಮಹಾಜನರು ತಮ್ಮ ಓಟನ್ನು ಕೊಡಬೇಕಾಗಿ ಪ್ರಾರ್ಥನೆ.

ಕಾಂಗ್ರೆಸ್ ಚುನಾವಣಾ ಸಮಿತಿ

ಡಿವಿಜನ್ ನಂ:—

೧. ಜಿ. ಎಸ್. ರಾಮಕೃಷ್ಣಯ್ಯ
೨. ಕೆ. ಸಿದ್ದಯ್ಯ
೩. ಎ. ಎನ್. ಸೂರ್ಯನಾರಾಯಣರಾವ್
೪. ಡಿ. ಲಿಂಗಯ್ಯ
೫. ಟಿ. ಎನ್. ಸುಬ್ಬರಾವ್
೬. ಬಿ. ರಾಮಣ್ಣ
೭. ಪಾಲಹಳ್ಳಿ ಸೀತಾರಾಮಯ್ಯ
೮. ಜಿ. ನರಸಿಂಹಯ್ಯ
೯. ಎಂ. ಆರ್. ಸುದರ್ಶನ್
೧೦. ಕೆ. ಎಸ್. ಸೂರ್ಯನಾರಾಯಣರಾವ್
೧೧. ಎ. ಕೃಷ್ಣಮೂರ್ತಿರಾವ್
೧೨. ಕೆ. ಎಸ್. ಸತ್ಯನಾರಾಯಣರಾವ್
೧೩. ಎನ್. ಶ್ರೀನಿವಾಸನ್
೧೪. ಹೆಚ್. ಕೆಂಪೇಗೌಡ
೧೫. ಎಸ್. ವೆಂಕಟರಮಣಯ್ಯ
೧೬. ಟಿ. ನರಸಿಂಹ ಅಯ್ಯಂಗಾರ್
೧೭. ಕೆ. ಚಾಮುಂಡಯ್ಯ
೧೯. ಎಂ. ಸಿದ್ದಲಿಂಗಪ್ಪ
೨೦. ಯು. ಎಲ್. ರಾಮಚಂದ್ರರಾವ್
೨೧. ಬಿ. ಎಲ್. ರಾಮಸ್ವಾಮಿ ಶೆಟ್ಟರು
೨೨. ಟಿ. ಚಂದ್ರಶೇಖರ ಗೌಡರು
೨೩. ಬಿ. ಎನ್. ಕೆಂಗೇಗೌಡರು
೨೪ ಡಾ॥ ಪಿ. ಡಿ. ಕೃಷ್ಣಸ್ವಾಮಿ
೨೫. ಎಸ್. ಕೆ. ಲಕ್ಷ್ಮೀನರಸಿಂಹಯ್ಯ
೨೬. ಕೆ. ಪುಟ್ಟಸ್ವಾಮಿ
೨೭. ಜಿ. ಆರ್. ರಂಗಸ್ವಾಮಯ್ಯ
೩೪. ಜಿ. ಎ ಕುಟಿನೋ
೩೫. ಎಸ್. ಶ್ರೀಕಂಠಯ್ಯ
೩೬. ಜೋಗಿಸಿದ್ದಯ್ಯ
೩೭. ಟಿ. ವೆಂಕಟರಮಣಯ್ಯ
೩೯. ಎಸ್. ಲಿಂಗಣ್ಣ

○ ಪಾಕೀಸ್ತಾನದಲ್ಲಿ ನಾಣ್ಯವನ್ನು ದಶಮಾಂಶ ರೀತಿಗೆ ಪರಿವರ್ತಿಸುವ ವಿಷಯವಾಗಿ ನಡೆದ ಅಭಿಪ್ರಾಯ ಗಣನೆಯಲ್ಲಿ ಅಧಿಕಸಂಖ್ಯೆಯಲ್ಲಿ ಅದಕ್ಕೆ ಒಪ್ಪಿಗೆ ದೊರೆತಿರುವುದಾಗಿ ಅಲ್ಲಿಯ ಪ್ರಧಾನಿಯವರು ತಿಳಿಸಿದ್ದಾರೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೮೬

೪-೧೨-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾಂಗ್ರೆಸ್ಸಿಗೆ ಸವಾಲ್

ಮೈಸೂರು ೪

ಕಾಂಗ್ರೆಸ್ ಸಂಸ್ಥೆಯು ತಾರೀಖು ೭-೧೨-೫೩ ರ ಪೌರಸಭಾ ಚುನಾವಣೆಯಲ್ಲಿ ಓಟುಗಳನ್ನು ಕೇಳುವುದಾಗಲಿ, ಗಳಿಸುವುದಾಗಲಿ ಇಷ್ಟವಿದ್ದಲ್ಲಿ ಪ್ರಾಂತೀಯ ಕಾಂಗ್ರೆಸ್ ಮತ್ತು ನಗರ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರುಗಳು ಚುನಾವಣೆಯಲ್ಲಿ ಕಾಂಗ್ರೆಸ್ ಜಯಗಳಿಸಿದ್ದಲ್ಲಿ ಪಕ್ಷಪಾತ ಮತ್ತು ಅನ್ಯಾಯ ದೃಷ್ಟಿಯಿಂದ ಮನೆಕಂದಾಯ, ನೀರಿನಕಂದಾಯ ಮತ್ತು ಇತರೆ ಕಂದಾಯಗಳನ್ನು ಪೌರಸಭೆಯು ಮನಸ್ವಿ ಹೆಚ್ಚಿಸಿರುವುದನ್ನು ಪರಿಶೀಲಿಸಿ ಕಡಮೆ ಮಾಡಿಸುತ್ತೇವೆಂದೂ, ಆಯಾ ವಾರ್ಡಿನ ನಮ್ಮ ಕೌನ್ಸಿಲರುಗಳು ಸರಿಯಾಗಿ ಪೌರರ ಕುಂದುಕೊರತೆಗಳನ್ನು ಆಗಾಗ್ಗೆ ವಿಚಾರಿಸಿ ಸರಿಪಡಿಸಿಕೊಡದೇ ಹೋದರೆ ಅಂತವರ ಮೇಲೆ ವಾರ್ಡಿನ ಮತದಾರರು ಅವಿಶ್ವಾಸ ಸೂಚಿಸಿದ್ದಲ್ಲಿ ಅಂತವರನ್ನು ಸ್ಥಾನದಿಂದ ನಿವೃತ್ತಿಮಾಡುತ್ತೇವೆಂದು ಜವಾಬ್ದಾರಿ ಯುತವಾದ ಜಂಟಿ ಹೇಳಿಕೆಯನ್ನು ಪ್ರಸಿದ್ಧ ಪತ್ರಿಕೆಯ ಮೂಲಕ ನಾಳೇ ದಿವಸವೇ ಹೊರಡಿಸಬೇಕೆಂದು ನಗರದ ಮತದಾರರ ಪರವಾಗಿ ಕಾಂಗ್ರೆಸ್ಸಿಗೆ ಸವಾಲ್ ಹಾಕಿರುತ್ತೇನೆ—ಎಂ. ಸಿ. ನರಸಿಂಹಯ್ಯ.

ಪೊಲೀಸ್ ಪ್ಯಾದೆಯ ಆತ್ಮಹತ್ಯೆ

ಮೈಸೂರು ೩

ಮೈಸೂರು ಆರನೆ ಕಾವಲಗಾರ ದಳಕ್ಕೆ ಸೇರಿದ ೩೦ ವರ್ಷದ ಪೊಲೀಸ್ ಕಾನ್ಸ್ಟೇಬಲ್ ಮಾಯಣ್ಣ ಎಂಬವವನು ನಿನ್ನೆ ಬೆಳಿಗ್ಗೆ ನಜರಬಾದ್ ಮೊಹಲ್ಲಾದಲ್ಲಿರುವ ಪೊಲೀಸ್ ಲೈನಿನ ತನ್ನ ಗೃಹದಲ್ಲಿ ನೇಣುಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡನೆಂದು ವರದಿಯಾಗಿದೆ.

ಆತನು ತನ್ನ ಹೆಂಡತಿಯನ್ನು ತೌರುಮನೆಗೆ ಕಳುಹಿಸಿದ್ದನೆಂದೂ, ಮೊನ್ನೆಯ ದಿನ ಮಧ್ಯಾಹ್ನದಿಂದ ಮನೆಯ ಬಾಗಿಲು ಹಾಕಿದ್ದರಿಂದ, ನಿನ್ನೆ ಬೆಳಿಗ್ಗೆ ಅನುಮಾನದಮೇಲೆ ಜನರು ಬಾಗಿಲನ್ನು ತೆಗೆದು ನೋಡಿದಾಗ ಆತನು ನೇಣುಹಾಕಿಕೊಂಡಿರುವುದು ಕಂಡುಬಂದಿತೆಂದೂ ಹೇಳಲಾಗಿದೆ.

ಕೂಡಲೇ ನಜರ್‌ಬಾದ್ ಪೊಲೀಸರು ಬಂದು ಮಹಜರ್ ಕ್ರಮ ನಡೆಸಿದರು. ಹೊಟ್ಟೆನೋವಿನಿಂದ ನರಳುತ್ತಿದ್ದು ಅದರ ಬಾಧೆಯನ್ನು ತಾಳಲಾರದೆ ಆತ್ಮಹತ್ಯ ಮಾಡಿಕೊಳ್ಳುವುದಾಗಿ ಒಂದು ಕಾಗದ ಬರೆದಿಟ್ಟಿದ್ದನೆಂದೂ ಹೇಳಲಾಗಿದೆ.

ಕರ್ನಾಟಕ ಪ್ರಾಂತ್ಯ ಕೂಡಲೇ ಆಗಬೇಕು

ಕರ್ನಾಟಕ ರಾಜ್ಯ ನಿರ್ಮಾಣ ಪರಿಷತ್ತಿನಲ್ಲಿ ಒತ್ತಾಯ

ಕರ್ನಾಟಕ ಪ್ರಾಂತ್ಯ ರಚನೆಯ ಬೇಡಿಕೆಯು ಪ್ರಾರಂಭವಾಗಿ ೩೦ ವರ್ಷಗಳಾದುವು. ಆದಾಗ್ಯೂ ಸ್ವತಂತ್ರ ಲಭಿಸಿದ ಮೇಲೆ ಸಹ ಈ ಪ್ರಾಂತ್ಯ ರಚನೆಯಾಗಿಲ್ಲ. ಕರ್ನಾಟಕ ಏಕೀಕರಣ ಕೂಡಲೇ ಆಗಬೇಕು. ಇದಕ್ಕಾಗಿ ಕನ್ನಡ ನಾಡಿನ ಪ್ರಜೆಗಳೆಲ್ಲರೂ ಸಂಘಟಿತರಾಗಿ ಹೋರಾಡಬೇಕು-ಎಂದು ಅಖಂಡ ಕರ್ನಾಟಕರಾಜ್ಯ ನಿರ್ಮಾಣ ಪರಿಷತ್ತು ತನ್ನ ಎರಡನೆಯ ಅಧಿವೇಶನದಲ್ಲಿ ಘೋಷಿಸಿದೆ

ಈ ಅಧಿವೇಶನವನ್ನು ನಿನ್ನೆದಿನ ಹಂಪೆಯಲ್ಲಿ ಪಾರ್ಲಿಮೆಂಟ್ ಸದಸ್ಯ ಶ್ರೀ ದಾಮೋದರಮೆನನ್‌ರವರು ಶ್ರೀ ಕೆ.ಆರ್. ಕಾರಂತರವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು.

ಭಾರತ ಶ್ರೇಷ್ಠ ನ್ಯಾಯಾಧೀಶರು

ಮುಂದಿನ ತಿಂಗಳು ೪ನೇ ತಾರೀಖಿನಿಂದ ನಿವೃತ್ತರಾಗಲಿರುವ ಭಾರತ ಶ್ರೇಷ್ಠ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಶ್ರೀ ಪತಂಜಲಿ ಶಾಸ್ತ್ರಿಯವರ ಸ್ಥಾನದಲ್ಲಿ ಜಸ್ಟೀಸ್ ಮೆಹರ್‌ಚಂದ್ ಮಹಾಜನ್‌ರನ್ನು ನೇಮಿಸಲಾಗಿದೆ. ಮದ್ರಾಸ್ ಹೈಕೋರ್ಟಿನಲ್ಲಿ ನಿವೃತ್ತರಾಗಿರುವ ಜಸ್ಟಿಸ್ ಟಿ. ಎಲ್. ವೆಂಕಟರಾಮಯ್ಯರ್‌ರವರನ್ನು ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿ ನೇಮಿಸಲಾಗಿದೆ.

ಗಣಿ ಕೆಲಸದಲ್ಲಿ ಹುಡುಗರ ನೇಮಕ ಕೂಡದು

ಇತ್ತೀಚೆಗೆ ಬ್ರಿಟನ್ನಿನಲ್ಲಿ ಜಾರಿಗೆ ಬಂದ ಗಣಿ ಕೆಲಸಗಳ ಸಂಬಂಧ ಕಾನೂನಿನ ಪ್ರಕಾರ ೧೬ ವರ್ಷದ ಕೆಳಗಿರುವ ಹುಡುಗರನ್ನು ಗಣಿ ಕೆಲಸಕ್ಕೆ ಸೇರಿಸಿಕೊಳ್ಳುವಂತಿಲ್ಲ.

ಪ್ರಾರಂಭ ಭಾಷಣ

ಮೈಸೂರು ೪

ಶ್ರೀ ಕಾವೇರಿಪಟ್ಟಣ-ಧರ್ಮಛತ್ರದಲ್ಲಿರುವ ವೈಶ್ಯ ಯುವಜನ ಸಂಘದ ಪ್ರಾರಂಭ ಭಾಷಣವನ್ನು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಟಿ. ಮರಿಯಪ್ಪನವರು ನಾಳೆಸಂಜೆ ೬ ಗಂಟೆಗೆ ಮಾಡುವರು. ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟರು ಅಧ್ಯಕ್ಷತೆ ವಹಿಸುವರು.

ಧನ್ವಂತರಿ ಜಯಂತಿ

ಮೈಸೂರು ೪

ನಂಜನಗೂಡಿನಲ್ಲಿ ನಿನ್ನೆ ಸಂಜೆ ಆಯುರ್ವೇದವಿದ್ವಾನ್ ಶ್ರೀ ಬಿ.ವಿ. ಪಂಡಿತರು ತಮ್ಮ ಗೃಹದಲ್ಲಿ ಶ್ರೀ ಧನ್ವಂತರಿ ಜಯಂತಿಯನ್ನು ವೈಭವದಿಂದ ಆಚರಿಸಿದರು.

ಕುಮಾರಿಗಳಾದ ವಿಶಾಲಾಕ್ಷಿ ಮತ್ತು ಇಂದಿರಾರವರಿಂದ ಪ್ರಾರ್ಥನೆ, ಶ್ರೀ ರಾಮಸ್ವಾಮಿ ದಾಸರಿಂದ ವಾಚನ, ಸಂಗೀತ ವಿದ್ವಾನ್ ಶ್ರೀ ಎ. ಸುಬ್ಬರಾಯರು ಮತ್ತು ಪಾರ್ಟಿಯವರಿಂದ ಸಂಗೀತ ನಡೆದವು

ಶ್ರೀ ಬಿ. ವಿ. ಪಂಡಿತರು ಅತಿಥಿಗಳನ್ನು ಸ್ವಾಗತಿಸಿ, ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯ,ಶ್ರೀಕೆ.ಟಿ.ಭಾಷ್ಯಂ ಮುಂತಾದವರಿಂದ ಬಂದಸಂದೇಶ ಗಳನ್ನು ಓದಿದರು.

ಅಧ್ಯಕ್ಷತೆ ವಹಿಸಿದ್ದ ವೈದ್ಯ ವಿದ್ವಾನ್ ಶ್ರೀ ಪಾರ್ಥನಾರಾಯಣ ಪಂಡಿತರು ಭಾಷಣ ಮಾಡಿ ಆಧುನಿಕ ಭಾರತದಲ್ಲಿ ಆಯುರ್ವೇದ ಪಾತ್ರದ ಪ್ರಾಮುಖ್ಯತೆಯನ್ನು ವಿವರಿಸಿದರು. ಇತ್ತೀಚೆಗೆ ಆಯುರ್ವೇದದ ಪ್ರಗತಿಯಲ್ಲಿ ಸರ್ಕಾರ ಮತ್ತು ಜನರು ಹೆಚ್ಚು ಆಸಕ್ತಿ ಹೊಂದಿದ್ದಾರೆ. ಅದನ್ನು ಅಭಿವೃದ್ಧಿಪಡಿಸಲು ಸರ್ಕಾರ ಅನೇಕ ಯೋಜನೆಗಳನ್ನು ಕೈಗೊಂಡಿದೆ. ಹೃಷಿಕೇಶದಲ್ಲಿ ಒಂದು ಆಯುರ್ವೇದ ವಿಶ್ವವಿದ್ಯಾನಿಲಯ ಸ್ಥಾಪಿಸಲು ಕೇಂದ್ರ ಸರ್ಕಾರ ಯೋಚಿಸುತ್ತಿದೆ. ಆಯುರ್ವೇದ ಪಂಡಿತರು ಸರಿಯಾದ ಶಿಕ್ಷಣ ಪಡೆದು ಅದನ್ನು ಅಭಿವೃದ್ಧಿಪಡಿಸಬೇಕು. ವಿದೇಶಿ ಔಷಧಿಗಳಿಗಾಗಿ ಹೋಗುತ್ತಿರುವ ವಿಪರೀತ ಹಣ ಉಳಿಸಲು ಸ್ವದೇಶಿ ಔಷಧಿಗಳನ್ನೇ ಜನರು ಉಪಯೋಗಿಸಬೇಕು--ಎಂದು ಅವರು ತಿಳಿಸಿದರು.

ದೇವಸ್ಥಾನದಲ್ಲಿ ಚುನಾವಣಾ ಪ್ರಚಾರ

ಮೈಸೂರು ೪

ಅಶೋಕರಸ್ತೆಯಲ್ಲಿರುವ ಶ್ರೀ ಕನ್ಯಕಾ ಪರಮೇಶ್ವರಿ ದೇವಸ್ಥಾನದಲ್ಲಿ ಈ ರಾತ್ರಿ ೯ ಗಂಟೆಗೆ ಶ್ರೀ ಅಮ್ಮನವರಿಗೆ ಗಜಲಕ್ಷ್ಮೀ ಅಲಂಕಾರ ಮಹಾಮಂಗಳಾರತಿ ಏರ್ಪಡಿಸಲಾಗಿದೆ.

ಇದೇ ಸಮಯದಲ್ಲಿ ಪುರಸಭಾ ಚುನಾವಣೆಯ ವಿಷಯಕ್ಕಿಲ್ಲಿ ಕಾಂಗ್ರೆಸ್ ಮುಖಂಡರು ಭಾಷಣ ಮಾಡುವರು.

ಎಸ್. ಎಸ್. ಎಲ್. ಸಿ. ಪರೀಕ್ಷಾ ಫಲಿತಾಂಶ

ಮೈಸೂರು ೪

ಸೆಪ್ಟಂಬರ್‌ನಲ್ಲಿ ನಡೆದ ಎಸ್. ಎಸ್. ಎಲ್. ಸಿ. ಪರೀಕ್ಷೆಯ ಫಲಿತಾಂಶವು ಇದೇ ೧೦ ನೇ ತಾರೀಖು ಗುರುವಾರ ಬೆಳಗ್ಗೆ ೧೧ ಗಂಟೆಗೆ ಪ್ರಕಟವಾಗುತ್ತದೆ.

ಬಹಿರಂಗ ಸಭೆ

ಮೈಸೂರು ೪

ನಾಳೆ ಸಂಜೆ ೭ ಗಂಟೆಗೆ ಟೌನ್‌ಹಾಲಿನಲ್ಲಿ ಮೈಸೂರಿನ ಮುಖ್ಯಮಂತ್ರಿಗಳು ಪುರಸಭಾ ಚುನಾವಣೆಯ ಕಾಂಗ್ರೆಸ್ ಪಕ್ಷದ ಪ್ರಚಾರಭಾಷಣ ಮಾಡುವರು.

ಮೈಸೂರು ಎರಡನೇ ಮ್ಯಾಜಿಸ್ಟ್ರೇಟರು

ಬೆಂಗಳೂರು ೪

ಶ್ರೀ ಕೆ. ಜಿ. ಪುಟ್ಟಣ್ಣಯ್ಯನವರನ್ನು ಮೈಸೂರಿನ ಎರಡನೇ ಸಿಟಿ ಮ್ಯಾಜಿಸ್ಟ್ರೇಟರಾಗಿ ವರ್ಗಾಯಿಸಲಾಗಿದೆ.

ಕೈಗಾರಿಕಾ ಆರ್ಥಿಕ ಮಂಡಲಿ ರಚನೆ

ಬೆಂಗಳೂರು ೪

ಮೈಸೂರು ಸಂಸ್ಥಾನದಲ್ಲಿ ಸ್ವಲ್ಪ ದಿವಸಗಳಲ್ಲಿಯೇ ಕೈಗಾರಿಕೆ ಆರ್ಥಿಕ ಮಂಡಲಿಯನ್ನು ಸರ್ಕಾರವು ರಚಿಸಲಿದೆ.

ಭಾರತಕ್ಕೆ ಜಪಾನ್ ರೈಲ್ವೆ ಇಂಜನ್‌ಗಳು

ಭಾರತವು ಜಪಾನಿನಿಂದ ೩೫೫ ಕೋಟಿ ಜಪಾನ್ ಯೆನ್‌ಗಳ ಬೆಲೆಯಲ್ಲಿ ೧೨೫ ರೈಲ್ವೆ ಇಂಜನ್ನುಗಳನ್ನು ಕೊಳ್ಳಲು ಒಪ್ಪಂದ ಮಾಡಿಕೊಂಡಿದೆ.

೫೦ ಹೊಸ ಸರ್ಕಾರಿ ಬಸ್ಸುಗಳು

ಮೈಸೂರು ಸರ್ಕಾರಿ ಟ್ರಾನ್ಸ್‌ಪೋರ್ಟ್ ವ್ಯವಸ್ಥೆಗೆ ೫೦ ಹೊಸ ಬಸ್ಸುಗಳನ್ನು ಇನ್ನು ೨ ತಿಂಗಳೊಳಗಾಗಿ ಸೇರಿಸಲಾಗುವುದೆಂದೂ, ಬಸ್ ಯಂತ್ರಗಳು ಈಗಾಗಲೇ ಬಂದು, ಅವುಗಳ ನಿರ್ಮಾಣ ಕಾರ್ಯವು ಮದ್ರಾಸಿನಲ್ಲಿ ನಡೆಯುತ್ತಿದೆಯೆಂದೂ ಹೇಳಲಾಗಿದೆ

○ ಬಳ್ಳಾರಿ ಜಿಲ್ಲೆಯ ಹಂಪಸಾಗರದಿಂದ ಹೈದರಾಬಾದಿನ ಅಳವಂಡಿಗೆ ಮದುವೆಗಾಗಿ ಪ್ರಯಾಣ ಮಾಡುತ್ತಿದ್ದ ತಂಡವೊಂದು ತುಂಗಭದ್ರಾ ನದಿಯನ್ನು ದೋಣಿಯಲ್ಲಿ ದಾಟುತ್ತಿದ್ದಾಗ ದೋಣಿಯು ಮುಳುಗಿ ೧೧ ಮಂದಿ ಹೆಂಗಸುಮಕ್ಕಳೂ ಆದಿಯಾಗಿ ನೀರಿನ ಪಾಲಾದರೆಂದು ವರದಿಯಾಗಿದೆ.

ಪುರಸಭಾಧ್ಯಕ್ಷರಿಗೆ ನೋಟೀಸ್

ಮೈಸೂರು ೨

ಚಾಮುಂಡಿಪುರಂ ಬಡಾವಣೆಯ ೫೭ ಮಂದಿ ರೇಟ್‌ಪೇಯರುಗಳು ಪುರಸಭೆಯು ವಸೂಲ್ಮಾಡುವ ಸೇರಿನ ಕಂದಾಯವು ರಾಜ್ಯಾಂಗಕ್ಕೆ ವಿರೋಧವಾಗಿರುವುದರಿಂದ ಅದನ್ನು ವಾಪಸು ಮಾಡಬೇಕೆಂದು ಪುರಸಭಾಧ್ಯಕ್ಷರಿಗೆ ಲಾಯರ್ ನೋಟೀಸ್ ಕೊಟ್ಟಿದ್ದಾರೆ.

ಈ ಸಂಬಂಧದಲ್ಲಿ ಶ್ರೀ. ತಗಡೂರು ರಾಮಚಂದ್ರರಾಯರು ಮೊದಲನೇ ಮುನಿಸೀಫ್ ಕೋರ್ಟಿನಲ್ಲಿ ಹೂಡಿರುವ ದಾವಾ ಮೊಕದ್ದಮೆಯ ಕಳೆದ ೧೭ನೇ ತಾರೀಖು ಪರಿಶೀಲನೆಗೆ ಬಂದಾಗ ಪುರಸಭಾಧ್ಯಕ್ಷರು ಹೇಳಿಕೆ ಕೊಡುವ ಬಗ್ಗೆ ಆಜ್ಞೆಯಾಯಿತು.

ಪಾನನಿರೋಧ ಜಾರಿಗೆ ತರಲು ಒತ್ತಾಯ

ಕರಾಚಿಯಲ್ಲಿ ಪಾನನಿರೋಧವನ್ನು ಪೂರ್ಣವಾಗಿ ಜಾರಿಗೆ ತರಬೇಕೆಂದು ಅಲ್ಲಿಯ ಪ್ರಾಂತೀಯ ಮುಸ್ಲಿಂಲೀಗ್ ಸಂಸ್ಥೆಯು ಪಾಕ್ ಸರ್ಕಾರವನ್ನು ಒತ್ತಾಯ ಮಾಡಿದೆ.

ಎಲಕ್ಟ್ರಿಕ್ ರೈಲು

ಕೊಚ್ಚಿ-ಕ್ವಿಲಾನ್ ನಡುವೆ ವಿದ್ಯುಚ್ಛಕ್ತಿ ರೈಲ್ವೆಯನ್ನು ಏರ್ಪಡಿಸುವ ವಿಷಯವನ್ನು ಕೇಂದ್ರ ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ರೈಲ್ವೆ ಉಪಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ರಾಜ್ಯಾಂಗ ತಿದ್ದುಪಡಿ

ಸರ್ಕಾರವು ಭೂಮಿಯನ್ನು ವಹಿಸಿಕೊಳ್ಳುವಾಗ ಹಾಲಿಯಲ್ಲಿರುವ ಅದರ ಬೆಲೆಯನ್ನು ಕೊಡಬೇಕೆಂದು ಇತ್ತೀಚೆಗೆ ಶ್ರೇಷ್ಠ ನ್ಯಾಯಾಲಯವು ಇತ್ತಿರುವ ತೀರ್ಪಿನಿಂದ ಜಮೀನ್ದಾರಿ ರದ್ದುಗೊಳಿಸುವ ಕಾರ್ಯಕ್ಕೆ ಅಡಚಣೆಯುಂಟಾಗಿರುವುದರಿಂದ ಸರ್ಕಾರವು ರಾಜ್ಯಾಂಗದ ೩೧ ನೇ ವಿಧಿಯನ್ನು ತಿದ್ದುಪಡಿ ಮಾಡಲು ವಿಷಯ ಪರಿಶೀಲಿಸುತ್ತಲಿರುವುದಾಗಿ ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೩—೧೨—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೮	೨೧—೧೪
ಎಳ್ಳು	೬೪—೧೨	೬೫—೨
ಹರಳು	೨೮—೭	೩೭—೪
ಹುಚ್ಚೆಳ್ಳು	೪೪—೬	—
ಅವರೆ	—	—
ಹುರಳಿ	೩೨—೧೨	೩೩—೧೪
ಹೆಸರು	೨೯—೨	೩೭—
ಅಲಸಂದೆ	೩೩—	೪೯—೬
ಉದ್ದು	೫೫—	—
ಹುಣಸೇಹಣ್ಣು	೧೦—೧೦	—
ಮೆಣಸಿನಕಾಯಿ	೧೪—೧೪	೨೮—೬
ಸೀಗೆಕಾಯಿ	೬—೧೦	—
ತೆಂಗಿನಕಾಯಿ	೧೮೬—	೩೭—

ಜೈಲು ಮುಖ್ಯಾಧಿಕಾರಿಗೆ ಖೈದಿಗಳ ಬಿನ್ನವತ್ತಳೆ

ಕಪೂರ್‌ಥಲಾ ಜೈಲಿಗೆ ಪೆಪ್ಸುವಿನ ಜೈಲಿನ ಮುಖ್ಯಾಧಿಕಾರಿಗಳು ಭೇಟಿಯಿತ್ತಾಗ ಅಲ್ಲಿಯ ಖೈದಿಗಳೆಲ್ಲರೂ ಅವರಿಗೆ ಒಂದು ಬಿನ್ನವತ್ತಳೆಯನ್ನು ಸಮರ್ಪಿಸಿದರು ಜೈಲಿನ ಅಧಿಕಾರಿಗಳು ತಮಗೆ ಉತ್ತಮರೀತಿಯಲ್ಲಿ ನೋಡಿಕೊಳ್ಳುತ್ತಿರುವುದನ್ನು ಆ ಬಿನ್ನವತ್ತಳೆಯಲ್ಲಿ ಹೊಗಳಲಾಗಿದೆ.

ಬ್ರಿಟನ್-ಪರ್ಶಿಯಾ ರಾಯಭಾರಿ ಸಂಪರ್ಕ

ಎಣ್ಣೆ ವಿಷಯದಲ್ಲಿ ಪರ್ಶಿಯಾ ಪ್ರಧಾನಿಯಾಗಿದ್ದ ಡಾ|| ಮುಸಾದಿಕ್‌ರವರು ಬ್ರಿಟನ್ನಿನೊಡನೆ ರಾಯಭಾರಿ ಸಂಪರ್ಕವನ್ನು ತ್ಯಜಿಸಿದ್ದುದನ್ನು ಈಗ ಪ್ರಾರಂಭಿಸಲು ಪರ್ಶಿಯಾ ಒಪ್ಪಿಕೊಟ್ಟಿರುವ ವಿಷಯವನ್ನು ಬ್ರಿಟನ್ನಿಗೆ ತಿಳಿಸಿರುವುದಾಗಿ ಹೇಳಲಾಗಿದೆ.

ಷೇಕ್ ಅಬ್ದುಲ್ಲಾ ಬಂಧನ ಅವಧಿ ಹೆಚ್ಚಿತು

ಕಾಶ್ಮೀರದಲ್ಲಿ ಬಂಧನದಲ್ಲಿರುವ ಮಾಜಿ ಪ್ರಧಾನಿ ಷೇಕ್ ಅಬ್ದುಲ್ಲಾರವರ ಬಂಧನದ ಅವಧಿಯು ಇದೇ ಮಾಹೆ ೮ನೇ ತಾರೀಖು ಮುಕ್ತಾಯವಾಗಬೇಕಾಗಿದ್ದುದು ಇನ್ನೂ ೩ ತಿಂಗಳಕಾಲ ಹೆಚ್ಚಿಸಲಾಗಿದೆ.

ತ್ರಿರಾಷ್ಟ್ರ ಸಮ್ಮೇಳನಾರಂಭ

ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳ ಪ್ರಧಾನಿ ಮತ್ತು ಅಮೆರಿಕಾಧ್ಯಕ್ಷ ಐಸೆನ್‌ಹೋವರ್ ಈ ಮೂರ ನಾಯಕರು ಈ ದಿನದಿಂದ ಬರ್ಮುಡಾದಲ್ಲಿ ಸಭೆ ಸೇರಲಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಣೆ

ಕೆಳಗೆ ನಮೂದಿಸಿರುವ ೭೯ನೇ ನಿಬಂಧನೆ ಪ್ರಕಾರ (1947-48 ರ ಕ್ಯಾಲೆಂಡರ್ ವ್ಯಾಲ್ಯೂಂ 1 ಪುಟ 31) ಈ ವಿಶ್ವವಿದ್ಯಾನಿಲಯದ ರಿಜಿಸ್ಟರ್ಡ್ ಪದವೀಧರರು (ಈಗ ರಿಜಿಸ್ಟರ್ಡ್ ಪದವೀಧರರಾಗಿ ಎನ್‌ರೋಲ್ ಆಗಿರುವವರು) ಪುನರ್ವಿಮರ್ಶೆ ಮತ್ತು ತಿದ್ದುಪಡಿ ಬಗ್ಗೆ ಕೆಳಗೆ ಕಂಡ ನಮೂನೆಯಲ್ಲಿ 1953ನೇ ಡಿಸೆಂಬರ್ 15 ನೇ ತಾರೀಖು ಅಥವಾ ಅದರೊಳಗೆ ಈ ಕಛೇರಿಗೆ ತಲುಪುವಂತೆ ಅರ್ಜಿಗಳನ್ನು ಕಳುಹಿಸಬೇಕೆಂದು ಕೋರಲಾಗಿದೆ.

79ನೇ ನಿಬಂಧನೆ:— ಪ್ರತಿ ವರ್ಷದ ಜನವರಿತಿಂಗಳ ಮೊದಲನೇ ದಿನ ಪದವೀಧರರ ರಿಜಿಸ್ಟರನ್ನು ಪುನರ್ಪರಿಶೀಲಿಸಿ, ತಿದ್ದುಪಡಿ ಮಾಡಲಾಗುವುದು. ಪುನರ್ಪರಿಶೀಲನೆ ಅಥವ ತಿದ್ದುಪಡಿಬಗ್ಗೆ ಅರ್ಜಿಗಳು ರಿಜಿಸ್ಟ್ರಾರರಿಗೆ ಹಿಂದಿನ ಡಿಸೆಂಬರ್ ೧೫ನೇ ತಾರೀಖಿನೊಳಗೆ ತಲುಪಬೇಕು.

1. ಹೆಸರು, ಪದವಿ ಅಥವಾ ಪದವಿಗಳು
2. ಎನ್‌ರೋಲ್‌ಮೆಂಟ್ ನಂಬರು.
3. ವಿಳಾಸ.

ಅಪ್ಪಣೆಮೇರೆ
ಎಫ್. ಜೆ. ಸಲ್ದಾನ್ಹಾ.
ರಿಜಿಸ್ಟ್ರಾರ್.

ಕಾಂಗ್ರೆಸ್ಸಿಗೇ ಓಟುಕೊಡಿ



ಇದೇ 7—12—53ನೇ ಸೋಮವಾರ ನಡೆಯುವ ಮೈಸೂರು ಪೌರಸಭಾಚುನಾವಣೆಯಲ್ಲಿ ದಯವಿಟ್ಟು ಈಕೆಳಗೆಕಂಡ ಕಾಂಗ್ರೆಸ್ ಉಮೇದುವಾರರಿಗೆ ಮಹಾಜನರು ತಮ್ಮ ಓಟನ್ನು ಕೊಡಬೇಕಾಗಿ ಪ್ರಾರ್ಥನೆ.

ಕಾಂಗ್ರೆಸ್ ಚುನಾವಣಾ ಸಮಿತಿ

ಡಿವಿಜನ್ ನಂ:—

೧. ಜಿ. ಎಸ್. ರಾಮಕೃಷ್ಣಯ್ಯ
೨. ಕೆ. ಸಿದ್ದಯ್ಯ
೩. ಎ. ಎನ್. ಸೂರ್ಯನಾರಾಯಣರಾವ್
೪. ಡಿ. ಲಿಂಗಯ್ಯ
೫. ಟಿ. ಎನ್. ಸುಬ್ಬರಾವ್
೬. ಬಿ. ರಾಮಣ್ಣ
೭. ಪಾಲಹಳ್ಳಿ ಸೀತಾರಾಮಯ್ಯ
೮. ಜಿ. ನರಸಿಂಹಯ್ಯ
೯. ಎಂ. ಆರ್. ಸುದರ್ಶನ್
೧೦. ಕೆ. ಎಸ್. ಸೂರ್ಯನಾರಾಯಣರಾವ್
೧೧. ಎ. ಕೃಷ್ಣಮೂರ್ತಿರಾವ್
೧೨. ಕೆ. ಎಸ್. ಸತ್ಯನಾರಾಯಣರಾವ್
೧೩. ಎನ್. ಶ್ರೀನಿವಾಸನ್
೧೪. ಹೆಚ್. ಕೆಂಪೇಗೌಡ
೧೫. ಎಸ್. ವೆಂಕಟರಮಣಯ್ಯ
೧೬. ಟಿ. ನರಸಿಂಹ ಅಯ್ಯಂಗಾರ್
೧೭. ಕೆ. ಚಾಮುಂಡಯ್ಯ
೧೮. ಎಂ. ಸಿದ್ದಲಿಂಗಪ್ಪ
೨೦. ಯು. ಎಲ್. ರಾಮಚಂದ್ರರಾವ್
೨೧. ಬಿ. ಎಲ್. ರಾಮಸ್ವಾಮಿ ಶೆಟ್ಟರು
೨೨. ಟಿ. ಚಂದ್ರಶೇಖರ ಗೌಡರು
೨೩. ಬಿ. ಎನ್. ಕೆಂಗೇಗೌಡರು
೨೪ ಡಾ|| ಪಿ. ಡಿ. ಕೃಷ್ಣಸ್ವಾಮಿ
೨೫. ಎಸ್. ಕೆ. ಲಕ್ಷ್ಮೀನರಸಿಂಹಯ್ಯ
೨೬. ಕೆ. ಪುಟ್ಟಸ್ವಾಮಿ
೨೭. ಜಿ. ಆರ್. ರಂಗಸ್ವಾಮಯ್ಯ
೩೪. ಜಿ ಎ ಕುಟಿನೋ
೩೫. ಎಸ್. ಶ್ರೀಕಂಠಯ್ಯ
೩೬. ಜೋಗಿಸಿದ್ದಯ್ಯ
೩೭. ಟಿ. ವೆಂಕಟರಮಣಯ್ಯ
೩೯. ಎಸ್. ಲಿಂಗಣ್ಣ

ಪ್ರಭಾ 5--12--53 ರಿಂದ ಅಮೋಘ 2ನೇ ವಾರ
ಮಿನಾಕುಮಾರಿ (ಬೈಜುಬಾವ್ರ ಪ್ರಖ್ಯಾತಿ) ದಿಲೀಪ್‌ಕುಮಾರ್ ನಟಿಸಿರುವ ರಣಜಿತ್‌ರವರ ಹಿಂದಿ ಚಿತ್ರ.
-ಫುಟ್-ಪಾತ್-
ದಿಗ್ದರ್ಶನ:—ಜಯಸರ್‌ಹಾದಿ
(ಹಮ್‌ಲೋಗ್ ಪ್ರಖ್ಯಾತಿ)

ಹೋಟೇಲ್ ಕೆಲಸಗಾರರ ಸಂಘಕ್ಕೆ ಕೃಪಲಾನಿ

ಮೈಸೂರು ೪

ಅಖಿಲಭಾರತ ಪ್ರಜಾಸೋಷಲಿಸ್ಟ್ ಪಕ್ಷದ ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ಮೊನ್ನೆ ಬೆಳಿಗ್ಗೆ ನಗರದ ನಿಯೋ ಹೋಟೆಲ್ ಕೆಲಸಗಾರರ ಸಂಘಕ್ಕೆ ಭೇಟಿಯಿತ್ತು ಕೆಲಸಗಾರರು ಸಂಘಟಿತರಾಗಿ ತಮ್ಮ ಪುರೋಭಿವೃದ್ಧಿಗೆ ಸಂಘವನ್ನು ಬಲಪಡಿಸಬೇಕೆಂದು ಅವರಿಗೆ ಹಿತವಚನವನ್ನು ಹೇಳಿದರು.

೧೦ ಲಕ್ಷ ಕಾರ್ಮಿಕರ ಮುಷ್ಕರ

ತಮಗೆ ಹೆಚ್ಚಿಗೆ ಸಂಬಳವನ್ನು ಕೊಡಬೇಕೆಂದು ಲಂಡನ್ನಿನಲ್ಲಿ ಮೊನ್ನೆಯದಿನ ಹಡಗು ನಿರ್ಮಾಣ ಮತ್ತು ಇಂಜನಿಯರಿಂಗ್ ಸಂಸ್ಥೆಗಳ ೧೦ ಲಕ್ಷ ಕಾರ್ಮಿಕರು ೨೪ ಗಂಟೆಗಳ ಮುಷ್ಕರವನ್ನು ಹೂಡಿದ್ದರು.

ಕಳೆದ ೨೭ ವರ್ಷಗಳಲ್ಲಿ ಈರೀತಿಯಾದ ಮುಷ್ಕರವು ಬ್ರಿಟನ್ನಿನಲ್ಲಿ ನಡೆದಿಲ್ಲವೆಂದು ಹೇಳಲಾಗಿದೆ.

ಪಾರ್ಲಿಮೆಂಟ್ ಸದಸ್ಯರಿಗೆ ಮಾಶಾಸನ

ಪಾರ್ಲಿಮೆಂಟ್ ಸದಸ್ಯರಿಗೆ ಮಾಹೆಯಾನಾ ೪೦೦ ರೂಪಾಯಿಗಳ ಸಂಬಳ ಮತ್ತು ಪಾರ್ಲಿಮೆಂಟ್ ನಡೆಯುವ ಕಾಲದಲ್ಲಿ ಪ್ರತಿದಿನ ೧೫ ರೂಪಾಯಿಗಳ ಭತ್ಯವನ್ನು ಕೊಡುವ ವಿಷಯವನ್ನು ಕಾಂಗ್ರೆಸ್ ಪಕ್ಷಪರಿಶೀಲಿಸುತ್ತಿರುವುದಾಗಿ ಗೊತ್ತಾಗಿದೆ.

ವುಡ್ ಲ್ಯಾಂಡ್ಸ್
4-12-53 ರಿಂದ ಅಮೋಘ 2 ನೇ ವಾರ
ದಿನ 3 ಆಟಗಳು 2-45,6-30,10ಕ್ಕೆ
ಸಂಗೀತ ಪಿಕ್ಚರ್ಸ್‌ರವರ:—
★ ನಾಲ್ವರ್ ★ [ತಮಿಳು]
ಪಾತ್ರ:—ಕುಮಾರಿತಂಗಂ, ನಾಗರಾಜನ್, ಮುತ್ತುಲಕ್ಷ್ಮಿ, ಏಳುಮಲೈ, ಕುಮಾರಿ ಕಮಲ.
ಪಾತ್ರ: ವಿ. ನಾಗಯ್ಯ, ಟಿ.ಎಸ್. ಬಾಲಯ್ಯ ಟಿ. ಆರ್. ರಾಜಕುಮಾರಿ.

ರಣಜಿತ್
3—12—53 ರಿಂದ
ರೇಲ್ ಕ ಡಿಬ್ಬ
(ಹಿಂದಿ)
ಪಾತ್ರ:—ಮಧುಬಾಲ, ಶಮ್ಮಿ ಕಪೂರ್, ಸಜ್ಜನ್ ಮತ್ತು ಓಂಪ್ರಕಾಶ್.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೮೭

೫-೧೨-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪುರಸಭಾ ಚುನಾವಣೆ ಉಮೇದುವಾರಿಕೆ ತಿರಸ್ಕರಿಸಿದ್ದಕ್ಕೆ ರಿಟ್ ಅರ್ಜಿ

ಒಂಬನೇ ಡಿವಿಜನ್ ಚುನಾವಣೆ ನಿಲ್ಲಿಸಲು ಕೋರಿಕೆ

ಮೈಸೂರು ೫

ಮೈಸೂರು ಪುರಸಭೆಯ ಚುನಾವಣೆಯಲ್ಲಿ ಒಂಬನೇ ಡಿವಿಜನ್ನಿನಿಂದ ಉಮೇದುವಾರಿಕೆಯನ್ನು ಸಲ್ಲಿಸಿದ್ದ ಶ್ರೀ ರಾಮಲಿಂಗಂರವರ ಅರ್ಜಿಯನ್ನು ರಿಟರ್ನಿಂಗ್ ಆಫೀಸರು ತಿರಸ್ಕರಿಸಿರುವುದು ಅಕ್ರಮವೆಂದು ಅವರು ಹೈಕೋರ್ಟಿನಲ್ಲಿ ಒಂದು ರಿಟ್ ಅರ್ಜಿ ಸಲ್ಲಿಸಿದ್ದಾರೆ.

೧, ೨, ೩೦ ಮತ್ತು ೩೬ನೇ ವಾರ್ಡುಗಳನ್ನು ಷೆಡ್ಯೂಲ್ಡ್ ಪಂಗಡಗಳಿಗಾಗಿ ಕೋಮುವಾರು ಭಾವನೆ ಮೇಲೆ ಕಾದಿರಿಸಿರುವುದು ಅಕ್ರಮವೆಂದೂ, ರಾಜ್ಯಾಂಗದ ೧೪ ಮತ್ತು ೧೫ನೇ ವಿಧಿಗಳಿಗೆ ಅನುಗುಣವಾಗಿಲ್ಲವೆಂದೂ, ಮೈಸೂರು ಸಿಟಿ ಮುನಿಸಿಪಾಲಿಟಿಗಳ ಚುನಾವಣೆ ನಿಬಂಧನೆಗಳಲ್ಲಿನ ೧೬ನೇ ನಿಯಮವೂ ಸಹಾ ಅಕ್ರಮವಾದುದೆಂದೂ, ಅದ್ದರಿಂದ ಇದೇ ೭ ನೇ ತಾ|| ಈ ಡಿವಿಜನ್‌ಗಳಲ್ಲಿ ಕೋಮುವಾರು ಆಧಾರದಮೇಲೆ ನಡೆಯಲಿರುವ ಚುನಾವಣೆಯನ್ನು ಪ್ರತಿಬಂಧಿಸಿ, ರಿಟರ್ನಿಂಗ್ ಆಫೀಸರ ಆಜ್ಞೆಯನ್ನು ರದ್ದುಗೊಳಿಸಿ, ತಮ್ಮ ಉಮೇದುವಾರಿಕೆಯನ್ನು ಅಂಗೀಕರಿಸುವಂತೆ ಆಜ್ಞೆ ಮಾಡಬೇಕೆಂದೂ ಅರ್ಜಿದಾರರು ಕೋರಿದ್ದಾರೆ.

ಪ್ರಜಾಸೋಷಲಿಸ್ಟ್‌ರವರಿಗೆ ಬೆಂಬಲ ನೀಡಿ

ಮೈಸೂರು, ಡಿ. ೫

ಟೌನ್‌ಹಾಲ್ ಮೈದಾನದಲ್ಲಿ ನಿನ್ನೆ ಸಂಜೆ ನಡೆದ ಮತ್ತೊಂದು ಬಹಿರಂಗ ಸಭೆಯಲ್ಲಿ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎಂ. ಎಸ್ ಗುರುಪಾದಸ್ವಾಮಿಯವರು ಭಾಷಣಮಾಡಿ, ಪ್ರಜಾಸೋಷಲಿಸ್ಟ್ ಪಕ್ಷದ ಉಮೇದುವಾರರಿಗೆ ಬೆಂಬಲ ನೀಡಬೇಕೆಂದು ಕೋರಿದರು.

ಕಾಂಗ್ರೆಸ್ ಆಡಳಿತವನ್ನು ವಹಿಸಿಕೊಂಡಾರಭ್ಯ, ದೇಶವು ಅಧೋಗತಿಗೆ ಇಳಿದು, ಜನರ ಕಷ್ಟಗಳು ಹೆಚ್ಚಾಗುತ್ತಿವೆ. ಪಂಚವಾರ್ಷಿಕ ಯೋಜನೆಗೆಂದು ಇಲ್ಲಿಯವರೆಗೆ ೧೪೦೦ ಕೋಟಿ. ರೂಪಾಯಿಗಳು ಖರ್ಚಾಗಿದ್ದರೂ ಅದರಿಂದ ಯಾವವಿಧವಾದ ಪ್ರಯೋಜನವೂ ಆಗದೆ ನಿರುದ್ಯೋಗ ಹೆಚ್ಚಾಗಿದೆ. ಅದ್ದರಿಂದ ಆ ಸಂಸ್ಥೆಯನ್ನು ಹೊರದೂಡಿ, ಮತ್ತೊಂದು ವಿರೋಧಪಕ್ಷವಾಗಿ ಕೆಲಸಮಾಡುತ್ತಿರುವ ಪ್ರಜಾಸೋಷಲಿಸ್ಟ್ ಪಕ್ಷಕ್ಕೆ ಮಹಾಜನರು ಸಂಪೂರ್ಣ ಅವರು ಬೆಂಬಲ ನೀಡಬೇಕು—ಎಂದು ತಿಳಿಸಿದರು

ನಗರದ ಆರೋಗ್ಯ ವರದಿ

ಮೈಸೂರುನಗರದಲ್ಲಿ ಕಳೆದ ತಿಂಗಳು ೩೦ ನೇ ತಾರೀಖು ಅಂತ್ಯದ ೧೫ ದಿನಗಳಲ್ಲಿ ಪ್ಲೇಗ್ ಅಥವ ಸಿಡಬಿನ ಉಪದ್ರವ ಮೂಲಕ ಯಾರೂ ಸತ್ತಿಲ್ಲ. ಆದರೂ ಮುಂಜಾಗ್ರತೆಗಾಗಿ ೧೧೦೭ ಮನೆಗಳಿಗೆ ಸೈನೊಫ್ಯೂಮೀನೇಟ್ ಮಾಡಲಾಯಿತು. ೧೯ ಪ್ರೈಮರಿ ಮತ್ತು ೪೭೦ ರಿವ್ಯಾಕ್ಸಿನೇಷನ್ ಮಾಡಲಾಯಿತು. ೭ ಡಿಫ್ತೀರಿಯಾ ಕೇಸುಗಳ ವರದಿಯಾಗಿ ಒಬ್ಬರು ಸತ್ತರು. ಪುರಸಭೆಯವರು ಕೈಗೊಂಡಿರುವ ಡಿಫ್ತೀರಿಯಾ ನಿರೋಧ ಯೋಜನೆ ಪ್ರಕಾರ, ಇಲ್ಲಿಯವರೆಗೆ ೨೧೮೭ ಮಕ್ಕಳಿಗೆ ಇನಾಕ್ಯುಲೇಷನ್ ಹಾಕಲಾಗಿದೆ. ನಗರದಲ್ಲಿ ಕಾಲರ ಇತ್ತಿಲ್ಲ ೨೯ ಕಾಲರಾ ನಿರೋಧ ಇನಾಕ್ಯುಲೇಷನ್ ಹಾಕಲಾಯಿತು-ಎಂದು ಪುರಸಭೆಯ ಆರೋಗ್ಯ ಇಲಾಖಾ ವರದಿ ತಿಳಿಸುತ್ತದೆ.

ಪುರಸಭಾ ಚುನಾವಣೆ

ಮೈಸೂರು ಪುರಸಭಾ ಚುನಾವಣೆಯು ೭ನೇ ತಾರೀಖು ಸೋಮವಾರ ಬೆಳಿಗ್ಗೆ ೮ರಿಂದ ೧೨ ಮತ್ತು ೧-೩೦ರಿಂದ ೫ ಗಂಟೆವರೆವಿಗೆ ನಡೆಯುತ್ತದೆ. ಮತದಾರರುಗಳು ತಮಗೆ ಪುರಸಭೆಯ ನೌಕರರು ಹಂಚಿರುವ ಗುರುತಿನ ಚೀಟಿಯೊಡನೆ ತಮಗೆ ಸಂಬಂಧಪಟ್ಟ ಪೋಲಿಂಗ್ ಬೂತಿಗೆ ಹೋಗಿ ಆ ಚೀಟಿಯನ್ನು ತೋರಿಸಿ, ಓಟಿನಚೀಟಿಯನ್ನು ಪಡೆದು ತಮ್ಮಿಷ್ಟಬಂದ ಉಮೇದುವಾರ ಹೆಸರಿನಲ್ಲಿರುವ ಪೆಟ್ಟಿಗೆಗೆ ಅದನ್ನು ಹಾಕಬೇಕಾಗಿದೆ.

ನಗರದಲ್ಲಿ ಸೋಮವಾರ ಸಾರ್ವತ್ರಿಕ ರಜಾದಿನ

ಮೈಸೂರು, ಡಿ. ೫

ಮೈಸೂರು ನಗರದಲ್ಲಿ ಇದೇ ೭ ನೇ ತಾರೀಖು ಸೋಮವಾರ ಪುರಸಭಾ ಚುನಾವಣೆ ನಡೆಯುವುದರಿಂದ ಆ ದಿನ ಸಾರ್ವತ್ರಿಕ ರಜಾದಿನವೆಂದು ಸರ್ಕಾರದವರು ಆಜ್ಞೆಮಾಡಿದ್ದಾರೆ.

ಗೋಧಿ ರೂಪಾಯಿಗೆ ೨ ಸೇರು ಒಂದೂವರೆ ಪಾವು

ಮೈಸೂರು ೫

ಈದಿನದಿಂದ ಗೋಧಿಯ ಮಾರಾಟದ ಬೆಲೆಯು ಸೇರು ಒಂದಕ್ಕೆ ಆರುಮುಕ್ಕಾಲಾಣೆಯೆಂದು [1 ರೂ.ಗೆ 2 ಸೇರು $1\frac{1}{2}$ ಪಾವು] ಸರ್ಕಾರದ ಪ್ರಕಟಣೆ ತಿಳಿಸುತ್ತದೆ.

ಧ್ವಜ ದಿನಾಚರಣೆ

ಬೆಂಗಳೂರು ೫

ಮಾಜಿ ಸೈನಿಕರು ಮತ್ತು ಅವರ ಸಂಸಾರದವರ ಪರಿಹಾರಕ್ಕಾಗಿ ಇದೇ ೭ ನೇ ತಾ|| ಸಂಸ್ಥಾನಾದ್ಯಂತ ಧ್ವಜ ದಿನಾಚರಣೆ ನಡೆಸಿ ನಿಧಿ ಸಂಗ್ರಹಿಸಲಾಗುವುದು. ಅದಕ್ಕಾಗಿ ಪ್ರತಿಜಿಲ್ಲಾಧಿಕಾರಿಗಳ ನೆರವಿನಿಂದ ಧ್ವಜಗಳನ್ನು ಮಾರಾಟ ಮಾಡಲು ವ್ಯವಸ್ಥೆ ಮಾಡಿದ್ದಾರೆ

ಈಧರ್ಮ ಕಾರ್ಯಕ್ಕೆ ಮಹಾಜನರು ನೆರವು ನೀಡಬೇಕು-ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮನವಿ ಮಾಡಿದ್ದಾರೆ.

ಧರ್ಮಶಾಲೆಯ ಪ್ರಾರಂಭೋತ್ಸವ

ಶ್ರೀಮನ್ಮಹಾರಾಜರು ಶ್ರೀಮಲೆಮಾದೇಶ್ವರ ಕ್ಷೇತ್ರದಲ್ಲಿ ಕಟ್ಟಿಸಿರುವ ಧರ್ಮಶಾಲೆಯ ಪ್ರಾರಂಭೋತ್ಸವವನ್ನು ನಿನ್ನೆಯದಿನ ಶ್ರೀ ಮಧ್ಯವರಾಣಿ ಶ್ರೀ ಕೆಂಪುಚಲುವಾಜಮ್ಮಣ್ಣಿಯವರು ನೆರವೇರಿಸಿದರು.

ರಾಮನಾಥಪುರದ ಜಾತ್ರೆ ರದ್ದು

ಇದೇ ೧೨ನೇ ತಾರೀಖು ಹಾಸನಜಿಲ್ಲೆ ರಾಮನಾಥಪುರದಲ್ಲಿ ನಡೆಯಲಿದ್ದ ದನಗಳ ಜಾತ್ರೆಯನ್ನು ಕಾಲರಾ ನಿಮಿತ್ತ ನಿಲ್ಲಿಸಲಾಗಿದೆಯೆಂದು ಸರ್ಕಾರದ ಪ್ರಕಟಣೆ ತಿಳಿಸಿರುತ್ತದೆ.

ನೆಹರೂ ಕೆನಡಾದ ಗೌರ್ನರ್ ಜನರಲ್ ಆಗಬೇಕಂತೆ

ಭಾರತದ ಪ್ರಧಾನಿ ಪಂಡಿತ ನೆಹರೂರವರು ರಾಜಕೀಯದಿಂದ ನಿವೃತ್ತಿ ಆದಮೇಲೆ ಕೆನಡಾದ ಗೌರ್ನರ್ ಜನರಲ್ ಪದವಿಗೆ ಅವರನ್ನು ಆಹ್ವಾನಿಸಬೇಕೆಂದು ಅಲ್ಲಿನ ಪಾರ್ಲಿಮೆಂಟ್ ಸದಸ್ಯರೊಬ್ಬರು ಸಲಹೆ ಮಾಡಿದ್ದಾರೆ.

ವೀಣಾವಾದನ

ರಾಜಧಾನಿಯ ಶ್ರೀ ವರಲಕ್ಷ್ಮೀ ಸಂಗೀತ ಮಂದಿರದ ಕೃಷ್ಣಮೂರ್ತಿಪುರದ ಶಾಖೆಯಲ್ಲಿ ಇದೇ ೭ನೇ ತಾರೀಖು ಸಂಜೆ ೫-೩೦ ಗಂಟೆಗೆ ವೈಣಿಕವಿದ್ವಾನ್ ಶ್ರೀ ವಿ. ವೆಂಕಟಸುಬ್ಬರಾಯರ ವೀಣಾವಾದನವು ನಡೆಯುತ್ತದೆ.

ಕಾಂಗ್ರೆಸ್ಸಿಗೆ ಬೆಂಬಲ ನೀಡಿ

ಮೈಸೂರು ೫

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯ ಶ್ರೀ ಟಿ. ಸುಬ್ರಹ್ಮಣ್ಯಂರವರು ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಭಾಷಣಮಾಡಿ, ನಾಳಿದ್ದು ನಡೆಯಲಿರುವ ಪುರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರಿಗೆ ಮಹಾಜನರು ಬೆಂಬಲ ನೀಡಬೇಕೆಂದು ಕೋರಿದರು.

ಕಾಂಗ್ರೆಸ್ ರಾಜ್ಯಾಡಳಿತವನ್ನು ವಹಿಸಿಕೊಂಡಮೇಲೆ ದೇಶವು ಎಷ್ಟೋ ಪ್ರಗತಿಮಾರ್ಗಕ್ಕೆ ಬಂದಿದೆ. ಅನೇಕ ಅಡಚಣೆ ಮತ್ತು ಆತಂಕಗಳು ಬಂದರೂ, ಕಳೆದ ೩ ವರ್ಷಗಳಲ್ಲಿ ಮತ್ತಾವ ರಾಷ್ಟ್ರವೂ ಗಳಿಸದಷ್ಟು ಪ್ರಗತಿಯನ್ನು ಭಾರತವು ಗಳಿಸಿದೆ ಪೊಲೀಸ್ ರಾಜ್ಯದಿಂದ ಸುಖೀ ರಾಜ್ಯಕ್ಕೆ ಬದಲಾವಣೆ ಆಗುವ ಕಾಲದಲ್ಲಿ ಯಾವ ಕೆಲಸಮಾಡಬೇಕಾದರೂ ಸ್ವಲ್ಪ ವಿಳಂಬವಾಗಬಹುದು ಆದರೆ ಕಾಂಗ್ರೆಸ್ ಸರ್ಕಾರ ಜನರ ಸುಖವನ್ನು ಮರೆತಿದ್ದಾರೆ ಎಂದು ಹೇಳುವುದು ಸತ್ಯಾಂಶಕ್ಕೆ ದೂರವಾದುದು. ಕಾಂಗ್ರೆಸ್ಸು ದೇಶದ ಮತ್ತು ಜನರ ಅಭಿವೃದ್ಧಿಗಾಗಿ ಸದಾ ದುಡಿಯುತ್ತಿದೆ. ಈಗ ಜನರಿಗೆ ಸುಖ ದೊರಕಿಸಬಹುದಾದ ಸಂಸ್ಥೆಯೆಂದರೆ ಸುವ್ಯವಸ್ಥಿತವಾದ ಕಾಂಗ್ರೆಸ್ ಒಂದೇ ದೇಶದಲ್ಲಿರುವುದು. ಆದ್ದರಿಂದ ಜನರು ಅದಕ್ಕೆ ಬೆಂಬಲಕೊಟ್ಟು ಅದನ್ನು ಬಲಪಡಿಸಬೇಕು-ಎಂದು ತಿಳಿಸಿದರು.

ಸೂಚನೆ

ಪುರಸಭಾ ಚುನಾವಣೆ ಪ್ರಯುಕ್ತ ಸಮಾಚಾರ ಕಾರ್ಯಾಲಯಕ್ಕೆ ಸೋಮವಾರ ರಜಾ ಕೊಡಲಾಗಿದೆ. ಆದಿನ ಪತ್ರಿಕೆ ಪ್ರಕಟವಾಗುವುದಿಲ್ಲ.

ಸಂಪಾದಕ.

ಮೈಸೂರು ಸಾಬು

ಮೈಸೂರು ಡಿ. ೫

ಬೆಂಗಳೂರಿಗೆ ಆಗಮಿಸಿರುವ ಚಲನಚಿತ್ರ ನಟ 'ಮೈಸೂರು ಸಾಬು' ಈದಿನ ತಮ್ಮ ಪತ್ನಿ ಪುತ್ರರೊಂದಿಗೆ ಮೈಸೂರಿಗೆ ಆಗಮಿಸಿ ಹೋಟೇಲ್ ಮೆಟ್ರೋಪೋಲ್‌ನಲ್ಲಿ ಬಿಡಾರ ಮಾಡುವರೆಂದು ತಿಳಿಯಬರುತ್ತದೆ.

ಕಾಂಗ್ರೆಸ್ ಕಾರ್ಯಕಾರಿ ಸಭೆ

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಈ ದಿನ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರ ಅಧ್ಯಕ್ಷತೆಯಲ್ಲಿ ಸೇರಿದೆ. ಇದರಲ್ಲಿ ಭಾಗವಹಿಸಲು ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಹೋಗಿದ್ದಾರೆ.

ನಿರುದ್ಯೋಗ ಪರಿಹಾರ ಕಾರ್ಯಗಳು

ಇದಕ್ಕಾಗಿ ಕೇಂದ್ರದಿಂದ ಹೆಚ್ಚು ಹಣ

ಪಾರ್ಲಿಮೆಂಟಿನಲ್ಲಿ ಸಚಿವರ ಹೇಳಿಕೆ

ದೇಶದಲ್ಲಿ ನಿರುದ್ಯೋಗವನ್ನು ಪರಿಹಾರ ಮಾಡಲು ಸರ್ಕಾರವು ಮೂರು ಕಾರ್ಯಕ್ರಮಗಳನ್ನು ಕೈಗೊಳ್ಳಲಿದೆ. ಅಭಿವೃದ್ಧಿ ಕಾರ್ಯಗಳನ್ನು ತ್ವರಿತಗೊಳಿಸುವುದು, ಅವಶ್ಯಕಬಿದ್ದಿದೆ ಪಂಚವಾರ್ಷಿಕ ಯೋಜನೆಯನ್ನು ಪುನರ್ಪರಿಶೀಲಿಸಿ ಬದಲಾಯಿಸುವುದು ಮತ್ತು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಇನ್ನೂ ಹೊಸ ಹೊಸ ಯೋಜನೆಗಳನ್ನು ಕೈಗೊಳ್ಳುವುದು ಇವು ಈ ಮೂರು ಹೊಸ ಕಾರ್ಯಕ್ರಮಗಳಾಗಿವೆ ಎಂದು ಆಯೋಜನಾ ಸಚಿವ ಶ್ರೀ ಗುಲ್ಜಾರಿಲಾಲ್ ನಂದಾರವರು ನಿನ್ನೆ ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಪಂಚವಾರ್ಷಿಕ ಯೋಜನಾಕಾರ್ಯಗಳಿಗೆ ಈಗಾಗಲೇ ಮಂಜೂರ್ಮಾಡಿರುವ ಹಣದ ಜೊತೆಗೆ ಇನ್ನೂ ಹಲವಾರು ಬಾಬುಗಳಿಗೆ ಹಣವನ್ನು ಒದಗಿಸಲಾಗುತ್ತದೆ. ಸ್ಥಳಾಂತರರಾದವರ ಪುನರ್ವಸತಿಗಾಗಿ ಇನ್ನು ೪೫ ಕೋಟಿ ರೂಪಾಯಿಗಳು, ರಸ್ತೆ ಕಾರ್ಯಗಳಗಾಗಿ ೧೦ ಕೋಟಿ, ಕೊರತೆ ಪ್ರದೇಶಗಳಲ್ಲಿ ನಡೆಯಬೇಕಾದ ಕಾರ್ಯಗಳು ಮತ್ತು ಅಲ್ಲಿಯ ಜನರಿಗೆ ಬಡ್ಡಿಯಿಲ್ಲದ ಸಾಲವನ್ನು ಕೊಡಲು ೪೦ ಕೋಟಿ, ಪ್ರಾಂತ್ಯಗಳಲ್ಲಿ ಆರ್ಥಿಕ ಮಂಡಲಿಗಳನ್ನು ರಚಿಸಲು ೫ ಕೋಟಿ, ವಿದ್ಯುಚ್ಛಕ್ತಿ ಕಾರ್ಯಗಳಿಗೆ ಎರಡೂವರೆ ಕೋಟಿ ರೂಪಾಯಿಗಳನ್ನು ಹೆಚ್ಚಾಗಿ ಈಗ ಒದಗಿಸಲಾಗಿದೆ ಇದರಿಂದ ದೇಶದಲ್ಲಿ ನಿರುದ್ಯೋಗವು ಕಡಮೆಯಾಗಲು ಅನುಕೂಲವಾಗುತ್ತದೆ ಎಂದು ಸಚಿವರು ತಿಳಿಸಿದ್ದಾರೆ.

ಭಾರತ ಪ್ರಧಾನಿ-ಪಾಕ್ ರಾಯಭಾರಿ ಭೇಟಿ

ಭಾರತದಲ್ಲಿರುವ ಪಾಕೀಸ್ತಾನ ರಾಯಭಾರಿ ಮಿ॥ ಘಸನಫರ್ ಅಲಿಖಾನರವರು ಪ್ರಧಾನಿ ನೆಹರೂರವರನ್ನು ಭೇಟಿಮಾಡಿ ಪಾಕ್ ಪ್ರಧಾನಿಯವರ ಒಂದು ಪತ್ರವನ್ನು ನೆಹರೂರವರಿಗೆ ಸಲ್ಲಿಸಿದರೆಂದು ತಿಳಿಯಬರುತ್ತದೆ. ಈ ಪತ್ರವು ಕಾಶ್ಮೀರ ವಿವಾದಗಳಿಗೆ ಸಂಬಂಧಪಟ್ಟಿರುವುದಾಗಿ ಹೇಳಲಾಗಿದೆ.

ರಾಜಾಜಿ ಉಳಿಸಲು ಉಪವಾಸ

ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರನ್ನು ಪದಚ್ಯುತರನ್ನಾಗಿ ಮಾಡಲು ಯತ್ನಿಸುತ್ತಿರುವ ಶಾಸನಸಭೆಯ ಕೆಲವು ಸದಸ್ಯರ ವರ್ತನೆಯನ್ನು ಪ್ರತಿಭಟಿಸಲು ರಾಮನಾಡಿನ ಶ್ರೀ ಬಾಲಸುಬ್ರಮಣ್ಯಂ ಎಂಬುವರು ಮೊನ್ನೆಯಿಂದ ಮದ್ರಾಸ್ ಅಸೆಂಬ್ಲಿ ಕಛೇರಿಯ ಮುಂದೆ ಆಮರಣಾಂತ ಉಪವಾಸವನ್ನು ಪ್ರಾರಂಭಿಸಿದ್ದಾರೆ.

ಭಾರತದಿಂದ ನಿಕ್ಸನ್‌ರ ನಿರ್ಗಮನ

ಭಾರತಕ್ಕೆ ಆಗಮಿಸಿದ್ದ ಅಮೆರಿಕಾ ಉಪಾಧ್ಯಕ್ಷ ಮಿ॥ ನಿಕ್ಸನ್‌ರವರು ನಿನ್ನೆಯ ದಿನ ಕಾಬೂಲಿಗೆ ಪ್ರಯಾಣ ಮಾಡಿದರು.

ಈ ಸಮಯದಲ್ಲಿ ಅವರು ಮಾತನಾಡುತ್ತಾ ತಾವು ಪ್ರಧಾನಿ ನೆಹರೂರೊಡನೆ ಅನೇಕ ಅಂತರರಾಷ್ಟ್ರೀಯ ವಿಷಯಗಳನ್ನು ಚರ್ಚಿಸಿದುದಾಗಿಯೂ ಎಲ್ಲಾ ವಿಷಯಗಳಲ್ಲಿಯೂ ಒಮ್ಮತಾಭಿಪ್ರಾಯಕ್ಕೆ ಬಾರದಿದ್ದರೂ ಅನೇಕ ವಿಷಯಗಳಲ್ಲಿ ಒಮ್ಮತವೇರ್ಪಡಿತೆಂದೂ ತಿಳಿಸಿದ್ದಾರೆ.

ಪಾಕೀಸ್ತಾನದಲ್ಲಿ ಅಮೆರಿಕಾ ಯುದ್ಧ ನೆಲೆಗಳ ಸ್ಥಾಪನೆ ವಿಷಯವಾಗಿ ಅವರು ಪ್ರಸ್ತಾಪಿಸಿ ಅಮೆರಿಕಾಕ್ಕೆ ಈ ರೀತಿಯಾದ ಅಭಿಪ್ರಾಯವೇನೂ ಇಲ್ಲವೆಂದೂ ಆದಾಗ್ಯೂ ಈ ವಿಷಯದಲ್ಲಿ ಭಾರತದ ಅಭಿಪ್ರಾಯವೇನೆಂಬುದು ತಮಗೆ ಗೊತ್ತಾಗಿರುವುದರಿಂದ ಅದನ್ನು ತಾವು ಅಧ್ಯಕ್ಷ ಐಸೆನ್ ಹೋವರ್‌ರವರಿಗೆ ವರದಿಮಾಡುವುದಾಗಿಯೂ ಹೇಳಿದರು.

ಕಾರ್ಮಿಕ ವಿಮಾ ಯೋಜನೆ

ಮುಂದಿನ ಸಾಲಿನ ಏಪ್ರಿಲ್‌ನಿಂದ ಕೊಯಮತ್ತೂರು ಮತ್ತು ಅದರ ಸುತ್ತಮುತ್ತಲಿನ ಪ್ರದೇಶಗಳಿಗೆ ಕಾರ್ಮಿಕ ವಿಮಾ ಯೋಜನೆಯನ್ನು ಅನ್ವಯಿಸಲಾಗುವುದು. ಇದರಿಂದ ೩೬೦೦೦ ಕಾರ್ಮಿಕರಿಗೆ ಪ್ರಯೋಜನ ದೊರೆಯುತ್ತದೆ. ಇದಕ್ಕಾಗಿ ೩.೬ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೪—೧೨—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೮	೨೦ —
ಎಳ್ಳು	೬೨—೪	೬೪—೮
ಹೊಂಗೆಬೀಜ	—	—
ಹರಳು	೩೪—೮	೩೭—೧೨
ಹುಚ್ಚೆಳ್ಳು	೪೧—೬	೪೨—೧೪
ಅವರೆ	—	—
ಹುರಳಿ	೩೦—೪	೩೪—೪
ಹೆಸರು	೩೧—೧೨	೩೮—೧೪
ಅಲಸಂದೆ	೩೧—೧೪	೪೬—೧೪
ಉದ್ದು	೩೫—೮	—
ಮೆಣಸಿನಕಾಯಿ	೧೫—೮	೨೯—೮
ಹುಣಸೇಹಣ್ಣು	೧೦ ೧೦	—
ಸೀಗೆಕಾಯಿ	—	—
ತೆಂಗಿನಕಾಯಿ	೧೮೧—	೨೮೪—

ರಾಜ್ಯಾಂಗ ತಿದ್ದುಪಡಿ ಪ್ರಶ್ನೆ ಪರಿಶೀಲನೆ

ಉನ್ನತಾಧಿಕಾರ ಸಮಿತಿ ನೇಮಕ ಮಾಡಲು

ಕೇಂದ್ರದ ನಿರ್ಧಾರ

ಭಾರತರಾಜ್ಯಾಂಗದಲ್ಲಿ ಹಲವಾರುತಿದ್ದುಪಡಿಗಳನ್ನು ಮಾಡಬೇಕಾಗಿರುವ ಅವಶ್ಯಕತೆಯು ಕಂಡುಬಂದಿರುವುದರಿಂದ, ಆಗಾಗ್ಗೆ ಅಲ್ಪಸ್ವಲ್ಪ ತಿದ್ದುಪಡಿಗಳನ್ನು ಮಾಡುವುದಕ್ಕೆ ಬದಲಾಗಿ ರಾಜ್ಯಾಂಗದ ಯಾವ ಯಾವ ವಿಧಿಗಳು ತಿದ್ದುಪಡಿಯಾಗಬೇಕೆಂಬುದನ್ನು ಆಮೂಲಾಗ್ರವಾಗಿ ಪರಿಶೀಲನೆ ಮಾಡಿ ಸರ್ಕಾರಕ್ಕೆ ಸಲಹೆ ನೀಡಲು ಉನ್ನತಾಧಿಕಾರವುಳ್ಳ ಮಂಡಲಿಯನ್ನು ರಚಿಸಲಾಗುವುದೆಂದು ಕೇಂದ್ರ ನ್ಯಾಯ ಮಂತ್ರಿ ಶ್ರೀ ಸಿ. ಸಿ. ಬಿಶ್ವಾಸ್‌ರವರು ಹೇಳಿದ್ದಾರೆ.

ಈಗಾಗಲೇ ಈ ವಿಷಯದಲ್ಲಿ ಪ್ರಾಂತ್ಯಗಳ ಮತ್ತು ಕೆಲವು ನಿಪುಣರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗುತ್ತಿದೆಯೆಂದೂ ಅವರು ತಿಳಿಸಿದ್ದಾರೆ.

ಬರ್ಮುಡಾ ಸಮ್ಮೇಳನ

ಬರ್ಮುಡಾದಲ್ಲಿ ತ್ರಿರಾಷ್ಟ್ರ ನಾಯಕರಾದ ಬ್ರಿಟನ್ ಪ್ರಧಾನಿ ಚರ್ಚಿಲ್, ಅಮೆರಿಕಾಧ್ಯಕ್ಷ ಐಸೆನ್‌ಹೋವರ್ ಮತ್ತು ಫ್ರೆಂಚ್ ಪ್ರಧಾನಿ ಲೆನಿಯಲ್‌ರ ನಡುವೆ ಮಾತುಕತೆಗಳು ಪ್ರಾರಂಭವಾಗಿದೆ.

ಇದಕ್ಕೆ ಮುನ್ನ ಈ ತ್ರಿರಾಷ್ಟ್ರಗಳ ವಿದೇಶಾಂಗ ಸಚಿವರು ಸಭೆ ಸೇರಿ ಸಮ್ಮೇಳನದಲ್ಲಿ ಚರ್ಚಿಸಬೇಕಾಗಿರುವ ವಿಷಯಗಳ ಪಟ್ಟಿಯನ್ನು ತಯಾರಿಸಿದರೆಂದು ಹೇಳಲಾಗಿದೆ.

ಮುಂದಿನ ವರ್ಷ ಜನವರಿಯಲ್ಲಿ ರಷ್ಯಾವನ್ನೊಳಗೊಂಡು ಚತುರಾಷ್ಟ್ರ ಸಮ್ಮೇಳನವೊಂದನ್ನು ನಡೆಸಬೇಕೆಂದು ಈ ವಿದೇಶಾಂಗ ಸಚಿವರು ತೀರ್ಮಾನಿಸಿರುವುದಾಗಿ ತಿಳಿಯಬರುತ್ತದೆ.

○ ಚೈನಾ ಜನತಾಸರ್ಕಾರಕ್ಕೆ ತನ್ನ ಮನ್ನಣೆಯನ್ನು ಕೊಟ್ಟು ಅದಕ್ಕೆ ತಕ್ಕ ಸ್ಥಾನವನ್ನು ಕೊಡದಿದ್ದರೆ ವಿಶ್ವದಲ್ಲಿ ಅಪಪ್ರಚಾರ ಯುದ್ಧವು ತಪ್ಪುವುದಿಲ್ಲವೆಂದು ರಷ್ಯಾದಲ್ಲಿ ಇರುವ ಭಾರತ ರಾಯಭಾರಿ ಶ್ರೀ ರಾಘವನ್‌ರವರು ಹೇಳಿದ್ದಾರೆ.

ರಣಜಿತ್
3—12—53 ರಿಂದ
ರೇಲ್ ಕ ಡಿಬ್ಬ
(ಹಿಂದಿ)
ಪಾತ್ರ:--ಮಧುಬಾಲ, ಶಮ್ಮಿ ಕಪೂರ್, ಸರ್ಜ್ಜ ಮತ್ತು ಓಂಪ್ರಕಾಶ್.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಕಾಂಗ್ರೆಸ್ಸಿಗೇ ಓಟುಕೊಡಿ



ಇದೇ 7—12—53ನೇ ಸೋಮವಾರ ನಡೆಯುವ ಮೈಸೂರು ಪೌರಸಭಾಚುನಾವಣೆಯಲ್ಲಿ ದಯವಿಟ್ಟು ಈಕೆಳಗೆಕಂಡ ಕಾಂಗ್ರೆಸ್ ಉಮೇದುವಾರರಿಗೆ ಮಹಾಜನರು ತಮ್ಮ ಓಟನ್ನು ಕೊಡಬೇಕಾಗಿ ಪ್ರಾರ್ಥನೆ.

ಕಾಂಗ್ರೆಸ್ ಚುನಾವಣಾ ಸಮಿತಿ

ಡಿವಿಜನ್ ನಂ:—

೧. ಜಿ. ಎಸ್. ರಾಮಕೃಷ್ಣಯ್ಯ
೨. ಕೆ. ಸಿದ್ದಯ್ಯ
೩. ಎ. ಎನ್. ಸೂರ್ಯನಾರಾಯಣರಾವ್
೪. ಡಿ. ಲಿಂಗಯ್ಯ
೫. ಟಿ. ಎನ್. ಸುಬ್ಬರಾವ್
೬. ಬಿ. ರಾಮಣ್ಣ
೭. ಪಾಲಹಳ್ಳಿ ಸೀತಾರಾಮಯ್ಯ
೮. ಜಿ. ನರಸಿಂಹಯ್ಯ
೯. ಎಂ. ಆರ್. ಸುದರ್ಶನ್
೧೦. ಕೆ. ಎಸ್. ಸೂರ್ಯನಾರಾಯಣರಾವ್
೧೧. ಎ. ಕೃಷ್ಣಮೂರ್ತಿರಾವ್
೧೨. ಕೆ. ಎಸ್. ಸತ್ಯನಾರಾಯಣರಾವ್
೧೩. ಎನ್. ಶ್ರೀನಿವಾಸನ್
೧೪. ಹೆಚ್. ಕೆಂಪೇಗೌಡ
೧೫. ಎಸ್. ವೆಂಕಟರಮಣಯ್ಯ
೧೬. ಟಿ. ನರಸಿಂಹ ಅಯ್ಯಂಗಾರ್
೧೭. ಕೆ. ಚಾಮುಂಡಯ್ಯ
೧೯. ಎಂ. ಸಿದ್ದಲಿಂಗಪ್ಪ
೨೦. ಯು. ಎಲ್. ರಾಮಚಂದ್ರರಾವ್
೨೧. ಬಿ. ಎಲ್. ರಾಮಸ್ವಾಮಿ ಶೆಟ್ಟರು
೨೨. ಟಿ. ಚಂದ್ರಶೇಖರ ಗೌಡರು
೨೩. ಬಿ. ಎನ್. ಕೆಂಗೇಗೌಡರು
೨೪. ಡಾ॥ ಪಿ. ಡಿ. ಕೃಷ್ಣಸ್ವಾಮಿ
೨೫. ಎಸ್. ಕೆ. ಲಕ್ಷ್ಮೀನರಸಿಂಹಯ್ಯ
೨೬. ಕೆ. ಪುಟ್ಟಸ್ವಾಮಿ
೨೭. ಜಿ. ಆರ್. ರಂಗಸ್ವಾಮಯ್ಯ
೩೪. ಜಿ. ಎ. ಕುಟಿನೋ
೩೫. ಎಸ್. ಶ್ರೀಕಂಠಯ್ಯ
೩೬. ಜೋಗಿಸಿದ್ದಯ್ಯ
೩೭. ಟಿ. ವೆಂಕಟರಮಣಯ್ಯ
೩೯. ಎಸ್. ಲಿಂಗಣ್ಣ

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೯೮

೮-೧೨-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪುರಸಭಾಚುನಾವಣೆ ನಿನ್ನೆ ಬಿರುಸಾಗಿ ನಡೆಯಿತು

ಮಂಡಿಮೊಹಲ್ಲಾದಲ್ಲಿ ಗಲಭೆ ಚದುರಿಸಲು ಪೋಲೀಸರು ಲಾಠಿ ಪ್ರಯೋಗ ಮಾಡಿದರು

ಕೇವಲ ೪೬೭೨೦ ಮಂದಿ ಓಟು ಮಾಡಿದರು

ಮೈಸೂರು, ಡಿ. ೮

ಮೈಸೂರು ಪುರಸಭೆಯ ಚುನಾವಣೆಯು ಪ್ರಪ್ರಥಮವಾಗಿ ವಯಸ್ಕರ ಮತದಾನ ಪದ್ಧತಿಯ ಮೇಲೆ ಬಿರುಸಿನಿಂದ ನಡೆಯಿತು. ಪುರಸಭೆಯಲ್ಲಿ ಒಟ್ಟು ೪೦ ಸ್ಥಾನಗಳಿದ್ದು ಅವುಗಳಲ್ಲಿ ೫ ಸ್ಥಾನಗಳು ಅವಿರೋಧವಾಗಿ ಬಂದಿರುವುದರಿಂದ, ಚುನಾವಣೆಯು ೩೫ ಸ್ಥಾನಗಳಿಗೆ ಮಾತ್ರ ನಡೆಯಿತು. ಅದಕ್ಕೆ ಒಟ್ಟು ೮೯ ಉಮೇದುವಾರರು ಸ್ಪರ್ಧಿಸಿದ್ದರು.

ಒಟ್ಟು ೮೭ ಸಾವಿರ ಓಟರುಗಳಿರುವ ನಗರವನ್ನು ೪೦ ಡಿವಿಜನ್‌ಗಳಾಗಿ ವಿಂಗಡಿಸಿ, ಸುಮಾರು ೩ ಸಾವಿರ ಓಟರುಗಳಿಗೆ ಒಂದು ಡಿವಿಜನ್ ಇದ್ದು ಸಾಮಾನ್ಯವಾಗಿ ಎರಡು ಪೋಲಿಂಗ್ ಬೂತುಗಳನ್ನು ಏರ್ಪಡಿಸಲಾಗಿತ್ತು.

ಬೆಳಿಗ್ಗೆ ೮ ರಿಂದ ೧೨ ಮತ್ತು ಮಧ್ಯಾಹ್ನ ೧-೩೦ ರಿಂದ ಸಂಜೆ ೫-೩೦ ಗಂಟೆ ವರೆಗೆ ಓಟಿಂಗ್ ನಡೆಯಿತು.

ಮಂಡಿ, ಲಷ್ಕರ್, ಹಳೇ ಅಗ್ರಹಾರ, ಚಾಮುಂಡಿಪುರಂಗಳಲ್ಲಿ ಓಟಿಂಗ್ ಬಹಳ ಬಿರುಸಾಗಿ ಜರುಗಿತು. ಮಿಕ್ಕ ಕಡೆಗಳಲ್ಲಿ ಅಷ್ಟು ಉತ್ಸಾಹ ಕಂಡು ಬರಲಿಲ್ಲ. ಮಂಡಿ ಮೊಹಲ್ಲಾದಲ್ಲಿ ಹೆಚ್ಚು ಮುಸ್ಲಿಂ ಘೋಷಾ ಹೆಂಗಸರು ಓಟು ಮಾಡುವುದು ಕಾಣಬಂತು. ಸಾಮಾನ್ಯವಾಗಿ ಎಲ್ಲಾ ಡಿವಿಜನ್‌ಗಳಲ್ಲೂ ಉಮೇದುವಾರರ ಕಡೆಯವರು ಮತದಾರರನ್ನ ಟ್ಯಾಕ್ಸಿ, ಟಾಂಗ ಮುಂತಾದ ವಾಹನಗಳಲ್ಲಿ ಕರೆದುಕೊಂಡು ಬರುತ್ತಿದ್ದುದು ಕಾಣಬಂತು.

ಕೇವಲ ೪೬,೭೨೦ ಮಂದಿ ಮತದಾರರು ತಮ್ಮ ಮತವನ್ನು ಚಲಾಯಿಸಿದರೆಂದು ಅಧಿಕೃತವಾಗಿ ತಿಳಿದುಬಂದಿದೆ.

ಚುನಾವಣೆಯ ವ್ಯವಸ್ಥೆಯನ್ನು ಸಮರ್ಪಕವಾಗಿ ಮಾಡಲಾಗಿತ್ತು. ಚುನಾವಣಾ ಅಧಿಕಾರಿಗಳಾದ ಶ್ರೀ ಎನ್. ಲಕ್ಷ್ಮಣರಾಯರು ಪ್ರತಿಯೊಂದು ಬೂತಿಗೂ ಹೋಗಿ ಅಲ್ಲಿ ಏರ್ಪಾಡುಗಳನ್ನು ಮಾಡಿದ್ದರು ಒಟ್ಟು ೭೭ ಬೂತುಗಳಿದ್ದವು.

ಜಿಲ್ಲಾಧಿಕಾರಿ ಶ್ರೀ ಎಂ.ಎಸ್. ಸ್ವಾಮಿ ನಾಥನ್, ಡಿ.ಎಸ್.ಪಿ. ಶ್ರೀ ಕೃಷ್ಣಮೂರ್ತಿರವರು ಎಲ್ಲಾ ಬಂದೋಬಸ್ತು ವ್ಯವಸ್ಥೆ ಮಾಡಿ, ಪ್ರತಿಯೊಂದು ಸ್ಥಳಕ್ಕೂ ಖುದ್ದಾಗಿ ಭೇಟಿ ಇತ್ತು, ಪರಿಶೀಲನೆ ನಡೆಸಿದರು.

ಚುನಾವಣೆಯು ಎಲ್ಲಾ ಕಡೆಯಲ್ಲೂ ಶಾಂತ ರೀತಿಯಿಂದ ನಡೆಯಿತು. ಆದರೆ

ನಿನ್ನೆ ಸಂಜೆ ೫ ಗಂಟೆ ಸಮಯದಲ್ಲಿ ಮಂಡಿ ಮೊಹಲ್ಲಾ ಇತ್ತೇಹಾದ್ ಮುಸ್ಲಿಂ ರೀಡಿಂಗ್ ರೂಂನಲ್ಲಿನ ೩೧ನೇ ಡಿವಿಜನ್ ಬೂತಿನ ಹತ್ತಿರ ಸ್ವಲ್ಪ ಗಲಾಟೆ ನಡೆಯಿತು. ಬೂತಿನ ಒಳಗೆ ಉಮೇದುವಾರರ ಪರವಾಗಿ ಪ್ರಚಾರ ನಡೆಯುತ್ತಿದೆಯೆಂದು ಎರಡು ಪಕ್ಷದ ಕಡೆಯ ಸಾವಿರಾರು ಜನರು ಬೂತಿನ ಹತ್ತಿರ ಸೇರಿ, ಬಿರುಸು ಮಾತು ಪ್ರಾರಂಭವಾಗಿ ಸ್ವಲ್ಪ ಹೊಡೆದಾಟ ಪ್ರಾರಂಭವಾಯಿತು. ಕೂಡಲೇ ಪೊಲೀಸ್ ಪಡೆಯವರು ಬಂದು ಗುಂಪನ್ನು ಲಾಠಿ ಪ್ರಯೋಗ ಮಾಡಿ ಚದುರಿಸಿದರು. ಆದನಂತರ ಪರಿಸ್ಥಿತಿಯು ಶಾಂತವಾಯಿತು. ಇದಲ್ಲದೆ ಮತ್ತಾವ ಘಟನೆಯೂ ನಡೆಯಲಿಲ್ಲ.

ಗೀತಾಜಯಂತಿ

ಸಾಂಸ್ಕೃತಿ ಪ್ರಸಾರದಿನ

ಬೆಂಗಳೂರು ೧೬

ಇದೇ ತಿಂಗಳು ೧೬ನೇ ತಾರೀಖು ಗೀತಾಜಯಂತಿಯದಿನ ಸಂಸ್ಕೃತಿ ಪ್ರಸಾರ ದಿನವನ್ನು ಆಚರಿಸಬೇಕೆಂದು ಮುಖ್ಯ ಮಂತ್ರಿಗಳು ಮನವಿ ಮಾಡಿದ್ದಾರೆ.

ಆದಿನ ಪ್ರಾಂತ್ಯಾದ್ಯಂತ ರಾಮಾಯಣ, ಮಹಾಭಾರತ, ಹರಿಶ್ಚಂದ್ರಕಾವ್ಯ, ನಳಚರಿತ್ರೆ, ಜೈಮಿನಿಭಾರತ ಮುಂತಾದ ಕಾವ್ಯಗಳ ಗಮಕವಚನ, ಭಾರತ ಸಾಂಸ್ಕೃತಿಯ ವಿಚಾರವಾಗಿ ಪ್ರಸಿದ್ಧ ವ್ಯಕ್ತಿಗಳಿಂದ ಭಾಷಣ, ಹರಿಕಥೆ ಮುಂತಾದುವನ್ನು ನಡೆಸಬೇಕೆಂದು ಕೋರಲಾಗಿದೆ.

ಸಂಸ್ಥಾನದಲ್ಲಿ ವಿದ್ಯಾ ಸಂಸ್ಥೆಗಳಲ್ಲೂ, ಕನ್ನಡಸಾಹಿತ್ಯಪರಿಷತ್ತು, ಕರ್ನಾಟಕ ಸಂಘಗಳು, ಭಾರತ ಸೇವಾದಳ, ಸಂಸ್ಕೃತ ಸಂಘಗಳು, ವಯಸ್ಕರ ಶಿಕ್ಷಣಸಮಿತಿ ಮತ್ತು ಮಹಿಳಾ ಸಂಸ್ಥೆಗಳು ಈ ದಿನವನ್ನು ಆಚರಿಸಿ ಈ ಕಾರ್ಯದಲ್ಲಿ ನೆರವು ನೀಡಬೇಕೆಂದು ಮನವಿ ಮಾಡಲಾಗಿದೆ.

ಪುರಸಭಾ ಚುನಾವಣಾ ಫಲಿತಾಂಶ

ಮೈಸೂರು ೮

ಪುರಸಭೆಗೆ ನಿನ್ನೆಯದಿನ ೩೫ ಸ್ಥಾನಗಳಿಗೆ ನಡೆದ ಚುನಾವಣೆಯ ಎಣಿಕೆಯು ಈದಿನ ಪುರಸಭಾ ಕಮಿಷನರ್ ಮತ್ತು ರಿಟರ್ನಿಂಗ್ ಅಧಿಕಾರಿಗಳಾದ ಶ್ರೀ ಎನ್. ಲಕ್ಷ್ಮಣರಾಯರವರ ನೇತೃತ್ವದಲ್ಲಿ ಪುರಭವನದಲ್ಲಿ ನಡೆಯುತ್ತಿದೆ.

ಇಲ್ಲಿಯ ವರೆಗೆ ಬಂದ ಫಲಿತಾಂಶ ಈರೀತಿಯಿದೆ: —

೧ ನೇ ಡಿವಿಜನ್
ಶ್ರೀ ಗಳಾದ
ಜಿ. ಎಸ್. ರಾಮಕೃಷ್ಣಯ್ಯ
ಕಾಂಗ್ರೆಸ್ ೧೧೦೪
ಚಿಕ್ಕಲಿಂಗಯ್ಯ ಸ್ವ. ೩೧೦.

೨ ನೇ ಡಿವಿಜನ್
ಕೆ. ಸಿದ್ದಯ್ಯ ಕಾಂ. ೧೩೩೪
ಕೆ. ಬಿ. ಶ್ರೀನಿವಾಸ್ ಸ್ವ. ೧೩೪
[ಠೇವಣಿ ಹೋಯಿತು]

೩ ನೇ ಡಿವಿಜನ್
ಶ್ರೀಕಂಠಶರ್ಮ ಸ್ವ. ೮೯೯
ನಂಜಪ್ಪ ಪ್ರ-ಸೋ. ೩೮೨
ಎ. ಎನ್. ಸೂರ್ಯನಾರಾಯಣರಾವ್ ಕಾಂ. ೧೪೬ (ಠೇವಣಿ ಹೋಯಿತು)

೪ ನೇ ಡಿವಿಜನ್
ಡಿ ಲಿಂಗಯ್ಯ ಕಾಂ. ೧೧೪೦
ವಿ. ಎನ್. ದಾಸಪ್ಪ ಸ್ವ. ೩೪೯

೫ ನೇ ಡಿವಿಜನ್
ಎಂ. ಸಿ. ಮಹದೇವಸ್ವಾಮಿ ಸ್ವತಂತ್ರ ೬೬೧
ಟಿ. ಎನ್. ಸುಬ್ಬರಾವ್ ಕಾ. ೪೬೫
ಗೋಪಾಲಶಾಸ್ತ್ರಿ ಸ್ವ. ೩೫೪

೬ ನೇ ಡಿವಿಜನ್
ಬಿ. ಕೆ. ರಾಮಕೃಷ್ಣಯ್ಯ ಪ್ರ ಸೋ ೩೮೫
ಬೆಳ್ಳಿಯಪ್ಪ ಕ. ೩೧೨
ಬಿ. ರಾವಣ್ಣ ಕಾಂ.

೭ ನೇ ಡಿವಿಜನ್
ಕೆ. ಕರಿಯಣ್ಣ ಪ್ರ.ಸೋ. ೬೭೦
ಪಿ. ಸೀತಾರಾಮಯ್ಯ ಕಾಂ. ೫೮೪
ಮಹಮದ್ ಷರೀಫ್ ಸ್ವ. ೪೭೦

೮ ನೇ ಡಿವಿಜನ್
ಸೇತುರಾಮರ್ ಸ್ವ. ೭೦೮
ಜಿ. ನರಸಿಂಹಯ್ಯ ಕಾಂ. ೪೯೧
ಜಿ.ಆರ್. ಜೋಷ್ಯರ್ ಪ್ರ.ಸೋ. ೨೬೫

೯ ನೇ ಡಿವಿಜನ್
ಎಂ. ಬುರ್ಡೆಕ್ಯಾಪ್ಟನ್ ಸ್ವ. ೭೫೨
ಎಂ.ಆರ್. ಸುದರ್ಶನ ಕಾಂ. ೭೧೪
ಬಿ.ಆರ್. ನಾಯ್ಡು ಪ್ರ.ಸೋ ೨೩೧

೧೦ ನೇ ಡಿವಿಜನ್
ಬಿ.ಜಿ. ದಾಸ್ ಪ್ರ.ಸೋ. ೮೫೨
ಕೆ. ಎಸ್. ಸೂರ್ಯನಾರಾಯಣರಾವ್ ಕಾ. ೫೭೨

೧೧ ನೇ ಡಿವಿಜನ್
ಎ. ಕೃಷ್ಣಮೂರ್ತಿರಾವ್ ಕಾಂ. ೯೬೨
ವೇದಾಂತ ಹೆಮ್ಮಿಗೆ ಪ್ರ ಸೋ. ೬೭೫

೧೨ ನೇ ಡಿವಿಜನ್
ಸಿ. ನಾರಾಯಣರಾವ್ ಪ್ರ.ಸೋ. ೫೪೧
ಕೆ.ಎಸ್. ಸತ್ಯನಾರಾಯಣರಾವ್ ಕಾಂ. ೪೭೫

೧೩ ನೇ ಡಿವಿಜನ್
ಎನ್. ಶ್ರೀನಿವಾಸನ್ ಕಾಂ ೭೬೫
ನರಸಿಂಹಯ್ಯ ಸ್ವ. ೨೪೧

೧೪ ನೇ ಡಿವಿಜನ್
ಹೆಚ್. ಕೆಂಪೇಗೌಡ ಕಾಂ. ೭೫೬
ಎನ್ ಜಿ. ಕೆಂಪೇಗೌಡ ಸ್ವ. ೩೩೨

೧೫ ನೇ ಡಿವಿಜನ್
ಎಸ್. ವೆಂಕಟರಮಣಯ್ಯ ಕಾಂ. ೭೯೧
ಬೈರಪ್ಪ ಸ್ವ ೬೪೧

೧೬ ನೇ ಡಿವಿಜನ್
ಟಿ. ನರಸಿಂಹಯ್ಯಂಗಾರ್ ಕಾ. ೩೪೬
ಎ. ವೆಂಕಟೇಶಯ್ಯ ಪ್ರ ಸೋ. ೩೨೭
ಲಕ್ಷ್ಮಣ ಮೊದಲಿಯಾರ್ ಸ್ವ. ೧೬೬

೧೭ ನೇ ಡಿವಿಜನ್
ದೊಡ್ಡತಮ್ಮೇಗೌಡ ಪ್ರ.ಸೋ. ೮೩೩
ಚಾಮುಂಡಯ್ಯ ಕಾಂ. ೧೯೭

೧೯ ನೇ ಡಿವಿಜನ್
ಎಂ. ಎನ್. ತಿಮ್ಮಯ್ಯ [ಪ್ರ. ಸೋ.
ಸಿದ್ದಲಿಂಗಯ್ಯ ಕಾಂ.
ತಾಂಡವಮೂರ್ತಿ ಸ್ವ.
(ಎಣಿಕೆ ಮುಂದುವರಿಯುತ್ತಿದೆ)

ಸಂಸ್ಥಾನದಲ್ಲೆಲ್ಲಾ ಎನ್. ಸಿ. ಸಿ. ಶಿಕ್ಷಣ

ಬೆಂಗಳೂರು ೮

ಸಂಸ್ಥಾನದ ಎಲ್ಲ ಕಾಲೇಜ್ ಮತ್ತು ಹೈಸ್ಕೂಲುಗಳಲ್ಲಿ ನ್ಯಾಷನಲ್ ಕೇಡೆಟ್ ಕೋರ್ ಶಿಕ್ಷಣ ವ್ಯವಸ್ಥೆಯನ್ನು ಮುಂದಿನ ವರ್ಷದಿಂದ ಜಾರಿಗೆ ತರಲು ಸರ್ಕಾರದವರು ಆಲೋಚಿಸುತ್ತಿದ್ದಾರೆಂದು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಮೊನ್ನೆದಿನ ಎನ್. ಸಿ. ಸಿ. ದಳದ ದಿನಾಚರಣೆಯ ಸಂಬಂಧದಲ್ಲಿ ತಿಳಿಸಿದ್ದಾರೆ.

ವಿದೇಶಗಳಲ್ಲಿ ಬಟ್ಟೆ ವ್ಯಾಪಾರ

ಭಾರತದಲ್ಲಿ ತಯಾರಾಗುವ ಬಟ್ಟೆಯನ್ನು ವಿದೇಶಗಳಲ್ಲಿ ವ್ಯಾಪಾರಮಾಡಲು ಭಾರತ ಸರ್ಕಾರವು ವ್ಯಾಪಾರ ಕೇಂದ್ರಗಳನ್ನು ಇತರ ರಾಷ್ಟ್ರಗಳ ಕೆಲವು ದೇಶಗಳಲ್ಲಿ ತೆರೆಯುವುದಲ್ಲದೆ ಈ ವ್ಯಾಪಾರವನ್ನು ಅಲ್ಲಿ ಹೆಚ್ಚಿಸಲು ಕೆಲವು ಅಧಿಕಾರಿಗಳನ್ನು ನೇಮಿಸುವುದೆಂದು, ಕೈಗಾರಿಕಾ ಸಚಿವರು ತಿಳಿಸಿದ್ದಾರೆ.

● ಪೋರ್ಚುಗೀಸ್ ಗೋವಾದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಿದೇಶೀ ಟ್ಯಾಂಕು ಮುಂತಾದ ಸಾಮಗ್ರಿಗಳ ಜಮಾವಣೆಯಾಗುತ್ತಿರುವುದಾಗಿ ಗೊತ್ತಾಗಿದೆ.

ಪಾಕೀಸ್ತಾನಕ್ಕೆ ಅಮೆರಿಕಾದ ಸೈನ್ಯ ಬೆಂಬಲ

ಕರಾಚಿಯಲ್ಲಿ ನಿಕ್ಸನ್‌ರ ಹೇಳಿಕೆ

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವೆ ಯಾವರೀತಿಯಾದ ಸೈನ್ಯ ಒಪ್ಪಂದ ಅಥವಾ ಪಾಕೀಸ್ತಾನದಲ್ಲಿ ಅಮೆರಿಕಾದ ಸೈನ್ಯ ನೆಲೆಗಳನ್ನು ಏರ್ಪಡಿಸುವ ವಿಷಯದಲ್ಲಿ ಅಮೆರಿಕಾ ಆಸಕ್ತಿಯನ್ನು ಹೊಂದಿಲ್ಲ. ಆದರೆ ಪಾಕೀಸ್ತಾನದಮೇಲೆ ಇತರ ಯಾವ ದೇಶಗಳಾಗಲೀ ವಿನಾಶಕಾರಕ ಕೃತ್ಯಗಳನ್ನೆಸಗಲು ಪ್ರಯತ್ನಿಸಿದರೆ ಅದನ್ನು ಎದುರಿಸಲು ಅಮೆರಿಕಾವು ಪಾಕೀಸ್ತಾನಕ್ಕೆ ಬೆಂಬಲವಾಗಿರುತ್ತದೆ—ಎಂದು ಪಾಕೀಸ್ತಾನದಲ್ಲಿ ಪ್ರವಾಸಮಾಡುತ್ತಿರುವ ಅಮೆರಿಕಾದ ಉಪಾಧ್ಯಕ್ಷ ಮಿ॥ ನಿಕ್ಸನ್‌ರವರು ಕರಾಚಿಯಲ್ಲಿ ಹೇಳಿರುವುದಾಗಿ ಗೊತ್ತಾಗಿದೆ.

೧೦೦೦, ೫೦೦೦, ೧೦೦೦೦ ರೂ.ಗಳ ನೋಟುಗಳು

ಭಾರತ ಸರ್ಕಾರವು ೧೦೦೦, ೫೦೦೦, ೧೦೦೦೦ ರೂಪಾಯಿಗಳ ನೋಟುಗಳನ್ನು ಹೊಸದಾಗಿ ಚಲಾವಣೆಗೆ ತರಲು ಒಂದು ಮಸೂದೆಯನ್ನು ತಯಾರಿಸಿ ಪಾರ್ಲಿಮೆಂಟಿನಲ್ಲಿ ಮಂಡಿಸಿದೆ. ಈ ಹೊಸ ನೋಟುಗಳನ್ನು ಜಾರಿಗೆ ತರಲು ತಕ್ಕ ಸಿದ್ಧತೆಗಳೆಲ್ಲವೂ ನಡೆದಿವೆಯೆಂದು ಈ ಮಸೂದೆ ಪ್ರಕಾರ ರಿಸರ್ವ್ ಬ್ಯಾಂಕಿಗೆ ಅಧಿಕಾರವನ್ನು ಕೊಟ್ಟಮೇಲೆ ಚಲಾವಣೆಗೆ ತರಲಾಗುವುದೆಂದೂ ತಿಳಿಸಲಾಗಿದೆ. ೧೯೪೬ರಲ್ಲಿ ರದ್ದಾದ ನೋಟುಗಳನ್ನು ಈಗ ಚಲಾವಣೆಗೆ ತರಲಾಗುವುದಿಲ್ಲ ಹೊಸ ನೋಟುಗಳನ್ನು ತಯಾರಿಸಲಾಗುತ್ತದೆ.

ಪಾಕೀಸ್ತಾನವನ್ನು ಅಮೆರಿಕ ನುಂಗುವ ಯತ್ನ

ಪಾಕೀಸ್ತಾನದಲ್ಲಿ ಅಮೆರಿಕಾವು ತನ್ನ ಸೈನ್ಯ ನೆಲೆಗಳನ್ನು ಸ್ಥಾಪಿಸುವುದು ಮತ್ತು ಪಾಕ್‌ಗೆ ಅಮೆರಿಕಾವು ಸೈನ್ಯ ನೆರವು ನೀಡುವುದರ ಸುದ್ದಿಯು ನಿಜವಾದಲ್ಲಿ ಪಾಕೀಸ್ತಾನವು ಸಂಪೂರ್ಣವಾಗಿ ಅಮೆರಿಕಾಕ್ಕೆ ಅಧೀನ ರಾಜ್ಯವಾಗುವುದೇ ಅಲ್ಲದೆ ಪಾಕೀಸ್ತಾನವನ್ನು ಅಮೆರಿಕಾವು ಸಂಪೂರ್ಣವಾಗಿ ನುಂಗುವುದಾಗಿ ಚೀನಾದ ಅಧಿಕಾರ ವೃತ್ತಗಳಲ್ಲಿ ಹೇಳಲಾಗುತ್ತಿದೆ.

ಚೈನಾ ಸಾಂಸ್ಕೃತಿಕ ನಿಯೋಗ

೪ ಸದಸ್ಯರನ್ನೊಳಗೊಂಡ ಚೈನಾ ಸಾಂಸ್ಕೃತಿಕ ನಿಯೋಗವೊಂದು ಭಾರತಕ್ಕೆ ಆಗಮಿಸಿದೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪುರಸಭೆಯ ವಿಶೇಷ ಅಧಿವೇಶನ

ಮೈಸೂರು ೮

ಪುರಸಭೆಯಲ್ಲಿರುವ ಗುಡಿಸುವವರು ಮತ್ತು ಚಾಡನಾಲಿಗಳಿಗೆ ಪ್ರಾವಿಡೆಂಟ್ ಫಂಡ್‌ನ್ನು ಐಚ್ಛಿಕವನ್ನಾಗಿ ಮಾಡುವುದನ್ನು ಪರಿಶೀಲಿಸಲು ಮತ್ತು ನೀರಿನ ತೆರಿಗೆ ಸಂಬಂಧದಲ್ಲಿ ಶ್ರೀ ತಗಡೂರು ರಾಮಚಂದ್ರರಾಯರು ಮತ್ತು ಇತರರು ಹೈಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿರುವ ವಿಷಯದಲ್ಲಿ ಪ್ರತಿ ಪ್ರಮಾಣ ಪತ್ರವನ್ನು ಒಪ್ಪಿಸಲು ಒಬ್ಬ ಅಧಿಕಾರಿಯನ್ನು ಕಳುಹಿಸಬೇಕೆಂದು ಸರ್ಕಾರದ ನ್ಯಾಯಾಂಗ ಕಾರ್ಯದರ್ಶಿಯವರು ಬರೆದಿರುವ ಪತ್ರವನ್ನು ಪರಿಶೀಲಿಸಲು ಇದೇ ೧೧ ನೇ ತಾರೀಖು ಪುರಸಭೆಯ ವಿಶೇಷ ಅಧಿವೇಶನ ನಡೆಯುತ್ತದೆ.

ಶಾಸನಸಭೆಯಲ್ಲಿ ಕೆ.ಎಂ.ಪಿ ಪಕ್ಷದ ವಿಸರ್ಜನೆ

ಆಂಧ್ರ ಶಾಸನಸಭೆಯಲ್ಲಿ ೬ ಜನ ಸದಸ್ಯರಿದ್ದ ಕೆ. ಎಂ. ಪಿ. ಪಕ್ಷವನ್ನು ವಿಸರ್ಜಿಸುವುದಾಗಿ ಆ ಪಕ್ಷದ ನಾಯಕ ಶ್ರೀ ವೈ. ಆದಿನಾರಾಯಣ ರೆಡ್ಡಿಯವರು ತಿಳಿಸಿರುವರು. ಶ್ರೀವೆಂಕಟರಾಮಯ್ಯನವರು ಸಭೆಯ ಅಧ್ಯಕ್ಷರಾಗಿ ಚುನಾಯಿತರಾಗಿರುವುದರಿಂದ ಅವರು ಪಕ್ಷವನ್ನು ತ್ಯಜಿಸಿದ್ದರಿಂದ ಉಳಿದವರೂ ಅದೇರೀತಿ ಮಾಡಿ ಸ್ವತಂತ್ರರುಳಿಯುವರಾಗಿರುವರು. ಆದರೆ ಶ್ರೀ ಪ್ರಾಗದ ಕೋಟಯ್ಯ ಎಂಬುವರು ಇದನ್ನು ವಿರೋಧಿಸಿರುವುದರಿಂದ ಅವರೊಬ್ಬರೇ ಈ ಪಕ್ಷದ ಸದಸ್ಯರಾಗಿ ಉಳಿಯುವರು.

ರೈಲ್ವೆಯಲ್ಲಿ ನೇಮಕ ಬಗ್ಗೆ ಹೊಸ ವ್ಯವಸ್ಥೆ

ಭಾರತ ರೈಲ್ವೆಯಲ್ಲಿ ಮುಖ್ಯ ಹುದ್ದೆಗಳಿಗೆ ಯೋಗ್ಯತೆಯನ್ನು ಪರಿಶೀಲಿಸಿ ನೇಮಕ ಮಾಡಲಾಗುತ್ತದೆಯೆಂದು ಶಿಫಾರಸಲಾಗಿದೆ. ಆದಾಗ್ಯೂ ಕೆಲವು ಉನ್ನತ ಹುದ್ದೆಗಳಿಗೆ ಸೀನಿಯಾರಿಟಿ ಪ್ರಕಾರ ಈಗ ಹುದ್ದೆಗಳಲ್ಲಿರುವವರು ಬರುವುದಕ್ಕೆ ಅವಕಾಶವನ್ನು ಕಲ್ಪಿಸಲಾಗಿದೆ.

ಈ ಹೊಸ ವಿಧಾನ ಪ್ರಕಾರ ಸಾಮಾನ್ಯವಾಗಿ ೨೦೦-೩೦೦ ರೂ. ಮತ್ತು ಅದಕ್ಕೆ ಮೇಲ್ಪಟ್ಟ ಸಂಬಳವಿರುವ ಹುದ್ದೆಗಳನ್ನು ಯೋಗ್ಯತೆಮೇಲೆ ನೇಮಕವಾಗುವ ಹುದ್ದೆಗಳೆಂತ ಪರಿಗಣಿಸಲಾಗುತ್ತದೆ. ಸ್ವಂತ ಜವಾಬ್ದಾರಿ ಹೆಚ್ಚಾಗಿರುವ ಕೆಲವು ೧೫೦-೨೫೦ ರೂಗಳು ಬರುವ ಹುದ್ದೆಗಳು ಅದೇ ಗುಂಪಿಗೆ ಸೇರುತ್ತದೆ.

ಗ್ರಾಮಾಂತರಗಳಲ್ಲಿ ಹೆಚ್ಚಿನ ಆರ್ಥಿಕ ಸೌಲಭ್ಯ

ರಿಸರ್ವ್‌ಬ್ಯಾಂಕ್ ನೀಡಲು ಹೊಸ ಮಸೂದೆ

ತಗಡೂರರ ರಿಟ್ ಅರ್ಜಿ ವಜಾ

ಮೈಸೂರು ೮

ಕಳೆದ ದಸರಾ ಸಮಯದಲ್ಲಿ ಅರಮನೆ ಮುಂದೆ ನಡೆಯಬೇಕಾಗಿದ್ದ ಕುಸ್ತಿ ಪಂದ್ಯಗಳನ್ನು ನಿಲ್ಲಿಸಿ ಹರಿಜನರಿಗೆ ಭೇದಭಾವ ತೋರಿಸಿದುದು ರಾಜ್ಯಾಂಗಕ್ಕೆ ವಿರೋಧವಾದುದೆಂದೂ, ಆ ರೀತಿ ಮಾಡಿದುದು ಸರಿಯಾದುದಲ್ಲವೆಂದೂ ಘೋಷಿಸಬೇಕೆಂದು ಶ್ರೀ ತಗಡೂರು ರಾಮಚಂದ್ರರಾಯರು ಮೈಸೂರು ಹೈಕೋರ್ಟಿನಲ್ಲಿ ಹೂಡಿದ್ದ ರಿಟ್ ಅರ್ಜಿಯನ್ನು ನ್ಯಾಯಾಧೀಶರುಗಳು ತಳ್ಳಿಹಾಕಿದ್ದಾರೆ.

ಹರಿಜನರ ಕುಸ್ತಿಗಳನ್ನು ರದ್ದುಮಾಡಿದ್ದಕ್ಕೆ ರಾಜ್ಯಾಂಗ ನ್ಯಾಯಬದ್ಧತೆ ಇಲ್ಲವೆಂದೂ, ಕೆಲವರು ಆಕ್ಷೇಪಣೆ ಮತ್ತು ಅಸಮಾಧಾನ ಪಟ್ಟರೆಂಬ ಕಾರಣದಿಂದ ಹರಿಜನರನ್ನು ಕುಸ್ತಿಯಲ್ಲಿ ಭಾಗವಹಿಸದಂತೆ ಮಾಡಿದುದು ಸರಿಯಲ್ಲವೆಂದೂ, ರಾಜ್ಯಾಂಗದ ೧೭ನೇ ಕಲಮಿನ ಪ್ರಕಾರ ಅಸ್ಪೃಶ್ಯತೆಯನ್ನು ಆಚರಣೆಗೆ ತರುವುದು ಶಿಕ್ಷಾರ್ಹವಾಗುವುದೆಂದೂ, ಶ್ರೀ ತಗಡೂರರವರೇ ಸ್ವತಃ ಕೋರ್ಟಿನಲ್ಲಿ ವಾದಿಸಿದರು.

ಯಾರಿಗೆ ಆಜ್ಞೆಯಿಂದ ತೊಂದರೆಯಾಗಿದೆಯೋ ಅವರು ಮಾತ್ರ ಅರ್ಜಿ ಹಾಕಿಕೊಂಡು ಪರಿಹಾರ ಕೇಳಬೇಕು ಬೇರೆಯವರು ಅರ್ಜಿಹಾಕಿ ಪರಿಹಾರ ಪಡೆಯಲು ಅವಕಾಶವಿಲ್ಲ. ಈಗ ಅರ್ಜಿ ಸಲ್ಲಿಸಿರುವವರು ತೊಂದರೆಗೊಳಗಾದವರಲ್ಲ—ಎಂದು ತಿಳಿಸಿ ನ್ಯಾಯಾಧೀಶರುಗಳು ಅರ್ಜಿಯನ್ನು ತಿರಸ್ಕರಿಸಿದರು.

ಯುವಕನಿಗೆ ಮರಣ ದಂಡನೆ

ಅಮೃತಸರದ ೨೨ ವರ್ಷದ ಕೃಷ್ಣಗೋಪಾಲ್ ಎಂಬ ಯುವಕನು ತಾನು ವಿವಾಹವಾಗಿದ್ದರೂ ಪಕ್ಕದ ಮನೆಯ ಯುವತಿಯೊಬ್ಬಳನ್ನು ಮದುವೆಯಾಗಲು ಯತ್ನಿಸಿ, ಅದಕ್ಕೆ ಆಕೆಯ ತಂದೆಯು ಒಪ್ಪದಿರಲು, ಅವರ ಮನೆಗೆ ಬೆಂಕಿ ಹತ್ತಿಸಿ, ಹುಡುಗಿಯ ತಂದೆ ತಾಯಿಗಳ ಕೊಲೆಗೆ ಕಾರಣನಾದನೆಂಬ ಆಪಾದನೆಯ ಮೇಲೆ ಆತನಿಗೆ ಮರಣದಂಡನೆಯನ್ನು ವಿಧಿಸಲಾಗಿದೆ.

ಮಕ್ಕಳಿಗಾಗಿ ಚಲನಚಿತ್ರ

ಮಕ್ಕಳ ಉಪಯೋಗಕ್ಕಾಗಿಯೇ ಭಾರತಸರ್ಕಾರವು ಎರಡು ಚಲನಚಿತ್ರಗಳನ್ನು ತಯಾರಿಸುತ್ತಲಿರುವುದಾಗಿ ಕೇಂದ್ರದ ಪ್ರಸಾರ ಶಾಖಾಸಚಿವರು ತಿಳಿಸುತ್ತಾರೆ.

ಗ್ರಾಮಾಂತರ ಪ್ರದೇಶಗಳಲ್ಲಿ ಜನರಿಗೆ ಸಾಲ ಮುಂತಾದ ರೀತಿಯಲ್ಲಿ ಹೆಚ್ಚಿನ ಸೌಲಭ್ಯಗಳನ್ನು ರಿಸರ್ವ್‌ಬ್ಯಾಂಕು ಏರ್ಪಡಿಸಲು ಭಾರತ ಸರ್ಕಾರವು ಅಧಿಕೃತ ಮಸೂದೆಯೊಂದನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿದೆ ಇದು ನಿನ್ನೆಯದಿನ ಚರ್ಚೆಗೆ ಬಂದಿತು.

ಬೆಲ್ಲ, ಹಾಲು, ಬೆಣ್ಣೆ ಮುಂತಾದುವುಗಳ ಉತ್ಪನ್ನ, ಭತ್ತ ಕುಟ್ಟುವುದು, ಅಂಳೆ ಬಿಡಿಸುವುದು, ಅಲ್ಪಪ್ರಮಾಣದಲ್ಲಿ ಗೃಹಕೈಗಾರಿಕೆಗಳನ್ನು ನಡೆಸುವುದು ಇವುಗಳಿಗೆ ರೈತರಿಗೆ ಆರ್ಥಿಕ ನೆರವು ನೀಡಲು ಈ ಮಸೂದೆಯು ರಿಸರ್ವ್‌ಬ್ಯಾಂಕಿಗೆ ಅಧಿಕಾರವನ್ನು ಕೊಡುತ್ತದೆ.

Wanted

Salesmen for canvassing our reputed products of Sri Krishna Camphor and Aluminium Works, Bangalore. Apply to City Supplies, Mothikhana buildings, Santhepet, Mysore.

ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಣೆ

ಕೆಳಗೆ ನಮೂದಿಸಿರುವ ೭೯ನೇ ನಿಬಂಧನೆ ಪ್ರಕಾರ (1947-48 ರ ಕ್ಯಾಲೆಂಡರ್ ವ್ಯಾಲ್ಯೂಂ 1 ಪುಟ 31) ಈ ವಿಶ್ವವಿದ್ಯಾನಿಲಯದ ರಿಜಿಸ್ಟರ್ಡ್ ಪದವೀಧರರು (ಈಗ ರಿಜಿಸ್ಟರ್ಡ್ ಪದವೀಧರರಾಗಿ ಎನ್‌ರೋಲ್ ಆಗಿರುವವರು) ಪುನರ್ವಿಮರ್ಶೆ ಮತ್ತು ತಿದ್ದುಪಡಿ ಬಗ್ಗೆ ಕೆಳಗೆ ಕಂಡ ನಮೂನೆಯಲ್ಲಿ 1953ನೇ ಡಿಸೆಂಬರ್ 15 ನೇ ತಾರೀಖು ಅಥವಾ ಅದರೊಳಗೆ ಈ ಕಛೇರಿಗೆ ತಲುಪುವಂತೆ ಅರ್ಜಿಗಳನ್ನು ಕಳುಹಿಸಬೇಕೆಂದು ಕೋರಲಾಗಿದೆ.

79ನೇ ನಿಬಂಧನೆ:— ಪ್ರತಿ ವರ್ಷದ ಜನವರಿ ತಿಂಗಳ ಮೊದಲನೇ ದಿನ ಪದವೀಧರರ ರಿಜಿಸ್ಟರನ್ನು ಪುನರ್ಪರಿಶೀಲಿಸಿ, ತಿದ್ದುಪಡಿ ಮಾಡಲಾಗುವುದು. ಪುನರ್ಪರಿಶೀಲನೆ ಅಥವ ತಿದ್ದುಪಡಿಬಗ್ಗೆ ಅರ್ಜಿಗಳು ರಿಜಿಸ್ಟ್ರಾರರಿಗೆ ಹಿಂದಿನ ಡಿಸೆಂಬರ್ ೧೫ನೇ ತಾರೀಖಿನೊಳಗೆ ತಲುಪಬೇಕು.

1. ಹೆಸರು, ಪದವಿ ಅಥವಾ ಪದವಿಗಳು
2. ಎನ್‌ರೋಲ್‌ಮೆಂಟ್ ನಂಬರು.
3. ವಿಳಾಸ.

ಅಪ್ಪಣೆಮೇರೆ
ಎಚ್. ಜಿ. ಸರೋಜಾ.
ರಿಜಿಸ್ಟ್ರಾರ್.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೮೯

೯-೧೨-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಚುನಾವಣೆ ರದ್ದಿನ ಬಗ್ಗೆ ಹೈಕೋರ್ಟಿನಲ್ಲಿ ರಿಟ್ ಅರ್ಜಿ

ಬೆಂಗಳೂರು ೯

ಪಿರಿಯಾಪಟ್ಟಣದ ಕ್ಷೇತ್ರದಿಂದ ಮೈಸೂರು ಶಾಸನಸಭೆಗೆ ಶ್ರೀ ಎಸ್.ಎಂ. ಮರಿಯಪ್ಪನವರು ಚುನಾಯಿತರಾಗಿರುವುದು ಅಕ್ರಮವೆಂದು ಚುನಾವಣಾ ಟ್ರಿಬ್ಯುನಲ್ ಇತ್ತ ಆಜ್ಞೆಯನ್ನು ರದ್ದುಗೊಳಿಸಬೇಕೆಂದು ಶ್ರೀ ಎಸ್.ಎಂ. ಮರಿಯಪ್ಪನವರು ಹೈಕೋರ್ಟಿನಲ್ಲಿ ಒಂದು ರಿಟ್ ಅರ್ಜಿಯನ್ನು ದಾಖಲ್ಮಾಡಿದ್ದಾರೆ. ಅದನ್ನು ನ್ಯಾಯಾಧೀಶರು ಸ್ವೀಕರಿಸಿ ಈ ಅರ್ಜಿ ಇತ್ಯರ್ಥ್ಯವಾಗುವವರೆಗೆ ಟ್ರಿಬ್ಯುನಲ್ ಇತ್ತ ತೀರ್ಮಾನವನ್ನು ಜಾರಿಗೆ ತರದಂತೆ ತಡೆ ಆಜ್ಞೆಯನ್ನು ಇತ್ತಿದ್ದಾರೆ.

ನೆಹರೂ ಪತ್ರದ ಬಗ್ಗೆ ಮುಖ್ಯ ಮಂತ್ರಿಗಳು

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಪತ್ರಿಕಾಗೋಷ್ಠಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಕೊಡುತ್ತಾ ತನ್ನು ಮೇಲೆ ಶ್ರೀ ಹೆಚ್. ಕೆ. ವೀರಣ್ಣಗೌಡರು ವೈಯುಕ್ತಿಕವಾಗಿ ಮಾಡಿರುವ ಆಪಾದನೆಗಳ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಪಂಡಿತ ನೆಹರೂರವರಿಂದ ಪತ್ರವೊಂದು ಬಂದಿದೆಯೆಂದು. ಆಪಾದನೆಗಳ ಬಗ್ಗೆ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷರು ಕೊಟ್ಟಿರುವ ತೀರ್ಪುಗಳನ್ನೊಳಗೊಂಡಿರುವುದೇ ಆ ಪತ್ರವೆಂದು ತಿಳಿಸಿದ್ದಾರೆ. ಶಾಸನಸಭೆಯ ಕಾಂಗ್ರೆಸ್ ಪಕ್ಷಕ್ಕೂ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಗೂ ತಿಳಿಸುವುದಕ್ಕೆ ಮುಂಚೆ ತಾವು ಆ ಪತ್ರದ ವಿಷಯಗಳನ್ನು ಹೊರಗೆಡವುದಿಲ್ಲವೆಂದೂ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಬೆಂಗಳೂರಿಗೆ ನೆಹರೂ ಭೇಟಿ

ಬೆಂಗಳೂರು ೯

ಮುಂದಿನ ತಿಂಗಳು ಹೈದರಾಬಾದಿನಲ್ಲಿ ನಡೆಯುವ ಸೈನ್ಸ್ ಕಾಂಗ್ರೆಸ್ ಅಧಿವೇಶನವನ್ನು ಮುಗಿಸಿಕೊಂಡು ಪ್ರಧಾನಿ ನೆಹರೂರವರು ಜನವರಿ ೩ ನೇ ತಾರೀಖು ಬೆಂಗಳೂರಿಗೆ ಆಗಮಿಸಿ ಅಂದು ಕಾಂಗ್ರೆಸ್ ಕೆಲಸಗಾರರನ್ನುದ್ದೇಶಿಸಿ ಭಾಷಣ ಮಾಡುವರೆಂದು ತಿಳಿಯಬರುತ್ತದೆ. ೪ನೇ ತಾರೀಖು ಅವರು ತಿರುವನಂತಪುರಕ್ಕೆ ತೆರಳುವರು.

ಕಾಫೀ ಬೆಲೆ ಇಳಿಯಿತು

ಕಾಫೀಪುಡಿಯ ಬೆಲೆಯನ್ನು ಇದೇ ೧೬ನೇ ತಾರೀಖಿನಿಂದ ಪೌಂಡು ಒಂದಕ್ಕೆ ಒಂದಾಣೆಯಂತೆ ಇಳಿಸಲಾಗಿದೆ.

ಖೆಡ್ಡಾಕ್ಕೆ ರಾಷ್ಟ್ರಪತಿಯವರಿಗೆ ಆಹ್ವಾನ

ಬೆಂಗಳೂರು ೯

ಇದೇ ೨೮ನೇ ತಾರೀಖು ನಡೆಯಲಿರುವ ಖೆಡ್ಡಾ ಕಾರ್ಯಾಚರಣೆಗಳನ್ನು ನೋಡಲು ರಾಷ್ಟ್ರಪತಿ ಡಾ॥ ರಾಜೇಂದ್ರ ಪ್ರಸಾದ್‌ರವರಿಗೆ ಆಹ್ವಾನವನ್ನು ಕೊಟ್ಟಿರುವುದಾಗಿ ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ನೈಜಾಮರಿಗೆ ೨೫ ಲಕ್ಷ ರೂ. ಖೋತಾ

ಹೈದರಾಬಾದಿನಲ್ಲಿರುವ ನೈಜಾಮರ ಅರಮನೆಗಳಿಗಾಗಿ ಅಲ್ಲಿಯ ಸರ್ಕಾರವು ಅವರಿಗೆ ೫೦ ಲಕ್ಷ ರೂಪಾಯಿಗಳನ್ನೂ, ಕೇಂದ್ರ ಸರ್ಕಾರವು ೫೦ ಲಕ್ಷ ರೂಪಾಯಿಗಳನ್ನು ಪ್ರತಿ ವರ್ಷವೂ ಕೊಡುತ್ತಲಿದ್ದುವು. ಆ ಹಣದ ಪೈಕಿ ೨೫ ಲಕ್ಷ ರೂಪಾಯಿಗಳನ್ನು ನೈಜಾಮರು ಈಗ ಬಿಟ್ಟುಕೊಡುವುದಾಗಿ ತಿಳಿಸಿದ್ದಾರೆ.

ಮುಂದಿನ ತಿಂಗಳು ಚತುರಾಷ್ಟ್ರ ಸಮ್ಮೇಳನ

ಅಮೆರಿಕಾ, ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾ ಈ ನಾಲ್ಕು ರಾಷ್ಟ್ರಗಳ ಸಮ್ಮೇಳನವು ಮುಂದಿನ ತಿಂಗಳು ೪ನೇ ತಾರೀಖು ಬರ್ಲಿನ್‌ನಲ್ಲಿ ನಡೆಯಬೇಕೆಂದು ರಷ್ಯಾಕ್ಕೆ ತಿಳಿಸಲಾಗಿರುವುದಾಗಿ ಗೊತ್ತಾಗಿದೆ.

ಆಂಧ್ರದಲ್ಲಿ ಡಿಸೆಂಬರ್ ೧೫ ರಜಾದಿನ

ಆಂಧ್ರ ರಚನೆಗಾಗಿ ತಮ್ಮ ತನುವನ್ನು ನೀಡಿದ ಶ್ರೀ ಪೊಟ್ಟಿ ಶ್ರೀರಾಮುಲುರವರು ನಿಧನವಾದ ಡಿಸೆಂಬರ್ ೧೫ನೇ ತಾರೀಖನ್ನು ಪ್ರತಿವರ್ಷವೂ ರಜಾ ದಿನವನ್ನಾಗಿ ಆಂಧ್ರ ಸರ್ಕಾರವು ಆಜ್ಞೆಮಾಡಿದೆ.

ಜಮೀನಿಲ್ಲದವರಿಗೆ ಜಮೀನು

ಭಾರತದಲ್ಲಿ ಜಮೀನಿಲ್ಲದೆ ಬರೀ ಸಾಗುವಳಿ ಮಾಡುವ ರೈತರು ಅಥವಾ ಗೇಣಿದಾರರು ೩ ಕೋಟಿ ಇದ್ದಾರೆ. ಇವರಲ್ಲಿ ಈಗ ೧॥ ಕೋಟಿ ಮಂದಿಗೆ ಜಮೀನುಗಳನ್ನು ಕೊಡಲು ಭಾರತ ಸರ್ಕಾರವು ಒಂದು ಯೋಜನೆಯನ್ನು ತಯಾರಿಸಿರುವುದಾಗಿ ಆಹಾರ ಉಪಮಂತ್ರಿಯವರು ತಿಳಿಸಿದ್ದಾರೆ.

ಜಿಲ್ಲಾಬೋರ್ಡು ಭವಿಷ್ಯ ಬಗ್ಗೆ ಸಮಿತಿ ನೇಮಕ

ಪತ್ರಿಕಾ ಸಮ್ಮೇಳನದಲ್ಲಿ ಮುಖ್ಯಮಂತ್ರಿಯವರ ಹೇಳಿಕೆ

ಸಂಸ್ಕೃತಿ ಪ್ರಸಾರ ಯೋಜನೆಯ ವಾರ್ಷಿಕೋತ್ಸವ

ಇದೇ ಮಾಹೆ ೧೬ನೇ ತಾರೀಖು ಸಂಸ್ಕೃತಿ ಪ್ರಸಾರ ವಾರ್ಷಿಕೋತ್ಸವವನ್ನು ನೆರವೇರಿಸಬೇಕೆಂದು ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ರೀತಿಯಾಗಿ ಒಂದು ಮನವಿಯನ್ನು ಮಾಡಿದ್ದಾರೆ. :—

ಸಂಸ್ಕೃತಿ ಪ್ರಸಾರ ಯೋಜನೆಯ ಪ್ರಾರಂಭೋತ್ಸವವು ಕಳೆದ ವರ್ಷ ಗೀತಾ ಜಯಂತಿಯ ಶುಭ ದಿವಸ (೧೯೫೨ನೆಯ ಇಸವಿ ನವೆಂಬರು ೨೭ನೆಯ ತಾರೀಖು) ನಮ್ಮ ಸಂಸ್ಥಾನದಲ್ಲೆಲ್ಲಾ ಸಾರ್ವತ್ರಿಕವಾಗಿ ನಡೆಯಿತು. ಜನರಲ್ಲಿ ದೈವಭಕ್ತಿ, ಧರ್ಮಶ್ರದ್ಧೆ ಮುಂತಾದ ಸದ್ಗುಣಗಳು ವೃದ್ಧಿಯಾಗಲು ಸಂಸ್ಕೃತಿ ಪ್ರಸಾರ ಯೋಜನೆಯಿಂದ ಬಹಳ ಸಹಾಯವಾಗುತ್ತದೆಂಬುದು ನನ್ನ ನಂಬಿಕೆ. ಕಳೆದ ವರ್ಷವೆಲ್ಲಾ ಸಂಸ್ಥಾನಾದ್ಯಂತ ನೂರಾರು ಸಭೆಗಳು ನಡೆದು, ಸಹಸ್ರಾರು ಜನರು ಈ ಪುಣ್ಯ ಕಾರ್ಯದಲ್ಲಿ ಭಾಗಿಗಳಾಗಿದ್ದಾರೆ. ಅವರು ತೋರಿಸಿರುವ ಉತ್ಸಾಹ, ಶ್ರದ್ಧೆಗಳು ದೇಶದ ನೈತಿಕ ಮಟ್ಟದ ಕುರುಹೆಂದು ಭಾವಿಸಬಹುದು. ಸಂಸ್ಥಾನದಲ್ಲಿ ಈ ವರ್ಷ ಸಮೃಷ್ಟಿಯಾಗಿ, ಬೆಳೆಗಳು ಸಮೃದ್ಧಿಯಾಗಿ ಆಗಿವೆ. ಈ ಪರಿಸ್ಥಿತಿಗೆ ದೇವರ ಕೃಪೆಯು ಕಾರಣವೆಂದು ನಂಬಿ, ಪುನಃ ಗೀತಾಜಯಂತಿಯ ಪವಿತ್ರ ದಿನ ಸಂಸ್ಕೃತಿ ಪ್ರಸಾರ ಯೋಜನೆಯ ವಾರ್ಷಿಕೋತ್ಸವವನ್ನು ಆಚರಿಸಿ, ಪ್ರಾರ್ಥನೆ ಮತ್ತು ಕಥಾ ಶ್ರವಣಗಳಿಂದ ಭಗವತ್ಕೃಪೆಗೆ ಪಾತ್ರರಾಗೋಣ.

ಗೀತಾಜಯಂತಿಯ ದಿವಸ (೧೬-೧೨-೧೯೫೩) ಎಲ್ಲಾ ಊರುಗಳಲ್ಲೂ ಬೆಳಗ್ಗೆ ಪ್ರಾರ್ಥನೆಗಳೂ, ಸಾಯಂಕಾಲ ಸಭೆಗಳೂ ನಡೆಯಬೇಕೆಂದು ಮಹಾ ಜನರಲ್ಲಿ ಬಿನ್ನೈಸುತ್ತೇನೆ. ಸಂಸ್ಥಾನದಲ್ಲಿರುವ ಎಲ್ಲಾ ಸಂಸ್ಥೆಗಳೂ, ಪ್ರಜಾ ಪ್ರಮುಖರೂ, ಸರ್ಕಾರಿ ಉದ್ಯೋಗಸ್ಥರೂ ಸಂಸ್ಕೃತಿ ಪ್ರಸಾರ ಯೋಜನೆಯ ವಾರ್ಷಿಕೋತ್ಸವವನ್ನು ಶ್ರದ್ಧೆಯಿಂದ ಆಚರಿಸಬೇಕೆಂದು ವಿಜ್ಞಾಪಿಸುತ್ತೇನೆ.

ಬೆಂಗಳೂರು ೯

ಸಂಸ್ಥಾನದಲ್ಲಿ ಜಿಲ್ಲಾ ಬೋರ್ಡುಗಳನ್ನು ಮುಂದುವರಿಸಬೇಕೇ ಅಥವಾ ಬೇಡವೇ ಎಂಬ ಪ್ರಶ್ನೆಯನ್ನು ಪರಿಶೀಲಿಸಲು ೧೧ ಜನ ಸದಸ್ಯರುಳ್ಳ ಸಮಿತಿಯೊಂದನ್ನು ಸದ್ಯದಲ್ಲಿಯೇ ನೇಮಿಸಲಾಗುವುದೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದ್ದಾರೆ.

ಈ ಸಮಿತಿಯಲ್ಲಿ ಎಲ್ಲಾ ರಾಜಕೀಯ ಪಕ್ಷದ ಪ್ರತಿನಿಧಿಗಳಿರುವರೆಂದೂ ಅವರು ಹೇಳಿದ್ದಾರೆ.

ಕನ್ನಡ ಟೈಪ್‌ರೈಟರ್ ಬಗ್ಗೆ ಪುನರ್ಪರಿಶೀಲನೆ

ಲಕ್ನೋದಲ್ಲಿ ಇತ್ತೀಚೆಗೆ ನಡೆದ ಭಾಷಾ ಸಂಬಂಧ ಪಟ್ಟ ಸಮ್ಮೇಳನದಲ್ಲಿ ಎಲ್ಲಾ ಭಾಷೆಗಳಿಗೂ ಒಂದೇ ಲಿಪಿಯಿರಬೇಕೆಂಬ ವಿಷಯವನ್ನು ತಾವು ಅನುಮೋದಿಸುವುದಾಗಿಯೂ ತಿಳಿಸಿ, ಈ ದೃಷ್ಟಿಯಿಂದ ಕನ್ನಡ ಟೈಪುರೈಟರ್ ರಚನೆ ಮುಂತಾದ ವಿಷಯವನ್ನು ಪುನಃ ಪರಿಶೀಲಿಸಬೇಕಾಗಿದೆಯೆಂದು ಹೇಳಿದ್ದಾರೆ.

ಮೈಸೂರಿಗೆ ೩ ಕೋಟಿ ರೂ ಸಾಲ

ಕೇಂದ್ರಸರ್ಕಾರದವರು ಲಕ್ಕವಳ್ಳಿಯ ಜಲಾಶಯದ ಪ್ರಥಮ ಘಟ್ಟದ ನಿರ್ಮಾಣಕ್ಕಾಗಿ ಮೈಸೂರು ಸರ್ಕಾರಕ್ಕೆ ೩ ಕೋಟಿರೂ ಸಾಲ ಕೊಡಲು ಯೋಚಿಸಿದೆ ಇದರ ಬಗ್ಗೆ ಮೈಸೂರು ಸರ್ಕಾರವು ಯೋಜನೆಯ ಕಾರ್ಯಕ್ರಮವನ್ನು ತಿಳಿಸಿದಮೇಲೆ ಕೇಂದ್ರವು ಅಂತ್ಯ ತೀರ್ಮಾನಕ್ಕೆ ಬರಲಾಗುವುದು ಎಂದು ರಾಜ್ಯಪರಿಷತ್ತಿನಲ್ಲಿ ಯೋಜನಾ ಉಪಮಂತ್ರಿಯವರು ತಿಳಿಸಿದ್ದಾರೆ.

ಮದ್ದಿನ ಕಾರ್ಖಾನೆಯಲ್ಲಿ ಆಸ್ಫೋಟನೆ

ಅಲಿಪುರನ್ ಸಿಡಿ ಮದ್ದಿನ ಕಾರ್ಖಾನೆಯೊಂದರಲ್ಲಿ ಕೆಲವು ಪಟಾಕಿ ಪೆಟ್ಟಿಗೆಗಳು ಆಸ್ಫೋಟನೆಯ ಫಲವಾಗಿ ನಿನ್ನೆ ಐದು ಜನರು ಮರಣ ಹೊಂದಿದರು. ಹಾಗೂ ೩ ಜನರಿಗೆ ತೀವ್ರ ಘಾಯವಾಗಿದೆ. ಅಕ್ಕಪಕ್ಕದ ಆರು ಮನೆಗಳು ಇದರ ಫಲವಾಗಿ ಧ್ವಂಸವಾಗಿವೆ.

ಪುರಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ೨೧ ಸ್ಥಾನಗಳು

ಪ್ರಜಾಸೋಶಲಿಸ್ಟರಿಗೆ ೯, ಸ್ವತಂತ್ರರಿಗೆ ೧೦

ಮೈಸೂರು ೯

ಪುರಸಭೆಯ ಚುನಾವಣೆಯು ಇದೇ ೭ ನೇ ತಾರೀಖು ನಡೆದು ನಿನ್ನೆಯದಿನ ಎಣಿಕೆಯು ಪುರಭವನದಲ್ಲಿ ೧೧ ಗಂಟೆಗೆ ಪ್ರಾರಂಭವಾಗಿ ರಾತ್ರಿ ೭.೩೦ ಗಂಟೆಯವರೆಗೂ ನಡೆಯಿತು.

ವಯಸ್ಕರ ಮತದಾನ ಪದ್ಧತಿಯ ಪ್ರಕಾರ ಚುನಾವಣೆಯು ಮೈಸೂರುನಗರ ಪುರಸಭೆಗೆ ನಡೆದುದು ಇದೇ ಪ್ರಥಮ ಪುರಸಭೆಯ ೪೦ ಸ್ಥಾನಗಳ ಪೈಕಿ ೫ ಸ್ಥಾನಗಳಿಗೆ ಅವಿರೋಧವಾಗಿ ಚುನಾವಣೆಯು ನಡೆಯಿತು.

ಈಗ ಈ ೪೦ ಸ್ಥಾನಗಳಲ್ಲಿ ಕಾಂಗ್ರೆಸ್ ಮತ್ತು ಅದರ ಬೆಂಬಲಿಗರು ೨೧ ಸ್ಥಾನಗಳನ್ನು, ಪ್ರಜಾಸೋಶಲಿಸ್ಟ್ ಪಕ್ಷವು ೯ ಮತ್ತು ಸ್ವತಂತ್ರರು ೧೦ ಸ್ಥಾನಗಳನ್ನು ಗಳಿಸಿದ್ದಾರೆ.

ಈ ಪುರಸಭಾ ಚುನಾವಣೆಗಳಲ್ಲಿ ೨ ನೇ ಡಿವಿಜನ್ನಿನ ಶ್ರೀ ಕೆ. ಬಿ. ಶ್ರೀನಿವಾಸಯ್ಯ [ಸ್ವ] ಮತ್ತು ೩ ನೇ ಡಿವಿಜನ್ನಿನ ಶ್ರೀ ಎ. ಎನ್. ಸೂರ್ಯನಾರಾಯಣರಾವ್ (ಕಾಂ) ಈ ಇಬ್ಬರೂ ಠೇವಣಿಗಳನ್ನು ಕಳೆದುಕೊಂಡರು.

ಚುನಾಯಿತರಾದ ಕಾಂಗ್ರೆಸ್ ಉಮೇದುವಾರರು

ಶ್ರೀಗಳಾದ

ಡಿವಿಜನ್

೧ ಜಿ. ಎಸ್. ರಾಮಕೃಷ್ಣಯ್ಯ
೨ ಕೆ. ಸಿದ್ದಯ್ಯ
೪ ಡಿ. ಲಿಂಗಯ್ಯ
೧೧ ಎ. ಕೃಷ್ಣಮೂರ್ತಿರಾವ್
೧೩ ಎನ್. ಶ್ರೀನಿವಾಸ
೧೪ ಹೆಚ್. ಕೆಂಪೇಗೌಡ
೧೫ ಎಸ್. ವೆಂಕಟರಮಣಯ್ಯ
೧೬ ಟಿ. ನರಸಿಂಹಯ್ಯಂಗಾರ್
೧೮ ಚೌಡಯ್ಯ [ಅವಿರೋಧ ಆಯ್ಕೆ]
೨೦ ಯು. ಎಲ್. ರಾಮಚಂದ್ರರಾವ್
೨೧ ಬಿ. ಎಲ್. ರಾಮಸ್ವಾಮಿಶೆಟ್ಟಿ
೨೩ ಬಿ. ಎನ್. ಕೆಂಗೇಗೌಡ
೨೬ ?. ಪುಟ್ಟಸ್ವಾಮಿ
೨೭ ಜಿ. ಆರ್. ?ಂಗಸ್ವಾಮಯ್ಯ
೨೮ ಎಂ. ಕೆ. ಲಿಂಗಯ್ಯ [ಅವಿರೋಧ]
೩೩ ಫಾದರ್ ಆಡಿಯೋ [ಕಾಂಗ್ರೆಸ್ ಬೆಂಬಲಿಗರು]
೩೪ ಜಿ. ಎ. ಕುಟಿನೋ
೩೬ ಜೋಗಿಸಿದ್ದಯ್ಯ
೩೮ ಹಾಜಿ ಅಮಿರುದ್ದೀನ್ ಖುರೈಷಿ (ಅವಿರೋಧ)
೩೯ ಎಸ್. ಲಿಂಗಣ್ಣ
೪೦ ವೆಂಕಟಲಿಂಗಯ್ಯ (ಅವಿರೋಧ)

ಜಯಗಳಿಸಿದ ಪ್ರಜಾಸೋಶಲಿಸ್ಟ ಉಮೇದುವಾರರು

ಶ್ರೀಗಳಾದ

ಡಿವಿಜನ್

೬ ಬಿ. ಕೆ. ರಾಮಕೃಷ್ಣಯ್ಯ
೭ ಕೆ. ಕರಿಯಣ್ಣ
೧೦ ಬಿ. ಜಿ. ದಾಸ್
೧೨ ನಾರಾಯಣರಾವ್
೧೯ ಎಂ. ಎನ್. ತಿಮ್ಮಯ್ಯ
೨೨ ಬಿ. ಕೆ. ಪುಟ್ಟಯ್ಯ
೨೪ ಹೆಚ್. ಎನ್. ಮುದ್ದಯ್ಯ
೨೫ ಎಸ್. ಗೋವಿಂದಯ್ಯ
೩೫ ಸಂಜೀವಯ್ಯ

ಜಯಗಳಿಸಿದ ಸ್ವತಂತ್ರರು

ಶ್ರೀಗಳಾದ

ಡಿವಿಜನ್

೩ ಶ್ರೀಕಂಠಶರ್ಮ
೫ ಎಂ. ಸಿ. ಮಹದೇವಸ್ವಾಮಿ
೮ ಕೆ. ಸೀತಾರಾಮನ್
೯ ಬುಡನ್ ಕ್ಯಾಪ್ಟನ್
೧೭ ದೊಡ್ಡತಮ್ಮೇಗೌಡ
೨೯ ಮಹಮದ್ ಯಾಕೂಬ್
೩೦ ಪಿ. ಎಲ್. ಕುಮಾರಸ್ವಾಮಿ [ಅವಿರೋಧ]
೩೧ ಮಹಮದ್ ಸೇಟ್
೩೨ ಅಜೀಜ್ ಸೇಟ್
೩೭ ಮೀರ್ ನೂರ್ ಹುಸೇನ್

ಕಾಂಗ್ರೆಸ್ ಪಕ್ಷವು ೩೫ ಸ್ಥಾನಗಳಲ್ಲಿ ಸ್ಪರ್ಧಿಸಿ ೨೧ ಸ್ಥಾನಗಳನ್ನು ಪಡೆಯಿತು. ಪ್ರಜಾಸೋಶಲಿಸ್ಟ್ ಪಕ್ಷವು ೧೮ ಸ್ಥಾನಗಳಲ್ಲಿ ಸ್ಪರ್ಧಿಸಿ ೯ ಸ್ಥಾನಗಳನ್ನು ಪಡೆಯಿತು.

ಈಗಿನ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯ, ಪಿ. ಸೀತಾರಾಮಯ್ಯ, ಶ್ರೀ ಕೆ. ಎಸ್. ಸತ್ಯನಾರಾಯಣರಾವ್, ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್, ಶ್ರೀ ಎ. ಎನ್. ಸೂರ್ಯನಾರಾಯಣರಾವ್, ಮುಂತಾದ ಕೆಲವು ಪ್ರಮುಖ ಕಾಂಗ್ರೆಸ್ಸಿಗರು, ಪ್ರಜಾಸೋಷಲಿಸ್ಟ್ ಪಕ್ಷದ ಶ್ರೀ ಎ. ವೆಂಕಟೇಶಯ್ಯ, ಜಿ. ಆರ್. ಜೋಶ್ಯರ್, ಮುಂತಾದವರು ಪರಾಜಯಹೊಂದಿದರು.

ಈಗಿನ ಪುರಸಭೆಯಲ್ಲಿದ್ದು ಸ್ಪರ್ಧಿಸಿ ಪರಾಜಯರಾದವರು ಶ್ರೀಗಳಾದ ಪಿ. ಸೀತಾರಾಮಯ್ಯ [ಕಾಂ] ಟಿ ವೆಂಕಟರಮಣಯ್ಯ(ಕಾಂ) ಚಾಮುಂಡಯ್ಯ (ಕಾಂ) ಡಾ|| ಪಿ.ಡಿ. ಕೃಷ್ಣಸ್ವಾಮಿ(ಕಾಂ) ಎ.ವೆಂಕಟೇಶಯ್ಯ(ಪ್ರ.ಸೊ.), ಸಯ್ಯದ್ ಅಬ್ದುಲ್ ರಹಿಮಾನ್ (ಸ್ವ.) ಶ್ರೀನಿವಾಸಯ್ಯಂಗಾರ್ (ಪ್ರ.ಸೋ.) ಬಿ. ಸುಬ್ಬಣ್ಣ (ಸ್ವ.) ಜಿ. ಅಹಮದ್ ಖಾನ್ (ಸ್ವ).

ಸಿ. ಆರ್. ರವರೇ ಮದ್ರಾಸ್ ಮುಖ್ಯಮಂತ್ರಿ ಆಗಿರಬೇಕು

ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯ ನಿರ್ಧಾರ

ಮದ್ರಾಸ್ ಪ್ರಾಂತ್ಯದ ಇಂದಿನ ಪರಿಸ್ಥಿತಿಯಲ್ಲಿ ಶ್ರೀ ಸಿ. ರಾಜಗೋಪಾಲಚಾರಿಯವರೇ ಮುಖ್ಯಮಂತ್ರಿಯಾಗಿರಬೇಕೆಂದು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ನಿರ್ಧರಿಸಿ ಮದ್ರಾಸ್ ಶಾಸನಸಭೆಯ ಕಾಂಗ್ರೆಸ್ ಪಕ್ಷವು ಅದನ್ನು ಅನುಮೋದಿಸಬೇಕೆಂದು ಆದೇಶವಿತ್ತಿರುವುದಾಗಿ ತಿಳಿಯಬರುತ್ತದೆ

ಈ ವಿಷಯದಲ್ಲಿ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ದೆಹಲಿಯಲ್ಲಿ ಮಾತನಾಡುತ್ತಾ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಸಿ. ರಾಜಗೋಪಾಲಾಚಾರಿಯವರ ಮೇಲೆ ಅವಿಶ್ವಾಸವನ್ನು ತರುವ ಪ್ರಯತ್ನವು ತೀರಾ ಖಂಡನೀಯ ಅಲ್ಲದೆ ಈ ರೀತಿ ಮಾಡುವುದು ಕಾಂಗ್ರೆಸ್ ಪಕ್ಷ, ಶಾಸನಸಭೆ ಮತ್ತು ಮದ್ರಾಸ್ ಪ್ರಾಂತ್ಯಕ್ಕೆ ತೀರ ಹಾನಿಕರವೆಂದು ಅವರು ಹೇಳಿದ್ದಾರೆ. ಕಾಂಗ್ರೆಸ್ಸಿನ ಶಿಸ್ತನ್ನು ಮೀರಿ ಪತ್ರಿಕೆಗಳಿಗೆ ಹೇಳಿಕೆ ಕೊಡುವುದು ಮುಂತಾದ ರೀತಿ ಡಾ|| ವರದರಾಜಲುನಾಯಡುರವರು ವರ್ತಿಸುತ್ತಲಿರುವುದು ಅಯೋಗ್ಯವಾದುದು ಅವರ ಮೇಲೆ ಶಿಸ್ತಿನಕ್ರಮವನ್ನು ತೆಗೆದುಕೊಳ್ಳಬೇಕು ಎಂದು ಶ್ರೀ ನೆಹರೂ ಹೇಳಿದ್ದಾರೆ.

ಮತದಾರ ಪೆಟ್ಟಿಗೆಯಲ್ಲಿ ಬ್ಲೇಡುಗಳು

ಮೈಸೂರು ೯

ಪುರಸಭೆಯ ಚುನಾವಣಾ ಪೆಟ್ಟಿಗೆಗಳನ್ನು ನಿನ್ನೆಯದಿನ ಓಟುಗಳನ್ನು ಎಣಿಸಲು ತೆರೆದಾಗ ಒಂದರಲ್ಲಿ ಬ್ಲೇಡುಗಳು, ಮತ್ತೊಂದರಲ್ಲಿ ೩ ಇಸ್ಪೀಟುಗಳು, ಇನ್ನೊಂದರಲ್ಲಿ ಒಬ್ಬ ಮಹಿಳೆಯ ಚಿತ್ರ, ಇನ್ನೊಂದರಲ್ಲಿ ಒಂದು ಆಣೆನಾಣ್ಯಗಳು ಮತದಾರರು ಹಾಕಿರುವುದು ದೊರೆಯಿತು.

-ಮೈಸೂರು ಪೇಟೆಧಾರಣೆ-

ತಾರೀಖು ೮—೧೨—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೮	೨೧—೪
ಎಳ್ಳು	೫೭—೧೪	೫೮—
ಹೊಂಗೆಬೀಜ	—	—
ಹರಳು	೨೮—೧೦	೪[illegible]—
ಹುಚ್ಚೆಳ್ಳು	೩೨—೪	೪೦—
ಅವರೆ	—	—
ಹುರುಳಿ	೩೨—	೩೪—೬
ಹೆಸರು	೩೧—	೩೭—೧೪
ಅಲಸಂದೆ	೩೩—೧೪	೫೦—೮
ಉದ್ದು	೬೦—	—
ಮೆಣಸಿನಕಾಯಿ	೧೬—೧೪	೩೩—೧೦
ಹುಣಸೇಹಣ್ಣು	೯—೧೪	೧೨—೧೪
ಸೀಗೆಕಾಯಿ	—	—
ತೆಂಗಿನಕಾಯಿ	೧೨೫—	೨೭೭—

ಕೆ. ಎಲ್. ನಂಜಪ್ಪ ಚಾಮರಾಜೇಂದ್ರ ವೃತ್ತಿಶಿಕ್ಷಣಶಾಲಾ ಮುಖ್ಯಾಧಿಕಾರಿ

ಮೈಸೂರು ೯

ಭಾರತ ಸರ್ಕಾರಕ್ಕೆ ಎರವಲಾಗಿ ಹೋಗಿದ್ದು ಈಗ ಹಿಂತಿರುಗಿರುವ ಶ್ರೀ ಕೆ. ಎಲ್. ನಂಜಪ್ಪನವರನ್ನು ಕೈಗಾರಿಕಾ ಡೆಪ್ಯುಟಿ ಡೈರೆಕ್ಟರಾಗಿ ನೇಮಿಸಿ ಅವರನ್ನು ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ಸೂಪರಿಂಡೆಂಟರಾಗಿ ವರ್ಗಾಯಿಸಲಾಗಿದೆ.

೩೦೫ ವಲಸೆಗಾರರ ದಸ್ತಗಿರಿ

ರಹದಾರಿಯನ್ನು ಪಡೆಯದೆ ಅನಧಿಕೃತವಾಗಿ ಸಿಂಹಳಕ್ಕೆ ಹೋಗುತ್ತಲಿದ್ದ ಮತ್ತು ಅವರಿಗೆ ನೆರವುನೀಡುತ್ತಿದ್ದ ಒಟ್ಟು ೩೦೫ ವಲಸೆಗಾರರನ್ನು ಸೆಪ್ಟೆಂಬರ್‌ಮಾಹೆಯಲ್ಲಿ ದಸ್ತಗಿರಿ ಮಾಡಲಾಗಿದೆಯೆಂದು ತಿಳಿಯಬರುತ್ತದೆ.

ಸ್ಕೌಟ್ ಜಾಂಬೂರಿ

ಹೈದರಾಬಾದಿನಲ್ಲಿ ಇದೇ ೨೯ ರಿಂದ ಜನವರಿ ೨ನೇ ತಾರೀಖಿನವರೆಗೆ ಅಖಿಲ ಭಾರತ ಸ್ಕೌಟ್ ಮತ್ತು ಗೈಡುಗಳ ಜಾಂಬೂರಿ ನಡೆಯುವುದು. ಪ್ರಧಾನಿ ನೆಹರೂರವರು ೨ನೇ ತಾ|| ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸುವರು.

ಬದನವಾಳು ಖಾದಿಕೇಂದ್ರದ ರಜತ ಮಹೋತ್ಸವ

ಬದನವಾಳು ಖಾದಿ ಕೇಂದ್ರದ ರಜತ ಮಹೋತ್ಸವವನ್ನು ಮುಂದಿನ ತಿಂಗಳು ೩ ನೇ ವಾರದಲ್ಲಿ ನಡೆಯುವುದು. ಅಖಿಲ ಭಾರತ ಖಾದಿ ಸಂಸ್ಥೆಯ ಅಧ್ಯಕ್ಷ ಶ್ರೀ ಎ. ಎಲ್. ಮೆಹ್ತಾರವರು ಅಧ್ಯಕ್ಷತೆ ವಹಿಸುತ್ತಾರೆ.

ಪ್ರಭಾ 11--12--53 ರಿಂದ ಅಮೋಘಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಫೈನ್‌ಆರ್ಟ್ಸ್ ಫಿಲ್ಮ್ಸ್‌ರವರ ಸಂಗೀತ ಮತ್ತು ಹಾಸ್ಯದಿಂದ ಕೂಡಿದ ಉತ್ತಮ ಹಿಂದಿಚಿತ್ರ.
ಚಾರ್-
-ಚಾಂದ್
ಪಾತ್ರ:—ಶ್ಯಾಮಾ, ಭಗವಾನ್, ಸುರೇಶ್ ಮತ್ತು ನುಜ್ಜ.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೯೦

೧೦-೧೨-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾಕನಕೋಟೆಯಲ್ಲಿ ಖೆಡ್ಡಾ ವ್ಯವಸ್ಥೆ

ಸುಮಾರು ೧ ಸಾವಿರ ಜನರು ಕೆಲಸ ಮಾಡುತ್ತಿದ್ದಾರೆ

ಮೈಸೂರು ೧೦

ಇದೇ ೨ನೇ ತಾರೀಖು ಕಾಕನಕೋಟೆ ಅರಣ್ಯದಲ್ಲಿ ಮೈಸೂರು ಸರ್ಕಾರದವರು ಏರ್ಪಡಿಸಿರುವ ಖೆಡ್ಡಾ ಕಾರ್ಯಕ್ರಮವು ಯಶಸ್ವಿಯಾಗಲು ಮೈಸೂರು ಅರಣ್ಯ ಇಲಾಖೆಯ ಮುಖ್ಯಾಧಿಕಾರಿ ಶ್ರೀ ಮುತ್ತಣ್ಣ ಮತ್ತು ಮೈಸೂರು ಜಿಲ್ಲಾ ಅರಣ್ಯಾಧಿಕಾರಿ ಶ್ರೀ ಗುಲಾಬ್ ಸಿಂಗ್‌ರವರು ಅಲ್ಲೇ ಮೊಕ್ಕಾಂ ಮಾಡಿ ಖುದ್ದು ಕೆಲಸ ಕಾರ್ಯಗಳನ್ನು ನೋಡಿಕೊಳ್ಳುತ್ತಿದ್ದಾರೆ.

ನಗರದ ಕೆಲವು ಪತ್ರಿಕೋದ್ಯೋಗಿಗಳು ಅಲ್ಲಿಗೆ ನಿನ್ನೆ ಭೇಟಿ ಇತ್ತು, ಖೆಡ್ಡಾ ಕೆಲಸ ಕಾರ್ಯಗಳನ್ನು ಪರಿಶೀಲಿಸಿದರು.

ಹೆಗ್ಗಡದೇವನಕೋಟೆ, ಚಾಮರಾಜನಗರ ಮುಂತಾದ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಾಡಾನೆಗಳ ಹಾವಳಿಯನ್ನು ತಪ್ಪಿಸಲು ಮತ್ತು ಇಲಾಖೆಯ ಉಪಯೋಗಕ್ಕಾಗಿ ಕಾಡಾನೆಗಳನ್ನು ಹಿಡಿಯಲು ಈ ವರ್ಷ ಖೆಡ್ಡಾ ಏರ್ಪಡಿಸಲಾಗಿದೆ. ಅವುಗಳಲ್ಲಿ ಕೆಲವನ್ನು ಮಾರಾಟ ಮಾಡಲಾಗುವುದು. ಇದಕ್ಕಾಗಿ ಸರ್ಕಾರದವರು ೯೦ ಸಾವಿರ ರೂ. ಮಂಜೂರು ಮಾಡಿದ್ದಾರೆ.

ಅರಣ್ಯ ಪ್ರದೇಶದ ಸುಮಾರು ೧೨೫ ಚದುರ ಮೈಲಿ ವಿಸ್ತೀರ್ಣದ ಆವರಣದೊಳಗಿರುವ ಕಾಡಾನೆಗಳ ಗುಂಪನ್ನು ಪತ್ತೆಹಚ್ಚುವ ಕಾರ್ಯವು ತ್ವರಿತವಾಗಿ ನಡೆಯುತ್ತಿದೆ. ಈಗಾಗಲೇ ಕೆಲವು ಕಾಡಾನೆಗಳ ಗುಂಪನ್ನು ಕಂಡುಹಿಡಿಯಲಾಗಿದೆ. ಖೆಡ್ಡಾ ನಡೆಯುವ ದಿನಕ್ಕೆ ಕೆಲವು ದಿನ ಮುಂಚಿತವಾಗಿ ಇವುಗಳನ್ನೆಲ್ಲಾ ಒಂದೆಡೆ ಸೇರಿಸುವ ಕಾರ್ಯವನ್ನು ಕೈಕೊಳ್ಳಲಾಗುತ್ತದೆ. ಈ ಕೆಲಸಗಳಿಗೆ ಸುಮಾರು ೬೦೦-೭೦೦ ತರಪೇತಾದ ಜನರನ್ನು ನೇಮಿಸಿಕೊಂಡು ಅವರಿಗೆ ಊಟ, ವಸತಿ ಮತ್ತು ಇತರ ಸೌಲಭ್ಯಗಳನ್ನು ಒದಗಿಸಲಾಗಿದೆ. ಇವರ ಸಹಾಯಕ್ಕಾಗಿ ಸುಮಾರು ೪೦ ಪಳಗಿದ ಆನೆಗಳನ್ನೂ ಉಪಯೋಗಿಸಲಾಗುತ್ತಿದೆ.

ಇದರ ಜೊತೆಗೆ ಸುಮಾರು ೨೦೦-೩೦೦ ಜನರು ಖೆಡ್ಡಾ ನಡೆಯುವ ಸುಮಾರು ೪ ಎಕರೆ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ನದಿಯಲ್ಲಿ ಅಟ್ಟಿಸಿಕೊಂಡ ಬಂದ ಆನೆಗಳು ಖೆಡ್ಡಾ ಸ್ಥಳಕ್ಕೆ ಪ್ರವೇಶಿಸಲು ದೊಡ್ಡ ಒಂದು ದ್ವಾರವನ್ನು, ಒಳಗೆ ಪ್ರವೇಶಿಸಿದನಂತರ ಹೊರಕ್ಕೆ ಹೋಗದಂತೆ ಮತ್ತೊಂದು ದ್ವಾರ, ಸುತ್ತಲು ತೇಗದ ಮರದಿಂದ ಕಟ್ಟಿದ ಪ್ರತಿಬಂಧಕಗಳು

ಕಾಕನಕೋಟೆ ಪ್ರದೇಶದಲ್ಲಿ ಭಾರಿ ಸಲಗ

ಮೈಸೂರು ೧೦

ಖೆಡ್ಡಾ ನಡೆಯುವ ಪ್ರದೇಶವಾದ ಕಾಕನಕೋಟೆ ಅರಣ್ಯದಲ್ಲಿ ಕಳೆದ ೨ ದಿನಗಳಿಂದ ಭಾರಿ ಸಲಗವೊಂದು ತನ್ನ ಗುಂಪನ್ನು ಬಿಟ್ಟು ಏಕಾಂಗಿಯಾಗಿ ಬಂದು ಓಡಾಡುತ್ತಿರುವುದು ಅರಣ್ಯ ಇಲಾಖೆಯವರಿಗೆ ತಿಳಿದು, ಅದನ್ನು ಹಿಡಿಯಲು ಪ್ರಯತ್ನ ನಡೆಯುತ್ತಿದೆ. ಇದರಿಂದ ಅಲ್ಲಿ ಕೆಲಸ ಮಾಡುತ್ತಿರುವ ಸಾವಿರಾರು ಜನರಿಗೆ ಗಾಭರಿ ಉಂಟಾಗಿದೆ. ನಿನ್ನೆದಿನ ಅರಣ್ಯ ಮುಖ್ಯಾಧಿಕಾರಿ ಶ್ರೀ ಮುತ್ತಣ್ಣ ಮತ್ತು ಜಿಲ್ಲಾ ಅರಣ್ಯಾಧಿಕಾರಿ ಶ್ರೀ ಗುಲಾಬ್ ಸಿಂಗ್‌ರವರು ಅದನ್ನು ಹಿಡಿಯಲು ಹೋಗಿ, ಅದು ವಿಪರೀತ ಉನ್ಮತ್ತಾವಸ್ಥೆಯಲ್ಲಿರುವುದನ್ನು ಕಂಡು ಹಾಗೆಯೇ ಹಿಂತಿರುಗಿದರು.

ಸಾಂಸ್ಕೃತಿಕ ನಿಯೋಗ

ರಷ್ಯಾ ಮತ್ತು ಅಫ್‌ಘಾನಿಸ್ಥಾನಗಳಿಂದ ಮುಂದಿನ ತಿಂಗಳು ಸಾಂಸ್ಕೃತಿಕ ನಿಯೋಗಗಳು ಭಾರತಕ್ಕೆ ಭೇಟಿ ಕೊಡಲಿರುವುದಾಗಿ ತಿಳಿಯಬರುತ್ತದೆ.

ಕಾಡಾನೆಗಳನ್ನು ಕಟ್ಟಿಹಾಕಲು ತಕ್ಕ ವ್ಯವಸ್ಥೆ, ಮುಂತಾದ ಕೆಲಸಗಳು ತ್ವರಿತವಾಗಿ ನಡೆಯುತ್ತಿವೆ. ಈ ಪ್ರದೇಶದ ಸುತ್ತಲೂ ಕಂದಕ ಮತ್ತು ಹಾದಿಗಳನ್ನು ಮುಚ್ಚುವ ಕಾರ್ಯಗಳು ಮುಗಿದಿವೆ. ಮುಖ್ಯ ಅತಿಥಿಗಳು ಮತ್ತು ಆಹ್ವಾನಿತರು ಖೆಡ್ಡಾ ವೀಕ್ಷಿಸಲು ಸೂಕ್ತ ಪ್ರತ್ಯೇಕ ಸ್ಥಳಗಳನ್ನು ಏರ್ಪಡಿಸಲಾಗಿದೆ

ಅಲ್ಲಿ ಕೆಲಸಮಾಡುತ್ತಿರುವವರ ಸೌಕರ್ಯಕ್ಕಾಗಿ ಅಂಗಡಿ, ಹೋಟೇಲು, ಆಸ್ಪತ್ರೆ, ವಾಸದ ಗುಡಿಸಲುಗಳು, ಮುಂತಾದುವುಗಳನ್ನು ಏರ್ಪಡಿಸಲಾಗಿದೆ. ಖೆಡ್ಡಾ ಕಾರ್ಯಗಳು ಸಫಲಿತವಾಗಿ ನಡೆಯಲು ಕಾಕನಕೋಟೆ ಮತ್ತು ಕಾರಾಪುರಕ್ಕೆ ಮಧ್ಯದಲ್ಲಿರುವ ಮಾಸ್ತಿಗುಡಿ ದೇವಸ್ಥಾನದಲ್ಲಿ ನಿತ್ಯವೂ ಪೂಜೆ ನಡೆಯಲು ಅರಣ್ಯ ಇಲಾಖೆಯವರು ವ್ಯವಸ್ಥೆ ಮಾಡಿದ್ದಾರೆ. ಸಾಮಾನ್ಯವಾಗಿ ಅಲ್ಲಿ ಸಂಚರಿಸುವವರು ದೇವತೆಗೆ ಪೂಜೆ ನಡೆಸಿ ಮುಂದಕ್ಕೆ ಹೋಗುವ ವಾಡಿಕೆ ಬಂದಿದೆ.

ಕಾಕನಕೋಟೆಯಲ್ಲಿ ಮೈಸೂರು ಸಾಬು

ಮೈಸೂರು ೧೦

ಹಾಲಿವುಡ್ಡಿನ ಪ್ರಸಿದ್ಧ ಸಿನಿಮಾ ನಟ ಮೈಸೂರು ಸಾಬು ತನ್ನ ಪತ್ನಿ ಮತ್ತು ಪುತ್ರರೊಂದಿಗೆ ಈಗ ಕಾಕನಕೋಟೆಯಲ್ಲಿ ನಡೆಯುತ್ತಿರುವ ಖೆಡ್ಡಾ ಕೆಲಸಕಾರ್ಯಗಳನ್ನು ವೀಕ್ಷಿಸಲು ಅಲ್ಲಿ ಕಳೆದ ೨ ದಿನಗಳಿಂದ ಇದ್ದಾರೆ, ಅವರು ಇದೇ ೧೨ ನೇ ತಾರೀಖು ತಿರುವಾಂಕೂರು ಕೊಚ್ಚಿಯಲ್ಲಿ ಬೊಂಬಾಯಿನ ಶ್ರೀ ಕಿಶೋರ್‌ಸಾಹುರವರ ನೂತನ ಚಿತ್ರದಲ್ಲಿ ಭಾಗವಹಿಸಲು ಹೋಗುವರು.

ಸಣ್ಣಪುಟ್ಟ ರೇವುಗಳ ಅಭಿವೃದ್ಧಿಗೆ ನೆರವು

ಭಾರತದಲ್ಲಿರುವ ಸಣ್ಣಪುಟ್ಟ ರೇವುಗಳ ಅಭಿವೃದ್ಧಿಗೆ ಕೇಂದ್ರ ಸರ್ಕಾರದವರು ೮೦ ಲಕ್ಷ ರೂ.ಗಳ ಸಾಲವನ್ನು ಕೊಡಲು ನಿರ್ಧರಿಸಿದೆ. ಒರಿಸ್ಸಾ, ಆಂಧ್ರ, ಮದರಾಸ್, ತಿರುವಾಂಕೂರು-ಕೊಚ್ಚಿ, ಬೊಂಬಾಯಿ ಮತ್ತು ಸೌರಾಷ್ಟ್ರಗಳಿಗೆ ಈ ಸಹಾಯ ಒದಗುವುದು.

ಕನ್ನಡದಲ್ಲಿ ಪಂಚವಾರ್ಷಿಕ ಯೋಜನೆಯ ಪುಸ್ತಕ

ಪಂಚವಾರ್ಷಿಕ ಯೋಜನೆ, ಪ್ರಶ್ನೆ ಮತ್ತು ಉತ್ತರಗಳು ಎಂಬ ಪುಸ್ತಕವನ್ನು ಭಾರತ ಸರ್ಕಾರದವರು ಈಗ ಹಿಂದಿಯಲ್ಲಿ ಪ್ರಕಟಿಸಿದ್ದಾರೆ. ಆ ಪುಸ್ತಕವನ್ನು ಕನ್ನಡ ಮತ್ತು ಇತರ ಭಾಷೆಗಳಲ್ಲೂ ಈ ತಿಂಗಳಿನಲ್ಲೇ ಪ್ರಕಟಿಸಲಾಗುವುದು.

'ಸಿ' ಸಂಸ್ಥಾನಗಳು ಕೇವಲ ಸ್ಥಳೀಯ ಸಂಸ್ಥೆಗಳು

ಭಾರತದಲ್ಲಿರುವ 'ಸಿ' ಸಂಸ್ಥಾನಗಳಿಗೆ ಯಾವ ಸ್ವಾತಂತ್ರ್ಯವೂ ಇರದೆ, ಕೇಂದ್ರ ಹಣಕಾಸಿನ ಶಾಖೆಯ ಅಧೀನದಲ್ಲಿದ್ದು, ಕೇವಲ ಸ್ಥಳೀಯ ಸಂಸ್ಥೆಗಳಂತೆ ಇವೆಯೆಂದು ಹಿಮಾಚಲ ಪ್ರದೇಶದ ಮುಖ್ಯಮಂತ್ರಿ ಡಾ|| ವೈ.ಎಸ್. ಪಾರ್ಮರ್‌ರವರು ಟೀಕೆ ಮಾಡಿದ್ದಾರೆ.

ಅಮೆರಿಕಾ-ಪಾಕ್ ಮಿಲಿಟರಿ ಒಪ್ಪಂದ ವಿಷಯ

ಪಾಕೀಸ್ತಾನ ಮತ್ತು ಅಮೆರಿಕಾ ಸೇನಾ ಒಪ್ಪಂದ ವಿಷಯದಲ್ಲಿ ಭಾರತವು ತನ್ನ ಅಭಿಮತವನ್ನು ಪಾಕೀಸ್ತಾನಕ್ಕೆ ತಿಳಿಸುವುದಾಗಿ ವರದಿಯಾಗಿದೆ. ಈ ವಿಷಯದಲ್ಲಿ ಅಲ್ಲಿರುವ ಭಾರತ ಹೈ ಕಮಿಷನರ್‌ರವರು ಪಾಕ್ ಪ್ರಧಾನಿಯನ್ನು ಭೇಟಿ ಮಾಡಿದ್ದರೆಂದು ತಿಳಿಯಬರುತ್ತದೆ.

ಕಾಂಗ್ರೆಸ್ಸಿಗೆ ತಾಂಡನ್ ರಾಜೀನಾಮೆ ?

ಭಾರತ ಸರ್ಕಾರದ ವಿದೇಶಾಂಗ ನೀತಿಯಬಗ್ಗೆ ಭಿನ್ನಾಭಿಪ್ರಾಯವನ್ನು ಹೊಂದಿರುವ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷರಾದ ಪಾರ್ಲಿಮೆಂಟ್ ಸದಸ್ಯ ಶ್ರೀ ಪುರುಷೋತ್ತಮದಾಸ್ ತಾಂಡನ್ನರು ಕಾಂಗ್ರೆಸ್ಸಿಗೆ ರಾಜೀನಾಮೆ ಕೊಡುವರೆಂದು ಹೇಳಲಾಗುತ್ತಿದೆ. ಅವರು ಪಾರ್ಲಿಮೆಂಟನಲ್ಲಿ ವಿರೋಧ ಪಕ್ಷವನ್ನು ರಚಿಸುವರೆಂದೂ ಗೊತ್ತಾಗಿದೆ.

ಭಾರತಾದ್ಯಂತ ಏಕರೀತಿ ಮಾರಾಟ ತೆರಿಗೆ

ಭಾರತಾದ್ಯಂತ ಏಕರೀತಿ ಮಾರಾಟ ತೆರಿಗೆಯನ್ನು ವಿಧಿಸುವ ವಿಷಯದಲ್ಲಿ ಕೇಂದ್ರ ಸರ್ಕಾರವು ಸದ್ಯದಲ್ಲಿಯೇ ಒಂದು ಅಂತ್ಯ ತೀರ್ಮಾನವನ್ನು ಮಾಡುವುದಾಗಿ ತಿಳಿಯಬರುತ್ತದೆ.

ಈ ವಿಷಯದಲ್ಲಿ ಕೇಂದ್ರವು ಎಲ್ಲಾ ಪ್ರಾಂತ್ಯಗಳ ಅಭಿಪ್ರಾಯವನ್ನು ಸಂಗ್ರಹಿಸುತ್ತಲಿದೆ.

ವಿಜ್ಞಾನ ಸಮ್ಮೇಳನ

ಮುಂದಿನ ತಿಂಗಳು ಹೈದರಾಬಾದಿನಲ್ಲಿ ನಡೆಯಲಿರುವ ವಿಜ್ಞಾನ ಸಮ್ಮೇಳನದಲ್ಲಿ ಭಾಗವಹಿಸಲು ವಿದೇಶೀಗಳ ೨೦ ವಿಜ್ಞಾನಿಗಳು ಮತ್ತು ಭಾರತದ ಸುಮಾರು ೨೦೦೦ ವಿಜ್ಞಾನಿಗಳು ಸೇರುವರೆಂದು ತಿಳಿಯಬರುತ್ತದೆ.

ಅಣುಶಕ್ತಿ ಹತೋಟಿಗೆ ಸಮಿತಿ

ಅಣುಶಕ್ತಿಗಳ ಹತೋಟಿಗೆ ವಿಶ್ವ ರಾಷ್ಟ್ರಗಳ ಸಮಿತಿಯೊಂದನ್ನು ರಚಿಸಬೇಕೆಂದು ಅಮೆರಿಕಾಧ್ಯಕ್ಷ ಐಸೆನ್ ಹೋವರ್‌ರವರು ಮಾಡಿದ ಸಲಹೆಯನ್ನು ವಿಶ್ವದ ಅನೇಕ ಪ್ರಮುಖನಾಯಕರು ಸ್ವಾಗತಿಸಿದ್ದಾರೆ.

ಆಸ್ತಿ ಪಾಸ್ತಿಗಳ ಹಂಚಿಕೆ

ಮೈಸೂರು, ಆಂಧ್ರ ಮತ್ತು ಮದ್ರಾಸ್ ಪ್ರಾಂತ್ಯಗಳು ತಮ್ಮ ನಡುವೆ ಆಸ್ತಿ ಮತ್ತು ಹೊರೆಯ ಹಂಚಿಕೆಯ ಕಾರ್ಯವನ್ನು ಮುಂದಿನ ತಿಂಗಳು ಕೊನೇ ವಾರದಲ್ಲಿ ಆರಂಭಿಸಲಿವೆ.

ನಿಕ್ಸನ್ ಟೆಹರಾನಿನಲ್ಲಿ

ಅಮೆರಿಕಾ ಉಪಾಧ್ಯಕ್ಷ ಮಿ|| ನಿಕ್ಸನ್‌ರವರು ಪಾಕೀಸ್ತಾನದಲ್ಲಿ ತಮ್ಮ ಪ್ರವಾಸವನ್ನು ಮುಗಿಸಿಕೊಂಡು ಕರಾಚಿಯಿಂದ ಟೆಹರಾನೆಗೆ ತೆರಳಿದ್ದಾರೆ.

ಕಡ್ಡಾಯ ಸೈನ್ಯ ಶಿಕ್ಷಣ

ಸಾರ್ವತ್ರಿಕ ಸೈನಿಕ ಶಿಕ್ಷಣವನ್ನು ನಾಗರಿಕರಿಗೆ ಒದಗಿಸಿ-ಎಂದು ಭಾರತ ಕಮ್ಯೂನಿಸ್ಟ್ ಪಕ್ಷವು ಕೇಂದ್ರ ಸರ್ಕಾರವನ್ನು ಕೇಳಿದೆ.

ಪಾಕ್ ಪ್ರಧಾನಿ ಮನೆಯ ಮುಂದೆ ಉಪವಾಸ ಮುಷ್ಕರವೇ ?

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವಿನ ಮಿಲಿಟರಿ ಒಪ್ಪಂದದ ವಿಷಯದಲ್ಲಿ ಅಲ್ಲಿಯ ಪ್ರಧಾನಿ ಮಿ॥ ಮಹಮುದ್ ಅಲಿಯವರು ವಿವರವಾಗಿ ನಿಜಾಂಶವನ್ನು ಜನತೆಗೆ ಹೊರಗೆಡಹದಿದ್ದರೆ ತಾವು ಅವರ ಮನೆಯಮುಂದೆ ಉಪವಾಸ ಸತ್ಯಾಗ್ರಹವನ್ನು ನಡೆಸುವುದಾಗಿ ಕರಾಚಿಯ ಪ್ರಮುಖ ಪತ್ರಿಕೆಯ ಸಂಪಾದಕರು ಪಾಕ್ ಪ್ರಧಾನಿಯವರಿಗೆ ತಿಳಿಸಿರುವುದಾಗಿ ವರದಿಯಾಗಿದೆ.

ಮುಸ್ಲಿಮೇತರರು ಪಾಕ್ ಪ್ರಧಾನಿಯಾಗಬಹುದು

ಪಾಕೀಸ್ತಾನವು ಇಸ್ಲಾಮಿಕ್ ರಾಜ್ಯವೆನ್ನುವುದನ್ನು ಸೂಚಿಸುವ ಕುರುಹಾಗಿ ಅಲ್ಲಿಯ ರಾಷ್ಟ್ರಾಧ್ಯಕ್ಷರು ಮುಸ್ಲಿಮರಾಗಿರಬೇಕೆಂದು ತೀರ್ಮಾನಿಸಲಾಗಿದೆ. ಆದರೆ ಅಲ್ಲಿಯ ಪ್ರಧಾನಿಯು ಸಹ ಮುಸ್ಲಿಮೇತರಾಗುವುದಕ್ಕೆ ಯಾವ ನಿರ್ಬಂಧವೂ ಇಲ್ಲ. ಎಂದು ಪಾಕ್ ರಾಜ್ಯಾಂಗ ಸಭೆ ಅಧ್ಯಕ್ಷರು ಹೇಳಿದ್ದಾರೆ.

ಬರೋಡಾ ರಾಜರ ಉದಾರತ್ವ

ದೇಶದ ಅಭಿವೃದ್ಧಿ ಕಾರ್ಯಗಳಲ್ಲಿ ಮಾಜಿ ಅರಸರು ಪಾತ್ರವಹಿಸುವ ವಿಷಯದಲ್ಲಿ ತಮಗೆ ಪ್ರಧಾನಿ ನೆಹರೂರವರು ಯಾವ ರೀತಿ ಸಲಹೆಯನ್ನು ಕೊಟ್ಟರೆ ಅದನ್ನು ತಾವು ಅಂಗೀಕರಿಸುವುದಾಗಿ ಬರೋಡಾ ಮಹಾರಾಜರು ತನ್ನ ರಾಜಾದಾಯವನ್ನು ಬೋತಾವನಾಡಿಕೊಳ್ಳುವ ವಿಷಯದಲ್ಲಿ ಪ್ರಧಾನಿಗೆ ಉತ್ತರವಿತ್ತಿದ್ದಾರೆ.

೭೫೦೦೦ ರೂ. ಪ್ಲಾಸ್ಟಿಕ್ ಷೀಟುಗಳ ಭಸ್ಮ

ನಿನ್ನೆ ರಾಜಕೋಟೆಯ ಜಾಮನಗರದಲ್ಲಿ ಅಗ್ನಿ ಅನಾಹುತ ವುಂಟಾಗಿ ೭೫೦೦೦ ರೂ. ಬೆಲೆಬಾಳುವ ಪ್ಲಾಸ್ಟಿಕ್ ಷೀಟುಗಳು ಭಸ್ಮವಾಗಿವೆ. ಇದರ ಫಲವಾಗಿ ಟೆಲಿಫೋನ್ ಮತ್ತು ತಂತಿ ವ್ಯವಸ್ಥೆ ಕೆಲವು ಗಂಟೆಗಳ ಕಾಲ ನಿಂತುಹೋಗಿದ್ದಿತು.

ಸಂಸ್ಕೃತಿ ಪ್ರಚಾರ ದಿನಾಚರಣೆ

ಮೈಸೂರು ೧೦

ಇದೇ ೧೬ ನೇ ತಾರೀಖು ಟೌನ್‌ಹಾಲಿನಲ್ಲಿ ನಡೆಯುವ ಸಾಂಸ್ಕೃತಿ ಪ್ರಚಾರ ವಾರ್ಷಿಕೋತ್ಸವದ ಸಮಾರಂಭದಲ್ಲಿ ಸಚಿವ ಡಾ॥ ನಾಗನ ಗೌಡರು ಇಲ್ಲಿ ಭಾಗವಹಿಸುವರು.

ರಾಮನಗರಂ ತಾಲ್ಲೂಕು ಲಕ್ಕಪ್ಪನ ಹಳ್ಳಿಯಲ್ಲಿ ನಡೆಯುವ ಸಮಾರಂಭದಲ್ಲಿ ಶ್ರೀಮನ್ಮಹಾರಾಜರವರು ಭಾಗವಹಿಸುವರು ಮುಖ್ಯಮಂತ್ರಿಗಳು ಅಧ್ಯಕ್ಷತೆ ವಹಿಸುವರು.

ಟ್ರಾಕ್ಟರು ಕೊಳ್ಳಲು ಸಾಲ

ಟ್ರಾಕ್ಟರು ಮತ್ತು ಇತರ ಉಪಕರಣಗಳನ್ನು ಕೊಳ್ಳಲು ವಿಧಾಯಕವಾದ ನಿಯಮಗಳಿಗೆ ಅನುಗುಣವಾಗಿ ಪ್ರತಿಯೊಬ್ಬ ರೈತನಿಗೂ ೨೦ ಸಾವಿರ ರೂಪಾಯಿಗಳಿಗೆ ಮೀರದಂತೆ ಸಾಲವನ್ನು ಕೊಡುವುದಾಗಿ ಸರ್ಕಾರವು ಪ್ರಕಟಣೆಯನ್ನಿತ್ತಿದೆ. ಇದನ್ನು ಕೊಳ್ಳುವವರು ಸಾಲಕ್ಕಾಗಿ ಇದೇ ಮಾಹೆ ೩೧ನೇ ತಾರೀಖಿನೊಳಗೆ ಆಹಾರೋತ್ಪತ್ತಿ ಕಮೀಷನರಿಗೆ ಅರ್ಜಿಯನ್ನು ಹಾಕಿಕೊಳ್ಳಬಹುದು.

ಕಿದ್ವಾಯಿಯವರು ಮದ್ರಾಸಿನಲ್ಲಿ

ಮದ್ರಾಸ್ ಮತ್ತು ತಿರುವಾಂಕೂರ್-ಕೊಚ್ಚಿ ಪ್ರಾಂತ್ಯಗಳಿಗೆ ಅಕ್ಕಿ ಪೂರೈಕೆಯ ವಿಷಯದಲ್ಲಿ ಮಾತುಕತೆಗಳನ್ನು ನಡೆಸಲು ಕೇಂದ್ರ ಆಹಾರ ಸಚಿವ ಶ್ರೀ ರಫಿ ಮಹಮುದ್ ಕಿದ್ವಾಯಿಯವರು ಮದರಾಸಿಗೆ ಆಗಮಿಸಿದ್ದಾರೆ.

ಅಲ್ಪ ಹಣ ಉಳಿತಾಯ

ಅಲ್ಪ ಹಣ ಉಳಿತಾಯ ಯೋಜನೆಯಲ್ಲಿ ಕಳೆದ ೮ ತಿಂಗಳುಗಳಲ್ಲಿ ೨೧ಕೋಟಿ ರೂಪಾಯಿಗಳು ವಸೂಲಾಗಿರುವುದಾಗಿ ತಿಳಿಯಬರುತ್ತದೆ.

ರಾಜಕಮಲ್, ಮೈಸೂರು

11—12—53 ರಿಂದ ಆಮೋಘ ಪ್ರಾರಂಭ

ಪ್ರಸಾದ್ ಆರ್ಟ್ಸ್‌ರವರ:—

ಪೆಂಪುಡು ಕೊಡಕು (ತೆಲುಗು)

(ಸಾಕುಮಗ)

ಭೂಮಿಕೆ:—ಸಾವಿತ್ರಿ, ಪುಷ್ಪವಲ್ಲಿ, ಬಾಲಸರಸ್ವತಿ, ಶಿವಾಜಿ ಗಣೇಶ್, ಎಸ್. ವಿ. ರಂಗರಾವ್, ಪ್ರಸಾದ್. ನಿರ್ದೇಶನ:—ಪ್ರಸಾದ್.

ವಿಶ್ವದಾದ್ಯಂತ ಮಾನವ ಹಕ್ಕುಗಳ ದಿನಾಚರಣೆ

ವಿಶ್ವದಾದ್ಯಂತ ಮಾನವ ಹಕ್ಕುಗಳ ೫ ನೇ ವಾರ್ಷಿಕೋತ್ಸವವನ್ನು ಈ ದಿನ ಆಚರಿಸಲಾಗುತ್ತದೆ.

ಆರ್ಥಿಕ, ಸಾಮಾಜಿಕ, ಪೌರ ಮುಂತಾದ ಹಕ್ಕುಗಳು ವಿಶ್ವದಲ್ಲಿ ಎಲ್ಲಾ ಜನತೆಗೂ ಸಮಾನವಾಗಿ ಅನ್ವಯಿಸುವಂತೆ ಇರಬೇಕೆಂದು ವಿಶ್ವಸಂಸ್ಥೆಯು ಹಿಂದೆ ಪ್ಯಾರಿಸಿನಲ್ಲಿ ನಡೆಸಿದ ತನ್ನ ಅಧಿವೇಶನದಲ್ಲಿ ಸರ್ವಾನುಮತದಿಂದ ನಿರ್ಧರಿಸಿತು.

ಇದರ ಬಗ್ಗೆ ಪ್ರಗತಿಯು ಹೇಗೆ ನಡೆದಿದೆಯೆಂಬುದನ್ನು ಗಮನಿಸಿ ಈ ಸಮಾನ ಹಕ್ಕು ಎಲ್ಲರಿಗೂ ಉಂಟಾಗುವಂತೆ ಮಾಡುವುದೇ ಈ ವಾರ್ಷಿಕೋತ್ಸವದ ಗುರಿಯಾಗಿದೆ.

ಪ್ರಕಾಶಕರು ಮತ್ತು ಮುದ್ರಕರ.
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಗಾಂಧಿ ಸ್ಮಾರಕಕ್ಕೆ ಸಹಾಯ

ನೈರೋಬಿಯಾದಲ್ಲಿ ಅಲ್ಲಿನ ಕೆನ್ಯಾ ಸರ್ಕಾರ ಮತ್ತು ಭಾರತೀಯರ ಸ್ಥಾಪಿಸಲಿರುವ ಗಾಂಧಿ ಸ್ಮಾರಕ ಪರಿಷತ್ತಿನ ಸಹಾಯವಾಗಿ ಭಾರತದ ಗಾಂಧಿಸ್ಮಾರಕ ನಿಧಿಯ ಟ್ರಸ್ಟಿನವರು ೧೫ ಲಕ್ಷ ರೂ. ಕೊಡಲು ನಿರ್ಧರಿಸಿದ್ದಾರೆ.

ರಣಜಿತ್

10—12—53 ರಿಂದ ಎರಡನೇವಾರ

ರೇಲ್ ಕ ಡಿಬ್ಬ

(ಹಿಂದಿ)

ಪಾತ್ರ:—ಮಧುಬಾಲ, ಶಮ್ಮಿ ಕಪೂರ್, ಸಜ್ಜನ್ ಮತ್ತು ಓಂಪ್ರಕಾಶ್.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು !

ಬಹುಕಾಲ ಬಾಳಿಕೆಬರುವವು !

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು !!!

* * * * *

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಹಳಿಗಳು (FLATS) ದುಂಡು ಮತ್ತು ಚೌಕ ಸಲಾಕಿಗಳು (ROUNDS & SQUARES) ಕೋನ ಕಂಬಿಗಳು (ANGLES) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (REINFORCING RODS) ಮತ್ತು ಬೀಲುಪಟ್ಟಿಗಳು (HOOPS)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು

ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರಖಾನೆ, ಭದ್ರಾವತಿ.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೯೧

೧೧-೧೨-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮೈಸೂರು ಪುರಸಭಾ ಚುನಾವಣೆ

ತಾತ್ಕಾಲಿಕ ತಡೆಗೆ ಸರ್ಕಾರಕ್ಕೆ ಅರ್ಜಿ

ಮೈಸೂರು ೧೧

ಮೈಸೂರು ಪುರಸಭೆಯ ಚುನಾವಣೆಗೆ ಶ್ರೀ ರಾಮಲಿಂಗಂರವರು ಸಲ್ಲಿಸಿದ್ದ ಉಮೇದುವಾರಿಕೆ ಅರ್ಜಿಯನ್ನು ರಿಟರ್ನಿಂಗ್ ಅಫಿಸರಿಗಳು ತಿರಸ್ಕರಿಸಿದ್ದು ಅಕ್ರಮವೆಂದು ಹೈಕೋರ್ಟಿನಲ್ಲಿ ರಿಟ್ ಅರ್ಜಿಯನ್ನು ಅವರು ಸಲ್ಲಿಸಿರುವುದರಿಂದ, ಅದು ಇತ್ಯರ್ಥವಾಗುವವರೆಗೂ, ಈಗ ನಡೆಸಿರುವ ಚುನಾವಣೆಗೆ ಸರ್ಕಾರವು ಮನ್ನಣೆ ಕೊಡುವುದನ್ನು ತಾತ್ಕಾಲಿಕವಾಗಿ ತಡೆ ಕೊಡಬೇಕೆಂದು ಪ್ರಾರ್ಥಿಸಿ ರಾಜಧಾನಿಯ ಶ್ರೀಗಳಾದ ಎ.ಎಸ್. ರಾಮಯ್ಯ ಮತ್ತು ತಗಡೂರು ರಾಮಚಂದ್ರರಾಯರು ಸರ್ಕಾರದ ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗೆ ಒಂದು ಪತ್ರವನ್ನು ಬರೆದಿದ್ದಾರೆ.

ಭಾರತಕ್ಕೆ ಅಮೆರಿಕದ ಚರ್ಚಾಕೂಟದ ತಂಡ

ಭಾರತದಲ್ಲಿ ಹತ್ತುವಾರಗಳ ಕಾಲ ಪ್ರವಾಸಮಾಡಿ, ಚರ್ಚಾಕೂಟದಲ್ಲಿ ಭಾಗವಹಿಸಲು, ಪ್ರಪ್ರಥಮವಾಗಿ ಅಮೆರಿಕದಿಂದ ಇಬ್ಬರು ವಿದ್ಯಾರ್ಥಿ ತಂಡವೊಂದನ್ನು ಕಳುಹಿಸಲಾಗಿದೆ: ಕೊಲಂಬೋ ವಿದ್ಯಾನಿಲಯದ ೨೪ ವರ್ಷದ ನಿಗ್ರೋ ಜನಾಂಗದ ಹಾರ್ಲೆಂಡ್ ರಾಂಡಾಲ್ಫ್ ಮತ್ತು ಇಲಿನಾಯ್ ವಿಶ್ವವಿದ್ಯಾನಿಲಯದ ೨೧ ವರ್ಷದ ಜಾರ್ಜ್ ಫಿಲಿಪ್ಸ್ ಎಂಬುವರು ನಿನ್ನೆ ಬೊಂಬಾಯಿಗೆ ಆಗಮಿಸಿದರು. ಅವರು ಮದ್ರಾಸ್, ಬೊಂಬಾಯಿ, ಹೈದರಾಬಾದ್, ನಾಗಪುರ, ಕಲ್ಕತ್ತ, ದೆಹಲಿ ಮುಂತಾದ ೩೨ ನಗರಗಳಿಗೆ ಭೇಟಿಇತ್ತು, ಅಲ್ಲಿ ರಾಜಕೀಯ ಮತ್ತು ಆರ್ಥಿಕ ವಿಷಯಗಳ ಮೇಲಿನ ಚರ್ಚಾಕೂಟದಲ್ಲಿ ಭಾಗವಹಿಸುವರು.

ಮದ್ರಾಸಿಗೆ ಕಾಶ್ಮೀರದ ರಾಜರ ಭೇಟಿ

ಕಾಶ್ಮೀರದ ಸದರ್-ಇ-ರಿಯಾಸತ್ ರಾದ ಶ್ರೀ ಕರಣ್‌ಸಿಂಗ್‌ರವರು ಮುಂದಿನ ತಿಂಗಳು ಮದರಾಸ್, ಬೊಂಬಾಯಿ ಮತ್ತು ಕಲ್ಕತ್ತೆಗಳಿಗೆ ಭೇಟಿಕೊಡಲಿದ್ದಾರೆ.

ಬೆಂಗಳೂರಿನಲ್ಲಿ ಫೌಂಟೆನ್‌ಪೆನ್ ಕಾರ್ಖಾನೆ

೫ ಲಕ್ಷ ರೂ. ಬಂಡವಾಳದಲ್ಲಿ ಒಂದು ಫೌಂಟೆನ್‌ಪೆನ್ ಮತ್ತು ಮಸಿ ತಯಾರಿಕೆ ಕಾರ್ಖಾನೆಯನ್ನು ಬೆಂಗಳೂರಿನಲ್ಲಿ ಇಷ್ಟರಲ್ಲೇ ಸ್ಥಾಪಿಸಲಾಗುವುದೆಂದು ಹೇಳಲಾಗಿದೆ.

ಪುರಸಭೆಯ ವಿಶೇಷ ಅಧಿವೇಶನ

ಮೈಸೂರು ೧೧

ಮೈಸೂರು ಪುರಸಭೆಯ ವಿಶೇಷ ಅಧಿವೇಶನವು ನಿನ್ನೆ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಪುರಸಭಾ ಸದಸ್ಯರಾಗಿದ್ದ ಶ್ರೀ ಟಿ. ನಾರಾಯಣಪ್ಪನವರ ನಿಧನದ ಬಗ್ಗೆ ಸಂತಾಪ ಸೂಚಿಸುವ ನಿರ್ಣಯ ಮಾಡಲಾಯಿತು.

ನೀರಿನ ಕಂದಾಯ ಹೆಚ್ಚಿಸಿರುವುದು ಅಕ್ರಮವೆಂದು ಶ್ರೀಗಳಾದ ತಗಡೂರು ರಾಮಚಂದ್ರರಾವ್, ಎ. ಎಸ್. ರಾಮಯ್ಯ ಮುಂತಾದವರು ಹೈಕೋರ್ಟಿನಲ್ಲಿ ಹೂಡಿರುವ ದಾವಾದ ಬಗ್ಗೆ ಪ್ರತಿ ಪ್ರಮಾಣಪತ್ರವನ್ನು ಸರ್ಕಾರವು ದಾಖಲುಮಾಡಲು ಸಂಬಂಧಪಟ್ಟ ವಿಷಯಗಳನ್ನು ಕೊಡಲು ಪುರಸಭೆಯ ಪರವಾಗಿ ರೆವಿನ್ಯೂಆಫೀಸರ್ ಮತ್ತು ಮುನಿಸಿಪಲ್ ಅಡ್ವೋಕೇಟರನ್ನು ಕಳುಹಿಸಬೇಕೆಂದು ತೀರ್ಮಾನಿಸಿತು.

ಅಮರಾವತಿ ಜಲಾಶಯ ಯೋಜನೆ

ಕೊಯಮುತ್ತೂರು ಜಿಲ್ಲೆಯ ಅಮರಾವತಿಯಲ್ಲಿ ೨ ಕೋಟಿ ೮೨ ಲಕ್ಷ ರೂ.ಗಳ ವೆಚ್ಚದಲ್ಲಿ ಕಟ್ಟಲಾಗುವ ಜಲಾಶಯ ಯೋಜನೆಯ ಪ್ರಾರಂಭೋತ್ಸವವನ್ನು ಮದ್ರಾಸ್ ಮುಖ್ಯಮಂತ್ರಿ ಶ್ರೀ ರಾಜಾಜಿಯವರು ನಿನ್ನೆ ನೆರವೇರಿಸಿದರು. ಇದರಿಂದ ೧೫ ಸಾವಿರ ಎಕರೆ ಜಮೀನು ಸಾಗುವಳಿಗೆ ಒದಗಲಿದೆ. ೧೯೪೮ರಲ್ಲಿ ೧½ ಕೋಟಿ ರೂ.ಗಳ ಖರ್ಚಿನಲ್ಲಿ ಲೋಯರ್ ಭವಾನಿ ಯೋಜನೆ ಪ್ರಾರಂಭವಾಗಿ ಅದರ ಕೆಲಸ ಮುಗಿಯುವುದರಲ್ಲಿದೆ. ಇದರಿಂದ ೨ ಲಕ್ಷ ಎಕರೆ ಜಮೀನಿಗೆ ನೀರಿನ ಸರಬರಾಜಾಗುತ್ತದೆ. ಅಮರಾವತಿ ಜಲಾಶಯ ೩೨೭೫ ಅಡಿ ಉದ್ದ ಇರುವುದು.

ಪತ್ನಿಯ ಕೊಲೆಪಾತಕನ ದಸ್ತಗಿರಿ

ತುಮಕೂರು ಕಾಲೇಜಿನ ವಿದ್ಯಾರ್ಥಿ ತಿಮ್ಮಯ್ಯ ಎಂಬುವರ ೧೮ ವರ್ಷದ ಹೆಂಡತಿ ತಿಮ್ಮಕ್ಕ ಎಂಬಾಕೆಯ ಕೊಲೆ ಆಗಿ, ಆಕೆಯ ಶವವು ಭಾವಿಯೊಂದರಲ್ಲಿ ಪತ್ತೆಆಗಿ, ಈಗ ಗುಮಾನಿ ಮೇಲೆ ಆ ವಿದ್ಯಾರ್ಥಿಯನ್ನು ಪೊಲೀಸರು ದಸ್ತಗಿರಿ ಮಾಡಿದ್ದಾರೆ.

ಗುಜರಾತಿ ಮಾಧ್ಯಮ ಶಿಕ್ಷಣ

ಗುಜರಾತ್ ವಿಶ್ವವಿದ್ಯಾನಿಲಯದ ಎಲ್ಲ ಕಾಲೇಜುಗಳಲ್ಲೂ ೧೯೫೫ ರಿಂದ ಗುಜರಾತಿಯನ್ನು ಮಾಧ್ಯಮ ಶಿಕ್ಷಣವನ್ನಾಗಿ ಜಾರಿಗೆ ತರಲು ವಿಶ್ವವಿದ್ಯಾನಿಲಯ ನಿರ್ಧರಿಸಿದೆ.

ಅಂತರರಾಷ್ಟ್ರೀಯ ಕುಸ್ತಿಪಂದ್ಯ

ಮೈಸೂರು ೧೧

ರಾಜಧಾನಿಯ ದೊಡ್ಡಕೆರೆ ಮೈದಾನದಲ್ಲಿ ಕಟ್ಟಲಾಗಿರುವ ಸ್ಟೇಡಿಯಂನಲ್ಲಿ ನಿನ್ನೆ ಸಂಜೆ ಅಂತರರಾಷ್ಟ್ರೀಯ ಕುಸ್ತಿ ಪಂದ್ಯಗಳು ನಡೆದುವು.

ಓರಿಯಂಟಲ್ ಛಾಂಪಿಯನ್ ಕಿಂಗ್‌ಕಾಂಗ್‌ಗೂ ಭಾರತದ ಹೀರೋ ನಂ. ೧ ದಾರಾಸಿಂಗ್‌ಗೂ ಪಂದ್ಯವು ೭ ರೌಂಡ್‌ಗಳು ನಡೆದು ಪಂದ್ಯವು ಸಮವಾಯಿತು.

ಫ್ಲಾಷ್‌ಗಾರ್ಡನ್ ಮತ್ತು ಸ್ಪೇನಿನ ಮಾರ್ಸಿಯಾನೋರವರಿಗೆ ನಡೆದ ಪಂದ್ಯದಲ್ಲಿ ಫ್ಲಾಷ್ ಗಾರ್ಡನ್ನಿಗೆ ಜಯಲಭಿಸಿತು.

ಭಾರತದ ಮಾದರಿ ಕುಸ್ತಿಯಲ್ಲಿ ಕರೂರಿನ ಕನಕಸುಂದರಂರವರು ಬೋರ್ನಿಯಾದ ಸರಬನ್ ದಾಸರನ್ನು ಸೋಲಿಸಿದರು. ಮತ್ತೊಂದು ಪಂದ್ಯದಲ್ಲಿ ಕೊಲ್ಲಾಪುರದ ಅಪ್ಪಣ್ಣನವರು ಕೃಷ್ಣಪ್ರಸಾದರನ್ನು ಸೋಲಿಸಿದರು.

ಕೋತಿಗಳ ರಫ್ತು

ಈ ವರ್ಷದ ಏಪ್ರಿಲ್‌ನಿಂದ ಸೆಪ್ಟೆಂಬರ್ ವರೆಗೆ ೪೫೭೭ ಕೋತಿಗಳನ್ನು ಪರದೇಶಗಳಿಗೆ ರಫ್ತುಮಾಡಲಾಗಿದೆ. ಏಪ್ರಿಲ್‌ನಿಂದ ಆಗಸ್ಟ್‌ವರೆಗೆ ಅವುಗಳನ್ನು ವಿಮಾನಗಳ ಮೂಲಕ ಹೊರತು ಇನ್ನಾವ ವಿಧದಲ್ಲೂ ರವಾನಿಸುವುದನ್ನು ಪ್ರತಿಬಂಧಿಸಲಾಗಿದೆ. ಬಿಸಲು ಕಾಲದಲ್ಲಿ ಅವುಗಳನ್ನು ರವಾನಿಸುವುದರಿಂದ ಅದಕ್ಕೆ ಹೆಚ್ಚು ಅಪಾಯ ಮತ್ತು ಕಷ್ಟವುಂಟಾಗುವುದು—ಎಂದು ಕೇಂದ್ರ ಆಹಾರ ಸಚಿವರು ತಿಳಿಸಿದ್ದಾರೆ.

ಟೆಲಿಫೋನ್ ಕೇಬಲ್ ಕಾರ್ಖಾನೆ

ಚಿತ್ತರಂಜನ ರೈಲ್ವೆ ಕಾರ್ಖಾನೆಗೆ ಸಮೀಪದಲ್ಲಿರುವ ನಾರಾಯಣ ಪುರದಲ್ಲಿ ೧ ಕೋಟಿ ೧೦ ಲಕ್ಷ ರೂ.ಗಳ ವೆಚ್ಚದಲ್ಲಿ ಕೇಂದ್ರ ಸರ್ಕಾರವು ನಿರ್ಮಿಸುತ್ತಲಿರುವ ಟೆಲಿಫೋನ್ ಕೇಬಲ್ ಕಾರ್ಖಾನೆಯ ಕೆಲಸವು ಮುಂದಿನ ಫೆಬ್ರವರಿ ತಿಂಗಳಿನಿಂದ ಪ್ರಾರಂಭವಾಗಲಿದೆಯೆಂದು, ಹೇಳಲಾಗಿದೆ. ಇದರಿಂದ ಭಾರತವು ವರ್ಷಂಪ್ರತಿ ೮೦ಲಕ್ಷ ರೂ.ಗಳ ಕೇಬಲನ್ನು ಆಮದು ಮಾಡಿಕೊಳ್ಳುತ್ತಿರುವುದು ನಿಲ್ಲುವುದು.

ರಾಜ್ಯಾಂಗ ತಿದ್ದುಪಡಿ ಖಾಸಗೀ ಮಸೂದೆ

ಭಾರತದ ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕೆಂದು ಪಾರ್ಲಿಮೆಂಟಿನ ೪ ಜನ ಖಾಸಗೀ ಸದಸ್ಯರು ಪಾರ್ಲಿಮೆಂಟಿನ ಸಮಿತಿಯು ಸಾಧುವಲ್ಲವೆಂದು ತಳ್ಳಿಹಾಕಿದೆ.

ಮುನ್ಸೀಫರುಗಳ ನೇಮಕದ ಬಗ್ಗೆ ಹೊಸ ಯೋಜನೆ

ಮುನ್ಸೀಫರುಗಳನ್ನು ನೇಮಿಸುವಾಗ ಹೈಕೋರ್ಟಿನವರು ತಯಾರಿಸಿ ಕಳುಹಿಸಿದ್ದ ಪಟ್ಟಿಯ ಮೇಲೆ ಸರ್ಕಾರದವರು ಇಲ್ಲಿಯವರೆಗೆ ಕ್ರಮ ತೆಗೆದುಕೊಳ್ಳುತ್ತಿದ್ದರು ಆದರೆ ಅದನ್ನು ಬಿಟ್ಟು ರಾಜ್ಯಾಂಗದ ೩೨೪ನೇ ಕಲಂ ಪ್ರಕಾರ ಹೊಸ ನಿಬಂಧನೆಗಳನ್ನು ರಚಿಸಿ, ಅದರಂತೆ ರಾಜಪ್ರಮುಖರು ಪಬ್ಲಿಕ್ ಸರ್ವಿಸ್ ಕಮೀಷನ್ ಸಲಹೆ ಮೇರೆ ಮುನ್ಸೀಫರನ್ನು ನೇಮಿಸಿಕೊಳ್ಳಲು ಸರ್ಕಾರ ಆಲೋಚಿಸಿದೆ. ಇತ್ತೀಚೆಗೆ ಮೈಸೂರು ಹೈಕೋರ್ಟಿನವರು ಕಳುಹಿಸಿದ್ದ ೨೧ ಜನ ಅಡ್ವೋಕೇಟರುಗಳ ಪಟ್ಟಿಯನ್ನು ಸರ್ಕಾರವು ಅಂಗೀಕರಿಸಲಿಲ್ಲವೆಂದು ಹೇಳಲಾಗಿದೆ.

ಕಾರ್ಪೊರೇಷನ್ ಕೆಲಸಗಾರರ ಪ್ರತಿಭಟನೆ

ಬೆಂಗಳೂರು ಕಾರ್ಪೊರೇಷನ್ ಆರೋಗ್ಯ ಮತ್ತು ತೋಟಗಳ ಶಾಖೆಯ ಸುಮಾರು ೨೫೦೦ ಮಂದಿ ಕೆಲಸಗಾರರು ತಮ್ಮ ೩ ವರ್ಷಗಳಿಂದ ಬಡ್ತಿ ಮತ್ತು ಉಡುಪನ್ನು ಕೊಟ್ಟಿಲ್ಲವೆಂದು ನಿನ್ನೆ ಪ್ರತಿಭಟನೆ ಸೂಚಿಸಿ ತಮ್ಮ ಸಂಬಳವನ್ನು ಪಡೆಯಲು ನಿರಾಕರಿಸಿದರು.

ಟಾಂಡನ್‌ರಿಂದ ಹೊಸ ವಿರುದ್ಧ ಪಕ್ಷ ರಚನೆ

ಅಖಿಲ ಭಾರತ ಕಾಂಗ್ರೆಸ್ ಮಾಜಿ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಾಂಡನ್‌ರವರು ಕಾಂಗ್ರೆಸ್ಸಿಗೆ ರಾಜೀನಾಮೆ ಇತ್ತು, ಒಂದು ಹೊಸ ವಿರುದ್ಧ ಪಕ್ಷವನ್ನು ರಚಿಸಲಿದ್ದಾರೆಂದು ಹೇಳಲಾಗಿದೆ.

ಭಾರತದಲ್ಲಿ ಅಣು ಯುದ್ಧ ಶಿಕ್ಷಣ ಇಲ್ಲ

ಭಾರತೀಯ ಸೈನಿಕರಿಗೆ ಅಣು ಶಕ್ತಿ ಯುದ್ಧದ ಶಿಕ್ಷಣವನ್ನು ಕೊಡಲು ಕೇಂದ್ರ ಸರ್ಕಾರ ಯೋಚಿಸಿಲ್ಲವೆಂದು ಪಾರ್ಲಿಮೆಂಟಿನಲ್ಲಿ ರಕ್ಷಣಾಸಚಿವರು ತಿಳಿಸಿದ್ದಾರೆ.

ವಿದೇಶೀ ಕಂಪೆನಿಗಳ ಲಾಭ

ಭಾರತದಲ್ಲಿರುವ ವಿದೇಶಿ ಕಂಪೆನಿಗಳು ಈ ವರ್ಷದ ಜನವರಿ-ಆಗಸ್ಟ್ ತಿಂಗಳುಗಳ ಅವಧಿಯಲ್ಲಿ ಒಟ್ಟು ೧೧೮ ಕೋಟಿ ರೂ. ಸಂಪಾದಿಸಿ ಅದನ್ನು ತಮ್ಮ ದೇಶಗಳಿಗೆ ಕಳುಹಿಸಿವೆಯೆಂದು ತಿಳಿಸಲಾಗಿದೆ.

ಅಖಿಲ ಭಾರತ ವಿದ್ಯಾಭ್ಯಾಸ ಸಮ್ಮೇಳನ

ಕಲ್ಕತ್ತಾದಲ್ಲಿ ಡಿಸೆಂಬರ್ ೨೮ನೇ ತಾ॥ ನಿಂದ ೩೧ರ ವರೆಗೆ ಅಖಿಲ ಭಾರತ ವಿದ್ಯಾಭ್ಯಾಸ ಸಮ್ಮೇಳನವು ನಡೆಯುತ್ತದೆ.

ಕೋಲಾರ ಚಿನ್ನದ ಗಣಿಯಲ್ಲಿ ಕಾರ್ಮಿಕರ ಮುಷ್ಕರ

ವೇತನ ಪರಿಷ್ಕರಿಸುವ ವಿಷಯ ಮುರಿದು ಬಿದ್ದುದೇ ಕಾರಣ

ಕೋಲಾರ ಚಿನ್ನದ ಗಣಿಯಲ್ಲಿ ನಿನ್ನೆಯ ದಿನ ೧೨೦೦೦ ಕಾರ್ಮಿಕರು ಕೆಲಸಕ್ಕೆ ಹೋಗದೆ ಮುಷ್ಕರವನ್ನು ಹೂಡಿದ್ದಾರೆ. ಬೋನಸ್ಸು, ತುಟ್ಟಿ ಭತ್ಯ, ವೇತನ ಮುಂತಾದುವುಗಳನ್ನು ಪರಿಷ್ಕರಿಸುವ ವಿಷಯದಲ್ಲಿ ಕಾರ್ಮಿಕ ಮುಖಂಡರಿಗೂ ಆಡಳಿತಗಾರರಿಗೂ ನಡೆಯುತ್ತಲಿದ್ದ ಮಾತುಕತೆಗಳು ಮುರಿದು ಬಿದ್ದುದೇ ಈ ಮುಷ್ಕರಕ್ಕೆ ಕಾರಣವಾಗಿರುವುದಾಗಿ ತಿಳಿಯಬರುತ್ತದೆ.

ಪಾಕೀಸ್ತಾನಕ್ಕೆ ಭಾರತದ ಬಟ್ಟೆ

೫೦ ಲಕ್ಷ ರೂಪಾಯಿಗಳ ಬೆಲೆಬಾಳುವ ಬಟ್ಟೆಯನ್ನು ಕೊಳ್ಳಲು ಪಾಕೀಸ್ತಾನವು ಭಾರತದ ಪ್ರಮುಖ ಬಟ್ಟೆ ವ್ಯಾಪಾರಿಗಳೊಡನೆ ಸಂಧಾನ ನಡೆಸುತ್ತಲಿರುವುದಾಗಿ ತಿಳಿಯಬರುತ್ತದೆ.

ಈ ವಿಷಯದಲ್ಲಿ ವಿಚಾರ ವಿನಿಮಯ ನಡೆಸಿ ತೀರ್ಮಾನಕ್ಕೆ ಬರಲು ಕೆಲವು ವರ್ತಕರನ್ನು ಪಾಕೀಸ್ತಾನವು ಆಹ್ವಾನಿಸಿರುವುದಾಗಿ ತಿಳಿಯಬರುತ್ತದೆ

ನೂತನ ಕಟ್ಟಡಗಳ ನಿರ್ಮಾಣ

ಆಂಧ್ರ ಪ್ರಾಂತ್ಯ ರಾಜಧಾನಿಯಾದ ಕರ್ನೂಲಿನಲ್ಲಿ ಈಗ ಡೇರಾಗಳಲ್ಲಿ ವಾಸ ಮಾಡುತ್ತಿರುವುದನ್ನು ಮುಂದುವರಿಸಲು ಅಸಾಧ್ಯವಾಗಿರುವುದರಿಂದ ನೌಕರರ ಸೌಕರ್ಯಕ್ಕಾಗಿ ೫೦೦ ವಾಸಗೃಹ, ಶಾಸನಸಭಾ ಭವನ ಮತ್ತು ಕೇಂದ್ರ ಕಛೇರಿಗಳು ಇವುಗಳಿಗೆ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ತ್ವರಿತವಾಗಿ ಕೈಗೊಳ್ಳುವ ಕೆಲಸಕ್ಕೆ ಮಂತ್ರಿ ಮಂಡಲವು ಒಪ್ಪಿಗೆಯನ್ನಿತ್ತಿದೆ.

ಪಾಕೀಸ್ತಾನಕ್ಕೆ ಚೀಣಾ ಪ್ರತಿಭಟನೆ

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವೆ ಮಿಲಿಟರಿ ಒಪ್ಪಂದ ಮತ್ತು ಪಾಕೀಸ್ತಾನದಲ್ಲಿ ಅಮೆರಿಕಾ ತನ್ನ ಸೈನ್ಯ ನೆಲೆಗಳನ್ನು ಸ್ಥಾಪಿಸುವ ವಿಷಯದಲ್ಲಿ ಚೈನಾ ಜನತಾಸರ್ಕಾರವು ಪಾಕೀಸ್ತಾನಕ್ಕೆ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿರುವುದಾಗಿ ತಿಳಿಯಬರುತ್ತದೆ.

ಮದ್ರಾಸಿಗೆ ಆಂಧ್ರದಿಂದ ಅಕ್ಕಿ

ಮದ್ರಾಸಿಗೆ ಈ ವರ್ಷ ಬೇಕಾಗುವ ಅಕ್ಕಿಯಲ್ಲಿ ೨ ಲಕ್ಷ ಟನ್‌ಗಳಷ್ಟನ್ನು ಆಂಧ್ರ ಪ್ರಾಂತ್ಯವು ಸರಬರಾಜು ಮಾಡುವುದಾಗಿ ಕೇಂದ್ರ ಆಹಾರ ಸಚಿವರು ತಿಳಿಸಿದ್ದಾರೆ.

ಭಾರತ ಜನಪದ ಯೋಜನಾಧಿಕಾರಿ ಪಾಕೀಸ್ತಾನಕ್ಕೆ

ಪಾಕೀಸ್ತಾನ ಸರ್ಕಾರದ ಆಹ್ವಾನದ ಮೇಲೆ ಭಾರತದ ಜನಪದ ಯೋಜನೆಯ ಮುಖ್ಯಾಧಿಕಾರಿಗಳಾದ ಶ್ರೀ ಎಸ್. ಕೆ. ಡೇಯವರು ಕರಾಚಿಗೆ ಹೋಗಿದ್ದಾರೆ. ಅಲ್ಲಿ ಈ ಯೋಜನೆಗಳನ್ನು ಜಾರಿಗೆ ತರುವ ವಿಷಯದಲ್ಲಿ ಸಲಹೆಯನ್ನು ನೀಡಲಿರುವರೆಂದು ತಿಳಿಯಬರುತ್ತದೆ. ಈಗ ಪಾಕೀಸ್ತಾನದಲ್ಲಿ ನಡೆಯುತ್ತಲಿರುವ ವಿವಿಧ ಗ್ರಾಮಾಭಿವೃದ್ಧಿ ಕಾರ್ಯಗಳನ್ನೆಲ್ಲಾ ಅವರು ಪರಿಶೀಲಿಸುವರು.

ಹಿಂದಿ ಮತ್ತು ಪ್ರಾದೇಶಿಕ ಭಾಷೆ ಕಡ್ಡಾಯ ಬೋಧನೆ

೧೯೫೫ರ ಪ್ರಾರಂಭದಿಂದ ಬೊಂಬಾಯಿ ಪ್ರಾಂತ್ಯದಲ್ಲಿರುವ ಎಲ್ಲಾ ಸೆಕೆಂಡರಿ ಪಾಠಶಾಲೆಗಳಲ್ಲಿ ಹಿಂದಿ ಮತ್ತು ಪ್ರಾದೇಶಿಕ ಭಾಷೆಯನ್ನು ಕಡ್ಡಾಯವಾಗಿ ಹೇಳಿಕೊಡಲಾಗುವುದೆಂದು ಅಲ್ಲಿಯ ವಿದ್ಯಾ ಸಚಿವರು ತಿಳಿಸಿದ್ದಾರೆ.

ಚೆಡ್ಡಿ ಜಗನ್ ಹೈದರಾಬಾದಿನಲ್ಲಿ

ಬ್ರಿಟಿಷ್ ಗಯಾನಾದ ಮಾಜಿ ಪ್ರಧಾನಿ ಚೆಡ್ಡಿ ಜಗನ್ ಮತ್ತು ಅವರ ಸಹೋದ್ಯೋಗಿ ಮಿ|| ಬರ್ನ್‌ಹಾಂರವರು ನಿನ್ನೆಯದಿನ ಹೈದರಾಬಾದಿನಲ್ಲಿ ಶಾಸನಸಭಾ ಸದಸ್ಯರನ್ನುದ್ದೇಶಿಸಿ ಭಾಷಣಮಾಡಿದರು.

-ಮೈಸೂರು ಪೇಟೆಧಾರಣೆ-

ತಾರೀಖು ೧೦—೧೨—೧೯೫೩

ಪದಾರ್ಥ	ರೂ. ಆ	ರೂ. ಆ
ಕಡಲೇಕಾಯಿ	೯—	೨೧—೮
ಎಳ್ಳು	೬೦—೮	೬೨—
ಹೊಂಗೆಬೀಜ	—	—
ಹರಳು	೩೩—	೩೯—೪
ಹುಚ್ಚೆಳ್ಳು	೩೧—೮	೩೯—೨
ಅವರೆ	—	—
ಹುರಳಿ	೨೫—೨	೩೩—೧೦
ಹೆಸರು	೩೦—೧೨	೩೮—೪
ಅಲಸಂದೆ	೩೧—	೫೦—೨
ಉದ್ದು	೫೯—೨	—
ಮೆಣಸಿನಕಾಯಿ	೧೮—	೩೭—
ಬೆಲ್ಲ	—	—
ಹುಣಸೇಹಣ್ಣು	೧೧—೬	೧೧—೧೫
ಸೀಗೆಕಾಯಿ	೬—೪	—
ತೆಂಗಿನಕಾಯಿ	೧೨೧—	೫೫೦—

ಸರ್ಕಾರಿ ಆಜ್ಞೆಗೆ ನ್ಯಾಯಾಧೀಶರ ತಿರಸ್ಕಾರ

ಜರ್ಮನಿಯಲ್ಲಿರುವ ಅಮೆರಿಕ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ವಿಲಿಯಂ ಕ್ಲಾರ್ಕ್ ಎಂಬುವರು ತಮ್ಮನ್ನು ಅಮೆರಿಕಾ ಸರ್ಕಾರವು ಕೆಲಸದಿಂದ ಸಸ್ಪೆಂಡ್ ಮಾಡಿರುವುದನ್ನು ಪ್ರತಿಭಟಿಸಿ, ಸ್ಟೇಟ್ ಇಲಾಖೆಯು ಈ ರೀತಿ ಮಾಡಿರುವುದು ನ್ಯಾಯಬಾಹಿರ, ಅದಕ್ಕೆ ಅಧಿಕಾರವಿಲ್ಲವೆಂದು ತಿಳಿಸಿ ತಾವು ನ್ಯಾಯಾಸ್ಥಾನ ಕಾರ್ಯಗಳಲ್ಲಿ ಮುಂದುವರಿಯುವುದಾಗಿ ಹೇಳಿದ್ದಾರೆ.

ಅವರು ಕಳೆದ ೪ ವರ್ಷಗಳಿಂದ ಜರ್ಮನಿಯಲ್ಲಿರುವರು. ಅಮೆರಿಕ ಸರ್ಕಾರವು ಅವರಿಗೆ ವರ್ಷಕ್ಕೆ ೧೧೦೦೦ ಡಾಲರು ವೇತನವನ್ನು ಕೊಡುತ್ತಿದೆ. ತಮಗೆ ಸರ್ಕಾರವು ವೇತನವನ್ನೇನಾದರೂ ಕೊಡುವುದನ್ನು ನಿಲ್ಲಿಸಿದರೆ ಅದರ ಮೇಲೆ ದಾವ ಹೂಡುವುದಾಗಿ ತಿಳಿಸಿದ್ದಾರೆ. ತಾವು ಮಾಡಬೇಕಾಗಿರುವ ಕೆಲಸವು ಇನ್ನೂ ಇರುವುದರಿಂದ ಸರ್ಕಾರದ ನೀತಿ ಖಂಡನೀಯವೆಂದು ಅವರು ತಿಳಿಸಿದ್ದಾರೆ.

ಭಾರತದಿಂದ ಅಂಡಮಾನ್ ದ್ವೀಪಕ್ಕೆ ೫೦೦ ಸಂಸಾರಗಳು

ಅಂಡಮಾನ್ ದ್ವೀಪಗಳಲ್ಲಿ ನೆಲೆಸಲು ಭಾರತ ಸರ್ಕಾರವು ಇಲ್ಲಿಂದ ೪೦೦ ಸಂಸಾರಗಳನ್ನು ಕಳುಹಿಸಲಿದೆಯೆಂದು ತಿಳಿಯಬರುತ್ತದೆ. ಪಶ್ಚಿಮ ಬಂಗಾಳದಲ್ಲಿರುವ ೨೦೦ ಸಂಸಾರಗಳನ್ನು ತಿರುವಾಂಕೂರು-ಕೊಚ್ಚಿ, ಮೈಸೂರು ಮತ್ತು ಇತರ ಪ್ರಾಂತ್ಯಗಳಿಂದ ಉಳಿದ ೨೦೦ ಸಂಸಾರಗಳನ್ನು, ಕಳುಹಿಸಲಾಗುತ್ತದೆ.

ಪ್ರತಿಯೊಂದು ಸಂಸಾರಕ್ಕೂ ೫ ಎಕರೆ ಜಮೀನು, ಮನೆ ನಿರ್ಮಾಣ ಮತ್ತು ವ್ಯವಸಾಯ ರಾಸುಗಳನ್ನು ಕೊಳ್ಳಲು ೨೦೦೦ ರೂಪಾಯಿಗಳ ಗ್ರಾಂಟನ್ನು ಕೊಡಲಾಗುತ್ತದೆ.

ಸಂಗೀತ ಕಛೇರಿಯಲ್ಲಿ ೮೨೦೦೦ ರೂ ಉತ್ಪತ್ತಿ

ಬೊಂಬಾಯಿನಲ್ಲಿರುವ ಸೇಟ್ ಜಿ. ಎಸ್. ಮೆಡಿಕಲ್ ಕಾಲೇಜಿನಲ್ಲಿ ಕ್ಷಯ ರೋಗದವರಿಗೆ ಹೆಚ್ಚಿಗೆ ಸೌಕರ್ಯವನ್ನು ಕೊಡುವ ನಿಧಿಗಾಗಿ ಏರ್ಪಡಿಸಿದ್ದ ಶ್ರೀಮತಿ ಸುಬ್ಬಲಕ್ಷ್ಮಿಯವರ ಸಂಗೀತ ಕಛೇರಿಯು ಮೊನ್ನೆ ನಡೆದು ೮೨೦೦೦ ರೂಪಾಯಿಗಳು ವಸೂಲಾಯಿತು.

ಸಿಂಹಳ ಪ್ರಧಾನಿಯ ಸಲಹೆ

ಭಾರತ, ಪಾಕೀಸ್ತಾನ, ಬರ್ಮಾ, ಇಂಡೋನೇಷ್ಯಾ ಮತ್ತು ಸಿಂಹಳ ಪ್ರಧಾನಿಗಳು ಆಗಾಗ್ಗೆ ಕಲೆತು ತಮ್ಮ ಸಮಸ್ಯೆಗಳನ್ನೂ, ತೊಂದರೆಗಳನ್ನೂ ಚರ್ಚಿಸಬೇಕೆಂದು ಸಿಂಹಳ ಪ್ರಧಾನಿ ಸರ್ ಕೋಟಿಲ್‌ವಾಲಾರವರು ಸಲಹೆ ಮಾಡಿದ್ದಾರೆ.

ಇಂತಹ ಭೇಟಿಯಿಂದ ಭದ್ರತೆ, ಐಕ್ಯತೆ ಮತ್ತು ಸೌಹಾರ್ದವುಂಟಾಗುವುದೆಂದು ಅವರು ಹೇಳಿದ್ದಾರೆ.

ವಿಮಾನ ಅಪಘಾತ

ಬೆಂಗಳೂರು ೧೧

ಬೆಂಗಳೂರು ವಿಮಾನಕಾರ್ಖಾನೆಯಲ್ಲಿ ಟೆಸ್ಟ್ ಪೈಲೆಟ್‌ರಾಗಿದ್ದ ಕಾ|| ನಾಮ್ ಜೋಷಿಯವರು ನಿನ್ನೆ ೧೨ ಗಂಟೆ ಸಮಯದಲ್ಲಿ ಅಲ್ಲಿಯೇ ತಯಾರಾದ ಹೆಚ್. ಟಿ. ವಿಮಾನವನ್ನು ವಿಧವಿಧವಾಗಿ ಹಾರಾಡಿಸುತ್ತಿದ್ದಾಗ ರನ್‌ವೇ ಕೊನೆಯಲ್ಲಿ ಅಪಘಾತಕ್ಕೀಡಾಗಿ ಅವರು ತೀರ್ವ ಗಾಯಗೊಂಡು ಕೆಳಗೆ ಬಿದ್ದರು. ಅವರನ್ನು ಆಸ್ಪತ್ರೆಗೆ ಸಾಗಿಸುವಾಗ ದಾರಿಯಲ್ಲಿ ಮೃತಹೊಂದಿದರೆಂದು ತಿಳಿಯಬರುತ್ತದೆ.

ಇವರಿಗೆ ೩೮ ವರ್ಷವಯಸ್ಸಾಗಿತ್ತು. ಪತ್ನಿ ಮತ್ತು ಮಕ್ಕಳು ಕಾನ್ಪುರದಲ್ಲಿರುವರು.

ವಿಮಾನವನ್ನು ತರಹೇವಾರಿ ರೀತಿಯಲ್ಲಿ ಹಾರಾಟ ನಡೆಸುವುದರಲ್ಲಿ ಅವರು ಪ್ರವೀಣರಾಗಿದ್ದರು ದಸರಾ ಮಹೋತ್ಸವ ಕಾಲದಲ್ಲಿ ಜಂಬೂಸವಾರಿದಿನ ಶ್ರೀಯುತರು ಮೈಸೂರು ನಗರದಲ್ಲಿ ಈ ವಿಮಾನವನ್ನು ವಿಧವಿಧವಾಗಿ ಹಾರಾಡಿಸುತ್ತ ಪ್ರದರ್ಶನ ನಡೆಸಿದ್ದರು.

ಅಪೆಕ್ಸ್ ಬ್ಯಾಂಕ್ ಕಾರ್ಯದರ್ಶಿ

ಬೆಂಗಳೂರು ೧೧

ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ ಶ್ರೀ ಪಿ. ಎಂ. ಚಂಗಪ್ಪನವರನ್ನು ಅಡಿಷನಲ್ ಜಾಯಿಂಟ್ ರಿಜಿಸ್ಟ್ರಾರಾಗಿ ಮಾಡಿ ಅಪೆಕ್ಸ್ ಬ್ಯಾಂಕಿನ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ಕೈಗಾರಿಕಾ ಕಲಾ ಪ್ರದರ್ಶನ

ಕಲ್ಕತ್ತಾದಲ್ಲಿ ಜನವರಿ ೫ರಿಂದ ಕೈಗಾರಿಕಾ ಕಲಾ ಪ್ರದರ್ಶನವೊಂದು ನಡೆಯುವುದು.

ರಣಜಿತ್
10—12—53 ರಿಂದ ಎರಡನೇವಾರ
ರೇಲ್ ಕ ಡಿಬ್ಬ
(ಹಿಂದಿ)
ಪಾತ್ರ:—ಮಧುಬಾಲ, ಶಮ್ಮಿ ಕಪೂರ್, ಸಜ್ಜನ್ ಮತ್ತು ಓಂಪ್ರಕಾಶ್.

Wanted

Salesmen for canvassing our reputed products of Sri Krishna Camphor and Aluminium Works, Bangalore. Apply to City Supplies, Mothikhana buildings, Santhepet, Mysore.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೯೨

೧೨-೧೨-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ನಾಗಪುರದ ಬಳಿ ವಿಮಾನ ಅಪಘಾತ

ಐ. ಎನ್. ಟಿ. ಯು. ಸಿ. ಕಾರ್ಯದರ್ಶಿ ಹರಿಹರನಾಥ ಶಾಸ್ತ್ರಿಯವರ ನಿಧನ

ಬೆಂಗಳೂರು ೧೨

ನಾಗಪುರದಿಂದ ಮದ್ರಾಸಿಗೆ ಹೊರಟ ವಿಮಾನವೊಂದು ನಾಗಪುರಕ್ಕೆ ೨ ಮೈಲಿ ದೂರದಲ್ಲಿ ಅಪಘಾತಕ್ಕೆ ಒಳಗಾಗಿ ಅದರಲ್ಲಿದ್ದ ೧೦ ಜನ ಪ್ರಯಾಣಿಕರು ಮತ್ತು ೪ ಚಾಲಕ ವರ್ಗದಲ್ಲಿ ೩ ಸ್ಥಳದಲ್ಲಿಯೇ ಮೃತರಾದರೆಂಬ ಸುದ್ದಿ ಬಂದಿದೆ.

ಸತ್ತ ಪ್ರಯಾಣಿಕರ ಪೈಕಿ ಐ. ಎನ್. ಟಿ. ಯು. ಸಿ. ಕಾರ್ಯದರ್ಶಿ ಶ್ರೀ ಹರಿಹರನಾಥ ಶಾಸ್ತ್ರಿಗಳೊಬ್ಬರೆಂದು ತಿಳಿಯಬಂದಿದೆ.

ಹೈಕೋರ್ಟುಗಳಿಗೆ ಹೆಚ್ಚಿಗೆ ಅಧಿಕಾರ ಅವಶ್ಯಕ

ಮೈಸೂರು ೧೨

ಪ್ರಜಾ ಪ್ರಭುತ್ವದಲ್ಲಿ ರಾಜ್ಯಾಂಗದ ಉಲ್ಲಂಘನೆಗಳನ್ನು ಕೋರ್ಟಿನ ಗಮನಕ್ಕೆ ತಂದು ಅದನ್ನು ಸರಿಪಡಿಸುವ ಹಕ್ಕು ಪ್ರತಿಯೊಬ್ಬ ಪ್ರಜೆಗೂ ಇರುತ್ತದೆ. ಇಂತಹ ಹಕ್ಕನ್ನು ಚಲಾಯಿಸುವುದಕ್ಕೆ ಅವಕಾಶವಿದ್ದರೆ ಮಾತ್ರ ಪ್ರಜಾಪ್ರಭುತ್ವವು ಉಳಿಯುತ್ತದೆ. ಆದರೆ ಈಗಿನ ಪದ್ಧತಿಯಂತೆ ನೊಂದವನು ರಾಜ್ಯಾಂಗದ ಉಲ್ಲಂಘನೆಯನ್ನು ಕೋರ್ಟಿನ ಗಮನಕ್ಕೆ ತರಬೇಕು-ಎಂದು ಮೈಸೂರು ಹೈಕೋರ್ಟು ಹೇಳಿ ಅರ್ಜಿಯನ್ನು ಈ ಕಾರಣದಿಂದ ತಿರಸ್ಕರಿಸಿದ್ದರಿಂದ ಪ್ರಜೆಯ ಹಕ್ಕಿಗೆ ಕುಂದಕವುಂಟಾಗಿದೆ. ಇನ್ನೂ ಹಲವು ಹೈಕೋರ್ಟುಗಳೂ ಸಹ ಹೀಗೆ ಮಾಡಿವೆ. ಆದ್ದರಿಂದ ಈ ಪ್ರಶ್ನೆಯನ್ನು ಪೂರ್ಣವಾಗಿ ಪರಿಶೀಲಿಸಿ ಒಂದು ವೇಳೆ ಹೈಕೋರ್ಟುಗಳಿಗೆ ಅಧಿಕಾರವಿಲ್ಲದಿದ್ದರೆ ಅಂಥ ಅಧಿಕಾರವನ್ನು ಕೊಡಲು ಏರ್ಪಾಡು ಮಾಡುವುದು ಅವಶ್ಯಕ. ತಾವು ಈ ಅಧಿವೇಶನದಲ್ಲಿ ತರುವ ನ್ಯಾಯಾಂಗ ಸುಧಾರಣೆಯಲ್ಲಿ ಈ ಅಂಶವನ್ನು ಅಗತ್ತಿಸಿ ಹೈಕೋರ್ಟುಗಳಿಗೆ ಅಧಿಕಾರವನ್ನು ಕೊಡುವ ಶಾಸನ ಸುಧಾರಣೆಯನ್ನು ಮಾಡಿಸಬೇಕು ಎಂದು ಶ್ರೀ ತಗಡೂರು ರಾಮಚಂದ್ರರಾಯರು ಕೇಂದ್ರ ಸರ್ಕಾರದ ಗೃಹ ಸಚಿವರಿಗೆ ಬಹಿರಂಗ ಪತ್ರವನ್ನು ಬರೆದಿದ್ದಾರೆ.

ಆಂಧ್ರಕ್ಕೆ ಹೈದರಾಬಾದಿನಲ್ಲಿ ಕಟ್ಟಡಗಳಿಲ್ಲ

ಆಂಧ್ರ ಸಂಸ್ಥಾನದ ಕಛೇರಿಗಳಿಗಾಗಿ ಹೈದರಾಬಾದಿನಲ್ಲಿ ಯಾವ ಸರ್ಕಾರಿ ಕಟ್ಟಡಗಳನ್ನು ಕೊಡಲು ಖಾಲಿ ಇಲ್ಲವೆಂದೂ, ತಾವೇ ಅನೇಕ ಬಾಡಿಗೆ ಕಟ್ಟಡಗಳಲ್ಲಿ ಕಛೇರಿಗಳನ್ನು ನಡೆಸುತ್ತಿರುವುದಾಗಿಯೂ ಅಲ್ಲಿನ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಸಿಂಹಳಕ್ಕೆ ಜಗನ್ ಪ್ರವೇಶವಿಲ್ಲ

ಈಗ ಭಾರತದಲ್ಲಿ ಪ್ರವಾಸ ಮಾಡುತ್ತಿರುವ ಬ್ರಿಟಿಷ್ ಗಯಾನದ ಪದಚ್ಯುತ ಪ್ರಧಾನಿ ಡಾ|| ಚೆಡ್ಡಿ ಜಗನ್ ಮತ್ತು ಅವರ ಸಹೋದ್ಯೋಗಿ ಮಿ|| ಬರ್ನ್‌ಹ್ಯಾಂರವರು ಸಿಂಹಳಕ್ಕೆ ಭೇಟಿ ಕೊಡಲು ಅನುಮತಿಯನ್ನು ಅವರ ಸರ್ಕಾರ ನಿರಾಕರಿಸಿದೆ.

ಟ್ರಾಂವೇ ಕಂಪೆನಿ ಮೇಲೆ ಜಫ್ತಿ ವಾರೆಂಟ್

ಮದ್ರಾಸ್ ಟ್ರಾಂವೇ ಕಂಪೆನಿಯವರು ವಿದ್ಯುಚ್ಛಕ್ತಿ ಮುಂತಾದ ಬಾಬುಗಳಲ್ಲಿ ಸರ್ಕಾರಕ್ಕೆ ಕೊಡಬೇಕಾಗಿದ್ದ ೯,೨೦,೦೦೦ ರೂಪಾಯಿಗಳ ಬಾಕಿಗೆ ಅದರ ಮೇಲೆ ಜಫ್ತಿ ವಾರೆಂಟ್ ಜಾರಿ ಆಗಿದೆ.

ಮುಂದಿನ ವರ್ಷದ ಸರ್ಕಾರಿ ರಜಾದಿನಗಳು

ಬೆಂಗಳೂರು ೧೨

ಈ ಕೆಳಗೆ ತಿಳಿಸಿರುವಂತೆ ಸರ್ಕಾರವು ಮುಂದಿನವರ್ಷದ ರಜಾದಿನಗಳನ್ನು ಘೋಷಿಸಿದೆ. ಪೂರ್ತಾರಜಾದಿನಗಳು:—

ಜನವರಿ ೧ ಹೊಸವರ್ಷಾರಂಭ, ಜನವರಿ ೧೪ ಉತ್ತರಾಯಣ ಪುಣ್ಯಕಾಲ, ಜನವರಿ ೨೬ ರಿಪಬ್ಲಿಕ್ ದಿನ, ಮಾರ್ಚಿ ೩ ಮಹಾಶಿವರಾತ್ರಿ, ಮೇ ೧೭ ಬುಧಪೂರ್ಣಿಮಾ, ಜುಲೈ ೨೧ ಮಹಾರಾಜರ ವರ್ಧಂತಿ, ಆಗಸ್ಟು ೧೪ ಉಪಾಕರ್ಮ, ಸೆಪ್ಟಂಬರ್ ೧ ಗಣೇಶ, ಸೆಪ್ಟಂಬರ್ ೮ ಮೊಹರಂ ಕೊನೇ ದಿನ, ಸೆಪ್ಟಂಬರ್ ೨೭ ದಸರಪ್ರಾರಂಭ, ಅಕ್ಟೋಬರ್ ೨ ಮಹಾತ್ಮಗಾಂಧಿ ಜನ್ಮದಿನ, ಅಕ್ಟೋಬರ್ ೬ ಮಹಾನವಮಿ, ಅಕ್ಟೋಬರ್ ೭ ವಿಜಯದಶಮಿ, ಅಕ್ಟೋಬರ್ ೨೫ ದೀಪಾವಳಿ, ಅಕ್ಟೋಬರ್ ೨೭ ಬಲಿಪಾಡ್ಯಮಿ, ಡಿಸೆಂಬರ್ ೨೫ ಕ್ರಿಸ್‌ಮಸ್.

ಹಿಂದೂ ರಜಾದಿನ:—ಮಾರ್ಚಿ ೧೯ ಹೋಳಿಹಬ್ಬ, ಏಪ್ರಿಲ್ ೧೩ ತಮಿಳು ಹೊಸವರ್ಷ, ಆಗಸ್ಟ್ ೩೧ ಗೌರಿ.

ಮುಸ್ಲಿಂ ರಜಾದಿನ:—ಜೂನ್ ೩ ಕುತುಬ್-ಇ-ರಮ್‌ಜಾನ್, ಆಗಸ್ಟ್ ೧೦ ಬಕ್ರೀದ್, ನವಂಬರ್ ೯ ಈದ್‌ಮಿಲಾದ್.

ಕ್ರೈಸ್ತರ ರಜಾದಿನ:—ಏಪ್ರಿಲ್ ೧೬ ಗುಡ್ ಫ್ರೈಡೇ.

ನಗರದ ಪ್ರಮುಖರಿಂದ ದೇವಸ್ಥಾನ ಕಟ್ಟಡದ ಕೆಲಸ

ಏನೂ ಹಣ ಖರ್ಚಾಗದೆ ಜನರೇ ತಮ್ಮ ಸ್ವಪ್ರಯತ್ನದಿಂದ ಎಷ್ಟು ಭಾರಿ ಕೆಲಸಗಳನ್ನಾದರೂ ಕೈಗೊಳ್ಳಬಹುದೆಂಬುದಕ್ಕೆ ಬಿಜಾಪುರದಲ್ಲಿ ನಡೆದ ಕೆಲಸ ದೃಷ್ಟಾಂತರವಾಗಿದೆ.

ಬಿಜಾಪುರದಲ್ಲಿರುವ ಶ್ರೀ ಬಸವೇಶ್ವರ ದೇವಸ್ಥಾನದ ಮೇಲ್‌ಚಾವಣಿಯ ಕೆಲಸವು ಕೆಲವು ವರ್ಷಗಳಿಂದ ನಿಂತುಹೋಗಿತ್ತು. ಅದನ್ನು ಪೂರೈಸಲು ಅಲ್ಲಿಯ ವರ್ತಕರು, ಲಾಯರು, ಕಾಲೇಜಿನ ಅಧ್ಯಾಪಕರು ಸೇರಿ ಒಟ್ಟು ೫೦೦ ಮಂದಿ ತಮ್ಮ ಕೆಲಸಗಳನ್ನೆಲ್ಲಾ ನಿಲ್ಲಿಸಿ, ಕೇವಲ ೧೨ ಗಂಟೆಗಳ ಕಾಲದಲ್ಲಿ ದೇವಸ್ಥಾನದ ಮೇಲ್‌ಚಾವಣಿಯನ್ನು ಕಾಂಕ್ರೀಟ್‌ನಲ್ಲಿ ಕಟ್ಟಿ ಮುಗಿಸಿದರು. ಈ ಕೆಲಸದಲ್ಲಿ ವರ್ತಕರ ಮತ್ತು ಇತರರ ಪತ್ನಿಯರೂ ಸಹಾಯಕರಾಗಿದ್ದರು.

ಲಂಚನಿರೋಧ ಇಲಾಖಾ ವರದಿ

ಸಂಸ್ಥಾನದ ಲಂಚನಿರೋಧ ಮತ್ತು ದಕ್ಷತಾ ತನಿಖಾಧಿಕಾರಿಗಳು ತಮ್ಮ ಇಲಾಖೆಯ ಅರ್ಧ ವರ್ಷದ ಕೆಲಸಕಾರ್ಯಗಳನ್ನು ಹೊರಗೆಡಹಿದ್ದಾರೆ

ಆ ವರದಿಯಲ್ಲಿ ಲಂಚದ ಆಪಾದನೆಯ ಮೇಲೆ ಪೂರ್ಣ ತನಿಖೆ ಮುಗಿದು ಕೆಲವರಿಗೆ ಶಿಕ್ಷೆಗಳನ್ನು ವಿಧಿಸಲಾಗಿದೆ. ಹಾಗೆ ಶಿಕ್ಷಿತರಾದವರ ಪೈಕಿ ಗುಮಾಸ್ತರುಗಳು, ಪೋಲೀಸ್ ಇನ್‌ಸ್ಪೆಕ್ಟರುಗಳು, ಶಾಲಾ ಅಧ್ಯಾಪಕರುಗಳೂ, ಡಾಕ್ಟರ್, ಇಂಜನೀಯರ್‌ಗಳೂ, ಪುರಸಭೆಯ ಎಕ್ಸಿಕ್ಯುಟಿವ್ ಆಫೀಸರುಗಳೂ ರೆವಿನ್ಯೂ ಇನ್‌ಸ್ಪೆಕ್ಟರುಗಳೂ ಇದ್ದಾರೆ.

ವಿಚಾರಣೆ ನಡೆಸಿ ಕೆಳಕಂಡವರಮೇಲೆ ಕಾರ್ಯಕ್ರಮಕ್ಕಾಗಿ ವರದಿ ಕಳುಹಿಸಲಾಗಿದೆ. ಒಬ್ಬರು ವ್ಯವಸಾಯ ಇಲಾಖಾ ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರ್ ಒಬ್ಬ ಮಾಜಿ ಕೆಮಿಕಲ್ ಇಂಜನೀಯರ್ ಒಬ್ಬ ವಿದ್ಯುಚ್ಛಕ್ತಿ ಇಲಾಖಾ ಜೂನಿಯರ್ ಇಂಜನೀಯರ್, ಒಬ್ಬ ಪೋಲೀಸ್ ಅಸಿಸ್ಟೆಂಟ್ ಸೂಪರಿನ್‌ಟೆಂಡೆಂಟ್, ಒಬ್ಬ ಟ್ರಾಕ್ಟರು ಇಂಜನೀಯರ್, ಒಬ್ಬ ಲೇಬರ್ ಅಸಿಸ್ಟೆಂಟ್ ಕಮಿಷನರ್, ಒಬ್ಬ ಅಮಲ್ದಾರ್, ಮೂವರು ಸಬ್ ಇನ್‌ಸ್ಪೆಕ್ಟರ್‌ಗಳು ಇಬ್ಬರು ರೆವಿನ್ಯೂ ಇನ್‌ಸ್ಪೆಕ್ಟರುಗಳೂ, ಒಬ್ಬ ಸ್ಪೆಷಲ್ ಇನ್‌ಸ್ಪೆಕ್ಟರ್, ಇಬ್ಬರು ರೇಂಜ್ ಫಾರೆಸ್ಟ್ ಇನ್‌ಸ್ಪೆಕ್ಟರ್‌ಗಳು ೪ ವ್ಯವಸಾಯದ ಇನ್‌ಸ್ಪೆಕ್ಟರುಗಳು, ಒಬ್ಬರು ಶಾಲಾ ಇನ್‌ಸ್ಪೆಕ್ಟರು, ಒಬ್ಬ ಸ್ಪೆಷಲ್ ಶಿರಸ್ತೆದಾರರು, ಒಬ್ಬ ಸೆಕ್ಷನ್ ಆಫೀಸರ್, ಒಬ್ಬ ಹೆಡ್ ಗ್ರಾಮಾಸ್ತರು, ಆಸ್ಪತ್ರೆಯ ಒಬ್ಬ ಹಿಂದಿನ ಸ್ಟುವರ್ಡ್, ಮೂವರು ಪೋಲೀಸ್ ದಫೇದಾರರು ೩ ಪೋಲೀಸ್ ಪ್ಯಾದೆಗಳು.

ಗಯಾನಾ ಜನರ ಹೋರಾಟಕ್ಕೆ ಭಾರತ ಬೆಂಬಲ ನೀಡಿ

ಬೆಂಗಳೂರು ೧೨

ಬ್ರಿಟಿಷ್ ಗಯಾನದ ಪದಚ್ಯುತ ಪ್ರಧಾನಿ ಡಾ|| ಚೆಡ್ಡಿ ಜಗನ್ ಮತ್ತು ಮಿ|| ಬರ್ನ್‌ಹ್ಯಾಂರವರು ನಿನ್ನೆ ನಿಲ್ಲಿಗೆ ಆಗಮಿಸಿದರು.

ಚಿಕ್ಕ ಲಾಲ್‌ಬಾಗ್‌ನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಅವರು ಭಾಷಣ ಮಾಡಿ, ಬ್ರಿಟಿಷರು ಸಾಮ್ರಾಜ್ಯ ಷಾಹಿಯನ್ನು ಬಲಪಡಿಸಲು ತಮಗಿದ್ದ ಅತ್ಯಲ್ಪ ಸ್ವಾತಂತ್ರವನ್ನು ಈಗ ಕಸಿದುಕೊಂಡಿದ್ದಾರೆಂದೂ, ಸ್ವಾತಂತ್ರಗಳಿಸಲು ಗಯಾನ ಜನರು ನಡೆಸುತ್ತಿರುವ ಹೋರಾಟಕ್ಕೆ ಭಾರತ ಜನರು ನೈತಿಕ ಬೆಂಬಲದೊಂದಿಗೆ ಧನ ಸಹಾಯ ಮಾಡಬೇಕೆಂದೂ ಮನವಿ ಮಾಡಿದರು.

ಜನರು ಸಂಘಟಿತರಾಗಿ ದೇಶವು ಬಲಯುತವಾಗಬೇಕಾಗಿದೆ

ಪ್ರಧಾನಿ ನೆಹರೂರವರ ಮನವಿ

ಪ್ರಧಾನಿ ನೆಹರೂರವರು ನಿನ್ನೆಯದಿನ ಡೆಹರಾಡೂನಿನಲ್ಲಿ ಮಾತನಾಡುತ್ತಿದ್ದಾಗ ಅಮೆರಿಕಾ—ಪಾಕೀಸ್ತಾನ ಸೈನ್ಯಬಾಂಧವ್ಯ ವಿಷಯವಾಗಿ ಪ್ರಸ್ತಾಪಿಸಿ ಭಾರತವು ಈಗ ಬಲಯುತವಾಗಬೇಕಾದ ಸನ್ನಿವೇಶ ಒದಗಿದೆ ಭಾರತ ಮತ್ತು ಪಾಕೀಸ್ತಾನಗಳು ಸ್ವತಂತ್ರ ರಾಷ್ಟ್ರಗಳಾಗಿವೆ ಅವು ತಮ್ಮಿಷ್ಟ ಬಂದಂತೆ ವರ್ತಿಸಬಹುದು ಆದರೆ ಈಗ ಅಮೆರಿಕಾ ಮತ್ತು ಪಾಕೀಸ್ತಾನ ಸೈನ್ಯ ವಿಷಯವು ಆಗ್ನೇಯ ಏಷ್ಯಾಕ್ಕೆ ಪ್ರಮಾದಕರವಾದುದು. ಈಗ ಪ್ರಾರಂಭದಲ್ಲಿ ವಿದೇಶೀ ಸೈನ್ಯಕ್ಕೆ ಸ್ವಲ್ಪ ಬಾಗಿಲನ್ನು ತೆರೆದರೆ ಮುಂದೆ ಒತ್ತಡದಿಂದ ಆದ್ವಾರವು ದೊಡ್ಡದಾಗುತ್ತ ಬರುತ್ತದೆ.

ಭಾರತದಲ್ಲಿ ಜನರು ಈಗ ಜಾಗರೂಕತೆಯಿಂದ ವರ್ತಿಸಬೇಕಾಗಿದೆ. ಈಗ ದೇಶದಲ್ಲಿ ಹೆಚ್ಚಿಗೆ ಸಂಘಟನೆ ಅತ್ಯಗತ್ಯವಾಗಿದೆ. ಜನರು ಮತೀಯ ಮತ್ತು ಜಾತಿಯುತ ಮನೋಭಾವವನ್ನು ತೊರೆದು ಇಲ್ಲದ ರಾಜಕೀಯ ಗೊಂದಲವನ್ನುಂಟುಮಾಡಬಾರದು ಎಂದು ತಿಳಿಸಿದ್ದಾರೆ.

ದೇಶದಾದ್ಯಂತ ಕೈಮಗ್ಗ ಕೈಗಾರಿಕಾಭಿವೃದ್ಧಿ

ಇದಕ್ಕಾಗಿ ಪ್ರಾಂತ್ಯಗಳಿಗೆ ೨ಕೋಟಿ ೧೫ ಲಕ್ಷ ರೂ. ನೆರವು

ದೇಶದ ನಾನಾ ಪ್ರಾಂತ್ಯಗಳು ಕೈಮಗ್ಗ ಕೈಗಾರಿಕಾ ಅಭಿವೃದ್ಧಿಗಾಗಿ ಮಾಡಿದ್ದ ಯೋಜನೆಗಳನ್ನೆಲ್ಲಾ ಭಾರತ ಸರ್ಕಾರವು ಅಂಗೀಕರಿಸಿ, ಅವುಗಳನ್ನು ಕಾರ್ಯರೂಪಕ್ಕೆ ತರಲು ಒಟ್ಟು ೨ ಕೋಟಿ ೧೫ ಲಕ್ಷ ರೂ. ಗಳನ್ನು ಪ್ರಾಂತ್ಯಗಳಿಗೆ ಕೊಟ್ಟಿದೆ. ಸಹಕಾರ ಸಂಘಗಳ ಮೂಲಕ ಕೈಮಗ್ಗದವರಿಗೆ ಎಲ್ಲಾ ನೆರವನ್ನೂ ನೀಡಲಾಗುತ್ತದೆ. ಇದಲ್ಲದೆ ಕೈಮಗ್ಗ ಕೈಗಾರಿಕೆಗೆ ಸಂಬಂಧಪಟ್ಟಂತೆ ಚಲಿಸುವ ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ತೆರೆಯಲಾಗುತ್ತದೆ. ವಿದೇಶಗಳಿಗೆ ಭಾರತದಿಂದ ಕಳೆದ ಸಾಲಿನಲ್ಲಿ ೫ ಕೋಟಿ ೨೨ಲಕ್ಷ ಗಜಗಳಷ್ಟು ಕೈಮಗ್ಗ ಬಟ್ಟೆಯನ್ನು ಸರಬರಾಜು ಮಾಡಲಾಗಿದೆ. ಈ ಬಟ್ಟೆಯ ವ್ಯಾಪಾರವನ್ನು ವಿದೇಶಗಳಲ್ಲಿ ಇನ್ನೂ ಹೆಚ್ಚಿಸಲು ಹಲವಾರು ಕಡೆ ವ್ಯಾಪಾರ ಮಳಿಗೆಗಳನ್ನು ತೆರೆಯಲಾಗುತ್ತದೆ.

ಅರಮನೆ ಬೆಂಕಿಗೆ ಆಹುತಿ

ಮಧ್ಯಪ್ರದೇಶದಲ್ಲಿ ಐಕ್ಯವಾಗಿರುವ ಸರಗೂಜ ಸಂಸ್ಥಾನ ಮಾಜಿ ರಾಜರಿಗೆ ಸೇರಿದ, ನಾಗಪುರಕ್ಕೆ ೨೦೫ ಮೈಲಿ ದೂರದಲ್ಲಿರುವ ಅಂಬಿಕಾಪುರ ಎಂಬಲ್ಲಿದ್ದ ಅರಮನೆಗೆ ಬೆಂಕಿ ತಗುಲಿ ಅರಮನೆ ಮತ್ತು ಅದರಲ್ಲಿ ಇದ್ದ ನಾನಾ ವಸ್ತುಗಳೆಲ್ಲವೂ ಸುಟ್ಟು ಭಸ್ಮವಾದುವು ಇದರಿಂದ ಸುಮಾರು ೪೦ ಲಕ್ಷ ರೂಪಾಯಿಗಳು ನಷ್ಟವಾಗಿರುವುದಾಗಿ ಅಂದಾಜು ಮಾಡಲಾಗಿದೆ. ಬೆಂಕಿಯನ್ನು ಆರಿಸಲು ಆಧುನಿಕ ಸಲಕರಣೆಗಳಾವುವೂ ಅಲ್ಲಿ ಇಲ್ಲದದ್ದ ಕಾರಣ ಅರಮನೆ ಪೂರ್ಣವಾಗಿ ಸುಟ್ಟುಹೋಯಿತು. ಯಾವ ಪ್ರಾಣಹಾನಿಯೇನೂ ಆಗಿಲ್ಲವೆಂದು ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೧—೧೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೪	೨೧—೮
ಎಳ್ಳು	೬೮—	—
ಹೊಂಗೆಬೀಜ	—	—
ಹರಳು	೩೨—೮	೩೭—
ಸೀಗೆಕಾಯಿ	—	—
ಹುಚ್ಚೆಳ್ಳು	೨೮—೬	೩೯—೧೦
ಅವರೆ	—	—
ಹುರಳಿ	೨೮—	೩೧—೪
ಹೆಸರು	೨೬—೧೨	೩೯—
ಹುಣಸೇಹಣ್ಣು	—	—
ಅಲಸಂದೆ	೨೬—	೪೮—೧೪
ಉಪ್ಪು	೫೫—	೫೫—೪
ಮೆಣಸಿನಕಾಯಿ	೧೭—	೩೮—
ಬೆಲ್ಲ	—	—
ತೆಂಗಿನಕಾಯಿ	೧೪೦—	೨೮೦—

ತೋಟಗಾರಿಗೆ ಶಿಕ್ಷಣ ತರಗತಿ

ಮೈಸೂರು ೧೨

ಮೈಸೂರು ಉದ್ಯಾನ ಕಲಾ ಸಂಘದ ಆಶ್ರಯದಲ್ಲಿ ತೋಟಗಾರಿಕೆ ಶಿಕ್ಷಣ ತರಗತಿಯ ಪ್ರಾರಂಭೋತ್ಸವವನ್ನು ನಾಳೆ ಸಂಜೆ ೫-೩೦ ಗಂಟೆಗೆ ಕರ್ಜನ್ ಪಾರ್ಕ್‌ನಲ್ಲಿ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ರಾಮರಾಯರು ನಡೆಸುತ್ತಾರೆ.

ತೋಟಗಾರಿಗೆ ಕಲೆ ಮತ್ತು ವಿಜ್ಞಾನವನ್ನು ಜನಪ್ರಿಯಗೊಳಿಸಲು ತೋಟದ ಇಲಾಖೆ ಹೋದ ವರ್ಷದಿಂದ "ತೋಟಗಾರಿಕೆ ಉಚಿತ ಶಿಕ್ಷಣ" ತರಗತಿಗಳನ್ನು ಲಾಲ್ ಬಾಗಿನಲ್ಲಿ ನಡೆಸುತ್ತಿದೆ. ಮೈಸೂರು ನಗರದ ವಿದ್ಯಾರ್ಥಿ ಮತ್ತು ಸಾರ್ವಜನಿಕರಿಗಾಗಿ ಈ ತರಹ ಉಚಿತ ಶಿಕ್ಷಣ ತರಗತಿಗಳನ್ನು, ಮೈಸೂರಿನಲ್ಲೂ ತೆರೆಯಲು ಏರ್ಪಾಟು ಮಾಡಿದೆ. ಪ್ರತಿ ಭಾನುವಾರವೂ ಈ ತೋಟಗಾರಿಕೆ ಶಿಕ್ಷಣವನ್ನು ಬೆಳಿಗ್ಗೆ ೯ ರಿಂದ ೧೨ ರವರೆಗೆ ಕರ್ಜನ್‌ಪಾರ್ಕಿನಲ್ಲಿ ಒಂದು ವರ್ಷಕಾಲ ನಡೆಸಲು ಎಲ್ಲಾ ಏರ್ಪಾಟಾಗಿದೆ. ಇದೇ ಡಿಸೆಂಬರ್ ೧೩ನೇ ಭಾನುವಾರ ಈ ತರಗತಿಗಳ ಪ್ರಾರಂಭೋತ್ಸವ ನಡೆಯುತ್ತದೆ. ಈ ತರಗತಿಗಳಿಗೆ ಸೇರಲು ಇಚ್ಛೆ ಪಡುವ ಮಹಿಳೆಯರು, ಮಹನೀಯರು, ವಿದ್ಯಾರ್ಥಿಗಳು, ವಿದ್ಯಾರ್ಥಿನಿಯರು, ಉಪಾಧ್ಯಾಯರು ಮುಂತಾಗಿ ಎಲ್ಲಾ ಸಾರ್ವಜನಿಕರುಗಳು ಡಿಸೆಂಬರ್ ೧೩ ನೇ ತಾರೀಖಿನೊಳಗಾಗಿ ತಮ್ಮ ವಿಳಾಸಗಳನ್ನು ಕರ್ಜನ್ ಪಾರ್ಕಿನಲ್ಲಿರುವ ತೋಟದ ಇಲಾಖೆ ಆಫೀಸಿಗೆ ತಿಳಿಸಬೇಕೆಂದು ಉದ್ಯಾನ ಕಲಾಸಂಘದ ಉಪಾಧ್ಯಕ್ಷರು ಕೋರುತ್ತಾರೆ.

ಪುರಸಭಾಧಿವೇಶನ

ಮೈಸೂರು ೧೨

ಪುರಸಭೆಯ ಸಾಮಾನ್ಯ ಅಧಿವೇಶನವನ್ನು ೨೫ನೇ ತಾರೀಖು ನಡೆಸಲು ನಿರ್ಧರಿಸಿದುದು ಬದಲಾವಣೆಯಾಗಿ ೨೬ ನೇ ತಾರೀಖು ಶನಿವಾರ ನಡೆಯುತ್ತದೆ.

ವಿದ್ಯಾರ್ಥಿಗಳಿಂದ ಅಣೆಕಟ್ಟು ನಿರ್ಮಾಣ

ಔರಂಗಾಬಾದ್ ಜಿಲ್ಲೆಯಲ್ಲಿ ಒಂದು ನದಿಗೆ ಅಣೆಕಟ್ಟು ಮತ್ತು ಪ್ರಾಂತ್ಯದಲ್ಲಿ ೫ ರಸ್ತೆಗಳ ನಿರ್ಮಾಣ ಕಾರ್ಯವನ್ನು ಈಗಿನ ಚಳಿಗಾಲದ ರಜಾದಿನಗಳಲ್ಲಿ ಹೈದರಾಬಾದಿನ ವಿವಿಧ ಕಾಲೇಜುಗಳ ೪೦೦ ವಿದ್ಯಾರ್ಥಿಗಳು ವಹಿಸಲಿರುವರು.

ಮೊಹಲ್ಲಾ ದಿನಾಚರಣೆ

ಮೈಸೂರು ೧೨

ಮೈಸೂರು ಪೌರಸಭೆಯ ಆಶ್ರಯದಲ್ಲಿ "ಕೃಷ್ಣರಾಜ ಮೊಹಲ್ಲಾ ದಿನಾಚರಣೆ" ಯನ್ನು ಇದೇ ೧೪ನೇ ತಾರೀಖು ಸೋಮವಾರ ಆಚರಿಸಲಾಗುತ್ತದೆ. ಈ ದಿನಾಚರಣೆಯ ಅಂಗವಾಗಿ ಬೆಳಿಗ್ಗೆ ೭-೩೦ ಗಂಟೆಯಿಂದ ೯-೩೦ ಗಂಟೆಯವರೆವಿಗೂ ಮೊಹಲ್ಲಾ ನಿರ್ಮಲೀಕರಣ ಕೆಲಸವನ್ನು ಇಲಾಖಾ ಜನಗಳಿಂದ ನಡೆಸಲಾಗುತ್ತದೆ.

ಬೆಳಿಗ್ಗೆ ೯ ಗಂಟೆಯಿಂದ ೧೨ ಗಂಟೆವರೆವಿಗೂ ದೇವಿ ಹಾಕುವುದು, ಮಕ್ಕಳ ಪರೀಕ್ಷೆ ಮತ್ತು ಗರ್ಭಿಣೀ ಸ್ತ್ರೀಯರ ಪರೀಕ್ಷೆ-ಕೃಷ್ಣರಾಜ ಮೊಹಲ್ಲಾ ಗುಣಾಂಬ ಗರ್ಭಿಣಿ ಮತ್ತು ಶಿಶು ಸಂರಕ್ಷಣಾಲಯದಲ್ಲಿ ನಡೆಯುವುದು. ಅಲ್ಲದೆ ಅಲ್ಲಿ ಸಾರ್ವಜನಿಕರ ಆರೋಗ್ಯ ವಿಚಾರದಲ್ಲಿ ಸೂಕ್ತ ಸಲಹೆಗಳನ್ನು ಕೊಡಲಾಗುತ್ತದೆ.

ಸಂಜೆ ೬ ಗಂಟೆಗೆ ಮೇಲ್ಕಂಡ ಗುಣಾಂಬ ಶಿಶುವಿಹಾರದ ಆವರಣದಲ್ಲಿ ಪೌರಸಭಾಧ್ಯಕ್ಷರ ನೇತೃತ್ವದಲ್ಲಿ ಒಂದು ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆ.

ಅಂತರ ವಿಶ್ವವಿದ್ಯಾನಿಲಯಗಳ ಸಮ್ಮೇಳನ

ಮೈಸೂರು ೧೨

ಭಾರತ, ಬರ್ಮಾ ಮತ್ತು ಸಿಲೋನ್ ವಿಶ್ವವಿದ್ಯಾನಿಲಯಗಳ ೭ನೇ ಅಧಿವೇಶನವು ಇದೇ ೨೨ನೇ ತಾರೀಖು ರಾಜಧಾನಿಯಲ್ಲಿ ನಡೆಯುವುದು. ಅದರ ಆರಂಭೋತ್ಸವವನ್ನು ರಾಜಪ್ರಮುಖರು ನೆರವೇರಿಸುವರು. ಡಾ|| ಲಕ್ಷ್ಮಣಸ್ವಾಮಿ ಮೊದಲಿಯಾರ್, ಡಾ|| ಸಿ.ಪಿ. ರಾಮಸ್ವಾಮಿ ಅಯ್ಯರ್, ಬ್ರಿಟನ್ನಿನ ಸರ್ ಡೇವಿಡ್ ಕ್ಯಾಂಬೆಲ್, ಪಾಕೀಸ್ತಾನ ಮತ್ತು ಸಿಲೋನ್‌ಗಳ ವಿದ್ಯಾಸಚಿವರುಗಳು ಅದರಲ್ಲಿ ಭಾಗವಹಿಸುವರು. ಸಮ್ಮೇಳನವು ೩ ದಿನಗಳು ನಡೆಯುವುದು.

ಪಾಕಿಸ್ತಾನ--ಅಮೆರಿಕ ಸೈನ್ಯ ಒಪ್ಪಂದದ ಬಗ್ಗೆ ಟೀಕೆಗಳು

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವಿನ ಸೈನ್ಯ ಒಪ್ಪಂದದ ವಿಷಯವಾಗಿ ಕೆನಡಾ, ಚೈನಾ ಮತ್ತು ಅಮೆರಿಕಾದ ನಾನ ಕಡೆಗಳಲ್ಲಿ ಉಗ್ರ ಟೀಕೆಗಳು ಬಂದು ಈ ಒಪ್ಪಂದವು ವಿಶ್ವಶಾಂತಿಗೆ ಧಕ್ಕೆ ತರುವಂತಾದುದೆಂದು ತಿಳಿಸಿವೆ.

ಕಾಶ್ಮೀರ ರಾಜ್ಯಾಂಗ ಸಭಾ ಅಧ್ಯಕ್ಷರಾದ ಗುಲಾಂ ಸಾದಿಕ್‌ರವರು ಈ ವಿಷಯದಲ್ಲಿ ಮಾತನಾಡುತ್ತ ಈ ಒಪ್ಪಂದದಿಂದ ಎಷ್ಟು ದುಷ್ಪರಿಣಾಮವುಂಟಾಗುತ್ತದೆಂಬುದನ್ನು ವಿಶ್ವದಲ್ಲಿರುವ ಎಲ್ಲಾ ರಾಷ್ಟ್ರಗಳು ಚೆನ್ನಾಗಿ ಅರಿತು ಕೊಳ್ಳಬೇಕಾದುದು ಅತ್ಯವಶ್ಯಕವೆಂದು ಹೇಳಿದ್ದಾರೆ.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ವ್ಯಾಪಾರಸ್ಥರಿಗೆ ಗೋಧಿ ಸರಬರಾಜು

ಬೆಂಗಳೂರು ೧೨

ರಹದಾರಿ ಪಡೆದಿರುವ ವರ್ತಕರಿಗೆ ಗೋಧಿಯನ್ನು ಪಲ್ಲಾ ಒಂದಕ್ಕೆ ೧೮-೫-೧೦ ರೂಪಾಯಿಗಳಂತೆ ಸರಬರಾಜು ಮಾಡುವುದಾಗಿ ಸರ್ಕಾರ ಪ್ರಕಟಣೆಯೊಂದು ತಿಳಿಸುತ್ತದೆ. ಇದನ್ನು ವರ್ತಕರು ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಪಡೆಯಬಹುದು.

ಪ್ರತಿಬಂಧಕ ರದ್ದು

ಬೆಂಗಳೂರು ೧೨

ಆಹಾರ ಧಾನ್ಯಗಳ ಹೊಟ್ಟಿನ ರವಾನೆಯ ಮೇಲಿದ್ದ ಪ್ರತಿಬಂಧಕವನ್ನು ತೆಗೆದು ಹಾಕಲಾಗಿದೆಯೆಂದು ಸರ್ಕಾರವು ಪ್ರಕಟಿಸಿದೆ. ಈಗ ಇದನ್ನು ಸಂಸ್ಥಾನದಿಂದ ಹೊರಕ್ಕೆ ಭಾರತದ ಯಾವ ಭಾಗಕ್ಕೆ ಬೇಕಾದರೂ ಕಳುಹಿಸಬಹುದು.

ನೆಹರೂರೊಡನೆ ರಾಜಾಜಿ ವಿರೋಧಿಗಳ ಭೇಟಿ

ಮದ್ರಾಸ್ ಶಾಸನಸಭೆಯ ಕಾಂಗ್ರೆಸ್ ಪಕ್ಷದಲ್ಲಿ ಮುಖ್ಯಮಂತ್ರಿ ಶ್ರೀ ರಾಜಾಜಿಯವರ ವಿರೋಧವಾಗಿ ಇರುವ ಗುಂಪಿಗೆ ಸೇರಿದ ಮೂರು ಜನ ಕಾಂಗ್ರೆಸ್ಸಿಗರು ನಿನ್ನೆ ದಿನ ದೆಹಲಿಗೆ ತೆರಳಿ ಕಾಂಗ್ರೆಸ್ ಅಧ್ಯಕ್ಷ ನೆಹರೂರವರನ್ನೂ ಭೇಟಿಮಾಡಿ ತಾವು ರಾಜಾಜಿ ವಿರೋಧವಾಗಿ ವರ್ತಿಸಿದ್ದಕ್ಕೆ ಕಾರಣಗಳನ್ನು ವಿವರಿಸಿದರೆಂದು ತಿಳಿಯಬರುತ್ತದೆ.

ಪ್ಲಾಟಿನಂ ಲೋಹದಲ್ಲಿ ತುಲಾಭಾರ

ಇಮಾಂ ಗಾದಿಯನ್ನು ಏರಿದ ೭೦ನೇ ವರ್ಷದ ಸಂಬಂಧದಲ್ಲಿ ಇಸ್ಮಾಲಿ ಜನಾಂಗದ ನಾಯಕರಾದ ಆಗಾಖಾನರವರು ಮುಂದಿನ ತಿಂಗಳು ೫ ನೇ ತಾರೀಖು ಕರಾಚಿಯಲ್ಲಿ ಪ್ಲಾಟಿನಂ ಲೋಹದಿಂದ ತುಲಾಭಾರವನ್ನು ತೂಗಿಸಿಕೊಳ್ಳುತ್ತಾರೆ.

ದಿನಕ್ಕೆ ೩೦೦೦ ಎಕರೆ ಜಮೀನು ಬೇಕು

ತಮಗೆ ಇನ್ನು ಮುಂದೆ ಭೂದಾನಯಜ್ಞ ಸಂಬಂಧದಲ್ಲಿ ಪ್ರತಿ ದಿನವೂ ೩೦೦೦ ಎಕರೆ ಜಮೀನು ಬೇಕೆಂದು ಭೂ ಸಂಗ್ರಹಣೆಯ ಕಾರ್ಯದಲ್ಲಿ ತೊಡಗಿರುವ ಆಚಾರ್ಯ ವಿನೋಬಾಭಾವೆಯವರು ತಿಳಿಸಿದ್ದಾರೆ.

ಸಮಾಜ ಸೇವೆಗಾಗಿ ಜಿಲ್ಲಾ ಸಮಿತಿಗಳು

ಮೈಸೂರು ಸಂಸ್ಥಾನದ ಪ್ರತಿ ಜಿಲ್ಲೆಯಲ್ಲೂ ಸಮಾಜಸೇವಾ ಕೆಲಸಕಾರ್ಯಗಳಿಗಾಗಿ ಸಮಿತಿಗಳನ್ನು ನೇಮಿಸಬೇಕೆಂದು ನಿನ್ನೆ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆದ ಸಮಾಜಸೇವಾ ಸಂಸ್ಥೆಗಳ ಕೇಂದ್ರ ಸಮಿತಿಯು ನಿರ್ಧರಿಸಿದೆ.

ಪೋಸ್ಟ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೯೩

೧೪-೧೨-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತವು ಯಾವ ಪ್ರಬಲ ರಾಷ್ಟ್ರದೊಡನೆ ಸೇರುವುದಿಲ್ಲ

ಭಾರತಕ್ಕೆ ಬೇಕಾದುದು ಶಾಂತಿ ಮತ್ತು ಎಲ್ಲರ ಸ್ನೇಹ

ಬಹಿರಂಗ ಸಭೆಯಲ್ಲಿ ನೆಹರೂರವರ ಘೋಷಣೆ

ಭಾರತವು ಎಲ್ಲಾ ರಾಷ್ಟ್ರಗಳೊಡನೆಯೂ ಸ್ನೇಹಭಾವದಿಂದ ಕೂಡಿರುವುದನ್ನು ಇಚ್ಛಿಸಿ ಅದಕ್ಕಾಗಿ ಶ್ರಮಿಸುತ್ತದೆ. ವಿಶ್ವದ ಮಹಾರಾಷ್ಟ್ರಗಳಾದ ಅಮೆರಿಕಾ ಅಥವಾ ರಷ್ಯಾದೊಡನೆ ಅದು ಸೇರುವ ಆಶೆಯನ್ನು ಹೊಂದಿಲ್ಲ-ಎಂದು ನಿನ್ನೆಯದಿನ ಕಲ್ಕತ್ತಾದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ಪ್ರಧಾನಿ ನೆಹ್ರೂ ನುಡಿದರು.

ಅಮೆರಿಕಾ ಮತ್ತು ಪಾಕೀಸ್ತಾನದ ಸೈನ್ಯ ಒಪ್ಪಂದ ವಿಷಯವಾಗಿ ಅವರು ಪ್ರಸ್ತಾಪಿಸಿ, ಉಭಯ ದೇಶಗಳು ಇದನ್ನು ನಿರಾಕರಿಸಿದ್ದಾಗ್ಯೂ ವಿಷಯ ಸ್ಪಷ್ಟವಾಗಿಲ್ಲ. ಇದು ಇಲ್ಲವೆಂದರೆ ನಮಗೆ ಸಂತೋಷ ಹಾಗೇನಾದರೂ ಒಪ್ಪಂದವಾದಲ್ಲಿ ಇಡೀ ಆಗ್ನೇಯ ಏಷ್ಯಾದ ರಾಷ್ಟ್ರಗಳಮೇಲೆ ವಿಶೇಷ ಪ್ರಭಾವ ಉಂಟಾಗುತ್ತದೆ. ಆದ್ದರಿಂದ ಇದನ್ನು ನೋಡುತ್ತಾ ಕುಳಿತಿರಲು ಸಾಧ್ಯವಿಲ್ಲ. ಆದರೂ ಜಾಗರೂಕತೆಯಿಂದ ನಾವು ಇರಬೇಕಾಗಿದೆ-ಎಂದು ಶ್ರೀ ನೆಹ್ರೂ ಹೇಳಿದರು

ದೇಶದೊಳಗಿನ ವಿಷಯವಾಗಿ ಅವರು ಪ್ರಸ್ತಾಪಿಸಿ, ಪಂಚವಾರ್ಷಿಕ ಯೋಜನೆಯನ್ನು ಈಗ ರಾಷ್ಟ್ರನಿರ್ಮಾಣ ಕಾರ್ಯಕ್ಕಾಗಿ ಕೈಗೊಳ್ಳಲಾಗಿದೆ. ಅದರಲ್ಲೇನೂ ನ್ಯೂನಾತಿರಿಕ್ತಗಳಿದ್ದಾಗ್ಯೂ ಮುಂದೆ ಇನ್ನೂ ಉನ್ನತ ಯೋಜನೆಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಬರೀ ಯೋಜನೆಗಳನ್ನು ತಯಾರಿಸುವುದರಿಂದ ಏನೂ ಪ್ರಯೋಜನವಾಗಲಾರದು. ಇದನ್ನು ಕಾರ್ಯರೂಪಕ್ಕೆ ತರಲು ಜನತೆಯು ಸರ್ಕಾರಕ್ಕೆ ತನ್ನ ಪೂರ್ಣ ಸಹಕಾರ ನೀಡಬೇಕು-ಎಂದು ಮನವಿ ಮಾಡಿದರು.

ರಾಜಕೀಯಕ್ಕೆ ಧಾರ್ಮಿಕ ತತ್ವಗಳನ್ನು ಬೆರೆಸಬಾರದು ಯಾವ ಮತಧರ್ಮವೇ ಇರಲಿ ಎಲ್ಲರಿಗೂ ಸಮಾನ ಹಕ್ಕುಗಳಿವೆ. ಹಿಂಸಾಮಾರ್ಗವನ್ನು ಮಾತ್ರ ನಾವು ಅನುಸರಿಸಬಾರದು. ಸಮಾನತ್ವವೆಂದು ಹೇಳುವ ಕಮ್ಯೂನಿಸ್ಟರ ತತ್ವ ಸಾಧುವಾಗಿದೆ. ಆದರೆ ಅದನ್ನು ಅವರು ಅನುಸರಿಸುತ್ತಲಿರುವ ಮಾರ್ಗವನ್ನು ಒಪ್ಪಲಾಗುವುದಿಲ್ಲ. ಬುಡಮೇಲು ಮಾಡುವ ಮಾರ್ಗಗಳನ್ನು ಅವರು ತೊರೆದು ಅಹಿಂಸಾಮಾರ್ಗವನ್ನು ಅವಲಂಬಿಸಬೇಕೆಂದು ಅವರು ತಿಳಿಸಿದರು.

ಉಚಿತ ಹೂವುಕುಂಡಗಳು

ತೋಟಗಾರಿಕೆ ಶಿಕ್ಷಣತರಗತಿ ಆರಂಭದಲ್ಲಿ ಭರವಸೆ

ಮೈಸೂರು ೧೪

ರಾಜಧಾನಿಯ ಕರ್ಜನ್ ಪಾರ್ಕಿನಲ್ಲಿ ನಿನ್ನೆ ತೋಟಗಾರಿಕೆ ಶಿಕ್ಷಣ ತರಗತಿಯ ಪ್ರಾರಂಭೋತ್ಸವವನ್ನು ಶ್ರೀ ಎಸ್. ರಾಮರಾಯರು ನೆರವೇರಿಸಿದರು. ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರಂಭದಲ್ಲಿ ತೋಟದ ಇಲಾಖಾ ಮುಖ್ಯಾಧಿಕಾರಿ ಡಾ|| ಮರಿಗೌಡರವರು ಸ್ವಾಗತ ಭಾಷಣ ಮಾಡಿ, ರಾಜಧಾನಿಯಲ್ಲಿ ಮೊಟ್ಟಮೊದಲನೆ ಬಾರಿ ಇಂತಹ ತೋಟಗಾರಿಕೆ ಶಿಕ್ಷಣ ವ್ಯವಸ್ಥೆಯನ್ನು ಏರ್ಪಡಿಸಲಾಗಿದೆಯೆಂದೂ, ಈ ಉಪಯೋಗವನ್ನು ಹೆಚ್ಚಾಗಿ ಜನರು ಉಪಯೋಗಿಸಿಕೊಳ್ಳಬೇಕೆಂದೂ ಮನವಿ ಮಾಡಿದರು.

ದೇಶದಲ್ಲಿ ತೋಟಗಾರಿಕೆ ಶಿಕ್ಷಣದ ಅಗತ್ಯವನ್ನು ತಿಳಿಸಿ, ಉದ್ಯೋಗ ಕಲ್ಪಿಸಿಕೊಡಲು ಈ ತರಗತಿಗಳನ್ನು ತೆರೆದಿಲ್ಲವೆಂದೂ, ಈ ಉದ್ದೇಶಬಿಟ್ಟು ಜನರು ತಮ್ಮ ಮನೆಗಳ ಆವರಣದಲ್ಲಿ ಒಳ್ಳೆ ತರಕಾರಿ ಮತ್ತು ಹಣ್ಣುಗಳನ್ನು ಬೆಳೆದು ಪುಷ್ಟಿ ಆಹಾರ ತಿನ್ನಲು ಅವಕಾಶವಾಗುವಂತೆ ಮಾಡಿಕೊಳ್ಳಬೇಕೆಂದೂ ಶ್ರೀ ರಾಮರಾಯರು ಹೇಳಿದರು.

ತೋಟಗಾರಿಕೆ ವಿಷಯದಲ್ಲಿ ಜನರು ಹೆಚ್ಚು ಆಸಕ್ತಿ ಹೊಂದಬೇಕೆಂದೂ, ತಮ್ಮ ಮನೆಗಳಲ್ಲಿ ಹೂವು ಬೆಳೆಯಲು ಕುಂಡಗಳನ್ನು ಎಷ್ಟು ಬೇಕಾದರೂ ಉಚಿತವಾಗಿ ಕೊಡಿಸಲು ಪ್ರಯತ್ನಿಸುವುದಾಗಿಯೂ ಶ್ರೀ ಟಿ.ವೆಂಕಟರಮಣಯ್ಯನವರು ಕೊನೆಯಲ್ಲಿ ತಿಳಿಸಿದರು.

ಪಠ್ಯ ಪುಸ್ತಕಗಳಿಗಾಗಿ ಸಂಶೋಧನಾ ಕೇಂದ್ರ

ಭಾರತದಲ್ಲಿ ಮಾದರಿ ಪಠ್ಯ ಪುಸ್ತಕಗಳನ್ನು ರಚಿಸಲು ಒಂದು ಸಂಶೋಧನಾ ಕೇಂದ್ರವನ್ನು ರಚಿಸಲು ಭಾರತ ಸರ್ಕಾರ ಆಲೋಚಿಸುತ್ತಿದೆಯೆಂದು ಕೇಂದ್ರ ವಿದ್ಯಾ ಉಪ ಸಚಿವರು ತಿಳಿಸಿದ್ದಾರೆ.

ಧನಲಕ್ಷ್ಮಿಗೆ ಪುನಃ ವೈದ್ಯಪರೀಕ್ಷೆ

ಕೊಡಗಿನ 'ರಹಸ್ಯ ಕನ್ಯೆ' ಧನಲಕ್ಷ್ಮಿ ಅನೇಕ ತಿಂಗಳುಗಳಿಂದ ಅನ್ನ ನೀರು ಇಲ್ಲದೆ ಜೀವಿಸುತ್ತಿದ್ದಾಳೆಂಬುದು ನಿರಾಧಾರವಾದುದೆಂಬುದೂ, ಆಕೆಯು ಆಹಾರ ತೆಗೆದುಕೊಳ್ಳುತ್ತಿದ್ದಳೆಂದೂ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯರುಗಳು ಆಕೆಯನ್ನು ಪರೀಕ್ಷೆ ಮಾಡಿದನಂತರ ತಿಳಿಸಿದ ಅಭಿಪ್ರಾಯಕ್ಕೆ ಎಷ್ಟೋ ಕಡೆ ಮನ್ನಣೆ ದೊರೆಯಲಿಲ್ಲ.

ಆಕೆಯು ವಿಕ್ಟೋರಿಯಾ ಆಸ್ಪತ್ರೆಯಿಂದ ಹೊರಕ್ಕೆ ಬಂದು ತನ್ನ ಅಕ್ಕನ ಮನೆಯಾದ ಚಾಮರಾಜ ನಗರಕ್ಕೆ ಹೋದಾಗನಿಂದಲೂ ಆಹಾರ ತೆಗೆದುಕೊಳ್ಳುತ್ತಿಲ್ಲವೆಂದು ಆಕೆಯ ಅಣ್ಣನು ತಿಳಿಸಿರುತ್ತಾನೆ. ಅದ್ದರಿಂದ ಆಕೆಯ ವಿಷಯ ಪುನಃ ಆಶ್ಚರ್ಯಕ್ಕೆ ಒಳಗಾಗಿದೆ.

ಈಗ ಆಕೆಯನ್ನು ವೈದ್ಯಪರೀಕ್ಷೆಗಾಗಿ ದೆಹಲಿಗೆ ಕರೆತರಲು ಕೊಡಗಿನ ಪಾರ್ಲಿಮೆಂಟ್ ಸದಸ್ಯರಾದ ಶ್ರೀ ಎನ್. ಸೋಮಣ್ಣನವರು ಪ್ರಯತ್ನ ನಡೆಸುತ್ತಿದ್ದಾರೆ. ಈ ವಿಷಯದಲ್ಲಿ ಅವರು ಕೇಂದ್ರ ಆರೋಗ್ಯ ಇಲಾಖೆಯವರೊಡನೆ ಮಾತುಕತೆ ನಡೆಸುತ್ತಿದ್ದಾರೆ.

ಭಾರತದಲ್ಲಿ ವಸಾಹತುಗಳು ಬೇಡ

ಭಾರತದಲ್ಲಿರುವ ವಸಾಹತು ಪ್ರಾಂತ್ಯಗಳಾದ ಗೋವ, ಪಾಂಡುಚೆರಿ, ಮಾಹೆ, ಕಾರೈಕಲ್ ಪ್ರದೇಶದ ಪ್ರಮುಖ ನಾಯಕರು ನಿನ್ನೆಯದಿನ ಮದ್ರಾಸ್‌ನಲ್ಲಿ ಒಂದು ಸಭೆಯನ್ನು ನಡೆಸಿ ಈ ಪ್ರಾಂತ್ಯಗಳು ಇನ್ನೂ ಭಾರತದೊಡನೆ ಸೇರಲಿರುವುದಕ್ಕೆ ತಮ್ಮ ವಿಷಾದವನ್ನು ವ್ಯಕ್ತಪಡಿಸಿದ್ದಾರೆ. ಗೋವಾದಲ್ಲಿ ವಿದೇಶೀ ಸೈನ್ಯಗಳ ನೆಲೆಯನ್ನಾಗಿ ಪರಿವರ್ತಿಸುತ್ತಲಿರುವುದಕ್ಕೆ ತಮ್ಮ ಕಳವಳವನ್ನು ವ್ಯಕ್ತಪಡಿಸಿ ನಿರ್ಣಯ ಮಾಡಿದ್ದಾರೆ.

ರಷ್ಯಾ-ಚೈನಾ ಪ್ರತಿಭಟನೆಗೆ ಪಾಕ್ ತಿರಸ್ಕಾರ

ರಷ್ಯಾ ಮತ್ತು ಚೈನಾಗಳು ಪಾಕ್-ಅಮೆರಿಕಾ ಮಿಲಿಟರಿ ಒಪ್ಪಂದ ವಿಷಯದಲ್ಲಿ ಮಾಡಿರುವ ಪ್ರತಿಭಟನೆಯನ್ನು ಪಾಕೀಸ್ತಾನವು ತಿರಸ್ಕರಿಸುವುದಾಗಿ ಕರಾಚಿಯ ಪತ್ರಿಕೆಯೊಂದು ಪ್ರಕಟಿಸಿದೆ. ತನ್ನ ರಕ್ಷಣಾ ಯೋಜನೆ ವಿಸ್ತರಣೆ ಮತ್ತು ಅದನ್ನು ಮುಂದುವರಿಸುವುದು, ಆಧುನಿಕ ಶಸ್ತ್ರಗಳನ್ನು ಅಮೆರಿಕದಿಂದ ಕೊಳ್ಳುವುದು ಮುಂತಾದ ಕಾರ್ಯದ ಭಾಗವನ್ನು ಪಾಕೀಸ್ತಾನವು ಮುಂದುವರಿಸುವುದಾಗಿ ಆ ಪತ್ರಿಕೆ ಬರೆದಿದೆ.

ಹರಿಹರನಾಥಶಾಸ್ತ್ರಿಯವರ ಬಗ್ಗೆ ಸಂತಾಪ

ಮೈಸೂರು, ಡಿ. ೧೪

ನಾಗಪುರದ ಹತ್ತಿರ ನಡೆದ ವಿಮಾನ ಅಪಘಾತದಲ್ಲಿ ಟ್ರೇಡ್ ಯೂನಿಯನ್ ಕಾಂಗ್ರೆಸ್ ಮತ್ತು ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಅಧ್ಯಕ್ಷರಾದ ಶ್ರೀ ಹರಿಹರನಾಥ ಶಾಸ್ತ್ರಿಯವರ ಅಕಾಲ ಮರಣಕ್ಕಾಗಿ ದಕ್ಷಿಣ ಭಾರತ ರೈಲ್ವೆ ಕಾರ್ಮಿಕರ ಮೈಸೂರು ಶಾಖೆಯವರು ನಿನ್ನೆಯದಿನ ಶ್ರೀ ಹೆಚ್. ಡಿ. ರಾಜ್‌ರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸಂತಾಪ ಸೂಚನೆಯ ನಿರ್ಣಯ ಮಾಡಿದರು.

ನಾಟಕ

ಶ್ರೀ ವರಲಕ್ಷ್ಮೀ ಸಂಗೀತ ಸಂಸ್ಥೆಯ ನಾಟಕ ಮತ್ತು ಸಾಹಿತ್ಯ ಮಂದಿರದವರು ತಮ್ಮ ಕೃಷ್ಣಮೂರ್ತಿಪುರಂ ಶಾಖೆಯಲ್ಲಿ ಇದೇ ೧೬ ನೇ ತಾರೀಖು ಬುಧವಾರ ಸಂಜೆ ಆರುವರೆ ಗಂಟೆಗೆ ಶ್ರೀ ಕೆ. ಶ್ರೀನಿವಾಸ ಶಾಸ್ತ್ರಿಗಳ "ಅಮರ ಬಳೆ ಅವಾಂತರ" ಎಂಬ ನಾಟಕವನ್ನು ಅಭಿನಯಿಸುವರು.

ಭಾರತದಲ್ಲಿ ಏಷ್ಯನ್ ಸಮ್ಮೇಳನಕ್ಕೆ ಒತ್ತಾಯ

ಪಾಕೀಸ್ತಾನವು ಅಮೆರಿಕದೊಡನೆ ಮಿಲಿಟರಿ ಒಪ್ಪಂದ ಮಾಡಿಕೊಳ್ಳಲಿರುವುದಕ್ಕೆ ಪ್ರತಿಯಾದ ಕ್ರಮ ಕೈಗೊಳ್ಳಲು ದೆಹಲಿಯಲ್ಲಿ ಏಷ್ಯಾ ಮತ್ತು ಮಧ್ಯ ಪ್ರಾಚ್ಯ ರಾಷ್ಟ್ರಗಳ ಸಮ್ಮೇಳನ ಕರೆಯಬೇಕೆಂಬ ಸಲಹೆಗೆ ಹೆಚ್ಚಿನ ಬೆಂಬಲ ಕಂಡುಬಂದಿದೆಯೆಂದು ಹೇಳಲಾಗಿದೆ.

ದಾವಣಗೆರೆಗೆ ಕೇಂದ್ರ ಕೈಗಾರಿಕಾ ಸಚಿವರು

ಇದೇ ೨೮ನೇ ತಾರೀಖು ಕೇಂದ್ರ ಸರಕಾರದ ಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಭೇಟಿ ಇತ್ತು, ಅದರ ಹತ್ತಿರವಿರುವ ತೋಳಹುಣಸೆಯಲ್ಲಿ ಹತ್ತಿ ಯಂತ್ರಗಾರ ಪ್ರಾರಂಭೋತ್ಸವ ನಡೆಸುವರು.

ಭಾರತಕ್ಕೆ ಪಾಕ್ ಗೌರ್ನರ್ ಜನರಲ್ ಭೇಟಿ

ಲಕ್ನೋ ಬಳಿ ಇರುವ ಮುಸ್ಲಿಂ ಧಾರ್ಮಿಕ ಕ್ಷೇತ್ರವೊಂದಕ್ಕೆ ಪಾಕ್ ಗೌರ್ನರ್ ಜನರಲ್ ಗುಲಾಂ ಮಹಮುದ್‌ರವರು ಇದೇ ೧೬ನೇ ತಾರೀಖು ಭೇಟಿ ಕೊಡುವರೆಂದು ತಿಳಿಯಬರುತ್ತದೆ.

● ವಿಶ್ವದಲ್ಲಿ ವಸಾಹತು ಪ್ರಾಂತ್ಯಗಳಿರಕೂಡದೆಂಬುದೇ ಭಾರತದ ನೀತಿ. ಅವುಗಳು ಸ್ವಾತಂತ್ರವಾಗಲು ಭಾರತದ ಸಹಾನುಭೂತಿಯಿದೆ. ಆದರೆ ಹೋರಾಟದಲ್ಲಿ ನೇರವಾದ ಪಾತ್ರವನ್ನು ವಹಿಸಲು ಸಾಧ್ಯವಿಲ್ಲವೆಂದು ಪ್ರಧಾನಿ ನೆಹರೂ ಹೇಳಿದ್ದಾರೆ.

ಮೈಸೂರಿನಲ್ಲಿ ಹರಿಜನರ ಉದ್ಧಾರ ಕಾರ್ಯಗಳು

ಮೈಸೂರು ಡಿ. ೧೪

ಮೈಸೂರಿನಲ್ಲಿ ಹರಿಜನೋದ್ಧಾರ ಕಾರ್ಯಗಳ ವಿಷಯವಾಗಿ ಆರೋಗ್ಯ ಮತ್ತು ಸ್ಥಳೀಯ ಸಂಸ್ಥೆ ಸಚಿವರಾದ ಶ್ರೀ ಟಿ. ಚನ್ನಯ್ಯನವರು ಮೊನ್ನೆದಿನ ಮೈಸೂರು ಆಕಾಶವಾಣಿಯಲ್ಲಿ ಮಾತನಾಡುತ್ತಾ ಈರೀತಿ ಹೇಳಿದ್ದಾರೆ.

ಮೈಸೂರಿನಲ್ಲಿ ಈ ಕಾರ್ಯವು ೬೦ ವರ್ಷಗಳ ಹಿಂದೆಯೇ ಪ್ರಾರಂಭವಾಯಿತು. ಮೊದಲು ವಿದ್ಯಾಸೌಕರ್ಯವನ್ನು ಕಲ್ಪಿಸುವ ಕಾರ್ಯದಲ್ಲಿ ತೊಡಗಲಾಯಿತು. ೧೮೦೦ ರ ಹಿಂದೆ ಈ ಕೆಲಸವು ಮಿಷನರಿಗಳ ಕೈಯಲ್ಲಿದ್ದಿತು ಆದರೆ ಸರ್ಕಾರವು ತಾನೇ ಈ ಕಾರ್ಯವನ್ನು ಪ್ರಾರಂಭಿಸಿ ೧೯೦೦ರ ವೇಳೆಗೆ ಪ್ರತ್ಯೇಕವಾಗಿ ಹರಿಜನರಿಗೆ ೩೧ ಸರ್ಕಾರಿ ಮತ್ತು ೩೧ ಏಡೆಡ್ ಶಾಲೆಗಳನ್ನು ಸ್ಥಾಪಿಸಿತು. ಇದು ಕ್ರಮೇಣ ಹೆಚ್ಚುತ್ತಾ ಈಗ ೪೪೬ ಶಾಲೆಗಳಿವೆ ಅವುಗಳಲ್ಲಿ ೧೭೪೩೬ ಬಾಲಕರು ಓದುತ್ತಿದ್ದಾರೆ.

ಹರಿಜನ ಮಕ್ಕಳು ಇತರ ಮಕ್ಕಳೊಂದಿಗೆ ವಿದ್ಯಾಭ್ಯಾಸಮಾಡುವುದಕ್ಕೆ ಪ್ರಾರಂಭದಲ್ಲಿ ಬಲತ್ತರವಾದ ಆಕ್ಷೇಪಣೆಗಳಿದ್ದುವು. ಈಗ ಅದು ಕಡಿಮೆಯಾಗಿ ಸುಮಾರು ೮೨೩೭೮ ಹರಿಜನ ಮಕ್ಕಳು ಇತರರೊಡನೆ ಶಿಕ್ಷಣಪಡೆಯುತ್ತಿದ್ದಾರೆ ಹರಿಜನರಿಗೆ ಉಚಿತ ವಿದ್ಯಾಭ್ಯಾಸ, ಬಟ್ಟೆ ಮತ್ತು ಪುಸ್ತಕಗಳ ಮತ್ತು ವಿದ್ಯಾರ್ಥಿನಿಲಯ ಮುಂತಾದ ಹಲವಾರು ಸೌಕರ್ಯಗಳನ್ನು ಮುಫತ್ತಾಗಿ ಒದಗಿಸಲಾಗಿದೆ.

ಈಗ ಸರ್ಕಾರವು ೨ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಲಿರುವುದಲ್ಲದೆ ೪೨ಕ್ಕೆ ಗ್ರಾಂಟನ್ನು ಕೊಡುತ್ತಿದೆ.

ಹರಿಜನರ ಆರ್ಥಿಕಸ್ಥಿತಿಯನ್ನು ಉತ್ತಮಗೊಳಿಸಲು ಅವರಿಗೆ ಉಚಿತವಾಗಿ ಮತ್ತು ಅರ್ಧಬೆಲೆಯಲ್ಲಿ ಜಮೀನನ್ನು ಒದಗಿಸಲಾಗುತ್ತಿದೆ. ಅದಲ್ಲದೆ ಕಂದಾಯ ರಿಯಾಯಿತಿಯನ್ನು ಸಹ ಕೊಡಲಾಗುತ್ತಿದೆ. ಕಳೆದ ೯ ವರ್ಷಗಳಲ್ಲಿ ಈರೀತಿ ೯೧೬೮೮ ಎಕರೆ ಭೂಮಿಯನ್ನು ಹಂಚಲಾಗಿದೆ.

ಹರಿಜನರ ವಾಸಕ್ಕಾಗಿ ಮನೆಗಳಿಗೆ ಉಚಿತವಾಗಿ ನಿವೇಶನ ಮತ್ತು ಮರಮುಟ್ಟು, ಹಣದ ಸಹಾಯವನ್ನೂ ಸಹ ಮಾಡಲಾಗುತ್ತಿದೆ. ಈರೀತಿ ನೆರವನ್ನು ಕಳೆದ ೫ ವರ್ಷಗಳಲ್ಲಿ ೨೪೯೯ ಜನರಿಗೆ ಒದಗಿಸಲಾಗಿದೆ.

ಹರಿಜನರಿಗೆ ಸರ್ಕಾರಿ ಉದ್ಯೋಗಗಳನ್ನು ಕೊಡುವುದರಲ್ಲೂ ಅವರಿಗೆ ಉತ್ತೇಜನ ಕೊಡಲಾಗುತ್ತಿದೆ. ೧೯೫೨ರಲ್ಲಿ ಸರಕಾರಿ ಕೆಲಸದಲ್ಲಿ ೨೫ ಗೆಜೆಟೆಡ್ ಮತ್ತು ೨೭೨೭ ನಾನ್‌ಗೆಜೆಟೆಡ್ ನೌಕರರು ಇದ್ದಾರೆ ಹೊಸದಾಗಿ ನೇಮಕ ಮಾಡಲಾಗುವ ಹುದ್ದೆಗಳಲ್ಲಿ ಶೇಕಡ 16ಕ್ಕೆ ರಷ್ಟನ್ನು ಅವರಿಗೆ ಮೀಸಲಾಗಿಡಲಾಗಿದೆ.

ಪ್ರತಿಬಂಧಕಾಜ್ಞೆ

ಹೈದರಾಬಾದ್ ಶಾಸನ ಭವನಕ್ಕೆ ೫೦೦ ಗಜ ದೂರದಲ್ಲಿ ಯಾವ ಸಭೆ,ಮೆರವಣಿಗೆ, ಪ್ರದರ್ಶನ ಮುಂತಾದುವನ್ನೆಲ್ಲಾ ೮ ದಿನಗಳ ಪ್ರತಿಬಂಧಿಸಿ ಅಲ್ಲಿಯ ಪೋಲೀಸ್ ಕಮೀಷನರ್ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ.

ಅಸಿಸ್ಟೆಂಟ್ ಪ್ರೊಫೆಸರಾಗಿ ನೇಮಕ

ಮಹಾರಾಜಾ ಕಾಲೇಜಿನ ಮನಶ್ಶಾಸ್ತ್ರ ಅಧ್ಯಾಪಕರಾದ ಶ್ರೀ ಅಬ್ದುಲ್ ಹಫೀಜ್‌ರನ್ನು ಅದೇ ಕಾಲೇಜಿನ ಹಂಗಾಮಿ ಅಸಿಸ್ಟೆಂಟ್ ಪ್ರೊಫೆಸರಾಗಿ ನೇಮಿಸಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೨—೧೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—೮	೨೪—
ಎಳ್ಳು	೬೦—೨	—
ಹೊಂಗೆಬೀಜ	—	—
ಹರಳು	೩೨—	—
ಹುಚ್ಚೆಳ್ಳು	೩೨—	೪೦—೨
ತವರೆ	—	—
ಹುರಳಿ	೩೮—೮	೩೧—೧೨
ಹೆಸರು	೩೦—೧೦	೩೭—೪
ಅಲಸಂದೆ	೩೮—	೫೦—
ಹುಣಸೇಹಣ್ಣು	೧೦—೨	೧೨—೧೪
ಸೀಗೆಕಾಯಿ	೫—೫	—
ಉದ್ದು	—	—
ಮೆಣಸಿನಕಾಯಿ	೧೫—೮	೩೬—[illegible]
ಬೆಲ್ಲ	—	—
ತೆಂಗಿನಕಾಯಿ	೧೫೦—	೨೨೪—

ಸಂಸ್ಥಾನದ ಆಡಳಿತದಲ್ಲೂ ಸಹ ಇವರಿಗೆ ಭಾಗವಹಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಅಲ್ಲದೆ ಹರಿಜನರಿಗೆ ಎಲ್ಲೆಡೆಯಲ್ಲಿಯೂ ಯಾವ ನಿರ್ಬಂಧವಿಲ್ಲದೆ ಇತರ ಜನಕ್ಕಿರುವಂತೆ ಸಮಾನ ಹಕ್ಕು ಇರಲು ಅಸ್ಪೃಶ್ಯತಾ ನಿವಾರಣಾ ಕಾನೂನನ್ನು ಜಾರಿಗೆ ತರಲಾಗಿದೆ. ಹೊಟೇಲು, ಛತ್ರ, ಹಾಸ್ಟಲು, ಸಿನೀಮಾ, ನಾಟಕ ಮಂದಿರ ನದಿ, ಹೊಳೆ,ಕೊಳ,ಭಾವಿ,ರಸ್ತೆ,ದೇವಸ್ಥಾನ ಮುಂತಾದ ನಾನಾ ಪ್ರಯೋಜನ ಹೊಂದಲು ಇದ್ದ ಅಡಚಣೆಗಳನ್ನೆಲ್ಲಾ ತೆಗೆದು ಹಾಕಲಾಗಿದೆ. ಅದನ್ನು ಅಡ್ಡಿಪಡಿಸುವವರನ್ನು ಶಿಕ್ಷೆಗೆ ಗುರಿಪಡಿಸುವ ಶಾಸನವಿದೆ.

ಈ ಕೆಲಸಗಳಿಗೆಲ್ಲಾ ಸಾರ್ವಜನಿಕರ ಸಹಕಾರವು ಧಾರಾಳವಾಗಿ ದೊರೆತಿದೆ ಸಾರ್ವಜನಿಕರು ಇತ್ಯೊಸ್ಪ್ಯತಿಶಯವಾಗಿ ಈ ಕಾರ್ಯದಲ್ಲಿ ಸರ್ಕಾರದೊಡನೆ ಸಹಕರಿಸಿ ಮಹಾತ್ಮಜಿಯವರು ಬೋಧಿಸಿದ ಮಾರ್ಗದಲ್ಲಿ ನಡೆದು ಅವರ ಆತ್ಮಕ್ಕೆ ಶಾಂತಿಯನ್ನು ದೊರೆಕಿಸುವುದು ನಮ್ಮೆಲ್ಲರ ಕರ್ತವ್ಯ.

ಸರ್ಕಾರಿ ಆಜ್ಞೆ

ಬೆಂಗಳೂರು, ಡಿ. ೮

ತುಂಗ ಮತ್ತು ಭದ್ರಾ ಯೋಜನೆಗಳಿಗೆ ರಜಾದಮೇಲಿರುವ ಶ್ರೀ ಎಲ್. ಸಿ. ಮುನಿಸ್ವಾಮಿ ರೆಡ್ಡಿಯವರನ್ನು ವಿಶೇಷ ಇಂಜನಿಯರಾಗಿ ನೇಮಿಸಲಾಗಿದೆ.

ತುಂಗ ವ್ಯಾಲಿ ಸರ್ಕಲ್ಲಿನ ಸೂಪರಿಂಟೆಂಡಿಂಗ್ ಇಂಜನಿಯರು ಶ್ರೀ ಸಿ. ಆರ್. ಕೃಷ್ಣಸ್ವಾಮಿ ಮೊದಲಿಯಾರ್‌ರವರನ್ನು ಶಿವಮೊಗ್ಗ ಸೂಪರಿಂಟೆಂಡಿಂಗ್ ಇಂಜನಿಯರಾಗಿ ವರ್ಗಾಯಿಸಲಾಗಿದೆ.

ನೌಕಾ ಇಂಜನಿಯರಿಂಗ್ ಶಿಕ್ಷಣ ಕಾಲೇಜು

ಕಲ್ಕತ್ತಾ ಬಳಿ ಭಾರತ ಸರ್ಕಾರವು ೪ ವರ್ಷದ ಹಿಂದೆ ಸ್ಥಾಪಿಸಿದ ನೌಕಾ ಇಂಜನಿಯರಿಂಗ್ ಕಾಲೇಜಿನ ಕಟ್ಟಡದ ಪ್ರಾರಂಭೋತ್ಸವವನ್ನು ಪ್ರಧಾನಿ ನೆಹರೂರವರು ಈದಿನ ನೆರವೇರಿಸಿದರು. ಕಾಮನ್ವೆಲ್ತ್ ರಾಷ್ಟ್ರಗಳನ್ನೆಲ್ಲಾ ಈ ರೀತಿ ಶಿಕ್ಷಣ ಕಾಲೇಜಿರುವುದು ಇದೊಂದೆಡೆಯಲ್ಲಿ ಮಾತ್ರ.

ಪಿ.ಎಸ್.ಪಿ. ಅಧ್ಯಕ್ಷರ ರಾಜೀನಾಮೆ

ಆಂಧ್ರ ಪ್ರದೇಶದ ಪ್ರಜಾಸೋಷಲಿಸ್ಟ ಪಕ್ಷದ ಅಧ್ಯಕ್ಷತೆಗೆ ಅಲ್ಲಿಯ ಅರ್ಥಿಕ ಸಚಿವ ಶ್ರೀ ಟಿ. ವಿಶ್ವನಾಥಂರವರು ರಾಜೀನಾಮೆ ಕೊಟ್ಟಿರುವುದಾಗಿ ತಿಳಿಯಬರುತ್ತದೆ. ಆಂಧ್ರ ಮಂತ್ರಿಮಂಡಲವನ್ನು ಅವರು ಸೇರಿದ ವಿಷಯದಲ್ಲಿ ಪಕ್ಷದಲ್ಲಿ ಉಂಟಾದ ಭಿನ್ನಾಭಿಪ್ರಾಯವೇ ಇದಕ್ಕೆ ಮುಖ್ಯ ಕಾರಣವಾಗಿದೆ.

ಭಾರತ ವಾಚನ

ಹಳೇ ಅಗ್ರಹಾರದಲ್ಲಿರುವ ಶ್ರೀ ಶಂಕರ ಮಠದಲ್ಲಿ ಮೈಸೂರಿನ ಗಮಕಿ ಸಹೋದರರಾದ ಶ್ರೀ॥ ಕೌಶಿಕ್ ಮತ್ತು ಶ್ರೀ॥ ವೆಂಕಟಸುಬ್ಬಯ್ಯನವರಿಂದ ಪ್ರತಿದಿನವೂ ನಡೆಸಲ್ಪಡುತ್ತಿರುವ ಭಾರತ ವಾಚನದಲ್ಲಿ "ಅಕ್ಷಯ ವಸ್ತ್ರದಾನ" ಎಂಬ ಕಥಾ ಭಾಗವು ಈಸಂಜೆ ೫-೩೦ ಘಂಟೆಗೆ ವಾಚಿಸಲ್ಪಡುವುದು. ಅದರ ಅಂಗವಾಗಿ ಮಂಗಳಾರತಿ ಏರ್ಪಡಿಸಿದೆ.

ಆಸ್ಟ್ರೇಲಿಯಾಕ್ಕೆ ದೇಶಮುಖ್ ದಂಪತಿಗಳು

ಆಸ್ಟ್ರೇಲಿಯಾದಲ್ಲಿ ಮುಂದಿನ ತಿಂಗಳು ೮ ನೇ ತಾರೀಖು ನಡೆಯಲಿರುವ ಕಾಮನ್‌ವೆಲ್ತ್ ಹಣಕಾಸಿನ ಸಚಿವರ ಸಮ್ಮೇಳನದಲ್ಲಿ ಭಾರತ ಸರ್ಕಾರದ ಆರ್ಥಿಕ ಸಚಿವ ಶ್ರೀ ಸಿ. ಡಿ. ದೇಶ್‌ಮುಖ್‌ರವರು ಭಾಗವಹಿಸುವರು ಅವರ ಜೊತೆ ಆಯೋಜನಾ ಕಮೀಷನ್ನಿನ ಶ್ರೀಮತಿ ದುರ್ಗಾಬಾಯಿ ದೇಶ್‌ಮುಖ್‌ರವರು ಹೋಗುವರು.

● ಲಂಡನ್ ನಗರದಲ್ಲಿ ಪ್ರಾಚೀನ ಪುಸ್ತಕಗಳು ಮತ್ತು ಹಸ್ತಪ್ರತಿಗಳ ಪ್ರದರ್ಶನದಲ್ಲಿ ಭಾರತದ ಪುರಾಣಗ್ರಂಥಗಳಾದ ರಾಮಾಯಣ ಮತ್ತು ಮಹಾಭಾರತಗಳ ಹಸ್ತಪ್ರತಿಗಳನ್ನು ಪ್ರದರ್ಶಿಸಲಾಗಿದೆ.

ಸಚಿವರುಗಳ ಪ್ರವಾಸ

ಬೆಂಗಳೂರು, ಡಿ. ೧೪

ವ್ಯವಸಾಯ ಸಚಿವ ಡಾ॥ ನಾಗನಗೌಡರು ಇದೇ ೧೫ ರಿಂದ ೧೭ರ ವರೆವಿಗೆ ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲೂ, ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಅದೇ ಕಾಲದಲ್ಲಿ ತುಮಕೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲೂ, ೨೧ ರಿಂದ ೨೪ರವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲೂ ಪ್ರವಾಸ ಮಾಡುವರು.

ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಇದೇ ೨೪ನೇ ತಾರೀಖು ಹೈದರಾಬಾದಿಗೆ ಪ್ರಯಾಣ ಮಾಡುವರು.

೭೯ ನಗರಗಳಿಗೆ ನೀರಿನ ವ್ಯವಸ್ಥೆ

ಮೈಸೂರು ಸಂಸ್ಥಾನದ ೭೯ ನಗರಗಳಿಗೆ ನೀರಿನ ವ್ಯವಸ್ಥೆಗಾಗಿ ಇಲ್ಲಿಯವರೆಗೆ ಸರ್ಕಾರದವರು ಹಣ ಸಹಾಯ ಮಾಡಿರುವರೆಂದು ಸ್ಥಳೀಯ ಸಚಿವ ಶ್ರೀ ಟಿ. ಚೆನ್ನಯ್ಯನವರು ತಿಳಿಸಿದ್ದಾರೆ.

ವಿಮಾ ಇಲಾಖಾ - ವೈದ್ಯಾಧಿಕಾರಿ

ಮೈಸೂರು ಅರಮನೆ ಆಸ್ಪತ್ರೆಯಲ್ಲಿರುವ ಡಾ॥ ಬಿ. ನಾರಾಯಣರಾಯರನ್ನು ಸರ್ಕಾರಿ ವಿಮಾ ಇಲಾಖಾ ಮೆಡಿಕಲ್ ಆಫೀಸರಾಗಿ ನೇಮಿಸಲಾಗಿದೆ.

ಅರಬ್ ಭಾಷೆಯಲ್ಲಿ ಭಾರತದ ಪ್ರಾಚೀನ ಗ್ರಂಥಗಳು

ಮಹಾಭಾರತ,ರಾಮಾಯಣ,ಭಗವತ್ ಗೀತೆ, ಶಕುಂತಲ,ದಮಯಂತಿ ಮುಂತಾದ ಪುರಾತ ಪ್ರಸಿದ್ಧ ಇತಿಹಾಸಗಳನ್ನು ಅರಬ್ ಭಾಷೆಗಳಲ್ಲಿ ಪ್ರಕಟಿಸಿ ಅವುಗಳನ್ನು ಈಜಿಪ್ಟ್ ಮುಂತಾದ ಮಧ್ಯ ಪ್ರಾಚ್ಯ ದೇಶಗಳಲ್ಲಿ ಹಂಚಲಾಗುವುದು.

ಸೂಡಾನಿನಲ್ಲಿ ಸೇನರವರಿಗೆ ಗೌರವ

ಸೂಡಾನಿನ ಸಾರ್ವತ್ರಿಕ ಚುನಾವಣಾಧಿಕಾರಿಗಳಾಗಿ ಅತ್ಯಮೋಘ ಸೇವೆ ಸಲ್ಲಿಸಿದ ಭಾರತದ ಶ್ರೀ ಸುಕುಮಾರ್ ಸೇನ್‌ರವರಿಗೆ ಗೌರವ ಸಲ್ಲಿಸಲು ಸೂಡಾನಿನ ರಾಜಧಾನಿಯಾದ ಖರ್ಟೂಮ್ ನಗರದ ಬಮ್‌ದೂರ್‌ಮೆನ್ನಿನ ರಸ್ತೆಯೊಂದಕ್ಕೆ ಅವರ ಹೆಸರನ್ನು ಇಡಲು ಆಲೋಚಿಸಿದೆ.

ಅಜಾದ್ ಕಾಶ್ಮೀರದಲ್ಲಿ ಹರತಾಳ

ಪಾಕೀಸ್ತಾನ ಮತ್ತು ಅಮೆರಿಕ ಮಿಲಟರಿ ಒಪ್ಪಂದವನ್ನು ಪ್ರತಿಭಟಿಸಲು ಅಜಾದ್ ಕಾಶ್ಮೀರದ ಅನೇಕ ಪ್ರದೇಶಗಳಲ್ಲಿ ಹರತಾಳ ನಡೆಯಿತು.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೯೪

೧೫-೧೨-೧೯೫೪ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತ ವಿರೋಧಿಸಿದರೂ ಪಾಕ್-ಅಮೆರಿಕಾ ಒಪ್ಪಂದ

ಭಾರತದಲ್ಲಿರುವ ಅಮೆರಿಕ ರಾಯಭಾರಿ ಹೇಳಿಕೆ

ಭಾರತದ ಪ್ರತಿಕ್ರಿಯೆಯನ್ನು ಅಮೆರಿಕ ಗಣಿಸುವುದಾದರೂ, ಪಾಕೀಸ್ತಾನದ ವಿಷಯದಲ್ಲಿ ಭಾರತದ ವಿರೋಧವನ್ನು ಗಮನಿಸದೆ ಅಮೆರಿಕ ಪಾಕೀಸ್ತಾನದೊಂದಿಗೆ ಮಿಲಿಟರಿ ಒಪ್ಪಂದವನ್ನು ಮಾಡಿಕೊಳ್ಳಬಹುದೆಂದು ಭಾರತದಲ್ಲಿರುವ ಅಮೆರಿಕದ ರಾಯಭಾರಿ ಮಿ॥ ಅಲೆನ್‌ರವರು ಹೇಳಿದ್ದಾರೆ.

ಭಾರತದ ಅಭಿಪ್ರಾಯವನ್ನು ತಮ್ಮ ಸರ್ಕಾರದ ಗಮನಕ್ಕೆ ಪೂರ್ಣವಾಗಿ ತಂದಿರುವುದಾಗಿ ಅವರು ಹೇಳಿದ್ದಾರೆ. ಎರಡು ರಾಷ್ಟ್ರಗಳು ಪರಸ್ಪರ ಬಾಂಧವ್ಯಕ್ಕೆ ಒಂದು ನಿಲುವು ವ್ಯಕ್ತಪಡಿಸಿದಾಗ ಮೂರನೆಯ ರಾಷ್ಟ್ರವು ಅದಕ್ಕೆ ಅಡ್ಡಿ ಬರಬಾರದೆಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕೆಂದೂ ಅವರು ತಿಳಿಸಿದರು.

ಜಗನ್ ಪತ್ನಿ ಮತ್ತು ಇತರರ ದಸ್ತಗಿರಿ

ಬ್ರಿಟಿಷ್ ಗಯಾನದ ಪದಚ್ಯುತ ಪ್ರಧಾನಿ ಡಾ॥ ಚೆಡ್ಡಿಜಗನ್‌ರವರ ಪತ್ನಿ ಮತ್ತು ಪೀಪಲ್ಸ್ ಪ್ರೋಗ್ರೆಸಿವ್ ಪಕ್ಷದ ಕಾರ್ಯದರ್ಶಿನಿ ಆದ ಶ್ರೀಮತಿ ಜೇನೆಲ್ ಜಗನ್ ಮತ್ತು ಪಕ್ಷದ ಇತರ ಮುಖಂಡರುಗಳನ್ನು ದಸ್ತಗಿರಿ ಮಾಡಲಾಗಿದೆ. ಸಾರ್ವಜನಿಕ ಸಭೆಯು ನಡೆಸಕೂಡದೆಂದು ಪ್ರತಿಬಂಧಕವಿದ್ದರೂ, ಅದನ್ನು ಉಲ್ಲಂಘಿಸಿದರೆಂಬ ಕಾರಣದಿಂದ ಅವರನ್ನು ಬಂಧಿಸಲಾಗಿದೆಯೆಂದು ಹೇಳಲಾಗಿದೆ.

ಭಾರತಕ್ಕೆ ಫಿಲಿಪೈನ್ಸ್ ನಿಯೋಗ

ಭಾರತ ಮತ್ತು ಫಿಲಿಪೈನ್ಸ್‌ಗಳಿಗೆ ಹೆಚ್ಚಿನ ಸಂಪರ್ಕ ಉಂಟುಮಾಡಲು ಒಂದು ಸೌಹಾರ್ದ ನಿಯೋಗ ಕಳುಹಿಸಬೇಕೆಂದು ತಾವು ಸರ್ಕಾರಕ್ಕೆ ಸಲಹೆ ಮಾಡಿರುವುದಾಗಿ ಭಾರತದಲ್ಲಿರುವ ಫಿಲಿಪೈನ್ಸ್ ಪ್ರತಿನಿಧಿ ಶ್ರೀ ನಾಸಿ್ ಕೋರಾಮ್ ಫೌವ್ಮ ತಿಳಿಸಿದ್ದಾರೆ.

ಭಾರತ-ಪಾಕ್ ಪರಿಣಿತರ ಸಮಿತಿ ಸಭೆ

ಭಾರತ ಮತ್ತು ಪಾಕೀಸ್ತಾನ ಸರ್ಕಾರಗಳ ಪರಿಣಿತರ ಸಮಿತಿಗಳು ಕಾಶ್ಮೀರದ ವಿಷಯದಲ್ಲಿ ಚರ್ಚೆ ನಡೆಸಲು ಮುಂದಿನ ವಾರದಲ್ಲಿ ದೆಹಲಿಯಲ್ಲಿ ಸಭೆ ಸೇರುವರೆಂದು ತಿಳಿಯಬರುತ್ತದೆ.

ಕಾರ್ಮಿಕ ಸಮ್ಮೇಳನ

ಮೈಸೂರು ೧೫

ಅಖಿಲಭಾರತ ಕಾರ್ಮಿಕ ತ್ರಿಪಕ್ಷ ಸಮ್ಮೇಳನವು ರಾಜಧಾನಿಯಲ್ಲಿ ಮುಂದಿನ ತಿಂಗಳು ೭ ನೇ ತಾರೀಖಿನಿಂದ ೧೧ ನೇ ತಾರೀಖಿನವರೆಗೆ ನಡೆಯುತ್ತದೆ. ಕೇಂದ್ರದ ಕಾರ್ಮಿಕ ಸಚಿವ ಶ್ರೀ ವಿ ವಿ. ಗಿರಿಯವರು ಅಧ್ಯಕ್ಷತೆ ವಹಿಸುವರು. ಎಲ್ಲಾ ಪ್ರಾಂತ್ಯಗಳ ಕಾರ್ಮಿಕ ಶಾಖಾಸಚಿವರು, ಕಾರ್ಮಿಕ ಪ್ರತಿನಿಧಿಗಳು ಮತ್ತು ಕೇಂದ್ರ ಸರ್ಕಾರದ ಕಾರ್ಮಿಕ ಶಾಖಾ ಅಧಿಕಾರಿವರ್ಗದವರು ಇದರಲ್ಲಿ ಭಾಗವಹಿಸುವರು.

ಹನುಮಜ್ಜಯಂತಿ ಮಹೋತ್ಸವ

ಮೈಸೂರು ೧೫

ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ಮಾರುತಿ ಮಂದಿರದಲ್ಲಿ ಇದೇ ೧೮ನೇ ತಾರೀಖಿನಿಂದ ೨೭ನೇ ತಾರೀಖಿನವರೆಗೆ ಹನುಮಜ್ಜಯಂತಿ ಮಹೋತ್ಸವವು ನಡೆಯುತ್ತದೆ. ಇದರ ಅಂಗವಾಗಿ ಪ್ರತಿದಿನ ಬೆಳಿಗ್ಗೆ ಪೂಜೆ, ಅಭಿಷೇಕ, ಪಾರಾಯಣ ಮತ್ತು ಸಂಜೆ ೫ ಗಂಟೆಯಿಂದ ಸಂಗೀತ ಕಛೇರಿ ನಡೆಯುತ್ತದೆ ೨೭ನೇ ತಾರೀಖು ಮಾರುತಿ ದೇವರ ಪಟ್ಟಾಭಿಷೇಕ ಮತ್ತು ಸಂಜೆ ೬ ಗಂಟೆಗೆ ಮೆರವಣಿಗೆ ನಡೆಯುತ್ತೆ.

ಸಂಸ್ಕೃತಿ ಪ್ರಚಾರ ಯೋಜನೆ ವಾರ್ಷಿಕೋತ್ಸವ

ಮೈಸೂರು ೧೫

ಸಂಸ್ಕೃತಿ ಪ್ರಚಾರ ಯೋಜನೆಯ ಪ್ರಥಮ ವಾರ್ಷಿಕೋತ್ಸವವನ್ನು ನಾಳೆ ಸಂಜೆ ೬-೩೦ ಗಂಟೆಗೆ ಪುರಭವನದಲ್ಲಿ ವ್ಯವಸಾಯ ಸಚಿವ ಡಾ॥ ನಾಗನಗೌಡರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ಬೆಂಗಳೂರಿಗೆ ಪ್ರಧಾನಿ ನೆಹರೂ

ಬೆಂಗಳೂರು ೧೫

ಪ್ರಧಾನಿ ನೆಹರೂರವರು ಮುಂದಿನ ತಿಂಗಳು ೨ನೇ ತಾರೀಖು ಮಧ್ಯಾಹ್ನ ಹೈದರಾಬಾದಿನಿಂದ ಬೆಂಗಳೂರಿಗೆ ಆಗಮಿಸುವರು. ಅನಂತರ ಅವರು ಕಾಂಗ್ರೆಸ್ ಕೆಲಸಗಾರರನ್ನುದ್ದೇಶಿಸಿ ಮತ್ತು ಬಹಿರಂಗ ಸಭೆಯೊಂದರಲ್ಲಿ ಭಾಷಣ ಮಾಡುತ್ತಾರೆ.

ಜಿಲ್ಲಾಬೋರ್ಡ್ ಭವಿಷ್ಯ ನಿರ್ಧಾರ ಸಮಿತಿ ರಚನೆ

ಬೆಂಗಳೂರು, ಡಿ. ೧೫

ಜಿಲ್ಲಾ ಬೋರ್ಡುಗಳ ಭವಿಷ್ಯ ನಿರ್ಧಾರಕ್ಕಾಗಿ ಸರ್ಕಾರದವರು ಮಾಜಿ ಸಚಿವ ಶ್ರೀ ಡಿ. ಹೆಚ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ.

ಶ್ರೀಗಳಾದ ಎಚ್. ಸಿ. ನಾಗಯ್ಯರೆಡ್ಡಿ, ಬಿ. ಸಿ. ನಂಜುಂಡಯ್ಯ, ಜೆ. ಮಹಮದ್ ಇಮಾಂ, ಎ. ಆರ್. ಬದ್ರಿನಾರಾಯಣ, ಬೋರಣ್ಣಗೌಡ,ಎಚ್ ಪಿ. ಗೋವಿಂದಗೌಡ, ಎಂ. ಮಾದಯ್ಯ, ಬಳ್ಳಾರಿಯ ಅಬ್ದುಲ್ ರಜಾಕ್, ಎಚ್. ಎಸ್. ಹಿರಣ್ಣಯ್ಯ, ಶ್ರೀಮತಿ ಲಕ್ಷ್ಮೀದೇವಿರಾಮಣ್ಣ ಇವರು ಸಮಿತಿಯ ಸದಸ್ಯರು ಸ್ಥಳೀಯ ಸಂಸ್ಥೆ ಉಪಕಾರ್ಯದರ್ಶಿ ಶ್ರೀ ಬಿ. ವೆಂಕಟರಮಣಯ್ಯನವರು ಸಮಿತಿಯ ಕಾರ್ಯದರ್ಶಿ.

೧೯೫೨ ನೇ ಮೈಸೂರು ಗ್ರಾಮಪಂಚಾಯಿತಿ ಮತ್ತು ಜಿಲ್ಲಾಬೋರ್ಡ್ ಶಾಸನದಂತೆ ಜಿಲ್ಲಾಬೋರ್ಡ್ ರಚನೆಯ ಸಾಧ್ಯತೆಗಳ ಪರಿಶೀಲನೆ ತಾಲ್ಲೂಕು ಬೋರ್ಡುಗಳ ರಚನೆ ಸಾಧ್ಯತೆ.

ಚುನಾವಣೆ ವಿಧಾನ, ಅಧಿಕಾರ, ಹಣಕಾಸು ಅವುಗಳಿಗೂ ಗ್ರಾಮಪಂಚಾಯಿತಿಗೂ ಇರಬೇಕಾದ ಸಂಬಂಧ ಮುಂತಾದ ವಿಷಯಗಳನ್ನು ಸಮಿತಿ ಪರಿಶೀಲಿಸಿ ಸರ್ಕಾರಕ್ಕೆ ವರದಿ ಮಾಡುತ್ತದೆ.

ಈ ಸಮಿತಿಯು ಕೂಡಲೇ ತನ್ನ ಕಾರ್ಯವನ್ನು ಪ್ರಾರಂಭಿಸಲಿದೆ.

ಕಬ್ಬಿನಮೇಲೆ ಶೆರಿಗೆ

ಬೆಂಗಳೂರು, ಡಿ. ೧೫

ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಅರೆಯಲ್ಪಡುವ ಕಬ್ಬಿನಮೇಲೆ ೧೯೫೩-೫೪ರಲ್ಲಿ ಟನ್ ಒಂದಕ್ಕೆ ಆರು ರೂಪಾಯಿನಂತೆ ತೆರಿಗೆಯನ್ನು ಮೈಸೂರುಸರ್ಕಾರ ವಿಧಿಸಿದೆ.

ಅಂತರರಾಷ್ಟ್ರೀಯ ನ್ಯಾಯ ಸಮ್ಮೇಳನ

ಅಂತರರಾಷ್ಟ್ರೀಯ ನ್ಯಾಯ ಸಮ್ಮೇಳನವು ಇದೇ ೨೮ನೇ ತಾರೀಖಿನಿಂದ ೬ ದಿನಗಳ ಕಾಲ ದೆಹಲಿಯಲ್ಲಿ ನಡೆಯುತ್ತದೆ. ಇದನ್ನು ರಾಷ್ಟ್ರಾಧ್ಯಕ್ಷರು ಉದ್ಘಾಟಿಸುವರು ಈರೀತಿಯ ಸಮ್ಮೇಳನವು ಏಷ್ಯಾ ರಾಷ್ಟ್ರಗಳಲ್ಲಿ ನಡೆಯುವುದು ಇದೇ ಪ್ರಥಮಭಾರಿ. ವಿಶ್ವದ ನಾನಾ ಭಾಗಗಳಿಂದ ಸುಮಾರು ನೂರುಜನ ನ್ಯಾಯ ಪಂಡಿತರು ಇದರಲ್ಲಿ ಭಾಗವಹಿಸುವರು.

ಹೈದರಾಬಾದ್ ಕಾಂಗ್ರೆಸ್‌ನಲ್ಲಿ ಪುನಃ ಒಡಕು

ಹೈದರಾಬಾದ್ ಸರ್ಕಾರದವರು ಮಂಡಿಸಿರುವ ಗೇಣಿದಾರರ ಮಸೂದೆ ಬಗ್ಗೆ ಕಾಂಗ್ರೆಸ್ ಪಕ್ಷದಲ್ಲಿ ಭಿನ್ನಾಭಿಪ್ರಾಯ ಉಂಟಾಗಿರುವುದಷ್ಟೆ. ಈಗ ಶಾಸನಸಭೆಯ ಕೆಲವು ಕಾಂಗ್ರೆಸ್ ಪಕ್ಷದ ಸದಸ್ಯರು ಮಂತ್ರಿಮಂಡಲವನ್ನು ಸೋಲಿಸಲು ಪುನಃ ಪ್ರಯತ್ನ ನಡೆಸುತ್ತಿರುವರೆಂದು ಹೇಳಲಾಗಿದೆ.

ಈ ವಿಷಯವನ್ನು ಪ್ರಧಾನಿ ನೆಹರೂರವರೊಡನೆ ಚರ್ಚಿಸಲು ಅಲ್ಲಿನ ಗೃಹಸಚಿವ ಶ್ರೀ ಬಿಂದುರವರು ಈಗ ದೆಹಲಿಗೆ ಹೋಗಿದ್ದಾರೆ.

ಮಧ್ಯಪ್ರಾಚ್ಯಕ್ಕೆ ನಾಟ್ಯಕಲಾ ಸಾಂಸ್ಕೃತಿಕ ನಿಯೋಗ

ನಾಟ್ಯದಲ್ಲಿ ಪ್ರಸಿದ್ಧಿ ಪಡೆದಿರುವ ಶ್ರೀ ಉದಯಶಂಕರ್‌ರವರು ತಮ್ಮ ತಂಡದೊಂದಿಗೆ ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ಸಾಂಸ್ಕೃತಿಕ ಪ್ರವಾಸ ಕೈಗೊಳ್ಳಬೇಕೆಂದು ಭಾರತ ಸರ್ಕಾರವು ಅವರನ್ನು ಆಹ್ವಾನಿಸಿರುವುದಾಗಿ ತಿಳಿಯಬರುತ್ತದೆ. ಅವರು ಕೈರೋ, ಅಲೆಕ್ಸಾಂಡ್ರಿಯಾ, ಬಾಗದಾದ್, ಅಂಕಾರ ಮುಂತಾದ ಊರುಗಳಿಗೆ ಭೇಟಿ ಕೊಡುವರು.

ರಷ್ಯಾ ಚೀಣಾದೊಡನೆ ಭಾರತ ಒಪ್ಪಂದವಾಗಲಿ

—ಮಾಸ್ಟರ್ ತಾರಾಸಿಂಗ್

ಸದ್ಯದಲ್ಲಿಯೇ ಪಾಕೀಸ್ತಾನ ಮತ್ತು ಅಮೆರಿಕಾ ನಡುವೆ ಒಪ್ಪಂದವಾಗುವುದರಿಂದ ಭಾರತವು ತನ್ನ ರಕ್ಷಣೆಗಾಗಿ ರಷ್ಯಾ ಮತ್ತು ಚೀಣಾಗಳೊಡನೆ ರಕ್ಷಣಾ ಒಪ್ಪಂದವನ್ನು ಮಾಡಿಕೊಳ್ಳುವುದು ಸೂಕ್ತವೆಂದು ಅಕಾಲಿ ನಾಯಕ ಮಾಸ್ಟರ್ ತಾರಾಸಿಂಗ್‌ರವರು ಹೇಳಿದ್ದಾರೆ.

ಹರಿಕಥೆ

ಮೈಸೂರು ಬಂಡೀಕೇರಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿಯವರ ದೇವಸ್ಥಾನದಲ್ಲಿ ನಾಳೆ ರಾತ್ರಿ ೯ ಘಂಟೆಗೆ ವೈಕುಂಠ ಏಕಾದಶೀ ಪ್ರಯುಕ್ತ ಶ್ರೀ ಎಸ್. ಕೃಷ್ಣಯ್ಯಂಗಾರ್ಯರಿಂದ "ಧ್ರುವಪ್ರಹ್ಲಾದರು" ಎಂಬ ಹರಿಕಥೆ ನಡೆಯುವುದು.

ಸಿಂಹಳಕ್ಕೆ ಚೈನಾಸೌಹಾರ್ದ ನಿಯೋಗದ ಪ್ರವೇಶ ನಿರಾಕರಣೆ

ಚೈನಾದೊಡನೆ ವ್ಯಾಪಾರ ವಿನಹ ಮತ್ಯಾವ ಸಂಬಂಧವೂ ಇಲ್ಲವೆಂದು ಸಿಂಹಳ ಪ್ರಧಾನಿ

ಬ್ರಿಟಿಷ್ ಗಯಾನಾದ ಪದಚ್ಯುತ ಪ್ರಧಾನಿ ಚೆಡ್ಡಿಜಗನ್‌ರವರಿಗೆ ಯಾವರೀತಿಯಾಗಿ ಸಿಂಹಳವನ್ನು ಪ್ರವೇಶಿಸಲು ರಹದಾರಿಯನ್ನು ನಿರಾಕರಿಸಲಾಯಿತೋ ಅದೇ ರೀತಿ ಈಗ ಭಾರತಕ್ಕೆ ಆಗಮಿಸಿರುವ ಚೈನಾ ನಿಯೋಗಕ್ಕೆ ಸಹ ಸಿಂಹಳಕ್ಕೆ ಬರಲು ರಹದಾರಿಯನ್ನು ನಿರಾಕರಿಸಲಾಗಿದೆಎಂದು ಸಿಂಹಳ ಪ್ರಧಾನಿ ಸರ್ ಕೋಟಿಲವಾಲಾರವರು ಹೇಳಿದ್ದಾರೆ.

ಏಷ್ಯಾದ ಇತರ ಭಾಗಗಳಲ್ಲಿ ಕಮ್ಯೂನಿಸ್ಟ್ ಪ್ರಭಾವವು ಹೇಗಿದೆ ಯೆಂಬುದನ್ನು ತಾವು ಅರಿತು ಎಚ್ಚರದಿಂದಿರುವುದಾಗಿ ಹೇಳುತ್ತಾ ಚೈನಾದೊಡನೆ ನಾವು ವ್ಯಾಪಾರ ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ನಾವು ರಬ್ಬರ್ ಮಾರುತ್ತೇವೆ. ಅವರಿಂದ ಅಕ್ಕಿ ಪಡೆಯುತ್ತೇವೆ ಇದು ವಿನಹಾ ಮತ್ಯಾವ ಸಂಬಂಧವೂ ಚೈನಾದೊಡನೆ ನಮಗೆ ಬೇಡ ಈ ವಿಷಯವನ್ನು ಚೈನಾ ಪ್ರಧಾನಿಗೆ ತಿಳಿಸಲಾಗಿದೆ ಎಂದು ಕೋಟಿಲವಾಲಾರವರು ಹೇಳಿದ್ದಾರೆ.

ತಮ್ಮ ದೇಶದ ಕಮ್ಯೂನಿಸ್ಟರ ವಿಷಯವಾಗಿ ಅವರು ಟೀಕಿಸುತ್ತಾ ಅವರು ರಷ್ಯಾದಿಂದ ಸಹಾಯಪಡೆದು ದೇಶದ್ರೋಹ ಕೆಲಸದಲ್ಲಿ ತೊಡಗಿರುವುದಾಗಿಯೂ ಅವರು ಪ್ರಬಲವಾಗಲು ಅವಕಾಶಕೊಡುವುದಿಲ್ಲವೆಂದೂ ತಿಳಿಸಿದ್ದಾರೆ.

ಬರ್ಮಾಕ್ಕೆ ಭಾರತ ನಿಯೋಗ

ಬರ್ಮಾ ಸರ್ಕಾರವು ಖಾಸಗಿ ಜನರ ಜಮೀನನ್ನು ತನ್ನ ವಶಪಡಿಸಿಕೊಳ್ಳುವುದರಿಂದ ಅಲ್ಲಿ ವಾಸಮಾಡುವ ಭಾರತೀಯರ ಜಮೀನುಗಳಿಗೆ ಸೂಕ್ತ ಪರಿಹಾರವನ್ನು ಪಡೆಯುವ ವಿಷಯದಲ್ಲಿ ಭಾರತ ಸರ್ಕಾರವು ಅಲ್ಲಿಗೆ ಒಂದು ನಿಯೋಗವನ್ನು ಕಳುಹಿಸಿದೆ. ಈ ನಿಯೋಗದಲ್ಲಿ ೩ ಸದಸ್ಯರುಗಳಿರುವರು. ಮೈಸೂರಿನ ಮಾಜಿ ದಿವಾನರಾದ ಶ್ರೀ ಮಿರ್ಜಾ ಎಂ. ಇಸ್ಮಾಯಿಲ್‌ರವರು ಈ ನಿಯೋಗದ ನಾಯಕರು ಇವರು ಈದಿನ ಕಲ್ಕತ್ತಾದಿಂದ ರಂಗೂನಿಗೆ ಹೊರಟಿರುವರು. ಬರ್ಮಾದಲ್ಲಿ ಭಾರತೀಯರಿಗೆ ಸೇರಿರುವ ಜಮೀನು ಸುಮಾರು ೨೫-೩೦ ಲಕ್ಷ ಎಕರೆಗಳಷ್ಟಿವೆ.

ಅಶೋಕ ಮೆಹ್ತಾ ಬಿಡುಗಡೆ

ಹರ್ದಿ ಭೂ ಸತ್ಯಾಗ್ರಹದಲ್ಲಿ ದಸ್ತಗಿರಿಯಾಗಿ ಶಿಕ್ಷಿತರಾಗಿದ್ದ ಪ್ರಜಾಸೋಷಲಿಸ್ಟ್ ನಾಯಕ ಶ್ರೀ ಅಶೋಕ ಮೆಹ್ತಾ ಮತ್ತು ಇತರ ೪೨ ಜನರನ್ನು ಬೊಂಬಾಯಿ ಸರ್ಕಾರವು ಅವರ ಶಿಕ್ಷೆಮುಗಿಯುವ ಮುನ್ನವೇ ಬಿಡುಗಡೆಮಾಡಿದೆ.

ಭಾರತದ ಜಾನುವಾರು ಅಭಿವೃದ್ಧಿ ಯೋಜನೆ

ಭಾರತದ ಗುಡ್ಡಗಾಡಿನ ಮತ್ತು ಮಳೆನಾಡು ಪ್ರದೇಶಗಳಲ್ಲಿರುವ ಜಾನುವಾರುಗಳನ್ನು ಅಭಿವೃದ್ಧಿ ಪಡಿಸಲು ವಿದೇಶ ಹೋರಿಗಳನ್ನು ಉಪಯೋಗಿಸುವ ಯೋಜನೆಯೊಂದನ್ನು ದೆಹಲಿಯಲ್ಲಿ ಮೊನ್ನೆ ನಡೆದ ಭಾರತದ ವ್ಯವಸಾಯ ಸಂಶೋಧನಾ ಕೌನ್ಸಿಲ್ ಸಭೆಯು ಅನುಮೋದಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೪—೧೨—೧೯೫೩

ಸಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—೬	೨೧—೪
ಎಳ್ಳು	—	—
ಹರಳು	೩೦—೪	೪೦—
ಹೊಂಗೆಬೀಜ	—	—
ಹುಚ್ಚೆಳ್ಳು	೩೨—೧೪	೪೨—
ಅವರೆ	—	—
ಹುರಳಿ	೩೦—೧೨	೩೩—
ಹೆಸರು	೩೧—೮	೩೯—೧೪
ಅಲಸಂದೆ	೩೫—	೪೮—
ಉದ್ದು	೫೫—೨	—
ಹುಣಸೇಹಣ್ಣು	—	—
ಮೆಣಸಿನಕಾಯಿ	೧೫—	೩೬—೧೪
ಸೀಗೆಕಾಯಿ	—	—
ಬೆಲ್ಲ	—	—
ತೆಂಗಿನಕಾಯಿ	೨೭೦—	೨೫೫—

ಬೊಂಬಾಯಿನಲ್ಲಿ ಹಿರಿಯ ಶಾಸನಸಭೆ ರದ್ದಾಗಬೇಕು

ಕಿರಿಯ ಶಾಸನಸಭೆಯಲ್ಲಿ ನಿರ್ಣಯ

ಬೊಂಬಾಯಿ ಪ್ರಾಂತ್ಯದಲ್ಲಿ ಹಿರಿಯ ಶಾಸನಸಭೆಯನ್ನು ರದ್ದುಗೊಳಿಸಬೇಕೆಂದು ಅಲ್ಲಿಯ ಕಿರಿಯ ಶಾಸನಸಭೆಯು ನಿರ್ಣಯಮಾಡಿದೆ.

ಈ ನಿರ್ಣಯವನ್ನು ಕೇಂದ್ರ ಸರ್ಕಾರದ ಪರಿಶೀಲನೆಗಾಗಿ ಕಳುಹಿಸಲಾಗುತ್ತದೆ. ಪ್ರಾಂತ್ಯಗಳಲ್ಲಿ ಹಿರಿಯಶಾಸನ ಸಭೆಗಳ ಭವಿಷ್ಯದ ವಿಷಯವಾಗಿ ಕೇಂದ್ರವು ಎಲ್ಲಾ ಪ್ರಾಂತ್ಯ ಶಾಸನ ಸಭೆಗಳ ಅಭಿಪ್ರಾಯವನ್ನು ಕೇಳಿತ್ತು. ಹಿರಿಯ ಸಭೆಯು ರದ್ದಾಗಬೇಕೆಂದು ನಿರ್ಧರಿಸಿರುವುದು ಇದೇ ಪ್ರಥಮ ಪ್ರಾಂತ್ಯವಾಗಿದೆ.

ಭಾರತ-ಪಾಕ್ ವಿವಾದಗಳು ಮೈತ್ರಿಯುತವಾಗಿ ಬಗೆಹರಿಯುವುವು

ಭಾರತ ಮತ್ತು ಪಾಕೀಸ್ತಾನ ನಡುವೆ ಇರುವ ಪ್ರಮುಖ ವಿಷಯವಾದ ಕಾಶ್ಮೀರ ಪ್ರಶ್ನೆಯು ಮೈತ್ರಿಯುತವಾಗಿ ಬಗೆಹರಿಯುವುದೆಂದು ತಾವು ನಂಬುವುದಾಗಿ ಭಾರತದಲ್ಲಿರುವ ಪಾಕೀಸ್ತಾನ ಹೈಕಮಿಷನರ್ ಘಜ್ನಫರ್ ಅಲಿಖಾನ್‌ರವರು ಹೇಳಿದ್ದಾರೆ.

ಉಭಯ ರಾಷ್ಟ್ರಗಳ ಪ್ರತಿನಿಧಿಗಳು ಈ ವಿವಾದವನ್ನೆಲ್ಲಾ ಶಾಂತರೀತಿಯಿಂದ ಬಗೆಹರಿಸಲು ಬಹಳ ಆಸಕ್ತರಾಗಿರುವುದರಿಂದ ಇದು ಸಾಧ್ಯ. ಕಾಶ್ಮೀರ ಪ್ರಶ್ನೆಯೊಂದು ಸಮಂಜಸವಾಗಿ ಬಗೆಹರಿದರೆ ಇತರವಿಷಯಗಳಾದ ಕಾಲುವೆನೀರು, ನಿರಾಶ್ರಿತರ ಆಸ್ತಿಪಾಸ್ತಿ ಇವುಗಳೆಲ್ಲವೂ ತಾನಾಗಿಯೇ ಪರಿಹಾರವಾಗುವುದೆಂದು ಅವರು ತಿಳಿಸಿದ್ದಾರೆ.

ಖಾಸಗಿ ಕೈಗಾರಿಕಾ ಸಂಸ್ಥೆಗಳಲ್ಲಿ ಶಿಕ್ಷಣ

ಇಂಜನಿಯರಿಂಗ್ ಮತ್ತು ವೃತ್ತಿ ಶಿಕ್ಷಣಾಲಯಗಳಲ್ಲಿ ಶಿಕ್ಷಣವನ್ನು ಪೂರೈಸಿಕೊಂಡು ಬರುವ ವಿದ್ಯಾರ್ಥಿಗಳಿಗೆ ಸರ್ಕಾರಿ ಮತ್ತು ಖಾಸಗಿ ಕೈಗಾರಿಕಾ ಸಂಸ್ಥೆಗಳಲ್ಲಿ ಕಾರ್ಯತಃ ಶಿಕ್ಷಣವನ್ನು ಕೊಡಲು ಸರ್ಕಾರ ವ್ಯವಸ್ಥೆಯನ್ನು ಮಾಡುತ್ತಿದೆ. ಇದಕ್ಕಾಗಿ ಆ ವಿದ್ಯಾರ್ಥಿಗಳಿಗೆ ಸರ್ಕಾರವೂ ಅಲ್ಲದೆ ಖಾಸಗಿ ಕೈಗಾರಿಕಾಸಂಸ್ಥೆಗಳೂ ವಿದ್ಯಾರ್ಥಿ ವೇತನವನ್ನು ಕೊಡುವುವು ೧೯೫೩-೫೪ನೇ ಸಾಲಿನಲ್ಲಿ ಈರೀತಿ ಸುಮಾರು ೫೦೦ ವೇತನಗಳು ಮಂಜೂರಾಗಲಿವೆಯೆಂದು ತಿಳಿಯಬರುತ್ತದೆ.

ಕಾಂಗ್ರೆಸ್ ನಾಯಕರಿಗೆ ಸಂಸ್ಥೆಯಲ್ಲಿ ಪ್ರೀತಿಯಿಲ್ಲ

ಕಾಂಗ್ರೆಸ್ ಅಧ್ಯಕ್ಷ ನೆಹರು ಹೇಳಿಕೆ

ಕಾಂಗ್ರೆಸ್ ಸಂಸ್ಥೆಯು ಇತ್ತೀಚಿಗೆ ಬಡವರ ಮನಸ್ಸನ್ನು ವಿಶೇಷವಾಗಿ ಆಕರ್ಷಿಸಿ ಬಡವರಿಗೆ ಆ ಸಂಸ್ಥೆಯಲ್ಲಿರುವಷ್ಟು ಆಸಕ್ತಿ ಕಾಂಗ್ರೆಸ್ ನಾಯಕರ ಮನಸ್ಸಿನಲ್ಲಿಲ್ಲ, ಅವರಲ್ಲಿ ಭಿನ್ನತೆಗಳು ಹೆಚ್ಚಾಗಿಮೂಡುತ್ತವೆ ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರುರವರು ಕಲ್ಕತ್ತದಲ್ಲಿ ಕಾಂಗ್ರೆಸ್ ಕೆಲಸಗಾರರನ್ನುದ್ದೇಶಿಸಿ ಭಾಷಣಮಾಡುತ್ತ ತಿಳಿಸಿದ್ದಾರೆ.

ಹೈದರಾಬಾದಿನಲ್ಲಿ ಪಂಚವಾರ್ಷಿಕ ಯೋಜನಾ ಕಾರ್ಯ

ಹೈದರಾಬಾದಿನಲ್ಲಿ ಪಂಚವಾರ್ಷಿಕ ಯೋಜನೆ ಕಾರ್ಯಕ್ಕಾಗಿ ಇಲ್ಲಿಯವರೆಗೆ ೧೪ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿರುವುದಾಗಿ ತಿಳಿಯಬರುತ್ತದೆ. ಈ ಪೈಕಿ ೧೦ ಕೋಟಿ ರೂಪಾಯಿಗಳನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿ ಕಾರ್ಯಗಳಿಗಾಗಿಯೇ ವೆಚ್ಚವಾಗಿದೆ. ಕೃಷಿ ಮತ್ತು ಗ್ರಾಮ ಕೈಗಾರಿಕೆಗಾಗಿ ೧ ಕೋಟಿ ೨೦ ಲಕ್ಷ, ರಸ್ತೆ ರಿಪೇರಿಗಾಗಿ ೪೬ ಲಕ್ಷ ರೂಗಳು ವೆಚ್ಚವಾಗಿದೆ.

ರಜತೋತ್ಸವ

ಬೆಂಗಳೂರಿನ ಬಳಿ ಇರುವ ಕೆಂಗೇರಿಯ ಗುರುಕುಲಾಶ್ರಮದ ರಜತಮಹೋತ್ಸವದ ಉದ್ಘಾಟನೆಯನ್ನು ಮದ್ರಾಸ್ ಗೌರ್ನರ್ ಶ್ರೀ ಶ್ರೀಪ್ರಕಾಶರು ಜನವರಿ ೧೬ ನೇ ತಾರೀಖು ನಡೆಸುವರು.

ಮೈಸೂರು ಸಿಟಿ ಮುನಿಸಿಪಲ್ ಕಮೀಷನರವರ ಆಫೀಸು

ತಾರೀಖು 5—12—1953

ಟೆಂಡರು ನೋಟಿಫಿಕೇಷನ್

ಇದರಿಂದ ಸಮಸ್ತ ಜನರಿಗೂ ತಿಳಿಸುವುದೇನೆಂದರೆ ಇದೇ ಮುನಿಸಿಪಲ್ ಫಾರಮ್ಮಿನ ತೆಂಗಿನ ಫಸಲನ್ನು 1954ನೇ ಜನವರಿ ತಾರೀಖು 1ರಲಾಗಾಯ್ತು 1956ನೇ ಡಿಸೆಂಬರ್ 31ನೇ ತಾರೀಖಿನ ವರೆಗೂ ರೂಢಿಸುವ ಸಲುವಾಗಿ ತಾ॥ 21—12—53 ನೇ ಸೋಮವಾರ ಮಧ್ಯಾಹ್ನ 4 ಘಂಟೆಯೊಳಗೆ ಟೆಂಡರ್ ಅರ್ಜಿ ಜೊತೆಯಲ್ಲಿ ಟೆಂಡರ್ ಡಿಪಾಜಿಟ್‌ಗಾಗಿ ಒಂದು ಸಾವಿರ ರೂಪಾಯಿಗಳನ್ನು ಮೈಸೂರು ಸಿಟಿ ಮುನಿಸಿಪಲ್ ಖಜಾನೆಯಲ್ಲಿ ಜಮಾ ಮಾಡಿ ಅದರ ಚಲನ್ ಟೆಂಡರ್ ಅರ್ಜಿಯೊಂದಿಗೆ ಲಗತ್ತುಮಾಡಿ ಮುನಿಸಿಪಲ್ ಕಮೀಷನರ್‌ರವರಿಗೆ ತಮ್ಮ ಟೆಂಡರ್ ಅರ್ಜಿಗಳನ್ನು ಸೀಲು ಮಾಡಿದ ಕವರಿನಲ್ಲಿ ಕೊಡಬಹುದು.

ನಿಬಂಧನೆಗಳು ಮತ್ತು ಹೆಚ್ಚಿನ ವಿವರಗಳಿಗೆ ಮುನಿಸಿಪಲ್ ಆಫೀಸಿನಲ್ಲಾಗಲಿ, ಮುನಿಸಿಪಲ್ ಫಾರಂನಲ್ಲಾಗಲಿ ತಿಳಿಯಬಹುದು.

ಎಸ್. ಲಕ್ಷ್ಮಣರಾವ್
ಮುನಿಸಿಪಲ್ ಕಮೀಷನರ್

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೯೫

೧೬-೧೨-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾಶ್ಮೀರ ಕಬಳಿಸಲು ಅಮೆರಿಕ ಯತ್ನ

ವಿಫಲವಾಗುವುದೆಂದು ಬಕ್ಷಿ ಗುಲಾಂ ಮಹಮದ್

ಕಳೆದ ಆಗಸ್ಟಿನಲ್ಲಿ ಕಾಶ್ಮೀರದಲ್ಲಿ ನಡೆದ ಘಟನೆಗಳಲ್ಲಿ ಅಮೆರಿಕದ ಪಿತೂರಿ ಇತ್ತೆಂಬುದಕ್ಕೆ ಈಚಿನ ಅಮೆರಿಕಾ ಮತ್ತು ಪಾಕೀಸ್ತಾನ ಮಿಲಿಟರಿ ಒಪ್ಪಂದ ಮಾತುಕತೆಗಳು ಸಾಕ್ಷಿಯಾಗಿವೆ. ಕಾಶ್ಮೀರದಲ್ಲಿ ಅವರ ರಾಜನೀತಿ ವಿಫಲವಾಯಿತು. ಕಾಶ್ಮೀರವನ್ನು ಕಬಳಿಸಲು ಈಗ ಮಾಡುವ ಅವರ ಪ್ರಯತ್ನವೂ ವಿಫಲವಾಗುತ್ತದೆ ಎಂದು ಕಾಶ್ಮೀರ ಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರು ತಿಳಿಸಿದ್ದಾರೆ

ಭಾರತದಿಂದ ಬರ್ಮಾಕ್ಕೆ ತಾಂತ್ರಿಕ ನೆರವು

ಬರ್ಮಾದಲ್ಲಿ ನಡೆಯಲಿರುವ ವಿದ್ಯುಚ್ಛಕ್ತಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಲು ಭಾರತವು ತಾಂತ್ರಿಕ ನೆರವು ನೀಡುವುದಾಗಿ ಅಲ್ಲಿಯ ನಿಯೋಗವೊಂದಕ್ಕೆ ಭರವಸೆಯನ್ನು ಕೊಡಲಾಗಿದೆ.

ಬೊಂಬಾಯಿಗೆ ಮೈಸೂರು ಪತ್ರಿಕೋದ್ಯಮ ವಿದ್ಯಾರ್ಥಿಗಳು

ಮಹಾರಾಜಾ ಕಾಲೇಜಿನ ಮೈಸೂರು ಪತ್ರಿಕೋದ್ಯಮದ ತರಗತಿಯ ೧೮ ವಿದ್ಯಾರ್ಥಿಗಳು ಈ ಸಂಜೆ ಬೊಂಬಾಯಿಗೆ ಪ್ರಯಾಣಮಾಡಿ ಎರಡು ವಾರ ಕಾಲ ಪ್ರವಾಸ ನಡೆಸುವರು.

ಉದ್ಯೋಗ ವಿನಿಮಯ ಸಂಸ್ಥೆ ಕಾರ್ಯಕ್ರಮ

ಬೆಂಗಳೂರು ೧೬

ಬೆಂಗಳೂರಿನಲ್ಲಿರುವ ಉದ್ಯೋಗ ವಿನಿಮಯ ಸಂಸ್ಥೆಯು ಕಳೆದ ನವಂಬರ್ ಮಾಹೆಯಲ್ಲಿ ೨೬೪೪ ಜನರ ಅರ್ಜಿಗಳನ್ನು ದಾಖಲ್ಮಾಡಿಕೊಂಡಿದೆ. ಇದರಲ್ಲಿ ೨೬೨ ಮಾಜಿ ಸೈನಿಕರು ೫೮ ಮಹಿಳೆಯರು ಇದ್ದಾರೆ. ಈ ಮಾಹೆಯಲ್ಲಿ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳಲ್ಲಿ ೭೪ ಮತ್ತು ಖಾಸಗಿಯಲ್ಲಿ ೨೪ ಉದ್ಯೋಗಗಳು ಖಾಲಿಯಿದ್ದುವು.

ಈ ತಿಂಗಳಿನಲ್ಲಿ ೮೨ ಜನರಿಗೆ ಉದ್ಯೋಗವನ್ನು ಕಲ್ಪಿಸಲಾಯಿತು.

ಈ ಸಂಸ್ಥೆಯು ಸ್ಥಾಪಿತವಾದಾಗಿನಿಂದ ನವಂಬರ್ ಆಖೈರವರೆಗೆ ೯೭೮೨೯ ಜನರ ಅರ್ಜಿ ದಾಖಲಾಗಿ ೬೬೮೪ ಜನರಿಗೆ ಉದ್ಯೋಗ ದೊರೆತಿದೆ.

ಅಗ್ನಿ ಸಮಾಧಿ

ಮಧ್ಯವಯಸ್ಸಿನ ಸಾಧು ಮಹಾರಾಜ್ ಎಂಬುವರು ಮೊನ್ನೆಯದಿನ ಕೊಟ್ಟಾಯಂ ಎಂಬಲ್ಲಿ ಒಂದು ದೇವಸ್ಥಾನದಲ್ಲಿ ಅಗ್ನಿ ಸಮಾಧಿಯನ್ನು ಜಯಪ್ರದವಾಗಿ ನಡೆಸಿದರೆಂದು ತಿಳಿಯಬರುತ್ತದೆ.

ಈ ಸಾಧುವು ಒಂದು ದೊಡ್ಡ ಹಳ್ಳವನ್ನು ತೆಗೆಸಿ ಅದರಲ್ಲಿ ಅವನು ಕುಳಿತು ಅದನ್ನು ಪೂರ್ಣವಾಗಿ ಮುಚ್ಚಲಾಯಿತು ಅದರ ಮೇಲೆ ಬೆಂಕಿಯನ್ನು ಉಜ್ವಲವಾಗಿ ಹತ್ತಿಸಲಾಯಿತು. ಈರೀತಿ ಆರೂವರೆ ಗಂಟೆ ಕಾಲ ನಡೆದು ಅತನು ಸುಖವಾಗಿ ಮೇಲಕ್ಕೆ ಬಂದಮೇಲೆ ಊರಿನಲ್ಲೆಲ್ಲಾ ಮೆರವಣಿಗೆ ನಡೆಯಿತು.

ಮಾರಾಟತೆರಿಗೆ ಬದಲು ಕೊಳ್ಳುವತೆರಿಗೆ

ಅಂತರ ಮಾರಾಟ ತೆರಿಗೆ ಬದಲು ಕೊಳ್ಳುವ ತೆರಿಗೆಯನ್ನು ವಿಧಿಸುವ ವಿಷಯದಲ್ಲಿ ಕೇಂದ್ರ ಸರ್ಕಾರವು ಪ್ರಾಂತ್ಯ ಸರ್ಕಾರಗಳ ಅಭಿಪ್ರಾಯವನ್ನು ಕೇಳುವುದಾಗಿ ಕೇಂದ್ರ ಆರ್ಥಿಕ ಸಚಿವ ಶ್ರೀ ಚಿಂತಾಮಣಿದೇಶಮುಖ್‌ರವರು ಕಲ್ಕತ್ತದ ವ್ಯಾಪಾರ ಸಂಸ್ಥೆಯೊಂದರಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಕಲ್ಲುಬಂಡೆ ಉರುಳಿ ೭ ಜನರ ಮರಣ

ಬೊಂಬಾಯಿಗೆ ೧೨ ಮೈಲಿ ದೂರದಲ್ಲಿ ಚಂಬೂದ್ ಎಂಬಲ್ಲಿ ರೈಲು ಓಡಾಟಕ್ಕಾಗಿ ಗುಡ್ಡ ಪ್ರದೇಶಗಳನ್ನು ಅಗಿಯುತ್ತಿದ್ದಾಗ ಕಲ್ಲುಬಂಡೆಗಳು ಬಿದ್ದು ೭ ಕಾರ್ಮಿಕರು ಸ್ಥಳದಲ್ಲಿಯೇ ಮೃತರಾದರೆಂದು ತಿಳಿಯಬರುತ್ತದೆ.

ಆಂಧ್ರದ ಹೊಸ ಆಹಾರ ನೀತಿ

ಆಂಧ್ರ ಪ್ರಾಂತ್ಯದಲ್ಲಿ ಬತ್ತದ ಬೆಲೆ ಹತೋಟಿ, ಸರ್ಕಾರ ಶೇಖರಣಪದ್ಧತಿ ಮುಂತಾದುವನ್ನೆಲ್ಲಾ ಪೂರ್ಣವಾಗಿ ರದ್ದುಗೊಳಿಸಲಾಗುವುದೆಂದು ತಿಳಿಯಬರುತ್ತದೆ.

ಐ. ಎನ್. ಟಿ. ಯು. ಸಿ. ನೂತನ ಕಾರ್ಯದರ್ಶಿ

ಪಾರ್ಲಿಮೆಂಟಿನ ಶ್ರೀ ಕೆ. ಪಿ. ತ್ರಿಪಾಠಿಯವರನ್ನು ಐ.ಎನ್.ಟಿ.ಯು.ಸಿ. ಸಂಸ್ಥೆಯ ಹಂಗಾಮಿ ಕಾರ್ಯದರ್ಶಿಯನ್ನಾಗಿ ದಿವಂಗತ ಹರಿಹರನಾಥ ಶಾಸ್ತ್ರಿಯವರ ಸ್ಥಾನದಲ್ಲಿ ನೇಮಿಸಲಾಗಿದೆ.

ಕಾಂಗ್ರೆಸ್ ಸದಸ್ಯತ್ವ ಕೂಡಿಸಲು ಕಾಲಾವದಿ

ಬೆಂಗಳೂರು ೧೬

ಸಾಮಾನ್ಯ ಮತ್ತು ಸಕ್ರಿಯಾ ಕಾಂಗ್ರೆಸ್ ಸದಸ್ಯರನ್ನು ಕೂಡಿಸುವ ಕಾಲಾವಧಿಯನ್ನು ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ೧೯೫೪ನೇ ಫೆಬ್ರವರಿ ೨೮ರ ವರೆಗೆ ಮತ್ತು ೧೯೫೪ನೇ ಸಾಲಿನ ಸದಸ್ಯತ್ವವನ್ನು ಮುಂದುವರಿಸುವ ಸಮಯವನ್ನು ೧೯೫೪ನೇ ಆಗಸ್ಟ್ ೩೧ ವರೆಗೆ ಹೆಚ್ಚಿಸಿರುವುದನ್ನು ಸಂಸ್ಥಾನದ ಎಲ್ಲಾ ಕಾಂಗ್ರೆಸ್ ಸಮಿತಿಗಳು ಗಮನಿಸಿ ಅವಧಿಯೊಳಗೆ ಸದಸ್ಯತ್ವ ಕೂಡಿಸುವ ಕೆಲಸವನ್ನು ಪೂರ್ಣಮಾಡಬೇಕೆಂದು ಎ. ಪಿ. ಸಿ. ಸಿ. ಕಾರ್ಯದರ್ಶಿಯವರು ಕೋರಿರುತ್ತಾರೆ.

ಯುವಕನ ಆತ್ಮಹತ್ಯೆ

ಬೆಂಗಳೂರು ೧೬

ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ಕೆಲಸಮಾಡುತ್ತಿದ್ದ ೨೮ ವರ್ಷ ವಯಸ್ಸಿನ ಶ್ರೀ ಶಿವರಾಮ್ ಎಂಬುವರು ನಿನ್ನೆ ಮಧ್ಯಾಹ್ನ ಕೆಲಸ ಮುಗಿಸಿಕೊಂಡು ಮನೆಗೆ ವಾಪಸ್ಸಾಗಿ ನೇಣುಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡರೆಂದು ವರದಿಯಾಗಿದೆ. ಅವರ ಪತ್ನಿಯವರು ಸಂಜೆ ರಾಮಕೃಷ್ಣಾಶ್ರಮದಿಂದ ಮನೆಗೆ ವಾಪಸ್ಸಾದಾಗ ಇದು ಕಂಡುಬಂದಿತು. ಕಾರಣವೇನೆಂಬುದು ತಿಳಿಯದಾಗಿದೆ.

ಖೆಡ್ಡಾಕ್ಕೆ ರಾಷ್ಟ್ರಾಧ್ಯಕ್ಷರು ಬರುವುದಿಲ್ಲ

ಬೆಂಗಳೂರು ೧೬

ಇದೇ ೨೮ನೇ ತಾರೀಖು ಕಾಕನಕೋಟೆಯಲ್ಲಿ ನಡೆಯಲಿರುವ ಖೆಡ್ಡಾಕ್ಕೆ ಆಹ್ವಾನಿಸಲಾಗಿದ್ದ ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದ್‌ರವರು ಕಾರ್ಯಗೌರವದಿಂದ ಬರಲು ಸಾಧ್ಯವಿಲ್ಲವೆಂದು ತಿಳಿಸಿರುವುದಾಗಿ ಗೊತ್ತಾಗಿದೆ.

ರೈತರಿಗೆ ಸೈನ್ಯಶಿಕ್ಷಣ

ಬೆಳಗಾಂನ ಸಹಾಯಕ ಪ್ರಾದೇಶಿಕ ಸೈನ್ಯದ ಶಿಬಿರದಲ್ಲಿ ೪೦೦ ಮಂದಿ ರೈತರಿಗೂ, ಯುವಕರಿಗೂ ಸೈನ್ಯಶಿಕ್ಷಣವನ್ನು ನಿನ್ನೆಯಿಂದ ಪ್ರಾರಂಭಿಸಲಾಗಿದೆ. ಇದು ಒಂದು ವಾರಕಾಲ ನಡೆಯುತ್ತದೆ.

ಪೊಟ್ಟಿ ಶ್ರೀರಾಮುಲು ದಿನಾಚರಣೆ

ಆಂಧ್ರಪ್ರಾಂತ್ಯ ರಚನೆಗಾಗಿ ತನ್ನ ತನುವನ್ನು ನೀಗಿದ ಪೊಟ್ಟಿ ಶ್ರೀರಾಮುಲುರವರು ನಿಧನರಾಗಿ ನಿನ್ನೆಗೆ ಒಂದುವರ್ಷವಾಯಿತು ಈ ಸಂಬಂಧದಲ್ಲಿ ಅನೇಕ ಕಡೆ ಅವರ ಜ್ಞಾಪಕಾರ್ಥವಾಗಿ ಸಭೆ, ಮೆರವಣಿಗೆಗಳು ನಡೆದುವು ರಾಜಮಹೇಂದ್ರಿಯಲ್ಲಿ ಪೂರ್ಣ ಹರಿತಾಳವನ್ನಾಚರಿಸಲಾಯಿತು.

ಮಿರ್ಜಾ ಇಸ್ಮಾಯಿಲ್ ಅಸ್ವಸ್ಥ

ಬರ್ಮಾಕ್ಕೆ ತೆರಳಬೇಕಾಗಿದ್ದ ಭಾರತ ನಿಯೋಗದ ನಾಯಕರಾದ ಮಿರ್ಜಾ ಇಸ್ಮಾಯಿಲ್ ರವರು ಮೊನ್ನೆ ಇದ್ದಕ್ಕಿದ್ದಂತೆಯೇ ಅಸ್ವಸ್ಥರಾಗಿ ಕಲ್ಕತ್ತದ ಪ್ರೆಸಿಡೆನ್ಸಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಪಶ್ಚಿಮ ಬಂಗಾಳ ಮುಖ್ಯ ಮಂತ್ರಿ ಡಾ॥ ಬಿ. ಸಿ. ರಾಯ್ ಮತ್ತು ಡಾ॥ ಪಿ. ಕೆ. ಬೋಸ್‌ರವರು ಅವರನ್ನು ಪರೀಕ್ಷಿಸಿ ಅವರಿಗೆ ಒಂದು ವಾರ ವಿಶ್ರಾಂತಿ ಬೇಕೆಂದು ತಿಳಿಸಿದ್ದಾರೆ.

ಬ್ರಿಟನ್ನಿನಲ್ಲಿ ರೈಲ್ವೆ ಮುಷ್ಕರ ಸಂಭವ

ಬ್ರಿಟನ್ನಿನಲ್ಲಿ ತಮ್ಮ ಕೂಲಿಯನ್ನು ಹೆಚ್ಚಿಸಬೇಕೆಂದು ರೈಲ್ವೆ ನೌಕರರುಗಳೆಲ್ಲಾ ಮುಷ್ಕರ ಹೂಡುವರೆಂದು ತಿಳಿದುಬಂದಿದೆ.

ಅಲ್ಲಿಯ ಮಂತ್ರಿಮಂಡಲಿಯು ತನ್ನ ತ್ವರಿತ ಸಭೆಯಲ್ಲಿ ವಿಷಯವನ್ನು ಪರಿಶೀಲಿಸುತ್ತದೆ.

ಪಾಕೀಸ್ತಾನದಲ್ಲಿ ಪಾನನಿರೋಧ

ಪಾಕೀಸ್ಥಾನ ಸರ್ಕಾರವು ಮುಂದಿನ ಅಕ್ಟೋಬರ್‌ನಿಂದ ಕರಾಚಿಯಲ್ಲಿ ಪಾನನಿರೋಧವನ್ನು ಕೂಡಲೇ ಜಾರಿಗೆ ತರಲು ಪರಿಶೀಲಿಸುತ್ತಿರುವುದಾಗಿ ತಿಳಿಯಬರುತ್ತದೆ.

ಮಹಾಚುನಾವಣೆ

ಪೆಪ್ಸು ಮತ್ತು ತಿರುವಾಂಕೂರ್ ಕೊಚ್ಚಿಗಳಲ್ಲಿ ಮುಂದಿನ ಮಾರ್ಚಿ ಆಖೈರಿನೊಳಗೆ ಚುನಾವಣೆಗಳೆಲ್ಲವೂ ಪೂರೈಸುವುದೆಂದು ಗೃಹಸಚಿವರು ಲೋಕಸಭೆಯಲ್ಲಿ ತಿಳಿಸಿದ್ದಾರೆ.

ಕಾಫಿಬೀಜ ಕೊಳ್ಳುವವರೇ ಇಲ್ಲ

ಕೊಯಮುತ್ತೂರಿನಲ್ಲಿ ಕಾಫಿ ಹರಾಜಿಗಾಗಿ ಇಟ್ಟ ೫೫ ಟನ್ನುಗಳಷ್ಟು ಕಾಫಿಬೀಜದಲ್ಲಿ ಕೇವಲ ೪ ಟನ್ನುಗಳಷ್ಟು ಖರ್ಚಾಯಿತೆಂದೂ ಉಳಿದುದನ್ನು ಕೊಳ್ಳುವವರೇ ಇರಲಿಲ್ಲವೆಂದು ತಿಳಿಯಬರುತ್ತದೆ.

ಸ್ಥಳೀಯ ಸಂಸ್ಥೆಗಳ ಆಡಳಿತ

ಮದ್ರಾಸ್ ಸರ್ಕಾರದ ನೂತನ ಯೋಜನೆ

ಸ್ಥಳೀಯ ಸಂಸ್ಥೆಗಳ ಆಡಳಿತವನ್ನು ಇನ್ನೂ ಉತ್ತಮಗೊಳಿಸಿ ಜನರಿಗೆ ತಮ್ಮ ತಮ್ಮ ಪ್ರದೇಶಗಳಲ್ಲಿಯ ಆಡಳಿತದಲ್ಲಿ ಹೆಚ್ಚು ಅಧಿಕಾರ ಮತ್ತು ಜವಾಬ್ದಾರಿಯನ್ನು ಕೊಡಲು, ಮದ್ರಾಸ್ ಪ್ರಾಂತ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಆಡಳಿತ ಕ್ರಮವನ್ನೂ ಸುಧಾರಿಸಲು ಹೊಸ ಯೋಜನೆಗಳನ್ನು ತಯಾರಿಸಲಾಗಿದೆ. ಈಗಿರುವ ಪುರಸಭೆಗಳಲ್ಲದೆ ಒಂದು ಜಿಲ್ಲೆಯಲ್ಲಿ ಗ್ರಾಮಪಂಚಾಯಿತಿಗಳು, ತಾಲ್ಲೂಕು ಅಥವಾ ಲೋಕಲ್ ಬೋರ್ಡುಗಳು ಮತ್ತು ಜಿಲ್ಲಾ ಕೌನ್ಸಿಲ್‌ಗಳನ್ನು ರಚಿಸಲಾಗುತ್ತೆ. ಈಗಿರುವ ಜಿಲ್ಲಾ ಬೋರ್ಡುಗಳನ್ನು ರದ್ದುಗೊಳಿಸಲಾಗುವುದು. ಗ್ರಾಮಪಂಚಾಯಿತಿ ಮತ್ತು ಲೋಕಲ್ ಬೋರ್ಡುಗಳ ಕೆಲಸವನ್ನು ಸರಿಯಾಗಿ ವಿಭಾಗಿಸಲಾಗುತ್ತದೆ. ಈ ಉಭಯ ಸಂಸ್ಥೆಗಳ ಕಾರ್ಯವನ್ನು ಪರಿಶೀಲಿಸಿ ಅವುಗಳಮೇಲೆ ಸೂಕ್ತ ಹತೋಟಿಯನ್ನು ಹೊಂದಿರುವಂತೆ ಜಿಲ್ಲಾ ಕಲೆಕ್ಟರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕೌನ್ಸಿಲ್‌ಗಳನ್ನು ರಚಿಸಲಾಗುತ್ತದೆ. ಈ ಕೌನ್ಸಿಲ್‌ಗಳಲ್ಲಿ ಆಯಾ ಜಿಲ್ಲೆಯ ಎಲ್ಲಾ ಲೋಕಲ್ ಬೋರ್ಡುಗಳ ಮತ್ತು ಪುರಸಭೆಯ ಅಧ್ಯಕ್ಷರುಗಳು, ಗ್ರಾಮಪಂಚಾಯಿತಿಗಳ ಒಬ್ಬ ಪ್ರತಿನಿಧಿ ಶಾಸನಸಭಾ, ಸದಸ್ಯರು ಎಲ್ಲರೂ ಸದಸ್ಯರಾಗಿರುತ್ತಾರೆ. ಆಯಾ ಜಿಲ್ಲೆಯಲ್ಲಿ ಇರುವ ಲೆಜಿಸ್ಲೇಟಿವ್ ಕೌನ್ಸಿಲ್ ಮತ್ತು ಪಾರ್ಲಿಮೆಂಟ್ ಸದಸ್ಯರೂ ಸಹ ಈ ಜಿಲ್ಲಾ ಕೌನ್ಸಿಲ್‌ನಲ್ಲಿ ಭಾಗವಹಿಸಬಹುದು. ಆದರೆ ಅವರಿಗೆ ಓಟಿನ ಹಕ್ಕಿರುವುದಿಲ್ಲ ಈ ಜಿಲ್ಲಾ ಸಮಿತಿಗಳು ಪಂಚವಾರ್ಷಿಕ ಯೋಜನೆಯ ಕೆಲಸಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ವ್ಯವಸ್ಥೆ ಮಾಡುತ್ತದೆ. ಈ ನೂತನ ಯೋಜನೆಯಿಂದ ಸರ್ಕಾರಕ್ಕೆ ಅಂತಹ ಹೆಚ್ಚಿನ ವೆಚ್ಚವೇನೂ ಆಗುವುದಿಲ್ಲವೆಂದು ಹೇಳಲಾಗಿದೆ.

ಕನ್ನಡ ಸಾಹಿತ್ಯ ಸಮ್ಮೇಳನ

ಕನ್ನಡ ಸಾಹಿತ್ಯ ಸಮ್ಮೇಳನವು ಈ ಮಾಸಾಂತ್ಯದಲ್ಲಿ ಉತ್ತರ ಕರ್ನಾಟಕ ಜಿಲ್ಲೆಯ ಕುಮಟದಲ್ಲಿ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ವಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು ಸರಿಯಷ್ಟೆ. ಮೈಸೂರಿನ ಕರ್ನಾಟಕ ಸಂಘದವರು ಕುಮಟಕ್ಕೆ ಸಾಮೂಹಿಕವಾಗಿ ಹೋಗಲು ತಕ್ಕ ಏರ್ಪಾಡು ಮಾಡಿರುತ್ತಾರೆ. ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಹೋಗಲಿಚ್ಛಿಸುವವರು ಚೇತನ ಪುಸ್ತಕಾಲಯದಲ್ಲಿ ತಮ್ಮ ಹೆಸರುಗಳನ್ನು ದಾಖಲ್ಮಾಡಬಹುದೆಂದು ಸಂಘದ ಕಾರ್ಯದರ್ಶಿಯವರು ತಿಳಿಸುತ್ತಾರೆ.

ಪಂಚವಾರ್ಷಿಕ ಯೋಜನೆಗೆ ನೆರವು

ಪಂಚವಾರ್ಷಿಕ ಯೋಜನೆಗೆ ಇನ್ನು ೩ ವರ್ಷ ಕಾಲದಲ್ಲಿ ವಿದೇಶಗಳಿಂದ ೯ಲ ಕೋಟಿ ರೂಪಾಯಿಗಳ ನೆರವು ಬರುವುದಾಗಿ ಕೇಂದ್ರ ಆರ್ಥಿಕ ಉಪಸಚಿವರು ತಿಳಿಸಿದ್ದಾರೆ.

ಒಂದು ಎಕರೆಯಲ್ಲಿ ೪೩ಪಲ್ಲ ೭೦ಸೇರ ಭತ್ತ ಉತ್ಪನ್ನ

ಬನ್ನೂರು ಹೋಬಳಿಗೆ ಸೇರಿದ ಕೊಡಗಹಳ್ಳಿ ಗ್ರಾಮದಲ್ಲಿ ಜಪಾನಿ ಮಾದರಿ ವ್ಯವಸಾಯವನ್ನು ಉತ್ತಮ ಮಟ್ಟದಲ್ಲಿ ಮಾಡುವ ಶ್ರೀ ಪಟೇಲ್ ಜವರೇಗೌಡರ ಜಮೀನಿನಲ್ಲಿ, ಟಿ. ನರಸೀಪುರದ ರೇಂಜ್ ವ್ಯವಸಾಯ ಇಲಾಖಾ ಇನ್‌ಸ್ಪೆಕ್ಟರಾದ ಶ್ರೀ ವೀರರಾಜೆಅರಸಿನವರು, ಶ್ರೀ ಮರಿಗೌಡರು ಮತ್ತು ಇನ್ನೂ ಅನೇಕ ವ್ಯವಸಾಯಗಾರರ ಸಮ್ಮುಖದಲ್ಲಿ ಭತ್ತದ ಕಟಾವು ನಡೆಸಿ, ಬಡಿದು, ತೂರಿ, ಅಳತೆ ಮಾಡಲಾಯಿತು. ಒಂದು ಎಕರೆಯಲ್ಲಿ ೪೩ಪಲ್ಲ ೭೦ಸೇರು ಭತ್ತ ಉತ್ಪತ್ತಿಯಾಗಿದೆ ಈ ಪ್ರದೇಶದಲ್ಲಿ ೨೧೩೪೦ ಪೌಂಡ್ ಹುಲ್ಲು ಬಂದಿದೆ. ಇಲ್ಲಿಯವರೆಗೆ ಮೈಸೂರು ಸೀಮೆಯಲ್ಲಿ ಈ ಸಾಲಿನಲ್ಲಿ ಗೊತ್ತಾದ ವರದಿ ಪ್ರಕಾರ ಈ ಉತ್ಪತ್ತಿಯೇ ಮೊದಲನೆಯದೆಂದು ಹೇಳಲಾಗಿದೆ.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಐರೋಪ್ಯ ದೇಶಗಳಿಗೆ ಅಮೆರಿಕಾ ಎಚ್ಚರಿಕೆ

ಐರೋಪ್ಯ ಸೇನೆಯನ್ನು ರಚಿಸದಿದ್ದರೆ ಐರೋಪ್ಯ ದೇಶಗಳಿಗೆ ನೆರವು ನೀಡುವ ವಿಷಯದಲ್ಲಿ ಅಮೆರಿಕ ತನ್ನ ನೀತಿಯನ್ನು ಬದಲಾಯಿಸಿ, ಆರ್ಥಿಕ ನೆರವು ನೀಡುವುದನ್ನು ನಿಲ್ಲಿಸಬೇಕಾಗುತ್ತದೆ ಎಂದು ಅಮೆರಿಕಾ ಸೆಕ್ರೆಟರಿ ಆಫ್ ಸ್ಟೇಟ್ ಮಿ॥ ಜಾರ್ಜ್ ಫಾಸ್ಟರ್ ಡಲ್ಲೆಸ್‌ರವರು ಅಟ್ಲಾಂಟಿಕ್ ಕೌನ್ಸಿಲ್ಲಿಗೆ ತಿಳಿಸಿದ್ದಾರೆ.

ದಾದಾಭಾಯಿಯವರ ನಿಧನ

ಕೌನ್ಸಿಲ್‌ಆಫ್ ಸ್ಟೇಟಿನ ಮಾಜಿ ಅಧ್ಯಕ್ಷ ಶ್ರೀ ಎಂ. ಬಿ. ದಾಧಾಭಾಯಿಯವರ ನಿಧನದ ಬಗ್ಗೆ ನಿನ್ನೆಯ ದಿನ ಕೌನ್ಸಿಲ್ ಆಫ್‌ಸ್ಟೇಟ್ ಸಭೆಯಲ್ಲಿ ಅವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು. ಅವರು ಆ ಸಭೆಯಲ್ಲಿ ೧೩ ವರ್ಷಕಾಲ ಅಧ್ಯಕ್ಷರಾಗಿದ್ದರು.

ಮೈಸೂರು ಸಿಟಿ ಮುನಿಸಿಪಲ್ ಕಮೀಷನರವರ ಆಫೀಸು

ತಾರೀಖು 5—12—1953

ಟೆಂಡರು ನೋಟಿಫಿಕೇಷನ್

ಇದರಿಂದ ಸಮಸ್ತ ಜನರಿಗೂ ತಿಳಿಸುವುದೇನೆಂದರೆ ಇಡೀ ಮುನಿಸಿಪಲ್ ಫಾರಮ್ಮಿನ ತೆಂಗಿನ ಫಸಲನ್ನು 1954ನೇ ಜನವರಿ ತಾರೀಖು 1ರಲಾಗಾಯ್ತು 1956ನೇ ಡಿಸೆಂಬರ್ 31ನೇ ತಾರೀಖಿನ ವರೆಗೂ ರೂಢಿಸುವ ಸಲುವಾಗಿ ತಾ॥. 21—12—53 ನೇ ಸೋಮವಾರ ಮಧ್ಯಾಹ್ನ 4 ಘಂಟೆಯೊಳಗೆ ಟೆಂಡರ್ ಅರ್ಜಿ ಜೊತೆಯಲ್ಲಿ ಟೆಂಡರ್ ಡಿಪಾಜಿಟ್‌ಗಾಗಿ ಒಂದು ಸಾವಿರ ರೂಪಾಯಿಗಳನ್ನು ಮೈಸೂರು ಸಿಟಿ ಮುನಿಸಿಪಲ್ ಖಜಾನೆಯಲ್ಲಿ ಜಮಾ ಮಾಡಿ ಅದರ ಚಲನ್ ಟೆಂಡರ್ ಅರ್ಜಿಯೊಂದಿಗೆ ಲಗತ್ತುಮಾಡಿ ಮುನಿಸಿಫಲ್ ಕಮೀಷನರ್‌ರವರಿಗೆ ತಮ್ಮ ಟೆಂಡರ್ ಅರ್ಜಿಗಳನ್ನು ಸೀಲು ಮಾಡಿದ ಕವರಿನಲ್ಲಿ ಕೊಡಬಹುದು.

ನಿಬಂಧನೆಗಳು ಮತ್ತು ಹೆಚ್ಚಿನ ವಿವರಗಳಿಗೆ ಮುನಿಸಿಪಲ್ ಆಫೀಸಿನಲ್ಲಾಗಲಿ, ಮುನಿಸಿಪಲ್ ಫಾರಂನಲ್ಲಾಗಲಿ ತಿಳಿಯಬಹುದು.

ಎನ್. ಲಕ್ಷ್ಮಣರಾವ್
ಮುನಿಸಿಪಲ್ ಕಮೀಷನರ್

ಅಂತರ್ರಾಷ್ಟ್ರೀಯ ಕುಸ್ತಿ ಪಂದ್ಯಗಳು

ಅರಮನೆಯ ಪೂರ್ವಭಾಗದ ದೊಡ್ಡಕೆರೆ ಪೋಲೀಸ್ ಹಾಕಿ ಮೈದಾನದಲ್ಲಿ

20—12—53 ನೇ ಭಾನುವಾರ ಸಂಜೆ 5—30 ಗಂಟೆಗೆ ವಿಸ್ಮಯಕಾರಕ ಕುಸ್ತಿ ಪಂದ್ಯಗಳು ನಡೆಯುವುವು.

ಅಮೆರಿಕನ್ ಸ್ವತಂತ್ರ ಶೈಲಿ ಕುಸ್ತಿಗಳು

ಟೈಗರ್ ಜೋಗೇಂದ್ರಸಿಂಗ್ Vs ಕಿಂಗ್‌ಕಾಂಗ್

(ಆಗ್ನೇಯ ಏಷ್ಯಾ ಛಾಂಪಿಯನ್) (ಪೌರ್ವಾತ್ಯ ಛಾಂಪಿಯನ್)

ಟೈಗರ್ ಹೋಲ್ಡನ್ [ಆಸ್ಟ್ರೇಲಿಯಾ ಛಾಂಪಿಯನ್] — ರೆಫ್ರಿ:—ವಾನ್ ಬಕ್ ಲೀ.. — ಫ್ಲಾಷ್‌ಗಾರ್ಡನ್ [ಅಮೆರಿಕ ಅದ್ಭುತ ಮನುಷ್ಯ]

★ ಭಾರತ ಮೈಖರಿ ಕುಸ್ತಿಗಳು ★

ಗಣಪತಿ ಸುಂದರಂ [ಸೇಲಂ ಜಿಲ್ಲಾ ಕರೂರು ಛಾಂಪಿಯನ್]	Vs	ಪೈಲ್ವಾನ್ ಅಬ್ದುಲ್ ರವುಫ್ [ಮೈಸೂರು ಕಮಾನಿದರ್ವಾಜ ಪೈಲ್ವಾನ್
೨ ಪೈ॥ ನಜರ್‌ಸಿಂಗ್ ದೆಹಲಿ ಛಾಂಪಿಯನ್	Vs	ಮುಕಾಸಿ ಮೈಸೂರು ಇಟ್ಟಿಗೆಗೂಡು
೩ ನರಸಿಂಹಯ್ಯ ದೇವನಹಳ್ಳಿ ಅರಳಿಪಟ್ಟಪೈಲ್ವಾನ್		ಬೈರು ಉ॥ ಗುಲ್ಬರ್ಗ ಮೈಸೂರು ಈಶ್ವರರಾಯರ ಗರಡಿ ಪೈಲ್ವಾನ್
೪ ಗೌಳಿಬಾಬು ಗೋವಾ ಛಾಂಪಿಯನ್	Vs	ಅಮೀರ್ ಮೈಸೂರು ಅಂಜುವರ್ನಾ ಗರಡಿ ಪೈಲ್ವಾನ್
೫ ಪೈಲ್ವಾನ್ ಚಿಕ್ಕಲಿಂಗಯ್ಯ ಮೈಸೂರು ಕನ್ನೇಗೌಡನ ಕೊಪ್ಪಲು ದಾಸೇಗೌಡರ ಗರಡಿ ಪೈ॥ ಚಿಕ್ಕಬಸವಯ್ಯ ಪಟ್ಟ	Vs	ಅಪ್ಪಣ್ಣ (ಕೊಲ್ಲಾಪುರದ ಪೈಲ್ವಾನ್

ರೆಫ್ರಿ:—ಜೋಗೇಂದ್ರಸಿಂಗ್

★

ಟಿಕೆಟ್ಟು ದೊರೆಯುವ ಸ್ಥಳ: ಹಿಂದೂಸ್ಥಾನ್ ಟ್ರಾವಲರ್ ಸ್ಟೋರ್ಸ್ (ಪ್ರಭಾಟಾಕೀಸ್ ಮುಂಭಾಗ) ಮತ್ತು ಸ್ಟೇಡಿಯಂನಲ್ಲಿ. ಮಹಿಳೆಯರಿಗೆ ಪ್ರತ್ಯೇಕಸ್ಥಳ, ಕೊನೆಯ ತರಗತಿ ವಿನಃ ಮಿಕ್ಕ ತರಗತಿಗಳಲ್ಲಿ ರಿಯಾಯಿತಿ ಮತ್ತು ಪ್ರತ್ಯೇಕ ಬುಕಿಂಗ್ ಏರ್ಪಡಿಸಲಾಗಿದೆ. 5 ವರ್ಷದ ಮೇಲ್ಪಟ್ಟವರಿಗೆ ಪೂರ್ತಿ ಛಾರ್ಜು. ಮುನ್ಸೂಚನೆಯಿಲ್ಲದೆ ಪಂದ್ಯವನ್ನು ರದ್ದುಮಾಡಬಹುದು.

★

ಟಿಕೆಟ್‌ದರ:—ಕುರ್ಚಿ ರೂ. 5-0-0, 3-0-0, ಬೆಂಚು 2-0-0, ಗ್ಯಾಲರಿ 1-3-0, ಮತ್ತು ನೆಲ 0-14-0.

[5 ರೂ. ಸೀಟು ಮಾತ್ರ ರಿಸರ್ವ್ ಮಾಡಲಾಗುತ್ತದೆ.]

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೯೭

೧೭-೧೨-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ವಿಶ್ವದ ಅಶಾಂತಿ ನೀಗಿಸಲು ಭಾರತೀಯ ಸಂಸ್ಕೃತಿಯಿಂದಲೇ ಸಾಧ್ಯ

ಸಂಸ್ಕೃತಿ ಪ್ರಸಾರ ಸಮಾರಂಭದಲ್ಲಿ ಸಚಿವರ ಹೇಳಿಕೆ

ಮೈಸೂರು, ದಿಸೆಂಬರ್ ೧೭

ಪ್ರಕೃತಿ ನಿಯಮವೇ ಧರ್ಮದಲ್ಲಿ ಅಳವಡಿಸಿಕೊಂಡಿದೆ. ಈ ನಿಯಮದಂತೆ ಪ್ರತಿ ಮಾನವನಿಗೂ ಧರ್ಮವು ಹುಟ್ಟುಗುಣವಾಗಿರುತ್ತದೆ. ಈ ಹುಟ್ಟು ಗುಣವನ್ನು ಅಲಕ್ಷ್ಯದಿಂದ ದಮನ ಮಾಡುವುದರಿಂದಲೇ ಪ್ರಚಲಿತ ಪ್ರಪಂಚದಲ್ಲಿ ನಾವು ಕಾಣುತ್ತಿರುವ ಕಷ್ಟಕಾರ್ಪಣ್ಯಗಳೊದಗಿರುವುದು. ಪ್ರಪಂಚದ ಜನಜನಾಂಗಗಳಲ್ಲಿ ಮೂಡಿರುವ ಮಾತ್ಸರ್ಯ, ಅಸಹನೆ, ಅಶಾಂತಿಗಳು ತೊಲಗಬೇಕಾದರೆ ಶಾಂತಿಯೇ ಉಸಿರಾಗಿಯುಳ್ಳ ಭಾರತೀಯ ಸಂಸ್ಕೃತಿಯಿಂದ ಮಾತ್ರ ಸಾಧ್ಯ.—ಎಂದು ವ್ಯವಸಾಯ ಸಚಿವ ಡಾ॥ ನಾಗನಗೌಡರು ನಿನ್ನೆ ಸಂಜೆ ಟೌನ್‌ಹಾಲಿನಲ್ಲಿ ನಡೆದ ಸಂಸ್ಕೃತಿ ಪ್ರಚಾರದ ಪ್ರಥಮ ವಾರ್ಷಿಕೋತ್ಸವದಲ್ಲಿ ಹೇಳಿದರು.

ಮುಂದುವರಿದು, ಅವರು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದರು:-

ನಮ್ಮ ನಾಡಿನ ಪ್ರತಿಯೊಬ್ಬ ವ್ಯಕ್ತಿಯ ರಕ್ತದ ಕಣಕಣಗಳಲ್ಲಿಯೂ ಪವಿತ್ರ ಸಂಸ್ಕೃತಿಯು ಮಿಡಿಯುತ್ತಿದೆ. ಕೆಲವು ಶತಮಾನಗಳಿಂದ ಪರಕೀಯರ ಆಳ್ವಿಕೆಗೆ ಒಳಗಾದುದರಿಂದಲೂ, ವಿಧರ್ಮೀಯರ ವಿಲಕ್ಷಣ ಸಂಸ್ಕೃತಿಯ ಪ್ರಭಾವದಿಂದಲೂ ನಮ್ಮ ಹುಟ್ಟುಸಂಸ್ಕೃತಿಯ ಮೇಲೆ ಧೂಳು ಮುಸುಕಿದಂತಾಗಿದೆ. ಈ ಧೂಳನ್ನು ಸ್ವಲ್ಪ ಕೊಡವಿದರೆ ಸಾಕು, ಒಳಗೆ ಹುದುಗಿರುವ ನಮ್ಮದೇ ಆಗಿರುವ ಸುರುಚಿತ ಸಂಸ್ಕೃತಿಯು ಪ್ರಕಾಶಿಸುತ್ತದೆ. ಈ ಕಾರ್ಯವನ್ನು ಫಲಪ್ರದವಾಗಿ ಮಾಡುವುದೇ ನಾವು ಕೈಗೊಂಡಿರುವ ಸಂಸ್ಕೃತಿ ಪ್ರಸಾರ ಕಾರ್ಯಕ್ರಮದ ಧ್ಯೇಯ.

ನಮ್ಮನಾಡಿನಲ್ಲಿ ರಾಮಾಯಣ, ಮಹಾಭಾರತಗಳು ಆಕಾಶಕ್ಕೆ ಸೂರ್ಯಚಂದ್ರರಂತಿವೆ. ಈ ಮಹಾಕಾವ್ಯಗಳ ವ್ಯಕ್ತಿಗಳು ಅಂದಿಗೂ, ಇಂದಿಗೂ, ಎಂದೆಂದಿಗೂ ಮಹೋನ್ನತ ಆದರ್ಶವ್ಯಕ್ತಿಗಳು ಪಂಡಿತ ಪಾಮರಾದಿಯಾಗಿ ಎಲ್ಲರೂ ಸದ್ಧರ್ಮನಿರತರಾಗಿರಲು ಸಹಾಯವಾಗಿರುವುವು ಭಗವಾನ್ ಬಸವೇಶ್ವರ, ಅಕ್ಕಮಹಾದೇವಿ, ಮುಂತಾದ ಶಿವಶರಣರ ವಚನಗಳು ಮತ್ತು ಪುರಂದರದಾಸರು, ಕನಕದಾಸರು ಮುಂತಾದ ದಾಸವರ್ಯರ ಅಮೃತಸಮಾನವಾದ ಉಪದೇಶಗಳು. ಪ್ರತಿಯೊಬ್ಬರೂ ಇವುಗಳನ್ನು ತಿಳಿದು, ನಿತ್ಯಜೀವನದಲ್ಲಿ ಅನುಷ್ಠಾನಕ್ಕೆ ತಂದುಕೊಂಡರೆ, ಕಷ್ಟಕಾರ್ಪಣ್ಯಗಳ ಸುಳಿವಾದರೂ ಎಲ್ಲಿದ್ದೀತು? ಈ ವಿಚಾರಗಳನ್ನು ತಿಳಿದಿರುವವರು ನಮ್ಮಲ್ಲಿ ಬಹಳಮಂದಿ ಇದ್ದಾರೆ. ನಮ್ಮ ದುರ್ದೈವವೋ ಏನೋ ಇವುಗಳನ್ನು ಅಭ್ಯಾಸದಲ್ಲಿ ಇಟ್ಟುಕೊಂಡು ಅನುಷ್ಠಾನಕ್ಕೆ ತಂದಿರುವವರು ಅತಿ ವಿರಳ. ಈ ವಿರೋದಾಭಾಸಗಳನ್ನು ತೊಡೆದು, ಮಾನವ ಸಹಜವಾದ ಸತ್ಯ, ಶೀಲ, ಶಾಂತಿ, ಪ್ರೇಮಗಳು ಜನತೆಯಲ್ಲಿ ಹರಡುವುದೇ ಸಂಸ್ಕೃತಿ ಪ್ರಸಾರದ ಗುರಿ.

ಮಾತೆಯರಲ್ಲಿ ಒಂದು ಬಿನ್ನಹ ನಮ್ಮ ಜನಾಂಗದ ಸಂಸ್ಕೃತಿಯ ಧರ್ಮದರ್ಶಿಗಳು ತಾವಾಗಿದ್ದೀರಿ. ನಮ್ಮ ಚಿಕ್ಕಂದಿನಲ್ಲಿ ಅರುಣೋದಯಕ್ಕೆ ಮುಂಚೆ ಕಿವಿಗೆ ಬೀಳುತ್ತಿದ್ದುದು ನಮ್ಮ ಮಾತೆಯರ ಮಂಜುಳವಾದ ಅರ್ಥಗರ್ಭಿತವಾದ ಉದಯರಾಗಗಳಾದರೋ ಎತ್ತಕಡೆ ಹೊರಳಿದರೂ ಶ್ರವಣವಾಗುವುದು ಅರ್ಥಶೂನ್ಯವಾದ ಕರ್ಕಶವಾದ ಸಿನೆಮಾ ಹಾಡುಗಳು! ಮಾತೆಯರು ಮನಸ್ಸುಮಾಡಿ ಈ ಅಪವಾದವನ್ನು ಹೋಗಲಾಡಿಸಬೇಕು. ತಮ್ಮ ಸಂತತಿಯ ಶಾರೀರಕ ಪೋಷಣೆಗೆ ತಾವು ಕೊಡುವ ಆಹಾರ, ಮಾಡುವ ಆರೈಕೆ ಎಷ್ಟು ಮುಖ್ಯವೋ, ಅದಕ್ಕಿಂತ ಮುಖ್ಯವಾದುದ್ದು ಅವರ ಸಂಸ್ಕೃತಿಯ ಪೋಷಣೆ ಎಂದು ತಾವು ಗಮನಿಸಬೇಕು. ನೀತಿರಹಿತವಾದ ದೇಶದಲ್ಲಿ ಅಷ್ಟೈಶ್ವರ್ಯಗಳಿದ್ದರೂ ಪ್ರಯೋಜನವಿಲ್ಲ. ನೀತಿಯೇ ಸತ್ಯ ಧರ್ಮಗಳ ಅಡಿಪಾಯ. ಜೀವನದ ಸೌಂದರ್ಯ, ಸೊಬಗು ಮತ್ತು ಪೂರ್ಣತೆಗಳು ಪ್ರಕಾಶಿಸುವುದು ನೀತಿಯಿಂದಲೇ.

ನಮ್ಮ ಅವಗುಣಗಳನ್ನು ಕಳೆದು ನಮ್ಮಲ್ಲಿ ಸಹಜವಾಗಿರುವ ಸತ್ಯ, ನೀತಿ--ಈ ಗುಣಗಳನ್ನು ಪ್ರಕಾಶಪಡಿಸಲು ನಮ್ಮ ಪುರಾತನ ಸಂಸ್ಕೃತಿಯ ಪ್ರಸಾರದಿಂದ ಮಾತ್ರ ಸಾಧ್ಯ. ಈ ಪವಿತ್ರ ಕಾರ್ಯವು ಸರ್ಕಾರಕ್ಕಿಂತಲೂ ಸಾರ್ವಜನಿಕರಿಗೆ ಹೆಚ್ಚಾಗಿ ಸೇರಿದ್ದು. ಸಂಸ್ಕೃತಿ ಪ್ರಸಾರ ಕಾರ್ಯವನ್ನು ನಮ್ಮ ಸರ್ಕಾರ ಪ್ರಾರಂಭಿಸಿ ಒಂದು ವರ್ಷ ಕಳೆದರೂ, ಆಗಬೇಕಾದಷ್ಟು ಸಾಧನೆಯಾಗಿಲ್ಲ. ಮಹಾಜನಗಳು ಈ ದಿಶೆಯಲ್ಲಿ ತಾವು ತೋರಿಸಬೇಕಾದಷ್ಟು ಶ್ರದ್ಧೆಯನ್ನು ತೋರಿಸುವುದು ಅವಶ್ಯಕ. ಈ ಪುಣ್ಯಕಾರ್ಯವನ್ನು ವಿರೋಧಿಸುವವರು ಯಾರು ಇರಲಾರರೆಂದು ನಂಬುತ್ತೇನೆ. ಸಂಸ್ಕೃತಿ ಪ್ರಸಾರಕ್ಕೂ ರಾಜಕೀಯ ಅಭಿಪ್ರಾಯಗಳಿಗೂ ಯಾವ ಸಂಬಂಧವೂ ಇರುವುದಿಲ್ಲ. ಈ ಪವಿತ್ರ ಕಾರ್ಯವು ದೇಶಹಿತದ ದೃಷ್ಟಿಯಿಂದ ಎಲ್ಲರಿಗೂ ಸೇರಿದ್ದು.

ಪ್ರಾರಂಭದಲ್ಲಿ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಸ್ವಾಗತ ಬಯಸಿದರು.

ಮಹಾರಾಜಾ ಕಾಲೇಜಿನ ಶ್ರೀ ಯಾಮುನಾಚಾರ್ಯರು ಭಾರತದ ಸಂಸ್ಕೃತಿಯ ವಿಚಾರದಲ್ಲಿ ಅಮೋಘ ಭಾಷಣಮಾಡಿದರು.

ಜಿಲ್ಲಾಧಿಕಾರಿ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ವಂದನೆಯನ್ನು ಅರ್ಪಿಸಿದರು.

ಪಾಕೀಸ್ತಾನದಲ್ಲಿ ಅಮೇರಿಕದ ನೆಲೆ ಭಾರತಕ್ಕೆ ಧಕ್ಕೆ

ಪಾಕೀಸ್ತಾನ ಮತ್ತು ಅಮೇರಿಕ ಮಿಲಿಟರಿ ಒಪ್ಪಂದದ ಬಗ್ಗೆ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣಗೌಡರು ಟೀಕಿಸಿ, ಇದರಿಂದ ಭಾರತದ ಭದ್ರತೆಗೆ ಧಕ್ಕೆ ಬರುವುದೆಂದೂ, ಮಿಲಿಟರಿ ನೆಲೆಗಳನ್ನು ಕೊಡುವುದಕ್ಕೆ ಜನರ ಒಪ್ಪಿಗೆ ಇಲ್ಲವೆಂದೂ ತಿಳಿಸಿದ್ದಾರೆ.

ಜನವರಿ ೨೨ಕ್ಕೆ ಕೊರಿಯಾ ಖೈದಿಗಳ ಬಿಡುಗಡೆ

ಜನವರಿ ೨೨ರ ತರುವಾಯ ಸ್ವದೇಶಕ್ಕೆ ವಾಪಸಾಗದ ಕೊರಿಯಾ ಖೈದಿಗಳನ್ನು ಭಾರತೀಯ ಪಡೆಗಳ ಉಸ್ತುವಾರಿಕೆಯಲ್ಲಿ ಇರಬೇಕೆಂಬ ವಿಷಯದಲ್ಲಿ ಮಿತ್ರ ಸೇನಾ ಮತ್ತು ಕಮ್ಯೂನಿಸ್ಟ್ ಪಕ್ಷಗಳು ಪರಸ್ಪರ ಒಪ್ಪಂದಕ್ಕೆ ಬಾರದಿದ್ದರೆ, ಆ ಖೈದಿಗಳನ್ನು ಬಿಡುಗಡೆ ಮಾಡಿಬಿಡುವುದಾಗಿ ಲೆ॥ ಜ॥ ಕೆ.ಎಸ್. ತಿಮ್ಮಯ್ಯನವರು ತಿಳಿಸಿದ್ದಾರೆ.

ರಾಜಪ್ರಮುಖರಿಂದ ಗೀತಾ ಮಂದಿರದ ಶಂಕುಸ್ಥಾಪನೆ

ರಾಮನಗರ ತಾಲ್ಲೂಕಿನ ಲಕ್ಕಪ್ಪನಹಳ್ಳಿಯಲ್ಲಿ ನಿನ್ನೆ ನಡೆದ ಸಂಸ್ಕೃತಿ ಪ್ರಸಾರದ ವಾರ್ಷಿಕೋತ್ಸವದ ಸಂಬಂಧದಲ್ಲಿ ಶ್ರೀಮನ್ಮಹಾರಾಜರವರು ಗೀತಾ ಮಂದಿರದ ಶಂಕುಸ್ಥಾಪನೆಯನ್ನು ನೆರವೇರಿಸಿ, ಸಂಸ್ಕೃತಿ ಬೆಳವಣಿಗೆಯ ಮಾನವ ನಾಗರೀಕತೆಯ ಗುರುತೆಂದೂ, ಅದೇ ಅಧ್ಯಾತ್ಮ ವಿದ್ಯಾಪ್ರಾಪ್ತಿ, ಅಜ್ಞಾನ ನಾಶ, ಜೀವನ್ಮುಕ್ತಿ ಮತ್ತು ಮುಕ್ತಿಯೆಂದೂ ತಿಳಿಸಿದರು. ಗೀತಾಧರ್ಮವೆ ಭಾರತ ಸಂಸ್ಕೃತಿಯೆಂದು ಅದನ್ನು ಅಧ್ಯಯನ ಮಾಡುವುದರಿಂದ ಈಗ ಪ್ರಪಂಚದಲ್ಲಿ ಉಂಟಾಗಿರುವ ಅನೇಕ ಲೋಪದೋಷಗಳು ಮಾಯವಾಗುವುದು ಎಂದೂ ಶ್ರೀಮನ್ಮಹಾರಾಜರು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ಸಂಸ್ಕೃತಿಯ ಪ್ರಚಾರದ ಅವಶ್ಯಕತೆಯನ್ನು ಒತ್ತಿ ಹೇಳಿ, ರಾಜಕಾರ್ಯದ ಜೊತೆಗೆ ಧರ್ಮಕಾರ್ಯವನ್ನೂ ನಡೆಸಬೇಕೆಂದು ತಮ್ಮ ಮಂತ್ರಿಮಂಡಲದ ಆಸೆಯೆಂದು ತಿಳಿಸಿದರು.

ಹರಿಹರನಾಥಶಾಸ್ತ್ರಿಯವರ ಸ್ಮಾರಕ ನಿಧಿ

ಭಾರತ ರಾಷ್ಟ್ರೀಯ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅಧ್ಯಕ್ಷರು ಮತ್ತು ಪಾರ್ಲಿಮೆಂಟಿನ ಸದಸ್ಯರು ಆಗಿದ್ದು, ವಿಮಾನ ಅಪಘಾತದಲ್ಲಿ ಮರಣ ಹೊಂದಿದ ಶ್ರೀ ಹರಿಹರನಾಥಶಾಸ್ತ್ರಿಯವರ ಗೌರವಾರ್ಥವಾಗಿ ಒಂದು ಸ್ಮಾರಕ ನಿಧಿಯನ್ನು ಕಾರ್ಮಿಕರ ಒಂದುದಿನದ ಕೂಲಿಯ ಹಣದಿಂದ ಕೂಡಿಸಬೇಕೆಂದು ಅವರ ಹಂಗಾಮಿ ಅಧ್ಯಕ್ಷ ಜಾನ್‌ರವರು ಮನವಿಮಾಡಿದ್ದಾರೆ.

○ ಮೈಸೂರಿನಲ್ಲಿರುವ ಸರ್ಕಾರಿ ಮುದ್ರಣಾಲಯದ ಸೀನಿಯರ್ ಅಸಿಸ್ಟೆಂಟ್ ಡೈರೆಕ್ಟರಾದ ಶ್ರೀ ಡಿ. ಎಸ್. ಗುರುಬಸವಪ್ಪನವರನ್ನು ಬೆಂಗಳೂರಿನಲ್ಲಿರುವ ಸರಕಾರಿ ಮುದ್ರಣಾಲಯದ ಡೈರೆಕ್ಟರನ್ನಾಗಿ ನೇಮಿಸಲಾಗಿದೆ.

● ಅಂತರ ರಾಷ್ಟ್ರೀಯ ಕುಸ್ತಿ ಪಂದ್ಯಗಳು ●

[ಅರಮನೆ ಪೂರ್ವದ ದೊಡ್ಡಕೆರೆ ಪೋಲೀಸ್ ಹಾಕಿ ಮೈದಾನದಲ್ಲಿ]

20-12-53 ನೇ ಭಾನುವಾರ ಸಂಜೆ 6-30 ಕ್ಕೆ

.... ಟೈಗರ್ ಜೋಗೇಂದ್ರಸಿಂಗ್ Vs ಕಿಂಗ್‌ಕಾಂಗ್ ....

ಫ್ಲಾಷ್‌ಗಾರ್ಡನ್ Vs ಟೈಗರ್ ಹೋಲ್ಡನ್

★ ಇದರೊಡನೆ ಭಾರತದ ರೀತಿಯ 5 ಜೊತೆ ಜಟ್ಟಿಗಳ ★

ಕುಸ್ತಿಗಳೂ ನಡೆಯುವುವು.

ರೆಫ್ರಿ—ವಾನ್ ಬಕ್ಲಿ

ಯುದ್ಧವಾದಲ್ಲಿ ಅಟಾಮಿಕ್ ಬಾಂಬು ಉಪಯೋಗ

ಅಮೆರಿಕಾಧ್ಯಕ್ಷ ಐಸೆನ್‌ಹೋವರ್ ಎಚ್ಚರಿಕೆ

ಈಗ ಪುನಃ ಯುದ್ಧವೇನಾದರೂ ಸಂಭವಿಸಿದರೆ ಅಮೆರಿಕ ತನ್ನ ರಕ್ಷಣೆಗಾಗಿ ಅಟಾಮಿಕ್ ಬಾಂಬನ್ನು ಉಪಯೋಗಿಸುವುದಾಗಿ ಅಮೆರಿಕ ಅಧ್ಯಕ್ಷ ಐಸೆನ್‌ಹೋವರ್‌ರವರು ಪತ್ರಿಕಾಸಮ್ಮೇಳನದಲ್ಲಿ ತಿಳಿಸಿದ್ದಾರೆ.

ಸಂಯುಕ್ತ ವಿರೋಧ ಪಕ್ಷ ರಚನೆಗೆ ಪ್ರಯತ್ನ

ಮದ್ರಾಸ್ ಶಾಸನ ಸಭೆಯಲ್ಲಿ ಕಮ್ಯೂನಿಸ್ಟ್ ಪಕ್ಷ ವಿನಹ ಮಿಕ್ಕೆಲ್ಲ ವಿರೋಧ ಪಕ್ಷಗಳು ಸೇರಿ ಸಂಯುಕ್ತ ವಿರೋಧ ಪಕ್ಷವನ್ನೊಂದು ರಚಿಸಿಕೊಳ್ಳಲು ಸಂಧಾನಗಳು ನಡೆಯುತ್ತಿರುವುದಾಗಿ ತಿಳಿಯಬರುತ್ತದೆ. ಪ್ರಜಾಸೋಷಲಿಸ್ಟ್, ಕೆ. ಎಂ. ಪಿ., ತಮಿಳುನಾಡು ಶ್ರಮಜೀವಿಗಳ ಪಕ್ಷ ಮತ್ತು ದ್ರಾವಿಡ ಪಾರ್ಲಿಮೆಂಟರಿ ಪಕ್ಷಗಳು ಒಟ್ಟುಗೂಡಿ ಈ ಸಂಯುಕ್ತ ಪಕ್ಷವನ್ನು ರಚಿಸಿಕೊಳ್ಳುವ ಪ್ರಯತ್ನ ಸಾಗುತ್ತಿದೆ. ಅದು ಕಾರ್ಯರೂಪಕ್ಕೆ ಬಂದಲ್ಲಿ ಈ ಪಕ್ಷದಲ್ಲಿ ೬೦-೭೦ ಸದಸ್ಯರಿರುವಂತಾಗಿ ಕಮ್ಯೂನಿಸ್ಟ್ ಪಕ್ಷದ ಈಗಿನ ಪ್ರಭಾವವು ಕಡಮೆ ಆಗುತ್ತದೆ.

ಬರ್ಮಾಕ್ಕೆ ಭಾರತ ನಿಯೋಗ

ಬರ್ಮಾದಲ್ಲಿ ಭಾರತೀಯರ ಜಮೀನು ಸರ್ಕಾರ ವಹಿಸಿಕೊಳ್ಳುವಾಗ ಕೊಡಬೇಕಾದ ಪರಿಹಾರ ವಿಷಯದಲ್ಲಿ ಕೇಂದ್ರ ಸರ್ಕಾರವು ನೇಮಿಸಿರುವ ನಿಯೋಗದ ನಾಯಕ ಮಿ|| ಮಿರ್ಜಾ ಇಸ್ಮಾಯಿಲ್‌ರವರು ಅನಾರೋಗ್ಯರಾಗಿರುವುದರಿಂದ ಬರ್ಮಾದಲ್ಲಿರುವ ಭಾರತ ರಾಯಭಾರಿ ಶ್ರೀ ಚಟ್ಟೂರ್‌ರವರನ್ನೇ ಆ ನಿಯೋಗದ ನಾಯಕರನ್ನಾಗಿ ನೇಮಿಸಲಾಗಿದೆ.

ನಿಯೋಗದ ಇತರ ಸದಸ್ಯರು ಈಗ ಬರ್ಮಾಕ್ಕೆ ತೆರಳಿದ್ದಾರೆ. ಉಭಯ ಸರಕಾರಗಳ ನಡುವೆ ಈದಿನ ಮಾತುಕತೆಗಳು ಪ್ರಾರಂಭವಾಗಲಿದೆ.

ಆಂಧ್ರದಲ್ಲಿ ಹೊಸ ಆಹಾರ ನೀತಿ

ಆಮದು ರಫ್ತಿಗೆ ಪರವಾನಿಗೆ ಅಗತ್ಯ

ಆಂಧ್ರ ಸರ್ಕಾರವು ತನ್ನ ಹೊಸ ಆಹಾರ ನೀತಿಯನ್ನು ಪ್ರಕಟಿಸಿದೆ. ಇದರಂತೆ ಆ ಪ್ರಾಂತ್ಯದಿಂದ ಹೊರಕ್ಕೆ ಆಹಾರವನ್ನು ಕಳುಹಿಸುವುದಕ್ಕೂ ಮತ್ತು ಹೊರಗಿನಿಂದ ತರುವುದಕ್ಕೂ ನಿರ್ಬಂಧವನ್ನು ವಿಧಿಸಿ ಅದು ಪರವಾನಿಗೆ ಮೇಲೆ ಮಾತ್ರ ನಡೆಯಬೇಕಾಗಿದೆ. ರಾಜ್ಯದೊಳಗೆ ಆಹಾರ ವಸ್ತುಗಳ ಓಡಾಟದ ಮೇಲಿದ್ದ ನಿಬಂಧಗಳನ್ನು ಈಗ ರದ್ದುಗೊಳಿಸಿದೆ.

ಮದ್ರಾಸ್, ತಿರುವಾಂಕೂರು-ಕೊಚ್ಚಿ ಪ್ರಾಂತ್ಯಗಳಿಗೆ ಬೇಕಾಗುವ ಅಕ್ಕಿಯನ್ನು ಆಂಧ್ರಪ್ರಾಂತ್ಯದಿಂದ ಒದಗಿಸಲಾಗುತ್ತದೆ.

ಸಾರ್ವಜನಿಕರು ಖೆಡ್ಡಾ ನೋಡಲು ರುಸುಂ

ಬೆಂಗಳೂರು ೧೭

ಮೈಸೂರು ನಗರಕ್ಕೆ ೪೮ ಮೈಲಿ ದೂರದಲ್ಲಿರುವ ಕಾರಾಪುರದಲ್ಲಿ ಇದೇ ಮಾಹೆ ೨೮ ನೇ ತಾರೀಖು ಮಧ್ಯಾಹ್ನ ಸುಮಾರು ಒಂದು ಗಂಟೆ ಸಮಯದಲ್ಲಿ ಖೆಡ್ಡಾ ಕಾರ್ಯಕ್ರಮ ನಡೆಯುತ್ತದೆ.

ಈ ಕಾರ್ಯಕ್ರಮವನ್ನು ವೀಕ್ಷಿಸಲು ಮಾರನೇದಿವಸದಿಂದ ಒಂದುವಾರಕಾಲ ಸಾರ್ವಜನಿಕರು ನೋಡಲು ಹೋಗಲು ಬಿಡಲಾಗುತ್ತದೆ. ಇದಕ್ಕಾಗಿ ತಲಾ ಒಂದಕ್ಕೆ ಒಂದುರೂಪಾಯಿ ರುಸುಂ ಕೊಡಬೇಕಾಗಿದೆ. ಟಿಕೆಟ್ಟುಗಳನ್ನು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಅರಣ್ಯಾಧಿಕಾರಿಗಳಿಂದ ಪಡೆಯಬಹುದು. ಸ್ಥಳದಲ್ಲಿ ಪೋಲೀಸಿನವರು ಮತ್ತು ಇತರರು ಟಿಕೇಟುಗಳನ್ನು ಚೆಕ್ಕುಮಾಡುತ್ತಾರೆ ಎಂದು ಸರ್ಕಾರಿ ಪ್ರಕಟಣೆಯೊಂದು ಹೊರಬಿದ್ದಿದೆ.

-ಮೈಸೂರು ಪೇಟೆಧಾರಣೆ-

ತಾರೀಖು: ೧೬—೧೨—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೭—೬	೨೧ ೧೪
ಎಳ್ಳು	—	—
ಹರಳು	೩೦—	೩೯—
ಹುಚ್ಚೆಳ್ಳು	೨೫—	೪೨-೨
ಹೊಂಗೆಬೀಜ	—	—
ಅವರೆ	—	—
ಹುರಳಿ	೨೫—	೪೮—
ಹೆಸರು	೩೦—	೩೮—೮
ಅಲಸಂದೆ	೨೫—	೪೮—
ಉದ್ದು	—	—
ಹುಣಸೇಹಣ್ಣು	೧೨ ೧	೧೨—೨
ಮೆಣಸಿನಕಾಯಿ	೧೮—	೩೯—
ಸೀಗೆಕಾಯಿ	—	—
ಬೆಲ್ಲ	—	—
ತೆಂಗಿನಕಾಯಿ	೧೯೯—	೨೯೮—

ಪ್ರಭಾ 18--12--53 ರಿಂದ ಅಮೋಘ 2 ನೇ ವಾರ
ದಿವಸಹಿ 3 ಪ್ರದರ್ಶನಗಳು
★ ಚಾರ್ ಚಾಂದ್ ★
ಪಾತ್ರ:—ಶ್ಯಾಮಾ, ಭಗವಾನ್, ಸುರೇಶ್ ಮತ್ತು ಮಜ್ನು.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಭಾವನಗರ ರಾಜಕುಮಾರರ ಮೇಲೆ ವಿಷಪ್ರಯೋಗ ಆಪಾದನೆ

ದರೋಡೆ ಆಪಾದನೆ ಮೇಲೆ ಜೈಲುವಾಸವನ್ನು ಅನುಭವಿಸುತ್ತಲಿರುವ ಭಾವನಗರ ರಾಜಕುಮಾರ ನಿರ್ಮಲಕುಮಾರ ಮತ್ತು ದೇವಗಢ ಬರಿಯದ ದಿವಂಗತ ಮಹಾರಾಜರವರ ಪತ್ನಿ ಶ್ರೀಮತಿ ಬೇಬ್‌ರವರ ಮೇಲೆ ಈಗ ಭಾವನಗರ ಸೆಷನ್ಸ್‌ಕೋರ್ಟಿನಲ್ಲಿ ಮತ್ತೊಂದು ಮೊಕದ್ದಮೆಯನ್ನು ಹೂಡಲಾಗಿದೆ.

ರಾಜಕುಮಾರರ ಪತ್ನಿ ಶ್ರೀಮತಿ ವೀಣಾ ದೇವಿಯವರಿಗೆ ಇವರಿಬ್ಬರೂ ವಿಷವನ್ನು ಕೊಟ್ಟು ಕೊಲ್ಲಲು ಯತ್ನಿಸುತ್ತಲಿದ್ದರೆಂದು ಆಪಾದಿಸಲಾಗಿದೆ. ನಿರ್ಮಲಕುಮಾರರು ಮತ್ತು ರಾಣಿಬೇಬ್‌ರ ನಡುವಿನ ಹಲವಾರು ಪ್ರಣಯ ಪತ್ರಗಳನ್ನು ಕೋರ್ಟಿನಲ್ಲಿ ಹಾಜರ್ಪಡಿಸಲಾಗಿದೆ. ಅದರಲ್ಲಿ ಈ ವಿಷ ಪ್ರಯೋಗ ವಿಷಯ ಅಡಕವಾಗಿತ್ತು.

ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ

ಮೈಸೂರು ೧೭

ಮೈಸೂರು ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಇದೇ ೨೦ ನೇ ತಾರೀಖು ಭಾನುವಾರ ಮಧ್ಯಾಹ್ನ ಎರಡು ಗಂಟೆಗೆ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಾರ್ಯಾಲಯದಲ್ಲಿ ನಡೆಯುತ್ತೆ. ಸದಸ್ಯರೆಲ್ಲರೂ ಬರಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ.

ಸಮಾಜಸೇವಾ ಸಂಸ್ಥೆಗಳಿಗೆ ನೆರವು

ಸಮಾಜಸೇವಾ ಸಂಸ್ಥೆಗಳಿಂದ ಆರ್ಥಿಕ ನೆರವಿಗಾಗಿ ಸುಮಾರು ೭೦೦ ಅರ್ಜಿಗಳು ಕೇಂದ್ರ ಸರ್ಕಾರದ ಹಸ್ತಗತವಾಗಿ ಅವುಗಳಲ್ಲಿ ೨೩೦ಕ್ಕೆ ಒಟ್ಟು ೮೦೬ ಲಕ್ಷ ರೂ.ಗಳ ನೆರವನ್ನು ಮಂಜೂರ್ಮಾಡಲಾಗಿದೆ.

ದ್ವಿತೀಯ ಪಂಚವಾರ್ಷಿಕ ಯೋಜನೆ

ಈಗ ನಡೆಯುತ್ತಿರುವ ಪಂಚವಾರ್ಷಿಕ ಯೋಜನೆಯಲ್ಲಿ ಸೇರದಿರುವ ಇತರ ಕೆಲಸಗಳನ್ನು ಸದ್ಯದಲ್ಲೆ ತಯಾರಿಸಲಿರುವ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲಾಗುವುದೆಂದು ಕೇಂದ್ರ ಆರ್ಥಿಕ ಸಚಿವ ಶ್ರೀ ದೇಶಮುಖ್‌ರವರು ತಿಳಿಸಿದ್ದಾರೆ.

ಪಂಚವಾರ್ಷಿಕ ಯೋಜನೆ ಪರಿಶೀಲನೆ

ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಸರ್ವ ಸದಸ್ಯರ ಸಭೆಯು ನಿನ್ನೆಯದಿನ ಪಕ್ಷದ ನಾಯಕ ಶ್ರೀ ನೆಹರೂರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಪಂಚವಾರ್ಷಿಕ ಯೋಜನೆ ಕಾರ್ಯಗಳನ್ನು ಚರ್ಚಿಸಿತೆಂದು ತಿಳಿಯಬರುತ್ತದೆ.

ಶಿಶು ಆರೋಗ್ಯ ಕೇಂದ್ರಗಳ ಸ್ಥಾಪನೆ

ಯು. ಪಿ. ಬಂಗಾಳ, ಬಿಹಾರ್ ಮತ್ತು ತಿರುವಾಂಕೂರು ಕೊಚ್ಚಿ ಸಂಸ್ಥಾನಗಳಲ್ಲಿ ಗರ್ಭಿಣಿ ಮತ್ತು ಶಿಶು ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲು ವಿಶ್ವ ಸಂಸ್ಥೆಯ ಮಕ್ಕಳ ಆರೋಗ್ಯ ಸಮಿತಿಯು ೮,೫೬,೦೦೦ ಡಾಲರುಗಳ ಸಹಾಯವನ್ನು ಒದಗಿಸಿದೆ.

ಅಂಚೆ ಇಲಾಖೆಯವರಿಗೆ ಗೃಹವಸತಿ

ಅಂಚೆ ಇಲಾಖಾ ನೌಕರರಿಗೆ ಗೃಹವಸತಿ ಮತ್ತು ಇತರ ಸೌಕರ್ಯಗಳನ್ನು ಒದಗಿಸಲು ಈವರ್ಷ ೩ ಕೋಟಿ ರೂ. ಗಳನ್ನು ಖರ್ಚುಮಾಡಲಾಗುವುದೆಂದು ಕೇಂದ್ರ ಸಂಚಾರ ಶಾಖಾ ಸಚಿವ ಶ್ರೀ ಜಗಜೀವನ ರಾಮ್‌ರವರು ತಿಳಿಸುತ್ತಾರೆ.

ನೂತನ ಆಡಿಟರ್ ಜನರಲ್

ಕೇಂದ್ರ ಉತ್ಪಾದನಾಶಾಖೆಯ ಕಾರ್ಯದರ್ಶಿ ಶ್ರೀ ವಿ. ಕೆ. ಚಂದಾರವರನ್ನು ಭಾರತ ಆಡಿಟರ್ ಜನರಲ್ ಶ್ರೀ ವಿ. ನರಹರಿರಾವ್‌ರವರು ನಿವೃತ್ತರಾಗುವ ಸ್ಥಾನದಲ್ಲಿ ನೇಮಿಸಲಾಗಿದೆ.

ಕಾರ್ಮಿಕರಿಗೆ ಬೋನಸ್ಸು

ಬೊಂಬಾಯಿನಲ್ಲಿರುವ ೪೮ ಗಿರಣಿಗಳ ಕಾರ್ಮಿಕರಿಗೆ ಅವರು ೧೯೫೨ ರಲ್ಲಿ ಪಡೆದ ಸಂಬಳದ ಶೇಕಡ ೧೫ರಷ್ಟು ಬೋನಸ್ಸನ್ನು ಈಗ ಕೊಡಬೇಕೆಂದು ಕೈಗಾರಿಕಾ ಟ್ರಿಬ್ಯುನಲ್ ತೀರ್ಪಿತ್ತಿದೆ.

ಸಕ್ಕರೆ ಆಮದು

ಈ ಸಾಲಿನಲ್ಲಿ ೪೫ ಸಾವಿರ ಟನ್ ಸಕ್ಕರೆಯನ್ನು ಆಮದು ಮಾಡಿಕೊಳ್ಳಲು ಪಾರ್ಲಿಮೆಂಟ್ ೧೦ ಕೋಟಿ ರೂಪಾಯಿಗಳನ್ನು ಮಂಜೂರ್ಮಾಡಿದೆ.

ಗೌಹತಿ-ಖಟ್ಮಂಡು ನಡುವೆ ವಿಮಾನ ಸೌಕರ್ಯ

ಅಸ್ಸಾಂ ರಾಜಧಾನಿ ಗೌಹತಿ ಮತ್ತು ನೇಪಾಳ ರಾಜಧಾನಿ ಖಟ್ಮಂಡುಗಳ ನಡುವೆ ಹೊಸದಾಗಿ ವಿಮಾನ ಸಂಚಾರ ವ್ಯವಸ್ಥೆಯನ್ನು ಮಾಡಲಾಗಿದೆ.

○ ವಾಣಿಯಂಬಾಡಿಯಲ್ಲಿ ನಿನ್ನೆಯ ದಿನ ನೂರು ಲೈನುಗಳ ಟೆಲಿಫೋನ್ ಎಕ್ಸ್‌ಚೇಂಜನ್ನು ಪ್ರಾರಂಭಿಸಲಾಯಿತು.

ರಣಜಿತ್
18-12-53 ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಆಟಗಳು
ಝೂಂಜಾರ್
ಪಾತ್ರ:-ಕಾಮಿನಿ ಕೌಶಲ್, ಉಷಾಕಿರಣ್, ಸಜ್ಜನ್, ಮೋತಿಲಾಲ್, ಓಂಪ್ರಕಾಶ್.

ರಾಜಕಮಲ್
18—12—53 ರಿಂದ 2 ನೇ ವಾರ
● ಪೆಂಪುಡುಕೊಡಕು ●
[ಸಾಕುಮಗ] (ತೆಲುಗು)
ಪಾತ್ರ:-ಸಾವಿತ್ರಿ, ಪುಷ್ಪವಲ್ಲಿ, ಮತ್ತಿತರರು.

ಪೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೯೭

೧೮-೧೨-೧೯೫೩ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತ ವ್ಯವಸಾಯ ಪದ್ಧತಿ ಉತ್ಕೃಷ್ಟವಾದುದು

ಮಾಜಿ ವ್ಯವಸಾಯ ಡೈರೆಕ್ಟರ್ ಡಾ|| ಕೋಲ್ಮನ್‌ರವರ ಅಭಿಪ್ರಾಯ

ಭಾರತದ ವ್ಯವಸಾಯ ಪದ್ಧತಿಯು ಸಹಸ್ರಾರು ವರ್ಷಗಳ ಹಿಂದಿನದು ಅದು ದೇಶಕ್ಕೆ ಹೊಂದಿಕೊಂಡಿರುವ ಉತ್ಕೃಷ್ಟ ಪದ್ಧತಿ. ಭಾರತದಲ್ಲಿ ಹೆಚ್ಚು ಜನಸಂಖ್ಯೆ ಇದ್ದು ಕೆಲಸಗಾರರು ಸಿಕ್ಕುವುದರಿಂದಲೂ ಮತ್ತು ಎತ್ತುಗಳು ಹೇರಳವಾಗಿ ಉಪಯೋಗಿಸುತ್ತಿರುವುದರಿಂದಲೂ ಟ್ರಾಕ್ಟರುಗಳ ಉಪಯೋಗ ಬೇಕಾಗಿಲ್ಲ

ಹಿಂದಿನಿಂದ ಉಪಯೋಗಿಸುತ್ತಿರುವ ವ್ಯವಸಾಯದ ಸಾಮಗ್ರಿಗಳೇ ಹೆಚ್ಚಿನ ಉಪಯುಕ್ತ ವಸ್ತುಗಳು. ಎತ್ತುಗಳನ್ನು ಉಪಯೋಗಿಸುವುದರಿಂದ ಉತ್ಕೃಷ್ಟವಾದ ಗೊಬ್ಬರವೂ ಸಿಕ್ಕುವುದು. ಅಮೆರಿಕಾದ ವ್ಯವಸಾಯ ಪದ್ಧತಿಯು ಭಾರತಕ್ಕೆ ಸರಿಹೊಂದುವುದಿಲ್ಲ ಆದ್ದರಿಂದ ಭಾರತೀಯ ವಿದ್ಯಾರ್ಥಿಗಳು ಅಮೆರಿಕಾಕ್ಕೆ ಹೋಗಿ ವ್ಯವಸಾಯದ ಬಗ್ಗೆ ಕಲಿಯುವುದು ಏನೂ ಇಲ್ಲ-ಎಂದ. ಮೈಸೂರು ಸಂಸ್ಥಾನದ ವ್ಯವಸಾಯ ಇಲಾಖಾ ನಿವೃತ್ತ ಡೈರೆಕ್ಟರ್ ಡಾ|| ಕೋಲ್ಮನ್‌ರವರು ಅಭಿಪ್ರಾಯಪಟ್ಟಿದ್ದಾರೆ. ಅವರು ೨೦ ವರ್ಷಗಳ ಹಿಂದೆ ನಿವೃತ್ತರಾಗಿ ಈಗ ಪುನಃ ಅಮೆರಿಕದಿಂದ ಮೈಸೂರಿಗೆ ಬಂದು ಪ್ರವಾಸ ಮಾಡುತ್ತಿದ್ದಾರೆ.

ಸಾಹಿತ್ಯ ಶಿಕ್ಷಣದ ಕಾರಾಗಾರ

ಮೈಸೂರು ೧೮

ಹೊಸದಾಗಿ ಅಕ್ಷರಾಭ್ಯಾಸ ಮಾಡುವವರಿಗೆ ಉಪಯೋಗವಾಗುವ ಪುಸ್ತಕಗಳನ್ನು ರಚಿಸಲು ವಯಸ್ಕರ ಶಿಕ್ಷಣಾಭ್ಯಾಸದಲ್ಲಿ ಆಸಕ್ತರಾದವರಿಗೆ ಅಲ್ಪ ಕಾಲಾವಧಿಯ ಪ್ರಯೋಗ ಶಿಕ್ಷಣವನ್ನು ಕೊಡಲು ಮೈಸೂರು ನಗರದಲ್ಲಿ ಮುಂದಿನ ತಿಂಗಳಿನಿಂದ ಕೇಂದ್ರ ಸರ್ಕಾರ ಮತ್ತು ಫೋರ್ಡ್ ಫೌಂಡೇಶನ್ ಆಶ್ರಯದಲ್ಲಿ ಒಂದು ವರ್ಕ್‌ಷಾಪ್ ತೆರೆಯಲಾಗುವುದು. ಮೈಸೂರು, ಆಂಧ್ರ, ಮದ್ರಾಸ್, ಹೈದರಾಬಾದ್, ತಿರುವಾಂಕೂರ್-ಕೊಚ್ಚಿ ಮತ್ತು ಕೊಡಗು ಸಂಸ್ಥಾನಗಳ ಗ್ರಂಥಕರ್ತರುಗಳಿಗೆ ಒಂದು ತಿಂಗಳ ಶಿಕ್ಷಣ ಕೊಡಲಾಗುವುದು. ಮೈಸೂರು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ವರ್ಕ್‌ಷಾಪ್ ನಡೆಯುವುದು. ಶಿಕ್ಷಣ ಪಡೆಯುವವರಿಗೆ ಸಂಚಾರ ಭತ್ಯ ಮತ್ತು ಊಟದ ಖರ್ಚಿಗಾಗಿ ತಲಾ ೧೦೦ ರೂ.ಗಳನ್ನು ಕೊಡಲಾಗುವುದು. ಈ ಶಿಕ್ಷಣವನ್ನು ಪಡೆಯಲಿಚ್ಛಿಸುವ ಗ್ರಂಥಕರ್ತರು ಇದೇ ೨೨ ನೇ ತಾರೀಖಿನೊಳಗಾಗಿ ಕೇಂದ್ರ ಸರ್ಕಾರದ ವಿದ್ಯಾಶಾಖಾ ಸೆಕ್ರೆಟರಿಯವರಿಗೆ ಬರೆದು ಕೊಳ್ಳಬೇಕೆಂದು ತಿಳಿಸಲಾಗಿದೆ.

ಅಮೆರಿಕದ ಸೆನೆಟ್ ಸದಸ್ಯರ ಭೇಟಿ

ಅಮೆರಿಕದ ರಿಪಬ್ಲಿಕನ್ ಪಕ್ಷದ ಸೆನೆಟರಾದ ಶ್ರೀಮತಿ ರಾಬರ್ಟ್ ಲೊ. ಬೇಕನ್ ಮತ್ತು ಮದ್ರಾಸಿನಲ್ಲಿರುವ ಅಮೆರಿಕ ಕ್ಯಾನ್ಸಲ್ ಜನರಲ್ ಮಿ|| ಹ್ಯಾರಿಕಾಫೆಲ್ ರಾಮ್ಸೆರವರುಗಳು ನಿನ್ನೆ ರಾಜಧಾನಿಗೆ ಆಗಮಿಸಿ, ಕೇಂದ್ರ ಆಹಾರ ಸಂಶೋಧನಾಲಯ ಮತ್ತು ಇತರ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಇತ್ತರು.

ಚಾಮುಂಡಿ ಬೆಟ್ಟದಲ್ಲಿ ಹೋಮ

ಮೈಸೂರು ೧೮

ಲೋಕ ಕಲ್ಯಾಣಾರ್ಥವಾಗಿ ಶ್ರೀ ಚಾಮುಂಡೇಶ್ವರಿ ಅಮ್ಮನವರಿಗೆ ಸಹಸ್ರ ಚಂಡಿ ಯಾಗ, ಗಣಹೋಮ, ನವಗ್ರಹ ಹೋಮಗಳು ಮುಂದಿನ ಫೆಬ್ರವರಿಯಲ್ಲಿ ಚಾಮುಂಡಿ ಬೆಟ್ಟದ ಮೇಲೆ ಇರುವ ಶ್ರೀ ಎ. ಶ್ರೀನಿವಾಸರಾಯರು ಮಾಡಲು ಯತ್ನಿಸುತ್ತಿರುವುದರಿಂದ ಮಹಾಜನಗಳು ಈ ಪುಣ್ಯಕಾರ್ಯಕ್ಕೆ ಸಹಾಯ ಮಾಡಬೇಕೆಂದು ಕೋರಲಾಗಿದೆ.

ಹಾಸನ-ಮಂಗಳೂರು ರೈಲ್ವೆ

ಮಂಗಳೂರು-ಹಾಸನದ ನಡುವೆ ರೈಲು ಹಾಕುವ ಬಗ್ಗೆ ಸರ್ವೆ ಕೆಲಸ ಪ್ರಾರಂಭಿಸಬೇಕೆಂದು ಕೇಂದ್ರ ರೈಲ್ವೆ ಬೋರ್ಡಿನವರು ಆಜ್ಞೆಮಾಡಿದ್ದಾರೆ.

ಬೆಂಕಿ ಅನಾಹುತದಲ್ಲಿ ಎತ್ತುಗಳ ದಹನ

ನಿನ್ನೆಯದಿನ ಬೊಂಬಾಯಿನ ಮಧ್ಯಭಾಗದಲ್ಲಿ ಅಗ್ನಿ ಅನಾಹುತ ಸಂಭವಿಸಿ ಅನುಪಯುಕ್ತ ಕಾಗದ ಮತ್ತು ರಟ್ಟಿನ ಉಗ್ರಾಣ ನಾಶವಾಯಿತು. ಸುಮಾರು ಒಂದು ಲಕ್ಷ ರೂಪಾಯಿ ನಷ್ಟವಾಗಿರುವುದಾಗಿ ತಿಳಿಯಬರುತ್ತದೆ. ಉಗ್ರಾಣದ ಬಳಿ ಇದ್ದ ಏಳು ಎತ್ತುಗಳ ಪೈಕಿ ಎರಡು ಸುಟ್ಟುಹೋದುವು.

ಕಾರ್ಯಾಂಗ-ನ್ಯಾಯಾಂಗ ಬೇರ್ಪಡೆ

ಮುಂದಿನ ಸಾಲಿನ ಜುಲೈ ಒಂದನೇ ತಾರೀಖಿನಿಂದ ದಕ್ಷಿಣಕನ್ನಡ, ಮಲಬಾರ್ ಮತ್ತು ತಂಜಾವೂರು ಜಿಲ್ಲೆಗಳಲ್ಲಿ ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರೇ ಮಾಡಲಾಗುವುದೆಂದು ಮದ್ರಾಸಿನ ನ್ಯಾಯಾಂಗ ಸಚಿವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಸರ್ಕಾರಿ ಕೆಲಸಕ್ಕೆ ಸೇರಲು ಮಹಿಳೆಯರ ವಯಸ್ಸು

ಬೆಂಗಳೂರು ೧೮

ಸರ್ಕಾರಿ ನೌಕರಿಗೆ ಸೇರುವ ಮಹಿಳೆಯರ ಕನಿಷ್ಠ ವಯಸ್ಸನ್ನು ೪೦ ರಿಂದ ೧೮ಕ್ಕೆ ಇಳಿಸಲಾಗಿದೆಯೆಂದೂ, ಈಗ ಹೆಚ್ಚು ಮಹಿಳೆಯರು ಕೆಲಸಕ್ಕೆ ಮುಂದೆ ಬರುತ್ತಿರುವುದೇ ಇದಕ್ಕೆ ಕಾರಣವೆಂದೂ, ಮೈಸೂರು ಸರ್ಕಾರದ ಪ್ರಕಟಣೆ ತಿಳಿಸಿದೆ.

ನೇತಾಜಿ ಪುತ್ರಿಗೆ ೨ ಲಕ್ಷ ರೂ. ನಿಧಿ

ಐ. ಎನ್. ಎ. ನಿಧಿಯಲ್ಲಿರುವ ೨ ಲಕ್ಷ ರೂ ಗಳನ್ನು ನೇತಾಜಿ ಸುಭಾಸ್ ಚಂದ್ರ ಬೋಸರ ೧೧ ವರ್ಷದ ಪುತ್ರಿಗಾಗಿ ಮೀಸಲಾಗಿಡಲಾಗಿದೆಯೆಂದೂ, ಆ ಹಣವನ್ನು ಸರಿಯಾದ ಬಾಬಿನಲ್ಲಿ ಇನ್‌ವೆಸ್ಟ್ ಮಾಡಬೇಕೆಂದೂ, ಅದಕ್ಕಾಗಿ ಪ್ರಧಾನಿ ನೆಹರೂ ಮತ್ತು ಬಂಗಾಳದ ಮುಖ್ಯಮಂತ್ರಿ ಡಾ|| ಬಿ. ಸಿ. ರಾಯ್ ಟ್ರಸ್ಟಿಗಳಾಗಿರಬೇಕೆಂದೂ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ನಿರ್ಧರಿಸಿದೆ.

ಭಾರತಕ್ಕೆ ರಷ್ಯದ ಶಸ್ತ್ರಾಸ್ತ್ರಗಳಿಲ್ಲ

ಪಾಕೀಸ್ತಾನ ಸೈನ್ಯವನ್ನು ಅಮೆರಿಕದ ಶಸ್ತ್ರಾಸ್ತ್ರಗಳಿಂದ ಬಲಪಡಿಸುವುದಾದರೆ ರಷ್ಯ ಭಾರತಕ್ಕೆ ಮಿಲಿಟರಿ ವಸ್ತುಗಳನ್ನು ಮಾರಲು ಸಿದ್ಧವಾಗಿದೆಯೆಂದು ದೆಹಲಿಯಲ್ಲಿರುವ ರಷ್ಯದ ರಾಯಭಾರಿ ತಿಳಿಸಿರುವರೆಂದು ಅಮೆರಿಕ ಮತ್ತು ಜಪಾನ್ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಸುದ್ದಿಗೆ ಯಾವ ಆಧಾರವೂ ಇಲ್ಲವೆಂದು ಭಾರತ ಸರ್ಕಾರವು ತಿಳಿಸಿದೆ.

ಅತಿವೃಷ್ಟಿಯಿಂದ ಅಭಾವ

ಶಿವಮೊಗ್ಗ ಜಿಲ್ಲಾ ಹೊನ್ನಾಳಿ ತಾಲ್ಲೂಕಿನಲ್ಲಿ ವಿಶೇಷ ಮಳೆಯ ದೆಸೆಯಿಂದ ಪೈರುಗಳ ಹೆಚ್ಚುಭಾಗವು ಹಾಳಾಗಿ ಅನೇಕ ಹಳ್ಳಿಗಳು ಅಭಾವ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿರುವುದಾಗಿ ತಿಳಿಯಬರುತ್ತದೆ.

ಮೈಸೂರು ಪುರಸಭಾ ಚುನಾವಣೆ

ಜಿಲ್ಲಾ ಕೋರ್ಟಿನಲ್ಲಿ ತಕರಾರು ಅರ್ಜಿ

ಮೈಸೂರು ೧೮

ಇದೇ ೭ ನೇ ತಾರೀಖು ನಗರದಲ್ಲಿ ನಡೆದ ಪುರಸಭೆಯ ಚುನಾವಣೆ ಸಂಬಂಧದಲ್ಲಿ ಪರಾಜಿತರಾದ ಶ್ರೀಗಳು ಪಾಲಹಳ್ಳಿ ಸೀತಾರಾಮಯ್ಯ, ಎನ್.ಸಿ.ವಗ್ಗಪ್ಪ, ಅಬ್ದುಲ್ ರಹಮಾನ್ ಮತ್ತು ಅಬ್ದುಲ್ ಜಬ್ಬಾರ್ ಖಾನರು ಜಿಲ್ಲಾ ಕೋರ್ಟಿನಲ್ಲಿ ತಕರಾರು ಅರ್ಜಿಯನ್ನು ನಿನ್ನೆದಿನ ಹೂಡಿ, ಚುನಾವಣೆಯು ಅಕ್ರಮವಾಗಿ ನಡೆದಿದೆಯೆಂದೂ, ಆದ್ದರಿಂದ ಅದನ್ನು ರದ್ದುಮಾಡಬೇಕೆಂದು ಅಥವ ಪುನಹ ಓಟಿನ ಎಣಿಕೆ ಆಗಬೇಕೆಂದೂ ಕೋರಿದ್ದಾರೆ. ಚುನಾವಣೆಯಲ್ಲಿ ಅಕ್ರಮ ಮತ್ತು ಸುಳ್ಳು ಮತದಾನಗಳು ನಡೆದಿವೆಯೆಂದೂ ಅವರು ಅರ್ಜಿಯಲ್ಲಿ ತಿಳಿಸಿದ್ದಾರೆ.

ಹೈದರಾಬಾದ್ ಕಾಂಗ್ರೆಸ್ ಪಕ್ಷದ ಭಿನ್ನಾಭಿಪ್ರಾಯ

ಹೈದ್ರಾಬಾದ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದಲ್ಲಿ ಉಂಟಾಗಿರುವ ಭಿನ್ನಾಭಿಪ್ರಾಯವನ್ನು ಬಗೆಹರಿಸಲು ಅಲ್ಲಿಗೆ ಮುಂದಿನ ತಿಂಗಳು ೨೦ನೇ ತಾ|| ಭೇಟಿ ಕೊಡಲಿರುವ ಪ್ರಧಾನಿ ನೆಹರೂರವರು ಪ್ರಯತ್ನಿಸುವರೆಂದು ಹೇಳಲಾಗಿದೆ.

೬೫೦ ರೂಪಾಯಿಗಳಿಗೆ ಟೆಲಿವಿಷನ್ ವ್ಯವಸ್ಥೆ

ಟೆಲಿವಿಷನ್ ಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು ಜಪಾನ್ ಸರ್ಕಾರವು ಅದರ ಮೇಲೆ ವಿಧಿಸುತ್ತಲಿರುವ ಸುಂಕ ಮುಂತಾದುವನ್ನು ಕಡಮೆ ಮಾಡಿ ಕೇವಲ ಅಲ್ಲಿಯ ನಾಣ್ಯದಲ್ಲಿ ೫೦೦೦೦ ಎನ್‌ಗಳು (೬೫೦ ರೂಪಾಯಿ) ಗಳಿಗೆ ದೊರೆಯುವಂತೆ ಮಾಡುವುದಾಗಿ ತಿಳಿಯಬರುತ್ತದೆ.

ಸರ್ಕಾರಿ ನೌಕರರು ಸ್ಥಿರ ಆಸ್ತಿ ಕೊಳ್ಳಲು ಅನುಮತಿ

ಸರ್ಕಾರಿ ನೌಕರರು ಪ್ರತಿವರ್ಷವೂ ತಮ್ಮಲ್ಲಿರುವ ಆಸ್ತಿಪಾಸ್ತಿಗಳ ಬಗ್ಗೆ ಸರ್ಕಾರಕ್ಕೆ ವರದಿ ಒಪ್ಪಿಸಬೇಕೆಂದೂ ಹೊಸ ಸ್ಥಿರ ಸ್ವತ್ತುಗಳನ್ನು ಕೊಳ್ಳುವಾಗ ಸರ್ಕಾರದ ಅಪ್ಪಣೆಯನ್ನು ಪೂರ್ವಭಾವಿ ಪಡೆಯಬೇಕೆಂದು ಕಡ್ಡಾಯಪಡಿಸುವ ವಿಷಯವನ್ನು ಕೇಂದ್ರಸರ್ಕಾರವು ಪರಿಶೀಲಿಸುತ್ತಿರುವುದಾಗಿ ಹೇಳಲಾಗಿದೆ.

ಕಾಫಿ ಬೆಲೆಯಲ್ಲಿ ಇಳಿತಾಯ

ಮದ್ರಾಸ್ ಪ್ರಾಂತ್ಯದ ನಾನಾ ಭಾಗಗಳಲ್ಲಿ ಕಾಫಿ ಬೀಜದ ಬೆಲೆಯು ಕಳೆದವಾರದಿಂದ ಇಳಿಯುತ್ತಿರುವುದಾಗಿ ಗೊತ್ತಾಗಿದೆ.

ಶಸ್ತ್ರಾಸ್ತ್ರ ಸರಬರಾಜಿಗೆ ಪಾಕ್-ಅಮೆರಿಕಾ ಸಂಧಾನ

ನಿಮಿಟ್ಸ್‌ರವರೇ ಕಾಶ್ಮೀರದ ಸರ್ವ ಪ್ರಜಾಮತಗಣನಾಧಿಕಾರಿ

ಪಾಕೀಸ್ತಾನ ಪ್ರಧಾನಿ ಮಹಮದ್ ಅಲಿಯವರ ಹೇಳಿಕೆ

ಕಾಶ್ಮೀರ ವಿಷಯದಲ್ಲಿ ಭಾರತ ಮತ್ತು ಪಾಕೀಸ್ತಾನ ಪ್ರಧಾನಿಗಳು ನಡೆಸಲಿರುವ ಮಾತುಕತೆಗಳಿಗೆ ಪೂರ್ವ ಭಾವಿಯಾಗಿ ಉಭಯ ದೇಶಗಳ ಉನ್ನತಾಧಿಕಾರಿಗಳ ಸಂಯುಕ್ತ ಸಮಿತಿಯು ಇದೇ ೨೧ ನೇ ತಾರೀಖು ದೆಹಲಿಯಲ್ಲಿ ನಡೆಯುವುದಾಗಿ ಪಾಕ್ ಪ್ರಧಾನಿ ಮಹಮುದ್ ಅಲಿಯವರು ತಿಳಿಸಿದ್ದಾರೆ. ಈ ಸಂದರ್ಭದಲ್ಲಿ ಅವರು ಪಾಕೀಸ್ತಾನ ಮತ್ತು ಅಮೆರಿಕಾ ಮಿಲಿಟರಿ ಒಪ್ಪಂದದ ವಿಷಯವಾಗಿ ಪ್ರಸ್ತಾಪಿಸಿ ಆ ರೀತಿಯಾದ ಒಪ್ಪಂದದ ಪ್ರಶ್ನೆಯೇನು ಇಲ್ಲ. ಪಾಕೀಸ್ತಾನದಲ್ಲಿ ಅಮೆರಿಕಾಕ್ಕೆ ಸೈನ್ಯ ನೆಲೆಗಳನ್ನು ಕೊಡುವ ವಿಷಯ ನಿರಾಧಾರವಾದುದು-ಎಂದು ತಿಳಿಸಿದ್ದಾರೆ.

ಪಾಕೀಸ್ತಾನವು ಅಮೆರಿಕದಿಂದ ಶಸ್ತ್ರಾಸ್ತ್ರಗಳನ್ನು ಪಡೆಯುವ ವಿಷಯದಲ್ಲಿ ಅನೌಪಚಾರಿಕವಾಗಿ ಮಾತುಕತೆಗಳು ಮಾತ್ರ ನಡೆದಿವೆ. ಇದಕ್ಕೂ ಕಾಶ್ಮೀರ ಪ್ರಶ್ನೆಗೂ ಸಂಬಂಧವಿಲ್ಲ. ಪಾಕೀಸ್ಥಾನಕ್ಕೆ ಆಕ್ರಮಣ ಅಭಿಲಾಷೆಯೇನೂ ಇಲ್ಲ. ಕಾಶ್ಮೀರದಲ್ಲಿ ಜನಮತ ಗಣನಾಧಿಕಾರಿಯನ್ನಾಗಿ ಯಾವುದಾದರೂ ಸಣ್ಣ ದೇಶದ ಪ್ರತಿನಿಧಿಯನ್ನು ನೇಮಿಸಬೇಕೆಂದು ಭಾರತ ಮಾಡಿರುವ ಸಲಹೆಯನ್ನು ಪಾಕೀಸ್ತಾನವು ಒಪ್ಪಿಲ್ಲ. ಅಡ್ಮಿರಲ್ ನಿಮಿಟ್ಸ್‌ರವರೇ ಇನ್ನೂ ಸರ್ವ ಪ್ರಜಾ ಮತಗಣನಾಧಿಕಾರಿಯಾಗಿಯೇ ಇರುತ್ತಾರೆ ಎಂದು ಅವರು ತಿಳಿಸಿದ್ದಾರೆ.

ವಿಶ್ವನಾಥಂ ನಾಯಕತ್ವದಲ್ಲಿ ಹೊಸ ಪಕ್ಷ ರಚನೆ

ಆಂಧ್ರದಲ್ಲಿ ಪ್ರಜಾಸೋಷಲಿಸ್ಟ ಪಕ್ಷ ಶಾಖೆಯ ಅಧ್ಯಕ್ಷತೆಗೆ ರಾಜೀನಾಮೆಯನ್ನಿತ್ತಿರುವ ಅಲ್ಲಿಯ ಅರ್ಥಿಕ ಸಚಿವ ಶ್ರೀ ಟಿ. ವಿಶ್ವನಾಥಂರವರು ತಮ್ಮ ಪಕ್ಷದ ಅಧ್ಯಕ್ಷತೆಗೆ ರಾಜೀನಾಮೆಯನ್ನಿತ್ತಿರುವುದರಿಂದ ಪಕ್ಷಕ್ಕೂ ರಾಜೀನಾಮೆ ಕೊಟ್ಟಂತೆಯೇ ಎಂದು ಹೇಳಿಕೆಯನ್ನಿತ್ತಿದ್ದಾರೆ.

ಅವರು ಮತ್ತು ಅವರ ಅನುಯಾಯಿಗಳು ಇದೇ ೨೭ನೇ ತಾರೀಖು ಸಭೆಸೇರಿ ಪ್ರತ್ಯೇಕ ಪಕ್ಷವನ್ನು ರಚಿಸುವುದಾಗಿ ತಿಳಿಸುತ್ತಾ ತಾವು ಯಾರೂ ಕಾಂಗ್ರೆಸ್ ಸಹ ಸದಸ್ಯತ್ವವನ್ನು ಪಡೆಯುವುದಿಲ್ಲವೆಂದು ಅವರು ಹೇಳಿದ್ದಾರೆ.

ಬೈಸಿಕಲ್ ಕೈಗಾರಿಕೆಗೆ ಸಲಹಾ ಸಮಿತಿ ರಚನೆ

ಭಾರತದಲ್ಲಿ ಬೈಸಿಕಲ್ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಲು ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡುವುದಕ್ಕಾಗಿ ಒಂದು ಸಲಹಾ ಸಮಿತಿಯನ್ನು ನೇಮಿಸಲಾಗಿದೆ.

ಬರ್ಮುಡಾ ಸಮ್ಮೇಳನದಲ್ಲಿ ಭಿನ್ನಾಭಿಪ್ರಾಯ

ಕಳೆದವಾರ ಬರ್ಮುಡಾದಲ್ಲಿ ಬ್ರಿಟನ್, ಅಮೆರಿಕ ಮತ್ತು ಫ್ರಾನ್ಸ್ ಈ ತ್ರಿರಾಷ್ಟ್ರ ಪ್ರತಿನಿಧಿಗಳ ಸಭೆಯಲ್ಲಿ ದೂರಪ್ರಾಚ್ಯ ಮತ್ತು ಆಗ್ನೇಯ ಏಷ್ಯಾವಿಷಯ ಹೆಚ್ಚಾಗಿ ಚರ್ಚಿಸಲಾಯಿತೆಂದೂ ಆ ಸಮಸ್ಯೆಗಳಲ್ಲಿ ತೀವ್ರ ಭಿನ್ನಾಭಿಪ್ರಾಯ ಉಂಟಾಯಿತೆಂದೂ ಬ್ರಿಟನ್ ಪ್ರಧಾನಿ ಸರ್ ಚರ್ಚಿಲ್ ರವರು ಹೇಳಿದ್ದಾರೆ.

ಈ ವಿಷಯಗಳಲ್ಲದೆ ಚೈನಾದೊಡನೆ ವ್ಯಾಪಾರ, ಚಾಂಕೈಷೇಕ್ ಮತ್ತು ಚು-ವಿಲೆ ಇವರ ವಿಷಯಗಳನ್ನೂ ಚರ್ಚಿಸಲಾಯಿತೆಂದು ತಿಳಿಸಿದ್ದಾರೆ. ಈ ಮಾತುಕತೆಗಳಿಂದ ತಮ್ಮ ವಿದೇಶಾಂಗ ನೀತಿಯಲ್ಲಿ ಬದಲಾವಣೆಯೇನೂ ಆಗುವುದಿಲ್ಲವೆಂದು ಮಿ॥ ಚರ್ಚಿಲ್ಲರು ನುಡಿದಿದ್ದಾರೆ.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

-ಮೈಸೂರು ಪೇಟೆಧಾರಣೆ-

ತಾರೀಖು ೧೭—೧೨—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೫—೨	೨೨ ೧೦
ಎಳ್ಳು	—	—
ಹರಳು	೩೫—	೩೯—೨
ಹುಚ್ಚೆಳ್ಳು	೩೪—೮	೪೩—
ಹೊಂಗೆಬೀಜ	—	—
ಅವರೆ	—	—
ಹುರಳಿ	೨೭—	೩೧—
ಹೆಸರು	೩೫—೨	೪೧—೮
ಅಲಸಂದೆ	೩೫—	೪೮—೮
ಉಪ್ಪು	—	—
ಹುಣಸೇಹಣ್ಣು	೧೧ ೬	೧೧—೭
ಮೆಣಸಿನಕಾಯಿ	೧೪—೮	೩೮—೪
ಸೀಗೆಕಾಯಿ	೭—	೭—೨
ಬೆಲ್ಲ	೫—	—
ತೆಂಗಿನಕಾಯಿ	೨೫೫—	೨೫೦—

ದ್ವಿತೀಯ ಪಂಚವಾರ್ಷಿಕ ಯೋಜನೆ

ಭಾರತ ಸರ್ಕಾರವು ತಯಾರಿಸಲಿರುವ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗಾರಿಕಾಭಿವೃದ್ಧಿಗೆ ಪ್ರಥಮ ಪ್ರಾಶಸ್ತ್ಯವನ್ನು ಕೊಡಲಾಗುತ್ತದೆ ಎಂದು ಕೇಂದ್ರ ಆರ್ಥಿಕಸಚಿವ ಶ್ರೀ ದೇಶಮುಖ್‌ರವರು ತಿಳಿಸಿದ್ದಾರೆ.

ಪರಿಗಣಿತ ಕೋಮಿನ ಪ್ರಗತಿಗೆ ವೆಚ್ಚ

ದೇಶದಲ್ಲಿ ಪರಿಗಣಿತ ಕೋಮು ಮತ್ತು ಪಂಗಡಗಳಿಗೆ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳು ಇಲ್ಲಿಯವರೆಗೆ ೪೦ ಕೋಟಿ ರೂಪಾಯಿಗಳನ್ನು ವೆಚ್ಚಮಾಡಿರುವುದಾಗಿ ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ.

★ ಮದ್ರಾಸ್ ಪ್ರಾಂತ್ಯದಲ್ಲಿ ೧೦೦೦ ಕ್ಕಿಂತ ಹೆಚ್ಚು ಜನಸಂಖ್ಯೆಯಿರುವ ಗ್ರಾಮಗಳಲ್ಲೆಲ್ಲಾ ಗ್ರಾಮ ಪಂಚಾಯಿತಿಗಳನ್ನು ರಚಿಸಬೇಕೆಂದು ಆಜ್ಞೆಮಾಡಿರುವುದಾಗಿ ತಿಳಿಯಬರುತ್ತದೆ.

● ಅಂತರ ರಾಷ್ಟ್ರೀಯ ಕುಸ್ತಿ ಪಂದ್ಯಗಳು ●
[ಅರಮನೆ ಪೂರ್ವದ ದೊಡ್ಡಕೆರೆ ಪೊಲೀಸ್ ಹಾಕಿ ಮೈದಾನದಲ್ಲಿ]
20-12-53 ನೇ ಭಾನುವಾರ ಸಂಜೆ 6-30 ಕ್ಕೆ
.... ಟೈಗರ್ ಜೋಗೇಂದ್ರಸಿಂಗ್ Vs ಕಿಂಗ್‌ಕಾಂಗ್ ....
ಫ್ಲಾಷ್‌ಗಾರ್ಡನ್ Vs ಟೈಗರ್ ಹೋಲ್ಡನ್
★ ಇವರೊಡನೆ ಭಾರತದ ರೀತಿಯ 5 ಜೊತೆ ಜಿದ್ದಾಜಿದ್ದಿನ ★
ಕುಸ್ತಿಗಳೂ ನಡೆಯಲಿವೆ.
ರೆಫರಿ— ವಾಂಗ್ ಬಕ್ಲಿ

ನ್ಯೂ ಅಪೆರಾ ಟಾಕೀಸ್, ಮೈಸೂರು
18—12—53 ರಿಂದ ಅನೋಘ ಪ್ರಾರಂಭ
ಆರ್. ಎಸ್. ಪಿಕ್ಚರ್ಸ್‌ರವರ ಕನ್ನಡ ಕಲಾಕೃತಿ
ಜಾತಕ ಫಲ

ತಾರಾಗಣ:—ಆರ ನಾಗೇಂದ್ರರಾವ್, ಕೆ. ಸಾರಂಗಪಾಣಿ, ಸೂರ್ಯಕಲಾ, ಬಾಲಚಂದ್ರ, ಕಮಲಾಬಾಯಿ ಮುಂತಾದವರು.

○ ಅಮೆರಿಕದಿಂದ ಸಾಲವಾಗಿ ಪಡೆದ ಗೋಧಿಯ ಬಾಬಿನಿಂದ ಭಾರತಕ್ಕೆ ಒಟ್ಟು ೧೬.೯ ಕೋಟಿ ರೂ. ಗಳಷ್ಟು ನಷ್ಟವಾಗಿದೆಯೆಂದು ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ.

THE MYSORE GOVERNMENT INSURANCE DEPARTMENT
(Public Branch)
—:o:—

Application has been received for the issue of a duplicate of Policy No. 33548/C on the life of Sri H. N. Lingappa Setty, Sharada Cycle and Watch Stores, No. 1177, Silver Jubilee Clock Tower Square Mysore. It is hereby notified that the duplicate will be issued unless valid objection therefor is received by the undersigned within one month from this date.

N. Narasimha Murthy,
Secretary.

Bangalore,
Dated 18th December 53

ಪೋ॥ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೯೮

೧೯-೧೨-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ರಾಜಾಜಿಯವರ ಕಾಂಗ್ರೆಸ್ ಸರ್ಕಾರದ ಮೇಲೆ ಕಾಂಗ್ರೆಸ್ಸಿಗರ ಟೀಕೆ

ಮದ್ರಾಸ್ ಶಾಸನ ಸಭೆಯಲ್ಲಿ ನಿನ್ನೆಯ ದಿನ ಮುಂದಿನ ಅರ್ಥವರ್ಷದ ಆಯವ್ಯಯವನ್ನು ಸರ್ಕಾರವು ಮಂಡಿಸಿದಾಗ ರಾಜಾಜಿ ಧೋರಣೆಯನ್ನು ಕಾಂಗ್ರೆಸ್ ಪಕ್ಷದ ಸದಸ್ಯರನೇಕರು ತೀವ್ರವಾಗಿ ಟೀಕಿಸಿದ್ದಾರೆ.

ಕಾಂಗ್ರೆಸ್ಸಿನ ಶ್ರೀ ಮಾಸಿಲಾಮಣಿ ಚೆಟ್ಟಿಯಾರ್‌ರವರು ಮಾತನಾಡುತ್ತಾ ತಾವು ಮುಖ್ಯಮಂತ್ರಿಯನ್ನು ಭೇಟಿಮಾಡಲು ಅನೇಕಸಲ ಯತ್ನಿಸಿದಾಗ ಭೇಟಿ ದೊರೆಯಲಿಲ್ಲ. ಅಂಥಹಾ ಭೇಟಿಯನ್ನು ಮಾಡಲು ಇಷ್ಟವಿಲ್ಲದವರು ಪ್ರಜಾ ಪ್ರತಿನಿಧಿಗಳಾಗಿ ಮಂತ್ರಿಮಂಡಲದಲ್ಲಿದ್ದು ಏನು ಕೆಲಸವನ್ನು ತಾನೆ ಮಾಡಿಯಾರು ಎಂದು ಟೀಕಿಸಿದರು.

ಶ್ರೀ ವಿ. ಕೆ. ರಾಮಸ್ವಾಮಿ, ಮೊದಲಿಯಾರ್‌ರವರು ಮಾತನಾಡುತ್ತಾ ಈಗಿನ ಸರ್ಕಾರದ ರೀತಿನೀತಿಗಳಿಂದ ಮದ್ರಾಸ್ ಅನಾಯಕತ್ವದ ಹಾದಿಯಲ್ಲಿ ಹೋಗುತ್ತಿದೆ ಎಂದು ಹೇಳಿದರು.

ಮುಸ್ಲಿಂಲೀಗ್ ಸದಸ್ಯರೊಬ್ಬರು ಮಾತನಾಡುತ್ತಾ ರಾಜಾಜಿ ಸರ್ಕಾರಕ್ಕೆ ತಾವು ಪೂರ್ಣ ಬೆಂಬಲ ಕೊಡುವುದಾಗಿ ತಿಳಿಸಿದರು.

ಪುರಸಭಾ ಚುನಾವಣೆ ತಕರಾರು ಅರ್ಜಿ

ಮೈಸೂರು ೧೯

ಮೈಸೂರು ನಗರ ಪುರಸಭೆಯ ಚುನಾವಣೆಯ ಸಂಬಂಧದಲ್ಲಿ ನಿನ್ನೆ ಮತ್ತೆ ಮೂರು ತಕರಾರು ಅರ್ಜಿಗಳನ್ನು ಜಿಲ್ಲಾ ಕೋರ್ಟಿನಲ್ಲಿ ದಾಖಲು ಮಾಡಲಾಗಿದೆ.

೧೦ ನೇ ವಾರ್ಡಿನಿಂದ ಕಾಂಗ್ರೆಸ್ ಪರ ಸ್ಪರ್ಧಿಸಿದ್ದ ಶ್ರೀ ಸುದರ್ಶನರವರು ಬಾಡನ್ ಕ್ಯಾಸ್ಟನ್‌ರವರ ಆಯ್ಕೆಯನ್ನು, ೩೫ನೇ ವಾರ್ಡಿನಿಂದ ಸೋತ ಶ್ರೀ ಶ್ರೀಕಂಠಯ್ಯನವರು ಶ್ರೀ ಸಂಜೀವಯ್ಯನವರ ಆಯ್ಕೆಯನ್ನು, ೨೬ ನೇ ವಾರ್ಡಿನಿಂದ ಪರಾಜಿತರಾದ ಕಮ್ಯೂನಿಸ್ಟ ಶ್ರೀ ಉಗ್ರಪ್ಪನವರು ಶ್ರೀ ಕೆ. ಪುಟ್ಟಸ್ವಾಮಿಯವರ ಆಯ್ಕೆಯನ್ನು ರದ್ದುಮಾಡಬೇಕೆಂದು ಅರ್ಜಿಗಳಲ್ಲಿ ನಮೂದಿಸಲಾಗಿದೆ.

ಸ್ಕೌಟರುಗಳಿಂದ ಹಳ್ಳಿಯ ಅಭಿವೃದ್ಧಿ ಕಾರ್ಯ

ಮೈಸೂರು ೧೯

ಮೈಸೂರು ವಿಶ್ವವಿದ್ಯಾನಿಲಯದ ೫೦ ಮಂದಿ ರೋವರ್ ಮತ್ತು ಸ್ಕೌಟರುಗಳು ಪಾಂಡವಪುರದ ತಾಲ್ಲೂಕು, ಚಿಕ್ಕಾಯಾರನಹಳ್ಳಿಯಲ್ಲಿ ನಾಳೆಯಿಂದ ೧೫ ದಿನಗಳು ಕ್ಯಾಂಪುಮಾಡಿ, ೩ ಫರ್ಲಾಂಗುಗಳ ರಸ್ತೆ ನಿರ್ಮಾಣ, ನಿರ್ಮಲೀಕರಣ, ಮತ್ತು ಇತರ ಸಾಮಾಜಿಕ ಕೆಲಸಗಳನ್ನು ಕೈಗೊಳ್ಳುವರು. ಇವರ ಸಂಗಡ ೫೦ ಮಂದಿ ಹಳ್ಳಿಯವರ. ಸಹಕರಿಸುವರು ಈ ಕಮ್ಯೂನಿಟಿ ಪ್ರತ್ಯೇಕ ಕ್ಯಾಂಪನ್ನು ವಿಶ್ವವಿದ್ಯಾನಿಲಯದ ಜಿಲ್ಲಾ ಸ್ಕೌಟ್ ಸಂಘದವರು ಏರ್ಪಡಿಸಿದ್ದಾರೆ.

ಹನುಮಜ್ಜಯಂತಿ

ಮೈಸೂರು ೧೯

ಕೋಟೆ ಉತ್ತರ ಬಾಗಿಲು ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಾಳೆಯಿಂದ ೨೬ನೇ ತಾ॥ ವರೆಗೆ ಹನುಮಜಯಂತಿಯ ಪ್ರಯುಕ್ತ ಬೆಂಗಳೂರು ರಾಮಸ್ವಾಮಿ ನಾಯ್ಡುರವರಿಂದ ಪ್ರತಿರಾತ್ರಿ ೧೦ ಗಂಟೆಗೆ ೫ ದಿನಗಳು ಹರಿಕಥೆ. ಕೊನೆಯ ದಿನ ಹನುಮಂತೋತ್ಸವ ನಡೆಯುತ್ತದೆ.

ಭಾರತದಲ್ಲಿ ಭಾರಿ ಉಕ್ಕಿನ ಕಾರ್ಖಾನೆ

ಭಾರತದಲ್ಲಿ ೭೨ ಕೋಟಿ ರೂ. ಗಳ ಖರ್ಚಿನಲ್ಲಿ ಭಾರಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು ಜರ್ಮನ್ ಕಂಪೆನಿಯೊಂದಿಗೂ ಕೇಂದ್ರ ಸರ್ಕಾರಕ್ಕೂ ನಾಳಿದ್ದು ಒಪ್ಪಂದಕ್ಕೆ ಸಹಿ ಬೀಳುವುದೆಂದು ಹೇಳಲಾಗಿದೆ.

ನೆಹರುರವರ ಭಾವಚಿತ್ರ

ಪ್ರಧಾನಿ ನೆಹರುರವರ ಭಾವಚಿತ್ರವನ್ನು ಬರೆಯಲು ಬ್ರಿಟನ್ನಿನ ಪ್ರಖ್ಯಾತ ಚಿತ್ರಗಾರರಾದ ಮಿ॥ ಎಡ್ವರ್ಡ್ ಹಾಲಿಡೇರವರು ಮುಂದಿನ ಜನವರಿಯಲ್ಲಿ ಭಾರತಕ್ಕೆ ಆಗಮಿಸುವರೆಂದು ತಿಳಿಯಬರುತ್ತದೆ.

ಹಿಂದೆ ಪ್ರಧಾನಿ ನೆಹರುರವರು ಲಂಡನ್ನಿಗೆ ಭೇಟಿಯಿತ್ತಾಗ ಮಿ॥ ಹಾಲಿಡೇರವರು ಇವರ ಚಿತ್ರವನ್ನು ಬರೆಯಲು ಪ್ರಾರಂಭಿಸಿದರೆಂದೂ ಆದರೆ ನೆಹರುರವರಿಗೆ ಅಲ್ಲಿ ಸಾಕಷ್ಟು ಅವಕಾಶ ದೊರೆಯದೆ ಆ ಚಿತ್ರ ಪೂರೈಸಲಾಗಲಿಲ್ಲವಾಗಿ ಆ ಚಿತ್ರವನ್ನು ಈಗ ಭಾರತದಲ್ಲಿ ಪೂರೈಸುವಂತೆ ಆಹ್ವಾನ ಮಿ॥ ಹಾಲಿಡೇರವರಿಗೆ ಹೋಗಿರುವುದಾಗಿ ಗೊತ್ತಾಗಿದೆ.

ಸಮಾಲೋಚನೆ ಆರಂಭ

ಬರ್ಮಾದಲ್ಲಿ ಭೂ ರಾಷ್ಟ್ರೀಕರಣ ಸಂಬಂಧದಲ್ಲಿ ಭಾರತೀಯರಿಗೆ ಬರಬೇಕಾದ ಭೂ ಪರಿಹಾರದ ಬಗ್ಗೆ ಭಾರತ ನಿಯೋಗಕ್ಕೂ ಬರ್ಮಾ ಸರ್ಕಾರಕ್ಕೂ ನಿನ್ನೆಯಿಂದ ಸಮಾಲೋಚನೆ ಪ್ರಾರಂಭವಾಗಿದೆ.

ಪತ್ರಿಕೋದ್ಯೋಗಿಗಳಿಗೆ ಕಾರ್ಮಿಕ ಕಾನೂನು ಅನ್ವಯ

ಭಾರತದ ಪತ್ರಿಕೋದ್ಯೋಗಿಗಳನ್ನು ಕೈಗಾರಿಕಾ ವಿವಾದ ಶಾಸನಕ್ಕೊಳಪಡಿಸಬೇಕೆಂದು ಕೋರುವ ಪ್ರೊ॥ ಡಿ. ಸಿ. ಶರ್ಮರವರ ಖಾಸಗೀ ನಿರ್ಣಯವು ನಿನ್ನೆ ಪಾರ್ಲಿಮೆಂಟಿನಲ್ಲಿ ತಿರಸ್ಕೃತವಾಯಿತು. ಈ ವಿಚಾರದಲ್ಲಿ ಕಾರ್ಮಿಕ ಸಚಿವ ಶ್ರೀ ಗಿರಿಯವರು ಮಾತನಾಡಿ, ಕಾರ್ಮಿಕ ಸೌಲಭ್ಯಗಳನ್ನು ಪತ್ರಿಕೋದ್ಯೋಗಿಗಳಿಗೆ ಒದಗಿಸಬೇಕೆಂಬುದೇ ಸರ್ಕಾರದ ಇಚ್ಛೆಯೆಂದೂ, ಈ ಬಗ್ಗೆ ಸರ್ಕಾರದವರು ಸೂಕ್ತಕ್ರಮ ಕೈಗೊಳ್ಳಲಿರುವರೆಂದೂ ಭರವಸೆ ಇತ್ತರು.

ಅಶ್ವಮೇಧ ಯಜ್ಞದ ಅವಶೇಷಗಳು

ಡೆಹರಾಡೂನಿಗೆ ೩೦ ಮೈಲಿ ದೂರದಲ್ಲಿರುವ ಯಮುನಾನದಿಯ ಎಡದ ದಡದಲ್ಲಿರುವ ಜಾಗತ್ ಗ್ರಾಮದ ಹತ್ತಿರ ೩ ಸಾವಿರ ವರ್ಷಗಳಹಿಂದೆ ನಡೆದ ಅಶ್ವಮೇಧ ಯಜ್ಞದ ಅವಶೇಷಗಳು ಪತ್ತೆ ಆಗಿವೆಯೆಂದೂ, ಈ ಯಜ್ಞದ ವಿವರಗಳನ್ನು ಬರೆದ ಇಟ್ಟಿಗೆಗಳು ಸಿಕ್ಕಿವೆಯೆಂದೂ ಪಾರ್ಲಿಮೆಂಟಿನಲ್ಲಿ ವಿದ್ಯಾ ಉಪಸಚಿವರು ತಿಳಿಸಿದ್ದಾರೆ.

ನಾಲ್ಕು ಬಿ. ಪ್ರಾಂತ್ಯಗಳಿಗೆ ವಿಶೇಷ ನೆರವು

ಸೌರಾಷ್ಟ್ರ, ರಾಜಾಸ್ತಾನ್, ಮಧ್ಯಭಾರತ್ ಮತ್ತು ಪೆಪ್ಸು ಸಂಸ್ಥಾನಗಳಿಗೆ ಒಟ್ಟು ೧೩ ಕೋಟಿ ರೂ.ಗಳ ವಿಶೇಷ ಗ್ರಾಂಟನ್ನು ಕೇಂದ್ರಸರ್ಕಾರ ಕೊಡಲು ನಿರ್ಧರಿಸಿದೆ.

ಶ್ರೀ ಎನ್. ವಿ. ಗಾಡ್ಗಿಲ್‌ರವರ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟ ಕೇಂದ್ರ ಪರಿಶೀಲನಾ ಸಮಿತಿಯ ಸಲಹೆ ಮೇಲೆ ಈ ವಿಶೇಷ ನೆರವನ್ನು ನೀಡಲಾಗಿದೆ.

ರಷ್ಯಾಕ್ಕೆ ಭಾರತದ ಟೀ

೧೯೫೩-೫೪ರಲ್ಲಿ ಭಾರತವು ರಷ್ಯಾಕ್ಕೆ ಸುಮಾರು ೩ಕೋಟಿ ಪೌಂಡುಗಳಷ್ಟು ಟೀಯನ್ನು ರಫ್ತುಮಾಡುವುದಾಗಿ ತಿಳಿಯಬರುತ್ತದೆ.

ಸರ್ಕಾರಿ ನೌಕರರಿಗೆ ವಿಶೇಷ ಭತ್ಯ

ಮೈಸೂರು ಸಂಸ್ಥಾನದ ಕೆಲವು ಪ್ರದೇಶಗಳಲ್ಲಿರುವ ಸರ್ಕಾರಿ ನೌಕರರಿಗೆ ವಿಶೇಷ ಭತ್ಯವನ್ನು ಸರ್ಕಾರವು ಈ ವರ್ಷದ ಸೆಪ್ಟೆಂಬರ್ ೧ ನೇ ತಾರೀಖಿನಿಂದ ಮಂಜೂರುಮಾಡಿದೆ.

ಮೈಸೂರು ಜಿಲ್ಲೆಯ ಹೆಗ್ಗಡದೇವನಕೋಟೆ, ಹುಣಸೂರು, ಕೃಷ್ಣರಾಜನಗರ ಮತ್ತು ಪೆರಿಯಾಪಟ್ಟಣ ತಾಲ್ಲೂಕುಗಳು, ಹಾಸನದ ಮಂಜರಾಬಾದ್, ಬೇಲೂರು ಮತ್ತು ಆಲೂರು ತಾಲ್ಲೂಕುಗಳು, ಕೋಲಾರದ ಚಿನ್ನದ ಗಣಿ ಮತ್ತು ಬಂಗಾರಪೇಟೆ ತಾಲ್ಲೂಕು, ಚಿತ್ರದುರ್ಗದ ಹಿರಿಯೂರ್ ಮತ್ತು ಬಬ್ಬೂರ್ ಫಾರಂ, ಚಿಕ್ಕಮಗಳೂರಿನ ತರಿಕೆರೆ ಮತ್ತು ಚಿಕ್ಕಮಗಳೂರು ತಾಲ್ಲೂಕುಗಳು, ಮಂಡ್ಯದ ಮದ್ದೂರು, ಫ್ರೆಂಚ್‌ರಾಕ್ಸ್, ಕೃಷ್ಣರಾಜಪೇಟೆ ಮತ್ತು ಮಂಡ್ಯ ತಾಲ್ಲೂಕುಗಳು, ಶಿವಮೊಗ್ಗದ ಶಿಕಾರಿಪುರ, ಸೊರಬ, ಸಾಗರ, ಹೊಸನಗರ, ತೀರ್ಥಹಳ್ಳಿ, ಕುಂಸಿ, ಭದ್ರಾವತಿ ಮತ್ತು ಶಿವಮೊಗ್ಗ ತಾಲ್ಲೂಕುಗಳಲ್ಲಿ ೫೦ ರೂ.ಗಳಿಂದ ಕಡಮೆ ಸಂಬಳ ಬರುವವರಿಗೆ ತಿಂಗಳಿಗೆ ೧-೮-೦ ರೂ. ವಿಶೇಷ ಭತ್ಯ.

ಸಾಗರ, ತೀರ್ಥಹಳ್ಳಿ, ಹೊಸನಗರ, ಮಧುಗಿರಿ, ಕೊಪ್ಪ, ಶೃಂಗೇರಿ, ನರಸಿಂಹರಾಜಪುರ, ಸಕಲೇಶಪುರ, ಚಿಕ್ಕಮಗಳೂರು ತಾಲ್ಲೂಕುಗಳಲ್ಲಿರುವ ಪ್ರೈಮರಿ ಶಾಲಾ ಉಪಾಧ್ಯಾಯರುಗಳಿಗೆ ಸಂಬಳದ ಪ್ರತಿ ರೂ.ಗೆ ನಾಲ್ಕು ಆಣೆ ವಿಶೇಷ ಭತ್ಯ ಕೊಡಲಾಗುವುದು.

ಮೈಸೂರು ಜಿಲ್ಲೆ ಮತ್ತು ನಗರ, ಬೆಂಗಳೂರು ಜಿಲ್ಲೆ ಮತ್ತು ನಗರ ಪೊಲೀಸ್ ಪ್ಯಾದೆಗಳು ಮತ್ತು ಮೈಸೂರು ಮತ್ತು ಬೆಂಗಳೂರುಗಳಲ್ಲಿರುವ ರೈಲ್ವೆ ಪೊಲೀಸ್ ಕಾನ್‌ಸ್ಟೇಬಲರುಗಳಿಗೆ ತಲಾ ೨ ರೂ. ವಿಶೇಷಭತ್ಯ. ಎಲ್ಲ ಶಸ್ತ್ರಾಸ್ತ್ರ ರಿಜರ್ವ್ ಪ್ಯಾದೆಗಳಿಗೂ ೨ ರೂ. ವಿಶೇಷ ಭತ್ಯ.

ಸಾಮುದಾಯಕ ಯೋಜನಾ ಅಧಿಕಾರಿಗಳ ಸಭೆ

ಮದರಾಸು, ಆಂಧ್ರ, ತಿರುವಾಂಕೂರು ಕೊಚ್ಚಿ, ಮೈಸೂರು ಮತ್ತು ಕೊಡಗು ಪ್ರಾಂತ್ಯಗಳಲ್ಲಿರುವ ಸಾಮುದಾಯಕ ಯೋಜನಾಧಿಕಾರಿಗಳ ಸಭೆಯೊಂದು ಮುಂದಿನ ತಿಂಗಳು ಮೊದಲನೆವಾರದಲ್ಲಿ ಮಧುರೆಬಳಿ ಗಾಂಧೀಗ್ರಾಮದಲ್ಲಿ ನಡೆಯುತ್ತದೆ.

ಭಾರತದಲ್ಲಿ ಪೆಟ್ರೋಲ್ ಕಾರ್ಖಾನೆ

ಭಾರತದಲ್ಲಿ ಪೆಟ್ರೋಲ್ ತಯಾರಿಕೆ ಕಾರ್ಖಾನೆಯೊಂದನ್ನು ಸ್ಥಾಪಿಸುವ ವಿಚಾರವು ಸರ್ಕಾರದ ಆಲೋಚನೆಯಲ್ಲಿದೆಯೆಂದು ಕೇಂದ್ರ ಉತ್ಪಾದನಾ ಸಚಿವರು ತಿಳಿಸಿದ್ದಾರೆ.

ಆಂಧ್ರದಲ್ಲಿ ಪಾನನಿರೋಧ ಪರಿಶೀಲನೆ

ಇದಕ್ಕಾಗಿ ಸಮಿತಿ ರಚನೆ

ಆಂಧ್ರಪ್ರಾಂತ್ಯದಲ್ಲಿ ಪಾನನಿರೋಧ ಶಾಸನ ಜಾರಿಯಲ್ಲಿರುವುದನ್ನು ಪರಿಶೀಲಿಸಿ ಅದನ್ನು ಮುಂದುವರಿಸಬೇಕೇ ಅಥವಾ ನೀತಿಯಲ್ಲಿ ಬದಲಾವಣೆ ನಡೆಯಬೇಕೇ ಎಂಬ ವಿಷಯವನ್ನು ಸರ್ಕಾರಕ್ಕೆ ಸಲಹೆ ನೀಡಲು ಒಂದು ಸಮಿತಿಯನ್ನು ನೇಮಿಸಲಾಗುತ್ತದೆ. ಪ್ರಧಾನಿ ನೆಹರೂರವರ ಸಲಹೆ ಮೇರೆ ಆಂಧ್ರ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂ ಈ ಸಮಿತಿಯನ್ನು ನೇಮಿಸಲು ನಿರ್ಧರಿಸಿರುವುದಾಗಿ ಹೇಳಿದ್ದಾರೆ.

ಭಾರತದ ನಾಯಕರು ಕಮ್ಯೂನಿಸಂ ವಿರೋಧಿಗಳು

ಅಮೆರಿಕಾ ಸೆನೆಟರ್ ಸ್ಮಿತ್‌ರ ಹೇಳಿಕೆ

ದಕ್ಷಿಣ ಮತ್ತು ದೂರ ಪ್ರಾಚ್ಯ ಸಂಚಾರದಿಂದ ಈಗ ತಾನೇ ಅಮೆರಿಕಾಕ್ಕೆ ಹಿಂತಿರುಗಿರುವ ದೂರ ಪ್ರಾಚ್ಯ ಉಪಸಮಿತಿಯ ಅಧ್ಯಕ್ಷರಾದ ಅಮೆರಿಕದ ಸೆನೇಟರ್ ಹೆಚ್. ಅಲೆಕ್ಸಾಂಡರ್ ಸ್ಮಿತ್‌ರವರು ಏಷ್ಯದ ಜನರು ಸ್ವಾತಂತ್ರ್ಯ ಮತ್ತು ಸ್ವಾವಲಂಬನೆಗಳನ್ನು ಅಪೇಕ್ಷಿಸುತ್ತಿರುವುದು ತನ್ನ ಸಂಚಾರದ ಎಲ್ಲೆಡೆಗಳಲ್ಲೂ ಕಂಡುಬಂತೆಂದು ಪತ್ರಿಕಾ ಗೋಷ್ಠಿಯೊಂದರಲ್ಲಿ ತಿಳಿಸಿದ್ದಾರೆ.

ಪ್ರಧಾನಿ ನೆಹರೂ ಮತ್ತು ಭಾರತದ ಇತರ ಧುರೀಣರು ಭಾರತದಲ್ಲಿ ಕಮ್ಯೂನಿಸಮ್ಮನ್ನು ವಿರೋಧಿಸುತ್ತಿದ್ದಾರೆ ಎಂಬುದಾಗಿ ಮಿ|| ಸ್ಮಿತ್ ಹೇಳಿದರು. ವಿಶ್ವ ಸಂಸ್ಥೆಯಲ್ಲಿ ಕಮ್ಯೂನಿಸ್ಟ್ ಚೀಣಕ್ಕೆ ಪ್ರವೇಶ ದೊರೆತರೆ, ಕಮ್ಯೂನಿಸ್ಟ್ ಚೀನಾದೊಡನೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸಲು ಸುಲಭವಾಗುವುದೆಂಬ ನಂಬಿಕೆಯಿಂದ ಈ ಧುರೀಣರು ಕಮ್ಯೂನಿಸ್ಟ್ ಚೀಣಾದ ಪ್ರವೇಶಕ್ಕೆ ಅನುಮೋದನೆ ಕೊಡುತ್ತಿದ್ದಾರೆಂದು ಮಿ|| ಸ್ಮಿತ್ ವಿವರಿಸಿದರು. ಅಲ್ಲದೆ ಕಮ್ಯೂನಿಸಂಗೆ ವಿರೋಧವಾಗಿರುವ ಸಂಪ್ರದಾಯಗಳಿರುವ ಚೀಣಾ ದೇಶವು ದೀರ್ಘ ಕಾಲ ಕಮ್ಯೂನಿಸ್ಟ್ ಆಳಿಕೆಯಲ್ಲಿರಲಾರದೆಂದು ಭಾರತೀಯರು ಭಾವಿಸುತ್ತಿರುವುದಾಗಿಯೂ ಮಿ|| ಸ್ಮಿತ್ ತಿಳಿಸಿದ್ದಾರೆ.

ಭಾರತ-ಪಾಕ್ ಚರಆಸ್ತಿ ಒಪ್ಪಂದ

ಚರ ಆಸ್ತಿಗಳ ಬಗ್ಗೆ ಭಾರತ-ಪಾಕೀಸ್ತಾನ್ ನಡುವೆ ಆದ ಒಪ್ಪಂದವು ಮುಂದಿನ ಜನವರಿ ೧ ನೇ ತಾರೀಖಿನಿಂದ ಕಾರ್ಯರೂಪಕ್ಕೆ ಬರಬೇಕೆಂಬ ಪಾಕೀಸ್ತಾನದ ಸಲಹೆಗೆ ಭಾರತ ಸರ್ಕಾರವು ಒಪ್ಪಿದೆ

○ ಕಾಶ್ಮೀರಕ್ಕೆ ೯೦ ಲಕ್ಷ ರೂಪಾಯಿಗಳ ಸಾಲವನ್ನು ಕೊಡಲು ಉಪಬೇಡಿಕೆಯನ್ನು ಕೇಂದ್ರಸರ್ಕಾರವು ಪಾರ್ಲಿಮೆಂಟಿನಲ್ಲಿ ಮಂಡಿಸಿ ಒಪ್ಪಿಗೆ ಪಡೆದಿದೆ.

ಉಚಿತ ಹಾಲಿನ ಪುಡಿ ಹಂಚಿಕೆ

ಅಮೆರಿಕದಲ್ಲಿರುವ ವಿಶ್ವ ಚರ್ಚ್ ಸರ್ವೀಸಿನವರು ಉಚಿತವಾಗಿ ಕಳುಹಿಸಿರುವ ಸುಮಾರು ಒಂದುಲಕ್ಷ ಪೌಂಡುಗಳಷ್ಟು ಹಾಲಿನ ಪುಡಿಯನ್ನು ಮದ್ರಾಸ್ ಪ್ರಾಂತ್ಯದಲ್ಲಿ ಅಭಾವ ಪ್ರದೇಶಗಳಲ್ಲಿರುವ ಮಕ್ಕಳಿಗೆ ಹಂಚಲು ಅದನ್ನು ೧೫೦ ಗ್ರಾಮಸೇವಾ ಸಂಸ್ಥೆಗಳಿಗೆ ಕಳುಹಿಸಲಾಗಿದೆ.

ಹೈದರಾಬಾದ್ ಶಾಸನಸಭೆಯ ಕಾಂ|| ಪಕ್ಷ

ಹೈದರಾಬಾದ್ ಶಾಸನಸಭೆಯಲ್ಲಿರುವ ೩ ಪರಿಗಣಿತ ಕೋಮಿನ ಸದಸ್ಯರು ಕಾಂಗ್ರೆಸ್ ಪಕ್ಷವನ್ನು ಸೇರಿರುವುದಾಗಿ ತಿಳಿಯಬರುತ್ತದೆ. ಇದರಿಂದ ೧೭೫ ಸದಸ್ಯರಿರುವ ಶಾಸನ ಸಭೆಯಲ್ಲಿ ಕಾಂಗ್ರೆಸ್ಸು ಈಗ ೯೫ ಸ್ಥಾನಗಳನ್ನು ಹೊಂದಿದಂತೆ ಆಗುತ್ತದೆ.

ಅಪೆರಾ

18-12-53ರ ಅಮೋಘ ಪ್ರಾರಂಭ

ಆರ್. ಎನ್ ಪಿಕ್ಚರ್ಸ್‌ರವರ

ಜಾತಕ ಫಲ

(ಕನ್ನಡ)

ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ರಣಜಿತ್

18-12-53 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಆಟಗಳು

ಝೂಂಜರ್

ಪಾತ್ರ:-ಕಾಮಿನಿ ಕೌಶಲ್, ಉಷಾಕಿರಣ್, ಸಜ್ಜನ್, ಮೋತಿಲಾಲ್, ಓಂಪ್ರಕಾಶ್.

ಅಡಿಷನಲ್ ಜಿಲ್ಲಾ ಕೋರ್ಟ್ ರದ್ದು

ಮೈಸೂರು ೧೯

ಈಗಿರುವ ಅಡಿಷನಲ್ ಜಿಲ್ಲಾ ಕೋರ್ಟನ್ನು ಮುಂದಿನ ಫೆಬ್ರವರಿ ತಿಂಗಳಿನಿಂದ ರದ್ದುಗೊಳಿಸಲಾಗಿದೆಯೆಂದು ಸರ್ಕಾರಿ ಪ್ರಕಟಣೆ ಹೊರಬಿದ್ದಿದೆ. ಇದೇ ಡಿಸೆಂಬರ್ ೨೭ ನೇ ತಾ||ನಿಂದ ಬೆಂಗಳೂರಿನಲ್ಲಿರುವ ೩ನೇ ಅಡಿಷನಲ್ ಜಿಲ್ಲಾ ಕೋರ್ಟನ್ನೂ ರದ್ದುಗೊಳಿಸಲಾಗಿದೆ.

ಜನತಾ ರೈಲುಗಳು ರದ್ದು

ಅಲಹಾಬಾದಿನಲ್ಲಿ ನಡೆಯುವ ಕುಂಭ ಮೇಳಕ್ಕೆ ಲಕ್ಷಾಂತರ ಜನರು ಪ್ರಯಾಣ ಮಾಡುವುದರಿಂದ ರೈಲುಗಾಡಿಗಳ ಅವಶ್ಯಕತೆ ವಿಶೇಷವಾಗಿರುತ್ತದೆ ಅದಕ್ಕಾಗಿ ಮದರಾಸಿನಿಂದ ದೆಹಲಿ ಮತ್ತು ಬೊಂಬಾಯಿಗಳಿಗೆ ಹೋಗುವ ವಾರಾಂತ್ಯದ ಜನತಾ ರೈಲುಗಳನ್ನು ಇದೇ ೨೫ನೇ ತಾರೀಖಿನಿಂದ ರದ್ದುಗೊಳಿಸಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೮—೧೨—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—೭	೨೩—೪
ಎಳ್ಳು	—	—
ಹರಳು	೩೨—	೪೨—
ಹುಚ್ಚೆಳ್ಳು	೩೧—೧೨	೪೨—೬
ಬೆಲ್ಲ	೫—	—
ಹುರಳಿ	೨೫—೧೨	೩೦—
ಹೆಸರು	೩೪—೨	೪೦—೧೪
ಅವರೆ	—	—
ಅಲಸಂದೆ	೩೩—	೪೮—
ಉದ್ದು	೫೬—೨	—
ಹೊಂಗೆಬೀಜ	—	—
ಮೆಣಸಿನಕಾಯಿ	೧೮—	೩೬—
ಸೀಗೆಕಾಯಿ	—	—
ಹುಣಸೇಹಣ್ಣು	೧೧—೧೦	—
ತೆಂಗಿನಕಾಯಿ	—	—

ಪ್ರಕಾಶಕರು ಮತ್ತು ಮುದ್ರಕರು:

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್, ಮೈಸೂರು.

ಕರ್ನೂಲಿನಲ್ಲಿ ವಿಮಾನ ನಿಲ್ದಾಣ ಪ್ರಶ್ನೆ ಪರಿಶೀಲನೆ

ಆಂಧ್ರ ರಾಜಧಾನಿಯಾದ ಕರ್ನೂಲಿನಲ್ಲಿ ವಿಮಾನ ನಿಲ್ದಾಣವೊಂದನ್ನು ಏರ್ಪಡಿಸಲು ಅಲ್ಲಿಯ ಸರ್ಕಾರವು ಮಾಡಿದ್ದ ಸಲಹೆಯನ್ನು ಕೇಂದ್ರಸರ್ಕಾರದ ವಿಮಾನ ಸಂಚಾರ ಶಾಖೆಯು ಪರಿಶೀಲಿಸುತ್ತಲಿರುವುದಾಗಿ ತಿಳಿಯಬರುತ್ತದೆ.

ಭಾರತೀಯ ನೌಕಾ ದಿನಾಚರಣೆ

ಈದಿನ ಭಾರತ ನೌಕಾ ದಿನ. ಇದನ್ನು ಭಾರತದಲ್ಲಿರುವ ಹಲವಾರು ರೇವುಗಳಲ್ಲಿ ನಡೆಸಲಾಗುತ್ತದೆ. ಈ ಸಂದರ್ಭದಲ್ಲಿ ಪರೇಡು, ಪ್ರದರ್ಶನ, ನೌಕೆಗಳಲ್ಲಿ ದೀಪೋತ್ಸವ ಮುಂತಾದುವು ನಡೆಯುತ್ತವೆ.

ಮೋದಿಯವರ ಉಚಿತ ನೇತ್ರ ಶಿಬಿರ

ನೇತ್ರ ವೈದ್ಯ ಡಾ|| ಎಂ. ಸಿ. ಮೋದಿಯವರು ಇದೇ ತಿಂಗಳ ೨೦ ನೇ ತಾರೀಖಿನಿಂದ ದಾವಣಗೆರೆಯಲ್ಲಿ ಉಚಿತವಾಗಿ ಕಣ್ಣಿನ ಆಪರೇಷನ್ ಮಾಡುವರು.

THE MYSORE GOVERNMENT INSURANCE DEPARTMENT

(Public Branch)

——:o:——

Application has been received for the issue of a duplicate of Policy No. 33548/C on the life of Sri H. N. Lingappa Setty, Sharada Cycle and Watch Stores, No. 1177, Silver Jubilee Clock Tower Square Mysore. It is hereby notified that the duplicate will be issued unless valid objection therefor is received by the undersigned within one month from this date.

C. Narasimha Murthy,

Secretary.

Bangalore,

Dated 18th December 53

● ಅಂತರ ರಾಷ್ಟ್ರೀಯ ಕುಸ್ತಿ ಪಂದ್ಯಗಳು ●

[ಅರಮನೆ ಪೂರ್ವದ ದೊಡ್ಡಕೆರೆ ಪೊಲೀಸ್ ಹಾಕಿ ಮೈದಾನದಲ್ಲಿ]

20-12-53 ನೇ ಭಾನುವಾರ ಸಂಜೆ 6-30 ಕ್ಕೆ

.... ಟೈಗರ್ ಜೋಗೇಂದ್ರಸಿಂಗ್ Vs ಕಿಂಗ್‌ಕಾಂಗ್ ....

ಫ್ಲಾಷ್‌ಗಾರ್ಡನ್ Vs ಟೈಗರ್ ಹೋಲ್ಡನ್

ಇವರೊಡನೆ ಭಾರತದರೀತಿಯ 5 ಜೊತೆ ಜಿದ್ದಾಜಿದ್ದಿನ ಕುಸ್ತಿಗಳೂ ನಡೆಯುತ್ತೆ

ಟಿಕೆಟ್ ದರ:—ಕುರ್ಚಿ ರೂ. 5-0-0, 3-0-0, ಬೆಂಚು 2-0-0, ಗ್ಯಾಲರಿ 1-6-0 ಮತ್ತು ನೆಲ 0-14-0 ಮಹಿಳೆಯರಿಗೆ ಪ್ರತ್ಯೇಕಸ್ಥಳ. ಕೊನೆಯತರಗತಿ ವಿನಃ ಮಿಕ್ಕ ತರಗತಿಗಳಲ್ಲಿ ರಿಯಾಯಿತಿ ಮತ್ತು ಪ್ರತ್ಯೇಕ ಬುಕಿಂಗ್ ಏರ್ಪಡಿಸಲಾಗಿದೆ.

[5 ರೂ. ಸೀಟು ಮಾತ್ರ ರಿಸರ್ವ್ ಮಾಡಲಾಗುತ್ತೆ.] ರೆಫ್ರಿ:—ವಾಂಗ್ ಬಕ್ಲೆ

ಕಿಂಗ್ ಕಾಂಗ್

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೯೯

೨೧-೧೨-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಅಂಚೆ ಇಲಾಖೆಗೂ ಜನರಿಗೂ ಹೆಚ್ಚು ನಿಕಟ ಸಂಬಂಧ ಅಗತ್ಯ

ಅಂಚೆ ಸೌಹಾರ್ದ ವಾರದಲ್ಲಿ ಕೇಂದ್ರ ಉಪಸಚಿವರ ಮನವಿ

ಮೈಸೂರು ೨೧

ನಮ್ಮ ವಿಷಯದಲ್ಲಿ ಸಾರ್ವಜನಿಕರ ಅಭಿಪ್ರಾಯವೇನು ? ಅಂಚೆ ಮತ್ತು ತಂತಿ ಇಲಾಖೆಯಲ್ಲಿ ಇರುವ ನ್ಯೂನಾತಿರಿಕ್ತಗಳೇನು ? ಇನ್ನೂ ಜನತೆಯ ಅವಶ್ಯಕತೆ ಏನು ? ಎಂಬುದನ್ನು ಅರಿತುಕೊಳ್ಳಲು ಅಂಚೆ ಮತ್ತು ತಂತಿ ಇಲಾಖೆಯವರ ನಿಮ್ಮ ಗಿರಾಕಿಗಳ ವಿಷಯ ತಿಳಿದುಕೊಳ್ಳಿ ಎಂದು ಈ ಅಂಚೆ ವಾರವನ್ನು ಇಂದಿನಿಂದ ಏರ್ಪಡಿಸಲಾಗಿದೆ-ಎಂದು ಭಾರತ ಸರ್ಕಾರದ ಸಂಚಾರ ಶಾಖಾ ಸಚಿವ ಶ್ರೀ ರಾಜಬಹದ್ದೂರ್‌ರವರು ಈದಿನ ಬೆಳಗ್ಗೆ ಅಶೋಕಾರಸ್ತೆಯಲ್ಲಿರುವ ಅಂಚೆ ಮತ್ತು ತಂತಿ ಕಛೇರಿಯಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ಈ ಸಮಾರಂಭಕ್ಕಾಗಿ ಅತಿಥಿಗಳನ್ನು ಪ್ರಾರಂಭದಲ್ಲಿ ಪೋಸ್ಟಲ್ ಸೂಪರಿಂಟೆಂಡರಾದ ಶ್ರೀ ನಾಯರ್‌ರವರು ತಿಳಿಸಿದರು.

ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಈ ಸಮಾರಂಭವನ್ನು ಉದ್ಘಾಟಿಸುತ್ತಾ ನಿತ್ಯ ಜೀವನಕ್ಕೆ ಉಪಯುಕ್ತವಾದ ಈ ಇಲಾಖೆಯಲ್ಲಿ ದಕ್ಷತೆ, ಪ್ರಾಮಾಣಿಕತೆಗಳು ಮುಖ್ಯವಾಗಿ ನೌಕರರಲ್ಲಿರಬೇಕಾದ ಸದ್ಗುಣಗಳು ಇದರ ಜೊತೆಗೆ ಸಾರ್ವಜನಿಕರಲ್ಲೂ ಸರ್ಕಾರದ ನೌಕರರಲ್ಲೂ ನಿಕಟ ಸಂಬಂಧ ಉಂಟಾಗಿ ಸೌಹಾರ್ದ್ಯದಿಂದ ಕೆಲಸ ನಡೆಯಬೇಕಾಗಿದೆ. ಆದ್ದರಿಂದ ಸಾರ್ವಜನಿಕರೇ ಈ ರೀತಿಯಾದ ವಾರವನ್ನು ಏರ್ಪಡಿಸಬೇಕೆಂದು ತಿಳಿಸಿದರು.

ಅಂಚೆ ಮತ್ತು ಟೆಲಿಫೋನ್ ಇಲಾಖೆಯಲ್ಲಿ ಅನೇಕ ತೊಂದರೆಗಳು ತೊಡಕುಗಳಿರುವುದು ಗೊತ್ತಾಗಿದೆ. ಅವುಗಳನ್ನೆಲ್ಲಾ ನಿರ್ಮೂಲಮಾಡಿ ಜನರಿಗೆ ಸಾಧ್ಯವಾದಷ್ಟು ಸೌಕರ್ಯಗಳನ್ನು ಒದಗಿಸುವುದೇ ಸರ್ಕಾರದ ಧ್ಯೇಯವಾಗಿದೆ. ವಿದೇಶೀಯರ ಕಾಲದಲ್ಲಿ ಅಂಚೆ ಇಲಾಖೆಗೂ ಸಾರ್ವಜನಿಕರಿಗೂ ಸರಿಯಾದ ಸಂಬಂಧವೇ ಇರಲಿಲ್ಲ ತಮಗೆ ಉಪಯುಕ್ತವಾದ ರೀತಿಯಲ್ಲಿ ಅವರು ಕೆಲಸ ಮಾಡುತ್ತಿದ್ದರು. ೩೬ ಕೋಟಿ ಜನರಿರುವ ರಾಷ್ಟ್ರದಲ್ಲಿ ಈಗ ಕೇವಲ ೨ ಲಕ್ಷ ಟೆಲಿಫೋನುಗಳಿವೆ ಅದರಲ್ಲಿ ಶೇಕಡ ೪೦-೪೫ ರಷ್ಟನ್ನು ೫ ವರ್ಷಗಳಲ್ಲಿ ಹಾಕಲಾಗಿದೆ. ಸ್ಟಾಕ್‌ಹೋಂ ಅಂಥಹಾ ನಗರ ಒಂದರಲ್ಲೇ ೩ ಲಕ್ಷ ಟೆಲಿಫೋನುಗಳಿವೆ ಅವು ಆಧುನಿಕ ಯಂತ್ರಗಳಿಂದ ಕೂಡಿವೆ. ಅಂದರೆ ನಾವು ಬಹಳ ಹಿಂದುಳಿದಿದ್ದೇವೆ. ಈಗ ಪ್ರತಿಯೊಂದು ಗ್ರಾಮಗಕ್ಕೂ ಅಂಚೆ, ತಂತಿ ಮತ್ತು ಇತರ ಸಂಚಾರ ವ್ಯವಸ್ಥೆಗಳನ್ನು ನಾವು ಏರ್ಪಡಿಸುತ್ತಲಿದ್ದೇವೆ. ಮಾಡಬೇಕಾದ ಕಾರ್ಯ ಅಗಾಧವಾಗಿದೆ. ಇದಕ್ಕೆಲ್ಲಾ ಜನತೆಯ ಬೆಂಬಲ ಬೇಕು ಸೇವಕರಾದ ನಮ್ಮ ಕಷ್ಟ ಸುಖಗಳನ್ನು ದಣಿಗಳಾದ ಸಾರ್ವಜನಿಕರು ಅರಿತು ನಮ್ಮೊಡನೆ ಸಹಕರಿಸಿ ಉಭಯತ್ರರುಗಳ ನಡುವೆ ನಿಕಟ ಸಂಬಂಧ ಹೆಚ್ಚಿ ದೇಶದ ಪ್ರಗತಿಗೆ ಎಲ್ಲರೂ ದುಡಿಯಬೇಕು ಎಂದು ಸಚಿವರು ಹೇಳಿದರು.

ವಿಶ್ವವಿದ್ಯಾನಿಲಯಗಳ ಸಮ್ಮೇಳನ

ಮೈಸೂರು ೨೧

ಭಾರತ, ಬರ್ಮಾ ಮತ್ತು ಸಿಲೋನ್ ವಿಶ್ವವಿದ್ಯಾನಿಲಯಗಳ ಏಳನೇ ಸಮ್ಮೇಳನವು ನಾಳೆಯಿಂದ ೨೪ನೇ ತಾರೀಖಿನವರೆಗೆ ರಂಗೂನ್ ವಿಶ್ವವಿದ್ಯಾನಿಲಯದ ರೆಕ್ಟಾರ್ ಡಾ|| ಹಿರ್ಟ್ ಅಂಗ್‌ರ ಅಧ್ಯಕ್ಷತೆಯಲ್ಲಿ ನಡೆಯುವುದು.

ಅದರ ಪ್ರಾರಂಭೋತ್ಸವವನ್ನು ನಾಳೆ ಬೆಳಗ್ಗೆ ೧೦-೩೦ ಗಂಟೆಗೆ ರಾಜಪ್ರಮುಖರು ಕ್ರಾಫರ್ಡ್ ಭವನದಲ್ಲಿ ನೆರವೇರಿಸುವರು.

ಸಮ್ಮೇಳನದ ಪ್ರತಿನಿಧಿಗಳ ಗೌರವಾರ್ಥವಾಗಿ ಶ್ರೀಮನ್ಮಹಾರಾಜರು ನಾಳೆ ಸಂಜೆ ೫ ಗಂಟೆಗೆ ಚಾಮುಂಡಿ ಜಮಖಾನದಲ್ಲಿ ಒಂದು ಸತ್ಕಾರಕೂಟ ಏರ್ಪಡಿಸಿದ್ದಾರೆ.

ಸ್ಕೌಟ್ ರ್‍ಯಾಲಿ

ಮೈಸೂರು ೨೧

ಮೈಸೂರು ನಗರದ ಸ್ಕೌಟ್ ಕೌನ್ಸಿಲಿನ ಆಶ್ರಯದಲ್ಲಿ ನಿನ್ನೆ ಸಂಜೆ ಟೌನ್‌ಹಾಲಿನ ಮೈದಾನದಲ್ಲಿ ನಗರದ ಸ್ಕೌಟ್ ರ್‍ಯಾಲಿಯು ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಕುಶಲ ಕಲಾಬೋರ್ಡಿನ ಸಭೆ

ಅಖಿಲಭಾರತ ಕುಶಲಕಲೆಗಳ ಬೋರ್ಡಿನ ಸಭೆಯು ಮುಂದಿನ ತಿಂಗಳು ೩ನೇ ತಾರೀಖಿನಿಂದ ೫ ನೇ ತಾರೀಖಿನವರೆಗೆ ಕೃಷ್ಣರಾಜಸಾಗರದಲ್ಲಿ ನಡೆಯುವುದಾಗಿ ತಿಳಿಯಬರುತ್ತದೆ.

ಕೇಂದ್ರ ಉಪಸಚಿವರಲ್ಲಿ ಅಂಚೆ ಇಲಾಖೆಯ ನಿಯೋಗ

ಮೈಸೂರು ೨೧

ರಾಜಧಾನಿಗೆ ನಿನ್ನೆ ಆಗಮಿಸಿದ ಕೇಂದ್ರ ಸರ್ಕಾರದ ಸಂಚಾರ ಶಾಖಾ ಉಪಸಚಿವ ಶ್ರೀ ರಾಜಬಹದ್ದೂರರವನ್ನು ನಗರದ ಅಂಚೆ ಮತ್ತು ಕೆಳದರ್ಜೆ ನೌಕರರ ಸಂಘದವರು ಭೇಟಿಮಾಡಿ ತಮ್ಮ ಕುಂದುಕೊರತೆಗಳನ್ನು ನಿವೇದಿಸಿಕೊಂಡರು.

ನೌಕರರುಗಳಿಗೆ ಆದಷ್ಟು ಬೇಗನೆ ಗೃಹವಸತಿ ಕಲ್ಪಿಸಲಾಗುವುದೆಂದು ಸಚಿವರು ಭರವಸೆ ಇತ್ತರು. ಅಂಚೆ ಇಲಾಖಾ ನೌಕರರ ಮಕ್ಕಳಿಗೆ ಉದ್ಯೋಗ, ಪರೀಕ್ಷೆಇಲ್ಲದೆ ನಾಲ್ಕನೆ ದರ್ಜೆಯ ನೌಕರರಿಗೆ ಭಡ್ತಿ, ಇವೇ ಮುಂತಾದ ಅವಹಾಲುಗಳನ್ನು ಪರಿಶೀಲಿಸುವುದಾಗಿ ಅವರು ನಿಯೋಗದವರಿಗೆ ತಿಳಿಸಿದರೆಂದು ಗೊತ್ತಾಗಿದೆ.

ಪೌರಸಭಾ ಚುನಾವಣೆಯ ಮೊಕದ್ದಮೆಗಳಿಗೆ ವಿಶೇಷ ನ್ಯಾಯಾಲಯ

ಮೈಸೂರು ೨೧

ಪೌರಸಭೆಯ ಚುನಾವಣೆ ಬಗ್ಗೆ ಹೂಡಲಾಗಿರುವ ಮೊಕದ್ದಮೆಗಳನ್ನು ಪರಿಶೀಲಿಸಲು ವಿಶೇಷ ನ್ಯಾಯಾಧೀಶರೊಬ್ಬರನ್ನು ನೇಮಿಸಲಾಗುವುದೆಂದು ತಿಳಿಯಬರುತ್ತದೆ.

ಎರಡು ಘಟ್ಟಗಳಲ್ಲಿ ಮಾರಾಟತೆರಿಗೆ

ಬೊಂಬಾಯಿ ಪ್ರಾಂತ್ಯದಲ್ಲಿ ಈಗ ವಿಧಿಸುತ್ತಲಿರುವ ವಿವಿಧಘಟ್ಟಗಳ ಮಾರಾಟತೆರಿಗೆಯನ್ನು ತಪ್ಪಿಸಿ ಎರಡು ಘಟ್ಟಗಳಲ್ಲಿ ಮಾತ್ರ ಮಾರಾಟತೆರಿಗೆಯನ್ನು ವಿಧಿಸಲು ಅಲ್ಲಿನ ಶಾಸನ ಸಭೆಯು ಒಪ್ಪಿಗೆಯನ್ನಿತ್ತಿದೆ.

ವಿಶ್ವದಲ್ಲೆಲ್ಲಾ ಭಾರಿ ಎಕ್ಸ್‌ರೇ ಯಂತ್ರ

ವಿಶ್ವದಲ್ಲೆಲ್ಲಾ ಅತ್ಯಂತ ದೊಡ್ಡದಾದ ಎಕ್ಸ್‌ರೇ ಯಂತ್ರವನ್ನು ಲಂಡನ್ನಿನ ಸೆಂಟ್ ಬಾರ್ತಲೋಮಿಯೋ ಆಸ್ಪತ್ರೆಯಲ್ಲಿ ಸ್ಥಾಪಿಸಲಾಗಿದೆ.

ವಸತಿ ಯೋಜನೆ

ಏರ್ನಾಕುಲಂನಲ್ಲಿ ಮೀನು ಹಿಡಿಯುವವರಿಗೆ ವಸತಿ ನಿರ್ಮಾಣ ಯೋಜನೆಯನ್ನು ಮಂಜೂರ್ಮಾಡಿ ತಿರುವಾಂಕೂರ್-ಕೊಚ್ಚಿ ಸರ್ಕಾರವು ಅದನ್ನು ಸದ್ಯದಲ್ಲೇ ಕಾರ್ಯರೂಪಕ್ಕೆ ತರಲಿದೆ.

ಕೇಂದ್ರ ಸಂಚಾರ ಶಾಖಾ ಉಪಸಚಿವರಾಗಮನ

ಮೈಸೂರು ೨೧

ಕೇಂದ್ರ ಸರ್ಕಾರದ ಸಂಚಾರ ಶಾಖಾ ಉಪಸಚಿವ ಶ್ರೀ ರಾಜಬಹದ್ದೂರ್‌ರವರು ನಿನ್ನೆ ಸಂಜೆ ಊಟಿಯಿಂದ ರಾಜಧಾನಿಗೆ ಆಗಮಿಸಿದರು. ರಾತ್ರಿ ಅವರು ಚಾಮುಂಡಿ ಬೆಟ್ಟಕ್ಕೆ ಹೋಗಿ ಅನಂತರ ಕೃಷ್ಣರಾಜಸಾಗರಕ್ಕೆ ಭೇಟಿಯಿತ್ತರು. ಕೃಷ್ಣರಾಜಸಾಗರದಲ್ಲಿ ಇಂಜನಿಯರ್ ಶ್ರೀ ಕೆ. ಪದ್ಮನಾಭರವರು ಸಚಿವರನ್ನು ಸ್ವಾಗತಿಸಿ ಕೃಷ್ಣರಾಜಸಾಗರ ಬೃಂದಾವನ ಮುಂತಾದುವನ್ನು ಅವರಿಗೆ ತೋರಿಸಿ, ಅಲ್ಲಿಯ ಕೆಲಸಕಾರ್ಯಗಳನ್ನು ವಿವರಿಸಿದರು.

ಇಲ್ಲಿಯ ಅದ್ಭುತ ಇಂಜನಿಯರಿಂಗ್ ಕೆಲಸ ಮತ್ತು ಮನರಂಜನಕ್ಕಾಗಿ ಏರ್ಪಡಿಸಿರುವ ಬೃಂದಾವನ ಮುಂತಾದುವನ್ನು ಸಚಿವರು ನೋಡಿ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿ, ಕುತೂಹಲದಿಂದ ಎಲ್ಲಾ ವಿವರಗಳನ್ನು ಅರಿತುಕೊಂಡರು.

ಸಚಿವರೊಡನೆ ಅಂಚೆ ಇಲಾಖೆಯ ಡೈರೆಕ್ಟರ್ ಶ್ರೀ ಸೇನಗುಪ್ತಾರವರೂ ಸಹ ಆಗಮಿಸಿದ್ದಾರೆ.

ವೆಲ್ಲೂರಿನಲ್ಲಿ ಪ್ರತಿಬಂಧಕಾಜ್ಞೆ

ಮಹಾತ್ಮ ಗಾಂಧಿಯವರ ಪ್ರತಿಮೆ ಪ್ರತಿಷ್ಠಾಪನೆ ವಿಷಯದಲ್ಲಿ ಒಂದು ಗುಂಪಿನವರಿಗೆ ವೈಮನಸ್ಯ ಉಂಟಾಗಿರುವುದರಿಂದ ವೆಲ್ಲೂರಿನಲ್ಲಿ ೧೪೪ ನೇ ಸೆಕ್ಷನ್ ಜಾರಿಮಾಡಲಾಗಿದೆ

ಎರ್ನಾಕುಲಂ-ಕ್ವಿಲಾನ್ ರೈಲು

ಎರ್ನಾಕುಲಂ ಮತ್ತು ಕ್ವಿಲಾನ್ ನಡುವಿನ ರೈಲ್ವೆ ಕೆಲಸವು ಓಡಾಟಕ್ಕೆ ೧೯೫೫ ರೊಳಗೆ ಸಿದ್ಧವಾಗಿ ಉಳಿದಕಾರ್ಯವೆಲ್ಲವೂ ೧೯೫೬ ರೊಳಗೆ ಪೂರ್ಣವಾಗುವುದಾಗಿ ತಿಳಿಯಬರುತ್ತದೆ.

ಕೊಚ್ಚಿನ್‌ಬಂದರು ವಿಸ್ತರಣೆ

ಕೊಚ್ಚಿನ್‌ಬಂದರಿನ ವಿಸ್ತರಣಾಕಾರ್ಯಕ್ಕಾಗಿ ಒಂದುಕೋಟಿ ೯೦ಲಕ್ಷ ರೂ.ಗಳನ್ನು ವೆಚ್ಚಮಾಡಲಾಗುತ್ತದೆ. ಇದಕ್ಕಾಗಿ ಕೇಂದ್ರವು ೧೨೦ ಲಕ್ಷರೂ.ಗಳಸಾಲವನ್ನು ಮಂಜೂರ್ಮಾಡಿದೆ.

ಕುಶಲ ಕಲಾ ಶಿಕ್ಷಣ ಕೇಂದ್ರ

ನಾಟಕ, ನೃತ್ಯ ಮತ್ತು ಇತರ ಕುಶಲಕಲೆಗಳ ಅಕಡೆಮಿಯು ಸದ್ಯದಲ್ಲೆ ಹೈದರಾಬಾದಿನಲ್ಲಿಸ್ಥಾಪಿತವಾಗಲಿದೆ.

ವಿಶ್ವಸಂಸ್ಥೆಯ ಮಹಾಧಿವೇಶನ ಒಂದೇ ದೇಶದಲ್ಲಿ ನಡೆಯಬಾರದು

ಅಧ್ಯಕ್ಷ ಶ್ರೀಮತಿ ವಿಜಯಲಕ್ಷ್ಮಿಯವರ ಅಭಿಪ್ರಾಯ

ವಿಶ್ವಸಂಸ್ಥೆಯು ನಾನಾ ದೇಶಗಳ ಸಮಸ್ಯೆಗಳನ್ನು ಪರಿಶೀಲಿಸುವುದರಿಂದ ಆಯಾ ದೇಶಗಳಿಗೆ ಸಂಬಂಧಪಟ್ಟ ವಿಷಯಗಳು ಚರ್ಚೆಗೆ ಬಂದಾಗ ಆ ಪ್ರಾಂತ್ಯಗಳಲ್ಲಿ ಮಹಾಸಭೆಯನ್ನು ನಡೆಯಿಸಬೇಕು ಅದರಿಂದ ವಿಷಯ ಚರ್ಚೆ ಮತ್ತು ತೀರ್ಮಾನಕ್ಕೆ ಸಹಕಾರಿಯಾಗುತ್ತದೆ ಎಂದು ವಿಶ್ವಸಂಸ್ಥೆ ಅಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿಯವರು ಕರಾಚಿಯಲ್ಲಿ ಸುದ್ದಿಗಾರರೊಡನೆ ಮಾತನಾಡುತ್ತಾ ಅಭಿಪ್ರಾಯಪಟ್ಟಿದ್ದಾರೆ. ಆದರೆ ಈ ವಿಷಯದಲ್ಲಿ ಪ್ರಯತ್ನಗಳೇನೂ ನಡೆದಿಲ್ಲವೆಂದೂ ಹೇಳಿದ್ದಾರೆ.

ಮದರಾಸಿನ ಕೃಷಿ ರತ್ನ

ಮದ್ರಾಸ್ ಪ್ರಾಂತ್ಯದ ರಾಮನಾಡ ಜಿಲ್ಲೆಯ ಶಂಕರ ನಾರಾಯಣ ತೇವರ್ ಎಂಬುವವರು ಒಂದು ಎಕರೆ ಜಮೀನಿನಲ್ಲಿ ೧೧೨೫೦ ಪೌಂಡುಗಳ ಬತ್ತವನ್ನು ಬೆಳೆದು ಹೊಸ ದಾಖಲೆಯನ್ನು ಮಾಡಿದ್ದಾರೆ.

ನಿನ್ನೆಯ ದಿನ ಅವರಿಗೆ ಮದ್ರಾಸ್ ಗೌರ್ನರ್ ಶ್ರೀ ಶ್ರೀಪ್ರಕಾಶರವರು ಚಿನ್ನದ ಪದಕ ಮತ್ತು ಸ್ವಲ್ಪ ಹಣವನ್ನು ಬಹುಮಾನವಾಗಿ ಕೊಟ್ಟರು. ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಅವರಿಗೆ "ಕೃಷಿ ರತ್ನ" ಎಂಬ ಪ್ರಶಸ್ತಿಯನ್ನು ಕೊಟ್ಟರು.

ಭಾರತದಲ್ಲಿ ಸಣ್ಣ ಮೋಟಾರುಗಳ ತಯಾರಿಕೆ

ಬೊಂಬಾಯಿನ ಬಳಿ ಕುರ್ಲಾದಲ್ಲಿರುವ ಮೋಟಾರು ಕಾರ್ಖಾನೆಯಲ್ಲಿ ಸಣ್ಣ ಮೋಟಾರು ಕಾರುಗಳನ್ನು ತಯಾರಿಸುವ ಉದ್ಯಮವನ್ನು ಸದ್ಯದಲ್ಲಿಯೇ ಕೈಗೊಳ್ಳಲಾಗುವುದೆಂದು ತಿಳಿದುಬಂದಿದೆ.

ಸಂಸ್ಥೆಯ ಡೈರೆಕ್ಟರಾದ ಶ್ರೀ ಲಾಲ್ ಚಂದ್ ಹೀರಾಚಂದ್‌ರವರು ಈ ವಿಷಯದಲ್ಲಿ ಮಾತನಾಡುತ್ತಾ ಸರ್ಕಾರವು ಈ ಯೋಜನೆಯನ್ನು ಒಪ್ಪಿದೊಡನೆಯೇ ಕಾರ್ಯವನ್ನು ಆರಂಭಿಸುವುದಾಗಿ ಅವರು ತಿಳಿಸಿದ್ದಾರೆ.

ವಿಜಯಲಕ್ಷ್ಮಿಯವರ ಆಗಮನ

ವಿಶ್ವಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿಯವರು ನಿನ್ನೆಯ ದಿನ ವಿಮಾನದಲ್ಲಿ ನವದೆಹಲಿಗೆ ಆಗಮಿಸಿದರು ಅವರೊಡನೆ ವಿಶ್ವಸಂಸ್ಥೆಯಲ್ಲಿ ಭಾರತ ಪ್ರತಿನಿಧಿಯಾಗಿರುವ ಶ್ರೀ ವಿ. ಕೆ. ಕೃಷ್ಣ ಮೆನನ್‌ರವರು ಆಗಮಿಸಿದ್ದಾರೆ.

ಹೊಸ ಪಾರ್ಲಿಮೆಂಟರಿ ಕಾರ್ಯದರ್ಶಿಗಳು

ಹೊಸದಾಗಿ ಪಾರ್ಲಿಮೆಂಟರಿ ಕಾರ್ಯದರ್ಶಿಗಳಾಗಿ ನೇಮಕವಾಗಿರುವ ಲೋಕಸಭಾಸದಸ್ಯ ಡಾ|| ಮನಮೋಹನದಾಸ್ ಮತ್ತು ರಾಜ್ಯಪರಿಷತ್ತಿನ ಸದಸ್ಯರಾದ ಡಾ|| ಕೆ. ಎಲ್. ಶ್ರೀಮಾಲಿ ಮತ್ತು ಶ್ರೀ ಜಿ. ರಾಜಗೋಪಾಲ್‌ರವರು ನಿನ್ನೆ ಪ್ರಧಾನಿಯವರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ಪತ್ರಿಕಾ ಆಕ್ಷೇಪಣಾ ಕಾನೂನು ಬೇಕಾಗಿಲ್ಲ

ಅಖಿಲ ಭಾರತ ವೃತ್ತಪತ್ರಿಕಾ ಸಂಪಾದಕರ ಸ್ಥಾಯಿಸಮಿತಿಯ ಸಭೆಯು ನಿನ್ನೆಯ ದಿನ ಶ್ರೀ ಎ ಬಿ ಮಣಿಯವರ ಅಧ್ಯಕ್ಷತೆಯಲ್ಲಿ ಸೇರಿ ಪತ್ರಿಕಾ ಪ್ರಕಟಣೆ ಕಾನೂನು ಮುಂದುವರಿಸಬೇಕಾದ ಅವಶ್ಯಕತೆ ಇಲ್ಲವೆಂದು ನಿರ್ಣಯಮಾಡಿದೆ.

ಭಾಷಾವಾರು ಪ್ರಾಂತ್ಯ ರಚನೆ ಕಮ್ಯೂನಿಸಂಗೆ ಸಹಕಾರಿ

ಭಾಷಾವಾರು ಪ್ರಾಂತ್ಯ ರಚನೆಯಿಂದ ಕಮ್ಯೂನಿಸಂ ಬೆಳೆಯಲು ಸಹಕಾರಿಯಾಗುವುದಾಗಿಯೂ ದೇಶದಲ್ಲಿ ಐಕ್ಯತೆ ತಪ್ಪಿ ಒಡಕು ಹೆಚ್ಚಾಗುವುದೆಂದೂ ಆರ್. ಎಸ್. ಎಸ್. ನಾಯಕ ಶ್ರೀ ಗೋಲ್ವಾಲ್ಕರರು ಹೇಳಿದ್ದಾರೆ.

ಪಂಚವಾರ್ಷಿಕ ಯೋಜನೆ ಪುನರ್ವಿಮರ್ಶೆ

ದೇಶದಲ್ಲಿ ಉದ್ಯೋಗವನ್ನು ಕಲ್ಪಿಸುವ ಅವಕಾಶವನ್ನು ಹೆಚ್ಚಿಸಲು ಪಂಚವಾರ್ಷಿಕ ಯೋಜನೆಯನ್ನು ಪುನರ್ವಿಮರ್ಶಿಸಲು ಲೋಕಸಭೆಯು ಒಪ್ಪಿಗೆಯನ್ನಿತ್ತಿದೆ.

ಅಪೇರಾ
18-12-53ರ ಅಮೋಘ ಪ್ರಾರಂಭ
ಆರ್. ಎನ್. ಪಿಕ್ಚರ್ಸ್‌ರವರ
ಜಾತಕ ಫಲ
(ಕನ್ನಡ)
ಪಾತ್ರ:—ಆರ್. ನಾಗೇಂದ್ರರಾವ್, ಜಿ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ಭಾಷೆ ದೇಶದ ಭಿನ್ನತೆ ನಿವಾರಿಸುವುದು

ವಾಣಿಜ್ಯ ಸಚಿವ ಶ್ರೀ ಕರಮರ್‌ಕರವರ ಹೇಳಿಕೆ

ಭಾಷಾ ಆಧಾರದಮೇಲೆ ರಾಷ್ಟ್ರ ವಿಭಾಗ ಮಾಡಿದರೆ ಮಾತ್ರ ದೇಶದಲ್ಲಿರುವ ಭಿನ್ನತೆ ನಿವಾರಣೆಯಾಗುತ್ತದೆ. ಅದೇ ಸಮಯದಲ್ಲಿ ದೇಶದ ಸಮಗ್ರತೆಯನ್ನು ಗಣನೆಗೆ ತೆಗೆದುಕೊಳ್ಳಬೇಕು-ಎಂದು ಬೊಂಬಾಯಿನಲ್ಲಿ ಶ್ರೀ ಆರ್. ಆರ್. ದಿವಾಕರ್‌ರವರಿಗೆ ಕನ್ನಡಿಗರು ಇತ್ತ ಸತ್ಕಾರಕೂಟದಲ್ಲಿ ವಾಣಿಜ್ಯ ಸಚಿವ ಶ್ರೀ ಕರಮರ್‌ಕರ್‌ರು ಮಾತನಾಡುತ್ತಾ ತಿಳಿಸಿದ್ದಾರೆ.

ಫ್ರಾನ್ಸಿನಲ್ಲಿ ಅಧ್ಯಕ್ಷ ಚುನಾವಣೆ

ಫ್ರಾನ್ಸಿನಲ್ಲಿ ಅಲ್ಲಿಯ ಅಧ್ಯಕ್ಷರ ಚುನಾವಣೆಯು ಹಲವಾರು ದಿನಗಳಿಂದ ೮ ಬಾರಿ ನಡೆದಾಗ್ಯೂ ಶಾಸನರೀತ್ಯ ನಿರ್ದಿಷ್ಟವಾದ ಮತವನ್ನು ಗಳಿಸಿ ಯಾರು ಚುನಾಯಿತರಾಗಿಲ್ಲ. ಈದಿನ ೯ ನೇ ಬಾರಿ ಚುನಾವಣೆಯು ನಡೆಯುತ್ತದೆ.

ಕಲ್ಕತ್ತಾದಲ್ಲಿ ಎಣ್ಣೆ ಶುದ್ಧೀಕರಣ ಕೇಂದ್ರ

ಕಲ್ಕತ್ತಾದಲ್ಲಿ ಸದ್ಯದಲ್ಲಿಯೇ ಒಂದು ಎಣ್ಣೆ ಶುದ್ಧೀಕರಣ ಕೇಂದ್ರವನ್ನು ಸ್ಥಾಪಿಸಲಾಗುತ್ತದೆ. ಅದಕ್ಕಾಗಿ ಕಲ್ಕತ್ತಾ ಬಂದರಿನ ವಿಸ್ತರಣಾ ಕಾರ್ಯ ಪ್ರಾರಂಭವಾಗಿದೆ.

ಮದ್ರಾಸ್ ಹೆಸರು ಬದಲಾಯಿಸಬೇಕು

ಈಗಿನ ಮದ್ರಾಸ್ ಪ್ರಾಂತ್ಯಕ್ಕೆ ಇನ್ನು ಮುಂದೆ "ತಮಿಳುನಾಡು" ಎಂದು ಹೊಸ ನಾಮಧೇಯವನ್ನು ಕೊಡಬೇಕೆಂದು ಶ್ರೀ ಜಿ. ಗೋವಿಂದರ್‌ರವರು ಶಾಸನಸಭೆಯಲ್ಲಿ ಒಂದು ಖಾಸಗಿ ನಿರ್ಣಯವನ್ನು ಮಂಡಿಸಿದ್ದಾರೆ.

ಅಸ್ಪೃಶ್ಯತೆಗೆ ಶಿಕ್ಷೆ ವಿಧಿಸುವ ಮಸೂದೆ

ಅಸ್ಪೃಶ್ಯತೆಯ ಆಚರಣೆಯನ್ನು ಶಿಕ್ಷಿಸುವ ಮಸೂದೆಯೊಂದನ್ನು ಸದ್ಯದಲ್ಲೇ ಮಂಡಿಸಲಿರುವುದಾಗಿ ಭಾರತ ಗೃಹಸಚಿವ ಡಾ|| ಕಟ್ಜೂರವರು ತಿಳಿಸಿದ್ದಾರೆ.

ಪ್ರಭಾ ಇಂದಿನಿಂದ ಅಮೋಘ ಪ್ರಾರಂಭ
ಮೂರು ದಿನಗಳು ಮಾತ್ರ
ಪ್ರತಿದಿವ 3 ಪ್ರದರ್ಶನಗಳು
ಜೈಮಹಾಲಕ್ಷ್ಮಿ
ಪಾತ್ರ:—ಶೋಭನಾಸಮರ್ಥ್, ಉಷಾಕಿರಣ್, ಶಕುಂತಲ, ನಿರ್ಮಲ ಮತ್ತು ಅರುಣ್

ಜಾತಕಫಲ—ಕನ್ನಡಚಿತ್ರ

ಮೈಸೂರು ೨೧

ಕನ್ನಡದ ಸುಪ್ರಸಿದ್ಧ ಕಲಾವಿದ ಶ್ರೀ ಆರ್. ನಾಗೇಂದ್ರರಾಯರು ರಚಿಸಿರುವ "ಜಾತಕಫಲ" ಎಂಬ ಕನ್ನಡ ಚಿತ್ರವು ಈಗ ರಾಜಧಾನಿಯ ಅಪೆರಾ ಚಿತ್ರಮಂದಿರದಲ್ಲಿ ಪ್ರದರ್ಶಿಸಲಾಗುತ್ತಿದೆ.

ಭಾರತದಲ್ಲಿ ತಯಾರಾಗುತ್ತಿರುವ ಹಿಂದಿ, ತಮಿಳು, ತೆಲುಗು ಮತ್ತು ಇತರ ಭಾಷಾ ಚಿತ್ರಗಳು ಹೇರಳವಾಗಿ ತಯಾರಾಗುತ್ತಿದ್ದರೂ, ಕನ್ನಡ ಚಿತ್ರಗಳು ವಿರಳವಾಗಿವೆ. ಅದರಲ್ಲೂ ಅವುಗಳು ಅತಿ ಕೀಳುಮಟ್ಟದಲ್ಲಿರುತ್ತಿವೆ ಆದರೆ ಶ್ರೀ ನಾಗೇಂದ್ರರಾಯರು ಈ ಕೊರತೆಯನ್ನು ನೆನಪಿನಲ್ಲಿಟ್ಟುಕೊಂಡು, ಒಂದು ಉತ್ತಮ ದರ್ಜೆಯ ಚಿತ್ರವನ್ನು ಕನ್ನಡನಾಡಿಗೆ ಕೊಟ್ಟಿರುವುದು ಸ್ತುತ್ಯಾರ್ಹವಾದುದು. ಶ್ರೀ ನಾಗೇಂದ್ರರಾಯರು ಚೆನ್ನಾಗಿ ಅಭಿನಯಿಸಿದ್ದಾರೆ ನಟನಟಿಯರಲ್ಲಿ ಹೆಚ್ಚುಮಂದಿ ತಮಿಳರಾದುದರಿಂದ, ಅವರು ಮಾತನಾಡುವ ಕನ್ನಡವು ಕೇವಲ ತಮಿಳಿನಂತಯೇ ಭಾಸವಾಗುತ್ತದೆ. ಇದೊಂದು ಈ ಚಿತ್ರದ ದೊಡ್ಡದೋಷ. ಆದರೂ ನಿತ್ಯಜೀವನವನ್ನು ಪ್ರತಿಬಿಂಬಿಸುವ ಚಿತ್ರಿತವಾದ್ದರಿಂದ ಪ್ರೇಕ್ಷಕರಿಗೆ ಅಷ್ಟು ಬೇಸರವಾಗುವುದಿಲ್ಲ. ಚಿತ್ರದಲ್ಲಿ ಹಾಸ್ಯಕ್ಕೂ ಪ್ರಾಮುಖ್ಯತೆ ಕೊಡಲಾಗಿದೆ.

ಬಾಲ್ಯ ಸ್ನೇಹಿತರಾದ ಚೆನ್ನಸ್ವಾಮಿಕಂತರಾಯ, ಕಂದಸ್ವಾಮಿ ಕಾಳಿಂಗರಾಯರು ತಮ್ಮ ಹಳೆಯ ಸ್ನೇಹವನ್ನು ಶಾಶ್ವತಗೊಳಿಸಲು ಪ್ರಯತ್ನಿಸಿ, ಕಂದಸ್ವಾಮಿಯ ಮಗ ಕನಕಸಭನಿಗೆ ಪಂಜರಾಯನ ಮಗಳು ಲಕ್ಷ್ಮಿಯನ್ನು ಕೊಟ್ಟು ಜಾತಕದ ದೋಷವು ಇದ್ದರೂ ಅದನ್ನು ಮರೆಮಾಚಿ ಮದುವೆ ಮಾಡುವರು. ಇದರಿಂದ ಮುಂದೆ ಉಂಟಾಗುವ ದುಃಖ ಸನ್ನಿವೇಶಗಳು ಬಂದು ಕೊನೆಯಲ್ಲಿ ಸುಗಮಗೊಳ್ಳುವುದು. ಇಷ್ಟೇ ಚಿತ್ರದ ಕಥಾವಸ್ತು.

ಇಂತಹ ಉತ್ತಮ ಕನ್ನಡ ಚಿತ್ರಗಳು ಕರ್ನಾಟಕದಲ್ಲಿ ಇನ್ನೂ ಹೆಚ್ಚಾಗಿ ಬರಲೆಂದು ಆಶಿಸುತ್ತೇವೆ.

ಕಾಂ|| ಮಹಾಧಿವೇಶನ

ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನವು ಮುಂದಿನ ಮಾಹೆ ೨೨ ಮತ್ತು ೨೩ರಲ್ಲಿ ನಡೆಯುವ ಬದಲು ೨೩ ಮತ್ತು ೨೪ ರಲ್ಲಿ ನಡೆಯುತ್ತದೆ.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೦೦

೨೨-೧೨-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ವಿಶ್ವವಿದ್ಯಾನಿಲಯಗಳು ಶಾಂತಿ ಮತ್ತು ಶಿಸ್ತಿನ ನೆಲೆಆಗಿರಬೇಕು

ಸದ್ಯಕ್ಕೆ ಇಂಗ್ಲೀಷ್ ಶಿಕ್ಷಣ ಮಾಧ್ಯಮವಾಗಿರಬೇಕು

ವಿಶ್ವವಿದ್ಯಾನಿಲಯಗಳ ಸಮ್ಮೇಳನದಲ್ಲಿ ರಾಜಪ್ರಮುಖರ ಸಲಹೆ

ಮೈಸೂರು ೨೨

ವಿದ್ಯಾಬೋಧನೆ, ಪರೀಕ್ಷೆಗಳು, ಸಂಶೋಧನೆ, ನಡವಳಿಕೆ ಮತ್ತು ನಡತೆಯಲ್ಲಿ ಉತ್ತಮ ದರ್ಜೆಯನ್ನು ಕಾಪಾಡಿಕೊಂಡು ಬರುವುದು ವಿಶ್ವವಿದ್ಯಾನಿಲಯಗಳ ಪ್ರಥಮ ಕರ್ತವ್ಯ. ವಿಶ್ವವಿದ್ಯಾನಿಲಯಗಳಿಂದ ಹೊರಬೀಳುವ ಪದವೀಧರರು ಯಾವರೀತಿ ಇದ್ದಾರೆ. ಜ್ಞಾನ ಮತ್ತು ತಿಳುವಳಿಕೆಯ ಹಾದಿಯಲ್ಲಿ ಎಷ್ಟು ಪ್ರಗತಿ ಸಾಧಿಸಿದೆ ಎಂಬುದರ ಮೇಲೆ ವಿಶ್ವವಿದ್ಯಾನಿಲಯಗಳ ಜಯಾಪಜಯಗಳನ್ನು ಅರಿತುಕೊಳ್ಳಬೇಕಾಗಿದೆ. ಈಗಿನ ವಿಶ್ವವಿದ್ಯಾನಿಲಯ ಶಿಕ್ಷಣದಲ್ಲಿ ಅಷ್ಟು ಪ್ರಗತಿ ಕಾಣಬರುತ್ತಿಲ್ಲ.

ವಿಶ್ವವಿದ್ಯಾನಿಲಯಗಳಲ್ಲಿ ಮಟ್ಟವು ಉತ್ತಮವಾಗದ ಹೊರತೂ ನಮ್ಮ ಪದವೀಧರರು ತಮ್ಮ ನಿತ್ಯಜೀವನದಲ್ಲಿ ಜಯಗಳಿಸಲಾರರು-ಎಂದು ಶ್ರೀಮನ್ಮಹಾರಾಜರು ಈದಿನ ಅಂತರ ವಿಶ್ವವಿದ್ಯಾನಿಲಯಗಳ ಸಮ್ಮೇಳನವನ್ನು ಉದ್ಘಾಟಿಸುತ್ತಾ ತಿಳಿಸಿದರು.

ಶ್ರೀಮನ್ಮಹಾರಾಜರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಈ ರೀತಿ ನುಡಿದರು:—

ವಿಶ್ವವಿದ್ಯಾನಿಲಯಗಳ ಬಗ್ಗೆ ಒಳ್ಳೆಯ ವರದಿಗಳಿದ್ದಾಗ್ಯೂ ಅತೃಪ್ತಿಯು ಕಾಣಬರುತ್ತಲೇ ಇದೆ.

ವಿಶ್ವವಿದ್ಯಾನಿಲಯದ ಕಮಿಷನ್, ಸೆಕೆಂಡರಿ ವಿದ್ಯಾಭ್ಯಾಸ ಕಮಿಷನ್, ಯೂನಿಯನ್ ಪಬ್ಲಿಕ್ ಸರ್ವಿಸ್ ಕಮಿಷನ್ ಮುಂತಾದುವು ಈಗಿನ ವಿದ್ಯಾಬೋಧನೆ ಮತ್ತು ಪರೀಕ್ಷೆಗಳ ಮಟ್ಟವು ಕಡಮೆಯಾಗಿದೆ ಮತ್ತು ಇನ್ನೂ ಕೀಳು ವ್ಯವಸ್ಥೆಗೆ ಬರುವ ಸಂಭವವಿದೆಯೆಂದು ಹೇಳುತ್ತಿವೆ.

ಬ್ರಿಟಿಷ್ ವಿಶ್ವವಿದ್ಯಾನಿಲಯ ವೆಟ್ರಿಕ್ಯುಲೇಷನ್ ನವರಿಗೆ ಸಹ ನಮ್ಮ ಪದವೀಧರರು ಸಮನಾಗಿಲ್ಲವೆಂದು ಹೇಳಲಾಗುತ್ತಿದೆ. ಈಗ ನಮ್ಮ ಮುಂದಿರುವ ಪ್ರಶ್ನೆಯು ಅಭಿವೃದ್ಧಿ ಕಾರ್ಯವಲ್ಲ. ಹಲವಾರು ಶತಮಾನಗಳಿಂದ ನಾವು ಗಳಿಸಿರುವುದನ್ನು ಉದ್ಧರಿಸಬೇಕಾದುದು.

ವಿಶ್ವವಿದ್ಯಾನಿಲಯ ಶಿಕ್ಷಣಕ್ಕೆ ಮುಂಚೆಯೇ ಈ ಕೆಡುಕು ಪ್ರಾರಂಭವಾಗುತ್ತಿದೆ. ನಮ್ಮ ಶಾಲಾ ಕಾಲೇಜುಗಳು ವಿದ್ಯಾಭ್ಯಾಸ ಸೌಕರ್ಯ, ಕಟ್ಟಡ, ಸಿಬ್ಬಂದಿ ಮುಂತಾದುವನ್ನು ಹೊಂದಿರುವುದಿಲ್ಲ. ಶಾಲಾಪ್ರವೇಶ, ಆಡಳಿತ, ಸಿಬ್ಬಂದಿ ನೇಮಕ ಮುಂತಾದುವುಗಳಲ್ಲಿ ಸ್ವತಂತ್ರ ಹೊಂದಿಲ್ಲ. ಆದರೆ ಈಚೆಗೆ ವಿಶ್ವವಿದ್ಯಾನಿಲಯಗಳ "ಗ್ರಾಂಟ್ಸ್ ಕಮೀಷನ್" ರಚನೆ ಯಾಗಲಿರುವುದರಿಂದ ಅನೇಕ ಈ ಕೊಂದರೆಗಳು ತಪ್ಪುತವೆ.

ಶಿಕ್ಷಣ ಮಾಧ್ಯಮ

ವಿಶ್ವವಿದ್ಯಾನಿಲಯಗಳ ಶಿಕ್ಷಣ ಮಾಧ್ಯಮ ವಿಷಯ ಇತ್ತೀಚೆಗೆ ಎಲ್ಲರ ಗಮನವನ್ನು ಸೆಳೆದಿದೆ.

ಈ ವಿಷಯದಲ್ಲಿ ಅನೇಕ ಭಿನ್ನಾಭಿಪ್ರಾಯಗಳು ತಲೆದೋರಿವೆ. ರಾಜಕೀಯ ಕ್ಷೇತ್ರದಲ್ಲಿ ರಾಷ್ಟ್ರೀಯ ಭಾಷೆಯೊಂದನ್ನು ಇಂಗ್ಲೀಷ್ ಭಾಷೆಯ ಸ್ಥಾನಕ್ಕೆ ತರಬೇಕೆಂದು, ಇಂಗ್ಲೀಷ್ ಭಾಷೆಯು ಪರಕೀಯವಾದುದಾಗಿ ರಾಷ್ಟ್ರೀಯ ಸಾಂಸ್ಕೃತಿಗೆ ಧಕ್ಕೆ ತರುವುದೆಂಬ ಅಭಿಪ್ರಾಯ ಮೂಡಿತು. ಆದರೆ ಭಾರತದ ವಿಸ್ತೀರ್ಣ, ದೇಶದಲ್ಲಿರುವ ವಿವಿಧ ಭಾಷೆಗಳು, ಇಂಗ್ಲೀಷ್ ಭಾಷೆಗೆ ಸರಿಸಮಾನವಾದಷ್ಟು ಸೌಕರ್ಯಗಳನ್ನು ಕೊಡುವ ಮತ್ತಾವ ಭಾಷೆಯೂ ಇಲ್ಲದಿರುವುದು ವಿಜ್ಞಾನ ಮುಂತಾದುವುಗಳಲ್ಲಿ ಪ್ರಾದೇಶಿಕ ಭಾಷೆಯ ಪುಸ್ತಕಗಳು ಅಭಾವ, ಭಾರತೀಯ ಭಾಷೆಗಳಲ್ಲಿ ಸಮನಾದ ಪದಗಳು ಇಲ್ಲದಿರುವುದು ಎಲ್ಲ ವೂ ಕಾಣಬಂದಿದೆ. ಪ್ರೌಢ ಶಿಕ್ಷಣದಲ್ಲಿ ಇಂಗ್ಲೀಷ್ ಭಾಷೆಯನ್ನು ಉಳಿಸಿಕೊಳ್ಳುವ ಅವಶ್ಯತೆ ಮತ್ತು ವಿಜ್ಞಾನ ಮತ್ತು ಅದಕ್ಕೆ ಸಂಬಂಧಪಟ್ಟ ಸಾಹಿತ್ಯದಲ್ಲಿ ನಾವು ಹಿಂದುಳಿದಿರುವುದು ಎಲ್ಲರ ಗಮನವನ್ನು ಸೆಳೆದಿದೆ. ರಾಷ್ಟ್ರೀಯ ಭಾಷೆಯು ಭಾರತ ನ್ಯಾಯಾಂಗ ಮತ್ತು ರಾಜ್ಯಾಂಗದಲ್ಲಿ ಜಾರಿಗೆ ಬಂದರೂ ಸ್ವಲ್ಪಕಾಲದವರೆಗೆ ಇಂಗ್ಲೀಷ್ ಭಾಷೆಯನ್ನು ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಮಾಧ್ಯಮವಾಗಿ ಮುಂದುವರಿಯಲೇ ಬೇಕಾಗಿದೆ.

ವಿಶ್ವವಿದ್ಯಾನಿಲಯಗಳಲ್ಲಿ ಶಿಸ್ತು

ವಿಶ್ವವಿದ್ಯಾನಿಲಯ ಆಡಳಿತಗಾರರು, ಸರ್ಕಾರಗಳು ಮತ್ತು ಎಲ್ಲರೂ ವಿಶೇಷವಾಗಿ ವಿದ್ಯಾರ್ಥಿಗಳ ಶಿಸ್ತಿನ ಬಗ್ಗೆ ಖಿನ್ನಮನಸ್ಕರಾಗಿದ್ದಾರೆ. ಸ್ವಾತಂತ್ರ ಹೋರಾಟದ ಅಸ್ತ್ರಗಳಾಗಿದ್ದ ಮುಷ್ಕರಗಳು, ಅಸಹಕಾರ ಚಳುವಳಿ, ಕಾನೂನು ಭಂಗ ಚಳುವಳಿ ಮುಂತಾದವೆಲ್ಲವೂ ರಾಷ್ಟ್ರ ಸ್ವಾತಂತ್ರವಾದ ಮೇಲೆ ವಿದ್ಯಾರ್ಥಿಗಳ ಆಯುಧಗಳಾಗಿವೆ.

ವಿದ್ಯಾರ್ಥಿಗಳು ಪಕ್ಷದ ಮತ್ತು ಕೋಮುವಾರು ನಾಯಕರ ಕೈಗೆ ಬಿದ್ದು ಹಾಳಾಗುತ್ತಲಿದ್ದಾರೆ. ಮುಷ್ಕರ, ಹರತಾಳ ಮುಂತಾದುವು ವಿದ್ಯಾರ್ಜನೆಯ ಕ್ರಮವಲ್ಲ ವಿದ್ಯಾರ್ಥಿಗಳ ಮತ್ತು ಅಧಿಕಾರಿ ವರ್ಗದವರ ಭಿನ್ನತೆಗಳೇನಿದ್ದರೂ ಸೌಹಾರ್ದಯುತವಾಗಿ ಪ್ರೀತಿ ವಿಶ್ವಾಸಗಳಿಂದ ಬಗೆಹರಿಯಬೇಕು ಅವು ಶಾಂತಿ ಮತ್ತು ಶಿಸ್ತಿನ ನೆಲೆವೀಡಾಗಿರಬೇಕು. ನಮ್ಮ ವಿದ್ಯಾರ್ಥಿಗಳು ನಮ್ಮ ಮುಂದಿನ ದೇಶ ನಿರ್ಮಾಪಕರು ಆದರೆ ಅಶಿಸ್ತಿನಿಂದ ಅವರ ವಿಷಯದಲ್ಲಿ ನಮಗಿರುವ ಆಶೋತ್ತರಗಳೆಲ್ಲವೂ ಮಾಯವಾಗುತ್ತಿವೆ. ಪ್ರತಿಯೊಬ್ಬ ವಿದ್ಯಾರ್ಥಿಯು ಸತ್ಯವಂತನಾಗಿ, ಬುದ್ಧಿ ಕೌಶಲ್ಯ ಸಾಮಾಜಿಕ ಕ್ಷೇತ್ರದಲ್ಲಿ ಉತ್ತಮರೀತಿ ನಡೆದುಕೊಳ್ಳುವಂತಹ ಲಕ್ಷಣಗಳನ್ನು ಕಲಿಯಬೇಕಾದುದು ಅತ್ಯಗತ್ಯ.

ನಮ್ಮ ಸಂಸ್ಕೃತಿ, ತತ್ವಜ್ಞಾನ ಮತ್ತು ಧರ್ಮ ಮುಂತಾದುವುಗಳ ವಿಷಯದಲ್ಲಿ ತಕ್ಕ ತಿಳುವಳಿಕೆಯಿಲ್ಲದೆ ಉತ್ತಮ ವಿದ್ಯಾಭ್ಯಾಸದಲ್ಲಿ ಹೆಚ್ಚು ಪ್ರಗತಿ ಸಾಧಿಸಿಲ್ಲ. ರಾಷ್ಟ್ರದ ನೈತಿಕ ಮಟ್ಟವು ಸಹ ಇತ್ತೀಚೆಗೆ ಕುಂದುತ್ತಿದೆ ನಾವು ಸ್ವಪಕ್ಷಪಾತ, ದುರಾಸೆ, ದ್ವೇಷಾ ಸೂಯೆಗಳ ಹಿಡಿತದಲ್ಲಿ ಸಿಕ್ಕಿಬಿದ್ದಿದ್ದೇವೆ. ವಿಶ್ವವಿದ್ಯಾನಿಲಯಗಳು ಉತ್ತಮ ನಡವಳಿಕೆ, ದೈವತ್ವ ಆಚರಣೆ ಮತ್ತು ಸಾಮಾಜಿಕ ಜವಾಬ್ದಾರಿಗಳ ಮಾತೃಸ್ಥಾನವಾಗಿರಬೇಕು ಅಲ್ಲಿ ಸಂಖ್ಯೆಗಿಂತ ಗುಣಕ್ಕೆ ಹೆಚ್ಚು ಪ್ರಾಶಸ್ತ್ಯ ವಿರಬೇಕು. ಈ ವಿಷಯದಲ್ಲಿ ಅಲ್ಲಿಯ ಅಧ್ಯಾಪಕರು ಪ್ರಮುಖ ಪಾತ್ರವನ್ನು ವಹಿಸಿ ಮಾರ್ಗದರ್ಶನ ಮಾಡಬೇಕಾಗಿದೆ.

ಇಲ್ಲಿ ಸೇರಲಿರುವ ವಿದ್ಯಾನಿಲಯಗಳ ಸಮ್ಮೇಳನವು ಈ ವಿಷಯಗಳನ್ನೆಲ್ಲಾ ಕೂಲಂಕುಶವಾಗಿ ಪರಿಶೀಲಿಸಿ ವಿಶ್ವದ ಪ್ರಗತಿಗೆ ಹಾದಿಯನ್ನು ಕಲ್ಪಿಸುವುದೆಂದು ತಾವು ಆಶಿಸುವುದಾಗಿ ಶ್ರೀಮನ್ಮಹಾರಾಜರು ಕೊನೆಯಲ್ಲಿ ಹಾರೈಸಿ ಸಮ್ಮೇಳನ ಉದ್ಘಾಟನೆಯನ್ನು ನಡೆಸಿದರು.

ಅಧ್ಯಕ್ಷರ ಭಾಷಣ

ರಂಗೂನ್ ವಿಶ್ವವಿದ್ಯಾನಿಲಯದ ರೆಕ್ಟರ್ ಡಾ|| ಟಂಗ್ ಆಂಗ್‌ರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಬರ್ಮಾ ಮತ್ತು ಭಾರತ ದೇಶಗಳಿಗೆ ಪ್ರಾಚೀನ ಕಾಲದಿಂದಲೂ ಸೌಹಾರ್ದ ಮತ್ತು ಸಾಂಸ್ಕೃತಿಕ ಸಂಪರ್ಕವಿರುವುದನ್ನು ವಿವರಿಸಿ, ಬರ್ಮಾ ದೇಶವು ೧೯೪೭ ರಲ್ಲಿ ಸ್ವಾತಂತ್ರವಾದರೂ ಭಾರತದ ವಿಶ್ವವಿದ್ಯಾನಿಲಯಗಳ ಬೋರ್ಡಿನಲ್ಲಿ ಸದಸ್ಯರಾಗಿರುವುದನ್ನು ತಿಳಿಸಿದರು. ಈಗ ವಿಶ್ವವಿದ್ಯಾನಿಲಯಗಳಲ್ಲಿ ಒದಗಿರುವ ಎರಡು ಮುಖ್ಯ ಸಮಸ್ಯೆಗಳಾವುವೆಂದರೆ ಅವರ ಉನ್ನತ ಮಟ್ಟವನ್ನು ಕಾಪಾಡುವುದು ಮತ್ತು ವಿದ್ಯಾರ್ಥಿಗಳಲ್ಲಿ ಉಂಟಾಗಿರುವ ಅಶಾಂತಿ ಮತ್ತು ಅಶಿಸ್ತು. ಹಿಂದಿನ ಕಾಲದಂತೆ ಯಾರ ಸಂಪರ್ಕವೂ ಇಲ್ಲದೆ ಬೌದ್ಧ ವಿಹಾರಗಳಂತೆ ಈಗ ವಿಶ್ವವಿದ್ಯಾನಿಲಯಗಳು ಇರಲು ಸಾಧ್ಯವಿಲ್ಲ. ಹೆಚ್ಚು ಹೆಚ್ಚಾಗಿ ಸಾಮಾನ್ಯ ಜನರ ಸಂಪರ್ಕ ಇರಲೇಬೇಕಾಗಿದೆ. ಈಗ ವಿಶ್ವವಿದ್ಯಾನಿಲಯಗಳು ಎರಡು ಬಲಪ್ರದವಾದ ಸೆಕೆಂಡರಿ ಶಾಲೆಗಳು ಮತ್ತು ಪಬ್ಲಿಕ್ ಸರ್ವೀಸ್ ಕಮೀಷನ್‌ಗಳಿಂದ ಎಳೆಯಲ್ಪಡುತ್ತಿವೆ. ಆದ್ದರಿಂದ ಉತ್ತಮ ಮಟ್ಟವನ್ನು ರಕ್ಷಿಸುವುದು ಕಷ್ಟವಾಗಿದೆ. ವಿದ್ಯಾರ್ಥಿಗಳು ಅಶಾಂತಿ ಮತ್ತು ಅಶಿಸ್ತು ಹೀಗೆ ಮುಂದುವರೆದರೆ ದೇಶಕ್ಕೆ ಹಾನಿ ಉಂಟಾಗುವುದು ಹಿಂದೆ ಸ್ವಾತಂತ್ರ ಹೋರಾಟದಲ್ಲಿ ಯುವಕರು ಈರೀತಿ ಮುಷ್ಕರ ಮುಂತಾದ ಚಳುವಳಿ ನಡೆಸಿದ್ದನ್ನು ಈಗ ನಡೆಸಿಕೊಂಡು ಬರಬಾರದು ಅದನ್ನು ಅಡಗಿಸಲು ಉಪಾಧ್ಯಾಯರುಗಳು ಸೂಕ್ತ ಕ್ರಮ ಕೈಗೊಳ್ಳಬೇಕು. ಕಾಲಕ್ರಮೇಣ ಇವೆಲ್ಲವೂ ಪರಿಹೋಗುವುದು-ಎಂದು ತಿಳಿಸಿದರು.

ಮದರಾಸ್ ವಿಶ್ವವಿದ್ಯಾನಿಲಯದ ಉಪಸ್ಥಾನಪತಿ ಡಾ|| ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರು ವಂದನೆಯನ್ನು ಅರ್ಪಿಸಿ, ಮೈಸೂರು ಶ್ರೀಮನ್ಮಹಾರಾಜರ ಬಗ್ಗೆ ಪ್ರಶಂಸೆ ಮಾಡಿದರು ಇತ್ತೀಚೆಗೆ ವಿಶ್ವವಿದ್ಯಾನಿಲಯಗಳ ವಿಚಾರದಲ್ಲಿ ಸಂಬಂಧಪಡದೆ ಇದ್ದವರಿಂದ ಟೀಕೆ ಮತ್ತು ತಲೆಹಾಕುವುದು ಹೆಚ್ಚುತ್ತಿರುವುದನ್ನು ಖಂಡಿಸಿದರು.

ಪ್ರಾರಂಭದಲ್ಲಿ ಮೈಸೂರಿನ ಪರವಾಗಿ ಉಪಸ್ಥಾನಪತಿ ಡಾ|| ಮಂಜುನಾಥರವರು ಸ್ವಾಗತ ಬಯಸಿದರು.

ಬೆಂಗಳೂರು ಕಾರ್ಪೊರೇಷನ್ ಚುನಾವಣೆ

ಕಾಂಗ್ರೆಸ್ಸಿಗೆ ಬಹುಮತ

ಬೆಂಗಳೂರು ೨೨

ಮೊನ್ನೆಯದಿನ ಬೆಂಗಳೂರಿನಲ್ಲಿ ನಡೆದ ಕಾರ್ಪೊರೇಷನ್ ಚುನಾವಣೆಯ ಎಣಿಕೆಯು ನಿನ್ನೆಯದಿನ ನಡೆಯಿತು. ಪುರಸಭೆಯ ೭೦ ಸ್ಥಾನಗಳ ಪೈಕಿ ಕಾಂಗ್ರೆಸ್ ೪೩ ಸ್ಥಾನಗಳನ್ನು ಗಳಿಸಿದೆ. ಪ್ರಜಾಸೋಷಲಿಸ್ಟ್ ಪಕ್ಷದವರು ೯, ಸಿ. ಯು. ಎಫ್‌ನವರು ೬, ಮತ್ತು ಸ್ವತಂತ್ರರು ೧೨ ಸ್ಥಾನಗಳನ್ನು ಪಡೆದಿದ್ದಾರೆ

ನಿಮ್ನವರ್ಗದವರ ವಸತಿಗೆ ನೆರವು

ನಿಮ್ನವರ್ಗದವರ ವಸತಿ ಸೌಕರ್ಯಕ್ಕಾಗಿ ಸರ್ಕಾರದವರು ಬಳ್ಳಾರಿ ಜಿಲ್ಲೆಗೆ ೩೫ ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದಾರೆ.

ಡಾ॥ ಮುಸಾದಿಕ್‌ರವರಿಗೆ ೩ ವರ್ಷ ಏಕಾಂತ ಕಾರಾಗೃಹ

ದೇಶದ್ರೋಹ ಅಪಾದನೆ ಮೇಲೆ ಮಿಲಿಟರಿ ಕೋರ್ಟಿನ ಶಿಕ್ಷೆ

ದೇಶದ್ರೋಹದ ಅಪಾದನೆ ಮೇಲೆ ಪರ್ಶಿಯಾದ ಮಾಜಿ ಪ್ರಧಾನಿ ಡಾ॥ ಮುಸಾದಿಕ್‌ರವರಿಗೆ ಅಲ್ಲಿಯ ವಿಶೇಷ ಮಿಲಿಟರಿ ನ್ಯಾಯಾಲಯವು ೩ ವರ್ಷ ಕಾಲ ಏಕಾಂತ ವಾಸ ಕಾರಾಗೃಹ ಶಿಕ್ಷೆಯನ್ನು ವಿಧಿಸಿದೆ.

ಡಾ॥ ಮುಸಾದಿಕ್‌ರವರ ವಯಸ್ಸು, ಅವರು ದೇಶಕ್ಕೆ ಹಿಂದೆ ಸಲ್ಲಿಸಿದ ಸೇವೆ ಮತ್ತು ಷಾ ರವರ ಕ್ಷಮಾ ಭಿಕ್ಷೆ ಇವುಗಳನ್ನೆಲ್ಲಾ ಪರಿಗಣಿಸಿ, ಅವರಿಗೆ ಅತ್ಯಲ್ಪ ಶಿಕ್ಷೆಯನ್ನು ವಿಧಿಸಲಾಗಿದೆ ಎಂದು ನ್ಯಾಯಾಲಯವು ತನ್ನ ತೀರ್ಪಿನಲ್ಲಿ ತಿಳಿಸಿದೆ.

ವಿಶ್ವವಿದ್ಯಾನಿಲಯಗಳಿಗೆ ಸ್ವಯಮಧಿಕಾರವಿರಬೇಕು

ವಿಶ್ವವಿದ್ಯಾನಿಲಯಗಳು ಸ್ವಯಮಧಿಕಾರವನ್ನು ಹೊಂದಿರಬೇಕು. ಅವುಗಳ ಆಡಳಿತದಲ್ಲಿ ಮಧ್ಯಮ ಪ್ರವೇಶವಿರಲೇ ಬಾರದು. ಆಡಳಿತವರ್ಗದಲ್ಲಿ ಸಚಿವರಿರಬಾರದು ಅಲ್ಲದೆ ವಿಶ್ವವಿದ್ಯಾನಿಲಯ ಉಪಸ್ಥಾನಪತಿಗಳು ಶಿಕ್ಷಣ ಶಾಸ್ತ್ರಜ್ಞರಾಗಿರಬೇಕು ಎಂದ, ಬೊಂಬಾಯಿನ ಮಾಜಿ ಗೌರ್‍ನರ ರಾಜಾ ಮಹಾರಾಜ ಸಿಂಗ್‌ರವರು ಲಕ್ನೋ ಮತ್ತು ಅಲಹಾಬಾದ್ ವಿಶ್ವವಿದ್ಯಾನಿಲಯ ಉಪಾಧ್ಯಾಯರ ಸಮ್ಮೇಳನದಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ದಾನ

ನಂಜನಗೂಡು ತಾಲ್ಲೂಕು ದೇವನೂರು ಗ್ರಾಮದ ಶ್ರೀ ಚನ್ನವೀರಪ್ಪನವರ ಮಕ್ಕಳು ಶ್ರೀ ಶಿವಲಿಂಗಪ್ಪನವರು ಮತ್ತು ಇದೇ ಗ್ರಾಮದ ಶ್ರೀ ಗುರುಲಿಂಗಯ್ಯನವರ ಪುತ್ರಿ ಶ್ರೀಮತಿ ಶಿವಮ್ಮ ಇವರ ಶುಭಕಾರ್ಯದಲ್ಲಿ ಮನೆಕಡೆಯಿಂದ ೧೦ ರೂಪಾಯಿಗಳನ್ನೂ ವಧುವಿನ ಕಡೆಯಿಂದ ೫ ರೂಪಾಯಿಗಳನ್ನೂ ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿ ನಿಲಯಕ್ಕೆ ದಾನಮಾಡಿದ್ದಾರೆ.

ಡಕಾಯಿತ ಭೂಪತ್ ಅಮೀರ್ ಯೂಸೂಫ್ ಆದ

ಭಾರತದ ಭಾರಿ ಡಕಾಯಿತ ಭೂಪತ್‌ನು ಒಂದು ವರ್ಷದ ಹಿಂದೆ ಭಾರತವನ್ನು ಬಿಟ್ಟು ಪಾಕೀಸ್ತಾನವನ್ನು ಸೇರಿದನಷ್ಟೆ. ಅಲ್ಲಿಗೆ ರಹದಾರಿ ಇಲ್ಲದೆ ಪ್ರವೇಶಿಸಿದನೆಂಬ ಅಪಾದನೆಯಮೇಲೆ ಜೈಲುವಾಸವನ್ನು ಅನುಭವಿಸಿದ್ದಾನೆ ಈಗ ಅವನು ಪಾಕೀಸ್ತಾನದಲ್ಲೇ ನೆಲೆಸಲು ತೀರ್ಮಾನಿಸಿ, ಮುಸ್ಲಿಂ ಜಾತಿಗೆ ಸೇರಿ ಅಮೀರ್ ಯೂಸೂಫ್ ಎಂಬ ಹೆಸರನ್ನು ಇಟ್ಟುಕೊಂಡಿದ್ದಾನೆ.

ನಿವಾರಕ ಬಂಧನ ಶಾಸನ ಮುಂದುವರೆಯಬೇಕು

ದೇಶದಲ್ಲಿ ಜಾರಿಗೆ ತಂದಿರುವ ನಿವಾರಕ ಬಂಧನ ಶಾಸನವು ಇಲ್ಲಿಯವರೆಗೆ ಮಾಡಿರುವ ಕೆಲಸದ ವರದಿಯನ್ನು ಕೇಂದ್ರ ಗೃಹಸಚಿವ ಡಾ॥ ಖಟ್ಜುರವರು ಪ್ರಜಾಸಭೆಯ ಮುಂದೆ ನಿನ್ನೆಯದಿನ ಮಂಡಿಸಿದರು. ಅವರ ಮೇಲೆ ಚರ್ಚೆಗಳು ಪ್ರಾರಂಭವಾಗಿವೆ. ಈದಿನವೂ ಚರ್ಚೆ ಮುಂದುವರಿಯುತ್ತಿದೆ.

ಈ ಶಾಸನವನ್ನು ಜಾರಿಗೆ ತಂದ ಉದ್ದೇಶವನ್ನು ಸಾಧಿಸಲಾಗಿದೆ: ದೇಶದಲ್ಲಿ ಈಗಿನ ಸರ್ಕಾರವಿರುವವರೆಗೆ ಹಿಂಸಾ ಪ್ರಚೋದನೆಗೆ ಅವಕಾಶವನ್ನು ಕೊಡುವುದಿಲ್ಲವೆಂದು ಗೃಹಸಚಿವರು ತಿಳಿಸುತ್ತಾ ಈ ಮಸೂದೆಯನ್ನು ಇನ್ನೂ ಮುಂದುವರಿಸಬೇಕೆಂದು ಹೇಳಿ ಸಭೆಯಲ್ಲಿ ಒಂದು ನಿರ್ಣಯವನ್ನು ಮಂಡಿಸಿದರು.

ಎ. ಪಿ. ಸಿ. ಸಿ. ಅಧ್ಯಕ್ಷರ ರಾಜೀನಾಮೆ

ಆಂಧ್ರಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿರುವ ಅಲ್ಲಿಯ ಉಪ ಮುಖ್ಯಮಂತ್ರಿ ಶ್ರೀ ಸಂಜೀವರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ ರಾಜೀನಾಮೆ ಕೊಡುವುದಾಗಿ ತಿಳಿಸಿದ್ದಾರೆ. ತಾವು ಉಪ ಮುಖ್ಯಮಂತ್ರಿ, ಶಾಸನಸಭೆಯಲ್ಲಿ ಪಕ್ಷದ ನಾಯಕರಾಗಿರುವುದರಿಂದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಮುಂದುವರೆಯುವುದಿಲ್ಲವೆಂದೂ ಇದೇ ೨೭ ನೇ ತಾರೀಖು ನಡೆಯಲಿರುವ ಕಾಂಗ್ರೆಸ್ ಸಭೆಯಲ್ಲಿ ತಮ್ಮ ರಾಜೀನಾಮೆ ಒಪ್ಪಿಸುವುದಾಗಿ ಅವರು ಹೇಳಿದ್ದಾರೆ

-ಮೈಸೂರು ಪೇಟೆಧಾರಣೆ-

ತಾರೀಖು ೨೧—೧೨—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—	೨೨ ೧೦
ಎಳ್ಳು	—	—
ಹುಳಿ	೩೫—೧೨	೩೬—
ಹುಚ್ಚೆಳ್ಳು	೩೦—೧೦	೪೧—೬
ಬೆಲ್ಲ	—	—
ಹುರಳಿ	೨೬—೧೪	೨೯—೪
ಹೆಸರು	೨೫—	೪೦—೨
ಅವರೆ	—	—
ಅಲಸಂದೆ	೩೪—	೪೮—೧೨
ಉದ್ದು	೫೬—೨	—
ಹೊಂಗೆಬೀಜ	—	—
ಮೆಣಸಿನಕಾಯಿ	೧೭—೧೦	೩೪—೧೨
ಸೀಗೆಕಾಯಿ	೬—೮	—
ಹುಣಸೇಹಣ್ಣು	೭—	—
ತೆಂಗಿನಕಾಯಿ	೧೯೧—	೨೮೪—

ಭಾರತ ಸರ್ಕಾರಕ್ಕೆ ಪಾಕೀಸ್ತಾನದ ಪ್ರತಿಭಟನೆ

ಭಾರತದಲ್ಲಿ ಕಾಂಗ್ರೆಸ್ ಅಪಪ್ರಚಾರಕ್ಕೆ ತೊಡಗಿದೆಯೆಂಬ ಆರೋಪಣೆ

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವಿನ ಸೈನ್ಯ ಒಪ್ಪಂದ ವಿಷಯದಲ್ಲಿ ವಿರೋಧವಾಗಿ ಕಾಂಗ್ರೆಸ್ ಸಂಸ್ಥೆಯು ಪ್ರಚಾರವನ್ನು ಕೈಗೊಂಡಿದೆ ಎಂದು ಪಾಕೀಸ್ತಾನವು ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಇದನ್ನು ಭಾರತದ ವಿದೇಶಾಂಗ ಕಛೇರಿಯ ಗಮನಕ್ಕೆ ತರುವಂತೆ ಭಾರತದಲ್ಲಿರುವ ತನ್ನ ದೇಶದ ಹೈಕಮೀಷನರಿಗೆ ಸೂಚನೆಯನ್ನು ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಪಾಕೀಸ್ತಾನದಲ್ಲಿ ಅಮೆರಿಕಾಕ್ಕೆ ಸೈನ್ಯ ನೆಲೆಗಳನ್ನು ಕೊಡುವ ವಿಷಯದಲ್ಲಿ ಸಂಧಾನ, ಮಾತುಕತೆಗಳು ಏನೂ ನಡೆದಿಲ್ಲ ಇದೆಲ್ಲಾ ಸುಳ್ಳು ಭಾರತ ಅಥವ ಮತ್ಯಾವ ರಾಷ್ಟ್ರದ ಮೇಲೆ ಆಕ್ರಮಣಕ್ಕಾಗಿ ಪಾಕೀಸ್ತಾನವು ತನ್ನ ಸೈನ್ಯ ವಿಸ್ತರಣಾಕಾರ್ಯದಲ್ಲಿ ತೊಡಗಿಲ್ಲ. ಭಾರತ ಕಾಂಗ್ರೆಸ್ಸಿನ ಪ್ರಚಾರವು ಪಾಕ್ ಸರ್ಕಾರದ ಒಳಾಡಳಿತದಲ್ಲಿ ನೀತಿಯಲ್ಲಿ ಪ್ರವೇಶಿಸಿದಂತಾಗಿದೆ. ತನ್ನ ರಕ್ಷಣೆ ಮತ್ತು ರಾಜಕೀಯ, ಆರ್ಥಿಕ ಮುಂತಾದ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಸ್ವತಂತ್ರ ರಾಷ್ಟ್ರವಾದ ಪಾಕೀಸ್ತಾನವು ತನ್ನಿಷ್ಟ ಬಂದಂತೆ ವರ್ತಿಸಲು ಸರ್ವಾಧಿಕಾರವನ್ನು ಪಡೆದಿದೆ ಎಂದು ಈ ಸೂಚನೆಯಲ್ಲಿ ಪಾಕೀಸ್ತಾನವು ತಿಳಿಸಿರುವುದಾಗಿ ಗೊತ್ತಾಗಿದೆ

ಪೆಪ್ಸುವಿನಲ್ಲಿ ನಡೆಯಲಿರುವ ಚುನಾವಣೆಗಳಲ್ಲಿ ಕಾಂಗ್ರೆಸ್ ಪ್ರಚಾರ ಕೈಗೊಂಡಿದ್ದ ಕೇಂದ್ರ ಸಂಚಾರ ಶಾಖಾ ಸಚಿವ ಶ್ರೀ ಜಗಜೀವನರಾಂರವರು ಮಾತನಾಡುತ್ತಾ ಅಮೆರಿಕಾ-ಪಾಕ್ ಮಿಲಿಟರಿ ಒಪ್ಪಂದದಿಂದ ಭಾರತ ಜನತೆಯ ಮೇಲೆ ಭಾರಿ ಜವಾಬ್ದಾರಿ ಬಿದ್ದಿದೆ.

ದೇಶದ ಭದ್ರತೆ ಮತ್ತು ಸ್ವಾತಂತ್ರ್ಯವನ್ನು ಕಾಪಾಡಬೇಕಾದರೆ ಸ್ಥಿರವಾದ ಸರ್ಕಾರವಿರಬೇಕು. ಕಾಂಗ್ರೆಸ್ಸಿಗೆ ಮಾತ್ರ ಈ ಕೆಲಸ ಸಾಧ್ಯವೆಂದು ಹೇಳಿದ್ದಾರೆ.

ದೆಹಲಿಯಲ್ಲಿ ಮೊನ್ನೆಯದಿನ ಒಂದು ಪ್ರಚಂಡ ಮೆರವಣಿಗೆಯು ನಡೆದು ಪಾಕ್-ಅಮೆರಿಕಾ ಸೈನ್ಯಒಪ್ಪಂದಕ್ಕೆ ತನ್ನ ವಿರೋಧವನ್ನು ಪ್ರದರ್ಶಿಸಿತು

ಅಂಚೆ ಇಲಾಖೆ ಸಪ್ತಾಹ

'ನಿಮ್ಮ ಗಿರಾಕಿಗಳನ್ನು ಅರಿತುಕೊಳ್ಳಿ' ಎಂಬ ಅಂಚೆ ಇಲಾಖೆಯ ಸಪ್ತಾಹವು ದೇಶಾದ್ಯಂತ ನಿನ್ನೆಯದಿನ ಪ್ರಾರಂಭವಾಯಿತು. ದೆಹಲಿಯಲ್ಲಿ ಇದನ್ನು ಕೇಂದ್ರ ಸಂಚಾರ ಶಾಖಾ ಸಚಿವ ಶ್ರೀ ಜಗಜೀವನರಾಂರವರು ಉದ್ಘಾಟಿಸಿದರು.

ರಾಷ್ಟ್ರೀಯ ಪ್ರತಿಭಟನಾ ದಿನ

ಪಾಕೀಸ್ತಾನ ಮತ್ತು ಅಮೆರಿಕ ಮಿಲಿಟರಿ ಒಪ್ಪಂದವನ್ನು ವಿರೋಧಿಸಿ ಭಾರತಾದ್ಯಂತ ಇದೇ ೨೭ನೇ ತಾರೀಖನ್ನು ರಾಷ್ಟ್ರೀಯ ಪ್ರತಿಭಟನಾ ದಿನವನ್ನಾಗಿ ಆಚರಿಸಬೇಕೆಂದು ಹಿಂದೂ ಮಹಾಸಭಾಧ್ಯಕ್ಷ ಶ್ರೀ ಎನ್. ಸಿ. ಛಟರ್ಜಿಯವರು ಎಲ್ಲಾ ಪ್ರದೇಶ ಮಹಾಸಭಾ ಸಮಿತಿಗಳಿಗೆ ಸೂಚನೆಯನ್ನು ಕೊಟ್ಟಿದ್ದಾರೆ.

ಕಾಶ್ಮೀರದ ಬಗ್ಗೆ ಪಾಕ್—ಭಾರತ ಮಾತುಕತೆ

ಕಾಶ್ಮೀರ ವಿಷಯದಲ್ಲಿ ಭಾರತ ಮತ್ತು ಪಾಕೀಸ್ತಾನ ಪ್ರಧಾನಿಗಳ ನಡುವೆ ನಡೆಯಲಿರುವ ಮಾತುಕತೆಗಳ ಪೂರ್ವಭಾವಿಯಾಗಿ ಉಭಯ ದೇಶಗಳ ಪರಿಣತ ಸಲಹಾಸಮಿತಿಯ ಸದಸ್ಯರ ನಡುವೆ ಸಮಾಲೋಚನೆಗಳು ನಿನ್ನೆಯದಿನ ದೆಹಲಿಯಲ್ಲಿ ಪ್ರಾರಂಭವಾದುವು.

ಬಿರುದು ಕೊಡುವ ಪದ್ಧತಿ ಪುನಃ ಜಾರಿಗೆ?

ಬೆಂಗಳೂರು ೨೨

ಉತ್ತಮ ಕಾರ್ಯಗಳನ್ನು ಎಸಗಿದವರಿಗೆ ಬಿರುದುಗಳನ್ನು ಕೊಡುವ ಪದ್ಧತಿ ಪುನಃ ಪ್ರಾರಂಭಿಸಲು ರಾಜ್ಯಾಂಗವನ್ನು ತಿದ್ದುಪಡಿ ಮಾಡಬೇಕೆಂದಿರುವುದಾಗಿ ಪ್ರಾಂತ್ಯ ಸರ್ಕಾರಗಳು ಈ ಬಗ್ಗೆ ಸಲಹೆ ಕೊಡಬೇಕೆಂದು ಕೇಂದ್ರವು ಕೇಳಿರುವುದಾಗಿ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ತಿಳಿಸಿದ್ದಾರೆ.

ಶಾಂತಿ ಸಮಿತಿಗಳಲ್ಲಿ ಕಾಂಗ್ರೆಸ್ಸಿಗರಿರಕೂಡದು

ಕಾಂಗ್ರೆಸ್ ಸದಸ್ಯರು, ಕಾಂಗ್ರೆಸ್ ಸಮಿತಿಗಳವರೂ ಎ. ಐ. ಸಿ. ಸಿ. ಅಂಗೀಕರಿಸದಿರುವ ಶಾಂತಿ ಸಮಿತಿಗಳಲ್ಲಿಯೂ ಭಾಗವಹಿಸಕೂಡದೆಂದು ಎ. ಪಿ. ಸಿ. ಸಿ. ಕಾರ್ಯದರ್ಶಿಯವರು ಪ್ರಕಟಿಸಿದ್ದಾರೆ.

ತಿರುವಾಂಕೂರ್-ಕೊಚ್ಚಿಯಲ್ಲಿ ಚುನಾವಣೆ

ತಿರುವಾಂಕೂರ್ ಮತ್ತು ಕೊಚ್ಚಿಯಲ್ಲಿ ಮಹಾ ಚುನಾವಣೆಗಳು ಫೆಬ್ರವರಿ ೧೫ನೇ ತಾರೀಖಿನಿಂದ ೨೬ನೇ ತಾರೀಖಿನವರೆಗೆ ನಡೆಯುವುದಾಗಿ ತಿಳಿಯಬರುತ್ತದೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೦೧

೨೩-೧೨-೧೯೫೩ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಹೊಡೆದಾಟ

ಮೈಸೂರು ೨೩

ಪುರಸಭಾ ಸದಸ್ಯ ಶ್ರೀ ಮೀರ್‌ನೂರ್ ಹುಸೇನರು ಮೊನ್ನೆ ರಾತ್ರಿ ನಜರಬಾದಿನಲ್ಲಿರುವ ಶ್ರೀ ಜಮೀರುದ್ದೀನ್ ಖುರೈಷಿಯವರ ಮಗನೊಡನೆ ಮಾತುಕತೆ ನಡೆಸುತ್ತಿದ್ದಾಗ ಅಲ್ಲಿ ಹೊಡೆದಾಟವು ನಡೆಯಿತೆಂದೂ ಸುಮಾರು ೨೦೦-೩೦೦ ಜನರು ಅಲ್ಲಿ ಸೇರಿ ಶ್ರೀ ಖುರೈಷಿಯವರ ಮನೆಗೆ ಪ್ರವೇಶಿಸಲು ಯತ್ನ ನಡೆಸಿದಾಗ ಆತ್ಮರಕ್ಷಣೆಗಾಗಿ ಆಕಾಶದಲ್ಲಿ ೩ಬಾರಿ ಗುಂಡುಹಾರಿಸಲಾಯಿತೆಂದೂ ಕೂಡಲೆ ಅಲ್ಲಿದ್ದ ಜನಗಳು ಚದುರಿದರೆಂದೂ ತಿಳಿಯಬರುತ್ತದೆ. ವಿಷಯ ತಿಳಿದೊಡನೆಯೇ ಪೊಲೀಸಿನವರು ಸ್ಥಳಕ್ಕೆ ಧಾವಿಸಿ ಗುಂಪನ್ನು ಚದುರಿಸಿದರೆಂದು ಗೊತ್ತಾಗಿದೆ.

ಉಭಯ ಪಕ್ಷದವರೂ ಪೋಲೀಸರಿಗೆ ದೂರು ಕೊಟ್ಟಿರುದಾಗಿ ತಿಳಿದುಬಂದಿದೆ.

ಸತ್ಕಾರಕೂಟ

ಮೈಸೂರು ೨೩

ರಾಜಧಾನಿಯಲ್ಲಿ ನಡೆಯುತ್ತಲಿರುವ ೭ ನೇ ಪಂಚವಾರ್ಷಿಕ ವಿಶ್ವವಿದ್ಯಾನಿಲಯ ಸಮ್ಮೇಳನದ ಪ್ರತಿನಿಧಿಗಳ ಗೌರವಾರ್ಥವಾಗಿ ಶ್ರೀಮನ್ಮಹಾರಾಜರು ಚಾಮುಂಡಿ ಜಮಖಾನದಲ್ಲಿ ಒಂದು ಸತ್ಕಾರ ಕೂಟವನ್ನು ನಿನ್ನೆ ಏರ್ಪಡಿಸಿದ್ದರು ಶ್ರೀಗಳಾದ ಡಾ॥ ರಾಮಸ್ವಾಮಿ ಮೊದಲಿಯಾರ್, ಡಾ॥ ಲಕ್ಷ್ಮಣಸ್ವಾಮಿ ಮೊದಲಿಯಾರ್, ಡಾ॥ ಸಿ ಪಿ. ರಾಮಸ್ವಾಮಿ ಅಯ್ಯರ್ ಮುಂತಾದವರನೇಕರು ಈ ಸತ್ಕಾರಕೂಟಕ್ಕೆ ಆಗಮಿಸಿದ್ದರು.

೧೨ ಲಕ್ಷ ರೂಪಾಯಿಗಳ ಪತ್ತೆ

ಚಿನ್ನವನ್ನು ಕಳ್ಳತನದಲ್ಲಿ ಸಾಗಿಸುತ್ತಲ್ಲಿರುವನೆಂಬ ಅನುಮಾನದಮೇಲೆ ಪತ್ತೆ ಕಾರ್ಯವನ್ನು ಕೈಗೊಂಡಿದ್ದ ಬೊಂಬಾಯಿ ಪೊಲೀಸ್ ತಂಡವೊಂದು ಬೊಂಬಾಯಿಗೆ ೧೧೦ ಮೈಲಿ ದೂರದಲ್ಲಿ ಹರ್ನ್ಯಾಲ್ ಎಂಬಲ್ಲಿ ಒಬ್ಬನನ್ನು ದಸ್ತಗಿರಿಮಾಡಿದರು.

ಆತನು ಒಂದು ಪ್ರದೇಶಕ್ಕೆ ಕೊಂಡೊಯ್ದು ಅಲ್ಲಿ ನೆಲವನ್ನು ಅಗಿಯುವಾಗ ೧೨ ಲಕ್ಷ ರೂಪಾಯಿಗಳ ನೋಟುಗಳು ದೊರಕಿತು. ಅವೆಲ್ಲಾ ೧೦೦ ರೂಪಾಯಿ ನೋಟುಗಳ ಕಂತೆಗಳಾಗಿ ಚೆನ್ನಾಗಿ ಪ್ಯಾಕ್‌ಮಾಡಿ ಅಲ್ಲಿ ಹುದುಗಿಡಲಾಗಿತ್ತು.

ಕಾಲರ ಹಾವಳಿ

ಈ ವರ್ಷ ಜನವರಿಯಿಂದ ನವೆಂಬರ್ ಅಂತ್ಯದವರೆಗೆ ೧೧ ತಿಂಗಳಲ್ಲಿ ಹೈದರಾಬಾದ್ ಪ್ರಾಂತ್ಯದಲ್ಲಿ ಕಾಲರಾ ರೋಗದಿಂದ ಒಟ್ಟು ೧೧೮೯ ಮರಣಗಳಾಗಿರುವುದಾಗಿ ತಿಳಿಯಬರುತ್ತದೆ.

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆ

ಮೈಸೂರು ೨೩

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಯು ಪುನರ್ರಚಿತವಾದನಂತರ ಮೊದಲನೆ ಬಾರಿಗೆ ಇದೇ ೨೦ ನೇ ತಾ॥ ಭಾನುವಾರ ಮಧ್ಯಾಹ್ನ ಎರಡು ಘಂಟೆಗೆ ಜಿಲ್ಲಾ ಕಾಂಗ್ರೆಸ್ ಕಛೇರಿಯಲ್ಲಿ ಸಮಿತಿ ಸಭೆ ನಡೆಯಿತು. ಸಭಾಧ್ಯಕ್ಷತೆಯನ್ನು ಅಧ್ಯಕ್ಷ ಶ್ರೀ ಕೆ ಪುಟ್ಟಸ್ವಾಮಿಯವರು ವಹಿಸಿದ್ದರು.

ಅಧ್ಯಕ್ಷರು ಸದಸ್ಯರುಗಳನ್ನೆಲ್ಲಾ ಸ್ವಾಗತಿಸುತ್ತಾ ಜಿಲ್ಲೆಯಲ್ಲಿನ ಪ್ರಸಕ್ತ ರಾಜಕೀಯ ಪರಿಸ್ಥಿತಿಯನ್ನು ಸದಸ್ಯರ ಗಮನಕ್ಕೆ ತಂದು ಸಂಸ್ಥೆಯ ಸಂಘಟನೆಗೆ ಮತ್ತು ಸಂಸ್ಥೆಯ ಶಕ್ತಿ ವೃದ್ಧಿಪಡಿಸಲು ಎಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಹಕಾರವನ್ನು ಆಶಿಸಿದರು. ಹುರುಪಿನಿಂದ ಸದಸ್ಯಸಂಗ್ರಹಣೆಯನ್ನು ಮಾಡಬೇಕೆಂದು ಕೋರಿದರು. ದೇಶದ ಮುಂದಿರುವ ಸಮಸ್ಯೆಗಳು ಶೀಘ್ರವಾಗಿ ಪರಿಹಾರವಾಗಬೇಕಾದಲ್ಲಿ ಕಾಂಗ್ರೆಸ್ ಅಂಗಸಂಸ್ಥೆಗಳು ವ್ಯವಸ್ಥಿತವಾಗಿ ಹಾಗೂ ಚಟುವಟಿಕೆಯಿಂದ ಕೆಲಸ ಮಾಡಬೇಕೆಂದು ಒತ್ತಿ ಹೇಳಿದರು.

ಇತ್ತೀಚೆಗೆ ಭಾರತದ ಪರಿಸ್ಥಿತಿಯನ್ನು ಕಲಕಿರುವ ಪಾಕೀಸ್ಥಾನ ಮತ್ತು ಅಮೆರಿಕಾಗಳ ಮಿಲಿಟರಿ ಒಪ್ಪಂದದ ವಿಷಯವನ್ನು ಪ್ರಸ್ತಾಪಿಸಿ ಇದರಿಂದ ದೇಶದ ಶಾಂತಿಗೆ ಧಕ್ಕೆ ಬರುವುದೆಂದೂ ಮತ್ತು ಭಾರತ ಪಾಕೀಸ್ಥಾನಗಳ ಸಂಬಂಧ ಬಿಗಡಾಯಿಸುವುದೆಂದು ಹೇಳಿದಾಗ ಸಭೆಯು ತನ್ನ ತೀವ್ರ ಕಳವಳವನ್ನು ವ್ಯಕ್ತಪಡಿಸಿತು.

ಮೈಸೂರು ಪ್ರಾಂತೀಯ ಕಾಂಗ್ರೆಸ್ ಅಧ್ಯಕ್ಷರು ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡುವಾಗಲು ಉಚಿತ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಎಲ್ಲಾ ತಾಲ್ಲೂಕು ಕಾಂಗ್ರೆಸ್ ಸಮಿತಿಗಳನ್ನು ಪ್ರಾರ್ಥಿಸಲಾಯಿತು.

ಶ್ರೀಗಳಾದ ಎನ್. ನಾರಾಯಣರಾವ್ ಎಂ. ಎಲ್. ನಂಜರಾಜೇಅರಸ್ ಮತ್ತು ಡಿ. ಎಂ. ಸಿದ್ದಯ್ಯನವರನ್ನೊಳಗೊಂಡ ಸ್ಟ್ಯಾಂಡಿಂಗ್ ಕಮಿಟಿ ನೇಮಿಸಲಾಯಿತು. ಜಿಲ್ಲಾ ಚುನಾವಣಾ ಪಂಚಾಯ್ತಿಯನ್ನು ನೇಮಿಸುವುದಕ್ಕಾಗಿ ಐದುಜನರ ಹೆಸರನ್ನು ಪ್ರಾದೇಶಿಕ ಕಾಂಗ್ರೆಸ್ ಸಮಿತಿಗೆ ಕಳುಹಿಸಲಾಯಿತು.

ಗೇಣಿ ಶಾಸನವನ್ನು ತಂದಿದ್ದಕ್ಕೆ ತನ್ನ ಸಂತೋಷವನ್ನು ವ್ಯಕ್ತಪಡಿಸುತ್ತಾ ಸರ್ಕಾರಕ್ಕೆ ತನ್ನ ಪೂರ್ಣ ಬೆಂಬಲ ನೀಡುವುದಾಗಿ ತೀರ್ಮಾನಿಸಲಾಯಿತು.

ಪ್ರಜಾಸೋಷಲಿಸ್ಟರ ಸತ್ಯಾಗ್ರಹ

ರಾಜಾಸ್ಥಾನದಿಂದ ಗೋಧಿಯನ್ನು ರಫ್ತು ಮಾಡುವುದನ್ನು ವಿರೋಧಿಸಿ ಅಲ್ಲಿಯ ಪ್ರಜಾಸೋಷಲಿಸ್ಟ್ ಪಕ್ಷವು ಸತ್ಯಾಗ್ರಹವನ್ನು ಪ್ರಾರಂಭಿಸಿದೆ.

ತನ್ನ ಪ್ರಾಂತ್ಯದಿಂದ ೧,೭೫,೦೦೦ ಮಣಗಳಷ್ಟು ಗೋಧಿಯನ್ನು ಹೊರಪ್ರಾಂತ್ಯಗಳಿಗೆ ಕಳುಹಿಸುವುದಾಗಿ ಅಲ್ಲಿಯ ಸರ್ಕಾರವು ತಿಳಿಸಿದುದನ್ನು ಪ್ರತಿಭಟಿಸಿ ಈಗ ಪ್ರಜಾಸೋಷಲಿಸ್ಟ್ ಪಕ್ಷವು ಈ ಚಳುವಳಿಯನ್ನು ಕೈಗೊಂಡಿದೆ.

ನಿನ್ನೆಯದಿನ ಕೆಲವು ಗೋಧಿ ತುಂಬಿದ ಲಾರಿಗಳು ಬಿಕನೇರಿನಿಂದ ಹೊರಡಲೆತ್ನಿಸಿದಾಗ ಸತ್ಯಾಗ್ರಹಿಗಳು ರಸ್ತೆಯಲ್ಲಿ ಲಾರಿಗಳ ಮುಂದೆ ಮಲಗಿದುದರಿಂದ ಅವುಗಳು ಹೊರಡಲೇ ಇಲ್ಲ.

ರಾಜಾಜಿ-ರಾಮಸ್ವಾಮಿ ನಾಯ್ಕರ್ ಭೇಟಿ

ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ಮೊನ್ನೆಯದಿನ ದ್ರಾವಿಡ ಸಂಘದ ಅಧ್ಯಕ್ಷ ಶ್ರೀ ಇ. ವಿ. ರಾಮಸ್ವಾಮಿನಾಯ್ಕರ್‌ರ ಮನೆಗೆ ತೆರಳಿ ಸ್ವಲ್ಪಕಾಲ ಅಲ್ಲಿದ್ದರೆಂದು ತಿಳಿಯಬರುತ್ತದೆ.

ಕಳೆದ ಕೆಲವು ವರ್ಷಗಳಿಂದ ಶ್ರೀ ನಾಯ್ಕರ್‌ರವರು ಶ್ರೀ ರಾಜಾಜಿಯವರ ವಿರುದ್ಧವಾಗಿ ನಾನಾ ಪ್ರಚಾರಗಳನ್ನು ನಡೆಸುತ್ತಲಿದ್ದಾರೆ.

ಕಳೆದ ೨೫ ವರ್ಷಗಳಿಂದ ಈ ಉಭಯತ್ರರ ಭೇಟಿ ಅಥವಾ ಮಾತುಕತೆಗಳು ನಡದೇ ಇರಲಿಲ್ಲ.

ರಾಜಕೀಯ ಸಮ್ಮೇಳನ

ತಿರುವಾಂಕೂರ್-ಕೊಚ್ಚಿಯ ಪ್ರದೇಶ ಕಾಂಗ್ರೆಸ್ ಸಮಿತಿಯು ಜನವರಿ ೧೫ ರಿಂದ ೩ ದಿನಗಳಕಾಲ ರಾಜಕೀಯ ಸಮ್ಮೇಳನವನ್ನು ನಡೆಸಲಿದೆ. ಶ್ರೀಗಳಾದ ರಾಜಾಜಿ, ವಿ.ವಿ. ಗಿರಿ, ಎಸ್. ಕೆ. ಪಾಟೀಲ್ ಮುಂತಾದವರು ಇದರಲ್ಲಿ ಭಾಗವಹಿಸುವರೆಂದು ತಿಳಿಯಬರುತ್ತದೆ.

ಮುಸಾದಿಕ್‌ರವರ ಅಪೀಲು

ತಮಗೆ ಮಿಲಿಟರಿ ನ್ಯಾಯಾಲಯವು ೩ ವರ್ಷಕಾಲ ಏಕಾಂತ ಜೈಲುವಾಸ ಶಿಕ್ಷೆಯನ್ನು ವಿಧಿಸಿರುವುದರ ವಿರುದ್ಧ ಪರ್ಶಿಯಾ ಮಾಜಿ ಪ್ರಧಾನಿ ಡಾ॥ ಮುಸಾದಿಕ್‌ರವರು ಅಪೀಲನ್ನು ಹಾಕಿರುವುದಾಗಿ ತಿಳಿಯಬರುತ್ತದೆ.

೧೦೦೦ ರೂ ಪಗರೀ ತೆಗೆದುಕೊಂಡಿದ್ದಕ್ಕೆ ೧೦೦೦ ರೂ. ಜುಲ್ಮಾನೆ

ಬೊಂಬಾಯಿನಲ್ಲಿ ಒಂದು ವಿಮಾ ಸಂಸ್ಥೆಯ ಡೈರೆಕ್ಟರು ಕಂಪೆನಿಗೆ ಸೇರಿದ ವಾಸಗೃಹವನ್ನು ಮಾಹೆಯಾನಾ ೩೦ ರೂಪಾಯಿಗಳ ಬಾಡಿಗೆಗೆ ಕೊಡುವಾಗ ೧೦೦೦ ರೂ. ಪಗರಿಯನ್ನು ಪಡೆದರೆಂಬ ಅಪಾದನೆ ಮೇಲೆ ಬೊಂಬಾಯಿ ಪ್ರೆಸಿಡೆನ್ಸಿ ನ್ಯಾಯಾಧೀಶರು ಅಪಾದಿತರಿಗೆ ಒಂದು ದಿನ ಜೈಲುವಾಸ ಮತ್ತು ೧೦೦೦ ರೂ. ಜುಲ್ಮಾನೆಯನ್ನು ವಿಧಿಸಿದ್ದಾರೆ.

ಮೈಸೂರುಟೀಮಿನ ಅಧ್ಭುತ ಆಟ

ಮದ್ರಾಸ್‌ನಲ್ಲಿ ನಡೆಯುತ್ತಿರುವ ಅಂತರ ವಿಶ್ವವಿದ್ಯಾನಿಲಯಗಳ ಕ್ರಿಕೆಟ್ ಟೋರ್ನಿಯ ಕ್ವಾರ್ಟರ್ ಫೈನಲ್‌ನಲ್ಲಿ ನಿನ್ನೆಯದಿನ ಮೈಸೂರಿನವರು ಅದ್ಭುತವಾಗಿ ಆಟವಾಡಿ ೯ ವಿಕೆಟ್‌ಗಳಿಗೆ ೬೯೧ ರನ್ನುಗಳನ್ನು ಮಾಡಿ ಡಿಕ್ಲೇರ್ ಮಾಡಿಕೊಂಡರು.

ಸ್ಥಾನಬದ್ಧ ಖೈದಿಗಳ ಬಿಡುಗಡೆಯಾಗಲಿ

ಸರ್ಕಾರವು ಎಲ್ಲಾ ಸ್ಥಾನಬದ್ಧ ಖೈದಿಗಳನ್ನು ಬಿಡುಗಡೆ ಮಾಡಬೇಕೆಂದು ಆಚಾರ್ಯ ಕೃಪಲಾನಿಯವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ವಜಾ ಆದ ಉಪಾಧ್ಯಾಯರ ಮೆರವಣಿಗೆ

ಕೆಲಸದಿಂದ ವಜಾ ಆದ ಸುಮಾರು ೪೦೦ ಮಂದಿ ಉಪಾಧ್ಯಾಯರುಗಳು ನಿನ್ನೆಯದಿನ ಹೈದರಾಬಾದ್ ಶಾಸನ ಸಭಾ ಭವನಕ್ಕೆ ಮೆರವಣಿಗೆಯಲ್ಲಿ ಹೋದರು.

ಹೊಸ ಉಕ್ಕಿನಕಾರ್ಖಾನೆ ಸ್ಥಾಪನೆ

ಭಾರತದಲ್ಲಿ ೧೦೦ ಕೋಟಿ ರೂಪಾಯಿಗಳ ಬಂಡವಾಳದಲ್ಲಿ ಒಂದು ಹೊಸ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು ಜರ್ಮನಿ ಕಂಪೆನಿಯೊಂದಿಗೆ ಒಪ್ಪಂದವೊಂದು ನಡೆದಿದೆ.

ಕಾಶ್ಮೀರಕ್ಕೆ ಭಾರತದ ಸಾಲ

ಭಾರತ ಸರ್ಕಾರವು ಕಾಶ್ಮೀರಕ್ಕೆ ಇಲ್ಲಿಯವರೆಗೆ ೬೧.೫೦ ಲಕ್ಷ ರೂಪಾಯಿಗಳನ್ನು ಸಾಲವಾಗಿ ಕೊಟ್ಟಿರುವುದಾಗಿ ಡಾ॥ ಖಟ್ಜುರವರು ರಾಜ್ಯ ಪರಿಷತ್ತಿನಲ್ಲಿ ತಿಳಿಸಿದ್ದಾರೆ.

ಸಂಸ್ಥಾನಗಳ ಪುನರ್ರಚನಾ ಕಮಿಷನ್ ನೇಮಕ

ಒರಿಸ್ಸಾ ಗೌರ್ನರ್ ಫಜಲ್ ಅಲಿ ಅಧ್ಯಕ್ಷರು

ಸಂಸ್ಥಾನಗಳ ಈಗಿನ ಆಯಕಟ್ಟುಗಳನ್ನು ವಿಮರ್ಶಿಸಿ ಅವುಗಳನ್ನು ಪುನರ್ರಚಿಸುವುದಕ್ಕಾಗಿ ಕೇಂದ್ರ ಸರ್ಕಾರಕ್ಕೆ ತಕ್ಕ ಸಲಹೆಗಳನ್ನು ನೀಡಲು ಮೂರು ಸದಸ್ಯರ ಒಂದು ಉನ್ನತ ಮಂಡಲಿಯನ್ನು ನೇಮಿಸಿರುವುದಾಗಿ ಪ್ರಧಾನಿ ನೆಹರೂರವರು ನಿನ್ನೆಯದಿನ ಲೋಕ ಸಭೆಯಲ್ಲಿ ತಿಳಿಸಿದರು.

ಈ ಉನ್ನತ ಮಂಡಲಿಯ ಅಧ್ಯಕ್ಷರಾಗಿ ಈಗ ಒರಿಸ್ಸಾದಲ್ಲಿ ಗೌರ್ನರ್ ಆಗಿರುವ ಶ್ರೀ ಫಜಲ್ ಅಲಿಯವರು ನೇಮಕವಾಗಿದ್ದಾರೆ.

ರಾಜ್ಯಪರಿಷತ್ತಿನ ಸದಸ್ಯ ಶ್ರೀ ಪಂಡಿತ ಹೃದಯನಾಥ ಕುಂಜ್ರು ಮತ್ತು ಈಜಿಪ್ಟಿನಲ್ಲಿ ಭಾರತ ರಾಯಭಾರಿಯಾಗಿರುವ ಸರ್ದಾರ್ ಕೆ. ಎಂ. ಪಣ್ಣೀಕರ್ ಇವರು ಸಮಿತಿಯ ಇನ್ನಿಬ್ಬ ಸದಸ್ಯರು.

೧೯೫೫ ನೇ ಜೂನ್ ೩೦ ರೊಳಗೆ ಸಮಿತಿಯು ತನ್ನ ವರದಿಯನ್ನು ಸಲ್ಲಿಸಬೇಕೆಂದು ಸೂಚಿಸಲಾಗಿದೆ.

ಈ ನೇಮಕದ ವಿಷಯದಲ್ಲಿ ದೇಶದ ಅನೇಕ ಭಾಗಗಳಲ್ಲಿ ಸಮಾಧಾನವನ್ನು ವ್ಯಕ್ತಪಡಿಸಲಾಗಿದೆ. ಬೊಂಬಾಯಿನ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್ ಕೆ. ಪಾಟೀಲರು ಸಮಿತಿಯ ಸದಸ್ಯರನ್ನು ಅತ್ಯಂತ ಜಾಗರೂಕತೆಯಿಂದ ಆರಿಸಲಾಗಿದೆ. ತನಗೆ ಸೂಕ್ತವೆಂದು ತೋರಿದುದನ್ನು ಸ್ವತಂತ್ರವಾಗಿ ಶಿಫಾರಸ್ಸು ಮಾಡಲು ಸಮಿತಿಯು ಹಿಂತೆಗೆಯುವುದಿಲ್ಲ ಎಂದು ಹೇಳಿದ್ದಾರೆ.

ಆಂಧ್ರದ ಉಪಮುಖ್ಯಮಂತ್ರಿ ಶ್ರೀ ಎನ್. ಸಂಜೀವರೆಡ್ಡಿ, ಬೊಂಬಾಯಿ ಸಚಿವ ಶ್ರೀ ಎಂ. ಪಿ. ಪಾಟೀಲ್ ಮುಂತಾದ ಅನೇಕರು ಸಮಿತಿಯ ರಚನೆಯನ್ನು ಸ್ವಾಗತಿಸಿದ್ದಾರೆ

೧೫೦೦ ವರ್ಷದ ೫೦೦ ನಾಣ್ಯಗಳ ಪತ್ತೆ

ಸೌರಾಷ್ಟ್ರದಲ್ಲಿ ರಾಲಿಯಾನಾ ಎಂಬ ಗ್ರಾಮದಲ್ಲಿ ೧೫೦೦ ವರ್ಷಗಳ ಹಿಂದೆ ಇದ್ದ ಗುಪ್ತರ ಕಾಲದ ೫೭೦ ಬೆಳ್ಳಿ ನಾಣ್ಯಗಳನ್ನು ಅಲ್ಲಿಯ ಪ್ರಾಚ್ಯ ಪರಿಶೋಧನ ಇಲಾಖೆಯವರು ಪತ್ತೆಹಚ್ಚಿದ್ದಾರೆ. ಅವು ಕ್ರಿ. ಶ. ೪೧೪-೪೫೩ ರಲ್ಲಿ ರಾಜ್ಯವಾಳುತ್ತಲಿದ್ದ ಕುಮಾರಗುಪ್ತ ಎಂಬುವವರ ಕಾಲದ ನಾಣ್ಯಗಳೆಂದು ತಿಳಿಯಬರುತ್ತದೆ.

ತಿರುವಾಂಕೂರ್-ಕೊಚ್ಚಿಗೆ ನೆಹರೂ ಭೇಟಿ

ಮುಂದಿನ ಜನವರಿ ಪ್ರಥಮ ವಾರದಲ್ಲಿ ಪ್ರಧಾನಿ ನೆಹರೂರವರು ತಿರುವಾಂಕೂರ್-ಕೊಚ್ಚಿ ಪ್ರಾಂತ್ಯಕ್ಕೆ ಭೇಟಿ ಕೊಡಲಿದ್ದಾರೆಂದು ತಿಳಿಯಬರುತ್ತದೆ.

ಸಂತಾಪಸೂಚಕ ಸಭೆ

ಮೈಸೂರು ೨೩

ಶ್ರೀಮನ್ಮಹಾರಾಜರವರ ಸನ್ನಿಧಿಯಲ್ಲಿ ಅನೇಕ ವರ್ಷಗಳು ಸೇವೆ ಸಲ್ಲಿಸಿ ಇತ್ತೀಚೆಗೆ ವಿಶ್ರಾಂತಿ ಹೊಂದಿದ ಶ್ರೀ ಗುರುಕಾರ್ ಬಸವಲಿಂಗಪ್ಪನವರು ತಮ್ಮ ೮೫ನೇ ವಯಸ್ಸಿನಲ್ಲಿ ಇದೇ ೧೬ನೇ ತಾ॥ ಲಿಂಗೈಕ್ಯರಾದರು. ಶ್ರೀ ತರಳುಬಾಳು ಜಗದ್ಗುರು ವೀರಶೈವ ವಿದ್ಯಾರ್ಥಿನಿಲಯದಲ್ಲಿ ಮೈಸೂರು ಅರಮನೆಯ ದರ್ಬಾರು ಭಕ್ಷಿಗಳಾದ ಶ್ರೀ ಹೆಚ್. ಎಲ್. ದೇವರಾಜ ಅರಸುರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ದಿವಂಗತರ ಬಗ್ಗೆ ಶೋಕವನ್ನು ಸೂಚಿಸಿ ಮೃತರ ಆತ್ಮಕ್ಕೆ ಶಾಂತಿಯನ್ನೂ ಮತ್ತು ಬಂಧುಬಾಂಧವರಿಗೆ ದುಃಖವನ್ನು ಸಹಿಸಲು ಶಕ್ತಿಯನ್ನು ಕೊಡಲೆಂದು ಭಗವಂತನನ್ನು ಪ್ರಾರ್ಥಿಸಲಾಯಿತು.

ನಗರ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಗಳು

ಶ್ರೀಗಳಾದ ಟಿ. ವೆಂಕಟರಮಣಯ್ಯ ಮತ್ತು ಕೆ. ಎಸ್. ಸತ್ಯನಾರಾಯಣರಾವ್ ರವರುಗಳನ್ನು ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳನ್ನಾಗಿ ನೇಮಿಸಲಾಗಿದೆ.

ತಿರುವಾಂಕೂರ್-ಕೊಚ್ಚಿಯ ಮಹಾಚುನಾವಣೆ

ತಿರುವಾಂಕೂರ್-ಕೊಚ್ಚಿ ಪ್ರಾಂತ್ಯದಲ್ಲಿ ಮುಂದಿನ ಫೆಬ್ರವರಿಯಲ್ಲಿ ನಡೆಯಲಿರುವ ಮಹಾಚುನಾವಣೆಗಳಲ್ಲಿ ಎಲ್ಲಾ ೧೧೪ ಸ್ಥಾನಗಳಿಗೂ ಕಾಂಗ್ರೆಸ್ ಪಕ್ಷವು ಸ್ಪರ್ಧಿಸಲು ನಿರ್ಧರಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೨—೧೨—೧೯೫೩

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೪—	೨೨—೧೪
ಎಳ್ಳು	—	—
ಹುರುಳು	೩೫ —	೪೦—
ಹುಚ್ಚೆಳ್ಳು	೩೪—೪	೪೨—೧೨
ಬೆಲ್ಲ	೫—	—
ಹುರಳಿ	೨೭—೨	೩೦—೨
ಹೆಸರು	೨೮—	೪೩—
ಅವರೆ	—	—
ಅಲಸಂದೆ	೩೨—	೪೭—
ಉದ್ದು	೪೬—೪	೫೨—೨
ಹೊಂಗೆಬೀಜ	—	—
ಮೆಣಸಿನಕಾಯಿ	೧೭—೧೪	೩೫—೪
ಸೀಗೆಕಾಯಿ	೬—	—
ಹುಣಸೇಹಣ್ಣು	೯—೧೨	೧೨—೬
ತೆಂಗಿನಕಾಯಿ	೧೪೯—	೨೫೩—

ಪಾಕಿಸ್ತಾನದಲ್ಲಿ ನಿರಾಶ್ರಿತರ ನೆರವಿಗೆ ಹಣವಿಲ್ಲ

ಹಣವೆಲ್ಲಾ ದೇಶದ ರಕ್ಷಣೆಗೆ ಬೇಕಾಗಿದೆ

ಪಾಕ್ ಪ್ರಧಾನಿ ಮಹಮದ್ ಅಲಿ ಹೇಳಿಕೆ

ಪಾಕೀಸ್ತಾನದಲ್ಲಿ ನಿರಾಶ್ರಿತರಿಗೆ ಸಾಕಷ್ಟು ನೆರವು ನೀಡಲು ಹಣವೇ ಇಲ್ಲವಾಗಿದೆ. ಇರುವ ಹಣವನ್ನೆಲ್ಲಾ ದೇಶದ ರಕ್ಷಣೆಗಾಗಿ ವೆಚ್ಚಮಾಡಬೇಕಾಗಿದೆ-ಎಂದು ಪಾಕ್ ಪ್ರಧಾನಿ ಮಹಮದಾಲಿಯವರು ತಿಳಿಸಿದ್ದಾರೆ.

ಪಾಕೀಸ್ತಾನವು ಭಾರತದಿಂದ ಆರ್ಥಿಕ ಸಹಕಾರವನ್ನು ಪಡೆಯಲು ಸಿದ್ಧವಿದೆ ಆದರೆ ಭಾರತದ ಅಡಿಯಾಳಾಗಿರಲಾರದು ಎಂದು ಅವರು ಹೇಳಿದ್ದಾರೆ.

ಕಾಶ್ಮೀರ ವಿವಾದದ ಬಗ್ಗೆ ಅವರು ಮಾತನಾಡುತ್ತಾ ನಾವು ಮತ್ತು ಭಾರತ ಪ್ರಧಾನಿ ನೆಹರೂರವರು ಉಭಯತ್ರರ ಸಂದರ್ಶನದಲ್ಲಿ ಕಾಶ್ಮೀರ ವಿಷಯದಲ್ಲಿ ಎಲ್ಲಾ ಅಭಿಪ್ರಾಯಗಳನ್ನು ಅರಿತುಕೊಂಡಿದ್ದೇವೆ. ಕಾಶ್ಮೀರ ಪ್ರಶ್ನೆ ಇತ್ಯರ್ಥಕ್ಕೆ ನಾವು ಸಮೀಪಿಸುತ್ತಲಿದ್ದೇವೆ—ಎಂದೂ ಅವರು ತಿಳಿಸಿದ್ದಾರೆ.

ಹೈದರಾಬಾದಿನಲ್ಲಿ ಕಾಂಗ್ರೆಸ್ ಭಿನ್ನತೆ

ಹೈದರಾಬಾದಿನಲ್ಲಿ ಕಾಂಗ್ರೆಸ್ ಪಕ್ಷವು ಸುಗಮವಾದ ಸರ್ಕಾರವನ್ನು ರಚಿಸುವುದಾದರೆ, ಈಗಿನ ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ರಾಜೀನಾಮೆಯನ್ನು ಕೊಡಲು ತಾವು ಆಕ್ಷೇಪಿಸುವುದಿಲ್ಲವೆಂದು ಪ್ರಧಾನಿ ನೆಹರೂರವರು ಅಭಿಪ್ರಾಯಪಟ್ಟಿರುವುದಾಗಿ ತಿಳಿಯಬರುತ್ತದೆ.

ಮುಖ್ಯಮಂತ್ರಿ ಶ್ರೀ ಬಿ.ರಾಮಕೃಷ್ಣರಾಯರು ರಾಜೀನಾಮೆ ಕೊಡಲು ಅನುಮತಿಯನ್ನು ಕೇಳಿ ಪತ್ರವನ್ನು ಗೃಹಸಚಿವ ಶ್ರೀ ಡಿ. ಜಿ. ಬಿಂದುರವರ ಮುಖೇನ ದೆಹಲಿಗೆ ಕಳುಹಿಸಿದಾಗ ಶ್ರೀ ನೆಹರೂರವರು ಈ ಉತ್ತರವನ್ನು ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಶ್ರೀ ನೆಹರೂರವರು ಮುಂದಿನ ತಿಂಗಳು ಮೊದಲನೆ ವಾರದಲ್ಲಿ ಹೈದರಾಬಾದಿಗೆ ಭೇಟಿ ಕೊಡುವಾಗ ಕಾಂಗ್ರೆಸ್ಸಿಗರಲ್ಲಿ ಉದ್ಭವಿಸಿರುವ ಭಿನ್ನತೆಗಳನ್ನು ಹೋಗಲಾಡಿಸಿ, ಸೌಹಾರ್ದ್ಯವನ್ನು ಕಲ್ಪಿಸಲು ಯತ್ನಿಸುವರೆಂದು ತಿಳಿಯಬರುತ್ತದೆ.

ಬೊಂಬಾಯಿನಲ್ಲಿ ಮೈಸೂರು ವಿದ್ಯಾರ್ಥಿಗಳು

ಬೊಂಬಾಯಿ ೨೩

ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಶಿಕ್ಷಣದ ವಿದ್ಯಾರ್ಥಿಗಳು ಮೊನ್ನೆಯದಿನ ಬೀಹಾರ್ ಗೌರ್ನರ್ ಶ್ರೀ ಆರ್. ಆರ್. ದಿವಾಕರ್‌ರವರನ್ನು ಭೇಟಿ ಮಾಡಿದ್ದರು. ಮೈಸೂರು ವಿಶ್ವವಿದ್ಯಾನಿಲಯವು ಈ ಶಿಕ್ಷಣವನ್ನು ಪ್ರಾರಂಭಿಸಿರುವುದಕ್ಕೆ ಶ್ರೀ ದಿವಾಕರ್‌ರವರು ಸಂತೋಷವನ್ನು ವ್ಯಕ್ತಪಡಿಸಿದರು.

ಪತ್ರಿಕೋದ್ಯಮಿಗಳು ಜನತೆಯ ಅಭಿಪ್ರಾಯವನ್ನು ಪ್ರತಿಬಿಂಬಿಸುವುದರಿಂದ ವಿದ್ಯಾರ್ಥಿಗಳು ಈ ಭಾಗದಲ್ಲಿ ಉತ್ತಮರೀತಿ ಜ್ಞಾನ ಪಡೆಯಬೇಕೆಂದು ವಿದ್ಯಾರ್ಥಿಗಳಿಗೆ ದಿವಾಕರರು ಹಿತ ನುಡಿದರು.

ಮಹಾತ್ಮಾ ಗಾಂಧಿ, ತಿಲಕ್, ಸಿ. ವೈ. ಚಿಂತಾಮಣಿ ಮುಂತಾದ ದೊಡ್ಡ ದೊಡ್ಡ ಪತ್ರಿಕೋದ್ಯಮಿಗಳ ಆದರ್ಶದಂತೆ ನಡೆಯಬೇಕೆಂದೂ ಅಂತಹ ದೊಡ್ಡವರ ಜೀವನ ಚರಿತ್ರೆಯನ್ನು ಅಭ್ಯಸಿಸಬೇಕೆಂದೂ ಅವರು ವಿದ್ಯಾರ್ಥಿಗಳಿಗೆ ತಿಳಿಸಿದರು.

ಅನಂತರ ವಿದ್ಯಾರ್ಥಿಗಳು ಮಧ್ಯಾಹ್ನ ಬೊಂಬಾಯಿ ಶಾಸನಸಭಾ ಕಾರ್ಯಗಳನ್ನು ವೀಕ್ಷಿಸಿ, ಸಭಾಧ್ಯಕ್ಷ ಶ್ರೀ ಹುಕ್ಕೇರಿಕರ್‌ರವರನ್ನು ಭೇಟಿಮಾಡಿದ್ದರು. ಅಲ್ಲಿಯ ಪ್ರಮುಖ ಪತ್ರಿಕೆಗಳಾದ ಟೈಂಸ್ ಆಫ್ ಇಂಡಿಯಾ, ಇಂಡಿಯನ್ ಎಕ್ಸ್‌ಪ್ರೆಸ್ ಕಾರ್ಯಾಲಯಗಳಿಗೂ ಭೇಟಿಯಿತ್ತಾಗ ಶ್ರೀ ಎನ್. ಎಸ್. ಶಿವರಾಮನ್‌ರವರು ಇವರನ್ನುದ್ದೇಶಿಸಿ ಭಾಷಣ ಮಾಡಿದರು.

ಬೊಂಬಾಯಿನ ಮುಖ್ಯಮಂತ್ರಿ ಶ್ರೀ ಮುರಾರ್ಜಿ ದೇಶಾಯ್, ಶ್ರೀ ಎಂ. ಪಿ. ಪಾಟೀಲ್ ಮುಂತಾದ ನಾಯಕರನ್ನೂ ಸಹ ವಿದ್ಯಾರ್ಥಿ ತಂಡವು ಭೇಟಿಮಾಡಿ ಪ್ರೇಕ್ಷಣೀಯ ಸ್ಥಳಗಳಿಗೂ ಹೋಗಿ ಒಂದು ೨೬ನೇ ತಾರೀಖು ಅವರು ಹುಬ್ಬಳ್ಳಿಗೆ ತೆರಳುವರೆಂದು ತಿಳಿಯಬರುತ್ತದೆ.

ಅಪೆರಾ
18-12-53ರಿಂದ ಅನೋಖಿ ಪ್ರಾರಂಭ
ಆರ್. ಎನ್. ಪಿಳ್ಳೈರ್‌ರವರ
ಜಾತಕ ಫಲ
(ಕನ್ನಡ)
ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ರಣಜಿತ್
25-12-53 ರಿಂದ ಅನೋಖಿ ಪ್ರಾರಂಭ
ಲೈಲಾಮಜ್ನು
ಪಾತ್ರ:—ನೂತನ್, ಶಮ್ಮಿ, ಓಂಪ್ರಕಾಶ್.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೦೩

೨೪-೧೨-೧೯೫೩ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಆಗ್ನೇಯ ಏಷ್ಯಾ ರಾಷ್ಟ್ರ ಪ್ರಧಾನಿಗಳ ಸಮ್ಮೇಳನ

ಸಿಂಹಳ ಪ್ರಧಾನಿ ಕೋಟಿಲವಾಲಾರವರ ಆಹ್ವಾನ

ಸಿಂಹಳ ಪ್ರಧಾನಿ ಮಿ॥ ಕೋಟಿಲವಾಲಾರವರು ಆಗ್ನೇಯ ಏಷ್ಯಾ ರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನವೊಂದನ್ನು ನಡೆಸಲು ನಿರ್ಧರಿಸಿ ಇದಕ್ಕಾಗಿ ಭಾರತ, ಪಾಕೀಸ್ತಾನ, ಬರ್ಮಾ ಮತ್ತು ಇಂಡೋನೇಷಿಯಾ ಪ್ರಧಾನಿಗಳಿಗೆ ಆಹ್ವಾನವನ್ನು ಕಳುಹಿಸಿರುವುದಾಗಿ ತಿಳಿಯಬರುತ್ತದೆ.

ಈ ಸಮ್ಮೇಳನದ ವೇಳಾಪಟ್ಟಿ, ನಡೆಯುವ ಕಾಲ ಮತ್ತು ಸ್ಥಳ ಯಾವುವೂ ಇನ್ನು ಇತ್ಯರ್ಥವಾಗಿಲ್ಲ. ಆದಾಗ್ಯೂ ಇಂದಿನ ಪ್ರಪಂಚ ಪರಿಸ್ಥಿತಿ, ವಸಾಹತು ಮತ್ತು ಸಾಮ್ರಾಜ್ಯ ಷಾಹಿ ಶೃಂಖಲೆಗಳಿಂದ ವಿಮುಕ್ತರಾಗಿರುವ ಆಗ್ನೇಯ ಏಷ್ಯಾ ರಾಷ್ಟ್ರಗಳ ಭದ್ರತೆ, ಪರಸ್ಪರ ಸಹಾಯ ಪ್ರಪಂಚದಲ್ಲಿರುವ ಮಹಾರಾಷ್ಟ್ರಗಳ ಕೈಗೆ ಪುನಃ ಈ ರಾಷ್ಟ್ರಗಳು ಸೀಳದಂತೆ ಮಾಡುವ ವಿಷಯ ಇತರ ಅಧೀನ ರಾಷ್ಟ್ರಗಳ ಸ್ವಾತಂತ್ರ ಚಳುವಳಿಗೆ ಪ್ರೋತ್ಸಾಹ ಮುಂತಾದ ನಾನಾ ವಿಷಯಗಳನ್ನು ಚರ್ಚಿಸಲು ಈ ಸಮ್ಮೇಳನವನ್ನು ಕರೆದಿರುವುದಾಗಿ ಹೇಳಲಾಗಿದೆ. ಈ ರೀತಿಯ ಸಮ್ಮೇಳನಗಳು ಆಗಿಂದಾಗ್ಗೆ ನಡೆಯಬೇಕೆಂದೂ ಸಿಂಹಳಪ್ರಧಾನಿಯವರು ಅಭಿಪ್ರಾಯಪಟ್ಟಿದ್ದಾರೆ.

ಈ ಸಲಹೆಯನ್ನು ಭಾರತ ಪ್ರಧಾನಿ ನೆಹರೂರವರು ಸಂತೋಷದಿಂದ ಸ್ವಾಗತಿಸುತ್ತ ಪಾಕೀಸ್ತಾನ ಮತ್ತು ಅಮೆರಿಕಾ ಮಿಲಿಟರಿ ಒಪ್ಪಂದ ಮಾತುಕತೆಗಳೇ ಈ ಸಮ್ಮೇಳನವನ್ನು ತ್ವರಿತವಾಗಿ ಕರೆಯುವಂತಾಗಿದೆಯೆಂದು ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ಭಾರತ ವಿದೇಶಾಂಗ ನೀತಿಯ ವಿಷಯವಾಗಿ ಮಾತನಾಡುತ್ತಾ ತಿಳಿಸಿದ್ದಾರೆ.

ಸರ್ಕಾರಕ್ಕೆ ಹಿಂದೂ ಮಹಾಸಭೆ ಬೆಂಬಲ

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವೆ ಮಿಲಿಟರಿ ಒಪ್ಪಂದವೇನಾದರೂ ಆದರೆ, ದೇಶಕ್ಕೆ ಒದಗಬಹುದಾದ ವಿಪತ್ತುಗಳನ್ನು ಎದುರಿಸಲು ತನ್ನ ರಾಜಕೀಯ ಭಿನ್ನತೆಗಳನ್ನೆಲ್ಲಾ ಮರೆತು ಸರ್ಕಾರಕ್ಕೆ ಪೂರ್ಣ ಬೆಂಬಲವನ್ನು ನೀಡುವುದಾಗಿ ಹಿಂದೂ ಮಹಾಸಭೆಯ ಕಾರ್ಯದರ್ಶಿ ಶ್ರೀ ದೇಶಪಾಂಡೆಯವರು ಹೇಳಿದ್ದಾರೆ.

ಕೊಲಂಬಿಯಾ ವಿಶ್ವವಿದ್ಯಾನಿಲಯದಲ್ಲಿ ಭಾರತೀಯರ ಭಾಷಣ

ನ್ಯೂಯಾರ್ಕ್ ಡಿಸೆಂಬರ್ ೨೩

ಕೊಲಂಬಿಯಾ ವಿಶ್ವವಿದ್ಯಾನಿಲಯದ ಎರಡನೇ ಶತವಾರ್ಷಿಕ ಸ್ಮಾರಕೋತ್ಸವದ ಭಾಷಣ ಕಾರ್ಯಕ್ರಮದಲ್ಲಿ ಭಾಗವಹಿಸಲಿರುವ ಹನ್ನೆರಡು ವಿದ್ವಾಂಸರಲ್ಲಿ ಮೂರು ಮಂದಿ ಭಾರತೀಯ ವಿದ್ವಾಂಸರಿರುವರು.

ಜನವರಿ ೩ ರಂದು ಬ್ರಿಟನ್ನಿನ ಇತಿಹಾಸ ತಜ್ಞ ಮಿ॥ ಆರ್ನಾಲ್ಡ್ ಟಾಯಿನ್ ಬೀಯವರು ಭಾಷಣ ಮಾಲೆಯನ್ನು ಪ್ರಾರಂಭಿಸುವರು 'ಮಾನವನ ವಿಚಾರ' ಎಂಬುದರ ಬಗ್ಗೆ ಅವರು ಭಾಷಣ ಕೊಡುವರು 'ಜ್ಞಾನ ಸಂಪಾದಿಸಲು ಮನುಷ್ಯನಿಗಿರುವ ಹಕ್ಕು' ಎಂಬುದು ಭಾಷಣ ಕಾರ್ಯಕ್ರಮದ ಕೇಂದ್ರ ವಿಷಯವಾಗಿದೆ.

ಭಾರತದ ಉಪಾಧ್ಯಕ್ಷ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್, ನ್ಯೂಯಾರ್ಕ್ ನಗರದ ಭಾರತೀಯ ಕೇಂದ್ರದ ಡೈರೆಕ್ಟರ್ ಸ್ವಾಮಿ ನಿಖಿಲಾನಂದ ಮತ್ತು ಮುಂಬಯಿ ತಾತಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್‌ನಲ್ಲಿ ಥಿಯರಟಿಕಲ್ ಫಿಸಿಕ್ಸ್ ನ ಪ್ರಧ್ಯಾಪಕ ಹೆಚ್. ಜೆ. ಭಾಭಾ ಈ ಮೂವರು ಭಾರತೀಯ ವಿದ್ವಾಂಸರುಗಳು ಭಾಷಣ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಹೌಸ್ ರೆಂಟ್ ಕಂಟ್ರೋಲರ್

ಮೈಸೂರು ೨೪

ಮೈಸೂರು ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟರಾದ ಶ್ರೀ ಪಿ.ಎಸ್. ರಾಜಶೇಖರಪ್ಪನವರನ್ನು ಮನೆ ಬಾಡಿಗೆ ಹತೋಟಿಯ ಅಧಿಕಾರಿಯನ್ನಾಗಿ ನೇಮಿಸಲಾಗಿದೆ.

ಸ್ವೀಕಾರ

ಶ್ರೀ ಎ. ರಾಮಸ್ವಾಮಿ ಅಯ್ಯರ್ ಸನ್ಸ್ ಮತ್ತು ಕಂಪೆನಿಯವರು ಕಳುಹಿಸಿರುವ ೧೯೫೪ ನೇ ಸಂತಾನ ಸಿಂಧೂರ್ ಪಾಕೆಟ್ ಕ್ಯಾಲೆಂಡರ್ ಆದರದಿಂದ ಸ್ವೀಕರಿಸಿದ್ದೇವೆ.

ಪಾಕ್-ಅಮೆರಿಕಾ ಮಿಲಿಟರಿ ನೆರವು

ವಸಾಹಿತು ಆಡಳಿತವನ್ನು ಪುನಃ ಆಹ್ವಾನಿಸಿದಂತೆ

ಲೋಕಸಭೆಯಲ್ಲಿ ನೆಹರು ಹೇಳಿಕೆ

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವೆ ಮಿಲಿಟರಿ ನೆರವಿನ ವಿಷಯ ಅಥವ ಅಮೆರಿಕಾಕ್ಕೆ ಪಾಕೀಸ್ತಾನದಲ್ಲಿ ನೆಲೆಗಳನ್ನು ಕಲ್ಪಿಸುವ ವಿಷಯದಲ್ಲಿ ಭೇದವೇನೂ ಇಲ್ಲ. ಪೂರ್ವ ರಾಷ್ಟ್ರಗಳಿಗೆ ಪಾಶ್ಚಿಮಾತ್ಯ ರಾಷ್ಟ್ರಗಳು ಪುನಃ ಈರೀತಿಯ ನೆರವು ಕೊಡುವುದೆಂದರೆ ಹಿಂದಿನ ಚರಿತ್ರೆಯನ್ನು ನಾವು ಜ್ಞಾಪಿಸಿಕೊಳ್ಳಬೇಕಾಗಿದೆ ಪುನಃ ವಸಾಹಿತು ಪ್ರಾಂತ್ಯರಚನೆಗೆ ಆಹ್ವಾನವಿತ್ತು ನಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುವ ಪರಿಸ್ಥಿತಿಯುಂಟಾಗುವಂತಾಗುತ್ತದೆ.

ಈರೀತಿ ನೆರವು ಪಡೆಯುವುದರಿಂದ ಪಾಕೀಸ್ತಾನವು ಬಲವಾಗುವುದಿಲ್ಲ ಬಲಗುಂದುತ್ತದೆ ಎಂದು ಪ್ರಧಾನಿ ನೆಹರೂರವರು ನಿನ್ನೆಯದಿವ ಪಾರ್ಲಿಮೆಂಟಿನಲ್ಲಿ ಭಾರತ ವಿದೇಶಾಂಗನೀತಿಯ ವಿಷಯದಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಈ ರೀತಿಯಾಗಿ ಪ್ರಬಲ ರಾಷ್ಟ್ರವೊಂದು ಪಾಕೀಸ್ತಾನಕ್ಕೆ ಮಿಲಿಟರಿ ನೆರವು ನೀಡಿದರೆ ಪಾಕೀಸ್ತಾನ ಸಮಸ್ಯೆಗಳನ್ನೆಲ್ಲಾ ಬೇರೇ ದೃಷ್ಟಿಕೋಣದಿಂದ ನೋಡಬೇಕಾಗುತ್ತದೆ. ಎಂದು ನೆಹರು ತಿಳಿಸಿದ್ದಾರೆ.

ಏಷ್ಯದ ನಾಯಕತ್ವದ ವಿಷಯದಲ್ಲಿ ಅವರು ಪ್ರಸ್ತಾಪಿಸುತ್ತ ಭಾರತಕ್ಕೆ ಏಷ್ಯ ಅಥವಾ ಯಾವ ದೇಶದ ನಾಯಕತ್ವ ಬೇಕಾಗಿಲ್ಲ. ಅಂಥಹ ನಾಯಕತ್ವದಲ್ಲಿ ನಮಗೆ ನಂಬಿಕೆಯೂ ಇಲ್ಲ. ಎಲ್ಲ ರಾಷ್ಟ್ರಗಳ ಸಹಕಾರದಲ್ಲಿ ಮಾತ್ರ ನಮಗೆ ಭರವಸೆಯಿದೆ ಎಂದು ಅವರು ತಿಳಿಸಿದ್ದಾರೆ.

ರೇಷನ್ ಡಿಪೋ ರಜಾ

ಮೈಸೂರು ೨೪

ರಾಜಧಾನಿಯಲ್ಲಿರುವ ಎಲ್ಲಾ ರೇಷನ್ ಡಿಪೋ ಮೊಹಲ್ಲಾ ಗೋಡೌನ್‌ಗಳು ಮತ್ತು ಮೋತೀಖಾನೆ ಡಿಪೋಗಳನ್ನು ಕ್ರಿಸ್‌ಮಿಸ್ ಹಬ್ಬದ ಪ್ರಯುಕ್ತ ನಾಳೆ ಮತ್ತು ಜನವರಿ ಒಂದನೇ ತಾರೀಖು ಮುಚ್ಚಲಾಗುತ್ತದೆ ಎಂದು ರೇಷನ್ ಅಧಿಕಾರಿಗಳು ತಿಳಿಸಿದ್ದಾರೆ.

ಪುರಸಭಾಧಿವೇಶನ

ಮೈಸೂರು ಪುರಸಭೆಯ ಮಾಹೆಯಾನ ಅಧಿವೇಶನವು ೨೬ ನೇತಾರೀಖು ಶನಿವಾರ ಮಧ್ಯಾಹ್ನ ೪ ಗಂಟೆಗೆ ನಡೆಯುತ್ತದೆ.

ಮುಖ್ಯಮಂತ್ರಿಗಳ ಮೇಲೆ ಕೈಮಾಡಿದವನ ಮೇಲಿನ ಮೊಕದ್ದಮೆ

ಬೆಂಗಳೂರು ೨೪

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನ ವರಮೇಲೆ ಕಳೆದ ೨೬ನೇ ತಾರೀಖು ಕೈಮಾಡಿದನೆಂಬ ಆಪಾದನೆಮೇಲೆ ಖೈದಿ ಮಾಧು ಉರುಫ್ ಮಹದೇವ ಎಂಬುವನು ನಿನ್ನೆಯದಿನ ಕೋರ್ಟಿನಲ್ಲಿ ಮಾತನಾಡುತ್ತಾ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕೋರ್ಟಿಗೆ ಬಂದಮೇಲೆ ನಾನು ಹೇಳಿಕೆ ಕೊಡುತ್ತೇನೆ. ನನಗೆ ಈ ಸಂಸ್ಥಾನದಲ್ಲಿ ವಿಚಾರಣೆ ಆಗುವುದು ಇಷ್ಟವಿಲ್ಲ. ವಿಚಾರಣೆಗೆ ಸ್ಪೆಷಲ್ ಕೋರ್ಟು ಏರ್ಪಾಡಾಗಬೇಕು. ಹೊರಗಿನಿಂದ ನ್ಯಾಯಾಧೀಶರು ಬರಲಿ ಎಂದು ತಿಳಿಸಿದ್ದಾನೆ.

ಮೊಕದ್ದಮೆಯನ್ನು ವರ್ಗಾಯಿಸಲು ಸುಪ್ರೀಂಕೋರ್ಟಿಗೆ ಅರ್ಜಿಯನ್ನು ಸಲ್ಲಿಸಲು ಕಾಲಾವಕಾಶವಿತ್ತು ವಿಚಾರಣೆಯನ್ನು ಜನವರಿ ೨ನೇ ತಾರೀಖಿಗೆ ಮುಂದುವರಿಸಲಾಗಿದೆ.

ಸಚಿವರ ಪ್ರವಾಸ

ಬೆಂಗಳೂರು ೨೪

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇದೇ ೨೬ನೇ ತಾರೀಖಿನಿಂದ ೩೦ ನೇ ತಾರೀಖಿನವರೆಗೆ ಮೈಸೂರು ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಾರೆ.

ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ಟಿ. ಚನ್ನಯ್ಯನವರು ಇದೇ ೨೬ನೇ ತಾರೀಖು ಕಾರಾಪುರಕ್ಕೆ ತೆರಳಿ ೨೯ರವರೆಗೆ ಅಲ್ಲಿಯೇ ಇದ್ದು ಅನಂತರ ಮೈಸೂರಿಗೆ ಹಿಂತಿರುಗುವರು.

ಹೊಸ ಆರ್ಡಿನೆನ್ಸ್

ಮೈಸೂರು ಪರಸ್ಪರ ಸಹಾಯ ಸಂಘಗಳ ೧೯೪೭ನೇ ಇಸವಿಯ ಕಾನೂನು ಬಳ್ಳಾರಿಜಿಲ್ಲೆಗೆ ಅನ್ವಯಿಸುವಂತೆ ಮೈಸೂರು ಸರ್ಕಾರವು ಒಂದು ಆರ್ಡಿನೆನ್ಸ್ ಹೊರಡಿಸಿದೆ.

○ ಬ್ರಿಟನ್, ಭಾರತಮತ್ತು ಸಿಂಹಳ ಈಮೂರುದೇಶಗಳ ಪ್ರತಿನಿಧಿಗಳ ಮೂರುಸದಸ್ಯರಿಗೆ ಸಮಿತಿಯೊಂದನ್ನು ಸಿಂಹಳಸರ್ಕಾರ ರಚಿಸುವುದಾಗಿ ತಿಳಿಯಬರುತ್ತದೆ.

ಕ್ರಿಮಿನಲ್ ಪ್ರೊಸೀಜರ್ ಕೋಡಿನ ತಿದ್ದುಪಡಿ

ಹಲವು ಹೊಸ ಸುಧಾರಣೆಗಳು ಆಗುವುವು

ಭಾರತ ಸರ್ಕಾರದವರು ಕ್ರಿಮಿನಲ್ ಪ್ರೊಸೀಜರ್ ಕೋಡಿಗೆ ತಿದ್ದುಪಡಿ ಸೂಚಿಸಲಿದ್ದು ಅದನ್ನು ನಿನ್ನೆ ಗೆಜೆಟ್ಟಿನಲ್ಲಿ ಪ್ರಕಟಿಸಿರುವರು. ಇದರಿಂದ ಹೊಸ ಸುಧಾರಣೆ ಆಗುವುದೆಂದು ಹೇಳಲಾಗಿದೆ. ಅಸೆಸರುಗಳ ಸಹಾಯದಿಂದ ವಿಚಾರಣೆ ನಡೆಸುವುದು ವಜಾ ಆಗುತ್ತವೆ. ಸರ್ಕಾರಿ ಉದ್ಯೋಗಸ್ಥರ ಸಾರ್ವಜನಿಕ ಸೇವೆಯ ರಕ್ಷಣೆಗೆ ಮಾನನಷ್ಟದ ಕಾನೂನನ್ನು ವಿಸ್ತರಿಸಿ ಅಶ್ಲೀಲವಾದ ಬರವಣಿಗೆಗಳನ್ನೂ, ಅವಮಾನಕರವಾದ ಲೇಖನಗಳನ್ನೂ ಶಾಸನ ವಿಧಿಯಲ್ಲಿ ಬರುವಂತೆ ಮಾಡಲಾಗುವುದು.

ಸೆಕ್ಷನ್ ೫೦೦ರ ಪ್ರಕಾರ ಬರುವ ತಕ್ಸೀರುಗಳು ನಾನ್ ಕಾಗ್ನಿಬಲ್ ಆಗಿರುವುದರಿಂದ ಅದನ್ನು ತಪ್ಪಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಗೌರ್ನರ್‌ಗಳ ಮೇಲೆ ಮಾನನಷ್ಟದ ಲೇಖನಗಳು ಬಂದರೆ ಅವರ ಸಾಕ್ಷ್ಯಕ್ಕಾಗಿ ಕಮಿಷನ್ ಏರ್ಪಡಿಸಲಾಗುವುದು ಸೆಷನ್ಸ್ ಕಮಿಟಲ್ ನಡುವಳಿಕೆಗಳನ್ನ ವಜಾ ಮಾಡಲಾಗುವುದು.

ಜೂರಿ ಪದ್ಧತಿಯನ್ನು ಮುಂದುವರಿಸಿ ಸ್ತ್ರೀಯರು ಜೂರಿಗಳಾಗಲು ಅವಕಾಶ ಕಲ್ಪಿಸಲಾಗುವುದು.

ಸುಳ್ಳುಸಾಕ್ಷಿ ಕೊಡುವವರನ್ನು ಆಗಲೇ ಅಲ್ಲಿಯೆ ವಿಚಾರಿಸಿ ಶಿಕ್ಷಿಸಬಹುದು; ಒಂದು ತಿಂಗಳ ಶಿಕ್ಷೆ ಜುಲ್ಮಾನೆ ಅಥವಾ ಎರಡನ್ನೂ ಅಲ್ಲಿಯೆ ವಿಧಿಸಬಹುದು.

ಸಮನ್ಸ್ ನಿರಾಕರಿಸಿದವರನ್ನು ಸಮ್ಮರಿಯಾಗಿ ಹದಿನೈದು ದಿನಗಳ ಜೈಲುಶಿಕ್ಷೆಗೂ ೫೦ ರೂ ಜುಲ್ಮಾನೆಗೂ ಗುರಿಪಡಿಸಬೇಕು.

ಪೋಲೀಸರು ಛಾರ್ಜ್‌ಷೀಟು ಹಾಕಿದ ಆರು ವಾರಗಳೊಳಗೆ ಮ್ಯಾಜಿಸ್ಟ್ರೇಟರು ಮೊಕದ್ದಮೆಯನ್ನು ಮುಗಿಸಬೇಕು. ಇವೇ ಮುಂತಾದುವು ಮಸೂದೆಯ ಮುಖ್ಯಾಂಶಗಳು.

ಜವಳಿ ವರ್ತಕರ ಸಂಘ ನೂತನ ಅಧಿಕಾರ ವರ್ಗ

ಜವಳಿ ವರ್ತಕರ ಸಂಘದ ಕಾರ್ಯನಿರ್ವಾಹಕ ಸಮಿತಿಸಭೆ ನಡೆದು ಶ್ರೀ ಯು. ಎಲ್. ರಾಮಚಂದ್ರರಾಯರು ಅಧ್ಯಕ್ಷರಾಗಿ ಶ್ರೀ ಪಿ ಎಸ್. ರಾಜಾರಾಂರಾವ್ ಉಪಾಧ್ಯಕ್ಷರಾಗಿ, ಶ್ರೀ ಬಿ. ಎಸ್. ರುದ್ರಪ್ಪ ಕಾರ್ಯದರ್ಶಿಯಾಗಿ, ಶ್ರೀ ನೂರ್‌ಮಹಮದ್ ಸಾಹೇಬ್ ಸಹ ಕಾರ್ಯದರ್ಶಿಯಾಗಿ, ಶ್ರೀ ಕಮಲಾಂಬ ರಿ.ಬಿ ಮೆ. ಹೆಚ್ ಸ್ವೀಶ್ವರರವರು ಖಜಾಂಜಿಗಳಾಗಿ ಚುನಾಯಿಸಲ್ಪಟ್ಟರು.

ಅಂಚೆ ರಜ

ಕ್ರಿಸ್‌ಮಸ್ ಹಬ್ಬದ ಪ್ರಯುಕ್ತ ನಾಳೆ ದಿನ ಅಂಚೆ ಮತ್ತು ತಂತಿ ರಜವನ್ನಾಗಿ ಪರಿಗಣಿಸಲಾಗುತ್ತದೆ.

ರಷ್ಯಾ ಮಾಜಿ ಸಚಿವ ಬೆರಿಯಾರನ್ನು ಗುಂಡಿಟ್ಟು ಕೊಲ್ಲಲಾಯಿತು

ರಷ್ಯಾ ಸುಪ್ರೀಂಕೋರ್ಟಿನ ಮರಣದಂಡನೆ ಆಜ್ಞೆಯಂತೆ

ರಷ್ಯಾದ ಸಚಿವರಾಗಿದ್ದು ರಾಷ್ಟ್ರದ್ರೋಹ ಆಪಾದನೆಯ ಮೇಲೆ ಕಳೆದ ಜೂನ್ ತಿಂಗಳಿನಲ್ಲಿ ಕೆಲಸದಿಂದ ನಿವೃತ್ತಿಗೊಳಿಸಿ ವಿಚಾರಣೆಗೊಳಪಡಿಸಿದ್ದ ಮಿ| ಬೆರಿಯಾರವರನ್ನು ಗುಂಡಿಟ್ಟು ಕೊಲ್ಲಲಾಯಿತೆಂದು ತಿಳಿಯಬರುತ್ತದೆ. ಅವರೊಡನೆ ಅವರ ಅನುಯಾಯಿಗಳಾದ ೬ ಜನರನ್ನು ಅದೇರೀತಿ ಕೊಲ್ಲಲಾಯಿತು.

ರಾಷ್ಟ್ರದ್ರೋಹದ ಆಪಾದನೆಯಮೇಲೆ ಇವರಿಗೆಲ್ಲಾ ಅಲ್ಲಿಯ ಸುಪ್ರೀಂಕೋರ್ಟು ಮರಣದಂಡನೆಯನ್ನು ವಿಧಿಸಿತ್ತು ಇವರೆಲ್ಲರಿಗೂ ಸೇರಿದ ಎಲ್ಲಾ ಆಸ್ತಿ ಪಾಸ್ತಿಗಳನ್ನು ಸರ್ಕಾರವು ಮುಟ್ಟುಗೋಲು ಹಾಕಿಕೊಳ್ಳುವಂತೆ ಆಜ್ಞೆ ಮಾಡಲಾಗಿದೆ.

ತೆಲಂಗಾಣ ಪ್ರಾಂತ್ಯ

ಅಖಿಲ ತೆಲಂಗಾಣ ಪ್ರಜಾಸೋಷಲಿಸ್ಟ್ ಕೆಲಸಗಾರರ ಪಕ್ಷವು ತನ್ನ ಸಮ್ಮೇಳನದಲ್ಲಿ ಪ್ರತ್ಯೇಕ ತೆಲಂಗಾಣ ಪ್ರಾಂತ್ಯವನ್ನು ರಚಿಸಬೇಕೆಂದು ನಿರ್ಣಯಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೩—೧೨—೧೯೫೩

ಪಲ್ಲ	ರೂ.	ಆ	ರೂ.	ಆ
ಕಡಲೇಕಾಯಿ	೧೮—೨		೨೨	೧೨
ಎಳ್ಳು	—		—	
ಹುರಳಿ	೩೪—೨		೩೯—೨	
ಹೊಂಗೆಬೀಜ	—		—	
ಹುಚ್ಚೆಳ್ಳು	೩೫—೪		೪೧—	
ದೆಕ್ಷ	—		—	
ಹುರಳಿ	೨೭—೧೦		೩೦—೧೨	
ಉದ್ದು	—		—	
ಹೆಸರು	೩೦—೬		೪೨—೧೪	
ಅವರೆ	—		—	
ಅಲಸಂದೆ	೨೯—೨		೪೭—೧೪	
ಮೆಣಸಿನಕಾಯಿ	೧೪—		೩೭—೬	
ಸೀಗೆಕಾಯಿ	—		—	
ತೆಂಗಿನಕಾಯಿ	೯೦—		೨೭೦—	

ಪ್ರಭಾ ಇಂದಿನಿಂದ ಅಮೋಘ ಪ್ರಾರಂಭ
ಪ್ರತಿದಿನ 3 ಪ್ರದರ್ಶನಗಳು
ಕೊಲಂಬಿಯಾ ಪಿಕ್ಚರ್ಸ್‌ನವರ ವರ್ಣರಂಜಿತ ಹಿಂದಿ ಚಿತ್ರ
★ ಚಿರಾಗ್-ಅಲ್ಲಾದೀನ್ ★
ಬೆಳಗಿನ ಪ್ರದರ್ಶನ 25-12-53 ರಿಂದ
ಗೀತಾಬಾಲಿ, ದೇವಾನಂದ್, ಕಲ್ಪನಾ, ಕಾರ್ತಿಕ್ ನಟಿಸಿರುವ ನವಕೇತನ್‌ರವರ ○ ಬಾಜಿ ○

ನಿವಾರಕ ಬಂಧನ ಶಾಸನ ಮುಂದುವರಿಸಲು ಒಪ್ಪಿಗೆ

ಭಾರತಾದ್ಯಂತ ಈಗ ಜಾರಿಯಲ್ಲಿರುವ ನಿವಾರಕ ಬಂಧನ ಶಾಸನವನ್ನು ಮುಂದಿನ ವರ್ಷಾಂತ್ಯದವರೆಗೆ ಮುಂದುವರಿಸಲು ಭಾರತ ಉಭಯ ಶಾಸನಸಭೆಗಳು ಒಪ್ಪಿಗೆಯನ್ನಿತ್ತಿವೆ. ಈ ಶಾಸನವನ್ನು ಮುಂದುವರಿಸುವುದು ಅನವಶ್ಯಕವೆಂದು ವಿರೋಧಪಕ್ಷದ ಶ್ರೀ ಎಂ ಎಸ್. ಗುರುಪಾದಸ್ವಾಮಿಯವರು ಮಂಡಿಸಿದ್ದ ನಿರ್ಣಯವು ಲೋಕಸಭೆಯಲ್ಲಿ ೨೦೬-೯೧ ಓಟುಗಳಿಂದ ತಿರಸ್ಕೃತವಾಯಿತು.

ಮಾಜಿ ಮುಖ್ಯಮಂತ್ರಿಯ ದಾನ

ಮದ್ರಾಸಿನ ಮಾಜಿ ಮುಖ್ಯಮಂತ್ರಿ ಶ್ರೀ ಓ. ಪಿ. ರಾಮಸ್ವಾಮಿ ರಾಜಾರವರು ತಮ್ಮ ಗ್ರಾಮ ರಾಜಪಾಳ್ಯದಲ್ಲಿ ಸುಮಾರು ೫೦೦೦೦ ರೂ. ಬೆಲೆಬಾಳುವ ಗೃಹವನ್ನು ಸಾರ್ವಜನಿಕ ಉಪಯೋಗಕ್ಕಾಗಿ ದಾನ ಮಾಡಿದ್ದಾರೆ.

ಹಿಂದೆ ಮಹಾತ್ಮಗಾಂಧಿ, ನೆಹರೂ, ರಾಜೇಂದ್ರಪ್ರಸಾದ್ ಮುಂತಾದವರು ಈ ಭಾಗಕ್ಕೆ ಭೇಟಿಯಿತ್ತಾಗ ಈ ಮನೆಯಲ್ಲಿ ತಂಗಿದ್ದರು. ಅದರ ಜ್ಞಾಪಕಾರ್ಥವಾಗಿ ಈ ದಾನವನ್ನು ಮಾಡಲಾಗಿದೆ

ಗ್ರಂಥಕರ್ತರಿಗೆ ಆರ್ಥಿಕ ನೆರವು

ದೆಹಲಿಯಲ್ಲಿ ಉರ್ದು ಗ್ರಂಥಕರ್ತರಾದ ಹಾಜಿ ರಾಹಿಯುದ್ದೀನ್ ಬಾಯ್ ಖೂದ್ ಎಂಬುವರಿಗೂ ಹಿಂದಿ ಗ್ರಂಥಕರ್ತರಾದ ಶ್ರೀ ಚಂದ್ರಶೇಖರಶಾಸ್ತ್ರಿ ಎಂಬುವರಿಗೂ ಭಾರತ ಸರ್ಕಾರವು ಇದೇ ನವಂಬರ್ ಮಾಹೆಯಿಂದ ಒಂದುವರ್ಷಕಾಲ ಮಾಸೆಯಾನಾ ೧೫೦ ರೂ. ಗಳ ಗ್ರಾಂಟನ್ನು ಮಂಜೂರ್ಮಾಡಿದೆ.

ರಾಜಕಮಲ್
25-12-53ರಿಂದ ಅಮೋಘಪ್ರಾರಂಭ
ರಾಜ್ಯಂ ಪಿಕ್ಚರ್ಸ್‌ರವರ: —
★ ದಾಸಿ ★ [ತೆಲುಗು]
ಪಾತ್ರ: —ಲಕ್ಷ್ಮಿರಾಜ್ಯಂ, ಶಾಂತಕುಮಾರಿ, ಎನ್. ಟಿ. ರಾಮರಾವ್, ಎಸ್.ವಿ. ರಂಗರಾವ್, ರೇಲಂಗಿ.

ಅಮೆರಿಕಾ ವ್ಯಾಪಾರ ಪರಿಷೆಯಲ್ಲಿ ಭಾರತದ ಸರಕುಗಳ ಪ್ರದರ್ಶನ

ಸಿಯಾಟಲ್ ವಾಷಿಂಗ್ಟನ್ ಡಿಸೆಂಬರ್ ೨೩.

ಇಲ್ಲಿ ಫೆಬ್ರವರಿ ೧೧ ರಿಂದ ೨೪ ರವರೆಗೆ ಜರಗಲಿರುವ ತೃತೀಯ ಅಂತರ ರಾಷ್ಟ್ರೀಯ ವ್ಯಾಪಾರ ಪರಿಷೆಯಲ್ಲಿನ ೧೪೫ ಬೂತ್‌ಗಳ ಪೈಕಿ ೧೦ ಬೂತ್‌ಗಳನ್ನು ಭಾರತದ ಪ್ರದರ್ಶಕರು ಕಾದಿರಿಸಿದ್ದಾರೆ ಎಂಬುದಾಗಿ ಪರಿಷೆಯ ವ್ಯವಸ್ಥಾಪಕ ಅಧಿಕಾರಿಗಳು ತಿಳಿಸಿದ್ದಾರೆ.

ಏಷ್ಯಾ ಮತ್ತು ಪ್ಯಾಸಿಫಿಕ್ ಪ್ರದೇಶದ ೨೩ ರಾಷ್ಟ್ರಗಳ ಸರಕುಗಳ ಪ್ರದರ್ಶನವನ್ನೇರ್ಪಡಿಸುವ ೧೯೫೪ ನೇ ಪರಿಕ್ಷೆಯು ವಾಷಿಂಗ್ಟನ್ ಸಂಸ್ಥಾನ ಸರ್ಕಾರದಿಂದ ಮತ್ತು ಖಾಸಗಿ ಮಂತಿಗೆಗಳಿಂದ ಜರಗಿಸಲ್ಪಡುವುದು.

ಈ ಗಾಗಲೇ ಬೂತ್‌ಗಳನ್ನು ಕಾದಿರಿಸಿದ ರಾಷ್ಟ್ರಗಳ ಪೈಕಿ ಜಪಾನ್‌ಗೆ ಅಗ್ರಸ್ಥಾನ ಸಲ್ಲುತ್ತದೆ. ಜಪಾನ್ ೬೦ ಬೂತ್‌ಗಳನ್ನು ಹಾಂಗ್‌ಕಾಂಗ್ ೧೬ ಬೂತ್‌ಗಳನ್ನು ಕಾದಿರಿಸಿದೆ. ಪಾಕೀಸ್ಥಾನವು ಒಂದು ಬೂತನ್ನು ಬರ್ಮಾ ನಾಲ್ಕು ಬೂತ್‌ಗಳನ್ನು, ಸಿಂಹಳ ಎರಡು ಬೂತ್‌ಗಳನ್ನು ಮತ್ತು ಫಿಲಿಪೈನ್ಸ್ ನಾಲ್ಕು ಬೂತ್‌ಗಳನ್ನು ಕಾದಿರಿಸಿದೆ.

ರಾಜ್ಯಚಿಹ್ನೆ ಬರೆದವರಿಗೆ ಬಹುಮಾನ

ಆಂಧ್ರ ರಾಜ್ಯ ಚಿಹ್ನೆಯನ್ನು ಬರೆದ ಶ್ರೀ ಸೂರಿಚೆಟ್ಟಿ ಆಂಜನೇಯಲು ಎಂಬುವರಿಗೆ ಅಲ್ಲಿಯ ಸರ್ಕಾರವು ೫೦೧ ರೂಪಾಯಿಗಳ ಬಹುಮಾನವನ್ನು ಕೊಟ್ಟಿದೆ.

ತಿರುವಾಂಕೂರ್--ಕೊಚ್ಚಿಗೆ ಮೈಸೂರು ಅಕ್ಕಿ

ತಿರುವಾಂಕೂರ್-ಕೊಚ್ಚಿ ಪ್ರಾಂತ್ಯಕ್ಕೆ ಮೈಸೂರು ೧೫೦೦ ಟನ್ ಅಕ್ಕಿಯನ್ನು ಕಳೆದವಾರ ಸರಬರಾಜು ಮಾಡಿದೆ.

ಅಪೆರಾ
18–12–53ರಿಂದ ಅಮೋಘ ಪ್ರಾರಂಭ
ಆರ್. ಎನ್. ಪಿಕ್ಚರ್ಸ್‌ರವರ
ಜಾತಕ ಫಲ
(ಕನ್ನಡ)
ಪಾತ್ರ: —ಆರ್ ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

[redacted]
ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋ॰ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೦೩

೨೬-೧೨-೧೯೫೩ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಸಂಸ್ಕೃತದ ಬಗ್ಗೆ ಸಂಶೋಧನೆ

ಮೈಸೂರು ೨೬.

ಭಾರತದ ಅತಿ ಪ್ರಾಚೀನ ಭಾಷೆಯಾದ ಸಂಸ್ಕೃತದ ಬಗ್ಗೆ ಸಂಶೋಧನೆ ನಡೆಸಲು ತಾವು ಒಂದು ಕೇಂದ್ರವನ್ನು ಏರ್ಪಡಿಸಿ, ೧ಲಕ್ಷ ರೂ. ನಿಧಿಯನ್ನು ಕೊಟ್ಟಿರುವುದಾಗಿಯೂ, ಅಂತಹ ಕೇಂದ್ರಗಳನ್ನು ಪ್ಯಾರಿಸ್ ಮುಂತಾದ ಕಡೆಗಳಲ್ಲಿ ಈಗ ತೆರೆಯಲಾಗಿದೆಯೆಂದೂ ಇತ್ತೀಚೆಗೆ ಮೈಸೂರಿಗೆ ಭೇಟಿ ಇತ್ತ ಅಣ್ಣಾಮಲೆ ವಿಶ್ವ ವಿದ್ಯಾನಿಲಯದ ಉಪಸ್ಥಾನಪತಿ ಡಾ|| ಸಿ. ಪಿ. ರಾಮಸ್ವಾಮಿಅಯ್ಯರ್‌ರವರು ತಿಳಿಸಿದ್ದಾರೆ.

ವಿಜ್ಞಾನ, ಬುದ್ಧಿ, ಮಾಯ ಮುಂತಾದ ವಿಷಯಗಳಲ್ಲಿ ಸಂಶೋಧನೆ ಮತ್ತು ಒಂದು ನಿಘಂಟನ್ನು ಏರ್ಪಡಿಸಲು ತಮಗೆ ಫ್ರಾನ್ಸ್, ಇಟಲಿ, ಭಾರತ ಮುಂತಾದ ದೇಶಗಳ ಪ್ರವೀಣರ ಸಹಾಯ ದೊರಕಿದೆಯೆಂದೂ ಅವರು ಹೇಳಿದ್ದಾರೆ.

ಅಖಿಲಭಾರತ ಪ್ರಾವಿಡೆಂಟ್ ನಿಧಿ ಯೋಜನ ಸಮ್ಮೇಳನ

ಮೈಸೂರು ೨೬

ಮುಂದಿನ ತಿಂಗಳು ೧೧ನೇ ತಾರೀಖಿನಿಂದ ೧೩ನೇ ತಾರೀಖಿನವರೆಗೆ ಅಖಿಲ ಭಾರತ ಪ್ರದೇಶಿಕ ಪ್ರಾವಿಡೆಂಟ್ ನಿಧಿ ಯೋಜನಾ ಸಮ್ಮೇಳನವು ರಾಜಧಾನಿಯಲ್ಲಿ ನಡೆಯುತ್ತದೆ.

ಸರ್ಕಾರಿ ಸುದ್ದಿ

ಫಾರೆಸ್ಟ್ ರೇಂಜರ್ ಶ್ರೀ ಪಿ. ಎಂ. ಮಾನಪ್ಪನವರಿಗೆ ಸಬ್ ಅಸಿಸ್ಟೆಂಟ್ ಕನ್ಸರ್ವೇಟರ್ ಆಗಿ ಬಡ್ತಿ ಕೊಟ್ಟು ಗೇಂ ಪ್ರಿಸರ್ವ್ ಆಫೀಸರಾಗಿ ನೇಮಿಸಲಾಗಿದೆ.

ಅರಮನೆ ಧರ್ಮಾಧಿಕಾರಿ ಶ್ರೀ ರಾಘವೇಂದ್ರಾಚಾರ್ಯರನ್ನು ಅರಮನೆ ಮುಜರಾಯಿ ಸಂಸ್ಥೆಗಳ ಧರ್ಮದರ್ಶಿಯನ್ನಾಗಿ ನೇಮಿಸಲಾಗಿದೆ.

ಮೆನನ್-ಮೊಲಟಾಫ್ ಭೇಟಿ

ರಷ್ಯಾದಲ್ಲಿರುವ ಭಾರತ ರಾಯಭಾರಿ ಶ್ರೀ ಕೆ. ಪಿ. ಎಸ್. ಮೆನನ್‌ರವರು ನಿನ್ನೆಯದಿನ ರಷ್ಯಾ ವಿದೇಶಾಂಗ ಸಚಿವ ಮೊಲಟಾಫ್‌ರವರನ್ನು ಭೇಟಿಮಾಡಿ ಸುಮಾರು ಅರ್ಧಗಂಟೆ ಕಾಲ ರಹಸ್ಯ ಮಾತುಕತೆಗಳನ್ನು ನಡೆಸಿದರೆಂದು ವರದಿಯಾಗಿದೆ.

ಅನಂತರ ಈ ಮಾತುಕತೆಗಳ ವಿಷಯದಲ್ಲಿ ಯಾವ ವಿವರಗಳನ್ನು ತಿಳಿಸಲು ಅವರು ನಿರಾಕರಿಸಿದರು.

ಪಾಕೀಸ್ತಾನಕ್ಕೆ ವಿವಿಧ ರಾಷ್ಟ್ರ ನಾಯಕರ ಭೇಟಿ

ಪಾಕ್-ಅಮೆರಿಕಾ ಸೈನ್ಯ ಒಪ್ಪಂದಕ್ಕೆ ಬೆಂಬಲದ ಉದ್ದಿಶ್ಯ

ಇರಾಕಿನ ದೊರೆ ಫಜಲ್ ಈಜಿಪ್ಟಿನ ಅಧ್ಯಕ್ಷ ಜನರಲ್ ನಗೀಬ್, ಸೌದೆ ಅರೇಬಿಯ ದೊರೆ ಜಬನ್ ಸೌದ್‌ರು, ತುರ್ಕಿಯ ಅಧ್ಯಕ್ಷ ಸಿಲಾಲ್ ಬೆಯಾರ್ ಕೆನಡಾ, ಬರ್ಮಾ ಮತ್ತು ಸಿಂಹಳ ಪ್ರಧಾನಿ ಮುಂತಾದ ಹಲವಾರು ರಾಷ್ಟ್ರದ ನಾಯಕರು ಮುಂದಿನ ವರ್ಷಾರಂಭದಲ್ಲಿ ಪಾಕೀಸ್ತಾನಕ್ಕೆ ಭೇಟಿಕೊಡುವರೆಂದು ತಿಳಿಯ ಬರುತ್ತದೆ.

ವಿದೇಶಿ ರಾಷ್ಟ್ರದನಾಯಕರು ಹೀಗೆ ಪಾಕೀಸ್ತಾನಕ್ಕೆ ಭೇಟಿ ಕೊಡಲು ಆಹ್ವಾನವನ್ನು ಅಂಗೀಕರಿಸಿರುವುದು ರಾಜಕೀಯ ವೃತ್ತಗಳಲ್ಲಿ ಹೆಚ್ಚು ಪ್ರಾಶಸ್ತ್ಯವನ್ನು ಪಡೆದಿದೆ.

ಅಮೇರಿಕಾದೊಡನೆ ತಾನು ಮಾಡಿಕೊಳ್ಳಲಿರುವ ಸೈನ್ಯ ಒಪ್ಪಂದಕ್ಕೆ ಆ ದೇಶಗಳ ಬೆಂಬಲ ಪಡೆಯಲು ಪಾಕೀಸ್ತಾನವು ಇವರನ್ನೆಲ್ಲಾ ಆಹ್ವಾನಿಸಿರುವುದಾಗಿ ಹೇಳಲಾಗಿದೆ.

ಭಾರತ-ಪಾಕ್ ಪ್ರಧಾನಿಗಳ ಭೇಟಿ

ಕೂಡಲೇ ಆಗಬೇಕೆಂದು ಪಾಕ್ ರಾಯಭಾರಿಯ ಒತ್ತಾಯ

ಭಾರತ ಪ್ರಧಾನಿ ನೆಹರೂ ಮತ್ತು ಪಾಕೀಸ್ತಾನ ಪ್ರಧಾನಿಯವರ ಭೇಟಿಯು ಆದಷ್ಟು ಜಾಗ್ರತೆಯಾಗಿ ನಡೆಯಬೇಕೆಂದು ಭಾರತದಲ್ಲಿರುವ ಪಾಕೀಸ್ತಾನ್ ರಾಯಭಾರಿ ಮಿ|| ಘಜ್ನಫರ್ ಅಲಿ ಖಾನ್‌ರವರು ಹೇಳಿದ್ದಾರೆ.

ಪಾಕೀಸ್ತಾನವು ಯುದ್ಧಕ್ಕೆ ಬಲಿಯಾಗುತ್ತದೆ

ಅಮೆರಿಕಾದಿಂದ ಸೈನ್ಯ ನೆರವನ್ನು ಪಡೆದರೆ ಪಾಕೀಸ್ತಾನವು ತನ್ನ ಸ್ವಾತಂತ್ರ್ಯವನ್ನು ಕಳೆದುಕೊಂಡು, ಯುದ್ಧ ಹೋರಾಟದಲ್ಲಿ ಅದು ಬಲಿಯಾಗುವುದಾಗಿ ಕಾಶ್ಮೀರ ವಿದ್ಯಾಸಚಿವರೂ ಮತ್ತು ಅಲ್ಲಿಯರಾಜ್ಯಾಂಗ ಸಭಾಧ್ಯಕ್ಷ ಶ್ರೀ ಕೆ. ಎಂ. ಸಾದಿಕ್‌ರವರು ತಿಳಿಸಿದ್ದಾರೆ.

ಚರ್ಚಿಲರ ಬಗ್ಗೆ ಚಲನಚಿತ್ರ

ಬ್ರಿಟಿಷ್ ಪ್ರಧಾನಿ ಸರ್ ಚರ್ಚಿಲ್‌ರವರು ಹಿಂದೆ ಬೋಯರ್ ಯುದ್ಧದಲ್ಲಿ ವರದಿಗಾರರಾಗಿದ್ದ ವಿಚಾರವಲ್ಲಿ ಅಮೆರಿಕ ಫಿಲಂ ಕಂಪೆನಿಯವರು ಬಂದು ಚಿತ್ರವನ್ನು ತಯಾರಿಸಲು ಪ್ರಧಾನಿ ಅನುಮತಿ ಕೊಟ್ಟಿದ್ದಾರೆಂದು ಹೇಳಲಾಗಿದೆ.

ಭಾರತಕ್ಕೆ ರಷ್ಯಾ ವಿಜ್ಞಾನಿಗಳು

ಮುಂದಿನ ತಿಂಗಳು ಮೊದಲನೇ ವಾರದಲ್ಲಿ ಹೈದರಾಬಾದಿನಲ್ಲಿ ನಡೆಯಲಾಗುವ ವಿಜ್ಞಾನಿಗಳ ಸಮ್ಮೇಳನಕ್ಕೆ ರಷ್ಯಾದಿಂದ ವಿಜ್ಞಾನಿಗಳ ನಿಯೋಗವೊಂದು ಬರಲಿದೆಯೆಂದು ತಿಳಿಯಬರುತ್ತದೆ.

ಭಾರತಕ್ಕೆ ಫ್ರೆಂಚ್ ಕಲಾವಿದರು

ಫ್ರಾನ್ಸಿನ ೪೦ ಮಂದಿ ಕಲಾವಿದರು ಸದ್ಯದಲ್ಲೇ ಭಾರತದಲ್ಲಿ ಪ್ರವಾಸಮಾಡಿ, ಇತಿಹಾಸ ಪ್ರಸಿದ್ಧ ಸ್ಥಳಗಳಿಗೆ ಭೇಟಿಕೊಡುವರು.

ಬೆಂಕಿ ಅನಾಹುತದಿಂದ ಲಕ್ಷಾಂತರ ರೂಪಾಯಿಗಳ ಆಸ್ತಿ ನಷ್ಟ

ಪೂಣೆಯ ಅತಿ ಜನನಿಬಿಡವಾದ ಭವಾನಿ ಪೇಟೆಯಲ್ಲಿ ನಿನ್ನೆ ಬೆಳಗ್ಗೆ ಭಾರಿ ಬೆಂಕಿ ಅನಾಹುತ ಉಂಟಾಗಿ ೨೫ ಸಂಸಾರದವರು ಮನೆ ಮಠಗಳನ್ನು ಕಳೆದುಕೊಂಡು ನಿರ್ಗತಿಕರಾದರು. ಅಲ್ಲಿನ ಮಿಲಿಟರಿಯವರು ಮತ್ತು ಅಗ್ನಿ ಶಾಮಕ ದಳದವರು ೫ ಗಂಟೆ ಕಾಲ ಹೋರಾಡಿ ಬೆಂಕಿಯನ್ನು ಆರಿಸಲಾಯಿತು ಒಟ್ಟು ೨೦ ಲಕ್ಷ ಗ್ಯಾಲನ್ ನೀರನ್ನು ಉಪಯೋಗಿಸಲಾಯಿತು. ಅಗ್ನಿ ಶಾಮಕ, ಸೈನಿಕ ಮತ್ತು ಪೋಲೀಸ್ ದಳದವರು ಆದಿಯಾಗಿ ೬ ಜನರಿಗೆ ವಿಪರೀತ ಗಾಯವಾಗಿದೆ. ದೈವವಶಾತ್ ಯಾರಿಗೂ ಪ್ರಾಣಹಾನಿ ಸಂಭವಿಸಲಿಲ್ಲ. ಲಕ್ಷಾಂತರ ರೂಪಾಯಿಗಳ ಆಸ್ತಿಗೆ ನಷ್ಟವುಂಟಾಗಿದೆ.

ಭಾರತಕ್ಕೆ ಡಾ|| ಹಕ್ಸ್‌ಲೆ

೧೯೪೬ರಿಂದ ೧೯೪೮ರವರೆಗೆ ವಿಶ್ವಸಂಸ್ಥೆ ಪ್ರಥಮ ಡೈರೆಕ್ಟರ್ ಜನರಲ್ ಆಗಿದ್ದ ಪ್ರಸಿದ್ಧ ವಿಜ್ಞಾನಿ ಡಾ|| ಜೂಲಿಯನ್ ಹಕ್ಸ್‌ಲೆಯವರು ಹೈದರಾಬಾದಿನಲ್ಲಿ ನಡೆಯಲಿರುವ ಭಾರತ ವಿಜ್ಞಾನ ಸಮ್ಮೇಳನದಲ್ಲಿ ಭಾಗವಹಿಸಲು ಭಾರತಕ್ಕೆ ಮುಂದಿನ ತಿಂಗಳು ಆಗಮಿಸಲಿರುವರು.

ಸ್ಥಳೀಯಸಂಸ್ಥೆ ಪರಿಶೀಲನಾ ಸಮಿತಿ

ಬೆಂಗಳೂರು ೨೬

ಜಿಲ್ಲಾ ಬೋರ್ಡುಗಳನ್ನು ಮುಂದುವರಿಸುವ ಪ್ರಶ್ನೆಯನ್ನು ಪರಿಶೀಲಿಸಲು ಸರ್ಕಾರವು ನೇಮಿಸಿರುವ ಸಮಿತಿಯು ಶ್ರೀ ಡಿ. ಹೆಚ್ ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಮೊನ್ನೆಯ ದಿನ ನಡೆಯಿತು.

ಸಮಿತಿಯು ತನ್ನ ಮುಂದಿನ ಕಾರ್ಯದ ವಿಚಾರವಾಗಿ ಚರ್ಚೆ ನಡೆಸಿತೆಂದೂ, ಇದಕ್ಕೆ ಸಂಬಂಧಪಟ್ಟ ಸಾಕ್ಷ್ಯ, ಸಾಹಿತ್ಯಗಳು ಈಗಾಗಲೇ ಇರುವುದರಿಂದ ಪ್ರಶ್ನಾವಳಿ ತಯಾರಿಸಬೇಕಾಗಿಲ್ಲವೆಂದೂ ನಿರ್ಧರಿಸಲಾಯಿತೆಂದು ತಿಳಿಯಬರುತ್ತದೆ.

ಶಾಸನಸಭಾ ಸದಸ್ಯರನ್ನು ಉದ್ದೇಶಿಸಿ ನೆಹ್ರೂ ಭಾಷಣ

ಬೆಂಗಳೂರು ೨೬

ಪ್ರಧಾನಿ ನೆಹರೂರವರು ಮುಂದಿನ ತಿಂಗಳು ೪ನೇ ತಾರೀಖು ಬೆಳಗ್ಗೆ ೧೧ ರಿಂದ ೧ ಗಂಟೆಯವರೆಗೆ ರೆಸಿಡೆನ್ಸಿಯಲ್ಲಿ ಮೈಸೂರು ಶಾಸನಸಭೆಗಳ ಕಾಂಗ್ರೆಸ್ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡುತ್ತಾರೆ.

ಚಿತ್ರದುರ್ಗ-ರಾಯದುರ್ಗ ರೈಲ್ವೆ ಮಾರ್ಗ

ಚಿತ್ರದುರ್ಗದಿಂದ ರಾಯದುರ್ಗಕ್ಕೆ ರೈಲ್ವೆ ಮಾರ್ಗವನ್ನು ಹಾಕಿ ತನ್ಮೂಲಕ ಬಳ್ಳಾರಿಯನ್ನು ಚಿತ್ರದುರ್ಗದೊಂದಿಗೆ ಸಂಬಂಧಗೊಳಿಸಬೇಕೆಂದು ಚಿತ್ರದುರ್ಗದ ನಾಯಕರುಗಳ ಕೇಂದ್ರ ರೈಲ್ವೆ ಉಪಸಚಿವ ಶ್ರೀ ಅಲಗೇಶನ್‌ರನ್ನು ಚಿಕ್ಕಜಾಜೂರಿನಲ್ಲಿ ಭೇಟಿಮಾಡಿ ಒತ್ತಾಯಪಡಿಸಿದರು.

ಪಾರ್ಲಿಮೆಂಟ್ ಅಧಿವೇಶನ ಮುಕ್ತಾಯ

ಭಾರತ ಪಾರ್ಲಿಮೆಂಟು ಮತ್ತು ಹಿರಿಯ ಶಾಸನಸಭಾಧಿವೇಶನಗಳು ಮೊನ್ನೆಯದಿನ ಮುಕ್ತಾಯಗೊಂಡು ಅನಿರ್ಧಿಷ್ಟ ಕಾಲ ಮುಂದಕ್ಕೆ ಹೋದುವು.

ಕನ್ನಡ ಸಾಹಿತ್ಯ ಸಮ್ಮೇಳನ

ಉತ್ತರ ಕನ್ನಡ ಜಿಲ್ಲೆಯ ಕುಮಟಾದಲ್ಲಿ ೩೬ನೇ ಕನ್ನಡ ಸಾಹಿತ್ಯ ಸಮ್ಮೇಳನವು ಈದಿನ ಮೈಸೂರಿನ ಸುಪ್ರಸಿದ್ಧ ಕವಿ ಶ್ರೀ ವಿ. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು.

ತೇನ್‌ಸಿಂಗ್‌ರಿಗೆ ಇರಾನಿನ ಪ್ರಶಸ್ತಿ

ಹಿಮಾಲಯ ಪರ್ವತರೋಹಿ ತೇನ್‌ಸಿಂಗ್‌ರವರಿಗೆ ಇರಾನಿನ ಷಾರವರು ಅಲ್ಲಿನ ಉನ್ನತ ಪ್ರಶಸ್ತಿ ಪದಕವನ್ನು ಕೊಟ್ಟಿರುತ್ತಾರೆ.

ಆಗ್ನೇಯ ಏಷ್ಯಾ ರಾಷ್ಟ್ರಪ್ರಧಾನಿ ಸಮ್ಮೇಳನ

ವಿವಾದಾಸ್ಪದ ವಿಷಯದಲ್ಲಿ ಚರ್ಚೆಯಿಲ್ಲ

ಸಿಂಹಳ ಪ್ರಧಾನಿ ಕೋಟಿಲವಾಲಾರವರ ಹೇಳಿಕೆ

ಆಗ್ನೇಯ ಏಷ್ಯಾ ರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನವು ಕೊಲಂಬೊನಲ್ಲಿ ನಡೆವರೆ ತಮಗೆ ಅತ್ಯಂತ ಸಂತೋಷವೆಂದು ಸಿಂಹಳಪ್ರಧಾನಿ ಕೋಟಿಲವಾಲಾರವರು ಒಂದು ಹೇಳಿಕೆಯನ್ನಿತ್ತಿದ್ದಾರೆ.

ಅಲ್ಲಿ ನಡೆಯಲಿರುವ ಕಾರ್ಯಕಲಾಪಗಳ ವಿಷಯವಾಗಿ ಶ್ರೀ ಕೋಟಿಲವಾಲಾರವರು ಪ್ರಸ್ತಾಪಿಸಿ, ಅಂತರ ರಾಷ್ಟ್ರೀಯ ವಿಷಯಗಳು, ಆಗ್ನೇಯ ಏಷ್ಯಾ ರಾಷ್ಟ್ರಗಳಿಗೆ ನೇರವಾಗಿ ಸಂಬಂಧಪಡುವ ವಿಷಯಗಳು, ಅಲ್ಲಿ ಚರ್ಚಿಸಲಾಗುತ್ತವೆ ಯೆಂದೂ ಆದರೆ ವಿವಾದಾಸ್ಪದವಾದ ವಿಷಯಗಳನ್ನು ಚರ್ಚಿಸುವುದಿಲ್ಲವೆಂದೂ ಹೇಳಿದ್ದಾರೆ.

ಈ ಸಮ್ಮೇಳನಕ್ಕೂ ಪಾಕೀಸ್ತಾನ ಅಮೆರಿಕಾ ಸೈನ್ಯ ಒಪ್ಪಂದ ವಿಷಯಕ್ಕೂ ಏನೂ ಸಂಬಂಧವಿಲ್ಲವೆಂದೂ ಅವರು ತಿಳಿಸಿದ್ದಾರೆ.

ರಾಜಪ್ರಮುಖರ ಹುದ್ದೆ ರದ್ದಾಗಬೇಕು

ಪಾರ್ಲಿಮೆಂಟ್ ಸದಸ್ಯರ ನಿರ್ಧಾರ

ಭಾರತ ಪಾರ್ಲಿಮೆಂಟಿನ ಬಿ ಮತ್ತು ಸಿ ವಿಭಾಗದ ಪ್ರಾಂತ್ಯಗಳ ಸದಸ್ಯರುಗಳು ನಿನ್ನೆಯದಿನ ದೆಹಲಿಯಲ್ಲಿ ಸಭೆ ಸೇರಿ ಪ್ರಾಂತ್ಯಗಳ ಪುನಃ್ರಚನೆಗೆ ಉನ್ನತ ಮಂಡಲಿಯನ್ನು ಸರ್ಕಾರವು ನೇಮಿಸಿರುವುದನ್ನು ಸ್ವಾಗತಿಸುತ್ತಾ ಅದು ಮುಂದೆ ತಾವು ಇಡಬೇಕಾದ ವಿಷಯಗಳನ್ನು ಚರ್ಚಿಸಿದರೆಂದು ತಿಳಿದು ಬರುತ್ತದೆ.

ರಾಜಪ್ರಮುಖರ ಹುದ್ದೆಗಳನ್ನು ರದ್ದುಗೊಳಿಸಬೇಕು, ಎ.ಬಿ. ಮತ್ತು ಸಿ. ಪ್ರಾಂತ್ಯಗಳಲ್ಲಿ ರಾಜಕೀಯ ಆಡಳಿತ ಮುಂತಾದ ನಾನಾ ಭಿನ್ನತೆಗಳನ್ನು ತಪ್ಪಿಸಬೇಕು ಎಂಬ ನಿರ್ಣಯಗಳನ್ನು ಮಾಡಿ ಇವನ್ನು ಉನ್ನತ ಮಂಡಲಿಯ ಪರಿಶೀಲನೆಗೆ ತಪ್ಪಿಸಬೇಕೆಂದು ತೀರ್ಮಾನ ಮಾಡಿರುವುದಾಗಿ ತಿಳಿಯಬರುತ್ತದೆ

ಸಾರ್ವಜನಿಕ ಆರೋಗ್ಯಕ್ಕೆ ವೆಚ್ಚ

ಭಾರತದಲ್ಲಿ ಎಲ್ಲಾ ಪ್ರಾಂತ್ಯಗಳಿಗಿಂತ ತಿರುವಾಂಕೂರ್-ಕೊಚ್ಚಿ ಪ್ರಾಂತ್ಯದಲ್ಲಿ ಸಾರ್ವಜನಿಕ ಆರೋಗ್ಯಕ್ಕಾಗಿ ಹಣ ವೆಚ್ಚವಾಗುತ್ತಿರುವುದೆಂದು, ಅಲ್ಲಿಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ.

ಪ್ರಾಂತ್ಯದ ಹುಟ್ಟುವಳಿಯಲ್ಲಿ ಹತ್ತನೇ ಒಂದು ಭಾಗವು ಇದಕ್ಕಾಗಿ ವೆಚ್ಚವಾಗುತ್ತಿದೆ ಪ್ರತಿಯೊಬ್ಬ ಪ್ರಜೆಗಾಗಿ ವೆಚ್ಚ ರೂ. ೧-೧೧-೦ ಎಂದು ಅವರು ತಿಳಿಸಿದ್ದಾರೆ.

ಭಾರತೀಯ ಸಂಗೀತಕ್ಕೆ ಪ್ರೋತ್ಸಾಹ

ಭಾರತೀಯ ಸಂಗೀತ ಅಭಿವೃದ್ಧಿಗೆ ಪ್ರೋತ್ಸಾಹವನ್ನು ನೀಡುವುದು ಸರ್ಕಾರದ ಹೊಣೆ. ದೇಶದಲ್ಲಿ ಜನಪ್ರಿಯ ಸಂಗೀತವು ಹೆಚ್ಚು ಪ್ರಾಮುಖ್ಯತೆಗೆ ಬಂದು ಶಾಸ್ತ್ರೀಯ ಸಂಗೀತವು ಕಡಮೆಯಾಗುತ್ತಿದೆ. ಜನಪ್ರಿಯ ಸಂಗೀತವು ಎಷ್ಟು ಅಭಿರುಚಿಯನ್ನು ಕೊಟ್ಟರೂ ಶಾಸ್ತ್ರೀಯ ಸಂಗೀತದಷ್ಟು ಉತ್ತಮ ದರ್ಜೆಯನ್ನು ಹೊಂದುವುದಿಲ್ಲ ಅದನ್ನು ಪುನರುದ್ಧಾರಗೊಳಿಸುವುದಲ್ಲದೆ ವಿಸ್ತರಿಸಲೂ ಬೇಕಾಗಿದೆ.

ಇದಕ್ಕಾಗಿ ಸರ್ಕಾರವು ಸೂಕ್ತ ಕಾರ್ಯಕ್ರಮಗಳನ್ನು ನಡೆಸುವುದು ಎಂದು ಕೇಂದ್ರ ಸರ್ಕಾರದ ವಾರ್ತಾ ಶಾಖಾ ಸಚಿವ ಡಾ॥ ಖೇಸ್ಕರ್‌ರವರು ಕಲ್ಕತ್ತಾದಲ್ಲಿ ನಡೆದ ಅಖಿಲಭಾರತ ಸಂಗೀತ ಸಮ್ಮೇಳನದಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ರಾಷ್ಟ್ರೀಯ ವಿಸ್ತರಣ ಕಾರ್ಯ

ಭಾರತ ಸರ್ಕಾರವು ಕೈಗೊಂಡಿರುವ ರಾಷ್ಟ್ರೀಯ ವಿಸ್ತರಣ ಕಾರ್ಯವು ದೇಶದಲ್ಲಿ ನಿರುದ್ಯೋಗವನ್ನು ತಪ್ಪಿಸುತ್ತದೆ. ವ್ಯವಸಾಯ ಉತ್ಪನ್ನದಲ್ಲಿ ಪ್ರಗತಿಯನ್ನುಂಟುಮಾಡುತ್ತದೆ. ಈ ಕಾರ್ಯಗಳಿಗಾಗಿ ಕೇಂದ್ರವು ಪ್ರಾಂತ್ಯಗಳಿಗೆ ಪ್ರತಿ ವರ್ಷವೂ ೧೦೦ ಕೋಟಿ ರೂಪಾಯಿಗಳ ನೆರವನ್ನು ನೀಡುತ್ತದೆ ಎಂಬ ಆಯೋಜನಾ ಮಂಡಲಿಯ ಉಪಾಧ್ಯಕ್ಷರು ತಿಳಿಸಿದ್ದಾರೆ.

ಕಸ್ತೂರಿಬಾ ಸಂಸ್ಥೆಯ ಕಾರ್ಯಕ್ರಮ

ಕಸ್ತೂರಿಬಾ ಸಂಸ್ಥೆಯು ಗ್ರಾಮಕೈಗಾರಿಕಾ ಅಭಿವೃದ್ಧಿಗಾಗಿ ಇಲ್ಲಿಯವರೆಗೆ ೩೫೦ ಗ್ರಾಮ ಕೇಂದ್ರಗಳನ್ನು ತೆರೆದಿರುವುದಾಗಿ ತಿಳಿಯಬರುತ್ತದೆ. ಇಲ್ಲಿಯವರೆಗೆ ಈ ಸಂಸ್ಥೆ ೧೦೦೦೦ ಜನರಿಗೆತರಪೇತುಕೊಟ್ಟಿದೆ.

ಭಾರತಕ್ಕೆ ಅಮೆರಿಕದ ಆರ್ಥಿಕ ನೆರವು

ಭಾರತರೈಲ್ವೆಗಳ ಪುನರ್ವವಸ್ಥೆಗಾಗಿ ಅಮೆರಿಕಾ ಮತ್ತು ಭಾರತ ಸರ್ಕಾರಗಳ ನಡುವೆ ಒಂದು ಒಪ್ಪಂದವುಂಟಾಗಿದೆ. ಇದರಂತೆ ಅಮೆರಿಕಾವು ಭಾರತಕ್ಕೆ ೧೦ ಕೋಟಿ ರೂಪಾಯಿ. ಆರ್ಥಿಕ ನೆರವನ್ನು ನೀಡುತ್ತದೆ.

ಪಾಕೀಸ್ತಾನ-ಅಮೆರಿಕಾ ಸೈನ್ಯ ಒಪ್ಪಂದ

ದೇಶದ ನಾನಾ ಭಾಗಗಳಲ್ಲಿ ಪ್ರತಿಭಟನೆ

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವೆ ಮಿಲಿಟರಿ ಒಪ್ಪಂದದ ವಿಷಯವನ್ನು ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ,ಮದ್ರಾಸಿನಲ್ಲಿರುವ ಮುಸ್ಲಿಂ ಮುಂತಾದ ಹಲವಾರು ಸಂಸ್ಥೆಗಳು ಪರಿಶೀಲಿಸಿ ತಮ್ಮ ಕಳವಳ ಮತ್ತು ಪ್ರತಿಭಟನೆಯನ್ನು ವ್ಯಕ್ತಪಡಿಸಿವೆ.

ಮದ್ರಾಸಿನ ಮಾಜಿ ಗೌರ್ನರ್ ಮತ್ತು ಕೇಂದ್ರ ಮಾಜಿ ಸಚಿವ ಶ್ರೀ ಮಹಮದ್ ಉಸ್ಮಾನ್‌ರವರ ಅಧ್ಯಕ್ಷತೆಯಲ್ಲಿ ನಿನ್ನೆ ಮದ್ರಾಸಿನಲ್ಲಿ ಸಭೆಯೊಂದುನಡೆದು ಪಾಕ್ ಅಮೆರಿಕಾ ಸೈನ್ಯ ಒಪ್ಪಂದ ವಿಷಯವನ್ನು ತೀವ್ರವಾಗಿ ಖಂಡಿಸಿ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ.

ಅಲಹಾಬಾದಿನಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ಭಾರಿ ಬಹಿರಂಗ ಸಭೆಯೊಂದು ನಡೆದು ಈ ರೀತಿಯ ಒಂಪ್ಪದವು ವಿಶ್ವಶಾಂತಿಗೆ ಧಕ್ಕೆತರುತ್ತದೆ ಎಂದು ತಿಳಿಸಿದೆ.

ಭಾರತವು ಜಾತ್ಯಾತೀತ ರಾಷ್ಟ್ರ

ಭಾರತವು ಜಾತಿರಹಿತ ರಾಜ್ಯ, ಭಾರತ ಪ್ರಜೆಗಳಲ್ಲಿ ಭೇದಭಾವವು ಏನೂ ಇಲ್ಲ ಎಂದು ರಾಜ್ಯಾಂಗದಲ್ಲಿ ಅಡಕವಾಗಿರುವುದು ನಮ್ಮ ಜನತೆಗೆ ಏನೂ ಹೊಸದಲ್ಲ. ದೇಶದ ನಾನಾ ಪ್ರಮುಖ ಮಹನೀಯರು ಈ ವಿಷಯಗಳನ್ನು ಹಲವಾರು ವರ್ಷಗಳ ಹಿಂದೆಯೇ ಜನಕ್ಕೆ ಬೋಧಿಸಿದ್ದಾರೆ. ಈಗ ಇಲ್ಲಿ ನಡೆಯುತ್ತಲಿರುವ ಉರುಸುಗಳಲ್ಲಿ ಯಾವ ಭೇದಭಾವವೂ ಇಲ್ಲದೆ ಎಲ್ಲಾ ಜನಾಂಗದವರೂ ಸೇರಿರುವುದೇ ಇದಕ್ಕೆ ತಕ್ಕ ನಿದರ್ಶನವಾಗಿವೆ-ಎಂದು ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದ್‌ರವರು ನಿನ್ನೆಯದಿನ ದೆಹಲಿಯಲ್ಲಿ ಖ್ವಾಜಾ ನಾಜಮುದ್ದೀನರವರ ಉರುಸ್ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು.

ಈ ಸಭೆಗೆ ಅನೇಕ ಹಿಂದುಗಳು, ಮುಸ್ಲಿಮರು ಮತ್ತು ಇತರ ಎಲ್ಲಾ ಜನಾಂಗದವರೂ ಬಂದಿದ್ದರು. ಅಲ್ಲದೆ ಭಾರತದಲ್ಲಿರುವ ಅಮೆರಿಕಾ ಮತ್ತು ಆಫ್ಘನ್ ರಾಯಭಾರಿಗಳೂ ಸಹ ಆಗಮಿಸಿದ್ದು ಅವರುಗಳು ಭಾಷಣ ಮಾಡಿದರು.

ಸರ್ವಸದಸ್ಯರ ಸಭೆ

ಮೈಸೂರು ೨೬

ನಿಯೋ ಹೋಟೆಲ್ ಕೆಲಸಗಾರರ ಸಂಘದ ಸರ್ವಸದಸ್ಯರ ಸಭೆಯು ಶ್ರೀ ಡಿ. ರಂಗನಾಥರವರ ಅಧ್ಯಕ್ಷತೆಯಲ್ಲಿ ಮೊನ್ನೆ ಸೇರಿ ನವಂಬರ ತಿಂಗಳ ಲೆಖ್ಖ ಪತ್ರಪರಿಶೀಲಿಸಿ, ನೂತನ ಕಾರ್ಯದರ್ಶಿಯಾಗಿ ಶ್ರೀ ವೇಣುಗೋಪಾಲಶರ್ಮರನ್ನು ಚುನಾಯಿಸಲಾಯಿತು.

ರೈಲ್ವೆ ಅಪಘಾತದಲ್ಲಿ ಕ್ರಿಸ್‌ಮಸ್ ವಿಹಾರಿಗಳ ಮರಣ

ನ್ಯೂಜಿಲೆಂಡಿನಲ್ಲಿ ವೆಲ್ಲಿಂಗ್‌ಟನ್ ಎಂಬಲ್ಲಿಂದ ಆಕ್ಲೆಂಡಿಗೆ ಹೋಗುತ್ತಿದ್ದ ರೈಲು ಒಂದು ಸೇತುವೆಯು ಮುರಿದುದರ ಪರಿಣಾಮವಾಗಿ ಪ್ರವಾಹದಲ್ಲಿ ಉರುಳಿತು. ಆಕ್ಲೆಂಡ್‌ನಲ್ಲಿದ್ದ ರಾಣಿ ಎಲಿಜಬೆತ್ ರವರನ್ನು ನೋಡಲು ಆ ರೈಲಿನಲ್ಲಿನೂರಾರು ಜನರು ಹೋಗುತ್ತಿದ್ದರು. ೧೬೬ ಮಂದಿ ಸತ್ತುಹೋದರೆಂದೂ ಅನೇಕ ಜನರಿಗೆ ಗಾಯಗಳಾಗಿವೆಯೆಂದೂ ತಿಳಿಯಬರುತ್ತದೆ. ಹಲವಾರು ಜನರು ಪತ್ತೆಯಾಗಿಲ್ಲ. ೮೦ ಮೈಲಿಯಾಚೆ ನದಿಯಲ್ಲಿ ೩೩ ಶವಗಳು ದೊರೆತಿವೆಯೆಂದು ತಿಳಿಯಬರುತ್ತದೆ.

ಭಾರಿ ಬೆಂಕಿ ಅನಾಹುತ

ಪೂನಾ ಬಳಿ ನಿನ್ನೆಯದಿನ ಭಾರಿ ಬೆಂಕಿ ಅನಾಹುತವೊಂದು ನಡೆದು ಸುಮಾರು ೪೦೦ ಜನ ಸೈನಿಕರು ಬೆಂಕಿಯನ್ನು ಆರಿಸಿದರೆಂದು ತಿಳಿಯಬರುತ್ತದೆ. ಸುಮಾರು ೧೫ ಲಕ್ಷ ರೂಪಾಯಿಗಳಷ್ಟು ನಷ್ಟ ಸಂಭವಿಸಿರುವುದಾಗಿ ತಿಳಿಯಬರುತ್ತದೆ.

★ ತಿಲ್ಲಾಂಗನಲ್ಲಿ ರೈಲ್ವೆ ಅಪಘಾತವೊಂದು ಉಂಟಾಗಿ ಸುಮಾರು ೩ ಲಕ್ಷ ರೂಪಾಯಿಗಳ ನಷ್ಟವಾಗಿರುವುದಾಗಿ ಗೊತ್ತಾಗಿದೆ.

ರಣಜಿತ್
25-12-53 ರಿಂದ ಅಮೋಘ ಪ್ರಾರಂಭ
ಲೈಲಾಮಜ್ನು
ಪಾತ್ರ:—ನೂತನ್, ಶಮ್ಮಿ, ಓಂಪ್ರಕಾಶ್.

ಅಪೇರಾ
24-12-53ರಿಂದ ಅಮೋಘ2ನೇ ವಾರ
ಆರ್. ಎನ್. ಪಿಕ್ಚರ್ಸ್‌ರವರ
ಜಾತಕ ಫಲ
(ಕನ್ನಡ)
ಪಾತ್ರ:—ಆರ್ ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೩೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೦೪

೨೮-೧೨-೧೯೫೩ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತ ಸೇವಾದಳ ಶಿಬಿರಗಳು

ಮೈಸೂರು ೨೮

ಮೈಸೂರು ಜಿಲ್ಲೆಯಲ್ಲಿ ಭಾರತ ಸೇವಾದಳದವರು ಕ್ರಿಸ್‌ಮಸ್ ರಜಾದಿನಗಳಲ್ಲಿ ಜಿಲ್ಲೆಯ ಮೂರುಕಡೆಗಳಲ್ಲಿ ಸೇವಾಶಿಬಿರಗಳನ್ನು ಪ್ರಾರಂಭಮಾಡಿದ್ದಾರೆ. ಈಗಾಗಲೇ ಚಾಮರಾಜನಗರದ ಬಳಿ ಮರಿಯಾಲದಲ್ಲಿ ೨೫ ನೇ ತಾರೀಖು ಶ್ರೀಗಳಾದ ವರದರಾಜು ಮತ್ತು ರಂಗಸ್ವಾಮಿಯವರ ನೇತೃತ್ವದಲ್ಲಿ ಪ್ರಥಮ ಸೇವಾಶಿಬಿರವು ಪ್ರಾರಂಭವಾಗಿದೆ. ಇಲ್ಲಿಗೆ ಆಗಮಿಸುವ ಸಹಸ್ರಾರು ಮಂದಿ ಭಕ್ತರುಗಳಿಗೆ ಅನುಕೂಲವಾಗುವಂತೆ ರಸ್ತೆರಿಪೇರಿ, ಇಂಗು ಬಚ್ಚಲು ನಿರ್ಮಾಣ ಇನ್ನು ಅನೇಕ ಸೇವಾಕಾರ್ಯಗಳು ಶ್ರೀ ಗುರುಸಿದ್ದಪ್ಪನವರ ಸಹಕಾರದ ಫಲವಾಗಿ ಯಶಸ್ವಿಯಾಗಿ ನಡೆಯುತ್ತಿವೆ. ಈ ಶಿಬಿರದ ಪೂರ್ಣವೆಚ್ಚವನ್ನು ಅಲ್ಲಿನ ಮಠಾಧಿಪತಿಗಳಾದ ಶ್ರೀ ಸದಾಶಿವಸ್ವಾಮಿಗಳವರು ವಹಿಸಿಕೊಂಡಿರುವುದು ಸಂತೋಷಕರವಾದ ವಿಷಯವಾಗಿದೆ.

೩೦ನೇ ತಾರೀಖಿನಿಂದ ಹುಣಸೂರು ತಾಲ್ಲೂಕು ಕಲ್ಲಹಳ್ಳಿಗ್ರಾಮದಲ್ಲಿ ಅದೇ ತಾಲ್ಲೂಕಿನ ದಳದವರು ಸೇವಾಶಿಬಿರವನ್ನು ಪ್ರಾರಂಭಿಸುತ್ತಾರೆ.

ಜನವರಿ ಒಂದರಲ್ಲಿ ಬೀರ್ವಾಳ್ ಹತ್ತಿರ (ನುಗು ಜಲಾಶಯ) ಹಲಸೂರಿನಲ್ಲಿ ಒಂದು ಸೇವಾಶಿಬಿರವು ಪ್ರಾರಂಭವಾಗುವುದು ಈ ಶಿಬಿರಕ್ಕೆ ಶ್ರೀ ಸಂಜೀವಪ್ಪನವರು ಅಧ್ಯಕ್ಷರಾಗಿಯೂ, ಶ್ರೀ ಲಕ್ಷ್ಮೀನರಸಿಂಹಯ್ಯಂಗಾರ್ ಕಾರ್ಯದರ್ಶಿಗಳು ಶ್ರೀ ಚಿಕ್ಕಣ್ಣನವರು ಶಿಕ್ಷಕರಾಗಿ ಕೆಲಸ ಮಾಡುತ್ತಾರೆಂದು ಜಿಲ್ಲಾ ಸಂಘಟಕರಾದ ಶ್ರೀ ಶಿವಾನಂದಮೂರ್ತಿಗಳು ತಿಳಿಸುತ್ತಾರೆ.

ಇದೇ ೨೫ ನೇ ತಾರೀಖು ಗುಂಡ್ಲುಪೇಟೆ ಪ್ರೌಢಶಾಲೆಯಲ್ಲಿ ಭಾರತ ಸೇವಾದಳದಶಾಖೆ ಪ್ರಾರಂಭೋತ್ಸವವನ್ನು ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೇಶವಯ್ಯಂಗಾರ್‌ರವರು ನೆರವೇರಿಸಿದರು ಆ ಸಂದರ್ಭದಲ್ಲಿ ಅಲ್ಲಿನ ವಿಧ್ಯಾರ್ಥಿಗಳಿಗೆ ಎಲ್ಲರೂ ಸೇವಾದಳಕ್ಕೆ ಸೇರಿ ಶಿಸ್ತಿನ ಸಿಪಾಯಿಗಳಾಗಿ ನವಭಾರತ ನಿರ್ಮಾಣಕಾರ್ಯದಲ್ಲಿ ನೆರವಾಗಬೇಕೆಂದು ಕೋರಿದರು. ಶ್ರೀ ಸಿ ಅಂಕನಾಯ್ಕರವರುಶಾಖಾ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ.

ಆಂಧ್ರಪ್ರದೇಶ ಕಾಂಗ್ರೆಸ್ ಅಧ್ಯಕ್ಷ

ಆಂಧ್ರಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಶ್ರೀ ಬಿ. ಗೋಪಾಲರೆಡ್ಡಿಯವರು ಚುನಾಯಿತರಾಗಿದ್ದಾರೆ.

ಕೈಮಗ್ಗದವರಿಗೆ ನಾನಾ ತೆರಿಗೆಗಳ ವಿನಾಯಿತಿ

ಆಂಧ್ರ ಸರ್ಕಾರದ ತೀರ್ಮಾನ

ಆಂಧ್ರ ಪ್ರಾಂತ್ಯದಲ್ಲಿ ಕೈಮಗ್ಗದವರಿಗೆ ಅಲ್ಲಿಯ ಸರ್ಕಾರವು ಆರ್ಥಿಕ ನೆರವು ನೀಡಿ ಅವರ ಸ್ಥಿತಿಯನ್ನು ಉತ್ತಮಪಡಿಸಲು ನಿರ್ಧರಿಸಿದೆ. ಅವರಿಗೆ ವಿಧಿಸುತ್ತಲಿದ್ದ ನಾನಾರೀತಿಯ ಕಂದಾಯಗಳಲ್ಲಿ ವಿನಾಯಿತಿಯನ್ನು ಈಗ ಕೊಡುವುದಾಗಿ ಅಲ್ಲಿಯ ಸಚಿವ ಶ್ರೀ ತಿಮ್ಮಾರೆಡ್ಡಿಯವರು ತಿಳಿಸಿರುವರು.

ಮನೆ ಕಂದಾಯ, ವೃತ್ತಿ ತೆರಿಗೆ ಮತ್ತು ಆಸ್ತಿಮೇಲಿನ ತೆರಿಗೆಯಲ್ಲಿ ವಿನಾಯಿತಿ ಕೊಡಲಾಗಿದೆ. ಈ ವಿಷಯವನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ತಿಳಿಸಲಾಗುತ್ತದೆ.

ಈ ಸಂಬಂಧದಲ್ಲಿ ಮೊಕದ್ದಮೆಗಳೇನಾದರೂ ಇದ್ದರೆ ಅವುಗಳನ್ನು ಹಿಂದಕ್ಕೆ ತೆಗೆದುಕೊಳ್ಳಲಾಗುತ್ತದೆ. ಅಲ್ಲದೆ ಆಸ್ತಿಪಾಸ್ತಿಗಳ ಮುಟ್ಟುಗೋಲು ಹಾಕಿದ್ದರೆ ಅವುಗಳನ್ನು ವಾಪಸ್ಸು ಕೊಡಲಾಗುವುದು.

ವಿದೇಶಿ ಸ್ವಾಸ್ಥ್ಯಗಳ ವಿಮೋಚನೆಗೆ ಪೊಲೀಸ್ ಕಾರ್ಯಾಚರಣೆಯೆ ?

ಭಾರತದಲ್ಲಿರುವ ವಿದೇಶೀ ಸ್ವಾಸ್ಥ್ಯಗಳನ್ನು ವಿಮೋಚನೆಗೊಳಿಸಲು ಹೈದರಾಬಾದಿನಲ್ಲಿ ಹಿಂದೆ ನಡೆಸಿದಂತೆ ಪೊಲೀಸ್ ಕಾರ್ಯಾಚರಣೆಯನ್ನು ನಡೆಸಬೇಕಾದ ಸನ್ನಿವೇಶ ಒದಗಬಹುದೆಂದು ಲೋಕಸಭೆಯ ಉಪಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರ್‌ರವರು ನಾಗಪುರದಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಮೆಡಿಕಲ್ ಸ್ಕೂಲು ಪ್ರಿನ್ಸಿಪಾಲ್

ಬೆಂಗಳೂರು ೨೮

ಮಿಂಟೋ ಆಸ್ಪತ್ರೆಯ ಸೂಪರಿಂಟೆಂಡೆಂಟರಾದ ಡಾ॥ ಎನ್. ವಾಸುದೇವರಾವ್‌ರನ್ನು ಮೆಡಿಕಲ್ ಸ್ಕೂಲು ಪ್ರಿನ್ಸಿಪಾಲರಾಗಿ ನೇಮಿಸಲಾಗಿದೆ.

ರೈಲ್ವೆ ಉಪಸಚಿವರಾಗಮನ

ಮೈಸೂರು ೨೮

ಕೇಂದ್ರ ರೈಲ್ವೆ ಉಪಸಚಿವ ಶ್ರೀ ಅಳಗೇಶನ್‌ರವರು ರಾಜಧಾನಿಗೆ ಆಗಮಿಸಿದ್ದಾರೆ ನಾಳೆಯದಿನ ಅವರು ರೈಲ್ವೆ ಕಾರ್ಮಿಕರನ್ನುದ್ದೇಶಿಸಿ ಭಾಷಣ ಮಾಡುವ ನಿರೀಕ್ಷೆ ಇದೆ.

ಕಂದಾಯ ಪುನರ್ವಿಮರ್ಶೆ ಅಧಿಕಾರಿಗಳಿಗೆ ಬೋನಸ್

ಪೌರಸಭಾ ವಿರೋಧ ಪಕ್ಷದ ಸದಸ್ಯರಿಬ್ಬರ ಸಭಾತ್ಯಾಗ

ಮೈಸೂರು ೨೮

ಈಗಿನ ಪುರಸಭೆಯ ಸಾಧಾರಣ ಮತ್ತು ಕಡೆಯ ಅಧಿವೇಶನವು ಮೊನ್ನೆ ಮಧ್ಯಾಹ್ನ ಸೇರಿತ್ತು. ೧೯೫೨-೫೩ ರಲ್ಲಿ ಮನೆ ಕಂದಾಯವನ್ನು ಪುನರ್ವಿಮರ್ಶೆ ಮಾಡಿದ ಪುರಸಭೆಯ ೪ ಜನ ಅಧಿಕಾರಿಗಳಿಗೆ ಒಟ್ಟು ೧,೧೦೦ರೂ ಬೋನಸ್ಸನ್ನು ಕೊಡಬೇಕೆಂಬ ಕಾರ್ಯಕಾರಿ ಸಮಿತಿ ನಿರ್ಣಯವು ಚರ್ಚೆಗೆ ಬಂದಾಗ ಶ್ರೀಗಳಾದ ಎ. ವೆಂಕಟೇಶಯ್ಯ, ಬಿ. ಜಿ. ದಾಸ್ ಮುಂತಾದವರು ಅದನ್ನು ವಿರೋಧಿಸಿ, ಕಂದಾಯವನ್ನು ಏರಿಸಿರುವುದರಿಂದ ಜನರಲ್ಲಿ ಉಂಟಾಗಿರುವ ಅಸಮಾಧಾನವು ಇನ್ನೂ ಹೆಚ್ಚುವುದೆಂದು ಹೇಳಿದರು. ಸಂಬಳ ಮತ್ತು ಭತ್ಯಗಳನ್ನು ಪಡೆಯುವವರಿಗೆ ಬೋನಸ್ ಕೊಡುವುದರಿಂದ ಸಾರ್ವಜನಿಕರ ಹಣವನ್ನು ದುರ್ವ್ಯಯ ಮಾಡಿದಂತಾಗುವುದೆಂದೂ ಅವರು ಅಭಿಪ್ರಾಯಪಟ್ಟರು ಶ್ರೀಗಳಾದ ಪಾಲಹಳ್ಳಿ ಸೀತಾರಾಮಯ್ಯ, ಜಿ. ಅಹಮದ್ ಖಾನ್ ಮುಂತಾದವರು ಮಾತನಾಡಿ ಪುರಸಭೆಗೆ ಬರಬೇಕಾದ ಸರಿಯಾದ ಆದಾಯವನ್ನು ಬರುವಂತೆ ಮಾಡಿದ ಈ ಅಧಿಕಾರಿಗಳಿಗೆ ಬೋನಸ್ ಕೊಡಬೇಕಾದುದು ನ್ಯಾಯವೆಂದುವಾದಿಸಿದರು.

ಈ ಮಧ್ಯೆ ಜ॥ ಮಿರ್ ನೂರ್ ಹುಸೇನರು ಈ ವಿಷಯವನ್ನು ಮುಂದವರಿಸಬೇಕೆಂದು ಸೂಚನೆಯನ್ನು ತಂದಾಗ ಅದು ೫-೧೦ ಮತಗಳಿಂದ ಬಿದ್ದುಹೋಯಿತು. ಈ "ಅನ್ಯಾಯದ" ಬಹುಮತದ ತೀರ್ಮಾನವನ್ನು ಪ್ರತಿಭಟಿಸುವದಾಗಿ ಹೇಳಿ ಡಾ॥ ಬಿ. ಜಿ. ದಾಸ್ ಮತ್ತು ಜ॥ ಮಿರ್ ನೂರ್ ಹುಸೇನರು ಸಭಾ ತ್ಯಾಗಮಾಡಿ ಸ್ವಲ್ಪ ಹೊತ್ತಿನ ನಂತರ ಒಳಕ್ಕೆ ಬಂದರು ಅನಂತರ ನಿರ್ಣಯವು ಅಂಗೀಕೃತವಾಯಿತು ಶ್ರೀ ಎ. ವೆಂಕಟೇಶಯನವರು ತಟಸ್ಥರಾಗಿದ್ದರು ಯಾರೂ ವಿರೋಧವಾಗಿ ಓಟು ಮಾಡಲಿಲ್ಲ.

ನೆಹರೂ ವಿರುದ್ಧ ಪ್ರದರ್ಶನ

ಪಾಟಿಯಾಲಾಕ್ಕೆ ೩೫ ಮೈಲಿ ದೂರದಲ್ಲಿ ಸಿಕ್ಕರ ಫತೇಘರ್ ಸಾಹೇಬ್ ಗುರುದ್ವಾರದಲ್ಲಿ ಪ್ರಧಾನಿ ನೆಹರೂರವರು ನಿನ್ನೆ ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣ ಮಾಡಲು ಎದ್ದಾಗ ಸಿಕ್ ಪ್ರದರ್ಶನರು ವಿರುದ್ಧ ಘೋಷಣೆಗಳನ್ನು ಮಾಡುತ್ತಾ ಭಾಷಣ ಮಾಡಲು ಅವಕಾಶ ಕೊಡಲಿಲ್ಲ. ಎಲ್ಲೆಡೆಯಲ್ಲೂ ಪಂಜಾಬಿ ಪ್ರಾಂತ್ಯರಚನೆಗೆ ಘೋಷಣೆಗಳು ಕೇಳಿಬರುತ್ತಿತ್ತು. ಅಕಾಲಿ ಪಕ್ಷದ ನಾಯಕ ಮಾಸ್ಟರ್ ತಾರಾಸಿಂಗ್‌ರವರುಸಹ ವೇದಿಕೆಯಮೇಲೆ ಬಂದು ನೆಹರೂ ಭಾಷಣ ಮಾಡದಂತೆ ತಡೆದರು. ಶ್ರೀ ನೆಹ್ರೂರವರು ಭಾಷಣವನ್ನು ಮಾಡದೆ ಹಿಂತಿರುಗಿದರು. ಉದ್ರಿಕ್ತ ಜನರು ಕೇಂದ್ರ ಸಚಿವ ಸರ್ದಾರ್ ಸ್ವರ್ಣಸಿಂಗ್‌ರವರನ್ನು ಮುತ್ತಿದರು. ಕಾರಿನಮೇಲೆ ಕಲ್ಲು ಇಟ್ಟಿಗೆಗಳು ಬಿದ್ದುವು ಪೋಲೀಸರು ಗುಂಪನ್ನು ಚದುರಿಸಿದರು.

ಏಷ್ಯಾ ಪ್ರಧಾನಿಗಳ ಸಮ್ಮೇಳನ

ಆಗ್ನೇಯ ಏಷ್ಯಾ ರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನವು ಮುಂದಿನ ತಿಂಗಳು ಕೊನೆಯವಾರದಲ್ಲಿ ಕೊಲೊಂಬೊವಿನಲ್ಲಿ ನಡೆಯುವುದೆಂದು ತಿಳಿಯಬರುತ್ತದೆ ಸಿಂಹಳ ಪ್ರಧಾನಿ ಸರ್ ಜಾನ್ ಕೊಟೇಲವಾಲಾರವರು ಭಾರತ ಪ್ರಧಾನಿ ನೆಹರೂರೊಡನೆ ಸಮಾಲೋಚನೆ ನಡೆಸಿದನಂತರ ತಾರೀಖನ್ನು ನಿರ್ಧರಿಸಲಾಗುವುದಾಗಿ ಹೇಳಲಾಗಿದೆ.

ಶ್ರೀ ಕೆ. ಸಿ. ರೆಡ್ಡಿಯವರ ಆಗಮನ

ಮೈಸೂರು ೨೮

ಕೇಂದ್ರ ಸರ್ಕಾರದ ಉತ್ಪನ್ನಶಾಖಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ನಿನ್ನೆಯದಿನ ಬೆಂಗಳೂರಿಗೆ ಆಗಮಿಸಿದರು.

ಈದಿನ ಶ್ರೀಯುತರು ಖೆಡ್ಡಾ ಕಾರ್ಯಕ್ರಮವನ್ನು ವೀಕ್ಷಿಸಲು ಅಲ್ಲಿಗೆ ಹೋಗಿದ್ದಾರೆ. ಅವರು ೪ನೇ ತಾರೀಖಿನವರೆಗೆ ಮೈಸೂರು ಸಂಸ್ಥಾನದಲ್ಲಿರುವರೆಂದು ತಿಳಿಯಬರುತ್ತದೆ

ಮಹಾ ಮಂಗಳಾರತಿ

ರಾಜಧಾನಿಯ ಕೋಟೆಯೊಳಗಿರುವ ಶ್ರೀ ಕೋಡಿ ಸೋಮೇಶ್ವರ ಸ್ವಾಮಿ ನವಗ್ರಹ ದೇವಸ್ಥಾನದ ಆವರಣದಲ್ಲಿರುವ ಶ್ರೀ ಕೋಡಿ ಕಾಲಭೈರವಸ್ವಾಮಿಯವರಿಗೆ ಭೈರವಾಷ್ಟಮಿ ಪ್ರಯುಕ್ತ ಈ ರಾತ್ರಿ ೮ ಘಂಟೆಗೆ ಮಹಾಮಂಗಳಾರತಿಯು ನಡೆಯುತ್ತದೆ.

ನಮ್ಮ ಸಾಮಾಜಿಕ ಪದ್ಧತಿಗಳನ್ನು ಪುನಃ ಉದ್ಧರಿಸಬೇಕು

ಸಾಮಾಜಿಕ ಸಮ್ಮೇಳನದಲ್ಲಿ ವಿದ್ಯಾಸಚಿವರ ಹಿತೋಕ್ತಿ

ಪಾಶ್ಚಾತ್ಯ ದೇಶಗಳಲ್ಲಾಗಲಿ ಪೌರಸ್ತ್ಯ ದೇಶಗಳಲ್ಲಾಗಲಿ ಈಗಿನ ಸಾಮಾಜಿಕ ವ್ಯವಸ್ಥೆಯು ಪೂರ್ತಿಯಾಗಿ ಸಮರ್ಪಕವಾಗಿಲ್ಲ. ಅದರಿಂದ ಪೂರ್ಣ ಸೌಖ್ಯ ಲಭಿಸುವಂತಿಲ್ಲ. ಸಮಾಜಕ್ಕೆ ಅವಶ್ಯಕವಾಗಿರುವಷ್ಟು ಭದ್ರತೆಯು ದೊರೆಯುವುದಕ್ಕೂ ಅದರಿಂದ ಅವಕಾಶವಿಲ್ಲ.

ನಮ್ಮ ದೇಶ ಪ್ರಾಚೀನ ಸಾಮಾಜಿಕ ವ್ಯವಸ್ಥೆಯನ್ನೂ, ಭದ್ರತೆಯನ್ನು ಕ್ರಿಸ್ತಶಕ ೫ ಮತ್ತು ೧೬ನೇ ಶತಮಾನಗಳಲ್ಲಿ ಭಾರತಕ್ಕೆ ಬಂದಿದ್ದ ಚೀನಾ ಪ್ರವಾಸಿಗಳೂ, ೧೫ ಮತ್ತು ೧೬ನೇ ಶತಮಾನದಲ್ಲಿ ಬಂದಿದ್ದ ಪೋರ್ಚುಗಲ್ ದೇಶದ ಪ್ರವಾಸಿಗಳೂ ಬಹಳವಾಗಿ ಶ್ಲಾಘಿಸಿದ್ದಾರೆ.

ಭಾರತವು ಬಹುಕಾಲದ ಪರಕೀಯರ ಆಡಳಿತದಿಂದಲೂ ಪಾರತಂತ್ರ್ಯದಿಂದಲೂ ಪಾರಾಗಿ ಈಗ ಸ್ವಾತಂತ್ರ್ಯವನ್ನು ಪಡೆದಿದೆ. ಈಗ ಭಾರತ ಸಮಾಜಸೇವಕರು ದೂರದೃಷ್ಟಿ, ಶ್ರದ್ಧೆ ಮತ್ತು ಜಾಗರೂಕತೆಯಿಂದ ಕೆಲಸ ಮಾಡಬೇಕಾಗಿದೆ. ಅವರು ಆತ್ಮಾರ್ಪಣೆ ಭಾವನೆಯಿಂದಲೂ, ದೀಕ್ಷಾ ಬುದ್ಧಿಯಿಂದಲೂ ಶ್ರಮಿಸಿ ವಿಶಿಷ್ಟಭಾವದಿಂದ ಸಮಾಜ ಸೇವೆ ಮಾಡಬೇಕಾಗಿದೆ ಎಂದು ಮೈಸೂರಿನ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಹೈದರಾಬಾದಿನಲ್ಲಿ ನಡೆದ ಸಾಮಾಜಿಕ ಕಾರ್ಯ ಸಂಬಂಧದ ಭಾರತೀಯ ಸಮ್ಮೇಳನದ ಆರನೇ ಅಧಿವೇಶನದಲ್ಲಿ ಸಮಾಜ ರಕ್ಷಣಾಶಾಖೆಯ ಸಭಾಧ್ಯಕ್ಷ ಭಾಷಣ ಮಾಡುತ್ತಾ ತಿಳಿಸಿದ್ದಾರೆ.

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಈರೀತಿ ಹೇಳಿದ್ದಾರೆ:—

ನಾವು ಮೊದಲ, ಚಿಕ್ಕವಯಸ್ಸಿನವರು ಕೆಟ್ಟಚಾಳಿಗೆ ಬೀಳದಂತೆ ನೋಡಿಕೊಳ್ಳಬೇಕಾಗಿದೆ. ಅವರಲ್ಲಿ ಸದ್ಗುಣಗಳು ಸರಿಸ್ಫುಟವಾಗುವಂತೆಯೂ ಶಿಕ್ಷಣ ಕೊಡಬೇಕು. ಅವರಲ್ಲಿ ಬೀಡಿ, ಸಿಗರೇಟು ಮುಂತಾದ ರೂಪಗಳಲ್ಲಿ ಹೊಗೆಸೊಪ್ಪಿನ ಬಳಕೆ, ಕಾಫಿ ಮಂದಿರಗಳಿಗೆ ಹೋಗುವುದು ಮತ್ತು ಚಲನಚಿತ್ರ ಮಂದಿರಗಳಿಗೆ ಪ್ರವೇಶ ಈ ಮೊದಲಾದ ಅಭ್ಯಾಸಗಳನ್ನು ನಿಲ್ಲಿಸಿ ಅದನ್ನು ಅವರಿಗೆ ನಿಷೇಧಗೊಳಿಸಬೇಕು.

ಇವು ಪಾಶ್ಚಿಮಾತ್ಯ ದೇಶದಲ್ಲಿ ಚಿಕ್ಕವಯಸ್ಸಿನವರಿಗೆ ಶೀರ ನಿಷಿದ್ಧ. ನಮ್ಮ ಸಮಾಜವು ಮೇಲ್ಮೆ ಹೊಂದಿ ಮಾನವ ವ್ಯಕ್ತಿತ್ವವು ಉತ್ತಮಗೊಳ್ಳುವುದರ ಮೂಲಾಧಾರದ ಮೇಲೆ ಸಾಮಾಜಿಕ ಪುನರುಜ್ಜೀವನವು ನಡೆಯುವಂತೆ ಮಾಡುವುದು ನಾವು ಸಾಧಿಸಬೇಕಾದ ಘನತರವಾದ ಕಾರ್ಯ ಎಂದು ಅವರು ತಿಳಿಸಿದರು.

ಪಾಕೀಸ್ತಾನದಲ್ಲಿ ಬಣ್ಣ ಬದಲಾಯಿಸುವವರು ಹೆಚ್ಚುತ್ತಿದ್ದಾರೆ

ಪಾಕೀಸ್ತಾನದಲ್ಲಿ ಬಣ್ಣ ಬದಲಾಯಿಸುತ್ತ ಹೋಗುವ ಜನರು ಅನೇಕರಿದ್ದಾರೆ. ತಮ್ಮ ಸ್ವಂತಕ್ಕಾಗಿ ಇವರು ಪಾಕೀಸ್ತಾನ ಸ್ಥಾಪನೆಯ ಮೂಲ ಉದ್ದೇಶವನ್ನೇ ಬಲಿಕೊಡುವಂತಹ ಜನರಿರುವರು. ಒಗ್ಗಟ್ಟಿನಿಂದಿದ್ದು ಇಂತಹವರನ್ನು ಮಟ್ಟಹಾಕಿ ದೇಶದ ಭದ್ರತೆಯನ್ನು ಕಾಪಾಡಬೇಕು ಎಂದು ಪಾಕ್‌ಗೌರ್ನರ್ ಜನರಲ್‌ರವರು ಮೊನ್ನೆಯದಿನ ಜಿನ್ನಾ ಜನ್ಮೋತ್ಸವ ಸಂದರ್ಭದಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಅಂತರರಾಷ್ಟ್ರೀಯ ನ್ಯಾಯವಾದಿಗಳ ಸಮ್ಮೇಳನ

ಅಂತರರಾಷ್ಟ್ರೀಯ ನ್ಯಾಯವಾದಿಗಳ ಸಮ್ಮೇಳನವನ್ನು ಇಂದು ದೆಹಲಿಯಲ್ಲಿ ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದ್‌ರವರು ಉದ್ಘಾಟಿಸಿದರು. ವಿಶ್ವದ ನೂರಾರು ರಾಷ್ಟ್ರಗಳಿಂದ ಪ್ರಮುಖ ನ್ಯಾಯವಾದಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಲು ಆಗಮಿಸಿದ್ದಾರೆ. ಈ ಸಮ್ಮೇಳನವು ೬ ದಿನಗಳ ಕಾಲ ಭಾರತ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಪತಂಜಲಿಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ಪುನಃ ಮುಸಾದಿಕ್‌ರವರ ವಿಚಾರಣೆ

ಪರ್ಷಿಯಾದಲ್ಲಿ ಮಾಜಿ ಪ್ರಧಾನಿ ಡಾ॥ ಮುಸಾದಿಕ್‌ರವರಿಗೆ ಅಲ್ಲಿಯ ಮಿಲಿಟರಿ ನ್ಯಾಯಾಲಯವು ೩ ವರ್ಷ ಏಕಾಂತ ಕಾರಾಗೃಹ ಶಿಕ್ಷೆಯನ್ನು ವಿಧಿಸಿರುವುದರ ಮೇಲೆ ಅವರು ಮಾಡಿರುವ ಅಪೀಲನ್ನು ಸದ್ಯದಲ್ಲಿಯೇ ಪರಿಷ್ಕೃತವಾದ ಮತ್ತೊಂದು ನ್ಯಾಯಾಲಯವು ವಿಚಾರಣೆ ಮಾಡುವುದಾಗಿ ತಿಳಿಯಬರುತ್ತದೆ.

ಗಡಿನಾಡು ಗಾಂಧಿ ಬಿಡುಗಡೆ ಪ್ರಶ್ನೆ

ಗಡಿನಾಡು ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್ ಮತ್ತು ಅವರ ಸಹೋದರ ಖಾನ್ ಸಾಹೇಬರನ್ನು ಬಂಧನದಿಂದ ಬಿಡುಗಡೆ ಮಾಡುವ ವಿಷಯವನ್ನು ಪಾಕೀಸ್ತಾನ ಸರಕಾರ ಪರಿಶೀಲಿಸುವುದಾಗಿ ಹೇಳಲಾಗಿದೆ.

ಪಾಕೀಸ್ತಾನ ಬಲಯುತವಾದರೆ ಭಾರತಕ್ಕೆ ಲಾಭ

ಪಾಕ್ ಪ್ರಧಾನಿ ಮಹಮದ್ ಅಲಿ ಹೇಳಿಕೆ

ನಮ್ಮ ರಕ್ಷಣಾ ಬಲವನ್ನು ನಾವು ಬಲಪಡಿಸಿಕೊಂಡರೆ ಅಕ್ಕಪಕ್ಕದವರೇಕೆ ಇಷ್ಟು ಗಾಬರಿ ಪಡಬೇಕು ಎಂದು ಪಾಕೀಸ್ತಾನ ಪ್ರಧಾನಿ ಮಹಮದ್ ಅಲಿಯವರು ಪಾಕ್-ಅಮೆರಿಕಾ ರಕ್ಷಣಾ ವಿಷಯದಲ್ಲಿ ಭಾರತ ಪ್ರಧಾನಿಯವರು ಹೇಳಿಕೆಗಳನ್ನು ಟೀಕಿಸುತ್ತಾ ತಿಳಿಸಿದ್ದಾರೆ.

ಭಾರತ–ಪಾಕೀಸ್ತಾನಗಳ ಪರಿಹಾರಕ್ಕೆ ಈ ರಕ್ಷಣಾ ಒಪ್ಪಂದದಿಂದ ತೊಂದರೆಯೇನಾಗುವುದಿಲ್ಲ. ಆರೀತಿ ಭಾರತ ಪ್ರಧಾನಿ ನೆಹರೂ ಹೇಳುವುದನ್ನು ಒಪ್ಪಲಾಗುವುದಿಲ್ಲ ಎಂದು ಮಿ॥ ಮಹಮದ್ ಅಲಿ ತಿಳಿಸಿದ್ದಾರೆ.

ಪಾಕೀಸ್ತಾನವು ಬಲವಾಗಿದ್ದರೆ ಭಾರತ ಗಡಿಗಳನ್ನು ಅದು ರಕ್ಷಿಸುವ ಸ್ಥಿತಿಯಲ್ಲಿರುತ್ತದೆ. ಇದರಿಂದ ಭಾರತಕ್ಕೆ ಲಾಭವೇ ವಿನಹ ನಷ್ಟವೇನೂ ಇಲ್ಲ ಎಂದು ಮಿ॥ ಮಹಮದ್ ಅಲಿಯವರು ಹೇಳಿದ್ದಾರೆ.

ಮುಖ್ಯ ಮಂತ್ರಿಯವರಲ್ಲಿ ವರ್ತಕರುಗಳ ನಿಯೋಗ

ಮೈಸೂರು ೨೮

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರ ಬಳಿ ನಿನ್ನೆಯದಿನ ನಗರದ ಬಟ್ಟೆ, ರೇಡಿಯೋ, ದಿನಸಿ ಮತ್ತು ಇತರ ವರ್ತಕರುಗಳ ಪ್ರತಿನಿಧಿಗಳು ನಿಯೋಗ ಹೋಗಿ ಮಾರಾಟತೆರಿಗೆ, ಅಕ್ಟ್ರಾಯ್ ಮತ್ತು ಬಟ್ಟೆ ರಹದಾರಿ ಇವುಗಳ ವಿಷಯವನ್ನು ಕುರಿತು ಅರಿಕೆ ಮಾಡಿಕೊಂಡರು. ಬಟ್ಟೆ ರಹದಾರಿಯನ್ನು ರದ್ದುಮಾಡುವಂತೆಯೂ, ಮಾರಾಟತೆರಿಗೆ ಅಥವಾ ಅಕ್ಟ್ರಾಯ್ ಸುಂಕದ ವಿಷಯದಲ್ಲಿ ವರ್ತಕರ ಕಷ್ಟಗಳನ್ನು ಗಮನಿಸುವಂತೆಯೂ ಅವರು ಅರಿಕೆ ಮಾಡಿಕೊಂಡುದಾಗಿ ಹೇಳಲಾಗಿದೆ. ಮುಖ್ಯಮಂತ್ರಿಗಳು ಸಾವಧಾನದಿಂದ ಅವರು ಹೇಳಿದುದನ್ನು ಕೇಳಿ ಸೂಕ್ತ ಸಮಾಧಾನ ನವಿತ್ತರೆಂದು ಗೊತ್ತಾಗಿದೆ. ನಿಯೋಗದಲ್ಲಿ ಶ್ರೀಗಳಾದ ರಾಮಸ್ವಾಮಿ, ಎಲ್. ನಾಗಣ್ಣ ಚೌಡಯ್ಯ, ನಂದೀಬಸಪ್ಪ, ಟಿ. ಸಿ. ನಟರಾಜ್, ರಾಜನ್, ಸಿ. ಎಸ್. ವಾಮನಮೂರ್ತಿ ಮುಂತಾದವರು ಇದ್ದರು.

ಅಪೆರಾ
24-12-53ರಿಂದ ಅಮೋಘ2ನೇ ವಾರ
ಆರ್. ಎನ್. ಪಿಕ್ಚರ್ಸ್‌ರವರ
ಜಾತಕ ಫಲ
(ಕನ್ನಡ)
ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ಮೋಟಾರು ಕೆಲಸಗಾರರ ಸಭೆ

ಮೈಸೂರು ೨೮

ಇದೇ ೨೬ ನೇ ತಾರೀಖು ಶನಿವಾರ ಸಾಯಂಕಾಲ ೮ ಘಂಟೆ ಮೋಟಾರು ಕೆಲಸಗಾರರ ಕಾರ್ಯಕಾರಿ ಸಮಿತಿಯ ಸಭೆಯು ಸೇರಿ ಸಂಘದ ಕಛೇರಿಯಲ್ಲಿ ಕೆ. ದೌಲತ್‌ರಾವ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೋಟಾರು ಕೆಲಸಗಾರರು ಮತ್ತು ಮತ್ತು ಮಾಲೀಕರ ಮಧ್ಯೆ ಉಂಟಾಗಿದ್ದ ವಿವಾದ ಸಂಬಂಧದಲ್ಲಿ ಕೈಗಾರಿಕ ಕೋರ್ಟಿನವರು ಕೊಟ್ಟಿರುವ ಅವಾರ್ಡನ್ನು ಅನೇಕ ಮಾಲೀಕರುಗಳು ಜಾರಿಗೆ ಕೊಡದಿರುವ ವಿಚಾರವನ್ನು ೨೯-೧೧-೫೩ ರಲ್ಲು ಕಾರ್ಮಿಕ ಸಚಿವರಲ್ಲಿ ಹೇಳಿದ್ದಾಗ ಅವರು ಮಾಲೀಕರುಗಳನ್ನು ಕರೆಯಿಸಿ ಮಾತುಕತೆ ನಡೆಯಿಸಿ ಇನ್ನು ಒಂದುವಾರದೊಳಗಾಗಿ ಇತ್ಯರ್ಥ ಮಾಡಿಸುವುದಾಗಿ ಹೇಳಿದ್ದರೂ ಈವರೆವಿಗೂ ಇತ್ಯರ್ಥವಾಗದಿರುವುದರಿಂದ ಕೆಲಸಗಾರರಲ್ಲಿ ತುಂಬಾ ಅಸಮಾಧಾನವುಂಟಾಗಿದೆ ಮಾತ್ರವಲ್ಲದೆ ಅಂದಿನಿಂದ ಕಿರುಕುಳ ಹೆಚ್ಚುತ್ತಿವೆ ಕೆಲವರು ಕೆಲಸಗಾರರನ್ನು ವಜಾ ಮಾಡುತ್ತಿರುತ್ತಾರೆ. ಮತ್ತೆ ಕೆಲವರು ಲೈಸನುಗಳನ್ನೇ ನಿಲ್ಲಿಸಿರುತ್ತಾರೆ. ಈ ಎಲ್ಲಾ ವಿಚಾರಗಳ ಬಗ್ಗೆ ಕಾರ್ಮಿಕ ಸಚಿವರಲ್ಲಿಗೆ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರೆಲ್ಲರೂ ಮತ್ತು ಶ್ರೀಗಳಾದ ಕೇಶವಕುಲಕರ್ಣಿ ಮತ್ತು ಎ. ರಾಮಣ್ಣನವರನ್ನೊಳಗೊಂಡ ನಿಯೋಗ ಹೋಗತಕ್ಕದ್ದೆಂದು ನಿರ್ಧರಿಸಲಾಯಿತು.

ವಿಶಾಲಾಂಧ್ರದಿನ

ಆಂಧ್ರಪ್ರಾಂತ್ಯ, ತೆಲಂಗಾಣ ಮತ್ತು ಮದ್ರಾಸ್, ಮೈಸೂರು, ಒರಿಸ್ಸಾ ಮತ್ತು ಮಧ್ಯಪ್ರದೇಶಗಳ ತೆಲುಗುಭಾಷಾ ಸ್ಥಳಗಳಲ್ಲಿ ಜನವರಿ ೧೪ ನೇ ತಾರೀಖು ವಿಶಾಲಾಂಧ್ರದಿನವಾಗಿ ಆಚರಿಸಬೇಕೆಂದು ವಿಶಾಲಾಂಧ್ರ ಮಹಾಸಭಾ ಅಧ್ಯಕ್ಷರು ಕೋರಿದ್ದಾರೆ.

ಆದಿನ ಸಾರ್ವತ್ರಿಕ ಸಭೆಗಳನ್ನು ನಡೆಸಿ ಹೈದರಾಬಾದ್ ರಾಜಧಾನಿಯಾಗಿ ಉಳ್ಳ ವಿಶಾಲಾಂಧ್ರವನ್ನು ಕೂಡಲೇ ರಚಿಸಬೇಕೆಂದು ಒತ್ತಾಯಮಾಡುವ ನಿರ್ಣಯವನ್ನು ಮಾಡಬೇಕೆಂದು ಮನವಿ ಮಾಡಲಾಗಿದೆ.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೯೫

೨೯-೧೨-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತದಲ್ಲಿ ಜನಾಭಿಪ್ರಾಯ ತಡೆಗಟ್ಟಲು ಸಾಧ್ಯವಿಲ್ಲ

ಪಾಕೀಸ್ತಾನಕ್ಕೆ-ಭಾರತದ ಉತ್ತರ

ಅಮೆರಿಕಾ ಮತ್ತು ಪಾಕೀಸ್ತಾನ ಸೈನ್ಯ ಒಪ್ಪಂದ ವಿಷಯದಲ್ಲಿ ಭಾರತದ ಜನತೆಯು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಲಿರುವುದನ್ನು ತಡೆಗಟ್ಟಲು ಸಾಧ್ಯವಿಲ್ಲವೆಂದು ಭಾರತವು ಪಾಕೀಸ್ತಾನಕ್ಕೆ ಪತ್ರವನ್ನು ಬರೆದಿರುವುದಾಗಿ ತಿಳಿಯಬರುತ್ತದೆ.

ಈ ಒಪ್ಪಂದ ವಿಷಯವು ಪಾಕೀಸ್ತಾನದ ಒಳಾಡಳಿತ ಮತ್ತು ವಿದೇಶಾಂಗ ನೀತಿಗೆ ಸೇರಿದೆ. ನೆರೆ ರಾಷ್ಟ್ರವು ಇದರಲ್ಲಿ ಪ್ರವೇಶಿಸುವುದು ಸೂಕ್ತವಲ್ಲ. ಪಾಕೀಸ್ತಾನದಲ್ಲಿ ಪರಿಣಾಮವುಂಟಾಗುವಂತಹ ಅಭಿಪ್ರಾಯವನ್ನು ಭಾರತವು ವ್ಯಕ್ತಪಡಿಸುವುದು ನ್ಯಾಯವಲ್ಲ ಇದನ್ನು ಸರ್ಕಾರವು ತಡೆಗಟ್ಟಬೇಕು ಎಂದು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿ ಪಾಕೀಸ್ತಾನವು ಬರೆದಿದ್ದ ಒಂದು ಪತ್ರಕ್ಕೆ ಮೇಲ್ಕಂಡಂತೆ ಉತ್ತರವನ್ನು ಭಾರತವು ಕಳುಹಿಸಿರುವುದಾಗಿ ಹೇಳಲಾಗಿದೆ.

ಭಾರತದಲ್ಲಿ ಅಖಿಲಭಾರತ ಕಾಂಗ್ರೆಸ್ ಪ್ರದೇಶ ಸಮಿತಿಗಳಿಗೆ ಪತ್ರವನ್ನು ಬರೆದು ಈ ಒಪ್ಪಂದ ವಿಷಯದಲ್ಲಿ ಜನತೆಯ ಅಭಿಪ್ರಾಯವನ್ನು ಪಡೆಯಬೇಕೆಂದು ಸೂಚನೆಯನ್ನಿದ್ದಿತು ಇದನ್ನು ಪಾಕೀಸ್ತಾನವು ಪ್ರತಿಭಟಿಸಿದೆ.

ಭಾರತವು ಪಾಕೀಸ್ತಾನಕ್ಕೆ ಕಳುಹಿಸಿರುವ ಉತ್ತರದಲ್ಲಿ ಭಾರತ ಕಾಂಗ್ರೆಸ್ಸಿನ ನಿಲುವನ್ನು ವಿವರಿಸುತ್ತಾ ಜನತೆಗೆ ಈ ಒಪ್ಪಂದ ವಿಷಯದಲ್ಲಿ ತಿಳುವಳಿಕೆ ಕೊಡುವುದೇ ಸಂಸ್ಥೆಯ ಉದ್ದೇಶವೆಂದೂ, ಭಾರತದಲ್ಲಿ ಪಾಕೀಸ್ತಾನದ ಈ ನೀತಿಯ ವಿರೋಧವಾಗಿ ಯಾವ ಘಟನೆಗಳೂ ನಡೆಯದಿರುವುದೇ ಭಾರತದಲ್ಲಿ ಈ ವಿಚಾರದಲ್ಲಿ ಶಾಂತಚಿತ್ತರಾಗಿ ಜನರು ಪರಿಶೀಲಿಸುತ್ತಲಿರುವುದಕ್ಕೆ ಸಾಕ್ಷಿಯೆಂದು ತಿಳಿಸಲಾಗಿದೆ.

ಪಾನನಿರೋಧ ಪರಿಶೀಲನಾ ಸಮಿತಿ

ಆಂಧ್ರಪ್ರಾಂತ್ಯದಲ್ಲಿ ಪಾನನಿರೋಧ ಕಾರ್ಯಾಚರಣೆಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಲಾಗುವುದು ಎಂದು ಅಲ್ಲಿಯ ಅರ್ಥಿಕ ಸಚಿವರು ತಿಳಿಸಿದ್ದಾರೆ.

ಪಾಕೀಸ್ತಾನಕ್ಕೆ ಭಾರತದಿಂದ ಬಟ್ಟೆ

ಪಾಕೀಸ್ತಾನವು ಸುಮಾರು ೩೨ ಲಕ್ಷ ರೂಪಾಯಿಗಳ ಬೆಲೆಬಾಳುವ ಪಂಚೆ ಮತ್ತು ಸೀರೆಗಳನ್ನು ಭಾರತ ಗಿರಣಿಗಳಲ್ಲಿ ಕೊಳ್ಳಲಿದೆ.

ತ್ಯಾಗರಾಜರ ಆರಾಧನೆ

ತಿರುವಯ್ಯಾರ್‌ನಲ್ಲಿ ಮುಂದಿನತಿಂಗಳು ೨೨ನೇ ತಾರೀಖಿನಿಂದ ೩ ದಿನಗಳು ತ್ಯಾಗರಾಜರ ಆರಾಧನಾ ಮಹೋತ್ಸವವು ನಡೆಯುತ್ತದೆ. ಮದ್ರಾಸ್ ಗೌರ್ನರ್ ಶ್ರೀ ಶ್ರೀಪ್ರಕಾಶರವರು ಆರಂಭೋತ್ಸವವನ್ನು ನೆರವೇರಿಸುತ್ತಾರೆ.

ಆರ್. ಎಂ. ಓ. ಆಗಿ ನೇಮಕ

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ಅಸಿಸ್ಟೆಂಟ್ ಸರ್ಜನ್ ಡಾ॥ ಕೆ. ಕೃಷ್ಣಮೂರ್ತಿಯವರನ್ನು ಅದೇ ಆಸ್ಪತ್ರೆಯ ಆರ್. ಎಂ. ಓ ಆಗಿ ನೇಮಿಸಲಾಗಿದೆ.

ಭಾರತಕೆ ಸಿಂಹಳದ ಅಕ್ಕಿ

ತಿರುವಾಂಕೂರ್-ಕೊಚ್ಚಿ ಪ್ರಾಂತ್ಯಕ್ಕೆ ಬೇಕಾಗುವ ಕುಸುಬಲಕ್ಕಿಯನ್ನು ಸಾಲವಾಗಿ ಕೊಡುವಂತೆ ಭಾರತ ಸರ್ಕಾರವು ಸಿಂಹಳ ಸರ್ಕಾರವನ್ನು ಕೇಳಿರುವುದಾಗಿ ತಿಳಿಯಬರುತ್ತದೆ.

ಅಖಿಲಭಾರತ ವಿದ್ಯಾ ಸಮ್ಮೇಳನ

ಅಖಿಲ ಭಾರತ ವಿದ್ಯಾ ಸಮ್ಮೇಳನವು ನಿನ್ನೆಯದಿನ ಕಲ್ಕತ್ತಾದಲ್ಲಿ ಪ್ರಾರಂಭವಾಯಿತು. ಭಾರತದ ನಾನಾ ಪ್ರಾಂತ್ಯಗಳಿಂದ ಸುಮಾರು ೩೫೦೦ ಉಪಾಧ್ಯಾಯರು ಮತ್ತು ವಿದ್ಯಾಪರಿಣಿತರು ಇದರಲ್ಲಿ ಭಾಗವಹಿಸುತ್ತಲಿದ್ದಾರೆ.

ತೆಲುಗಿನಲ್ಲಿ ಕಾರ್ಯಕಲಾಪಗಳು

ಆಂಧ್ರ ಶಾಸನಸಭೆಯಲ್ಲಿ ಕಾರ್ಯಕಲಾಪಗಳೆಲ್ಲವೂ ತೆಲುಗು ಭಾಷೆಯಲ್ಲಿ ನಡೆಯಲು ಆರಂಭವಾಗಿದೆ.

ಕೊರಿಯಾದಲ್ಲಿರುವ ಅಮೆರಿಕಯುದ್ಧಸಾಮಗ್ರಿಗಳು ಪಾಕೀಸ್ತಾನಕ್ಕೆ

ಬ್ರಿಟಿಷ್ ವೃತ್ತಗಳಲ್ಲಿ ಮಹದಾಶ್ಚರ್ಯ

ಕೊರಿಯಾದಲ್ಲಿರುವ ಅಮೆರಿಕಾ ಯುದ್ಧ ಸಾಮಗ್ರಿಗಳನ್ನು ಅಲ್ಲಿಂದ ಪಾಕೀಸ್ತಾನಕ್ಕೆ ಕಳುಹಿಸಲಾಗುವುದೆಂದು ತಿಳಿಯಬರುತ್ತದೆ

ಸುಮಾರು ೨೦ ಡಿಸ್ಟ್ರಾಯರ್ ಅನೇಕ ಭಾರಿ ಯುದ್ಧ ಹಡಗುಗಳು, ಸಾವಿರಾರು ವಿಮಾನಗಳು, ಸುಮಾರು ೩೦-೪೦ ಲಕ್ಷ ಪೌಂಡುಗಳಷ್ಟು ಆಧುನಿಕ ಶಸ್ತ್ರಾಸ್ತ್ರಗಳನ್ನು ಅಮೆರಿಕ—ಪಾಕ್ ಒಪ್ಪಂದ ರೀತ್ಯಾ ಸರಬರಾಜು ಮಾಡಲಾಗುತ್ತದೆ ಎಂದು ಹೇಳಲಾಗಿದೆ.

ರಷ್ಯಾವನ್ನು ಎದುರಿಸಲು ಅಮೆರಿಕವು ಪಾಕೀಸ್ತಾನವನ್ನು ತನ್ನ ಯುದ್ಧ ನೆಲೆಯನ್ನಾಗಿ ಮಾಡಿಕೊಳ್ಳುವುದೇ ಅದರ ಆಶಯವೆಂದೂ ಊಹಿಸಲಾಗಿದೆ.

ಅಮೆರಿಕದ ಈ ನೀತಿಯ ಬಗ್ಗೆ ಬ್ರಿಟನ್ನಿನಲ್ಲಿ ವಿಶೇಷ ಪರಿಣಾಮವುಂಟಾಗಿರುವುದಾಗಿ ತಿಳಿಯಬರುತ್ತದೆ.

ಹಿಂದಿ ಪ್ರಬಂಧ ಸ್ಪರ್ಧೆ

ಮೈಸೂರು ೨೯

ಜಯನಗರದಲ್ಲಿರುವ ಶಿಶುಸಾಹಿತ್ಯ ಸಂಘದಾಶ್ರಯದಲ್ಲಿ ಇದೇ ೩೧ ನೇ ತಾರೀಖು ಸಂಜೆ ೫-೩೦ ಗಂಟೆಗೆ ವನಿತಾಸದನ ಸಭಾಂಗಣದಲ್ಲಿ ಶ್ರೀ ರಂಗನಾಯಕಮ್ಮ ಸ್ಮಾರಕ ಹಿಂದೀ ಪ್ರಬಂಧ ಸ್ಪರ್ಧೆ ಬಹುಮಾನ ವಿನಿಯೋಗವು ಶ್ರೀ ಎಸ್. ರಂಗಾಚಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಪಿಲಿಫೈನ್ಸ್‌ನಲ್ಲಿ ವಯಸ್ಕರ ಶಿಕ್ಷಣಶಾಖೆಯ ಶ್ರೀ ಟಿ. ಕೃಷ್ಣಮೂರ್ತಿಯವರು ಭಾಷಣಮಾಡುತ್ತಾರೆ.

ವಾರ್ಷಿಕೋತ್ಸವ

ಮೈಸೂರು ಭಾರತ ಸೇವಾಸಮಾಜದ ಶಾಖೆಯ ಬಾಟ್‌ಮಿಂಟನ್ ಕ್ಲಬ್ಬಿನ ಪ್ರಥಮ ವಾರ್ಷಿಕೋತ್ಸವವು ನಾಳೆ ಸಂಜೆ ಐದು ಗಂಟೆಗೆ ಸಮಾಜದ ಆವರಣದಲ್ಲಿ ಶಾರದಾವಿಲಾಸ ಹೈಸ್ಕೂಲು ಉಪಾಧ್ಯಾಯರಾದ ಶ್ರೀ ಬಿ. ರಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಕಾಲೇಜು ವಿದ್ಯಾರ್ಥಿಗಳ ಪ್ರವಾಸ ಮುಕ್ತಾಯ

ಮೈಸೂರು ೨೯

ಬೊಂಬಾಯಿ ಪ್ರವಾಸ ಕೈಗೊಂಡಿದ್ದ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಪತ್ರಿಕೋದ್ಯಮ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳು ನಿನ್ನೆರಾತ್ರಿ ಬೊಂಬಾಯಿನಿಂದ ರಾಜಧಾನಿಗೆ ಹಿಂತಿರುಗಿದರು. ಮಾರ್ಗದಲ್ಲಿ ಹುಬ್ಬಳ್ಳಿಗೆ ಹೋಗಿ ಅಲ್ಲಿ ಕೆ. ಪಿ. ಸಿ. ಸಿ. ಕಾರ್ಯದರ್ಶಿಯವರನ್ನು ಭೇಟಿಮಾಡಿದ್ದರು.

ಭೂಪಾಲ್ ಮಂತ್ರಿ ಮಂಡಲದಲ್ಲಿ ಬಿಕ್ಕಟ್ಟು

ಭೂಪಾಲ್ ಮಂತ್ರಿಮಂಡಲದಲ್ಲಿ ಬಿಕ್ಕಟ್ಟುಂಟಾಗಿ ಅಲ್ಲಿಯ ಆರ್ಥಿಕ ಸಚಿವ ಶ್ರೀ ಕಾಂತಾಪ್ರಸಾದ್‌ರವರು ಕೂಡಲೇ ರಾಜೀನಾಮೆ ಕೊಡಬೇಕೆಂದು ಕಾಂಗ್ರೆಸ್ ಹೈಕಮ್ಯಾಂಡ್ ಆದೇಶವಿತ್ತಿದೆ.

ಆಂಧ್ರದ ಖೋತಾಬಜೆಟ್

ಆಂಧ್ರ ಶಾಸನ ಸಭಾಧಿವೇಶನವು ನಿನ್ನೆ ದಿನ ಪ್ರಾರಂಭವಾಯಿತು. ಆರ್ಥಿಕ ಸಚಿವ ಶ್ರೀ ಟಿ. ವಿಶ್ವನಾಥಂರವರು ಪ್ರಸಕ್ತ ಸಾಲಿನ ದ್ವಿತಿಯಾರ್ಧದ ಆಯವ್ಯಯವನ್ನು ಮಂಡಿಸಿದರು. ಇದರಲ್ಲಿ ೧೧೮೭-೨೯ ಲಕ್ಷ ರೂ.ಗಳ ಆದಾಯ ಮತ್ತು ೧೨೩೪-೧೬ ಲಕ್ಷ ರೂಪಾಯಿಗಳ ಖೋತಾ ಆಗುತ್ತದೆ,

ಅಂತರ ರಾಷ್ಟ್ರೀಯ ಪ್ರಜಾಸಂಖ್ಯೆ ಸಮ್ಮೇಳನ

ಮುಂದಿನ ಸಾಲಿನ ಸೆಪ್ಟಂಬರ್ ಮಾಹೆಯಲ್ಲಿ ಅಂತರಾಷ್ಟ್ರೀಯ ಪ್ರಜಾ ಸಂಖ್ಯಾ ಸಮ್ಮೇಳನವೊಂದು ಭಾರತದಲ್ಲಿ, ವಿಶ್ವಸಂಸ್ಥೆಯ ಆಶ್ರಯದಲ್ಲಿ ನಡೆಯುವುದೆಂದು ತಿಳಿಯಬರುತ್ತದೆ.

ಮಾನವ ಜನಾಂಗದ ಮನೋಭಾವಬದಲಾಗಬೇಕು

ವಿನಾಶದ ಕಡೆ ಎಳೆಯುತ್ತಿರುವ ಪರಿಸ್ಥಿತಿ ತಪ್ಪಿಸಬೇಕು

ನ್ಯಾಯಾಂಗ ಸಮ್ಮೇಳನದಲ್ಲಿ ರಾಷ್ಟ್ರಾಧ್ಯಕ್ಷರ ಮನವಿ

ವಿಶ್ವದಲ್ಲಿರುವ ಅತ್ಯಂತ ಉನ್ನತ ರಾಷ್ಟ್ರಗಳು ಪ್ರತಿಸ್ಪರ್ಧಿಗಳ ಭಯದಿಂದ ಜೀವಿಸುತ್ತಲಿವೆ. ಅಗತ್ಯ ವಸ್ತುಗಳ ತಯಾರಿಕೆ ಮುಂತಾದುವುಗಳಲ್ಲಿ ಒಬ್ಬರನ್ನು ಇನ್ನೊಬ್ಬರು ಹಿಂದಕ್ಕೆ ಹಾಕಲು ಯತ್ನಗಳನ್ನು ನಡೆಸುತ್ತಲಿರುವರು. ಆದರೆ ಈ ಯತ್ನಗಳೆಲ್ಲಾ ಸ್ವರಕ್ಷಣೆಗಿಂತಲೂ ಶತ್ರುಗಳನ್ನು ಹೆದರಿಸಲು ನಡೆಯುತ್ತಿವೆ.

ಈ ಭಯ ಮತ್ತು ವಸ್ತುಗಳ ಪರಿಪೂರ್ಣತೆ ಹೊಂದಿರುವ ಆಸಕ್ತಿಯು ಮಾನವ ಸ್ವಾತಂತ್ರ್ಯಗಳನ್ನು ವ್ಯತಿರಿಕ್ತ ರೀತಿಯಲ್ಲಿ ಹತೋಟಿಯಲ್ಲಿಡಲು ಕಾರಣವಾಗುತ್ತಿವೆ ಎಂದು ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದ್‌ರವರು ನಿನ್ನೆಯದಿನ ಅಂತರರಾಷ್ಟ್ರೀಯ ನ್ಯಾಯಾಂಗ ಸಮ್ಮೇಳನವನ್ನು ಉದ್ಘಾಟಿಸುತ್ತಾ ತಿಳಿಸಿದರು.

ವಿನಾಶದಕಡೆ ಎಳೆಯುತ್ತಿರುವ ಮಾನವ ಜನಾಂಗದ ಮನೋಭಾವವನ್ನು ಪುನರ‍್ರೂಪಿಸಬೇಕಾದ ಅವಶ್ಯಕತೆಯು ವಿಶೇಷವಾಗಿದೆ. ಆ ಕಾರ್ಯವನ್ನು ಎಲ್ಲಾ ರಾಷ್ಟ್ರಗಳ ಜನತೆ ಕೈಗೊಳ್ಳಬೇಕಾಗಿದೆ ಎಂದು ರಾಷ್ಟ್ರಾಧ್ಯಕ್ಷರು ನುಡಿದರು.

ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಸ್ವಾಗತಿಸುತ್ತ ಭಾರತ ಶ್ರೇಷ್ಠ ನ್ಯಾಯಮೂರ್ತಿಗಳಾದ ಶ್ರೀ ಪತಂಜಲಿಶಾಸ್ತ್ರಿಯವರು, ಈಗ ಎಲ್ಲರಲ್ಲೂ ಹೆದರಿಕೆಯನ್ನು ಹುಟ್ಟಿಸುತ್ತಲಿರುವ ಅಟಾಮಿಕ್ ಯುಗದಲ್ಲಿ ಹೊಸದೊಂದು ವಿಶ್ವಜನಾಂಗವು ಕಾಣಿಸಿಕೊಳ್ಳುವದಿನ ದೂರವಿಲ್ಲ ಎಂದು ಹೇಳಿದರು.

ಕಾರ್ಮಿಕರ ವಸತಿ ಗೃಹ ಆರಂಭ

ಮೈಸೂರು ೨೯

ಕೇಂದ್ರಸರ್ಕಾರದ ಮರಾಮತ್ತು ಮತ್ತು ಗೃಹವಸತಿ ಶಾಖಾ ಸಚಿವರಾದ ಶ್ರೀ ಸ್ವರ್ಣಸಿಂಗ್‌ರವರು ಕೆಸರೆಯ ಬಳಿ ಕಾರ್ಮಿಕರಿಗಾಗಿ ಕಟ್ಟಲಾಗುವ ಗೃಹಗಳ ಪ್ರಾರಂಭೋತ್ಸವವನ್ನು ನಾಳೆ ಬೆಳಿಗ್ಗೆ ಒಂಭತ್ತು ವರೆ ಗಂಟೆಗೆ ನೆರವೇರಿಸುತ್ತಾರೆ. ಸಂಜೆ ೪ ಗಂಟೆಗೆ ಅವರು ಮಂಡ್ಯದಲ್ಲಿ ಕಾರ್ಮಿಕರ ವಸತಿಗೃಹಗಳ ಶಂಕುಸ್ಥಾಪನೆಯನ್ನು ನೆರವೇರಿಸುತ್ತಾರೆ.

ಕಾರ್ಮಿಕ ಪ್ರದೇಶಗಳಲ್ಲಿ ಅವರಿಗಾಗಿ ಗೃಹಗಳನ್ನು ಕಟ್ಟಲು ಕೇಂದ್ರಸರ್ಕಾರವು ಹಣವನ್ನು ಒದಗಿಸುತ್ತಲಿದೆ. ಆ ಯೋಜನೆಯ ಅಂಗವಾಗಿ ಸಂಸ್ಥಾನದಲ್ಲೂ ಈ ಕಾರ್ಯವು ಪ್ರಾರಂಭವಾಗಿದೆ.

ಮಾರಾಟತೆರಿಗೆ ಕಾನೂನು ಬದಲಾವಣೆ

ಮೈಸೂರು ೨೯

ಮೊನ್ನೆಯದಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನು ಸ್ಥಳೀಯ ವರ್ತಕರ ಮುಖಂಡರು ಭೇಟಿಮಾಡಿ ಮಾರಾಟ ತೆರಿಗೆ, ಆಕ್ಟ್ರಾಯ್ ಮುಂತಾದ ವಿಷಯದಲ್ಲಿ ಇರುವ ತೊಂದರೆಗಳನ್ನು ನಿವೇದಿಸಿಕೊಂಡಾಗ, ಮುಂದಿನ ಶಾಸನಸಭೆಯಲ್ಲಿ ಮಾರಾಟತೆರಿಗೆ ಕಾನೂನಿನಲ್ಲಿ ಹಲವಾರು ಬದಲಾವಣೆಗಳನ್ನು ಮಾಡಲಾಗುವುದಾಗಿ ತಿಳಿಸಿದರೆಂದು ಗೊತ್ತಾಗಿದೆ.

ಕೊರಿಯಾದಿಂದ ಅಮೆರಿಕಾ ಸೈನ್ಯ ವಿಸರ್ಜನೆ

ಅಮೆರಿಕ ಅಧ್ಯಕ್ಷ ಐಸೆನ್‌ಹೋವರ್‌ರವರು ಕೊರಿಯಾದಲ್ಲಿರುವ ತಮ್ಮ ಸೈನ್ಯವನ್ನು ಕ್ರಮೇಣ ವಿಸರ್ಜಿಸಲಾಗುವುದೆಂದು ಹೇಳಿರುವುದು ದಕ್ಷಿಣ ಕೊರಿಯಾದಲ್ಲಿ ಅತ್ಯಂತ ಗಾಬರಿಯನ್ನುಂಟುಮಾಡಿದೆ. ತನ್ನ ನೆರವಿಗೆ ಈ ಸೈನ್ಯವನ್ನು ಹೇಗಾದರೂ ಮಾಡಿ ಉಳಿಸಿಕೊಳ್ಳುವ ಯತ್ನಗಳು ನಡೆಯುತ್ತಿರುವುದಾಗಿ ಹೇಳಲಾಗಿದೆ.

ಮಲೆನಾಡು ಪ್ರತಿನಿಧಿಗಳ ಸಮ್ಮೇಳನ

ಬೊಂಬಾಯಿ, ಮದ್ರಾಸ್, ಮೈಸೂರು ಮತ್ತು ಕೊಡಗಿನ ಮಲೆನಾಡು ಪ್ರದೇಶದ ಪ್ರತಿನಿಧಿಗಳ ಸಮ್ಮೇಳನವು ಫೆಬ್ರವರಿಯಲ್ಲಿ ಶಿವಮೊಗ್ಗದಲ್ಲಿ ನಡೆಯುತ್ತದೆ. ಈ ಸಮ್ಮೇಳನವನ್ನು ಕೇಂದ್ರ ಆಹಾರಸಚಿವ ರಫಿ ಅಹಮದ್ ಕಿದ್ವಾಯಿಯವರು ಉದ್ಘಾಟಿಸುವರು.

-ಮೈಸೂರು ಪೇಟೆಧಾರಣೆ-

ತಾರೀಖು ೨೮—೧೨—೧೯೫೧

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೭—	೨೫—೧೪
ಎಳ್ಳು	—	—
ಹರಳು	೩೭—೧೦	೩೯—
ಹೊಂಗೆಬೀಜ	—	—
ಹುಚ್ಚೆಳ್ಳು	೩೪—	೪೪—೧೪
ಬೆಲ್ಲ	—	—
ಹುರಳಿ	೨೯—೨	೩೦—೮
ಉದ್ದು	—	—
ಹೆಸರು	೩೪—	೪೨—೧೨
ಅಲಸಂದೆ	೩೫—	೪೭—೨
ಹುಣಸೆಹಣ್ಣು	೧೨—೧೪	—
ಮೆಣಸಿನಕಾಯಿ	೨೦—	೩೭—೪
ಸೀಗೆಕಾಯಿ	—	—
ತೆಂಗಿನಕಾಯಿ	೧೪೮—	೨೮೭—

ಆಂಧ್ರದಲ್ಲಿ ನೂತನರಾಜಕೀಯ ಪಕ್ಷ ರಚನೆ

ಆಂಧ್ರದಲ್ಲಿ ಆರ್ಥಿಕ ಸಚಿವ ಶ್ರೀ ಟಿ. ವಿಶ್ವನಾಥಂರವರ ನಾಯಕತ್ವದಲ್ಲಿ ಪ್ರಜಾಪಕ್ಷವೆಂಬ ನೂತನ ಪಕ್ಷವೊಂದು ರಚನೆಯಾಗಿದೆ. ಇಲ್ಲಿಯವರೆಗೆ ಪ್ರಜಾ ಸೋಷಲಿಸ್ಟ್ ಪಕ್ಷದಲ್ಲಿ ಇದ್ದು ಆಂಧ್ರಸರ್ಕಾರ ರಚನೆಯಲ್ಲಿ ಭಿನ್ನತೆಹೊಂದಿ, ಕಾಂಗ್ರೆಸ್ ಸರ್ಕಾರಕ್ಕೆ ಬೆಂಬಲ ನೀಡಲು ನಿರ್ಧರಿಸಿದ ಶ್ರೀ ಟಿ. ವಿಶ್ವನಾಥಂ ಮತ್ತು ಅವರು ಅನುಯಾಯಿಗಳು ಪ್ರಜಾಸೋಷಲಿಸ್ಟ್ ಪಕ್ಷವನ್ನು ತ್ಯಜಿಸಿ ಈ ನೂತನ ಪಕ್ಷವನ್ನು ರಚಿಸಿದ್ದಾರೆ.

ಮಾಜಿ ಪ್ರಧಾನಿ ಪತ್ನಿಗೆ ಕಠಿಣಶಿಕ್ಷೆ

ಬ್ರಿಟಿಷ್ ಗಯಾನಾದ ಪದಚ್ಯುತರಾದ ಪ್ರಧಾನಿ ಡಾ॥ ಚೆಡ್ಡಿಜಗನ್‌ರವರ ಪತ್ನಿಗೆ ಅಲ್ಲಿಯ ನ್ಯಾಯಾಲಯವೊಂದು ಮೂರು ತಿಂಗಳ ಕಠಿಣಶಿಕ್ಷೆಯನ್ನು ವಿಧಿಸಿದೆ. ಆಜ್ಞೆಯನ್ನು ಉಲ್ಲಂಘಿಸಿ, ಅವರು ಬಹಿರಂಗ ಸಭೆಯನ್ನು ನಡೆಸಿದರೆಂಬುದೇ ಅವರ ಮೇಲಿನ ಆಪಾದನೆ.

ಆಂಧ್ರ ಸಚಿವ ಲಚ್ಚಣ್ಣನವರ ರಾಜೀನಾಮೆ ?

ಆಂಧ್ರಪ್ರಾಂತ್ಯದಲ್ಲಿ ಸಚಿವರಾಗಿರುವ ಶ್ರೀ ಲಚ್ಚಣ್ಣನವರು ತಮ್ಮ ಸಚಿವ ಪದವಿಗೆ ರಾಜೀನಾಮೆಯನ್ನು ಕೊಟ್ಟು ಆ ಪತ್ರವನ್ನು ಕೃಷಕಲೋಕಪಕ್ಷದ ನಾಯಕ ಪ್ರೊಫೆಸರ್ ರಂಗಾರವರಿಗೆ ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಸಿಂಹಳ ಪ್ರಧಾನಿಗೆ ಅಮೆರಿಕ ಆಹ್ವಾನ

ಅಮೆರಿಕಾಕ್ಕೆ ಭೇಟಿ ಕೊಡುವಂತೆ ಸಿಂಹಳ ಪ್ರಧಾನಿ ಸರ್ ಜಾನ್ ಕೊಟೇಲವಾಲಾರವರಿಗೆ ಆಹ್ವಾನ ಬಂದಿರುವುದಾಗಿ ತಿಳಿಯಬರುತ್ತದೆ. ಅವರು ಅಮೆರಿಕಾಕ್ಕೆ ಯಾವಾಗ ಹೋಗುವರೆಂದು ಇನ್ನೂ ತಿಳಿಯದು.

ಹೈದರಾಬಾದ್ ಜವಾರ್ ಮದರಾಸಿಗೆ

ಮದ್ರಾಸಿಗೆ ಹೈದರಾಬಾದ್ ೨೫-೩೦ ಸಾವಿರ ಟನ್ ಜವಾರ್ ಧಾನ್ಯವನ್ನು ಸರಬರಾಜು ಮಾಡುವುದಾಗಿ ಗೊತ್ತಾಗಿದೆ.

ಇತಿಹಾಸ ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ಇತಿಹಾಸ ಕಾಂಗ್ರೆಸ್ ಅಧಿವೇಶನವು ಈ ದಿನ ವಾಲ್ಟೇರ್‌ನಲ್ಲಿ ಭಾರತ ಉಪ ರಾಷ್ಟ್ರಪತಿ ಡಾ॥ ರಾಧಾಕೃಷ್ಣರವರು ಉದ್ಘಾಟಿಸಿದರು.

ಖೆಡ್ಡಾಕ್ಕೆ ಸ್ವರ್ಣಸಿಂಗ್‌ರ ಭೇಟಿ

ಮೈಸೂರು ೨೮

ಕೇಂದ್ರ ವಸತಿ ಮತ್ತು ಮರಾಮತ್ ಶಾಖಾ ಸಚಿವ ಸರ್ದಾರ್ ಸ್ವರ್ಣಸಿಂಗ್‌ರವರು ನಿನ್ನೆ ಬೆಳಿಗ್ಗೆ ರಾಜಧಾನಿಗೆ ಆಗಮಿಸಿ ಖೆಡ್ಡಾ ಕಾರ್ಯಕ್ರಮವನ್ನು ವೀಕ್ಷಿಸಲು ಕಾಕನಕೋಟೆಗೆ ತೆರಳಿದರು.

ವಿವಾಹ

ಮೈಸೂರು ೨೮

ಒಲಂಪಿಯಾ ಚಿತ್ರಮಂದಿರದ ಮ್ಯಾನೇಜರ್ ಶ್ರೀ ಬಿ. ಶೇಷಗಿರಿರಾಯರ ಪುತ್ರಿ ಶ್ರೀಮತಿ ಯಶೋದಾಬಾಯಿಯವರನ್ನು ಶ್ರೀ ಕಾಶಿ ಪ್ರಾಣೇಶಾಚಾರ್ಯರ ಪುತ್ರ ಡಾ॥ ಕೆ. ಪಿ. ಪುರುಷೋತ್ತಮರಾವ್‌ರವರಿಗೆ ಕೊಟ್ಟು ಮೊನ್ನೆಯದಿನ ವಿವಾಹವು ವೈಭವದಿಂದ ನಡೆಯಿತು.

ಜಿಲ್ಲಾಬೋರ್ಡು ಸಭೆ

ಮೈಸೂರು ೨೯

ಮೈಸೂರು ಜಿಲ್ಲಾ ಬೋರ್ಡಿನ ಸಾಮಾನ್ಯಸಭೆಯು ಮುಂದಿನತಿಂಗಳು ೧೧ ನೇ ತಾರೀಖು ಜಿಲ್ಲಾ ಭವನದಲ್ಲಿ ನಡೆಯುತ್ತೆ.

ಆಂಧ್ರ ಶಾಸನ ಸಭಾಧಿವೇಶನ

ಆಂಧ್ರ ಪ್ರಾಂತ್ಯದ ಶಾಸನ ಸಭೆಯ ಆಯವ್ಯಯದ ಅಧಿವೇಶನವು ನಿನ್ನೆ ಪ್ರಾರಂಭವಾಯಿತು. ಈ ಅಧಿವೇಶನವು ೧೧ ದಿನಗಳ ಕಾಲ ನಡೆಯುತ್ತದೆ.

ಆಂಧ್ರದ ರಾಜಧಾನಿ ಪ್ರಶ್ನೆ ಮತ್ತು ವಿದ್ಯಾಭ್ಯಾಸ ಸುಧಾರಣೆಗಳು ಅಲ್ಲಿ ಚರ್ಚೆಗೆ ಬರುವ ವಿಷಯಗಳಲ್ಲಿ ಪ್ರಮುಖವಾದುದೆಂದು ತಿಳಿಯಬರುತ್ತದೆ.

ಅಮೆರಿಕಾದಲ್ಲಿ ರಷ್ಯಾ ಗುಪ್ತ ತಂಡಗಳು

ಅಮೆರಿಕಾದಲ್ಲಿ ಸುಮಾರು ೨೫ ರಷ್ಯಾ ಗುಪ್ತ ತಂಡಗಳು ಇರುವುದಾಗಿ ಅಮೆರಿಕಾ ರಕ್ಷಣಾ ಉಪಸಮಿತಿಯ ಅಧ್ಯಕ್ಷರು ತಿಳಿಸಿದ್ದಾರೆ.

ಜಿಲ್ಲಾ ಬೋರ್ಡುಗಳು ರದ್ದು

ಒರಿಸ್ಸಾ ಪ್ರಾಂತ್ಯದಲ್ಲಿ ಮುಂದಿನತಿಂಗಳು ೧ ನೇ ತಾರೀಖಿನಿಂದ ಎಲ್ಲಾ ಜಿಲ್ಲಾ ಬೋರ್ಡುಗಳು ರದ್ದುಗೊಳಿಸಲಾಗಿದೆ.

[redacted]

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋಸ್ಟ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೦೭

೩೦-೧೨-೧೯೫೧ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

31 Fr. 1-1-52

ಅಮೇರಿಕಾಶಸ್ತ್ರಾಸ್ತ್ರಗಳು ಪಾಕೀಸ್ತಾನಕ್ಕೆ

ಹೊಸವರ್ಷಾರಂಭದಲ್ಲಿ ಬರುವನಿರೀಕ್ಷೆ

ಯುದ್ಧನೌಕೆಗಳು, ಸಾವಿರಾರು ಯುದ್ಧವಿಮಾನಗಳ ಸರಬರಾಜು

ಅಮೆರಿಕಾ ಮತ್ತು ಪಾಕೀಸ್ತಾನ ನಡುವೆ ಯಾವ ರೀತಿಯಾದ ಸೈನ್ಯ ಒಪ್ಪಂದ ಆಗುವುದಿಲ್ಲವೆಂದು ಎಷ್ಟು ಭರವಸೆಗಳು ಬರುತ್ತಿದ್ದರೂ ಪಾಕೀಸ್ತಾನಕ್ಕೆ ಅಮೆರಿಕಾದ ಸೈನ್ಯ ಸಹಾಯವು ಹೊಸವರ್ಷಾರಂಭದಿಂದ ಪ್ರಾರಂಭವಾಗುವುದಾಗಿ ಅಧಿಕೃತ ವೃತ್ತಗಳಿಂದ ಸುದ್ದಿ ಹೊರಬೀಳುತ್ತಿದೆ.

ಮುಂದಿನವರ್ಷದಲ್ಲಿ ಅಮೆರಿಕಾವು ಪಾಕೀಸ್ತಾನಕ್ಕೆ ೧೭ ಡಿಸ್ಟ್ರಾಯರ್ ನೌಕೆಗಳೂ, ೪ ದೊಡ್ಡ ಯುದ್ಧ ಜಹಜುಗಳೂ, ೩ ಸಾವಿರ ವಿಮಾನಗಳನ್ನು ಕಳುಹಿಸುವುದಾಗಿ ಹೇಳಲಾಗುತ್ತಿದೆ. ಈ ವಿಮಾನಗಳಲ್ಲಿ ಹೆಚ್ಚಿಗೆ ಸಂಖ್ಯೆಯಲ್ಲಿ ಡಕೋಟಾಗಳಿರುವುವೆಂದೂ ಅಲ್ಲದೆ ಒಂದು ಸಾವಿರ ಫೈಟರ್ ಮತ್ತು ಬಾಂಬರ್ ವಿಮಾನಗಳಿರುವುವೆಂದೂ ಹೇಳಲಾಗುತ್ತಿದೆ.

ಪಾಕೀಸ್ತಾನ ವಿಮಾನ ನಿಲ್ದಾಣಗಳಲ್ಲಿ ಅದರಲ್ಲೂ ಮುಖ್ಯವಾಗಿ ಉತ್ತರಭಾಗದಲ್ಲಿರುವ ಗಿಲ್ಗಿಟ್ ಮುಂತಾದುವನ್ನು ಆಧುನಿಕ ಸಾಧನಗಳಿಂದ ಅಳವಡಿಸಲು ಅಮೆರಿಕಾವು ಒಂದೂವರೆ ಕೋಟಿ ಡಾಲರುಗಳನ್ನು ಕೊಡುವುದಾಗಿ ತಿಳಿಯಬರುತ್ತದೆ.

ಈಗಾಗಲೇ ಅಮೆರಿಕವು ಗಿಲ್ಗಿಟ್‌ನ್ನು ತನ್ನ ನೆಲೆಯನ್ನಾಗಿ ಪರಿವರ್ತಿಸಿಕೊಂಡಿರುವುದಾಗಿಯೂ, ಪಾಕೀಸ್ತಾನಿಗಳಿಗೆ ಅಲ್ಲಿ ಪ್ರವೇಶವನ್ನು ನಿಷೇಧಿಸಿ ಪಾಕೀಸ್ತಾನ ಸರಕಾರವು ಈ ಭಾಗವನ್ನು ತನ್ನ ನೇರವಾದ ಹತೋಟಿಯಲ್ಲಿಟ್ಟುಕೊಂಡಿರುವುದಾಗಿಯು ಹೇಳಲಾಗುತ್ತಿದೆ.

ಟರ್ಕಿಗೆ ಈಗ ಬಂದಿಳಿದಿರುವ ಅಮೆರಿಕಾ ಸೈನ್ಯ ಸಾಮಗ್ರಿಗಳನ್ನು ಹಲವನ್ನು ಪಾಕೀಸ್ತಾನಕ್ಕೆ ಕಳುಹಿಸಲಾಗುತ್ತದೆಯೆಂದೂ ಅಮೆರಿಕಾ ರಕ್ಷಣಾ ವ್ಯವಸ್ಥೆಗೆ ಟರ್ಕಿಯು ಒಪ್ಪಿರುವುದರಿಂದ ಟರ್ಕಿ ಮತ್ತು ಪಾಕೀಸ್ತಾನ ನಡುವೆಯು ರಕ್ಷಣಾ ಒಪ್ಪಂದ ಆಗಲಿದೆಯೆಂದೂ ಹೇಳಲಾಗಿದೆ.

○ ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ವಾರ್ಷಿಕ ಅಧಿವೇಶನವು ನಾಳೆಯದಿನ ಶಾಸ್ತ್ರಿ ನಗರ (ಜಲಂಧರ್) ನಲ್ಲಿ ಪ್ರಾರಂಭವಾಗುತ್ತದೆ. ಪ್ರಧಾನಿ ನೆಹರೂರವರು ಸಮ್ಮೇಳನವನ್ನು ಉದ್ಘಾಟಿಸುತ್ತಾರೆ.

ವಿದ್ಯುತ್ ಷಾಕ್ ಹೊಡೆದು ನೇಪಾಳ ರಾಯಭಾರಿ ನಿಧನ

ಭಾರತದಲ್ಲಿ ನೇಪಾಳದ ರಾಯಭಾರಿಯಾಗಿದ್ದ ಲೆಫ್ಟಿನೆಂಟ್ ಜನರಲ್ ವಿಜಯ ಷಂಷೇರ್ ಜಂಗ್ ಬಹದ್ದೂರ್ ರಾಣಾರವರು ನಿನ್ನೆಯದಿನ ಬೆಳಗ್ಗೆ ವಿದ್ಯುಚ್ಛಕ್ತಿ ಷಾಕ್ ಹೊಡೆದು ಮರಣಹೊಂದಿದರು. ಅವರು ಬೆಳಗ್ಗೆ ದೆಹಲಿಯಲ್ಲಿ ತಮ್ಮ ಮನೆಯಲ್ಲಿ ಸ್ನಾನದ ತೊಟ್ಟಿಯಲ್ಲಿ ಕುಳಿತು ಸ್ನಾನ ಮಾಡುತ್ತಿದ್ದಾಗ, ನೀರು ಕಾಯಿಸುವ ವಿದ್ಯುತ್ ಸಲಕರಣೆಗಳಲ್ಲಿ ಷಾರ್ಟ್ ಸರ್ಕ್ಯೂಟ್ ಆಗಿ ಅವರಿಗೆ ಷಾಕ್ ಹೊಡೆಯಿತು.

ಅವರು ಸ್ನಾನಕ್ಕೆ ಹೋಗಿ ಎಷ್ಟು ಹೊತ್ತಾದರೂ ಹೊರಗೆ ಬರದೆ ಸ್ನಾನದ ಕೊಠಡಿಯಲ್ಲಿ ಒಂದು ವಿಧವಾದ ಶಬ್ದವು ಕೇಳಿಬಂದೊಡನೇ ಬಾಗಿಲನ್ನು ಒಡೆದು ನೋಡಲಾಗಿ ಅವರು ಜ್ಞಾನವಿಲ್ಲದೆ ಬಿದ್ದಿದ್ದು ಕಾಣಬಂದಿತು. ಕೂಡಲೇ ಡಾಕ್ಟರುಗಳು ಬಂದು ಅವರ ದೇಹವನ್ನು ಪರೀಕ್ಷಿಸಿ ಎಷ್ಟುವಿಧವಾದ ಚಿಕಿತ್ಸೆ ನಡೆಸಿದರು. ಅದು ಪ್ರಯೋಜನವೇನೂ ಆಗಲಿಲ್ಲ

ಶ್ರೀಯುತರು ನೇಪಾಳದ ಕೊನೆಯ ರಾಣಾವಂಶ ಮೋಹನ ಶಂಷೀರ್ ಜಂಗ್ ಬಹದ್ದೂರ್‌ರವರ ಎರಡನೇ ಪುತ್ರರು. ಅವರಿಗೆ ೩೮ ವರ್ಷ ವಯಸ್ಸಾಗಿತ್ತು.

ವಿಷಯ ತಿಳಿದೊಡನೆಯೇ ಪ್ರಧಾನಿ ನೆಹರೂರವರೂ ಮತ್ತು ಅನೇಕ ಪ್ರಮುಖರು ಅವರ ಮನೆಗೆ ತೆರಳಿ ಅನುತಾಪವನ್ನು ವ್ಯಕ್ತಪಡಿಸಿದರು. ರಾಷ್ಟ್ರಾಧ್ಯಕ್ಷ, ಪ್ರಧಾನಿ ಎಲ್ಲರೂ ನೇಪಾಳ ರಾಜರಿಗೆ ತಮ್ಮ ಅನುತಾಪ ವ್ಯಕ್ತಪಡಿಸಿದ್ದಾರೆ.

ಮೃತರ ತಂದೆಯವರು ಬೆಂಗಳೂರಿನಲ್ಲಿದ್ದರು. ಅವರಿಗೆ ವರ್ತಮಾನ ಕೊಟ್ಟು ಸಂಜೆ ದಹನಕ್ರಿಯೆ ಸಕಲ ಮರ್ಯಾದೆಗಳೊಡನೆ ನಡೆಯಿತು.

ಮೃತರ ಗೌರವಾರ್ಥವಾಗಿ ದೆಹಲಿಯಲ್ಲಿ ಸರ್ಕಾರಿ ಕಟ್ಟಡಗಳಮೇಲೆ ರಾಷ್ಟ್ರಧ್ವಜವನ್ನು ಅರ್ಧಮಟ್ಟಕ್ಕೆ ಹಾರಿಸಲಾಗಿದ್ದಿತು.

ಸಂಸ್ಥಾನದಲ್ಲಿ ಕಾರ್ಮಿಕರಿಗೆ ವಸತಿಗೃಹ

ಈ ಸಂಬಂಧದಲ್ಲಿ ಕಾನೂನು ರಚನೆಯಾಗಲಿದೆ

ಮೈಸೂರು ೩೦

ಭಾರತದಲ್ಲಿ ಆರ್ಥಿಕ ಅಭಿವೃದ್ಧಿ ಯೋಜನಾ ಮುಖ್ಯಾಧಿಕಾರಿಗಳ ಲೆಖ್ಖಾಚಾರ ಪ್ರಕಾರ ೮.೪ ಕೋಟಿ ರೂಪಾಯಿಗಳ ವೆಚ್ಚದಲ್ಲಿ ೪೨ ಸಾವಿರ ಮನೆಗಳನ್ನು ಕಟ್ಟಿಸಬೇಕಾಗಿದೆ. ಮನೆ ಕಟ್ಟುವ ಜಾಗದ ಬೆಲೆಯೂ ಸೇರಿ ೨೭೦೦ ರೂಪಾಯಿ ಗಳು ಮೀರಕೂಡದೆಂದು ಕೇಂದ್ರವು ನಿರ್ಧರಿಸಿದೆ. ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಸಂಖ್ಯೆಯು ಹೆಚ್ಚುತ್ತಿರುವುದರಿಂದ ನಾವು ಅವರ ವಸತಿಗಾಗಿ ಕನಿಷ್ಟಪಕ್ಷ ೧೮ ಕೋಟಿ ರೂಪಾಯಿಗಳು ವೆಚ್ಚಮಾಡಿ ೫೨ ಸಾವಿರ ಮನೆಗಳನ್ನು ಕಟ್ಟಬೇಕಾಗಿದೆ. ಕಾರ್ಮಿಕ ವರ್ಗದವರಿಗೂ ಮಧ್ಯಮ ವರ್ಗದವರಿಗೂ ವಸತಿ ಸೌಕರ್ಯವನ್ನು ಏರ್ಪಡಿಸಲು ಮೈಸೂರು ಸರ್ಕಾರವು ಒಂದು ಶಾಸನವನ್ನು ಮಾಡಲಿದೆ. ಈ ಯೋಜನೆಗೆ ಭಾರತಸರ್ಕಾರದ ಅನುಮೋದನೆ ಮತ್ತು ಸಹಾಯವು ದೊರೆಯಬೇಕೆಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈದಿನ ಕೆಸರೆಯಲ್ಲಿ ಕಾರ್ಮಿಕ ವಸತಿಯ ಪ್ರಾರಂಭೋತ್ಸವದಲ್ಲಿ ಮಾತನಾಡುತ್ತಾ ತಿಳಿಸಿದರು.

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತ ಈ ರೀತಿ ಹೇಳಿದರು:—

ಮೈಸೂರು ಸರ್ಕಾರವು ಗೃಹನಿರ್ಮಾಣ ಯೋಜನೆಯಲ್ಲಿ ಹಿಂದಿನಿಂದಲೂ ಅನುಭವ ಸಂಪಾದಿಸಿದೆ ಬೆಂಗಳೂರು ಮೈಸೂರು ನಗರಾಭಿವೃದ್ಧಿ ಸಂಸ್ಥೆಗಳು ಈ ಕೆಲಸವನ್ನು ಅನೇಕ ವರ್ಷಗಳಿಂದಲೂ ಮಾಡಿಕೊಂಡು ಬಂದಿವೆ. ಅವು ಇದುವರೆಗೆ ೭೦೦ ಮನೆಗಳನ್ನು ಕಟ್ಟಿ ಪೂರ್ತಿಮಾಡಿವೆ. ಹೊಸ ಬಡಾವಣೆಗಳನ್ನು ಒಂದೇ ಸಮನೆ ನಿರ್ಮಿಸಲಾಗುತ್ತಿದೆ. ದೊಡ್ಡ ಕೈಗಾರಿಕಾ ಸಂಸ್ಥೆಗಳೂ ಈ ದಿಕ್ಕಿನಲ್ಲಿ ಉತ್ತಮವಾಗಿ ಕೆಲಸ ನಡೆಸಿವೆ. ಕೋಲಾರದ ಚಿನ್ನದಗಣಿಯವರು ಬೆಂಗಳೂರು ಮೈಸೂರಿನ ಬಟ್ಟೆ ಕಾರ್ಖಾನೆಗಳೂ, ಹಿಂದೂಸ್ಥಾನ ವಿಮಾನ ಕಾರ್ಖಾನೆ ಮತ್ತಿತರ ಕೈಗಾರಿಕಾ ಸಂಸ್ಥೆಗಳೂ ಈಗಾಗಲೇ ಕಾರ್ಮಿಕರಿಗೆ ವಾಸದ ಮನೆಗಳನ್ನು ಕಟ್ಟಿಸಿಕೊಟ್ಟಿವೆ. ಮುಂದಿನ ಅವಶ್ಯಕತೆಗಳಿಗೂ ಗಮನವಿತ್ತು ಕೆಲಸಮಾಡುತ್ತಿವೆ. ಎಷ್ಟೇ ಮಾಡಿದರೂ ಈ ಪ್ರಶ್ನೆಯನ್ನು ಬಿಡಿಸಲು ಇನ್ನು ಹೆಚ್ಚು ಪ್ರಮಾಣದಲ್ಲಿ ನಾವು ಕಾರ್ಯತತ್ಪರರಾಗಬೇಕಾಗುವುದು.

ನಮ್ಮ ಜನಗಳಲ್ಲಿ ಹರಿಜನರೇ ಅತ್ಯಂತ ದುರವಸ್ಥೆಯ ಮನೆಗಳಿಗಾಗಿ ವಾಸಮಾಡುವವರು. ಅವರ ವಾಸದ ಮನೆಗಳಿಗಾಗಿ ಕಳೆದ ಐದು ವರ್ಷಗಳಲ್ಲಿ ಒಂದು ಕೋಟಿಗೂ ಮೀರಿ ಖರ್ಚುಮಾಡಿದ್ದೇವೆ. ನಗರಗಳಲ್ಲಿಯೂ ಪಟ್ಟಣಗಳಲ್ಲಿಯೂ ಮಧ್ಯಮ ತರಗತಿಯವರಿಗೆ ಆಯಾ ಸ್ಥಳದ ಗೃಹನಿರ್ಮಾಣ ಸಹಕಾರ ಸಂಸ್ಥೆಗಳು ಸಾವಿರಾರು ಮನೆಗಳನ್ನು ಕಟ್ಟಿಸಿಕೊಟ್ಟಿದ್ದಾರೆ.

ಮೈಸೂರು ಸರ್ಕಾರದವರು ೧೯೪೯ನೇ ಇಸವಿಯಲ್ಲಿ ಈ ಸಂಬಂಧದ ಒಂದು ಶಾಸನ ಮಾಡಿದರು. ಗೃಹನಿರ್ಮಾಣ ಸಂಸ್ಥೆಗಳಿಗೆ ಕಾನೂನಿನ ಬೆಂಬಲವೀಯುವುದೇ ಈ ಶಾಸನದ ಉದ್ದೇಶ ಇದರ ಅಂಗವಾಗಿ ೧೯೫೨ರ ಮಧ್ಯಕಾಲದಲ್ಲಿ ಒಂದು ಆಡಳಿತ ಮಂಡಳಿ (Board) ಸಹ ರಚಿತವಾಯಿತು. ಕಾರ್ಮಿಕ ಗೃಹನಿರ್ಮಾಣ ಸಂಸ್ಥೆ ಮತ್ತು ಬೆಂಗಳೂರು ನಗರಾಭಿವೃದ್ಧಿ ಇವೆರಡರ ಪ್ರಯತ್ನದ ಫಲವಾಗಿ ರಾಜಾಜಿನಗರವೆಂಬ ಕೈಗಾರಿಕಾ ಉಪನಗರವು ಸ್ಥಾಪಿತವಾಗಿ ೨೪೦ ಮನೆಗಳನ್ನು ಕಟ್ಟಲಾಯಿತು. ಕೇಂದ್ರ ಸರ್ಕಾರದವರೂ ಸಹ ಇದಕ್ಕೆ ತಮ್ಮ ನೆರವಿತ್ತರು. ಈ ೨೪೦ ಮನೆಗಳಲ್ಲಿಯೂ ಕಾರ್ಮಿಕರು ಈಗ ವಾಸವಾಗಿದ್ದಾರೆ. ಬೆಂಗಳೂರುನಗರ ಮಧ್ಯದ ಕಿಷ್ಕಿಂಧತೆಯು ರಾಜಾಜಿನಗರ ಸ್ಥಾಪನೆಯಿಂದ ಕೊಂಚಮಟ್ಟಿಗಾದರೂ ಕಡಮೆಯಾಗಿದೆ. ೫೪-೫೫ನೆ ಸಾಲಿನಲ್ಲಿ ೨,೭೫೦ ಮನೆ ಕಟ್ಟಿಸಬೇಕೆಂದು ಈ ಕಾರ್ಮಿಕ ಗೃಹನಿರ್ಮಾಣ ಸಂಸ್ಥೆಯವರು ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ. ಬೆಂಗಳೂರಿನಲ್ಲಿ ತ್ವರಿತವಾಗಿ ೭೦೦ ಮನೆಗಳನ್ನು ಕಟ್ಟುವ ಯೋಜನೆಯೊಂದನ್ನು ನಾವು ಕೇಂದ್ರ ಸರ್ಕಾರದ ಒಪ್ಪಿಗೆಗೆ ಕಳುಹಿಸಿದ್ದೇವೆ. ಶ್ರೀಮಾನ್ ಸರ್ದಾರ್ ಸ್ವರ್ಣಸಿಂಗರವರು ದಯವಿಟ್ಟು ತ್ವರಿತವಾಗಿ ನಮ್ಮ ಯೋಜನೆಗೆ ತಮ್ಮ ಒಪ್ಪಿಗೆ ಕೊಡುವರೆಂದು ನಂಬಿದ್ದೇನೆ. ಗೃಹನಿರ್ಮಾಣ ಸಮಸ್ಯೆಯು ವಿಳಂಬ ಮಾಡಬಹುದಾದ ಸಮಸ್ಯೆಯಲ್ಲ. ವಿಶ್ರಾಂತಿಯಿಲ್ಲದೆ ದುಡಿದರೆ ಮಾತ್ರ ಅದನ್ನ ಸಾಧಿಸಬಹುದಾಗಿದೆ.

ನಮಗಿರುವ ಹಣಕಾಸಿನ ಪರಿಮಿತಿ, ಸ್ಥಳೀಯ ಸನ್ನಿವೇಶ ಇವುಗಳಿಗನುಗುಣವಾಗಿ ಕಟ್ಟಡಗಳ ಮಾದರಿ ಮತ್ತು ಬೆಲೆಯನ್ನು ನಿರ್ಧರಿಸಿಕೊಳ್ಳುವ ವಿವೇಚನೆಯನ್ನು ಪ್ರಾಂತ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರದ ಈಗಿನ ಯೋಜನೆ. ಈತೆರನಾದ ವಿವೇಚನೆಗೆ ಅಲ್ಪಸ್ವಲ್ಪ ಅವಕಾಶ ಇದೆ. ನಿಜ. ಆದರೆ ಅಷ್ಟು ಸಾಲದು. "ಮನೆ ಕಟ್ಟುವ ತಪಶೀಲು ಮತ್ತು ಅದಕ್ಕೆ ಖರ್ಚುಮಾಡಬೇಕಾದ ವೆಚ್ಚವನ್ನು ನಮಗೆ ಬಿಟ್ಟುಬಿಡಿ, ಅದನ್ನು ನಾವು ಸರಿಯಾಗಿಯೇ ಮಾಡುತ್ತೇವೆ. ನಿಮ್ಮ ಪರೀಕ್ಷೆಗೆ ತಕ್ಕಂತೆ ನಾವು ನಡೆದುಕೊಳ್ಳುತ್ತೇವೆ" ಎಂದು ನಾನು ಗೃಹನಿರ್ಮಾಣ ಮಂತ್ರಿಗಳಿಗೆ ಸೂಚಿಸ ಬಯಸುತ್ತೇನೆ.

ಬೊಂಬಾಯಿ ಬಳಿ ರೈಲ್ವೆ ಅಪಘಾತ

ಎಂಜನ್ನಿಗೆ ಪೂರಾ ಜಖಂ, ೬೦ ಜನರಿಗೆ ಗಾಯ

ಬೊಂಬಾಯಿಗೆ ಬರುತ್ತಿದ್ದ "ಡೆಕ್ಕನ್ ಕ್ವೀನ್" ರೈಲು ನಿನ್ನೆಯಬೆಳಿಗ್ಗೆ ಪ್ರಯಾಣಿಕರಿಂದ ತುಂಬಿದ್ದ ಸಬರ್ಬಾನ್ ರೈಲೊಂದಕ್ಕೆ ಡಿಕ್ಕಿ ಹೊಡೆದಿದುದರ ಪರಿಣಾಮವಾಗಿ ಎಂಜಿನ್ ಪುಡಿಪುಡಿಯಾಗಿ ಅದರ ಹಿಂಬದಿಯಲ್ಲಿದ್ದ ಗಾಡಿಯು ಉರುಳಿತು.

ಈ ಅನಾಹುತದಲ್ಲಿ ಸಾವುಗಳಾವುವೂ ಉಂಟಾಗಲಿಲ್ಲ. ಗಾಯಗೊಂಡ ಸುಮಾರು ೬೦ ಜನರಲ್ಲಿ ೨೦ ಜನರು ಆಸ್ಪತ್ರೆಯನ್ನು ಸೇರಿ ಚಿಕಿತ್ಸೆ ಪಡೆಯುತ್ತಿರುವುದಾಗ ತಿಳಿಯಬರುತ್ತದೆ ಯಾರಿಗೂ ಅಂತಹ ಪ್ರಬಲವಾದ ಗಾಯಗಳೇನೂ ಆಗಿಲ್ಲ.

ಪಾಕ್‌ಗೆ ಅಮೆರಿಕ ಆರ್ಥಿಕ ನೆರವು

ಅಮೆರಿಕವು ಪಾಕೀಸ್ಥಾನಕ್ಕೆ ೨.೨ ಕೋಟಿ ಡಾಲರುಗಳ ನೆರವು ಕೊಡುವ ಒಪ್ಪಂದಕ್ಕೆ ನಿನ್ನೆಯದಿನ ಸಹಿಯಾಯಿತೆಂದು ತಿಳಿಯಬರುತ್ತದೆ. ಪಾಕೀಸ್ತಾನದಲ್ಲಿ ನಡೆಯಬೇಕಾಗಿರುವ ಹಲವಾರು ಅಭಿವೃದ್ಧಿ ಕಾರ್ಯಗಳಿಗೆ ಈ ಹಣವನ್ನು ಉಪಯೋಗಿಸಿಕೊಳ್ಳಲಾಗುತ್ತದೆ.

ಸೋಷಲಿಸ್ಟ್ ಪಕ್ಷಕ್ಕೆ ರಾಜೀನಾಮೆ

ಆಂಧ್ರ ಪ್ರಜಾಸೋಷಲಿಸ್ಟ್ ಪಕ್ಷದ ೫೪ ಜನರು ಪಕ್ಷಕ್ಕೆ ತಮ್ಮ ರಾಜೀನಾಮೆಯನ್ನು ಇತ್ತಿರುವುದಾಗಿ ಪ್ರಕಟಿಸಲಾಗಿದೆ. ಪಕ್ಷದ ಸಹ ಕಾರ್ಯದರ್ಶಿಯವರೂ, ಇಬ್ಬರು ವಿಧಾನಸಭಾ ಸದಸ್ಯರೂ ಇವರಲ್ಲಿರುವರು.

ವಿಚಿತ್ರ ಕರುವಿನ ಜನನ

ನೆಲ್ಲೂರು ಜಿಲ್ಲೆಯ ಬಿಲ್ಲಕೂರು ಗ್ರಾಮದಲ್ಲಿ ಒಂದು ತಲೆ, ಎರಡು ಮುಖ, ಮೂರು ಕಣ್ಣುಗಳುಳ್ಳ ವಿಚಿತ್ರ ಹಸುವಿನ ಕರುವು ಜನಿಸಿದೆ ಒಂದು ಕಣ್ಣು ಮುಖದ ನಡುವೆ ಅದರ ಅಕ್ಕಪಕ್ಕಗಳಲ್ಲಿ ಮತ್ತೆರಡು ಇವೆ.

ಕರುವು ಆಹಾರವನ್ನು ತೆಗೆದುಕೊಳ್ಳುತ್ತ ಆರೋಗ್ಯವಾಗಿದೆ.

ಮಕ್ಕಳನ್ನು ಪಡೆಯುವುದು ಉತ್ತಮ ರಾಷ್ಟ್ರಸೇವೆ

ರಷ್ಯಾದಲ್ಲಿ ಮಕ್ಕಳನ್ನು ಪಡೆಯುವುದು ಉತ್ತಮ ರಾಷ್ಟ್ರಸೇವೆಯಂತೆ ಪರಿಗಣಿಸಲಾಗುತ್ತಿದೆ. ೧೦ಕ್ಕಿಂತ ಹೆಚ್ಚಾಗಿ ಮಕ್ಕಳನ್ನು ಪಡೆದ ಸುಮಾರು ೩೮೦೦೦ ಮಹಿಳೆಯರಿಗೆ 'ಮದರ್ ಹಿರೋಯಿನ್' ಎಂಬ ಬಿರುದನ್ನು ಕೊಟ್ಟಿರುವುದಾಗಿ ಭಾರತಕ್ಕೆ ಆಗಮಿಸಿರುವ ರಷ್ಯಾ ಆರೋಗ್ಯ ಉಪಸಚಿವರಾದ ಶ್ರೀ ಮತಿ ಕೋವಿಗಿರಿನಾರವರು ಹೇಳಿದ್ದಾರೆ.

ತಿರುನಕ್ಷತ್ರ

ಮೈಸೂರು ಶ್ರೀ ಅಹೋಬಿಲ ಮಠದಲ್ಲಿ ೨ನೇ ತಾರೀಖು ಶನಿವಾರ ದ್ವಾದಶೀದಿನ ೪೦ನೇ ಪಟ್ಟದಲ್ಲಿ ಅಭಿಷಿಕ್ತರಾದ ಶ್ರೀ ರಂಗನಾಥ ಶಠಕೋಪ ಸ್ವಾಮಿಗಳವರ ತಿರುನಕ್ಷತ್ರವು ಬೆಳೆಯುವುದರಿಂದ ಆದಿನ ಬೆಳಿಗ್ಗೆ ೮ ಘಂಟೆಗೆ ಸರಿಯಾಗಿ ಮೈಸೂರು ಶ್ರೀ ಅಹೋಬಿಲ ಮಠಕ್ಕೆ ಶಿಷ್ಯರೂ ಮತ್ತು ಭಕ್ತರೂ ಬಂದು ದೇವರ ಸೇವಾ, ತೀರ್ಥ, ಪ್ರಸಾದ ಸ್ವೀಕರಿಸಿ ಕೃತಾರ್ಥರಾಗಬೇಕಾಗಿ ಪ್ರಾರ್ಥಿಸಲಾಗಿದೆ.

ಪ್ರಾಂತ್ಯ ಶ್ರೇಷ್ಠ ಕಾರ್ಯದರ್ಶಿಗಳ ಸಮ್ಮೇಳನ

ಭಾರತದ ಎಲ್ಲಾ ಪ್ರಾಂತ್ಯಗಳ ಶ್ರೇಷ್ಠ ಕಾರ್ಯದರ್ಶಿಗಳ ಸಮ್ಮೇಳನವೊಂದು ಮುಂದಿನತಿಂಗಳು ಮಧ್ಯಭಾಗದಲ್ಲಿ ದೆಹಲಿಯಲ್ಲಿ ನಡೆಯಲಿರುವುದಾಗಿ ತಿಳಿಯಬರುತ್ತದೆ. ಪ್ರಾಂತ್ಯ ಮತ್ತು ಕೇಂದ್ರ ಆಡಳಿತಕ್ಕೆ ಸಂಬಂಧಪಟ್ಟ ಸಾಮಾನ್ಯ ವಿಷಯಗಳನ್ನೂ, ರಾಜ್ಯಾಂಗ ತಿದ್ದುಪಡಿ ವಿಷಯವನ್ನೂ ಇಲ್ಲಿ ಚರ್ಚಿಸಲಾಗುವುದೆಂದು ಹೇಳಲಾಗಿದೆ.

ಪಾಕೀಸ್ತಾನಕ್ಕೆ ಸೈನ್ಯ ನೆರವು ಅಪಾಯಕರ

ಪಾಕೀಸ್ತಾನಕ್ಕೆ ಅಮೇರಿಕಾವು ಮಿಲಿಟರಿ ನೆರವು ನೀಡುವುದು ಅಪಾಯಕಾರಕ ಮತ್ತು ಮೂರ್ಖತನವೆಂದು ಬ್ರಿಟಿಷ್ ಕಾರ್ಮಿಕ ಮುಖಂಡ ಮಿ॥ ಬೆವಾನ್‌ರವರು ಹೇಳಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು. ೨೯—೧೨—೧೯೫೩

ಸಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೨	೨೫—೭
ಎಳ್ಳು	—	—
ಹರಳು	೩೬—೧೪	೩೯—೨
ಹೊಂಗೆಬೀಜ	—	—
ಹುಚ್ಚೆಳ್ಳು	೩೪—	೪೫—೭
ಬೆಲ್ಲ	—	—
ಹುರಳಿ	೨೮—೪	೩೦—೭
ಉದ್ದು	—	—
ಹೆಸರು	೩೧—೧೦	೪೦—
ಅಲಸಂದೆ	೩೩—೭	೪೬—೪
ಹುಣಸೆಹಣ್ಣು	೧೧—	೧೨—೧೪
ಮೆಣಸಿನಕಾಯಿ	೧೯—೧೨	೩೭—
ಸೀಗೆಕಾಯಿ	—	—
ತೆಂಗಿನಕಾಯಿ	೧೪೯—	೨೮೩—

ಭಾರತದಲ್ಲಿ ಆರ್ಥಿಕಪರಿಸ್ಥಿತಿ ಉತ್ತಮಗೊಳ್ಳುತ್ತಿದೆ

ಕೇಂದ್ರ ಹಣಕಾಸಿನ ಸಚಿವರ ಹೇಳಿಕೆ

ಭಾರತದಲ್ಲಿ ಈಗ ಆರ್ಥಿಕಪರಿಸ್ಥಿತಿಯು ಉತ್ತಮಗೊಳ್ಳುತ್ತಿದೆ. ಎಲ್ಲಾ ವಸ್ತುಗಳ ಬೆಲೆಯು ಇಳಿಮುಖವಾಗುತ್ತಿದೆ. ಕೊರಿಯಾಯುದ್ಧಕ್ಕೆ ಮುನ್ನ ವಸ್ತುಗಳಿಗಿದ್ದ ಬೆಲೆಗೇ ಇಳಿಯುವ ಸೂಚನೆಗಳಿರುವುದಾಗಿ ಕೇಂದ್ರ ಆರ್ಥಿಕ ಸಚಿವ ಶ್ರೀ ದೇಶಮುಖ್‌ರವರು ಹೇಳಿದ್ದಾರೆ.

ದೇಶದಲ್ಲಿ ಕೈಗಾರಿಕೋತ್ಪತ್ತಿ ಅಧಿಕಗೊಳ್ಳುತ್ತಿದೆ ಇದರಿಂದಲೂ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತಿರುವುದಾಗಿ ಅವರು ತಿಳಿಸಿದ್ದಾರೆ.

ಬಹುಪತ್ನಿತ್ವ ನಿರೋಧ ಶಾಸನ

ತಮ್ಮ ಪತ್ನಿಗಳು ಜೀವಂತರಾಗಿರುವಾಗ ಪುನಃ ವಿವಾಹವನ್ನು ಸರ್ಕಾರಿ ಉದ್ಯೋಗಸ್ಥರು ಮಾಡಿಕೊಳ್ಳುವುದನ್ನು ನಿಷೇಧಿಸಿ ಆಜ್ಞೆಮಾಡಲು ಕೇಂದ್ರ ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ತಿಳಿಯಬರುತ್ತದೆ.

ಮುಂದಿನ ಫೆಬ್ರವರಿ ಅಥವಾ ಮಾರ್ಚಿ ಮಾಹೆಯಿಂದ ಇದನ್ನು ಜಾರಿಗೆ ತರಬಹುದು. ಎಲ್ಲಾ ಪ್ರಾಂತ್ಯಗಳಲ್ಲೂ ಈ ಸಂಬಂಧದಲ್ಲಿ ಒಂದೇರೀತಿ ಆಜ್ಞೆಯಿರುವಂತೆ ವ್ಯವಸ್ಥೆ ಮಾಡಲಾಗುತ್ತದೆ.

ಚತುರ್ರಾಷ್ಟ್ರ ಸಮ್ಮೇಳನ

ರಷ್ಯಾ, ಬ್ರಿಟನ್, ಅಮೆರಿಕ ಮತ್ತು ಫ್ರಾನ್ಸ್ ಈ ನಾಲ್ಕು ರಾಷ್ಟ್ರಗಳ ವಿದೇಶಾಂಗ ಸಚಿವರ ಸಮ್ಮೇಳನವು ಜನವರಿ ೨೫ರಲ್ಲಿ ನಡೆಯುವುದೆಂದು ಗೊತ್ತಾಗಿದೆ.

ಪಾನನಿರೋಧ ಪರಿಶೀಲನಾ ಸಮಿತಿ ರಚನೆ

ಆಂಧ್ರಪ್ರಾಂತ್ಯದಲ್ಲಿ ಪಾನನಿರೋಧ ಕ್ರಮವು ಹೇಗೆ ನಡೆಯುತ್ತಿದೆ ಎಂಬುದನ್ನು ಪರಿಶೀಲಿಸಿ ಸರ್ಕಾರಕ್ಕೆ ಸೂಕ್ತ ಸಲಹೆಯನ್ನು ನೀಡಲು ಶ್ರೀ ಎಸ್. ವಿ. ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ ಆಂಧ್ರ ಸರ್ಕಾರವು ೩ ಜನ ಸದಸ್ಯರ ಸಮಿತಿಯೊಂದನ್ನು ರಚಿಸಿದೆ.

ನೊಂದವರಿಗೆ ಪರಿಹಾರ

ಆಂಧ್ರಪ್ರಾಂತ್ಯ ಚಳುವಳಿಯಲ್ಲಿ ಪೋಲೀಸಿನವರ ಗುಂಡಿನ ಏಟಿನಲ್ಲಿ ನೊಂದವರಿಗೆ ಪರಿಹಾರ ಕೊಡಲಾಗುವುದಾಗಿ ತಿಳಿಯಬರುತ್ತದೆ.

ಚೈನಾ ಸಾಂಸ್ಕೃತಿಕ ನಿಯೋಗ

ಚೈನಾ ಸಾಂಸ್ಕೃತಿಕ ನಿಯೋಗವು ನಿನ್ನೆಯದಿನ ಮದ್ರಾಸಿಗೆ ಆಗಮಿಸಿತು.

ಪ್ರಾಂತ್ಯ ಪೋಲೀಸ್ ಮುಖ್ಯಾಧಿಕಾರಿಗಳ ಸಭೆ

ಪ್ರಾಂತ್ಯಗಳ ನ್ಯಾಯ ಮತ್ತು ಶಿಸ್ತಿನ ವಿಷಯವನ್ನು ಚರ್ಚಿಸಲು ಎಲ್ಲಾ ಪ್ರಾಂತ್ಯಗಳ ಪೋಲೀಸ್ ಮುಖ್ಯಾಧಿಕಾರಿಗಳ ಸಭೆಯೊಂದು ಮುಂದಿನತಿಂಗಳು ೬ನೇ ತಾರೀಖಿನಿಂದ ಮೂರುದಿನಗಳು ದೆಹಲಿಯಲ್ಲಿ ನಡೆಯಲಿದೆ.

ಆಹಾರಧಾನ್ಯ ರಫ್ತಿಗೆ ಪ್ರತಿಬಂಧಕ

ಬಳ್ಳಾರಿ ಜಿಲ್ಲೆಯಿಂದ ಮೈಸೂರು ಸಂಸ್ಥಾನದ ಹೊರಗಿನ ಪ್ರದೇಶಗಳಿಗೆ ಮಿಲೆಟ್ಸ್ ಧಾನ್ಯಗಳನ್ನು ರಫ್ತುಮಾಡಕೂಡದೆಂದು ಆಜ್ಞೆ ಮಾಡಲಾಗಿದೆ.

ಅಕ್ಕಿಪಡಿತರ ಹೆಚ್ಚಿತು

ಹೈದರಾಬಾದ್ ಮತ್ತು ಸಿಕಂದರಾಬಾದ್ ನಗರಗಳಲ್ಲಿ ಮುಂದಿನ ಒಂದನೇ ತಾರೀಖಿನಿಂದ ಅಕ್ಕಿಯ ಪಡಿತರವನ್ನು ೬ ಔನ್ಸ್‌ಗಳಿಂದ ೮ ಔನ್ಸ್‌ಗಳಿಗೆ ಹೆಚ್ಚಿಸಲಾಗಿದೆ.

ತಿರುವಾಂಕೂರಿನಲ್ಲಿ ನೆಹರೂ ಪ್ರವಾಸ

ಪ್ರಧಾನಿ ನೆಹ್ರೂರವರು ಫೆಬ್ರವರಿ ೪ನೇ ತಾರೀಖು ತಿರುವನಂತಪುರಕ್ಕೆ ತೆರಳಿ ಅಲ್ಲಿ ೫ ದಿನಗಳ ಪ್ರವಾಸ ನಡೆಸುವರೆಂದು ತಿಳಿಯಬರುತ್ತದೆ

★ ಮದ್ರಾಸ್ ಪ್ರಾಂತ್ಯದಲ್ಲಿ ಮಹಿಳಾ ಪೋಲೀಸ್ ದಳವನ್ನು ನೇಮಿಸುವ ಸಂಭವವಿದೆಯೆಂದು ಮುಖ್ಯಮಂತ್ರಿ ಶ್ರೀ ರಾಜಗೋಪಾಲಾಚಾರಿಯವರು ವಿಧಾನ ಪರಿಷತ್ತಿನಲ್ಲಿ ತಿಳಿಸಿದ್ದಾರೆ.

ಅಪೆರಾ

24-12-53ರಿಂದ ಅಮೋಘ2ನೇ ವಾರ

ಆರ್. ಎನ್. ಪಿಕ್ಚರ್ಸ್‌ರವರ

ಜಾತಕ ಫಲ

(ಕನ್ನಡ)

ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

[redacted]

ಪ್ರಕಾಶಕರು ಮತ್ತು ಮುದ್ರಕರು:

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೬೪ ರಿಜಿಸ್ಟರ್ ನಂ. ಎಂ. ೫೫೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೦೬

೨-೧-೧೯೫೪ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ರಾಷ್ಟ್ರಾಭಿವೃದ್ಧಿಗೆ ಮಾತ್ರ ಅಣುಶಕ್ತಿ ಪ್ರಯೋಗ

ಪ್ರಧಾನಿ ನೆಹರೂರವರ ಹೇಳಿಕೆ

ನಮ್ಮ ದೇಶದಲ್ಲಿ ಅಣುಬಾಂಬನ್ನು ತಯಾರಿಸುವ ಕಚ್ಚಾವಸ್ತುಗಳು ಇಲ್ಲ. ನಮಗೆ ಅಣುಬಾಂಬನ್ನು ತಯಾರಿಸುವ ಆಸೇಕ್ತೆಯೂ ಇಲ್ಲ ನಾವು ಇನ್ನು ೧೦-೧೫ವರ್ಷಗಳಲ್ಲಿ ಅಣುಶಕ್ತಿಯನ್ನು ದೇಶದ ಅಭ್ಯುದಯ ಕಾರ್ಯಕ್ಕಾಗಿ ಉಪಯೋಗಿಸಿಕೊಳ್ಳುತ್ತೇವೆ. ಅಣುಶಕ್ತಿಯನ್ನು ಸದಾಕಾಲದಲ್ಲಿಯೂ ಶಾಂತಿಗಾಗಿ ಮತ್ತು ದೇಶದ ಪ್ರಗತಿಗೆ ಉಪಯೋಗಿಸಬೇಕೇವಿನಃ ಸಂಶೋಧನೆಯನ್ನು ನಡೆಸಿದ ವೈಜ್ಞಾನಿಕರನ್ನೇ ನುಂಗುವ ಕಾರ್ಯಕ್ಕಾಗಿ ಉಪಯೋಗಿಸಬಾರದು.

ಈಗ ವಿಶ್ವದಲ್ಲಿರುವ ಕ್ರಾಂತಿಗಳಲ್ಲೆಲ್ಲಾ ಅಣು ಕ್ರಾಂತಿಯು ಬಲವಾದ ಕ್ರಾಂತಿಯಾಗಿದೆಯೆಂದೂ ಅದನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕೆಂದೂ ಪ್ರಧಾನಿ ನೆಹರೂರವರು ಬೊಂಬಾಯಿನಲ್ಲಿ ಅಣುಶಕ್ತಿ ಸಂಶೋಧನಾಲಯದ ಶಂಕುಸ್ಥಾಪನಾ ಸಮಯದಲ್ಲಿ ತಿಳಿಸಿತ್ತಾರೆ

ನದಿಕಣಿವೆ ಇಂಜನಿಯರ ಸಮ್ಮೇಳನ

ಭಾರತದಲ್ಲಿ ನದಿ ಕಣಿವೆ ಯೋಜನೆಗಳಿಗೆ ಸಂಬಂಧಪಟ್ಟ ಎಲ್ಲಾ ಇಂಜನಿಯರುಗಳ ಸಮ್ಮೇಳನವೊಂದು ಇದೇ ೫ನೇ ತಾರೀಖಿನಿಂದ ೩ ದಿನಗಳಕಾಲ ನಾಂಗಲ್‌ನಲ್ಲಿ ನಡೆಯುತ್ತದೆ. ಕೇಂದ್ರ ಆಯೋಜನಾ ಸಚಿವ ಶ್ರೀ ಜಿ. ಎಲ್. ನಂದಾರವರು ಅಧ್ಯಕ್ಷತೆವಹಿಸುತ್ತಾರೆ. ದೇಶದ ಸುಮಾರು ೬೦ ಇಂಜನಿಯರು ಈ ಸಮ್ಮೇಳನದಲ್ಲಿ ಭಾಗವಹಿಸುವರು.

ಉಪ್ಪಿನ ಮೇಲೆ ತೆರಿಗೆ

ಪಾರ್ಲಿಮೆಂಟ್ ಒಪ್ಪಿಗೆಯನ್ನಿತ್ತ ಉಪ್ಪಿನ ತೆರಿಗೆ ಕಾನೂನು ಇಂದಿನಿಂದ ದೇಶಾದ್ಯಂತ ಜಾರಿಗೆ ಬಂದಿದೆ. ಈ ಕಾನೂನಿನಂತೆ ಖಾಸಗಿ ಜನರು ತಯಾರಿಸುವ ಉಪ್ಪಿಗೆ ಮಣ ಒಂದಕ್ಕೆ ೨ ಆಣೆ ಕಾರ್ಖಾನೆಗಳು ತಯಾರಿಸುವ ಉಪ್ಪಿಗೆ ಮಣಕ್ಕೆ ಮೂರುವರಾಣೆಯಂತೆ ಸುಂಕವನ್ನು ವಿಧಿಸಲಾಗುತ್ತದೆ.

ಆಂಧ್ರಕ್ಕೆ ಹೈಕೋರ್ಟು

ಆಂಧ್ರ ಸರ್ಕಾರದ ಶ್ರೇಷ್ಠ ನ್ಯಾಯಲಯವನ್ನು ಸ್ಥಾಪಿಸಲು ಕೇಂದ್ರ ಸರ್ಕಾರವು ಒಂದು ವಿಶೇಷ ಸಮಿತಿಯನ್ನು ರಚಿಸಲಿದೆಯೆಂದು ತಿಳಿಯಬರುತ್ತದೆ.

ಮೈಸೂರಿನಲ್ಲಿ ಬಂಗಾಳಿ ಸೈಕಲ್ ಸವಾರರು

ಬಂಗಾಳದ ಅಸೋರಿ ಪತ್ರಿಕೆಯ ಉಪಸಂಪಾದಕರಾದ ಮಿ॥ ಸಾಂತುಘೋಷ್ ಮತ್ತು ನಿರಪದನಿಯೋಗಿ ಎಂಬಿಬ್ಬರು ಸೈಕಲ್ ಮೇಲೆ ಅಖಿಲಭಾರತ ಪ್ರವಾಸವನ್ನು ಕಳೆದ ವರ್ಷ ಅಕ್ಟೋಬರ್ ೧೧ನೇ ತಾ॥ ಕೈಗೊಂಡು ಮೊನ್ನೆ ದಿನ ಮೈಸೂರಿಗೆ ಬಂದಿರುವರು. ಅವರುಗಳು ಇದುವರೆಗೆ ಒರಿಸ್ಸಾ, ಆಂಧ್ರ,ಮದರಾಸು,ಪಾಂಡಿಚೆರಿ, ಟ್ರಿಚ್ಚಿ, ತಂಜಾವೂರು. ರಾಮೇಶ್ವರಂ, ಧನಸ್ಕೋಟಿ, ಪಾಂಕೋಟೆ, ಕನ್ಯಾಕುಮಾರಿ, ತಿರುವಾಂಕೂರ್, ಕೊಚ್ಚಿನ್ ಸಂಸ್ಥಾನ, ಮಲಬಾರ್, ನೀಲಗಿರಿ ಮತ್ತು ಇನ್ನೂ ಅನೇಕ ಪಟ್ಟಣಗಳನ್ನು ಸುತ್ತಿಕೊಂಡು ಬಂದಿರುವರು ಅವರು ಇಲ್ಲಿಯವರೆಗೆ ೩೦೦೦ ಮೈಲಿ ಪ್ರವಾಸ ಮಾಡಿದ್ದಾರೆ.

ಇವರು ೩ ದಿನಗಳು ಮೈಸೂರು ನಗರದಲ್ಲಿದ್ದು ಅನಂತರ ಬೆಂಗಳೂರಿನ ಮುಖಾಂತರವಾಗಿ ಬೊಂಬಾಯಿ, ಪೂನಾ, ರಾಜಾಸ್ಥಾನ, ಡೆಲ್ಲಿ ಮತ್ತು ಕಾಶ್ಮೀರಕ್ಕೆ ಭೇಟಿ ಕೊಡಲಿರುವರು.

ಅಕಾಲಿ ಪಕ್ಷಕ್ಕೆ ೩೦೫ ಸದಸ್ಯರ ರಾಜೀನಾಮೆ

ಕಳೆದ ಭಾನುವಾರ ಪ್ರಧಾನಿ ನೆಹರೂರವರು ಪಾಟಿಯಾಲಾಕ್ಕೆ ಭೇಟಿಯಿತ್ತಾಗ ಅವರು ವಿರುದ್ಧ ಪ್ರದರ್ಶನಗಳನ್ನು ಅಕಾಲಿ ಪಕ್ಷದವರು ಮಾಡಿದ್ದಕ್ಕಾಗಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಆ ಪಕ್ಷದ ೩೦೫ ಸದಸ್ಯರು ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟಿದ್ದಾರೆ.

ರೇಷ್ಮೆ ಕೈಗಾರಿಕೆಗೆ ನೆರವು

ರೇಷ್ಮೆ ಕೈಗಾರಿಕೆಗೆ ಇನ್ನೂ ೫ ವರ್ಷ ಕಾಲ ನೆರವು ನೀಡಲು ಭಾರತ ಸರ್ಕಾರವು ನಿರ್ಧರಿಸಿದೆ. ಆದರೆ ಅವುಗಳ ಮೇಲೆ ಈಗ ವಿಧಿಸುತ್ತಲಿರುವ ತೆರಿಗೆಗಳ ಬದಲಾವಣೆಯೇನೂ ಇರುವುದಿಲ್ಲ.

ಸಿಮೆಂಟಿನ ಬೆಲೆ

ಬೆಂಗಳೂರು ೨

ಸಿಮೆಂಟಿನ ಬೆಲೆಯು ಈಗಿರುವಂತೆಯೇ ಮಾರ್ಚಿ ಕೊನೆಯವರೆಗೂ ಇರುವುದು ಅದನ್ನು ಬದಲಾಯಿಸುವುದಿಲ್ಲವೆಂದು ಸರ್ಕಾರ ಪ್ರಕಟಿಸಿದೆ.

ಜೋಳ ಮತ್ತು ಇತರಧಾನ್ಯಗಳ ಹತೋಟಿರದ್ದು

ಕೇಂದ್ರ ಸರ್ಕಾರದ ಆಜ್ಞೆ

ಭಾರತಾದ್ಯಂತ ಒರಟು ಧಾನ್ಯಗಳಾದ ಜೋಳ, ಬಾಜ್ರ, ಮುಸುಕಿನ ಜೋಳ, ಬಾರ್ಲಿ, ಕಡಲೆ ಮತ್ತು ಇತರ ಧಾನ್ಯಗಳ ಮೇಲಿನ ಹತೋಟಿಯನ್ನು ನಿನ್ನೆಯಿಂದ ಸಂಪೂರ್ಣವಾಗಿ ರದ್ದುಗೊಳಿಸಲಾಗಿದೆ. ಈ ಧಾನ್ಯಗಳನ್ನು ಒಂದ ಪ್ರಾಂತ್ಯದಿಂದ ಮತ್ತೊಂದಕ್ಕೆ ರವಾನೆಯ ಮೇಲಿದ್ದ ಪ್ರತಿಬಂಧಕವನ್ನೂ ತೆಗೆದು ಹಾಕಲಾಗಿದೆ.

ಶಿವಮೊಗ್ಗದಲ್ಲಿ ಸೈನ್ಯಶಿಕ್ಷಣ ಕೇಂದ್ರ

ಭಾರತ ಪ್ರಜೆಗಳು ಶಿಸ್ತಿನಿಂದ ತಮ್ಮ ಕರ್ತವ್ಯವನ್ನು ಪಾಲಿಸಲು ಸಾಧ್ಯವಾದಷ್ಟು ಜನರಿಗೆ ಸೈನ್ಯ ಶಿಕ್ಷಣವನ್ನು ಕೊಡುವ ಒಂದು ಯೋಜನೆಯನ್ನು ಭಾರತ ಸರ್ಕಾರವು ತಯಾರಿಸಿದೆ. ಇದರಲ್ಲಿ ಭಾರತದಲ್ಲಿ ಸದ್ಯಕ್ಕೆ ೧೨ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಈಗಾಗಲೇ ಬೆಳಗಾಂನಲ್ಲಿ ಇಂತಹ ಕೇಂದ್ರವು ೪೦೮ ರೈತ ಮತ್ತು ಇತರಜನರಿಗೆ ಒಂದು ವಾರ ಶಿಕ್ಷಣವನ್ನು ಕೊಟ್ಟಿದೆ.

ಇಂತಹ ಸೈನ್ಯ ಶಿಕ್ಷಣ ಶಿಬಿರವೊಂದನ್ನು ಶಿವಮೊಗ್ಗಾದಲ್ಲಿ ಸ್ಥಾಪಿಸಲಾಗುತ್ತದೆ.

ಅಂತರ ರಾಷ್ಟ್ರೀಯ ಮಕ್ಕಳ ಕಲಾಪ್ರದರ್ಶನ

ಅಂತರ ರಾಷ್ಟ್ರೀಯ ಮಕ್ಕಳ ಕಲಾಪ್ರದರ್ಶನವನ್ನು ಪ್ರಧಾನಿ ನೆಹರುರವರು ನಾಳೆಯ ದಿನ ಹೈದರಾಬಾದಿನಲ್ಲಿ ಆರಂಭ ಮಾಡುತ್ತಾರೆ.

ಬ್ರಿಟನ್, ಚೀಣಾ, ಜರ್ಮನಿ, ಈಜಿಪ್ಟ್, ಟರ್ಕಿ ಮತ್ತು ನಾರ್ವೆಗಳ ಮಕ್ಕಳ ಕಲಾಕೃತಿಗಳನ್ನು ಇಲ್ಲಿ ಪ್ರದರ್ಶನವಾಗುತ್ತದೆ. ಇಂತಹ ಪ್ರದರ್ಶನ ಭಾರತದಲ್ಲಿ ನಡೆಯುವುದೇ ಇದೇ ಪ್ರಥಮ.

ಪಾನ ನಿರೋಧ ಕಾರ್ಯ ಪೋಲೀಸ್ ಖಾತೆಗೆ

ಮದ್ರಾಸ್ ಪ್ರಾಂತ್ಯದಲ್ಲಿ ಪಾನನಿರೋಧ ಕಾರ್ಯವನ್ನೆಲ್ಲಾ ಇನ್ನು ಮುಂದೆ ಪೋಲೀಸ್ ಖಾತೆಗೆ ವಹಿಸುವ ಉದ್ದೇಶ್ಯವಿರುವುದಾಗಿ ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿಯವರು ತಿಳಿಸಿದ್ದಾರೆ. ಈಗ ಈ ಕೆಲಸವನ್ನು ಮಾಡಲು ಪ್ರತ್ಯೇಕ ಶಾಖೆಯಿದೆ ಅದನ್ನು ಇನ್ನುಮುಂದೆ ವಜಾಮಾಡಲಾಗುತ್ತದೆ.

ರೇಡಿಯೋ ಪ್ರಸಾರ

ಮೈಸೂರು ೨

ನಾಳೆಯದಿನ ಸಂಜೆ ಪ್ರಧಾನಿ ನೆಹರೂರವರು ಬೆಂಗಳೂರಿನಲ್ಲಿ ಮಾಡುವ ಸಾರ್ವಜನಿಕ ಭಾಷಣವನ್ನು ರಾತ್ರಿ ೧೦ ಗಂಟೆಗೆ ಮೈಸೂರು ಆಕಾಶವಾಣಿಯಿಂದ ಪುನಃ ಪ್ರಸಾರ ಮಾಡಲಾಗುತ್ತದೆ.

ಸೋಮವಾರ ಹಿಂದೂಸ್ಥಾನ್ ವಿಮಾನ ಕಾರ್ಖಾನೆಗೆ ಅವರು ಕೊಡುವ ಭೇಟಿಯ ರೇಡಿಯೋ ವರದಿಯನ್ನು ಅದೇ ರಾತ್ರಿ ೯-೪೦ ಗಂಟೆಗೆ ಪ್ರಸಾರಮಾಡಲಾಗುತ್ತದೆ.

ಪಾರ್ಲಿಮೆಂಟ್ ಅಧಿವೇಶನ

ಪಾರ್ಲಿಮೆಂಟ್‌ನ ಬಡ್ಜೆಟ್ ಅಧಿವೇಶನವು ಮುಂದಿನ ತಿಂಗಳು ೧೫ ನೇ ತಾರೀಖಿನಿಂದ ೩ ತಿಂಗಳ ಕಾಲ ನಡೆಯುವುದೆಂದು ತಿಳಿಯಬರುತ್ತದೆ. ಮೊದಲನೆಯ ದಿನ ನಡೆಯುವ ಉಭಯ ಸಭೆಗಳ ಸಂಯುಕ್ತ ಅಧಿವೇಶನದಲ್ಲಿ ರಾಷ್ಟ್ರಾಧ್ಯಕ್ಷರು ಭಾಷಣ ಮಾಡುತ್ತಾರೆ.

ದಕ್ಷಿಣ ಭಾರತದಲ್ಲಿ ಡಿ. ಡಿ. ಟಿ. ಕಾರ್ಖಾನೆ

ಕಚ್ಚಾ ವಸ್ತುಗಳು ಸಿಕ್ಕುವ ದಕ್ಷಿಣ ಭಾರತದಲ್ಲಿ ಡಿ.ಡಿ.ಟಿ. ಕಾರ್ಖಾನೆಯನ್ನು ಆರಂಭಿಸುವುದಾಗಿ ಕೇಂದ್ರ ಉತ್ಪಾದನಾ ಸಚಿವ ಶ್ರೀ ಕೆ ಸಿ. ರೆಡ್ಡಿಯವರು ಹೇಳಿದ್ದಾರೆ.

ಗೃಹನಿರ್ಮಾಣ ಕಾರ್ಯಕ್ಕೆ ನೆರವು

ಮೈಸೂರು ಸಂಸ್ಥಾನದಲ್ಲಿ ಗೃಹನಿರ್ಮಾಣ ಕಾರ್ಯಕ್ಕಾಗಿ ಕೇಂದ್ರ ಗೃಹನಿರ್ಮಾಣ ಸಂಸ್ಥೆಯು ೪೧ ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಹೆಚ್ಚಿಗೆ ಜೋಳದ ಪಡಿತರ

ಬೆಂಗಳೂರು ೨

ಸರ್ಕಾರಿ ಗೋಡೌನುಗಳಲ್ಲಿ ಜೋಳದ ದಾಸ್ತಾನು ಉತ್ತಮವಾಗಿರುವುದರಿಂದ ಎಂ. ತರಗತಿಯ ಕಾರ್ಡುದಾರರಿಗೆ ಇನ್ನು ಮುಂದೆ ಜೋಳದ ಪಡಿತರವನ್ನು ಸರ್ಕಾರ ೩ ೯ ಔನ್ಸ್‌ಗಳಿಗೆ ಹೆಚ್ಚಿಸಿದೆ.

ಮುದ್ರಣದ ತೊಂದರೆಯಿಂದ ಕಳೆದೆರಡು ದಿನಗಳು ಪತ್ರಿಕೆ ಹೊರಡಲಿಲ್ಲ. [ಸಂ]

ಅಮೆರಿಕಾ ಸರ್ಕಾರಕ್ಕೆ ಅಮೆರಿಕನ್ನರ ಎಚ್ಚರಿಕೆ

ಪಾಕೀಸ್ತಾನಕ್ಕೆ ಸೈನ್ಯ ನೆರವು ಬೇಡ

ಅಮೆರಿಕಾವು ಪಾಕೀಸ್ತಾನಕ್ಕೆ ಸೈನ್ಯ ನೆರವು ನೀಡುವುದು ವಿವೇಚನಾರಹಿತವಾದ ಕ್ರಮ. ಏಷ್ಯಾದಲ್ಲಿ ಕಮ್ಯೂನಿಸಂನ ವಿರುದ್ಧವಾದ ಪ್ರಬಲ ರಾಷ್ಟ್ರ ಭಾರತ. ಭಾರತಕ್ಕೆ ಯುದ್ಧಾಪೇಕ್ಷೆಯಿದೆ, ಅದು ಕಮ್ಯೂನಿಸಂ ಪಕ್ಷಪಾತಿ ಎನ್ನುವುದು ಶುದ್ಧ ತಪ್ಪು. ಆದರಿಂದ ಅದರ ಮೈತ್ರಿಯನ್ನು ಕಳೆದುಕೊಳ್ಳಬೇಕಾಗುತ್ತದೆ-ಎಂದು ಅಮೆರಿಕದ ೧೨ ಮಂದಿ ಪ್ರಮುಖರು ಅಧ್ಯಕ್ಷ ಐಸೆನ್‌ಹೋವರ್ ಮತ್ತು ಸ್ಟೇಟ್ ಕಾರ್ಯದರ್ಶಿ, ಕಾಂಗ್ರೆಸ್ ಮುಖಂಡರಿಗೆ ತಂತಿ ಮೂಲಕ ತಿಳಿಸಿದ್ದಾರೆ.

ಈರೀತಿ ಪಾಕೀಸ್ತಾನಕ್ಕೆ ಸೈನ್ಯ ನೆರವು ಕೊಡುವ ಬದಲು ಭಾರತ ಮತ್ತು ಪಾಕೀಸ್ತಾನಕ್ಕೆ ಹೆಚ್ಚು ಆರ್ಥಿಕ ನೆರವು ನೀಡಬೇಕು. ಪಾಕೀಸ್ತಾನಕ್ಕೆ ಸೈನ್ಯ ನೆರವು ನೀಡುವುದು ಅನಗತ್ಯ ಅಲ್ಲದೆ ಹಾಗೆ ಮಾಡಿದರೆ ಪ್ರಪಂಚದ ಆ ಭಾಗದಲ್ಲಿ ಇಲ್ಲದ ಸಂದೇಹ ಮತ್ತು ಭೀತಿಯುಂಟಾಗುತ್ತದೆ ಎಂದು ಆ ತಂತಿಯಲ್ಲಿ ತಿಳಿಸಲಾಗಿದೆ.

ಕೈ ಕಸಬು ಸಮಿತಿ ಸಭೆ

ಅಖಿಲಭಾರತ ಕೈ ಕಸಬುಗಳ ಸಮಿತಿಯ ಸಭೆಯು ಕೃಷ್ಣರಾಜಸಾಗರದಲ್ಲಿ ನಾಳಿದ್ದಿನಿಂದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಅನೇಕ ಸಣ್ಣಸಣ್ಣ ಕೈಗಾರಿಕೆಗಳ ವಿಷಯವನ್ನು ಅಲ್ಲಿ ಚರ್ಚಿಸಲಾಗುವುದು ಅದರಲ್ಲಿ ೨೦ ಮಂದಿ ಪ್ರತಿನಿಧಿಗಳು ಭಾಗವಹಿಸುವರು. ೫ ನೇ ತಾ॥ ಮಧ್ಯಾಹ್ನ ಸಭೆಯು ರಾಜಧಾನಿಯ ವಸ್ತುಪ್ರದರ್ಶನದ ಕಟ್ಟಡದಲ್ಲಿ ಸೇರುವುದು ಮುಖ್ಯಮಂತ್ರಿಯವರೂ, ಡಾ॥ ನಾಗನಗೌಡರೂ ಭಾಗವಹಿಸುವರು ಅದೇ ಸಂಜೆ ಕೃಷ್ಣರಾಜಸಾಗರದಲ್ಲಿ ಬೋರ್ಡಿನ ಆರನೇ ಅಧಿವೇಶನವು ಸೇರುವುದು.

ಪಕ್ಷದ ನಾಯಕರ ಬದಲಾವಣೆ ಅತ್ಯಾಗತ್ಯ

ಪಕ್ಷದ ನಾಯಕರಾಗಿ ಶ್ರೀ ಬಿ ರಾಮಕೃಷ್ಣರಾಯರಿರುವುದನ್ನು ಬದಲಾಯಿಸುವುದು ಅತ್ಯಾಗತ್ಯ ಹಾಗೆ ಬದಲಾವಣೆಯಾದರೆ ಮಾತ್ರ ಕಾಂಗ್ರೆಸ್ಸಿನ ಭಿನ್ನತೆಹೋಗಿ ಸರ್ಕಾರದಲ್ಲಿ ಭದ್ರತೆಯುಂಟಾಗುತ್ತದೆ ಎಂದು ಅಲ್ಲಿಯ ಶಾಸನಸಭೆಯ ವಿರೋಧ ಕಾಂಗ್ರೆಸ್ಸಿಗರು ಪ್ರಧಾನಿ ನೆಹರೂರವರಿಗೆ ಪತ್ರ ಬರೆದಿರುವುದಾಗಿ ಗೊತ್ತಾಗಿದೆ.

ಲಕ್ಷ್ಮೀ ಪೂಜೆ

ರಾಜಕಮಲ್ ಟಾಕೀಸಿನವರು ನಿನ್ನೆ ತಮ್ಮ ಸಿನಿಮಾ ಮಂದಿರದಲ್ಲಿ ಲಕ್ಷ್ಮೀಪೂಜೆಯನ್ನು ನೆರವೇರಿಸಿ ಇಷ್ಟ ಮಿತ್ರಾದಿಗಳನ್ನು ಕರೆದು ಸತ್ಕರಿಸಿದರು.

ವಿಶ್ವೇಶ್ವರಯ್ಯ ನಾಲಾ ಅಭಿವೃದ್ಧಿ ಸಮಿತಿ

ಬೆಂಗಳೂರು ೨

ವಿಶ್ವೇಶ್ವರಯ್ಯ ನಾಲಾ ಪ್ರದೇಶಕ್ಕಾಗಿ ಇಪ್ಪತ್ತನಾಲ್ಕು ಜನರ ಸಮಿತಿಯೊಂದನ್ನು ೩ ವರ್ಷದ ಅವಧಿಯವರೆಗೆ ಸರ್ಕಾರದವರು ರಚಿಸಿರುತ್ತಾರೆ. ಆರೋಗ್ಯ ಮತ್ತು ಅಭಿವೃದ್ಧಿಗಾಗಿ ಎರಡು ಸ್ಥಾಯಿ ಸಮಿತಿಗಳನ್ನು ಏರ್ಪಡಿಸಲಾಗಿದೆ. ಆ ಪ್ರದೇಶ ಮತ್ತು ಅಕ್ಕಪಕ್ಕಗಳಲ್ಲಿ ನೀರಾವರಿ, ಆರೋಗ್ಯ, ಮಾರ್ಗಾನುಕೂಲಗಳ ಬಗ್ಗೆ ಸೂಕ್ತ ಏರ್ಪಾಡಿನ ವಿಷಯವನ್ನು ಪರಿಶೀಲಿಸಲು ಸಮಿತಿಗೆ ಅಧಿಕಾರ ವೀಯಲಾಗಿದೆ. ಮೈಸೂರು ಜಿಲ್ಲಾಧಿಕಾರಿಗಳು, ಮಂಡ್ಯ ಸಕ್ಕರೆ ಕಂಪೆನಿ ಅಧ್ಯಕ್ಷರು, ಮಂಡ್ಯಾ ಜಿಲ್ಲಾಬೋರ್ಡು ಅಧ್ಯಕ್ಷರು, ನಿವೃತ್ತ ಇಂಜನಿಯರ್ ಎಂ.ನರಸಿಂಹಯ್ಯ, ಶ್ರೀಗಳಾದ ಕೆ. ಚಿಕ್ಕಲಿಂಗಯ್ಯ, ಪಿ ತಿರುಮಲೇಗೌಡ, ಕೆ. ವಿ. ವೀರೇಗೌಡ, ಕೆ. ಪುಟ್ಟಸ್ವಾಮಿ, ಎಸ್. ಎಂ. ಲಿಂಗಪ್ಪ, ಎಂ. ಚಿಕ್ಕಲಿಂಗಯ್ಯ, ಕೆ. ವಿ. ವೀರಪ್ಪ, ಎಸ್. ಶ್ರೀನಿವಾಸಯ್ಯಂಗಾರ್, ಶಿವನಂಜೇಗೌಡ, ಬಿ. ಪಿ. ನಾಗರಾಜಮೂರ್ತಿ ಮತ್ತು ಬಿ. ವೈ. ನೀಲೇಗೌಡರು ಸಮಿತಿಯ ಸದಸ್ಯರಾಗಿರುವರು ರೆವಿನ್ಯೂ ಮಂತ್ರಿಗಳು ಸಮಿತಿಯ ಅಧ್ಯಕ್ಷರಾಗಿರುವರು.

ಸ್ಥಾಯೀ ಸಮಿತಿಗಳನ್ನೂ ರಚಿಸಲಾಗಿದೆ ಈ ಸಮಿತಿಗಳ ಸ್ಥಾಪನೆಯಾಗಿರುವುದರಿಂದ ವಿಶ್ವೇಶ್ವರಯ್ಯ ಕಾಲುವೆ ಪ್ರದೇಶದ ಸಲಹಾಸಮಿತಿ, ಕಬ್ಬಿನಸೆಸ್ ಸಮಿತಿ, ಕೃಷ್ಣರಾಜಸಾಗರ ವರ್ಕ್ಸ್ ಸಮಿತಿ, ಮುಂತಾದ ಇತರ ಸಮಿತಿಗಳನ್ನು ರದ್ದುಮಾಡಲಾಗಿದೆ.

ಭಾರತಕ್ಕೆ ವಿದೇಶೀಯ ಯಂತ್ರೋಪಕರಣ

ಭಾರತದಲ್ಲಿ ಪಂಚವಾರ್ಷಿಕ ಯೋಜನೆಯ ಪ್ರಕಾರ ೬೦೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಿರುವ ನದೀಕಣಿವೆ ಯೋಜನೆಗಳಿಗಾಗಿ ವಿದೇಶಗಳಿಂದ ಇಲ್ಲಿಯವರೆಗೆ ೩೦ ಕೋಟಿ ರೂಪಾಯಿಗಳಷ್ಟು ಬೆಲೆಬಾಳುವ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳಲಾಗಿದೆಯೆಂದು ತಿಳಿಯಬರುತ್ತದೆ.

ಶ್ರೀ ಎಂ. ವಿ. ಕೃಷ್ಣಪ್ಪ

ಕೇಂದ್ರ ಸರ್ಕಾರದ ಆಹಾರ ಶಾಖಾ ಉಪಮಂತ್ರಿಗಳಾದ ಶ್ರೀ: ಎಂ. ವಿ. ಕೃಷ್ಣಪ್ಪನವರು ದಕ್ಷಿಣ ಭಾರತ ಪ್ರವಾಸವನ್ನು ಕೈಗೊಂಡಿದ್ದಾರೆ. ಅವರು ಇದೇ ೧೧ ನೇ ತಾರೀಖು ಬೆಂಗಳೂರಿಗೆ ಆಗಮಿಸುವರು.

ಭಾರತದಲ್ಲಿ ವಿದೇಶೀ ಸೈನ್ಯಕ್ಕೆ ಸ್ಥಾನವಿಲ್ಲ

ಸೈನ್ಯ ನೆರವುನೀಡಲು ಬಂದವರಿಗೆ ವಂದನಾಪೂರ್ವಕ ನಿರಾಕರಣೆ

ಭಾರತದಲ್ಲಿ ಯಾವ ಪರಿಸ್ಥಿತಿಯಲ್ಲೂ ವಿದೇಶೀ ಸೈನ್ಯಗಳಿಗೆ ಇರಲು ಅವಕಾಶವನ್ನು ಕೊಡುವುದಿಲ್ಲ. ಆದರೆ ವಿದೇಶಿ ಸೈನ್ಯಗಳು ಆಕ್ರಮಣ ಮಾಡಿದರೆ ನಮ್ಮ ಶಕ್ತಿಮೀರಿ ಹೋರಾಡುತ್ತೇವೆ. ಮಿತ್ರರಾಷ್ಟ್ರಗಳು ನಮಗೆ ಸೈನ್ಯ ನೆರವು ನೀಡಲು ಬಂದರೆ ವಂದನಾಪೂರ್ವಕವಾಗಿ ಅದನ್ನು ನಿರಾಕರಿಸುತ್ತೇವೆ ಎಂದು ಪ್ರಧಾನಿ ನೆಹರೂರವರು ತಿಳಿಸಿದ್ದಾರೆ.

ಪುರಸಭಾಧ್ಯಕ್ಷರ ಸತ್ಕಾರ ಸಮಾರಂಭ

ಮೈಸೂರು ೮

ಪೌರಸಭೆಯಲ್ಲಿ ಮೊನ್ನೆ ಪುರಸಭಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಒಂದು ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು.

ಶ್ರೀಮತಿ ಚೊಕ್ಕಮ್ಮನವರ ಸಂಗೀತವು ನಡೆಯಿತು.

ಉಪಹಾರಾನಂತರ ಶ್ರೀ ಟಿ. ವೆಂಕಟರಮಣಯ್ಯನವರು ಮಾತನಾಡಿ ತಾವು ತಮ್ಮ ಅಧ್ಯಕ್ಷ ಸ್ಥಾನದ ಅವಧಿಯಲ್ಲಿ ಪೌರರ ಸೇವೆ ಸಲ್ಲಿಸಿದ್ದರೆ ಪೌರ ಸಭಾಸದಸ್ಯರುಗಳ, ಪೌರಸಭೆಯ ಕಮೀಷನರ್ ಮತ್ತು ಪೌರಸಭೆಯ ನೌಕರ ಮಾನೇರುಗಳ ಸಹಕಾರವೇ ಕಾರಣವೆಂದರು. ತಮಗೆ ಸಹಕಾರ ನೀಡಿದ ಎಲ್ಲಾ ಮಹನೀಯರುಗಳಿಗೂ ವಂದನೆ ಅರ್ಪಿಸಿದರು.

ಶ್ರೀ ಟಿ. ವೆಂಕಟರಮಣಯ್ಯನವರು ನಗರಕ್ಕೆ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ಶ್ರೀಗಳಾದ ಎಂ. ರಾಮಸ್ವಾಮಿ, ಎಂ. ಸಿ. ಮಹದೇವಸ್ವಾಮಿ, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಎಸ್. ಲಿಂಗಣ್ಣ, ಪಾರ್ಲಿಮೆಂಟ್ ಸದಸ್ಯ ಎ. ರಾಚಯ್ಯ, ಜ॥ ಮಿರ್‌ನೂರ್‌ಹುಸೇನ್ ಮತ್ತು ಪೌರಸಭಾ ಕಮೀಷನರುಗಳು ಮಾತನಾಡಿದರು.

ಪರ್ವತಾರೋಹಣ ತಂಡಗಳು

ಈ ವರ್ಷದಲ್ಲಿ ಹಿಮಾಲಯ ಪರ್ವತವನ್ನು ಹತ್ತಲು ಹಲವಾರು ತಂಡಗಳಿಗೆ ರಹದಾರಿಯನ್ನು ಕೊಡಲಾಗಿದೆ.

ಒಂದು ಸ್ವಿಸ್‌ತಂಡವು ಗೌರಿಶಂಕರವನ್ನು ಹತ್ತಲು ಯತ್ನಿಸುತ್ತದೆ. ಅಲ್ಲದೆ ಅಮೆರಿಕಾ ತಂಡವೊಂದು ೨೭೭೯೦ ಅಡಿ ಎತ್ತರವಿರುವ ಮಾಕಲು ಶಿಖರ, ಅದೇಶಿಖರವನ್ನು ಹತ್ತಲು ಫ್ರೆಂಚ್‌ತಂಡ, ೨೬೭೫೮ ಅಡಿ ಎತ್ತರವಿರುವ ಮನಸ್ಲು ಶಿಖರವನ್ನು ಜಪಾನ್ ತಂಡ, ೨೬೭೯೫ ಅಡಿ ಎತ್ತರವಿರುವ ಧವಳಗಿರಿಯನ್ನು ಹತ್ತಲು ಅರ್ಜೆಂಟೈನಾ ತಂಡವೊಂದು ಪರ್ವತಾರೋಹಣ ಕಾರ್ಯವನ್ನು ನಡೆಸಲಿವೆ.

ಹೊಸ ರೇಡಿಯೋ ಕೇಂದ್ರ

ಜಯಪುರದಲ್ಲಿ ೨೦ ಕಿಲೋವಾಟ್ಸ್‌ಗಳ ರೇಡಿಯೋ ಕೇಂದ್ರವೊಂದನ್ನು ಸ್ಥಾಪಿಸಲಾಗುತ್ತದೆ.

ಪ್ರಜಾಸೋಷಲಿಸ್ಟ್ ಪಕ್ಷದ ಅಧಿಕಾರವರ್ಗ

ಅಲಹಾಬಾದಿನಲ್ಲಿ ನಡೆದ ಪ್ರಜಾಸೋಲಿಸ್ಟ್ ಪಕ್ಷದ ಸಮ್ಮೇಳನದಲ್ಲಿ ಡಾ॥ ಆರ್. ಎಂ. ಲೋಹಿಯಾರವರನ್ನು ಪಕ್ಷದ ಜನರಲ್ ಸೆಕ್ರೆಟರಿ, ಶ್ರೀ ಅಶೋಕಾಮೆಹ್ತಾರವರನ್ನು ಜಾಯಿಂಟ್ ಜ॥ ಸೆಕ್ರೆಟರಿ ಶ್ರೀಗಳಾದ ಸಾದಿಕ್ ಆಲಿ ಮತ್ತು ಮಧುಲಿಮೆಯವರನ್ನು ಜಾಯಿಂಟ್ ಸೆಕ್ರೆಟರಿಗಳನ್ನಾಗಿ ಚುನಾಯಿಸಲಾಯಿತು.

ಪಕ್ಷದ ಕಾರ್ಯನಿರ್ವಾಹಕ ಸಮಿತಿಗೆ ೧೮ ಜನರನ್ನು ಚುನಾಯಿಸಿಕೊಳ್ಳಲು ಏಳು ಜನರ ಉಪಸಮಿತಿ ರಚಿಸಲಾಯಿತು.

ಆಚಾರ್ಯ ಕೃಪಲಾನಿಯವರನ್ನು ಪಕ್ಷದ ಅಧ್ಯಕ್ಷರಾಗಿ ಮತ್ತೆ ಚುನಾಯಿಸಲ್ಪಟ್ಟರು.

ರಣಜಿತ್
1-1-54 ರಿಂದ ಅಮೋಘ 2 ನೇ ವಾರ
ಲೈಲಾಮಜ್ನು
ಪಾತ್ರ:—ನೂರ್ಜ, ಶಮ್ಮಿ, ಓಂಪ್ರಕಾಶ್.

ಅಪೆರಾ
31-12-53 ರಿಂದ ಅಮೋಘ3ನೇ ವಾರ
ಆರ್. ಎಸ್. ಪಿಕ್ಚರ್ಸ್‌ರವರ
ಜಾತಕ ಫಲ
(ಕನ್ನಡ)
ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೩೬೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೦೮

೪-೧-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತಕ್ಕೆ ಶಸ್ತ್ರಾಸ್ತ್ರಗಳ ಸ್ಪರ್ಧೆ ಬೇಕಾಗಿಲ್ಲ

ಪಾಕೀಸ್ತಾನ-ಅಮೆರಿಕಾ ಸೈನ್ಯ ನೆರವು ಒಪ್ಪಂದ

ವಿಶ್ವದ ಯುದ್ಧಕ್ಕೆ ಹಾದಿ

ಪ್ರಧಾನಿ ನೆಹರೂರವರ ಸ್ಪಷ್ಟ ಹೇಳಿಕೆ

ಅಮೇರಿಕಾ ಮತ್ತು ಪಾಕೀಸ್ತಾನಗಳ ನಡುವಿನ ಸೈನ್ಯ ಒಪ್ಪಂದವು ವಿಶ್ವದ ಮಹಾಯುದ್ಧಕ್ಕೆ ಹಾದಿ ಅಲ್ಲದೆ ಯುದ್ಧವನ್ನು ನಮ್ಮ ಬಾಗಿಲಿಗೆ ತರುವಂಥಾದ್ದು. ಅಲೆಗ್ಜಾಂಡರನ ಕಾಲದಿಂದಲೂ ಭಾರತದ ಹಲವಾರು ರಾಜರು ವಿದೇಶೀಯರ ನೆರವನ್ನು ಕೋರಿ ತಮ್ಮ ಶತ್ರುಗಳನ್ನು ಜಯಿಸಲು ಶ್ರಮಿಸಿ ಕೊನೆಗೆ ತಾವೂ ತಮ್ಮ ಶತ್ರುಗಳೂ ಹಾಳಾಗಿ ವಿದೇಶೀಯರು ಇಲ್ಲಿ ನೆಲೆಸಲು ಕಾರಣವಾದುದು ಹಿಂದಿನ ಚರಿತ್ರೆಯಿಂದ ಚೆನ್ನಾಗಿ ತಿಳಿಯಬರುತ್ತದೆ.

ಇದನ್ನು ನಾವು ಗಮನಿಸಬೇಕು. ಈಗ ಅಮೆರಿಕಾ ಪಾಕೀಸ್ತಾನ ಸೈನ್ಯ ನೆರವು ನಡೆದರೆ ಭಾರತವು ಅಮೆರಿಕಾ: ರಷ್ಯಾ, ಅಥವಾ ಚೈನಾಗಳಿಂದ ನೆರವನ್ನೇಕೆ ಪಡೆಯಬಾರದೆಂದು ಕೆಲವರು ವಾದಿಸುತ್ತಾರೆ. ಭಾರತಕ್ಕೆ ಯಾವ ದೇಶದ ಸೈನ್ಯ ನೆರವೂ ಬೇಕಾಗಿಲ್ಲ. ಈ ನೆರವಿಗಾಗಿ ಭಿಕ್ಷೆ ಬೇಡುವುದಿಲ್ಲ-ಎಂದು ಪ್ರಧಾನಿ ನೆಹರೂರವರು ನಿನ್ನೆ ಸಂಜೆ ಬೆಂಗಳೂರು ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು.

ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಈರೀತಿ ನುಡಿದರು:—

೨ ವರ್ಷಗಳ ಹಿಂದೆ ನಾನು ಮೈಸೂರು ಸಂಸ್ಥಾನಕ್ಕೆ ಬಂದಿದ್ದೆ. ಈ ಪ್ರಾಂತ್ಯಕ್ಕೆ ಬರಲು ನನಗೆ ಅತ್ಯಾನಂದಉಂಟಾಗುತ್ತದೆ. ಇಲ್ಲಿಯ ಹವಾ ಚೆನ್ನಾಗಿದೆ. ಜನತೆಯು ವಿಶ್ವಾಸಪರರು. ಬೆಂಗಳೂರು ಇತ್ತೀಚೆಗೆ ಭಾರತ ಪಟ್ಟಣಗಳಲ್ಲಿ ಒಂದು ಪ್ರಮುಖ ಪಟ್ಟಣವಾಗುತ್ತಿದೆ. ಕೈಗಾರಿಕೆಗಳು ಮತ್ತು ಅನೇಕ ಇತರ ಸಂಸ್ಥೆಗಳು ಸ್ಥಾಪನೆಯಾಗುತ್ತಿವೆ.

ಕಳೆದ ೫-೬ ವರ್ಷಗಳಲ್ಲಿ ಭಾರತದಲ್ಲಿ ಜನತೆಯ ಪ್ರಗತಿಗಾಗಿ ಅನೇಕ ಕಾರ್ಯಗಳನ್ನು ಮಾಡಲಾಗಿದೆ. ಮತ್ತು ಮಾಡಲಾಗುತ್ತಿವೆ. ನಮ್ಮ ಮುನ್ನಡೆಯು ಗಮನಾರ್ಹವಾಗಿದೆ. ಈಗ ಅಸ್ತಿಭಾರ ಕೆಲಸವನ್ನು ಮಾಡುತ್ತಿದ್ದೇವೆ. ಅದು ಸರಿಹೋದರೆ ಮುಂದಿನ ಕೆಲಸ ನಿರಾತಂಕವಾಗಿ ನಡೆಯುವುದು.

ದೇಶದ ಪ್ರಗತಿ ದಕ್ಷಿಣೆಯಿಂದ ಆಗದು

ದೇಶದಲ್ಲಿ ಪ್ರಥಮವಾಗಿ ಬಡತನವನ್ನು ಹೋಗಲಾಡಿಸಲು ನಾನಾ ಅಭಿವೃದ್ಧಿ ಮತ್ತು ಇತರ ಕಾರ್ಯಗಳಲ್ಲಿ ತೊಡಗಲಾಗಿದೆ. ಆದರೆ ಎಲ್ಲವನ್ನೂ ದಕ್ಷಿಣೆ ಅಥವ ಇನ್ನಾವ ರೀತಿ ಮಾಡಲು ಸಾಧ್ಯವಿಲ್ಲ, ದೇಶದ ೩೫ ಕೋಟಿ ಜನರೂ ಇದಕ್ಕಾಗಿ ದುಡಿಯಬೇಕು. ಈಗಾಗಲೇ ಕೈಗಾರಿಕೆ, ವಿಜ್ಞಾನ, ನದಿಕಣಿವೆ ಮುಂತಾದ ನಾನಾ ಯೋಜನೆ ಕಾರ್ಯಗಳನ್ನು ಕೈಗೊಳ್ಳಲಾಗಿದೆ ಇವುಗಳನ್ನೆಲ್ಲಾ ಸ್ವಲ್ಪ ವಿದೇಶೀ ನೆರವು ಪಡೆದು ನಮ್ಮವರೇ ಮಾಡುತ್ತಲಿದ್ದಾರೆ. ಜನಪದ ಯೋಜನೆ ಮತ್ತು ರಾಷ್ಟ್ರೀಯ ಅಭಿವೃದ್ಧಿ ಕಾರ್ಯಗಳನ್ನು ಗ್ರಾಮಾಂತರ ಪ್ರದೇಶಗಳ ಪ್ರಗತಿಗಾಗಿ ಪ್ರಾರಂಭಿಸಲಾಗಿದೆ. ಈಗ ಒಂದು ದೊಡ್ಡ ಕ್ರಾಂತಿಯೇ ಪ್ರಾರಂಭವಾಗಿವೆ. ಕ್ರಾಂತಿ ಎಂದರೆ ಒಬ್ಬರ ತಲೆಯನ್ನು ಒಬ್ಬರು ಒಡೆಯುವುದಿಲ್ಲ. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳನ್ನು ಉತ್ತಮಗೊಳಿಸಲು ನಡೆಸುವ ಶಾಂತಿಯುತ ಮಾರ್ಗ. ಇತರ ಯಾವ ಮಾರ್ಗವನ್ನು ಅನುಸರಿಸಿದರೂ ಭಿನ್ನತೆ, ನಿಧಾನ, ಅಸಮಾಧಾನ ಮತ್ತು ನಾಶವುಂಟಾಗುತ್ತದೆ. ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿ ನಾವು ಯೋಜನೆಯನ್ನು ತಯಾರಿಸಿದಾಗ ಜನತೆಯ ಬೆಂಬಲ ವಿಷಯದಲ್ಲಿ ಸ್ವಲ್ಪ ಸಂಶಯವಿತ್ತು. ಈಗ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚಿಗೆ ನೆರವು ಜನರಿಂದ ದೊರೆಯುತ್ತಿದೆ. ಭಾರತದಲ್ಲಿ ವ್ಯವಸಾಯಾಭಿವೃದ್ಧಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡಲಾಗಿದೆ. ಕೈಗಾರಿಕೆಗೂ ತಕ್ಕಷ್ಟು ಪ್ರಾಶಸ್ತ್ಯ ನೀಡಲಾಗಿದೆ.

ವ್ಯವಸಾಯಾಭಿವೃದ್ಧಿಯಾದರೆ ಕೈಗಾರಿಕಾಭಿವೃದ್ಧಿಯೂ ಆಗುತ್ತದೆ. ಆಹಾರ ಮುಂತಾದುವಕ್ಕೆ ವಿದೇಶಗಳನ್ನು ನೆಚ್ಚಿಕೊಂಡಿರುವುದು ಮೂಢತನ. ಅದನ್ನು ತಪ್ಪಿಸಲು ವ್ಯವಸಾಯಾಭಿವೃದ್ಧಿ ಅತ್ಯಗತ್ಯ. ನಮಗೆ ಬೇಕಾಗುವಷ್ಟನ್ನು ನಾವು ಇಲ್ಲಿಯೆ ಬೆಳೆಯಬೇಕು. ಕಳೆದವರ್ಷ ಈ ವಿಷಯದಲ್ಲಿ ಹೆಚ್ಚು ಪ್ರಗತಿ ಸಾಧಿಸಲಾಗಿದೆ. ಒಂದೆರಡು ವರ್ಷಗಳಲ್ಲಿ ಹೊರಗಿನಿಂದ ಆಹಾರವನ್ನು ತರಿಸಿಕೊಳ್ಳುವುದನ್ನು ನಿಲ್ಲಿಸಲಾಗುತ್ತಿದೆ. ದೇಶದಲ್ಲಿ ನಿರುದ್ಯೋಗ ಸಮಸ್ಯೆಯೊಂದು ಪ್ರಬಲವಾಗಿದೆ. ಆರ್ಥಿಕಾಭಿವೃದ್ಧಿಯಿಂದ ಅದನ್ನು ಸರಿಪಡಿಸಿಕೊಳ್ಳಬೇಕು. ೫-೬ ವರ್ಷಗಳಲ್ಲಿನ ಭಾರತದ ಪ್ರಗತಿಯನ್ನು ಪರರಾಷ್ಟ್ರಗಳು ನೋಡಿ ಸಹಿಸುತ್ತಿಲ್ಲ. ಭಾರತವು ಜಾಗ್ರತೆಯಾಗಿ ಉತ್ತಮಸ್ಥಿತಿ ಬಂದು ಎಲ್ಲಾ ರಾಷ್ಟ್ರಗಳಿಗೆ ಸಮನಾಗುವುದು ಅವರಿಗೆ ಬೇಕಿಲ್ಲ.

ಕೊರಿಯಾ ಯುದ್ಧದಲ್ಲಿ ಭಾರತವು ಬಹಳ ಜವಾಬ್ದಾರಿ ಪಾತ್ರವನ್ನು ವಹಿಸುತ್ತಿದೆ.

ಶಸ್ತ್ರಾಸ್ತ್ರಗಳ ಸ್ಪರ್ಧೆ ಬೇಡ

ಪಾಕೀಸ್ಥಾನವು ತನಗೆ ಬೇಕಾದರೀತಿ ನಡೆಯಲು ಸ್ವತಂತ್ರಹಕ್ಕನ್ನು ಪಡೆದಿದೆ ಅಮೆರಿಕಾದಿಂದ ಸೈನ್ಯನೆರವು ಪಡೆಯುವ ವಿಷಯದಲ್ಲಿ ಎಲ್ಲಾ ರಾಷ್ಟ್ರಗಳೂ ತಮ್ಮ ಅಭಿಪ್ರಾಯವನ್ನು ತಿಳಿಸಲೂಸಹ ಅವು ಹಕ್ಕನ್ನು ಪಡೆದಿವೆ. ಭಾರತವು ಶಾಂತಿಪ್ರಿಯವಾದ ರಾಷ್ಟ್ರ. ಸ್ವತಂತ್ರ ಹೋರಾಟವನ್ನೂ ಸಹ ಶಾಂತಿರೀತಿಯಿಂದಲೇ ನಡೆಸಿತು. ನಮಗೆ ಶಸ್ತ್ರಾಸ್ತ್ರಗಳ ಸ್ಪರ್ಧೆ ಬೇಡ ಆರ್ಥಿಕವಾಗಿ ದೇಶವು ಭದ್ರವಾಗಿದ್ದರೆ ರಕ್ಷಣೆಯಲ್ಲಿಯೂ ಭದ್ರವಾಗಿ ಇರುತ್ತವೆ. ಪಾಕೀಸ್ಥಾನ-ಅಮೆರಿಕಾ ಸೈನ್ಯನೆರವಿನ ನಿಲುವು ವಿಶ್ವಕ್ಕೆ ಹಾನಿಕರ ವಿಶ್ವಯುದ್ಧಕ್ಕೆ ಅದು ಹಾದಿ ಆ ಯುದ್ಧವು ಭಾರತದ ಬಾಗಲಿಗೇ ಬರುತ್ತದೆ. ಈ ಒಪ್ಪಂದದಿಂದ ಭಾರತಕ್ಕೆ ಪ್ರಯೋಜನವಾಗುತ್ತದೆ ಯೆನ್ನುವುದು ತಪ್ಪು ಅಭಿಪ್ರಾಯ. ಭಾರತವು ಸ್ವಾತಂತ್ರ ಗಳಿಸಿದನಂತರ ಈಗ ಅನುಸರಿಸುತ್ತಲಿರುವ ರೀತಿಯಲ್ಲಿ ಹೋಗದೇ ಇದ್ದಿದ್ದರೆ ವಿಶ್ವ ಸಂಗ್ರಾಮವು ಆಗಲೇ ಉಂಟಾಗುತ್ತಿತ್ತು. ಈ ಸೈನ್ಯ ನೆರವಿನ ವಿಷಯದಲ್ಲಿ ಎಲ್ಲಾ ಏಷ್ಯಾರಾಷ್ಟ್ರಗಳು ಕೆಲವು ಮಧ್ಯಪ್ರಾಚ್ಯರಾಷ್ಟ್ರಗಳೂ ತಮ್ಮ ಅಭಿಪ್ರಾಯವನ್ನು ವಿರೋಧವಾಗಿ ವ್ಯಕ್ತಪಡಿಸಿವೆ. ಭಾರತ, ಪಾಕೀಸ್ಥಾನಗಳ ನಡುವೆ ಪರಿಹಾರವಾಗದ ಇನ್ನೂ ಅನೇಕ ಸಮಸ್ಯೆಗಳಿವೆ ನಮಗೆ ಪಾಕೀಸ್ತಾನದ ಸ್ನೇಹ ಬೇಕು ನಮ್ಮ ರಾಷ್ಟ್ರಾಭಿವೃದ್ಧಿ ಕಾರ್ಯಗಳನ್ನೆಲ್ಲಾ ಒದಿಗಿಟ್ಟು ಆ ದ್ರವ್ಯವನ್ನು ಶಸ್ತ್ರಾಸ್ತ್ರಗಳಿಗೆ ವೆಚ್ಚಮಾಡಲು ಸಿದ್ಧವಿಲ್ಲ. ಆ ನೀತಿ ನಮಗೆ ಬೇಡ ಇದು ಕೇವಲ ಏಷ್ಯಾ ವಿರೋಧ ನೀತಿಯಾಗುತ್ತದೆ. ಈಗ ಪಾಕೀಸ್ತಾನವು ಅನುಸರಿಸುವ ನೀತಿ ಅವಕ್ಕೇ ಹಾನಿ, ಅದರಿಂದ ವಿಶ್ವಕ್ಕೆ ಹಾನಿ, ದೇಶದಲ್ಲಿ ಸ್ವಲ್ಪ ಬಂದೂಕಗಳಿರಬೇಕು ಆದರೆ ಸಾಧನ ಸಂಪತ್ತನೆಲ್ಲಾ ನಾವು ಬಂದೂಕಗಳಿಗೆ ಉಪಯೋಗಿಸುವುದಿಲ್ಲ.

ಭಾರತದ ಜನರೆಲ್ಲರೂ ತಮ್ಮಲ್ಲಿರುವ ಭೇದಭಾವಗಳನ್ನು ತೊರೆದು ಐಕ್ಯತೆಯಿಂದ ರಾಷ್ಟ್ರನಿರ್ಮಾಣ ಕಾರ್ಯದಲ್ಲಿ ತೊಡಗಿ ದೇಶದ ಪ್ರಗತಿಯನ್ನು ಸಾಧಿಸಬೇಕು.

ಹೈದರಾಬಾದ್ ಶಾಸನಸಭಾ ಕಾಂಗ್ರೆಸ್ ಪಕ್ಷನಾಯಕರು

ಮೊನ್ನೆಯದಿನ ಹೈದರಾಬಾದ್ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕರ ಆಯ್ಕೆಯು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರ ನೇತೃತ್ವದಲ್ಲಿ ನಡೆದು ಈಗಿರುವ ಶ್ರೀ ರಾಮಕೃಷ್ಣರಾಯರೇ ಪುನಃ ನಾಯಕರಾಗಿ ಚುನಾಯಿತರಾದರು. ಇವರಿಗೆ ೬೮ ಓಟುಗಳು ಬಂದವು. ಉಮೇದುವಾರರಾಗಿದ್ದ ಶ್ರೀ ಡಿ. ಜಿ. ಬಿಂದುರವರಿಗೆ ೮ ಓಟು ಶ್ರೀ ವಿನಾಯಕರಾವ್ ವಿದ್ಯಾಲಂಕಾರ್ ೩, ಡಾ॥ ಜಿ. ಎಸ್. ಮೇಲ್ಕೋಟೆ ೨, ಶ್ರೀ ಕೆ. ವಿ. ರಂಗರೆಡ್ಡಿ ೨. ಓಟುಗಳು ಬಂದವು.

ಅನಂತರ ಶ್ರೀ ನೆಹರೂರವರು ಮಾತನಾಡುತ್ತ ಶ್ರೀ ಬಿ. ರಾಮಕೃಷ್ಣರಾಯರು ಇನ್ನು ತಮ್ಮಿಷ್ಟಬಂದಂತೆ ಮಂತ್ರಿಮಂಡಲ ರಚಿಸಿಕೊಳ್ಳಬಹುದೆಂದು ನುಡಿದರು.

ಲಿಯಾಕತ್ ಕೊಲೆ ಬಗ್ಗೆ ಪುನಃ ತನಿಖೆ

ಪಾಕೀಸ್ತಾನದ ಪ್ರಧಾನಿಯಾಗಿದ್ದ ಲಿಯಾಕತ್ ಅಲಿಖಾನರ ಕೊಲೆಯ ವಿಷಯದಲ್ಲಿ ಇಲ್ಲಿಯವರೆಗೆ ನಡೆದ ತನಿಖೆಯು ಅಸಮರ್ಪಕವೆಂದು ಪರಿಗಣಿಸಿ ಪಾಕ್ ಪ್ರಧಾನಿ ಮಹಮದ್‌ಅಲಿಯವರು ಅಮೆರಿಕದಿಂದ ಪ್ರವೀಣರನ್ನು ಆಹ್ವಾನಿಸಿ ಪುನಃ ತನಿಖೆ ನಡೆಸಲು ವ್ಯವಸ್ಥೆ ಮಾಡುತ್ತಿರುವುದಾಗಿ ತಿಳಿಯಬರುತ್ತದೆ.

ಸರ್ಕಾರವೇ ಆಸ್ಪತ್ರೆಗಳನ್ನು ನಡೆಸಬೇಕು

ಭಾರತದಲ್ಲಿ ಎಲ್ಲ ಆಸ್ಪತ್ರೆಗಳನ್ನೂ ಸರ್ಕಾರವೇ ನಡೆಸಿಕೊಂಡು ಬರಬೇಕೆಂದು ಈಗ ಭಾರತದಲ್ಲಿ ಪ್ರವಾಸ ಮಾಡುತ್ತಿರುವ ರಷ್ಯದ ಡೆಪ್ಯೂಟಿ ಆರೋಗ್ಯ ಸಚಿವ ಶ್ರೀಮತಿ ಮ್ಯಾರಿಯಾ ಕೊವಿರ್‌ಜಿನಾರವರು ಮದರಾಸಿಗೆ ಭೇಟಿ ಕೊಟ್ಟಾಗ ಸಲಹೆ ಮಾಡಿದ್ದಾರೆ.

ಮಿತಸಂತಾನ ಯೋಜನೆಗೆ ಸಹಾಯ

ಭಾರತದಲ್ಲಿ ಮಿತಸಂತಾನ ಯೋಜನೆಯನ್ನು ಕಾರ್ಯರೂಪಕ್ಕೆ ತರಲು ೧೯೫೪-೫೫ ನೇ ಸಾಲಿಗೆ ಕೇಂದ್ರ ಸರ್ಕಾರದವರು ೬೫ ಲಕ್ಷ ರೂಗಳನ್ನು ಕೊಟ್ಟಿದ್ದಾರೆ. ಬೊಂಬಾಯಿ ವಿನಹ ಮಿಕ್ಕ ಪ್ರಾಂತ್ಯಗಳು ಈ ಯೋಜನೆಗೆ ಸ್ವಾಗತ ಇತ್ತಿವೆ.

ಪುರಸಭಾಧ್ಯಕ್ಷರ ಚುನಾವಣೆ

ಮೈಸೂರು ೪

ಪುರಸಭೆಯ ನೂತನ ಅಧ್ಯಕ್ಷರ ಚುನಾವಣೆಯು ಇದೇ ೨೦ ನೇ ತಾರೀಖು ೪ ಘಂಟೆಗೆ ನಡೆಯುತ್ತದೆ.

ಬಾರ್ಬಿ ಕಂಪೆನಿಯ ಲೇಬರ್ ಸಂಘದ ಸಭೆ

ಮೈಸೂರು ೪

ಮೊನ್ನೆಯದಿನ ಬೆಳಗ್ಗೆ ಕಂಪೆನಿಯ ಕೆಲಸಗಾರರ ಸಂಘದ ಕಾರ್ಯಾಲಯದಲ್ಲಿ ಶ್ರೀ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಕಾರ್ಯ ನಿರ್ವಾಹಕ ಮಂಡಲಿಯ ತುರ್ತುಸಭೆಯು ನಡೆಯಿತು.

ತಾರೀಖು ೩೧-೧೨-೫೩ನೇ ಗುರುವಾರ ಸಂಘಕ್ಕೆ ಹಾಲಿ ರಿಟೆನ್‌ಶನ್ ಸಂಬಳ ಪಡೆಯುತ್ತಿರುವ ಕೆಲಸಗಾರರು ಕೊಟ್ಟ ಅರ್ಜಿಯ ನಕಲನ್ನು ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಿಗೆ ಓದಿ ತಿಳಿಸಿದರು. ಅದರಿಂದ ಹಾಲಿ ರಿಟೆನ್‌ಶನ್ ಸಂಬಳ ಪಡೆಯುತ್ತಿರುವ ಹಲವು ಕೆಲಸಗಾರರು ಲೇಬರ್ ಕಾನೂನಿಗೆ ವಿರುದ್ಧವಾಗಿ ಸಕಲ ಸದಸ್ಯರ ಸಭೆಯನ್ನು ನಡೆಸಿರುವುದರಿಂದ ಹೀಗೆ ಮಾಡಿರುವುದು ಅವರ ತಪ್ಪೆಂದು ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರು ತೀರ್ಮಾನಿಸಿದರು.

ಹೀಗೆ ಸಭೆಯನ್ನು ನಡೆಸಲು ಮುಖ್ಯ ಜಂಬಲಿಗರಾದ ೩೩ ಜನ ಸಾಮಾನ್ಯ ಸದಸ್ಯರು ಸಂಘದ ಮತ್ತು ಕಾನೂನಿನ ವಿರುದ್ಧವಾಗಿ ನಡೆದರೆಂಬ ತಪ್ಪಿನ ಮೇಲೆ ಇವರನ್ನು ಸಂಘದ ಸಾಮಾನ್ಯ ಸದಸ್ಯತನದಿಂದ ತೆಗೆದುಹಾಕಲು ಕಾರ್ಯ ನಿರ್ವಾಹಕ ಮಂಡಲಿಯ ಸದಸ್ಯರು ಸರ್ವಾನುಮತದಿಂದ ತೀರ್ಮಾನಿಸಿದರು.

ಇವರು ಬೇರೆ ಸಂಘ ಮಾಡಿಕೊಂಡು ಅಧಿಕಾರವರ್ಗದವರನ್ನೂ, ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರನ್ನೂ ಚುನಾಯಿಸಿಕೊಂಡಿರುವುದರಿಂದ ಈ ಸಂಘಕ್ಕೂ ಮತ್ತು ಹೊಸಸಂಘದ ಸದಸ್ಯರಿಗೂ ಯಾವ ಸಂಬಂಧವೂ ಇಲ್ಲ. ಎಂಬುದಾಗಿ ಸರ್ವಾನುಮತದಿಂದ ತೀರ್ಮಾನಿಸಿದರು.

ರಾಯಭಾರಿಗಳ ಬದಲಾವಣೆ

ಭಾರತ ರಿಸರ್ವ್ ಬ್ಯಾಂಕಿನ ಗೌರ್ನರ್ ಆಗಿರುವ ಶ್ರೀ ಬೆನಗಲ್ ರಾಮರಾಯರನ್ನು ಅಮೇರಿಕಾದಲ್ಲಿ ಭಾರತ ರಾಯಭಾರಿಯಾಗಿ ನೇಮಿಸಿ ಅವರ ಸ್ಥಾನಕ್ಕೆ ಅಮೇರಿಕದಲ್ಲಿರುವ ರಾಯಭಾರಿ ಶ್ರೀ ಜಿ ಎಲ್. ಮೆಹ್ತಾರವರು ಬರುವರೆಂದು ಗೊತ್ತಾಗಿದೆ.

ಅರ್ಜೆಂಟೈನಾದಲ್ಲಿ ಭಾರತ ರಾಯಭಾರಿಯಾಗಿರುವ ಶ್ರೀ ಅಲಿ ಯವಾರ್ ಜಂಗ್ ರವರನ್ನು ಈಜಿಪ್ಟಿನಲ್ಲಿ ಭಾರತ ರಾಯಭಾರಿಯಾಗಿ ನೇಮಿಸಲಾಗುವುದೆಂದು ತಿಳಿಯಬರುತ್ತದೆ. ಈಜಿಪ್ಟಿನಲ್ಲಿರುವ ಸರ್ದಾರ್ ಪಣಿಕ್ಕರ್‌ರವರು ಸದ್ಯದಲ್ಲಿಯೇ ಭಾರತಕ್ಕೆ ಆಗಮಿಸಿ ಪ್ರಾಂತ್ಯ ವಿಂಗಡನಾ ಮಂಡಲಿಯನ್ನು ಸೇರಲಿರುವರು.

ರೈಲ್ವೆ ಅನಾಹುತ

ಭಾರತ-ನೇಪಾಳ ಗಡಿ ಪ್ರದೇಶದಲ್ಲಿ ಒಂದು ಪ್ಯಾಸಂಜರು ರೈಲು ಗೂಡ್ಸ್‌ಗಾಡಿ ಒಂದಕ್ಕೆ ಡಿಕ್ಕಿ ಹೊಡೆದುದರ ಪರಿಣಾಮವಾಗಿ ೮ ಜನರು ಅಲ್ಲಿಯೇ ಮಡಿದು, ಅನೇಕರಿಗೆ ಗಾಯಗಳಾದುವು.

ಅಮೆರಿಕಾ-ಇರಾಕ್, ಸೌದಿಅರೇಬಿಯ ಮಿಲಿಟೆರಿ ಒಪ್ಪಂದ

ಅಮೆರಿಕಾ ಮತ್ತು ಪಾಕೀಸ್ತಾನಗಳ ನಡುವೆ ನಡೆಯಲಿರುವ ಸೈನ್ಯ ಒಪ್ಪಂದ ದಂತೆಯೇ ಅಮೆರಿಕಾವು ಇರಾಕ್ ಮತ್ತು ಸೌದಿ ಅರೆಬಿಯಾಗಳ ನಡುವೆಯೂ ಸೈನ್ಯ ಒಪ್ಪಂದವನ್ನು ಮಾಡಿಕೊಳ್ಳಲಿದೆಯೆಂದು ವರದಿಯಾಗಿದೆ. ಸೌದಿಅರೆಬಿಯಾದೊಡನೆ ಒಪ್ಪಂದ ಬಗ್ಗೆ ಈಗಾಗಲೇ ಕರಡು ತಯಾರಾಗಿ ಅದನ್ನು ಪರಿಶೀಲಿಸಲಾಗುತ್ತಿದೆಯೆಂದೂ, ಇನ್ನೂ ಕೆಲವು ತಿಂಗಳುಗಳಲ್ಲಿ ಇರಾಕ್‌ನೊಡನೆ ಒಪ್ಪಂದ ನಡೆಯುವುದು ಎಂದೂ ಹೇಳಲಾಗುತ್ತಿದೆ. ಅಮೆರಿಕಾ ಮತ್ತು ಇರ್ರಾಗಳ ನಡುವೆ ಈಗಾಗಲೇ ಸೈನ್ಯ ಒಪ್ಪಂದವಾಗಿದೆ.

ಆಂಧ್ರದಲ್ಲಿರುವ ಖೈದಿಗಳ ಬಿಡುಗಡೆ

ಆಂಧ್ರಪ್ರಾಂತ್ಯದಲ್ಲಿ ಎಲ್ಲಾ ಜೈಲುಗಳಲ್ಲಿರುವ ಒಟ್ಟು ಸುಮಾರು ೩೦೦೦ ಖೈದಿಗಳನ್ನು ಇದೇ ೧೩ ನೇ ತಾರೀಖು ಬಿಡುಗಡೆ ಮಾಡಲಾಗುತ್ತದೆಯೆಂದು ಅಲ್ಲಿಯ ನ್ಯಾಯಸಚಿವ ಶ್ರೀ ಟಿ. ವಿಶ್ವನಾಥಂರವರು ತಿಳಿಸಿದ್ದಾರೆ. ಕಳೆದ ಅಕ್ಟೋಬರ್ ೧ ನೇ ತಾರೀಖು ಹೊಸರಾಜ್ಯ ಸ್ಥಾಪನೆಯಾದ ಜ್ಞಾಪಕಾರ್ಥವಾಗಿ ಈ ಬಿಡುಗಡೆಯಾಗುತ್ತದೆ.

ಇತರ ಪ್ರಾಂತ್ಯಗಳಲ್ಲಿ ಸಹ ಇರುವ ಆಂಧ್ರ ಖೈದಿಗಳನ್ನು ಬಿಡುಗಡೆ ಮಾಡುವಂತೆ ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳಿಗೂ ಮನವಿ ಮಾಡಲಾಗುತ್ತದೆ ಎಂದೂ ಅವರು ತಿಳಿಸಿದ್ದಾರೆ.

ಸಚಿವ ಲಚ್ಚಣ್ಣನವರ ರಾಜಿನಾಮೆ

ಆಂಧ್ರಸರ್ಕಾರವು ರಾಜಧಾನಿಯನ್ನು ಗುಂಟೂರು ವಿಜಯವಾಡಕ್ಕೆ ವರ್ಗಾಯಿಸಿ ಕರ್ನೂಲಿನಲ್ಲಿ ಶ್ರೇಷ್ಠ ನ್ಯಾಯಾಲಯವನ್ನು ಸ್ಥಾಪಿಸುವ ವಿಷಯದಲ್ಲಿ ನಿರ್ದಿಷ್ಟವಾದ ನಿಲುವನ್ನು ತೆಗೆದುಕೊಳ್ಳದಿದ್ದರೆ ಸಚಿವ ಮಂಡಲದಲ್ಲಿರುವ ಕೃಷಕ ಲೋಕಪಕ್ಷದ ಶ್ರೀ ಜಿ. ಲಚ್ಚಣ್ಣನವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡುವರೆಂದು ತಿಳಿಯಬರುತ್ತದೆ.

ಸೈನ್ಯ ನೆರವಿಗೆ ಅಮೆರಿಕಾ ಉಪಾಧ್ಯಕ್ಷರ ಬೆಂಬಲ

ಪಾಕೀಸ್ತಾನಕ್ಕೆ ಸೈನ್ಯ ನೆರವನ್ನು ಅಮೆರಿಕಾವು ಕೊಡುವುದನ್ನು ಅಲ್ಲಿಯ ಉಪಾಧ್ಯಕ್ಷ ಮಿ॥ ನಿಕ್ಸನ್‌ರವರು ಸ್ವಾಗತಿಸಿರುವುದಾಗಿ ಹೇಳಲಾಗುತ್ತಿದೆ

● ಕೈಮಗ್ಗದ ಅಭಿವೃದ್ಧಿಗಾಗಿ ಭಾರತ ಸರ್ಕಾರವು ಮೈಸೂರಿಗೆ ೧,೯೦,೦೦೦ ರೂಪಾಯಿಗಳ ಸಾಲವನ್ನು ನಿಗದಿ ಮಾಡಿದೆ.

ಪ್ರಧಾನಿ ನೆಹರೂ ಬೆಂಗಳೂರಿನಲ್ಲಿ

ಬೆಂಗಳೂರು ೪

ಪ್ರಧಾನಿ ನೆಹರೂರವರು ನಿನ್ನೆಯದಿನ ಮಧ್ಯಾಹ್ನ ೪ ಗಂಟೆಗೆ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಆಗಮಿಸಿದರು ಅವರನ್ನು ನಿಲ್ದಾಣದಲ್ಲಿ ರಾಜಪ್ರಮುಖರು, ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯ ಕೇಂದ್ರ ಸಚಿವ ಶ್ರೀ ಕೆ. ಸಿ. ರೆಡ್ಡಿ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡ ಮುಂತಾದವರು ಸ್ವಾಗತಿಸಿದರು.

ಹೈಕೋರ್ಟಿನ ಮುಖ್ಯ ನ್ಯಾಯಾಧೀಶ ಶ್ರೀ ಪಿ. ಮೇದಪ್ಪ ಮತ್ತು ಇತರ ಉನ್ನತಾಧಿಕಾರಿಗಳನ್ನು ಪ್ರಧಾನಿಯವರಿಗೆ ಪರಿಚಯ ಮಾಡಿಕೊಡಲಾಯಿತು. ಭಾರತ ವಿಮಾನದಳದವರು ಗೌರವ ರಕ್ಷೆಯನ್ನು ಸಲ್ಲಿಸಿದರು. ನಿನ್ನೆ ಸಂಜೆ ಅವರು ಸಾರ್ವಜನಿಕ ಸಭೆಯಲ್ಲಿ ಭಾಷಣವನ್ನು ಮಾಡಿದರು.

ಈ ದಿನ ಕಾಂಗ್ರೆಸ್ ಕಾರ್ಯಕರ್ತರನ್ನುದ್ದೇಶಿಸಿ ಭಾಷಣಮಾಡಿ ಅನಂತರ ಭಾರತ ವಿಮಾನ ಕಾರ್ಖಾನೆಗೆ ಭೇಟಿ ಕೊಡಲಿರುವರು

ಕೈಗಾರಿಕಾ ಅಡಿಷನಲ್ ಡೈರೆಕ್ಟರ್

ಬೆಂಗಳೂರು ೪

ಲಂಡನ್ನಿನಲ್ಲಿ ಮೈಸೂರಿನ ಟ್ರೇಡ್ ಏಜೆಂಟರಾಗಿದ್ದು ಹಿಂತಿರುಗಿರುವ ಶ್ರೀ ಕೆ. ನಾರಾಯಣಸ್ವಾಮಿಯವರನ್ನು ಕೈಗಾರಿಕೆ ಮತ್ತು ವಾಣಿಜ್ಯ ಶಾಖೆಯ ಅಡಿಷನಲ್ ಡೈರೆಕ್ಟರಾಗಿ ನೇಮಿಸಲಾಗಿದೆ.

ಸರ್ಕಾರಕ್ಕೆ ಕಮ್ಯೂನಿಸ್ಟ್ ಪಕ್ಷದ ಬೆಂಬಲ

ಅಮೆರಿಕಾ ಮತ್ತು ಪಾಕೀಸ್ತಾನ ಸೈನ್ಯ ಒಪ್ಪಂದವನ್ನು ಭಾರತ ಕಮ್ಯೂನಿಸ್ಟ್ ಪಕ್ಷವು ತೀವ್ರವಾಗಿ ಖಂಡಿಸಿ, ಈ ವಿಷಯದಲ್ಲಿ ಭಾರತದ ನಿಲುವನ್ನು ಸ್ವಾಗತಿಸಿ, ತನ್ನ ಮಧುರೆ ಅಧಿವೇಶನದಲ್ಲಿ ನಿರ್ಣಯವನ್ನು ಮಾಡಿದೆ.

ನೇತ್ರವೈದ್ಯರ ಸಮ್ಮೇಳನ

ಅಖಿಲ ಭಾರತ ನೇತ್ರವೈದ್ಯರ ಸಮ್ಮೇಳನವು ಜನವರಿ ೩೪ನೇ ತಾರೀಖಿನಿಂದ ೩ ದಿನಗಳಕಾಲ ನಾಗಪುರದಲ್ಲಿ ನಡೆಯುತ್ತದೆ.

ಫೆಬ್ರವರಿ ೩ರಿಂದ ೬ರವರೆಗೆ ಕ್ಷಯರೋಗ ನಿರೋಧ ಕಾರ್ಯಕರ್ತರ ಸಮ್ಮೇಳನವೂ ನಾಗಪುರದಲ್ಲಿ ನಡೆಯುತ್ತದೆ.

ಅಖಿಲಭಾರತ ಕಾರ್ಮಿಕ ಸಮ್ಮೇಳನ

ಮೈಸೂರು ೪

ಅಖಿಲಭಾರತ ಕಾರ್ಮಿಕ ಸಮ್ಮೇಳನದ ೧೩ ನೇ ಅಧಿವೇಶನವು ರಾಜಧಾನಿಯಲ್ಲಿ ಇದೇ ೭ ರಿಂದ ೧೦ ನೇ ತಾರೀಖಿನವರೆಗೆ ಕೇಂದ್ರ ಕಾರ್ಮಿಕ ಸಚಿವ ಶ್ರೀ ವಿ. ವಿ. ಗಿರಿರವರ ಅಧ್ಯಕ್ಷತೆಯಲ್ಲಿ ನಡೆಯುವುದು ಸಮ್ಮೇಳನದ ಪ್ರಾರಂಭೋತ್ಸವವನ್ನು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಇದೇ ೭ ನೇ ತಾ॥ ಬೆಳಗ್ಗೆ ೧೦ ಗಂಟೆಗೆ ಕ್ರಾಫರ್ಡ್ ಭವನದಲ್ಲಿ ನೆರವೇರಿಸುವರು.

ಸಕ್ಕರೆ ಬೆಲೆ ಮೇಲಿನ ಹತೋಟಿ

ಈ ಸಾಲಿನಲ್ಲಿ ಕಬ್ಬಿನ ಬೆಳೆಯು ಅಷ್ಟು ಸಮರ್ಪಕವಾಗಿಲ್ಲವಾದ್ದರಿಂದ ಸಕ್ಕರೆಬೆಲೆ ಮೇಲಿರುವ ಹತೋಟಿಯನ್ನು ಮುಂದುವರಿಸಲಾಗುವುದಾಗಿ ತಿಳಿಯಬರುತ್ತದೆ.

ತಾಟಿಬೆಲ್ಲದ ಯೋಜನೆಗೆ ನೆರವು

ಮೈಸೂರು ಸರ್ಕಾರವು ಕೈಗೊಂಡಿರುವ ತಾಟಿಬೆಲ್ಲದ ಯೋಜನೆಯ ವೆಚ್ಚದಲ್ಲಿ ಅರ್ಧಭಾಗ ೮೯೬೫ ರೂಪಾಯಿಗಳನ್ನು ಕೇಂದ್ರಸರ್ಕಾರವು ಗ್ರಾಂಟ್ ರೂಪದಲ್ಲಿ ಕೊಟ್ಟಿದೆ.

ಪಾಕೀಸ್ತಾನ-ಅಮೆರಿಕಾ ಸೈನ್ಯ ಒಪ್ಪಂದಕ್ಕೆ ವಿರೋಧ

ಪಾಕೀಸ್ತಾನದಲ್ಲಿರುವ ಅನೇಕ ರಾಜಕೀಯ ಪಕ್ಷಗಳು ಪಾಕ್ ಮತ್ತು ಅಮೆರಿಕಾ ಸೈನ್ಯ ಒಪ್ಪಂದ ವಿಷಯದಲ್ಲಿ ತಮ್ಮ ವಿರೋಧವನ್ನು ವ್ಯಕ್ತಪಡಿಸಿವೆ.

ಹರಿಜನ ಸೇವಕ ಸಂಘದ ಅಧ್ಯಕ್ಷರು

ಮೈಸೂರು ಸಂಸ್ಥಾನದ ಹರಿಜನ ಸೇವಕ ಸಂಘದ ಅಧ್ಯಕ್ಷರನ್ನಾಗಿ ಶ್ರೀ ಎಂ. ಹೆಚ್. ಹಾರವರನ್ನು ಕೇಂದ್ರ ಸಂಸ್ಥೆಯು ನೇಮಿಸಿದೆ.

ಅಪೆರಾ

31-12-53 ರಿಂದ ಅಮೋಘ3ನೇ ವಾರ

ಆರ್. ಎಂ. ಪಿಕ್ಚರ್ಸ್‌ರವರ

ಜಾತಕ ಫಲ (ಕನ್ನಡ)

ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

[redacted]

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೦೯

೫-೧-೧೯೫೪ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ನಗರದ ಆರೋಗ್ಯ ವರದಿ

ಮೈಸೂರು ೫

ಕಳೆದ ಡಿಸೆಂಬರ್ ಅಂತ್ಯದ ೧೫ ದಿನಗಳ ಅವಧಿಯಲ್ಲಿ ಮೈಸೂರು ನಗರದಲ್ಲಿ ಪ್ಲೇಗ್, ಸಿಡುಬು ಮತ್ತು ಮತ್ತು ಕಾಲರಾ ಉಪದ್ರವಗಳು ಇರಲಿಲ್ಲ. ಕೆ. ಆರ್ ಆಸ್ಪತ್ರೆಯಲ್ಲಿ ಬನ್ನೂರಿಂದ ಬಂದ ಟೈಫಾಯಿಡ್‌ನಿಂದ ಸತ್ತ ಒಂದು ಕೇಸು ವರದಿಯಾಗಿತು. ೩೫ ಟೈಫಾಯಿಡ್ ನಿರೋಧ ಇನಾಕ್ಲುಲೇಷನ್ ಹಾಕಲಾಯಿತು. ೫ ಡಿಫ್ತೀರಿಯಾ ಕೇಸುಗಳು ವರದಿಯಾಗಿ, ಅವರಲ್ಲಿ ಒಂದು ಮರಣ ಸಂಭವಿಸಿತು. ನವೆಂಬರ್ ೧೧ನೇ ತಾರೀಖಿನಿಂದ ಪ್ರಾರಂಭವಾದ ಡಿಫ್ತೀರಿಯಾ ನಿರೋಧ ಚಳುವಳಿ ಪ್ರಕಾರ, ಒಟ್ಟು ೧೫೭೫ ಮಕ್ಕಳಿಗೆ ಇನಾಕ್ಲುಲೇಷನ್ ಹಾಕಲಾಯಿತು-ಎಂದು ಪೌರಸಭೆಯ ಆರೋಗ್ಯ ಇಲಾಖಾ ವರದಿ ತಿಳಿಸಿರುತ್ತದೆ.

ಗ್ರಾಮ ಕೈಗಾರಿಕಾ ಸಮ್ಮೇಳನ

ಮೈಸೂರು ೫

ಮೈಸೂರು ಸಂಸ್ಥಾನದ ಕೈ ಕಸುಬು ಮತ್ತು ಗ್ರಾಮ ಕೈಗಾರಿಕೆಗಳ ಪ್ರಥಮ ಸಮ್ಮೇಳನವು ಈ ದಿನ ಮಧ್ಯಾಹ್ನ ವ್ಯವಸಾಯ ಸಚಿವ ಡಾ॥ ಆರ್. ನಾಗನಗೌಡರ ಅಧ್ಯಕ್ಷತೆಯಲ್ಲಿ ವಸ್ತು ಪ್ರದರ್ಶನದ ಭವನದಲ್ಲಿ ನಡೆಯಿತು. ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಸಮ್ಮೇಳನವನ್ನು ಉದ್ಘಾಟಿಸಿದರು. ಅಖಿಲಭಾರತ ಕುಶಲ ಕಲೆಗಳ ಬೋರ್ಡಿನ ಅಧ್ಯಕ್ಷಣಿ ಶ್ರೀಮತಿ ಕಮಲಾದೇವಿ ಮತ್ತು ಇತರ ಸದಸ್ಯರು ಭಾಷಣ ಮಾಡಿದರು.

ಚಿನ್ನದಗಣಿ ಕಾರ್ಮಿಕರ ಪ್ರತಿಭಟನೆ

ಚಿನ್ನದ ಗಣಿಯ ಸುಮಾರು ೧೫ಸಾವಿರ ಮಂದಿ ಕಾರ್ಮಿಕರು ನಿನ್ನೆ ದಿನ ಸಾರ್ವತ್ರಿಕ ಮೆರವಣಿಗೆ ನಡೆಸಿ, ಆಡಳಿತಗಾರರು ತಮ್ಮ ಕೂಲಿ ದರ ಪುನರ್ ವಿಮರ್ಶೆಮಾಡದಿರುವುದು ಮತ್ತು ೧೯೫೩ರ ಬೋನಸ್ ಕೊಡದಿರುವುದರ ಬಗ್ಗೆ ಪ್ರತಿಭಟನೆ ಸೂಚಿಸಿದರು. ಕೇಂದ್ರ ಕಾರ್ಮಿಕ ಸಚಿವ ಶ್ರೀ ಗಿರಿಯವರಲ್ಲಿ ನಿಯೋಗ ಹೋಗಬೇಕೆಂದೂ ಕಾರ್ಮಿಕರು ನಿರ್ಧರಿಸಿದ್ದಾರೆ.

ಚಿನ್ನದ ಗಣಿಯಲ್ಲಿ ಕೈಗಾರಿಕೆಗಳು

ಕೋಲಾರದ ಚಿನ್ನದಗಣಿ ಪ್ರದೇಶದಲ್ಲಿ ೨-೩ ಕೈಗಾರಿಕೋದ್ಯಮಗಳನ್ನು ಸ್ಥಾಪಿಸಲು ತಮ್ಮ ತೀವ್ರ ಪರಿಶೀಲನೆಯಲ್ಲಿದೆಯೆಂದು ಕೇಂದ್ರ ಉತ್ಪನ್ನ ಶಾಖಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿದ್ದಾರೆ.

ಸೇವಾಗ್ರಾಮದಲ್ಲಿ ಗಾಂಧಿ ಜ್ಞಾನಮಂದಿರ ಸ್ಥಾಪನೆ

ಇಲ್ಲಿ ಗಾಂಧಿ ಪೀಠವನ್ನು ಏರ್ಪಡಿಸಲಾಗಿದೆ

ಮಹಾತ್ಮ ಗಾಂಧಿಯವರ ಲೇಖನ ಮುಂತಾದುವನ್ನು ಸಂಗ್ರಹಣ ಮಾಡುವುದಲ್ಲದೆ ಪರಿಶೋಧನೆ ಮುಂತಾದುವನ್ನು ನಡೆಸಲು ಗಾಂಧಿ ಜ್ಞಾನಮಂದಿರದ ಉದ್ಘಾಟನೆಯನ್ನು ಪ್ರಧಾನಿ ನೆಹರೂರವರು ಈ ದಿನ ಸೇವಾಗ್ರಾಮದಲ್ಲಿ ನೆರವೇರಿಸುವರು. ಪರಿಶೋಧನಾ ಕಾರ್ಯಕ್ಕಾಗಿ ಪ್ರತ್ಯೇಕ ಗಾಂಧಿ ವಿದ್ಯಾಪೀಠವನ್ನೂ ವಿಶ್ವದ ನಾನಾ ಭಾಗಗಳಿಂದ ಬರುವ ಪರಿಣಿತರ ಉಪಯೋಗಕ್ಕಾಗಿ ಒಂದು ಅಂತರ ರಾಷ್ಟ್ರೀಯ ಭವನವನ್ನು ಇಲ್ಲಿ ಕಲ್ಪಿಸಲಾಗುತ್ತದೆ.

ಚಿತ್ತರಂಜನ್ನಿನ ೧೦೦ ನೇ ರೈಲ್ವೆ ಎಂಜನ್

ಭಾರತದ ಚಿತ್ತರಂಜನ್ ರೈಲ್ವೆ ಕಾರ್ಖಾನೆಯಲ್ಲಿ ತಯಾರಿಸಲ್ಪಟ್ಟಿರುವ ೧೦೦ ನೇ ರೈಲ್ವೆ ಎಂಜಿನ್ನನ್ನು ಕೇಂದ್ರ ರೈಲ್ವೆ ಸಚಿವ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ಇದೇ ೬ನೇ ತಾರೀಖು ತಾವೇ ಪೆಡ್ಡಿದಿಂದ ಸಮಾರಂಭದ ಪ್ರದೇಶಕ್ಕೆ ನಡೆಸುವರು. ದಿವಂಗತ ದೇಶಬಂಧು ಚಿತ್ತರಂಜನದಾಸ್ ಅವರ ಪತ್ನಿ ಶ್ರೀಮತಿ ಬಸಂತಾದೇವಿಯವರು ಸಮಾರಂಭದ ಅಧ್ಯಕ್ಷತೆ ವಹಿಸುವರು.

೯ ವರ್ಷದ ಬಾಲಕ ವಿಮಾನ ಚಾಲಕ

ಪೂಣೆಯ ೯ ವರ್ಷದ ರಷೀದ್ ಇರಾನಿ ಎಂಬ ಬಾಲಕನು ಈಗ ಪ್ರಪಂಚದ ಮತ್ತು ಭಾರತದ ಪ್ರಥಮ ಗ್ಲೈಡರ್ ವಿಮಾನ ಚಾಲಕನಾಗಿದ್ದಾನೆ. ಆತನು ಅಲ್ಲಿ ಶಿಕ್ಷಣ ಮುಗಿಸಿಕೊಂಡು ಎ ಮತ್ತು ಬಿ. ಸರ್ಟಿಫಿಕೇಟ್ ಪಡೆದಿದ್ದಾನೆ.

ನಾಗಪುರಕ್ಕೆ ಪ್ರಯಾಣ

ಬೆಂಗಳೂರು ೫

ಪ್ರಧಾನಿ ನೆಹರೂರವರು ನಿನ್ನೆಯದಿನ ಮಧ್ಯಾಹ್ನ ನಾಗಪುರಕ್ಕೆ ವಿಮಾನದಲ್ಲಿ ಪ್ರಯಾಣ ಮಾಡಿದರು. ಅವರನ್ನು ರಾಜಪ್ರಮುಖರು, ಮುಖ್ಯಮಂತ್ರಿ ಮತ್ತು ಇತರ ಮಂತ್ರಿಗಳು, ಉನ್ನತಾಧಿಕಾರಿಗಳು ಬೀಳ್ಕೊಟ್ಟರು. ಅದಕ್ಕೆ ಮುನ್ನ ಪ್ರಧಾನಿಯವರು ಮೈಸೂರು ವಿಧಾನ ಸೌಧ ಕಟ್ಟಡದ ನಿರ್ಮಾಣ ಸ್ಥಳಕ್ಕೆ ಭೇಟಿಯನ್ನು ಇತ್ತಿದ್ದರು.

ಪಾಸ್ ಪೋರ್ಟು ವ್ಯವಸ್ಥೆ

ಇಷ್ಟು ಕಾಲವೂ ಪ್ರಾಂತ್ಯ ಸರ್ಕಾರಗಳು ನೋಡಿಕೊಳ್ಳುತ್ತಲಿದ್ದ ಪಾಸ್ ಪೋರ್ಟ್ ಕಾರ್ಯವನ್ನು ಇನ್ನು ಮುಂದೆ ಕೇಂದ್ರ ಸರ್ಕಾರದ ವಿದೇಶಾಂಗ ಶಾಖೆಯು ನೋಡಿ ಕೊಳ್ಳುತ್ತದೆ. ಇದಕ್ಕಾಗಿ ಮದ್ರಾಸ್, ಬೊಂಬಾಯಿ, ದೆಹಲಿ, ಕಲ್ಕತ್ತ, ನಾಗಪುರಗಳಲ್ಲಿ ಪ್ರದೇಶ ಕಛೇರಿಗಳನ್ನು ತೆರೆಯಲಾಗುತ್ತದೆ ಮದ್ರಾಸ್ ಕಛೇರಿಯ ವ್ಯಾಪ್ತಿಗೆ ಮೈಸೂರು ಸಂಸ್ಥಾನ ಸೇರುತ್ತದೆ.

ಪ್ರಧಾನ ಸಚಿವರ ಸಮ್ಮೇಳನ

ಆಗ್ನೇಯ ಏಷ್ಯಾ ರಾಷ್ಟ್ರ ಪ್ರಧಾನಿಗಳ ಸಮ್ಮೇಳನವನ್ನು ನಡೆಸಬೇಕೆಂದು ಸಿಂಹಳ ಪ್ರಧಾನಿ ಸರ್ ಜಾನ್ ಕೊಟೇಲವಾಲಾರವರ ಸಲಹೆಯನ್ನು ಭಾರತ ಪ್ರಧಾನಿ ನೆಹರೂರವರು ಒಪ್ಪಿರುವುದಾಗಿ ವರದಿಯಾಗಿದೆ.

ಈ ಸಮ್ಮೇಳನಕ್ಕೆ ಈಜಿಪ್ಟ್ ಅಧ್ಯಕ್ಷ ಜನರಲ್ ನಗೀಬರನ್ನು ಆಹ್ವಾನಿಸಬೇಕು-ಎಂದು ಇಂಡೋನೇಷ್ಯಾ ಸೂಚಿಸಿರುವುದಾಗಿ ಹೇಳಲಾಗಿದೆ.

ಭೂದಾನ ಯಜ್ಞ ಚಳುವಳಿ

ಭೂದಾನ ಯಜ್ಞ ಚಳುವಳಿಯಲ್ಲಿ ಡಿಸೆಂಬರ್ ಅಂತ್ಯದವರೆಗೆ ೨೩ ಲಕ್ಷ ೫೭ ಸಾವಿರ ಎಕರೆ ಜಮೀನನ್ನು ಸಂಗ್ರಹಿಸಿರುವುದಾಗಿ ತಿಳಿಯ ಬರುತ್ತದೆ. ಪ್ರಾಂತ್ಯಗಳಲ್ಲೆಲ್ಲಾ ಬೀಹಾರಿನಲ್ಲಿ ಇದರಲ್ಲಿ ಅರ್ಧಕ್ಕಿಂತ ಹೆಚ್ಚು ಜಮೀನು ಸಂಗ್ರಹವಾಗಿದೆ.

ಅಂಚೆ ದರಗಳು ಏರುವುವು

ಮುಂದಿನ ಏಪ್ರಿಲ್ ತಿಂಗಳಿಂದ ಅಂಚೆ ದರಗಳು ಏರುವ ಸಂಭವ ಉಂಟೆಂದೂ ಆದರೆ ಕಾರ್ಡುಗಳ ದರ ಮಾತ್ರ ಈಗಿನಂತೆ ಇರುವುವೆಂದೂ ಕೇಂದ್ರ ಸಂಪರ್ಕ ಶಾಖಾ ಸಚಿವ ಶ್ರೀ ಜಗಜೀವನರಾಮ್‌ರವರು ತಿಳಿಸಿದ್ದಾರೆ.

ಅಖಿಲ ಭಾರತ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಮ್ಮೇಳನ

ಅಖಿಲ ಭಾರತ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಮ್ಮೇಳನದ ಪ್ರಾರಂಭೋತ್ಸವವನ್ನು ಪ್ರಧಾನಿ ನೆಹರೂರವರು ಈ ದಿನ ನಾಗಪುರದಲ್ಲಿ ನೆರವೇರಿಸುವರು.

ಶಿವಮೊಗ್ಗಾದಲ್ಲಿ ಸಕ್ಕರೆ ಕಾರ್ಖಾನೆ

ಶಿವಮೊಗ್ಗಾದಲ್ಲಿ ಒಂದುಕೋಟಿ ರೂ. ಖರ್ಚಿನಲ್ಲಿ ಪೂರ್ವ ಆಫ್ರಿಕದ ಶ್ರೀ ಮಾಲ್ಜಿ ಭಾಯ್ ಮದ್ವಾನಿಯವರು ಸ್ಥಾಪಿಸಲಿರುವ ಸಕ್ಕರೆ ಕಾರ್ಖಾನೆಗೆ ಅಗತ್ಯವಾದ ಎಲ್ಲ ನೆರವನ್ನೂ ಸರ್ಕಾರ ನೀಡಬೇಕೆಂದು ಶಿವಮೊಗ್ಗ ಪೌರಸಭೆಯವರು ನಿರ್ಣಯ ಮಾಡಿದ್ದಾರೆ.

ಭಾರತಕ್ಕೆ ರಷ್ಯಾ ಸಾಂಸ್ಕೃತಿಕ ನಿಯೋಗ

ರಷ್ಯದ ಸಾಂಸ್ಕೃತಿಕ ನಿಯೋಗವೊಂದು ಭಾರತಕ್ಕೆ ಇದೇ ತಿಂಗಳು ಮಧ್ಯಭಾಗದಲ್ಲಿ ಆಗಮಿಸಿ ೬ ವಾರಗಳ ಕಾಲ ಪ್ರವಾಸ ನಡೆಸುವುದು. ನಿಯೋಗದವರು ದೆಹಲಿ, ಬೊಂಬಾಯಿ, ಕಲ್ಕತ್ತಾ, ಮದ್ರಾಸ್, ಬೆಂಗಳೂರುಗಳಲ್ಲಿ ನೃತ್ಯ ಸಂಗೀತ ಪ್ರದರ್ಶನವನ್ನು ನಡೆಸುವರು.

ಕುಂಭಮೇಳಕ್ಕೆ ರಾಷ್ಟ್ರಾಧ್ಯಕ್ಷರು

ಭಾರತ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದ್‌ರು ಮುಂದಿನ ತಿಂಗಳು ೧ನೇ ತಾರೀಖಿನಿಂದ ನಾಲ್ಕು ದಿನಗಳು ಪ್ರಯಾಗದಲ್ಲಿ ಯಾತ್ರಾರ್ಥಿಗಳ ಗುಡಿಸಿಲಿನಲ್ಲಿ ಸಾಮಾನ್ಯ ಯಾತ್ರಿಕರಾಗಿ ಇಳಿದುಕೊಂಡು ಕುಂಭಮೇಳದಲ್ಲಿ ಭಾಗವಹಿಸುವರೆಂದು ಹೇಳಲಾಗಿದೆ.

ಟರ್ಕಿ ರಾಯಭಾರಿಗೆ ಉಚ್ಚಾಟನೆ

ತನ್ನ ದೇಶದ ಆಡಳಿತದಲ್ಲಿ ಪ್ರವೇಶಿಸುತ್ತಲಿರುವ ಆಪಾದನೆಯಮೇಲೆ ಈಜಿಪ್ಟಿನ ಸರ್ಕಾರವು ಕೈರೋದಲ್ಲಿರುವ ಟರ್ಕಿ ರಾಯಭಾರಿಯು ೨೪ ಗಂಟೆಗಳಲ್ಲಿ ಅಲ್ಲಿಂದ ಹೊರಟುಹೋಗಬೇಕೆಂದು ಆಜ್ಞೆಮಾಡಿದೆ.

ಒರಟು ಧಾನ್ಯಗಳ ಹತೋಟಿ ರದ್ದು

ಬೊಂಬಾಯಿ, ಹುಬ್ಬಳ್ಳಿ, ಬೆಳಗಾಂ, ಪೂನಾ, ಅಹಮದಾಬಾದ್, ಅಹಮದ್ ನಗರ ಮುಂತಾದ ೧೧ ಪಟ್ಟಣಗಳಲ್ಲಿ ಬೊಂಬಾಯಿ ಸರ್ಕಾರವು ಒರಟು ಧಾನ್ಯಗಳ ಹತೋಟಿಯನ್ನು ಇದೇ ೨೧ನೆ ತಾರೀಖಿನಿಂದ ರದ್ದುಮಾಡುವುದಾಗಿ ಪ್ರಕಟಿಸಲಾಗಿದೆ.

ಭಾರಿ ರೈಲ್ವೆ ಅಪಘಾತ

೧೬ ಜನರ ಮರಣ; ೪೫ ಜನರಿಗೆ ಗಾಯ; ೧೭ ಜನರ ಸ್ಥಿತಿ ಚಿಂತಾಜನಕ

ಉತ್ತರ ಭಾರತದಲ್ಲಿ ಫಿರೋಜ್ ಪುರಕ್ಕೆ ಹೋಗುತ್ತಿದ್ದ ರೈಲೊಂದು ನಿನ್ನೆ ಬೆಳಗ್ಗೆ ಭಾಟಿಂಡಾ ಎಂಬ ರೈಲ್ವೆ ನಿಲ್ದಾಣದಬಳಿ ಕಂಬಿತಪ್ಪಿ ಗಾಡಿಗಳು ಉರುಳಿದವು. ಅದರ ಪರಿಣಾಮವಾಗಿ ೧೬ ಜನರು ಅಲ್ಲಿಯೇ ಸತ್ತರು, ೪೫ ಜನರಿಗೆ ಗಾಯಗಳಾಗಿವೆ. ಅದರಲ್ಲಿ ೧೭ ಜನರ ಸ್ಥಿತಿ ಚಿಂತಾಜನಕವಾಗಿದೆ.

ಅನಾಹುತದ ಕಾರಣ ತಿಳಿಯಬಂದಿಲ್ಲ. ರೈಲ್ವೆ ಅಧಿಕಾರಿಗಳು ಸ್ಥಳಕ್ಕೆಧಾವಿಸಿ ವಿಚಾರಣೆ ನಡೆಸುತ್ತಲಿದ್ದಾರೆ. ದುರಂತಕ್ಕೊಳಗಾದವರಿಗೆ ರಾಷ್ಟ್ರಾಧ್ಯಕ್ಷರು ತಮ್ಮ ಅನುತಾಪವನ್ನು ವ್ಯಕ್ತಪಡಿಸಿದ್ದಾರೆ.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಸಿಂಹಳದಲ್ಲಿ ಭಾರತದ ಪ್ರದರ್ಶನಶಾಲೆ

ಭಾರತದಲ್ಲಿ ತಯಾರಾಗುವ ವಸ್ತುಗಳಿಗೆ ವಿದೇಶಗಳಲ್ಲಿ ಗಿರಾಕಿಗಳನ್ನು ಹೊಂದಿಸುವ ಉದ್ದಿಶ್ಯದಿಂದ ಭಾರತ ಸರ್ಕಾರವು ಹಲವಾರು ಕಡೆ ಭಾರತ ವಸ್ತುಗಳ ಪ್ರದರ್ಶನ ಶಾಲೆಗಳನ್ನು ಸ್ಥಾಪಿಸಲು ನಿರ್ಧರಿಸಿದ್ದಾರಷ್ಟೆ. ಇದರಂತೆ ಕೊಲೊಂಬೋವಿನಲ್ಲಿ ಒಂದು ಪ್ರದರ್ಶನಶಾಲೆಯನ್ನು ಇದೇ ತಿಂಗಳು ಮೂರನೇ ವಾರದಲ್ಲಿ ತೆರೆಯಲಾಗುತ್ತದೆ. ಸದ್ಯಕ್ಕೆ ಭಾರತದಲ್ಲಿ ತಯಾರಾಗುವ ಬಟ್ಟೆಗಳು ಮತ್ತು ಕುಶಲ ಕಲೆವಸ್ತುಗಳನ್ನು ಇಲ್ಲಿ ಪ್ರದರ್ಶನಕ್ಕಿಡಲಾಗುತ್ತದೆ. ಇಷ್ಟವುಳ್ಳವರು ತಮ್ಮ ಸ್ಯಾಂಪಲ್ ವಸ್ತುಗಳನ್ನು ಸಿಂಹಳದಲ್ಲಿರುವ ಭಾರತ ಹೈಕಮಿಷನರಿಗೆ ಕಳುಹಿಸಬಹುದು.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು !

ಬಹುಕಾಲ ಬಾಳಿಕೆಬರುವವು !

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು !!!

★ ★ ★ ★ ★

ಮೈಸೂರು ಉಕ್ಕಿನ ಸಾಮಾನುಗಳು
ಗಾಡಿಪಟ್ಟಿ ಅಥವಾ ಹಳಿಗಳು (FLATS) ದುಂಡು ಮತ್ತು ಚದುರ ಸಲಾಕಿಗಳು (ROUNDS & SQUARES) ಕೋನ ಕಂಬಿಗಳು (ANGLES) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (REINFORCING RODS) ಮತ್ತು ಬೀಲುಪಟ್ಟಿಗಳು (HOOPS)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು

ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ

ಮೈಸೂರು ಕಬ್ಬಿಣದ

ಮತ್ತು

ಉಕ್ಕಿನ ಕಾರಖಾನೆ, ಭದ್ರಾವತಿ.

ಆಂಧ್ರ ಸಚಿವ ಮಂಡಲಿಯಲ್ಲಿ ಬಿಕ್ಕಟ್ಟು

ಸಚಿವ ಶ್ರೀ ಲಚ್ಚಣ್ಣನವರ ರಾಜೀನಾಮೆ

ಕೃಷಿಕಲೋಕ ಪಕ್ಷವು ವಿರೋಧ ಪಕ್ಷವಾಯಿತು

ಆಂಧ್ರ ಮಂತ್ರಿಮಂಡಲದಲ್ಲಿ ಕೃಷಕಲೋಕಪಕ್ಷಕ್ಕೆ ಸೇರಿದ್ದ ಶ್ರೀ ಲಚ್ಚಣ್ಣನವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆಯನ್ನು ಸಲ್ಲಿಸಿದ್ದಾರೆ ಅದನ್ನು ಗೌರ್ನರ್ ಶ್ರೀ ತ್ರಿವೇದಿಯವರು ಅಂಗೀಕರಿಸಿದ್ದಾರೆ.

ಸರ್ಕಾರದ ಬಜೆಟ್ಟಿಗೆ ಶ್ರೀ ಲಚ್ಚಣ್ಣನವರು ಅಂಗೀಕಾರವೀಯಬೇಕು ಇಲ್ಲವೇ ಮಂತ್ರಿ ಮಂಡಲವನ್ನು ತ್ಯಜಿಸಬೇಕೆಂದು ನಿರ್ದೇಶನಬಂದಿದುದರಿಂದ ಈ ರೀತಿಮಾಡಿದರೆಂದು ಹೇಳಲಾಗುತ್ತಿದೆ.

ಕೃಷಕಲೋಕ ಪಕ್ಷದ ನಾಯಕ ಪ್ರೊಫೆಸರ್ ಎನ್. ಜಿ. ರಂಗಾರವರು ಈ ಸಂಬಂಧದಲ್ಲಿ ಮಾತನಾಡುತ್ತ ತಾವು ಎಲ್ಲಾ ರಾಜಕೀಯ ಪಕ್ಷಗಳೊಡನೆ ಸಂಧಾನ ನಡೆಸುವುದಾಗಿ ತಿಳಿಸಿದ್ದಾರೆ ಆಂಧ್ರ ಪ್ರಾಂತ್ಯದ ಖಾಯಂ ರಾಜಧಾನಿಯು ಕರ್ನೂಲ್‌ನಲ್ಲೇ ಉಳಿದರೆ ಅಲ್ಲಿಯ ಶ್ರೇಷ್ಠ ನ್ಯಾಯಾಲಯವು ವಿಜಯವಾಡಾ-ಗುಂಟೂರು ಪ್ರದೇಶದಲ್ಲಿರಬೇಕು, ವಿಜಯವಾಡ ಗುಂಟೂರು ಪ್ರದೇಶದಲ್ಲಿ ರಾಜಧಾನಿ ಏರ್ಪಟ್ಟರೆ ಕರ್ನೂಲ್‌ನಲ್ಲಿ ಶ್ರೇಷ್ಠನ್ಯಾಯಾಲಯವಿರಬೇಕೆಂದು ತೀರ್ಮಾನಿಸಿರುವುದಾಗಿ ಹೇಳಿದ್ದಾರೆ. ಸರ್ಕಾರವು ಈ ನೆಲುವಿಗೆ ಒಪ್ಪಬೇಕೆಂದು ಅವರು ಹೇಳಿದ್ದಾರೆ. ಈಗ ಸರ್ಕಾರವು ಕೃಷಕಲೋಕ ಪಕ್ಷದ ನಿಲುವಿಗೆ ವಿರೋಧವಾಗಿರುವುದರಿಂದ ತಮ್ಮ ಪಕ್ಷವು ಸರ್ಕಾರಕ್ಕೆ ಇನ್ನು ಮುಂದೆ ಸಹಕಾರ ನೀಡುವುದಿಲ್ಲವೆಂದು ಶಾಸನ ಸಭೆಯಲ್ಲಿ ವಿರೋಧ ಪಕ್ಷವಾಗಿ ಕಾರ್ಯಾಚರಣೆ ನಡೆಸುವುದೆಂದು ಪ್ರೊಫೆಸರ್ ರಂಗಾರವರು ಹೇಳಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೪—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—೬	೨೪—೧೪
ಎಳ್ಳು	೬೫—	೬೫—೨
ಹರಳು	೩೭—	೪೧—೧೪
ಹೊಂಗೆಬೀಜ	—	—
ಹುಚ್ಚೆಳ್ಳು	೩೬—೪	೪೭—೧೦
ಬೆಲ್ಲ	—	—
ಹುರಳಿ	೨೮—	೩೧—೪
ಉದ್ದು	೫೪—೪	೬೪—೧೦
ಹೆಸರು	೩೪—೨	೪೨—೨
ಅಲಸಂದೆ	೩೮—	೪೮—೮
ಹುಣಸೆಹಣ್ಣು	೫—೧೦	೯—೮
ಮೆಣಸಿನಕಾಯಿ	೧೨—	೩೬—೧೨
ಸೀಗೆಕಾಯಿ	೫—೧೦	—
ತೆಂಗಿನಕಾಯಿ	೧೮೦—	೨೯೬—

ಮೌಲಾನಾ ಅಜಾದರಿಗೆ ಪೆಟ್ಟು

ಕೇಂದ್ರಸರ್ಕಾರದ ವಿದ್ಯಾಸಚಿವ ಶ್ರೀ ಮೌಲಾನಾ ಅಜಾದರು ನಿನ್ನೆಯದಿನ ಜಾರಿಬಿದ್ದು ಮುಂಡಿ ಚಿಪ್ಪು ಮುರಿಯಿತೆಂದು ತಿಳಿಯಬರುತ್ತದೆ. ಕೂಡಲೇ ಅವರಿಗೆ ವೈದ್ಯರು ಚಿಕಿತ್ಸೆಯನ್ನು ನಡೆಸಿದರು. ಶ್ರೀ ಅಜಾದರು ಹುಷಾರಾಗಿರುತ್ತಾರೆ. ಅಂತಹ ಗಾಬರಿಯೇನೂ ಇಲ್ಲ. ಆದಾಗ್ಯೂ ಚಿಕಿತ್ಸೆಗಾಗಿ ಅವರು ಒಂದುತಿಂಗಳಕಾಲ ಹಾಸಿಗೆಯಲ್ಲಿಯೇ ಇರಬೇಕಾಗುತ್ತದೆ. ಅವಶ್ಯಕವಾದ ಸರ್ಕಾರಿ ಕಾಗದ ಪತ್ರಗಳನ್ನು ಮಾತ್ರ ಅವರು ಪರಿಶೀಲಿಸುವರು.

ಮದ್ರಾಸಿಗೆ ಮಿಲ್ಲು ಪಂಚೆ,ಸೀರೆ ಬೇಡ

ಮದ್ರಾಸ್ ಪ್ರಾಂತ್ಯಕ್ಕೆ ಗಿರಣಿಯಲ್ಲಿ ತಯಾರಾಗುವ ಪಂಚೆ ಮತ್ತು ಸೀರೆಗಳ ರಫ್ತನ್ನು ನಿಷೇಧಿಸಬೇಕೆಂದು ಅಲ್ಲಿಯ ಸರ್ಕಾರವು ಕೇಂದ್ರವನ್ನು ಕೋರಿರುವುದಾಗಿ ಅರ್ಥಿಕಸಚಿವ ಶ್ರೀ ಸುಬ್ರಹ್ಮಣ್ಯಂರವರು ಹೇಳಿದ್ದಾರೆ.

ರಷ್ಯಾ ಸೈನ್ಯ ನೆರವನ್ನು ಭಾರತ ಕೇಳಿಲ್ಲ

ಭಾರತವು ರಷ್ಯಾವನ್ನು ಸೈನ್ಯ ನೆರವು ಕೇಳಿರುವುದಾಗಿ ಅಮೇರಿಕಾ ಪತ್ರಿಕೆಗಳು ಬರೆದಿರುವುದು ತೀರಾ ನಿರಾಧಾರವಾದುದೆಂದೂ ತಾವು ರಷ್ಯಾ ವಿದೇಶಾಂಗ ಸಚಿವ ಮಿ॥ ಮಾಲಂಕೋವ್‌ರವರನ್ನು ಭೇಟಿಮಾಡಿದಾಗ ಈ ವಿಷಯದಲ್ಲಿ ಯಾವ ಮಾತುಗಳೂ ನಡೆಯಲಿಲ್ಲವೆಂದೂ ರಷ್ಯಾದಲ್ಲಿರುವ ಭಾರತದ ರಾಯಭಾರಿ ಶ್ರೀ ಕೆ. ಪಿ. ಎಸ್. ಮೆನನ್‌ರವರು ಹೇಳಿದ್ದಾರೆ.

ಶ್ರೇಷ್ಠ ನ್ಯಾಯಾಧೀಶರ ಅಧಿಕಾರ ಸ್ವೀಕಾರ

ಭಾರತ ಸುಪ್ರಿಂಕೋರ್ಟಿನನೂತನ ಶ್ರೇಷ್ಠ ನ್ಯಾಯಾಧೀಶರಾಗಿ ನೇಮಕವಾಗಿರುವ ಶ್ರೀ ಮೆಹರ್‌ಚಂದ್ ಮಹಾಜನ್‌ರವರು ನಿನ್ನೆಯದಿನ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದ್‌ರವರ ಸಮ್ಮುಖದಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಸುಪ್ರೀಂಕೋರ್ಟಿನ ನ್ಯಾಯಾಧೀಶರಾಗಿ ಶ್ರೀ ವೆಂಕಟರಾಮಯ್ಯರ್‌ರವರು ನಿನ್ನೆ ಅಧಿಕಾರ ವಹಿಸಿಕೊಂಡರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೧೦

೬-೧-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಗ್ರಾಮಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ನೀಡಬೇಕು

ವಿದೇಶೀ ಆಮದನ್ನು ನಿಷೇಧಿಸಬೇಕು

ಗ್ರಾಮಕೈಗಾರಿಕೆ ಸಮ್ಮೇಳನದಲ್ಲಿ ಮುಖ್ಯಮಂತ್ರಿಗಳ ಸಲಹೆ

ಮೈಸೂರು ೬

ಸಂಸ್ಥಾನದ ಕೈಕಸಬು ಮತ್ತು ಗ್ರಾಮ ಕೈಗಾರಿಕೆಗಳ ಪ್ರಥಮ ಸಮ್ಮೇಳನವು ನಿನ್ನೆ ಸಂಜೆ ವ್ಯವಸಾಯ ಸಚಿವ ಡಾ॥ ಆರ್. ನಾಗನ ಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು.

ಸ್ವಾಗತಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಸಿ. ರುದ್ರಪ್ಪನವರು ಸ್ವಾಗತಬಯಸಿ ಮೈಸೂರು ಸಂಸ್ಥಾನ ಕೈಕಸುಬು ಮತ್ತು ಗ್ರಾಮ ಕೈಗಾರಿಕೆಗಳಿಗೆ ಮಾತೃಸ್ಥಾನವಾಗಿದ್ದು. ಇತ್ತೀಚೆಗೆ ಅನೇಕ ತೊಂದರೆಗಳಿಂದ ಅವುಗಳು ನಾಶವಾಗುತ್ತಿವೆ. ಮೈಸೂರು ಸರ್ಕಾರದವರು ಅದಕ್ಕೆ ಪ್ರೋತ್ಸಾಹ ಕೊಡುತ್ತಿದ್ದರೂ ಹಣದ ಅಭಾವದಿಂದ ಅದು ಸಾಲದಾಗಿದೆ. ಕೇಂದ್ರ ಸರ್ಕಾರದವರು ನೆರವು ನೀಡಿ ಕೈಗಾರಿಕೆಗಳು ಅಭಿವೃದ್ಧಿ ಹೊಂದುವಂತೆ ಮಾಡಬೇಕೆಂದು ತಿಳಿಸಿದರು

ಶ್ರೀಮನ್ಮಹಾರಾಜರವರಿಂದ ಬಂದ ಸಂದೇಶವನ್ನು ಓದಲಾಯಿತು.

ಅನಂತರ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಸಮ್ಮೇಳನದ ಆರಂಭೋತ್ಸವ ನಡೆಸಿ, ಇಂತಹ ಸಣ್ಣ ಪುಟ್ಟ ಕೈಗಾರಿಕೆಗಳ ಅವಶ್ಯಕತೆಯನ್ನು ಒತ್ತಿಹೇಳಿದರು.

ಭಾರತವು ವಿಶೇಷ ವ್ಯವಸಾಯ ದೇಶವಾದ್ದರಿಂದ ಇಂತಹ ಕೈಕಸುಬು ಮತ್ತು ಗ್ರಾಮಕೈಗಾರಿಕೆಗಳು ಹೆಚ್ಚು ಬೆಳೆಯಬೇಕಾಗಿದೆ ೪೦ ವರ್ಷಗಳ ಹಿಂದೇ ಈ ಪ್ರಾಮುಖ್ಯತೆಯನ್ನು ಅರಿತು ಮೈಸೂರು ಸರ್ಕಾರದವರು ಈಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುತ್ತಿದ್ದಾರೆ. ಕಳೆದ ೧೫-೨೦ ವರ್ಷಗಳಲ್ಲಿ ಅನೇಕ ಸಣ್ಣ ಪುಟ್ಟ ಕೈಗಾರಿಕೆಗಳನ್ನು ಸ್ಥಾಪಿಸಲಾಗಿದೆ. ೧೯೪೭-೪೮ ರಲ್ಲಿ ೨೬ ಲಕ್ಷ ರೂಗಳ ೩ ವರ್ಷದ ಯೋಜನೆಯನ್ನು ಸರ್ಕಾರ ಮಂಜೂರು ಮಾಡಿದೆ. ಪಂಚವಾರ್ಷಿಕ ಯೋಜನೆಯಲ್ಲಿ ಗ್ರಾಮಕೈಗಾರಿಕೆಗಳಿಗಾಗಿ ೧.೩೫ಲಕ್ಷ ರೂ. ಮೀಸಲಾಗಿಡಲಾಗಿದೆ. ಕೈಕಸಬು ಮತ್ತು ಇತರ ಕೈಗಾರಿಕೆಗಳ ಶಿಕ್ಷಣಕ್ಕಾಗಿ ಅನೇಕ ಶಾಲೆಗಳಲ್ಲಿ ವ್ಯವಸ್ಥೆ ಮಾಡಲಾಗಿದೆ. ೩೨ ಗ್ರಾಮಕೈಗಾರಿಕೆಗಳ ಶಿಕ್ಷಣ ಕೇಂದ್ರಗಳೂ ಇವೆ. ಕಳೆದ ೫-೬ ವರ್ಷಗಳಲ್ಲಿ ೨ ಸಾವಿರ ಜನರಿಗಿಂತ ಹೆಚ್ಚಿಗೆ ಶಿಕ್ಷಣ ಪಡೆದಿದ್ದಾರೆ ಇದರ ಜೊತೆಗೆ ಡಾ॥ ವಿಶ್ವೇಶ್ವರಯ್ಯನವರ ಗ್ರಾಮಕೈಗಾರಿಕಾ ಯೋಜನೆಯನ್ನೂ ಕೈಗೊಳ್ಳಲಾಗಿದೆ. ಕೇಂದ್ರಸರ್ಕಾರದ ಸಹಾಯದಿಂದ ನೂತನ ಗ್ರಾಮಕೈಗಾರಿಕೆಗಳನ್ನು ಕೈಗೊಳ್ಳಲು ೯ ಲಕ್ಷ ರೂ. ಯೋಜನೆಯು ತಯಾರಾಗಿದೆ.

ದೇಶದಲ್ಲಿ ದೊಡ್ಡ ಮತ್ತು ಸಣ್ಣ ಕೈಗಾರಿಕೆಗಳು ಒಟ್ಟಿಗೆ ಬೆಳೆಯಬೇಕು. ಎಲ್ಲರಿಗೂ ಉದ್ಯಮ ಒದಗಿಸಲು ಗ್ರಾಮಕೈಗಾರಿಕೆಗಳು ಹೆಚ್ಚು ಅಭಿವೃದ್ಧಿ ಆಗಬೇಕು. ಅದಕ್ಕಾಗಿ ಕೇಂದ್ರ ಸರ್ಕಾರದವರು ಒಂದು ಬೋರ್ಡನ್ನು ಸ್ಥಾಪಿಸಿದ್ದಾರೆ. ಇಂತಹ ಸಣ್ಣಪುಟ್ಟ ಕೈಗಾರಿಕೆ ವಸ್ತುಗಳನ್ನು ಜನರು ಹೆಚ್ಚಾಗಿ ಉಪಯೋಗಿಸಬೇಕು ಮತ್ತು ಹೊರಗಿನಿಂದ ಎಷ್ಟು ಇಂತಹ ವಸ್ತುಗಳು ಬರುತ್ತಿವೆಯೆಂಬುದನ್ನು ಪರಿಶೀಲಿಸಿ, ಅವುಗಳ ಆಮದನ್ನು ನಿಷೇಧಿಸಬೇಕು..ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಡಾ॥ ನಾಗನಗೌಡರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಜನರು ಪರದೇಶದ ವಸ್ತುಗಳ ಮೇಲಿನ ವ್ಯಾಮೋಹವನ್ನು ತ್ಯಜಿಸಿ, ಸ್ವದೇಶಿ ವಸ್ತುಗಳನ್ನು ಪ್ರೋತ್ಸಾಹಿಸಬೇಕೆಂದು ತಿಳಿಸಿದರು. ಭಾರತದಲ್ಲಿರುವ ಅಬಾದು ಜಮೀನುಗಳನ್ನೆಲ್ಲಾ ಹಂಚಿದರೂ, ಪ್ರತಿ ರೈತನಿಗೆ ಅರ್ಧ ಎಕರೆ ಜಮೀನು ಸಿಕ್ಕುವುದಿಲ್ಲ ಹಳ್ಳಿಯಲ್ಲಿರುವ ರೈತರು ವರ್ಷಕ್ಕೆ ಆರುತಿಂಗಳು ಕೆಲಸವಿಲ್ಲದೆ ಇರುತ್ತಾರೆ. ಅವರಿಗೆ ಸೂಕ್ತ ಉದ್ಯಮ ಒದಗಿಸಲು ಹೆಚ್ಚು ಗ್ರಾಮ ಕೈಗಾರಿಕೆಗಳನ್ನು ಸ್ಥಾಪಿಸಬೇಕು. ನಮ್ಮ ಹಿಂದಿನವರು ಹಳ್ಳಿಗಳಲ್ಲಿ ನೆಲೆಸಿ ಇಂತಹ ಕೈಗಾರಿಕೆಗಳಲ್ಲಿ ನಿರತರಾಗಿದ್ದರು. ಈಗ ಅವುಗಳನ್ನು ಮರೆತು ನಗರಗಳಿಗೆ ಬರುತ್ತಿರುವುದೇ ಸಣ್ಣಪುಟ್ಟ ಕೈಗಾರಿಕೆಗಳು ಸಾಯುವುದಕ್ಕೆ ಕಾರಣವಾಗಿದೆ. ಆದ್ದರಿಂದ ಜನರು ಇದಕ್ಕೆ ಹೆಚ್ಚು ಬೆಂಬಲ ಮತ್ತು ಪ್ರೋತ್ಸಾಹ ಕೊಡಬೇಕೆಂದು ಹೇಳಿದರು.

ಇಂತಹ ಕೈಗಾರಿಕೆಗಳ ಅಭಿವೃದ್ಧಿಗಾಗಿ ಒಂದು ಕಾರ್ಪೋರೇಷನ್ ಮತ್ತು ಸಂಶೋಧನಾಕೇಂದ್ರಗಳನ್ನು ಕೇಂದ್ರಸರ್ಕಾರ ಸ್ಥಾಪಿಸಬೇಕು. ಸಣ್ಣ ಪುಟ್ಟ ಕೈಗಾರಿಕೆಗಳ ಮೇಲೆ ಹೊರಿಸುತ್ತಿರುವ ಮಾರಾಟದ ತೆರಿಗೆ, ಆಕ್ಟ್ರಾಯ್ ಮುಂತಾದವುಗಳು ರದ್ದಾಗಬೇಕು. ಭಾರತದಲ್ಲಿ ಮತ್ತು ಪರದೇಶಗಳಲ್ಲಿ ಈ ಸಾಮಾನುಗಳ ಮಾರಾಟವಾಗಲು ಸರಿಯಾದ ವ್ಯವಸ್ಥೆ ಆಗಬೇಕು.

ಸಮಾಜ ಸೇವಕರಿಗೆ, ವಿಜ್ಞಾನಿಗಳಿಗೆ ಪ್ರಶಸ್ತಿಗಳು

ಭಾರತರತ್ನ-ಪದ್ಮವಿಭೂಷಣ ಎಂಬ ಬಿರುದು

ಭಾರತದಲ್ಲಿ ಕಲೆ, ವಿಜ್ಞಾನ, ಸಾಹಿತ್ಯ ಮುಂತಾದುವುಗಳಲ್ಲಿ ಪ್ರಸಿದ್ಧರಾದವರಿಗೂ, ಮತ್ತು ಸಮಾಜ ಸೇವೆಯನ್ನು ಉತ್ತಮ ರೀತಿ ನಡೆಸಿರುವವರಿಗೂ ಪ್ರಶಸ್ತಿಗಳನ್ನು ರಾಷ್ಟ್ರಾಧ್ಯಕ್ಷರು ಮಂಜೂರ್ಮಾಡಿರುತ್ತಾರೆ.

ಕಲೆ, ವಿಜ್ಞಾನ ಮುಂತಾದವರಿಗೆ ಸಂಬಂಧಪಟ್ಟಂತೆ ಸುವರ್ಣ ಪದಕ ಬಹುಮಾನ ಮತ್ತು 'ಭಾರತರತ್ನ' ಎಂಬ ಬಿರುದುಗಳನ್ನು ಕೊಡಲಾಗುತ್ತದೆ.

ಸಮಾಜ ಸೇವಕರಿಗೆ ಮೂರು ರೀತಿಯ ಪದಕಗಳು, ಸುವರ್ಣ, ರಜತ ಮತ್ತು ಕಂದು ಕಂಚಿನವು ಮತ್ತು ಪದ್ಮವಿಭೂಷಣ ಎಂಬ ಬಿರುದು ಕೊಡಲಾಗುತ್ತದೆ.

ಈ ಪ್ರಶಸ್ತಿಗಳನ್ನು ಜನಾಂಗ, ಉದ್ಯೋಗ, ಸ್ಥಾನ ಮತ್ತು ಲಿಂಗ ಮುಂತಾದುವುಗಳಲ್ಲಿ ಯಾವ ಭೇದವೂ ಇಲ್ಲದೆ ಕೊಡಲಾಗುವುದು.

ಆಂಗ್ಲೋ ಇಂಡಿಯನ್ ಪಾಠಶಾಲೆಗಳ ಪ್ರವೇಶ

ಬೊಂಬಾಯಿನಲ್ಲಿರುವ ಆಂಗ್ಲೋ ಇಂಡಿಯನ್ ಶಾಲೆಗಳಿಗೆ ಅದೇ ಜನಾಂಗದವರನ್ನು ಮಾತ್ರ ಸೇರಿಸಬೇಕೆಂದು ಆಜ್ಞೆಯನ್ನು ಪಾರ್ಲಿಮೆಂಟ್ ಸದಸ್ಯ ಶ್ರೀ ಫ್ರಾಂಕ್ ಅಂಥೋನಿಯವರು ತೀವ್ರವಾಗಿ ಖಂಡಿಸಿ ಈ ಆಜ್ಞೆಗೆ ಯಾವ ಪಾಠಶಾಲೆಯೂ ಗಮನವೀಯಬಾರದೆಂದು ಕೋರಿದ್ದಾರೆ. ಕೇಂದ್ರ ವಿದ್ಯಾಸಚಿವರು ಈ ವಿಷಯವಲ್ಲಿ ಬೊಂಬಾಯಿಗೆ ಸದ್ಯದಲ್ಲೆ ಬರೆಯಲಿರುವರೆಂದು ತಿಳಿಯಬರುತ್ತದೆ.

ಭಾರತಕ್ಕೆ ತಾಂತ್ರಿಕ ನೆರವು

ಭಾರತ ಮತ್ತು ಅಮೆರಿಕಾಗಳ ನಡುವೆ ತಾಂತ್ರಿಕ ಸಹಕಾರ ಯೋಜನೆಯ ಪ್ರಕಾರ ಒಪ್ಪಂದವೊಂದು ಆಗಿದೆ. ಇದರಂತೆ ಅಮೆರಿಕಾವು ಭಾರತಕ್ಕೆ ಹನ್ನೆರಡೂ ಮುಕ್ಕಾಲು ಕೋಟಿ ರೂಪಾಯಿಗಳ ಬೆಲೆಯ ೩ ಲಕ್ಷಟನ್ ಉಕ್ಕನ್ನು ಸಹಾಯವಾಗಿ ಕೊಡಲಿದೆ.

ಅಗರಬತ್ತಿ ಕೈಗಾರಿಕೆ ಅಭಿವೃದ್ಧಿಗಾಗಿ ಪರದೇಶಗಳಲ್ಲಿ ಸೂಕ್ತ ಮಾರ್ಕೆಟ್‌ವ್ಯವಸ್ಥೆ ಅವಕ್ಕೆ ಬೇಕಾಗುವ ಸೂಕ್ತ ವಸ್ತುಗಳನ್ನು ಹೊರಗಡೆಯಿಂದ ತರಿಸಲು ಅನುಮತಿ, ಇವೇ ಮುಂತಾದ ನಿರ್ಣಯಗಳನ್ನು ಮಾಡಲಾಯಿತು.

ವಿಶ್ವವಿದ್ಯಾನಿಲಯದ ಘಟಿಕೋತ್ಸವ

ಮೈಸೂರು ೬

ಮೈಸೂರು ವಿಶ್ವವಿದ್ಯಾನಿಲಯದ ೩೪ ನೇ ಘಟಿಕೋತ್ಸವವು ಇದೇ ೮ ನೇ ತಾರೀಖು ಬೆಳಿಗ್ಗೆ ೯ ಗಂಟೆಗೆ ಕ್ರಾಫರ್ಡ್ ಭವನದಲ್ಲಿ ನಡೆಯುವುದು ಪಾರ್ಲಿಮೆಂಟ್ ಸದಸ್ಯರೂ ಮತ್ತು ಲಕ್ನೋ ವಿಶ್ವವಿದ್ಯಾನಿಲಯದ ಇತಿಹಾಸ ಪ್ರಾಧ್ಯಾಪಕರೂ ಆದ ಡಾ॥ ರಾಧಾಕುಮುದ್ ಮುಖರ್ಜಿಯವರ ಭಾಷಣ ಮಾಡುವರು.

ಸ್ವೀಕಾರ

ಮೈಸೂರು ಅರಗು ಮತ್ತು ಬಣ್ಣದ ಕಾರ್ಖಾನೆಯವರು ಕಳುಹಿಸಿರುವ ೧೯೫೪ ನೇ ವರ್ಷದ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ.

ವಿದ್ಯಾಗಣಪತಿ ಮಂದಿರಕ್ಕೆ ನೆರವು

ಕಾಶೀಪತಿಲಾಯದಲ್ಲಿರುವ ವಿದ್ಯಾಗಣಪತಿ ಮಂದಿರಕ್ಕೆ ದಿವಂಗತ ಶ್ರೀ ಕೆ. ವೀರಭದ್ರನೊದಲಿಯಾರ್‌ರವರ ಪತ್ನಿ ಶ್ರೀಮತಿ ಪದ್ಮಮ್ಮನವರು, ಶ್ರೀಗಳಾದ ಎಂ. ಆರ್. ಜಟ್ಟಪ್ಪನವರು, ಬಿ. ಎ. ಶನೈರವರು ತಲಾ ನೂರು ರೂಪಾಯಿಗಳನ್ನು ಉದಾರ ದಾನ ಮಾಡಿದ್ದಾರೆ.

ಕೈರೋದಲ್ಲಿ ಭಾರತದ ವಸ್ತುಪ್ರದರ್ಶನ

ಭಾರತದಲ್ಲಿ ತಯಾರಾಗುವ ವಸ್ತುಗಳ ವ್ಯಾಪಾರ ಪ್ರಚಾರ ಸಂಬಂಧವಲ್ಲಿ ಕೈರೋ ನಗರದಲ್ಲಿ ಭಾರತಸರ್ಕಾರವು ಏಪ್ರಿಲ್ ೧ ನೇ ತಾರೀಖಿನಿಂದ ೩ ವಾರಗಳ ಕಾಲ ಅಖಿಲ ಭಾರತ ಪ್ರದರ್ಶನವೊಂದನ್ನು ಏರ್ಪಡಿಸಿದೆ.

ಬಂಗಾಳಿ ಭಾಷೆಯ ಬಗ್ಗೆ ಪ್ರತಿಭಟನೆ

ಪಾಕಿಸ್ತಾನ ಪ್ರಧಾನಿ ಮಿ॥ ಮಹಮದ್ ಅಲಿಯವರು ಇತ್ತೀಚೆಗೆ ಢಕ್ಕಾದಲ್ಲಿ ಮಾತನಾಡುತ್ತಾ ಬಂಗಾಳಿಯನ್ನು ಪಾಕಿಸ್ತಾನದಲ್ಲಿ ರಾಜ್ಯಭಾಷೆಯನ್ನಾಗಿ ಮಾಡಲು ತಾವು ಬೆಂಬಲ ನೀಡುವುದಾಗಿ ಹೇಳಿರುವುದನ್ನು ಪಾಕಿಸ್ತಾನದ ಉರ್ದು ವೃತ್ತಗಳಲ್ಲಿ ಪ್ರತಿಭಟಿಸಲು ಪ್ರಾರಂಭಿಸಿದ್ದಾರೆ.

ಪಾಕೀಸ್ತಾನಕ್ಕೆ ಶತ್ರು ಭೀತಿ ಬಲವಾಗಿದೆ

ಭಾರತಕ್ಕೆ ಎಲ್ಲಾ ದೇಶಗಳ ಸ್ನೇಹ ಬೇಕು

ಭಾರತ ಪ್ರಧಾನಿ ನೆಹರೂ ಘೋಷಣೆ

ಒಂದು ದೇಶವು ಸೈನ್ಯ ಸಾಮಗ್ರಿಗಳ ನೆರವನ್ನು ಪಡೆದರೆ ಅದರ ಗತಿಯೇನಾಗುವುದೆಂಬುದು ಈಗ ದಕ್ಷಿಣ ಕೊರಿಯಾದಿಂದ ಅರಿತುಕೊಳ್ಳಬಹುದಾಗಿದೆ. ಪ್ರಕೃತ ಪರಿಸ್ಥಿತಿಯಲ್ಲಿ ದಕ್ಷಿಣಕೊರಿಯಾವು ಈಗ ತನ್ನ ಹತೋಟಿಯಲ್ಲಿಯೇ ಇಲ್ಲದಾಗಿದೆ. ಆದ್ದರಿಂದ ಪಾಕೀಸ್ತಾನವು ಅಮೆರಿಕಾದ ಸೈನ್ಯ ನೆರವನ್ನು ಪಡೆದರೆ ಆ ದೇಶವೂ ತನ್ನ ಸ್ವಾತಂತ್ರ್ಯವನ್ನು ಕಾಪಾಡಿಕೊಳ್ಳಲು ಕಷ್ಟವಾಗುತ್ತದೆ ಅಲ್ಲದೆ ಪಾಕೀಸ್ತಾನವು ತನ್ನ ಸೈನ್ಯ ಬಲವನ್ನು ವಿಸ್ತರಿಸಿಕೊಳ್ಳಬೇಕೆಂಬ ವಿಷಯವನ್ನು ಪರಿಗಣಿಸಿದರೆ ತನಗೆ ಶತ್ರುಗಳಿದೆಯೆಂಬ ಭೀತಿಯು ಅದನ್ನು ವಿಶೇಷವಾಗಿ ಕಾಡುತ್ತಿರುವಂತೆ ತೋರುತ್ತದೆ ಭಾರತಕ್ಕೆ ವಿಶ್ವದ ಎಲ್ಲಾ ರಾಷ್ಟ್ರಗಳ ಸ್ನೇಹ ಬೇಕು ಭಾರತಕ್ಕೆ ಶತ್ರುಗಳೇ ಇಲ್ಲ ಎಂದು ಪ್ರಧಾನಿ ನೆಹರೂರವರು ನಿನ್ನೆ ದಿನ ನಾಗಪುರದಲ್ಲಿ ಸಾರ್ವತ್ರಿಕ ಸಭೆಯೊಂದರಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಪರ ರಾಷ್ಟ್ರಗಳಲ್ಲಿ ಈರೀತಿಯ ಸೈನ್ಯ ಜಮಾವಣೆ ಮತ್ತು ಇತರ ಯುದ್ಧ ಪ್ರಚೋದಿತ ಕಾರ್ಯಗಳು ನಡೆಯುತ್ತಿರುವಾಗ ಭಾರತದ ಜನರು ಜಾಗರೂಕತರಾಗಿ ಜಾಗ್ರತೆಯಿಂದ ವರ್ತಿಸುತ್ತಾ ಎಲ್ಲಾ ಭಿನ್ನತೆಗಳನ್ನೂ ತೊಡೆದು ಐಕ್ಯರಾಗಬೇಕೆಂದು ಮನವಿ ಮಾಡಿದ್ದಾರೆ.

ಪುರಸಭೆ ವಿಶೇಷ ಅಧಿವೇಶನ

ಮೈಸೂರು ೬

ಪುರಸಭೆಯ ನಾನಾ ಸಮಿತಿಗಳ ರಚನೆ ಮತ್ತು ಇತರ ಕೆಲವು ಸಮಿತಿಗಳಿಗೆ ಪುರಸಭೆಯ ಸದಸ್ಯರ ಆಯ್ಕೆ ಮುಂತಾದುವನ್ನು ನಡೆಸಲು ಪುರಸಭೆಯ ವಿಶೇಷ ಅಧಿವೇಶನವು ಇದೇ ೧೧ನೇ ತಾರೀಖು ಮಧ್ಯಾಹ್ನ ನಾಲ್ಕುಗಂಟೆಗೆ ನಡೆಯುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೫—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೫—	೨೪—೧೪
ಎಳ್ಳು	೬೧—೨	೭೧—೪
ಹರಳು	೩೯—೨	೪೧—೨
ಹೊಂಗೆಬೀಜ	—	—
ಹುಚ್ಚೆಳ್ಳು	೩೯—	೪೯—
ಬೆಲ್ಲ	—	—
ಹುರಳಿ	೨೭—೧೨	೩೧—೬
ಉದ್ದು	—	—
ಹೆಸರು	೩೫—೧೨	೪೩—೪
ಅಲಸಂದೆ	೩೫—	೪೭—೬
ಹುಣಸೆಹಣ್ಣು	೬—೪	೧೨—೮
ಮೆಣಸಿನಕಾಯಿ	೨೦—೧೪	೩೬—೧೨
ಸೀಗೆಕಾಯಿ	೪—೧೪	೫—೧೪
ತೆಂಗಿನಕಾಯಿ	೧೭೧—	೨೮೫—

ಟೆಹರಾನಿನಲ್ಲಿ ಪ್ರದರ್ಶನ

ಸರ್ಕಾರದ ವಿರುದ್ಧವಾಗಿ ಮಾಜಿ ಪ್ರಧಾನಿ ಡಾ॥ ಮುಸಾದಿಕ್‌ರವರ ಬೆಂಬಲಿಗರು ನಿನ್ನೆ ಟೆಹರಾನಿನಲ್ಲಿ ಪ್ರದರ್ಶನವನ್ನು ಮಜ್ಲಿಸ್‌ಭವನದ ಮುಂದೆ ನಡೆಸಿದರು. ಅದರಲ್ಲಿ ೧೦೦೦ ಕ್ಕಿಂತ ಹೆಚ್ಚಾಗಿ ಶಾಲಾ ಬಾಲಕರು ಭಾಗವಹಿಸಿದ್ದರು. ಪ್ರದರ್ಶನಕಾರರಲ್ಲಿ ಅನೇಕರನ್ನು ಪೊಲೀಸರು ಬಂಧಿಸಿ, ಅವರ ತಲೆಯನ್ನು ನುಣ್ಣಗೆ ಬೋಳಿಸಿ ಸಂಜೆ ಬಿಡುಗಡೆ ಮಾಡಿದರೆಂದು ತಿಳಿಯಬರುತ್ತದೆ.

ಇಂಜನಿಯರುಗಳ ಸಮ್ಮೇಳನ

ಭಾರತ ವಿವಿಧ ಪ್ರಾಂತ್ಯಗಳ ಇಂಜನಿಯರುಗಳ ವಿಚಾರಗೋಷ್ಠಿಯು ನಿನ್ನೆಯ ದಿನ ಕೇಂದ್ರ ಆಯೋಜನಾ ಸಚಿವ ಶ್ರೀ ಗುಲ್ಜಾರಿಲಾಲ್ ನಂದಾರವರ ಅಧ್ಯಕ್ಷತೆಯಲ್ಲಿ ನಂಗಾಲ್‌ನಲ್ಲಿ ಪ್ರಾರಂಭವಾಯಿತು ನದೀಕಣಿವೆ ಮತ್ತು ಇತರ ಪ್ರಮುಖ ವಿಷಯಗಳ ಬಗ್ಗೆ ಇಲ್ಲಿ ಚರ್ಚೆ ನಡೆಯುತ್ತದೆ. ವಿಚಾರಗೋಷ್ಠಿಯು ೩ ದಿನಗಳು ನಡೆಯುವುದು.

ಗಡಿನಾಡು ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್ ಬಿಡುಗಡೆ

ಗಡಿನಾಡು ಪ್ರಾಂತ್ಯದಲ್ಲಿರುವ ಎಲ್ಲಾ ರಾಜಕೀಯ ಬಂಧಿತರ ಖುಲಾಸೆ

ಕಳೆದ ೬ ವರ್ಷಗಳಿಂದ ಬಂಧನದಲ್ಲಿದ್ದ ಕೆಂಪುಕೋಟಿನ ಪಕ್ಷದ ನಾಯಕ ಖಾನ್ ಅಬ್ದುಲ್‌ಗಫಾರ್ ಖಾನ್‌ರನ್ನು ಬಿಡುಗಡೆ ಮಾಡಬೇಕೆಂದು ಪಾಕೀಸ್ತಾನ ಸರ್ಕಾರವು ಆಜ್ಞೆ ಮಾಡಿರುವುದಾಗಿ ತಿಳಿಯಬರುತ್ತದೆ.

ಇವರನ್ನಲ್ಲದೆ ಈ ಪ್ರಾಂತ್ಯದಲ್ಲಿ ಬಂಧನದಲ್ಲಿರುವ ಇನ್ನೂ ೪೫ ಜನರನ್ನು ಬಿಡಲಾಗುತ್ತದೆ.

ಖಾನ್ ಅಬ್ದುಲ್ ಗಫಾರ್ ಖಾನ್‌ರವರ ಮೇಲೆ ಮಾತ್ರ ಷರತ್ತನ್ನೂ ಹಾಕಿ ಅವರು ಪಶ್ಚಿಮ ಪಂಜಾಬಿನಲ್ಲಿಯೇ ಇರಬೇಕೆಂದು ತಿಳಿಸಲಾಗಿದೆ. ಇತರರ ಮೇಲೆ ಯಾವ ಪ್ರತಿಬಂಧಕವೂ ಇರುವುದಿಲ್ಲ.

ಈ ಬಿಡುಗಡೆಯು ಭಾರತ ಮತ್ತು ಪಾಕೀಸ್ತಾನ ವೃತ್ತಗಳಲ್ಲೆಲ್ಲಾ ಅತ್ಯಂತ ಸಂತೋಷವನ್ನುಂಟುಮಾಡಿದೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಜೂನ್ ಮಾಹೆಯಲ್ಲಿ ಆಂಧ್ರದಲ್ಲಿ ಚುನಾವಣೆಯೆ?

ಆಂಧ್ರಪ್ರಾಂತ್ಯದ ರಾಜಧಾನಿ ಪ್ರಶ್ನೆಯ ವಿಷಯದಲ್ಲಿ ಕೃಷಕಲೋಕಪಕ್ಷದ ಬಿನ್ನತೆಯಿಂದ ಕಾಂಗ್ರೆಸ್ ಸರ್ಕಾರಕ್ಕೆ ತನ್ನ ಬೆಂಬಲ ಕೊಡುವುದಕ್ಕೆ ವಿರೋಧಿಸಿ ಮಂತ್ರಿಮಂಡಲದಲ್ಲಿದ್ದ ತನ್ನ ಪ್ರತಿನಿಧಿ ಶ್ರೀ ಲಚ್ಚಣ್ಣನವರನ್ನೂ ಹಿಂಪಕ್ಕೆ ತೆಗೆದುಕೊಂಡಿದೆಯಷ್ಟೆ. ಈ ರಾಜಧಾನಿ ಪ್ರಶ್ನೆಯಲ್ಲಿ ಈ ಪಕ್ಷವು ಕಮ್ಯೂನಿಸ್ಟ್ ಪಕ್ಷದೊಡನೆ ಒಪ್ಪಂದಮಾಡಿಕೊಂಡಿರುವುದರಿಂದ ಆಂಧ್ರದಲ್ಲಿ ಸದ್ಯದಲ್ಲಿಯೇ ಮಹಾಚುನಾವಣೆಗಳು ನಡೆದು ಸುಭದ್ರ ಸರ್ಕಾರ ಸ್ಥಾಪನೆಯಾಗುವುದೆಂದು ಹೇಳಲಾಗುತ್ತಿದೆ ಈ ವಿಷಯದಲ್ಲಿ ಉಪ ಮುಖ್ಯಮಂತ್ರಿ ಶ್ರೀ ಸಂಜೀವ ರೆಡ್ಡಿಯವರು ಮಾತನಾಡುತ್ತ ಯಾವುದೋ ಒಂದು ವಿಷಯದ ಭಿನ್ನತೆಯಿಂದ ಸರ್ಕಾರವು ಶಾಸನ ಸಭೆಯಲ್ಲಿ ಮಂಡಿಸುವ ಬಜೆಟ್ಟನ್ನು ಸಚಿವರೊಬ್ಬರು ವಿರೋಧಿಸುತ್ತೇವೆಂಬುದರಲ್ಲಿ ಅರ್ಥವಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಮಹಾಚುನಾವಣೆಗಳನ್ನು ನಡೆಸುವುದು ಸೂಕ್ತ ಸರ್ಕಾರವು ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಲಾಗುತ್ತಿದೆ. ಈ ಚುನಾವಣೆಗಳು ಜೂನ್ ಮಾಹೆಯಲ್ಲಿ ನಡೆಯಬಹುದು-ಎಂದು ಹೇಳಿದ್ದಾರೆ.

ರಣಜಿತ್
7-1-54 ರಿಂದ ಅಮೋಘ ಪ್ರಾರಂಭ
ಪ್ರತಿದಿನ 3 ಆಟಗಳು
ಧೂನ್ (ಹಿಂದಿ)
ಪಾತ್ರ:- ನರ್ಗಿಸ್, ರಾಜಕಪೂರ್, ಮೋತಿಲಾಲ್

ಅಪೆರಾ
7-1-53 ರಿಂದಅಮೋಘ 4ನೇ ವಾರ
ಆರ್. ಎಮ್. ಪಿಕ್ಚರ್ಸ್‌ರವರ
ಜಾತಕ ಫಲ
(ಕನ್ನಡ)
ಪಾತ್ರ: —ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ನೈಸರ್ಗಿಕ ಬಣ್ಣಗಳಲ್ಲಿ
ಬೇಕ್‌ಲೈಟ್ ಸಾಮಾನುಗಳಲ್ಲಿ
ಮೈಸೂರೈಟ್ ಮತ್ತು ಐವರೈಟ್
ಅಸಮಾನವಾದ ದರ್ಜೆಗೆ ಸೇರಿದ್ದು
ಕುಡಿಯುವ ಪಾತ್ರೆಗಳು, ಬಟ್ಟಲುಗಳು, ಬಶಿಗಳು, ಕ್ಷೌರದ ದೊನ್ನೆಗಳು, ಸಿಗರೇಟು ಬೂದಿಯನ್ನು ಹಾಕುವ ತಟಕೆಗಳು, ಟೇಬಲ್ ಅಲಂಕರಿಸುವ ಕೌಶಲ್ಯದ ಸಾಮಾನುಗಳು, ಅಂಗಶೃಂಗಾರ ಪದಾರ್ಥಗಳನ್ನಿಡುವ ಸಾಮಾನುಗಳು, ವಿಧವಿಧವಾದ ನಮೂನೆಗಳಲ್ಲಿ ಮತ್ತು ಆಕರ್ಷಕ ಬಣ್ಣಗಳಲ್ಲಿ ತಯಾರಿಸಲ್ಪಡುವುವು.
ಅಚ್ಚು ಮಾಡಿದ ಮೈಸೂರೈಟ್ ಸಾಮಾನುಗಳು
ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ,
ಮೈಸೂರು ರೋಡ್, ಬೆಂಗಳೂರು ೨

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೧೨

೭-೧-೧೯೫೪ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ದೇಶದ ಪ್ರಗತಿಗೆ ಮಾಲೀಕರು, ಕಾರ್ಮಿಕರು ಸಹಕರಿಸಿ ದುಡಿಯಬೇಕು

ಅಖಿಲ ಕಾರ್ಮಿಕ ಸಮ್ಮೇಳನದಲ್ಲಿ ಸಚಿವ ವಿ.ವಿ. ಗಿರಿಯವರ ಮನವಿ

ಮಾಲೀಕರು ದೇಶದ ಇಂದಿನ ಸ್ಥಿತಿಗತಿಗುಣವಾಗಿ ತಮ್ಮ ನಿಲುವನ್ನು ಮಾರ್ಪಡಿಸಿಕೊಳ್ಳಬೇಕು, ಹಿಂದಿನದಿನಗಳು ಉತ್ತಮವಾಗಿದ್ದವೋ ಅಥವಾ ಕೆಟ್ಟದಾಗಿದ್ದವೋ ಅವು ಪುನಃ ಬರುವುದಿಲ್ಲ. ಕಾರ್ಮಿಕರು ಸಹ ತಮ್ಮ ಕಷ್ಟದಿಂದ ಗಳಿಸಿದ ಲಾಭದಲ್ಲಿ ಒಂದುಭಾಗವನ್ನು ಅಪೇಕ್ಷಿಸುವುದು ಸಹಜವಾದರೂ, ಅದರಲ್ಲಿ ಹೆಚ್ಚುಭಾಗವನ್ನು ಸುಮ್ಮನೆ ಅಪೇಕ್ಷಿಸುವುದು ನ್ಯಾಯವಲ್ಲ ಮಾಲೀಕರು ಹೆಚ್ಚುಲಾಭವನ್ನು ಗಳಿಸುವಂತೆ ಕಾರ್ಮಿಕರು ಕಷ್ಟಪಟ್ಟು ಕೆಲಸ ಮಾಡಬೇಕು ಹಾಗೆಬಂದಲಾಭದಲ್ಲಿ ತಮ್ಮ ಭಾಗವನ್ನು ಪಡೆಯಲು ತಮಗೆ ತಾವೇ ಸಹಾಯಮಾಡಿಕೊಳ್ಳಬೇಕು ಹಾಗೆಮಾಡಿದರೆ ಅವರ ಬೇಡಿಕೆಯನ್ನು ಯಾರೂ ತಿರಸ್ಕರಿಸುವುದಿಲ್ಲ ಎಂಬುದಾಗಿ ಕೇಂದ್ರ ಕಾರ್ಮಿಕ ಸಚಿವ ಶ್ರೀ ವಿ.ವಿ. ಗಿರಿಯವರು ಈ ದಿನ ಕ್ರಾಫರ್ಡ್ ಭವನದಲ್ಲಿ ಪ್ರಾರಂಭವಾದ ೧೩ನೇ ಅಖಿಲಭಾರತ ಕಾರ್ಮಿಕ ಸಮ್ಮೇಳನದಲ್ಲಿ ಅಧ್ಯಕ್ಷ ಭಾಷಣ ಮಾಡುತ್ತಾ ತಿಳಿಸಿದರು.

ಸಚಿವರು ತಮ್ಮ ಭಾಷಣದ ಪ್ರಾರಂಭದಲ್ಲಿ ದೇಶದ ಕಾರ್ಮಿಕ ಮುಖಂಡರಲ್ಲಿ ಪ್ರಮುಖರಲ್ಲೊಬ್ಬರಾಗಿದ್ದ ದಿವಂಗತ ಶ್ರೀ ಹರಿಹರನಾಥಶಾಸ್ತ್ರಿಯವರ ಸ್ಮರಣೆಯನ್ನು ಮಾಡಿ ದೇಶಕ್ಕೆ ಅವರು ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ಅವರ ದುರ್ಮರಣದಿಂದ ದೇಶಕ್ಕೆ ಉಂಟಾದ ನಷ್ಟವು ಅಗಾಧವಾದುದೆಂದು ತಿಳಿಸಿದರು.

ಅನಂತರ ಮೈಸೂರು ಸಂಸ್ಥಾನದಲ್ಲಿ ಅನೇಕ ವರ್ಷಗಳಿಂದ ಪ್ರಮುಖ ರಾಜಕಾರಣಿಗಳು ಆಡಳಿತದಲ್ಲಿದ್ದು ಕೈಗಾರಿಕಾ ಪ್ರಗತಿಯು ಸರ್ವತೋಮುಖವಾಗಿಬೆಳೆದಿರುವುದನ್ನೂ ದೇಶದ ಪ್ರಮುಖ ಕೈಗಾರಿಕೆಗಳ ಸ್ಥಾಪನೆಗೆ ಸಂಸ್ಥಾನವು ಶ್ರಮಿಸಿರುವುದನ್ನೂ ವಿವರಿಸಿ, ಇಲ್ಲಿಯ ಆಡಳಿತ ಸೂತ್ರವನ್ನು ಕೊಂಡಾಡಿದರು.

ಸಚಿವರು ಈ ಸಮ್ಮೇಳನಕ್ಕೆ ದೇಶದ ನಾನಾ ಭಾಗಗಳಿಂದ ಬಂದಿರುವ ಆಡಳಿತ ಮಾಲೀಕ ಮತ್ತು ಕಾರ್ಮಿಕ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ ಆಗಿಂದಾಗ್ಗೆ ಇಂತಹ ಸಮ್ಮೇಳನಗಳನ್ನು ನಡೆಸಿ ಮಾಡಿರುವ ಕಾರ್ಯಗಳು, ಮುಂದಕ್ಕೆ ಮಾಡಬೇಕಾದ ಕೆಲಸಗಳು ಇವುಗಳನ್ನೆಲ್ಲಾ ಪರಿಶೀಲಿಸುವುದು ಅತ್ಯಗತ್ಯವೆಂದು ತಿಳಿಸಿದರು.

ಅನಂತರ ಸಚಿವರು ಮಾತನಾಡುತ್ತಾ ಈರೀತಿ ಹೇಳಿದರು:—

ಕೈಗಾರಿಕಾ ಉದ್ಯಮದಲ್ಲಿ ಲಾಭದ ಮಟ್ಟವು ಇಳಿಯುತ್ತಿರುವ ಕಾಲವನ್ನು ನಾವು ಪ್ರವೇಶಿಸುತ್ತಲಿದ್ದೇವೆ. ಮಾಲೀಕರು ತಮ್ಮ ಚಟುವಟಿಕೆಗಳನ್ನು ಉನ್ನತಮಟ್ಟದಲ್ಲಿ ಇಡಲು ಸಾಧ್ಯವಾಗದಾಗಿದೆ. ಆದ್ದರಿಂದ ಅವರು ವೆಚ್ಚವನ್ನು ಕಡಿಮೆಮಾಡುವ ಉದ್ದೇಶದಿಂದ ಕೆಲಸಗಾರರ ಸಂಖ್ಯೆ ಖೋತಾ ಮುಂತಾದುವನ್ನು ಮಾಡಲು ಹೊರಟಿರುವರು ಇದರಿಂದ ಕಾರ್ಮಿಕರಿಗೆ ತೊಂದರೆ ಹೆಚ್ಚುತ್ತದೆ. ಅಲ್ಲದೆ ದೇಶವು ಪಂಚವಾರ್ಷಿಕ ಯೋಜನೆ ಕಾರ್ಯದಲ್ಲಿ ನಿರತವಾಗಿದೆ. ಈ ಕಾರ್ಯವು ಇನ್ನೂ ಪೂರ್ಣವಾಗಿಲ್ಲ. ಆದ್ದರಿಂದ ಈಗಿನ ಪರಿಸ್ಥಿತಿಯಲ್ಲಿ ಕಾರ್ಮಿಕರಿಗೂ ಮತ್ತು ಮಾಲೀಕರಿಗೂ ಸಂಬಂಧವನ್ನು ಉಳಿಸಲು ಕಡ್ಡಾಯವಾಗಿ ನ್ಯಾಯವನ್ನು ಕಲ್ಪಿಸುವುದು ಅವಶ್ಯಕವಾಗಿದೆ.

ದೇಶದಲ್ಲಿ ನಿರುದ್ಯೋಗ ಸಮಸ್ಯೆಯು ಭೀಕರವಾಗಿ ತಲೆದೋರಿದೆ. ಇದನ್ನು ಪರಿಹಾರಮಾಡಲು ಸರ್ಕಾರವು ನಾನಾಮಾರ್ಗಗಳನ್ನು ಅನುಸರಿಸಲು ಪ್ರಾರಂಭಿಸಿದೆ. ಇದಕ್ಕೆ ಎಲ್ಲರೂ ಪ್ರಮುಖ ಗಮನವನ್ನು ಕೊಡಬೇಕಾಗಿದೆ. ಕೆಲಸದಿಂದ ತೆಗೆದುಹಾಕಲ್ಪಟ್ಟವರಿಗೆ ಮಾಲೀಕರು ಪರಿಹಾರವನ್ನು ಕೊಡಬೇಕೆಂಬ ಶಾಸನ ತರಲಾಯಿತು. ಸರ್ಕಾರದ ಕಾರ್ಮಿಕ ಸ್ಥಿತಿಯ ಬಗ್ಗೆ ಕೆಲವೆಡೆ ಇಲ್ಲದ ಟೀಕೆಗಳು ಬರುತ್ತಲಿವೆ. ಸರ್ಕಾರವು ಅತ್ಯಂತ ಜಾಗರೂಕತೆಯಿಂದ ತನ್ನ ನೀತಿಯನ್ನು ಅನುಸರಿಸುತ್ತಲಿದೆ. ಆ ನೀತಿಯನ್ನು ಸಕಾರಣವಿಲ್ಲದೆ ಟೀಕಿಸಿದರೆ ಅದರಿಂದ ದುಷ್ಪರಿಣಾಮ ಉಂಟಾಗುತ್ತದೆ.

ಕಾರ್ಮಿಕರಿಗೆ ಸಂಬಂಧಪಟ್ಟ ಪರಿಶೋಧನೆ ಮುಂತಾದುವನ್ನು ನಡೆಸಲು ಬೊಂಬಾಯಿನಲ್ಲಿ ಒಂದು ಕೇಂದ್ರ ಕಾರ್ಮಿಕ ಸಂಸ್ಥೆಯನ್ನು ಸ್ಥಾಪಿಸಲಾಗುತ್ತದೆ. ಅಲ್ಲಿ ಶಿಕ್ಷಣವನ್ನು ಕೊಡುವ ವ್ಯವಸ್ಥೆಯನ್ನೂ ಮಾಡಲಾಗುತ್ತದೆ. ಅಲ್ಲದೆ ದೇಶದಲ್ಲಿರುವ ನಾನಾ ಪ್ರಮುಖ ಕೈಗಾರಿಕಾ ಸಂಸ್ಥೆಗಳ ಬೆಳವಣಿಗೆಗೆ ಸೂಕ್ತ ಕ್ರಮಗಳನ್ನು ಸಹ ಕಂಡುಹಿಡಿಯುವ ವ್ಯವಸ್ಥೆಯನ್ನೂ ಮಾಡಲಾಗುತ್ತದೆ.

ಅಂಚೆದರ ಏರುವುದಿಲ್ಲ

ಕೇಂದ್ರಸರ್ಕಾರದ ಪ್ರಕಟಣೆ

ಅಂಚೆದರ ಏರುವುದೆಂಬ ಕೇಂದ್ರ ಸಂಪರ್ಕ ಶಾಖಾ ಸಚಿವ ಶ್ರೀ ಜಗಜೀವನರಾಂರವರು ಸೂಚಿಸಿದರೆಂದು ಪತ್ರಿಕೆಗಳಲ್ಲಿ ವರದಿಯಾಗಿರುವ ಸುದ್ದಿಯು ನಿರಾಧಾರವಾದುದು ಮುಂದಿನ ಹಣಕಾಸಿನ ಸಾಲಿನಲ್ಲಿ ಅಂಚೆದರವನ್ನು ಏರಿಸಬೇಕೆಂದು ಸರ್ಕಾರವು ಯೋಚಿಸಿಲ್ಲ ಎಂದು ಅಧಿಕೃತ ಪ್ರಕಟಣೆಯನ್ನು ಹೊರಡಿಸಿದೆ.

ಚುಂಚನಕಟ್ಟೆಗೆ ಹೋಗುವವರಿಗೆ ಎಚ್ಚರಿಕೆ

ಮೈಸೂರು ೭

ಇದೇ ೮ನೇ ತಾರೀಖಿನಿಂದ ಸುಮಾರು ೧೦ ದಿನಗಳಕಾಲ ಚುಂಚನಕಟ್ಟೆಯಲ್ಲಿ ನಡೆಯಲಿರುವ ಜಾತ್ರೆಯಕಾಲದಲ್ಲಿ ಕಾಲರಾರೋಗವು ಹರಡುವ ಸಂಭವವಿರುವುದರಿಂದ ಅಲ್ಲಿಗೆ ಹೋಗುವವರೆಲ್ಲರೂ ಪೂರ್ವಭಾವಿ ಕಾಲರಾ ಇನಾಕ್ಯುಲೇಷನ್ ಹಾಕಿಸಿಕೊಂಡು ಸರ್ಟಿಫಿಕೇಟ್ ಪಡೆಯಬೇಕೆಂದು ಎಚ್ಚರಿಸಲಾಗಿದೆ.

ಖಾನ್ ಅಬ್ದುಲ್ ಗಫಾರ್ ಖಾನರ ಬಿಡುಗಡೆಯಾಯಿತು

ಖಾನ್ ಅಬ್ದುಲ್ ಗಫಾರ್ ಖಾನ್‌ರವರನ್ನು ನಿನ್ನೆಯದಿನ ರಾವಲ್ಪಿಂಡಿಯಲ್ಲಿ ಪಾಕೀಸ್ತಾನ ಸರ್ಕಾರವು ಬಿಡುಗಡೆ ಮಾಡಿದೆಂದೂ ಆನರೆ ಅವರು ಅಸ್ವಸ್ಥ ಪ್ರಯುಕ್ತ ಸ್ವಲ್ಪಕಾಲ ಜೈಲಿನಲ್ಲಿಯೇ ಇರಲು ಇಚ್ಛಿಸಿರುವುದಾಗಿ ವರದಿಯಾಗಿದೆ.

ಕಾರ್ಮಿಕರ ಜೀವಾವಿಮಾ ಯೋಜನೆಯನ್ನು ಇತ್ತೀಚೆಗೆ ಜಾರಿಗೆ ತರಲಾಗಿದೆ. ಅದರ ಪ್ರಗತಿಯು ಅಷ್ಟು ಸಮರ್ಪಕವಾಗಿಲ್ಲ. ಈ ಯೋಜನೆಯನ್ನು ಬೆಂಗಳೂರು, ನಾಗಪುರ, ಕೊಯಮುತ್ತೂರು ಮತ್ತು ಮಧ್ಯಭಾರತ ಕೆಲವು ಪಟ್ಟಣಗಳಲ್ಲಿ ಜಾರಿಗೆ ತರಲಾಗುತ್ತಿದೆ. ಈ ಯೋಜನೆಗೆ ಎಲ್ಲರೂ ತಮ್ಮ ಸಹಕಾರವನ್ನು ನೀಡಬೇಕು.

ಕಾರ್ಮಿಕರಿಗೆ ಕೂಲಿ ನಿಗಧಿ ಮಾಡುವುದು, ದೇಶಕ್ಕೆಲ್ಲಾ ಒಂದೇರೀತಿ ಅಂಗಡಿ ಮತ್ತು ಸಿಬ್ಬಂದಿ ಕಾನೂನು ಇರುವಂತೆ ಏರ್ಪಾಡು ಮಾಡಲಾಗುತ್ತದೆ.

ಒಟ್ಟಿನಲ್ಲಿ ಮಾಲೀಕರು ಮತ್ತು ಕಾರ್ಮಿಕರು ಸೇರಿ ದೇಶದ ಪ್ರಗತಿಗಾಗಿ ದುಡಿಯಬೇಕು ಬರೀ ಬೇಡಿಕೆ, ಮುಷ್ಕರ ಮುಂತಾದುವುಗಳಲ್ಲಿ ಕಾಲ ಕಳೆಯಬಾರದು.

ಕಾರ್ಮಿಕರಿಗೆ ಕೇಂದ್ರ ಸಚಿವರ ಹಿತೋಕ್ತಿ

ಮೈಸೂರು ೭

ಕೇಂದ್ರ ಕಾರ್ಮಿಕ ಸಚಿವ ಶ್ರೀ ವಿ. ವಿ. ಗಿರಿಯವರು ನಿನ್ನೆ ಸಂಜೆ ಟೌನ್‌ಹಾಲ್ ಮೈದಾನದಲ್ಲಿ ರಾಜಧಾನಿಯ ೨೦ ಕಾರ್ಮಿಕ ಸಂಘದ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿ, ಕಾರ್ಮಿಕರು ಸಂಘಟಿತರಾಗಿ, ಶಾಂತಿಯಿಂದ ಕಾನೂನನ್ನು ಅನುಸರಿಸಿ ಮಾಲೀಕರೊಡನೆ ವಿಚಾರವಿನಿಮಯ ಮಾಡಿಕೊಳ್ಳುವುದರಿಂದಲೇ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಸಾಧ್ಯವೆಂದು ತಿಳಿಸಿದರು. ವಿನಾ ಘರ್ಷಣೆಯಾದರೆ, ಮಾಲೀಕರಿಗೂ, ಕಾರ್ಮಿಕರಿಗೂ ಮತ್ತು ದೇಶಕ್ಕೂ ಹಾನಿ ಉಂಟಾಗುವುದು-ಎಂದು ಒತ್ತಿ ಹೇಳಿದರು.

ಪ್ರಾರಂಭದಲ್ಲಿ ಕಾರ್ಮಿಕ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಸ್ವಾಗತ ಬಯಸಿದರು. ವಿವಿಧ ಕಾರ್ಮಿಕ ಸಂಘದವರು ಕೇಂದ್ರಸಚಿವರಿಗೆ ಹಾರಗಳನ್ನು ಅರ್ಪಿಸಿದರು.

ಭಾರಿಮಳೆ ಬಿದ್ದುದರಿಂದ ಸಭೆಯನ್ನು ಬರಖಾಸ್ತು ಮಾಡಲಾಯಿತು.

ಶ್ರೀಮನ್ಮಹಾರಾಜರ ಸಂದೇಶ

ಮೈಸೂರು ೭

ಇಂದು ನಗರದಲ್ಲಿ ಪ್ರಾರಂಭವಾದ ೧೩ನೇ ಭಾರತ ಕಾರ್ಮಿಕ ಸಮ್ಮೇಳನ ಪ್ರತಿನಿಧಿಗಳನ್ನು ಸ್ವಾಗತಿಸಿ, ಸಮ್ಮೇಳನವು ಯಶಸ್ವಿಯಾಗಲೆಂದು ಹಾರೈಸಿ, ಶ್ರೀಮನ್ಮಹಾರಾಜರು ಒಂದು ಸಂದೇಶವನ್ನು ಕಳುಹಿಸಿದ್ದಾರೆ.

ವಿಧಾನ ಪರಿಷತ್ತಿನ ರದ್ದಿಗೆ ನಿರ್ಣಯ

ಬೆಂಗಳೂರು ೭

ಇದೇ ೧೧ ನೇ ತಾರೀಖು ಪ್ರಾರಂಭವಾಗಲಿರುವ ವಿಧಾನ ಸಭೆಯ ಅಧಿವೇಶನದಲ್ಲಿ ವಿಧಾನಪರಿಷತ್ತು ರದ್ದಾಗಬೇಕೆಂದು ಖಾಸಗಿ ನಿರ್ಣಯವೊಂದರ ಚರ್ಚೆಗೆ ಪ್ರಥಮಸ್ಥಾನ ದೊರೆತಿದೆ.

● ತಿರುವಾಂಕೂರ್-ಕೊಚ್ಚಿಯಲ್ಲಿ ನಡೆಯಲಿರುವ ಚುನಾವಣೆಗಳಲ್ಲಿ ಕಾಂಗ್ರೆಸ್‌ಪಕ್ಷವು ಶಾಸನಸಭೆಯ ಎಲ್ಲಾ ಸ್ಥಾನಗಳಿಗೂ ಸ್ಪರ್ಧಿಸಲಿದೆ. ಆದರೆ ಅಧ್ಯಕ್ಷ ಸ್ಥಾನಕ್ಕೆ ಮಾತ್ರ ತಾನು ಸ್ಪರ್ಧಿಸುವುದಿಲ್ಲ-ಎಂದು ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿ ಬಲವಂತರಾವ್ ಮೆಹ್ತಾ ಹೇಳಿದ್ದಾರೆ.

ಚಿತ್ತರಂಜನ ರೈಲ್ವೆ ಕಾರ್ಖಾನೆ ಪ್ರಗತಿ

೪ ವರ್ಷಗಳಲ್ಲಿ ೧೦೦ ಇಂಜನ್ ತಯಾರಿಕೆ

ಚಿತ್ತರಂಜನ ರೈಲ್ವೆ ಕಾರ್ಖಾನೆಯು ತಯಾರಿಸಿದ ೧೦೦ನೇ ರೈಲ್ವೆ ಇಂಜನ್ನಿನ ಚಲನ ಪ್ರಾರಂಭೋತ್ಸವವನ್ನು ನಿನ್ನೆದಿನ ಕೇಂದ್ರ ರೈಲ್ವೆ ಸಚಿವ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ನೆರವೇರಿಸಿದರು.

ಈ ಸಂದರ್ಭದಲ್ಲಿ ಸಚಿವರು ಮಾತನಾಡುತ್ತಾ ಚಿತ್ತರಂಜನ ರೈಲ್ವೆ ಕಾರ್ಖಾನೆಯು ಸ್ಥಾಪಿತವಾದ ಕೇವಲ ೪ ವರ್ಷಗಳಲ್ಲಿ ೧೦೦ ಇಂಜನ್ನುಗಳನ್ನು ತಯಾರಿಸಿದೆ. ಇಂಜನ್ನಿಗೆ ಬೇಕಾಗುವ ಬಿಡಿ ಭಾಗಗಳಲ್ಲಿ ಶೇಕಡ ೮೦ ಭಾಗಗಳನ್ನು ಇಲ್ಲಿಯೇ ತಯಾರಿಸಲಾಗಿದೆ. ಇಷ್ಟೊಂದು ಬಿಡಿ ಭಾಗಗಳನ್ನೂ ವಿಶ್ವದಲ್ಲಿ ಯಾವ ರೈಲ್ವೆ ಕಾರ್ಖಾನೆಯೂ ತಯಾರಿಸುತ್ತಿಲ್ಲ. ಇದೇ ಪ್ರಥಮವಾಗಿದೆ. ಈ ೧೦೦ನೇ ಇಂಜನ್ನಿನ ೯೦ ಭಾಗಗಳನ್ನು ಈಗ ಚಿತ್ತರಂಜನ ಕಾರ್ಖಾನೆಯೇ ತಯಾರಿಸಿದೆ ಎಂದು ಅವರು ತಿಳಿಸಿದರು.

೧೯೫೩ನೇ ವರ್ಷದಲ್ಲಿ ಈ ಕಾರ್ಖಾನೆಯು ೫೪ ರೈಲ್ವೆ ಇಂಜನ್ನುಗಳನ್ನು ತಯಾರಿಸಿರುವುದಾಗಿಯೂ ಸಚಿವರು ಹೇಳಿದ್ದಾರೆ.

ಭಾರತ-ಇಟಲಿ ವಾಣಿಜ್ಯ ಒಪ್ಪಂದ

ಭಾರತವು ಇಟಲಿ ಮತ್ತು ನಾರ್ವೆಗಳ ನಡುವೆ ವಾಣಿಜ್ಯ ಒಪ್ಪಂದವನ್ನು ಮುಂದುವರಿಸುವ ವಿಷಯದಲ್ಲಿ ಸಂಧಾನಗಳು ನಡೆಯುತ್ತಿವೆ.

○ ಅಖಿಲ ಕರ್ನಾಟಕ ರಾಜ್ಯಪರಿಷತ್ತಿನ ಚಳವಳಿಯಲ್ಲಿ ದಸ್ತಗಿರಿಯಾಗಿದ್ದವರನ್ನು ಬಿಡುಗಡೆಮಾಡಲು ಆಜ್ಞೆಯಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೭—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—೮	೨೪—
ಎಳ್ಳು	೬೩—೮	—
ಹರಳು	೪೦—೮	೪೧—೧೦
ಹೊಂಗೆಬೀಜ	—	—
ಹುಚ್ಚೆಳ್ಳು	೩೬—	೪೪—೧೪
ಬೆಲ್ಲ	—	—
ಹುರಳಿ	೨೮—೨	೩೧—೮
ಉದ್ದು	—	—
ಹೆಸರು	೩೩—	೪೨—೧೦
ಅಲಸಂದೆ	೩೬—	೪೫—೮
ಅವರೆ	೪೪—೨	—
ಹುಣಸೆಹಣ್ಣು	೧೨—೮	—
ಮೆಣಸಿನಕಾಯಿ	೧೫—೧೦	೩೫—೨
ಸೀಗೆಕಾಯಿ	೫—೩	೫—೮
ತೆಂಗಿನಕಾಯಿ	—	—

ಕಾರ್ಮಿಕ ಸಮ್ಮೇಳನದ ಪ್ರತಿನಿಧಿಗಳು

ಮೈಸೂರು ೭

ರಾಜಧಾನಿಯಲ್ಲಿ ಇಂದಿನಿಂದ ನಡೆಯಲಿರುವ ಅಖಿಲ ಭಾರತ ಕಾರ್ಮಿಕ ಸಮ್ಮೇಳನದಲ್ಲಿ ಕೇಂದ್ರ ಮತ್ತು ಸಂಸ್ಥಾನ ಸರಕಾರ, ಕಾರ್ಮಿಕರ ಮತ್ತು ಮಾಲೀಕ ಪ್ರತಿನಿಧಿಗಳು ಒಟ್ಟು ೪೦ ಮಂದಿ ಭಾಗವಹಿಸುವರು. ಕೇಂದ್ರ ಕಾರ್ಮಿಕ ಸಚಿವ ಶ್ರೀ ವಿ. ವಿ. ಗಿರಿಯವರು ಅಧ್ಯಕ್ಷತೆ ವಹಿಸುವರು ಕೇಂದ್ರ ಕಾರ್ಮಿಕ ಉಪಸಚಿವ ಶ್ರೀ ಆಬೀದಾಲಿಯವರೂ ಭಾಗವಹಿಸುವರು.

ಕಾರ್ಮಿಕ ಸಚಿವರುಗಳಾದ ಅಸ್ಸಾಮಿನ ಶ್ರೀ ಪೂರ್ಣಾನಂದ ಚೆಟ್ಟಿಯಾ, ಮಧ್ಯಪ್ರದೇಶದ ದೀನ್‌ದಯಾಳ್‌ಗುಪ್ತ, ಒರಿಸ್ಸಾದ ಶ್ರೀ ಸುಂದರರಾಮ್ ಸರಾನ್, ಪಂಜಾಬಿನ ಶ್ರೀ ಸುಂದರಸಿಂಗ್, ಬಂಗಾಳದ ಶ್ರೀ ಕೆ.ಸಿ. ಮುಖರ್ಜಿ ಮಧ್ಯಭಾರತದ ಶ್ರೀ ವಿ. ವಿ. ಡೇವಿಡ್, ರಾಜಾಸ್ತಾನದ ಶ್ರೀ ರಾಮಕರ್ಣ ಜೋಷಿ, ಸೌರಾಷ್ಟ್ರದ ಶ್ರೀ ಜೆ. ಸಿ. ಓಜಾ, ಅಜ್ಮೀರದ ಶ್ರೀ ಬ್ರಿಜ ಮೋಹನ್‌ಲಾಲ್ ಶರ್ಮ, ಭೂಪಾಲಿನ ಶ್ರೀ ಕಾಂತಪ್ರಸಾದ್ ಮತ್ತು ಮೈಸೂರಿನ ಶ್ರೀ ಎ. ಜಿ. ರಾಮಚಂದ್ರರಾಯರುಗಳವರು ಪ್ರತಿನಿಧಿಗಳಾಗಿ ಭಾಗವಹಿಸುವರು.

ಕಾರ್ಮಿಕ ಪ್ರತಿನಿಧಿಗಳು:—

ಶ್ರೀಗಳಾದ ಪಿ. ರಾಮಮೂರ್ತಿ, ಜಿ.ಡಿ. ಅಬೇಕರ್, ಕೆ. ಪಿ. ತ್ರಿಪಾಠಿ, ಎನ್. ಕೆ. ಸೇನ್.

ಮಾಲೀಕ ಪ್ರತಿನಿಧಿಗಳು: |

ಶ್ರೀಗಳಾದ ಎನ್. ತಾತಾ, ಹಂಟರ್, ಎಂ. ಎಲ್. ಬಾಗಲಾ, ಕೆ. ಡಿ. ಜಲನ್, ಜಿ. ಪಿ. ಹವೇಸಿಂಗ್, ನಂದಾಸ್ ಹರಿದಾಸ್ ಮತ್ತು ಮೈಸೂರಿನ ಮುನಿನಂಜಪ್ಪ.

ಸಮ್ಮೇಳನ ಕಾರ್ಯಕಲಾಪಗಳು ಲಲಿತ ಮಹಲ್ ಅರಮನೆಯಲ್ಲಿ ನಡೆಯುವುವು.

● ಕಳೆದಡಿಸಂಬರ್ ೧೫ ರಿಂದ ಮಾಸಾಂತ್ಯದವರೆಗೆ ತಯಾರಾದ ಸಕ್ಕರೆಯನ್ನು ನಿರಾತಂಕ ಮಾರಾಟಕ್ಕೆ ಬಿಡಲಾಗಿದೆ.

ಪ್ರಭಾ● ಇಂದಿನಿಂದ ಜಯಪ್ರದ 2 ನೇ ವಾರ
ಪ್ರತಿದಿನ 3 ಪ್ರದರ್ಶನಗಳು
ಆರ್. ಕೆ. ಫಿಲ್ಮ್ಸ್‌ರವರ ಶಂಪಾದ ಸಂಗೀತದಿಂದ ಕೂಡಿದ ಹಾಸ್ಯಪೂರಿತ ಸಾಮಾಜಿಕ ತಮಿಳು ಚಿತ್ರ—
★ ಆವನ್ ★
ಪಾತ್ರ:-ರಾಜ್‌ಕಪೂರ್, ನರ್ಗಿಸ್, ವಿಜಯಲಕ್ಷ್ಮಿ ಮತ್ತು ಪ್ರಾಣ್

ದೇಶದ ಆರ್ಥಿಕ ಭದ್ರತೆಗೆ ಕಾರ್ಮಿಕರ ಸಹಕಾರ ಅಗತ್ಯ

ಅಖಿಲಭಾರತ ಕಾರ್ಮಿಕ ಸಮ್ಮೇಳನದಲ್ಲಿ

ಮುಖ್ಯಮಂತ್ರಿಯವರ ಹೇಳಿಕೆ

ಮೈಸೂರು ೭

ದೇಶದ ಆರ್ಥಿಕ ಭದ್ರತೆಗೆ ಕಾರ್ಮಿಕರ ಸಹಾಯ ಸಹಕಾರಗಳು ತುಂಬ ಅತ್ಯಗತ್ಯವೆಂಬುದನ್ನು ಬೇರೇ ಒತ್ತಿಹೇಳಬೇಕಾಗಿಲ್ಲ ಬಂಡವಾಳದ ಮತ್ತು ದಕ್ಷ ಆಡಳಿತದ ವ್ಯವಸ್ಥೆಯಿಲ್ಲದೆ ಹೋದರೆ ಕಚ್ಚಾಮಾಲಿನಂತೆ ಕಾರ್ಮಿಕರು ಸೋಮಾರಿಗಳಾಗಿ ಕೊಳೆಯಬೇಕಾಗುತ್ತದೆ. ಅದರಿಂದ ನಾಡಿಗಾಗುವ ನಷ್ಟ ಅಷ್ಟಿಷ್ಟಲ್ಲ. ಸಿದ್ಧಗೊಳಿಸಿದ ವಸ್ತುಗಳನ್ನು ಬಳಸುವವರಿಲ್ಲದಿದ್ದರೆ ಕಾರ್ಮಿಕರು, ಬಂಡವಾಳಗಾರರು ಮತ್ತು ಆಡಳಿತ ವರ್ಗದವರೆಲ್ಲ ನಷ್ಟಕ್ಕೆ ಗುರಿಯಾಗುತ್ತಾರೆ ಕೈಗಾರಿಕಾ ಕ್ಷೇತ್ರದಲ್ಲಿ ಕಾರ್ಮಿಕರು, ಬಂಡವಾಳಗಾರರು, ಆಡಳಿತಗಾರರು ಮತ್ತು ಬಳಸಗಾರರು-ಈ ಚದುರಂಗಗಳಿಗೆ ಸಮಾನವಾದ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ. ಇವುಗಳಲ್ಲಿ ಯಾವುದನ್ನು ಅಲ್ಪವೆಂದು ಪರಿಗಣಿಸಿದರೂ ಆರ್ಥಿಕ ಭದ್ರತೆ ಕುಸಿದು ನಾಡಿನ ಪ್ರಗತಿ ಕುಂಚಿತವಾಗುತ್ತದೆ ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ೧೩ ನೇ ಭಾರತೀಯ ಕಾರ್ಮಿಕ ಸಮ್ಮೇಳನದ ಪ್ರಾರಂಭ ಭಾಷಣದಲ್ಲಿ ಈದಿನ ತಿಳಿಸಿದರು.

ದೇಶದಲ್ಲಿ ಬಂಡವಾಳಗಾರರು ಮತ್ತು ಕಾರ್ಮಿಕರಲ್ಲಿ ಅತೃಪ್ತಿ ಹೆಚ್ಚಾಗಿ ಮೂಡುತ್ತಿದೆ. ಈ ಉಭಯತ್ರರ ನಡುವೆ ಹೋರಾಟವನ್ನು ತಡೆಗಟ್ಟುವುದು ಪ್ರತಿಯೊಬ್ಬ ದೇಶಾಭಿಮಾನಿಯ ಕರ್ತವ್ಯ. ಕಾರ್ಮಿಕರು ಬಂಡವಾಳಗಾರರು ಎಲ್ಲರೂ ಈ ಪವಿತ್ರೋದ್ಯಮದಲ್ಲಿ ಸಮಭಾಗಿಗಳೆಂಬ ಭಾವನೆ ಕುದುರಬೇಕು ಆಗ ಸಮರಸ ಭಾವನೆಯು ಹುಟ್ಟಿ ದೇಶವು ಪ್ರಗತಿಯಾಗುತ್ತದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳ ಆಧಾರದಮೇಲೆ ಭಾರತ ಸಂವಿಧಾನ ರೂಪಗೊಂಡಿದೆ. ವ್ಯಕ್ತಿಯ ಘನತೆ ಗೌರವಗಳನ್ನೂ, ಪ್ರಜಾಸಮುದಾಯಕ್ಕೆ ಸಮಾನಾವಕಾಶವನ್ನೂ ರಾಷ್ಟ್ರದ ಐಕ್ಯತೆಯನ್ನೂ ಅದು ಎತ್ತಿಹಿಡಿಯುತ್ತದೆ.

ಸಹಕಾರ ತತ್ವದ ಆಧಾರದ ಮೇಲೆ ಪ್ರಜಾಕ್ಷೇಮವನ್ನು ಸಾಧಿಸುವುದೆ ನಮ್ಮ ಆದರ್ಶವಾಗಿರಬೇಕು. ಸ್ಪರ್ಧೆ ಸಹಕಾರಕ್ಕೆ ದಾರಿಮಾಡಬೇಕು; ಸಮಷ್ಟಿ ಹಿತದಲ್ಲಿ ವ್ಯಷ್ಟಿಹಿತ ವಿಲೀನಗೊಳ್ಳಬೇಕು. ಭಾರತ ಸಂವಿಧಾನದ ಈ ಮೂಲತತ್ವಗಳಲ್ಲಿ ಹೊಸ ಸಾಮಾಜಿಕ ವ್ಯವಸ್ಥೆಯ ಅವಶ್ಯಕತೆ ಅಡಕವಾಗಿದೆ. ಈ ವ್ಯವಸ್ಥೆಯ ಪ್ರಕಾರ ತಾನು ಬರಿಯ ಶ್ರಮಜೀವಿಯಲ್ಲ ಅಥವ ಕೂಲಿಗಾರನಲ್ಲ, ತಾನೂ ಈ ಸಾಹಸೋದ್ಯಮದಲ್ಲಿ ಯಜಮಾನ ಮತ್ತು ಸಮಭಾಗಿ ಎಂಬ ಭಾವನೆ ಪ್ರತಿಯೊಬ್ಬನಲ್ಲಿಯೂ ಮೂಡಬೇಕು. ಕಾರ್ಮಿಕರೂ ಲಾಭದಲ್ಲಿ ಪಾಲುಗಾರರಾಗಬೇಕೆಂಬ ವಿಷಯವನ್ನು ಹಿಂದೆ ತೀವ್ರವಾಗಿ ಪರ್ಯಾಲೋಚಿಸಲಾಗಿತ್ತು. ಲಾಭದ ಹಂಚಿಕೆಯಿಂದ ಕೈಗಾರಿಕೆ ತನ್ನದೆಂಬ ಹೊಣೆಗಾರಿಕೆಯ ಮತ್ತು ಅಭಿಮಾನದ ಮನೋಭಾವ ಬೆಳೆಯಲು ಅವಕಾಶವಾಗುತ್ತದೆ-ಎಂದು ಹೇಳಿದರು.

ಸಂಸ್ಥಾನದ ಕಾರ್ಮಿಕ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಸ್ವಾಗತವನ್ನು ಬಯಸಿ, ಅಖಿಲಭಾರತ ಕಾರ್ಮಿಕ ಸಮ್ಮೇಳನದ ಉದ್ದೇಶವು ಕಾರ್ಮಿಕ ಸಮಸ್ಯೆಗಳ ಮತ್ತು ಸಾಮಾಜಿಕ ಕಾರ್ಯನೀತಿ ವಿಮರ್ಶೆ ಮತ್ತು ಕೈಗಾರಿಕೆಗಳ ಪ್ರಗತಿ ಸಾಧನೆಗೆ ಕುಂದಕ ಬಾರದಂತೆ ಕಾರ್ಮಿಕ, ಬಂಡವಾಳಗಾರ ಮುಂತಾದವರಲ್ಲಿ ಅಂತರವನ್ನು ಹೋಗಲಾಡಿಸಿ ದೇಶದ ಆರ್ಥಿಕ ಸ್ಥಿತಿ ಹೆಚ್ಚಿಸುವುದಾಗಿದೆ. ಇದಕ್ಕೆ ಸಂಬಂಧಪಟ್ಟವರೆಲ್ಲರೂ ಶ್ರಮಿಸಬೇಕೆಂದು ಹೇಳಿದರು

ಒರಿಸ್ಸಾ ಮುಖ್ಯಮಂತ್ರಿಯ ರಾಜೀನಾಮೆ

ಒರಿಸ್ಸಾ ಮುಖ್ಯಮಂತ್ರಿ ಶ್ರೀ ನಾಭಾಕೃಷ್ಣಚೌಧರಿಯವರು ಭೂದಾನಯಜ್ಞ ಚಳುವಳಿಯಲ್ಲಿ ತಮ್ಮ ಕಾಲವನ್ನು ಕಳೆಯಲು ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೊಡಲು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಪಾಕ್-ರಷ್ಯಾ ವಾಣಿಜ್ಯ ಒಪ್ಪಂದ

ಪಾಕೀಸ್ತಾನ ಮತ್ತು ರಷ್ಯಾಗಳ ನಡುವೆ ವಾಣಿಜ್ಯ ಒಪ್ಪಂದ ವಿಷಯದಲ್ಲಿ ವ್ಯವಹಾರ ನಡೆಸುತ್ತಿರುವುದಾಗಿ ತಿಳಿಯಬರುತ್ತದೆ.

ಗೋಧಿ ರೇಷನ್ ರದ್ದು

ಇದೇ ೧೮ ನೇ ತಾರೀಖಿನಿಂದ ಬೊಂಬಾಯಿನಲ್ಲಿ ಗೋಧಿ ರೇಷನಿಂಗ್ ರದ್ದಾಗುವುದಾಗಿ ಪ್ರಕಟಿಸಲಾಗಿದೆ.

ರಾಜಕಮಲ್
8—12—53 ರಿಂದ 2 ನೇ ವಾರ
ಸೌಭಾಗ್ಯಲಕ್ಷ್ಮಿ
ಪಾತ್ರ:— ಹರಣಿ, ಇಂದುಶೇಖರ್,

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೧೨

೮-೧-೧೯೫೪ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ದೇಶದ ರಕ್ಷಣೆ, ಪ್ರಗತಿಗಾಗಿ ದಕ್ಷರಾದ ಜನಾಂಗ ತಯಾರಾಗಬೇಕು

ವಿಶ್ವವಿದ್ಯಾನಿಲಯಗಳ ಪಾತ್ರದ ಬಗ್ಗೆ

ಡಾ॥ ಮುಖರ್ಜಿಯವರ ಸಲಹೆ

ಮೈಸೂರು ೮

ವಿಶ್ವವಿದ್ಯಾನಿಲಯದ ೩೪ನೇ ಘಟಿಕೋತ್ಸವವು ಈದಿನ ಬೆಳಿಗ್ಗೆ ಕ್ರಾಫರ್ಡ್ ಭವನದಲ್ಲಿ ಸ್ಥಾನಪತಿ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯಿತು. ಕೇಂದ್ರ ಸರ್ಕಾರದ ಕಾರ್ಮಿಕ ಸಚಿವ ಶ್ರೀ ವಿ. ವಿ. ಗಿರಿ, ಕಾರ್ಮಿಕ ಉಪಸಚಿವ ಶ್ರೀ ಅಬೀದಾಲಿ, ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯ, ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾವ್ ಮುಂತಾದ ಅನೇಕ ಮಹನೀಯರು ದಯಮಾಡಿದ್ದರು.

ಲಕ್ನೋ ವಿಶ್ವವಿದ್ಯಾನಿಲಯದ ಇತಿಹಾಸ ಪ್ರಾಧ್ಯಾಪಕರಾದ ಡಾ॥ ರಾಧಾಕುಮುದ್ ಮುಖರ್ಜಿಯವರು ಭಾಷಣ ಮಾಡಿ, ಮೈಸೂರು ವಿಶ್ವವಿದ್ಯಾನಿಲಯದ ಪ್ರಗತಿ ಬಗ್ಗೆ ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿದರು.

೧೯೧೭ರಿಂದ ೨೧ರವರೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ತಾವು ಇತಿಹಾಸ ಶಾಖೆಯ ಪ್ರಥಮ ಪ್ರಾಧ್ಯಾಪಕರಾಗಿದ್ದುದನ್ನು ಸ್ಮರಿಸಿಕೊಂಡು, ಕಳೆದ ೩೦ ವರ್ಷಗಳಲ್ಲಿ ಈ ವಿಶ್ವವಿದ್ಯಾನಿಲಯವು ಹೆಚ್ಚು ಪ್ರಗತಿ ಸಾಧಿಸಿದೆಯೆಂದು ತಿಳಿಸಿದರು. ೧೯೨೧ ರಲ್ಲಿ ಕೇವಲ ೧೦೫೦ ಜನ ವಿದ್ಯಾರ್ಥಿಗಳಿದ್ದು, ಈಗ ಡಿಗ್ರಿ ಕ್ಲಾಸುಗಳಲ್ಲಿ ೪೧೩೧ ಮಂದಿ ವಿದ್ಯಾರ್ಥಿಗಳೂ, ಇತರ ಕಾಲೇಜುಗಳಲ್ಲಿ ೪೩೩೪ ಮಂದಿ ಇಂಟರ್‌ನಲ್ಲಿ ೧೦೨೯ ಮಂದಿ, ಒಟ್ಟು ೧೯,೧೮೪ ಮಂದಿ ವಿದ್ಯಾರ್ಥಿಗಳು ಇದ್ದಾರೆ ಇದು ಗಮನಾರ್ಹವಾದುದೆಂದರು.

ಈಗಿನ ಅಶಾಂತಿ ವಾತಾವರಣದಲ್ಲಿ ಮತ್ತು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆ ಆಗುತ್ತಿರುವಾಗ ವಿಶ್ವವಿದ್ಯಾನಿಲಯಗಳ ಪಾತ್ರ ಮಹತ್ತರವಾಗಿದ್ದು, ಮುಂದಿನ ಜನಾಂಗದ ಭವಿಷ್ಯವನ್ನು ಅದು ರೂಪಿಸಬೇಕಾಗಿದೆ.

ದೇಶದ ರಕ್ಷಣೆ ಮತ್ತು ಪ್ರಗತಿಗಾಗಿ ದಕ್ಷರಾದ ಜನಾಂಗವನ್ನು ವಿಶ್ವವಿದ್ಯಾನಿಲಯವು ತಯಾರು ಮಾಡಬೇಕಾಗಿದೆ.

ವಿಶ್ವದಲ್ಲಿ ಶಾಂತಿ ಮತ್ತು ಒಂದು ವಿಶ್ವ ಸ್ಥಾಪಿಸಲು ಜನರಲ್ಲಿ ಅಂತರರಾಷ್ಟ್ರೀಯ ದೃಷ್ಟಿ ಮತ್ತು ಐಕ್ಯತೆ ಉಂಟುಮಾಡಲು ವಿಶ್ವವಿದ್ಯಾನಿಲಯಗಳು ಶ್ರಮಿಸಬೇಕು.

ಭಾರತದ ಸಂಸ್ಕೃತಿ ಅಂಗವಾಗಿ ಮೈಸೂರು ವಿಶ್ವವಿದ್ಯಾನಿಲಯವು ಕರ್ನಾಟಕ ಸಾಂಸ್ಕೃತಿಗೆ ಕೇಂದ್ರವಾಗಿರಬೇಕು.

ವಿಶ್ವವಿದ್ಯಾನಿಲಯಗಳಿಗೆ ಈಗ ಒಂದು ದೊಡ್ಡ ಅಪಾಯ ಸಂಭವಿಸುತ್ತಿದೆ. ಎಲ್ಲಿ ನೋಡಿದರೂ ವಿಜ್ಞಾನಕ್ಕೆ ಹೆಚ್ಚು ಪ್ರಾಮುಖ್ಯತೆ ಕೊಟ್ಟು, ಮಾನವೀಯತೆ ಶಾಖೆಗಳನ್ನು ಕಡೆಗಣ್ಣಿನಿಂದ ನೋಡುತ್ತಿರುವುದು ಶೋಚನೀಯ ಇದರಿಂದ ವಿಶ್ವವಿದ್ಯಾನಿಲಯಗಳಲ್ಲಿ ಜ್ಞಾನ ಮತ್ತು ಶೀಲ ಬೆಳವಣಿಗೆಗೆ ಧಕ್ಕೆ ಉಂಟಾಗುವುದು.

ಭಾರತದಲ್ಲಿ ವಿದ್ಯಾರ್ಜನೆಗೆ ಬಡತನವು ಅಡ್ಡವಾಗಿದೆ. ಭಾರತದ ಹೆಚ್ಚು ಜನರು ಹಳ್ಳಿಗಳಲ್ಲಿ ವಾಸಮಾಡುತ್ತಿರುವುದರಿಂದ ವಿಶ್ವವಿದ್ಯಾನಿಲಯಗಳಿಗೂ ಹಳ್ಳಿಯ ಜನರಿಗೂ ಹೆಚ್ಚು ಸಂಪರ್ಕ ವಿರಬೇಕಾದ್ದು ಅಗತ್ಯ. ಆದ್ದರಿಂದ ಗ್ರಾಮಾಂತರ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗಬೇಕು-ಎಂದು ಅವರು ತಿಳಿಸಿದರು.

ಒಟ್ಟು ೧೩೮೭ ಪದವೀಧರರಿಗೆ ಡಿಗ್ರಿಗಳನ್ನು ಕೊಡಲಾಯಿತು. ಅದರ ಪೈಕಿ ೨೪೨ ಮಂದಿ ಮಹಿಳೆಯರಿದ್ದಾರೆ.

ಮೆಡಿಕಲ್ ಕಾಲೇಜಿನ ಶ್ರೀಮತಿ ಎಸ್. ಚಂದ್ರಮ್ಮನವರಿಗೆ ೩ ಚಿನ್ನದ ಪದಕ ಮತ್ತು ೨ ಬಹುಮಾನಗಳು ದೊರೆತವು.

ಮಹಾರಾಜಾ ಕಾಲೇಜಿನ ಎಂ. ಎ. ಪರೀಕ್ಷೆಯಲ್ಲಿ ಶ್ರೀಮತಿ ಕರುಣಾರತ್ನರವರಿಗೆ ೩ ಚಿನ್ನದ ಪದಕ ಮತ್ತು ಒಂದು ಬಹುಮಾನ ಕೊಡಲಾಯಿತು.

ಜಿಲ್ಲಾ ಬೋರ್ಡ್ ಸಭೆ

ಮೈಸೂರು ೮

ಇದೇ ೧೧ ನೇ ತಾರೀಖು ನಡೆಯಬೇಕಾಗಿದ್ದ ಜಿಲ್ಲಾ ಬೋರ್ಡಿನ ಸಭೆಯನ್ನು ೧೨ ನೇ ತಾರೀಖಿಗೆ ಮುಂದುವರಿಸಲಾಗಿದೆ.

ಅನಿರ್ಬಂಧ ಮಾರಾಟಕ್ಕೆ ಗೋಧಿ

ಮೈಸೂರು ೮

ರಹದಾರಿ ಪಡೆದಿರುವ ವರ್ತಕರಿಗೆ ಗೋಧಿಯನ್ನು ಆಹಾರ ಇಲಾಖೆಯವರಿಂದ ಪಲ್ಲಾ ಒಂದಕ್ಕೆ ೪೮-೫-೧೦ ರೂಗಳಂತೆ ಮಾರಲಾಗುತ್ತದೆಯೆಂದು ನಗರದ ರೇಷನಿಂಗ್ ಅಧಿಕಾರಿಗಳು ಪ್ರಕಟಿಸಿದ್ದಾರೆ

ಕಾಂಗ್ರೆಸ್ ಸಮಿತಿ ಸಭೆ

ಮೈಸೂರು ೮

ನಾಳೆ ಸಂಜೆ ೬-೩೦ಕ್ಕೆ ಮೈಸೂರು ದಕ್ಷಿಣಭಾಗ ಕಾಂಗ್ರೆಸ್ ಸಮಿತಿ ಸಭೆಯು ನಗರ ಕಾಂಗ್ರೆಸ್ ಕಾರ್ಯಾಲಯದಲ್ಲಿ ನಡೆಯುವುದು ಸಮಿತಿಯ ಸದಸ್ಯರೆಲ್ಲರೂ ದಯಮಾಡಿಸಬೇಕಾಗಿ ಕಾರ್ಯದರ್ಶಿಯವರು ಕೋರುತ್ತಾರೆ.

ಸತ್ಕಾರಕೂಟ

ಮೈಸೂರು ೮

ಅಖಿಲಭಾರತ ಕಾರ್ಮಿಕ ಸಮ್ಮೇಳನದ ಪ್ರತಿನಿಧಿಗಳ ಗೌರವಾರ್ಥವಾಗಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಸಂಜೆ ಪ್ರಭುತ್ವಭವನದಲ್ಲಿ ಒಂದು ಸತ್ಕಾರಕೂಟವನ್ನು ಏರ್ಪಡಿಸಿದ್ದರು.

ಪೆಪ್ಸುವಿನಲ್ಲಿ ಚುನಾವಣಾ ಸ್ಪರ್ಧಿಗಳು

ಪೆಪ್ಸುವಿನಲ್ಲಿ ಸದ್ಯದಲ್ಲಿಯೇ ನಡೆಯಲಿರುವ ಮಹಾಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷಪರವಾಗಿ ಅಲ್ಲಿಯ ಅನೇಕ ಮಾಜಿ ಅರಸರು, ರಾಜಕುಮಾರರು ಮತ್ತು ಜಮೀನ್ದಾರರು ಉಮೇದುವಾರರಾಗುತ್ತಿರುವರು.

ಪಾನನಿರೋಧ ರದ್ದಿನ ಖೋತಾ ನಿರ್ಣಯಕ್ಕೆ ಸೋಲು

ಪಾನನಿರೋಧವನ್ನು ರದ್ದುಗೊಳಿಸಬೇಕೆಂದು ಆಂಧ್ರ ಶಾಸನಸಭೆಯಲ್ಲಿ ವಿರೋಧ ಪಕ್ಷದವರು ತಂದ ಖೋತಾ ನಿರ್ಣಯವು ಬಿದ್ದುಹೋಯಿತು.

ಆಫ್ಘನ್ ಸಾಂಸ್ಕೃತಿಕ ನಿಯೋಗ

ಅಫ್ಘಾನಿಸ್ಥಾನದಿಂದ ಭಾರತಕ್ಕೆ ಆಗಮಿಸಿರುವ ಸಾಂಸ್ಕೃತಿಕ ನಿಯೋಗವು ಇದೇ ೨೩ ನೇ ತಾರೀಖು ಬೆಂಗಳೂರಿಗೆ ಆಗಮಿಸಿ ೩ ದಿನ ಇರುವುದಾಗಿ ತಿಳಿಯಬರುತ್ತದೆ.

ಪಾಕೀಸ್ಥಾನಕ್ಕೆ ಮಿಲಿಟರಿ ನೆರವು

ಪಾಕೀಸ್ತಾನಕ್ಕೆ ಅಮೆರಿಕಾವು ೨೦ ಕೋಟಿ ಡಾಲರುಗಳಷ್ಟು ಮಿಲಿಟರಿ ಸಹಾಯವನ್ನು ನೀಡುವುದಾಗಿ ಹೇಳಲಾಗಿದೆ.

ವಿಧಾನಸಭೆಯಲ್ಲಿ ಮಂಡಿತವಾಗುವ ನಿರ್ಣಯಗಳು

ಬೆಂಗಳೂರು ೮

ಇದೇ ೧೧ನೇ ತಾರೀಖಿನಿಂದ ವಿಧಾನ ಸಭೆಯ ಅಧಿವೇಶನವು ಪ್ರಾರಂಭವಾಗುತ್ತದೆ ಇದರಲ್ಲಿ ೮೩ ನಿರ್ಣಯಗಳನ್ನು ಮಂಡಿಸಲು ಅನೇಕ ಸದಸ್ಯರು ಕಳುಹಿಸಿದ್ದಾರೆ.

೧೯೫೪ನೇ ಏಪ್ರಿಲ್ ಒಂದನೇ ತಾರೀಖಿನಿಂದ ಮೈಸೂರು ವಿಧಾನ ಪರಿಷತ್ತನ್ನು ರದ್ದುಗೊಳಿಸಬೇಕೆಂಬ ನಿರ್ಣಯವು ಪ್ರಥಮಸ್ಥಾನ ಪಡೆದಿದೆ.

ಜಮೀನಿಲ್ಲದ ಎ. ಜಿ. ಓ. ಗಳಿಗೆ ೫ ಎಕರೆ ಜಮೀನು ಕೊಡಬೇಕು. ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಕಡ್ಡಾಯ ಶಿಕ್ಷಣವನ್ನು ಏರ್ಪಡಿಸಬೇಕು. ನ್ಯಾಯಾಂಗವನ್ನು ಆಡಳಿತದಿಂದ ಬೇರ್ಪಡಿಸಬೇಕು, ವಿಧಾನ ಸದಸ್ಯರು ತಮ್ಮ ಕ್ಷೇತ್ರದಲ್ಲಿ ಪ್ರವಾಸಮಾಡಲು ಮೋಟಾರು ಬೈಸಿಕಲ್ಲು ಅಥವಾ ಇತರ ವಾಹನ ಸೌಕರ್ಯ ಏರ್ಪಡಿಸಬೇಕು, ನಗರ ಮತ್ತು ಟೌನುಗಳಲ್ಲಿ ಭಿಕ್ಷಾಟನೆಯನ್ನು ನಿಲ್ಲಿಸಬೇಕು. ರೋಡ್‌ಟ್ರಾನ್ಸ್‌ಪೋರ್ಟ್ ಸರ್ವಿಸ್ ರದ್ದುಗೊಳಿಸಬೇಕು ಮುಂತಾದ ಹಲವಾರು ಖಾಸಗಿ ನಿರ್ಣಯಗಳು ಇದರಲ್ಲಿವೆ.

ಕೋರ್ಟುಗಳಿಗೆ ಹೆಚ್ಚಿನ ಮೊನ್ನೆ ಶನಿವಾರ ರಜಾ

ಬೆಂಗಳೂರು ೮

ಮೈಸೂರಿನ ಹೈಕೋರ್ಟು ಮತ್ತು ಸಂಸ್ಥಾನದಲ್ಲಿರುವ ಎಲ್ಲಾ ಸಿವಿಲ್ ಮತ್ತು ಕ್ರಿಮಿನಲ್ ಕೋರ್ಟುಗಳು ಮತ್ತು ಅದಕ್ಕೆ ಸಂಬಂಧಪಟ್ಟ ಕಛೇರಿಗಳು ಪ್ರತಿ ತಿಂಗಳು ಕೊನೆಯ ಶನಿವಾರದ ಹಿಂದಿನ ಶನಿವಾರ ಪೂರ್ತ ರಜಾದಿನವನ್ನಾಗಿ ಆಚರಿಸಲು ಆಜ್ಞೆಯಾಗಿದೆ. ಇತರ ಶನಿವಾರಗಳಲ್ಲಿ ಬೆಳಿಗ್ಗೆ ೧೧ ಘಂಟೆಯಿಂದ ಸಂಜೆ ೫ ಗಂಟೆಯವರೆಗೆ ಅವು ಕೆಲಸ ಮಾಡುತ್ತವೆ.

ನೇಪಾಳದಲ್ಲಿ ನೂತನ ಸರ್ಕಾರ

ನೇಪಾಳದ ಮಹಾರಾಜ ಶ್ರೀ ತ್ರಿಭುವನರು ತಮ್ಮ ವಿದೇಶ ಪ್ರವಾಸ ಮುಗಿಸಿಕೊಂಡು ಖಟ್ಮಂಡುವಿಗೆ ಹಿಂತಿರುಗಿದೊಡನೆಯೇ ರಾಷ್ಟ್ರೀಯ ಸರ್ಕಾರವನ್ನು ರಚಿಸಲಾಗುತ್ತದೆಯೆಂದು ಅಲ್ಲಿಯ ಪ್ರಧಾನಿ ಶ್ರೀ ಎ. ಪಿ. ಕೊಯಿರಾಲಾರವರು ಹೇಳಿದ್ದಾರೆ.

ಮದ್ರಾಸ್‌ನಲ್ಲಿ ವಿದ್ಯಾನೀತಿಯ ಬಗ್ಗೆ ಕಾಂಗ್ರೆಸ್ಸಿಗರ ಟೀಕೆ

ಮೊನ್ನೆಯದಿನ ಮದ್ರಾಸ್ ಶಾಸನ ಸಭೆಯ ಕಾಂಗ್ರೆಸ್‌ಪಕ್ಷ ಸಭೆಯು ನಡೆದಾಗ ಸದಸ್ಯರನೇಕರು ಸರ್ಕಾರದ ಹೊಸ ವಿದ್ಯಾಂಗ ನೀತಿಯನ್ನು ಟೀಕಿಸಿದರೆಂದೂ ತಿಳಿಯಬರುತ್ತದೆ. ತಮ್ಮ ವಿರೋಧಿಗಳು ತಮ್ಮನ್ನು ಪದಚ್ಯುತರನ್ನಾಗಿ ಮಾಡಲು ಯಾವುದಾದರೂ ಕಾರಣ ಹುಡುಕುತ್ತಾ ಈಗ ಪ್ರಾರಂಭಿಸಿರುವ ಹೊಸ ವಿದ್ಯಾನೀತಿಯನ್ನು ಟೀಕಿಸುವುದು ಸರಿಯಲ್ಲವೆಂದು ಸ್ವಲ್ಪ ಕಾಲ ಇದು ಕಾರ್ಯರೂಪವಾಗಲು ಬಿಡಬೇಕೆಂದು ಮುಖ್ಯ ಮಂತ್ರಿ ಶ್ರೀ ರಾಜಾಜಿಯವರು ತಿಳಿಸಿದರೆಂದೂ ಹೇಳಲಾಗಿದೆ. ತಾವು ಮುಖ್ಯಮಂತ್ರಿ ಪದವಿಯನ್ನು ಯಾವಾಗ ಬೇಕಾದರೂ ಬಿಡಲು ಸಿದ್ಧವಿರುವುದಾಗಿಯೂ ಅಲ್ಲದೆ ಈಗಿನ ವಿದ್ಯಾ ಸುಧಾರಣೆಯನ್ನು ಮುಂದುವರಿಸಲು ಹೊಸದಾಗಿ ಬರುವ ಸರ್ಕಾರಕ್ಕೆ ತಾವು ಪೂರ್ಣ ಸಹಕಾರವನ್ನು ನೀಡಲು ಸಿದ್ಧವಿರುವುದಾಗಿಯೂ ಅವರು ಹೇಳಿರುವುದಾಗಿ ಗೊತ್ತಾಗಿದೆ.

ಈ ಸಮಯದಲ್ಲಿ ತಮಿಳು ನಾಡು ಕಾಂಗ್ರೆಸ್ ಅಧ್ಯಕ್ಷರು ಮಾತನಾಡುತ್ತಾ ವಿದ್ಯಾ ಸುಧಾರಣೆಗೂ ಪಕ್ಷದ ನಾಯಕತ್ವಕ್ಕೂ ಸಂಬಂಧವನ್ನು ಕಲ್ಪಿಸಬಾರದೆಂದು ಕೋರುದಾಗಿ ಹೇಳಲಾಗಿದೆ.

ಇಂಗ್ಲೀಷ್ ಮಾಧ್ಯಮದ ನಿರ್ಬಂಧ

ಇಂಗ್ಲೀಷ್ ಮಾಧ್ಯಮವಿರುವ ಶಾಲೆಗಳಿಗೆ ಮುಂದಿನವರ್ಷದಿಂದ ಆಂಗ್ಲೋಇಂಡಿಯನ್ ಮತ್ತು ವಿಶ್ವೇತರನ್ನು ವಿನಃ ಮತ್ತೆ ಯಾರನ್ನೂ ಸೇರಿಸಕೂಡದೆಂದು ಬೊಂಬಾಯಿ ಸರ್ಕಾರವು ಆಜ್ಞೆ ಮಾಡಿದೆ. ಪ್ರಾಂತೀಯ ಭಾಷೆಯ ಮಾಧ್ಯಮ ಉತ್ತೇಜನವನ್ನು ಕೊಡಲು ಈ ವ್ಯವಸ್ಥೆ ಮಾಡಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೭—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೨	೨೪—೧೪
ಎಳ್ಳು	೬೫—೧೪	೭೦—
ಹರಳು	೩೮—೧೨	೪೩—೪
ಕೊಂಗೆಬೀಜ	—	—
ಹುಚ್ಚೆಳ್ಳು	೩೬—೧೪	೪೪—೧೪
ಬೆಲ್ಲ	—	—
ಹುರಳಿ	೨೮—೮	೩೧—೮
ಉದ್ದು	—	—
ಹೆಸರು	೩೫—೮	೪೧—೮
ಅಲಸಂದೆ	೩೩—೪	೪೬—
ಅವರೆ	೪೮—೪	—
ಹುಣಿಸೆಹಣ್ಣು	೧೩—	೧೬—೩
ಮೆಣಸಿನಕಾಯಿ	೧೫—೮	೩೩—೬
ಸೀಗೆಕಾಯಿ	೫—೧೫	—
ತೆಂಗಿನಕಾಯಿ	೧೯೪—	೩೦೫—

ಬೆಲ್ಲ ಸಟ್ಟಾ ವ್ಯಾಪಾರ ನಿಷೇಧಾಜ್ಞೆ ರದ್ದು

ಸಕ್ಕರೆ ಮೇಲೆ ನಿಷೇಧ ಮುಂದುವರೆಯುತ್ತದೆ

ಬೆಲ್ಲ ಸಟ್ಟಾ ವ್ಯಾಪಾರದಮೇಲೆ ಕೇಂದ್ರ ಸರ್ಕಾರದವರು ವಿಧಿಸಿದ್ದ ನಿಷೇದಾಜ್ಞೆಯನ್ನು ರದ್ದುಮಾಡುವುದಾಗಿ ಪ್ರಕಟಿಸಲಾಗಿದೆ. ಆದರೆ ಸಕ್ಕರೆ ಸಟ್ಟಾವ್ಯಾಪಾರದ ಮೇಲಿರುವ ನಿಷೇದಾಜ್ಞೆಯು ಮುಂದುವರಿಯುತ್ತದೆ.

ಕಾಂಗ್ರೆಸ್ ಮಹಾಧಿವೇಶನ

ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನವು ಇದೇ ೨೩ ಮತ್ತು ೨೪ನೇ ತಾರೀಖಿನಿಂದ ಕಲ್ಕತ್ತಾದ ಬಳಿ ಕಲ್ಯಾಣಿಯಲ್ಲಿ ನಡೆಯುತ್ತದೆ. ಇದಕ್ಕೆ ಪುರ್ವಭಾವಿ ೨೦ ಮತ್ತು ೨೧ನೇ ತಾರೀಖುಗಳಲ್ಲಿ ಕಾರ್ಯಕಾರಿ ಸಮಿತಿ ಸಭೆಯ ೨೨ ಮತ್ತು ೨೩ರಲ್ಲಿ ವಿಷಯ ನಿಯಾಮಕ ಸಮಿತಿ ಸಭೆಗಳು ಸೇರುತ್ತವೆ.

ಸಮುದ್ರ ಸುಂಕ ಶಾಸನ ತಿದ್ದುಪಡಿ

ಸಮುದ್ರಯಾನದಲ್ಲಿ ಕಳ್ಳ ವ್ಯಾಪಾರವನ್ನು ತಪ್ಪಿಸಲು ಈಗಿರುವ ಸಮುದ್ರಯಾನ ಸುಂಕ ಶಾಸನವನ್ನು ತಿದ್ದುಪಡಿ ಮಾಡಲಾಗುತ್ತದೆಯೆಂದು ಕೇಂದ್ರ ಹಣಕಾಸಿನ ಉಪಸಚಿವರು ಹೇಳಿದ್ದಾರೆ.

ಸರ್ಕಾರಕ್ಕೆ ಗೂರ್ಖಾ ನೆರವು

ಪಾಕೀಸ್ತಾನವು ಮತ್ತು ಕೆಲವು ಹೊರ ರಾಷ್ಟ್ರಗಳು ಯುದ್ಧ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿರುವುದನ್ನು ಅಖಿಲ ಭಾರತ ಗೂರ್ಖಾಮಂಡಲಿಯು ತೀವ್ರವಾಗಿ ಖಂಡಿಸಿ, ಹಾಗೆ ಆಕ್ರಮಣ ರೀತಿಯು ಮುಂದುವರಿದರೆ ತನ್ನ ಮಂಡಲಿಯು ಭಾರತ ಸೈನ್ಯಕ್ಕೆ ೫೦,೦೦೦ ಭಾರತದ ಗೂರ್ಖಾರನ್ನು ಒದಗಿಸುವುದಾಗಿ ತಿಳಿಸಿದೆ.

ಮಾಸ್ಟರ್ ತಾರಾಸಿಂಗರ ಮೇಲೆ ಧಾಳಿ

ಅಕಾಲಿಪಕ್ಷದ ನಾಯಕ ಮಾಸ್ಟರ್ ತಾರಾಸಿಂಗ್‌ರವರು ನಿನ್ನೆಯದಿನ ದೆಹಲಿಯಿಂದ ಕಲ್ಕತ್ತಾಕ್ಕೆ ಆಗಮಿಸಿದಾಗ ಹೌರಾ ರೈಲ್ವೆ ನಿಲ್ದಾಣದ ಬಳಿ ಸಾವಿರಾರು ಜನ ಸಿಕ್ಕರು ಅವರ ವಿರೋಧವಾಗಿ ಪ್ರದರ್ಶನ ನಡೆಸಿ ಅವರಮೇಲೆ ಕಲ್ಲು, ಇಟ್ಟಿಗೆಚೂರು ಮುಂತಾದುವನ್ನು ಎಸೆದರು. ಮಾಸ್ಟರ್ ತಾರಾಸಿಂಗ್‌ರವರು ಸುಮಾರು ೩ ಗಂಟೆ ಕಾಲ ಪೊಲೀಸರ ರಕ್ಷಣೆಯಲ್ಲಿರಬೇಕಾಯಿತು.

City Municipal Office, Mysore.

Dated 5—1—1954

NOTIFICATION

Notice is hereby given to the inhabitants of the Mysore City Municipality that the Municipal Council have resolved to add the following items to the list of the 12 articles which are already exempted as per G. O. No- 2- 1421-22-CM 27-53-14 dated 4-5-53 from the operation of the bye-laws relating to licensing of Hawkers in the city of Mysore framed under section 51(i) (a) (ii) and (vi) and(vii) read with Section 82 and 167 of the Mysore City Municipalities Act sanctioned in G. O. No. L. 3618/CM 27-51-2 dated 16-7-51 numbering them as 13, 14, and 15.

13. Person or persons who deal in vegetables, Bratties, head load of Fuel.

14. Sellers of Hurikadale and Ganjampuri.

15. Flower sellers.

Any inhabitant of the Municipality, objecting to the proposed amendment may within one month from the date of this notification send his objection in writing to the Municipal Council.

N. LAKSHMAN RAO,
Municipal Commissioner.

ಖಾನ್ ಅಬ್ದುಲ್ ಗಫಾರ್‌ಖಾನ್

ರಾವಲ್ಪಿಂಡಿ ಕಾರಾಗೃಹದಲ್ಲಿದ್ದ ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರವರ ಬಿಡುಗಡೆಯು ಮೊನ್ನೆಯದಿನ ಸಂಜೆ ಆಯಿತು. ಅವರು ಅಸ್ವಸ್ಥದಿಂದ ಆ ರಾತ್ರಿಯನ್ನು ಜೈಲಿನ ಆವರಣದಲ್ಲೇ ಕಳೆದರು.

ನಿನ್ನೆಯದಿನ ಅವರು ಪತ್ರಿಕೋದ್ಯೋಗಿಗಳೊಡನೆ ಮಾತನಾಡುತ್ತಾ ತಮ್ಮ ಮುಂದಿನ ಕಾರ್ಯಕ್ರಮವನ್ನು ಇನ್ನು ತಯಾರಿಸಿಲ್ಲವೆಂದೂ ಸದ್ಯಕ್ಕೆ ಪಾಕ್ ಪಂಜಾಬಿನಲ್ಲಿಯೇ ಇದ್ದು ಚಿಕಿತ್ಸೆ ಪಡೆಯುವುದಾಗಿಯೂ ತಿಳಿಸಿದ್ದಾರೆ.

ನೂತನ ರಾಷ್ಟ್ರೀಯ ಉಡುಪು

ಸರ್ಕಾರಿ ನೌಕರರು ಇನ್ನುಮುಂದೆ ಗುಂಡಿಗಳಿರುವ ಸಣ್ಣ ಕೋಟು ಮತ್ತು ಷರಾಯಿಗಳನ್ನು ಧರಿಸಬೇಕೆಂದು ಪ್ರಧಾನಿ ನೆಹರೂರವರು ಕೇಂದ್ರ ಸರ್ಕಾರದ ನೌಕರರುಗಳಿಗೆ ಒಂದು ಸೂಚನಾ ಪತ್ರವನ್ನು ಕಳುಹಿಸಿರುವುದಾಗಿ ತಿಳಿಯಬರುತ್ತದೆ.

ಈ ಬಟ್ಟೆಯು ಸ್ವದೇಶಿಯಾಗಿದ್ದು ಕೈನೂಲಿನಿಂದ ಕೈಮಗ್ಗದಿಂದ ತಯಾರಿಸಿದ್ದಾಗಿರಬೇಕೆಂದು ತಿಳಿಸಲಾಗಿದೆ.

ದೇಶದ ಸ್ಥಿತಿಗತಿಗಳು ಮತ್ತು ಶಿಸ್ತನ್ನು ಗಮನಿಸಿ ಸರ್ಕಾರಿ ನೌಕರರೆಲ್ಲಾ ಒಂದೇ ರೀತಿಯ ಉಡುಪನ್ನು ಧರಿಸಲು ಈ ವ್ಯವಸ್ಥೆ ಮಾಡಲಾಗಿದೆ.

ಆಂಧ್ರ ರಾಜಧಾನಿ ಸದ್ಯಕ್ಕೆ ಬದಲಾವಣೆಯಿಲ್ಲ

ಆಂಧ್ರದ ಈಗಿನ ರಾಜಧಾನಿ ಕರ್ನೂಲನ್ನು ಸದ್ಯಕ್ಕೆ ಬದಲಾಯಿಸುವುದಿಲ್ಲ. ಈ ವಿಷಯದಲ್ಲಿ ಶಾಸನ ಸಭೆಯ ಮುಂದಿನ ಅಧಿವೇಶನದಲ್ಲಿ ಸರ್ಕಾರದ ನಿಲುವನ್ನು ತಿಳಿಸಲಾಗುತ್ತದೆ. ಎಂದು ಆಂಧ್ರ ಮುಖ್ಯ ಮಂತ್ರಿ ಶ್ರೀ ಟಿ. ಪ್ರಕಾಶಂರವರು ಹೇಳಿದ್ದಾರೆ.

ಅಪೆರಾ
7-1-53 ರಿಂದ ಅಮೋಘ 4ನೇ ವಾರ
ಆರ್. ಎನ್. ಪಿಕ್ಚರ್ಸ್‌ರವರ
ಜಾತಕ ಫಲ
(ಕನ್ನಡ)
ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೬೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೧೩

೯-೧-೧೯೫೪ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತದ ಶಾಂತಿ ಮತ್ತು ಭದ್ರತೆಯು ಜ್ಞಾನವಿವೇಚನೆಯಿಂದಲೇ ಸಾಧ್ಯ

ಮಹಾರಾಜಾ ಕಾಲೇಜು ಸಮಾರಂಭದಲ್ಲಿ

ರಾಜಪ್ರಮುಖರ ಹೇಳಿಕೆ

ಮೈಸೂರು ೯

ಮಹಾರಾಜಾ ಕಾಲೇಜಿನ ದಿನಾಚರಣೆಯು ನಿನ್ನೆ ಸಂಜೆ ಶ್ರೀಮನ್ಮಹಾರಾಜರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ಶ್ರೀ ಟಿ.ಎಸ್. ಗೋಪಾಲನ್‌ರಿಂದ ಪ್ರಾರ್ಥನೆಯಾದನಂತರ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಟಿ. ಸಿದ್ಧಲಿಂಗಯ್ಯನವರು ಸ್ವಾಗತ ಬಯಸಿದರು. ಅನಂತರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ವಿ. ಎಲ್. ಡಿಸೌಜಾರವರು ಭಾಷಣ ಮಾಡಿ, ೧೮೩೩ರಲ್ಲಿ ಕಾಲೇಜ್ ಆರಂಭವಾದಾಗಿನಿಂದ ಇಲ್ಲಿಯವರೆಗೆ ಅನೇಕ ಗಣ್ಯ ವಿದ್ಯಾವಂತರೂ ರಾಜಕಾರಣಿಗಳನ್ನು ರೂಪಿಸಲಾಗಿದೆಯೆಂದೂ. ಈಗಲೂ ಕಾಲೇಜು ಉನ್ನತಮಟ್ಟದಲ್ಲಿದ್ದು, ಈಗ ೧೧೫೦ ಜನ ೧೫೦ ಮಹಿಳೆಯರೂ, ಇದ್ದಾರೆಂದು ತಿಳಿಸಿ, ಹಳೆಯ ವಿದ್ಯಾರ್ಥಿಗಳಾದ ಶ್ರೀಮನ್ಮಹಾರಾಜರವರು ಕಾಲೇಜಿನ ಬಗ್ಗೆ ತೋರುತ್ತಿರುವ ಆಸಕ್ತಿಯನ್ನು ಕೊಂಡಾಡಿದರು.

ರಾಜಪ್ರಮುಖರ ಭಾಷಣ

ಅನಂತರ ಶ್ರೀಮನ್ಮಹಾರಾಜರವರು ಬಹುಮಾನ ವಿನಿಯೋಗಿಸಿ, ಅಮೋಘ ಭಾಷಣ ಮಾಡಿದರು.

ನಮ್ಮ ರಾಷ್ಟ್ರವು ಈಗ ಪರರಾಳ್ವಿಕೆಯಿಂದ ಸ್ವಾತಂತ್ರ್ಯ ಪಡೆದಿದೆ. ಈಗ ಅನೇಕ ಸಮಸ್ಯೆಗಳು ಇದರಿಂದ ಉದ್ಭವಿಸಿವೆ. ಈ ಕಾಲೇಜು ಸ್ಥಾಪನೆಯಾದಾಗ ಭಾರತದಲ್ಲಿ ಇಂಗ್ಲೀಷ್ ಶಿಕ್ಷಣವು ಉತ್ಸಾಹದಿಂದ ಆರಂಭವಾಯಿತು. ಈ ಇಂಗ್ಲಿಷ್ ಸುಧಾರಕರಿಗೆ ಪಾಶ್ಚಿಮಾತ್ಯ ಜ್ಞಾನಭಂಡಾರದಷ್ಟೇ ನಮ್ಮೀ ಪುರಾತನ ಸಂಸ್ಕೃತಿಯ ಸಂಪತ್ತೂ ಉಚಿತವಾಗಿ ದೇಶೀಯ ವಿಷಯಗಳ ಅಭ್ಯಾಸವನ್ನು ಪೂರಕವಾಗಿ ಗಣಿಸಿದ್ದಿದ್ದರೆ. ಕಳೆದ ನೂರು ವರುಷದ ಶಿಕ್ಷಣ ನಮ್ಮ ರಾಷ್ಟ್ರದಲ್ಲಿ ದ್ವಿಗುಣವಾಗಿ ಫಲಪ್ರದವಾಗುತ್ತಿತ್ತು.

ಸ್ವಾತಂತ್ರ್ಯದೊಂದಿಗೆ ರಾಷ್ಟ್ರದ ಶಿಕ್ಷಣ ವ್ಯವಸ್ಥೆಯನ್ನು ಪುನರ್ರೂಪಿಸಿ ಸುಭದ್ರ ತಳಹದಿಯ ಮೇಲೆ ಭವಿಷ್ಯ ನಿರ್ಮಿಸಬೇಕಾಗಿದೆ.

ಭಾರತದ ಶಾಂತಿ ಮತ್ತು ಸುಭದ್ರತೆ ಭಾರತೀಯ ಜ್ಞಾನ, ವಿವೇಚನೆ, ಸಹಕಾರ ಪ್ರಯತ್ನಗಳಿಂದಲೇ ಮಾತ್ರ ಸಾಧ್ಯ. ಪ್ರಜಾ ಸಂಸ್ಥೆಯಲ್ಲಿ ಪ್ರಜೆಯ ಹಕ್ಕುಬಾಧ್ಯತೆಯೆಂದರೆ ಸೇವೆಯ ಹಕ್ಕೆಂದೇ ಅರ್ಥ. ಸೇವೆಯ ಬೆಲೆ ದಕ್ಷತೆ, ಶಿಸ್ತುಗಳನ್ನು ಅವಲಂಬಿಸಿದೆ. ಇಂದು ಶಿಸ್ತು ತುಂಬಾ ಅಗತ್ಯನಾಗಿದೆ. ರಾಜಕೀಯ ಮತ್ತು ಆರ್ಥಿಕ ಅಶಾಂತಿ, ಆಶಾಭಂಗ, ನಿರಾಶೆಗಳು ಅಪಕ್ವ ಮನಸ್ಸುಗಳ ಮೇಲೆ ಪಕ್ಷ ರಾಜಕೀಯದ ಪ್ರಭಾವ, ಶಿಕ್ಷಣ ವ್ಯವಸ್ಥೆಯ ಲೋಪದೋಷ-ಇವೇ ವಿಶ್ವವಿದ್ಯಾನಿಲಯದ ಜೀವನಕ್ಕೆ ಕಳಂಕ ತಂದಿರುವ ಅಶಿಸ್ತಿಗೆ ಕಾರಣವಾಗಿವೆ.

ವಿಶ್ವವಿದ್ಯಾನಿಲಯದ ಶಿಕ್ಷಣದ ಪುನರುಜ್ಜೀವನ ಕಾರ್ಯದಲ್ಲಿ ಮಹಾರಾಜಾಕಾಲೇಜಿನ ಪಾತ್ರ ಮಹತ್ತರವಾಗಿದೆ. ಸಾಹಿತ್ಯ, ಇತಿಹಾಸ, ದರ್ಶನ, ಸಂಗೀತ, ಪುರಾತನ ಸಾಂಸ್ಕೃತಿಗಳಲ್ಲಿ ತಮ್ಮ ಆಸಕ್ತಿ ಅಭ್ಯಾಸಗಳಿಗೆ ಮಹಾರಾಜಾಕಾಲೇಜಿನಲ್ಲಿ ಅಧ್ಯಾಪಕರು ಹಾಕಿದ ಅಸ್ತಿಭಾರವೇ ಕಾರಣವಾಗಿದೆ-ಎಂದು ರಾಜಪ್ರಮುಖರು ತಿಳಿಸಿದರು.

ಮಹಾರಾಜಾಕಾಲೇಜಿನಲ್ಲಿ ತಾವು ವಿದ್ಯಾರ್ಥಿಯಾಗಿದ್ದ ಕಾಲವನ್ನು ಸ್ಮರಿಸಿಕೊಂಡು, ತಮ್ಮ ಜ್ಞಾನಾರ್ಜನೆಯು ಅತಿ ಮೇಲಿನ ಮಟ್ಟದಲ್ಲಿ ನಡೆದುಕೊಳ್ಳಲು ಸಹಾಯಕರಾದ ಗುರುಗಳಿಗೆಲ್ಲರಿಗೂ ವಂದನೆಯನ್ನು ಕೊನೆಯಲ್ಲಿ ಅರ್ಪಿಸಿದರು.

ಕಾರ್ಮಿಕರ ಪ್ರದರ್ಶನ

ಮೈಸೂರು ಸರ್ಕಾರದ ಕಾರ್ಮಿಕಶಾಖೆಯವರು ಕಾರ್ಖಾನೆ ಕಾನೂನನ್ನು ಸರಿಯಾಗಿ ಜಾರಿಗೆ ತರದೆ ಕಾರ್ಮಿಕರ ಹಿತಕ್ಕೆ ವಿರೋಧವಾಗಿ ನಡೆಯುತ್ತಿರುವುದನ್ನು ಪ್ರತಿಭಟಿಸಲು ನಗರದ ಸುಮಾರು ೩೦೦ ಮಂದಿ ಕಾರ್ಮಿಕರು ಈದಿನ ಬೆಳಿಗ್ಗೆ ಲಲಿತಮಹಲ್ ಅರಮನೆ ಮುಂದೆ ಪ್ರದರ್ಶನ ನಡೆಸಿದರು. ಅಖಿಲಭಾರತ ಕಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವ ಪ್ರತಿನಿಧಿಗಳು ಮತ್ತು ಕೇಂದ್ರ ಕಾರ್ಮಿಕ ಉಪಸಚಿವ ಶ್ರೀ ಅಬಿದಾಲಿಯವರಿಗೆ ಈ ಕೊರತೆಗಳನ್ನು ನಿವೇದಿಸಿಕೊಂಡರು.

ಜಿಲ್ಲಾ ಬೋರ್ಡುಗಳು ರದ್ದಾಗಕೂಡದು

ಸರ್ಕಾರದ ಈಗಿನ ನೀತಿ ಪ್ರಜಾ ಪ್ರಭುತ್ವಕ್ಕೆ ವಿರೋಧ

ಶ್ರೀ ಚೆನ್ನಬಸಪ್ಪನವರ ಟೀಕೆ

ಮೈಸೂರು ೯

ಕೇವಲ ೨ ವರ್ಷಗಳ ಕೆಳಗೆ ರಚಿತವಾದ ಜಿಲ್ಲಾಬೋರ್ಡು ಕಾನೂನನ್ನು ಜಾರಿಗೆ ತಂದು ಅದು ಹೇಗೆ ನಡೆಯುತ್ತದೆ ಎಂಬುದನ್ನು ಗಮನಿಸದೇ ಆತುರಾತುರದಿಂದ ಜಿಲ್ಲಾಬೋರ್ಡುಗಳನ್ನು ರದ್ದುಮಾಡುವುದಾಗಲೀ ಅಥವಾ ಈಗಿನ ಜಿಲ್ಲಾಬೋರ್ಡುಗಳ ಆಡಳಿತವನ್ನು ಜಿಲ್ಲಾಧಿಕಾರಿಗಳಿಗೆ ವಹಿಸುವುದಾಗಲೀ ಪ್ರಜಾಪ್ರಭುತ್ವ ತತ್ವಕ್ಕೆ ವಿರೋಧವಾದುದು ಎಂದು ಜಿಲ್ಲಾ ಬೋರ್ಡಿನ ಅಧ್ಯಕ್ಷ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ಈಬೆಳಿಗ್ಗೆ ಪತ್ರಿಕಾ ಸಮ್ಮೇಳನವೊಂದನ್ನು ನಡೆಸಿ ಅಲ್ಲಿ ತಿಳಿಸಿದರು.

ಮೈಸೂರು ಸಂಸ್ಥಾನದಲ್ಲಿ ಸ್ಥಳೀಯ ಸಂಸ್ಥೆಗಳ ರಚನೆ ವಿಷಯವನ್ನು ಅವರು ಪ್ರಸ್ತಾಪಿಸಿ ಈರೀತಿ ತಿಳಿಸಿದರು:—

ಈಗ್ಗೆ ೯೨ ವರ್ಷಗಳ ಹಿಂದೆ ರಚಿತವಾದ ಜಿಲ್ಲಾಬೋರ್ಡು ವ್ಯವಸ್ಥೆಯು ಇಲ್ಲಿಯವರೆಗೆ ಅತ್ಯಂತ ಅಮೋಘವಾದ ಸೇವೆ ಸಲ್ಲಿಸಿದೆ. ಈ ನಡುವೆ ತಾಲ್ಲೂಕು ಸಮಿತಿ ಮತ್ತು ಇತರ ಹಲವಾರು ಸಮಿತಿಗಳು ಹುಟ್ಟಿದುವು, ರದ್ದಾದುವು ಆದರೆ ಜಿಲ್ಲಾ ಸಮಿತಿಗಳು ೯೨ ವರ್ಷಕಾಲ ಕೆಲಸಮಾಡಿವೆ. ಜನತೆಗೆ ಹೆಚ್ಚು ಆಡಳಿತ ಜವಾಬ್ದಾರಿಯನ್ನು ವಹಿಸಲು ಮೈಸೂರು ಸರ್ಕಾರ ೧೯೪೨ರಲ್ಲಿ ವೆಂಕಟಪ್ಪ ಸಮಿತಿಯನ್ನು ರಚಿಸಿತು. ಆ ಸಮಿತಿಯು ಸ್ಥಳೀಯ ಸಂಸ್ಥೆಗಳ ಆಗುಹೋಗುಗಳನ್ನು ವಿವರವಾಗಿ ಪರಿಶೀಲಿಸಿ ಜಿಲ್ಲಾಬೋರ್ಡು ಇರಬೇಕು—ಎಂದೂ ಸೂಚಿಸಿ ಶಾಸನದಲ್ಲಿ ಅನೇಕ ಮಾರ್ಪಾಟುಗಳನ್ನು ಸೂಚಿಸಿರುವುದನ್ನು ಸರ್ಕಾರವು ಅಂಗೀಕರಿಸಿ ಅದರಂತೆ ೧೯೫೨ನೇ ಫೆಬ್ರವರಿ ೧೮ರಿಂದ ಹೊಸ ಶಾಸನವನ್ನು ಜಾರಿಗೆ ತಂದರು. ಅದು ಇನ್ನೂ ಕೆಲಸ ಮಾಡುವುದಕ್ಕೆ ಮುನ್ನವೇ ಜಿಲ್ಲಾಬೋರ್ಡು ರದ್ದಿನ ವಿಷಯ ಪರಿಶೀಲಿಸುವ ಅವಶ್ಯಕತೆಯೇ ಇಲ್ಲ. ಹೊಸದಾಗಿ ಜಿಲ್ಲಾ ಸಮಿತಿಗಳನ್ನು, ಚುನಾವಣೆ ನಡೆದು, ರಚಿಸಬೇಕಾದ ಕಾರ್ಯಕ್ರಮದಲ್ಲಿ ಸ್ವಲ್ಪ ಭಿನ್ನತೆಯು ಹುಟ್ಟಿತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಶಾಸನಸಭಾ ಕಾಂಗ್ರೆಸ್ ಪಕ್ಷವು ವಯಸ್ಕರ ಮತದಾನ ಪ್ರಕಾರ ಚುನಾವಣೆ ನಡೆಸುವಂತೆ ನಿರ್ದೇಶನ ಕೊಟ್ಟಿತು. ಆದರೆ ಶಾಸನಸಭೆಯ ಕಾಂಗ್ರೆಸ್‌ಪಕ್ಷದ ಕಾರ್ಯ ಸಮಿತಿಯ ಸಲಹೆ ಮೇಲೆ ಈಗ ಜಿಲ್ಲಾ ಬೋರ್ಡುಗಳನ್ನು ರದ್ದುಗೊಳಿಸಿ, ತಾಲ್ಲೂಕು ಸಮಿತಿಗಳನ್ನು ರಚಿಸಬೇಕೆಂದು ಹೊರಟಿದೆ. ಈ ವಿಷಯವನ್ನು ಪರಿಶೀಲಿಸಲು ಪುನಃ ಮತ್ತೊಂದು ಸಮಿತಿಯು ಕಳೆದ ೧೮ನೇ ತಾರೀಖು ರಚನೆಯಾಗಿದೆ, ಈ ಸಮಿತಿಯ ರಚನೆ ಅನವಶ್ಯಕವಾಗಿದೆ. ಅಲ್ಲದೆ ಈ ಸಮಿತಿಯು ತನ್ನ ವರದಿಯನ್ನು ಕೊಡುವ ಮುನ್ನ ಜಿಲ್ಲಾ ಬೋರ್ಡುಗಳನ್ನು ರದ್ದುಗೊಳಿಸಿ ಅದರ ಆಡಳಿತವನ್ನು ಜಿಲ್ಲಾಧಿಕಾರಿಗಳಿಗೆ ವಹಿಸಲು ಜಿಲ್ಲಾಬೋರ್ಡು ಶಾಸನಕ್ಕೆ ಸರ್ಕಾರವು ತಿದ್ದುಪಡಿಯನ್ನು ತರಲಿದೆ. ಈ ಕ್ರಮವು ಸಮಿತಿಯ ಕಾರ್ಯಕಲಾಪಗಳಿಗೆ ಅಡ್ಡಿತರುವುದಾಗಿದೆ.

ಈಗಿರುವ ಜಿಲ್ಲಾ ಬೋರ್ಡುಗಳು ಬಹಳ ಕಾಲದಿಂದಿವೆ ಎಂಬ ವಾದ ಹುಟ್ಟಿದೆ. ಸರ್ಕಾರವೇ ಇದಕ್ಕೆ ಜೀವದಾನ ಕೊಡುತ್ತಾ ಬಂದವೇ ವಿನಹ ಸಮಿತಿಗಳು ಮುಂದುವರಿಯಲು ಇಷ್ಟಪಡಲಿಲ್ಲ. ಆದಾಗ್ಯೂ ಜನರಿಂದ ಚುನಾಯಿತ ಬೋರ್ಡುಗಳು ಶಾಸನೋಕ್ತ್ಯ ಕೆಲಸ ಮಾಡುತ್ತಿರುವಾಗ ಕಾರಣವಿಲ್ಲದೆ ಅವುಗಳನ್ನು ರದ್ದುಗೊಳಿಸಿ ಆಡಳಿತವನ್ನು ಸರ್ಕಾರಿ ಅಧಿಕಾರಿಗಳಿಗೆ ವಹಿಸುವುದು ಪ್ರಜಾಪ್ರಭುತ್ವಕ್ಕೆ ವಿರುದ್ಧ ಅಲ್ಲದೆ ಬೋರ್ಡಿನ ಸದಸ್ಯರಿಗೂ ಒಂದು ರೀತಿಯ ಅವಮಾನ ಮಾಡಿದಂತಾಗುತ್ತದೆ ಈ ವಿಷಯದಲ್ಲಿ ಜಿಲ್ಲಾ ಬೋರ್ಡ್‌ಗಳ ಅಭಿಪ್ರಾಯ ಅಥವ ಜನತೆಯ ಅಭಿಪ್ರಾಯವನ್ನು ತೆಗೆದುಕೊಂಡಿಲ್ಲ.

ಈ ನೀತಿಯಿಂದ ಈಗಿನ ಸರ್ಕಾರಕ್ಕೆ ಬಹಳ ಕೆಟ್ಟ ಹೆಸರು ಬರುತ್ತದೆ.

ತಾಲ್ಲೂಕು ಬೋರ್ಡ್‌ಗಳನ್ನು ರಚಿಸಿದರೆ ಗ್ರಾಮಾಭಿವೃದ್ಧಿ ಕಾರ್ಯಗಳು ನಡೆಯುವುದೇ ಕಷ್ಟವಾಗುತ್ತದೆ. ಆರ್ಥಿಕ ದುಸ್ಥಿತಿ ಆಡಳಿತದಲ್ಲಿ ತೊಂದರೆ ಮುಂತಾದ ಅನೇಕ ಸಮಸ್ಯೆಗಳು ಉಂಟಾಗುತ್ತವೆ.

ಸರ್ಕಾರವು ಈ ವಿಷಯದಲ್ಲಿ ಜನಾಭಿಪ್ರಾಯವನ್ನು ಪಡೆದು, ಶಾಸನ ಸಭಾಸದಸ್ಯರು ಸಾವಧಾನದಿಂದ ಎಲ್ಲವನ್ನು ಪರಿಶೀಲಿಸಿ ಅಂತ್ಯತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಅವರು ತಿಳಿಸಿದರು.

ಚೀಣಾ ಮೇಲೆ ಅಣುಬಾಂಬು ?

ಕಮ್ಯೂನಿಸ್ಟ್ ಚೀಣಾವು ಯುದ್ಧ ಪ್ರಾರಂಭಿಸಿದರೆ ಅಥವ ಇಂಡೋ-ಚೀಣಾದಲ್ಲಿ ಕೈಹಾಕಿದರೆ ಅಮೆರಿಕವು ಅಣುಬಾಂಬನ್ನು ಪ್ರಯೋಗಿಸಲಾಗುವುದೆಂದು ಅಧ್ಯಕ್ಷ ಐಸೆನ್ ಹೋವರ್ ತಿಳಿಸಿರುವರೆಂದು ಪ್ರಕಟವಾಗಿದೆ.

ಆಂಧ್ರ ಶಾಸನ ಸಭೆಯಲ್ಲಿ ಸರ್ಕಾರಕ್ಕೆ ಜಯ

ತನ್ನಲ್ಲಿ ಅವಿಶ್ವಾಸ ವ್ಯಕ್ತಪಡಿಸಿದರೆ ಕೂಡಲೇ ರಾಜೀನಾಮೆ ಕೊಡುವುದಾಗಿ ಪ್ರಕಾಶಂ

ಆಂಧ್ರದ ತಾತ್ಕಾಲಿಕ ರಾಜಧಾನಿಯಾದ ಕರ್ನೂಲ್‌ನಲ್ಲಿ ಸರ್ಕಾರಿ ಕಟ್ಟಡಗಳನ್ನು ಕಟ್ಟಲು ಬೇಕಾಗುವ ಹಣಕ್ಕಾಗಿ ಸರ್ಕಾರವು ಶಾಸನಸಭೆಯಲ್ಲಿ ಮಂಡಿಸಿದ್ದ ಬೇಡಿಕೆಗೆ ನಿನ್ನೆ ಒಪ್ಪಿಗೆ ದೊರೆಯಿತು. ಈ ಸಂದರ್ಭದಲ್ಲಿ ಕೃಷಕಲೋಕ ಪಕ್ಷವು ರಾಜಧಾನಿ ವಿಷಯವಾಗಿ ಮಂಡಿಸಿದ್ದ ಖೋತಾ ನಿರ್ಣಯವು ೬೫-೭೦ ಮತಗಳಿಂದ ಬಿದ್ದುಹೋಯಿತು

ಈ ಸಂದರ್ಭದಲ್ಲಿ ಆಂಧ್ರ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ಸಭೆಯ ವಿಶ್ವಾಸವನ್ನು ಕೋರುತ್ತಾ ತಮ್ಮಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸಿದರೆ. ಈಗಲೇ ರಾಜೀನಾಮೆ ಸಲ್ಲಿಸುವುದಾಗಿ ತಿಳಿಸಿದರು. ಆದರೆ ಮಂಡಿಸಿದ್ದ ಬೇಡಿಕೆಗೆ ಒಪ್ಪಿಗೆ ದೊರೆತುದುದರಿಂದ ಸಭಾಧ್ಯಕ್ಷರು ವಿಶ್ವಾಸಸೂಚಕ ನಿರ್ಣಯವನ್ನು ತೆಗೆದುಕೊಳ್ಳಲಿಲ್ಲ.

ಬೊಂಬಾಯಿ-ಮಂಗಳೂರು ನೂತನ ರಸ್ತೆ

ಪಶ್ಚಿಮತೀರದಲ್ಲಿ ಉಪಯುಕ್ತವಾಗುವಂತೆ ಬೊಂಬಾಯಿ ಮತ್ತು ಮಂಗಳೂರು ನಡುವೆ ಒಂದು ನೂತನ ರಸ್ತೆಯನ್ನು ನಿರ್ಮಿಸಲಾಗುವುದಾಗಿ ತಿಳಿಯಬರುತ್ತದೆ. ಮೋಟಾರುವಾಹನ ಮುಂತಾದುವುಗಳ ಸಂಚಾರಕ್ಕೆ ಇದು ಬಹಳ ಉಪಯುಕ್ತವಾಗುತ್ತದೆ. ಈ ರಸ್ತೆಯು ಸುಮಾರು ೫೦೦ ಮೈಲಿ ಉದ್ದವಿರುತ್ತದೆ. ಇದರಲ್ಲಿ ಭಾರಿ ೫ ಸೇತುವೆಗಳ ನಿರ್ಮಾಣ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ. ಈ ರಸ್ತೆಯ ವೆಚ್ಚದಲ್ಲಿ ಅರ್ಧಭಾಗವನ್ನು ಕೇಂದ್ರಸರ್ಕಾರವು ವಹಿಸಿಕೊಳ್ಳುತ್ತದೆ. ಇದಕ್ಕಾಗಿ ಸದ್ಯಕ್ಕೆ ಒಂದುಕೋಟಿ ರೂಪಾಯಿಗಳನ್ನು ಕೇಂದ್ರವು ಮಂಜೂರ್ಮಾಡಿದೆ.

ವಿಮಾನ ಅಪಘಾತ

ಮೊನ್ನೆಯದಿನ ಸಂಜೆ ಬೆಂಗಳೂರಿನಿಂದ ಹೊರಟ ಪ್ರಯೋಗಾರ್ಥ ವಿಮಾನವೊಂದು ಮದ್ರಾಸ್-ಚಿತ್ತೂರ್ ರಸ್ತೆಯಬಳಿ ಅಪಘಾತಕ್ಕೀಡಾಯಿತೆಂದೂ ಅದರಲ್ಲಿದ್ದ ಚಾಲಕ ಲೆಫ್ಟಿನೆಂಟ್ ದಂಡಪಾಣಿಯವರು ಪ್ಯಾರಾಚ್ಯೂಟ್‌ನಿಂದ ಸುರಕ್ಷಿತವಾಗಿ ಕೆಳಗಿಳಿದರೆಂದೂ ತಿಳಿಯಬರುತ್ತದೆ.

ಸಿಂಹಳ ಪ್ರಧಾನಿ ಭಾರತಕ್ಕೆ

ಸಿಂಹಳ ಪ್ರಧಾನಿ ಸರ್ ಜಾನ್ ಕೊಟೇಲವಾಲಾರವರು ಭಾರತಕ್ಕೆ ಮುಂದಿನ ಶುಕ್ರವಾರ ೧೫ನೇ ತಾರೀಖು ಆಗಮಿಸಲಿರುವರೆಂದು ತಿಳಿಯಬರುತ್ತದೆ.

ಕಾರ್ಮಿಕ ಸಚಿವರಲ್ಲಿ ನಿಯೋಗ

ಮೈಸೂರು ೯

ಕೆಲವು ಮಂದಿ ಮೋಟಾರು ಮಾಲೀಕರುಗಳು ಕೆಲಸಗಾರರಿಗೆ ಕಿರುಕುಳ ಕೊಡುತ್ತಿರುವುದು ಹಾಗೂ ಕೈಗಾರಿಕಾ ಕೋರ್ಟಿನ ಅವಾರ್ಡನ್ನು ಜಾರಿಗೆ ಕೊಡದಿರುವ ವಿಚಾರಗಳನ್ನು ಮೋಟಾರುಕೆಲಸಗಾರರ ಸಂಘದ ಪ್ರತಿನಿಧಿಗಳು ನಿನ್ನೆ ದಿನ ಕಾರ್ಮಿಕ ಸಚಿವರಲ್ಲಿ ನಿಯೋಗ ಹೋಗಿ ತಿಳಿಸಿವರು. ಮಾಲೀಕರ ಪೈಕಿ ಕೆಲವರು ವಿನಾಕಾರಣ ಕೆಲಸಗಾರರನ್ನು ತೆಗೆದುಹಾಕುತ್ತಿರುವರೆಂಬುದನ್ನು ಸಚಿವರಿಗೆ ತಿಳಿಸಿದರು. ಈ ವಿಚಾರಗಳನ್ನು ಸಚಿವರು ಕೇಳಿ ಅವಾರ್ಡನ್ನೆಲ್ಲಾ ಜಾರಿಗೆ ಕೊಡುವಂತೆ ಕೂಡಲೇ ಏರ್ಪಾಡು ಮಾಡುವುದಾಗಿಯೂ, ಹಾಗೆ ಜಾರಿಗೆ ಕೊಡದಿರುವರ ಮೇಲೆ ತಕ್ಕ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚನೆ ಕೊಡುವುದಾಗಿಯೂ ಭರವಸೆ ಇತ್ತರು.

ನಿಯೋಗದಲ್ಲಿ ಐ. ಎನ್. ಟಿ. ಯು. ಸಿ. ಕಾರ್ಯದರ್ಶಿಗಳಾದ ಶ್ರೀ ಕೇಶವ ಕುಲಕರ್ಣಿ, ಶ್ರೀ ಗಳಾದ ಎ. ರಾಮಣ್ಣ, ಕೆ. ದೌಲತ್‌ರಾವ್, ಟಿ. ಎಸ್. ಸುಬ್ಬಣ್ಣ ಮುಂತಾದವರು ಇದ್ದರು.

-ಮೈಸೂರು ಪೇಟೆಧಾರಣೆ-

ತಾರೀಖು ೮—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—೧೪	೨೪—೧೨
ಎಳ್ಳು	೭೨—೨	—
ಹರಳು	೩೫—	೪೦—೧೦
ಹೊಂಗೆಬೀಜ	—	—
ಹುಚ್ಚೆಳ್ಳು	೩೫—೨	೪೭—೧೪
ಹುರಳಿ	೨೪—	೩೦—೧೦
ಉದ್ದು	—	—
ಹೆಸರು	೩೪—೮	೪೨—೮
ಅಲಸಂದೆ	೩೨—	೪೭—
ಅವರೆ	೩೭—೧೦	—
ಹುಣಿಸೆಹಣ್ಣು	೫—೧೧	೧೪—೩
ಮೆಣಸಿನಕಾಯಿ	೨೨—	೩೪—೮
ಸೀಗೆಕಾಯಿ	—	—
ಬೆಲ್ಲ	೫—	—
ತೆಂಗಿನಕಾಯಿ	೮೦—	೨೭೩—

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಏಷ್ಯಾ ಪ್ರಧಾನಿಗಳ ಸಮ್ಮೇಳನಕ್ಕೆ ಪಾಕೀಸ್ತಾನದ ಬಹಿಷ್ಕಾರವೇ ?

ಪಾಕೀಸ್ತಾನದ ಬೆದರಿಕೆ

ಸಿಂಹಳ ಪ್ರಧಾನಿ ಸರ್ ಜಾನ್ ಕೊಟೇಲವಾಲಾರವರು ಕರೆದಿರುವ ಆಗ್ನೇಯ ಏಷ್ಯಾ ರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನದಲ್ಲಿ ಅಮೆರಿಕಾ ಮತ್ತು ಪಾಕೀಸ್ತಾನಗಳ ನಡುವೆ ನಡೆಯುತ್ತಿರುವ ಮಿಲಿಟರಿ ಒಪ್ಪಂದ ವಿಷಯವನ್ನೆಲ್ಲಾದರೂ ಚರ್ಚಿಸುವುದಾದರೆ ತಾನು ಈ ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲವೆಂದು ಪಾಕೀಸ್ತಾನವು ಸಿಂಹಳ ಸರ್ಕಾರಕ್ಕೆ ಈಗಾಗಲೇ ತಿಳಿಸಿರುವುದಾಗಿ ಹೇಳಲಾಗಿದೆ.

ಮಾರಾಟ ತೆರಿಗೆ ವಸೂಲಿ ಬಗ್ಗೆ ದಾವಾ

ಮೈಸೂರು ೮

ಮೈಸೂರು ಚಾಮುಂಡಿಪುರಂನಲ್ಲಿರುವ ರಿಟೈರ್ಡ್ ಎಲೆಕ್ಟ್ರಿಕಲ್ ಇಂಜನಿಯರವರಾದ ಶ್ರೀಮಾನ್ ಬಿ. ಶ್ರೀನಿವಾಸಯ್ಯರ್‌ರವರು ತಾರೀಖು 7—1—54 ರಲ್ಲಿ ಮೈಸೂರು ಒಂದನೇ ಮುನ್ಸೀಫ್ ಕೋರ್ಟಿನಲ್ಲಿ ಕೆ. ಆರ್. ಮೊಹಲ್ಲಾ ಹದಿಮೂರನೇ ರೇಷನ್ ಡಿಪೋ ಮಾಲೀಕರ ಮೇಲೆ ದಾವಾ ದಾಖಲ್ಮಾಡಿ ಗಿರಾಕಿಯ 'ಟರ್ನ್ ಓವರ್' ನ ರೂಪಾಯಿನ ಭಿನ್ನಾಂಶದಮೇಲೆ ಎಂದರೆ ಆಣ ಪೈಗಳನ್ನು ರೂ-ವೆಂದು ಭಾವಿಸಿ ೩ ಪೈ ಸೇಲ್ಸ್‌ಟ್ಯಾಕ್ಸ್ ವಸೂಲಿ ಮಾಡುತ್ತಲಿರುವುದು ರಾಜ್ಯಾಂಗದ ೨೬೫ನೇ ವಿಧಿಗೆ ವಿರೋಧವಾದ್ದರಿಂದಲೂ ಮತ್ತು ಮಾಲೀಕರುಗಳು ಸರ್ಕಾರಕ್ಕೆ ಒಪ್ಪಿಸುವಾಗ ರೂಪಾಯಿನಭಿನ್ನಾಂಶಕ್ಕೆ ಸೇಲ್ಸ್‌ಟ್ಯಾಕ್ಸ್ ಆಕ್ಟ್ ಪ್ರಕಾರವೇ ಕೊಡಬೇಕಾಗಿಲ್ಲವಾದರೂ ಮಾಲೀಕರುಗಳು ಗಿರಾಕಿಗಳಿಂದ ವಸೂಲಿ ಮಾಡುತ್ತಿರುವುದು ರಾಜ್ಯಾಂಗದ ೧೪ನೇ ವಿಧಿಗೆ ವಿರೋಧವಾದ್ದರಿಂದಲೂ ಇನ್ನುಮುಂದೆ ಗಿರಾಕಿಗಳಿಂದ ರೂ. ವಿನ ಭಿನ್ನಾಂಶಕ್ಕೆ ವಸೂಲಿಮಾಡದಂತೆ ತಡೆ ಆಜ್ಞೆ ಮಾಡಬೇಕೆಂಬುದಾಗಿಯೂ ಮತ್ತು ಮೇಲ್ಕಂಡಂತೆ ತಮ್ಮಿಂದ ವಸೂಲಿಮಾಡಿದ ಟ್ಯಾಕ್ಸನ್ನು ವಾಪಸು ಕೊಡಿಸಬೇಕೆಂತಲೂ ಸಹ ಕೋರಿದ್ದಾರೆ.

ನಾಳೆ ನೀರು ನಿಲ್ಲುತ್ತದೆ

ಮೈಸೂರು ೯

ನಾಳೆಯದಿನ ಬೆಳಗ್ಗೆ ೮ಗಂಟೆಯಿಂದ ಮದ್ಯಾಹ್ನ ೪ ಗಂಟೆವರೆವಿಗೆ ವಿದ್ಯುಚ್ಛಕ್ತಿ ಸರಬರಾಜನ್ನು ಸಾರ್ವತ್ರಿಕವಾಗಿ ನಿಲ್ಲಿಸುತ್ತದೆಯಾದ್ದರಿಂದ ಆ ವೇಳೆಯಲ್ಲಿ ನೀರು ಸರಬರಾಜು ಇರುವುದಿಲ್ಲ. ಆದಕಾರಣ ಆದಕ್ಕೆ ಮೊದಲೇ ಪೌರರು ಸಾಕಷ್ಟು ನೀರನ್ನು ಶೇಖರಿಸಿಟ್ಟುಕೊಳ್ಳಬೇಕಾಗಿ ಪುರಸಭಾಧಿಕಾರಿಗಳು ಕೋರಿರುತ್ತಾರೆ.

ವಾರ್ಷಿಕೋತ್ಸವ

ಮೈಸೂರು ೯

ರಾಜಪರಿವಾರ ಸಂಘದ ಮೂರನೇ ವಾರ್ಷಿಕೋತ್ಸವವು ಈ ಸಂಜೆ ೭ ಗಂಟೆಗೆ ವೀರನಗೆರೆಯಲ್ಲಿ ನಡೆಯುತ್ತದೆ. ವಿಧಾನ ಸಭಾಸದಸ್ಯ ಶ್ರೀ ಎ. ಭೀಮಪ್ಪನಾಯಕರು ಆರಂಭ ಭಾಷಣ ಮಾಡುತ್ತಾರೆ. ದರಬಾರ್‌ಭಕ್ಷಿ ಶ್ರೀ ಹೆಚ್. ಎಲ್. ದೇವರಾಜ ಅರಸುರವರು ಅಧ್ಯಕ್ಷತೆ ವಹಿಸುವರು.

ಉಪಾಧ್ಯಾಯರ ದಿನ

ಭಾರತದಲ್ಲಿರುವ ಸುಮಾರು ೧೦ ಲಕ್ಷ ಮಂದಿ ಪ್ರಾಥಮಿಕ ಶಾಲಾ ಉಪಾಧ್ಯಾಯರು ತಮ್ಮ ಕುಂದುಕೊರತೆಗಳ ಬಗ್ಗೆ ಪ್ರತಿವರ್ಷ ಜನವರಿ ೭ ನೇ ತಾರೀಖು 'ಉಪಾಧ್ಯಾಯರ' ದಿನವನ್ನಾಗಿ ಆಚರಿಸಬೇಕೆಂದು ನಾಗಪುರದಲ್ಲಿ ಮೊನ್ನೆ ಸಮಾವೇಶಗೊಂಡಿದ್ದ ಅಖಿಲಭಾರತ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಮ್ಮೇಳನದಲ್ಲಿ ನಿರ್ಧರಿಸಲಾಗಿದೆ. ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳು ಆದಿನವನ್ನು ರಜಾವಾಗಿ ಪರಿಗಣಿಸಬೇಕೆಂದೂ ಕೋರಲಾಗಿದೆ.

ಕೇಂದ್ರಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸ ಕಮೀಷನ್ ನೇಮಿಸಬೇಕೆಂದೂ ಒತ್ತಾಯ ಪಡಿಸಲಾಗಿದೆ.

ತಿರುವಾಂಕೂರ್-ಕೊಚ್ಚಿ ಚುನಾವಣೆ

ತಿರುವಾಂಕೂರ್-ಕೊಚ್ಚಿಯಲ್ಲಿ ನಡೆಯಲಿರುವ ಮಹಾಚುನಾವಣೆಗಳಲ್ಲಿ ಈಗಾಗಲೇ ೧೧೩ ಸ್ಥಾನಗಳಿಗೆ ೩೦೦ ಉಮೇದುವಾರರು ಅರ್ಜಿ ಸಲ್ಲಿಸಿರುವುದಾಗಿ ತಿಳಿಯಬರುತ್ತದೆ.

ಅಪೆರಾ
7-1-53 ರಿಂದ ಅಮೋಘ 4ನೇ ವಾರ
ಆರ್. ಎನ್. ಪಿಕ್ಚರ್ಸ್‌ರವರ
ಜಾತಕ ಫಲ
(ಕನ್ನಡ)
ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ರಣಜಿತ್
7-1-54 ರಿಂದ ಅಮೋಘ ಪ್ರಾರಂಭ
ಪ್ರತಿದಿನ 3 ಆಟಗಳು
ಧೂನ್ (ಹಿಂದಿ)
ಪಾತ್ರ:— ನರ್ಗಿಸ್, ರಾಜಕಪೂರ್, ಮೋತಿಲಾಲ್

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೧೪

೧೧-೧-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ರಾಷ್ಟ್ರೀಯ ಪುನರ್ನಿರ್ಮಾಣಕ್ಕಾಗಿ ಸೈನ ರಚನೆ

ಎ. ಐ. ಸಿ. ಸಿ. ಯಲ್ಲಿ ನಿರ್ಣಯ ಮಂಡಿಸಲಾಗುತ್ತದೆ

ದೇಶದ ಅಭಿವೃದ್ಧಿ ಕಾರ್ಯಗಳನ್ನು ತ್ವರಿತಗೊಳಿಸಲು ಸ್ವಂತ ಬಂಡವಾಳದ ಮೇಲೆ ೫ ಲಕ್ಷ ಬಲಯುತ ರಾಷ್ಟ್ರೀಯ ಪುನಃನಿರ್ಮಾಣ ಸೇನೆಯನ್ನು ನಿರ್ಮಿಸಬೇಕೆಂದು ಪಶ್ಚಿಮ ಬಂಗಾಳದ ಶಾಸನಸಭಾ ಸದಸ್ಯರೊಬ್ಬರು ಕಲ್ಯಾಣಿಯಲ್ಲಿ ನಡೆಯಲಿರುವ ಎ. ಐ. ಸಿ. ಸಿ. ಅಧಿವೇಶನದಲ್ಲಿ ಮಂಡಿಸಲಿದ್ದಾರೆ.

ಈ ಸೈನ್ಯಕ್ಕೆ ನಿರುದ್ಯೋಗಿಗಳನ್ನು ಸೇರಿಸಿಕೊಂಡು ಭಾರತ ಸೈನ್ಯಶಿಕ್ಷಣ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ಶಿಕ್ಷಣ ನಡೆಯಬೇಕೆಂದು ಸೂಚಿಸಲಾಗುತ್ತದೆ.

ಭಾರತಕ್ಕೆ ಬ್ರಿಟಿಷ್ ಟೆಲಿಫೋನ್ ಪ್ರವೀಣರು

ಕಲ್ಕತ್ತಾದಲ್ಲಿರುವ ಟೆಲಿಫೋನ್ ವ್ಯವಸ್ಥೆಯನ್ನು 'ಆಟೋಮ್ಯಾಟಿಕ್' ಆಗಿ ಪರಿವರ್ತಿಸಲು ಭಾರತ ಅಂಚೆ ಮತ್ತು ತಂತಿ ಇಲಾಖೆಯು ಬ್ರಿಟಿಷ್ ಅಂಚೆ ಇಲಾಖೆಯು ೪ ಅಧಿಕಾರಿಗಳ ನೆರವನ್ನು ಪಡೆಯಲು ಅವರನ್ನು ಆಹ್ವಾನಿಸಿದೆ. ಈ ನಾಲ್ವರು ಸದ್ಯದಲ್ಲಿಯೇ ಭಾರತಕ್ಕೆ ಆಗಮಿಸಿ ಇಲ್ಲಿ ೩ ವರ್ಷಗಳ ಕಾಲ ಇರುತ್ತಾರೆ.

ಹಂಪೆ

ವಿಜಯನಗರ ರಾಜರ ಕಾಲದಲ್ಲಿ ಜನರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ವಿವರಿಸುವಂತಹ 'ಹಂಪೆ' ಎಂಬ ಕಾರ್ಯಕ್ರಮವನ್ನು ಅಖಿಲ ಭಾರತ ರೇಡಿಯೋವಿನ ಮೈಸೂರು ಶಾಖೆ ನಾಳೆ ರಾತ್ರಿ ೮-೩೦ ಗಂಟೆಗೆ ಪ್ರಚಾರಮಾಡಲಿದೆ.

ಹಿಂದೀ ಭಾಷಾಪ್ರೇಮಿಗಳ ಪಕ್ಷ

ಹಿಂದೀ ಭಾಷಾಪ್ರೇಮಿಗಳು ತಮ್ಮದೇ ಆದ ಒಂದು ಪಕ್ಷವನ್ನು ರಚಿಸಿಕೊಂಡರೆ ಆಗ ಅವರ ಉದ್ದೇಶ ಸಫಲಗೊಳ್ಳುತ್ತದೆ ಎಂದು ಕಾಂಗ್ರೆಸ್ ಮಾಜಿ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಾಂಡನ್‌ರವರು ಹೇಳಿದ್ದಾರೆ.

ಯುವಕ ಸೋಷಲಿಸ್ಟ್ ಸಮ್ಮೇಳನ

ಅಖಿಲ ಭಾರತ ಯುವಕ ಸೋಷಲಿಸ್ಟ್ ಸಮ್ಮೇಳನವು ಇಂದಿನಿಂದ ೧೫ನೇ ತಾರೀಖಿನವರೆಗೆ ಲಕ್ನೋದಲ್ಲಿ ನಡೆಯುತ್ತದೆ.

ಇನಾಂಗಳ ರದ್ದಿಯಾತಿ ಮಸೂದೆ

ಶೃಂಗೇರಿ ಜಹಗೀರಿಗೂ ಅನ್ವಯಿಸುತ್ತದೆ

ಬೆಂಗಳೂರು ೧೧

ಈದಿನ ಪ್ರಾರಂಭವಾಗಲಿರುವ ಶಾಸನ ಸಭೆಯಲ್ಲಿ ಸರ್ಕಾರವು ಮಂಡಿಸಲಿರುವ ಮಠೀಯ ಮತ್ತು ಧಾರ್ಮಿಕ ಇನಾಂಗಳನ್ನು ರದ್ದುಗೊಳಿಸುವ ಮಸೂದೆಯ ಕರಡನ್ನು ಶಾಸನ ಸಭಾಧ್ಯಕ್ಷರು ಸಾರ್ವಜನಿಕರ ಅವಗಾಹನೆಗೆ ಪ್ರಕಟಿಸಿದ್ದಾರೆ.

ಈ ಮಸೂದೆಯು ಬಳ್ಳಾರಿಜಿಲ್ಲೆಯನಹ ಪ್ರಾಂತ್ಯದ ಮಿಕ್ಕಎಲ್ಲಾ ಜಿಲ್ಲೆಗಳಿಗೂ ಅನ್ವಯಿಸಲು ಅವಕಾಶ ಕಲ್ಪಿಸಲಾಗಿದೆ.

ಇನಾಂ ಕೊಟ್ಟ ಉದ್ದೇಶಕ್ಕೆ ಧಕ್ಕೆ ಬರದಂತೆ ಇನಾಂ ಪಡೆದಿರುವ ಸಂಸ್ಥೆಗೆ ಈ ಮಸೂದೆಪ್ರಕಾರ ಕಳೆದು ಕೊಳ್ಳುವ ಆಸ್ತಿಯ ಆದಾಯದ ಮೊತ್ತವನ್ನು ವಾರ್ಷಿಕ ಭತ್ಯವನ್ನಾಗಿ ಕೊಡಲ ಅವಕಾಶವನ್ನು ಈಗ ಕಲ್ಪಿಸಲಾಗಿದೆ.

ಹಣಕಾಸಿನ ಪರಿಣಾಮದ ವಿವರಗಳನ್ನು ಈ ಮಸೂದೆಯಲ್ಲಿ ಸೂಚಿಸಲಾಗಿದೆ.

ಈ ಮಸೂದೆಯು ಶೃಂಗೇರಿ ಜಹಗೀರಿಗೂ ಸಹ ಅನ್ವಯಿಸುತ್ತದೆ.

ಸರ್ಕಾರವು ಇನಾಂಗಳನ್ನೆಲ್ಲಾ ವಹಿಸಿಕೊಂಡನಂತರ ಪ್ರತಿವರ್ಷವೂ ಈ ಇನಾಂ ಅನುಭವಿಸುತ್ತಿರುವವರಿಗೆ ಸುಮಾರು ೧೮ ಲಕ್ಷ ರೂಪಾಯಿಗಳನ್ನು ಭತ್ಯವಾಗಿ ಕೊಡಬೇಕಾಗುತ್ತದೆ. ಸರ್ಕಾರಕ್ಕೆ ಕಂದಾಯ ರೀತ್ಯ ೩ ಲಕ್ಷ ರೂಪಾಯಿ ಹೆಚ್ಚಿಗೆ ವರಮಾನ ಬರುತ್ತದೆ.

ಕೈಗಾರಿಕಾ ಪ್ರಗತಿ ಸಾಲದು

ದೇಶದ ಅಭ್ಯುದಯ ಮತ್ತು ಭದ್ರತೆಗಾಗಿ ದೇಶದಲ್ಲಿ ಭಾರಿ ಮತ್ತು ಸಣ್ಣ ಕೈಗಾರಿಕೆಗಳನ್ನು ಯೋಜಿತ ತಳಹದಿಯ ಮೇಲೆ ಅಭಿವೃದ್ಧಿಪಡಿಸುವುದು ಅತ್ಯಗತ್ಯ ಈಗ ಕೈಗಾರಿಕಾ ಶಿಕ್ಷಣ ಮತ್ತು ಅದರ ಪ್ರಗತಿ ನಿಧಾನವಾಗಿ ನಡೆಯುತ್ತಿದೆ. ಇದು ಸರಿಯಲ್ಲವೆಂದು ಅಖಿಲ ಭಾರತ ಉತ್ಪಾದಕರ ಸಂಘದ ಅಧ್ಯಕ್ಷ ಡಾ॥ ಎಂ. ವಿಶ್ವೇಶ್ವರಯ್ಯನವರು ಹೇಳಿದ್ದಾರೆ.

ಬೊಂಬಾಯಿ ಸರ್ಕಾರ ವಿರುದ್ಧ ಚಳುವಳಿ

ಇಂಗ್ಲೀಷ್ ಶಿಕ್ಷಣ ಮಾಧ್ಯಮ ನಿಷೇಧಕ್ಕೆ ಪ್ರತಿಭಟನೆ

ಬೊಂಬಾಯಿನಲ್ಲಿ ಸರ್ಕಾರವು ಇಂಗ್ಲೀಷ್ ಶಿಕ್ಷಣಮಾಧ್ಯಮದ ಮೇಲೆ ನಿಷೇಧವನ್ನು ವಿಧಿಸಿರುವುದನ್ನು ಪ್ರತಿಭಟಿಸಲು ಚಳುವಳಿಯನ್ನು ಹೂಡಲು ಇಂಗ್ಲೀಷ್ ಮಾಧ್ಯಮವಾಗಿ ಇರುವ ಎಲ್ಲಾ ಶಾಲಾ ಮುಖ್ಯೋಪಾಧ್ಯಾಯರು ತೀರ್ಮಾನಿಸಿದ್ದಾರೆ.

ಬ್ರಿಟಿಷ್ ಕಾಮೆಟ್ ಜಟ್ ವಿಮಾನ ಸಮುದ್ರಪಾಲು

೨೯ ಪ್ರವಾಸಿಕರು ಮತ್ತು ೭ ಮಂದಿ ಚಾಲಕದವರನ್ನೊಳಗೊಂಡಿದ್ದ ಬ್ರಿಟಿಷ್ ಕಾಮೆಟ್ ಜೆಟ್ ವಿಮಾನವೊಂದು ನಿನ್ನೆ ದಿನ ಮೆಡಿಟರೇನಿಯನ್ ಸಮುದ್ರದಲ್ಲಿ ಬಿದ್ದುಹೋಯಿತೆಂದು ವರದಿಯಾಗಿದೆ. ಈ ವಿಮಾನವು ಸಿಂಗಪುರದಿಂದ ಲಂಡನ್ನಿಗೆ ಹೋಗುತ್ತಿದ್ದಿತು.

ಸಿಂಹಳ-ಭಾರತ ಮಾತುಕತೆ

ಸಿಂಹಳ ಮತ್ತು ಭಾರತ ಪ್ರಧಾನಿಗಳ ಸಮ್ಮೇಳನವು ಮುಂದಿನತಿಂಗಳು ಪ್ರಾರಂಭವಾಗಲಿವೆ. ಈ ಸಂದರ್ಭದಲ್ಲಿ ಪ್ರಧಾನಿ ನೆಹರೂರೊಡನೆ ಪೂರ್ವಭಾವಿ ಮಾತುಕತೆಗಳಿಗಾಗಿ ಸಿಂಹಳದಲ್ಲಿರುವ ಭಾರತ ಹೈಕಮೀಷನರ್ ಶ್ರೀ ಸಿ. ಸಿ. ದೇಸಾಯಿಯವರು ಭಾರತಕ್ಕೆ ಆಗಮಿಸಿದ್ದಾರೆ.

ಭಾರತೀಯರಲ್ಲಿ ಆಲಸ್ಯ ಮನೋಭಾವ

ಸ್ವಾತಂತ್ರ್ಯ ಬಂದನಂತರ ಭಾರತೀಯರಲ್ಲಿ ಆಲಸ್ಯ ಮನೋಭಾವವು ಹೋಗಿ ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಪಡೆಯಲು ದುಡಿಯಬೇಕೆಂದು ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರು ಹೇಳಿದ್ದಾರೆ.

ಚುನಾವಣೆಯಲ್ಲಿ ಸರ್ಕಾರಿ ಅಧಿಕಾರಿಗಳ ಪಾತ್ರ ಇರಕೂಡದು

ಮುಂದಿನ ಚುನಾವಣೆಗಳಲ್ಲಿ ಸರ್ಕಾರಿ ಅಧಿಕಾರಿಗಳು ಯಾವ ಪಕ್ಷ ಅಥವಾ ಸ್ವತಂತ್ರ ಸ್ಪರ್ಧಿಯ ಪ್ರಚಾರ ಮುಂತಾದ ಕಾರ್ಯದಲ್ಲಿ ಸರ್ಕಾರಿ ನೌಕರರು ಭಾಗವಹಿಸಕೂಡದೆಂದು ತಿರುವಾಂಕೂರ್—ಕೊಚ್ಚಿನ್ ಸರ್ಕಾರ ಪ್ರಕಟಣೆಯನ್ನಿತ್ತಿದೆ.

ಪ್ರತಿಭಟನಾ ದಿನಾಚರಣೆ

ಅಮೆರಿಕಾ-ಪಾಕೀಸ್ತಾನ ಸೈನ್ಯ ಒಪ್ಪಂದಕ್ಕೆ ವಿರೋಧವನ್ನು ವ್ಯಕ್ತಪಡಿಸಲು ಎಲ್ಲಾ ಕಾಂಗ್ರೆಸ್ ಸಮಿತಿಗಳು ಜನವರಿ ೧೫ನೇ ತಾರೀಖು ಪ್ರತಿಭಟನಾ ದಿನವನ್ನಾಗಿ ಆಚರಿಸಬೇಕೆಂದು ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿಯು ತನ್ನ ಉಪಸಮಿತಿಗಳಿಗೆ ಸೂಚನೆಯನ್ನಿತ್ತಿದೆ.

೩೦೦ ಗ್ರಾಮಗಳಲ್ಲಿ ಅಭಾವ ಪರಿಸ್ಥಿತಿ

ಬಿಕಾನೀರ್ ಜಿಲ್ಲೆಗೆ ಸೇರಿದ ೩೦೦ ಗ್ರಾಮಗಳಲ್ಲಿ ವಾಸಿಸುವ ರೈತರು ಕೊಳ್ಳುವಶಕ್ತಿಯನ್ನು ಪೂರ್ಣವಾಗಿಕಳೆದುಕೊಂಡು ಅಭಾವ ಪರಿಸ್ಥಿತಿಗೆ ಒಳಗಾಗಿರುವುದಾಗಿ ವರದಿಯಾಗಿದೆ.

ಭಾರತದಲ್ಲಿ ಪಾಕೀಸ್ತಾನದ ಮೇಲೆ ಅಪಪ್ರಚಾರನಿಲ್ಲಲಿ

ಅಮೆರಿಕಾಕ್ಕೆ ಯಾವ ಸೈನ್ಯನೆಲೆಯನ್ನು ಕೊಡದೆ, ಕೇವಲ ತನ್ನ ರಕ್ಷಣೆಗಾಗಿ ಸೈನ್ಯ ನೆರವನ್ನು ಪಡೆಯಲು ಪಾಕೀಸ್ತಾನವು ಯೋಚಿಸುತ್ತಲಿರುವುದಕ್ಕಾಗಿ ಭಾರತದಲ್ಲಿ ವಿರೋಧ ಚಳವಳಿಯು ಪ್ರಾರಂಭವಾಗಿದೆ. ಪಾಕೀಸ್ತಾನಕ್ಕೆ ಯಾವ ರಾಷ್ಟ್ರದ ಮೇಲೂ ಆಕ್ರಮಣಮಾಡುವ ಉದ್ದೇಶವಿಲ್ಲ. ಭಾರತದಲ್ಲಿ ಆಗುತ್ತಿರುವ ಈ ವಿರೋಧ ಚಳುವಳಿಯನ್ನು ಕೂಡಲೇ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ತಡೆಗಟ್ಟಬೇಕೆಂದು ಪಾಕ್ ಪ್ರಧಾನಿ ಮಹಮದ್ ಅಲಿಯವರು ಪ್ರಧಾನಿ ನೆಹರುರವರಿಗೆ ಬಿನ್ನವಿಸಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಅವರು ಮಾತನಾಡುತ್ತ ಪರದೇಶಗಳಿಂದ ಸೈನ್ಯನೆರವು ಅಥವಾ ಆರ್ಥಿಕ ನೆರವು ಪಡೆಯುವುದರಲ್ಲಿ ವ್ಯತ್ಯಾಸವೇನೂ ಇಲ್ಲವೆಂದು ಹೇಳಿದ್ದಾರೆ.

ಸೂಕ್ತ ಬಹುಮಾನ

ಎಂ. ಜಯಕುಮಾರ್ Ex-I.A.M-C. ಇವರ ಮಿಲಿಟರಿ ಪೆನ್ಷನ್ ಸರ್ಟಿಫಿಕೇಟ್ ಕಳೆದು ಹೋಗಿದೆ ಯಾರಿಗಾದರೂ ಸಿಕ್ಕಿದರೆ ಅದನ್ನು No. 3821, ರೈಲಾಶ್ರಯ, ಜಯನಗರ, ಮೈಸೂರು ಈ ಅಡ್ರೆಸ್ಸಿಗೆ ತಲುಪಿಸಿದರೆ ಸೂಕ್ತಬಹುಮಾನ ಕೊಡಲಾಗುತ್ತದೆ.

ಆಂಧ್ರ ಶಾಸನ ಸಭೆಯಲ್ಲಿ ಸರ್ಕಾರಕ್ಕೆ ಜಯ

ತಮ್ಮಲ್ಲಿ ಅವಿಶ್ವಾಸ ವ್ಯಕ್ತಪಡಿಸಿದರೆ ಕೂಡಲೇ ರಾಜೀನಾಮೆ ಕೊಡುವುದಾಗಿ ಪ್ರಕಾಶಂ

ಆಂಧ್ರದ ತಾತ್ಕಾಲಿಕ ರಾಜಧಾನಿಯಾದ ಕರ್ನೂಲ್‌ನಲ್ಲಿ ಸರ್ಕಾರಿ ಕಟ್ಟಡಗಳನ್ನು ಕಟ್ಟಲು ಬೇಕಾಗುವ ಹಣಕ್ಕಾಗಿ ಸರ್ಕಾರವು ಶಾಸನಸಭೆಯಲ್ಲಿ ಮಂಡಿಸಿದ್ದ ಬೇಡಿಕೆಗೆ ನಿನ್ನೆ ಒಪ್ಪಿಗೆ ದೊರೆಯಿತು. ಈ ಸಂದರ್ಭದಲ್ಲಿ ಕೃಷಕಲೋಕ ಪಕ್ಷವು ರಾಜಧಾನಿ ವಿಷಯವಾಗಿ ಮಂಡಿಸಿದ್ದ ಖೋತಾ ನಿರ್ಣಯವು ೬೫-೭೦ ಮತಗಳಿಂದ ಬಿದ್ದು ಹೋಯಿತು

ಈ ಸಂದರ್ಭದಲ್ಲಿ ಆಂಧ್ರ ಮುಖ್ಯ ಮಂತ್ರಿ ಶ್ರೀ ಟಿ. ಪ್ರಕಾಶಂರವರು ಸಭೆಯ ವಿಶ್ವಾಸವನ್ನು ಕೋರುತ್ತಾ ತಮ್ಮಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸಿದರೆ ಈಗಲೇ ರಾಜೀನಾಮೆ ಸಲ್ಲಿಸುವುದಾಗಿ ತಿಳಿಸಿದರು. ಆದರೆ ಮಂಡಿಸಿದ್ದ ಬೇಡಿಕೆಗೆ ಒಪ್ಪಿಗೆ ದೊರೆತುದುದರಿಂದ ಸಭಾಧ್ಯಕ್ಷರು ವಿಶ್ವಾಸ ಸೂಚಕ ನಿರ್ಣಯವನ್ನು ತೆಗೆದುಕೊಳ್ಳಲಿಲ್ಲ.

ಬೊಂಬಾಯಿ-ಮಂಗಳೂರು ನೂತನ ರಸ್ತೆ

ಪಶ್ಚಿಮತೀರದಲ್ಲಿ ಉಪಯುಕ್ತವಾಗುವಂತೆ ಬೊಂಬಾಯಿ ಮತ್ತು ಮಂಗಳೂರು ನಡುವೆ ಒಂದು ನೂತನ ರಸ್ತೆಯನ್ನು ನಿರ್ಮಿಸಲಾಗುವುದಾಗಿ ತಿಳಿಯಬರುತ್ತದೆ. ಮೋಟಾರುವಾಹನ ಮುಂತಾದುವುಗಳ ಸಂಚಾರಕ್ಕೆ ಇದು ಬಹಳ ಉಪಯುಕ್ತವಾಗುತ್ತದೆ ಈ ರಸ್ತೆಯು ಸುಮಾರು ೫೦೦ ಮೈಲಿ ಉದ್ದವಿರುತ್ತದೆ. ಇದರಲ್ಲಿ ಭಾರಿ ೫ ಸೇತುವೆಗಳ ನಿರ್ಮಾಣ ಕಾರ್ಯವು ಈಗಾಗಲೇ ಪ್ರಾರಂಭವಾಗಿದೆ. ಈ ರಸ್ತೆಯ ವೆಚ್ಚದಲ್ಲಿ ಅರ್ಧಭಾಗವನ್ನು ಕೇಂದ್ರಸರ್ಕಾರವು ವಹಿಸಿಕೊಳ್ಳುತ್ತದೆ. ಇದಕ್ಕಾಗಿ ಸದ್ಯಕ್ಕೆ ಒಂದು ಕೋಟಿ ರೂಪಾಯಿಗಳನ್ನು ಕೇಂದ್ರವು ಮಂಜೂರ್ಮಾಡಿದೆ.

ವಿಮಾನ ಅಪಘಾತ

ಮೊನ್ನೆಯದಿನ ಸಂಜೆ ಬೆಂಗಳೂರಿನಿಂದ ಹೊರಟ ಪ್ರಯೋಗಾರ್ಥ ವಿಮಾನವೊಂದು ಮದ್ರಾಸ್-ಚಿತ್ತೂರ್ ರಸ್ತೆಯಬಳಿ ಅಪಘಾತಕ್ಕೀಡಾಯಿತೆಂದೂ ಅದರಲ್ಲಿದ್ದ ಚಾಲಕ ಲೆಫ್ಟಿನೆಂಟ್ ದಂಡಪಾಣಿಯವರು ಪ್ಯಾರಾಚ್ಯೂಟ್‌ನಿಂದ ಸುರಕ್ಷಿತವಾಗಿ ಕೆಳಗಿಳಿದರೆಂದೂ ತಿಳಿಯಬರುತ್ತದೆ.

ಸಿಂಹಳ ಪ್ರಧಾನಿ ಭಾರತಕ್ಕೆ

ಸಿಂಹಳ ಪ್ರಧಾನಿ ಸರ್ ಜಾನ್ ಕೊಟೇಲವಾಲಾರವರು ಭಾರತಕ್ಕೆ ಮುಂದಿನ ಶುಕ್ರವಾರ ೧೫ನೇ ತಾರೀಖು ಆಗಮಿಸಲಿರುವರೆಂದು ತಿಳಿಯಬರುತ್ತದೆ.

ಕಾರ್ಮಿಕ ಸಚಿವರಲ್ಲಿ ನಿಯೋಗ

ಮೈಸೂರು ೯

ಕೆಲವು ಮಂದಿ ಮೋಟಾರು ಮಾಲೀಕರುಗಳು ಕೆಲಸಗಾರರಿಗೆ ಕಿರುಕುಳ ಕೊಡುತ್ತಿರುವುದು ಹಾಗೂ ಕೈಗಾರಿಕಾ ಕೋರ್ಟಿನ ಅವಾರ್ಡನ್ನು ಜಾರಿಗೆ ಕೊಡದಿರುವ ವಿಚಾರಗಳನ್ನು ಮೋಟಾರುಕೆಲಸಗಾರರ ಸಂಘದ ಪ್ರತಿನಿಧಿಗಳು ನಿನ್ನೆ ದಿನ ಕಾರ್ಮಿಕ ಸಚಿವರಲ್ಲಿ ನಿಯೋಗ ಹೋಗಿ ತಿಳಿಸಿದರು. ಮಾಲೀಕರ ಪೈಕಿ ಕೆಲವರು ವಿನಾಕಾರಣ ಕೆಲಸಗಾರರನ್ನು ತೆಗೆದುಹಾಕುತ್ತಿರುವರೆಂಬುದನ್ನು ಸಚಿವರಿಗೆ ತಿಳಿಸಿದರು. ಈ ವಿಚಾರಗಳನ್ನು ಸಚಿವರು ಕೇಳಿ ಅವಾರ್ಡನ್ನೆಲ್ಲಾ ಜಾರಿಗೆ ಕೊಡುವಂತೆ ಕೂಡಲೇ ಏರ್ಪಾಡು ಮಾಡುವುದಾಗಿಯೂ, ಹಾಗೆ ಜಾರಿಗೆ ಕೊಡದಿರುವರ ಮೇಲೆ ತಕ್ಕ ಕ್ರಮ ಕೈಗೊಳ್ಳಲು ಸಂಬಂಧ ಪಟ್ಟವರಿಗೆ ಸೂಚನೆ ಕೊಡುವುದಾಗಿಯೂ ಭರವಸೆ ಇತ್ತರು.

ನಿಯೋಗದಲ್ಲಿ ಐ. ಎನ್. ಟಿ. ಯು. ಸಿ. ಕಾರ್ಯದರ್ಶಿಗಳಾದ ಶ್ರೀ ಕೇಶವ ಕುಲಕರ್ಣಿ, ಶ್ರೀಗಳಾದ ಎ. ರಾಮಣ್ಣ, ಕೆ. ದೌಲತ್‌ರಾವ್, ಟಿ. ಎಸ್. ಸುಬ್ಬಣ್ಣ ಮುಂತಾದವರು ಇದ್ದರು .

-ಮೈಸೂರು ಪೇಟೆಧಾರಣೆ-

ತಾರೀಖು ೮—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—೧೪	೨೪ ೧೨
ಎಳ್ಳು	೭೨-೨	—
ಹರಳು	೩೫—	೪೦—೧೦
ಹೊಂಗೆಬೀಜ	—	—
ಹುಚ್ಚೆಳ್ಳು	೩೫—೨	೪೭—೧೪
ಹುರಳಿ	೨೪—	೩೦—೧೦
ಉದ್ದು	—	—
ಹೆಸರು	೩೪—೮	೪೨—೮
ಅಲಸಂದೆ	೩೨—	೪೭—
ಅವರೆ	೩೭—೧೦	—
ಹುಣಸೆಹಣ್ಣು	೫—೧೧	೧೪—೩
ಮೆಣಸಿನಕಾಯಿ	೨೨—	೩೪—೮
ಸೀಗೆಕಾಯಿ	—	—
ಬೆಲ್ಲ	೫—	—
ತೆಂಗಿನಕಾಯಿ	೮೦—	೨೭೩—

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಏಷ್ಯಾ ಪ್ರಧಾನಿಗಳ ಸಮ್ಮೇಳನಕ್ಕೆ ಪಾಕೀಸ್ತಾನದ ಬಹಿಷ್ಕಾರವೇ ?

ಪಾಕೀಸ್ತಾನದ ಬೆದರಿಕೆ

ಸಿಂಹಳ ಪ್ರಧಾನಿ ಸರ್ ಜಾನ್ ಕೊಟೇಲವಾಲಾರವರು ಕರೆದಿರುವ ಆಗ್ನೇಯ ಏಷ್ಯಾ ರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನದಲ್ಲಿ ಅಮೆರಿಕಾ ಮತ್ತು ಪಾಕೀಸ್ತಾನಗಳ ನಡುವೆ ನಡೆಯುತ್ತಿರುವ ಮಿಲಿಟರಿ ಒಪ್ಪಂದ ವಿಷಯವನ್ನೆಲ್ಲಾದರೂ ಚರ್ಚಿಸುವುದಾದರೆ ತಾನು ಈ ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲವೆಂದು ಪಾಕೀಸ್ತಾನವು ಸಿಂಹಳ ಸರ್ಕಾರಕ್ಕೆ ಈಗಾಗಲೇ ತಿಳಿಸಿರುವುದಾಗಿ ಹೇಳಲಾಗಿದೆ.

ಮೂರಾಟ ತೆರಿಗೆ ವಸೂಲಿ ಬಗ್ಗೆ ದಾವಾ

ಮೈಸೂರು ೮

ಮೈಸೂರು ಚಾಮುಂಡಿಪುರಂನಲ್ಲಿರುವ ರಿಟೈರ್ಡ್ ಎಲೆಕ್ಟ್ರಿಕಲ್ ಇಂಜನಿಯರವರಾದ ಶ್ರೀಮಾನ್ ಬಿ. ಶ್ರೀನಿವಾಸಯ್ಯರ್‌ರವರು ತಾರೀಖು 7—1—54 ರಲ್ಲಿ ಮೈಸೂರು ಒಂದನೇ ಮುನ್ಸೀಫ್ ಕೋರ್ಟಿನಲ್ಲಿ ಕೆ. ಆರ್. ಮೊಹಲ್ಲಾ ಹದಿಮೂರನೇ ರೇಷನ್ ಡಿಪೋ ಮಾಲೀಕರ ಮೇಲೆ ದಾವಾ ದಾಖಲ್ಮಾಡಿ ಗಿರಾಕಿಯು 'ಟರ್ನ್ ಓವರ್' ನ ರೂಪಾಯಿನ ಭಿನ್ನಾಂಶದಮೇಲೆ ಎಂದರೆ ಆಣ ಪೈಗಳನ್ನು ರೂ-ವೆಂದು ಭಾವಿಸಿ ೩ ಪೈ ಸೇಲ್ಸ್‌ಟ್ಯಾಕ್ಸ್ ವಸೂಲಿ ಮಾಡುತ್ತಲಿರುವುದು ರಾಜ್ಯಾಂಗದ ೨೬೫ನೇ ವಿಧಿಗೆ ವಿರೋಧವಾದ್ದರಿಂದಲೂ ಮತ್ತು ಮಾಲೀಕರುಗಳು ಸರ್ಕಾರಕ್ಕೆ ಒಪ್ಪಿಸುವಾಗ ರೂಪಾಯಿನಭಿನ್ನಾಂಶಕ್ಕೆ ಸೇಲ್ಸ್‌ಟ್ಯಾಕ್ಸ್ ಆಕ್ಟ್ ಪ್ರಕಾರವೇ ಕೊಡಬೇಕಾಗಿಲ್ಲವಾದರೂ ಮಾಲೀಕರುಗಳು ಗಿರಾಕಿಗಳಿಂದ ವಸೂಲಿ ಮಾಡುತ್ತಿರುವುದು ರಾಜ್ಯಾಂಗದ ೧೫ನೇ ವಿಧಿಗೆ ವಿರೋಧವಾದ್ದರಿಂದಲೂ ಇನ್ನುಮುಂದೆ ಗಿರಾಕಿಗಳಿಂದ ರೂ. ವಿನ ಭಿನ್ನಾಂಶಕ್ಕೆ ವಸೂಲಿಮಾಡದಂತೆ ತಡೆ ಆಜ್ಞೆ ಮಾಡಬೇಕೆಂಬುದಾಗಿಯೂ ಮತ್ತು ಮೇಲ್ಕಂಡಂತೆ ತಮ್ಮಿಂದ ವಸೂಲಿಮಾಡಿದ ಟ್ಯಾಕ್ಸನ್ನು ವಾಪಸು ಕೊಡಿಸಬೇಕೆಂತಲೂ ಸಹ ಕೋರಿದ್ದಾರೆ.

ನಾಳೆ ನೀರು ನಿಲ್ಲುತ್ತದೆ

ಮೈಸೂರು ೯

ನಾಳೆಯದಿನ ಬೆಳಿಗ್ಗೆ ೮ಗಂಟೆಯಿಂದ ಮದ್ಯಾಹ್ನ ೪ ಗಂಟೆವರೆವಿಗೆ ವಿದ್ಯುಚ್ಛಕ್ತಿ ಸರಬರಾಜನ್ನು ಸಾರ್ವತ್ರಿಕವಾಗಿ ನಿಲ್ಲಿಸುತ್ತದೆಯಾದ್ದರಿಂದ ಆ ವೇಳೆಯಲ್ಲಿ ನೀರು ಸರಬರಾಜು ಇರುವುದಿಲ್ಲ. ಆದಕಾರಣ ಅದಕ್ಕೆ ಮೊದಲೇ ಪೌರರು ಸಾಕಷ್ಟು ನೀರನ್ನು ಶೇಖರಿಸಿಟ್ಟುಕೊಳ್ಳಬೇಕಾಗಿ ಪುರಸಭಾಧಿಕಾರಿಗಳು ಕೋರಿರುತ್ತಾರೆ.

ವಾರ್ಷಿಕೋತ್ಸವ

ಮೈಸೂರು ೯

ರಾಜಪರಿವಾರ ಸಂಘದ ಮೂರನೇ ವಾರ್ಷಿಕೋತ್ಸವು ಈ ಸಂಜೆ ೭ ಗಂಟೆಗೆ ವೀರನಗೆರೆಯಲ್ಲಿ ನಡೆಯುತ್ತದೆ. ವಿಧಾನ ಸಭಾಸದಸ್ಯ ಶ್ರೀ ಎ. ಭೀಮಪ್ಪನಾಯಕರು ಆರಂಭ ಭಾಷಣ ಮಾಡುತ್ತಾರೆ. ದರಬಾರ್‌ಭಕ್ಷಿ ಶ್ರೀ ಹೆಚ್. ಎಲ್. ದೇವರಾಜ ಅರಸುರವರು ಅಧ್ಯಕ್ಷತೆ ವಹಿಸುವರು.

ಉಪಾಧ್ಯಾಯರ ದಿನ

ಭಾರತದಲ್ಲಿರುವ ಸುಮಾರು ೧೦ ಲಕ್ಷ ಮಂದಿ ಪ್ರಾಥಮಿಕ ಶಾಲಾ ಉಪಾಧ್ಯಾಯರು ತಮ್ಮ ಕುಂದುಕೊರತೆಗಳ ಬಗ್ಗೆ ಪ್ರತಿವರ್ಷ ಜನವರಿ ೭ ನೇ ತಾರೀಖು 'ಉಪಾಧ್ಯಾಯರ' ದಿನವನ್ನಾಗಿ ಆಚರಿಸಬೇಕೆಂದು ನಾಗಪುರದಲ್ಲಿ ಮೊನ್ನೆ ಸಮಾವೇಶಗೊಂಡಿದ್ದ ಅಖಿಲಭಾರತ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಮ್ಮೇಳನದಲ್ಲಿ ನಿರ್ಧರಿಸಲಾಗಿದೆ. ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳು ಆದಿನವನ್ನು ರಜಾವಾಗಿ ಪರಿಗಣಿಸಬೇಕೆಂದೂ ಕೋರಲಾಗಿದೆ.

ಕೇಂದ್ರಸರ್ಕಾರದವರು ಪ್ರಾಥಮಿಕ ವಿದ್ಯಾಭ್ಯಾಸ ಕಮೀಷನ್ ನೇಮಿಸಬೇಕೆಂದೂ ಒತ್ತಾಯ ಪಡಿಸಲಾಗಿದೆ.

ತಿರುವಾಂಕೂರ್-ಕೊಚ್ಚಿ ಚುನಾವಣೆ

ತಿರುವಾಂಕೂರ್-ಕೊಚ್ಚಿಯಲ್ಲಿ ನಡೆಯಲಿರುವ ಮಹಾಚುನಾವಣೆಗಳಲ್ಲಿ ಈಗಾಗಲೇ ೧೦೩ ಸ್ಥಾನಗಳಿಗೆ ೩೦೦ ಉಮೇದುವಾರರು ಅರ್ಜಿ ಸಲ್ಲಿಸಿರುವುದಾಗಿ ತಿಳಿಯಬರುತ್ತದೆ.

ಅಪೆರಾ
7-1-53 ರಿಂದ ಅಮೋಘ 4ನೇ ವಾರ
ಆರ್. ಎನ್. ಪಿಕ್ಚರ್ಸ್‌ರವರ
ಜಾತಕ ಫಲ
(ಕನ್ನಡ)
ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ರಣಜಿತ್
7-1-54 ರಿಂದ ಅಮೋಘ ಪ್ರಾರಂಭ
ಪ್ರತಿದಿನ 3 ಆಟಗಳು
ಧೂನ್ (ಹಿಂದಿ)
ಪಾತ್ರ:— ನರ್ಗಿಸ್, ರಾಜಕಪೂರ್, ಮೋತಿಲಾಲ್

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೧೪

೧೧-೧-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ರಾಷ್ಟ್ರೀಯ ಪುನರ್ನಿರ್ಮಾಣಕ್ಕಾಗಿ ಸೈನ್ಯ ರಚನೆ

ಎ. ಐ. ಸಿ. ಸಿ. ಯಲ್ಲಿ ನಿರ್ಣಯ ಮಂಡಿಸಲಾಗುತ್ತದೆ

ದೇಶದ ಅಭಿವೃದ್ಧಿ ಕಾರ್ಯಗಳನ್ನು ತ್ವರಿತಗೊಳಿಸಲು ಸ್ವಂತ ಬಂಡವಾಳದ ಮೇಲೆ ೫ ಲಕ್ಷ ಬಲಯುತ ರಾಷ್ಟ್ರೀಯ ಪುನಃನಿರ್ಮಾಣ ಸೇನೆಯನ್ನು ನಿರ್ಮಿಸಬೇಕೆಂದು ಪಶ್ಚಿಮ ಬಂಗಾಳದ ಶಾಸನಸಭಾ ಸದಸ್ಯರೊಬ್ಬರು ಕಲ್ಯಾಣಿಯಲ್ಲಿ ನಡೆಯಲಿರುವ ಎ. ಐ. ಸಿ. ಸಿ. ಅಧಿವೇಶನದಲ್ಲಿ ಮಂಡಿಸಲಿದ್ದಾರೆ.

ಈ ಸೈನ್ಯಕ್ಕೆ ನಿರುದ್ಯೋಗಿಗಳನ್ನು ಸೇರಿಸಿಕೊಂಡು ಭಾರತ ಸೈನ್ಯಶಿಕ್ಷಣ ಅಧಿಕಾರಿಯೊಬ್ಬರ ನೇತೃತ್ವದಲ್ಲಿ ಶಿಕ್ಷಣ ನಡೆಯಬೇಕೆಂದು ಸೂಚಿಸಲಾಗುತ್ತದೆ.

ಭಾರತಕ್ಕೆ ಬ್ರಿಟಿಷ್ ಟೆಲಿಫೋನ್ ಪ್ರವೀಣರು

ಕಲ್ಕತ್ತಾದಲ್ಲಿರುವ ಟೆಲಿಫೋನ್ ವ್ಯವಸ್ಥೆಯನ್ನು 'ಆಟೋಮ್ಯಾಟಿಕ್' ಆಗಿ ಪರಿವರ್ತಿಸಲು ಭಾರತ ಅಂಚೆ ಮತ್ತು ತಂತಿ ಇಲಾಖೆಯು ಬ್ರಿಟಿಷ್ ಅಂಚೆ ಇಲಾಖೆಯು ೪ ಅಧಿಕಾರಿಗಳ ನೆರವನ್ನು ಪಡೆಯಲು ಅವರನ್ನು ಆಹ್ವಾನಿಸಿದೆ. ಈ ನಾಲ್ವರು ಸದ್ಯದಲ್ಲಿಯೇ ಭಾರತಕ್ಕೆ ಆಗಮಿಸಿ ಇಲ್ಲಿ ೩ ವರ್ಷಗಳ ಕಾಲ ಇರುತ್ತಾರೆ.

ಹಂಪೆ

ವಿಜಯನಗರ ರಾಜರ ಕಾಲದಲ್ಲಿ ಜನರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ವಿವರಿಸುವಂತಹ 'ಹಂಪೆ' ಎಂಬ ಕಾರ್ಯಕ್ರಮವನ್ನು ಅಖಿಲ ಭಾರತ ರೇಡಿಯೋವಿನ ಮೈಸೂರು ಶಾಖೆ ನಾಳೆ ರಾತ್ರಿ ೮-೩೦ ಗಂಟೆಗೆ ಪ್ರಚಾರಮಾಡಲಿದೆ.

ಹಿಂದೀ ಭಾಷಾಪ್ರೇಮಿಗಳ ಪಕ್ಷ

ಹಿಂದೀ ಭಾಷಾಪ್ರೇಮಿಗಳು ತಮ್ಮದೇ ಆದ ಒಂದು ಪಕ್ಷವನ್ನು ರಚಿಸಿಕೊಂಡರೆ ಆಗ ಅವರ ಉದ್ದೇಶ ಸಫಲಗೊಳ್ಳುತ್ತದೆ-ಎಂದು ಕಾಂಗ್ರೆಸ್ ಮಾಜಿ ಅಧ್ಯಕ್ಷ ಶ್ರೀ ಪುರುಷೋತ್ತಮದಾಸ್ ಟಾಂಡನ್‌ರವರು ಹೇಳಿದ್ದಾರೆ.

ಯುವಕ ಸೋಷಲಿಸ್ಟ್ ಸಮ್ಮೇಳನ

ಅಖಿಲ ಭಾರತ ಯುವಕ ಸೋಷಲಿಸ್ಟ್ ಸಮ್ಮೇಳನವು ಇಂದಿನಿಂದ ೧೫ನೇ ತಾರೀಖಿನವರೆಗೆ ಲಕ್ನೋದಲ್ಲಿ ನಡೆಯುತ್ತದೆ.

ಇನಾಂಗಳ ರದ್ದಿಯಾತಿ ಮಸೂದೆ

ಶೃಂಗೇರಿ ಜಹಗೀರಿಗೂ ಅನ್ವಯಿಸುತ್ತದೆ

ಬೆಂಗಳೂರು ೧೧

ಈದಿನ ಪ್ರಾರಂಭವಾಗಲಿರುವ ಶಾಸನ ಸಭೆಯಲ್ಲಿ ಸರ್ಕಾರವು ಮಂಡಿಸಲಿರುವ ಮತೀಯ ಮತ್ತು ಧಾರ್ಮಿಕ ಇನಾಂಗಳನ್ನು ರದ್ದುಗೊಳಿಸುವ ಮಸೂದೆಯ ಕರಡನ್ನು ಶಾಸನ ಸಭಾಧ್ಯಕ್ಷರು ಸಾರ್ವಜನಿಕರ ಅವಗಾಹನೆಗೆ ಪ್ರಕಟಿಸಿದ್ದಾರೆ.

ಈ ಮಸೂದೆಯು ಬಳ್ಳಾರಿಜಿಲ್ಲೆವಿನಹ ಪ್ರಾಂತ್ಯದ ಮಿಕ್ಕಎಲ್ಲಾ ಜಿಲ್ಲೆಗಳಿಗೂ ಅನ್ವಯಿಸಲು ಅವಕಾಶ ಕಲ್ಪಿಸಲಾಗಿದೆ.

ಇನಾಂ ಕೊಟ್ಟ ಉದ್ದೇಶಕ್ಕೆ ಧಕ್ಕೆ ಬರದಂತೆ ಇನಾಂ ಪಡೆದಿರುವ ಸಂಸ್ಥೆಗೆ ಈ ಮಸೂದೆಪ್ರಕಾರ ಕಳೆದು ಕೊಳ್ಳುವ ಆಸ್ತಿಯ ಆದಾಯದ ಮೊತ್ತವನ್ನು ವಾರ್ಷಿಕ ಭತ್ಯವನ್ನಾಗಿ ಕೊಡಲು ಅವಕಾಶವನ್ನು ಈಗ ಕಲ್ಪಿಸಲಾಗಿದೆ.

ಹಣಕಾಸಿನ ಪರಿಣಾಮದ ವಿವರಗಳನ್ನು ಈ ಮಸೂದೆಯಲ್ಲಿ ಸೂಚಿಸಲಾಗಿದೆ.

ಈ ಮಸೂದೆಯು ಶೃಂಗೇರಿ ಜಹಗೀರಿಗೂ ಸಹ ಅನ್ವಯಿಸುತ್ತದೆ.

ಸರ್ಕಾರವು ಇನಾಂಗಳನ್ನೆಲ್ಲಾ ವಹಿಸಿಕೊಂಡನಂತರ ಪ್ರತಿವರ್ಷವೂ ಈ ಇನಾಂ ಅನುಭವಿಸುತ್ತಿರುವವರಿಗೆ ಸುಮಾರು ೧೭ ಲಕ್ಷ ರೂಪಾಯಿಗಳನ್ನು ಭತ್ಯವಾಗಿ ಕೊಡಬೇಕಾಗುತ್ತದೆ. ಸರ್ಕಾರಕ್ಕೆ ಕಂದಾಯ ರೀತ್ಯ ೩ ಲಕ್ಷ ರೂಪಾಯಿ ಹೆಚ್ಚಿಗೆ ವರಮಾನ ಬರುತ್ತದೆ.

ಕೈಗಾರಿಕಾ ಪ್ರಗತಿ ಸಾಲದು

ದೇಶದ ಅಭ್ಯುದಯ ಮತ್ತು ಭದ್ರತೆಗಾಗಿ ದೇಶದಲ್ಲಿ ಭಾರಿ ಮತ್ತು ಸಣ್ಣ ಕೈಗಾರಿಕೆಗಳನ್ನು ಯೋಜಿತ ತಳಹದಿಯ ಮೇಲೆ ಅಭಿವೃದ್ಧಿಪಡಿಸುವುದು ಅತ್ಯಗತ್ಯ ಈಗ ಕೈಗಾರಿಕಾ ಶಿಕ್ಷಣ ಮತ್ತು ಅದರ ಪ್ರಗತಿ ನಿಧಾನವಾಗಿ ನಡೆಯುತ್ತಿದೆ. ಇದು ಸರಿಯಲ್ಲವೆಂದು ಅಖಿಲ ಭಾರತ ಉತ್ಪಾದಕರ ಸಂಘದ ಅಧ್ಯಕ್ಷ ಡಾ|| ಎಂ. ವಿಶ್ವೇಶ್ವರಯ್ಯನವರು ಹೇಳಿದ್ದಾರೆ.

ಬೊಂಬಾಯಿ ಸರ್ಕಾರ ವಿರುದ್ಧ ಚಳುವಳಿ

ಇಂಗ್ಲೀಷ್ ಶಿಕ್ಷಣ ಮಾಧ್ಯಮ ನಿಷೇಧಕ್ಕೆ ಪ್ರತಿಭಟನೆ

ಬೊಂಬಾಯಿನಲ್ಲಿ ಸರ್ಕಾರವು ಇಂಗ್ಲೀಷ್ ಶಿಕ್ಷಣಮಾಧ್ಯಮದ ಮೇಲೆ ನಿಷೇಧವನ್ನು ವಿಧಿಸಿರುವುದನ್ನು ಪ್ರತಿಭಟಿಸಲು ಚಳುವಳಿಯನ್ನು ಹೂಡಲು ಇಂಗ್ಲೀಷ್ ಮಾಧ್ಯಮವಾಗಿ ಇರುವ ಎಲ್ಲಾ ಶಾಲಾ ಮುಖ್ಯೋಪಾಧ್ಯಾಯರು ತೀರ್ಮಾನಿಸಿದ್ದಾರೆ.

ಬ್ರಿಟಿಷ್ ಕಾಮೆಟ್ ಜೆಟ್ ವಿಮಾನ ಸಮುದ್ರಪಾಲು

೨೯ ಪ್ರವಾಸಿಕರು ಮತ್ತು ೭ ಮಂದಿ ಚಾಲಕದವರನ್ನೊಳಗೊಂಡಿದ್ದ ಬ್ರಿಟಿಷ್ ಕಾಮೆಟ್ ಜೆಟ್ ವಿಮಾನವೊಂದು ನಿನ್ನೆ ದಿನ ಮೆಡಿಟರೇನಿಯನ್ ಸಮುದ್ರದಲ್ಲಿ ಬಿದ್ದುಹೋಯಿತೆಂದು ವರದಿಯಾಗಿದೆ. ಈ ವಿಮಾನವು ಸಿಂಗಪುರದಿಂದ ಲಂಡನ್ನಿಗೆ ಹೋಗುತ್ತಿದ್ದಿತು.

ಸಿಂಹಳ-ಭಾರತ ಮಾತುಕತೆ

ಸಿಂಹಳ ಮತ್ತು ಭಾರತ ಪ್ರಧಾನಿಗಳ ಸಮ್ಮೇಳನವು ಮುಂದಿನತಿಂಗಳು ಪ್ರಾರಂಭವಾಗಲಿವೆ. ಈ ಸಂದರ್ಭದಲ್ಲಿ ಪ್ರಧಾನಿ ನೆಹರೂರೊಡನೆ ಪೂರ್ವಭಾವಿ ಮಾತುಕತೆಗಳಿಗಾಗಿ ಸಿಂಹಳದಲ್ಲಿರುವ ಭಾರತ ಹೈಕಮಿಷನರ್ ಶ್ರೀ ಸಿ. ಸಿ. ದೇಸಾಯಿಯವರು ಭಾರತಕ್ಕೆ ಆಗಮಿಸಿದ್ದಾರೆ.

ಭಾರತೀಯರಲ್ಲಿ ಆಲಸ್ಯ ಮನೋಭಾವ

ಸ್ವಾತಂತ್ರ್ಯ ಬಂದನಂತರ ಭಾರತೀಯರಲ್ಲಿ ಆಲಸ್ಯ ಮನೋಭಾವವು ಹೋಗಿ ದೇಶದ ಆರ್ಥಿಕ ಮತ್ತು ಸಾಮಾಜಿಕ ಸ್ವಾತಂತ್ರ್ಯವನ್ನು ಪಡೆಯಲು ದುಡಿಯಬೇಕೆಂದು ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್‌ರವರು ಹೇಳಿದ್ದಾರೆ.

ಚುನಾವಣೆಯಲ್ಲಿ ಸರ್ಕಾರಿ ಅಧಿಕಾರಿಗಳ ಪಾತ್ರ ಇರಕೂಡದು

ಮುಂದಿನ ಚುನಾವಣೆಗಳಲ್ಲಿ ಸರ್ಕಾರಿ ಅಧಿಕಾರಿಗಳು ಯಾವ ಪಕ್ಷ ಅಥವಾ ಸ್ವತಂತ್ರ ಸ್ಪರ್ಧಿಯ ಪ್ರಚಾರ ಮುಂತಾದ ಕಾರ್ಯದಲ್ಲಿ ಸರ್ಕಾರಿ ನೌಕರರು ಭಾಗವಹಿಸಕೂಡದೆಂದು ತಿರುವಾಂಕೂರ್—ಕೊಚ್ಚಿನ್ ಸರ್ಕಾರ ಪ್ರಕಟಣೆಯನ್ನಿತ್ತಿದೆ.

ಪ್ರತಿಭಟನಾ ದಿನಾಚರಣೆ

ಅಮೆರಿಕಾ-ಪಾಕೀಸ್ತಾನ ಸೈನ್ಯ ಒಪ್ಪಂದಕ್ಕೆ ವಿರೋಧವನ್ನು ವ್ಯಕ್ತಪಡಿಸಲು ಎಲ್ಲಾ ಕಾಂಗ್ರೆಸ್ ಸಮಿತಿಗಳು ಜನವರಿ ೧೫ನೇ ತಾರೀಖು ಪ್ರತಿಭಟನಾ ದಿನವನ್ನಾಗಿ ಆಚರಿಸಬೇಕೆಂದು ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿಯು ತನ್ನ ಉಪಸಮಿತಿಗಳಿಗೆ ಸೂಚನೆಯನ್ನಿತ್ತಿದೆ.

೩೦೦ ಗ್ರಾಮಗಳಲ್ಲಿ ಅಭಾವ ಪರಿಸ್ಥಿತಿ

ಬಿಕನೀರ್ ಜಿಲ್ಲೆಗೆ ಸೇರಿದ ೩೦೦ ಗ್ರಾಮಗಳಲ್ಲಿ ವಾಸಿಸುವ ರೈತರು ಕೊಳ್ಳುವಶಕ್ತಿಯನ್ನು ಪೂರ್ಣವಾಗಿಕಳೆದುಕೊಂಡು ಅಭಾವ ಪರಿಸ್ಥಿತಿಗೆ ಒಳಗಾಗಿರುವುದಾಗಿ ವರದಿಯಾಗಿದೆ.

ಭಾರತದಲ್ಲಿ ಪಾಕೀಸ್ತಾನದ ಮೇಲೆ ಅಪಪ್ರಚಾರನಿಲ್ಲಲಿ

ಅಮೆರಿಕಾಕ್ಕೆ ಯಾವ ಸೈನ್ಯನೆಲೆಯನ್ನು ಕೊಡದೆ, ಕೇವಲ ತನ್ನ ರಕ್ಷಣೆಗಾಗಿ ಸೈನ್ಯ ನೆರವನ್ನು ಪಡೆಯಲು ಪಾಕೀಸ್ತಾನವು ಯೋಚಿಸುತ್ತಲಿರುವುದಕ್ಕಾಗಿ ಭಾರತದಲ್ಲಿ ವಿರೋಧ ಚಳವಳಿಯು ಪ್ರಾರಂಭವಾಗಿದೆ. ಪಾಕೀಸ್ತಾನಕ್ಕೆ ಯಾವ ರಾಷ್ಟ್ರದ ಮೇಲೂ ಆಕ್ರಮಣಮಾಡುವ ಉದ್ದೇಶವಿಲ್ಲ. ಭಾರತದಲ್ಲಿ ಆಗುತ್ತಿರುವ ಈ ವಿರೋಧ ಚಳುವಳಿಯನ್ನು ಕೂಡಲೇ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ತಡೆಗಟ್ಟಬೇಕೆಂದು ಪಾಕ್ ಪ್ರಧಾನಿ ಮಹಮದ್ ಆಲಿಯವರು ಪ್ರಧಾನಿ ನೆಹರುರವರಿಗೆ ಬಿನ್ನವಿಸಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಅವರು ಮಾತನಾಡುತ್ತ ಪರದೇಶಗಳಿಂದ ಸೈನ್ಯನೆರವು ಅಥವಾ ಆರ್ಥಿಕ ನೆರವು ಪಡೆಯುವುದರಲ್ಲಿ ವ್ಯತ್ಯಾಸವೇನೂ ಇಲ್ಲವೆಂದು ಹೇಳಿದ್ದಾರೆ.

ಸೂಕ್ತ ಬಹುಮಾನ

ಎಂ. ಜಯಕುಮಾರ್ Ex-I.A. M-C. ಇವರ ಮಿಲಿಟರಿ ಪೆನ್ಷನ್ ಸರ್ಟಿಫಿಕೇಟ್ ಕಳೆದು ಹೋಗಿದೆ ಯಾರಿಗಾದರೂ ಸಿಕ್ಕಿದರೆ ಅದನ್ನು No. 2821, ರೈಲಾಶ್ರಯ, ಜಯನಗರ, ಮೈಸೂರು ಈ ಅಡ್ರೆಸ್ಸಿಗೆ ತಲುಪಿಸಿದರೆ ಸೂಕ್ತಬಹುಮಾನ ಕೊಡಲಾಗುತ್ತದೆ.

ದೇಶದಾದ್ಯಂತ ಅಕ್ಕಿಯ ಪಡಿತರ ವಜಾ

ಕೇಂದ್ರ ಆಹಾರಸಚಿವ ಶ್ರೀ ಕಿದ್ವಾಯಿಯವರ ಹೇಳಿಕೆ

ಸರ್ಕಾರವು ೧೫ ಲಕ್ಷ ಟನ್ ಅಕ್ಕಿಯನ್ನು ದಾಸ್ತಾನು ಮಾಡಿದೊಡನೆಯೇ ದೇಶದಾದ್ಯಂತ ಅಕ್ಕಿಯ ಪಡಿತರವನ್ನು ರದ್ದುಗೊಳಿಸಲಾಗುತ್ತದೆಯೆಂದು ಕೇಂದ್ರ ಆಹಾರ ಸಚಿವ ಶ್ರೀ ರಫಿ ಅಹಮದ್ ಕಿದ್ವಾಯಿಯವರು ಹೇಳಿದ್ದಾರೆ.

ಗೋಧಿಯ ವಿಷಯವಾಗಿ ಪ್ರಸ್ತಾಪಿಸುತ್ತಾ, ಕೇಂದ್ರದಲ್ಲಿ ಈಗ ೭ ಲಕ್ಷ ಟನ್ ಗೋಧಿ ದಾಸ್ತಾನಿದೆ. ಅಂತರರಾಷ್ಟ್ರೀಯ ಗೋಧಿ ಸಮಿತಿಯೊಡನಾಗಿರುವ ಒಪ್ಪಂದ ಪ್ರಕಾರ ೧೦ ಲಕ್ಷ ಟನ್ ಗೋಧಿ ತರಿಸಿಕೊಳ್ಳಲು ಅವಕಾಶವಿದೆ. ಆದರೆ ಇನ್ನೂ ಅದನ್ನು ತರಿಸಿಕೊಂಡಿಲ್ಲ. ಅವರು ಒತ್ತಾಯಪಡಿಸಿದರೆ ಆಗ ತರಿಸಿಕೊಳ್ಳುತ್ತದೆ. ಎಂದು ತಿಳಿಸಿದ್ದಾರೆ.

ಸಕ್ಕರೆ ವಿಷಯವಾಗಿ ಸಚಿವರು ಮಾತನಾಡುತ್ತಾ, ಈ ಸಾಲಿನಲ್ಲಿ ದೇಶದಲ್ಲಿ ೧೩ ಲಕ್ಷ ಟನ್ ಸಕ್ಕರೆಯ ಉತ್ಪಾದನೆ ಆಗುತ್ತದೆ ೭ ಲಕ್ಷ ಟನ್ ಸಕ್ಕರೆಯನ್ನು ಆಮದುಮಾಡಿಕೊಳ್ಳಲು ಭಾರತವು ಸಿದ್ಧವಾಗಿದೆ ಎಂದೂ ಅವರು ಹೇಳಿದ್ದಾರೆ.

ಪ್ರಾಂತ್ಯಗಳ ಶ್ರೇಷ್ಠ ಕಾರ್ಯದರ್ಶಿಗಳ ಸಮ್ಮೇಳನ

ದೇಶದ ಎಲ್ಲಾ ಪ್ರಾಂತ್ಯಗಳ ಶ್ರೇಷ್ಠ ಕಾರ್ಯದರ್ಶಿಗಳ ಸಭೆಯೊಂದು ಮುಂದಿನ ತಿಂಗಳು ನಡೆಯುತ್ತದೆ. ಕೇಂದ್ರ ಗೃಹಶಾಖೆಯು ಈ ಸಮ್ಮೇಳನವನ್ನು ಏರ್ಪಡಿಸಿದೆ.

ಲಂಚನಿರೋಧ, ಸ್ಥಾನಗಳ ದುರುಪಯೋಗ ನಿವಾರಣೆ, ಸ್ಥಾನಬದ್ಧ ಕಾನೂನುವ ಎಂದುವರಿಸುವುದು, ಸರ್ಕಾರಿ ಕೆಲಸಕ್ಕೆ ಸೇರಿಸಿಕೊಳ್ಳುವ ನೀತಿ ಮುಂತಾದ ನಾನಾ ವಿಷಯಗಳು ಚರ್ಚಿಸಲ್ಪಡುವುವೆಂದು ತಿಳಿಯಬರುತ್ತದೆ.

ನೂತನ ವಿಮಾನ ಸೈನ್ಯ ಮುಖ್ಯಾಧಿಕಾರಿ

ವೈಸ್‌ಮಾರ್ಷಲ್ ಎಸ್. ಮುಖರ್ಜಿಯವರನ್ನು ಭಾರತವಿಮಾನ ದಳದ ನೂತನ ದಂಡನಾಯಕರನ್ನಾಗಿ ನೇಮಿಸಲಾಗಿದೆ. ಅವರು ಏಪ್ರಿಲ್ ಒಂದನೇ ತಾರೀಖಿನಿಂದ ಈ ಹೊಸ ಹುದ್ದೆಯನ್ನು ಸ್ವೀಕರಿಸುವರು. ಈ ಉನ್ನತ ಸ್ಥಾನಕ್ಕೆ ಭಾರತೀಯರು ನೇಮಕವಾಗುವುದು ಇದೇ ಪ್ರಥಮ.

ಪಾಕ್-ಟರ್ಕಿ ರಕ್ಷಣಾ ಒಪ್ಪಂದವಿಲ್ಲ

ಪಾಕೀಸ್ಥಾನ ಮತ್ತು ಟರ್ಕಿಗಳ ನಡುವೆ ಯಾವ ರಕ್ಷಣಾ ಒಪ್ಪಂದವಿಲ್ಲವೆಂದು ಟರ್ಕಿಯ ವಿದೇಶಾಂಗ ಸಚಿವರು ಹೇಳಿದ್ದಾರೆ.

ರೈಲ್ವೆ ಕೆಲಸಗಾರರಿಗೆ ಕೇಂದ್ರ ಸಚಿವರ ಉಪದೇಶ

ಮೈಸೂರು ೧೧

ಕೇಂದ್ರ ಕಾರ್ಮಿಕ ಸಚಿವ ಶ್ರೀ ವಿ. ವಿ. ಗಿರಿಯವರು ರೈಲ್ವೆ ವರ್ಕ್‌ಷಾಪಿನ ಆವರಣದಲ್ಲಿ ರೈಲ್ವೆ ಕೆಲಸಗಾರರನ್ನುದ್ದೇಶಿಸಿ ಮೊನ್ನೆ ಭಾಷಣಮಾಡಿದರು.

ಕೆಲಸಗಾರರ ಹಕ್ಕುಬಾಧ್ಯತೆಗಳ ರಕ್ಷಣೆಗೆ ಸಂಘ ಬಲಗೊಳ್ಳಬೇಕೆಂದೂ ಆದರೆ ಸ್ವಾತಂತ್ರ್ಯ ನಂತರ ಕಾರ್ಮಿಕರ ಜವಾಬ್ದಾರಿ ಮಹತ್ತರವಾಗಿದೆಯೆಂದೂ, ಅದನ್ನು ಅವರೆಲ್ಲರೂ ಅರಿತು, ಮುಷ್ಕರ ಬಿಟ್ಟು ಸ್ನೇಹಭಾವದಿಂದ ಚರ್ಚೆ ಮತ್ತು ಪಂಚಾಯಿತಿಗಳಿಂದ ನ್ಯಾಯ ದೊರಕಿಸಿಕೊಳ್ಳಬೇಕೆಂದೂ ತಿಳಿಸಿದರು.

ಕೈಮಗ್ಗ ವಾರ ದಿನಾಚರಣೆ

ಕೈಮಗ್ಗ ಕೈಗಾರಿಕೆಯ ಪ್ರಾಮುಖ್ಯತೆಯನ್ನು ಜನರು ಅರಿತುಕೊಳ್ಳಲೆಂದು ಭಾರತಾದಾದ್ಯಂತ ಕೈಮಗ್ಗವಾರ ದಿನಾಚರಣೆಯನ್ನು ಆಚರಿಸಲು ಅಖಿಲಭಾರತ ಕೈಮಗ್ಗ ಬೋರ್ಡಿನವರು ಸಿದ್ಧತೆ ಮಾಡುತ್ತಿದ್ದಾರೆ. ಈ ಸಮಾರಂಭ ನಡೆಸಲು ಎ. ಬಿ. ಸಿ. ಸ್ಥಾನಗಳಿಗೆ ತಲಾ ೫, ೩ ಮತ್ತು ೧ ಸಾವಿರಗಳನ್ನು ಮತ್ತು ಪ್ರತಿ ಸಹಕಾರ ಸಂಘಗಳಿಗೆ ೧೦ ರೂ.ಗಳನ್ನು ಕೊಡಲಾಗುವುದು.

ಬೊಂಬಾಯಿ ಸರ್ಕಾರದ ನೀತಿಯ ಬಗ್ಗೆ ಕಾಂಗ್ರೆಸ್ ಅಧ್ಯಕ್ಷರ ಟೀಕೆ

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಮುಂದಿನ ಸಾಲಿನಿಂದ ಆಂಗ್ಲೋ ಇಂಡಿಯನ್ನರ ವಿನಹ ಮತ್ಯಾರಿಗೂ ಇಂಗ್ಲೀಷ್ ಮೂಲಕ ಶಿಕ್ಷಣ ಕೊಡಕೂಡದೆಂದು ಬೊಂಬಾಯಿ ಸರ್ಕಾರವು ಮಾಡಿರುವ ಆಜ್ಞೆಯನ್ನು ಅಲ್ಲಿಯ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲರು ಟೀಕಿಸಿ ಈ ನೀತಿಯ ವಿವೇಚನಾರಹಿತವಾದುದೆಂದು, ಸರ್ಕಾರವು ಇದನ್ನು ಪುನರ್ಪರಿಶೀಲಿಸಬೇಕೆಂದೂ ಹೇಳಿದ್ದಾರೆ.

ರಾಜಪ್ರಮುಖರ ಸಮ್ಮೇಳನ

ಮುಂದಿನ ಮಾರ್ಚಿ ಒಂದು ಮತ್ತು ಎರಡನೇ ತಾರೀಖುಗಳಲ್ಲಿ ರಾಜಪ್ರಮುಖರ ಮತ್ತು ಗೌರ್ನರುಗಳ ಸಮ್ಮೇಳನವು ದೆಹಲಿಯಲ್ಲಿ ನಡೆಯುತ್ತದೆ. ರಾಷ್ಟ್ರಾಧ್ಯಕ್ಷರು ಈ ಸಮ್ಮೇಳನದ ಅಧ್ಯಕ್ಷತೆ ವಹಿಸುವರು.

ಸಿರಿಮಂತರು ತಮ್ಮ ಆಸ್ತಿಯಲ್ಲಿ ಆರನೇ ಒಂದು ಭಾಗ ಕೊಡಬೇಕು

ಆಚಾರ್ಯ ವಿನೋಭಾವೆಯವರ ಸಂಪತ್ತುದಾನ ಚಳುವಳಿ

ಆಚಾರ್ಯ ವಿನೋಬಭಾವೆಯವರು ಸದ್ಯದಲ್ಲಿಯೇ ತಮ್ಮ ಭೂದಾನ ಚಳುವಳಿಯನ್ನು ಪೂರ್ಣಮಾಡಿ ಸಂಪತ್ತುದಾನ ಚಳುವಳಿಯನ್ನು ಆರಂಭಿಸುವುದಾಗಿ ತಿಳಿಸಿದ್ದಾರೆ.

ರಾಮನಾಡಿನ ರಾಜರು ಜನತಾ ಪಕ್ಷದ ಪರವಾಗಿ ೫ ಲಕ್ಷ ಎಕರೆ ಜಮೀನನ್ನು ಆಚಾರ್ಯವಿನೋಬಭಾವೆಯವರ ಭೂದಾನ ಯಜ್ಞ ಚಳುವಳಿಗೆ ಕೊಟ್ಟಿದ್ದಾರೆ.

ಈ ಸಂದರ್ಭದಲ್ಲಿ ಆಚಾರ್ಯ ವಿನೋಬಭಾವೆಯವರು ಮಾತನಾಡುತ್ತಾ, ದೇಶದಲ್ಲಿ ನೂತನವಾಗಿ ಸಂಪತ್‌ದಾನ ಚಳುವಳಿಯನ್ನು ಆರಂಭಿಸಲಾಗುತ್ತದೆ. ಇದರಿಂದ ಸಿರಿವಂತರ ನಿಜವಾದ ದೇಶಪ್ರೇಮ ಮತ್ತು ತ್ಯಾಗಬುದ್ಧಿಯು ಹೊರಬೀಳುತ್ತದೆ. ಸಂಪತ್‌ದಾನವೆಂದರೆ ದ್ರವ್ಯಶೇಖರಣೆ ಕಾರ್ಯವಲ್ಲ. ಸಿರಿವಂತರು ತಮ್ಮಲ್ಲಿರುವ ಆಸ್ತಿಯ ಬಗ್ಗೆ ವಿವರವನ್ನಿತ್ತು ಅದರಲ್ಲಿ ⅙ ಭಾಗವನ್ನು ದಾನ ಮಾಡಬೇಕಾಗುತ್ತದೆ ಎಂದು ಹೇಳಿದ್ದಾರೆ.

ಚುನಾವಣಾ ಕ್ಷೇತ್ರ ಪುನರ್ವಿಂಗಡನೆ

ಬೆಂಗಳೂರು ೧೧

ಮೈಸೂರು ಸಂಸ್ಥಾನದ ಶಾಸನಸಭೆಗಳ ಮತ್ತು ಕೇಂದ್ರ ಪಾರ್ಲಿಮೆಂಟಿನ ಚುನಾವಣಾ ಕ್ಷೇತ್ರ ಪುನರ್ವಿಂಗಡನೆ ವಿಷಯದಲ್ಲಿ ಅದಕ್ಕಾಗಿ ನೇಮಿಸಿರುವ ಸಮಿತಿಯು ಮಾಡಿದ್ದ ಶಿಫಾರಸುಗಳನ್ನು ಕೇಂದ್ರ ಸರಕಾರವು ಪರಿಶೀಲಿಸಿ ನೂತನ ಆಜ್ಞೆಯನ್ನು ಹೊರಡಿಸಿದೆ.

ಲೋಕಸಭೆಗೆ ಪ್ರಾಂತ್ಯದಿಂದ ಒಟ್ಟು ೧೧ ಸಾರ್ವತ್ರಿಕ ಮತ್ತು ೨ ನಿಮ್ನವರ್ಗದ ಸ್ಥಾನಗಳನ್ನು ಕಲ್ಪಿಸಲಾಗಿದೆ. ಪ್ರತಿಯೊಂದು ಜಿಲ್ಲೆಗೂ ಬೆಂಗಳೂರುನಗರಕ್ಕೂ ಒಂದೊಂದು ಸ್ಥಾನ ಕೊಡಲಾಗಿದೆ. ಮೈಸೂರು ಮತ್ತು ಕೋಲಾರ ಜಿಲ್ಲೆಗಳಿಗೆ ಪ್ರತ್ಯೇಕವಾಗಿ ಒಂದೊಂದು ನಿಮ್ನವರ್ಗದ ವರಿಗೆ ಕೊಡಲಾಗಿದೆ.

ಶಾಸನಸಭೆಗೆ ಒಟ್ಟು ೧೧೭ ಸ್ಥಾನಗಳು, ಅವುಗಳಲ್ಲಿ ೯೬ ಸಾರ್ವತ್ರಿಕ ಮತ್ತು ೨೧ ನಿಮ್ನವರ್ಗ ಸ್ಥಾನಗಳನ್ನು ಕಲ್ಪಸಲಾಗಿದೆ.

ಜಿಲ್ಲಾಗಳ ವಿವರ ಈ ರೀತಿಯಿದೆ:—

ಬೆಂಗಳೂರು ಜಿಲ್ಲಾ ಸಾರ್ವತ್ರಿಕಸ್ಥಾನ ೨೧ ನಿಮ್ನವರ್ಗ ೪, ಮಂಡ್ಯ ೮ ಸಾರ್ವತ್ರಿಕ ೧ ನಿಮ್ನವರ್ಗ, ಮೈಸೂರು ಜಿಲ್ಲೆ ೧೯ ಸಾರ್ವತ್ರಿಕ ೩ ನಿಮ್ನವರ್ಗ, ಹಾಸನ ಜಿಲ್ಲೆ ೭ ಸಾರ್ವತ್ರಿಕ ೨ ನಿಮ್ನವರ್ಗ, ಚಿಕ್ಕಮಗಳೂರು ಜಿಲ್ಲೆ ೪ ಸಾರ್ವತ್ರಿಕ ೧ ನಿಮ್ನವರ್ಗ, ಶಿವಮೊಗ್ಗಾ ಜಿಲ್ಲೆ ೭ ಸಾರ್ವತ್ರಿಕ ೧ ನಿಮ್ನವರ್ಗ, ಚಿತ್ರದುರ್ಗ ಜಿಲ್ಲೆ ೮ ಸಾರ್ವತ್ರಿಕ ೨ ನಿಮ್ನವರ್ಗ, ಬಳ್ಳಾರಿ ಜಿಲ್ಲೆ ೭ ಸಾರ್ವತ್ರಿಕ ೨ ನಿಮ್ನವರ್ಗ, ತುಮಕೂರು ಜಿಲ್ಲೆ ೧೨ ಸಾರ್ವತ್ರಿಕ ೨ ನಿಮ್ನವರ್ಗ ಕೋಲಾರ ಜಿಲ್ಲೆ ೧೦ ಸಾರ್ವತ್ರಿಕ ೩ ನಿಮ್ನವರ್ಗ.

ಸಿದ್ದವೀರಪ್ಪನವರ ಆಗಮನ

ಬೆಂಗಳೂರು ೧೧

ವಿಶ್ವಸಂಸ್ಥೆಯ ಆಹಾರ ಮತ್ತು ವ್ಯವಸಾಯ ಸಮ್ಮೇಳನಕ್ಕೆ ರೋಂ ನಗರಕ್ಕೆ ತೆರಳಿದ್ದ ಗೃಹಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ಮೊನ್ನೆಯದಿನ ತಮ್ಮ ಪ್ರವಾಸವನ್ನು ಪೂರೈಸಿಕೊಂಡು ಇಲ್ಲಿಗೆ ಹಿಂತಿರುಗಿದರು.

ಅಮೆರಿಕಾ ಮೇಲೆ ಜಪಾನ್ ಲಾಯರುಗಳ ದಾವ

ಎರಡನೇ ಮಹಾಯುದ್ಧದಲ್ಲಿ ಅಮೆರಿಕಾವು ಜಪಾನ್ ಮೇಲೆ ಅಣು ಬಾಂಬನ್ನು ಉಪಯೋಗಿಸಿ ಭಯಂಕರ ಹಾನಿಯನ್ನು ಉಂಟುಮಾಡಿತಷ್ಟೆ. ಅದರಲ್ಲಿ ಸತ್ತ ಪ್ರತಿಯೊಬ್ಬನಿಗೂ ಅಮೆರಿಕಾ ಸರ್ಕಾರವು ೧೦ ಲಕ್ಷ ಎನ್, ಇತರ ನೊಂದವರಿಗೆ ೨ಲಕ್ಷ ಎನ್ ಪರಿಹಾರವನ್ನು ಕೊಡಬೇಕೆಂದು, ಅಮೆರಿಕಾ ಸರ್ಕಾರ ಮತ್ತು ಮಾಜಿ ಅಧ್ಯಕ್ಷ ಟ್ರೂಮನ್ನರ ಮೇಲೆ ಜಪಾನ್ ಲಾಯರುಗಳು ದಾವ ಹೂಡಲಿರುವರೆಂದು ತಿಳಿಯಬರುತ್ತದೆ.

ಅಪೆರಾ
7–1–53 ರಿಂದಅನೋಖ 4ನೇ ವಾರ
ಆರ್. ಎನ್. ಪಿಕ್ಚರ್ಸ್‌ರವರ
ಜಾತಕ ಫಲ
(ಕನ್ನಡ)
ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೧೩

೧೩-೧-೧೯೫೩ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪಂಚವಾರ್ಷಿಕ ಯೋಜನಾ ಕಾರ್ಯಗಳಿಗೆ ಹೆಚ್ಚಿನ ತೆರಿಗೆ

ಜಿಲ್ಲಾ ಬೋರ್ಡುಗಳ ಆಡಳಿತಕ್ಕಾಗಿ ವಿಶೇಷಾಧಿಕಾರಿಗಳ ನೇಮಕ

ಶಾಸನ ಸಭೆಗಳ ಸಂಯುಕ್ತ ಅಧಿವೇಶನದಲ್ಲಿ ರಾಜಪ್ರಮುಖರ ಘೋಷಣೆ

ಬೆಂಗಳೂರು ೧೨

ಈಗಿರುವ ಜಿಲ್ಲಾ ಬೋರ್ಡುಗಳನ್ನು ರದ್ದುಗೊಳಿಸಿ ಅವುಗಳ ಆಡಳಿತವನ್ನು ವಿಶೇಷ ಅಧಿಕಾರಿಗಳಿಗೆ ನೇಮಿಸಲು ಸರ್ಕಾರವು ನಿರ್ಧರಿಸಿದೆ. ಈ ಅಧಿಕಾರಿಗಳಿಗೆ ಸಹಾಯನೀಡಲು ಖಾಸಗಿ ಸದಸ್ಯರ ಸಮಿತಿಯೊಂದನ್ನು ರಚಿಸಲಾಗುತ್ತದೆ--ಎಂದು ರಾಜಪ್ರಮುಖರು ನಿನ್ನೆಯದಿನ ಉಭಯ ಶಾಸನಸಭೆಗಳ ಸಂಯುಕ್ತ ಅಧಿವೇಶನದಲ್ಲಿ ಭಾಷಣಮಾಡುತ್ತಾ ತಿಳಿಸಿದರು.

ಸಂಸ್ಥಾನಕ್ಕೆ ಬಳ್ಳಾರಿಯ ಸೇರ್ಪಡೆ ದೇಶದಲ್ಲಿ ಮಳೆ ಬೆಳೆ, ನೀರಾವರಿ ಯೋಜನೆಗಳು, ಆಹಾರಪರಿಸ್ಥಿತಿ, ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮ ಮುಂತಾದುವುಗಳನ್ನೆಲ್ಲಾ ರಾಜಪ್ರಮುಖರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು.

ಪ್ರಾರಂಭದಲ್ಲಿ ಶ್ರೀಮನ್ಮಹಾರಾಜರು ಬಳ್ಳಾರಿಯ ಜನರಿಗೂ ಅಲ್ಲಿಂದ ಈಗ ಶಾಸನಸಭೆಗೆ ಬಂದ ೫ ಮಂದಿ ಸದಸ್ಯರಿಗೂ ಸ್ವಾಗತವನ್ನು ನೀಡಿದರು.

ತುಂಗಭದ್ರಾ ಯೋಜನೆಯ ವಿಷಯವಾಗಿ ಅವರು ಪ್ರಸ್ತಾಪಿಸುತ್ತಾ, ಪ್ರಾರಂಭದಲ್ಲಿ ಈ ಹೊಸ ಜಿಲ್ಲೆಯು ಆರ್ಥಿಕ ದೃಷ್ಟಿಯಿಂದ ಅನುಕೂಲವಾಗಿಲ್ಲದಿದ್ದರೂ ತುಂಗಭದ್ರಾ ಯೋಜನೆಯ ಕಾರ್ಯವು ಮುಗಿದ ನಂತರ ಸಂಸ್ಥಾನಕ್ಕೆ ಗಣನೀಯವಾದ ಪ್ರಯೋಜನವಾಗುತ್ತದೆ. ಹಣಕಾಸಿನದೃಷ್ಟಿಯಲ್ಲಿ ಉಂಟಾಗುವ ತೊಂದರೆಯೂ ನಿವಾರಣೆಯಾಗುತ್ತದೆ ಎಂದು ತಿಳಿಸಿದರು.

ದೇಶದಲ್ಲಿ ಮಳೆಬೆಳೆಗಳಾಗದೆ ತೊಂದರೆ ಉಂಟಾಗಿದ್ದು ಕೇಂದ್ರ ಈ ವಿಷಯದಲ್ಲಿ ನೆರವುನೀಡಿ ವಿಶೇಷ ಸಹಾಯಮಾಡಿದೆ. ಕೆಲವು ಪ್ರಮುಖ ನೀರಾವರಿ ಯೋಜನಾಕಾರ್ಯಗಳು ಮಂಜೂರಾಗಿದೆ. ಈವರ್ಷ ಸಂಸ್ಥಾನಾದ್ಯಂತ ಸಮೃದ್ಧಿಯಾಗಿ ಮಳೆಯಾಗಿರುವುದರಿಂದ ಆಹಾರ ಪರಿಸ್ಥಿತಿಯು ಉತ್ತಮಗೊಳ್ಳುತ್ತಿದೆ, ಈ ಸಮಯದಲ್ಲಿ ಕೆಲವು ಕಟ್ಟೆಗಳು ಕೋಡಿ ಹರಿದು ಒಡೆದು ಹೋದುವು ಅವುಗಳ ದುರಸ್ತಿನ ಕೆಲಸವೂ ಪ್ರಾರಂಭವಾಗಲಿದೆ. ಆಹಾರಧಾನ್ಯಗಳ ಹಕೋಟೆಯನ್ನು ಕ್ರಮಕ್ರಮವಾಗಿ ಸಡಿಲಿಸಲಾಗುತ್ತಿದೆ. ಈಗ ಬತ್ತದ ವಸೂಲಿಕ್ರಮದಲ್ಲೂ ಬದಲಾವಣೆ ಮಾಡಿ ಬೆಳೆದವರು ಸ್ವಯಿಚ್ಛೆಯಿಂದ ತಮಗೆ ತೋರಿದಷ್ಟನ್ನು ಕೊಡಲು ವ್ಯವಸ್ಥೆ ಮಾಡಲಾಗಿದೆಯೆಂದು ಅವರು ತಿಳಿಸಿದರು.

ಪಂಚವಾರ್ಷಿಕ ಯೋಜನೆಯ ವಿಷಯವಾಗಿ ಅವರು ಪ್ರಸ್ತಾಪಿಸುತ್ತಾ, ರಾಷ್ಟ್ರಾಭಿವೃದ್ಧಿ ವಿಸ್ತರಣಾಕಾರ್ಯದಲ್ಲಿ ನಮ್ಮ ಸಂಸ್ಥಾನದಲ್ಲಿ ೭ ಬ್ಲಾಕುಗಳನ್ನು ಪ್ರಾರಂಭಿಸಲಾಗಿದೆ. ಇವು ೭೦೦ ಗ್ರಾಮಗಳನ್ನು ಒಳಗೊಂಡಿವೆ. ಇದರಿಂದ ೫ ಲಕ್ಷ ಪ್ರಜೆಗಳಿಗೆ ಉಪಯೋಗವಾಗುತ್ತದೆ. ೧೯೫೪-೫೫ ರಲ್ಲಿ ಇನ್ನು ೮, ೫೫-೫೬ರಲ್ಲಿ ೧೨ ಬ್ಲಾಕುಗಳನ್ನು ಏರ್ಪಡಿಸಲಾಗುತ್ತದೆ ಈ ಯೋಜಯಿಂದ ಸಂಸ್ಥಾನದಲ್ಲಿರುವ ಜನಸಂಖ್ಯೆಯಲ್ಲಿನಾಲ್ಕನೆ ಒಂದಕ್ಕಾದರೂ ಪ್ರಯೋಜನವನ್ನು ಕಲ್ಪಿಸುವ ಯೋಜನೆಯಿದೆ. ಈ ಯೋಜನೆಗಾಗಿ ಏಳೂವರೆಲಕ್ಷ ರೂಪಾಯಿಗಳು ವೆಚ್ಚ ತಗಲುತ್ತದೆ.

ಸಂಸ್ಥಾನದಲ್ಲಿ ಪಂಚವಾರ್ಷಿಕ ಯೋಜನೆಯ ಪ್ರಕಾರ ೩೬·೭ ಕೋಟಿ ರೂಪಾಯಿಗಳ ವೆಚ್ಚದ ಕಾರ್ಯ ನಡೆಯಬೇಕಾಗಿದೆ. ಈ ಮೊಬಲಗಿನಸೈಕಿ ೯ ಕೋಟಿ ಸಾಲದ ರೂಪದಲ್ಲೂ, ೮ ಕೋಟಿ ಹೆಚ್ಚಿನ ತೆರಿಗೆರೂಪದಲ್ಲೂ ಒದಗಿಸಿಕೊಳ್ಳಬೇಕಾಗಿ ಪ್ಲಾನಿಂಗ್ ಕಮಿಷನ್ ಸೂಚನೆಯಿತ್ತಿದೆ. ಈಗ ಸಾಲವನ್ನು ಎತ್ತಲಾಗಿದೆ. ತೆರಿಗೆಗಳನ್ನು ಹೆಚ್ಚಿಸುವ ಮೂಲಕ ಸದ್ಯಕ್ಕೆ ಮೂರುವರೆ ಕೋಟಿ ರೂಪಾಯಿಗಳ ಹುಟ್ಟುವಳಿ ಬರಬಹುದಾಗಿದೆ. ಈ ಕೆಲಸ ಕಾರ್ಯಗಳಲ್ಲಿ ಸರ್ಕಾರದೊಡನೆ ಸಾರ್ವಜನಿಕರೂ ಸಹಕಾರವನ್ನು ನೀಡಬೇಕೆಂದು ತಿಳಿಸಿದರು.

● ಭೂತಾನಿನ ಮಹಾರಾಜರು ಮಹಾರಾಣಿಯವರೊಡನೆ ನಿನ್ನೆಯದಿನ ದೆಹಲಿಗೆ ಆಗಮಿಸಿದರು. ಅವರು ೩ ವಾರಗಳಕಾಲ ಭಾರತದಲ್ಲಿ ಪ್ರವಾಸ ಮಾಡಲಿರುವರು. ಅವರನ್ನು ಪ್ರಧಾನಿನೆಹರುರವರು ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿದರು ಅವರ ಗೌರವಾರ್ಥವಾಗಿ ೧೫ ಕುಶಾಲ ತೋಪುಗಳನ್ನು ಹಾರಿಸಲಾಯಿತು. ಸಂಜೆ ಮಹಾರಾಜರು ರಾಷ್ಟ್ರಾಧ್ಯಕ್ಷರನ್ನು ಪ್ರಧಾನಿಯವರನ್ನು ಅವರ ಭವನಗಳಲ್ಲಿ ಭೇಟಿಮಾಡಿದ್ದರು.

ಪಾಕೀಸ್ತಾನದಲ್ಲಿ ಮಿತ್ರ ರಾಷ್ಟ್ರಗಳಿಗೆ ನೆಲೆಕೊಟ್ಟರೆ ತಪ್ಪಿಲ್ಲ

ಪಾಕ್ ಪ್ರಧಾನಿ ಮಹಮದ್ ಆಲಿ ಹೇಳಿಕೆ

ಪಾಕೀಸ್ತಾನವು ತನ್ನ ಮಿತ್ರರಾಷ್ಟ್ರಗಳಿಗೆ ತನ್ನ ದೇಶದಲ್ಲಿ ಜರೂರು ಪರಿಸ್ಥಿತಿ ಸಮಯದಲ್ಲಿ ಯುದ್ಧ ನೆಲೆಗಳನ್ನು ಕೊಟ್ಟರೆ ತಪ್ಪೇನೂ ಇಲ್ಲ. ಆದಾಗ್ಯೂ ಪಾಕೀಸ್ಥಾನದಲ್ಲಿ ಅಮೆರಿಕಾ ಯುದ್ಧನೆಲೆಗಳ ಪ್ರಶ್ನೆ ಈಗ ಇಲ್ಲ ಎಂದು ಪಾಕ್ ಪ್ರಧಾನಿ ಮಿ॥ ಮಹಮದ್ ಆಲಿಯವರು ಹೇಳಿರುವುದಾಗಿ ತಿಳಿಯಬರುತ್ತದೆ.

ಪಾಕೀಸ್ತಾನವು ಅಮೆರಿಕಾದಿಂದ ಸೈನ್ಯನೆರವನ್ನು ಪಡೆದರೆ ಭಾರತ ಮತ್ತು ಪಾಕೀಸ್ತಾನಗಳ ಸಂಬಂಧಕ್ಕೆ ಸದ್ಯದಲ್ಲಿ ಸ್ವಲ್ಪ ಬಾಧಕವಾಗಬಹುದು ಆದರೆ ಮುಂದಕ್ಕೆ ಇದರಿಂದ ಉಭಯದೇಶಗಳಿಗೂ ಬಹಳ ಪ್ರಯೋಜನವಾಗುತ್ತದೆ. ಕಾಶ್ಮೀರಪ್ರಶ್ನೆಯು ತ್ವರಿತವಾಗಿ ಇತ್ಯರ್ಥವಾಗುವುದಕ್ಕೆ ಈ ಸೈನ್ಯ ಸಹಾಯ ಉಪಯೋಗವಾಗುತ್ತದೆ ಎಂದು ಅವರು ತಿಳಿಸಿದ್ದಾರೆ.

ಭಾರತ ಪ್ರಧಾನಿ ನೆಹರೂರೊಡನೆ ತಾವು ಎಷ್ಟುಸಲ ಬೇಕಾದರೂ ಭಾರತ. ಪಾಕೀಸ್ತಾನಗಳ ನಡುವಿನ ಸಮಸ್ಯೆಗಳ ಪರಿಹಾರಕ್ಕೆ ಮಾತುಕತೆಗಳನ್ನು ನಡೆಸಲು ಸಿದ್ಧವಿರುವುದಾಗಿಯೂ ಆದರೆ ಪಾಕ್-ಅಮೆರಿಕಾ ಮಿಲಿಟರಿ ನೆರವಿನ ವಿಷಯ ಮಾತನಾಡಲು ಮಾತ್ರ ತಾವು ನೆಹರೂರವರನ್ನು ಭೇಟಿ ಮಾಡುವುದಿಲ್ಲ ವೆಂದೂ ಅದು ಕೇವಲ ಪಾಕೀಸ್ತಾನದ ಅಂತರಿಕ ವಿಷಯವೆಂದೂ ಮಹಮದಾಲಿ ನುಡಿದಿದ್ದಾರೆ.

ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನದಲ್ಲಿ ತಾವು ಭಾಗವಹಿಸುವ ವಿಷಯವನ್ನು ಅವರು ಪ್ರಸ್ತಾಪಿಸಿ ಈ ಆಹ್ವಾನಕ್ಕೆ ತಾವು ಇನ್ನೂ ಉತ್ತರ ಕೊಟ್ಟಿಲ್ಲವೆಂದೂ ನಾಳೆ ಕರಾಚಿಗೆ ಆಗಮಿಸಲಿರುವ ಸಿಂಹಳ ಪ್ರಧಾನಿಯವರೊಡನೆ ವಿಷಯ ಚರ್ಚಿಸಿ ನಿರ್ಧರಿಸುವುದಾಗಿ ಹೇಳಿದ್ದಾರೆ. ಈ ಸಮ್ಮೇಳನದಲ್ಲಿ ಪಾಕ್-ಅಮೆರಿಕಾ ಸೈನ್ಯ ಒಪ್ಪಂದ ವಿಷಯ ಚರ್ಚೆಗೆ ಬಂದರೆ ಅಗ ಏನು ಮಾಡುತ್ತೀರಿ ಎಂಬ ಪ್ರಶ್ನೆಗೆ ಮಹಮದ್ ಆಲಿ ಉತ್ತರಕೊಡುತ್ತಾ ಈ ಸಭೆಯನ್ನ ಬಹಿಷ್ಕರಿಸಬೇಕಾಗುತ್ತದೆ ಅಥವಾ ಆ ವಿಷಯ ಚರ್ಚೆಗೆ ಬಂದಾಗ ಗೈರು ಹಾಜರಾಗಬೇಕಾಗುತ್ತದೆ ಎಂದು ಹೇಳಿದ್ದಾರೆ.

★ ಸೀತಾವಿಲಾಸ ಛತ್ರದಬಳಿ ಪದ್ಮಾವತಮ್ಮ ಎಂಬ ಸುಮಾರು ೩೦ ವರ್ಷದ ಮಹಿಳೆಯ ಸೀಮೆಯೆಣ್ಣೆ ಸುರಿದು ಕೊಂಡು ಬೆಂಕಿ ಹತ್ತಿಸಿಕೊಂಡು ಮೃತಳಾದಳೆಂದು ತಿಳಿಯಬರುತ್ತದೆ.

ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಕ್ಕೆ ಉಮೇದುವಾರಿಕೆ

ಮೈಸೂರು ೧೨

ಇದೇ ೨೦ನೇ ತಾರೀಖು ನಡೆಯಲಿರುವ ಪುರಸಭಾಧ್ಯಕ್ಷರ ಚುನಾವಣೆಗೆ ಶ್ರೀಗಳಾದ ಬಿ. ಕೆ. ರಾಮಕೃಷ್ಣಯ್ಯ (ಸಂಯುಕ್ತಜನತಾ ಪಕ್ಷ) ಮತ್ತು ಕೆ. ಪುಟ್ಟಸ್ವಾಮಿ (ಕಾಂಗ್ರೆಸ್)ನವರುಗಳು ಉಮೇದುವಾರಿಕೆ ಅರ್ಜಿ ಸಲ್ಲಿಸಿದ್ದಾರೆ. ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀಗಳಾದ ಎಂ. ಸಿ. ಮಹದೇವಸ್ವಾಮಿ (ಸಂ. ಜ. ಪ.) ಕೆ. ಸಿದ್ದಯ್ಯನವರು ಅರ್ಜಿ ಸಲ್ಲಿಸಿದ್ದಾರೆ.

ಚುನಾವಣಾ ಟ್ರಿಬುನಲ್ ತೀರ್ಪು ರದ್ದು

ಬೆಂಗಳೂರು ೧೨

ಚನ್ನರಾಯಪಟ್ಟಣ ಕ್ಷೇತ್ರದಿಂದ ಮೈಸೂರು ಶಾಸನ ಸಭೆಗೆ ಚುನಾಯಿತರಾಗಿದ್ದ ಶ್ರೀ ಕೆ. ಬಸಪ್ಪಗೌಡರ ಚುನಾವಣೆಯು ಕ್ರಮಬದ್ಧವಾಗಿಲ್ಲವೆಂದು ಚುನಾವಣಾ ಟ್ರಿಬ್ಯುನಲ್‌ನವರು ಕೊಟ್ಟಿದ್ದ ತೀರ್ಪನ್ನು ಮೈಸೂರು ಶ್ರೇಷ್ಠ ನ್ಯಾಯಾಲಯವು ರದ್ದುಗೊಳಿಸಿ ಸೂಕ್ತ ರಿಟ್ ಹೊರಡಿಸಿದ್ದಾರೆ.

ತರೀಕೆರೆ ಕ್ಷೇತ್ರದಿಂದ ಚುನಾಯಿತರಾದ ಶ್ರೀ ಟಿ. ನಾಗಪ್ಪನವರ ಚುನಾವಣೆಯನ್ನು ರದ್ದುಗೊಳಿಸಿ ಟ್ರಿಬ್ಯುನಲ್ ಇತ್ತಿದ್ದ ಆಜ್ಞೆಯನ್ನೂ ಶ್ರೇಷ್ಠ ನ್ಯಾಯಾಲಯವು ರದ್ದುಗೊಳಿಸಿದೆ.

೧೮೮೯ ಜನರ ಬಂಧನ

ಮದ್ರಾಸ್ ಪ್ರಾಂತ್ಯದಲ್ಲಿ ಜಾರಿಗೆ ತಂದ ಪ್ರಾಥಮಿಕ ವಿದ್ಯಾಸುಧಾರಣೆಯನ್ನು ವಿರೋಧಿಸಲು ನಡೆದ ಚಳುವಳಿಯಲ್ಲಿ ೧೮೮೯ ಜನರ ಬಂಧನ ಮಾಡಲಾಯಿತೆಂದು ಮುಖ್ಯಮಂತ್ರಿ ಶ್ರೀ ರಾಜಗೋಪಾಲಚಾರಿಯವರು ಅಲ್ಲಿಯ ಶಾಸನಸಭೆಯಲ್ಲಿ ತಿಳಿಸಿದ್ದಾರೆ.

● ಕೊರಿಯಾ ಪರಿಸ್ಥಿತಿಯನ್ನು ಚರ್ಚಿಸಲು ಫೆಬ್ರವರಿ ೮ ಅಥವ ೯ ರಂದು ವಿಶ್ವಸಂಸ್ಥೆಯ ಅಧಿವೇಶನವನ್ನು ಕರೆಯಬೇಕೆಂದು ಭಾರತವು ಕೋರಿದೆ.

ಪುರಸಭೆಯ ಪ್ರಥಮ ಅಧಿವೇಶನದಲ್ಲೇ ನೂತನ ಸದಸ್ಯರ ಸಭಾತ್ಯಾಗ

ಸಮಿತಿಗಳ ರಚನೆಯಲ್ಲಿ ತಮ್ಮ ಪಕ್ಷಕ್ಕೆ ತಕ್ಕ ಪ್ರಾತಿನಿಧ್ಯ ಇಲ್ಲವೆಂದು ಸಭೆಗೆ ಬಹಿಷ್ಕಾರ

ಮೈಸೂರು ೧೨

ನಿನ್ನೆಯ ದಿನ ಪುನರ್ರಚಿತವಾದ ಪುರಸಭೆಯ ಪ್ರಥಮ ಅಧಿವೇಶನವು ಪ್ರಾರಂಭವಾಗಿ ಒಂದು ಉಪಸಮಿತಿಯ ಸದಸ್ಯರ ಆಯ್ಕೆಯಾದೊಡನೆಯೇ ಉಳಿದ ಕಾರ್ಯಕಲಾಪಗಳಲ್ಲಿ ವಿರೋಧಪಕ್ಷದವರು ಭಾಗವಹಿಸುವುದಿಲ್ಲವೆಂದು ತಿಳಿಸಿ ಸಭಾತ್ಯಾಗವನ್ನು ಮಾಡಿದರು ಅವರೊಡನೆ ಕುಳಿತಿದ್ದ ಶ್ರೀ ಸೇತುರಾಮ್‌ರವರು ಮಾತ್ರ ಕಾರ್ಯಕಲಾಪಗಳಲ್ಲಿ ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಪುರಸಭಾಧ್ಯಕ್ಷರಾದ ಶ್ರೀ ಎಂ. ಎಸ್. ಸ್ವಾಮಿನಾಥ್‌ರವರು ನೂತನ ಸದಸ್ಯರನ್ನು ಸ್ವಾಗತಿಸುತ್ತಾ ಮೈಸೂರು ಪುರಸಭೆಯು ಹಿಂದಿನಿಂದಲೂ ಆದರ್ಶವಾಗಿ ಕೆಲಸಮಾಡುತ್ತಿದೆ. ಹೊಸದಾಗಿ ಬಂದಿರುವ ಸದಸ್ಯರು ಪುರಜನರ ಹಿತಕ್ಕಾಗಿ ಶ್ರಮವಹಿಸಬೇಕೆಂದು ತಿಳಿಸಿದರು.

ಶ್ರೀ ಬಿ ಕೆ. ರಾಮಕೃಷ್ಣಯ್ಯನವರು ಮಾತನಾಡುತ್ತಾ ಸಾಮಾನ್ಯವಾಗಿ ಪುರಸಭೆಗಳಲ್ಲಿ ರಾಜಕೀಯ ಪಕ್ಷಗಳ ಗೊಂದಲವಿಲ್ಲದೆ ಇರಬೇಕು. ಆದಾಗ್ಯೂ ಚುನಾವಣೆಗಳಲ್ಲಿ ವಿವಿಧ ರಾಜಕೀಯ ಪಕ್ಷಗಳು ಸ್ಪರ್ಧಿಸಿ ಜಯಶೀಲರಾಗಿ ಬಂದಿದ್ದರೂ ಮುಂದೆ ಪುರಸಭೆಯ ಕಾರ್ಯಗಳಲ್ಲಿ ಪಕ್ಷ ಪ್ರತಿಪಕ್ಷ ಎಂಬ ಭೇದಭಾವವನ್ನು ತೊರೆದು ಜನಾರೋಗ್ಯ, ನೀರಿನ ಸರಬರಾಜು ಮುಂತಾದ ಪುರಜನರ ಹಿತಾಭಿವೃದ್ಧಿಗಳಿಗಾಗಿ ಒಗ್ಗಟ್ಟಿನಿಂದ ಕೆಲಸಮಾಡಬೇಕೆಂದು ತಿಳಿಸಿದರು.

ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಎಸ್. ಲಿಂಗಣ್ಣನವರು ಸಹ ಮಾತನಾಡಿ ಎಲ್ಲರೂ ಸೌಹಾರ್ದ್ಯಯುತವಾಗಿ ಪೌರಸೇವೆಯನ್ನು ಮಾಡಬೇಕೆಂದು ಹೇಳಿದರು.

ಅನಂತರ ಕಾಂಗ್ರೆಸ್ ಪಕ್ಷದ ಶ್ರೀ ಟಿ. ನರಸಿಂಹಯ್ಯಂಗಾರ್‌ರವರು ಮ್ಯಾನೇಜಿಂಗ್ ಸಮಿತಿಗೆ ೮ ಜನ ಸದಸ್ಯರ ಹೆಸರನ್ನು ಸೂಚಿಸಿದರು.

ಅದರಲ್ಲಿ ಕಾಂಗ್ರೆಸ್ಸಿನ ೫ ಜನ ಸದಸ್ಯರು ವಿರೋಧಪಕ್ಷದ ೩ ಜನರಿದ್ದರು. ಆ ಸಮಯದಲ್ಲಿ ಶ್ರೀ ರಾಮಕೃಷ್ಣಯ್ಯನವರು ಮಾತನಾಡುತ್ತಾ ತಮ್ಮ ಹೆಸರು ಸೂಚಿತವಾಗಿರುವುದನ್ನು ಹಿಂದಕ್ಕೆ ತೆಗೆದುಕೊಂಡು ಕಾಂಗ್ರೆಸ್ ಪಕ್ಷದಿಂದ ನಾಲ್ವರು ಮತ್ತು ತಮ್ಮ ಪಕ್ಷದಲ್ಲಿ ನಾಲ್ವರು ಒಮ್ಮತದಿಂದ ಚುನಾಯಿತರಾಗಬೇಕೆಂದರು. ಅದನ್ನು ಶ್ರೀ ಟಿ. ನರಸಿಂಹಯ್ಯಂಗಾರ್‌ರವರು ವಿರೋಧಿಸಿ, ತಾವು ಸೂಚಿಸಿರುವುದು ಪಕ್ಷಗಳ ಆಧಾರವೇನಿಲ್ಲ, ದಕ್ಷತೆಯಿಂದ ಕಾರ್ಯನಿರ್ವಹಣೆಗಾಗೆಂದರು.

ಶ್ರೀ ಮಹಮದ್‌ಸೇಟ್‌ರವರು ಮಾತನಾಡುತ್ತಾ ಈಗ ಸೂಚಿತವಾಗಿರುವ ಹೆಸರುಗಳು ಎಲ್ಲರೂ ಒಮ್ಮತದಿಂದ ತೀರ್ಮಾನಿಸಿದ್ದಲ್ಲ. ಕಾಂಗ್ರೆಸ್ ಪಕ್ಷದ ಸದಸ್ಯರು ತೀರ್ಮಾನಿಸಿರುವುದು. ಆದ್ದರಿಂದ ಈ ಸಭೆಯನ್ನು ಮುಂದಕ್ಕೆ ಹಾಕಿ ಅನಧಿಕೃತವಾಗಿ ಎಲ್ಲಾ ಸದಸ್ಯರೂ ಸೇರಿ ಬೇರೇ ಪಟ್ಟಿಯನ್ನು ತಯಾರಿಸಬೇಕೆಂದು ಸಲಹೆಯಿತ್ತರು. ಈ ಸಲಹೆಗೆ ಪುರಸ್ಕಾರ ದೊರೆಯಲಿಲ್ಲ. ಶ್ರೀ ಕೆ. ಪುಟ್ಟಸ್ವಾಮಿಯವರು ಇದನ್ನು ತೀವ್ರವಾಗಿ ವಿರೋಧಿಸಿ ನಿರ್ದಿಷ್ಟವಾದ ಕಾರ್ಯಕ್ರಮವನ್ನು ಉಳ್ಳ ಕಾಂಗ್ರೆಸ್ ಪಕ್ಷ ಕೆಲಸಮಾಡುವಾಗ ಪಕ್ಷದ ಆಧಾರ ಬೇಡ ಎನ್ನುವುದನ್ನು ಒಪ್ಪಲಾಗುವುದಿಲ್ಲ. ಇದನ್ನು ನಮ್ಮ ಹಿರಿಯರು ತೀರ್ಮಾನಿಸಿದ್ದಾರೆ. ಇಲ್ಲಿ ನಮಗೆ ತತ್ವ, ನೀತಿಬೋಧನೆ ಬೇಡವೆಂದರು.

ಶ್ರೀ ಮೀರ್‌ನೂರ್ ಹುಸೇನ್‌ರವರು ಈ ಅಭಿಪ್ರಾಯವನ್ನು ವಿರೋಧಿಸಲು ಹೊರಟಾಗ ಅಧ್ಯಕ್ಷರು ನಡುವೆ ಮಾತನಾಡುತ್ತಾ ಇಂತಹ ಚಿಹಿ ಪ್ರಸಂಗಗಳಿಂದ ಪ್ರಯೋಜನವೇನೂ ಇಲ್ಲ. ಕಾರ್ಯಕಲಾಪಗಳನ್ನು ನಡೆಸೋಣವೆಂದರು. ಅನಂತರ ವಿರೋಧಪಕ್ಷದ ಶ್ರೀ ಬಿ.ಜಿ ದಾಸ್‌ರವರು ಮ್ಯಾನೇಜಿಂಗ್ ಕಮಿಟಿಗೆ ತಮ್ಮ ಪಕ್ಷದ ನಾಲ್ವರ ಹೆಸರನ್ನು ಸೂಚಿಸಿದರು.

ಸದಸ್ಯರ ಮತಗಣನೆ ನಡೆಯಬೇಕಾದ ಸಂದರ್ಭ ಒದಗಿದ್ದರಿಂದ ಇದನ್ನು ಬ್ಯಾಲೆಟ್ ಮೂಲಕ ನಡೆಸಬೇಕೆ ಅಥವಾ ಕೈ ಎತ್ತುವುದರ ಮೂಲಕವೇ ಎಂಬ ಪ್ರಶ್ನೆ ಉದ್ಭವಿಸಿತು. ವಿರೋಧ ಪಕ್ಷದವರು ಬ್ಯಾಲೆಟ್ ಮೂಲಕವೆಂದರು. ಮತ ಪಡೆದಾಗ ಅದಕ್ಕೆ ೧೯ ಜನರು ಮಾತ್ರ ಮತನೀಡಿದರು ಅಧ್ಯಕ್ಷರು ಕಾನೂನನ್ನು ವಿವರಿಸಿ ೪೦ ಸದಸ್ಯರಿರುವ ಸಭೆಯಲ್ಲಿ ಬ್ಯಾಲೆಟ್‌ನಲ್ಲಿ ಚುನಾವಣೆ ನಡೆಸಲು ಬಹುಮತ ದೊರೆಯಲಿಲ್ಲವೆಂದರು. ಈ ಬಗ್ಗೆ ಬ್ಯಾಲೆಟ್ ಬೇಡವೆನ್ನುವವರಿಂದಲೂ ಅಭಿಪ್ರಾಯ ಪಡೆಯಬೇಕೆಂದು ವಿರೋಧಪಕ್ಷದವರು ಹೇಳಿದರು. ಈ ವಿಷಯದಲ್ಲಿ ಸ್ವಲ್ಪ ಚರ್ಚೆ ನಡೆದು ಕೊನೆಗೆ ಅಧ್ಯಕ್ಷರು ರೂಲಿಂಗ್ ಕೊಟ್ಟು ಬ್ಯಾಲೆಟ್‌ನಿಂದ ಚುನಾವಣೆ ಬೇಕಾಗಿಲ್ಲವೆಂದರು.

ಅನಂತರ ಮ್ಯಾನೇಜಿಂಗ್ ಕಮಿಟಿಗೆ ಚುನಾವಣೆ ನಡೆಯಿತು.

ಶ್ರೀಗಳಾದ ಎಸ್. ಲಿಂಗಣ್ಣ, ಜಿ.ಎಸ್. ರಾಮಕೃಷ್ಣಯ್ಯ, ಸೇತುರಾಮ್, ಎಂ. ವೆಂಕಟರಂಗಯ್ಯ, ಫಾದರ್ ಆಡಿಯೋ, ಎಸ್.ವೆಂಕಟರಮಣಯ್ಯ, ಎ. ಶ್ರೀನಿವಾಸ್ ಮತ್ತು ಸಂಜೀವಯ್ಯ ಇವರು ಬಹುಮತ ಪಡೆದು ಚುನಾಯಿತರಾದರು.

ಈ ಚುನಾವಣೆಯಲ್ಲಿ ವಿರೋಧಪಕ್ಷದ ಸೇತುರಾಮನ್ ವಿನಹ ಮತ್ಯಾರೂ ಮತ ನೀಡಲೇಯಿಲ್ಲ. ತಮ್ಮ ಪಕ್ಷ ಸೂಚಿಸಿದ್ದ ಹೆಸರುಗಳ ಬಗ್ಗೆ ಮತ ಪಡೆದುಕೊಂಡಾಗಲೂ ಅವರು ಮತ ನೀಡಲೇಯಿಲ್ಲ.

ಬಾಕಿ ಸಮಿತಿಗಳ ಚುನಾವಣೆಯನ್ನು ಪ್ರಾರಂಭಿಸುವಾಗ ಶ್ರೀ ಬಿ. ಕೆ. ರಾಮಕೃಷ್ಣಯ್ಯನವರು ಮಾತನಾಡುತ್ತಾ ಮುಂದಿನ ಕಾರ್ಯಕ್ರಮದಲ್ಲಿ ತಾವುಗಳಾರೂ ಭಾಗವಹಿಸುವುದಿಲ್ಲವೆಂದು ತಿಳಿಸಿ ಸಭಾತ್ಯಾಗ ಮಾಡಿದರು. ಅವರ ಜೊತೆಯಲ್ಲಿ ಉಳಿದ ೧೭ ಜನರೂ ಹೊರಟುಹೋದರು. ಶ್ರೀ ಸೇತುರಾಮನ್‌ರವರು ಮಾತ್ರ ಮುಂದಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಿದರು. ಅನಂತರ ವರ್ಕ್ಸ್, ಹೆಲ್ತ್, ಟೌನ್‌ಹಾಲ್, ಆಡಿಟ್, ಲೀಗಲ್ ಮತ್ತು ಫ್ರಾವಿಡೆಂಟ್ ಫಂಡ್‌ಗಳಿಗೆ ಸದಸ್ಯರನ್ನು ಚುನಾಯಿಸಲಾಯಿತು.

ವರ್ಕ್ಸ್ ಕಮಿಟಿ: ಶ್ರೀಗಳಾದ ನರಸಿಂಹ ಅಯ್ಯಂಗಾರ್, ಹೆಚ್. ಕೆಂಪೇಗೌಡ, ಆರ್. ಸೇತುರಾಮನ್ ಮತ್ತು ಕೆ. ಸಿದ್ದಯ್ಯ.

ಹೆಲ್ತ್ ಕಮಿಟಿ: ಶ್ರೀಗಳಾದ ಕುಟಿನೊ, ಎಂ. ಕೆ. ಲಿಂಗಯ್ಯ, ಎ. ಕೃಷ್ಣಮೂರ್ತಿ ರಾವ್, ಚೌಡಯ್ಯ.

ಟವನ್‌ಹಾಲ್ ಕಮಿಟಿ: ಶ್ರೀಗಳಾದ ಡಿ. ಲಿಂಗಯ್ಯ, ಜಿ. ಆರ್. ರಂಗಸ್ವಾಮಯ್ಯ, ಜೋಗಿಸಿದ್ದಯ್ಯ ಮತ್ತು ಬಿ.ಎ. ಕೆಂಗೇಗೌಡ.

ಆಡಿಟ್ ಕಮಿಟಿ: ಶ್ರೀಗಳಾದ ಕೃಷ್ಣಮೂರ್ತಿರಾವ್, ಬಿ. ಎಲ್. ರಾಮಸ್ವಾಮಿಶೆಟ್ಟಿ, ಬಿ. ಎನ್. ಕೆಂಗೇಗೌಡ.

ಲೀಗಲ್ ಕಮಿಟಿ: ಶ್ರೀಗಳಾದ ಟಿ. ನರಸಿಂಹಯ್ಯಂಗಾರ್, ಸಂಜೀವಯ್ಯ ಮತ್ತು ಬಿ. ಕೆ. ರಾಮಕೃಷ್ಣಯ್ಯ.

ಫ್ರಾವಿಡೆಂಟ್ ಫಂಡ್ ಕಮಿಟಿ: ಶ್ರೀಗಳಾದ ಡಿ. ವೆಂಕಟಲಿಂಗಯ್ಯ, ಎಸ್. ವೆಂಕಟರಮಣಯ್ಯ ಮತ್ತು ಕುಟೀನೊ.

ಇತರ ಸಮಿತಿಗಳಿಗೆ ಚುನಾಯಿಸುವುದನ್ನು ಮುಂದುವರಿಸಬೇಕೆಂಬ ಕೋರಿಕೆ ಮೇಲೆ ಸಭೆಯನ್ನು ಮುಂದುವರಿಸಲಾಯಿತು.

ಕೊರಿಯಾ ಯುದ್ಧ ಖೈದಿಗಳ ಬಿಡುಗಡೆಗೆ ಒತ್ತಾಯ

ಕೊರಿಯಾದಲ್ಲಿರುವ ಎಲ್ಲಾ ಯುದ್ಧ ಖೈದಿಗಳನ್ನು ಜನವರಿ ೨೩ನೇ ತಾರೀಖು ಬಂಧಮುಕ್ತರನ್ನಾಗಿ ಮಾಡಬೇಕೆಂದು ವಿಶ್ವಸಂಸ್ಥೆ ಸೈನ್ಯವು ತಟಸ್ಥ ರಾಷ್ಟ್ರಗಳ ಸಮಿತಿಗೆ ತಿಳಿಸಿದೆ.

ಪುರಸಭಾ ಕಾಂಗ್ರೆಸ್ ಪಕ್ಷದ ನಾಯಕ

ಮೈಸೂರು ೧೨

ಪುರಸಭೆಯ ಕಾಂಗ್ರೆಸ್ ಪಕ್ಷದನಾಯಕರಾಗಿ ಶ್ರೀ ಎಸ್. ಲಿಂಗಣ್ಣನವರು ಆಯ್ಕೆಯಾಗಿದ್ದಾರೆ. ಶ್ರೀ ಪಿ. ಸೀತಾರಾಮಯ್ಯನವರು ಪಕ್ಷದ ಅಧ್ಯಕ್ಷ, ಶ್ರೀ ಟಿ. ನರಸಿಂಹಯ್ಯಂಗಾರ್‌ರವರು ಪಕ್ಷದ ಉಪನಾಯಕ ಮತ್ತು ಕಾರ್ಯದರ್ಶಿ, ಶ್ರೀ ಚೌಡಯ್ಯನವರು ಖಜಾಂಚಿಗಳಾಗಿ ಆರಿಸಲಾಗಿದೆ.

ಪುರಸಭಾ ಸದಸ್ಯರಲ್ಲದ ಶ್ರೀಗಳಾದ ಎಸ್. ಚನ್ನಯ್ಯ. ಬಿ.ನಾರಾಯಣಸ್ವಾಮಿ ಟಿ. ವೆಂಕಟರಮಣಯ್ಯ ಪಿ. ಸೀತಾರಾಮಯ್ಯನವರುಗಳನ್ನು ಪುರಸಭಾ ಕಾಂಗ್ರೆಸ್ ಪಕ್ಷದ ಸದಸ್ಯರನ್ನಾಗಿ ಕೋ ಆಪ್ಟ್ ಮಾಡಿಕೊಳ್ಳಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೧—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೭—೧೦	೨೫—೬
ಎಳ್ಳು	೬೦—	—
ಹರಳು	೪೧—೮	೪೨—೧೦
ಹೊಂಗೆಬೀಜ	—	—
ಹುಚ್ಚೆಳ್ಳು	೩೮—	೪೬—
ಹುರಳಿ	೨೮—೮	೩೧—೧೦
ಉದ್ದು	೬೦—೪	—
ಹೆಸರು	೩೯—೧೪	೪೩—
ಅಲಸಂದೆ	೩೩—೨	೪೬—೨
ಅವರೆ	—	—
ಹುಣಸೆಹಣ್ಣು	೧೩—೧	೧೬—೨
ಮೆಣಸಿನಕಾಯಿ	೧೬—೨	೩೫—೧೨
ಸೀಗೆಕಾಯಿ	೫—೭	—
ಬೆಲ್ಲ	—	—
ತೆಂಗಿನಕಾಯಿ	೧೬೦—	೨೯೦—

ಲಾರ್ಡ್ ಸೈಮನ್ನರ ನಿಧನ

ಬ್ರಿಟನ್ನಿನ ಮಾಜಿ ವಿದೇಶಾಂಗ ಶಾಖಾ ಸಚಿವ ಲಾರ್ಡ್ ಸೈಮನ್‌ರವರು ನಿನ್ನೆಯ ದಿನ ನಿಧನರಾದರು ಅವರಿಗೆ ೮೦ ವರ್ಷ ವಯಸ್ಸಾಗಿತ್ತು ಅವರು ೧೯೨೭ರಲ್ಲಿ ಭಾರತ ಸ್ವಾತಂತ್ರ ಸಂಗ್ರಾಮ ಸಮಯದಲ್ಲಿ ಇಲ್ಲಿಗೆ ಆಗಮಿಸಿದ್ದರು ಅವರು ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿದ ವರದಿಯಮೇಲೆ ಭಾರತ ಸ್ವಾತಂತ್ರ್ಯವಿಷಯದಲ್ಲಿ ಮೂರು ಬಾರಿ ದುಂಡುಮೇಜಿನಪರಿಷತ್ತು ನಡೆಯಿತು.

ರಣಜಿತ್
ತಾ॥ 14-4-54 ರಿಂದ ದಿನ 3 ಆಟಗಳು
ಶ್ರೀರಾಮಚಂದ್ರರವರ
ಲಹರ್ [ಹಿಂದಿ]
ಪಾತ್ರ:—ಕಿಶೋರ್‌ಕುಮಾರ್, ಸ್ಯಾನೂ ಶಕುಂತಲ, ಓಂಪ್ರಕಾಶ್, ಸುಂದರ್

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋ॥ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೧೬

೧೩-೧-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾಂಗ್ರೆಸ್ ಸಮಿತಿ ಸಭೆ

ಮೈಸೂರು ೧೩

ಮೈಸೂರುನಗರದ ದಕ್ಷಿಣ ವಿಭಾಗದ ಕಾಂಗ್ರೆಸ್ ಸಮಿತಿಯು ಇದೇ ಶನಿವಾರ ಸಂಜೆ ನಗರ ಕಾಂಗ್ರೆಸ್ ಸಮಿತಿಯ ಕಛೇರಿಯಲ್ಲಿ ಶ್ರೀ ಬಿ ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಕೆಳಗೆ ಕಂಡ ನಿರ್ಣಯಗಳನ್ನು ಸ್ವೀಕರಿಸಿತು.

ಕಾಂಗ್ರೆಸ್ಸಿಗೆ ಪ್ರಾಥಮಿಕ ಸದಸ್ಯರನ್ನು ಈಸಲ ಹೆಚ್ಚಿಗೆ ಹೆಚ್ಚಾಗಿ ಸೇರಿಸಬೇಕೆಂದೂ ದಕ್ಷಿಣ ವಿಭಾಗದ ಕಾಂಗ್ರೆಸ್ ಕಾರ್ಯಕರ್ತರುಗಳು ಇದರಲ್ಲಿ ಪೂರ್ಣವಾಗಿ ಸಹಕರಿಸಬೇಕೆಂದು ತೀರ್ಮಾನಿಸಿತು.

ಪಾಕೀಸ್ತಾನ ಮತ್ತು ಅಮೆರಿಕ ಮಿಲಿಟರಿ ಒಪ್ಪಂದವು ಏಷ್ಯಾದ ಶಾಂತಿಗೆ ಧಕ್ಕೆ ತರುವುದರಿಂದ ಸಭೆಯು ಈ ಒಪ್ಪಂದದ ಬಗ್ಗೆ ತನ್ನ ತೀವ್ರ ಕಳವಳವನ್ನು ವ್ಯಕ್ತಪಡಿಸಿತು ಈ ಒಪ್ಪಂದವು ಭಾರತಕ್ಕೆ ಅಪಾಯಕರವಾಗಿ ಪರಿಣಮಿಸುವುದೆಂದು ಈ ಸಮಿತಿಯು ಭಾವಿಸುತ್ತದೆ.

ರಾಜಕೀಯ ಚಳುವಳಿಯಲ್ಲಿ ನೊಂದವರ ಬಗ್ಗೆ ಎ.ಐ.ಸಿ.ಸಿ. ಕಛೇರಿಯಿಂದ ಬಂದಿರುವ ಪ್ರಕಟನೆಯ ಪ್ರಕಾರ ಪಟ್ಟಿಯನ್ನು ತಯಾರಿಸಿ ಮುಂದಿನ ಸಭೆಯಲ್ಲಿ ತರತಕ್ಕದ್ದು.

ಹೈದರಾಬಾದ್ ಕಾಂಗ್ರೆಸ್ಸಿನಲ್ಲಿ ಪುನಃ ಭಿನ್ನತೆ

ಹೈದರಾಬಾದ್ ಕಾಂಗ್ರೆಸ್ಸಿನಲ್ಲಿ ತಲೆದೋರಿರುವ ಭಿನ್ನತೆಯನ್ನು ನಿವಾರಿಸಲು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ಪ್ರಯತ್ನಿಸಿ, ಶಾಸನಸಭೆಯ ಕಾಂಗ್ರೆಸ್ ಪಕ್ಷವನ್ನು ಉದ್ದೇಶಿಸಿ ಭಾಷಣ ಮಾಡಿದ ಮೇಲೆ ಪುನಃ ಶ್ರೀ ಬಿ. ರಾಮಕೃಷ್ಣರಾಯರನ್ನೇ ತಮ್ಮ ನಾಯಕರನ್ನಾಗಿ ಪಕ್ಷವು ಚುನಾಯಿಸಿಕೊಂಡಿತು. ಆದಾಗ್ಯೂ ಪಕ್ಷದಲ್ಲಿ ಭಿನ್ನತೆಯು ಪೂರ್ಣವಾಗಿ ಅಳಿದುಹೋದಂತೆ ಕಾಣುತ್ತಿಲ್ಲ. ಈಗಾಗಲೇ ಅಲ್ಲಿಯ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ರಮಾನಂದ ತೀರ್ಥರವರು ಅಧ್ಯಕ್ಷತೆಗೆ ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ಹೊಸ ಅಧ್ಯಕ್ಷರ ಚುನಾವಣೆಯು ಇದೇ ೧೭ ನೇ ತಾರೀಖು ನಡೆಯಬೇಕಾಗಿದೆ.

ಅಲ್ಲಿಯ ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ತಮ್ಮ ಮಂತ್ರಿಮಂಡಲದ ಪುನರ್ರಚನೆ ಮತ್ತು ಕಾಂಗ್ರೆಸ್ ಅಧ್ಯಕ್ಷರ ಚುನಾವಣೆ ವಿಷಯದಲ್ಲಿ ಪ್ರಧಾನಿ ನೆಹರೂರವರನ್ನು ಭೇಟಿಮಾಡಲು ದೆಹಲಿಗೆ ತೆರಳಿದ್ದಾರೆ.

ಮೈಸೂರಿಗೆ ಸಕ್ಕರೆ

ಮುಂದಿನ ತಿಂಗಳು ವಿದೇಶಗಳಿಂದ ಬರುವ ಸಕ್ಕರೆಯನ್ನು ೨೫೦೦ ಮೂಟೆಗಳನ್ನು ಮೈಸೂರು ಸಂಸ್ಥಾನಕ್ಕೆ ನಿಗದಿ ಮಾಡಲಾಗಿದೆ ಯೆಂದು ತಿಳಿಯಬರುತ್ತದೆ.

ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನ

ಮೇ ತಿಂಗಳಿನಲ್ಲಿ ನಡೆಯುವ ಸಂಭವ

ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನವು ಬರುವ ಮೇ ತಿಂಗಳಿನಲ್ಲಿ ನಡೆಯುವ ಸಂಭವವಿದೆಯೆಂದು ಸಿಂಹಳ ಪ್ರಧಾನಿ ಸರ್ ಜಾನ್ ಕೊಟೇಲವಾಲಾರವರು ಹೇಳಿದ್ದಾರೆ.

ಶ್ರೀಯುತರು ಭಾರತ ಪ್ರಧಾನಿ ನೆಹ್ರೂರವರನ್ನು ಭೇಟಿಮಾಡಿ ಭಾರತ--ಸಿಂಹಳಗಳ ನಡುವೆ ಇರುವ ಸಿಂಹಳ ಭಾರತೀಯರ ಪ್ರಶ್ನೆ ವಿಷಯವಾಗಿ ಮಾತುಕತೆ ನಡೆಸಲು ಈದಿನ ಕೊಲಂಬೋವಿನಿಂದ ಭಾರತಕ್ಕೆ ಹೊರಟಿದ್ದಾರೆ. ಅವರು ಕರಾಚಿಗೆ ತೆರಳಿ ಶುಕ್ರವಾರದ ದಿನ ದೆಹಲಿಗೆ ಬರುವರು

ಕರಾಚಿಯಲ್ಲಿ ಪಾಕ್ ಪ್ರಧಾನಿ ಮಹಮದಾಲಿಯವರೊಡನೆ ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನ ವಿಷಯವನ್ನು ಚರ್ಚಿಸುವರೆಂದು ತಿಳಿದುಬಂದಿದೆ. ಅನಂತರ ಈ ವಿಷಯವನ್ನು ಪ್ರಧಾನಿ ನೆಹರೂರವರೊಡನೆಯೂ ಚರ್ಚಿಸಲಿರುವರು.

ಸಮ್ಮೇಳನದಲ್ಲಿ ಭಾಗವಹಿಸುವಂತೆ ಇಂಡೋನೇಷ್ಯಾ ಪ್ರಧಾನಿಯವರಿಗೂ ಈ ಆಹ್ವಾನವನ್ನು ಕಳುಹಿಸಲಾಗಿದೆ.

ಪಾಕೀಸ್ತಾನಕ್ಕೆ ಸಂಬಂಧಪಟ್ಟ ಆಂತರಿಕ ವಿಷಯಗಳಲ್ಲಿ ಸಮ್ಮೇಳನವು ಚರ್ಚೆ ನಡೆಸದಿದ್ದರೆ ಮಾತ್ರ ತಾವು ಈ ಸಮ್ಮೇಳನದಲ್ಲಿ ಭಾಗವಹಿಸುವುದಾಗಿ ಪಾಕೀಸ್ತಾನದ ಪ್ರಧಾನಿ ಮಹಮದಾಲಿಯವರು ತಿಳಿಸಿರುವುದಾಗಿ ಗೊತ್ತಾಗಿದೆ.

ಯುವತಿಯ ಮರಣ

ಮೈಸೂರು ೧೩

ಮೊನ್ನೆ ರಾತ್ರಿ ಹೊಸಕೇರಿಯಲ್ಲಿ ಮೃತಳಾದ ಶ್ರೀಮತಿ ಲಕ್ಷಮ್ಮ ಎಂಬಾಕೆಯನ್ನು ಸಂಸ್ಕಾರಕ್ಕಾಗಿ ಕರೆದೊಯ್ಯುತ್ತಿದ್ದಾಗ ಆಕೆಯ ತಂದೆ ಮತ್ತು ಸಂಬಂಧಿಕರು ಅವಳ ಮರಣದ ಬಗ್ಗೆ ಸಂಶಯಗೊಂಡು ಶವವನ್ನು ರುದ್ರಭೂಮಿಗೆ ಕೊಂಡೊಯ್ಯುವುದನ್ನು ನಿಲ್ಲಿಸಿ ಪೋಸ್ಟ್‌ಮಾರ್ಟಂಗಾಗಿ ಆಸ್ಪತ್ರೆಗೆ ಕಳುಹಿಸಲಾಯಿತು. ಪೋಸ್ಟ್‌ಮಾರ್ಟಂ ನಡೆದ ನಂತರ ಶವವನ್ನು ಆಕೆಯ ಗಂಡ ಲಿಂಗಯ್ಯ ಮತ್ತು ತಂದೆಯವರ ವಶಕ್ಕೆ ಕೊಡಲಾಯಿತು.

ಪೊಲೀಸರು ತನಿಖೆ ಕ್ರಮ ನಡೆಸುತ್ತಲಿದ್ದಾರೆ.

ಸೂಚನೆ

ಉತ್ತರಾಯಣ ಪುಣ್ಯಕಾಲದ ಪ್ರಯುಕ್ತ ನಾಳೆ ನಮ್ಮ ಪತ್ರಿಕಾಲಯಕ್ಕೆ ರಜಾ ಕೊಡಲಾಗಿದೆ ಪತ್ರಿಕೆ ಪ್ರಕಟವಾಗುವುದಿಲ್ಲ—ಸಂ.

ಶಾಸನ ಸಭಾಧಿವೇಶನ

ಬೆಂಗಳೂರು ೧೩

ನಿನ್ನೆ ನಡೆದ ಶಾಸನ ಸಭಾಧಿವೇಶನದಲ್ಲಿ ದೇಣಿದಾರರ ರಕ್ಷಣೆ ತಿದ್ದುಪಡಿಯು ಅಂಗೀಕಾರವಾಯಿತು.

ಮುನ್ಸೀಫರುಗಳ ನೇಮಕ ವಿಷಯದಲ್ಲಿ ಹೈಕೋರ್ಟು ಕಳುಹಿಸಿದ್ದ ಪಟ್ಟಿಯನ್ನು ಸರ್ಕಾರವು ಒಪ್ಪದೇ ತಾನೇ ಕೆಲವು ನೇಮಕ ಮಾಡಿದುದರ ಬಗ್ಗೆ ಅನೇಕ ಪ್ರಶ್ನೋತ್ತರಗಳು ನಡೆದುವು.

ಬ್ಲಿಟ್ ಪತ್ರಿಕಾ ಸಂಪಾದಕರು ದಸರಾ ವೇಳೆಯಲ್ಲಿ ಮೈಸೂರಿಗೆ ಆಗಮಿಸಿದ ವಿಷಯದಲ್ಲಿ ಪ್ರಶ್ನೆಯೊಂದಕ್ಕೆ ಅವರಿಗೆ ವಿಶೇಷ ಆಹ್ವಾನವೇನೂ ಹೋಗಿರಲಿಲ್ಲ. ಅವರಿಗೆ ಪ್ರೇಕ್ಷಕ ಗ್ಯಾಲರಿಯಲ್ಲಿ ಒಂದು ಪಾಸನ್ನು ಕೊಡಲಾಗಿತ್ತೆಂಬ ಉತ್ತರ ಕೊಡಲಾಯಿತು.

ಫಸ್ಟ್‌ಗ್ರೇಡ್ ಕಾಲೇಜುಗಳ ಸ್ಥಾಪನೆ ವಿಶಯದಲ್ಲಿ ಶಿವಮೊಗ್ಗಾದಲ್ಲಿ ಒಂದು ಫಸ್ಟ್‌ಗ್ರೇಡ್ ಕಾಲೇಜನ್ನು ಸ್ಥಾಪಿಸುವ ವಿಷಯ ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ವಿದ್ಯಾಸಚಿವರು ತಿಳಿಸಿದರು.

ಮಹಾರಾಜಾ ಕಾಲೇಜಿನ ಪ್ರೊಫೆಸರ್ ಶ್ರೀ ಶ್ರೀಕಂಠಯ್ಯನವರು ಇತ್ತಿರುವ ರಾಜಿನಾಮೆ ವಿಷಯ ಬಂದಾಗ ಅವರು ೨೦-೫-೫೩ ರಲ್ಲಿ ರಾಜೀನಾಮೆ ಸಲ್ಲಿಸಿದ್ದಾರೆ ಆದರಲ್ಲಿ ಕಾರಣಗಳನ್ನು ಕೊಡಲಾಗಿದೆ. ರಾಜೀನಾಮೆ ಅಂಗೀಕಾರವಾಗಿಲ್ಲ. ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಉತ್ತರಬಂದಿತು.

ಗೋಸದನಗಳ ಸ್ಥಾಪನೆ

ಪಂಚವಾರ್ಷಿಕ ಯೋಜನೆಪ್ರಕಾರ ದೇಶದಲ್ಲಿ ೧೬೦ ಗೋಸದನಗಳನ್ನು ಸ್ಥಾಪಿಸಲಾಗುತ್ತದೆ. ಇವುಗಳಿಗಾಗಿ ವೆಚ್ಚವಾಗುವ ಹಣದಲ್ಲಿ ಅರ್ಧಭಾಗವನ್ನು ಕೇಂದ್ರ ಸರ್ಕಾರವು ಕೊಡುವುದು.

ಡಾ॥ ಶ್ರೀಮತಿ ಅಪ್ಪಯ್ಯನವರ ನಿಧನ

ವಾಣಿವಿಲಾಸ ಆಸ್ಪತ್ರೆಯ ಮೆಡಿಕಲ್ ಆಫೀಸರ್ ಡಾ॥ ಶ್ರೀಮತಿ ಅಪ್ಪಯ್ಯನವರು ನಿನ್ನೆಯದಿನ ನಿಧನರಾದರು.

ಶ್ರೀಮತಿಯವರು ಮಾಮೂಲಿನಂತೆ ತಮ್ಮ ಕೆಲಸವನ್ನು ಆಸ್ಪತ್ರೆಯಲ್ಲಿ ಪೂರೈಸಿಕೊಂಡು ೨ ಘಂಟೆಗೆ ಮನೆಗೆಹಿಂತಿರುಗಿದರೆಂದು ೪.೩೦ ಗಂಟೆಗೆ ಹೃದಯಸ್ತಂಭನದಿಂದ ನಿಧನರಾದರೆಂದು ತಿಳಿಯಬರುತ್ತದೆ.

ಪೌರಸಭೆಯಲ್ಲಿ ಸಂಯುಕ್ತ ಪೌರಪಕ್ಷ

ಮೈಸೂರು ೧೩

ಮೈಸೂರು ಪುರಸಭೆಯಲ್ಲಿ ನೂತನವಾಗಿ ರಚಿತವಾಗಿರುವ ಸಂಯುಕ್ತ ಪೌರಪಕ್ಷದವರು ನಿನ್ನೆಯಸಂಜೆ ಪತ್ರಿಕಾ ಸಮ್ಮೇಳನವನ್ನು ನಡೆಸಿ ಪುರಸಭಾ ಕಾರ್ಯಗಳಲ್ಲಿ ತಮ್ಮ ಪಕ್ಷದ ಧ್ಯೇಯವೇನೆಂಬುದನ್ನು ವಿವರಿಸಿದರು

ಮೊನ್ನೆಯದಿನ ನಡೆದ ಪುರಸಭೆಯ ಉಪಸಮಿತಿಗಳ ರಚನೆಯಲ್ಲಿ ತಮ್ಮ ಪಕ್ಷವು ಸಹಕಾರವನ್ನು ನೀಡಿದರೂ ಕಾಂಗ್ರೆಸ್ ಪಕ್ಷವು ತಿರಸ್ಕರಿಸಿದುದರಿಂದ ತಾವೆಲ್ಲರೂ ಸಭೆಯ ಕಾರ್ಯಕಲಾಪಗಳನ್ನು ಬಹಿಷ್ಕರಿಸಬೇಕಾಯಿತೆಂದು ಪಕ್ಷದನಾಯಕ ಶ್ರೀ ಬಿ. ಕೆ. ರಾಮಕೃಷ್ಣಯ್ಯನವರು ತಿಳಿಸಿದರು.

೧೦ ನೇ ತಾರೀಖು ತಮ್ಮ ಪಕ್ಷದಪರವಾಗಿ ಶ್ರೀ ಮಹಮದ್ ಸೇಟ್ ರವರು ನಗರದ ಕಾಂಗ್ರೆಸ್ ಅಧ್ಯಕ್ಷ ಶ್ರೀ ಚನ್ನಯ್ಯನವರಿಗೆ ಪತ್ರಬರೆದು ಪುರಸಭಾ ಕಾರ್ಯಕಲಾಪಗಳಲ್ಲಿ ಉಭಯಪಕ್ಷದವರು ಸಹಕಾರದಿಂದ ಕೆಲಸಮಾಡಬೇಕೆಂದು ಸೂಚಿಸಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ಸಹಕಾರ ಮನೋಭಾವದಿಂದ ನಡೆಸಬೇಕೆಂದು ಸೂಚಿಸಿದ್ದನ್ನೂ, ಪತ್ರವು ಸಕಾಲಕ್ಕೆ ಬರಲಿಲ್ಲವೆಂದು ಶ್ರೀ ಚನ್ನಯ್ಯನವರು ಕೊಟ್ಟ ಉತ್ತರವನ್ನೂ ಪತ್ರಿಕಾ ಸಮ್ಮೇಳನದಲ್ಲಿ ವಿವರಿಸಲಾಯಿತು.

ಪುರಜನರ ಸೇವೆಯೇ ತಮ್ಮ ಪಕ್ಷದ ಧ್ಯೇಯವಾಗಿರುವುದರಿಂದ ಪುರಜನರಕ್ಷೇಮಕ್ಕಾಗಿ ಆಡಳಿತಪಕ್ಷವು ಯಾವ ತೀರ್ಮಾನಗಳನ್ನು ತೆಗೆದುಕೊಂಡರೂ ತಾವು ಅದನ್ನೂ ಅನುಮೋದಿಸುವುದಾಗಿಯೂ ಜನರ ಹಿತಕ್ಕೆ ಧಕ್ಕೆತರುವ ಕಾರ್ಯವನ್ನು ತಮ್ಮ ಪಕ್ಷವು ತೀವ್ರವಾಗಿ ಪ್ರತಿಭಟಿಸುವುದೆಂದು ಶ್ರೀಗಳಾದ ರಾಮಕೃಷ್ಣಯ್ಯ, ಮೀರ್‌ನೂರ್ ಹುಸೇನ್‌ರವರು, ಮಹಮ್ಮದ್‌ಸೇಟ್‌ರುಗಳು ಮಾತನಾಡುತ್ತ ತಿಳಿಸಿದರು.

ಹೆಚ್ಚಿಗೆ ಅಕ್ಕಿ ಪಡಿತರ

ಮೈಸೂರು ೧೩

'ಆರ್' ಮತ್ತು 'ಎಂ' ತರಗತಿಯ ಎಲ್ಲಾ ರೇಷನ್‌ದಾರರಿಗೂ ಅಕ್ಕಿಯ ಪಡಿತರವನ್ನು ೯-೬ ಔನ್ಸ್‌ಗಳಿಗೆ. ಹೆಚ್ಚಿಸಲಾಗಿದೆ ಈಗ ಆರ್. ತರಗತಿಯವರಿಗೆ ೬ ಮತ್ತು ಎಂ. ತರಗತಿಯವರಿಗೆ ೩ ಔನ್ಸ್ ಕೊಡಲಾಗುತ್ತಿದೆ.

★ ಸೀತಾವಿಲಾಸ ಛತ್ರದ ಬಳಿ ನಿನ್ನೆ ಸೀಮೆಯೆಣ್ಣೆ ಸುರಿದುಕೊಂಡುಕೊಂಡು ಬೆಂಕಿಹತ್ತಿಸಿಕೊಂಡ ಮಹಿಳೆಯು ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿರುವುದಾಗಿ ತಿಳಿಯಬರುತ್ತದೆ.

ಸೇವಾದಳದ ೩೦ನೇ ವರ್ಷ ವರ್ಧಂತಿಗೆ ೩೦ ಶ್ರಮದಾನ ಯಜ್ಞ ಶಿಬಿರಗಳ ಕಾಣಿಕೆ

ಕಳೆದ ೨೮ ನೇ ತಾರೀಖು ಸಮಗ್ರ ಭಾರತವಲ್ಲಿ ಜರುಗಿದ ಸೇವಾದಳದ ೩೦ನೇ ವರ್ಷ ವರ್ಧಂತಿಗೆ ಭಾರತ ಸೇವಾದಳವು ಸಲ್ಲಿಸಿದ ಕಾಣಿಕೆ ಎಂದರೆ ೩೦ ಶ್ರಮದಾನ ಯಜ್ಞ ಶಿಬಿರಗಳನ್ನು ಯಶಸ್ವಿ ಗೊಳಿಸಿದುದು.

ಬಳ್ಳಾರಿ ಜಿಲ್ಲೆಯೊಂದರಲ್ಲಿ ಬಿಟ್ಟು, ಉಳಿದೆಲ್ಲ ಜಿಲ್ಲೆಗಳಲ್ಲಿ ಒಟ್ಟು ೮೮೪ ಮಂದಿ ಸ್ವಯಂಸೇವಕರು ಮೂವತ್ತು ಶಿಬಿರಗಳಲ್ಲಿ ಶ್ರಮದಾನ ಸೇವೆಸಲ್ಲಿಸಿದ್ದಾರೆ. ಹತ್ತು ವರ್ಷದಿಂದ ೨೩ವರ್ಷವಯಸ್ಸಿನ ಬಾಲಕರು-ಯುವಕರು ದಿನಕ್ಕೆ ಸರಾಸರಿ ಆರುಗಂಟೆಯಕಾಲ ಕೆಲಸಮಾಡಿರುವರು ಈ ಮೂವತ್ತು ಶಿಬಿರಗಳಲ್ಲಿ ಒಂದು ವಾರದಿಂದ ೧೭ ದಿವಸಗಳವರೆಗೂ ನಡೆದ ಶಿಬಿರಗಳ ಸಂಖ್ಯೆಯೇ ಹೆಚ್ಚು. ಸರಾಸರಿ ಹತ್ತು ದಿವಸಗಳ ಈ ೩೦ ಶಿಬಿರಗಳಲ್ಲಿ ಸರಾಸರಿ ೩೦ ಮಂದಿ ಸ್ವಯಂಸೇವಕರು ದಿನಕ್ಕೆ ೬ ಗಂಟೆಯಂತೆ ಸಲ್ಲಿಸದ ಸೇವೆಯ ಕಾಲ ೫೩,೦೪೦ ಗಂಟೆಗಳು.

ಅವರು ನಡೆಸಿದ ವಿವಿಧ ಕೆಲಸಗಳು

ಶಾಲಾ ಕಟ್ಟಡದ ನಿರ್ಮಾಣ, ಗ್ರಾಮಾಂತರ ರಸ್ತೆಗಳ ರಚನೆ, ಹಳ್ಳಿಗಳ ಬೀದಿ ಮತ್ತು ರಸ್ತೆರಿಪೇರಿ, ಕಲ್‌ವರ್ಟ್ ಕಾಸ್‌ವೇ ಮತ್ತು ಮೋರಿಗಳನ್ನು ಕಟ್ಟುವುದು ಸಾರ್ವಜನಿಕ ಕಟ್ಟಡಗಳ ರಿಪೇರಿ-ಗ್ರಾಮ ನೈರ್ಮಲ್ಯ ಕಾರ್ಯ ಡಾ॥ ಮೋದಿರವರ ಶಿಬಿರದಲ್ಲಿ ಸೇವೆ, ಸಂಸ್ಕೃತಿ ಪ್ರಸಾರ ಕಾರ್ಯ

ಮಂಡ್ಯಾ-ಮೈಸೂರು ಜಿಲ್ಲೆಗಳಲ್ಲಿ-

ದೊಡ್ಡಕ್ಯಾತನಹಳ್ಳಿ, ಸುಗ್ಗನಹಳ್ಳಿ ಕೊಪ್ಪಲು, ಮಲಿಯಾಲ, ಹಲಸೂರು (ಬೀರವಾಳ) ಕಲ್ಲಹಳ್ಳಿ, ಅಂಕನಹಳ್ಳಿ-ಈ ಸ್ಥಳಗಳಲ್ಲೂ, ಹಾಸನಜಿಲ್ಲೆ ಮಾದಾಪುರದಲ್ಲಿಯೂ ಶಿಬಿರಗಳು ಯಶಸ್ವಿಗೊಂಡವು

ಬಿಹಾರ್ ಮುಖ್ಯ ಮಂತ್ರಿಯ ರಾಜಿನಾಮೆ

ಬಿಹಾರಿನ ಮುಖ್ಯಮಂತ್ರಿ ಶ್ರೀ ಕೃಷ್ಣ ಸಿಂಹರವರು ಭೂದಾನಯಜ್ಞ ಚಳವಳಿಯಲ್ಲಿ ಕೆಲಸಮಾಡಲು ಉದ್ದೇಶಿಸಿ ಮುಖ್ಯ ಮಂತ್ರಿಸ್ಥಾನಕ್ಕೆ ರಾಜಿನಾಮೆ ಕೊಡುವರೆಂದು ತಿಳಿಯಬರುತ್ತದೆ. ಈಗ ಇವರು ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

ಅಮೆರಿಕಾದಲ್ಲಿ ಸೈನ್ಯಶಕ್ತಿ ವಿಸ್ತರಣೆ

ಐಸೆನ್ ಹೋವರ್ ಸರ್ಕಾರದ ನೀತಿಯೆಂದು ಡಾಲೆಸ್

ಆಕ್ರಮಣವನ್ನು ಎದುರಿಸಲು ಸಿದ್ಧವಾಗಿರುವುದಕ್ಕಾಗಿ ತನ್ನ ಮಿಲಿಟರಿಶಕ್ತಿಯನ್ನು ಅಗಾಧವಾಗಿ ಬೆಳೆಸುವುದು ಐಸೆನ್‌ಹೋವರ್‌ರವರ ಸರ್ಕಾರದ ನೀತಿಯೆಂದು ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಿ॥ ಡಾಲಸ್‌ರವರು ಹೇಳಿದ್ದಾರೆ.

ಪಾನನಿರೋಧ ನೀತಿಯಲ್ಲಿ ಕಾಂಗ್ರೆಸ್ಸಿಗರಲ್ಲಿ ಭಿನ್ನತೆ

ಪಾನನಿರೋಧ ವಿಷಯದಲ್ಲಿ ಆಂಧ್ರ ಶಾಸನಸಭಾ ಕಾಂಗ್ರೆಸ್ ಪಕ್ಷದಲ್ಲಿ ಭಿನ್ನಾಭಿಪ್ರಾಯವಿರುವುದಾಗಿ ಪಕ್ಷದ ಕಾರ್ಯದರ್ಶಿಯವರು ತಿಳಿಸಿದ್ದಾರೆ. ಪಕ್ಷದ ಸಭೆಯು ಮೊನ್ನೆಯದಿನ ನಡೆದು ಈ ವಿಷಯವು ಚರ್ಚೆಗೆ ಬಂದಿತ್ತು. ಕೆಲವರು ಈ ನೀತಿಯನ್ನು ವಿರೋಧಿಸಿದರೆಂದು ಹೇಳಲಾಗಿದೆ.

ಅಪೆರಾ
14-1-54 ರಿಂದ ಅಮೋಘ 5 ನೇ ವಾರ
ಆರ್. ಎನ್. ಪಿಕ್ಚರ್ಸ್‌ರವರ
ಜಾತಕ ಫಲ
(ಕನ್ನಡ)
ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ಪ್ರಭಾ -ಅಮೋಘ ಪ್ರಾರಂಭ- ★ 15-1 54 ರಿಂದ ದಿವಸಕ್ಕೆ 3 ಆಟಗಳು
ರೂಪ್‌ನಗರ್ ಲಿಮಿಟೆಡ್‌ರವರ—
★ **ಧುಆ** ★
ಪಾತ್ರ:-ಉಷಾಕಿರಣ್, ಆಶಾನಾಫೂರ್ ಎಂ.ರಾಜನ್, ಉಲ್ಹಾಸ್, ಜೀವನ್ ಮತ್ತು ಓಂ ಪ್ರಕಾಶ್.
ಸಂಗೀತ-ವಸಂತ್ ದೇಶಾಯ್.
ಬೆಳಗಿನ ಪ್ರದರ್ಶನ:-14-1-54 ರಿಂದ 4 ದಿನಗಳು. ಶಮ್ಮಿ, ಅರ್ಜುನ್ ನಟಿಸಿರುವ ....ಮಲ್ಹಾರ್....

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ವಲ್ಲಭಾಯಿ ಸ್ಮಾರಕ ಸ್ಪರ್ಧಾಸಮಿತಿ

ಬೆಂಗಳೂರು ೧೨

ವಲ್ಲಭಾಯಿ ಸ್ಮಾರಕ ಅಖಿಲಮೈಸೂರು ಸ್ಪರ್ಧಾಸಮಿತಿಯ ಆರಂಭೋತ್ಸವವನ್ನು ಮಾಜಿ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ನಿನ್ನೆ ನೆರವೇರಿಸಿದರು. ಶ್ರೇಷ್ಠ ನ್ಯಾಯಾಧೀಶ ಶ್ರೀ ಮೇದಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಯುವಜನರಲ್ಲಿ ಕ್ರೀಡೆ, ಸಾಹಿತ್ಯ ಮತ್ತು ಕಲೆಯಲ್ಲಿ ಶ್ರದ್ಧೆಯನ್ನುಂಟುಮಾಡಲು ಸ್ಪರ್ಧೆಗಳನ್ನು ನಡೆಸುವುದೇ ಈ ಸಮಿತಿಯ ಉದ್ದೇಶ.

ರಣಜಿತ್
ತಾ॥ 14-4-54 ರಿಂದ ದಿನ 3 ಆಟಗಳು
ಸಿ.ರಾಮಚಂದ್ರರವರ
ಲಹರ್ೇ [ಹಿಂದಿ]
ಪಾತ್ರ:—ಕಿಶೋರ್‌ಕುಮಾರ್, ಶ್ಯಾಮಾ, ಶಕುಂತಲ, ಓಂಪ್ರಕಾಶ್, ಸುಂದರ್

-ಮೈಸೂರು ಪೇಟೆಧಾರಣೆ-

ತಾರೀಖು ೧೨—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—೨	೨೪—೧೦
ಎಳ್ಳು	—	—
ಹುರಳಿ	೩೬—	೪೨—೧೨
ಸೊಂಗೆಬೀಜ	—	—
ಹುಚ್ಚೆಳ್ಳು	೩೫—೬	೪೪—೧೦
ಹುರಳಿ	೨೮—೧೪	೩೨—೧೨
ಉದ್ದು	—	—
ಹೆಸರು	೩೫—	೪೫—೮
ಅಲಸಂದೆ	೩೦—	೪೬—೧೦
ಅವರೆ	೪೮—	—
ಹುಣಸೆಹಣ್ಣು	೧೩—೨	೧೬—೫
ಮೆಣಸಿನಕಾಯಿ	೧೭—೧೪	೩೭—
ಸೀಗೆಕಾಯಿ	೫—೫	೫—೬
ಬೆಲ್ಲ	—	—
ತೆಂಗಿನಕಾಯಿ	೧೩೭—	೨೯೦—

ಮಕ್ಕಳ ಕಲಾ ಪ್ರದರ್ಶನ

ಪ್ರಸಿದ್ಧ ಕಲಾವಿದರಾದ ಶ್ರೀ ಶಂಕರ್‌ರವರು ದೆಹಲಿಯಲ್ಲಿ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಕ್ಕಳ ಕಲಾಪ್ರದರ್ಶನದಲ್ಲಿ ಭಾರತ ರಾಷ್ಟ್ರಾಧ್ಯಕ್ಷರ ಚಿನ್ನದಪದಕ ಬಹುಮಾನವು ಉತ್ತಮಚಿತ್ರ ಬರೆದ ಜಪಾನಿನ ೧೦ ವರ್ಷದ ಬಾಲಕಿಗೆ ದೊರೆತಿದೆ. ಸಾಹಿತ್ಯ ಕೃತಿಯ ಬಹುಮಾನವು ಪ್ಯಾರಿಸ್ಸಿನಲ್ಲಿರುವ ೧೫ ವರ್ಷದ ಭಾರತ ಬಾಲಕಿಗೆ ದೊರೆತಿದೆ.

ಎಂ. ಬಿ. ಬಿ. ಎಸ್. ಪರೀಕ್ಷೆ ಫಲಿತಾಂಶ

ಮೈಸೂರು ೧೩

ವಿಶ್ವವಿದ್ಯಾನಿಲಯದ ಎಂ. ಬಿ. ಬಿ. ಎಸ್. ಮತ್ತು ಪ್ರಿ-ಮೆಡಿಕಲ್ ಪರೀಕ್ಷೆಗಳ ಫಲಿತಾಂಶವನ್ನು ಇದೇ ೧೮ನೇ ತಾರೀಖು ಸೋಮವಾರ ೧೧ ಗಂಟೆಗೆ ಪ್ರಕಟಿಸಲಾಗುತ್ತದೆ.

ಒಲಂಪಿಯಾ ● 14-1-54 ರಿಂದ ಅಮೋಘ ಪ್ರಾರಂಭ ಪ್ರತಿದಿನ 3ಆಟಗಳು
ಕಿಶೋರ್ ಸಾಹುರವರ ಅತ್ಯುತ್ತಮ ಕಾಣಿಕೆ
ಮಯೂರ್ ಪಂಖ್ [ಹಿಂದಿ]
(ಗೇವಾಕಲರ್)
ಪಾತ್ರ:-ಕಿಶೋರ್ ಸಾಹು, ಸುಮಿತ್ರ, ಓಡಿ. ಫರ್ಗೂಸನ್, ಆಶಾಮಾಥೂರ್.
ATALLAM RELEASE

ಇದರ ಪರಿಚಯವಿದೆಯೆ !!
ಒಂಟಿ ಪೆಟ್ಟಿಗೆಗಳಲ್ಲಿರುವ
ಮೈಸೂರು--
--ಸಾಬೂನು
●●●●
ಸಂಪೂರ್ಣವಾಗಿ ಶುದ್ಧವಾದ, ಯಾವ ಬೆರಕೆಯೂ, ಅಪಾಯಕರ ರಸಾಯನಿಕ ದ್ರವ್ಯಗಳೂ ಇಲ್ಲದ ಅತ್ಯುತ್ತಮವಾದ ಒಗೆಯುವ ಸಾಬೂನು. ಯಾವ ಶ್ರಮವಿಲ್ಲದೆಯೇ ಶುಭ್ರವಾಗಿ ತೊಳೆಯುತ್ತದೆ. ತೊಂದರೆ, ಶ್ರಮ, ಕಾಲ, ಹಣ ಮಿಗಿಸುತ್ತದಲ್ಲದೆ, ಸಂಪೂರ್ಣ ತೃಪ್ತಿಯನ್ನೂ ಕೊಡುತ್ತದೆ.
★ ● ● ★
ಒಂದು ಪೆಟ್ಟಿಯನ್ನು ಬಳಸಿನೋಡಿ.
ಎಲ್ಲ ಕಡೆಯೂ ಸಿಗುತ್ತದೆ.
....
ಗವರ್ನಮೆಂಟ್ ಸೋಪ್--ಫ್ಯಾಕ್ಟರಿ. ಬೆಂಗಳೂರು.
ಐ. ಎಸ್. ಟಿ. ಎಂ. ಎ. ಮೆಂಬರು

★ ರಾಜಕಮಲ್, ಮೈಸೂರು ★
14-1-54 ರಿಂದ ಅಮೋಘಪ್ರಾರಂಭ ಪ್ರತಿದಿನ ೩ ಆಟಗಳು
25ಲಕ್ಷ ವ್ಯಯದಿಂದ 3ವರ್ಷ ಶ್ರಮಪಟ್ಟು ನಿರ್ಮಿಸಿದ ಮಹತ್ತಾದ ಜಾನಪದ ಚಿತ್ರ
ವಿಜಯರವರ ⁘ **ಚಂದ್ರಹಾರಂ** ⁘ [ತಮಿಳು]
ಭೂಮಿಕೆ : ಶ್ರೀರಂಜನಿ, ಸಾವಿತ್ರಿ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್ ಮತ್ತು ರೇಲಂಗಿ.
ಕಾಂಪ್ಲಿಮೆಂಟರಿ, ರಿಯಾಯಿತಿ ಮತ್ತು ಫ್ರೀಪಾಸುಗಳನ್ನು 6 ವಾರಕಾಲ ಮನ್ನಾಮಾಡಿರುತ್ತದೆ.

16,18,19 no paper

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೧೭

೧೫-೧-೧೯೫೪ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಈಜಿಪ್ಟ್ ಆದ್ಯಂತ ಜರೂರು ಪರಿಸ್ಥಿತಿ ಘೋಷಣೆ

ಈಜಿಪ್ಟಿನಲ್ಲಿರುವ ಪ್ರಬಲ ಪಕ್ಷ 'ಮುಸ್ಲಿಂ ಬ್ರದರ್‌ಹುಡ್' ಎಂಬ ಪಕ್ಷವನ್ನು ವಿಸರ್ಜಿಸಿ, ಅದರ ಪ್ರಮುಖ ನಾಯಕರನ್ನೆಲ್ಲಾ ಅಲ್ಲಿಯ ಸರ್ಕಾರವು ದಸ್ತಗಿರಿ ಮಾಡಿದೆ ಇದರಿಂದ ದೇಶದಲ್ಲಿ ಅಶಾಂತಿ ಉದ್ಭವಿಸಿರುವುದನ್ನು ತಡೆಗಟ್ಟಲು ಜರೂರು ಪರಿಸ್ಥಿತಿಯನ್ನು ಘೋಷಿಸಲಾಗಿದೆ

ಜನರಲ್ ನಗೀಬ್ ಸರ್ಕಾರವನ್ನು ಉರುಳಿಸುವುದಕ್ಕೆ ಒಳಸಂಚನ್ನು ನಡೆಸುತ್ತಲಿದ್ದುದಲ್ಲದೆ ಈ ಪಕ್ಷವು ಬ್ರಿಟಿಷರೊಡನೆ ಸಂಬಂಧವನ್ನು ಏರ್ಪಡಿಸಿಕೊಂಡಿದ್ದಿತೆಂದೂ ಆರೋಪಿಸಲಾಗಿದೆ.

ಕೈರೋನಗರ ಮತ್ತು ಇತರ ಪ್ರಮುಖ ಪ್ರದೇಶಗಳಲ್ಲಿ ಸಶಸ್ತ್ರ ಪೋಲೀಸ್ ಮತ್ತು ಸೈನ್ಯ ದಳಗಳು ಎಲ್ಲಾ ಸರ್ಕಾರಿ ಕಛೇರಿ ಮತ್ತು ಮುಖ್ಯ ರಸ್ತೆಗಳಲ್ಲಿ ಕಾವಲನ್ನು ಕಾಯುತ್ತಿರುವುದಾಗಿ ತಿಳಿಯಬರುತ್ತದೆ.

ವಿದ್ಯಾಭ್ಯಾಸ ಸರ್ಕಾರದ ಹತೋಟಿಯಲ್ಲಿರಬಾರದು

ನ್ಯಾಯಾಂಗವು ಯಾವರೀತಿಯಾಗಿ ಸರ್ಕಾರದ ಹತೋಟಿಯಲ್ಲಿರಬಾರದೋ ಹಾಗೆಯೇ ವಿದ್ಯಾಭ್ಯಾಸವು ಸಹ ಸರ್ಕಾರದ ಹತೋಟಿಯಲ್ಲಿರಬಾರದು. ಅದು ಕೇಂದ್ರಿಕೃತ ಯೋಜನೆಗೂ ಒಳಪಟ್ಟಿರಬಾರದು-- ಎಂದು ಆಚಾರ್ಯ ವಿನೋಬಾಭಾವೆಯವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮೈಸೂರು ರೇಡಿಯೋನಲ್ಲಿ ವಿಶೇಷ ಕಾರ್ಯಕ್ರಮ

ಮೈಸೂರು ಪ್ರಸಿದ್ಧ ಸಂಗೀತಗಾರರಾಗಿದ್ದ ಶ್ರೀ ವೀಣೆ ಶೇಷಣ್ಣನವರ ಜೀವನ ಮತ್ತು ಅವರ ಕಾರ್ಯಗಳನ್ನು ವಿವರಿಸುವ ವಿಶೇಷ ಕಾರ್ಯಕ್ರಮವೊಂದನ್ನು ಇದೇ ೧೮ ನೇ ತಾರೀಖು ರಾತ್ರಿ ೮ ಗಂಟೆಗೆ ಮೈಸೂರು ರೇಡಿಯೋ ಕೇಂದ್ರದಲ್ಲಿ ಪ್ರಸಾರಮಾಡಲಾಗುತ್ತದೆ.

'ಸಿ'ವಿಭಾಗಪ್ರಾಂತ್ಯ ಗೌರ್ನರುಗಳಿಗೆ ಪ್ರತ್ಯೇಕಧ್ವಜ

ಈಗ ಎ. ಮತ್ತು ಬಿ. ವಿಭಾಗಪ್ರಾಂತ್ಯಗಳಲ್ಲಿ ಗೌರ್ನರುಗಳು ಮತ್ತು ರಾಜಪ್ರಮುಖರು ಪ್ರತ್ಯೇಕ ಧ್ವಜವನ್ನು ಹೊಂದಿರುವಂತೆಯೇ 'ಸಿ'ವಿಭಾಗ ಪ್ರಾಂತ್ಯಗಳಲ್ಲಿರುವ ಲೆಫ್ಟಿನೆಂಟ್ ಗೌರ್ನರುಗಳು ಸಹ ತಮ್ಮದೇ ಆದ ಪ್ರತ್ಯೇಕಧ್ವಜವನ್ನು ಹೊಂದಿರಲು ಕೇಂದ್ರ ಸರ್ಕಾರವು ತೀರ್ಮಾನಿಸಿರುವುದಾಗಿ ಗೊತ್ತಾಗಿದೆ.

ಯುದ್ಧ ಖೈದಿಗಳನ್ನೆಲ್ಲಾ ಸೆರೆ ಹಿಡಿದವರಿಗೇ ಹಿಂದಕ್ಕೆ

ತಾಟಸ್ಥ ರಾಷ್ಟ್ರ ಸಮಿತಿ ಅಧ್ಯಕ್ಷರ ತೀರ್ಮಾನ

ಕೊರಿಯಾದಲ್ಲಿ ಸ್ವದೇಶಕ್ಕೆ ಹಿಂತಿರುಗದೇ ಇರುವ ಯುದ್ಧ ಖೈದಿಗಳನ್ನೆಲ್ಲಾ ಸೆರೆಹಿಡಿದ ಸೈನ್ಯಾಧಿಪತ್ಯಗಳಿಗೇ ಇದೇ ೨೦ನೇ ತಾರೀಖು ಹಿಂದಕ್ಕೆ ಕೊಡುವುದಾಗಿ ಅಲ್ಲಿರುವ ತಾಟಸ್ಥ ರಾಷ್ಟ್ರ ಸಮಿತಿಯ ಅಧ್ಯಕ್ಷ ಜನರಲ್ ತಿಮ್ಮಯ್ಯನವರು ಸಂಬಂಧಪಟ್ಟ ಸೈನ್ಯಾಧಿಪತ್ಯಗಳಿಗೆ ತಿಳಿಸಿರುವುದಾಗಿ ವರದಿಯಾಗಿದೆ.

ಸಂಸ್ಥಾನ ಪ್ರತಿನಿಧಿಗಳ ಸಭೆ

ಎ. ಐ. ಸಿ. ಸಿ. ಅಧಿವೇಶನವು ನಡೆಯಲಿರುವ ಕಲ್ಯಾಣಿಯಲ್ಲಿ ಇದೇ ೨೧ರಿಂದ ೨೩ರವರೆಗೆ ಎಲ್ಲಾ ಬಿ. ಮತ್ತು ಸಿ. ಪ್ರಾಂತ್ಯಗಳ ಪ್ರತಿನಿಧಿಗಳ ಸಮ್ಮೇಳನವೊಂದು ನಡೆಯುವುದಾಗಿ ತಿಳಿಯಬರುತ್ತದೆ.

ಪ್ರಾಂತ್ಯಗಳ ಪುನರ್ವಿಂಗಡನೆ, ರಾಜಪ್ರಮುಖರ ಹುದ್ದೆ ರದ್ದು, ಮಾಜಿ ಅರಸರ ಖಾಸಾ ಬೊಕ್ಕಸರದ್ದು, ಪ್ರಾಂತ್ಯಗಳ ಅಭಿವೃದ್ಧಿಕಾರ್ಯಗಳು ಮುಂತಾದ ವಿಷಯಗಳನ್ನೆಲ್ಲಾ ಈ ಸಭೆಯಲ್ಲಿ ಚರ್ಚಿಸಲಾಗುವುದಾಗಿ ಹೇಳಲಾಗಿದೆ.

ಎ. ಐ. ಸಿ. ಸಿ. ಪ್ರತಿನಿಧಿಗಳಾಗಿರುವ ಲೋಕಸಭೆ ಸದಸ್ಯರು, ವಿಧಾನ ಸಭೆ ಸದಸ್ಯರು ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರು ಎಲ್ಲರೂ ಈ ಸಮ್ಮೇಳನದಲ್ಲಿ ಭಾಗವಹಿಸುವರು.

ಪಾಕ್-ಅಮೆರಿಕಾ ಸೈನ್ಯ ಒಪ್ಪಂದಕ್ಕೆ ಬ್ರಿಟನ್ ವಿರೋಧವಿಲ್ಲ

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವೆ ನಡೆಯಲಿರುವ ಸೈನ್ಯಒಪ್ಪಂದಕ್ಕೆ ಬ್ರಿಟನ್ ವಿರೋಧಿಸುವುದಿಲ್ಲವೆಂದೂ ಹಾಗೆ ವಿರೋಧಿಸಲು ತನಗೆ ಹಕ್ಕಿಲ್ಲವೆಂದೂ ಬ್ರಿಟನ್ ಕಾಮನ್ವೆಲ್ತ್ ಕಾರ್ಯದರ್ಶಿಯವರು ತಿಳಿಸಿದ್ದಾರೆ.

ಭೂತಾನ ರಾಜರಿಗೆ ಪದ್ಮ ವಿಭೂಷಣ ಪದಕ

ಸಮಾಜಸೇವೆಗಾಗಿ ರಾಷ್ಟ್ರಾಧ್ಯಕ್ಷರು ಏರ್ಪಡಿಸಿರುವ "ಪದ್ಮ ವಿಭೂಷಣ"ವೆಂಬ ಪದಕವನ್ನು ಭೂತಾನಿನ ಮಹಾರಾಜರಿಗೆ ಕೊಡಲಾಗಿದೆ. ಈ ಗೌರವವನ್ನು ಪಡೆಯುವುದರಲ್ಲಿ ಇವರೇ ಮೊದಲನೆಯವರು.

ಕಾಂಗ್ರೆಸ್ ಪಕ್ಷ ಸಭೆಯಲ್ಲಿ ನೆಹರೂ ಪತ್ರ ಪರಿಶೀಲನೆ

ಬೆಂಗಳೂರು ೧೫

ಮೈಸೂರು ಮಂತ್ರಿಮಂಡಲದ ಮೇಲೆ ಪ್ರದೇಶಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರು ಕಾಂಗ್ರೆಸ್ ಅಧ್ಯಕ್ಷ ನೆಹರೂರವರ ಬಳಿ ಮಾಡಿದ್ದ ಆರೋಪಣೆಗಳ ಬಗ್ಗೆ ಶ್ರೀ ನೆಹರೂರವರು ಬರೆದಿರುವ ಪತ್ರವನ್ನು ಮೊನ್ನೆಯದಿನ ಶಾಸನಸಭಾ ಕಾಂಗ್ರೆಸ್‌ಪಕ್ಷದ ಸಭೆಯಲ್ಲಿ ಓದಲಾಯಿತು. ಶ್ರೀ ನೆಹರೂರವರು ಆರೋಪಣೆ ಬಗ್ಗೆ ಈ ರೀತಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಾಗಿ ತಿಳಿಯಬರುತ್ತದೆ.

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರ ಸಹೋದರ ಶ್ರೀ ನಂಜಪ್ಪನವರಿಗೆ ಜಮೀನು ಮಂಜೂರ್ಮಾಡಿದ್ದು ಹಿಂದಿನ ಸರ್ಕಾರ ಆದಾಗ್ಯೂ ಆ ಬಗ್ಗೆ ಖರ್ಚನ್ನು ಕೊಟ್ಟು ಜಮೀನನ್ನು ಹಿಂದಕ್ಕೆ ಪಡೆದು ಅದನ್ನು ರೈತರಿಗೆ ಹಂಚಬೇಕು.

ತಾಮ್ರದ ತಂತಿ ಪ್ರಕರಣದಲ್ಲಿ ಶ್ರೀ ಸಿದ್ದಲಿಂಗಯ್ಯನವರ ದೋಷವೇನೂ ಇಲ್ಲ. ಆದಾಗ್ಯೂ ಸಾರ್ವಜನಿಕ ವ್ಯವಹಾರವು ಉತ್ತಮ ಮಟ್ಟದಲ್ಲಿ ಇರುವ ದೃಷ್ಟಿಯಲ್ಲಿ ತಮ್ಮ ಸೂಚನೆಯಂತೆ ಶ್ರೀ ಸಿದ್ದಲಿಂಗಯ್ಯನವರು ರಾಜೀನಾಮೆ ಕೊಟ್ಟಿದ್ದಾರೆ.

ಶ್ರೀ ಟಿ. ಚೆನ್ನಯ್ಯನವರಮೇಲೆ ಅನಾನಿಕರೆ ಪ್ರಕರಣ ದೂರುಬಂದಿರುವುದು ತೀರ ಕ್ಷುಲ್ಲಕವಾದುದು ಗಮನಾರ್ಹವಲ್ಲ.

ಶ್ರೀಗಳಾದ ರುದ್ರಪ್ಪ ಮತ್ತು ಹುಚ್ಚಮಾಸ್ತಿಗೌಡರ ನೇಮಕ ಸರಿಯಲ್ಲ ಅವರು ರಾಜೀನಾಮೆ ಕೊಡಬೇಕು. ಹಲವಾರು ಸಲ ಹನುಮಂತಯ್ಯನವರು ಕೇಂದ್ರದ ನೀತಿಯನ್ನು ಟೀಕಿಸಿರುವುದು ಸರಿಯಲ್ಲ.

ಕಾಂಗ್ರೆಸ್ ಅಧ್ಯಕ್ಷರು ಮುಖ್ಯಮಂತ್ರಿಯವರನ್ನು ಬಹಿರಂಗವಾಗಿ ಟೀಕಿಸುವುದು ಸರಿಯಲ್ಲ. ಕಾಂಗ್ರೆಸ್ಸಿನಲ್ಲಿ ಒಬ್ಬರಮೇಲೊಬ್ಬರು ಟೀಕಿಸುವುದು ನಿಲ್ಲಬೇಕು.

ಶ್ರೀ ನೆಹರೂರವರು ಕಾಂಗ್ರೆಸ್ ಸರ್ಕಾರ ಮತ್ತು ಪಕ್ಷ ಇವುಗಳೆರಡೂ ಐಕಮತ್ಯದಿಂದ ಸಹಕರಿಸಿ ದೇಶದ ಪ್ರಗತಿಗಾಗಿ ಶ್ರಮಿಸಬೇಕೆಂದು ಆ ಪತ್ರದಲ್ಲಿ ತಿಳಿಸಿರುವುದಾಗಿ ಗೊತ್ತಾಗಿದೆ.

ಬಟ್ಟೆ ದಾನ

ಮೈಸೂರು ೧೫

ನಗರದ ಬಟ್ಟೆ ವ್ಯಾಪಾರಿಗಳಾದ ಶ್ರೀ ಕೆ. ಎಸ್. ಸತ್ಯನಾರಾಯಣರಾವ್‌ರವರು ಮೈಸೂರು ಜಿಲ್ಲಾಧಿಕಾರಿಗಳ ಕೋರಿಕೆಯ ಮೇರೆ ಹೆಗ್ಗಡದೇವನಕೋಟೆ ತಾಲ್ಲೂಕು ಟಿಂಜಳ್ಳಿ ಮತ್ತು ಚಾಮರಾಜನಗರ ತಾಲ್ಲೂಕು ಬೂದಿಪಡಗದಲ್ಲಿರುವ ಕಾಡು ಕುರುಬರ ಹಾಸ್ಟಲುಗಳ ಬಾಲಕರುಗಳಿಗೆ 186½ ಗಜ ಶರಟು ಬಟ್ಟೆಯನ್ನು ಉಚಿತವಾಗಿ ಕೊಟ್ಟಿದ್ದಾರೆ.

ರಾಜಾಜಿ ಕಾಂಗ್ರೆಸ್ ಅಧ್ಯಕ್ಷರಾಗುವರೆ

ಮದ್ರಾಸ್ ಮುಖ್ಯ ಮಂತ್ರಿ ಸ್ಥಾನಕ್ಕೆ ರಾಜಾಜಿ ರಾಜಿನಾಮೆಯೇ ?

ಶಾಸನಸಭೆಯಲ್ಲಿ ಮುಂದಿನ ಸಾಲಿನ ಬಜೆಟ್ ಅಧಿವೇಶನವಾದೊಡನೆಯೇ ಮದ್ರಾಸ್ ಮುಖ್ಯ ಮಂತ್ರಿ ಶ್ರೀ ರಾಜಗೋಪಾಲಚಾರಿಯವರು ತಮ್ಮ ಸ್ಥಾನಕ್ಕೆ ರಾಜಿನಾಮೆಕೊಡುವರೆಂದು ತಿಳಿಯಬರುತ್ತದೆ.

ಈನಡುವೆ ಪ್ರಪಂಚದ ಈಗಿನ ಪರಿಸ್ಥಿತಿಯಲ್ಲಿ ಭಾರತವಿದೇಶಾಂಗ ಕಾರ್ಯಗಳಲ್ಲಿ ಪ್ರಧಾನಿ ನೆಹರೂರವರಿಗೆ ಕೆಲಸ ಕಾರ್ಯ ಹೆಚ್ಚುತ್ತಿರುವುದರಿಂದ ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಮುಂದುವರಿಯಲು ಸಾಧ್ಯವಾಗುವುದಿಲ್ಲವಾಗಿ ಶ್ರೀ ರಾಜಾಜಿಯವರನ್ನು ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಈಗನಡೆಯಲಿರುವ ಕಲ್ಯಾಣಿ ಅಧಿವೇಶನದಲ್ಲಿ ಚುನಾಯಿಸಲಾಗುವುದೆಂದು ತಿಳಿಯಬರುತ್ತದೆ.

ಸರ್ಕಾರಕ್ಕೆ ನೋಟೀಸ್

ಇಂಗ್ಲೀಷ್ ಮಾಧ್ಯಮವಿರುವ ಪಾಠಶಾಲೆಗಳಿಗೆ ಆಂಗ್ಲೋಇಂಡಿಯನ್ ಮತ್ತು ಏಷ್ಯೇತರರನ್ನು ಮಾತ್ರ ಸೇರಿಸಿಕೊಳ್ಳಬೇಕೆಂಬ ಆಜ್ಞೆಯನ್ನು ಕೂಡಲೇ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಬೊಂಬಾಯಿನಲ್ಲಿರುವ ಬಾರ್ನೆಸ್ ಹೈಸ್ಕೂಲು ಅಲ್ಲಿಯ ಸರ್ಕಾರಕ್ಕೆ ನೋಟೀಸ್ ಕೊಟ್ಟಿದೆ.

ಖೈದಿಗಳ ಬಿಡುಗಡೆ

ನೂತನ ರಾಜ್ಯಸ್ಥಾಪನೆಯ ಜ್ಞಾಪಕಾರ್ಥವಾಗಿ ಆಂಧ್ರದಲ್ಲಿರುವ ಎಲ್ಲಾ ಖೈದಿಗಳ ಬಿಡುಗಡೆಯು ಮೊನ್ನೆ ಮತ್ತು ನಿನ್ನೆ ನಡೆಯಿತು.

ಈಗ ಆಂಧ್ರದಲ್ಲಿರುವ ಎಲ್ಲಾ ಜೈಲುಖಾನೆಗಳು ಖಾಲಿಯಾಗಿವೆ. ಎಲ್ಲಿಯೂ ಒಬ್ಬ ಖೈದಿಯೂ ಇಲ್ಲ.

○ ಭೂದಾನ ಯಜ್ಞ ಚಳುವಳಿಯಲ್ಲಿ ಸಂಗ್ರಹಿಸುವ ಜಮೀನಿನಲ್ಲಿ ಮೂರನೆಒಂದು ಭಾಗವನ್ನು ಹರಿಜನರಿಗೆ ಹಂಚಲಾಗುತ್ತದೆ ಹತ್ತು ವರ್ಷಗಳ ಕಾಲ ಇದನ್ನು ಮಾರಲು ಅವಕಾಶವಿರುವುದಿಲ್ಲವೆಂದು ಆಚಾರ್ಯ ಶ್ರೀ ವಿನೋಬಭಾವೆಯವರು ಹೇಳಿದ್ದಾರೆ.

ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನ

ಪಾಕೀಸ್ತಾನವು ಭಾಗವಹಿಸುವುದಾಗಿ ಮಹಮ್ಮದಾಲಿ

ಸಿಂಹಳ ಪ್ರಧಾನಿ ಸರ್ ಜಾ೯ ಕೊಟೇಲವಾಲಾರವರು ಏರ್ಪಡಿಸಿರುವ ಆಗ್ನೇಯ ಏಷ್ಯಾಪ್ರಧಾನಿಗಳ ಸಮ್ಮೇಳನದಲ್ಲಿ ಪಾಕೀಸ್ತಾನವು ಭಾಗವಹಿಸುವುದಾಗಿ ಪಾಕೀಸ್ತಾನ ಪ್ರಧಾನಿ ಮಹಮದ್ ಅಲಿಯವರು ತಿಳಿಸಿದ್ದಾರೆ.

ಸಿಂಹಳ ಪ್ರಧಾನಿ ಸರ್ ಜಾ೯ ಕೋಟೆಲವಾಲಾರವರು ಮೊನ್ನೆ ಯದಿನ ಸಿಂಹಳದಿಂದ ದೆಹಲಿಗೆ ಹೊರಡುವ ಮಾರ್ಗದಲ್ಲಿ ಪಾಕ್ ರಾಜಧಾನಿ ಕರಾಚಿಗೆ ಭೇಟಿಯಿತ್ತಿದ್ದರು. ಅಲ್ಲಿ ಅವರಿಗೂ ಪಾಕ್ ಪ್ರಧಾನಿಯವರಿಗೂ ಆಗ್ನೇಯ ಏಷ್ಯಾರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನ ವಿಷಯ ಚರ್ಚೆಯಾಯಿತೆಂದೂ ಅನಂತರ ಪಾಕೀಸ್ತಾನ ಪ್ರಧಾನಿ ಈ ಸಮ್ಮೇಳನದಲ್ಲಿ ಭಾಗವಹಿಸಲು ನಿರ್ಧರಿಸಿದರೆಂದು ಹೇಳಲಾಗಿದೆ.

ಸ್ವದೇಶಿ ತತ್ವ ಪಾಲಿಸಬೇಕು

ದೇಶದ ಸ್ವಾತಂತ್ರ್ಯ ಹೋರಾಟದಲ್ಲಿದ್ದ ಸ್ವದೇಶೀ ತತ್ವಗಳನ್ನು, ಸ್ವಾತಂತ್ರ್ಯ ಗಳಿಸಿದಮೇಲೆ ಅಭಿವೃದ್ಧಿ ಪಡಿಸಬೇಕಾದುದು ನಮ್ಮೆಲ್ಲರ ಕರ್ತವ್ಯ. ಆ ಮನೋಭಾವವು ಎಲ್ಲರ ಮನಸ್ಸಿನಲ್ಲಿಯೂ ಹುಟ್ಟಿ, ಅದನ್ನು ಕಾರ್ಯರೂಪಕ್ಕೆ ತರಬೇಕಾಗಿದೆ-ಎಂದು ಶ್ರೀಮತಿ ವಿಜಯಲಕ್ಷ್ಮಿಯವರು ಅಖಿಲ ಭಾರತೀಯ ಉದ್ಯೋಗ ಪ್ರದರ್ಶನವನ್ನು ದೆಹಲಿಯಲ್ಲಿ ಉದ್ಘಾಟಿಸುತ್ತಾ ತಿಳಿಸಿದ್ದಾರೆ. ಕೆಲವು ರಾಷ್ಟ್ರಗಳಲ್ಲಿ ಯಂತ್ರೋಪಕರಣಗಳ ಪ್ರಾಬಲ್ಯವು ಹೆಚ್ಚಿದೆ ಭಾರತವೂ ಸಹ ಯಂತ್ರೋಪಕರಣಕ್ಕೊಳಗಾಗಿರುವ ಪಾಶ್ಚಿಮಾತ್ಯ ರಾಷ್ಟ್ರಗಳ ನೀತಿಯನ್ನು ಅನುಸರಿಸಬೇಕೆಂದು ಹಲವರು ಅಭಿಪ್ರಾಯವಾಗಿದೆ. ನಾವು ಹಲವಾರು ವರ್ಷಗಳ ಹಿಂದೆ ಇದ್ದ ರೀತಿಯಲ್ಲೇ ಇರಬೇಕೆಂದು ಮತ್ತೆ ಹಲವರ ವಾದ. ಆದರೆ ನಾವು ಮಧ್ಯವರ್ತಿಗಳಾಗಿದ್ದು ದೇಶದ ಪ್ರಗತಿಯನ್ನು ಸಾಧಿಸಬೇಕಾಗಿದೆ-ಎಂದು ಅವರು ತಿಳಿಸಿದ್ದಾರೆ.

ಭಾರತಕ್ಕೆ ರಷ್ಯಾ ಪೆಟ್ರೋಲಿಯಂ ವಸ್ತುಗಳು

ಸೀಮೆಯೆಣ್ಣೆ ಮತ್ತು ಮೋಟಾರು ಸ್ಪಿರಿಟ್ಟುಗಳು ಮುಂತಾದ ಪೆಟ್ರೋಲಿಯಂ ವಸ್ತುಗಳನ್ನು ತುಂಬಿರುವ ರಷ್ಯಾದ ಹಡಗೊಂದು ಬೊಂಬಾಯಿಗೆ ಆಗಮಿಸಿದೆ. ಯುದ್ಧಾನಂತರ ಪೆಟ್ರೋಲಿಯಂ ವಸ್ತುಗಳನ್ನು ರಷ್ಯಾವು ಭಾರತಕ್ಕೆ ಕಳುಹಿಸಿರುವುದು ಇದೇ ಪ್ರಥಮ.

ಕೊಟೆಲವಾಲಾ ದೆಹಲಿಗೆ

ಸಿಂಹಳ ಪ್ರಧಾನಿ ಸರ್ ಜಾ೯ ಕೊಟೆಲವಾಲಾರವರು ದೆಹಲಿಗೆ ಕರಾಚಿಯಿಂದ ಈ ಸಂಜೆ ಆಗಮಿಸಲಿದ್ದಾರೆ. ಅದರಿಗಾಗಿ ದೆಹಲಿಯಲ್ಲಿ ಅಭೂತ ಸ್ವಾಗತ ನೀಡುವ ಕಾರ್ಯಕ್ರಮ ನಡೆದಿದೆ.

ಜಿಲ್ಲಾ ಬೋರ್ಡುಗಳ ರದ್ದಿಗೆ ವಿರೋಧ

ಮೈಸೂರು ಜಿಲ್ಲಾ ಬೋರ್ಡಿನಲ್ಲಿ ತೀವ್ರ ಚರ್ಚೆ

ಮೈಸೂರು ೧೫

ಸಂಸ್ಥಾನದಲ್ಲಿ ಜಿಲ್ಲಾ ಬೋರ್ಡುಗಳನ್ನು ರದ್ದುಗೊಳಿಸಲು ಸರ್ಕಾರವು ಇತ್ತೀಚೆಗೆ ಮಾಡಿರುವ ನಿರ್ಧಾರವನ್ನು ಇದೇ ೧೨ನೇ ತಾರೀಖು ನಡೆದ ಮೈಸೂರು ಜಿಲ್ಲಾ ಬೋರ್ಡು ತೀವ್ರವಾಗಿ ವಿರೋಧಿಸಿ ಇದು ವಿನಾಶಕಾರಿ ಅದರಿಂದ ಗ್ರಾಮಾಭಿವೃದ್ಧಿ ಕಾರ್ಯ ನಿಂತು ಸರ್ಕಾರದ ಬಗ್ಗೆ ಜನರಲ್ಲಿ ದುರಭಿಪ್ರಾಯ ಹೊಂದುವಂತಾಗುತ್ತದೆ ಎಂಬ ನಿರ್ಣಯವನ್ನು ಮಾಡಿತು.

ಸಭೆಯು ಪ್ರಾರಂಭವಾದೊಡನೆಯೇ ಅಧ್ಯಕ್ಷ ಶ್ರೀ ಚೆನ್ನಬಸಪ್ಪನವರು ಬೋರ್ಡು ಮಾಡಿರುವ ಕೆಲವು ಕಾರ್ಯಗಳನ್ನು ವಿವರಿಸಿದರು.

ಅನಂತರ ಶಾಸನಸಭಾಧಿವೇಶನದಲ್ಲಿ ರಾಜಪ್ರಮುಖರು ಜಿಲ್ಲಾ ಬೋರ್ಡುಗಳ ರದ್ದಿನ ವಿಷಯದಲ್ಲಿ ಮಾಡಿದ ಭಾಷಣವನ್ನು ಸದಸ್ಯರ ಗಮನಕ್ಕೆ ತಂದು ಸಭೆಯು ಈ ವಿಷಯವನ್ನು ತೀವ್ರವಾಗಿ ಪರಿಶೀಲಿಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಬೇಕೆಂದು ತಿಳಿಸಿದರು.

ಈಗ ಸರ್ಕಾರವು ತಂದಿರುವ ತಿದ್ದುಪಡಿಯ ಪ್ರಕಾರ ಜಿಲ್ಲಾ ಬೋರ್ಡ್ ಆಡಳಿತವನ್ನ ಯಾವ ಅಧಿಕಾರಿಗೆ ಬೇಕಾದರೂ ವಹಿಸಬಹುದು ಇದಲ್ಲದೆ ಜಿಲ್ಲಾ ಬೋರ್ಡುಗಳ ಭವಿಷ್ಯ ವಿಷಯದಲ್ಲಿ ಒಂದು ಸಮಿತಿಯನ್ನು ನೇಮಿಸಲಾಗಿದೆ. ಸರ್ಕಾರದ ಈ ನೀತಿಯು ಪ್ರಜಾಹಿತ ದೃಷ್ಟಿಯಿಂದ ಸಾಧುವೇ ಎಂಬುದನ್ನು ಯೋಚಿಸಬೇಕಾಗಿದೆ ಎಂದು ಅವರು ತಿಳಿಸಿದರು.

ಅನಂತರ ಶ್ರೀಗಳಾದ ಎಸ್. ಎಂ. ಸಿದ್ದಯ್ಯ, ಟಿ. ಹೊನ್ನಪ್ಪ, ಪಿ. ವೆಂಕಟಸುಬ್ಬಯ್ಯ, ಎಂ. ಸಿ. ಶಿವಾನಂದಶರ್ಮ ಮುಂತಾದ ಸದಸ್ಯರೆಲ್ಲರೂ ಮಾತನಾಡಿ ಸರ್ಕಾರದ ಈ ಧೋರಣೆಯನ್ನು ತೀವ್ರವಾಗಿ ಖಂಡಿಸಿದರು.

ಜಿಲ್ಲಾ ಬೋರ್ಡುಗಳ ಅಭಿಪ್ರಾಯವನ್ನು ಪಡೆಯದೇ ಸರ್ಕಾರವು ಈ ಕಾರ್ಯಕ್ರಮ ಕೈಗೊಂಡಿದೆ. ಇದು ಪ್ರಜಾಪ್ರಭುತ್ವಕ್ಕೆ ವಿರೋಧವಾದ ಕಾರ್ಯಕ್ರಮವಾಗಿದೆ, ಆತುರಾತುರದಿಂದ ಈ ರೀತಿ ಮಾಡಲು ಕಾರಣವು ಸರಿಯಾಗಿ ತಿಳಿಯದಾಗಿದೆ. ಜಿಲ್ಲಾ ಬೋರ್ಡುಗಳು ಪ್ರಾತಿನಿಧ್ಯ ಸ್ವರೂಪ ಕಳೆದುಕೊಂಡಿದೆ ಎಂದು ಸರ್ಕಾರವು ಹೇಳುವುದು ಅಪಮಾನಕರವಾಗಿದೆ. ಚುನಾವಣೆಗಳನ್ನು ನಡೆಸದೆ ಜಿಲ್ಲಾ ಬೋರ್ಡುಗಳಿಗೆ ಸರ್ಕಾರವೇ ಜೀವದಾನ ಕೊಡುತ್ತಾ ಬಂದಿತು. ನಾವುಗಳು ಜೀವದಾನ ಕೇಳಲಿಲ್ಲ. ಸ್ವಪ್ರತಿಷ್ಠೆ, ಮತ್ತು ಯಾವುದೋ ಕಾರ್ಯವನ್ನು ಸಾಧಿಸಲು ಸರ್ಕಾರವು ಈ ಹೊಸ ನೀತಿಯನ್ನು ಅನುಸರಿಸುತ್ತಲಿರುವಂತೆ ಕಾಣುತ್ತದೆ.

ಈ ನೀತಿಯು ಬೋರ್ಡಿನ ಸದಸ್ಯರಿಗೆಲ್ಲಾ ಅವಮಾನಮಾಡಿದಂತಾಗಿದೆ. ಜಿಲ್ಲಾ ಬೋರ್ಡಿನ ಇತಿಹಾಸದಲ್ಲೇ ಇಲ್ಲದ ನೀತಿಯನ್ನು ಅದರಲ್ಲೂ ಈಗಿನ ಪ್ರಜಾಸರ್ಕಾರವೆನಿಸಿಕೊಂಡಿರುವ ಕಾಂಗ್ರೆಸ್ ಸರ್ಕಾರವು ಅನುಸರಿಸುವುದು ತೀವ್ರಖಂಡನೀಯ, ಪ್ರಜಾಭಿಪ್ರಾಯಕ್ಕೆ ಈಗಿನ ಸರ್ಕಾರದಲ್ಲಿ ಮನ್ನಣೆಯಿಲ್ಲವೆಂದು ತೋರುತ್ತದೆ ಸರ್ಕಾರವು ಪುನಃ ತನ್ನ ನೀತಿಯನ್ನು ಪುನರ್ವಿಮರ್ಶಿಸಬೇಕು ಹಾಗಾಗದಿದ್ದರೆ ಗ್ರಾಮಾಭಿವೃದ್ಧಿ ಕಾರ್ಯಗಳೆಲ್ಲಾ ನಿಂತುಹೋಗಿ ಇಲ್ಲಿಯವರೆಗೆ ನಡೆದಿರುವ ಪ್ರಗತಿ ಕಾರ್ಯಗಳೆಲ್ಲಾ ಹಾಳಾಗಿ ಹೋಗುತ್ತವೆ ದೇಶದ ಪ್ರಗತಿ ಹೆಚ್ಚಬೇಕೆಂದು ಹೇಳುತ್ತಿರುವ ಈ ಸಮಯದಲ್ಲಿ ಸರ್ಕಾರದ ಈ ನೀತಿಯು ಸಂಸ್ಥಾನವನ್ನು ಅಧೋಗತಿಗೆ ಇಳಿಸಿದಂತಾಗುತ್ತದೆ ಎಂದು ಅವರು ತಿಳಿಸಿದರು.

ಅನಂತರ ಅಧ್ಯಕ್ಷರು ಚರ್ಚೆಗೆ ಉತ್ತರ ಕೊಟ್ಟು, ಅದನ್ನು ಮುಕ್ತಾಯಗೊಳಿಸುತ್ತಾ ಸುಭದ್ರವಾಗಿ ಅನಾದಿಯಿಂದ ಬಂದಿರುವ ಸ್ಥಳೀಯ ಸಂಸ್ಥೆಗಳನ್ನು ರದ್ದುಗೊಳಿಸುವುದು ಈಗಿನ ಸ್ಥಿತಿಯಲ್ಲಿ ಉತ್ತಮ ಮಾರ್ಗವಲ್ಲ. ಸರ್ಕಾರವು ಈ ವಿಷಯದಲ್ಲಿ ಜನಾಭಿಪ್ರಾಯವನ್ನು ಪಡೆದು ಅನಂತರ ತನ್ನ ಅಂತ್ಯನಿರ್ಧಾರಕ್ಕೆ ಬರಬೇಕೆಂದು ತಿಳಿಸಿದರು.

ಹೈಕೋರ್ಟಿನಲ್ಲಿ ರಿಟ್ ಅರ್ಜಿ

ಮೈಸೂರು ಜಲಪುರಿ ದೊಡ್ಡ ಗರಡಿ ಮಾದಯ್ಯ, ಮಂಡಿಮೊಹಲ್ಲಾ ತಿಮ್ಮಯ್ಯನವರ ಗರಡಿ ಮರಿಯಪ್ಪ, ವೀರನಗೆರೆಯ ಚಿಕ್ಕ ಗರಡಿ ನಂಜಯ್ಯ ಇವರುಗಳು ಭಾರತ ರಾಜ್ಯಾಂಗದ ೨೨೬ನೇ ವಿಧಿಯ ಮೇರೆ ತಾ|| ೧೧-೧-೫೪ರಲ್ಲಿ ಮೈಸೂರು ಹೈಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿ, ತಮಗೆ ಅರಮನೆ ಮುಂದೆ ಸರ್ಕಾರದವರು ವ್ಯವಸ್ಥೆ ಮಾಡಿದ್ದ ಕುಸ್ತಿ ಪಂದ್ಯದಲ್ಲಿ ಭಾಗವಹಿಸುವಂತೆ ಟಿಕೇಟು ಕೊಟ್ಟು ಅನಂತರ ಕುಸ್ತಿಯನ್ನೇ ರದ್ದುಮಾಡಿದ್ದು ತಮಗೆ ರಾಜ್ಯಾಂಗದ ೧೯ನೇ ವಿಧಿ ಪ್ರಕಾರ ದತ್ತವಾದ ಮೂಲಭೂತ ಹಕ್ಕನ್ನು ಉಲ್ಲಂಘಿಸಿದಂತಾಗಿದೆಯೆಂದೂ, ಇಂಥ ಪ್ರಶ್ನೆಯು ಮುಂದೆಯೂ ಬರಬಹುದಾದ್ದರಿಂದ ಸರ್ಕಾರದವರು ನಿಲ್ಲಿಸಿದ ಆರ್ಡರಿನ ರಾಜ್ಯಾಂಗದ ಬದ್ಧತೆಯನ್ನು ತೀರ್ಮಾನಿಸಿ ಸರ್ಕಾರದ ಆರ್ಡರನ್ನು ರದ್ದುಮಾಡಿ ಸೂಕ್ತ ರಿಟ್ ಕೊಡಬೇಕಾಗಿ ಕೋರಿದ್ದಾರೆ.

ವಿಶೇಷ ಸಭೆ

ಮೈಸೂರು ೧೫

ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ನಡೆಸಲು ಪುರಸಭೆ ವಿಶೇಷ ಅಧಿವೇಶನವೊಂದು ಇದೇ ೨೦ನೇ ತಾ|| ಮಧ್ಯಾಹ್ನ ೪ ಗಂಟೆಗೆ ನಡೆಯುತ್ತದೆ.

ರಾಜೀನಾಮೆ

ಪ್ರಧಾನಿ ನೆಹರೂರವರ ಸೂಚನೆಮೇಲೆ ಕಮ್ಯೂನಿಟಿ ಪ್ರಾಜೆಕ್ಟ್ ಸಮಿತಿಯ ಅಧ್ಯಕ್ಷತೆಗೆ ಶ್ರೀ ಹೆಚ್. ಎಸ್. ರುದ್ರಪ್ಪನವರೂ ಚಿನ್ನದ ಗಣಿ ಸಮಿತಿಯ ಡೈರೆಕ್ಟರವರ ಸ್ಥಾನಕ್ಕೆ ಶ್ರೀ ಹುಚ್ಚಮಾಸ್ತಿಗೌಡರೂ ರಾಜೀನಾಮೆಯನ್ನು ಸಲ್ಲಿಸಿದ್ದಾರೆ.

ರಾಜಕಮಲ್, ಮೈಸೂರು.

ಪ್ರತಿದಿನ ಮೂರು ಆಟಗಳು

ತಮಿಳು ಚಿತ್ರ

ಅಪೆರಾ

14-1-54 ರಿಂದ ಅಮೋಘ 5 ನೇ ವಾರ

ಆರ್. ಎನ್. ಪಿಕ್ಚರ್ಸ್‌ರವರ

ಜಾತಕ ಫಲ

(ಕನ್ನಡ)

ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋ೯ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೧೮

೨೦-೧-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪಾಕ್-ಅಮೆರಿಕಾ ಮಿಲಿಟೆರಿ ನೆರವು ಬಗ್ಗೆ ಕಾಂಗ್ರೆಸ್ಸಿನ ಖಂಡನೆ

ಪಾಕೀಸ್ತಾನ ಮತ್ತು ಅಮೆರಿಕಾ ಸೈನ್ಯ ಒಪ್ಪಂದದಿಂದ ಆಗ್ನೇಯ ಏಷ್ಯಾ ರಾಷ್ಟ್ರಗಳ ಪರಿಸ್ಥಿತಿ ಅಪಾಯಕರವಾಗುತ್ತದೆ. ಪಾಕೀಸ್ತಾನವು ತನ್ನ ಇಷ್ಟ ಬಂದಂತೆ ನೀತಿಯನ್ನು ನಿರ್ಧರಿಸಿಕೊಳ್ಳಬಹುದು ಅದಕ್ಕೆ ಪೂರ್ಣ ಅಧಿಕಾರವಿದೆ. ಆದರೆ ನೆರೆಯ ರಾಷ್ಟ್ರದ ಶಾಂತಿಗೆ ಧಕ್ಕೆ ತರುವ ಹಕ್ಕು ಮಾತ್ರ ಅದಕ್ಕಿಲ್ಲ. ಭಾರತವು ವಿಶ್ವದ ಎಲ್ಲಾ ರಾಷ್ಟ್ರಗಳೊಡನೆ ಅದರಲ್ಲೂ ತನ್ನ ನೆರೆಯ ರಾಷ್ಟ್ರವಾದ ಪಾಕೀಸ್ತಾನದೊಡನೆ ನಿಕಟ ಸಂಬಂಧವನ್ನು ಇಟ್ಟುಕೊಳ್ಳಲು ಆಶಿಸುತ್ತಲಿದೆ ಆದರೆ ಈಗ ಪಾಕೀಸ್ತಾನದ ಸೈನ್ಯ ನೆರವಿನ ವಿಷಯವು ಶಾಂತಿಗೆ ಧಕ್ಕೆ ತರುವುದಾಗಿದೆ. ಭಾರತ ಮತ್ತು ಪಾಕೀಸ್ತಾನಗಳ ನಡುವೆ ಪರಿಹಾರವಾಗಬೇಕಾದ ಅನೇಕ ಸಮಸ್ಯೆಗಳಿವೆ. ಅವುಗಳು ಸೌಹಾರ್ದಯುತವಾಗಿ ಪರಿಹಾರವಾಗಲು ಈಗಿನ ಮಾರ್ಗ ವಿಫಲವನ್ನುಂಟುಮಾಡುತ್ತದೆ ಈಗ ಎಲ್ಲಾ ಏಷ್ಯಾ ರಾಷ್ಟ್ರಗಳು ಎಚ್ಚರಿಕೆಯಿಂದ ವಿಷಯಗಳನ್ನು ಪರಿಶೀಲಿಸಬೇಕಾಗಿದೆ ಎಂದು ಕಾಂಗ್ರೆಸ್ ಪಕ್ಷವು ತನ್ನ ಅಧಿವೇಶನದಲ್ಲಿ ಮಂಡಿಸಲಿರುವ ವರದಿಯಲ್ಲಿ ತಿಳಿಸಿರುವುದಾಗಿ ಗೊತ್ತಾಗಿದೆ.

ವಿದೇಶೀ ಸ್ವಾಸ್ಥ್ಯಗಳ ವಿಷಯವಾಗಿ ವರದಿಯು ಪ್ರಸ್ತಾಪಿಸಿ, ಫ್ರೆಂಚ್ ಸ್ವಾಸ್ಥ್ಯಗಳಲ್ಲಿ ಭಯೋತ್ಪಾದನೆ, ಧಾಳಿ ಮುಂತಾದುವು ವಿಶೇಷವಾಗಿ ನಡೆಯುತ್ತಿವೆ. ಪೋರ್ಚುಗೀಸ್ ಸ್ವಾಸ್ಥ್ಯಗಳಲ್ಲಿ ಪರಿಸ್ಥಿತಿ ಇನ್ನೂ ಹದಗೆಡುತ್ತಿದೆ ಅದನ್ನು ಭಾರತವು ನೋಡುತ್ತಾ ಕುಳಿತಿರಲಾರದು ಎಂದು ತಿಳಿಸಿದೆ.

ಆಚಾರ್ಯ ವಿನೋಬಭಾವೆಯವರ ಭೂದಾನ ಯಜ್ಞ ಚಳುವಳಿಯ ವಿಷಯವಾಗಿ ಪ್ರಸ್ತಾಪಿಸುತ್ತಾ, ಶಾಂತರೀತಿಯಿಂದ ಭೂಸುಧಾರಣೆಯನ್ನು ಹೇಗೆ ಜಾರಿಗೆ ತರಬೇಕೆಂಬುದು ಈ ಚಳುವಳಿಯಿಂದ ಅರಿತುಕೊಳ್ಳಬಹುದಾಗಿದೆ ದೇಶದಲ್ಲಿ ಭೂಮಿ ಹಂಚಿಕೆಯನ್ನು ಸರಿಯಾಗಿ ಮಾಡಿದರೆ ಆಗ ನಿರುದ್ಯೋಗ ಸಮಸ್ಯೆಯು ಪರಿಹಾರವಾಗುತ್ತದೆ ಎಂದು ವರದಿ ತಿಳಿಸುತ್ತದೆ.

● ಇತ್ತೀಚೆಗೆ ರೈಲುಗಳಲ್ಲಿ ಸಂಭವಿಸುತ್ತಲಿರುವ ಅಪಘಾತಗಳ ಪರಿಶೀಲನೆ ನಡೆಸಲು ರೈಲ್ವೆ ಇಲಾಖೆಯ ಪಾರ್ಲಿಮೆಂಟರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿದೆ.

ಸಂಸ್ಕೃತದ ಹಿರಿಮೆ

ಮೈಸೂರು ೨೦

ರಾಜಧಾನಿಯ ವಾಣಿ ವಿದ್ಯಾಲಯದ ವಾರ್ಷಿಕೋತ್ಸವವು ಮಹಾರಾಜಾ ಕಾಲೇಜಿನ ಸಂಸ್ಕೃತ ಉಪ ಪ್ರಾಧ್ಯಾಪಕರಾದ ಶ್ರೀ ಮಾ೯ ವಿ. ಟಿ. ತಿರುನಾರಾಯಣ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮೊದಲು ಬಾಲಕಿಯರು ಸ್ವಾಗತಪದ್ಯವನ್ನು ಸುಶ್ರಾವ್ಯವಾಗಿ ಹಾಡಿದರು. ಶಾಲೆಯ ಹುಡುಗರಿಂದ ಸಂಗೀತ ಮತ್ತು ವೀಣಾವಾದನವು ನಡೆಯಿತು. ಕಾರ್ಯದರ್ಶಿಗಳು ವರದಿಯನ್ನು ಓದಿದನಂತರ ವಿವಿಧ ಸ್ಪರ್ಧೆಗಳಲ್ಲಿ ಉತ್ತೀರ್ಣರಾದವರಿಗೆ ಅಧ್ಯಕ್ಷರು ಬಹುಮಾನವನ್ನು ಹಂಚಿದರು ಅನಂತರ ಅಧ್ಯಕ್ಷರು ತಮ್ಮ ಭಾಷಣ ಮಾಡಿ ಸಂಸ್ಕೃತಿಯ ಹಿರಿಮೆಯನ್ನೂ ಮತ್ತು ಎಲ್ಲಾ ಭಾಷೆಗಳಿಗೂ ಮೂಲವಾದ ಸಂಸ್ಕೃತ ಭಾಷೆಯ ಹಿರಿಮೆಯನ್ನೂ ಒತ್ತಿ ಹೇಳಿದರು. ಹಿಂದಿಯ ವೈಶಿಷ್ಟ್ಯ ಮತ್ತು ಅದನ್ನೂ ಎಲ್ಲರೂ ಕಲಿಯಬೇಕಾದ ಆವಶ್ಯಕತೆಯನ್ನೂ ಮನದಟ್ಟು ಮಾಡಿಕೊಟ್ಟರು ಸ್ವಾತಂತ್ರ್ಯವು ಬಂದನಂತರ ನಮ್ಮ ಜವಾಬ್ದಾರಿ ಹೆಚ್ಚಿದೆಯೆಂದೂ ಮತ್ತು ಎಲ್ಲರೂ ದೇಶಕ್ಕಾಗಿ ದುಡಿಯಬೇಕೆಂದರು. ಪರಭಾಷಾ ವ್ಯಾಮೋಹ, ಅವರ ನಡೆನುಡಿ ಮತ್ತು ಅನುಕರಣೆಯನ್ನೂ ಸಾಧ್ಯವಾದಷ್ಟು ಬಿಡಬೇಕೆಂದರು.

ಕಾರ್ಮಿಕರಿಗೆ ವಸತಿ ನಿರ್ಮಾಣ

ಮೈಸೂರು ಸಂಸ್ಥಾನದ ಕಾರ್ಮಿಕ ಗೃಹನಿರ್ಮಾಣ ಕಾರ್ಪೊರೇಷನ್ ೧೯೫೪-೫೫ರಲ್ಲಿ ಸುಮಾರು ೩೪೦೦ ವಾಸದ ಮನೆಗಳನ್ನು ಕಟ್ಟಲು ಯೋಜನೆ ತಯಾರಿಸಿ ಅದನ್ನು ಕೇಂದ್ರಸರ್ಕಾರದ ಒಪ್ಪಿಗೆಗೆ ಕಳುಹಿಸಲಾಗಿದೆಯೆಂದು ತಿಳಿಸಲಾಗಿದೆ.

೨೧೬೬೪ ತೊಲ ಅಕ್ರಮ ಚಿನ್ನ ಪತ್ತೆ

ಅಕ್ರಮವಾಗಿ ಭಾರತಕ್ಕೆ ಸಾಗಿಸಿದ್ದ ೧೮ ಲಕ್ಷ ರೂಪಾಯಿಗಳ ಬೆಲೆಬಾಳುವ ೨೧೬೬೪ ತೊಲ ಚಿನ್ನವನ್ನು ಬೊಂಬಾಯಿನಲ್ಲಿ ಸುಂಕದ ಅಧಿಕಾರಿಗಳು ಪತ್ತೆಹಚ್ಚಿ ಅದನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧದಲ್ಲಿ ೮ ಜನರ ದಸ್ತಗಿರಿಯಾಗಿದೆ.

ಕುಸ್ತಿ ರದ್ದಿನ ಬಗ್ಗೆ ರಿಟ್ ಅರ್ಜಿ

ಬೆಂಗಳೂರು ೨೦

ಕಳೆದ ಅಕ್ಟೋಬರ್ ತಿಂಗಳಿನಲ್ಲಿ ದಸರಾ ಸಮಾರಂಭದಲ್ಲಿ ಅರಮನೆ ಮುಂದೆ ನಡೆಯಬೇಕಾಗಿದ್ದ ಕುಸ್ತಿ ಪಂದ್ಯಗಳನ್ನು ಸರ್ಕಾರವು ರದ್ದುಮಾಡಿರುವುದು ರಾಜ್ಯಾಂಗದ ೧೪, ೧೫ ಮತ್ತು ೧೯ರ ವಿಧಿಗಳಿಗೆ ವಿರೋಧವೆಂದೂ, ಆ ಆಜ್ಞೆಯನ್ನು ವಜಾ ಮಾಡಬೇಕೆಂದೂ ರಿಟ್ ಅರ್ಜಿಯೊಂದು ಮೈಸೂರು ಹೈಕೋರ್ಟಿನಲ್ಲಿ ನಿನ್ನೆಯದಿನ ಶ್ರೀ ಮಾದಯ್ಯ ಮತ್ತು ಇತರರಿಬ್ಬರು ಸಲ್ಲಿಸಿದ್ದಾರೆ ಈ ಆಜ್ಞೆಯಿಂದ ಅದಿಕರ್ನಾಟಕ ಕೋಮಿನವರು ಕುಸ್ತಿಪಂದ್ಯಗಳಲ್ಲಿ ಭಾಗವಹಿಸಲು ಅವಕಾಶ ದೊರೆಯದಂತೆ ಆಯಿತೆಂದೂ, ಆದ್ದರಿಂದ ಕುಸ್ತಿಗಳನ್ನು ರದ್ದುಮಾಡಿರುವುದು ಅನ್ಯಾಯವಾದುದೆಂದೂ ಅರ್ಜಿಯಲ್ಲಿ ತಿಳಿಸಲಾಗಿದೆ.

ಏಷ್ಯಾದ ಜನತೆ ಶಾಂತಿ ಮಾರ್ಗವನ್ನು ಅವಲಂಬಿಸಬೇಕು

ಏಷ್ಯಾಕ್ಕೆ ಶಾಂತಿ ಬೇಕು. ಅದನ್ನು ನಿರ್ಧರಿಸಲು ವಿದೇಶೀಯರ ನೆರವು ಅವರ ಮಧ್ಯಸ್ಥಿಕೆ ಮತ್ತು ಪ್ರವೇಶ ಬೇಕಿಲ್ಲ. ಏಷ್ಯಾದ ನಾಯಕರೆಲ್ಲರೂ ಕಲೆತು ತಮ್ಮ ತಮ್ಮಲ್ಲಿಯೇ ತೊಂದರೆಗಳನ್ನು ನಿವಾರಿಸಿಕೊಳ್ಳಬೇಕು.

ವಿದೇಶೀಗಳದಾನ, ಸೈನ್ಯನೆರವು ಮುಂತಾದುವುಗಳಿಂದ ಏಷ್ಯಾದ ಭವಿಷ್ಯವನ್ನು ನಿರ್ಧರಿಸಲಾಗುವುದಿಲ್ಲವೆಂದು ಸಿಂಹಳ ಪ್ರಧಾನಿ ಸರ್ ಜಾ೯ ಕೊಟೇಲೆವಾಲಾರವರು ಹೇಳಿದ್ದಾರೆ.

ವಿಶ್ವವು ಜನಿಸಿದಾರಭ್ಯ ಅನೇಕ ಯುದ್ಧಗಳ ನಡೆದಿವೆ. ಆದರೆ ಅವರಿಂದ ಪ್ರಬಲ ವಿಶ್ವವನ್ನು ಕಟ್ಟಲಾಗಿಲ್ಲ ಎಂಬುದನ್ನು ಅರಿತು ಶಾಂತಿ ಮಾರ್ಗವನ್ನು ಅನುಸರಿಸಬೇಕಾದುದು ಕರ್ತವ್ಯ. ನಮ್ಮ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಿಕೊಂಡರೆ ದೇಶದ ರಕ್ಷಣಾ ಕಾರ್ಯವು ತಾನಾಗಿಯೇ ಉತ್ತಮಗೊಳ್ಳುತ್ತದೆ ಎಂದೂ ಅವರು ತಿಳಿಸಿದ್ದಾರೆ.

ಮಹಿಳೆಯರೇ ಪುರಸಭಾ ಸದಸ್ಯರಾಗಿರಬೇಕು

ಪೌರಸಭೆಯ ಕೆಲಸಗಳು ಒಂದು ಮನೆಯಹೆಂಗಸಿನ ಕೆಲಸದಂತಿರುವುದರಿಂದ ಎಲ್ಲ ಪುರಸಭೆಯ ಸದಸ್ಯರೂ ಮಹಿಳೆಯರೇ ಆಗಿರಬೇಕೆಂದು ಭಾರತದ ಆಯೋಜನಾ ಕಮೀಶನ್ನಿನ ಸದಸ್ಯೆ ಶ್ರೀಮತಿ ದುರ್ಗಾಬಾಯಿ ದೇಶಮುಖ್‌ರವರು ತಿಳಿಸಿದ್ದಾರೆ.

ಕ್ರಿಕೆಟ್ ಆಟ ಪ್ರಸಾರ

ಮೈಸೂರು ೨೦

ಇದೇ ೨೩ನೇ ತಾರೀಖಿನಿಂದ ೨೬ರವರೆಗೆ ೪ ದಿನಗಳು ಬೆಂಗಳೂರು ಸೆಂಟ್ರಲ್ ಕಾಲೇಜು ಮೈದಾನದಲ್ಲಿ ಕಂಬೈಂಡ್ ಯೂನಿವರ್ಸಿಟೀಸ್ X1 ಮತ್ತು ಸಿಲ್ವರ್ ಜ್ಯೂಬಿಲಿ ಓವರ್ ಸೀಸ್ X1ರ ನಡುವೆ ನಡೆಯುವ ಕ್ರಿಕೆಟ್ ಆಟದ ವೀಕ್ಷಣ ವರದಿಯ ಪ್ರಸಾರವನ್ನು ಮೈಸೂರು ರೇಡಿಯೋ ಕೇಂದ್ರವು ಮಾಡಲಿದೆ ಈ ದಿನಗಳಲ್ಲಿ ಪ್ರಸಾರವನ್ನು ಬೆಳಿಗ್ಗೆ ೧೧ ರಿಂದ ೧೨-೩೦, ೨-೩೦ ರಿಂದ ೩-೩೦ ಮತ್ತು ೪ ರಿಂದ ೫ ಗಂಟೆ ವರೆಗೆ ಮಾಡಲಾಗುತ್ತದೆ.

ಎಂ. ಪಿ. ಸಿ. ಸಿ. ತಾತ್ಕಾಲಿಕ ಕಛೇರಿ

ಬೆಂಗಳೂರು ೨೦

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯು ತಾತ್ಕಾಲಿಕ ಕಛೇರಿಯನ್ನು ನಾಳೆಯಿಂದ ೨೪ರವರೆಗೆ ಎ. ಐ. ಸಿ. ಸಿ. ಅಧಿವೇಶನ ನಡೆಯುವ ಕಲ್ಯಾಣಿಯಲ್ಲಿ ತೆರೆಯಲಾಗುತ್ತದೆ. ಎ. ಐ. ಸಿ. ಸಿ. ಗೆ ಹೋಗುವ ಮೈಸೂರು ಪ್ರತಿನಿಧಿಗಳು ತಮ್ಮ ಸೌಲಭ್ಯವನ್ನು ಅಲ್ಲಿ ಪಡೆಯಬಹುದಾಗಿದೆ.

ಅಕ್ರಮ ಪ್ರವೇಶಮಾಡುವವರಿಗೆ ಪ್ರಾಣಾಪಾಯ

ಭಾರತ ಮತ್ತು ಸಿಂಹಳಗಳ ನಡುವೆ ಒಪ್ಪಂದವಾಗಿರುವುದರಿಂದ ಇನ್ನು ಮುಂದೆ ಸಿಂಹಳಕ್ಕೆ ಅಕ್ರಮಪ್ರವೇಶಮಾಡುವವರಿಗೆ ಮದ್ರಾಸ್ ಸರ್ಕಾರವು ಎಚ್ಚರಿಕೆಯನ್ನು ಕೊಡುತ್ತಾ ಹಾಗೆ ಅಕ್ರಮಪ್ರವೇಶಮಾಡುವವರಿಗೆ ಪ್ರಾಣಾಪಾಯ ಸಂಭವವಿದೆಯೆಂದು ತಿಳಿಸಿದೆ.

ವಿಶ್ವಸಂಸ್ಥೆಯಲ್ಲಿ ಕಾಶ್ಮೀರ ಪ್ರಶ್ನೆ ಬೇಡ

ಭಾರತ ಮತ್ತು ಪಾಕೀಸ್ತಾನಗಳ ನಡುವೆ ಇರುವ ಕಾಶ್ಮೀರ ಪ್ರಶ್ನೆಯನ್ನು ಆ ಉಭಯ ರಾಷ್ಟ್ರಗಳೇ ನೇರವಾಗಿ ಕಲೆತು ಇತ್ಯರ್ಥಮಾಡಿಕೊಳ್ಳುವುದು ಉತ್ತಮ ವಿಶ್ವಸಂಸ್ಥೆಯಲ್ಲಿ ಕಾಶ್ಮೀರಪ್ರಶ್ನೆ ಬೇಡ ಎಂದು ತುರ್ಕಿಯ ವಿದೇಶಾಂಗ ಸಚಿವರು ಹೇಳಿದ್ದಾರೆ.

ಕುಂಭಮೇಳದಲ್ಲಿ ೫ ಲಕ್ಷ ಜನರು

ಕುಂಭ ನಗರದಲ್ಲಿ ನಿನ್ನೆ ಸುಮಾರು ೫ ಲಕ್ಷ ಜನರು ಗಂಗಾ ಯಮುನಾ ಮತ್ತು ಸರಸ್ವತಿಯ ಸಂಗಮದಲ್ಲಿ ಸ್ನಾನ ಮಾಡಿದರು. ಪ್ರಧಾನಿ ನೆಹರೂರವರು ನಿನ್ನೆದಿನ ಕುಂಭಮೇಳಕ್ಕೆ ಭೇಟಿಯಿತ್ತಾಗ ಲಕ್ಷಾಂತರ ಜನರು ಅವರಿಗೆ ಸ್ವಾಗತ ನೀಡಿದರು.

ಪಾಕ್-ಅಮೆರಿಕಾ ಸೈನ್ಯ ಒಪ್ಪಂದ ಸಂಗ್ರಾಮಕ್ಕೆ ಆಹ್ವಾನ

ಪಾಕೀಸ್ತಾನ ಮತ್ತು ಅಮೆರಿಕ ಸೈನ್ಯ ಒಪ್ಪಂದದಿಂದ ಪಾಕೀಸ್ತಾನವು ತನ್ನ ಸ್ವಾತಂತ್ರ್ಯವನ್ನು ಮಾರಿಕೊಂಡಂತಾಗುತ್ತದೆ ಅಲ್ಲದೆ ಏಷ್ಯಾಕ್ಕೆ ಸಂಗ್ರಾಮ ಚಿನ್ಹೆಯಾಗಿದೆ ಈಗಿರುವ ಶಾಂತಿ ವಾತಾವರಣವನ್ನು ಕಲಕುತ್ತದೆ. ಮತ್ತು ಯುದ್ಧವನ್ನು ಏಷ್ಯಾಕ್ಕೆ ಆಹ್ವಾನಿಸಿದಂತೆ ಆಗುತ್ತದೆ. ಭಾರತವು ತನ್ನದೇ ಆದ ಒಂದು ನೀತಿಯನ್ನು ಅನುಸರಿಸುತ್ತ ವಿಶ್ವಶಾಂತಿಗಾಗಿ ಶ್ರಮಿಸುತ್ತಲಿದೆ. ಆದರೆ ತನ್ನ ದೇಶಕ್ಕೆ ಆಕ್ರಮಣವೇನಾದರೂ ಒದಗಿದರೆ ಅದನ್ನು ಎದುರಿಸಲು ಎಲ್ಲಾ ರಕ್ಷಣಾ ಕಾರ್ಯಗಳನ್ನು ಮಾಡಿಕೊಂಡು ಸಿದ್ಧವಿದೆಯೆಂದು ಕೇಂದ್ರ ರಕ್ಷಣಾ ಉಪಸಚಿವರು ಹೇಳಿದ್ದಾರೆ.

ಅಗ್ಗದ ಮನೆಗಳ ನಿರ್ಮಾಣ ಪ್ರದರ್ಶನ

ಅಗ್ಗದ ಮನೆಗಳ ಅಂತರರಾಷ್ಟ್ರೀಯ ಪ್ರದರ್ಶನವೊಂದನ್ನು ಈದಿನ ದೆಹಲಿಯಲ್ಲಿ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದ್‌ರವರು ಉದ್ಘಾಟಿಸಲಿರುವರು. ವಾಸಕ್ಕೆ ಎಲ್ಲಾ ಸೌಕರ್ಯಗಳನ್ನು ಪಡೆದು ನೋಡುವುದಕ್ಕೆ ಸುಂದರವಾಗಿ ಇರುವ ಸುಮಾರು ೧೭೦೦ ರೂಗಳಿಂದ ೫೦೦೦ ರೂಪಾಯಿಗಳವರೆವಿಗೆ ವೆಚ್ಚದ ಮನೆಗಳನ್ನು ಕಟ್ಟುವ ವಿಷಯದಲ್ಲಿ ಈ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಈರೀತಿಯ ೬೦ ಮನೆಗಳನ್ನು ಇಲ್ಲಿ ನಿರ್ಮಿಸಲಾಗಿದೆ.

ವಿದೇಶೀ ಶಿಕ್ಷಣಕ್ಕೆ ನೆರವು

ವಿದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯುವುದಕ್ಕಾಗಿ ಪ್ರತಿವರ್ಷವೂ ಬಿರ್ಲಾ ಟ್ರಸ್ಟ್ ನವರು ೧೦ ವಿದ್ಯಾರ್ಥಿ ವೇತನಗಳನ್ನು ಕೊಡಲಿರುವರು. ಪ್ರತಿಯೊಬ್ಬ ವಿದ್ಯಾರ್ಥಿಗೂ ಸುಮಾರು ೧೨೦೦೦ ರೂಪಾಯಿಗಳನ್ನು ಕೊಡಲಾಗುತ್ತದೆ. ಈ ಪೈಕಿ ಶೇಕಡ ೪೦ ರಷ್ಟು ಉಚಿತವಾಗಿರುತ್ತದೆ ಉಳಿಕೆ ಹಣವನ್ನು ಶಿಕ್ಷಣ ಮುಗಿದನಂತರ ೬ ವರ್ಷ ಕಂತುಗಳಲ್ಲಿ ವಾಪಸ್ಸು ಕೊಡಬೇಕಾಗಿದೆ.

ಜ್ವಾಲಾಮುಖಿಯಿಂದ ಮರಣ

ಜಾವಾದಲ್ಲಿ ಮರಪಿ ಅಗ್ನಿ ಪರ್ವತ ಕಾರಿ, ೨೫ ಜನರು ಸತ್ತು ೬೬ ಮಂದಿಗೆ ಗಾಯವಾಗಿದೆಯೆಂದು ತಿಳಿದುಬಂದಿದೆ.

ಒರಿಸ್ಸಾ ನೂತನ ಗೌರ್ನರ್

ಪ್ರಾಂತ್ಯ ಪುನರ್ವಿಂಗಡನಾ ಸಮಿತಿಯ ಅಧ್ಯಕ್ಷರಾಗಿ ನೇಮಕವಾಗಿರುವ ಶ್ರೀ ಫಸಲ್ ಆಲಿಯವರ ಸ್ಥಾನದಲ್ಲಿ ಒರಿಸ್ಸಾ ಗೌರ್ನರಾಗಿ ಮದರಾಸಿನ ಮಾಜಿ ಮುಖ್ಯಮಂತ್ರಿ ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾರವರನ್ನು ನೇಮಿಸಿ ರಾಷ್ಟ್ರಾಧ್ಯಕ್ಷರು ಆಜ್ಞೆಯೊಂದನ್ನು ಹೊರಡಿಸಿದ್ದಾರೆ.

೨೨೦೦೦ ಯುದ್ಧಖೈದಿಗಳು ವಿಶ್ವಸೈನ್ಯದ ವಶಕ್ಕೆ

ಅವರನ್ನೆಲ್ಲಾ ಫಾರ್ಮೋಸಾಕ್ಕೆ ರವಾನಿಸಲಾಗುತ್ತದೆ

ಸ್ವದೇಶಕ್ಕೆ ಹಿಂತಿರುಗದೆ ಇರುವ ಸುಮಾರು ೨೨೦೦೦ ಉತ್ತರ ಕೊರಿಯಾ ಮತ್ತು ಚೈನಾ ಯುದ್ಧಖೈದಿಗಳನ್ನು ಭಾರತೀಯ ಮೇಲ್ವಿಚಾರಕ ಸೈನ್ಯವು ವಿಶ್ವಸಂಸ್ಥೆಯ ಸೈನ್ಯಕ್ಕೆ ವಾಪಸ್ಸುಕೊಡಲು ಇಂದಿನಿಂದ ಪ್ರಾರಂಭಿಸಿದೆ.

ಈ ಯುದ್ಧಖೈದಿಗಳನ್ನು ಶನಿವಾರ ದಿನದಿಂದ ಸಾಮಾನ್ಯ ನಾಗರೀಕರಂತೆ ಪರಿಗಣಿಸಿ ಅವರನ್ನೆಲ್ಲಾ ಫಾರ್ಮೋಸಾಕ್ಕೆ ರವಾನಿಸಲಾಗುವುದೆಂದು ವಿಶ್ವಸೈನ್ಯದ ಅಪ್ಪಮಸೈನ್ಯಾಧಿಕಾರಿ ಹೇಳಿದ್ದಾರೆ.

ಇದನ್ನು ಅಮೆರಿಕಾ ವಿದೇಶಾಂಗ ಕಾರ್ಯದರ್ಶಿ ಮಿ॥ ಡಲ್ಸ್‌ರವರು ಸಮರ್ಥಿಸಿದ್ದಾರೆ.

ಮೈಸೂರಿಗೆ ನೀರಿನ ಸರಬರಾಜಿನ ಯೋಜನೆ

ಬೆಂಗಳೂರು ೨೦

ಮೈಸೂರು ನಗರದಲ್ಲಿ ನೀರಿನ ಸರಬರಾಜನ್ನು ಉತ್ತಮಗೊಳಿಸಲು ೫೯ ಲಕ್ಷ ರೂಪಾಯಿಗಳ ಅಂದಾಜುಪಟ್ಟಿ ತಯಾರಾಗಿದೆ. ಇದರಲ್ಲಿ ಹಿಂದೆ ಕೊಂಡುಕೊಂಡ ೧೩ ಲಕ್ಷ ರೂ.ಗಳ ಎರಕದ ಕಬ್ಬಿಣದ ಪೈಪುಗಳು ಸೇರಿವೆ. ಯೋಜನೆಗೆ ಬೇಕಾಗಿರುವ ನಿವ್ವಳ ಮೊಬಲಗು ೨೬ ಲಕ್ಷ ರೂಗಳು ಮಾತ್ರ ಇದು. ಚೀಫ್ ಇಂಜನಿಯರ ಪರಿಶೀಲನೆಯಲ್ಲಿದೆ ಎಂದು ಸ್ಥಳೀಯ ಸಂಸ್ಥೆಯ ಸಚಿವ ಶ್ರೀ ಚನ್ನಯ್ಯನವರು ನಿನ್ನೆ ಶಾಸನ ಸಭೆಯಲ್ಲಿ ಶ್ರೀ ಬಿ. ನಾರಾಯಣಸ್ವಾಮಿಯವರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು.

-ಮೈಸೂರು ಪೇಟೆಧಾರಣೆ-

ತಾರೀಖು ೧೯—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೭—	೩೪—
ಎಳ್ಳು	೬೭—	—
ಹರಳು	೪೦—೨	೪೨—೧೪
ಹೊಂಗೆಬೀಜ	—	—
ಹುಚ್ಚೆಳ್ಳು	೩೩—೪	೪೪—೧೨
ಹುರುಳಿ	೩೨—	೩೩—೪
ಉದ್ದು	—	—
ಹೆಸರು	೩೭—೨	೪೩—
ಅಲಸಂದೆ	೩೪—೧೦	೪೭—೧೦
ಅವರೆ	೩೧—೨	—
ಕೊತ್ತಂಬರಿ	೨೬—೬	೨೭—೧೦
ತೊಗರಿ	೨೪—	೩೧—೪
ಹುಣಸೆಹಣ್ಣು	೩—೧೩	೧೩—೧೫
ಮೆಣಸಿನಕಾಯಿ	೨೪—	೩೫—
ಸೀಗೆಕಾಯಿ	೬—೪	೬—೭
ಬೆಲ್ಲ	—	—
ತೆಂಗಿನಕಾಯಿ	೧೫೦—	೨೭೫—

ವಿಧಾನಸೌಧ ಕಟ್ಟಡದ ಖರ್ಚು

ಬೆಂಗಳೂರು ೨೧

ವಿಧಾನಸೌಧಕ್ಕೆ ಹೋದ ವರ್ಷದ ನವೆಂಬರ್‌ವರೆಗೆ ೧೦,೫೭,೭೭೫ ರೂಪಾಯಿಗಳು ಖರ್ಚಾಗಿದೆಯೆಂದೂ, ೧೯೫೫-೫೬ರಲ್ಲಿ ಕಟ್ಟಡ ಪೂರ್ತಿಯಾಗುವುದೆಂದೂ ಮರಾಮತ್ ಇಲಾಖಾ ಸಚಿವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಪಾಕೀಸ್ತಾನದಲ್ಲಿ ಸಂಶೋಧನಾ ಕೇಂದ್ರಗಳು

ಪಾಕೀಸ್ತಾನದಲ್ಲಿ ನಾಲ್ಕು ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾಲಯಗಳನ್ನು ಸ್ಥಾಪಿಸಲು ವೈಜ್ಞಾನಿಕ ಸಮಿತಿ ನಿರ್ಧರಿಸಿದೆ. ಡಾಕಾ, ಲಾಹೋರ್, ಪೆಷಾವರ್ ಮತ್ತು ಕರಾಚಿಗಳಲ್ಲಿ ಈ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

ಸರ್ಕಾರಿ ಬಸ್ಸುಗಳಲ್ಲಿ ಉತ್ಪತ್ತಿ ಹೆಚ್ಚುತ್ತಿದೆ

ಬೆಂಗಳೂರು ೨೦

ರಾಷ್ಟ್ರೀಕರಣ ಮಾಡಿರುವ ಮಾರ್ಗಗಳಲ್ಲಿ ಸರ್ಕಾರಿ ಬಸ್ಸುಗಳಿಗೆ ನಿತ್ಯದ ವಸೂಲಿಯು ಈಗ ಸರಾಸರಿ ದಿನ ಒಂದಕ್ಕೆ ಸಾವಿರ ರೂ. ಗಳಷ್ಟು ಹೆಚ್ಚಾಗಿದೆ. ಇನ್ನು ಕೆಲವು ಮಾರ್ಗಗಳ ಬಗ್ಗೆ ಸರ್ವಮಾನ್ಯತೆ ಪಡೆಯಬೇಕೆಂದು ಸರ್ಕಾರ ಆಲೋಚಿಸುತ್ತಿದೆ ಎಂದು ಸಂಚಾರಶಾಖಾ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ನಿನ್ನೆ ಶಾಸನ ಸಭೆಯಲ್ಲಿ ತಿಳಿಸಿದರು.

ಮೂರನೇ ಯುದ್ಧ ತಡೆಗಟ್ಟಲು ಆಗ್ನೇಯ ಏಷ್ಯಾ ಜನತೆಯ ಒಗ್ಗಟ್ಟು ಅಗತ್ಯ

ಆಗ್ನೇಯ ಏಷ್ಯಾ ಜನತೆಯ ಒಗ್ಗಟ್ಟಿನಿಂದ ಮೂರನೇ ವಿಶ್ವ ಯುದ್ಧವನ್ನು ತಡೆಗಟ್ಟಬಹುದಾಗಿದೆ-ಎಂದು ಸಿಂಹಳ ಪ್ರಧಾನಿ ಸರ್ ಜಾನ್ ಕೊಟೇಲವಾಲಾರವರು ನಿನ್ನೆ ಬೊಂಬಾಯಿಯಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಟಿಕೆಟ್ ಇಲ್ಲದೆ ವಿಮಾನ ಪ್ರಯಾಣ

ಬೊಂಬಾಯಿನ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಯೊಬ್ಬನು ಟಿಕೆಟ್ ಇಲ್ಲದೆ ಬೊಂಬಾಯಿನಿಂದ ಲಂಡನ್ನಿಗೆ ಹೊರಡುವ ವಿಮಾನವೊಂದರಲ್ಲಿ ಅವಿತುಕೊಂಡಿದ್ದುದು ಕೈರೋದಲ್ಲಿ ಪತ್ತೆಯಾಗಿ ಈಗ ಆತನನ್ನು ಬೊಂಬಾಯಿಗೆ ವಾಪಸು ತರಲಾಗಿದೆ. ಆತನಲ್ಲಿ ಪಾಸ್‌ಪೋರ್ಟ್ ಮತ್ತು ಇತರ ಯಾವ ದಾಖಲೆಗಳೂ ಇರಲಿಲ್ಲ.

ಮಂತ್ರಿಗಳ ಅನುಪಯುಕ್ತ ಪ್ರವಾಸವಿಲ್ಲ

ಬೆಂಗಳೂರು ೨೦

ವಿರೋಧಪಕ್ಷದವರ ಟೀಕೆಗೆ ಉತ್ತರವನ್ನು ಹೇಳುತ್ತಾ ಮಂತ್ರಿಗಳಿಗೆ ಸಿಕ್ಕಾಪಟ್ಟೆ ಪ್ರವಾಸ ಮಾಡಬೇಕೆಂಬ ಬಯಕೆ ಇಲ್ಲವೆಂದೂ ಮತ್ತು ಜನರು ಕರೆದರೆ ಇಲ್ಲವೆಂದು ಹೇಳುವುದಕ್ಕೆ ಆಗುವುದಿಲ್ಲವೆಂದೂ ಶ್ರೀ ಕೆ. ಹನುಮಂತಯ್ಯನವರು ತಿಳಿಸಿದ್ದಾರೆ.

ರೈಲ್ವೆ ಅಪಘಾತ

ಕಳೆದ ಭಾನುವಾರ ಮಧ್ಯರಾತ್ರಿಯಲ್ಲಿ ಗುಂತಕಲ್ ಹುಬ್ಬಳ್ಳಿ ರೈಲ್ವೆಲೈನಿನಲ್ಲಿ ಬಂಟನಹಾಳು ಮತ್ತು ಬೈವನಹಾಳ್ ಎಂಬ ರೈಲ್ವೆ ನಿಲ್ದಾಣಗಳ ನಡುವೆ ಗೂಡ್ಸ್‌ಗಾಡಿಯೂ ಉರುಳಿ ೪ ಜನರು ಮೃತಪಟ್ಟರು.

ಸಿಂಹಳಕ್ಕೆ ಭಾರತದಿಂದ ಸಾಲ

ಸಿಂಹಳದಲ್ಲಿ ನಡೆಯಬೇಕಾಗಿರುವ ಹಲವಾರು ಅಭಿವೃದ್ಧಿ ಕಾರ್ಯಗಳಿಗೆ ಅಲ್ಲಿಯ ಸರ್ಕಾರವು ಭಾರತದಿಂದ ಹಣವನ್ನು ಸಾಲವನ್ನಾಗಿ ಪಡೆಯಲು ಯೋಚಿಸುತ್ತಲಿರುವುದಾಗಿ ಅಲ್ಲಿಯ ಆರ್ಥಿಕ ಸಚಿವರು ಹೇಳಿದ್ದಾರೆ.

ಹೆಚ್ಚಿಗೆ ಆಹಾರ ಬೆಳೆಯುವ ಯೋಜನೆ

೧೯೫೪-೫೫ರಲ್ಲಿ ಮೈಸೂರು ಸಂಸ್ಥಾನದಲ್ಲಿ ಹೆಚ್ಚಿಗೆ ಆಹಾರ ಬೆಳೆಯುವ ಕಾರ್ಯಕ್ರಮಗಳಿಗೆ ಎರಡೂವರೆಲಕ್ಷ ರೂಪಾಯಿಗಳ ಯೋಜನೆಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಲಾಗಿದೆಯೆಂದು ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ರಣಜಿತ್

21-4-54 ರಿಂದ ಅಮೋಘ ಪ್ರಾರಂಭ

ರಣಜಿತ್‌ರವರ:....

○ ಪಾಪಿ ○

ಪಾತ್ರ:—ನರ್ಗೀಸ್, ರಾಜಕಪೂರ್

[ದ್ವಂದ್ವ ಪಾತ್ರ]

ಅಪೆರಾ

21–1–54 ರಿಂದ ಅಮೋಘ 6 ನೇ ವಾರ

ಆರ್. ಎನ್. ಪಿಕ್ಚರ್ಸ್‌ರವರ

ಜಾತಕ ಫಲ

(ಕನ್ನಡ)

ಪಾತ್ರ:—ಆರ್. ನಾಗೇಂದ್ರರಾವ್, ಕೆ. ಸಾರಂಗಪಾಣಿ, ಬಾಲಚಂದ್ರ, ಸೂರ್ಯಕಲಾ ಮತ್ತು ಕಮಲಾಬಾಯಿ

ಪ್ರಕಾಶಕರು ಮತ್ತು ಮುದ್ರಕರು:

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ

ಸಂಪುಟ ೪

ಸಂಚಿಕೆ ೧೧೯

೨೧-೧-೧೯೫೪ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪುರಸಭೆಯ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ

ಮೈಸೂರು ೨೧

ಮೈಸೂರು ಪುರಸಭೆಯ ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಚುನಾವಣೆಯು ನಿನ್ನೆ ಸಂಜೆ ನಡೆಯಿತು.

ಕಾಂಗ್ರೆಸ್ ಪಕ್ಷದ ಶ್ರೀ ಕೆ. ಪುಟ್ಟಸ್ವಾಮಿಯವರಿಗೆ ೩೩ ಓಟುಗಳುಬಂದು ಅವರು ಅಧ್ಯಕ್ಷರಾಗಿ ಚುನಾಯಿತರಾದರು. ಅವರ ಪ್ರತಿಸ್ಪರ್ಧಿ ಸಂಯುಕ್ತ ಪೌರಪಕ್ಷದನಾಯಕ ಶ್ರೀ ಬಿ. ಕೆ. ರಾಮಕೃಷ್ಣಯ್ಯನವರಿಗೆ ೧೬ ಓಟುಗಳು ಬಂದವು.

ಕಾಂಗ್ರೆಸ್ ಪಕ್ಷದ (ಹರಿಜನ) ಶ್ರೀ ಕೆ. ಸಿದ್ದಯ್ಯನವರಿಗೆ ೩೦ ಓಟುಗಳು ಬಂದು ಉಪಾಧ್ಯಕ್ಷರಾಗಿ ಚುನಾಯಿತರಾದರು. ಅವರ ಪ್ರತಿಸ್ಪರ್ಧಿ ಶ್ರೀ ಎಂ. ಸಿ. ಮಹದೇವಸ್ವಾಮಿಯವರಿಗೆ ೧೭ ಓಟುಗಳು ಬಂದವು.

ಶ್ರೀಗಳಾದ ಬಿ. ಕೆ. ರಾಮಕೃಷ್ಣಯ್ಯ, ಎ. ಕೃಷ್ಣಮೂರ್ತಿರಾವ್, ಎಸ್. ಲಿಂಗಣ್ಣ ಮುಂತಾದವರು ನೂತನ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಓಟಿನ ಪೆಟ್ಟಿಗೆಯಲ್ಲಿ ಪ್ಲಾಟ್‌ಫಾರಂ ಟಿಕೆಟ್

ಮೈಸೂರು ೨೧

ನಿನ್ನೆ ಸಂಜೆ ಪುರಸಭೆಯ ನೂತನ ಉಪಾಧ್ಯಕ್ಷ ಚುನಾವಣೆ ಸಂದರ್ಭದಲ್ಲಿ ಸದಸ್ಯರುಗಳಿಗೆ ಮತದಾನ ಚೀಟಿಯನ್ನು ಹಂಚಿದಾಗ, ಒಬ್ಬ ಸದಸ್ಯರು ಆ ಚೀಟಿಯನ್ನು ತಮ್ಮ ಜೇಬಿನಲ್ಲೇ ಇಟ್ಟುಕೊಂಡು, ಓಟಿನ ಪೆಟ್ಟಿಗೆಗೆ ರೈಲ್ವೆ ಪ್ಲಾಟ್‌ಫಾರಂ ಟಿಕೆಟ್ ಒಂದನ್ನು ಹಾಕಿದ್ದುದು ಕಂಡುಬಂತು.

ಆಯುರ್ವೇದ ಕಾಲೇಜ್ ವರ್ಗಾವಣೆ

ರಾಜಧಾನಿಯಲ್ಲಿರುವ ಆಯುರ್ವೇದ ಮತ್ತು ಯುನಾನಿ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವ ಬಗ್ಗೆ ಸರ್ಕಾರ ಆಲೋಚಿಸುತ್ತಿದೆಯೆಂದು ವಿಧಾನ ಸಭೆಯಲ್ಲಿ ಶಿಕ್ಷಣ ಸಚಿವರು ತಿಳಿಸಿದ್ದಾರೆ.

ಕಾಲೇಜ್ ಬಿಟ್ಟರೂ ವಿದ್ಯಾರ್ಥಿಗಳು ಫೀಜು ಕೊಡಬೇಕು

ಭಾರತದ ವಿಶ್ವವಿದ್ಯಾನಿಲಯಗಳ ಹಣಕಾಸಿನ ಪರಿಸ್ಥಿತಿಯನ್ನು 'ಉತ್ತಮಗೊಳಿಸಲು ವ್ಯಾಸಂಗ ಮಾಡಿದ ವಿದ್ಯಾರ್ಥಿಗಳು ಕಾಲೇಜನ್ನು ಬಿಟ್ಟರೂ ತಾವು ಮೊದಲು ಕೊಡುತ್ತಿದ್ದ ಫೀಜಿನ ಮೊಬಲಗನ್ನು ಕೊಡುತ್ತಾ ಬರಬೇಕೆಂದು ಕೇಂದ್ರ ಗೃಹ ಸಚಿವ ಡಾ॥ ಖಟ್ಜುರವರು ಸಲಹೆ ಮಾಡಿದ್ದಾರೆ.

ದೇಶದಲ್ಲಿ ವಾಸಗೃಹಗಳ ಅಭಾವ

ಅಗ್ಗದ ಮನೆಗಳ ನಿರ್ಮಾಣ ಅತ್ಯಗತ್ಯವೆಂದು ರಾಷ್ಟ್ರಾಧ್ಯಕ್ಷರು

ದೇಶದಲ್ಲಿ ವಾಸಗೃಹಗಳ ಅಭಾವವನ್ನು ನಿವಾರಿಸಬೇಕಾದುದು ಅತ್ಯಂತ ಜರೂರು ಸಮಸ್ಯೆಯಾಗಿದೆ. ನಿರ್ಮಾಣ ವೆಚ್ಚವನ್ನು ಇಳಿಸಿ, ನಮ್ಮಲ್ಲಿಯೇ ದೊರೆಯುವಂತಹಾ ಸಾಮಾನುಗಳನ್ನು ಉಪಯೋಗಿಸಿ ಗೃಹಗಳ ಅವಶ್ಯಕತೆಯನ್ನು ಪೂರೈಸಬೇಕಾಗಿದೆ. ಗ್ರಾಮಜೀವನದ ನಮೂನೆ ಮನೆಗಳನ್ನು ಕಟ್ಟುವ ಅವಶ್ಯಕತೆಯೇ ವಿಶೇಷವಾಗಿದೆ ಈ ಜಟಿಲ ಸಮಸ್ಯೆಯನ್ನು ಪೂರೈಸಲು ಇಲ್ಲಿ ಪ್ರಾರಂಭಿಸಿರುವ ಕಡಮೆ ವೆಚ್ಚದ ಗೃಹಗಳ ಪ್ರದರ್ಶನವು ಸಹಾಯಕವಾಗತ್ತದೆ-ಎಂದು ರಾಷ್ಟ್ರಾಧ್ಯಕ್ಷರು ನಿನ್ನೆಯದಿನ ದೆಹಲಿಯಲ್ಲಿ ಅಂತರರಾಷ್ಟ್ರೀಯ ಕಡಮೆವೆಚ್ಚದ ಗೃಹಗಳ ಪ್ರದರ್ಶನವನ್ನು ಉದ್ಘಾಟಿಸುತ್ತಾ ತಿಳಿಸಿದರು.

ಈ ಸಂದರ್ಭದಲ್ಲಿ ಕೇಂದ್ರ ಗೃಹನಿರ್ಮಾಣ ಶಾಖಾ ಸಚಿವರು ಮಾಡನಾಡುತ್ತಾ ಈ ಪ್ರದರ್ಶನವು ಕಡಮೆ ವೆಚ್ಚದಲ್ಲಿ ಗೃಹನಿರ್ಮಾಣದ ಬಗ್ಗೆ ಜನತೆಗೆ ವಿಶೇಷ ತಿಳುವಳಿಕೆಯನ್ನು ಕೊಡುತ್ತದೆ ಎಂದು ಹೇಳುತ್ತಾ ಈ ಪ್ರದರ್ಶನಕ್ಕೆ ನೆರವು ನೀಡಿರುವ ಎಲ್ಲಾ ರಾಷ್ಟ್ರಗಳಿಗೂ ಅಭಿನಂದಿಸಿದರು.

ಪಾಕೀಸ್ತಾನದಲ್ಲಿ ೭೭ ಲಕ್ಷ ಮುಸ್ಲಿಂ ನಿರಾಶ್ರಿತರು

ಭಾರತ ಮತ್ತು ಪಾಕೀಸ್ತಾನ ಬೇರೆಯಾದಾಗಲಿನಿಂದ ಇಲ್ಲಿಯವರೆಗೆ ಭಾರತದಿಂದ ಪಾಕೀಸ್ತಾನಕ್ಕೆ ೭೭ ಲಕ್ಷ ಮುಸ್ಲಿಂ ನಿರಾಶ್ರಿತರು ಬಂದಿರುವರೆಂದೂ, ಕರಾಚಿ ನಗರ ಒಂದರಲ್ಲೇ ೧೫ ಲಕ್ಷ ಮಂದಿ ನಿರಾಶ್ರಿತರಿರುವರೆಂದೂ ಪಾಕೀಸ್ತಾನ ಸಚಿವರು ತಿಳಿಸಿದ್ದಾರೆ. ೧೯೫೩ನೇ ಮಾರ್ಚಿ ತಿಂಗಳವರೆಗೆ ನಿರಾಶ್ರಿತರ ತೆರಿಗೆಯಾಗಿ ೪.೬೩ ಕೋಟಿ ರೂಪಾಯಿಗಳನ್ನು ವಸೂಲ್ಮಾಡಲಾಗಿದೆಯೆಂದೂ ಅವರು ಹೇಳಿದ್ದಾರೆ

ಭಾರತದ ಸ್ವತಂತ್ರ ನೀತಿ ಮುಂದುವರಿಯಬೇಕು

ಅಂತರರಾಷ್ಟ್ರೀಯ ವ್ಯವಹಾರಗಳಲ್ಲಿ ಸ್ವತಂತ್ರ ನೀತಿಯನ್ನು ಅನುಸರಿಸುವುದನ್ನು ಭಾರತವು ಮುಂದುವರಿಸಬೇಕೆಂದೂ ಮತ್ತು ಯಾವ ರಾಷ್ಟ್ರ ಕೂಟದ ವಿರುದ್ಧ ಮತ್ತೊಂದು ಕೂಟದೊಡನೆ ಭಾರತವು ಸೇರಕೂಡದೆಂದೂ ಅಭಿಪ್ರಾಯ ವ್ಯಕ್ತಪಡಿಸುವ ನಿರ್ಣಯವನ್ನು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಅನುಮೋದಿಸಿದೆ.

ಕೊರಿಯಾ ಯುದ್ಧಖೈದಿಗಳ ಬಗ್ಗೆ ಯಾವ ಒಪ್ಪಂದವೂ ಆಗದಿರುವುದಕ್ಕೆ ವಿಷಾದ ವ್ಯಕ್ತಪಡಿಸಿ, ಕೂಡಲೇ ರಾಜಕೀಯ ಸಮ್ಮೇಳನ ಸೇರುವಂತಾಗಬೇಂದು ಆಶಿಸುವ ನಿರ್ಣಯವನ್ನೂ ಮಾಡಲಾಗಿದೆ.

ನೂತನ ಪ್ರಥಮದರ್ಜೆ ಕಾಲೇಜುಗಳಿಲ್ಲ

ಮೈಸೂರು ಸಂಸ್ಥಾನದಲ್ಲಿ ಈಗ ಹೊಸದಾಗಿ ಪ್ರಥಮದರ್ಜೆ ಕಾಲೇಜನ್ನು ಸ್ಥಾಪಿಸುವ ಉದ್ದೇಶ ಸರ್ಕಾರಕ್ಕಿಲ್ಲವೆಂದೂ, ಆದರೆ ಕೆಲವು ಇಂಟರ್ ಕಾಲೇಜುಗಳನ್ನು ಹೆಚ್ಚಿಸುವ ವಿಷಯವು ವಿಶ್ವವಿದ್ಯಾನಿಲಯದ ಪರಿಶೀಲನೆಯಲ್ಲಿದೆಯೆಂದೂ ಶಿಕ್ಷಣ ಸಚಿವರು ತಿಳಿಸಿದ್ದಾರೆ.

ತೇನ್‌ಸಿಂಗ್ ಮದ್ರಾಸಿನಲ್ಲಿ

ಗೌರಿಶಂಕರ ಶಿಖರ ಏರಿದ ವೀರ ತೇನ್‌ಸಿಂಗ್‌ರವರು ಮದ್ರಾಸಿಗೆ ಆಗಮಿಸಿದ್ದಾರೆ.

ಪಾಕ್-ಅಮೆರಿಕ ಮಿಲಿಟರಿ ಒಪ್ಪಂದ

ಭಾರತದಲ್ಲಿ ಉಗ್ರ ಪರಿಸ್ಥಿತಿ ಉಂಟಾಗಿದೆ

ಪಾಕೀಸ್ತಾನಕ್ಕೆ ಅಮೆರಿಕವು ಮಿಲಿಟರಿ ನೆರವನ್ನು ಕೊಡುವುದರಿಂದ ಉಗ್ರ ಪರಿಸ್ಥಿತಿ ಉಂಟಾಗಿದೆಯೆಂದೂ, ಇದರಿಂದ ಭಾರತದಲ್ಲಿ ರಾಷ್ಟ್ರೀಯ ಐಕ್ಯತೆಯ ಅಗತ್ಯ ಹೆಚ್ಚಾಗಿದೆಯೆಂದೂ ಸೂಚಿಸುವ ನಿರ್ಣಯವು ಕಲ್ಯಾಣಿಯಲ್ಲಿ ನಿನ್ನೆ ಸೇರಿದ ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಅಂಗೀಕೃತವಾಗಿದೆ.

ಭಾರತಕ್ಕೆ ಬ್ರಿಟಿಷ್ ಸಚಿವರ ಭೇಟಿ

ಬ್ರಿಟನ್ನಿನ ಹಣಕಾಸಿನ ಸಚಿವರಾದ ಮಿ॥ ಆರ್. ಎ. ಬಟ್ಲರ್‌ರವರು ಇದೇ ೨೪ ನೇ ತಾರೀಖು ಆಸ್ಟ್ರೇಲಿಯದಿಂದ ಕಲ್ಕತ್ತೆಗೆ ಆಗಮಿಸಿ, ೩ ದಿನಗಳು ದೆಹಲಿಯಲ್ಲಿರುವರು. ೨೭ ನೇ ತಾರೀಖು ಕರಾಚಿಗೆ ಪ್ರಯಾಣ ಬೆಳೆಸುವರು.

'ಭಾಗಿನ' ಗ್ರಂಥ ಸಮರ್ಪಣೆ

ಮಹಾರಾಜಾಕಾಲೇಜಿನಲ್ಲಿ ಇದೇ ೨೬ ನೇ ತಾರೀಖು ಬೆಳಗ್ಗೆ ೯ ಗಂಟೆಗೆ ಅಲ್ಲಿ ಪ್ರಕಟವಾಗಿರುವ 'ಬಾಗಿನ' ಎಂಬ ಗ್ರಂಥವನ್ನು ಪ್ರೊಫೆಸರ್ ಎಸ್. ವಿ. ರಂಗಣ್ಣನವರಿಗೆ ಒಪ್ಪಿಸಲು ಒಂದು ಸಮಾರಂಭವು ನಡೆಯುವುದು. ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರರು ಅಧ್ಯಕ್ಷತೆ ವಹಿಸುವರು.

ಭಾರತ ಸಿಲೋನ್ ಒಪ್ಪಂದ ಬಗ್ಗೆ ಅತೃಪ್ತಿ

ಸಿಂಹಳ ದ್ವೀಪದಲ್ಲಿರುವ ಭಾರತೀಯರ ಪೌರಹಕ್ಕಿನ ಬಗ್ಗೆ ಭಾರತ ಮತ್ತು ಸಿಲೋನ್ ಪ್ರಧಾನಿಗಳ ಮಾತುಕತೆನಡೆದು ದೆಹಲಿಯಲ್ಲಿ ಒಂದು ಒಪ್ಪಂದವಾಯಿತಷ್ಟೆ. ಆದರ ಬಗ್ಗೆ ಸೀಲೋನಿನಲ್ಲಿರುವ ಭಾರತೀಯರು ಅತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ.

ಹೆಚ್ಚು ಆಹಾರ ಬೆಳೆ ಯೋಜನೆ

ಸಂಸ್ಥಾನದಲ್ಲಿ ಹೆಚ್ಚು ಆಹಾರ ಬೆಳೆ ಯೋಜನೆಗೆ ೧೯೫೪-೫೫ನೇ ಸಾಲಿಗೆ 2½ ಕೋಟಿ ರೂಗಳ ಗ್ರಾಂಟು ಮತ್ತು ಸಾಲ ಕೊಡಬೇಕೆಂದು ಕೇಂದ್ರಕ್ಕೆ ಮೈಸೂರು ಸರ್ಕಾರ ಮನವಿ ಮಾಡಿದೆಯೆಂದು ಗೊತ್ತಾಗಿದೆ.

ನೇತಾಜಿ ಬೋಸರ ದಿನಾಚರಣೆ

ಇದೇ ೨೩ನೇ ತಾರೀಖು ಸಂಸ್ಥಾನಾದ್ಯಂತ ನೇತಾಜಿ ಸುಬಾಷ್‌ಚಂದ್ರಬೋಸರ ಜನ್ಮದಿನಾಚರಣೆಯನ್ನು ಆಚರಿಸಿ, ಆದಿನ ಸಭೆ ಮತ್ತು ಮೆರವಣಿಗೆಗಳನ್ನು ನಡೆಸಬೇಕೆಂದು ಪ್ರಾಂತೀಯ ಪ್ರಜಾಸೋಷಲಿಸ್ಟ ಪಕ್ಷವು ಮನವಿಮಾಡಿದೆ.

ಕಾರ್ಮಿಕ ವಸತಿ ನಿರ್ಮಾಣ

ಹೈದರಾಬಾದ್‌ನಲ್ಲಿ ೬೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ೨೦೦೦ ಕಾರ್ಮಿಕ ವಸತಿಗೃಹಗಳನ್ನು ನಿರ್ಮಿಸಲು ಅಲ್ಲಿಯ ಸರ್ಕಾರವು ಒಂದು ಯೋಜನೆಯನ್ನು ತಯಾರಿಸಿದೆ.

ಕಾಂಗ್ರೆಸ್ ಸಮಿತಿ ಸಭೆ

ಇದೇ ೨೩ ನೇ ತಾರೀಖು ಶನಿವಾರ ಸಂಜೆ ೬—೩೦ ಗಂಟೆಗೆ ನಗರ ಕಾಂಗ್ರೆಸ್ ಸಮಿತಿಯ ಕಛೇರಿಯಲ್ಲಿ ಮೈಸೂರು ನಗರ ದಕ್ಷಿಣ ವಿಭಾಗದ ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಕರೆಯಲಾಗಿದೆ. ಈ ವಿಭಾಗದ ಕಾಂಗ್ರೆಸ್ ಕಾರ್ಯಕರ್ತರುಗಳು ತಪ್ಪದೆ ಬರಬೇಕೆಂದು ಕಾರ್ಯದರ್ಶಿಯವರು ಕೋರುತ್ತಾರೆ.

ರಿಪಬ್ಲಿಕ್ ದಿನಾಚರಣೆ

ಬೆಂಗಳೂರು ೨೧

ಇದೇ ತಿಂಗಳು ೨೬ ನೇ ತಾರೀಖು ರಿಪಬ್ಲಿಕ್ ದಿನಾಚರಣೆಯನ್ನು ಅತಿ ವೈಭವದಿಂದ ನಡೆಯಿಸಲು ಏರ್ಪಾಡುಗಳು ನಡೆಯುತ್ತಿವೆ.

ಆ ದಿನ ಪ್ರಾತಃಕಾಲ ೯-೩೦ ಗಂಟೆಗೆ ಸರಿಯಾಗಿ ರಾಜಪ್ರಮುಖರು ರೇಸ್‌ಕೋರ್ಸಿನಲ್ಲಿ ನಡೆಯುವ ಪೆರೇಡಿನಲ್ಲಿ ಭಾಗವಹಿಸಿ ವಂದನೆಯನ್ನು ತೆಗೆದುಕೊಳ್ಳುವರು.

ಸಾಯಂಕಾಲ ೪-೪೫ ಗಂಟೆಯಿಂದ ೮ ಗಂಟೆವರೆಗೆ ಒಲಂಪಿಕ್ [ಸಂಪಂಗಿಕೆರೆ] ಸ್ಟೇಡಿಯಂನಲ್ಲಿ ವಿವಿಧ ವಿನೋದಾವಳಿ ಮತ್ತು ಆಟಗಳು ನಡೆಯುವುವು. ರಾಜಪ್ರಮುಖರು ಆಹ್ವಾನವನ್ನು ಮನ್ನಿಸಿ ಸಮಾರಂಭಕ್ಕೆ ದಯಮಾಡಿಸಲು ಒಪ್ಪಿದ್ದಾರೆ.

ನಿರುದ್ಯೋಗಿಗಳ ವಿವರ

ಬೆಂಗಳೂರು ೨೧

ಸಂಸ್ಥಾನದಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಎಷ್ಟೆಂಬುದನ್ನು ತಿಳಿಯಲು ಯಾವ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಆದರೆ ಸಂಸ್ಥಾನದಲ್ಲಿರುವ ಉದ್ಯೋಗ ವಿನಿಮಯ ಕಛೇರಿಯ ಅಂಕಿ ಅಂಶಗಳಪ್ರಕಾರ ೧೯೫೩ನೇ ಅಕ್ಟೋಬರ್ ಆಖೈರಿನವರೆವಿಗೆ ೮೧೬೪ ಮಂದಿ ನಿರುದ್ಯೋಗಿಗಳು ದಾಖಲ್ಮಾಡಿಕೊಂಡಿರುವರೆಂದು ಕಾರ್ಮಿಕ ಸಚಿವರು ಶಾಸನಸಭೆಯಲ್ಲಿ ಹೇಳಿದ್ದಾರೆ.

೩೨೦೦ ಕೆಲಸಗಳಿಗೆ ೨೦ ಸಾವಿರ ಅರ್ಜಿ

ನಿರುದ್ಯೋಗಿ ಪದವೀಧರರಿಗೆ ಉದ್ಯೋಗ ಕೊಡಲು ಉತ್ತರ ಪ್ರದೇಶ ಸರ್ಕಾರವು ಜಾಹಿರಾತು ಮಾಡಿದ ೩೨೦೦ ಉಪಾಧ್ಯಾಯರ ಕೆಲಸಗಳಿಗೆ ೨೦ ಸಾವಿರ ಅರ್ಜಿಗಳು ಬಂದಿವೆಯೆಂದು ಹೇಳಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೦—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೆ	೬೦—	೬೨—
ಕಡಲೇಕಾಯಿ	೧೮—	೨೩—೧೪
ಎಳ್ಳು	೭೩—	೭೫—
ಹರಳು	೩೮—೧೦	೪೧—೧೪
ಹೊಂಗೆಬೀಜ	—	—
ಹುಚ್ಚೆಳ್ಳು	೩೫—೧೪	೪೪—
ಹುರುಳಿ	೩೧—೨	೩೨—೧೪
ಉದ್ದು	೪೭—೧೪	೫೭—
ಹೆಸರು	೩೯—೨	೪೪—
ಅಲಸಂದೆ	೨೦—	೪೭—೧೦
ಅವರೆ	—	—
ಕೊತ್ತಂಬರಿ	೨೬—	೨೭—೨
ತೊಗರಿ	೨೧—	೨೬—೪
ಹುಣಸೆಹಣ್ಣು	೩—	೧೩—
ಮೆಣಸಿನಕಾಯಿ	೨೦—೧೪	೩೫—೨
ಸೀಗೆಕಾಯಿ	೫—	೬—೧೯
ಬೆಲ್ಲ	೫—	—
ತೆಂಗಿನಕಾಯಿ	೧೭೫—	೨೯೧—

ನಿರುದ್ಯೋಗ ಪರಿಹಾರಕ್ಕೆ ನಾಲ್ಕುವರೆ ಕೋಟಿ ರೂಗಳ ನೂತನ ಯೋಜನೆ

ಆಯೋಜನಾ ಮಂಡಲಿ ಒಪ್ಪಿಗೆಗೆ ಮೈಸೂರು ಸರ್ಕಾರ ಕಳುಹಿಸಿದೆ

ಬೆಂಗಳೂರು ೨೧

ಪ್ರಾಂತ್ಯದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಪರಿಹಾರಮಾಡಲು ಸರ್ಕಾರವು ೪.೫೨ ಕೋಟಿ ರೂಪಾಯಿಗಳ ಯೋಜನೆಯೊಂದನ್ನು ತಯಾರಿಸಿ ಆಯೋಜನಾ ಮಂಡಲಿಯ ಒಪ್ಪಿಗೆಗೆ ಕಳುಹಿಸಿರುವುದಾಗಿ ಶಾಸನ ಸಭೆಯಲ್ಲಿ ಕಾರ್ಮಿಕ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಹೇಳಿದ್ದಾರೆ.

ಬಳ್ಳಾರಿಯಲ್ಲಿ ಹತ್ತಿಬಟ್ಟೆ ಕಾರ್ಖಾನೆ ನಿರ್ಮಾಣ, ಶಿವಮೊಗ್ಗದಲ್ಲಿ ಸಕ್ಕರೆ ಕಾರ್ಖಾನೆ ನಿರ್ಮಾಣ, ಬೆಂಗಳೂರಿನಲ್ಲಿರುವ ಪಿಂಗಾಣಿಕಾರ್ಖಾನೆಯ ಬಡಾವಣೆ ಮುಂತಾದ ೧೦ ಕೈಗಾರಿಕೆಗಳಿಗೆ ಸಂಬಂಧಿಸಿದಂತೆ ವಿಷಯಗಳು ಈ ಯೋಜನೆಯಲ್ಲಿ ಅಡಕವಾಗಿರುವುದಾಗಿ ಅವರು ತಿಳಿಸಿದ್ದಾರೆ. ಕುಟೀರ ಮತ್ತು ಗ್ರಾಮಕೈಗಾರಿಕಾಭಿವೃದ್ಧಿ ಕಾರ್ಯವೂ ಇವರಲ್ಲಿ ಅಡಕವಾಗಿವೆ.

ಜಿಲ್ಲಾ ಬೋರ್ಡ್ ತಿದ್ದುಪಡಿ ಮಸೂದೆಗೆ ಒಪ್ಪಿಗೆ

ವಿಧಾನ ಪರಿಷತ್ತಿನಲ್ಲಿ ವಿರೋಧಪಕ್ಷದ ಸದಸ್ಯರ ಸಭಾತ್ಯಾಗ

ಬೆಂಗಳೂರು ೨೧

ಗ್ರಾಮಪಂಚಾಯಿತಿ ಮತ್ತು ಜಿಲ್ಲಾ ಬೋರ್ಡುಗಳ ತಿದ್ದುಪಡಿ ಮಸೂದೆಯು ನಿನ್ನೆಯ ದಿನ ವಿಧಾನ ಪರಿಷತ್ತಿನಲ್ಲಿ ಅಂಗೀಕಾರವಾಯಿತು.

ಇದನ್ನು ಪ್ರತಿಭಟಿಸಿ ವಿರೋಧಪಕ್ಷದ ೬ ಮಂದಿ ಸದಸ್ಯರು ಶ್ರೀ ಡಿ. ವೆಂಕಟರಾಮಯ್ಯನವರ ನಾಯಕತ್ವದಲ್ಲಿ ಸಭಾತ್ಯಾಗ ಮಾಡಿದರು.

ಸತ್ಯಾಗ್ರಹ

ರಾಜಾಸ್ಥಾನದಲ್ಲಿ ಹೆಚ್ಚುವರಿಯಾದ ಗೋಧಿಯಲ್ಲಿ 1¾ ಲಕ್ಷ ಮಣವನ್ನು ಹೊರಕ್ಕೆ ರಫ್ತುಮಾಡುವುದನ್ನು ವಿರೋಧಿಸಿ ಕಳೆದ ೨೧ನೇ ತಾರೀಖಿನಿಂದ ಪ್ರಜಾಸೋಷಲಿಸ್ಟ್ ಪಕ್ಷವು ನಡೆಸುತ್ತಲಿರುವ ಸತ್ಯಾಗ್ರಹವು ಇನ್ನೂ ಮುಂದುವರಿಯುತ್ತಲೇ ಇದೆ. ಈ ಸಾಗಾಣಿಕೆಗೆ ಎಲ್ಲಾ ವರ್ಗಗಳಿಂದಲೂ ಪ್ರತಿಭಟನೆ ಬಂದುದರಿಂದ ಸಾಗಾಣಿಕೆ ಕಾರ್ಯವನ್ನು ನಿಲ್ಲಿಸಲಾಗಿದೆ.

ಸಾಗಾಣಿಕೆಗೆ ಟ್ರಕ್ಕುಗಳನ್ನು ತಂದು ಧಾನ್ಯ ತುಂಬಲು ಯತ್ನಿಸುತ್ತಲಿದ್ದಾಗ ಅವುಗಳಿಗೆ ಅಡ್ಡಲಾಗಿ ಸತ್ಯಾಗ್ರಹಿಗಳು ಮಲಗಿಬಿಟ್ಟರು. ಅವರನ್ನೆಲ್ಲಾ ದಸ್ತಗಿರಿ ಮಾಡಲಾಗಿದೆ.

ಮಂತ್ರಿಗಳೂ ಸಹ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿರಕೂಡದು

ಬೀಹಾರ್ ಮತ್ತು ಹೈದರಾಬಾದ್ ಪ್ರದೇಶ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷರುಗಳಾಗಿ ಅಲ್ಲಿಯ ಮಂತ್ರಿಗಳಿರುವುದಕ್ಕೆ ಅನುಮತಿ ಕೊಡಲಾಗುವುದಿಲ್ಲವೆಂದು ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಧರಿಸಿದೆ

ಬ್ರಿಟನ್ ರಾಣಿ ಜಿಬ್ರಾಲ್ಟರಿಗೆ ಪ್ರವೇಶಿಸಕೂಡದು

ಬ್ರಿಟನ್ ರಾಣಿ ಎಲಿಜಬೆತ್‌ರು ಜಿಬ್ರಾಲ್ಟರಿಗೆ ಬರಕೂಡದೆಂದು ಸ್ಪೇನ್ ಸರ್ಕಾರವು ಪ್ರತಿಭಟನೆ ಸೂಚಿಸಿದೆಯೆಂದು ತಿಳಿಯಬರುತ್ತದೆ.

ರಾಜ್ಯಾಂಗಕ್ಕೆ ತಿದ್ದುಪಡಿ ಬಗ್ಗೆ ಮೈಸೂರಿನ ಸಲಹೆ

ಬೆಂಗಳೂರು ೨೧

ರಾಜ್ಯಾಂಗ ತಿದ್ದುಪಡಿ ವಿಷಯದಲ್ಲಿ ಕೇಂದ್ರ ಸರ್ಕಾರವು ಮೈಸೂರಿನ ಸಲಹೆ ಬಗ್ಗೆ ಪತ್ರ ಬರೆದಿದೆ ಅದಕ್ಕೆ ಇನ್ನೂ ಯಾವ ಉತ್ತರವನ್ನು ಕೊಟ್ಟಿಲ್ಲ. ಈ ವಿಷಯದಲ್ಲಿ ಶಾಸನಸಭೆಯ ಸಲಹೆಯನ್ನು ಪಡೆಯಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ವಿಧಾನ ಪರಿಷತ್ತಿನಲ್ಲಿ ತಿಳಿಸಿದ್ದಾರೆ.

ಐ. ಎನ್. ಟಿ. ಯು. ಸಿ. ಅಧಿವೇಶನ

ಬೆಂಗಳೂರು ೨೧

ಐ. ಎನ್. ಟಿ. ಯು. ಸಿ. ಯ ಮೈಸೂರು ಶಾಖೆಯ ದ್ವಿತೀಯ ಅಧಿವೇಶನವನ್ನು ಇದೇ ೨೪ ನೇ ತಾರೀಖು ಬೆಳಗ್ಗೆ ೯.೩೦ ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಉದ್ಘಾಟಿಸುವರು ಶ್ರೀ ಎನ್ ಕೇಶವಯ್ಯಂಗಾರ್‌ರವರು ಅಧ್ಯಕ್ಷತೆ ವಹಿಸುತ್ತಾರೆ.

ಯುದ್ಧ ಖೈದಿಗಳು ವಾಪಸು

ಸ್ವದೇಶಕ್ಕೆ ಹಿಂತಿರುಗದ ೨೨೦೦೦ ಚೀಣ ಮತ್ತು ಉತ್ತರಕೊರಿಯಾ ಯುದ್ಧ ಖೈದಿಗಳನ್ನು ಭಾರತದ ಉಸ್ತುವಾರಿ ಸೈನ್ಯದವರು ವಿಶ್ವಸಂಸ್ಥೆ ಸೈನ್ಯಕ್ಕೆ ಒಪ್ಪಿಸುವ ಕಾರ್ಯವನ್ನು ನಿನ್ನೆ ಬೆಳಗ್ಗೆ ಪ್ರಾರಂಭ ಮಾಡಿ, ಅರ್ಧರಾತ್ರಿಯ ವೇಳೆಗೆ ಮುಗಿಸಿದರೆಂದು ತಿಳಿಯಬರುತ್ತದೆ

ಕಾಶ್ಮೀರಕ್ಕೆ ಹೋಗುವವರಿಗೆ ರಹದಾರಿ

ಭಾರತ ನಿವಾಸಿಗಳು ಕಾಶ್ಮೀರವನ್ನು ಪ್ರವೇಶಿಸಲು ಕಲ್ಕತ್ತಾದಲ್ಲಿರುವ ಪೋಲೀಸ್ ಕಮಿಷನರ್ ಮತ್ತು ದೇಶದಲ್ಲಿರುವ ಎಲ್ಲಾ ಜಿಲ್ಲಾ ಮ್ಯಾಜಿಸ್ಟ್ರೇಟರುಗಳು ರಹದಾರಿಯನ್ನು ಕೊಡಲು ಭಾರತ ಸರ್ಕಾರದವರು ಅನುಮತಿ ನೀಡಿದ್ದಾರೆ. ಕಾಶ್ಮೀರವನ್ನು ನೋಡಲು ಹೋಗುವವರಿಗೆ ಸೌಕರ್ಯವನ್ನು ಒದಗಿಸಿ ಜಾಗ್ರತೆಯಾಗಿ ರಹದಾರಿ ಸಿಗುವಂತಾಗಲು ಈ ವ್ಯವಸ್ಥೆಯನ್ನು ಮಾಡಲಾಗಿದೆ.

ದೆಹಲಿಯಲ್ಲಿರುವ ಜಮ್ಮು ಮತ್ತು ಕಾಶ್ಮೀರ ಸರ್ಕಾರದ ಟ್ರೇಡ್ ಕಮಿಷನರವರು ಮತ್ತು ಡೆಪ್ಯುಟಿ ಟ್ರೇಡ್ ಕಮಿಷನರ್ ಮತ್ತು ಪಠಾಣಕೋಟೆ, ಅಮೃತಸರ, ಕಲ್ಕತ್ತಾ, ಬೊಂಬಾಯಿ, ಮದರಾಸ್‌ಗಳಲ್ಲಿರುವ ಟ್ರೇಡ್ ಏಜಂಟರುಗಳು ಜಮ್ಮು ಮತ್ತು ಕಾಶ್ಮೀರಕ್ಕೆ ಹೋಗುವ ಅಲ್ಲಿಯ ಖಾಯಂ ನಿವಾಸಿಗಳಿಗೆ ರಹದಾರಿ ಕೊಡುತ್ತಾರೆ.

ಇನಾಂ ರದ್ದಿನ ಮಸೂದೆ ಚರ್ಚೆ ಮುಂದಕ್ಕೆ

ಬೆಂಗಳೂರು ೨೧

ಮತಸಂಬಂಧವಾದ ಮತ್ತು ಧರ್ಮಾರ್ಥವಾದ ಇನಾಂತಿಗಳ ರದ್ದಿನ ಮಸೂದೆಯ ಬಗ್ಗೆ ಸಾರ್ವಜನಿಕರ ಅಭಿಪ್ರಾಯವನ್ನು ಪಡೆಯಲು ಸರ್ಕಾರವು ನಿರ್ಧರಿಸಿರುವುದರಿಂದ ಈ ಮಸೂದೆಯನ್ನು ಈಗ ನಡೆಯುತ್ತಿರುವ ಶಾಸನಸಭಾಧಿವೇಶನದಲ್ಲಿ ತರುವುದಿಲ್ಲವೆಂದು ತಿಳಿಯಬರುತ್ತದೆ.

ಜನಾಭಿಪ್ರಾಯ ಪಡೆದನಂತರ ಪುನಃ ಮಾರ್ಚಿಯಲ್ಲಿ ನಡೆಯುವ ಬಡ್ಜೆಟ್ ಅಧಿವೇಶನದಲ್ಲಿ ಅದು ಚರ್ಚೆಗೆ ಬರಬಹುದು.

ರೈಲ್ವೆ ಅಪಘಾತ ತನಿಖಾ ಸಮಿತಿ

ಭಾರತದ ರೈಲ್ವೆಯಲ್ಲಿ ಇತ್ತೀಚಿಗೆ ಉಂಟಾಗುತ್ತಿರುವ ಅಪಘಾತಗಳ ಬಗ್ಗೆ ತ್ವರಿತ ತನಿಖೆ ನಡೆಸಲು ಒಂದು ಸಮಿತಿಯನ್ನು ನೇಮಿಸಲಾಗಿದೆ. ೩ ತಿಂಗಳಿನಲ್ಲಿ ವರದಿಯನ್ನು ಒಪ್ಪಿಸಬೇಕೆಂದು ಸಮಿತಿಗೆ ಸೂಚನೆ ಕೊಡಲಾಗಿದೆ.

ಪ್ರಭಾ ಜಯಪ್ರದ 2ನೇ ವಾರ ★ 22-1-54 ರಿಂದ ದಿವಸಹಿ 3 ಆಟಗಳು
ಪತ್ತೆದಾರಿ ಚಿತ್ರ.
ರೂಪ್‌ನಗರ್ ಲಿಮಿಟೆಡ್‌ರವರ—
★ ಧುಅ ★
ಪಾತ್ರ:-ಉಷಾಕಿರಣ್. ಆಶಾಮಾಥೂರ್, ಎಂ.ರಾಜನ್, ಉಲ್ಹಾಸ್, ಜೀವನ್ ಮತ್ತು ಓಂಪ್ರಕಾಶ್.
ಸಂಗೀತ-ವಸಂತ್‌ದೇಸಾಯ್.
ಬೆಳಗಿನ ಪ್ರದರ್ಶನ:—22-1-54 ರಿಂದ 3 ದಿನಗಳು ನರ್ಗೀಸ್, ರಾಜ್‌ಕಪೂರ್ ನಟಿಸಿರುವ ಅಂಬರ್

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೨೦

೨೨-೧-೧೯೫೪ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕರಾಚಿ ಬಳಿ ಭೀಕರ ರೈಲ್ವೆ ಅಪಘಾತ

೨೮೦ ಮಂದಿ ಪ್ರಯಾಣಿಕರ ಮರಣ; ೫೦ ಜನರಿಗೆ ಗಾಯ

ಭಾರತ-ಪಾಕ್ ರೈಲ್ವೆ ಚರಿತ್ರೆಯಲ್ಲಿ ಇಂತಹ ಅಪಘಾತ ಎಂದೂ ನಡೆದಿಲ್ಲ

ಲಾಹೋರಿನಿಂದ ಕರಾಚಿಗೆ ಹೊರಟ ಪಾಕೀಸ್ತಾನ ಮೇಲ್ ರೈಲುಗಾಡಿಯು ನಿನ್ನೆಯದಿನ ಬೆಳಗ್ಗೆ ೬ ಗಂಟೆಯ ವೇಳೆಯಲ್ಲಿ ಕರಾಚಿಗೆ ೬೫ ಮೈಲಿ ದೂರದಲ್ಲಿ ಅಪಘಾತಕ್ಕೀಡಾಗಿ ೨೦೦ ಮಂದಿ ಪ್ರಯಾಣಿಕರು ಬೆಂಕಿಗಾಹುತಿಯಾಗಿ ಮಡಿದರೆಂದೂ ೫೦ ಜನಕ್ಕಿಂತ ಹೆಚ್ಚು ಜನರಿಗೆ ಗಾಯಗಳಾಗಿವೆಯೆಂದೂ ಅವರಲ್ಲಿ ೩೦ ಜನರಿಗೆ ತೀವ್ರಗಾಯಗಳಾಗಿ ಅವರನ್ನೆಲ್ಲಾ ಆಸ್ಪತ್ರೆಗೆ ದಾಖಲ್ಮಾಡಿರುವುದಾಗಿ ವರದಿಯಾಗಿದೆ.

ಅಪಘಾತ ವಿವರ ಈ ರೀತಿ ಇದೆ:—

೬೦ ಮೈಲಿ ವೇಗವಲ್ಲಿ ಹೋಗುತ್ತಿದ್ದ ಈ ಮೇಲು ಗಾಡಿಯು ಲೈನಿನಲ್ಲಿ ಕಂಬಿ ತಪ್ಪಿ ನಿಂತಿದ್ದ ಒಂದು ಗೂಡ್ಸ್ ರೈಲಿಗೆ ಡಿಕ್ಕಿ ಹೊಡೆಯಿತು. ಮೇಲು ರೈಲಿನ ಮೊದಲನೆ ೩ ಗಾಡಿಗಳು ನೆಲಕ್ಕೆ ಉರುಳಿದುವು. ಡಿಕ್ಕಿ ಹೊಡೆದ ರಭಸದಿಂದ ಗೂಡ್ಸ್‌ರೈಲಿನಲ್ಲಿದ್ದ ಪೆಟ್ರೋಲ್ ಟ್ಯಾಂಕಿಗೆ ಬೆಂಕಿ ಹತ್ತಿಕೊಂಡಿತು ಮೇಲ್ ರೈಲಿನ ಮೇಲೂ ಪೆಟ್ರೋಲ್ ಸುರಿದು ಕೂಡಲೇ ಅವೂ ಹತ್ತಿಕೊಂಡವು ಒಂದೇ ಪ್ರಮಾಣದಲ್ಲಿ ಉರಿಯುತ್ತಿದ್ದುದರಿಂದ ಅವುಗಳ ಹತ್ತಿರ ಸಹ ಹೋಗಲು ಯಾರಿಗೂ ಆಗಲಿಲ್ಲ. ಅವುಗಳಲ್ಲಿದ್ದ ಪ್ರಯಾಣಿಕರು ಬಹುಮಂದಿ ಹೊರಕ್ಕೆ ಬರಲು ಆಗಲಿಲ್ಲ. ಎಲ್ಲರೂ ಬೆಂಕಿಗೆ ಸಿಕ್ಕಿಕೊಂಡು ಅಲ್ಲಿಯೇ ಮೃತರಾದರು ಸತ್ತವರ ಸಂಖ್ಯೆ ಇನ್ನೂ ನಿರ್ಧಿಷ್ಟವಾಗಿ ತಿಳಿದುಬಂದಿಲ್ಲ. ಸುಮಾರು ೨೦೦ ಮಂದಿ ಯಾದರೂ ಸತ್ತಿರಬಹುದೆಂದು ಊಹಿಸಲಾಗಿದೆ. ಶವಗಳನ್ನು ತೆಗೆಯುವ ಪ್ರಯತ್ನಗಳು ಇನ್ನೂ ನಡೆಯುತ್ತಿವೆ

ಸತ್ತವರಲ್ಲಿ ಹೆಂಗಸರು ಮತ್ತು ಮಕ್ಕಳ ಸಂಖ್ಯೆಯೇ ಹೆಚ್ಚಾಗಿದೆಯೆಂದು ಹೇಳಲಾಗುತ್ತಿದೆ

ಗಂಡಸರು,ಹೆಂಗಸರು ಮತ್ತು ಮಕ್ಕಳು ಬೆಂಕಿ ಜ್ವಾಲೆಯಲ್ಲಿ ಸಿಕ್ಕಿ ಬೇಯುತ್ತಲಿದ್ದುದನ್ನು ಅನೇಕರು ಸ್ವಂತಃ ಕಣ್ಣುಗಳಿಂದ ನೋಡುತ್ತಾ ಅಸಹಾಯಕರಾಗಿ ನಿಲ್ಲಬೇಕಾದ ಹೃದಯ ಭೇದಕ ದೃಶ್ಯ ಕಂಡುಬಂತು. ಕರಾಚಿ ಪತ್ರಿಕೆಯ ವರದಿಗಾರರೊಬ್ಬರು ಅದೇ ರೈಲಿನಲ್ಲಿ ತಮ್ಮ ಹೆಂಡತಿ, ತಾಯಿ ಮತ್ತು ನಾಲ್ಕು ಮಕ್ಕಳು ಬೆಂಕಿಗೆ ಆಹುತಿಯಾಗಿ ಇಡೀ ಸಂಸಾರವನ್ನೇ ಕಳೆದುಕೊಂಡ ದುರಂತವನ್ನು ಅವರೇ ವರ್ಣಿಸಿದ್ದಾರೆ.

ಅಪಘಾತವಾದ ಸ್ವಲ್ಪಹೊತ್ತಿನೊಳಗೆ ಬೇರೆ ಇಂಜನ್ನು ಬಂದು ತೊಂದರೆಗೊಳಗಾಗದ ಇತರ ಪ್ರಯಾಣೀಕರನ್ನು ಉಳಿದ ಗಾಡಿಗಳಲ್ಲಿ ಹಿಂದಕ್ಕೆ ಕರೆದೊಯ್ಯಲಾಯಿತು. ಈ ಮಾರ್ಗದಲ್ಲಿ ರೈಲ್ವೆ ಸಂಚಾರ ಪೂರ್ತ ನಿಂತುಹೋಗಿದೆ.

ಈ ರೈಲಿನ ಕೊನೆಯ ಸ್ಪೆಷಲ್ ಸಲೂನಲ್ಲಿ ಪಾಕ್ ವಿದೇಶಾಂಗ ಸಚಿವ ಜಫರುಲ್ಲಾಖಾನರವರು ಇದ್ದರು ಅವರಿಗೆ ಯಾವ ತೊಂದರೆಯೂ ಆಗದೆ ಸುರಕ್ಷಿತವಾಗಿ ಕರಾಚಿಯನ್ನು ಸೇರಿದರೆಂದು ಗೊತ್ತಾಗಿದೆ.

ಇಂತಹ ಭಾರಿ ಅಪಘಾತ ಭಾರತ-ಪಾಕ್ ಚರಿತ್ರೆಯಲ್ಲಿ ಎಂದೂ ನಡೆದಿಲ್ಲ- ಎಂದು ಹೇಳಲಾಗಿದೆ.

ನಗರದಲ್ಲಿ ಗೃಹಕೈಗಾರಿಕಾ ಸಹಕಾರ ಸಂಘ

ಮೈಸೂರು ೨೨

ದೇಶದಲ್ಲಿ ಗೃಹಕೈಗಾರಿಕೆಗಳನ್ನು ಅಭಿವೃದ್ಧಿ ತರಲು ನಗರದಲ್ಲಿ ಒಂದು ಸಹಕಾರ ಸಂಘವನ್ನು ಸ್ಥಾಪಿಸಬೇಕೆಂದು ಕಳೆದ ಭಾನುವಾರ ಇಲ್ಲಿ ನಡೆದ ಪ್ರೋತ್ಸಾಹಿಗಳ ಸಭೆಯಲ್ಲಿ ತೀರ್ಮಾನಿಸಲಾಯಿತು. ಕಾಳಿಕಾಂಬಾ ಬ್ಯಾಂಕಿಂಗ್ ಮತ್ತು ಕೈಗಾರಿಕಾ ಸಹಕಾರ ಸಂಘ ಎಂಬುದನ್ನು ಕೂಡಲೇ ಸ್ಥಾಪಿಸಲು ಅದಕ್ಕೆ ಸಂಬಂಧಪಟ್ಟ ಕ್ರಮ ಕೈಗೊಳ್ಳಲು ಶ್ರೀಗಳಾದ ಎಂ. ಸಿ. ಬೆಟ್ಟಾಚಾರ್ಯ, ಕರಿಯಪ್ಪಾಚಾರ್ಯ ಮುಂತಾದ ೧೧ ಮಂದಿಯ ಒಂದು ತಾತ್ಕಾಲಿಕ ಸಮಿತಿಯನ್ನು ರಚಿಸಲಾಯಿತು.

ಭಾರತ-ಸಿಲೋನ್ ಒಪ್ಪಂದಕ್ಕೆ ವಿರೋಧ

ಸಿಂಹಳದ್ವೀಪದಲ್ಲಿರುವ ಭಾರತೀಯರ ಪೌರಹಕ್ಕಿನ ಸಂಬಂಧದಲ್ಲಿ ಭಾರತ ಮತ್ತು ಸಿಲೋನ್ ಪ್ರಧಾನಿಗಳ ನಡುವೆ ಆಗಿರುವ ಒಪ್ಪಂದಕ್ಕೆ ಭಾರತ ಸರ್ಕಾರವು ಮನ್ನಣೆ ಕೊಡಬಾರದೆಂದು ಪ್ರಧಾನಿ ನೆಹರೂರವರಿಗೆ ಸಿಲೋನಿನ ಭಾರತೀಯ ಕಾಂಗ್ರೆಸ್ ಸಂಸ್ಥೆ ತಂತಿ ಕಳುಹಿಸಿದೆ.

ಈ ಒಪ್ಪಂದದಿಂದ ಅಲ್ಲಿರುವ ಭಾರತೀಯರಿಗೆ ಯಾವ ಪ್ರಯೋಜನವೂ ಆಗುವುದಿಲ್ಲವೆಂದು ತಿಳಿಸಲಾಗಿದೆ.

ನೆಹರೂರವರಿಗೆ ೫ ಸಾವಿರ ಎಕರೆ ಭೂದಾನ

ತಿರುವಾಂಕೂರು ಕೊಚ್ಚಿಯಲ್ಲಿ ಚುನಾವಣಾ ಪ್ರಚಾರಕ್ಕಾಗಿ ಮುಂದಿನ ತಿಂಗಳು ಭೇಟಿಕೊಡಲಿರುವ ಪ್ರಧಾನಿ ನೆಹರೂರವರಿಗೆ ಅಲ್ಲಿನ ಭೂದಾನ ಯಜ್ಞ ಸಮಿತಿಯವರು ೫ ಸಾವಿರ ಎಕರೆ ಜಮೀನನ್ನು ಕೊಡಲು ನಿರ್ಧರಿಸಿದ್ದಾರೆ.

ಸಿಂಹಳಕ್ಕೆ ಭಾರತದ ನೆರವು ಬೇಕು

ಭಾರತದಲ್ಲಿರುವ ವಿಶ್ವವಿದ್ಯಾನಿಲಯಗಳಲ್ಲಿ ಮತ್ತು ಕೈಗಾರಿಕಾ ಸಂಸ್ಥೆಗಳಲ್ಲಿ ಸಿಂಹಳ ವಿದ್ಯಾರ್ಥಿಗಳು ತರಪೇತು ಪಡೆಯಲು ಅನುಕೂಲಗಳು ಇನ್ನೂ ಹೆಚ್ಚಾಗಿ ಬೇಕಾಗಿದೆ. ಸಿಂಹಳ ಪ್ರಗತಿಗೆ ಭಾರತದ ನೆರವು ನಾನಾರೀತಿಯಲ್ಲಿ ಬೇಕಾಗುತ್ತದೆ ಎಂದು ಅಲ್ಲಿಯ ಪ್ರಧಾನಿ ಸರ್ ಜಾನ್ ಕೊಟೇಲವಾಲರವರು ಹೇಳಿದ್ದಾರೆ.

ಭಿಕ್ಷುಕ ನಿರೋಧ ಕ್ರಮ

ಮೈಸೂರು ಸಂಸ್ಥಾನದಲ್ಲಿ ೧೯೫೧ ರ ಜನಗಣತಿ ಮೇರೆ ೧೫೫೭೮ ಮಂದಿ ಭಿಕ್ಷುಕರಿರುವರು. ಕಾಲೋನಿಗಳ ಸ್ಥಾಪನೆಯಿಂದ ಈ ಸಮಸ್ಯೆ ಪರಿಹಾರವಾಗುವುದಿಲ್ಲ. ಇನ್ನೂ ಹೊಸ ಕ್ರಮಗಳನ್ನು ಸೂಚಿಸಲು ಉಪಸಮಿತಿಯನ್ನು ರಚಿಸಲಾಗಿದೆ. ಭಿಕ್ಷುಕ ನಿರೋಧ ಶಾಸನವನ್ನು ಸಂಸ್ಥಾನದಾದ್ಯಂತ ಅನ್ವಯಿಸುವ ಯೋಚನೆ ಸರಕಾರಕ್ಕೆ ಇದೆ.ಎಂದು ರೆವಿನ್ಯೂಸಚಿವರು ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ಸಂಸ್ಥಾನಗಳ ಹೈಪವರ್ ಸಮಿತಿ

ಭಾರತದ ಸಂಸ್ಥಾನಗಳ ಪುನರ್ ವಿಂಗಡನಾ ಹೈಪವರ್ ಸಮಿತಿಯು ಮುಂದಿನ ತಿಂಗಳಿನ ಮಧ್ಯಭಾಗದಿಂದ ಕೆಲಸ ಪ್ರಾರಂಭಿಸುವುದೆಂದೂ, ಅದಕ್ಕೆ ಕೇಂದ್ರ ವಾರ್ತಾ ಶಾಖೆಯ ಕಾರ್ಯದರ್ಶಿ ಶ್ರೀ ಪಿ. ಸಿ. ಚೌಧ್ರಿಯವರನ್ನು ಕಾರ್ಯದರ್ಶಿಯನ್ನಾಗಿ ನೇಮಿಸಲಾಗುವುದೆಂದೂ ತಿಳಿದುಬಂದಿದೆ.

ಮಸ್ತಕಾಭಿಷೇಕ

ಕಳೆದ ಮಾರ್ಚಿ ತಿಂಗಳಿನಲ್ಲಿ ಶ್ರವಣಬೆಳಗೊಳದ ಮಹಾ ಮಸ್ತಕಾಭಿಷೇಕದ ಉತ್ಸವದಿಂದ ೨,೪೩,೬೧೫ ರೂ. ಗಳು ಬಂದು, ೨,೩೫,೨೯೦ ರೂಪಾಯಿಗಳು ಖರ್ಚಾಯಿತೆಂದು ತಿಳಿಸಲಾಯಿತು.

ಶಾಸನಸಭಾಧಿವೇಶನ ಮುಕ್ತಾಯ

ಸ್ವ. ಸು.] ಬೆಂಗಳೂರು ೨೨

ಈದಿನ ಶಾಸನ ಸಭಾಧಿವೇಶನದಲ್ಲಿ ಶ್ರೀ ನಾಗಯ್ಯರೆಡ್ಡಿಯವರು 'ಬ್ಲಿಟ್ಸ್' ಪತ್ರಿಕೆ ಜಾಹಿರಾತು ಕೊಟ್ಟಿದ್ದ ವಿಷಯವನ್ನು ಪುನಃ ಪ್ರಸ್ತಾಪಿಸಿದಾಗ ಕೈಗಾರಿಕಾ ಸಚಿವ ಶ್ರೀ ಸಿದ್ಧವೀರಪ್ಪನವರು ಉತ್ತರ ಕೊಡುತ್ತಾ, ೧೯೪೯ ರಿಂದ ಈ ಪತ್ರಿಕೆಗೆ ಜಾಹಿರಾತುಗಳನ್ನು ಕೊಡಲಾಗುತ್ತಿದೆಯೆಂದೂ ಸಂಸ್ಥಾನದಲ್ಲಿರುವ ಕೈಗಾರಿಕೆಗಳು ಹೆಚ್ಚಾಗಿ ಪ್ರಚಾರವಾಗುವುದಕ್ಕಾಗಿ ಅವುಗಳನ್ನು ಕೊಡಲಾಯಿತೆಂದು ಹೇಳಿದರು.

ಶಾಸನಸಭೆಯ ರೂಲ್ಸ್‌ಮತ್ತು ಪ್ರೊಸೀಜರ್ ಸಮಿತಿಗೆ ಶ್ರೀಗಳಾದ ಕೆ. ಹನುಮಂತಯ್ಯ, ಎಂ. ವಿ. ರಾಮರಾವ್, ಟಿ. ಮರಿಯಪ್ಪ, ಹುಚ್ಚಮಾಸ್ತಿಗೌಡ, ಎಲ್. ಸಿದ್ದಪ್ಪ, ಜೆ. ಎ. ಇಮಾಂ ಮತ್ತು ಹೆಚ್. ಎಸ್. ರುದ್ರಪ್ಪನವರು ಚುನಾಯಿತರಾದರು ಉಪಾಧ್ಯಕ್ಷರನ್ನು ಅಧ್ಯಕ್ಷರು ಸಭೆಗೆ ಸದಸ್ಯರನ್ನಾಗಿ ನಾಮಕರಣ ಮಾಡಿದರು.

ಪಾನನಿರೋಧವನ್ನು ಸಂಸ್ಥಾನಾದ್ಯಂತ ಜಾರಿಗೆ ತರಬೇಕೆಂದು ಶ್ರೀಮತಿ ಸುಬ್ಬಮ್ಮನವರು ಮಾಡಿದ ಒಂದು ಖಾಸಗಿ ನಿರ್ಣಯವು ಚರ್ಚೆಗೆ ಬಂದಾಗ ಸಚಿವರು ಮಾತನಾಡುತ್ತಾ ಸರ್ಕಾರದ ನೀತಿಯು ಇದೇ ಆಗಿದೆ. ಆದರೆ ಇದರಿಂದ ಖೋತಾ ಆಗುವ ಹಣವನ್ನು ಯಾವರೀತಿ ಉತ್ಪತ್ತಿಯಾಗುವಂತೆ ಮಾಡಬೇಕೆಂಬುದನ್ನು ಸರಕಾರವು ಪರಿಶೀಲಿಸುತ್ತಲಿದೆ-ಎಂದು ತಿಳಿಸಿದಾಗ ನಿರ್ಣಯವನ್ನು ಸೂಚಕರು ಹಿಂದಕ್ಕೆ ತೆಗೆದುಕೊಂಡರು.

ಶಾಸನಸಭಾಧಿವೇಶನವು ಈದಿನ ಮುಕ್ತಾಯವಾಯಿತು

ವಿದ್ಯಾರ್ಥಿಗಳು ಚಳುವಳಿ ನಡೆಸಕೂಡದು

ವಿದ್ಯಾರ್ಥಿಗಳು ಸ್ವಾತಂತ್ರ್ಯ ಪೂರ್ವ ಚಳುವಳಿಯ ಮನೋಭಾವನೆಯನ್ನು ತೊರೆದು ರಚನಾತ್ಮಕ ಕಾರ್ಯದಲ್ಲಿ ನಿರತರಾಗಬೇಕೆಂದೂ, ವಿದ್ಯಾರ್ಥಿಗಳು ವ್ಯಾಸಂಗದ ಸಮಯದಲ್ಲಿ ಚಳುವಳಿ ನಡೆಸಕೂಡದು ಎಂದೂ ಕೇಂದ್ರ ವಾರ್ತಾಸಚಿವ ಶ್ರೀ ಕೇಸ್ಕರ್‌ರವರು ಕಾಂಗ್ರೆಸ್‌ನಗರದಲ್ಲಿ ನಿನ್ನೆ ಸಮಾವೇಶಗೊಂಡ ಅಖಿಲಭಾರತ ಯುವಕ ಸಮ್ಮೇಳನದಲ್ಲಿ ತಿಳಿಸಿದ್ದಾರೆ.

ಕಮ್ಯೂನಿಸ್ಟರ ಆಕ್ರಮಣ ತಡೆಗಟ್ಟಲು ಏಷ್ಯಾಕ್ಕೆ ಅಮೆರಿಕಾ ನೆರವು

ಅಮೆರಿಕಾ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷ ಐಸೆನ್‌ಹೋವರ್ ಹೇಳಿಕೆ

ಅಮೆರಿಕಾ ಸಂಯುಕ್ತ ಸಂಸ್ಥಾನವು ವಿಶ್ವದಲ್ಲಿ ಶಾಂತಿಸ್ಥಾಪನೆಗಾಗಿ ತನ್ನ ಎಲ್ಲಾ ಪ್ರಯತ್ನಗಳನ್ನು ಮಾಡುತ್ತದೆ. ಏಷ್ಯಾ ಖಂಡದ ದೇಶಗಳಲ್ಲಿ ಕಮ್ಯೂನಿಸ್ಟರ ಆಕ್ರಮಣವನ್ನು ತಡೆಗಟ್ಟಲು ಆ ರಾಷ್ಟ್ರಗಳಿಗೆ ಸೂಕ್ತ ಸಹಾಯವನ್ನು ಅಮೆರಿಕಾವು ಮಾಡುತ್ತದೆ ಎಂದು ಅಲ್ಲಿಯ ಅಧ್ಯಕ್ಷ ಐಸೆನ್‌ಹೋವರ್‌ರವರು ಅಮೆರಿಕಾ ಕಾಂಗ್ರೆಸ್ಸಿನ ೧೯೫೪-೫೫ ನೇ ಸಾಲಿನ ಬಡ್ಜೆಟ್ ಅಧಿವೇಶನದಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಕಾಂಗ್ರೆಸ್ ನಗರದಲ್ಲಿ ಭಾರಿಮಳೆ ಅವಾಂತರ

ಅಖಿಲಭಾರತ ಕಾಂಗ್ರೆಸ್ ಅಧಿವೇಶನಕ್ಕಾಗಿ ನಿರ್ಮಿತವಾಗಿರುವ ಕಲ್ಯಾಣಿ ನಗರವು ನಿನ್ನೆ ಭಾರಿಮಳೆ ಮತ್ತು ಬಿರುಗಾಳಿ ಹೊಡೆತಕ್ಕೆ ಸಿಕ್ಕಿ ವಿಶೇಷ ನಷ್ಟವುಂಟಾಯಿತು. ಕಾರ್ಯಕಾರೀ ಸಮಿತಿಯ ಭವ್ಯವಾದ ಚಪ್ಪರವು ಹಾಳಾಯಿತು. ಬಹಿರಂಗಾಧಿವೇಶನದ ಮಹಾವೇದಿಕೆಗೂ ಜಖಂ ಆಯಿತು. ವಿಷಯ ನಿಯಾಮಕ ಸಮಿತಿಯ ಚಪ್ಪರದ ಮೇಚ್ಛಾವಣಿ ಹಾರಿಹೋಯಿತು. ಪ್ರತಿನಿಧಿಗಳ ೨ ಗುಡಾರಗಳು ಹಾಳಾದವು ವಸ್ತುಪ್ರದರ್ಶನದ ಆವರಣಕ್ಕೂ ವಿಶೇಷ ಜಖಂ ಆಗಿದೆ. ಅನೇಕ ಸ್ಟಾಲುಗಳಿಗೆ ನಷ್ಟ ಉಂಟಾಗಿದೆ.

ನಿನ್ನೆ ಬೆಳಗ್ಗೆ ಭಾರಿಮಳೆ ಬೀಳುತ್ತಿದ್ದರೂ ಕಾಂಗ್ರೆಸ್ ಅಧ್ಯಕ್ಷ ನೆಹರೂರವರು ಕಾಂಗ್ರೆಸ್ ಧ್ವಜಾರೋಹಣ ಮಾಡಿ ರಾಷ್ಟ್ರದ ಐಕ್ಯತೆಯ ಆಗತ್ಯವನ್ನು ಒತ್ತಿ ಹೇಳಿದರು. ಸಹಸ್ರಾರು ಜನರು ನೆರೆದಿದ್ದರು.

ಖಾನ್ ಸಹೋದರರ ಬಿಡುಗಡೆ ಬಗ್ಗೆ ಸಂತೋಷ

ಖಾನ್ ಅಬ್ದುಲ್ ಗಫಾರ್‌ಖಾನ್, ಖಾನ್ ಸಾಹೇಬ್ ಮತ್ತು ಸಮತ್‌ಖಾನರವರನ್ನು ಪಾಕೀಸ್ತಾನ ಸರ್ಕಾರವು ಬಿಡುಗಡೆ ಮಾಡಿದ್ದಕ್ಕೆ ಅಖಿಲಭಾರತ ಕಾಂಗ್ರೆಸ್ ವಿಷಯ ನಿಯಾಮಕ ಸಮಿತಿಯು ತನ್ನ ಸಂತೋಷವನ್ನು ವ್ಯಕ್ತಪಡಿಸಿ ನಿನ್ನೆಯದಿನ ಒಂದು ನಿರ್ಣಯ ಮಾಡಿದೆ.

ಪುರಸಭಾ ನೌಕರರಿಗೆ ವಸತಿ ನೆರವು

ಹೈದರಾಬಾದ್‌ನಲ್ಲಿ ಪುರಸಭಾ ನೌಕರರಿಗೆ ವಸತಿ ನಿರ್ಮಾಣಕ್ಕಾಗಿ ಅಲ್ಲಿಯ ಸರ್ಕಾರವು ೩ ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿದೆ.

ನಗರಾರೋಗ್ಯ

ಮೈಸೂರು ೨೨

ಇದೇ ಮಾಹೆ ೧೫ನೇ ತಾರೀಖಿಗೆ ಮುಕ್ತಾಯವಾದ ಆರೋಗ್ಯ ವರದಿಯ ಪ್ರಕಾರ ನಗರದಲ್ಲಿ ಪ್ಲೇಗು, ಕಾಲರ ಮತ್ತು ಸಿಡುಬು ರೋಗಗಳು ಇರಲಿಲ್ಲ. ಮುಂಜಾಗ್ರತೆಗಾಗಿ ೧೧೩೧ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಯಿತು. ೬೫ ಕಾಲರಾ ನಿರೋಧ ಇನಾಕ್ಯುಲೇಷನ್, ೧೬೮ ಪ್ರಾಥಮಿಕ ಮತ್ತು ೩೬೨ ರಿ ವ್ಯಾಕ್ಸಿನೇಷನ್ ಹಾಕಲಾಯಿತು. ಡಿಫ್ತೀರಿಯಾ ರೋಗ ೬ ಜನಕ್ಕೆ ತಗುಲಿ ಒಂದು ಮರಣವಾಯಿತು. ಈ ಪಕ್ಷದಲ್ಲಿ ೧೩೬೩ ಡಿಫ್ತೀರಿಯ ನಿರೋಧ ಇನಾಕ್ಯುಲೇಷನ್ ಮಾಡಲಾಯಿತು.

ರೈತರಿಗಾಗಿ ಜಿಲ್ಲಾ ಬ್ಯಾಂಕುಗಳು

ಬೆಂಗಳೂರು ೨೨

ಶಿವಮೊಗ್ಗ, ಹಾಸನ ಮತ್ತು ಮಂಡ್ಯಾಗಳಲ್ಲಿರುವಂತೆ ಜಿಲ್ಲಾ ಬ್ಯಾಂಕುಗಳನ್ನು ಇನ್ನೂ ೬ ಪ್ರದೇಶಗಳಲ್ಲಿ ಸ್ಥಾಪಿಸಿ, ರೈತರಿಗೆ ಉಪಯುಕ್ತವಾಗುವಂತೆ ಮಾಡಲಾಗುತ್ತದೆಯೆಂದು ವ್ಯವಸಾಯ ಸಚಿವರು ಶಾಸನಸಭೆಯಲ್ಲಿ ತಿಳಿಸಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೧—೧—೧೯೫೪

ಪಲ್ಲ	ರೂ. ಅ	ರೂ. ಅ
ಕಡಲೇಕಾಯಿ	೧೮—೧೦	೨೩—೧೦
ಎಳ್ಳು	೬೧—	೭೫—೨
ಹರಳು	೩೫—	೪೧—೨
ಹೊಂಗೆಬೀಜ	೧೮—	೧೮—೧೪
ಹುಚ್ಚೆಳ್ಳು	೩೯—೧೪	೪೫—೪
ಹುರುಳಿ	೩೦—	೩೨—೮
ಉದ್ದು	—	—
ಹೆಸರು	೩೯—೧೪	೪೪—೪
ಅಲಸಂಡೆ	೩೦—೨	೪೭—೨
ಅವರೆ	—	—
ಕೊತ್ತಂಬರಿ	೨೬—೬	೩೦—೮
ಕಡಲೆ	೬೩—	—
ತೊಗರಿ	೨೩—೧೦	೨೭—
ಹುಣಸೆಹಣ್ಣು	೪—೮	೧೧—೬
ಮೆಣಸಿನಕಾಯಿ	೧೯—೧೦	೩೬—೧೨
ಸೀಗೆಕಾಯಿ	೪—	೪—೧೫
ಬೆಲ್ಲ	—	—
ತೆಂಗಿನಕಾಯಿ	೧೬೦—	೨೯೬—

ನೂತನ ವಿದ್ಯುತ್ಕೇಂದ್ರ ಸ್ಥಾಪನೆ

ಶಿಂಷಾದ ಬಳಿ ೭ ಕೋಟಿ ರೂ. ನೂತನ ಕೇಂದ್ರ

ಬೆಂಗಳೂರು ೨೨

ಶಿಂಷಾ ವಿದ್ಯುತ್ಕೇಂದ್ರದ ಬಡಾವಣೆ ಮತ್ತು ಇನ್ನೊಂದು ವಿದ್ಯುತ್ಕೇಂದ್ರವನ್ನು ಸ್ಥಾಪಿಸುವ ವಿಷಯದಲ್ಲಿ ಮೈಸೂರು ಸರ್ಕಾರವು ತನ್ನ ಪರಿಶೋಧನೆಯನ್ನು ಪೂರೈಸಿದೆ. ಈ ನೂತನ ಕೇಂದ್ರಕ್ಕೆ ೭ ಕೋಟಿ ರೂಪಾಯಿಗಳ ವೆಚ್ಚವಾಗುತ್ತದೆ ಇದರಿಂದ ೪೫೦೦೦ ಕಿಲೋವಾಟ್ಸ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ತಯಾರಿಸಲು ಸಾಧ್ಯವಾಗುತ್ತದೆ. ಈ ವಿಷಯವನ್ನು ವ್ಯವಸಾಯ ಸಚಿವ ಡಾ|| ನಾಗನಗೌಡರು ನಿನ್ನೆಯದಿನ ಶಾಸನಸಭೆಯಲ್ಲಿ ತಿಳಿಸಿದರು.

ಖಾದಿ ಸಮಿತಿ ಪುನರ್ರಚನೆ

ಬೆಂಗಳೂರು ೨೨

ಸಂಸ್ಥಾನದಲ್ಲಿ ಖಾದಿ ಅಭಿವೃದ್ಧಿ ಬಗ್ಗೆ ಕೆಲಸವು ತೃಪ್ತಿಕರವಾಗಿ ನಡೆಯುತ್ತಿಲ್ಲ. ಸರ್ಕಾರದ ಆಡಳಿತದಲ್ಲಿ ೧೦, ಜಿಲ್ಲಾ ಬೋರ್ಡುಗಳ ಆಡಳಿತದಲ್ಲಿ ೧೨ ಮತ್ತು ಇತರ ಸಂಸ್ಥೆಗಳ ೩ ಖಾದಿ ಕೇಂದ್ರಗಳು ಸಂಸ್ಥಾನದಲ್ಲಿವೆ. ಜಿಲ್ಲಾಬೋರ್ಡುಗಳ ಆಡಳಿತದಲ್ಲಿರುವ ಖಾದಿ ಕೇಂದ್ರಗಳನ್ನು ಸರ್ಕಾರವು ವಹಿಸಿಕೊಳ್ಳುವ ವಿಷಯ ಪರಿಶೀಲನೆಯಲ್ಲಿದೆ. ಈಗಿರುವ ಖಾದಿ ಸಮಿತಿಯನ್ನು ಇನ್ನೂ ಒಂದುವಾರದೊಳಗೆ ಪುನರ್ರಚಿಸಲಾಗುತ್ತದೆ. ಖಾದಿ ಕೈಗಾರಿಕಾಭಿವೃದ್ಧಿಗೆ ಒಂದುಲಕ್ಷ ರೂಪಾಯಿಗಳ ಆರ್ಥಿಕ ನೆರವು ನೀಡಲಾಗಿದೆ-ಎಂದು ಕೈಗಾರಿಕಾ ಸಚಿವರು ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ಸಚಿವರಿಗೆ ಶಾಸನಸಭಾ ಅಧ್ಯಕ್ಷರ ಸೂಚನೆ

ಬೆಂಗಳೂರು ೨೨

ವಿಧಾನ ಪರಿಷತ್ತಿನ ಕೆಲಸವು ಇತರ ಎಲ್ಲಾ ಕೆಲಸಗಳಿಗಿಂತ ಬಹಳ ಪ್ರಾಮುಖ್ಯವಾದುದು. ಇದನ್ನು ಸಚಿವರು ಮನಸ್ಸಿನಲ್ಲಿಟ್ಟುಕೊಳ್ಳಬೇಕು-ಎಂದು ವಿಧಾನ ಪರಿಷತ್ತಿನ ಅಧ್ಯಕ್ಷ ಶ್ರೀ ಕೆ. ಟಿ. ಭಾಷ್ಯಂರವರು ನಿನ್ನೆ ಸಭೆಯಲ್ಲಿ ಸಚಿವರೊಬ್ಬರು ಹಾಜರಿಲ್ಲದುದಕ್ಕೆ ಟೀಕಿಸುತ್ತಾ ಹೇಳಿದರು.

ಆಲೂಗೆಡ್ಡೆ ಸಂಶೋಧನಾ ಕೇಂದ್ರ

ನಂದೀಬೆಟ್ಟದಲ್ಲಿ ಒಂದು ಆಲೂಗೆಡ್ಡೆ ಸಂಶೋಧನಾಲಯವನ್ನು ಕೇಂದ್ರ ಸರ್ಕಾರವು ಸ್ಥಾಪಿಸಲಿದೆಯೆಂದು ಕೇಂದ್ರ ಆಹಾರ ಉಪಸಚಿವ ಶ್ರೀ ಎಂ. ವಿ. ಕೃಷ್ಣಪ್ಪನವರು ತಿಳಿಸಿದ್ದಾರೆ.

ಬಳ್ಳಾರಿ ಜೈಲಿನಲ್ಲಿ ಆಂಧ್ರ ಖೈದಿಗಳು

ಬಳ್ಳಾರಿ ಜೈಲಿನಲ್ಲಿ ಆಂಧ್ರಪ್ರಾಂತ್ಯದ ಖೈದಿಗಳನ್ನಿಡುವ ವಿಷಯದಲ್ಲಿ ಮೈಸೂರು ಮತ್ತು ಆಂಧ್ರ ಸರ್ಕಾರಗಳ ಪ್ರತಿನಿಧಿಗಳ ಸಭೆಯೊಂದು ಇದೇ ೨೫ ನೇ ತಾರೀಖು ನಡೆಯಲಿದೆ.

ಮುನ್ಸೀಫರುಗಳ ಆಯ್ಕೆ

ಬೆಂಗಳೂರು ೨೨

ಮೈಸೂರು ಸಂಸ್ಥಾನದಲ್ಲಿ ಮುನ್ಸೀಫರುಗಳ ನೇಮಕ ಮತ್ತು ಬಡ್ತಿ ಬಗ್ಗೆ ರಾಜಪ್ರಮುಖರು ಒಂದು ಆಜ್ಞೆಯನ್ನು ಹೊರಡಿಸಿ, ಬರುವ ಫೆಬ್ರವರಿ ತಿಂಗಳಿನಿಂದ ನೂತನ ನಿಯಮವು ಜಾರಿಗೆ ಬರುವುದೆಂದು ತಿಳಿಸಿದ್ದಾರೆ. ಇದರ ಪ್ರಕಾರ ಪಬ್ಲಿಕ್ ಸರ್ವಿಸ್ ಕಮೀಷನನು ಪರೀಕ್ಷೆ ನಡೆಸಿ ಆಯ್ಕೆ ಮಾಡುವರು. ಮುನ್ಸೀಫ್ ಪರೀಕ್ಷೆಗೆ ಕೂಡುವವರು ೪ ವರ್ಷಕಾಲ ಲಾಯರಾಗಿರಬೇಕು. ನಿಮ್ನ ವರ್ಗದವರಿಗೆ ಶೇಕಡ $16\frac{2}{3}$ ಭಾಗವನ್ನು ಮೀಸಲಾಗಿಡಲಾಗುವುದು.

ಗ್ರಾಮಕೈಗಾರಿಕಾಭಿವೃದ್ಧಿ ಕಾರ್ಯ ತೃಪ್ತಿಕರ

ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವ ಯೋಜನೆಗಳು ತೃಪ್ತಿಕರವಾಗಿ ನಡೆಯುತ್ತಿವೆ. ಮುಂದಿನವರ್ಷದಿಂದ ಸಂಸ್ಥಾನದಾದ್ಯಂತ ವಿಶ್ವೇಶ್ವರಯ್ಯನವರ ಗ್ರಾಮಾಂತರ ಕೈಗಾರಿಕಾ ಯೋಜನೆಯನ್ನು ಜಾರಿಗೆ ತರಲಾಗುವುದು-ಎಂದು ಕೈಗಾರಿಕಾ ಸಚಿವರು ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ರಸ್ತೆಯೋಜನೆ

ಮೈಸೂರು ಸಂಸ್ಥಾನದ ಸುಮಾರು ೩೨೦ ಮೈಲಿಗಳಷ್ಟನ್ನು ರಾಷ್ಟ್ರೀಯ ರಸ್ತೆಗಳ ಯೋಜನೆಯಲ್ಲಿ ಸೇರಿಸಲು ಕೇಂದ್ರ ಸರ್ಕಾರವು ಒಪ್ಪಿರುವುದರಿಂದ ರಸ್ತೆಗಳು ಬಹಳ ಮಟ್ಟಿಗೆ ಉತ್ತಮಗೊಳ್ಳುವುದೆಂದು ಶಾಸನಸಭೆಯಲ್ಲಿ ತಿಳಿಸಲಾಗಿದೆ.

ಬೇಕಾಗಿದ್ದಾರೆ

ಫೋಟೋ ಸ್ಟುಡಿಯೋವಿನಲ್ಲಿ ನುರಿತ ಡಾರ್ಕ್‌ರೂಮ್ ಕೆಲಸ ಮಾಡುವವರು ಬೇಕಾಗಿದ್ದಾರೆ. ಕೂಡಲೇ ವಿಚಾರಿಸಿ.

ಕಮಲ್ ಸ್ಟುಡಿಯೋ
ದೊಡ್ಡಗಡಿಯಾರದ ಚೌಕ,
ಮೈಸೂರು.

ರಣಜಿತ್

21-1-54 ರಿಂದ ಆಮೋಘ ಪ್ರಾರಂಭ
ರಣಜಿತ್‌ರವರ:....

○ ಪಾಪಿ ○

ಪಾತ್ರ:—ನರ್ಗೀಸ್, ರಾಜಕಪೂರ್
[ದ್ವಂದ್ವ ಪಾತ್ರ]

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋ| ೫೭೪
ರಿಜಿಸ್ಟರ್
ನಂ. ಎಂ. ೩೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೨೧

೨೩-೧-೧೯೫೪ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭೂದಾನ ಪಕ್ಷಾಚರಣೆ

ಮೈಸೂರು ೨೩

ಇದೇ ೩೦ ನೇ ತಾರೀಖು ಸರ್ವೋದಯ ದಿನದಿಂದ ೧೫ದಿನಗಳಕಾಲ ಮೈಸೂರು ಪ್ರಾಂತೀಯ ಭೂದಾನ ಸಮಿತಿಯ ಮತ್ತು ಇತರ ಸರ್ವೋದಯ ಕಾರ್ಯಕರ್ತರುಗಳೂ ನಂಜನಗೂಡು ತಾಲ್ಲೂಕಿನಲ್ಲಿ ಭೂದಾನ ಪಕ್ಷವನ್ನು ಆಚರಿಸಲು ವ್ಯವಸ್ಥೆಮಾಡಲಾಗಿದೆ. ಸಂಸ್ಥಾನದ ವಿವಿಧರಾಜಕೀಯ ಪಕ್ಷಗಳ ಅನೇಕ ಮುಖಂಡರು ಇದರಲ್ಲಿ ಭಾಗವಹಿಸಲಿರುವರು. ಈ ಸಂಧರ್ಭದಲ್ಲಿ ನಂಜನಗೂಡು ತಾಲ್ಲೂಕಿನಲ್ಲಿ ಒಟ್ಟು ಎರಡು ಸಾವಿರ ಎಕರೆ ಭೂಮಿಪ್ರಾಪ್ತಿಯಾಗಬೇಕೆಂದು ಸಂಕಲ್ಪಮಾಡಲಾಗಿದೆ. ಜಿಲ್ಲಾದ್ಯಂತ ಇರುವ ಎಲ್ಲ ಸಮಾಜಸೇವಾ ಕಾರ್ಯಕರ್ತರೂ, ರಾಜಕೀಯ ಪಕ್ಷಗಳ ಇತರ ಮುಖಂಡರುಗಳೆಲ್ಲರೂ ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ನಂಜನಗೂಡಿನಲ್ಲಿ ಸಭೆ

ಭೂದಾನ ಪಕ್ಷಾಚರಣೆಯವ್ಯವಸ್ಥೆ ಮಾಡುವ ಸಲುವಾಗಿ ನಾಳೆ ಭಾನುವಾರ ಮಧ್ಯಾಹ್ನ ೪ ಗಂಟೆಗೆ ನಂಜನಗೂಡಿನಲ್ಲಿರುವ ಶ್ರೀ ಕನಕದಾಸ ವಿದ್ಯಾರ್ಥಿ ನಿಲಯದಲ್ಲಿ ಭೂದಾನ ಹಿತೈಷಿಗಳ ಸಭೆಯನ್ನು ಏರ್ಪಡಿಸಲಾಗಿದೆ. ನಂಜನಗೂಡು ತಾಲ್ಲೂಕಿನ ಮತ್ತು ಜಿಲ್ಲೆಯ ಇನ್ನಿತರ ಎಲ್ಲಾ ಭೂದಾನ ಹಿತೈಷಿಗಳೂ ಆಗಮಿಸಬೇಕೆಂದು ಪ್ರಾರ್ಥಿಸಲಾಗಿದೆ.

ರಿಪಬ್ಲಿಕ್ ದಿನಾಚರಣೆ

ಮೈಸೂರು ೨೩

ಇದೇ ೨೬ನೇ ತಾರೀಖು ರಿಪಬ್ಲಿಕ್ ದಿನಾಚರಣೆಯ ಅಂಗವಾಗಿ ರಾಜಧಾನಿಯ ಟೌನ್‌ಹಾಲಿನ ಆವರಣದಲ್ಲಿ ಬೆಳಗ್ಗೆ ೯ ಘಂಟೆಗೆ ಧ್ವಜಾರೋಹಣ ನಡೆಯುವುದು. ಸಂಜೆ ಸ್ಕೌಟುಗಳಿಂದ ಆಟಪಾಟಗಳು ಏರ್ಪಡಿಸಲಾಗಿದೆ. ಎಲ್ಲರೂ ಭಾಗವಹಿಸಬೇಕೆಂದು ಕೋರಲಾಗಿದೆ.

ಯಾವ ರಾಷ್ಟ್ರದೊಡನೆಯೂ ಭಾರತದ ಮಿಲಿಟರಿ ಒಪ್ಪಂದವಿಲ್ಲ

ಭಾರತವು ಯಾವ ರಾಷ್ಟ್ರದೊಡನೆಯೂ ಮಿಲಿಟರಿ ಸಹಾಯಕ್ಕಾಗಿ ಒಪ್ಪಂದಮಾಡಿಕೊಳ್ಳುವುದಿಲ್ಲವೆಂದೂ, ತನ್ನ ದೇಶದ ಸ್ವತಂತ್ರ ನೀತಿಯನ್ನು ಮುಂದುವರಿಸಿಕೊಂಡು ಬರುವುದೆಂದೂ ಪ್ರಧಾನಿ ನೆಹರೂರವರು ಕಾಂಗ್ರೆಸ್ ನಗರದಲ್ಲಿ ಸಮಾವೇಶಗೊಂಡ ಅಖಿಲಭಾರತ ಕಾಂಗ್ರೆಸ್ಸಿನ ವಿಷಯನಿಯಾಮಕ ಸಮಿತಿಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ.

ಅಕ್ಕಿ ಸರಬರಾಜಿಗೆ ಕೊರತೆ ಇಲ್ಲ

ಮೈಸೂರಿನ ಆಹಾರ ಪರಿಸ್ಥಿತಿಯು ಉತ್ತಮಗೊಂಡಿದೆ. ಅಕ್ಕಿಯ ಸರಬರಾಜಿನಲ್ಲಿ ಯಾವ ಕೊರತೆಯೂ ಇಲ್ಲ. ಸಂಸ್ಥಾನದ ಉತ್ತರಭಾಗದಲ್ಲಿ ಜೋಳದ ಬೆಳೆ ಮಾತ್ರ ಹೆಚ್ಚುಮಳೆಯಿಂದ ಸ್ವಲ್ಪ ಕೆಟ್ಟಿದೆ ಆದರೆ ಜೋಳ ಮತ್ತು ರಾಗಿಯನ್ನು ಭಾರತದ ಯಾವಕಡೆಯಿಂದಲಾದರೂ ತರಿಸಿಕೊಳ್ಳಬಹುದೆಂದು ಕೇಂದ್ರ ಸರ್ಕಾರ ತಿಳಿಸಿದೆ. ಇದರಿಂದ ಯಾವ ಅಭಾವವೂ ಇರುವುದಿಲ್ಲ ಎಂದು ಆಹಾರ ಸಚಿವ ಶ್ರೀ ಸಿದ್ದವೀರಪ್ಪನವರು ತಿಳಿಸಿದ್ದಾರೆ.

ಪೋರ್ಚುಗೀಸ್ ಸ್ವಾಸ್ಥ್ಯದಲ್ಲಿ ಹೆಚ್ಚಿನ ಸೈನ್ಯ

ಭಾರತದಲ್ಲಿರುವ ಪೋರ್ಚುಗೀಸ್ ಸ್ವಾಸ್ಥ್ಯದಲ್ಲಿ ಯುದ್ಧ ಸಿದ್ಧತೆಗಳನ್ನು ಹೋಲುವ ರೀತಿಯಲ್ಲಿ ಸೈನ್ಯ ಜಮಾವಣೆಯು ಅಧಿಕ ಸಂಖ್ಯೆಯಲ್ಲಿ ಆಗುತ್ತಿರುವುದಾಗಿ ತಿಳಿಯಬರುತ್ತದೆ. ಪೋರ್ಚುಗಲ್ಲಿನಿಂದ ಗೋವಾಕ್ಕೆ ಕೆಲವು ಹಡಗುಗಳಲ್ಲಿ ಪೋರ್ಚುಗೀಸಿನ ಉನ್ನತ ಸೈನ್ಯಾಧಿಕಾರಿಗಳು ಮತ್ತು ಶಸ್ತ್ರಾಸ್ತ್ರಗಳು ಬಂದುವೆಂದು ಹೇಳಲಾಗುತ್ತಿದೆ.

ಖಾಸಗಿ ವಿದ್ಯಾ ಸಂಸ್ಥೆಗಳಿಗೆ ಹೆಚ್ಚು ಉತ್ತೇಜನ

ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮತ್ತೊಬ್ಬ ಆಡಳಿತದ ರಿಜಿಸ್ಟ್ರಾರ್‌ರನ್ನು ನೇಮಿಸುವುದು ಮತ್ತು ಖಾಸಗಿ ವಿದ್ಯಾಸಂಸ್ಥೆಗಳಿಗೆ ಹೆಚ್ಚು ಉತ್ತೇಜನ ಕೊಡುವುದು, ಈ ವಿಷಯಗಳನ್ನು ಸರ್ಕಾರ ಪರಿಶೀಲಿಸುವುದೆಂದು ರೆವಿನ್ಯೂ ಸಚಿವರು ನಿನ್ನೆ ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ವೈದ್ಯ ವಸ್ತು ಪ್ರದರ್ಶನದಲ್ಲಿ ಬೆಂಕಿ

ಮೈಸೂರು ಸಂಸ್ಥಾನದ ವೈದ್ಯರ ಸಮ್ಮೇಳನದ ಅಂಗವಾಗಿ ಚಿಕ್ಕಮಗಳೂರಿನಲ್ಲಿ ಏರ್ಪಡಿಸಿದ್ದ ವಸ್ತುಪ್ರದರ್ಶನದಲ್ಲಿ ನಿನ್ನೆ ಬೆಂಕಿ ಅನಾಹುತ ಉಂಟಾಗಿ ಮೂರು ಸ್ಟಾಲುಗಳು ಸುಟ್ಟುಹೋಗಿ, ೩ ಸಾವಿರ ರೂ. ನಷ್ಟ ಉಂಟಾಗಿದೆಯೆಂದು ವರದಿಯಾಗಿದೆ.

ಭಾರತಕ್ಕೆ ಈಜಿಪ್ಟ್ ಪತ್ರಿಕಾ ನಿಯೋಗ

ಈಜಿಪ್ಟಿನಿಂದ ನಾಲ್ಕು ಸದಸ್ಯರ ಪತ್ರಿಕಾ ನಿಯೋಗವೊಂದು ಈಗ ಭಾರತಕ್ಕೆ ಆಗಮಿಸಿದೆ. ನಿಯೋಗದವರು ದೆಹಲಿಯಲ್ಲಿ ಒಂದುವಾರ ಕಾಲವಿರುವರು.

ಪಾನನಿರೋಧ ಯಶಸ್ವಿಯಾಗಲು ತಕ್ಕ ವಾತಾವರಣಬೇಕು

ಶ್ರೀ ಕೆ. ಹನುಮಂತಯ್ಯನವರ ಹೇಳಿಕೆ

ಬೆಂಗಳೂರು ೨೩

ಸಮಾಜದ ಉನ್ನತ ವರ್ಗದವರಲ್ಲಿ ಕೆಲವರು ಪಾನನಿರೋಧ ಬೇಡವೆಂದು ಹೇಳುತ್ತಿದ್ದಾರೆ. ಕೆಲವರು ಪ್ರಭಾವವುಳ್ಳ ಪತ್ರಿಕೆಗಳ ಮೂಲಕ ಅದು ಯಶಸ್ವಿಯಾಗಿಲ್ಲ. ರದ್ದಾಗಬೇಕೆಂದು ಬೊಬ್ಬೆ ಇಡುತ್ತಿದ್ದಾರೆ. ದುರಾದೃಷ್ಟವಶಾತ್ ಉನ್ನತಾಧಿಕಾರಿಗಳ ಶ್ರೇಣಿಯಲ್ಲಿರುವವರಲ್ಲಿ ಕೆಲವರಿಗೆ ಪಾನನಿರೋಧದಲ್ಲಿ ಆಸಕ್ತಿ ಇಲ್ಲ. ಪೋಲೀಸ್ ಅಧಿಕಾರಿಗಳಲ್ಲೂ ಕೆಲವು ಪಾನನಿರೋಧದ ಬಗ್ಗೆ ಅಷ್ಟು ಆಸಕ್ತಿ ವಹಿಸುತ್ತಿಲ್ಲ. ಈ ಕಾರಣದಿಂದ ಅಧಿಕಾರಿಗಳನ್ನು ಡಿಸ್‌ಮಿಸ್ ಮಾಡಲು ಸಾಧ್ಯವಿಲ್ಲ. ಇದಕ್ಕೆಲ್ಲಾ ಬೇರೆ ಪರಿಹಾರ ಯೋಚಿಸಬೇಕು. ನಿರಂತರವಾಗಿ ಎಚ್ಚರವಾಗಿರುವುದೇ ಪಾನ ನಿರೋಧ ಯಶಸ್ವಿಯಾಗಲು ಅಗತ್ಯ. ಶಾಸನ ಸಭಾಸದಸ್ಯರು ತಮ್ಮ ಕ್ಷೇತ್ರಗಳಲ್ಲಿ ಪಾನ ನಿರೋಧ ಯಶಸ್ವಿಯಾಗಲು ತಕ್ಕ ವಾತಾವರಣ ಕಲ್ಪಿಸಲು ಪ್ರಯತ್ನಿಸಬೇಕು-ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆ ಶಾಸನಸಭೆಯಲ್ಲಿ ಪಾನ ನಿರೋಧವನ್ನು ಸಂಸ್ಥಾನಾದ್ಯಂತ ಆಚರಣೆಗೆ ತರಬೇಕೆಂದು ಸೂಚಿಸುವ ಖಾಸಗೀ ನಿರ್ಣಯಕ್ಕೆ ಉತ್ತರವಾಗಿ ತಿಳಿಸಿದ್ದಾರೆ.

ಹೈಸ್ಕೂಲುಗಳಲ್ಲಿ ಔದ್ಯೋಗಿಕ ಶಿಕ್ಷಣ

ದೇಶದಲ್ಲಿ ಈಗಿರುವ ಹೈಸ್ಕೂಲುಗಳಲ್ಲಿ ಶೇಕಡ ೧೫ ರಷ್ಟನ್ನು ಔದ್ಯೋಗಿಕ ಶಾಲೆಗಳನ್ನಾಗಿ ಪರಿವರ್ತಿಸಬೇಕೆಂದು ಕೇಂದ್ರ ಸೆಕೆಂಡರಿ ಶಿಕ್ಷಣ ಸಮಿತಿಯ ವರದಿಯ ಬಗ್ಗೆ ಕ್ರಮಗಳನ್ನು ಶಿಫಾರಸುಮಾಡುವ ಇಲಾಖಾ ಸಮಿತಿ ಸಲಹೆಮಾಡಿದೆ.

ದೇಶದ ಶಿಕ್ಷಣ ವ್ಯವಸ್ಥೆಯ ಪುನರ್ರಚನೆಗಾಗಿ ಸೆಕೆಂಡರಿ ಶಿಕ್ಷಣ ಸಮಿತಿ ನೀಡಿರುವ ಸಲಹೆಗಳನ್ನು ಜಾರಿಗೆತರಲು ೩ ಕೋಟಿ ರೂಪಾಯಿಗಳು ವೆಚ್ಚವಾಗುವುದೆಂದು ಅಂದಾಜುಮಾಡಲಾಗಿದೆ.

ಕೋರ್ಟುಗಳ ಅಧಿಕಾರ ಪರಿಶೀಲನಾ ಸಮಿತಿ

ಮೈಸೂರು ಸಂಸ್ಥಾನದ ಕೋರ್ಟುಗಳ ಅಧಿಕಾರ ಮತ್ತು ಹಣಕಾಸಿನ ವ್ಯಾಪ್ತಿಯನ್ನು ಪುನರ್ವಿಂಗಡನೆ ಮಾಡಲು ಒಂದು ಪರಿಶೀಲನಾ ಸಮಿತಿಯನ್ನು ರಚಿಸಲಾಗಿದೆಯೆಂದು ಗೃಹಸಚಿವರು ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ತಿರುವಾಂಕೂರಿನಲ್ಲಿ ಮಹಿಳೆಯರಿಂದ ಚುನಾವಣಾ ಪ್ರಚಾರ

ಪ್ರತಿ ಸಾವಿರ ಜನದಲ್ಲಿ ಗಂಡಸರಿಗಿಂತ ೮ ಮಂದಿ ಹೆಂಗಸರೇ ಹೆಚ್ಚಾಗಿರುವ ಮತ್ತು ಅತ್ಯಧಿಕ ಸಂಖ್ಯೆಯಲ್ಲಿ ಅಕ್ಷರಸ್ಥರಿರುವ ತಿರುವಾಂಕೂರು—ಕೊಚ್ಚಿಯ ಚುನಾವಣಾ ಪ್ರಚಾರದಲ್ಲಿ ಮಹಿಳೆಯರು ಹೆಚ್ಚು ಪಾತ್ರ ವಹಿಸಿದ್ದಾರೆ. ಅವರು ಕಾಂಗ್ರೆಸ್ಸಿಗೆ ಬೆಂಬಲ ಕೊಡಲು ನಿರ್ಧರಿಸಿದ್ದಾರೆ.

ಪ್ರಾಚೀನ ದೇವಾಲಯದ ಪತ್ತೆ!

ಅಸ್ಸಾಮಿಗೆ ೧೦ ಮೈಲಿ ದೂರದಲ್ಲಿರುವ ಬಾಗ್‌ಬಾರ್ಹಿ ಎಂಬ ಅರಣ್ಯದಲ್ಲಿ ಸಾವಿರ ವರ್ಷಗಳ ಹಿಂದಿನ ಈಶ್ವರದೇವಾಲಯವೊಂದು ಪತ್ತೆಆಗಿದೆ. ಈ ಪ್ರಾಚೀನ ದೇವಾಲಯವು ತ್ರಿಪುರರಾಜರಿಂದ ಕಟ್ಟಲ್ಪಟ್ಟದ್ದೆಂದು, ದೇವಾಲಯ ಗೋಡೆಗಳ ಮೇಲಿನ ಕೆತ್ತನೆ ಕೆಲಸದಿಂದ ವ್ಯಕ್ತಪಟ್ಟಿದೆ.

ಕುಂಭಮೇಳದಲ್ಲಿ ಸಾಧುಗಳು

ಗಂಗೆ, ಯಮುನಾ ಮತ್ತು ಸರಸ್ವತಿ ಸಂಗಮಸ್ಥಳವಾದ ಕುಂಭನಗರದಲ್ಲಿ ೨೦ ಸಾವಿರಕ್ಕಿಂತ ಹೆಚ್ಚಾಗಿ ಸಾಧುಗಳು ಸೇರಿದ್ದಾರೆಂದೂ, ಈಗಾಗಲೇ ಲಕ್ಷಾಂತರ ಜನರು ಸೇರಿರುವರೆಂದೂ ಹೇಳಲಾಗಿದೆ.

ರೈಲ್ವೆ ಅಪಘಾತದ ಬಗ್ಗೆ ತನಿಖೆ

ಕರಾಚಿಗೆ ೭೫ ಮೈಲಿ ಬಳಿ ಮೊನ್ನೆ ಬೆಳಗ್ಗೆ ಸಂಭವಿಸಿದ ಭಾರಿ ರೈಲ್ವೆ ಅಪಘಾತದ ಬಗ್ಗೆ ಕೂಡಲೇ ತನಿಖೆ ನಡೆಯಬೇಕೆಂದು ಪಾಕೀಸ್ತಾನ್ ಸರ್ಕಾರ ಆಜ್ಞೆ ಮಾಡಿದೆ.

ಭಾರತ ವೈಜ್ಞಾನಿಕ ಪ್ರಗತಿ ಬಗ್ಗೆ ಪ್ರಶಂಸೆ

ಭಾರತವು ಸ್ವತಂತ್ರವನ್ನು ಪಡೆದ ಕೆಲ [illegible] ಕಾಲದಲ್ಲಿಯೇ ವಿಜ್ಞಾನ ಪ್ರಗತಿ[illegible] ಮುನ್ನಡೆ ಇಟ್ಟು ಅನೇಕ [illegible] ಶಾಲೆಗಳನ್ನು ತೆರೆದಿರುವುದು [illegible] ಉತ್ತಮ ಭವಿಷ್ಯವಿದೆ ಎಂದು [illegible] ವಿಜ್ಞಾನ ನಿಯೋಗದವರು ತಿಳಿಸಿದ್ದಾರೆ.

ಮೋಟಾರು ಅಪಘಾತ

ಕಲ್ಯಾಣಿಯ ಕಾಂಗ್ರೆಸ್ ನಗರದಲ್ಲಿ ನಿನ್ನೆ ೧೨ ಮೋಟಾರು ಅಪಘಾತಗಳು ನಡೆದು ಒಬ್ಬ ಪೋಲೀಸಿನವನಿಗೆ ತೀವ್ರ ಗಾಯವಾಗಿದೆ.

ಜಗತ್ತಿನ ಭವಿಷ್ಯ ಭಾರತದ ಕೈಯಲ್ಲಿದೆ

ಅಮೆರಿಕಾ ಮಾಜಿ ರಾಯಭಾರಿ ಚೆಸ್ಟರ್‌ಬೌಲ್ಸ್ ಹೇಳಿಕೆ

ಏಷ್ಯಾ ದಾರಿದ್ರ್ಯಪೀಡಿತ ಜನತೆಗೆ ಅತಿ ಶೀಘ್ರವಾಗಿ ಹೆಚ್ಚು ಸಮೃದ್ಧವಾಗಿರುವ ಜೀವನವನ್ನೊದಗಿಸಬಲ್ಲ ಪದ್ಧತಿ ಯಾವುದೆಂಬುದನ್ನು ನಿರ್ಧರಿಸಲು ಪ್ರಜಾಸತ್ತಾತ್ಮಕ ಭಾರತ ಮತ್ತು ಕಮ್ಯೂನಿಸ್ಟ್ ಚೀನಾಗಳೊಳಗೆ ನಡೆಯುತ್ತಿರುವ ಹೋರಾಟವು ಇಡೀ ಜಗತ್ತಿನ ಭವಿಷ್ಯವನ್ನೇ ನಿರ್ಣಯಿಸಬಹುದೆಂದು ಭಾರತದ ಅಮೆರಿಕ ಮಾಜಿ ರಾಯಭಾರಿ ಮಿ॥ ಚೆಸ್ಟರ್ ಬೌಲ್ಸ್‌ರವರು ಹೇಳಿದ್ದಾರೆ.

ಏಷ್ಯಾದಲ್ಲಿ ಸಂಚರಿಸುವವನಿಗೆ ಎರಡು ಮುಖ್ಯ ವಿಷಯಗಳು ಕಂಡುಬರುತ್ತವೆ. ಮೊದಲನೆಯದು ಪಾಶ್ಚಾತ್ಯ ರಾಷ್ಟ್ರಗಳ ಬಗ್ಗೆ ಈಗಲೂ ವ್ಯಕ್ತಗೊಳಿಸಲ್ಪಡುತ್ತಿರುವ ಅಪನಂಬಿಕೆಗೆ ಕಾರಣವಾಗಿರುವ ವಸಹಾತುಶಾಹಿಯ ಸ್ಮರಣೆಯ ಅವಶೇಷ. ಎರಡನೆಯದು ಏಷ್ಯದ ಬಡತನ. ಬಡತನವು ಏಷ್ಯಾಕ್ಕೆ ಹೊಸದಲ್ಲ. ಆದರೆ ಈಗ ಮೊದಲಬಾರಿಗೆ ಜನರು, ದಾರಿದ್ರ್ಯ ನೀಗಿಸಿಕೊಳ್ಳಲು ಸಾಧ್ಯವಿದೆಯೆಂದು ನಂಬಿಕೆಯುಳ್ಳವರಾಗಿದ್ದಾರೆ.

ಶೀಘ್ರವಾಗಿ ತಮ್ಮ ಜೀವನಗಳನ್ನು ಸುಧಾರಿಸುವ ಇಚ್ಛೆಯೇ ಏಷ್ಯಾದ ಕ್ರಾಂತಿಯ ತಳಹದಿ ಮತ್ತು ಸಾರಾಂಶವಾಗಿದೆ.

ಇದನ್ನು ಅತ್ಯುತ್ತಮ ರೀತಿಯಿಂದ ಸಾಧಿಸಲು ಕಮ್ಯೂನಿಸ್ಟ್ ಪದ್ಧತಿಯಿಂದ ಸಾಧ್ಯವೇ ಅಥವ ಪ್ರಜಾಪ್ರಭುತ್ವ ಪದ್ಧತಿಯಿಂದಲೇ ಎಂಬುದನ್ನು ಪರೀಕ್ಷಿಸುವ ಸ್ಪರ್ಧೆಯಲ್ಲಿ ಚೀನ ಮತ್ತು ಭಾರತಗಳು ಈಗ ನಿರತವಾಗಿವೆ. ಈ ರಾಷ್ಟ್ರಗಳ ಸ್ಪರ್ಧೆಯು ನಮ್ಮೆಲ್ಲರ ಭವಿಷ್ಯವನ್ನು ನಿರ್ಧರಿಸಬಹುದು ಎಂದು ಮಿ॥ ಬೌಲ್ಸ್ ಹೇಳಿದ್ದಾರೆ.

ಭಾರತವು ಯಶಸ್ವಿಯಾದರೆ ಇಡೀ ಏಷ್ಯಾದಲ್ಲಿ ಸ್ಥಿರತೆ ನೆಲೆಗೊಳ್ಳುವುದು ಆದರೆ ಭಾರತ ಸೋತರೆ ಬಹುಶಃ ಇಡೀ ಸ್ವತಂತ್ರ ವಿಶ್ವವು ಮುರಿದು ಬೀಳಬಹುದು ಎಂದು ಮಿ॥ ಬೌಲ್ಸ್ ಸಾರಿದ್ದಾರೆ.

ಇಂಗ್ಲೀಷ್ ಕಲಿಯದಿದ್ದರೆ ಆಕಾಶ ತಲೆಯಮೇಲೆ ಬೀಳುವುದಿಲ್ಲ

[illegible]ಬೊಂಬಾಯಿ ಪ್ರಾಂತ್ಯದಲ್ಲಿ ಇಂಗ್ಲೀಷ್ [illegible]ಯನ್ನು ಕಲಿಯುವುದರ ವಿಷಯದಲ್ಲಿ [illegible]ರವು ವಿಧಿಸಿರುವ ನಿರ್ಬಂಧವನ್ನು [illegible]ಗೆದುಹಾಕಬೇಕೆಂದು ಕೊಂಕಣಿ ಮತ್ತು ತುಳು ಭಾಷೆಯ ಕೆಲವು ಪ್ರಮುಖರುಗಳು ವಿದ್ಯಾಸಚಿವ ಶ್ರೀ ದಿನಕರರಾವ್ ದೇಸಾಯ್‌ರವರನ್ನು ಭೇಟಿಮಾಡಿ ಕೇಳಿಕೊಂಡಾಗ ಯಾವ ಪಂಗಡಕ್ಕೂ ವಿನಾಯಿತಿ ಕೊಡಲಾಗುವುದಿಲ್ಲ. ಇಂಗ್ಲೀಷ್ ಭಾಷೆಯನ್ನು ಕಲಿಯದಿದ್ದರೆ ಆಕಾಶ ತಲೆಯ ಮೇಲೆ ಬೀಳುವುದಿಲ್ಲ-ಎಂದು ತಿಳಿಸಿದ್ದಾರೆ.

ಆಯುರ್ವೇದ ಮತ್ತು ಪಾಶ್ಚಾತ್ಯ ಚಿಕಿತ್ಸಾ ವೈದ್ಯ ವಿಧಾನ ಮಿಳಿನವಾಗಬೇಕು

ವೈದ್ಯ ಸಮ್ಮೇಳನದಲ್ಲಿ ಸಚಿವ ಶ್ರೀ ರಾಮಚಂದ್ರರಾಯರ ಸಲಹೆ

ಚಿಕ್ಕಮಗಳೂರು ೨೩

ಭಾರತದಲ್ಲಿ ಬಹುಕಾಲ ಪರಕೀಯರ ಆಡಳಿತವೇ ಇದ್ದುದರಿಂದ ಆರೋಗ್ಯ ರಕ್ಷಣೆ ವಿಚಾರದಲ್ಲಿ ಉದಾಸೀನತೆ ಇತ್ತು. ಈಗ ಸ್ವತಂತ್ರ ಬಂದಮೇಲೆ ಪ್ರಜೆಗಳ ಆರೋಗ್ಯ ಭಾಗ್ಯವನ್ನು ಹೆಚ್ಚಿಸುವ ವಿಚಾರವು ಎಷ್ಟು ತ್ವರ್ಯವಾಗಿ ನಡೆಯಬೇಕಾಗಿದೆಯೆಂಬುದನ್ನು ಗ್ರಹಿಸಿ, ಇತರರೆಲ್ಲರೊಡನೆ ಒಟ್ಟುಗೂಡಿ ಅವರೆಲ್ಲರ ಸಹಕಾರದಿಂದ ಪ್ರಯತ್ನವನ್ನು ಕೈಗೊಳ್ಳಬೇಕಾದ ಗುರುತರವಾದ ಹೊಣಗಾರಿಕೆಯು ಎಲ್ಲರ ಮೇಲೂ ಇದೆ ಈ ಕಾರ್ಯದಲ್ಲಿ ಎಲ್ಲರೂ ಸರ್ವ ಸಹಾಯವನ್ನೂ ವಿನಿಯೋಗಿಸಿ ಶ್ರಮಿಸಬೇಕು-ಎಂದು ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ನಿನ್ನೆ ಸಂಸ್ಥಾನದ ವೈದ್ಯ ಸಂಘದ ರಜತೋತ್ಸವ ಮತ್ತು ಸಮ್ಮೇಳನದ ಪ್ರಾರಂಭೋತ್ಸವದಲ್ಲಿ ತಿಳಿಸಿದ್ದಾರೆ.

ದೇಶದಲ್ಲಿ ಆಯುರ್ವೇದ ಮತ್ತು ಯುನಾನಿ ವೈದ್ಯವು ಉತ್ತಮ ರೀತಿಯಲ್ಲಿ ನಡೆಯುತ್ತಿದೆ. ಪ್ರಾಚೀನ ಕಾಲದ ವೈದ್ಯ ಶಾಸ್ತ್ರವು, ಆಧುನಿಕ ಕಾಲದ ವೈದ್ಯ ಶಾಸ್ತ್ರವು ಸಮ್ಮಿಳಿತವಾಗಿ ಪರಸ್ಪರವಾಗಿ ಪೂರಕವಾಗಬೇಕು. ಆಧುನಿಕ ವೈದ್ಯ ಶಾಸ್ತ್ರಜ್ಞರು ಪ್ರಾಚೀನ ಕಾಲದ ಆಯುರ್ವೇದ ಗ್ರಂಥಗಳಲ್ಲಿ ನಿರೂಪಿತವಾಗಿರುವ ವಿಷಯಗಳನ್ನು ತಾತ್ಸಾರವಿಲ್ಲದೆ ಸಹಾನುಭೂತಿಯಿಂದ ಗ್ರಹಿಸಿ ಅದರ ಪ್ರಯೋಜನ ಪಡೆಯಬೇಕು.

ಮೆಡಿಕಲ್ ಕಾಲೇಜ್ ವ್ಯಾಸಂಗ ಕ್ರಮದಲ್ಲಿ ಆಯುರ್ವೇದವನ್ನೂ ಸೇರಿಸುವುದು ಉಚಿತವಾಗಿದೆ. ಅದೂ ಅಲ್ಲದೆ ಒಂದು ಸಂಶೋಧನ ಶಾಲೆಯ ಸ್ಥಾಪನೆ ಆಗಬೇಕು. ಇದರಿಂದ ಎರಡು ವೈದ್ಯ ಕ್ರಮಗಳು ಒಂದುಗೂಡಲು ಅನುಕೂಲವಾಗುತ್ತದೆ.

ನಮ್ಮ ನೆರೆಯ ಪ್ರಾಂತ್ಯಗಳಲ್ಲಿರುವಂತೆ ಮೈಸೂರು ಸಂಸ್ಥಾನದಲ್ಲೂ ವೈದ್ಯರುಗೌರವಾರ್ಥವಾಗಿ ಕೆಲಸಮಾಡುವ ವ್ಯವಸ್ಥೆಯನ್ನು ಕೂಡಲೇ ಆಚರಣೆಗೆ ತರಬೇಕು-ಎಂದು ಸಚಿವರು ತಿಳಿಸಿದರು.

ದ್ವಿತೀಯ ಪಂಚವಾರ್ಷಿಕ ಯೋಜನೆ

ದ್ವಿತೀಯ ಪಂಚವಾರ್ಷಿಕಯೋಜನೆಯನ್ನು ತಯಾರಿಸುವಾಗ ಪ್ರಾಂತ್ಯ ಸರ್ಕಾರಗಳು ಗ್ರಾಮಪಂಚಾಯಿತಿ, ಜಿಲ್ಲಾ ಬೋರ್ಡುಗಳು, ಪೌರಸಭೆಗಳು ಮತ್ತು ಸಾಮಾಜಿಕ ಸಮಾಜಗಳ ನೆರವನ್ನು ಪಡೆದು ಆಯಾ ತಾಲ್ಲೂಕು ಜಿಲ್ಲಾ ಮತ್ತು ಗ್ರಾಮಗಳ ಅವಶ್ಯಕತೆಯೇನೆಂಬುದನ್ನು ವಿಶದವಾಗಿ ಪರಿಶೀಲಿಸಬೇಕು. ಹೆಚ್ಚಾಗಿ ವ್ಯವಸಾಯ ಉತ್ಪನ್ನ, ಸ್ಥಳೀಯ ಕೆಲಸಗಳ ಆಡಳಿತ ಮತ್ತು ನಿರ್ಮಾಣ ಗ್ರಾಮಕೈಗಾರಿಕೆಗಳ ಅಭಿವೃದ್ಧಿ ಗ್ರಾಮಸ್ಥರಿಗೆ ಹಲವಾರು ಉಪಯುಕ್ತ ಸೌಕರ್ಯಗಳು ಮುಂತಾದುವುಗಳೆಲ್ಲಾ ಅವುಗಳಲ್ಲಿ ಸೇರಿರಬೇಕು.

ಈ ಯೋಜನೆಗಳನ್ನು ಗ್ರಾಮ ಮತ್ತು ಇತರ ಪ್ರದೇಶಗಳಲ್ಲಿರುವ ಸಮಾಜ ಸೇವಕರು ಮತ್ತು ಪ್ರಮುಖ ನಾಯಕರು ಮುಂತಾದವರ ಸಹಾಯವನ್ನು ಪಡೆದು ತಯಾರಿಸಬೇಕು-ಎಂಬುದಾಗಿ ಆಯೋಜನಾ ಸಮಿತಿಯ ಉಪಾಧ್ಯಕ್ಷ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಹೇಳಿದ್ದಾರೆ.

ಕೊರಿಯಾದಲ್ಲಿ ಯುದ್ಧ ಬಂದಿಗಳ ಬಿಡುಗಡೆ

ಕೊರಿಯಾದಲ್ಲಿ ವಿಶ್ವಸಂಸ್ಥೆ ಸೈನ್ಯಕ್ಕೆ ಉತ್ತರ ಕೊರಿಯಾ ಮತ್ತು ಚೈನಾ ಯುದ್ಧ ಖೈದಿಗಳನ್ನು ವಾಪಸ್ಸು ಮಾಡುವ ಕಾರ್ಯವನ್ನು ಭಾರತ ಮೇಲ್ವಿಚಾರಕ ಸೈನ್ಯವು ಪೂರೈಸಿತು.

ಆದರೆ ವಿಶ್ವಸಂಸ್ಥೆಯ ಯುದ್ಧ ಖೈದಿಗಳನ್ನು ಉತ್ತರಕೊರಿಯಾ ಮತ್ತು ಚೈನಾ ಸೈನ್ಯವು ವಾಪಸ್ಸು ತೆಗೆದುಕೊಳ್ಳುವುದನ್ನು ನಿರಾಕರಿಸಿತು. ಆದ್ದರಿಂದ ಭಾರತ ಮೇಲ್ವಿಚಾರಕ ಸೈನ್ಯವು ಆ ಬಂದಿಗಳನೆಲ್ಲಾ ತನ್ನ ವಶದಿಂದ ನಿನ್ನೆ ಮಧ್ಯರಾತ್ರಿಯಲ್ಲೇ ಬಿಡುಗಡೆಯಾಯಿತು.

ಆ ಬಂದಿಗಳನೆಲ್ಲಾ ಇಟ್ಟಿದ್ದ ಶಿಬಿರಗಳಿಗೆ ಹಾಕಿದ್ದ ಬೀಗಗಳನೆಲ್ಲಾ ಭಾರತ ಸೈನ್ಯವು ತೆಗೆದು ಅಲ್ಲಿ ಕಾವಲಿದ್ದ ತನ್ನ ಕಾವಲುಗಾರ ಸೈನ್ಯವನ್ನೆಲ್ಲಾ ವಾಪಸ್ಸು ಕರೆಸಿಕೊಂಡಿದೆ. ಈ ಸಂದರ್ಭದಲ್ಲಿ ಭಾರತ ಸೈನ್ಯದ ಮುಖ್ಯಾಧಿಕಾರಿಯವರು ಮಾತನಾಡುತ್ತಾ, ಇನ್ನು ಬಂದಿಗಳನ್ನು ತನ್ನ ವಶದಲ್ಲಿಟ್ಟುಕೊಂಡಿರುವುದಕ್ಕೆ ಕಾನೂನು ರೀತ್ಯಾ ತಮಗೆ ಹಕ್ಕಿಲ್ಲವೆಂದು ಉತ್ತರಕೊರಿಯಾ ಮತ್ತು ಚೈನಾ ಪಡೆಗೆ ತಿಳಿಸಿ ಈ ಕಾರ್ಯವನ್ನು ಮಾಡಿದೆಯೆಂದು ಹೇಳಿದ್ದಾರೆ.

ಮುಖ್ಯಮಂತ್ರಿಯವರ ಪ್ರವಾಸ

ಬೆಂಗಳೂರು ೨೩

ಮುಂದಿನ ಮಾಹೆ ೪ನೇ ತಾರೀಖಿನಿಂದ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಬೊಂಬಾಯಿ ಪ್ರಾಂತ್ಯದ ಕನ್ನಡ ಭಾಗಗಳಲ್ಲಿ ಒಂದು ವಾರಕಾಲ ಪ್ರವಾಸ ಮಾಡಲಿದ್ದಾರೆ.

ಉನ್ನತ ಪೋಲೀಸ್ ಅಧಿಕಾರಿಗಳ ಮೇಲೆ: ಆಪಾದನೆ

ಬೆಂಗಳೂರು ೨೩

ಉನ್ನತ ಪೋಲೀಸ್ ಅಧಿಕಾರಿಗಳ ಮೇಲೆ ಕೆಲವು ಅಕ್ರಮಗಳ ಆರೋಪಣೆಗಳನ್ನು ನಮೂದಿಸಿ ಸರ್ಕಾರಕ್ಕೆ ಒಂದು ಪತ್ರ ಬಂದಿದೆ. ಇದನ್ನು ವಿಚಾರಣೆಗಾಗಿ ಲಂಚ ನಿರೋಧ ಸಮಿತಿಗೆ ಕಳುಹಿಸಿರುವುದಾಗಿ ಗೃಹಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ನಿನ್ನೆಯದಿನ ಶಾಸನಸಭೆಯಲ್ಲಿ ತಿಳಿಸಿದರು. ಆರೋಪಣೆಗಳ ಬಗ್ಗೆ ವಿವರಗಳನ್ನು ಕೊಡಲು ಸಚಿವರು ನಿರಾಕರಿಸಿದರು.

ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನ

ಆಗ್ನೇಯ ಏಷ್ಯಾ ರಾಷ್ಟ್ರಗಳ ಸಮ್ಮೇಳನವು ಸಿಲೋನಿನಲ್ಲಿ ಮುಂದಿನ ಏಪ್ರಿಲ್ ೨೭ರಿಂದ ಮೇ ೧೭ನೇ ತಾರೀಖಿನವರೆಗಿನ ಅವಧಿಯಲ್ಲಿ ನಡೆಯಲಿದೆಯೆಂದು ಸಿಂಹಳ ಪ್ರಧಾನಿ ಸರ್ ಕೊಟೇಲವಾಲಾರವರು ತಿಳಿಸಿದ್ದಾರೆ. ಅದರಲ್ಲಿ ಭಾಗವಹಿಸಲು ಪಾಕೀಸ್ತಾನ ಯಾವ ಷರತ್ತೂ ಹಾಕಿಲ್ಲವೆಂದೂ ಅವರು ಹೇಳಿದ್ದಾರೆ.

ಭಾರತಕ್ಕೆ ೨೫ ಲಕ್ಷ ಡಾಲರುಗಳ ನೆರವು

ಅತ್ಯುತ್ತಮ ಕಬ್ಬಿಣದ ವಸ್ತುಗಳನ್ನು ಕೊಳ್ಳಲು ಭಾರತಕ್ಕೆ ಅಮೆರಿಕಾವು ೨೫ ಲಕ್ಷ ಡಾಲರುಗಳ ನೆರವನ್ನು ಕೊಡುವುದಾಗಿ ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೨—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೧೦	೨೫—೧೪
ಎಳ್ಳು	—	—
ಹರಳು	೩೯—೧೨	೪೧—೨
ಹೊಂಗೆಬೀಜ	೨೩—೨	—
ಹುಚ್ಚೆಳ್ಳು	೩೬—೧೨	೪೪—೨
ಹುರುಳಿ	೩೦—	೩೨—೮
ಉದ್ದು	—	—
ಹೆಸರು	೩೯—೪	೪೪—೮
ಅಲಸಂದೆ	೩೫—	೪೬—
ಅವರೆ	—	—
ಕೊತ್ತಂಬರಿ	೨೫—೬	೩೦—೮
ಕಡಲೆ	೬೨—	೬೦—
ತೊಗರಿ	೨೨—	೩೦—
ಹುಣಸೆಹಣ್ಣು	೬—೧	೧೦—೪
ಮೆಣಸಿನಕಾಯಿ	೨೩—೧೪	೩೩—೧೦
ಸೀಗೆಕಾಯಿ	೪—೧೨	೫—೧೪
ಬೆಲ್ಲ	—	—
ತೆಂಗಿನಕಾಯಿ	೧೯೦—	೨೪೫—

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೩೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೨೩

೨೫-೧-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾಂಗ್ರೆಸ್ ಸಮಿತಿ ಸಭೆ

ಮೈಸೂರು ೨೫

ಇದೇ ೨೩ ನೇ ತಾರೀಖು ನಗರದ ದಕ್ಷಿಣ ವಿಭಾಗದ ಕಾಂಗ್ರೆಸ್ ಕಾರ್ಯಕಾರಿ ಸಭೆಯು ಶ್ರೀ ಬಿ. ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದು ಈ ತೀರ್ಮಾನಗಳನ್ನು ಮಾಡಿದರು.

ಕಾಂಗ್ರೆಸ್ ಚಟುವಟಿಕೆಗಳು ಮತ್ತು ಕಾಂಗ್ರೆಸ್ ಸದಸ್ಯರನ್ನು ಕೂಡಿಸುವ ಬಗ್ಗೆ ಚರ್ಚೆಯಾಗಿ ಕಾರ್ಯಕರ್ತರೆಲ್ಲರೂ ಹುರುಪಿನಿಂದ ಸದಸ್ಯರನ್ನು ಕೂಡಿಸಬೇಕೆಂದು ಮತ್ತು ಕಾಂಗ್ರೆಸ್ ಸದಸ್ಯ ಸಪ್ತಾಹ ಆಚರಿಸಬೇಕು ಕಾಂಗ್ರೆಸ್ ಸಕ್ರಿಯಾ ಸದಸ್ಯರು ಕಾಂಗ್ರೆಸ್ ನಿಯಮಗಳನ್ನು ಸರಿಯಾಗಿ ಪಾಲಿಸುವಂತೆ ಉಚಿತ ಕಾರ್ಯಕ್ರಮ ಕೈಗೊಳ್ಳಬೇಕೆಂದೂ ಮತ್ತು ಸಕ್ರಿಯಾ ಸದಸ್ಯರಾಗಲು ಸದಸ್ಯತನದ ಶುಲ್ಕವು ಹೆಚ್ಚೆಂದೂ ಇದರಿಂದ ಅನೇಕ ಕಾರ್ಯಕರ್ತರು ಸದಸ್ಯರಾಗಲು ಸಾಧ್ಯವಾಗಿರಲಾರದೆಂದೂ ಆದುದರಿಂದ ಎಂ.ಪಿ.ಸಿ.ಸಿ.ಯು ಸದಸ್ಯತನದ ಶುಲ್ಕವನ್ನು ಕಡಮೆಮಾಡಲು ಪ್ರಯತ್ನಿಸಬೇಕು ಎ. ಐ. ಸಿ. ಸಿ. ಯವರಿಗೆ ಕಳುಹಿಸಲು, ರಾಜಕೀಯ ಸಂತಾಪದಿಂದ ಪರಿಹಾರ ಕಾರ್ಯಗಳ ಬಗ್ಗೆ ವಿವರ ಪಡೆಯಲು ಪತ್ರಿಕೆಗಳಿಗೆ ಕಾರ್ಯದರ್ಶಿಯವರು ಪ್ರಕಟನೆ ಕೊಡಬೇಕು.

ಇಬ್ಬರು ಪೋಲೀಸರಿಗೆ ಜೀವಾವಧಿ ಶಿಕ್ಷೆ

ಮೈಸೂರು ೨೫

ಸಾಲಿಗ್ರಾಮದ ಪೋಲೀಸ್ ಸ್ಟೇಷನ್ನಿನ ಲಾಕಪ್ಪಿನ ಅಫೀಸ್‌ಸಾಬ್ ಎಂಬ ಖೈದಿಯೊಬ್ಬನ ಮರಣಕ್ಕೆ ಕಾರಣರಾದರೆಂಬ ಆಪಾದನೆಯಮೇಲೆ ಅಲ್ಲಿನ ಪೋಲೀಸ್ ದಫೇದಾರ್ ಲಿಂಗದಾಸಯ್ಯ ಮತ್ತು ಕಾನ್‌ಸ್ಟೇಬಲ್ ಮಹಮದ್ ದಸ್ತಗೀರ್ ಎಂಬುವರಿಗೆ ನಗರದ ಅಡಿಷನಲ್ ನ್ಯಾಯಾಧೀಶರವರು ಜೀವಾವಧಿ ಶಿಕ್ಷೆ ವಿಧಿಸಿದ್ದಾರೆ.

ಕಳೆದ ೧೨-೧-೫೩ನೇ ದಿನ ಕಳ್ಳತನ ಮಾಡುತ್ತಿದ್ದಾಗ ಸಾಲಿಗ್ರಾಮದ ಪೋಲೀಸರಿಂದ ಅಫೀಸ್‌ಸಾಬ್ ಎಂಬುವನು ದಸ್ತಗಿರಿಯಾಗಿ ಆತನನ್ನು ಲಾಕಪ್ಪಿನಲ್ಲಿ ಇಡಲಾಗಿತ್ತು. ಅದೇದಿನ ರಾತ್ರಿ ಆತನು ಅಲ್ಲೇ ಮರಣಹೊಂದಿದನು ಮರಣವು ಆತ್ಮಹತ್ಯೆಯೆಂದು ಆಪಾದಿತರು ಕೃಷ್ಣರಾಜನಗರದ ಮುನ್ಸೀಫ್ ಮ್ಯಾಜಿಸ್ಟ್ರೇಟರಿಗೆ ವರದಿಮಾಡಿದ್ದರು. ಅದರ ಬಗ್ಗೆ ತನಿಖೆನಡೆದು ಆಪಾದಿತರೇ ಆತನ ಕೊಲೆಗೆ ಕಾರಣವೆಂದು ನಗರದ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿತ್ತು. ಅವರನ್ನು ನ್ಯಾಯಾಧೀಶರು ಸೆಷನ್ಸ್‌ಗೆ ಗುರಿಪಡಿಸಿದ್ದರು.

ಕಾಶ್ಮೀರ ಎಂದಿಗೂ ಭಾರತದಲ್ಲೇ ಇರುವುದು

ಪ್ರಧಾನಿ ಭಕ್ಷಿಯವರ ಸ್ಪಷ್ಟ ಹೇಳಿಕೆ

ನೂರಾರು ವರ್ಷಗಳಿಂದ ಕಾಶ್ಮೀರವು ಭಾರತದ ಒಂದು ಭಾಗವಾಗಿತ್ತು ಮತ್ತು ಇನ್ನು ಮುಂದೂ ಅದೇರೀತಿ ಇರುವುದೆಂದು ಕಾಶ್ಮೀರದ ಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರು ಕಾಂಗ್ರೆಸ್ ನಗರದಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ.

ಯಾವ ವಿದೇಶೀಯನು ಕಾಶ್ಮೀರದಲ್ಲಿ ಕಾಲಿಡಲು ಜನರು ಅವಕಾಶ ಕೊಡುವುದಿಲ್ಲ ಮತ್ತು ಕಾಶ್ಮೀರದಲ್ಲಿ ಮತ್ತೊಂದು ಕೊರಿಯಾ ನಡೆಯದಂತೆ ಸರ್ವಪ್ರಯತ್ನ ಮಾಡಲಾಗುವುದು. ಪಾಕ್-ಅಮೆರಿಕಾ ಮಿಲಿಟರಿ ಒಪ್ಪಂದವು ಕಾಶ್ಮೀರವನ್ನು ಅಡಗಿಸಲು ನಡೆಸುತ್ತಿರುವ ಪ್ರಯತ್ನ ಆದರೆ ಅದು ಸಫಲವಾಗುವುದಿಲ್ಲ. ಮುಂದಿನ ತಿಂಗಳು ೩ನೇ ತಾರೀಖು ನಡೆಯಲಿರುವ ಕಾಶ್ಮೀರ್ ದೆಹಲಿ ಒಪ್ಪಂದವನ್ನು ಜಾರಿಗೆ ತರಲಾಗುವುದು-ಎಂದು ಹೇಳಿದ್ದಾರೆ.

ಕಡ್ಡಾಯ ಸೈನ್ಯ ಶಿಕ್ಷಣ ಅತ್ಯಗತ್ಯ

ಸರ್ಕಾರಕ್ಕೆ ಜನಸಂಘದ ಒತ್ತಾಯ

ಅಂತರ ರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತವು ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು, ಭಾರತೀಯರು ಸಶಸ್ತ್ರರಾಗಿ, ಎಲ್ಲವನ್ನೂ ಎದುರಿಸಲು ಕ್ರಮತೆಗೆದುಕೊಳ್ಳಬೇಕು ಸರ್ಕಾರವು ಕೂಡಲೇ ಕಡ್ಡಾಯವಾದ ಸೈನ್ಯ ಶಿಕ್ಷಣವನ್ನು ಜಾರಿಗೆ ತರಬೇಕೆಂದು ಭಾರತೀಯ ಜನಸಂಘದ ಅಧಿವೇಶನದಲ್ಲಿ ಅಧ್ಯಕ್ಷ ಪಂಡಿತ ಶರ್ಮರವರು ಮಾತನಾಡುತ್ತಾ ನಿನ್ನೆಯದಿನ ತಿಳಿಸಿದರು.

ರಿಪಬ್ಲಿಕ್ ದಿನಾಚರಣೆ

ಮೈಸೂರು ೨೫

ನಾಳೆ ಸಂಜೆ ೫ ಗಂಟೆಗೆ ಆದಿಕರ್ನಾಟಕಪುರದಲ್ಲಿ ಮಹಾರಾಜಾ ಕಾಲೇಜಿನ ಸಮಾಜ ಸೇವಸಂಘದ ಆಶ್ರಯದಲ್ಲಿ ರಿಪಬ್ಲಿಕ್‌ದಿನವು ನಡೆಯುವುದು ಪುರಸಭಾ ಕಮೀಷನರ್ ಶ್ರೀ ಎ. ಲಕ್ಷ್ಮಣರಾವ್‌ರವರು ಅಧ್ಯಕ್ಷತೆ ವಹಿಸುವರು.

ಸೂಚನೆ

ರಿಪಬ್ಲಿಕ್ ದಿನಾಚರಣೆ ಪ್ರಯುಕ್ತ ನಾಳೆದಿನ ಸಮಾಚಾರ ಪತ್ರಿಕೆಗೆ ರಜಾ ಕೊಡಲಾಗಿದೆ.

—ವ್ಯವಸ್ಥಾಪಕ.

ಪತ್ರಿಕೆಯವರ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಭೇಟಿ

ಮೈಸೂರು ೨೫

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಪತ್ರಿಕೋದ್ಯಮದಲ್ಲಿ ವ್ಯಾಸಂಗ ಪಡೆಯುತ್ತಿರುವ ವಿದ್ಯಾರ್ಥಿಗಳು ನಿನ್ನೆ ದಿನ ನಗರದ ಪತ್ರಿಕಾ ಸಂಪಾದಕರೂ ಮತ್ತು ಪತ್ರಿಕೋದ್ಯೋಗಿಗಳನ್ನು ಆಹ್ವಾನಿಸಿ ಸತ್ಕರಿಸಿದರು.

ಪತ್ರಿಕೋದ್ಯಮ ಶಾಖೆಯ ಶಿಕ್ಷಕರಾದ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಸ್ವಾಗತಬಯಸಿ, ಕಳೆದ ೩ ವರ್ಷಗಳಿಂದ ಈ ಶಾಖೆಯು ಕೆಲಸಮಾಡುತ್ತಿದ್ದರೂ ನಗರದ ಪತ್ರಿಕೋದ್ಯೋಗಿಗಳ ಸಂಬಂಧವು ವಿದ್ಯಾರ್ಥಿಗಳಿಗೆ ಇಲ್ಲವೆಂಬ ಅಂಶವನ್ನು ತಿಳಿಸಿ ತಮ್ಮ ಶಾಖೆಯ ಚಟುವಟಿಕೆಗಳನ್ನು ವಿವರಿಸಿದರು.

ಅನಂತರ ವಿದ್ಯಾರ್ಥಿಗಳ ಕೇಳಿದ ಪ್ರಶ್ನೆಗಳಿಗೆ ಶ್ರೀಗಳಾದ ಅಗರಂ ರಂಗಯ್ಯ ಆರ್. ಗೋಪಾಲಕೃಷ್ಣರಾವ್, ಎ. ಎ. ಶಾಸ್ತ್ರಿ ಮುಂತಾದ ಪತ್ರಿಕೋದ್ಯೋಗಿಗಳು ಉತ್ತರಕೊಟ್ಟು, ಪತ್ರಿಕೋದ್ಯಮದ ಕುರಿತ ಶಿಕ್ಷಕರ ಅಗತ್ಯವನ್ನು ತಿಳಿಸಿ, ಅಂತಹವರಿಗೆ ಒಳ್ಳೆ ಭವಿಷ್ಯವಿದೆಯೆಂದೂ ದೇಶಭಾಷೆಗಳ ಪತ್ರಿಕೆಗಳು ಹೆಚ್ಚಾಗಿ ಬೆಳೆಯಬೇಕು-ಎಂದು ತಿಳಿಸಿದರು.

ಪತ್ರಿಕೋದ್ಯಮದಲ್ಲಿರುವ ವಿದ್ಯಾರ್ಥಿಗಳು ಬರಿಪಠ್ಯ ಪುಸ್ತಕಗಳನ್ನು ಓದುವುದರಿಂದ ಹೆಚ್ಚು ಪ್ರಯೋಜನವಾಗುವುದಿಲ್ಲವೆಂದೂ, ಅವರುಗಳು ಪತ್ರಿಕಾಲಯದಲ್ಲಿ ಹೆಚ್ಚು ಶಿಕ್ಷಣವನ್ನು ಪಡೆಯಬೇಕೆಂದೂ, ಅದಕ್ಕೆ ನಗರದಲ್ಲಿರುವ ಹಲವಾರು ಪತ್ರಿಕಾ ಕಛೇರಿಗಳಿಗೆ ಹೋಗಿ ಶಿಕ್ಷಣವನ್ನು ಪಡೆದರೆ, ಅವರಿಗೆ ಮುಂದೆ ಪ್ರಯೋಜನವಾಗುವುದೆಂದೂ, ವಿದ್ಯಾರ್ಥಿಗಳು ಕಾಲೇಜುಗಳಲ್ಲಿ ಆಗುವ ಸಮಾರಂಭಗಳನ್ನು ತಾವೇ ಖುದ್ದಾಗಿ ವರದಿಮಾಡಿ ಅನುಭವ ಪಡೆಯಬೇಕೆಂದೂ ಸಲಹೆ ಮಾಡಿದರು.

ಪ್ರಿನ್ಸಿಪಾಲ್ ಶ್ರೀ ಡಿಸೋಜಾರವರು ಮಾತನಾಡಿನಗರದ ಪತ್ರಿಕೋದ್ಯಮಿಗಳ ಬಗ್ಗೆ ತಮ್ಮ ಪ್ರಶಂಸೆಯನ್ನು ವ್ಯಕ್ತಪಡಿಸಿದರು. ಭಾರತದ ಪತ್ರಿಕೆಗಳು ಅಂತರರಾಷ್ಟ್ರೀಯ ವಾರ್ತೆಗೆ ಹೆಚ್ಚುಗಮನ ಕೊಡುತ್ತವೆ. ನಮ್ಮ ದೇಶದಲ್ಲಿ ನಡೆಯುವ ಘಟನೆಗಳು ಅಷ್ಟಾಗಿ ವರದಿಯಾಗುತ್ತಿಲ್ಲ. ಪರದೇಶಗಳ ಪತ್ರಿಕೆಗಳು ಹೆಚ್ಚಾಗಿ ತಮ್ಮದೇಶಗಳ ಘಟನೆಗೇ ಪ್ರಾಮುಖ್ಯತೆ ಕೊಡುತ್ತವೆ. ಇನ್ನು ಮುಂದೆ ನಮ್ಮ ಪತ್ರಿಕೆಗಳು ಇದೇ ರೀತಿ ಮಾಡಬೇಕು ಎಂದು ಅವರು ತಿಳಿಸಿದರು.

ಐ. ಎನ್. ಟಿ. ಯು. ಸಿ. ನೂತನ ಅಧಿಕಾರಿ ವರ್ಗ

ಬೆಂಗಳೂರು ೨೫

ಐ. ಎನ್. ಟಿ. ಯು. ಸಿ. ಮೈಸೂರು ಶಾಖೆಯ ನೂತನ ಅಧಿಕಾರವರ್ಗ ಚುನಾವಣೆಯು ನಡೆದು ಶ್ರೀ ಎನ್. ಕೇಶವಯ್ಯಂಗಾರ್‌ರವರು ಅಧ್ಯಕ್ಷರಾಗಿ ಪುನಃ ಚುನಾಯಿತರಾಗಿದ್ದಾರೆ.

ಶ್ರೀಗಳಾದ ಸಿ. ಜೆ. ದೇವನಾಥ್, ಡಿ. ವೆಂಕಟೇಶ್, ಹೆಚ್. ಎಸ್. ಮಾಸ್ತಿಗೌಡರು ಉಪಾಧ್ಯಕ್ಷರು, ಶ್ರೀಗಳಾದ ಕೇಶವ ಕುಲಕರ್ಣಿ ಮತ್ತು ಎ. ರಾಮಣ್ಣ, ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಜೆ. ಲಿಂಗಯ್ಯ, ಎಂ.ಎಸ್. ಸೀತಾರಾಂ, ವಿ. ಅಣ್ಣಯ್ಯ, ವಿ. ಎಸ್. ಕೃಷ್ಣಯ್ಯರ್, ಟಿ.ಎಸ್. ಸುಬ್ಬಣ್ಣ, ಕೆ. ಬಿ. ತಿಮ್ಮಯ್ಯ, ಜಿ. ವಿ. ರಾಮಾಚಾರ್, ಬಿ. ಬಾಲಯ್ಯ, ಕೆ. ಆರ್. ಪ್ರಸಾದ್ ಮತ್ತು ಹೆಚ್. ಕೆಂಪಹನುಮಯ್ಯ ಇವರು ಕಾರ್ಯಸಮಿತಿ ಸದಸ್ಯರಾಗಿಯೂ ಚುನಾಯಿತರಾದರು.

ಕಾಂಗ್ರೆಸ್ ಮಹಾಧಿವೇಶನ ಮುಕ್ತಾಯ

ಕಲ್ಯಾಣಿಯಲ್ಲಿ ಕಾಂಗ್ರೆಸ್ ಮಹಾಧಿವೇಶನವು ನಿನ್ನೆಯದಿನ ಮುಕ್ತಾಯವಾಯಿತು. ಅಲ್ಲಿಗೆ ತೆರಳಿದ್ದ ನಾಯಕರುಗಳೆಲ್ಲರೂ ಒಬ್ಬೊಬ್ಬರಾಗಿ ತಮ್ಮ ಪ್ರಾಂತ್ಯಗಳಿಗೆ ಹಿಂತಿರುಗುತ್ತಲಿದ್ದಾರೆ ಪ್ರಧಾನಿ ನೆಹರುರವರು ಈದಿನದೆಹಲಿಗೆ ಹಿಂತಿರುಗಿದರು.

ಮುಂದಿನ ಅಖಿಲಭಾರತಕಾಂಗ್ರೆಸ್ ಅಧಿವೇಶನವನ್ನು ಕಾಶ್ಮೀರದಲ್ಲಿ ನಡೆಯಬೇಕೆಂದು ಅಲ್ಲಿಯ ಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರು ಆಹ್ವಾನವಿತ್ತಿರುದುದಾಗಿ ತಿಳಿಯಬರುತ್ತದೆ.

ಸುಸಂಸ್ಕೃತ ಸಾಹಿತ್ಯಕ್ಕೆ ಪ್ರೋತ್ಸಾಹ

ಭಾರತದಲ್ಲಿ ಅನರ್ಹ ಸಾಹಿತ್ಯ ಬೆಳೆದು ಜನರ ಅಭಿರುಚಿಮಟ್ಟ ಇಳಿಯದಂತೆ ನೋಡಿಕೊಳ್ಳಲು ಭಾರತ ಸರ್ಕಾರವು ಎಲ್ಲಾ ಭಾಷೆಗಳೂ ಸುಸಂಸ್ಕೃತ ಸಾಹಿತ್ಯಕ್ಕೆ ಪ್ರೋತ್ಸಾಹ ನೀಡಲು ಒಂದು ಯೋಜನೆಯನ್ನು ತಯಾರಿಸಿದೆ.

ಚತುರ್ರಾಷ್ಟ್ರ ವಿದೇಶಾಂಗ ಸಚಿವರ ಸಮ್ಮೇಳನ

ಬ್ರಿಟನ್, ಅಮೆರಿಕಾ, ಫ್ರಾನ್ಸ್ ಮತ್ತು ರಷ್ಯಾ ವಿದೇಶಾಂಗ ಸಚಿವರ ಸಮ್ಮೇಳನವು ಪ್ಯಾರಿಸ್ಸಿನಲ್ಲಿ ಈದಿನ ಪ್ರಾರಂಭವಾಗಲಿದೆ.

ರಿಪಬ್ಲಿಕ್ ದಿನಾಚರಣೆಯ ವಿಶೇಷ ಪ್ರಸಾರ

ಮೈಸೂರು ೨೫

ರಿಪಬ್ಲಿಕ್ ದಿನಾಚರಣೆಯ ಪ್ರಯುಕ್ತ ಮೈಸೂರು ಆಕಾಶವಾಣಿಯಲ್ಲಿ ನಾಳೆ ಈ ಕೆಳಕಂಡ ವಿಶೇಷ ಪ್ರಸಾರಗಳನ್ನು ಏರ್ಪಡಿಸಲಾಗಿದೆ:—

ಬೆಳಿಗ್ಗೆ ೭ ವಂದೇಮಾತರಂ ಗೀತೆಯೊಡನೆ ಆರಂಭ, ೭-೫ ವಿ. ಕಾಳಿಂಗರಾವ್ ಮತ್ತು ವೃಂದದವರಿಂದ ರಾಷ್ಟ್ರೀಯ ಗೀತೆಗಳು, ೯-೧೫—೧೧-೧೫ ದೆಹಲಿಯಲ್ಲಿ ನಡೆಯುವ ಕಾರ್ಯಕ್ರಮಗಳ ವೀಕ್ಷಕ ವರದಿ ಮಧ್ಯಾಹ್ನ ೩ ವನಿತಾ ವಿಹಾರ, ಕೆ. ವಿ. ಪುಟ್ಟಪ್ಪನವರಿಂದ ರಚಿತವಾಗಿರುವ 'ಭಾರತ ಭೂವಿ. ನಮ್ಮ ತಾಯಿ' ಗೀತೆಯ ಗೋಷ್ಠಿಗಾನ, ಬೆಟಗೇರಿ ಕೃಷ್ಣಮೂರ್ತಿರವರಿಂದ 'ಬೆಳವಾಡಿ ಮಲ್ಲಮ್ಮ' ನಾಟಕ. ಸಂ. ೬-೩೦ "ಭಾರತದ ಜನತಾ ಸರ್ಕಾರ" ಸಂಭಾಷಣೆ ೭-೫ ಒರಿಸ್ಸಾ, ಗುಜರಾತ್, ಉತ್ತರಪ್ರದೇಶ ಮತ್ತು ಬಿಹಾರಿನ ಗೀತೆಗಳು ೭-೨೦ ರಿಪಬ್ಲಿಕ್‌ದಿನದ ಯೋಜನೆಗಳು, ಭಾಷಣಮಾಲೆ. ೯-೧೫ ರಾಜಪ್ರಮುಖರ ಸಂದೇಶ. ೯-೩೦ ಬೆಂಗಳೂರಿನಲ್ಲಿ ನಡೆಯುವ ಕಾರ್ಯಕಲಾಪಗಳ ವರದಿ ೯-೪೫ ಎಂ. ಎ. ಬಾಬು, ಎಸ್. ಅನಂತನಾರಾಯಣ,ಮತ್ತು ಎಸ್ ವಿ ಪರಮೇಶ್ವರಭಟ್ಟರ ಕವನಗಳ ಗಾನ.

ರಿಪಬ್ಲಿಕ್ ದಿನಾಚರಣೆ

ಮೈಸೂರು ೨೫

ಭಾರತದ ಆದ್ಯಂತವೂ ಆಚರಿಸುವ ರಿಪಬ್ಲಿಕ್ ದಿನಾಚರಣೆಯ ಅಂಗವಾಗಿ ಮೈಸೂರು ಪುರಸಭೆಯವರು ನಾಳೆಯ ದಿನ ಬೆಳಿಗ್ಗೆ ೯ ಗಂಟೆಗೆ ರಂಗಾಚಾರ್ಲು ಸ್ಮಾರಕ ಭವನದ ಆವರಣದಲ್ಲಿ ಧ್ವಜಾರೋಹಣ ಸಮಾರಂಭವನ್ನೂ ನಂತರ ಪೋಲೀಸ್, ಸ್ಕೌಟ್, ರೋವರ್ಸ್, ಗರ್ಲ್‌ಗೈಡ್ಸ್ ಮತ್ತು ಇತರ ದಳಗಳಿಂದ ಧ್ವಜವಂದನೆಯನ್ನೂ ಸಹ ಏರ್ಪಡಿಸಿರುತ್ತಾರೆ.

ಸಾಯಂಕಾಲ ೫ ಘಂಟೆಗೆ ಅದೇ ಆವರಣದಲ್ಲಿ ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ ಹೆಚ್. ಕೆ. ವೀರಣ್ಣಗೌಡರ ಅಧ್ಯಕ್ಷತೆಯಲ್ಲಿ ಸಭೆ ನಡೆಯುತ್ತೆ. ಸಂಗೀತ, ಪದ್ಯವಾಚನ, ಸ್ಕೌಟ್‌ದಳಗಳ ಪ್ರದರ್ಶನ ವಗೈರೆ ನಡೆಯಲೂ ಸಹ ಏರ್ಪಡಿಸಿರುತ್ತೆ.

ಮಹಾಜನಗಳು ದಯಮಾಡಿಸಿ ಸದರಿ ಸಮಾರಂಭವು ಯಶಸ್ವಿಯಾಗಿ ನಡೆಯಲು ಸಹಕರಿಸಬೇಕಾಗಿ ಪುರಸಭಾಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿಯವರು ಕೋರುತ್ತಾರೆ.

ನಡು ಹಗಲಿನಲ್ಲಿ ದರೋಡೆ

ಪೇರಿ ಜಿಲ್ಲೆಯ ಗೋವಾಗೋಕರ್ಣನಾಥ್ ಎಂಬಲ್ಲಿರುವ ಇಂಪೀರಿಯಲ್ ಬ್ಯಾಂಕಿಗೆ ನಡು ಹಗಲಿನಲ್ಲಿ ಮೊನ್ನೆದಿವ ೬ ಮಂದಿ ಶಸ್ತ್ರಸಜ್ಜಿತ ದರೋಡೆಗಾರರು ನುಗ್ಗಿ ೧,೯೦,೦೦೦ ರೂಪಾಯಿಗಳ ನಗದನ್ನು ಅಪಹರಿಸಿಕೊಂಡು ಹೋಗಿದ್ದಾರೆ.

ಬೊಂಬಾಯಿನಲ್ಲಿ ಉಚಿತ ಪ್ರಾಥಮಿಕ ಶಿಕ್ಷಣ

ಮುಂದಿನ ಸಾಲಿನಿಂದ ಜಾರಿಗೆ ಬರಲಿದೆ

ಬೊಂಬಾಯಿ ಪ್ರಾಂತ್ಯದಾದ್ಯಂತ ಉಚಿತ ಪ್ರಾಥಮಿಕ ಶಿಕ್ಷಣವನ್ನು ಕೊಡಲು ಅಲ್ಲಿಯ ಸರ್ಕಾರವು ನಿರ್ಧರಿಸಿದೆ. ಅಲ್ಲದೆ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿಯೂ ಮಾಡಲಾಗಿದೆ. ಈ ಹೊಸ ಯೋಜನೆಯು ಶಾಲೆಗಳು ಮುಂದಿನವರ್ಷದಿಂದ ಜಾರಿಗೆ ಬರುತ್ತದೆ. ಈ ಸಂಬಂಧದಲ್ಲಿ ತಕ್ಕ ವ್ಯವಸ್ಥೆಗಳನ್ನೆಲ್ಲಾ ಸರ್ಕಾರವು ಈಗಾಗಲೇ ಏರ್ಪಾಡು ಮಾಡುತ್ತಿದೆ.

ಭಾರತಕ್ಕೆ ಬ್ರಿಟನ್ ಆರ್ಥಿಕ ಸಚಿವ

ಬ್ರಿಟನ ಆರ್ಥಿಕ ಸಚಿವರಾದ ಮಿ॥ ಬಟ್ಲರ್‌ರವರು ಸಿಡ್ನಿಯಲ್ಲಿ ಕಾಮನ್ವೆಲ್ತ್ ರಾಷ್ಟ್ರಗಳ ಆರ್ಥಿಕಸಚಿವ ಸಮ್ಮೇಳನವನ್ನು ಪೂರೈಸಿಕೊಂಡು ನಿನ್ನೆಯದಿನ ಕಲ್ಕತ್ತಾಕ್ಕೆ ಆಗಮಿಸಿದರು. ಈರಾತ್ರಿ ದೆಹಲಿಗೆ ಆಗಮಿಸಿ, ನಾಳೆಯದಿನ ನಡೆಯಲಿರುವ ರಿಪಬ್ಲಿಕ್ ದಿನಾಚರಣೆಯಲ್ಲಿ ಭಾಗವಹಿಸಿ ೨೭ ನೇ ತಾರೀಖು ಕರಾಚಿಗೆ ತೆರಳುವರು.

ರಾಷ್ಟ್ರ ನಿರ್ಮಾಣಕ್ಕೆ ಜನರು ಶ್ರಮಿಸಬೇಕು

ಭಾರತದ ಜನರು ಎಂತಹ ವಿಪತ್ತುಗಳು ಬಂದರೂ ಹೆದರದೆ ರಾಷ್ಟ್ರನಿರ್ಮಾಣದ ಕಾರ್ಯದಲ್ಲಿ ಬದ್ಧಕಂಕಣರಾಗಬೇಕು ಎಂದು ಪ್ರಧಾನಿ ನೆಹರೂ ಭಾರತ ಕಾಂಗ್ರೆಸ್ಸಿನ ವಿಷಯ ನಿಯಾಮಕ ಸಮಿತಿಯ ಮುಕ್ತಾಯ ಭಾಷಣದಲ್ಲಿ ಕೋರಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೫—೧—೧೯೫೪

ಪಲ್ಲ	ರೂ. ಅ	ರೂ. ಅ
ಕಡಲೇಕಾಯಿ	೨೧—೮	೨೪—೧೦
ಎಳ್ಳು	—	—
ಹರಳು	೩೮—	೪೧—೨
ಹೊಂಗೆಬೀಜ	೨೪—	೨೫—
ಹುಚ್ಚೆಳ್ಳು	೩೯—೨	೪೪—೧೨
ಹುರುಳಿ	೨೯—	೩೨—೬
ಉದ್ದು	—	—
ಹೆಸರು	೩೦—	೪೪—೧೪
ಅವರೆ	೩೫—	೩೮—
ಕೊತ್ತಂಬರಿ	೨೬—೪	೨೮—೧೪
ಕಡಲೆ	—	—
ಅಲಸಂದೆ	೨೮—೨	೪೬—
ತೊಗರಿ	೨೦—೮	೨೪—
ಹುಣಸೆಹಣ್ಣು	೬—	೧೧—೧೨
ಮೆಣಸಿನಕಾಯಿ	೨೦—೪	೩೫—೬
ಸೀಗೆಕಾಯಿ	೨—೧೨	೫—೬
ಬೆಲ್ಲ	—	—
ತೆಂಗಿನಕಾಯಿ	೧೪೫—	೨೪—

ದೇಶದ ಪ್ರಗತಿಗೆ ಕಾರ್ಮಿಕರು ಶ್ರಮಿಸಬೇಕು

ಬೆಂಗಳೂರು ೨೫

ಕಾರ್ಮಿಕರೇ ಆಗಲಿ, ಮಾಲೀಕರೇ ಆಗಲಿ ನಾವೇ ದೊಡ್ಡವರು ಎಂಬ ಭಾವನೆಯಿಂದ ವರ್ತಿಸಬಾರದು ಎಲ್ಲರೂ ಸಹಕಾರ ಮನೋಭಾವನೆಯಿಂದ ಕೆಲಸ ಮಾಡಿ, ದೇಶದ ಸಂಪತ್ತನ್ನು ಹೆಚ್ಚಿಸಬೇಕು. ಲಾಭದ ಹಂಚಿಕೆಯಿಂದ ಕೆಲಸದ ಯೋಗ್ಯತಾನುಸಾರ ಹಂಚಿಕೆಯಾಗಬೇಕು ಕಾರ್ಖಾನೆಯು ಎಲ್ಲರಿಗೂ ಸೇರಿದ ಕುಟುಂಬದ ಆಸ್ತಿ ಎಂಬ ಭಾವನೆಯು ಮೂಡಬೇಕು-ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆಯದಿನ ಐ. ಎ. ಟಿ. ಯು. ಸಿ.ಮೈಸೂರು ಶಾಖೆಯ ಸಮ್ಮೇಳನ ಆರಂಭೋತ್ಸವದಲ್ಲಿ ತಿಳಿಸಿರುವರು. ಸಹಕಾರ ಗುರಿಯನ್ನು ಗಮನದಲ್ಲಿಟ್ಟುಕೊಂಡು ಪ್ರತಿಯೊಬ್ಬರು ಶಾಂತಿಯುತ ಮತ್ತು ರಾಜ್ಯಾಂಗ ಬದ್ಧ ವಿಧಾನಗಳನ್ನು ಅನುಸರಿಸಿ ಶ್ರಮಿಸಿದೆ ಶೋಷಣರಹಿತ ಸಮಾಜ ಸ್ಥಾಪನೆಗೆ ಸುಲಭವಾಗುವುದೆಂದೂ ಅವರು ಒತ್ತಿಹೇಳಿದ್ದಾರೆ. ಮೈಸೂರಿನಲ್ಲಿ ಕಾರ್ಮಿಕರು ಸುವ್ಯವಸ್ಥಿತ ರೀತಿಯಿಂದ ಕೆಲಸ ಮಾಡುತ್ತಿರುವುದು ಹೆಮ್ಮೆ ಎಂದೂ ಅವರು ತಿಳಿಸಿದ್ದಾರೆ.

ನೇತಾಜಿಯವರ ಜನ್ಮದಿನೋತ್ಸವ

ಮೈಸೂರು ೨೫

ನಗರಸೇವಾದಳ ಸುಭಾಷ್ ಶಾಖೆಯ ಆಶ್ರಯದಲ್ಲಿ ಶನಿವಾರ ದಸರ ವಸ್ತುಪ್ರದರ್ಶನದ ಆವರಣದಲ್ಲಿ ನೇತಾಜಿ ಸುಭಾಷ್‌ರವರ ಜನ್ಮದಿನೋತ್ಸವವನ್ನು ಆಚರಿಸಿದರು. ವಿದ್ಯಾವರ್ಧಕ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಸಿ. ನರಸಿಂಗರಾವ್‌ರವರು ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಮಹಾರಾಜ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್‌ರವರಾದ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಸುಭಾಷ್‌ರವರ ಜೀವನಚರಿತ್ರೆಯ ಬಗ್ಗೆ ಭಾಷಣ ಮಾಡಿದರು.

ರಾಷ್ಟ್ರಾಧ್ಯಕ್ಷರ ಸಂದೇಶ

ರಿಪಬ್ಲಿಕ್ ದಿನಾಚರಣೆಯ ಪ್ರಯುಕ್ತ ರಾಷ್ಟ್ರಾಧ್ಯಕ್ಷರು ಈ ರಾತ್ರಿ ೮-೩೦ ಗಂಟೆಗೆ ಭಾರತ ಪ್ರಜೆಗಳಿಗೆ ದೆಹಲಿಯ ರೇಡಿಯೋ ಕೇಂದ್ರದ ಮೂಲಕ ಒಂದು ಸಂದೇಶವನ್ನು ನೀಡಲಿದ್ದಾರೆ.

ನೆಹ್ರೂ ನೀತಿಗೆ ಜನಸಂಘದ ಸ್ವಾಗತ

ಬೊಂಬಾಯಿನಲ್ಲಿ ನಿನ್ನೆ ಪ್ರಾರಂಭವಾದ ಅಖಿಲ ಭಾರತ ಜನಸಂಘ ಮಹಾಸಭೆಯು ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವೆ ಆಗಲಿರುವ ಒಪ್ಪಂದ ವಿಷಯದಲ್ಲಿ ಪ್ರಧಾನಿ ನೆಹರೂರವರ ನಿಲುವನ್ನು ಸ್ವಾಗತಿಸಿ, ಈ ಸೈನ್ಯ ಒಪ್ಪಂದವು ಭಾರತ ಮತ್ತು ಆಗ್ನೇಯ ಏಷ್ಯಾ ರಾಷ್ಟ್ರಗಳ ಹಿತಕ್ಕೆ ಧಕ್ಕೆ ತರುತ್ತದೆ—ಎಂದು ತಿಳಿಸಿದೆ.

ತಿರುಪತಿಯಲ್ಲಿ ವಿಶ್ವವಿದ್ಯಾನಿಲಯ

ತಿರುಪತಿಯಲ್ಲಿ ಒಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಆಂಧ್ರಸರ್ಕಾರವು ಒಂದು ಸಮಿತಿಯನ್ನು ನೇಮಿಸಿದೆ ತಿರುಪತಿ ದೇವಸ್ಥಾನದ ನಿಧಿಯಿಂದ ಇದನ್ನು ಸ್ಥಾಪಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ.

City Municipal Office,
Mysore Dated 18-1-1954

NOTIFICATION

Re: Quotations for the supply of Articles as detailed below for the year 1954--1955.

Notice is hereby given that sealed Tenders with samples will be received by the undersigned at the office for the supply of articles mentioned below for the year 1954-55 on or before 16th February 1954.

1. Each Tender must be accompanied by a Chellan for having deposited Rs. 100/- in cash to the Municipal Treasury as earnest money in default of which tenders will be rejected.

2. Particulars may be had at the office on all working days or on a reference to the office.

DETAILS

Particulars.	Deposit.
1. Phenyle (1000 Gallons)	Rs. 100/-
2. Stationery Articles.	Rs. 100/-

(Sd) N. Lakshman Rao,
Municipal Comissioner.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೨೩

೨೭-೧-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತಾದ್ಯಂತ ಗಣರಾಜ್ಯ ದಿನಾಚರಣೆ

ಕಳೆದ ನಾಲ್ಕು ವರ್ಷಗಳ ಪ್ರಗತಿ ಬಗ್ಗೆ ಮೆಚ್ಚಿಗೆ

ಮೈಸೂರು ೨೬

ದೇಶಾದ್ಯಂತವೂ ಗಣರಾಜ್ಯ ದಿನಾಚರಣೆಯು ನಿನ್ನೆಯದಿನ ಅತ್ಯಂತ ವೈಭವವಾಗಿ ನಡೆಯಿತು. ಧ್ವಜಾರೋಹಣ, ಭಾರಿ ಮೆರವಣಿಗೆ, ಬಹಿರಂಗ ಸಭೆಗಳು, ವಿವಿಧ ವಿನೋದಾವಳಿ ಅನೇಕ ಪ್ರಮುಖ ನಗರಗಳಲ್ಲಿ ವಿದ್ಯುದ್ದೀಪೋತ್ಸವ ಮುಂತಾದವು ನಡೆದುವು.

ಮೈಸೂರು ನಗರದಲ್ಲಿ ನಿನ್ನೆಯದಿನ ಬೆಳಿಗ್ಗೆ ೯ ಗಂಟೆಗೆ ಸರಿಯಾಗಿ ಪುರಸಭಾಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿಯವರು ಪುರಭವನ ಮೈದಾನದಲ್ಲಿ ಧ್ವಜಾರೋಹಣ ನಡೆಸಿದರು. ಪೋಲೀಸ್, ಆರಮ್ಡ್ ರಿಸರ್ವ್ ಪೋಲೀಸ್, ಸ್ಕೌಟುಗಳು, ಸೇವಾದಳ, ಗರ್ಲ್ ಗೈಡುಗಳು ಮುಂತಾದವರುಗಳಿಂದ ಜಿಲ್ಲಾಧಿಕಾರಿ ಶ್ರೀ ಎಂ ಎಸ್. ಸ್ವಾಮಿನಾಥನ್‌ರವರು ವಂದನೆ ಸ್ವೀಕರಿಸಿದರು.

ಸಂಜೆ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರ ಅಧ್ಯಕ್ಷತೆಯಲ್ಲಿ ಭಾರಿ ಬಹಿರಂಗ ಸಭೆಯು ನಡೆಯಿತು ಸಾವಿರಾರುಜನ ಸೇರಿದ್ದರು.

ಬೆಂಗಳೂರಿನಲ್ಲಿ ನಿನ್ನೆಯದಿನ ಬೆಳಿಗ್ಗೆ ರಾಜಪ್ರಮುಖರು ರೇಸ್ ಕೋರ್ಸಿನಲ್ಲಿ ನಡೆದ ಪೆರೇಡ್‌ನಲ್ಲಿ ವಂದನೆಯನ್ನು ಸ್ವೀಕರಿಸಿದರು. ಸಂಜೆ ೫ ಗಂಟೆಗೆ ಸಂಪಂಗಿ ಸ್ಟೇಡಿಯಂನಲ್ಲಿ ವಿವಿಧ ವಿನೋದಾವಳಿ ನಡೆಯಿತು. ಕಾರ್ಪೊರೇಷನವರು ಸುಮಾರು ೪೦೦೦೦ ಬಾಲಕ ಬಾಲಕಿಯರಿಗೆ ಸಿಹಿ ತಿಂಡಿಗಳನು ಹಂಚಿದರು.

ರಾಷ್ಟ್ರದ ನಾನಾಭಾಗಗಳಲ್ಲಿ

ದೆಹಲಿಯಲ್ಲಿ ನಿನ್ನೆಯದಿನ ಗಣರಾಜ್ಯ ದಿನಾಚರಣೆಯಲ್ಲಿ ರಾಷ್ಟ್ರಾಧ್ಯಕ್ಷರು ನೌಕಾದಳ, ವಿಮಾನದಳ, ಪದಾತಿ ಮುಂತಾದುವುಗಳಿಂದ ಗೌರವ ರಕ್ಷೆಯನ್ನು ಸ್ವೀಕರಿಸಿದರು. ಈ ದಿನಾಚರಣೆಯ ಸೂಚನೆಗಾಗಿ ೩೧ ಕುಶಾಲ ತೋಪುಗಳನ್ನು ಹಾರಿಸಲಾಯಿತು. ದೇಶದ ನಾನಾ ಭಾಗಗಳಿಂದ ಗ್ರಾಮಕಲಾ ನೃತ್ಯ ತಂಡದವರು ಇದರಲ್ಲಿ ಭಾಗವಹಿಸಿದ್ದರು. ಸಂಜೆ ಭಾರಿ ಸತ್ಕಾರ ಕೂಟವೊಂದು ನಡೆಯಿತು.

ಕಲ್ಕತ್ತಾ, ಮದರಾಸ್, ಬೊಂಬಾಯಿ, ಲಕ್ನೊ, ಮುಂತಾದ ಪ್ರಮುಖ ಪಟ್ಟಣಗಳಲ್ಲಿಯೂ, ಗ್ರಾಮಾಂತರ ಪ್ರದೇಶಗಳಲ್ಲಿಯೂ ಗೌರ್ನರುಗಳು, ರಾಜಪ್ರಮುಖರುಗಳು, ಮುಖ್ಯಮಂತ್ರಿಗಳು ಮುಂತಾದವರಿಂದ ಧ್ವಜಾರೋಹಣ,ಸಂದೇಶಗಳು,ದೇಶಸೇವೆಗಾಗಿ ಪ್ರತಿಜ್ಞೆಗಳು ಮುಂತಾದುವು ನಡೆದುವು.

ಕೊಚ್ಚಿ, ಬೊಂಬಾಯಿ ಮುಂತಾದ ರೇವುಪಟ್ಟಣಗಳಲ್ಲಿ ಹಡಗುಗಳ ಶೃಂಗಾರ ಮತ್ತು ಅವುಗಳ ಪ್ರದರ್ಶನ ನಡೆದುವು.

ದೇಶದಲ್ಲಿ ಈಗ ನಡೆಯುತ್ತಿರುವ ಪಂಚವಾರ್ಷಿಕ ಯೋಜನಾ ಕಾರ್ಯಕ್ರಮಗಳ ವಿವರಣೆ ಮತ್ತು ಅವುಗಳ ವಿಸ್ತರಣಾ ಕಾರ್ಯ ಪ್ರಾರಂಭ ಮುಂತಾದ ಅನೇಕ ಕಾರ್ಯಗಳು ಯಶಸ್ವಿಯಾಗಿ ನಡೆದುವು

ವಿದೇಶಗಳಲ್ಲಿ

ಅಮೆರಿಕಾ, ಜಪಾನ್, ಥೈಲೆಂಡ್, ಇರಾನ್, ಇರಾಕ್ ಮುಂತಾದ ವಿಶ್ವದ ನಾನಾರಾಷ್ಟ್ರಗಳು ಭಾರತಕ್ಕೆ ಈ ಸಂದರ್ಭದಲ್ಲಿ ಶುಭ ಸಂದೇಶಗಳನ್ನು ಕಳುಹಿಸಿದುವು. ಭಾರತವು ತನ್ನ ಈ ನಾಲ್ಕುವರ್ಷಗಳು ಸಲ್ಲಿಸಿದ ಕಾರ್ಯಗಳಬಗ್ಗೆ ಅನೇಕವು ಮೆಚ್ಚಿಗೆಯನ್ನು ವ್ಯಕ್ತಪಡಿಸಿವೆ.

ಭಾರತವು ಶಾಂತಿಗಾಗಿ ಶ್ರಮಿಸುತ್ತಲಿರುವುದನ್ನು, ಕೊರಿಯದಲ್ಲಿ ನಡೆಸಿದಕಾರ್ಯವನ್ನು ಪ್ರಶಂಸಿಸಿವೆ.

ಜಪಾನ್, ಕಾಬೂಲ್, ಕರಾಚಿ, ಡಕ್ಕ, ಕೈರೋ, ಕೊಲೊಂಬೊ ಮುಂತಾದ ನಾನಾ ವಿದೇಶೀಪಟ್ಟಣಗಳಲ್ಲಿ ಈ ಸಮಾರಂಭವನ್ನು ಅಲ್ಲಿಯ ಭಾರತೀಯರು ಮತ್ತು ಭಾರತಸರ್ಕಾರ ಪ್ರತಿನಿಧಿಗಳು ಏರ್ಪಡಿಸಿದ್ದರು. ಇದರಲ್ಲಿ ಅಲ್ಲಿಯ ಅನೇಕ ಪ್ರಮುಖ ನಾಯಕರುಗಳು ಭಾಗವಹಿಸಿದ್ದರು.

ಮಲೇರಿಯಾ ನಿವಾರಣಾ ಕಾರ್ಯ

ಭಾರತದಲ್ಲಿ ಮಲೇರಿಯಾ ರೋಗದಿಂದ ಪ್ರತಿವರ್ಷವೂ ೭೫ ಲಕ್ಷ ಜನರು ಪೀಡಿತರಾಗಿ ಸುಮಾರು ೮ಲಕ್ಷ ಜನರು ಸಾಯುತ್ತಿರುವರೆಂದು ತಿಳಿಯಬರುತ್ತದೆ.

ಸರ್ಕಾರವು ಕೈಗೊಂಡಿರುವ ರಾಷ್ಟ್ರೀಯ ಮಲೇರಿಯಾ ನಿವಾರಣಾ ಕಾರ್ಯಕ್ರಮದ ಪ್ರಕಾರ ಕಳೆದ ಏಪ್ರಿಲ್‌ನಿಂದ ನವೆಂಬರ್ ವರೆಗೆ ೪೩೦ ಲಕ್ಷ ಜನಕ್ಕಿಂತ ಹೆಚ್ಚಾಗಿ ಈ ರೋಗದಿಂದ ರಕ್ಷಿಸಿರುವುದಾಗಿ ವರದಿಯಾಗಿದೆ.

ಈ ಅವಧಿಯಲ್ಲಿ ೮೫ ಲಕ್ಷ ಮನೆಗಳಿಗೆ ರೋಗ ನಿರೋಧ ದ್ರಾವಕವನ್ನು ಹಾಕಲಾಗಿದೆ. ೩,೪೫,೦೦೦ ಮಲೇರಿಯಾ ರೋಗಗ್ರಸ್ತರಿಗೆ ಚಿಕಿತ್ಸೆ ಮಾಡಲಾಗಿದೆ.

ಮುಂದಿನ ೩ ವರ್ಷಗಳ ಕಾಲದ ಈ ರೋಗನಿವಾರಣಾಕಾರ್ಯಕ್ಕಾಗಿ ಆಯೋಜನಾಸಮಿತಿ ೧೦ ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿದೆ. ಮಲೇರಿಯಾ ರೋಗ ನಿವಾರಣೆಗಾಗಿ ಈಗ ಸರ್ಕಾರವು ಕೈಗೊಂಡಿರುವ ಯೋಜನೆಯು ವಿಶ್ವದಲ್ಲೆಲ್ಲಾ ಒಂದು ಭಾರಿ ಯೋಜನೆಯಾಗಿದೆ.

ಗಣರಾಜ್ಯ ದಿನಾಚರಣೆದಿನ ಶ್ರೀಮನ್ಮಹಾರಾಜರ ಸಂದೇಶ

ಮೈಸೂರು ೨೬

ಈದಿನ ಭಾರತವು ಗಣರಾಜ್ಯವಾಗಿ ೫ ನೇ ವರ್ಷವನ್ನು ಆರಂಭಿಸುತ್ತದೆ. ಇದು ಸಂತೋಷ ಮತ್ತು ಉತ್ಸಾಹ ಸಮಾರಂಭ ನಡೆಸುವ ದಿನವಾಗಿದೆ ಮತ್ತು ನಾವು ಈಗ ಸಂತೋಷದಿಂದ ಅನುಭವಿಸುತ್ತಲಿರುವ ಸ್ವಾತಂತ್ರ್ಯವನ್ನು ಗಳಿಸಿಕೊಡಲು ಶ್ರಮಿಸಿದ ನಾಯಕರನ್ನು ಅತ್ಯಂತ ಗೌರವದಿಂದ ಸ್ಮರಿಸಿಕೊಳ್ಳುವ ಸಮಯವಾಗಿದೆ. ಎಂದು ಶ್ರೀಮನ್ಮಹಾರಾಜರು ನಿನ್ನೆಯ ದಿನದ ಭಾರತಗಣ ರಾಜ್ಯದಿನದ ಸಂಬಂಧದಲ್ಲಿ ಎ. ಐ. ಆರ್. ಮೂಲಕ ಸಂದೇಶವನ್ನು ನೀಡುತ್ತ ತಿಳಿಸಿದ್ದಾರೆ.

ಅವರು ತಮ್ಮ ಸಂದೇಶದಲ್ಲಿ ಈ ರೀತಿ ತಿಳಿಸಿರುವರು:—

ಕಳೆದ ನಾಲ್ಕುವರ್ಷಗಳಲ್ಲಿ ನಮಗೆ ಒದಗಿದ ತೊಂದರೆಗಳು ಮತ್ತು ಪರೀಕ್ಷಾ ಕಾಲದಲ್ಲಿ ರಾಜ್ಯದ ಆಡಳಿತವನ್ನು ವಹಿಸಿಕೊಂಡಿರುವವರು, ಭಾರತವನ್ನು ಕ್ಷೇಮರಾಜ್ಯವನ್ನಾಗಿ ಮಾಡಿ ಜನತೆಯ ಸುಖಕ್ಕಾಗಿ ವಿಶೇಷವಾಗಿ ಶ್ರಮಿಸಿದ್ದಾರೆ ರಾಷ್ಟ್ರೀಯ ಯೋಜನೆಯಲ್ಲಿ ಈಗ ಭಾರತೀಯರಿಗೆ ನೂತನ ಜೀವನ ಉದ್ಭವಿಸುತ್ತದೆ. ಈ ಯೋಜನೆಯು ಪ್ರಜಾಪ್ರಭುತ್ವ ರೀತ್ಯ ಆರ್ಥಿಕಾಭಿವೃದ್ಧಿಗಾಗಿ ಕೈಗೊಂಡಿರುವ ಬೃಹತ್ ಯೋಜನೆಯಾಗಿದೆ. ಈ ಯೋಜನೆಯು ಯಶಸ್ವಿಯಾಗಲು ಸರ್ವರೂ ತಮ್ಮ ಸಹಾಯ ಮತ್ತು ಸಹಕಾರ ನೀಡುವುದು ಅತ್ಯಗತ್ಯ. ದೇಶಕ್ಕೆ ಈಗ ನಿಸ್ಪೃಹತೆಯಿಂದ ಕೆಲಸ ಮಾಡುವವರು ಬೇಕಾಗಿದ್ದಾರೆ. ಆರಾಮ ಕುರ್ಚಿಯಲ್ಲಿ ಕುಳಿತು ಟೀಕೆ ಮಾಡುವ ದಿನಗಳು ಕಳೆದುಹೋದುವು. ಪ್ರತಿಯೊಬ್ಬ ಪ್ರಜೆಯು ಶ್ರಮಜೀವನಕ್ಕೆ ಇಳಿದು ದುಡಿಯಬೇಕಾಗಿದೆ. ಕರ್ತವ್ಯಪಾಲನೆಯೇ ನಿಜವಾದ ಲಕ್ಷಣ ಮಾತುಗಳು ಬರೀ ನೆರಳುಮಾತ್ರ. ನಮ್ಮ ನೂತನ ಜೀವನದಲ್ಲಿ ಭಾರತದ ಶ್ರೇಷ್ಠ ಪುತ್ರರು ನಮ್ಮ ಭವಿಷ್ಯವನ್ನು ನಿರ್ಧರಿಸಲು ಇರುವುದು ನಮ್ಮ ಅದೃಷ್ಟ. ಭಾರತದ ಪುನರ್ವ್ಯವಸ್ಥೆಗೆ ಅವರಿಗೆ ಶಕ್ತಿ ಬರುವಂತೆ ನಾವು ಸಹಕಾರ ನೀಡುವುದು ಪ್ರಮುಖ ಕರ್ತವ್ಯ ನಮ್ಮ ದೇಶಕ್ಕೆ ಶಕ್ತಿ ಮತ್ತು ಐಕ್ಯತೆ ಬೇಕಾಗಿದೆ. ನಾವು ನಮ್ಮ ಭಾಷೆ, ಪದ್ಧತಿ ಮುಂತಾದುವಕ್ಕೆ ತಕ್ಕಷ್ಟು ಪ್ರಾಮುಖ್ಯತೆಯನ್ನು ಮಾತ್ರ ಕೊಡೋಣ ನಮ್ಮ ಏಕಮಾತ್ರ ಸಾಂಸ್ಕೃತಿಯ ಐಕ್ಯತೆ ಮತ್ತು

ಮುಖ್ಯಮಂತ್ರಿಯವರ ಸಂದೇಶ

ಪೂಜ್ಯಗಾಂಧಿಜಿಯವರು, ಹರಿಜನ ಪತ್ರಿಕೆಗಾಗಿ ಬರೆದ ಕಡೆಯ ಸಂಪಾದಕೀಯ ಲೇಖನದಲ್ಲಿ ಕಾಂಗ್ರೆಸ್ ಸಂಸ್ಥೆಯನ್ನು ಅಳಿಯಗೊಡಬಾರದು ರಚನಾತ್ಮಕ ಕಾರ್ಯದಲ್ಲಿ ಜನರು ತೊಡಗಬೇಕು ಎಂದು ಹೇಳಿರುವುದನ್ನು ಉಲ್ಲೇಖಿಸುತ್ತ, ಗಣರಾಜ್ಯ ದಿನಾಚರಣೆಯ ಸಂಬಂಧದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಈ ರೀತಿ ಒಂದು ಸಂದೇಶವನ್ನು ಇತ್ತಿದ್ದಾರೆ.

ಜನರ ಮನಸ್ಸನ್ನು ಉದ್ರೇಕಗೊಳಿಸಿ ಹುರಿದುಂಬಿಸುವ ಚಳುವಳಿ, ಭಾಷಣ, ಘೋಷಣೆಗಳು, ಕಾರಾಗೃಹ ವಾಸ, ತ್ಯಾಗ, ಇವುಗಳ ಕಾಲ ಆಗಿಹೋಯಿತು. ಈಗ ರಚನಾತ್ಮಕ ಕಾರ್ಯಗಳ ನಿರ್ವಹಣೆಗಾಗಿ ನಾವು ಸ್ಥಿರಮನಸ್ಕರಾಗಿ ಯೋಚಿಸಬೇಕು. ಶ್ರಮಪಟ್ಟು ಶಿಸ್ತಿನಿಂದ ದುಡಿಯಬೇಕು. ಇದು ಕಷ್ಟತರವಾದ ಕೆಲಸ ಆದ್ದರಿಂದ ನಮ್ಮ ಮನಸ್ಸು ಚಂಚಲವಾಗಿದೆ, ಗೊಣಗಾಟಕ್ಕೂ, ದ್ವೇಷ ದೂಷಣೆಗಳಿಗೂ ಎಡೆಗೊಟ್ಟಿದೆ. ಈ ಮನೋವೃತ್ತಿಯನ್ನು ಬಿಟ್ಟು ನಮ್ಮ ದೇಶದ ಮತ್ತು ಜನರ ಪರಿಸ್ಥಿತಿಯನ್ನು ಸ್ಥಿಮಿತ ಮನಸ್ಸಿನಿಂದ ಅಳೆಯಬೇಕು, ಅರಿಯಬೇಕು. ಅವರ ಸರ್ವತೋಮುಖವಾದ ಅಭಿವೃದ್ಧಿಗಾಗಿ ದುಡಿಯಬೇಕು. ದುಡಿಯುವವನು ದೊಡ್ಡವನು.

ನಾವೆಲ್ಲರೂ ಭಾರತೀಯರು ಎಂಬುದನ್ನು ಸದಾಜ್ಞಾಪಕದಲ್ಲಿಟ್ಟುಕೊಂಡು ಪ್ರಾಂತೀಯತೆ ಭಾವನೆಯನ್ನು ಜಯಿಸೋಣ.

ಭಾರತವು ಸ್ವಾತಂತ್ರಗಳಿಸಿದಾಗಿನಿಂದ ರಾಜಕೀಯದಲ್ಲಿ ಸಣ್ಣ ರಾಜ್ಯವೆನಿಸಿಕೊಂಡಿದ್ದಾಗ್ಯೂ ಪುರಾತನ ಸಾಂಸ್ಕೃತಿಯ ಅಸ್ತಿತ್ವವನ್ನು ಹೊಂದಿದೆ ಅದು ವಯಸ್ಸಿನ ಬುದ್ಧಿ ಮತ್ತು ವಯಸ್ಕರಿಗೆ ಶಕ್ತಿ ಕೊಡುತ್ತದೆ ದೇವರು ನಮಗೆ ಕೊಟ್ಟಿರುವುದನ್ನು ಸದುಪಯೋಗಪಡಿಸಿಕೊಂಡು, ನಮ್ಮ ನಾಯಕರ ಸ್ಫೂರ್ತಿ ಮತ್ತು ಆದರ್ಶವನ್ನು ಅನುಕರಿಸಿ ಶಾಂತಿ ಮತ್ತು ಪ್ರಗತಿ ಮಾರ್ಗದಲ್ಲಿ ಮುನ್ನುಗ್ಗೋಣ. ಈ ಸಮಾರಂಭವನ್ನು ಸಾಮಾನ್ಯವಾಗಿ ನಡೆಸುವ ವರ್ಷ ಸಮಾರಂಭಗಳಂತೆ ಕಳೆಯದೆ ಸಹಕಾರ, ಸಾರ್ವಜನಿಕಶಕ್ತಿ ಮತ್ತು ಸಹನೆಯ ಪ್ರಗತಿಯಿಂದ ಉಪಯುಕ್ತ ಜೀವನಕ್ಕಾಗಿ ನಮ್ಮ ಶಕ್ತಿಮೀರಿ ದುಡಿಯುತ್ತೇವೆಂದು ಪ್ರತಿಜ್ಞೆ ಮಾಡೋಣ. ಪರಮಾತ್ಮನು ನಮ್ಮನ್ನು ಸರಿಯಾದ ಮಾರ್ಗದಲ್ಲಿ ಕೊಂಡೊಯ್ಯಲು ಕಾಪಾಡಲಿ.

ಹೈದರಾಬಾದಿನಲ್ಲಿ ನೂತನ ಮಂತ್ರಿಮಂಡಲ

ಸಚಿವ ಸಂಪುಟದಲ್ಲಿ ಎಂಟುಮಂದಿ ಇರುವರು

ಮುಂದಿನತಿಂಗಳು ಉಪಮಂತ್ರಿಗಳ ನೇಮಕ

ಹೈದರಾಬಾದಿನ ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ತಮ್ಮ ಮಂತ್ರಿ ಮಂಡಲವನ್ನು ಪುನರ್ರಚಿಸಿ ಮಂತ್ರಿಗಳ ಸಂಖ್ಯೆಯನ್ನು ೧೦ರಿಂದ ಲಕ್ಕೆ ಇಳಿಸಿರುವರು.

ಹೊಸ ಮಂತ್ರಿಮಂಡಲದಲ್ಲಿರುವವರು: ಶ್ರೀ ಬಿ. ರಾಮಕೃಷ್ಣರಾವ್ ಮುಖ್ಯಮಂತ್ರಿ, ಶ್ರೀಗಳಾದ ಕೆ. ವೆಂಕಟರಂಗರೆಡ್ಡಿ, ಡಿ.ಜಿ. ಬಿಂದು, ವಿನಾಯಕರಾವ್ ವಿದ್ಯಾಲಂಕಾರ್ ನವಾಬ್ ಮೆಹದಿನ ವಾಜ್‌ಜಂಗ್, ಡಾ|| ಜಿ.ಎಸ್. ಮೇಲ್ಕೋಟೆ, ಡಾ|| ಚೆನ್ನಾರೆಡ್ಡಿ, ಮತ್ತು ಗೋಪಾಲರಾವ್ ಏಕ್‌ಬೋಟೆ.

ಶ್ರೀ ಗೋಪಾಲರಾವ್ ಏಕ್‌ಬೋಟೆಯವರನ್ನು ಹೊಸದಾಗಿ ಸೇರಿಸಿಕೊಳ್ಳಲಾಗಿದೆ. ಇತರರೆಲ್ಲರೂ ಹಿಂದಿನ ಮಂತ್ರಿಮಂಡಲದಲ್ಲಿಯೇ ಇದ್ದವರು. ಹಿಂದಿನ ಮಂತ್ರಿಮಂಡಲದಲ್ಲಿದ್ದ ಶ್ರೀಗಳಾದ ಅಣ್ಣಾರಾವ್ ಗಣಮುಖಿ, ದೇವಿಸಿಂಗ್ ಚವಾಣ್ ಮತ್ತು ಶಂಕರದೇವ್‌ರು ಈ ಸಂಪುಟದಲ್ಲಿಲ್ಲ.

ಇನ್ನೂ ೬-೭ ಉಪಸಚಿವರನ್ನು ನೇಮಿಸಲಾಗುವುದೆಂದೂ ಅವರ ಹೆಸರು ಫೆಬ್ರವರಿ ಒಂದರಲ್ಲಿ ಪ್ರಕಟವಾಗುವುದು ಎಂದು ಮುಖ್ಯಮಂತ್ರಿಯವರು ಹೇಳಿದ್ದಾರೆ.

ಕಾಶ್ಮೀರಕ್ಕೆ ಭಾರತ ಸುಪ್ರೀಂ ಕೋರ್ಟಿನ ವ್ಯಾಪ್ತಿ

ಭಾರತ ಸುಪ್ರೀಂಕೋರ್ಟಿನ ವ್ಯಾಪ್ತಿಯನ್ನು ಕಾಶ್ಮೀರಕ್ಕೂ ಅನ್ವಯಿಸುವಂತೆ ಅಲ್ಲಿಯ ರಾಜ್ಯಾಂಗಸಭೆಯು ತೀರ್ಮಾನಿಸುವುದಾಗಿ ಹೇಳಲಾಗುತ್ತಿದೆ. ೧೯೫೨ ನೇ ಜುಲೈನಲ್ಲಿ ಭಾರತ ಮತ್ತು ಕಾಶ್ಮೀರ ನಡುವೆ ಆದ ದೆಹಲಿ ಒಪ್ಪಂದವನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಈ ವಿಷಯವೂ ಸೇರಿದೆ. ಕಾಶ್ಮೀರ ಮಾಜಿ ಪ್ರಧಾನಿ ಷೇಕ್ ಅಬ್ದುಲ್ಲಾರವರು ಈ ವ್ಯವಸ್ಥೆಗೆ ವಿರೋಧಿ.

ತಿರುವಾಂಕೂರಿಗೆ ಸಿಂಹಳ ಅಕ್ಕಿ

ತಿರುವಾಂಕೂರ್–ಕೊಚ್ಚಿ ಪ್ರಾಂತ್ಯಕ್ಕೆ ೩೦೦೦೦ ಟನ್ ಕುಸಬಲು ಅಕ್ಕಿಯನ್ನು ಸಿಂಹಳ ಸರ್ಕಾರವು ಎರವಲಾಗಿ ಕೊಡಲು ಒಪ್ಪಿದೆ. ಈ ಸಂಬಂಧದಲ್ಲಿ ಉಭಯ ಸರ್ಕಾರಗಳ ನಡುವೆ ಒಂದು ಒಪ್ಪಂದಕ್ಕೆ ಸಹಿಯಾಗಿದೆ.

ಸಾಮಾಜಿಕ ಕ್ಷೇಮ ಕಾರ್ಯಗಳಿಗೆ ೫೦ ಕೋಟಿ ರೂಪಾಯಿಗಳು

ಆರೋಗ್ಯ, ಶಿಕ್ಷಣ, ವಸತಿ, ಹಿಂದುಳಿದ ವರ್ಗಗಳ ಪುನರ್‌ವ್ಯವಸ್ಥೆ ಮುಂತಾದ ನಾನಾ ಸಾಮಾಜಿಕ ಕ್ಷೇಮ ಕಾರ್ಯಗಳಿಗೆ ಆಯೋಜನಾ ಸಮಿತಿಯು ೫೦ ಕೋಟಿ ರೂಪಾಯಿಗಳಿಗಿಂತ ಹೆಚ್ಚು ಹಣವನ್ನು ನಿಗದಿಮಾಡಿದೆ.

ರಿಟ್‌ಅರ್ಜಿಯ ಫೀ ಹೆಚ್ಚಿಸಿದ್ದಕ್ಕೆ ರಿಟ್‌ಅರ್ಜಿ

ಬೆಂಗಳೂರು ೨೭

ಮೈಸೂರಿನ ಶ್ರೀಗಳಾದ ಎ.ಎಸ್.ರಾಮಯ್ಯ ಮತ್ತು ತಗಡೂರು ರಾಮಚಂದ್ರರಾವ್ ಇವರು ಮೈಸೂರುಹೈಕೋರ್ಟಿನ ರೂಲ್ಸ್ ಕಮಿಟಿಕಾರ್ಯದರ್ಶಿಯವರ ಮೇಲೆ ತಾ|| ೨೫-೧-೫೪ರಲ್ಲಿ ರಿಟ್‌ಅರ್ಜಿಯನ್ನು ಸಲ್ಲಿಸಿ, ರಿಟ್ ಅರ್ಜಿಗಳಿಗೆ ಎರಡು ರೂ ನಿಂದ ಇಪ್ಪತ್ತು ರೂ. ಗೆ ಕೋರ್ಟುಫೀಯನ್ನು ೧೭-೮-೫೩ ರಲ್ಲಿ ಆಯ್ತು ಹೆಚ್ಚಿಸಿದ್ದು ಹೈಕೋರ್ಟಿನ ಅಧಿಕಾರ ವ್ಯಾಪ್ತಿಗೆಮೀರಿದ್ದೆಂದೂ ಈ ಬಗ್ಗೆ ಮಾಡಿದ ನಿಯಮವು ಜಾರಿಯಲ್ಲಿರುವ ಕೋರ್ಟು ಫೀಆಕ್ಟಿಗೆ ವಿರುದ್ಧವೆಂತಲೂ ಹೇಬಸ್‌ಕಾರ್ಪಸ್ ಅರ್ಜಿಗಳಿಗೆ ಎರಡು ರೂ ಮಾತ್ರ ನಿಗಧಿಮಾಡಿ ರಾಜ್ಯಾಂಗ ೨೨೬ರ ಪ್ರಕಾರ ಸಲ್ಲಿಸುವ ಇತರ ರಿಟ್ ಅರ್ಜಿಗಳಿಗೆ ಮಾತ್ರ ಇಪ್ಪತ್ತುರೂ. ಕೋರ್ಟುಫೀ ನಿಗದಿ ಮಾಡಿರುವುದು ೧೪ನೇ ವಿಧಿಗೆ ವಿರೋಧವೆಂತಲೂ ಆದ್ದರಿಂದ ರೂಲ್ಸು ಕಮಿಟಿಯವರು ಮಾಡಿರುವ ತಿದ್ದುಪಡಿನಿಯಮವು ಅಸಾಧುವೆಂದು ಘೋಷಿಸಬೇಕಾಗಿಯೂ ಮತ್ತು ತಮ್ಮಿಂದ ಮೂರು ರಿಟ್ ಅರ್ಜಿಗಳಿಗೆ ಹೆಚ್ಚಿಗೆ ವಸೂಲಾಗಿರುವ ಕೋರ್ಟುಫೀ ೫೪ ರೂಗಳನ್ನು ವಾಪಸ್ಸು ಕೊಡಿಸಿ ಕೊಡುವಂತೆಯೂ ಸಹಪ್ರಾರ್ಥಿಸಿದ್ದಾರೆ.

ಗೇಣಿದಾರರ ಕಾನೂನು ಅನ್ವಯ

ಬೆಂಗಳೂರು ೨೭

೧೯೫೨ನೇ ಗೇಣಿದಾರರ ಕಾನೂನನ್ನು ಜನರಿಗೆ ಒಂದನೇ ತಾರೀಖಿನಿಂದ ಬೆಂಗಳೂರು, ಮೈಸೂರು ಮತ್ತು ಹಾಸನ ಜಿಲ್ಲೆಗಳಿಗೂ ಮತ್ತು ತುಮಕೂರು, ಕೋಲಾರ, ಚಿತ್ರದುರ್ಗ, ಶಿವಮೊಗ್ಗ ಚಿಕ್ಕಮಗಳೂರು, ಮಂಡ್ಯ ಜಿಲ್ಲೆಗಳಲ್ಲಿ ಕೆಲವು ತಾಲ್ಲೂಕುಗಳಲ್ಲಿ ಜಾರಿಗೆ ಬಂದಿದೆಯೆಂದು ಸರ್ಕಾರವು ವಿಶೇಷ ಗೆಜಟ್ ಪ್ರಕಟಿಸಿದೆ.

ಗಿರಣಿ ಕಾರ್ಮಿಕರ ಮೇಲೆ ಗುಂಡಿನೇಟು

ಒಬ್ಬನ ಮರಣ ೬ ಜನರಿಗೆ ಗಾಯ

ಬೊಂಬಾಯಿನ ದಾದರ್ ನಲ್ಲಿರುವ ಕಮಲಾ ಗಿರಣಿಯ ಸುಮಾರು ೫೦೦೦ ಕಾರ್ಮಿಕರ ಗುಂಪನ್ನು ಚದುರಿಸಲು ಮೊನ್ನೆ ಅರ್ಧರಾತ್ರಿಯಲ್ಲಿ ಪೊಲೀಸಿನವರು ಗುಂಡುಹಾರಿಸಿದುದರ ಪರಿಣಾಮವಾಗಿ ಒಬ್ಬನ್ನು ಸತ್ತು ೬ ಜನರಿಗೆ ಗಾಯಗಳಾದುವೆಂದು ತಿಳಿಯಬರುತ್ತದೆ.

ಪ್ರಾರಂಭದಲ್ಲಿ ಕೆಲವು ಕಾರ್ಮಿಕರು ತಮಗೆ ೧೯೫೩ ರ ಬೋನಸ್ ಕೊಡಬೇಕೆಂದು ಮುಷ್ಕರವನ್ನು ಪ್ರಾರಂಭಿಸಿದರೆಂದೂ ಸಂಜೆಯ ವೇಳೆಗೆ ಗಿರಣಿಯ ಎಲ್ಲಾ ಕಾರ್ಮಿಕರು ಸೇರಿ ಗಿರಣಿಯ ಮ್ಯಾನೇಜರ್ ಮೇಲೆ ಧಾಳಿ ಮಾಡಲು ಯತ್ನಿಸಿ, ಒಳಗೆ ನುಗ್ಗಿ ಕಬ್ಬಿಣಸಲಾಕಿ ಮುಂತಾದುವನ್ನು ತರಲು ಯತ್ನಿಸಿದಾಗ ಪೊಲೀಸಿನವರು ಲಾಠಿ ಪ್ರಹಾರ ಮಾಡಿ, ಅವರನ್ನು ಚದುರಿಸಲು ಯತ್ನಿಸಿದರು. ಅದು ಸಫಲವಾಗದೆ ಪೊಲೀಸಿನವರು ಗುಂಡುಹಾರಿಸಿದರು. ಅದರ ಪರಿಣಾಮವಾಗಿ ಒಬ್ಬನು ಸತ್ತು ೬ ಜನರಿಗೆ ಗಾಯಗಳಾದುವೆಂದು ಹೇಳಲಾಗಿದೆ.

ಒಬ್ಬ ಪೊಲೀಸ್ ಅಧಿಕಾರಿ ಮತ್ತು ೧೩ ಜನ ಇತರ ಪೊಲೀಸರಿಗೂ ಈ ಸಂಬಂಧದಲ್ಲಿ ಗಾಯಗಳಾಗಿರುವುದಾಗಿ ತಿಳಿಯಬರುತ್ತದೆ.

ಎಂ. ಎನ್. ರಾಯ್ ನಿಧನ

ರ್‍ಯಾಡಿಕಲ್ ಡೆಮೊಕ್ರಾಟಿಕ್ ಪಕ್ಷದ ಶ್ರೀ ಎಂ. ಎನ್. ರಾಯ್‌ರವರು ಮೊನ್ನೆ ರಾತ್ರಿ ಮೆದುಳಿನ ರಕ್ತ ಒತ್ತಡದಿಂದ ನಿಧನರಾದರು ಭಾರತ ಸ್ವಾತಂತ್ರ ಸಂಗ್ರಾಮದಲ್ಲಿ ಉಗ್ರಾವಿಗಳಾಗಿ ದೇಶಸೇವೆ ಸಲ್ಲಿಸಿದವರಲ್ಲಿ ಇವರೊಬ್ಬರು. ಇವರಿಗೆ ೬೧ ವರ್ಷವಯಸ್ಸಾಗಿತ್ತು. ಕಳೆದ ೨-೩ ತಿಂಗಳಿಂದ ಅಸ್ವಸ್ಥರಾಗಿದ್ದರು ಇವರು ೧೭ ಭಾಷೆಗಳಲ್ಲಿ ಪ್ರವೀಣರಾಗಿದ್ದರು. ಇಂಗ್ಲೀಷ್, ಹಿಂದಿ, ರಷ್ಯ, ಮುಂತಾದ ಹಲವಾರು ಭಾಷೆಗಳಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ.

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದ್, ಪ್ರಧಾನಿ ನೆಹರೂ, ಮದ್ರಾಸ್ ಗೌರ್ನರ್ ಶ್ರೀ ಶ್ರೀಪ್ರಕಾಶಂ ಮುಂತಾದ ಹಲವಾರು ನಾಯಕರು ಇವರ ನಿಧನದ ಬಗ್ಗೆ ತಮ್ಮ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ.

ಸೇಲ್ಸ್‌ಟ್ಯಾಕ್ಸ್ ಬಗ್ಗೆ ಮತ್ತೊಂದು ರಿಟ್ ಅರ್ಜಿ

ಬೆಂಗಳೂರು ೨೭

ಮೈಸೂರಿನ ಶ್ರೀಗಳಾದ ಎ. ಎಸ್. ರಾಮಯ್ಯ ಮತ್ತು ತಗಡೂರು ರಾಮಚಂದ್ರರಾವ್ ಇವರುಗಳು ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿಯವರು, ಇಂಡಿಯಾ ಕಾಫಿಬೋರ್ಡ್ ಚೀಫ್ ಮಾರ್ಕೆಟಿಂಗ್ ಆಫೀಸ್‌ರವರು ಮತ್ತು ಮೈಸೂರು ಸಿಟಿ ಇಂಡಿಯಾ ಕಾಫಿ ಹೌಸ್ ಮ್ಯಾನೇಜರವರು ಇವರುಗಳ ಮೇಲೆ ತಾ|| ೨೫-೧-೫೪ ರಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿ ರೂಪಾಯಿನ ಭಿನ್ನಾಂಶಕ್ಕೆ ಸೇಲ್ಸ್‌ಟ್ಯಾಕ್ಸ್ ವಿಧಿಸಿ ವಸೂಲಿ ಮಾಡುವುದಕ್ಕೆ ಶಾಸನಾಧಾರವಿಲ್ಲದ ಕಾರಣ ೨೬೫ ವಿಧಿಯ ಉಲ್ಲಂಘನೆಯಾಗಿದೆಯೆಂತಲೂ ತಮ್ಮಿಂದ ಅಕ್ರಮವಾಗಿ ವಸೂಲ್ಮಾಡಿದ ಸೇಲ್ಸ್‌ಟ್ಯಾಕ್ಸನ್ನು ವಾಪಸು ಕೊಡಿಸಬೇಕೆಂತಲೂ ಇನ್ನು ಮುಂದಕ್ಕೆ ಇಂಡಿಯಾ ಕಾಫೀ ಹೌಸಿನವರು ರೂಪಾಯಿನ ಭಿನ್ನಾಂಶಕ್ಕೆ ಸೇಲ್ಸ್ ಟ್ಯಾಕ್ಸನ್ನು ವಸೂಲಿ ಮಾಡದಂತೆಯೂ ಇಂಜಂಕ್ಷನ್ ಆರ್ಡರು ಕೊಡಬೇಕಾಗಿ ಪ್ರಾರ್ಥಿಸಿದ್ದಾರೆ.

ತುಮಕೂರು--ಬೆಂಗಳೂರು ಟೆಲಿಫೋನ್ ವ್ಯವಸ್ಥೆ

ತುಮಕೂರು ಮತ್ತು ಬೆಂಗಳೂರುಗಳ ನಡುವೆ ಟ್ರಂಕ್ ಟೆಲಿಫೋನ್ ವ್ಯವಸ್ಥೆಯನ್ನು ನಿನ್ನೆಯದಿನ ಬೆಂಗಳೂರು ಸಿಟಿ ಪೋಸ್ಟಾಫೀಸಿನಲ್ಲಿ ಪ್ರಾರಂಭಿಸಲಾಯಿತು.

ಅಶೋಕಚಕ್ರ ಪ್ರಶಸ್ತಿ

ಕೊರಿಯಾದಲ್ಲಿರುವ ಭಾರತ ಮೇಲ್ವಿಚಾರಕ ಪಡೆಯ ದಂಡನಾಯಕ ಮೇಜರ್ ಜನರಲ್ ಥೋರಟ್‌ರವರಿಗೆ ರಾಷ್ಟ್ರಾಧ್ಯಕ್ಷರು ಅಶೋಕಚಕ್ರ ಎರಡನೇ ತರಗತಿಯ ಪ್ರಶಸ್ತಿಯನ್ನು ದಯಪಾಲಿಸಿದ್ದಾರೆ. ಕಳೆದ ಸೆಪ್ಟೆಂಬರ್ ೨೬ರಲ್ಲಿ ಭಾರತ ಸೈನ್ಯದ ಅಧಿಕಾರಿಯೊಬ್ಬರ ಮೇಲೆ ಯುದ್ಧಖೈದಿಗಳು ಧಾಳಿನಡೆಸಿದಾಗ ಶ್ರೀ ಥೋರಟ್‌ರವರು ತೋರಿಸಿದ ಸಾಹಸಕ್ಕೆ ಈ ಪ್ರಶಸ್ತಿಯನ್ನು ಕೊಡಲಾಗಿದೆ.

ಆಂಧ್ರ ಮತ್ತು ಮೈಸೂರು ಅಧಿಕಾರಿಗಳ ಸಭೆ

ಬಳ್ಳಾರಿಯಲ್ಲಿರುವ ಜೈಲು ಮತ್ತು ಪಾಲಿ ಟೆಕ್ನಿಕಲ್ ಶಾಲೆಗಳನ್ನು ಆಂಧ್ರ ಸರ್ಕಾರವು ಉಪಯೋಗಿಸಿಕೊಳ್ಳುವ ವಿಷಯದಲ್ಲಿ ಉಭಯ ಸರ್ಕಾರಗಳ ಪ್ರತಿನಿಧಿಗಳ ಸಭೆಯು ಮೊನ್ನೆಯದಿನ ಕರ್ನೂಲಿನಲ್ಲಿ ನಡೆದು ಕೆಲವು ಪ್ರಮುಖ ನಿರ್ಧಾರಗಳಿಗೆ ಬರಲಾಗಿರುವುದಾಗಿ ಗೊತ್ತಾಗಿದೆ.

ಪ್ರಭಾ ★

ಅಮೋಘ ಪ್ರಾರಂಭ 29—1—54 ರಿಂದ
ಪ್ರತಿದಿನ ಮೂರು ಪ್ರದರ್ಶನಗಳು

ಬಾಬ್ ಅಂಡ್ ಸಾಲಿ ರವರ ಕಥೆ

[ವಯಸ್ಕರಿಗೆ ಮಾತ್ರ]

ಈ ಚಿತ್ರದಲ್ಲಿ ಇಂದಿನ ಅಶೀಳಯುವಕ ಯುವತಿಯರು ತಮ್ಮ ಪ್ರಾಪ್ತ ವಯಸ್ಸಿನಲ್ಲಿ ಲೈಂಗಿಕ ಜ್ಞಾನಶೂನ್ಯತೆಯಿಂದ ಹೇಗೆ ಅನೇಕ ತೊಂದರೆಗಳಿಗೆ ಈಡಾಗುವರು ಎಂಬುದನ್ನು ನೋಡಬಹುದು.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೨೪

೨೮-೧-೧೯೫೪ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾಶ್ಮೀರದಲ್ಲಿ ಪರರಾಷ್ಟ್ರಗಳ ಕೈವಾಡಸಹಿಸಲಾರೆವು

ಉಗ್ರಪ್ರತಿಭಟನೆ ಮಾಡಲಾಗುತ್ತದೆ

ಸತ್ಕಾರಕೂಟವೊಂದರಲ್ಲಿ ಕಾಶ್ಮೀರ ಪ್ರಧಾನಿಯವರ ಹೇಳಿಕೆ

ಕಾಶ್ಮೀರದಲ್ಲಿ ಇತ್ತೀಚೆಗೆ ಪರರಾಷ್ಟ್ರಗಳ ಕೈವಾಡವು ಹೆಚ್ಚುತ್ತಿದೆ. ಇದನ್ನು ಯಾವ ಕಾಶ್ಮೀರಿಯೂ ಸಹಿಸುವುದಿಲ್ಲ. ಇದರಿಂದ ಕಾಶ್ಮೀರದಲ್ಲಿ ನಡೆಯಬೇಕಾಗಿರುವ ಪ್ರಗತಿಗೆ ಕುಂದುಂಟಾಗಿದೆ. ಇದನ್ನು ತಡೆಗಟ್ಟಲು ಉಗ್ರವಾಗಿ ಪ್ರತಿಭಟನೆ ಮಾಡಲಾಗುತ್ತದೆ ಎಂದು ಕಾಶ್ಮೀರ ಪ್ರಧಾನಿ ಭಕ್ಷಿ ಗುಲಾಂ ಮಹಮದ್ ನಿನ್ನೆಯದಿನ ದೆಹಲಿಯಲ್ಲಿ ಅವರ ಗೌರವಾರ್ಥವಾಗಿ ನಡೆದ ಸತ್ಕಾರಕೂಟ ಒಂದರಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ

ಭಾರತವೊಂದೇ ಅಲ್ಲ, ಮಾನವ ಕಲ್ಯಾಣಕ್ಕಾಗಿ ಮಹಾತ್ಮ ಗಾಂಧಿಯವರು ಮಾಡಿಯವ ತತ್ವಗಳನ್ನು ನಾವು ಪಾಲಿಸುತ್ತೇವೆ. ಕಾಶ್ಮೀರವು ಅನಾದಿಯಿಂದಲೂ ಭಾರತದ ಒಂದು ಭಾಗ. ಭಾರತದಲ್ಲಿ ನಾವು ಇರುವುದು ಕ್ಷೇಮಕರವಾಗಿದೆ. ಮುಂದೆಯೂ ನಾವು ಭಾರತದ ಒಂದು ಭಾಗವಾಗಿಯೇ ಇರುತ್ತೇವೆ ಎಂದು ಅವರು ತಿಳಿಸಿದ್ದಾರೆ.

ಸಚಿವರಿಗೆ ಇಲಾಖಾ ಹಂಚಿಕೆ

ಹೈದರಾಬಾದಿನ ನೂತನ ಮಂತ್ರಿ ಮಂಡಲದಲ್ಲಿ ಇಲಾಖಾ ಹಂಚಿಕೆಮಾಡಿ ಅಲ್ಲಿಯ ರಾಜಪ್ರಮುಖರು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ.

ಶ್ರೀ ಡಿ. ಜಿ. ಬಿಂದುರವರಿಗೆ ಗೃಹಶಾಖೆ ಶ್ರೀ ಗೋಪಾಲರಾವ್ ಏಕ್‌ಬೋಟೆಯವರಿಗೆ ವಿದ್ಯಾಖಾತೆ, ಶ್ರೀ ವಿನಾಯಕರಾವ್ ವಿದ್ಯಾಲಂಕಾರ್‌ರವರಿಗೆ ಹಣಕಾಸು ಮತ್ತು ಕೈಗಾರಿಕೆ, ಡಾ|| ಮೇಲ್ಕೋಟೆಯವರಿಗೆ ಕಾರ್ಮಿಕ ಮತ್ತು ಕಾಮಗಾರಿ, ಡಾ|| ಚೆನ್ನಾರೆಡ್ಡಿ ರೆವೆನ್ಯೂ ಮತ್ತು ಅಬ್ಕಾರಿ, ಶ್ರೀ ಮೆಹದಿನವಾಜ್‌ಜಂಗ್ ಆರೋಗ್ಯ, ಶ್ರೀ ರಾಮಕೃಷ್ಣರಾವ್ ಸಮಾಚಾರ ಮತ್ತು ಇತರಂಶಾಖೆಗಳು-ಈರೀತಿ ಹಂಚಿಕೆ ಮಾಡಲಾಗಿದೆ.

ಪುರಸಭಾಧಿವೇಶನ

ಮೈಸೂರು ೨೮

ಮೈಸೂರು ಪುರಸಭೆಯ ಮಾಹೆಯಾನ ಅಧಿವೇಶನವು ಇದೇ ೩೦ನೇ ತಾರೀಖು ಶನಿವಾರ ಸಂಜೆ ೪ ಗಂಟೆಗೆ ನಡೆಯುತ್ತದೆ.

'ಬಾಗಿನ' ಗ್ರಂಥ ಸಮರ್ಪಣೆ

ಮೈಸೂರು ೨೮

ಮಹಾರಾಜಾ ಕಾಲೇಜಿನ ಪ್ರಾಧ್ಯಾಪಕ ಶ್ರೀ ಎಸ್. ವಿ ರಂಗಣ್ಣನವರಿಗೆ, ಅವರ ಸಹಾಧ್ಯಾಪಕರೂ, ಶಿಷ್ಯರೂ ' ಬಾಗಿನ ' ಗ್ರಂಥವನ್ನು ಒಪ್ಪಿಸುವ ಸಮಾರಂಭವು ಮೊನ್ನೆಯದಿನ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ಶ್ರೀ ಟಿ.ಎಸ್. ಗೋಪಾಲನ್‌ರವರ ಪ್ರಾರ್ಥನೆ, ಶ್ರೀ ಕ. ವೆಂ. ರಾಘವಾಚಾರ್ಯರಿಂದ ಸ್ವಾಗತಭಾಷಣವಾದುವು. ಅನಂತರ ಶ್ರೀಮತಿ ರಂಗಮಣಿ ಮತ್ತು ವೃಂದದವರಿಂದ ಸಂಗೀತ ನಡೆಯಿತು. ಶ್ರೀಗಳಾದ ವಿ ಎಲ್. ಡಿಸೌಜಾ ಮತ್ತು ಕೆ. ವಿ. ಪುಟ್ಟಪ್ಪನವರು ಇಂಗ್ಲೀಷ್ ಪ್ರಾಧ್ಯಾಪಕರಾದ ಶ್ರೀ ಎಸ್.ವಿ. ರಂಗಣ್ಣನವರು ಕನ್ನಡ ಪ್ರಪಂಚಕ್ಕೆ ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿದರು.

ಶ್ರೀ ಕೆ. ವಿ. ಪುಟ್ಟಪ್ಪನವರು ಅನಂತರ 'ಬಾಗಿನ' ಗ್ರಂಥವನ್ನು ಶ್ರೀ ರಂಗಣ್ಣನವರಿಗೆ ಸಮರ್ಪಿಸಿದರು. ಈ ಗ್ರಂಥದಲ್ಲಿ ಕನ್ನಡನಾಡಿನಹಲವಾರು ಸುಪ್ರಸಿದ್ಧ ಲೇಖಕರ ಬರಹಗಳಿವೆ ಶ್ರೀ ರಂಗಣ್ಣನವರು ತಮಗೆ ಇತ್ತ ಸನ್ಮಾನಕ್ಕಾಗಿ ವಂದಿಸಿದರು. ಅಧ್ಯಕ್ಷ ಶ್ರೀ ಮಾಸ್ತಿಯವರು ಮಾತನಾಡುತ್ತಾ ವಿದ್ಯಾರ್ಥಿಗಳು ಗ್ರಾಮಾಂತರ ಪ್ರದೇಶಗಳಿಗೆ ಹೋಗಿ ಅಲ್ಲಿ ಜ್ಞಾನ ಪ್ರಚಾರವನ್ನು ಮಾಡಬೇಕೆಂದು ಹಿತನುಡಿದರು.

ಕಾಂಗ್ರೆಸ್ ಕಾರ್ಯಕರ್ತರ ಸಭೆ

ಮೈಸೂರು ೨೮

ಇದೇ ೩೧ ನೇ ತಾರೀಖು ಭಾನುವಾರ ಮಧ್ಯಾಹ್ನ ೩ ಘಂಟೆಗೆ ರಾಜಧಾನಿಯಲ್ಲಿರುವ ಜಿಲ್ಲಾ ಕಾಂಗ್ರೆಸ್ ಸಮಿತಿ ಕಛೇರಿಯಲ್ಲಿ ಮೈಸೂರು ಜಿಲ್ಲೆಯ ಕಾಂಗ್ರೆಸ್ ಕೆಲಸಗಾರರನ್ನು ಉದ್ದೇಶಿಸಿ ಪ್ರದೇಶಕಾಂಗ್ರೆಸ್ ಸಮಿತಿಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರು ಭಾಷಣಮಾಡುತ್ತಾರೆ.

ಭಾರತ ಪ್ರಗತಿ ಕಾರ್ಯಗಳ ಬಗ್ಗೆ ಬ್ರಿಟನ್ ಅರ್ಥಸಚಿವರ ಪ್ರಶಂಸೆ

ಭಾರತ ತನ್ನ ರಕ್ಷಣಾ ವೆಚ್ಚವನ್ನು ಕಡಿಮೆಮಾಡಬಹುದು

ಸರ್ವೋದಯ ದಿನಾಚರಣೆ

ಮೈಸೂರು ೨೮

ಇದೇ ೩೦ನೇ ತಾ|| ಶನಿವಾರ ಸರ್ವೋದಯ ದಿನಾಚರಣೆ ಅಂಗವಾಗಿ ಟೌನ್ ಹಾಲಿನಲ್ಲಿ ಕೆಳಗೆಕಂಡ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಕಾಂಗ್ರೆಸ್ ಕಾರ್ಯಕರ್ತರೂ ಮತ್ತು ಸರ್ವರೂ ದಯಮಾಡಿಸಿ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕೆಂದು ಕೋರಲಾಗಿದೆ.

೩೦ನೇ ತಾ|| ಬೆಳಗ್ಗೆ ಆರು ಘಂಟೆಯಿಂದ ಸಂಜೆ ಆರು ಘಂಟೆ ವರಿವಿಗೆ ಸೂತ್ರಯಜ್ಞವು ನಡೆಯುತ್ತದೆ.

ಬೆಳಗ್ಗೆ ೯ಘಂಟೆಗೆ ಸಾಮೂಹಿಕಪ್ರಾರ್ಥನೆ. ಸಂಜೆ ೫ ಘಂಟೆಯಿಂದ ಸಾಮೂಹಿಕ ಸೂತ್ರಯಜ್ಞವು ಆರಂಭವಾಗಿ ೫–೩೦ರ ವರಿವಿಗೂ ನಡೆಯುತ್ತದೆ.

ಸಂಜೆ ೫-೩೦ ಘಂಟೆಯಿಂದ ೬ ಘಂಟೆ ವರಿವಿಗೆ ಸಾಮೂಹಿಕ ಪ್ರಾರ್ಥನೆ ನಡೆಯುತ್ತದೆ.

ನೂಲುವವರು ಚರಕಗಳನ್ನು ತರಬೇಕೆಂದು ಕೋರಲಾಗಿದೆ.

ಉಚ್ಚ-ನೀಚ ಜಾತಿಭೇದ ತೊಡೆದುಹಾಕಿ

ದೇಶರಕ್ಷಣೆಗಾಗಿ ಪಣತೊಡಿ ಎಂದು ನೆಹರೂ ಹಿತೋಕ್ತಿ

ದೇಶದಲ್ಲಿ ಉಚ್ಚ, ನೀಚ ಜಾತಿಯವರೆಂಬ ಭೇದಭಾವವನ್ನು ಸರ್ವರೂ ತೊಡೆದು ಹಾಕಿ ಸಮಾನತ್ವ ಭಾವವನ್ನು ಅಭ್ಯಾಸಿಸಬೇಕಾಗಿದೆ. ನಾಡಿನ ರಕ್ಷಣೆ ಮತ್ತು ಐಕ್ಯತೆಯಕಡೆ ಎಲ್ಲರೂ ಗಮನಕೊಡಬೇಕು ದೇಶದಲ್ಲಿ ದಾರಿದ್ರ್ಯ, ಅಜ್ಞಾನ, ರೋಗರುಜಿನಗಳ ನಿವಾರಣೆಯಾಗಿ ದೇಶವನ್ನು ಪುನರ್ನಿಮಿಸಲು ಎಲ್ಲರೂ ದುಡಿಯಬೇಕು ಎಂದು ಪ್ರಧಾನಿ ನೆಹರೂರವರು ನ್ಯಾಷನಲ್ ಕ್ಯಾಡೆಟ್ ಕೋರ್ ದಳದವರಿಗೆ ಹಿತವಚನವನ್ನು ನುಡಿದಿದ್ದಾರೆ.

ನವದೆಹಲಿಯಲ್ಲಿ ನಿನ್ನೆಯದಿನ ಎನ್.ಸಿ.ಸಿ. ವಾರ್ಷಿಕ ಅಧಿವೇಶನವು ನಡೆಯಿತು. ಈ ಸಂಬಂಧದಲ್ಲಿ ಪ್ರಧಾನಿಯವರು ಮೇಲೆ ಹೇಳಿದಂತೆ ಹಿತನುಡಿಯುತ್ತಾ ಭಾರತಕ್ಕೆ ಎಲ್ಲಾ ರಾಷ್ಟ್ರಗಳ ಸ್ನೇಹಬೇಕು. ಯಾವ ರಾಷ್ಟ್ರದಮೇಲೂ ಆಕ್ರಮಣ ಉದ್ದೇಶವಿಲ್ಲ ಎಂದು ಹೇಳಿದ್ದಾರೆ.

ಭಾರತವು ಸ್ವಾತಂತ್ರ್ಯಗಳಿಸಿದ ನಂತರ ನಡೆಸಿರುವ ಕಾರ್ಯಗಳಲ್ಲಿ ಆಹಾರೋತ್ಪತ್ತಿ, ಪಂಚವಾರ್ಷಿಕ ಯೋಜನೆ ಮತ್ತು ಹಣದ ಉಬ್ಬರ ತಡೆಗಟ್ಟುವುದರಲ್ಲಿ ಅತ್ಯದ್ಭುತ ಪ್ರಗತಿ ಸಾಧಿಸಿ ಎಲ್ಲಾ ಕಾಮನ್ವೆಲ್ತ್ ದೇಶಗಳಿಗೂ ಬ್ರಿಟನ್ನಿಗೂ ಮಾರ್ಗದರ್ಶಿಯಾಗಿದೆ-ಎಂದು ಬ್ರಿಟನ್ನಿನ ಅರ್ಥಿಕಸಚಿವ ಮಿ|| ಬಟ್ಲರ್‌ರವರು ದೆಹಲಿಯಲ್ಲಿ ನಿನ್ನೆ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ್ದಾರೆ. ಪಾಕ್-ಅಮೆರಿಕಾ ಸೈನ್ಯ ನೆರವಿನ ವಿಷಯವಾಗಿ ಅವರು ಪ್ರಸ್ತಾಪಿಸುತ್ತಾ ಸ್ವತಂತ್ರ ರಾಷ್ಟ್ರಗಳ ಒಪ್ಪಂದದ ಬಗ್ಗೆ ತಾವು ಅಭಿಪ್ರಾಯ ವ್ಯಕ್ತಪಡಿಸಲಾಗುವುದಿಲ್ಲವೆಂದು ಹೇಳುತ್ತಾ ಪಾಕೀಸ್ತಾನವು ತನ್ನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಲು ಮತ್ತು ಆಹಾರ ಉತ್ಪನ್ನ ಬಗ್ಗೆ ಪ್ರಗತಿ ಕಾರ್ಯಗಳನ್ನು ನಡೆಸಬೇಕಾಗಿದೆಯೆಂದೂ ಭಾರತವು ತನ್ನ ರಕ್ಷಣಾ ವೆಚ್ಚವನ್ನು ಸ್ವಲ್ಪ ಕಡಮೆ ಮಾಡಿ ಅದನ್ನು ರಾಷ್ಟ್ರಾಭಿವೃದ್ಧಿಗಾಗಿ ಉಪಯೋಗಿಸಬಹುದೆಂದೂ ತಿಳಿಸಿದ್ದಾರೆ.

ಸಚಿವರೇ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿಯೂ ಇರುವರು

ಹೈದರಾಬಾದಿನ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಕೆ. ವೆಂಕಟರಂಗ ರೆಡ್ಡಿಯವರು ಸದ್ಯಕ್ಕೆ ಸಚಿವಮಂಡಲಿಯಲ್ಲಿಯೇ ಮುಂದುವರಿಯುವುದಾಗಿ ತಿಳಿಸಿದ್ದಾರೆ,

ಬೀಹಾರ್ ಮತ್ತು ಹೈದರಾಬಾದ್‌ಗಳಲ್ಲಿ ಸಚಿವರುಗಳು ಪ್ರದೇಶಕಾಂಗ್ರೆಸ್ ಅಧ್ಯಕ್ಷರಾಗಿರಲು ಅವಕಾಶವನ್ನು ಕಲ್ಯಾಣಿಯಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಕಾರ್ಯಸಮಿತಿಯು ನಿರಾಕರಿಸಿತು. ಇನ್ನು ೬ ತಿಂಗಳೊಳಗೆ ಈ ಸ್ಥಾನಗಳಿಗೆ ಉಪಚುನಾವಣೆ ನಡೆಸುವುದರಿಂದ ಅಲ್ಲಿಯವರೆಗೆ ತಾವುಒಂದು ಸ್ಥಾನದಲ್ಲಿದ್ದು ಮತ್ತೊಂದಕ್ಕೆ ರಾಜೀನಾಮೆಕೊಡುವ ವಿಷಯವನ್ನು ನಿರ್ಧರಿಸುವುದಾಗಿ ಶ್ರೀ ರೆಡ್ಡಿಯವರು ತಿಳಿಸಿದ್ದಾರೆ.

ರಿಪಬ್ಲಿಕ್ ದಿನಾಚರಣೆ

ಮೈಸೂರು ೨೮

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದಲ್ಲಿ ಪೌರಸಭಾಧ್ಯಕ್ಷರಾದ ಶ್ರೀ ಕೆ. ಪುಟ್ಟಸ್ವಾಮಿರವರ ಧ್ವಜಾರೋಹಣದೊಂದಿಗೆ ಮೊನ್ನೆಯದಿನ ಪ್ರಜಾರಾಜ್ಯ ದಿನೋತ್ಸವವನ್ನು ಆಚರಿಸಲಾಯಿತು.

ಇಂದ್ರಧನುಸ್

ಮೈಸೂರು ೨೮

ಈ ರಾತ್ರಿ ೯.೩೦ ಗಂಟೆಗೆ ಮೈಸೂರು ಆಕಾಶವಾಣಿಯಲ್ಲಿ ಇಂದ್ರಧನುಸ್ ಎಂಬ ಕಾರ್ಯಕ್ರಮವನ್ನು ಪ್ರಸಾರ ಮಾಡಲಾಗುತ್ತದೆ. ಹಿಂದೀ-ಕೆ- ಉಪನ್ಯಾಸಕರ್ ಎಂಬ ಭಾಷಣಮಾಲೆಯಲ್ಲಿ ಒಂದು ಉಪನ್ಯಾಸ, ಸಲೀಂ ತಮಸ್ಸೈರವರಿಂದ ರಚಿತವಾದ ಷಹೀದ್ ಎಂಬ ಕಿರುನಾಟಕ, ಹೆಚ್.ಆರ್. ಲೀಲಾವತಿಯವರಿಂದ ಭಜನ ಮತ್ತು ಗೀತೆಗಳ ಗಾನ, ನಿವೇದನ್‌ಹೈ ನಲ್ಲಿ ಶ್ರೋತೃಗಳ ಪತ್ರಗಳಿಗೆ ವಿನೋದಾರವರಿಂದ ಉತ್ತರ-ಈ ಕಾರ್ಯಕ್ರಮಗಳು ಈ ಪ್ರಸಾರದಲ್ಲಿ ಸೇರಿವೆ.

ಇಂಜನಿಯರಿಂಗ್ ಸಂಶೋಧನಾ ಕೇಂದ್ರ

ಮೈಸೂರು ೨೮

ಕೃಷ್ಣರಾಜಸಾಗರದಲ್ಲಿರುವ ಹೈಡ್ರಾಲಿಕ್ ಸಂಶೋಧನಾಕೇಂದ್ರವನ್ನು ಇನ್ನುಮುಂದೆ ಇಂಜನಿಯರಿಂಗ್ ಸಂಶೋಧನಾ ಕೇಂದ್ರವೆಂದು ಕರೆಯಲಾಗುತ್ತದೆ. ಇದು ಸರ್ಕಾರದ ಚೀಫ್ ಇಂಜನಿಯರ ಅಧಿಕಾರಕ್ಕೊಳಪಟ್ಟು ಒಬ್ಬ ಸಂಶೋಧನಾಕಾರಿಗಳ ಆಡಳಿತದಲ್ಲಿ ಇರುತ್ತದೆ.

ಜನಪದ ಯೋಜನಾ ಅಧಿಕಾರಿಗಳ ಸಮ್ಮೇಳನ

ದಕ್ಷಿಣ ಭಾರತ ಪ್ರಾಂತ್ಯಗಳ ಜನಪದ ಯೋಜನೆಯ ಅಧಿಕಾರಿಗಳ ಸಭೆಯೊಂದು ಮುಂದಿನ ತಿಂಗಳು ೪ನೇ ತಾ|| ಮಧುರಾ ಜಿಲ್ಲೆಯಲ್ಲಿರುವ ಗಾಂಧಿಗ್ರಾಮದಲ್ಲಿ ನಡೆಯುತ್ತದೆ. ಈ ಸಮ್ಮೇಳನದಲ್ಲಿ ಮದ್ರಾಸ್, ಆಂಧ್ರ, ತಿರುವಾಂಕೂರ್-ಕೊಚ್ಚಿ, ಮೈಸೂರು, ಕೊಡಗು ಮುಂತಾದ ಪ್ರಾಂತ್ಯಗಳ ಪ್ರತಿನಿಧಿಗಳು ಭಾಗವಹಿಸುವರು.

-ಮೈಸೂರು ಪೇಟೆಧಾರಣೆ-

ತಾರೀಖು ೨೭—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೧೦	೨೬—
ಎಳ್ಳು	೬೭—೬	೭೨—
ಹರಳು	೩೬—೪	೪೧—
ಹೊಂಗೆಬೀಜ	೧೯—೮	೨೨—೬
ಹುಚ್ಚೆಳ್ಳು	೩೬—	೪೪—೨
ಹುರುಳಿ	೨೮—೧೨	೩೧—೧೦
ಉದ್ದು	೬೪—	—
ಹೆಸರು	೩೨—	೪೩—೧೪
ಅವರೆ	೩೪—	೩೬—
ಕೊತ್ತಂಬರಿ	೨೫—೧೪	೨೮—೧೨
ಕಡಲೆ	೫೯—೧೨	೬೨—೧೪
ಅಲಸಂದೆ	೩೦—೧೦	೪೮—
ತೊಗರಿ	೨೩—೧೪	೩೨—೧೨
ಹುಣಿಸೆಹಣ್ಣು	೬—೩	೧೧—
ಮೆಣಸಿನಕಾಯಿ	೨೪—೨	೩೩—೧೦
ಸೀಗೆಕಾಯಿ	೩—೧೧	೬—೯
ಬೆಲ್ಲ	೫—	—
ತೆಂಗಿನಕಾಯಿ	೨೩೫—	೨೫೫—

ಬೊಂಬಾಯಿನಲ್ಲಿ ೧ಲಕ್ಷ ೨೫ಸಾವಿರ ಕಾರ್ಮಿಕರ ಮುಷ್ಕರ

ಗಿರಣಿ ಕೆಲಸಗಾರರಮೇಲೆ ಪೊಲೀಸರು ಗುಂಡುಹಾರಿಸಿದ್ದಕ್ಕೆ ಪ್ರತಿಭಟನೆ

ಕಳೆದ ಸೋಮವಾರ ರಾತ್ರಿ ಕಮಲಾ ಬಟ್ಟೆ ಗಿರಣಿಯ ಕಾರ್ಮಿಕರಮೇಲೆ ಪೊಲೀಸಿನವರು ಗುಂಡುಹಾರಿಸಿದುದನ್ನು ಪ್ರತಿಭಟಿಸಿ, ಬೊಂಬಾಯಿನಲ್ಲಿ ನಿನ್ನೆಯದಿನ ೧ ಲಕ್ಷ ೨೫ ಸಾವಿರ ಕಾರ್ಮಿಕರು ಒಂದು ದಿನದ ಸಾಂಕೇತಿಕ ಮುಷ್ಕರವನ್ನು ಆಚರಿಸಿದರು.

ನಗರದಲ್ಲಿರುವ ೬೬ ಗಿರಣಿಗಳ ಪೈಕಿ ೩೩ ಗಿರಣಿಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟದ್ದುವು.

ಗೋಲಿಬಾರಿನ ಬಗ್ಗೆ ಸರ್ಕಾರವು ಕೂಡಲೇ ತನಿಖೆಯನ್ನು ನಡೆಸುವುದಾಗಿ, ಬೊಂಬಾಯಿ ಕಾರ್ಮಿಕ ಸಚಿವ ಶ್ರೀ ಶಾಂತಿಲಾಲ್‌ಷಾರವರು ಆಶ್ವಾಸನವಿತ್ತಿದ್ದಾರೆ.

ಗಣಿ ಕೆಲಸಗಾರರ ಸಾರ್ವತ್ರಿಕ ಮುಷ್ಕರ

ಗಣಿ ಕೆಲಸಗಾರರ ಬೇಡಿಕೆಗಳನ್ನು ಸರ್ಕಾರವು ಪೂರೈಸಲು ತಕ್ಕ ವ್ಯವಸ್ಥೆಯನ್ನು ಮಾಡದಿದ್ದರೆ ಮಾರ್ಚಿ ಒಂದನೇ ತಾರೀಖಿನಿಂದ ಭಾರತಾದ್ಯಂತ ಎಲ್ಲಾ ಗಣಿ ಕೆಲಸಗಾರರು ಮುಷ್ಕರವನ್ನು ಹೂಡುವುದಾಗಿ ಅಖಿಲಭಾರತ ರಾಷ್ಟ್ರೀಯ ಗಣಿ ಕಾರ್ಮಿಕರ ಸಮಿತಿಯು ನಿರ್ಧರಿಸಿದೆ. ಈ ವಿಷಯವನ್ನು ಗಣಿ ಕೆಲಸಗಾರರ ಸಂಘಗಳು ಇದೇ ೩೧ ನೇ ತಾರೀಖು ತಮ್ಮ ತಮ್ಮ ಮಾಲೀಕರಿಗೆ ತಿಳಿಸಬೇಕೆಂದೂ ಸೂಚಿಸಲಾಗಿದೆ.

ಜನವರಿ ೩೧ ನೇ ತಾರೀಖನ್ನು ಭಾರತ ಗಣಿಗಳ ದಿನವನ್ನಾಗಿ ಆಚರಿಸಲಾಗುತ್ತದೆ.

ಕರಾಚಿಯಲ್ಲಿ ರೇವು ಕೆಲಸಗಾರರ ಮುಷ್ಕರ

ಕರಾಚಿಯಲ್ಲಿ ರೇವು ಕೆಲಸಗಾರರು ಹೆಚ್ಚಿಗೆ ವೇತನಕ್ಕಾಗಿ ಪ್ರಾರಂಭಿಸಿರುವ ಮುಷ್ಕರವು ಕಳೆದ ಮೂರುದಿನಗಳಿಂದ ನಡೆಯುತ್ತಲೇಯಿದೆ. ಈ ಮುಷ್ಕರವು ನ್ಯಾಯಬಾಹಿರವೆಂದು ಪಾಕೀಸ್ತಾನ ಸರಕಾರವು ಘೋಷಿಸಿದೆ. ಸೈನ್ಯ ಬಲದವರು ರೇವಿನಲ್ಲಿ ಎಲ್ಲಾ ಕೆಲಸಗಳನ್ನೂ ನಡೆಸುತ್ತಲಿದ್ದಾರೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

———

ಮೊದಲನೆ ಬಹುಮಾನ 10000 ರೂ.

ಒಟ್ಟು 2000 ಬಹುಮಾನಗಳು.

ಬಹುಮಾನದ ಮೊಬಲಗು 45000 ರೂ.

ಟಿಕೇಟು ಒಂದಕ್ಕೆ ಒಂದೇರೂಪಾಯಿ.

ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು 4.

ಮುಖ್ಯಮಂತ್ರಿಗಳ ಪ್ರವಾಸ

ಬೆಂಗಳೂರು ೨೮

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಮುಂದಿನ ತಿಂಗಳು ೪ ಮತ್ತು ೫ನೇ ತಾರೀಖುಗಳಲ್ಲಿ ಧಾರವಾಡ ಜಿಲ್ಲೆಯಲ್ಲೂ, ೬ ಮತ್ತು ೭ನೇ ತಾರೀಖುಗಳಲ್ಲಿ ಬಿಜಾಪುರ ಜಿಲ್ಲೆಯಲ್ಲೂ ಪ್ರವಾಸಮಾಡುವರು.

ಭಾರತದ ಮೇಲ್ವಿಚಾರಕ ಸೈನ್ಯ ಸ್ವದೇಶಕ್ಕೆ ವಾಪಸ್ಸು

ಕೊರಿಯಾದಲ್ಲಿರುವ ಭಾರತದ ಮೇಲ್ವಿಚಾರಕ ಸೈನ್ಯದ ಮೊದಲನೆಯ ತಂಡವು ಮುಂದಿನತಿಂಗಳು ೭ನೇ ತಾರೀಖು ಸ್ವದೇಶಕ್ಕೆ ಹೊರಡುತ್ತದೆ.

ಶ್ರೀ ಬರುವಾ ನೂತನ ವಾರ್ತಾಸಚಿವರೆ?

ಕೇಂದ್ರಸರ್ಕಾರದ ವಾರ್ತಾ ಮತ್ತು ಪ್ರಸಾರಶಾಖಾ ಸಚಿವರಾದ ಡಾ|| ಬಿ. ವಿ. ಕೇಸ್ಕರ್‌ರವರನ್ನು ಫ್ರಾನ್ಸಿನಲ್ಲಿ ಭಾರತ ರಾಯಭಾರಿಯಾಗಿ ನೇಮಿಸಲಾಗುವುದೆಂದೂ ಅವರ ಸ್ಥಾನದಲ್ಲಿ ಅಸ್ಸಾಮಿನ ಶ್ರೀ ಪಿ. ಸಿ. ಬರುವಾರವರನ್ನು ನೇಮಿಸಲಾಗುವುದೆಂದು ತಿಳಿಯಬರುತ್ತದೆ.

ಚರ್ಮ ಕೈಗಾರಿಕೆಗೆ ನೆರವು

ಚರ್ಮ ಕೈಗಾರಿಕಾಭಿವೃದ್ಧಿಗಾಗಿ ಭಾರತ ಸರ್ಕಾರವು ಅಖಿಲಭಾರತ ಗೃಹಕೈಗಾರಿಕಾ ಮಂಡಲಿಗೆ ಮೂರೂವರೆ ಲಕ್ಷ ರೂಪಾಯಿಗಳ ಸಹಾಯ ದ್ರವ್ಯವನ್ನು ಮಂಜೂರ್ಮಾಡಿದೆ.

ಏಷ್ಯಾ ರಾಷ್ಟ್ರಗಳಿಗೆ ರಷ್ಯಾ ನೆರವು

ಏಷ್ಯಾದ ಎಲ್ಲಾ ರಾಷ್ಟ್ರಗಳಿಗೆ ರಷ್ಯಾವು ತಾಂತ್ರಿಕ ನೆರವನ್ನು ನೀಡುವುದಾಗಿ ಮುಂದೆಬಂದಿದೆ.

.... ರಾಜಕಮಲ್ ....

29—1—54 ರಿಂದ 3 ನೇ ವಾರ

ಚಂದ್ರಹಾರಂ (ತಮಿಳು)

ಪಾತ್ರ:-ಶ್ರೀರಂಜನಿ, ಸಾವಿತ್ರಿ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್ ಮತ್ತು ರೇಲಂಗಿ.

ರಣಜಿತ್

29-1-54 ರಿಂದ ಅಮೋಘ ಪ್ರಾರಂಭ

ಷೇಕ್ ಮುಕ್ತಾರ್ ನಟಿಸಿರುವ:-

○ ಅನ್ನದಾತ ○ (ಹಿಂದಿ)

Palace Maramath Department

Abstract Notification Dated 25th Jany. 1954

—:o:—

Sealed Tenders for constructing 3 (Three) Blocks of Twin Type Model Houses in the premises of Jaganmohana Palace Building on Krishnavilas Agrahar Road, Mysore estimated to cost Rs. 36,000/- will be received till 3-30 P.M. on 4-2-1954.

Please see the Notification published on the Notice Board of the Palace Engineer's Office for details.

Earnest Money to be deposited with the Tender is Rs. 1,800/-.

Mysore, Dated 25th Jany. 1954

Sd/H. K. Panditaradhya. *Palace Engineer.*

ಪ್ರಕಾಶಕರು ಮತ್ತು ಮುದ್ರಕರು: ಜಿ. ಎಲ್. ಸ್ವಾಮಿ ಸಮಾಚಾರ ಪ್ರೆಸ್, ಮೈಸೂರು.

ಪೋ| ೫೬೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೨೫

೨೯-೧-೧೯೫೪ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಸೇಲ್‌ಟ್ಯಾಕ್ಸ್ ಬಗ್ಗೆ ಕ್ರಿಮಿನಲ್ ಮೊಕದ್ದಮೆ

ಮೈಸೂರು ೨೯

ಮೈಸೂರು ಚಾಮುಂಡಿಪುರದ ಶ್ರೀ ಆರ್. ಸಿದ್ದೋಜಿ ರಾಯರವರು ತಾರೀಖು ೨೫-೧-೫೪ ರಲ್ಲಿ ಸಂತೇಪೇಟೆ ವರ್ತಕರಾದ ಶ್ರೀ ಪುಟ್ಟಯ್ಯನವರ ಶ್ರೀನಿವಾಸಯ್ಯನವರ ಮೇಲೆ ಮೈಸೂರು ಒಂದನೇ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ ಕ್ರಿಮಿನಲ್ ಕೇಸ್ ದಾಖಲ್ಮಾಡಿ ಸದರಿ ಅಂಗಡಿಯವರು ರೂಪಾಯಿನ ಭಿನ್ನಾಂಶಕ್ಕೆ ಸೇಲ್ಸ್‌ಟ್ಯಾಕ್ಸನ್ನು ಶಾಸನಾಧಾರವಿಲ್ಲದೆ ತೆಗೆದುಕೊಳ್ಳುತ್ತಿರುವುದು ಕ್ರಿಮಿನಲ್ ಅಪರಾಧವೆಂತಲೂ ರೂಪಾಯಿನಭಿನ್ನಾಂಶಕ್ಕೆ ಸೇಲ್ಸ್‌ಟ್ಯಾಕ್ಸ್ ವಸೂಲಿ ಮಾಡಲು ಗೌರ್ನಮೆಂಟ್ ಅಥವ ಸೇಲ್ಸ್‌ಟ್ಯಾಕ್ಸ್ ಆಫೀಸರ ಆರ್ಡರನ್ನು ತೋರಿಸಬೇಕೆಂದು ಕೇಳಲು ತಮ್ಮಲ್ಲಿಲ್ಲವೆಂದು ತಿಳಿಸಿದ್ದರಿಂದಲೂ ಸೇಲ್ಸ್‌ಟ್ಯಾಕ್ಸ್ ಆಕ್ಟ್ ಇಪ್ಪತ್ತನೇ ಸೆಕ್ಷನ್ ಮೇಲೆ ತಪ್ಪಿತಸ್ಥರೆಂದು ಹೇಳಿ ಕಾನೂನು ಮೇಲೆ ನಡವಳಿಕೆ ತೆಗೆದುಕೊಳ್ಳಬೇಕಾಗಿ ಪ್ರಕಟಿಸಿದ್ದಾರೆ. ಮ್ಯಾಜಿಸ್ಟ್ರೇಟರವರು ಮೊಕದ್ದಮೆಯನ್ನು ಫೈಲಿಗೆ ತೆಗೆದುಕೊಂಡು ಈಬಗ್ಗೆ ಸೇಲ್ಸ್‌ಟ್ಯಾಕ್ಸ್ ಆಫೀಸರ ರಿಪೋರ್ಟಿಗೆ ಕಳುಹಿಸಿ ಫೆಬ್ರವರಿ ೧೦ಕ್ಕೆ ವಿಚಾರಣೆಗೆ ಹಾಕಿದ್ದಾರೆ.

ಉದಾರ ದಾನ

ಮೈಸೂರು ೨೯

ಮೈಸೂರು ನಗರದ ಕರ್ಣಾಟಕ ಸಂಘದ ಪುಸ್ತಕ ಭಂಡಾರಕ್ಕೆ ಶ್ರೀಯುತ ನಾಡಿಗ ಕೃಷ್ಣಮೂರ್ತಿಯವರು ತಮ್ಮ ೨೬ ಪುಸ್ತಕಗಳನ್ನು ಉದಾರವಾಗಿ ದಾನಮಾಡಿರುತ್ತಾರೆ. ಅಂತೆಯೇ ಕನ್ನಡನಾಡಿನ ಇತರ ಲೇಖಕರೂ, ಪ್ರಕಟನಕಾರರೂ ಮತ್ತು ಭಾಷಾಭಿಮಾನಿಗಳೂ ತಮ್ಮತಮ್ಮ ಪುಸ್ತಕಗಳನ್ನು ಉದಾರವಾಗಿ ದಾನಮಾಡಿ ಸಂಘದ ಪುಸ್ತಕ ಭಂಡಾರವನ್ನು ವೃದ್ಧಿಗೊಳಿಸಬೇಕೆಂದು ಕಾರ್ಯದರ್ಶಿಯವರು ಕೋರುತ್ತಾರೆ.

ಸಂಗೀತ ಕಛೇರಿ

ಈರಾತ್ರಿ ೭-೩೦ ಗಂಟೆಗೆ ರಾಮಾನುಜಾ ರಸ್ತೆಯಲ್ಲಿರುವ ಮುಂದಲಹಟ್ಟಿ ಅರಸಿನವರ ಮನೆಯಲ್ಲಿ ತ್ಯಾಗರಾಜ ಜಯಂತಿ ಪ್ರಯುಕ್ತ ಕುಮಾರಿ ಸಿ. ಎನ್. ಜಗನ್ನಾಥ, ಬಿ. ಶ್ರೀಮತಿಯವರ ಮತ್ತು ವಿದ್ವಾನ್ ಬಿ. ಎಂ. ಮುನಿವೆಂಕಟಪ್ಪನವರ ಸಂಗೀತ ಕಛೇರಿ ನಡೆಯುತ್ತದೆ.

[illegible] ಸ್ವೀಕಾರ

ಶ್ರೀ ಡಿ. ನಾ. ಅಶ್ವತ್ಥನಾರಾಯಣರಾವ್ ರವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ 'ಸುಧಾ' ರಾಷ್ಟ್ರೀಯದಿನೋತ್ಸವದ ವಿಶೇಷ ಸಂಚಿಕೆಯನ್ನು ಆದರದಿಂದ ಸ್ವೀಕರಿಸಿದ್ದೇವೆ.

ನಾಡಹಬ್ಬ

ಮೈಸೂರು ೧೯

ಪ್ರಥಮ ದರ್ಜೆ ಕಾಲೇಜಿನ ಕರ್ಣಾಟಕ ಸಂಘದ ಆಶ್ರಯದಲ್ಲಿ ಇದೇ ೩೦ ನೇ ತಾರೀಖಿನಿಂದ ೩ ದಿನಗಳು ನಾಡಹಬ್ಬ ಮಹೋತ್ಸವವು ಕಾಲೇಜಿನ ಆವರಣದಲ್ಲಿ ಪ್ರತಿದಿನ ಸಾಯಂಕಾಲ ೫-೩೦ ಗಂಟೆಯಿಂದ ನಡೆಯುತ್ತದೆ. ೩೦ ನೇ ತಾರೀಖಿನ ಸಮಾರಂಭವು ಶ್ರೀ ಮಾಸ್ತಿ ವೆಂಕಟೇಶ ಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಗೀತಾವಾಚನ, ಶ್ರೀ ಕೃಷ್ಣಶಾಸ್ತ್ರಿಗಳ ಭಾವಚಿತ್ರ ಅನಾವರಣ, ಸಂಗೀತ ಮುಂತಾದುವು ನಡೆಯುತ್ತದೆ. ೩೧ ನೇ ತಾರೀಖು ಶ್ರೀ ಕೆ. ಸಂಪದ್ಗಿರಿರಾವ್ ಮತ್ತು ಫೆಬ್ರವರಿ ೧ ನೇ ತಾರೀಖು ಪುರಸಭಾಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಮಾರಂಭವು ನಡೆಯುತ್ತದೆ.

ಗೌರ್ನರ್-ರಾಜಪ್ರಮುಖರ ಸಮ್ಮೇಳನ

ಮಾರ್ಚಿ ಒಂದನೇ ತಾರೀಖು ನವದೆಹಲಿಯಲ್ಲಿ ಗೌರ್ನರ್ ಮತ್ತು ರಾಜಪ್ರಮುಖರ ಸಮ್ಮೇಳನವೊಂದು ನಡೆಯುತ್ತದೆ. ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದ್‌ರವರು ಸಮ್ಮೇಳನದ ಅಧ್ಯಕ್ಷತೆ ವಹಿಸುತ್ತಾರೆ.

ಕಾಶ್ಮೀರದ ಸದರಿ-ಇ-ರಿಯಾಸತ್ ಶ್ರೀ ಕರಣಸಿಂಗ್‌ರವರೂ ಈ ಸಮ್ಮೇಳನಕ್ಕೆ ಆಗಮಿಸುವರು.

ಈರೀತಿಯ ಸಮ್ಮೇಳನಕ್ಕೆ ಕಾಶ್ಮೀರ ಅಧಿಪತಿ ಭಾಗವಹಿಸುವುದು ಇದೇ ಪ್ರಥಮ ಬಾರಿ.

ಬೈಸಿಕಲ್‌ಮೇಲೆ ವಿಶ್ವ ಪರ್ಯಟನ

ಟರ್ಕಿದೇಶದ ಅಹಮದ್ ಓಜಾಲ್ ಎಂಬ ಯುವಕನು ಬೈಸಿಕಲ್‌ಮೇಲೆ ವಿಶ್ವ ಪರ್ಯಟನ ಪ್ರಾರಂಭಿಸಿ ಈಗಾಗಲೇ ೩೧ ದೇಶಗಳಿಗೆ ಭೇಟಿ ಕೊಟ್ಟಿದ್ದಾನೆ. ಅತನು ಭಾರತಕ್ಕೆ ಆಗಮಿಸಿ ಇಂಡೋನೇಷ್ಯಾಕ್ಕೆ ತೆರಳಿದ್ದಾನೆ. ಭಾರತಕ್ಕೆ ಆಗಮಿಸಿದ್ದಾಗ ಪ್ರಧಾನಿ ನೆಹರೂರವರು ಆತನಿಗೆ ೨೫೦೦ ರೂ. ಬಹುಮಾನವನ್ನಿತ್ತರೆಂದು ತಿಳಿಯಬರುತ್ತದೆ.

ಬ್ರಿಟಿಷ್ ಪದವೀಧರನಿಗೆ ತಮಿಳು ಕಲಿಯಲು ಆಸೆ

ಲಂಡನ್ ವಿಶ್ವವಿದ್ಯಾನಿಲಯದ ಪದವೀಧರ ಮಿ|| ಜಾರ್ಜ್ ಮಾರ್ ಎಂಬುವವರು ತಮಿಳು ಭಾಷೆಯನ್ನು ಕಲಿಯಲು ಭಾರತಕ್ಕೆ ಆಗಮಿಸಿ ಅಣ್ಣಾಮಲೈ ವಿಶ್ವವಿದ್ಯಾನಿಲಯವನ್ನು ಸೇರಿದ್ದಾರೆ. ಅವರು ಅಲ್ಲಿ ೬ ತಿಂಗಳ ಕಾಲ ವ್ಯಾಸಂಗವನ್ನು ಮಾಡುತ್ತಾರೆ.

ಶಾಸನಸಭಾಧ್ಯಕ್ಷರ ಸಮ್ಮೇಳನ

ಬೆಂಗಳೂರು ೨೯

ಕಾಶ್ಮೀರದಲ್ಲಿ ಜೂನ್ ಮಾಹೆಯಲ್ಲಿ ನಡೆಯಲಿರುವ ಶಾಸನಸಭಾಧ್ಯಕ್ಷರ ಸಮ್ಮೇಳನದಲ್ಲಿ ಭಾಗವಹಿಸಲು ಸಂಸ್ಥಾನದ ವಿಧಾನಸಭೆ ಮತ್ತು ಪರಿಷತ್ತಿನ ಅಧ್ಯಕ್ಷರುಗಳೂ, ಕಾರ್ಯದರ್ಶಿಗಳೂ ಭಾಗವಹಿಸಲು ಹೋಗುವರು.

ಕೇಂದ್ರ ವಿದ್ಯಾ ಸಲಹಾ ಸಮಿತಿ ಸಭೆ

ಬೆಂಗಳೂರು ೨೯

ದೆಹಲಿಯಲ್ಲಿ ಮುಂದಿನತಿಂಗಳು ೭ನೇ ತಾರೀಖಿನಿಂದ ೧೦ರವರೆಗೆ ಕೇಂದ್ರ ವಿದ್ಯಾ ಸಲಹಾ ಸಮಿತಿಯ ಸಭೆಯು ನಡೆಯುತ್ತದೆ ಅದರಲ್ಲಿ ಭಾಗವಹಿಸಲು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಅಲ್ಲಿಗೆ ತೆರಳುವರು.

ಪಂಚ ಮಹಾರಾಷ್ಟ್ರಗಳ ಸಮ್ಮೇಳನ

ಅಮೇರಿಕಾ, ಬ್ರಿಟನ್, ಫ್ರಾನ್ಸ್, ರಷ್ಯಾ ಮತ್ತು ಚೈನಾ ಈ ಪಂಚ ಮಹಾರಾಷ್ಟ್ರಗಳ ಸಮ್ಮೇಳನವನ್ನು ನಡೆಸಬೇಕೆಂಬ ವಿಷಯವನ್ನು ಚರ್ಚಿಸಲು ಅಮೇರಿಕಾ, ಬ್ರಿಟನ್, ಫ್ರಾನ್ಸ್ ಮತ್ತು ರಷ್ಯಾದೇಶಗಳ ವಿದೇಶಾಂಗಸಚಿವರುಗಳ ಗುಪ್ತ ಅಧಿವೇಶನವೊಂದು ಮುಂದಿನವಾರ ನಡೆಯುವುದು ಎಂದು ತಿಳಿಯಬರುತ್ತದೆ.

ಡೈಕ್ರೊಮೈಟ್ ಕಾರ್ಖಾನೆ ವರ್ಗಾವಣೆ

ಬಳಗೊಳದಲ್ಲಿ ೧೯೪೮ರಲ್ಲಿ ಸ್ಥಾಪಿಸಲಾದ ಸರ್ಕಾರಿ ಡೈಕ್ರೊಮೇಟ್ ಕಾರ್ಖಾನೆಯು ನಷ್ಟದಿಂದ ಕೆಲಸಮಾಡುತ್ತಿರುವುದರಿಂದ, ಈ ಕಾರ್ಖಾನೆಯಲ್ಲಿ ಅಲ್ಲಿಯೇ ಇರುವ ಕೃತಕನೊಬ್ಬರ ಕಾರ್ಖಾನೆಯ ಆಡಳಿತವಹಿಸಿ ಕೊಡಲು ಸರ್ಕಾರವು ನಿರ್ಧರಿಸಿ, ಈಬಗ್ಗೆ ಆಜ್ಞೆಮಾಡಿದೆ. ಈಕಾರ್ಖಾನೆಯಲ್ಲಿ ಸರ್ಕಾರದ ೩.೫ ಲಕ್ಷರೂಪಾಯಿಗಳ ಆಸ್ತಿಯಿದೆ. ಇದರ ವರ್ಗಾವಣೆಯು ನಡೆಯುತ್ತದೆ.

ಭಾರತಕ್ಕೆ ಕೆನಡಾಪ್ರಧಾನರ ಭೇಟಿ

ಕೆನಡಾ ಪ್ರಧಾನಿಯವರು ಮುಂದಿನ ತಿಂಗಳು ೨೧ ನೇ ತಾರೀಖು ಭಾರತಕ್ಕೆ ಆಗಮಿಸುವರು.

ಕೈದಿಗಳಿಗೆ ರಿಯಾಯಿತಿ

ಗಣರಾಜ್ಯದಿನಾಚರಣೆ ಸಂಬಂಧದಲ್ಲಿ ಹೈದರಾಬಾದಿನಲ್ಲಿ ಎಲ್ಲಾ ಕೈದಿಗಳಿಗೆ ೧೫ ದಿವಸಗಳ ರಿಯಾಯತಿ ಕೊಡಲಾಯಿತು.

ರಾಜಪ್ರಮುಖರ ಆಸಕ್ತಿ

ಬೆಂಗಳೂರು ೨೯

ನಿನ್ನೆಯದಿನ ಬೆಳಗ್ಗೆ ನೂತನ ಮೇಯರ್ ಶ್ರೀ ಹೆಚ್. ಎಂ. ಸೀತಾರಾಂರವರು ಶ್ರೀಮನ್ಮಹಾರಾಜರನ್ನು ಭೇಟಿಮಾಡಿದಾಗ ಕಾರ್ಪೊರೇಷನ್ ಕೈಗೊಳ್ಳಬೇಕೆಂದಿರುವ ಕಾರ್ಯಗಳನ್ನು ವಿವರಿಸಿದರು. ಮಹಾರಾಜರು ಅವುಗಳನ್ನು ಸಾವಧಾನದಿಂದ ಕೇಳಿ ಮುಂದೆ ತಾವು ನಗರಕ್ಕೆ ಆಗಮಿಸಿದಾಗ ಕೊಳಕು ಪ್ರದೇಶಗಳಿಗೆ ಭೇಟಿ ಕೊಡುವುದಾಗಿ ತಿಳಿಸಿದರು.

ಚುನಾವಣಾ ತಕರಾರು ವಿಚಾರಣೆಯಲ್ಲಿ ನೆಹರೂ ಸಾಕ್ಷಿ

೧೯೫೨ರಲ್ಲಿ ನಡೆದ ಮೊಹರ್ದಾ ಉಪಚುನಾವಣೆಯಲ್ಲಿ ಜಯಗಳಿಸಿದ ಕಾಂಗ್ರೆಸ್ ಪ್ರತಿನಿಧಿ ಶ್ರೀ ಸುರೇಂದ್ರನಾಥ್ ರೋವರ ವಿರುದ್ಧ ಶ್ರೀ ಡಿ. ಪಿ. ಮಿಶ್ರರವರು ಹಾಕಿರುವ ತಕರಾರು ಅರ್ಜಿ ವಿಚಾರಣೆಯಲ್ಲಿ ಶ್ರೀ ನೆಹರೂರವರು ಸಾಕ್ಷಿಯೀಯಲು ನಾಗಪುರಕ್ಕೆ ಹೋಗುವರು.

ಟಿಕೆಟ್ ಇಲ್ಲದೆ ೧೪೦ ಪ್ರಯಾಣಿಕರು

ಮೊನ್ನೆಯ ದಿನ ಕುಪ್ಪದಿಂದ ಬೆಂಗಳೂರಿಗೆ ಬಂದ ರೈಲಿನಲ್ಲಿ ಟೆಲ್ಪೋರ್ ಕಾರ್ಖಾನೆಯ ೧೪೦ ಮಂದಿ ಟಿಕೇಟಿಲ್ಲದೆ ಪ್ರಯಾಣ ಮಾಡುತ್ತಲಿದ್ದುದು ಪತ್ತೆಹಚ್ಚಿ ಅವರಿಂದ ೧೩೦ ರೂಪಾಯಿಗಳನ್ನು ವಸೂಲ್ಮಾಡಲಾಯಿತು.

ನೂತನ ಆರ್ಡಿನೆನ್ಸ್

ಪತ್ರಿಕೆಗಳಲ್ಲಿ ಆಕ್ಷೇಪಣಲೇಖನಗಳ ಪ್ರಚಾರಬಗ್ಗೆ ಭಾರತ ಸರ್ಕಾರವು ಹೊರಡಿಸಿದ್ದ ಕಾನೂನು ನಾಳೆಯದಿನದಿಂದ ಮುಕ್ತಾಯವಾಗಬೇಕಾಗಿತ್ತು. ಅದನ್ನು ಇನ್ನು ಎರಡುವರ್ಷಕಾಲ ಮುಂದುವರಿಸಿ, ರಾಷ್ಟ್ರಾಧ್ಯಕ್ಷರು ಒಂದು ವಿಶೇಷ ಆರ್ಡಿನೆನ್ಸ್ ಹೊರಡಿಸಿದ್ದಾರೆ.

ದಾವಣಗೆರೆಯಲ್ಲಿ ಹರತಾಳ

ದಾವಣಗೆರೆ ಪುರಸಭೆಯವರು ಬೆಣ್ಣೆ, ತುಪ್ಪ, ತರಕಾರಿ, ಅರಿಸಿ, ಕುಂಕುಮ ಮುಂತಾದ ದಿನಚರಿ ಉಪಯುಕ್ತ ವಸ್ತುಗಳಮೇಲೆ ಸುಂಕವನ್ನು ಹಾಕಲು ನಿರ್ಧರಿಸಿರುವುದನ್ನು ಪ್ರತಿಭಟಿಸಿ ಅಲ್ಲಿಯ ವರ್ತಕರಿಲ್ಲರೂ ಮೊನ್ನೆಯದಿನ ಹರತಾಳವನ್ನು ಆಚರಿಸಿ ತಮ್ಮ ಅಂಗಡಿಗಳನ್ನೆಲ್ಲಾ ಮುಚ್ಚಿದ್ದರು.

● ವ್ಯವಸಾಯೋತ್ಪನ್ನವಸ್ತುಗಳ ಬೆಲೆಯು ಇಳಿಯುತ್ತಲಿರುವಾಗ ಕಬ್ಬಿನಬೆಲೆಯನ್ನು ಏರಿಸುವ ಪ್ರಶ್ನೆಯೇ ಇಲ್ಲವೆಂದು ಆಹಾರ ಸಚಿವ ಶ್ರೀ ಕಿದ್ವಾಯಿಯವರು ಹೇಳಿದ್ದಾರೆ.

ಭಾರತ-ಕಾಶ್ಮೀರ ಸಂಬಂಧ

ಭಾರತದೊಡನೆ ಕಾಶ್ಮೀರದ ರಾಜ್ಯಾಂಗ ಸಂಬಂಧ ವಿಷಯದಲ್ಲಿ ಕಾಶ್ಮೀರ ಪ್ರಧಾನಿ ಭಕ್ಷಿ ಗುಲಾಂ ಮಹಮದ್, ಅವರ ಸಹೋದ್ಯೋಗಿಗಳು ಮತ್ತು ಭಾರತ ಸರ್ಕಾರದ ಪ್ರತಿನಿಧಿಗಳ ನಡುವೆ ಕಳೆದ ೩-೪ ದಿವಸಗಳಿಂದ ಚರ್ಚೆಗಳು ನಡೆದು ಅಂತ್ಯ ತೀರ್ಮಾನಕ್ಕೆ ಬಂದಿರುವುದಾಗಿ ತಿಳಿಯ ಬರುತ್ತದೆ.

ಮುಂದಿನ ರಾಜ್ಯಾಂಗಸಭಾ ಅಧಿವೇಶನದಲ್ಲಿ ಭಾರತ-ಕಾಶ್ಮೀರಗಳ ನಡುವೆ ಆದ ದೆಹಲಿಯ ಒಪ್ಪಂದಕ್ಕೆ ಶಾಸನಬದ್ಧ ಸಮರ್ಥನೆಯನ್ನು ಕೊಡಲಾಗುತ್ತದೆಯೆಂದು ತಿಳಿಯಬರುತ್ತದೆ.

ರಾಜಕೀಯ ನಾಯಕರ ಸಮ್ಮೇಳನ ನಡೆಯಬೇಕು

ಮಂತ್ರಿಮಂಡಲಗಳ ಮತ್ತು ಶಾಸನಸಭೆಗಳ ಒಳಗೂ, ಹೊರಗೂ ಕಾರ್ಯಗಳು ಗೌರವಯುತವಾಗಿ ನಡೆಯುವಂತೆ ಒಂದು ಸಹಕಾರ ನೀತಿಯನ್ನು ರೂಪಿಸಲು ಎಲ್ಲಾ ರಾಜಕೀಯ ಪಕ್ಷಗಳ ನಾಯಕರ ಸಮ್ಮೇಳನವೊಂದನ್ನು ಏರ್ಪಡಿಸುವುದು ಯುಕ್ತವೆಂದು ಕೃಷಿಕಲೋಕಪಕ್ಷದ ನಾಯಕ ಪ್ರೊಫೆಸರ್ ರಂಗಾರವರು ಮನವಿ ಮಾಡಿದ್ದಾರೆ.

ಮೋಟಾರು ವಾಹನಗಳಿಗೆ ಸೀಮೆಯೆಣ್ಣೆ

ಸೀಮೆಯೆಣ್ಣೆ ಮತ್ತು ನೀರನ್ನು ನಿಗದಿಯಾದ ಪ್ರಮಾಣದಲ್ಲಿ ಬೆರಿಕೆ ಮಾಡಿ ಪೆಟ್ರೋಲ್ ಬದಲು ಮೋಟಾರುಗಳಿಗೆ ಉಪಯೋಗಿಸುವುದನ್ನು ಬೊಂಬಾಯಿನಲ್ಲಿ ಒಬ್ಬ ಯಂತ್ರ ತಯಾರಿಕಾಗಾರರು ಕಂಡುಹಿಡಿದ್ದಾರೆ. ಇದನ್ನು ಉಪಯೋಗಿಸಿದ ಮೋಟಾರುಗಳು ಪೆಟ್ರೋಲ್ ಹಾಕಿದ ಮೋಟಾರುಗಳಂತೆಯೇ ಚಲಿಸುತ್ತವೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೮—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೧೨	೨೪—೧೨
ಎಳ್ಳು	೬೩—೨	೬೭—
ಹುರುಳಿ	೩೫—	೪೦—
ಹೊಂಗೆಬೀಜ	೨೧—೮	೨೨—೮
ಹುಚ್ಚೆಳ್ಳು	೩೫—೨	೪೪—೧೦
ಹುರುಳಿ	೨೯—೬	೩೧—೧೨
ಉದ್ದು	—	—
ಹೆಸರು	೩೬—೨	೪೧—
ಅಲಸಂದೆ	೩೬—	೪೫—
ಅವರೆ	—	—
ಕೊತ್ತಂಬರಿ	೩೩—೬	೨೯—೧೨
ತೊಗರಿ	೨೫—೨	೩೩—೨
ಕಡಲೆ	೫೬—೮	೬೦—೮
ಹುರುಸೆಹಣ್ಣು	೪—೬	೧೧—
ಮೆಣಸಿನಕಾಯಿ	೨೦—೧೪	೩೪—
ಸೀಗೆಕಾಯಿ	೪—೧೦	೫—೧೨
ಬೆಲ್ಲ	—	—
ಹುಣಿಸೆಕಾಯಿ	೧೫೫—	೬೧೫—

ಭಾರತ-ಸಿಂಹಳ ಒಪ್ಪಂದಕ್ಕೆ ಸ್ವಾಗತ

ಒಪ್ಪಂದಕ್ಕೆ ಸಿಂಹಳ ಸರ್ಕಾರದ ಒಪ್ಪಿಗೆ

ಸಿಂಹಳದಲ್ಲಿರುವ ಭಾರತ ವಂಶಸ್ಥರ ಹಲವಾರು ಹಕ್ಕಿನ ಬಗ್ಗೆ ಭಾರತ ಮತ್ತು ಸಿಂಹಳ ಪ್ರಧಾನಿಗಳ ನಡುವೆ ಆಗಿರುವ ಒಪ್ಪಂದವನ್ನು ಸಿಂಹಳದ ಕೆಲವು ಪತ್ರಿಕೆಗಳು ಸ್ವಾಗತಿಸಿವೆ. ಈ ಒಪ್ಪಂದದಿಂದ ಭಾರತ ಮತ್ತು ಸಿಂಹಳ ಸಂಬಂಧವು ಮತಷ್ಟು ಬಲಗೊಳ್ಳುವುದಕ್ಕೆ ಮಾರ್ಗವಾದಂತೆ ಆಯಿತು ಎಂದು ಹೇಳಿವೆ. ಆದರೆ ಈ ಒಪ್ಪಂದಕ್ಕೆ ಸಿಂಹಳದಲ್ಲಿರುವ ಭಾರತ ಕಾಂಗ್ರೆಸ್ ತನ್ನ ವಿರೋಧ ವ್ಯಕ್ತಪಡಿಸಿದೆ.

ಪ್ರಧಾನಿ ನೆಹರೂರವರು ಮುಂದಿನ ತಿಂಗಳು ತಿರುವಾಂಕೂರ್-ಕೊಚ್ಚಿಯ ಚುನಾವಣಾ ಪ್ರಚಾರಕ್ಕಾಗಿ ಆಗಮಿಸುವಾಗ ಸಿಂಹಳ ನಾಯಕರನ್ನು ಬರಮಾಡಿಕೊಂಡು ವಿಷಯ ಚರ್ಚಿಸುವರೆಂದು ಹೇಳಲಾಗುತ್ತದೆ.

ಬಿರುದುಗಳನ್ನು ಕೊಡುವುದು ರಾಜ್ಯಾಂಗಕ್ಕೆ ವಿರೋಧ

ಭಾರತ ಸರ್ಕಾರವು ಇತ್ತೀಚೆಗೆ ಸಾರ್ವಜನಿಕ ಸೇವೆ ಸಲ್ಲಿಸಿದವರಿಗೆ 'ಭಾರತ ರತ್ನ', ಮತ್ತು 'ಪದ್ಮ ವಿಭೂಷಣ' ಎಂಬ ಬಿರುದುಗಳನ್ನು ಕೊಡುವ ಹೊಸ ಆಜ್ಞೆಯ ಬಗ್ಗೆ ಹರಿಜನ ಪತ್ರಿಕೆಯು ಟೀಕಿಸಿ ಈ ಆಜ್ಞೆಯು ರಾಜ್ಯಾಂಗದ ೧೮ ನೇ ವಿಧಿಗೆ ವಿರೋಧವೆಂದು ಅಗ್ರಲೇಖನ ಬರೆದಿದೆ.

ದೇವಾಲಯ ಪ್ರವೇಶ ಯತ್ನಕ್ಕಾಗಿ ದಸ್ತಗಿರಿ

ನೇಪಾಳ ರಾಜಧಾನಿ ಖಾಟ್ಮಂಡುವಿಗೆ ೨ ಮೈಲಿಯಲ್ಲಿರುವ ಪ್ರಸಿದ್ಧ ಪಶುಪತಿನಾಥದೇವಾಲಯಕ್ಕೆ ಪ್ರವೇಶಿಸಲು ಯತ್ನಿಸಿದ ೯ ಹರಿಜನರನ್ನು ಅಲ್ಲಿಯ ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ. ನೇಪಾಳದಲ್ಲಿರುವ ಶಾಸನಪ್ರಕಾರ ಹರಿಜನರಿಗೆ ದೇವಾಲಯ ಪ್ರವೇಶವಿಲ್ಲ.

ಖೈದಿಗಳ ಬಿಡುಗಡೆ

ಕೇಂದ್ರ ಕಾನೂನುಗಳ ರೀತ್ಯ ಶಿಕ್ಷೆಗೊಳಗಾಗಿ ಸೆರೆವಾಸ ಅನುಭವಿಸುತ್ತಲಿರುವ ಖೈದಿಗಳನ್ನು ಸಹ ಹೊಸ ಆಂಧ್ರಪ್ರಾಂತ್ಯದಲ್ಲಿ ಬಿಡುಗಡೆ ಮಾಡಲು ಕೇಂದ್ರಸರ್ಕಾರವು ಒಪ್ಪಿಗೆಯಿತ್ತಿರುವುದಾಗಿ ತಿಳಿಯಬರುತ್ತದೆ.

ಸಾಮೂಹಿಕ ಬಿಡುಗಡೆಯ ಪ್ರಕಾರ ಒಟ್ಟು ಸುಮಾರು ೬೦೦೦ ಖೈದಿಗಳನ್ನು ಬಿಟ್ಟಂತಾಗುತ್ತದೆ.

ಸಿಗರೇಟು ಮಾರಾಟ

ಭಾರತದಲ್ಲಿ ೧೯೫೨-೫೩ ನೇ ಸಾಲಿನಲ್ಲಿ ಒಟ್ಟು ಮುವತ್ತೈದೂವರೆ ಕೋಟಿ ರೂಪಾಯಿಗಳಷ್ಟು ಸಿಗರೇಟುಗಳು ಮಾರಾಟವಾಗಿವೆ.

ಟಲಿಫೋನ್ ಯಂತ್ರಗಳ ತಯಾರಿಕೆ

ಬೆಂಗಳೂರು ೨೯

೧೯೫೩ ರಲ್ಲಿ ಬೆಂಗಳೂರು ಟಲಿಫೋನ್ ಕಾರ್ಖಾನೆಯಲ್ಲಿ ೪೦ ಸಾವಿರ ಟಲಿಫೋನ್ ಯಂತ್ರಗಳನ್ನು ತಯಾರಿಸಲಾಗಿದೆ. ಕಳೆದ ಸಾಲಿನಲ್ಲಿ ಕೇವಲ ೧೫ ಸಾವಿರ ಯಂತ್ರಗಳು ತಯಾರಾಗಿದ್ದುವು.

ಈಜಿಪ್ಟ್ ಪತ್ರಿಕಾ ನಿಯೋಗ

ಬೆಂಗಳೂರು ೨೯

ಈಜಿಪ್ಟ್ ಪತ್ರಿಕಾ ನಿಯೋಗದವರು ಮುಂದಿನ ತಿಂಗಳು ೭ ನೇ ತಾರೀಖು ಸಂಸ್ಥಾನಕ್ಕೆ ಆಗಮಿಸಿ ೩ ದಿನಗಳ ಕಾಲ ಪ್ರವಾಸ ನಡೆಸುವರು.

ಟ್ರೇಡ್ ಮಾರ್ಕ್ ಸಮಿತಿ

ಬೆಂಗಳೂರು ೨೯

ಟ್ರೇಡ್ ಮಾರ್ಕ್ಸ್ ವಿಚಾರಣಾಸಮಿತಿಯು ಮುಂದಿನ ತಿಂಗಳು ೩ ರಿಂದ ೧೧ ರವರೆಗೆ ಬೆಂಗಳೂರಿನಲ್ಲಿದ್ದು ಟ್ರೇಡ್ ಮಾರ್ಕ್ಸ್ ವಿಚಾರಬಗ್ಗೆ ಸಾಕ್ಷಿಯನ್ನು ಪಡೆಯುತ್ತದೆ.

ರಷ್ಯಾ ಸಾಂಸ್ಕೃತಿಕ ನಿಯೋಗ

ಬೆಂಗಳೂರು ೨೯

ರಷ್ಯಾ ಸಾಂಸ್ಕೃತಿಕ ನಿಯೋಗದವರು ಬೆಂಗಳೂರಿಗೆ ಇದೇ ೨೧ ನೇ ತಾರೀಖು ಆಗಮಿಸಿ, ಸಂಸ್ಥಾನದಲ್ಲಿ ೩ ದಿನಗಳ ಕಾಲ ಇರುವರು.

ಚಲಿಸುವ ಪರ್ವತ

ಉತ್ತರ ಇಟಲಿಯಲ್ಲಿ ಮೊದಿನಾ ಎಂಬ ನಗರದ ಬಳಿ ಇರುವ ಪರ್ವತವೊಂದು ಗಂಟೆಗೆ ಒಂದು ಗಜದಂತೆ ಮುಂದಕ್ಕೆ ಹೋಗುತ್ತಿರುವುದಾಗಿ ವರದಿಯಾಗಿದೆ.

ಈ ಪರ್ವತವು ಈಗಾಗಲೇ ಕಣಿವೆ ಪ್ರದೇಶದಲ್ಲಿ ವಾಸಗೃಹಗಳಲ್ಲಿ ಅನೇಕವನ್ನು ನಾಶಪಡಿಸಿದೆ.

ಇಂಜಿನಿಯರುಗಳು ಈ ಪರ್ವತ ಚಲನೆಯನ್ನು ನೋಡಿ ಕಾರಣ ತಿಳಿಯಲಾರದೆ ಮುಗ್ಧರಾಗಿದ್ದಾರೆ.

ಭಾರತವು ಏಷ್ಯಾದ ಪ್ರಮುಖ ರಾಷ್ಟ್ರ

ಟರ್ಕಿಯಲ್ಲಿ ಮೊನ್ನೆಯದಿನ ಭಾರತ ರಿಪಬ್ಲಿಕ್ ದಿನಾಚರಣೆಯು ಅತ್ಯಂತ ವೈಭವದಿಂದ ನಡೆಯಿತು.

ಟರ್ಕಿಯ ಪ್ರಮುಖ ನಾಯಕರು ಮತ್ತು ಪತ್ರಿಕೆಗಳು ಭಾರತವು ಏಷ್ಯಾ ಖಂಡದ ಮುಖಂಡ ರಾಷ್ಟ್ರವೆಂದು ಸಾರಿದ್ದಾರೆ.

ಸತ್ಯಮಂಗಲಕ್ಕೆ ಫೋನ್ ಸಂಪರ್ಕ

ಊರೋಕ್ ಎಕ್ಸ್‌ಚೇಂಜಿಗೆ ಸೇರಿದಂತೆ ಸಾರ್ವಜನಿಕ ಟಲಿಫೋನ್ ವ್ಯವಸ್ಥೆಯನ್ನು ಸತ್ಯಮಂಗಲದಲ್ಲಿ ಇದೇ ೩೦ ನೇ ತಾರೀಖಿನಿಂದ ಮಾಡಲಾಗಿದೆ.

ಇದೇ ೧೮ ನೇ ತಾರೀಖಿನಿಂದ ಕುಂದಾಪುರಕ್ಕೂ ಟಲಿಫೋನ್ ಏರ್ಪಾಡು ಮಾಡಲಾಗಿದೆ.

ಗೃಹನಿರ್ಮಾಣಕ್ಕೆ ನೆರವು

ಕೈಗಾರಿಕಾ ಗೃಹ ವಸತಿ ನಿರ್ಮಾಣ ಕಾರ್ಯಕ್ಕಾಗಿ ಭಾರತಸರ್ಕಾರವು ವಿವಿಧ ಪ್ರಾಂತ್ಯ ಸರ್ಕಾರಗಳಿಗೆ ೧೯೫೩-೫೪ ನೇ ಸಾಲಿಗೆ ಒಟ್ಟು ೧,೧೩,೪೪,೩೪೨ ರೂಪಾಯಿಗಳನ್ನು ಮಂಜೂರ್ಮಾಡಿದೆ.

★ ಉಡ್ ಲ್ಯಾಂಡ್ಸ್ ★

29-1-54 ಶುಕ್ರವಾರದಿಂದ

ಜನಭರಿತ 2 ನೇ ವಾರ

ಭಗವಾನ್ ಆರ್ಟ್ಸ್ ಪ್ರೊಡಕ್ಷನ್ಸ್‌ರವರ:....

-ರಂಗೀಲಾ-

ಹಾಸ್ಯ ಸಂಗೀತ ನೃತ್ಯಮಯ ಹಿಂದಿ ಚಿತ್ರ.

ಪಾತ್ರ:-ಹಾಸ್ಯನಟ ಭಗವಾನ್, ಪೂರ್ಣಿಮಾ

— ಇಂದೇ ನೋಡಿರಿ —

ರಾಷ್ಟ್ರೀಯ

ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ

ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ.

ಒಟ್ಟು 2000 ಬಹುಮಾನಗಳು.

ಬಹುಮಾನದ ಮೊಬಲಗು 45000 ರೂ.

ಟಿಕೇಟು ಒಂದಕ್ಕೆ ಒಂದೇರೂಪಾಯಿ.

ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು 4.

ರಣಜಿತ್

29-1-54 ರಿಂದ ಅಮೋಘ ಪ್ರಾರಂಭ

ಶೇಕ್ ಮುಕ್ತಾರ್ ಘಟಿಸಿರುವ:-

ಅನ್ನದಾತ (ಹಿಂದಿ)

ಪ್ರಕಾಶಕರು ಮತ್ತು ಮುದ್ರಕರು: ಜಿ. ಎಲ್. ಸ್ವಾಮಿ ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೨೬

೩೦-೧-೧೯೫೪ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಸನ್ಮಾನ

ಮೈಸೂರು ೩೦

ಹಲವಾರು ದಿನಗಳಿಂದ ಕನ್ಯಕಾಪರಮೇಶ್ವರಿ ದೇವಸ್ಥಾನದಲ್ಲಿ ಹರಿಕಥೆ ನಡೆಸುತ್ತಲಿದ್ದ ಶ್ರೀ ಜಯತೀರ್ಥಾಚಾರ್ಯರವರಿಗೆ ಅಲ್ಲಿಯ ಭಕ್ತಮಂಡಲಿಯವರು ನಿನ್ನೆಯ ದಿನ ಒಂದು ಬಿನ್ನವತ್ತಳೆ ಮತ್ತು ನಿಧಿಯನ್ನು ಅರ್ಪಿಸಿದರು. ವಿಧಾನ ಪರಿಷತ್ತಿನ ಉಪಾಧ್ಯಕ್ಷ ಶ್ರೀ ಪಿ. ಗೋಪಾಲಕೃಷ್ಣಶೆಟ್ಟರು ಭಕ್ತಮಂಡಲಿಯ ಪರವಾಗಿ ಭಿನ್ನವತ್ತಳೆಯನ್ನು ಇಂಗ್ಲೀಷಿನಲ್ಲೂ ಶ್ರೀ ಕೆ. ಆರ್. ತಿಮ್ಮರಾಯ ಶೆಟ್ಟಿಯವರು ಕನ್ನಡದಲ್ಲೂ ಓದಿದರು. ಭಕ್ತರು ಶ್ರೀ ಜಯತೀರ್ಥಾಚಾರ್ಯರಿಗೆ ಸೀರೆ, ಪಂಚೆ ಮುಂತಾದುವನ್ನು ಕೊಟ್ಟು ಸತ್ಕರಿಸಿದರು.

ಸರ್ಕಾರಿ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣ ಕೊಡಬೇಕು

ಸರ್ಕಾರವು ನಡೆಸುತ್ತಲಿರುವ ಶಾಲೆಗಳಲ್ಲಿ ರಾಜ್ಯಾಂಗದಲ್ಲಿ ಧಾರ್ಮಿಕಶಿಕ್ಷಣವನ್ನು ಕೊಡಕೂಡದೆಂಬ ವಿಧಿಯನ್ನು ತೆಗೆದು ಹಾಕಬೇಕೆಂದು ಆಂಧ್ರ ಸರ್ಕಾರವು ರಾಜ್ಯಾಂಗಕ್ಕೆ ತಿದ್ದುಪಡಿಯನ್ನು ಸೂಚಿಸಿರುವುದಾಗಿ ತಿಳಿಯಬರುತ್ತದೆ.

ರಾಜ್ಯಾಂಗಪ್ರಕಾರ ಈಗ ಸರ್ಕಾರೀ ಶಾಲೆಗಳಲ್ಲಿ ಧಾರ್ಮಿಕಶಿಕ್ಷಣಕ್ಕೆ ಅವಕಾಶವಿಲ್ಲ. ಆದರೆ ಸರ್ಕಾರಿ ನೆರವುಪಡೆಯುವ ಶಾಲೆಗಳಲ್ಲಿ ಮಾತ್ರ ಇವೆ. ಕೆಲವು ಶಾಲೆಗಳಲ್ಲಿ ಈ ಶಿಕ್ಷಣವಿದ್ದು ಕೆಲವು ಶಾಲೆಗಳಲ್ಲಿ ಇಲ್ಲದಿರುವುದು ಅಸಂಬದ್ಧವೆಂದು ತಿಳಿಸಲಾಗಿದೆ.

ಜಮೀನು ಹಿಡುವಳಿ ಪರಿಶೀಲನೆ

ಭಾರತಾದ್ಯಂತ ಜಮೀನು ಹಿಡುವಳಿ ವಿಷಯದಲ್ಲಿ ಅಂಕಿ ಅಂಶಗಳನ್ನು ಸಂಗ್ರಹಿಸುವ ಕಾರ್ಯವು ಮುಂದಿನ ಬೇಸಿಗೆಯಲ್ಲಿ ಪ್ರಾರಂಭವಾಗುವುದೆಂದು ತಿಳಿದುಬಂದಿದೆ. ಪ್ರಾಂತ್ಯ ಸರ್ಕಾರಗಳು ಮುಂದಿನ ಮಾರ್ಚಿಯೊಳಗೆ ಕೆಲವು ಪ್ರದೇಶಗಳಲ್ಲಿ ಈ ಸರ್ವೆ ಕೆಲಸವನ್ನು ಮಾಡಿ ಅಖಂಡ ಭಾರತ ಸರ್ವೆ ನಡೆಸಲು ಇರುವ ತೊಂದರೆ ಮತ್ತು ಇತರ ವಿಷಯಗಳನ್ನು ಕಂಡುಹಿಡಿಯಲು ಕೇಂದ್ರವು ಸೂಚಿಸಿದೆ.

ಅಖಿಲಭಾರತ ನೇತ್ರ ವೈದ್ಯರ ಸಮ್ಮೇಳನ

ಅಖಿಲ ಭಾರತ ನೇತ್ರವೈದ್ಯರ ಸಮ್ಮೇಳನವನ್ನು ನಿನ್ನೆಯದಿನ ನಾಗಪುರದಲ್ಲಿ ಮಧ್ಯಪ್ರದೇಶದ ಮುಖ್ಯಮಂತ್ರಿ ಶ್ರೀ ರವಿಶಂಕರ ಶುಕ್ಲಾರವರು ಉದ್ಘಾಟಿಸಿದರು.

ಪಾಕೀಸ್ತಾನ ದ್ವಿಭಾಷಾ ರಾಷ್ಟ್ರವಾಗುವುದು

ಪಾಕೀಸ್ತಾನದಲ್ಲಿ ಉರ್ದು ಮತ್ತು ಬಂಗಾಳಿ ಈ ಎರಡು ಭಾಷೆಗಳನ್ನೂ, ರಾಷ್ಟ್ರಭಾಷೆಯಾಗಿ ಅಲ್ಲಿಯ ರಾಜ್ಯಾಂಗ ಸಭೆಯು ಅನುಮೋದಿಸುವುದೆಂದು ತಿಳಿಯಬರುತ್ತದೆ. ಈ ಸಲಹೆಗೆ ಪಾಕ್‌ಪ್ರಧಾನಿ ಮಹಮದ್ ಅಲಿಯವರ ಪೂರ್ಣ ಬೆಂಬಲವಿದೆ.

ಪೂರ್ವ ಪಾಕೀಸ್ತಾನದಲ್ಲಿ ಜನತೆಯ ಮೇಲೆ ಉರ್ದುಭಾಷೆಯನ್ನು ಪಶ್ಚಿಮ ಪಾಕೀಸ್ತಾನದ ಜನರಮೇಲೆ ಬಂಗಾಳಿ ಭಾಷೆಯನ್ನು ಒತ್ತಾಯ ಪಡಿಸಲು ಸಾಧ್ಯವಿಲ್ಲದಿರುವುದರಿಂದ, ಪಾಕೀಸ್ತಾನವನ್ನು ದ್ವಿಭಾಷಾ ರಾಷ್ಟ್ರವನ್ನಾಗಿ ಮಾಡಬೇಕಾದುದು ಅನಿವಾರ್ಯವಾಗಿದೆ.

ಶ್ರದ್ಧಾಂಜಲಿ

ಮಹಾತ್ಮಾ ಗಾಂಧಿಯವರು ಗುಂಡಿನ ಬಾಯಿಗೆ ತುತ್ತಾಗಿ ಇಂದಿಗೆ ೬ ವರ್ಷಗಳಾದವು. ದೇಶಾದ್ಯಂತ ಜನತೆಯು ಅವರನ್ನು ಸ್ಮರಿಸಿಕೊಂಡು ಶ್ರದ್ಧಾಂಜಲಿಯನ್ನು ಸಮರ್ಪಿಸಿ, ಆತ್ಮಾರ್ಪಣೆ ಮಾಡಿಕೊಳ್ಳುವುದು ಇಂದಿನ ಪ್ರಥಮ ಕರ್ತವ್ಯ.

ಮಹಾತ್ಮರು ಭಾರತ ಸ್ವಾತಂತ್ರ್ಯಸಂಗ್ರಾಮದಲ್ಲಿ ಹೋರಾಡಿ, ಸ್ವಾತಂತ್ರ್ಯ ಗಳಿಸಿಕೊಟ್ಟು ಅದು ಇನ್ನೂ ಕಣ್ಣುಬಿಡುವ ಸ್ಥಿತಿಯಲ್ಲಿರುವಾಗಲೇ ಅವರು ನಮ್ಮ ಕಣ್ಮರೆಯಾದರು. ಆದರೆ ಭಾರತಕ್ಕೇ ಅಲ್ಲ, ವಿಶ್ವಕ್ಕೇ ಶಾಂತಿಮಾರ್ಗದ ನಾನಾ ತತ್ವಗಳನ್ನು ಅವರು ಬೀರಿದ್ದಾರೆ. ಈಗ ಆ ತತ್ವಗಳ ಮಹತ್ವವು ಹೊರ ಬೀಳುತ್ತಿದೆ. ಸ್ವದೇಶಕ್ಕಿಂತಲೂ ವಿದೇಶಗಳಲ್ಲಿ ಈ ತತ್ವಗಳ ಮಹತ್ವವು ವಿಶೇಷವಾಗುತ್ತಿದೆ. ನಮ್ಮ ಜನರು ಸ್ವಾತಂತ್ರ್ಯವನ್ನು ಪಡೆದ ಅಮಲಿನಲ್ಲಿ ಮಹಾತ್ಮರ ತತ್ವ, ನೀತಿಬೋಧೆ ಮತ್ತು ಮೇಲ್ಪಂಕ್ತಿಗಳನ್ನು ಮರೆಯುತ್ತಲಿದ್ದಾರೆ. ಮಹಾತ್ಮರನ್ನು ನಾವು ಸ್ಮರಿಸಿಕೊಂಡು ಅವರ ಮೇಲ್ಪಂಕ್ತಿಯನ್ನೇ ಅನುಸರಿಸಿ, ಅವರು ಮಾರ್ಗ ತೋರಿರುವ ರಚನಾತ್ಮಕ ಕಾರ್ಯಗಳಲ್ಲಿ ತೊಡಗಿ ಭಾರತ ಪ್ರಗತಿಯನ್ನು ಸಾಧಿಸಿದರೆ ಅವರ ಆತ್ಮಕ್ಕೆ ಎಷ್ಟೋ ಸಂತೋಷವಾಗುತ್ತದೆ. ಅಲ್ಲದೆ ವಿಶ್ವದಲ್ಲಿ ಭಾರತದ ಪ್ರತಿಷ್ಠೆ ಎಲ್ಲಾ ರಾಷ್ಟ್ರಗಳಿಗೂ ಮಿಗಿಲಾಗಿ ಅವುಗಳಿಗೆಲ್ಲಾ ಮಾದರಿಯಾಗುತ್ತದೆ. ಅದಲ್ಲದೆ ನಮ್ಮಲ್ಲಿ ಈಗ ಹುಟ್ಟಿರುವ ನಾನಾರೀತಿಯ ಭೇದಭಾವಗಳನ್ನು ತೊರೆದು ಒಗ್ಗಟ್ಟಿನಿಂದ ಶ್ರಮಿಸಿ ನಮ್ಮ ನಾಡಿನಲ್ಲಿ ಪ್ರಗತಿ ಸಾಧಿಸುವ ಮಾರ್ಗವನ್ನು ಎಲ್ಲರೂ ಹಿಡಿಯುವುದು ಅತ್ಯಾವಶ್ಯಕ. ಅದಕ್ಕಾಗಿ ನಾವು ಇಂದು ಪ್ರತಿಜ್ಞೆ ಮಾಡೋಣ.

ಆಹಾರಧಾನ್ಯಗಳ ಬೆಲೆಯಲ್ಲಿ ಇಳಿತಾಯ

ಬೊಂಬಾಯಿ ಪ್ರಾಂತ್ಯದಲ್ಲಿ ಅಕ್ಕಿ, ಗೋಧಿ, ಜೋಳ ಮುಂತಾದ ಆಹಾರಧಾನ್ಯಗಳ ಬೆಲೆಯನ್ನು ಅಲ್ಲಿಯ ಸರ್ಕಾರವು ಫೆಬ್ರವರಿ ಒಂದನೇ ತಾರೀಖಿನಿಂದ ಇಳಿಸಿರುವುದಾಗಿ ಪ್ರಕಟಿಸಲಾಗಿದೆ. ಇತ್ತೀಚೆಗೆ ದೇಶದಲ್ಲಿ ಆಹಾರ ಪರಿಸ್ಥಿತಿಯು ಉತ್ತಮಗೊಳ್ಳುತ್ತಿರುವುದರಿಂದ ಎಲ್ಲೆಡೆಯಲ್ಲಿಯೂ ಆಹಾರಪದಾರ್ಥಗಳು ಅಗ್ಗವಾಗಿ ದೊರೆಯುತ್ತಿವೆ. ಸರ್ಕಾರವೂ ಸಹ ಬೆಲೆ ಇಳಿತಾಯವನ್ನು ಮಾಡಿದೆ.

ಈ ಆಹಾರವಸ್ತುಗಳ ಬೆಲೆಯು ಶೇಕಡ ೧೧ ರಿಂದ ೧೬ ರವರೆಗೆ ಇಳಿಸಲಾಗಿದೆ. ಅಕ್ಕಿಯ ಬೆಲೆಯು ಮಣ ಒಂದಕ್ಕೆ 3¾ ರೂಪಿನಿಂದ 5 ರೂಗಳವರೆಗೆ, ಗೋಧಿ ಬೆಲೆಯನ್ನು ಮಣ ಒಂದಕ್ಕೆ ೩ ರೂ, ಮೈಲೋವನ್ನು ಮಣಒಂದಕ್ಕೆ ೨ ರೂಪಾಯಿನಂತೆ ಇಳಿಸಲಾಗಿದೆ.

ಕೈಮಗ್ಗದವರಿಗೆ ನೆರವು

ಕೈಮಗ್ಗದ ಕೈಗಾರಿಕೆಗೆ ನೆರವುನೀಡಲು ಭಾರತ ಸರ್ಕಾರವು ಮಧ್ಯಭಾರತ, ಆಂಧ್ರ, ತ್ರಿಪುರ, ಪಂಜಾಬ್, ಹೈದರಾಬಾದ್ ಸಂಸ್ಥಾನಗಳಿಗೆ ಪುನಃ ಹಣಸಹಾಯ ನೀಡಿದೆ. ಆಂಧ್ರವು ೨,೦೪,೩೬೮ ರೂಪಾಯಿಗಳನ್ನು ಪಡೆಯುತ್ತದೆ.

ಕೈಮಗ್ಗ ಕೈಗಾರಿಕೆಯ ಪ್ರಗತಿಗಾಗಿ ಭಾರತ ಸರ್ಕಾರವು ೫೩-೫೪ನೇ ಸಾಲಿನಲ್ಲಿ ಒಟ್ಟು ೩ ಕೋಟಿ ೬೨ ಲಕ್ಷ ರೂಪಾಯಿಗಳನ್ನು ಕೊಟ್ಟಿದೆ.

ಪ್ರಧಾನಿ ನೆಹರೂರೊಡನೆ ಸಿಂಹಳ ನಾಯಕರ ಭೇಟಿ

ಸಿಂಹಳದಲ್ಲಿರುವ ಭಾರತ ವಂಶಸ್ಥರ ವಿಷಯದಲ್ಲಿ ಈಗ ಆಗಿರುವ ಒಪ್ಪಂದ ಸಂಬಂಧದಲ್ಲಿ ಮುಂದಿನ ತಿಂಗಳು ಮೊದಲನೆವಾರದಲ್ಲಿ ತಿರುವನಂತಪುರದಲ್ಲಿ ತಮ್ಮನ್ನು ಭೇಟಿಮಾಡಬೇಕೆಂದು ಪ್ರಧಾನಿ ನೆಹರೂರವರು ಸಿಂಹಳ ಕಾಂಗ್ರೆಸ್ ನಾಯಕರನ್ನು ಆಹ್ವಾನಿಸಿರುವುದಾಗಿ ಗೊತ್ತಾಗಿದೆ.

ಬೈಸಿಕಲ್ಲುಗಳು ಬಡವರ ವಾಹನ

ಬೈಸಿಕಲ್ಲುಗಳ ಅಭಿವೃದ್ಧಿ ಮಂಡಲಿಯ ಸಭೆಯನ್ನು ಕೇಂದ್ರ ಕೈಗಾರಿಕಾ ಸಚಿವ ಶ್ರೀ ಟಿ ಟಿ ಕೃಷ್ಣಮಾಚಾರಿಯವರು ದೆಹಲಿಯಲ್ಲಿ ನಿನ್ನೆ ಉದ್ಘಾಟಿಸುತ್ತಾ, ಬೈಸಿಕಲ್ಲುಗಳು ಬಡವರ ವಾಹನವೆಂಬುದನ್ನು ತಿಳಿದುಕೊಂಡು ಅವುಗಳು ಆದಷ್ಟು ಸುಲಭದರದಲ್ಲಿ ಭಾರತದಲ್ಲಿ ದೊರೆಯುವಂತೆ ಮಾಡಬೇಕೆಂದು ತಿಳಿಸಿದ್ದಾರೆ.

ಟರ್ಕಿ-ಪಾಕೀಸ್ತಾನ ಮಿಲಿಟರಿ ಒಪ್ಪಂದ

ಟರ್ಕಿ ಮತ್ತು ಪಾಕೀಸ್ತಾನಗಳ ನಡುವೆ ಸದ್ಯದಲ್ಲಿಯೇ ಮಿಲಿಟರಿ ಒಪ್ಪಂದವಾಗುವುದೆಂದು ತಿಳಿಯಬರುತ್ತದೆ. ಈ ಒಪ್ಪಂದವಾದನಂತರ ಅಮೆರಿಕಾವು ಈ ಎರಡು ರಾಷ್ಟ್ರಗಳಿಗೂ ಮಿಲಿಟರಿ ನೆರವನ್ನು ನೀಡುತ್ತದೆಯೆಂದು ಹೇಳಲಾಗಿದೆ.

ಪ್ರಧಾನ ಕಾರ್ಯದರ್ಶಿಗಳ ಸಮ್ಮೇಳನ ಮುಂದಕ್ಕೆ

ಮುಂದಿನತಿಂಗಳು ಮೊದಲನೆಯವಾರದಲ್ಲಿ ದೆಹಲಿಯಲ್ಲಿ ನಡೆಯಬೇಕಾಗಿದ್ದ ಎಲ್ಲಾ ಪ್ರಾಂತ್ಯಗಳ ಪ್ರಧಾನ ಕಾರ್ಯದರ್ಶಿಗಳ ಸಮ್ಮೇಳನವನ್ನು ಅನಿರ್ದಿಷ್ಟಕಾಲ ಮುಂದಕ್ಕೆ ಹಾಕಿರುವುದಾಗಿ ತಿಳಿಯಬರುತ್ತದೆ.

ಮದ್ರಾಸ್-ಆಂಧ್ರ ಗಡಿ ಪ್ರಶ್ನೆ

ಚಿತ್ತೂರು ಜಿಲ್ಲೆಗೆ ಸಂಬಂಧಪಟ್ಟಂತೆ ಆಂಧ್ರ ಮತ್ತು ಮದ್ರಾಸ್ ಪ್ರಾಂತ್ಯಗಳ ಪ್ರಶ್ನೆಯನ್ನು ಮದ್ರಾಸ್-ಆಂಧ್ರ ಪ್ರತಿನಿಧಿಗಳ ಸಭೆಯೊಂದು ಫೆಬ್ರವರಿ ೨ ನೇ ತಾರೀಖು ನಡೆಯುತ್ತದೆ.

ಪೌರ ವ್ಯವಹಾರದಲ್ಲಿ ಮಹಿಳೆಯರಿಗೆ ಹೆಚ್ಚಿನ ಪಾತ್ರ ಅವಶ್ಯಕ

ಮಹಿಳೆಯರು ಪೌರ ವ್ಯವಹಾರಗಳಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಬೇಕೆಂದು ಪ್ರಪಂಚ ಸಂಸ್ಥೆ ಅಧ್ಯಕ್ಷಣಿ ಶ್ರೀಮತಿ ವಿಜಯಲಕ್ಷ್ಮಿಯವರು ನಾಗಪುರದಲ್ಲಿ ಮಾತನಾಡುತ್ತಾ ಹೇಳಿದ್ದಾರೆ.

ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನ

ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನವು ಏಪ್ರಿಲ್ ೨೮ನೇ ತಾ॥ ಕೊಲಂಬೊವಿನಲ್ಲಿ ನಡೆಯುವುದೆಂದು ತಿಳಿದುಬಂದಿದೆ.

ಮೇಯರುಗಳ ಸಮ್ಮೇಳನ

ಏಷ್ಯಾ ರಾಷ್ಟ್ರಗಳ ಪ್ರಮುಖ ಪಟ್ಟಣಗಳ ಮೇಯರುಗಳ ಸಮ್ಮೇಳನವು ಮುಂದಿನ ಏಪ್ರಿಲ್ ಮಾಹೆಯಲ್ಲಿ ಕಲ್ಕತ್ತಾದಲ್ಲಿ ನಡೆಯುವುದೆಂದು ತಿಳಿಯಬರುತ್ತದೆ.

ಪುರಸಭೆಗಳ ಆಡಳಿತ, ಪುರಜನರಿಗೆ ವಸತಿ ಮತ್ತು ವಿದ್ಯಾಭ್ಯಾಸ, ಕಾರ್ಮಿಕ ಮುಂತಾದ ನಾನಾ ವಿಷಯಗಳು ಈ ಸಮ್ಮೇಳನದಲ್ಲಿ ಚರ್ಚೆಗೆ ಬರುವುದಾಗಿ ಗೊತ್ತಾಗಿದೆ.

ಜೀವವಿಮಾ ಕಂಪೆನಿ ಪರಸ್ಪರ ಸಹಕಾರ ಕೂಡಿಸುವ ಸಂಸ್ಥೆ

'ಪೃಥ್ವೀಭವನ' ಉದ್ಘಾಟನ ಸಮಾರಂಭದಲ್ಲಿ

ಮುಖ್ಯಮಂತ್ರಿಯವರ ಹೇಳಿಕೆ

ಬೆಂಗಳೂರು ೩೦

ಜೀವವಿಮೆ ಕೇವಲ ವ್ಯಾಪಾರದ ಉದ್ಯಮವಲ್ಲ. ಅದು ಪಾಲಿಸಿ ತೆಗೆದುಕೊಳ್ಳುವವರೆಲ್ಲರನ್ನೂ ಪರಸ್ಪರ ಸಹಾಯಕ್ಕಾಗಿ ಒಟ್ಟುಗೂಡಿಸುವ ಸಂಸ್ಥೆ ನಮ್ಮ ಸಮಾಜ ಮತ್ತು ದೇಶವೆಲ್ಲದರ ಆರ್ಥಿಕ ಚಟುವಟಿಕೆಗೆ ಅದರಿಂದ ಸಹಾಯವಾಗುತ್ತದೆ. ಅದು ಕೂಡಿಸಿದ ಹಣ ದೇಶಕ್ಕೂ, ಕೈಗಾರಿಕೆಗಳಿಗೂ ಬಂಡವಾಳವನ್ನೊದಗಿಸಿ, ದೇಶದ ಆರ್ಥಿಕ ಪ್ರಗತಿಗೆ ನೆರವಾಗುತ್ತದೆ. ವಿಮೆಯಿಂದ ವ್ಯಕ್ತಿಗೂ ಕುಟುಂಬಕ್ಕೂ ಲಾಭವಾಗುವುದಲ್ಲದೆ, ವ್ಯಾಪಾರೋದ್ಯಮಗಳಿಗೂ, ಕೈಗಾರಿಕೆಗಳಿಗೂ ಉತ್ತೇಜನ ದೊರೆತು ದೇಶವೆಲ್ಲಕ್ಕೂ ಲಾಭವಾಗುತ್ತದೆ. ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಿನ್ನೆಯದಿನ "ಪೃಥ್ವೀ"ಭವನವನ್ನು ತೆರೆಯುವ ಮತ್ತು ಏಷಿಯಾಟಿಕ್ ಮತ್ತು ಪೃಥ್ವೀ ವಿಮಾ ಕಂಪೆನಿಗಳ ೮ ನೇ ವಾರ್ಷಿಕೋತ್ಸವವನ್ನು ನಡೆಸುತ್ತಾ ತಿಳಿಸಿದ್ದಾರೆ.

ಅವರು ಮುಂದುವರಿಯುತ್ತಾ ಈ ರೀತಿ ಹೇಳಿದರು:—

ವಿಮಾ ಏಜೆಂಟರು ನಮ್ಮ ಬೆನ್ನು ಹತ್ತಿದ ಪೀಡೆಯೆಂದು ಭಾವಿಸುವುದು ತಪ್ಪು. ಅವರು ಸಮಾಜದ ಉದ್ಧಾರಕ್ಕಾಗಿ ದುಡಿಯುವವರು. ಅವರನ್ನು ಜೇನುಹುಳುವಿಗೆ ಹೋಲಿಸಬಹುದು. ಆ ದುಂಬಿ ಹೂವಿಂದ ಹೂವಿಗೆ ಹಾರಿ ತನ್ನ ಗೂಡಿನಲ್ಲಿ ಮಧುವನ್ನು ಶೇಖರಿಸುವಂತೆ ವಿಮಾ ಏಜೆಂಟರು ಸಮಾಜದಲ್ಲಿ ಒಬ್ಬರ ಬಳಿಯಿಂದ ಮತ್ತೊಬ್ಬರ ಬಳಿಗೆ ಹೋಗಿ ಅಸಂಖ್ಯಾತ ಜನರಿಂದ ಸಮಾಜದ ಏಳಿಗೆಗಾಗಿ ಹಣವನ್ನು ಕೂಡಿಸುತ್ತಾರೆ. ಆದ್ದರಿಂದ ಕೆಲವು ಜನರು ಅವರನ್ನು ಕಂಡರೆ ಅಸಮಾಧಾನವನ್ನು ವ್ಯಕ್ತಪಡಿಸಿದರೂ ಅವರು ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಕಾದ್ದಿಲ್ಲ. ಎಲ್ಲರಂತೆ ತಾವು ದೇಶಸೇವೆ ಮಾಡುತ್ತಿದ್ದೇವೆಂದು ಹೆಮ್ಮೆಯಿಂದ ಕೆಲಸ ಮಾಡಬಹುದು.

ಈಗ ನಮ್ಮ ಪಂಚವರ್ಷ ಯೋಜನೆಗಾಗಿ ೩,೨೪೪ ಕೋಟಿ ರೂಪಾಯಿಗಳನ್ನು ಈ ಐದು ವರ್ಷಗಳಲ್ಲಿ ಖರ್ಚುಮಾಡುತ್ತೇವೆ. ಈ ಸ್ಥಿತಿಯಲ್ಲಿ ೩೮೫ ಕೋಟಿ ರೂಪಾಯಿಗಳನ್ನು ನಾವು ಸಾಲವಾಗಿ ಪಡೆಯಬೇಕು. ಈ ಸಾಲದಲ್ಲಿ ಬಹುಭಾಗವನ್ನು ವಿಮಾ ಕಂಪೆನಿಯವರು ಕೊಟ್ಟಿದ್ದಾರೆ. ಪಂಚವರ್ಷ ಯೋಜನೆ ಕಾರ್ಯಗತವಾಗುವಂತೆ ಮಾಡುವುದರಲ್ಲಿ ಅವರಿಂದ ನಮಗೆ ವಿಶೇಷವಾದ ನೆರವು ಸಿಕ್ಕಿದೆ. ಮುಂದೆ ೨ ನೇ ಪಂಚವರ್ಷ ಯೋಜನೆಯೊಂದು ಬರುತ್ತದೆ. ಮೂರನೆಯದೂ ಬರಬಹುದು. ಇವೆಲ್ಲಾ ಫಲದಾಯಕವಾಗಬೇಕಾದರೆ ಹೆಚ್ಚು ಹೆಚ್ಚಾಗಿ ಹಣವನ್ನು ಕೂಡಿಸಬೇಕು. ಆದ್ದರಿಂದ ಮುಂದೆ ಬರುವ ವರ್ಷಗಳಲ್ಲಿ ವಿಮಾ ಕಂಪೆನಿಯವರ ಜವಾಬ್ದಾರಿ ಬಹಳ ಹೆಚ್ಚುತ್ತದೆ. ಅದನ್ನು ಅವರು ಯಶಸ್ವಿಯಾಗಿ ನಿರ್ವಹಿಸುತ್ತಾರೆಂದು ನನಗೆ ಪೂರ್ಣ ಭರವಸೆಯಿದೆ.

ಕೋಟಿಗಟ್ಟಲೆ ಜನರಿರುವ ನಮ್ಮ ದೇಶದಲ್ಲಿ ವಿಮಾ ಕಂಪೆನಿಯವರಿಗೆ ವಿಶಾಲವಾದ ಕಾರ್ಯಕ್ಷೇತ್ರವಿದೆ. ಇಂಡಿಯಾದಲ್ಲಿ ಇದುವರೆಗೆ ನಡೆದಿರುವ ವಿಮಾಕಾರ್ಯ ಅತ್ಯಲ್ಪವಾದದ್ದು. ನಮ್ಮ ೩೫ ಕೋಟಿ ಜನಸಂಖ್ಯೆಯನ್ನೂ ಅದು ಬೆಳೆಯುತ್ತಿರುವ ಪ್ರಮಾಣವನ್ನೂ ನೆನಪಿಗೆ ತಂದುಕೊಂಡರೆ ವಿಮಾ ಕಂಪೆನಿಯವರು ಮಾಡಬೇಕಾದ ಕೆಲಸಕ್ಕೆ ಮಿತಿಯೇ ಇಲ್ಲವೇನೋ ಎನ್ನಿಸುತ್ತದೆ. ನಮ್ಮ ವಿಮಾ ಸಂಸ್ಥೆಗಳು ಉಳಿದೆಲ್ಲಾ ದೇಶಗಳನ್ನು ಮೀರಿಸುವ ಮಟ್ಟಕ್ಕೆ ಏರಬಹುದು. ಅವರು ಶ್ರಮಪಟ್ಟು ಕೆಲಸಮಾಡಿದರೆ ಅವರಿಗೂ ಲಾಭವುಂಟು; ಅವರಿಂದ ಹಣವನ್ನುಳಿಸುವ ಅಭ್ಯಾಸ ಕಲಿಯುವ ಜನತೆಗೂ ಲಾಭವುಂಟು.

ಮನೆಕಟ್ಟುವ ಯೋಜನೆ, ಮುನಿಸಿಪಾಲಿಟಿ ಮತ್ತು ಸ್ಥಳೀಯ ಸಂಸ್ಥೆಗಳು ಕೈಗೊಳ್ಳುವ ಚರಂಡಿ ವ್ಯವಸ್ಥೆ ಮೊದಲಾದ ಕಾರ್ಯಗಳು, ನೀರಿನ ಸರಬರಾಜು, ಮುಂತಾದ ಸಾರ್ವಜನಿಕ ಯೋಜನೆಗಳಲ್ಲಿ ವಿಮಾ ಕಂಪೆನಿಗಳು ಮುಖ್ಯಪಾತ್ರವನ್ನು ವಹಿಸಬಹುದೆಂದು ಈಗ ತಾನೇ ನೀವು ಹೇಳಿದ್ದೀರಿ. ಕೂಲಿಗಾರರ ಅನುಕೂಲಕ್ಕಾಗಿ ಇಂಡಿಯಾ ಸರ್ಕಾರದವರು ಮನೆಕಟ್ಟುವ ಯೋಜನೆಯೊಂದಕ್ಕೆ ಹಣ ಒದಗಿಸಿದ್ದಾರೆ. ಮಧ್ಯಮ ವರ್ಗದವರಿಗೂ ಈ ಮನೆಯ ಸಮಸ್ಯೆ ಬಹಳ ಕಠಿಣವಾಗಿಯೇ ಇದೆಯೆಂದು ನನಗೆ ಅನ್ನಿಸುತ್ತದೆ ಈ ಸಮಸ್ಯೆಯನ್ನು ಬಿಡಿಸಲು ಮೈಸೂರು ಸರ್ಕಾರವು ಒಂದು ಗೃಹನಿರ್ಮಾಣ ಸಮಿತಿಯನ್ನು ಸ್ಥಾಪಿಸಬೇಕೆಂದಿದೆ. ಈ ವಿಷಯವನ್ನೊಳಗೊಂಡ ಮಸೂದೆಯೊಂದನ್ನು ಸದ್ಯದಲ್ಲೇ ಶಾಸನ ಸಭೆಯ ಮುಂದಿಡಲಾಗುತ್ತದೆ. ಮೈಸೂರು ದೇಶದ ನಗರಗಳೆಲ್ಲಕ್ಕೂ ನೀರಿನ ಸರಬರಾಜು ಮಾಡುವ ಯೋಜನೆಯನ್ನೂ ನಾವು ಕೈಕೊಂಡಿದ್ದೇವೆ. ಈ ಸಂದರ್ಭದಲ್ಲಿ ಮುನಿಸಿಪಾಲಿಟಿಗಳಿಗೆ ಸಾಲಕೊಡಲು ೫೦ ಲಕ್ಷ ರೂಪಾಯಿಗಳನ್ನು ಮೀಸಲಿಟ್ಟಿದೆ ನಗರಾಭಿವೃದ್ಧಿ, ಚರಂಡಿ ವ್ಯವಸ್ಥೆ ಮುಂತಾದ ಕಾರ್ಯಕ್ರಮಗಳಿಗೆ ಇನ್ನೂ ಅಧಿಕವಾದ ಹಣ ಬೇಕಾಗುತ್ತದೆ. ಇವಕ್ಕೆ ಸಹಾಯ ಒದಗಿಸಲು ವಿಮಾ ಕಂಪೆನಿಯವರು ಮುಂದೆ ಬರುತ್ತಾರೆಂದು ನಂಬಿದ್ದೇನೆ. ಇಂಥ ದೇಶೋದ್ಧಾರದ ಕಾರ್ಯಗಳಿಗೆ ಸಹಾಯ ಮಾಡುವುದರಿಂದ ವಿಮೆಯ ವಿಷಯದಲ್ಲಿ ಜನತೆಯ ಆಸಕ್ತಿ ಉತ್ಸಾಹಗಳು ಹೆಚ್ಚಿ ಅವರ ಉದ್ಯಮದಲ್ಲಿ ವಿಶ್ವಾಸವು ಸ್ಥಿರಗೊಳ್ಳುತ್ತವೆ ಎಂದು ಹೇಳುತ್ತಾ ಕಂಪೆನಿಗೆ ಶುಭಾಶಯವನ್ನು ಕೋರಿದರು.

ಬುಡಕಟ್ಟಿನ ಜನರ ಅಭಿವೃದ್ಧಿಗೆ ಪರಿಶೋಧನಾ ಕೇಂದ್ರ ಸ್ಥಾಪನೆ

ಬುಡಕಟ್ಟು ಜನರ ಸ್ಥಿತಿಗತಿ ಮುಂತಾವುಗಳನ್ನೆಲ್ಲಾ ಪರಿಶೀಲಿಸಲು ಮಧ್ಯಪ್ರದೇಶದ ಸರ್ಕಾರವು ಚಿಂದವಾರ ಎಂಬಲ್ಲಿ ಒಂದು ಪರಿಶೋಧನಾ ಕೇಂದ್ರವನ್ನು ಸ್ಥಾಪಿಸಲಿದೆ. ಪರಿಗಣಿತ ಬುಡಕಟ್ಟಿನವರಿಗೆಸಂಬಂಧಪಟ್ಟ ವಿಷಯದಲ್ಲಿ ಸರ್ಕಾರಕ್ಕೆ ಈ ಕೇಂದ್ರವು ಎಲ್ಲಾ ಸಲಹೆಗಳನ್ನೂ ನೀಡುತ್ತದೆ. ಆ ಜನಾಂಗದ ಕ್ಷೇಮಾಭ್ಯುದಯ ಯೋಜನೆಗಳನ್ನೆಲ್ಲಾ ಈ ಸಂಸ್ಥೆಯು ನಡೆಸುತ್ತದೆ.

ಮಧ್ಯಪ್ರದೇಶದಲ್ಲಿ ಈ ಬುಡಕಟ್ಟಿನ ಜನರು ೫೦ ಲಕ್ಷ ಜನರಿರುವರು.

ಪಂಚವಾರ್ಷಿಕ ಯೋಜನೆಯ ಪ್ರಕಾರ ಈ ಪ್ರಾಂತ್ಯವು ಈ ಬುಡಕಟ್ಟು ಜನರ ಅಭ್ಯುದಯಕ್ಕಾಗಿ ೧೭೦ ಲಕ್ಷ ರೂಪಾಯಿಗಳ ವೆಚ್ಚದ ಯೋಜನೆಯನ್ನು ತಯಾರಿಸಿ ಕಾರ್ಯರೂಪಕ್ಕೆ ತರಲಾರಂಭಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೯—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೧೦	೨೬—೧೦
ಎಳ್ಳು	೭೦—೧೦	—
ಹರಳು	೩೬—	೩೯—
ಹೊಂಗೆಬೀಜ	೧೯—೮	೨೦—೨
ಹುಚ್ಚೆಳ್ಳು	೩೬—	೪೪—
ಹುರುಳಿ	೨೭—೮	೩೧—
ಉದ್ದು	—	—
ಹೆಸರು	೩೮—	೪೦—
ಅಲಸಂದೆ	೩೫—	೬೨—೬
ಅವರೆ	೩೦—	೩೬—೮
ಕೊತ್ತಂಬರಿ	೨೭—೨	೨೫—೪
ತೊಗರಿ	೨೫—೧೦	೬೨—೮
ಕಡಲೆ	೪೮—೮	೫೦—
ಹುಣಸೆಹಣ್ಣು	೬—೯	೧೧—೬
ಮೆಣಸಿನಕಾಯಿ	೨೫—	೩೩—೧೦
ಸೀಗೆಕಾಯಿ	೪—೩	೫—೧೦
ಬೆಲ್ಲ	—	—
ತೆಂಗಿನಕಾಯಿ	೨೦೧—	೩೧೨—

ಡಿ. ಎಸ್. ಪಿ. ಯವರ ವರ್ಗಾವಣೆ

ಬೆಂಗಳೂರು ೩೦

ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿಗಳ ವರ್ಗಾವಣೆಯು ಈರೀತಿ ಇದೆ:—

ಮೈಸೂರು ಡಿ.ಎಸ್.ಪಿ. ಶ್ರೀ ಕೆ.ಎಸ್. ಕೃಷ್ಣಮೂರ್ತಿಯವರು ಬೆಂಗಳೂರು ನಾರ್ತ್ ಡಿ. ಎಸ್. ಪಿ., ತುಮಕೂರು ಡಿ. ಎಸ್. ಪಿ. ಮಲ್ಲಪ್ಪ ಮೈಸೂರಿಗೆ.

ಐ. ಜಿ. ಪಿ. ಯವರ ಅಸಿಸ್ಟೆಂಟ್ ಶ್ರೀ ಆರ್. ಡಿ. ಆಂಡ್ರಸನ್ ಬೆಂಗಳೂರು ಜಿಲ್ಲಾ ಡಿ. ಎಸ್. ಪಿ. ಅಲ್ಲಿರುವ ಶ್ರೀ ಜಯಸಿಂಗ್ ಚಿಕ್ಕಮಗಳೂರಿಗೆ ಚಿಕ್ಕಮಗಳೂರು ಡಿ. ಎಸ್. ಪಿ. ಶ್ರೀ ವಿಜಯ ದೇವರಾಜ ಅರಸ್ ತುಮಕೂರಿಗೆ.

ಪೋಲೀಸ್ ಟ್ರೇನಿಂಗ್ ಸ್ಕೂಲ್ ಪ್ರಿನ್ಸಿಪಾಲ್ ಶ್ರೀ ಎಲ್. ಸುಬ್ರಹ್ಮಣ್ಯರಾವ್ ಡಿ. ಐ. ಜಿ. ಯವರ ಅಸಿಸ್ಟೆಂಟರಾಗಿ.

ರಜಾದಲ್ಲಿರುವ ಶ್ರೀ ಎಂ. ಖಾದರಿಅಲಿ, ಆರ್ಮ್ಡ್ ರಿಸರ್ವ್‌ಪೋಲೀಸ್ ಅಲ್ಲಿರುವ ಶ್ರೀ ಮಹಮದ್ ದಸ್ತಗಿರ್ ರೈಲ್ವೆ ಡಿ.ಎಸ್. ಪಿ., ರೈಲ್ವೆ ಡಿ. ಎಸ್. ಪಿ. ಶ್ರೀ ದೇವರಾವ್ ರವರು ಆಂಟಿಕರಪ್ಷನ್, ಅಲ್ಲಿರುವ ಶ್ರೀ ಎಂ. ನರಸಿಂಹಯ್ಯ ಪೋಲೀಸ್ ಟ್ರೇನಿಂಗ್ ಸ್ಕೂಲ್ ಪ್ರಿನ್ಸಿಪಾಲರಾಗಿ.

ಸನ್ಯಾಸಿಗಳ ಪ್ರತಿಜ್ಞೆ

ಅಲಹಾಬಾದಿನ ಬಳಿ ಕುಂಭನಗರದಲ್ಲಿ ಸುಮಾರು ೧೦ ಸಾವಿರ ಕಾವಿಧಾರಿಗಳಾದ ಸನ್ಯಾಸಿಗಳು ತಮ್ಮ ಪ್ರಾರ್ಥನಾವ್ರತವನ್ನು ಪೂರೈಸಿ, ಪಾಕೀಸ್ತಾನ ಅಮೆರಿಕಾ ಸೈನ್ಯ ಒಪ್ಪಂದದ ವಿರೋಧವಾಗಿ ಭಾರತಾದ್ಯಂತ ಜನರನ್ನು ಐಕ್ಯಗೊಳಿಸಲು ಪ್ರತಿಜ್ಞೆಯನ್ನು ಸ್ವೀಕರಿಸಿದ್ದಾರೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

Palace Maramath Department

Abstract Notification Dated 25th Jany. 1954

—:o:—

Sealed Tenders for constructing 3 (Three) Blocks of Twin Type Model Houses in the premises of Jaganmohana Palace Building on Krishnavilas Agrahar Road, Mysore estimated to cost Rs. 36,000/- will be received till 3-30 P.M. on 4-2-1954.

Please see the Notification published on the Notice Board of the Palace Engineer's Office for details.

Earnest Money to be deposited with the Tender is Rs. 1,800/-.

Mysore, Dated 25th Jany. 1954

Sd/H. K. Panditaradhya. *Palace Engineer.*

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೩೩೦೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೨೬

೧-೨-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಾಂಗ್ರೆಸ್ಸಿನಲ್ಲಿ ಐಕ್ಯತೆ ಅಗತ್ಯ

ಅಧ್ಯಕ್ಷ ವೀರಣ್ಣಗೌಡರ ಹಿತೋಕ್ತಿ

ಮೈಸೂರು ೧

ನಿನ್ನೆಯದಿನ ಮಧ್ಯಾಹ್ನ ಮೈಸೂರು ಜಿಲ್ಲಾ ಕಾಂಗ್ರೆಸ್ ಕೆಲಸಗಾರರನ್ನುದ್ದೇಶಿಸಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಹೆಚ್. ಕೆ. ವೀರಣ್ಣಗೌಡರು ಮಾತನಾಡುತ್ತಾ ಕಾಂಗ್ರೆಸ್ಸಿನಲ್ಲಿ ಐಕ್ಯತೆಯನ್ನುಂಟುಮಾಡಿ, ಸದಸ್ಯರನ್ನು ಕೂಡಿಸಲು ಎಲ್ಲರೂ ದುಡಿಯಬೇಕೆಂದು ಮನವಿ ಮಾಡಿದರು.

ಕೆಲವು ಕಾಂಗ್ರೆಸ್ಸಿಗರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಕಾಂಗ್ರೆಸ್ಸಿನ ಪ್ರತಿಷ್ಠೆಯನ್ನು ಕೆಡಿಸುತ್ತಿರುವುದು ವಿಷಾದಕರ. ಸ್ವಾತಂತ್ರ್ಯ ಚಳುವಳಿಯಕಾಲದಲ್ಲಿ ಸ್ವಾರ್ಥತ್ಯಾಗದಿಂದ ಸೇವೆ ಸಲ್ಲಿಸದಂತೆ ಈಗಲೂ ಕಾಂಗ್ರೆಸ್ ಕೆಲಸಗಾರರು ಅದೇ ಸ್ಫೂರ್ತಿಯಿಂದ ತ್ಯಾಗದ ಸೇವೆಯ ಬೆಂಬಲ ನೀಡಬೇಕು. ಹೆಚ್ಚಾಗಿ ಸದಸ್ಯರುಗಳನ್ನು ಸೇರಿಸಿ ತಾಲ್ಲೂಕು ಸಮಿತಿಗಳಿಗೆ ಹೊಸ ಜೀವನ ತುಂಬಬೇಕುಎಂದು ಶ್ರೀ ವೀರಣ್ಣಗೌಡರು ತಿಳಿಸಿದರು.

ಪ್ರಾರಂಭದಲ್ಲಿ ಜಿಲ್ಲಾ ಸಮಿತಿ ಅಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿಯವರು ಶ್ರೀ ವೀರಣ್ಣಗೌಡರನ್ನು ಸ್ವಾಗತಿಸುತ್ತಾ ಸಂಸ್ಥೆಯ ಪ್ರಗತಿಗಾಗಿ ಅವರು ಸಲ್ಲಿಸುತ್ತಲಿರುವ ಸೇವೆಯನ್ನು ಪ್ರಶಂಸಿಸಿದರು.

ಮದ್ಯಪಾನ ನಿರೋಧ ಯಶಸ್ವಿ

ಬೊಂಬಾಯಿ ಪ್ರಾಂತ್ಯದಲ್ಲಿ ಮದ್ಯಪಾನ ನಿರೋಧವನ್ನು ಜಾರಿಗೆ ತಂದಾಗಿನಿಂದ ಸರ್ಕಾರಕ್ಕೆ ಯಾವ ರೀತಿಯಾಗಿಯೂ ನಷ್ಟವಾಗಿಲ್ಲ. ಅದರಲ್ಲಿ ಬರುತ್ತಿದ್ದ ಹಣವೆಲ್ಲಾ ಈಗ ಮಾರಾಟತೆರಿಗೆಯಿಂದಲೇ ಬರುತ್ತಿದೆ ಎಂದು ಬೊಂಬಾಯಿ ಪಾನನಿರೋಧ ಸಚಿವ ಶ್ರೀ ಜೀವರಾಜ್ ಮೆಹ್ತಾರವರು ಮಾತನಾಡುತ್ತಾ ಪಾನನಿರೋಧವನ್ನು ಪ್ರಾಂತ್ಯದಲ್ಲಿ ಖಾಯಂ ಆಗಿ ಜಾರಿಗೆ ತರಲಾಗುತ್ತದೆ ಈಗಿನ ನೀತಿಯಲ್ಲಿ ಏನೂ ಬದಲಾವಣೆಯಿಲ್ಲ ಎಂದು ಹೇಳಿದ್ದಾರೆ.

ನೂತನ ನೀರಾವರಿ ಯೋಜನೆಗಳು

ಆಂಧ್ರ ಪ್ರಾಂತ್ಯದಲ್ಲಿ 9½ ಕೋಟಿ ರೂಪಾಯಿಗಳವೆಚ್ಚದ ೨೮ ನೀರಾವರಿ ಯೋಜನೆಗಳನ್ನು ಸದ್ಯದಲ್ಲಿಯೇ ಕೈಗೊಳ್ಳಲಾಗುತ್ತದೆ. ಇದರಿಂದ ೧೧ ಜಿಲ್ಲೆಗಳಲ್ಲಿಯೂ ವ್ಯವಸಾಯಾಭಿವೃದ್ಧಿಗೆ ಸಹಾಯವಾಗುತ್ತದೆ.

ಮುಂದಿನವರ್ಷ ಅಕ್ಕಿಮೇಲಿನ ಹತೋಟಿ ಪೂರ್ಣರದ್ದು

ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ಆಹಾರ ಶಾಖೆಗಳನ್ನು ಮುಚ್ಚಲಾಗುತ್ತದೆ

ಆಹಾರ ಸಚಿವ ಶ್ರೀ ಕಿದ್ವಾಯಿಯವರ ಹೇಳಿಕೆ

ಭಾರತದಲ್ಲಿ ವಿಭಜನೆಯಾಗುವುದಕ್ಕೆ ಮುಂಚೆ ಎಷ್ಟು ಆಹಾರವು ಉತ್ಪತ್ತಿಯಾಗುತ್ತಲಿತ್ತೋ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಈಗ ಉತ್ಪತ್ತಿಯಾಗುತ್ತಿದೆ. ದೇಶದಲ್ಲಿ ಆಹಾರ ಕೊರತೆಯು ಈಗ ಪೂರ್ಣವಾಗಿ ಪರಿಹಾರವಾಗಿದೆ. ಸದ್ಯದಲ್ಲಿ ದೇಶದ್ಯಾಂತ ಅಕ್ಕಿವಿನಹ ಮಿಕ್ಕ ಎಲ್ಲಾ ಆಹಾರ ವಸ್ತುಗಳಮೇಲಿನ ಹತೋಟಿಯನ್ನು ರದ್ದುಗೊಳಿಸಲಾಗಿದೆ. ಈಗ ನಡೆಯುತ್ತಿರುವ ಅಕ್ಕಿ ದಾಸ್ತಾನು ಕೆಲಸವೆಲ್ಲವೂ ಮುಗಿದ ನಂತರ, ಮುಂದಿನ ವರ್ಷದವೇಳೆಗೆ ಅದರ ಮೇಲಿನ ಹತೋಟಿಯನ್ನು ಪೂರ್ಣವಾಗಿ ರದ್ದುಗೊಳಿಸಲಾಗುತ್ತದೆಯೆಂದು ಆಹಾರ ಸಚಿವ ಶ್ರೀ ಕಿದ್ವಾಯಿಯವರು ಹೇಳಿದ್ದಾರೆ.

ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ಇರುವ ಆಹಾರ ಶಾಖೆಗಳನ್ನು ಆದಷ್ಟು ಜಾಗ್ರತೆಯಾಗಿ ರದ್ದುಗೊಳಿಸುವುದೇ ಸರ್ಕಾರದ ನೀತಿಯಾಗಿದೆ. ಮುಂದಿನ ಸಾಲಿನವೇಳೆಗೆ ಈ ಇಲಾಖೆಗಳು ರದ್ದಾಗುವುವು. ಆಹಾರ ಪದಾರ್ಥಗಳ ಮಾರಾಟದಲ್ಲಿ ರೈತರಿಗೆ ನಷ್ಟ ಸಂಭವಿಸಿದರೆ ಸರ್ಕಾರವು ತಾನೇ ಸರಿಯಾದ ಬೆಲೆಗೆ ಆಹಾರವನ್ನು ಕೊಳ್ಳುವ ವ್ಯವಸ್ಥೆ ಮಾಡಲಾಗುತ್ತದೆ. ಅಂತರರಾಷ್ಟ್ರೀಯ ಗೋಧಿ ಮಂಡಲಿಯೊಡನೆ ಭಾರತವು ೨೦ ಲಕ್ಷ ಟನ್ ಗೋಧಿಗಾಗಿ ಒಪ್ಪಂದ ಮಾಡಿಕೊಂಡಿತು. ಆದರೆ ಈಗ ಕೇವಲ ಸ್ವಲ್ಪವನ್ನು ಮಾತ್ರ ಖರೀದಿಸಿಕೊಳ್ಳಲಾಗಿದೆ. ಉಳಿಕೆಯನ್ನು ತರಿಸಿಕೊಳ್ಳುವ ಅಗತ್ಯವೇ ಇಲ್ಲವಾಗಿದೆ ಎಂದು ಅವರು ತಿಳಿಸಿದ್ದಾರೆ.

ಸ್ವದೇಶಿ ವಸ್ತುಗಳ ನಾಶ

ಸರ್ಕಾರವು ಸ್ವದೇಶದಲ್ಲಿ ತಯಾರಾದ ಸಾಮಗ್ರಿಗಳಿಗೆ ತಕ್ಕಪ್ರೋತ್ಸಾಹವನ್ನು ಕೊಡುತ್ತಿಲ್ಲವೆಂದು ಸರ್ಕಾರದ ನೀತಿಯನ್ನು ನಿರೋಧಿಸಿ, ಕೊಯಮತ್ತೂರಿನ ಕೈಗಾರಿಕೋದ್ಯಮಿ ಶ್ರೀ ಜಿ. ಡಿ. ನಾಯ್ಡುರವರು ಮೊನ್ನೆಯದಿನ ಬಹಿರಂಗ ಸಭೆಯಲ್ಲಿ ತಮ್ಮ ಸಂಸ್ಥೆಯು ತಯಾರಿಸಿದ್ದ ೪೦ ರೇಡಿಯೋ, ಅನೇಕ ಗಡಿಯಾರ ಮತ್ತು ಇತರ ವಸ್ತುಗಳನ್ನು ಚೂರು ಚೂರಾಗಿ ಒಡೆದು ಹಾಕಿದರೆಂದು ತಿಳಿಯಬರುತ್ತದೆ.

ಲಾಠಿ ಪ್ರಹಾರದಿಂದ ಒಬ್ಬನ ಮರಣ

ಕಟಕ್ ಬಳಿ ಯಿರುವ ಹಿರಾಕುಡ್ ಅಣೆಕಟ್ಟಿನ ಕೆಲಸಗಾರರು ಹೆಚ್ಚು ಕೂಲಿ ಮತ್ತು ಇತರ ಬೇಡಿಕೆಗಳಿಗೆ ಪುರಸ್ಕಾರ ದೊರೆಯಲಿಲ್ಲವೆಂದು ಮೊನ್ನೆಯದಿನ ನಿಷೇಧಾಜ್ಞೆಯನ್ನು ಉಲ್ಲಂಘಿಸಿ, ಪ್ರದರ್ಶನ ನಡೆಸಿದರು. ಗುಂಪನ್ನು ಚದುರಿಸಲು ಪೊಲೀಸಿನವರು ಲಾಠಿ ಪ್ರಹಾರ ಮಾಡಿದರು ಅದರ ಪರಿಣಾಮವಾಗಿ ೩೦ ಜನರಿಗೆ ಗಾಯಗಳಾಗಿ ಆಸ್ಪತ್ರೆಗೆ ಸಾಗಿಸಲಾಯಿತು ಅವರಲ್ಲಿ ಒಬ್ಬನು ಅಲ್ಲಿ ಸತ್ತು ಹೋದನೆಂದು ತಿಳಿಯಬರುತ್ತದೆ.

ಈ ಸಂಬಂಧದಲ್ಲಿ ೫೦ ಜನರು ದಸ್ತಗಿರಿಯಾಗಿದೆ. ಈಚೆಗೆ ಪರಿಸ್ಥಿತಿಯು ಉತ್ತಮಗೊಂಡು ಕಾರ್ಮಿಕರು ಕೆಲಸಕ್ಕೆ ಹೋಗುತ್ತಿರುವುದಾಗಿ ತಿಳಿಯಬರುತ್ತದೆ.

ಜೈನರ ದೇವಾಲಯಕ್ಕೆ ಹರಿಜನ ಪ್ರವೇಶವಿಲ್ಲ

ದೆಹಲಿಯ ಆರೋಗ್ಯ ಸಚಿವ ಡಾ|| ಸುಶೀಲನಾಯರ್‌ರವರು ನಿನ್ನೆಯದಿನ ಕೆಲವು ಹರಿಜನರೊಡನೆ ಲಾಲ್‌ಮಂದಿರ್ ಎಂಬ ಕರೆಯಲಾಗುವ ಜೈನರ ದೇವಾಲಯಕ್ಕೆ ಹೋದಾಗ ಪ್ರವೇಶ ದೊರೆಯಲಿಲ್ಲ ಅವರು ಹೋಗುವ ಮುಂಚೆಯೇ ದೇವಾಲಯಕ್ಕೆ ಬೀಗಹಾಕಿ, ಕಾವಲು ಹಾಕಿತ್ತು ಸಚಿವರು ಬಾಗಿಲು ತೆಗೆಯುವಂತೆ ಕೇಳಿದಾಗ ಅವರು ನಿರಾಕರಿಸಿದರು.

ಕಾಶ್ಮೀರ ಪ್ರಶ್ನೆ ಚರ್ಚೆಯಿಲ್ಲವೇ ?

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವೆ ಆಗಲಿರುವ ಸೈನ್ಯ ಒಪ್ಪಂದ ಪ್ರಶ್ನೆ ಈಗ ಉದ್ಭವಿಸಿರುವುದರಿಂದ ಕಾಶ್ಮೀರದ ಪ್ರಶ್ನೆಯ ವಿಷಯದಲ್ಲಿ ಭಾರತ ಮತ್ತು ಪಾಕ್ ಪ್ರಧಾನಿಗಳ ನಡುವೆ ಮಾತುಕತೆಗಳು ಸದ್ಯದಲ್ಲಿಯೇ ನಡೆಯುವ ಸಂಭವವಿಲ್ಲವೆಂದು ದೆಹಲಿಯಲ್ಲಿ ಹೇಳಲಾಗುತ್ತಿದೆ.

ಪ್ರತಿಭಟನಾ ಸಭೆ

ಮೈಸೂರು ೧

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್‌ನಲ್ಲಿರುವ ಎಲ್ಲಾ ಅಂಗಡಿ ಮತ್ತು ಕೊಠಡಿಗಳ ಮಾಹೆಯಾನಾ ಬಾಡಿಗೆಯನ್ನು ಶೇ|| ೩೦೦-೫೦೦ರ ವರೆಗೆ ಏರಿಸಿರುವುದನ್ನು ಪ್ರತಿಭಟಿಸಿ ಆ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ವಿಷಯ ಚರ್ಚೆಗಾಗಿ ಅಲ್ಲಿಯ ಬಾಡಿಗೆದಾರರ ಸಭೆಯೊಂದು ಈ ಸಂಜೆ ಮೋತೀಖಾನಾ ಹೊಸ ಕಟ್ಟಡದಲ್ಲಿ ಏರ್ಪಡಿಸಲಾಗಿದೆ.

ಸ್ವೀಕಾರ

ಜಯಭಾರತ್ ಇನ್ವೆಸ್ಟ್‌ಮೆಂಟ್‌ನವರು ಕಳುಹಿಸಿರುವ ೧೯೫೪ನೇ ವರ್ಷದ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ.

ಭಾರತ ಶ್ರೇಷ್ಠ ನ್ಯಾಯಾಧೀಶರ ಪ್ರವಾಸ

ಭಾರತ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಮೆಹರ್‌ಚಂದ್ ಮಹಾಜನ್‌ರವರು ಫೆಬ್ರವರಿ ಕೊನೆಯವಾರದಲ್ಲಿ ದಕ್ಷಿಣ ಭಾರತ ಪ್ರವಾಸವನ್ನು ಕೈಗೊಳ್ಳಲಿದ್ದಾರೆ.

ಅವರು ಮಾರ್ಚಿ ೨ ನೇ ತಾರೀಖು ಬೆಂಗಳೂರಿಗೆ ಆಗಮಿಸಿ ೩ ದಿನಗಳಕಾಲ ಅಲ್ಲಿರುತ್ತಾರೆ.

ಸರ್ಕಾರ ಉರುಳಿಸಲು ಪ್ರಯತ್ನ

ಈಜಿಪ್ಟಿನ ಸರ್ಕಾರವನ್ನು ಉರುಳಿಸಲು ಯತ್ನಿಸಿದರೆಂಬ ಆಪಾದನೆಮೇಲೆ ನಗೀಬರ ಕ್ರಾಂತಿಕಾರಕ ಸರ್ಕಾರದ ಮಿಲಿಟರಿ ನ್ಯಾಯಾಲಯದಲ್ಲಿ ೪೪ ಮಂದಿಯ ವಿಚಾರಣೆ ಪ್ರಾರಂಭವಾಗಿದೆ.

ವಿದೇಶಗಳಲ್ಲಿ ಭಾರತೀಯರು

ವಿದೇಶಗಳಲ್ಲಿ ಒಟ್ಟು ೪೫ ಲಕ್ಷ ಭಾರತೀಯರು ಇರುವುದಾಗಿ ಈಚಿನ ಅಂಕಿ ಸಂಗ್ರಹಣೆಯಿಂದ ತಿಳಿದುಬಂದಿದೆ.

ನೆಹರೂ ಆಂಧ್ರ ಪ್ರವಾಸ

ಪಾರ್ಲಿಮೆಂಟಿನ ಬಜೆಟ್ ಅಧಿವೇಶನ ಮುಗಿದನಂತರ ಪ್ರಧಾನಿ ನೆಹರೂರವರು ಆಂಧ್ರ ಪ್ರಾಂತ್ಯ ಪ್ರವಾಸ ಕೈಗೊಳ್ಳುವರೆಂದು ತಿಳಿಯಬರುತ್ತದೆ.

ಸರ್ವೋದಯ ಸಮ್ಮೇಳನ

ಇದೇ ೨೦ನೇ ತಾರೀಖಿನಿಂದ ಪಶ್ಚಿಮ ವಾಹಿನಿಯಲ್ಲಿ ಸರ್ವೋದಯ ಸಮ್ಮೇಳನವು ೩ ದಿನಗಳಕಾಲ ನಡೆಯುತ್ತದೆ.

ಹೆಚ್ಚು ಆಹಾರ ಬೆಳೆಗೆ ಕೇಂದ್ರದಿಂದ ೧ ಕೋಟಿ ರೂ.

ಮೈಸೂರು ಸಂಸ್ಥಾನದಲ್ಲಿ ೫೪-೫೫ ನೇ ಸಾಲಿನಲ್ಲಿ ಹೆಚ್ಚು ಆಹಾರ ಬೆಳೆಯಲು ಕೇಂದ್ರವು ಒಂದು ಕೋಟಿ ರೂಪಾಯಿಗಳನ್ನು ಕೊಡಲು ನಿರ್ಧರಿಸಿದೆ.

ಈ ಪೈಕಿ ಸ್ವಲ್ಪ ಭಾಗವು ಗ್ರಾಂಟು. ಉಳಿಕೆ ಸಾಲದ ರೂಪದಲ್ಲಿರುತ್ತದೆ.

ವಿದ್ಯುತ್ ಸರಬರಾಜು ಮತ್ತು ನೀರಾವರಿ ಕೆಲಸಗಳಿಗಾಗಿ ವಿದ್ಯುತ್ ಪಂಪುಗಳನ್ನು ಒದಗಿಸಲು ೬೪ ೫೫ ಲಕ್ಷ ರೂ. ಜಮೀನು ಅಭಿವೃದ್ಧಿ ಕಾರ್ಯಗಳಿಗೆ ೩-೨೫ ಲಕ್ಷ ರೂ. ಉತ್ತಮ ಬಿತ್ತನೆ ಧಾನ್ಯಗಳ ಹಂಚಿಕೆಗೆ ೯೯,೯೦೦ ರೂ, ಮತ್ತು ಕೃತಕ ಗೊಬ್ಬರ ತಯಾರಿಕೆಗೆ ೬೪೩೦೦ ರೂ. ಕೊಡಲಾಗುತ್ತದೆ.

ಕಾಶ್ಮೀರ-ಭಾರತ ಸಂಬಂಧ

ಭಾರತ ಮತ್ತು ಕಾಶ್ಮೀರಗಳ ಸಂಬಂಧದಲ್ಲಿ ಉಭಯ ಸರ್ಕಾರಗಳ ಪ್ರತಿನಿಧಿಗಳು ಕಳೆದವಾರ ಮಾತುಕತೆಗಳನ್ನು ನಡೆಸಿ ಕೆಲವು ಪ್ರಮುಖ ನಿರ್ಧಾರಗಳಿಗೆ ಬಂದಿರುವುದಾಗಿ ತಿಳಿಯಬರುತ್ತದೆ.

ಕಾಶ್ಮೀರದಲ್ಲಿ ಭಾರತ ಶ್ರೇಷ್ಠ ನ್ಯಾಯಾಲಯದ ವ್ಯಾಪ್ತಿಯಿರುವುದಕ್ಕೆ ಕಾಶ್ಮೀರವು ಒಪ್ಪಿದೆಯೆಂದೂ ಈಬಗ್ಗೆ ಇದೇ ೩ನೇ ತಾರೀಖು ನಡೆಯಲಿರುವ ಕಾಶ್ಮೀರ ರಾಜ್ಯಾಂಗ ಸಭೆಯಲ್ಲಿ ತನ್ನ ಒಪ್ಪಿಗೆಯನ್ನು ಸೂಚಿಸುವ ನಿರ್ಣಯವಾಗುವುದೆಂದು ಹೇಳಲಾಗಿದೆ.

ಅಲ್ಲದೆ ಕಾಶ್ಮೀರವು ಭಾರತಕ್ಕೆ ಸೇರಿರುವ ವಿಷಯದಲ್ಲಿಯೂ ನಿರ್ದಿಷ್ಟವಾದ ನಿರ್ಣಯವೊಂದನ್ನು ಪುನಃ ರಾಜ್ಯಾಂಗ ಸಭೆಯಲ್ಲಿ ಮಾಡಿ, ಈ ವಿಷಯದಲ್ಲಿ ಯಾವ ವಿವಾದವೂ ಮುಂದೆ ಇರದಂತೆ ಮಾಡಲಾಗುತ್ತದೆ ಎಂದೂ ಹೇಳಲಾಗಿದೆ.

ಉಕ್ಕಿನ ಕಾರ್ಖಾನೆ

ಭಾರತದಲ್ಲಿ ೭೧-೭೫ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಸ್ಥಾಪಿಸಲಾಗುವ ಭಾರಿ ಉಕ್ಕಿನ ಕಾರ್ಖಾನೆಯನ್ನು ಒರಿಸ್ಸಾ ಪ್ರಾಂತ್ಯದಲ್ಲಿರುವ ರೂರ್ಕೆಲಾ ಎಂಬಲ್ಲಿ ನಿರ್ಮಿಸಲಾಗುವುದೆಂದು ಹೇಳಲಾಗಿದೆ.

ಜರ್ಮನಿಯ ಪರಿಣಿತರು ಈ ಸ್ಥಳವನ್ನು ಚುನಾಯಿಸಿರುವುದಾಗಿ ತಿಳಿಯಬರುತ್ತದೆ. ಸದ್ಯದಲ್ಲಿಯೇ ಕೇಂದ್ರ ಉತ್ಪಾದನಾಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಅಲ್ಲಿಗೆ ಹೋಗಿ ಸ್ಥಳಪರೀಕ್ಷೆ ನಡೆಸಿದನಂತರ ಕೇಂದ್ರವು ತನ್ನ ಅಂತ್ಯತೀರ್ಮಾನಕ್ಕೆ ಬರುತ್ತದೆ.

ಚಲನಚಿತ್ರ ಕಟ್ಟಡಗಳಿಗೆ ರಾಷ್ಟ್ರದ ಸಂಪತ್ತು ಬೇಡ

ದೇಶದಲ್ಲಿ ಚಲನಚಿತ್ರಗಳ ಮಟ್ಟವು ಇನ್ನೂ ಉತ್ತಮಗೊಳ್ಳಬೇಕು. ಅಲ್ಲದೆ ಅಷ್ಟೊಂದು ಅತ್ಯಾವಶ್ಯಕವಲ್ಲದ ಚಲನಚಿತ್ರಗಳ ಕಟ್ಟಡಗಳಿಗಾಗಿ ದೇಶದ ಸಂಪತ್ತನ್ನು ವೆಚ್ಚಮಾಡುವುದು ಸರಿಯಲ್ಲ. ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವ ಯೋಜನೆಗಳಿಗೆ ಪ್ರಥಮ ಸ್ಥಾನ ಕೊಡಬೇಕು ಎಂದು ಪ್ರಧಾನಿ ನೆಹರೂರವರು ಸರ್ವೋದಯ ದಿನಾಚರಣಾ ಸಂಬಂಧದಲ್ಲಿ ಡೆಹಲಿಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ತಿಳಿಸಿದ್ದಾರೆ.

ಮಾಜಿ ಸಚಿವರಿಗೆ ಜೈಲುವಾಸ

ಈಜಿಪ್ಟಿನ ಮಾಜಿ ಹಣಕಾಸಿನ ಸಚಿವ ಕೋಟ್ಯಾಧೀಶ್ವರರಾದ ಫೌದಾಸರಗ್ ಎಲ್ ದಿನ್‌ರವರಿಗೆ ನಗೀಬರ ಕ್ರಾಂತಿಕಾರಿ ಪಂಚಾಯಿತಿಯು ೧೫ ವರ್ಷ ಜೈಲುವಾಸ ಶಿಕ್ಷೆಯನ್ನು ವಿಧಿಸಿದೆ. ಅಧಿಕಾರ ದುರುಪಯೋಗ, ಲಂಚಕೋರತನ ಮತ್ತು ಹತ್ತಿ ವ್ಯಾಪಾರದಲ್ಲಿ ಸರ್ಕಾರಕ್ಕೆ ೧೫೦ಲಕ್ಷ ರೂ. ನಷ್ಟ ಮಾಡಿದರೆಂಬುದೇ ಅವರ ಮೇಲಿನ ಆಪಾದನೆ.

ಹೈದರಾಬಾದಿನಲ್ಲಿ ಉಪಸಚಿವರ ನೇಮಕ

ಹೈದರಾಬಾದ್ ಸಚಿವ ಮಂಡಲಿಗೆ ಶ್ರೀಗಳಾದ ಪಿ. ಹನುಮಂತರಾವ್. ಎಂ. ಬಿ. ಗೌತಮ, ವಿರೂಪಾಕ್ಷಪ್ಪ, ಶ್ರೀನಿವಾಸರಾವ್, ಭಗವಂತರಾವ್ ಗಾಧೆ ಮತ್ತು ಶ್ರೀಮತಿ ಮಸೂಮಬೇಗಂರವರನ್ನು ಉಪಸಚಿವರನ್ನಾಗಿ ನೇಮಿಸಲಾಗುವುದೆಂದು ತಿಳಿಯಬರುತ್ತದೆ.

ಪಾಕ್-ಅಮೆರಿಕಾ ಸೈನ್ಯ ಒಪ್ಪಂದದ ವಿಷಯ

ಪಾಕೀಸ್ತಾನ ಅಮೆರಿಕಾ ಸೈನ್ಯಒಪ್ಪಂದ ವಿಷಯದಲ್ಲಿ ಪ್ರಧಾನಿ ನೆಹರೂರವರು ಪಾಕ್ ಪ್ರಧಾನಿ ಮಹಮದ್ ಆಲಿಯವರೊಡನೆ ಪತ್ರವ್ಯವಹಾರ ನಡೆಸುತ್ತಲಿರುವುದಾಗಿ ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೩೦—೧—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—೮	೨೫—೧೪
ಎಳ್ಳು	—	—
ಹರಳು	೨೦—	೩೯—೧೨
ಹುಚ್ಚೆಳ್ಳು	೩೬—	೪೪—೩
ಹುರುಳಿ	೨೮—	೩೦—೮
ಹೆಸರು	೩೬—೬	೪೨—೧೪
ಹೊಂಗೆಬೀಜ	೧೪—೪	೨೦—೮
ಹುಣಸೆಬೀಜ	೧೫—೧೪	೧೬—೨
ಅಲಸಂದೆ	೨೭—೨	೪೫—೧೪
ಕೊತ್ತಂಬರಿ	೨೪—	೨೮—
ಕಡಲೆ	೫೦—	೫೨—
ತೊಗರಿ	೨೪—೨	೩೨—
ಉದ್ದು	—	—
ಅವರೆ	—	—
ಹುಣಸೆಹಣ್ಣು	೫—೧—	೧೨—
ಸೀಗೆಕಾಯಿ	೩—೧೪	೫—೭
ಮೆಣಸಿನಕಾಯಿ	೨೦—	೩೨—೧೩
ಬೆಲ್ಲ	೫—	—
ತೆಂಗಿನಕಾಯಿ	೧೫೮—	೨೭೯—

ಬೊಂಬಾಯಿ ಪೌರಸಭೆಗೆ ಕೇಂದ್ರ ಸರ್ಕಾರದ ನೋಟೀಸ್

ಕೇಂದ್ರ ಸರ್ಕಾರವು ಬೊಂಬಾಯಿ ಕಾರ್ಪೊರೇಷನ್ನಿಗೆ ಒಂದು ನೋಟೀಸನ್ನು ಕೊಟ್ಟು ಕೂಡಲೆ ೩೦ ಲಕ್ಷ ರೂಪಾಯಿಗಳನ್ನು ೧೯೪೯ ನೇ ಜುಲೈನಿಂದ ಶೇಕಡ ೬ ರಂತೆ ಬಡ್ಡಿ ಸಮೇತ ಹಿಂದಕ್ಕೆ ಕೊಡಬೇಕೆಂದು ತಿಳಿಸಿದೆ. ಹಾಗೆ ಆ ಹಣವನ್ನು ಕೊಡದಿದ್ದರೆ ಬೊಂಬಾಯಿ ಶ್ರೇಷ್ಠ ನ್ಯಾಯಾಲಯದಲ್ಲಿ ದಾವ ಹೂಡುವುದಾಗಿ ತಿಳಿಸಿದೆ.

ಬೊಂಬಾಯಿ ನಗರಕ್ಕೆ ಕೇಂದ್ರ ಸರ್ಕಾರವು ಕಳುಹಿಸಿದ ಎಲ್ಲಾ ಆಹಾರವಸ್ತುಗಳ ಮೇಲೆ ಅಲ್ಲಿಯ ಕಾರ್ಪೊರೇಷನ್ ೧೯೪೮ನೆ ಜನವರಿಯಿಂದ ೧೯೪೯ನೆ ಜುಲೈ ೧೩ರವರೆಗೆ ತೆರಿಗೆಯನ್ನು ವಿಧಿಸಿ ೩೦ ಲಕ್ಷ ರೂಪಾಯಿಯನ್ನು ವಸೂಲ್ಮಾಡಿದೆಯೆಂದೂ ಹಾಗೆ ತೆರಿಗೆಯನ್ನು ವಿಧಿಸಿರುವುದು ಕಾನೂನುಬಾಹಿರವೆಂದೂ ಈಗ ವಸೂಲ್ಮಾಡಿರುವ ಹಣವನ್ನು ವಾಪಸ್ಸು ಕೊಡಬೇಕೆಂದೂ ತಿಳಿಸಲಾಗಿದೆ.

ಬೆಂಗಳೂರಿನಲ್ಲಿ ಪಾರ್ಲಿಮೆಂಟ್ ಅಧಿವೇಶನ ?

ದಕ್ಷಿಣ ಭಾರತ ಜನರಿಗೆ ಪಾರ್ಲಿಮೆಂಟಿನ ಕಾರ್ಯಕಲಾಪಗಳು ಚೆನ್ನಾಗಿ ತಿಳಿದು, ಹೆಚ್ಚಿನ ಸಂಪರ್ಕವುಂಟಾಗಲು ದಕ್ಷಿಣ ಭಾರತದಲ್ಲಿ, ಅದರಲ್ಲೂ ಸೌಕರ್ಯಗಳಿರುವ ಬೆಂಗಳೂರಿನಲ್ಲಿ ಪಾರ್ಲಿಮೆಂಟ್ ಅಧಿವೇಶನ ನಡೆಯಬೇಕೆಂದು ಕೆಲವು ಪಾರ್ಲಿಮೆಂಟ್ ಸದಸ್ಯರು ಸೂಚಿಸಿದ್ದಾರೆ.

ಕರ್ನಾಟಕ ಕಾಂಗ್ರೆಸ್ ಅಧಿವೇಶನ

ಕರ್ನಾಟಕ ಕಾಂಗ್ರೆಸ್ ಅಧಿವೇಶನವು ಇದೇ ೪ ನೇ ತಾರೀಖು ಹುಬ್ಬಳ್ಳಿಯಲ್ಲಿ ನಡೆಯುತ್ತದೆ. ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಪ್ರಾರಂಭೋತ್ಸವವನ್ನು ನೆರವೇರಿಸುತ್ತಾರೆ.

Wanted Agents

Enthusiastic inexperienced educated unemployed may also apply. Will be given Practical training.

Apply to T. Sitaramih, Inspector, Bombay Mutual Life Insurance Society, Ltd., 1500/19, K. R. Vanam Chamaraja Mohalla, Mysore.

ಸರ್ಕಾರಿ ಕೆಲಸದ ಅರ್ಜಿಗೆ ಒಂದು ರೂ. ಶುಲ್ಕ

ಬೆಂಗಳೂರು ೧

ಮೈಸೂರು ಪಬ್ಲಿಕ್ ಸರ್ವಿಸ್‌ಕಮೀಷನ್ ಮತ್ತು ಇಲಾಖೆಗಳಲ್ಲಿ ಖಾಲಿ ಇರುವ ಕೆಲಸಗಳಿಗೆ ಅರ್ಜಿಯನ್ನು ಹಾಕಿಕೊಳ್ಳುವಾಗ ೧ ರೂಪಾಯಿ ಅರ್ಜಿ ಶುಲ್ಕವನ್ನು ಕೊಡಬೇಕೆಂದು ಸರ್ಕಾರವು ಆಜ್ಞೆ ಮಾಡಿದೆ.

ಕೇಂದ್ರ ಭಿಕ್ಷುಕ ಸಮಿತಿ

ಬೆಂಗಳೂರು ೧

ಕೇಂದ್ರ ಭಿಕ್ಷುಕ ಸಮಿತಿಯ ಅಧ್ಯಕ್ಷರಾಗಿ ವ್ಯವಸಾಯ ಸಚಿವ ಡಾ|| ನಾಗನಗೌಡರನ್ನು ನೇಮಿಸಲಾಗಿದೆ. ಇಲ್ಲಿಯವರೆಗೂ ಅಧ್ಯಕ್ಷರಾಗಿದ್ದ ಶ್ರೀ ಕಡಿದಾಳ್ ಮಂಜಪ್ಪನವರು ರಾಜೀನಾಮೆ ಸಲ್ಲಿಸಿರುವರು.

ಅಮೆರಿಕಾ-ಪಾಕ್ ಒಪ್ಪಂದ

ಅಮೆರಿಕಾ ಮತ್ತು ಪಾಕೀಸ್ತಾನಗಳ ಒಪ್ಪಂದ ವಿಷಯವನ್ನು ಕಾಮನ್ವೆಲ್ತ್ ರಾಷ್ಟ್ರಗಳು ತೀವ್ರ ಸಮಾಲೋಚನೆ ನಡೆಸಬೇಕೆಂದು ಮಾಂಚಸ್ಟರ್ ಗಾರ್ಡಿಯನ್ ಪತ್ರಿಕೆ ಅಗ್ರಲೇಖನ ಬರೆದಿದೆ.

ಕಾಶ್ಮೀರ ಚರ್ಚೆ ನಡೆಸಲು ನಿರ್ದಿಷ್ಟ ದಿನ

ಕಾಶ್ಮೀರ ಸಮಸ್ಯೆಯ ವಿಷಯದಲ್ಲಿ ಚರ್ಚೆನಡೆಸಲು ನಿರ್ದಿಷ್ಟ ದಿನವನ್ನು ಗೊತ್ತುಮಾಡಬೇಕೆಂದು ಭಾರತ ಪ್ರಧಾನಿ ನೆಹರೂರವರನ್ನು ಕೇಳಿರುವುದಾಗಿ ಪಾಕ್ ಪ್ರಧಾನಿ ಮಹಮದ್‌ಆಲಿಯವರು ತಿಳಿಸಿದ್ದಾರೆ

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ.

ಒಟ್ಟು 2000 ಬಹುಮಾನಗಳು.

ಬಹುಮಾನದ ಮೊಬಲಗು 45000 ರೂ.

ಟಿಕೇಟು ಒಂದಕ್ಕೆ ಒಂದೇರೂಪಾಯಿ.

ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೬೪
ರಿಜಿಸ್ಟರ್ ನಂ. ಎಂ. ೫೬೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೨೮

೨-೨-೧೯೫೪ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತದಲ್ಲಿ ಪ್ರಾಯೋಗಿಕ ಶಿಕ್ಷಣ ಅತ್ಯಗತ್ಯ

ಮೈಸೂರು ೨

ಡೆನ್ಮಾರ್ಕಿನ ಇಂಟರ್‌ನ್ಯಾಷನಲ್ ಪೀಪಲ್ಸ್ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಪೀಟರ್ ಮಾನಿಚ್‌ರವರನ್ನು ನಿನ್ನೆ ಮೈಸೂರು ವಯಸ್ಕರ ಶಿಕ್ಷಣ ಸಮಿತಿಯವರು ಸತ್ಕರಿಸಿದರು.

ಈ ಸಂದರ್ಭದಲ್ಲಿ ಡಾ|| ಮಾನಿಚ್‌ರು ಮಾತನಾಡುತ್ತಾ ಸಾಮಾನ್ಯವಾಗಿ ಭಾರತದಲ್ಲಿ ವಿದ್ಯಾಭ್ಯಾಸವು ಪರೀಕ್ಷೆಗಳಲ್ಲಿ ಮಾತ್ರ ಮುಕ್ತಾಯವಾಗುತ್ತದೆ ಪ್ರಜೆಗಳಿಗೆ ನಿತ್ಯ ಜೀವನದಲ್ಲಿ ಉಪಯುಕ್ತವಾಗುವಂತಹ ಪ್ರಾಯೋಗಿಕ ಶಿಕ್ಷಣ ಅತ್ಯಾವಶ್ಯಕ. ಅಲ್ಲದೆ ಗ್ರಾಮಾಂತರಗಳಲ್ಲಿ ಈ ಪ್ರಾಯೋಗಿಕ ಶಿಕ್ಷಣ ನಡೆಯುವುದು ಮೇಲು. ಈ ರೀತಿಯ ಪಾಠಶಾಲೆಗಳು ಡೆನ್ಮಾರ್ಕಿನಲ್ಲಿವೆ. ಅಲ್ಲಿ ಸಾಂಸ್ಕೃತಿಕ ಶಿಕ್ಷಣಕ್ಕೂ ತಕ್ಕಷ್ಟು ಪ್ರಾಶಸ್ತ್ಯವಿದೆ. ಭಾರತದಲ್ಲೂ ಇಂತಹ ಶಾಲೆಗಳನ್ನು ತೆರೆಯಬೇಕಾದುದು ಅತ್ಯಾಗತ್ಯವಾಗಿದೆ. ಇದರಿಂದ ವಿದ್ಯೆ ಕಲಿತವರು ಪಟ್ಟಣಗಳಿಗೆ ಬಂದು ಸರ್ಕಾರಿ ಕೆಲಸ ಹುಡುಕುವುದು ನಿಂತು, ಅವರುಗಳು ಹಳ್ಳಿಗಳಲ್ಲೇ ನೆಲೆಸುವಂತೆ ಆಗುವುದು ಎಂದು ತಿಳಿಸಿದರು.

ಪ್ರಾರಂಭದಲ್ಲಿ ಸಮಿತಿಯ ಅಧ್ಯಕ್ಷ ಶ್ರೀ ಟಿ. ಮಾದಯ್ಯಗೌಡರು ಅತಿಥಿಗಳನ್ನು ಸ್ವಾಗತಿಸಿ ಅವರು ವಿದ್ಯಾಭ್ಯಾಸಕ್ಕಾಗಿ ಶ್ರಮಿಸುತ್ತಲಿರುವುದನ್ನು ಪ್ರಶಂಸಿಸಿದರು.

ಸರ್ವೋದಯ ದಿನಾಚರಣೆ

ಸಾರ್ವಜನಿಕವಿದ್ಯಾರ್ಥಿನಿಲಯ ಸಂಘದ ಆಶ್ರಯದಲ್ಲಿ ಬಾಪೂಜಿಯವರು ಹುತಾತ್ಮರಾದ ದಿನವನ್ನ ಸರ್ವೋದಯ ದಿನಾಚರಣೆಯನ್ನಾಗಿ ಶ್ರೀ ದನುಜನಾಯಕ್‌ರವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಶ್ರೀಗಳಾದ ಕಾ.ನಾ. ಕೃಷ್ಣಮೂರ್ತಿ, ಎ.ಆರ್ ರಾಮಚಂದ್ರಯ್ಯ ಟಿ.ಎಸ್. ಸುಬ್ಬಣ್ಣ ಮತ್ತು ಎಸ್.ಕೆ. ಮಾಧವ ಮೂರ್ತಿ, ರವರು ಮಾತನಾಡಿ ಮಹಾತ್ಮರು ಅವತಾರ ಪುರುಷರೆಂದೂ, ಮಾನವ ಶ್ರೇಷ್ಠರೆಂದೂ ಮತ್ತೆ ಅವರನ್ನು ಪೂಜಿಸುವುದಕ್ಕಿಂತ ಅವರ ತತ್ವಗಳನ್ನು ಅನುಷ್ಠಾನಕ್ಕೆ ತರಬೇಕೆಂದೂ ತಿಳಿಸಿದರು.

ಕಾರ್ಯದರ್ಶಿ ಶ್ರೀ ಸಿ. ಎಂ. ವೀರಭದ್ರಾಚಾರಿಯವರು ವಂದನೆಗಳನ್ನರ್ಪಿಸಿದರು. ನಂತರ ಸಭೆಯು ೨ ನಿಮಿಷಗಳಕಾಲ ಮೌನದಿಂದ ಎದ್ದುನಿಂತು ಪೂಜ್ಯ ಬಾಪೂಜಿ ಆತ್ಮಕ್ಕೆ ಶಾಂತಿಯನ್ನು ಕೋರಲಾಯಿತು.

ಚಲನಚಿತ್ರಕ್ಕೆ ಬಹಿಷ್ಕಾರ

"ಮೈಸರ್ ಜಾ" ಎಂಬ ಚಲನಚಿತ್ರಕ್ಕೆ ಕೇಂದ್ರ ಸರ್ಕಾರದವರು ಭಾರತಾದ್ಯಂತ ಬಹಿಷ್ಕಾರ ಹಾಕಿದ್ದಾರೆ.

ರಾಜಧಾನಿಯಲ್ಲಿ ಬಯಲುನಾಟಕ ಮಂದಿರ

ಮೈಸೂರು ೨

ಮೈಸೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಶ್ರಮ ದುಡಿತದಿಂದ ನಗರದಲ್ಲಿ ಬರುವ ಬೇಸಿಗೆಯಲ್ಲಿ ಒಂದು ಬಯಲುನಾಟಕ ಮಂದಿರ ಮತ್ತು ಈಜುವ ಕೊಳಗಳು ರಚಿತವಾಗಲಿದೆ. ಇದಕ್ಕೆ ಕೇಂದ್ರ ಸರ್ಕಾರದವರು ೨೨ ಸಾವಿರ ರೂ.ಗಳನ್ನು ಕೊಟ್ಟಿದ್ದಾರೆ.

ಪಾಕ್-ಅಮೆರಿಕಾ ನೇರವಾದ ಸೈನ್ಯ ಒಪ್ಪಂದವಿಲ್ಲ ?

ಪಾಕೀಸ್ತಾನ ಮತ್ತು ಅಮೆರಿಕಾಸೈನ್ಯ ಒಪ್ಪಂದ ವಿಷಯದಲ್ಲಿ ಭಾರತದಲ್ಲಿ ವಿರೋಧವು ವಿಶೇಷವಾಗಿ ವ್ಯಕ್ತಪಡುತ್ತಿದೆ. ಈಗಾಗಲೇ ಅನೇಕ ಅರಬ್ ರಾಷ್ಟ್ರಗಳು ಮತ್ತು ಇತರ ಪ್ರಮುಖ ಏಷ್ಯಾರಾಷ್ಟ್ರಗಳು ಈ ಸಂಬಂಧದಲ್ಲಿ ತಮ್ಮ ಅಸಮ್ಮತಿಯನ್ನು ಸೂಚಿಸಿವೆ.

ಈ ವಿಷಯಗಳನ್ನೆಲ್ಲಾ ಅಮೆರಿಕಾವು ಗಮನಿಸಿ ನೇರವಾಗಿ ಪಾಕೀಸ್ತಾನಕ್ಕೆ ಸೈನ್ಯನೆರವು ನೀಡುವುದನ್ನು ಕೈಬಿಟ್ಟು, ಟರ್ಕಿ ಮತ್ತು ಪಾಕೀಸ್ತಾನಕ್ಕೆ ಸೈನ್ಯ ಒಪ್ಪಂದ ಉಂಟಾಗುವಂತೆ ಮಾಡಿ, ತಾವು ಪಾಕೀಸ್ತಾನಕ್ಕೆ ಟರ್ಕಿಯ ಮೂಲಕ ಸೈನ್ಯನೆರವು ನೀಡಲು ಯತ್ನಿಸುತ್ತಲಿರುವುದಾಗಿ ವರದಿಯಾಗಿದೆ.

ಸರ್ಕಾರಕ್ಕೆ ವೈದ್ಯ ಶುಲ್ಕ ಕೊಡಲು ನಿರಾಕರಣೆ

ಪಂಜಾಬಿನಲ್ಲಿ ವೈದ್ಯರು ಮತ್ತು ಹಕೀಮರಿಗೆ ಸರ್ಕಾರವು ಪ್ರತಿವರ್ಷವೂ ಹಾಕುತ್ತಿದ್ದ ೨ ರೂಪಾಯಿ ರಿಜಿಸ್ಟ್ರೇಷನ್ ಶುಲ್ಕವನ್ನು ಕೊಡಕೂಡದೆಂದು ಅಲ್ಲಿಯ ಸುಮಾರು ೩೦೦ ಜನ ವೈದ್ಯರು ತೀರ್ಮಾನಿಸಿದ್ದಾರೆ.

ಈ ಶುಲ್ಕವನ್ನು ಅಲೋಪತಿ ಡಾಕ್ಟರುಗಳಿಗೆ ವಿಧಿಸದೆ ಕೇವಲ ಆಯುರ್ವೇದ ಮತ್ತು ಯುನಾನಿ ವೈದ್ಯ ಮತ್ತು ಹಕೀಮರಿಗೆ ಮಾತ್ರ ವಿಧಿಸುತ್ತಲಿರುವುದು ಅನ್ಯಾಯವೆಂದು ಅವರು ಹೇಳಿದ್ದಾರೆ.

ಪಾಕ್ ಪ್ರಧಾನಿಗೆ ನೆಹರೂ ಪತ್ರ

ಅಮೆರಿಕಾ ಮತ್ತು ಪಾಕೀಸ್ತಾನಗಳ ನಡುವೆ ನಡೆಯಲಿರುವ ಸೈನ್ಯ ಒಪ್ಪಂದ ವಿಷಯಗಳಲ್ಲಿ ತಮಗೆ ವಿವರಗಳನ್ನು ಕೊಡಬೇಕೆಂದು ಪ್ರಧಾನಿ ನೆಹರೂರವರು ಪಾಕ್ ಪ್ರಧಾನಿ ಮಹಮದ್‌ಆಲಿಯವರಿಗೆ ಪತ್ರ ಬರೆದಿರುವುದಾಗಿ ತಿಳಿಯಬರುತ್ತದೆ.

ಒರಟು ಧಾನ್ಯಗಳ ಮೇಲಿನ ಹತೋಟಿ ರದ್ದು

ಬೆಂಗಳೂರು ೨

ಸೌರಾಷ್ಟ್ರ, ಮಧ್ಯಭಾರತ ಮತ್ತು ಉತ್ತರ ಪ್ರದೇಶದ ೧೧ ಜಿಲ್ಲೆಗಳಲ್ಲಿ ವಿನಹ ದೇಶದ ಇತರ ಪ್ರದೇಶಗಳಲ್ಲೆಲ್ಲಾ ಭಾರತ ಸರ್ಕಾರವು ಒರಟು ಧಾನ್ಯಗಳ ಮೇಲಿನ ಹತೋಟಿಯನ್ನು ಇದೇ ಜನವರಿ ಒಂಬನೇ ತಾರೀಖಿನಿಂದ ರದ್ದುಗೊಳಿಸಿರುವುದರಿಂದ ರಾಗಿ, ಜೋಳ, ನವಣೆ, ಸಾವೆ, ಸಜ್ಜೆ ಮತ್ತು ಬರಗು ಈ ಧಾನ್ಯಗಳನ್ನು ಆಹಾರ ಧಾನ್ಯಗಳ ಆಮದು ಮತ್ತು ರಫ್ತಿಗೆ ಸಂಬಂಧಪಟ್ಟ ಕಾನೂನುಗಳ ಪಟ್ಟಿಯಿಂದ ತೆಗೆದುಹಾಕಿರುವುದಾಗಿ ಸರ್ಕಾರವು ಪ್ರಕಟಿಸಿದೆ.

ಕಾಂಗ್ರೆಸ್ಸಿಗೆ ಉಪಾಧ್ಯಾಯರ ಬಹಿಷ್ಕಾರ

ಕಾಂಗ್ರೆಸ್ ಸರ್ಕಾರವು ತಮ್ಮ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸದಿರುವುದರಿಂದ ಮುಂಬರುವ ಚುನಾವಣೆಗಳಲ್ಲಿ ತಾವು ಕಾಂಗ್ರೆಸ್ಸಿಗೆ ಬೆಂಬಲನೀಡಿ, ಮತ ಕೊಡುವುದಿಲ್ಲವೆಂದು ಕೊಚ್ಚಿಯ ಪ್ರಾಥಮಿಕ ಶಾಲಾ ಉಪಾಧ್ಯಾಯರು ನಿರ್ಧರಿಸಿದ್ದಾರೆ.

ಅಕ್ಕಿ ಪಡಿತರ ಹೆಚ್ಚುವುದು

ಈ ವರ್ಷದ ಅಕ್ಕಿಯ ಉತ್ಪಾದನೆಯು ಕಳೆದವರ್ಷಕ್ಕಿಂತ ೨೦ ಲಕ್ಷದಷ್ಟು ಹೆಚ್ಚಾಗಿದೆ. ದೇಶದಲ್ಲಿ ಹೇರಳವಾಗಿ ಅಕ್ಕಿ ಇರುವುದರಿಂದ ಕೆಲವು ಸಂಸ್ಥಾನಗಳಿಗೆ ಅಕ್ಕಿಯ ಪಡಿತರವನ್ನು ಹೆಚ್ಚಿಸಲು ಅವುಗಳಿಗೆ ಹೆಚ್ಚು ಅಕ್ಕಿಯನ್ನು ಒದಗಿಸಲು ಕೇಂದ್ರ ಸರ್ಕಾರ ಒಪ್ಪಿದೆ—ಎಂದು ಕೇಂದ್ರ ಆಹಾರ ಸಚಿವರು ತಿಳಿಸಿದ್ದಾರೆ.

ರೈಲ್ವೆ ಸಂಘಗಳ ವಿಲೀನ

ದಕ್ಷಿಣ ರೈಲ್ವೆ ಕಾರ್ಮಿಕರ ಸಂಘದ ಸರ್ವಸದಸ್ಯರ ಸಭೆಯು ನಡೆದು ದಕ್ಷಿಣ ರೈಲ್ವೆ ಎಂಪ್ಲಾಯಿಸ್ ಸಂಘವನ್ನು ಕಾರ್ಮಿಕರ ಸಂಘದೊಡನೆ ವಿಲೀನಗೊಳಿಸಲು ನಿರ್ಧರಿಸಿತು. ಇದಕ್ಕಾಗಿ ಶ್ರೀ ಎಸ್. ಗುರುಸ್ವಾಮಿಯವರ ನೇತೃತ್ವದಲ್ಲಿ ೩ಜನರ ಸಮಿತಿಯನ್ನು ರಚಿಸಲಾಗಿದೆ.

ಬಡಜನರಿಗೆ ಭೂಮಿ

ಭೂಮಿಯಿಲ್ಲದ ಬಡಜನರಿಗೆ ಬಂಜರು ಭೂಮಿಯನ್ನು ಕೊಡುವ ಬಗ್ಗೆ ಶೀಘ್ರದಲ್ಲೇ ಶಾಸನವನ್ನು ತರಲಾಗುವುದೆಂದು ಆಂಧ್ರ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ತಿಳಿಸಿದ್ದಾರೆ.

ಅ|| ರಿಜಿಸ್ಟ್ರಾರ್ ಕೋರ್ಟಿನಲ್ಲಿ ಮೊಕದ್ದಮೆ

ಮೈಸೂರು ೨

ಮೊನ್ನೆಯದಿನ ಸಿಟಿ ಕೋ ಆಪರೇಟಿವ್ ಬ್ಯಾಂಕಿನ ಡೈರೆಕ್ಟರ್ ಚುನಾವಣೆ ನಡೆದು ಫಲಿತಾಂಶ ಹೊರಬಿದ್ದಿದ್ದು ಅಕ್ರಮರೀತಿಯಲ್ಲಿ ನಡೆದಿದೆಯೆಂದು ಅದನ್ನು ರದ್ದುಗೊಳಿಸಿ ಪುನಃ ಎಣಿಕೆ ನಡೆಸಬೇಕೆಂದು ಶ್ರೀ ಶ್ರೀಕಂಠಶಾಸ್ತ್ರಿಯವರು ಮೈಸೂರು ಅಸಿಸ್ಟೆಂಟ್ ರಿಜಿಸ್ಟ್ರಾರರವರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದಾರೆ.

ಭಾರತ-ಪಾಕ್ ವಿವಾದ ಪರಿಹಾರಗಳಲ್ಲಿ ಬಿಕ್ಕಟ್ಟೆ ?

ಭಾರತ ಮತ್ತು ಪಾಕೀಸ್ಥಾನಗಳ ನಡುವೆ ಇರುವ ಕಾಶ್ಮೀರ ಪ್ರಶ್ನೆ ಮತ್ತು ಇತರ ವಿಷಯಗಳ ಪರಿಹಾರ ವಿಷಯದಲ್ಲಿ ಉಭಯ ಪ್ರಧಾನಿಗಳ ಸಮ್ಮೇಳನವು ನಡೆಯುವ ಸಂಭವವು ಸದ್ಯದಲ್ಲಿ ಕಾಣದಂತಾಗಿದೆ. ಈ ವಿಷಯದಲ್ಲಿ ತಮ್ಮ ಸರ್ಕಾರದೊಡನೆ ಮಾತುಕತೆ ನಡೆಸಲು ಭಾರತದಲ್ಲಿರುವ ಪಾಕ್ ರಾಯಭಾರಿ ಮಿ|| ಘಜ್ನಫರ್ ಅಲಿ ಖಾನ್‌ರವರು ಕರಾಚಿಗೆ ತ್ವರಿತವಾಗಿ ತೆರಳಿದ್ದಾರೆ.

೫ ಸಾವಿರ ಉಪಾಧ್ಯಾಯರ ನೇಮಕ

ಬೀಹಾರ್ ಸಂಸ್ಥಾನದಲ್ಲಿ ಪ್ರಾಥಮಿಕ ಶಿಕ್ಷಣದ ಪುನರ್ವ್ಯವಸ್ಥೆಗಾಗಿ ಬರುವವರ್ಷ ದೊಡ್ಡ ಕಾರ್ಯಕ್ರಮ ಕೈಗೊಳ್ಳುವುದಾಗಿಯೂ, ೫ ಸಾವಿರ ಉಪಾಧ್ಯಾಯರುಗಳನ್ನು ನೇಮಿಸಲಾಗುವುದೆಂದೂ ಅಲ್ಲಿನ ಗವರ್ನರ್ ಶ್ರೀ ಆರ್. ಆರ್ ದಿವಾಕರ್ ತಿಳಿಸಿದ್ದಾರೆ.

ಕರ್ನಾಟಕ ವಿದ್ಯಾರ್ಥಿಗಳ ಸಮ್ಮೇಳನ

ಅಖಿಲ ಕರ್ನಾಟಕ ವಿದ್ಯಾರ್ಥಿಗಳ ಸಮ್ಮೇಳನವು ಇದೇ ೭ನೇ ತಾರೀಖು ಹೈದರಾಬಾದಿನಲ್ಲಿ ಶ್ರೀ ಬೇಂದ್ರೆಯವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಉತ್ಪಾದನಾಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಸಮ್ಮೇಳನವನ್ನು ಉದ್ಘಾಟಿಸುವರು.

ದೆಹಲಿಗೆ ವಿದ್ಯಾಸಚಿವರು

ಬೆಂಗಳೂರು ೨

ದೆಹಲಿಯಲ್ಲಿ ನಡೆಯುವ ಶಿಕ್ಷಣ ಸಲಹಾ ಸಮಿತಿಯಲ್ಲಿ ಭಾಗವಹಿಸಲು ಶಿಕ್ಷಣಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಇದೇ ನಾಲ್ಕನೇ ತಾರೀಖು ದೆಹಲಿಗೆ ಪ್ರಯಾಣ ಮಾಡುತ್ತಾರೆ.

ಸಮಾಚಾರ

ತಾರೀಖು 2-2-54ನೇ ಮಂಗಳವಾರ

ಸರ್ಕಾರದ ನೀತಿ ಸರಿಯಿಲ್ಲ

ಬಾಡಿಗೆದಾರರಿಗೆ ಮನೆಗಳ ಮಾಲೀಕರು ಬಾಡಿಗೆಯನ್ನು ತೋಚಿದಂತೆ ಹೆಚ್ಚಿಸದಿರಲೆಂದು ಸರ್ಕಾರದವರು ಬಾಡಿಗೆಯ ಹತೋಟಿ ಶಾಸನವನ್ನು ರಚಿಸಿ ಹಲವಾರು ವರ್ಷಗಳಿಂದ ಅದನ್ನು ಜಾರಿಗೆ ತಂದಿರುವರು. ಆ ಶಾಸನದಲ್ಲಿ ಬಾಡಿಗೆಯನ್ನು ಯಾವಾಗ, ಯಾವ ಪ್ರಮಾಣದಲ್ಲಿ ಹೆಚ್ಚಿಸಬೇಕೆಂಬುದನ್ನು ಸಹ ಸೂಚಿಸಲಾಗಿದೆ. ಆ ಶಾಸನವನ್ನು ಮೀರಿದರೆ ನ್ಯಾಯಾಸ್ಥಾನದಲ್ಲಿ ಪರಿಹಾರವನ್ನೂ ಸಹ ಪಡೆಯಲು ಸದವಕಾಶ ಕಲ್ಪಿಸಲಾಗಿದೆ. ಆದರೆ ಶಾಸನಾಧಾರಕರೇ ಈ ಶಾಸನವನ್ನು ಮುರಿದು ಖಾಸಗಿಯವರಿಗೆ ಕೊಟ್ಟಿರುವ ಸರಕಾರಿ ಕಟ್ಟಡದ ಬಾಡಿಗೆಯನ್ನು ಶೇಕಡ ೩೦೦ರಿಂದ ೬೦೦ರವರೆಗೆ ಇದ್ದಕ್ಕಿದ್ದಂತೆಯೆ ಏರಿಸಿರುವುದು ವಿಚಿತ್ರವಾಗಿದೆ. ಈ ಬಾಡಿಗೆ ಹತೋಟಿ ಶಾಸನವು ಸರ್ಕಾರಕ್ಕೆ ಅನ್ವಯಿಸುವುದಿಲ್ಲವೆಂಬ ಒಂದು ವಿಧಿಯನ್ನು ಯಾವ ಕಾರಣದಿಂದಲೋ ಆ ಶಾಸನದಲ್ಲಿ ನಮೂದಿಸಲಾಗಿದೆ. ಆದಾಗ್ಯೂ ಸರ್ಕಾರವು ತನ್ನ ಕಟ್ಟಡಗಳಲ್ಲಿ ವಾಸವಾಗಿರುವ ಬಾಡಿಗೆದಾರರಿಂದ ಹೆಚ್ಚಿನ ಬಾಡಿಗೆಯನ್ನು ಕೇಳುವಾಗ ಖಾಸಗಿ ಕಟ್ಟಡಗಳಿಗೆ ಶಾಸನವನ್ನು ಹೇಗೆ ಕಡ್ಡಾಯವಾಗಿ ಜಾರಿಗೆ ತರಲು ಒತ್ತಾಯಪಡಿಸಲಾಗುತ್ತದೆಯೋ ಹಾಗೆಯೇ ತಾನೂ ನಡೆದುಕೊಳ್ಳುವುದು ಧರ್ಮ.

ಮೈಸೂರು ನಗರದಲ್ಲಿರುವ ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್ ಕಟ್ಟಡವು ಮೊದಲು ಪುರಸಭೆ ಆಡಳಿತದಲ್ಲಿತ್ತು. ಕಾರಣಾಂತರದಿಂದ ಅದು ಸರ್ಕಾರದ ವಶವಾಯಿತು ಆಗಿನಿಂದಲೂ ಅಲ್ಲಿ ಸುಮಾರು ೬೦-೭೦ ಬಾಡಿಗೆದಾರರಿರುವರು. ಅಲ್ಲಿರುವ ಅಂಗಡಿ ಮತ್ತು ಕೊಠಡಿಗಳಿಗೆ ಯಾವುದೋ ಒಂದು ರೀತಿ ಬಾಡಿಗೆಯನ್ನು ವಿಧಿಸಲಾಗಿತ್ತು. ಖಾಲಿಯಾದ ಹಲವಾರು ಅಂಗಡಿ ಮತ್ತು ರೂಮುಗಳನ್ನು ಸರ್ಕಾರವು ಪುನಃ ಇತರರಿಗೆ ಬಾಡಿಗೆಗೆ ಕೊಡುವಾಗಲೂ ಹಿಂದಿನ ಬಾಡಿಗೆ ಅಥವಾ ಅದಕ್ಕಿಂತ ಸ್ವಲ್ಪ ಹೆಚ್ಚು ಮಾಡಿ ಕೊಡುತ್ತಾ ಬಂದಿತ್ತು.

ಈಗ ಇದ್ದಕ್ಕಿದ್ದಂತೆಯೇ ಸರ್ಕಾರದವರು ಈ ಬಾಡಿಗೆಗಳನ್ನೆಲ್ಲ ಶೇಕಡ ೩೦೦ ರಿಂದ ಹಿಡಿದು ೬೦೦ ರವರೆಗೆ ಏರಿಸಿದ್ದಾರೆ. ಈ ವಿಷಯದಲ್ಲಿ ಎಲ್ಲಾ ಬಾಡಿಗೆದಾರರಿಗೆ ಕಳುಹಿಸಿರುವ ತಿಳುವಳಿಕೆ ಚೀಟಿಯಲ್ಲಿ ಕಾರಣ ನಮೂದಿಸಿಲ್ಲ. ಈ ಹೊಸ ಆಜ್ಞೆಯಂತೆ ೫ ರೂ. ಬಾಡಿಗೆ ೧೫ ರಿಂದ ೨೫ ರೂ. ಗೆ ಏರಿದೆ. ಈಗ ಬಾಡಿಗೆದಾರರೆಲ್ಲರೂ ದಿಕ್ಕು ಕಾಣದವರಾಗಿದ್ದಾರೆ.

ಸಾಮಾನ್ಯವಾಗಿ ಇಲ್ಲಿ ಬಾಡಿಗೆಗಿರುವವರೆಲ್ಲರೂ ಸಣ್ಣ ಪುಟ್ಟ ವ್ಯಾಪಾರಸ್ಥರು, ನ್ಯಾಯವಾದಿಗಳು. ಇವರಿಗೆ ದಿನೇ ದಿನೇ ಈಗಿನ ಆರ್ಥಿಕ ಮುಗ್ಗಟ್ಟಿನಲ್ಲಿ ಆದಾಯವೇನೂ ಹೆಚ್ಚುತ್ತಿಲ್ಲ. ಇಳುವರಿಯಲ್ಲಿಯೇ ಇದೆ. ಹಾಗಿರುವಾಗ ಬಾಡಿಗೆಯನ್ನು ಒಂದಕ್ಕೆ ೪-೫-೬ ರಷ್ಟು ಹೆಚ್ಚಾಗಿ ಹೇಗೆ ಕೊಡುವುದು ಸಾಧ್ಯ.

ಭಾರತದ ಬೆದರಿಕೆಗಳಿಗೆ ಹೆದರುವುದಿಲ್ಲ

ಪಾಕೀಸ್ತಾನದಲ್ಲಿ ಮಿಲಿಟರಿ ಶಕ್ತಿಯನ್ನು ಹೆಚ್ಚಿಸಲಾಗುವುದು

ಪ್ರಧಾನಿ ಮಹಮ್ಮದ್ ಅಲಿಯವರ ಹೇಳಿಕೆ

ಪಾಕೀಸ್ತಾನವು ಯಾವ ದೇಶದ ಮೇಲೂ ಆಕ್ರಮಣ ಮಾಡುವ ಉದ್ದಿಶ್ಯವನ್ನು ಹೊಂದಿಲ್ಲವೆಂದು ಘಂಟಾಘೋಷವಾಗಿ ಹೇಳುತ್ತಿದ್ದೇವೆ. ಆದಾಗ್ಯೂ ಪಾಕೀಸ್ತಾನ ಮತ್ತು ಅಮೆರಿಕಾ ಮಿಲಿಟರಿ ನೆರವಿನ ವಿಷಯದಲ್ಲಿ ಭಾರತವು ತೋಚಿದಂತೆ ಹೇಳುತ್ತಿದೆ. ಪಾಕೀಸ್ತಾನವು ತನ್ನ ಒಳಾಡಳಿತ ವಿಷಯದಲ್ಲಿ ಪೂರ್ಣ ಸ್ವಾತಂತ್ರ್ಯವನ್ನು ಹೊಂದಿದೆ. ಭಾರತವು ಇದರಲ್ಲಿ ಪ್ರವೇಶಿಸುವ ಹಕ್ಕನ್ನು ಪಡೆದಿಲ್ಲ. ಈಗಾಗಲೇ ಭಾರತವು ಇಲ್ಲಸಲ್ಲದ ಬೆದರಿಕೆಗಳನ್ನು ಹಾಕುತ್ತಿದೆ. ವಿದೇಶಗಳಿಂದ ಭಾರತವು ಆರ್ಥಿಕ ನೆರವನ್ನು ಪಡೆಯುತ್ತಾ ತನ್ನಲ್ಲಿ ಆರ್ಥಿಕ, ಸಾಮಾಜಿಕ ಮತ್ತು ಸೈನ್ಯ ಬಲವನ್ನು ಹೇಗೆ ಹೆಚ್ಚಿಸಿಕೊಳ್ಳುತ್ತಿದೆಯೋ ಹಾಗೆಯೇ ಪಾಕೀಸ್ತಾನವೂ ನೆರವನ್ನು ಪಡೆದು ತನ್ನ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಇಚ್ಛಿಸಿದರೆ ಭಾರತವು ಪಾಕೀಸ್ತಾನ ವಿಷಯದಲ್ಲಿ ಹೀಗೇಕೆ ನಡೆಯಬೇಕು. ಭಾರತವು ಆರ್ಥಿಕ ನೆರವನ್ನು ಪಡೆಯುತ್ತಿರುವುದನ್ನು ಪಾಕೀಸ್ತಾನವು ಏನಾದರೂ ಪ್ರಶ್ನಿಸಿದೆಯೇ? ಈ ರೀತಿಯಾದ ಭಾರತದ ಹೆದರಿಕೆಗಳಿಗೆ ಪಾಕೀಸಾನವು ಸ್ವಲ್ಪವೂ ಹೆದರುವುದಿಲ್ಲ. ತನ್ನ ಆರ್ಥಿಕ, ಸಾಮಾಜಿಕ ಮತ್ತು ಸೈನ್ಯ ಬಲವನ್ನು ಉತ್ತಮಗೊಳಿಸಲು ತನ್ನ ಈಗಿನ ನೀತಿಯನ್ನು ಸ್ವಲ್ಪವೂ ಬದಲಾಯಿಸದೆ ಮುಂದುವರಿಸಿಕೊಂಡು ಹೋಗೆಹೋಗುತ್ತದೆ-ಎಂಬುದಾಗಿ ಪಾಕ್ ಪ್ರಧಾನಿ ಮಹಮುದಾಲಿಯವರು ನಿನ್ನೆ ದಿನ ತಮ್ಮ ಪ್ರಸಾರಭಾಷಣದಲ್ಲಿ ತಿಳಿಸಿದ್ದಾರೆ.

ಡೈರಕ್ಟರುಗಳ ಚುನಾವಣೆ

ಮೈಸೂರು ೨

ರಾಜಧಾನಿಯಲ್ಲಿರುವ ಸಿಟಿ-ಕೋ-ಆಪರೇಟೀವ್ ಬ್ಯಾಂಕಿನ ಡೈರಕ್ಟರುಗಳ ಚುನಾವಣೆಯು ಮೊನ್ನೆ ದಿನ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ನಡೆದು ಈ ಕೆಳಕಂಡವರುಗಳು ಚುನಾಯಿತರಾಗಿದ್ದಾರೆ.

ಶ್ರೀಗಳಾದ:-ಎಂ ಸಿ ಕೃಷ್ಣಸ್ವಾಮಿ, ಎಂ. ಸಿ. ಮಹದೇವಸ್ವಾಮಿ, ಎಸ್. ಪುಟ್ಟಣ್ಣಯ್ಯ, ಎಂ. ಎಸ್. ಕೃಷ್ಣಾಜಿರಾವ್, ಡಿ. ಎ. ಗೋವಿಂದರಾವ್, ಎ. ಆರ್. ನಾಗರಾಜ್, ಎಂ. ಎಸ್. ಬಸವಣ್ಣ, ಪಿ. ಎಫ್. ಗೌಸ್ ಮೊಹದೀನ್, ಎ. ಕೃಷ್ಣಮೂರ್ತಿರಾವ್, ಎಂ. ಆರ್. ಸಿ. ಬಸಪ್ಪ, ಡಿ. ಬಿ. ಕೃಷ್ಣಪ್ಪ, ಜಿ. ಜನಾರ್ಧನನಾಯ್ಡು, ಟಿ. ಗುಂಡಪ್ಪ, ಕೆ. ನಂದಿಬಸಪ್ಪ, ಎ. ವಿ. ರಂಗರಾವ್.

ಬೊಂಬಾಯಿನಲ್ಲಿ ಹೆಚ್ಚು ಅಕ್ಕಿ ಪಡಿತರ

ರೇಷನ್ ಜಾರಿಯಿರುವ ಪ್ರದೇಶಗಳಲ್ಲಿ ಬೊಂಬಾಯಿ ಸರ್ಕಾರವು ಅಕ್ಕಿಯ ಪಡಿತರವನ್ನು ೪ ಔನ್ಸುಗಳಿಂದ ೬ ಔನ್ಸುಗಳಿಗೆ ಹೆಚ್ಚಿಸಿದೆ.

ಈ ಕಟ್ಟಡಗಳ ಬಾಡಿಗೆಯನ್ನು ಹಲವಾರು ವರ್ಷಗಳಿಂದ ಹೆಚ್ಚಿಸಿಲ್ಲ. ಅದರ ರಿಪೇರಿ ಮುಂತಾದ ಕೆಲಸಗಳ ವೆಚ್ಚವು ಹೆಚ್ಚುತ್ತಿದೆ ಆದ್ದರಿಂದ ಬಾಡಿಗೆ ಏರಿಸಬೇಕೆಂಬ ವಾದವನ್ನು ಸರ್ಕಾರ ಹೂಡಬಹುದು ಆದರೆ ಈ ಏರಿಕೆಯಿಂದ ಬಾಡಿಗೆದಾರರ ಪರಿಸ್ಥಿತಿ ಏನಾಗುತ್ತದೆ ಎಂಬುವನ್ನು ಪರಿಗಣಿಸಬೇಕಾದುದು ಅತ್ಯಗತ್ಯ. ನಗರದ ಇತರ ಪ್ರದೇಶಗಳಿಗಿಂತ ಇಲ್ಲಿ ಸ್ವಲ್ಪ ಕಡಮೆ ಬಾಡಿಗೆ ಇರಬಹುದು.

ಆದರೆ ಹತ್ತಾರು ವರ್ಷಗಳಿಂದ ಒಂದೇ ಕಡೆ ಬಾಡಿಗೆಗಿದ್ದವರಿಗೆ ಈ ರೀತಿ ಏಕಾಏಕಿ ಬಾಡಿಗೆ ಹೆಚ್ಚಿಸಿದರೆ ಅವರು ಎಲ್ಲಿಂದ ಕೊಡುತ್ತಾರೆ. ಅಥವ ಈ ಸ್ಥಳವನ್ನು ಬಿಟ್ಟು ಇನ್ನೆಲ್ಲಿಯಾದರೂ ಹೋಗಲು ಸಾಧ್ಯವೆ ? ಇವುಗಳನ್ನೆಲ್ಲಾ ಸರ್ಕಾರವು ಪರಿಶೀಲಿಸಬೇಕಾಗಿತ್ತು.

ಸರ್ಕಾರದವರು ಈಗ ತಾವು ಮಾಡಿರುವ ಆಜ್ಞೆಯನ್ನು ಪುನಃ ಪರಿಶೀಲಿಸಿ, ಸದ್ಯಕ್ಕೆ ಬಾಡಿಗೆಯನ್ನು ಏರಿಸದಂತೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದು ಅತ್ಯವಶ್ಯಕವಾಗಿದೆ. ಹಾಗೇನಾದರೂ ಸರ್ಕಾರಕ್ಕೆ ಈಗ ವಿಶೇಷ ನಷ್ಟ ಸಂಭವಿಸುತ್ತಿದ್ದರೆ ಬಾಡಿಗೆ ಹತೋಟಿ ಶಾಸನದ ಪರಿಮಿತಿಗೆ ಮೀರದಂತೆ ಬಾಡಿಗೆ ಹೆಚ್ಚಿಸಿ ಈಗಿರುವ ಬಾಡಿಗೆದಾರರಿಗೆ ವಿಶೇಷ ತೊಂದರೆ ಯಾಗದಂತೆ [illegible] ನೋಡಬೇಕಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೧೨	೨೭—೮
ಎಳ್ಳು	—	—
ಹರಳು	೩೩—೨	೩೭—೧೦
ಹುಚ್ಚೆಳ್ಳು	೩೫—	೪೪—
ಹುರುಳಿ	೨೮—	೨೯—೧೨
ಹೆಸರು	೩೪—೧೪	೪೦—೧೦
ಹೊಂಗೆಬೀಜ	೧೩—	೧೯—೧೦
ಹುಣಸೆಬೀಜ	೧೫—೧೪	—
ಅಲಸಂದೆ	೨೯—೧೪	೪೪—೪
ಕೊತ್ತಂಬರಿ	೨೫—	೨೭—೬
ಕಡಲೆ	೩೨—೬	೫೪—೬
ತೊಗರಿ	೧೮—	೩೦—೧೨
ಉದ್ದು	—	—
ಅವರೆ	೨೯—೨	೩೭—೧೪
ಹುಣಸೇಹಣ್ಣು	೩—೧೫	೧೧—೧೦
[illegible]	೫—೨	೫—೯
ಮೆಣಸಿನಕಾಯಿ	೩೦—೨	೩೪—೧೪
ಬೆಲ್ಲ	೫೦—	—
ತೆಂಗಿನಕಾಯಿ	೧೫೪—	[illegible]

ಜಿಲ್ಲಾ ಮೋಟಾರು ಕೆಲಸಗಾರರ ಸಭೆ

ಮೈಸೂರು ೨

ಮೋಟಾರು ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ನಿನ್ನೆ ಶ್ರೀ ಕೆ. ದೌಲತ್‌ರಾವ್‌ರವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಕೆಳಕಂಡ ನಿರ್ಣಯಗಳನ್ನು ಮಾಡಲಾಯಿತು:

ಕೈಗಾರಿಕಾ ಕೋರ್ಟಿನ ತೀರ್ಪನ್ನು ಇನ್ನೂ ಜಾರಿಗೆ ಕೊಡದೆ ಇರುವ ವಿಷಯದಲ್ಲಿ ಲೇಬರ್ ಇಲಾಖೆಗೂ ಮತ್ತು ಸರ್ಕಾರಕಕ್ಕೂ ಎಷ್ಟೇ ಒತ್ತಾಯ ಪೂರ್ವಕವಾಗಿ ನಿವೇದನೆಗಳನ್ನು ಮಾಡಿದರೂ ಯಾವುದೇ ರೀತಿಯ ಕ್ರಮ ತೆಗೆದುಕೊಳ್ಳದೆ ಇರುವುದನ್ನು ಈ ಸಭೆಯು ತೀವ್ರವಾಗಿ ಖಂಡಿಸುತ್ತದೆ. ಸರ್ಕಾರದ ಈ ನಿಧಾನ ರೀತಿಯಿಂದ ಮಾಲೀಕರ ಮೇಲೆ ದಿನೇ ದಿನೇ ಕೆಲಸಗಾರರಲ್ಲಿ ತೀವ್ರ ಅಸಮಾಧಾನ ಉಂಟುಮಾಡಿದೆ. ಈ ಬಗ್ಗೆ ಸೂಕ್ತ ಕಾರ್ಯಕ್ರಮ ತಕ್ಷಣ ಕೈಗೊಳ್ಳದಿದ್ದಲ್ಲಿ ಪರಿಸ್ಥಿತಿ ಉಗ್ರವಾಗಬಹುದು ಆದುದರಿಂದ ಅಂತಹ ಪರಿಸ್ಥಿತಿಯನ್ನು ತಪ್ಪಿಸಲು ಮತ್ತು ಕೆಲಸಗಾರರಿಗೆ ಆಗುತ್ತಿರುವ ತೊಂದರೆಗಳನ್ನು ನಿವಾರಣೆ ಮಾಡಲು ಸೂಕ್ತಕ್ರಮವನ್ನು ಕೈಗೊಳ್ಳಬೇಕೆಂದು ಈ ಸಭೆಯು ಒತ್ತಾಯ ಪಡಿಸುತ್ತದೆ.

೧೩-೨-೫೪ ನೇ ಸಂಘದ ಸಕಲ ಸದಸ್ಯರ ಸಭೆಯನ್ನು ಕರೆಯತಕ್ಕದೆಂದು ತೀರ್ಮಾನಿಸುತ್ತದೆ.

★ ಪಾಕೀಸ್ತಾನದಲ್ಲಿ ಇತ್ತೀಚಿಗೆ ಬಟ್ಟೆ ಅಭಾವವುಂಟಾಗಿರುವುದರಿಂದ ದೇಶಾದ್ಯಂತ ಬಟ್ಟೆಯ ಮೇಲಿನ ಹತೋಟಿಯನ್ನು ವಿಧಿಸಲು ಸರ್ಕಾರವು ಅಲ್ಲಿಯ ಬಟ್ಟೆ ಕಮೀಷನರಿಗೆ ಅಧಿಕಾರವನ್ನು ಕೊಟ್ಟಿದೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ.

ಒಟ್ಟು 2000 ಬಹುಮಾನಗಳು.

ಬಹುಮಾನದ ಮೊಬಲಗು 45000 ರೂ.

ಟಿಕೇಟು ಒಂದಕ್ಕೆ ಒಂದೇರೂಪಾಯಿ.

ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ: ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್ ಮೈಸೂರು

ಫೋ॥ ೫೬೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೨೯

೩-೨-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪಾನನಿರೋಧ ರದ್ದುಮಾಡಿದರೆ ಉಪವಾಸ

ಪಾನನಿರೋಧ ರದ್ದು ಮಾಡಿದರೆ ಉಪವಾಸ

ಪಾನನಿರೋಧವನ್ನು ಆಂಧ್ರಪ್ರಾಂತ್ಯದಲ್ಲಿ ರದ್ದುಗೊಳಿಸಿದರೆ ತಾವು ಸತ್ಯಾಗ್ರಹವನ್ನು ಮಾಡುವುದಾಗಿ ಸ್ವಾಮಿ ಸೀತಾರಾಂರವರು ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರಿಗೆ ತಿಳಿಸಿದ್ದಾರೆ.

ಅಲ್ಲದೆ ಪಾನನಿರೋಧವನ್ನು ಮುಂದುವರಿಸಬೇಕೆಂದು ಅಭಿಪ್ರಾಯವು ಜನರಲ್ಲಿ ಮೂಡಲು ತಾವು ಮಾರ್ಚಿ ೫ ರಿಂದ ಉಪವಾಸ ಮಾಡುವುದಾಗಿಯೂ ಅವರು ತಿಳಿಸಿದ್ದಾರೆ.

ಪಾನನಿರೋಧ ನೀತಿಯನ್ನು ಮುಂದುವರಿಸಲೂ ಸಹ ಅವರು ೨೦ ಅಂಶದ ಕಾರ್ಯಕ್ರಮವನ್ನು ಸೂಚಿಸಿದ್ದಾರೆ.

ರಾಜ್ಯಾಂಗ ತಿದ್ದುಪಡಿ ಬಗ್ಗೆ ಸಲಹೆ

ಭೂ ಸುಧಾರಣೆ, ವಾಕ್ ಸ್ವಾತಂತ್ರ್ಯ, ವಿದ್ಯಾಸಂಸ್ಥೆಗಳಲ್ಲಿ ಧಾರ್ಮಿಕ ಶಿಕ್ಷಣ, ಪಬ್ಲಿಕ್ ಸರ್ವಿಸ್ ಕಮೀಷನ್, ನಿವೃತ್ತ ನ್ಯಾಯಾಧೀಶರುಗಳು ಸುಪ್ರೀಂಕೋರ್ಟಿನಲ್ಲಿ ನ್ಯಾಯವಾದಿಗಳಾಗುವುದು ಇವೇ ಮುಂತಾದ ವಿಷಯಗಳಲ್ಲಿ ಭಾರತದ ರಾಜ್ಯಾಂಗ ತಿದ್ದುಪಡಿ ಆಗಬೇಕು-ಎಂದು ಹಲವಾರು ಸಂಸ್ಥಾನಗಳು ಸೂಚಿಸಿವೆ.

ರಾಜ್ಯಾಂಗ ತಿದ್ದುಪಡಿ ಬಗ್ಗೆ ಕೇಂದ್ರ ಸರ್ಕಾರವು ಸಂಸ್ಥಾನಗಳ ಸಲಹೆಯನ್ನು ಕೇಳಿತ್ತು. ಇಲ್ಲಿಯವರೆಗೆ ಅಸ್ಸಾಂ, ಬಿಹಾರ್, ಬಂಗಾಳ, ಆಂಧ್ರ ಮತ್ತು ಉತ್ತರಪ್ರದೇಶ ಸಂಸ್ಥಾನಗಳು ಮಾತ್ರ ಸಲಹೆಗಳನ್ನು ಕಳುಹಿಸಿವೆ.

ಸುಲಭ ಮತ್ತು ಸೌಕರ್ಯ ಗೃಹಗಳ ಅಗತ್ಯ

ದೇಶದಲ್ಲಿ ಮನೆಗಳಿಲ್ಲದೆ ಒದ್ದಾಡುತ್ತಿರುವ ಲಕ್ಷಾಂತರ ಬಡಜನರಿಗೆ ಉಪಯೋಗವಾಗುವಂತಹ ಸುಲಭ ಬೆಲೆ ಮತ್ತು ಸೌಕರ್ಯವುಳ್ಳ ಗೃಹಗಳನ್ನು ನಿರ್ಮಿಸಬೇಕಾದ ಅಗತ್ಯವನ್ನು ಪ್ರಧಾನಿ ನೆಹರು ತಿಳಿಸಿದ್ದಾರೆ ಈಗ ಬೇಕಾದುದು ಭವ್ಯ ಭವನಗಳಲ್ಲ ಲಕ್ಷಾಂತರ ಜನರಿಗೆ ಸಣ್ಣ ಮನೆಗಳು ಎಂದು ಅವರು ಹೇಳಿದ್ದಾರೆ.

ಬೊಂಬಾಯಿ ಸಚಿವರ ಉದಾರತೆ

ಬೊಂಬಾಯಿನ ಪಾಲಿಟನ್ ಸಂಸ್ಥಾನದ ಮಹಾರಾಜರು ಮತ್ತು ಈಗ ಪಬ್ಲಿಕ್ ವರ್ಕ್ಸ್ ಸಚಿವರೂ ಆಗಿರುವ ಶ್ರೀ ಎ. ಎಂ. ನಾಯಕ್ ನಿಂಬಾಲಕರ್‌ರವರು ತಮ್ಮ ಅರಮನೆಯ ಸ್ವಲ್ಪಭಾಗವನ್ನು ಮಕ್ಕಳ ಆಸ್ಪತ್ರೆಗಾಗಿ ಕೊಟ್ಟಿದ್ದಾರೆ.

ಹರಿಜನ ಸಮ್ಮೇಳನ

ಮೈಸೂರು ೩

ಟಿ. ನರಸೀಪುರದ ಗೋಪಾಲಪುರದಲ್ಲಿ ಜಿಲ್ಲಾಧಿಕಾರಿ ಶ್ರೀ ಎಂ. ಎಸ್. ಸ್ವಾಮಿನಾರ್ಥರವರ ಅಧ್ಯಕ್ಷತೆಯಲ್ಲಿ ಹರಿಜನ ಸಮ್ಮೇಳನವು ನಡೆಯಿತು. ಪಾರ್ಲಿಮೆಂಟ್ ಸದಸ್ಯ ಶ್ರೀ ಎನ್. ರಾಚಯ್ಯನವರು ಸಮ್ಮೇಳನದ ಪ್ರಾರಂಭೋತ್ಸವ ನೆರವೇರಿಸಿದರು.

ಜಿಲ್ಲಾಧಿಕಾರಿಗಳು ಭಾಷಣಮಾಡಿ, ಹರಿಜನರ ಉದ್ಧಾರಕ್ಕಾಗಿ ಸರ್ಕಾರದವರು ಕೈಗೊಂಡಿರುವ ಕಾರ್ಯವನ್ನು ವಿವರಿಸಿ, ಕಳೆದ ವರ್ಷ ೧೩ ಲಕ್ಷ ರೂ. ಖರ್ಚು ಮಾಡಲಾಗಿದೆಯೆಂದು ತಿಳಿಸಿದರು. ಹರಿಜನರಿಗೆ ವ್ಯವಸಾಯ ಕೇಂದ್ರಗಳನ್ನು ಸ್ಥಾಪಿಸಲಾಗಿದೆ. ಅಧಿಕಾರಿಗಳು ಮತ್ತು ಸಾರ್ವಜನಿಕರೂ ಅವರ ಪುರೋಭಿವೃದ್ಧಿಗಾಗಿ ದುಡಿಯುತ್ತಿದ್ದಾರೆ ಎಂದು ಹೇಳಿದರು.

ಅಸ್ಪೃಶ್ಯತೆ ಹೋಗಲಾಡಿಸಲು ತಿಂಗಳಿಗೊಂದುಸಾರಿ ಹರಿಜನ ದಿನವನ್ನು ಆಚರಿಸಬೇಕು. ನಿಮ್ನವರ್ಗದ ನಿಧಿ ವಿಲೇವಾರಿ ಬಗ್ಗೆ ಜಿಲ್ಲಾ ಮತ್ತು ತಾಲ್ಲೂಕು ಸಲಹಾ ಸಮಿತಿ ರಚಿತವಾಗಬೇಕು. ಹೋಟೇಲುಗಳಲ್ಲಿರುವ ಜಾತಿ ಬೋರ್ಡುಗಳು ರದ್ದಾಗಬೇಕು. ಪಬ್ಲಿಕ್ ಸರ್ವೀಸ್ ಕಮೀಷನ್, ವಿಶ್ವವಿದ್ಯಾನಿಲಯದ ಕೌನ್ಸಿಲ್ ಮುಂತಾದುವುಗಳಲ್ಲಿ ಹರಿಜನರಿಗೆ ಪ್ರಾತಿನಿಧ್ಯವಿರಬೇಕು. ಪ್ರತಿ ಹರಿಜನ ವಿದ್ಯಾರ್ಥಿ ನಿಲಯಕ್ಕೆ ೫೦ ಎಕರೆ ಜಮೀನು ಕೊಡಬೇಕು. ಪಾನನಿರೋಧ ಸಂಸ್ಥಾನಾದ್ಯಂತ ಜಾರಿಗೆ ತರಬೇಕು---ಎಂಬ ನಿರ್ಣಯಗಳನ್ನು ಅನುಮೋದಿಸಲಾಯಿತು.

ವಿಶ್ವದ ಶಾಂತಿಗೆ ಗಾಂಧಿ ಮಾರ್ಗ

ಗಾಂಧಿಜೀ ತತ್ವವನ್ನು ಅನುಕರಣೆಗೆ ತರುವುದರಿಂದ ವಿಶ್ವದಲ್ಲಿ ಶಾಂತಿಯನ್ನು ನೆಲೆಸಬಹುದೆಂದು ದೆಹಲಿಯಲ್ಲಿ ಮೊನ್ನೆ ನಡೆದ ಚರ್ಚಾಕೂಟದಲ್ಲಿ ಅಭಿಪ್ರಾಯ ಪಡೆಯಲಾಗಿದೆ. ಭಾರತದಲ್ಲಿರುವ ವಿದೇಶೀ ರಾಯಭಾರಿಗಳೆಲ್ಲರೂ ಅದರಲ್ಲಿ ಭಾಗವಹಿಸಿದ್ದರು.

ಮೈಸೂರು ಜಿಲ್ಲಾ ಬೋರ್ಡು ತಿದ್ದುಪಡಿಗೆ ಅಂಗೀಕಾರ

ಬೆಂಗಳೂರು ೩

ಜಿಲ್ಲಾಬೋರ್ಡುಗಳ ರದ್ದಿಗೆ ಸಂಬಂಧಪಟ್ಟ ಮೈಸೂರು ಗ್ರಾಮ ಪಂಚಾಯತಿ ಮತ್ತು ಜಿಲ್ಲಾಬೋರ್ಡುಗಳ ಕಾನೂನು ತಿದ್ದುಪಡಿ ಮಸೂದೆಗೆ ಶ್ರೀಮನ್ಮಹಾರಾಜರವರು ಅಂಗೀಕಾರವಿತ್ತಿದ್ದಾರೆ.

ನೂತನ ವಿದ್ಯಾಕ್ರಮ ವಿಸ್ತರಣೆ

ಮದ್ರಾಸ್ ಪ್ರಾಂತ್ಯದಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಜಾರಿಗೆ ತಂದಿರುವ ಪ್ರಾಥಮಿಕ ವಿದ್ಯಾಭ್ಯಾಸದ ನೂತನ ಕ್ರಮವನ್ನು ಮದ್ರಾಸ್ ನಗರ ಸಮೇತ ಎಲ್ಲಾ ಪುರಸಭಾ ಪ್ರದೇಶಗಳಿಗೆ ವಿಸ್ತರಿಸಲಾಗುತ್ತದೆ ಈ ಹೊಸಕ್ರಮದ ಪ್ರಕಾರ ಪ್ರಾಥಮಿಕ ಶಾಲೆಗಳಲ್ಲಿ ದಿನವೂ ಕೇವಲ ೩ ಗಂಟೆಗಳ ಕಾಲ ಪಾಠಗಳು ನಡೆಯುತ್ತವೆ. ಇತರ ವೇಳೆಗಳಲ್ಲಿ ಗ್ರಾಮಕೈಗಾರಿಕೆ ಮುಂತಾದ ಕಸುಬುಗಳಲ್ಲಿ ಶಿಕ್ಷಣ ಕೊಡಲಾಗುತ್ತದೆ.

ಗ್ರಾಮಾಂತರ ಆರೋಗ್ಯ ಕೆಲಸಕ್ಕೆ ಯುವಕರು

ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ೧೮ ವರ್ಷದ ಯುವಕ ಮತ್ತು ಯುವತಿಯರಿಗೆ ಆರೋಗ್ಯ ಬಾಬಿನಲ್ಲಿ ಶಿಕ್ಷಣಕೊಟ್ಟು ಗ್ರಾಮಾಂತರ ಪ್ರದೇಶಗಳಿಗೆ ಕಳುಹಿಸುವ ಯೋಜನೆಯೊಂದನ್ನು ಕೇಂದ್ರ ಸರ್ಕಾರವು ಮಂಜೂರು ಮಾಡಿದೆ ಎರಡು ವರ್ಷಕಾಲ ಶಿಕ್ಷಣ ಕೊಡಲಾಗುವುದು ಮತ್ತು ಇದರ ವೆಚ್ಚವನ್ನು ಕೇಂದ್ರ ಸರ್ಕಾರ ವಹಿಸಲಿದೆ.

ಆಂಧ್ರ ಶ್ರೇಷ್ಠ ನ್ಯಾಯಾಲಯ

ಆಂಧ್ರ ಶ್ರೇಷ್ಠ ನ್ಯಾಯಾಲಯವನ್ನು ಮುಂದಿನ ಜೂನ್ ಮಾಹೆಯಿಂದ ವಿಶಾಖಪಟ್ಟಣದಲ್ಲಿ ಸ್ಥಾಪಿಸಬೇಕೆಂಬ ಸರ್ಕಾರಿ ನಿರ್ಣಯವನ್ನು ಆಂಧ್ರ ಸರ್ಕಾರವು ಇದೇ ಮಾಹೆ ೨೨ ನೇ ತಾರೀಖು ಪ್ರಾರಂಭವಾಗಲಿರುವ ಪ್ರಾಂತ್ಯ ಶಾಸನ ಸಭೆಯಲ್ಲಿ ಮಂಡಿಸಲಿದೆ.

ಟರ್ಕಿ-ಪಾಕ್ ರಕ್ಷಣಾ ಒಪ್ಪಂದ ?

ಟರ್ಕಿ ಮತ್ತು ಪಾಕೀಸ್ತಾನಗಳು ರಾಜಕೀಯ ಮತ್ತು ರಕ್ಷಣಾ ಬಗ್ಗೆ ಒಪ್ಪಂದ ಮಾಡಿಕೊಳ್ಳಲು ಸನ್ನಾಹ ನಡೆಯುತ್ತಿದೆಯೆಂದೂ, ಇದಕ್ಕೆ ಅಮೆರಿಕದ ಬೆಂಬಲ ಇದೆಯೆಂದೂ ಹೇಳಲಾಗುತ್ತಿದೆ.

ಹೆಚ್ಚಿನ ಅಕ್ಕಿ ಪಡಿತರ

ತಿರುವಾಂಕೂರು-ಕೊಚ್ಚಿ ಪ್ರಾಂತ್ಯದಲ್ಲಿ ಅಕ್ಕಿಯ ಪಡಿತರವನ್ನು ೩ ಔನ್ಸ್‌ಗಳಿಂದ ೯ ಔನ್ಸ್‌ಗಳಿಗೆ ಹೆಚ್ಚಿಸಲಾಗಿದೆ.

ಮಂತ್ರಿಗಳಿಗಿಂತ ಕಲಾವಿದರಿಗೆ ಹೆಚ್ಚು ಸಂಬಳ

ರಷ್ಯಾದಲ್ಲಿ ಮಂತ್ರಿಗಳಿಗಿಂತ ಕಲಾವಿದರಿಗೆ ಹೆಚ್ಚು ಸಂಬಳವಿದೆಯೆಂದೂ, ಅವರು ಹೆಚ್ಚು ಮಾನ್ಯರೆಂದೂ ಭಾರತಕ್ಕೆ ಆಗಮಿಸಿರುವ ರಷ್ಯ ಸಾಂಸ್ಕೃತಿಕ ನಿಯೋಗದ ಅಧ್ಯಕ್ಷರು ಹೇಳಿದ್ದಾರೆ.

ಪ್ರಧಾನಿ ಪದವಿಗೆ ಚರ್ಚಿಲರು ವೃದ್ಧರು

ಬ್ರಿಟನ್ನಿನ ಪ್ರಧಾನಿಯಾಗಿರಲು ಸರ್ ಚರ್ಚಿಲರು ಈಗ ಅತಿ ವೃದ್ಧರಾಗಿದ್ದಾರೆಂದು ಅಲ್ಲಿನ ಶೇಕಡ ೫೪ ರಷ್ಟು ಮಂದಿ ಅಭಿಪ್ರಾಯ ಪಟ್ಟಿದ್ದಾರೆ.

ಷೇಕ್ ಅಬ್ದುಲ್ಲಾ ಸ್ಥಾನಬದ್ಧತೆ

ಕಾಶ್ಮೀರ ಪ್ರಧಾನಿ ಷೇಕ್ ಅಬ್ದುಲ್ಲಾ, ಮಾಜಿ ರೆವಿನ್ಯೂ ಮಂತ್ರಿ ಮಿರ್ಜಾ ಅಫ್ಜಲ್ ಬೇಗ್ ಇವರ ಸ್ಥಾನಬದ್ಧತೆಯ ಅವಧಿಯನ್ನು ಮತ್ತೆ ಎರಡು ತಿಂಗಳ ಕಾಲ ಹೆಚ್ಚಿಸಲಾಗಿದೆ.

ಕಟುವಾಗಿ ಪಾನನಿರೋಧ ಅನ್ವಯ

ಮದ್ರಾಸ್ ನಗರದಲ್ಲಿ ಪಾನನಿರೋಧವನ್ನು ಕಟುವಾಗಿ ಆಚರಣೆಗೆ ತರಲು ಅಲ್ಲಿಯ ಸರ್ಕಾರವು ವಿಶೇಷ ಸಿಬ್ಬಂದಿಯನ್ನು ನೇಮಿಸಿದೆ.

ಆಫ್ಘನ್ ನಿಯೋಗ

ಆಫ್ಘಾನಿಸ್ತಾನದ ಸಾಂಸ್ಕೃತಿಕ ನಿಯೋಗವೊಂದು ನಿನ್ನೆಯದಿನ ದೆಹಲಿಗೆ ಆಗಮಿಸಿದೆ. ಅವರು ಭಾರತದಲ್ಲಿ ೬ ವಾರಗಳ ಕಾಲವಿರುತ್ತಾರೆ. ಆಗ್ಗೆ ಬೆಂಗಳೂರು ಮತ್ತು ಮೈಸೂರಿಗೂ ಭೇಟಿ ಕೊಡುವರು.

ಜಿಲ್ಲಾ ಖಜಾನೆ ಮೈಸೂರು ಬ್ಯಾಂಕ್ ಆಡಳಿತಕ್ಕೆ

ಹಾಸನದಲ್ಲಿರುವ ಜಿಲ್ಲಾ ಖಜಾನೆಯ ಆಡಳಿತವನ್ನು ಮುಂದಿನ ಏಪ್ರಿಲ್‌ನಿಂದ ಮೈಸೂರು ಬ್ಯಾಂಕು ತನ್ನ ಆಡಳಿತಕ್ಕೆ ತೆಗೆದುಕೊಳ್ಳುವುದೆಂದು ತಿಳಿಯಬರುತ್ತದೆ.

ವಿಶ್ವೇಶ್ವರಯ್ಯ ನಾಲಾ ಸಮಿತಿ ಸಭೆ

ಮೈಸೂರು ೩

ಇದೇ ೧೪ನೇ ತಾರೀಖು ಕೃಷ್ಣರಾಜಸಾಗರದಲ್ಲಿ ವಿಶ್ವೇಶ್ವರಯ್ಯ ನಾಲಾ ಸಮಿತಿ ಸಭೆಯು ಕಾಮಗಾರಿ ಸಚಿವ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ಮುಡುಕತೊರೆ ಜಾತ್ರೆಗೆ ಹೋಗುವವರಿಗೆ ಎಚ್ಚರಿಕೆ

ಮೈಸೂರು ೩

ಟಿ. ನರಸೀಪುರ ತಾಲ್ಲೂಕು ಮುಡುಕತೊರೆಯಲ್ಲಿ ಇದೇ ೭ ನೇ ತಾರೀಖಿನಿಂದ ಪ್ರಾರಂಭವಾಗುವ ಜಾತ್ರೆಯ ಕಾಲದಲ್ಲಿ ಕಾಲರಾ ರೋಗವು ಹರಡುವ ಸಂಭವ ಇರುವುದರಿಂದ ಅಲ್ಲಿಗೆ ಹೋಗುವವರು ಪೂರ್ವಭಾವಿ ಕಾಲರಾ ನಿರೋಧ ಇನಾಕ್ಯುಲೇಷನ್ ಹಾಕಿಸಿಕೊಂಡು ಸರ್ಟಿಫಿಕೇಟ್ ಪಡೆಯಬೇಕೆಂದು ಜಿಲ್ಲಾ ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಈ ಇನಾಕ್ಯುಲೇಷನನ್ನು ಮೈಸೂರು ಜಿಲ್ಲೆಯಲ್ಲಿರುವ ಎಲ್ಲಾ ಆಸ್ಪತ್ರೆ ಮತ್ತು ಹೆಲ್ತ್ ಯೂನಿಟ್ಟುಗಳಲ್ಲಿ ಮಾಡಲಾಗುತ್ತೆ ಮುಡುಕತೊರೆ ಟಿ. ಬಿ., ಬೆಟ್ಟಹಳ್ಳಿ ಔಟ್ ಪೋಸ್ಟ್, ಟಿ. ನರಸೀಪುರ ಹ್ಯಾಂಡ್ ಪೋಸ್ಟ್, ಬೆಳಕವಾಡಿ ಕ್ರಾಸ್‌ರಸ್ತೆ ಮತ್ತು ಕೃಷ್ಣಾಪುರಕ್ರಾಸ್‌ರಸ್ತೆ ಈ ಸ್ಥಳಗಳಲ್ಲಿಯೂ ಇನಾಕ್ಯುಲೇಷ ಮಾಡಲಾಗುತ್ತದೆ.

ಪುರಸಭಾಸದಸ್ಯ ಮತ್ತು ಇತರ ೨೯ ಜನರ ಮೇಲೆ ಮೊಕದ್ದಮೆ

ಮೈಸೂರು ೩

ಇತ್ತೀಚೆಗೆ ನಡೆದ ಪುರಸಭಾ ಚುನಾವಣೆಯ ಕಾಲದಲ್ಲಿ ಮಂಡಿ ಮೊಹಲ್ಲಾ ಅಂಜುಮಾನ್ ಮತ್ತು ಸವಾಯ್ ರಸ್ತೆಗಳಲ್ಲಿನ ಮತದಾನ ಕೇಂದ್ರಗಳ ಬಳಿ ದೊಂಬಿ ಮತ್ತು ಗಲಭೆ ನಡೆಸಿದರೆಂಬ ಆಪಾದನೆ ಮೇಲೆ ಪುರಸಭಾ ಸದಸ್ಯ ಶ್ರೀ ಅಜೀಜ್ ಸೇಟ್ ಮತ್ತು ೩ ಜನ ಪ್ರಮುಖ ವರ್ತಕರನ್ನೊಳಗೊಂಡು ಒಟ್ಟು ೩೦ ಜನರ ಮೇಲೆ ಮಂಡಿಪೊಲೀಸರು ನಗರದ ಪ್ರಥಮ ದರ್ಜೆ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದಾರೆ

ಬಿಕನೀರ್‌ನಲ್ಲಿ ಸತ್ಯಾಗ್ರಹ

ಪ್ರಾಂತ್ಯದಿಂದ ಹೊರಕ್ಕೆ ಗೋಧಿಯನ್ನು ರವಾನಿಸಕೂಡದೆಂದು ಬಿಕನೀರ್‌ನಲ್ಲಿ ಡಿಸೆಂಬರ್ ೨೧ ನೇ ತಾರೀಖಿನಿಂದ ಪ್ರಾರಂಭವಾದ ಸತ್ಯಾಗ್ರಹವು ಇನ್ನೂ ಮುಂದುವರಿಯುತ್ತಲೇ ಇದೆ. ಈ ಸಂಬಂಧದಲ್ಲಿ ಇಲ್ಲಿಯವರೆಗೆ ೧೪೧ ಜನರ ದಸ್ತಗಿರಿಗಳಾಗಿವೆ.

೩ ಜನರು ಆಮರಣಾಂತ ಉಪವಾಸವನ್ನು ಕೈಗೊಂಡಿದ್ದಾರೆ. ಅವರಲ್ಲಿ ಒಬ್ಬನ ಸ್ಥಿತಿ ಕ್ಷಯಿಸುತ್ತಲಿರುವುದಾಗಿ ಹೇಳಲಾಗಿದೆ.

ಕೈಗಾರಿಕಾ ಅಭಿವೃದ್ಧಿ ಕಾರ್ಪೊರೇಷನ್

ಭಾರತದಲ್ಲಿ ನೂತನ ಕೈಗಾರಿಕೆಗಳನ್ನು ತ್ವರಿತವಾಗಿ ಸ್ಥಾಪಿಸಲು ಸಹಾಯಮಾಡುವುದಕ್ಕಾಗಿ ಒಂದು ಕೈಗಾರಿಕಾ ಅಭಿವೃದ್ಧಿ ಕಾರ್ಪೊರೇಷನ್ ಸ್ಥಾಪಿಸಲು ಕೇಂದ್ರ ಸರ್ಕಾರ ನಿರ್ಧರಿಸಿ, ಅದಕ್ಕೆ ವಿಶ್ವಬ್ಯಾಂಕಿನಿಂದ ಹಣ ಪಡೆಯಲು ಮಾತುಕತೆ ನಡೆಸುತ್ತಿದೆ.

ಪಾಕೀಸ್ತಾನ-ಅಮೆರಿಕಾ ಸೈನ್ಯ ಒಪ್ಪಂದ ಅರಬ್-ಏಷ್ಯಾ ಪ್ರತ್ಯೇಕತೆಗೆ ಯತ್ನ

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವೆ ನಡೆಯಲಿರುವ ಸೈನ್ಯ ಒಪ್ಪಂದವು ಅರಬ್ ಮತ್ತು ಏಷ್ಯಾ ರಾಷ್ಟ್ರಗಳನ್ನು ಪ್ರತ್ಯೇಕಗೊಳಿಸುವ ಒಂದು ಯತ್ನವಾಗಿದೆ ಇದನ್ನು ಸಾಮಾನ್ಯವಾಗಿ ಈ ಭಾಗಗಳಲ್ಲಿರುವ ಎಲ್ಲಾ ರಾಷ್ಟ್ರಗಳು ವಿರೋಧಿಸುತ್ತಲಿವೆ ಎಂದು ಈಜಿಪ್ಟಿನಲ್ಲಿ ರಾಯಭಾರಿಯಾಗಿ ಭಾರತಕ್ಕೆ ಹಿಂತಿರುಗಿರುವ ಸರದಾರ್ ಪಣಿಕ್ಕರ್‌ರವರು ಹೇಳಿದ್ದಾರೆ. ಈಜಿಪ್ಟ ದೇಶದ ವಿಷಯವಾಗಿ ಅವರು ಮಾತನಾಡುತ್ತ ಭಾರತದಂತೆ ಈಜಿಪ್ಟ ಸಹ ಶಾಂತಿ ಪ್ರಿಯರಾಷ್ಟ್ರ. ವಿಶ್ವಶಾಂತಿಗಾಗಿಯೇ ಅದು ಶ್ರಮಿಸುತ್ತಲಿದೆ ಎಂದು ಹೇಳಿದ್ದಾರೆ.

ಆಯುರ್ವೇದ ಶಿಕ್ಷಣ

ಸೌರಾಷ್ಟ್ರದಲ್ಲಿ ಆಯುರ್ವೇದದಲ್ಲಿ ೫ ವರ್ಷಕಾಲ ಉನ್ನತ ಶಿಕ್ಷಣವನ್ನು ಕೊಡುವ ಯೋಜನೆಯನ್ನು ಅಲ್ಲಿಯ ಸರ್ಕಾರವು ಪರಿಶೀಲಿಸುತ್ತಲಿದೆ. ಅಲ್ಲಿ ಶಸ್ತ್ರ ಚಿಕಿತ್ಸೆ ಮುಂತಾದ ನೂತನ ಚಿಕಿತ್ಸಾ ಕ್ರಮಗಳಲ್ಲಿ ಸಹ ಶಿಕ್ಷಣಕೊಟ್ಟು, ಅನಂತರ ಪದವಿಯನ್ನು ಕೊಡಲಾಗುತ್ತದೆ.

ಗಾಂಧಿ ಜನತಾ ಕಾಂಗ್ರೆಸ್

ಪಂಜಾಬಿನಲ್ಲಿ ಕಾಂಗ್ರೆಸ್ಸಿನಿಂದ ಹೊರದೂಡಲ್ಪಟ್ಟ ಮಾಜಿ ಸಚಿವ ಶ್ರೀ ರಾಮಶರ್ಮ ಎಂಬುವರು ಅಲ್ಲಿ "ಗಾಂಧಿ ಜನತಾ ಕಾಂಗ್ರೆಸ್" ಎಂಬ ನೂತನ ಪಕ್ಷವನ್ನು ಕಟ್ಟಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೩—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—	೨೨—೧೪
ಎಳ್ಳು	೬೫—೨	೭೩—೨
ಹರಳು	೩೬—೨	೩೭—೧೦
ಹುಚ್ಚೆಳ್ಳು	೩೩—	೪೩—
ಹೊಂಗೆಬೀಜ	೧೪—೮	೧೬—೨
ಹುಣಸೆಬೀಜ	೧೨—	—
ಹುರುಳಿ	೨೮—೬	೩೦—
ಹೆಸರು	೩೦—	೪೦—೬
ಅಲಸಂದೆ	೩೧—	೪೫—೧೪
ಅವರೆ	೨೮—೨	೩೬—೧೨
ಕೊತ್ತುಂಬರಿ	೨೬—೬	೨೯—
ಸೀಗೆಕಾಯಿ	೪—	೫—೧
ಹುಣಸೆಹಣ್ಣು	೭—೭	೧೧—
ಮೆಣಸಿನಕಾಯಿ	೨೫—	೩೪—೮
ಕಡಲೆ	೫೧—೬	೫೫—
ತೆಂಗಿನಕಾಯಿ	೧೫೫—	೩೧೨—
ಕೊಬರಿ	೧೫—	೩೧—೧೨
ಉಮ್ಮ	—	—
ಬೆಲ್ಲ	೫—	—

ಮೈಸೂರಿನಲ್ಲಿ ಕಬ್ಬಿಣದ ಅದುರು

ಮೈಸೂರು ಸಂಸ್ಥಾನದಲ್ಲಿ ಉತ್ತಮ ತರಹದ ಕಬ್ಬಿಣದ ಅದುರು ಸುಮಾರು ೧೦೦ ಕೋಟಿ ಟನ್ನುಗಳಷ್ಟು ದೊರೆಯುವುದೆಂದೂ ಇದರಲ್ಲಿ ಶೇಕಡ ೬೦ ರಷ್ಟು ಕಬ್ಬಿಣದ ಅಂಶ ಇರುವುದೆಂದೂ ಈಚೆಗೆ ಪತ್ತೆಹಚ್ಚಲಾಗಿದೆ. ಈ ಖನಿಜವಲ್ಲದೆ ಪ್ರಾಂತ್ಯದಲ್ಲಿ ಸುಮಾರು ೩೦ ಕೋಟಿ ಟನ್ನುಗಳಷ್ಟು ಮ್ಯಾಗ್ನಿಸೈಟ್ ಅದುರು ಸಹ ದೊರೆಯುವುದೆಂದು ಕಂಡುಹಿಡಿಯಲಾಗಿದೆ.

ಗಂಗಾ ನದಿಯಲ್ಲಿ ಪವಿತ್ರ ಸ್ನಾನ

ಅಲಹಾಬಾದಿನ ಬಳಿ ಗಂಗಾನದಿಯ ಸಂಗಮ ಸ್ಥಳವಾದ ಕುಂಭನಗರದಲ್ಲಿ ಈದಿನ ೪೦ ಲಕ್ಷ ಜನರು ಸ್ನಾನ ಮಾಡಿದರೆಂದು ತಿಳಿಯಬರುತ್ತದೆ. ಕುಂಭಮೇಳ ಸಮಾರಂಭದಲ್ಲಿ ಈ ದಿನವೇ ಪರ್ವ ದಿನವಾಗಿದೆ. ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದರು ತಮ್ಮ ಸಂಸಾರ ಸಮೇತ ಅಲ್ಲಿಗೆ ತೆರಳಿ ಈ ದಿನ ಬೆಳಿಗ್ಗೆ ಅಲ್ಲಿ ಪವಿತ್ರ ಸ್ನಾನವನ್ನು ಮಾಡಿದರು.

೬೦೧೨ ಖೈದಿಗಳ ಬಿಡುಗಡೆ

ನೂತನ ಪ್ರಾಂತ್ಯರಚನೆಯ ಜ್ಞಾಪಕಾರ್ಥವಾಗಿ ಆಂಧ್ರದಲ್ಲಿ ಬಿಡುಗಡೆಮಾಡಿದ ಖೈದಿಗಳ ಸಂಖ್ಯೆಯು ಒಟ್ಟು ೬೦೧೨ ಎಂಬುದಾಗಿ ಆಂಧ್ರ ಮುಖ್ಯಮಂತ್ರಿ ಶ್ರೀ ಟಿ ಪ್ರಕಾಶಂರವರು ತಿಳಿಸಿದ್ದಾರೆ.

ಗೋಧಿ ಹತೋಟಿ ರದ್ದು

ಫೆಬ್ರವರಿ ಒಂದನೇ ತಾರೀಖಿನಿಂದ ಬೃಹತ್ ಬೊಂಬಾಯಿ ಮತ್ತು ಥಾನಾ ಜಿಲ್ಲೆಯ ೩೩ ಗ್ರಾಮಗಳಲ್ಲಿ ಗೋಧಿ ಹತೋಟಿಯನ್ನು ರದ್ದುಗೊಳಿಸಲಾಗಿದೆ.

ಸಂಸ್ಥಾನದ ಚುನಾವಣೆ ಅಧಿಕಾರಿಗಳು

ಮೈಸೂರು, ಕೋಲಾರ, ಬೆಂಗಳೂರಿನ ದಕ್ಷಿಣ, ಮಂಡ್ಯ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ ಮತ್ತು ಬಳ್ಳಾರಿಯ ಕ್ಷೇತ್ರಗಳಿಗೆ ಆಯಾಯ ಜಿಲ್ಲಾಧಿಕಾರಿಗಳನ್ನ ರಿಜಿಸ್ಟ್ರೇಷನ್ ಮತ್ತು ರಿಟರ್ನಿಂಗ್ ಅಧಿಕಾರಿಗಳನ್ನಾಗಿ ಕೇಂದ್ರ ಚುನಾವಣಾ ಕಮೀಷನರು ನೇಮಿಸಿದ್ದಾರೆ. ಹಾಸನ-ಚಿಕ್ಕಮಗಳೂರು ಎರಡೂ ಸೇರಿ ಅದಕ್ಕೆ ಹಾಸನದ ಜಿಲ್ಲಾಧಿಕಾರಿಗಳು ರಿಜಿಸ್ಟ್ರೇಷನ್ ಮತ್ತು ರಿಟರ್ನಿಂಗ್ ಆಫೀಸರಾಗಿರುವರು ಆಯಾಯ ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟರು ಅಸಿಸ್ಟೆಂಟ್ ರಿಟರ್ನಿಂಗ್ ಅಧಿಕಾರಿಗಳಾಗಿರುವರು. ಬೆಂಗಳೂರು ಉತ್ತರಕ್ಷೇತ್ರಕ್ಕೆ ಕಾರ್ಪೊರೇಷನ್ ಕಮೀಷನರು ರಿಟರ್ನಿಂಗ್ ಅಧಿಕಾರಿಗಳಾಗಿರುವರು.

ಸೊಸೈಟಿ ಕಾರ್ಯದರ್ಶಿ

ಮೈಸೂರು ೩

ಮೈಸೂರು ಕೋ-ಆಪರೇಟಿವ್ ಸೊಸೈಟಿಯ ಅಸಿಸ್ಟೆಂಟ್ ಕಾರ್ಯದರ್ಶಿಗಳಾಗಿದ್ದ ಶ್ರೀ ಸುಬ್ರಹ್ಮಣ್ಯಂರವರನ್ನು ಅದೇ ಸೊಸೈಟಿಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ.

ಕಳ್ಳಭಟ್ಟಿ ವ್ಯಾಪಾರದಲ್ಲಿ ನಷ್ಟ

ಪಶ್ಚಿಮ ಬಂಗಾಳದಲ್ಲಿ ಕಳ್ಳಭಟ್ಟಿ ವ್ಯಾಪಾರ ನಡೆಯುತ್ತಿರುವುದರಿಂದ ಸರ್ಕಾರಕ್ಕೆ ವರ್ಷವೂ ೭೫ ಲಕ್ಷ ರೂಪಾಯಿಗಳ ನಷ್ಟವಾಗುತ್ತಿರುವುದಾಗಿ ಅಧಿಕೃತವಾಗಿ ಹೇಳಲಾಗಿದೆ.

.... ರಣಜಿತ್ ....
5-2-54 ರಿಂದ ಆಮೋಘ ಪ್ರಾರಂಭ
ಪ್ರತಿದಿನ 3 ಆಟಗಳು
ನಿರೂಪ್‌ರಾಯ್, ಆಗಾ, ಮನಹರ್ ದೇಸಾಯ್ ಮತ್ತು ಜೀವನ್ ನಟಿಸಿರುವ:-
-ಮಂಚಲಾ-
(ಹಿಂದಿ)
ದಿಗ್ದರ್ಶನ:-ಜಯಂತ ದೇಸಾಯಿ.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್ ಮೈಸೂರು.

ಪ್ರಭಾ ★ ಜಯಪ್ರದ 2 ನೇ ವಾರ
5—2—54 ರಿಂದ ಪ್ರತಿದಿನ 3 ಆಟಗಳು
ಪ್ರತಿಯೊಬ್ಬಗಂಡಸು ಮತ್ತುಹೆಂಗಸು ತಪ್ಪದೇ ನೋಡಿ ನೆನೆಯಬೇಕಾದ ಚಿತ್ರ
★ ಬಾಬ್ ಅಂಡ್ ಸ್ಯಾಲಿ ರವರ ಕಥೆ ★
[ವಯಸ್ಕರಿಗೆ ಮಾತ್ರ] ಶ್ರೀ
ಈ ಚಿತ್ರದಲ್ಲಿ ಇಂದಿನ ಅನೇಕ ಯುವಕ ಯುವತಿಯರು ತಮ್ಮ ಪ್ರಾಪ್ತ ವಯಸ್ಸಿನಲ್ಲಿ ಲೈಂಗಿಕ ಜ್ಞಾನ ಶೂನ್ಯತೆಯಿಂದ ಹೇಗೆ ಅನೇಕ ತೊಂದರೆಗಳಿಗೆ ಈಡಾಗುವರು ಎಂಬುದನ್ನು ನೋಡಬಹುದು.
ಬೆಳಗಿನ ಪ್ರದರ್ಶನ:.... 5—2—54 ರಿಂದ 3 ದಿನಗಳು.
ವಿ. ಶಾಂತಾರಾಂರವರ .... ಪರ್ ಛಾಯ್ ....
ಪಾತ್ರ:—ಶಾಂತಾರಾಂ, ಜಯಶ್ರೀ, ಲಲಿತಾಪವಾರ್.

ಪೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೩೦

೪-೨-೧೯೫೪ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕುಂಭ ಮೇಳದಲ್ಲಿ ನೂರಾರು ಯಾತ್ರಿಕರ ಮರಣ

೪೦ ಲಕ್ಷಕ್ಕಿಂತ ಹೆಚ್ಚಿನ ಜನಸಂದಣಿಯಲ್ಲಿ ಗೊಂದಲ

ಅಲಹಾಬಾದಿನ ಬಳಿ ಗಂಗಾ ಯಮುನಾ ನದಿಗಳ ಸಂಗಮದಲ್ಲಿ ಕುಂಭಮೇಳದ ಸಮಾರಂಭದಲ್ಲಿ ಜನಸಂದಣಿಯು ವಿಪರೀತವಾಗಿ ಅನೇಕರು ತುಳಿತಕ್ಕೆ ಸಿಕ್ಕಿ ನಿನ್ನೆ ಸುಮಾರು ೩೫೦ ಜನರು ಸತ್ತು ಹೋದರೆಂದು ಸಾವಿರಾರು ಜನರು ಗಾಯಗೊಂಡರೆಂದು ವರದಿಯಾಗಿದೆ.

ಕುಂಭನಗರದ ಸಂಗಮದಲ್ಲಿ ತೀರ್ಥ ಸ್ನಾನ ಮಾಡುವುದಕ್ಕೆ ನಿನ್ನೆ ಪವಿತ್ರವಾದ ದಿನವಾಗಿತ್ತು ಭಾರತದ ನಾನಾ ಕಡೆಗಳಿಂದ ಸುಮಾರು ೪೦ ಲಕ್ಷ ಜನರು ಅಲ್ಲಿ ಸೇರಿದ್ದರು: ಉತ್ತರ ಪ್ರದೇಶ ಸರ್ಕಾರವು ಇಲ್ಲಿ ಎಲ್ಲಾ ವ್ಯವಸ್ಥೆಗಳನ್ನು ಮಾಡಿತ್ತು. ಸುಮಾರು ೩೦೦೦ ಪೋಲೀಸಿನವರು ೬೦೦೦ ಸ್ವಯಂ ಸೇವಕರು ಇಲ್ಲಿಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಲಿದ್ದರು. ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ್, ಪ್ರಧಾನಿ ನೆಹರೂ ಮುಂತಾದವರು ಸಹ ಈ ಸಮಾರಂಭಕ್ಕೆ ದಯಮಾಡಿಸಿದ್ದರು. ನೂರಾರು ವರ್ಷಗಳಿಂದ ನಡೆಯುತ್ತಿರುವ ಈ ಕುಂಬಮೇಳ ಸಮಾರಂಭದಲ್ಲಿ ಈ ವರ್ಷ ಸೂರ್ಯ, ಚಂದ್ರ ಮತ್ತು ಗುರು ಗ್ರಹಗಳು, ಶಿಷ್ಟಸ್ಥಾನ ಹೊಂದಿದ್ದರಿಂದ ಅಗಾಧವಾಗಿ ಜನಸ್ತೋಮವು ಸೇರಿತ್ತು.

ನಿನ್ನೆಯದಿನ ಸ್ನಾನಕ್ಕೆ ಜನರು ಅಗಾಧ ಸಂಖ್ಯೆಯಲ್ಲಿ ಬರುತ್ತಿದ್ದಾಗ ಕುಂಭನಗರ ಮತ್ತು ಸ್ನಾನಘಟ್ಟಗಳ ನಡುವೆ ತಾತ್ಕಾಲಿಕವಾಗಿ ನಿರ್ಮಿಸಿದ್ದ ಸೇತುವೆಯ ಬಳಿ ಜನರ ನೂಕು ನುಗ್ಗಲು ಹೆಚ್ಚಾಗಿ ನೂರಾರು ಜನರು ತುಳಿತಕ್ಕೆ ಸಿಕ್ಕಿಬಿದ್ದರು ಇವರಲ್ಲಿ ಉತ್ತರ ಭಾರತದ ಮಕ್ಕಳು ಮತ್ತು ಮಹಿಳೆಯರೇ ವಿಶೇಷವಾಗಿ ಈ ಅಪಘಾತಕ್ಕೆ ಈಡಾದರು ಅಲ್ಲಿ ಮಳೆಯು ಬೇರೆ ವಿಶೇಷವಾಗಿ ಬಂದಿದ್ದರಿಂದ ಎಲ್ಲೆಡೆಯಲ್ಲಿಯೂ ಕೆಸರಿನಲ್ಲಿ ಸಿಕ್ಕಿಬಿದ್ದು ಜನರು ಮಡಿದರು. ಈ ಗೊಂದಲವನ್ನು ತಡೆಯಲು ಮೇಳದ ಅಧಿಕಾರಿಗಳು ಎಷ್ಟು ಶ್ರಮಪಟ್ಟರೂ ಸಾಧ್ಯವಾಗಲಿಲ್ಲ. ಕೆಸರಿನಲ್ಲಿ ಸಿಕ್ಕಿಬಿದ್ದವರನ್ನು ಸಂರಕ್ಷಿಸುವ ಕಾರ್ಯ ಕಷ್ಟತರವಾಯಿತು. ಸಾವಿರಾರುಜನರು ದಿಕ್ಕುತೋಚದೆ ಪತ್ತೆಯಾಗದ ತಮ್ಮ ಸಂಬಂಧಿಕರನ್ನು ಹುಡುಕುತ್ತಲಿದ್ದರು. ಈ ಅಪಘಾತದ ಸ್ಥಳದಲ್ಲೂ ಜನಸಾಂದ್ರತೆಯನ್ನು ತಡೆದು ಶವಗಳ ಪತ್ತೆ ಕಾರ್ಯ,ಗಾಯಗೊಂಡವರನ್ನು ಅಲ್ಲಿಯ ೮ ಆಸ್ಪತ್ರೆಗಳಿಗೆ ಕಳುಹಿಸುವ ಕಾರ್ಯ ನಡೆಯಿತು. ಶವಗಳನ್ನು ರವಾನಿಸುವುದಕ್ಕೆ ೧೨ ಮೋಟಾರು ಟ್ರಕ್ಕುಗಳನ್ನು ಉಪಯೋಗಿಸಲಾಯಿತು. ಆಸ್ಪತ್ರೆಗಳಲ್ಲೆಲ್ಲಾ ಗಾಯಗೊಂಡವರಿಗೆ ಸ್ಥಳವೇ ದೊರಕುವುದು ಕಷ್ಟವಾಯಿತು. ನೂರಾರು ಶವಗಳ ವಾರಸುದಾರರು ಕಾಣಲಾರದೆ ಅವುಗಳನ್ನು ಮೇಳದ ಅಧಿಕಾರಿಗಳೇ ಸಂಚಯನ ವ್ಯವಸ್ಥೆಯನ್ನು ಏರ್ಪಾಡು ಮಾಡಿದ್ದಾರೆ. ಇಲ್ಲಿಯವರೆಗೆ ಸುಮಾರು ೩೫೦ ಶವಗಳು ಸಿಕ್ಕಿವೆ.

ಇಲ್ಲಿ ದೊರೆತ ಶವಗಳನ್ನೆಲ್ಲಾ ಪೊಲೀಸ್ ಠಾಣೆಗೆ ಕೊಂಡೊಯ್ದು ಅಲ್ಲಿಡಲಾಯಿತು. ಸತ್ತವರಲ್ಲಿ ಮಹಿಳೆಯರೇ ೨೫೦ಕ್ಕೆ ಹೆಚ್ಚಾಗಿದ್ದಾರೆಂದೂ ೧೪ ಮಕ್ಕಳೆಂದೂ ತಿಳಿಯಬರುತ್ತದೆ. ಈ ಶವಗಳಲ್ಲಿ ಕೇವಲ ೮೫ ಶವಗಳನ್ನು ಮಾತ್ರ ವಾರಸುದಾರರು ಗುರ್ತುಹಚ್ಚಿ ತೆಗೆದುಕೊಂಡು ಹೋದರೆಂದೂ ಉಳಿದುವುಗಳನ್ನೆಲ್ಲಾ ಮೇಳದ ಅಧಿಕಾರಿಗಳು ದಹನ ಮಾಡಲು ವ್ಯವಸ್ಥೆ ಮಾಡಿದ್ದಾರೆಂದು ಗೊತ್ತಾಗಿದೆ.

ಈ ವಿಷಾದ ಘಟನೆಯ ಸ್ಥಳಕ್ಕೆ ಪ್ರಧಾನಿ ನೆಹರೂ ಮುಂತಾದವರು ಕೂಡಲೇ ಧಾವಿಸಿ ಪರಿಶೀಲನೆ ನಡೆಸಿದರು. ರಾಷ್ಟ್ರಾಧ್ಯಕ್ಷರು ಮತ್ತು ಪ್ರಧಾನಿಗಳು ಸತ್ತವರಕುಟುಂಬಕ್ಕೆ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ

ಈ ಘಟನೆಗಳ ಬಗ್ಗೆ ವಿಚಾರಣೆ ನಡೆಸಲು ಉತ್ತರಪ್ರದೇಶ ಸರಕಾರವು ಒಂದು ಸಮಿತಿಯನ್ನು ರಚಿಸಲಿದೆ.

ಕುಂಭಮೇಳಕ್ಕೆ ಬರುವ ಯಾತ್ರಿಕರ ರೈಲುಸಂಚಾರವನ್ನು ನಿಲ್ಲಿಸಲಾಗಿದೆ. ಅಲ್ಲಿಂದ ಮಾತ್ರ ಯಾತ್ರಿಕರನ್ನು ಹೊರಕ್ಕೆ ಕಳುಹಿಸಲಾಗುತ್ತಿದೆ.

ಸಾವಿರಾರು ಮಂದಿ ಸಾಧುಗಳು ಅತಿ ವೈಭವದಿಂದ ಬೆಳಗ್ಗೆ ಮೆರವಣಿಗೆಯಲ್ಲಿ ಸಂಗಮಕ್ಕೆ ಹೋಗಿ ಸ್ನಾನಮಾಡಿದ ದೃಶ್ಯ ಅತಿ ಆಕರ್ಷಣೆಯವಾಗಿತ್ತು.

ಮೈಸೂರಿನ ಮಾಜಿ ಅಧಿಕಾರಿಯ ಮೇಲೆ ಮೊಕದ್ದಮೆ

ಮೈಸೂರಿನ ಮಾಜಿ ಅರ್ಥಿಕ ಕಾರ್ಯದರ್ಶಿಯಾಗಿದ್ದ ಶ್ರೀ ಎ. ಎನ್. ರಾಘವಾಚಾರ್ ಮತ್ತು ಅವರ ಪುತ್ರ ಶ್ರೀ ಎ. ಆರ್ ಪಾರ್ಥಸಾರಥಿರವರ ಮೇಲೆ ನಂಬಿಕೆ ದ್ರೋಹದ ಆಪಾದನೆ ಮೊಕದ್ದಮೆಯಲ್ಲಿ ಅವರನ್ನು ಖುಲಾಸೆಮಾಡಿ ಬೊಂಬಾಯಿಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು ಕೊಟ್ಟಿದ್ದ ತೀರ್ಪನ್ನು ಬೊಂಬಾಯಿ ಹೈಕೋರ್ಟಿನವರು ತಳ್ಳಿಹಾಕಿ ಪುನಃ ವಿಚಾರಣೆ ನಡೆಯಬೇಕೆಂದು ತೀರ್ಪಿತ್ತಿದ್ದಾರೆ.

ಸಿಗ್ಮಾ ಕಾರ್ಪೊರೇಷನ್ ಎಂಬ ಕಂಪೆನಿಯನ್ನು ಪ್ರತಿವಾದಿಗಳು ಸ್ಥಾಪಿಸಿ, ನಿವೃತ್ತ ರೈಲ್ವೆ ನೌಕರರಾದ ಶ್ರೀ ಎನ್. ಪಾಳ್ಯಂರವರಿಂದ ೯೫೦೦ ರೂ. ಠೇವಣಿ ಇಡುವಂತೆ ಪ್ರೇರೇಪಿಸಿ, ನಂತರ ಆ ಕಂಪೆನಿಯನ್ನು ರಿಜಿಸ್ಟ್ರಾರರು ರದ್ದುಮಾಡಿದಾಗ,ಆ ಹಣವನ್ನು ಶ್ರೀ ಪಾಳ್ಯಂರವರಿಗೆ ವಾಪಸು ಕೊಡಲಿಲ್ಲವೆಂದೂ. ಆಪಾದನೆ ಹೊರಿಸಲಾಗಿತ್ತು. ಅರ್ಜಿದಾರರು ಮತ್ತು ಪ್ರತಿವಾದಿಗಳ ಸಮ್ಮತಿಯೊಡನೆ ವಿಷಯವನ್ನು ಪಂಚಾಯಿತಿಗೆ ಒಪ್ಪಿಸಿ, ಮೊಕದ್ದಮೆಯನ್ನು ವಜಾಮಾಡಲಾಗಿತ್ತು. ಪಂಚಾಯಿತಿಯು ಕರಾರಿನ ಪ್ರಕಾರ ೨ ತಿಂಗಳಿನಲ್ಲಿ ಮುಕ್ತಾಯ ವಾಗದಿದ್ದುದರಿಂದ ಅರ್ಜಿದಾರರು ಅವಧಿಯನ್ನು ವಿಸ್ತರಿಸಬೇಕೆಂದು ಕೋರಿದ್ದ ಅರ್ಜಿಯನ್ನು ತಳ್ಳಿಹಾಕಿದ್ದರ ಮೇಲೆ ಅರ್ಜಿದಾರರು ಹೈಕೋರ್ಟಿನಲ್ಲಿ ಅಪೀಲು ಹೂಡಿದ್ದರು.

ಭೂದಾನ ಯಜ್ಞಕ್ಕೆ ೨೯ಲಕ್ಷ ಎಕರೆ ಸಂಗ್ರಹ

ಭಾರತದಲ್ಲಿ ಭೂದಾನ ಯಜ್ಞ ಚಳುವಳಿಯಲ್ಲಿ ಕಳೆದ ತಿಂಗಳು ೧೦ ನೇ ತಾರೀಖಿನವರೆಗೆ ಒಟ್ಟು ೨೯,೦೭,೦೨೪ ಎಕರೆ ಜಮಿನು ಸಂಗ್ರಹವಾಗಿದೆಯೆಂದು ತಿಳಿಸಲಾಗಿದೆ. ಬಿಹಾರ್ ಪ್ರಾಂತ್ಯದಲ್ಲಿ ೧೮ ಲಕ್ಷ ಸಂಗ್ರಹವಾಗಿ, ಪ್ರಥಮ ಸ್ಥಾನವನ್ನು ಪಡೆದಿದೆ. ಉತ್ತರ ಪ್ರದೇಶ, ವಿಂಧ್ಯ ಪ್ರದೇಶ, ರಾಜಸ್ತಾನ ಮತ್ತು ಹೈದರಾಬಾದ್‌ಗಳಲ್ಲಿ ೭೯೫೧ ಜಮೀನಿಲ್ಲದ ಸಂಸಾರಗಳಿಗೆ ೪೦,೫೪೫ ಎಕರೆಗಳನ್ನು ಹಂಚಲಾಗಿದೆ.

ಜೀವವಿಮೆ ಏಜೆಂಟರ ಸಮ್ಮೇಳನ

ಬೆಂಗಳೂರು ೪

ಮೈಸೂರು ಸರ್ಕಾರದ ಜೀವವಿಮಾ ಸಂಸ್ಥೆಯ ಏಜೆಂಟರುಗಳ ಸಮ್ಮೇಳನವೊಂದು ಈ ಮಾಹೆಯ ಅಂತ್ಯದಲ್ಲಿ ಬೆಂಗಳೂರಿನಲ್ಲಿ ನಡೆಯುತ್ತದೆ.

ಕೋಲಾರ ಆಂಧ್ರಕ್ಕೆ ಸೇರುವ ಶುಭ ಸೂಚನೆ!

ಕೋಲಾರ ಜಿಲ್ಲೆಯನ್ನು ಆಂಧ್ರಕ್ಕೆ ಸೇರಿಸಬೇಕೆಂದು ಜನಗಣತಿ ರಿಜಿಸ್ಟ್ರಾರ್ ರವರ ಅಭಿಪ್ರಾಯವಾಗಿದೆ. ಇದು ಶುಭ ಸೂಚನೆಯೇ ಸರಿ! ಕೋಲಾರ ಆಂಧ್ರಕ್ಕೆ ಸೇರಿದ ಮೇಲೆ ಚಿನ್ನದಗಣಿ, ಬೆಂಗಳೂರು ಸಿವಿಲ್ ಪ್ರದೇಶ, ಅರಳೇಪೇಟೆ ಮತ್ತು ಮಲ್ಲೇಶ್ವರದ ಕೂಲಿಗಾರರ ಕಾಲೊನಿಗಳು ತಮಿಳು ನಾಡಿಗೆ ಸೇರಲೇ ಬೇಕಾಗುತ್ತದೆ. ಅದರಂತೆಯೇ ಬೆಂಗಳೂರುನಗರದ ದೊಡ್ಡಪೇಟೆ, ನಗರ್ತರಪೇಟೆ, ವಿಶ್ವೇಶ್ವರಪುರ ಮತ್ತು ಚಿತ್ರದುರ್ಗ ಜಿಲ್ಲೆಯ ಕೆಲವು ತಾಲ್ಲೂಕುಗಳು ಕೋಲಾರದ ಜೊತೆಯಲ್ಲಿ ಆಂಧ್ರಕ್ಕೆ ಸೇರಲೇಬೇಕು. ಈ ಸಲಹೆಯನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು, ಕೇಂದ್ರದ ಉತ್ಪಾದನಾ ಮಂತ್ರಿಗಳಾದ ಶ್ರೀ ಕೆ. ಸಿ. ರೆಡ್ಡಿಯವರು ಮತ್ತು ಉಪಆಹಾರ ಮಂತ್ರಿಗಳಾದ ಶ್ರೀ ಎಂ. ವಿ. ಕೃಷ್ಣಪ್ಪನವರು ಕೇಂದ್ರ ಸರ್ಕಾರದ ಮುಂದಿಟ್ಟು, ಅದು ಕೂಡಲೇ ಕಾರ್ಯಗತವಾಗುವಂತೆ ಮಾಡುವರೆಂದು ನಂಬಿರುತ್ತೇನೆ

-ಎಂ ಆರ್. ಸಿ. ಬಸಪ್ಪ.

ಆಂಧ್ರದಲ್ಲಿ ಕಡ್ಡಾಯ ಅಕ್ಕಿ ಸಂಗ್ರಹಣೆ

ಆಂಧ್ರ ಪ್ರಾಂತ್ಯದಲ್ಲಿ ಈಗಿನ ಸುಗ್ಗಿಯಲ್ಲಿ ಹೆಚ್ಚಿಗೆ ಬತ್ತವನ್ನು ಬೆಳೆಯುವವರು ಸರಕಾರಕ್ಕೆ ತಮ್ಮಿಷ್ಟಬಂದಷ್ಟು ಮಾರಬಹುದು ಎಂದು ಹೊಸ ಆಜ್ಞೆಯನ್ನು ಹೊರಡಿಸಲಾಗಿತ್ತು. ಆದರೆ ಈ ಆಜ್ಞೆಯು ಅಷ್ಟು ಫಲಕಾರಿಯಾಗದೆ, ಸರ್ಕಾರವು ನಿರೀಕ್ಷಿಸಿದ್ದಷ್ಟು ಅಕ್ಕಿ ಸಂಗ್ರಹಣೆಯಾಗದಿರುವುದರಿಂದ ಕಡ್ಡಾಯವಾಗಿ ಅಕ್ಕಿಯನ್ನು ಸಂಗ್ರಹಿಸಲು ನಿರ್ಧರಿಸಿ, ಸರ್ಕಾರ ಹೊಸ ಆಜ್ಞೆಯನ್ನು ಹೊರಡಿಸಿದೆ.

ಈ ನೂತನ ಆಜ್ಞೆಯ ಪ್ರಕಾರ ೧೦ ಮತ್ತು ಹೆಚ್ಚು ಎಕರೆ ಜಮೀನು ಇರುವವರು ಎಕರೆಯೊಂದಕ್ಕೆ ೪ಮಣ ಅಕ್ಕಿಯನ್ನು ಕಡ್ಡಾಯವಾಗಿ ಸರ್ಕಾರವು ನಿರ್ಧರಿಸಿರುವ ದರಕ್ಕೆ ಕೊಡಲೇಬೇಕಾಗಿದೆ.

ಮದ್ರಾಸ್ ಪ್ರಾಂತ್ಯಕ್ಕೆ ಆಂಧ್ರವು ೨ ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ಕೊಡಲು ಒಪ್ಪಿದೆ. ಈರೀತಿಯಾಗಿ ಕಡ್ಡಾಯವಾಗಿ ಅಕ್ಕಿ ಸಂಗ್ರಹಣ ಕಾರ್ಯ ನಡೆಯದಿದ್ದರೆ ಮದ್ರಾಸಿಗೆ ಅಕ್ಕಿ ಸರಬರಾಜಿಗೆ ತೊಂದರೆಯಾಗುತ್ತದೆಯೆಂದು ಭಾವಿಸಲಾಗಿದೆ.

ಭೂ ಸುಧಾರಣೆಗಾಗಿ ರಾಜ್ಯಾಂಗ ತಿದ್ದುಪಡಿ

ದೇಶಾದ್ಯಂತ ಭೂ ಸುಧಾರಣೆಯನ್ನು ಜಾರಿಗೆ ತರುವ ವಿಷಯದಲ್ಲಿ ರಾಜ್ಯಾಂಗವನ್ನು ತಿದ್ದುಪಡಿ ಮಾಡಲು ಹಲವಾರು ಪ್ರಾಂತ್ಯಗಳು ಇತ್ತಿರುವ ಸಲಹೆಯನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಒಪ್ಪಿರುವುದಾಗಿ ಬೊಂಬಾಯಿಯ ರೆವಿನ್ಯೂಸಚಿವರಾದ ಶ್ರೀ ಹೀರೆಯವರು ಹೇಳಿದ್ದಾರೆ.

ಸರ್ಕಾರಿ ಸುದ್ದಿ

ಬೆಂಗಳೂರು ೪

ಡಾ॥ ಶ್ರೀಮತಿ ಶಂಕರಂಬಾಳ್‌ರನ್ನು ವಾಣಿವಿಲಾಸ ಆಸ್ಪತ್ರೆಯ ಸೂಪರಿಂಟೆಂಡರಾಗಿ ನೇಮಿಸಲಾಗಿದೆ.

○ ನಿಮ್ನವರ್ಗದವರು ಎತ್ತು, ಗಾಡಿ,ವ್ಯವಸಾಯ ಉಪಕರಣ, ಗೊಬ್ಬರ, ಬೀಜ ಮುಂತಾದುವನ್ನು ಕೊಳ್ಳಲು ಮತ್ತು ಗೃಹ ಕೈಗಾರಿಕೆಗಳನ್ನು ಸ್ಥಾಪಿಸಲು ಸರ್ಕಾರವು ಬಡ್ಡಿಯಿಲ್ಲದ ೫೦ ರೂಗಳಿಂದ ೫೦೦ ರೂಗಳವರೆಗೆ ಸಾಲವನ್ನು ಕೊಡಲು ವ್ಯವಸ್ಥೆ ಮಾಡಿದೆ.

ಗೂಡ್ಸ್‌ರೈಲು ಕಂಬಿತಪ್ಪಿತು

ಮೈಸೂರು ೪

ಬೆಂಗಳೂರಿನಿಂದ ಅರಸೀಕೆರೆಗೆ ಹೊರಟಿದ್ದ ಗೂಡ್ಸ್‌ಗಾಡಿಯೊಂದು ಮೊನ್ನೆ ರಾತ್ರಿ ೧ ಗಂಟೆಯಲ್ಲಿ ಗುಬ್ಬಿ-ತುಮಕೂರುಗಳ ನಡುವೆ ಅಪಘಾತಕ್ಕೀಡಾಗಿ ಕಂಬಿ ತಪ್ಪಿದಾಗ ೧೪ ವ್ಯಾಗನ್‌ಗಳು ಉರುಳಿ ಬಿದ್ದುವೆಂದು ವರದಿಯಾಗಿದೆ. ಇದರಿಂದ ರೈಲು ಮಾರ್ಗಕ್ಕೆ ಜಖಂ ಆಗಿರುವುದೆಂದೂ, ಆದ್ದರಿಂದ ಪೂನಾ ಹರಿಹರಗಳ ಕಡೆಗೆ ಹೋಗುವಗಾಡಿಗಳನ್ನು ಮೈಸೂರುಮೂಲಕ ಕಳುಹಿಸಲಾಗಿದೆಯೆಂದೂ ತಿಳಿದುಬಂದಿದೆ. ಯಾರಿಗೂ ಸಾವುನೋವುಗಳುಂಟಾಗಿಲ್ಲವೆಂದು ಗೊತ್ತಾಗಿದೆ.

ಟಿ. ಬಿ. ನಂಜರಾಜೆ ಅರಸಿನವರ ನಿಧನ

ಮೈಸೂರು ೪

ಮೈಸೂರು ಜಿಲ್ಲಾಬೋರ್ಡು ಮುಖ್ಯಾಧಿಕಾರಿಗಳಾದ ಶ್ರೀ ಟಿ. ಬಿ. ನಂಜರಾಜೆ ಅರಸಿನವರು ಮೊನ್ನೆ ಸಂಜೆ ಮೃತಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಶ್ರೀಯುತರು ದಿ|| ತುರುವೇಕೆರೆ ಬಸವರಾಜೆ ಅರಸಿನವರ ಮಕ್ಕಳು.

ಸಿಂಹಳಕ್ಕೆ ಭಾರತದ ಶುಭಾಶಯ

ಈದಿನ ಸಿಂಹಳದ ೬ನೇ ಸ್ವಾತಂತ್ರ್ಯೋತ್ಸವದ ಸಂಬಂಧದಲ್ಲಿ ಪ್ರಧಾನಿ ನೆಹರೂರವರು ಸಿಂಹಳ ಪ್ರಧಾನಿ ಸರ್ ಜಾನ್ ಕೊಟೇಲವಾಲಾರವರಿಗೆ ಭಾರತದ ಜನತೆಯ ಪರವಾಗಿ ಶುಭಾಶಯ ಸಂದೇಶವನ್ನು ಕಳುಹಿಸಿದ್ದಾರೆ.

ಮಂಗಳೂರು-ಹಾಸನ ರೈಲ್ವೆ

ಮಂಗಳೂರು ಮತ್ತು ಹಾಸನಗಳ ನಡುವೆ ಮೀಟರ್‌ಗೇಜ್ ರೈಲ್ವೆ ಹಾಕಲು ಕೇಂದ್ರ ರೈಲ್ವೆ ಬೋರ್ಡು ಅನುಮತಿ ನೀಡಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೩—೨—೧೯೫೪

ಪಲ್ಲ	ರೂ. ಅ	ರೂ. ಅ
ಕಡಲೇಕಾಯಿ	೧೮—೨	೨೬—೧೪
ಎಳ್ಳು	೬೪—೨	—
ಹರಳು	೩೨—	೩೬—೧೪
ಹುಚ್ಚೆಳ್ಳು	೩೮—೮	೪೨—
ಹೊಂಗೆಬೀಜ	೧೮—೧೪	೨೦—೪
ಹುಣಸೆಬೀಜ	೧೪—೧೪	—
ಹುರುಳಿ	೨೬—೮	೩೧—೨
ಹೆಸರು	೩೫—೪	೪೪—
ಅಲಸಂದೆ	೩೦—	೪೫—
ಅವರೆ	೩೦—೮	೩೩—೮
ಕಡಲೆ	೫೭—	೫೪—
ಉದ್ದು	—	—
ಕೊತ್ತಂಬರಿ	೨೬—	೨೮—೪
ತೊಗರಿ	೨೫—	೩೩—೪
ಹುಣಸೆಹಣ್ಣು	೫—೧೨	೧೧—೧೩
ಮೆಣಸಿನಕಾಯಿ	೨೧—೧೨	೩೩—೧೪
ಸೀಗೆಕಾಯಿ	೩—೧೫	೫—
ಬೆಲ್ಲ	—	—
ತೆಂಗಿನಕಾಯಿ	೧೯೦—	೩೨೮—

ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನ

ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನವು ಏಪ್ರೆಲ್ ೨೮ ನೇ ತಾರೀಖು ಕೊಲೊಂಬೋವಿನಲ್ಲಿ ನಡೆಯಲು ಎಲ್ಲಾ ಪ್ರಧಾನಿಗಳೂ ಒಪ್ಪಿರುವುದಾಗಿ ತಿಳಿಯಬರುತ್ತದೆ. ಈ ಸಮ್ಮೇಳನವು ಒಂದುವಾರ ಕಾಲ ನಡೆಯುತ್ತದೆ.

ಒಲಂಪಿಯಾ ★ 4-2-54 ರಿಂದ
ಅಮೋಘ ಪ್ರಾರಂಭ ದಿನ ೩ ಆಟಗಳು
ಪ್ರಣಯಪೂರಿತ ಅತ್ಯುನ್ನತ ಸಾಮಾಜಿಕ ಹಿಂದಿ ಚಿತ್ರ. ನಯಾಸಂಸಾರ್‌ದವರ:-
— ರಾಹಿ —
ಪಾತ್ರ:ನಳಿನಿಜಯವಂತ್, ಬಾಲ್‌ರಾಜ್ ಸಹಾನಿ, ದೇವಾನಂದ್ ಮತ್ತು ಡೇವಿಡ್.
ನಿರ್ದೇಶನ:- ಕೆ. ಎ. ಅಬ್ಬಾಸ್
ಬೆಳಗಿನ ಪ್ರದರ್ಶನ ○ ಅಂದಾಜ್ ○

ವಿದ್ಯಾಭ್ಯಾಸವು ರಾಜಕೀಯ ಪಕ್ಷದ ಆಡಳಿತದಲ್ಲಿ ಇರಕೂಡದು

ಡಾ|| ಎ. ಲಕ್ಷ್ಮಣಸ್ವಾಮಿ ಮೊದಲಿಯಾರ್‌ರ ಸಲಹೆ

ಪ್ರಜಾಪ್ರಭುತ್ವ ರೀತ್ಯಾ ರಚಿತವಾಗುವ ಸರ್ಕಾರವು ವಿದ್ಯಾಭ್ಯಾಸ ಕ್ರಮದಲ್ಲಿ ಸೂಕ್ತ ಸಲಹೆಗಳನ್ನು ಕೊಡಲು ಅಶಕ್ತವಾಗಿರುತ್ತದೆ ಎಂಬುದಾಗಿ ಮದ್ರಾಸ್ ವಿಶ್ವವಿದ್ಯಾನಿಲಯದ ಉಪಸ್ಥಾನಪತಿ ಡಾ|| ಲಕ್ಷ್ಮಣಸ್ವಾಮಿ ಮೊದಲಿಯಾರ್‌ರವರು ಹೇಳಿದ್ದಾರೆ.

ವಿದ್ಯಾಭ್ಯಾಸದಲ್ಲಿ ರಾಜಕೀಯವು ಸ್ವಲ್ಪ ಪಾತ್ರವನ್ನು ವಹಿಸುತ್ತದೆ. ಆದರೆ ವ್ಯಕ್ತಿಗಳಿಂದ ರೂಪಿತವಾಗುವ ಕೆಲವು ಯೋಜನೆಗಳು ವಿದ್ಯಾಭ್ಯಾಸಕ್ಕೆ ಅತ್ಯಂತ ಕುಂದುಕವನ್ನು ಉಂಟುಮಾಡಿ ಜನರ ಮುಂದಿನ ಭವಿಷ್ಯವನ್ನೇ ಹಾಳುಮಾಡುತ್ತದೆ. ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಯೋಜನೆಗಳನ್ನೆಲ್ಲಾ ಆಡಳಿತದಲ್ಲಿರುವ ರಾಜಕೀಯ ಪಕ್ಷವು ತಯಾರಿಸಲು ಸಾಧ್ಯವೇ ಇಲ್ಲ. ಪರದೇಶಗಳಲ್ಲಿ ಈ ಕೆಲಸಗಳನ್ನು ಪ್ರತ್ಯೇಕವಾಗಿ ರಚಿತವಾಗುವ ಕಮೀಷನ್‌ಗಳು ಮಾಡುತ್ತವೆ. ಆದರೆ ಭಾರತದಲ್ಲಿ ಈರೀತಿಯಿಲ್ಲದಿರುವುದು ವಿಷಾದಕರ.

ವಿದ್ಯಾಭ್ಯಾಸವು ಪರಿಣಿತರ ಸಲಹೆಯ ಮೇಲೆ ನಡೆಯಬೇಕೇ ವಿನಹ ಅಧಿಕಾರದಲ್ಲಿರುವ ಪಕ್ಷಗಳ ಅವಶ್ಯಕತೆಯನ್ನು ಅನುಸರಿಸಬಾರದು. ಈಗ ಭಾರತಾದ್ಯಂತ ವಿದ್ಯಾಸುಧಾರಣೆಯನ್ನು ಜಾರಿಗೆ ತಂದು ಈಗಿರುವ ವಿದ್ಯಾಕ್ರಮವನ್ನು ಪೂರ್ಣವಾಗಿ ಮಾರ್ಪಡಿಸುವ ಕಾರ್ಯಕ್ರಮ ನಡೆಯುತ್ತಿದೆ. ಈ ಹೊಸ ಸುಧಾರಣೆ ಜಾರಿಗೆ ಬಂದರೆ ವಿದ್ಯಾರ್ಥಿಗಳಿಗೆ ದೇಶಕ್ಕೆ ತಕ್ಕಂತೆ ಅನೇಕ ರೀತಿಯ ಶಿಕ್ಷಣ ದೊರೆಯಲು ಅವಕಾಶ ಉಂಟಾಗುತ್ತದೆ—ಎಂದು ತಿಳಿಸಿದ್ದಾರೆ.

ಭಾಷೆಗಳ ವಿಚಾರವಾಗಿ ಅವರು ಪ್ರಸ್ತಾಪಿಸುತ್ತಾ ದೇಶದಲ್ಲಿ ಈಗ ಇದು ಒಂದು ದೊಡ್ಡ ಸಮಸ್ಯೆಯಾಗಿದೆ. ಜನರು ೨-೩ ಭಾಷೆಗಳನ್ನು ಕಲಿಯಲು ಹೆದರುತ್ತಿದ್ದಾರೆ. ವಿದೇಶಗಳಲ್ಲಿ ವಿದ್ಯಾರ್ಥಿಗಳು ೨-೩-೪ ಭಾಷೆಗಳನ್ನು ಕಲಿಯುತ್ತಿದ್ದಾರೆ. ಹೆಚ್ಚು ಭಾಷೆಗಳನ್ನು ಕಲಿತಷ್ಟೂ ಪ್ರಯೋಜನ ಹೆಚ್ಚುತ್ತದೆ. ಯಾವ ಭಾಷೆಯನ್ನು ಆದರೂ ವಿಶಾಲ ದೃಷ್ಟಿಯಿಂದ ನೋಡಬೇಕೆಂದು ಹೇಳಿದ್ದಾರೆ.

ಆಫ್ಘನ್ ಸಾಂಸ್ಕೃತಿಕ ನಿಯೋಗ

ಭಾರತಕ್ಕೆ ಆಗಮಿಸಿರುವ ಆಫ್ಘನ್ ನಿಯೋಗದವರು ಬೆಂಗಳೂರಿಗೆ ಇದೇ ೨೨ ನೇ ತಾರೀಖು ಆಗಮಿಸಿ, ಸಂಸ್ಥಾನದಲ್ಲಿ ೩ ದಿನಗಳ ಪ್ರವಾಸ ಮಾಡುವರು.

● ಕಳೆದವರ್ಷ ಭಾರತದ ರೈಲುಗಳಲ್ಲಿ ೩ ನೇ ತರಗತಿಗಾಡಿಯಲ್ಲಿ ಪ್ರತಿದಿನ ೩೧ ಲಕ್ಷ ಜನರು ಪ್ರಯಾಣ ಮಾಡಿದರೆಂದು ತಿಳಿಸಲಾಗಿದೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್ ಮೈಸೂರು.

C2. P.R. 184-133-53-54

City Municipal Office,
Mysore Dated 2-2-54

NOTIFICATION

Notice is hereby given to the inhabitants of the Municipality of Mysore that the Municipal Council desire to amend the Octroi Bye-laws item No. 23 (d) of schedule of articles subject to levy of octroi as follows :-

Add after the words 'the like' at the end "and also suffron and musk".

Any inhabitant of the Municipality objecting to the proposed amendment, may within one month from the date of this notice prefer his objection in writing to the Municipal Council.

N. LAKSHMAN RAU,
Municipal Commissioner

★ ರಾಜಕಮಲ್, ಮೈಸೂರು ★
.... ಅಮೋಘವಾದ 4 ನೇ ವಾರ ....

—[ತಮಿಳು] ಪ್ರತಿದಿನ ಮೂರು ಪ್ರದರ್ಶನಗಳು—

ಪೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೬೨

೬-೨-೧೯೫೪ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕುಂಭಮೇಳದ ದುರಂತದಲ್ಲಿ ೩ ಸಾವಿರ ಜನರಿನ್ನೂಪತ್ತೆಯಿಲ್ಲ

ನೂರಾರು ಮಕ್ಕಳು ಅನಾಥರಾಗಿವೆ

ಅಲಹಾಬಾದಿನ ಬಳಿ ನಡೆದ ಕುಂಭಮೇಳ ದುರಂತದಲ್ಲಿ ಅಧಿಕೃತವಾಗಿ ಮೇಳದ ಅಧಿಕಾರಿಗಳ ವಶಕ್ಕೆ ದೊರೆತ ೩೧೬ ಶವಗಳ ಪೈಕಿ ೧೭೦ ಶವಗಳನ್ನು ಅವರ ಸಂಬಂಧಿಕರಿಗೆ ಕೊಟ್ಟು ಉಳಿದುವನ್ನೆಲ್ಲಾ ಗಂಗಾತೀರದಲ್ಲಿ ಸುಡಲಾಯಿತು. ಈ ಭೀಕರ ದೃಶ್ಯವನ್ನು ಅಲ್ಲಿ ಸೇರಿದ್ದ ಇನ್ನೂ ಲಕ್ಷಾಂತರ ಜನರು ನೋಡಿ ಸಹಿಸಲಾರದಷ್ಟು ದುಃಖವನ್ನು ಪ್ರದರ್ಶಿಸಿದರು.

ಕುಂಭಮೇಳದ ಪ್ರದೇಶದಲ್ಲಿರುವ ಪೋಲೀಸ್, ಟೆಲಿಫೋನ್ ಮತ್ತು ಟೆಲಿಗ್ರಾಫ್ ಇಲಾಖೆಗಳಿಗೆ ಜನರು ಸಂಬಂಧಿಕರ ಬಗ್ಗೆ ವಿವರಗಳನ್ನು ಕೇಳುತ್ತಾ ಅಸಂಖ್ಯಾತ ವಿಚಾರಣೆಗಳು ಬರುತ್ತಿವೆ. ಅವುಗಳಿಗೆ ಜವಾಬು ಕೊಡುವುದು ಸಹಾ ಕಷ್ಟವಾಗಿದೆ ಅಂದಿನ ದಿನ ಸುಮಾರು ೨೦೦೦೦ ಜನರು ಪತ್ತೆಯಿಲ್ಲದೆಇದ್ದರು. ಈಗ ಇನ್ನೂ ೩೦೦೦ ಜನರು ಪತ್ತೆಯಿಲ್ಲವೆಂದೂ ಹೇಳಲಾಗಿದೆ.

ದೃಶ್ಯಗಳಲ್ಲೆಲ್ಲಾ ಅತಿ ಭೀಕರವಾದುದು ಅನಾಥರಾದ ಮಕ್ಕಳ ಗೋಳು. ತಮ್ಮ ತಂದೆತಾಯಿಗಳನ್ನು ಕಳೆದುಕೊಂಡಿರುವ ೩ ತಿಂಗಳ ಮಕ್ಕಳಿಂದ ೧೦ ವರ್ಷದ ವಯಸ್ಸಿನ ಮಕ್ಕಳು ಈಗ ಮಹಿಳಾ ಸ್ವಯಂಸೇವಕರ ವಶದಲ್ಲಿವೆ. ಅವುಗಳ ಹೆಸರು ಮತ್ತು ಇತರ ವಿವರಗಳನ್ನು ತಿಳಿದುಕೊಳ್ಳುವುದೇ ದುಸ್ತರವಾಗಿದೆ. ಅಲ್ಲದೆ ಅವುಗಳನ್ನು ಏನುಮಾಡಬೇಕೆಂಬುದು ಒಂದೇ ಪ್ರಶ್ನೆ ಆಗಿದೆ. ಈ ಮಕ್ಕಳ ವಾರಸುದಾರರಾದರೂ ಬಂದಿದ್ದರೆ ಅವುಗಳಗಾಗಿಯೇ ಒಂದು ಅನಾಥಾಲಯವನ್ನು ಏರ್ಪಡಿಸಿ ಅವುಗಳ ಬೆಳವಣಿಗೆಗೆ ಸರ್ಕಾರ ವ್ಯವಸ್ಥೆ ಮಾಡಬೇಕಾಗುತ್ತದೆ.

ಸತ್ತವರ ಮತ್ತು ಗಾಯಗೊಂಡವರ ಬಗ್ಗೆ ವಿವರಗಳನ್ನು ಅಖಿಲಭಾರತ ರೇಡಿಯೋವು ನಿನ್ನೆಯದಿನ ಬೆಳಗ್ಗೆ ಮತ್ತು ಸಂಜೆ ಎಲ್ಲಾ ವಿವರಗಳೊಡನೆ ಪ್ರಸಾರ ಮಾಡಿತು.

ಈಗ ಕುಂಭಮೇಳ ಪ್ರದೇಶವು ಶಾಂತವಾಗಿ, ಜನಸ್ತೋಮವು ಸ್ವಲ್ಪವಿದ್ದರೂ ಉತ್ಸಾಹರಹಿತ ಪ್ರದೇಶವಾಗಿ ಕಾಣಬರುತ್ತಿದೆಯೆಂದು ಹೇಳಲಾಗಿದೆ.

ಪ್ರಚಾರ ಕಾರ್ಯಕ್ಕೆ ಸಾಧುಗಳು

ಭಾರತದಲ್ಲಿರುವ ಸಾವಿರಾರು ಸಾಧುಗಳ ಸೇವೆಯನ್ನು ಪಂಚವಾರ್ಷಿಕ ಯೋಜನೆಯ ಪ್ರಚಾರಕ್ಕೆ ಉಪಯೋಗಿಸಿಕೊಳ್ಳಲು ಕೇಂದ್ರ ಸರ್ಕಾರ ಆಲೋಚಿಸುತ್ತಿದೆ.

ಮುನಿಸಿಪಲ್ ಮತ್ತು ಜಿಲ್ಲಾಬೋರ್ಡು ಹೈಸ್ಕೂಲುಗಳು

ಸರ್ಕಾರ ವಹಿಸಿಕೊಳ್ಳಲು ಸಾಧ್ಯವಿಲ್ಲ

ಮೈಸೂರು ಸಂಸ್ಥಾನದಲ್ಲಿರುವ ಮುನಿಸಿಪಲ್ ಹೈಸ್ಕೂಲುಗಳನ್ನು ಸರ್ಕಾರ ವಹಿಸಿಕೊಳ್ಳಬೇಕಾದರೆ ೧೮ ಲಕ್ಷ ರೂಪಾಯಿ ಖರ್ಚಾಗುವುದು. ಈಗಾಗಲೇ ವಿದ್ಯಾಭ್ಯಾಸಕ್ಕಾಗಿ ಸರ್ಕಾರ ೩ ಕೋಟಿ ರೂ. ಖರ್ಚು ಮಾಡುತ್ತಿದೆ. ಈಗ ಪ್ರೈಮರಿ ಶಿಕ್ಷಣವನ್ನು ಒದಗಿಸುವುದಕ್ಕೆ ಮೊದಲು ವ್ಯವಸ್ಥೆ ಮಾಡಬೇಕು. ಅದು ಸರ್ಕಾರದ ಹೊಣೆ ಆಗಿದೆ. ಆದ್ದರಿಂದ ಮುನಿಸಿಪಲ್ ಮತ್ತು ಜಿಲ್ಲಾ ಬೋರ್ಡು ಹೈಸ್ಕೂಲುಗಳನ್ನು ಸರ್ಕಾರವು ವಹಿಸಿಕೊಳ್ಳಲು ಆರ್ಥಿಕ ದೃಷ್ಟಿಯಿಂದ ಸಾಧ್ಯವಿಲ್ಲ. ಆದರೆ ಎಲ್ಲ ಪೌರಸಭೆಗಳವರೂ ಶಿಕ್ಷಣ ತೆರಿಗೆ ವಿಧಿಸಲು ಒಪ್ಪಿದರೆ ಮಾತ್ರ ಈ ಪ್ರಶ್ನೆಯನ್ನು ಪರಿಶೀಲಿಸಲಾವುದು-ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹೇಳಿದ್ದಾರೆ.

ನೆಹರೂರವರ ಗಾಂಧಿ ಟೋಪಿ

ಬೊಂಬಾಯಿ ಪ್ರಾಂತ್ಯದಲ್ಲಿರುವ ಕೋಳಿವಾಡ ಎಂಬ ಗ್ರಾಮದ ಹಲವು ಬೆಸ್ತರು ಪ್ರಜಾರಾಜ್ಯ ದಿನಾಚರಣೆಯನ್ನು ಭಾಗವಹಿಸಲು ದೆಹಲಿಗೆ ತೆರಳಿದ್ದಾಗ ಅಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ನೆಹರುವರು ಒಬ್ಬ ಬೆಸ್ತನ 'ಕೋಳಿ ಟೋಪಿ' ಯನ್ನು ತೆಗೆದುಕೊಂಡು ಆತನಿಗೆ ತಮ್ಮ ತಲೆಯಮೇಲಿದ್ದ ಗಾಂಧಿ ಟೋಪಿಯನ್ನು ಹಾಕಿದರು.

ಇದು ತಮ್ಮ ಜನಾಂಗ ಮತ್ತು ಗ್ರಾಮಕ್ಕೆ ದೊರೆತ ಬಹುಮಾನವೆಂದು ಆ ಜನರೆಲ್ಲರೂ ಆ ಟೋಪಿಯನ್ನು ಒಂದು ಗಾಜಿನ ಪೆಟ್ಟಿಗೆಯಲ್ಲಿಟ್ಟು ತಮ್ಮ ಗ್ರಾಮದ ಮಧ್ಯಭಾಗದಲ್ಲಿ ಪ್ರದರ್ಶಿಸಿದ್ದಾರೆ.

ಕೇಂದ್ರ ಅರಣ್ಯ ಸಮಿತಿ

ಕೇಂದ್ರ ವ್ಯವಸಾಯ ಸಚಿವ ಡಾ|| ಪಂಜಾಬ್‌ರಾವ್ ದೇಶಮುಖ್‌ರವರ ಅಧ್ಯಕ್ಷತೆಯಲ್ಲಿ ಭಾರತ ಸರ್ಕಾರವು ಒಂದು ಕೇಂದ್ರ ಅರಣ್ಯ ಸಮಿತಿಯನ್ನು ರಚಿಸಿದೆ. ಮೈಸೂರು ಅರಣ್ಯ ಸಚಿವ ಡಾ|| ನಾಗನಗೌಡರು ಈ ಸಮಿತಿಯಲ್ಲಿ ಒಬ್ಬ ಸದಸ್ಯರು. ದೇಶದಲ್ಲಿ ಅರಣ್ಯಾಭಿವೃದ್ಧಿಗೆ ಹೊಸ ಕ್ರಮಗಳನ್ನು ಕಂಡುಹಿಡಿಯುವುದು ಈ ಸಮಿತಿಯ ಮುಖ್ಯ ಕೆಲಸವಾಗಿರುತ್ತದೆ.

ಮುಂದಿನ ಸಾಲಿನ ರೈಲ್ವೆ ಬಡ್ಜೆಟ್ ಆಶಾದಾಯಕವಾಗಿಲ್ಲ

ಆದರೂ ರೈಲ್ವೆ ದರಗಳಲ್ಲಿ ಏರಿಕೆಯ ಸಂಭವವಿಲ್ಲ

ಲೋಕಸಭೆಯಲ್ಲಿ ಇದೇ ೧೯ ನೇ ತಾರೀಖು ಕೇಂದ್ರ ರೈಲ್ವೆ ಸಚಿವ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ಮುಂದಿನ ಸಾಲಿನ ರೈಲ್ವೆ ಬಡ್ಜೆಟ್ಟನ್ನು ಮಂಡಿಸಲಿರುವರು.

ವ್ಯವಸಾಯದಿಂದ ಆರ್ಥಿಕ ಉತ್ಪನ್ನವು ಅಷ್ಟು ಸಮರ್ಪಕವಾಗಿಲ್ಲವಾಗಿ ರೈಲ್ವೆಯ ಉತ್ಪನ್ನವೂ ಹೆಚ್ಚುವ ಆಸೆಯೇನೂ ಮುಂದಕ್ಕೆಕಾಣುವುದಿಲ್ಲವೆಂದುಹೇಳಲಾಗುತ್ತಿದೆ. ಇದರ ಪರಿಣಾಮವಾಗಿ ರೈಲ್ವೆ ಪ್ರಯಾಣಿಕರಿಗೆ ವಿಶೇಷರೀತಿಯ ಸೌಲಭ್ಯಗಳು ಮುಂದಿನ ಸಾಲಿನಲ್ಲಿ ದೊರೆಯುವುದು ಕಷ್ಟವಾಗುತ್ತದೆ. ಆದಾಗ್ಯೂ ರೈಲ್ವೆ ದರಗಳು ಏನೂ ಬದಲಾವಣೆಯಾಗುವುದಿಲ್ಲವೆಂದೂ ಈಗಿರುವ ದರಗಳೇ ಮುಂದುವರಿಸುವ ಸಂಭವವಿದೆಯೆಂದೂ ಹೇಳಲಾಗುತ್ತಿದೆ.

ಒಟ್ಟಿನಲ್ಲಿ ರೈಲ್ವೆ ಬಡ್ಜೆಟ್ಟು ಅಷ್ಟು ಆಶಾದಾಯಕವಾಗಿಲ್ಲವೆಂದು ತಿಳಿಯಬರುತ್ತದೆ.

ನೂತನ ಹೊಟೇಲು ತೆರೆಯಲು ನಿರ್ಬಂಧ ಕೂಡದು

ಪುರಸಭೆಯಲ್ಲಿ ನಿರ್ಣಯ

ಮೈಸೂರು ೬

ನಗರದ ಪುರಸಭೆಯ ಮುಂದುವರಿದ ಅಧಿವೇಶನವು ನಿನ್ನೆ ಸಂಜೆ ಶ್ರೀ ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತ್ತು.

ಪ್ರಾರಂಭದಲ್ಲಿ ಶ್ರೀ ಬಿ. ಕೆ. ರಾಮಕೃಷ್ಣಯ್ಯನವರು ಕ್ರಿಯಾಲೋಪವೆತ್ತಿ, ಕಾರ್ಯಕಲಾಪಗಳಲ್ಲಿ ಮೊದಲು ಪ್ರಶ್ನೆಗಳನ್ನು ತೆಗೆದುಕೊಳ್ಳಬೇಕೆಂದು ತಿಳಿಸಿದರು. ಶ್ರೀಗಳಾದ ಮೀರ್‌ನೂರ್‌ಹುಸೇನ್ ಮತ್ತು ಶ್ರೀಕಂಠಶರ್ಮರವರು ಅದನ್ನು ಅನುಮೋದಿಸಿ ಕಾನೂನು ಮತ್ತು ಪಾರ್ಲಿಮೆಂಟರಿ ಪದ್ಧತಿ ಪ್ರಕಾರ ಪ್ರಶ್ನೆಗಳನ್ನು ಮೊದಲು ತೆಗೆದುಕೊಳ್ಳಬೇಕೆಂದು ತಿಳಿಸಿದರು. ಹಿಂದಿನಿಂದಲೂ ಅಜೆಂಡಾದಲ್ಲಿ ನಮೂದಿಸಿರುವ ಕಾರ್ಯಕ್ರಮದಂತೆ ನಡೆಸುತ್ತಿದ್ದರೂ, ಸದಸ್ಯರು ಈಗ ಎತ್ತಿರುವ ವಿಷಯವು ಮುಖ್ಯವಾದ್ದರಿಂದ ತಮ್ಮ ತೀರ್ಪನ್ನು ಮುಂದೆ ಕೊಡುವುದಾಗಿ ಅಧ್ಯಕ್ಷರು ತಿಳಿಸಿದರು.

ಆರೋಗ್ಯ ವರದಿಯನ್ನು ಅಂಗೀಕರಿಸುವ ವಿಷಯ ಬಂದಾಗ ಡಾ|| ಬಿ. ಜಿ. ದಾಸ್, ಅಜೀಜ್‌ಸೇಟ್ ಮುಂತಾದವರು ನಗರದಲ್ಲಿ ಲೈಸೆನ್ಸ್ ಇಲ್ಲದೆ ನೂರಾರು ಹೊಟೇಲು ಇವೆಯೆಂದೂ, ಅವುಗಳಿಂದ ಜನರ ಆರೋಗ್ಯ ಹಾಳಾಗುತ್ತಿದೆಯೆಂದೂ ಅಧ್ಯಕ್ಷರ ಗಮನಕ್ಕೆ ತಂದರು. ಈ ವಿಚಾರದಲ್ಲಿ ಪೌರಸಭೆಯ ಅಧಿಕಾರಿಗಳು ಸೂಕ್ತಕ್ರಮ ಕೈಗೊಂಡು, ಅನೇಕ ಮೊಕದ್ದಮೆ ಹೂಡಲಾಗುತ್ತಿದೆಯೆಂದು ಕಮೀಷನರು ಉತ್ತರವಿತ್ತರು.

ಸಂಸ್ಥಾನದಲ್ಲಿ ಈಗ ಆಹಾರ ಕಂಟ್ರೋಲ್ ರದ್ದಾಗಿರುವುದರಿಂದ ಹೊಸ ಹೋಟೇಲುಗಳನ್ನು ತೆರೆಯಲು ಹಾಕಿರುವ ನಿರ್ಬಂಧಗಳನ್ನು ಸರ್ಕಾರದವರು ತೆಗೆದು ಹಾಕಬೇಕೆಂದು ಪ್ರಾರ್ಥಿಸುವ ನಿರ್ಣಯವನ್ನು ಅನುಮೋದಿಸಲಾಯಿತು.

ರಿಪಬ್ಲಿಕ್ ದಿನಾಚರಣೆಯ ಖರ್ಚಿಗಾಗಿ ೨೦೦ ರೂ. ಮಂಜೂರು ಮಾಡಲಾಯಿತು. ಈ ಸಂದರ್ಭದಲ್ಲಿ ಶ್ರೀಗಳಾದ ಮೀರ್ ನೂರ್ ಹುಸೇನ್ ಮತ್ತು ಎಂ. ಎನ್. ತಿಮ್ಮಯ್ಯನವರು ಮಾತನಾಡಿ, ರಿಪಬ್ಲಿಕ್ ದಿನಾಚರಣೆಯನ್ನು ಪುರಸಭೆಯ ಇತರ ಪಕ್ಷದವರ ಸಲಹೆ ಪಡೆಯದೆ ಕೇವಲ ಕಾಂಗ್ರೆಸ್ ಪಕ್ಷದ ಸಮಾರಂಭವನ್ನಾಗಿ ಮಾಡಿದುದು ವಿಷಾದಕರವೆಂದು ತಿಳಿಸಿದರು.

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣಗೌಡರಂತ ದೊಡ್ಡ ವ್ಯಕ್ತಿಗಳು ಅದರ ಅಧ್ಯಕ್ಷತೆ ವಹಿಸಿದ್ದರಿಂದ, ಈ ಸಮಾರಂಭದಲ್ಲಿ ಯಾರ ಭಿನ್ನಾಭಿಪ್ರಾಯ ಇಲ್ಲವೆಂದು ಭಾವಿಸಿದ್ದ ಕಾರಣ ಇತರ ಪಕ್ಷದವರ ಸಲಹೆಗಳನ್ನು ಪಡೆಯಬೇಕಾದ ಅವಶ್ಯಕತೆ ತಮಗೆ ಕಾಣಬರಲಿಲ್ಲವೆಂದು ಅಧ್ಯಕ್ಷರು ತಿಳಿಸಿದರು.

ಶಿಶುವಿಹಾರಕ್ಕೆ ನೆರವು

ಮೈಸೂರು ೬

ರಾಜಧಾನಿಯ ಸಿವಿಕ್ ಮತ್ತು ಸೋಷಿಯಲ್ ಪ್ರೋಗ್ರೆಸ್ ಸಂಸ್ಥೆಯ ಆಶ್ರಯದಲ್ಲಿ ಸೀತಾವಿಲಾಸ ಛತ್ರದಲ್ಲಿ ನಡೆಯುತ್ತಿರುವ ಶಿಶುವಿಹಾರಕ್ಕೆ ೧೦೦ ರೂ. ದ್ರವ್ಯ ಸಹಾಯ, ಮತ್ತು ಅಲ್ಲಿರುವ ಮಕ್ಕಳ ಸಂರಕ್ಷಣಾ ಕೇಂದ್ರಕ್ಕೆ ೨ ಬ್ಯಾರೆಲ್ ಹಾಲಿನ ಪುಡಿಯನ್ನು ಸಂಸ್ಥಾನದ ರೆಡ್ ಕ್ರಾಸ್ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಲಕ್ಷ್ಮಿ ಕೃಷ್ಣಪ್ಪನವರು ಕೊಟ್ಟಿದ್ದಾರೆ.

ಜಾನುವಾರು ಅಭಿವೃದ್ಧಿ ಕೇಂದ್ರಗಳು

ದೇಶದಲ್ಲಿ ಹಾಲಿನ ಉತ್ಪತ್ತಿ ಹೆಚ್ಚಾಗಲು ಮತ್ತು ಒಳ್ಳೆಯ ತಳಿಗಳನ್ನು ವ್ಯವಸ್ಥೆ ಮಾಡಲು ಪಂಚವಾರ್ಷಿಕ ಯೋಜನೆಯ ಪ್ರಕಾರ ಭಾರತ ಸರ್ಕಾರವು ದೇಶಾದ್ಯಂತ ೬೦೦ ಕೇಂದ್ರಗಳನ್ನು ಸ್ಥಾಪಿಸುವ ಕಾರ್ಯದ ಪೈಕಿ ಈಗಾಗಲೇ ೩೨೦ ಕೇಂದ್ರಗಳು ಸ್ಥಾಪಿತವಾಗಿವೆ. ಇವುಗಳಲ್ಲಿ ಉತ್ತಮತರದ ಹೋರಿಗಳನ್ನು ಇಡಲಾಗಿದೆ. ಈ ಕೇಂದ್ರಗಳು ಜಾನುವಾರುಗಳಿಗೆ ಬರುವ ರೋಗಗಳನ್ನು ತಡೆಗಟ್ಟುವಕಾರ್ಯದಲ್ಲಿಯೂ ತೊಡಗುತ್ತವೆ. ಎಲ್ಲಾ ಕೇಂದ್ರಗಳು ಸ್ಥಾಪಿತವಾದ ಕೆಲವು ವರ್ಷಗಳಲ್ಲಿಯೇ ದೇಶದಲ್ಲಿ ಜಾನುವಾರುಗಳು ಅಭಿವೃದ್ಧಿ ಗೊಂಡು ಸಂಪತ್ತು ಹೆಚ್ಚುತ್ತದೆ

ಈ ಕೇಂದ್ರಗಳ ಸ್ಥಾಪನೆ ಮತ್ತು ಇತರ ವೆಚ್ಚಗಳಲ್ಲಿ ಭಾರತಸರ್ಕಾರವು ಅರ್ಧಭಾಗವನ್ನು ವಹಿಸಿಕೊಳ್ಳುತ್ತದೆ. ಈ ಯೋಜನೆ ಫಲಪ್ರದವಾಗುವುದಕ್ಕಾಗಿ ಖಾಸಗಿ ಕೇಂದ್ರಗಳ ಸ್ಥಾಪನೆಗೂ ಸರ್ಕಾರವು ಪೂರ್ಣ ನೆರವು ಕೊಡುತ್ತದೆ ಇವುಗಳ ಪೂರ್ಣ ವೆಚ್ಚವನ್ನೆಲ್ಲಾ ಕೇಂದ್ರವೇ ವಹಿಸುತ್ತದೆ.

ಕಡಲೆಕಾಯಿ ಎಣ್ಣೆ ದಾಸ್ತಾನು ಕೂಡದು

ಕಡಲೆಕಾಯಿ ಎಣ್ಣೆ ದಾಸ್ತಾನನ್ನು ವರ್ತಕರು ಮಾಡಕೂಡದೆಂದು ಕೇಂದ್ರದ ಕೈಗಾರಿಕಾ ಸಚಿವರು ಎಚ್ಚರಿಸಿದ್ದಾರೆ. ಅಲ್ಲದೆ ಈ ಎಣ್ಣೆ ಬೆಲೆಯನ್ನು ಟನ್ ಒಂದಕ್ಕೆ ೧೦೦ ರೂಪಾಯಿಗಳಿಗೆ ಇಳಿಸಬೇಕು. ಹಾಗಿಲ್ಲದಿದ್ದರೆ ಈ ಎಣ್ಣೆಯ ರಫ್ತಿನಮೇಲೆ ನಿರ್ಬಂಧ ವಿಧಿಸಲಾಗುತ್ತದೆ ಎಂದೂ ಅವರು ತಿಳಿಸಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೫—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೨	೨೭—೨
ಎಳ್ಳು	೬೫—	೬೯—
ಹುರುಳಿ	೩೧—೪	೩೬—೮
ಹುಚ್ಚೆಳ್ಳು	೩೦—೨	೪೪—೨
ಹೊಂಗೆಬೀಜ	೧೫—೧೨	೨೦—
ಹುಣಸೆಬೀಜ	೧೪—೮	೧೪—೧೦
ಹುರುಳಿ	೨೫—	೩೦—೧೦
ಹೆಸರು	೩೫—೧೪	೪೦—೮
ಅಲಸಂದೆ	೨೯—	೪೫—೪
ಅವರೆ	—	—
ಕಡಲೆ	೪೯—೮	೫೩—೪
ಉದ್ದು	—	—
ಕೊತ್ತಂಬರಿ	೨೯—೨	೩೦—೧೪
ತೊಗರಿ	೨೦—೧೨	೨೮—
ಹುಣಸೆಹಣ್ಣು	೩—೮	೯—೧೪
ಮೆಣಸಿನಕಾಯಿ	೧೯—೧೯	೩೩—
ಸೀಗೆಕಾಯಿ	೪—	೫—೪
ಬೆಲ್ಲ	೨—೧೨	೫—
ತೆಂಗಿನಕಾಯಿ	೨೧೧—	೨೯೨—

★ ಕೇಂದ್ರಸರ್ಕಾರದ ಆದೇಶದಂತೆ ಎಲ್ಲಾ ಪ್ರಾಂತ್ಯ ಸರ್ಕಾರಗಳು ಭೂ ಹಿಡುವಳಿಯ ವಿಷಯದಲ್ಲಿ ಗಣತಿಯನ್ನು ತೆಗೆದುಕೊಳ್ಳುವ ಕಾರ್ಯವನ್ನು ಸದ್ಯದಲ್ಲಿಯೇ ಪ್ರಾರಂಭಿಸಲಿವೆ.

ಕರ್ನಾಟಕ ರಾಜ್ಯಕ್ಕೆ ಉಪವಾಸ-ಸತ್ಯಾಗ್ರಹ ಕೂಡದು

ಕರ್ನಾಟಕ ರಾಜ್ಯ ನಿರ್ಮಾಣಕ್ಕೆ ಯಾರೂ ಉಪವಾಸ, ಸತ್ಯಾಗ್ರಹ ಮತ್ತು ಉಗ್ರ ಭಾಷಣಗಳನ್ನು ಮಾಡಬಾರದೆಂದೂ ಕನ್ನಡಿಗರೆಲ್ಲರೂ ಏಕಮತ್ಯದಿಂದ ಸಂಸ್ಥಾನಗಳ ಪುನರ್ವ್ಯವಸ್ಥೆ ಕಮೀಷನ್ನಿನ ಮುಂದೆ ವಾದ ಸೂಚಿಸಬೇಕೆಂದೂ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಹುಬ್ಬಳ್ಳಿಯಲ್ಲಿ ನಿನ್ನೆ ಕರ್ನಾಟಕ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ತಿಳಿಸಿದ್ದಾರೆ.

ಕೊರಿಯಾದಲ್ಲಿರುವ ಭಾರತ ಸೈನ್ಯ ವಾಪಸ್ಸು

ಸ್ವದೇಶಕ್ಕೆ ಹಿಂತಿರುಗಿದ ಕೊರಿಯಾ ಯುದ್ಧ ಖೈದಿಗಳ ಮೇಲ್ವಿಚಾರಣೆ ನಡೆಸುತ್ತಲಿದ್ದ ಭಾರತಸೈನ್ಯದ ಮೊದಲನೆ ತಂಡವು ಇದೇ೨೦ ನೇ ತಾ॥ ಮದ್ರಾಸಿಗೆ ಆಗಮಿಸಲಿದೆ. ಉಳಿದ ಎಲ್ಲಾ ಸೈನ್ಯವು ಮುಂದಿನ ತಿಂಗಳು ಅಂತ್ಯದೊಳಗೆ ಭಾರತಕ್ಕೆ ಹಿಂತಿರುಗುವುದಾಗಿ ತಿಳಿಯ ಬರುತ್ತದೆ.

ಕನ್ನಡ ಚರ್ಚಾ ಸ್ಪರ್ಧೆ

ಮೈಸೂರು ೬

ಸಾರ್ವಜನಿಕ ವಿದ್ಯಾರ್ಥಿನಿಲಯದ ಆಶ್ರಯದಲ್ಲಿ ನಾಳೆ ಬೆಳಗ್ಗೆ ೯-೩೦ ಗಂಟೆಗೆ ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ಶಾಖೆಯ ಉಪಪ್ರಾಧ್ಯಾಪಕರಾದ ಶ್ರೀ ನಾಡಿಗ ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಅಖಿಲಕರ್ನಾಟಕ ಅಂತರವಿದ್ಯಾರ್ಥಿನಿಲಯಗಳ ಕನ್ನಡ ಚರ್ಚಾ ಸ್ಪರ್ಧೆ ನಡೆಯುತ್ತದೆ.

ಪಾನ ನಿರೋಧ ರದ್ದಾಗಲಿ

ಆಂಧ್ರ ಪ್ರಾಂತ್ಯದಲ್ಲಿ ತನ್ನ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸಲು ಸರ್ಕಾರವು ಕೂಡಲೇ ಪಾನನಿರೋಧ ಶಾಸನವನ್ನು ರದ್ದುಗೊಳಿಸಬೇಕೆಂದು ಆದೋನಿ ಪುರಸಭೆಯು ಒಂದು ನಿರ್ಣಯವನ್ನು ಮಾಡಿದೆ.

ಪ್ರಕಾಶಕರು ಮತ್ತು ಮುದ್ರಕರ:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್ ಮೈಸೂರು.

ಲಾಲ್‌ಬಾಗ್ ಅಭಿವೃದ್ಧಿ ಯೋಜನೆ

ಬೆಂಗಳೂರಿನ ಲಾಲ್‌ಬಾಗ್ ಗ್ಲಾಸ್ ಹೌಸ್ ೫೭ ವರ್ಷಗಳ ಹಿಂದೆ ನಿರ್ಮಾಣವಾಗಿದ್ದರೂ ಅದನ್ನು ಉತ್ತಮ ಪಡಿಸಿಲ್ಲವಾದ್ದರಿಂದ, ಈಗ ಅದನ್ನು ಹೆಚ್ಚು ಆಕರ್ಷಣೀಯ ಮತ್ತು ಸುಂದರವಾಗಿ ಮಾಡಲು ೩೦ ಸಾವಿರ ರೂ. ಯೋಜನೆಯೊಂದನ್ನು ಸರ್ಕಾರಕ್ಕೆ ಕಳುಹಿಸಿರುವುದಾಗಿ ಉದ್ಯಾನಗಳ ಮುಖ್ಯಾಧಿಕಾರಿ ಡಾ॥ ಎಂ. ಹೆಚ್. ಮರೀಗೌಡರು ತಿಳಿಸಿರುತ್ತಾರೆ.

.... ರಣಜಿತ್ ....
5–2–54 ರಿಂದ ಅಮೋಘ ಪ್ರಾರಂಭ
ಪ್ರತಿದಿನ 3 ಆಟಗಳು
ನಿರೂಪ್‌ರಾಯ್, ಆಗಾ, ಮನ್‌ಹರ್ ದೇಸಾಯ್ ಮತ್ತು ಜೀವನ್ ನಟಿಸಿರುವ:-
-ಮಂಚಲಾ-
(ಹಿಂದಿ)
ದಿಗ್ದರ್ಶನ:— ಜಯಂತ್ ದೇಸಾಯಿ.

Sri Ganesh Talkies, Mysore
Grand Gala Release ::: On 5-2-54 ::: Daily 3 Shows
Here is the screen at its greatest...

No Concession or Complimentaries during the First Week

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೬೬

೮-೨-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ವಿಶ್ವವಿದ್ಯಾನಿಲಯಗಳ ಆಡಳಿತದಲ್ಲಿ ರಾಜಕೀಯ ಪಕ್ಷಗಳ ಗೊಂದಲ

ಕೇಂದ್ರ ಸರ್ಕಾರದ ನಿರ್ಧಾರ

ಭಾರತದ ವಿಶ್ವವಿದ್ಯಾನಿಲಯಗಳ ಪುನರ್ರಚನೆ ವಿಷಯದಲ್ಲಿ ಸರ್ಕಾರವು ನೇಮಿಸಿರುವ ವಿಶ್ವವಿದ್ಯಾನಿಲಯಗಳ ಗ್ರಾಂಟ್ಸ್ ಸಮಿತಿಯು ಮಾಡಿರುವ ಶಿಫಾರಸ್ಸುಗಳನ್ನು ಅಂಗೀಕರಿಸಲಾಗಿದೆ. ಅವುಗಳನ್ನು ಕೂಡಲೇ ಕಾರ್ಯರೂಪಕ್ಕೆ ತರಲು ಎಲ್ಲಾ ವ್ಯವಸ್ಥೆಗಳನ್ನೂ ಮಾಡಲಾಗುತ್ತದೆ ಎಂದು ನಿನ್ನೆಯದಿನ ದೆಹಲಿಯಲ್ಲಿ ಪ್ರಾರಂಭವಾದ ಕೇಂದ್ರ ಶಿಕ್ಷಣ ಮಂಡಲಿಯ ೨೧ ನೇ ಸಮ್ಮೇಳನದಲ್ಲಿ ವಿದ್ಯಾಸಚಿವ ಮೌಲಾನಾ ಅಬುಲ್ ಕಲಾಂ ಅಜಾದ್‌ರವರು ತಿಳಿಸಿದ್ದಾರೆ. ಅವರು ತಮ್ಮ ಭಾಷಣದಲ್ಲಿ ಈರೀತಿ ಹೇಳಿದ್ದಾರೆ:—

ಈ ಹೊಸ ಸಲಹೆಗಳಮೇಲೆ ಎಲ್ಲಾ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕ ಮತ್ತು ಇತರರ ಸಂಬಳಗಳನ್ನು ಒಂದೇ ಮಟ್ಟದಲ್ಲಿಡಲಾಗುತ್ತದೆ. ವಿಶ್ವವಿದ್ಯಾನಿಲಯ ಆಡಳಿತದಲ್ಲಿ ರಾಜಕೀಯ ಪಕ್ಷಗಳ ಗೊಂದಲ ಯಿರಕೂಡದೆಂದೂ ಮಂಡಲಿಯು ಶಿಫಾರ್ಸು ಮಾಡಿದೆ. ಅದನ್ನು ಸರ್ಕಾರವು ಅನುಮೋದಿಸಿ ಎಲ್ಲಾ ವಿಶ್ವವಿದ್ಯಾನಿಲಯಗಳ ಆಡಳಿತ ಮಂಡಲಿಗಳಾದ ಕೌನ್ಸಿಲ್, ಸೆನೇಟ್ ಮುಂತಾದುವುಗಳನ್ನು ಪುನರ್ರಚಿಸಲು, ವಿಶ್ವವಿದ್ಯಾನಿಲಯಶಾಸನದಲ್ಲಿ ಸೂಕ್ತ ತಿದ್ದುಪಡಿಯನ್ನೂ ಮಾಡಲಾಗುತ್ತದೆ.

ವಿಶ್ವವಿದ್ಯಾನಿಲಯಗಳ ವೈಸ್‌ಛಾನ್ಸಲರ ನೇಮಕವು ಈಗ ದೆಹಲಿ ವಿಶ್ವವಿದ್ಯಾನಿಲಯದಲ್ಲಿ ನಡೆಯುವ ಕ್ರಮವನ್ನೇ ಅನುಸರಿಸಲಾಗುತ್ತದೆ.

ವಿಶ್ವವಿದ್ಯಾನಿಲಯಗಳ ಮಟ್ಟವು ಉತ್ತಮಗೊಳ್ಳಬೇಕಾದರೆ ಶಾಲೆಗಳಲ್ಲಿ ಶಿಕ್ಷಣ ಕ್ರಮ ಸುಧಾರಣೆ ಅತ್ಯಗತ್ಯ. ಈಗಾಗಲೇ ಸೆಕೆಂಡರಿ ವಿದ್ಯಾಭ್ಯಾಸ ಸುಧಾರಣಾ ಸಮಿತಿ ತನ್ನ ವರದಿಯನ್ನು ಕೊಟ್ಟಿದೆ. ಇನ್ನು ಮುಂದೆ ಪ್ರಾಥಮಿಕ ಶಿಕ್ಷಣ ೮ ವರ್ಷಕಾಲ ೪ ವರ್ಷಕಾಲ ಸೆಕೆಂಡರಿ ವಿದ್ಯಾಭ್ಯಾಸ ನಡೆಯುವ ವ್ಯವಸ್ಥೆ ಅಲ್ಲದೆ ಪೌರ ಶಿಕ್ಷಣ ಕ್ರಮವನ್ನು ಜಾರಿಗೆ ತರಲಾಗುತ್ತದೆ. ಸೆಕೆಂಡರಿ ವಿದ್ಯಾಭ್ಯಾಸದಲ್ಲಿ ಭಾಷೆ, ವಿಜ್ಞಾನ ಇವುಗಳಿಗೆ ಸಾಕಷ್ಟು ಪ್ರಾಶಸ್ತ್ಯ ಕೊಟ್ಟರೂ ಕಸುಬುಗಳಿಗೆ ಸಂಬಂಧಪಟ್ಟ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯವನ್ನು ಕೊಡಲಾಗುತ್ತದೆ. ದೇಶದಲ್ಲಿರುವ ಸೆಕೆಂಡರಿ ಶಾಲೆಗಳಲ್ಲಿ ಶೇಕಡ ೫ ರಷ್ಟನ್ನು ಪ್ರಥಮ ವರ್ಷದಲ್ಲಿ ಶೇಕಡ ೧೦ ರಷ್ಟನ್ನು ಎರಡನೇ ವರ್ಷದಲ್ಲಿ ವಿವಿಧೋದ್ದೇಶ ಶಾಲೆಗಳನ್ನಾಗಿ ಮಾರ್ಪಡಿಸುವ ಸಲಹೆ ಬಂದಿದೆ. ಆದರೆ ಶೇಕಡ ೨೫ ರಷ್ಟು ಶಾಲೆಗಳಾದರೂ ಕೂಡಲೇ ವಿವಿಧೋದ್ದೇಶ ಶಾಲೆಗಳಾಗಿ ಪರಿವರ್ತನೆ ಆಗಬೇಕಾಗಿದೆ. ಈ ಪರಿವರ್ತನ ಕಾರ್ಯವೆಲ್ಲಾ ೧೦ ವರ್ಷಗಳಲ್ಲಿ ಪೂರ್ಣವಾಗಬೇಕು. ಸಾಮಾನ್ಯವಾಗಿ ಸರ್ಕಾರಿ ನೌಕರಿಗೆ ಸೆಕೆಂಡರಿ ವಿದ್ಯಾಭ್ಯಾಸ ಅನರ್ಹತೆ ಮಾತ್ರ ಸಾಕು-ಎಂಬ ನೀತಿಯನ್ನು ನಾವು ಅನುಷ್ಠಾನಕ್ಕೆ ತರಬೇಕು.

ದೇಶದಲ್ಲಿ ವಿದ್ಯಾರ್ಥಿಗಳಲ್ಲಿ ಅಶಾಂತಿ ವಿಶೇಷವಾಗಿ ಕಾಣಬರುತ್ತಿದೆ. ಇದಕ್ಕೆ ಸಂಬಂಧಪಟ್ಟವರೆಲ್ಲರೂ ಕಲೆತು ಪರಿಹಾರ ಮಾರ್ಗಗಳನ್ನು ಸೂಚಿಸಬೇಕು.

ಈ ಸಮ್ಮೇಳನವು ನಿನ್ನೆಯದಿನ ದೆಹಲಿಯಲ್ಲಿ ಪ್ರಾರಂಭವಾಗಿ ೩ ದಿನಗಳ ಕಾಲ ನಡೆಯುತ್ತದೆ. ಅಲ್ಲಿ ವಿದ್ಯಾಭ್ಯಾಸ ಕ್ರಮ ಮಾರ್ಪಾಡು ಮುಂತಾದ ನಾನಾ ವಿಷಯಗಳನ್ನು ಚರ್ಚಿಸಲಾಗುತ್ತದೆ.

ಈ ಸಮ್ಮೇಳನದಲ್ಲಿ ಎಲ್ಲಾ ಪ್ರಾಂತ್ಯದ ವಿದ್ಯಾಸಚಿವರು ಪ್ರಮುಖ ವಿದ್ಯಾನಿಪುಣರು ಭಾಗವಹಿಸುತ್ತಲಿದ್ದಾರೆ.

ವಿದ್ಯಾಸಚಿವ ಮೌಲಾನಾ ಅಜಾದರು ಸಮ್ಮೇಳನಕ್ಕೆ ಆಗಮಿಸಲಿಲ್ಲವಾಗಿ ಅವರ ಭಾಷಣವನ್ನು ಪ್ರೊಫೆಸರ್ ಹುಮಾಯೂನ್ ಕಬೀರ್‌ರವರು ಓದಿದರು.

೬೭ ಸಾವಿರ ರೂ. ಬೆಲೆಯ ಜಮಖಾನ

ಪರ್ಷಿಯಾದ ಗುಲಾಮನೊಬ್ಬನು ೩೪ ವರ್ಷಗಳ ಕಾಲ ತೆಗೆದುಕೊಂಡು ತಯಾರಿಸಿದ ಜಮಖಾನವು ಈಗ ಸಿಂಗಪುರಕ್ಕೆ ಮಾರಾಟಕ್ಕೆ ಬಂದಿದೆ. ಅದರಲ್ಲಿ ಚಿನ್ನದ ತಂತಿ ಮತ್ತು ರೇಷ್ಮೆ ಉಪಯೋಗಿಸಿ ಜೀವನ ವೃಕ್ಷದ ಮಾದರಿಯನ್ನು ಚಿತ್ರಿಸಲಾಗಿದೆ. ಜಮಖಾನದ ಬೆಲೆಯು ೬೭ ಸಾವಿರ ರೂ. ಗಳೆಂದು ಹೇಳಲಾಗಿದೆ.

ಬಂದೀಖಾನೆ ಮುಖ್ಯಾಧಿಕಾರಿ

ಆಹಾರ ಶಾಖಾ ಡೈರೆಕ್ಟರ್ ಶ್ರೀ ಕೆ. ಪಿ. ರಾಮನಾಥಯ್ಯನವರನ್ನು ಎಕ್ಸ್ ಅಫಿಷಿಯೋ ಬಂದೀಖಾನೆಗಳ ಇನ್ಸ್‌ಪೆಕ್ಟರ್ ಜನರಲ್ ಆಗಿ ನೇಮಿಸಲಾಗಿದೆ.

ವಿದ್ಯಾ ಮಂದಿರದ ಆರಂಭೋತ್ಸವ

ಮೈಸೂರು ೮

ರಾಜಧಾನಿಯ ಭಾರತ ಕಲಾ ನಿಕೇತನದ ಆಶ್ರಯದಲ್ಲಿ ನಿನ್ನೆ ಬೆಳಗ್ಗೆ ಖಿಲ್ಲೆ ಮೊಹಲ್ಲಾ ಶ್ರೀರಾಮರಸ್ತೆಯಲ್ಲಿ ನೂತನ ವಿದ್ಯಾ ಮಂದಿರದ ಪ್ರಾರಂಭೋತ್ಸವವನ್ನು ನಗರ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ನೆರವೇರಿಸಿದರು. ಪಾರ್ಲಿಮೆಂಟ್ ಸದಸ್ಯ ಶ್ರೀ ಎನ್. ರಾಚಯ್ಯನವರು ಅಧ್ಯಕ್ಷತೆ ವಹಿಸಿದ್ದರು. ವ್ಯವಸ್ಥಾಪಕ ಶ್ರೀ ಎಂ. ಚಂದ್ರಶೇಖರ್‌ರವರು ಸ್ವಾಗತ ಬಯಸಿದರು.

ಹರಿಕಥೆ

ರಾಜಧಾನಿಯ ಕೃಷ್ಣರಾಜಮೊಹಲ್ಲಾ ಕಾಶಿಪತಿ ಅಗ್ರಹಾರದಲ್ಲಿರುವ ಶ್ರೀ ವಿದ್ಯಾ ಗಣಪತಿ ಮಂದಿರದಲ್ಲಿ ಈದಿನ ರಾತ್ರಿ ೮ ಘಂಟೆಗೆ ಶ್ರೀ ನಂದೀಪುರ ಶ್ರೀನಿವಾಸ ರಂಗಾಚಾರ್ಯರಿಂದ “ ಐರಾವತ ” ಎಂಬ ಹರಿಕಥೆ ನಡೆಯುತ್ತದೆ.

ವಿದೇಶೀ ಸ್ವಾಸ್ಥ್ಯಗಳ ವಿಮೋಚನೆ

ಭಾರತದಲ್ಲಿರುವ ವಿದೇಶೀ ಸ್ವಾಸ್ಥ್ಯಗಳ ವಿಮೋಚನಾ ಕಾಲವು ಯೋಚಿಸಿರುವುದಕ್ಕಿಂತ ಮುಂಚೆಯೇ ಬರುವುದೆಂದು ತಾವು ಆಶಿಸಿರುವುದಾಗಿ ಕೇಂದ್ರ ಗೃಹಶಾಖಾ ಉಪಸಚಿವ ಶ್ರೀ ದಾತಾರ್‌ರವರು ಹೇಳಿದ್ದಾರೆ.

ಭಾರತವು ಅವುಗಳ ಸ್ವಾತಂತ್ರ್ಯಕ್ಕಾಗಿ ಪ್ರಜಾ ಸತ್ತಾತ್ಮಕ ರೀತಿಯಲ್ಲಿ ತನ್ನ ಕೆಲಸವನ್ನು ಮಾಡುತ್ತಿರುವುದಾಗಿ ಹೇಳಿದ್ದಾರೆ

ಲೋಕಲ್ ಸೆಸ್ಸು ವಸೂಲಿ

ತುಮಕೂರು ಜಿಲ್ಲೆಯಲ್ಲಿ ಭೂಕಂದಾಯ ಮತ್ತು ಅರಣ್ಯ ಕಂದಾಯ ವಿಧಿಸಲಾಗುವ ಎಲ್ಲಾ ಬಾಬುಗಳ ಮೇಲೂ ರೂಪಾಯಿಗೆ ೨ ಆಣೆಯಂತೆ ಲೋಕಲ್ ಸೆಸ್ಸು ವಿಧಿಸಬೇಕೆಂದು ಅಲ್ಲಿಯ ಜಿಲ್ಲಾ ಬೋರ್ಡು ಮಾಡಿದ್ದ ನಿರ್ಣಯಕ್ಕೆ ಸರ್ಕಾರವು ಅನುಮೊದನೆ ಇತ್ತಿದೆ.

ಭಾರತಮೇಲ್ವಿಚಾರಕ ಸೈನ್ಯ ವಾಪಸ್ಸು

ಸ್ವದೇಶಕ್ಕೆ ಹಿಂತಿರುಗದೆಯಿದ್ದ ಸೈನ್ಯಕರನ್ನು ಕೊರಿಯಾದಲ್ಲಿ ನೋಡಿಕೊಳ್ಳುತ್ತಲಿದ್ದ ಭಾರತ ಮೇಲ್ವಿಚಾರಕ ಪಡೆಯ ಪ್ರಥಮ ತಂಡದ ೨೦೦ ಸೈನಿಕರು ನಿನ್ನೆಯದಿನ ಕೊರಿಯಾದ ಇಂಚಾನ್ ಬಂದರಿನಿಂದ ಭಾರತಕ್ಕೆ ವಾಪಸ್ಸು ಹೊರಟಿದ್ದಾರೆ.

ಪ್ರಾಂತ್ಯ ವಿಂಗಡನಾ ಸಮಿತಿ ಸಭೆ

ಪ್ರಾಂತ್ಯ ವಿಂಗಡನಾ ಸಮಿತಿಯ ಪ್ರಥಮ ಸಭೆಯು ಇದೇ ೧೧ನೇ ತಾರೀಖು ದೆಹಲಿಯಲ್ಲಿ ನಡೆಯಲಿದೆ. ಈ ಸಮಿತಿಯ ಸದಸ್ಯರಾದ ಸರ್ದಾರ್ ಕೆ. ಎಂ. ಪಣೀಕರ್ ಮತ್ತು ಪಂಡಿತ ಹೃದಯನಾಥಕುಂಜ್ರುರವರು, ಸಮಿತಿಯ ಅಧ್ಯಕ್ಷ ಶ್ರೀ ಫೇಜಲ್ ಆಲಿಯವರು ೯ ನೇ ತಾರೀಖು ಆಗಮಿಸುವರು.

ಮಾರಾಟ ತೆರಿಗೆ ಬದಲು ಕೊಳ್ಳುವ ತೆರಿಗೆ

ಅಂತರ ಪ್ರಾಂತೀಯ ವ್ಯಾಪಾರದ ಮೇಲೆ ಈಗ ವಿಧಿಸುತ್ತಲಿರುವ ಮಾರಾಟ ತೆರಿಗೆ ಕ್ರಮವನ್ನು ರದ್ದುಗೊಳಿಸಿ ಕೊಳ್ಳುವ ತೆರಿಗೆಯನ್ನು ಒಂದೆಡೆ ಮಾತ್ರ ವಿಧಿಸುವ ನೂತನ ಕ್ರಮವನ್ನು ಕೇಂದ್ರ ಸರ್ಕಾರವು ಜಾರಿಗೆ ತರುವುದಾಗಿ ತಿಳಿಯ ಬರುತ್ತದೆ.

ಈ ವಿಷಯವನ್ನು ಕೇಂದ್ರವು ಪ್ರಾಂತ್ಯ ಸರ್ಕಾರಗಳಿಗೆ ತಿಳಿಸಿರುವುದಾಗಿ ಗೊತ್ತಾಗಿದೆ.

ಈ ವ್ಯವಸ್ಥೆಯಲ್ಲಿ ಭಾರತಾದ್ಯಂತ ಏಕರೀತಿ ಏರ್ಪಾಡು ಇರುವಂತೆ ತಕ್ಕ ಮಸೂದೆಯನ್ನು ಸಹ ಕೇಂದ್ರವು ಮುಂದಿನ ಪಾರ್ಲಿಮೆಂಟ್ ಅಧಿವೇಶನದಲ್ಲಿ ಮಂಡಿಸಲಿದೆಯೆಂದು ಹೇಳಲಾಗುತ್ತಿದೆ.

ಜಮೀನ್ದಾರರುಗಳಿಂದ ಭೂದಾನ

ಬ್ರೋಚ್ ಜಿಲ್ಲೆಯ ವಲಿಯಾ ತಾಲ್ಲೂಕಿನ ಜಮೀನ್ದಾರರುಗಳು ತಮ್ಮ ಭೂಮಿಯಲ್ಲಿ ಹತ್ತನೇ ಒಂದು ಭಾಗವನ್ನೂ ಭೂದಾನ ಯಜ್ಞಕ್ಕಾಗಿ ಕೊಡಲು ನಿರ್ಧರಿಸಿದ್ದಾರೆ.

ಗುದ್ದಲಿ ಪೂಜೆ

ಬೆಂಗಳೂರು ೮

ಕಾಂಗ್ರೆಸ್ ವಸ್ತುಪ್ರದರ್ಶನದ ಗುದ್ದಲಿ ಪೂಜೆ ಸಮಾರಂಭವನ್ನು ಈ ದಿನ ಬೆಳಗ್ಗೆ ವ್ಯವಸಾಯ ಸಚಿವ ಡಾ॥ ಆರ್. ನಾಗನಗೌಡರು ಸುಭಾಷ್ ನಗರದಲ್ಲಿ ನೆರವೇರಿಸಿದರು.

ಧಾನ್ಯ ಮಾರಾಟಕ್ಕೆ ಅಡ್ಡಿ

ಲೆವಿಪದ್ಧತಿ ಪ್ರಕಾರ ಸರ್ಕಾರಕ್ಕೆ ಕೊಡಬೇಕಾದಷ್ಟು ಧಾನ್ಯವನ್ನು ಕೊಡುವವರೆಗೆ ಕಟಾವಾದ ಧಾನ್ಯವನ್ನು ಮಾರಕೂಡದೆಂದು ಆಂಧ್ರ ಸರ್ಕಾರವು ಒಂದು ಆಜ್ಞೆಯನ್ನು ಹೊರಡಿಸಿದೆ.

○ ಭಾರತಕ್ಕೆ ಆಗಮಿಸಿದ್ದ ಈಜಿಪ್ಟ್ ಪತ್ರಿಕಾ ನಿಯೋಗವು ಇಲ್ಲಿ ತನ್ನ ೨ ವಾರಗಳ ಪ್ರವಾಸವನ್ನು ಪೂರೈಸಿಕೊಂಡು ನಿನ್ನೆ ಸ್ವದೇಶಕ್ಕೆ ಹಿಂತಿರುಗಿತು.

ಪ್ರಧಾನಿ ನೆಹ್ರೂರವರಿಗೆ ಪಾಕ್ ಪ್ರಧಾನಿ ಪತ್ರ

ಕಾಶ್ಮೀರ ವಿವಾದದ ಬಗ್ಗೆ ಸಮಾಲೋಚನೆ ನಡೆಸಲು ಒಂದು ನಿರ್ದಿಷ್ಟ ದಿನವನ್ನು ಗೊತ್ತುಮಾಡಬೇಕೆಂದು ಪಾಕೀಸ್ತಾನ ಪ್ರಧಾನಿ ಮಹಮದಾಲಿಯವರು ಭಾರತ ಪ್ರಧಾನಿ ನೆಹರೂರವರಿಗೆ ಪತ್ರ ಬರೆದಿರುವುದಾಗಿ ತಿಳಿಯಬರುತ್ತದೆ.

ಪಾಕೀಸ್ತಾನ ಮತ್ತು ಅಮೆರಿಕಾಗಳ ನಡುವೆ ಆಗಲಿರುವ ಸೈನ್ಯ ಒಪ್ಪಂದದ ವಿಷಯದಲ್ಲಿ ಮೂಡಿರುವ ಸಂಶಯಗಳನ್ನು ನಿವಾರಣೆ ಮಾಡಲು ಈ ವಿಷಯವನ್ನು ಚರ್ಚಿಸಲು ಸಿದ್ಧವಿರುವುದಾಗಿ ಈಚೆಗೆ ಮಿ|| ಮಹಮದಾಲಿಯವರು ಹೇಳಿದ್ದಾರೆ.

ನೆಹರೂರೊಡನೆ ಸಿಂಹಳ ನಾಯಕರ ಭೇಟಿ

ಸಿಂಹಳವಲ್ಲಿರುವ ಭಾರತೀಯ ಕಾಂಗ್ರೆಸ್ಸಿನ ನಿಯೋಗವೊಂದು ಅದರ ಅಧ್ಯಕ್ಷ ಶ್ರೀ ತೊಂಡಮಾನ್‌ರವರ ನೇತೃತ್ವದಲ್ಲಿ ನಿನ್ನೆಯ ದಿನ ಪ್ರಧಾನಿ ನೆಹರೂರವರನ್ನು ತಿರುವನಂತಪುರದಲ್ಲಿ ಭೇಟಿಮಾಡಿ ಒಂದೂವರೆ ಗಂಟೆಕಾಲ ಮಾತುಕತೆ ನಡೆಸಿದರೆಂದು ತಿಳಿಯಬರುತ್ತದೆ.

ಸಿಂಹಳದಲ್ಲಿರುವ ಭಾರತೀಯರ ವಿಷಯದಲ್ಲಿ ಸಿಂಹಳ ಮತ್ತು ಭಾರತ ಪ್ರಧಾನಿಗಳ ನಡುವೆ ಏರ್ಪಟ್ಟ ಒಪ್ಪಂದ ವಿಷಯದಲ್ಲಿ ತಮ್ಮ ವಿರೋಧ ಅಭಿಪ್ರಾಯವನ್ನು ಅವರು ಪ್ರಧಾನಿ ನೆಹರೂರವರಿಗೆ ತಿಳಿಸಿದರೆಂದು ಗೊತ್ತಾಗಿದೆ

ಅಧಿಕಾರಿಗಳ ಸಭೆ

ಜಿಲ್ಲಾಧಿಕಾರಿಗಳ ಮತ್ತು ಸರ್ಕಾರದ ಇತರ ಮುಖ್ಯ ಇಲಾಖಾಧಿಕಾರಿಗಳ ಸಭೆಗಳನ್ನು ಆಗಾಗ್ಗೆ ನಡೆಸಿ ವಿಚಾರ ವಿನಿಮಯ ಆಗುವಂತೆ ವ್ಯವಸ್ಥೆ ಮಾಡಬೇಕೆಂದು ಭಾರತ ಸರ್ಕಾರವು ಎಲ್ಲಾ ಪ್ರಾಂತ್ಯ ಸರ್ಕಾರಗಳಿಗೆ ಸೂಚನೆಯನ್ನಿತ್ತಿರುವುದಾಗಿ ತಿಳಿಯಬರುತ್ತದೆ.

ಭೂದಾನಯಾತ್ರೆ

ಕಾಂಗ್ರೆಸ್ಸಿ ಕಾರ್ಯಕಾರಿ ಸಮಿತಿಯ ಮಾಜಿ ಸದಸ್ಯ ಶ್ರೀ ಶಂಕರರಾವ್ ದೇವ್‌ರವರು ಇದೇ ೨೧ ನೇ ತಾರೀಖಿನಿಂದ ಮಹಾರಾಷ್ಟ್ರದ ನಾಲ್ಕು ಜಿಲ್ಲೆಗಳಲ್ಲಿ ಭೂದಾನ ಯಜ್ಞ ಸಂಬಂಧದಲ್ಲಿ ಒಂದು ಲಕ್ಷ ಎಕರೆ ಜಮೀನು ಸಂಗ್ರಹಣೆಗಾಗಿ ಕಾಲುನಡಿಗೆ ಪ್ರವಾಸವನ್ನು ಕೈಗೊಳ್ಳಲಿರುವರು.

ತುಟ್ಟಿಭತ್ಯ ಸಂಬಳದೊಡನೆ ಐಕ್ಯ

ಅಂಚೆ ಮತ್ತು ಆರ್. ಎಂ. ಎಸ್. ನೌಕರರಿಗೆ ಕೊಡುತ್ತಿರುವ ತುಟ್ಟಿಭತ್ಯವನ್ನು ಸಂಬಳದೊಡನೆ ಐಕ್ಯಗೊಳಿಸುವ ವಿಷಯವನ್ನು ಕೇಂದ್ರ ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ಸಂಚಾರ ಖಾತಾ ಸಚಿವ ಶ್ರೀ ಜಗಜೀವನರಾಂರವರು ಹೇಳಿದ್ದಾರೆ.

ಪಾಕೀಸ್ತಾನ ಪ್ರಧಾನಿಗೆ ಕಾಶ್ಮೀರ ಪ್ರಧಾನಿಯ ಎಚ್ಚರಿಕೆ

ಕಾಶ್ಮೀರಿಗಳು ಜಾಗೃತರಾಗಿದ್ದಾರೆ, ಕುಟಿಲ ಪ್ರಯತ್ನಗಳಿಗೆ ಸೊಪ್ಪು ಹಾಕುವುದಿಲ್ಲ

ಕಾಶ್ಮೀರದ ಜನತೆಯು ೧೯೪೭ರಲ್ಲಿ ಇದ್ದಂತೆ ಈಗ ಇಲ್ಲ. ವಿಶೇಷವಾಗಿ ಜಾಗೃತರಾಗಿದ್ದಾರೆ. ಪಾಕೀಸ್ತಾನವು ಅಮೆರಿಕದೊಡನೆ ಸೈನ್ಯ ಒಪ್ಪಂದವನ್ನು ಮಾಡಿಕೊಂಡರೆ ಕಾಶ್ಮೀರವನ್ನು ಕಬಳಿಸಲು ಸುಲಭವೆಂದು ಪಾಕೀಸ್ತಾನ ಪ್ರಧಾನಿ ಮಹಮದ್ ಅಲಿಯವರು ತಿಳಿದಿರುವಂತೆ ಕಾಣುತ್ತದೆ. ಹಾಗೆ ಅವರು ಭಾವಿಸಿದ್ದರೆ ಅದು ಶುದ್ಧ ತಪ್ಪು. ಇಂತಹ ಕುಟಿಲ ಪ್ರಯತ್ನಗಳಿಗೆ ಈಗ ಕಾಶ್ಮೀರಿಗಳುಸೊಪ್ಪು ಹಾಕುವುದಿಲ್ಲವೆಂದು ನಾನು ಅವರಿಗೆ ಎಚ್ಚರಿಸುತ್ತೇನೆ ಎಂಬುದಾಗಿ ಕಾಶ್ಮೀರದ ಪ್ರಧಾನಿ ಭಕ್ಷಿ ಗುಲಾಂ ಮಹಮದ್‌ರವರು ನಿನ್ನೆಯ ದಿನ ಶ್ರೀನಗರದ ಬಳಿ ಭಾರಿ ಬಹಿರಂಗ ಸಭೆಯಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಭಗವದ್ಗೀತೆ ಉಪನ್ಯಾಸ

ಮೈಸೂರು ೮

ಉಪನ್ಯಾಸರತ್ನಾಕರ, ಶೃತಿಸ್ಮೃತಿ ಗೀತ ಸಂಪನ್ನ ಶ್ರೀ ಜಯತೀರ್ಥಾಚಾರ್ಯರವರು ಇಂದಿನಿಂದ ಪ್ರತಿದಿನ ರಾತ್ರಿ ೯ ರಿಂದ ೧೦ ಘಂಟೆಯವರೆಗೆ ವಿ. ಡಿ. ರಾಜಾರಾಂ ಅಗ್ರಹಾರದಲ್ಲಿ ಭಗವದ್ಗೀತೆಯ ಉಪನ್ಯಾಸವನ್ನು ಮಾಡುತ್ತಾರೆ ಎಂದು ವ್ಯವಸ್ಥಾಪಕರಾದ ಶ್ರೀ ಎ. ಕೃಷ್ಣಮೂರ್ತಿರಾಯರು ತಿಳಿಸುತ್ತಾರೆ.

ನೂತನ ಅಧಿಕಾರವರ್ಗ

ಮೈಸೂರು ೮

ಮೈಸೂರು ಸಿಟಿ ಕೋ-ಆಪರೇಟೀವ್ ಬ್ಯಾಂಕಿನ ಅಧಿಕಾರವರ್ಗದ ಚುನಾವಣೆಯು ನಡೆದು ಶ್ರೀ ಎ. ಕೃಷ್ಣಮೂರ್ತಿ ರಾವ್ ಅಧ್ಯಕ್ಷ, ಶ್ರೀ ಜಿ. ಜನಾರ್ದನ ನಾಯ್ಡು ಉಪಾಧ್ಯಕ್ಷ, ಶ್ರೀ ಎ. ವಿ. ರಂಗರಾವ್ ಗೌರವ ಕಾರ್ಯದರ್ಶಿ ಮತ್ತು ಎಂ. ಆರ್. ನಾರಾಯಣಸ್ವಾಮಿ ನ್ಯಾಯಸಲಹೆಗಾರರಾಗಿ ಚುನಾಯಿತರಾಗಿದ್ದಾರೆ.

೧೦೦ ಜನರ ದೋಣಿ ನದಿಪಾಲು

ಸೂರತ್‌ಬಳಿ ನಿನ್ನೆಯದಿನ ಬೆಳಗ್ಗೆ ೧೦೦ ಜನರು ಇದ್ದ ದೋಣಿಯೊಂದು ಪೂರ್ಣ ನದಿಯಲ್ಲಿ ಮುಳಗಿಹೋಯಿತು. ೨೩ ಜನರನ್ನು ರಕ್ಷಿಸಲಾಯಿತೆಂದೂ ಇತರರಲ್ಲಿ ಹಲವರು ಈಜಿಕೊಂಡು ದಡ ಸೇರಿದರೆಂದೂ ತಿಳಿಯಬರುತ್ತದೆ. ಉಳಿದವರು ಇನ್ನೂ ಪತ್ತೆಯಿಲ್ಲ. ಕಡೆಯಪಕ್ಷ ೧೧ ಜನರಾದರೂ ಸತ್ತಿರಬಹುದೆಂದು ಊಹಿಸಲಾಗಿದೆ.

ಫ್ಲೈಯಿಂಗ್ ಬಾಕ್ಸ್‌ಕಾರ್ ವಿಮಾನ

ಭಾರತದ ವಾಯುದಳದವರಿಂದ ಕೊಂಡುಕೊಂಡಿರುವ ಸರಕುಗಳನ್ನೊಯ್ಯುವ ಎರಡು ಬೃಹದಾಕಾರದ (ಕಾರ್ಗೋ) ವಿಮಾನಗಳು ಜನವರಿ ೨೯ರಂದು ಅಮೆರಿಕದಿಂದ ನವದೆಹಲಿಗೆ ತೆರಳಿವೆಯೆಂದು ತಿಳಿಯಬರುತ್ತದೆ.

ಭಾರತದ ವಾಯುದಳದವರು ಕೆಲವು ಫ್ಲೈಯಿಂಗ್ ಬಾಕ್ಸ್‌ಕಾರ್‌ಗಳನ್ನು ತರಿಸುವ ವ್ಯವಸ್ಥೆ ಮಾಡಿದ್ದಾರೆ. ಈಗ ಬರುವ ೨ ವಿಮಾನಗಳು ಈ ವ್ಯವಸ್ಥೆಯ ಪ್ರಕಾರ ತರಿಸಲ್ಪಡುವ ವಿಮಾನಗಳಲ್ಲಿ ಮೊದಲನೆಯವುಗಳು. ಈ ವಿಮಾನಗಳೊಳಗೆ ಅಮೆರಿಕದ ವೈಮಾನಿಕರು ಬರುತ್ತಾರೆ. ಭಾರತೀಯ ವೈಮಾನಿಕರು ಸಾಕಷ್ಟು ತರಪೇತು ಪಡೆಯುವವರೆಗೂ ಅಮೆರಿಕದ ವೈಮಾನಿಕರು ಇಲ್ಲಿ ಇರುವರು.

ಕುಂಭನಗರ ದುರಂತ ಪರಿಶೀಲನಾ ಸಮಿತಿ

ಕಳೆದ ಬುಧವಾರ ಕುಂಭಮೇಳದಲ್ಲಿ ನಡೆದ ದುರಂತದ ವಿಷಯದಲ್ಲಿ ಪರಿಶೀಲನೆ ನಡೆಸಿ, ಅದಕ್ಕೆ ಕಾರಣ, ಅಲ್ಲಿ ನಡೆದಿದ್ದ ವ್ಯವಸ್ಥೆ, ಮುಂದೆ ಇಂತಹ ದುರಂತ ಉಂಟಾಗದಂತೆ ಮಾಡಬೇಕಾದ ಎಚ್ಚರಿಕೆ ಕ್ರಮ ಮುಂತಾದ ಬಗ್ಗೆ ಸರ್ಕಾರಕ್ಕೆ ಸಲಹೆ ನೀಡಲು ಉತ್ತರಪ್ರದೇಶವು ತ್ರಿಮೂರ್ತಿಗಳ ಸಮಿತಿಯನ್ನು ನೇಮಿಸಿದೆ.

ಅಲಹಾಬಾದ್ ಶ್ರೇಷ್ಠನ್ಯಾಯಾಲಯದ ನಿವೃತ್ತ ಉನ್ನತ ನ್ಯಾಯಾಧೀಶ ಶ್ರೀ ಕಮಲಾಕಾಂತವರ್ಮರವರು ಈ ಸಮಿತಿಯ ಅಧ್ಯಕ್ಷರು.

Wanted Agents

Enthusiastic inexperienced educated unemployed may also apply. Will be given Practical training.

Apply to T. Sitaramih, Inspector, Bombay Mutual Life Insurance Society, Ltd., 1500/19, K. R. Vanam Chamaraja Mohalla, Mysore.

ಶಾಸನಸಭೆಗಳಿಗೆ ಚುನಾವಣೆ

ಕೇಂದ್ರ ಹಿರಿಯ ಶಾಸನಸಭೆಯಲ್ಲಿ ಇದೇ ವರ್ಷ ಏಪ್ರಿಲ್ ೨ ನೇ ತಾರೀಖಿಗೆ ಮುಕ್ತಾಯವಾಗುವ ಸದಸ್ಯತ್ವಸ್ಥಾನಗಳಿಗೆ ಮರು ಚುನಾವಣೆಯು ಮಾರ್ಚಿ ೨೯ನೇ ತಾರೀಖು ನಡೆಯಬೇಕೆಂದು ಚುನಾವಣಾ ಸಮಿತಿಯು ನಿರ್ಧರಿಸಿದೆ.

ಎ ಮತ್ತು ಬಿ ಪ್ರಾಂತ್ಯಗಳಲ್ಲಿಯೂ ಸಹ ವಿಧಾನ ಪರಿಷತ್ತುಗಳಲ್ಲಿ ಖಾಲಿಯಾಗುವ ಸ್ಥಾನಗಳಿಗೆ ಚುನಾವಣೆ ನಡೆಸುವ ವಿಷಯದಲ್ಲಿ ಇದೇ ೧೫ನೇ ತಾರೀಖಿನೊಳಗೆ ರಾಷ್ಟ್ರಾಧ್ಯಕ್ಷರ ಆಜ್ಞೆ ಹೊರಬೀಳಲಿದೆ,

-ಮೈಸೂರು ಪೇಟೆಧಾರಣೆ-

ತಾರೀಖು, ೬—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೨೦—೧೪	೨೩—೪
ಎಳ್ಳು	—	—
ಹರಳು	೩೧—೮	೩೫—೨
ಹುಚ್ಚೆಳ್ಳು	೩೫—	೪೨—೮
ಹೊಂಗೆಬೀಜ	೧೮—೧೦	೨೦—೧೨
ಹುಣಸೆಬೀಜ	೧೪—೪	—
ಹುರುಳಿ	೨೭—೮	೩೦—೧೨
ಹೆಸರು	೩೪—೧೦	೪೨—೬
ಅಲಸಂದೆ	೩೧—	೪೫—೨
ಅವರೆ	೩೬—೧೪	—
ಕಡಲೆ	೫೧—೧೨	೫೩—೧೨
ಉದ್ದು	—	—
ಕೊತ್ತಂಬರಿ	೨೭—೧೪	೨೯—೧೦
ತೊಗರಿ	೧೯—೨	೨೯—೮
ಹುಣಸೆಹಣ್ಣು	೪—೧೨	೧೦—೧೨
ಮೆಣಸಿನಕಾಯಿ	೨೫—೨	೩೪—೪
ಸೀಗೆಕಾಯಿ	೪—೬	೫—
ಬೆಲ್ಲ	೫—	೫—
ತೆಂಗಿನಕಾಯಿ	೧೫೫—	೨೮೭—

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ.
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.

ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು: ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್ ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೩೪

೯-೩-೧೯೫೪ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಸರ್ಕಾರ ಹೆಚ್ಚು ಲಾಭ ಸಂಪಾದಿಸುತ್ತಿದೆ

ಮೈಸೂರು ೯

ಸರ್ಕಾರದವರು ತಾವು ೨೦-೩೨ ರೂ. ಗಳಂತೆ ಕೊಂಡ ಭತ್ತವನ್ನು ಪಾಲಿಷ್ ಇಲ್ಲದೆ ಒಂದೂವರೆ ಸೇರಿನಿಂದ ಎರಡು ಸೇರಿನಂತೆ ಬಿಕರಿ ಮಾಡುತ್ತಿದ್ದಾರೆ. ಇವರಿಗೆ ಒಂದು ಪಲ್ಲ ಭತ್ತಕ್ಕೆ ೫೫ ಸೇರು ಅಕ್ಕಿ ಆಗುತ್ತದೆ. ಇವರು ಮಾರುತ್ತಿರುವ ದರದಂತೆ ಇವರಿಗೆ ರೂ. ೩೬-೧೨-೦ ಬರುತ್ತದೆ. ಇದರಿಂದ ಭತ್ತದ ಖರೀದಿ ಮತ್ತು ಖರ್ಚು ಒಂದು ಪಲ್ಲಾ ಭತ್ತಕ್ಕೆ ಬೀಳುವ ರೂ. ೨೪-೦-೦ ಜಾತಾ ರೂ. ೧೨-೧೨-೦ ಲಾಭ ಉಳಿಯುತ್ತದೆ. ಈ ರೀತಿ ಮಿತಿಮೀರಿದ ಲಾಭ ಸಂಪಾದಿಸುತ್ತಾ ಹೋದರೆ ಬಡ ಪ್ರಜೆಗಳ ಗತಿ ಏನಾಗಬೇಕು? ವರ್ತಕರು ರೂ. ೨೫-೨೬ ರಿಂದ ಭತ್ತವನ್ನು ಕೊಂಡು ಪಾಲೀಷ್ ಮಾಡಿದ ಅಕ್ಕಿಯನ್ನು ಎರಡರಿಂದ ಎರಡೂವರೆ ಸೇರಿನಂತೆ ಮಾರುತ್ತಿರುವುದು ಸಹ ನಮ್ಮ ಸರ್ಕಾರಕ್ಕೆ ಚೆನ್ನಾಗಿ ತಿಳಿದಿರುತ್ತೆ. ಬಂಡವಾಳ ಷಾಹಿ ವರ್ತಕರು ಕೊಳ್ಳುವ ಧಾನ್ಯ ಮತ್ತು ರಾಗಿ, ಜೋಳ, ಭತ್ತವನ್ನು ಯಾವ ಕಾರಣದಿಂದಲೂ ಲಾರಿ ಮೂಲಕವಾಗಲಿ, ರೈಲ್ ಮೂಲಕವಾಗಲಿ ಸಾಗಿಸುವುದಕ್ಕೆ ಅವಕಾಶವನ್ನು ಕೊಡದ ರೀತಿಮಾಡುವುದಕ್ಕೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಕಟ್ಟಾಜ್ಞೆ ಮಾಡಿ ಅಧಿಕಾರ ಚಲಾಯಿಸಲು ಅವರಿಗೆ ಅನುಮತಿ ಕೊಡಬೇಕು:ಎಂದು ನಗರದ ರೇಷನ್ ಕಾರ್ಡುದಾರರ ಸಂಘದ ಶ್ರೀ ಟಿ.ಪಿ. ಕೊದಂಡರಾಮಪಿಳ್ಳೆಯವರು ತಿಳಿಸಿದ್ದಾರೆ.

ಚರ್ಚಾಸ್ಪರ್ಧೆ

ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರದ ಶಾಖಾ ಸಂಘದ ಆಶ್ರಯದಲ್ಲಿ ಇದೇ ೧೦ನೇ ತಾರೀಖು ಸಂಜೆ ೫-೩೦ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ 'ಮೈಸೂರಿನಲ್ಲಿ ಜಿಲ್ಲಾಬೋರ್ಡುಗಳ ಬದಲು ತಾಲ್ಲೂಕು ಬೋರ್ಡುಗಳ ರಚನೆಗೆ ಸ್ವಾಗತ' ಎಂಬ ವಿಷಯದಮೇಲೆ ಚರ್ಚೆ ನಡೆಯುವುದು. ಶ್ರೀ ಹೆಚ್. ಸಿ. ದಾಸಪ್ಪನವರು ಅಧ್ಯಕ್ಷತೆ ವಹಿಸುವರು ಶ್ರೀಗಳಾದ ಹೆಚ್. ಎಂ. ಚೆನ್ನಬಸಪ್ಪ, ಕೆ. ಗೋಪಾಲಕೃಷ್ಣಶೆಟ್ಟಿ, ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಕೆ. ವಿ. ಶಂಕರಗೌಡ ಮುಂತಾದವರು ಭಾಗವಹಿಸುವರು.

ನೂತನ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟರು

ಮೈಸೂರು ೯

ಬೆಂಗಳೂರಿಗೆ ವರ್ಗವಾಗಿರುವ ಜಿಲ್ಲಾ ಪೊ|| ಸೂಪರಿಂಟೆಂಡೆಂಟರಾದ ಶ್ರೀ ಕೃಷ್ಣಮೂರ್ತಿಯವರು ನಿನ್ನೆಯದಿನ ಹೊಸದಾಗಿ ಬಂದಿರುವ ಶ್ರೀ ಮಲ್ಲಪ್ಪನವರಿಗೆ ತಮ್ಮ ಅಧಿಕಾರವನ್ನು ವಹಿಸಿಕೊಟ್ಟರು.

ಅಂತರ ವಿದ್ಯಾರ್ಥಿ ನಿಲಯಗಳ ಚರ್ಚಾಸ್ಪರ್ಧೆ

ಮೈಸೂರು ೯

'ಇಂದಿನ ಪರಿಸ್ಥಿತಿಯಲ್ಲಿ ದೇಶದ ಏಳಿಗೆ ಆಗಬೇಕಾದರೆ ಧರ್ಮ ಸಂಸ್ಥೆಗಳಿಂದಲೇ ಸಾಧ್ಯವೇ ಹೊರತು ರಾಜಕೀಯ ಸಂಸ್ಥೆಗಳಿಂದ ಸಾಧ್ಯವಿಲ್ಲ' ಎಂಬ ವಿಷಯದ ಮೇಲೆ ಮೊನ್ನೆದಿನ ಅಂತರ ವಿದ್ಯಾರ್ಥಿ ನಿಲಯಗಳ ಕನ್ನಡ ಚರ್ಚಾಸ್ಪರ್ಧೆಯು ಸಾರ್ವಜನಿಕ ವಿದ್ಯಾರ್ಥಿ ನಿಲಯದ ಸಂಘದ ಆಶ್ರಯದಲ್ಲಿ ನಡೆಯಿತು. ೧೨ ನಿಲಯದ ಪ್ರತಿನಿಧಿಗಳು ಅದರಲ್ಲಿ ಭಾಗವಹಿಸಿದ್ದರು. ಶ್ರೀ ನಾಡಿಗ ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ತಾ. ಸು. ಶಾಮರಾಯರು, ಎಂ. ಕೃಷ್ಣಪ್ಪನವರು, ಜೆ. ಆರ್. ಮಹಾಲಿಂಗಯ್ಯನವರು ತೀರ್ಪುಗಾರರಾಗಿದ್ದರು.

ವಿಷಯವು ಓಟಿಗೆ ಹಾಕಿದಾಗ ಸಮವಾಗಿ ಮತಗಳು ಬಂದವು.

ಮೊದಲನೇ ಬಹುಮಾನವು ಮಹಾರಾಜಾ ಕಾಲೇಜ್ ಹಾಸ್ಟಲಿನ ಶ್ರೀ ಹೆಚ್. ಎಂ. ನಾಯಕ್‌ರವರಿಗೂ, ದ್ವಿತೀಯ ಬಹುಮಾನವು ಶಾರದಾ ನಿಕೇತನದ ಶ್ರೀ ವಿ. ಚಂದ್ರಶೇಖರ್‌ರವರಿಗೂ, ಮೂರನೆ ಬಹುಮಾನ ಸಾರ್ವಜನಿಕ ಹಾಸ್ಟಲಿನ ಶ್ರೀ ಸಿ. ಎಸ್. ಅನಂತಯ್ಯನವರಿಗೂ, ೪ನೇ ಬಹುಮಾನ ಮಹಾರಾಜಾ ಕಾಲೇಜ್ ಹಾಸ್ಟೆಲಿನ ಶ್ರೀ ಪಂಚಾಕ್ಷರಿಯವರಿಗೂ, ೫ನೇ ಬಹುಮಾನ ಕ್ಯಾತನಹಳ್ಳಿ ಶ್ರೀ ಸಿದ್ದಲಿಂಗಪ್ಪನವರ ಸಂಸ್ಕೃತ ಪಾಠಶಾಲೆಗೂ ದೊರೆಯಿತು. ಪರ್ಯಾಯ ಪಾರಿತೋಷಕವು ಈವರ್ಷವೂ ಮಹಾರಾಜಾಕಾಲೇಜ್ ಹಾಸ್ಟಲಿಗೆ ಬಂದಿತು.

ರಷ್ಯಾ ಸಾಂಸ್ಕೃತಿಕ ನಿಯೋಗ

ಮೈಸೂರು ೯

ಭಾರತದಲ್ಲಿ ಪ್ರವಾಸ ಮಾಡುತ್ತಲಿರುವ ರಷ್ಯಾದ ಸಾಂಸ್ಕೃತಿಕ ನಿಯೋಗದವರು ಇದೇ ೨೦ನೇ ತಾರೀಖು ಮಧ್ಯಾಹ್ನ ಬೆಂಗಳೂರಿಗೆ ಆಗಮಿಸುವರು ಮಾರನೆಯದಿನ ಅವರು ಮೈಸೂರುನಗರ ಮತ್ತು ಬೃಂದಾವನಗಳಿಗೆ ಭೇಟಿ ಕೊಡುವರು. ೨೧ನೇ ತಾ|| ಸಂಜೆ ಮತ್ತು ೨೫ನೇ ತಾರೀಖು ರಾತ್ರಿ ನಿಯೋಗದವರ ಸಂಗೀತ, ಜಾನಪದ ನೃತ್ಯ ಮತ್ತು ನೃತ್ಯ-ನಾಟಕಗಳ ಪ್ರದರ್ಶನವನ್ನು ಏರ್ಪಡಿಸಲಾಗಿದೆ.

○ ಕಚ್ ಪ್ರಾಂತ್ಯದ ಒಂದು ಗ್ರಾಮದಲ್ಲಿ ಪಾಠಶಾಲೆಗೆ ಹರಿಜನರನ್ನು ಸೇರಿಸಕೂಡದು ಸೇರಿಸಿದರೆ ಉಪಾಧ್ಯಾಯರನ್ನು ಹೊಡೆಯುತ್ತೇವೆಂದು ೯ ಜನ ಗ್ರಾಮಸ್ಥರು ಹೆದರಿಸಿದ್ದಕ್ಕಾಗಿ ಅಸ್ಪೃಶ್ಯತಾ ನಿವಾರಣಾ ಶಾಸನ ಪ್ರಕಾರ ಅವರಿಗೆಲ್ಲಾ ತಲಾ ೨೫ ರೂಗಳಂತೆ ಜುಲ್ಮಾನೆ ವಿಧಿಸಲಾಗಿದೆ.

೮ ವರ್ಷದ ಪ್ರಾಥಮಿಕ ವಿದ್ಯಾಭ್ಯಾಸ

ಕೇಂದ್ರ ವಿದ್ಯಾಮಂಡಲದ ನಿರ್ಧಾರ

ದೇಶಾದ್ಯಂತ ಪ್ರಾಥಮಿಕ ಶಿಕ್ಷಣವನ್ನು ೮ ವರ್ಷಕಾಲ ಅನಂತರ ಸೆಕೆಂಡರಿ ವಿದ್ಯಾಶಿಕ್ಷಣವನ್ನು, ಅಥವ ೩ ವರ್ಷಗಳ ಕಾಲ ಕೊಡಬೇಕೆಂದು ನಿನ್ನೆಯದಿನ ಕೇಂದ್ರ ವಿದ್ಯಾ ಮಂಡಲಿಯು ನಿರ್ಣಯ ಮಾಡಿದೆ.

ಸೆಕೆಂಡರಿ ಪಾಠಶಾಲೆಗಳಲ್ಲಿ ಸಾಮಾಜಿಕ, ವಿಜ್ಞಾನ, ವ್ಯವಸಾಯ, ಗೃಹವಿಜ್ಞಾನ, ಪೌರತ್ವ ಇವುಗಳಿಗೆ ಸಂಬಂಧಪಟ್ಟ ಶಿಕ್ಷಣವನ್ನೂ ಸಹ ಭೋದಿಸಬೇಕೆಂದು ತೀರ್ಮಾನಿಸಲಾಗಿದೆ. ಮದ್ರಾಸು ಪ್ರಾಂತ್ಯದಲ್ಲಿ ನೂತನವಾಗಿ ಜಾರಿಗೆ ತಂದಿರುವ ಪರಿಷ್ಕೃತ ಶಿಕ್ಷಣ ಕ್ರಮವನ್ನು ಸಹ ಮಂಡಲಿಯು ಪ್ರಶಂಸಿಸಿ ನಿರ್ಣಯವನ್ನು ಮಾಡಿದೆ.

ಸಾಮಾಜಿಕ ಸುರಕ್ಷಿತ ಯೋಜನೆ ಅಗತ್ಯ

ಸಾಮಾಜಿಕ ಸುರಕ್ಷಿತ ಯೋಜನೆಯ ಬಗ್ಗೆ ಹೆಚ್ಚು ಗಮನ ಕೊಡಬೇಕು ಕನಿಷ್ಠ ಪಕ್ಷ ೧೦ ಮಂದಿ ನೌಕರರಾದರೂ ಇರುವ ಸಂಸ್ಥೆಯನ್ನೊಳಗೊಂಡು ಸಕಲ ಕೈಗಾರಿಕಾ ಮತ್ತು ವಾಣಿಜ್ಯ ಸಂಸ್ಥೆಗಳ ನೌಕರರಿಗೂ ಅನ್ವಯವಾಗಿ ಸಮಗ್ರ ಸುರಕ್ಷಿತ ಯೋಜನೆಯನ್ನು ವ್ಯವಸ್ಥೆ ಮಾಡಬೇಕು-ಎಂದು ಕಳೆದ ವರ್ಷ ಭಾರತಕ್ಕೆ ಭೇಟಿ ಇತ್ತ ವಿಶ್ವ ದ್ರವ್ಯನಿಧಿ ನಿಯೋಗದವರು ಕೇಂದ್ರ ಸರ್ಕಾರಕ್ಕೆ ಒಪ್ಪಿಸಿರುವ ವರದಿಯಲ್ಲಿ ತಿಳಿದಿದ್ದಾರೆ.

ಭಾರತದಲ್ಲಿ ಇಂದು ಧಾರಣೆಗಳು ಸೂಕ್ತವಾದ ಸ್ತಿಮಿತ ಮಟ್ಟಕ್ಕೆ ಬಂದಿವೆ ಮತ್ತು ಧಾರಣೆಗಳು ಯುದ್ಧ ಪೂರ್ವ ಮಟ್ಟಕ್ಕೆ ಇಳಿವ ಸಂಭವವೇ ಇಲ್ಲ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಜನಪದ ಯೋಜನಾ ಕಾರ್ಯ

೨ನೇ ಪಂಚವಾರ್ಷಿಕ ಯೋಜನೆಯಲ್ಲಿ ಜನಪದ ಯೋಜನಾ ಕಾರ್ಯಕ್ರಮದಲ್ಲಿ ೩೬೦೦ ವಿಭಾಗಗಳನ್ನು ರಚಿಸಿ ಕಾರ್ಯವನ್ನು ಮಾಡಲಾಗುತ್ತದೆ. ಈಗಾಗಲೇ ಈ ಕೆಲಸವು ದೇಶದಲ್ಲಿ ೧೨೦೦ ವಿಭಾಗಗಳಲ್ಲಿ ನಡೆಯುತ್ತಿವೆ. ೨ನೇ ಪಂಚವಾರ್ಷಿಕ ಯೋಜನೆಯಲ್ಲಿ ಭಾರತಾದ್ಯಂತ ಇರುವ ಎಲ್ಲಾ ಗ್ರಾಮಾಂತರ ಪ್ರದೇಶಗಳಿಗೆ ಜನಪದ ಯೋಜನಾ ಕಾರ್ಯವನ್ನು ವಿಸ್ತರಿಸಲಾಗುವುದು.

○ ಮೈಸೂರು ಸರ್ಕಾರದವರು ಖಾದಿ ಮತ್ತು ಗ್ರಾಮ ಕೈಗಾರಿಕಾ ಸಮಿತಿಯನ್ನು ಪುನರ್ರಚಿಸಿದ್ದಾರೆ.

ಯುವಕ ವೈದ್ಯರಿಗೆ ಕಡ್ಡಾಯ ಗ್ರಾಮಾಂತರ ಸೇವೆ

ಇಲ್ಲದಿದ್ದರೆ ಸರ್ಕಾರಿ ಕೆಲಸವಿಲ್ಲ

ಗ್ರಾಮಾಂತರಗಳಲ್ಲಿ ಒಂದು ವರ್ಷ ಕಾಲವಾದರೂ ಸೇವೆ ಸಲ್ಲಿಸದ ಯುವಕ ವೈದ್ಯರನ್ನು ಸರ್ಕಾರಿ ಕೆಲಸಕ್ಕೆ ನೇಮಿಸಿ ಕೊಳ್ಳಬಾರದೆಂದು ಭಾರತ ಸರ್ಕಾರವು ಕಾನೂನು ಮಾಡಲಿದೆಯೆಂದು ಪ್ರಧಾನಿ ನೆಹರೂ ತಿರುವನಂತಪುರ-ಕೊಚ್ಚಿಯ ಉಲ್ಲಾರ್ ಎಂಬಲ್ಲಿ ಮೆಡಿಕಲ್ ಕಾಲೇಜ್ ಆಸ್ಪತ್ರೆಯ ಪ್ರಾರಂಭೋತ್ಸವದಲ್ಲಿ ತಿಳಿಸಿದ್ದಾರೆ.

ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚು ವೈದ್ಯಕೀಯ ಸೌಲಭ್ಯ ಒದಗಿಸಬೇಕಾದ ಅಗತ್ಯವಿರುವುದರಿಂದ ಈ ಕಡ್ಡಾಯಸೇವೆಯನ್ನು ತರಬೇಕಾಗಿದೆಯೆಂದು ಅವರು ಹೇಳಿದ್ದಾರೆ. ಭಾರತ ನಗರಗಳಲ್ಲಿ ಆಸ್ಪತ್ರೆಗಳ ವ್ಯವಸ್ಥೆ ಚೆನ್ನಾಗಿದೆ ಆದರೆ ಗ್ರಾಮಾಂತರಗಳ ವ್ಯವಸ್ಥೆ ಸಾಲದು ರೋಗಗಳನ್ನು ವಾಸಿಮಾಡುವ ಪ್ರಶ್ನೆಗಿಂತ ಇಂದು ಪ್ರತಿ ಪ್ರದೇಶದ ಸಾರ್ವಜನಿಕ ಆರೋಗ್ಯದ ಕಡೆ ಗಮನ ಕೊಡಬೇಕಾಗಿದೆ. ಅರ್ಹ ವೈದ್ಯರುಗಳ ಕೊರತೆ ವಿಶೇಷವಾಗಿರುವುದರಿಂದ ಮೇಲ್ಕಂಡ ಕೊರತೆ ನಿವಾರಿಸಲು ಎಷ್ಟು ಕಾಲ ಹಿಡಿಯುವುದೆಂಬುನ್ನು ಹೇಳಲು ಸಾಧ್ಯವಿಲ್ಲ ಆದರೂ ಆದಷ್ಟು ಬೇಗ ಈ ಕೊರತೆಯನ್ನು ನಿವಾರಿಸಬೇಕು ಇದಕ್ಕೆ ಯುವಕ ವೈದ್ಯರು ಮುಂದೆ ಬಂದು ಸೇವೆ ಸಲ್ಲಿಸಬೇಕು ಎಂದು ಪ್ರಧಾನಿಯವರು ತಿಳಿಸಿದ್ದಾರೆ.

ಕರ್ನಾಟಕ ಪ್ರಾಂತ್ಯದ ರಚನೆ

ಇಂದಿನ ನಾನಾ ಸಂಸ್ಥಾನಗಳನ್ನು ಆಡಳಿತ, ಭಾಷೆ ಮತ್ತು ಇತರ ಸೌಕರ್ಯಗಳ ದೃಷ್ಟಿಯಿಂದ ಪುನರ್ವ್ಯವಸ್ಥೆ ಮಾಡಬೇಕು. ಮೈಸೂರು ಸೇರಿದ ಕರ್ನಾಟಕಪ್ರಾಂತ್ಯ ಬೇಗನೆ ರಚಿತವಾಗುವುದು. ಆದರೆ ಈ ಭಾಷಾ ಪ್ರಾಂತ್ಯಗಳು ಭಾಷಾ ಮನೋಭಾವನೆ ತೊರೆದು ಸಮಗ್ರ ರಾಷ್ಟ್ರದ ಹಿತವನ್ನು ಲಕ್ಷದಲ್ಲಿಟ್ಟುಕೊಳ್ಳಬೇಕು-ಎಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಬಿಜಾಪುರದಲ್ಲಿ ತಿಳಿಸಿದ್ದಾರೆ.

ಮಲತಾಯಿ ಮತ್ತು ಮಗುವಿನ ಕೊಲೆ

ಲಾಹೋರಿನ ಸಿವಿಲ್ ಜಡ್ಜರಾದ ಶ್ರೀ ಎಂ. ಜಿ. ಚೀಮಾರವರ ೧೬ ವರ್ಷದ ಪರ್‌ವಿಜ್ ಎಂಬಾತನು ತನ್ನ ಮಲತಾಯಿ ಮತ್ತು ಆಕೆಯ ನಾಲ್ಕುವರ್ಷದ ಮಗುವನ್ನು ಕೊಲೆ ಮಾಡಿದನೆಂಬ ಆಪಾದನೆ ಮೇಲೆ ದಸ್ತಗಿರಿ ಮಾಡಲಾಗಿದೆ.

★ ಬಳ್ಳಾರಿಯ ಕೆಲವು ಭಾಗಗಳನ್ನು ಮೈಸೂರಿಗೆ ಸೇರಿಸಲು ಸಲಹೆ ಮಾಡಿದ ಮಿಶ್ರಾ ತೀರ್ಪನ್ನು ಬಳ್ಳಾರಿ ತಾಲ್ಲೂಕು ಆಂಧ್ರ ಸಮ್ಮೇಳನವು ಖಂಡಿಸಿ ಇದು ಅನ್ಯಾಯವೆಂದು ಹೇಳಿದೆ.

ಸಂಸ್ಥಾನದಲ್ಲಿ ಹೊಸದಾಗಿ ೫೦೦ ಉಪಾಧ್ಯಾಯರ ನೇಮಕ

ಪತ್ರಿಕಾಸಮ್ಮೇಳನದಲ್ಲಿ ವಿದ್ಯಾಭ್ಯಾಸ ಮುಖ್ಯಾಧಿಕಾರಿಗಳ ವಿವರಣೆ

ಬೆಂಗಳೂರು ೯

ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸವನ್ನು ಒದಗಿಸುವ ಉದ್ದೇಶದಿಂದ ಸರ್ಕಾರವು ಎಸ್. ಎಸ್. ಎಲ್. ಸಿ ಆಗಿರುವ ಸುಮಾರು ೫೦೦ ಜನರನ್ನು ಭಾರತ ಸರ್ಕಾರದ ಆದೇಶದಂತೆ ಸಂಸ್ಥಾನದ ಪ್ರಾಥಮಿಕ ಶಾಲೆಗಳಿಗಾಗಿ ನೇಮಿಸಿಕೊಳ್ಳಲಾಗುವುದೆಂದು ವಿದ್ಯಾಭ್ಯಾಸ ಇಲಾಖಾ ಮುಖ್ಯಾಧಿಕಾರಿ ಶ್ರೀ ಜೆ. ಬಿ. ಮಲ್ಲಾರಾಧ್ಯರವರು ನಿನ್ನೆ ಪತ್ರಿಕಾಸಮ್ಮೇಳನದಲ್ಲಿ ತಿಳಿಸಿದ್ದಾರೆ.

ಈ ನೇಮಕದಲ್ಲಿ ೨೦೦ ಜನರನ್ನು ಹೊಸದಾಗಿ ಸ್ಥಾಪಿಸಲಾಗುವ ಒಂದೇ ಉಪಾಧ್ಯಾಯರಿರುವ ಶಾಲೆಗಳಿಗೂ ಇನ್ನು ೩೦೦ ಜನರನ್ನು ಈಗ ಖಾಲಿ ಇರುವ ಶಾಲೆಗಳಿಗೆ ನೇಮಿಸಲಾಗುವುದೆಂದೂ ಇದಕ್ಕಾಗಿ ತಗಲುವ ವೆಚ್ಚದಲ್ಲಿ ಮೊದಲನೆಯವರ್ಷ ಶೇಕಡ ೭೫, ೨ನೇ ವರ್ಷ ಶೇಕಡ ೫೦, ಮೂರನೇ ವರ್ಷ ಶೇಕಡ ೨೫ ರಷ್ಟನ್ನು ಕೇಂದ್ರಸರ್ಕಾರವು ಸಹಾಯದ್ರವ್ಯ ರೂಪದಲ್ಲಿ ಕೊಡುವುದೆಂದೂ ಅನಂತರ ಈ ವೆಚ್ಚವನ್ನೆಲ್ಲಾ ಪ್ರಾಂತ್ಯಸರ್ಕಾರವೇ ವಹಿಸಿಕೊಳ್ಳುವುದೆಂದೂ ತಿಳಿಸಿದ್ದಾರೆ. ಚುನಾಯಿತರಾದವರಿಗೆ ೬ ವಾರಕಾಲ ತರಪೇತು ಕೊಡಲಾಗುವುದೆಂದೂ ಅವರು ತಿಳಿಸಿದ್ದಾರೆ.

ಇಸ್ಲಾಂ ರಾಷ್ಟ್ರಗಳ ಸೈನ್ಯ ನೆರವಿಗೆ ಅಮೆರಿಕನ್ನರ ವಿರೋಧ

ಮಧ್ಯಪ್ರಾಚ್ಯದಲ್ಲಿರುವ ಅರಬ್ ರಾಷ್ಟ್ರಗಳಿಗೆ ಸೈನ್ಯ ನೆರವನ್ನು ನೀಡಬೇಕೆಂದು ಅಮೆರಿಕಾ ಸರ್ಕಾರದ ಹೊಸನೀತಿಗೆ ಅಲ್ಲಿನ ಡೆಮೊಕ್ರಾಟಿಕ್ ಮತ್ತು ರಿಪಬ್ಲಿಕ್ ಪಕ್ಷದ ೩೫ ಮಂದಿ ಕಾಂಗ್ರೆಸ್ಸಿಗರು ತಮ್ಮ ತೀವ್ರ ಕಳವಳ ಮತ್ತು ಪ್ರತಿಭಟನೆಯನ್ನು ವ್ಯಕ್ತಪಡಿಸಿ ವಿದೇಶಾಂಗಸಚಿವ ಡಲ್ಸ್‌ರವರಿಗೆ ಪತ್ರ ಬರೆದಿದ್ದಾರೆ.

ಒಕ್ಕಲುತನ ಕಾನೂನು

ರೈತರಿಗೆ ಮತ್ತು ಅಲ್ಪಪ್ರಮಾಣ ಹಿಡುವಳಿದಾರರಿಗೆ ನೆರವು ನೀಡುವುದಕ್ಕಾಗಿಯೇ ಒಕ್ಕಲುತನ ಕಾನೂನನ್ನು ಜಾರಿಗೆ ತಂದಿರುವುದಾಗಿ ಹೈದರಾಬಾದಿನ ಮುಖ್ಯ ಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಹೇಳಿದ್ದಾರೆ.

ಗೋವಾದಲ್ಲಿ ಸತ್ಯಾಗ್ರಹವೆ?

ಭಾರತದಲ್ಲಿ ಪೋರ್ಚುಗೀಸ್ ಸ್ವಾಮ್ಯಕ್ಕೊಳಪಟ್ಟ ಗೋವಾವು ಭಾರತದೊಡನೆ ವಿಲೀನಗೊಳ್ಳುವುದಕ್ಕಾಗಿ ಅಲ್ಲಿರುವ ರಾಷ್ಟ್ರೀಯ ಕಾಂಗ್ರೆಸ್ ಸತ್ಯಾಗ್ರಹವನ್ನು ಪ್ರಾರಂಭಿಸುವುದಾಗಿ ಅದರ ಅಧ್ಯಕ್ಷ ಶ್ರೀ ಪೀಟರ್ ಅಲ್ವಾರಿಸ್‌ರವರು ತಿಳಿಸಿದ್ದಾರೆ.

ಕೃಷ್ಣಾನದಿಗೆ ಅಣೆಕಟ್ಟು

ಕೃಷ್ಣಾನದಿಗೆ ಅಡ್ಡಲಾಗಿ ನಂದಿಕೊಂಡ ಎಂಬಲ್ಲಿ ೨೫ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಜಲಾಶಯವೊಂದನ್ನು ನಿರ್ಮಿಸಲು ಆಂಧ್ರ ಮತ್ತು ಹೈದರಾಬಾದ್ ಸರ್ಕಾರಗಳು ಪರಿಶೀಲನೆ ನಡೆಸುತ್ತಲಿರುವುದಾಗಿಯೂ, ಈ ವಿಷಯದಲ್ಲಿ ಸದ್ಯದಲ್ಲಿಯೇ ತೀರ್ಮಾನವಾಗುವ ನಿರೀಕ್ಷೆಯಿದೆಯೆಂದೂ ತಿಳಿಯಬರುತ್ತದೆ.

ಕುಂಭಮೇಳದಲ್ಲಿ ಕಾಲರಾ

ಕುಂಭಮೇಳದಲ್ಲಿ ಕಳೆದ ಬುಧವಾರ ನಡೆದ ದುರಂತದ ಜೊತೆಗೆ ಅಲ್ಲಿ ಕಾಲರಾ ರೋಗ ಕಾಣಿಸಿಕೊಂಡಿರುವುದು ಈಗ ಯಾತ್ರಿಕರಿಗೆ ಇನ್ನೂ ವಿಶೇಷ ಗಾಭರಿಯನ್ನುಂಟುಮಾಡಿದೆ. ಅಲ್ಲಿಂದ ಅವರುಗಳು ಓಡುತ್ತಿದ್ದಾರೆ ೩೬ ಗಂಟೆಗಳಲ್ಲಿ ೩೦ ಕಾಲರಾ ಕೇಸುಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಭಾರತ ಮೇಲ್ವಿಚಾರಕ ಸೈನ್ಯ ವಾಪಸ್ಸು

ಸ್ವದೇಶಕ್ಕೆ ಹಿಂತಿರುಗದ ಯುದ್ಧ ಖೈದಿಗಳ ಮೇಲ್ವಿಚಾರಣೆಗಾಗಿ ಕೊರಿಯಾಕ್ಕೆ ತೆರಳಿದ್ದ ಭಾರತ ಸೈನ್ಯದ ಮೊದಲನೆ ತಂಡದ ೧೬೦೦ ಜನರು ನಿನ್ನೆಯದಿನ ಸ್ವದೇಶಕ್ಕೆ ಹಿಂತಿರುಗಲು ಹೊರಟಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೮—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೧೨	೨೨—೨
ಎಳ್ಳು	೭೦—೨	—
ಹುರಳಿ	೩೫—	೪೨—
ಹುಚ್ಚೆಳ್ಳು	೩೫—	೪೨—೮
ತೊಂಗೆಬೀಜ	೧೯—೧೦	೨೨—೧೨
ಹುಣಸೆಬೀಜ	೧೩—೧೨	೧೩—೧೪
ಹುರುಳಿ	೨೫—೪	೩೧—೬
ಹೆಸರು	೩೪—೧೨	೪೦—
ಅಲಸಂದೆ	೩೦—೨	೪೦—
ಅವರೆ	೩೩—೨	೩೬—೨
ಕಡಲೆ	೫೨—	೫೫—
ಉದ್ದು	—	—
ಕೊತ್ತಂಬರಿ	೨೫—೧೪	೨೫—೪
ಹೊಗರಿ	೧೮—	೨೬—೧೨
ಹುಣಸೆಹಣ್ಣು	೩—೧೩	೧೦—೧೨
ಮೆಣಸಿನಕಾಯಿ	೩೩—೧೪	೩೩—
ಸೀಗೆಕಾಯಿ	೪—೪	೪—೧೫
ಬೆಲ್ಲ	೪—೧೨	೫—
ಕೊಬ್ಬರಿಕಾಯಿ	೧೪೬—	೩೪೦—

ಗೂಡ್ಸ್ ಗಾಡಿ ಉರುಳಿ ಭಾರಿ ರೈಲ್ವೆ ಅಪಘಾತ

೩೦ ಮಂದಿ ಮರಣ ; ೯ ಜನರಿಗೆ ಗಾಯ

ಉತ್ತರಪ್ರದೇಶದಲ್ಲಿ ಕಾಶಿಗೆ ೪೨ ಮೈಲಿ ದೂರದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ರೈಲ್ವೆವಿಭಾಗದಲ್ಲಿ ನಿನ್ನೆ ಗೂಡ್ಸ್‌ಗಾಡಿಯ ೧೩ ವ್ಯಾಗನ್ನುಗಳು ಉರುಳಿ ೩೦ಮಂದಿ ಕಾರ್ಮಿಕರು ಮಡಿದು ೯ ಜನರಿಗೆ ಗಾಯಗಳಾಗಿರುವುದೆಂದು ತಿಳಿಯಬರುತ್ತದೆ.

ಈ ಮಾರ್ಗದಲ್ಲಿ ನಿನ್ನೆಯದಿನ ಗೂಡ್ಸ್ ಗಾಡಿಯು ರಿಪೇರಿಯಾಗುತ್ತಿದ್ದ ಒಂದು ಸೇತುವೆಯನ್ನು ದಾಟಿ ಮುಂದಕ್ಕೆ ಹೋದಾಗ ಗಾಡಿಯ ೧೩ ವ್ಯಾಗನ್ನುಗಳು ಸಡಿಲವಾಗಿ ಅವುಗಳ, ಹಿಂದಕ್ಕೆ ರಭಸವಾಗಿ ಓಡಲಾರಂಭಿಸಿತು. ಸೇತುವೆಯ ಬಳಿ ಕೆಲಸ ಮಾಡುತ್ತಿದ್ದವರು ಈ ಗಾಡಿಗಳಿಗೆ ಸಿಕ್ಕಿ ಅನೇಕರು ಕೆಳಗುರುಳಿದರು. ಒಟ್ಟು ಸ್ಥಳದಲ್ಲಿಯೇ ೨೫ ಜನರು ಸತ್ತುಹೋದರು. ಆಸ್ಪತ್ರೆಗೆ ಸಾಗಿಸುವಾಗ ೫ ಜನ ಮಡಿದರು ಆ ೧೩ ವಾಗನ್ನುಗಳು ಸುಮಾರು ೫೦ ಅಡಿಗಳ ಕೆಳಗೆ ಬಿದ್ದು ಗಾಡಿಗಳೆಲ್ಲವೂ ಚೂರುಚೂರಾದುವು. ಸೇತುವೆಗೂ ಸಹ ವಿಶೇಷ ಜಖಂ ಆಗಿದೆ. ಉತ್ತರ ರೈಲ್ವೆ ಅಧಿಕಾರಿಗಳು ಸ್ಥಳಕ್ಕೆ ಹೋಗಿ ತನಿಖೆ ನಡೆಸುತ್ತಲಿದ್ದಾರೆ.

ನ್ಯೂಸ್ ಪ್ರಿಂಟ್ ತಯಾರಿಕಾ ಕಾರ್ಖಾನೆ

ಉತ್ತರ ಪ್ರದೇಶದಲ್ಲಿ ೫ಕೋಟಿ ೪೦ಲಕ್ಷ ರೂಪಾಯಿಗಳ ಬಂಡವಾಳದಲ್ಲಿ ವೃತ್ತಪತ್ರಿಕಾ ಕಾಗದ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಲಾಗುತ್ತದೆ. ಕಾಗದ ಪ್ರಾಯೋಗಿಕಾ ತಯಾರಿಕಾ ಕಾರ್ಯವು ಇದೇ ಜುಲೈ ಮಾಹೆಯಿಂದ ಪ್ರಾರಂಭವಾಗುವುದಾಗಿ ತಿಳಿಯಬರುತ್ತದೆ.

ಪೂರ್ಣಾನದಿ ಅಪಘಾತ

ಮೊನ್ನೆಯದಿನ ಪಾಟ್ನಾಬಳಿ ಪೂರ್ಣನದಿಯಲ್ಲಿ ೧೦೦ ಜನರಿದ್ದ ದೋಣಿಯೊಂದು ಮುಳುಗಿಹೋಯಿತಷ್ಟೆ. ಅದರಲ್ಲಿ ಸುಮಾರು ೩೦ ಜನರನ್ನು ಸಂರಕ್ಷಿಸಲಾಯಿತೆಂದೂ ಇಲ್ಲಿಯವರೆಗೆ ೧೮ ಶವಗಳ ಪತ್ತೆ ಹಚ್ಚಿರುವುದಾಗಿ ತಿಳಿಯಬರುತ್ತದೆ. ಇನ್ನೂ ಪತ್ತೆಯಾಗದವರಿಗಾಗಿ ಕಾರ್ಯಗಳು ನಡೆಯುತ್ತಿವೆ.

ಕೇಂದ್ರ ಆರೋಗ್ಯ ಸಮಿತಿ ಸಮ್ಮೇಳನ

ಕೇಂದ್ರ ಆರೋಗ್ಯ ಸಮಿತಿಯ ೨ ನೇ ಸಮ್ಮೇಳನವು ನಿನ್ನೆ, ರಾಜಕೋಟೆಯಲ್ಲಿ ಆರೋಗ್ಯ ಸಚಿವ ಶ್ರೀಮತಿ ರಾಜಕುಮಾರಿ ಅಮೃತಕೌರ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಎಲ್ಲಾ ಪ್ರಾಂತ್ಯ ಆರೋಗ್ಯ ಸಚಿವರು ಮತ್ತು ಮುಖ್ಯಾಧಿಕಾರಿಗಳು ಈ ಸಮ್ಮೇಳನದಲ್ಲಿ ಭಾಗವಹಿಸುವರು.

ಮುಂಗಡ ಹಣ ಕೊಡದೆ ಧರ್ಮ !

ಕುಂಭಮೇಳಕ್ಕೆ ಬಂದ ಯಾತ್ರಿಕರ ಪೈಕಿ ೧೦೫ ಮಂದಿಗೆ ಮೂರುದಿನಗಳ ಕಾಲ ಊಟ ಮತ್ತು ಬಟ್ಟೆಗಳನ್ನು ಕೊಟ್ಟು ತನಗೆ ಅದರ ಖರ್ಚಿನ ಬಾಬ್ತು ಬಿಲ್ ಕಳುಹಿಸಿ ಕೊಡಬೇಕೆಂದು ಬಿಹಾರ್ ಮುಖ್ಯ ಮಂತ್ರಿ ಡಾ॥ ಶ್ರೀ ಕೃಷ್ಣಸಿನ್ಹರವರು ಸೂಚಿಸಿದ್ದ ಪ್ರಾರ್ಥನೆಯು ಕುಂಭಮೇಳದ ಅಧಿಕಾರಿಗಳಿಗೆ ಆಶ್ಚರ್ಯ ಮತ್ತು ತಲೇನೋವು ಉಂಟುಮಾಡಿದೆ. ಮುಂಗಡವಾಗಿ ಹಣ ಪಡೆಯದೇ ಖಾಸಗಿಯವರಿಗಾಗಿ ಹಣ ಖರ್ಚುಮಾಡಲು ಮೇಳದ ಅಧಿಕಾರಿಗಳಿಗೆ ಹಿಂದಿನ ಯಾವ ಸಂಪ್ರದಾಯವೂ ಇಲ್ಲದಿರುವುದೇ ಈ ಜಿಜ್ಞಾಸಕ್ಕೆ ಕಾರಣವಾಗಿದೆ.

ತಿರುವಾಂಕೂರಿನಲ್ಲಿ ವಿರೋಧ ಪಕ್ಷಗೆದ್ದರೆ ಆಡಳಿತಕ್ಕೆ ಬರಲಿ

ತಿರುವಾಂಕೂರು-ಕೊಚ್ಚಿಯಲ್ಲಿ ಕಾಂಗ್ರೆಸ್ ಪ್ರಚಾರ ನಡೆಸುತ್ತಲಿರುವ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ನಿನ್ನೆಯದಿನ ಅಲ್ಲಿ ಮಾತನಾಡುತ್ತ ಈಗಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಸೋತು ವಿರೋಧ ಪಕ್ಷವು ಜಯಗಳಿಸಿದರೆ, ರಾಜ್ಯಾಂಗರೀತ್ಯಾ ಅದು ಆಡಳಿತವನ್ನು ವಹಿಸಿಕೊಳ್ಳುವುದರಲ್ಲಿ ತಮ್ಮ ಅಭ್ಯಂತರವೇನೂ ಇಲ್ಲ. ಆದರೆ ಎಲ್ಲರೂ ರಾಜ್ಯಾಂಗಕ್ಕೆ ಅನುಗುಣವಾಗಿ ನಡೆಯಬೇಕು ಎಂದು ಹೇಳಿದ್ದಾರೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ. ಒಟ್ಟು 2000 ಬಹುಮಾನಗಳು. ಬಹುಮಾನದ ಮೊಬಲಗು 45000 ರೂ. ಟಿಕೇಟು ಒಂದಕ್ಕೆ ಒಂದೇರೂಪಾಯಿ. ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು.
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್ ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೩೫

೧೦-೨-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕರ್ನಾಟಕ-ಆಂಧ್ರ ಗಡಿ ನಿರ್ಧರಿಸಲು ಸಮಿತಿ

ಮೈಸೂರು ಸರ್ಕಾರ ಸದ್ಯದಲ್ಲೇ ನೇಮಿಸುವುದು

ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಪ್ರಾರ್ಥನೆಯ ಮೇರೆ ಕರ್ನಾಟಕ ಮತ್ತು ಆಂಧ್ರಗಳ ನಡುವೆ ಗಡಿ ಗೊತ್ತುಪಡಿಸುವ ಬಗ್ಗೆ ಒಂದು ಗಡಿ ನಿರ್ಧಾರ ಸಮಿತಿಯನ್ನು ಮೈಸೂರು ಸರಕಾರವು ಸದ್ಯದಲ್ಲೇ ನೇಮಿಸುವುದೆಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹುಬ್ಬಳ್ಳಿಯಲ್ಲಿ ತಿಳಿಸಿದ್ದಾರೆ.

ಕನ್ನಡಿಗರ ಬಯಕೆಯನ್ನು ಈಡೇರಿಸಬೇಕು

ಮುಖ್ಯ ಮಂತ್ರಿ ಹನುಮಂತಯ್ಯನವರ ಹೇಳಿಕೆ

ಉತ್ತರ ಕರ್ನಾಟಕದ ೫೫ ಲಕ್ಷಜನರು ಕರ್ನಾಟಕ ಪ್ರಾಂತರಚನೆ ತಡವಾಗಿರುವುದರಿಂದ ಅಸಮಾಧಾನಗೊಂಡಿದ್ದಾರೆ. ಯಾವುದೇ ಪ್ರದೇಶದ ಜನತೆಯ ಅತೃಪ್ತಿಯು ಇಡೀ ರಾಷ್ಟ್ರದ ಐಕ್ಯತೆಗೆ ತೀವ್ರ ಧಕ್ಕೆಯನ್ನುಂಟುಮಾಡುವುದು. ಅದನ್ನು ಸಮಂಜಸವಾಗಿ ನಿವಾರಿಸಬೇಕಾದುದು ಅಗತ್ಯ. ಕನ್ನಡ ಭಾಷಾ ಪ್ರದೇಶಗಳ ಜನರ ಇಚ್ಛೆಯನ್ನು ಈಡೇರಿಸುವುದಕ್ಕಾಗಿ ಕೇಂದ್ರಕ್ಕೆ ಪ್ರಾಂತ್ಯಗಳ ಪುನರ್ವಿಂಗಡನಾ ಸಮಿತಿಯವರು ತಮ್ಮ ಅಂತ್ಯ ವರದಿಯನ್ನೊಪ್ಪಿಸುವುದಕ್ಕೆ ಮೊದಲು ಒಂದು ತಾತ್ಕಾಲಿಕ ವರದಿಯನ್ನು ಕೊಟ್ಟು ಕನ್ನಡಿಗರಿಗೆ ತೃಪ್ತಿಯನ್ನುಂಟುಮಾಡುವರೆಂದು ನಂಬಲಾಗಿದೆ ಎಂದು ಮೈಸೂರಿನ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ತಮ್ಮ ಉತ್ತರ ಕರ್ನಾಟಕ ಪ್ರವಾಸದ ಅಂತ್ಯದಲ್ಲಿ ಹೇಳಿದ್ದಾರೆ.

ಭಾರತದಲ್ಲಿ ಕಾಶ್ಮೀರ ಸೇರ್ಪಡೆ

ಭಾರತದಲ್ಲಿ ಕಾಶ್ಮೀರವು ಸೇರುವ ವಿಷಯದಲ್ಲಿ ಈಗ ಕಾಶ್ಮೀರ ರಾಜ್ಯಾಂಗ ಸಭೆಯು ನಿರ್ದಿಷ್ಟವಾದ ತೀರ್ಮಾನವನ್ನು ಮಾಡಿದೆ.

ಈಗ ಆ ವಿಷಯದಲ್ಲಿ ಇನ್ನು ಮುಂದೆ ಮಾತುಕತೆ ನಡೆಸುವುದು ರಾಜ್ಯಾಂಗಕ್ಕೆ ವಿರೋಧವಾಗುತ್ತದೆ. ಮತ್ತು ಅದನ್ನು ಉಲ್ಲಂಘಿಸಿದಂತಾಗುವುದು ಎಂಬುದಾಗಿ ಹಿಂದೂಮಹಾಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ದೇಶಪಾಂಡೆಯವರು ಹೇಳಿರುವರು.

ಏಷ್ಯಾಕ್ಕೆ ಪುನಃ ಕಾಲಿಡಲು ವಿದೇಶಿಗಳ ಪ್ರಯತ್ನ

ಪ್ರಧಾನಿ ನೆಹರೂರವರ ಖಂಡನೆ

ಏಷ್ಯಾಖಂಡಕ್ಕೆ ಪಾಶ್ಚಾತ್ಯ ರಾಷ್ಟ್ರಗಳು ಪುನಃ ಕಾಲಿಡಲು, ಯತ್ನಿಸುತ್ತಲಿರುವುದಕ್ಕೆ ಅತ್ಯಂತವಾಗಿ ವಿಷಾದ ಪಡಬೇಕಾಗಿದೆ. ಅಮೆರಿಕಾವು ಪಾಕೀಸ್ತಾನಕ್ಕೆ ಮಿಲಿಟರಿ ನೆರವನ್ನು ಕೊಡುವುದೇ ಇದಕ್ಕೆ ಸಾಕ್ಷಿಯಾಗಿದೆ. ನಾವು ಈ ನೀತಿಗೆ ಹೆದರುವವರಲ್ಲ, ಗಾಬರಿಯು ಪಡಬೇಕಾಗಿಲ್ಲ. ಈ ರೀತಿ ಪರಿಸ್ಥಿತಿಯು ಈಗ ಉದ್ಭವಿಸಿರುವುದು ಭಾರತಕ್ಕೆ ಒಂದು ರೀತಿಯ ಪ್ರಯೋಜನವನ್ನುಂಟುಮಾಡಿದೆ. ಜನತೆಯಲ್ಲಿ ಜಡತ್ವ ನಿವಾರಣೆಯಾಗಿ ಜಾಗೃತಿಯುಂಟಾಗುವುದು ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ನಿನ್ನೆಯದಿನ ತಿರುವಾಂಕೂರ್-ಕೊಚ್ಚಿಯ ಚುನಾವಣಾ ಪ್ರಚಾರದ ಮುಕ್ತಾಯ ಭಾಷಣದಲ್ಲಿ ತಿಳಿಸಿದ್ದಾರೆ.

ಒಂದು ದೇಶವು ಶಸ್ತ್ರಾಸ್ತ್ರಗಳಿಂದ ಬಲಯುತವಾಗುವುದಿಲ್ಲ. ಶಿಸ್ತು ಮತ್ತು ಜನತೆಯ ಐಕ್ಯಮತ್ಯ ಮತ್ತು ಆರ್ಥಿಕ ಮಟ್ಟ ಉತ್ತಮಗೊಳ್ಳುವುದರಿಂದಲೇ ಮಾತ್ರ ಸಾಧ್ಯ. ವಿದೇಶಗಳಿಂದ ಟ್ಯಾಂಕುಗಳು ಮುಂತಾದುವನ್ನು ತರಿಸಿಕೊಂಡರೆ ಒಂದೆರಡು ವರ್ಷಗಳು ಮಾತ್ರ ಬರುತ್ತವೆ. ಆದರೆ ತನಗೆ ಬೇಕಾದ ವಸ್ತುಗಳನ್ನೆಲ್ಲಾ ತಾನೇ ತಯಾರಿಸಿಕೊಂಡರೆ ಮಾತ್ರ ಆಗ ನಿಜವಾದ ಶಕ್ತಿಯುಂಟಾಗುತ್ತದೆ. ದೇಶದಲ್ಲಿ ಉತ್ಪನ್ನ ಹೆಚ್ಚಿ ನಿರುದ್ಯೋಗವೂ ತಪ್ಪಬೇಕು ಆಗ ದೇಶವು ಶಕ್ತಿಯುತವಾಗುತ್ತದೆ ಎಂಬುದಾಗಿ ಶ್ರೀ ನೆಹರೂರವರು ತಿಳಿಸಿದ್ದಾರೆ.

ಜಿಲ್ಲಾಬೋರ್ಡ್ ಸಮಿತಿಗಳ ಸಮಾಪ್ತಿ

ಮೈಸೂರು ಜಿಲ್ಲಾ ಬೋರ್ಡ್ ತಿದ್ದುಪಡಿ ಕಾನೂನು ಜಾರಿಗೆ ಬಂದಿರುವುದರಿಂದ ಈಗಿರುವ ಜಿಲ್ಲಾ ಬೋರ್ಡ್ ಅಧ್ಯಕ್ಷ ಮತ್ತು ಸದಸ್ಯರುಗಳ ಅಧಿಕಾರಾವಧಿಯು ಇದೇ ೧೫ನೇ ತಾರೀಖಿನಿಂದ ಮುಕ್ತಾಯವಾಗುವುದೆಂದೂ ಸರ್ಕಾರದ ಆಜ್ಞೆ ಹೊರಟಿದೆ. ಆಯಾ ಜಿಲ್ಲಾಧಿಕಾರಿಗಳೇ ಆ ಬೋರ್ಡ್‌ಗಳ ವಿಶೇಷ ಅಧಿಕಾರಿಗಳಾಗುವರು. ಮತ್ತು ಮೇಲ್ಕಂಡದಿನ ಅವರು ಅಧಿಕಾರ ವಹಿಸಿಕೊಳ್ಳುವರು.

ಮಠಗಳಿಗೆ ಸರ್ಕಾರದ ಗ್ರಾಂಟು

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರ ಹೇಳಿಕೆ

ಶೃಂಗೇರಿ ಮಠ ಅಥವ ಮತ್ತಾವುದೇ ಜಹಗೀರಿನ ಸಾಧಾರಣ ವರಮಾನವನ್ನು ಕಿತ್ತುಕೊಳ್ಳಲು ಸರ್ಕಾರದ ಉದ್ದೇಶವಲ್ಲ. ಅಲ್ಲಿರುವ ಜಹಗೀರುಗಳ ಗೇಣಿದಾರರುಗಳಿಗೆ ಸಂಸ್ಥಾನದ ಇತರ ಗೇಣಿದಾರರುಗಳಿಗೆ ಸಮಾನವಾದ ಹಕ್ಕುಗಳನ್ನು ಕೊಡಲು ಮಾತ್ರ ಉದ್ದೇಶಿಸಲಾಗಿದೆ. ಸರ್ಕಾರದವರು ಮಠಗಳಿಗೆ ವಾರ್ಷಿಕ ಗ್ರಾಂಟನ್ನು ಕೊಡುವರು-ಎಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೈಸೂರು ಮಠಗಳ ಇನಾಂ ರದ್ದು ಮಸೂದೆಯ ವಿಷಯದಲ್ಲಿ ಪ್ರಸ್ತಾಪಿಸುತ್ತಾ ಹುಬ್ಬಳ್ಳಿಯಲ್ಲಿ ತಿಳಿಸಿರುತ್ತಾರೆ.

ಕಾಂಗ್ರೆಸ್ ಮೆಂಬರು ಮಾಡಿಸಲಿಕ್ಕೆ ನಿರ್ಬಂಧ

ಮೈಸೂರು ನಗರದಲ್ಲಿ ಕಾಂಗ್ರೆಸ್ ಮೆಂಬರುಗಳನ್ನು ಮಾಡಿಸಲು ಅಲ್ಲಿಯ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರ ಹತ್ತಿರ ಹೋಗಿ ಮೆಂಬರು ಮಾಡಲಿಕ್ಕೆ ಪುಸ್ತಕಗಳನ್ನು ಕೇಳಿದರೆ ಒಂದು ಅಥವಾ ಎರಡನ್ನು ಮಾತ್ರ ಕೊಡುತ್ತೇವೆ ಹೆಚ್ಚಿಗೆ ಪುಸ್ತಕ ನನ್ನಲ್ಲಿಲ್ಲ ಎಂದು ಹೇಳುತ್ತಾರೆ. ಈ ಎರಡು ಪುಸ್ತಕಗಳನ್ನು ಕೊಡಲು ಸುಮಾರು ೫-೬ ದಿವಸ ತಿರುಗಿಸುತ್ತಾರೆ. ಈ ರೀತಿ ಅವರು ಸತಾಯಿಸಿ ಕಾಲ ಕಳೆಯುತ್ತಿರುತ್ತಾರೆ-ಸಿಟಿಯಲ್ಲಿ ಈಗಿನ ಅಧಿಕಾರಿ ವರ್ಗದವರ ಮೇಲೆ ಬಹಳ ಪೈಪೋಟಿ, ಇದ್ದು ಪ್ರಬಲವಾದ ವಿರೋಧವಿರುವುದೇ ಇವಕ್ಕೆ ಕಾರಣ. ಎಲ್ಲಿ ಕಾಂಗ್ರೆಸ್ ಮೆಂಬರುಗಳನ್ನು ಹೆಚ್ಚಾಗಿ ಮಾಡಿಸಿ ಸಿಟಿ ಕಾಂಗ್ರೆಸ್ ಬೇರೆಯವರಿಗೆ ಹೋಗುವುದೋ ಎಂಬ ಹೆದರಿಕೆ ನಾನು ಕಾರ್ಯದರ್ಶಿಯವರಿಗೆ ಇದರ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಿಗೂ ಮತ್ತು ಎಂ. ಪಿ. ಸಿ. ಸಿ. ಅಧ್ಯಕ್ಷರಿಗೂ ಮೆಂಬರು ಮಾಡಲಿಕ್ಕೆ ಪುಸ್ತಕಗಳನ್ನು ಕೊಡುವುದಿಲ್ಲ. ಎಂದು ಪತ್ರ ಬರೆಯುತ್ತೇನೆಂದು ಹೇಳಿದರೆ ಯಾರಿಗೆ ಬೇಕಾದರೂ ಬರೆದುಕೋ ನನ್ನ ಹತ್ತಿರ ಪುಸ್ತಕ ಇಲ್ಲ ಎಂದು ಧೋರಣೆ ಮಾತನಾಡಿದರು. ಇವರ ನಡವಳಿಕೆ ಬಗ್ಗೆ ಸಾರ್ವಜನಿಕರೇ ಯೋಚಿಸಲಿ.

ಟಿ. ಎಸ್. ಸುಬ್ಬಣ್ಣ.

ತಂಬಾಕು ಕೊಳ್ಳುವವರೇ ಇಲ್ಲ

ಆಂಧ್ರ ಪ್ರಾಂತ್ಯದಲ್ಲಿ ಸುಮಾರು ೩ ಕೋಟಿ ಮಣಗಳಷ್ಟು ತಂಬಾಕನ್ನು ಕೊಳ್ಳುವವರೇ ಇಲ್ಲದೆ ಹಾಗೇಯೇ ಉಳಿದು ಹೋಗಿದೆ. ಅದಕ್ಕೆ ವಿದೇಶಗಳಲ್ಲಿ ಗಿರಾಕಿಗಳನ್ನು ಪಡೆಯಲು ಭಾರತ ಸರ್ಕಾರವು ಉನ್ನತ ಅಧಿಕಾರಿಯೋರ್ವರನ್ನು ವಿದೇಶಕ್ಕೆ ಕಳುಹಿಸಲಿದೆ.

ಶಾಲಾ ತಾಯಂದಿರ ನೇಮಕ

ಗ್ರಾಮಾಂತರ ಪ್ರದೇಶಗಳಲ್ಲಿ ಬಾಲಕಿಯರ ವಿದಾಭ್ಯಾಸಕ್ಕೆ ಸಂಬಂಧಪಟ್ಟಂತೆ 'ಶಾಲಾ ತಾಯಂದಿರು ಅಥವಾ ಶಾಲಾ ಮೇಲ್ವಿಚಾರಕರು' ಎಂಬ ನೂತನ ಹುದ್ದೆಯನ್ನು ಕಲ್ಪಿಸಬೇಕೆಂದು ದೆಹಲಿಯಲ್ಲಿ ನಡೆದ ವಿದ್ಯಾಸಮಿತಿಯು ಸರ್ಕಾರಕ್ಕೆ ಶಿಫಾರ್ಸು ಮಾಡಿದೆ.

ಈ ನೇಮಕಗಳನ್ನು ಮಾಡುವಾಗ್ಗೆ ಶಾಲೆ ಉಪಾಧ್ಯಾಯರ ಪತ್ನಿಯರನ್ನೇ ನೇಮಿಸಬೇಕೆಂದು ಶಾಲಾಉಪಾಧ್ಯಾಯರಿಗೆ ಉಚಿತ ವಾಸಸ್ಥಳ ಕೊಡಬೇಕೆಂದೂ, ಮಹಿಳೆಯರನ್ನು ನೇಮಿಸಿಕೊಳ್ಳುವಾಗ ಕೆಲವು ರಿಯಾಯಿತಿ ಕೊಡಬೇಕೆಂದು ಸಮಿತಿ ಸೂಚಿಸಿದೆ.

ಅಲ್ಲದೆ ಶಾಲೆಗಳಲ್ಲಿ ಓದುವ ಹೆಣ್ಣುಮಕ್ಕಳು ತಮ್ಮ ವಿದ್ಯಾಭ್ಯಾಸನಂತರ ಶಿಕ್ಷಣ ಕಾರ್ಯಕ್ಕೆ ಪ್ರವೇಶಿಸಲು ಇಚ್ಛಿಸಿದರೆ ಅವರಿಗೆ ೭ ಮತ್ತು ೮ ನೇ ತರಗತಿಗಳಲ್ಲೂ ಶಿಕ್ಷಣ ತರಗತಿಯಲ್ಲಿ ಶುಲ್ಕವನ್ನು ತೆಗೆದುಕೊಳ್ಳಕೊಡದೆಂದೂ ಸಮಿತಿ ತಿಳಿಸಿದೆ.

ಕೈಮಗ್ಗ ಕೈಗಾರಿಕಾ ಕೇಂದ್ರ

ಸಹಕಾರ ಪದ್ಧತಿರೀತ್ಯಾ ಸುಮಾರು ೩೮ ಲಕ್ಷ ರೂಪಾಯಿಗಳ ಚಂದಾವನ್ನು ಎತ್ತಿ ಗುಂಟಕಲ್ಲಿನಲ್ಲಿ ಒಂದು ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಕೇಂದ್ರ ಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ನಿನ್ನೆಯದಿನ ಅದನ್ನು ಉದ್ಘಾಟಿಸಿದರು.

ಭಾರತದಲ್ಲೇ ಇದು ಪ್ರಪ್ರಥಮ ಕೇಂದ್ರವಾಗಿದೆ.

ಮಿಷಿನ್‌ಟೂಲ್ ಕಾರ್ಖಾನೆ ಕಾರ್ಯ

ಬೆಂಗಳೂರು ೧೦

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಹಿಂದೂಸ್ತಾನ್ ಮಿಷಿನ್‌ಟೂಲ್ ಕಾರ್ಖಾನೆಯಲ್ಲಿ ಜುಲೈವೇಳೆಗೆ ಉತ್ಪನ್ನ ಪ್ರಾರಂಭವಾಗುವುದಾಗಿ ಉತ್ಪನ್ನ ಖಾತಾಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಹೇಳಿದ್ದಾರೆ.

○ ಹೈಸ್ಕೂಲುಗಳಲ್ಲಿ ಪುಸ್ತಕ ಭಂಡಾರಗಳನ್ನು ಅಭಿವೃದ್ಧಿಪಡಿಸಲು ತಲಾ ೫ ಸಾವಿರ ರೂ. ಗ್ರಾಂಟು ಕೊಡಬೇಕೆಂದೂ ಅದರ ಪೈಕಿ ಶೇಕಡ 33⅓ ರಷ್ಟು ಕೇಂದ್ರ ಮತ್ತು ಉಳಿದುವನ್ನು ಸಂಸ್ಥಾನ ಸರ್ಕಾರಗಳು ಕೊಡಬೇಕೆಂದೂ ದೆಹಲಿಯಲ್ಲಿ ಸೇರಿರುವ ಕೇಂದ್ರ ವಿದ್ಯಾ ಸಲಹಾ ಬೋರ್ಡು ಶಿಫಾರಸು ಮಾಡಿದೆ.

ಸಂಸ್ಥಾನದಲ್ಲಿ ಹೊಸದಾಗಿ ೫೦೦ ಉಪಾಧ್ಯಾಯರ ನೇಮಕ

ಪತ್ರಿಕಾ ಸಮ್ಮೇಳನದಲ್ಲಿ ವಿದ್ಯಾಭ್ಯಾಸ ಮುಖ್ಯಾಧಿಕಾರಿಗಳ ವಿವರಣೆ

ಬೆಂಗಳೂರು, [illegible]

[illegible]

ಸಂಸ್ಥಾನದಿಂದ ಅವಕಾಶವಿಲ್ಲ

[illegible]

ಗೂಡ್ಸ್ ಗಾಡಿ ಉರುಳಿ ಭಾರಿ ರೈಲ್ವೆ ಅಪಘಾತ

೩೦ ಮಂದಿ ಮರಣ [illegible] ಜನರಿಗೆ ಗಾಯ

ಉತ್ತರಪ್ರದೇಶದಲ್ಲಿ [illegible] ಹೊಸದಾಗಿ ನಿರ್ಮಿಸಲಾಗುತ್ತಿರುವ ರೈಲ್ವೆ ವಿಭಾಗದಲ್ಲಿ ನೆನ್ನೆ ಗೂಡ್ಸ್ ಗಾಡಿಯ [illegible] ಗಳು ಉರುಳಿ ೩೦ ಮಂದಿ ಕಾರ್ಮಿಕರು ಸತ್ತರು. [illegible] ಜನರಿಗೆ ಗಾಯವಾಗಿರುವುದೆಂದು ತಿಳಿಯಬಂದಿದೆ.

[illegible]

ಕುಂಭಮೇಳದ ಕಾಲ್ತುಳಿತ ಸಾವು ಸೂರಿದ ಸ್ವರ್ಗ!

[illegible]

ತಿರುವಾಂಕೂರಿನಲ್ಲಿ ಕಮ್ಯೂನಿಸ್ಟ್ ಪಕ್ಷಗಳ ಬೆಂಬಲ

[illegible]

ಭಾರತ ಹೋಟೆಲ್ ಮಾಲೀಕರ ಸ್ನೇಹ ಭಾವನೆ

[illegible]

ನ್ಯೂಸ್ ಪ್ರಿಂಟ್ ತಯಾರಿಕಾ ಕಾರ್ಖಾನೆ

[illegible]

ಕಾಶ್ಮೀರ ಸಮಸ್ಯೆಗೆ ಸ್ನೇಹ ಭಾವನೆಯೇ ಅಮೆರಿಕನ್ನರ ಅಭಿಪ್ರಾಯ

[illegible]

ಮೈಸೂರು ಮಾರುಕಟ್ಟೆ ಧಾರಣೆ

[illegible]

ಪೂರ್ಣಾನದಿ ಅಪಘಾತ

[illegible]

ಜನಸಂಖ್ಯೆ ಕಾನೂನು

[illegible]

ಗೋವಾದಲ್ಲಿ ಸತ್ಯಾಗ್ರಹವೇ?

[illegible]

ಕೇಂದ್ರ ಆರೋಗ್ಯ ಸಮಿತಿ ಸಮ್ಮೇಳನ

[illegible]

ರಾಷ್ಟ್ರೀಯ ವಿದ್ಯಾಲಯ ನಿಧಿ

[illegible]

೩೧-೩-೧೯೫೪ | ೧೯-೪-೧೯೫೪

ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು.

[illegible] ೧೦೦೦೦ [illegible] ೨೦೦೦ [illegible] ೪೫೦೦೦ [illegible]

[illegible] ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋ೯ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೩೫

೧೦-೩-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ.

ಕರ್ಣಾಟಕ-ಆಂಧ್ರ ಗಡಿ ನಿರ್ಧರಿಸಲು ಸಮಿತಿ

ಮೈಸೂರು ಸರ್ಕಾರ ಸದ್ಯದಲ್ಲೇ ನೇಮಿಸುವುದು

ಕರ್ಣಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಪ್ರಾರ್ಥನೆಯ ಮೇರೆ ಕರ್ಣಾಟಕ ಮತ್ತು ಆಂಧ್ರಗಳ ನಡುವೆ ಗಡಿ ಗೊತ್ತುಪಡಿಸುವ ಬಗ್ಗೆ ಒಂದು ಗಡಿ ನಿರ್ಧಾರ ಸಮಿತಿಯನ್ನು ಮೈಸೂರು ಸರಕಾರವು ಸದ್ಯದಲ್ಲೇ ನೇಮಿಸುವುದೆಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹುಬ್ಬಳ್ಳಿಯಲ್ಲಿ ತಿಳಿಸಿದ್ದಾರೆ.

ಕನ್ನಡಿಗರ ಬಯಕೆಯನ್ನು ಈಡೇರಿಸಬೇಕು

ಮುಖ್ಯ ಮಂತ್ರಿ ಹನುಮಂತಯ್ಯನವರ ಹೇಳಿಕೆ

ಉತ್ತರ ಕರ್ಣಾಟಕದ ೫೫ ಲಕ್ಷ ಜನರು ಕರ್ಣಾಟಕ ಪ್ರಾಂತರಚನೆ ತಡವಾಗಿರುವುದರಿಂದ ಅಸಮಾಧಾನಗೊಂಡಿದ್ದಾರೆ. ಯಾವುದೇ ಪ್ರದೇಶದ ಜನತೆಯ ಅತೃಪ್ತಿಯು ಇಡೀ ರಾಷ್ಟ್ರದ ಐಕ್ಯತೆಗೆ ತೀವ್ರ ಧಕ್ಕೆಯನ್ನುಂಟುಮಾಡುವುದು. ಅದನ್ನು ಸಮಂಜಸವಾಗಿ ನಿವಾರಿಸಬೇಕಾದುದು ಅಗತ್ಯ. ಕನ್ನಡ ಭಾಷಾ ಪ್ರದೇಶಗಳ ಜನರ ಇಚ್ಛೆಯನ್ನು ಈಡೇರಿಸುವುದಕ್ಕಾಗಿ ಕೇಂದ್ರಕ್ಕೆ ಪ್ರಾಂತ್ಯಗಳ ಪುನರ್ವಿಂಗಡನಾ ಸಮಿತಿಯವರು ತಮ್ಮ ಅಂತ್ಯ ವರದಿಯ ನ್ನೊಪ್ಪಿಸುವುದಕ್ಕೆ ಮೊದಲು ಒಂದು ತಾತ್ಕಾಲಿಕ ವರದಿಯನ್ನು ಕೊಟ್ಟು ಕನ್ನಡಿಗರಿಗೆ ತೃಪ್ತಿಯುಂಟುಮಾಡುವರೆಂದು ನಂಬಲಾಗಿದೆ ಎಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ತಮ್ಮ ಉತ್ತರ ಕರ್ಣಾಟಕ ಪ್ರವಾಸದ ಅಂತ್ಯದಲ್ಲಿ ಹೇಳಿದ್ದಾರೆ.

ಭಾರತದಲ್ಲಿ ಕಾಶ್ಮೀರ ಸೇರ್ಪಡೆ

ಭಾರತದಲ್ಲಿ ಕಾಶ್ಮೀರವು ಸೇರುವ ವಿಷಯದಲ್ಲಿ ಈಗ ಕಾಶ್ಮೀರ ರಾಜ್ಯಾಂಗ ಸಭೆಯು ನಿರ್ದಿಷ್ಟವಾದ ತೀರ್ಮಾನವನ್ನು ಮಾಡಿದೆ.

ಈಗ ಆ ವಿಷಯದಲ್ಲಿ ಇನ್ನು ಮುಂದೆ ಮಾತುಕತೆ ನಡೆಸುವುದು ರಾಜ್ಯಾಂಗಕ್ಕೆ ವಿರೋಧವಾಗುತ್ತದೆ. ಮತ್ತು ಅದನ್ನು ಉಲ್ಲಂಘಿಸಿದಂತಾಗುವುದು ಎಂಬುದಾಗಿ ಹಿಂದೂಮಹಾಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ದೇಶಪಾಂಡೆಯವರು ಹೇಳಿಯವರು.

ವಿಷ್ವಾಕ್ಕೆ ಪುನಃ ಕಾಲಿಡಲು ವಿದೇಶಿಗಳ ಪ್ರಯತ್ನ

ಪ್ರಧಾನಿ ನೆಹರೂರವರ ಖಂಡನೆ

ಏಷ್ಯಾಖಂಡಕ್ಕೆ ಪಾಶ್ಚಾತ್ಯ ರಾಷ್ಟ್ರಗಳು ಪುನಃ ಕಾಲಿಡಲು ಯತ್ನಿಸುತ್ತಲಿರುವುದಕ್ಕೆ ಅತ್ಯಂತವಾಗಿ ವಿಷಾದಪಡಬೇಕಾಗಿದೆ. ಅಮೆರಿಕಾವು ಪಾಕೀಸ್ತಾನಕ್ಕೆ ಮಿಲಿಟರಿ ನೆರವನ್ನು ಕೊಡುವುದೇ ಇದಕ್ಕೆ ಸಾಕ್ಷಿಯಾಗಿದೆ. ನಾವು ಈ ನೆರವಿಗೆ ಹೆದರುವವರಲ್ಲ. ಗಾಬರಿಯು ಪಡಬೇಕಾಗಿಲ್ಲ. ಈ ರೀತಿ ಪರಿಸ್ಥಿತಿಯು ಈಗ ಉದ್ಭವಿಸಿರುವುದು ಭಾರತಕ್ಕೆ ಒಂದು ರೀತಿಯ ಪ್ರಯೋಜನವನ್ನುಂಟುಮಾಡಿದೆ. ಜನತೆಯಲ್ಲಿ ಜಡತ್ವ ನಿವಾರಣೆಯಾಗಿ ಜಾಗೃತಿಯುಂಟಾಗುವುದು ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ನೆನ್ನೆಯದಿನ ತಿರುವಂಕೂರ್-ಕೊಚ್ಚಿಯ ಚುನಾವಣಾ ಪ್ರಚಾರದ ಮುಕ್ತಾಯ ಭಾಷಣದಲ್ಲಿ ತಿಳಿಸಿದ್ದಾರೆ.

ಒಂದು ದೇಶವು ಶಸ್ತ್ರಾಸ್ತ್ರಗಳಿಂದ ಬಲಯುತವಾಗುವುದಿಲ್ಲ. ಶಿಸ್ತು ಮತ್ತು ಜನತೆಯ ಐಕ್ಯಮತ್ಯ ಮತ್ತು ಆರ್ಥಿಕ ಮಟ್ಟ ಉತ್ತಮಗೊಳ್ಳುವುದರಿಂದಲೇ ಮಾತ್ರ ಸಾಧ್ಯ. ವಿದೇಶಗಳಿಂದ ಟ್ಯಾಂಕುಗಳು ಮುಂತಾದುವನ್ನು ತರಿಸಿಕೊಂಡರೆ ಒಂದೆರಡು ವರ್ಷಗಳು ಮಾತ್ರ ಬರುತ್ತವೆ. ಆದರೆ ತನಗೆ ಬೇಕಾದ ವಸ್ತುಗಳನ್ನೆಲ್ಲಾ ತಾನೇ ತಯಾರಿಸಿಕೊಂಡರೆ ಮಾತ್ರ ಆಗ ನಿಜವಾದ ಶಕ್ತಿಯುಂಟಾಗುತ್ತದೆ. ದೇಶದಲ್ಲಿ ಉತ್ಪನ್ನ ಹೆಚ್ಚಿ ನಿರುದ್ಯೋಗವೂ ತಪ್ಪಬೇಕು ಆಗ ದೇಶವು ಶಕ್ತಿಯುತವಾಗುತ್ತದೆ ಎಂಬುದಾಗಿ ಶ್ರೀ ನೆಹರೂರವರು ತಿಳಿಸಿದ್ದಾರೆ.

ಜಿಲ್ಲಾಬೋರ್ಡು ಸಮಿತಿಗಳ ಸಮಾಪ್ತಿ

ಮೈಸೂರು ಜಿಲ್ಲಾ ಬೋರ್ಡು ತಿದ್ದುಪಡಿ ಕಾನೂನು ಜಾರಿಗೆ ಬಂದಿರುವುದರಿಂದ ಈಗಿರುವ ಜಿಲ್ಲಾ ಬೋರ್ಡು ಅಧ್ಯಕ್ಷ ಮತ್ತು ಸದಸ್ಯರುಗಳ ಅಧಿಕಾರಾವಧಿಯು ಇದೇ ಗುರುವಾರದಿಂದ ಮುಕ್ತಾಯವಾಗುವುದೆಂದೂ ಸರ್ಕಾರದ ಆಜ್ಞೆ ಹೊರಟಿದೆ. ಆಯಾ ಜಿಲ್ಲಾಧಿಕಾರಿಗಳೇ ಆ ಬೋರ್ಡುಗಳ ಎಕ್ಸಿಕ್ಯೂಟಿವ್ ಅಧಿಕಾರಿಗಳಾಗುವರು. ಮತ್ತು ಮೇಲ್ಕಂಡದಿನ ಅವರು ಅಧಿಕಾರ ವಹಿಸಿಕೊಳ್ಳುವರು.

ಮಠಗಳಿಗೆ ಸರ್ಕಾರದ ಗ್ರಾಂಟು

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರ ಹೇಳಿಕೆ

ಶೃಂಗೇರಿ ಮಠ ಅಥವ ಮತ್ತಾವುದೇ ಜಹಗೀರಿನ ಸಾಧಾರಣ ವರಮಾನವನ್ನು ಕಿತ್ತುಕೊಳ್ಳಲು ಸರ್ಕಾರದ ಉದ್ದೇಶವಲ್ಲ. ಅಲ್ಲಿರುವ ಜಹಗೀರುಗಳ ಗೇಣೀದಾರರುಗಳಿಗೆ ಸಂಸ್ಥಾನದ ಇತರ ಗೇಣಿದಾರರುಗಳಿಗೆ ಸಮಾನವಾದ ಹಕ್ಕುಗಳನ್ನು ಕೊಡಲು ಮಾತ್ರ ಉದ್ದೇಶಿಸಲಾಗಿದೆ. ಸರ್ಕಾರದವರು ಮಠಗಳಿಗೆ ವಾರ್ಷಿಕ ಗ್ರಾಂಟನ್ನು ಕೊಡುವರು ಎಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೈಸೂರು ಮಠಗಳ ಇನಾಂ ರದ್ದು ಮಸೂದೆಯ ವಿಷಯದಲ್ಲಿ ಪ್ರಸ್ತಾಪಿಸುತ್ತಾ ಹುಬ್ಬಳ್ಳಿಯಲ್ಲಿ ತಿಳಿಸಿರುತ್ತಾರೆ.

ಕಾಂಗ್ರೆಸ್ ಮೆಂಬರು ಮಾಡಿಸಲಿಕ್ಕೆ ನಿರ್ಬಂಧ

ಮೈಸೂರು ನಗರದಲ್ಲಿ ಕಾಂಗ್ರೆಸ್ ಮೆಂಬರುಗಳನ್ನು ಮಾಡಿಸಲು ಅಲ್ಲಿಯ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರ ಹತ್ತಿರ ಹೋಗಿ ಮೆಂಬರು ಮಾಡಲಿಕ್ಕೆ ಪುಸ್ತಕಗಳನ್ನು ಕೇಳಿದರೆ ಒಂದು ಅಥವಾ ಎರಡನ್ನು ಮಾತ್ರ ಕೊಡುತ್ತೇವೆ ಹೆಚ್ಚಿಗೆ ಪುಸ್ತಕ ನನ್ನಲ್ಲಿ ಇಲ್ಲ ಎಂದು ಹೇಳುತ್ತಾರೆ. ಈ ಎರಡು ಪುಸ್ತಕಗಳನ್ನು ಕೊಡಲು ಸುಮಾರು ೫-೬ ದಿವಸ ತಿರುಗಿಸುತ್ತಾರೆ. ಈರೀತಿ ಅವರು ಸತಾಯಿಸಿ ಕಾಲ ಕಳೆಯುತ್ತಿರುತ್ತಾರೆ. ಸಿಟಿಯಲ್ಲಿ ಈಗಿನ ಅಧಿಕಾರ ವರ್ಗದವರ ಮೇಲೆ ಬಹಳ ಸ್ಪೈಟು, ಇದ್ದು ಪ್ರಬಲವಾದ ವಿರೋಧವಿರುವುದೇ ಇವಕ್ಕೆ ಕಾರಣ. ಎಲ್ಲಿ ಕಾಂಗ್ರೆಸ್ ಮೆಂಬರುಗಳನ್ನು ಹೆಚ್ಚಾಗಿ ಮಾಡಿಸಿ ಸಿಟಿ ಕಾಂಗ್ರೆಸ್ ಚೇರಿಯವರಿಗೆ ಹೋಗುವುದೋ ಎಂಬ ಹೆದರಿಕೆ. ನಾನು ಕಾರ್ಯದರ್ಶಿಯವರಿಗೆ ಇದರ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಿಗೂ ಮತ್ತು ಎಂ. ಪಿ. ಸಿ. ಸಿ. ಅಧ್ಯಕ್ಷರಿಗೂ ಮೆಂಬರು ಮಾಡಲಿಕ್ಕೆ ಪುಸ್ತಕಗಳನ್ನು ಕೊಡುವುದಿಲ್ಲ. ಎಂದು ಪತ್ರ ಬರೆಯುತ್ತೇನೆಂದು ಹೇಳಿದರೆ ಯಾರಿಗೆ ಬೇಕಾದರೂ ಬರೆದುಕೋ ನನ್ನ ಹತ್ತಿರ ಪುಸ್ತಕ ಇಲ್ಲ ಎಂದು ಧೋರಣೆ ಮಾತನಾಡಿದರು. ಇವರ ನಡತೆಗಳ ಬಗ್ಗೆ ಸಾರ್ವಜನಿಕರೇ ಯೋಚಿಸಲಿ.

ಟಿ. ಎಸ್. ಸುಬ್ಬಣ್ಣ.

ತಂಬಾಕು ಕೊಳ್ಳುವವರೇ ಇಲ್ಲ

ಆಂಧ್ರ ಪ್ರಾಂತ್ಯದಲ್ಲಿ ಸುಮಾರು ೩ ಕೋಟಿ ಮಣಗಳಷ್ಟು ತಂಬಾಕನ್ನು ಕೊಳ್ಳುವವರೇ ಇಲ್ಲದೆ ಹಾಗೆಯೇ ಉಳಿದು ಹೋಗಿದೆ. ಆದಕ್ಕೆ ವಿದೇಶಗಳಲ್ಲಿ ಗಿರಾಕಿಗಳನ್ನು ಪಡೆಯಲು ಭಾರತ ಸರ್ಕಾರವು ಉನ್ನತ ಅಧಿಕಾರಿಯೋರ್ವರನ್ನು ವಿದೇಶಕ್ಕೆ ಕಳುಹಿಸಲಿದೆ.

ಶಾಲಾ ತಾಯಂದಿರ ನೇಮಕ

ಗ್ರಾಮಾಂತರ ಪ್ರದೇಶಗಳಲ್ಲಿ ಬಾಲಕಿಯರ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ 'ಶಾಲಾ ತಾಯಂದಿರು ಅಥವಾ ಶಾಲಾ ಮೇಲ್ವಿಚಾರಕರು' ಎಂಬ ನೂತನ ಹುದ್ದೆಯನ್ನು ಕಲ್ಪಿಸಬೇಕೆಂದು ದೆಹಲಿಯಲ್ಲಿ ನಡೆದ ವಿದ್ಯಾಸಮಿತಿಯು ಸರ್ಕಾರಕ್ಕೆ ಶಿಫಾರಸ್ ಮಾಡಿದೆ.

ಈ ನೇಮಕಗಳನ್ನು ಮಾಡುವಾಗ್ಗೆ ಶಾಲೆ ಉಪಾಧ್ಯಾಯರ ಪತ್ನಿಯರನ್ನೇ ನೇಮಿಸಬೇಕೆಂದು ಶಾಲಾ ಉಪಾಧ್ಯಾಯರಿಗೆ ಉಚಿತ ವಾಸಸ್ಥಳ ಕೊಡಬೇಕೆಂದೂ, ಮಹಿಳೆಯರನ್ನು ನೇಮಿಸಿಕೊಳ್ಳುವಾಗ ಕೆಲವು ರಿಯಾಯಿತಿ ಕೊಡಬೇಕೆಂದು ಸಮಿತಿ ಸೂಚಿಸಿದೆ.

ಅಲ್ಲದೆ ಶಾಲೆಯಲ್ಲಿ ಓದುವ ಹೆಣ್ಣು ಮಕ್ಕಳು ತಮ್ಮ ವಿದ್ಯಾಭ್ಯಾಸನಂತರ ಶಿಕ್ಷಣ ಕಾರ್ಯಕ್ಕೆ ಪ್ರವೇಶಿಸಲು ಇಚ್ಛಿಸಿದರೆ ಅವರಿಗೆ ೭ ನೆಯ ೮ ನೇ ತರಗತಿಗಳಲ್ಲಿ ಶಿಕ್ಷಣ ತರಗತಿಯಲ್ಲಿ ಸಂಬಳವನ್ನು ತೆಗೆದುಕೊಳ್ಳಕೊಡಬೇಕೆಂದೂ ಸಮಿತಿ ತಿಳಿಸಿದೆ.

ಕೈಮಗ್ಗ ಕೈಗಾರಿಕಾ ಕೇಂದ್ರ

ಸಹಕಾರ ಪದ್ಧತಿಯಲ್ಲಿ ಸುಮಾರು ೫೦ ಲಕ್ಷ ರೂಪಾಯಿಗಳ ಚಂದಾವನ್ನು ಎತ್ತಿ ಗುಂಟೂರಿನಲ್ಲಿ ಒಂದು ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಕೇಂದ್ರ ಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ನಿನ್ನೆಯದಿನ ಅದನ್ನು ಉದ್ಘಾಟಿಸಿದರು.

ಭಾರತದಲ್ಲೇ ಇದು ಪ್ರಪ್ರಥಮ ಕೇಂದ್ರವಾಗಿದೆ.

ಮಿಷನ್‌ಟೂಲ್ ಕಾರ್ಖಾನೆ ಕಾರ್ಯ

ಬೆಂಗಳೂರು ೧೦

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಹಿಂದೂಸ್ತಾನ್ ಮಿಷನ್‌ಟೂಲ್ ಕಾರ್ಖಾನೆಯಲ್ಲಿ ಜುಲೈವೇಳೆಗೆ ಉತ್ಪನ್ನ ಪ್ರಾರಂಭವಾಗುವುದಾಗಿ ಉತ್ಪನ್ನ ಖಾತಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಹೇಳಿದ್ದಾರೆ.

○ ಹೈಸ್ಕೂಲುಗಳಲ್ಲಿ ಪುಸ್ತಕ ಭಂಡಾರಗಳನ್ನು ಅಭಿವೃದ್ಧಿ ಪಡಿಸಲು ಕಲಾ ೫ ಸಾವಿರ ರೂ. ಗ್ರಾಂಟು ಕೊಡಬೇಕೆಂದೂ ಅದರ ಪೈಕಿ ಶೇಕಡ ೩೩½ ರಷ್ಟು ಕೇಂದ್ರ ಮತ್ತು ಉಳಿದುದನ್ನು ಸಂಸ್ಥಾನ ಸರ್ಕಾರಗಳು ಕೊಡಬೇಕೆಂದೂ ದೆಹಲಿಯಲ್ಲಿ ಸೇರಿರುವ ಕೇಂದ್ರ ವಿದ್ಯಾ ಸಲಹಾ ಬೋರ್ಡು ಶಿಫಾರಸು ಮಾಡಿದೆ.

ಸಂಸ್ಥಾನದಲ್ಲಿ ಹೊಸದಾಗಿ ೫೦೦ ಉಪಾಧ್ಯಾಯರ ನೇಮಕ

ಪತ್ರಿಕಾಸಮ್ಮೇಳನದಲ್ಲಿ ವಿದ್ಯಾಭ್ಯಾಸ ಮುಖ್ಯಾಧಿಕಾರಿಗಳ ವಿವರಣೆ

ಬೆಂಗಳೂರು ೯

ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸವನ್ನು ಒದಗಿಸುವ ಉದ್ದೇಶದಿಂದ ಸರ್ಕಾರವು ಎಸ್. ಎಸ್. ಎಲ್. ಸಿ. ಆಗಿರುವ ಸುಮಾರು ೫೦೦ ಜನರನ್ನು ಭಾರತ ಸರ್ಕಾರದ ಆದೇಶದಂತೆ ಸಂಸ್ಥಾನದ ಪ್ರಾಥಮಿಕ ಶಾಲೆಗಳಿಗೆ ನೇಮಿಸಿಕೊಳ್ಳಲಾಗುವುದೆಂದು ವಿದ್ಯಾಭ್ಯಾಸ ಇಲಾಖಾ ಮುಖ್ಯಾಧಿಕಾರಿ ಶ್ರೀ ಜೆ. ಬಿ. ಮಲ್ಲಾರಾಧ್ಯರವರು ನಿನ್ನೆ ಪತ್ರಿಕಾಸಮ್ಮೇಳನದಲ್ಲಿ ತಿಳಿಸಿದ್ದಾರೆ.

ಈ ನೇಮಕದಲ್ಲಿ ೩೦೦ ಜನರನ್ನು ಹೊಸದಾಗಿ ಸ್ಥಾಪಿಸಲಾಗುವ ಒಂದೇ ಉಪಾಧ್ಯಾಯರಿರುವ ಶಾಲೆಗಳಿಗೂ ಇನ್ನು ೨೦೦ ಜನರನ್ನು ಈಗ ಖಾಲಿ ಇರುವ ಶಾಲೆಗಳಿಗೆ ನೇಮಿಸಲಾಗುವುದೆಂದೂ ಇದಕ್ಕಾಗಿ ತಗಲುವ ವೆಚ್ಚದಲ್ಲಿ ಮೊದಲನೆಯ ವರ್ಷ ಶೇಕಡ ೭೫, ೨ನೇ ವರ್ಷ ಶೇಕಡ ೫೦, ಮೂರನೇ ವರ್ಷ ಶೇಕಡ ೨೫ ರಷ್ಟನ್ನು ಕೇಂದ್ರಸರ್ಕಾರವು ಸಹಾಯದ್ರವ್ಯ ರೂಪದಲ್ಲಿ ಕೊಡುವುದೆಂದೂ ಅನಂತರ ಈ ವೆಚ್ಚವನ್ನೆಲ್ಲಾ ಪ್ರಾಂತ್ಯಸರ್ಕಾರವೇ ವಹಿಸಿಕೊಳ್ಳುವುದೆಂದೂ ತಿಳಿಸಿದ್ದಾರೆ. ಚುನಾಯಿತರಾದವರಿಗೆ ೬ ವಾರಕಾಲ ತರಪೇತು ಕೊಡಲಾಗುವುದೆಂದೂ ಅವರು ತಿಳಿಸಿದ್ದಾರೆ.

ಇಸ್ಲಾಂ ರಾಷ್ಟ್ರಗಳ ಸೈನ್ಯ ನೆರವಿಗೆ ಅಮೆರಿಕನ್ನರ ವಿರೋಧ

ಮಧ್ಯಪ್ರಾಚ್ಯದಲ್ಲಿರುವ ಅರಬ್ ರಾಷ್ಟ್ರಗಳಿಗೆ ಸೈನ್ಯ ನೆರವನ್ನು ನೀಡಬೇಕೆಂದು ಅಮೆರಿಕಾ ಸರ್ಕಾರದ ಹೊಸನೀತಿಗೆ ಅಲ್ಲಿಯ ಡೆಮೊಕ್ರಾಟಿಕ್ ಮತ್ತು ರಿಪಬ್ಲಿಕ್ ಪಕ್ಷದ ೩೫ ಮಂದಿ ಕಾಂಗ್ರೆಸ್ಸಿಗರು ತಮ್ಮ ತೀವ್ರ ಕಳವಳ ಮತ್ತು ಪ್ರತಿಭಟನೆಯನ್ನು ವ್ಯಕ್ತಪಡಿಸಿ ವಿದೇಶಾಂಗಸಚಿವ ಡಲ್ಲೆಸ್‌ರವರಿಗೆ ಪತ್ರ ಬರೆದಿದ್ದಾರೆ.

ಒಕ್ಕಲುತನ ಕಾನೂನು

ರೈತರಿಗೆ ಮತ್ತು ಅಲ್ಪಪ್ರಮಾಣ ಹಿಡುವಳಿದಾರರಿಗೆ ನೆರವು ನೀಡುವುದಕ್ಕಾಗಿಯೇ ಒಕ್ಕಲುತನ ಕಾನೂನನ್ನು ಜಾರಿಗೆ ತಂದಿರುವುದಾಗಿ ಹೈದರಾಬಾದಿನ ಮುಖ್ಯಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಹೇಳಿದ್ದಾರೆ.

ಗೋವಾದಲ್ಲಿ ಸತ್ಯಾಗ್ರಹವೆ?

ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯವಾದ ಗೋವಾವು ಭಾರತದೊಡನೆ ವಿಲೀನಗೊಳ್ಳುವುದಕ್ಕಾಗಿ ಅಲ್ಲಿರುವ ರಾಷ್ಟ್ರೀಯ ಕಾಂಗ್ರೆಸ್ ಸತ್ಯಾಗ್ರಹವನ್ನು ಪ್ರಾರಂಭಿಸುವುದಾಗಿ ಅದರ ಅಧ್ಯಕ್ಷ ಶ್ರೀ ಪೀಟರ್ ಆಳ್ವಾರಿಸ್‌ರವರು ತಿಳಿಸಿದ್ದಾರೆ.

ಕೃಷ್ಣಾನದಿಗೆ ಅಣೆಕಟ್ಟು

ಕೃಷ್ಣಾನದಿಗೆ ಅಡ್ಡಲಾಗಿ ನಂದಿಕೊಂಡ ಎಂಬಲ್ಲಿ ೫೫ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಜಲಾಶಯವೊಂದನ್ನು ನಿರ್ಮಿಸಲು ಆಂಧ್ರ ಮತ್ತು ಹೈದರಾಬಾದ್ ಸರ್ಕಾರಗಳು ಪರಿಶೀಲನೆ ನಡೆಸುತ್ತಲಿರುವುದಾಗಿಯೂ, ಈ ವಿಷಯದಲ್ಲಿ ಸದ್ಯದಲ್ಲಿಯೇ ತೀರ್ಮಾನವಾಗುವ ನಿರೀಕ್ಷೆಯಿದೆ ಯೆಂದೂ ತಿಳಿಯಬರುತ್ತದೆ.

ಕುಂಭಮೇಳದಲ್ಲಿ ಕಾಲರಾ

ಕುಂಭಮೇಳದಲ್ಲಿ ಕಳೆದ ಬುಧವಾರ ನಡೆದ ದುರಂತದ ಜೊತೆಗೆ ಅಲ್ಲಿ ಕಾಲರಾ ರೋಗ ಕಾಣಿಸಿಕೊಂಡಿರುವುದು ಈಗ ಯಾತ್ರಿಕರಿಗೆ ಇನ್ನೂ ವಿಶೇಷ ಗಾಬರಿಯನ್ನುಂಟುಮಾಡಿದೆ. ಅಲ್ಲಿಂದ ಅವರುಗಳು ಓಡುತ್ತಿದ್ದಾರೆ. ೩೬ ಗಂಟೆಗಳಲ್ಲಿ ೩೦ ಕಾಲರಾ ಕೇಸುಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಭಾರತ ಮೇಲ್ವಿಚಾರಕ ಸೈನ್ಯ ವಾಪಸ್ಸು

ಸ್ವದೇಶಕ್ಕೆ ಹಿಂತಿರುಗದ ಯುದ್ಧಕೈದಿಗಳ ಮೇಲ್ವಿಚಾರಣೆಗಾಗಿ ಕೊರಿಯಾಕ್ಕೆ ತೆರಳಿದ್ದ ಭಾರತ ಸೈನ್ಯದ ಮೊದಲನೆ ತಂಡದ ೧೬೦೦ ಜನರು ನಿನ್ನೆಯದಿನ ಸ್ವದೇಶಕ್ಕೆ ಹಿಂತಿರುಗಲು ಹೊರಟಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೮—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೧೨	೨೨—೨
ಎಳ್ಳು	೭೦—೨	—
ಹುರಳಿ	೩೫—	೪೨—
ಹುಚ್ಚೆಳ್ಳು	೩೫—	೪೨—೮
ಹೊಂಗೆಬೀಜ	೧೯—೧೦	೨೨—೧೨
ಹುಣಸೆಬೀಜ	೧೩—೧೨	೧೩—೧೪
ಹುರುಳಿ	೨೫—೪	೩೧—೬
ಹೆಸರು	೩೪—೧೨	೪೦—
ಅಲಸಂದೆ	೩೦—೨	೪೦—
ಅವರೆ	೩೩—೨	೩೬—೨
ಕಡಲೆ	೫೨—	೫೩—
ಉದ್ದು	—	—
ಕೊತ್ತಂಬರಿ	೨೫—೧೪	೨೮—೪
ತೊಗರಿ	೧೮—	೨೭—೧೨
ಹುಣಸೆಹಣ್ಣು	೩—೧೩	೧೦—೧೨
ಮೆಣಸಿನಕಾಯಿ	೨೩—೧೪	೩೩—
ಸೀಗೆಕಾಯಿ	೪—೪	೪—೧೫
ಬೆಲ್ಲ	೪—೧೨	೫—
ತೆಂಗಿನಕಾಯಿ	೧೪೭—	೩೦೦—

ಗೂಡ್ಸ್ ಗಾಡಿ ಉರುಳಿ ಭಾರಿ ರೈಲ್ವೆ ಅಪಘಾತ

೩೦ ಮಂದಿ ಮರಣ ; ೯ ಜನರಿಗೆ ಗಾಯ

ಉತ್ತರಪ್ರದೇಶದಲ್ಲಿ ಕಾಶಿಗೆ ೪೨ ಮೈಲಿ ದೂರದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ರೈಲ್ವೆವಿಭಾಗದಲ್ಲಿ ನಿನ್ನೆ ಗೂಡ್ಸ್‌ಗಾಡಿಯ ೧೩ ವ್ಯಾಗನ್ನುಗಳು ಉರುಳಿ ೩೦ ಮಂದಿ ಕಾರ್ಮಿಕರು ಮಡಿದು ೯ ಜನರಿಗೆ ಗಾಯಗಳಾಗಿರುವುದೆಂದು ತಿಳಿಯಬರುತ್ತದೆ.

ಈ ಮಾರ್ಗದಲ್ಲಿ ನಿನ್ನೆಯದಿನ ಗೂಡ್ಸ್ ಗಾಡಿಯು ರಿಪೇರಿಯಾಗುತ್ತಿದ್ದ ಒಂದು ಸೇತುವೆಯನ್ನು ದಾಟಿ ಮುಂದಕ್ಕೆ ಹೋದಾಗ ಗಾಡಿಯ ೧೩ ವ್ಯಾಗನ್ನುಗಳು ಸಡಿಲವಾಗಿ ಅವುಗಳು ಹಿಂದಕ್ಕೆ ರಭಸವಾಗಿ ಓಡಲಾರಂಭಿಸಿತು. ಸೇತುವೆಯ ಬಳಿ ಕೆಲಸ ಮಾಡುತ್ತಿದ್ದವರು ಈ ಗಾಡಿಗಳಿಗೆ ಸಿಕ್ಕಿ ಅನೇಕರು ಕೆಳಗುರುಳಿದರು. ಒಟ್ಟು ಸ್ಥಳದಲ್ಲಿಯೇ ೨೫ ಜನರು ಸತ್ತುಹೋದರು. ಆಸ್ಪತ್ರೆಗೆ ಸಾಗಿಸುವಾಗ ೫ ಜನ ಮಡಿದರು. ೧೩ ವ್ಯಾಗನ್ನುಗಳು ಸುಮಾರು ೫೦ ಅಡಿಗಳ ಕೆಳಗೆ ಬಿದ್ದು ಗಾಡಿಗಳೆಲ್ಲವೂ ಚೂರು ಚೂರಾದುವು. ಸೇತುವೆಗೂ ಸಹ ವಿಶೇಷ ಜಖಂ ಆಗಿದೆ. ಉತ್ತರ ರೈಲ್ವೆ ಅಧಿಕಾರಿಗಳು ಸ್ಥಳಕ್ಕೆ ಹೋಗಿ ತನಿಖೆ ನಡೆಸುತ್ತಲಿದ್ದಾರೆ.

ನ್ಯೂಸ್ ಪ್ರಿಂಟ್ ತಯಾರಿಕಾ ಕಾರ್ಖಾನೆ

ಉತ್ತರ ಪ್ರದೇಶದಲ್ಲಿ ೫ಕೋಟಿ ೭೦ಲಕ್ಷ ರೂಪಾಯಿಗಳ ಬಂಡವಾಳದಲ್ಲಿ ವೃತ್ತಪತ್ರಿಕಾ ಕಾಗದ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಲಾಗುತ್ತದೆ. ಕಾಗದ ಪ್ರಾಯೋಗಿಕ ತಯಾರಿಕಾ ಕಾರ್ಯವು ಇದೇ ಜುಲೈ ಮಾಹೆಯಿಂದ ಪ್ರಾರಂಭವಾಗುವುದಾಗಿ ತಿಳಿಯಬರುತ್ತದೆ.

ಪೂರ್ಣಾನದಿ ಅಪಘಾತ

ಮೊನ್ನೆಯದಿನ ಪಾಟ್ನಾಬಳಿ ಪೂರ್ಣನದಿಯಲ್ಲಿ ೧೦೦ ಜನರಿದ್ದ ದೋಣಿಯೊಂದು ಮುಳುಗಿಹೋಯಿತಷ್ಟೆ. ಅದರಲ್ಲಿ ಸುಮಾರು ೩೦ ಜನರನ್ನು ಸಂರಕ್ಷಿಸಲಾಯಿತೆಂದೂ ಇಲ್ಲಿಯವರೆಗೆ ೧೮ ಶವಗಳ ಪತ್ತೆ ಹಚ್ಚಿರುವುದಾಗಿ ತಿಳಿಯಬರುತ್ತದೆ. ಇನ್ನೂ ಪತ್ತೆಯಾಗದವರಿಗಾಗಿ ಕಾರ್ಯಗಳು ನಡೆಯುತ್ತಿವೆ.

ಕೇಂದ್ರ ಆರೋಗ್ಯ ಸಮಿತಿ ಸಮ್ಮೇಳನ

ಕೇಂದ್ರ ಆರೋಗ್ಯ ಸಮಿತಿಯ ೨ ನೇ ಸಮ್ಮೇಳನವು ನಿನ್ನೆ, ರಾಜಕೋಟೆಯಲ್ಲಿ ಆರೋಗ್ಯ ಸಚಿವ ಶ್ರೀಮತಿ ರಾಜಕುಮಾರಿ ಅಮೃತಕೌರ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಎಲ್ಲಾ ಪ್ರಾಂತ್ಯ ಆರೋಗ್ಯ ಸಚಿವರು ಮತ್ತು ಮುಖ್ಯಾಧಿಕಾರಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಮುಂಗಡ ಹಣ ಕೊಡದೆ ಧರ್ಮ!

ಕುಂಭಮೇಳಕ್ಕೆ ಬಂದ ಯಾತ್ರಿಕರ ಪೈಕಿ ೧೦೦೮ ಮಂದಿಗೆ ಮೂರುದಿನಗಳ ಕಾಲ ಊಟ ಮತ್ತು ಬಟ್ಟೆಗಳನ್ನು ಕೊಟ್ಟು ತನಗೆ ಅದರ ಖರ್ಚಿನ ಬಾಬ್ತು ಬಿಲ್ ಕಳುಹಿಸಿ ಕೊಡಬೇಕೆಂದು ಬಿಹಾರ್ ಮುಖ್ಯ ಮಂತ್ರಿ ಡಾ॥ ಶ್ರೀ ಕೃಷ್ಣಸಿನ್ಹರವರು ಸೂಚಿಸಿದ್ದ ಪ್ರಾರ್ಥನೆಯು ಕುಂಭಮೇಳದ ಅಧಿಕಾರಿಗಳಿಗೆ ಆಶ್ಚರ್ಯ ಮತ್ತು ತಲೆನೋವು ಉಂಟುಮಾಡಿದೆ. ಮುಂಗಡವಾಗಿ ಹಣ ಪಡೆಯದೇ ಖಾಸಗಿಯವರಿಗಾಗಿ ಹಣ ಖರ್ಚುಮಾಡಲು ಮೇಳದ ಅಧಿಕಾರಿಗಳಿಗೆ ಹಿಂದಿನ ಯಾವ ಸಂಪ್ರದಾಯವೂ ಇಲ್ಲದಿರುವುದೇ ಈ ಚಿಂತೆಗೆ ಕಾರಣವಾಗಿದೆ.

ತಿರುವಾಂಕೂರಿನಲ್ಲಿ ವಿರೋಧ ಪಕ್ಷಗೆದ್ದರೆ ಆಡಳಿತಕ್ಕೆ ಬರಲಿ

ತಿರುವಾಂಕೂರು-ಕೊಚ್ಚಿಯಲ್ಲಿ ಕಾಂಗ್ರೆಸ್ ಪ್ರಚಾರ ನಡೆಸುತ್ತಲಿರುವ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ನಿನ್ನೆಯದಿನ ಅಲ್ಲಿ ಮಾತನಾಡುತ್ತ ಈಗಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಸೋತು ವಿರೋಧ ಪಕ್ಷವು ಜಯಗಳಿಸಿದರೆ, ರಾಜ್ಯಾಂಗರೀತ್ಯಾ ಅದು ಆಡಳಿತವನ್ನು ವಹಿಸಿಕೊಳ್ಳುವುದರಲ್ಲಿ ತಮ್ಮ ಅಭ್ಯಂತರವೇನೂ ಇಲ್ಲ. ಆದರೆ ಎಲ್ಲರೂ ರಾಜ್ಯಾಂಗಕ್ಕೆ ಅನುಗುಣವಾಗಿ ನಡೆಯಬೇಕು ಎಂದು ಹೇಳಿದ್ದಾರೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ. ಒಟ್ಟು 2000 ಬಹುಮಾನಗಳು. ಬಹುಮಾನದ ಮೊಬಲಗು 45000 ರೂ. ಟಿಕೇಟು ಒಂದಕ್ಕೆ ಒಂದೇರೂಪಾಯಿ. ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು. ಜಿ. ಎಲ್. ಸ್ವಾಮಿ ಸಮಾಚಾರ ಪ್ರೆಸ್, ಮೈಸೂರು.

ಪೋಸ್ಟ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೩೫

೧೦-೩-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕರ್ಣಾಟಕ-ಆಂಧ್ರ ಗಡಿ ನಿರ್ಧರಿಸಲು ಸಮಿತಿ

ಮೈಸೂರು ಸರ್ಕಾರ ಸದ್ಯದಲ್ಲೇ ನೇಮಿಸುವುದು

ಕರ್ಣಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಪ್ರಾರ್ಥನೆಯ ಮೇರೆ ಕರ್ಣಾಟಕ ಮತ್ತು ಆಂಧ್ರಗಳ ನಡುವೆ ಗಡಿ ಗೊತ್ತುಪಡಿಸುವ ಬಗ್ಗೆ ಒಂದು ಗಡಿ ನಿರ್ಧಾರ ಸಮಿತಿಯನ್ನು ಮೈಸೂರು ಸರಕಾರವು ಸದ್ಯದಲ್ಲೇ ನೇಮಿಸುವುದೆಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹುಬ್ಬಳ್ಳಿಯಲ್ಲಿ ತಿಳಿಸಿದ್ದಾರೆ.

ಕನ್ನಡಿಗರ ಬಯಕೆಯನ್ನು ಈಡೇರಿಸಬೇಕು

ಮುಖ್ಯ ಮಂತ್ರಿ ಹನುಮಂತಯ್ಯನವರ ಹೇಳಿಕೆ

ಉತ್ತರ ಕರ್ಣಾಟಕದ ೫೦ ಲಕ್ಷಜನರು ಕರ್ಣಾಟಕ ಪ್ರಾಂತ ರಚನೆ ತಡವಾಗಿರುವುದರಿಂದ ಅಸಮಾಧಾನಗೊಂಡಿದ್ದಾರೆ. ಯಾವುದೇ ಪ್ರದೇಶದ ಜನತೆಯ ಅತೃಪ್ತಿಯು ಇಡೀ ರಾಷ್ಟ್ರದ ಐಕ್ಯತೆಗೆ ತೀವ್ರ ಧಕ್ಕೆಯನ್ನುಂಟುಮಾಡುವುದು. ಅದನ್ನು ಸಮಂಜಸವಾಗಿ ನಿವಾರಿಸಬೇಕಾದುದು ಅಗತ್ಯ. ಕನ್ನಡ ಭಾಷಾ ಪ್ರದೇಶಗಳ ಜನರ ಇಚ್ಛೆಯನ್ನು ಈಡೇರಿಸುವುದಕ್ಕಾಗಿ ಕೇಂದ್ರಕ್ಕೆ ಪ್ರಾಂತ್ಯಗಳ ಪುನರ್ವಿಂಗಡನಾ ಸಮಿತಿಯವರು ತಮ್ಮ ಅಂತ್ಯ ವರದಿಯ ನ್ನೊಪ್ಪಿಸುವುದಕ್ಕೆ ಮೊದಲು ಒಂದು ತಾತ್ಕಾಲಿಕ ವರದಿಯನ್ನು ಕೊಟ್ಟು ಕನ್ನಡಿಗರಿಗೆ ತೃಪ್ತಿಯುಂಟುಮಾಡುವರೆಂದು ನಂಬಲಾಗಿದೆ ಎಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ತಮ್ಮ ಉತ್ತರ ಕರ್ಣಾಟಕ ಪ್ರವಾಸದ ಅಂತ್ಯದಲ್ಲಿ ಹೇಳಿದ್ದಾರೆ.

ಭಾರತದಲ್ಲೇ ಕಾಶ್ಮೀರ ಸೇರ್ಪಡೆ

ಭಾರತದಲ್ಲಿ ಕಾಶ್ಮೀರವು ಸೇರುವ ವಿಷಯದಲ್ಲಿ ಈಗ ಕಾಶ್ಮೀರ ರಾಜ್ಯಾಂಗ ಸಭೆಯು ನಿರ್ದಿಷ್ಟವಾದ ತೀರ್ಮಾನವನ್ನು ಮಾಡಿದೆ.

ಈಗ ಆ ವಿಷಯದಲ್ಲಿ ಇನ್ನುಮುಂದೆ ಮಾತುಕತೆ ನಡೆಸುವುದು ರಾಜ್ಯಾಂಗಕ್ಕೆ ವಿರೋಧವಾಗುತ್ತದೆ. ಮತ್ತು ಅದನ್ನು ಉಲ್ಲಂಘಿಸಿದಂತಾಗುವುದು ಎಂಬುದಾಗಿ ಹಿಂದೂಮಹಾಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ದೇಶಪಾಂಡೆಯವರು ಹೇಳಿರುವರು.

ವಿಷ್ವಾಕ್ಕೆ ಪುನಃ ಕಾಲಿಡಲು ವಿದೇಶಿಗಳ ಪ್ರಯತ್ನ

ಪ್ರಧಾನಿ ನೆಹರೂರವರ ಖಂಡನೆ

ಏಷ್ಯಾಖಂಡಕ್ಕೆ ಪಾಶ್ಚಾತ್ಯ ರಾಷ್ಟ್ರಗಳು ಪುನಃ ಕಾಲಿಡಲು ಯತ್ನಿಸುತ್ತಲಿರುವುದಕ್ಕೆ ಅತ್ಯಂತವಾಗಿ ವಿಷಾದಪಡಬೇಕಾಗಿದೆ. ಅಮೆರಿಕಾವು ಪಾಕೀಸ್ತಾನಕ್ಕೆ ಮಿಲಿಟರಿ ನೆರವನ್ನು ಕೊಡುವುದೇ ಇದಕ್ಕೆ ಸಾಕ್ಷಿಯಾಗಿದೆ. ನಾವು ಈ ನೆರವಿಗೆ ಹೆದರುವವಲ್ಲ. ಗಾಬರಿಯು ಪಡಬೇಕಾಗಿಲ್ಲ. ಈ ರೀತಿ ಪರಿಸ್ಥಿತಿಯು ಈಗ ಉದ್ಭವಿಸಿರುವುದು ಭಾರತಕ್ಕೆ ಒಂದು ರೀತಿಯ ಪ್ರಯೋಜನವನ್ನುಂಟುಮಾಡಿದೆ. ಜನತೆಯಲ್ಲಿ ಜಡತ್ವ ನಿವಾರಣೆಯಾಗಿ ಜಾಗೃತಿಯುಂಟಾಗುವುದು ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ನಿನ್ನೆಯದಿನ ತಿರುವಾಂಕೂರ್-ಕೊಚ್ಚಿಯ ಚುನಾವಣಾ ಪ್ರಚಾರದ ಮುಕ್ತಾಯ ಭಾಷಣದಲ್ಲಿ ತಿಳಿಸಿದ್ದಾರೆ.

ಒಂದು ದೇಶವು ಶಸ್ತ್ರಾಸ್ತ್ರಗಳಿಂದ ಬಲಯುತವಾಗುವುದಿಲ್ಲ. ಶಿಸ್ತು ಮತ್ತು ಜನತೆಯ ಐಕ್ಯಮತ್ಯ ಮತ್ತು ಆರ್ಥಿಕ ಮಟ್ಟ ಉತ್ತಮಗೊಳ್ಳುವುದರಿಂದಲೇ ಮಾತ್ರ ಸಾಧ್ಯ. ವಿದೇಶಗಳಿಂದ ಟ್ಯಾಂಕುಗಳು ಮುಂತಾದುವನ್ನು ತರಿಸಿಕೊಂಡರೆ ಒಂದೆರಡು ವರ್ಷಗಳು ಮಾತ್ರ ಬರುತ್ತವೆ. ಆದರೆ ತನಗೆ ಬೇಕಾದ ವಸ್ತುಗಳನ್ನೆಲ್ಲಾ ತಾನೇ ತಯಾರಿಸಿಕೊಂಡರೆ ಮಾತ್ರ ಆಗ ನಿಜವಾದ ಶಕ್ತಿಯುಂಟಾಗುತ್ತದೆ. ದೇಶದಲ್ಲಿ ಉತ್ಪನ್ನ ಹೆಚ್ಚಿ ನಿರುದ್ಯೋಗವೂ ತಪ್ಪಬೇಕು. ಆಗ ದೇಶವು ಶಕ್ತಿಯುತವಾಗುತ್ತದೆ ಎಂಬುದಾಗಿ ಶ್ರೀ ನೆಹರೂರವರು ತಿಳಿಸಿದ್ದಾರೆ.

ಜಿಲ್ಲಾಬೋರ್ಡು ಸಮಿತಿಗಳ ಸಮಾಪ್ತಿ

ಮೈಸೂರು ಜಿಲ್ಲಾ ಬೋರ್ಡು ತಿದ್ದುಪಡಿ ಕಾನೂನು ಜಾರಿಗೆ ಬಂದಿರುವುದರಿಂದ ಈಗಿರುವ ಜಿಲ್ಲಾ ಬೋರ್ಡು ಅಧ್ಯಕ್ಷ ಮತ್ತು ಸದಸ್ಯರುಗಳ ಅಧಿಕಾರಾವಧಿಯು ಇದೇ ೧೫ನೇ ತಾರೀಖಿನಿಂದ ಮುಕ್ತಾಯವಾಗುವುದೆಂದೂ ಸರ್ಕಾರದ ಆಜ್ಞೆ ಹೊರಟಿದೆ. ಆಯಾ ಜಿಲ್ಲಾಧಿಕಾರಿಗಳೇ ಆ ಬೋರ್ಡುಗಳ ವಿಶೇಷ ಅಧಿಕಾರಿಗಳಾಗುವರು. ಮತ್ತು ಮೇಲ್ಕಂಡದಿನ ಅವರು ಅಧಿಕಾರ ವಹಿಸಿಕೊಳ್ಳುವರು.

ಮಠಗಳಿಗೆ ಸರ್ಕಾರದ ಗ್ರಾಂಟು

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರ ಹೇಳಿಕೆ

ಶೃಂಗೇರಿ ಮಠ ಅಥವ ಮತ್ತಾವುದೇ ಜಹಗೀರಿನ ಸಾಧಾರಣ ವರಮಾನವನ್ನು ಕಿತ್ತುಕೊಳ್ಳಲು ಸರ್ಕಾರದ ಉದ್ದೇಶವಲ್ಲ. ಅಲ್ಲಿರುವ ಜಹಗೀರುಗಳ ಗೇಣಿದಾರರುಗಳಿಗೆ ಸಂಸ್ಥಾನದ ಇತರ ಗೇಣಿದಾರರುಗಳಿಗೆ ಸಮಾನವಾದ ಹಕ್ಕುಗಳನ್ನು ಕೊಡಲು ಮಾತ್ರ ಉದ್ದೇಶಿಸಲಾಗಿದೆ. ಸರ್ಕಾರವು ಮಠಗಳಿಗೆ ವಾರ್ಷಿಕ ಗ್ರಾಂಟನ್ನು ಕೊಡುವರು-ಎಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೈಸೂರು ಮಠಗಳ ಇನಾಂ ರದ್ದು ಮಸೂದೆಯ ವಿಷಯದಲ್ಲಿ ಪ್ರಸ್ತಾಪಿಸುತ್ತಾ ಹುಬ್ಬಳ್ಳಿಯಲ್ಲಿ ತಿಳಿಸಿರುತ್ತಾರೆ.

ಕಾಂಗ್ರೆಸ್ ಮೆಂಬರು ಮಾಡಿಸಲಿಕ್ಕೆ ನಿರ್ಬಂಧ

ಮೈಸೂರು ನಗರದಲ್ಲಿ ಕಾಂಗ್ರೆಸ್ ಮೆಂಬರುಗಳನ್ನು ಮಾಡಿಸಲು ಆಪ್ತಿಯ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರ ಹತ್ತಿರ ಹೋಗಿ ಮೆಂಬರು ಮಾಡಲಿಕ್ಕೆ ಪುಸ್ತಕಗಳನ್ನು ಕೇಳಿದರೆ ಒಂದು ಅಥವಾ ಎರಡನ್ನು ಮಾತ್ರ ಕೊಡುತ್ತೇನೆ ಹೆಚ್ಚಿಗೆ ಪುಸ್ತಕ ನನ್ನಲ್ಲಿಲ್ಲ ಎಂದು ಹೇಳುತ್ತಾರೆ. ಈ ಎರಡು ಪುಸ್ತಕಗಳನ್ನು ಕೊಡಲು ಸುಮಾರು ೫-೬ ದಿವಸ ತಿರುಗಿಸುತ್ತಾರೆ. ಈ ರೀತಿ ಅನಾವಶ್ಯಕವಾಗಿ ಕಾಲ ಕಳೆಯುತ್ತಿರುತ್ತಾರೆ. ಸಿಟಿಯಲ್ಲೀಗಿನ ಅಧಿಕಾರ ವರ್ಗದವರ ಮೇಲೆ ಬಹಳ ಪ್ರೊಟೆಸ್ಟ್ ಇದ್ದು ಪ್ರಬಲವಾದ ವಿರೋಧವಿರುವುದೇ ಇದಕ್ಕೆ ಕಾರಣ. ಎಲ್ಲಿ ಕಾಂಗ್ರೆಸ್ ಮೆಂಬರುಗಳನ್ನು ಹೆಚ್ಚಾಗಿ ಮಾಡಿಸಿ ಸಿಟಿ ಕಾಂಗ್ರೆಸ್ ಬೇರೆಯವರಿಗೆ ಹೋಗುವುದೋ ಎಂಬ ಹೆದರಿಕೆ. ನಾನು ಕಾರ್ಯದರ್ಶಿಯವರಿಗೆ ಇದರ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಿಗೂ ಮತ್ತು ಎಂ. ಪಿ. ಸಿ. ಸಿ. ಅಧ್ಯಕ್ಷರಿಗೂ ಮೆಂಬರು ಮಾಡಲಿಕ್ಕೆ ಪುಸ್ತಕಗಳನ್ನು ಕೊಡುವುದಿಲ್ಲ. ಎಂದು ಪತ್ರ ಬರೆಯುತ್ತೇನೆಂದು ಹೇಳಿದರೆ ಯಾರಿಗೆ ಬೇಕಾದರೂ ಬರೆದುಕೋ ನನ್ನ ಹತ್ತಿರ ಪುಸ್ತಕ ಇಲ್ಲ ಎಂದು ಘೋರಣೆ ಮಾತನಾಡಿದರು. ಇವರ ನಡವಳಿಕೆ ಬಗ್ಗೆ ಸಾರ್ವಜನಿಕರೇ ಯೋಚಿಸಲಿ.

ಟಿ. ಎಸ್. ಸುಬ್ಬಣ್ಣ.

ತಂಬಾಕು ಕೊಳ್ಳುವವರೇ ಇಲ್ಲ

ಆಂಧ್ರ ಪ್ರಾಂತ್ಯದಲ್ಲಿ ಸುಮಾರು ೩ ಕೋಟಿ ಮಣಗಳಷ್ಟು ತಂಬಾಕನ್ನು ಕೊಳ್ಳುವವರೇ ಇಲ್ಲದೆ ಹಾಗೆಯೇ ಉಳಿದು ಹೋಗಿದೆ. ಅದಕ್ಕೆ ವಿದೇಶಗಳಲ್ಲಿ ಗಿರಾಕಿಗಳನ್ನು ಪಡೆಯಲು ಭಾರತ ಸರ್ಕಾರವು ಉನ್ನತ ಅಧಿಕಾರಿಯೋರ್ವರನ್ನು ವಿದೇಶಕ್ಕೆ ಕಳುಹಿಸಲಿದೆ.

ಶಾಲಾ ತಾಯಂದಿರ ನೇಮಕ

ಗ್ರಾಮಾಂತರ ಪ್ರದೇಶಗಳಲ್ಲಿ ಬಾಲಕಿಯರ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ 'ಶಾಲಾ ತಾಯಂದಿರು' ಅಥವಾ 'ಶಾಲಾ ಮೇಲ್ವಿಚಾರಕರು' ಎಂಬ ನೂತನ ಹುದ್ದೆಯನ್ನು ಕಲ್ಪಿಸಬೇಕೆಂದು ದೆಹಲಿಯಲ್ಲಿ ನಡೆದ ವಿದ್ಯಾಸಮಿತಿಯು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಈ ನೇಮಕಗಳನ್ನು ಮಾಡುವಾಗ್ಗೆ ಶಾಲೆ ಉಪಾಧ್ಯಾಯರ ಪತ್ನಿಯರನ್ನೇ ನೇಮಿಸಬೇಕೆಂದು ಶಾಲಾಉಪಾಧ್ಯಾಯರಿಗೆ ಉಚಿತ ವಾಸಸ್ಥಳ ಕೊಡಬೇಕೆಂದೂ, ಮಹಿಳೆಯರನ್ನು ನೇಮಿಸಿಕೊಳ್ಳುವಾಗ ಕೆಲವು ರಿಯಾಯಿತಿ ಕೊಡಬೇಕೆಂದು ಸಮಿತಿಸೂಚಿಸಿದೆ.

ಹಳ್ಳಿಸ ಶಾಲೆಯಲ್ಲಿ ಓದುವ ಹೆಣ್ಣುಮಕ್ಕಳು ತಮ್ಮ ವಿದ್ಯಾಭ್ಯಾಸನಂತರ ಶಿಕ್ಷಣ ಕಾರ್ಯಕ್ಕೆ ಪ್ರವೇಶಿಸಲು ಇಚ್ಛಿಸಿದರೆ ಅವರಿಗೆ ೭ ಮತ್ತು ೮ ನೇ ತರಗತಿಗಳಲ್ಲೂ ಶಿಕ್ಷಣ ತರಗತಿಯಲ್ಲಿ ಸಂಬಳವನ್ನು ತೆಗೆದು ಕೊಳ್ಳಕೂಡದೆಂದೂ ಸಮಿತಿ ತಿಳಿಸಿದೆ.

ಕೈಮಗ್ಗ ಕೈಗಾರಿಕಾ ಕೇಂದ್ರ

ಸಹಕಾರ ಪದ್ಧತಿರೀತ್ಯಾ ಸುಮಾರು ೩೮ ಲಕ್ಷ ರೂಪಾಯಿಗಳ ಚಂದಾವನ್ನು ಎತ್ತಿ ಗುಂಟೂರಿನಲ್ಲಿ ಒಂದು ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಕೇಂದ್ರ ಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ನಿನ್ನೆಯದಿನ ಅದನ್ನು ಉದ್ಘಾಟಿಸಿದರು.

ಭಾರತದಲ್ಲೇ ಇದು ಪ್ರಪ್ರಥಮ ಕೇಂದ್ರವಾಗಿದೆ.

ಮಿಷನ್‌ಟೂಲ್ ಕಾರ್ಖಾನೆ ಕಾರ್ಯ

ಬೆಂಗಳೂರು ೧೦

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಹಿಂದೂಸ್ತಾನ್ ಮಿಷನ್‌ಟೂಲ್ ಕಾರ್ಖಾನೆಯಲ್ಲಿ ಜುಲೈವೇಳೆಗೆ ಉತ್ಪನ್ನ ಪ್ರಾರಂಭವಾಗುವುದಾಗಿ ಉತ್ಪನ್ನ ಕಾರ್ಖಾನೆಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಹೇಳಿದ್ದಾರೆ.

○ ಹೈಸ್ಕೂಲುಗಳಲ್ಲಿ ಪುಸ್ತಕ ಭಂಡಾರಗಳನ್ನು ಅಭಿವೃದ್ಧಿಪಡಿಸಲು ತಲಾ ೫ ಸಾವಿರ ರೂ. ಗ್ರಾಂಟು ಕೊಡಬೇಕೆಂದೂ ಅದರ ಪೈಕಿ ಶೇಕಡ 33⅓ ರಷ್ಟು ಕೇಂದ್ರ ಮತ್ತು ಉಳಿದುದನ್ನು ಸಂಸ್ಥಾನ ಸರ್ಕಾರಗಳು ಕೊಡಬೇಕೆಂದೂ ದೆಹಲಿಯಲ್ಲಿ ಸೇರಿರುವ ಕೇಂದ್ರ ವಿದ್ಯಾ ಸಲಹಾ ಬೋರ್ಡು ಶಿಫಾರಸು ಮಾಡಿದೆ.

ಸಂಸ್ಥಾನದಲ್ಲಿ ಹೊಸದಾಗಿ ೫೦೦ ಉಪಾಧ್ಯಾಯರ ನೇಮಕ

ಪತ್ರಿಕಾಸಮ್ಮೇಳನದಲ್ಲಿ ವಿದ್ಯಾಭ್ಯಾಸ ಮುಖ್ಯಾಧಿಕಾರಿಗಳ ವಿವರಣೆ

ಬೆಂಗಳೂರು ೯

ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸವನ್ನು ಒದಗಿಸುವ ಉದ್ದೇಶದಿಂದ ಸರ್ಕಾರವು ಎಸ್. ಎಸ್. ಎಲ್. ಸಿ ಆಗಿರುವ ಸುಮಾರು ೫೦೦ ಜನರನ್ನು ಭಾರತ ಸರ್ಕಾರದ ಆದೇಶದಂತೆ ಸಂಸ್ಥಾನದ ಪ್ರಾಥಮಿಕ ಶಾಲೆಗಳಾಗಿ ನೇಮಿಸಿಕೊಳ್ಳಲಾಗುವುದೆಂದು ವಿದ್ಯಾಭ್ಯಾಸ ಇಲಾಖಾ ಮುಖ್ಯಾಧಿಕಾರಿ ಶ್ರೀ ಜೆ. ಬಿ. ಮಲ್ಲಾರಾಧ್ಯರವರು ನಿನ್ನೆ ಪತ್ರಿಕಾಸಮ್ಮೇಳನದಲ್ಲಿ ತಿಳಿಸಿದ್ದಾರೆ.

ಈ ನೇಮಕದಲ್ಲಿ ೩೦೦ ಜನರನ್ನು ಹೊಸದಾಗಿ ಸ್ಥಾಪಿಸಲಾಗುವ ಒಂದೇ ಉಪಾಧ್ಯಾಯರಿರುವ ಶಾಲೆಗಳಿಗೂ ಇನ್ನು ೨೦೦ ಜನರನ್ನು ಈಗ ಖಾಲಿ ಇರುವ ಶಾಲೆಗಳಿಗೆ ನೇಮಿಸಲಾಗುವುದೆಂದೂ ಇದಕ್ಕಾಗಿ ತಗಲುವ ವೆಚ್ಚದಲ್ಲಿ ಮೊದಲನೆಯವರ್ಷ ಶೇಕಡ ೭೫, ೨ನೇ ವರ್ಷ ಶೇಕಡ ೫೦, ಮೂರನೇ ವರ್ಷ ಶೇಕಡ ೨೫ ರಷ್ಟನ್ನು ಕೇಂದ್ರಸರ್ಕಾರವು ಸಹಾಯದ್ರವ್ಯ ರೂಪದಲ್ಲಿ ಕೊಡುವುದೆಂದೂ ಅನಂತರ ಈ ವೆಚ್ಚವನ್ನೆಲ್ಲಾ ಪ್ರಾಂತ್ಯಸರ್ಕಾರವೇ ವಹಿಸಿಕೊಳ್ಳುವುದೆಂದೂ ತಿಳಿಸಿದ್ದಾರೆ. ಚುನಾಯಿತರಾದವರಿಗೆ ೬ ವಾರಕಾಲ ತರಪೇತು ಕೊಡಲಾಗುವುದೆಂದೂ ಅವರು ತಿಳಿಸಿದ್ದಾರೆ.

ಇಸ್ಲಾಂ ರಾಷ್ಟ್ರಗಳ ಸೈನ್ಯ ನೆರವಿಗೆ ಅಮೆರಿಕನ್ನರ ವಿರೋಧ

ಮಧ್ಯಪ್ರಾಚ್ಯದಲ್ಲಿರುವ ಅರಬ್ ರಾಷ್ಟ್ರಗಳಿಗೆ ಸೈನ್ಯ ನೆರವನ್ನು ನೀಡಬೇಕೆಂದು ಅಮೆರಿಕಾ ಸರ್ಕಾರದ ಹೊಸನೀತಿಗೆ ಅಲ್ಲಿಯ ಡೆಮೊಕ್ರಾಟಿಕ್ ಮತ್ತು ರಿಪಬ್ಲಿಕ್ ಪಕ್ಷದ ೩೫ ಮಂದಿ ಕಾಂಗ್ರೆಸ್ಸಿಗರು ತಮ್ಮ ತೀವ್ರ ಕಳವಳ ಮತ್ತು ಪ್ರತಿಭಟನೆಯನ್ನು ವ್ಯಕ್ತಪಡಿಸಿ ವಿದೇಶಾಂಗಸಚಿವ ಡಲ್ಸ್‌ರವರಿಗೆ ಪತ್ರ ಬರೆದಿದ್ದಾರೆ

ಒಕ್ಕಲುತನ ಕಾನೂನು

ರೈತರಿಗೆ ಮತ್ತು ಅಲ್ಪಪ್ರಮಾಣ ಹಿಡುವಳಿದಾರರಿಗೆ ನೆರವು ನೀಡುವುದಕ್ಕಾಯೇ ಒಕ್ಕಲುತನ ಕಾನೂನನ್ನು ಜಾರಿಗೆ ತಂದಿರುವುದಾಗಿ ಹೈದರಾಬಾದಿನ ಮುಖ್ಯ ಮಂತ್ರಿ ಶ್ರೀ ಬಿ. ರಾಮಕೃಷ್ಣರಾಯರು ಹೇಳಿದ್ದಾರೆ.

ಗೋವಾದಲ್ಲಿ ಸತ್ಯಾಗ್ರಹವೆ?

ಭಾರತದಲ್ಲಿ ಪೋರ್ಚುಗೀಸ್ ಸ್ವಾಸ್ತ್ಯವಾದ ಗೋವಾವು ಭಾರತದೊಡನೆ ವಿಲೀನಗೊಳ್ಳುವುದಕ್ಕಾಗಿ ಅಲ್ಲಿರುವ ರಾಷ್ಟ್ರೀಯ ಕಾಂಗ್ರೆಸ್ ಸತ್ಯಾಗ್ರಹವನ್ನು ಪ್ರಾರಂಭಿಸುವುದಾಗಿ ಅದರ ಅಧ್ಯಕ್ಷ ಶ್ರೀ ಪೀಟರ್ ಅಲ್ವಾರಿಸ್‌ರವರು ತಿಳಿಸಿದ್ದಾರೆ.

ಕೃಷ್ಣಾನದಿಗೆ ಅಣೆಕಟ್ಟು

ಕೃಷ್ಣಾನದಿಗೆ ಅಡ್ಡಲಾಗಿ ನಂದಿಕೊಂಡ ಎಂಬಲ್ಲಿ ೩೫ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಜಲಾಶಯವೊಂದನ್ನು ನಿರ್ಮಿಸಲು ಆಂಧ್ರ ಮತ್ತು ಹೈದರಾಬಾದ್ ಸರ್ಕಾರಗಳು ಪರಿಶೀಲನೆ ನಡೆಸುತ್ತಲಿರುವುದಾಗಿಯೂ, ಈ ವಿಷಯದಲ್ಲಿ ಸದ್ಯದಲ್ಲಿಯೇ ತೀರ್ಮಾನವಾಗುವ ನಿರೀಕ್ಷೆಯಿದೆಯೆಂದೂ ತಿಳಿಯಬರುತ್ತದೆ.

ಕುಂಭಮೇಳದಲ್ಲಿ ಕಾಲರಾ

ಕುಂಭಮೇಳದಲ್ಲಿ ಕಳೆದ ಬುಧವಾರ ನಡೆದ ದುರಂತದ ಜೊತೆಗೆ ಅಲ್ಲಿ ಕಾಲರಾ ರೋಗ ಕಾಣಿಸಿಕೊಂಡಿರುವುದು ಈಗ ಯಾತ್ರಿಕರಿಗೆ ಇನ್ನೂ ವಿಶೇಷ ಗಾಭರಿಯನ್ನುಂಟುಮಾಡಿದೆ. ಅಲ್ಲಿಂದ ಅವರುಗಳು ಓಡುತ್ತಿದ್ದಾರೆ ೪೬ ಗಂಟೆಗಳಲ್ಲಿ ೩೦ ಕಾಲರಾ ಕೇಸುಗಳನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಭಾರತ ಮೇಲ್ವಿಚಾರಕ ಸೈನ್ಯ ವಾಪಸ್ಸು

ಸ್ವದೇಶಕ್ಕೆ ಹಿಂತಿರುಗದ ಯುದ್ಧ ಖೈದಿಗಳ ಮೇಲ್ವಿಚಾರಣೆಗಾಗಿ ಕೊರಿಯಾಕ್ಕೆ ತೆರಳಿದ್ದ ಭಾರತ ಸೈನ್ಯದ ಮೊದಲನೆ ತಂಡದ ೧೬೦೦ ಜನರು ನಿನ್ನೆಯದಿನ ಸ್ವದೇಶಕ್ಕೆ ಹಿಂತಿರುಗಲು ಹೊರಟಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೮—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೧೨	೨೨—೨
ಎಳ್ಳು	೭೦—೨	—
ಹರಳು	೩೫—	೪೨—
ಹುಚ್ಚೆಳ್ಳು	೩೫—	೪೨—೮
ಹೊಂಗೆಬೀಜ	೧೯—೧೦	೨೨—೧೨
ಹುಣಸೆಬೀಜ	೧೩—೧೨	೧೩—೧೪
ಹುರುಳಿ	೨೫—೪	೩೧—೬
ಹೆಸರು	೩೪—೧೨	೪೦—
ಅಲಸಂದೆ	೩೦—೨	೪೦—
ಅವರೆ	೩೩—೨	೩೬—೨
ಕಡಲೆ	೫೨—	೫೩—
ಉದ್ದು	—	—
ಕೊತ್ತಂಬರಿ	೨೫—೧೪	೨೮—೪
ತೊಗರಿ	೧೮—	೨೬—೧೨
ಹುಣಸೆಹಣ್ಣು	೩—೧೩	೧೦—೧೨
ಮೆಣಸಿನಕಾಯಿ	೨೩—೧೪	೩೩—
ಸೀಗೆಕಾಯಿ	೪—೪	೪—೧೫
ಬೆಲ್ಲ	೪—೧೨	೫—
ತೆಂಗಿನಕಾಯಿ	೧೪೬—	೩೦೦—

ಗೂಡ್ಸ್ ಗಾಡಿ ಉರುಳಿ ಭಾರಿ ರೈಲ್ವೆ ಅಪಘಾತ

೩೦ ಮಂದಿ ಮರಣ ; ೯ ಜನರಿಗೆ ಗಾಯ

ಉತ್ತರಪ್ರದೇಶದಲ್ಲಿ ಕಾಶಿಗೆ ೪೨ ಮೈಲಿ ದೂರದಲ್ಲಿ ನೂತನವಾಗಿ ನಿರ್ಮಿಸಲಾಗುತ್ತಿರುವ ರೈಲ್ವೆವಿಭಾಗದಲ್ಲಿ ನಿನ್ನೆ ಗೂಡ್ಸ್‌ಗಾಡಿಯ ೧೩ವ್ಯಾಗನ್ನುಗಳು ಉರುಳಿ ೩೦ಮಂದಿ ಕಾರ್ಮಿಕರು ಮಡಿದು ೯ ಜನರಿಗೆ ಗಾಯಗಳಾಗಿರುವುದೆಂದು ತಿಳಿಯಬರುತ್ತದೆ.

ಈ ಮಾರ್ಗದಲ್ಲಿ ನಿನ್ನೆಯದಿನ ಗೂಡ್ಸ್ ಗಾಡಿಯು ರಿಪೇರಿಯಾಗುತ್ತಿದ್ದ ಒಂದು ಸೇತುವೆಯನ್ನು ದಾಟ ಮುಂದಕ್ಕೆ ಹೋದಾಗ ಗಾಡಿಯ ೧೩ ವ್ಯಾಗನ್ನುಗಳು ಸಡಿಲವಾಗಿ ಅವುಗಳ, ಹಿಂದಕ್ಕೆ ರಭಸವಾಗಿ ಓಡಲಾರಂಭಿಸಿತು. ಸೇತುವೆಯ ಬಳಿ ಕೆಲಸ ಮಾಡುತ್ತಿದ್ದವರು ಈ ಗಾಡಿಗಳಿಗೆ ಸಿಕ್ಕಿ ಅನೇಕರು ಕೆಳಗುರುಳಿದರು. ಒಟ್ಟು ಸ್ಥಳದಲ್ಲಿಯೇ ೨೫ ಜನರು ಸತ್ತುಹೋದರು. ಆಸ್ಪತ್ರೆಗೆ ಸಾಗಿಸುವಾಗ ೫ ಜನ ಮಡಿದರು ಆ ೧೩ ವಾಗನ್ನುಗಳು ಸುಮಾರು ೫೦ ಅಡಿಗಳ ಕೆಳಗೆ ಬಿದ್ದು ಗಾಡಿಗಳೆಲ್ಲವೂ ಚೂರು ಚೂರಾದುವು. ಸೇತುವೆಗೂ ಸಹ ವಿಶೇಷ ಜಖಂ ಆಗಿದೆ. ಉತ್ತರ ರೈಲ್ವೆ ಅಧಿಕಾರಿಗಳು ಸ್ಥಳಕ್ಕೆ ಹೋಗಿ ತನಿಖೆ ನಡೆಸುತ್ತಲಿದ್ದಾರೆ.

ನ್ಯೂಸ್ ಪ್ರಿಂಟ್ ತಯಾರಿಕಾ ಕಾರ್ಖಾನೆ

ಉತ್ತರ ಪ್ರದೇಶದಲ್ಲಿ ೫ಕೋಟಿ ೪೦ಲಕ್ಷ ರೂಪಾಯಿಗಳ ಬಂಡವಾಳದಲ್ಲಿ ವೃತ್ತಪತ್ರಿಕಾ ಕಾಗದ ತಯಾರಿಕಾ ಕಾರ್ಖಾನೆಯನ್ನು ಸ್ಥಾಪಿಸಲಾಗುತ್ತದೆ. ಕಾಗದ ಪ್ರಾಯೋಗಿಕಾ ತಯಾರಿಕಾ ಕಾರ್ಯವು ಇದೇ ಜುಲೈ ಮಾಹೆಯಿಂದ ಪ್ರಾರಂಭವಾಗುವುದಾಗಿ ತಿಳಿಯಬರುತ್ತದೆ.

ಪೂರ್ಣಾನದಿ ಅಪಘಾತ

ಮೊನ್ನೆಯದಿನ ಪಾಟ್ನಾಬಳಿ ಪೂರ್ಣನದಿಯಲ್ಲಿ ೧೦೦ ಜನರಿದ್ದ ದೋಣಿಯೊಂದು ಮುಳುಗಿಹೋಯಿತಷ್ಟೆ. ಅದರಲ್ಲಿ ಸುಮಾರು ೩೦ ಜನರನ್ನು ಸಂರಕ್ಷಿಸಲಾಯಿತೆಂದೂ ಇಲ್ಲಿಯವರೆಗೆ ೧೮ ಶವಗಳ ಪತ್ತೆ ಹಚ್ಚಿರುವುದಾಗಿ ತಿಳಿಯಬರುತ್ತದೆ. ಇನ್ನೂ ಪತ್ತೆಯಾಗದವರಿಗಾಗಿ ಕಾರ್ಯಗಳು ನಡೆಯುತ್ತಿವೆ.

ಕೇಂದ್ರ ಆರೋಗ್ಯ ಸಮಿತಿ ಸಮ್ಮೇಳನ

ಕೇಂದ್ರ ಆರೋಗ್ಯ ಸಮಿತಿಯ ೨ ನೇ ಸಮ್ಮೇಳನವು ನಿನ್ನೆ, ರಾಜಕೋಟೆಯಲ್ಲಿ ಆರೋಗ್ಯ ಸಚಿವ ಶ್ರೀಮತಿ ರಾಜಕುಮಾರಿ ಅಮೃತಕೌರ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಎಲ್ಲಾ ಪ್ರಾಂತ್ಯ ಆರೋಗ್ಯ ಸಚಿವರು ಮತ್ತು ಮುಖ್ಯಾಧಿಕಾರಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿರುವರು.

ಮುಂಗಡ ಹಣ ಕೊಡದೆ ಧರ್ಮ!

ಕುಂಭಮೇಳಕ್ಕೆ ಬಂದ ಯಾತ್ರಿಕರ ಪೈಕಿ ೧೦೮ ಮಂದಿಗೆ ಮೂರುದಿನಗಳ ಕಾಲ ಊಟ ಮತ್ತು ಬಟ್ಟೆಗಳನ್ನು ಕೊಟ್ಟು ತನಗೆ ಅದರ ಖರ್ಚಿನ ಬಾಬ್ತು ಬಿಲ್ ಕಳುಹಿಸಿ ಕೊಡಬೇಕೆಂದು ಬಿಹಾರ್ ಮುಖ್ಯ ಮಂತ್ರಿ ಡಾ॥ ಶ್ರೀ ಕೃಷ್ಣಸಿನ್ಹರವರು ಸೂಚಿಸಿದ್ದ ಪ್ರಾರ್ಥನೆಯು ಕುಂಭಮೇಳದ ಅಧಿಕಾರಿಗಳಿಗೆ ಆಶ್ಚರ್ಯ ಮತ್ತು ತಲೇನೋವು ಉಂಟುಮಾಡಿದೆ. ಮುಂಗಡವಾಗಿ ಹಣ ಪಡೆಯದೇ ಖಾಸಗಿಯವರಿಗಾಗಿ ಹಣ ಖರ್ಚುಮಾಡಲು ಮೇಳದ ಅಧಿಕಾರಿಗಳಿಗೆ ಹಿಂದಿನ ಯಾವ ಸಂಪ್ರದಾಯವೂ ಇಲ್ಲದಿರುವುದೇ ಈ ಜಿಜ್ಞಾಸಕ್ಕೆ ಕಾರಣವಾಗಿದೆ.

ತಿರುವಾಂಕೂರಿನಲ್ಲಿ ವಿರೋಧ ಪಕ್ಷಗೆದ್ದರೆ ಆಡಳಿತಕ್ಕೆ ಬರಲಿ

ತಿರುವಾಂಕೂರು-ಕೊಚ್ಚಿಯಲ್ಲಿ ಕಾಂಗ್ರೆಸ್ ಪ್ರಚಾರ ನಡೆಸುತ್ತಲಿರುವ ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ನಿನ್ನೆಯದಿನ ಅಲ್ಲಿ ಮಾತನಾಡುತ್ತ ಈಗಿನ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷವು ಸೋತು ವಿರೋಧ ಪಕ್ಷವು ಜಯಗಳಿಸಿದರೆ, ರಾಜ್ಯಾಂಗ ರೀತ್ಯಾ ಅದು ಆಡಳಿತವನ್ನು ವಹಿಸಿಕೊಳ್ಳುವುದರಲ್ಲಿ ತಮ್ಮ ಅಭ್ಯಂತರವೇನೂ ಇಲ್ಲ. ಆದರೆ ಎಲ್ಲರೂ ರಾಜ್ಯಾಂಗಕ್ಕೆ ಅನುಗುಣವಾಗಿ ನಡೆಯಬೇಕು ಎಂದು ಹೇಳಿದ್ದಾರೆ

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ.
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್ ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೩೫

೧೦-೨-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕರ್ಣಾಟಕ-ಆಂಧ್ರ ಗಡಿ ನಿರ್ಧರಿಸಲು ಸಮಿತಿ

ಮೈಸೂರು ಸರ್ಕಾರ ಸದ್ಯದಲ್ಲೇ ನೇಮಿಸುವುದು

ಕರ್ಣಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಪ್ರಾರ್ಥನೆಯ ಮೇರೆ ಕರ್ಣಾಟಕ ಮತ್ತು ಆಂಧ್ರಗಳ ನಡುವೆ ಗಡಿ ಗೊತ್ತುಪಡಿಸುವ ಬಗ್ಗೆ ಒಂದು ಗಡಿ ನಿರ್ಧಾರ ಸಮಿತಿಯನ್ನು ಮೈಸೂರು ಸರಕಾರವು ಸದ್ಯದಲ್ಲೇ ನೇಮಿಸುವುದೆಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹುಬ್ಬಳ್ಳಿಯಲ್ಲಿ ತಿಳಿಸಿದ್ದಾರೆ.

ಕನ್ನಡಿಗರ ಬಯಕೆಯನ್ನು ಈಡೇರಿಸಬೇಕು

ಮುಖ್ಯ ಮಂತ್ರಿ ಹನುಮಂತಯ್ಯನವರ ಹೇಳಿಕೆ

ಉತ್ತರ ಕರ್ಣಾಟಕದ ೫೫ ಲಕ್ಷಜನರು ಕರ್ಣಾಟಕ ಪ್ರಾಂತರಚನೆ ತಡವಾಗಿರುವುದರಿಂದ ಅಸಮಾಧಾನಗೊಂಡಿದ್ದಾರೆ. ಯಾವುದೇ ಪ್ರದೇಶದ ಜನತೆಯ ಅತೃಪ್ತಿಯು ಇಡೀ ರಾಷ್ಟ್ರದ ಐಕ್ಯತೆಗೆ ತೀವ್ರ ಧಕ್ಕೆಯನ್ನುಂಟುಮಾಡುವುದು. ಅದನ್ನು ಸಮಂಜಸವಾಗಿ ನಿವಾರಿಸಬೇಕಾದುದು ಅಗತ್ಯ. ಕನ್ನಡ ಭಾಷಾ ಪ್ರದೇಶಗಳ ಜನರ ಇಚ್ಛೆಯನ್ನು ಈಡೇರಿಸುವುದಕ್ಕಾಗಿ ಕೇಂದ್ರಕ್ಕೆ ಪ್ರಾಂತ್ಯಗಳ ಪುನರ್ವಿಂಗಡನಾ ಸಮಿತಿಯವರು ತಮ್ಮ ಅಂತ್ಯ ವರದಿಯನ್ನೊಪ್ಪಿಸುವುದಕ್ಕೆ ಮೊದಲು ಒಂದು ತಾತ್ಕಾಲಿಕ ವರದಿಯನ್ನು ಕೊಟ್ಟು ಕನ್ನಡಿಗರಿಗೆ ತೃಪ್ತಿಯನ್ನುಂಟುಮಾಡುವರೆಂದು ನಂಬಲಾಗಿದೆ ಎಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ತಮ್ಮ ಉತ್ತರ ಕರ್ಣಾಟಕ ಪ್ರವಾಸದ ಅಂತ್ಯದಲ್ಲಿ ಹೇಳಿದ್ದಾರೆ.

ಭಾರತದಲ್ಲಿ ಕಾಶ್ಮೀರ ಸೇರ್ಪಡೆ

ಭಾರತದಲ್ಲಿ ಕಾಶ್ಮೀರವು ಸೇರುವ ವಿಷಯದಲ್ಲಿ ಈಗ ಕಾಶ್ಮೀರ ರಾಜ್ಯಾಂಗ ಸಭೆಯು ನಿರ್ದಿಷ್ಟವಾದ ತೀರ್ಮಾನವನ್ನು ಮಾಡಿದೆ.

ಈಗ ಆ ವಿಷಯದಲ್ಲಿ ಇನ್ನುಮುಂದೆ ಮಾತುಕತೆ ನಡೆಸುವುದು ರಾಜ್ಯಾಂಗಕ್ಕೆ ವಿರೋಧವಾಗುತ್ತದೆ. ಮತ್ತು ಅದನ್ನು ಉಲ್ಲಂಘಿಸಿದಂತಾಗುವುದು ಎಂಬುದಾಗಿ ಹಿಂದೂಮಹಾಸಭೆಯ ಪ್ರಧಾನ ಕಾರ್ಯದರ್ಶಿ ಶ್ರೀ ದೇಶಪಾಂಡೆಯವರು ಹೇಳಿರುವರು.

ವಿಷ್ಯಾಕ್ಕೆ ಪುನಃ ಕಾಲಿಡಲು ವಿದೇಶಿಗಳ ಪ್ರಯತ್ನ

ಪ್ರಧಾನಿ ನೆಹರೂರವರ ಖಂಡನೆ

ಏಷ್ಯಾಖಂಡಕ್ಕೆ ಪಾಶ್ಚಾತ್ಯ ರಾಷ್ಟ್ರಗಳು ಪುನಃ ಕಾಲಿಡಲು ಯತ್ನಿಸುತ್ತಲಿರುವುದಕ್ಕೆ ಅತ್ಯಂತವಾಗಿ ವಿಷಾದ ಪಡಬೇಕಾಗಿದೆ. ಅಮೆರಿಕಾವು ಪಾಕೀಸ್ತಾನಕ್ಕೆ ಮಿಲಿಟರಿ ನೆರವನ್ನು ಕೊಡುವುದೇ ಇದಕ್ಕೆ ಸಾಕ್ಷಿಯಾಗಿದೆ. ನಾವು ಈ ನೆರವಿಗೆ ಹೆದರುವವರಲ್ಲ, ಗಾಬರಿಯು ಪಡಬೇಕಾಗಿಲ್ಲ. ಈ ರೀತಿ ಪರಿಸ್ಥಿತಿಯು ಈಗ ಉದ್ಭವಿಸಿರುವುದು ಭಾರತಕ್ಕೆ ಒಂದು ರೀತಿಯ ಪ್ರಯೋಜನವನ್ನುಂಟುಮಾಡಿದೆ. ಜನತೆಯಲ್ಲಿ ಜಡತ್ವ ನಿವಾರಣೆಯಾಗಿ ಜಾಗೃತಿಯುಂಟಾಗುವುದು ಎಂದು ಕಾಂಗ್ರೆಸ್ ಅಧ್ಯಕ್ಷ ಶ್ರೀ ನೆಹರೂರವರು ನಿನ್ನೆಯದಿನ ತಿರುವಾಂಕೂರ್-ಕೊಚ್ಚಿಯ ಚುನಾವಣಾ ಪ್ರಚಾರದ ಮುಕ್ತಾಯ ಭಾಷಣದಲ್ಲಿ ತಿಳಿಸಿದ್ದಾರೆ.

ಒಂದು ದೇಶವು ಶಸ್ತ್ರಾಸ್ತ್ರಗಳಿಂದ ಬಲಯುತವಾಗುವುದಿಲ್ಲ. ಶಿಸ್ತು ಮತ್ತು ಜನತೆಯ ಐಕ್ಯಮತ್ಯ ಮತ್ತು ಆರ್ಥಿಕ ನುಟ್ಟ ಉತ್ತಮಗೊಳ್ಳುವುದರಿಂದಲೇ ಮಾತ್ರ ಸಾಧ್ಯ. ವಿದೇಶಗಳಿಂದ ಟ್ಯಾಂಕುಗಳು ಮುಂತಾದುವನ್ನು ತರಿಸಿಕೊಂಡರೆ ಒಂದೆರಡು ವರ್ಷಗಳು ಮಾತ್ರ ಬರುತ್ತವೆ. ಆದರೆ ತನಗೆ ಬೇಕಾದ ವಸ್ತುಗಳನ್ನೆಲ್ಲಾ ತಾನೇ ತಯಾರಿಸಿಕೊಂಡರೆ ಮಾತ್ರ ಆಗ ನಿಜವಾದ ಶಕ್ತಿಯುಂಟಾಗುತ್ತದೆ. ದೇಶದಲ್ಲಿ ಉತ್ಪನ್ನ ಹೆಚ್ಚಿ ನಿರುದ್ಯೋಗವೂ ತಪ್ಪಬೇಕು ಆಗ ದೇಶವು ಶಕ್ತಿಯುತವಾಗುತ್ತದೆ ಎಂಬುದಾಗಿ ಶ್ರೀ ನೆಹರೂರವರು ತಿಳಿಸಿದ್ದಾರೆ.

ಜಿಲ್ಲಾಬೋರ್ಡು ಸಮಿತಿಗಳ ಸಮಾಪ್ತಿ

ಮೈಸೂರು ಜಿಲ್ಲಾಬೋರ್ಡು ತಿದ್ದುಪಡಿ ಕಾನೂನು ಜಾರಿಗೆ ಬಂದಿರುವುದರಿಂದ ಈಗಿರುವ ಜಿಲ್ಲಾಬೋರ್ಡು ಅಧ್ಯಕ್ಷ ಮತ್ತು ಸದಸ್ಯರುಗಳ ಅಧಿಕಾರಾವಧಿಯು ಇದೇ ೧೫ನೇ ತಾರೀಖಿನಿಂದ ಮುಕ್ತಾಯವಾಗುವುದೆಂದೂ ಸರ್ಕಾರದ ಆಜ್ಞೆ ಹೊರಟಿದೆ. ಆಯಾ ಜಿಲ್ಲಾಧಿಕಾರಿಗಳೇ ಆ ಬೋರ್ಡುಗಳ ವಿಶೇಷ ಅಧಿಕಾರಿಗಳಾಗುವರು. ಮತ್ತು ಮೇಲ್ಕಂಡದಿನ ಅವರು ಅಧಿಕಾರ ವಹಿಸಿಕೊಳ್ಳುವರು.

ಮಠಗಳಿಗೆ ಸರ್ಕಾರದ ಗ್ರಾಂಟು

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರ ಹೇಳಿಕೆ

ಶೃಂಗೇರಿ ಮಠ ಅಥವ ಮತ್ತಾವುದೇ ಜಹಗೀರಿನ ಸಾಧಾರಣ ವರಮಾನವನ್ನು ಕಿತ್ತುಕೊಳ್ಳಲು ಸರ್ಕಾರದ ಉದ್ದೇಶವಲ್ಲ. ಅಲ್ಲಿರುವ ಜಹಗೀರುಗಳ ಗೇಣೀದಾರರುಗಳಿಗೆ ಸಂಸ್ಥಾನದ ಇತರ ಗೇಣಿದಾರರುಗಳಿಗೆ ಸಮಾನವಾದ ಹಕ್ಕುಗಳನ್ನು ಕೊಡಲು ಮಾತ್ರ ಉದ್ದೇಶಿಸಲಾಗಿದೆ. ಸರ್ಕಾರದವರು ಮಠಗಳಿಗೆ ವಾರ್ಷಿಕ ಗ್ರಾಂಟನ್ನು ಕೊಡುವರು-ಎಂದು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೈಸೂರು ಮಠಗಳ ಇನಾಂ ರದ್ದು ಮಸೂದೆಯ ವಿಷಯದಲ್ಲಿ ಪ್ರಸ್ತಾಪಿಸುತ್ತಾ ಹುಬ್ಬಳ್ಳಿಯಲ್ಲಿ ತಿಳಿಸುತ್ತಾರೆ

ಕಾಂಗ್ರೆಸ್ ಮೆಂಬರು ಮಾಡಿಸಲಿಕ್ಕೆ ನಿರ್ಬಂಧ

ಮೈಸೂರು ನಗರದಲ್ಲಿ ಕಾಂಗ್ರೆಸ್ ಮೆಂಬರುಗಳನ್ನು ಮಾಡಿಸಲು ಅಲ್ಲಿಯ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯವರ ಹತ್ತಿರ ಹೋಗಿ ಮೆಂಬರು ಮಾಡಲಿಕ್ಕೆ ಪುಸ್ತಕಗಳನ್ನು ಕೇಳಿದರೆ ಒಂದು ಅಥವಾ ಎರಡನ್ನು ಮಾತ್ರ ಕೊಡುತ್ತೇವೆ ಹೆಚ್ಚಿಗೆ ಪುಸ್ತಕ ನನ್ನಲ್ಲಿಲ್ಲ ಎಂದು ಹೇಳುತ್ತಾರೆ. ಈ ಎರಡು ಪುಸ್ತಕಗಳನ್ನು ಕೊಡಲು ಸುಮಾರು ೫-೬ ದಿವಸ ತಿರುಗಿಸುತ್ತಾರೆ. ಈರೀತಿ ಅವರು ಸತಾಯಿಸಿ ಕಾಲ ಕಳೆಯುತ್ತಿರುತ್ತಾರೆ-ಸಿಟಿಯಲ್ಲಿಈಗಿನ ಅಧಿಕಾರಿ ವರ್ಗದವರ ಮೇಲೆ ಬಹಳ ಪ್ರೊಟೆಸ್ಟು, ಇದ್ದು ಪ್ರಬಲವಾದ ವಿರೋಧವಿರುವುದೇ ಇದಕ್ಕೆ ಕಾರಣ. ಎಲ್ಲಿ ಕಾಂಗ್ರೆಸ್ ಮೆಂಬರುಗಳನ್ನು ಹೆಚ್ಚಾಗಿ ಮಾಡಿಸಿ ಸಿಟಿ ಕಾಂಗ್ರೆಸ್ ಬೇರೆಯವರಿಗೆ ಹೋಗುವುದೋ ಎಂಬ ಹೆದರಿಕೆ ನಾನು ಕಾರ್ಯದರ್ಶಿಯವರಿಗೆ ಇದರ ಬಗ್ಗೆ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಿಗೂ ಮತ್ತು ಎಂ. ಪಿ. ಸಿ. ಸಿ. ಅಧ್ಯಕ್ಷರಿಗೂ ಮೆಂಬರು ಮಾಡಲಿಕ್ಕೆ ಪುಸ್ತಕಗಳನ್ನು ಕೊಡುವುದಿಲ್ಲ. ಎಂದು ಪತ್ರ ಬರೆಯುತ್ತೇನೆಂದು ಹೇಳಿದರೆ ಯಾರಿಗೆ ಬೇಕಾದರೂ ಬರೆದುಕೋ ನನ್ನ ಹತ್ತಿರ ಪುಸ್ತಕ ಇಲ್ಲ ಎಂದು ಧೋರಣೆ ಮಾತನಾಡಿದರು. ಇವರ ನಡವಳಿಕೆ ಬಗ್ಗೆ ಸಾರ್ವಜನಿಕರೇ ಯೋಚಿಸಲಿ.

ಟಿ. ಎಸ್. ಸುಬ್ಬಣ್ಣ.

ತಂಬಾಕು ಕೊಳ್ಳುವವರೇ ಇಲ್ಲ

ಆಂಧ್ರ ಪ್ರಾಂತ್ಯದಲ್ಲಿ ಸುಮಾರು ೩ ಕೋಟಿ ಮಣಗಳಷ್ಟು ತಂಬಾಕನ್ನು ಕೊಳ್ಳುವವರೇ ಇಲ್ಲದೆ ಹಾಗೇಯೇ ಉಳಿದು ಹೋಗಿದೆ. ಅದಕ್ಕೆ ವಿದೇಶಗಳಲ್ಲಿ ಗಿರಾಕಿಗಳನ್ನು ಪಡೆಯಲು ಭಾರತ ಸರ್ಕಾರವು ಉನ್ನತ ಅಧಿಕಾರಿಯೋರ್ವರನ್ನು ವಿದೇಶಕ್ಕೆ ಕಳುಹಿಸಲಿದೆ.

ಶಾಲಾ ತಾಯಂದಿರ ನೇಮಕ

ಗ್ರಾಮಾಂತರ ಪ್ರದೇಶಗಳಲ್ಲಿ ಬಾಲಕಿಯರ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ 'ಶಾಲಾ ತಾಯಂದಿರು ಅಥವಾ ಶಾಲಾ ಮೇಲ್ವಿಚಾರಕರು' ಎಂಬ ನೂತನ ಹುದ್ದೆಯನ್ನು ಕಲ್ಪಿಸಬೇಕೆಂದು ದೆಹಲಿಯಲ್ಲಿ ನಡೆದ ವಿದ್ಯಾಸಮಿತಿಯು ಸರ್ಕಾರಕ್ಕೆ ಶಿಫಾರ್ಸು ಮಾಡಿದೆ.

ಈ ನೇಮಕಗಳನ್ನು ಮಾಮೂಲಾಗಿ ಶಾಲೆ ಉಪಾಧ್ಯಾಯರ ಪತ್ನಿಯರನ್ನೇ ನೇಮಿಸಬೇಕೆಂದು ಶಾಲಾಉಪಾಧ್ಯಾಯರಿಗೆ ಉಚಿತ ವಾಸಸ್ಥಳ ಕೊಡಬೇಕೆಂದೂ, ಮಹಿಳೆಯರನ್ನು ನೇಮಿಸಿಕೊಳ್ಳುವಾಗ ಕೆಲವು ರಿಯಾಯತಿ ಕೊಡಬೇಕೆಂದು ಸಮಿತಿ ಸೂಚಿಸಿದೆ.

ಅಲ್ಲದೆ ಶಾಲೆಗಳಲ್ಲಿ ಓದುವ ಹೆಣ್ಣುಮಕ್ಕಳು ತಮ್ಮ ವಿದ್ಯಾಭ್ಯಾಸನಂತರ ಶಿಕ್ಷಣ ಕಾರ್ಯಕ್ಕೆ ಪ್ರವೇಶಿಸಲು ಇಚ್ಛಿಸಿದರೆ ಅವರಿಗೆ ೬ ಮತ್ತು ೮ ನೇ ತರಗತಿಗಳಲ್ಲೂ ಶಿಕ್ಷಣ ತರಗತಿಯಲ್ಲಿ ಸ್ಥಳವನ್ನು ತೆಗೆದುಕೊಡಬೇಕೆಂದೂ ಸಮಿತಿ ತಿಳಿಸಿದೆ.

ಕೈಮಗ್ಗ ಕೈಗಾರಿಕಾ ಕೇಂದ್ರ

ಸಹಕಾರ ಪದ್ಧತಿರೀತ್ಯಾ ಸುಮಾರು ೮೮ ಲಕ್ಷ ರೂಪಾಯಿಗಳ ಚಂದಾವನ್ನು ಎತ್ತಿ ಗುಂಟಕಲ್ಲಿನಲ್ಲಿ ಒಂದು ಕೈಗಾರಿಕಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಕೇಂದ್ರ ಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ನಿನ್ನೆಯದಿನ ಅದನ್ನು ಉದ್ಘಾಟಿಸಿದರು.

ಭಾರತದಲ್ಲೇ ಇದು ಪ್ರಪ್ರಥಮ ಕೇಂದ್ರವಾಗಿದೆ.

ಮಿಷಿನ್‌ಟೂಲ್ ಕಾರ್ಖಾನೆ ಕಾರ್ಯ

ಬೆಂಗಳೂರು ೧೦

ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಹಿಂದೂಸ್ತಾನ್ ಮಿಷಿನ್‌ಟೂಲ್ ಕಾರ್ಖಾನೆಯಲ್ಲಿ ಜುಲೈವೇಳೆಗೆ ಉತ್ಪನ್ನ ಪ್ರಾರಂಭವಾಗುವುದಾಗಿ ಉತ್ಪನ್ನಶಾಖಾಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಹೇಳಿದ್ದಾರೆ.

○ ಹೈಸ್ಕೂಲುಗಳಲ್ಲಿ ಪುಸ್ತಕ ಭಂಡಾರಗಳನ್ನು ಅಭಿವೃದ್ಧಿಪಡಿಸಲು ತಲಾ ೫ ಸಾವಿರ ರೂ. ಗ್ರಾಂಟು ಕೊಡಬೇಕೆಂದೂ ಅದರ ಪೈಕಿ ಶೇಕಡ 33⅓ ರಷ್ಟು ಕೇಂದ್ರ ಮತ್ತು ಉಳಿದುದನ್ನು ಸಂಸ್ಥಾನ ಸರ್ಕಾರಗಳು ಕೊಡಬೇಕೆಂದೂ ದೆಹಲಿಯಲ್ಲಿ ಸೇರಿರುವ ಕೇಂದ್ರ ವಿದ್ಯಾ ಸಲಹಾ ಬೋರ್ಡು ಶಿಫಾರಸು ಮಾಡಿದೆ.

ಅಮೆರಿಕಾಕ್ಕೆ ಪಾಕೀಸ್ತಾನದ ಬೆದರಿಕೆ

ಮಿಲಿಟರಿ ನೆರವು ನೀಡದಿದ್ದರೆ ವಿಶೇಷ ಪರಿಣಾಮವುಂಟಾಗುವುದು

ತಮಗೆ ಸೈನ್ಯ ನೆರವನ್ನು ಕೊಡುವ ಪ್ರಶ್ನೆಯನ್ನು, ಭಾರತದ ವಿರೋಧವನ್ನು ಗಮನಿಸಿ, ಅದನ್ನು ಕೈಬಿಟ್ಟರೆ ಇದರಿಂದ ವಿಶೇಷ ಪರಿಣಾಮವುಂಟಾಗುವುದೆಂದು ಪಾಕೀಸ್ತಾನವು ಅಮೆರಿಕಾಕ್ಕೆ ಎಚ್ಚರಿಸಿರುವುದಾಗಿ ಹೇಳಲಾಗಿದೆ.

ಭಾರತವು ಎಷ್ಟೇ ವಿರೋಧಿಸಿದರೂ ಪಾಕೀಸ್ತಾನಕ್ಕೆ ಅಮೆರಿಕಾವು ಯುದ್ಧನೆರವನ್ನು ಕೊಡುವುದಕ್ಕೆ ಹಿಂತೆಗೆಯುವುದಿಲ್ಲವೆಂದು ಅಮೆರಿಕ ವೃತ್ತಪತ್ರಿಕೆಗಳಲ್ಲಿ ಹೇಳಲಾಗುತ್ತಿದೆ. ಈ ಒಪ್ಪಂದದ ವಿಷಯದಲ್ಲಿ ವಿವರಗಳು ಪ್ರಕಟವಾದರೆ ಭಾರತವು ತನ್ನ ವಿರೋಧವನ್ನು ತಾನೇ ನಿಲ್ಲಿಸುತ್ತದೆ ಎಂದೂ ಹೇಳಲಾಗುತ್ತಿದೆ.

ಸೈನ್ಯ ನೆರವಿನ ಪ್ರಮಾಣವು ಸದ್ಯಕ್ಕೆ ೨೫೦ ರಿಂದ ೧೦೦೦ ಲಕ್ಷ ಡಾಲರುಗಳ ಬೆಲೆಯ ಪರಿಮಿತಿಯಲ್ಲಿ ಇರುವುದೆಂದೂ ವರದಿಯಾಗಿದೆ.

ವಿಶ್ವಸಮಸ್ಯೆ ಬಗ್ಗೆ ನಗೀಬರ ಅಭಿಪ್ರಾಯ

ವಿಶ್ವದ ನಾನಾ ಸಮಸ್ಯೆಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಸಿಂಹಳ ಪ್ರಧಾನಿ ಕೊಟೇಲವಾಲಾರವರು ಈಜಿಪ್ಟಿನ ರಾಷ್ಟ್ರಾಧ್ಯಕ್ಷ ಮತ್ತು ಪ್ರಧಾನಿ ಜನರಲ್ ನಗೀಬರಿಗೆ ಪತ್ರ ಬರೆದಿರುವುದಾಗಿ ತಿಳಿಯಬರುತ್ತದೆ.

ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನದಲ್ಲಿ ಜನರಲ್ ನಗೀಬ್‌ರವರ ಅಭಿಪ್ರಾಯವನ್ನು ಇಡಲು ಸರ್ ಕೊಟೇಲವಾಲಾರವರು ಈ ಪತ್ರ ಬರೆದಿರುವುದಾಗಿ ಹೇಳಲಾಗಿದೆ.

ಸತ್ಯಾಗ್ರಹ ಮುಕ್ತಾಯ

ಗೋಧಿಯನ್ನು ಪ್ರಾಂತ್ಯದಿಂದ ಹೊರಕ್ಕೆ ಕಳುಹಿಸಕೂಡದೆಂದು ಬಿಕನೀರ್‌ನಲ್ಲಿ ಕಳೆದ ಒಂದೆರಡು ತಿಂಗಳುಗಳಿಂದ ಪ್ರಜಾಸೋಷಲಿಸ್ಟ್ ಪಕ್ಷದವರು ನಡೆಸುತ್ತಲಿದ್ದ ಸತ್ಯಾಗ್ರಹವು ಮುಕ್ತಾಯವಾಗಿದೆ. ಸರ್ಕಾರವು ಕೆಲವು ಭರವಸೆಗಳನ್ನು ಇತ್ತಿರುವುದರಿಂದ ಅದನ್ನು ಕ್ರಿಯಾಸಮಿತಿ ನಿಲ್ಲಿಸಿತು.

ನೆಹರೂ-ಕೊಟೇಲವಾಲಾ ಒಪ್ಪಂದ

ಸಿಂಹಳದಲ್ಲಿರುವ ಭಾರತೀಯರ ವಿಷಯದಲ್ಲಿ ಪ್ರಧಾನಿ ನೆಹರೂ ಮತ್ತು ಸಿಂಹಳ ಪ್ರಧಾನಿ ಸರ್ ಜಾನ್ ಕೊಟೇಲವಾಲರ ನಡುವೆ ಆಗಿರುವ ಒಪ್ಪಂದವು ಪೂರ್ಣವಾದುದೆಂದು ಈಗಲೇ ಯಾರು ಭಾವಿಸಬಾರದೆಂದು ಪ್ರಧಾನಿ ನೆಹರೂರವರು ಹೇಳಿದ್ದಾರೆ.

ತಮಿಳುನಾಡು ಕಾಂಗ್ರೆಸ್ಸಿನ ಸ್ಥಾನ

ಪ್ರಧಾನಿ ನೆಹರೂರವರು ಮೊನ್ನೆಯ ದಿನ ನಾಗರಕೋಯಿಲ್‌ನಲ್ಲಿ ಕಾಂಗ್ರೆಸ್ ಪ್ರಚಾರಸಭೆಯೊಂದರಲ್ಲಿ ಮಾತನಾಡುತ್ತಾ ಕಾಂಗ್ರೆಸ್ಸಿನಲ್ಲಿದ್ದ ಹಲವರು ತಮ್ಮ ಸ್ವಉದ್ದೇಶಗಳಿಗಾಗಿ ಪ್ರತ್ಯೇಕವಾಗಿ ತಿರುವಾಂಕೂರ್ ತಮಿಳುನಾಡು ಕಾಂಗ್ರೆಸ್ ಎಂದು ಹೆಸರಿಟ್ಟುಕೊಂಡು ಅಖಿಲಭಾರತ ಕಾಂಗ್ರೆಸ್ಸಿಗೆ ವಿರೋಧವಾಗಿ ವರ್ತಿಸುತ್ತಾ, ತಾವು ಕಾಂಗ್ರೆಸ್ಸಿಗರೆಂದು ಹೇಳಿಕೊಳ್ಳುವುದು ನಾಚಿಕೆಗೇಡು. ಇಂತಹವರಿಗೆ ಅಖಿಲ ಭಾರತ ಕಾಂಗ್ರೆಸ್ ಸಂಸ್ಥೆಯಲ್ಲಿ ಜಾಗವಿಲ್ಲ ಎಂಬುದಾಗಿ ಹೇಳಿದ್ದಾರೆ.

ಸಾಮಾಜಿಕ ಶಿಕ್ಷಣ ವಾರ

ಇದೇ ೧೨ನೇ ತಾರೀಖಿನ ದಿನ ಬೊಂಬಾಯಿನಲ್ಲಿ ಸಾಮಾಜಿಕ ಶಿಕ್ಷಣ ವಾರವು ಪ್ರಾರಂಭವಾಗುತ್ತದೆ. ಈ ವಾರದಲ್ಲಿ ವಯಸ್ಕರ ಶಿಕ್ಷಣ ಕಾರ್ಯವನ್ನೂ ನಡೆಸಲಾಗುತ್ತದೆ.

೬೬ ಜನರ ದಸ್ತಗಿರಿ

ಉತ್ತರ ಪ್ರದೇಶದಲ್ಲಿ ರೈತರು ಕಬ್ಬನ್ನು ಗಿರಣಿಗಳಿಗೆ ಕೊಡುವುದನ್ನು ತಪ್ಪಿಸಲು ಯತ್ನಿಸುದರ ಪರಿಣಾಮವಾಗಿ ಸರ್ಕಾರವು ಇಲ್ಲಿಯವರೆಗೆ ೬೬ ಜನರನ್ನು ಬಂಧಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೯—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮--೧೪	೩೦—
ಎಳ್ಳು	—	—
ಹರಳು	೩೩—	೩೪—೨
ಹುಚ್ಚೆಳ್ಳು	೩೩—೨	೪೧—
ಹೊಂಗೆಬೀಜ	೨೦—೮	೨೩—೬
ಹುಣಸೆಬೀಜ	೧೪—	೧೪—೨
ಹುರುಳಿ	೨೬—೧೪	೩೨—೬
ಹೆಸರು	೩೫—೧೨	೪೮--೧೦
ಅಲಸಂದೆ	೨೭—೨	೪೪—೧೨
ಅವರೆ	—	—
ಕಡಲೆ	೩೯—೨	೫೩—೮
ಉದ್ದು	—	—
ಕೊತ್ತಂಬರಿ	೨೩—	೨೮—೧೪
ತೊಗರಿ	೨೩—೪	೩೧—೧೦
ಹುಣಸೆಹಣ್ಣು	೬—೬	೯—೮
ಮೆಣಸಿನಕಾಯಿ	೨೦—೧೨	೩೮—೮
ಸೀಗೆಕಾಯಿ	೩—೬	೪—೧೦
ಬೆಲ್ಲ	೪—೧೨	೫—
ತೆಂಗಿನಕಾಯಿ	೧೭೫—	೨೯—

ಆಂಧ್ರ ಪ್ರಾಂತ್ಯದಲ್ಲಿ ಪಾನನಿರೋಧ ರದ್ದು ಕೂಡದು

ಪ್ರದೇಶ ಕಾಂಗ್ರೆಸ್ ಕಾರ್ಯಸಮಿತಿಯ ಸಲಹೆ

ಆಂಧ್ರ ಪ್ರಾಂತ್ಯದಲ್ಲಿ ಪಾನನಿರೋಧವನ್ನು ರದ್ದುಗೊಳಿಸದೆ ಈಗಿರುವಂತೆಯೇ ಮುಂದುವರಿಸಿಕೊಂಡು ಹೋಗಬೇಕೆಂದು ಮೊನ್ನೆಯದಿನ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸರಿ ನಿರ್ಣಯ ಮಾಡಿದೆ.

ಪಾನನಿರೋಧ ಮುಂದುವರಿಸುವ ವಿಷಯದಲ್ಲಿ ಸರ್ಕಾರಕ್ಕೆ ಸಲಹೆ ನೀಡಲು ಆಂಧ್ರ ಸರ್ಕಾರವು ನೇಮಿಸಿರುವ ಸಮಿತಿಗೆ ಈ ವಿಷಯವನ್ನು ಪ್ರದೇಶ ಕಾಂಗ್ರೆಸ್ ಕಾರ್ಯದರ್ಶಿಯವರು ಸ್ವತಃ ತಿಳಿಸಬೇಕೆಂದು ನಿರ್ಣಯ ಮಾಡಲಾಗಿದೆ.

ಸ್ವಾತಂತ್ರ್ಯಸಮರದಲ್ಲಿ ಹಿಂದೆ ಹೋರಾಡಿ ನೊಂದವರಿಗೆ ಜಮೀನನ್ನು ಸರ್ಕಾರವು ಉಚಿತವಾಗಿ ಕೊಡಬೇಕೆಂದು ನಿರ್ಧರಿಸಿ ಈ ವಿಷಯದಲ್ಲಿ ಅಂಕಿ ಮತ್ತು ಅಂಶಗಳನ್ನು ಸಂಗ್ರಹಿಸಲು ಒಂದು ಸಮಿತಿಯನ್ನು ನೇಮಿಸಲಾಗಿದೆ.

ಕಾಂಗ್ರೆಸ್ ಪುನರ್ರಚನೆಯಾಗಬೇಕು

ಶ್ರೀ ಎಸ್. ಕೆ. ಪಾಟೀಲರ ಹೇಳಿಕೆ

ಈಗಿರುವ ಹಳೆಯ ಕಾಂಗ್ರೆಸ್ ಮಡಿಯಬೇಕು. ಕಾಂಗ್ರೆಸ್ಸನ್ನು ಪುನರ್ರಚಿಸಬೇಕು. ಈಗಿರುವ ಕಾಂಗ್ರೆಸ್ಸಿನ ಪ್ರಕಾರ ಸಮಿತಿಯ ಅಧ್ಯಕ್ಷರುಗಳಿಗೂ, ಪ್ರಾಂತ್ಯ ಮುಖ್ಯಮಂತ್ರಿಗಳಿಗೂ ವಿಶೇಷವಾಗಿ ಭಿನ್ನಾಭಿಪ್ರಾಯಗಳು ಹೆಚ್ಚುತ್ತಿವೆ. ಉಭಯತ್ರರ ನಡುವೆ ಸುಮ್ಮನೆ ಸಲಹೆಗಳು ನಡೆಯುತ್ತಿರುವುದರಿಂದ ಅದು ಅಪ್ರಯೋಜನವಾಗಿದೆ-ಎಂದು ಬೊಂಬಾಯಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್.ಕೆ. ಪಾಟೀಲ್‌ರವರು ಹೇಳಿದ್ದಾರೆ.

ಅಮೆರಿಕ ಮತ್ತು ಬ್ರಿಟನ್‌ಗಳಲ್ಲಿರುವಂತೆ ನ್ಯಾಯಾಂಗ ರೀತ್ಯಾ ಕಾಂಗ್ರೆಸ್ಸು ಸುವ್ಯವಸ್ಥಿತವಾಗಿ ನಡೆಯುವಂತೆ ಆಗಬೇಕು. ಕಾಂಗ್ರೆಸ್ ಅಧಿಕಾರದಲ್ಲಿರುವಸಂಸ್ಥೆಯೆಂದು ಕಾಂಗ್ರೆಸ್ಸಿಗರಿಗೆ ವಿಶೇಷ ರಿಯಾಯಿತಿ ದೊರೆಯಬಾರದು. ಕಾಂಗ್ರೆಸ್ ಸರ್ಕಾರಕ್ಕೆ ಪಕ್ಷ ಮನೋಭಾವವಿರಕೂಡದು ಎಂದೂ ಅವರು ತಿಳಿಸಿದ್ದಾರೆ.

ಬೊಂಬಾಯಿ ಸರ್ಕಾರವು ಆಂಗ್ಲ ಭಾಷಾ ಶಾಲೆಗಳಿಗೆ ಇತರರು ಸೇರುವ ವಿಷಯದಲ್ಲಿ ಮಾಡಿರುವ ನಿರ್ಬಂಧಾಜ್ಞೆಯನ್ನು ಅವರು ಪ್ರಸ್ತಾಪಿಸಿ ಅದು ವಿಶ್ವದಲ್ಲೇ ಅತ್ಯಂತ ವಿವೇಚನಾರಹಿತವಾದ ಕಾರ್ಯವಾಗಿದೆ ಈ ಆಜ್ಞೆಯನ್ನು ವಾಪಸ್ಸು ಪಡೆಯುವಂತೆ ಮಾಡಲು ನಾನು ನನ್ನ ಕೈಲಾದುದನ್ನೆಲ್ಲಾ ಮಾಡಿದ್ದೇನೆ. ಭಾಷೆಗಳಲ್ಲಿ ಯಾವುದೂ ಪರಭಾಷೆಯಲ್ಲ. ಇಂಗ್ಲೀಷ್ ಭಾರತದಲ್ಲಿ ವಿದೇಶಭಾಷೆಯಲ್ಲ. ಭಾರತ ಕಾಂಗ್ರೆಸ್ಸಿನ ಎಲ್ಲಾ ಕಾರ್ಯಕಲಾಪಗಳು ಮತ್ತು ನಿರ್ಣಯಗಳು ಇಲ್ಲಿಯವರೆಗೆ ಇಂಗ್ಲೀಷಿನಲ್ಲೇ ನಡೆಯುತ್ತಿದೆ. ರಾಷ್ಟ್ರದಲ್ಲಿ ಅದರ ಅವಶ್ಯಕತೆಯು ಇದರಿಂದ ತಿಳಿಯಬರುತ್ತದೆ. ಈ ಹೊಸ ನೀತಿಯಿಂದ ಕಾಂಗ್ರೆಸ್ಸು ಬೊಂಬಾಯಿನ ಮುಂದಿನ ಚುನಾವಣೆಗಳಲ್ಲಿ ಒಂದು ಲಕ್ಷ ಓಟುಗಳನ್ನು ಕಳೆದುಕೊಳ್ಳುತ್ತದೆ—ಎಂದು ಅವರು ಹೇಳಿದ್ದಾರೆ.

ಪ್ರಭಾ ★ ಅಮೋಘಪ್ರಾರಂಭ
12--2-54 ರಿಂದ ದಿನವಹಿ 3 ಆಟಗಳು
ಸಿ. ಎಂ. ತ್ರಿವೇದಿಯವರ ಸಂಗೀತ, ನೃತ್ಯಗಳಿಂದ ಕೂಡಿದ ಮಹೋನ್ನತ ಪೌರಾಣಿಕ ಹಿಂದಿ ಚಿತ್ರ.
-ಹರಿದರ್ಶನ್-
ಪಾತ್ರ:-ನೀಲಾಚಟ್ನೀಸ್, ಚಪಿನ್‌ಗುಪ್ತ, ಸಪ್ರು ಮತ್ತು ರಾಜ್‌ಕುಮಾರ್.
ಕಡೆಯ 2 ದಿನಗಳು ! !
—ಜಾಜ್ ಮತ್ತು ಸ್ಯಾಲಿರವರ ಕಥೆ—

ಉಪಾಧ್ಯಾಯರ ಮುಷ್ಕರ

ತಮಗೆ ಹೆಚ್ಚಿಗೆ ಸಂಬಳವನ್ನು ಕೊಡಬೇಕೆಂದು ಪಶ್ಚಿಮ ಬಂಗಾಳದ ಎಲ್ಲಾ ಸೆಕೆಂಡರಿ ಶಾಲಾ ಉಪಾಧ್ಯಾಯರು ನಾಳೆಯಿಂದ ಮುಷ್ಕರ ಹೂಡುವರೆಂದು ತಿಳಿಯಬರುತ್ತದೆ.

ನೆಹರೂರವರಿಗೆ ಮಹಮದಾಲಿ ಪತ್ರ

ಪಾಕೀಸ್ತಾನ ಪ್ರಧಾನಿ ಮಹಮದ್ ಅಲಿಯವರು ಪ್ರಧಾನಿ ನೆಹರೂರವರಿಗೆ ಬರೆದಿರುವ ೩ ಪತ್ರಗಳು ಬಂದಿವೆಯೆಂದು ತಿಳಿಯಬರುತ್ತದೆ.

ಪೌರಸತ್ಕಾರ

ಪ್ರಧಾನಿ ನೆಹರೂರೊಡನೆ ಮಾತುಕತೆಗೆ ಆಗಮಿಸಿದ್ದ ಸಿಂಹಳ ಕಾಂಗ್ರೆಸ್ ನಿಯೋಗದವರಿಗೆ ನಿನ್ನೆ ತಿರುವಾಂಕೂರಿನಲ್ಲಿ ಭಾರಿ ಪೌರಸತ್ಕಾರ ಏರ್ಪಡಿಸಲಾಗಿತ್ತು.

ಕುಂಭಮೇಳದ ದುರಂತ

ಕುಂಭಮೇಳದಲ್ಲಿ ಕಳೆದ ಬುಧವಾರ ನಡೆದ ದುರಂತದಲ್ಲಿ ತನ್ನ ಸಂಸಾರದವರನ್ನೆಲ್ಲಾ ಕಳೆದುಕೊಂಡ ೫೩ ವರ್ಷದ ಮುದುಕಿಯೊಬ್ಬಳು ಅಲ್ಲಿನ ಸೇತುವೆಯಿಂದ ಹಾರಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದುದನ್ನು ಸ್ವಯಂಸೇವಕರು ತಡೆದು ನಿಲ್ಲಿಸಿದ ರಿಂಬ ಹೃದಯಾಂತಕ ವಾರ್ತೆ ವರದಿಯಾಗಿದೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್ ಮೈಸೂರು

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೩೬

೧೧-೨-೧೯೫೪ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಬೆಂಗಳೂರಿನಲ್ಲಿ ಪೋಲೀಸರಿಂದ ಲಾಠಿ ಪ್ರಹಾರ

೧೬ ಮಂದಿಗೆ ಗಾಯ

ಬೆಂಗಳೂರು ೧೧

ನಿನ್ನೆಯದಿನ ಸಂಜೆ ಸಿವಿಲ್ ಪ್ರದೇಶದಲ್ಲಿ ಶ್ರೀ ದಾವುದ್ ಮತ್ತು ಅವರ ಪತ್ನಿಯವರ ಸಾಮೂಹಿಕ ರೋಗ ನಿವಾರಣಾ ಪ್ರಾರ್ಥನಾ ಸಭೆಯಲ್ಲಿ ಕೆಲವರು ಗಲಾಟೆಯನ್ನು ಪ್ರಾರಂಭಿಸಿದುದರ ಪರಿಣಾಮವಾಗಿ ಗಲಭೆ ನಡೆಯಿತು. ಪೋಲೀಸರು ಗುಂಪನ್ನು ಚದುರಿಸಲು ಲಾಠಿ ಪ್ರಹಾರವನ್ನು ಮಾಡಿದರು. ಇದರಿಂದ ೧೨ ಜನರಿಗೆ ಗಾಯಗಳಾದುವು. ಅವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತು.

ಪ್ರಾರ್ಥನಾಸಭೆಯು ನಡೆಯುವಾಗ ಸುಮಾರು ೮ ಗಂಟೆ ಸಮಯದಲ್ಲಿ ಓರ್ವ ಮಹಿಳೆಯು ವೇದಿಕೆಗೆ ಬಂದು ಪ್ರಾರ್ಥನೆಯೆಂದು ಹೇಳುತ್ತಾ ಇಲ್ಲಿ ಕೇವಲ ಹಿಂದೂ ಧರ್ಮ ದೂಷಣೆ, ಕ್ರೈಸ್ತಧರ್ಮ ಪ್ರಚಾರ ನಡೆಯುತ್ತಿದೆಯೆಂದೂ ಇವೆಲ್ಲಾ ಮೋಸವೆಂದೂ ಇಲ್ಲಿರುವವರೆಲ್ಲರೂ ಹೊರಟು ಹೋಗಬೇಕೆಂದೂ ಆಕೆ ಹೇಳಿದುದರ ಮೇಲೆ ಗಲಭೆ ಪ್ರಾರಂಭವಾಯಿತೆಂದು ಹೇಳಲಾಗಿದೆ. ಕೆಲವು ಯುವಕರು ಮುಂದೆಬಂದು ಅಲ್ಲಿ ವಿದ್ಯುದ್ದೀಪ ಮುಂತಾದುವುಗಳಿಗೆ ಕಲ್ಲುಗಳನ್ನು ಎಸೆದು ಗಲಭೆ ಮಾಡಲು ಆರಂಭಿಸಿದರೆಂದೂ, ಪೋಲೀಸರು ಎಷ್ಟು ಬುದ್ಧಿವಾದ ಹೇಳಿದರೂ ಜನರು ಅಲ್ಲಿಂದ ಕದಲದಿರಲು ರಿಸರ್ವ್ ಪೋಲೀಸರು ಅಲ್ಲಿಗೆ ಆಗಮಿಸಿ ಲಾಠಿಪ್ರಹಾರ ಮಾಡಿ ಜನರನ್ನು ಚದುರಿಸಿದರೆಂದು ತಿಳಿಯಬರುತ್ತದೆ.

ಚರ್ಚಾ ಸ್ಪರ್ಧೆ

ಮೈಸೂರು ೧೧

"ಮೈಸೂರಿನಲ್ಲಿ ಜಿಲ್ಲಾ ಬೋರ್ಡುಗಳ ಬದಲು ತಾಲ್ಲೂಕು ಬೋರ್ಡುಗಳ ರಚನೆಗೆ ಸ್ವಾಗತ" ಎಂಬ ವಿಷಯದಲ್ಲಿ ನಿನ್ನೆ ಸಂಜೆ ಮಹಾರಾಜಾ ಕಾಲೇಜಿನ ರಾಜ್ಯಶಾಸ್ತ್ರದ ಸಂಘದ ಆಶ್ರಯದಲ್ಲಿ ಚರ್ಚಾ ಸ್ಪರ್ಧೆಯು ಇಂಗ್ಲೀಷಿನಲ್ಲಿ ನಡೆಯಿತು. ಶ್ರೀ ಹೆಚ್. ಸಿ. ದಾಸಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಮಂಡ್ಯದ ಶ್ರೀ ಕೆ. ವಿ. ಶಂಕರಗೌಡ್ರು, ಶ್ರೀಗಳಾದ ಟಿ. ಎಸ್. ರಾಜಗೋಪಾಲಯ್ಯಂಗಾರ್, ಎಂ. ಲಿಂಗಣ್ಣ ಮತ್ತು ಚಲುವರಾಜ್‌ರವರ ಪರವಾಗಿಯೂ, ಶ್ರೀಗಳಾದ ಹೆಚ್. ಎಂ. ಚನ್ನಬಸಪ್ಪ, ಎಸ್. ಶ್ರೀನಿವಾಸಅಯ್ಯಂಗಾರ್, ಪಿ. ಗೋಪಾಲಕೃಷ್ಣಶೆಟ್ಟಿ ಮತ್ತು ಬಿ. ಪಿ. ನಾಗರಾಜಮೂರ್ತಿಯವರು ವಿರೋಧವಾಗಿಯೂ ಮಾತನಾಡಿದರು.

ವಿಷಯವನ್ನು ಓಟಿಗೆ ಹಾಕಿದಾಗ, ಅದು ಬಹುಮತದಿಂದ ಅನುಮೋದಿಸಲ್ಪಟ್ಟಿತು.

ಅಂಗಡಿ ಕಾನೂನು ಉಲ್ಲಂಘನೆಗೆ ಶಿಕ್ಷೆ

ಅಂಗಡಿ ಕಾನೂನು ಉಲ್ಲಂಘಿಸಿದರೆಂಬ ಆಪಾದನೆಯ ಮೇಲೆ ನಗರದ ನಜರ್‌ಬಾದ್ ವರ್ತಕ ಶ್ರೀ ಪುಟ್ಟಲಿಂಗಪ್ಪನವರಿಗೆ ೩ ರೂ ಮತ್ತು ವಾಣಿವಿಲಾಸ ಮಾರ್ಕೆಟ್‌ನಲ್ಲಿರುವ ಹೋಟೇಲ್ ಮಾಲೀಕ ಶ್ರೀ ಡಿ. ಸಿ. ವರದರಾಜಪಿಳ್ಳೈಯವರಿಗೆ ೪ ರೂ. ಜುಲ್ಮಾನೆಯನ್ನು ದ್ವಿತೀಯ ನ್ಯಾಯಾಧೀಶರು ವಿಧಿಸಿದ್ದಾರೆ. ಅಂಗಡಿ ಕಾನೂನು ಇನ್ಸ್‌ಪೆಕ್ಟರ್ ಶ್ರೀ ಎಸ್. ನಾಗಪ್ಪನವರು ಮೊಕದ್ದಮೆ ಹೂಡಿದ್ದರು.

ರಾಜಧಾನಿಗೆ ಬ್ರಿಟಿಷ್ ಹೈಕಮೀಷನರ್ ಭೇಟಿ

ಮೈಸೂರು ೧೧

ಭಾರತದಲ್ಲಿ ಬ್ರಿಟಿಷ್ ಹೈಕಮೀಷನರಾಗಿರುವ ಸರ್ ಅಲೆಕ್ಸಾಂಡರ್ ಕ್ಲಟರ್‌ಬಕ್‌ರವರು ನಿನ್ನೆ ಬೆಂಗಳೂರಿಗೆ ಆಗಮಿಸಿದರು. ಅವರು ಈದಿನ ಸಂಜೆ ರಾಜಧಾನಿಗೆ ಆಗಮಿಸುವರು. ನಗರದ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಇತ್ತು ೧೩ ನೇ ತಾರೀಖು ಕೊಡಗಿಗೆ ಪ್ರಯಾಣ ಬೆಳೆಸುವರು.

ಒರಿಸ್ಸಾಗೌರ್ನರ್

ಮದರಾಸಿನ ಮಾಜಿ ಮುಖ್ಯಮಂತ್ರಿ ಶ್ರೀ ಪಿ. ಎಸ್. ಕುಮಾರಸ್ವಾಮಿ ರಾಜಾರವರು ನಿನ್ನೆಯದಿನ ಒರಿಸ್ಸಾ ಗೌರ್ನರ್ ಆಗಿ ಅಧಿಕಾರವನ್ನು ಸ್ವೀಕರಿಸಿದರು.

ಸರ್ವೋದಯ ಶಿಕ್ಷಣ ಶಿಬಿರ

ಮದ್ರಾಸ್ ಪ್ರಾಂತ್ಯದ ಮಧುರೆ ಬಳಿ ಇರುವ ಗಾಂಧೀಗ್ರಾಮದಲ್ಲಿ ಬರುವ ಮೇ ತಿಂಗಳಿನಲ್ಲಿ ವಿದ್ಯಾರ್ಥಿಗಳಿಗೆ ಸರ್ವೋದಯ ವಿಚಾರದಲ್ಲಿ ಶಿಕ್ಷಣ ಕೊಡಲು ಒಂದು ಶಿಬಿರವನ್ನು ಗಾಂಧೀವಿಚಾರ ಪರಿಷತ್ತಿನವರು ಏರ್ಪಡಿಸಲಿದ್ದಾರೆ.

ಅಕ್ಕಿಮೇಲಿನ ಹತೋಟಿ ರದ್ದು

ಬೊಂಬಾಯಿ ಪ್ರಾಂತ್ಯದಾದ್ಯಂತ ಇದೇ ಏಪ್ರಿಲ್ ಮಾಹೆಯಿಂದ ಅಕ್ಕಿ ಮೇಲಿನ ಹತೋಟಿಯನ್ನು ರದ್ದುಗೊಳಿಸಲಾಗುವುದೆಂದು ತಿಳಿಯಬರುತ್ತದೆ.

ಕಾಶ್ಮೀರ ರಾಜ್ಯಾಂಗ ಸಭೆಗೆ ಹಕ್ಕಿಲ್ಲ

ಭಾರತದೊಡನೆ ಕಾಶ್ಮೀರದ ಐಕ್ಯತೆ ವಿಷಯದಲ್ಲಿ ಕಾಶ್ಮೀರ ರಾಜ್ಯಾಂಗ ಸಭೆಯು ಇತ್ತೀಚೆಗೆ ಮಾಡಿರುವ ತೀರ್ಮಾನವು ನ್ಯಾಯಬಾಹಿರವೆಂದು ಪಾಕೀಸ್ಥಾನ ಪ್ರಧಾನಿ ಮಹಮದ್ ಅಲಿಯವರು ಒಂದು ಹೇಳಿಕೆಯನ್ನಿತ್ತಿದ್ದಾರೆ.

ಭಾರತದೊಡನೆ ಐಕ್ಯವಾಗಿರುವುದಾಗಿ ಈ ಸಭೆಯು ತೀರ್ಮಾನಿಸಲು ಅದಕ್ಕೆ ಹಕ್ಕಿಲ್ಲ. ಕಾಶ್ಮೀರ ರಾಜ್ಯಾಂಗ ಸಭೆಯೆನಿಸಿಕೊಂಡಿರುವ ಇದು ಜನರಿಂದ ಚುನಾಯಿತರಾದ ಶಾಸನ ಸಭೆಯಲ್ಲ. ಕಾಶ್ಮೀರ ಜನರನ್ನು ಈ ಸಭೆಯು ಪ್ರತಿಬಿಂಬಿಸುವುದಿಲ್ಲ. ಅಲ್ಲದೆ ಈರೀತಿ ತೀರ್ಮಾನವನ್ನು ಮಾಡುವುದು ದೆಹಲಿಯ ಒಪ್ಪಂದಕ್ಕೆ ಮತ್ತು ಸೆಕ್ಯೂರಿಟಿ ಕೌನ್ಸಿಲ್ಲಿನ ತೀರ್ಮಾನಕ್ಕೆ ವಿರೋಧವಾಗಿದೆ ಎಂದು ಅವರು ತಿಳಿಸುತ್ತಾ ಪಾಕೀಸ್ತಾನವು ಕಾಶ್ಮೀರ ವಿಷಯವನ್ನು ಶಾಂತರೀತಿಯಿಂದ ಬಗೆಹರಿಸಬೇಕೆಂದು ಆಶಿಸುತ್ತಿದೆ. ಆದರೆ ಹೆದರಿಕೆಯಿಂದ ಯಾವ ದೇಶಕ್ಕೂ ತಲೆಬಾಗುವುದಿಲ್ಲ ಎಂದಿದ್ದಾರೆ.

ಜಫರುಲ್ಲಾ ಖಾನರ ಪ್ರಲಾಪ

ಕಾಶ್ಮೀರ ರಾಜ್ಯಾಂಗಸಭೆಯು ಭಾರತಕ್ಕೆ ಕಾಶ್ಮೀರಸೇರುವ ವಿಷಯದಲ್ಲಿ ಮಾಡಿರುವ ತೀರ್ಮಾನವನ್ನೂ ನಿರಾಕರಿಸಬೇಕೆಂದು ಪ್ರಧಾನಿ ನೆಹರುರವರನ್ನೂ ಪಾಕಿಸ್ತಾನ ವಿದೇಶಾಂಗ ಸಚಿವ ಜಫರುಲ್ಲಾ ಖಾನರವರು ಒತ್ತಾಯ ಮಾಡಿದ್ದಾರೆ.

ಹಾಗೆಮಾಡದಿದ್ದರೆ ಭದ್ರತಾ ಸಮಿತಿಗೆ ದೂರು ಹೋಗಬೇಕಾಗುವುದೆಂದು ತಿಳಿಸಿದ್ದಾರೆ.

೨೩೦೦೦ ಉಪಾಧ್ಯಾಯರ ಮುಷ್ಕರ

ಹೆಚ್ಚಿನ ಸಂಬಳ ಬೇಡಿಕೆಗಾಗಿ ಪಶ್ಚಿಮ ಬಂಗಾಳದಲ್ಲಿ ೨೩೦೦೦ ಉಪಾಧ್ಯಾಯರು ಮುಷ್ಕರವನ್ನು ನಿನ್ನೆಯಿಂದ ಹೂಡಿದ್ದಾರೆ.

ಕಾಂಗ್ರೆಸ್ ಪಕ್ಷ ವಿನಹ ಮಿಕ್ಕೆಲ ಪಕ್ಷಗಳ ಬೆಂಬಲವು ಈ ಮುಷ್ಕರಕ್ಕೆ ಇದೆ.

ಕೃತಕ ಹಾಲಿನ ತಯಾರಿಕಾ ಕೇಂದ್ರ

ಮೈಸೂರು ೧೧

ಮೈಸೂರಿನಲ್ಲಿರುವ ಕೇಂದ್ರ ಅಹಾರ ಸಂಶೋಧನಾಲಯದವರು ತ್ರಿಚೂರಿನಲ್ಲಿ ಒಂದು ಕೃತಕ ಹಾಲಿನ ತಯಾರಿಕಾ ಯಂತ್ರವನ್ನು ಸ್ಥಾಪಿಸಿದ್ದಾರೆ. ಕಡಲೇಕಾಯಿನಿಂದ ಈ ಹಾಲನ್ನು ತಯಾರಿಸಲಾಗುವುದು. ಒಂದು ಪೌಂಡು ಕಡಲೇಕಾಯಿನಿಂದ ೮ ಪೌಂಡು ಹಾಲು ಉತ್ಪತ್ತಿ ಅಗುವುದು. ಹಸು ಅಥವ ಎಮ್ಮೆ ಹಾಲಿನಷ್ಟೆ ಪುಷ್ಟಿಯಾಗಿದ್ದು, ಅದರ ಬೆಲೆಯು ಅರ್ಧದಷ್ಟು ಸುಲಭವಾಗಿರುವುದು.

ಪ್ರಧಾನಿ ನೆಹರೂರವರು ತಿರುವಾಂಕೂರು-ಕೊಚ್ಚಿ ಸಂಸ್ಥಾನದ ಚುನಾವಣಾ ಪ್ರಚಾರ ಪ್ರವಾಸದ ಕಾಲದಲ್ಲಿ ಕಳೆದ ೫ನೇ ತಾರೀಖು ಈ ಹಾಲಿನ ಕೇಂದ್ರಕ್ಕೆ ಭೇಟಿ ಇತ್ತು, ಈ ಕಾರ್ಯದ ಬಗ್ಗೆ ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿ, ಇಂತಹ ಕೃತಕ ಹಾಲು ವಿಶೇಷವಾಗಿ ತಯಾರಾಗಿ, ಬಡಜನರಿಗೆ ಉಪಯೋಗವಾಗಬೇಕೆಂದು ತಿಳಿಸಿದರು.

ಫುಟ್‌ಬಾಲ್ ಪಂದ್ಯ

ಮೈಸೂರು ಆದಿಜಾಂಬವ ಯುವಕ ಸಂಘದ ಸ್ವಾನ್ ಫುಟ್‌ಬಾಲ್ ಕ್ಲಬ್ಬಿನವರಿಗೂ ಶ್ರೀರಂಗಪಟ್ಟಣದ ಸರ್ ಸೈಯ್ಯದ್ ಫುಟ್‌ಬಾಲ್ ಕ್ಲಬ್ಬಿನ ಆಟಗಾರರಿಗೂ ಮೊನ್ನೆ ಸಂಜೆ ಪಂದ್ಯ ನಡೆದು ಸ್ವಾನ್ ಫುಟ್‌ಬಾಲ್ ಕ್ಲಬ್ಬಿನವರು ೩-೧ ಗೋಲುಗಳಿಂದ ಜಯಗಳಿಸಿದರು.

ಶ್ರೀ ಕೆ. ಸಿ. ರೆಡ್ಡಿ

ಕೇಂದ್ರ ಉತ್ಪಾದನಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಮೊನ್ನೆಯದಿನ ಬೆಂಗಳೂರಿಗೆ ಆಗಮಿಸಿ ನಿನ್ನೆಯದಿನ ದೆಹಲಿಗೆ ಪ್ರಯಾಣ ಮಾಡಿದರು. ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅವರನ್ನು ಬೀಳ್ಕೊಟ್ಟರು.

ಮಹಾರಾಷ್ಟ್ರಪ್ರಾಂತ್ಯ ರಚನೆ

ಮಹಾರಾಷ್ಟ್ರ ಪ್ರಾಂತ್ಯರಚನೆಗೆ ತಮ್ಮ ಮನವಿ ಪತ್ರವನ್ನೂ ತಯಾರಿಸಿ ಭಾರತಸರ್ಕಾರವು ನೇಮಿಸಿರುವ ಪ್ರಾಂತ್ಯ ಪುನರ್ವಿಂಗಡನಾ ಸಮಿತಿಗೆ ಒಪ್ಪಿಸಲು, ಬೊಂಬಾಯಿನಲ್ಲಿ ಸಂಯುಕ್ತ ಮಹಾರಾಷ್ಟ್ರ ಅಧಿವೇಶನವು ನಿರ್ಧರಿಸಿದೆ.

೪೦ ಹುದ್ದೆಗಳಿಗೆ ೧೨೦೦ ಅರ್ಜಿಗಳು

ಕಾರವಾರ ಜಿಲ್ಲೆಯಲ್ಲಿ ೪೦ ಪೋಲೀಸ್ ಪ್ಯಾದೆಗಳ ಹುದ್ದೆಗೆ ೧೨೦೦ ಜನರು ಅರ್ಜಿಗಳನ್ನು ಸಲ್ಲಿಸಿದ್ದಾರೆ.

ಪಂಚವಾರ್ಷಿಕ ಯೋಜನೆಗೆ ಹಣ ಒದಗಿಸಿ

ಪ್ರಾಂತ್ಯಗಳಿಗೆ ಕೇಂದ್ರದ ಸೂಚನೆ

ಪಂಚವಾರ್ಷಿಕ ಯೋಜನೆಯನ್ನು ತಯಾರಿಸುವಾಗ ಪ್ರಾಂತ್ಯಗಳು ಈ ಕಾರ್ಯಕ್ಕಾಗಿ ಒದಗಿಸಬೇಕೆಂದು ನಿರ್ಧರಿಸಲಾಗಿದ್ದ ೫೩೨ ಕೋಟಿ ರೂಪಾಯಿಗಳ ಪೈಕಿ ೫೩-೫೪ನೇ ಸಾಲಿನಲ್ಲಿ ಕೇವಲ ೧೦೧ ಕೋಟಿ ರೂಪಾಯಿಗಳನ್ನು ಒದಗಿಸಿವೆ ಇದು ಕೇವಲ ಅತ್ಯಲ್ಪವಾದುದು. ಈ ಕ್ರಮದಿಂದ ದೇಶದಲ್ಲಿ ಈ ಯೋಜನೆಯನ್ನು ಪೂರೈಸಲು ವಿಶೇಷವಾಗಿ ತೊಂದರೆಯಾಗುತ್ತಿದೆ. ಆದ್ದರಿಂದ ಎಲ್ಲಾ ಪ್ರಾಂತ್ಯಗಳೂ ಆದಷ್ಟು ಜಾಗ್ರತೆಯಾಗಿ ಆರ್ಥಿಕ ಸ್ಥಿತಿ ಉತ್ತಮಗೊಳ್ಳುವಂತೆ ಮಾಡಬೇಕೆಂದು ಆಯೋಜನಾಸಮಿತಿಯು ಎಲ್ಲಾ ಪ್ರಾಂತ್ಯ ಸರ್ಕಾರಗಳಿಗೆ ಸೂಚನೆಯನ್ನಿತ್ತಿರುವುದಾಗಿ ತಿಳಿಯಬರುತ್ತದೆ.

ಕೆಲವು ಪ್ರಾಂತ್ಯಗಳಲ್ಲಿ ಹೊಸ ತೆರಿಗೆಗಳನ್ನು ವಿಧಿಸುವುದನ್ನು ಯೋಚಿಸಿ ಕೈಬಿಟ್ಟವೆ. ದೇಶದ ನಾನಾಭಾಗಗಳಲ್ಲಿ ಭೂಕಂದಾಯವನ್ನು ಹೆಚ್ಚಿಸುವ ಸಾಧ್ಯತೆಯಿದೆ. ಅನೇಕಕಡೆ ೩೦-೪೦ ವರ್ಷಗಳ ಹಿಂದೆ ವಿಧಾಯಕ ಮಾಡಿದಂತೆಯೇ ವಸೂಲಾಗುತ್ತಿದೆ ಅಲ್ಲದೆ ವ್ಯವಸಾಯದ ವರಮಾನ ತೆರಿಗೆ ವಿಧಿಸಲು ಸಾಧ್ಯತೆಯಿದೆ. ಇವುಗಳನ್ನೆಲ್ಲಾ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸಲಾಗಿದೆ.

ಆಂಧ್ರ ಸರ್ಕಾರದ ಸಲಹೆಗೆ ಕೇಂದ್ರದ ನಕಾರ

ಬಣ್ಣದ ಸೀರೆಗಳ ತಯಾರಿಕೆಯನ್ನು ಕೈಮಗ್ಗದವರಿಗೆ ಮೀಸಲಾಗಿಡಬೇಕೆಂದು ಆಂಧ್ರ ಸರ್ಕಾರವು ಕೇಂದ್ರಕ್ಕೆ ಮಾಡಿದ್ದ ಸಲಹೆಗೆ ಒಪ್ಪಿಗೆ ದೊರೆಯಲಿಲ್ಲವೆಂದು ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೦—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—೨	೨೮—೬
ಎಳ್ಳು	—	—
ಹರಳು	೩೨—೪	೩೪—೧೨
ಹುಚ್ಚೆಳ್ಳು	೩೫—	೪೧—೧೨
ಹೊಂಗೆಬೀಜ	೧೮—೨	೨೩—೨
ಹುಣಸೆಬೀಜ	೧೪—೧೨	—
ಹುರುಳಿ	೨೫—೪	೩೨—೧೦
ಹೆಸರು	೩೫—	೪೦—೧೦
ಅಲಸಂದೆ	೩೦—	೪೩—೮
ಅವರೆ	—	—
ಕಡಲೆ	೪೧—	೪೯—
ಉದ್ದು	—	—
ಕೊತ್ತಂಬರಿ	೨೪—೪	೩೦—೨
ತೊಗರಿ	೨೩—೨	೨೮—೧೨
ಹುಣಸೆಹಣ್ಣು	೩—	೧೦—೨
ಮೆಣಸಿನಕಾಯಿ	೨೮—೧೪	೩೧—೧೦
ಸೀಗೆಕಾಯಿ	೩—೧೪	೪—೧೨
ಬೆಲ್ಲ	೮—	—
ತೆಂಗಿನಕಾಯಿ	೨೦೨—	೩೦೦—

ಅಂತರಪ್ರಾಂತ್ಯ ಮಾರಾಟ ತೆರಿಗೆ ಕ್ರಮದಲ್ಲಿ ಬದಲಾವಣೆ

ವ್ಯಾಪಾರಸ್ಥರಿಗೆ ತೊಂದರೆ ತಪ್ಪಿಸಲು ಕ್ರಮ

ಅಂತರ ಪ್ರಾಂತ್ಯ ಮಾರಾಟ ತೆರಿಗೆಯಲ್ಲಿ ವ್ಯಾಪಾರಸ್ಥರಿಗೆ ಆಗುತ್ತಿರುವ ತೊಂದರೆಯನ್ನು ನಿವಾರಿಸಲು ಕೇಂದ್ರ ಸರ್ಕಾರವು ಪ್ರಾಂತ್ಯ ಸರ್ಕಾರಗಳ ನಡುವೆ ಸಮಾಲೋಚನೆ ನಡೆಸಿ ಒಂದು ಅಂತ್ಯ ತೀರ್ಮಾನಕ್ಕೆ ಬಂದಿರುವುದಾಗಿ ತಿಳಿಯಬರುತ್ತದೆ. ಈ ತೀರ್ಮಾನಕ್ಕೆ ಎಲ್ಲಾ ಪ್ರಾಂತ್ಯಗಳು ಒಪ್ಪಿರುವುದಾಗಿ ತಿಳಿಯಬರುತ್ತದೆ. ಈ ತೆರಿಗೆ ಸಂಬಂಧ ವಿಷಯಗಳಲ್ಲಿ ವ್ಯಾಪಾರಸ್ಥರು ತಮ್ಮ ಕಾಗದ ಪತ್ರಗಳೊಂದಿಗೆ ಹೊರ ಪ್ರಾಂತ್ಯಗಳಿಗೆ ಹೋಗುವ ತೊಂದರೆ ತಪ್ಪುತ್ತದೆ. ಅಂತರ ರಾಜ್ಯ ವ್ಯವಹಾರಗಳಲ್ಲಿ ಕೊಳ್ಳುವ ಪ್ರದೇಶದಲ್ಲಿ ಮಾತ್ರ ತೆರಿಗೆಯನ್ನು ವಿಧಿಸುವ ಕ್ರಮವನ್ನು ಇನ್ನು ಮುಂದೆ ಜಾರಿಗೆ ತರಲಾಗುತ್ತದೆಯೆಂದು ತಿಳಿಯಬರುತ್ತದೆ. ವ್ಯಾಪಾರಸ್ಥರ ರಿಜಿಸ್ಟ್ರೇಷನ್ ಮತ್ತು ಕಾನೂನನ್ನು ಜಾರಿಗೆ ತರುವುದರಲ್ಲಿ ಕಟ್ಟುನಿಟ್ಟಿನ ಕ್ರಮ ಅನುಸರಿಸಲಾಗುತ್ತದೆ.

ಈ ಹೊಸ ನೀತಿಯನ್ನು ಎಲ್ಲಾ ಪ್ರಾಂತ್ಯ ಸರ್ಕಾರಗಳು ಒಪ್ಪಿರುವುದರಿಂದ ಈ ಬಗ್ಗೆ ರಾಜ್ಯಾಂಗ ತಿದ್ದುಪಡಿ ಅನವಶ್ಯಕವೆಂದು ಹೇಳಲಾಗುತ್ತಿದೆ.

ಕನ್ನಡ ಹಬ್ಬ

ಮೈಸೂರು ೧೧

ರಾಜಧಾನಿಯಲ್ಲಿರುವ ರಾಷ್ಟ್ರೀಯ ಇಂಜನಿಯರಿಂಗ್ ಸಂಸ್ಥೆಯ ಕರ್ನಾಟಕ ಸಂಘದ ಆಶ್ರಯದಲ್ಲಿ ಇದೇ ೧೨ ಮತ್ತು ೧೩ನೇ ತಾರೀಖುಗಳಲ್ಲಿ ಪ್ರತಿದಿನ ಸಂಜೆ ೫-೩೦ ಗಂಟೆಗೆ ಕನ್ನಡ ಹಬ್ಬ ಸಮಾರಂಭ ನಡೆಯುತ್ತದೆ.

ಮೊದಲನೆಯದಿನ ಪ್ರೊ॥ ಯಮುನಾಚಾರ್ಯರವರು ಅಧ್ಯಕ್ಷತೆ ವಹಿಸುತ್ತಾರೆ. ಶ್ರೀಗಳಾದ ದೇವುಡು ನರಸಿಂಹಶಾಸ್ತ್ರಿಗಳು ಮತ್ತು ನಾಡಿಗ ಕೃಷ್ಣಮೂರ್ತಿಯವರು ಭಾಷಣ ಮಾಡುತ್ತಾರೆ

ಎರಡನೇದಿನ ಶ್ರೀ ಕೆ. ಸಂಪದ್ಗಿರಿರಾವ್ ರವರ ಅಧ್ಯಕ್ಷತೆಯಲ್ಲಿ ಕಾರ್ಯಕಲಾಪಗಳು ನಡೆಯುವುವು. ಶ್ರೀಗಳಾದ ಶಿವರಾಮಶಾಸ್ತ್ರಿ ಮತ್ತು ಎ. ನಾರಾಯಣರಾವ್ ರವರುಗಳು ಉಪನ್ಯಾಸ ಮಾಡುತ್ತಾರೆ.

ಕನ್ನಡ ಗೀತೆ, ಭಾವಗೀತೆ, ಜನಪದ ಗೀತೆ, ನೃತ್ಯ, ನಾಟಕ ಮುಂತಾದ ನಾನಾ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಗೋವಾ ಬಿಟ್ಟು ಹೊರಡಿ

ವ್ಯಾಪಾರ ವಹಿವಾಟುಗಳಲ್ಲಿ ಭಾರತ ಸರ್ಕಾರವು ನಿರ್ಬಂಧಗಳನ್ನು ವಿಧಿಸಿರುವುದರಿಂದ ಗೋವಾದಲ್ಲಿ ಸರ್ಕಾರಿ ಕಛೇರಿಗಳು ಮತ್ತು ಇತರ ಪ್ರಮುಖ ಪ್ರದೇಶಗಳಲ್ಲಿ 'ಗೋವಾ ಬಿಟ್ಟು ಹೊರಡಿ' ಎಂಬ ಪ್ರಕಟನೆಗಳನ್ನು ಹಚ್ಚಲಾಗಿದೆ.

ಗೋವಾ ಪಟ್ಟಣದಿಂದ ಭಾರತದೊಡನೆ ಎಲ್ಲಾರೀತಿಯ ವ್ಯಾಪಾರವೂ ನಿಂತು ಹೋಗಿರುವುದಾಗಿ ತಿಳಿಯಬರುತ್ತದೆ.

ಆಯುರ್ವೇದ ಮತ್ತು ಯುನಾನಿ ಶಿಕ್ಷಣ

ಆಯುರ್ವೇದ ಮತ್ತು ಯುನಾನಿ ಶಿಕ್ಷಣಕ್ಕೆ ದೇಶಾದ್ಯಂತ ಒಂದೇ ಕ್ರಮವನ್ನು ಅನುಸರಿಸಬೇಕು. ಈ ಶಿಕ್ಷಣಕ್ಕೆ ಸೇರಿಕೊಳ್ಳುವವರು ವಿಜ್ಞಾನಶಾಸ್ತ್ರದಲ್ಲಿ ಇಂಟರ್‌ಮೀಡಿಯೆಟ್ ಪರೀಕ್ಷೆಯನ್ನಾದರೂ ಮಾಡಿರಬೇಕು. ಆಯುರ್ವೇದ ಕಲಿಯುವವರು ಸಂಸ್ಕೃತ, ಯುನಾನಿಗೆ ಅರೆಬಿಕ್ ಅಥವ ಪರ್ಷಿಯನ್ ಭಾಷೆ ತಿಳಿದಿರಬೇಕು ಎಂದು ಕೇಂದ್ರ ಆರೋಗ್ಯ ಮಂಡಲಿಯ ಸಮ್ಮೇಳನದಲ್ಲಿ ತೀರ್ಮಾನಿಸಲಾಗಿದೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್ ಮೈಸೂರು.

ಆಂಧ್ರದಲ್ಲಿ ನೀರಾವರಿ ಕಾಮಗಾರಿಗಳು

ಪಂಚವಾರ್ಷಿಕ ಯೋಜನೆಯ ಕಾರ್ಯಕ್ರಮದಲ್ಲಿ ಆಂಧ್ರ ಸರ್ಕಾರವು ೬೧೭ ಲಕ್ಷ ರೂಪಾಯಿಗಳ ವೆಚ್ಚದ ೧೮೨ ಕಿರಿಯ ನೀರಾವರಿ ಕಾಮಗಾರಿಗಳನ್ನು ಮಾಡುವುದನ್ನು ಪರಿಶೀಲಿಸುತ್ತಲಿದೆ. ಈ ಕೆಲಸಗಳನ್ನು ಪೂರೈಸಿದರೆ ಪ್ರಾಂತ್ಯದಲ್ಲಿ ೩೩೫೦೦ ಟನ್ನುಗಳಷ್ಟು ಆಹಾರಧಾನ್ಯವನ್ನು ಹೆಚ್ಚಾಗಿ ಉತ್ಪತ್ತಿ ಮಾಡಬಹುದಾಗಿದೆ.

ರಾಷ್ಟ್ರೀಯ
ವಿದ್ಯೋದಯ ನಿಧಿ ಲಾಟರಿ
ಮುಕ್ತಾಯ ಡ್ರಾಯಿಂಗ್
31-3-1954 19-4-1954
ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು
ಮತ್ತು
ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ
ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ
ಮೊದಲನೆ ಬಹುಮಾನ 10000 ರೂ.
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಬಳ್ಳಾರಿ ಕೆಲವು ಭಾಗಗಳು ಆಂಧ್ರಕ್ಕೆ ಸೇರಬೇಕು

ಈಗ ಮೈಸೂರು ಪ್ರಾಂತ್ಯಕ್ಕೆ ಸೇರಿರುವ ಬಳ್ಳಾರಿಯಲ್ಲಿ ಆಂಧ್ರರು ವಿಶೇಷವಾಗಿರುವ ಬಳ್ಳಾರಿ, ಮೋಕಾ ಮತ್ತು ರೂಪನಗುಡಿ ಫಿರ್ಕಾಗಳನ್ನು ಆಂಧ್ರಪ್ರಾಂತ್ಯಕ್ಕೆ ಸೇರಿಸಬೇಕೆಂದೂ ಇಲ್ಲದಿದ್ದರೆ ಸತ್ಯಾಗ್ರಹ ಪ್ರಾರಂಭಿಸುವುದಾಗಿಯೂ ಬಳ್ಳಾರಿ ಆಂಧ್ರರು ತೀರ್ಮಾನಿಸಿದ್ದಾರೆ.

ಚೈನಾ ಯುದ್ಧ ಖೈದಿಗಳು ಕೋಮಿಂಗ್‌ಟಾಂಗ್ ಸರ್ಕಾರಕ್ಕೆ

ಕೊರಿಯಾದಿಂದ ಫಾರ್ಮೋಸಾಕ್ಕೆ ಹೋಗಿರುವ ೧೪ ಸಾವಿರ ಮಾಜಿ ಚೈನಾ ಯುದ್ಧ ಖೈದಿಗಳು ಕೋಮಿಂಗ್‌ಟಾಂಗ್ ಸರ್ಕಾರಕ್ಕೆ ಸೇರಲು ತಮ್ಮ ಪ್ರಮಾಣವನ್ನು ಸ್ವೀಕಾರ ಮಾಡಿದ್ದಾರೆ.

ಶಾಸನಸಭಾ ಸದಸ್ಯರ ದಸ್ತಗಿರಿ

ಉತ್ತರಪ್ರದೇಶದಲ್ಲಿ ಸಕ್ಕರೆ ಗಿರಣಿಗಳಿಗೆ ಕಬ್ಬನ್ನು ಸರಬರಾಜು ಮಾಡಕೂಡದೆಂದು ರೈತರನ್ನು ತಡೆಗಟ್ಟಿದರೆಂಬ ಆಪಾದನೆ ಮೇಲೆ ಅಲ್ಲಿಯ ನಾಲ್ವರ ಶಾಸನಸಭಾ ಸದಸ್ಯರನ್ನು ಪೋಲೀಸಿನವರು ದಸ್ತಗಿರಿ ಮಾಡಿದ್ದಾರೆ.

ಖೈದಿಗಳಿಗೆ ರಿಯಾಯಿತಿ

ಹೈದರಾಬಾದಿನ ಜೈಲುಗಳಲ್ಲಿರುವ ಸುಮಾರು ೫೦೦ ಖೈದಿಗಳಿಗೆ ಗಣರಾಜ್ಯದಿನ ಒಂದು ತಿಂಗಳು ಜೈಲುವಾಸದಲ್ಲಿ ರಿಯಾಯಿತಿ ದೊರೆತುದರ ಪರಿಣಾಮವಾಗಿ ೫೦ ಜನರ ಬಿಡುಗಡೆಯಾಗುವುದೆಂದು ತಿಳಿಯಬರುತ್ತದೆ.

ಭಾರತ-ಪಾಕ್ ಪ್ರಧಾನಿಗಳ ಭೇಟಿ ಇಲ್ಲ

ಭಾರತ ಮತ್ತು ಪಾಕ್ ಪ್ರಧಾನಿಗಳ ನಡುವೆ ಸದ್ಯದಲ್ಲಿ ಯಾವ ಮಾತುಕತೆಯೂ ಇಲ್ಲವೆಂದು ಪ್ರಧಾನಿ ನೆಹ್ರೂ ತಿಳಿಸಿದ್ದಾರೆ.

.... ರಾಜಕಮಲ್ ....
12—2—54 ರಿಂದ 5 ನೇ ವಾರ
ಪ್ರತಿದಿನ ಮೂರು ಆಟಗಳು
ಚಂದ್ರಹಾರಂ
(ತಮಿಳು)
ಪಾತ್ರ:-ಶ್ರೀರಂಜನಿ, ಸಾವಿತ್ರಿ,
ಎನ್. ಟಿ. ರಾಮರಾವ್, ಎಸ್. ವಿ.
ರಂಗರಾವ್ ಮತ್ತು ರೇಲಂಗಿ.

.... ರಣಜಿತ್ ....
12–2–54 ರಿಂದ ಅಮೋಘ ಪ್ರಾರಂಭ
ಶಶಿಕಲಾ, ದುರ್ಗಾಕೋಟೆ ನಟಿಸಿರುವ:-
ಚಾ ಚಾ-
-ಚೌಧರಿ

ಪೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೩೭

೧೨-೨-೧೯೫೪ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

೬ ಲಕ್ಷ ಓಟಿನ ಚೀಟಿ ಪೆಟ್ಟಿಗೆಗಳ ಮಾಯ

ತಿರುವಾಂಕೂರು ಕೊಚ್ಚಿ ಸಂಸ್ಥಾನದಲ್ಲಿ ನಡೆಯಲಿರುವ ಚುನಾವಣೆಯ ಉಪಯೋಗಕ್ಕಾಗಿ ನಾಸಿಕ್‌ನಿಂದ ಕಳುಹಿಸಿದ್ದ ಆರು ಲಕ್ಷ ಓಟಿನ ಚೀಟಿಗಳಿದ್ದ ಮೂರು ಪೆಟ್ಟಿಗೆಗಳು ಮಾಯವಾಗಿವೆಯೆಂದು ವರದಿಯಾಗಿದೆ. ಈ ಕಳೆದುಹೋದ ಚೀಟಿಗಳನ್ನು ಓಟಿನ ಎಣಿಕೆ ಮಾಡುವಾಗ ಕುಲಗೆಟ್ಟ ಓಟುಗಳೆಂದು ಪರಿಗಣಿಸಬೇಕೆಂದೂ ಅಂತಹ ಓಟುಗಳನ್ನು ಉಪಯೋಗಿಸುವವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದೂ ಚುನಾವಣಾಧಿಕಾರಿಗಳು ಎಚ್ಚರಿಕೆ ಇತ್ತಿದ್ದಾರೆ. ೨೦ ಡಬ್ಬಗಳ ಪೈಕಿ ೧೭ ಮಾತ್ರ ತಿರುವನಂತಪುರಕ್ಕೆ ತಲುಪಿವೆ

೩ ಮಕ್ಕಳಿಗೆ ಜನ್ಮವಿತ್ತ ಮಾತೆ

ಮೈಸೂರು ೧೨

ರಾಜಧಾನಿಯ ನಜರ್‌ಬಾದ್ ನಿವಾಸಿ ಶ್ರೀ ಕಾಳಯ್ಯ ಎಂಬುವರ ಪತ್ನಿ ೩೫ ವಯಸ್ಸಿನ ಶ್ರೀಮತಿ ಮಾದಮ್ಮ ಎಂಬಾಕೆಯು ನಿನ್ನೆ ಬೆಳಿಗ್ಗೆ ೬ ರಿಂದ ಮಧ್ಯಾಹ್ನ ೨ ಗಂಟೆ ಅವಧಿಯಲ್ಲಿ ಮೂರು ಗಂಡು ಮಕ್ಕಳಿಗೆ ಜನ್ಮವಿತ್ತಳೆಂದು ವರದಿಯಾಗಿದೆ ಮೊದಲನೆ ಮಗುವಿನ ಜನನ ಬೆಳಿಗ್ಗೆ ೬ ಗಂಟೆಗೆ ಆಗಿ, ತಾಯಿಗೆ ಇನ್ನೂ ಪ್ರಸುವವೇದನೆ ಇದ್ದುದರಿಂದ ಆಕೆಯನ್ನು ಆಸ್ಪತ್ರೆಗೆ ಸಾಗಿಸಲಾಯಿತು ಅಲ್ಲಿ ಇನ್ನೆರಡು ಮಕ್ಕಳು ಜನಿಸಿದವು. ತಾಯಿ ಮತ್ತು ಮಕ್ಕಳು ಆರೋಗ್ಯವಾಗಿದ್ದಾರೆ. ಆಕೆಗೆ ಈಗ ಒಟ್ಟು ೮ ಮಕ್ಕಳಿವೆ.

ಬ್ರಿಟಿಷ್ ಹೈಕಮೀಷನರ ಭೇಟಿ

ಮೈಸೂರು ೧೨

ಭಾರತದಲ್ಲಿ ಬ್ರಿಟಿಷ್ ಹೈಕಮೀಷನರಾಗಿರುವ ಸರ್ ಅಲೆಕ್ಸಾಂಡರ್ ಕ್ಲಟರ್‌ಬಕ್ ರವರು ನಿನ್ನೆ ಮಧ್ಯಾಹ್ನ ರಾಜಧಾನಿಗೆ ಆಗಮಿಸಿ, ಪ್ರಭುತ್ವ ಭವನದಲ್ಲಿ ತಂಗಿದ್ದಾರೆ. ಅವರು ನಿನ್ನೆ ಸಂಜೆ ಮತ್ತು ಈ ದಿನ ವಿಶ್ವವಿದ್ಯಾನಿಲಯದ ಅನೇಕ ಕಾಲೇಜು, ಬೃಂದಾವನ ಮತ್ತು ಇತರ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಇತ್ತಿದ್ದರು.

ಜಿಲ್ಲಾ ಮೋಟಾರು ಕೆಲಸಗಾರರ ಸಭೆ

ಮೈಸೂರು ೧೨

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಕಲ ಸದಸ್ಯರ ಸಭೆಯು ನಾಳೆ ರಾತ್ರಿ ೯ ಗಂಟೆಗೆ ಶ್ರೀ ಕೆ. ದೌಲತ್‌ರಾವ್ ರವರ ಅಧ್ಯಕ್ಷತೆಯಲ್ಲಿ ನಡೆಯುವುದು. ಶ್ರೀಗಳಾದ ಕೇಶವ ಕುಲಕರ್ಣಿ ಮತ್ತು ಎ. ರಾಮಣ್ಣನವರು ಭಾಷಣ ಮಾಡುವರು.

ಗೋಹತ್ಯ ಆಪಾದನೆಗೆ ಶಿಕ್ಷೆ

ಮೈಸೂರು ೧೨

ಅಶೋಕಾರಸ್ತೆಯ ವಕೀಲರಾದ ಶ್ರೀ ಕೈಲಾಸಂ ವರಿಗೆ ಸೇರಿದ ಹಸುವೊಂದನ್ನು ಅಪಹರಿಸಿ ಕೊಲ್ಲಲು ಯತ್ನಿಸುತ್ತಿದ್ದ ಸಮಯದಲ್ಲಿ ಪೋಲೀಸರು ಹೋಗಿ ಹಸುವನ್ನು ರಕ್ಷಿಸಿ, ಮದುರೆ, ಅನ್ವಾರ್ ಮತ್ತು ದೊರೈ ಎಂಬುವರ ಮೇಲೆ ಮೊಕದ್ದಮೆ ಹೂಡಿದ್ದರು. ನಗರ ನ್ಯಾಯಾಧೀಶರು ಅವರಿಗೆ ತಲಾ ೧೫ ದಿನಗಳ ಸಾದಾ ಶಿಕ್ಷೆಯನ್ನು ವಿಧಿಸಿದರು.

● ರಷ್ಯಾದಲ್ಲಿ ವರ್ಷವೊಂದಕ್ಕೆ ೧೦೦ ಆಟಂಬಾಂಬುಗಳನ್ನು ತಯಾರಿಸುತ್ತಲಿರುವುದಾಗಿ ತಿಳಿಯಬರುತ್ತದೆ.

ಜೂಜುಕೋರರಿಗೆ ಶಿಕ್ಷೆ

ಮೈಸೂರು ೧೨

ರಾಜಧಾನಿಯ ಮುಕ್ಕಾಜಿ ಚೌಕದ ಮನೆಯೊಂದರಲ್ಲಿ ಕೋಳಂದವೇಲು ಮತ್ತು ಇತರ ೯ ಜನರು ಜೂಜಾಡುತ್ತಿದ್ದರೆಂದು ಅವರಿಗೆ ತಲಾ ೨೫ ರೂ. ಜುಲ್ಮಾನೆ. ಕೋಳಂದವೇಲು ತಮ್ಮ ಮನೆಯನ್ನು ಜೂಜಿಗಾಗಿ ಉಪಯೋಗಿಸಿದ್ದಕ್ಕೆ ಆತನಿಗೆ ಒಂದು ತಿಂಗಳ ಸಾದಾಸಜ ಮತ್ತು ೨೦೦ ರೂ. ಜುಲ್ಮಾನೆ ವಿಧಿಸಲಾಗಿದೆ.

ಭಾರತಕ್ಕೆ ಪ್ರೇಕ್ಷಕರನ್ನು ಆಕರ್ಷಿಸಲು ಯೋಜನೆ

ಭಾರತಕ್ಕೆ ಹೆಚ್ಚು ಮಂದಿ ವಿದೇಶಿ ಪ್ರೇಕ್ಷಕರು ಬರುವಂತೆ ಪರದೇಶಗಳಲ್ಲಿರುವ ಭಾರತದ ರಾಯಭಾರ ಕಛೇರಿಗಳು ಪ್ರಚಾರ ಮಾಡಬೇಕೆಂದು ಕೇಂದ್ರ ಸರ್ಕಾರವು ಸದ್ಯದಲ್ಲೇ ಸೂಚನೆ ಕೊಡಲಿದೆ. ಇದರ ಜೊತೆಗೆ ಅಮೆರಿಕದ ನ್ಯೂಯಾರ್ಕಿನಲ್ಲಿರುವಂತೆ ಇತರ ಕಡೆಗಳಲ್ಲೂ ಪ್ರೇಕ್ಷಕರ ವಾರ್ತಾ ಕಛೇರಿಗಳನ್ನು ಭಾರತ ಸರ್ಕಾರ ತೆರೆಯಲಿದೆ.

ಕಳೆದವರ್ಷದ ಜನವರಿಯಿಂದ ನವೆಂಬರ್‌ವರೆಗೆ ಒಟ್ಟು ೨೫೪೪೮ ಮಂದಿ ಪ್ರೇಕ್ಷಕರು ಭಾರತಕ್ಕೆ ಭೇಟಿ ಇತ್ತಿದ್ದರು. ಅದರಲ್ಲಿ ಬ್ರಿಟನ್ನಿನವರೇ ವಿಶೇಷವಾಗಿದ್ದು ಅವರ ಸಂಖ್ಯೆ ೭೦೪೯. ಅಮೆರಿಕದಿಂದ ೫೬೬೬ ಮಂದಿ ಬಂದಿದ್ದರು. ಇದರಿಂದ ಸರ್ಕಾರಕ್ಕೆ ೨.೫ ಕೋಟಿ ರೂ ವರಮಾನ ಬಂದಿತು.

ಜಿಲ್ಲಾ ಬೋರ್ಡುಗಳ ರದ್ದು

ಮೈಸೂರು ಗ್ರಾಮಪಂಚಾಯಿತಿ ಮತ್ತು ಜಿಲ್ಲಾ ಬೋರ್ಡುಗಳ ತಿದ್ದುಪಡಿ ಕಾನೂನು ಪ್ರಕಾರ ಸಂಸ್ಥಾನದ ಜಿಲ್ಲಾ ಬೋರ್ಡುಗಳು ಇದೇ ೧೫ ನೇ ತಾರೀಖು ಬದಲು ಮಾರ್ಚಿ ೧ ನೇ ತಾರೀಖಿನಿಂದ ರದ್ದಾಗುವುವೆಂದು ಸರ್ಕಾರದವರು ನಿನ್ನೆ ಆಜ್ಞೆ ಹೊರಡಿಸಿದ್ದಾರೆ. ೧೫ ನೇ ತಾರೀಖಿನಿಂದ ರದ್ದಾಗುವುವೆಂದು ಹಿಂದೆ ಸರ್ಕಾರದ ಆಜ್ಞೆ ಆಗಿತ್ತು.

ಶನಿ ಮಹಾತ್ಮೆ

ಮಂಡಿ ಮೊಹಲ್ಲಾ ಕಾಮಾಟಗೇರಿಯಲ್ಲಿರುವ ಶ್ರೀ ದಾಸಪ್ಪನವರ ಧರ್ಮ ಛತ್ರದಲ್ಲಿ ನಾಳೆ ಸಂಜೆ ೪ ಘಂಟೆಗೆ ಶ್ರೀ ಸಿ. ಕೆ. ಪಾರ್ಥಸಾರಥಿಯವರಿಂದ ಶನಿ ಮಹಾತ್ಮೆ ಕಥೆ ನಡೆಯುತ್ತದೆ.

ಖೈದಿಗಳ ಖುಲಾಸೆ ನ್ಯಾಯವಾಗಿದೆ

ನೂತನ ಆಂಧ್ರಪ್ರಾಂತ ರಚನೆಯ ಸಂತೋಷಾರ್ಥವಾಗಿ ನೂರಾರು ಖೈದಿಗಳನ್ನು ಆದರ ಸರ್ಕಾರದವರು ಬಿಡುಗಡೆ ಮಾಡಿದುದು ನ್ಯಾಯಾಂಗದ ನಿರ್ವಹಣೆಗೇನೂ ಚ್ಯುತಿತಂದಿಲ್ಲವೆಂದು ಮದರಾಸ್ ಹೈಕೋರ್ಟಿನವರು ಅಭಿಪ್ರಾಯ ಪಟ್ಟು, ಅದರ ಬಗ್ಗೆ ಸಲ್ಲಿಸಿದ್ದ ತಕರಾರು ಅರ್ಜಿಯನ್ನು ತಳ್ಳಿಹಾಕಿದ್ದಾರೆ.

ಪಾನನಿರೋಧ ಬಗ್ಗೆ ಪ್ರಕಾಶಂ

ಪಾನನಿರೋಧವನ್ನು ಆಂಧ್ರದಲ್ಲಿ ರದ್ದುಗೊಳಿಸದೆ ಮುಂದುವರಿಸಿಕೊಂಡು ಹೋಗಬೇಕೆಂದು ಆಂಧ್ರಪ್ರದೇಶ ಕಾಂಗ್ರೆಸ್ ಸಮಿತಿಯು ಮಾಡಿರುವ ನಿರ್ಣಯವನ್ನು ಸರ್ಕಾರವು ಅನುಸರಿಸಲೇಬೇಕೆಂಬುದೇನೂ ಇಲ್ಲ ಅದು ಕೇವಲ ಕಾಂಗ್ರೆಸ್‌ಪಕ್ಷದ ತೀರ್ಮಾನ-ಎಂದು ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ತಿಳಿಸಿದ್ದಾರೆ.

ಮೂರು ಮೈಲಿಗೊಂದು ಅಂಚೆ ಕಛೇರಿ

ಭಾರತದಲ್ಲಿ ಮೂರು ಮೈಲಿ ಫಾಸಲೆಗೊಂದು ಅಂಚೆ ಕಛೇರಿಯನ್ನು ಇನ್ನು ೩ ವರ್ಷಗಳಲ್ಲಿ ಒದಗಿಸಲಾಗುವುದೆಂದು ಕೇಂದ್ರ ಸಂಪರ್ಕ ಶಾಖಾಸಚಿವರು ಮದರಾಸಿನಲ್ಲಿ ತಿಳಿಸಿದ್ದಾರೆ.

ಭಾರತಕ್ಕೆ ಜಪಾನ್ ವ್ಯಾಪಾರ ನಿಯೋಗ

ಭಾರತದೊಡನೆ ವ್ಯಾಪಾರ ಸಂಧಾನಗಳನ್ನು ನಡೆಸಲು ಜಪಾನಿನಿಂದ ೧೫ ಜನ ಸದಸ್ಯರ ನಿಯೋಗವೊಂದು ಕಲ್ಕತ್ತಾಕ್ಕೆ ಆಗಮಿಸಿದೆ.

ರಾಜ್ಯ ಪರಿಷತ್ತಿಗೆ ಉಪ ಚುನಾವಣೆ

ಬೆಂಗಳೂರು ೧೨

ಮೈಸೂರು ಪ್ರಾಂತ್ಯದಿಂದ ರಾಜ್ಯ ಪರಿಷತ್ತಿಗೆ ಚುನಾವಣೆ ನಡೆಯುವ ಎರಡು ಸ್ಥಾನಗಳಿಗೆ ಸ್ಪರ್ಧಿಗಳನ್ನು ಶಿಫಾರಸು ಮಾಡಬೇಕೆಂದು ಎಂ. ಪಿ. ಸಿ. ಸಿ ಕಛೇರಿಗೆ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸೂಚನೆಯಿತ್ತಿದೆ.

ಈಗ ಅಲ್ಲಿ ಮೈಸೂರಿನ ಪರ ಇರುವ ಶ್ರೀ ಕೆ. ಸಿ ರೆಡ್ಡಿ (ಕಾಂ) ಮತ್ತು ಶ್ರೀ ಸಿ. ಜಿ. ಕೆ. ರೆಡ್ಡಿ (ಪಿ. ಎಸ್. ಪಿ.)ಯವರ ಸದಸ್ಯತ್ವ ಅವಧಿಯು ಈ ತಿಂಗಳಿನಲ್ಲಿ ಮುಗಿಯುತ್ತದೆ.

ಅಠಾರ ಕಛೇರಿಯ ಮುಂದೆ ಪ್ರದರ್ಶನ

ಬೆಂಗಳೂರು ೧೨

೧೯೩೫ ರಿಂದ ತಾವು ವಾಸಿಸುತ್ತಲಿದ್ದ ಗುಡಿಸಲುಗಳನ್ನು ಕಿತ್ತುಹಾಕಲು ಕಾರ್ಪೋರೇಷನ್ ನಿರ್ಧರಿಸುವುದರಿಂದ ತಮಗೆ ಉಂಟಾಗುವ ಕಷ್ಟವನ್ನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳಲು ನಿನ್ನೆ ಮದಿನ ಕಳಾಸಿಪಾಳ್ಯದ ಬಳಿಯಿರುವ ಮೋತಿನಗರದ ಸುಮಾರು ೨೦೦ ಮಂದಿ ನಿವಾಸಿಗಳು ಅಠಾರ ಕಛೇರಿಯ ಮುಂದೆ ಪ್ರದರ್ಶನ ನಡೆಸಿದರು.

ಪ್ರಾಂತ್ಯ ಸರ್ಕಾರಗಳಿಗೆ ಮನವಿ

ಪ್ರಾಂತ್ಯ ವಿಂಗಡನಾ ಸಮಿತಿಗೆ ಸಂಸ್ಥಾನ ಸರ್ಕಾರಗಳು ತಮ್ಮ ಸಲಹೆ ಮತ್ತು ಅಭಿಪ್ರಾಯಗಳನ್ನು ಆದಷ್ಟು ಜಾಗ್ರತೆಯಾಗಿ ಒಪ್ಪಿಸಬೇಕೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಮನವಿಮಾಡಿದ್ದಾರೆ.

ಬರ್ಮಾದಿಂದ ಭಾರತಕ್ಕೆ ಅಕ್ಕಿ

ಬರ್ಮಾದಿಂದ ಭಾರತ ಸರ್ಕಾರವು ಈ ಸಾಲಿನಲ್ಲಿ ೬ ಲಕ್ಷ ಟನ್ ಅಕ್ಕಿಯನ್ನು ತರಿಸಿಕೊಳ್ಳುವುದಾಗಿ ತಿಳಿಯಬರುತ್ತದೆ. ಈ ಅಕ್ಕಿಯು ಕೇಂದ್ರದ ದಾಸ್ತಾನಿನಲ್ಲಿರುತ್ತದೆ.

ರೇಡಿಯೋ ಟೆಲಿಫೋನ್ ಸಂಪರ್ಕ

ಇದೇ ೧೫ನೇ ತಾರೀಖಿನಿಂದ ಸಿಂಹಳ ಮತ್ತು ಜಪಾನ್‌ಗಳ ನಡುವೆ ರೇಡಿಯೋ ಟೆಲಿಫೋನ್ ವ್ಯವಸ್ಥೆಯನ್ನು ಏರ್ಪಡಿಸಲಾಗುತ್ತದೆ.

ನೂತನ ರೈಲ್ವೆ ನಿಲ್ದಾಣ

ನವದೆಹಲಿಯಲ್ಲಿ ೨೦ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಿ ನೂತನ ರೈಲ್ವೆ ನಿಲ್ದಾಣವನ್ನು ಕಟ್ಟಲಾಗುತ್ತದೆ.

ಸರ್ಕಾರಿ ನೌಕರರಿಗೆ ಉಚಿತ ವೈದ್ಯ ಸೌಕರ್ಯ

ಏಪ್ರೆಲ್ ತಿಂಗಳಿನಿಂದ ದೆಹಲಿಯಲ್ಲಿ ಪ್ರಾರಂಭ

ಕೇಂದ್ರ ಆರೋಗ್ಯ ಸಚಿವರ ಹೇಳಿಕೆ

ಬ್ರಿಟನ್ನಿನಲ್ಲಿರುವಂತೆ ಭಾರತದಲ್ಲೂ ಎಲ್ಲದರ್ಜೆಯ ಸರ್ಕಾರಿ ನೌಕರರಿಗೆ ಉಚಿತವಾಗಿ ವೈದ್ಯ ಸೌಕರ್ಯಗಳನ್ನು ಒದಗಿಸುವ ಬಗ್ಗೆ ಒಂದು ಯೋಜನೆಯನ್ನು ಜಾರಿಗೆ ತರಲಾಗುವದೆಂದು ಕೇಂದ್ರ ಆರೋಗ್ಯ ಸಚಿವರು ತಿಳಿಸಿದ್ದಾರೆ. ಇದರ ಪ್ರಕಾರ ಪ್ರತಿಯೊಬ್ಬ ನೌಕರರು ತಿಂಗಳಿಗೆ ತಲಾ ಆಣೆಯಿಂದ ೧೨ ರೂಪಾಯಿಗಳ ವರೆಗೆ ಚಂದಾ ಕೊಡುವುದರಿಂದ, ಅವರಿಗೆ ಉಚಿತವಾಗಿ ಔಷಧಿ ಮತ್ತು ಇತರ ಸೌಕರ್ಯಗಳನ್ನು ಕೊಡಲಾಗುವುದು.

ಈ ಯೋಜನೆಯನ್ನು ಮುಂದಿನ ಏಪ್ರಿಲ್ ತಿಂಗಳಿನಿಂದ ದೆಹಲಿಯ ಕೇಂದ್ರ ಸರ್ಕಾರಿ ನೌಕರರಿಗಾಗಿ ಪ್ರಾರಂಭಿಸಲಾಗುವುದು. ಅದು ಯಶಸ್ವಿಯಾದಲ್ಲಿ ಇತರ ಎಲ್ಲ ಕಡೆಗಳಲ್ಲೂ ಜಾರಿಗೆ ತರಲಾಗುವುದು ಹೆಚ್ಚಿಗೆ ಸಂಬಳ ಕೊಟ್ಟು ಇದಕ್ಕಾಗಿ ಉತ್ತಮ ದರ್ಜೆಯ ವೈದ್ಯರನ್ನು ನೇಮಿಸಿಕೊಳ್ಳಲಾಗುವುದು.

ಪಾಕೀಸ್ತಾನಕ್ಕೆ ಇರಾಕ್ ದೊರೆ ಭೇಟಿ ರದ್ದು

ಪಾಕೀಸ್ತಾನಕ್ಕೆ ಅಮೆರಿಕವು ಮಿಲಿಟರಿ ನೆರವನ್ನು ನೀಡುವುದನ್ನು ಪ್ರತಿಭಟಿಸಿ ಪಾಕೀಸ್ತಾನಕ್ಕೆ ಭೇಟಿಕೊಡುವುದನ್ನು ಇರಾಕಿನ ದೊರೆಗಳು ರದ್ದುಮಾಡಿದ್ದಾರೆ.

ರೇಡಿಯೋ ವಿಶೇಷ ಕಾರ್ಯಕ್ರಮ

ಮೈಸೂರು ೧೨

ಇತ್ತೀಚೆಗೆ ಕಾರಾಪುರದಲ್ಲಿ ನಡೆದ ಕೆಡ್ಡಾ ಬಗ್ಗೆ ಇದೇ ೧೪ನೇ ತಾರೀಖು ಭಾನುವಾರ ರಾತ್ರಿ ೯-೧೫ ಗಂಟೆಗೆ ಮೈಸೂರು ಆಕಾಶವಾಣಿಯಲ್ಲಿ ವಿಶೇಷ ಪ್ರಸಾರವನ್ನು ಏರ್ಪಾಡುಮಾಡಿದೆ. ಪ್ರಸಾರ ವಿವರಗಳನ್ನು ಶ್ರೀ ಆರ್. ಕೆ. ನಾರಾಯಣ್‌ರವರು ಬರೆದಿರುವರು ಶ್ರೀಮತಿ ಬಾರ್ಬರಾ ಮ್ಯಾನಿಗ್ಗರವರು ಖೆಡ್ಡಾದ ಕಥೆಯನ್ನು ಹೇಳುವರು. ಶ್ರೀ ಸಫಿ ದಾರಾಷಾರವರು ವ್ಯಾಖ್ಯಾನ ಮಾಡುತ್ತಾರೆ. ರಾಜಪ್ರಮುಖರು ಈ ಕಾರ್ಯಕ್ರಮವನ್ನು ಆರಂಭಿಸುವರು.

ಅಮೆರಿಕಾ-ಪಾಕ್ ಮಿಲಿಟರಿ ಒಪ್ಪಂದ ಚರ್ಚೆ

ಅಮೆರಿಕಾ ಮತ್ತು ಪಾಕೀಸ್ತಾನಗಳ ನಡುವೆ ನಡೆಯಲಿರುವ ಮಿಲಿಟರಿ ನೆರವಿನ ವಿಷಯದಲ್ಲಿ ಚರ್ಚೆ ನಡೆಸಲು ಆಗ್ನೇಯ ಏಷ್ಯಾ ರಾಷ್ಟ್ರಗಳು ಮತ್ತು ದಕ್ಷಿಣ ಆಫ್ರಿಕದಲ್ಲಿರುವ ಅಮೆರಿಕಾ ರಾಯಭಾರಿ ಮತ್ತು ಪ್ರತಿನಿಧಿಗಳು ಸಿಂಹಳದಲ್ಲಿ ಸಭೆ ಸೇರಲಿರುವರೆಂದು ತಿಳಿಯಬರುತ್ತದೆ.

ನೈಸರ್ಗಿಕ ಬಣ್ಣಗಳಲ್ಲಿ

ಬೇಕ್‌ಲೈಟ್ ಸಾಮಾನುಗಳಲ್ಲಿ

ಮೈಸೂರೈಟ್ ಮತ್ತು ಐವರೈಟ್

ಅಸಮಾನವಾದ ದರ್ಜೆಗೆ ಸೇರಿದ್ದು

ಕುಡಿಯುವ ಪಾತ್ರೆಗಳು, ಬಟ್ಟಲುಗಳು, ಬಶಿಗಳು, ಕ್ಷೌರದ ದೊನ್ನೆಗಳು, ಸಿಗರೇಟು ಬೂದಿಯನ್ನು ಹಾಕುವ ತಟಕಗಳು, ಟೇಬಲ್ ಅಲಂಕರಿಸುವ ಕೌಶಲ್ಯದ ಸಾಮಾನುಗಳು, ಅಂಗಶೃಂಗಾರ ಪದಾರ್ಥಗಳನ್ನಿಡುವ ಸಾಮಾನುಗಳು, ವಿಧವಿಧವಾದ ನಮೂನೆಗಳಲ್ಲಿ ಮತ್ತು ಆಕರ್ಷಕ ಬಣ್ಣಗಳಲ್ಲಿ ತಯಾರಿಸಲ್ಪಡುವುವು.

ಅಚ್ಚುಮಾಡಿದ ಮೈಸೂರೈಟ್ ಸಾಮಾನುಗಳು

ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ,

ಮೈಸೂರು ರೋಡ್, ಬೆಂಗಳೂರು-೨

ಸಮಾಜ ಶಿಕ್ಷಣ ಶಿಬಿರ ಮುಕ್ತಾಯ ಸಮಾರಂಭ

ಮೈಸೂರು ೧೨

ನಂಜನಗೂಡು ವಿದ್ಯಾಪೀಠದಲ್ಲಿ ನಡೆಯುತ್ತಿರುವ ಸಮಾಜಶಿಕ್ಷಣ ಕಾರ್ಯಕರ್ತರ ಶಿಕ್ಷಣ ಶಿಬಿರದ ಮುಕ್ತಾಯ ಸಮಾರಂಭವು ಈ ಸಂಜೆ ೭ ಘಂಟೆಗೆ ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷ ಶ್ರೀ ಟಿ. ಮಾದಯ್ಯಗೌಡರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಪುರಸಭಾಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿಯವರು ಮುಕ್ತಾಯ ಭಾಷಣ ಮಾಡುತ್ತಾರೆ

ಭಾರತದ ಶ್ರೇಷ್ಠ ನ್ಯಾಯಾಧೀಶರು

ಭಾರತದ ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಮಹಾಜನ್‌ರವರು ಮುಂದಿನ ತಿಂಗಳು ೨ ನೇ ತಾರೀಖು ಬೆಂಗಳೂರಿಗೆ ಆಗಮಿಸಿ ಮೂರುದಿನಗಳ ಕಾಲ ಇರುವರು.

ನೆಹರೂ ದೆಹಲಿಗೆ ವಾಪಸ್ಸು

ತಿರುವಾಂಕೂರ್-ಕೊಚ್ಚಿಯಲ್ಲಿ ತಮ್ಮ ಪ್ರವಾಸವನ್ನು ಮುಗಿಸಿಕೊಂಡು ಪ್ರಧಾನಿ ನೆಹರೂರವರು ನಿನ್ನೆಯದಿನ ದೆಹಲಿಗೆ ಹಿಂತಿರುಗಿದರು.

-ಮೈಸೂರು ಪೇಟೆಧಾರಣೆ-

ತಾರೀಖು ೧೧—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೮	೨೮—೬
ಎಳ್ಳು	—	—
ಹರಳು	೩೦—	೩೧—೧೨
ಹುಚ್ಚೆಳ್ಳು	೩೭—೨	೪೨—
ಹೊಂಗೆಬೀಜ	೨೧—	೨೫—೬
ಹುಣಸೆಬೀಜ	೧೫—೮	೧೫—೧೨
ಹುರುಳಿ	೨೫—	೩೧—೧೪
ಹೆಸರು	೩೯—	೪೨—೧೦
ಅವರೆ	೨೭—	—
ಅಲಸಂದೆ	೩೭—	೪೩—೧೪
ಕೊತ್ತಂಬರಿ	೨೭—೨	೩೦—
ಕಡಲೆ	೪೫—೧೪	೪೯—೨
ತೊಗರಿ	೧೫—೨	೨೫—೧೨
ಹುಣಸೆಹಣ್ಣು	೩—೫	೧೦—೧೨
ಮೆಣಸಿನಕಾಯಿ	೨೭—೧೪	೩೮—೪
ಸೀಗೆಕಾಯಿ	೪—೧	೪—೭
ಬೆಲ್ಲ	—	—
ತೆಂಗಿನಕಾಯಿ	೧೭೨—	೨೭೯—
ಉದ್ದು	—	—

ಕೆಲಸದಿಂದ ತೆಗೆದು ಹಾಕಿದ್ದಕ್ಕೆ ರಿಟ್ ಅರ್ಜಿ

ಬೆಂಗಳೂರು ೧೨

ತಾತಾ ವಿಜ್ಞಾನ ಮಂದಿರದಲ್ಲಿ ನೌಕರರಾಗಿದ್ದು ಕೆಲಸದಿಂದ ತೆಗೆದು ಹಾಕಲ್ಪಟ್ಟ ಶ್ರೀ ಮುರುಗೇಶ್ ಎಂಬುವರು ಮೈಸೂರು ಶ್ರೇಷ್ಠ ನ್ಯಾಯಾಲಯದಲ್ಲಿ ಒಂದು ರಿಟ್ ಅರ್ಜಿಯನ್ನು ಸಲ್ಲಿಸಿ, ತಮ್ಮನ್ನು ಕೆಲಸದಿಂದ ತೆಗೆದು ಹಾಕಿರುವುದು ಕ್ರಮಬದ್ಧವಲ್ಲವೆಂದು ಆಜ್ಞೆಮಾಡಬೇಕೆಂದು ಕೋರಿದ್ದಾರೆ.

ಕೋತಿಗಳ ಕಾಟ ತಪ್ಪಿಸಲು ಶಾಸನ

ಭಾರತದ ಕೆಲವು ಪ್ರಾಂತ್ಯಗಳಲ್ಲಿ ಜಾರಿಗೆ ತಂದಿರುವಂತೆ ಮೈಸೂರು ಸಂಸ್ಥಾನದಲ್ಲೂ ಕೋತಿಗಳ ಉಪಟಳವನ್ನು ತಪ್ಪಿಸಲು ಸರ್ಕಾರವು ಒಂದು ಶಾಸನವನ್ನು ಮಾಡುವುದನ್ನು ಯೋಚಿಸುತ್ತಲಿರುವುದಾಗಿ ತಿಳಿಯಬರುತ್ತದೆ.

★ ಶಿಕಾರಿಪುರ ತಾಲ್ಲೂಕು ಅಂಜನಾಪುರದ ಬಳಿ ೫೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ನೂತನ ನೀರಾವರಿ ಕಾರ್ಯವನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ.

NO. C 10 P. R 48 53-54

ಸಿಟಿ ಮುನಿಸಿಪಲ್ ಆಫೀಸು

ಮೈಸೂರು ತಾ॥ 9—2—1954

ನೋಟಿಫಿಕೇಷನ್

ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನಂದರೆ:—

ಸಿಟಿ ಮುನಿಸಿಪಲ್ ಆಫೀಸಿನಲ್ಲಿ ಹಾಜರು ಇರುವ ವೇಸ್ಟ್ ಪೇಪರು ಮತ್ತು ಹಳೆಯ ಪುಸ್ತಕಗಳನ್ನು ತಾರೀಖು 25-2-1954 ನೇ ದಿವಸ ದಿವಿ 11 ಘಂಟೆಗಾಗಾಯ್ತು ಹರಾಜುಮೂಲಕ ವಿಲೆವಾರಿ ಮಾಡಿಸಲಾಗುತ್ತೆ. ಸದರಿ ಮಾಲುಗಳನ್ನು ಪಡೆಯಲು ಇಷ್ಟವುಳ್ಳವರು ಹರಾಜಿನ ಕಾಲಕ್ಕೆ ಹಾಜರಾಗಿ ಭಡಸವಾಲ್ ಮೂಲಕ ಪಡಿಯಬಹುದು. ಹೆಚ್ಚಿಗೆ ವಿಷಯಗಳನ್ನು ಆಫೀಸಿನಲ್ಲಿ ಆಫೀಸು ನಡಿಸುವ ಕಾಲದಲ್ಲಿ ತಿಳಿದು ಬಹುದಾಗಿರುತ್ತೆ.

ಎನ್. ಲಕ್ಷ್ಮಣರಾವ್
ಮುನಿಸಿಪಲ್ ಕಮೀಷನರ್

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್ ಮೈಸೂರು.

ಪ್ರಭುದೇವ ಥಿಯೇಟರ್

[ಪದ್ಮಾ ಟಾಕೀಸ್]

13—2—54 ನೇ ಶನಿವಾರದಿಂದ

ಶ್ರೀ ರಾಜರಾಜೇಶ್ವರಿಯವರ:— ★ ಲಕ್ಷ್ಮಿ ★ (ತಮಿಳು)

ಪ್ರತಿದಿನ 3 ಆಟಗಳು

ಪಾತ್ರ:— ಕನ್ನಾಂಬ, ವಸಜ, ನಾರಾಯಣರಾವ್, ಮನೋಹರ್ ಮುಂತಾದವರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೩೮

೧೩-೨-೧೯೫೪ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪಶ್ಚಿಮ ಬಂಗಾಳದಲ್ಲಿ ೨೫೦೦೦ ಉಪಾಧ್ಯಾಯರ ಮುಷ್ಕರ

ಸಹಾನುಭೂತಿ ವ್ಯಕ್ತಪಡಿಸಲು ಕಲ್ಕತ್ತಾನಗರದಲ್ಲಿ ಹರತಾಳ

ತಮ್ಮ ಸಂಬಳವನ್ನು ಹೆಚ್ಚಿಸಬೇಕೆಂಬ ಬೇಡಿಕೆಯಮೇಲೆ ಪಶ್ಚಿಮ ಬಂಗಾಳಾದ್ಯಂತ ೨೫೦೦೦ ಉಪಾಧ್ಯಾಯರು ಇದೇ ೧೦ ನೇ ತಾರೀಖು ಪ್ರಾರಂಭಿಸಿದ ಮುಷ್ಕರವು ಮುಂದುವರಿಯುತ್ತಿದೆ. ಈ ಮುಷ್ಕರದಲ್ಲಿ ಸರ್ಕಾರಿ ಮತ್ತು ಮಿಷನರಿ ಶಾಲಾ ಉಪಾಧ್ಯಾಯರು ಭಾಗವಹಿಸಿಲ್ಲ.

ಕಲ್ಕತ್ತಾ ನಗರದಲ್ಲಿಯೇ ಸುಮಾರು ೩೦೦೦ ಉಪಾಧ್ಯಾಯರು ಮುಷ್ಕರ ನಡೆಸುತ್ತಲಿರುವರು.

ಈ ಮುಷ್ಕರಕ್ಕೆ ಸಹಾನುಭೂತಿ ವ್ಯಕ್ತಪಡಿಸಲು ನಿನ್ನೆಯದಿನ ಕಲ್ಕತ್ತಾದಲ್ಲಿ ಅನೇಕ ಅಂಗಡಿಗಳು ಮತ್ತು ಮಾರುಕಟ್ಟೆಗಳು ಮುಚ್ಚಲಾಗಿತ್ತು. ಗವರ್ನರ್ ನಿವಾಸದ ಮುಂದೆ ಪ್ರದರ್ಶನ ನಡೆಯಿತು. ಶಾಂತರೀತಿಯಿಂದ ಮುಷ್ಕರ ನಡೆಯುತ್ತಿದೆ.

ಸರ್ವೋದಯ ಮೇಳ

ಮೈಸೂರು ೧೩

ಕಳೆದ ಮೂರು ದಿನಗಳಿಂದ ಪಶ್ಚಿಮವಾಹಿನಿಯಲ್ಲಿ ನಡೆಯುತ್ತಿದ್ದ ಸರ್ವೋದಯ ಮೇಳವು ನಿನ್ನೆ ಮುಕ್ತಾಯವಾಯಿತು. ಗುಜರಾತಿನ ಶ್ರೀ ವಲ್ಲಭಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು.

ನಿನ್ನೆ ಬೆಳಿಗ್ಗೆಯಿಂದ ಸಂಜೆಯವರೆಗೂ ಕಾರ್ಯ ಕಲಾಪಗಳನ್ನು ಏರ್ಪಡಿಸಲಾಗಿತ್ತು. ಪ್ರಾರ್ಥನೆ, ಸೂತ್ರಯಜ್ಞ, ಸಾಮೂಹಿಕ ಪ್ರಾರ್ಥನೆ, ಗಾಂಧಿ ಸಾಹಿತ್ಯ ವಾಚನ, ಸರ್ವೋದಯ ಸಾಹಿತ್ಯ ವಾಚನಗಳು ನಡೆದವು. ಮಧ್ಯಾಹ್ನ ಖಾದಿ, ಭೂದಾನಯಜ್ಞ, ಹರಿಜನಸೇವಕ ಸಂಘಗಳ ಕಾರ್ಯಕರ್ತರ ಸಭೆಯು ಶ್ರೀ ವಲ್ಲಭಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದು, ವಿಚಾರವಿನಿಮಯ ಮಾಡಲಾಯಿತು.

ಸಂಜೆ ಸೂತ್ರಯಜ್ಞವಾದ ಮೇಲೆ, ಶ್ರೀ ವಲ್ಲಭಸ್ವಾಮಿಯವರು ಸರ್ವೋದಯ ಸಿದ್ಧಾಂತ ಮತ್ತು ಭೂದಾನಯಜ್ಞ ಮತ್ತು ರಚನಾತ್ಮಕ ವಿಚಾರಗಳಲ್ಲಿ ಭಾಷಣ ಮಾಡಿದರು.

ಮೈಸೂರು ಚರಕಾಸಂಘದ ಆಶ್ರಯದಲ್ಲಿ ನಡೆದ ನೂಲುವ ಸ್ಪರ್ಧೆಯಲ್ಲಿ ಚಿತ್ರದುರ್ಗದ ಭಾರತ ನೇಕಾರರವರಿಗೆ ಪ್ರಥಮ ಬಹುಮಾನ ದೊರೆಯಿತು.

● ಭಾರತ ಸರ್ಕಾರವು ರಚಿಸಿರುವ ಪ್ರಾಂತ್ಯ ವಿಂಗಡನಾ ಸಮಿತಿಯ ಪ್ರಥಮ ಸಭೆಯು ನಿನ್ನೆಯ ದಿನ ದೆಹಲಿಯಲ್ಲಿ ಶ್ರೀ ಫಜಲ್ ಆಲಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ಮೈಸೂರು, ಬೊಂಬಾಯಿ, ಹೈದರಾಬಾದ್‌ಗಳಲ್ಲಿ ಕನ್ನಡಿಗರು

ಶೇಕಡ ೭೨ ರಷ್ಟುಮಂದಿ ಇದ್ದಾರೆ

ಬೆಂಗಳೂರು ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಕೊಡಗು, ಉದಕಮಂಡಲಿ, ಹೈದರಾಬಾದಿನ ಬಿದರ್, ಮಧ್ಯಪ್ರದೇಶದ ಬಾಸ್ಟರ್ ಬೇಟಲ್ ಮತ್ತು ನಿಮಾರ್, ಮಧ್ಯಭಾರತದ ನಿಮಾರ್, ಧಾರ್ ಮತ್ತು ಜಾಬು ಮತ್ತು ಗ್ರೇಟರ್ ಬೊಂಬಾಯಿ ಈ ನಗರಗಳಲ್ಲಿ ಯಾವ ಭಾಷೆ ಮಾತನಾಡುವವರು ಬಹುಮತದಲ್ಲಿ ಇಲ್ಲವೆಂದು ಜನಗಣತಿಯ ವರದಿಯಿಂದ ತಿಳಿದುಬಂದಿದೆ.

ಮೈಸೂರು, ಬೊಂಬಾಯಿ ಮತ್ತು ಹೈದರಾಬಾದ್ ಪ್ರಾಂತ್ಯಗಳ ಒಟ್ಟು ೬೪ ಸಾವಿರ ಚದರಮೈಲಿಗಳ ಪ್ರದೇಶದಲ್ಲಿ ಶೇ॥ ೭೨ ಮಂದಿ ಕನ್ನಡ ಮಾತನಾಡುವವರು ಇದ್ದಾರೆ.

ಮೈಸೂರು ಸಂಸ್ಥಾನದಲ್ಲಿ ಮೈಸೂರು ನಗರದಲ್ಲಿ ಶೇಕಡ ೮೫, ಮಂಡ್ಯ ೯೩, ಹಾಸನ ೮೬, ಚಿಕ್ಕಮಗಳೂರು ೭೧, ಶಿವಮೊಗ್ಗ ೭೪, ಚಿತ್ರದುರ್ಗ ೭೨, ತುಮಕೂರು ೭೯ ಮತ್ತು ಬಳ್ಳಾರಿ ೫೫ ಕನ್ನಡಿಗರಿದ್ದಾರೆ.

ಕೋಲಾರ ಜಿಲ್ಲೆಯಲ್ಲಿ ಶೇಕಡ ೫೪ಜನ ತೆಲುಗು ಮಾತನಾಡುವರಿದ್ದಾರೆ ೨೧ ಲಕ್ಷ ಜನಸಂಖ್ಯೆ ಇರುವ ಬೆಂಗಳೂರುಜಿಲ್ಲೆಯಲ್ಲಿ ಕನ್ನಡ ಮಾತನಾಡುವವರು ಶೇಕಡ ೪೯, ತೆಲುಗು ಶೇಕಡ ೧೮, ತಮಿಳು ೧೭ ಮತ್ತು ಹಿಂದೂಸ್ಥಾನಿ ೧೦ ಇದ್ದಾರೆ.

ಬೊಂಬಾಯಿ ಪ್ರಾಂತ್ಯದಲ್ಲಿ ಬೆಳಗಾವಿನಲ್ಲಿ ಶೇಕಡ ೬೪, ಬಿಜಾಪುರದಲ್ಲಿ ಶೇಕಡ ೮೪, ಧಾರವಾಡದಲ್ಲಿ ೮೧, ಕನ್ನಡಿಗರಿದ್ದಾರೆ.

ಹೈದರಾಬಾದ್ ಸಂಸ್ಥಾನದಲ್ಲಿ ರಾಯಚೂರಿನಲ್ಲಿ ಶೇಕಡ ೬೩, ಮತ್ತು ಗುಲ್ಬರ್ಗಾದಲ್ಲಿ ಶೇಕಡ ೫೫ ಜನ ಕನ್ನಡ ಮಾತನಾಡುವವರಿದ್ದಾರೆ.

೧೭ ಲಕ್ಷ ಜನಸಂಖ್ಯೆ ಇರುವ ದಕ್ಷಿಣ ಜಿಲ್ಲೆಯಲ್ಲಿ ಕನ್ನಡ ಮಾತನಾಡುವವರು ೬೭ ಮಂದಿ ಇದ್ದಾರೆ.

೨,೨೯,೪೦೫ ಜನರಿರುವ ಕೊಡಗಿನಲ್ಲಿ ಶೇಕಡ ೩೫ ಮಂದಿ ಕನ್ನಡ ಮಾತನಾಡುವವರಿದ್ದಾರೆ.

ನೀಲಗಿರಿಯಲ್ಲಿ ಶೇಕಡ ೧೩ರಷ್ಟು ಕನ್ನಡಿಗರಿದ್ದಾರೆ.

ಮೈಸೂರಿನಲ್ಲಿ ಖೋತಾ ಬಡ್ಜೆಟ್

ಒಂದೂವರೆ ಕೋಟಿ ರೂ. ಆಗಬಹುದೆಂದು ನಿರೀಕ್ಷೆ

ಬೆಂಗಳೂರು ೧೩

ಮೈಸೂರು ಸಂಸ್ಥಾನದ ೧೯೫೪-೫೫ನೇ ಸಾಲಿನ ಆಯವ್ಯಯದಲ್ಲಿ ಒಂದೂವರೆ ಕೋಟಿ ರೂಗಳಷ್ಟು ಖೋತಾ ಬರುವ ನಿರೀಕ್ಷೆ ಇದೆಯೆಂದು ತಿಳಿಯಬರುತ್ತದೆ. ಭಾರಿ ನೀರಾವರಿ, ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಯೋಜನೆಗಳು, ತುಂಗಭದ್ರಾ ಯೋಜನೆ, ಮತ್ತು ವಿದ್ಯಾಭ್ಯಾಸ, ವೈದ್ಯಕೀಯ ಮತ್ತು ಇತರ ಬಾಬುಗಳಿಗೆ ಹೆಚ್ಚು ಹಣವನ್ನು ಖರ್ಚುಮಾಡುತ್ತಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ನೂತನ ವಿದ್ಯಾಸುಧಾರಣೆಯನ್ನು ಈ ವರ್ಷದಿಂದಲೇ ಜಾರಿಗೆ ತರಬೇಕೆಂದು ಸರ್ಕಾರದವರು ಆಶಿಸಿದ್ದರೂ, ಹಣದ ಕೊರತೆಯಿಂದ ಅದನ್ನು ಸಂಪೂರ್ಣವಾಗಿ ಕಾರ್ಯಗತಮಾಡಲು ಸಾಧ್ಯವಾಗುವುದಿಲ್ಲವೆಂದೂ, ಆದರೆ ವಿವಿಧ ಹಂತಗಳಲ್ಲಿ ಜಾರಿಗೆ ತರಲಾಗುವುದೆಂದೂ ಹೇಳಲಾಗಿದೆ. ವಿಶ್ವವಿದ್ಯಾನಿಲಯದ ಮಟ್ಟವನ್ನು ಏರಿಸುವುದು, ಮತ್ತು ಉಪಾಧ್ಯಾಯರ ಶಿಕ್ಷಣ ಇವುಗಳಿಗೆ ಮೊದಲು ಗಮನ ಕೊಡಲಾಗುವುದು.

ಇದರಿಂದ ವಿದ್ಯಾಭ್ಯಾಸ ಖರ್ಚು ೩.೭೫ ರಿಂದ ೪.೨೫ ಕೋಟಿ ರೂನಿಗೆ ಏರುವುದು.

ಗ್ರಾಮಾಂತರ ನೀರಿನ ಸರಬರಾಜಿಗೆ ೨೦ ಲಕ್ಷ, ವೈದ್ಯ ಮತ್ತು ಆರೋಗ್ಯ ಬಾಬಿಗೆ ೧.೫ ಕೋಟಿ ರೂ. ಕೊಡಲಾಗುವುದು.

ಬಳ್ಳಾರಿ ಜಿಲ್ಲೆಯಲ್ಲಿ ೨.೫ ಲಕ್ಷ ಎಕರೆ ಉತ್ತಮ ಹತ್ತಿ ಬೆಳೆಯುವ ಜಮೀನು ಇರುವುದರಿಂದ ಹತ್ತಿ ಕಾರ್ಖಾನೆ ಸ್ಥಾಪನೆ ಮತ್ತು ಖಾದಿ, ಉಣ್ಣೆ, ಸಕ್ಕರೆ, ತಂಬಾಕು, ಎಣ್ಣೆ, ಮುಂತಾದ ಕೈಗಾರಿಕೆಗಳ ಅಭಿವೃದ್ಧಿ ಯೋಜನೆಯನ್ನು ಕೈಗೊಳ್ಳಲು ಸರ್ಕಾರ ಯೋಚಿಸುತ್ತಿದೆ.

ಹೋಟೆಲ್ ಕೆಲಸಗಾರರ ಅಧಿಕಾರವರ್ಗ ಚುನಾವಣೆ

ಸಿಯೋಹೋಟೆಲ್ ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ನಿನ್ನೆ ರಾತ್ರಿ ೮-೩೦ ಕ್ಕೆ ನಡೆದು ನಗರದ ವಕೀಲರೂ, ಪುರಸಭಾ ಸದಸ್ಯರೂ ಆದ ಶ್ರೀ ಶ್ರೀಕಂಠಶರ್ಮರವರನ್ನು ಸಂಘದ ಅಧ್ಯಕ್ಷರನ್ನಾಗಿಯೂ. ಶ್ರೀ ಎ. ಗೋವಿಂದರಾಜು ರವರನ್ನು ಉಪಾಧ್ಯಕ್ಷರನ್ನಾಗಿಯೂ ಚುನಾಯಿಸಲಾಯಿತು.

ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗೆ ಶಿಕ್ಷೆ

ಮೈಸೂರು ೧೪

ರಾಜಧಾನಿಯ ಫಸ್ಟ್‌ಗ್ರೇಡ್ ಕಾಲೇಜಿನ ಸೀನಿಯರ್ ಇಂಟರ್ ವಿದ್ಯಾರ್ಥಿ ಶ್ರೀಕಂಠ ಎಂಬುವನು ಓರಿಯಂಟಲ್ ಪುಸ್ತಕ ಭಂಡಾರದ ಬಳಿ ಮೊನ್ನೆಯದಿನ ಗಲಭೆ ಮತ್ತು ಹೊಡೆದಾಟ ನಡೆಸಿದನೆಂಬ ಅಪಾದನೆಮೇಲೆ ಅವರಿಗೆ ೫ ರೂ. ಜುಲ್ಮಾನೆ ತಪ್ಪಿದರೆ ಒಂದು ವಾರ ಸಾದಾ ಸಜಾ ಮತ್ತು ೨ ವರ್ಷಕಾಲ ಒಳ್ಳೆಯ ನಡತೆಯಿಂದಿರಲು ಸ್ವಂತ ಮುಚ್ಚಳಿಕೆ ಮತ್ತು ೨೦೦ ರೂ ಗಳ ಎರಡು ಜಾಮೀನುಗಳನ್ನು ಕೊಡಬೇಕೆಂದು ನಗರದ ನ್ಯಾಯಾಧೀಶರಾದ ಶ್ರೀ ಎಂ. ಡಿ. ಶಿವನಂಜಪ್ಪನವರು ಆಜ್ಞೆ ಮಾಡಿದ್ದಾರೆ. ಎರಡನೇ ಅಪಾದಿತ ಸಿದ್ದಯ್ಯ ಎಂಬುವರಿಗೆ ೧ ರೂ. ದಂಡ ವಿಧಿಸಲಾಗಿದೆ

ಕುಕ್ಕರಹಳ್ಳಿ ಕೆರೆ ಕಡೆಯಿಂದ ಬರುತ್ತಿದ್ದ ಅಪರಿಚಿತರಾದ ಶ್ರೀ ಸಿದ್ದಯ್ಯನನ್ನು ೧ ನೇ ಆಪಾದಿತ ಶ್ರೀಕಂಠ ಕರೆದು ಅಲ್ಲಿ ಹೋಗುತ್ತಿದ್ದ ಮಹಿಳೆಯ ವಿಷಯದಲ್ಲಿ ಅಶ್ಲೀಲವಾಗಿ ಮಾತನಾಡಿಸಿದನೆಂದೂ, ಆದರಿಂದ ಇಬ್ಬರಿಗೂ ಮಾತು ಬೆಳೆದು ಗಲಾಟೆಯಾಯಿತೆಂದೂ ಪೋಲೀಸರು ಮೊಕದ್ದಮೆ ಹೂಡಿದ್ದರು.

ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ, ೧ನೇ ಆಪಾದಿತನ ವರ್ತನೆಯು ವಿಶ್ವವಿದ್ಯಾನಿಲಯದ ಘನತೆಗೆ ತಕ್ಕದ್ದಲ್ಲವೆಂದೂ. ಆತನು ವ್ಯಾಸಂಗ ಮಾಡುತ್ತಿರುವ ತರಗತಿಯಲ್ಲಿ ಅನೇಕ ಪ್ರಾಪ್ತವಯಸ್ಸಿನ ಯುವತಿ ಮತ್ತು ಯುವಕರು ಇದ್ದಾರೆ. ಆದ್ದರಿಂದ ಆತನು ಒಳ್ಳೆ ನಡತೆಯಲ್ಲಿರಲು ಎರಡು ವರ್ಷಗಳಕಾಲ ಮುಚ್ಚಳಿಕೆ ಕೊಡಬೇಕು-ಎಂದು ತಿಳಿಸಿದ್ದಾರೆ.

ವಿಶ್ವವಿದ್ಯಾನಿಲಯದವರು ಆ ವಿದ್ಯಾರ್ಥಿಯ ಮೇಲೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಅವರಿಗೆ ಈ ತೀರ್ಪಿನ ಪ್ರತಿಯನ್ನು ಕಳುಹಿಸಬೇಕೆಂದೂ ಆಜ್ಞೆ ಮಾಡಿದ್ದಾರೆ.

ಭಾರತದಲ್ಲಿ ಹತ್ತಿ ಬೆಳೆ

ಮುಂದಿನ ಸಾಲಿನಲ್ಲಿ ದೇಶದಲ್ಲಿ ಹತ್ತಿ ಬೆಳೆಯು ೮೨ ಸಾವಿರ ಬೇಲುಗಳಷ್ಟು ಹೆಚ್ಚಾಗಿ ಆಗುವುದೆಂದೂ ಇದರಿಂದ ವಿದೇಶಗಳ ಸರಬರಾಜಿನಲ್ಲಿ ಕಡಮೆ ಮಾಡಬಹುದೆಂದು ಹತ್ತಿ ಸಮಿತಿಯು ನಿರ್ಧರಿಸಿದೆ.

ಭಾರತ ರೈಲ್ವೆಯಲ್ಲಿ ೪೨ ಕೋಟಿ ರೂ. ನಿವ್ವಳ ಆದಾಯ

ದೇಶದಲ್ಲಿ ೩೪೦೦೦ ಮೈಲಿ ರೈಲುಮಾರ್ಗವಿದೆ

೧೯೫೨-೫೩ ನೇ ಸಾಲಿನಲ್ಲಿ ಭಾರತ ರೈಲ್ವೆಯಲ್ಲಿ ಒಟ್ಟು ೪೨ ಕೋಟಿ ೧೮ ಲಕ್ಷ ರೂಪಾಯಿಗಳ ನಿವ್ವಳ ಆದಾಯ ಬಂದಿರುವುದಾಗಿ ರೈಲ್ವೆಯ ವಾರ್ಷಿಕವರದಿಯು ತಿಳಿಸುತ್ತದೆ. ಇದರಿಂದ ೧೩ ಕೋಟಿ ರೂಪಾಯಿಗಳ ಹೆಚ್ಚುವರಿ ಬಂದಂತಾಗಿದೆ.

ಈ ಸಾಲಿನಲ್ಲಿ ಎರಡು ಹೊಸ ರೈಲ್ವೆಗಳನ್ನು ವಹಿಸಿಕೊಳ್ಳಲಾಯಿತು. ೧೨೫ ಮೈಲಿ ಉದ್ದದ ಹೊಸ ರೈಲ್ವೆ ಮಾರ್ಗವನ್ನು ನಿರ್ಮಿಸಲಾಯಿತು. ಈಗ ದೇಶಾದ್ಯಂತ ಒಟ್ಟು ೩೪೦೦೦ ಮೈಲಿ ರೈಲುಮಾರ್ಗವಿದೆ. ಈ ಸಾಲಿನಲ್ಲಿ ಇಂಟರ್ ಮತ್ತು ಮೂರನೇ ತರಗತಿ ಗಾಡಿಗಳಿಗೆ ಫ್ಯಾನುಹಾಕುವ ವ್ಯವಸ್ಥೆ ಮಾಡಲಾಯಿತು. ಅಲ್ಲದೆ ೩ ನೇ ತರಗತಿ ಪ್ರಯಾಣಿಕರಿಗೆ ಅನ್ನಪಾನೀಯ ಮುಂತಾದ ವ್ಯವಸ್ಥೆಗಳನ್ನು ಹೆಚ್ಚು ಮಾಡಲಾಯಿತು. ಈ ಸಾಲಿನಲ್ಲಿ ಒಟ್ಟು ೩ ಕೋಟಿ ೪೦ ಲಕ್ಷ ಜನರು ರೈಲಿನಲ್ಲಿ ಪ್ರಯಾಣ ಮಾಡಿದ್ದಾರೆ ಎಂದು ಈ ವರದಿ ತಿಳಿಸುತ್ತದೆ.

ಕೊರತೆ ಪ್ರದೇಶಗಳಲ್ಲಿ ನೀರಾವರಿ ಯೋಜನೆ

ಆಂಧ್ರ ಪ್ರಾಂತ್ಯದ ಕೊರತೆ ಪ್ರದೇಶಗಳಲ್ಲಿ ಸಣ್ಣ ನೀರಾವರಿ ಕಾರ್ಯಗಳನ್ನು ನಡೆಸಲು ಭಾರತ ಸರ್ಕಾರವು ಆಂಧ್ರಕ್ಕೆ ೫ ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟಿದೆ. ಈ ನೀರಾವರಿ ಕಾರ್ಯಗಳಿಂದ ಸುಮಾರು ೨ ಲಕ್ಷ ಎಕರೆಗೆ ನೀರಾವರಿ ಸೌಕರ್ಯ ದೊರೆಯುತ್ತದೆ.

ಭಾರತ-ಸಿಂಹಳ ಒಪ್ಪಂದಕ್ಕೆ ಅಂಗೀಕಾರ

ಸಿಂಹಳದಲ್ಲಿರುವ ಭಾರತೀಯರ ವಿಷಯದಲ್ಲಿ ಭಾರತ ಮತ್ತು ಸಿಂಹಳ ಪ್ರಧಾನಿಗಳ ನಡುವೆ ಇತ್ತೀಚೆಗೆ ಆದ ಒಪ್ಪಂದವನ್ನು ಸಿಂಹಳದಲ್ಲಿರುವ ಅಧಿಕಾರ ಪಕ್ಷವು ಅಂಗೀಕರಿಸಿದೆ.

ಸಿಂಹಳ ಭಾರತೀಯರ ಕಾಂಗ್ರೆಸ್ ಈ ಒಪ್ಪಂದವನ್ನು ಪರಿಶೀಲಿಸುತ್ತಲಿದೆ. ಇನ್ನೂ ಯಾವ ನಿರ್ಧಾರಕ್ಕೂ ಬಂದಿಲ್ಲ.

ಕೃಷ್ಣಾ ಜಲಾಶಯ

ವಿಜಯವಾಡ ಬಳಿ ಕೃಷ್ಣಾ ನದಿಯ ಜಲಾಶಯವನ್ನು ನಿರ್ಮಿಸಲು ಈ ದಿನ ಆಂಧ್ರ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ಪ್ರಾರಂಭೋತ್ಸವವನ್ನು ನೆರವೇರಿಸಿದರು. ಈ ಜಲಾಶಯ ನಿರ್ಮಾಣಕ್ಕೆ ೨ ಕೋಟಿ ೭೯ ಲಕ್ಷ ರೂಪಾಯಿಗಳ ವೆಚ್ಚವಾಗುತ್ತದೆ. ಇದರಿಂದ ಒಂದು ಲಕ್ಷ ಎಕರೆ ಜಮೀನಿಗೆ ನೀರು ಒದಗುತ್ತದೆ.

ಸಮಾಜ ಶಿಕ್ಷಣ ಸಪ್ತಾಹ

ಬೊಂಬಾಯಿನಲ್ಲಿ ಕೇಂದ್ರ ಆರೋಗ್ಯ ಸಚಿವ ರಾಜಕುಮಾರಿ ಅಮೃತಕೌರ್‌ರವರು ಸಮಾಜ ಶಿಕ್ಷಣ ಸಪ್ತಾಹವನ್ನು ಆರಂಭಿಸಿದರು.

ಬೊಂಬಾಯಿನಲ್ಲಿ ೧೬ರಿಂದ ೪೦ ವರ್ಷಗಳಲ್ಲಿ ಸುಮಾರು ೩ ಲಕ್ಷ ಅನಕ್ಷರಸ್ಥರು ಅಕ್ಷರಸ್ಥರಾಗಿರುವುದಾಗಿಯೂ ಅದರಲ್ಲಿ ಮಹಿಳೆಯರು ೫೦ ಸಾವಿರವಿರುವರೆಂದೂ ತಿಳಿಯಬರುತ್ತದೆ. ಬೊಂಬಾಯಿ ಆದ್ಯಂತ ಅಕ್ಷರಸ್ಥತೆಯನ್ನು ಹೆಚ್ಚಿಸಲು ೭೫ ಲಕ್ಷ ರೂಪಾಯಿವೆಚ್ಚದ ೧೦ ವರ್ಷದ ಯೋಜನೆಯು ತಯಾರಾಗಿದೆ. ಈ ಯೋಜನೆಗೆ ಸರ್ಕಾರದ ಅನುಮತಿ ದೊರೆತಿದೆ.

ಸರ್ಕಾರಕ್ಕೆ ಖಾದಿ ಬಟ್ಟೆ

ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳು ತಮ್ಮ ನೌಕರರ ಉಪಯೋಗಕ್ಕಾಗಿ ಈ ಸಾಲಿನಲ್ಲಿ ಸುಮಾರು ೭೫ ಲಕ್ಷ ರೂಪಾಯಿಗಳ ಖಾದಿಯನ್ನು ಕೊಳ್ಳಲು ನಿರ್ಧರಿಸಿದೆ.

ಸತ್ಯಾಗ್ರಹ

ಪೋರ್ಚುಗೀಸ್ ಗೋವಾ ಕೂಡಲೇ ಭಾರತದೊಡನೆ ಐಕ್ಯಗೊಳಿಸಲು ಅಲ್ಲಿಯ ಕಾಂಗ್ರೆಸ್ ಸದ್ಯದಲ್ಲಿಯೇ ಸತ್ಯಾಗ್ರಹವನ್ನು ಪ್ರಾರಂಭಿಸಲು ನಿರ್ಧರಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೨—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೨೦—	೨೭—
ಎಳ್ಳು	೬೪—೧೦	೭೫—೬
ಹುರಳಿ	೨೮—೧೨	೩೧—
ಹುಚ್ಚೆಳ್ಳು	೩೬—೨	೪೧—೧೨
ಹೊಂಗೆಬೀಜ	೨೨—	೨೫—೬
ಹುಣಸೆಬೀಜ	೧೪—೪	೧೪—೧೦
ಹುರುಳಿ	೨೪—	೩೧—೪
ಹೆಸರು	೩೬—	೪೧—೪
ಅವರೆ	೨೮—೮	೩೫—
ಅಲಸಂದೆ	೩೨—	೪೪—೬
ಉದ್ದು	—	—
ಕೊತ್ತಂಬರಿ	೨೫—೮	೨೯—೬
ಕಡಲೆ	೪೬—	೪೮—೮
ತೊಗರಿ	೨೨—೧೪	೨೮—೨
ಹುಣಸೆಹಣ್ಣು	೩—೧೨	೯—೯
ಮೆಣಸಿನಕಾಯಿ	೨೦—	೩೭—೪
ಸೀಗೆಕಾಯಿ	೩—೧೨	೪—೮
ಬೆಲ್ಲ	—	—
ತೆಂಗಿನಕಾಯಿ	೧೪೯—	೩೦೬—

ಪಾಕೀಸ್ತಾನಕ್ಕೆ ಅಮೆರಿಕಾ ಮಿಲಿಟೆರಿ ನಿಯೋಗ

ಮಿಲಿಟೆರಿ ನೆರವಿನ ವಿಷಯ ಪರಿಶೀಲನೆಗಾಗಿ

ಪಾಕೀಸ್ತಾನಕ್ಕೆ ಅಮೆರಿಕಾವು ಎಷ್ಟು ಪ್ರಮಾಣದಲ್ಲಿ ಯಾವರೀತಿಯ ಮಿಲಿಟರಿ ನೆರವನ್ನು ನೀಡಬೇಕು ಎಂಬುದನ್ನು ಪರಿಶೀಲಿಸಲು ಅಮೆರಿಕಾ ಸೈನ್ಯ ಶಾಖೆಯ ಒಂದು ನಿಯೋಗವು ಸದ್ಯದಲ್ಲಿಯೇ ಪಾಕಿಸ್ತಾನಕ್ಕೆ ಬರುವುದಾಗಿ ತಿಳಿಯಬರುತ್ತದೆ.

ಅಮೆರಿಕಾವು ಸದ್ಯಕ್ಕೆ ಪಾಕೀಸ್ತಾನಕ್ಕೆ ನೇರವಾಗಿ ಯಾವ ಸಹಾಯವನ್ನೂ ಕೊಡದೆ ಟರ್ಕಿಯ ಮೂಲಕ ಎಲ್ಲವನ್ನೂ ಕೊಡುವುದಾಗಿ ಹೇಳಲಾಗುತ್ತಿದೆ. ಈ ಸಂಬಂಧದಲ್ಲಿ ಟರ್ಕಿ ಮತ್ತು ಪಾಕೀಸ್ತಾನಗಳ ನಡುವೆ ಮಿಲಿಟೆರಿ ಒಪ್ಪಂದವಾಗುತ್ತದೆಯೆಂದು ಆ ಒಪ್ಪಂದವಾದನಂತರ ಅಮೆರಿಕಾದಿಂದ ಸೈನ್ಯ ನೆರವು ಬರುವುದು ಪ್ರಾರಂಭವಾಗುವುದೆಂದೂ ತಿಳಿಯಬರುತ್ತದೆ.

ಇಂಡೋ-ಚೀಣಾಕ್ಕೆ ಅಮೆರಿಕದ ಸೈನ್ಯವಿಲ್ಲ

ಇಂಡೋ-ಚೀಣಾಕ್ಕೆ ಅಮೆರಿಕದ ಸೈನ್ಯವನ್ನು ಕಳುಹಿಸಿ ಮತ್ತಷ್ಟು ಯುದ್ಧವನ್ನು ಕೆರಳಿಸುವ ಯೋಜನೆ ಅಮೆರಿಕಕ್ಕೆ ಇಲ್ಲವೆಂದು ಅಧ್ಯಕ್ಷ ಐಕ್‌ರವರು ಸ್ಪಷ್ಟವಾಗಿ ತಿಳಿಸಿದ್ದಾರೆ. ಅಲ್ಲಿರುವ ೨೦೦ ಮಂದಿ ವಿಮಾನ ಸಂಚಾಲಕ ಪರಿಣಿತರ ತಂಡವನ್ನು ಯುದ್ಧರಂಗದ ಹತ್ತಿರ ಇಡಲಾಗುವುದಿಲ್ಲವೆಂದೂ ಅವರು ಹೇಳಿದ್ದಾರೆ.

ಖಾದಿ ಅಭಿವೃದ್ಧಿಗೆ ೧೨ ಕೋಟಿ ರೂಪಾಯಿ

ದೇಶಾದ್ಯಂತ ಖಾದಿ ಮತ್ತು ಇತರ ಕುಟೀರ ಕೈಗಾರಿಕೆಗಳ ಅಭಿವೃದ್ಧಿಗಾಗಿ ೧೨ ಕೋಟಿ ರೂಪಾಯಿಗಳನ್ನು ವೆಚ್ಚಮಾಡಲು ಸರ್ಕಾರವು ರಚಿಸಿರುವ ಖಾದಿ ಅಭಿವೃದ್ಧಿ ಸಮಿತಿ ನಿರ್ಧರಿಸಿದೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 — ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ. ಒಟ್ಟು 2000 ಬಹುಮಾನಗಳು. ಬಹುಮಾನದ ಮೊಬಲಗು 45000 ರೂ. ಟಿಕೇಟು ಒಂದಕ್ಕೆ ಒಂದೇರೂಪಾಯಿ.

ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಶಾಸನಸಭೆಯಲ್ಲಿ ವಿರೋಧ ಪಕ್ಷದವರ ಸಭಾತ್ಯಾಗ

ಉತ್ತರ ಪ್ರದೇಶದಲ್ಲಿ ಮೊನ್ನೆಯದಿನ ಶಾಸನಸಭೆಯನ್ನು ಉದ್ಘಾಟಿಸಲು ಅಲ್ಲಿಯ ಗೌರ್ನರು ಶ್ರೀ ಮುನ್ಷಿಯವರು ತಮ್ಮ ಭಾಷಣವನ್ನು ಪ್ರಾರಂಭಮಾಡಿದಾಗ ವಿರೋಧ ಪಕ್ಷದವರೆಲ್ಲರೂ ಸಭಾತ್ಯಾಗಮಾಡಿದರು. ಕುಂಭಮೇಳ ದುರಂತ ನಡೆದ ದಿನ ಗೌರ್ನರ್‌ರವರು ರಾಷ್ಟ್ರಾಧ್ಯಕ್ಷರಿಗೆ ಸತ್ಕಾರ ಕೂಟವನ್ನು ಏರ್ಪಡಿಸಿದ್ದುದನ್ನು ಪ್ರತಿಭಟಿಸಲು ಸಭಾತ್ಯಾಗ ನಡೆಯಿತು.

ಗೌರ್ನರ್‌ರವರು ಈ ವಿಷಯದಲ್ಲಿ ಮಾತನಾಡುತ್ತ ಈ ದುರಂತವು ತಮಗೆ ತಿಳಿಯುವುದಕ್ಕೆ ಮುಂಚೆಯೇ ಈ ಸತ್ಕಾರ ಕೂಟ ನಡೆಯಿತೆಂದು ತಿಳಿಸಿದರು.

ಕುಂಭಮೇಳದಲ್ಲಿ ಮಡಿದವರ ಬಗ್ಗೆ ಸಂತಾಪ ಸೂಚಿಸಲು ಶಾಸನ ಸಭೆಯು ನಿನ್ನೆಯದಿನ ೨ ನಿಮಿಷಕಾಲ ಮೌನವನ್ನು ಆಚರಿಸಿತು.

ಭಾಷಣ

ಮೈಸೂರು ೧೩

ಮೈಸೂರು ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ಸಂಘದ ಆಶ್ರಯದಲ್ಲಿ ಇದೇ ೧೫ ನೇ ತಾರೀಖು ಸೋಮವಾರ ಸಂಜೆ ೫ ಗಂಟೆಗೆ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಶ್ರೀ ವಿ. ಸೀತಾರಾಮಯ್ಯನವರು ಭಾಷಣ ಮಾಡುವರು. ಪುರಸಭಾಧ್ಯಕ್ಷ ಶ್ರೀ ಕೆ ಪುಟ್ಟಸ್ವಾಮಿಯವರು ಅಧ್ಯಕ್ಷತೆ ವಹಿಸುವರು.

ಪೂಣೆ ಕೋಟೆ ಮರಾಠ ಸಂಸ್ಕೃತಿ ಕೇಂದ್ರ

೧೮ನೇ ಶತಮಾನದಲ್ಲಿ ಕಟ್ಟಲಾದ ಪೂನಾ ನಗರದಲ್ಲಿರುವ ಶಾನವಾರವಾಡ ಎಂಬ ಪ್ರಾಚೀನ ಕೋಟೆಯನ್ನು ಅಭಿವೃದ್ಧಿಪಡಿಸಿ, ಅದನ್ನು ಮರಾಠ ಸಂಸ್ಕೃತಿಯ ಕೇಂದ್ರವನ್ನಾಗಿ ಪರಿವರ್ತಿಸಲು ಕೇಂದ್ರ ಸರ್ಕಾರವು ಯೋಚಿಸುತ್ತಿದೆ.

.... ರಣಜಿತ್ ....

12–2–54 ರಿಂದ ಅಮೋಘ ಪ್ರಾರಂಭ

ಶಶಿಕಲಾ, ದುರ್ಗಾಕೋಟೆ ನಟಿಸಿರುವ:-

ಚಾ ಚಾ- -ಚೌಧರಿ

ಪ್ರಕಾಶಕರು ಮತ್ತು ಮುದ್ರಕರು:

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್ ಮೈಸೂರು.

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೪೯

೧೫-೨-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಜಿಲ್ಲಾ ಮೋಟಾರು ಕೆಲಸಗಾರರ ಮುಷ್ಕರ

ಮಾರ್ಚಿ ೧ ರಿಂದ ಪ್ರಾರಂಭಿಸಲು ನೋಟೀಸ್

ಮೈಸೂರು ೧೫

ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದ ಸಭೆಯು ಮೊನ್ನೆ ರಾತ್ರಿ ಶ್ರೀ ಕೆ. ದೌಲತ್‌ರಾವ್‌ರವರ ಅಧ್ಯಕ್ಷತೆ ನಡೆದು ಈ ಕೆಳಗೆಕಂಡ ನಿರ್ಣಯವನ್ನು ಅನುಮೋದಿಸಲಾಯಿತು.

ಮೋಟಾರು ಕೆಲಸಗಾರರ ಸಂಘದವರು ಆಡಳಿತ ಮಂಡಲಿಯ ಮುಂದಿಟ್ಟದ್ದ ಬೇಡಿಕೆಗಳಿಗೆ ಸಂಬಂಧಿಸಿದಂತೆ ಕೈಗಾರಿಕಾ ಕೋರ್ಟಿನವರು ಕೊಟ್ಟಿರುವ ಅವಾರ್ಡನ್ನು ಸಿ. ಪಿ. ಸಿ., ಚಾಮುಂಡಿ, ಕೆ. ಬಿ. ಸಬ್ಬೀರ್, ರಹಮಾನಿಯ, ತಿಬ್ಬದೇವಿ, ಕೆ. ಬಿ, ಅರಕೆರೆ, ಟ್ರಾನ್ಸ್‌ಪೋರ್ಟ್ ಮುಂತಾದ ಸರ್ವೀಸುಗಳು ಜಾರಿಗೆ ಕೊಡದಿರುವ ಬಗ್ಗೆ ಅನೇಕಾವರ್ತಿ ಒತ್ತಾಯ ಪಡಿಸಿದರೂ ಪ್ರಯೋಜನವಾಗಿಲ್ಲ. ಈ ಬಗ್ಗೆ ಸರ್ಕಾರದ ಕಾರ್ಮಿಕ ಇಲಾಖೆ, ಕಾರ್ಮಿಕ ಮಂತ್ರಿಗಳಲ್ಲಿ ದೂರು ಕೊಟ್ಟಾಗಲೂ, ಕೆಲಸಗಾರರಿಗೆ ಪರಿಹಾರ ದೊರಕಿಲ್ಲ. ಇನ್ನು ಕೆಲಸಗಾರರು ಸುಮ್ಮನಿರಲು ಸಾಧ್ಯವಿಲ್ಲ. ಈವರೆಗೆ ನಡೆಸಿದ ಕಾರ್ಯಕ್ರಮಗಳು ಪ್ರಯೋಜನವಾಗಲಿಲ್ಲವಾದ್ದರಿಂದ ಮುಷ್ಕರ ಒಂದೇ ದಾರಿಯೆಂದು ಈ ಸಭೆ ಮನಗೊಂಡಿದೆ. ೨೮-೨-೫೪ರ ಒಳಗೆ ಅವಾರ್ಡನ್ನು ಸಂಪೂರ್ಣವಾಗಿ ಜಾರಿಗೆಕೊಡದೇ ಹೋದರೆ ಮಾರ್ಚಿ ೧ ನೇ ತಾರೀಖಿನಿಂದ ಈ ಮೇಲ್ಕಂಡ ಸರ್ವೀಸುಗಳ ಕೆಲಸಗಾರರು ಮುಷ್ಕರ ಹೂಡತಕ್ಕದ್ದೆಂದು ಈ ಸಭೆ ತೀರ್ಮಾನಿಸುತ್ತದೆ. ವಿಶೇಷ ಆಹ್ವಾನದ ಮೇಲೆ ಸಭೆಗೆ ದಯಮಾಡಿದ್ದ ಐ. ಎನ್. ಟಿ. ಯು. ಸಿ. ಕಾರ್ಯದರ್ಶಿಗಳಾದ ಶ್ರೀ ಕೇಶವಕುಲಕರ್ಣಿ ಮತ್ತು ಶ್ರೀ ಎ. ರಾಮಣ್ಣನವರು ಸದಸ್ಯರನ್ನುದ್ದೇಶಿಸಿ ಭಾಷಣ ಮಾಡಿದರು.

ಮಕ್ಕಳಿಗಾಗಿ ಕ್ಷಯರೋಗದ ಆಸ್ಪತ್ರೆ

ಭಾರತದಲ್ಲಿ ಮೊಟ್ಟಮೊದಲು ಬಾರಿಗೆ ಮಕ್ಕಳ ಕ್ಷಯರೋಗ ಆಸ್ಪತ್ರೆಗಳನ್ನು ಈ ವರ್ಷದಿಂದ ಸ್ಥಾಪಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ಡಹಲಿಯ ಕುತುಬ್‌ಮಿನಾರ್ ಬಳಿ ಮತ್ತು ಮದನಪಲ್ಲಿಗಳಲ್ಲಿ ಈ ಆಸ್ಪತ್ರೆಗಳನ್ನು ತೆರೆಯಲಾಗುವುದು.

ಚಿಕಿತ್ಸೆ ಜೊತೆಗೆ ಸಂಶೋಧನೆ ನಡೆಸಲು ಸಹ ವ್ಯವಸ್ಥೆ ಮಾಡಲಾಗುವುದು.

ಮೈಸೂರಿನಲ್ಲಿ ಕೃತಕ ಅಕ್ಕಿ ತಯಾರಿಕೆ

ಮೈಸೂರು ೧೫

ರಾಜಧಾನಿಯಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ದಿನಕ್ಕೆ ೨ಲಕ್ಷ ಟನ್ ಅಕ್ಕಿಯನ್ನು ತಯಾರಿಸುವ ಯಂತ್ರವೊಂದನ್ನು ಸದ್ಯದಲ್ಲೇ ಸ್ಥಾಪಿಸಲಾಗುವುದು. ಅದಕ್ಕೆ ಬೇಕಾದ ಯಂತ್ರಕ್ಕೆ ೨ ಲಕ್ಷ ರೂ. ಬೆಲೆಯೆಂದೂ, ಅದು ಇನ್ನೆರಡು ತಿಂಗಳಿನಲ್ಲೇ ಬ್ರಿಟನ್ನಿನಿಂದ ಬರಲಿದೆಯೆಂದೂ ತಿಳಿದುಬಂದಿದೆ.

೧೦ ಸಾವಿರ ಜನರಿಗೆ ಸಾಕಾಗುವ ಈ ೨ ಲಕ್ಷ ಟನ್ ಕೃತಕ ಅಕ್ಕಿಯನ್ನು ಒಂದು ನಿರ್ದಿಷ್ಟವಾದ ಪ್ರದೇಶದಕ್ಕೆ ಸರಬರಾಜು ಮಾಡಿ, ಅದು ಯಶಸ್ವಿಯಾದರೆ, ಇನ್ನೂ ಭಾರಿ ಪ್ರಮಾಣದಲ್ಲಿ ತಯಾರಿಸಲಾಗುವುದೆಂದೂ, ಈ ಅಕ್ಕಿಯು ಸ್ವಾಭಾವಿಕ ಅಕ್ಕಿಯಷ್ಟೇ ಪುಷ್ಟಿಕರವಾಗಿದ್ದು, ಅದಕ್ಕಿಂತ ೨-೩ ರಷ್ಟು ಬೆಲೆ ಕಡಮೆ ಆಗುವುದೆಂದೂ ಹೇಳಲಾಗಿದೆ.

ಪಾರ್ಲಿಮೆಂಟ್ ಪ್ರಾರಂಭ ಅಧಿವೇಶನಕ್ಕೆ ಬಹಿಷ್ಕಾರ

ದೆಹಲಿಯಲ್ಲಿ ಈ ದಿನ ಪ್ರಾರಂಭವಾದ ಪಾರ್ಲಿಮೆಂಟಿನ ಉಭಯ ಸಭೆಗಳ ಸಂಯುಕ್ತ ಅಧಿವೇಶನಕ್ಕೆ ಕಮ್ಯೂನಿಸ್ಟ್ ಪಕ್ಷದ ಸದಸ್ಯರು ಹಾಜರಾಗಲು ಬಹಿಷ್ಕಾರಹಾಕಿ ಸಭೆಗೆ ಬರಲೇ ಇಲ್ಲ.

ಅಲಹಾಬಾದಿನ ಕುಂಭನಗರ ದುರಂತದಲ್ಲಿ ಕಾಂಗ್ರೆಸ್ ಸರ್ಕಾರವು ಅಜಾಗರೂಕತೆಯಿಂದ ವರ್ತಿಸಿದರೆಂಬ ಆಪಾದನೆ ಮೇಲೆ ಈ ಪಕ್ಷವು ರಾಷ್ಟ್ರಾಧ್ಯಕ್ಷರು ಪ್ರಾರಂಭಿಸಲಿರುವ ಅಧಿವೇಶನಕ್ಕೆ ಬಹಿಷ್ಕಾರ ಹಾಕಿದ್ದಾರೆ.

ರಾಜ್ಯ ಪರಿಷತ್ತಿಗೆ ಚುನಾವಣೆ

ಏಪ್ರಿಲ್ ೨ನೇ ತಾರೀಖು ರಾಜ್ಯ ಪರಿಷತ್ತಿನಲ್ಲಿ ಖಾಲಿಯಾಗುವ ೬೬ ಸ್ಥಾನಗಳಿಗೆ ೧೫ ಎ ಮತ್ತು ಬಿ ಮತ್ತು ೪ ಸಿ ವಿಭಾಗ ಪ್ರಾಂತ್ಯಗಳಿಂದ ಚುನಾವಣೆಯು ಮುಂದಿನ ತಿಂಗಳು ೨೨ ನೇ ತಾರೀಖು ನಡೆಯುತ್ತದೆ. ಆಯಾ ಪ್ರಾಂತ್ಯಗಳ ಕೆಳಿಯ ಶಾಸನಸಭೆಗಳು ಈ ಸ್ಥಾನಗಳಿಗೆ ಚುನಾವಣೆಯನ್ನು ನಡೆಸುತ್ತವೆ.

ಮೈಸೂರಿನಲ್ಲಿ ಕಡ್ಡಾಯ ದೇವನಾಗರಿ ಲಿಪಿ ಶಿಕ್ಷಣ

ಮುಂದಿನ ಸಾಲಿನಿಂದ ಜಾರಿ

ಮೈಸೂರು ಸಂಸ್ಥಾನದ ಎಲ್ಲಾ ಪ್ರಾಥಮಿಕ ಶಾಲೆಗಳಲ್ಲೂ ಕನ್ನಡದ ಜೊತೆಗೆ ದೇವನಾಗರಿ ಲಿಪಿಯನ್ನು ಕಡ್ಡಾಯವಾಗಿ ಶಿಕ್ಷಣ ಕೊಡುವುದನ್ನು ಪ್ರಾರಂಭಿಸಲಾಗುವುದೆಂದು ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಹೈದರಾಬಾದ್ ಹಿಂದಿ ಪ್ರಚಾರಸಮ್ಮೇಳನಕ್ಕೆ ಕಳುಹಿಸಿದ್ದ ಸಂದೇಶದಲ್ಲಿ ತಿಳಿಸಿದ್ದಾರೆ.

ರಾಜಪ್ರಮುಖರ ಕಾರಿಗೆ ಸಿಕ್ಕಿ ಮಗುವಿಗೆ ಗಾಯ

ಮೈಸೂರು ೧೫

ಮೈಸೂರಿನ ರಾಜಪ್ರಮುಖರು ಮೊನ್ನೆ ದಿನ ರಾಜಧಾನಿಯ ರಾಮಾನುಜ ರಸ್ತೆಯಲ್ಲಿ ಹೋಗುತ್ತಿದ್ದಾಗ, ರಾಮಚಂದ್ರ ಅಗ್ರಹಾರದ ಕಡೆಯಿಂದ ೮ ವರ್ಷದ ಮಗುವೊಂದು ಸಿನಿಮಾ ಚೀಟಿ ಪಡೆಯಲು ಓಡಿಬಂದಾಗ ಆಕಸ್ಮಾತ್ ಕಾರಿಗೆ ಸಿಕ್ಕಿ, ತಲೆ ಮತ್ತು ಎಡ ತೊಡೆಗೆ ಏಟು ಬಿದ್ದಿತೆಂದು ವರದಿಯಾಗಿದೆ. ಕೂಡಲೇ ಕಾರನ್ನು ನಿಲ್ಲಿಸಿ, ಶ್ರೀಮನ್ಮಹಾರಾಜರು ಮಗುವನ್ನು ಕೈಯಲ್ಲಿ ಎತ್ತಿಕೊಂಡು ಸಂತೈಸಿ ಅದರ ತಂದೆ ತಾಯಿಗಳೊಡನೆ ಆಸ್ಪತ್ರೆಗೆ ಕರೆದುಕೊಂಡುಹೋಗಿ ಚಿಕಿತ್ಸೆ ಮಾಡಿಸಿದರು.

ಆ ಮಗುವು ಬನುಮಯ್ಯ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ವೆಂಕಟನಾರಾಯಣಶಾಸ್ತ್ರಿಯವರ ಕುಮಾರಿಯೆಂದೂ, ಈಗ ಅದು ಗುಣಮುಖವಾಗುತ್ತಿದೆಯೆಂದೂ ಹೇಳಲಾಗಿದೆ.

ಪ್ರೇಮ ಪತ್ರ ಬರಹ ಸ್ಪರ್ಧೆ ಕೂಡದು

ಬೆಂಗಳೂರು ಒಕ್ಕಲಿಗರ ಸಂಘದ ವಿದ್ಯಾರ್ಥಿನಿಲಯದಲ್ಲಿ ಮೊನ್ನೆದಿನ ನಡೆದ "ಪ್ರೇಮಪತ್ರ ಬರಹ" ಸ್ಪರ್ಧೆಯಲ್ಲಿ ಅಧ್ಯಕ್ಷತೆ ವಹಿಸಿದ್ದ ಶ್ರೀ ಹೆಚ್. ಬಿ. ಗುಂಡಪ್ಪನವರು ಅದರ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತಪಡಿಸಿ, ಅಂತಹ ಸ್ಪರ್ಧೆಗಳನ್ನು ಇನ್ನುಮುಂದೆ ನಡೆಸಕೂಡದೆಂದು ಸಲಹೆ ಮಾಡಿದ್ದಾರೆ. ಸ್ಪರ್ಧೆಯಿಲ್ಲದೆಯೇ ಪ್ರಣಯ ಪತ್ರಗಳನ್ನು ಬರೆಯುವಾಗ ಇದಕ್ಕೆ ಸ್ಪರ್ಧೆ ಏಕೆ ಎಂದು ಅವರು ಪ್ರಶ್ನಿಸಿ, ತಮ್ಮಕಾಲದಲ್ಲಿ ವಿದ್ಯಾರ್ಥಿಗಳಲ್ಲಿ ಈರೀತಿ ಯೋಚನೆಗಳೇ ಬರುತ್ತಿರಲಿಲ್ಲವೆಂದೂ, ಈಗಿನಕಾಲದಲ್ಲಿ ಇದಕ್ಕೂ ಸ್ಪರ್ಧೆ ಏರ್ಪಡಿಸುವುದು ಆಶ್ಚರ್ಯವೆಂದೂ, ಅದು ನ್ಯಾಯವಾದುದಲ್ಲವೆಂಬೂ ಅವರು ಹೇಳಿದ್ದಾರೆ.

ಕರ್ನಾಟಕ ಏಕೀಕರಣದಿಂದ ಅನಾನುಕೂಲ

ಬೆಂಗಳೂರು ೧೫

"ನಾನು ಹೊರಗಿದ್ದರೆ, ಕರ್ನಾಟಕ ಏಕೀಕರಣಕ್ಕೆ ವಿರೋಧವಾಗಿ ಚಳುವಳಿಯನ್ನು ಹೂಡುತ್ತಿದ್ದೆ. ಈಗ ಪಬ್ಲಿಕ್ ಸರ್ವೀಸ್ ಕಮಿಷನ್ ಅಧ್ಯಕ್ಷನಾಗಿರುವುದರಿಂದ ಮಾತನಾಡಲು ಅವಕಾಶವಿಲ್ಲ" ಎಂದು ಶ್ರೀ ಹೆಚ್. ಬಿ. ಗುಂಡಪ್ಪಗೌಡರು ನಿನ್ನೆಯ ದಿನ ಒಕ್ಕಲಿಗ ಸಂಘದ ವಿದ್ಯಾರ್ಥಿ ನಿಲಯದ ವಾರ್ಷಿಕೋತ್ಸವದಲ್ಲಿ ಮಾತನಾಡುತ್ತ ತಿಳಿಸಿದ್ದಾರೆ.

ಶ್ರೀಯುತರು ಕರ್ನಾಟಕ ಏಕೀಕರಣ ವಿಷಯವನ್ನು ಪ್ರಸ್ತಾಪಿಸುತ್ತ ಒಕ್ಕಲಿಗ ಜನಾಂಗದ ಪ್ರತಿನಿಧಿಯಾದ ಒಕ್ಕಲಿಗ ಸಂಘವು ಕರ್ನಾಟಕ ಏಕೀಕರಣದಿಂದುಂಟಾಗುವ ಅನುಕೂಲ ಅನಾನುಕೂಲಗಳನ್ನು ಪರಿಶೀಲಿಸಿ, ನಿರ್ಧಾರವನ್ನು ಭಾರತ ಸರ್ಕಾರವು ರಚಿಸಿರುವ ಗಡಿ ನಿರ್ಧರಣ ಸಮಿತಿಗೆ ತಿಳಿಸಬೇಕು. ಇದರಿಂದ ಪ್ರಯೋಜನವಾದರೆ ನಾವೆಲ್ಲಾ ಸೇರೋಣ ಇಲ್ಲವಾದರೆ ವಿರೋಧಿಸೋಣ

ಮೈಸೂರಿಗೆ ಈಗಾಗಲೇ ಬಹಳಷ್ಟು ಸೇರಿ ವಿಸ್ತೀರ್ಣ, ಜನಸಂಖ್ಯೆ ಹೆಚ್ಚಾಗಿದೆ. ಇನ್ನೂ ಬರುವವರೆಲ್ಲಾ ಬನ್ನೀ ಎನ್ನಲು ಸಾಧ್ಯವೇ ? ನಮ್ಮಲ್ಲಿಯೇ ಸಾಕಷ್ಟು ಜನರಿರುವಾಗ ಬೇರೆ ಹೆಚ್ಚು ಜನ ಬೇಡ ಎನ್ನಲು ಹೇಳಬಹುದೆ ? ಇವುಗಳನ್ನೆಲ್ಲಾ ಪರಿಶೀಲಿಸಬೇಕಾಗಿದೆ. ಕೋಲಾರದಲ್ಲಿರುವ ಆಂಧ್ರರು ಇಲ್ಲೇ ಇರಬೇಕೆನ್ನುತ್ತಾರೆ. ಪೂನಾದಲ್ಲಿರುವ ಕನ್ನಡಿಗರು ಇಲ್ಲಿಗೆ ಬರಬೇಕೆನ್ನುತ್ತಾರೆ. ಪರಿಸ್ಥಿತಿ ಹೀಗಿರುವಾಗ ಭಾಷಾವಾರು ಪ್ರಾಂತ್ಯ ರಚನೆಯಿಂದ ಅನನ್ವಯ, ಅವಿವೇಕ ಉಂಟಾಗುತ್ತದೆ ಎಂದೂ ಅವರು ತಿಳಿಸಿದರು.

ಅಸ್ಪೃಶ್ಯತೆ ನಿವಾರಣೆಗೆ ನೂತನ ಯೋಜನೆ

ದೇಶದಲ್ಲಿ ಅಸ್ಪೃಶ್ಯತೆಯನ್ನು ನಿರ್ಮೂಲಮಾಡಲು ಬೊಂಬಾಯಿ ಸರ್ಕಾರದವರು ಒಂದು ನೂತನ ಯೋಜನೆಯನ್ನು ಕಾರ್ಯರೂಪಕ್ಕೆ ತಂದಿದ್ದಾರೆ. ಹರಿಜನರ ಮಕ್ಕಳನ್ನು ಸುವರ್ಣ ಹಿಂದೂಗಳು ತಮ್ಮ ಮನೆಯಲ್ಲೇ ಸಾಕಲು ಸೌಕರ್ಯ ಕೊಟ್ಟು ಅದರ ವೆಚ್ಚಕ್ಕಾಗಿ ತಿಂಗಳಿಗೆ ತಲಾ ೨೦ ರೂ. ಗಳನ್ನು ಕೊಡಲು ನಿರ್ಧರಿಸಿದ್ದಾರೆ.

ರೋಗಿಗಳಿಗೆ ಹಣ್ಣುಗಳ ಉಚಿತ ಹಂಚಿಕೆ ಯೋಜನೆ

ಬೆಂಗಳೂರು ೧೫

ನಗರದ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಉಚಿತವಾಗಿ ಹಣ್ಣು ಹಂಚುವಯೋಜನಾ ಕಾರ್ಯಕ್ರಮವನ್ನು ಕಾರ್ಪೊರೇಷನ್ ಮೇಯರ್ ಶ್ರೀ ಎಚ್. ಎಸ್. ಸೀತಾರಾಮರವರು ಪ್ರಾರಂಭಿಸಿದ್ದಾರೆ. ಈ ಸಂಬಂಧದಲ್ಲಿ ನಗರದ ಹಣ್ಣಿನ ವ್ಯಾಪಾರಿಗಳು ಈ ಕಾರ್ಯದಲ್ಲಿ ಸಹಕರಿಸಿರುವುದಾಗಿ ಅವರು ತಿಳಿಸುತ್ತ ಈ ಕಾರ್ಯಕ್ರಮವು ವಾರಕ್ಕೊಮ್ಮೆ ನಡೆಯುವುದಾಗಿ ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಪಾಕಶಾಲೆ

ಇದೇ ಸೆಪ್ಟೆಂಬರ್ ೭ ರಿಂದ ೧೮ ರವರೆಗೆ ಲಂಡನ್ನಿನ ಒಲಂಪಿಯಾದಲ್ಲಿ ಬ್ರಿಟಿಷ್ ಆಹಾರ ಪ್ರದರ್ಶನವು ನಡೆಯುತ್ತದೆ. ಉತ್ತಮ ಆಹಾರ ತಯಾರಿಕೆ, ಆಹಾರ ಯಂತ್ರಗಳು ಮುಂತಾದವನ್ನು ಇಲ್ಲಿ ಪ್ರದರ್ಶಿಸಲಾಗುತ್ತದೆ. ಅಲ್ಲದೆ 'ಅಂತರರಾಷ್ಟ್ರೀಯ ಪಾಕಶಾಲೆ' ಎಂಬ ಒಂದು ನೂತನ ವ್ಯವಸ್ಥೆ ಮಾಡಲಾಗುತ್ತಿದೆ. ಇಲ್ಲಿ ಸುಮಾರು ೩೦ ಅಡಿಗೆ ಮನೆಗಳಲ್ಲಿ ವಿಶ್ವದ ನಾನಾ ಭಾಗಗಳ ಉತ್ತಮ ಆಹಾರ ತಯಾರಿಕೆಯನ್ನು ತೋರಿಸಲಾಗುತ್ತದೆ.

ಕಾಶ್ಮೀರ್ ವಿವಾದ ಯುದ್ಧದಿಂದಲೇ ಇತ್ಯರ್ಥ

ಕಾಶ್ಮೀರದ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಬಲಪ್ರಯೋಗದಿಂದ ಮಾತ್ರವೇ ಸಾಧ್ಯವೆಂದು ಆಜಾದ್ ಕಾಶ್ಮೀರದ ಮಾಜಿ ಅಧ್ಯಕ್ಷ ಅಬ್ಬಾಸರು ತಿಳಿಸಿದ್ದಾರೆ. ಭದ್ರತಾ ಸಮಿತಿ ಅಥವ ನೆಹರೂ-ಆಲಿ ಮಾತುಕತೆಗಳಿಂದ ಈ ವಿವಾದ ಇತ್ಯರ್ಥವಾಗುವುದಿಲ್ಲವೆಂದೂ, ಕಾಶ್ಮೀರದ ಮೇಲೆ ಪಾಕ್ ಸೈನ್ಯಗಳ ದಂಡೆಯಾತ್ರೆ ನಡೆಯಬೇಕೆಂದೂ ಅವರು ಸಲಹೆ ಮಾಡಿದ್ದಾರೆ.

ಕಳೆದುಹೋದ ಮತದಾನ ಚೀಟಿಗಳು ನದಿ ದಡದಲ್ಲಿ

ತಿರುವಾಂಕೂರು-ಕೊಚ್ಚಿಯಲ್ಲಿ ಈದಿನ ಪ್ರಾರಂಭವಾಗಿರುವ ಮತದಾನಕ್ಕೆ ಕಳುಹಿಸಲಾಗಿದ್ದ ಮತದಾನ ಚೀಟಿ ಪೆಟ್ಟಿಗೆಗಳಲ್ಲಿ ೧೦ ಲಕ್ಷ ಚೀಟಿಗಳು ಮಾಯವಾಗಿದ್ದುವಷ್ಟೆ. ಈ ಚೀಟಿಗಳಿದ್ದ ೩ ಪೆಟ್ಟಿಗೆಗಳು ಈಗ ಕಡಪಾ ಬಳಿ ಇರುವ ಒಂದು ಗ್ರಾಮದ ಪೆನ್ನಾರು ನದಿಯ ದಡದಲ್ಲಿ ಹೂತಿಟ್ಟದುದನ್ನ ಪೊಲೀಸರು ಪತ್ತೆಹಚ್ಚಿದ್ದಾರೆ. ಈ ಸಂಬಂಧದಲ್ಲಿ ಒಬ್ಬನ ದಸ್ತಗಿರಿಯಾಗಿದೆ.

ದಂತ ವೈದ್ಯರ ಸಮ್ಮೇಳನ

ಬೊಂಬಾಯಿನಲ್ಲಿ ನಿನ್ನೆಯದಿನ ಅಖಿಲ ಭಾರತ ದಂತ ವೈದ್ಯರ ೪೦ ನೇ ಸಮ್ಮೇಳನವು ಪ್ರಾರಂಭವಾಯಿತು. ಬೊಂಬಾಯಿ ಮುಖ್ಯ ಮಂತ್ರಿ ಶ್ರೀ ಮೊರಾರ್ಜಿ ದೇಸಾಯ್‌ರವರು ಸಮ್ಮೇಳನವನ್ನು ಉದ್ಘಾಟಿಸಿದರು.

ಪಾಕೀಸ್ತಾನ-ಟರ್ಕಿಗಳ ನಡುವೆ ನೂತನ ಒಪ್ಪಂದ

ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಒಪ್ಪಂದಕ್ಕೆ ಈ ಮಾಹೆಯಲ್ಲಿ ಸಹಿ

ಅನಂತರ ಪಾಕೀಸ್ತಾನಕ್ಕೆ ಅಮೆರಿಕಾ ಮಿಲಿಟರಿ ನೆರವು

ಪಾಕೀಸ್ತಾನ ಮತ್ತು ಟರ್ಕಿ ದೇಶಗಳ ನಡುವೆ ಈ ಮಾಹೆ ಅಂತ್ಯದೊಳಗೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಒಪ್ಪಂದಕ್ಕೆ ಸಹಿ ಬೀಳುವುದೆಂದು ತಿಳಿಯಬರುತ್ತದೆ. ಪಾಕ್ ಪ್ರಧಾನಿ ಮಹಮದ್ ಆಲಿಯವರು ಈ ಒಪ್ಪಂದವು ಉಭಯ ದೇಶಗಳ ನಡುವೆ ಆಗುವುದೆಂದು ತಿಳಿಸಿದ್ದಾರೆ. ಆದರೆ ಯಾವಾಗ ಎಂಬುದನ್ನು ಹೇಳಿಲ್ಲ.

ಟರ್ಕಿಯು ಯುಗೋಸ್ಲೋವೇಕಿಯ ಮುಂತಾದ ಕೆಲವು ಮಧ್ಯಪ್ರಾಚ್ಯ ದೇಶಗಳೊಡನೆಮಾಡಿಕೊಂಡಿರುವ ಒಪ್ಪಂದರೀತ್ಯಾ ಇದು ಇರುವುದೆಂದು ಹೇಳಲಾಗುತ್ತಿದೆ. ಈಗಾಗಲೇ ಕರಡು ಒಪ್ಪಂದ ತಯಾರಾಗಿರುವುದಾಗಿ ಗೊತ್ತಾಗಿದೆ. ಉಭಯ ದೇಶಗಳ ನಡವೆ ಮಿಲಿಟರಿ ನೆರವಿನ ವಿಷಯವು ಇದರಲ್ಲಿ ಪ್ರಸ್ತಾಪವಿಲ್ಲದಿದ್ದಾಗ್ಯೂ ದೇಶದ ಹಿತರಕ್ಷಣಾ ಕಾರ್ಯದಲ್ಲಿ ಒಬ್ಬರು ಮತ್ತೊಬ್ಬರೊಡನೆ ವಿಚಾರ ವಿನಿಮಯ ನಡೆಸಬಹುದಾಗಿದೆ. ಈ ಒಪ್ಪಂದವು ಅಮೆರಿಕಾ ಮತ್ತು ಪಾಕೀಸ್ತಾನಗಳ ಮಿಲಿಟರಿ ನೆರವಿಗೆ ಸೂಚನೆಯೆಂದೂ, ಈ ಒಪ್ಪಂದವಾದೊಡನೆಯೇ ಅಮೆರಿಕಾದಿಂದ ಪಾಕೀಸ್ತಾನಕ್ಕೆ ಮಿಲಿಟರಿನೆರವು ಪ್ರಾರಂಭವಾಗುವುದೆಂದೂ ಹೇಳಲಾಗುತ್ತಿದೆ.

ಕೋಲಾರ ಜಿಲ್ಲೆ ಆಂಧ್ರಕ್ಕೆ ಸೇರಕೂಡದು

ಕೇಂದ್ರ ಗಡಿನಿರ್ಧಾರ ಸಮಿತಿಯವರು ಕೋಲಾರ ಜಿಲ್ಲೆಯನ್ನು ವಿಶಾಲಾಂಧ್ರಕ್ಕೆ ಸೇರಿಸಬೇಕೆಂದು ಸಲಹೆ ಮಾಡುವುದಾದರೆ ಅದರ ವಿರುದ್ಧವಾಗಿ ಇಡೀ ಜಿಲ್ಲೆಯ ಪ್ರಜೆಗಳು ಹೋರಾಟ ನಡೆಸುವರೆಂದು ಶಾಸನ ಸಭಾ ಸದಸ್ಯ ಶ್ರೀ ನಾರಾಯಣಗೌಡರು ಮುಳುಬಾಗಿಲಿನ ಸಮಾರಂಭವೊಂದರಲ್ಲಿ ಎಚ್ಚರಿಸಿದ್ದಾರೆ.

ರಾಷ್ಟ್ರೀಯ ರಜಾ ದಿನ

ಕಾಶ್ಮೀರ ರಾಜ್ಯಾಂಗ ಸಭೆಯು ಇದೇ ೭ನೇ ತಾರೀಖು ನೂತನ ರಾಜ್ಯಾಂಗವನ್ನು ಅಂಗೀಕರಿಸಿದುದರ ಜ್ಞಾಪಕಾರ್ಥವಾಗಿ ಪ್ರತಿ ವರ್ಷವೂ ಫೆಬ್ರವರಿ ೭ ನೇ ತಾರೀಖನ್ನು ರಾಷ್ಟ್ರೀಯ ರಜಾ ದಿನವನ್ನಾಗಿ ಆಚರಿಸಲು ಅಲ್ಲಿಯ ಸರ್ಕಾರವು ನಿರ್ಧರಿಸಿದೆ.

○ ಲಕ್ನೋನಗರದಲ್ಲಿ ಇತ್ತೀಚೆಗೆ ವಿದ್ಯುಚ್ಛಕ್ತಿ ದರವನ್ನು ಏರಿಸಿರುವುದರಿಂದ ಅಲ್ಲಿಯ ವರ್ತಕರು ಈ ದಿನದಿಂದ ಮಧ್ಯಾಹ್ನ ೪ ರಿಂದ ರಾತ್ರಿ ೮ ವರೆಗೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸದೇ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಲು ನಿರ್ಧರಿಸಿದ್ದಾರೆ.

ಸಲಹಾ ಸಮಿತಿ ರಚನೆ

ಪಶ್ಚಿಮ ಬಂಗಾಳದಲ್ಲಿರುವ ಎಲ್ಲಾ ಖಾಸಗಿ ಮತ್ತು ಸರ್ಕಾರ ನೆರವು ಪಡೆಯುತ್ತಿರುವ ಸೆಕೆಂಡರಿ ಶಾಲೆಗಳ ಉಪಾಧ್ಯಾಯ ಸ್ಥಿತಿಗತಿಗಳು ಮತ್ತು ಹೆಚ್ಚಿನ ಸಂಬಳ ಮುಂತಾದ ವಿಷಯಗಳನ್ನು ಪರಿಶೀಲಿಸಿ ಸೂಕ್ತ ಸಲಹೆ ನೀಡಲು ಅಲ್ಲಿಯ ಸರ್ಕಾರವು ಶ್ರೇಷ್ಠ ನ್ಯಾಯಾಲಯದ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಿದೆ. ಹೆಚ್ಚಿನ ಸಂಬಳ ಬೇಡಿಕೆಗಾಗಿ ಈ ಶಾಲಾ ಉಪಾಧ್ಯಾಯರು ಪ್ರಾರಂಭಿಸಿರುವ ಮುಷ್ಕರವು ಇನ್ನೂ ಮುಂದುವರಿಯುತ್ತಲೆ ಇದೆ.

ಅಮೆರಿಕಾ--ಪಾಕೀಸ್ತಾನ ಮಿಲಿಟರಿ ನೆರವು ಖಂಡನೆ

ತಮಿಳುನಾಡು ಕಾಂಗ್ರೆಸ್ ಸಮಿತಿಯು ಕರೂರಿನಲ್ಲಿ ನಡೆಸಿದ ಅಧಿವೇಶನದಲ್ಲಿ ನಿನ್ನೆ ಅಮೆರಿಕಾ-ಪಾಕೀಸ್ತಾನ ಮಿಲಿಟರಿ ಒಪ್ಪಂದವನ್ನು ತೀವ್ರವಾಗಿ ಖಂಡಿಸಿ, ಇದರಿಂದ ಏಷ್ಯಾಖಂಡದ ಶಾಂತಿಗೆ ಭಂಗ ಬರುವುದರಿಂದ ಇದನ್ನು ಕೈಬಿಡಬೇಕೆಂದು ಉಭಯ ದೇಶಗಳನ್ನು ಕೋರುವ ನಿರ್ಣಯ ಮಾಡಿದೆ.

ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷ ಸಭೆ

ಭಾರತದ ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಸಭೆಯು ನಿನ್ನೆಯದಿನ ಶ್ರಿ ನೆಹರೂರವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಅಮೆರಿಕಾ ಪಾಕೀಸ್ಥಾನ ಮಿಲಿಟರಿ ಒಪ್ಪಂದ, ಭಾರತ-ಸಿಂಹಳ ಒಪ್ಪಂದ, ಕುಂಭಮೇಳದ ದುರಂತ ಮುಂತಾದ ವಿಷಯಗಳ ಬಗ್ಗೆ ಶ್ರೀ ನೆಹರೂರವರು ಸಭೆಯಲ್ಲಿ ವಿವರಿಸಿತ್ತರೆಂದು ಹೇಳಲಾಗಿದೆ.

ತಿರುವಾಂಕೂರ್-ಕೊಚ್ಚಿ ಮಹಾಚುನಾವಣೆ

ತಿರುವಾಂಕೂರ್-ಕೊಚ್ಚಿಯಲ್ಲಿ ಎರಡನೇ ಬಾರಿ ಮಹಾ ಚುನಾವಣೆಯು ಈ ದಿನ ಪ್ರಾರಂಭವಾಯಿತು.

ಶಾಸನಸಭೆಯ ೧೧೭ ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದೆ. ಇದರಲ್ಲಿ ಕಾಂಗ್ರೆಸ್, ಪ್ರಜಾಸೋಷಲಿಸ್ಟ್, ಕಮ್ಯೂನಿಸ್ಟ್, ಕ್ರಾಂತಿಕಾರಕ ಸೋಷಲಿಸ್ಟ್, ತಿರುವಾಂಕೂರು ತಮಿಳುನಾಡು ಕಾಂಗ್ರೆಸ್ ಮತ್ತು ಸ್ವತಂತ್ರರು ಸ್ಪರ್ಧಿಸಿದ್ದಾರೆ.

ಗೋಧಿ ಬೆಲೆಯಲ್ಲಿ ಇಳಿತಾಯ

ಮೈದಾ, ಸೋಜಿ ಮುಂತಾದುವನ್ನು ತಯಾರಿಸಲು ಉಪಯೋಗಿಸುವ ಆಮದಾದ ಗೋಧಿಯ ಬೆಲೆಯನ್ನು ಮಣಕ್ಕೆ ಒಂದು ರೂಪಾಯಿನಂತೆ ಇಳಿಸಿರುವುದಾಗಿ ಕೇಂದ್ರ ಸರ್ಕಾರವು ಪ್ರಕಟಿಸಿದೆ. ಇನ್ನು ಮುಂದೆ ಈ ಇಳಿತಾಯವಾದ ಬೆಲೆಯು ಮಣ ಒಂದಕ್ಕೆ ೧೫ ರೂ

ಗೋವನ್ನರ ಮೆರವಣಿಗೆ

ಭಾರತದಲ್ಲಿರುವ ಪೋರ್ಚುಗೀಸ್ ಗೋವಾವು ಕೂಡಲೇ ಭಾರತದಲ್ಲಿ ಐಕ್ಯಗೊಳ್ಳಬೇಕೆಂಬುದನ್ನು ವ್ಯಕ್ತಪಡಿಸಲು ಬೊಂಬಾಯಿನಲ್ಲಿ ನಿನ್ನೆ ಗೋವನ್ನರ ಮೆರವಣಿಗೆ ಮತ್ತು ಬಹಿರಂಗ ಸಭೆ ನಡೆಯಿತು. ಇದರಲ್ಲಿ ಅನೇಕ ಭಾರತೀಯರು ಭಾಗವಹಿಸಿ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು.

ಅಂಧಗಾಯಕರಿಗೆ ರಾಷ್ಟ್ರಾಧ್ಯಕ್ಷರ ಆಹ್ವಾನ

ಬೊಂಬಾಯಿನಲ್ಲಿರುವ ಒಂದು ಅಂಧ ಕೈಗಾರಿಕಾ ಗೃಹದ ೩೦ ಮಂದಿ ಅಂಧಗಾಯಕರನ್ನು ರಾಷ್ಟ್ರಾಧ್ಯಕ್ಷರು ದೆಹಲಿಗೆ ಆಹ್ವಾನಿಸಿದ್ದಾರೆ. ಮಾರ್ಚಿ ೨ ನೇ ತಾರೀಖಿನಿಂದ ೧೫ ದಿನಗಳ ಕಾಲ ಇವರ ಸಂಗೀತ ಕಛೇರಿಗಳು ನಡೆಯಲಿವೆ.

ಅಮೆರಿಕಾಕ್ಕೆ ಈಜಿಪ್ಟಿನ ಎಚ್ಚರಿಕೆ

ಸೂಯೆಜ್ ಕಾಲುವೆ ವಿವಾದ ಪರಿಹಾರದಲ್ಲಿ ತಮಗೆ ಸೂಕ್ತ ನೆರವು ನೀಡದಿದ್ದರೆ ಅಥವಾ ತಮಗೆ ವಿರೋಧವಾಗಿ ವರ್ತಿಸಿದರೆ ಉಭಯ ದೇಶಗಳ ನಡುವೆ ಇರುವ ಎಲ್ಲಾ ಸಂಬಂಧವನ್ನು ತೊಡೆದುಹಾಕುವುದಾಗಿ ಅಮೆರಿಕಾಕ್ಕೆ ಈಜಿಪ್ಟ್ ಎಚ್ಚರಿಸಿರುವುದಾಗಿ ಹೇಳಲಾಗುತ್ತಿದೆ

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ

ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ.
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.

ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೬ ಸಂಚಿಕೆ ೧೪೦

೧೬-೨-೧೯೫೪ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತದ ಆರ್ಥಿಕ ಪರಿಸ್ಥಿತಿ ಉತ್ತಮಗೊಂಡಿದೆ

ಪಾರ್ಲಿಮೆಂಟ್‌ನಲ್ಲಿ ರಾಷ್ಟ್ರಾಧ್ಯಕ್ಷರ ಹೇಳಿಕೆ

ದೇಶದಲ್ಲಿ ಆರ್ಥಿಕ ಪರಿಸ್ಥಿತಿಯು ಇತ್ತೀಚೆಗೆ ಉತ್ತಮಗೊಳ್ಳುತ್ತಿದೆ. ಆಹಾರೋತ್ಪನ್ನವು ಹೆಚ್ಚುತ್ತಿದೆ. ಹಿಂದಿನ ಸಾಲಿಗಿಂತ ಈ ಸಾಲಿನಲ್ಲಿ ೫೦ ಲಕ್ಷ ಟನ್ ಹೆಚ್ಚು ಆಹಾರ ಬೆಳೆಯಲಾಗಿದೆ. ಕೈಗಾರಿಕೋತ್ಪತ್ತಿಯ ಮಟ್ಟವೂ ಉತ್ತಮವಾಗುತ್ತಿದೆ-ಎಂದು ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದ್‌ರವರು ನಿನ್ನೆಯದಿನ ಪಾರ್ಲಿಮೆಂಟಿನ ಉಭಯ ಸಭೆಗಳ ಸಂಯುಕ್ತ ಅಧಿವೇಶನದ ಆರಂಭ ಭಾಷಣದಲ್ಲಿ ತಿಳಿಸಿದ್ದಾರೆ.

ರಾಷ್ಟ್ರಾಧ್ಯಕ್ಷರು ತಮ್ಮ ಭಾಷಣದಲ್ಲಿ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಘಟನೆಗಳ ಬಗ್ಗೆ ಪ್ರಸ್ತಾಪ ಮಾಡಿದರು.

ವಿಶ್ವದ ನಾನಾಭಾಗಗಳಲ್ಲಿ ಶಾಂತಿ ಪ್ರಯತ್ನಗಳು ನಡೆಯುತ್ತಿವೆ. ಕೆಲವೆಡೆ ಮಾತ್ರ ಇನ್ನೂ ಯುದ್ಧ ಮತ್ತು ಶಸ್ತ್ರಾಸ್ತ್ರ ಹಂಬಲು ಮುಂದುವರಿಯುತ್ತಲೇ ಇವೆ. ವಿಶ್ವಶಾಂತಿ ಪ್ರಯತ್ನದಲ್ಲಿರುವ ಎಲ್ಲಾ ರಾಷ್ಟ್ರಗಳಿಗೆ ಜಯಲಭಿಸಲೆಂದು ಹಾರೈಸುತ್ತೇನೆ.

ಭಾರತವು ಸರ್ವದಾ ಶಾಂತಿ ಮಾರ್ಗವನ್ನೇ ಅನುಸರಿಸುತ್ತ ವಿಶ್ವದ ಎಲ್ಲಾ ರಾಷ್ಟ್ರಗಳ ಸ್ನೇಹವನ್ನು ಕೋರುತ್ತದೆ. ಅದಕ್ಕಾಗಿಯೇ ಶ್ರಮಿಸುತ್ತಲಿದೆ. ಕೊರಿಯಾದಲ್ಲಿ ಯುದ್ಧಕೈದಿಗಳ ವಾಪಸ್ಸಿಚಾರಕ ಕಾರ್ಯ ಮತ್ತು ತಟಸ್ಥ ಮಂಡಲಿಯಲ್ಲಿ ತನ್ನ ಕೆಲಸವನ್ನು ಭಾರತವು ನಿಷ್ಪಕ್ಷಪಾತವಾಗಿ ಮತ್ತು ದಕ್ಷತೆಯಿಂದ ನಿರ್ವಹಿಸಿರುವುದು ಸ್ತುತ್ಯಾರ್ಹವಾದುದು. ಕೊರಿಯಾಕ್ಕೆ ಸಂಬಂಧಪಟ್ಟ ಇನ್ನೂ ಹಲವಾರು ವಿಷಯಗಳು ತೀರ್ಮಾನವಾಗಿಲ್ಲ. ವಿಶ್ವಸಂಸ್ಥೆಯು ಇನ್ನೂ ಶಾಂತರೀತಿಯಿಂದ ತೀರ್ಮಾನಿಸುವುದೆಂದು ಆಶಿಸಲಾಗಿದೆ.

ಭಾರತವು ಸಿಂಹಳ ಮತ್ತು ಬರ್ಮಾಗಳ ನಡುವೆ ಸ್ನೇಹ ಪ್ರಯತ್ನ ಕಾರ್ಯಗಳ ಕಾರ್ಯವನ್ನು ಮುಂದುವರಿಸುತ್ತಲಿದೆ. ಸಿಂಹಳದಲ್ಲಿರುವ ಭಾರತೀಯರ ವಿಷಯದಲ್ಲಿ ಇತ್ತೀಚೆಗೆ ಒಪ್ಪಂದವುಂಟಾಗಿದೆ. ಇದು ಸ್ವಾಗತಾರ್ಹವಾದುದು.

ಕಳೆದ ವರ್ಷ ಭಾರತ ಮತ್ತು ಪಾಕೀಸ್ತಾನ ಪ್ರಧಾನಿಗಳ ನಡುವೆ ಮಾತುಕತೆಗಳು ನಡೆದು ಅನೇಕ ವಿಷಯದಲ್ಲಿ ಒಮ್ಮತವೇರ್ಪಟ್ಟಿತ್ತು. ಆದರೆ ಈಚಿನ ಹಲವಾರು ಪ್ರಕರಣಗಳಿಂದ ಹೆಚ್ಚಿನ ಪ್ರಗತಿಗೆ ಅಡಚಣೆಯುಂಟಾಗಿದೆ—ಎಂದು ರಾಷ್ಟ್ರಾಧ್ಯಕ್ಷರು ತಿಳಿಸಿದರು.

ಅನಂತರ ಅವರು ಪಂಚವಾರ್ಷಿಕ ಯೋಜನೆಯ ವಿಷಯವಾಗಿ ಮಾತನಾಡುತ್ತ ಈ ಅವಧಿಯಲ್ಲಿ ಗಮನಾರ್ಹವಾದ ಕೆಲಸಗಳು ಅನೇಕ ಕಡೆ ನಡೆದಿವೆ. ಇನ್ನೂ ನಡೆಯಬೇಕಾದುದು ಮಹತ್ತರವಾಗಿದೆ. ಜನರು ಈ ಕಾರ್ಯ ಸಾಧನೆಯಲ್ಲಿ ಅತ್ಯಂತ ಉತ್ಸಾಹಶಾಲಿಗಳಾಗಿರುವರು. ಜನತೆಯ ಬೆಂಬಲದಿಂದ ಇನ್ನೂ ಅನೇಕ ಕೆಲಸಗಳು ನಡೆಯುವುದರಲ್ಲಿ ಸಂದೇಹವಿಲ್ಲವೆಂದು ಹೇಳಿದರು.

ದೇಶದಲ್ಲಿ ರೈಲ್ವೆಮಾರ್ಗ, ವಿಮಾನ ಸಂಚಾರ ಮುಂತಾದುವುಗಳಲ್ಲಿ ಹೊಸ ಹೊಸ ಕ್ರಮಗಳನ್ನು ಏರ್ಪಡಿಸಲಾಗಿದೆ.

ಅಂತೆ ಕೈಗಾರಿಕಾ, ಕಾರ್ಮಿಕರ ವಸತಿ ನಿರ್ಮಾಣ, ಸ್ಥಳಾಂತರರಾದವರಿಗೆ ಮರುವಸತಿಕಾರ್ಯ ಇವುಗಳಲ್ಲಿ ವಿಶೇಷ ಪ್ರಗತಿಯನ್ನು ಸಾಧಿಸಲಾಗಿವೆ ಎಂದು ತಿಳಿಸಿದರು.

ರಾಷ್ಟ್ರಾಧ್ಯಕ್ಷರು ಸಭೆಯಲ್ಲಿ ಕುಂಭದುರಂತ ವಿಷಯವನ್ನು ಪ್ರಸ್ತಾಪಿಸಿ ಅದಕ್ಕೆ ತಮ್ಮ ವ್ಯಸನವನ್ನೂ ನೊಂದವರಿಗೆ ಸಹಾನುಭೂತಿಯನ್ನೂ ವ್ಯಕ್ತಪಡಿಸಿದರು. ಅವರು ಪಾರ್ಲಿಮೆಂಟಿನ ಮುಂದಿರುವ ಹಲವಾರು ಮಸೂದೆಗಳನ್ನು ಪ್ರಸ್ತಾಪಿಸಿ ಇನ್ನೂ ಕೆಲವು ಇತ್ಯರ್ಥವಾಗದ ಮಸೂದೆಗಳಿವೆ. ಅವುಗಳಲ್ಲಿ ಹಿಂದೂ ಕಾಯಿದೆ ಸುಧಾರಣೆಯು ಮುಖ್ಯವಾದುದು. ನ್ಯಾಯಸ್ಥಾನಗಳ ಕಾರ್ಯಗಳ ಬಗ್ಗೆ ಸುಧಾರಣೆಗಳನ್ನು ತರಲು ಸರ್ಕಾರವು ಕಾತುರವಾಗಿರುವುದಾಗಿಯೂ ತಿಳಿಸಿದರು.

ಆಂಧ್ರಪ್ರಾಂತ್ಯ ಸ್ಥಾಪನೆಯನ್ನು ರಾಷ್ಟ್ರಾಧ್ಯಕ್ಷರು ಸ್ವಾಗತಿಸುತ್ತಾ ದೇಶದಲ್ಲಿ ಗಡಿನಿರ್ಧಾರಣ ಕಾರ್ಯವನ್ನು ಮಾಡಲು ಸರ್ಕಾರವು ಈಗಾಗಲೇ ಸಮಿತಿಯನ್ನು ನೇಮಿಸಿದೆ. ಅದು ತನ್ನ ಕಾರ್ಯವನ್ನು ಮಾಡಲು ಜನತೆಯು ಎಲ್ಲಾ ಸಹಕಾರವನ್ನೂ ನೀಡಬೇಕೆಂದು ಅವರು ಕೋರಿದರು.

ವಿದೇಶಿ ಸ್ವಾಮ್ಯಗಳ ನಿರ್ಮೂಲದ ಸಮ್ಮೇಳನ

ಭಾರತದಲ್ಲಿರುವ ವಿದೇಶೀ ಸ್ವಾತ್ರ್ಯಗಳನ್ನು ತೊಡೆದು ಹಾಕುವ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಲು ಮುಂದಿನ ತಿಂಗಳು ಅಮೃತಸರದಲ್ಲಿ ಸಂಯುಕ್ತ ಸಂಘದ ಆಶ್ರಯದಲ್ಲಿ ಒಂದು ಸಮ್ಮೇಳನ ನಡೆಯಲಿದೆ.

ವೃತ್ತಪತ್ರಿಕೆಗಳ ಪಾತ್ರ

ಮೈಸೂರು ೧೬

ರಾಜಧಾನಿಯ ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ಸಂಘದ ಸದಸ್ಯರನ್ನುದ್ದೇಶಿಸಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ವಿ. ಸೀತಾರಾಮಯ್ಯನವರು ನಿನ್ನೆ ಸಂಜೆ ಭಾಷಣಮಾಡಿ, ದೇಶದಲ್ಲಿರುವ ವೃತ್ತಪತ್ರಿಕೆಗಳ ದರ್ಜೆಯ ಬಗ್ಗೆ ಟೀಕೆ ಮಾಡಿದರು. ಪತ್ರಿಕೆಗಳಲ್ಲಿ ಉತ್ತಮ ಸಾಹಿತ್ಯ, ವಿಚಾರ ಪ್ರಚೋದನಾ ಲೇಖನಗಳು ಇಡಬೇಕೆಂದು, ವಿಮರ್ಶೆಗಳು ನ್ಯಾಯವಾಗಿರಬೇಕೆಂದೂ, ಪತ್ರಿಕೆಗಳನ್ನು ಓದುವುದರಿಂದ ಜ್ಞಾನಾಭಿವೃದ್ಧಿ ಆಗಬೇಕೆಂದೂ ಅವರು ತಿಳಿಸಿದರು

ಅಧ್ಯಕ್ಷತೆವಹಿಸಿದ್ದ ಶ್ರೀ ಕೆ. ಪುಟ್ಟಸ್ವಾಮಿಯವರು ಮಾತನಾಡಿ, ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಪಾತ್ರವು ಮಹತ್ತರವಾಗಿದೆಯೆಂದೂ, ಪತ್ರಿಕೆಗಳು ಕಾನೂನು ಕಟ್ಟಲೆಗಳ ಹಿಡಿತದಲ್ಲಿದ್ದಂತೆ ಸ್ವಾತಂತ್ರ ವಾತಾವರಣದಲ್ಲಿ ಉತ್ತಮ ಸೇವೆಸಲ್ಲಿಸುವಂತಾಗಬೇಕೆಂದೂ ಹೇಳಿದರು.

ಶಾಸನ ಸಭಾ ಸದಸ್ಯರ ಮನೆಗಳನ್ನು ಸುತ್ತುಗಟ್ಟಲಾಗುವುದು

ಉಪಾಧ್ಯಾಯ ಮುಷ್ಕರಗಾರರ ನೂತನ ಕಾರ್ಯಕ್ರಮ

ಪಶ್ಚಿಮ ಬಂಗಾಳದ ಪ್ರಾಥಮಿಕ ಶಾಲಾ ಉಪಾಧ್ಯಾಯರ ಮುಷ್ಕರವು ಕಳೆದ ೫ ದಿನಗಳಿಂದ ಕಲ್ಕತ್ತೆಯಲ್ಲಿ ಶಾಂತರೀತಿಯಲ್ಲಿ ನಡೆಯುತ್ತಿದೆ. ಮುಷ್ಕರವನ್ನು ಮುಕ್ತಾಯ ಮಾಡಬೇಕೆಂಬ ಮುಖ್ಯಮಂತ್ರಿಗಳ ಮನವಿಯನ್ನು ನಿರಾಕರಿಸಿ, ಮುಷ್ಕರಗಾರರು ಶಾಸನಸಭೆಯ ಎಲ್ಲ ಕಾಂಗ್ರೆಸ್ ಸದಸ್ಯರ ಮನೆಗಳನ್ನು ಸುತ್ತುಗಟ್ಟಿ, ಅವರುಗಳು ಸಭೆಗೆ ಹೋಗದಂತೆ ತಡೆಹಾಕಲು ನಿರ್ಧರಿಸಿದ್ದಾರೆ. ಈ ಕಾರ್ಯಕ್ರಮದಿಂದ ಸರ್ಕಾರದವರು ಬಡ್ಜೆಟ್ಟನ್ನು ಸಭೆಯಮುಂದೆ ಇಡಲು ಸಾಧ್ಯವಿಲ್ಲದೆ ರಾಜ್ಯಾಂಗ ಬಿಕ್ಕಟ್ಟು ಉಂಟಾಗುವುದೆಂದು ಹೇಳಲಾಗಿದೆ.

ಸಂಗೀತದಮೂಲಕ ಹೆಚ್ಚು ಬೆಳೆ

ಅಣ್ಣಾಮಲೆ ವಿಶ್ವವಿದ್ಯಾನಿಲಯದಲ್ಲಿ ಸಸಿಗಳಮೇಲೆ ಸಂಗೀತದ ವ್ಯಾಪ್ತಿಯ ಬಗ್ಗೆ ಸಂಶೋಧನೆ ನಡೆಸಲಾಗುತ್ತಿದೆ. ಅದನ್ನು ವೀಕ್ಷಿಸಿದ ಕೇಂದ್ರ ಸಂಪರ್ಕ ಶಾಖಾ ಸಚಿವ ಶ್ರೀ ಜಗಜೀವನರಾಂರವರು ಈ ಸಂಶೋಧನೆಯು ಯಶಸ್ವಿಯಾದಲ್ಲಿ ಮುಂದೆ ಸಂಗೀತದ ಮೂಲಕ ಹೆಚ್ಚುಬೆಳೆ ಬೆಳೆಯಲು ಅನುಕೂಲವಾಗಬಹುದೆಂದು ತಿಳಿಸಿದ್ದಾರೆ.

ವಯಸ್ಕರ ಸಾಹಿತ್ಯ ಬರೆಹಗಾರರಿಗೆ ಪ್ರೋತ್ಸಾಹ ಅಗತ್ಯ

ಸಾಹಿತ್ಯ ಕಾರಖಾನೆ ಮುಕ್ತಾಯದ ಸಮಾರಂಭದಲ್ಲಿ

ಮೈಸೂರು ೧೬

ಕಳೆದ ಒಂದು ತಿಂಗಳಿನಿಂದ ರಾಜಧಾನಿಯಲ್ಲಿ ಕೇಂದ್ರ ಸರ್ಕಾರದಿಂದ ಏರ್ಪಡಿಸಲಾಗಿದ್ದ ವಯಸ್ಕರ ಸಾಹಿತ್ಯ ಬರೆಗಾರರ ಶಿಕ್ಷಣ ಸಾಹಿತ್ಯ ಕಾರಖಾನೆಯು ನಿನ್ನೆಗೆ ಮುಕ್ತಾಯವಾಯಿತು. ಕನ್ನಡ, ತಮಿಳು, ತೆಲುಗ, ಮಲಯಾಳ ಮತ್ತು ಮರಾಠಿ ಪ್ರದೇಶಗಳಿಂದ ೩೩ ಮಂದಿ ಶಿಕ್ಷಣ ಪಡೆದು ಸುಮಾರು ೧೪೩ ಕಾರ್ಡ್ ಫೋಲ್ಡರು ಮತ್ತು ಪುಸ್ತಕಗಳನ್ನು ತಯಾರಿಸಿದ್ದಾರೆ.

ಕೇಂದ್ರ ವಿದ್ಯಾಸಚಿವ ಶಾಖೆಯ ಜಂಟಿ ಕಾರ್ಯದರ್ಶಿ ಶ್ರೀ ಕೆ. ಜಿ. ಸೈಯದ್ದೀನ್‌ರವರು ಶಿಕ್ಷಣ ಪಡೆದವರಿಗೆ ಪ್ರಶಸ್ತಿ ಪತ್ರಿಕೆಗಳನ್ನು ಹಂಚಿ, ಅವರ ಕಾರ್ಯಗಳನ್ನು ಪ್ರಶಂಸಿದರು.

ಮಕ್ಕಳಿಗೆ ಅಥವ ಮುಂದುವರಿದ ವಿದ್ಯಾರ್ಥಿಗಳಿಗೆ ಬೇಕಾಗುವ ಸಾಹಿತ್ಯ ಬರೆಯುವಷ್ಟುವಯಸ್ಕರ ಸಾಹಿತ್ಯಾನುಬವವಲ್ಲ. ಯಾವ ಪುಸ್ತಕವಾದರೂ ವಯಸ್ಕನಿಗೆ ಉಪಯೋಗವಾಗುವುದೆಂಬ ಭಾವನೆ ಹೋಗಬೇಕು.

ಆತನು ಜೀವನದಲ್ಲಿ ಸುಖದುಃಖಗಳನ್ನು ಅನುಭವಿಸಿದವನು. ಆತನು ಸಂಸ್ಕೃತಿವಂತ ಎಂಬುದನ್ನು ಅರಿಯಬೇಕು.

ಆತನ ಆಸೆ ಆಕಾಂಕ್ಷೆಗಳ ಪರಸ್ಪರ ಸಂಬಂಧ ಹೊಂದಿದ ಮತ್ತು ಸಾಮಾನ್ಯ ಜೀವನದಲ್ಲಿ ಬೇಕಾಗುವಸಾಹಿತ್ಯಗಳನ್ನು ಬರೆಯಬೇಕಾದುದು ಈಗ ಅತ್ಯಗತ್ಯವಾಗಿದೆ. ಬಾಲ ವಿದ್ಯಾರ್ಥಿಗಳಿಗೆ ಬರೆದ ಪಠ್ಯಪುಸ್ತಕ ಆತನಿಗೆ ಸರಿಹೋಗದು ಅದಕ್ಕಾಗಿಯೇ ವಿದ್ಯಾ ಪ್ರಗತಿಯಾದ ಪರದೇಶಗಳಲ್ಲಿ ಉತ್ತಮ ಮತ್ತು ಸುಪ್ರಸಿದ್ಧ ಸಾಹಿತಿಗಳು ಈ ಕೆಲಸದಲ್ಲಿ ನಿರತರಾಗಿದ್ದಾರೆ. ಭಾರತದಲ್ಲೂ ಸಾಹಿತಿಗಳು ಮುಂದೆ ಬಂದು ಉತ್ತಮ ದರ್ಜೆಯ ಸಾಹಿತ್ಯವನ್ನು ಸಿದ್ಧಗೊಳಿಸಬೇಕು.

ಅದಕ್ಕಾಗಿ ಕೇಂದ್ರ ಸರ್ಕಾರದವರು ಪ್ರಕಾಶಕರಿಗೂ ಬರಹಗಾರರಿಗೂ ಹಣ ಸಹಾಯ ನೀಡಲು ಒಂದು ಯೋಜನೆ ಮಂಜೂರುಮಾಡಿದ್ದಾರೆ-ಎಂದು ಅವರು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಶ್ರೀ ಕೆ. ಟಿ. ಭಾಷ್ಯಂರವರು ಅಕ್ಷರ ಕಲಿತ ವಯಸ್ಕರಿಗೆ ಸರಿಯಾದ ಸಾಹಿತ್ಯವಿಲ್ಲದೆ ಅವರು ಪುನಃ ಅನಕ್ಷರಸ್ಥರಾಗುತ್ತಿರುವುದನ್ನು ತಡೆಯಲು ಇಂತಹ ಶಿಕ್ಷಣ ಕೇಂದ್ರವನ್ನು ಏರ್ಪಡಿಸಿರುವುದು ಸ್ತುತ್ಯಾರ್ಹವಾದುದೆಂದು ತಿಳಿಸಿದರು.

ಕಲ್ಕತ್ತಾದಲ್ಲಿ ೩೦೦ ಉಪಾಧ್ಯಾಯರ ದಸ್ತಗಿರಿ

ಇದರಲ್ಲಿ ೫೦ ಮಹಿಳೆಯರು ಇದ್ದಾರೆ

ಕಳೆದ ಗುರುವಾರದಿಂದ ಹೆಚ್ಚಿಗೆ ಸಂಬಳ ಬೇಡಿಕೆಗಾಗಿ ಕಲ್ಕತ್ತದ ಡಾಲ್‌ಹೌಸಿ ಚೌಕದಲ್ಲಿ ಕುಳಿತು ಮುಷ್ಕರ ಹೂಡುತ್ತಲಿದ್ದ ೩೦೦ ಉಪಾಧ್ಯಾಯರನ್ನು ಪೋಲೀಸಿನವರು ನಿನ್ನೆಯದಿನ ರಾತ್ರಿ ದಸ್ತಗಿರಿ ಮಾಡಿರುವುದಾಗಿ ತಿಳಿಯಬರುತ್ತದೆ. ಇವರಲ್ಲಿ ೫೦ ಮಹಿಳೆಯರು ಇರುವುದಾಗಿ ಗೊತ್ತಾಗಿದೆ.

ಪ್ರಜಾಸಭೆಯಲ್ಲಿ ವಿರೋಧ ಪಕ್ಷದ ಸಭಾತ್ಯಾಗ

ನಿನ್ನೆಯದಿನ ಕೇಂದ್ರ ಪ್ರಜಾಸಭೆಯಲ್ಲಿ ವಿರೋಧಪಕ್ಷದ ಸದಸ್ಯರು ಕುಂಭನಗರ ದುರಂತದ ಬಗ್ಗೆ ಅವಸರ ನಿಲುವಳಿ ಸೂಚನೆಗಳನ್ನು ಮಂಡಿಸಿದರು. ಸಭಾಧ್ಯಕ್ಷರು ಅವುಗಳನ್ನು ತಳ್ಳಿಹಾಕಿದರು ಅದನ್ನು ಪ್ರತಿಭಟಿಸಿ ಕಮ್ಯೂನಿಸ್ಟ್, ಹಿಂದೂಮಹಾಸಭಾ ಮತ್ತು ಇತರ ವಿರೋಧ ಪಕ್ಷದ ಸದಸ್ಯರುಗಳು ಸಭಾತ್ಯಾಗ ಮಾಡಿದರು.

ಈ ಸಾರಿ ಲೋಕಸಭೆಯ ಅಧಿವೇಶನವು ಸುಮಾರು ೩ ತಿಂಗಳ ಕಾಲ ನಡೆಯುತ್ತದೆ. ಇದೇ ೧೯ ನೇ ತಾರೀಖು ರೈಲ್ವೆ ಸಚಿವ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ರೈಲ್ವೆ ಬಡ್ಜೆಟ್ಟನ್ನು ಲೋಕಸಭೆಯಲ್ಲಿ ಮಂಡಿಸುವರು. ೨೭ ನೇ ತಾರೀಖು ಆರ್ಥಿಕ ಸಚಿವ ಶ್ರೀ ದೇಶಮುಖ್‌ರವರು ದೇಶದ ಬಡ್ಜೆಟ್ಟನ್ನು ಮಂಡಿಸುತ್ತಾರೆ. ಮುಂದಿನ ತಿಂಗಳು ಒಂದನೇ ತಾರೀಖಿನಿಂದ ಅವು ಚರ್ಚೆಗೆ ಬರುತ್ತವೆ.

ಖಾದಿಗೆ ಸರ್ಕಾರದ ಪ್ರೋತ್ಸಾಹ

ಖಾದಿಗೆ ಪ್ರೋತ್ಸಾಹಕೊಡುವ ಉದ್ದೇಶ್ಯದಿಂದ ಕೇಂದ್ರ ಸರ್ಕಾರವು ಸದ್ಯದಲ್ಲಿಯೇ ೩ ಲಕ್ಷ ರೂಪಾಯಿ ಬೆಲೆ ಬಾಳುವ ಖಾದಿಯನ್ನು ತಮ್ಮ ನೌಕರುಮಾನೇರುಗಳಿಗೆ ಕೊಡಲು ಕೊಳ್ಳಲಿದೆ.

ಕೇಂದ್ರ ಸರ್ಕಾರದ ಎಲ್ಲಾ ಶಾಖೆಗಳಲ್ಲಿಯೂ ಉಪಯೋಗಕ್ಕಾಗಿ ಬಟ್ಟೆಯನ್ನು ಕೊಳ್ಳುವಾಗ ಖಾದಿಯನ್ನೇ ಕೊಳ್ಳಬೇಕೆಂಬ ಸೂಚನೆಯನ್ನೂ ಕೊಡಲಾಗಿದೆ.

ಕಾಂಗ್ರೆಸ್ಸಿಗರಿಗೆ ಸೂಚನೆ

ಪಾರ್ಲಿಮೆಂಟಿನ ಕೆಲವು ಸದಸ್ಯರು ಏರ್ಪಡಿಸಿರುವ ವಿಶ್ವ ಪ್ರಜಾ ಪ್ರಭುತ್ವ ಶಾಂತಿ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸ್ಸಿಗರು ಭಾಗವಹಿಸಬಹುದೆಂದು ಎ. ಐ. ಸಿ. ಸಿ. ಕಾರ್ಯದರ್ಶಿಯವರು ಕಾಂಗ್ರೆಸ್ಸಿಗರಿಗೆ ಸೂಚನೆಯನ್ನಿತ್ತಿದ್ದಾರೆ.

ರಾಷ್ಟ್ರೀಯ ಸಂಗೀತ ಮಹೋತ್ಸವ

ಇದೇ ಮಾರ್ಚಿ ೨೭ ನೇ ತಾರೀಖಿನಿಂದ ೩೧ ರ ವರೆಗೆ ದೆಹಲಿಯಲ್ಲಿ ರಾಷ್ಟ್ರೀಯ ಸಂಗೀತ ಮಹೋತ್ಸವವು ನಡೆಯುತ್ತದೆ. ದೇಶದ ವಿವಿಧ ಭಾಗಗಳಿಂದ ಸುಮಾರು ೭೦ ಜನ ವಿದ್ವಾಂಸರು ಇದರಲ್ಲಿ ಭಾಗವಹಿಸುತ್ತಾರೆ. ಭಾರತ ಸರ್ಕಾರವು ರಚಿಸಿರುವ ಸಂಗೀತ ನಾಟಕ ಪ್ರೌಢಶಾಲೆಯ ಆಶ್ರಯದಲ್ಲಿ ನಡೆಯುತ್ತದೆ.

ಕೊನೆಯದಿನ ನಾಲ್ಕು ಕರ್ನಾಟಕ ಮತ್ತು ಹಿಂದೂಸ್ತಾನಿ ಸಂಗೀತ ವಿದ್ವಾಂಸರಿಗೆ ರಾಷ್ಟ್ರಾಧ್ಯಕ್ಷರು ಬಹುಮಾನವನ್ನು ಕೊಡುತ್ತಾರೆ.

ಈ ಸಮಾರಂಭಕ್ಕೆ ಎಲ್ಲಾ ಪ್ರಾಂತ್ಯ ಸರ್ಕಾರಗಳು ೨೫ ಜನ ವಿದ್ವಾಂಸರನ್ನು ಕಳುಹಿಸುತ್ತವೆ.

ಕರ್ನಾಟಕ ಸಂಗೀತದ ಪರವಾಗಿ ಶ್ರೀಗಳಾದ ಅರ್ಯಕುಡಿ ರಾಮಾನುಜ ಅಯ್ಯಂಗಾರ್, ಟಿ. ಚೌಡಯ್ಯ, ಪಾಲಘಾಟ್ ಮಣಿ, ರಾಜರತ್ನಂಪಿಳ್ಳೆಯವರುಗಳು ಇದರಲ್ಲಿ ಭಾಗವಹಿಸುತ್ತಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೫-೩-೧೯೫೪

ಸಲ್ಲ	ರೂ. ಆ	ರೂ. ಆ
ಕಡಲೇಕಾಯಿ	೩೦-೩	೩೮-೧೪
ಎಳ್ಳು	೬೦—	೭೦—
ಹರಳು	೩೫—	೨೪—೩
ಹುಚ್ಚೆಳ್ಳು	೨೭—೮	೪೧—೧೪
ಹೊಂಗೆಬೀಜ	೩೦-೩	೩೪—೩
ಹುಣಸೆಬೀಜ	೧೪—೩	—
ಹುರುಳಿ	೩೫-೩	೨೦—೧೩
ಹೆಸರು	೩೭—	೪೧—೧೪
ಅವರೆ	೩೮—	೨೫—
ಅಲಸಂದೆ	೩೮—	೨೭—
ಉದ್ದು	೫೩—	—
ಕೊತ್ತಂಬರಿ	೩೭—೧೩	೩೮—೪
ಕಡಲೆ	೪೪—೮	೪೭—
ತೊಗರಿ	೩೮—೮	೨೧—
ಹುಣಸೆಹಣ್ಣು	೪—೧೦	೯—೭
ಮೆಣಸಿನಕಾಯಿ	೨೧—	೨೪—೭
ಸೀಗೆಕಾಯಿ	೨—೭	೪—೮
ಬೆಲ್ಲ	೫—	—
ತೆಂಗಿನಕಾಯಿ	೧೮೩—	೩೩೮—

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಶಾಸನಸಭೆಯಲ್ಲಿ ಸದಸ್ಯರ ಕೂಗಾಟ--ಗಲಭೆ

ವಿರೋಧ ಪಕ್ಷದವರ ಸಭಾತ್ಯಾಗ

ನಿನ್ನೆಯದಿನ ಪಶ್ಚಿಮ ಬಂಗಾಳದ ಶಾಸನ ಸಭಾಧಿವೇಶನವು ಆರಂಭವಾಗಿ ಅಲ್ಲಿಯ ಗೌರ್ನರ್‌ರವರು ತಮ್ಮ ಭಾಷಣವನ್ನು ಪ್ರಾರಂಭಿಸುವಾಗ ವಿರೋಧ ಪಕ್ಷದವರು ಶಾಂತರೀತಿಯಿಂದ ಮುಷ್ಕರಹೂಡುತ್ತಿರುವ ಉಪಾಧ್ಯಾಯರ ಮೇಲೆ ಪೋಲೀಸ್ ವರ್ತನೆಯ ಬಗ್ಗೆ ನಿಲುವಳಿ ಸೂಚನೆಗಳನ್ನು ಮಂಡಿಸಿ ಗೌರ್ನರು ಭಾಷಣ ಮಾಡಲು ಅವಕಾಶ ಕಲ್ಪಿಸದೆ ಸುಮಾರು ೧೫ ನಿಮಿಷಕಾಲ ಕೂಗಾಟ ಮತ್ತು ಗಲಭೆ ನಡೆಸಿದರು.

ಗಲಭೆಯಾಗುತ್ತಿರುವಾಗಲೇ ಗೌರ್ನರ್‌ರವರು ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಅದನ್ನು ಪ್ರತಿಭಟಿಸಿ ವಿರೋಧ ಪಕ್ಷದವರೆಲ್ಲರೂ ಸಭಾತ್ಯಾಗ ಮಾಡಿದರು.

ಹಿರಿಯ ಶಾಸನಸಭೆಗೆ ಮರುಚುನಾವಣೆ

ಬೆಂಗಳೂರು ೧೭

ಇದೇ ಮೇ ೧೩ ನೇ ತಾರೀಖಿನಿಂದ ಹಿರಿಯ ಶಾಸನ ಸಭೆಯಲ್ಲಿ ಖಾಲಿಯಾಗುವ ೧೪ ಸ್ಥಾನಗಳ ಉಪಚುನಾವಣೆಯು ಮೇ ೭ ನೇ ತಾರೀಖು ನಡೆಸುವಂತೆ ಕೇಂದ್ರ ಚುನಾವಣಾ ಸಮಿತಿಯು ಆಜ್ಞೆಮಾಡಿದೆ.

ಬೊಂಬಾಯಿ ಸರ್ಕಾರಕ್ಕೆ ರಿಟ್ ಆಜ್ಞೆ

ಇಂಗ್ಲೀಷ್ ಮಾಧ್ಯಮವಿರುವ ಶಾಲೆಗಳಿಗೆ ಆಂಗ್ಲೋ ಇಂಡಿಯನ್ ಮತ್ತು ಏಶ್ಯೇತರ ವಿನಹ ಮತ್ಯಾರನ್ನು ಸೇರಿಸಕೂಡದೆಂದು ಬೊಂಬಾಯಿ ಸರ್ಕಾರವು ಮಾಡಿರುವ ಆಜ್ಞೆಯ ಮೇಲೆ ಅಲ್ಲಿಯ ಶ್ರೇಷ್ಠ ನ್ಯಾಯಾಲಯವು ಒಂದು ರಿಟ್ ಆಜ್ಞೆಯನ್ನು ಹೊರಡಿಸಿ ಅದನ್ನು ಜಾರಿಗೆ ತರಕೂಡದೆಂದೂ ಈರೀತಿ ಸರ್ಕಾರವು ಮಾಡಿರುವುದು ಕಾನೂನಿಗೆ ವಿರೋಧವಾಗಿಯೂ ರಾಜ್ಯಾಂಗವನ್ನು ಉಲ್ಲಂಘಿಸಿದಂತಾಗಿದೆಯೆಂದೂ ತೀರ್ಪಿತ್ತಿದೆ.

ಈ ವಿಷಯದಲ್ಲಿ ಪ್ರಮುಖ ರಾಜ್ಯಾಂಗ ವಿಷಯ ಅಡಕವಾಗಿರುವುದರಿಂದ ಬೊಂಬಾಯಿ ಸರ್ಕಾರವು ಈ ಆಜ್ಞೆಯ ಮೇಲೆ ಸರ್ವೋನ್ನತ ನ್ಯಾಯಾಲಯಕ್ಕೆ ಅಪೀಲು ಹೋಗಲಿದೆ.

ಸಕ್ಕರೆ ಆಮದು

ದೇಶದಲ್ಲಿ ಸಕ್ಕರೆಯು ಅವಶ್ಯಕತೆಯು ಹೆಚ್ಚಾಗಿರುವುದರಿಂದ ಕೇಂದ್ರವು ಕೂಡಲೇ ವಿದೇಶಗಳಿಂದ ಸಕ್ಕರೆ ಆಮದು ಮಾಡುವುದಾಗಿ ತಿಳಿಯ ಬರುತ್ತದೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ	ಡ್ರಾಯಿಂಗ್
31-3-1954	19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು
ಮತ್ತು
ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ
ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ.
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪಾಕೀಸ್ಥಾನಕ್ಕೆ ಬ್ರಿಟರ್ನಿಂದಲೂ ಮಿಲಿಟರಿ ನೆರವು

ಪಾಕೀಸ್ಥಾನಕ್ಕೆ ಅಮೆರಿಕಾವು ಟರ್ಕಿಯ ಮೂಲಕ ಮಿಲಿಟರಿ ನೆರವನ್ನು ಕೊಡುವ ವಿಷಯದಲ್ಲಿ ಈಗಾಗಲೇ ಹಲವಾರು ನಿರ್ಧಾರಗಳಾಗಿರುವುದಾಗಿ ಹೇಳಲಾಗುತ್ತಿದೆ. ಸಾಮಾನ್ಯವಾಗಿ ಪಾಕೀಸ್ಥಾನದಲ್ಲಿರುವ ಸೈನ್ಯವೆಲ್ಲವೂ ಬ್ರಿಟಿಷರಿಂದಲೇ ವ್ಯವಸ್ಥಿತವಾಗಿರುವುದರಿಂದ ಅಮೆರಿಕಾ ಮಿಲಿಟರಿ ನೆರವಿನ ವಿಷಯದಲ್ಲಿ ಲಂಡನ್, ಅಂಕಾರಾ ಮತ್ತು ಕರಾಚಿಗಳ ನಡುವೆ ವ್ಯವಹಾರ ನಡೆಸುತ್ತಿರುವುದಾಗಿ ತಿಳಿಯಬರುತ್ತದೆ.

ಈ ಮಿಲಿಟರಿ ನೆರವಿನ ವ್ಯವಹಾರದಲ್ಲಿ ಕೆಲವು ಶಸ್ತ್ರಾಸ್ತ್ರಗಳನ್ನು ಪಾಕೀಸ್ಥಾನಕ್ಕೆ ಬ್ರಿಟನ್ ಕಳುಹಿಸಿ ಅದಕ್ಕೆ ಸಂಬಂಧಪಟ್ಟ ವೆಚ್ಚವನ್ನೆಲ್ಲಾ ಅಮೆರಿಕಾ ಕೊಡುವುದೆಂದೂ ಹೇಳಲಾಗುತ್ತಿದೆ.

ಕುಂಭ ದುರಂತ ಬಗ್ಗೆ ಸಂತಾಪ

ನಿನ್ನೆಯದಿನ ಪಾರ್ಲಿಮೆಂಟಿನ ಉಭಯ ಸಭೆಗಳ ಸಂಯುಕ್ತ ಅಧಿವೇಶನವು ನಡೆದು ಅನಂತರ ಪ್ರತ್ಯೇಕವಾಗಿ ಅವು ಸೇರಿದಾಗ ಕುಂಭನಗರ ದುರಂತದ ಬಗ್ಗೆ ಸಭೆಗಳು ತಮ್ಮ ಸಂತಾಪವನ್ನು ವ್ಯಕ್ತಪಡಿಸಲು ೨ ನಿಮಿಷಕಾಲ ಮೌನವನ್ನು ಆಚರಿಸಿದವು.

ಅಶೋಕ ಶಾಸನ ಪತ್ತೆ

ಕರ್ನೂಲ್ ಜಿಲ್ಲೆಯ ಪತ್ತಿಕೊಂಡ ತಾಲ್ಲೂಕಿನ ರಾಜುಲುಮಂದಗಿರಿ ಎಂಬಲ್ಲಿರುವ ರಾಮಲಿಂಗೇಶ್ವರ ದೇವಸ್ಥಾನದ ಬಳಿ ಒಂದು ಬಂಡೆಯಲ್ಲಿ ಅಶೋಕ ಚಕ್ರವರ್ತಿಯ ಕಾಲದ ಶಾಸನವೊಂದು ದೊರೆತಿದೆ.

ಪೋಸ್ಟ್ ೫೭೪
ರಿಜಿಸ್ಟರ್
ನಂ. ಎಂ. ೩೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೪೧

೧೭-೩-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕಲ್ಕತ್ತಾ ನಗರದಲ್ಲಿ ಗಲಭೆ, ಘರ್ಷಣೆ ಮತ್ತು ಗೋಲಿಬಾರ್

೩ ಜನರ ಮರಣ; ಹಲವರಿಗೆ ಗಾಯ, ನಗರದಾದ್ಯಂತ ೧೪೪ ನೇ ಸೆಕ್ಷನ್ ಜಾರಿ

ಕಲ್ಕತ್ತಾದಲ್ಲಿ ನಡೆಯುತ್ತಿರುವ ಉಪಾಧ್ಯಾಯರ ಮುಷ್ಕರ ಸಂಬಂಧದಲ್ಲಿ ನಿನ್ನೆಯ ದಿನ ಕಲ್ಕತ್ತ ನಗರವು ಬಹಳ ಅಶಾಂತಿಯಿಂದ ಕೂಡಿತ್ತು ಎಲ್ಲಾ ಕಡೆಯಲ್ಲೂ ಗಲಭೆ, ಗಲಾಟೆ, ಸರ್ಕಾರಿ ವಾಹನ ಟ್ರಾಂವೇಗಳಿಗೆ ಬೆಂಕಿಹಚ್ಚುವುದು, ಸರ್ಕಾರಿ ಕಟ್ಟಡಗಳ ಮೇಲೆ ಧಾಳಿ ಮುಂತಾದುವು ವಿಶೇಷವಾಗಿ ನಡೆಯಿತು. ಪೋಲೀಸಿನವರು ಹಲವಾರು ಕಡೆ ಅಶ್ರುವಾಯುವನ್ನು ಉಪಯೋಗಿಸಿ ಗುಂಪುಗಳನ್ನು ಚದುರಿಸಲು ಯತ್ನಿಸಿದರು. ಕೊನೆಗೆ ಅವರು ಗೋಲಿಬಾರ್ ಸಹ ಮಾಡಬೇಕಾದ ಪ್ರಸಂಗ ಒದಗಿತು. ಈ ಸಂಬಂಧದಲ್ಲಿ ಸುಮಾರು ೭೦ ಜನರಿಗೆ ಗಾಯಗಳಾದುವು. ಅದರಲ್ಲಿ ಮೂವರು ಸತ್ತುಹೋದರು. ಪೋಲೀಸಿನವರು ಪರಿಸ್ಥಿತಿಯನ್ನು ಹತೋಟಿಗೆ ತರಲು ಸಾಧ್ಯವಾಗದ ಮಿಲಿಟರಿಯನ್ನು ಕರೆಯಬೇಕಾಯಿತು. ಗಲಭೆಗಾರರು ರಸ್ತೆ ಸಂಚಾರಕ್ಕೆ ಅನೇಕ ಅಡ್ಡಿ ಆತಂಕಗಳನ್ನು ಒಡ್ಡಿದ್ದರು. ಪೋಲೀಸ್ ಮತ್ತು ಮಿಲಿಟರಿಯವರ ಮೇಲೆ ಕಲ್ಲು, ಮುಂತಾದುವುಗಳ ಸುರಿ ಮಳೆ ನಡೆಯಿತು. ಇದರಿಂದ ಸುಮಾರು ೧೭ ಅಶ್ವಾರೋಹಿ ಪೋಲೀಸರಿಗೆ ೭ ಕುದುರೆಗಳಿಗೆ ತೀವ್ರ ಗಾಯಗಳಾದುವು. ಸರ್ಕಾರದ ೭ ಬಸ್ಸುಗಳು, ೭ ಟ್ರಾಂಗಳು ಅಗ್ನಿಗಾಹುತಿಯಾದುವು. ನಗರದಲ್ಲಿ ಈಗ ಸರ್ಕಾರಿ ಬಸ್ಸು ಮತ್ತು ಟ್ರಾಂಗಳ ಸಂಚಾರವನ್ನು ಮನ್ನಾ ಮಾಡಲಾಗಿದೆ. ಕಲ್ಕತ್ತ ನಗರ ಮತ್ತು ಸುತ್ತ ಮುತ್ತಲ ಉಪನಗರಗಳಲ್ಲಿ ೧೪೪ ನೇ ವಿಧಿಯ ಪ್ರಕಾರ ಪ್ರತಿಬಂಧಕಾಜ್ಞೆಯನ್ನು ವಿಧಿಸಲಾಗಿದೆ. ಪ್ರಮುಖ ಸ್ಥಳಗಳಲ್ಲೆಲ್ಲಾ ಪೋಲೀಸ್ ಮತ್ತು ಮಿಲಿಟರಿ ಗಸ್ತು ಮತ್ತು ಕಾವಲು ಹಾಕಲಾಗಿದೆ.

ಕಾರ್ಪೊರೇಷನ್ ಕಛೇರಿ, ಕಾಂಗ್ರೆಸ್ ಭವನ ಇವುಗಳ ಮೇಲೆ ನಡೆದ ಧಾಳಿ ಪರಿಣಾಮವಾಗಿ ಕಟ್ಟಡ ಮತ್ತು ಕಾಗದ ಪತ್ರಗಳು, ಮರ ಮುಟ್ಟುಗಳಿಗೆ ನಷ್ಟ ಸಂಭವಿಸಿದೆ.

ಪ್ರಜಾ ಸೋಷಲಿಸ್ಟ್ ಪಕ್ಷದ ಅಧ್ಯಕ್ಷ ಡಾ॥ ಸುರೇಶಬಾನರ್ಜಿ ಮತ್ತು ಪಶ್ಚಿಮ ಬಂಗಾಳ ಶಾಸನ ಸಭೆಯ ೭ ಸದಸ್ಯರ ದಸ್ತಗಿರಿಯಾಗಿದೆ. ಇಲ್ಲಿಯವರೆಗೆ ಈ ಸಂಬಂಧದಲ್ಲಿ ಸುಮಾರು ೫೦ ಜನರು ಬಂಧಿತರಾಗಿದ್ದಾರೆ. ಇವರಲ್ಲದೆ ಸುಮಾರು ೩೫೦ ಉಪಾಧ್ಯಾಯರು ಸಹ ಬಂಧನದಲ್ಲಿರುವರು

ಮಧ್ಯರಾತ್ರಿಯವೇಳೆಗೆ ಪರಿಸ್ಥಿತಿಯು ಉತ್ತಮಗೊಂಡಿರುವುದಾಗಿ ಹೇಳಲಾಗಿದೆ. ಶಾಸನ ಸಭಾಭವನದ ಬಳಿ ಮೆರವಣಿಗೆ, ಸಭೆ ಮುಂತಾದುವನ್ನು ನಡೆಸಕೂಡದೆಂದು ವಿಧಿಸಿದ್ದ ನಿಷೇಧಾಜ್ಞೆಯನ್ನು ಮುರಿಯಲು ಸುಮಾರು ೭೦೦೦ ಜನರು ಅಲ್ಲಿಗೆ ಧಾವಿಸಿದರು. ಅದನ್ನು ತಡೆಗಟ್ಟಲು ಪೋಲೀಸಿನವರು ಅಶ್ರುವಾಯು ಮತ್ತು ಲಾಠಿ ಪ್ರಹಾರ ನಡೆಸಿದರು ಗುಂಪು ಆ ಸ್ಥಳವನ್ನು ಬಿಟ್ಟು ಹತ್ತಿರದ ಮೈದಾನದಲ್ಲಿ ಸೇರಿತು. ಈ ಗಲಭೆಯು ಅನಂತರ ನಗರದ ನಾನಾ ಭಾಗಗಳಿಗೆ ಹರಡಿತು.

ವಿಶೇಷಾಜ್ಞೆಗಳ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆ

ಸಭೆಗೆ ಅಗೌರವೆಂದು ಸದಸ್ಯರ ಟೀಕೆ

ಪಾರ್ಲಿಮೆಂಟಿನ ಅಧಿವೇಶನ ಇಲ್ಲದಿರುವಾಗ ಸರ್ಕಾರವು ವಿಶೇಷಾಜ್ಞೆಗಳನ್ನು ಮಾಡುವ ವಿಷಯದಲ್ಲಿ ನಿನ್ನೆಯ ದಿನ ಪಾರ್ಲಿಮೆಂಟಿನಲ್ಲಿ ೨ ಗಂಟೆಗಳ ಕಾಲ ಚರ್ಚೆಯು ನಡೆಯಿತು. ಲೋಕಸಭಾ ಸದಸ್ಯರಾದ ಡಾ॥ ಕೃಷ್ಣಸ್ವಾಮಿ ಮತ್ತು ಡಾ॥ ಲಂಕಾಸುಂದರಂರವರು ಈ ವಿಷಯದಲ್ಲಿ ಚರ್ಚೆ ಪ್ರಾರಂಭಿಸುತ್ತಾ ಸರ್ಕಾರವು ಈ ರೀತಿಯ ಆಜ್ಞೆಗಳನ್ನು ಮಾಡುವುದು ಪಾರ್ಲಿಮೆಂಟಿಗೆ ಅಗೌರವ ಮತ್ತು ರಾಜ್ಯಾಂಗವನ್ನು ಉಲ್ಲಂಘಿಸಿದಂತಾಗುತ್ತದೆಯೆಂದು ಟೀಕಿಸಿದರು. ಸಭಾಧ್ಯಕ್ಷರು ಈ ವಿಷಯದಲ್ಲಿ ಮಾತನಾಡುತ್ತಾ ಈ ಪ್ರಶ್ನೆಯು ಸಾಮಾನ್ಯವಾದುದಲ್ಲ. ಪಕ್ಷದ ದೃಷ್ಟಿಯಿಂದ ಇದನ್ನು ಪರಿಗಣಿಸಬಾರದು. ಪ್ರಜಾಪ್ರಭುತ್ವ ಸಂಪ್ರದಾಯಗಳ ದೃಷ್ಟಿಯಿಂದ ನೋಡಬೇಕೆಂದು ತಿಳಿಸಿದರು.

ಕುಂಭಮೇಳದ ಸಮಯದಲ್ಲಿ ಸರ್ಕಾರವು ಸುಂಕ ವಸೂಲಿಗಾಗಿ ವಿಶೇಷಾಜ್ಞೆಯನ್ನು ಹೊರಡಿಸಿದುವನ್ನು ಹಲವು ಸದಸ್ಯರು ಟೀಕಿಸಿ ಪಾರ್ಲಿಮೆಂಟಿನ ಅಧಿಕಾರವನ್ನು ಸರ್ಕಾರವು ಕಿತ್ತುಕೊಳ್ಳಬಾರದೆಂದರು.

ಕೇಂದ್ರ ಹಣಕಾಸಿನ ಸಚಿವ ಶ್ರೀ ದೇಶಮುಖ್ ಮತ್ತು ಗೃಹಸಚಿವ ಡಾ॥ ಕಟ್ಜುರವರು ಇದಕ್ಕೆ ಉತ್ತರವೀಯುತ್ತಾ ರಾಜ್ಯಾಂಗ ಚೌಕಟ್ಟಿನಲ್ಲಿ ತನ್ನ ಅಧಿಕಾರ ಪರಿಮಿತಿಯನ್ನು ಮೀರದೆ, ಸೂಕ್ಷ್ಮವಾಗಿ ವಿಚಾರವಿನಿಮಯ ನಡೆಸಿ ಇಂತಹ ಆಜ್ಞೆಗಳನ್ನು ಮಾಡಲಾಗಿದೆಯೆಂದು ತಿಳಿಸಿದರು.

ಅರಿಶಿನಪುಡಿ ಸಂಶೋಧನೆ

ದುಗ್ಗಿರಾಲಾದಲ್ಲಿ ಅರಿಶಿನ ಪುಡಿಯ ಬಗ್ಗೆ ಸಂಶೋಧನೆ ನಡೆಸಲು ಒಂದು ಕೇಂದ್ರವನ್ನು ತೆರೆಯಲು ಆಂಧ್ರ ಸರ್ಕಾರ ನಿರ್ಧರಿಸಿದೆ.

ಭಾರತ ಸೈನ್ಯಕ್ಕೆ ಸುಸ್ವಾಗತ

ಕೊರಿಯದಲ್ಲಿ ಕಳೆದ ೫ ತಿಂಗಳುಗಳಿಂದ ಮೇಲ್ವಿಚಾರಕ ಸೈನ್ಯವಾಗಿ ಹೋಗಿದ್ದ ಭಾರತ ಪಡೆಯ ಮೊದಲನೆಯ ತಂಡವು ಇದೇ ೩೧ ನೇ ತಾರೀಖು ಮದರಾಸಿಗೆ ವಾಪಸ್ಸು ಬರುತ್ತದೆ.

ಕೇಂದ್ರ ರಕ್ಷಣಾ ಉಪಸಚಿವ ಶ್ರೀ ಸತೀಶ್‌ಚಂದ್ರರವರು ಪ್ರಧಾನಿಯವರ ಸಂದೇಶದೊಂದಿಗೆ ಮದ್ರಾಸಿಗೆ ಆಗಮಿಸಿ ಈ ತಂಡವನ್ನು ಸ್ವಾಗತಿಸುವರು.

ನಿರ್ಬಂಧ ರದ್ದು

ಗಡಿನಾಡು ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್‌ರವರ ಮೇಲೆ ಪಾಕೀಸ್ತಾನ ಸರ್ಕಾರವು ವಿಧಿಸಿದ್ದ ಚಲನವಲನಗಳಿಗೆ ಸಂಬಂಧಪಟ್ಟ ಕೆಲವು ನಿರ್ಬಂಧಗಳನ್ನು ರದ್ದುಗೊಳಿಸುವುದಾಗಿ ಪಾಕ್ ಪ್ರಧಾನಿ ತಿಳಿಸಿದ್ದಾರೆ. ಈಗ ಅವರನ್ನು ಯಾರು ಬೇಕಾದರೂ ಅನಿರ್ಬಂಧವಾಗಿ ಭೇಟಿ ಮಾಡಬಹುದಾಗಿದೆ.

ಸಕ್ಕರೆ ಆಮದು

ಇದೇ ಏಪ್ರೆಲ್ ಮಾಹೆಯಿಂದ ಮುಂದಿನ ಸಾಲಿನ ಮಾರ್ಚಿಯವರೆಗೆ ಕೇಂದ್ರ ಸರ್ಕಾರವು ೫ ಲಕ್ಷ ಟನ್ ಸಕ್ಕರೆಯನ್ನು ಆಮದು ಮಾಡಿಕೊಳ್ಳಲು ನಿರ್ಧರಿಸಿರುವುದಾಗಿ ತಿಳಿಯ ಬರುತ್ತದೆ. ಕಬ್ಬಿನ ಬೆಳೆಯಲ್ಲಿ ಇಳಿತಾಯವಾಗಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಪುರಾತನಕಾಲದ ನಾಣ್ಯಗಳ ಪತ್ತೆ

ಕ್ರಿಸ್ತಪೂರ್ವಕ್ಕೆ ೧೦೦೦ ವರ್ಷಗಳ ಹಿಂದಿನ ಚರಿತ್ರೆಯನ್ನು ಬರೆಯಲು ಅನುಕೂಲವಾಗುವಂತಹ ಮೌರ್ಯರ ಕಾಲಕ್ಕಿಂತಲೂ ಹಿಂದಿನ ಹಲವು ಪುರಾತನ ನಾಣ್ಯಗಳು, ಚಿನ್ನದ ವಿಗ್ರಹಗಳು ಮುಂತಾದುವು ಬೊಂಬಾಯಿಗೆ ೫೦ ಮೈಲಿಮೂರದಲ್ಲಿ ವಜ್ರೇಶ್ವರಿ ಎಂಬಲ್ಲಿ ದೊರೆತಿವೆ.

ಹಿರಿಯ ಶಾಸನ ಸಭೆಗಳ ಭವಿಷ್ಯ

ಪ್ರಾಂತ್ಯಗಳಲ್ಲಿ ಹಿರಿಯ ಶಾಸನ ಸಭೆಗಳು ಮುಂದುವರಿಯುವ ವಿಷಯವನ್ನು ೧೯೫೭ ರಲ್ಲಿ ನಡೆಯುವ ಮಹಾ ಚುನಾವಣೆಗಳೊಳಗಾಗಿ ಇತ್ಯರ್ಥಗೊಳಿಸಲಾಗುವುದೆಂದು ತಿಳಿಯಬರುತ್ತದೆ.

ಭೂಮಿ ಗುಡುಗಿತು

ಮೊನ್ನೆ ರಾತ್ರಿ ಒಂದು ಗಂಟೆ ಸಮಯದಲ್ಲಿ ದೆಹಲಿಯಲ್ಲಿ ೩ ಸೆಕೆಂಡುಗಳಕಾಲ ಭೂಮಿಯು ಗುಡುಗಿತು. ಅಂತಹ ತೊಂದರೆ ಅಥವಾ ನಷ್ಟವೇನೂ ಸಂಭವಿಸಲಿಲ್ಲ.

ರಷ್ಯನ್-ಹಿಂದಿ ನಿಘಂಟು

ಮಾಸ್ಕೋದಲ್ಲಿ ರಷ್ಯನ್-ಹಿಂದಿ ನಿಘಂಟುವೊಂದನ್ನು ತಯಾರಿಸಲಾಗಿದೆಯೆಂದೂ, ಅದರಲ್ಲಿ ೪೪ ಸಾವಿರ ಪದಗಳು ಇವೆಯೆಂದೂ ವರದಿಯಾಗಿದೆ.

ಚರ್ಚಿಲರಿಗೆ ನೋಬಲ್ ಪಾರಿತೋಷಕ

ಬ್ರಿಟನ್ನಿನ ಪ್ರಧಾನಿ ಸರ್ ಚರ್ಚಿಲರಿಗೆ ಶಾಂತಿ ಪಾಲನೆಗಾಗಿ ಈ ವರ್ಷ ನೋಬಲ್ ಪಾರಿತೋಷಕವನ್ನು ಕೊಡಬಹುದೆಂದು ಹೇಳಲಾಗಿದೆ.

ಅಶ್ಲೀಲ ಜಾಹೀರಾತು ನಿರೋಧ ಮಸೂದೆ

ಅಶ್ಲೀಲ ಜಾಹಿರಾತು ಸುಳ್ಳು ಔಷಧಿಗಳ ಮೂಲಕ ಮತ್ತು ಯಂತ್ರ ಮಂತ್ರ ಯಕ್ಷಿಣಿಗಳ ಮೂಲಕ ರೋಗಗಳನ್ನು ನಾಶಿ ಮಾಡುವುದಾಗಿ ಕೊಡುವ ಜಾಹಿರಾತು ಮುಂತಾದುವನ್ನು ನಿಷೇಧಿಸುವ ಮಸೂದೆಯನ್ನು ರಾಜ್ಯ ಪರಿಷತ್ತು ಅಂಗೀಕರಿಸಿದೆ.

ಇನಾಂ ರದ್ದಿನ ಬಗ್ಗೆ ಪ್ರತಿಭಟನೆ

ಮತೀಯ ಇನಾಮುಗಳ ರದ್ದು ಮಾಡಲು ಮೈಸೂರು ಸರ್ಕಾರವು ತರಲಿರುವ ಮಸೂದೆಯ ಬಗ್ಗೆ ಬೊಂಬಾಯಿನಲ್ಲಿರುವ ಕನ್ನಡಿಗರು ಸಭೆನಡೆಸಿ ತಮ್ಮ ಪ್ರತಿಭಟನೆ ವ್ಯಕ್ತಪಡಿಸಿದ್ದಾರೆ.

ಅಮೆರಿಕಾ-ಪಾಕ್ ರಕ್ಷಣಾ ಒಪ್ಪಂದ ಬೇಡ

ಅಮೆರಿಕಾದೊಡನೆ ರಕ್ಷಣಾ ಅಥವಾ ಮಿಲಿಟರಿ ಒಪ್ಪಂದವು ಬೇಡವೆಂದು ಕೈರೊ ಪತ್ರಿಕೆಯೊಂದು ಪಾಕೀಸ್ತಾನಕ್ಕೆ ಒತ್ತಾಯ ಪಡಿಸಿದೆ.

★ ಮೈಸೂರು ಹತ್ತಿ ನೂಲು ಶಾಸನವನ್ನು ಬಳ್ಳಾರಿ ಜಿಲ್ಲೆಗೂ ಅನ್ವಯಿಸಿ ಸರ್ಕಾರವು ಆಜ್ಞೆ ಹೊರಡಿಸಿದೆ.

ಬಟ್ಟೆ ವ್ಯಾಪಾರಿಗಳ ಲೈಸೆನ್ಸ್ ಶುಲ್ಕದಲ್ಲಿ ಇಳಿತಾಯ

ಬೆಂಗಳೂರು ೧೭

ಬಟ್ಟೆ ಮತ್ತು ನೂಲು ಬಟ್ಟೆ ವ್ಯಾಪಾರಿಗಳ ಲೈಸೆನ್ಸ್ ಶುಲ್ಕವನ್ನು ವರ್ಷಕ್ಕೆ ೧೦೦ ರೂಗಳಿಂದ ೫೦ ರೂ, ಚಿಲ್ಲರೆ ವ್ಯಾಪಾರಿಗಳ ಶುಲ್ಕದ ದರವನ್ನು ೧೫ ರೂಗಳಿಂದ ೧೦ ರೂಗಳಿಗೆ ಇಳಿಸಿ ಸರ್ಕಾರವು ಒಂದು ಪ್ರಕಟಣೆಯನ್ನಿತ್ತಿದೆ.

ಪಾನನಿರೋಧ ಬಗ್ಗೆ ಸಮಿತಿಯ ವರದಿ

ಆಂಧ್ರದಲ್ಲಿ ಪಾನನಿರೋಧದ ಬಗ್ಗೆ ಸರ್ಕಾರಕ್ಕೆ ಸಲಹೆಯನ್ನು ನೀಡಲು ರಚಿತವಾಗಿದ್ದ ರಾಮಮೂರ್ತಿ ಸಮಿತಿಯು ತನ್ನ ವರದಿಯನ್ನು ಈದಿನ ಸರ್ಕಾರಕ್ಕೆ ಒಪ್ಪಿಸುವುದಾಗಿ ತಿಳಿಯಬರುತ್ತದೆ.

ಈ ಸಂದರ್ಭದಲ್ಲಿ ಅಲ್ಲಿಯ ಉಪಮುಖ್ಯಮಂತ್ರಿ ಶ್ರೀ ಎನ್. ಸಂಜೀವರೆಡ್ಡಿಯವರು ಮಾತನಾಡುತ್ತಾ ಪಾನನಿರೋಧದ ಬಗ್ಗೆ ಈ ಸಮಿತಿಯು ಏನೇ ವರದಿಕೊಡಲಿ, ಪಾನನಿರೋಧವನ್ನು ಮುಂದುವರಿಸಿಕೊಂಡು ಬರಲು ತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸುವುದಾಗಿ ಹೇಳಿದ್ದಾರೆ.

ಸದಸ್ಯರಿಗೆ ಶಾಸನ ಸಭೆಯಲ್ಲಿಯೇ ವಸತಿ ಸೌಕರ್ಯ

ಪಶ್ಚಿಮ ಬಂಗಾಳದ ಶಾಸನಸಭೆಯಲ್ಲಿರುವ ಕಮ್ಯೂನಿಸ್ಟ್ ಸದಸ್ಯ ಶ್ರೀ ಜ್ಯೋತಿ ಬಾಸು ರವರನ್ನು ಅಲ್ಲಿಯ ಪೊಲೀಸ್ ಕಮೀಷನರ್ ಹೊರಡಿಸುವ ಆಜ್ಞೆ ಪ್ರಕಾರ ದಸ್ತಗಿರಿಯಾಗುವುದನ್ನು ತಪ್ಪಿಸಲು ಪಶ್ಚಿಮ ಬಂಗಾಳದ ಶಾಸನ ಸಭೆಯು ಬಡ್ಜೆಟ್ ಅಧಿವೇಶನವು ಮುಗಿಯುವವರೆಗೆ ಶ್ರೀ ಬಾಸುರವರು ಶಾಸನ ಸಭಾಭವನದಲ್ಲಿಯೇ ವಾಸವಾಗಿರುವಂತೆ ಸಭಾಧ್ಯಕ್ಷರು ಅನುಮತಿ ನೀಡಿದ್ದಾರೆ.

ಉಪಾಧ್ಯಾಯರ ಮುಷ್ಕರ ಸಂಬಂಧದಲ್ಲಿ ಶ್ರೀ ಬಾಸುರವರ ದಸ್ತಗಿರಿ ಆಜ್ಞೆ ಹೊರಟಿತ್ತು.

ಪ್ರಾಂತ್ಯ ಸರ್ಕಾರಗಳಿಗೆ ಆದೇಶ

ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಬೇಕಾಗಿರುವ ನೀರಾವರಿ ಮತ್ತು ವಿದ್ಯುತ್ ಯೋಜನೆಗಳ ಬಗ್ಗೆ ವಿವರಗಳನ್ನು ಕೇಂದ್ರಸರ್ಕಾರಕ್ಕೆ ಕಳುಹಿಸಬೇಕೆಂದು ಎಲ್ಲಾ ಪ್ರಾಂತ್ಯಗಳಿಗೂ ಆದೇಶ ಕೊಡಲಾಗಿದೆ. ಈ ವಿಚಾರವನ್ನು ಪ್ರತ್ಯೇಕವಾಗಿ ರಚಿಸವಾಗುವ ವಿಶೇಷ ಸಮಿತಿಯೊಂದು ಪರಿಶೀಲಿಸುತ್ತದೆ

ಅಕ್ಕಿ ಪಡಿತರ ರದ್ದು

ಪಂಜಾಬ್ ಪ್ರಾಂತ್ಯದಾದ್ಯಂತ ಅಕ್ಕಿ ಪಡಿತರ ಮತ್ತು ಸಾಗಣಿಕೆ ಬಗ್ಗೆ ಇದ್ದ ಎಲ್ಲಾ ಪ್ರತಿಬಂಧಕಾಜ್ಞೆಗಳನ್ನು ರದ್ದುಗೊಳಿಸಲಾಗಿದೆ.

ಸಂಸ್ಥಾನದ ಮುಖ್ಯಪಟ್ಟಣಗಳಲ್ಲಿ ವಿಮಾನ ವಿಹಾರ ವ್ಯವಸ್ಥೆ

ಮೈಸೂರು ೧೭

ಸಂಸ್ಥಾನದ ಜನರಲ್ಲಿ ವಿಮಾನಯಾನ ಬಳಕೆಯಾಗಲೆಂದು ಕೆಲವು ಮುಖ್ಯ ಪಟ್ಟಣಗಳಲ್ಲಿ ವಿಮಾನ ವಿಹಾರ ವ್ಯವಸ್ಥೆಯನ್ನು ವಿಮಾನಯಾನ ಶಿಕ್ಷಣಶಾಲೆಯವರು ಏರ್ಪಡಿಸಲಿದ್ದಾರೆ. ಇದಕ್ಕಾಗಿ ಹಾಸನ, ಶಿವಮೊಗ್ಗ, ಭದ್ರಾವತಿ, ಸಾಗರ, ಕೋಲಾರ, ಮತ್ತು ದಾವಣಗೆರೆಗಳಲ್ಲಿ ವಿಮಾನ ನಿಲ್ದಾಣಗಳನ್ನು ರಚಿಸಲಾಗುವುದೆಂದೂ ತಿಳಿದುಬಂದಿದೆ.

ಪಶ್ಚಿಮ ಬಂಗಾಳ ಉಪಾಧ್ಯಾಯರಿಗೆ ಹೆಚ್ಚಿನ ತುಟ್ಟಿ ಭತ್ಯ

ಸರ್ಕಾರಿ ಆಡಳಿತದಲ್ಲಿರುವ ಎಲ್ಲಾ ಸೆಕೆಂಡರಿಶಾಲೆಗಳ ಉಪಾಧ್ಯಾಯರಿಗೆ ಪಶ್ಚಿಮ ಬಂಗಾಳ ಸರ್ಕಾರವು ೧೦ ರೂಪಾಯಿಗಳಿಂದ ೧೭½ ರೂಪಾಯಿಗಳಿಗೆ ಹೆಚ್ಚಿಸಿರುವುದಾಗಿ ಅಲ್ಲಿಯ ಮುಖ್ಯ ಮಂತ್ರಿ ಡಾ|| ಬಿ. ಸಿ ರಾಯ್‌ರವರು ಪ್ರಕಟಿಸಿದ್ದಾರೆ. ಈ ಶಾಲೆಗಳ ಆಡಳಿತವರ್ಗದವರು ಸಹ ಈ ತುಟ್ಟಿಭತ್ಯ ಮೊಬಲಗನ್ನು ೧೭½ ರೂಗಳಿಗೆ ಹೆಚ್ಚಿಸಿ ಅವರಿಗೆ ಪ್ರತಿಮಾಹೆ ೩೫ ರೂಗಳ ತುಟ್ಟಿಭತ್ಯವನ್ನು ಕೊಡಬೇಕೆಂದು ಸೂಚಿಸಲಾಗಿದೆ.

ತಮ್ಮ ತುಟ್ಟಿ ಭತ್ಯವನ್ನು ೩೫ ರೂಗಳಿಗೆ ಹೆಚ್ಚಿಸಬೇಕೆಂದು ಪಶ್ಚಿಮ ಬಂಗಾಳದಲ್ಲಿ ಈಗ ಉಪಾಧ್ಯಾಯರು ಮುಷ್ಕರವನ್ನು ನಡೆಸುತ್ತಲಿರುವರು.

-ಮೈಸೂರು ಪೇಟೆಧಾರಣೆ-

ತಾರೀಖು, ೧೬—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೧೨	೨೫—೮
ಎಳ್ಳು	೫೮—೮	೬೫—೬
ಹರಳು	೨೭—	೩೨—
ಹುಚ್ಚೆಳ್ಳು	೩೦—	೪೧—೬
ಹೊಂಗೆಬೀಜ	೨೩—೧೨	೨೩—೧೪
ಹುಣಸೆಬೀಜ	೧೩—	೧೩—೨
ಹುರುಳಿ	೨೫—	೩೦—೮
ಹೆಸರು	೩೭—೨	೪೨—
ಅವರೆ	೨೫ ೧೪	೩೩—೧೪
ಅಲಸಂದೆ	೩೨—	೪೬—೨
ಉದ್ದು	—	—
ಕೊತ್ತಂಬರಿ	೩೦—	೩೧—೮
ಕಡಲೆ	೫೧—೨	—
ತೊಗರಿ	೨೨—೪	೨೫—೧೦
ಹುಣಸೆಹಣ್ಣು	೪—೬	೯—೧೪
ಮೆಣಸಿನಕಾಯಿ	೧೮—	೨೯—
ಸೀಗೆಕಾಯಿ	೩—೪	೪—೭
ಬೆಲ್ಲ	—	—
ತೆಂಗಿನಕಾಯಿ	೧೪೦—	೨೯೫—

ನೂತನ ಉಕ್ಕಿನ ಕಾರ್ಖಾನೆ

ಜರ್ಮನ್ ಕಂಪೆನಿಯೊಂದರ ಸಹಕಾರದಿಂದ ಭಾರತದಲ್ಲಿ ಸ್ಥಾಪಿಸಲಾಗುವ ಭಾರಿ ಪ್ರಮಾಣದ ಉಕ್ಕಿನ ಕಾರ್ಖಾನೆಯನ್ನು ಒರಿಸ್ಸಾ ಪ್ರಾಂತ್ಯದ ರೂರ್ಕೆಲಾದಲ್ಲಿ ಸ್ಥಾಪಿಸಲು ಕೇಂದ್ರ ಮಂತ್ರಿಮಂಡಲಿಯು ನಿರ್ಧರಿಸಿರುವುದಾಗಿ ಉತ್ಪಾದನಾಸಚಿವ ಶ್ರೀ ಕೆ. ಸಿ. ರೆಡ್ಡಿಯವರು ಲೋಕಸಭೆಯಲ್ಲಿ ತಿಳಿಸಿದ್ದಾರೆ

ಕೇಂದ್ರ ಅರ್ಥಾರಾ ಕಛೇರಿಯಲ್ಲಿ ಬೆಂಕಿ

ದೆಹಲಿಯಲ್ಲಿರುವ ಭಾರತ ಸರ್ಕಾರದ ಕೇಂದ್ರ ಕಛೇರಿಯ ಆರ್ಥಿಕ ಇಲಾಖೆಯ ಕಟ್ಟಡಕ್ಕೆ ನಿನ್ನೆ ಬೆಳಗಿನಝಾವ ಬೆಂಕಿ ಹತ್ತಿಕೊಂಡು ಅನೇಕ ಕಾಗದಪತ್ರಗಳು, ಕುರ್ಚಿ ಮತ್ತು ಸಾಮಾನುಗಳು ಭಸ್ಮವಾದವೆಂದೂ, ೮ ಅಗ್ನಿಶಮನಕ ಯಂತ್ರಗಳು ಬೆಂಕಿಯನ್ನು ಆರಿಸಿದವೆಂದೂ ವರದಿಯಾಗಿದೆ.

ಕಮ್ಯೂನಿಸ್ಟರಿಗೆ ಉಚ್ಚಾಟನೆ

ಸರ್ಕಾರಿ ಕೆಲಸದಲ್ಲಿರುವ ಎಲ್ಲಾ ಕಮ್ಯೂನಿಸ್ಟ್ ಮತ್ತು ಇತರಕಾಂತ್ರಿಕಾರಕ ಪಕ್ಷಗಳಿಗೆ ಸೇರಿರುವವರನ್ನೆಲ್ಲಾ ಸಿಂಹಳ ಸರ್ಕಾರವು ಕೆಲಸದಿಂದ ತೆಗೆದು ಹಾಕುವುದಾಗಿ ತಿಳಿಯಬರುತ್ತದೆ.

ಹಿಂದಿ ಪದಗಳ ನಿರ್ಮಾಣ

ರಸಾಯನಶಾಸ್ತ್ರ, ಸಸ್ಯ ಶಾಸ್ತ್ರ, ಗಣಿತ ಶಾಸ್ತ್ರ, ಭೌತ ಶಾಸ್ತ್ರ ಮುಂತಾದುವುಗಳಿಗೆ ಸಂಬಂಧಪಟ್ಟಂತೆ ಇಂಗ್ಲೀಷ್ ಪದಗಳಿಗೆ ಸಮವಾದ ಹಿಂದಿಯ ಸುಮಾರು ೫೫೦೦ ಪದಗಳನ್ನು ಭಾರತ ಸರ್ಕಾರದ ವಿದ್ಯಾ ಇಲಾಖಾ ಹಿಂದಿ ಶಾಖೆಯು ಪ್ರಕಟಿಸಿದೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ

ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ.

ಒಟ್ಟು 2000 ಬಹುಮಾನಗಳು.

ಬಹುಮಾನದ ಮೊಬಲಗು 45000 ರೂ.

ಟಿಕೇಟು ಒಂದಕ್ಕೆ ಒಂದೇರೂಪಾಯಿ.

ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಭಾಷಣ

ಮೈಸೂರು ೧೭

ರಾಜಧಾನಿಯ ಪ್ರಥಮ ದರ್ಜೆ ಕಾಲೇಜಿನ ಇಂಗ್ಲೀಷ್ ಸೆಮಿನಾರಿನ ಆಶ್ರಯದಲ್ಲಿ ಮೈಸೂರು ಸರ್ಕಾರದ ಡೆಪ್ಯುಟಿ ಇನ್ಫರ್ಮೇಷನ್ ಆಫೀಸರಾದ ಶ್ರೀ ಡಿ. ಆರ್. ರಾಮಯ್ಯನವರು 'ಆಧುನಿಕ ಪತ್ರಿಕೋದ್ಯಮ' ಎಂಬ ವಿಚಾರವಾಗಿ ಭಾಷಣ ಮಾಡಿದರು.

ಬಿ. ಟಿ. ಕಾಲೇಜಿನ ಪ್ರಿನ್ಸಿಪಾಲರಾದ ಪ್ರೊ|| ಎ. ಸಿ. ದೇವೇಗೌಡರು ತಮ್ಮ ಇತ್ತೀಚಿನ 'ಅಮೆರಿಕಾ ಪ್ರವಾಸದ ಹಲವು ಅನುಭವಗಳು' ಎಂಬ ವಿಚಾರವಾಗಿ ಮಾತನಾಡಿದರು. ಡಾ|| ಎಂ. ಷಡಕ್ಷರಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. 'ಸುಧಾ' ಪತ್ರಿಕೆಯ ಸಂಪಾದಕರಾದ ಶ್ರೀ ದೇ. ನಾ. ಅಶ್ವತ್ಥನಾರಾಯಣರಾವ್‌ರವರು ಪತ್ರಿಕೆಯ ಪರವಾಗಿ ಶ್ರೀಯುತರುಗಳಿಗೆ ಪುಷ್ಪಹಾರಗಳನ್ನರ್ಪಿಸಿದರು. ಸೆಮಿನಾರಿನ ಅಧ್ಯಕ್ಷರಾದ ಶ್ರೀ ಎನ್. ಎಸ್. ಸೂರ್ಯನಾರಾಯಣರಾಯರು ಸ್ವಾಗತ ಭಾಷಣವನ್ನೂ, ಕಾರ್ಯದರ್ಶಿ ಶ್ರೀ ರಮಾನಂದರವರು ವಂದನಾರ್ಪಣೆಯನ್ನೂ ನೆರವೇರಿಸಿದರು.

ನೂತನ ಗೃಹನಿರ್ಮಾಣ ಯೋಜನೆ

ಕಾರ್ಮಿಕರಿಗೆ ವಸತಿ ಸೌಕರ್ಯವನ್ನು ಕಲ್ಪಿಸಲು ಮದ್ರಾಸ್ ಸರ್ಕಾರವು ಒಂದು ನೂತನ ಗೃಹನಿರ್ಮಾಣ ಯೋಜನೆಯನ್ನು ಮಂಜೂರು ಮಾಡಿದೆ. ಇದರಂತೆ ಈ ಸಾಲಿನಲ್ಲಿ ತಲಾ ೨೦೦೦ ರೂ. ವೆಚ್ಚದ ೮೭೪ ವಾಸದ ಮನೆಗಳನ್ನು ಕಟ್ಟಲಾಗುತ್ತದೆ.

ವ್ಯವಸಾಯ ಕಾಲೇಜ್ ಸ್ಥಾಪನೆಗೆ ನೆರವು

ಪಶ್ಚಿಮ ಬಂಗಾಳದಲ್ಲಿ ಒಂದು ಹೊಸ ವ್ಯವಸಾಯ ಕಾಲೇಜನ್ನು ಸ್ಥಾಪಿಸಲು ಪ್ರಸಿದ್ಧ ಕೈಗಾರಿಕೋದ್ಯಮಿ ಶ್ರೀ ಜಿ. ಡಿ. ಬಿರ್ಲಾರವರು ೧೪ ಲಕ್ಷ ರೂಪಾಯಿಗಳನ್ನು ಅಲ್ಲಿಯ ಮುಖ್ಯ ಮಂತ್ರಿಯವರಿಗೆ ಕೊಟ್ಟಿದ್ದಾರೆ.

IN AID OF

BLIND, DEAF & DUMB

ARTS' FESTIVAL

Crawford Hall, Mysore.

19th, 20th & 21st Feb. 54

Daily at 5–30 p. m.

Tickets :-

Season : 2-8-0, 1-8-0, 1-0-0.

Daily : 1-8-0, 0-12-0, 0-8-0.

ಪ್ರಕಾಶಕರು ಮತ್ತು ಮುದ್ರಕರು:

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೪೨

೧೮-೨-೧೯೫೪ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕೈಮಗ್ಗ ಸಪ್ತಾಹ

ಮೈಸೂರು ೧೮

ಅಖಿಲ ಭಾರತದ ಕೈಮಗ್ಗದ ಸಮಿತಿಯ ನಿರ್ದೇಶನಾನುಗುಣವಾಗಿ ಮೈಸೂರು ಸಂಸ್ಥಾನದಲ್ಲಿ ಹಾಗೂ ಮೈಸೂರು ನಗರದಲ್ಲಿ 'ಕೈಮಗ್ಗದ ಸಪ್ತಾಹ'ವನ್ನು ಇದೇ ಮಾರ್ಚಿ ೭ ನೇ ತಾರೀಖಿನಿಂದ ೧೩ ರವರೆಗೆ ಆಚರಿಸಲಾಗುವುದು. ಈ ಸಂದರ್ಭದಲ್ಲಿ ನಗರದಲ್ಲಿ ಕೈಮಗ್ಗದ ಸರಕುಗಳ ಪ್ರದರ್ಶನ, ಮೆರವಣಿಗೆ ಮುಖಂಡರುಗಳಿಂದ ಭಾಷಣ ಏರ್ಪಡಿಸಿರುತ್ತದೆ.

ನಗರಾರೋಗ್ಯ

ಮೈಸೂರು ನಗರದಲ್ಲಿ ಇದೇ ೧೫ ನೇ ತಾರೀಖಿಗೆ ಮುಕ್ತಾಯವಾದ ಪಕ್ಷದಲ್ಲಿ ಸಿಡುಬು, ಕಾಲರಾ ಮತ್ತು ಪ್ಲೇಗು ರೋಗಗಳಿಲ್ಲ. ಆದಾಗ್ಯೂ ೧೮೩೨ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಯಿತು. ೫೫೫ ಪ್ರಥಮ ಮತ್ತು ೫೦೭ ಪುನಃ ವ್ಯಾಕ್ಸಿನೇಷನ್ ೨೦ ಕಾಲರಾ ನಿರೋಧ ಇನಾಕ್ಯುಲೇಷನ್ ಮಾಡಲಾಯಿತು. ಡಿಫ್ತೀರಿಯ ರೋಗವು ೮ ಜನಕ್ಕೆ ತಗಲಿ ೨ ಮರಣಗಳಾದವು. ೧೨೯ ಮಕ್ಕಳಿಗೆ ಡಿಫ್ತೀರಿಯ ನಿರೋಧ ಇನಾಕ್ಯುಲೇಷನ್ ಮಾಡಲಾಯಿತು.

ಟೈಫಾಯಿಡ್ ರೋಗವು ೭ ಜನಕ್ಕೆ ತಗುಲಿ ೪ ಮರಣಗಳಾದವು. ೭೬ ಟೈಫಾಯಿಡ್ ನಿರೋಧ ಇನಾಕ್ಯುಲೇಷನ್ನು ಈ ಪಕ್ಷದಲ್ಲಿ ಮಾಡಲಾಯಿತು.

ಛಡಿ ಏಟಿನ ಶಿಕ್ಷೆ

ಅನಾಗರಿಕ ಕೃತ್ಯಗಳನ್ನು ಎಸಗಿದವರಿಗೆ ಛಡಿ ಏಟು ಶಿಕ್ಷೆ ಕೊಡುವುದನ್ನು ಜಾರಿಗೆತರುವ ವಿಷಯದಲ್ಲಿ ಕೇಂದ್ರ ಸರ್ಕಾರವು ಎಲ್ಲಾ ಪ್ರಾಂತ್ಯಗಳ ಅಭಿಪ್ರಾಯವನ್ನು ಕೇಳುವುದಾಗಿ ತಿಳಿಯಬರುತ್ತದೆ.

ಚಿತ್ರಕಲಾ ಪ್ರದರ್ಶನ

ಭಾರತ ಪ್ರಸಿದ್ಧ ಕವಿವರ್ಯ ರವೀಂದ್ರನಾಥ್ ಠಾಕೂರರು ಬರೆದ ಹಲವಾರು ಚಿತ್ರಗಳನ್ನೊಳಗೊಂಡ ಚಿತ್ರ ಕಲಾಪ್ರದರ್ಶನ ಒಂದನ್ನು ನಿನ್ನೆಯದಿನ ಪ್ರಧಾನಿ ನೆಹರೂರವರು ದೆಹಲಿಯಲ್ಲಿ ಪ್ರಾರಂಭಿಸಿದರು

ಅಶ್ಲೀಲ ಪುಸ್ತಕಗಳು ಅಗ್ನಿಗಾಹುತಿ

ಮೈಲಾಪುರ, ಟ್ರಿಪ್ಲಿಕೇನ್ ಮತ್ತು ಜಾರ್ಜ್‌ಟೌನ್‌ಗಳಲ್ಲಿರುವ ಪುಸ್ತಕದಂಗಡಿಗಳನ್ನು ಮದ್ರಾಸ್ ಪೊಲೀಸರು ಶೋಧಿಸಿ ಅಲ್ಲಿ ದೊರೆತ ಅಶ್ಲೀಲ ಪುಸ್ತಕಗಳ ಸುಮಾರು ೧೭೦೦೦ ಪ್ರತಿಗಳನ್ನು ಸಾರ್ವಜನಿಕರ ಸಮ್ಮುಖದಲ್ಲಿ ಮೊನ್ನೆಯದಿನ ಸುಟ್ಟುಹಾಕಿದರು.

ಆಹಾರದಲ್ಲಿ ಮೈಸೂರು ಸ್ವಾವಲಂಬಿಯಾಗಿದೆ

ಲೋಕಸಭೆಯಲ್ಲಿ ಆಹಾರ ಸಚಿವರ ವಿವರಣೆ

ದೇಶದಲ್ಲಿ ಈ ಸಾಲಿನಲ್ಲಿ ಆಹಾರ ಪರಿಸ್ಥಿತಿಯು ಹಿಂದಿನ ಹಲವಾರು ವರ್ಷಗಳಿಗಿಂತ ಅತ್ಯಂತ ಉತ್ತಮವಾಗಿದೆ. ಬತ್ತದ ಬೆಳೆಯು ಎಲ್ಲಾ ಕಡೆಯಲ್ಲೂ ವಿಶೇಷವಾಗಿ ಆಗಿದೆ. ಕಲ್ಕತ್ತ, ಬೊಂಬಾಯಿ ಮತ್ತು ತಿರುವಾಂಕೂರ್ ಕೊಚ್ಚಿ ಪ್ರಾಂತ್ಯಗಳಿಗೆ ಮಾತ್ರ ಅಕ್ಕಿಯನ್ನು ಕೇಂದ್ರವು ಸರಬರಾಜು ಮಾಡಬೇಕಾಗಿದೆ. ಮೈಸೂರು ಮತ್ತು ಹೈದರಾಬಾದ್ ಪ್ರಾಂತ್ಯಗಳು ಅಕ್ಕಿಯಲ್ಲಿ ಸ್ವಾವಲಂಬಿಯಾಗಿವೆ. ಮದ್ರಾಸಿಗೆ ಬೇಕಾಗುವ ಅಕ್ಕಿಯನ್ನು ಹೆಚ್ಚುವರಿ ಪ್ರದೇಶವಾದ ಆಂಧ್ರದಿಂದಲೇ ಒದಗಿಸಲಾಗುತ್ತದೆ ಎಂದು ಕೇಂದ್ರ ಆಹಾರ ಸಚಿವ ಶ್ರೀ ಕಿದ್ವಾಯಿಯವರು ಲೋಕಸಭೆಯಲ್ಲಿ ವಿವರಣೆಯನ್ನಿತ್ತಿದ್ದಾರೆ.

ಪೆಪ್ಸುವಿನಲ್ಲಿ ಚುನಾವಣೆ

ಪೆಪ್ಸು ಪ್ರಾಂತ್ಯದಲ್ಲಿ ದ್ವಿತೀಯ ಮಹಾಚುನಾವಣೆಯು ಈ ದಿನ ಪ್ರಾರಂಭವಾಯಿತು.

ಸಾರ್ವಜನಿಕ ಆರೋಗ್ಯ ಸಮಿತಿ

ಬೆಂಗಳೂರು ೧೮

ಆರೋಗ್ಯ ಸಚಿವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಆರೋಗ್ಯ ಸಮಿತಿಯನ್ನು ಸರ್ಕಾರವು ಪುನಸ್ರಚಿಸಿದೆ. ಶ್ರೀಗಳಾದ ಸಿ. ಜೆ. ದೇವನಾಥ, ಟಿ. ವೀರಣ್ಣ, ಕೆ. ಜಿ. ತಿಮ್ಮೇಗೌಡ, ಸಿ. ಹೆಚ್. ಲಿಂಗದೇವರು, ಡಾ|| ಎಂ. ಶಿವರಾಂ ಮತ್ತು ಡಾ|| ಎಂ. ಸಿ. ಅಲ್ವಾಕರ್‌ರವರು ಸಮಿತಿಯ ಸದಸ್ಯರುಗಳು.

ಸಚಿವರುಗಳ ಪ್ರವಾಸ

ಬೆಂಗಳೂರು ೧೮

ಕಾರ್ಯಾಂಗ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಇದೇ ೨೦ ರಿಂದ ೨೨ ರವರೆಗೆ ಹಾಸನ, ಶಿವಮೊಗ್ಗ ಜಿಲ್ಲೆಗಳಲ್ಲಿ, ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ಟಿ. ಚನ್ನಯ್ಯನವರು ೧೯ ಮತ್ತು ೨೦ ರಲ್ಲಿ ಹಾಸನ ಜಿಲ್ಲೆಗೆ ಪ್ರವಾಸಮಾಡುತ್ತಾರೆ.

ವಿಶೇಷ

ಚೀಫ್ ಇಂಜನಿಯರ್ ನಿವೃತ್ತಿ

ನೀರಾವರಿ ಯೋಜನೆಗಳ ವಿಶೇಷ ಚೀಫ್ ಇಂಜನಿಯರ್ ಶ್ರೀ ಕೆ. ಸುಬ್ಬರಾಯರು ಇದೇ ೨೫ನೇ ತಾರೀಖಿನಿಂದ ನಿವೃತ್ತರಾಗುತ್ತಾರೆ.

ಪಾನ ನಿರೋಧ ರದ್ದಾಗದಿದ್ದರೆ ಸತ್ಯಾಗ್ರಹ

ಪಾನ ನಿರೋಧವನ್ನು ರದ್ದುಗೊಳಿಸಬೇಕು ಇಲ್ಲವಾದರೆ ತಾವು ಸತ್ಯಾಗ್ರಹ ಹೂಡಿ, ಬಹಿರಂಗವಾಗಿ ಮರಗಳಿಂದ ಹೆಂಡವನ್ನು ಇಳಿಸಿ, ಪಾನನಿರೋಧ ಶಾಸನವನ್ನು ಉಲ್ಲಂಘಿಸುವುದಾಗಿ ಆಂಧ್ರ ಪ್ರಾಂತ್ಯದಲ್ಲಿ ಹೆಂಡ ಇಳಿಸುತ್ತಿದ್ದವರ ಸಮ್ಮೇಳನವು ತೀರ್ಮಾನ ಮಾಡಿದೆ.

ಅಭಾವ ಪ್ರದೇಶಗಳ ಅಭಿವೃದ್ಧಿಗೆ ನೆರವು

ಪಂಚವಾರ್ಷಿಕ ಯೋಜನೆಯ ಪ್ರಕಾರ ಅಭಾವ ಪ್ರದೇಶಗಳಲ್ಲಿ ಅಭಿವೃದ್ಧಿ ಕಾರ್ಯಕ್ಕಾಗಿ ಕೇಂದ್ರ ಸರ್ಕಾರವು ನಿಗದಿಮಾಡಿರುವ ೪೦ ಕೋಟಿ ರೂಪಾಯಿಗಳ ಪೈಕಿ ಮೈಸೂರು ಸಂಸ್ಥಾನಕ್ಕೆ ೩½ ಕೋಟಿ ರೂಪಾಯಿಗಳನ್ನೂ ಕೊಡಲಾಗುವುದೆಂದು ಕೇಂದ್ರ ಆರ್ಥಿಕ ಸಚಿವರು ಲೋಕಸಭೆಯಲ್ಲಿ ತಿಳಿಸಿದ್ದಾರೆ.

ಅಖಿಲ ಭಾರತ ಖಾದಿ ಪ್ರದರ್ಶನ

ಅಖಿಲ ಭಾರತ ಖಾದಿ ಮತ್ತು ಗ್ರಾಮ ಕೈಗಾರಿಕೆ ಮತ್ತು ವ್ಯವಸಾಯ ಪ್ರದರ್ಶನವು ಇದೇ ಮಾರ್ಚಿ ಒಂದನೇ ತಾರೀಖು ಹುಬ್ಬಳ್ಳಿಯಲ್ಲಿ ಪ್ರಾರಂಭವಾಗುತ್ತದೆ. ಬೊಂಬಾಯಿಯ ಮುಖ್ಯ ಮಂತ್ರಿ ಶ್ರೀ ಮೊರಾರ್ಜಿ ದೇಸಾಯ್‌ರವರು ಪ್ರದರ್ಶನವನ್ನು ಉದ್ಘಾಟಿಸುತ್ತಾರೆ.

ಪ್ಲಾಂಟೇಷನ್ ತನಿಖಾ ಸಮಿತಿ

ಕಾಫಿ, ರಬ್ಬರ್, ಟೀ ಮುಂತಾದ ಪ್ಲಾಂಟೇಷನ್ ಉದ್ಯಮಗಳಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಪರಿಶೀಲಿಸಲು ಕೇಂದ್ರ ಸರ್ಕಾರವು ಒಂದು ತನಿಖಾ ಸಮಿತಿಯನ್ನು ರಚಿಸಿದೆ.

ರಬ್ಬರ್ ತೋಟಗಳಲ್ಲಿ ಆಹಾರ ಧಾನ್ಯ

ಸಿಂಹಳ ದ್ವೀಪದಲ್ಲಿರುವ ಎಲ್ಲ ರಬ್ಬರ್ ತೋಟಗಳಲ್ಲಿ ಆಹಾರ ಧಾನ್ಯಗಳನ್ನು ಬೆಳೆಯಬೇಕೆಂದು ಕಡ್ಡಾಯ ಮಾಡಲು ಸಿಲೋನ್ ಸರ್ಕಾರದವರು ನಿರ್ಧರಿಸಿದ್ದಾರೆ.

ಹೈಕೋರ್ಟಿನಲ್ಲಿ ರಿಟ್ ಅರ್ಜಿ ವಜಾ

ಬೆಂಗಳೂರು ೧೮

ಮೈಸೂರಿನ ನಾಗರಿಕರಾದ ಶ್ರೀ ತಗಡೂರು ರಾಮಚಂದ್ರರಾವ್ ಮತ್ತು ವಕೀಲರಾದ ಶ್ರೀ ಎ. ಎಸ್. ರಾಮಯ್ಯನವರು ಮೈಸೂರು ಸರ್ಕಾರ, ಇಂಡಿಯಾ ಕಾಫಿ ಬೋರ್ಡ್ ಮತ್ತು ಮೈಸೂರು ಕಾಫಿ ಹೌಸಿನ ಮ್ಯಾನೇಜರುಗಳ ಮೇಲೆ ಹೂಡಿದ್ದ ರಿಟ್ ಅರ್ಜಿಯನ್ನು ಮೊನ್ನೆಯದಿನ ಶ್ರೇಷ್ಠ ನ್ಯಾಯಾಲಯದಲ್ಲಿ ಜಸ್ಟಿಸ್ ವೆಂಕಟರಮಣಯ್ಯ ಮತ್ತು ಜಸ್ಟಿಸ್ ಟಿ. ಬಾಲಕೃಷ್ಣಯ್ಯನವರು ವಜಾ ಮಾಡಿದ್ದಾರೆ.

ರೂಪಾಯಿನ ಮೊತ್ತಕ್ಕಿಂತ ಕಡಿಮೆ ಯಾವ ಮೊಬಲಗಿನ ಮೇಲೆ ಮಾರಾಟ ತೆರಿಗೆಯನ್ನು ತೆಗೆದುಕೊಳ್ಳುತ್ತಿರುವುದು ನ್ಯಾಯಬಾಹಿರವೆಂದೂ ಆಜ್ಞೆ ಕೊಡಬೇಕೆಂದು ಅರ್ಜಿಯಲ್ಲಿ ಕೇಳಲಾಗಿತ್ತು. ಈ ಅರ್ಜಿಯಲ್ಲಿ ನಮೂದಿಸಿರುವಂತೆ ಅರ್ಜಿದಾರರಿಗೆ ತೊಂದರೆಯಾಗಿದೆ ಎಂದು ಹೇಳಲು ಈಗ ಯಾವ ಆಧಾರವೂ ಇಲ್ಲವೆಂದೂ ತಮಗೆ ತೋರಿದ ಹಣವನ್ನು ಕೊಡುವುದಾಗಿ ಒಪ್ಪಲು ಪದಾರ್ಥಗಳನ್ನು ಕೊಳ್ಳುವವರ ಮೇಲೆ ಯಾವ ಕಟ್ಟುಪಾಡು ಇರುವುದಿಲ್ಲವೆಂದೂ ಹಣವನ್ನು ವಾಪಸ್ಸು ಮಾಡಬೇಕೆಂಬ ಒತ್ತಾಯ ಮಾಡುವ ಪ್ರಯತ್ನವಿದ್ದಲ್ಲಿ ಮತ್ತು ಅದು ಚರ್ಚಾಸ್ಪದವಾಗಿ ಕಂಡುಬಂದಲ್ಲಿ ಅಂತಹ ಹಕ್ಕಿನ ನ್ಯಾಯಾಬದ್ಧತೆಯನ್ನು ವಿಮರ್ಶಿಸಿ ತೀರ್ಮಾನ ಕೊಡುವ ಪ್ರಶ್ನೆ ಏಳುತ್ತದೆಯೆಂದೂ ನ್ಯಾಯಮೂರ್ತಿಗಳು ತಮ್ಮ ಆಜ್ಞೆಯಲ್ಲಿ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ವಿರೋಧಪಕ್ಷದ ಸಭಾತ್ಯಾಗ

ಕಲ್ಕತ್ತಾ ಪರಿಸ್ಥಿತಿಯನ್ನು ಚರ್ಚಿಸಲು ನಿನ್ನೆಯದಿನ ಲೋಕಸಭೆಯಲ್ಲಿ ವಿರೋಧ ಪಕ್ಷದವರು ತಂದ ನಿಲುವಳಿ ಸೂಚನೆಯನ್ನು ಸಭಾಧ್ಯಕ್ಷರು ತಳ್ಳಿಹಾಕಿದರು. ಅದನ್ನು ಪ್ರತಿಭಟಿಸಿ ಕಮ್ಯೂನಿಸ್ಟ್ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು. ರಾಜ್ಯ ಪರಿಷತ್ತಿನಲ್ಲಿಯೂ ಈ ರೀತಿಯ ನಿಲುವಳಿ ಸೂಚನೆಯನ್ನು ವಿರೋಧಪಕ್ಷದವರು ತಂದರು ಅದನ್ನು ಸಭಾಧ್ಯಕ್ಷರು ಅಂಗೀಕರಿಸಿದರು.

ರಾಜಕುಮಾರಿ ಅಮೃತ ಕೌರ್

ಬೆಂಗಳೂರು ೧೮

ಕೇಂದ್ರ ಸರ್ಕಾರದ ಆರೋಗ್ಯ ಶಾಖಾ ಮಂತ್ರಿ ಶ್ರೀಮತಿ ರಾಜಕುಮಾರಿ ಅಮೃತ ಕೌರ್‌ರವರು ಈದಿನ ದೆಹಲಿಯಿಂದ ವಿಮಾನದಲ್ಲಿ ಇಲ್ಲಿಗೆ ಆಗಮಿಸಿ ಸಂಜೆ ಮದನಪಲ್ಲಿಗೆ ತೆರಳಿದರು.

ನ್ಯಾಯಸ್ಥಾನಗಳಲ್ಲಿ ಪ್ರಾದೇಶಿಕ ಭಾಷೆ

ಹೈದರಾಬಾದಿನಲ್ಲಿರುವ ಎಲ್ಲಾ ಕೆಳ ದರ್ಜೆಯ ನ್ಯಾಯಸ್ಥಾನಗಳಲ್ಲಿ ಪ್ರಾದೇಶಿಕ ಭಾಷೆಯಲ್ಲಿ ಕಾರ್ಯಕಲಾಪಗಳು ಏಪ್ರಿಲ್ ಒಂದನೇ ತಾರೀಖಿನಿಂದ ಪ್ರಾರಂಭಿಸಲಾಗುತ್ತದೆ. ತೆಲುಗು, ಮರಾಠಿ ಮತ್ತು ಉರ್ದು ಆ ಪ್ರಾಂತ್ಯದ ಪ್ರಾದೇಶಿಕ ಭಾಷೆಗಳಾಗಿ ಪರಿಗಣಿಸಲಾಗಿದೆ. ಇಲ್ಲಿಯವರೆಗೆ ನ್ಯಾಯಸ್ಥಾನಗಳ ಕಾರ್ಯಕಲಾಪಗಳು ಉರ್ದು ಅಥವಾ ಇಂಗ್ಲೀಷ್ ಭಾಷೆಯಲ್ಲಿ ಮಾತ್ರ ನಡೆಯುತ್ತಿದ್ದುವು.

ರಾಷ್ಟ್ರೀಯ ಗೃಹನಿರ್ಮಾಣ ಮಂಡಲಿ

ಸದ್ಯದಲ್ಲಿಯೇ ದೇಶದಲ್ಲಿ ರಾಷ್ಟ್ರೀಯ ಗೃಹನಿರ್ಮಾಣ ಮಂಡಲಿಯೊಂದನ್ನು ರಚಿಸಲಾಗುವುದೆಂದು ಕೇಂದ್ರ ಮರಾಮತ್ ಶಾಖಾ ಸಚಿವ ಸರ್ದಾರ್ ಸ್ವರ್ಣಸಿಂಗ್‌ರವರು ತಿಳಿಸಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೭—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೨೧—	೨೨—೪
ಎಳ್ಳು	—	—
ಹರಳು	೨೮—೨	೨೯—೮
ಹುಚ್ಚೆಳ್ಳು	೩೮—೨	೪೨—
ಹೊಂಗೆಬೀಜ	೨೦—	೨೩—೧೨
ಹುಣಸೆಬೀಜ	೧೨—೧೪	೧೩—೨
ಹುರುಳಿ	೨೪—	೩೦—೧೪
ಹೆಸರು	೩೩—೮	೪೧—೨
ಅವರೆ	—	—
ಅಲಸಂದೆ	೩೦—೨	೪೩—೨
ಉದ್ದು	—	—
ಕೊತ್ತಂಬರಿ	೨೯—೪	೩೦—೧೦
ಕಡಲೆ	೪೫—೮	೫೧—೮
ತೊಗರಿ	೧೬—೨	೨೭—೮
ಹುಣಸೆಹಣ್ಣು	೩—೯	೮—
ಮೆಣಸಿನಕಾಯಿ	೨೦—	೨೧—೨
ಸೀಗೆಕಾಯಿ	೩—೧೧	೪—೧೦
ಬೆಲ್ಲ	—	—
ತೆಂಗಿನಕಾಯಿ	೧೬೨—	೩೧೦—

ಕಲ್ಕತ್ತಾ ಪರಿಸ್ಥಿತಿ ಶಾಂತವಾಗಿದೆ

ಕೆಲವೆಡೆ ಮಾತ್ರ ಸಣ್ಣಪುಟ್ಟ ಘಟನೆಗಳು

ನಿನ್ನೆಯದಿನ ೧೬೦ ಜನರ ದಸ್ತಗಿರಿ

ಕಲ್ಕತ್ತಾದಲ್ಲಿ ನಿನ್ನೆಯದಿನ ಪರಿಸ್ಥಿತಿಯು ಶಾಂತವಾಗಿತ್ತೆಂದು ತಿಳಿಯಬರುತ್ತದೆ. ನಗರದ ಯಾವ ಭಾಗದಲ್ಲೂ ಅಂತಹ ಭಾರಿ ದುರ್ಘಟನೆಗಳಾವುವೂ ನಡೆಯಲಿಲ್ಲ ಕೆಲವು ಪ್ರದೇಶಗಳಲ್ಲಿ ಮಾತ್ರ ಸಣ್ಣಪುಟ್ಟ ಘಟನೆಗಳು ನಡೆದುವು. ಅಶ್ರುವಾಯುವನ್ನು ಉಪಯೋಗಿಸಿ ಪೊಲೀಸರು ಸ್ಥಿತಿಯನ್ನು ತಹಬಂದಿಗೆ ತಂದರು.

ನಗರದ ಎಲ್ಲಾ ಪ್ರಮುಖ ಪ್ರದೇಶಗಳಲ್ಲಿ ಪೊಲೀಸ್ ಮತ್ತು ಮಿಲಿಟರಿಯವರ ಉಸ್ತುವಾರಿ ಮತ್ತು ಬಂದೋಬಸ್ತು ಬಲವಾಗಿತ್ತು. ೧೪೪ ನೇ ವಿಧಿಯ ಪ್ರಕಾರ ವಿಧಿಸಲಾಗಿದ್ದ ನಿಷೇಧಾಜ್ಞೆಯನ್ನು ಉಲ್ಲಂಘಿಸಿದುದರ ಪರಿಣಾಮವಾಗಿ ೧೬೦ ಜನರ ದಸ್ತಗಿರಿಗಳಾದುವು. ಉಪಾಧ್ಯಾಯರ ಮುಷ್ಕರವು ಇನ್ನೂ ಮುಂದುವರಿಯುತ್ತಲೇಯಿದೆ.

ನಗರದಲ್ಲಿ ಇನ್ನೂ ಸರ್ಕಾರಿ ಬಸ್ಸು ಮತ್ತು ಟ್ರಾಂಗಳ ಸಂಚಾರವನ್ನು ಪ್ರಾರಂಭಿಸಿಲ್ಲ. ಮಂಗಳವಾರ ನಡೆದ ಘಟನೆಗಳ ಪರಿಣಾಮವಾಗಿ ಆಸ್ಪತ್ರೆಯಲ್ಲಿ ದಾಖಲಾಗಿದ್ದವರಲ್ಲಿ ನಿನ್ನೆ ಮತ್ತೆ ಮೂವರು ಸತ್ತರು.

ನೇಪಾಳ ರಾಷ್ಟ್ರದಿನ

ನೇಪಾಳದಲ್ಲಿ ಇಂದು ಅಲ್ಲಿಯ ರಾಷ್ಟ್ರದಿನ. ಆ ಸಂದರ್ಭದಲ್ಲಿ ಅಲ್ಲಿಯ ದೊರೆ ತ್ರಿಭುವನರವರಿಗೆ ಭಾರತ ರಾಷ್ಟ್ರಾಧ್ಯಕ್ಷರು ಒಂದು ಶುಭ ಸಂದೇಶವನ್ನು ಕಳುಹಿಸಿದ್ದಾರೆ.

ರಾಷ್ಟ್ರಾಧ್ಯಕ್ಷರ ಪ್ರವಾಸ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದ್‌ರವರು ೯ ದಿನಗಳ ಪ್ರವಾಸವನ್ನು ಅಸ್ಸಾಂ ಪ್ರಾಂತ್ಯದಲ್ಲಿ ನಿನ್ನೆ ಪ್ರಾರಂಭಿಸಿದರು.

ದೆಹಲಿಯಲ್ಲಿ ರೇಷನ್ ವಜಾ

ಇನ್ನು ಎರಡು ವಾರಗಳಲ್ಲಿ ದೆಹಲಿ ನಗರದಲ್ಲಿ ಆಹಾರ ರೇಷನ್ ಕ್ರಮವನ್ನು ರದ್ದುಗೊಳಿಸಲಾಗುವುದೆಂದು ಆಹಾರ ಉಪಸಚಿವರು ಲೋಕಸಭೆಯಲ್ಲಿ ತಿಳಿಸಿದ್ದಾರೆ.

'ಸ್ವಚ್ಛಭಾರತ' ಚಳುವಳಿ

ಭಾರತ ಸೇವಕ ಸಮಾಜದವರು ದೇಶಾದ್ಯಂತ 'ಸ್ವಚ್ಛ ಭಾರತ' ಚಳುವಳಿಯನ್ನು ಪ್ರಾರಂಭಿಸಬೇಕೆಂದು ಆಚಾರ್ಯ ವಿನೋಬಭಾವೆಯವರು ಸಲಹೆಯಿತ್ತಿದ್ದಾರೆ.

ಪ್ರಭಾ ★ ಎರಡನೇ ವಾರ

19—2—54 ರಿಂದ ದಿನವಹಿ 3 ಆಟಗಳು

-ಹರಿದರ್ಶನ್-

ಪಾತ್ರ: ಲೀಲಾಚಿಟ್ನೀಸ್, ರಾಜ್‌ಕುಮಾರ್, ಬಿಪಿನ್‌ಗುಪ್ತ.

ಇದರ ಜೊತೆಯಲ್ಲೂ:- ಕುಂಭಮೇಳ, ರಷ್ಯಾದೇಶದ ಸಾಂಸ್ಕೃತಿಕ ನಿಯೋಗ, ಮದ್ರಾಸಿನಲ್ಲೂ ನಡೆದ ನಾಲ್ಕನೇ ಕ್ರಿಕೆಟ್ ಟೆಸ್ಟ್ ಪಂದ್ಯ, ಇವುಗಳನ್ನೊಳಗೊಂಡ ನ್ಯೂಸ್ ರೀಲನ್ನು ಪ್ರದರ್ಶಿಸಲ್ಪಡುತ್ತೆ.

.... ರಾಜಕಮಲ್ ....

19—2—54 ರಿಂದ **6** ನೇ ವಾರ

ಪ್ರತಿದಿನ ಮೂರು ಆಟಗಳು

ಚಂದ್ರಹಾರಂ

(ತಮಿಳು)

ಪಾತ್ರ:—ಶ್ರೀರಂಜನಿ, ಸಾವಿತ್ರಿ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್ ಮತ್ತು ರೇಲಂಗಿ.

.... ರಣಜಿತ್ ....

19—2—54 ರಿಂದ 2 ನೇ ವಾರ

ಶಶಿಕಲಾ, ದುರ್ಗಾಖೋಟೆ ನಟಿಸಿರುವ:-

ಚಾ ಚಾ-ಚೌಧರಿ

ಪ್ರಕಾಶಕರು ಮತ್ತು ಮುದ್ರಕರು:

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್, ಮೈಸೂರು.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು !

ಬಹುಕಾಲ ಬಾಳಿಕೆಬರುವವು !

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು !!!

★ ★ ★ ★ ★

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟೆ ಅಥವಾ ಪಳಿಗಳು (FLATS) ದುಂಡು ಮತ್ತು ಚದುರ ಸಲಾಕಿಗಳು (ROUNDS & SQUARES) ಕೋನ ಕಂಬಿಗಳು (ANGLES) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (REINFORCING RODS) ಮತ್ತು ಬೀಲುಪಟ್ಟಿಗಳು (HOOPS)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು

ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ

ಮೈಸೂರು ಕಬ್ಬಿಣದ

ಮತ್ತು

ಉಕ್ಕಿನ ಕಾರಖಾನೆ, ಭದ್ರಾವತಿ.

.... ನಾಳೆ **19—2—54** ನೇ ಶುಕ್ರವಾರದಿಂದ ....

ಲಕ್ಷ್ಮೀ ಟಾಕೀಸ್, ಮೈಸೂರು

ಜಯಂತಿರವರ ★ ಪೊನ್‌ವಯಲ್ ★

[ಚಿನ್ನದ ಭೂಮಿ] ★ (ತಮಿಳು)

ತಾರಾಗಣ:—ಅಂಜಲಿದೇವಿ, ಟಿ. ಆರ್. ರಾಮಚಂದ್ರನ್, ಕೆ. ಸಾರಂಗಪಾಣಿ, ಮನೋಹರ್.

ಪ್ರತಿದಿನ 3 ಪ್ರದರ್ಶನಗಳು:— 2-45, 6-15, 9-45

ಫೋನ್ ೫೭೪

ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ

ಸಂಪುಟ ೪

ಸಂಚಿಕೆ ೧೪೩

೧೯-೨-೧೯೫೪ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮೈಸೂರು ವಿದ್ಯಾರ್ಥಿಗಳ ಖಂಡನೆ

ಮೈಸೂರು ೧೯

ರಾಜಧಾನಿಯ ಮಹಾರಾಜಾ ಮತ್ತು ಫಸ್ಟ್‌ಗ್ರೇಡ್ ಕಾಲೇಜಿನ ವಿದ್ಯಾರ್ಥಿಗಳು ನಿನ್ನೆ ಸಭೆ ಸೇರಿ, ಕಲ್ಕತ್ತದ ಉಪಾಧ್ಯಾಯರ ಮುಷ್ಕರದ ಸಂಬಂಧವಲ್ಲಿ ನಿರಪರಾಧಿ ಸಾರ್ವಜನಿಕರ ಮೇಲೆ ಗೋಲಿಬಾರು ಮಾಡಿದ ಪಶ್ಚಿಮ ಬಂಗಾಳ ಸರ್ಕಾರದ ನೀತಿಯನ್ನು ತೀವ್ರವಾಗಿ ಖಂಡಿಸಿ, ಮರಣ ಮತ್ತು ನೊಂದವರಿಗೆ ಸಹಾನುಭೂತಿ ವ್ಯಕ್ತಪಡಿಸುವ ನಿರ್ಣಯ ಮಾಡಿದರು.

ಉಪಾಧ್ಯಾಯರ ಮುಷ್ಕರಕ್ಕೆ ಬೆಂಬಲ ನೀಡುವ ನಿರ್ಣಯವನ್ನೂ ಅನುಮೋದಿಸಲಾಯಿತು.

ರಾಜಪ್ರಮುಖರಲ್ಲಿ ಭೇಟಿ

ರಾಜಧಾನಿಯ ಶ್ರೀಗಳಾದ ಎ. ಕೃಷ್ಣಮೂರ್ತಿರಾವ್, ಎಂ. ಆರ್. ಸಿ. ಬಸಪ್ಪ, ಎಂ ರಾಮಸ್ವಾಮಿ, ಎಂ.ಎಲ್. ರಾಜಣ್ಣ, ಪರಕಾಲ ಮಠದ ಶ್ರೀ ಕಸ್ತೂರಿ ರಂಗಾಚಾರ್, ಕೋಟೆಶ್ವರದ ಶ್ರೀ ಶ್ರೀನಿವಾಸರಾಯರು ನಿನ್ನೆ ಶ್ರೀಮನ್ಮಹಾರಾಜರವರನ್ನು ಭೇಟಿಮಾಡಿ, ಚಾಮುಂಡಿ ಬೆಟ್ಟದಲ್ಲಿ ಏರ್ಪಡಿಸುವ ಶ್ರೀ ಚಂಡಿಹೋಮದ ಉದ್ಘಾಟನಾ ಮಹೋತ್ಸವವನ್ನು ರಾಜಪ್ರಮುಖರು ನಡೆಸಬೇಕೆಂದು ಪ್ರಾರ್ಥಿಸಿದರು. ಅದಕ್ಕೆ ಶ್ರೀಮನ್ಮಹಾರಾಜರವರು ಒಪ್ಪಿಕೊಂಡರೆಂದು ಹೇಳಲಾಗಿದೆ.

ರೇಡಿಯೋ ನಾಟಕ ಮಹೋತ್ಸವ

ಮೈಸೂರು ೧೯

ಅಖಿಲ ಭಾರತ ರೇಡಿಯೋ ಮೈಸೂರು ಕೇಂದ್ರದವರು ಇದೇ ೨೧ ರಿಂದ ೨೬ ನೇ ತಾರೀಖಿನವರೆಗೆ ಪ್ರತಿದಿನ ರಾತ್ರಿ ೮ ಗಂಟೆಯಿಂದ ರೇಡಿಯೋ ನಾಟಕ ಹಬ್ಬದ ಪ್ರಸಾರ ಏರ್ಪಡಿಸಿದ್ದಾರೆ. ಸುಪ್ರಸಿದ್ಧ ಕನ್ನಡ ನಾಟಕ ಮತ್ತು ತೆಲುಗು, ತಮಿಳು ಮತ್ತು ಹಿಂದಿ ನಾಟಕಗಳ ಕನ್ನಡ ಅನುವಾದವನ್ನೂ ಪ್ರಸಾರಮಾಡಲಾಗುವುದು.

ಮೈಸೂರಿನಲ್ಲಿ ಭೂದಾನ

ಕಳೆದ ತಿಂಗಳಿನ ಅಂತ್ಯದವರೆಗೆ ಮೈಸೂರು ಸಂಸ್ಥಾನದಲ್ಲಿ ಒಟ್ಟು ೨೬೬೨ ಎಕರೆಗಳು ಭೂದಾನ ಯಜ್ಞಕ್ಕಾಗಿ ವಸೂಲಾಗಿವೆ. ಅದರ ಪೈಕಿ, ಬೆಂಗಳೂರು ೧೫೫ ಎಕರೆ, ಕೋಲಾರ ೧೭೫, ತುಮಕೂರು ೧೫೯, ಚಿಕ್ಕಮಗಳೂರು ೨೬೦, ಹಾಸನ ೧೨೧, ಚಿತ್ರದುರ್ಗ ೧೧೯, ಶಿವಮೊಗ್ಗ ೧೪೧, ಮಂಡ್ಯ ೪೭, ಮೈಸೂರು ೪೯ ಮತ್ತು ಬಳ್ಳಾರಿ ೩೮೦ ಎಕರೆ ಬಂದಿವೆ.

ಪುನಃ ಕಲ್ಕತ್ತಾದಲ್ಲಿ ನಿನ್ನೆ ಎರಡು ಬಾರಿ ಗೋಳಿಬಾರು

೧೪೪ ಜನರ ದಸ್ತಗಿರಿ

ಕಲ್ಕತ್ತದಲ್ಲಿ ನಿನ್ನೆಯ ದಿನವೂ ಹಲವಾರು ಸಣ್ಣಪುಟ್ಟ ಘಟನೆಗಳು ವರದಿಯಾಗಿದೆ. ಶಾಸನವನ್ನು ಮುರಿದರೆಂಬ ಆಪಾದನೆ ಮೇಲೆ ನಿನ್ನೆಯದಿನ ೧೪೪ ಜನರ ದಸ್ತಗಿರಿಗಳಾದುವು ಗಲಾಟೆಯಾದ ಪ್ರದೇಶಗಳಲ್ಲಿ ಪುನಃ ಎರಡು ಬಾರಿ ಪೋಲೀಸಿನವರು ಗುಂಡು ಹಾರಿಸಿದರು. ಸಾವು ನೋವುಗಳೇನೂ ವರದಿಯಾಗಿಲ್ಲ ಬೆಳಿಗ್ಗೆ ಮಾತ್ರ ಟ್ರಾಂ ಮತ್ತು ಸರ್ಕಾರಿ ಬಸ್ಸುಗಳು ಚಲಿಸುತ್ತಲಿದ್ದುವು. ಮುಂಜಾಗರೂಕತೆಗಾಗಿ ಸಂಜೆ ಇವುಗಳನ್ನು ನಿಲ್ಲಿಸಲಾಗಿತ್ತು.

ಉಪಾಧ್ಯಾಯರ ಮುಷ್ಕರ ಮಾತ್ರ ಮುಂದುವರಿಯುತ್ತಲಿದೆ

ಬೌದ್ಧರು ಧರ್ಮಯುದ್ಧ ನಡೆಸಬೇಕು

ಸಿಂಹಳದಲ್ಲಿರುವ ಭಾರತೀಯರ ಬಗ್ಗೆ ಎರಡು ರಾಷ್ಟ್ರಗಳಿಗೆ ಆಗಿರುವ ಒಪ್ಪಂದವು ಸಿಂಹಳದ ಸ್ವಾತಂತ್ರ್ಯಕ್ಕೂ ಮತ್ತು ಬೌದ್ಧಮತಕ್ಕೂ ವಿಪತ್ಕಾರಿ ಆಗಿಯೆಂದೂ ಆದ್ದರಿಂದ ಬೌದ್ಧಮತವನ್ನು ರಕ್ಷಿಸಲು ಭಿಕ್ಷುಗಳು ಧರ್ಮಯುದ್ಧ ನಡೆಸಬೇಕೆಂದೂ ಅಲ್ಲಿನ ಪಾರ್ಲಿಮೆಂಟ್ ವಿರೋಧ ಪಕ್ಷದ ನಾಯಕ ಶ್ರೀ ಬಂಡಾರನಾಯಕೆಯವರು ಹೇಳಿದ್ದಾರೆ.

ನೂತನ ಮಂತ್ರಿ ಮಂಡಲ

ನೇಪಾಳದಲ್ಲಿ ಅಲ್ಲಿಯ ದೊರೆ ತ್ರಿಭುವನರವರು ೭ ಮಂತ್ರಿಗಳುಳ್ಳ ನೂತನ ಸಚಿವ ಮಂಡಲಿಯನ್ನು ರಚಿಸಿದ್ದಾರೆ. ಇಲ್ಲಿಯವರೆಗೆ ಪ್ರಧಾನಿಯಾಗಿದ್ದ ಶ್ರೀ ಎಂ. ಪಿ ಕೊಯಿರಾಲಾರವರು ಮುಂದೆಯೂ ಪ್ರಧಾನಿಯಾಗಿಯೇ ಇರುದ್ದಾರೆ.

ರೈಲ್ವೆ ಬಡ್ಜೆಟ್ಟು

ಲೋಕಸಭೆಯಲ್ಲಿ ಕೇಂದ್ರ ರೈಲ್ವೆ ಸಚಿವ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ರೈಲ್ವೆ ಶಾಖಾ ಬಡ್ಜೆಟ್ಟನ್ನು ಈ ಮಧ್ಯಾನ್ಹ ಮಂಡಿಸಿದರು.

ಚೀಣಾದೊಡನೆ ಚರ್ಚೆ

ಕೊರಿಯಾ ಮತ್ತು ಇಂಡೋ ಚೀಣಾಗಳ ಬಗ್ಗೆ ಚೀಣಾದೊಂದಿಗೆ ಬರುವ ಏಪ್ರಿಲ್ ತಿಂಗಳಿನಲ್ಲಿ ಜಿನೀವಾದಲ್ಲಿ ಸಮ್ಮೇಳನ ನಡೆಸಲು ಬರ್ಲಿನ್‌ನ್ನಲ್ಲಿ ಸೇರಿರುವ ಚತುರಾಷ್ಟ್ರ ವಿದೇಶಾಂಗ ಸಚಿವರುಗಳು ಒಪ್ಪಿಗೆಗೆ ಬಂದಿರುವರೆಂದು ವರದಿಯಾಗಿದೆ.

ಸರ್ಕಾರ ಖಂಡನಾ ನಿರ್ಣಯಕ್ಕೆ ಸೋಲು

ಕಲ್ಕತ್ತಾದಲ್ಲಿ ನಡೆದ ಗೋಳಿಬಾರು ಪ್ರಕರಣದ ಬಗ್ಗೆ ವಿರೋಧಪಕ್ಷದ ಡಾ॥ ಲಂಕಾಸುಂದರವರು ಮಂಡಿಸಿದ ಸರ್ಕಾರವನ್ನು ಖಂಡಿಸುವ ನಿಲುವಳಿ ಸೂಚನೆಯು ನಿನ್ನೆ ಲೋಕಸಭೆಯಲ್ಲಿ ಚರ್ಚೆಯಾಗಿ, ಬಹುಮತದಿಂದ ಅದು ಬಿದ್ದು ಹೋಯಿತು. ನಿಲುವಳಿ ಸೂಚನೆಯಾದರೂ ಸರ್ಕಾರವನ್ನು ಖಂಡಿಸುವ ನಿರ್ಣಯವೆಂದು ಅದನ್ನು ಭಾವಿಸಲಾಗಿತ್ತು.

ಪಾದ್ರಿಗಳು ಧರ್ಮಬೋಧೆ ನಡೆಸಲಿ, ಆದರೆ ಮತಾಂತರ ಕಾರ್ಯ ಬೇಡ

ರಾಷ್ಟ್ರಾಧ್ಯಕ್ಷರ ಹಿತೋಕ್ತಿ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದರವರು ಅಸ್ಸಾಂ ಪ್ರಾಂತ್ಯದಲ್ಲಿ ೯ ದಿನಗಳ ಪ್ರವಾಸವನ್ನು ಕೈಗೊಂಡಿರುವರಷ್ಟೆ.

ನಿನ್ನೆಯದಿನ ಅವರು ಗೋರಬೆಟ್ಟ ಪ್ರದೇಶದಲ್ಲಿ ಪ್ರವಾಸಮಾಡುತ್ತಾ ಅಲ್ಲಿಯ ಜನರು ಒಪ್ಪಿಸಿದ ಬಿನ್ನವತ್ತಳೆಗಳನ್ನು ಸ್ವೀಕರಿಸಿದರು. ಅಲ್ಲಿ ಒಂದು ಭಾರಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ ಕ್ರೈಸ್ತ ಪಾದ್ರಿಗಳು ಧರ್ಮಬೋಧೆ ಮತ್ತು ಸಮಾಜಸೇವಾಕಾರ್ಯಗಳಲ್ಲಿ ನಿರತರಾಗಬಹುದು. ಅವರವರ ಧರ್ಮವನ್ನು ಅವಲಂಬಿಸಲು ರಾಜ್ಯಾಂಗದಲ್ಲಿ ಎಲ್ಲರಿಗೂ ಸಮಾನ ಹಕ್ಕನ್ನು ಕಲ್ಪಿಸಲಾಗಿದೆ. ಆದರೆ ಇತರರನ್ನು ತಮ್ಮ ಮತಕ್ಕೆ ಮತಾಂತರ ಮಾಡಿಕೊಳ್ಳುವ ಕಾರ್ಯದಲ್ಲಿ ಮಾತ್ರ ತೊಡಗಬಾರದು ಎಂದು ಹಿತನುಡಿದರು.

ಕಮ್ಯೂನಿಸ್ಟ್ ಪಕ್ಷವನ್ನು ನಿಷೇಧಿಸಬೇಕು ?

ಲೋಕಸಭೆಯಲ್ಲಿ ನಿನ್ನೆಯದಿನ ಕಾಂಗ್ರೆಸ್ ಸದಸ್ಯ ಡಾ॥ ಸತ್ಯನಾರಾಯಣಸಿನ್ಹರವರು ಮಾತನಾಡುತ್ತಾ ಕಮ್ಯೂನಿಸ್ಟ್ ಪಕ್ಷವು ಪ್ರಜಾಸತ್ತೆಯ ವಾತಾವರಣದಲ್ಲಿ ಹೊಂದಿಕೊಳ್ಳುವುದಿಲ್ಲ. ದೌರ್ಜನ್ಯ ಕೃತ್ಯಗಳಲ್ಲೇ ನಿರತವಾಗಿರುತ್ತದೆ. ಆದ್ದರಿಂದ ಅದನ್ನು ಏಕೆ ನಿಷೇಧಿಸಬಾರದು ಎಂದು ಹೇಳಿದರು.

ಜಿಲ್ಲಾ ಬೋರ್ಡಿನ ಸಭೆ

ಮೈಸೂರು ೧೯

ಮೈಸೂರು ಜಿಲ್ಲಾ ಬೋರ್ಡಿನ ವಿಶೇಷ ಸಭೆಯು ನಿನ್ನೆ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಬೋರ್ಡಿನವರು ಅನೇಕ ಅಭಿವೃದ್ಧಿ ಕಾರ್ಯಗಳಿಗಾಗಿ ದಾನಿಗಳು ಸಹಾಯ ಮಾಡಿದ್ದಾರೆಂದೂ, ಅವುಗಳ ಕೆಲಸ ಇನ್ನೂ ಪೂರೈಸಿಲ್ಲವೆಂದೂ, ಆದ್ದರಿಂದ ಮುಂದಿನ ಸಾಲಿನ ಬಡ್ಜೆಟ್ಟನ್ನು ತಾವೇ ಸಿದ್ಧಪಡಿಸುವುದು ಸೂಕ್ತವೆಂದೂ ಅಧ್ಯಕ್ಷರು ಸೂಚನೆ ಇತ್ತವೇಳೆ, ಇದೇ ೨೮ ನೇ ತಾರೀಖು ಬಡ್ಜೆಟ್ ಪರಿಶೀಲನೆಗಾಗಿ ವಿಶೇಷ ಸಭೆ ಕರೆಯಬೇಕೆಂದು ನಿರ್ಧರಿಸಲಾಯಿತು.

ಕಳೆದ ಮೂರುತಿಂಗಳ ಅವಧಿಯಲ್ಲಿ ದಾನಿಗಳಿಂದ ಪ್ರಾಥಮಿಕ ಶಾಲಾಕಟ್ಟಡಗಳಿಗಾಗಿ ೧,೬೨,೯೪೪ ರೂ.ಗಳು ಬಂದಿವೆಯೆಂದು ಅಧ್ಯಕ್ಷರು ತಿಳಿಸಿದರು. ತಗಡೂರಿನ ಶ್ರೀ ವೆಂಕಟಸುಬ್ಬಶೆಟ್ಟಿಯವರು ಹೆರಿಗೆ ಆಸ್ಪತ್ರೆಗಾಗಿ ೪ ಸಾವಿರ ಮತ್ತು ಸಂತೇಮೈದಾನದಲ್ಲಿ ಕುಡಿಯುವ ನೀರಿನ ವ್ಯವಸ್ಥೆಗಾಗಿ ೧ ಸಾವಿರ ರೂಗಳನ್ನು ಈಗತಾನೇ ದಾನಮಾಡಿದ್ದಾರೆಂದೂ ಶ್ರೀ ಚನ್ನಬಸಪ್ಪನವರು ತಿಳಿಸಿದರು.

ಮೈಸೂರು ಜಿಲ್ಲಾ ಬೋರ್ಡಿನವರು ನಡೆಸುವ ಕಾರ್ಯಗಳ ಬಗ್ಗೆ ಪ್ರಶಂಸೆ ಮಾಡಿ ಕಳುಹಿಸಿದ್ದ ಸರ್ಕಾರದ ಪತ್ರವನ್ನು ಅಧ್ಯಕ್ಷರು ಓದಿದರು.

ಪ್ರಾರಂಭದಲ್ಲಿ ಬೋರ್ಡಿನ ಎಕ್ಸಿಕ್ಯೂಟಿವ್ ಅಧಿಕಾರಿಗಳಾಗಿದ್ದ ಶ್ರೀ ಟಿ. ಬಿ. ನಂಜರಾಜ ಅರಸಿನವರ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

ಇಂಗ್ಲೀಷ್‌ನಲ್ಲಿ ಪತ್ರವ್ಯವಹಾರ

ಪ್ರಮುಖ ಪತ್ರಗಳನ್ನೆಲ್ಲಾ ಇಂಗ್ಲೀಷ್ ಭಾಷೆಯಲ್ಲಿಯೇ ಕಳುಹಿಸಬೇಕೆಂದು ಬೊಂಬಾಯಿ ಸರ್ಕಾರವು ಅಹಮದಾಬಾದ್ ಪುರಸಭೆಗೆ ಸೂಚನೆಯನ್ನಿತ್ತಿದೆ. ಪತ್ರವ್ಯವಹಾರವನ್ನೆಲ್ಲಾ ಗುಜರಾತ್ ಭಾಷೆಯಲ್ಲಿ ನಡೆಯಬೇಕೆಂದು ಪುರಸಭೆಯು ಹಿಂದೆ ನಿರ್ಣಯ ಮಾಡಿ ಅದು ವಿಶೇಷ ಕಾಲವಿಳಂಬಕ್ಕೆ ಕಾರಣವಾಗಿರುವುದೆಂದು ಹೇಳಲಾಗಿದೆ.

೩೦ ಹೊಸ ಬಸ್ಸುಗಳು

ಬೆಂಗಳೂರು ೧೮

ಪ್ರಯಾಣಿಕರಿಗೆ ಇನ್ನೂ ಹೆಚ್ಚಿನ ಸೌಕರ್ಯ ಒದಗಿಸಲು ಈ ತಿಂಗಳ ಕೊನೆಯೊಳಗಾಗಿ ೩೦ ಹೊಸ ಬಸ್ಸುಗಳನ್ನು ತರಿಸಲಾಗುವುದೆಂದೂ, ಈಗಾಗಲೇ ೮ ಹೊಸ ಸರ್ಕಾರಿ ಬಸ್ಸುಗಳು ಚಲಿಸುತ್ತಿವೆಯೆಂದೂ ತಿಳಿಸಲಾಗಿದೆ.

ವಿದ್ಯಾರ್ಥಿನಿಯ ಆತ್ಮಹತ್ಯೆ

ಮೈಸೂರು ೧೯

ಕೋರ್ಟು ಎದುರಿಗೆ ಶ್ರೀ ಕಾಶಿ ಶೇಷ ಸುಬ್ರಹ್ಮಣ್ಯಶಾಸ್ತ್ರಿಗಳ ಮನೆ ಹಿಂಭಾಗದಲ್ಲಿ ವಾಸವಾಗಿದ್ದು ಎಂ. ಎ. ತರಗತಿ ವಿದ್ಯಾರ್ಥಿನಿ ಶ್ರೀಮತಿ ಪಾರ್ವತಮ್ಮ ಎಂಬ ಯುವತಿಯು ನೇಣುಹಾಕಿಕೊಂಡು ನಿನ್ನೆ ಬೆಳಗ್ಗೆ ಸುಮಾರು ೧೧ ಘಂಟೆ ಸಮಯದಲ್ಲಿ ಮೃತಪಟ್ಟಳೆಂದು ವರದಿಯಾಗಿದೆ.

ಬೆಳಗ್ಗೆ ಕಾಲೇಜಿಗೆ ಹೋಗುವುದಾಗಿ ಹೇಳಿ ಹೊರಟು, ವಾಪಸ್ಸುಬಂದು ಆತ್ಮಹತ್ಯೆ ಮಾಡಿಕೊಂಡಳೆಂದು ಹೇಳಲಾಗಿದೆ. ಆಕೆಯ ತಾಯಿ ಮನೆಯಲ್ಲಿಯಿಲ್ಲದಿದ್ದ ಸಮಯದಲ್ಲಿ ಈ ಪ್ರಸಂಗ ನಡೆಯಿತೆಂದು ಹೇಳಲಾಗಿದೆ. ಆಕೆಯು ಚಿಕ್ಕಬಳ್ಳಾಪುರದಲ್ಲಿ ಅ॥ ಇಂಜಿನಿಯರ್ ಶ್ರೀ ಪಾಳ್ಯಂರವರ ಪುತ್ರಿ.

೪ ಕೋಟಿ ರೂಪಾಯಿಗಳ ಸಾಲ

ಪ್ರಾಂತ್ಯದಲ್ಲಿ ನಡೆಯಬೇಕಾಗಿರುವ ಹಲವಾರು ಅಭಿವೃದ್ಧಿಕಾರ್ಯಗಳಿಗಾಗಿ ಪಶ್ಚಿಮ ಬಂಗಾಳ ಸರ್ಕಾರವು ೪ ಕೋಟಿ ರೂಪಾಯಿಗಳ ಸಾರ್ವಜನಿಕ ಸಾಲವನ್ನು ಎತ್ತುವುದಾಗಿ ತಿಳಿಯಬರುತ್ತದೆ.

ಮಲೇರಿಯಾ ನಿರೋಧ ಕ್ರಮ

ಬೊಂಬಾಯಿ ಪ್ರಾಂತ್ಯದಲ್ಲಿ ಮಲೇರಿಯಾ ನಿರೋಧ ಕಾರ್ಯಕ್ಕಾಗಿ ಪ್ರತಿವರ್ಷವೂ ೩೭ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡಲು ಅಲ್ಲಿಯ ಸರ್ಕಾರವು ನಿರ್ಧರಿಸಿದೆ.

ಗೋಹತ್ಯ ನಿರೋಧ ಶಾಸನ

ದನಕರು ಮುಂತಾದ ಪ್ರಾಣಿಗಳ ಕೊಲೆಯನ್ನು ನಿರೋಧಿಸುವ ಪ್ರಾಣಿ ರಕ್ಷಣಾ ಕಾನೂನನ್ನು ಭೂಪಾಲ್ ಶಾಸನ ಸಭೆಯು ಅಂಗೀಕರಿಸಿದೆ.

ಜೂನ್ ಮಾಹೆಯಲ್ಲಿ ಬ್ರಿಟಿಷ್ ಪ್ರಧಾನಿ ಚರ್ಚಿಲ್ಲರ ನಿವೃತ್ತಿ?

ಈಡನ್ ಪ್ರಧಾನಿ ಆಗುವರು

ಬ್ರಿಟೀಷ್ ರಾಣಿ ಎಲಿಜಬೆತ್‌ರವರು ತಮ್ಮ ಕಾಮನ್ವೆಲ್ತ್ ದೇಶಗಳ ಪ್ರವಾಸವನ್ನು ಪೂರೈಸಿಕೊಂಡು ಜೂನ್ ಮಾಹೆಯಲ್ಲಿ ಲಂಡನ್ನಿಗೆ ಹಿಂತಿರುಗಿದೊಡನೆಯೇ ಅಲ್ಲಿಯ ಪ್ರಧಾನಿ ಚರ್ಚಿಲ್ಲರು ತಮ್ಮ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸುವುದು ನಿಶ್ಚಯವಾಗಿರುವುದಾಗಿ ತಿಳಿಯಬರುತ್ತದೆ.

ಈಗಿನ ವಿದೇಶಾಂಗ ಸಚಿವ ಮಿ॥ ಈಡನ್ ರವರು ಪ್ರಧಾನಿ ಪಟ್ಟಕ್ಕೆ ಬರುವರೆಂದೂ ಹೇಳಲಾಗಿದೆ.

ಮಿ॥ ಈಡನ್‌ರವರು ಪ್ರಧಾನಿಯಾದರೆ ಈಗಿನ ಚರ್ಚಿಲ್ಲರ ಸಚಿವ ಸಂಪುಟದಲ್ಲಿ ಕೆಲವರು ನಿವೃತ್ತರಾಗುವರೆಂದೂ ತಿಳಿಯಬರುತ್ತದೆ.

ರಾಮರಾಜ್ಯ ಪರಿಷತ್ ನಾಯಕರ ದಸ್ತಗಿರಿ

ಕಾಶಿಯಲ್ಲಿರುವ ವಿಶ್ವನಾಥ ದೇವಾಲಯಕ್ಕೆ ಹರಿಜನರು ಪ್ರವೇಶಿಸಲು ಅಡ್ಡಿಪಡಿಸಿದರೆಂಬ ಆಪಾದನೆಮೇಲೆ ರಾಮರಾಜ್ಯ ಪರಿಷತ್ತಿನ ನಾಯಕ ಸ್ವಾಮಿ ಕರಪಾತ್ರಜಿ ಮಹಾರಾಜ್ ಮತ್ತು ೫೦ ಜನರನ್ನು ದಸ್ತಗಿರಿ ಮಾಡಲಾಗಿದೆ

ರಾತ್ರಿವೇಳೆ ಕೆಲಸಮಾಡಲು ನಿರಾಕರಣೆ

ಬೊಂಬಾಯಿ ರೇವಿನಲ್ಲಿ ಕೆಲಸಮಾಡುವವರಲ್ಲಿ ಸುಮಾರು ೧೫೦೦ ಜನರು ರಾತ್ರಿ ವೇಳೆ ಕೆಲಸಮಾಡಲು ನಿರಾಕರಿಸಿರುವುದರಿಂದ ಅಲ್ಲಿಯ ಕೆಲಸದಲ್ಲಿ ತೊಂದರೆಯುಂಟಾಗಿರುವುದಾಗಿ ತಿಳಿಯಬರುತ್ತದೆ.

ಕಿಡಿ ಪತ್ರಿಕಾ ಸಂಪಾದಕರಿಗೆ ಹೈಕೋರ್ಟಿನಿಂದ ನೋಟೀಸ್

ಬೆಂಗಳೂರು ೧೯

ಕಿಡಿ ಪತ್ರಿಕೆಯ ಮೇಲೆ ಆಕ್ಷೇಪಣೆಯ ಶಾಸನ ಪ್ರಕಾರ ಬೆಂಗಳೂರು ಸೆಷನ್ಸ್ ಕೋರ್ಟಿನಲ್ಲಿ ಹೂಡಲಾಗಿದ್ದ ಮೊಕದ್ದಮೆಗಳಿಗೆ ಸಂಬಂಧಿಸಿದಂತೆ ಪತ್ರಿಕೆಯ ಒಂದು ಸಂಚಿಕೆಯಲ್ಲಿ 'ಕಿಡಿಯ ಮೇಲೆ ಕೆಂಗಲ್ಲರ ಸರ್ಕಾರದ ದ್ವಿತೀಯ ಧಾಳಿ' ಎಂಬ ಶಿರೋನಾಮೆಯಲ್ಲಿ ಪ್ರಕಟಿಸಿದ ಲೇಖನವು ವಿಚಾರಣೆಗೆ ಅಡ್ಡಿಪಡಿಸಿತೆಂದು ನ್ಯಾಯಾಧೀಶರು ಹೈಕೋರ್ಟಿಗೆ ತಿಳಿಸಲಾಗಿ ಶ್ರೇಷ್ಠ ನ್ಯಾಯಾಲಯವು ಕಿಡಿ ಪತ್ರಿಕೆ ಸಂಪಾದಕ ಶ್ರೀ ಪಿ. ಶೇಷಪ್ಪ ಮತ್ತು ಪ್ರಕಟಣಕಾರರಾದ ಶ್ರೀ ಎಂ. ಎಸ್. ಚಿಂತಾಮಣಿಯವರಿಗೆ ನೋಟೀಸ್ ಕೊಟ್ಟಿದೆ.

ಅರಮನೆ ಮುಂದೆ ಕುಸ್ತಿ ಪ್ರಕರಣ

ಹೈಕೋರ್ಟಿನಲ್ಲಿ ರಿಟ್ ಅರ್ಜಿ ವಜಾ

ಬೆಂಗಳೂರು ೧೯

ಅರಮನೆ ಮುಂದೆ ಕಳೆದ ನವರಾತ್ರಿಯಲ್ಲಿ ಕುಸ್ತಿ ನಡೆಸಲು ಹರಿಜನರಿಗೆ ಅವಕಾಶವೀಯಲಿಲ್ಲವೆಂಬ ಸಂಬಂಧದಲ್ಲಿ ಶ್ರೀ ನಂಜಪ್ಪ ಮುಂತಾದವರು ಹೈಕೋರ್ಟಿನಲ್ಲಿ ಹೂಡಿದ್ದ ರಿಟ್ ಅರ್ಜಿಯನ್ನು ತಿರಸ್ಕರಿಸಲಾಗಿದೆ. ಪ್ರಜೆಗಳ ಮೂಲಭೂತ ಹಕ್ಕುಗಳನ್ನೂ ಕಡೆಗಣಿಸಿ ಈ ಕುಸ್ತಿಯನ್ನು ನಿಷ್ಪಲಿಲ್ಲ ಆ ದಿನ ವಿಪರೀತ ಗಲಾಟೆಯಿಂದ ಶಾಂತಿ ಮತ್ತು ಶಿಸ್ತನ್ನು ಕಾಪಾಡಲು ಅನಿವಾರ್ಯವಾಗಿ ಸರ್ಕಾರವು ಕುಸ್ತಿ ನಿಲ್ಲಿಸಬೇಕಾಯಿತೆಂದು ನ್ಯಾಯಾಧೀಶರು ತಿಳಿಸಿದ್ದಾರೆ.

ಶಾಸನಸಭೆಯಲ್ಲಿ ವಿರೋಧ ಪಕ್ಷದ ಅಸಹಕಾರ

ಓರಿಸ್ಸಾ ಗೌರ್ನರ್ ಆಗಿ ಶ್ರೀ ಕುಮಾರಸ್ವಾಮಿ ರಾಜಾರವರನ್ನು ನೇಮಕವಾಗಿರುವುದನ್ನು ಪ್ರತಿಭಟಿಸಿ ಅಲ್ಲಿನ ಶಾಸನಸಭೆಯ ಅಧಿವೇಶನದಲ್ಲಿ ಗೌರ್ನರ್ ಭಾಷಣ ಸಮಯದಲ್ಲಿ ವಿರೋಧ ಪಕ್ಷದ ಸದಸ್ಯರವರು ಸಭೆಗೆ ಹಾಜರಾಗಲಿಲ್ಲ.

ತಮ್ಮ ಕ್ಷೇತ್ರದಲ್ಲಿಯೇ ಪರಾಜಿತರಾಗಿ ಮದ್ರಾಸ್ ಮುಖ್ಯ ಮಂತ್ರಿಯಾಗಿದ್ದಾಗ ಅವರ ಮೇಲೆ ಅನೇಕ ಆಪಾದನೆಗಳು ಇರುವಂಥವರನ್ನೂ ಗೌರ್ನರ್ ಆಗಿ ನೇಮಿಸಿರುವುದನ್ನು ತಾವು ಪ್ರತಿಭಟಿಸಿ ಸಭೆಗೆ ಹಾಜರಾಗುವುದಿಲ್ಲವೆಂದು ವಿರೋಧ ಪಕ್ಷದ ನಾಯಕರು ತಿಳಿಸಿದ್ದಾರೆ.

ಟ್ಯಾಕ್ಸಿಯವರಿಗೆ ರಿಯಾಯತಿ

ಮದ್ರಾಸ್‌ನಲ್ಲಿ ಪ್ರಯಾಣಿಕರನ್ನು ಒಯ್ಯುತ್ತಿದ್ದ ದೊಡ್ಡ ಟ್ಯಾಕ್ಸಿಗಳು ಹೆಚ್ಚಿನ ಸುಂಕವನ್ನು ಕೊಡದೆ ಏಪ್ರಿಲ್ ಮಾಹೆಯಿಂದ ಡ್ರೈವರ್ ಸೇರದೆ, ೫ ಜನರನ್ನು ಒಯ್ಯಬಹುದೆಂದು ಸರ್ಕಾರ ಆಜ್ಞೆಮಾಡಿದೆ. ಟ್ಯಾಕ್ಸಿಗಳಲ್ಲಿ ೪ ಜನರು ಮಾತ್ರ ಓಡಾಡುವ ಅವಕಾಶವು ಈಗಿದೆ.

ರೇವು ಅಭಿವೃದ್ಧಿಗೆ ೧೦ ಕೋಟಿ ರೂ. ವೆಚ್ಚ

ರಂಗೂನ್ ಬಂದರನ್ನು ಅಭಿವೃದ್ಧಿಗೊಳಿಸಲು ಬರ್ಮಾ ಸರ್ಕಾರವು ಮುಂಬರುವ ೩ ವರ್ಷಗಳಲ್ಲಿ ೧೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಿದೆ.

ಆಂಧ್ರಕ್ಕೆ ೩॥ ಕೋಟಿ ರೂ. ಸಾಲ

೧೯೫೩—೫೪ನೇ ಸಾಲಿನಲ್ಲಿ ನಡೆಯಬೇಕಾದ ಹಲವಾರು ಕಾರ್ಯಗಳಿಗಾಗಿ ಕೇಂದ್ರವು ಆಂಧ್ರ ಸರ್ಕಾರಕ್ಕೆ ೩॥ ಕೋಟಿ ರೂಪಾಯಿಗಳ ಸಾಲವನ್ನು ಕೊಟ್ಟಿದೆ.

ಹೆಚ್ಚಿನ ಭೂಕಂದಾಯ

ಒಂದು ಕೋಟಿ ರೂಪಾಯಿಗಳವರೆಗೆ ಹೆಚ್ಚಿನ ವರಮಾನವನ್ನು ಪಡೆಯಲೋಸುಗ ಆಂಧ್ರ ಸರ್ಕಾರವು ಭೂಕಂದಾಯ ದರವನ್ನು ಸ್ವಲ್ಪ ಹೆಚ್ಚಿಸುವುದಾಗಿ ತಿಳಿಯಬರುತ್ತದೆ

ಚೀಣಾಕ್ಕೆ ಆಹ್ವಾನ

ಕೇಂದ್ರ ಆರೋಗ್ಯ ಸಚಿವ ರಾಜಕುಮಾರಿ ಅಮೃತಕೌರ್‌ರವರು ಚೀಣಾಕ್ಕೆ ಭೇಟಿ ಕೊಡಬೇಕೆಂದು ಅಲ್ಲಿಯ ಸರ್ಕಾರವು ಆಹ್ವಾನಿಸಿದೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ

ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ. ಒಟ್ಟು 2000 ಬಹುಮಾನಗಳು. ಬಹುಮಾನದ ಮೊಬಲಗು 45000 ರೂ. ಟಿಕೇಟು ಒಂದಕ್ಕೆ ಒಂದೇ ರೂಪಾಯಿ.

ಇಂದೇ ಟಿಕೇಟನ್ನು ಕೊಂಡು, ಸಹಾಯಮಾಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಮುನಿಸಿಪಲ್ ಆಫೀಸು
ಮೈಸೂರು ತಾ॥ ೧-೩-೧೯೫೪

ಟೆಂಡರ್ ನೋಟೀಸ್

೧೯೫೪-೫೫ ನೇ ಸಾಲಿಗೆ ಮೈಸೂರು ಸಿಟಿ ಮುನಿಸಿಪಲ್ ಆಫೀಸಿನಲ್ಲಿ ಅಜೆಂಡಾ ವಗೈರೆ ಮುದ್ರಣ ಕಾರ್ಯಗಳನ್ನು ಮಾಡಲು ಇದೇ ೧೯೫೪ ನೇ ಇಸವಿ ಫೆಬ್ರವರಿ ಮಾಹೆ ೨೭ ನೇ ತಾರೀಖು ಮಧ್ಯಾಹ್ನ ೪ ಘಂಟೆವರೆವಿಗೆ ಮೈಸೂರು ಸರ್ಕಾರದ ಮಂಜೂರು ಪಡೆದಿರುವ ಮುದ್ರಣಾಲಯದ ಮಾಲೀಕರುಗಳಿಂದ ಟೆಂಡರುಗಳನ್ನು ಸ್ವೀಕರಿಸಲಾಗುವುದು. ಈ ಟೆಂಡರುಗಳನ್ನು ಕೊಡಲು ೫೦/- (ಐವತ್ತು) ರೂಪಾಯಿಗಳನ್ನು ಮುನಿಸಿಪಲ್ ಖಜಾನೆಗೆ ಇರಸಾಲ್ ಮಾಡಿ ರಶೀದಿಯನ್ನು ಟೆಂಡರು ಜೊತೆಯಲ್ಲಿ ಲಗತ್ತಿಸಿ ಸೀಲ್ ಮಾಡಿದ ಕವರನ್ನು ಆಫೀಸಿಗೆ ಕೊಡತಕ್ಕದ್ದು. ಈ ಟೆಂಡರಿಗೆ ಸಂಬಂಧಿಸಿದ ಇತರ ವಿಷಯಗಳನ್ನು ಮುನಿಸಿಪಲ್ ಆಫೀಸಿನಲ್ಲಿ ಆಫೀಸು ನಡೆಯುವಕಾಲದಲ್ಲಿ ತಿಳಿಯಬಹುದು.

ಎನ್. ಲಕ್ಷ್ಮಣರಾವ್
ಮುನಿಸಿಪಲ್ ಕಮೀಷನರ್
ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೪೪

೨೦-೨-೧೯೫೪ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ರೈಲ್ವೆ ಅಭಿವೃದ್ಧಿಗಾಗಿ ೯೫ ಕೋಟಿ ರೂಪಾಯಿಗಳು

ಪ್ರಯಾಣದರ ಹೆಚ್ಚುವುದಿಲ್ಲ : ಹಲವಾರು ರಿಯಾಯಿತಿಗಳು : ಪಾರ್ಲಿಮೆಂಟಿನಲ್ಲಿ ರೈಲ್ವೆ ಬಡ್ಜೆಟ್

ಮುಂದಿನ ಸಾಲಿನಲ್ಲಿ ಭಾರತ ಸರ್ಕಾರವು ರೈಲ್ವೆ ಅಭಿವೃದ್ಧಿ ಕಾರ್ಯಗಳಿಗಾಗಿ ೯೫ ಕೋಟಿ ರೂಪಾಯಿಗಳನ್ನು ಮೀಸಲಾಗಿಟ್ಟಿರುವುದಾಗಿಯೂ, ಪ್ರಯಾಣಿಕರಿಗೆ ಕೆಲವು ರಿಯಾಯಿತಿಗಳನ್ನು ಕೊಡಲು ವ್ಯವಸ್ಥೆ ಮಾಡುವುದಾಗಿಯೂ ರೈಲ್ವೆ ಸಚಿವ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ನಿನ್ನೆದಿನ ಪಾರ್ಲಿಮೆಂಟಿನಲ್ಲಿ ರೈಲ್ವೆ ಬಡ್ಜೆಟ್ಟನ್ನು ಮಂಡಿಸುತ್ತಾ ತಿಳಿಸಿದರು.

ಮುಂದಿನ ಸಾಲಿನಲ್ಲಿ ರೈಲ್ವೆಯಿಂದ ೫ ಕೋಟಿ ೧೪ ಲಕ್ಷ ರೂಪಾಯಿಗಳ ನಿವ್ವಳ ಹೆಚ್ಚುವರಿಯು ಬರುವುದಾಗಿ ಅಂದಾಜು ಮಾಡಲಾಗಿದೆ. ಹಿಂದೆ ಯಾವಾಗಲೂ ಈರೀತಿ ಹೆಚ್ಚುವರಿ ಬಂದಿಲ್ಲ. ನಿವ್ವಳ ವರಮಾನವು ಸುಮಾರು ೪೦ ಕೋಟಿ ೬೪ ಲಕ್ಷ ರೂಪಾಯಿಗಳೆಂದೂ ಅದರಲ್ಲಿ ಸರ್ಕಾರಕ್ಕೆ ಕೊಡುವ ಲಾಭಾಂಶ ೩೫ ಕೋಟಿ ೪೦ ಲಕ್ಷ ರೂಪಾಯಿಗಳನ್ನು ಕೊಟ್ಟಮೇಲೆ ಅಷ್ಟು ನಿವ್ವಳ ನಫೆಯು ಬರುವುದಾಗಿಯೂ ಸಚಿವರು ತಿಳಿಸಿದ್ದಾರೆ.

ಮುಂದಿನ ಸಾಲಿನಲ್ಲಿ ರೈಲ್ವೆ ಪ್ರಯಾಣದರ ಮತ್ತು ಸಾಗಾಣಿಕೆ ದರಗಳಲ್ಲಿ ಬದಲಾವಣೆಯೇನೂ ಇರುವುದಿಲ್ಲ. ಆದರೆ ಪ್ರವಾಸಿಗರಿಗೆ ಮತ್ತು ವಿದ್ಯಾರ್ಥಿಗಳಿಗೆ ಹಲವು ರಿಯಾಯತಿಗಳನ್ನೂ ಕೊಡಲಾಗುತ್ತದೆ. ೨, ಇಂಟರ್ ಮತ್ತು ೩ ನೇ ತರಗತಿಯಲ್ಲಿ ೧೫೦೦ ಕ್ಕಿಂತ ಹೆಚ್ಚು ಮೈಲಿ ಪ್ರವಾಸಮಾಡುವವರಿಗೆ ೩ ದರ, ವಿದ್ಯಾರ್ಥಿಗಳು ಪ್ರವಾಸ ಮಾಡುವಾಗ ೪ ಜನರು ಒಟ್ಟಿಗೆ ಹೊರಟರೇ ರಿಯಾಯಿತಿ ಸೌಕರ್ಯ (ಈಗ ೧೦ ಜನಗಳ ಮೇಲ್ಪಟ್ಟು ಹೋಗಬೇಕಾಗಿದೆ.) ೩೦ ಮೈಲಿಯಲ್ಲಿಂದ ಶಾಲೆಗಳಿಗೆ ಹೋಗುವ ವಿದ್ಯಾರ್ಥಿಗಳಿಗೆ ತಿಂಗಳೊಂದಕ್ಕೆ ಕೇವಲ ಸಾಮಾನ್ಯ ದರದ ೧೨ ರಷ್ಟು ಮುಂತಾದ ಹಲವಾರು ರಿಯಾಯಿತಿಗಳನ್ನು ಅವರು ಪ್ರಕಟಪಡಿಸಿದರು.

ಪ್ರವಾಸಿಗರಿಗೆ ಹೆಚ್ಚಿನ ರೈಲುಗಳ ವ್ಯವಸ್ಥೆ, ೩ ನೇ ತರಗತಿ ಗಾಡಿಗಳಲ್ಲಿ ಫ್ಯಾನ್ ಮುಂತಾದ ಹಲವಾರು ಸೌಕರ್ಯಗಳು ಎಲ್ಲವನ್ನೂ ಇನ್ನು ಹೆಚ್ಚಾಗಿ ಕಲ್ಪಿಸಲಾಗುತ್ತದೆ.

ರೈಲ್ವೆ ನೌಕರರಿಗೆ ವಾಸಕ್ಕಾಗಿ ಗೃಹ ನಿರ್ಮಾಣ ಕಾರ್ಯವನ್ನು ಏರ್ಪಡಿಸಲಾಗುತ್ತದೆ. ಈ ಕಾರ್ಯವನ್ನು ಸಾಧ್ಯವಾದಷ್ಟು ಸಣ್ಣಸಣ್ಣ ನಿಲ್ದಾಣಗಳಲ್ಲಿ ವ್ಯವಸ್ಥೆ ಮಾಡಲಾಗುತ್ತದೆ.

ಕಲ್ಕತ್ತಾ ಉಪನಗರದಲ್ಲಿ ವಿದ್ಯುತ್ ರೈಲು, ಪಠಾಣಕೋಟಿ ಮತ್ತು ಮಾಧವಪುರಗಳ ನಡುವೆ ಬ್ರಾಡ್‌ಗೇಜು ಮುಂತಾದುವು ಹೊಸ ಹಿರಿಯ ಕಾರ್ಯಗಳಿರುತ್ತವೆ.

ಪಂಚವಾರ್ಷಿಕ ಯೋಜನೆಯಲ್ಲಿ ರೈಲ್ವೆ ಪ್ರಗತಿಗಾಗಿ ೪೦೦ ಕೋಟಿ ರೂಪಾಯಿಗಳನ್ನು ನಿಗದಿ ಮಾಡಿರುವುದಾಗಿಯೂ ಸಚಿವರು ತಿಳಿಸಿದರು.

ಚಿತ್ತರಂಜನ ರೈಲ್ವೆ ಕಾರ್ಖಾನೆಯಲ್ಲಿ ಪ್ರತಿ ವರ್ಷವೂ ೨೦೦ ಇಂಜನ್ನುಗಳ ತಯಾರಿಕೆಗೆ ವ್ಯವಸ್ಥೆ ಮಾಡಲಾಗಿದೆಯೆಂದೂ ಅವರು ಹೇಳಿದರು.

ರಷ್ಯದ ಸಾಂಸ್ಕೃತಿಕ ನಿಯೋಗ

ಮೈಸೂರು ೨೦

ಭಾರತದಲ್ಲಿ ಪ್ರವಾಸಮಾಡುತ್ತಿರುವ ರಷ್ಯದ ಸಾಂಸ್ಕೃತಿಕ ನಿಯೋಗದವರ ಗೌರವಾರ್ಥವಾಗಿ ನಾಳೆ ಸಂಜೆ ೫ ಗಂಟೆಗೆ ನಗರದ ಪುರಸಭೆಯವರು ಒಂದು ಸತ್ಕಾರ ಕೂಟವನ್ನು ಪುರಸಭಾ ಕಛೇರಿಯಲ್ಲಿ ಏರ್ಪಡಿಸಿದ್ದಾರೆ

ನಿಯೋಗದವರು ನಾಳೆ ಬೆಳಗ್ಗೆ ಬೆಂಗಳೂರಿನಿಂದ ಆಗಮಿಸಿ, ಬೃಂದಾವನ ಮತ್ತು ಇತರ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಕೊಡುವರು.

ರಾಜಪ್ರಮುಖರನ್ನೂ ನಿಯೋಗದವರು ಕಾಣಲಿದ್ದಾರೆ. ಅದೇ ದಿನ ರಾತ್ರಿ ಬೆಂಗಳೂರಿಗೆ ಹಿಂತಿರುಗುವರು.

ಮೋಟಾರು ಕೆಲಸಗಾರರ ಮುಷ್ಕರ

ಮೈಸೂರು ೨೦

ಮುಂದಿನ ತಿಂಗಳು ೧ ನೇ ತಾರೀಖಿನಿಂದ ಮುಷ್ಕರ ಹೂಡಬೇಕೆಂದು ಮೈಸೂರು ಜಿಲ್ಲಾ ಮೋಟಾರು ಕೆಲಸಗಾರರ ಸಂಘದವರು ನಿರ್ಧರಿಸಿದ್ದಾರಷ್ಟೆ. ಈ ಸಂಬಂಧದಲ್ಲಿ ಸಂಘದ ಅಧಿಕಾರಿವರ್ಗದವರು ಒಂದು ಮನವಿ ಹೊರಡಿಸಿ, ಈ ಮುಷ್ಕರದಿಂದ ಸಾರ್ವಜನಿಕರಿಗೆ ತೊಂದರೆ ಆಗುವುದಾದರೂ ಅದನ್ನು ಮನ್ನಿಸಿ ಜನರು ಕೆಲಸಗಾರರ ನ್ಯಾಯ ಬದ್ಧವಾದ ಹೋರಾಟಕ್ಕೆ ಸಂಪೂರ್ಣ ನೆರವುನೀಡಬೇಕೆಂದೂ, ಕೆಲಸಗಾರರು ಶಾಂತಿ ಮತ್ತು ಶಿಸ್ತಿನಿಂದ ನಡೆದುಕೊಂಡು ಮುಷ್ಕರವನ್ನು ಯಶಸ್ವಿಯಾಗಿ ಮಾಡಬೇಕೆಂದೂ ತಿಳಿಸಿದ್ದಾರೆ.

ವರ್ತಕರಿಗೆ ಜುಲ್ಮಾನೆ

ಮೈಸೂರು ೨೦

ರಾಜಧಾನಿಯ ವಾಣೀವಿಲಾಸ ಮಾರ್ಕೆಟ್‌ನಲ್ಲಿ ವರ್ತಕರಾದ ಶ್ರೀ ಜಿ. ಆರ್. ವರದರಾಜಶೆಟ್ಟರು ಅಂಗಡಿ ಕಾನೂನು ಉಲ್ಲಂಘನೆ ಮಾಡಿದರೆಂದು ಅವರಿಗೆ ೧೦ ರೂ. ಜುಲ್ಮಾನೆಯನ್ನು ನಗರದ ದ್ವಿತೀಯ ನ್ಯಾಯಾಧೀಶರು ವಿಧಿಸಿದ್ದಾರೆ.

ದಿನಸಿ ಅಂಗಡಿಗೆ ಬೆಂಕಿ

ಮೈಸೂರು ೨೦

ಹಳೇ ಸಂತೇಪೇಟೆಯಲ್ಲಿರುವ ದೇವಸ್ಥಾನದ ಪಕ್ಕದಗಲ್ಲಿಯಲ್ಲಿರುವ ಶ್ರೀ ರಾಮಯ್ಯನವರ ದಿನಸಿ ಅಂಗಡಿಗೆ ನಿನ್ನೆ ಬೆಳಗಿನ ಝಾವ ೩-೩೦ ಗಂಟೆ ಸಮಯದಲ್ಲಿ ಬೆಂಕಿ ಹತ್ತಿಕೊಂಡಿರುವುದನ್ನು ಗಸ್ತಿನ ಮೇಲಿದ್ದ ದೇವರಾಜಾ ಪೋಲೀಸಿನವರು ಕಂಡು ಕೂಡಲೇ ಅಗ್ನಿಶಮನ ದಳದವರಿಗೆ ತಿಳಿಸಲಾಗಿ ಅವರು ಕೂಡಲೇ ಬಂದು ಬೆಂಕಿಯನ್ನು ಆರಿಸಿದರು. ೩೦೦ ರೂ. ನಷ್ಟ ಸಂಭವಿಸಿರುವುದೆಂದು ಹೇಳಲಾಗಿದೆ.

ಕನ್ನಡದ ವಿಶ್ವಕೋಶ

ಮೈಸೂರು ೨೦

ಮೈಸೂರು ವಿಶ್ವವಿದ್ಯಾನಿಲಯದವರು ೧೨ ಲಕ್ಷ ರೂಗಳ ಖರ್ಚಿನಲ್ಲಿ ಕನ್ನಡ ವಿಶ್ವಕೋಶವೊಂದನ್ನು ಸಿದ್ಧಗೊಳಿಸಲು ಶ್ರೀಗಳಾದ ಕೆ ವಿ. ಪುಟ್ಟಪ್ಪ, ಕೆ. ಸುಬ್ಬರಾಯಾಚಾರ್, ವಿ. ಎಲ್. ಡಿಸೌಜಾ, ಜೆ. ಬಿ. ಮಲ್ಲಾರಾಧ್ಯ, ಎಂ. ಪಿ. ಎಲ್. ಶಾಸ್ತ್ರಿ ಮತ್ತು ಗೊರೂರು ರಾಮಸ್ವಾಮಿ ಅಯ್ಯಂಗಾರ್ ರವರುಗಳನ್ನೊಳಗೊಂಡ ಒಂದು ಸಲಹಾಸಮಿತಿಯನ್ನು ರಚಿಸಿದ್ದಾರೆ.

ಬೆಂಗಳೂರಿನಲ್ಲಿ ರೇಡಿಯೋ ಕೇಂದ್ರ

೫೦ ಕಿಲೋವಾಟ್ ಶಕ್ತಿಯುಳ್ಳ ಭಾರಿ ರೇಡಿಯೋ ಕೇಂದ್ರವನ್ನು ಬೆಂಗಳೂರಿನಲ್ಲಿ ಸದ್ಯದಲ್ಲೇ ಸ್ಥಾಪಿಸಲಾಗುವುದೆಂದು ಹೇಳಲಾಗಿದೆ. ಈ ಸಂಬಂಧದಲ್ಲಿ ಅಖಿಲಭಾರತ ರೇಡಿಯೋ ಡೆಹಲಿ ಕೇಂದ್ರದ ಇಂಜನಿಯರ್ ಶ್ರೀ ರಾಮ್‌ಲಾಲ್ ಸೂರಿಯವರು ಈಗ ನಗರಕ್ಕೆ ಆಗಮಿಸಿ ಸ್ಥಳಪರಿಶೋಧನೆ ಮಾಡುತ್ತಿದ್ದಾರೆ.

ಐಸನ್‌ಹೋವರ್ ಸಂದೇಶ

ಕೊರಿಯಾದಲ್ಲಿ ಯುದ್ಧಖೈದಿಗಳ ಮೇಲ್ವಿಚಾರಣಾ ಕಾರ್ಯದಲ್ಲಿ ಭಾರತ ಸೈನ್ಯವು ಉತ್ತಮಸೇವೆಯನ್ನು ಸಲಿಸಿತೆಂದು ಅಮೆರಿಕಾಧ್ಯಕ್ಷ ಐಸನ್‌ಹೋವರ್‌ರವರು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿ ಪ್ರಧಾನಿ ನೆಹರೂರವರಿಗೆ ತಮ್ಮ ಮತ್ತು ತಮ್ಮ ದೇಶದಪರವಾಗಿ ಒಂದು ಸಂದೇಶವನ್ನು ಕಳುಹಿಸಿದ್ದಾರೆ.

● ಬೊಂಬಾಯಿ ಪ್ರಾಂತ್ಯದಲ್ಲಿ ಅಸ್ಪೃಶ್ಯತೆಯ ನಿವಾರಣೆಗಾಗಿ ಅಲ್ಲಿಯ ಸರ್ಕಾರವು ೧೪ ನೂತನ ಯೋಜನೆಗಳನ್ನು ತಯಾರಿಸಿರುವುದಾಗಿ ತಿಳಿಯಬರುತ್ತದೆ.

ಯೋಗಶಾಲೆ ಸ್ಥಾಪನೆಗೆ ಒತ್ತಾಯ

ಮೈಸೂರು ೨೦

ನಗರದ ಪುರಸಭೆಯ ಅಧಿವೇಶನವು ಇದೇ ೨೭ ನೇ ತಾರೀಖು ಮಧ್ಯಾಹ್ನ ೪ ಘಂಟೆಗೆ ನಡೆಯುವುದು.

ನಗರದಲ್ಲಿರುವ ಎಲ್ಲಾ ಜಾಡಮಾಲೀಗಳಿಗೂ ಉಚಿತ ಗೃಹಗಳನ್ನು ಒದಗಿಸಬೇಕೆಂದು ಶ್ರೀ ಪಿ. ಎಲ್. ಕುಮಾರಸ್ವಾಮಿಯವರು ನಿರ್ಣಯವೊಂದನ್ನು ಕಳುಹಿಸಿದ್ದಾರೆ.

ಮೈಸೂರು ನಗರದಲ್ಲಿ ಒಂದು ಈಜುವ ಕೊಳವನ್ನು ಪುರಸಭೆಯವರು ರಚಿಸಬೇಕೆಂದು ಶ್ರೀ ಎಂ. ಎನ್. ತಿಮ್ಮಯ್ಯನವರು ಒಂದು ಯೋಗಶಾಲೆಯನ್ನು ಸ್ಥಾಪಿಸಬೇಕೆಂದು ಶ್ರೀ ಬಿ. ಜಿ. ದಾಸ್‌ರವರು ನಿರ್ಣಯಮಂಡಿಸಿದ್ದಾರೆ.

ನಗರದಲ್ಲಿ ಬಡಜನರು ವಾಸಿಸುವ ಸ್ಥಳ ಮತ್ತು ಸ್ಲಂ ಪ್ರದೇಶಗಳಿಗೆ ಶ್ರೀಮನ್ಮಹಾರಾಜರವರು ಭೇಟಿಕೊಡಬೇಕೆಂದು ಪ್ರಾರ್ಥಿಸುವ ನಿರ್ಣಯವನ್ನು ಶ್ರೀ ಮೀರ್ ನೂರ್ ಹುಸೇನ್‌ರು ತಂದಿದ್ದಾರೆ.

ನಗರದಲ್ಲಿರುವ ಸ್ಲಂ ಪ್ರದೇಶಗಳನ್ನು ನಿರ್ಮೂಲಮಾಡಿ ಅಲ್ಲಿ ನೂತನ ಕಟ್ಟಡಗಳನ್ನು ಕಟ್ಟಲು ಕೂಡಲೇ ರಚಿಸಬೇಕೆಂದು ಫಾದರ್ ಆಂಟಿಯೋರವರು ಸೂಚಿಸಿದ್ದಾರೆ.

ಕಲಾಮಹೋತ್ಸವ

ಮೈಸೂರು ೨೦

ಮೈಸೂರು ಜಿಲ್ಲಾ ಅಮೆಚೂರ್ ಅಥ್ಲೆಟಿಕ್ ಸಂಘದ ಆಶ್ರಯದಲ್ಲಿ ನಗರದ ಕ್ರಾಫರ್ಡ್ ಭವನದಲ್ಲಿ ಏರ್ಪಡಿಸಿರುವ ೩ ದಿನಗಳ ಕಲಾ ಮಹೋತ್ಸವವು ನಿನ್ನೆಯಿಂದ ಪ್ರಾರಂಭವಾಯಿತು. ಸಂಗೀತ, ನಾಟಕ, ನೃತ್ಯ, ವ್ಯಾಯಾಮ ಮತ್ತು ಸುಂದರ ದೇಹದ ಪ್ರದರ್ಶನ ಮುಂತಾದ ಮನರಂಜನೆ ಕಾರ್ಯಕ್ರಮಗಳನ್ನು ಪ್ರತಿದಿನ ಸಂಜೆ ೫-೩೦ ಗಂಟೆಯಿಂದ ಏರ್ಪಡಿಸಲಾಗಿದೆ. ಪ್ರವೇಶಮೂಲಕ ಬಂದಹಣವನ್ನು ಅಂಗವಿಹೀನರ ಶಾಲೆಗೆ ಕೊಡಲಾಗುವುದು.

● ಕಡಪ, ಕರ್ನೂಲ್ ಮತ್ತು ಅನಂತಪುರ ಜಿಲ್ಲೆಗಳಿಗಾಗಿ ಒಟ್ಟು ೨೫೦೦ ಕಿಲೋವಾಟ್ಸ್ ವಿದ್ಯುಚ್ಛಕ್ತಿಯನ್ನು ಜೋಗ್‌ನಿಂದ ೩ ವರ್ಷಗಳ ಕಾಲ ಒದಗಿಸಬೇಕೆಂದು ಮೈಸೂರು ಸರ್ಕಾರವನ್ನು ಆಂಧ್ರ ಕೇಳಿದೆ.

ಪಾಕೀಸ್ತಾನ-ಟರ್ಕಿಗಳ ನಡುವೆ ಒಪ್ಪಂದ ಸಹಿಯಾಯಿತು

ಅಮೆರಿಕಾ ಮಿಲಿಟರಿ ನೆರವಿಗೆ ಅಡಚಣೆ ತಪ್ಪಿತು

ಬ್ರಿಟಿಷ್ ವೃತ್ತಗಳಲ್ಲಿ ಈ ಒಪ್ಪಂದಕ್ಕೆ ಸ್ವಾಗತ

ಪಾಕೀಸ್ತಾನ ಮತ್ತು ಟರ್ಕಿರಾಷ್ಟ್ರಗಳ ನಡುವೆ ನಿಕಟಸ್ನೇಹ ಮತ್ತು ಸಹಕಾರಗಳಿಗಾಗಿ ಒಂದು ಒಪ್ಪಂದವು ಸಹಿಯಾಯಿತೆಂದು ಕರಾಚಿ ಮತ್ತು ಅಂಕಾರಾಗಳಲ್ಲಿ ನಿನ್ನೆಯದಿನ ಪ್ರಕಟವಾಗಿದೆ.

ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಉನ್ನತಿಕಾಗಿ ಈ ಒಪ್ಪಂದವು ಆಗಿರುವುದಾಗಿ ಈ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಈ ಸಂಬಂಧದಲ್ಲಿ ಪಾಕ್‌ಪ್ರಧಾನಿ ಮಹಮುದ್ ಅಲಿಯವರು ಒಂದು ಹೇಳಿಕೆಯನ್ನು ಕೊಡುತ್ತ ಮುಸ್ಲಿಂ ದೇಶಗಳನ್ನು ಪ್ರಬಲಗೊಳಿಸಲು ಈ ಕಾರ್ಯವನ್ನು ಎಸಗಿರುವುದಾಗಿಯೂ ಈ ವಿಷಯಗಳಲ್ಲಿ ಸೂಕ್ತ ಪರಿಶೀಲನೆ ಈಗಾಗಲೇ ನಡೆಯುತ್ತಿರುವುದಾಗಿಯೂ ತಿಳಿಸಿದ್ದಾರೆ.

ರಾಜಕೀಯ ಒಪ್ಪಂದವೆಂದು ಇದರಲ್ಲಿ ನಮೂದಿಸಿದುವುದರಲ್ಲಿ ರಕ್ಷಣೆಯೂ ಸೇರಿರುವುದಾಗಿ ಬಲ್ಲವೃತ್ತಗಳಲ್ಲಿ ಹೇಳಲಾಗುತ್ತಿದೆ.

ಅಮೆರಿಕವು ಪಾಕೀಸ್ತಾನಕ್ಕೆ ಮಿಲಟರಿ ನೆರವನ್ನು ಕೊಡಲು ಇದ್ದ ಅಡಚಣೆಗಳೆಲ್ಲವೂ ಈ ಒಪ್ಪಂದದ ಪರಿಣಾಮವಾಗಿ ತಪ್ಪಿಹೋಗಿ ಸುಗಮವಾಗಿ ಇನ್ನು ಕಾರ್ಯ ನಡೆಯಲು ಅನುಕೂಲವಾಗಿರುವುದಾಗಿ ಹೇಳಲಾಗುತ್ತಿದೆ. ಈ ಒಪ್ಪಂದವನ್ನು ಬ್ರಿಟನ್ ಸ್ವಾಗತಿಸಿರುವುದಾಗಿಯೂ ತಿಳಿಯಬರುತ್ತದೆ.

ಪಾಕೀಸ್ತಾನ ಅಮೆರಿಕಾಗಳ ನಡುವೆ ಮಿಲಿಟರಿ ಒಪ್ಪಂದ ವಿಷಯವಲ್ಲಿ ಬಹಿರಂಗ ಪ್ರಕಟಣೆಯು ಮುಂದಿನ ವಾರದ ಮೊದಲನೆ ವಾರದಲ್ಲಿ ಹೊರಬೀಳಬಹುದೆಂದು ತಿಳಿಯಬರುತ್ತದೆ.

ನಿನ್ನೆಯದಿನ ಪ್ರಧಾನಿ ನೆಹರೂರವರು ಈ ಮಿಲಿಟರಿ ನೆರವಿನ ವಿಷಯವಾಗಿ ರಾಜ್ಯ ಪರಿಷತ್ತಿನಲ್ಲಿ ಪ್ರಸ್ತಾಪಿಸುತ್ತಾ ಈ ವಿಷಯಗಳನ್ನ ಭಾರತವೊಂದೇ ಅಲ್ಲ ಏಷ್ಯಾ ಘಟನೆಗಳ ದೃಷ್ಟಿಯಲ್ಲಿ ಅತಿ ಮುಖ್ಯವಾದುದು. ಭಾರತದ ಮೇಲೂ ಇದರ ಪರಿಣಾಮ ವಿಶೇಷವಾಗಿರುತ್ತದೆ. ನಮ್ಮ ರಕ್ಷಣಾಬಲವನ್ನು ಹೆಚ್ಚಿಸಬೇಕೆಂಬ ಸಲಹೆ ಈಗಾಗಲೇ ಬರುತ್ತಿದೆ. ಅದು ತಪ್ಪುನೀತಿ. ಇದರಿಂದ ಕಾರ್ಯಸಾಧನೆಯೇನೂ ಆಗುವುದಿಲ್ಲ ಎಂದು ತಿಳಿಸಿದ್ದಾರೆ.

ಬೇಬಿ ಮೋಟಾರು ಕಾರುಗಳು

ಭಾರತದಲ್ಲಿಯೇ ತಯಾರಾಗುತ್ತಲಿರುವ ಬೇಬಿ ಮೋಟಾರು ಕಾರುಗಳು ಇದೇ ಸಾಲಿನ ಮಧ್ಯಭಾಗದಲ್ಲಿ ಮಾರಾಟಕ್ಕೆ ಸಿದ್ಧವಾಗುವುದಾಗಿ ತಿಳಿಯಬರುತ್ತದೆ

ಕಾಶ್ಮೀರ ರಾಜ್ಯಾಂಗ ಸಭೆ ನಿರ್ಧಾರ

ನಿರಾಕರಿಸಲಾಗುವುದಿಲ್ಲವೆಂದು ಪ್ರಧಾನಿ ನೆಹರೂ

ಕಾಶ್ಮೀರವು ಭಾರತದೊಡನೆ ಸೇರುವ ವಿಷಯದಲ್ಲಿ ಪ್ರಜೆಗಳಿಂದ ಚುನಾಯಿತರಾದ ರಾಜ್ಯಾಂಗ ಸಭೆಯು ಮಾಡಿರುವ ನಿರ್ಧಾರವನ್ನು ಭಾರತವು ನಿರಾಕರಿಸಲಾರದು. ಕಾಶ್ಮೀರ ವಿಷಯದಲ್ಲಿ ಭಾರತ ನೀತಿಯೇನೆಂಬುದನ್ನು ಹಲವಾರು ಸಾರಿ ವಿಶದೀಕರಿಸಲಾಗಿದೆ. ಪ್ರಜಾ ಪ್ರತಿನಿಧಿಗಳ ನಿರ್ಧಾರಕ್ಕೆ ಮನ್ನಣೆ ಕೊಡಲೇ ಬೇಕು ಆದರೆ ಅಂತರ ರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತವು ತನ್ನ ಕಟ್ಟುಪಾಡುಗಳಲ್ಲಿ ಏನನ್ನೂ ಬದಲಾಯಿಸದೆ ಪಾಲಿಸುತ್ತದೆ. ಆದರೆ ಅವುಗಳನ್ನು ಹೊಸ ಘಟನೆಗಳ ಹಿನ್ನಲೆಯಿಂದ ಪರಿಶೀಲಿಸಬೇಕಾಗಿದೆ ಎಂದು ಪ್ರಧಾನಿ ನೆಹರೂರವರು ಕಾಶ್ಮೀರವು ಭಾರತದೊಡನೆ ಸೇರಲು ಅಲ್ಲಿಯ ರಾಜ್ಯಾಂಗ ಸಭೆಯು ತೀರ್ಮಾನದ ವಿಷಯದಲ್ಲಿ ಮಾತನಾಡುತ್ತಾ ವಿಧಾನ ಪರಿಷತ್ತಿನಲ್ಲಿ ತಿಳಿಸಿದ್ದಾರೆ.

ಈ ನಿರ್ಧಾರವನ್ನು ನಿರಾಕರಿಸಬೇಕೆಂದು ಪಾಕೀಸ್ತಾನ ಪ್ರಧಾನಿ ಮಿ॥ ಮಹಮದ್ ಆಲಿಯವರು ತಮಗೆ ಸೂಚಿಸಿದ್ದರೆಂದೂ ಶ್ರೀ ನೆಹರೂ ಹೇಳಿದ್ದಾರೆ.

ಕಲ್ಕತ್ತಾ ಪರಿಸ್ಥಿತಿ

ಕಲ್ಕತ್ತಾದಲ್ಲಿ ನಿನ್ನೆಯದಿನ ಮಾಮೂಲಿನಂತೆ ಟ್ರಾಂ ಮತ್ತು ಸರ್ಕಾರಿ ಬಸ್ಸುಗಳ ಓಡಾಟ ನಡೆಯುತ್ತಿತ್ತು. ನಗರದಲ್ಲಿ ಒಂದೆಡೆ ಮಾತ್ರ ಪೊಲೀಸರ ಮೇಲೆ ಪ್ರದರ್ಶನಕಾರರು ಕಲ್ಲುಗಳನ್ನು ಎಸೆದರು. ಆದರಿಂದ ಒಬ್ಬ ಪೊಲೀಸಿನವನಿಗೆ ಘಾಯಗಳಾದವು ಮತ್ತ್ಯಾವ ಘಟನೆಗಳೂ ನಡೆಯಲಿಲ್ಲ. ಸರ್ಕಾರಿ ಕಛೇರಿಯಮುಂದೆ ಪ್ರದರ್ಶನ ನಡೆಸಿದ್ದಕ್ಕಾಗಿ ೧೯ ಜನರ ದಸ್ತಗಿರಿಗಳಾದುವು. ಉಪಾಧ್ಯಾಯರ ಮುಷ್ಕರದ ಕ್ರಿಯಾಸಮಿತಿಯ ಎಲ್ಲಾ ಸದಸ್ಯರನ್ನೂ ದಸ್ತಗಿರಿ ಮಾಡಲಾಯಿತು.

ಒಟ್ಟು ನಿನ್ನೆಯದಿನ ೯೦ ಜನರ ದಸ್ತಗಿರಿಗಳಾದುವು.

ರಾಷ್ಟ್ರಾಧ್ಯಕ್ಷರಿಗೆ ಅಭಿನಂದನೆ

ಪಾರ್ಲಿಮೆಂಟಿನ ಪ್ರಾರಂಭದಲ್ಲಿ ರಾಷ್ಟ್ರಾಧ್ಯಕ್ಷರು ಮಾಡಿದ ಭಾಷಣಕ್ಕೆ ಅವರನ್ನು ಅಭಿನಂದಿಸುವ ನಿರ್ಣಯವನ್ನು ನಿನ್ನೆಯ ದಿನ ಪ್ರಜಾಪರಿಷತ್ತು ಅಂಗೀಕರಿಸಿತು.

ಪ್ರಜಾ ಸೋಷಲಿಸ್ಟ್ ಪಕ್ಷದ ಉಮೇದುವಾರರು

ರಾಜ್ಯ ಪರಿಷತ್ತಿಗೆ ಮೈಸೂರು ಸಂಸ್ಥಾನದಿಂದ ನಡೆಯುವ ಎರಡು ಸ್ಥಾನಗಳ ಚುನಾವಣೆಯಲ್ಲಿ ಒಂದು ಸ್ಥಾನಕ್ಕೆ ಶ್ರೀ ಬಿ. ಟಿ. ರಾಮಯ್ಯನವರನ್ನು ನಿಲ್ಲಿಸಲು ಪ್ರಜಾ-ಸೋಷಲಿಸ್ಟ್ ಪಕ್ಷ ನಿರ್ಧರಿಸಿದೆ.

ಮೈಸೂರು ಶಾಸನ ಸಭೆಯ ಚುನಾವಣೆಗೆ ಶ್ರೀಗಳಾದ ಕೆ. ಚಿಕ್ಕಲಿಂಗಯ್ಯ, ಜಿ. ಸದಾಶಿವರಾವ್, ಕೆ. ವೀರಭದ್ರಪ್ಪ, ಮತ್ತು ಆರ್. ಪಿ. ರೇವಣ್ಣನವರನ್ನೂ, ಶ್ರೀ ಆರ್. ದಯಾನಂದ ಸಾಗರ್‌ರನ್ನು ಪದವೀಧರರ ಕ್ಷೇತ್ರದಿಂದಲೂ, ಶ್ರೀ ಬಿ. ಕೆ. ಪುಟ್ಟಸ್ವಾಮಯ್ಯನವರನ್ನು ಶಾಸನ ಸಭೆಯ ಚುನಾವಣಾ ಕ್ಷೇತ್ರದಿಂದಲೂ ನಿಲ್ಲಿಸಲಾಗುವುದು.

ಸಿಂಹಳಕ್ಕೆ ವಿಜಯಲಕ್ಷ್ಮಿ ರವರ ಭೇಟಿ

ವಿಶ್ವಸಂಸ್ಥೆಯ ಅಧ್ಯಕ್ಷಿಣಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರವರು ಮುಂದಿನ ತಿಂಗಳು ಆದಿಯಲ್ಲಿ ಸಿಂಹಳಕ್ಕೆ ಭೇಟಿ ಕೊಡುವರೆಂದು ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೯—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೧೪	೨೫—
ಎಳ್ಳು	೬೦—೧೨	—
ಹರಳು	೨೬—೧೨	೩೩—
ಹುಚ್ಚೆಳ್ಳು	೬೫—೧೦	೪೨—೧೪
ಹೊಂಗೆಬೀಜ	೨೩—೧೪	೨೬—೬
ಹುಣಸೆಬೀಜ	೧೨—೮	—
ಹುರುಳಿ	೨೪—೧೪	೨೯—೪
ಹೆಸರು	೩೯—	೪೪—೨
ಅವರೆ	೨೭—೧೪	೩೫—೨
ಅಲಸಂದೆ	೨೯—	೪೪—೧೪
ಉದ್ದು	—	—
ಕೊತ್ತಂಬರಿ	೨೬—೪	೨೮—
ಕಡಲೆ	೪೭—	೫೦—
ತೊಗರಿ	೨೪—೧೦	೩೦—
ಹುಣಸೆಹಣ್ಣು	೩—೪	೮—೮
ಮೆಣಸಿನಕಾಯಿ	೨೮—	೨೯—೪
ಸೀಗೆಕಾಯಿ	೪—೬	೪—೧೩
ಬೆಲ್ಲ	೪—೧೨	೫—
ತೆಂಗಿನಕಾಯಿ	೧೯೦—	೨೩೫—

.... ರಣಜಿತ್ ....
19-2-54 ರಿಂದ 2 ನೇ ವಾರ
ಶಶಿಕಲಾ, ದುರ್ಗಾಕೋಟಿ ನಟಿಸಿರುವ:-
ಚಾ ಚಾ-
-ಚೌಧರಿ

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಜಿಲ್ಲಾ ಬೋರ್ಡು ಸಭೆ

ಮೈಸೂರು ೨೦

೫೪-೫೫ ನೇ ಸಾಲಿನ ಬಡ್ಜಟ್ ಪರಿಶೀಲನೆಗಾಗಿ ಮೈಸೂರು ಜಿಲ್ಲಾಬೋರ್ಡಿನ ವಿಶೇಷ ಸಭೆಯು ಇದೇ ಮಾಹೆ ೨೮ ನೇ ತಾರೀಖು ಬೆಳಿಗ್ಗೆ ೮-೩೦ ಘಂಟೆಗೆ ಜಿಲ್ಲಾ ಭವನದಲ್ಲಿ ಸೇರುತ್ತದೆ.

ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನ

ಇದೇ ಏಪ್ರಿಲ್ ಮಾಹೆಯಲ್ಲಿ ಕೊಲಂಬೋವಿನಲ್ಲಿ ನಡೆಯಲಿರುವ ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ತಾವು ಆಹ್ವಾನಿಸಿರುವ ಪ್ರಧಾನಿಗಳೆಲ್ಲರೂ ಒಪ್ಪಿರುವುದಾಗಿ ಸಿಂಹಳ ಪ್ರಧಾನಿ ಸರ್‌ಜಾನ್ ಕೊಟೇಲವಾಲಾರವರು ಹೇಳಿದ್ದಾರೆ.

ಬೊಂಬಾಯಿ ಕಾಲೇಜುಗಳಲ್ಲಿ ಹಿಂದಿ ಮಾಧ್ಯಮ

೧೯೫೮ರ ವೇಳೆಗೆ ಬೊಂಬಾಯಿ ಪ್ರಾಂತ್ಯದಲ್ಲಿರುವ ಎಲ್ಲಾ ಕಾಲೇಜುಗಳಲ್ಲೂ ಹಿಂದಿಶಿಕ್ಷಣ ಮಾಧ್ಯಮವನ್ನಾಗಿ ಮಾಡಲು ಅಲ್ಲಿಯ ಸರ್ಕಾರವು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಈ ಸಂದರ್ಭದಲ್ಲಿ ಸಧ್ಯದಲ್ಲಿಯೇ ಎಲ್ಲಾ ಸರ್ಕಾರಿ ಕಾಲೇಜುಗಳ ಪ್ರಾಧ್ಯಾಪಕರ ಸಮ್ಮೇಳನ ಒಂದನ್ನು ಏರ್ಪಡಿಸಲಾಗುತ್ತಿದೆ.

ರೈಲ್ವೆಯ ಲಂಚರುಷುವತ್ತು ಪರಿಶೀಲನಾ ಸಮಿತಿ ಅಧ್ಯಕ್ಷತೆಗೆ ಕೃಪಲಾನಿ

ರೈಲ್ವೆ ನೌಕರರಲ್ಲಿ ಲಂಚರುಷುವತ್ತು ವಿಷಯಗಳ ಬಗ್ಗೆ ಪರಿಶೀಲನೆ ನಡೆಸಲು ರಚಿಸಿರುವ ಸಮಿತಿಯ ಅಧ್ಯಕ್ಷ ಪಂಡಿತ ಹೃದಯನಾಥ ಕುಂಜ್ರುರವರು ಪ್ರಾಂತ್ಯ ವಿಂಗಡನಾ ಸಮಿತಿಯ ಸದಸ್ಯರಾಗಿ ನೇಮಕವಾಗಿರುವುದರಿಂದ ಆಚಾರ್ಯ ಕೃಪಲಾನಿಯವರನ್ನು ಆ ಸಮಿತಿಯ ಅಧ್ಯಕ್ಷರಾಗಿ ನೇಮಿಸಲಾಗಿದೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ
ಮುಕ್ತಾಯ 31-3-1954 ಡ್ರಾಯಿಂಗ್ 19-4-1954
ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು
ಮತ್ತು
ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ
ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ
ಮೊದಲನೆ ಬಹುಮಾನ 10000 ರೂ
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪೋ॥ ೫೭೪
ರಿಜಿಸ್ಟರ್
ನಂ. ಎಂ. ೫೩೨೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೪೫

೨೨-೨-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಭಾರತಕ್ಕೆ ಕೆನಡಾ ಶುಭಾಶಯ

ಕೆನಡಾ ಪ್ರಧಾನಿ ಲಾರೆನ್ಸ್‌ರವರು ಭಾರತ ಪ್ರವಾಸಕೈಗೊಳ್ಳಲು ನಿನ್ನೆಯದಿನ ದೆಹಲಿಗೆ ಆಗಮಿಸಿದರು. ಅವರನ್ನು ಪ್ರಧಾನಿ ನೆಹರೂರವರು ವಿಮಾನನಿಲ್ದಾಣದಲ್ಲಿ ಸ್ವಾಗತಿಸಿದರು.

ಭಾರತಕ್ಕೆ ಕೆನಡಾ ದೇಶದ ಜನತೆಯ ಹೃತ್ಪೂರ್ವಕ ಶುಭಾಶಯವನ್ನು ತಾವು ತಂದಿರುವುದಾಗಿ ಅವರು ತಿಳಿಸುತ್ತಾ, ಏಷ್ಯಾದಲ್ಲಿ ಭಾರತದ ಪಾತ್ರವು ಅತ್ಯಂತ ಮುಖ್ಯವಾದುದೆಂದೂ ವಿಶ್ವದ ನಾಯಕರಲ್ಲಿ ಅಗ್ರಗಣ್ಯರಲ್ಲೊಬ್ಬರಾದ ಶ್ರೀ ನೆಹರೂರವರನ್ನು ಭೇಟಿಮಾಡಲು ತಾವು ಅತ್ಯಂತ ಹರ್ಷಿಸುವುದಾಗಿಯೂ ತಿಳಿಸಿದ್ದಾರೆ.

ಹೈದರಾಬಾದಿನಲ್ಲಿ ಹೆಚ್ಚು ಅಕ್ಕಿ ಉತ್ಪಾದನೆ

ಹೈದರಾಬಾದ್ ಪ್ರಾಂತ್ಯದಲ್ಲಿ ಕಳೆದ ಅನೇಕ ವರ್ಷಗಳಲ್ಲಿಲ್ಲದಿರುವಷ್ಟು ಅಕ್ಕಿ ಈ ಸಾಲಿನಲ್ಲಿ ಉತ್ಪತ್ತಿಯಾಗಿರುವುದಾಗಿ ಅಲ್ಲಿಯ ಆಹಾರ ಸಚಿವ ಡಾ॥ ಚೆನ್ನಾರೆಡ್ಡಿಯವರು ಹೇಳಿದ್ದಾರೆ.

ಪ್ರಾಂತ್ಯದ ಅವಶ್ಯಕತೆಗೆ ಬೇಕಾಗುವಷ್ಟನ್ನು ಇಟ್ಟುಕೊಂಡು ಹೆಚ್ಚುವರಿಯನ್ನು ಹೊರಕ್ಕೆ ಕಳುಹಿಸಲು ಸಾಧ್ಯವೆಂದೂ ಅವರು ತಿಳಿಸಿದ್ದಾರೆ.

ಚುನಾವಣೆಗಾಗಿ ವಿವಾಹ ವಿಚ್ಛೇದನ

ಬರೋಡ ಪೌರಸಭೆಯ ಚುನಾವಣೆಯಲ್ಲಿ ಸ್ಪರ್ಧಿಸಲು ಶ್ರೀ ಮಣಿಬಾಯ್ ಸೊಲಂಕಿಯವರು ತಮ್ಮ ವಿವಾಹ ವಿಚ್ಛೇದನ ಮಾಡಿಕೊಳ್ಳಬೇಕಾಯಿತೆಂದು ವರದಿಯಾಗಿದೆ. ಅವರ ಪತ್ನಿಯು ಅದೇ ಪುರಸಭೆಯಲ್ಲಿ ನೌಕರರಾಗಿರುವುದರಿಂದ ತಾವು ಚುನಾವಣೆಗೆ ನಿಲ್ಲಲು ಅನರ್ಹತೆ ಇದ್ದದ್ದರಿಂದ ಈರೀತಿ ಹೆಂಡತಿಯನ್ನೇ ಅವರು ತ್ಯಜಿಸಬೇಕಾಯಿತು

ರಾಷ್ಟ್ರೀಕರಣ

ಸರ್ಕಾರವು ಎಲ್ಲಾ ಬಾಬುಗಳಲ್ಲೂ ರಾಷ್ಟ್ರೀಕರಣ ಕಾರ್ಯವನ್ನು ಕೈಗೊಳ್ಳುವುದು ದೇಶದ ಪ್ರಗತಿಗೆ ವಿರೋಧವಾದುದು. ಜನತೆಯು ಅತಿಯಾಗಿ ಬಂಡವಾಳವನ್ನು ಹಾಕಿ ನಡೆಸಲು ಸಾಧ್ಯವಲ್ಲದ ಕೈಗಾರಿಕೆ ಮುಂತಾದುವನ್ನು ಮಾತ್ರ ಸರ್ಕಾರವು ರಾಷ್ಟ್ರೀಕರಣ ಮಾಡಿಕೊಳ್ಳಬೇಕು ಎಂದು ಬೊಂಬಾಯಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಕೆ. ಪಾಟೀಲರು ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಆನೆಯ ಮರಣ

ಬೊಂಬಾಯಿನ ಮೃಗಾಲಯಕ್ಕೆ ಮೈಸೂರಿನ ಮಹಾರಾಜರವರು ಬಹುಮಾನವಾಗಿ ಕೊಟ್ಟಿದ್ದ ಬೇಗಂ ಎಂಬ ಹೆಣ್ಣಾನೆಯು ಮರಣ ಹೊಂದಿತೆಂದು ವರದಿಯಾಗಿದೆ. ಕಳೆದ ೧೭ ವರ್ಷಗಳಿಂದ ಅದು ಮಕ್ಕಳ ಪ್ರೀತಿಗೆ ಪಾತ್ರವಾಗಿತ್ತು. ಸುಮಾರು ೮೦ ಸಾವಿರ ರೂಪಾಯಿಗಳು ವರಮಾನ ಅದರಿಂದ ಪುರಸಭೆಗೆ ಬಂದಿತ್ತು.

ಕೈಗಾರಿಕಾ ಕಾರ್ಪೊರೇಷನ್

ವಿಶ್ವದ ಬ್ಯಾಂಕ್ ಸಲಹೆ ಮೇಲೆ ಭಾರತದಲ್ಲಿ ೫ ಕೋಟಿ ರೂ. ಬಂಡವಾಳದ ಒಂದು ಕೈಗಾರಿಕಾ ಕಾರ್ಪೊರೇಷನನ್ನು ಈ ವರ್ಷದೊಳಗೆ ಸ್ಥಾಪಿಸಲಾಗುವುದು ದೆಂದೂ, ಇದರಲ್ಲಿ ಖಾಸಗೀ ಕೈಗಾರಿಕಾ ಪ್ರಮುಖರು ಮತ್ತು ಕೇಂದ್ರಸರ್ಕಾರದ ಪ್ರತಿನಿಧಿಗಳೂ ಇರುವರೆಂದು ಗೊತ್ತಾಗಿದೆ.

ಭಾರತಕ್ಕೆ ಸಿಲೋನ್ ನಿಯೋಗ

ಸಿಂಹಳ ಪಾರ್ಲಿಮೆಂಟಿನ ಸದಸ್ಯರ ಸೌಹಾರ್ದ್ಯ ನಿಯೋಗವೊಂದು ಸಧ್ಯದಲ್ಲೇ ಭಾರತಕ್ಕೆ ಭೇಟಿಇತ್ತು ೧೫ ದಿನಗಳ ಪ್ರವಾಸ ಮಾಡಲಿದೆಯೆಂದೂ ಭಾರತ ಸರ್ಕಾರದ ಆಹ್ವಾನದ ಮೇರೆ ಪ್ರಧಾನಿ ಕೋಟಿಲಾವಾಲಾರವರು ಇದನ್ನು ಏರ್ಪಡಿಸಿರುವರೆಂದೂ ಹೇಳಲಾಗಿದೆ.

ಪಾಕ್-ಸಿಂಧ್ ಪ್ರಾಂತ್ಯದಲ್ಲೂ ಜಹಗೀರ್‌ದಾರಿ ರದ್ದು

ಪಾಕೀಸ್ತಾನದ ಸಿಂಧ್ ಪ್ರಾಂತ್ಯದಲ್ಲೂ ಜಹಗೀರ್‌ದಾರಿಯನ್ನು ರದ್ದುಗೊಳಿಸುವುದಾಗಿ ಅಲ್ಲಿಯ ಮುಖ್ಯ ಮಂತ್ರಿಯವರು ಹೇಳಿದ್ದಾರೆ.

ಆರ್ಥಿಕ ಕಾರ್ಪೊರೇಷನ್

ಹೈದರಾಬಾದ್ ಸರ್ಕಾರವು ೨ ಕೋಟಿ ರೂಪಾಯಿಗಳ ಆರ್ಥಿಕ ಕಾರ್ಪೊರೇಷನನ್ನು ಸ್ಥಾಪಿಸಿದೆ. ಇದರಲ್ಲಿ ೧೦೦ ರೂಪಾಯಿಗಳ ೫೦೦೦ ಷೇರುಗಳನ್ನು ಅಲ್ಲಿಯ ಸರ್ಕಾರವು ಪಡೆಯಲಿದೆ.

ಆಫ್ಘಾನಿ ಸಾಂಸ್ಕೃತಿಕ ನಿಯೋಗ

ಮೈಸೂರು ೨೨

ಭಾರತದಲ್ಲಿ ಪ್ರವಾಸ ಮಾಡುತ್ತಿರುವ ಆಫ್ಘಾನಿಸ್ಥಾನ ಸಾಂಸ್ಕೃತಿಕ ನಿಯೋಗದವರು ನಾಳೆ ಬೆಳಿಗ್ಗೆ ರಾಜಧಾನಿಗೆ ಬೆಂಗಳೂರಿನಿಂದ ಆಗಮಿಸುವರು.

ರಷ್ಯದ ಸಾಂಸ್ಕೃತಿ ನಿಯೋಗದ ಭೇಟಿ

ಪುರಸಭೆಯ ಸತ್ಕಾರ

ಮೈಸೂರು ೨೨

ಭಾರತದಲ್ಲಿ ಪ್ರವಾಸ ಮಾಡುತ್ತಿರುವ ರಷ್ಯದ ಸಾಂಸ್ಕೃತಿ ನಿಯೋಗದವರು ಬೆಂಗಳೂರಿನಿಂದ ನಿನ್ನೆ ಬೆಳಿಗ್ಗೆ ರಾಜಧಾನಿಗೆ ಆಗಮಿಸಿದರು. ಅವರನ್ನು ಲಲಿತಮಹಲ್ ಅರಮನೆಯಲ್ಲಿ ಜಿಲ್ಲಾಧಿಕಾರಿ, ಪುರಸಭಾಧ್ಯಕ್ಷ ಮುಂತಾದವರು ಸ್ವಾಗತಿಸಿದರು. ಅನಂತರ ನಿಯೋಗದವರು ನಗರದ ಹಲವಾರು ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ಇತ್ತರು.

ಸಂಜೆ ನಿಯೋಗದವರ ಗೌರವಾರ್ಥವಾಗಿ ಪುರಸಭೆಯವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಮೈಸೂರು ಶ್ರೇಷ್ಠನ್ಯಾಯಾಧೀಶ ಶ್ರೀ ಮೇದಪ್ಪ, ಶ್ರೀ ಎಸ್. ಚನ್ನಯ್ಯ ಮುಂತಾದ ಹಲವಾರು ಗಣ್ಯ ಮಹನೀಯರು ಮತ್ತು ಮಹಿಳೆಯರು ಸಮಾರಂಭಕ್ಕೆ ದಯಮಾಡಿಸಿದ್ದರು.

ಪುರಸಭಾಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿಯವರು ನಿಯೋಗದವರಿಗೆ ಸ್ವಾಗತ ಬಯಸಿ, ಇಂತಹ ಸಾಂಸ್ಕೃತಿಕ ನಿಯೋಗದ ಸಂಪರ್ಕದಿಂದ ಪರಸ್ಪರ ದೇಶಗಳಲ್ಲಿ ಸೌಹಾರ್ದ ಉಂಟಾಗಲು ಅವಕಾಶವಾಗುವುದೆಂದು ತಿಳಿಸಿದರು. ಭಾರತವು ಯಾವ ದೇಶಕ್ಕೂ ಅಥವ ಕಮ್ಯೂನಿಸ್ಟ್ ತತ್ವಕ್ಕೂ ಹೆದರುವುದಿಲ್ಲ ಏತಕ್ಕೆಂದರೆ ಭಾರತದ ರಾಷ್ಟ್ರಪಿತರಾದ ಮಹಾತ್ಮ ಗಾಂಧಿಜೀಯವರೇ ಅತ್ಯಂತ ದೊಡ್ಡ ಕಮ್ಯೂನಿಸ್ಟ್‌ರಾಗಿದ್ದರು. ಅವರಿಗೆ ಯಾವ ಆಸ್ತಿ ಪಾಸ್ತಿಗಳು ಇತ್ತಿಲ್ಲ ಇಡೀ ದೇಶವೇ ಅವರದಾಗಿತ್ತು. ಅಂತಹವರ ರಾಜಕೀಯ ತತ್ವವನ್ನೇ ಭಾರತ ಸರ್ಕಾರವು ಪರಿಪಾಲಿಸುತ್ತಿದೆ ಎಂದು ಶ್ರೀ ಪುಟ್ಟಸ್ವಾಮಿಯವರು ಹೇಳಿದರು. ಕಲಾ ಕೇಂದ್ರವಾದ ಮೈಸೂರು ನಗರದಜನರು ನಿಯೋಗದವರ ಆಮೋಘ ನೃತ್ಯ ಕಲಾಪ್ರದರ್ಶನವೀಕ್ಷಿಸಲ ಅವಕಾಶ ಕಲ್ಪಿಸದಿರುವುದಕ್ಕೆ ವಿಷಾದನ್ನು ವ್ಯಕ್ತಪಡಿಸಿದರು.

ರಷ್ಯದ ಉಪಸಚಿವ ಮತ್ತು ನಿಯೋಗದ ಮುಖಂಡರಾದ ಮಿ॥ ಬೆಸ್ಪಲಾಫ್‌ರವರು ತಮ್ಮ ಭಾಷೆಯಲ್ಲೇ ಉತ್ತರವಿತ್ತು, ಮೈಸೂರು ಪುರಸಭೆಯವರು ತಮಗೆ ಇತ್ತ ಸ್ವಾಗತಕ್ಕೆ ವಂದನೆಯನ್ನು ಅರ್ಪಿಸಿದರು.

ಎಲ್ಲ ದೇಶಗಳೊಡನೆ ವಾಣಿಜ್ಯ ಸಂಪರ್ಕವನ್ನು ಹೊಂದಿ ಶಾಂತಿ ಸೌಹಾರ್ದದಿಂದಿರಬೇಕೆಂಬುದೇ ರಷ್ಯದ ಮುಖ್ಯ ಧ್ಯೇಯ ಅದಕ್ಕಾಗಿಯೇ ಈಗ ಭಾರತಕ್ಕೆ ಅನೇಕ ಸೌಹಾರ್ದ ನಿಯೋಗಗಳನ್ನು ಕಳುಹಿಸಲಾಗುತ್ತಿದೆ. ಅದರಂತೆಯೇ ಭಾರತ ಮತ್ತು ಇತರ ದೇಶಗಳಿಂದ ಸೌಹಾರ್ದ ನಿಯೋಗಗಳನ್ನು ರಷ್ಯವು ಸ್ವಾಗತಿಸುತ್ತದೆ ಎಂದು ಅವರು ತಿಳಿಸಿದರು.

ರಾಜ್ಯಪರಿಷತ್ತಿಗೆ ಮೈಸೂರಿನ ಉಮೇದುವಾರರು

ಕೇಂದ್ರ ರಾಜ್ಯಪರಿಷತ್ತಿಗೆ ಮೈಸೂರು ಶಾಸನ ಸಭೆಯ ಕ್ಷೇತ್ರದಿಂದ ಎರಡು ಸ್ಥಾನಗಳಿಗೆ ನಡೆಯುವ ಚುನಾವಣೆಗೆ ಶ್ರೀಗಳಾದ ಕೆ. ಸಿ. ರೆಡ್ಡಿ ಮತ್ತು ಹೆಚ್. ಸಿ. ದಾಸಪ್ಪನವರನ್ನು ಉಮೇದುವಾರರನ್ನಾಗಿ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿ ಆರಿಸಿದೆ.

ಮೈಸೂರಿನ ಕಲಾ ನೈಪುಣ್ಯತೆಗೆ ಮುಗ್ಧರಾದ ರಷ್ಯನ್ನರು

ಮೈಸೂರು ೨೨

ರಾಜಧಾನಿಗೆ ನಿನ್ನೆ ಭೇಟಿಯಿತ್ತ ರಷ್ಯದ ಸಾಂಸ್ಕೃತಿಕ ನಿಯೋಗದವರು ಮೈಸೂರಿನ ಕುಶಲಕಲೆ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ.

ನಿಯೋಗದವರು ನಗರದ ಚಾಮರಾಜೇಂದ್ರ ಟೆಕ್ನಿಕಲ್ ಸಂಸ್ಥೆಗೆ ಭೇಟಿ ಇತ್ತು, ಅಲ್ಲಿ ಎರಡು ಗಂಟೆಗಳ ಕಾಲ ಅಲ್ಲಿನ ಕೆಲಸಕಾರ್ಯ ಮತ್ತು ಕಲಾ ನೈಪುಣ್ಯತೆಯನ್ನು ನೋಡಿ ಮುಗ್ಧರಾದರು ೧೫೦೦ ರೂ. ಬೆಲೆಬಾಳುವ ಮರದ ಆನೆ ಮತ್ತು ಇತರ ವಸ್ತುಗಳನ್ನು ಕೊಂಡುಕೊಂಡರು.

ರೋಗಿಯಿಂದ ವೈದ್ಯರಿಗೆ ಚಾಕುವಿನಿಂದ ಇರಿತ

ಮದರಾಸಿನ ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರಾಮಮೂರ್ತಿ ಎಂಬ ಯುವಕನು ತನಗೆ ತಣ್ಣನೆ ಹಾಲನ್ನು ಕೊಡಲಿಲ್ಲವೆಂದ ಮೂರುಮಂದಿ ವೈದ್ಯರಿಗೆ ಚಾಕುವಿನಿಂದ ತಿವಿದು ಗಾಯಪಡಿಸಿ ನೆಂದು ಆತನನ್ನು ಈಗ ದಸ್ತಗಿರಿ ಮಾಡಲಾಗಿದೆ.

ಭಾರತದಲ್ಲಿ ಇಲ್ಲಿಯವರೆಗೆ ಪ್ರವಾಸ ಮಾಡಿದ ತಮ್ಮ ಅನುಭವಗಳನ್ನು ವಿವರಿಸುತ್ತಾ, ದೇಶದ ಸುಪ್ರಸಿದ್ಧ ಕಲಾವಿದರೂ ಗ್ರಂಥಕರ್ತರೂ ಮತ್ತು ಇತರರನ್ನೂ ಮತ್ತು ಚಾರಿತ್ರಿಕ ಮತ್ತು ಪ್ರಾಚೀನ ಶಿಲ್ಪಿಕಲಾ ಪ್ರದೇಶಗಳನ್ನು ಭೇಟಿಮಾಡಿದುದಾಗಿಯೂ ಭಾರತದ ಸಾಂಸ್ಕೃತಿಯು ಪ್ರಪಂಚದಲ್ಲೇ ಅತ್ಯಂತ ಹಿರಿಯ ಮತ್ತು ಪ್ರಾಚೀನವಾದುದೆಂದೂ ಅವರು ಹೇಳಿದರು.

ಈ ಸಮಾರಂಭ ನಡೆಯುತ್ತಿದ್ದ ಪುರಸಭಾ ಕಛೇರಿಯ ಹೊರಗಡೆ ನೂರಾರು ಜನರು ನಿಯೋಗದವರ ದರ್ಶನ ಪಡೆಯಲು ಕಾದು ನಿಂತಿದ್ದರು.

ಬಂಗಾಳದಲ್ಲಿ ಉಪಾಧ್ಯಾಯರ ಮುಷ್ಕರ ಮುಕ್ತಾಯ

ಸಂಘದ ಅಧ್ಯಕ್ಷ ಮತ್ತು ಮುಖ್ಯಮಂತ್ರಿಗಳ ಸಮಾಲೋಚನಾ ಫಲ

ದಸ್ತಗಿರಿಯಾದವರ ಬಿಡುಗಡೆಗೆ ಆಜ್ಞೆ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮತ್ತು ಅಖಿಲ ಬಂಗಾಳ ಉಪಾಧ್ಯಾಯರ ಸಂಘದ ಅಧ್ಯಕ್ಷರುಗಳ ಸಮಾಲೋಚನಾ ಫಲವಾಗಿ ಪಶ್ಚಿಮಬಂಗಾಳದಾದ್ಯಂತ ನಡೆಯುತ್ತಿರುವ ಸೆಕೆಂಡರಿ ಶಾಲಾ ಉಪಾಧ್ಯಾಯರ ಮುಷ್ಕರವು ನಿನ್ನೆಯದಿನ ಮುಕ್ತಾಯವಾಗಿರುವುದಾಗಿಯೂ ಈದಿನ ಎಲ್ಲಾ ಉಪಾಧ್ಯಾಯರು ತಮ್ಮ ನಿತ್ಯ ಕರ್ತವ್ಯದಲ್ಲಿ ತೊಡಗಬೇಕೆಂದು ಸೂಚನೆ ಕೊಡಲಾಗಿದೆಯೆಂದೂ ತಿಳಿಯಬರುತ್ತದೆ.

ಮುಷ್ಕರ ಮುಕ್ತಾಯ ಮಾಡಿರುವ ನಿರ್ಧಾರಕ್ಕೆ ಮುಖ್ಯಮಂತ್ರಿಯವರು ಉಪಾಧ್ಯಾಯರನ್ನು ವಂದಿಸಿದ್ದಾರೆ.

ಈ ಸಂಬಂಧದಲ್ಲಿ ದಸ್ತಗಿರಿಯಾದವರನ್ನೆಲ್ಲಾ ಕೂಡಲೇ ಬಿಡುಗಡೆ ಮಾಡಬೇಕೆಂದು ತಾವು ಆಜ್ಞೆ ಕೊಟ್ಟಿರುವುದಾಗಿಯೂ ಅವರು ತಿಳಿಸಿದ್ದಾರೆ.

ಕೇಂದ್ರ ಸಮಿತಿಗಳಲ್ಲಿ ಮೈಸೂರಿನವರಿಗೆ ಸ್ಥಾನ

ಮೈಸೂರು ವಿಶ್ವವಿದ್ಯಾನಿಲಯದ ಡಾ॥ ಹೆಚ್. ಎಲ್. ಹರಿಯಪ್ಪನವರನ್ನು ಕೇಂದ್ರ ಸಾಮಾಜಿಕ ವಿಜ್ಞಾನದ ಪ್ರವೀಣರ ಸಮಿತಿ, ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಎ. ಶಿವರಾಮಶಾಸ್ತ್ರಿಯವರನ್ನು ಸಾಂಸ್ಕೃತಿಕ ಸಂಬಂಧವಾದ ಭಾರತೀಯ ಮಂಡಲಿ ಮತ್ತು ಹಿಂದಿ ಉಪಪ್ರಾಧ್ಯಾಪಕರಾದ ಶ್ರೀ ಎ. ನಾಗಪ್ಪನವರನ್ನು ಅಖಿಲಭಾರತ ಹಿಂದಿ ಪರೀಕ್ಷಾ ಸಮಿತಿಗಳಿಗೆ ಸದಸ್ಯರುಗಳನ್ನಾಗಿ ಭಾರತ ಸರ್ಕಾರವು ನೇಮಿಸಿದೆ.

ಗ್ರಾಮಾಂತರಗಳಲ್ಲಿ ಸೂತಿಕಾಲಯುಗಳು

ಗ್ರಾಮಾಂತರಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಗರ್ಭಿಣಿ ಮತ್ತು ಮಕ್ಕಳ ಸಂರಕ್ಷಣಾಲಯಗಳನ್ನು ಕಟ್ಟುವ ಬಗ್ಗೆ ಕೇಂದ್ರವು ಎಲ್ಲಾ ಪ್ರಾಂತ್ಯಗಳಿಗೆ ಪತ್ರ ಬರೆದಿದೆ. ಈ ಕಾರ್ಯಕ್ಕಾಗಿ ಕೇಂದ್ರವು ೫೦ ಲಕ್ಷ ರೂಪಾಯಿಗಳನ್ನು ವೆಚ್ಚಮಾಡಲಿದೆ.

ಸಿಂಹಳದಲ್ಲಿ ತಮಿಳು ಸರ್ಕಾರಿ ಭಾಷೆ

ಸಿಂಹಳದಲ್ಲಿ ಸಿಂಹಳ ಭಾಷೆಯನ್ನು ಅಲ್ಲದೆ ತಮಿಳನ್ನೂ ಸಹ ಸರ್ಕಾರಿ ಭಾಷೆಯನ್ನಾಗಿ ಮಾಡಬೇಕೆಂದು ಆಡಳಿತದಲ್ಲಿ ಇರುವ ಸಂಯುಕ್ತ ರಾಷ್ಟ್ರೀಯ ಪಕ್ಷವು ನಿರ್ಣಯಮಾಡಿದೆ.

ಸಂಸ್ಥಾನಾದ್ಯಂತ ಗ್ರಾಮಕೈಗಾರಿಕೆ ಯೋಜನೆ

ಬೆಂಗಳೂರು ೨೨

ಸಂಸ್ಥಾನದ ಎಲ್ಲ ಜಿಲ್ಲೆಗಳಲ್ಲೂ ಡಾ॥ ಎಂ. ವಿಶ್ವೇಶ್ವರಯ್ಯನವರ ಗ್ರಾಮಕೈಗಾರಿಕಾ ಯೋಜನೆಯನ್ನು ಜಾರಿಗೆ ತರಲು ಈ ವರ್ಷದ ಬಜೆಟ್ಟಿನಲ್ಲಿ ೨೦ ಲಕ್ಷ ರೂಪಾಯಿಗಳನ್ನು ಒದಗಿಸಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿದ್ದಾರೆ.

ಭಾರತದ ಉಸ್ತುವಾರಿ ಸೈನ್ಯದ ವಾಪಸು

ಕೊರಿಯಾದಲ್ಲಿ ಯುದ್ಧಖೈದಿಗಳ ಮೇಲ್ವಿಚಾರಕ ಕೆಲಸದಲ್ಲಿದ್ದ ಭಾರತ ಸೇನೆಯ ಪ್ರಥಮ ತಂಡವು ನಿನ್ನೆ ಮದರಾಸಿಗೆ ಹಿಂದಿರುಗಿತು. ಬಂದರಿನಲ್ಲಿ ಸೈನಿಕರಿಗೆ ಅಮೋಘ ಸ್ವಾಗತವನ್ನು ನೀಡಲಾಯಿತು. ಭಾರತದ ಸೈನ್ಯದವರು ತಮ್ಮ ಕೆಲಸದಲ್ಲಿ ತೋರಿಸಿದ ಶೌರ್ಯ, ಧೈರ್ಯ, ಬುದ್ಧಿ ಚಾತುರ್ಯ ಮತ್ತು ಜವಾಬ್ದಾರಿ ಇಡೀ ಭಾರತಕ್ಕೇ ಹೆಮ್ಮೆತಂದಿದೆ ಎಂದು ಗೌರ್ನರ್ ಶ್ರೀ ಶ್ರೀಪ್ರಕಾಶರವರು ಪ್ರಶಂಸೆ ಮಾಡಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೦—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೨೦—	೨೮-೮
ಎಳ್ಳು	—	—
ಹರಳು	೨೫—	೩೬—
ಹುಚ್ಚೆಳ್ಳು	೩೦—೧೦	೪೨—೨
ಹೊಂಗೆಬೀಜ	೨೧—	೨೫—೧೪
ಹುಣಸೆಬೀಜ	೧೨—೪	—
ಹುರುಳಿ	೨೫—	೨೯—೨
ಹೆಸರು	೩೬—೧೨	೩೮—
ಅವರೆ	೨೬-೨	೩೨—
ಅಲಸಂದೆ	೨೮—೨	೩೬—೧೨
ಉದ್ದು	—	—
ಕೊತ್ತಂಬರಿ	೨೬—೪	೨೯—೧೨
ಕಡಲೆ	೪೫—೮	೪೯—
ತೊಗರಿ	೨೨—	೨೬—೨
ಹುಣಸೆಹಣ್ಣು	೪—	೮—೯
ಮೆಣಸಿನಕಾಯಿ	೨೩—೪	೩೨—೪
ಸೀಗೆಕಾಯಿ	೪—೨	೪—೧೦
ಬೆಲ್ಲ	೪—೮	೫—
ತೆಂಗಿನಕಾಯಿ	೧೬೪—	೩೧೫—

ಜಮೀನಿಲ್ಲದವರಿಗೆ ಉಚಿತವಾಗಿ ಜಮೀನು

೧೪ ಲಕ್ಷ ಎಕರೆ ಹಂಚಲು ಆಂಧ್ರಸರ್ಕಾರದ ನಿರ್ಧಾರ

ಆಂಧ್ರಪ್ರಾಂತ್ಯದಲ್ಲಿ ಜಮೀನಿಲ್ಲದವರಿಗೆ ೧೪ ಲಕ್ಷ ಎಕರೆ ಬಂಜರು ಜಮೀನನ್ನು ಹಂಚಲು ಅಲ್ಲಿಯ ಸರ್ಕಾರವು ನಿರ್ಧರಿಸಿದೆ. ಪ್ರತಿಯೊಂದು ಸಂಸಾರಕ್ಕೂ ೫ ಎಕರೆ ಜಮೀನನ್ನು ಉಚಿತವಾಗಿ ಕೊಡಲಾಗುತ್ತದೆ.

ಆಂಧ್ರ ಶಾಸನಸಭಾ ಅಧಿವೇಶನ

ಆಂಧ್ರ ಶಾಸನಸಭಾಧಿವೇಶನವು ಈದಿನ ಕರ್ನೂಲಿನಲ್ಲಿ ಪ್ರಾರಂಭವಾಗುತ್ತದೆ. ಅಧಿವೇಶನವು ೬ ವಾರಗಳ ಕಾಲ ನಡೆಯುವುದೆಂದು ತಿಳಿಯಬರುತ್ತದೆ. ಪಾನನಿರೋಧ ನೀತಿ ಮತ್ತು ಆಂಧ್ರಕ್ಕೆ ನೂತನ ಶ್ರೇಷ್ಠ ನ್ಯಾಯಾಲಯ ಸ್ಥಾಪನೆ ಇವು ಅಲ್ಲಿ ಬರಲಿರುವ ಪ್ರಮುಖ ವಿಷಯಗಳಾಗಿವೆ.

ರಜ್ವಿಯ ಉಪವಾಸ

ತನ್ನನ್ನು ಕೂಡಲೇ ಕಾರಾಗೃಹದಿಂದ ಬಿಡಬೇಕೆಂದು ಹೈದ್ರಾಬಾದಿನಲ್ಲಿ ೭ ವರ್ಷ ಕಠಿಣ ಶಿಕ್ಷೆಯನ್ನು ಅನುಭವಿಸುತ್ತಲಿರುವ ರಜಾಕರ ನಾಯಕ ರಜ್ವಿಯು ಇದೇ ೧೮ ನೇ ತಾರೀಖಿನಿಂದ ಅನ್ನಾಹಾರಗಳನ್ನು ತೊರೆದು ಉಪವಾಸ ಪ್ರಾರಂಭಿಸಿರುವುದಾಗಿ ತಿಳಿಯಬರುತ್ತದೆ.

ಹೈದರಾಬಾದ್ ಶಾಸನಸಭೆ

ಹೈದರಾಬಾದ್ ಶಾಸನಸಭೆಯ ಅಧಿವೇಶನವು ಈದಿನ ಪ್ರಾರಂಭವಾಯಿತು. ರಾಜಪ್ರಮುಖರು ಸಭೆಯನ್ನುದ್ದೇಶಿಸಿ ಭಾಷಣ ಮಾಡಿದರು.

ಅರಮನೆ ಅಶ್ವಶಾಲಾ ಮತ್ತು ಗಜಶಾಲಾ, ಮೈಸೂರು

ಟೆಂಡರ್ ನೋಟೀಸು

ಸನ್ 1954-55ನೇ ಸಾಲಿನಲ್ಲಿ ಅಂದರೆ ತಾ: 1-4-54 ರಿಂದ 31-3-55ರಪೂರ್ತಾ ಅರಮನೆ ಅಶ್ವಶಾಲಾ ಮತ್ತು ಗಜಶಾಲಾ ಇಲಾಖೆಗೆ ಸೌದೆ ಸರಬರಾಯಿ ಮಾಡಲು ಅಪೇಕ್ಷೆಯುಳ್ಳವರು ಸೀಲಾದ ಟೆಂಡರುಗಳನ್ನು 1954ನೇ ಫೆಬ್ರವರಿ ಮಾಹೆ ತಾ: 25ನೇ ಮಧ್ಯಾಹ್ನ 12 ಘಂಟೆಯೊಳಗಾಗಿ ಮೇಲ್ಕಂಡ ಇಲಾಖಾ ಆಫೀಸರ್ ಇನ್ ಚಾರ್ಜ್ ಆಫೀಸರವರಿಗೆ ಕೊಡತಕ್ಕದ್ದು. ಹೆಚ್ಚಿಗೆ ವಿಷಯಗಳನ್ನು ಇಲಾಖೆಯಲ್ಲಿ ವಿಚಾರಿಸಿ ತಿಳಿದುಕೊಳ್ಳತಕ್ಕದ್ದು.

M. GOPALKRISHNE URS
officer-in-charge
Palace Stables & Gajasala
MYSORE

ನಿರಾಶ್ರಿತರಿಗೆ ಕಾಫಿ ತೋಟಗಳು

ಭಾರತವನ್ನು ಬಿಟ್ಟು ಪಾಕೀಸ್ತಾನದಲ್ಲಿ ನೆಲೆಸಿರುವವರಿಗೆ ಸೇರಿದ ಚಿಕ್ಕಮಗಳೂರು ಜಿಲ್ಲೆಯ ಬೆಳಗೋಡು ಕಾಫಿ ತೋಟಗಳನ್ನು ಪಾಕೀಸ್ತಾನದಿಂದ ಸ್ಥಾನಪಲ್ಲಟರಾಗಿ ಪಂಜಾಬ್ ಅಥವ ಇತರ ಕಡೆಗಳಲ್ಲಿ ಭೂಮಿಯನ್ನು ಪಡೆಯುವವರಿಗೆ ಕೊಡಲಾಗುವುದು ಎಂದು ಬೊಂಬಾಯಿ ಸರ್ಕಾರ ತಿಳಿಸಿದೆ.

ಹಾಸನ-ಮಂಗಳೂರು ರೈಲ್ವೆ ಸರ್ವೆ

ಹಾಸನ--ಮಂಗಳೂರು ರೈಲ್ವೆ ನಿರ್ಮಾಣದ ಇಂಜನಿಯರಿಂಗ್ ಸರ್ವೆ ಕಾರ್ಯವು ಮುಂದಿನ ತಿಂಗಳಿನ ಮಧ್ಯಭಾಗದಲ್ಲಿ ಆರಂಭಿಸಲಾಗುವುದು. ಹಾಸನ, ಸಕಲೇಶಪುರ, ಮಾರನಹಳ್ಳಿ ಮತ್ತು ಮಂಗಳೂರುಗಳಲ್ಲಿ ಒಂದೊಂದು ಸರ್ವೆ ಕೇಂದ್ರಗಳನ್ನು ಸ್ಥಾಪಿಸಲಾಗುವುದು.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ	ಡ್ರಾಯಿಂಗ್
31-3-1954	19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ

ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ ಒಟ್ಟು 2000 ಬಹುಮಾನಗಳು. ಬಹುಮಾನದ ಮೊಬಲಗು 45000 ರೂ. ಟಿಕೇಟು ಒಂದಕ್ಕೆ ಒಂದೇರೂಪಾಯಿ. ಇಂದೇ ಟಿಕೇಟನ್ನು ಕೊಂಡು, ಸಹಾಯಮಾಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಭಾ ★ ಅಮೋಘ ಪ್ರಾರಂಭ

26--2-54 ರಿಂದ ದಿನವಹಿ 3 ಆಟಗಳು

ಮಾಡರ್ನ ಥಿಯೇಟರ್ಸ್‌ರವರ ಮಹೋನ್ನತ ಕನ್ನಡ ಚಿತ್ರ

-ದೇವ ಕನ್ನಿಕಾ-

ಪಾತ್ರ : ಎಸ್. ಜಾನಕಿ, ಇಂದುಶೇಖರ್, ಲಕ್ಷ್ಮೀದೇವಿ ಮತ್ತು ಬಾಲಕೃಷ್ಣ

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೪೬

೨೩-೨-೧೯೫೪ ನೇ ಮಂಗಳವಾರ ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪಾಕೀಸ್ತಾನ ಅಮೆರಿಕಾ ಮಿಲಿಟರಿ ನೆರವು

ಕೇಳಲಾಗಿದೆಯೆಂದು ಪ್ರಧಾನಿ ಮಹಮದಾಲಿರವರ ಅಧಿಕೃತ ಹೇಳಿಕೆ

ಅಮೆರಿಕಾ ರಕ್ಷಣಾ ಕಾಯಿದೆಯ ಪ್ರಕಾರ ತಮಗೆ ಮಿಲಿಟರಿ ನೆರವನ್ನು ನೀಡಬೇಕೆಂದು ಅಮೆರಿಕಾಕ್ಕೆ ಪಾಕೀಸ್ತಾನವು ಅಧಿಕೃತವಾಗಿ ಪ್ರಾರ್ಥನೆಯನ್ನು ಇದೇ ಭಾನವಾರ ಕಳುಹಿಸಿದೆಯೆಂದೂ ಅದಕ್ಕೆ ಇನ್ನು ಉತ್ತರವೇನೂ ಬಂದಿಲ್ಲವೆಂದೂ ಪಾಕ್ ಪ್ರಧಾನಿ ಮಹಮದ್ ಅಲಿಯವರು ತಿಳಿಸಿದ್ದಾರೆ.

ಈ ಮಿಲಿಟರಿ ಒಪ್ಪಂದವು ವಿಶ್ವಶಾಂತಿಯನ್ನು ಕಾಪಾಡಲು ಮತ್ತು ಪಾಕೀಸ್ತಾನದ ಭೌಗೋಳಿಕ ಸನ್ನಿವೇಶ ಮುಂತಾದುವನ್ನು ಪರಿಗಣಿಸಿ ಪಾಕೀಸ್ತಾನವು ತನ್ನ ಪ್ರಮುಖ ಪಾತ್ರವನ್ನು ನಿರ್ವಹಿಸಲು ಅತ್ಯಗತ್ಯವೆಂದು ಅವರು ಹೇಳಿದ್ದಾರೆ.

ಪಾಕೀಸ್ತಾನಕ್ಕೆ ಇಲ್ಲಿಯವರೆಗೆ ಯಾವ ದೇಶದ ಮೇಲೂ ಆಕ್ರಮಣ ಮಾಡುವ ಆಸೆಯಿರಲಿಲ್ಲ. ಮುಂದೆಯೂ ಇಲ್ಲ. ವಿಶ್ವಶಾಂತಿಯೇ ಅದರ ಧ್ಯೇಯ ಎಂದು ಅವರು ತಿಳಿಸಿದ್ದಾರೆ.

ಈ ಒಪ್ಪಂದ ವಿಷಯದಲ್ಲಿ ವಿವರಗಳ ಪರಿಶೀಲನೆ ನಡೆಯುತ್ತಿದೆಯೆಂದೂ ಯಾವ ರೀತಿ ನೆರವು, ಪ್ರಮಾಣ ಮುಂತಾದುವು ಇನ್ನೂ ನಿರ್ಧಾರವಾಗಿಲ್ಲವೆಂದೂ ಅವರು ಹೇಳಿದ್ದಾರೆ.

ಪಾಕೀಸ್ತಾನದಲ್ಲಿ ಅಮೇರಿಕಾ ಸೈನ್ಯ ನೆಲೆಗಳನ್ನು ಸ್ಥಾಪಿಸುವ ವಿಷಯವನ್ನು ಅವರು ನಿರಾಕರಿಸಿದ್ದಾರೆ.

ಚೈನಾ ಮತ್ತು ರಷ್ಯಾದೊಡನೆ ಯಾವುದಾದರೂ ಸೌಹಾರ್ದಯುತ ಒಪ್ಪಂದವನ್ನು ಮಾಡಿಕೊಳ್ಳಲಾಗುತ್ತದೆಯೇ ಎಂಬ ಪ್ರಶ್ನೆಗೆ ಅವರು ಉತ್ತರವೀಯದೆ ಸುಮ್ಮನೆ ನಕ್ಕರು.

ಭಾರತದೊಡನೆ ಪಾಕೀಸ್ತಾನದ ಸಂಬಂಧದ ವಿಷಯವಾಗಿ ಅವರು ಪ್ರಸ್ತಾಪಿಸಿ ಭಾರತದೊಡನೆ ಪಾಕೀಸ್ತಾನವು ಯುದ್ಧ ನಡೆಸುವ ಅಪಾಯವೇನೂ ಇಲ್ಲವೆಂದಿದ್ದಾರೆ.

ಕಾಶ್ಮೀರ ವಿಷಯದಲ್ಲಿ ಪಾಕೀಸ್ತಾನ ಮತ್ತು ಭಾರತ ಪ್ರಧಾನಿಗಳ ಸಮಾಲೋಚನೆ ವಿಷಯವಾಗಿ ಅವರು ಮಾತನಾಡುತ್ತಾ ಸದ್ಯದಲ್ಲಿಯೇ ತಾವು ಪ್ರಧಾನಿ ನೆಹರೂರವರನ್ನು ಈ ವಿಷಯದಲ್ಲಿ ಚರ್ಚಿಸಲು ಭೇಟಿ ಮಾಡುವ ಸಂಭವವಿಲ್ಲವೆಂದೂ ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನ ಕಾಲದಲ್ಲಿ ತಾವು ಶ್ರೀ ನೆಹ್ರೂರೊಡನೆ ಈ ವಿಷಯ ಚರ್ಚಿಸಬಹುದೆಂದೂ ಮಿ॥ ಮಹಮದ್ ಅಲಿಯವರು ತಿಳಿಸಿದ್ದಾರೆ.

ಕಾಶ್ಮೀರ ಪ್ರಜಾಭಿಪ್ರಾಯ ಮುಖ್ಯಾಧಿಕಾರಿಯ ವಿಷಯವಾಗಿ ಅವರು ಮಾತನಾಡುತ್ತಾ ಈಗಿರುವ ಜನರಲ್ ನಿಮಿಟ್ಸ್‌ರವರು ರಾಜೀನಾಮೆಯನ್ನು ಕೊಟ್ಟಿರುವ ವಿಷಯವು ತಮಗೆ ತಿಳಿಯಬಂದಿದೆಯೆಂದೂ ಬೇರೊಬ್ಬರನ್ನು ನೇಮಿಸುವ ವಿಷಯವನ್ನು ಪಾಕೀಸ್ತಾನವು ಇನ್ನೂ ಯೋಚಿಸಿಲ್ಲವೆಂದೂ ಹೇಳಿದ್ದಾರೆ.

ವಿಶೇಷ ಚೀಫ್ ಇಂಜನಿಯರ್

ಬೆಂಗಳೂರು ೨೩

ಕಾವೇರಿ ಸರ್ಕಲಿನ ಸೂಪರಿಂಟೆಂಡಿಂಗ್ ಇಂಜನಿಯರ್ ಶ್ರೀ ಹೆಚ್. ಅನಂತಾಚಾರ್ಯರನ್ನು ನೀರಾವರಿ ಯೋಜನೆಗಳ ವಿಶೇಷ ಚೀಫ್ ಇಂಜನಿಯರಾಗಿ ಇದೇ ೨೫ ನೇ ತಾರೀಖಿನಿಂದ ನೇಮಿಸಲಾಗಿದೆ.

ಸತ್ತ ಅಳಿಯನನ್ನು ನೋಡಲು ಹೊರಟ ಮಾವನಿಗೂ ಮೃತ್ಯು

ದಕ್ಷಿಣ ಭಾರತೀಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷರಾದ ಶ್ರೀ ಇ. ವಿ. ಸುಂದರರಾಮ ರೆಡ್ಡಿಯವರು ಮದರಾಸಿನಲ್ಲಿ ಕಾರ್ ಅಪಘಾತವೊಂದರಲ್ಲಿ ಗಾಯಗೊಂಡು ಆಸ್ಪತ್ರೆಯಲ್ಲಿ ನಿಧನರಾದರು. ಅವರ ಅಂತ್ಯದರ್ಶನಕ್ಕಾಗಿ ಅವರ ಮಾವ ಡಾ॥ ರಾಮಕೃಷ್ಣರೆಡ್ಡಿಯವರು ತಿರುಪತಿಯಿಂದ ಮದರಾಸಿಗೆ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ಬಸ್ ಅಪಘಾತಕ್ಕೆ ಒಳಗಾಗಿ ಅವರೂ ಮರಣ ಹೊಂದಿದರು.

ಉಪವಾಸ ಮುಕ್ತಾಯ

ಹೈದರಾಬಾದಿನಲ್ಲಿ ಜೈಲುವಾಸವನ್ನು ಅನುಭವಿಸುತ್ತಲಿದ್ದ ರಜಾಕರ ನಾಯಕ ಕಾಸಿಂ ರಜ್ವಿಯು ತಾನಾಗೆಯೇ ಉಪವಾಸವನ್ನು ಮುಕ್ತಾಯಗೊಳಿಸಿರುವುದಾಗಿ ತಿಳಿಯಬರುತ್ತದೆ.

ಕಿತ್ತಳೆಹಣ್ಣಿನಲ್ಲಿ ಹುಳಿ ತೆಗೆಯಲು ಯತ್ನ

ಮೈಸೂರು ೨೩

ಕೊಡಗು, ನಾಗಪುರ ಮತ್ತು ಅಸ್ಸಾಂ ಮುಂತಾದ ಪ್ರದೇಶಗಳಲ್ಲಿ ಬೆಳೆಯುವ ಕಿತ್ತಲೆಹಣ್ಣುಗಳು ದೊಡ್ಡದಾಗಿ ರುಚಿತವಾಗಿದ್ದರೂ, ಅವುಗಳಲ್ಲಿ ಹುಳಿಯಿರುವುದರಿಂದ ಸಾಥ್‌ಗಾಡಿ ಹಣ್ಣಿನಷ್ಟು ಉತ್ತಮವಾಗಿರುವುದಿಲ್ಲ. ಈಗ ಆ ಹುಳಿಯನ್ನು ತೆಗೆದುಹಾಕಲು ಮೈಸೂರಿನಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಪ್ರಯತ್ನ ಯಶಸ್ವಿಯಾಗಿ ನಡೆದಿದೆಯೆಂದು ಹೇಳಲಾಗಿದೆ.

ದರೋಡೆಗಾರರಿಗೂ ಪೋಲೀಸರಿಗೂ ಕದನ

ಕಲ್ಕತ್ತೆಯ ಹೌರಾ ರೈಲ್ವೆ ನಿಲ್ದಾಣದ ಆವರಣದಲ್ಲೇ ಪೋಲೀಸರಿಗೂ ಇಬ್ಬರು ದರೋಡೆಗಾರರಿಗೂ ಭಾರಿಬಂದೂಕದ ಕದನ ನಡೆಯಿತೆಂದು ವರದಿಯಾಗಿದೆ. ಪಂಜಾಬ್ ರೈಲಿನಿಂದ ಬರುತ್ತಿದ್ದ ಈ ದರೋಡೆಗಾರರನ್ನು ಹಿಡಿಯಲು ರೈಲ್ವೆ ಸ್ಟೇಷನ್ನಿನಲ್ಲಿ ಪೋಲೀಸರು ಸಿದ್ಧರಾಗಿದ್ದರೆಂದೂ, ದರೋಡೆಗಾರರೂ ರೈಲನ್ನು ಇಳಿದು ಜನರ ನೂಕನುಗ್ಗಲಿನಲ್ಲಿ ಬಂದೂಕವನ್ನು ಹಾರಿಸುತ್ತಾ ಓಡಿಹೋಗುತ್ತಿದ್ದಾಗ ಪೋಲೀಸರು ಗುಂಡುಹಾರಿಸಿ ಅವರನ್ನು ಹಿಡಿಯಲು ೨೦ ನಿಮಿಷಕಾಲ ಸಾಹಸಪಟ್ಟರೆಂದೂ, ಈ ಕದನದಲ್ಲಿ ಅನೇಕ ಪ್ರಯಾಣಿಕರಿಗೆ ಏಟುಬಿದ್ದು, ಇಬ್ಬರು ಹೆಂಗಸರು ಮರಣ ಹೊಂದಿದರೆಂದೂ ಹೇಳಲಾಗಿದೆ.

ಭಾರತ ಸೇವಾದಳದ ಸೇವೆ

ಈ ಸಲನಡೆದ ಮುಡುಕುತೊರೆ ಜಾತ್ರೆಯಲ್ಲಿ ತಾ॥ ೧೨ ರಲ್ಲಿ ಟಿ. ನರಸಿಪುರ ವಿದ್ಯೋದಯ ಶಾಲೆಯ ೩೦ ಮಂದಿ ಮತ್ತು ತಲಕಾಡು ಪ್ರೌಢಶಾಲೆಯ ೨೦ ಜನ ಸೇವಾದಳದ ಸ್ವಯಂ ಸೇವಕರುಗಳು ಸ್ವಚ್ಛತಾಕಾರ್ಯ ಮತ್ತು ಇತರ ಸೇವೆಯಲ್ಲಿ ತೊಡಗಿದ್ದು ಯಾತ್ರಿಕರಿಗೆ ಸಹಾಯಕರಾಗಿದ್ದರು. ಜಾತ್ರೆಯಲ್ಲಿ ಅನೇಕ ಜೇಬುಗಳ್ಳರನ್ನು ಬಂಧಿಸಿ ಪೋಲೀಸರವಶಕ್ಕೆ ಒಪ್ಪಿಸಲಾಯಿತು.

ಜಿಲ್ಲಾಧಿಕಾರಿಗಳಾದ ಶ್ರೀ ಸ್ವಾಮಿನಾಥರವರು ಎರಡು ಶಾಲೆಯ ಸ್ವಯಂ ಸೇವಕರಿಗೂ ಬೆಳ್ಳಿಯ ಕಪ್ಪುಗಳನ್ನು ಕೊಟ್ಟರು.

ಜಿಲ್ಲಾ ಆರೋಗ್ಯಧಿಕಾರಿಗಳು ಒಬ್ಬ ಸ್ವಯಂ ಸೇವಕನಿಗೆ "ಆದರ್ಶ ಸೇವಕ" ಎಂಬ ಒಂದು ಚಿನ್ನದ ಪದಕವನ್ನು ಪಾರಿತೋಷಕವಾಗಿ ಕೊಟ್ಟರು.

ರೈಲ್ವೆ ಅಪಘಾತಗಳಿಗೆ ಅನನುಭವಸ್ಥ ಡ್ರೈವರರೇ ಕಾರಣ

ಮೈಸೂರು ೨೩

ದಕ್ಷಿಣ ರೈಲ್ವೆಯ ಮೈಸೂರು ವಿಭಾಗದಲ್ಲಿ ಇತ್ತೀಚೆಗೆ ರೈಲ್ವೆ ಅಪಘಾತಗಳು ಆಗುತ್ತಿರುವುದಕ್ಕೆ ಅನುಭವಸ್ಥ ಡ್ರೈವರುಗಳು ಇಲ್ಲದಿರುವುದೇ ಕಾರಣವೆಂದು ಮೊನ್ನೆ ಇಲ್ಲಿಸೇರಿದ್ದ ದಕ್ಷಿಣರೈಲ್ವೆ ನೌಕರರ ಸಂಘದ ಪ್ರಾಂತೀಯ ಸಮಿತಿಯಲ್ಲಿ ಅಭಿಪ್ರಾಯಪಡಲಾಗಿದೆ. ಮೈಸೂರು ಸಂಸ್ಥಾನದ ರೈಲ್ವೆ ಪ್ರದೇಶದ ಹೊರಗಿನಿಂದ ಡ್ರೈವರರನ್ನು ನೇಮಿಸಿ, ಸಂಸ್ಥಾನ ರೈಲ್ವೆಯ ಹಿರಿಯ ಫೈರ್‌ಮನ್‌ಗಳ ಕೆಲಸವನ್ನು ಗಮನಿಸದಿರುವುದನ್ನು ಉಗ್ರವಾಗಿಖಂಡಿಸಲಾಯಿತು.

ಆಫ್ಘನ್ ಸಾಂಸ್ಕೃತಿಕ ನಿಯೋಗದ ಆಗಮನ

ಡಾ॥ ಅಲಿ ಮಹಮದ್ ಖಾನ್ ಪೋಪಲ್‌ರವರ ನಾಯಕತ್ವದಲ್ಲಿ ನಗರಕ್ಕೆ ಈ ಮಧ್ಯಾಹ್ನ ೮ ಮಂದಿ ಸದಸ್ಯರನ್ನೊಳಗೊಂಡ ಆಫ್ಘನ್ ಸಾಂಸ್ಕೃತಿಕ ನಿಯೋಗವು ಆಗಮಿಸಿತು. ಅವರು ಈದಿನ ನಗರ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯಿತ್ತು ರಾತ್ರಿ ಬೆಂಗಳೂರಿಗೆ ಹಿಂತಿರುಗುವರು.

ಶಾಸನಸಭಾಧಿವೇಶನ

ಮದ್ರಾಸ್ ಶಾಸನಸಭೆಗಳ ಸಂಯುಕ್ತ ಅಧಿವೇಶನವು ನಿನ್ನೆಯದಿನ ಗೌರ್ನರ್ ಶ್ರೀ ಶ್ರೀಪ್ರಕಾಶರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ ಮಕ್ಕಳಿಗೆ ಹೆಚ್ಚು ವಿದ್ಯಾಭ್ಯಾಸ, ಉತ್ತಮ ಆರೋಗ್ಯ, ಹರಿಜನರಿಗೆ ಸಾಮಾಜಿಕ ಮತ್ತು ಮನರಂಜನೆಯ ಸೌಲಭ್ಯಗಳನ್ನು ಒದಗಿಸುವಯೋಜನೆಗಳನ್ನು ವಿವರಿಸಿದರು.

ಅಂಡಮಾನಿನಲ್ಲಿ ವ್ಯವಸಾಯಗಾರರು

ಮುಂದಿನ ಮಳೆಗಾಲದೊಳಗಾಗಿ ಅಂಡಮಾನ್ ದ್ವೀಪದಲ್ಲಿ ಸುಮಾರು ೨ ಸಾವಿರ ಮಂದಿ ವ್ಯವಸಾಯಗಾರರು ನೆಲೆಸಲು ವ್ಯವಸ್ಥೆ ಮಾಡಲಾಗುವುದೆಂದು ಪಾರ್ಲಿಮೆಂಟಿನಲ್ಲಿ ಉಪ ಗೃಹಸಚಿವರವರು ತಿಳಿಸಿದ್ದಾರೆ.

ಪತ್ರಿಕೆಗಳಿಗೆ ಸರ್ಕಾರದ ನೆರವು

ಅಸ್ಪೃಶ್ಯತಾ ನಿವಾರಣೆಗಾಗಿ ಶ್ರಮಿಸುವ ಪತ್ರಿಕೆಗಳಿಗೆಲ್ಲಾ ಬೊಂಬಾಯಿ ಸರ್ಕಾರವು ನೆರವು ನೀಡಲು ಯೋಚಿಸುತ್ತಲಿರುವುದಾಗಿ ತಿಳಿಯಬರುತ್ತದೆ.

ಹೈದರಾಬಾದ್ ಶಾಸನ ಸಭೆಯಲ್ಲಿ ವಿರೋಧಪಕ್ಷದ ಸಭಾತ್ಯಾಗ

ಹೈದರಾಬಾದ್ ಶಾಸನಸಭೆಯ ಅಧಿವೇಶನವು ನಿನ್ನೆಯದಿನ ಅಲ್ಲಿಯ ರಾಜಪ್ರಮುಖರಾದ ನೈಜಾಮ್‌ರವರ ಭಾಷಣದಿಂದ ಪ್ರಾರಂಭವಾಯಿತು. ಅವರು ಭಾಷಣ ಮಾಡುವ ಮುನ್ನ ವಿರೋಧ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗಮಾಡಿ, ಭಾಷಣವು ಮುಗಿದನಂತರ ಸಭೆಗೆ ಹಿಂತಿರುಗಿದರು.

ರಾಜಪ್ರಮುಖರ ಹುದ್ದೆಯು ಇರಕೂಡದೆಂಬುದಕ್ಕೆ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಲು ಈ ರೀತಿ ಮಾಡಲಾಯಿತೆಂದು ಪಕ್ಷದ ನಾಯಕರು ತಿಳಿಸಿದ್ದಾರೆ.

ಕೊರಿಯಾ ಯುದ್ಧ ಖೈದಿಗಳಿಗೆ ವೆಚ್ಚದ ಹಣ

ತಮ್ಮ ಸ್ವದೇಶಕ್ಕೆ ಹಿಂತಿರುಗಲು ನಿರಾಕರಿಸಿ ಭಾರತಕ್ಕೆ ಆಗಮಿಸಿರುವ ೮೮ ಜನ ಕೊರಿಯಾ ಯುದ್ಧ ಖೈದಿಗಳಿಗೆ ಪ್ರತಿಯೊಬ್ಬನಿಗೂ ವೆಚ್ಚಕ್ಕಾಗಿ ಭಾರತ ಸರ್ಕಾರವು ೫೦ ರೂಪಾಯಿಗಳ ಮಾಸಾಶನವನ್ನು ಮಂಜೂರ್ಮಾಡಿದೆ. ನಿನ್ನೆಯದಿನ ಅದನ್ನು ಅವರಿಗೆ ಮದ್ರಾಸ್‌ನಲ್ಲಿ ಹಂಚಲಾಯಿತು. ಭಾರತ ರೆಡ್‌ಕ್ರಾಸ್ ಸಂಸ್ಥೆಯು ಸಹ ಇವರಿಗೆ ಅನೇಕ ಉಪಯುಕ್ತ ವಸ್ತುಗಳನ್ನು ಉಚಿತವಾಗಿ ಕೊಟ್ಟಿದೆ.

ಹೊಸ ಜಿಲ್ಲೆಗಳ ರಚನೆ

ಆಂಧ್ರಪ್ರಾಂತ್ಯದಲ್ಲಿ ಮತ್ತೆ ಎರಡು ಜಿಲ್ಲೆಗಳನ್ನು ರಚಿಸಲು ಅಲ್ಲಿಯ ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ತಿಳಿಯಬರುತ್ತದೆ. ಈಗ ಉತ್ತರಭಾಗದಲ್ಲಿರುವ ೪ ರೇವು ಜಿಲ್ಲೆಗಳಿಗೆ ಸಂಬಂಧಪಟ್ಟ ಪ್ರದೇಶಗಳನ್ನು ಒಟ್ಟುಗೂಡಿಸಿ ಒಂದು ಪ್ರತ್ಯೇಕ ಜಿಲ್ಲೆ ಮತ್ತು ಕರ್ನೂಲ್, ನೆಲ್ಲೂರು ಮತ್ತು ಗುಂಟೂರು ಜಿಲ್ಲೆಗಳಲ್ಲಿ ಅಭಿವೃದ್ಧಿಯಾಗಬೇಕಾಗಿರುವ ಕೆಲವು ತಾಲ್ಲೂಕುಗಳನ್ನು ಸೇರಿಸಿ ಮತ್ತೊಂದು ಜಿಲ್ಲೆಯನ್ನು ಮಾಡುವ ಯೋಜನೆಯಿದೆ.

ಇಂಡೋಚೈನಾ ಯುದ್ಧ ಮುಕ್ತಾಯವಾಗಲಿ

ಜನತೆಯ ಸ್ವಾತಂತ್ರ್ಯಕ್ಕೆ ಧಕ್ಕೆ ಬರದಂತೆ ಇಂಡೋಚೀನಾ ಯುದ್ಧವು ಹೇಗಾದರೂ ಮುಕ್ತಾಯವಾಗಲಿ ಎಂದು ಪ್ರಧಾನಿ ನೆಹರೂರವರು ಸಂಬಂಧಪಟ್ಟ ಎಲ್ಲಾ ರಾಷ್ಟ್ರ ಮತ್ತು ಪಕ್ಷಗಳಿಗೆ ಮನವಿ ಮಾಡಿದ್ದಾರೆ.

ಸ್ವೀಕಾರ

ಮಂಗಳೂರು ಗಣೇಶಬೀಡಿ ಕಂಪೆನಿಯವರು ಕಳುಹಿಸಿರುವ ೧೯೫೪ ನೇ ಕ್ಯಾಲೆಂಡರನ್ನು ಆದರದಿಂದ ಸ್ವೀಕರಿಸಿದ್ದೇವೆ.

ಹೈದರಾಬಾದಿನಲ್ಲಿ ಹೊಸದಾಗಿ ೨೫೦೦ ಉಪಾಧ್ಯಾಯರು

ಪ್ರಾಂತ್ಯದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಪರಿಹಾರಮಾಡಲು ಹೊಸ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿ ಅಲ್ಲಿ ೧೫೦೦ ಜನ ಉಪಾಧ್ಯಾಯರನ್ನು ನೇಮಿಸಿಕೊಳ್ಳಲಾಗುವುದೆಂದು ಅಲ್ಲಿಯ ರಾಜಪ್ರಮುಖರು ನಿನ್ನೆಯದಿನ ಶಾಸನಸಭೆಯಲ್ಲಿ ಮಾಡಿದ ಭಾಷಣದಲ್ಲಿ ತಿಳಿಸಿದ್ದಾರೆ.

ಈ ಸಂಬಂಧದಲ್ಲಿ ಅವರು ಮಾತನಾಡುತ್ತಾ ಪ್ರಾಂತ್ಯದಲ್ಲಿ ಅನೇಕ ನೀರಾವರಿ ಕಾರ್ಯಗಳನ್ನು ಕಾರ್ಯಗತ ಮಾಡುತ್ತಲಿರುವುದರಿಂದ ಆಹಾರಪರಿಸ್ಥಿತಿಯು ಉತ್ತಮವಾಗಿದೆಯೆಂದು ಅವರು ಹೇಳಿದ್ದಾರೆ.

ಉಪಾಧ್ಯಾಯರಿಗೆ ಹೆಚ್ಚಿನ ಸಂಬಳ ಪರಿಶೀಲನೆ

ಮದ್ರಾಸ್ ಪ್ರಾಂತ್ಯದಲ್ಲಿರುವ ಎಲ್ಲಾ ಶಾಲಾ ಉಪಾಧ್ಯಾಯರಿಗೆ ಹೆಚ್ಚಿನ ಸಂಬಳವನ್ನು ಕೊಡುವ ವಿಷಯವನ್ನು ಅಲ್ಲಿಯ ಸರ್ಕಾರವು ಪರಿಶೀಲಿಸುತ್ತಲಿರುವುದಾಗಿಯೂ ಸದ್ಯದಲ್ಲಿಯೇ ಈ ಸಂಬಂಧದಲ್ಲಿ ಹೊಸ ಆಜ್ಞೆಯೆಂದು ಹೊರಬೀಳುವುದೆಂದೂ ತಿಳಿಯಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೨—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—	೨೧-೧೨
ಎಳ್ಳು	—	—
ಹರಳು	೨೩ ೧೪	೩೩—
ಹುಚ್ಚೆಳ್ಳು	೩೭—೧೪	೪೨—
ಹೊಂಗೆಬೀಜ	೨೨—೨	೨೫—೮
ಹುಣಸೆಬೀಜ	೧೨—	೧೨—೨
ಹುರುಳಿ	೨೫—	೨೯—೧೨
ಹೆಸರು	೩೮—೧೪	—
ಅವರೆ	೨೮ ೧೪	೨೭—೨
ಅಲಸಂದೆ	೩೦—೨	೪೮—೪
ಉದ್ದು	—	—
ಕೊತ್ತಂಬರಿ	೨೮—೮	೨೯—೧೦
ಕಡಲೆ	೪೭—೮	೪೯—
ತೊಗರಿ	೨೧—೮	೨೮—
ಹುಣಸೆಹಣ್ಣು	೨—೮	೮—೧೦
ಮೆಣಸಿನಕಾಯಿ	೩೭—೧೦	೩೧—
ಸೀಗೆಕಾಯಿ	೪—	೪—೧೧
ಬೆಲ್ಲ	೪—೮	೫—
ತೆಂಗಿನಕಾಯಿ	೧೩೦—	೨೯೪—

ಆಂಧ್ರದಲ್ಲಿ ಪಾನನಿರೋಧ ವಿಫಲಗೊಂಡಿದೆ

ಪಾನನಿರೋಧ ಪರಿಶೀಲನಾ ಸಮಿತಿಯ ವರದಿ

ಆಂಧ್ರಪ್ರಾಂತ್ಯದಲ್ಲಿ ಪಾನನಿರೋಧವು ಯಾವರೀತಿ ನಡೆಯುತ್ತಿದೆಯೆಂಬುದನ್ನು ಪರಿಶೀಲಿಸಿ ಅದನ್ನು ಮುಂದುವರಿಸಲು ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ಕೊಡಲು ಅಲ್ಲಿಯ ಸರ್ಕಾರವು ನೇಮಿಸಿದ್ದ ತ್ರಿಮೂರ್ತಿ ಸಮಿತಿಯು ಈ ಪ್ರಾಂತ್ಯದಲ್ಲಿ ಪಾನನಿರೋಧವು ಯಶಸ್ವಿಯಾಗಿ ನಡೆಯುತ್ತಿಲ್ಲವೆಂದು ಅಭಿಪ್ರಾಯಪಟ್ಟು, ಅದನ್ನು ಮಾರ್ಪಡಿಸಲು ೧೪ ಹೊಸ ಸಲಹೆಗಳನ್ನು ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಪಾನನಿರೋಧ ನೀತಿಯಿಂದ ಪ್ರಾಂತ್ಯದ ಪೋಲೀಸ್, ಸಹಕಾರ ಮುಂತಾದ ಶಾಖೆಗಳಲ್ಲಿ ಲಂಚಕೋರತನವು ವಿಶೇಷವಾಗುತ್ತಿರುವುದೆಂದೂ ಈ ಸಮಿತಿಯು ಸೂಚಿಸಿದೆ.

ಈಗಿನ ಮದ್ಯದ ಉಪಯೋಗದಲ್ಲಿ ಹಲವಾರು ಬದಲಾವಣೆಗಳನ್ನು ಮಾಡುವುದು ಮತ್ತು ಅದರ ಮೇಲೆ ವಿಧಿಸುತ್ತಲಿರುವ ಸುಂಕ ಮುಂತಾದುವನ್ನು ತೆಗೆದುಹಾಕಬೇಕೆಂದೂ ಸಮಿತಿ ಸಲಹೆ ಕೊಟ್ಟಿದೆ.

ಉಪಾಧ್ಯಾಯರ ಮುಷ್ಕರ ಮುಕ್ತಾಯ

ಕಳೆದ ೧೨ ದಿನಗಳಿಂದ ಪಶ್ಚಿಮಬಂಗಾಳದಲ್ಲಿ ಸೆಕೆಂಡರಿ ಶಾಲಾ ಉಪಾಧ್ಯಾಯರು ನಡೆಸುತ್ತಲಿದ್ದ ಮುಷ್ಕರವು ನಿನ್ನೆಯದಿನ ಕೊನೆಗೊಂಡಿತು. ಪೂರ್ವಮೂಲಿನಂತೆ ಎಲ್ಲಾ ಉಪಾಧ್ಯಾಯರು ತಮ್ಮ ತಮ್ಮ ಶಾಲೆಗಳಿಗೆ ಹೋದರು.

ಈ ಮುಷ್ಕರ ಸಂಬಂಧದಲ್ಲಿ ದಸ್ತಗಿರಿಯಾದವರಲ್ಲಿ ನಿನ್ನೆಯದಿನ ೩೨೧ ಉಪಾಧ್ಯಾಯರ ಬಿಡುಗಡೆಯಾಯಿತು. ಇವರಲ್ಲಿ ೪೪ ಮಹಿಳೆಯರೂ ಸೇರಿದ್ದಾರೆ. ಇವರನ್ನಲ್ಲದೆ ಮತ್ತೆ ೬೧ ಜನರನ್ನು ಬಿಡುಗಡೆ ಮಾಡಲಾಗಿದೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಭಾರತಕ್ಕೂ ನೆರೆರಾಷ್ಟ್ರಗಳಿಗೂ ಸೌಹಾರ್ದ್ಯಯುತ ಸಂಬಂಧ

ಟಿಬೆಟ್ ವಿಷಯದಲ್ಲಿ ಭಾರತ ಮತ್ತು ಚೈನಾಗಳ ನಡುವೆ ಅತ್ಯಂತ ಸೌಹಾರ್ದ್ಯಯುತವಾಗಿ ಮಾತುಕತೆಗಳು ಮುಂದುವರಿಯುತ್ತಿರುವುದಾಗಿ ಪ್ರಧಾನಿ ನೆಹರೂರವರು ತಿಳಿಸುತ್ತಾ, ಭಾರತದೊಡನೆ ಪಾಕೀಸ್ತಾನವಹ ಮಿಕ್ಕೆಲ್ಲ ನೆರೆರಾಷ್ಟ್ರಗಳು ವಿಶೇಷ ಸೌಹಾರ್ದ್ಯಯುತವಾಗಿ ನಡೆಯುತ್ತಿರುವುದಾಗಿ ಹೇಳಿದ್ದಾರೆ.

ರಾಷ್ಟ್ರಾಧ್ಯಕ್ಷರಿಗೆ ವಂದನೆ

ಪಾರ್ಲಿಮೆಂಟಿನ ಸಂಯುಕ್ತ ಅಧಿವೇಶನದಲ್ಲಿ ಭಾಷಣಮಾಡಿದುದಕ್ಕೆ ರಾಷ್ಟ್ರಾಧ್ಯಕ್ಷರಿಗೆ ಲೋಕಸಭೆಯು ವಂದನಾ ನಿರ್ಣಯವನ್ನು ನಿನ್ನೆಯದಿನ ಅಂಗೀಕರಿಸಿತು.

ತೆಲುಗು ಶೀಘ್ರಲಿಪಿ ಮತ್ತು ಟೈಪ್ ಯಂತ್ರ

ತೆಲುಗು ಶೀಘ್ರಲಿಪಿ ಮತ್ತು ಟೈಪ್ ಯಂತ್ರದ ಪರಿಶೀಲನೆಗಾಗಿ ಆಂಧ್ರ ಸರ್ಕಾರವು ಒಂದು ಸಲಹಾ ಸಮಿತಿಯನ್ನು ರಚಿಸಿದೆ.

ಅರಮನೆ ಅಶ್ವಶಾಲಾ ಮತ್ತು ಗಜಶಾಲಾ, ಮೈಸೂರು

ಟೆಂಡರ್ ನೋಟೀಸು

ಸನ್ 1954-55ನೇ ಸಾಲಿನಲ್ಲಿ ಅಂದರೆ ತಾ: 1-4-54 ರಿಂದ 31-3-55ರವರೆಗೆ ಅರಮನೆ ಅಶ್ವಶಾಲಾ ಮತ್ತು ಗಜಶಾಲಾ ಇಲಾಖೆಗೆ ಸೌದೆ ಸರಬರಾಯಿ ಮಾಡಲು ಅಪೇಕ್ಷೆಯುಳ್ಳವರು ಸೀಲಾದ ಟೆಂಡರುಗಳನ್ನು 1954ನೇ ಫೆಬ್ರವರಿ ಮಾಹೆ ತಾ: 25ನೇ ಮಧ್ಯಾಹ್ನ 12 ಘಂಟೆಯೊಳಗಾಗಿ ಕೆಳಕಂಡ ಇಲಾಖಾ ಆಫೀಸರ್ ಇನ್ ಚಾರ್ಜು ಆಫೀಸರವರಿಗೆ ಕೊಡತಕ್ಕದ್ದು. ಹೆಚ್ಚಿಗೆ ವಿಷಯಗಳನ್ನು ಇಲಾಖೆಯಲ್ಲಿ ವಿಚಾರಿಸಿ ತಿಳಿದುಕೊಳ್ಳತಕ್ಕದ್ದು.

M. GOPALKRISHNE URS
officer-in-charge
Palace Stables & Gajasala
MYSORE

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೪೭

೨೪-೨-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಶಾಸನಸಭಾಧಿವೇಶನ

ಬೆಂಗಳೂರು ೨೪

ಮೈಸೂರು ಶಾಸನಸಭೆಯ ಬಡ್ಜೆಟ್ ಅಧಿವೇಶನವು ಈಗಿನ ಕಾರ್ಯಕ್ರಮ ಪಟ್ಟಿಯಂತೆ ಮಾರ್ಚಿ ಒಂದನೇ ತಾರೀಖಿನಿಂದ ೩೦ರ ವರೆಗೂ, ಪ್ರಜಾಪರಿಷತ್ತು ಮಾರ್ಚಿ ೧೫ರಿಂದ ೩೦ರ ವರೆಗೂ ನಡೆಯವುದೆಂದು ತಿಳಿಯಬರುತ್ತದೆ.

ಮೈಸೂರುಸಾಬು-ನೆಹರೂ ಭೇಟಿ

ಅಮೆರಿಕದ ಹಾಲಿವುಡ್ಡಿನ ಸುಪ್ರಸಿದ್ಧ ನಟ ಮೈಸೂರು ಸಾಬು ಪ್ರಧಾನಿ ನೆಹರೂರವರನ್ನು ನಾಳೆದಿನ ದೆಹಲಿಯಲ್ಲಿ ಭೇಟಿ ಮಾಡಲಿದ್ದಾನೆ. ಆತನು ಈಗ ಬೊಂಬಾಯಿನಲ್ಲಿದ್ದಾನೆ.

೧೮ ವರ್ಷಗಳ ಹಿಂದೆ ತನ್ನನ್ನು ಹಾಲಿವುಡ್ಡಿಗೆ ಕಳುಹಿಸಲು ಸಹಾಯ ಮಾಡಿದುದಕ್ಕಾಗಿ ಮೈಸೂರಿನ ರಾಜರನ್ನು ವಂದಿಸಲು ಮತ್ತು ವಿಶ್ವದ ಮಹಾಪುರುಷ ಪಂಡಿತ ನೆಹರೂರವರನ್ನು ಖುದ್ದು ಭೇಟಿ ಮಾಡಲು ಭಾರತಕ್ಕೆ ಬಂದ ಮುಖ್ಯ ಉದ್ದೇಶವೆಂದೂ, ಈ ಎರಡು ಇಷ್ಟಾರ್ಥಗಳೂ ದೇವರ ಕೃಪೆಯಿಂದ ಈಗ ಫಲಿಸಿತೆಂದೂ ಸಾಬು ತಿಳಿಸಿದ್ದಾನೆ.

೬೧ ಲಕ್ಷ ಟಿಕೇಟು ಇಲ್ಲದ ಪ್ರಯಾಣಿಕರು

ಕಳೆದ ವರ್ಷ ಭಾರತದ ರೈಲ್ವೆಗಳಲ್ಲಿ ೬೧,೧೯,೬೯೭ ಮಂದಿ ಟಿಕೇಟು ಇಲ್ಲದೆ ಪ್ರಯಾಣ ಮಾಡುತ್ತಿದ್ದುದನ್ನು ಪತ್ತೆ ಮಾಡಲಾಯಿತೆಂದೂ, ಅವರುಗಳ ಪೈಕಿ ಒಂಭತ್ತೂವರೆ ಲಕ್ಷ ಜನರಿಗೆ ದಂಡ ಹಾಕಿ, ಒಟ್ಟು ೧೪೭ ಲಕ್ಷ ರೂಗಳನ್ನು ವಸೂಲು ಮಾಡಲಾಯಿತೆಂದೂ ತಿಳಿಸಲಾಗಿದೆ. ಕುಂಭಮೇಳಕ್ಕೆ ಈ ಸಾರಿ ೩೭ ಸಾವಿರ ಜನರು ಟಿಕೇಟು ಇಲ್ಲದೆ ಪ್ರಯಾಣಮಾಡಿದರು.

ಮೋಟಾರು ಬಸ್ಸು ತಯಾರಿಕೆ ಕಾರ್ಖಾನೆ

ಭಾರತದಲ್ಲಿ ಮೋಟಾರು ಬಸ್ ಮತ್ತು ಟ್ರಕ್ಕುಗಳನ್ನು ತಯಾರಿಸಲು ಒಂದು ಕಾರ್ಖಾನೆಯನ್ನು ಸ್ಥಾಪಿಸಲು ಟಾಟಾ ಕಂಪೆನಿಯವರು ಜರ್ಮನಿಯ ಕಂಪೆನಿಯೊಂದರೊಡನೆ ವ್ಯವಹಾರ ನಡೆಸುತ್ತಿದ್ದಾರೆ.

ಟರ್ಕಿ-ಪಾಕ್ ಒಪ್ಪಂದಕ್ಕೆ ಸ್ವಾಗತ

ಟರ್ಕಿ ಮತ್ತು ಪಾಕೀಸ್ತಾನಗಳನಡುವೆ ಆಗಿರುವ ರಾಜಕೀಯ ಮತ್ತು ಆರ್ಥಿಕ ಒಪ್ಪಂದವನ್ನು ಬ್ರಿಟನ್ ವಿದೇಶಾಂಗ ಸಚಿವ ಮಿ|| ಈಡನ್‌ರವರು ಸ್ವಾಗತಿಸಿದ್ದಾರೆ.

ಉದ್ಯಾನವನ ಮಹೋತ್ಸವ

ಮೈಸೂರು ೨೪

ಸಂಸ್ಥಾನದ ಫಲಪುಷ್ಪಗಳ ಸಂಘದ ಮೈಸೂರು ಶಾಖೆಯ ಆಶ್ರಯದಲ್ಲಿ ಉದ್ಯಾನವನ ಮಹೋತ್ಸವವು ಮುಂದಿನ ಜುಲೈ ತಿಂಗಳಿನ ಮೊದಲನೆ ವಾರದಲ್ಲಿ ಆಚರಿಸಲಾಗುವುದು.

ಈ ಸಂದರ್ಭದಲ್ಲಿ ಬಹುಮಾನವನ್ನು ಕೊಡುವ ಸಲುವಾಗಿ ೧ನೇ ತಾರೀಖು ಅರಮನೆ, ಸರ್ಕಾರಿ ಮತ್ತು ಪುರಸಭಾ ಉದ್ಯಾನವನಗಳ ಮತ್ತು ೨ನೇ ತಾರೀಖು ಖಾಸಗಿ ಉದ್ಯಾನವನಗಳು ಮತ್ತು ಕೈತೋಟಗಳಿಗೂ ಭೇಟಿ ಕೊಡಲಾಗುವುದು.

ಫಲ ಪುಷ್ಪಗಳ ಪ್ರದರ್ಶನ ೩ನೇ ತಾ|| ಶನಿವಾರ ಮತ್ತು ೪ನೇ ತಾ|| ಭಾನುವಾರ ನಡೆಯುವುದು. ಎಲ್ಲರೂ ಸಹಕರಿಸಬೇಕೆಂದು ಸಂಘದ ಉಪಾಧ್ಯಕ್ಷ ಶ್ರೀ ಟಿ. ವೆಂಕಟರಮಣಯ್ಯನವರು ಕೋರುತ್ತಾರೆ.

ಭಾರಿ ಕೇಡಿಗೆ ಶಿಕ್ಷೆ

ಮೈಸೂರು ೨೪

ರಾಜಧಾನಿಯ ಲಷ್ಕರ್ ಮೊಹಲ್ಲಾದ ಭಾರಿ ಕೇಡಿ ಮಂಚ ಉರುಫ್ ಉಗ್ರ ಉರುಫ್ ನರಸಿಂಹ ಎಂಬುವನು ನಗರದಲ್ಲಿ ೬ ಕಡೆಗಳಲ್ಲಿ ಕಳ್ಳತನ ಮಾಡಿದವನೆಂದು ಆತನಿಗೆ ೯ ತಿಂಗಳು ಕಠಿಣ ಶಿಕ್ಷೆಯನ್ನು ನಗರದ ಮೊದಲನೇ ನ್ಯಾಯಾಧೀಶರು ವಿಧಿಸಿದ್ದಾರೆ.

ವಿದ್ಯುಚ್ಛಕ್ತಿ ಇಲಾಖೆಯಲ್ಲಿ ನೌಕರನಾಗಿದ್ದ ಚಿಕ್ಕ ಎಂಬುವನು ಕ್ಯಾಮರಾ, ಬಟ್ಟೆ ಮುಂತಾದ ವಸ್ತುಗಳನ್ನು ೫ ಕಡೆ ಕಳವು ಮಾಡಿದವನೆಂದು ಆತನಿಗೆ ೩ ತಿಂಗಳು ಕಠಿಣ ಶಿಕ್ಷೆ ವಿಧಿಸಲಾಗಿದೆ.

ಪಾನನಿರೋಧ ರದ್ದಾಗಲಿ

ಕಳೆದ ಎರಡು ದಿನಗಳಿಂದ ಗುಂಟೂರಿನಲ್ಲಿ ನಡೆದ ಆಂಧ್ರ ಪ್ರಜಾಸೋಷಲಿಸ್ಟ್ ಪಕ್ಷ ಸಭೆಯು ಪ್ರಾಂತ್ಯದಲ್ಲಿ ಪಾನನಿರೋಧವನ್ನೂ ಪೂರ್ಣವಾಗಿ ರದ್ದುಗೊಳಿಸಬೇಕು ಇಲ್ಲವೇ ರಾಮಮೂರ್ತಿ ಸಮಿತಿ ಸಲಹೆಗಳನ್ನು ಸರ್ಕಾರವು ಅಂಗೀಕರಿಸಬೇಕು ಎಂಬ ನಿರ್ಣಯಮಾಡಿದೆ.

ಬಡಜನರಿಗೆ ಗೃಹವಸತಿ

ಭಾರತದ ಉಪಾಧ್ಯಾಯರು, ಗುಮಾಸ್ತರು, ಅಂಗಡಿ ನೌಕರರು ಮುಂತಾದ ಬಡಜನರಿಗೆ ಸುಲಭ ಬೆಲೆಯಲ್ಲಿ ಮನೆಗಳನ್ನು ಒದಗಿಸಲು ದೇಶದಾದ್ಯಂತ ಒಂದು ಗೃಹಯೋಜನೆಯನ್ನು ಕಾರ್ಯರೂಪಕ್ಕೆ ತರಲು ಕೇಂದ್ರ ಆಯೋಜನಾ ಸಮಿತಿ ನಿರ್ಧರಿಸಿದೆ.

ಅಂತರ ಪ್ರಾಂತ್ಯ ಮಾರಾಟ ತೆರಿಗೆ ವಸೂಲಿ

ಬೆಂಗಳೂರು ೨೪

ಅಂತರ ಪ್ರಾಂತ್ಯ ಮಾರಾಟ ತೆರಿಗೆ ವಸೂಲಿಬಗ್ಗೆ ಮೈಸೂರು ಸರ್ಕಾರದವರು ಒಂದು ತಾತ್ಕಾಲಿಕ ವ್ಯವಸ್ಥೆಯನ್ನು ಮಾಡಿರುವ ಆಜ್ಞೆಯು ಪ್ರಕಟವಾಗಿದೆ.

ಇನ್ನು ಮುಂದೆ ಸಂಸ್ಥಾನಕ್ಕೆ ಸೇರಿದ ವ್ಯಾಪಾರಿಗಳು ಸಂಸ್ಥಾನಕ್ಕೆ ಸೇರದ ವ್ಯಾಪಾರಿಗಳು, ಸಂಸ್ಥಾನಕ್ಕೆ ಸಂಬಂಧಿಸಿದಂತೆ ಮಾಡುವ ವ್ಯಾಪಾರದ ವಿವರವನ್ನು ೩ ತಿಂಗಳಿಗೊಂದು ಬಾರಿ ಒಪ್ಪಿಸಬೇಕು. ಅದನ್ನು ನಿರ್ಧಿಷ್ಟ ಫಾರಂಗಳಲ್ಲಿ ಸರ್ಕಾರ ಗೊತ್ತುಪಡಿಸುವ ಅಧಿಕಾರಿಗಳಿಗೆ ಕಳುಹಿಸಬೇಕು.

ಭಾರತಕ್ಕೆ ವಿಶ್ವವು ಚಿರಋಣಿ ಆಗಿರಬೇಕು

ಭಾರತವು ವಿಶ್ವಶಾಂತಿಗಾಗಿ ವಿಶೇಷವಾಗಿ ಶ್ರಮಿಸುತ್ತಲಿದೆ. ಕೊರಿಯಾದಲ್ಲಿ ಭಾರತ ಸೈನ್ಯ ಅದ್ವಿತೀಯ ಶಕ್ತಿ ಸಹನೆ ಮತ್ತು ಶಾಂತ ಮನೋಭಾವವನ್ನು ತೋರಿಸಿದೆ. ಅಲ್ಲಿ ಭಾರತವು ನಡೆಸಿದ ಕಾರ್ಯಕ್ಕೆ ವಿಶ್ವವು ಚಿರಋಣಿಯಾಗಿರಬೇಕು. ಕೊರಿಯಾ ಪ್ರಶ್ನೆಯು ಸಂಪೂರ್ಣವಾಗಿ ಇತ್ಯರ್ಥವಾಗುವುದರಲ್ಲಿ ಭಾರತವು ಇನ್ನೂ ತನ್ನ ಪಾತ್ರವನ್ನು ವಹಿಸಲೇ ಬೇಕು ಎಂಬುದಾಗಿ ನಿನ್ನೆಯದಿನ ಪಾರ್ಲಿಮೆಂಟ್ ಸದಸ್ಯರನ್ನುದ್ದೇಶಿಸಿ ಕೆನಡಾ ಪ್ರಧಾನಿ ಮಿ|| ಸೆಂಟ್‌ಲಾರೆಂಟ್‌ರವರು ಮಾತನಾಡುತ್ತಾ ತಿಳಿಸಿದರು.

ನೂತನ ಪುಸ್ತಕ ಭಂಡಾರ

ಪ್ರಪಂಚ ಸಂಸ್ಥೆಯ ಯುನೆಸ್ಕೊ ಶಾಖೆಯು ಹೊಸ ದೆಹಲಿಯಲ್ಲಿ ಅತ್ಯಾಧುನಿಕ ರೀತಿಯ ಪುಸ್ತಕ ಭಂಡಾರವೊಂದನ್ನು ತೆರೆಯಲಿದೆ. ಇದಕ್ಕಾಗಿ ೬೦ ಸಾವಿರ ಡಾಲರುಗಳ ವೆಚ್ಚಮಾಡಲಿದೆ.

೪ ಲಕ್ಷ ಟನ್ ಆಹಾರ ದಾಸ್ತಾನು

ಇದೇ ೯ ನೇ ತಾರೀಖು ಅಂತ್ಯದ ಅವಧಿಯಲ್ಲಿ ಭಾರತ ಸರ್ಕಾರದಲ್ಲಿ ಒಟ್ಟು ೪,೩೮,೦೦೦ ಟನ್‌ಗಳಷ್ಟು ಆಹಾರ ಧಾನ್ಯಗಳ ದಾಸ್ತಾನುಇತ್ತೆಂದು ಕೇಂದ್ರ ಆಹಾರ ಉಪಸಚಿವ ಶ್ರೀ ಕೃಷ್ಣಪ್ಪನವರು ತಿಳಿಸಿದ್ದಾರೆ.

ಅಭಾವ ಪ್ರದೇಶಗಳು

ರಾಜಸ್ಥಾನದಲ್ಲಿ ಬಿಕನೀರ್, ಜಯಪುರ ಮುಂತಾದ ಭಾಗಗಳಿಗೆ ಸೇರಿದ ೪೫೨ ಗ್ರಾಮಗಳನ್ನು ಅಭಾವ ಪ್ರದೇಶಗಳೆಂದು ಅಲ್ಲಿಯ ಸರ್ಕಾರವು ಘೋಷಿಸಿದೆ.

ದಕ್ಷತೆ ಮತ್ತು ಉತ್ತಮ ಕೆಲಸಕ್ಕೆ ಬಡ್ತಿ

ಬೆಂಗಳೂರು ೨೪

ಸೀನಿಯಾರಿಟಿ ಮೇಲೆ ಬಡ್ತಿ ಕೊಡುವುದರಿಂದ ಆಡಳಿತದಲ್ಲಿ ದಕ್ಷತೆ, ಉತ್ಸಾಹ ಉಂಟಾಗುವುದಿಲ್ಲ. ಇನ್ನುಮುಂದೆ ಸರ್ಕಾರವು ಕೇವಲ ಸೀನಿಯಾರಿಟಿ ಮೇಲೆ ಬಡ್ತಿ ಕೊಡದೆ ದಕ್ಷತೆ ಮತ್ತು ಉತ್ತಮ ಕೆಲಸವನ್ನು ಪರಿಗಣಿಸಿ ಬಡ್ತಿ ಕೊಡುವುದೆಂದು ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ನಿನ್ನೆಯದಿನ ಅಠಾರಾಕಛೇರಿಯಲ್ಲಿ ನಡೆದ ಇಲಾಖಾ ಮುಖ್ಯಾಧಿಕಾರಿಗಳ ಸಭೆಯಲ್ಲಿ ತಿಳಿಸಿದ್ದಾರೆ.

ದಕ್ಷತೆಯಿಂದ ಕೆಲಸ ಮಾಡುವವರಿಗೆ ಸೂಕ್ತ ಪರಿಹಾರವನ್ನು ಸಹ ಕೊಡಲಾಗುವುದೆಂದು ಅವರು ಹೇಳಿದ್ದಾರೆ.

ಅಲ್ಲದೆ ಅಧಿಕಾರಿಗಳು ಇಲಾಖಾ ಕಾರ್ಯಗಳನ್ನು ನಡೆಸುವಾಗ ಬರುವ ತೊಂದರೆಗಳನ್ನು ಮಂತ್ರಿಗಳ ಗಮನಕ್ಕೆ ತಂದರೆ ಅವುಗಳನ್ನು ಕೂಡಲೇ ಪರಿಹಾರ ಮಾಡಲಾಗುವುದೆಂದೂ ತ್ವರಿತಕೆಲಸವಿದ್ದಾಗ ಅಧಿಕಾರಿಗಳು ನೇರವಾಗಿ ತಮ್ಮ ಅಥವಾ ಇತರ ಮಂತ್ರಿಗಳ ಬಳಿಗೆ ಬರಬಹುದೆಂದು ತಿಳಿಸಿದ್ದಾರೆ.

ಶಾಸನಸಭೆಯ ಕಾಂಗ್ರೆಸ್ ಸದಸ್ಯರ ದಾಖಲಾತಿ

ಮುಂದಿನ ಚುನಾವಣೆಗಳಲ್ಲಿ ಈಗ ಶಾಸನಸಭಾ ಕಾಂಗ್ರೆಸ್ ಸದಸ್ಯರ ಉಮೇದುವಾರಿಕೆಗಳನ್ನು ಪರಿಶೀಲಿಸಲು ಅನುಕೂಲವಾಗುವಂತೆ, ಅವರ ಚಟುವಟಿಕೆಗಳ ಬಗ್ಗೆ ದಾಖಲಾತಿಗಳನ್ನು ಮಾಡಬೇಕು ಎಂದು ಅಖಿಲ ಭಾರತ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಎಲ್ಲ ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೂ ಸೂಚನೆ ಇತ್ತಿದ್ದಾರೆ.

ಮಾಜಿ ಅಧಿಕಾರಿಮೇಲೆ ಲಂಚದ ಆಪಾದನೆ

ಕೇಂದ್ರ ಕೈಗಾರಿಕಾ ಸಚಿವಶಾಖೆಯ ಮಾಜಿಕಾರ್ಯದರ್ಶಿ ಶ್ರೀ ಎಸ್. ಎ. ವೆಂಕಟರಾಮನ್‌ರವರ ಮೇಲೆ ಲಂಚರುಷವತ್ತಿನ ಆಪಾದನೆ ಮೇಲೆ ದೆಹಲಿಯ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಧೀಶರ ಕೋರ್ಟಿನಲ್ಲಿ ಮೊಕದ್ದಮೆ ಹೂಡಲಾಗಿದೆ.

ಪೆಪ್ಸು ಚುನಾವಣೆ

ಪೆಪ್ಸು ಸಂಸ್ಥಾನದಲ್ಲಿ ಚುನಾವಣೆಯು ಮೊನ್ನೆ ಪ್ರಾರಂಭವಾಗಿ ಈಗ ಎಂಟು ಚುನಾವಣಾ ಕ್ಷೇತ್ರಗಳ ಎಣಿಕೆ ಆರಂಭವಾಗಿದೆ. ನಿನ್ನೆಯವರೆಗೆ ಹೊರಬಿದ್ದ ಫಲಿತಾಂಶದ ಪ್ರಕಾರ, ಐದು ಸ್ಥಾನಗಳಲ್ಲಿ ಮೂರು ಕಾಂಗ್ರೆಸ್ಸಿಗೆ ದೊರೆತಿದೆ.

ಆಂಧ್ರ ಪಾನನಿರೋಧ ಸಮಿತಿಯ ಸಲಹೆಗಳು

ಆಂಧ್ರದಲ್ಲಿ ಪಾನನಿರೋಧ ನೀತಿಯ ಬಗ್ಗೆ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ಕೊಡಲು ರಚಿತವಾಗಿದ್ದ ರಾಮಮೂರ್ತಿ ಸಮಿತಿಯು ಪಾನನಿರೋಧ ನೂತನ ನೀತಿಯ ಬಗ್ಗೆ ಈ ಕೆಳಗೆ ಕಂಡ ೧೪ ಸಲಹೆಗಳನ್ನು ಕೊಟ್ಟಿದೆ:-

ಪಾನ ನಿರೋಧದಲ್ಲಿ ಮದ್ಯಗಳ ಬಗ್ಗೆ ಶಾಸನವನ್ನು ಬದಲಾಯಿಸಬೇಕು.

ಯಾವ ರಹದಾರಿಯಿಲ್ಲದೆ ಹೆಂಡವನ್ನು ಉಪಯೋಗಿಸುವ ಅವಕಾಶವಿಂಬೇಕು.

ರೇಷನ್ ಕ್ರಮವನ್ನು ಅನುಸರಿಸಿ ರಹದಾರಿಯ ಮೇಲೆ ಸಾರಾಯಿ ಉಪಯೋಗಿಸುವಂತೆ ಮಾಡಬೇಕು.

ಲೈಸನ್ಸ್ ಪಡೆದಿರುವ ಅಂಗಡಿಗಳ ಹತ್ತಿರ ಮಾತ್ರ ಮದ್ಯ ಸೇವನೆಗೆ ಅವಕಾಶವಿರಬೇಕು.

ಹೆಂಡ ಮತ್ತು ಸಾರಾಯಿ ಅಂಗಡಿಗಳನ್ನು ಹರಾಜು ಮೂಲಕ ವಿಲೆಮಾಡಬೇಕು.

ಸಾರಾಯಿ ಬೆಲೆ ಇಳಿಯುವಂತೆ ಮೊದಲು ಅದರ ಮೇಲಿನ ಸುಂಕವನ್ನು ಕಡಮೆ ಮಾಡಬೇಕು.

ಶರಾಬು ಅಂಗಡಿಗಳು ವಾಸಗೃಹಗಳಿಗೆ ದೂರವಿರಬೇಕು. ೨೧ವರ್ಷ ವಯಸ್ಸಿನ ಕೆಳಗಿನವರಿಗೆ ಮತ್ತು ಮಹಿಳೆಯರಿಗೆ ಈ ಮದ್ಯಗಳನ್ನು ಮಾರಕೂಡದು.

ಮದ್ಯ ಕೊಳ್ಳುವವರಿಗೆ ರಶೀತಿ ಕೊಟ್ಟು ತಕ್ಕ ಲೆಕ್ಕಪತ್ರ ಇಟ್ಟಿರಬೇಕು.

ವಿದೇಶೀ ಮದ್ಯಗಳನ್ನು ವೈದ್ಯ ಚೀಟಿಯಿಲ್ಲದೆಯೇ ರಹದಾರಿಯ ಮೇಲೆ ಉಪಯೋಗಿಸುವಂತೆ ಮಾಡಬೇಕು.

ಈ ವ್ಯಾಪಾರದ ಮೇಲಿರುವ ಇತರ ನಿರ್ಬಂಧಗಳನ್ನು ಬದಲಾಯಿಸಕೂಡದು.

ಅಫೀಮು ಮತ್ತು ಗಾಂಜಾ ಮೇಲಿರುವ ಈಗಿನ ಶಾಸನ ಮುಂದುವರಿಯಬೇಕು ಅವಶ್ಯಕಬಿದ್ದರೆ ಸರ್ಕಾರ ಬದಲಾಯಿಸಬಹುದು.

ಸೇರಾ ಮತ್ತು ತಾಟಿ ಬೆಲ್ಲ ತಯಾರಿಕೆಯನ್ನು ನಿಷೇಧಿಸಬೇಕು. ಇದಕ್ಕೆ ಸಂಬಂಧಪಟ್ಟಂತಿರುವ ಸಹಕಾರ ಸಂಘಗಳನ್ನು ಮುಚ್ಚಬೇಕು.

ಮದ್ಯಗಳಿಂದ ಬರುವ ವರಮಾನವನ್ನೆಲ್ಲಾ ರಾಷ್ಟ್ರೀಯ ಪ್ರಗತಿಕಾರ್ಯಗಳಿಗೆ ಉಪಯೋಗಿಸಬೇಕು.

ಮ್ಯಾಜಿಸ್ಟ್ರೇಟರುಗಳ ಮತ್ತು ನ್ಯಾಯವಾದಿಗಳ ಸಮ್ಮೇಳನ

ನ್ಯಾಯಾಸ್ಥಾನಗಳ ನಿತ್ಯ ಕೆಲಸಗಳಲ್ಲಿ ಉಂಟಾಗುವ ತೊಂದರೆಗಳನ್ನೆಲ್ಲಾ ಪರಿಶೀಲಿಸಿ, ಅವುಗಳಿಗೆ ಸೂಕ್ತ ಪರಿಹಾರವನ್ನು ಕಂಡು ಹಿಡಿಯಲು ಸೂರತ್ ಜಿಲ್ಲೆಯಲ್ಲಿರುವ ಎಲ್ಲಾ ಮ್ಯಾಜಿಸ್ಟ್ರೇಟರುಗಳ ಮತ್ತು ನ್ಯಾಯವಾದಿಗಳ ಸಮ್ಮೇಳನವೊಂದು ಇದೇ ೨೭, ೨೮ ನೇ ತಾರೀಖುಗಳಲ್ಲಿ ನಡೆಯಲಿದೆ.

ಪಾಕೀಸ್ತಾನ ವಿದೇಶಾಂಗ ಸಚಿವರ ರಾಜೀನಾಮೆ ?

ಟರ್ಕಿ-ಪಾಕೀಸ್ತಾನ ಒಪ್ಪಂದ ವಿಷಯದಲ್ಲಿ ಭಿನ್ನತೆ

ಪಾಕೀಸ್ತಾನದ ವಿದೇಶಾಂಗ ಸಚಿವ ಸರ್ ಮಹಮದ್ ಜಫರುಲ್ಲಾ ಖಾನರವರು ತಮ್ಮ ಹುದ್ದೆಗೆ ರಾಜೀನಾಮೆಯನ್ನು ಸಲ್ಲಿಸಿರುವುದಾಗಿಯೂ ಈ ವಿಷಯದಲ್ಲಿ ಅಂತ್ಯ ತೀರ್ಮಾನವಾಗುವವರೆಗೆ ಈ ಸ್ಥಾನದಲ್ಲಿ ಮುಂದುವರಿಯುವಂತೆ ಪ್ರಧಾನಿ ಮಹಮದಾಲಿಯವರು ಅವರನ್ನು ಪ್ರಾರ್ಥಿಸಿರುವುದಾಗಿಯೂ ಅಲ್ಲಿಯ ಪತ್ರಿಕೆಯೊಂದು ಪ್ರಕಟಿಸಿದೆ.

ಅರಬ್ ಮತ್ತು ಆಫ್ರಿಕಾಗಳ ನಡುವೆ ಪಾಕೀಸ್ತಾನದ ಸಂಬಂಧಕ್ಕೆ ಪಾಕೀಸ್ತಾನ ಮತ್ತು ಟರ್ಕಿ ಒಪ್ಪಂದವು ಅಡಚಣೆಯನ್ನುಂಟುಮಾಡುವುದೆಂದು ಜಫರುಲ್ಲಾ ಖಾನರು ಅಭಿಪ್ರಾಯಪಟ್ಟು ಈ ಒಪ್ಪಂದವನ್ನು ವಿರೋಧಿಸಿ ರಾಜೀನಾಮೆ ಇತ್ತಿರುವುದಾಗಿ ಹೇಳಲಾಗಿದೆ.

ಪಾನನಿರೋಧದಿಂದ ಪ್ರಾಂತ್ಯದ ವರಮಾನ ಇಳಿದಿಲ್ಲ

೧೯೫೦ರಿಂದ ಪ್ರಾಂತ್ಯದಲ್ಲಿ ಪಾನನಿರೋಧವನ್ನು ಜಾರಿಗೆ ತಂದಾಗಿನಿಂದ ಸಂಸ್ಥಾನದ ವರಮಾನವೇನೂ ಇಳಿದಿಲ್ಲ. ಈ ಬಾಬಿನಿಂದ ಬರುತ್ತಿದ್ದ ಹಣವನ್ನು ಬೇರೇ ತೆರಿಗೆರೂಪದಲ್ಲಿ ವಸೂಲ್ಮಾಡಲಾಗುತ್ತಿದೆ ಎಂದು ಬೊಂಬಾಯಿ ಸರ್ಕಾರವು ತೆರಿಗೆ ವಿಚಾರಣಾ ಸಮಿತಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದೆ. ಪಾನನಿರೋಧವನ್ನು ಜಾರಿಗೆ ತಂದಿರುವುದರಿಂದ ಜನರಿಗೆ ಸುಮಾರು ೬೫ ಕೋಟಿ ರೂಪಾಯಿಗಳಷ್ಟು ಹಣವು ಉಳಿತಾಯವಾಗಿ ಅವರು ಕೊಳ್ಳುವ ಶಕ್ತಿಯು ಉತ್ತಮಗೊಂಡಿದೆ ಎಂದು ಈ ಪತ್ರದಲ್ಲಿ ತಿಳಿಸಲಾಗಿದೆ.

ಹಿಂದಿಯಲ್ಲಿ ಪಠ್ಯ ಪುಸ್ತಕಗಳು

ಕಾಲೇಜು ವಿದ್ಯಾಭ್ಯಾಸಕ್ಕೆ ಬೇಕಾಗುವ ಎಲ್ಲಾ ಹಿಂದಿ ಪಠ್ಯ ಪುಸ್ತಕಗಳನ್ನು ಸರ್ಕಾರವೇ ತಯಾರಿಸಲು ವ್ಯವಸ್ಥೆ ಮಾಡಲಾಗಿದೆಯೆಂದು ಬೊಂಬಾಯಿಯ ವಿದ್ಯಾಸಚಿವರು ಹೇಳಿದ್ದಾರೆ.

ಇಂಗ್ಲೀಷ್ ಭಾಷೆಯ ವಿಷಯವಾಗಿ ಅವರು ಮಾತನಾಡುತ್ತಾ ನಮ್ಮ ಜನರು ಇಂಗ್ಲೀಷ್ ಭಾಷೆಯನ್ನು ಕಲಿತು ಕೆಟ್ಟ ಪ್ರಜೆಗಳಾಗುತ್ತಲಿದ್ದಾರೆ. ಅದನ್ನು ನಾವು ತಪ್ಪಿಸಬೇಕಾಗಿದೆ ಎಂದೂ ಹೇಳಿದ್ದಾರೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಸಾರ್ವಜನಿಕ ಬಿನ್ನವತ್ತಳೆ

ಬೆಂಗಳೂರು ೨೪

ಇಲ್ಲಿಗೆ ಆಗಮಿಸಿರುವ ರಷ್ಯಾ ಸಾಂಸ್ಕೃತಿಕ ನಿಯೋಗದವರಿಗೆ ನಿನ್ನೆ ಸಾರ್ವಜನಿಕ ಬಿನ್ನವತ್ತಳೆಯನ್ನು ನಗರಭವನದಲ್ಲಿ ಅರ್ಪಿಸಲಾಯಿತು.

ಪ್ರಾಂತ್ಯ ವಿಂಗಡನಾ ಕಾರ್ಯ ಬಗ್ಗೆ ವಿವರಣೆ

ಪ್ರಾಂತ್ಯಗಳ ಪುನರ್ವಿಂಗಡನಾ ಸಂಬಂಧದಲ್ಲಿ ಯಾವ ರೀತಿಯಾದ ಪ್ರಶ್ನಾವಳಿಯನ್ನೂ ತಯಾರಿಸದೆ ಸಂಬಂಧಪಟ್ಟವರಿಂದ ಲಿಖಿತ ಪತ್ರಗಳನ್ನು ಮಾತ್ರ ಪಡೆಯುವಂತೆ ಇದಕ್ಕಾಗಿ ಕೇಂದ್ರವು ರಚಿಸಿರುವ ಸಮಿತಿಯು ನಿರ್ಧರಿಸಿದೆ. ಈ ಬಗ್ಗೆ ಒಂದು ಪ್ರಕಟಣೆ ಹೊರಬಿದ್ದಿದೆ.

ಈ ರೀತಿಯಾಗಿ ಪತ್ರಗಳನ್ನು ಕಳುಹಿಸುವವರು ಎಲ್ಲಾ ವಿವರಗಳನ್ನೂ, ಅಂಕಿ ಅಂಶಗಳನ್ನೂ, ಭೂಪಟಗಳನ್ನೂ ತಯಾರಿಸಿ ೬ ಪ್ರತಿಗಳನ್ನು ಸಮಿತಿಯ ಕಾರ್ಯದರ್ಶಿಯವರಿಗೆ ಕಳುಹಿಸಬೇಕಾಗಿ ಕೋರಲಾಗಿದೆ.

ಸಾವಿರ ಜನಸಂಖ್ಯೆಯಿರುವ ಗ್ರಾಮಗಳಿಗೆ ಶಾಲೆಗಳು

ಒಂದು ಸಾವಿರ ಅದಕ್ಕಿಂತ ಹೆಚ್ಚು ಜನಸಂಖ್ಯೆಯುಳ್ಳ ಎಲ್ಲಾ ಗ್ರಾಮಗಳಲ್ಲೂ ಒಂದೊಂದು ಶಾಲೆಯನ್ನು ಸ್ಥಾಪಿಸಲು ಮದ್ರಾಸ್ ಸರ್ಕಾರವು ನಿರ್ಧರಿಸಿದೆ. ಮುಂದಿನ ಸಾಲಿನಲ್ಲಿ ಇಂತಹ ೧೭೨೦ ಶಾಲೆಗಳನ್ನು ತೆರೆಯಲಾಗುತ್ತದೆ.

ಅರಮನೆ ಅಶ್ವಶಾಲಾ ಮತ್ತು ಗಜಶಾಲಾ, ಮೈಸೂರು

ಟೆಂಡರ್ ನೋಟೀಸು

ಸನ್ 1954-55ನೇ ಸಾಲಿನಲ್ಲಿ ಅಂದರೆ ತಾ: 1-4-54 ರಿಂದ 31-3-55ರವರೆಗೆ ಅರಮನೆ ಅಶ್ವಶಾಲಾ ಮತ್ತು ಗಜಶಾಲಾ ಇಲಾಖೆಗೆ ಸೌದೆ ಸರಬರಾಯಿ ಮಾಡಲು ಅಪೇಕ್ಷೆಯುಳ್ಳವರು ಸೀಲಾದ ಟೆಂಡರುಗಳನ್ನು 1954ನೇ ಫೆಬ್ರವರಿ ಮಾಹೆ ತಾ: 25ನೇ ಮಧ್ಯಾಹ್ನ 12 ಘಂಟೆಯೊಳಗಾಗಿ ಮೇಲ್ಕಂಡ ಇಲಾಖಾ ಆಫೀಸರ್ ಇನ್ ಚಾರ್ಜು ಆಫೀಸರವರಿಗೆ ಕೊಡತಕ್ಕದ್ದು. ಹೆಚ್ಚಿಗೆ ವಿಷಯಗಳನ್ನು ಇಲಾಖೆಯಲ್ಲಿ ವಿಚಾರಿಸಿ ತಿಳಿದುಕೊಳ್ಳತಕ್ಕದ್ದು.

M. GOPALKRISHNE URS
officer-in-charge
Palace Stables & Gajasala
MYSORE

ದಕ್ಷಿಣ ಕನ್ನಡ ವಿದ್ಯಾರ್ಥಿ ಸಂಘದ ದಿನಾಚರಣೆ

ಮೈಸೂರು ೨೪

ದಕ್ಷಿಣ ಕನ್ನಡ ವಿದ್ಯಾರ್ಥಿ ಸಂಘದ ದಿನಾಚರಣೆಯು ಇದೇ ೨೮ ನೇ ತಾರೀಖು ಭಾನುವಾರ ಬೆಳಗ್ಗೆ ೧೦-೩೦ ಗಂಟೆಗೆ ವಾಣಪ್ರಕಾಶದಲ್ಲಿ ಶ್ರೀಮತಿ ಯಶೋಧರ ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

೮೦೦ ವಿದ್ಯಾರ್ಥಿಗಳ ಉಪವಾಸ ಮುಷ್ಕರ

ಕಲ್ಕತ್ತ ಬಳಿ ಖರಕಪುರದಲ್ಲಿರುವ ಭಾರತ ತಾಂತ್ರಿಕ ಶಿಕ್ಷಣ ಕೇಂದ್ರದ ಡೈರೆಕ್ಟರಾದ ಡಾ॥ ಜೆ. ಸಿ. ಘೋಷ್‌ರವರನ್ನು ತಮ್ಮ ಶಾಲೆಯಿಂದ ಬದಲಾಯಿಸಕೂಡದೆಂದು ಅಲ್ಲಿಯ ೮೦೦ ವಿದ್ಯಾರ್ಥಿಗಳು ಉಪವಾಸ ಮುಷ್ಕರವನ್ನು ಪ್ರಾರಂಭಿಸಿ ಶಾಲೆಗೆ ಹೋಗದೆ ಇದ್ದಾರೆ. ಡಾ॥ ಘೋಷ್‌ರವರು ಕಲ್ಕತ್ತ ವಿಶ್ವವಿದ್ಯಾನಿಲಯದ ಉಪಸ್ಥಾನಪತಿಗಳಾಗಿ ನೇಮಕವಾಗಿದ್ದಾರೆ.

ಅಖಿಲ ಭಾರತ ಮಾನಸಿಕ ಆರೋಗ್ಯ ಕೇಂದ್ರ

ಬೆಂಗಳೂರು ೨೪

೭೩ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಬೆಂಗಳೂರಿನಲ್ಲಿ ಅಖಿಲ ಭಾರತ ಮಾನಸಿಕ ಆರೋಗ್ಯ ಕೇಂದ್ರವೊಂದನ್ನು ಭಾರತ ಸರಕಾರವು ಸ್ಥಾಪಿಸಲಿದೆ. ಈ ಕಾರ್ಯಕ್ಕಾಗಿ ಮೈಸೂರು ಸರ್ಕಾರವು ಕಟ್ಟಡಕ್ಕಾಗಿ ೪.೭ ಲಕ್ಷ ಮತ್ತು ಸಾಮಗ್ರಿಗಳಿಗಾಗಿ ೮೦೦೦೦ ರೂಪಾಯಿಗಳನ್ನು ಕೊಡಲಿದೆ.

ಮದ್ರಾಸಿಗೆ ಆಂಧ್ರದ ಅಕ್ಕಿ

ಮದ್ರಾಸ್ ಪ್ರಾಂತ್ಯಕ್ಕೆ ಆಂಧ್ರವು ಈ ಸಾಲಿನಲ್ಲಿ ೨ ಲಕ್ಷ ಟನ್ ಅಕ್ಕಿಯನ್ನು ಸರಬರಾಜು ಮಾಡಲಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೩—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—೪	೨೪—೮
ಎಳ್ಳು	೬೦—೨	೬೬—೨
ಹರಳು	೨೪—	೩೩—
ಹುಚ್ಚೆಳ್ಳು	೩೫—	೪೧—
ಹೊಂಗೆಬೀಜ	೧೫—೨	೨೫—೪
ಹುಣಸೆಬೀಜ	೧೧—೧೪	೧೨—೨
ಹುರುಳಿ	೨೫—೮	೨೯—೪
ಅವರೆ	—	—
ಅಲಸಂದೆ	೨೧—	೪೪—೨
ಉದ್ದು	—	—
ಕೊತ್ತಂಬರಿ	೩೦—	೩೦—೬
ಕಡಲೆ	೪೭—೪	೫೦—೨
ತೊಗರಿ	೨೪—೧೪	೩೦—
ಹುಣಸೆಹಣ್ಣು	೫—೧೫	೮—೪
ಮೆಣಸಿನಕಾಯಿ	೨೩—೧೨	೩೦—೪
ಸೀಗೆಕಾಯಿ	೩—೭	೪—೯
ಬೆಲ್ಲ	೪—೮	೫—
ತೆಂಗಿನಕಾಯಿ	೧೦೨—	೨೮೨—

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೪೮

೨೫-೨-೧೯೫೪ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

೩ ತಿಂಗಳೊಳಗಾಗಿ ಬಳ್ಳಾರಿ ಬಿಟ್ಟುಕೊಡಬೇಕು

ಮೈಸೂರು ಸರ್ಕಾರಕ್ಕೆ ಬಳ್ಳಾರಿ ಆಂಧ್ರರ ಬೆದರಿಕೆ

ಬಳ್ಳಾರಿ ತಾಲ್ಲೂಕಿನ ೫ ಫಿರ್ಕಾಗಳಲ್ಲಿ ತೆಲುಗು ಮಾತನಾಡುವವರೇ ಹೆಚ್ಚಾಗಿ ಇದ್ದಾರೆ ಮೈಸೂರು ಸರ್ಕಾರವು ಇನ್ನು ೩ ತಿಂಗಳೊಳಗಾಗಿ ಬಳ್ಳಾರಿಯನ್ನು ಆಂಧ್ರ ಪ್ರಾಂತ್ಯಕ್ಕೆ ಒಪ್ಪಿಸದಿದ್ದರೆ ಬಲಾತ್ಕಾರವಾಗಿ ಅದನ್ನು ಒಪ್ಪಿಸುವ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತದೆ ಎಂಬುದಾಗಿ ಬಳ್ಳಾರಿ ಐಕ್ಯತಾ ವಿರೋಧ ಸಮಿತಿಯ ಅಧ್ಯಕ್ಷ ಶ್ರೀ ಸೀತಾರಾಮರೆಡ್ಡಿಯವರು ಎಚ್ಚರಿಸಿದ್ದಾರೆ.

ಬಳ್ಳಾರಿ ಮೈಸೂರಿಗೆ ಸೇರಿರುವುದನ್ನು ವಿರೋಧಿಸಲು ಈ ಸಂಸ್ಥೆಯು ಹೊಸದಾಗಿ ರಚಿತವಾಗಿದೆ.

ಶ್ರೀ ಸೀತಾರಾಮರೆಡ್ಡಿಯವರು ಮದ್ರಾಸಿನಲ್ಲಿ ಹಿಂದೆ ಸಚಿವರಾಗಿದ್ದರು.

ಬಳ್ಳಾರಿ ತಾಲ್ಲೂಕಿನಲ್ಲಿರುವ ಎಲ್ಲಾ ೨೫೦೦೦ ಆಂಧ್ರರು ಈ ಸಂಸ್ಥೆಗೆ ಸೇರಿ ಮುಂದೆ ಈ ಬಗ್ಗೆ ಚಳುವಳಿ ಹೂಡುವುದಾಗಿಯೂ ಅವರು ತಿಳಿಸಿದ್ದಾರೆ.

ಕಂದಾಯ ರಿಯಾಯಿತಿ

ಹುಣಸೂರು ತಾಲ್ಲೂಕು ಕುಂಟೇನಕೆರೆ, ಮಲಯಬನಕಟ್ಟೆ, ಸಿದ್ದನಕೆರೆ ಅಚ್ಚುಕಟ್ಟುಗಳಲ್ಲಿ ೧೯೪೯-೫೦ ರಲ್ಲಿ ಮಳೆ ಸರಿಯಾಗಿ ಬೀಳದ ಕಾರಣ ೧೬೦ರೂ ೬ ಆಣೆ ಕಂದಾಯ ರಿಯಾಯಿತಿಯನ್ನು ಕೊಡಲಾಗಿದೆ.

೫೨-೫೩ ನೇ ಸಾಲಿನಲ್ಲಿ ಗೋರಿಬಿದನೂರು ತಾಲ್ಲೂಕಿನ ೭೯ ಕೆರೆಗಳ ಅಚ್ಚುಕಟ್ಟಿನಲ್ಲಿ ತೊಂದರೆಗೀಡಾದವರಿಗೆ೧೭೦೨೯ ರೂ. ೧೩ ಆಣೆ ೩ ಕಾಸು ಕಂದಾಯ ಮಾಫಿ ಮಾಡಲಾಗಿದೆ.

ಕೆನಡಾ ಪ್ರಧಾನಿಗೆ ಗೌರವ ಪ್ರಶಸ್ತಿ

ಕೆನಡಾ ಪ್ರಧಾನಿ ಲೂಯಿ ಸೆಂಟ್ ಲಾರೆಂಟ್‌ರವರಿಗೆ ದೆಹಲಿಯ ವಿಶ್ವವಿದ್ಯಾನಿಲಯವು ನಿನ್ನೆಯದಿನ ವಿಶೇಷ ಸಮಾರಂಭವೊಂದರಲ್ಲಿ 'ಡಾಕ್ಟರ್ ಆಫ್ ಲಾಸ್' ಎಂಬ ಗೌರವ ಪ್ರಶಸ್ತಿಯನ್ನು ಕೊಟ್ಟು ಸನ್ಮಾನಿಸಿತು.

ಭಾರತಕ್ಕೆ ವಿಶ್ವಬ್ಯಾಂಕಿನ ಸಾಲ

ಭಾರತದಲ್ಲಿ ಒಂದು ಕೈಗಾರಿಕಾ ಆರ್ಥಿಕ ಕಾರ್ಪೊರೇಷನ್ ಸ್ಥಾಪಿಸಲು ವಿಶ್ವಬ್ಯಾಂಕ್ 17½ ಕೋಟಿ ರೂಪಾಯಿಗಳ ಸಾಲವನ್ನು ಕೊಡುವುದಾಗಿ ತಿಳಿಯಬರುತ್ತದೆ.

ಇಂಡೋ-ಚೀಣಾ ಯುದ್ಧ

ನಿಲ್ಲಿಸಬೇಕೆಂಬ ನೆಹರೂ ಸಲಹೆಗೆ ಕೆನಡಾದ ಬೆಂಬಲ

ಭಾರತ ಪ್ರಧಾನಿ ನೆಹರೂರಂತಹ ವ್ಯಕ್ತಿಗಳು ಇಂಡೋಚೀಣಾ ಯುದ್ಧವನ್ನು ಮುಕ್ತಾಯಗೊಳಿಸಬೇಕೆಂದು ಮಾಡಿರುವ ಸಲಹೆಗೆ ಕೆನಡಾವು ತನ್ನ ಪೂರ್ಣ ಒಪ್ಪಿಗೆಯನ್ನು ಮತ್ತು ಸಹಕಾರವನ್ನು ನೀಡುತ್ತದೆ. ಶ್ರೀ ನೆಹರೂರವರ ಸಲಹೆಯನ್ನು ಗೌರವಯುತವಾಗಿ ಪರಿಶೀಲಿಸಬೇಕು ಎಂದು ಭಾರತಕ್ಕೆ ಆಗಮಿಸಿರುವ ಕೆನಡಾ ಪ್ರಧಾನಿಯವರು ತಿಳಿಸಿದ್ದಾರೆ.

ವಿಶ್ವ ಸಂಸ್ಥೆಯಲ್ಲಿ ಚೀಣಾ ಜನತಾ ಸರ್ಕಾರದ ಸ್ಥಾನದ ವಿಷಯವಾಗಿ ಅವರು ಪ್ರಸ್ತಾಪಿಸುತ್ತಾ ಜನರ ಪ್ರತಿನಿಧಿಯಾಗಿರುವ ಸರ್ಕಾರಕ್ಕೆ ಮಾನ್ಯತೆ ದೊರೆಯಲೇಬೇಕೆಂದು ಹೇಳಿದ್ದಾರೆ

ಪಾಕೀಸ್ತಾನ ಅಮೆರಿಕಾ ಮಿಲಿಟರಿ ನೆರವಿನ ವಿಷಯವಾಗಿ ಅವರು ಪ್ರಸ್ತಾಪಿಸುತ್ತಾ ಅಮೆರಿಕಾವು ಯಾವ ದುರುದ್ದೇಶಪೂರ್ವಕವಾಗಿ ಈ ಕಾರ್ಯವನ್ನು ನಡೆಸುತ್ತಿಲ್ಲ. ತಪ್ಪುಮಾಡುತ್ತಿರಬಹುದು ಆದರೆ ವಿಶ್ವದಲ್ಲಿ ಬಿಕ್ಕಟ್ಟು ಪರಿಹಾರ ಮಾಡಿ ಶಾಂತಿ ಸ್ಥಾಪಿಸಬೇಕೆಂಬುದೇ ಅಮೆರಿಕಾ ಧ್ಯೇಯವಾಗಿರುತ್ತದೆ ಈ ಒಪ್ಪಂದವು ಭಾರತಕ್ಕೆ ತೊಂದರೆ ಅಥವ ವಿರುದ್ಧವಾಗಿ ಉಪಯೋಗವಾಗುವ ರೀತಿಯಿದ್ದರೆ ಅಮೆರಿಕಾ ಇದಕ್ಕೆ ಒಪ್ಪುತ್ತಲೇ ಇರಲಿಲ್ಲ. ಅಂತಹ ಕಾರ್ಯಕ್ಕೆ ತೊಡಗಲು ಅಮೆರಿಕಾದಲ್ಲಿ ೧೦೦ ಕ್ಕೆ ಒಬ್ಬನೂ ಒಪ್ಪುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ಪರದೇಶಿ ಬಟ್ಟೆಗಳಿಗೆ ಪಾಕ್ ಬಹಿಷ್ಕಾರ

ಕೈಮಗ್ಗದ ಬಟ್ಟೆಗೆ ಪ್ರೋತ್ಸಾಹವನ್ನು ಕೊಡಲು ಪರದೇಶಿ ಬಟ್ಟೆಗಳನ್ನು ತರಿಸುವುದಕ್ಕೆ ಬಹಿಷ್ಕಾರ ಹಾಕಬೇಕೆಂದು ಪಾಕೀಸ್ತಾನ ಬಟ್ಟೆ ತಯಾರಿಕಾ ಸಂಘದವರು ಮುಂದಿನ ತಿಂಗಳಿನ ಅಧಿವೇಶನದಲ್ಲಿ ನಿರ್ಧರಿಸಲಿದ್ದಾರೆ.

ಪೆಪ್ಸುವಿನಲ್ಲಿ ಚುನಾವಣಾ ಫಲಿತಾಂಶ

ಪೆಪ್ಸುವಿನಲ್ಲಿ ನಡೆದ ಮಹಾಚುನಾವಣೆಗಳಲ್ಲಿ ೧೪ ಸ್ಥಾನಗಳ ಫಲಿತಾಂಶವು ಹೊರಬಿದ್ದಿದೆ. ಇವರಲ್ಲಿ ಕಾಂಗ್ರೆಸ್ಸಿಗೆ ೧೦, ಅಕಾಲಿಪಕ್ಷ ೧, ಕಮ್ಯೂನಿಸ್ಟ್ ೧, ಸ್ವತಂತ್ರ ೧ ಸ್ಥಾನಗಳನ್ನು ಗಳಿಸಿವೆ.

ನಾನು ರಾಷ್ಟ್ರ ದ್ರೋಹಿಯಲ್ಲ

ನ್ಯಾಯ ರೀತ್ಯಾ ವಿಚಾರಣೆ ನಡೆಸಿ; ತಪ್ಪಿತಸ್ಥನಾದರೆ ಗುಂಡಿಟ್ಟು ಕೊಲ್ಲಿ

ಖಾನ್ ಅಬ್ದುಲ್ ಗಫಾರ್ ಖಾನ್ ರವರ ಹೇಳಿಕೆ

ಕಳೆದ ೬ ವರ್ಷಗಳಿಂದ ಜೈಲು ವಾಸವನ್ನು ಅನುಭವಿಸುತ್ತಲಿದ್ದು ಈಗತಾನೇ ಬಂಧಮುಕ್ತರಾಗಿರುವ ಗಡಿನಾಡಿನ ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನರವರು ನಿನ್ನೆಯದಿನ ರಾವಲ್ಪಿಂಡಿಯಿಂದ ಲಾಹೋರಿಗೆ ಆಗಮಿಸಿದರು. ಅವರಿಗೆ ಅಲ್ಲಿ ಅಭೂತ ಸ್ವಾಗತ ದೊರೆಯಿತು.

ಅವರು ಅಲ್ಲಿ ಸುದ್ದಿಗಾರರೊಡನೆ ಮಾತನಾಡುತ್ತಾ, ನಾನು ಇನ್ನು ಪೂರ್ಣವಾಗಿ ಬಂಧಮುಕ್ತನಾಗಿ ತಮ್ಮಿಷ್ಟಬಂದಂತೆ ಕೆಲಸಮಾಡಲು, ಮಾತನಾಡಲು ಸ್ವಾತಂತ್ರ್ಯವನ್ನು ಪಡೆದಿಲ್ಲ. ನಾನು ಜೈಲಿನಲ್ಲಿದ್ದಾಗ, ಪಾಕೀಸ್ತಾನ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಅವಕಾಶವನ್ನು ಕೇಳಿದೆ. ಕೊನೆಗೆ ಅಲ್ಲಿಯ ಸದಸ್ಯರ ಭೇಟಿಯನ್ನು ಕೋರಿದೆ. ಅವು ನಿರಾಕರಿಸಲ್ಪಟ್ಟಿತು. ನಾನು ರಾಷ್ಟ್ರ ದ್ರೋಹಿಯಲ್ಲ. ವಿಚಾರಣಾಮಂಡಲಿಯೊಂದನ್ನು ರಚಿಸಿ ವಿಚಾರಣೆ ನಡೆಯಲಿ ನಾನು ತಪ್ಪಿತಸ್ಥನೆಂದು ತಿಳಿದುಬಂದರೆ ನನ್ನನ್ನು ಗುಂಡಿಟ್ಟು ಕೊಲ್ಲಿ-ಎಂದು ತಿಳಿಸಿದರು.

ಅವರು ಕಾಶ್ಮೀರ ವಿಷಯವಾಗಿ ಮಾತನಾಡುತ್ತಾ ಹಿಂದೆ ಮಹಮದ್ ಅಲಿ ಜಿನ್ನಾರವರಿಗೆ ಈ ವಿಷಯದಲ್ಲಿ ಕೆಲವು ಸಲಹೆಗಳನ್ನು ಕೊಟ್ಟೆ. ಅವುಗಳನ್ನು ಗಮನಿಸಲಿಲ್ಲ ಈಗ ಪರಿಸ್ಥಿತಿಯು ಬಿಗಡಾಯಿಸಿಕೊಂಡಿದೆ ಮಧ್ಯಸ್ಥಿಕೆಯನ್ನು ವಹಿಸುವ ಕಾಲ ಇದಲ್ಲ. ಕಳೆದ ೬ ವರ್ಷಗಳಿಂದ ನಿಮ್ಮನ್ನು ಜೈಲಿನಲ್ಲಿಟ್ಟಿದ್ದ ಪಾಕೀಸ್ತಾನದ ಪರ ನೀವು ಹೇಗೆ ಸಂಧಾನ ನಡೆಸುತ್ತೀರೆಂಬ ಪ್ರಶ್ನೆ ಬಂದರೆ ನಾನು ಉತ್ತರ ಕೊಡಲು ಕಷ್ಟ ಎಂದು ಅವರು ತಿಳಿಸಿದ್ದಾರೆ

ಸದ್ಯಕ್ಕೆ ಪಾನನಿರೋಧ ಬೇಡ

ಬೀಹಾರ್ ಸರ್ಕಾರದ ಅಭಿಪ್ರಾಯ

ದೇಶದ ಆರ್ಥಿಕಸ್ಥಿತಿ ಉತ್ತಮಗೊಳ್ಳುವವರೆಗೆ ಪಾನನಿರೋಧ ನೀತಿಯು ಬೇಡ ಎಂಬುದಾಗಿ ಬೀಹಾರ್ ಸರ್ಕಾರವು ತೆರಿಗೆ ವಿಚಾರಣಾ ಮಂಡಲಿಗೆ ತಿಳಿಸಿರುವುದಾಗಿ ವರದಿಯಾಗಿದೆ. ಈ ಬಾಬಿನಲ್ಲಿ ಸರ್ಕಾರಕ್ಕೆ ಆಗುತ್ತಿರುವ ನಷ್ಟವನ್ನು ಸರಿತೂಗಿಸಲು ಕಷ್ಟವಾಗಿದೆಯೆಂದೂ ಅದು ತಿಳಿಸಿದೆ.

○ ಗೋವಾಕ್ಕೆ ಅತ್ಯಧಿಕ ಸಂಖ್ಯೆಯಲ್ಲಿ ಪೋರ್ಚುಗೀಸ್ ಸೈನ್ಯ ಮತ್ತು ಅಧಿಕಾರಿಗಳು ಬರುತ್ತಿರುವುದಾಗಿ ವರದಿಯಾಗಿದೆ. ಪ್ರಯಾಣಿಕರ ಹಡುಗುಗಳನ್ನೆಲ್ಲಾ ಈಗ ಈ ಸೈನ್ಯ ರವಾನೆಗೆ ಉಪಯೋಗಿಸಲಾಗುತ್ತಿದೆಯೆಂದು ತಿಳಿಯಬರುತ್ತದೆ.

ಖಾಸಗೀ ವಿದ್ಯಾಶಾಲೆಗಳಿಗೆ ಪ್ರೋತ್ಸಾಹ ನೀಡಿ

ಮೈಸೂರು ೨೫

ರಾಜಧಾನಿಯ ನ್ಯಾಷನಲ್ ಇಂಜನಿಯರಿಂಗ್ ಶಾಲಾ ಸಂಘದ ಮುಕ್ತಾಯ ಭಾಷಣವನ್ನು ನಿನ್ನೆಯಸಂಜೆ ಮಹಾರಾಜಾ ಕಾಲೇಜಿನ ಪ್ರೊ॥ ಎಂ. ವಿ. ಕೃಷ್ಣರಾಯರು ಮಾಡಿ, ಮೈಸೂರು ಇಂಜನಿಯರುಗಳು ಸಂಸ್ಥಾನ ಮತ್ತು ಇತರ ಕಡೆಗಳಲ್ಲಿ ಹೆಸರು ಪಡೆದಿರುವರೆಂದೂ, ಅದೇರೀತಿ ಮುಂದೆ ಇಂಜನಿಯರಾಗುವ ವಿದ್ಯಾರ್ಥಿಗಳು ಜನರಿಗೆ ಉಪಯೋಗವಾಗುವಂತೆ ಸೇವೆ ಸಲ್ಲಿಸಬೇಕೆಂದು ತಿಳಿಸಿದರು.

ಅಧ್ಯಕ್ಷತೆವಹಿಸಿದ್ದ ಮಾಜಿ ದಿವಾನರಾದ ಶ್ರೀ ಎನ್. ಮಾಧವರಾಯರು ಭಾಷಣ ಮಾಡಿ. ಖಾಸಗೀ ವಿದ್ಯಾಶಾಲೆಗಳು ಹೆಚ್ಚಬೇಕೆಂದೂ, ಅದಕ್ಕೆ ಸಾರ್ವಜನಿಕರೂ ಮತ್ತು ಸರ್ಕಾರ ಪ್ರೋತ್ಸಾಹ ಕೊಡಬೇಕೆಂದು ಹೇಳಿದರು.

ಕಾಳಿದಾಸ ಮಹೋತ್ಸವ

ಪ್ರಥಮ ದರ್ಜೆ ಕಾಲೇಜಿನ ಸಂಸ್ಕೃತ ಸಂಘದಾಶ್ರಯದಲ್ಲಿ ಇದೇ ೨೬ ಮತ್ತು ೨೭ ತಾರೀಖುಗಳ ಸಂಜೆ ೫-೩೦ ಘಂಟೆಗೆ 'ಕಾಳಿದಾಸ ಮಹೋತ್ಸವ'ವು ನಡೆಯುತ್ತದೆ ಪ್ರಸಿದ್ಧ ಗ್ರಂಥಕರ್ತರಾದ ಶ್ರೀ ಶಿವರಾಮಕಾರಂತರು ನಾಳೆ ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ.

ಆಯೋಜನಾ ಸಮಿತಿಗೆ ರಾಜೀನಾಮೆ

ಕೇಂದ್ರ ಸಾಮಾಜಿಕ ಸೇವಾ ಸಮಿತಿಯಲ್ಲಿ ತನ್ನ ಪೂರ್ಣ ಕಾಲವನ್ನು ವಿನಿಯೋಗಿಸುವ ಉದ್ದೇಶದಿಂದ ಶ್ರೀಮತಿ ದುರ್ಗಾಬಾಯಿ ದೇಶಮುಖ್‌ರವರು ಆಯೋಜನಾ ಸಮಿತಿ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಸಲ್ಲಿಸಿದ್ದಾರೆ.

೫ ರೂ ಲಂಚ ಪಡೆದಿದ್ದಕ್ಕೆ ೯ ತಿಂಗಳ ಕಠಿಣ ಸಜಾ

ಅಹಮದಾಬಾದಿನ ಸಿವಿಲ್ ಕೋರ್ಟ್ ಒಂದರಲ್ಲಿ ಒಬ್ಬ ಗುಮಾಸ್ತನು ೫ ರೂಪಾಯಿಗಳ ಲಂಚವನ್ನು ಪಡೆದಿದ್ದಕ್ಕೆ ಅಲ್ಲಿಯ ಅಡಿಷನಲ್ ಸೆಷನ್ಸ್ ನ್ಯಾಯಾಧೀಶರು ಅವನಿಗೆ ೯ ತಿಂಗಳು ಕಠಿಣ ಸಜಾ ೩೦೦ ರೂಪಾಯಿಗಳ ಜುಲ್ಮಾನೆ ತಪ್ಪಿದರೆ ಮತ್ತೆ ೩ ತಿಂಗಳ ಕಠಿಣಸಜಾ ವಿಧಿಸಿದ್ದಾರೆ.

ಆಂಧ್ರಪ್ರಾಂತ್ಯ ಪಾನನಿರೋಧ ನೀತಿ

ನೆಹರೂ ಪರಿಶೀಲನೆಯಲ್ಲಿ

ಆಂಧ್ರಪ್ರಾಂತ್ಯದಲ್ಲಿ ಹೊಸ ಪಾನನಿರೋಧ ನೀತಿಯ ಬಗ್ಗೆ ಅಲ್ಲಿಯ ಉಪಮುಖ್ಯಮಂತ್ರಿ ಮತ್ತು ಶಾಸನಸಭೆಯ ಕಾಂಗ್ರೆಸ್‌ಪಕ್ಷದ ನಾಯಕ ಶ್ರೀ ಎನ್. ಸಂಜೀವರೆಡ್ಡಿಯವರು ಪ್ರಧಾನಿ ನೆಹರೂರವರ ಸಲಹೆಯನ್ನು ಕೇಳಿರುವುದಾಗಿ ತಿಳಿಸಿದ್ದಾರೆ.

ರಾಮಮೂರ್ತಿ ಸಮಿತಿಯು ಪ್ರಾಂತ್ಯದಲ್ಲಿ ಈಗಿನ ಪಾನನಿರೋಧ ನೀತಿಯನ್ನು ಬದಲಾಯಿಸಿ ಹಲವಾರು ರಿಯಾಯಿತಿಗಳನ್ನು ಕೊಟ್ಟು ಸಡಿಲಿಸಬೇಕೆಂದು ಸೂಚಿಸಿದೆಯಷ್ಟೆ. ಈ ವರದಿಯನ್ನು ನೆಹರೂರವರ ಗಮನಕ್ಕೆ ಕಳುಹಿಸಲಾಗಿದೆ. ಶ್ರೀ ನೆಹ್ರೂರವರ ತೀರ್ಮಾನದಂತೆ ಕಾಂಗ್ರೆಸ್‌ಪಕ್ಷವು ತನ್ನ ನಿಲುವನ್ನು ನಿರ್ಧರಿಸುವುದು.

ಆಂಧ್ರ ಮಂತ್ರಿಮಂಡಲವು ಈ ವರದಿಯ ಬಗ್ಗೆ ಇನ್ನೂ ಯಾವ ನಿರ್ಧಾರವನ್ನೂ ಕೈಗೊಂಡಿಲ್ಲ. ಪ್ರಾಂತ್ಯದ ಕಲೆಕ್ಟರುಗಳು ಸಹ ಪಾನನಿರೋಧ ನೀತಿಯನ್ನು ಸ್ವಲ್ಪ ಸಡಿಲಿಸಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದಾಗಿ ತಿಳಿಯಬರುತ್ತದೆ

ಈ ವಿಷಯದಲ್ಲಿ ಸದ್ಯದಲ್ಲಿಯೇ ಕಾಂ॥ ಅಧ್ಯಕ್ಷ ನೆಹರೂರವರು ತಮ್ಮ ನಿರ್ದಿಷ್ಟ ತೀರ್ಮಾನವನ್ನು ಕೊಡುವ ನಿರೀಕ್ಷೆಯಿದೆ.

ಪಾನನಿರೋಧ ವಿಸ್ತರಣೆ

ಒರಿಸ್ಸಾಪ್ರಾಂತ್ಯದಲ್ಲಿ ಕಟಕ್, ಪುರಿ ಮತ್ತು ಬಲಸೋರೆ ಪ್ರದೇಶಗಳಲ್ಲಿ ಪಾನನಿರೋಧ ಶಾಸನವನ್ನು ಮುಂದಿನ ಹಣಕಾಸಿನ ವರ್ಷದಿಂದ ವಿಸ್ತರಿಸಲಾಗುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೪—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—೪	೨೭—೧೪
ಎಳ್ಳು	೫೮—	—
ಹರಳು	೨೫—೮	೩೧—
ಹುಚ್ಚೆಳ್ಳು	೩೫—೨	೪೨—೧೦
ಹೊಂಗೆಬೀಜ	೨೧—೧೪	೨೪—೮
ಹುಣಸೆಬೀಜ	೧೨—೧೦	೧೨—೧೪
ಹುರುಳಿ	೨೬—	೨೯—೪
ಹೆಸರು	೩೭—೪	೩೯—
ಅವರೆ	೨೮—೮	೩೨—೨
ಅಲಸಂದೆ	೩೩—	೪೬—೮
ಉದ್ದು	—	—
ಕೊತ್ತಂಬರಿ	೨೮—	೩೦—೧೨
ತೊಗರಿ	೨೬—೧೦	೨೮—೪
ಕಡಲೆ	೪೫—೧೪	೪೮—೧೪
ಹುಣಸೆಹಣ್ಣು	೪—೮	೮—೧೦
ಮೆಣಸಿನಕಾಯಿ	೨೯—೧೨	೩೧—
ಸೀಗೆಕಾಯಿ	೩—೧೪	೪—೧೦
ಬೆಲ್ಲ	೪—೮	೫—
ತೆಂಗಿನಕಾಯಿ	೧೨೫—	೩೧೪—

ನ್ಯೂಸ್‌ಪ್ರಿಂಟ್ ಮೇಲಿನ ಆಕ್ಟ್ರಾಯ್ ತೆಗೆಯಬೇಕು

ಪುರಸಭೆಯವರಲ್ಲಿ ನಗರದ ಪತ್ರಿಕೆಯವರ ಮನವಿ

ಮೈಸೂರು ೨೫

ಮೈಸೂರು ನಗರಕ್ಕೆ ಆಮದಾಗುವ ಮುದ್ರಣ ಕಾಗದದ 'ನ್ಯೂಸ್‌ಪ್ರಿಂಟ್' ಮೇಲೆ ಹಾಕಲಾಗುತ್ತಿರುವ ಆಕ್ಟ್ರಾಯ್ ತೆರಿಗೆಯನ್ನು ವಜ್ನಮಾಡುವಂತೆ ಪೌರಸಭೆಯವರನ್ನು ಕೋರಿ ನಗರದ ಪತ್ರಿಕಾ ಸಂಪಾದಕರುಗಳು ಅಧ್ಯಕ್ಷರಿಗೆ ಪತ್ರವೊಂದನ್ನು ಬರೆದಿರುತ್ತಾರೆ. ಬೆಂಗಳೂರು, ಮದ್ರಾಸು, ಬೊಂಬಾಯಿ ಮುಂತಾದ ಕಡೆಗಳಲ್ಲಿ ಈ ಕಾಗದದ ಮೇಲೆ ತೆರಿಗೆಯನ್ನು ಹಾಕುತ್ತಿಲ್ಲವೆಂದೂ, ಮೈಸೂರು ನಗರದಲ್ಲಿ ಮಾತ್ರ ಇದನ್ನು ವಸೂಲ್ಮಾಡುತ್ತಿರುವುದಾಗಿಯೂ ಅವರು ತಿಳಿಸಿರುತ್ತಾರೆ.

ಮಾರಾಟ ತೆರಿಗೆಯು ಇರುವಾಗ ಆಕ್ಟ್ರಾಯ್ ತೆರಿಗೆಯನ್ನು ಸಂಪೂರ್ಣವಾಗಿ ರದ್ದುಮಾಡಬೇಕೆಂದು ಅನೇಕ ಕಡೆಗಳಿಂದ ಒತ್ತಾಯವು ಬರುತ್ತಿದೆ. ಈ ಪ್ರಶ್ನೆಯು ಇತ್ಯರ್ಥವಾಗಲು ಸಾವಕಾಶವಾಗಬಹುದು ಆದರೆ ಜನಜೀವನದ ಅಭ್ಯುದಯಕ್ಕಾಗಿ ದುಡಿಯುತ್ತಿರುವ ವರ್ತಮಾನಪತ್ರಿಕೆಗಳಿಗೆ ಉಪಯೋಗಿಸಲ್ಪಡುವ ಕಾಗದದ ಮೇಲೆ ಹಾಕಲಾಗುತ್ತಿರುವ ಈ ತೆರಿಗೆಗೆ ವಿನಾಯಿತಿಯನ್ನು ಕೊಟ್ಟು ಇನ್ನೂ ಶೈಶವಾವಸ್ಥೆಯಲ್ಲಿರುವ ನಗರದ ಪತ್ರಿಕಾವೃತ್ತಿಗೆ ನೆರವು ನೀಡಬೇಕೆಂದು ಅವರುಗಳು ಕೋರುತ್ತಾರೆ.

ವೃತ್ತಪತ್ರಿಕೆಗಳ ಪಾತ್ರ

ಮೈಸೂರು ೨೫

ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ಸಂಘದ ಆಶ್ರಯದಲ್ಲಿ ನಿನ್ನೆ ಕನ್ನಡ ಜಿಲ್ಲೆಯ ಸುಪ್ರಸಿದ್ಧ ಸಾಹಿತಿ ಶ್ರೀ ಶಿವರಾಂ ಕಾರಂತರವರು ಭಾಷಣಮಾಡಿ, ದೇಶದಲ್ಲಿ ಪತ್ರಿಕೆಗಳ ಮಹತ್ತರ ಪಾತ್ರವನ್ನು ವಿವರಿಸಿದರು. ಕನ್ನಡ ಪತ್ರಿಕೆಗಳ ವಿಚಾರವನ್ನು ಅವರು ಪ್ರಸ್ತಾಪಿಸಿ, ಅವುಗಳು ರಾಜಕೀಯ ಪಕ್ಷದ ಗೊಂದಲಕ್ಕೆ ಸಿಕ್ಕದೆ, ಸ್ವಾತಂತ್ರ ವಾತಾವರಣದಲ್ಲಿ ಬೆಳೆದು ಸಾಮಾನ್ಯ ಜನರನ್ನು ಆಕರ್ಷಿಸುವಂತೆ ಸುದ್ದಿ ಮತ್ತು ಸಾಹಿತ್ಯಗಳನ್ನು ಪ್ರಕಟಿಸಬೇಕೆಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಪ್ರೊ॥ ಎಲ್. ಶ್ರೀಕಂಠಯ್ಯನವರು ಭಾಷಣಮಾಡಿ, ರಾಜಕೀಯಕ್ಕೂ, ಪತ್ರಿಕೋದ್ಯಮಕ್ಕೂ ನಿಕಟ ಸಂಬಂಧವಿದೆಯೆಂದೂ, ಪತ್ರಿಕೋದ್ಯಮ ವಿದ್ಯಾರ್ಥಿಗಳು ಹೆಚ್ಚು ಪರಿಶ್ರಮ ಹೊಂದಬೇಕೆಂದೂ ಸಲಹೆ ಮಾಡಿದರು.

ಅಮೆರಿಕಾ-ಪಾಕೀಸ್ತಾನ ಮಿಲಿಟರಿ ಒಪ್ಪಂದ

ಸದ್ಯದಲ್ಲಿಯೇ ಅಮೆರಿಕಾ ಪ್ರಕಟಣೆ ಹೊರಬೀಳಲಿದೆ

ಭಾರತದ ಮೇಲೆ ಈ ಶಸ್ತ್ರಾಸ್ತ್ರಗಳನ್ನು ಉಪಯೋಗಿಸಕೂಡದೆಂಬ ಷರತ್ತು ?

ತನಗೆ ಮಿಲಿಟರಿ ನೆರವನ್ನು ಕೊಡಬೇಕೆಂದು ಪಾಕೀಸ್ತಾನವು ಅಮೇರಿಕಾವನ್ನು ಅಧಿಕೃತವಾಗಿ ಈಗ ಕೇಳಿರುವುದರಿಂದ ಪಾಕೀಸ್ತಾನದ ಪರಿಸ್ಥಿತಿಯನ್ನು ಪರಿಶೀಲಿಸಿ ಯಾವರೀತಿಯ ಮತ್ತು ಎಷ್ಟು ಪ್ರಮಾಣದ ನೆರವು ನೀಡಬೇಕೆಂಬುದನ್ನು ನಿರ್ಧರಿಸಲು ಅಮೆರಿಕಾದ ಮಿಲಿಟರಿ ನಿಪುಣರ ನಿಯೋಗವೊಂದು ಸದ್ಯದಲ್ಲಿಯೇ ಕರಾಚಿಗೆ ಬರುವುದಾಗಿ ಹೇಳಲಾಗಿದೆ.

ಈ ಮಿಲಿಟರಿ ನೆರವನ್ನು ಕೊಡುವಾಗ ಅಮೆರಿಕಾವು ಭಾರತದ ಮಿತ್ರತ್ವವನ್ನು ಕಳೆದುಕೊಳ್ಳದಂತೆ ಎಚ್ಚರಿಕೆಯಿಂದ ವರ್ತಿಸುವುದೆಂದು ತಿಳಿಯಬರುತ್ತದೆ.

ಕಾಶ್ಮೀರ ವಿವಾದವೇನಾದರೂ ಪರಿಹಾರವಾಗದೆ ಯುದ್ಧಪರಿಸ್ಥಿತಿ ಒದಗಿದರೆ ಆಗ ಈ ಅಮೆರಿಕಾ ಶಸ್ತ್ರಾಸ್ತ್ರಗಳನ್ನು ಪಾಕೀಸ್ತಾನವು ಉಪಯೋಗಿಸದಂತೆ ಷರತ್ತನ್ನು ಅಮೆರಿಕಾವು ಪಾಕೀಸ್ತಾನಕ್ಕೆ ಹಾಕುವುದಾಗಿಯೂ ಹೇಳಲಾಗುತ್ತಿದೆ.

ಮತದಾನ ಎಣಿಕೆ ಸಂಬಂಧದಲ್ಲಿ ಸಭೆ, ಮೆರವಣಿಗೆಗಳಿಗೆ ತಡೆ

ತಿರುವಾಂಕೂರು-ಕೊಚ್ಚಿ ಪ್ರಾಂತ್ಯದಲ್ಲಿ ನಡೆದ ಮಹಾಚುನಾವಣೆಗಳ ಮತದಾನ ಎಣಿಕೆ ಕಾರ್ಯವು ಇದೇ ೨೭ ನೇ ತಾರೀಖಿನಿಂದ ಪ್ರಾರಂಭವಾಗುತ್ತದೆ ಈ ಸಂಬಂಧದಲ್ಲಿ ಮುಂಜಾಗ್ರತೆಗಾಗಿ ಪ್ರಾಂತ್ಯದಲ್ಲಿ ಸಭೆ, ಮೆರವಣಿಗೆ ಮುಂತಾದುವುಗಳನ್ನು ನಡೆಸಕೂಡದೆಂದು ೧೪೪ ನೇ ವಿಧಿಯನ್ನು ಜಾರಿ ಮಾಡಲಾಗಿದೆ. ಇದು ಒಂದುವಾರ ಕಾಲ ಜಾರಿಯಲ್ಲಿರುತ್ತದೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ ಒಟ್ಟು 2000 ಬಹುಮಾನಗಳು. ಬಹುಮಾನದ ಮೊಬಲಗು 45000 ರೂ. ಟಿಕೇಟು ಒಂದಕ್ಕೆ ಒಂದೇರೂಪಾಯಿ. ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ನಿರುದ್ಯೋಗ ಪರಿಶೀಲನೆ

ಬೆಂಗಳೂರು ೨೫

ಮೈಸೂರು ಸಂಸ್ಥಾನದಲ್ಲಿ ನಿರುದ್ಯೋಗಗಳ ಬಗ್ಗೆ ಪರಿಶೀಲನೆಯನ್ನು ನಡೆಸಲು ಸರ್ಕಾರವು ನಿರ್ಧರಿಸಿ ಈ ಬಗ್ಗೆ ಒಂದು ಪ್ರಕಟಣೆಯನ್ನಿತ್ತಿದೆ.

ನಿರುದ್ಯೋಗಿಗಳು ತಮ್ಮ ಎಲ್ಲಾ ಪೂರ್ಣ ವಿವರಗಳನ್ನು ಅಂಕಿಅಂಶಗಳ ಡೈರೆಕ್ಟರವರಿಗೆ ತಿಳಿಸಬೇಕೆಂದು ಕೋರಲಾಗಿದೆ.

೨೪ ಗಂಟೆಗಳಲ್ಲಿ ಕರಾಚಿ ಬಿಡಲು ಆಜ್ಞೆ

ಅಖಿಲ ಪಾಕೀಸ್ತಾನ ವಿದ್ಯಾರ್ಥಿ ಸಮ್ಮೇಳನದಲ್ಲಿ ಭಾಗವಹಿಸಲು ಕರಾಚಿಗೆ ಹೋಗಿದ್ದ ಭೂಪಾಲಿನ ವಿದ್ಯಾರ್ಥಿನಿಯೋರ್ವಳು ಬಹಿರಂಗ ಸಭೆಯಲ್ಲಿ ಪಾಕೀಸ್ತಾನ ಮತ್ತು ಟರ್ಕಿ ಒಪ್ಪಂದವನ್ನು ಟೀಕಿಸಿದಳೆಂದು ಆಕೆಯು ೨೪ ಗಂಟೆಗಳೊಳಗಾಗಿ ಕರಾಚಿಯನ್ನು ಬಿಡಬೇಕೆಂದು ಸರ್ಕಾರವು ಆಜ್ಞೆ ಮಾಡಿದೆ.

ರಾಷ್ಟ್ರಾಧ್ಯಕ್ಷರಿಗೆ ಸಲಗ ಬಹುಮಾನ

ಅಸ್ಸಾಂ ಸರ್ಕಾರವು ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದ್‌ರವರಿಗೆ ತಮ್ಮ ಪ್ರಾಂತ್ಯಕ್ಕೆ ಭೇಟಿಯಿತ್ತುದರ ಹಾಗಿ ಒಂದು ಸಲಗವನ್ನು ಬಹುಮಾನವಿತ್ತಿದೆ.

.... ರಾಜಕಮಲ್ ....

26—2 54 ರಿಂದ 7 ನೇ ವಾರ

ಪ್ರತಿದಿನ ಮೂರು ಆಟಗಳು

ಚಂದ್ರಹಾರಂ (ತಮಿಳು)

ಪಾತ್ರ:—ಶ್ರೀರಂಜನಿ, ಸಾವಿತ್ರಿ, ಎನ್. ಟಿ. ರಾಮರಾವ್, ಎಸ್. ವಿ. ರಂಗರಾವ್ ಮತ್ತು ರೇಲಂಗಿ.

.... ರಣಜಿತ್ ....

26—2—54 ರಿಂದ 3 ನೇ ವಾರ

ಶಶಿಕಲಾ, ದುರ್ಗಾಕೋಟೆ ನಟಿಸಿರುವ:-

ಚಾ ಚಾ- -ಚೌಧರಿ

ಪ್ರಕಾಶಕರು ಮತ್ತು ಮುದ್ರಕರು: ಜಿ. ಎಲ್. ಸ್ವಾಮಿ ಸಮಾಚಾರ ಪ್ರೆಸ್, ಮೈಸೂರು.

ಪೋಸ್ಟ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೪೯

೨೬-೨-೧೯೫೪ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪಾಕೀಸ್ತಾನಕ್ಕೆ ಅಮೆರಿಕದ ಮಿಲಿಟರಿ ನೆರವು

ಭಾರತದ ಸ್ನೇಹವನ್ನು ಅಮೆರಿಕ ಕಳೆದುಕೊಳ್ಳುವುದಿಲ್ಲ

ಅಧ್ಯಕ್ಷ ಐಸೆನ್ ಹೋವರ್‌ರವರ ಅಧಿಕೃತ ಹೇಳಿಕೆ

ಅಮೇರಿಕಾವು ಪಾಕೀಸ್ತಾನಕ್ಕೆ ಮಿಲಿಟರಿ ನೆರವನ್ನು ನೀಡಲು ನಿರ್ಧರಿಸಿರುವುದಾಗಿ ಅಮೆರಿಕಾ ಅಧ್ಯಕ್ಷ ಐಸೆನ್ ಹೋವರ್‌ರವರು ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಇದೇ ರೀತಿಯ ಪ್ರಕಟಣೆಯೊಂದು ಕರಾಚಿಯಲ್ಲಿ ಸಹ ನಿನ್ನೆಯ ದಿನ ಹೊರಬಿತ್ತು.

ಈ ಸಂಬಂಧದಲ್ಲಿ ಅಧ್ಯಕ್ಷ ಐಸೆನ್ ಹೋವರ್‌ರವರು ಪ್ರಧಾನಿ ನೆಹರೂರವರಿಗೆ ಒಂದು ಪತ್ರವನ್ನು ಬರೆದಿರುತ್ತಾರೆ. ಭಾರತದಲ್ಲಿರುವ ಅಮೆರಿಕಾ ರಾಯಭಾರಿ ಮಿ॥ ಜಾರ್ಜ್ ಅಲೆನ್‌ರವರು ಈ ಪತ್ರವನ್ನು ಶ್ರೀ ನೆಹರೂರವರಿಗೆ ನಿನ್ನೆ ಒಪ್ಪಿಸಿದರು.

ಭಾರತ ಅಥವ ಇನ್ನಾವ ರಾಷ್ಟ್ರದ ಮೇಲೂ ಆಕ್ರಮಣವನ್ನು ನಡೆಸಲು ಪಾಕೀಸ್ತಾನಕ್ಕೆ ಅಮೆರಿಕಾವು ಮಿಲಿಟರಿ ನೆರವನ್ನು ನೀಡುವುದಿಲ್ಲ. ಹಾಗೇನಾದರೂ ಪಾಕೀಸ್ತಾನವು ಈ ಬಲವನ್ನು ದುರುಪಯೋಗಪಡಿಸಿಕೊಂಡರೆ ವಿಶ್ವಸಂಸ್ಥೆ ಮತ್ತು ಇತರ ಮೂಲಗಳಿಂದ ಅದನ್ನು ತಪ್ಪಿಸಲು ತಮ್ಮ ಪೂರ್ಣಾಧಿಕಾರವನ್ನು ಉಪಯೋಗಿಸುವುದಾಗಿ ಅಧ್ಯಕ್ಷ ಐಸೆನ್ ಹೋವರ್‌ರವರು ಈ ಪತ್ರದಲ್ಲಿ ತಿಳಿಸುವುದಾಗಿ ಗೊತ್ತಾಗಿದೆ. ಮಧ್ಯ ಪ್ರಾಚ್ಯದಲ್ಲಿ ರಕ್ಷಣಾ ವ್ಯವಸ್ಥೆಯಲ್ಲಿ ಸ್ಥಿರತೆಯನ್ನು ಉಂಟುಮಾಡಲು ಅಮೆರಿಕಾವು ಈ ಕಾರ್ಯಕ್ರಮವನ್ನು ಕೈಗೊಂಡಿದೆ. ವಿಶ್ವದ ಶಾಂತಿ ಸ್ಥಾಪನೆಯೇ ಅಮೆರಿಕಾದ ಧ್ಯೇಯ ಎಂದೂ ಈ ಪತ್ರದಲ್ಲಿ ತಿಳಿಸಲಾಗಿದೆ.

ಅಮೆರಿಕಾವು ಸಹ ಭಾರತಕ್ಕೆ ಭಾರಿ ಪ್ರಮಾಣದಲ್ಲಿ ಆರ್ಥಿಕ ಮತ್ತು ತಾಂತ್ರಿಕ ನೆರವನ್ನು ಕೊಡುತ್ತಿದೆ ಅದರಲ್ಲಿ ಭಾರತದ ಸ್ನೇಹವನ್ನು ಅಮೆರಿಕಾವು ಸದಾ ಅಪೇಕ್ಷಿಸುತ್ತದೆ ಯೆಂಬುದು ಗೊತ್ತಾಗುತ್ತದೆ. ಭಾರತದ ಸ್ನೇಹವನ್ನು ಕಳೆದುಕೊಳ್ಳುವಂತಹ ಯಾವ ಮಾರ್ಗವನ್ನು ಅಮೆರಿಕಾವು ಅನುಸರಿಸುವುದಿಲ್ಲ ಭಾರತದ ಸೈನ್ಯ ದಕ್ಷತೆಯಲ್ಲಿ ಯಾವ ರೀತಿಯ ಅನುಮಾನವೂ ಇಲ್ಲ. ಭಾರತ ಸೈನ್ಯದ ವಿಷಯದಲ್ಲಿ ವಿಶ್ವದ ಮೆಚ್ಚಿಗೆಯಿದೆ. ಭದ್ರತಾ ಶಾಸನ ಪ್ರಕಾರ ಭಾರತವೂ ಸಹ ತನ್ನ ಶಕ್ತಿಯನ್ನು ಹೆಚ್ಚಿಸಿ ಕೊಳ್ಳಲು ಅಮೆರಿಕಾಕ್ಕೆ ಮಿಲಿಟರಿ ನೆರವಿಗಾಗಿ ಮನವಿ ಸಲ್ಲಿಸಿದರೆ ಅದನ್ನು ಅಶ್ವಾಸಿಸುತ್ತೇವೆ ಮತ್ತು ಆಸಕ್ತಿಯಿಂದ ಪರಿಶೀಲಿಸುತ್ತೇವೆ. ಪಾಕೀಸ್ತಾನದ ಮಿಲಿಟರಿ ನೆರವಿನ ಬಗ್ಗೆ ಪೂರ್ಣ ವಿವರಗಳನ್ನು ಮೂಲಧ್ಯೇಯಗಳನ್ನು ತಿಳಿಸಿರುವುದರಿಂದ ಭಾರತದಲ್ಲಿ ಹುಟ್ಟಿರುವ ಭಿನ್ನತೆ ಮತ್ತು ಶಂಕೆ ತಪ್ಪುವುದೆಂದು ತಾವು ನಂಬುವುದಾಗಿ ಅಧ್ಯಕ್ಷ ಐಸೆನ್‌ಹೋವರ್‌ರವರು ತಿಳಿಸಿದ್ದಾರೆ.

ವಿಶ್ವವಿದ್ಯಾನಿಲಯದ ಬಡ್ಜೆಟ್

ಬೆಂಗಳೂರು ೨೬

ಮೈಸೂರು ವಿಶ್ವವಿದ್ಯಾನಿಲಯದ ೫೪-೫೫ ನೇ ಬಡ್ಜೆಟ್‌ನ್ನು ನಿನ್ನೆ ನಡೆದ ಸೆನೆಟ್ ವಿಶೇಷ ಸಭೆಯಲ್ಲಿ ಪರಿಶೀಲಿಸಲಾಯಿತು ಒಟ್ಟು ಆದಾಯ ೮೩,೦೦,೦೦೦ ರೂ. ಫೀಸ್ ಇತ್ಯಾದಿಬಾಬಿನಿಂದ ೧೫,೫೦,೦೦೦ ಕಳೆದ ವರ್ಷದ ಶುಲ್ಕ ೬,೧೫೦೦೦; ಸರ್ಕಾರಿ ಗ್ರಾಂಟು ೬೧,೬೫,೦೦೦ ಒಟ್ಟು ವೆಚ್ಚ ೭೨,೬೮,೬೦೦ ರೂ. ಅಭಿವೃದ್ಧಿ ಯೋಜನೆಗೆ ೨,೦೫,೦೦೦; ನೂತನ ಬಾಬುಗಳು ೪,೬೯,೨೧೦; ವಿದ್ಯಾರ್ಥಿ ವೇತನ ೩ ಲಕ್ಷ; ಓರಿಯಂಟಲ್ ಸಂಶೋಧನೆ ಶಾಲೆಗೆ ೪೭,೪೦೦ ರೂಗಳು ಒಟ್ಟು ಉಳಿತಾಯ ೯,೭೧೦ ರೂ.

ಮೈಸೂರು ಮಹಾರಾಣಿ ಕಾಲೇಜಿನ ಲ್ಯಾಬೊರೇಟರಿ ನಿರ್ಮಾಣಕ್ಕಾಗಿ ೧ ಲಕ್ಷ ರೂ. ಮಂಜೂರು ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು.

ಪ್ರತಿವರ್ಷವೂ ಲ್ಯಾಪ್ಸ್ ಆಗದ ಒಟ್ಟು ಗ್ರಾಂಟನ್ನು ವಿಶ್ವವಿದ್ಯಾನಿಲಯಕ್ಕೆ ಇನ್ನು ಮುಂದೆ ಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಲಾಯಿತು. ಸರ್ಕಾರವು ೪೮ಲಕ್ಷ ರೂ. ಗ್ರಾಂಟ್ ನಿಗದಿಮಾಡಿರುವುದಾಗಿ ಮೊದಲು ಪತ್ರ ಬರೆದು, ಅನಂತರ ಅದನ್ನು ೪೨.೫ ಲಕ್ಷ ರೂ. ಗಳಿಗೆ ಇಳಿಸಿದುದರ ಬಗ್ಗೆ ಸದಸ್ಯರು ತೀವ್ರವಾಗಿ ಟೀಕಿಸಿ, ಇದರಿಂದ ವಿಶ್ವವಿದ್ಯಾನಿಲಯದ ಅಭಿವೃದ್ಧಿ ಕಾರ್ಯಗಳಿಗೆ ತುಂಬಾ ತೊಂದರೆ ಆಗಿ ಕೆಲವು ಕಾಲೇಜುಗಳನ್ನೇ ಮುಚ್ಚಬೇಕಾಗುವುದು ಎಂದು ಅಭಿಪ್ರಾಯಪಟ್ಟರು.

ಕೊಡಗಿನಲ್ಲಿ ಭಾರಿ ವಿದ್ಯುತ್ ಕೇಂದ್ರ

ದಕ್ಷಿಣ ಕೊಡಗಿನ ಕಾಡುಪ್ರದೇಶದಲ್ಲಿ ಇರುವ ಬರಪೊಳೆಯಿಂದ ವಿದ್ಯುಚ್ಛಕ್ತಿ ತಯಾರಿಕೆ ಯೋಜನೆಯೊಂದನ್ನು ಕೇಂದ್ರ ಸರ್ಕಾರವು ೧೫ ಕೋಟಿ ರೂ. ಗಳ ಖರ್ಚಿನಿಂದ ಕೈಗೊಂಡಿದೆ. ಇದರಿಂದ ೨,೨೦,೦೦೦ ಕಿಲೋವಾಟ್ ವಿದ್ಯುಚ್ಛಕ್ತಿ ಉತ್ಪತ್ತಿಯಾಗುವುದು.

ಈ ಕೇಂದ್ರದಿಂದ ಸುಮಾರು ೮ ಸಾವಿರ ಎಕರೆ ಜಮೀನು ಮತ್ತು ಹಲವಾರು ಗ್ರಾಮಗಳು ನೀರುಪಾಲಾದರೂ ಮುಂದೆ ವರ್ಷಕ್ಕೆ ೧ ಕೋಟಿ ರೂ. ವರಮಾನ ಬರುವುದೆಂದು ಹೇಳಲಾಗಿದೆ.

ಹೊಸ ಹೋಟೇಲು ತೆರೆಯಲು ನಿರ್ಬಂಧ ರದ್ದು

ಬೆಂಗಳೂರು ೨೬

ಸಂಸ್ಥಾನದಲ್ಲಿ ಈಗ ಆಹಾರದ ಮೇಲಿನ ಹತೋಟಿ ರದ್ದಾಗಿರುವುದರಿಂದಲೂ ಮತ್ತು ಆಹಾರ ಪರಿಸ್ಥಿತಿ ಉತ್ತಮಗೊಂಡಿರುವುದರಿಂದ ಹೊಸ ಹೋಟೆಲು ಮತ್ತು ರೊಟ್ಟಿ ಅಂಗಡಿಗಳನ್ನು ತೆರೆಯಲು ಇದ್ದ ನಿರ್ಬಂಧವನ್ನು ತೆಗೆದುಹಾಕಿರುವುದಾಗಿ ಸರ್ಕಾರದ ಪ್ರಕಟಣೆ ತಿಳಿಸುತ್ತದೆ. ಇನ್ನು ಮುಂದೆ ನೂತನ ಹೋಟೇಲು ತೆರೆಯಲು ಆಹಾರ ಇಲಾಖೆಯ ಅನುಮತಿ ಬೇಕಾಗಿಲ್ಲ ಆದರೆ ಆಯಾಯ ಸ್ಥಳೀಯ ಸಂಸ್ಥೆಗಳಿಂದ ರಹದಾರಿ ಪಡೆಯಬೇಕು.

ಭಾರತದ ಕೈಗಾರಿಕಾ ಶತಮಾನೋತ್ಸವ

ಭಾರತದ ಟೆಕ್ಸ್‌ಟೈಲ್ ಕೈಗಾರಿಕೆಗೆ ಮುಂದಿನ ತಿಂಗಳಿಗೆ ನೂರು ವರ್ಷ ತುಂಬುವುದರಿಂದ ಅದರ ಶತಮಾನೋತ್ಸವವನ್ನು ಮಾರ್ಚಿ ೧೮ ಮತ್ತು ೧೯ ನೇ ತಾರೀಖುಗಳಲ್ಲಿ ಬೊಂಬಾಯಿನಲ್ಲಿ ವೈಭವದಿಂದ ಆಚರಿಸಲು ವ್ಯವಸ್ಥೆ ಮಾಡಲಾಗುತ್ತಿದೆ ಕೈಗಾರಿಕಾ ವಸ್ತು ಪ್ರದರ್ಶನವೂ ನಡೆಯಲಿದೆ.

ಭಾರತದಲ್ಲಿ ಮೊದಲನೆ ಬಟ್ಟೆ ಕಾರ್ಖಾನೆಯು ಬೊಂಬಾಯಿನಲ್ಲಿ ೧೮೫೪ ರಲ್ಲಿ ಆರಂಭವಾಯಿತು ಈಗ ದೇಶದಾದ್ಯಂತ ೪೫೦ ಬಟ್ಟೆ ಗಿರಣಿಗಳಿವೆ. ಇವುಗಳಲ್ಲಿ ೧೭೫ ಮದ್ರಾಸ್ ಪ್ರಾಂತ್ಯದಲ್ಲಿದ್ದು, ಅದರಲ್ಲಿ ಶೇಕಡ ೫೦ ರಷ್ಟು ಕೊಯಮತ್ತೂರಿನಲ್ಲಿವೆ.

ಇಂಗ್ಲೀಷ್ ತೊಡೆದು ಹಾಕುವ ಉದ್ದೇಶವಿಲ್ಲ

ಇಂಗ್ಲೀಷ್ ಭಾಷೆಯನ್ನು ಪೂರ್ಣವಾಗಿ ತೊಡೆದು ಹಾಕಬೇಕೆಂಬ ಉದ್ದೇಶವೇನೂ ಸರ್ಕಾರಕ್ಕಿಲ್ಲ. ಶಿಕ್ಷಣವುಮಾತ್ರ ಪ್ರಾದೇಶಿಕ ಭಾಷೆಯಲ್ಲಿ ನಡೆಯಲಿ ಎಂಬುದೇ ಸರ್ಕಾರದನೀತಿ ಎಂದು ಬೊಂಬಾಯಿಯ ವಿದ್ಯಾ ಸಚಿವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ

ವಿಮಾನ ಅಪಘಾತ

ದೆಹಲಿಯ ಬಳಿ ಯಮುನಾ ಸೇತುವೆ ಹತ್ತಿರ ನಿನ್ನೆಯದಿನ ಒಂದು ಡಕೋಟಾ ವಿಮಾನವು ನೆಲಕ್ಕುರುಳಿ ಅದರಲ್ಲಿದ್ದ ಚಾಲಕವರ್ಗದ ಮೂವರು ಸ್ಥಳದಲ್ಲಿಯೇ ಮೃತರಾದರು.

ಪ್ರಾಥಮಿಕ ಶಿಕ್ಷಣದಲ್ಲಿ ಬದಲಾವಣೆ

ಬೆಂಗಳೂರು ೨೬

ನೂತನ ವಿದ್ಯಾಸುಧಾರಣಾ ರೀತ್ಯಾ ಇನ್ನು ಮುಂದೆ ಪ್ರಾಥಮಿಕ ಶಿಕ್ಷಣದ ೪ ವರ್ಷಗಳಲ್ಲಿ ದಿನಕ್ಕೆ ೩ ಗಂಟೆಗಳಕಾಲ ಮಾತ್ರ ಶಿಕ್ಷಣವನ್ನು ಕೊಡುವ ವಿಷಯವನ್ನು ಸರ್ಕಾರವು ಯೋಚಿಸುತ್ತಲಿರುವುದಾಗಿ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಗಾಂಧಿನಗರ ಹೈಸ್ಕೂಲಿನಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಮಾರಾಟ ತೆರಿಗೆ ವಿಚಾರಣಾ ಸಮಿತಿ ಶಿಫಾರಸು ಅಂಗೀಕಾರ

ಮಾರಾಟತೆರಿಗೆ ವಿಚಾರಣಾ ಸಮಿತಿಯು ಮಾಡಿರುವ ಕೆಲವು ಮುಖ್ಯ ಶಿಫಾರಸುಗಳನ್ನು ಸರ್ಕಾರವು ಅಂಗೀಕರಿಸಿದೆಯೆಂದೂ ಈಬಗ್ಗೆ ಸದ್ಯದಲ್ಲಿಯೇ ಪ್ರಕಟಣೆಯೊಂದು ಹೊರಬೀಳಲಿದೆಯೆಂದೂ ತಿಳಿಯಬರುತ್ತದೆ. ಈಗ ವಿನಾಯಿತಿಯಿರುವ ವಸ್ತುಗಳ ಜೊತೆಗೆ ಮತ್ತೆ ಕೆಲವನ್ನು ಸೇರಿಸಲಾಗುವುದೆಂದು ಗೊತ್ತಾಗಿದೆ

ಭಾರತಕ್ಕೆ ವಿದೇಶಿ ವಿಮಾನಗಳು

ಭಾರತಕ್ಕೆ ಬೇಕಾಗುವ ವಿವಿಧ ವಿಮಾನಗಳನ್ನು ಕೊಳ್ಳಲು ಪರಿಶೀಲನೆ ನಡೆಸಿ ಸರ್ಕಾರಕ್ಕೆ ಸೂಕ್ತ ಸಲಹೆ ನೀಡುವ ಉದ್ದೇಶದಿಂದ ತಜ್ಞರ ತಂಡವೊಂದು ಸದ್ಯದಲ್ಲೇ ವಿದೇಶ ಪ್ರವಾಸ ಕೈಗೊಳ್ಳಲಿದೆ.

ವಾಹನಗಳ ಮುಷ್ಕರ

ವಾಹನಗಳ ಮೇಲೆ ಹಲವು ಹತೋಟಿಗಳನ್ನು ಪಾಕೀಸ್ತಾನ ಸರ್ಕಾರವು ವಿಧಿಸಿರುವುದರಿಂದ ಅವನ್ನು ಪ್ರತಿಭಟಿಸಿ ಕರಾಚಿಯಲ್ಲಿ ನಿನ್ನೆಯದಿನ ಒಂಟೆಗಾಡಿ, ಕತ್ತೆಗಾಡಿ, ಮೋಟಾರುಗಳು ಮುಂತಾದ ೫ ಸಾವಿರ ವಾಹನಗಳು ಸಂಚಾರ ಸೌಲಭ್ಯಗಳನ್ನು ನಿಲ್ಲಿಸಿ ಮುಷ್ಕರ ಹೂಡಿದ್ದುವು.

ಪಾನನಿರೋಧ ನೀತಿ ಬದಲಾವಣೆಗೆ ವಿರೋಧ

ಆಂಧ್ರದಲ್ಲಿ ಪಾನನಿರೋಧ ಬಗ್ಗೆ ರಾಮಮೂರ್ತಿ ಸಮಿತಿಯು ಒಪ್ಪಿಸಿರುವ ವರದಿಯ ವೇಲೆ ಎ. ಪಿ. ಸಿ. ಸಿ. ಅಧ್ಯಕ್ಷ ಶ್ರೀ ಬಿ. ಗೋಪಾಲರೆಡ್ಡಿಯರು ಮಾತನಾಡುತ್ತ ತಾವು ಜಾರಿಯಲ್ಲಿರುವ ಪಾನನಿರೋಧ ನೀತಿಯ ಬದಲಾವಣೆಗೆ ವಿರೋಧಿ ಎಂದು ತಿಳಿಸಿದ್ದಾರೆ.

ಪತ್ರವ್ಯವಹಾರ:

ವಿದ್ಯಾರ್ಥಿಗಳಿಗೆ ತೊಂದರೆ

ಮೈಸೂರಿನಲ್ಲಿ ಸಿ. ಬಿ. ಜಿ. ವಿಭಾಗವನ್ನು ಐಚ್ಛಿಕ ಭಾಗವನ್ನಾಗಿ ತೆಗೆದುಕೊಂಡು ಇಂಟರ್‌ಮಿಡಿಯೇಟ್ ವ್ಯಾಸಂಗವನ್ನು ಪೂರೈಸಬಹುದು. ಆದರೆ ಇದನ್ನೇ ತಮ್ಮ ಐಚ್ಛಿಕ ಭಾಗವನ್ನಾಗಿಮಾಡಿಕೊಂಡು ಮುಂದೆ ಬಿ. ಎಸ್. ಸಿ ತರಗತಿಯಲ್ಲಿ ವ್ಯಾಸಂಗ ಮಾಡಬೇಕಾದ ವಿದ್ಯಾರ್ಥಿಗಳು ಬೆಂಗಳೂರು ನಗರದಲ್ಲಿರುವ ಸೆಂಟ್ರಲ್ ಕಾಲೇಜಿಗೇ ಹೋಗಬೇಕು. ಇಲ್ಲದಿದ್ದರೆ ವ್ಯಾಸಂಗವನ್ನು ಮೈಸೂರಿನಲ್ಲೇ ಮುಂದುವರಿಸಬೇಕಾದರೆ ಮಹಾರಾಜಾ ಕಾಲೇಜಿನಲ್ಲಿ ತಮಗೆ ಇಷ್ಟವಿಲ್ಲದೆ ಇರುವ ಐಚ್ಛಿಕ ಭಾಗವನ್ನು ತೆಗೆದುಕೊಂಡು ಮುಂದುವರಿಸಬೇಕು. ಹೀಗೆ ಅನಾನುಕೂಲದಿಂದ ಬಹಳ ಹುಡುಗರು ಮಾಡಬೇಕಾಗಿ ಬಂದಿದೆ. ಮೈಸೂರಿನಲ್ಲಿ ಬೇರೆ ಎಲ್ಲಾ ವಿಜ್ಞಾನದ ಭಾಗವನ್ನೇ ಐಚ್ಛಿಕ ಭಾಗವನ್ನಾಗಿಟ್ಟುಕೊಂಡು ಬಿ. ಎಸ್. ಸಿ. ವ್ಯಾಸಂಗವನ್ನು ಮುಂದುವರಿಸಲು ಅನುಕೂಲವಿದೆ. ಆದರೆ ಸಿ. ಬಿ. ಜಿ. (ರಸಾಯನ ಶಾಸ್ತ್ರ, ಸಸ್ಯಶಾಸ್ತ್ರ ಮತ್ತು ಭೂ ಶಾಸ್ತ್ರ) ವಿಭಾಗಕ್ಕೆ ಮಾತ್ರ ಅನುಕೂಲವಿಲ್ಲ ಇದರಿಂದ ಬಹಳ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ವಿಶ್ವವಿದ್ಯಾನಿಲಯದ ಅಧಿಕಾರ ವರ್ಗದವರು ಈ ವಿಚಾರವನ್ನು ಕೂಲಂಕುಷವಾಗಿ ಪರಿಶೀಲಿಸಿ ಮುಂದಿನವರ್ಷದಿಂದಲೇ ಅಂದರೆ ಜೂನ್ ೧೯೫೪ ರಿಂದಲೇ ವಿದ್ಯಾರ್ಥಿಗಳು ಸಿ. ಬಿ. ಜಿ ಐಚ್ಛಿಕ ಭಾಗವನ್ನಾಗಿ ತೆಗೆದುಕೊಂಡು ಮೈಸೂರಿನಲ್ಲಿ ಬಿ. ಎಸ್. ಸಿ. ವ್ಯಾಸಂಗವನ್ನು ಮುಂದುವರಿಸುವಂತೆ ಅನುಕೂಲ ಕಲ್ಪಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ಪ್ರಥಮ ದರ್ಜೆಯ ಕಾಲೇಜು
ಸೀನಿಯರ್ ಇಂಟರ್ (C.B.G.)ವರ್ಗದ
ವಿದ್ಯಾರ್ಥಿಗಳು

ಬಸ್ ಮಾಲೀಕರ ಮೇಲೆ ಮೊಕದ್ದಮೆ

ಮೈಸೂರು ೨೬

ಜಿಲ್ಲಾ ಮೋಟಾರು ಕೆಲಸಗಾರರ ಸಂಘದವರು ಕೈಗಾರಿಕಾ ನ್ಯಾಯಾಲಯದಲ್ಲಿ ಹಲವು ಬಸ್ಸುಗಳ ಮಾಲೀಕರ ಮೇಲೆ ಹೂಡಿದ್ದ ಮೊಕದ್ದಮೆಗಳಲ್ಲಿ ನ್ಯಾಯಾಲಯದವರು ತೀರ್ಪನ್ನು ಇದುವರೆಗೂ ಪಾಲಿಸದೆ ಉಲ್ಲಂಘಿಸಿರುವ ಬಗ್ಗೆ ಪಬ್ಲಿಕ್ ಪ್ರಾಸಿಕ್ಯೂಟರ್‌ರವರು ನಗರದ ೧ ನೇ ನ್ಯಾಯಾಧೀಶರ ಕೋರ್ಟಿನಲ್ಲಿ ಚಾಮುಂಡಿ, ರಹಿಮಾನಿಯ, ಷಬ್ಬೀರ್, ಕೆ. ಬಿ. ಮತ್ತು ತಿಬ್ಬಾದೇವಿ ಮೋಟಾರು ಸರ್ವಿಸ್ಸುಗಳ ಮಾಲೀಕರ ಮೇಲೆ ಮೊಕದ್ದಮೆ ಹೂಡಿರುತ್ತಾರೆ.

ಹೈದರಾಬಾದಿನಲ್ಲಿ ಅಕ್ಕಿ ರೇಷನ್ ವಜಾ

ಹೈದರಾಬಾದ್ ಮತ್ತು ಸಿಕಂದರಾಬಾದ್‌ಗಳಲ್ಲಿ ಇಂದಿನಿಂದ ಅಕ್ಕಿ ಪಡಿತರ ಪದ್ಧತಿಯನ್ನು ರದ್ದುಗೊಳಿಸಲಾಗಿದೆ. ಸಾಗಾಣಿಕೆ ಮತ್ತು ಇತರ ಬಾಬುಗಳಲ್ಲಿ ಅಕ್ಕಿಯ ಮೇಲಿದ್ದ ನಿರ್ಬಂಧವೆಲ್ಲವೂ ಹೋದುವು.

ಈಜಿಪ್ಟ್ ಅಧ್ಯಕ್ಷ ಜನರಲ್ ನಗೀಬ್‌ರವರ ಬಂಧನ

ಲೆ|| ನಾಸಿರ್ ನೂತನ ಪ್ರಧಾನಿ

ಈಜಿಪ್ಟಿನ ಅಧ್ಯಕ್ಷ ಮತ್ತು ಪ್ರಧಾನಿ ಜನರಲ್ ನಗೀಬ್‌ರವರು ತಮ್ಮ ಎಲ್ಲಾ ಅಧಿಕಾರ ಸ್ಥಾನಗಳಿಗೆ ರಾಜೀನಾಮೆಯನ್ನು ಸಲ್ಲಿಸಿರುವುದನ್ನು ಅಲ್ಲಿಯ ಕ್ರಾಂತಿಕಾರಕ ಸಮಿತಿಯು ಅಂಗೀಕರಿಸಿದೆ.

ಆ ಸಮಿತಿಯ ಉಪಾಧ್ಯಕ್ಷ ಲೆ|| ಕ|| ಕಮಾಲ್ ಅಬ್ದೆಲ್ ನಾಸಿರ್‌ರವರು ನೂತನ ಪ್ರಧಾನಿಯಾಗಿ ನೇಮಕವಾಗಿದ್ದಾರೆ.

ಇತ್ತೀಚಿನ ಸುದ್ದಿಗಳ ಪ್ರಕಾರ ಜನರಲ್ ನಗೀಬ್‌ರವರನ್ನು ಅವರ ಮನೆಯಲ್ಲಿಯೇ ಬಂಧಿಸಲಾಗಿದೆ. ಮನೆಯಲ್ಲಿದ್ದ ಪಹರೆಯನ್ನೆಲ್ಲಾ ತೆಗೆದುಹಾಕಿ ಶಸ್ತ್ರಸಜ್ಜಿತ ಸೈನ್ಯದವರನ್ನು ಮನೆಯಲ್ಲೂ ಮನೆಯ ಹೊರಗೂ ಹಾಕಲಾಗಿದೆ

ಮನೆಯ ಸುತ್ತಲೂ ಕಬ್ಬಿಣದ ಮುಳ್ಳು ತಂತಿಗಳ ಬೇಲಿಯನ್ನು ಅದರ ಸುತ್ತಲೂ ಸೈನ್ಯ ಮತ್ತು ಗುಂಡಿನ ಸೈನ್ಯ ಮೋಟಾರುಗಳನ್ನು ಮೈಗಾವಲಿಗಿಡಲಾಗಿದೆಯೆಂದು ತಿಳಿಯಬರುತ್ತದೆ.

ದೇಶದಲ್ಲಿ ಮಹಾ ಚುನಾವಣೆಗಳು ನಡೆದು ಪ್ರಜಾಪ್ರಭುತ್ವ ತತ್ವಗಳ ಮೇಲೆ ನೂತನ ಅಧ್ಯಕ್ಷರ ಚುನಾವಣೆಯಾಗುವವರೆಗೆ ಈ ಸ್ಥಾನವು ಭರ್ತಿಯಾಗುವುದಿಲ್ಲವೆಂದು ಘೋಷಿಸಲಾಗಿದೆ.

ತಮಗೆ ಆಡಳಿತದಲ್ಲಿ ಪೂರ್ಣಾಧಿಕಾರವನ್ನು ಕೊಡಬೇಕು. ಮಂತ್ರಿಗಳ ಮತ್ತು ಸೈನ್ಯಾಧಿಕಾರಿಗಳ ನೇಮಕ ಮತ್ತು ನಿವೃತ್ತಿ ಇವುಗಳ ವಿಷಯದಲ್ಲಿ ತಮಗೆ ಸರ್ವಾಧಿಕಾರವನ್ನು ಕೇಳಿದ್ದರು. ಆದರೆ ಮಂಡಲಿಯು ಇದಕ್ಕೆ ಮನ್ನಣೆ ಕೊಡದೆ ಇದು ಪ್ರಜಾಪ್ರಭುತ್ವಕ್ಕೆ ವಿರೋಧವೆಂದು ಅವರ ಬೇಡಿಕೆಯನ್ನು ತಳ್ಳಿಹಾಕಲಾಯಿತು. ಆದರಿಂದ ಜನರಲ್ ನಗೀಬ್‌ರವರು ತಮ್ಮ ಹುದ್ದೆಗಳಿಗೆಲ್ಲಾ ರಾಜೀನಾಮೆಯನ್ನು ಸಲ್ಲಿಸಿದ್ದಾರೆ.

ಈಜಿಪ್ಟ್ ದೇಶದಾದ್ಯಂತ ಮುಂಜಾಗ್ರತೆಗಾಗಿ ವಿಶೇಷ ಪರಿಸ್ಥಿತಿಯನ್ನು ಘೋಷಿಸಲಾಗಿದೆ ಎಂಬ ಸುದ್ದಿ ಬಂದಿತ್ತು. ಆದರೆ ಇದು ನಿಜವಲ್ಲವೆಂದು ಅಧಿಕೃತವಾಗಿ ಹೇಳಲಾಗುತ್ತಿದೆ.

ಜನರಲ್ ನಗೀಬ್‌ರವರ ರಾಜೀನಾಮೆಯಿಂದ ಉದ್ಭವಿಸುವ ನೂತನ ಪರಿಸ್ಥಿತಿಯಿಂದ ದೇಶದ ಆಂತರಿಕ ಮತ್ತು ವಿದೇಶಾಂಗ ನೀತಿಗಳಲ್ಲಿ ಯಾವ ಬದಲಾವಣೆಯೂ ಇಲ್ಲವೆಂದು ಅಧಿಕೃತ ಪ್ರಕಟಣೆ ಹೊರಡಿಸಲಾಗಿದೆ.

ರೇವು ಅಭಿವೃದ್ಧಿ

ವಿಶಾಖಪಟ್ಟಣ ರೇವನ್ನು ಅಭಿವೃದ್ಧಿಪಡಿಸಲು ೧೬೮ ಲಕ್ಷ ರೂಪಾಯಿಗಳ ನೂತನ ಯೋಜನೆ ಮಂಜೂರಾಗಿದೆ.

ಸಾಮೂಹಿಕ ಯೋಜನಾ ಸಮಿತಿ ಅಧ್ಯಕ್ಷರು

ಬೆಂಗಳೂರು ೨೬

ಸಂಸ್ಥಾನದ ಸಾಮೂಹಿಕ ಯೋಜನಾ ಸಮಿತಿಯ ಅಧ್ಯಕ್ಷರಿಗೆ ಶ್ರೀ ಹೆಚ್. ಎಸ್. ರುದ್ರಪ್ಪನವರು ಕೊಟ್ಟಿರುವ ರಾಜೀನಾಮೆಯು ಇದೇ ತಿಂಗಳು ೧೭ ರಿಂದ ಜಾರಿಗೆ ಬಂದಿರುವುದೆಂದೂ, ಅಂದಿನಿಂದ ವ್ಯವಸಾಯ ಸಚಿವ ಡಾ|| ಆರ್. ನಾಗನಗೌಡರೇ ಸಮಿತಿಯ ಅಧ್ಯಕ್ಷರಾಗಿರುವರೆಂದು ಸರ್ಕಾರದ ಆಜ್ಞೆಯಾಗಿದೆ.

ಹಿಂದಿ-ರಷ್ಯಾ ನಿಘಂಟು

ರಷ್ಯಾ ಸರ್ಕಾರವು ರಷ್ಯಾ ಮತ್ತು ಹಿಂದಿ ಭಾಷೆಯ ಒಂದು ನಿಘಂಟನ್ನು ಪ್ರಕಟಿಸಿದೆ. ಇದರಲ್ಲಿ ೩೫೦೦೦ ಪದಗಳಿವೆ ರಷ್ಯಾ ಜನತೆಯು ಹಿಂದಿಯನ್ನು ಅರಿತುಕೊಳ್ಳಲು ಇದು ವಿಶೇಷ ಪ್ರಯೋಜನವಾಗುವುದೆಂದು ಹೇಳಲಾಗಿದೆ.

ಮರಾಠಿ-ರಷ್ಯಾ, ಉರ್ದು-ರಷ್ಯಾ, ತಮಿಳು-ರಷ್ಯಾ ನಿಘಂಟುಗಳು ಈಗಾಗಲೇ ತಯಾರಾಗಿರುವುದಾಗಿ ತಿಳಿಯಬರುತ್ತದೆ.

ಕಾಂಗ್ರೆಸ್ಸಿಗೆ ೧೫ ಸ್ಥಾನಗಳು

ಪೆಪ್ಸುವಿನಲ್ಲಿ ೬೦ ಶಾಸನ ಸಭಾ ಸ್ಥಾನಗಳಿಗೆ ನಡೆದ ಮಹಾಚುನಾವಣೆಗಳಲ್ಲಿ ಇಲ್ಲಿಯವರೆಗೆ ೨೦ ಸ್ಥಾನಗಳ ಫಲಿತಾಂಶ ಹೊರಬಿದ್ದಿದೆ. ಇದರಲ್ಲಿ ಕಾಂಗ್ರೆಸ್ ೧೫ ಸ್ಥಾನಗಳನ್ನು ಗಳಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೫—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೧೨	೨೬—೨
ಎಳ್ಳು	೬೮—	—
ಹರಳು	೨೯—೨	—
ಹುಚ್ಚೆಳ್ಳು	೩೬—೨	೪೦—
ಹೊಂಗೆಬೀಜ	೨೧—೨	೨೫—೧೪
ಹುಣಸೆಬೀಜ	೧೨—೧೨	—
ಹುರುಳಿ	೨೩—೧೩	೨೯—
ಹೆಸರು	೩೯—	೪೧—೧೨
ಅವರೆ	೨೫—	೨೯—
ಅಲಸಂದೆ	೩೦—೪	೪೩—
ಉದ್ದು	—	—
ಕೊತ್ತಂಬರಿ	೨೯—	೨೯—೨
ತೊಗರಿ	೨೯—೧೨	—
ಕಡಲೆ	೪೪—	೪೮—೨
ಹುಣಸೆಹಣ್ಣು	೫—೩	೮—೧೨
ಮೆಣಸಿನಕಾಯಿ	೨೦—	೩೦—
ಸೀಗೆಕಾಯಿ	೩—೧೩	೪—೯
ಬೆಲ್ಲ	೪—೮	೫—
ತೆಂಗಿನಕಾಯಿ	೧೧೦—	೩೧೧—

ನಿಜಾಮರ ಆಸ್ತಿ ಸರ್ಕಾರ ವಶಪಡಿಸಿಕೊಳ್ಳಬೇಕು

ಹೈದರಾಬಾದ್ ನೈಜಾಮರ ಆಸ್ತಿಪಾಸ್ತಿಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡು ಅದನ್ನು ಜನರ ಯೋಗಕ್ಷೇಮಕ್ಕಾಗಿ ಉಪಯೋಗಿಸಬೇಕೆಂದು ಅಲ್ಲಿನ ಶಾಸನಸಭೆಯ ವಿರೋಧಪಕ್ಷದ ನಾಯಕ ಶ್ರೀ ದೇಶಪಾಂಡೆಯವರು ರಾಜಪ್ರಮುಖರ ಭಾಷಣದ ಮೇಲೆ ಚರ್ಚೆ ಪ್ರಾರಂಭವಾದಾಗ ತಿಳಿಸಿದ್ದಾರೆ.

ಸಾಮಾಜಿಕ ಕ್ಷೇಮಾಭಿವೃದ್ಧಿ ಮಂಡಲಿಯ ಅಧ್ಯಕ್ಷತೆ

ಭಾರತ ಸರ್ಕಾರವು ಕಳೆದ ಆಗಸ್ಟ್ ಮಾಹೆಯಲ್ಲಿ ರಚಿಸಿದ ಸಾಮಾಜಿಕ ಕ್ಷೇಮಾಭಿವೃದ್ಧಿ ಮಂಡಲಿಯ ಅಧ್ಯಕ್ಷರ ಕಾರ್ಯಗಳು ಇತ್ತೀಚೆಗೆ ವಿಶೇಷವಾಗುತ್ತಿರುವುದರಿಂದ ಈಗಿರುವ ಅಧ್ಯಕ್ಷರಾದ ಶ್ರೀಮತಿ ದುರ್ಗಾಬಾಯಿ ದೇಶಮುಖ್‌ರವರನ್ನು ಪೂರ್ಣಕಾಲದ ಅಧ್ಯಕ್ಷರನ್ನಾಗಿ ಸರ್ಕಾರವು ನೇಮಿಸಿದೆ. ಇದರಿಂದ ಶ್ರೀಮತಿಯವರು ಆ ಯೋಜನಾ ಸಮಿತಿಯ ಸದಸ್ಯತ್ವಕ್ಕೆ ರಾಜೀನಾಮೆಯನ್ನು ಕೊಟ್ಟು ಸಾಮಾಜಿಕ ಕ್ಷೇಮಾಭಿವೃದ್ಧಿ ಮಂಡಲಿಯ ಕಾರ್ಯದಲ್ಲಿಯೇ ನಿರತರಾಗಲಿದ್ದಾರೆ.

ಗಾಂಧಿ ಸ್ಮಾರಕ ನಿಧಿಗೆ ೫೦ ಲಕ್ಷ ರೂ.

ಮಹಾತ್ಮ ಗಾಂಧಿ ಸ್ಮಾರಕ ನಿಧಿಗೆ ಬೊಂಬಾಯಿನ ಗಿರಣಿ ಮಾಲೀಕರ ಸಂಘದವರು ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ಹಣವನ್ನು ಬೊಂಬಾಯಿನಲ್ಲಿಯೇ ಕಾರ್ಮಿಕರಿಗಾಗಿ ಕಟ್ಟುವ ಆಸ್ಪತ್ರೆಗಾಗಿ ಉಪಯೋಗಿಸಲಾಗುವುದೆಂದು ತಿಳಿಯಬರುತ್ತದೆ.

ಆಹಾರ ವಸ್ತುಗಳ ಮೇಲಿನ ಹತೋಟಿ ರದ್ದು

ಪಂಜಾಬ್ ಪ್ರಾಂತ್ಯದಲ್ಲಿ ಆಹಾರ ಪಡಿತರ, ಸಾಗಾಣಿಕೆ ಮುಂತಾದುವುಗಳ ಮೇಲಿದ್ದ ಎಲ್ಲಾ ಹತೋಟಿಗಳನ್ನು ರದ್ದುಗೊಳಿಸಲಾಗಿದೆ ಆದರೆ ಪ್ರಾಂತ್ಯದಿಂದ ಹೊರಕ್ಕೆ ಕಳುಹಿಸಲು ಇರುವ ನಿರ್ಬಂಧ ಮಾತ್ರ ಉಳಿದಿರುತ್ತದೆ.

ಪ್ರಭಾ ★ ಅಮೋಘ ಪ್ರಾರಂಭ ಇಂದಿನಿಂದ
ದಿನವಹಿ 3 ಆಟಗಳು
ಮಾಡರ್ನ್ ಥಿಯೇಟರ್ಸ್‌ರವರ
ಜನಪ್ರಿಯ ಪೌರಾಣಿಕ ಕನ್ನಡಚಿತ್ರ
-ದೇವ ಕನ್ನಿಕಾ-
ಪಾತ್ರ:--ಇಂದುಶೇಖರ್, ಎಸ್. ಜಾನಕಿ, ಹೆಚ್. ಆರ್. ಶಾಸ್ತ್ರಿ, ಶಾಂತಿಗ್ರಾಂ, ಟಿ. ಎನ್. ಬಾಲಕೃಷ್ಣ, ಮರಿರಾವ್ ಮತ್ತು ಲಕ್ಷ್ಮೀದೇವಿ.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೬೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೫೦

೨೭-೨-೧೯೫೪ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ರೇಷನ್ ಬಡವಾಡೆ

ಮೈಸೂರು ೨೬

ನಾಳೆ ೨೮ ನೇ ತಾರೀಖು ರಜಾದಿನವಾದ್ದರಿಂದ ಜಿಲ್ಲಾ ಟ್ರೆಷರಿಯಲ್ಲಿ ರೇಷನ್ ಬಟವಾಡೆಯನ್ನು ೧ ನೇ ತಾ|| ಸೋಮವಾರ ಬೆಳಗ್ಗೆ ೮ ರಿಂದ ೧೨, ೨ ನೇ ತಾರೀಖು ಮಂಗಳವಾರ ೧೧ ರಿಂದ ಮಧ್ಯಾಹ್ನ ೩ ಗಂಟೆಯವರೆಗೆ ಮಾಡಲಾಗುತ್ತದೆ ಯೆಂದು ಜಿಲ್ಲಾ ಟ್ರೆಷರಿ ಅಧಿಕಾರಿಗಳು ತಿಳಿಸುತ್ತಾರೆ.

ಮೈಸೂರು ವಿಧಾನ ಪರಿಷತ್ತಿಗೆ ಕಾಂಗ್ರೆಸ್ ಉಮೇದುವಾರರು

ಮೈಸೂರು ವಿಧಾನ ಪರಿಷತ್ತಿನಲ್ಲಿ ಖಾಲಿಯಾಗುವ ಮೂರು ಸ್ಥಾನಗಳಿಗೆ ಶ್ರೀಗಳಾದ ಎಂ. ಎಚ್. ಶಿವಮ್ಮಾಜೋಯಿ, ಎಂ. ವೆಲ್ಲೂರಿ ಮತ್ತು ತಿರುಮಲಗೌಡರನ್ನು ಕಾಂಗ್ರೆಸ್ ಉಮೇದುವಾರರುಗಳಾಗಿ ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿಯು ಚುನಾಯಿಸಿದೆ.

ಇಂಗ್ಲೀಷ್ ಶಿಕ್ಷಣ ಮಾಧ್ಯಮವಾಗಿಯೇ ಇರಬೇಕು

ಭಾರತ ರಕ್ಷಣಾ ಮತ್ತು ಆಡಳಿತ ಶಾಖೆಗೆ ಸಂಬಂಧಪಟ್ಟ ಎಲ್ಲಾ ಪರೀಕ್ಷೆಗಳನ್ನು ಇಂಗ್ಲೀಷ್ ಭಾಷೆಯಲ್ಲಿಯೇ ನಡೆಸುವವರೆಗೂ ಸೆಕೆಂಡರಿ ಶಾಲೆಗಳಲ್ಲಿ ಇಂಗ್ಲೀಷ್ ಭಾಷೆಯೇ ಶಿಕ್ಷಣ ಮಾಧ್ಯಮವಾಗಿರಬೇಕೆಂದು ಮಧ್ಯಪ್ರದೇಶದ ಸೆಕೆಂಡರಿ ವಿದ್ಯಾಸಮಿತಿ ತೀರ್ಮಾನಿಸಿದೆ.

ವಿದ್ಯಾರ್ಥಿಗಳಿಗೆ ಉಚಿತ ಊಟ ವ್ಯವಸ್ಥೆ

ಮದ್ರಾಸ್ ಕಾರ್ಪೊರೇಷನ್ನಿನ ಶಾಲೆಗಳಲ್ಲಿ ಒಟ್ಟು ೮೧೭೬೯ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಅವರ ಪೈಕಿ ೧೦೩೬೦ ವಿದ್ಯಾರ್ಥಿಗಳ ಮಧ್ಯಾಹ್ನದ ಊಟಕ್ಕಾಗಿ ಪ್ರತಿ ವರ್ಷ ೨ ಲಕ್ಷ ರೂಗಳನ್ನು ಕಾರ್ಪೊರೇಷನ್ ಖರ್ಚು ಮಾಡುತ್ತಿದೆ.

ರಾಮಮೂರ್ತಿ ಸಮಿತಿ ವರದಿ ಪರಿಶೀಲನೆ

ಪಾನ ನಿರೋಧ ನೀತಿಯ ಬಗ್ಗೆ ರಾಮಮೂರ್ತಿ ಸಮಿತಿಯು ಮಾಡಿರುವ ಶಿಫಾರಸುಗಳನ್ನು ಅಖಿಲಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಏಪ್ರಿಲ್ ೩ ಮತ್ತು ೪ ನೇ ತಾರೀಖು ನಡೆಸುವ ತನ್ನ ಸಭೆಯಲ್ಲಿ ಪರಿಶೀಲಿಸುವುದೆಂದು ತಿಳಿಯ ಬರುತ್ತದೆ.

ಮಕ್ಕಳ ಅಪಹರಣದ ಭೀತಿಗೆ ಬುಡವಿಲ್ಲ

ನಗರದಲ್ಲಿ ಇಲ್ಲಿಯವರೆಗೆ ಒಂದು ಮಗುವೂ ತಪ್ಪಿಸಿಕೊಂಡಿಲ್ಲ

ನಗರದಲ್ಲೆಲ್ಲಾ ಮತ್ತು ಶಾಲೆಗಳಬಳಿ ಗುಪ್ತ ಪೋಲೀಸರ ಗಸ್ತು ಹಾಕಲಾಗಿದೆ—ಜಿಲ್ಲಾಧಿಕಾರಿಗಳ ಹೇಳಿಕೆ

ಮೈಸೂರು ೨೬

ರಾಜಧಾನಿಯಲ್ಲಿ ಕಳೆದ ೮ ದಿನಗಳಿಂದಲೂ ಮಕ್ಕಳ ಅಪಹರಣವಾಗುತ್ತಿದೆ ಯೆಂಬ ಸುದ್ದಿ ಹರಡಿ ಜನರಲ್ಲಿ ಭೀತಿ ಉಂಟಾಗಿರುವುದಕ್ಕೆ ಯಾವ ಆಧಾರವೂ ಮತ್ತು ಬುಡವೂ ಇಲ್ಲ. ಇಲ್ಲಿಯವರೆವಿಗೆ ಒಂದು ಮಗುವಾದರೂ ನಗರದಲ್ಲಿ ತಪ್ಪಿಸಿಕೊಂಡಿಲ್ಲ. ಯಾವ ಕೆಲಸವೂ ಇಲ್ಲದೆ ಕೆಲವು ಸೋಮಾರಿಗಳ ಸುಳ್ಳು ಸುದ್ದಿ ಹರಡುವಿಕೆಯಿಂದ ನಿರಪರಾಧಿಗಳು ಕಷ್ಟಪಡಬೇಕಾಗಿದೆ. ಇಂತಹ ಅಚಾತುರ್ಯ ನಡತೆಗೆ ಸಾರ್ವಜನಿಕರು ಎಡೆಗೊಡಬಾರದು. ಈ ದಿನದಿಂದ ಮಫ್ತಿ ಪೋಲೀಸರ ಗಸ್ತನ್ನು ನಗರದಲ್ಲೆಲ್ಲಾ ಏರ್ಪಡಿಸಲಾಗಿದೆ. ಶಾಲೆಗಳ ಹತ್ತಿರ ಪೋಲೀಸ್ ಸೈಕಲ್ ಸವಾರರ ಕಾವಲನ್ನು ಹಾಕಲಾಗಿದೆ..ಎಂದು ಜಿಲ್ಲಾಧಿಕಾರಿಗಳು ಈ ದಿನ ಬೆಳಗ್ಗೆ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು.

ಕಳೆದ ೮ ದಿನಗಳಲ್ಲಿ ನಗರದಲ್ಲಿ ನಡೆದ ಘಟನೆಗಳನ್ನು ಅವರು ವಿವರಿಸುತ್ತಾ, ಈ ರೀತಿ ಹೇಳಿದರು —

೧೬ನೇ ತಾ|| ಬೆಳಗ್ಗೆ ೧೧ ಗಂಟೆಗೆ ಕೃಷ್ಣರಾಜ ಪೋಲೀಸ್ ಸ್ಟೇಷನ್ನಿನ ಆವರಣದಲ್ಲಿ ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಗಡ್ಡಬೆಳೆಸಿಕೊಂಡು ಹೋಗುತ್ತಿದ್ದ ೪೦ವರ್ಷದ ರಾಮನ್ ಎಂಬಾತನು ಮಲ್ಲಿಕಾರ್ಜುನಪ್ಪ ಎಂಬ ಹುಡುಗನನ್ನು ಅಪಹರಿಸಲು ಪುಸಲಾಯಿಸುತ್ತಿದ್ದನೆಂದು ಆತನನ್ನು ಜನರು ಹೊಡೆದು ಪೋಲೀಸ್ ಠಾಣೆಗೆ ಕರೆದೊಯ್ದರು. ಕೊನೆಯಲ್ಲಿ ಆತನು ನಿರಪರಾಧಿ ಯೆಂದೂ, ಈ ಸುದ್ದಿಗೆ ಯಾವ ಆಧಾರವೂ ಇಲ್ಲವೆಂದು ಗೊತ್ತಾಯಿತು.

ಇದೇರೀತಿ ೧೮ ನೇ ತಾರೀಖು ಕನ್ನೇಗೌಡನ ಕೊಪ್ಪಲಿನ ಮಹದೇವ ಎಂಬಾತನನ್ನು ಗೀತಾ ರಸ್ತೆಯಲ್ಲಿ ಅಪಹರಿಸಲು ಯತ್ನ ಎಂಬ ಸುದ್ದಿ ಪ್ರಕಟಿಸಿದೆ. ಆ ದುರಂತಕ್ಕೆ ಯಾವ ಆಧಾರವೂ ಇಲ್ಲ ೧೭ ನೇ ತಾರೀಖು ಚಾಮುಂಡಿಪುರದಲ್ಲಿ ವೀರಪ್ಪ ಎಂಬ ಹುಡುಗನು ಪೆಪ್ಪರ್‌ಮೆಂಟ್ ತಿಂದು ಜ್ಞಾನತಪ್ಪಿ ಆಸ್ಪತ್ರೆಗೆ ದಾಖಲು ಆಗಿದ್ದಕ್ಕೂ ಮಕ್ಕಳ ಅಪಹರಣಕ್ಕೂ ಯಾವ ಸಂಬಂಧವಿಲ್ಲ. ನಜರ್‌ಬಾದ್ ಪರಹದ್ದಿನಲ್ಲಿ ಆರ್‌ಮುಗಂ ಎಂಬಾತನು ಆದಿಕರ್ನಾಟಕ ಕಾಲೋನಿಯಲ್ಲಿ ಭಿಕ್ಷೆಮಾಡುತ್ತಿದ್ದಾಗ ಆತನು ಮಕ್ಕಳ ಅಪಹರಣ ಮಾಡುವನೆಂದು ಅವನನ್ನು ಜನರ ಗುಂಪು ಹೊಡೆದುದು. ೨೫ ನೇ ತಾರೀಖು ಮಂಡಿ ಸ್ಟೇಷನ್ನಿನ ಹತ್ತಿರ ಶ್ರೀನಿವಾಸ ಎಂಬ ಹುಡುಗನು ಸೀಮೆಸುಣ್ಣದಲ್ಲಿ. ಏನೋ ಬರೆಯುತ್ತಿದ್ದಾಗ ಆತನು ಮಕ್ಕಳಿಗೆ ವಿಷದ ಪೆಪರ್‌ಮೆಂಟ್ ಕೊಡುವನೆಂದು ಜನರ ಗುಂಪು ಆತನನ್ನು ಠಾಣೆಗೆ ಎಳೆದುಕೊಂಡು ಬಂದಿದ್ದು. ಮೊನ್ನೆರಾತ್ರಿ ಬೇಗೊಳದಿಂದ ಗೌರವಸ್ಥನಾದ ಮಲ್ಲಯ್ಯ ಎಂಬಾತನು ತನಗೆ ಗುರುತಿರುವ ಹುಡುಗನ ಹತ್ತಿರ ಮಾತನಾಡುತ್ತಿದ್ದಾಗ ಜನರ ಗುಂಪು ಆತನಿಗೆ ಹೊಡೆದು ಗಾಯಪಡಿಸಿದ್ದು ಈ ಪ್ರಕರಣಗಳಲ್ಲೆಲ್ಲಾ ನಿರಪರಾಧಿ ಮತ್ತು ಗೌರವಸ್ಥರಿಗೆ ಏಟುಬಿದ್ದು ವೃಥಾ ಗಲಾಟೆ ನಡೆದು, ಮಕ್ಕಳ ಅಪಹರಣದ ಸುದ್ದಿ ಹರಡಿದೆ ಪೋಲೀಸರು ಪರಿಶೀಲನೆ ನಡೆಸಿದ ಮೇಲೆ ಗಲಾಟೆ ಸುದ್ದಿಗೆ ಯಾವ ಆಧಾರವೂ ಇಲ್ಲವೆಂದು ಕಂಡುಬಂದಿದೆ. ಆದ್ದರಿಂದ ಸಾರ್ವಜನಿಕರು ಈ ರೀತಿ ಸುದ್ದಿಗೆ ಕಿವಿಕೊಡದೆ, ಯಾವ ಗಾಭರಿಯೂ ಇಲ್ಲದೆ ಇರಬೇಕೆಂದು ಜಿಲ್ಲಾಧಿಕಾರಿಗಳು ಮನವಿ ಮಾಡಿಕೊಂಡರು.

ಪುರ ಸಭಾಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿ ಜಿಲ್ಲಾ ಪೋಲೀಸ್ ಅಧಿಕಾರಿ ಶ್ರೀ ಮಲ್ಲಪ್ಪನವರು ಜನರು ಗಾಬರಿಪಡಬೇಕಾಗಿಲ್ಲವೆಂದೂ, ಸೂಕ್ತ ಮುಂಜಾಗ್ರತೆ ಕ್ರಮ ತೆಗೆದುಕೊಳ್ಳಲಾಗಿದೆಯೆಂದು ಭರವಸೆ ಇತ್ತರು.

ಶಾಲಾ ಕಾಲೇಜುಗಳ ಫೀಜು ಹೆಚ್ಚಿಸಬೇಕು

ಶಿಕ್ಷಣ ಸುಧಾರಣಾ ಸಮಿತಿಯ ಸಲಹೆ

ಬೆಂಗಳೂರು ೨೬

ಪ್ರಾಥಮಿಕ ವಿದ್ಯಾಭ್ಯಾಸ ಕಾಲವು ಸಂಸ್ಥಾನದ ವಿದ್ಯಾಸುಧಾರಣಾ ಸಮಿತಿಯು ಶಿಫಾರಸು ಮಾಡಿರುವಂತೆ ೬ ವರ್ಷಗಳ ಕಾಲ ಇರಬೇಕು. ಶಿಕ್ಷಣ ಮಟ್ಟ ಉತ್ತಮವಾಗಿರಬೇಕಾಗಿರುವುದರಿಂದ ವಿಶ್ವವಿದ್ಯಾನಿಲಯದ ಶಿಕ್ಷಣವು ೩ ವರ್ಷ ಕಾಲ ಇರಬೇಕೆಂದು ನಿನ್ನೆಯದಿನ ನಡೆದ ವಿದ್ಯಾಸುಧಾರಣಾಸಮಿತಿಯು ನಿರ್ಧಾರಮಾಡಿದೆ.

ಈ ಶಿಕ್ಷಣ ಸುಧಾರಣಾ ಸಮಿತಿಯ ಸಭೆಯು ನಿನ್ನೆಯದಿನ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಪ್ರಾರಂಭದಲ್ಲಿ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಭಾಷಣವನ್ನು ಮಾಡಿ ಕೇಂದ್ರ ವಿದ್ಯಾಸಮಿತಿಯ ಕೆಲವು ತೀರ್ಮಾನಗಳನ್ನು ವಿವರಿಸಿದರು.

ಶಿಕ್ಷಣ ಸುಧಾರಣೆಗಳನ್ನು ಜಾರಿಗೆ ತರಲು ಉಂಟಾಗುವ ಆರ್ಥಿಕ ಪರಿಣಾಮವನ್ನು ಸಮಿತಿ ಚರ್ಚಿಸಿ, ಶಿಕ್ಷಣ ತೆರಿಗೆ ವಿಧಿಸುವುದು, ಶಿಕ್ಷಣ ಶುಲ್ಕದದರವನ್ನು ಹೆಚ್ಚಿಸುವುದು, ಮುಂತಾದ ವಿಷಯುಗಳಲ್ಲಿ ಸಭೆಯು ಕೆಲವು ಸಲಹೆಗಳನ್ನು ಮಾಡಿದುದಾಗಿ ಗೊತ್ತಾಗಿದೆ.

ವಿದ್ಯಾ ಸಚಿವರು ಮಾತನಾಡಿದಾಗ ಕೇಂದ್ರ ಸಮಿತಿಯು ಹೈಕೋರ್ಟ್ ನ್ಯಾಯಾಧೀಶರು, ಪಬ್ಲಿಕ್ ಸರ್ವಿಸ್ ಕಮಿಷನ್ ಸದಸ್ಯರು, ಶಾಲಾ ಮುಖ್ಯೋಪಾಧ್ಯಾಯರು, ವಿದ್ಯಾ ಇಲಾಖಾ ಮುಖ್ಯಾಧಿಕಾರಿಗಳು ಮತ್ತು ಇಬ್ಬರು ಶಿಕ್ಷಣ ತಜ್ಞರು ಇರುವ ಪಠ್ಯಪುಸ್ತಕ ಸಮಿತಿ ರಚಿಸಬೇಕೆಂದು ಸೂಚಿಸಿದೆ ಎಂದು ತಿಳಿಸಿದರು.

ಮುಖ್ಯ ಮಂತ್ರಿಯವರು ಕೊನೆಯಲ್ಲಿ ಮಾತನಾಡುತ್ತ ಶಾಲಾಶುಲ್ಕವನ್ನು ಹೆಚ್ಚಿಸಬೇಕೆಂಬುದನ್ನು ಅನುಮೋದಿಸಿದರು. ಸುಂಕವನ್ನು ಹೆಚ್ಚಿಸುವುದರಿಂದ ಸುಮಾರು ೧೦ ಲಕ್ಷ ರೂ ಬರುವ ನಿರೀಕ್ಷೆಯಿದೆಯೆಂದು ತಿಳಿಸಿದರು.

ಈ ವಿಷಯಗಳನ್ನೆಲ್ಲಾ ಸರ್ಕಾರವು ಆಜ್ಞೆ ಮಾಡಲು ಸಹಾಯ ನೀಡಲು ಒಂಭತ್ತು ಸದಸ್ಯರ ಮೀರದ ಒಂದು ಸಮಿತಿಯನು ರಚಿಸಬೇಕೆಂದು ಸೂಚಿಸಿದರು. ಸಭೆಯು ಅದಕ್ಕೆ ಒಪ್ಪಿಗೆಯಿತ್ತಿತು.

ತಡೆ ಆಜ್ಞೆಗೆ ನಿರಾಕರಣೆ

ಬೆಂಗಳೂರು ೨೬

ತರೀಕೆರೆ ಕ್ಷೇತ್ರದಿಂದ ಮೈಸೂರು ವಿಧಾನಸಭೆಗೆ ಚುನಾಯಿತರಾದ ಶ್ರೀ ಟಿ. ನಾಗಪ್ಪನವರು ವಿಧಾನಸಭೆಯ ಮುಂದಿನ ಅಧಿವೇಶನದಲ್ಲಿ ಭಾಗವಹಿಸದಂತೆ ತಡೆ ಆಜ್ಞೆ ಕೊಡಲು ಭಾರತ ಶ್ರೇಷ್ಠ ನ್ಯಾಯಾಲಯವು ನಿರಾಕರಿಸಿರುವುದಾಗಿ ತಿಳಿಯಬರುತ್ತದೆ. ವಿಧಾನ ಸಭೆಗೆ ಶ್ರೀ ನಾಗಪ್ಪನವರ ಚುನಾವಣೆಯನ್ನು ಪ್ರಶ್ನಿಸಿ ಶ್ರೀ ಟಿ. ಸಿ. ಬಸಪ್ಪನವರು ಸಲ್ಲಿಸಿರುವ ಅಪೀಲು ತ್ವರಿತವಾಗಿ ನಡೆಯಲು ಆಜ್ಞೆ ಮಾಡಲಾಗಿದೆ.

ವಿ. ವಿ. ಶ್ರೀನಿವಾಸ ಅಯ್ಯಂಗಾರ್ಯರ ನಿಧನ

ಮದ್ರಾಸಿನ ಸುಪ್ರಸಿದ್ಧ ವಕೀಲರೂ ಮತ್ತು ಅಲ್ಲಿನ ಹೈಕೋರ್ಟಿನ ಮಾಜಿ ನ್ಯಾಯಾಧೀಶರೂ ಆಗಿದ್ದ ಶ್ರೀ ವಿ. ವಿ. ಶ್ರೀನಿವಾಸಯ್ಯಂಗಾರ್ಯರು ಮೊನ್ನೆ ತಮ್ಮ ಸ್ವಗೃಹದಲ್ಲಿ ಹೃದಯವೇದನೆಯ ಪರಿಣಾಮವಾಗಿ ಮೃತಪಟ್ಟರು ಅವರಿಗೆ ೮೪ ವರ್ಷ ವಯಸ್ಸಾಗಿದ್ದಿತು.

ಸಾಲ ಕೊಡಿಸುವುದಾಗಿ ಹೇಳಿ ಮೋಸದ ಯತ್ನ

ಬೊಂಬಾಯಿನ ೩ ಅಪಾದಿತರಿಗೆ ಜೈಲು ರಿಮ್ಯಾಂಡು

ಮೈಸೂರು ೨೭

ರಾಜಧಾನಿಯ ಶ್ರೀಗಳಾದ ವಿ. ನಾರಾಯಣರಾವ್, ಎಂ. ಎಸ್. ಮಾಧವರಾವ್ ಮತ್ತು ರಟ್ಟಿಹಳ್ಳಿ ರಾಮಪ್ಪ ಮುಂತಾದವರಿಗೆ ೪ಲಕ್ಷ ರೂ.ಗಳನ್ನು ಸಾಲ ಕೊಡಿಸುವುದಾಗಿ ಹೇಳಿ, ಅವರಿಂದ ೧೫,೯೯೦ ರೂ. ಗಳನ್ನು ಪಡೆದು ಮೋಸ ಮಾಡಿದರೆಂಬ ದೂರಿನ ಸಂಬಂಧವಾಗಿ, ಬೊಂಬಾಯಿನ ಡಿ. ಗುರುನಾಥ ಸಾಥೀಮಸಾ ಧೊಂಗ್ಡೆ, ಎ. ಹೆಚ್. ದೇಶಾಯ್ ಉರುಫ್ ಅರ್ದೇಶೀರ್ ಹೊರ್ಮುಸ್ಜಿ ದೇಶಾಯ್, ಕುರ್ಷಿದ್ ಉಗ್ರಜಿ ಬೊರ್ಮಾಜಿ ಉರುಫ್ ಕಾಶೀನಾಥ್ ಈ ಮೂರು ಜನರನ್ನು ಬೊಂಬಾಯಿ ಪೋಲೀಸರು ದಸ್ತಗಿರಿಮಾಡಿ, ಇಲ್ಲಿಗೆ ಕರೆತಂದು ನಗರದ ೧ನೇ ನ್ಯಾಯಾಧೀಶರ ಮುಂದೆ ನಿನ್ನೆಯದಿನ ಹಾಜರುಪಡಿಸಿದರು.

ಅವರ ಪರವಾಗಿ ಇಲ್ಲಿನ ವಕೀಲರಾದ ಶ್ರೀ ಎನ್. ಜೆ. ಮೈರೂರುವಾಲಾರವರು ಜಾಮೀನು ಅರ್ಜಿಯನ್ನು ಸಲ್ಲಿಸಲಾಗಿ ಅಪಾದಿತರನ್ನು ತಲಾ ೨೫ ಸಾವಿರ ರೂ. ಗಳ ಜಾಮೀನಿನ ಮೇಲೆ ಬಿಡುವಂತೆ ನ್ಯಾಯಾಧೀಶರು ಅಜ್ಞೆ ಮಾಡಿದರು. ಜಾಮೀನು ಕೊಡಲು ಅವರಿಗೆ ಸಾಧ್ಯವಾಗದೆ ಅವರನ್ನು ಸಬ್ ಜೈಲಿಗೆ ರಿಮ್ಯಾಂಡ್ ಮಾಡಲಾಯಿತು.

ಇದೇ ಸಂಬಂಧದಲ್ಲಿ ಮತ್ತೊಬ್ಬ ಅಪಾದಿತರಾದ ಜೆ. ಮಾಣೆಕ್‌ಜಿ ದೇಶಾಯರು ಸಿಕ್ಕಿಲ್ಲ. ನಗರದ ಕ್ರೈಂಬ್ರಾಂಚ್ ಪೋಲೀಸರು ಸದರಿಯವರ ಮೇಲೂ ಮತ್ತು ಮೈಸೂರು ನಿವಾಸಿಗಳಾದ ಹೆಚ್. ವಿ. ರಂಗಸ್ವಾಮಿ ಅಯ್ಯಂಗಾರ್, ಅಪ್ಪು ಮತ್ತು ಕೃಷ್ಣಪ್ಪನವರ ಮೇಲೂ ನಗರದ ಒಂದನೇ ಕೋರ್ಟಿನಲ್ಲಿ ಐ. ಪಿ. ಸಿ. ೪೨೦ ಮತ್ತು ೧೨೦ ಬಿ. ವಿಧಿಯ ಪ್ರಕಾರ ಮೊಕದ್ದಮೆ ಹೂಡಿರುವರು. ಸದರಿ ರಂಗಸ್ವಾಮಿ ಅಯ್ಯಂಗಾರ್ ಮತ್ತು ಇನ್ನಿಬ್ಬರು ಮೈಸೂರಿನವರು. ಕಳೆದ ೬ ತಿಂಗಳುಗಳಿಂದಲೂ ಜೈಲಿನಲ್ಲಿರುವರು.

೫ ಗ್ಯಾಲನ್ ನೀರಿಗೆ ಒಂದಾಣೆ

ಮಧ್ಯ ಭಾರತದ ರತ್ಲಂ ಎಂಬಲ್ಲಿ ನೀರಿನ ಅಭಾವವುಂಟಾಗಿ ೫ ಗ್ಯಾಲನ್ ನೀರಿಗೆ ಒಂದಾಣೆಯಂತೆ ಮಾರಲಾಗುತ್ತಿರುವುದಾಗಿ ತಿಳಿಯಬರುತ್ತದೆ.

ಸರ್ಕಾರಿ ವ್ಯವಹಾರ ತಮಿಳಿನಲ್ಲಿ

ತಮಿಳು ಭಾಷೆಯಲ್ಲಿಯೇ ಸರ್ಕಾರಿ ವ್ಯವಹಾರವನ್ನು ತಿರುಚಿರಪಳ್ಳಿ ಜಿಲ್ಲೆಯಲ್ಲಿ ಇನ್ನೂ ಒಂದು ವರ್ಷಕಾಲ ನಡೆಸುವಂತೆ ಮದ್ರಾಸ್ ಸರ್ಕಾರವು ಅಜ್ಞೆಮಾಡಿದೆ.

ಸಂತೆಗಾಡಿ ಲೂಟಿ ಮಾಡಿದವರಿಗೆ ಶಿಕ್ಷೆ

ಮೈಸೂರು ೨೭

೧೯೫೩ ನೇ ಇಸವಿ ಅಕ್ಟೋಬರ್ ೯ನೇ ತಾ॥ ಗಣಗನೂರು ಸಂತೆಗೆ ಹೋಗಿ ವಾಪಸು ಬರುತ್ತಿದ್ದ ಬಳಗಲಿ ಸಂಗಪ್ಪ ಶಿವಬಸಪ್ಪ ಎಂಬುವರ ಗಾಡಿಯನ್ನು ಟಿ. ನರಸೀಪುರ-ನಂಜನಗೂಡು ರಸ್ತೆಯಲ್ಲಿ ತಡೆದು ಲೂಟಿ ಮಾಡಿದರೆಂದು ನಂಜನಗೂಡು ಪೋಲೀಸರು ಆಲ್ದೂರು ಕಾಳಪ್ಪ, ಮುದ್ದುಬಸಪ್ಪ, ಮಾದಶೆಟ್ಟಿ ಮತ್ತು ಮಲ್ಲ ಉರುಫ್ ಲೈಟು ಮತ್ತು ಬಳಗಲಿಯ ಚೌಡಶೆಟ್ಟಿ ಮತ್ತು ಮಾದಶೆಟ್ಟಿ ಎಂಬುವರ ಮೇಲೆ ನಂಜನಗೂಡು ಕೋರ್ಟಿನಲ್ಲಿ ಹೂಡಿದ್ದ ಮೊಕದ್ದಮೆಯು ಸೆಷನ್ನಿಗೆ ಗುರಿಯಾಗಿದ್ದು, ಅಸಿಸ್ಟೆಂಟ್ ಸೆಷನ್ ನ್ಯಾಯಾಧೀಶರಾದ ಶ್ರೀ ಎಂ. ಎಸ್. ಭೀಮರಾಯರು ವಿಚಾರಣೆ ನಡೆಸಿ, ಜ್ಯೂರಿಗಳ ಬಹುಮತಾಭಿಪ್ರಾಯದಂತೆ ೨ ನೇ ಅಪಾದಿತ ಮುದ್ದಬಸಪ್ಪನನ್ನು ಖುಲಾಸೆ ಮಾಡಿ ಉಳಿದ ೫ ಜನರಿಗೆ ತಲಾ ೩ ವರ್ಷ ಕಠಿಣ ಸಜಾವನ್ನು ವಿಧಿಸಿರುತ್ತಾರೆ.

ಅಪರಾಧಿಗಳ ಪರ ಶ್ರೀ ಮಹೇಶಚಂದ್ರ ಗುರುರವರೂ, ಸರ್ಕಾರದ ಪರ ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಜಿ. ಶಂಕರಶೆಟ್ಟಿಯವರು ವಕಾಲತ್ತು ವಹಿಸಿದ್ದರು.

ಪಾಕೀಸ್ತಾನಕ್ಕೆ ಅಮೆರಿಕಾ ಮಿಲಿಟರಿ ನೆರವು

ಪಾಕೀಸ್ತಾನಕ್ಕೆ ಅಮೆರಿಕಾ ಮಿಲಿಟರಿ ನೆರವು ಕೊರಿಯಾ ಅಥವ ಟರ್ಕಿಯ ಮೂಲಕ ಏನೂ ಬರುವುದಿಲ್ಲವೆಂದೂ ನೇರವಾಗಿ ಅಮೆರಿಕಾದಿಂದಲೇ ಬರುವುದೆಂದು ಪಾಕ್ ಪ್ರಧಾನಿ ಹೇಳಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೭—೨—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—೮	೨೫—
ಎಳ್ಳು	—	—
ಹರಳು	೨೭—೧೨	೩೩—೮
ಹುಚ್ಚೆಳ್ಳು	೩೬—೬	೪೧—೪
ಹೊಂಗೆಬೀಜ	೨೩—೧೦	೨೬—
ಹುಣಸೆಬೀಜ	೧೨—೬	—
ಹುರುಳಿ	೨೫—೧೪	೨೯—
ಹೆಸರು	೩೬—೪	೪೧—೧೪
ಅವರೆ	೩೩—	—
ಅಲಸಂದೆ	೩೩—೪	೪೨—
ಉದ್ದು	—	—
ಕೊತ್ತಂಬರಿ	೨೭—	೨೯—೮
ತೊಗರಿ	೨೪—೨	೩೨—೨
ಕಡಲೆ	೪೪—೮	೪೯—೮
ಹುಣಸೆಹಣ್ಣು	೪—	೯—೧೨
ಮೆಣಸಿನಕಾಯಿ	೨೨—೮	೩೧—೧೦
ಸೀಗೆಕಾಯಿ	೪—೪	೪—೧೧
ಬೆಲ್ಲ	—	—
ತೆಂಗಿನಕಾಯಿ	೧೪೬—	೨೪೬—

ಮುಖ್ಯಮಂತ್ರಿಯವರ ಪ್ರವಾಸ

ಮೈಸೂರು ೨೭

ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮುಂದಿನ ತಿಂಗಳು ೧೩ ನೇ ತಾರೀಖು ಮೈಸೂರಿಗೆ ಆಗಮಿಸುವರು. ಬೆಂಗಳೂರಿನಿಂದ ಬೆಳಿಗ್ಗೆ ಹೊರಟು ಭೂತನಹೊಸೂರಿನಲ್ಲಿ ಶ್ರೀ ದೊಡ್ಡೇಗೌಡರು ಕಟ್ಟಿಸಿರುವ ಪ್ರೈಮರಿ ಶಾಲೆಯ ಶಂಕುಸ್ಥಾಪನೆ ಮಾಡಿ, ಶ್ರೀ ದೊಡ್ಡೇಗೌಡರು ಕಟ್ಟಿಸಿರುವ ಮಿಲ್ ಪ್ರಾರಂಭೋತ್ಸವ ಮಾಡುವರು. ನಂತರ ಮೈಸೂರಿಗೆ ಆಗಮಿಸಿ ಮಧ್ಯಾಹ್ನ ೪ ಘಂಟೆಗೆ ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ಸಂಘದ ಸಮಾರೋಪ ಭಾಷಣ ಮಾಡುವರು. ಸಂಜೆ ೬ ಘಂಟೆಗೆ ಶಾರದಾವಿಲಾಸ ಹೈಸ್ಕೂಲಿನ ಸ್ಕೂಲ್‌ಡೇ ಸಮಾರಂಭದ ಅಧ್ಯಕ್ಷತೆ ವಹಿಸುವರು.

೧೪ ನೇ ತಾ॥ ಭಾನುವಾರ ಮೈಸೂರಿನಲ್ಲಿ ಇರುವರು. ಸೋಮವಾರ ಬೆಳಿಗ್ಗೆ ಇಲ್ಲಿಂದ ಹೊರಟು ಬೆಂಗಳೂರಿಗೆ ತೆರಳುವರು.

ಸಂಗೀತ ಪರೀಕ್ಷಾ ಸಮಿತಿ

ಶ್ರೀ ಟಿ. ವಿ. ಸುಬ್ಬರಾವ್‌ರವರ ಅಧ್ಯಕ್ಷತೆಯಲ್ಲಿ ದಕ್ಷಿಣಭಾರತ ಸಂಗೀತ ಪರೀಕ್ಷಾ ಸಮಿತಿಯನ್ನು ರಚಿಸಲಾಗಿದೆ. ಇದರಲ್ಲಿ ಶ್ರೀಗಳಾದ ಟಿ. ಎಲ್. ವೆಂಕಟರಾಮಯ್ಯರ್, ಶಮ್ಮಂಗುಡಿ ಶ್ರೀನಿವಾಸ ಅಯರ್, ಚಿತ್ತೂರ್ ಸುಬ್ರಹ್ಮಣ್ಯ, ಚೌಡಯ್ಯ, ರಾಜಮಾಣಿಕ್ಯಂಪಿಳ್ಳೆ, ಚೆಂಬೈ ವೈದ್ಯನಾಥ ಭಾಗವತರ್, ಚಿಲಕಲಪುಡಿ ವೆಂಕಟೇಶ್ವರಶರ್ಮರವರುಗಳು ಸದಸ್ಯರಾಗಿದ್ದಾರೆ.

೧೬ ಲಕ್ಷ ರೂ. ಚಿನ್ನ ಪತ್ತೆ

ಕಾರಾವಾರದ ಬಳಿ ಪೋಲೀಸರು ಕೆಲವು ದಿನಗಳ ಹಿಂದೆ ಒಂದು ಮೋಟಾರಿನಲ್ಲಿ ಕಳ್ಳತನದಲ್ಲಿ ಸಾಗುತ್ತಿದ್ದ ೭ ಲಕ್ಷ ಬೆಲೆಬಾಳುವ ಚಿನ್ನವನ್ನು ಪತ್ತೆ ಹಚ್ಚಿದರು. ಪುನಃ ಅನುಮಾನದಮೇಲೆ ಆ ಗಾಡಿಯನ್ನು ಶೋಧಿಸಲಾಗಿ ಅದರ ಇಂಜನ್ನಿನೊಳಗೆ ಮತ್ತೆ ೯ ಲಕ್ಷ ಬೆಲೆಯ ಚಿನ್ನವು ಪತ್ತೆ ಆಯಿತು.

ರಾಷ್ಟ್ರೀಯ
ವಿದ್ಯೋದಯ ನಿಧಿ ಲಾಟರಿ
ಮುಕ್ತಾಯ 31-3-1954 ಡ್ರಾಯಿಂಗ್ 19-4-1954
ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು
ಮತ್ತು
ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ
ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ
ಮೊದಲನೆ ಬಹುಮಾನ 10000 ರೂ
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಕಾರ್ಯಕರ್ತರಲ್ಲಿ ವಿನಂತಿ

ಮೈಸೂರು ೨೭

ಮೈಸೂರು ಜಿಲ್ಲೆಯಲ್ಲಿ ಕಾಂಗ್ರೆಸ್ ಸದಸ್ಯತ್ವ ಸಂಗ್ರಹಣೆಗೆ ಪ್ರದೇಶ ಕಾಂಗ್ರೆಸ್ ಕಛೇರಿ, ಜಿಲ್ಲಾ ಕಾಂಗ್ರೆಸ್ ಕಛೇರಿ ಮತ್ತು ತಾಲ್ಲೂಕು ಕಾಂಗ್ರೆಸ್ ಕಛೇರಿಯಿಂದ ಪುಸ್ತಕ ಪಡೆದ ಮಹನೀಯರು ಮತ್ತು ಕಾಂಗ್ರೆಸ್ ಕಾರ್ಯಕರ್ತರು ಸದಸ್ಯತ್ವದ ಪುಸ್ತಕಗಳನ್ನು ಹಣದ ಸಮೇತ ಆಯಾ ತಾಲ್ಲೂಕು ಸಮಿತಿ ಕಛೇರಿಗೆ ಮಾರ್ಚಿ ಒಂದನೇ ತಾರೀಖು ತಲಪಿಸಬೇಕೆಂದು ಕೋರಲಾಗಿದೆ. ಸದಸ್ಯ ಸಂಗ್ರಹಣೆ ಅವಧಿಯು ಫೆಬ್ರವರಿ ೨೮ನೇ ತಾ॥ ಮುಗಿಯುವುದರಿಂದಲೂ, ತಾಲ್ಲೂಕು ಕಾಂ॥ ಸಮಿತಿಯವರು ಮಾರ್ಚಿ ೭ನೇ ತಾ॥ ರೊಳಗೆ ಸದಸ್ಯರ ಪಟ್ಟಿ ತಯಾರಿಸಿ ಹಣದ ಸಮೇತ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಅದನ್ನು ತಲಪಿಸಬೇಕಾಗಿರುವುದರಿಂದಲೂ ಪುಸ್ತಕ ಪಡೆದಿರುವ ಮಹನೀಯರೆಲ್ಲರೂ ಮಾರ್ಚಿ ೧ನೇ ತಾ॥ ಆಯಾ ತಾಲ್ಲೂಕು ಸಮಿತಿಗೆ ಪುಸ್ತಕ ಮತ್ತು ಹಣ ತಲಪಿಸಿ ಸಹಕರಿಸಬೇಕೆಂದು ಕಾರ್ಯದರ್ಶಿಗಳು ಕೋರುತ್ತಾರೆ.

ಬಳ್ಳಾರಿ ಪುರಸಭೆಯ ರದ್ದಿಗೆ ಒತ್ತಾಯ

ಬಳ್ಳಾರಿ ಪುರಸಭೆಗೆ ಈಗ ಆಂಧ್ರರೇ ಬಹು ಮಂದಿ ಸದಸ್ಯರಿರುವುದರಿಂದ ಅವರುಗಳು ಪೌರ ಸೇವೆಯ ವಿಷಯವನ್ನೇ ಮರೆತು ಭಾಷಾಗೊಂದಲದಲ್ಲಿ ತೊಡಗಿರುವುದರಿಂದ ಪುರಸಭೆಯನ್ನು ರದ್ದುಮಾಡಿ ಸರ್ಕಾರವೇ ಅಧಿಕಾರ ವಹಿಸಿಕೊಳ್ಳಬೇಕೆಂದು ಅಲ್ಲಿನ ವಾಣಿಜ್ಯ ಸಂಘದವರು ಮೈಸೂರು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಫರೂಕ್ ಸ್ಟಾಂಪು ಮಾರಾಟದಿಂದ ೪ಲಕ್ಷ ಪೌಂಡ್ ಲಾಭ

ಈಜಿಪ್ಟಿನ ಮಾಜಿ ದೊರೆ ಫರೂಕಿಗೆ ಸೇರಿದ್ದ ಅಮೂಲ್ಯ ಪ್ರಾಚೀನ ಸ್ಟಾಂಪುಗಳ ಮಾರಾಟದಿಂದ ಸರ್ಕಾರಕ್ಕೆ ೩,೯೦,೦೦೦ ಪೌಂಡುಗಳು ಬಂದಿವೆ.

ಫ್ರೆಂಚರಿಗೆ ಅಮೆರಿಕಾ ಮತ್ತು ಬ್ರಿಟನ್ ನೆರವು

ಇಂಡೋ ಚೀನಾದಲ್ಲಿ ಯುದ್ಧ ಪರಿಸ್ಥಿತಿಯು ಇನ್ನೂ ಹದಗೆಟ್ಟರೆ ಅಮೇರಿಕಾ ಮತ್ತು ಬ್ರಿಟನ್‌ಗಳು ಸೈನ್ಯಬಲ ಮತ್ತು ಶಸ್ತ್ರಾಸ್ತ್ರಗಳನ್ನು ಕಳುಹಿಸಲು ನಿರ್ಧರಿಸಿವೆ.

.... ರಣಜಿತ್ ....
26-2-54 ರಿಂದ 3 ನೇ ವಾರ
ಶಶಿಕಲಾ, ದುರ್ಗಾಕೋಟೆ ನಟಿಸಿರುವ:-
ಚಾ ಚಾ-
-ಚೌಧರಿ

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೫೧

೧-೩-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಜಾಡಮಾಲಿಗಳಿಗೆ ಉಚಿತ ಗೃಹವಸತಿ

ಪುರಸಭೆಯಲ್ಲಿ ನಿರ್ಣಯ

ಮೈಸೂರು ೧

ಪುರಸಭೆಯ ಜಾಡಮಾಲಿಗಳಿಗೆ ಆದಷ್ಟು ಬೇಗನೆ ಉಚಿತ ಗೃಹವಸತಿಯನ್ನು ಏರ್ಪಡಿಸಬೇಕೆಂಬ ಶ್ರೀ ಪಿ. ಎಲ್. ಕುಮಾರಸ್ವಾಮಿಯವರ ನಿರ್ಣಯವು ಮೊನ್ನೆ ನಡೆದ ಪುರಸಭೆಯ ಅಧಿವೇಶನದಲ್ಲಿ ಅಂಗೀಕೃತವಾಯಿತು.

ಆದಿಕರ್ನಾಟಕ ಪುರ, ಕಲಾಸಗೇರಿ ಮತ್ತು ಅವುಗಳ ಪಕ್ಕದಲ್ಲಿರುವ ಮಾದರಿ ಮನೆಗಳ ಪ್ರದೇಶಕ್ಕೆ ಒಳಚರಂಡಿ ಹಾಕಿಸಬೇಕೆಂಬ ಮತ್ತೊಂದು ನಿರ್ಣಯವು ಬಿದ್ದುಹೋಯಿತು. ಹಣದ ಅಭಾವ ಮತ್ತು ನೀರು ಸರಬರಾಜಿನ ತೊಂದರೆಯಿಂದ ಈ ಕೆಲಸವನ್ನು ಅಲ್ಲಿ ಕೈಗೊಳ್ಳಲು ಸಾಧ್ಯವಾಗಲಿಲ್ಲವೆಂದು ತಿಳಿಸಿ, ನಿರ್ಣಯವನ್ನು ವಾಪಸು ತೆಗೆದುಕೊಳ್ಳಬೇಕೆಂದು ಅಧ್ಯಕ್ಷರು ತಿಳಿಸಿದರೂ, ಶ್ರೀ ಕುಮಾರಸ್ವಾಮಿಯವರು ಅವಕ್ಕೆ ಒಪ್ಪಲಿಲ್ಲ.

ನಗರದಲ್ಲಿ ಆರೋಗ್ಯದ ಸುಂಕವನ್ನು ವಸೂಲ್ಮಾಡಲು ಮತ್ತು ಸಾರ್ವಜನಿಕ ವೈದ್ಯಶಾಲೆಗಳಿಗೆ ದ್ರವ್ಯಸಹಾಯ ಕೊಡಲು ಸಾಧ್ಯವಿಲ್ಲವೆಂದು ಸರ್ಕಾರದವರು ತಿಳಿಸಿರುವ ಸೂಚನೆಯನ್ನು ಒಪ್ಪಕೂಡದೆಂದೂ ವಸೂಲಿಯ ಖರ್ಚಿಗಾಗಿ ಶೇಕಡ ೧೨ ರಷ್ಟನ್ನು ಕೊಟ್ಟರೆ ಅದನ್ನು ಒಪ್ಪಬಹುದೆಂದೂ ಶ್ರೀ ಟಿ. ನರಸಿಂಹಯ್ಯಂಗಾರ್ಯರು ತಿಳಿಸಿದರು. ಆರೀತಿ ಷರತ್ತು ಹಾಕುವುದು ಸರಿಯುಲ್ಲವೆಂದು ತೆರಿಗೆಯನ್ನು ವಸೂಲು ಮಾಡಲೇ ಬೇಕಾಗುವುದೆಂದೂ ಅಧ್ಯಕ್ಷರು ತಿಳಿಸಿದರು.

ಈಗ ವಸೂಲ್ಮಾಡದೆ ಬಾಕಿ ಇರುವ ೩ ವರ್ಷಗಳ ತೆರಿಗೆಯನ್ನಾದರೂ ಮನ್ನಾ ಮಾಡಬೇಕೆಂದು ಸರ್ಕಾರದವರನ್ನು ಪ್ರಾರ್ಥಿಸಬೇಕೆಂಬ ಸಂಯುಕ್ತ ಪಕ್ಷದ ಸೂಚನೆಯನ್ನು ಅಂಗೀಕರಿಸಲಾಯಿತು.

ಪ್ರಶ್ನೋತ್ತರಕಾಲದಲ್ಲಿ ಪುರಸಭೆಯಲ್ಲಿ ಕೆಲಸಕ್ಕಿರುವ ೭೩೫ ಜಾಡಮಾಲಿಗಳಲ್ಲೈಕೆ ೧೭೮ ಮಂದಿಗೆ ವಸತಿ ಸೌಕರ್ಯ ಕಲ್ಪಿಸಲಾಗಿದೆಯೆಂದೂ, ನಗರದಲ್ಲಿ ೬೦ ಸಾರ್ವಜನಿಕ ಫ್ಲಷ್ ಕಕ್ಕಸ್ಸುಗಳಿದ್ದು, ಬೇರೆ ೬೦ ಕಕ್ಕಸ್ಸುಗಳಿಗೆ ನೀರಿನ ಸೌಕರ್ಯ ಒದಗಿಸಲಾಗಿದೆಯೆಂದೂ, ಅವುಗಳು ಸಮರ್ಪಕವಾಗಿಲ್ಲವೆಂದೂ ಅಧ್ಯಕ್ಷರು ತಿಳಿಸಿದರು.

ಟೆಲಿಫೋನ್ ಕಾರ್ಖಾನೆಗೆ ೮೩ ಲಕ್ಷ ರೂ. ಗ್ರಾಂಟ್

ಬೆಂಗಳೂರಿನಲ್ಲಿರುವ ಟೆಲಿಫೋನ್ ಕಾರ್ಖಾನೆಯ ಬಡಾವಣೆಗಾಗಿ ಈ ವರ್ಷ ೨೫ ಲಕ್ಷ ರೂ. ಗಳನ್ನು ಕೊಡಲಾಗಿದೆ.

ಜಿಲ್ಲಾಬೋರ್ಡಿ ಬಡ್ಜೆಟ್

ಮೈಸೂರು ೧

ಮೈಸೂರು ಜಿಲ್ಲಾ ಬೋರ್ಡಿನ ಅಂತ್ಯ ಸಭೆಯು ನಿನ್ನೆ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ೧೯೫೪-೫೫ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಮಂಜೂರ್ಮಾಡಲಾಯಿತು.

ಒಟ್ಟು ಆದಾಯ ೨೫,೯೬,೦೦೦ ರೂ. ಗಳಿದ್ದು, ಖರ್ಚು ೨೨,೮೯,೦೦೦ ರೂ. ಗಳಾಗಿ, ೧,೯೮,೦೦೦ ರೂ. ಉಳಿತಾಯವಾಗುವುದೆಂದು ಅಂದಾಜು ಮಾಡಲಾಗಿದೆ.

ಅಧ್ಯಕ್ಷರು ಬಜೆಟ್ಟನ್ನು ಮಂಡಿಸುತ್ತಾ, ಕಳೆದ ೭ ವರ್ಷಗಳಲ್ಲಿ ಬೋರ್ಡಿನವರು ಕೈಗೊಂಡ ಹಲವಾರು ರಚನಾತ್ಮಕ ಕಾರ್ಯಗಳನ್ನು ವಿವರಿಸಿದರು ಈ ಸಂಬಂಧದಲ್ಲಿ ಸರ್ಕಾರದವರು ಜಿಲ್ಲಾ ಬೋರ್ಡುಗಳನ್ನು ರದ್ದು ಮಾಡಿರುವ ನೀತಿಯನ್ನು ತೀವ್ರವಾಗಿ ಟೀಕಿಸಿ, ಇದರಿಂದ ಗ್ರಾಮಾಂತರ ಅಭಿವೃದ್ಧಿ ಕಾರ್ಯಕ್ಕೆ ಧಕ್ಕೆ ಉಂಟಾಗುವುದೆಂದೂ, ಉತ್ತಮ ಸೇವೆ ಸಲ್ಲಿಸುತ್ತಿದ್ದ ಜಿಲ್ಲಾ ಬೋರ್ಡುಗಳ ರದ್ದಿಗೆ ಅಗತ್ಯವೇ ಇತ್ತಿಲ್ಲವೆಂದೂ ಅವರು ತಿಳಿಸಿದರು

೧೯೫೪-೫೫ನೇ ಸಾಲಿನಲ್ಲಿ ಕೈಗೊಳ್ಳಲಿರುವ ಅಭಿವೃದ್ಧಿ ಕಾರ್ಯಗಳನ್ನು ವಿವರಿಸಿ, ೫೬೮ ಮೈಲಿಗಳಷ್ಟು ರಸ್ತೆಯ ನಿರ್ಮಾಣಕ್ಕಾಗಿ ೨,೧೦,೮೫೦ರೂ., ಆಸ್ಪತ್ರೆಗಳ ಖರ್ಚಿಗಾಗಿ ೧-೪೦,೦೦೦ ರೂ. ಹೈಸ್ಕೂಲು ಮತ್ತು ಇತರ ಶಾಲಾ ಕಟ್ಟಡಗಳಿಗೆ ೧,೧೨,೦೦೦ ರೂ. ಕುಡಿಯುವ ನೀರಿನ ಬಾವಿಗಳಿಗಾಗಿ ೫ ಸಾವಿರ ರೂ. ಒದಗಿಸಲಾಗಿದೆಯೆಂದು ಅಧ್ಯಕ್ಷರು ತಿಳಿಸಿದರು.

ಧರ್ಮಕಾರ್ಯಗಳಿಗಾಗಿ ಸಾರ್ವಜನಿಕರಿಂದ ಹೆಚ್ಚುಹಣ ಬರುತ್ತಿರುವುದರಿಂದ ಬೋರ್ಡಿನ ಹಣಕಾಸಿನ ಪರಿಸ್ಥಿತಿ ಉತ್ತಮಗೊಂಡಿದೆಯೆಂದೂ, ಆದರೂ ಸರ್ಕಾರದಿಂದ ಬರಬೇಕಾಗಿರುವ ಬಾಕಿ ವಿಶೇಷವಾಗಿ ನಿಂತಿದೆಯೆಂದೂ ಶ್ರೀ ಚೆನ್ನಬಸಪ್ಪನವರು ಹೇಳಿದರು.

ಕೊನೆಯಲ್ಲಿ ಉತ್ತಮ ಕೆಲಸ ನಡೆಸಲು ಇಲ್ಲಿಯವರೆಗೆ ಸಹಕರಿಸಿದ ಸದಸ್ಯರು ಮತ್ತು ಇತರರನ್ನು ಅಧ್ಯಕ್ಷರು ವಂದಿಸಿದರು.

ಮೈಸೂರು ಉಕ್ಕಿನ ಕಾರ್ಖಾನೆಗೆ ಸಹಾಯ

ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು ಅಭಿವೃದ್ಧಿ ಪಡಿಸಲು ಕೇಂದ್ರ ಸರ್ಕಾರದವರು ಈ ವರ್ಷದ ಬಜೆಟ್ಟಿನಲ್ಲಿ ೧೦೦ ಲಕ್ಷ ರೂ. ಕೊಟ್ಟಿದ್ದಾರೆ. ಕಳೆದ ವರ್ಷ ೮೧.೫೮ ಲಕ್ಷ ರೂಗಳನ್ನು ಕೊಡಲಾಗಿತ್ತು.

ನಿರಾಶ್ರಿತ ಬಾಲಕಿಗೆ ಆಶ್ರಯ

ಮೈಸೂರು ೧

ಶಿವಮೊಗ್ಗದ ಶ್ರೀ ತೋಪಣ್ಣ ಎಂಬವರ ಪುತ್ರಿ ಎಂದು ಹೇಳಲಾದ ೧೨ ವರ್ಷದ ಜಯಮ್ಮ ಎಂಬಾಕೆಯು ಮನೆಬಿಟ್ಟು ಕೆಲಸಕ್ಕಾಗಿ ಹುಡುಕಿಕೊಂಡು, ನಗರದ ನಿವಾಸಿ ಶ್ರೀ ನಾಗರಾಜ್ ಎಂಬುವರು ಕಂಡು, ಆಕೆಯನ್ನು ಜಿಲ್ಲಾ ಪೋಲೀಸ್ ಅಧಿಕಾರಿಗಳಲ್ಲಿ ಕರೆದೊಯ್ದರೆಂದೂ, ವರದಿಯಾಗಿದೆ.

ನಂತರ ತಮ್ಮ ಮನೆಯಲ್ಲೇ ಆಕೆಗೆ ಆಶ್ರಯ ಕೊಡುವುದಾಗಿ ಶ್ರೀ ನಾಗರಾಜ್‌ರವರು ಹೇಳಿದ್ದರಿಂದ, ಅವರಿಂದ ಮುಚ್ಚಳಿಕೆ ತೆಗೆದುಕೊಂಡು ಹುಡುಗಿಯನ್ನು ಕಳುಹಿಸಿಕೊಟ್ಟರೆಂದೂ ಹೇಳಲಾಗಿದೆ.

ಮುಕ್ತಾಯ ಭಾಷಣ

ಮೈಸೂರು ೧

ಮಹಾರಾಜಾ ಕಾಲೇಜಿನ ಸಾಮಾಜಿಕ ಶಾಸ್ತ್ರಸಂಘದ ಆಶ್ರಯದಲ್ಲಿ ಡಾ॥ ಟಿ. ಎ. ಪುರುಷೋತ್ತಂರವರ ಅಧ್ಯಕ್ಷತೆಯಲ್ಲಿ ಡಾ॥ ಎಂ. ಆದಿಕೇಶವಲುರವರು ಮುಕ್ತಾಯ ಸಮಾರಂಭ ಭಾಷಣವನ್ನು ಮಾಡುತ್ತಾರೆ.

ಭಾರತದ ಖೋತಾ ಬಜೆಟ್

ಭಾರತದ ೧೯೫೪-೫೫ ನೇ ಸಾಲಿನ ಬಜೆಟ್ಟನ್ನು ಮೊನ್ನೆದಿನ ಪಾರ್ಲಿಮೆಂಟಿನಲ್ಲಿ ಹಣಕಾಸಿನ ಸಚಿವರು ಮಂಡಿಸುತ್ತಾ, ಒಟ್ಟು ವರಮಾನವು ೪೪೧.೦೩ ಕೋಟಿ ರೂ, ಖರ್ಚು ೪೯೭.೯೮ ಕೋಟಿ ರೂ. ಆಗಿದ್ದು, ೨೬.೦೬ ಕೋಟಿ ರೂ. ಖೋತ ಬೀಳುವ ನಿರೀಕ್ಷೆ ಇದೆಯೆಂದು ತಿಳಿಸಿದ್ದಾರೆ.

ಶಸ್ತ್ರಾಸ್ತ್ರ ಶೇಖರಣೆಯ ಸ್ಪರ್ಧೆಯಲ್ಲಿ ಭಾರತವು ಸೇರಿ ವಿಶೇಷವಾಗಿ ಹಣ ಖರ್ಚು ಮಾಡುವುದಿಲ್ಲವೆಂದೂ, ಆರ್ಥಿಕಾಭಿವೃದ್ಧಿ ಕಾರ್ಯಗಳಿಗೆ ಹೆಚ್ಚು ಗಮನ ಕೊಡುವುದೆಂದೂ ಹಣಕಾಸಿನ ಸಚಿವರು ತಿಳಿಸಿದ್ದಾರೆ.

ನೀರಾವರಿ ಯೋಜನೆಗಳಿಗೆ ೧೫ ಕೋಟಿ ರೂ.

ಭಾರತದ ೫ ಪ್ರಮುಖ ನೀರಾವರಿ ಯೋಜನೆಗಳಾದ ಕೋಸಿ, ಕೊಯನ, ಕೃಷ್ಣ, ಚಂಬಲ್ ಮತ್ತು ರಿಹೆಂದ್‌ಗಳಿಗೆ ಈ ವರ್ಷ ೧೫ ಕೋಟಿ ರೂ.ಗಳನ್ನು ಖರ್ಚುಮಾಡಲಾಗುವುದೆಂದು ತಿಳಿಸಲಾಗಿದೆ.

ವಿಶ್ವ ಆರೋಗ್ಯದಿನ

ಇದೇ ಏಪ್ರಿಲ್ ೭ನೇ ತಾರೀಖು 'ವಿಶ್ವ ಆರೋಗ್ಯದಿನ' ವನ್ನು ವಿಶ್ವದಾದ್ಯಂತ ಆಚರಿಸಲಾಗುತ್ತದೆ.

ನಿರಪರಾಧಿಯ ಮೇಲೆ ಧಾಳಿ

ಮೈಸೂರು ೧

ಮೈಸೂರು ತಾಲ್ಲೂಕು ಮೇಗಲಪುರದಲ್ಲಿ ಮೊನ್ನೆ ದಿನ ಚಾಮರಾಜನಗರದಿಂದ ಬಂದ ಒಬ್ಬ ನಿರಪರಾಧಿ ಮತ್ತು ಅಪರಿಚಿತ ವ್ಯಕ್ತಿ ಒಬ್ಬನನ್ನು ಅಲ್ಲಿಯ ಜನರು ಹಿಡಿದುಕೊಂಡು ಆತನು ಮಕ್ಕಳ ಅಪಹರಣೆಗೆ ಬಂದಿರುವನೆಂದು ಹೊಡೆದು ಬಡಿದು ಗಲಾಟೆ ಮಾಡಿದರೆಂದೂ ವರದಿಯಾಗಿದೆ. ಆತನು ದನ ಕೊಳ್ಳಲು ಅಲ್ಲಿಗೆ ಹೋಗಿದ್ದನೆಂದೂ, ಅಲ್ಲಿನ ಪಟೇಲರು ಘಟನೆಯ ಬಳಿಗೆ ಹೋಗಿ ಆತನನ್ನು ರಕ್ಷಿಸಿದರೆಂದೂ ಹೇಳಲಾಗಿದೆ.

ಆರೋಗ್ಯ ಸಚಿವರ ರಾಜಿನಾಮೆ

ಈಗ ನಡೆದ ಚುನಾವಣೆಗಳಲ್ಲಿ ಪರಾಜಯ ಹೊಂದಿದ ತಿರುವಾಂಕೂರ್-ಕೊಚ್ಚಿಯ ಆರೋಗ್ಯಸಚಿವ ಶ್ರೀ ಮಾಧವರವರು ಮಂತ್ರಿಮಂಡಲಕ್ಕೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿದ್ದಾರೆ.

ಪೆಪ್ಸುವಿನಲ್ಲಿ ಚುನಾವಣಾ ಫಲಿತಾಂಶ

ಪೆಪ್ಸುವಿನಲ್ಲಿ ಅಲ್ಲಿಯ ಶಾಸನಸಭೆಯ ೬೦ ಸ್ಥಾನಗಳಿಗೆ ನಡೆದ ಮಹಾ ಚುನಾವಣೆಯಲ್ಲಿ ಇಲ್ಲಿಯವರೆಗೆ ೩೫ ಸ್ಥಾನಗಳ ಫಲಿತಾಂಶ ಹೊರಬಿದ್ದಿದೆ ಅವುಗಳಲ್ಲಿ ಕಾಂಗ್ರೆಸ್ ೨೭ ಸ್ಥಾನಗಳನ್ನು ಗಳಿಸಿದೆ.

ಕ್ಷೇಮಾಭಿವೃದ್ಧಿ ಕೇಂದ್ರಗಳು

ಕ್ಷೇಮಾಭಿವೃದ್ಧಿಯ ೬೬ಕೇಂದ್ರಗಳನ್ನು ಸ್ಥಾಪಿಸಲು ಕ್ಷೇಮಾಭಿವೃದ್ಧಿ ಮಂಡಲಿಯು ೨ ಲಕ್ಷ ರೂಪಾಯಿಗಳನ್ನು ಮಂಜೂರ್ಮಾಡಿದೆ. ಇಲ್ಲಿಯವರೆಗೆ ಮಂಡಲಿಯು ೫೪೬ ಕೇಂದ್ರಗಳನ್ನು ಸ್ಥಾಪಿಸಿ ಅದಕ್ಕಾಗಿ ೧೮ ಲಕ್ಷ ೫೪ ಸಾವಿರ ರೂ ವೆಚ್ಚಮಾಡಿದೆ.

ಶಾಸನಸಭಾ ಸದಸ್ಯರ ದಸ್ತಗಿರಿ

ತಮ್ಮಮೇಲೆ ಹೊರಡಿಸಿದ್ದ ದಸ್ತಗಿರಿ ವಾರೆಂಟ್ ವಾಪಸ್ ಆಗಬೇಕೆಂದು ತಿಳಿದುಕೊಂಡು ಪಶ್ಚಿಮ ಬಂಗಾಳದ ಶಾಸನ ಸಭಾಭವನದಲ್ಲಿಯೇ ಆಶ್ರಯ ಪಡೆದಿದ್ದ ಆ ಸಭಾ ಸದಸ್ಯ ಕಮ್ಯೂನಿಸ್ಟ್ ಪಕ್ಷದ ಶ್ರೀ ಜ್ಯೋತಿ ಬಾಸುರವರು ಹೊರಕ್ಕೆ ಬಂದೊಡನೆಯೇ ಮೊನ್ನೆಯದಿನ ಪೋಲೀಸಿನವರು ಅವರನ್ನು ದಸ್ತಗಿರಿ ಮಾಡಿದರು.

ಸಿಮೆಂಟ್, ಸಾಬೂನು ಮತ್ತು ಕೃತಕ ರೇಷ್ಮೆಮೇಲೆ ಸುಂಕ ಹೆಚ್ಚಿತು

ಪಾರ್ಲಿಮೆಂಟನಲ್ಲಿ ಕೇಂದ್ರ ಆರ್ಥಿಕ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರು ಬಡ್ಜೆಟ್‌ಮಂಡಿಸುವಾಗಿ ಸೂಚಿಸಿರುವ ಹೊಸ ತೆರಿಗೆ ಕ್ರಮವು ಇಂದಿನಿಂದಲೇ ಜಾರಿಗೆ ಬಂದಿರುವುದಾಗಿ ಆಜ್ಞೆ ಮಾಡಲಾಗಿದೆ.

ಸಿಮೆಂಟಗೆ ಟನ್ ಒಂದಕ್ಕೆ 5 ರೂ. ಬಾರುಸೋಪು ಹಂಡ್ರೆಡ್‌ವೇಟಿಗೆ 5¼ ರೂ. ಇತರ ಬಟ್ಟೆಸೋಪು 6 ರೂ. 2 ಆ. ಟಾಯಿಲೆಟ್ ಮುಂತಾದುವು ಹಂಡ್ರಡ್‌ವೇಟ್‌ಗೆ 14 ರೂ. ಪಾದರಕ್ಷೆಗಳಿಗೆ ಶೇಕಡ 10ರಷ್ಟು. ಸೂಪರ್‌ಫೈನ್ ಹತ್ತಿಬಟ್ಟೆಗೆ ಗಜ ಒಂದಕ್ಕೆ 6ಕಾಸು, ಇತರ ಬಟ್ಟೆಗಳಿಗೆ ಗಜ ಒಂದಕ್ಕೆ 3ಕಾಸು. ಈರೀತಿ ಹೊಸ ಸುಂಕವನ್ನು ವಿಧಿಸಲಾಗಿದೆ.

ಭಾರತದ ರಾಷ್ಟ್ರೀಯ ವರಮಾನ

ಭಾರತದ ರಾಷ್ಟ್ರೀಯ ವರಮಾನವು ೧೯೫೦-೫೧ ರಲ್ಲಿ ೯೫೩೦ ಕೋಟಿ ರೂ. ಗಳಿದ್ದವೆಂದೂ, ೧೯೫೧-೫೨ರಲ್ಲಿ ೯೦೧೦ ಕೋಟಿಗಳೆಂದೂ ಆದರ ಪರಿಶೀಲನಾ ಸಮಿತಿ ವರದಿಮಾಡಿದೆ. ದೇಶದಲ್ಲಿ ಕೆಲಸ ಮಾಡುವ ಜನಸಂಖ್ಯೆಯಲ್ಲಿ ಶೇಕಡ ೭೦ ಮಂದಿ ವ್ಯವಸಾಯದಲ್ಲೂ, ಶೇಕಡ ೨೮ ಮಂದಿ ಕೈಗಾರಿಕೆಯಲ್ಲೂ ನಿರತರಾಗಿದ್ದಾರೆಂದು ತಿಳಿಸಲಾಗಿದೆ.

ರಾಜಾಸ್ಥಾನದಲ್ಲಿ ಕಾಂಗ್ರೆಸ್ಸಿಗೆ ಬೆಂಬಲ

ರಾಜಾಸ್ಥಾನದಲ್ಲಿ ಪ್ರಮುಖ ಜಹಗೀರ್‌ದಾರರ ಮನವಿಯನ್ನು ಮನ್ನಿಸಿ ಸಾವಿರಾರು ಜನರು ಕಾಂಗ್ರೆಸ್ ಪಕ್ಷಕ್ಕೆ ಸೇರುತ್ತಿರುವುದಾಗಿ ವರದಿಯಾಗಿದೆ. ಸಂಯುಕ್ತದಳ ಮುಂತಾದ ವಿರೋಧ ಪಕ್ಷದವರಲ್ಲಿ ನೂರಾರು ಜನರು ತಮ್ಮ ಪಕ್ಷಕ್ಕೆ ರಾಜೀನಾಮೆ ಇತ್ತು ಕಾಂಗ್ರೆಸ್ಸನ್ನು ಸೇರುತ್ತಿದ್ದಾರೆ.

ಉತ್ಪಾದನಾ ಶಿಕ್ಷಣ ಕೇಂದ್ರ

ಭಾರತದಲ್ಲಿ ಉತ್ಪತ್ತಿಯನ್ನು ಹೆಚ್ಚಿಸಲು ಮಾಲೀಕರ ಮತ್ತು ಕಾರ್ಮಿಕರ ಪ್ರತಿನಿಧಿಗಳಿಗೆ ಶಿಕ್ಷಣ ಕೊಡುವ ಬಗ್ಗೆ ಒಂದು ರಾಷ್ಟ್ರೀಯ ಕೇಂದ್ರವನ್ನು ಸ್ಥಾಪಿಸಲು ಭಾರತ ಸರ್ಕಾರ ಯೋಚಿಸುತ್ತಿದೆಯೆಂದು ಕೇಂದ್ರ ಕಾರ್ಮಿಕ ಸಚಿವರು ತಿಳಿಸಿದ್ದಾರೆ.

ಪಾನನಿರೋಧ ರದ್ದಿಗಾಗಿ ಸತ್ಯಾಗ್ರಹ

ಆಂಧ್ರ ಸರ್ಕಾರವು ಪಾನ ನಿರೋಧವನ್ನು ರದ್ದುಮಾಡದಿದ್ದರೆ ಪ್ರಾಂತ್ಯಾದ್ಯಂತ ಸತ್ಯಾಗ್ರಹ ಚಳುವಳಿ ಪ್ರಾರಂಭಿಸಬೇಕೆಂದು ಮಾಜಿ ಸಚಿವ ಶ್ರೀ ಲಚ್ಚಣ್ಣನವರ ಅಧ್ಯಕ್ಷತೆಯಲ್ಲಿ ನಡೆದ ಕೃಷಿಕಾರರ ಲೋಕಸಭೆಯಲ್ಲಿ ನಿರ್ಧರಿಸಲಾಗಿದೆ.

ಜನರಲ್ ನಗೀಬರಿಗೆ ಪುನಃ ಈಜಿಪ್ಟಿನ ಅಧಿಕಾರಗಿರಿ

ಲೆ|| ಕ|| ಅಬ್ದುಲ್ ನಾಸಿರ್‌ರವರು ಪ್ರಧಾನಿಯಾಗಿಯೇ ಇರುವರು

ಈಜಿಪ್ಟಿನಲ್ಲಿ ಕಳೆದವಾರ ನಡೆದ ಕೆಲವು ಕ್ರಾಂತಿಕಾರರ ಘಟನೆಗಳು ಈಗ ಶಾಂತವಾಗಿ ಪುನಃ ಜನರಲ್ ನಗೀಬ್‌ರವರು ರಾಷ್ಟ್ರಾಧ್ಯಕ್ಷರಾಗಿ ನೇಮಕವಾಗಿದ್ದಾರೆ. ಹೊಸದಾಗಿ ಪ್ರಧಾನಿಯಾಗಿ ನೇಮಕವಾಗಿದ್ದ ಲೆ|| ಜನರಲ್ ನಾಸಿರ್‌ರವರು ಪ್ರಧಾನಿಯಾಗಿಯೇ ಮುಂದುವರಿಯುತ್ತಾರೆ. ಈ ಸಂಬಂಧದಲ್ಲಿ ಕ್ರಾಂತಿಸಮಿತಿ, ಮತ್ತು ಜ|| ನಗೀಬ್‌ರವರು ಒಂದು ಪ್ರಕಟಣೆಯನ್ನು ಹೊರಡಿಸಿ ತಮ್ಮ ಪಕ್ಷದ ಭಿನ್ನಾಭಿಪ್ರಾಯವೆಲ್ಲವೂ ಬಗೆಹರಿಯಿತೆಂದೂ ಇದು ಕೇವಲ ಸಂಸಾರ ಜಗಳವಾಗಿತ್ತೆಂದೂ ತಿಳಿಸಲಾಗಿದೆ. ಜನತೆಯು ತಮ್ಮ ವಿಷಯದಲ್ಲಿ ಇಟ್ಟಿರುವ ಪ್ರೀತಿ ವಿಶ್ವಾಸಗಳಿಗೆ ತಾವು ಹೆಮ್ಮೆಪಡುವುದಾಗಿ ಜನರಲ್ ನಗೀಬ್‌ರವರು ತಿಳಿಸುತ್ತಾ ತಮ್ಮ ಜೀವಮಾನವನ್ನೇ ದೇಶದ ಹಿತಕ್ಕಾಗಿ ಶ್ರಮಿಸಲು ಉಪಯೋಗಿಸುವುದಾಗಿ ತಿಳಿಸಿದ್ದಾರೆ.

ಸದ್ಯದಲ್ಲಿಯೇ ಈಜಿಪ್ಟಿನಲ್ಲಿ ರಾಜ್ಯಾಂಗ ಶಾಸನಾಸಭೆಯನ್ನು ರಚಿಸಿ ಅದಷ್ಟು ಜಾಗ್ರತೆಯಾಗಿ ಪ್ರಜಾಸರ್ಕಾರವು ಸ್ಥಾಪನೆಯಾಗುವಂತೆ ಮಾಡಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದಾಗಿಯೂ ಅವರು ಹೇಳಿದ್ದಾರೆ.

ತಿರುವಾಂಕೂರ್-ಕೊಚ್ಚಿ ಚುನಾವಣಾ ಫಲಿತಾಂಶ

ತಿರುವಾಂಕೂರು-ಕೊಚ್ಚಿ ಶಾಸನಸಭೆಯಲ್ಲಿರುವ ೧೧೭ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಇಲ್ಲಿಯವರೆವಿಗೆ ೭೩ ಸ್ಥಾನಗಳ ಫಲಿತಾಂಶವು ಪ್ರಕಟವಾಗಿದೆ. ಇದರಲ್ಲಿ ಕಾಂಗ್ರೆಸ್ ೨೮ ಸ್ಥಾನಗಳನ್ನು ಮಾತ್ರ ಗಳಿಸಿದೆ. ಇತರ ಪಕ್ಷಗಳು ಕಮ್ಯೂನಿಸ್ಟ ೧೪, ಪ್ರಜಾಸೋಷಲಿಸ್ಟ ೧೧, ತಿರುವಾಂಕೂರು ತಮಿಳುನಾಡು ಕಾಂಗ್ರೆಸ್ ೮ ಕ್ರಾಂತಿಕಾರಕ ಸೋಷಲಿಸ್ಟ ೭, ಸ್ವತಂತ್ರರು ೪ ಸ್ಥಾನಗಳನ್ನು ಗಳಿಸಿವೆ.

ಹೊಸ ಟೆಲಿಫೋನ್ ವ್ಯವಸ್ಥೆ

ಬೊಂಬಾಯಿ ನಲ್ಲಿ ಟೆಲಿಫೋನ್ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸಲು ೫೭ ಲಕ್ಷ ರೂ. ಗಳನ್ನೂ ಹೈದರಾಬಾದಿನಲ್ಲಿ ೨೫ಲಕ್ಷ ರೂ. ಗಳನ್ನೂ ವೆಚ್ಚಮಾಡಲಾಗುತ್ತದೆ.

.... ರಣಜಿತ್ ....
3–3–54 ರಿಂದ ಅಮೋಘ ಪ್ರಾರಂಭ
ಫಿಲ್ಮಿಸ್ತಾನ್‌ರವರ:-
ಸಮ್ರಾಟ್ [ಹಿಂದಿ]
ಪಾತ್ರ:-ರೆಹನ, ಅಜಿತ್, ರಾಮಸಿಂಗ್, ಮುಮ್ತಾಜ್ ಅಲಿ.

ನಗರದಲ್ಲಿ ನೀರು ಸರಪರಾಜಿಗೆ ೩೯|| ಲಕ್ಷ ರೂ ಯೋಜನೆ

ಮೈಸೂರು ೧

ನಗರದ ನೀರು ಸರಪರಾಜು ವ್ಯವಸ್ಥೆಯನ್ನು ಉತ್ತಮಗೊಳಿಸಲು 39½ ಲಕ್ಷ ರೂಪಾಯಿಗಳ ಯೋಜನೆಯೊಂದನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಪುರಸಭೆಯು ಮೊನ್ನೆ ನಡೆದ ವಿಶೇಷ ಅಧಿವೇಶನದಲ್ಲಿ ತೀರ್ಮಾನಮಾಡಿತು.

ಪ್ರಾರಂಭದಲ್ಲಿ ಪುರಸಭಾಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿಯವರು ಮಾತನಾಡುತ್ತಾ ನಗರದ ನೀರಿನ ಕೊರತೆಯನ್ನು ತಪ್ಪಿಸಲು ೮೦ ಲಕ್ಷ, ೩೯|| ಲಕ್ಷ ಮತ್ತು ೨೬ ಲಕ್ಷ ರೂಪಾಯಿಗಳ ವೆಚ್ಚದ ಮೂರು ಯೋಜನೆಗಳು ತಯಾರಾಗಿರುವುದಾಗಿಯೂ ಆದರೆ ನಿಪುಣರು ೩೯|| ಲಕ್ಷ ರೂಗಳ ಯೋಜನೆಯು ಹೆಚ್ಚಿನ ಪ್ರಯೋಜನಕಾರಿಯೆಂದು ಅಭಿಪ್ರಾಯಪಟ್ಟಿರುವುದಾಗಿ ತಿಳಿಸಿದರು.

ಅನಂತರ ಸಭೆಯು ಈ ೩೯,೪೯,೦೦೦ ರೂಗಳ ಯೋಜನೆಯನ್ನು ಒಪ್ಪಿ, ಅರ್ಧ ಹಣವನ್ನು ಸರ್ಕಾರ ಕೊಡಬೇಕೆಂದು ಪ್ರಾರ್ಥಿಸಲಾಯಿತು. ಈಗಾಗಲೇ ಸರ್ಕಾರದವರು ೧೩.೨೦ ಲಕ್ಷ ರೂಗಳನ್ನು ಪೈಪುಗಳಿಗಾಗಿ ವೆಚ್ಚಮಾಡಿರುವುದರಿಂದ ಸರ್ಕಾರದವರು ಕೇವಲ ೬.೫೪ ಲಕ್ಷ ರೂ. ಕೊಡಬೇಕಾಗುವುದೆಂದೂ ತಿಳಿಸಲಾಯಿತು.

ಮಿಕ್ಕ ಅರ್ಧ ಹಣವನ್ನು ಸರ್ಕಾರದವರು ಪುರಸಭೆಗೆ ೨೦ ವಾರ್ಷಿಕ ಕಂತುಗಳ ಸಾಲದ ರೂಪದಲ್ಲಿ ಕೊಡಬೇಕೆಂದೂ ಪ್ರಾರ್ಥಿಸಲಾಯಿತು.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ
ಮುಕ್ತಾಯ 31-3-1954 ಡ್ರಾಯಿಂಗ್ 19-4-1954
ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ
ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ
———
ಮೊದಲನೆ ಬಹುಮಾನ 10000 ರೂ
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಎಲಕ್ಟ್ರಾನಿಕ್ ಕಾರ್ಖಾನೆ

ಬೆಂಗಳೂರು ೧

ಜಾಲಹಳ್ಳಿಯಬಳಿ ೫೦೦ ಎಕರೆ ಪ್ರದೇಶದಲ್ಲಿ ಭಾರತ ಎಲಕ್ಟ್ರಾನಿಕ್ ಕಾರ್ಖಾನೆಯನ್ನು ಸ್ಥಾಪಿಸಲಾಗುವುದೆಂದು ಇದಕ್ಕಾಗಿ ಕೇಂದ್ರವು ಏಳೂವರೆಕೋಟಿ ರೂ. ಮೂಲಬಂಡವಾಳ ಹಾಕುವುದಾಗಿಯೂ ಆ ಕಾರಖಾನೆಯ ಜನರಲ್ ಮ್ಯಾನೇಜರ್‌ರವರು ಹೇಳಿದ್ದಾರೆ.

ಸುಡಾನಿನಲ್ಲಿ ನೂತನ ಪಾರ್ಲಿಮೆಂಟ್

ಸುಡಾನಿನಲ್ಲಿ ನೂತನ ಪಾರ್ಲಿಮೆಂಟ್ ಅಧಿವೇಶನವು ಈದಿನ ಪ್ರಾರಂಭವಾಗುತ್ತದೆ ಈ ಸಂಬಂಧದಲ್ಲಿ ಪ್ರಧಾನಿ ನೆಹರು ಮತ್ತು ಪ್ರಜಾಸಭೆಯ ಅಧ್ಯಕ್ಷ ಶ್ರೀ ಮಾವಲಂಕರ್‌ರವರು ಶುಭಾಶಯ ಸಂದೇಶಗಳನ್ನು ಕಳುಹಿಸಿದ್ದಾರೆ.

ರಾಜ್ಯಾಂಗಕ್ಕೆ ವಿರೋಧ

ರಾಮಮೂರ್ತಿ ಸಮಿತಿಯವರು ಆಂಧ್ರದಲ್ಲಿ ಪಾನನಿರೋಧ ಬಗ್ಗೆ ಸೂಚಿಸಿರುವ ಸಲಹೆಗಳಂತೆ ನೀತಿಯನ್ನು ಬದಲಾಯಿಸುವುದು ರಾಜ್ಯಾಂಗಕ್ಕೆ ವಿರೋಧವಾಗುತ್ತದೆ-ಎಂದು ಎ. ಐ. ಸಿ. ಸಿ. ಕಾರ್ಯದರ್ಶಿ ಶ್ರೀ ಅಗರವಾಲಾರವರು ಹೇಳಿದ್ದಾರೆ

ಕೋರ್ಟಿನ ವ್ಯವಹಾರ ಪ್ರಾಂತೀಯ ಭಾಷೆಯಲ್ಲಿ

ಕೆಳದರ್ಜೆ ಕೋರ್ಟುಗಳಲ್ಲಿ ಆಯಾ ಪ್ರಾಂತೀಯ ಭಾಷೆಗಳಲ್ಲಿ ವ್ಯವಹಾರವನ್ನು ನಡೆಸಬೇಕೆಂದು ಹೈದರಾಬಾದ್ ಸರ್ಕಾರವು ಮಾಡಿರುವ ಆಜ್ಞೆಯನ್ನು ಮುಂದಕ್ಕೆ ಹಾಕಲಾಗಿದೆ.

ವ್ಯವಸಾಯ ಕೂಲಿಗಾರರಲ್ಲಿ ಶೇಕಡ ೪೫ ಸಾಲಗಾರರು

ಭಾರತದಲ್ಲಿರುವ ವ್ಯವಸಾಯ ಕೂಲಿಗಾರರಲ್ಲಿ ಶೇಕಡ ೪೫ ರಷ್ಟು ಮಂದಿ ಸಾಲಗಾರರೆಂದು ಅಧಿಕೃತ ಸರ್ವೆಯಿಂದ ಗೊತ್ತಾಗಿದೆ

ಪ್ರಾಂತ್ಯಗಳಿಗೆ ಕೇಂದ್ರದ ಆರ್ಥಿಕ ನೆರವು

ಪ್ರಾಂತ್ಯಗಳಿಗೆ ಕೇಂದ್ರಸರ್ಕಾರವು ಈ ವರ್ಷದಲ್ಲಿ ೨೬.೩೨ ಕೋಟಿ ರೂಪಾಯಿಗಳನ್ನು ಕೊಟ್ಟಿದುದನ್ನು ಮುಂದಿನ ಸಾಲಿಗೆ ೩೨.೪೪ ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲಾಗಿದೆ.

ದೆಹಲಿಯಲ್ಲಿ ಗೋಧಿ ಪಡಿತರ ರದ್ದು

ಕಳೆದ ೧೦ ವರ್ಷಗಳಿಂದ ಜಾರಿಯಲ್ಲಿದ್ದ ಗೋಧಿ ಪಡಿತರವನ್ನು ದೆಹಲಿಯಲ್ಲಿ ಇಂದಿನಿಂದ ರದ್ದುಗೊಳಿಸಲಾಗಿದೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋನ್ ೫೭೪
ರಿಜಿಸ್ಟರ್
ನಂ. ಎಂ. ೩೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೫೨

೨-೩-೧೯೫೪ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಏಷ್ಯಾದ ಯಾಜಮಾನ್ಯತೆಗೆ ಅಮೆರಿಕದ ಪ್ರಯತ್ನ

ಪಾಕ್-ಅಮೆರಿಕಾ ಮಿಲಿಟರಿ ಒಪ್ಪಂದ

ಅಮೆರಿಕದ ನೀತಿಗೆ ಪ್ರಧಾನಿ ನೆಹರೂರವರ ತೀವ್ರ ಖಂಡನೆ

ಅಮೆರಿಕಾವು ಪಾಕೀಸ್ತಾನಕ್ಕೆ ಮಿಲಿಟರಿ ನೆರವನ್ನು ಕೊಡಲು ನಿರ್ಧರಿಸಿರುವುದರಿಂದ ಕಾಶ್ಮೀರದಲ್ಲಿ ತಟಸ್ಥರೇಖೆಯ ಇಕ್ಕೆಲಗಳಲ್ಲಿರುವ ವಿಶ್ವಸಂಸ್ಥೆಯ ಸೈನ್ಯದಲ್ಲಿರುವ ಅಮೆರಿಕನ್ನರನ್ನು ಇನ್ನು ಮುಂದೆ ತಟಸ್ಥ ವೀಕ್ಷಕರೆಂದು ಪರಿಗಣಿಸಲು ಸಾಧ್ಯವಾಗುವುದಿಲ್ಲ. ಅವರು ಹಾಗೆ ಮುಂದುವರಿಯುವುದು ಅನುಚಿತವೂ ಆಗುತ್ತದೆ ಎಂದು ಪ್ರಧಾನಿ ನೆಹರೂರವರು ಕಾಶ್ಮೀರ ಪರಿಸ್ಥಿತಿ,ಅಮೆರಿಕಾ ಪಾಕೀಸ್ತಾನ ಸೈನ್ಯಒಪ್ಪಂದ ವಿಷಯಗಳಲ್ಲಿ ನಿನ್ನೆಯದಿನ ಪಾರ್ಲಿಮೆಂಟನಲ್ಲಿ ಮಾಡಿದ ಸ್ಫೂರ್ತಿದಾಯಕ ಭಾಷಣದಲ್ಲಿ ತಿಳಿಸಿದ್ದಾರೆ.

ಕಾಶ್ಮೀರದಲ್ಲಿರುವ ವಿದೇಶೀ ಸೈನ್ಯ ವೀಕ್ಷಕರನ್ನು ಈಗ ನಾವು ಪ್ರತ್ಯೇಕ ದೃಷ್ಟಿಕೋಣದಿಂದ ಪರಿಶೀಲಿಸಬೇಕಾಗಿದೆ. ಅಲ್ಲಿರುವ ಸೈನ್ಯದ ಸಂಖ್ಯೆ, ಸ್ವಭಾವ ಅತಿ ಮುಖ್ಯ ಪ್ರಶ್ನೆಯಾಗಿದೆ. ಪಾಕೀಸ್ತಾನದ ಕಡೆ ಅಗಾಧವಾದ ವಿದೇಶೀ ಸೈನ್ಯ ಸೇರುತ್ತಲಿರುವುದರಿಂದ ಕಾಶ್ಮೀರ ಪರಿಸ್ಥಿತಿಯೇ ಬದಲಾಯಿಸಿದೆ. ಯುದ್ಧ ಬೆದರಿಕೆಯಿಲ್ಲದಿದ್ದರೆ ಈ ಅಗಾಧವಾದ ಸೇನೆಯಾಕೆ? ಪಾಕೀಸ್ತಾನವು ಅಮೆರಿಕಾ ಸೈನ್ಯ ನೆರವನ್ನು ದುರುಪಯೋಗಪಡಿಸಿಕೊಂಡು ಭಾರತದಮೇಲೆ ಆಕ್ರಮಣ ನಡೆಸಿದರೆ ತಾವು ತಡೆಗಟ್ಟುವುದಾಗಿ, ಉಗ್ರಕ್ರಮ ಕೈಗೊಳ್ಳುವುದಾಗಿ ಅಧ್ಯಕ್ಷ ಐಸೆನ್‌ಹೋವರ್ ತಿಳಿಸಿದ್ದಾರೆ.

ಉದ್ದೇಶ ಚೆನ್ನಾಗಿದೆ ಆದರೆ ಪರಿಣಾಮ ಮಾತ್ರ ದುರದೃಷ್ಟಕರವಾಗುತ್ತದೆ. 6½ ವರ್ಷಗಳ ಹಿಂದೆ ಪಾಕೀಸ್ತಾನವು ಭಾರತದ ಮೇಲೆ ಹಲವಾರು ಬಾರಿ ಆಕ್ರಮಣ ನಡೆಸಿತು. ಅಮೆರಿಕಾವು ಏನೂ ಕ್ರಮ ತೆಗೆದುಕೊಳ್ಳಲಿಲ್ಲ. ಖಂಡಿಸಲೂ ಸಹ ಇಲ್ಲ ಈಗ ಈ ನೆರವಿನ ಫಲವಾಗಿ ಮತ್ತೆ ಮತ್ತೆ ಆಕ್ರಮಣ ನಡೆಯಬಹುದು ಅದನ್ನು ನಿರಾಕರಿಸಬಹುದು. ತಪ್ಪಿಸಲ. ಪ್ರಯತ್ನ ಪಡಬಹುದು ಆದರೆ ಅದು ವಿಫಲವಾಗಬಹುದು.

ಭಾರತ ಮತ್ತು ಪಾಕೀಸ್ಥಾನ ನಡುವೆ ಅನೇಕ ಬಗೆಹರಿಯದ ಸಮಸ್ಯೆಗಳಿವೆ.ಅವುಗಳೆಲ್ಲಾ ಈ ಉಭಯ ದೇಶಗಳೇ ಬಗೆಹರಿಸಿಕೊಳ್ಳುವುದು ಅತ್ಯಗತ್ಯ. ಇದಕ್ಕೆ ಹೊರಗಿನವರ ಮಧ್ಯಸ್ಥಿಕೆ ಬೇಕಿಲ್ಲ.

ಪಾಕೀಸ್ಥಾನವು ತನ್ನ ಮೇಲಿನ ಆಕ್ರಮಣವನ್ನು ಎದುರಿಸಲು ಈರೀತಿ ನೆರವು ಕೇಳಿರುವುದಾಗಿಯೂ ತನ್ನಮೇಲೆ ಏಷ್ಯಾದ ಎರಡು ಪ್ರಬಲ ರಾಷ್ಟ್ರಗಳಿಂದ—ಭಾರತ ಮತ್ತು ಚೈನಾಗಳಿಂದ-ಆಕ್ರಮಣ ನಡೆಯುವುದಿಲ್ಲವೆಂಬ ಭರವಸೆ ಅತ್ಯಗತ್ಯವೆಂದ. ವಿಶ್ವಸಂಸ್ಥೆಯಲ್ಲಿರುವ ಪಾಕೀಸ್ಥಾನ ಪ್ರತಿನಿಧಿ ತಿಳಿಸಿದ್ದಾರೆ. ಪಾಕೀಸ್ತಾನಕ್ಕೆ ಎಲ್ಲಿಂದ ಆಕ್ರಮಣ ಭೀತಿ ? ಎಲ್ಲಿಂದ ಧಾಳಿ ನಡೆಯುತ್ತದೆ ? ಯುದ್ಧ ವಿರೋಧ ಘೋಷಣೆಯನ್ನು ಭಾರತ ಪಾಕೀಸ್ತಾನಗಳು ಮಾಡಬೇಕೆಂಬ ಸೂಚನೆಯನ್ನು ಪಾಕೀಸ್ತಾನ ನಿರಾಕರಿಸಿದೆ. ಚೈನಾವು ಪಾಕೀಸ್ತಾನದ ಮೇಲೆ ಧಾಳಿ ನಡೆಸಲು ಸಾಧ್ಯವೇ ಇಲ್ಲ. ಆದ್ದರಿಂದ ಈ ಹೆದರಿಕೆಗೆ ಕಾರಣವೇ ಇಲ್ಲ.

ಕಮ್ಯೂನಿಸ್ಟ ರಾಜ್ಯಗಳಲ್ಲಿ ಒಡಕುಂಟುಮಾಡಲು ಏಷ್ಯಾದ ಯಾಜಮಾನ್ಯವನ್ನು ಅಮೆರಿಕಾ ಹೊಂದಿರಬೇಕೆಂದು ಅಮೆರಿಕಾ ವಿದೇಶಾಂಗ ಶಾಖಾ ಉಪಕಾರ್ಯದರ್ಶಿಯವರು ತಮ್ಮ ಕಾಂಗ್ರೆಸ್ಸಿಗೆ ತಿಳಿಸಿದ್ದಾರೆ. ಏಷ್ಯಾ ರಾಷ್ಟ್ರಗಳು ಅದರಲ್ಲೂ ಭಾರತವು ಈ ನೀತಿಯನ್ನು ಖಂಡಿತವಾಗಿ ಒಪ್ಪುವುದಿಲ್ಲ. ಪರದೇಶಗಳ ಅಧೀನದಲ್ಲಿ ಭಾರತವು ಇರುವುದಿಲ್ಲ.

ಈ ಮಿಲಿಟರಿ ನೆರವಿನಿಂದ ಮುಸ್ಲಿಂ ದೇಶಗಳ ಭದ್ರತೆ ಮತ್ತು ವಿಶ್ವಶಾಂತಿಗೆ ಮಾರ್ಗವೆಂದು ಪಾಕ್ ಪ್ರಧಾನಿ ಹೇಳಿದ್ದಾರೆ ವಿದೇಶಿ ಶಸ್ತ್ರಾಸ್ತ್ರಗಳನ್ನ ಪಡೆದು ಯಾವ ರಾಷ್ಟ್ರವೇ ಆಗಲಿ ಪ್ರಬಲವಾಗುತ್ತದೆ ಎನ್ನುವುದರಲ್ಲಿ ಅರ್ಥವಿಲ್ಲ.

ಭಾರತವು ತನಗೂ ಶಸ್ತ್ರಾಸ್ತ್ರ ಬೇಕೆಂದು ಮನವಿ ಸಲ್ಲಿಸಿದರೆ ಸಹಾನುಭೂತಿಯಿಂದ ಪರಿಶೀಲಿಸಲಾಗುತ್ತದೆ-ಎಂದು ಅಧ್ಯಕ್ಷ ಐಸೆನ್‌ಹೋವರ್‌ರವರು ತಿಳಿಸಿದ್ದಾರೆ. ಈ ರೀತಿ ಹೇಳಿ ಐಸೆನ್‌ಹೋವರ್‌ರವರು ಭಾರತಕ್ಕೆ ಅಲ್ಲದೆ ತಮಗೂ ಅನ್ಯಾಯ ಮಾಡಿಕೊಂಡಿದ್ದಾರೆ. ಈರೀತಿ ನಾವೇ ನೆರವು ಕೇಳಿದರೆ ಕಪಟಿಗಳಾಗುತ್ತೇವೆ ಅಲ್ಲದೆ ಧ್ಯೇಯವಿಲ್ಲದ ಸ್ವಾರ್ಥಿಗಳೆನಿಸಿಕೊಳ್ಳುತ್ತೇವೆ-ಎಂದು ಪ್ರಧಾನಿ ನೆಹರೂರವರು ಹೇಳಿದ್ದಾರೆ.

ಇಂತಹ ವಿಷಮ ಪರಿಸ್ಥಿತಿಯಲ್ಲಿ ಭಾರತದ ಜನತೆಯು ತನ್ನ ಪಕ್ಷ ಮತ್ತು ಇತರ ಭೇದಭಾವಗಳನ್ನು ಬಿಟ್ಟು ಇವನ್ನು ಕೇವಲ ರಾಷ್ಟ್ರಸಮಸ್ಯೆಗಳೆಂದು ಪರಿಗಣಿಸಿ ಐಕ್ಯತೆಯಿಂದ ವರ್ತಿಸಬೇಕು ಎಂದು ಪ್ರಧಾನಿ ಮನವಿ ಮಾಡಿದ್ದಾರೆ.

ಪ್ರಧಾನಿ ನೆಹರೂರವರು ಈ ಭಾಷಣವನ್ನು ಮಾಡಿದ್ದಲ್ಲದೆ ತಮಗೆ ಅಮೆರಿಕ ಅಧ್ಯಕ್ಷ ಐಸೆನ್‌ಹೋವರ್‌ರವರು ಬರೆದಿದ್ದ ವೈಯುಕ್ತಿಕ ಪತ್ರಕ್ಕೆ ತಾವು ಬರೆದ ಜವಾಬನ್ನೂ ಸಹ ಪಾರ್ಲಿಮೆಂಟನಲ್ಲಿ ಓದಿದರು.

ಈ ಮಿಲಿಟರಿ ನೆರವಿನ ವಿಷಯದಲ್ಲಿ ಭಾರತದ ಜನತೆಯು ತನ್ನ ಅಭಿಪ್ರಾಯವನ್ನ ವ್ಯಕ್ತಪಡಿಸಿದೆ. ತನ್ನ ಶಾಂತಿ ಪಾಲನಾ ನೀತಿಯನ್ನೇ ಭಾರತವು ಇನ್ನು ಮುಂದೆಯೂ ಅನುಸರಿಸುತ್ತದೆ-ಎಂದು ಈ ಪತ್ರದಲ್ಲಿ ನೆಹರೂ ತಿಳಿಸಿದ್ದಾರೆ.

ಸುಂಕ ಏರಿಸಿದ ಪರಿಣಾಮ

೧೦೦೦ ಕಾರ್ಮಿಕರು ಕೆಲಸ ಕಳೆದುಕೊಂಡರು

ಕಚ್ಚಾ ರೇಷ್ಮೆಯಮೇಲೆ ಗಜ ಒಂದಕ್ಕೆ ಒಂದೂವರಾಣೆ ಸುಂಕ ವಿಧಿಸಲು ಕೇಂದ್ರ ಸರ್ಕಾರವು ಮಾಡಿರುವ ಆಜ್ಞೆಯ ಪರಿಣಾಮವಾಗಿ ಲೂಧಿಯಾನದಲ್ಲಿ ೧೦ ಕ್ಕಿಂತ ಹೆಚ್ಚಾಗಿ ಗಿರಣಿಗಳು ತಮ್ಮ ಕೆಲಸಗಳನ್ನು ನಿನ್ನೆಯದಿನ ನಿಲ್ಲಿಸಿದವು. ಆದರ ಪರಿಣಾಮವಾಗಿ ೧೦೦೦ ಕಾರ್ಮಿಕರು ಕೆಲಸಗಳನ್ನು ಕಳೆದುಕೊಂಡಿರುತ್ತಾರೆ.

ಖನಿಜಮರಳಿನ ಕೈಗಾರಿಕೆ ರಾಷ್ಟ್ರೀಕರಣ

ತಿರುವಾಂಕೂರ್-ಕೊಚ್ಚಿ ಪ್ರಾಂತ್ಯದಲ್ಲಿ ಖನಿಜಮರಳಿಗೆ ಸಂಬಂಧಪಟ್ಟ ಎಲ್ಲಾ ಕೈಗಾರಿಕೆಗಳನ್ನೂ ರಾಷ್ಟ್ರೀಕರಣ ಮಾಡಿಕೊಳ್ಳಲು ಕೇಂದ್ರ ಸರ್ಕಾರವು ನಿರ್ಧರಿಸಿದೆ. ಈ ಸಂಬಂಧದಲ್ಲಿ ಕೇಂದ್ರ ಮತ್ತು ಪ್ರಾಂತ್ಯ ಕಾರ್ಪೊರೇಷನ್‌ಗಳನ್ನು ರಚಿಸಲಾಗುತ್ತದೆ.

ರೈಲ್ವೆಯಲ್ಲಿ ಎರಡೇ ತರಗತಿಗಳಿರಬೇಕು

ಭಾರತಾದ್ಯಂತ ರೈಲ್ವೆಯಲ್ಲಿ ಕೇವಲ ಎರಡು ದರ್ಜೆಯ ತರಗತಿಗಳಿದ್ದು ಉಳಿದುದನ್ನೆಲ್ಲಾ ರದ್ದುಗೊಳಿಸಬೇಕೆಂಬುದೇ ತಮ್ಮ ಆಶೆಯೆಂದು ಕೇಂದ್ರ ರೈಲ್ವೆ ಸಚಿವರು ತಿಳಿಸಿದ್ದಾರೆ

ಅಕ್ಕಿ ವಿಷಯದಲ್ಲಿ ಹೊಸ ಆಹಾರ ನೀತಿ

ಅಕ್ಕಿಯ ವಿಷಯದಲ್ಲಿ ಹೊಸ ಆಹಾರ ನೀತಿಯನ್ನು ಇನ್ನು ಒಂದೆರಡು ದಿನಗಳಲ್ಲಿ ಪ್ರಕಟಿಸುವುದಾಗಿ ಕೇಂದ್ರ ಆಹಾರ ಸಚಿವ ಕಿದ್ವಾಯಿಯವರು ಲೋಕಸಭೆಯಲ್ಲಿ ತಿಳಿಸಿದ್ದಾರೆ.

ತಿರುವಾಂಕೂರ್--ಕೊಚ್ಚಿಯಲ್ಲಿ ಯಾವ ಪಕ್ಷಕ್ಕೂ ಬಹುಮತವಿಲ್ಲ

ತಿರುವಾಂಕೂರು-ಕೊಚ್ಚಿ ಶಾಸನಸಭೆಗೆ ನಡೆದ ಮಹಾಚುನಾವಣೆಗಳ ಫಲಿತಾಂಶದಿಂದ ಯಾವ ಪಕ್ಷವೂ ಬಹುಮತವನ್ನು ಪಡೆಯುವ ಸಂಭವವೇ ಇಲ್ಲದಂತಾಗಿದೆ. ಶಾಸನಸಭೆಯಲ್ಲಿರುವ ೧೧೭ ಸ್ಥಾನಗಳ ಪೈಕಿ ಇಲ್ಲಿಯವರೆಗೆ ೯೪ ಸ್ಥಾನಗಳ ಫಲಿತಾಂಶ ಹೊರಬಿದ್ದಿದೆ. ಇದರಲ್ಲಿ ಕಾಂಗ್ರೆಸ್ ೩೪, ಕಮ್ಯೂನಿಸ್ಟ ೨೦. ಪ್ರಜಾಸೋಷಲಿಸ್ಟ ೧೫, ಕ್ರಾಂತಿಕಾರಕ ಸೋಷಲಿಸ್ಟ ೮, ತಿರುವಾಂಕೂರ್ ತಮಿಳುನಾಡು ಕಾಂಗ್ರೆಸ್ ೧೦, ಸ್ವತಂತ್ರರು ೭ ಈರೀತಿ ಸ್ಥಾನವನ್ನು ಗಳಿಸಿದ್ದಾರೆ. ಇನ್ನು ಕೇವಲ ೧೩ ಸ್ಥಾನಗಳ ಫಲಿತಾಂಶ ಹೊರಬೀಳಬೇಕಾಗಿದೆ. ಅದನ್ನೆಲ್ಲಾ ಒಂದೇ ಪಕ್ಷ ಪೂರ್ಣವಾಗಿ ಗಳಿಸಿದರೂ ಯಾವ ಪಕ್ಷಕ್ಕೂ ಬಹುಮತ ಬರುವುದಿಲ್ಲ.

ರಾಜ್ಯ ಪರಿಷತ್ತಿನ ಚುನಾವಣೆ

ರಾಜ್ಯಪರಿಷತ್ತಿನಲ್ಲಿ ಖಾಲಿಬಿದ್ದಿರುವ ಎರಡು ಸ್ಥಾನಗಳಿಗೆ ಸಂಸ್ಥಾನದಿಂದ ನಡೆಯಲಿರುವ ಉಪಚುನಾವಣೆಗೆ ಶ್ರೀಗಳಾದ ಕೆ. ಸಿ. ರೆಡ್ಡಿ, ಹೆಚ್. ಸಿ. ದಾಸಪ್ಪನವರ ಅಧಿಕೃತ ಉಮೇದವಾರರಾಗಿಯೂ ಶ್ರೀ ಜಿ. ಚಲಂ ಮತ್ತು ಶ್ರೀಮತಿ ಯಶೋಧರಾ ದಾಸಪ್ಪನವರು ಅವರ ಪರವಾಗಿಯೇ ಅರ್ಜಿಯನ್ನು ಸಲ್ಲಿಸಿದ್ದಾರೆ ಎಲ್ಲ ಉಮೇದುವಾರರೂ ಕಂಗ್ರೆಸ್ ಪಕ್ಷದವರೇ ಆಗಿದ್ದಾರೆ.

ಬಂದೀಗೌಡರ ರಾಜೀನಾಮೆ

ಮೈಸೂರು ಸಕ್ಕರೆಕಂಪನಿಯ ಅಧ್ಯಕ್ಷರಾಗಿ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಅಡಿಷನಲ್ ಡೈರೆಕ್ಟರ್ ಶ್ರೀ ಕೆ ನಾರಾಯಣಸ್ವಾಮಿಯವರು ಚುನಾಯಿತರಾಗಿರುವುದರಿಂದ, ಶ್ರೀ ಎ. ಜಿ. ಬಂದೀಗೌಡರು ಕಂಪನಿಯ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಇತ್ತಿದ್ದಾರೆ.

ಕಾರ್ಯದರ್ಶಿಗಳಿಗೆ ಮೋಟಾರು ಸೈಕಲ್‌ಗಳು

ಮಧ್ಯಭಾರತದಲ್ಲಿ ಮಂತ್ರಿಗಳ ಪಾರ್ಲಿಮೆಂಟರಿ ಕಾರ್ಯದರ್ಶಿಗಳಿಗೆ ಸರ್ಕಾರಿ ವೆಚ್ಚದಲ್ಲಿ ಮೋಟಾರು ಸೈಕಲ್ಲುಗಳನ್ನು ಕೊಡಲು ಅಲ್ಲಿಯ ಸರ್ಕಾರವು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಶಾಸನಸಭೆಯಲ್ಲಿ ಈ ಸಂಬಂಧದಲ್ಲಿ ಒಂದು ಮಸೂದೆಯನ್ನು ತರಲಾಗುತ್ತದೆ.

ಮತದಾನಪಟ್ಟಿ ಪರಿಷ್ಕರಣ

ಬೆಂಗಳೂರು ೨

ಮಂಡ್ಯ ಮತ್ತು ಮೈಸೂರುಗಳಿಗೆ ಸಂಬಂಧಪಟ್ಟ ಪಾರ್ಲಿಮೆಂಟಿನ ಚುನಾವಣಾ ಕ್ಷೇತ್ರಗಳ ಮತದಾನ ಪಟ್ಟಿಯನ್ನು ಪುನರ್ರಚಿಸಲು ಸರ್ಕಾರವು ವ್ಯವಸ್ಥೆಮಾಡಿದೆ. ಈ ಸಂಬಂಧದಲ್ಲಿ ಮತದಾರರ ಬಗ್ಗೆ ವಿವರ ಪಡೆಯಲು ಮನೆಮನೆಗೂ ಭೇಟಿ ಕೊಡಲಾಗುತ್ತದೆ.

ಇದೇ ೧೯೫೪ನೇ ಮಾರ್ಚಿ ಒಂದನೆ ತಾರೀಖಿಗೆ ೨೧ ವರ್ಷವಯಸ್ಸುತುಂಬುವವರೆಲ್ಲರೂ ಮತನೀಡಲು ಅರ್ಹರಾಗುತ್ತಾರೆ. ಈ ಸಂಬಂಧದಲ್ಲಿ ಸಾರ್ವಜನಿಕರು ಸಹಕಾರ ನೀಡಬೇಕೆಂದು ಕೋರಲಾಗಿದೆ

ಮತದಾನ ಪಟ್ಟಿಗಳನ್ನು ಮೊದಲು ೧೯೫೪ ಜೂನ್ ೨೯ರಲ್ಲಿ,ಅಂತ್ಯಪಟ್ಟಿಯನ್ನು ೧೯೫೪ ಸೆಪ್ಟಂಬರ್ ೩೦ರಲ್ಲೂ ಪ್ರಕಟಿಸಲಾಗುತ್ತದೆ.

ಸೂಡಾನ್ ಪಾರ್ಲಿಮೆಂಟ್ ನಡೆಯಲಿಲ್ಲ

ಸೂಡಾನಿನಲ್ಲಿ ನಿನ್ನೆಯದಿನ ನಡೆಯಬೇಕಾಗಿದ್ದ ಪ್ರಥಮ ಪಾರ್ಲಿಮೆಂಟ್ ಅಧಿವೇಶನವು ಖಾರ್ಟೂಮಿನಲ್ಲಿ ನಡೆದ ಗಲಭೆಯ ಪರಿಣಾಮವಾಗಿ ಪ್ರಾರಂಭವಾಗದೆ ಇದೇ ೧೦ ನೇ ತಾ|| ಮುಂದುವರಿಯಿತು.

ಈ ಅಧಿವೇಶನಕ್ಕೆ ಈಜಿಪ್ಟ್ ರಾಷ್ಟ್ರಾಧ್ಯಕ್ಷ ಜನರಲ್ ನಗೀಬ್,ಭಾರತದ ಚುನಾವಣಾ ಪ್ರಧಾನಾಧಿಕಾರಿ ಶ್ರೀ ಸುಕುಮಾರಸೇನ್ ಮುಂತಾದವರು ವಿಶೇಷ ಆಹ್ವಾನಿತರಾಗಿ ಹೋಗಿದ್ದರು.

ಅಧಿವೇಶನವು ನಡೆಯುವ ಮುನ್ನ ಸೂಡಾನಿನ ರಾಜಧಾನಿ ಖಾರ್ಟೂಮಿನಲ್ಲಿ ಗಲಭೆ ನಡೆದು ಅದರ ಪರಿಣಾಮವಾಗಿ ೩೦ ಜನರು ಮಡಿದು ನೂರಾರು ಜನರಿಗೆ ಗಾಯಗಳಾದುವು. ಮಿಲಿಟೆರಿಯವರು ನಗರವನ್ನು ಆಕ್ರಮಿಸಿಕೊಂಡು ಗಲಭೆಗಳನ್ನು ತಡೆಯಲೆತ್ನಿಸಿದರು. ಆ ನಗರ ಮತ್ತು ಜಿಲ್ಲೆಯಲ್ಲಿ ಜರೂರು ಪರಿಸ್ಥಿತಿಯನ್ನು ಘೋಷಿಸಲಾಗಿದೆ.

ಗೌರ್ನರ್, ರಾಜಪ್ರಮುಖರ ಸಮ್ಮೇಳನ

ಭಾರತಪ್ರಾಂತ್ಯಗಳ ಗೌರ್ನರ್ ಮತ್ತು ರಾಜಪ್ರಮುಖರ ಸಮ್ಮೇಳನವು ನಿನ್ನೆಯದಿನ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದ್‌ರವರ ಅಧ್ಯಕ್ಷತೆಯಲ್ಲಿ ದೆಹಲಿಯಲ್ಲಿ ಪ್ರಾರಂಭವಾಯಿತು. ಎಲ್ಲಾ ಪ್ರಾಂತ್ಯಗಳ ಗೌರ್ನರ್, ರಾಜಪ್ರಮುಖರು, ಲೆಫ್ಟಿನೆಂಟ್ ಗೌರ್ನರ್, ಕಾಶ್ಮೀರ ಅಧಿಪತಿ ಸದರಿ-ಇ-ರಿಯಾಸತ್ ರವರುಗಳೂ, ಪ್ರಧಾನಿ ನೆಹರೂ, ಉಪರಾಷ್ಟ್ರಪತಿ ಡಾ|| ರಾಧಾಕೃಷ್ಣನ್ ಮತ್ತು ಗೃಹ, ವಿದ್ಯಾ, ಆಯೋಜನಾ ಮುಂತಾದ ಶಾಖಾಸಚಿವರುಗಳೂ ಇದರಲ್ಲಿ ಹಾಜರಿದ್ದರು. ರಾಷ್ಟ್ರಾಧ್ಯಕ್ಷರು ತಮ್ಮ ಪ್ರಾರಂಭಭಾಷಣ ಮಾಡಿದನಂತರ ದೇಶದ ಆರ್ಥಿಕ, ರಕ್ಷಣೆ, ಅಭಿವೃದ್ಧಿಕಾರ್ಯಗಳು, ವಿದ್ಯಾಸುಧಾರಣೆ ಮುಂತಾದ ವಿಷಯಗಳಲ್ಲಿ ಚರ್ಚೆನಡೆಯಿತೆಂದು ತಿಳಿಯಬರುತ್ತದೆ.

ಶಾಸನ ಸಭೆಯಲ್ಲಿ ಆಂಧ್ರ ಸರ್ಕಾರಕ್ಕೆ ಸೋಲು

ವಿಶಾಖಪಟ್ಟಣದಲ್ಲಿ ಪ್ರತ್ಯೇಕ ಆಂಧ್ರ ಶ್ರೇಷ್ಠ ನ್ಯಾಯಾಲಯವನ್ನು ಸ್ಥಾಪಿಸಬೇಕೆಂದು ಅಲ್ಲಿಯ ಸರ್ಕಾರವು ಮಂಡಿಸಿದ್ದ ನಿರ್ಣಯವು ಶಾಸನಸಭೆಯಲ್ಲಿ ನಿನ್ನೆಯ ದಿನ ಬಿದ್ದುಹೋಗಿ ಸರ್ಕಾರಕ್ಕೆ ಸೋಲುಂಟಾಯಿತು.

ಜುಲೈ ೫ ರಿಂದ ಆಂಧ್ರ ಶ್ರೇಷ್ಠನ್ಯಾಯಾಲಯವು ಹಂಗಾಮಿಯಾಗಿ ಗುಂಟೂರಿನಲ್ಲಿ ಇರಬೇಕೆಂದು ವಿರೋಧಪಕ್ಷವು ಮಂಡಿಸಿದ ನಿರ್ಣಯವು ೭೭-೬೬ ಓಟುಗಳಿಂದ ಅಂಗೀಕಾರವಾಯಿತು.

ವಿದ್ಯಾರ್ಥಿಗಳಿಗೆ ಸೈನ್ಯ ಶಿಕ್ಷಣ

ಮುಂದಿನ ವರ್ಷದಿಂದ ಎಲ್ಲಾ ಶಾಲಾ ಕಾಲೇಜುಗಳಲ್ಲಿ ಸೈನ್ಯ ಶಿಕ್ಷಣವನ್ನು ಜಾರಿಗೆ ತರಲು ಪಂಜಾಬ್ ಸರ್ಕಾರವು ನಿರ್ಧರಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—೮	೨೫—೨
ಎಳ್ಳು	—	—
ಹರಳು	೨೭—	೩೨—
ಹುಚ್ಚೆಳ್ಳು	೩೫—೨	೪೦—
ಹೊಂಗೆಬೀಜ	೩೬—೧೨	೨೬—
ಹುಣಸೆಬೀಜ	೧೨—೪	೧೨—೮
ಹುರುಳಿ	೨೫—	೨೮—೬
ಹೆಸರು	೩೫—೬	೪೨—೮
ಅವರೆ	—	—
ಅಲಸಂದೆ	೩೦—೨	೮೬—೧೪
ಉದ್ದು	—	—
ಕೊತ್ತಂಬರಿ	೨೮—೨	೨೯—೧೦
ತೊಗರಿ	೨೬—	೨೮—೬
ಕಡಲೆ	೪೫—೨	೪೮—೬
ಹುಣಸೆಹಣ್ಣು	೫—೧೩	೮—೧೦
ಮೆಣಸಿನಕಾಯಿ	೨೬—೪	೩೧—೪
ಸೀಗೆಕಾಯಿ	೪—೯	೫—೧
ಬೆಲ್ಲ	೪—೮	೫—
ತೆಂಗಿನಕಾಯಿ	೧೬೦—	೩೨೫—

ಪಾಕ್-ಅಮೆರಿಕಾ ಮಿಲಿಟರಿ ಒಪ್ಪಂದ ಖಂಡನೆ

ಕೇವಲ ಕೆಲವು ಶಸ್ತ್ರಾಸ್ತ್ರ ಅಥವ ಗೋಧಿದಾನಕ್ಕಾಗಿ ಪಾಕೀಸ್ಥಾನವು ತನ್ನ ದೇಶದ ಸ್ವಾತಂತ್ರ್ಯವನ್ನು ಕಳೆದುಕೊಂಡಿದೆ ಪಾಕ್-ಅಮೆರಿಕಾ ಮಿಲಿಟರಿ ಒಪ್ಪಂದದಿಂದ ಪಾಕೀಸ್ತಾನದ ಮಿತ್ರ ರಾಷ್ಟ್ರಗಳೆಲ್ಲಾ ಶತ್ರುಗಳಾಗುವುದರಲ್ಲಿ ಸಂದೇಹವಿಲ್ಲ ಈ ಹೊಸ ನೀತಿಯಿಂದ ಪಾಕೀಸ್ತಾನವು ಸದಾ ಯುದ್ಧಮಾಡುತ್ತಿರಬೇಕಾಗುತ್ತದೆ- ಎಂದು ಅಜಾದ್ ಪಾಕೀಸ್ತಾನ ಪಕ್ಷದ ನಾಯಕ ಇಫ್ತಿಕರುದ್ದೀನರವರು ಹೇಳಿದ್ದಾರೆ.

ಅವರು ಮುಂದುವರಿಯುತ್ತಾ ಈಗಿನ ಪಾಕೀಸ್ತಾನ ಮಂತ್ರಿಮಂಡಲವು ಜನತೆಯ ಪ್ರತಿಬಿಂಬವಲ್ಲ ಆದ್ದರಿಂದ ಅಮೆರಿಕಾದಲ್ಲಿ ಪಾಕೀಸ್ತಾನವನ್ನು ಸೈನ್ಯ ಬಂಧನದಲ್ಲಿರುವಂತೆ ಮಾಡಲು ಈ ಸರ್ಕಾರಕ್ಕೆ ಯಾವ ಹಕ್ಕೂ ಇಲ್ಲ ಎಂದು ಹೇಳಿದ್ದಾರೆ.

● ಕೊರಿಯಾವನ್ನು ಐಕ್ಯಗೊಳಿಸುವುದಕ್ಕಾಗಿ ತಾವು ಕೂಡಲೇ ಉತ್ತರಕೊರಿಯಾ ಮೇಲೆ ಆಕ್ರಮಣ ಕಾರ್ಯ ನಡೆಸುವುದಾಗಿ ದಕ್ಷಿಣ ಕೊರಿಯಾ ಅಧ್ಯಕ್ಷ ಸಿಂಗ್‌ಮನ್‌ರೀಯವರು ಹೇಳಿದ್ದಾರೆ.

.... ರಣಜಿತ್ ....

3-3-54 ರಿಂದ ಅಮೋಘ ಪ್ರಾರಂಭ ಫಿಲ್ಮಿಸ್ತಾನ್‌ರವರ:-

ಸಮ್ರಾಟ್ [ಹಿಂದಿ]

ಪಾತ್ರ:-ರೆಹನ, ಅಜಿತ್, ರಾಮಸಿಂಗ್, ಮುಮ್ತಾಜ್ ಅಲಿ.

ಮಹಾಶಿವರಾತ್ರಿ ಪ್ರಯುಕ್ತ ನಾಳೆರಾತ್ರಿ 12-30 ಕ್ಕೆ ವಿಶೇಷ ಪ್ರದರ್ಶನ

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಆಯುರ್ವೇದಕ್ಕೆ ಪ್ರೋತ್ಸಾಹ

ಆಂಧ್ರ ಪ್ರಾಂತ್ಯದಲ್ಲಿ ಆಯುರ್ವೇದ, ಯುನಾನಿ ಮತ್ತು ಹೋಮಿಯೋಪತಿ ವೈದ್ಯವನ್ನು ಹೆಚ್ಚುಪ್ರಚಾರಕ್ಕೆ ತರುವ ಉದ್ದೇಶದಿಂದ ಅಲ್ಲಿಯಸರ್ಕಾರವು ಒಂದು ಸಲಹಾ ಸಮಿತಿಯನ್ನು ರಚಿಸಿದೆ.

ಆಂಧ್ರ ಪ್ರಾಂತ್ಯ ರಾಜಧಾನಿ ಕರ್ನೂಲನ್ನು ಉತ್ತಮಗೊಳಿಸಲು ಒಂದು ಸಲಹಾ ಸಮಿತಿಯನ್ನೂ ರಚಿಸಲಾಗಿದೆ.

ಪ್ರಕಟಣೆ

ಮೈಸೂರು ನಗರಾಭಿವೃದ್ಧಿ ಸಮಿತಿ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—ಮೇಲ್ಕಂಡ ಆಫೀಸಿಗೆ ಸಂಬಂಧಪಟ್ಟ ಸ್ಟೋರ್ಸಿನಲ್ಲಿ ಹಳೇ ಸಾಮಾನುಗಳು ಅಂದರೆ ಕಬ್ಬಿಣದ ಸಾಮಾನುಗಳು ಮರದ ಸಾಮಾನುಗಳು ಇತ್ಯಾದಿ ಮಾರ್ಚಿ ಮಾಹೆ 6ನೇ ತಾ|| ಶನಿವಾರ ಬೆಳಿಗ್ಗೆ 9 ಗಂಟೆಗೆ ಸ್ಟೋರ್ಸಿನ ಆವರಣದಲ್ಲಿ ಬಹಿರಂಗವಾಗಿ ಈ ಕೆಳಗೆ ನಮೂದಿಸಿರುವ ಕಾಲದಲ್ಲಿ ಈ ಕೆಳಗೆ ರುಜು ಮಾಡಿರುವವರಿಂದ ಅಥವಾ ಅವರ ಅಧಿಕೃತ ಪ್ರತಿನಿಧಿಯ ಸಮ್ಮುಖದಲ್ಲಿ ಹರಾಜು ಮಾಡಲ್ಪಡುತ್ತವೆ.

ಹರಾಜಿನಲ್ಲಿ ಭಾಗವಹಿಸಲು ಇಷ್ಟವುಳ್ಳವರು 10 ರೂ. ಗಳನ್ನು ಮೊದಲೇ ಠೇವಣಿಯಾಗಿ ಪಾವತಿ ಮಾಡಿ ಹರಾಜಿನಲ್ಲಿ ಭಾಗವಹಿಸಬಹುದು. ಈ ಮೊಬಲಗು ಹರಾಜು ಮುಗಿದನಂತರ ವಾಪಸು ಪಡೆಯಬಹುದು. ಆಖೈರ್ ಬಿಡ್ ದಾರನು ಠೇವಣಿ ಜಾತಾ ಬಾಕಿ ಬಿಡ್ ಮೊಬಲಗನ್ನು ಕೂಡಲೇ ಪಾವತಿ ಮಾಡಿ ಸಾಮಾನುಗಳನ್ನು ಸ್ಥಳದಿಂದ ಹೊರಕ್ಕೆ ಸಾಗಿಸಬೇಕು. ಪೂರ್ತಾ ಹಣವನ್ನು ಕೂಡಲೇ ಪಾವತಿ ಮಾಡದಿದ್ದಲ್ಲಿ ಠೇವಣಿ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಮತ್ತು ಸಾಮಾನುಗಳನ್ನು ದುಸರಾ ಹರಾಜು ಮಾಡಲಾಗುತ್ತದೆ. ಇದಕ್ಕೆ ತಗಲುವ ಖರ್ಚನ್ನು ಆತನಿಂದ ವಸೂಲು ಮಾಡಲಾಗುತ್ತೆ. ಒಂದುವೇಳೆ ದುಸರಾ ಹರಾಜಿನಲ್ಲಿ ಬಂದ ಬಿಡ್ ಮೊಬಲಗು ಮೊದಲು ಹರಾಜಿನ ಬಿಡ್ ಮೊಬಲಗಿಗಿಂತ ಕಮ್ಮಿಯಾದಲ್ಲಿ ಕಮ್ಮಿಯಾದ ಹಣವನ್ನು ಆತನಿಂದ ಕಂದಾಯದ ಬಾಕಿಯಂತೆ ವಸೂಲು ಮಾಡಲಾಗುತ್ತೆ. ಆಖೈರ್ ಬಿಡ್ ಮೊಬಲಗಿನ ಮೇಲೆ ರೂ.ಗೆ 3 ಪೈನಂತೆ ಮಾರಾಟ ತೆರಿಗೆ ವಸೂಲುಮಾಡಲಾಗುತ್ತೆ ಆಖೈರು ಬಿಡ್ ಒಪ್ಪುವ ಅಥವಾ ತಿರಸ್ಕರಿಸುವ ಹಕ್ಕು ಈ ಕೆಳಗೆ ರುಜು ಮಾಡಿರುವವರ ನಿರ್ಧಾರಕ್ಕೆ ಒಳಪಟ್ಟಿದೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಆಫೀಸಿನಲ್ಲಿ ಆಫೀಸ್ ದಿನಗಳಲ್ಲಿ 3-5 ಗಂಟೆವರೆಗೆ ತಿಳಿಯಬಹುದು. ಹರಾಜು ಮಾಡಲ್ಪಡುವ ಸಾಮಾನುಗಳಪಟ್ಟಿಯನ್ನು ಆಫೀಸಿನ ನೋಟೀಸ್ ಬೋರ್ಡಿನಲ್ಲಿಯೂ ಸ್ಟೋರ್ಸಿನಲ್ಲಿಯೂ ಪ್ರಚುರಪಡಿಸಿರುತ್ತೆ. ಹರಾಜಾಗುವ ಸಾಮಾನುಗಳನ್ನು ಸ್ಟೋರ್ಸಿನಲ್ಲಿ ಬೆಳಿಗ್ಗೆ 8-12 ಗಂಟೆಗಳೊಳಗೆ ಇಷ್ಟವುಳ್ಳವರು ನೋಡಬಹುದು.

K. V. RAJARATNAM.
Trust Board Engineer.

• ಚಾಮುಂಡೇಶ್ವರಿ ಟಾಕೀಸ್ • ಮೈಸೂರು

3—3—54 ರಿಂದ ಅಮೋಘ ಪ್ರಾರಂಭ ದಿನವಹಿ 3 ಪ್ರದರ್ಶನಗಳು

ಕನ್ನಡ 'ರಾಜಾವಿಕ್ರಮ' ಚಿತ್ರವನ್ನ ತಯಾರಿಸಿ ಚಲನಚಿತ್ರ ಪ್ರದರ್ಶನದಲ್ಲಿ ಹೊಸ ಕ್ರಾಂತಿಯನ್ನುಂಟುಮಾಡಿದ ಪ್ರಖ್ಯಾತ ದಿಗ್ದರ್ಶಕ ಕೆಂಪರಾಜ್‌ರವರ ಮತ್ತೊಂದು ಕಲಾಕೃತಿ.

★ ಜಲದುರ್ಗ ★

ತಾರಾಗಣ:—ಕೆಂಪರಾಜ್, ಕೃಷ್ಣಕುಮಾರಿ, ಬಿ. ಆರ್. ಪಂತುಲು ಗಣಪತಿಭಟ್ ಮುಂತಾದವರು.

ಶಿವರಾತ್ರಿ ದಿನ ರಾತ್ರಿ 1 ಗಂಟೆಗೆ 4ನೇ ಪ್ರದರ್ಶನವುಂಟು

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೩೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೫೩

೩-೩-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪಂಚವಾರ್ಷಿಕ ಯೋಜನೆ

ಬೆಂಗಳೂರು ೩

ಸಂಸ್ಥಾನದಲ್ಲಿ ಪಂಚವಾರ್ಷಿಕ ಯೋಜನೆಯು ೧೯೫೧-೫೨ ರಲ್ಲಿ ಜಾರಿಗೆಬಂದು, ಇಲ್ಲಿಯವರೆಗೆ ೧೪೫ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲಾಗಿದೆ. ೧೯೫೩ ನೇ ಆಗಸ್ಟ್ ಅಂತ್ಯದವೇಳೆಗೆ ಒಟ್ಟು ೧,೩೩೮.೧೭ ಲಕ್ಷ ರೂ. ಗಳನ್ನು ಖರ್ಚು ಮಾಡಲಾಗಿದೆ. ಕೇಂದ್ರ ಸರ್ಕಾರದಿಂದ ೮ ಕೋಟಿ ರೂ. ಸಹಾಯ ಬರಬೇಕಾಗಿದ್ದು, ಇಲ್ಲಿಯವರೆಗೆ ೭೦೩.೯೬ ಲಕ್ಷ ರೂ. ಗಳು ಬಂದಿವೆ. ಭದ್ರಾ ಮತ್ತು ತುಂಗ ಜಲಾಶಯ ಯೋಜನೆಗಳು ತ್ವರಿತವಾಗಿ ನಡೆಯುವಂತೆ ಕೇಂದ್ರವು ೩|| ಕೋಟಿ ರೂ ವಿಶೇಷರೀತಿಯ ಸಾಲ ಕೊಟ್ಟಿದೆ. ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ

ಹಾಸನ-ಮಂಗಳೂರು ರೈಲ್ವೆ

ಮಂಗಳೂರು-ಹಾಸನ ರೈಲ್ವೆ ನಿರ್ಮಾಣಕ್ಕಾಗಿ ಈಗ ಸರ್ವೆ ಕಾರ್ಯ ಪ್ರಾರಂಭಿಸಲಾಗಿದೆ. ಈ ರೈಲ್ವೆ ಮಾರ್ಗದಲ್ಲಿ ಸಕಲೇಶಪುರವೂ ಒಂದು ರೈಲ್ವೆ ನಿಲ್ದಾಣವಾಗುತ್ತದೆ. ಈ ಕೆಲಸ ಪೂರೈಸಿದಮೇಲೆ ಸಕಲೇಶಪುರದಿಂದ ಕಡೂರಿಗೆ ರೈಲ್ವೆ ಮಾರ್ಗವನ್ನು ರಚಿಸುವ ವಿಚಾರ ಪರಿಶೀಲಿಸಲಾಗುವುದು-ಎಂದು ಕೇಂದ್ರ ರೈಲ್ವೆ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಗೌರ್ನರ್-ರಾಜಪ್ರಮುಖರ ಸಮ್ಮೇಳನ ಮುಕ್ತಾಯ

ಕಳೆದ ಎರಡು ದಿನಗಳಿಂದ ದೆಹಲಿಯಲ್ಲಿ ನಡೆಯುತ್ತಲಿದ್ದ ಗೌರ್ನರ್,ರಾಜಪ್ರಮುಖರ ಸಮ್ಮೇಳನವು ನಿನ್ನೆಯದಿನ ಮುಕ್ತಾಯವಾಯಿತು. ಪ್ರಧಾನಿ ನೆಹರೂರವರು ಮುಕ್ತಾಯ ಭಾಷಣಮಾಡುತ್ತ ದೇಶದ ಒಳಾಡಳಿತ ಸ್ಥಿತಿಗಳನ್ನು, ಶ್ರೀ ಕಿದ್ವಾಯಿಯವರು ದೇಶದ ಆಹಾರ ಪರಿಸ್ಥಿತಿಯ ವಿಷಯವಾಗಿ ವಿವರವಿತ್ತರು.

ಬೆಂಗಳೂರಿನಲ್ಲಿ ರೇಡಿಯೋ ಕೇಂದ್ರ

ಬೆಂಗಳೂರು ಮತ್ತು ಲಕ್ನೋಗಳಲ್ಲಿ ೫೦ ಕಿಲೋವಾಟ್ಸ್ ಎರಡು ಟ್ರಾನ್ಸ್‌ಮೀಟರ್ ಗಳು, ಮದ್ರಾಸ್, ಇಂದೂರ್ ಮತ್ತು ಹೈದರಾಬಾದ್‌ಗಳಲ್ಲಿ ೧೦ ಕಿಲೋವಾಟ್ಸ್ ಮೂರು ಟ್ರಾನ್ಸ್‌ಮೀಟರುಗಳು, ಬೊಂಬಾಯಿ, ಮದ್ರಾಸ್ ಮತ್ತು ಕಲ್ಕತ್ತಾಗಳಲ್ಲಿ ೧೦೦ ಕಿಲೋವಾಟ್ಸಿನ ೩ ಟ್ರಾನ್ಸ್‌ಮೀಟರ್ ಗಳನ್ನು ೫೪-೫೫ ರಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರವು ೨ಕೋಟಿ ರೂ. ಒದಗಿಸಿದೆ.

ವಿದ್ಯುಚ್ಛಕ್ತಿ ತಗಲಿ ದುರಂತ ಮರಣ

ಮೈಸೂರು ೩

ಕೃಷ್ಣರಾಜಸಾಗರದಲ್ಲಿ ವಿದ್ಯುಚ್ಛಕ್ತಿ ಕಂಬದ ಮೇಲೆ ಹತ್ತಿ ಕೆಲಸಮಾಡುತ್ತಿದ್ದ ೬೦ ವರ್ಷದ ಮಹಮದ್ ಖಾನ್ ಎಂಬುವನಿಗೆ ಮೊನ್ನೆ ದಿನ ವಿದ್ಯುತ್ ತಗಲಿ, ಆತನು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಮೃತಪಟ್ಟನೆಂದು ವರದಿಯಾಗಿದೆ.

ಗೋಹತ್ಯಕ್ಕಾಗಿ ಜುಲ್ಮಾನೆ

ಮೈಸೂರು ೩

ಮಂಡಿಮೊಹಲ್ಲಾ ಕಸಾಬ್ ಗೇರಿಯ ಮಹಮದ್ ಅಲಂ ಮತ್ತು ಅಬ್ದುಲ್ ಗಫಾರ್ ಎಂಬುವರು ಗೋಹತ್ಯ ಮಾಡಿದರೆಂಬ ಆಪಾದನೆಮೇಲೆ ನಗರದ ನ್ಯಾಯಾಧೀಶರು ತಲಾ ೫೦ ರೂ ದಂಡ ವಿಧಿಸಿದ್ದಾರೆ.

ಹರಿಕಥೆ

ಮೈಸೂರು ೩

ನೂರಡಿ ರಸ್ತೆಯಲ್ಲಿರುವ ಗೃಹನಿರ್ಮಾಣ ಸಹಕಾರ ಸಂಘದ ಬಳಿ ನಾಗಮಂಗಲದ ಶ್ರೀ ಲಕ್ಷ್ಮೀನಾರಾಯಣ ಭಾಗವತರಿಂದ ಈ ದಿನ ಸಂಜೆ ೫ರಿಂದ 'ಅಂಗುಲ್ಯಾಭರಣ,' ರಾತ್ರಿ ೮ರಿಂದ 'ಮಾರ್ಕಂಡೇಯ ಚರಿತ್ರೆ' ಎಂಬ ಹರಿಕಥೆ ನಡೆಯುವುದು.

ಆಸ್ತಿಯಲ್ಲವನ್ನೂ ದಾನ ಮಾಡಿದರು

ಕಲ್ಕತ್ತಾದ ಸುಪ್ರಸಿದ್ಧ ದಾನಿಗಳಾದ ಶ್ರೀ ಶಶಿಭೂಷಣ ದೇವ್‌ರವರು ತಮ್ಮ ೮೬ ನೇ ಜನ್ಮದಿನದ ಸಮಯದಲ್ಲಿ ತಮ್ಮ ಉಳಿದ ಆಸ್ತಿಯಲ್ಲವನ್ನೂ ೨,೭೦,೦೦೦ ರೂಪಾಯಿಗಳನ್ನು ಧರ್ಮಕಾರ್ಯಕ್ಕಾಗಿ ಕೊಟ್ಟಿದ್ದಾರೆ. ಇಲ್ಲಿಯವರೆಗೆ ಅವರು ೧೦,೪೩,೬೦೦ ರೂ. ಗಳನ್ನು ದಾನಮಾಡಿದ್ದಾರೆ.

ಕಾಂಗ್ರೆಸ್ ಸದಸ್ಯತ್ವ ಸಂಗ್ರಹಣಾ ಕಾಲ

ಕಾಂಗ್ರೆಸ್ ಸಂಸ್ಥೆಗೆ ಸದಸ್ಯರನ್ನು ಸಂಗ್ರಹಿಸುವ ಕಾಲವನ್ನು ಹೆಚ್ಚಿಸಬೇಕೆಂದು ಹಲವಾರು ಪ್ರದೇಶ ಕಾಂಗ್ರೆಸ್ ಸಮಿತಿಗಳು ಕೋರಿರುವುದನ್ನು ಮನ್ನಿಸಿ ಮಾರ್ಚಿ ೧೫ ರ ವರೆಗೂ ಸದಸ್ಯತ್ವ ಸಂಗ್ರಹಣ ಕಾಲವನ್ನು ಮುಂದುವರಿಸಿರುವುದಾಗಿ ಎ. ಐ. ಸಿ. ಸಿ. ಕಛೇರಿ ಪ್ರಕಟಿಸಿದೆ.

ಸೂಚನೆ

ಮಹಾ ಶಿವರಾತ್ರಿ ಹಬ್ಬದ ಪ್ರಯುಕ್ತ ನಾಳೆದಿನ 'ಸಮಾಚಾರ' ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ.

ನೆಹರೂರವರಿಗೆ ಕಮ್ಯೂನಿಸ್ಟರ ಬೆಂಬಲ

ಅಮೆರಿಕಾ ಮತ್ತು ಪಾಕೀಸ್ತಾನ ಮಿಲಿಟರಿ ಒಪ್ಪಂದ ವಿಷಯದಲ್ಲಿ ಪ್ರಧಾನಿ ನೆಹರೂರವರು ಮೊನ್ನೆಯದಿನ ಮಾತನಾಡಿ ಭಾರತದ ನಿಲುವನ್ನು ಸ್ಪಷ್ಟವಾಗಿ ತಿಳಿಸಿರುವುದನ್ನು ಭಾರತ ಕಮ್ಯೂನಿಸ್ಟ್ ಪಕ್ಷವು ಸ್ವಾಗತಿಸಿ ಈ ವಿಷಯದಲ್ಲಿ ಕಮ್ಯೂನಿಸ್ಟ್ ಪಕ್ಷವು ಪ್ರಧಾನಿ ನೆಹರೂರವರಿಗೆ ಪೂರ್ಣ ಬೆಂಬಲ ನೀಡುವುದಾಗಿ ತಿಳಿಸಿದೆ.

ಕಾಶ್ಮೀರ ವಿಷಯದಲ್ಲಿ ಪ್ರಧಾನಿ ನೆಹರೂರವರು ಹೇಳಿರುವುದನ್ನು ಕಾಶ್ಮೀರ ರಾಜ್ಯಾಂಗ ಸಭಾಧ್ಯಕ್ಷ ಮಹಮದ್ ಸಾದಿಕ್‌ರವರು ಸ್ವಾಗತಿಸುತ್ತಾ ಪ್ರಧಾನಿ ನೆಹರೂರವರು ಹೇಳಿರುವುದು ಕಾಶ್ಮೀರಿಗಳ ಅಭಿಪ್ರಾಯವನ್ನು ಪೂರ್ಣವಾಗಿ ಪ್ರತಿಬಿಂಬಿಸುತ್ತದೆ. ಕಾಶ್ಮೀರಿಗಳೆಲ್ಲರೂ ಭಾರತದ ನೀತಿಗೆ ಪೂರ್ಣ ಬೆಂಬಲಿಗರು ಎಂದು ಹೇಳಿದ್ದಾರೆ.

ಪೆಪ್ಸು ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಬಹುಮತ

ಪೆಪ್ಸುವಿನಲ್ಲಿ ನಡೆದ ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತವನ್ನು ಗಳಿಸಿದೆ. ಅಲ್ಲಿಯ ಶಾಸನಸಭೆಯ ೬೦ ಸ್ಥಾನಗಳ ಪೈಕಿ ೫೩ ಸ್ಥಾನಗಳ ಫಲಿತಾಂಶ ಇಲ್ಲಿಯವರೆಗೆ ಪ್ರಕಟವಾಗಿದೆ. ಅದರಲ್ಲಿ ಕಾಂಗ್ರೆಸ್ ೪೫ ಸ್ಥಾನ ಗಳಿಸಿದೆ. ತಾರಾಸಿಂಗ್ ಅಕಾಲಿಪಕ್ಷ ೭ ರಾಮ್ ಅಕಾಲಿ ಪಕ್ಷ ೧, ಕಮ್ಯೂನಿಸ್ಟ್ ೩, ಸ್ವತಂತ್ರರು ೭ ಸ್ಥಾನಗಳನ್ನು ಪಡೆದಿದ್ದಾರೆ. ಇಲ್ಲಿ ಈ ಬಾರಿ ಸ್ಥಿರವಾದ ಕಾಂಗ್ರೆಸ್ ಸರ್ಕಾರ ರಚಿಸಲು ಯಾವ ರೀತಿಯ ಅಡಚಣೆಯೂ ಇಲ್ಲವಾಗಿದೆ. ಮಾಜಿ ಮುಖ್ಯಮಂತ್ರಿ ಶ್ರೀ ರಾರೇವಾಲಾರವರು ಸ್ವತಂತ್ರ ಸದಸ್ಯರಾಗಿ ಜಯಗಳಿಸಿದ್ದಾರೆ.

ಹಯಾತ್‌ರಿಗೆ ಕೇಂದ್ರದ ಹುದ್ದೆ

ಮೈಸೂರಿನ ಮಾಜಿ ವಿದ್ಯುಚ್ಛಕ್ತಿ ಇಲಾಖಾ ಚೀಫ್ ಇಂಜನಿಯರಾಗಿದ್ದ ಶ್ರೀ ಮಹಮದ್ ಹಯಾತ್‌ರನ್ನು ಕೇಂದ್ರದ ವಿದ್ಯುಚ್ಛಕ್ತಿ ಬೋರ್ಡಿನ ಸಲಹೆಗಾರರಾಗಿ ಮೂರುವರ್ಷಕಾಲ ನೇಮಿಸಲಾಗಿದೆ.

ಪದ್ಮವಿಭೂಷಣ ಪ್ರಶಸ್ತಿ

ನಿನ್ನೆ ದೆಹಲಿಯಲ್ಲಿ ನಡೆದ ವಿಶೇಷ ಸಮಾರಂಭವೊಂದರಲ್ಲಿ ರಾಷ್ಟ್ರಾಧ್ಯಕ್ಷರು ಸಿಕ್ಕಿಂನ ಮಹಾರಾಜ ಕುಮಾರರಿಗೆ ಪದ್ಮವಿಭೂಷಣ ಎಂಬ ಪ್ರಶಸ್ತಿಯನ್ನು ದಯಪಾಲಿಸಿದರು.

ಮೈಸೂರಿನ ನ್ಯಾಯಾಂಗದ ಬಗ್ಗೆ ಪ್ರಶಂಸೆ

ಬೆಂಗಳೂರು ೩

ಭಾರತದ ಶ್ರೇಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಶ್ರೀ ಮೆಹರ್ ಚಂದ್‌ರವರು ಮೈಸೂರಿನ ನ್ಯಾಯಾಂಗದ ಬಗ್ಗೆ ಪ್ರಶಂಸೆಮಾಡಿ, ಈಗಿನ ರಿಪಬ್ಲಿಕ್ ಭಾರತದಲ್ಲಿ ಕಾರ್ಯಾಂಗ ಮತ್ತು ನ್ಯಾಯಾಂಗಗಳು ಪರಸ್ಪರ ಸಹಕಾರದೊಡನೆ ಕೆಲಸ ಮಾಡಬೇಕೆಂದು ತಿಳಿಸಿದ್ದಾರೆ. ಅವರು ಮೊನ್ನೆ ಇಲ್ಲಿಗೆ ಆಗಮಿಸಿದರು.

ಭಾರತ ಸಿಲೋನ್ ಒಪ್ಪಂದಕ್ಕೆ ವಿರೋಧ

ಸಿಂಹಳ ಮತ್ತು ಭಾರತ ಸರ್ಕಾರಗಳ ನಡುವೆ ಇತ್ತೀಚೆಗೆ ಆಗಿರುವ ಒಪ್ಪಂದವನ್ನು ಸಿಂಹಳದ ಬೌದ್ಧಸನ್ಯಾಸಿಗಳು ವಿರೋಧಿಸಿದ್ದಾರೆ. ಈ ಒಪ್ಪಂದದಿಂದ ಸಿಂಹಳದ ಜನರಿಗೆ ಅನ್ಯಾಯವಾಗುವುದೆಂದೂ, ಆದ್ದರಿಂದ ಪ್ರತಿ ಹಳ್ಳಿ ಮತ್ತು ನಗರದಲ್ಲೂ ವಿರೋಧ ಸಂಸ್ಥೆಗಳನ್ನು ರಚಿಸಿ,ಸರ್ಕಾರವು ಅದನ್ನು ರದ್ದುಮಾಡುವಂತೆ ಒತ್ತಾಯಪಡಿಸಬೇಕೆಂದೂ ನಿರ್ಧರಿಸಿದ್ದಾರೆ.

ಬೊಂಬಾಯಿನಲ್ಲಿ ೧೦೦೦೦ ಉಪಾಧ್ಯಾಯರ ನೇಮಕ

ಬೊಂಬಾಯಿ ಪ್ರಾಂತ್ಯದಲ್ಲಿ ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸವನ್ನು ಕಲ್ಪಿಸುವ ಉದ್ದೇಶದಿಂದ ೧೦೦೦೦ ಉಪಾಧ್ಯಾಯರುಗಳನ್ನು ಸದ್ಯದಲ್ಲಿಯೇ ನೇಮಿಸಿಕೊಳ್ಳಲಾಗುತ್ತದೆಯೆಂದು ತಿಳಿಯಬರುತ್ತದೆ

ಕಡ್ಡಾಯ ಆರೋಗ್ಯ ಯೋಜನೆ

ದೆಹಲಿಯಲ್ಲಿ ಮುಂದಿನ ತಿಂಗಳು ೧ನೇ ತಾರೀಖಿನಿಂದ ಸರ್ಕಾರಿ ಉದ್ಯೋಗಸ್ಥರಿಗೆ ಕಡ್ಡಾಯವಾದ ಆರೋಗ್ಯ ಯೋಜನೆಯನ್ನು ಜಾರಿಗೆ ತರಲಾಗುತ್ತದೆ. ಇಲ್ಲಿ ಎರಡು ವರ್ಷಕಾಲ ಇದನ್ನು ಪ್ರಯೋಗಾರ್ಥವಾಗಿ ನಡೆಸಿ ಅನಂತರ ಇತರ ಭಾಗಗಳಿಗೆ ವಿಸ್ತರಿಸಲಾಗುತ್ತದೆ.

ನಿರಾಶ್ರಿತರಿಗಾಗಿ ವೆಚ್ಚ

ಮುಂದಿನ ಹಣಕಾಸಿನ ಸಾಲಿನಲ್ಲಿ ನಿರಾಶ್ರಿತರ ಪುನರ್ವಸತಿಗಾಗಿ ಭಾರತ ಸರಕಾರವು ೬೪.೪೩ ಕೋಟಿ ರೂಪಾಯಿಗಳನ್ನು ನಿಗದಿಮಾಡಿದೆ. ಈ ಕಾರ್ಯಕ್ಕಾಗಿ ಇಲ್ಲಿಯವರೆಗೆ ೨೩೬ ಕೋಟಿ ರೂಪಾಯಿಗಳ ವೆಚ್ಚವಾಗಿದೆ.

ಭಾರತ-ಸ್ವಿಟ್ಸರ್‌ಲೆಂಡ್ ರೇಡಿಯೋ ಟೆಲಿಫೋನ್

ಭಾರತ ಮತ್ತು ಸ್ವಿಟ್ಸರ್‌ಲೆಂಡ್ ನಡುವೆ ರೇಡಿಯೋ ಟೆಲಿಫೋನ್ ವ್ಯವಸ್ಥೆಯನ್ನು ಇದೇ ೧ ನೇ ತಾರೀಖು ಸಂಪರ್ಕಶಾಖಾ ಸಚಿವ ಶ್ರೀ ಜಗಜೀವನರಾಂರವರು ಪ್ರಾರಂಭಿಸಿದರು.

ಸರ್ಕಾರಿ ನೌಕರರಿಗೆ ಶಿಕ್ಷಣ ವ್ಯವಸ್ಥೆ

ಬೆಂಗಳೂರು ೩

ಸರ್ಕಾರಿ ಕೆಲಸದಲ್ಲಿ ದಕ್ಷತೆ ಹೆಚ್ಚಿಸಲು ನೌಕರರಿಗೆ ಶಿಕ್ಷಣ ಕೊಡುವ ಆಲೋಚನೆಯನ್ನು ಸರ್ಕಾರ ಪರಿಶೀಲಿಸುತ್ತಿದೆ-ಎಂದು ಮೊನ್ನೆ ಪ್ರಾರಂಭವಾದ ಮೈಸೂರು ಶಾಸನ ಸಭೆಯಲ್ಲಿ ರೆವಿನ್ಯೂ ಸಚಿವರು ತಿಳಿಸಿದ್ದಾರೆ.

ಸಂಸ್ಥಾನದಲ್ಲಿ ನಿರುದ್ಯೋಗಿ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಸರ್ವಪ್ರಯತ್ನ ಮಾಡುತ್ತಿದೆಯೆಂದೂ, ಈಗ ಅದರ ಬಗ್ಗೆ ಸರ್ವೆ ಮಾಡಲು ಸರ್ಕಾರವು ಆಜ್ಞೆ ಮಾಡಿರುವುದಾಗಿಯೂ ತಿಳಿಸಲಾಯಿತು.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಮೈಸೂರಿನವರಲ್ಲದವರನ್ನು ಬಿಟ್ಟು ಮೈಸೂರಿನ ವಿದ್ಯಾರ್ಥಿನಿಯರಿಗೆ ಮಾತ್ರ ಶುಲ್ಕ ರಿಯಾಯಿತಿ ತೋರಿಸುತ್ತಿದ್ದ ನೀತಿಯು ರಾಜ್ಯಾಂಗಕ್ಕೆ ವಿರೋಧವೆಂದು ಕಂಡುಬಂದಿರುವುದರಿಂದ ಅದನ್ನು ರದ್ದುಗೊಳಿಸಲಾಯಿತೆಂದು ವಿದ್ಯಾಸಚಿವರು ಹೇಳಿದ್ದಾರೆ.

ಅಮೃತಸರ್-ಲಾಹೋರಿಗೆ ರೈಲು

ಭಾರತ ವಿಭಜನೆಯಾದನಂತರ ನಿಂತುಹೋಗಿದ್ದ ಅಮೃತಸರ್ ಮತ್ತು ಲಾಹೋರುಗಳ ನಡುವೆ ರೈಲು ಸಂಚಾರವು ಸದ್ಯದಲ್ಲಿಯೇ ಪ್ರಾರಂಭವಾಗಲಿದೆ. ಈ ಸಂಬಂಧವಲ್ಲಿ ಭಾರತ ಮತ್ತು ಪಾಕಿಸ್ತಾನ ರೈಲ್ವೆ ಅಧಿಕಾರಿಗಳ ನಡುವೆ ಒಪ್ಪಂದವೊಂದು ಆಗಿದೆ.

● ಭಾರತಕ್ಕೆ ಆಗಮಿಸಿದ್ದ ರಷ್ಯಾ ಸಾಂಸ್ಕೃತಿಕ ನಿಯೋಗವು ಈದಿನ ಬೊಂಬಾಯಿನಿಂದ ಸ್ವದೇಶಕ್ಕೆ ಹಿಂತಿರುಗಿತು.

ಒಲಂಪಿಯಾ ● ಇಂದಿನಿಂದಪ್ರಾರಂಭ
ಪ್ರತಿದಿನ 3 ಪ್ರದರ್ಶನಗಳು
ಇಂದಿನ ಸಮಾಜದ ಲೋಪದೋಷಗಳನ್ನು ಬೆಳಕಿಗೆ ತಂದ, ಅಮರಪ್ರೇಮದ, ನೈಜ ಕಥಾವಸ್ತು.
ಶರಚ್ಚಂದ್ರ ಚಟರ್ಜಿಯವರ:—
★ ಪರಿಣೀತಾ ★
ಪಾತ್ರ-ಅಶೋಕ್‌ಕುಮಾರ್, ಅಶಿತ್‌ಬರ್ರಾ ಮೀನಾಕುಮಾರಿ
ಮಹಾಶಿವರಾತ್ರಿ ಪ್ರಯುಕ್ತ ರಾತ್ರಿ 1 ಘಂಟೆಗೆ 4 ನೇ ಪ್ರದರ್ಶನವುಂಟು

ANNOUNCEMENT

I, the undersigned wish to make it known to the subscribers of '*The Times of India*' and allied publications, that I have severed all my connections with Raman Bros., News Agents, Mysore from 24-12-1953 and have nothing to do with the same.

Mysore 28-12-53 — M. P. RAMAN.

ತಿರುವಾಂಕೂರ್-ಕೊಚ್ಚಿಯಲ್ಲಿ ಕಾಂಗ್ರೆಸ್ಸಿಗೆ ಬಹುಮತ ಬರಲಿಲ್ಲ

ತಾತ್ಕಾಲಿಕ ಕಾಂಗ್ರೆಸ್ ಸರ್ಕಾರದ ರಾಜಿನಾಮೆ

ತಿರುವಾಂಕೂರ್-ಕೊಚ್ಚಿ ಪ್ರಾಂತ್ಯದಲ್ಲಿ ನಡೆದ ಮಹಾಚುನಾವಣೆಗಳಲ್ಲಿ ೧೧೭ ಸ್ಥಾನಗಳ ಪೈಕಿ ಈಗ ೧೧೫ ಸ್ಥಾನಗಳ ಫಲಿತಾಂಶವು ಹೊರಬಿದ್ದಿದೆ. ಇದರಲ್ಲಿ ಯಾವ ಪಕ್ಷವೂ ಬಹುಮತವನ್ನು ಪಡೆದಿಲ್ಲ. ಹೆಚ್ಚುಮತವನ್ನು ಗಳಿಸಿರುವ ಪಕ್ಷವು ಕಾಂಗ್ರೆಸ್ ಆಗಿರುತ್ತದೆ.

ಕಾಂಗ್ರೆಸ್ ೪೫, ಕಮ್ಯೂನಿಸ್ಟ್ ೨೩, ಪ್ರಜಾಸೋಷಲಿಸ್ಟ್ ೧೮, ಕ್ರಾಂತಿಕಾರಕ ಸೋಷಲಿಸ್ಟ್ ಪಕ್ಷ ೯, ತಿರುವಾಂಕೂರ್-ತಮಿಳುನಾಡು ಕಾಂಗ್ರೆಸ್ ೧೨, ಸ್ವತಂತ್ರರು ೮ ಸ್ಥಾನಗಳನ್ನು ಗಳಿಸಿವೆ.

ಈಗ ಸರ್ಕಾರ ನಡೆಸುತ್ತಲಿರುವ ಶ್ರೀ ಜಾನ್‌ರವರ ಮಂತ್ರಿಮಂಡಲವು ಈದಿನ ರಾಜಪ್ರಮುಖರಿಗೆ ತನ್ನ ರಾಜೀನಾಮೆಯನ್ನು ಸಲ್ಲಿಸಿತು. ಸುಭದ್ರ ಸರ್ಕಾರವು ರಚಿಸಲು ರಾಜಪ್ರಮುಖರು ಸೂಕ್ತ ಕ್ರಮವನ್ನು ಕೈಗೊಳ್ಳಲು ಈರೀತಿ ಮಾಡಲಾಗಿದೆ.

ತನ್ನ ಮುಂದಿನ ನಿಲುವೇನೆಂಬುದನ್ನು ನಿರ್ಧರಿಸಲು ಪ್ರದೇಶ ಕಾಂಗ್ರೆಸ್ ಸಮಿತಿಯು ಈದಿನ ಸಭೆ ಸೇರಲಿದೆ.

ಕಮ್ಯೂನಿಸ್ಟ್ ಪಕ್ಷದವರು ಸಹ ತಮ್ಮ ಕೇಂದ್ರಸಮಿತಿಯೊಡನೆ ಸಮಾಲೋಚನೆ ನಡೆಸಲು ದೆಹಲಿಗೆ ತೆರಳಿರುವರು.

ಸರ್ಕಾರದಮೇಲೆ ದಾವ

ಕುಂಭಮೇಳ ದುರಂತ ಬಗ್ಗೆ

ಕುಂಭಮೇಳ ದುರಂತದಲ್ಲಿ ತನ್ನ ಸಂಸಾರದಲ್ಲಿದ್ದ ೮ ಜನರೆಲ್ಲಾ ಸತ್ತುಹೋದುದರಿಂದ ತನಗೆ ಆದ ನಷ್ಟವನ್ನೆಲ್ಲಾ ಕೊಡಬೇಕು-ಎಂದು ೬೦ ವರ್ಷದ ಮಹಿಳೆಯೋರ್ವಳು ಸರ್ಕಾರದಮೇಲೆ ಒಂದು ಮೊಕದ್ದಮೆ ಹೂಡಿದ್ದಾಳೆ.

ಶಾಸನ ಸಭೆಯಿಂದ ಸದಸ್ಯರ ಉಚ್ಚಾಟನೆ

ಮುಖ್ಯಮಂತ್ರಿ ಮೊರಾರ್ಜಿ ದೇಸಾಯ್‌ರವರ ಬಗ್ಗೆ ಆಕ್ಷೇಪಣೀಯ ರೀತಿ ಮಾತನಾಡಿದುದನ್ನು ವಾಪಸ್ಸು ತೆಗೆದುಕೊಳ್ಳಲು ನಿರಾಕರಿಸಿದುದಕ್ಕೆ ಬೊಂಬಾಯಿ ಶಾಸನ ಸಭಾ ಉಪಾಧ್ಯಕ್ಷರು ಅಲ್ಲಿಯ ಸದಸ್ಯ ಶ್ರೀ ಬಿ. ಸಿ. ಕಾಂಬಳಿಯವರನ್ನು ಸಭೆಯಿಂದ ಹೊರಕ್ಕೆ ಹೋಗುವಂತೆ ಆಜ್ಞೆ ಮಾಡಿದರು.

ಕೂಡಲೇ ಸದಸ್ಯರು ಸಭೆಯನ್ನು ಬಿಟ್ಟು ಹೊರಟುಹೋದರು.

ಗೋವಾಕ್ಕೆ ಶಸ್ತ್ರಾಸ್ತ್ರಗಳು

ಕಳೆದವಾರ ಪೋರ್ಚುಗೀಸ್ ಗೋವಾಕ್ಕೆ ಒಂದು ಹಡಗು ತುಂಬ ಬಂದೂಕಗಳು ಟ್ಯಾಂಕುಗಳು ಬಂದುವೆಂದೂ ಇನ್ನು ಎರಡು ಹಡಗುಗಳ ಶಸ್ತ್ರಾಸ್ತ್ರಗಳು ಬರಲಿವೆ-ಎಂದೂ ತಿಳಿದುಬರುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—	೨೩—೨
ಕೈ॥ ಬೀಜ	೪೫—	—
ಎಳ್ಳು	೬೩—೨	—
ಹರಳು	೨೪—	೨೮—
ಹುಚ್ಚೆಳ್ಳು	೩೭—	೪೧—
ಹೊಂಗಬೀಜ	೨೨—	೨೪—೧೦
ಹುಣಸೆಬೀಜ	೧೧—೧೪	—
ಹುರುಳಿ	೨೫—೪	೨೮—೬
ಹೆಸರು	೩೬—೨	೪೧—೧೦
ಅವರೆ	೧೮—	೩೨—೧೨
ಅಲಸಂದೆ	೩೦—೨	೪೭—೨
ಉದ್ದು	೫೭—೪	—
ಕೊತ್ತಂಬರಿ	೨೬—೮	೩೧—೪
ತೊಗರಿ	೨೭—	೨೭—೮
ಕಡಲೆ	೪೫—೮	೪೯—೧೦
ಹುಣಸೆಹಣ್ಣು	೫—೧೪	೮—೧೫
ಮೆಣಸಿನಕಾಯಿ	—	—
ಸೀಗೆಕಾಯಿ	೪—೮	೫—೪
ಬೆಲ್ಲ	೪—೮	—
ತೆಂಗಿನಕಾಯಿ	೧೧೩—	೩೧—

ರಸ್ತೆಕಾರ್ಯಕ್ಕಾಗಿ ೧.೨೫ ಕೋಟಿ ರೂ.

ತಿರುವಾಂಕೂರ್-ಕೊಚ್ಚಿ ಪ್ರಾಂತ್ಯದಲ್ಲಿ ರಸ್ತೆಗಳ ನಿರ್ಮಾಣ ಮತ್ತು ದುರಸ್ತಿಗಾಗಿ ಮುಂದಿನ ಸಾಲಿನಲ್ಲಿ ೧.೨೫ ಕೋಟಿ ರೂಪಾಯಿಗಳನ್ನು ಕೊಡಲು ಒಪ್ಪಿದೆ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಅಮೆರಿಕಾ ಪ್ರಜಾಸಭೆಯಲ್ಲಿ ಗುಂಡಿನ ಏಟು

ಅಮೆರಿಕಾದ ಪ್ರಜಾಸಭೆಯ ಅಧಿವೇಶನವು ನಡೆಯುತ್ತಿದ್ದಾಗ ಮೊನ್ನೆಯದಿನ ಪ್ರೇಕ್ಷಕ ಗ್ಯಾಲರಿಯಲ್ಲಿ ಕುಳಿತಿದ್ದವರ ಪೈಕಿ ಮೂವರು ಸದಸ್ಯರ ಕಡೆ ಗುಂಡು ಹಾರಿಸಿದರು. ಇದರ ಪರಿಣಾಮವಾಗಿ ೫ ಜನರಿಗೆ ಗಾಯಗಳಾದುವು. ಕೂಡಲೇ ಅವರನ್ನು ಆಸ್ಪತ್ರೆಗೆ ಸಾಗಿಸಿ ಗುಂಡು ಹಾರಿಸಿದವರನ್ನು ದಸ್ತಗಿರಿ ಮಾಡಲಾಯಿತು.

ಇದರ ಪರಿಣಾಮವಾಗಿ ಅಮೆರಿಕಾದ ಅಧ್ಯಕ್ಷ ಐಸೆನ್‌ಹೋವರ್ ಮತ್ತು ಅವರ ಸಚಿವರಿಗೆ ವಿಶೇಷ ರಕ್ಷಣಾ ವ್ಯವಸ್ಥೆಗಳನ್ನು ಈಗ ಮಾಡಲಾಗಿದೆ.

.... ರಣಜಿತ್ ....
3–3–54 ರಿಂದ ಅಮೋಘ ಪ್ರಾರಂಭ
ಫಿಲ್ಮಿಸ್ತಾನ್‌ರವರ:-
ಸಮ್ರಾಟ್ [ಹಿಂದಿ]
ಪಾತ್ರ:-ರೆಹನ, ಅಜಿತ್, ರಾಮಸಿಂಗ್, ಮುಮ್ತಾಜ್ ಅಲಿ.
ಮಹಾಶಿವರಾತ್ರಿ ಪ್ರಯುಕ್ತ ಈದಿನ ರಾತ್ರಿ 12-30 ಕ್ಕೆ ವಿಶೇಷ ಪ್ರದರ್ಶನ

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ
ಮುಕ್ತಾಯ 31-3-1954 — ಡ್ರಾಯಿಂಗ್ 19-4-1954
ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ
ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ
———
ಮೊದಲನೆ ಬಹುಮಾನ 10000 ರೂ
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

• ಚಾಮುಂಡೇಶ್ವರಿ ಟಾಕೀಸ್ • ಮೈಸೂರು
3—3—54 ರಿಂದ ಅಮೋಘ ಪ್ರಾರಂಭ ದಿನವಹಿ 3 ಪ್ರದರ್ಶನಗಳು
ಕನ್ನಡ 'ರಾಜಾವಿಕ್ರಮ' ಚಿತ್ರವನ್ನು ತಯಾರಿಸಿ ಚಲನಚಿತ್ರ ಪ್ರದರ್ಶನದಲ್ಲಿ ಹೊಸ ಕ್ರಾಂತಿಯನ್ನುಂಟುಮಾಡಿದ ಪ್ರಖ್ಯಾತ ದಿಗ್ದರ್ಶಕ ಕೆಂಪರಾಜ್‌ರವರ ಮತ್ತೊಂದು ಕಲಾಕೃತಿ.
★ ಜಲದುರ್ಗ ★
ತಾರಾಗಣ:—ಕೆಂಪರಾಜ್, ಕೃಷ್ಣಕುಮಾರಿ, ಬಿ. ಆರ್. ಪಂತುಲು ಗಣಪತಿಭಟ್ ಮುಂತಾದವರು.
ಮಹಾಶಿವರಾತ್ರಿ ಪ್ರಯುಕ್ತ ಈದಿನ ರಾತ್ರಿ 1 ಗಂಟೆಗೆ 4ನೇ ಪ್ರದರ್ಶನವುಂಟು

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೫೫

೫-೩-೧೯೫೪ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಪುರಸಭಾಧ್ಯಕ್ಷರಮೇಲೆ ಕಂಟೆಮ್ಪ್ಟ್ ಮೊಕದ್ದಮೆ

ಮೈಸೂರು ೫

ಶ್ರೀ ತಗಡೂರು ರಾಮಚಂದ್ರರಾಯರು ಮೈಸೂರು ಒಂದನೇ ಮುನಸೀಫ್ ಕೋರ್ಟಿಗೆ ಇದೇ ೪ನೇ ತಾರೀಖು ಒಂದು ಅರ್ಜಿಯನ್ನು ಸಲ್ಲಿಸಿ ಪುರಸಭೆಯ ಅಧ್ಯಕ್ಷರು ಮತ್ತು ಅಸೆಸಿಂಗ್ ಆಫೀಸರಮೇಲೆ ಕಂಟೆಮ್ಪ್ಟ್ ಬಗ್ಗೆ ಸೂಕ್ತಕ್ರಮ ಕೈಗೊಳ್ಳಬೇಕೆಂದು ಪ್ರಾರ್ಥಿಸಿದ್ದಾರೆ.

ತಾವು ಮೈಸೂರು ಪುರಸಭೆಯ ಅಧ್ಯಕ್ಷ ಮತ್ತು ಅಸೆಸಿಂಗ್ ಆಫೀಸರಮೇಲೆ ನೀರಿನ ತೆರಿಗೆ ವಿಚಾರವಾಗಿ ದಾಖಲ್ಮಾಡಿದ ಮೊಕದ್ದಮೆಯಲ್ಲಿ ಅದು ತೀರ್ಮಾನವಾಗುವವರೆಗೂ ವಾದಿ ಮನೆಗೆ ನೀರು ನಿಲ್ಲಿಸುವುದಿಲ್ಲವೆಂದು ಪುರಸಭೆಯ ವಕೀಲರು ಕೋರ್ಟಿಗೆ ಭರವಸೆ ಕೊಟ್ಟಿದ್ದರೂ, ನೀರಿನ ಕಂದಾಯ ಕೊಡಬೇಕೆಂತಲೂ ತಪ್ಪಿದರೆ ನೀರುಸರಬರಾಜು ನಿಲ್ಲಿಸುವುದಾಗಿಯೂ ತಮಗೆ ನೋಟೀಸ್ ಕೊಟ್ಟಿರುವುದು ಅಕ್ರಮವೆಂದೂ, ಅದು ಕೋರ್ಟಿಗೆ ಅಪಮಾನವಾಗಿ ಕಂಟೆಮ್ಪ್ಟ್ ಆಗಿರುವುದೆಂದೂ, ಆದ್ದರಿಂದ ಸೂಕ್ತಕ್ರಮ ಕೈಗೊಳ್ಳಬೇಕೆಂದೂ ಶ್ರೀ ತಗಡೂರ್ ಪ್ರಾರ್ಥಿಸಿದ್ದಾರೆ.

ಸೋಮವಾರ ನೀರು ನಿಲ್ಲುತ್ತದೆ

ಮೈಸೂರು ೫

ಇದೇ ೮ನೇ ತಾರೀಖು ಸೋಮವಾರ ಬೆಳಗೊಳ ಪಂಪಿಂಗ್ ಸ್ಟೇಷನ್ನಿಗೆ ನೀರನ್ನು ಒದಗಿಸುವ ದೇವರಾಯ ನಾಲೆಯ ಪಾತ್ರವನ್ನು ಸ್ಟೇಷನ್ ಹತ್ತಿರ ಚೊಕ್ಕಟಮಾಡುವ ಬಗ್ಗೆ ಆದಿವಸ ಬೆಳಗ್ಗೆ ೮ ಗಂಟೆಯಿಂದ ಸಾಯಂಕಾಲ ೪ ಗಂಟೆಯವರೆಗೆ ನಗರಕ್ಕೆ ನೀರಿನ ಸರಬರಾಜು ಮಾಡಲು ಅವಕಾಶವಿಲ್ಲವಾಗಿ, ಪುರಜನರು ಭಾನುವಾರವೇ ತಮಗೆ ಬೇಕಾಗುವ ನೀರಿನ ಶೇಖರಣೆ ಮಾಡಿಕೊಳ್ಳಬೇಕಾಗಿ ಪುರಸಭಾ ಕಮಿಷನರ್ ಪ್ರಾರ್ಥಿಸಿದ್ದಾರೆ.

ಪುರಸಭೆ ಕೆಲಸಗಾರರ ಸಂಘ

ಮೈಸೂರು ೫

ರಾಜಧಾನಿಯ ಪುರಸಭೆಯ ಕೆಲಸಗಾರರು ಮೊನ್ನೆದಿನ ಸಭೆ ಸೇರಿ, ತಮ್ಮ ಹಕ್ಕುಬಾಧ್ಯತೆಗಳನ್ನು ಕಾಪಾಡಿಕೊಳ್ಳಲು ಒಂದು ಸಂಘವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದ್ದಾರೆ. ಅದಕ್ಕೆ ಶ್ರೀ ಮುನಿಯಪ್ಪನವರು ಅಧ್ಯಕ್ಷ, ಶ್ರೀ ಬಿ. ಸುಬ್ಬಸಿಂಗ್ ಕಾರ್‍ಯದರ್ಶಿ, ಶ್ರೀ ಮಾರೆಯ್ಯ ಉಪಕಾರ್‍ಯದರ್ಶಿ ಮತ್ತು ಶ್ರೀ ಗುರುಮೂರ್ತಿ ಖಜಾಂಜಿಯಾಗಿಯೂ ಚುನಾಯಿತರಾಗಿದ್ದಾರೆ.

ತಿರುವಾಂಕೂರು-ಕೊಚ್ಚಿಯಲ್ಲಿ ಮಿಶ್ರ ಸರ್ಕಾರ ಸ್ಥಾಪನೆ

ವಾಮಪಕ್ಷದ ನಾಯಕ ಪಟ್ಟಂತಾನುಪಿಳ್ಳೈರವರ ಪ್ರಯತ್ನ

ರಾಜಪ್ರಮುಖರ ಭೇಟಿಗಾಗಿ ಅವರ ಕೋರಿಕೆ

ತಿರುವಾಂಕೂರು-ಕೊಚ್ಚಿಯಲ್ಲಿ ವಾಮಪಕ್ಷಗಳೊಡನೆ ಕನಿಷ್ಠ ಯೋಜನಾ ಕಾರ್‍ಯಕ್ರಮವನ್ನು ನಿರ್ಧರಿಸಿಕೊಂಡು ಪ್ರಜಾಸೋಷಲಿಸ್ಟ್ ಪಕ್ಷದ ನಾಯಕ ಶ್ರೀ ಪಟ್ಟಂತಾನುಪಿಳ್ಳೆಯವರು ನೂತನ ಸರ್ಕಾರವನ್ನು ರಚಿಸಲು ಯತ್ನಿಸುತ್ತಲಿದ್ದಾರೆ.

ಅವರು ಅಲ್ಲಿಯ ರಾಜಪ್ರಮುಖರಿಗೆ ಒಂದು ಪತ್ರವನ್ನು ಬರೆದು ಸಂಯುಕ್ತ ಪಕ್ಷವು ಈಗ ರಚನೆಯಾಗಿ ಅದರಲ್ಲಿ ಶಾಸನಸಭೆಗೆ ಚುನಾಯಿತರಾಗಿರುವ ೫೯ ಜನರು ಸದಸ್ಯರಾಗಿರುವುದಾಗಿಯೂ ಈ ಪಕ್ಷವು ತಮನ್ನು ನಾಯಕರನ್ನಾಗಿ ಚುನಾಯಿಸುವುದರಿಂದ ಬಹುಮತ ಪಡೆದಿರುವ ಈ ಪಕ್ಷವು ಮಂತ್ರಿಮಂಡಲವನ್ನು ರಚಿಸುವ ವಿಷಯದಲ್ಲಿ ಚರ್ಚೆಗಾಗಿ ತಮಗೆ ಭೇಟಿ ಕೊಡಬೇಕೆಂದೂ ಇದರಲ್ಲಿ ಕೋರಿರುವುದಾಗಿ ತಿಳಿಯಬರುತ್ತದೆ.

ಕ್ರಾಂತಿಕಾರಕ ಸೋಷಲಿಸ್ಟ್ ಪಕ್ಷದ ನಾಯಕರೂ ಸಹ ಸದ್ಯದಲ್ಲಿಯೇ ಮಿಶ್ರ ಸರ್ಕಾರ ರಚನೆಯಾಗುವುದೆಂದು ತಿಳಿಸಿದ್ದಾರೆ.

ಈ ಮಧ್ಯೆ ಕಮ್ಯೂನಿಸ್ಟ್ ಪಕ್ಷದ ಮುಖಂಡರು ದೆಹಲಿಗೆ ತೆರಳಿ ತಮ್ಮ ಕೇಂದ್ರ ಕಛೇರಿಯೊಡನೆ ಸಮಾಲೋಚನೆ ನಡೆಸಿಕೊಂಡು ಈಗತಾನೇ ತಿರುವನಂತಪುರಕ್ಕೆ ಹಿಂತಿರುಗಿದ್ದಾರೆ.

ಕಾಂಗ್ರೆಸ್ ಪಕ್ಷದ ೪೫ ಸದಸ್ಯರ ಸಭೆಯು ನಿನ್ನೆಯದಿನ ನಡೆದು ಶ್ರೀ ಪಿ. ಗೋವಿಂದ ಮೆನನ್‌ರವರನ್ನು ತಮ್ಮ ನಾಯಕರನ್ನಾಗಿ ಚುನಾಯಿಸಿಕೊಂಡಿದ್ದಾರೆ. ಇವರು ಈಗಿರುವ ಮೇಲ್ವಿಚಾರಕ ಸರ್ಕಾರದಲ್ಲಿ ಹಣಕಾಸಿನ ಸಚಿವರಾಗಿದ್ದಾರೆ.

ರಾಜಕೀಯ ಪಕ್ಷ ಪ್ರತಿ ಪಕ್ಷಗಳ ಗಣನೆಯನ್ನು ತೆಗದುಕೊಳ್ಳದೆ ಪ್ರಜಾಪ್ರಭುತ್ವ ರೀತ್ಯಾ ಬಹುಮತಗಳಿಸುವ ಪಕ್ಷವು ಮಂತ್ರಿಮಂಡಲವನ್ನು ರಚಿಸಲು ಕೇಂದ್ರದ ಆತಂಕವೇನೂ ಇಲ್ಲವೆಂದು ಹೇಳಲಾಗುತ್ತಿದೆ.

ಕಾಂಗ್ರೆಸ್ ಪಕ್ಷಕ್ಕೆ ಇತರರೊಡನೆ ಸೇರಿ ಮಂತ್ರಿಮಂಡಲ ರಚಿಸುವ ಆಕಾಂಕ್ಷೆ ಕಾಣಬರುತ್ತಿಲ್ಲ.

● ಮೈಸೂರು, ಅಜ್ಮೀರ್ ಮತ್ತು ಸೌರಾಷ್ಟ್ರಗಳಲ್ಲಿ ನಿರುದ್ಯೋಗ ಪರಿಸ್ಥಿತಿಯು ಹದಗೆಟ್ಟಿದೆಯೆಂದೂ, ಪಂಜಾಬ್ ಮತ್ತು ಅಸ್ಸಾಂಗಳಲ್ಲಿ ಉತ್ತಮವಾಗಿದೆಯೆಂದೂ ಹೇಳಲಾಗಿದೆ.

ಕೊಳಕು ಪ್ರದೇಶಗಳ ನಿರ್ಮೂಲ

ಪುರಸಭೆಯ ಪರಿಶೀಲನೆ

ಮೈಸೂರು ೫

ಪುರಸಭೆಯ ಮುಂದುವರಿದ ಅಧಿವೇಶನವು ನಿನ್ನೆ ಸಂಜೆ ಶ್ರೀ ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು.

ನಗರದಲ್ಲಿ ಒಂದು ಈಜುವ ಕೊಳವನ್ನು ಪುರಸಭೆಯವರು ನಿರ್ಮಿಸಬೇಕೆಂದು ಶ್ರೀ ಎಂ. ಎನ್. ತಿಮ್ಮಯ್ಯನವರ ನಿರ್ಣಯವನ್ನು ಮಂಡಿಸಿ, ನಗರದ ಮಧ್ಯಭಾಗದಲ್ಲಿರುವ ಟೌನ್‌ಹಾಲ್ ಆವರಣದಲ್ಲಿ ಅದನ್ನು ರಚಿಸಬೇಕೆಂದು ತಿಳಿಸಿದರು.

ಜನರಿಗೆ ಮೊದಲೇ ಕುಡಿಯುವುದಕ್ಕೆ ನೀರಿನ ಅಭಾವವಿರುವುದರಿಂದ ಈಜುವ ಕೊಳ ನಿರ್ಮಿಸಿದರೆ ಇನ್ನೂ ನೀರಿಗೆ ತೊಂದರೆ ಆಗುವುದೆಂದು ಶ್ರೀ ಎ. ಕೃಷ್ಣಮೂರ್ತಿಯವರು ವಿರೋಧಿಸಿದರು.

ಕುಕ್ಕರಹಳ್ಳಿ ಕೆರೆ ಪಕ್ಕದಲ್ಲಿ ಈಗ ಒಂದು ಈಜುವ ಕೊಳ ಇದೆ ಅದನ್ನು ಇನ್ನೂ ಉತ್ತಮಪಡಿಸಿ ವಿಶೇಷವಾಗಿ ಜನರು ಉಪಯೋಗಿಸುವಂತೆ ಮಾಡಿದರೆ ಸಾಕು-ಎಂದು ಅಧ್ಯಕ್ಷರು ಹೇಳಿದಮೇಲೆ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು.

ಜನರು ಆರೋಗ್ಯದಿಂದಿರಲು ನಗರದಲ್ಲಿ ಒಂದು ಯೋಗಶಾಲೆಯನ್ನು ಸ್ಥಾಪಿಸಬೇಕೆಂಬ ಶ್ರೀ ಬಿ. ಜಿ. ದಾಸ್‌ರವರ ನಿರ್ಣಯವು ೨೭-೧೮ ಓಟುಗಳಿಂದ ಬಿದ್ದುಹೋಯಿತು. ಪುರಸಭೆಯವರೇ ಇದನ್ನು ಸ್ಥಾಪಿಸಲು ಹಣವಿಲ್ಲ. ಬೆಂಗಳೂರಿನ ಮಹನೀಯರೊಬ್ಬರು ಒಂದು ಯೋಗಶಾಲೆಯನ್ನು ಸ್ಥಾಪಿಸುವುದಾಗಿ ಮುಂದೆ ಬಂದಿದ್ದಾರೆ. ಅವರಿಗೆ ಗ್ರಾಂಟ್ ಕೊಡುವ ವಿಷಯವನ್ನು ಮುಂದೆ ಪರಿಶೀಲಿಸಬಹುದು ಎಂದು ಅಧ್ಯಕ್ಷರು ತಿಳಿಸಿದರು.

ಕೊಳಕು ಪ್ರದೇಶವನ್ನು ಸ್ವಚ್ಛಮಾಡಿ ಅಲ್ಲಿ ನೂತನ ಗೃಹಗಳನ್ನು ನಿರ್ಮಿಸಬೇಕೆಂಬ ಡಾ॥ ಆಡಿಯೋದರ ನಿರ್ಣಯವನ್ನು ಕಾರ್‍ಯಕಾರೀಸಮಿತಿಯ ಪರಿಶೀಲನೆಗೆ ಕಳುಹಿಸಲಾಯಿತು.

ವೆಂಕಟೇಶ್ವರ ವಿಶ್ವವಿದ್ಯಾನಿಲಯ

ತಿರುಪತಿಯಲ್ಲಿ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಸೂಕ್ತ ಯೋಜನೆಯನ್ನು ತಯಾರಿಸುವುದಕ್ಕಾಗಿ ಆಂಧ್ರ ಸರ್ಕಾರವು ಒಬ್ಬ ವಿಶೇಷ ಅಧಿಕಾರಿಯನ್ನು ನೇಮಿಸಲಿದೆ.

ಈ ವಿಶ್ವವಿದ್ಯಾನಿಲಯವು ಸ್ಥಾಪಿತವಾದೊಡನೆಯೇ ನೆಲ್ಲೂರು, ಅನಂತಪುರ, ಕಡಪ, ಚಿತ್ತೂರು ಮತ್ತು ಕರ್ನೂಲುಗಳಲ್ಲಿರುವ ಕಾಲೇಜುಗಳು ಇದಕ್ಕೆ ಸೇರುತ್ತವೆ. ಈ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಲು ಆಂಧ್ರ ಸರ್ಕಾರವು ಕೇಂದ್ರದಿಂದ ೫೦ ಲಕ್ಷ ರೂಪಾಯಿಗಳ ನೆರವನ್ನು ಕೇಳುವುದಾಗಿ ತಿಳಿಯಬರುತ್ತದೆ.

ಬರುವ ಜೂನ್ ಮಾಹೆಯಿಂದ ಈ ವಿಶ್ವವಿದ್ಯಾನಿಲಯವು ತನ್ನ ಕಾರ್ಯವನ್ನು ಪ್ರಾರಂಭಮಾಡುವುದಾಗಿ ಗೊತ್ತಾಗಿದೆ.

ಗೀತಾ ಉಪನ್ಯಾಸ

ರಾಜಧಾನಿಯ ಕಾಶೀಪತಿ ಅಗ್ರಹಾರದಲ್ಲಿರುವ ಶ್ರೀ ವಿದ್ಯಾ ಗಣಪತಿ ಮಂದಿರದಲ್ಲಿ ನಾಳೆಯಿಂದ ಇದೇ ೧೨ನೇ ತಾರೀಖಿನವರೆಗೆ ಪ್ರತಿದಿನ ರಾತ್ರಿ ೯ ಗಂಟೆಯಿಂದ ಶ್ರೀ ಜಪ ತೀರ್ಥಾಚಾರ್ಯರಿಂದ ಶ್ರೀ ಉದ್ಧವ ಗೀತಾ ಉಪನ್ಯಾಸ ನಡೆಯುವುದು. ಜಿಲ್ಲಾಧಿಕಾರಿ ಶ್ರೀ ಎಂ. ಎಸ್. ಸ್ವಾಮಿನಾಥರವರು ಅದರ ಪ್ರಾರಂಭೋತ್ಸವ ನಡೆಸುವರು.

ಯೋಗಾಭ್ಯಾಸ ಕಲಿಯಲು ರಷ್ಯನರ ಆಶೆ

ಯೋಗಾಭ್ಯಾಸವನ್ನು ರಷ್ಯದ ಜನರು ಕಲಿಯಲು ಭಾರತಕ್ಕೆ ಒಂದು ನಿಪುಣರ ತಂಡವನ್ನು ಕಳುಹಿಸುವಂತೆ ತಾವು ಸರ್ಕಾರಕ್ಕೆ ಸಲಹೆ ಮಾಡುವುದಾಗಿ ಭಾರತದಲ್ಲಿ ಪ್ರವಾಸ ಮಾಡಿದ ರಷ್ಯದ ಸಾಂಸ್ಕೃತಿಕ ನಿಯೋಗದ ಮುಖಂಡರು ತಿಳಿಸಿದ್ದಾರೆ.

ಉಪಸಚಿವರಿಗೆ ೬೫೦ ರೂ. ಸಂಬಳ ೩೫೦ ರೂ. ಭತ್ಯ

ಹೈದರಾಬಾದಿನಲ್ಲಿ ನೇಮಕವಾಗಿರುವ ಉಪಸಚಿವರುಗಳಿಗೆ ಮಾಹೆಯಾನ ೬೫೦ ರೂ ಸಂಬಳ, ೧೫೦ ರೂ. ವಾಸದಭತ್ಯ ಮತ್ತು ೨೦೦ ರೂ. ವಾಹನಭತ್ಯವನ್ನು ಕೊಡುವ ಮಸೂದೆಯನ್ನು ಅಲ್ಲಿಯ ಶಾಸನಸಭೆಯು ಅಂಗೀಕರಿಸಿದೆ.

ಮದ್ರಾಸ್-ತಿರುವಾಂಕೂರುಗಳಿಗೆ ಆಂಧ್ರದ ಅಕ್ಕಿ

ಈ ಮಾಹೆ ಅಂತ್ಯದೊಳಗೆ ಮದ್ರಾಸ್ ಮತ್ತು ತಿರುವಾಂಕೂರು-ಕೊಚ್ಚಿ ಪ್ರಾಂತ್ಯಗಳಿಗೆ ಆಂಧ್ರದಿಂದ ತಲಾ ೨೫೦೦೦ ಟನ್ ಅಕ್ಕಿಯನ್ನು ಸರಬರಾಜು ಮಾಡಲಾಗುತ್ತದೆ.

ಕೈಮಗ್ಗ ಬಟ್ಟೆಗಳಮೇಲೆ ಮಾರಾಟ ತೆರಿಗೆ ರದ್ದು

ಪ್ರಾಂತ್ಯಗಳಿಗೆ ಕೇಂದ್ರ ಸರ್ಕಾರದ ಸೂಚನೆ

ಕೈಮಗ್ಗ ಬಟ್ಟೆಗಳ ಮೇಲೆ ಮಾರಾಟ ತೆರಿಗೆಯನ್ನು ದೇಶಾದ್ಯಂತ ರದ್ದುಗೊಳಿಸಬೇಕೆಂದು ಕೇಂದ್ರ ಸರ್ಕಾರವು ಎಲ್ಲಾ ಪ್ರಾಂತ್ಯ ಸರ್ಕಾರಗಳಿಗೆ ಸೂಚನೆಯನ್ನು ಕೊಟ್ಟಿರುವುದಾಗಿ ಕೈಗಾರಿಕಾ ಸಚಿವರು ಪಾರ್ಲಿಮೆಂಟನಲ್ಲಿ ತಿಳಿಸಿದ್ದಾರೆ.

ಖಾದಿ ಮತ್ತು ಕೈಮಗ್ಗಕ್ಕೆ ಪ್ರೋತ್ಸಾಹ ಕೊಡಲು ಖಾದಿ ನೇಯುವವರಿಗೆ ಮತ್ತು ನೇಕಾರರಿಗೆ ೨೩೦೦೦ರೂಪಾಯಿಗಳ ಬಹುಮಾನವನ್ನು ಸಹ ಕೊಡಲು ಕೇಂದ್ರ ನಿರ್ಧರಿಸಿರುವುದಾಗಿಯೂ ಅವರು ಹೇಳಿದ್ದಾರೆ.

ಹಿಂದೂಸ್ಥಾನ್ ಉಕ್ಕಿನ ಕಂಪೆನಿ

ಭಾರತ ಸರ್ಕಾರವು ಜರ್ಮನಿ ಸಂಸ್ಥೆಯೊಂದರ ಸಹಕಾರದಿಂದ ರುಕ್ಕೆಲಾದಲ್ಲಿ ಸ್ಥಾಪಿಸಲಿರುವ ಉಕ್ಕಿನ ಕಾರ್ಖಾನೆಯ ಮಂಡಲಿಯ ಅಧ್ಯಕ್ಷರನ್ನಾಗಿ ಕೈಗಾರಿಕೆ ಶಾಖಾ ಕಾರ್ಯದರ್ಶಿ ಶ್ರೀ ಎ. ಕೆ. ಚಂದಾರವರನ್ನೂ ಕಾರ್ಖಾನೆಯ ಆಡಳಿತ ಡೈರೆಕ್ಟರಾಗಿ ಶ್ರೀ ಎಸ್. ಎನ್. ಮಜುಂದಾರ್‌ರನ್ನೂ ಸರ್ಕಾರವು ನೇಮಿಸಿದೆ. ಈ ಕಾರ್ಖಾನೆಯನ್ನು 'ಹಿಂದೂಸ್ಥಾನ ಉಕ್ಕಿನ ಕಂಪೆನಿ' ಯೆಂದು ಕರೆಯಲಾಗುತ್ತದೆ. ಅದರ ಬಂಡವಾಳದಲ್ಲಿ ಶೇಕಡ ೮೦ರಷ್ಟನ್ನು ಸರ್ಕಾರವು ಹಾಕಿದೆ

ಕುದುರೆ ಮತ್ತು ಅದರ ಮಾಲೀಕನ ದಸ್ತಗಿರಿ

ಸೋಲಾಪುರದ ಬಳಿ ಒಬ್ಬನು ಕುದುರೆಯಮೇಲೆ ೮೦ ಸೀಸೆ ಹೆಂಡವನ್ನು ತೆಗೆದುಕೊಂಡು ಹೋಗುತ್ತಿದ್ದನೆಂಬ ಆಪಾದನೆ ಮೇಲೆ ಅವನನ್ನೂ ಅವನ ಕುದುರೆಯನ್ನೂ ಪೊಲೀಸಿನವರು ದಸ್ತಗಿರಿ ಮಾಡಿದ್ದಾರೆ.

ಭಾರತ ಸೈನ್ಯದ ೩ನೇ ತಂಡ

ಕೊರಿಯಾಕ್ಕೆ ತೆರಳಿದ್ದ ಭಾರತ ಮೇಲ್ವಿಚಾರಕ ಸೈನ್ಯದ ೩ ನೇ ತಂಡವು ಈದಿನ ಮದ್ರಾಸಿಗೆ ಆಗಮಿಸಿತು.

-ಮೈಸೂರು ಪೇಟೆಧಾರಣೆ-

ತಾರೀಖು ೪—೩—೧೯೫೪

ಪಲ್ಲ	ರೂ. ಅ	ರೂ. ಅ
ಕಡಲೇಕಾಯಿ	೧೯—೨	೨೧—೨
ಹುಚ್ಚೆಳ್ಳು	೩೬—೧೪	೩೮—
ಹೊಂಗೆಬೀಜ	೧೮—	೨೫—
ಹುಣಸೆಬೀಜ	೧೨—	—
ಹುರುಳಿ	೨೫—೨	೨೮—
ಹುಣಸೆಹಣ್ಣು	೬—೧೧	೯—೫
ಮೆಣಸಿನಕಾಯಿ	೨೮—೧೦	—
ಸೀಗೆಕಾಯಿ	೪—೬	೪—೯
ಬೆಲ್ಲ	೪—೮	—

ನಿರುದ್ಯೋಗ ಪರಿಹಾರಕ್ಕೆ ೭೪ ಕೋಟಿ ರೂ. ಯೋಜನೆ

ದೇಶದಲ್ಲಿ ನಿರುದ್ಯೋಗವನ್ನು ಪರಿಹಾರ ಮಾಡಿ, ಹೆಚ್ಚು ಜನರಿಗೆ ಉದ್ಯೋಗವನ್ನು ಕಲ್ಪಿಸಲು ಎಲ್ಲಾ ಪ್ರಾಂತ್ಯಗಳಲ್ಲಿ ಕ್ರಮ ಕೈಗೊಳ್ಳಲು ೭೪ ಕೋಟಿ ರೂಪಾಯಿಗಳ ವೆಚ್ಚದ ೩೧೩ ಯೋಜನೆಗಳಿಗೆ ಆಯೋಜನಾ ಸಮಿತಿಯು ಒಪ್ಪಿಗೆ ಇತ್ತಿರುವುದಾಗಿ ಆಯೋಜನಾ ಸಚಿವ ಶ್ರೀ ನಂದಾರವರು ಹೇಳಿದ್ದಾರೆ.

ಈ ಯೋಜನೆಗಳಲ್ಲಿ ನೀರಾವರಿ, ವಿದ್ಯಾಭ್ಯಾಸ, ಜನಾರೋಗ್ಯ, ರಸ್ತೆಗಳ ನಿರ್ಮಾಣ ಮತ್ತು ರಿಪೇರಿ, ವಿದ್ಯುತ್ ಉತ್ಪಾದನೆ ಮುಂತಾದ ಹಲವಾರು ಯೋಜನೆಗಳು ಸೇರಿವೆ.

೨ ಲಕ್ಷ ರೂ. ಖಾದಿ ಕೇಳುವವರಿಲ್ಲ

ಕಳೆದ ೪ ವರ್ಷಗಳಲ್ಲಿ ಭಾರತದಲ್ಲಿ ೪ ಲಕ್ಷ ರೂಪಾಯಿಗಳ ಖಾದಿ ಉತ್ಪತ್ತಿ ಆಗಿ ೨ ಲಕ್ಷ ರೂ. ಗಳ ಖಾದಿ ಮಾರಾಟವಾಗದೇ ಹಾಗೇ ಬಿದ್ದಿವೆಯೆಂದು ಹುಬ್ಬಳ್ಳಿಯ ಖಾದಿ ಮತ್ತು ಗ್ರಾಮಕೈಗಾರಿಕೆಗಳ ಪ್ರದರ್ಶನ ಸಮಿತಿಯ ಅಧ್ಯಕ್ಷ ಶ್ರೀ ವಿ. ವಿ. ಪಾಟೀಲ್ ತಿಳಿಸಿದ್ದಾರೆ.

ಭಾರತ ಕುಟೀರ ಕೈಗಾರಿಕಾ ಪ್ರದರ್ಶನ

ಭಾರತದ ಕುಟೀರ ಕೈಗಾರಿಕೆಗಳು ವಿದೇಶಗಳಲ್ಲಿ ಹೆಚ್ಚು ಮಾರಾಟವಾಗಲು ಅನುಕೂಲವಾಗುವಂತೆ ಭಾರತ ಸರ್ಕಾರವು ಹಲವಾರುಕಡೆ ಪ್ರದರ್ಶನಗಳಲ್ಲಿ ಭಾಗವಹಿಸಲು ನಿರ್ಧರಿಸಿದೆ ಸದ್ಯದಲ್ಲಿಯೇ ಭಾರತವು ಕೈರೋ ನಗರದಲ್ಲಿ ಒಂದು ಪ್ರದರ್ಶನವನ್ನು ಏರ್ಪಡಿಸಿರುತ್ತದೆ. ಇನ್ನೂ ೩ ಅಂತರರಾಷ್ಟ್ರೀಯ ಪ್ರದರ್ಶನಗಳಲ್ಲಿ ಭಾಗವಹಿಸಲಾಗುವುದು.

ಶಿವರಾತ್ರಿದಿನ ೧೦೦ ಜನರು ನೀರಿನಪಾಲು

ಆಗ್ರಾಕ್ಕೆ ೫೩ ಮೈಲಿ ದೂರದಲ್ಲಿ ಶಿವರಾತ್ರಿಯ ದಿನ ಶಿವನ ದೇವಾಲಯಕ್ಕೆ ಆರಾಧನೆಗಾಗಿ ಯಮುನಾನದಿಯಲ್ಲಿ ಹೋಗುತ್ತಿದ್ದ ಯಾತ್ರಿಕರ ದೋಣಿ ಒಂದು ನದಿಯಲ್ಲಿ ಮುಳುಗಿತು. ಅದರಲ್ಲಿದ್ದ ಸುಮಾರು ೧೦೦ ಜನ ಯಾತ್ರಿಕರ ಪೈಕಿ ಒಬ್ಬರೂ ಪತ್ತೆಯಿಲ್ಲವಾಗಿದ್ದಾರೆ.

೮೦೦೦೦ ಎಕರೆ ಜಮೀನು ಸಂಗ್ರಹಣೆ

ಹೈದರಾಬಾದ್ ಪ್ರಾಂತ್ಯದಲ್ಲಿ ಇಲ್ಲಿಯವರೆಗೆ ಭೂದಾನಯಜ್ಞ ಚಳುವಳಿಯ ಅಂಗವಾಗಿ ೮೦ ಸಾವಿರ ಎಕರೆ ಜಮೀನನ್ನು ಸಂಗ್ರಹಿಸಲಾಗಿದೆ.

ಭಾರತಕ್ಕೆ ಬರ್ಮಾ ಅಕ್ಕಿ

ಭಾರತವು ಸದ್ಯದಲ್ಲಿಯೇ ಬರ್ಮಾದಿಂದ ೯ ಲಕ್ಷ ಟನ್ ಅಕ್ಕಿಯನ್ನು ಕೊಳ್ಳಲು ನಿರ್ಧರಿಸಿರುವುದಾಗಿ ತಿಳಿಯಬರುತ್ತದೆ.

ಸದ್ಯದಲ್ಲಿಯೇ ಈ ಬಗ್ಗೆ ಉಭಯ ಸರಕಾರಗಳ ನಡುವೆ ಒಪ್ಪಂದವಾಗಲಿದೆ.

ಮಾಜಿ ಭಾರತ ಸೇನಾನಿ ಕರಾಚಿಯಲ್ಲಿ

ಭಾರತದ ಮಾಜಿ ಶ್ರೇಷ್ಠ ದಂಡನಾಯಕ ಫೀಲ್ಡ್ ಮಾರ್ಷಲ್ ಆಕಿನ್‌ಲೆಕ್‌ರವರು ಕರಾಚಿಯಿಂದ ಪಾಕೀಸ್ಥಾನ ಪಂಜಾಬ್‌ನಲ್ಲಿ ಪ್ರವಾಸ ಮಾಡಲು ಹೊರಟಿದ್ದಾರೆ.

ಪಾಕೀಸ್ತಾನ ಸ್ಥಾಪನೆಯಾದಾಗಿನಿಂದ ಇವರ ಚಟುವಟಿಕೆಗಳು ಪಾಕೀಸ್ತಾನದಲ್ಲಿ ಹೆಚ್ಚಾಗಿವೆ.

ಕಾಲೇಜುಗಳಲ್ಲಿ ಹಿಂದಿ ಮಾಧ್ಯಮ

೧೯೫೫ ರಿಂದ ಎಲ್ಲಾ ಸರ್ಕಾರಿ ಕಾಲೇಜುಗಳ ಪ್ರಥಮ ತರಗತಿಗಳಲ್ಲಿ ಶಿಕ್ಷಣ ಮಾಧ್ಯಮವು ಹಿಂದೀಭಾಷೆಯಾಗಿರುವಂತೆ ಸದ್ಯದಲ್ಲಿಯೇ ಬೊಂಬಾಯಿ ಸರ್ಕಾರವು ಆಜ್ಞೆ ಮಾಡುವುದಾಗಿ ಅಲ್ಲಿಯ ವಿದ್ಯಾಸಚಿವರು ಹೇಳಿದ್ದಾರೆ.

ತಿಮ್ಮಯ್ಯನವರು ಸ್ವದೇಶಕ್ಕೆ

ಕೊರಿಯಾದಲ್ಲಿ ತಟಸ್ಥ ಮಂಡಲಿಯ ಅಧ್ಯಕ್ಷರಾಗಿದ್ದ ಜನರಲ್ ತಿಮ್ಮಯ್ಯನವರು ನಿನ್ನೆಯ ದಿನ ನವದೆಹಲಿಗೆ ಆಗಮಿಸಿದರು. ಅವರನ್ನು ವಿಮಾನ ನಿಲ್ದಾಣದಲ್ಲಿ ಭಾರತ ಶ್ರೇಷ್ಠ ದಂಡನಾಯಕ ರಾಜೇಂದ್ರ ಸಿಂಹಜಿ ಮತ್ತು ಇತರ ಪ್ರಮುಖರು, ರಕ್ಷಣಾ ಶಾಖಾ ಕಾರ್ಯದರ್ಶಿ, ಶ್ರೀಮತಿ ಇಂದಿರಾ ಗಾಂಧಿ ಮುಂತಾದವರು ಸ್ವಾಗತಿಸಿದರು.

ಪ್ರಭಾ ★ ಇಂದಿನಿಂದ ಎರಡನೇವಾರ
ದಿನವಹಿ 3 ಆಟಗಳು
ದೇವ ಕನ್ನಿಕಾ
ಕನ್ನಡ

ನೈಸರ್ಗಿಕ ಬಣ್ಣಗಳಲ್ಲಿ
ಬೇಕ್‌ಲೈಟ್ ಸಾಮಾನುಗಳಲ್ಲಿ
ಮೈಸೂರೈಟ್ ಮತ್ತು ಐವರೈಟ್
ಅಸಮಾನವಾದ ದರ್ಜೆಗೆ ಸೇರಿದ್ದು
ಕುಡಿಯುವ ಪಾತ್ರೆಗಳು, ಬಟ್ಟಲುಗಳು, ಬಶಿಗಳು, ಕ್ಷೌರದ ದೊನ್ನೆಗಳು,
ಸಿಗರೇಟು ಬೂದಿಯನ್ನು ಹಾಕುವ ತಬಕಗಳು, ಟೇಬಲ್ ಅಲಂಕರಿಸುವ
ಕೌಶಲ್ಯದ ಸಾಮಾನುಗಳು, ಅಂಗಶೃಂಗಾರ ಪದಾರ್ಥಗಳನ್ನಿಡುವ
ಸಾಮಾನುಗಳು, ವಿಧವಿಧವಾದ ನಮೂನೆಗಳಲ್ಲಿ
ಮತ್ತು ಆಕರ್ಷಕ ಬಣ್ಣಗಳಲ್ಲಿ
ತಯಾರಿಸಲ್ಪಡುವುವು.
ಅಚ್ಚು ಮಾಡಿದ ಮೈಸೂರೈಟ್ ಸಾಮಾನುಗಳು
ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿ,
ಮೈಸೂರು ರೋಡ್, ಬೆಂಗಳೂರು-೨

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ
ಮುಕ್ತಾಯ 31-3-1954 ಡ್ರಾಯಿಂಗ್ 19-4-1954
ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ
ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ
ಮೊದಲನೆ ಬಹುಮಾನ 10000 ರೂ
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇ ರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೫೬

೬-೩-೧೯೫೪ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮೈಸೂರಿನಲ್ಲಿ ೩೯೯ ಲಕ್ಷರೂ. ಖೋತಾಬಡ್ಜೆಟ್

ಬೆಂಗಳೂರು ೬

ಶಾಸನ ಸಭೆಯಲ್ಲಿ ಈ ದಿನ ಮುಖ್ಯಮಂತ್ರಿಯವರು ಸಂಸ್ಥಾನದ ಮುಂದಿನ ಸಾಲಿನ ಆಯವ್ಯಯವನ್ನು ಮಂಡಿಸಿದರು.

ಸಂಸ್ಥಾನದ ಉತ್ಪತಿಯು ೨೧೨೧.೪೦ ಲಕ್ಷ ರೂ. ವೆಚ್ಚ ೨೪೩೦.೭೩ ಲಕ್ಷ ರೂ. ಇದರಿಂದ ೩೦೯.೩೩ ಲಕ್ಷ ರೂಪಾಯಿಗಳ ಖೋತಾ ಬೀಳುತ್ತದೆ.

ಈ ಖೋತಾದಲ್ಲಿ ಸ್ವಲ್ಪ ಭಾಗವನ್ನು ಸರಿತೂಗಿಸಲು ಈ ಕೆಳಗೆ ನಮೂದಿಸಿರುವಂತೆ ಹೆಚ್ಚಿನ ತೆರಿಗೆ ಮತ್ತು ಹೊಸತೆರಿಗೆಯನ್ನು ವಿಧಿಸಲಾಗುತ್ತದೆ:—

೧. ಭೂಕಂದಾಯದ ಮೇಲೆ ಸರ್ ಚಾರ್ಜು ವಿಧಿಸುವುದು: ಖುಷ್ಕಿ ಜಮೀನು ಶೇಕಡ $12\frac{1}{2}$, ತರಿ ಶೇಕಡ ೫೦, ಬಾಗಾಯಿತು ಶೇಕಡ $62\frac{1}{2}$ ಮತ್ತು ಕಾಫಿ ಎಕರೆಗೆ ೧೦ ರೂಪಾಯಿಗಳು.

೨. ವಾಟರ್ ರೇಟ್ ದರವನ್ನು ಶೇಕಡ ೫೦ ರಷ್ಟು ಹೆಚ್ಚಿಸುವುದು.

೩. ವಿದ್ಯುಚ್ಛಕ್ತಿ ದರವನ್ನು ಶೇಕಡ ೨೦ ರಷ್ಟು ಹೆಚ್ಚಿಸುವುದು ವ್ಯವಸಾಯಕ್ಕೆ ವಿದ್ಯುಚ್ಛಕ್ತಿ ಉಪಯೋಗಿಸುವಾಗ ಆಹಾರ ಬೆಳೆಗೆ ೯ ಪೈ ಇತರ ಬೆಳೆಗೆ ೦-೧-೬

೪. ಮದ್ರಾಸ್‌ನಲ್ಲಿರುವಂತೆ ಸ್ಟಾಂಪು ಮತ್ತು ರಿಜಿಸ್ಟ್ರೇಷನ್ ಫೀ ಹೆಚ್ಚಿಸುವುದು.

೫. ವರ್ಷಕ್ಕೆ ೭೫೦೦ ರೂಗಳಿಗಿಂತ ಹೆಚ್ಚು ಉತ್ಪತ್ತಿಯಿರುವ ಹೋಟೇಲುಗಳಿಗೆ ಶೇಕಡ ೧೦ ರಂತೆ ಮಾರಾಟ ತೆರಿಗೆ ವಿಧಿಸುವುದು.

೬. ಮಿಲ್ ಮತ್ತು ಪವರ್‌ಲೂಂಗಳಲ್ಲಿ ತಯಾರಾಗುವ ಒರಟು ಬಟ್ಟೆಗಳ ವಿನಹ ಇತರ ಬಟ್ಟೆಗಳ ಮೇಲೆ ಒಂದೇ ಘಟ್ಟದಲ್ಲಿ ರೂ.ಗೆ ೨ ಆಣೆಯಂತೆ ಮಾರಾಟತೆರಿಗೆಯನ್ನು ವಿಧಿಸಲಾಗುವುದು.

ಈ ಹೆಚ್ಚಿನ ತೆರಿಗೆಗಳಿಂದ ೧೮೫ ಲಕ್ಷ ರೂಪಾಯಿಗಳ ಅಧಿಕ ಉತ್ಪನ್ನ ಉಂಟಾಗುತ್ತದೆ.

ಈ ವರ್ಷ ನೀರಾವರಿ ಕಾರ್ಯಗಳ ಪೈಕಿ ಭದ್ರಾ ಅಣೆಕಟ್ಟಿನ ಕಾರ್ಯಕ್ಕೆ ೧೫೦ ಲಕ್ಷ, ನುಗು ಜಲಾಶಯಕ್ಕೆ ೪೫ ಲಕ್ಷ, ತುಂಗ ಅಣೆಕಟ್ಟಿನ ಕಾರ್ಯಕ್ಕೆ ೩೨ಲಕ್ಷ ಮತ್ತು ತುಂಗಭದ್ರಾ ಕಾರ್ಯಕ್ಕೆ ೪೫॥ ಲಕ್ಷ ರೂ. ಗಳನ್ನು ಒದಗಿಸಲಾಗಿದೆ.

ವಿದ್ಯಾಭ್ಯಾಸಕ್ಕಾಗಿ ೪೧೫ ಲಕ್ಷ ರೂಪಾಯಿಗಳನ್ನು ಮೀಸಲಾಗಿಡಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಗಾಗಿ ೩೩ಲಕ್ಷ ವ್ಯವಸಾಯ ವಿದ್ಯುಚ್ಛಕ್ತಿಗಾಗಿ ೩೫ ಲಕ್ಷ ರೂ ಒದಗಿಸಲಾಗಿದೆ.

ನಗರದ ಆರೋಗ್ಯ ವರದಿ

ಮೈಸೂರು ೬

ಮೈಸೂರು ನಗರದಲ್ಲಿ ಕಳೆದ ತಿಂಗಳಿನ ಅಂತ್ಯದ ೧೫ ದಿನಗಳಲ್ಲಿ ಪ್ಲೇಗ್ ಅಥವ ಸಿಡುಬಿನ ಉಪದ್ರವ ಇರಲಿಲ್ಲ. ಆದರೂ ಮುಂಜಾಗ್ರತೆ ಬಗ್ಗೆ ೯೫೦ ಮನೆಗಳಿಗೆ ಸೈನೋಫೂಮಿಗೇಟ್ ಮಾಡಲಾಯಿತು. ೫೯೮ ಪ್ರೈಮರಿ ಮತ್ತು ೧೦೭೭ ರಿ.ವ್ಯಾಕ್ಸಿನೇಷನ್ ಮಾಡಲಾಯಿತು.

ಟೈಫಾಯಿಡ್‌ನಿಂದ ಇಬ್ಬರು ಸತ್ತರು. ೮೫ ಟೈಫಾಯಿಡ್ ನಿರೋಧ ಇನಾಕ್ಯುಲೇಷನ್ ಹಾಕಲಾಯಿತು.

ಡಿಫ್ತೀರಿಯಾದ ೩ ಕೇಸುಗಳು ವರದಿಯಾಗಿತ್ತು. ೬೯೩ ಮಕ್ಕಳಿಗೆ ಡಿಫ್ತೀರಿಯಾ ನಿರೋಧ ಇನಾಕ್ಯುಲೇಷನ್ ಹಾಕಲಾಯಿತು.

ಒಂದು ಕಾಲರಾ ಕೇಸು ವರದಿಯಾಗಿ, ೩೭೦ ಜನರಿಗೆ ಇನಾಕ್ಯುಲೇಷನ್ ಮಾಡಲಾಯಿತು—ಎಂದು ಪುರಸಭೆಯ ಆರೋಗ್ಯ ಇಲಾಖಾ ವರದಿ ತಿಳಿಸಿದೆ.

ಭಾರತದ ಗಡಿಯಲ್ಲಿ ಮಿಲಿಟರಿ ಕೇಂದ್ರಗಳು

ಗೋವಾ ಸರ್ಕಾರದ ಸಿದ್ಧತೆ

ಗೋವಾಕ್ಕೆ ಇತ್ತೀಚೆಗೆ ವಿಶೇಷ ಸೈನ್ಯ ಮತ್ತು ಯುದ್ಧಸಾಮಗ್ರಿಗಳು ಬರುತ್ತಿವೆಯೆಂದೂ, ಭಾರತದ ಗಡಿ ಪ್ರದೇಶಗಳಲ್ಲಿ ಮಿಲಿಟರಿ ಕೇಂದ್ರಗಳನ್ನು ಗೋವಾ ಸರ್ಕಾರ ಸ್ಥಾಪಿಸಿದೆಯೆಂದೂ ತಿಳಿದುಬಂದಿದೆ. ೧೦ ರಿಂದ ೧೮ ವರ್ಷದ ಯುವಕರೆಲ್ಲರಿಗೂ ಕಡ್ಡಾಯವಾಗಿ ಮಿಲಟರಿ ಶಿಕ್ಷಣವನ್ನು ಕೊಡಲಾಗುತ್ತಿದೆ. ಗೋವಾದ ಮೇಲೆ ಭಾರತದ ಸೈನ್ಯದ ಆಕ್ರಮಣವನ್ನು ಎದುರಿಸಲು ಸರ್ವ ಸಿದ್ಧತೆಗಳಾಗುತ್ತಿವೆಯೆಂದೂ ಹೇಳಲಾಗಿದೆ.

ರೇಡಿಯೋ ಕೇಂದ್ರವನ್ನು ಮುಚ್ಚಲಾಗುವುದು

ಬೆಂಗಳೂರು ಜಿಲ್ಲೆಯ ಹೊಸಕೋಟೆ ಮತ್ತು ಆವಲಹಳ್ಳಿ ಬಳಿ ಕೇಂದ್ರಸರ್ಕಾರವು ರೇಡಿಯೋ ಕೇಂದ್ರವನ್ನು ಸ್ಥಾಪಿಸಲಿರುವುದರಿಂದ, ಆ ಪ್ರದೇಶಗಳ ಜಮೀನನ್ನು ವಶಪಡಿಸಿಕೊಳ್ಳುವ ಬಗ್ಗೆ ಮೈಸೂರು ಸರ್ಕಾರ ಒಂದು ಪ್ರಕಟಣೆ ಹೊರಡಿಸಿದೆ. ಮೇಲ್ಕಂಡ ಪ್ರದೇಶದಲ್ಲಿ ೫೦ ಕಿಲೋವಾಟ್ ರಿಸೀವಿಂಗ್ ಸ್ಟೇಷನ್ನನ್ನು ಸ್ಥಾಪಿಸಿ, ಸ್ಟುಡಿಯೋವನ್ನು ರಿಸಿಡೆನ್ಸಿ ಬಳಿ ಇಡಲಾಗುವುದೆಂದೂ, ಈ ಕೆಲಸವು ಮುಗಿದನಂತರ ಮೈಸೂರಿನಲ್ಲಿರುವ ರೇಡಿಯೋ ಕೇಂದ್ರವನ್ನು ಮುಚ್ಚಲಾಗುವುದೆಂದೂ ಹೇಳಲಾಗಿದೆ.

ದಸರಾ ಉತ್ಸವಕ್ಕೆ ೧॥ ಲಕ್ಷ ರೂಪಾಯಿ ಖರ್ಚು

ಬೆಂಗಳೂರು ೬

ರಾಜಧಾನಿಯಲ್ಲಿ ನಡೆಯುವ ದಸರಾ ಉತ್ಸವವು ಸಂಸ್ಥಾನದ ಸಮಾರಂಭವೆಂದೂ ಅದರ ವೆಚ್ಚಕ್ಕಾಗಿ ಪ್ರತ್ಯೇಕವಾದ ಯಾವ ಬಾಬನ್ನೂ ಗೊತ್ತುಮಾಡಿಲ್ಲವೆಂದೂ ಕಳೆದ ಉತ್ಸವಕ್ಕೆ ೧,೪೫,೬೭೭ ರೂ. ಗಳು ವೆಚ್ಚವಾಯಿತೆಂದೂ ಶಾಸನಸಭೆಯಲ್ಲಿ ಗೃಹ ಸಚಿವರು ತಿಳಿಸಿದರು.

ದಸರಾ ಉತ್ಸವ ಕಾಲದಲ್ಲಿ ಕುಸ್ತಿಪಂದ್ಯ ನಡೆಯುವ ಸಂಬಂಧದಲ್ಲಿ ನಡೆದ ಗಲಾಟೆ ಮತ್ತು ಗೋಲಿಬಾರು ಪ್ರಕರಣದಲ್ಲಿ ಸರ್ಕಾರವು ಯಾರಿಗೂ ಪರಿಹಾರ ಕೊಟ್ಟಿಲ್ಲ ಎಂದೂ ತಿಳಿಸಲಾಯಿತು.

ಪ್ರಜಾಸೋಷಲಿಸ್ಟ ಅಧ್ಯಕ್ಷರಿಗೆ ಬಹಿರಂಗ ಪತ್ರ

ರಾಜಧಾನಿಯ ಶ್ರೀ ಜಿ. ಸ್ವಾಮಿದಾಸರು ಸಂಸ್ಥಾನದ ಪ್ರಜಾಸೋಷಲಿಸ್ಟ್ ಪಕ್ಷದ ಅಧ್ಯಕ್ಷರಿಗೆ ಕೆಳಗೆಕಂಡ ಅಂಶಗಳನ್ನೊಳಗೊಂಡ ಒಂದು ಬಹಿರಂಗಪತ್ರವನ್ನು ಬರೆದಿರುತ್ತಾರೆ.

ಮಹಾಚುನಾವಣೆ ಆದನಂತರ ಪಕ್ಷವು ಅವ್ಯವಸ್ಥಿತೆಯಲ್ಲಿದ್ದು, ಚುನಾಯಿತ ಸದಸ್ಯರು ಕೆಲಸಗಾರರ ವಿಷಯದಲ್ಲಿ ತಾತ್ಸಾರ ಭಾವನೆಯಿಂದಿರುವುದು ಅಸಹನೀಯ. ಹತೋಟಿ ರದ್ದಾಗಿರುವುದರಿಂದ ಸರ್ಕಾರಿ ಡಿಪೋಗಳನ್ನು ರದ್ದುಮಾಡಲು ಮತ್ತು ದವಸಧಾನ್ಯಗಳಬೆಲೆ ಏರಿಸುವ ಲಾಭಕೋರರಮೇಲೆ ಉಗ್ರಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಪಕ್ಷವು ಒತ್ತಾಯಪಡಿಸಬೇಕು.

ಶಾಸನಸಭೆ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಉಮೇದುವಾರರನ್ನು ಆರಿಸುವಾಗ ಸ್ವಾರ್ಥಿಗಳಿಗೆ ಅವಕಾಶ ಕೊಡಬಾರದು.

ದೇಶದ ಮುಂದಿನ ಜರೂರು ಪರಿಸ್ಥಿತಿಯಲ್ಲಿ ಪಕ್ಷವು ತನ್ನದೇ ಸ್ವಂತ ಕಾರ್ಯನೀತಿಯನ್ನು ಮುಂದುವರಿಸಬೇಕು.

ಜಮೀನಿಲ್ಲದ ಕಾರ್ಮಿಕರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ

ಜಮೀನಿಲ್ಲದ ಕಾರ್ಮಿಕರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸವನ್ನು ಕೊಡಲು ಮಧ್ಯಪ್ರದೇಶ ಸರ್ಕಾರವು ನಿರ್ಧರಿಸಿ ಈ ಕಾರ್ಯಕ್ಕಾಗಿ ಮುಂದಿನ ಹಣಕಾಸಿನ ಸಾಲಿನಲ್ಲಿ ೧೦ ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದೆ.

ಇದಲ್ಲದೆ ನಿರುದ್ಯೋಗ ವಿದ್ಯಾವಂತರು ಸಣ್ಣ ಮತ್ತು ಗೃಹ ಕೈಗಾರಿಕೆಗಳನ್ನು ಸ್ಥಾಪಿಸಲು ನೆರವುನೀಡಲು ೫ ಲಕ್ಷ ರೂ. ಮುಡುಪುಮಾಡಿದೆ.

ನಗರದಲ್ಲಿ ವಿಚಿತ್ರ ಪ್ರಸಂಗ

ಮೈಸೂರು ೬

ನಿನ್ನೆಯದಿನ ಬೆಳಿಗ್ಗೆ ೧೦-೩೦ ಗಂಟೆಯಲ್ಲಿ ನಗರದ ಪ್ರಮುಖ ಕಾಂಗ್ರೆಸ್ಸಿಗರಾದ ಶ್ರೀ ಎಂ. ಎನ್. ಜೋಯಿಸ್‌ರವರ ಮನೆಯ ಒಳಗೆ ಯಾರೋ ಆಗುಂತಕನು ಆಗಮಿಸಿ ಕೂಗಲಾಗಿ ಶ್ರೀ ಜೋಯಿಸ್‌ರವರ ಪತ್ನಿ ಶ್ರೀಮತಿ ಸುಬ್ಬಮ್ಮ ಜೋಯಿಸರು ಹೊರಗೆ ಬಂದು ಅಲ್ಲಿ ನಿಂತಿದ್ದ ಮಧ್ಯವಯಸ್ಸಿನ ವ್ಯಕ್ತಿಯನ್ನು ನೋಡಿ ವಿಚಾರಿಸಲಾಗಿ ಅವನು ಆಕೆಯ ಕೈಗೆ ಖಾಲಿ ಕಾಗದವೊಂದನ್ನು ಕೊಟ್ಟು ಅದಕ್ಕೆ ರುಜು ಹಾಕಿ ಎಂದು ಕೇಳಿದನೆಂದೂ ಆಕೆಯು ಕಾರಣವನ್ನು ಕೇಳುವಾಗ ಆತನು ತನ್ನ ಕೈಲಿದ್ದ ಬೂದಿಯನ್ನು ಅವರಮೇಲೆ ಎರಚಿದನೆಂದೂ ಹೇಳಲಾಗಿದೆ. ಅನಂತರ ಶ್ರೀಮತಿ ಸುಬ್ಬಮ್ಮನವರು ಎಲ್ಲಿಹೋದರೆಂಬುದು ಯಾರಿಗು ತಿಳಿಯಲಿಲ್ಲ.

ಸಂಜೆ ೫ ಗಂಟೆ ವೇಳೆಯಲ್ಲಿ ಶ್ರೀಮತಿಯವರು ಬೆಂಗಳೂರು ರೈಲಿನಲ್ಲಿ ಕುಳಿತಿದ್ದುದನ್ನು ತಾವೇ ಅರಿತುಕೊಂಡು ಗಾಬರಿಯಿಂದ ತಮಗೆ ಏನೂ ಅರಿವಿಲ್ಲದೆ ಈರೀತಿ ರೈಲಿನಲ್ಲಿ ಪ್ರಯಾಣ ಮಾಡುತ್ತಿರುವುದಕ್ಕೆ ಇತರ ಪ್ರಯಾಣಿಕರಲ್ಲಿ ಆಶ್ಚರ್ಯ ವ್ಯಕ್ತಪಡಿಸಲು ತಮ್ಮ ಪರಿಚಯವನ್ನು ಅವರಿಗೆ ತಿಳಿಸಲಾಗಿ ಅದೇ ಗಾಡಿಯಲ್ಲಿ ಪ್ರಯಾಣ ಮಾಡುತ್ತಿದ್ದ ಬೆಂಗಳೂರಿನವಿಜಯವಿಲಾಸ ಪ್ರೆಸ್ಸಿನ ಮಾಲೀಕರ ಕಡೆಯವರು ತಮ್ಮ ಮನೆಗೆ ಅವರನ್ನು ಕರೆದುಕೊಂಡುಹೋಗಿ ಅನಂತರ ಶ್ರೀ ಕೆ. ಆರ್. ಮಾಧವರಾವ್‌ರವರಿಗೆ ಈ ವಿಷಯವನ್ನೆಲ್ಲಾ ತಿಳಿಸಿ ಅವರ ಮನೆಗೆ ಆಕೆಯನ್ನು ಕಳುಹಿಸಲಾಯಿತೆಂದು ಈ ಸುದ್ದಿಯನ್ನು ನಿನ್ನೆ ರಾತ್ರಿ ಶ್ರೀ ಮಾಧವರಾಯರು ಟೆಲಿಫೋನಿನಲ್ಲಿ ಮೈಸೂರಿಗೆ ತಿಳಿಸಿದರೆಂದೂ ಈ ದಿನ ಬೆಳಗಿನ ಜಾವದಲ್ಲಿ ಶ್ರೀಮತಿ ಸುಬ್ಬಮ್ಮನವರನ್ನು ಬೆಂಗಳೂರಿನಿಂದ ಮೈಸೂರಿಗೆ ಕರತರಲಾಯ್ತೆಂದು ತಿಳಿಯಬರುತ್ತದೆ.

ಈ ವಿಚಿತ್ರ ಪ್ರಸಂಗವು ನಗರದಲ್ಲೆಲ್ಲಾ ಕೋಲಾಹಲವನ್ನು ಎಬ್ಬಿಸಿದೆ. ಆ ಆಗುಂತಕನು ಯಾರು ಎಂಬುದನ್ನು ಪತ್ತೆಹಚ್ಚಲು ಪೋಲೀಸಿನವರು ಈಗ ಕ್ರಮನಡೆಸುತ್ತಲಿರುವರು. ಶ್ರೀಮತಿಯವರು ಈಗ ಆರೋಗ್ಯವಾಗಿ ಈಗ ಇಲ್ಲಿಯೇ ತಮ್ಮ ಮನೆಯಲ್ಲಿ ಇದ್ದಾರೆ.

೨ ನೇ ಪಂಚವಾರ್ಷಿಕ ಯೋಜನೆಯಲ್ಲಿ ರೈಲ್ವೆ ವಿಸ್ತರಣೆ

ಪಾರ್ಲಿಮೆಂಟಿನಲ್ಲಿ ರೈಲ್ವೆ ಸಚಿವರ ವಿವರಣೆ

೨ ನೇ ಪಂಚವಾರ್ಷಿಕ ಯೋಜನೆಯಲ್ಲಿ ದೇಶದಲ್ಲಿ ಸುಮಾರು ೧೫೦೦ ರಿಂದ ೨೦೦೦ ಮೈಲಿಗಳ ವರೆಗೆ ಹೊಸ ರೈಲ್ವೆ ಲೈನುಗಳನ್ನು ಹಾಕುವುದಾಗಿ ರೈಲ್ವೆ ಸಚಿವ ಶ್ರೀ ಲಾಲಾಬಹದ್ದೂರ್ ಶಾಸ್ತ್ರಿಯವರು ಪಾರ್ಲಿಮೆಂಟಿನಲ್ಲಿ ರೈಲ್ವೆ ಬಜೆಟ್ಟಿನ ಚರ್ಚೆಗೆ ಉತ್ತರ ಕೊಡುತ್ತಾ ತಿಳಿಸಿದ್ದಾರೆ.

೧೦|| ರೂ. ದುರುಪಯೋಗಕ್ಕೆ ೨ ವರ್ಷ ಕಠಿಣ ಶಿಕ್ಷೆ

ಟೆಲಿಗ್ರಾಂಗೆ ಅಂಟಿಸಿದ್ದ ೧೦ರೂ. ೮ಆಣೆ ಸ್ಟಾಂಪನ್ನು ಉಪಯೋಗಪಡಿಸಿಕೊಂಡು ಸರ್ಕಾರಕ್ಕೆ ಮೋಸ ಮಾಡಿದ್ದನೆಂಬ ಅಪಾದನೆ ಮೇಲೆ ಗೂಡಲೂರಿನ ಪೋಸ್ಟಾಫೀಸಿನಲ್ಲಿ ತಂತಿ ಗುಮಾಸ್ತನಾಗಿದ್ದ ವೇದಸುಂದರಂ ಎಂಬುವರಿಗೆ ದಕ್ಷಿಣ ಆರ್ಕಾಟ್ ಸೆಷನ್ಸ್ ನ್ಯಾಯಾಧೀಶರು ೨ ವರ್ಷ ಕಠಿಣ ಸಜಾ ೭೫ ರೂ. ಜುಲ್ಮಾನೆ ವಿಧಿಸಿದ್ದಾರೆ.

ಸ್ವದೇಶೀಯರಿಗೆ ಮಾತ್ರ ಉದ್ಯೋಗ

ಸಿಂಹಳದಲ್ಲಿ ಸ್ವದೇಶೀಯರಿಗೆ ಮಾತ್ರ ಅಲ್ಲಿಯ ಉದ್ಯೋಗವು ದೊರೆಯುವಂತೆ ವ್ಯವಸ್ಥೆಗೊಳಿಸಲು ಸದ್ಯದಲ್ಲಿಯೇ ಒಂದು ಆರ್ಡಿನೆನ್ಸ್ ಹೊರಡಿಸುವುದಾಗಿ ಅಲ್ಲಿಯ ಪ್ರಧಾನಿ ಸರ್ ಜಾನ್ ಕೊಟೇಲವಾಲಾರವರು ಹೇಳಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೫—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—೪	೨೫—೧೪
ಹರಳು	೨೬—೬	೩೨—೨
ಹುಚ್ಚೆಳ್ಳು	೩೫—	೩೭—೮
ಹೊಂಗೆಬೀಜ	೧೯—	೨೪—೬
ಹುಣಸೆಬೀಜ	೧೨—೮	—
ಹುರುಳಿ	೨೪—೧೨	೨೯—೪
ಕಾ|| ಬೀಜ	—	—
ಎಳ್ಳು	—	—
ಹೆಸರು	೩೪—೬	೪೧—೮
ಅವರೆ	೨೫ —	—
ಅಲಸಂದೆ	೩೭--	೪೨—೧೦
ಉದ್ದು	—	—
ಕೊತ್ತಂಬರಿ	೨೫—೧೪	೨೮—೧೦
ತೊಗರಿ	೨೪—೧೪	—
ಕಡಲೆ	೪೪—೨	೪೭—೨
ಸೀಗೆಕಾಯಿ	೪—೪	೫—೧
ಬೆಲ್ಲ	—	—
ಮೆಣಸಿನಕಾಯಿ	—	—
ಹುಣಸೆಹಣ್ಣು	೪—೧೫	೯—೧೦
ತೆಂಗಿನಕಾಯಿ	೧೬೭—	೩೩೫—

ವಿದ್ಯುದುತ್ಪಾದಕ ಕಾರ್ಖಾನೆ

ಅಮೆರಿಕಾದೇಶದಲ್ಲಿ ಜಗತ್ತಿನಲ್ಲೇ ಮೊದಲನೆಯದಾಗಿರುವ ಪರಮಾಣು-ವಿದ್ಯುದುತ್ಪಾದಕ ಕಾರ್ಖಾನೆಯು ನಿರ್ಮಿಸಲ್ಪಡುತ್ತಿದೆ

ಮೂರು ಅಥವಾ ನಾಲ್ಕು ವರ್ಷಗಳೊಳಗೆ ಹೊಸ ಕಾರ್ಖಾನೆಯ ನಿರ್ಮಾಣವು ಸಂಪೂರ್ಣವಾಗುವುದು. ಈ ಕಾರ್ಖಾನೆಗೆ ೬೦,೦೦೦ ಕಿಲೋವಾಟ್ಸುಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಕನಿಷ್ಠ ಶಕ್ತಿ ಇರುವುದು. ಇದು ಒಂದು ಲಕ್ಷ ಜನರಿರುವ ಸಮಾಜದ ಅವಶ್ಯಕತೆಗಳನ್ನು ಪೂರೈಸಲು ಸಾಕಾಗಬಲ್ಲುದು.

ಪೆಪ್ಸುವಿನಲ್ಲಿ ಕಾಂಗ್ರೆಸ್‌ಗೆ ಬಹುಮತ

ಪೆಪ್ಸುವಿನಲ್ಲಿ ಮಹಾ ಚುನಾವಣೆಯು ನಡೆದು ಶಾಸನಸಭೆಯ ೬೦ ಸ್ಥಾನಗಳ ಫಲಿತಾಂಶವು ಪ್ರಕಟವಾಗಿದೆ. ಕಾಂಗ್ರೆಸ್ ಬಹುಮತ ಪಡೆದು ೩೭ ಸ್ಥಾನಗಳನ್ನು ಗಳಿಸಿದೆ. ಮಾಸ್ಟರ್ ತಾರಾಸಿಂಗ್‌ರವರ ಅಕಾಲಿ ಪಕ್ಷ ೧೦, ರಾರ್ಮಾ ಅಕಾಲಿ ಪಕ್ಷ ೨, ಕಮ್ಯೂನಿಸ್ಟ್ ೪, ಸ್ವತಂತ್ರರು ೭ ಸ್ಥಾನಗಳನ್ನು ಗಳಿಸಿದ್ದಾರೆ.

ಭಾರತ ಮೇಲ್ವಿಚಾರಕ ಸೈನ್ಯ ವಾಪಸ್ಸು

ಕೊರಿಯಾದಲ್ಲಿ ಮೇಲ್ವಿಚಾರಕ ಕಾರ್ಯದಲ್ಲಿ ತೊಡಗಿದ್ದ ಭಾರತ ಸೈನ್ಯದ ೩ ನೇ ತಂಡವು ನಿನ್ನೆಯದಿನ ಮದ್ರಾಸಿಗೆ ಆಗಮಿಸಿತು.

ಮುಖ್ಯಮಂತ್ರಿ ಶ್ರೀ ಸಿ. ರಾಜಗೋಪಾಲಾಚಾರಿ ಮತ್ತು ಇತರ ಪ್ರಮುಖರು ಈ ತಂಡವನ್ನು ಸ್ವಾಗತಿಸಿದರು ಇದರಲ್ಲಿ ೫೪೪ ಅಧಿಕಾರಿಗಳು ಮತ್ತು ಸೈನ್ಯಕರು ಇದ್ದಾರೆ.

ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೆ ಸೂಚನೆ

ಭಾಷಾವಾರು ಪ್ರಾಂತ್ಯ ಚಳುವಳಿಯನ್ನು ಪ್ರಾರಂಭಿಸಿರುವ ಹಲವಾರು ರಾಜಕೀಯ ಪಕ್ಷಗಳೊಡನೆ ಕಾಂಗ್ರೆಸ್ಸಿಗರಾರೂ ಭಾಗವಹಿಸಬಾರದು. ಹಾಗೆ ಭಾಗವಹಿಸಿದವರನ್ನು ಎಚ್ಚರಿಕೆಯಿಂದ ನೋಡಿಕೊಂಡು ಅವರಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಲು ಕೇಂದ್ರ ಕಛೇರಿಗೆ ತಿಳುವಳಿಕೆ ಕೊಡಬೇಕೆಂದು ಎ.ಐ.ಸಿ.ಸಿ. ಕಾರ್ಯದರ್ಶಿ ಎಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಸೂಚನೆಯನ್ನಿತ್ತಿರುವುದಾಗಿ ತಿಳಿಯಬರುತ್ತದೆ.

ಸ್ಪರ್ಧೆಗಳನ್ನು ಬಹಿಷ್ಕರಿಸಬೇಕು

ಪಾರ್ಲಿಮೆಂಟಿನಲ್ಲಿ ಸದಸ್ಯರೊಬ್ಬರ ನಿರ್ಣಯ

ದೇಶದಲ್ಲಿ ನಾನಾ ವಿಧದ ಸ್ಪರ್ಧೆಗಳು ಪ್ರಾರಂಭವಾಗಿ ಜನರ ಕಾಲವ್ಯಯವಾಗುತ್ತಿರುವುದಲ್ಲದೆ ಆರ್ಥಿಕ ಪರಿಸ್ಥಿತಿಯು ಹದಗೆಡುತ್ತಿದೆ. ಆದ್ದರಿಂದ ಎಲ್ಲಾ ರೀತಿಯ ಸ್ಪರ್ಧೆಗಳನ್ನೂ ಬಹಿಷ್ಕರಿಸಬೇಕೆಂಬ ಮಸೂದೆಯನ್ನು ಶ್ರೀ ರಾಮರಾವ್‌ರವರು ವಿಧಾನಪರಿಷತ್ತಿನಲ್ಲಿ ಮಂಡಿಸಿದರು.

ಈ ಸಂದರ್ಭದಲ್ಲಿ ಗೃಹಸಚಿವ ಡಾ|| ಕಟ್ಜುರವರು ಮಾತನಾಡುತ್ತಾ ಈ ಸ್ಪರ್ಧೆಗಳ ಬಹಿಷ್ಕಾರ ಅಥವಾ ಇನ್ಯಾವರೀತಿಯ ಕಾರ್ಯಕ್ರಮದಬಗ್ಗೆ ಎಲ್ಲಾ ಪ್ರಾಂತ್ಯಸರ್ಕಾರಗಳ ಅಭಿಪ್ರಾಯವನ್ನು ಕೇಳಲಾಗಿದೆ ಅಲ್ಲಿಂದ ಜವಾಬುಗಳು ಬಂದನಂತರ ಮುಂದಿನ ಶಾಸನಸಭೆ ಅಧಿವೇಶನದಲ್ಲಿ ಒಂದು ಹೊಸ ಮಸೂದೆಯನ್ನು ತರುವ ವ್ಯವಸ್ಥೆ ಮಾಡಲಾಗುತ್ತದೆ ಅಥವಾ ಅದರ ವಿಷಯದಲ್ಲಿ ಒಂದು ಹೇಳಿಕೆಯನ್ನು ಕೊಡಲಾಗುತ್ತದೆ ಎಂದು ತಿಳಿಸಿದರು.

ಆರ್ಥಿಕ ವೆಚ್ಚದಲ್ಲಿ ಕೇಂದ್ರದ ಹೆಚ್ಚಿನ ಹತೋಟಿ ಬೇಡ

ಸರ್ಕಾರಿ ಉದ್ಯೋಗಗಳಲ್ಲಿ ಬಡ್ತಿಯನ್ನು ಕೊಡುವಾಗ ಅರ್ಹತೆಗೆ ಪ್ರಥಮ ಸ್ಥಾನವನ್ನು ಕೊಡಬೇಕು, ಬರೀ ಸೀನಿಯಾರಟಿಯನ್ನು ಗಮನಿಸಬಾರದು, ಪಬ್ಲಿಕ್ ಸರ್ವಿಸ್ ಕಮಿಷನ್ ಮೂಲಕ ಕೆಲಸಕ್ಕೆ ನೇಮಿಸಿಕೊಳ್ಳುವಾಗ ಅರ್ಜಿದಾರರು ಮಾಡಿರುವ ಪರೀಕ್ಷೆಗಳನ್ನೇ ಗಮನಿಸದೆ ಅವರ ಬುದ್ಧಿಶಕ್ತಿ ಮತ್ತು ಸಮಾಜಸೇವೆ ಮಾಡುವಶಕ್ತಿ ಮುಂತಾದುವನ್ನು ಗಮನಿಸಬೇಕು. ತಾಂತ್ರಿಕ ಹುದ್ದೆಗಳ ನೇಮಕವನ್ನು ಪಬ್ಲಿಕ್ ಸರ್ವಿಸ್ ಕಮಿಷನ್ ಮಾಡಕೂಡದು ಎಂಬೀ ಸಲಹೆಗಳನ್ನು ಕೇಂದ್ರ ಪ್ರಧಾನಿಶಾಖೆಯು ಎಲ್ಲಾ ಪ್ರಾಂತ್ಯ ಸರ್ಕಾರಗಳಿಗೆ ಸೂಚನೆಯನ್ನಿತ್ತಿರುವುದಾಗಿ ತಿಳಿಯಬರುತ್ತದೆ.

ಅಲ್ಲದೆ ಪ್ರಾಂತ್ಯಗಳಲ್ಲಿ ಅಭಿವೃದ್ಧಿ ಕಾರ್ಯಗಳು ಮತ್ತು ಇತರ ಯೋಜನೆಗಳನ್ನು ಕೈಗೊಳ್ಳುವಾಗ ಅನೇಕ ವಿಷಯಗಳು ಕೇಂದ್ರೀಕೃತವಾಗಿ ಕೆಲಸ ನಡೆಸಲು ಆತಂಕಗಳು ಹೆಚ್ಚಾಗುತ್ತಿವೆ ಆದುದರಿಂದ ಬಜೆಟ್ಟಿನಲ್ಲಿ ನಮೂದಿಸಿರುವ ವೆಚ್ಚಗಳನ್ನು ಮಾಡುವಾಗ ಪ್ರಾಂತ್ಯ ಸರ್ಕಾರಗಳಮೇಲೆ ಕೇಂದ್ರ ಸರ್ಕಾರದ ಹತೋಟಿ ಹೆಚ್ಚಾಗಿರಕೂಡದು ಎಂಬ ಅಂಶವೂ ಈ ಸೂಚನೆಯಲ್ಲಿ ಅಡಕವಾಗಿರುವುದಾಗಿ ತಿಳಿಯಬರುತ್ತದೆ.

ಪೂರ್ವ ಬಂಗಾಳದಲ್ಲಿ ಗೌರ್ನರ್ ಆಡಳಿತ

ಪೂರ್ವಬಂಗಾಳದಲ್ಲಿ ಇದೇ ೧೪ನೇ ತಾರೀಖಿನಿಂದ ಗೌರ್ನರ್ ಆಡಳಿತವು ಜಾರಿಗೆ ಬರುವುದಾಗಿ ಪಾಕೀಸ್ತಾನ ಪ್ರಧಾನಿ ಮಹಮುದ್ ಅಲಿಯವರು ಹೇಳಿದ್ದಾರೆ.

ಮುಕ್ತಾಯ ಭಾಷಣ

ಮೈಸೂರು ೬

ಪ್ರಥಮದರ್ಜೆ ಕಾಲೇಜಿನ ಪ್ರಕೃತಿ ವಿಜ್ಞಾನಶಾಸ್ತ್ರ ಸಂಘದ ಆಶ್ರಯದಲ್ಲಿ ಇದೇ ೭ನೇ ತಾರೀಖು ಭಾನುವಾರ ಸಂಜೆ ೪-೧೫ ಗಂಟೆಗೆ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಮುಕ್ತಾಯ ಭಾಷಣವನ್ನು ಮಾಡುತ್ತಾರೆ.

ಬಹಿರಂಗ ಸಭೆ

ಮೈಸೂರು ೬

ನಾಳೆ ೭-೩-೫೪ ನೇ ಭಾನುವಾರ ಸಂಜೆ ೬ ಗಂಟೆಗೆ ಟವನ್‌ಹಾಲ್ ಮೈದಾನದಲ್ಲಿ ಅಮೆರಿಕಾ ಪಾಕೀಸ್ಥಾನದ ಮಿಲಿಟರಿ ಒಪ್ಪಂದವನ್ನು ಖಂಡಿಸಲು ಶ್ರೀ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯುವುದು

ಕಾಶ್ಮೀರ ವಿವಾದದಲ್ಲಿ ಟರ್ಕಿ ಪ್ರವೇಶಿಸುವುದಿಲ್ಲ

ಭಾರತ ಮತ್ತು ಪಾಕೀಸ್ಥಾನಗಳ ನಡುವೆ ಇರುವ ಕಾಶ್ಮೀರ ವಿವಾದದಲ್ಲಿ ಟರ್ಕಿಯು ಪ್ರವೇಶಿಸದೆ ತಟಸ್ಥವಾಗಿರುವುದಾಗಿ ಟರ್ಕಿಯ ವಿದೇಶಾಂಗ ಶಾಖಾ ವಕ್ತಾರರು ಹೇಳಿದ್ದಾರೆ.

ರಾಷ್ಟ್ರಾಧ್ಯಕ್ಷರ ಪ್ರವಾಸ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದ್‌ರವರು ಅಂಡಮಾನ್ ದ್ವೀಪಗಳ ಪ್ರವಾಸ ಕೈಗೊಳ್ಳಲು ಈದಿನ ದೆಹಲಿಯಿಂದ ಪ್ರಯಾಣ ಮಾಡಿದರು.

ರಾಷ್ಟ್ರೀಯ
ವಿದ್ಯೋದಯ ನಿಧಿ ಲಾಟರಿ
ಮುಕ್ತಾಯ 31-3-1954 ಡ್ರಾಯಿಂಗ್ 19-4-1954
ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು
ಮತ್ತು
ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ
ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ
———
ಮೊದಲನೆ ಬಹುಮಾನ 10000 ರೂ
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೩೩೧೦

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೫೮

೮-೪-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಹೋಟೇಲುಗಳ ಮೇಲೆ ಮಾರಾಟ ತೆರಿಗೆ

ರಾಜ್ಯಾಂಗ ಬಾಹಿರವಾದುದು

ಮೈಸೂರು ೮

ಸಂಸ್ಥಾನದ ಹೋಟೇಲುಗಳಿಗೆ ಒಟ್ಟು ವ್ಯಾಪಾರದ ಮೊಬಲಗಿನ ಮೇಲೆ ಶೇಕಡ ಹತ್ತರಂತೆ ಮಾರಾಟ ತೆರಿಗೆ ವಿಧಿಸುವುದಾಗಿ ಬಜೆಟ್ಟಿನಲ್ಲಿ ನಮೂದಿಸಿರುವುದು ರಾಜ್ಯಾಂಗ ಬಾಹಿರವಾಗಿದೆ. ಹೋಟೇಲುಗಳಾಗಲೀ ಅಥವ ಮತ್ತಾವ ವ್ಯಾಪಾರಕ್ಕಾಗಲೀ ಶಾಸನ ಮಾಡುವುದು ಮಾರಾಟ ತೆರಿಗೆಯಲ್ಲ. ಅದು ವೃತ್ತಿ ತೆರಿಗೆ ಆಗುವುದು ಆದುದರಿಂದ ಅದು ರಾಜ್ಯಾಂಗದ ೧೪, ೨೭೬ ವಿಧಿಗೆ ವಿರೋಧವಾದುದು. ಪ್ರತಿಯೊಬ್ಬ ಶಾಸನ ಸಭಾ ಸದಸ್ಯರು ತಾವು ಮಾಡುವ ಶಾಸನಗಳು ರಾಜ್ಯಾಂಗಕ್ಕೆ ಬದ್ಧವಾಗಿಡೆಯೇ ಎಂಬುದನ್ನು ಯೋಚಿಸಬೇಕು. ಆದ್ದರಿಂದ ಈ ವಿಚಾರವನ್ನು ಸಂಪೂರ್ಣವಾಗಿ ಸಭೆಯು ಪರಿಶೀಲಿಸಬೇಕು-ಎಂಬುದಾಗಿ ಶ್ರೀ ತಗಡೂರು ರಾಮಚಂದ್ರರಾಯರು ಮೈಸೂರು ಶಾಸನಸಭೆಯ ಅಧ್ಯಕ್ಷರಿಗೆ ಪತ್ರ ಬರೆದಿದ್ದಾರೆ.

ಮುಕ್ತಾಯ ಭಾಷಣ

ಮೈಸೂರು ೮

ಮೈಸೂರು ವಿಶ್ವವಿದ್ಯಾನಿಲಯದ ಪತ್ರಿಕೋದ್ಯಮ ಸಂಘದ ಮುಕ್ತಾಯ ಭಾಷಣವನ್ನು ಇದೇ ೧೩ನೇ ತಾರೀಖು ಶನಿವಾರ ಮಧ್ಯಾಹ್ನ ೪ ಘಂಟೆಗೆ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ನೆರವೇರಿಸುವರು.

ವಿಧಾನಸಭಾ ಮಾಜಿ ಅಧ್ಯಕ್ಷ ಶ್ರೀ ವಿ. ವೆಂಕಟಪ್ಪನವರು ಶ್ರೀ ಡಿ. ವಿ. ಗುಂಡಪ್ಪನವರ ಭಾವಚಿತ್ರ ಅನಾವರಣ ಮಾಡುತ್ತಾರೆ. ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ವಿ. ಎಲ್. ಡಿಸೌಜಾರವರು ಈ ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ.

ವಾರ್ಷಿಕೋತ್ಸವ

ಮೈಸೂರು ೮

ಸಾರ್ವಜನಿಕ ವಿದ್ಯಾರ್ಥಿನಿಲಯದ ೮ ನೇ ವಾರ್ಷಿಕೋತ್ಸವವು ಇದೇ ೧೧ ನೇ ತಾರೀಖು ಗುರುವಾರ ಸಂಜೆ ೬ ಗಂಟೆಗೆ ನಿಲಯದ ನೂತನ ಕಟ್ಟಡದಲ್ಲಿ ಜಿಲ್ಲಾಧಿಕಾರಿ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ಪಾನ ನಿರೋಧ ವಿಸ್ತರಣೆ

ಮೈಸೂರು ೮

ಮೈಸೂರು ಸಂಸ್ಥಾನದಲ್ಲಿ ಪಾನ ನಿರೋಧವನ್ನು ಇನ್ನೂ ಕೆಲವು ತಾಲ್ಲೋಕುಗಳಿಗೆ ವಿಸ್ತರಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಭಾರಿ ಭೋಜನಕೂಟಗಳು ಅಸಹ್ಯಕರ

ಭಾರತದಲ್ಲಿ ಕೋಟ್ಯಾಂತರ ಜನರು ಹೊಟ್ಟೆ ಬಟ್ಟೆಗಿಲ್ಲದೆ ನರಳುತ್ತಿರುವಾಗ ಕೆಲವರು ತಮ್ಮ ಐಶ್ವರ್ಯವನ್ನು ತೋರಿಸಲು ಭಾರಿ ಔತಣ ಮತ್ತು ಮದ್ಯಪಾನ ಕೂಟದಲ್ಲಿ ತೊಡಗಿರುವುದು ಅತೀ ಶೋಚನೀಯ ಮತ್ತು ಅಸಹ್ಯಕರ ಎಂದು ಪ್ರಧಾನಿ ನೆಹರೂ ಖಂಡಿಸಿದ್ದಾರೆ. ಈ ರೀತಿ ದೆಹಲಿಯಲ್ಲಿ ಕೂಟಗಳು ನಡೆಯುತ್ತಿರುವುದು ದೇಶಕ್ಕಾಗಲೀ ಅಥವ ಯಾರಿಗೇ ಆಗಲಿ ಉತ್ತಮ ಮೇಲ್ಪಂಕ್ತಿಯಲ್ಲವೆಂದೂ ಅವರು ಹೇಳಿದ್ದಾರೆ.

ಸರ್ಕಾರ ರಚಿಸಲು ಕಾಂ|| ಪಕ್ಷದ ನಿರಾಕರಣೆ

ತಿರುವಾಂಕೂರು--ಕೊಚ್ಚಿಯ ರಾಜಪ್ರಮುಖರ ಆಹ್ವಾನದಂತೆ ಅಲ್ಲಿಯ ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಪಿ.ಗೋವಿಂದಮೆನನ್‌ರವರು ರಾಜಪ್ರಮುಖರನ್ನು ಭೇಟಿಮಾಡಿ ತಮ್ಮ ಪಕ್ಷವು ಬಹುಮತ ಪಡೆಯದಿರುವುದರಿಂದ ತಾವು ಮಂತ್ರಿಮಂಡಲವನ್ನು ರಚಿಸಲು ಸಾಧ್ಯವಿಲ್ಲವೆಂದು ಹೇಳಿದ್ದಾರೆ.

ಬೊಂಬಾಯಿಯಲ್ಲಿ ೨೭ ರೇಷ್ಮೆ ಗಿರಣಿಗಳು ಬಂದು

ಕೃತಕ ರೇಷ್ಮೆಯ ಮೇಲೆ ಭಾರತ ಸರ್ಕಾರದವರು ಇತ್ತೀಚೆಗೆ ಅಧಿಕ ಸುಂಕವನ್ನು ಹಾಕಿದುದರ ಪರಿಣಾಮವಾಗಿ ಬೊಂಬಾಯಿ ನಗರದಲ್ಲಿರುವ ೧೨೭ ರೇಷ್ಮೆ ಗಿರಣಿಗಳ ಪೈಕಿ ೨೭ನ್ನು ಮುಚ್ಚಲಾಗಿದೆ. ಇದರಿಂದ ಸುಮಾರು ೮೦೦೦ ಕಾರ್ಮಿಕರು ನಿರುದ್ಯೋಗಿಗಳಾಗುವರು.

ಪೆಪ್ಸುವಿನಲ್ಲಿ ಇಬ್ಬರ ಕಾಂಗ್ರೆಸ್ ಮಂತ್ರಿಮಂಡಲ

ಪೆಪ್ಸುವಿನಲ್ಲಿ ಬಹುಮತ ಗಳಿಸಿರುವ ಕಾಂಗ್ರೆಸ್ ಪಕ್ಷವು ಈದಿನ ಶ್ರೀ|| ರಘುಬೀರಸಿಂಗ್‌ರ ನಾಯಕತ್ವದಲ್ಲಿ ಅಧಿಕಾರ ವಹಿಸಿಕೊಂಡಿತು. ಸದ್ಯಕ್ಕೆ ಅವರು ಮತ್ತು ಶ್ರೀ ಭಿಷ್ಣಾರವರು ಮಾತ್ರ ಮಂತ್ರಿಗಳಾಗಿರುವರು.

ಸರ್ಕಾರಿ ನೌಕರರಿಗೆ ಮದ್ಯಪಾನ ನಿರೋಧ ಷರತ್ತು

ಹೊಸದಾಗಿ ಸೇರುವ ಸರ್ಕಾರಿ ನೌಕರರು ಮದ್ಯಪಾನ ಮಾಡುವುದಿಲ್ಲವೆಂಬ ಷರತ್ತಿಗೆ ರುಜು ಹಾಕಬೇಕೆಂದು ಮಧ್ಯಪ್ರದೇಶ ಸರ್ಕಾರ ನೂತನ ಆಜ್ಞೆ ಮಾಡಿದೆ.

ನಗರದಲ್ಲಿ ಭಾರಿ ಕಳ್ಳತನ

೪೦ ಸಾವಿರ ರೂ. ಬೆಲೆ ಬಾಳುವ ವಸ್ತುಗಳ ಅಪಹರಣ

ಮೈಸೂರು ೮

ರಾಜಧಾನಿಯ ಲಲಿತ್‌ಮಹಲ್ ಅರಮನೆ ಬಳಿ ಇರುವ ಈಸ್ಟರ್ನ ಬಡಾವಣೆಯಲ್ಲಿರುವ ಶ್ರೀ ಎಂ.ಜಿ. ಗೋಪಾಲರಾಜೇಅರಸಿನವರ ಮನೆಯಲ್ಲಿ ಕಳೆದ ೫ ನೇ ತಾರೀಖು ರಾತ್ರಿ ೪೦ ಸಾವಿರ ರೂ ಬೆಲೆಬಾಳುವ ವಸ್ತುಗಳ ಕಳುವು ಆಗಿದೆಯೆಂದು ಪೋಲೀಸರಿಗೆ ವರದಿಯಾಗಿದೆ.

ಯಾರೋ ಕಳ್ಳರು ರಾತ್ರಿ ಕಿಟಕಿಯನ್ನು ಒಡೆದು ಮನೆಗೆ ನುಗ್ಗಿ ಅಲ್ಲಿ ಇದ್ದ ಬೆಳ್ಳಿಯ ಸಾಮಾನುಗಳು, ಆಭರಣ ಮತ್ತು ಭಾರಿ ಸೀರೆಗಳನ್ನು ಅಪಹರಿಸಿಕೊಂಡು ಹೋಗಿದ್ದಾರೆಂದೂ ಹೇಳಲಾಗಿದೆ. ನಜರಬಾದ್ ಪೋಲೀಸರು ತನಿಖೆ ನಡೆಸುತ್ತಿದ್ದಾರೆ.

ಕೈಮಗ್ಗದ ಸಪ್ತಾಹ

ಮೈಸೂರು ೮

ಅಖಿಲ ಭಾರತ ಕೈಮಗ್ಗದ ಸಪ್ತಾಹದ ಪ್ರಾರಂಭೋತ್ಸವವನ್ನು ನಿನ್ನೆ ಸಂಜೆ ಟೌನ್ ಹಾಲಿನಲ್ಲಿ ಜಿಲ್ಲಾಧಿಕಾರಿ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ನೆರವೇರಿಸಿದರು.

ಶ್ರೀಮತಿ ಕಾಮೇಶ್ವರಮ್ಮನವರು ಕೈಮಗ್ಗ ಕೈಗಾರಿಕೆಗೆ ಪ್ರೋತ್ಸಾಹ ಆಗತ್ಯವೆಂದೂ, ಈ ಬಗ್ಗೆ ಜನರಲ್ಲಿ ಹೆಚ್ಚು ಆಸಕ್ತಿ ಉಂಟುಮಾಡಲು ಈ ಸಪ್ತಾಹವನ್ನು ಕೈಗೊಳ್ಳಲಾಗಿದೆಯೆಂದೂ ತಿಳಿಸಿದರು.

ಶ್ರೀಗಳಾದ ಎ. ಪಿ. ರಾವ್ ಮತ್ತು ಸಿದ್ಧಲಿಂಗಯ್ಯನವರು ಭಾಷಣ ಮಾಡಿ ಈ ಕೈಗಾರಿಕೆಯ ಹೀನ ಸ್ಥಿತಿಯನ್ನು ವಿವರಿಸಿದರು.

ಭಾರತಾದ್ಯಂತ ೩೦ ಲಕ್ಷ ಕೈಮಗ್ಗಗಳು ಇವೆ. ಅವುಗಳಿಂದ ೧೨೦ ಕೋಟಿ ಗಜ ತಯಾರಾಗುತ್ತಲಿದೆ. ಮೈಸೂರು ಸಂಸ್ಥಾನದಲ್ಲಿ ೩೨ ಸಾವಿರ ಕೈಮಗ್ಗಗಳಿವೆ. ಆರ್ಥಿಕ ದುಸ್ಥಿತಿಯಿಂದ ಸಾವಿರಾರು ಮಗ್ಗಗಳು ನಿಂತು ಹೋಗಿವೆ. ಈ ಕೈಗಾರಿಕೆಯ ಅಭಿವೃದ್ಧಿಗಾಗಿ ಮೈಸೂರು ಸರ್ಕಾರದವರು ಸರ್ವ ಪ್ರಯತ್ನ ಮಾಡುತ್ತಿದ್ದಾರೆ. ಒಂದು ನೇಕಾರ ಸಂಘವನ್ನು ಮೂರುವರೆ ಲಕ್ಷ ರೂ ಬಂಡವಾಳದ ನೆರವಿನಿಂದ ಸದ್ಯದಲ್ಲೇ ಸರ್ಕಾರ ಸ್ಥಾಪಿಸಲಿದೆ-ಎಂದು ಕಾರ್ಯದರ್ಶಿಯವರು ತಿಳಿಸಿದರು.

ಭಾರತದಲ್ಲಿರುವ ಲಕ್ಷಾಂತರ ಮಂದಿ ಕೈಮಗ್ಗದವರ ನಿರುದ್ಯೋಗತನವನ್ನು ಬಗೆಹರಿಸಬೇಕಾದರೆ ಜನರು ಮುಂದೆ ಬಂದು ಕೈಮಗ್ಗದ ಬಟ್ಟೆಗಳಿಗೆ ಪ್ರೋತ್ಸಾಹ ಕೊಡಬೇಕು. ದೇಶದಲ್ಲಿರುವ ಬಡತನ ಮತ್ತು ನಿರುದ್ಯೋಗತನ ಹೋಗಬೇಕಾದರೆ ನಮಗೆ ಬೇಕಾದ ವಸ್ತುಗಳನ್ನು ಇಲ್ಲೇ ತಯಾರಿಸಬೇಕಾದುದು ಅತ್ಯಗತ್ಯ. ಭಾರತದಲ್ಲಿ ಕೈಮಗ್ಗ ಕೈಗಾರಿಕೆಯು ಒಂದು ದೊಡ್ಡ ಉದ್ಯಮವಾಗಿದೆ. ಆದರೆ ಅದಕ್ಕೆ ಸಾಕಷ್ಟು ಗಿರಾಕಿಗಳಿಲ್ಲದೆ ಅತಿ ಹೀನಸ್ಥಿತಿಗೆ ಬಂದಿದೆ. ಅದನ್ನು ಉತ್ತಮ ಪಡಿಸಲು ಕೇಂದ್ರ ಸರ್ಕಾರದವರು ಈ ರಾಷ್ಟ್ರೀಯ ಸಪ್ತಾಹ ಕೈಗೊಂಡಿದ್ದಾರೆ. ಅದಕ್ಕೆ ಸಾರ್ವಜನಿಕರು ಬೆಂಬಲ ನೀಡಬೇಕು-- ಎಂದು ಜಿಲ್ಲಾಧಿಕಾರಿಗಳು ಮನವಿ ಮಾಡಿದರು.

ಗಾಂಧಿಸಾಗರ ಅಣೆಕಟ್ಟು

ಮಧ್ಯಭಾರತದಲ್ಲಿ ೧೧ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಜಂಬಲ್ ನದಿಗೆ ಕಟ್ಟಲಾಗುವ ಗಾಂಧಿಸಾಗರ ಅಣೆಕಟ್ಟಿನ ಶಂಕುಸ್ಥಾಪನೆಯನ್ನು ನಿನ್ನೆಯದಿನ ಪ್ರಧಾನಿ ನೆಹರೂರವರು ನೆರವೇರಿಸಿದರು.

ಈ ಅಣೆಕಟ್ಟಿನ ನಿರ್ಮಾಣದಿಂದ ೬೦೦೦೦ ಕಿಲೋವಾಟ್ಸ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ತಯಾರಿಸಲು ಅನುಕೂಲವಾಗುತ್ತದೆ.

ನೆಹರೂ-ಮಹಮುದ್ ಅಲಿ ಭೇಟಿ

ತಾವು ಭಾರತ ಪ್ರಧಾನಿ ನೆಹರೂರವರನ್ನು ಈ ಮಾಹೆಯ ಅಂತ್ಯದೊಳಗೆ ನೋಡುವ ನಿರೀಕ್ಷೆಯಿರುವುದಾಗಿ ಪಾಕ್ ಪ್ರಧಾನಿ ಮಹಮುದ್ ಅಲಿಯವರು ಹೇಳಿದ್ದಾರೆ.

ಕೆರೆಗಳು ಒಡೆದುದಕ್ಕೆ ನಿರ್ಮಾಪಕರೇ ಕಾರಣ

ಚಿತ್ರದುರ್ಗ ಜಿಲ್ಲೆಯ ಜಗಳೂರಿನ ಸಂಗೇನಹಳ್ಳಿ ಮತ್ತು ತುಪ್ಪದಹಳ್ಳಿ ಕೆರೆಗಳು ಒಡೆದುಹೋಗಿ ವಿಪರೀತ ನಷ್ಟ ಸಂಭವಿಸಿರುವುದು. ಅದರ ದೋಷಯುಕ್ತ ನಿರ್ಮಾಣವೇ ಕಾರಣವೆಂದೂ, ಅದಕ್ಕೆ ಜವಾಬ್ದಾರರಾದವರ ಮೇಲೆ ಉಗ್ರ ಕ್ರಮ ಕೈಗೊಳ್ಳಬೇಕೆಂದೂ ಆ ಬಗ್ಗೆ ನೇಮಿಸಲಾಗಿದ್ದ ವಿಶೇಷ ಸಮಿತಿಯು ವರದಿ ಮಾಡಿರುವುದಾಗಿ ಗೊತ್ತಾಗಿದೆ.

ಸರ್ಕಾರವು ಈ ವರದಿಯನ್ನು ಪ್ರಕಟಿಸಿ ಸಲಹೆಗಳ ಬಗ್ಗೆ ಪರಿಶೀಲನೆ ನಡೆಸುತ್ತಿದೆ.

ಆಂಧ್ರದಲ್ಲಿ ಹೊಸ ತೆರಿಗೆಗಳು

ಆಂಧ್ರ ಶಾಸನಸಭೆಯಲ್ಲಿ ಅಲ್ಲಿಯ ಆರ್ಥಿಕ ಸಚಿವ ಶ್ರೀ ಟಿ. ವಿಶ್ವನಾಥಂರವರು ಮೊನ್ನೆಯದಿನ ಮುಂದಿನ ಸಾಲಿನ ೨ ಕೋಟಿ೯ ಲಕ್ಷ ರೂಪಾಯಿಗಳ ಖೋತಾ ಆಯವ್ಯಯ ಪಟ್ಟಿಯನ್ನು ಮಂಡಿಸಿದರು.

ಖೋತಾವನ್ನು ಸರಿಪಡಿಸಲು ನೀರಿನ ಮೇಲಿನ ಕಂದಾಯವನ್ನು ಹೆಚ್ಚಿಸುವುದು, ಲಾಭದಾಯಕ ಬೆಳೆಗಳ ಮೇಲೆ ತೆರಿಗೆ ವಿಧಿಸುವುದು, ನೀರಾವರಿ ಸೌಕರ್ಯಗಳನ್ನು ಹೆಚ್ಚಾಗಿ ಪಡೆಯುವ ಜಮೀನುಗಳ ಮೇಲೆ ಅಭಿವೃದ್ಧಿ ತೆರಿಗೆಯನ್ನು ಹಾಕುವ ಹೊಸ ಕ್ರಮಗಳನ್ನು ಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ. ಈ ಹೊಸ ತೆರಿಗೆಗಳನ್ನು ವಿಧಿಸುವುದರಿಂದ ಒಂದು ಕೋಟಿ ರೂಪಾಯಿಗಳ ಅಧಿಕ ಉತ್ಪತ್ತಿಯಾಗುವುದೆಂದೂ ಅವರು ಹೇಳಿದ್ದಾರೆ.

ಅಖಿಲಭಾರತ ಮಲೆನಾಡು ಸಮ್ಮೇಳನ

ಕೇಂದ್ರ ಸರ್ಕಾರದ ಆಹಾರ ಸಚಿವ ಶ್ರೀ ರಫಿ ಅಹಮದ್ ಕಿದ್ವಾಯ್‌ರವರು ಶಿವಮೊಗ್ಗದಲ್ಲಿ ಮುಂದಿನ ತಿಂಗಳು ೬ ನೇ ತಾ|| ನಡೆಯುವ ಅಖಿಲಭಾರತ ಮಲೆನಾಡು ಸಮ್ಮೇಳನದ ಆರಂಭೋತ್ಸವ ನೆರವೇರಿಸುವರು. ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷತೆ ವಹಿಸುವರು. ಕೇಂದ್ರ ರೈಲ್ವೆಸಚಿವ ಶ್ರೀ ಲಾಲ್‌ಬಹದ್ದೂರ್‌ಶಾಸ್ತ್ರಿ ಮತ್ತು ಆಯೋಜನಾ ಶಾಖಾಸಚಿವ ಶ್ರೀ ಗುಲ್ಜಾರಿಲಾಲ್ ನಂದಾರವರೂ ಅವರಲ್ಲಿ ಭಾಗವಹಿಸುವರು. ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅದರ ವಸ್ತುಪ್ರದರ್ಶನವನ್ನು ಉದ್ಘಾಟಿಸುವರು.

-ಮೈಸೂರು ಪೇಟೆಧಾರಣೆ-

ತಾರೀಖು ೬—೪—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೨೦—	೨೬—೧೨
ಹರಳು	೨೮—	೨೯—೬
ಹುಚ್ಚೆಳ್ಳು	೩೫—	೪೨—೨
ಹೊಂಗೆಬೀಜ	೧೮—೧೪	೨೩—೮
ಹುಣಸೆಬೀಜ	೧೨—೬	—
ಹುರುಳಿ	೨೫—	೨೮—೪
ಕ|| ಬೀಜ	—	—
ಎಳ್ಳು	೬೨—	೬೪—೧೨
ಹೆಸರು	೩೭—	೪೦—೧೦
ಅವರೆ	—	—
ಅಲಸಂದೆ	೩೦—೨	೪೭—೬
ಉಪ್ಪು	೫೫—	—
ಕೊತ್ತಂಬರಿ	೨೮—೧೪	೨೯—೮
ತೊಗರಿ	೨೪—೮	೩೧—
ಕಡಲೆ	೪೨—	೪೬—೦
ಸೀಗೆಕಾಯಿ	೪—೧೦	೫—೪
ಬೆಲ್ಲ	—	—
ಮೆಣಸಿನಕಾಯಿ	೨೫—	೨೮—೧೪
ಹುಣಸೆಹಣ್ಣು	೫—೧೩	೯—೧೨
ತೆಂಗಿನಕಾಯಿ	೧೫೦—	೩೫೦—

ಸಂಸ್ಥಾನದಲ್ಲಿ ೩ ಕೋಟಿ ರೂಪಾಯಿನ ಎರಡನೇ ಅಭಿವೃದ್ಧಿ ಸಾಲ

ಸರ್ಕಾರ ಎತ್ತುವುದಾಗಿ

ಶಾಸನಸಭೆಯಲ್ಲಿ ಮುಖ್ಯಮಂತ್ರಿಯವರ ಹೇಳಿಕೆ

ಬೆಂಗಳೂರು ೮

ಶಾಸನಸಭೆಯಲ್ಲಿ ಮೊನ್ನೆಯದಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮುಂದಿನವರ್ಷದ ಆಯವ್ಯಯವನ್ನು ಮಂಡಿಸಿದಾಗ ೧೯೫೪-೫೫ ರಲ್ಲಿ ೩ ಕೋಟಿ ರೂಪಾಯಿನ ೨ನೇ ಅಭಿವೃದ್ಧಿ ಸಾಲವನ್ನು ಸರ್ಕಾರವು ಎತ್ತುವುದಾಗಿ ತಿಳಿಸಿದ್ದಾರೆ.

ಸಂಸ್ಥಾನದಲ್ಲಿ ಸಣ್ಣ ಮತ್ತು ಮಧ್ಯಮ ವರ್ಗದ ಖಾಸಗಿ ಕೈಗಾರಿಕೆಗಳಿಗೆ ನೆರವು ನೀಡುವುದಕ್ಕಾಗಿ ಒಂದು ಕೈಗಾರಿಕಾ ಆರ್ಥಿಕ ಕಾರ್ಪೋರೇಷನ್ ರಚಿಸುವುದಾಗಿಯೂ ಅವರು ಹೇಳಿದ್ದಾರೆ.

ಅವರ ಭಾಷಣದ ಮುಖ್ಯಾಂಶಗಳು:-

ಕಳೆದ ಸಾಲಿನಲ್ಲಿ ಕ್ಷಾಮಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳಿಗಾಗಿ ಒಂದುಕೋಟಿ ರೂ. ಗಳನ್ನು ವೆಚ್ಚಮಾಡಲಾಗಿದೆ.

ಬಳ್ಳಾರಿ ಜಿಲ್ಲೆಯು ಮೈಸೂರಿಗೆ ಸೇರಿದುದರಿಂದ ಸಂಸ್ಥಾನಕ್ಕೆ ೪೧ ಲಕ್ಷ ರೂಪಾಯಿಗಳ ಹೆಚ್ಚಿನ ವೆಚ್ಚದ ಹೊರೆ ಬಿದ್ದಿದೆ.

ಮೈಸೂರು ಸಂಸ್ಥಾನದಲ್ಲಿ ಅನ್ವಯಿಸುವಂತೆ ಪಂಚವಾರ್ಷಿಕ ಯೋಜನೆಯ ವೆಚ್ಚವು ೩೬.೬೦ ಕೋಟಿ ರೂಗಳಿಂದ ೪೮.೫೭ ಕೋಟಿ ರೂಗಳಿಗೆ ಏರಿಸಲಾಗಿದೆ.

ಶಿಂಷಾ ವಿದ್ಯುತ್ಕೇಂದ್ರವನ್ನು ಅಭಿವೃದ್ಧಿಪಡಿಸಲು ಕೇಂದ್ರದಿಂದ ಒಂದು ಕೋಟಿ ರೂಪಾಯಿಗಳ ನೆರವು ಬರುವ ನಿರೀಕ್ಷೆಯಿದೆ.

ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಗಾಗಿಯೇ ಕೇಂದ್ರ ಸರ್ಕಾರವು ೬.೯೦ ಲಕ್ಷ ರೂಗಳ ಸಹಾಯವನ್ನು ೫೩-೫೪ರಲ್ಲಿ ಕೊಟ್ಟಿದೆ.

ಹೆಚ್ಚುಬೆಳೆ ಯೋಜನೆ ಕಾರ್ಯಗಳಿಗಾಗಿ ಕೇಂದ್ರವು೧೯೪೯-೫೦ ರಿಂದ ೫೨-೫೩ ರವರೆಗೆ ೮೩೯-೪೮ ಲಕ್ಷ ರೂಗಳ ಸಹಾಯ ಕೊಟ್ಟಿದೆ.೫೩-೫೪ರಲ್ಲಿ ೪೧೬ ಲಕ್ಷ.೫೪-೫೫ ರಲ್ಲಿ ೪೮೧ ಲಕ್ಷ ಬರುವ ನಿರೀಕ್ಷೆಯಿದೆ. ಕೇಂದ್ರವು ಈ ಹಣವನ್ನು ಯಾವ ಷರತ್ತುಗಳನ್ನೂ ವಿಧಿಸಿದೆ ಕೊಡುವುದು ಅವಶ್ಯಕ.

ಸರ್ಕಾರಿ ಉದ್ಯೋಗಗಳಲ್ಲಿ ಬಡ್ತಿ ಕೊಡುವವರಿಗೆ ಪ್ರಧಾನಿಯವರ ಸೂಚನೆಯಂತೆ ದಕ್ಷತೆಗೆ ಹೆಚ್ಚು ಪ್ರಧಾನ್ಯತೆ ಕೊಡಲಾಗುತ್ತದೆ. ಈ ವಿಷಯದಲ್ಲಿ ದಕ್ಷತೆಯುಳ್ಳವರ ಬಗ್ಗೆ ಎಲ್ಲಾ ಇಲಾಖೆಗಳಲ್ಲೂ ಸರ್ವೆ ನಡೆಯುವ ಕಾರ್ಯಕ್ರಮವನ್ನು ಕೈಗೊಳ್ಳಲಾಗುತ್ತದೆ.

ದಕ್ಷರಲ್ಲದವರ ನಿವೃತ್ತಿ ಅಥವಾ ಕೆಳದರ್ಜೆಗೆ ಹಾಕುವ ವಿಷಯದಲ್ಲಿ ಸರ್ಕಾರವು ಪರಿಶೀಲಿಸುವುದು.

ಜಮೀನಿಲ್ಲದವರಿಗೆ ಪ್ರತಿ ಸಂಸಾರಕ್ಕೂ ೫ ಎಕರೆ ಖುಷ್ಕಿ ಅಥವಾ ೨ ಎಕರೆ ತರಿ ಜಮೀನನ್ನು ನಿಗದಿಯಾದ ಬೆಲೆಗೆ ಕೊಡುವ ಏರ್ಪಾಡು ಜಾರಿಗೆ ಕೊಡಲಾಗಿದೆ.

ಪಾನನಿರೋಧವು ಉತ್ತಮವಾಗಿ ನಡೆಯುತ್ತಲಿದ್ದರೂ ಆರ್ಥಿಕ ದೆಸೆಯಿಂದ ಪ್ರಾಂತ್ಯದಾದ್ಯಂತ ಜಾರಿಗೆ ತರಲು ಸಾಧ್ಯವಿಲ್ಲ ಆದರೆ ಮತ್ತೆ ಕೆಲವು ತಾಲ್ಲೂಕುಗಳಿಗೆ ವಿಸ್ತರಿಸುವ ಮತ್ತು ಪಾನನಿರೋಧ ಜಾರಿಯಲ್ಲಿರುವ ಕಡೆ ಹೆಂಡ ತೆಗೆಯುವ ಕ್ರಮವನ್ನು ನಿಲ್ಲಿಸಲಾಗುತ್ತದೆ.

ಕೋಲಾರ ಚಿನ್ನದ ಗಣಿಗಳಿಂದ ಸಂಸ್ಥಾನಕ್ಕೆ ಅಷ್ಟು ಆದಾಯ ಬರುತ್ತಿಲ್ಲ. ಹೆಚ್ಚು ಆದಾಯ ಬರುವುದಕ್ಕೆ ಸೂಕ್ತ ಕ್ರಮ ಕೈಗೊಳ್ಳಲು ಒಂದು ಸಮಿತಿಯನ್ನು ರಚಿಸಲಾಗಿದೆ.

ಮೈಸೂರುಬ್ಯಾಂಕಿನ ಮೂಲಕ ಟ್ರೆಷರಿ ಕಾರ್ಯಗಳನ್ನು ಮಾಡುವ ಕ್ರಮವನ್ನು ಇನ್ನೂ ೪ ಜಿಲ್ಲಾ ಕೇಂದ್ರ ಮತ್ತು ಇತರ ಪ್ರದೇಶಗಳಿಗೆ ವಿಸ್ತರಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ೨೦೦ ಹೊಸ ಪ್ರಾಥಮಿಕ ಮತ್ತು ೫೦ ಸಮಾಜ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ. ಉದ್ಯೋಗವನ್ನು ಒದಗಿಸುವ ಉದ್ದೇಶದಿಂದ ಎಸ್. ಎಲ್. ಸಿ. ಆದ ೫೫೦ ಜನ ಉಪಾಧ್ಯಾಯರನ್ನು ಪ್ರಾಥಮಿಕ ಶಾಲೆಗಳಿಗೆ ನೇಮಿಸಿಕೊಳ್ಳಲಾಗುತ್ತದೆ.

ಡಾ|| ವಿಶ್ವೇಶ್ವರಯ್ಯನವರ ಗ್ರಾಮಾಭಿವೃದ್ಧಿ ಯೋಜನೆ ಉತ್ತಮವಾಗಿ ನಡೆಯುತ್ತಿದೆ. ಇದನ್ನು ಸಂಸ್ಥಾನಾದ್ಯಂತ ಜಾರಿಗೆ ತರಲಾಗುತ್ತದೆ.

ಮೈಸೂರು ನಗರದಲ್ಲಿ ಮುಂದಿನ ಸಾಲಿನಿಂದ ಹೊಸ ಔದ್ಯೋಗಿಕ ಶಾಲೆಯನ್ನು ತೆರೆಯಲಾಗುತ್ತದೆ.

ಮುಂದಿನ ಸಾಲಿನಲ್ಲಿ ವಿದ್ಯಾಭ್ಯಾಸಕ್ಕಾಗಿ ೪೧೮ ಲಕ್ಷ ರೂಗಳನ್ನು ಒದಗಿಸಲಾಗಿದೆ ಇದು ಪ್ರಾಂತ್ಯದ ಉತ್ಪತ್ತಿಯಲ್ಲಿ ಮೂರನೇ ಒಂದು ಭಾಗವಾಗಿರುತ್ತದೆ.

ಸಂಸ್ಥಾನದಲ್ಲಿ ಈಗ ೫೦೯ ವೈದ್ಯಶಾಲೆಗಳು ೧೩೫ ಆರೋಗ್ಯ ಕೇಂದ್ರಗಳಿವೆ. ವೈದ್ಯ ನೆರವಿಗಾಗಿ ಮುಂದಿನ ಸಾಲಿನಲ್ಲಿ ೧೧೦ ಲಕ್ಷ, ಆರೋಗ್ಯ ಬಾಬಿಗಾಗಿ ೪೦ ಲಕ್ಷ ರೂ ಹಣ ಒದಗಿಸಲಾಗಿದೆ. ಸಂಸ್ಥಾನದಲ್ಲಿ ೨೧೭ ಪಶುವೈದ್ಯ ಶಾಲೆಗಳಿವೆ.

ಹಿಂದುಳಿದ ಜನಾಂಗದ ಅಭಿವೃದ್ಧಿಗಾಗಿ ಮುಂದಿನ ಸಾಲಿನಲ್ಲಿ ೨೫ ಲಕ್ಷ ರೂಗಳನ್ನು ಒದಗಿಸಲಾಗಿದೆ.

ಬೆಂಗಳೂರುನಗರದಲ್ಲಿ ನೀರಿನ ಸೌಕರ್ಯ ಉತ್ತಮಪಡಿಸಲು ೭೦ ಲಕ್ಷ ರೂ ಯೋಜನೆ ಮಂಜೂರಾಗಿದೆ ಇದೇ ರೀತಿ ಮೈಸೂರು ನಗರದಲ್ಲೂ ಹೊಸ ಯೋಜನೆ ತಯಾರಾಗಿದೆ.ಎಲ್ಲಾ ಪುರಸಭೆ ಪ್ರದೇಶಗಳಲ್ಲಿ ನೀರಿನ ವ್ಯವಸ್ಥೆ ಉತ್ತಮಗೊಳಿಸಲು ೨|| ಕೋಟಿ ರೂಪಾಯಿಗಳ ಯೋಜನೆಯನ್ನು ಕಾರ್ಯಗತ ಮಾಡಲಾಗುತ್ತಿದೆ.

ಕೈಗಾರಿಕಾ ಗೃಹ ನಿರ್ಮಾಣ ಯೋಜನೆ ಪ್ರಕಾರ ೪೨ ಲಕ್ಷ ರೂಗಳ ವೆಚ್ಚದಲ್ಲಿ ೧೫೮೪ ಮನೆಗಳನ್ನು ಕಟ್ಟಲಾಗುತ್ತಿದೆ. ಮಧ್ಯಮ ತರಗತಿಯವರಿಗೆ ಮನೆ ಒದಗಿಸುವ ಕಾರ್ಯಕ್ಕಾಗಿ ಒಂದು ಗೃಹ ಸಮಿತಿಯನ್ನು ರಚಿಸಲಾಗುತ್ತದೆ.

ಸಂಸ್ಥಾನದಲ್ಲಿ ಆಹಾರ ಪರಿಸ್ಥಿತಿ ಉತ್ತಮವಾಗಿದೆ. ಈ ಸಾಲಿನಲ್ಲಿ ತಿರುವಾಂಕೂರು ಕೊಚ್ಚಿಗೆ ೨೦ ಸಾವಿರ ಟನ್ ಅಕ್ಕಿಯನ್ನು ಇಲ್ಲಿಂದ ಒದಗಿಸಲಾಯಿತು.

ಮೈಸೂರಿಗೆ ಕೇಂದ್ರದ ನೆರವು

ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಕೇಂದ್ರ ಸರ್ಕಾರವು ಕೈಗೊಂಡಿರುವ ೭೪ ಕೋಟಿ ರೂ. ಯೋಜನೆಯಲ್ಲಿ ಮೈಸೂರು ಸಂಸ್ಥಾನಕ್ಕೆ ೭೪.೮ ಲಕ್ಷ ರೂ. ಗಳನ್ನು ಕೊಡಲಾಗಿದೆ. ಅದೂ ಅಲ್ಲದೆ ಅಭಾವ ಪ್ರದೇಶಗಳಲ್ಲಿ ಖಾಯಂ ಕೆಲಸ ಕಾರ್ಯಗಳನ್ನು ಕೈಗೊಳ್ಳಲು ೩.೫ ಕೋಟಿ ರೂ. ಗಳನ್ನೂ ಕೊಡಲಾಗಿದೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ

ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ

ಒಟ್ಟು 2000 ಬಹುಮಾನಗಳು.

ಬಹುಮಾನದ ಮೊಬಲಗು 45000 ರೂ.

ಟಿಕೇಟು ಒಂದಕ್ಕೆ ಒಂದೇರೂಪಾಯಿ.

ಇಂದೇ ಟಿಕೇಟನ್ನು ಕೊಂಡು, ಸಹಾಯಸೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು:

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್, ಮೈಸೂರು.

ಪೋರ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೯೯

೬-೪-೧೯೫೪ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಇಂಗ್ಲಿಷ್ ಭಾಷೆ ಉಳಿಯಬೇಕು

ವಿದ್ಯಾಸಚಿವರ ಹೇಳಿಕೆ

ಮೈಸೂರು ೯

ರಾಜಧಾನಿಯ ಪ್ರಥಮದರ್ಜೆ ಕಾಲೇಜಿನ ಪ್ರಕೃತಿ ವಿಜ್ಞಾನ ಸಂಘದ ಮುಕ್ತಾಯಭಾಷಣವನ್ನು ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಮೊನ್ನೆದಿನ ಮಾಡಿ, ಇಂಗ್ಲೀಷ್‌ಭಾಷೆ ಭಾರತದಲ್ಲಿ ಉಳಿಯಬೇಕೆಂದು ತಿಳಿಸಿದ್ದಾರೆ.

ನಮಗೆ ಒಂದು ಅಂತರ ರಾಷ್ಟ್ರೀಯ ಭಾಷೆ ಬೇಕು. ಪ್ರಪಂಚ ದಿನೇದಿನೇ ಸಣ್ಣದಾಗುತ್ತಾ ಬರುತ್ತಿರುವ ಕಾಲದಲ್ಲಿ ಹೆಚ್ಚು ಬಳಕೆಯಲ್ಲಿರುವ ಇಂಗ್ಲೀಷ್‌ಭಾಷೆಯನ್ನು ಬಿಡುವುದಕ್ಕೆ ಕಷ್ಟ. ಆದಕ್ಕಾಗಿಯೇ ಮೈಸೂರು ವಿದ್ಯಾಸುಧಾರಣಾ ಸಮಿತಿಯು ೫ನೇ ವರ್ಷದ ವಿದ್ಯಾರ್ಜನೆಯಿಂದ ಇಂಗ್ಲೀಷ್ ಇರಬೇಕೆಂದು ನಿರ್ಧರಿಸಿದೆ. ರಷ್ಯದಲ್ಲೂ ೫ನೇ ವರ್ಷದಿಂದಲೇ ಇಂಗ್ಲೀಷ್ ಕಲಿಯಲು ಪ್ರಾರಂಭವಾಗುವುದು. ನಮ್ಮ ಅಭಿಪ್ರಾಯವನ್ನೇ ಇತ್ತೀಚೆಗೆ ಮೈಸೂರಿಗೆ ಭೇಟಿ ಇತ್ತ ರಷ್ಯದ ಸಾಂಸ್ಕೃತಿಕ ನಿಯೋಗದ ಮುಖಂಡರು ಸಹ ಪುಷ್ಟೀಕರಿಸಿದ್ದಾರೆ ಎಂದು ಸಚಿವರು ತಿಳಿಸಿದರು.

ವಿದ್ಯಾರ್ಥಿಗಳು ದೇಶಾಭಿಮಾನಿಗಳಾಗಲು ಈಗಿನಿಂದಲೇ ಸರ್ವಸಿದ್ಧತೆಮಾಡಿಕೊಳ್ಳಬೇಕೆಂದೂ, ರಾಷ್ಟ್ರದ ರಕ್ಷಣೆಗೆ ಅಗತ್ಯವಾದ ಸೇನೆಗೆ ಯುವಕರು ಹೆಚ್ಚಾಗಿ ಸೇರಬೇಕೆಂದೂ ಸಚಿವರು ಉಪದೇಶ ಮಾಡಿದರು.

ಬೆಂಕಿ ಅನಾಹುತ

ಮೈಸೂರು ೯

ರಾಜಧಾನಿಯ ಈದಿಗ ಬಡಾವಣೆಯ ಶ್ರೀನಿವಾಸದೇವಸ್ಥಾನದ ರಸ್ತೆಯಲ್ಲಿರುವ ಶ್ರೀಮತಿ ವಸಾದಮ್ಮ ಎಂಬಾಕೆಯ ಮನೆಗೆ ಈ ಬೆಳಿಗ್ಗೆ ೧೧ಗಂಟೆಗೆ ಅಕಸ್ಮಾತ್ ಬೆಂಕಿ ಬಿದ್ದುದನ್ನು ಕಂಡು ಕೂಡಲೇಅಗ್ನಿಶಮನಕ ದಳದವರು ಬಂದು ಅದನ್ನು ಆರಿಸಿದರು ಮನೆಯ ಮೇಲ್‌ಚಾವಣಿ ಸ್ವಲ್ಪ ಜಖಂ ಆಗಿ,೧೦ ಹೊರೆ ಜೋಳದಕಡ್ಡಿ ನಾಶವಾಯಿತೆಂದೂ ವರದಿಯಾಗಿದೆ. ಬೆಂಕಿ ಬಿದ್ದಾಗ ಮನೆಯಲ್ಲಿ ಯಾರೂ ಇತ್ತಿಲ್ಲವೆಂದೂ, ಬೆಂಕಿ ಅನಾಹುತಕ್ಕೆ ಕಾರಣವೇನು ಎಂಬುದು ಗೊತ್ತಿಲ್ಲವೆಂದೂ ಹೇಳಲಾಗಿದೆ.

ಸ್ವೀಕಾರ

ಮರಿಮಲ್ಲಪ್ಪ ಮಾಧ್ಯಮಿಕ ಶಾಲಾ ಅಧ್ಯಾಪಕರಾದ ಶ್ರೀ ಎ. ಜಿ. ಚನ್ನಬಸಪ್ಪನವರು ರಚಿಸಿರುವ 'ದೇಶಾಭಿಮಾನ'ವನ್ನು ಆದರದಿಂದ ಸ್ವೀಕರಿಸಿದ್ದೇವೆ.

ಕಾಂಗ್ರೆಸ್ ಅಥವಾ ವಾಮ ಪಕ್ಷದೊಡನೆ ಸೇರಿ ಸರ್ಕಾರ ರಚನೆ ಇಲ್ಲ

ತಿರುವಾಂಕೂರಿನಲ್ಲಿ ಪಿ. ಎಸ್. ಪಿ. ಯ ನಿಲುವು

ತಿರುವಾಂಕೂರು-ಕೊಚ್ಚಿಯಲ್ಲಿ ಸರ್ಕಾರವನ್ನು ರಚಿಸುವ ವಿಷಯದಲ್ಲಿ ಅಖಿಲ ಭಾರತ ಪ್ರಜಾಸೋಷಲಿಸ್ಟ್ ಪಕ್ಷದ ನಾಯಕ ಶ್ರೀರಾಮ ಮನೋಹರ ಲೋಹಿಯಾರವರು ಮಾತನಾಡುತ್ತಾ ತಮ್ಮ ಪಕ್ಷವು ಕಾಂಗ್ರೆಸ್ ಅಥವಾ ಸಂಯುಕ್ತ ವಾಮಪಕ್ಷದೊಡನೆ ಸೇರಿ ಸರ್ಕಾರವನ್ನು ರಚಿಸುವ ಪ್ರಶ್ನೆಯೇ ಇಲ್ಲ. ಸಂಯುಕ್ತ ವಾಮಪಕ್ಷವು ಸರ್ಕಾರ ರಚಿಸಿದರೆ ತನಗೆ ಸರಿಹೋಗುವ ವಿಷಯಗಳಲ್ಲಿ ಪ್ರಜಾಸೋಷಲಿಸ್ಟ್ ಪಕ್ಷವು ಆ ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ನೀಡುತ್ತದೆ. ಹಾಗೆ ವಾಮಪಕ್ಷವು ಸರ್ಕಾರವನ್ನು ರಚಿಸದಿದ್ದರೆ ಆಗ ಪ್ರಜಾ ಸೋಷಲಿಸ್ಟ್ ಪಕ್ಷವು ಸರ್ಕಾರವನ್ನು ರಚಿಸುವ ಭಾರವನ್ನು ಹೊರಲು ಸಿದ್ಧವಿದೆ. ಆಗ ವಾಮ ಪಕ್ಷವು ಹೊರಗಿನಿಂದ ತನ್ನ ಸಹಕಾರ ನೀಡಬೇಕು-ಎಂದು ಹೇಳಿದ್ದಾರೆ.

ಈ ಸಂದರ್ಭದಲ್ಲಿ ತಿರುವಾಂಕೂರಿನ ಪಿ. ಎಸ್. ಪಿ. ನಾಯಕ ಶ್ರೀ ಪಟ್ಟಂತಾನು ಪಿಳ್ಳೆಯವರು ಮಾತನಾಡುತ್ತಾ ತಮ್ಮ ಪಕ್ಷವು ಕಾಂಗ್ರೆಸ್ಸಿನೊಡನೆ ಸೇರಿ ಮಿಶ್ರ ಸರ್ಕಾರವನ್ನು ರಚಿಸುವ ಸಾಧ್ಯತೆಯೇ ಇಲ್ಲವೆಂದು ಮಾತ್ರ ಹೇಳಿದ್ದಾರೆ. ನಾಳೆ ಮದ್ರಾಸಿನಲ್ಲಿ ಸೇರುವಪ್ರಜಾಸೋಷಲಿಸ್ಟ್ ಪಕ್ಷದ ರಾಷ್ಟ್ರೀಯ ಕಾರ್ಯಮಂಡಲಿಯು ಈ ಬಗ್ಗೆ ಅಂತ್ಯತೀರ್ಮಾನವನ್ನು ಮಾಡುವುದಾಗಿ ತಿಳಿಯಬರುತ್ತದೆ.

ಕಾಂಗ್ರೆಸ್ ಆಡಳಿತದ ಬಗ್ಗೆ ಉಗ್ರಟೀಕೆ

ಚನ್ನಪಟ್ಟಣ ೯

ಕೋಮುವಾದಿ ಮತ್ತು ಬಂಡವಾಳಗಾರರ ಹಿಡಿತದಲ್ಲಿ ಸಿಕ್ಕಿರುವ ಕಾಂಗ್ರೆಸ್ ಜನತೆ ನಿರೀಕ್ಷಿಸಿದ್ದ ಸ್ವಾತಂತ್ರ್ಯದ ಫಲವನ್ನು ದೊರಕಿಸಿ ಕೊಡುವುದರಲ್ಲಿ ವಿಫಲಗೊಂಡಿದೆ. ಗಾಂಧಿ ತತ್ವವಾದಿಗಳೆಂದು ಹೇಳಿಕೊಳ್ಳುವ ಕಾಂಗ್ರೆಸ್ಸಿನವರು ಗಾಂಧಿ ತತ್ವದಿಂದ ಸಾವಿರ ಮೈಲಿ ದೂರ ಹೋಗಿರುವರು. ಪ್ರಜಾಸೋಷಲಿಸ್ಟ್ ಪಕ್ಷದ ಕಾರ್ಯಕ್ರಮವನ್ನು ಜಾರಿಗೆ ತಂದರೆ ದೇಶದ ಬಡತನ ನಿರ್ಮೂಲವಾಗುವುದು ಅಲ್ಲದೆ ದಲೇ ತಮ್ಮ ಪಕ್ಷದ ಕಾರ್ಯಕ್ರಮ ಸಂಪೂರ್ಣವಾಗಿ ಗಾಂಧಿ ತತ್ವವನ್ನು ಪ್ರತಿಬಿಂಬಿಸಿರುವುದು-ಎಂದು ಅಖಿಲಭಾರತ ಪ್ರಜಾಸೋಷಲಿಸ್ಟ್ ನಾಯಕ ಡಾ|| ಪಿ. ಸಿ. ಘೋಷ್‌ರವರು ಇಲ್ಲಿ ನಿನ್ನೆ ಪ್ರಾರಂಭವಾದ ಮೈಸೂರು ಪ್ರಾದೇಶಿಕ ಪಕ್ಷದ ಪ್ರಥಮ ಸಮ್ಮೇಳನದಲ್ಲಿ ತಿಳಿಸಿದ್ದಾರೆ. ಶ್ರೀ ಅಶೋಕ ಮೆಹತಾರವರು ಅಧ್ಯಕ್ಷತೆ ವಹಿಸಿದ್ದರು.

ಸಮಿತಿ ಸರ್ಕಾರ ರಚನೆಯಾಗಲಿ

ಶಾಸನಸಭೆಯಲ್ಲಿ ಇರುವ ಪ್ರತಿ ರಾಜಕೀಯ ಪಕ್ಷದ ಸದಸ್ಯರ ಸಂಖ್ಯೆಗನುಗುಣವಾಗಿ ಪ್ರಾತಿನಿಧ್ಯ ಉಳ್ಳ ಸಮಿತಿ ಒಂದನ್ನು ರಚಿಸಿ ಆ ಮೂಲಕ ರಚಿಸುವ ಸಂಪುಟವು ರಾಜ್ಯವಾಳುವಂತಹ ವ್ಯವಸ್ಥೆಯನ್ನು ತಿರುವಾಂಕೂರು-ಕೊಚ್ಚಿಯಲ್ಲಿ ಮಾಡಬೇಕೆಂದು ಕೃಷಿಕಲೋಕ ಪಕ್ಷದ ನಾಯಕ ಪ್ರೊಫೆಸರ್ ಎನ್. ಜಿ. ರಂಗಾರವರು ಹೇಳಿಕೆ ಇತ್ತಿದ್ದಾರೆ.

ವಿದ್ಯಾರ್ಥಿನಿಯರಿಗೆ ಖಾಸಗಿ ವ್ಯಾಸಂಗ

ಮೈಸೂರು ಸಂಸ್ಥಾನದಲ್ಲಿ ವಿದ್ಯಾರ್ಥಿನಿಯರು ಖಾಸಗಿಯಾಗಿ ಓದಿ ಖಾಸಗಿಯಾಗಿ ಪರೀಕ್ಷೆಗಳಿಗೆ ಕುಳಿತುಕೊಳ್ಳಲು ಅವಕಾಶ ಕೊಡುವ ವಿಚಾರವನ್ನು ಸರ್ಕಾರ ಪರಿಶೀಲಿಸುವುದಾಗಿ ಶಾಸನ ಸಭೆಯಲ್ಲಿ ವಿದ್ಯಾಸಚಿವರು ಭರವಸೆ ಇತ್ತಿದ್ದಾರೆ.

ಪಂಚವಾರ್ಷಿಕ ಯೋಜನೆ ಪೂರೈಕೆಗೆ

೬೦೦ ಕೋಟಿ ರೂ. ಖೋತಾ ಎದುರಿಸಬೇಕು

ಪಂಚವಾರ್ಷಿಕ ಯೋಜನೆಗೆ ಈ ಮೂರುವರ್ಷಗಳಲ್ಲಿ ಕೇಂದ್ರ ಮತ್ತು ಸಂಸ್ಥಾನಗಳಲ್ಲಿ ಒಟ್ಟು ೯೪೪.೩ ಕೋಟಿ ರೂಪಾಯಿಗಳು ಖರ್ಚಾಗಿವೆ. ಇನ್ನೆರಡು ವರ್ಷಗಳಲ್ಲಿ ಯೋಜನೆಯ ಪೂರೈಕೆಗಾಗಿ ೧೩೦೦ ಕೋಟಿ ರೂ. ಗಳು ಖರ್ಚಾಗಬೇಕಾಗಿದೆ. ಇದರಿಂದ ರಾಷ್ಟ್ರವು ಇನ್ನೆರಡು ವರ್ಷಗಳಲ್ಲಿ ೫೦೦ ರಿಂದ ೬೦೦ ಕೋಟಿ ರೂ. ಗಳ ಖೋತಾ ಆಯವ್ಯಯವನ್ನು ಎದುರಿಸಬೇಕಾಗಿದೆ-ಎಂದು ಕೇಂದ್ರ ಆರ್ಥಿಕ ಸಚಿವ ಶ್ರೀ ದೇಶಮುಖ್‌ರವರು ರಾಜ್ಯ ಪರಿಷತ್ತಿನಲ್ಲಿ ತಿಳಿಸಿದ್ದಾರೆ.

ಕೈಮಗ್ಗದವರ ಸಹಾಯಕ ಯೋಜನೆ

ಮೈಸೂರು ಸಂಸ್ಥಾನದ ಕೈಮಗ್ಗದವರಿಗೆ ಸಹಾಯವಾಗುವಂತೆ ನಾನಾ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವಂತೆ ಆಜ್ಞೆ ಮಾಡಲಾಗಿದೆ. ಮಿಲ್ ಬಟ್ಟೆ ಸೆಸ್ ನಿಧಿಯಿಂದ ಪ್ರತಿವರ್ಷವೂ ದೊರೆಯುವ ೧೦,೧೩,೫೫೪ ರೂ.ಗಳನ್ನು ಕೈಮಗ್ಗದವರಿಗಾಗಿ ಉಪಯೋಗಿಸಿ ಅವರಿಗೆ ಅನುಕೂಲಮಾಡಿ ಕೊಡಲಾಗುವುದು.ಅವರಿಗೆ ಸಾಲ ಕೊಡುವುದಕ್ಕಾಗಿ ಈಗ ಒದಗಿಸುತ್ತಿರುವ ಮೂರುವರೆ ಲಕ್ಷ ರೂ; ಸರಕಾರಿ ಸಿಬ್ಬಂದಿ ವೆಚ್ಚಕ್ಕಾಗಿ ೨೫ ಸಾವಿರ ರೂ, ಕೈಮಗ್ಗದ ಸರಕುಗಳ ಮಾರಾಟಕ್ಕಾಗಿ ಎರಡು ಮೋಟಾರು ಲಾರಿಗಳು ವೆಚ್ಚ. ಇವೇ ಮುಂತಾದ ಸೌಕರ್ಯಗಳನ್ನು ಒದಗಿಸಲಾಗಿದೆ. ಕೈಮಗ್ಗ ಬಟ್ಟೆ ಸಂಶೋಧನೆ ನಡೆಸಿ, ಉತ್ತಮ ನೇಯ್ಗೆ ಮಾದರಿಗಳನ್ನು ಜನರಿಗೆ ತಿಳಿಸುವುದಕ್ಕೆ ಬೆಂಗಳೂರಿನಲ್ಲಿ ಕೇಂದ್ರ ಸಂಸ್ಥೆಯೊಂದನ್ನು ಸ್ಥಾಪಿಸಲಾಗಿದೆ. ಕೈಮಗ್ಗದ ರೇಷ್ಮೆ ಮತ್ತು ಉಣ್ಣೆ ನೇಯ್ಗೆ ಕೈಗಾರಿಕೆಗಳಿಗೂ ಪ್ರೋತ್ಸಾಹ ಕೊಡಲಾಗುವುದು-ಎಂದು ಕೈಗಾರಿಕಾ ಸಚಿವ ಶ್ರೀ ಸಿದ್ಧವೀರಪ್ಪನವರು ಕೈಮಗ್ಗ ಸಪ್ತಾಹ ಸಮಾರಂಭದಲ್ಲಿ ತಿಳಿಸಿದ್ದಾರೆ.

ಪಾನಕೂಟಗಳಲ್ಲಿ ಕಾಂಗ್ರೆಸ್ಸಿಗರು ಭಾಗವಹಿಸಕೂಡದು

ಬ್ರಿಟಿಷರ ಕಾಲದಲ್ಲಿಯೂ ಸಹ ಭಾರತದಲ್ಲಿ ಈಗಿನಷ್ಟು ವ್ಯಾಪಕ ಪಾನೀಯ ಸತ್ಕಾರ ಕೂಟಗಳು ಏರ್ಪಡುತ್ತಿರಲಿಲ್ಲ ಇಂತಹ ಸತ್ಕಾರ ಕೂಟಗಳು ದೆಹಲಿಯಲ್ಲಿಯೇ ಮಾದರಿಯಾಗಿ ಇಡೀ ದೇಶದ ಗಮನವನ್ನೇ ಸೆಳೆಯುತ್ತಿದೆ. ಇಂತಹ ಅಭ್ಯಾಸವನ್ನು ಪರಿಶುದ್ಧಗೊಳಿಸಬೇಕಾದುದು ಅತ್ಯಾವಶ್ಯಕ. ಕಾಂಗ್ರೆಸ್ ಸಚಿವರಾಗಲಿ ಅಥವ ಕಾಂಗ್ರೆಸ್ ಶಾಸನ ಸಭಾ ಸದಸ್ಯರಾಗಲಿ ಈ ಪಾನ ಸತ್ಕಾರಕೂಟಗಳನ್ನು ಏರ್ಪಡಿಸುವುದು ಅಥವ ಅದರಲ್ಲಿ ಭಾಗವಹಿಸುವುದು ಯೋಗ್ಯವಲ್ಲವೆಂದು ಪಾರ್ಲಿಮೆಂಟ್ ಸದಸ್ಯ ಸೇಠ್ ಗೋವಿಂದದಾಸ್‌ರವರು ಹೇಳಿಕೆಯಿತ್ತಿದ್ದಾರೆ.

ನೆಲಮಂಗಲದಲ್ಲಿ ಒಂದು ನ್ಯಾಯಾಲಯ

ಬೆಂಗಳೂರು ತಾಲ್ಲೋಕು ನೆಲಮಂಗಲದಲ್ಲಿ ಒಂದು ನ್ಯಾಯಾಲಯವನ್ನು ಸ್ಥಾಪಿಸುವ ವಿಷಯ ಸರ್ಕಾರವು ಇತ್ತೀಚೆಗೆ ನೇಮಿಸಿರುವ ಕೋರ್ಟುಗಳ ಪ್ರಾದೇಶಿಕ ಮತ್ತು ಹಣಕಾಸಿನ ಅಧಿಕಾರ ವ್ಯಾಪ್ತಿಯ ಪರಿಶೀಲನಾ ಸಮಿತಿಯು ಪರಿಶೀಲಿಸುತ್ತಿರುವುದಾಗಿ ತಿಳಿಯ ಬರುತ್ತದೆ.

ಜನರಲ್ ನಗೀಬ್‌ರವರಿಗೆ ಸರ್ವೋನ್ನತ ಅಧಿಕಾರ

ಪುನಃ ಅವರಿಗೇ ರಾಷ್ಟ್ರಾಧ್ಯಕ್ಷ ಮತ್ತು ಪ್ರಧಾನಿ ಪಟ್ಟ

ಈಜಿಪ್ಟಿನ ಜನರಲ್ ನಗೀಬ್ ರವರಿಗೆ ಅಲ್ಲಿಯ ಕ್ರಾಂತಿ ಕಾರಕ ಪಕ್ಷವು ಅವರು ಹಿಂದೆ ಕೇಳಿದ್ದ ಸರ್ವೋನ್ನತ ಅಧಿಕಾರವನ್ನು ಕೊಟ್ಟು ಪುನಃ ಅವರನ್ನೇ ಪ್ರಧಾನಿ, ರಾಷ್ಟ್ರಾಧ್ಯಕ್ಷ ಮತ್ತು ಕ್ರಾಂತಿಕಾರಕ ಪಕ್ಷದ ಅಧ್ಯಕ್ಷರನ್ನಾಗಿ ಚುನಾಯಿಸಿಕೊಂಡಿದೆ.

ಈಗ್ಗೆ ೧೨ ದಿನಗಳ ಹಿಂದೆ ಜನರಲ್ ನಗೀಬ್‌ರವರು ತಮಗೆ ಸರ್ವೋನ್ನತ ಅಧಿಕಾರ ದೊರೆಯಲಿಲ್ಲವೆಂದು ಎಲ್ಲಾ ಹುದ್ದೆಗಳಿಗೆ ರಾಜೀನಾಮೆ ಸಲ್ಲಿಸಿದರು. ಲೆ॥ ಜನರಲ್ ನಿಸ್ಸಾರ್‌ರವರು ಪ್ರಧಾನಿಯಾದರು ೨ ದಿನಗಳ ನಂತರ ಜನರಲ್ ನಗೀಬ್‌ರವರು ರಾಷ್ಟ್ರಾಧ್ಯಕ್ಷ ಸ್ಥಾನವನ್ನು ಪುನಃ ಪಡೆದರು. ಜನರಲ್ ನಿಸ್ಸಾರ್‌ರವರನ್ನು ಪ್ರಧಾನಿ ಸ್ಥಾನದ ಜೊತೆಗೆ ಮಿಲಿಟರಿ ಗೌರ್ನರ್ ಜನರಲ್ ಆಗಿ ನೇಮಿಸಲಾಯಿತು. ಈಗ ಜನರಲ್ ನಗೀಬ್‌ರವರೇ ತಮ್ಮ ಹಿಂದಿನ ಎಲ್ಲಾ ಸ್ಥಾನಗಳನ್ನೂ ಸರ್ವಾಧಿಕಾರವನ್ನೂ ಪಡೆದಿದ್ದಾರೆ.

ಇನ್ನು ಲೆ॥ ಜನರಲ್ ನಿಸ್ಸಾರ್‌ರವರ ಸ್ಥಾನವೇನೆಂಬುದು ತಿಳಿಯದಾಗಿದೆ.

ನಿನ್ನೆಯದಿನ ಕ್ರಾಂತಿಕಾರಕ ಮಂಡಲಿಯು ಸಭೆ ನಡೆಸಿ ಈ ಅಂತ್ಯ ತೀರ್ಮಾನವನ್ನು ಮಾಡಿರುವುದಾಗಿ ತಿಳಿಯ ಬರುತ್ತದೆ.

ಭಾರತ ನೇಪಾಳ ಸಂಬಂಧ

ಭಾರತ ಮತ್ತು ನೇಪಾಳ ದೇಶಗಳ ನಡುವೆ ಭಿನ್ನತೆಯನ್ನು ಕಲ್ಪಿಸಲು ವಿದೇಶೀ ಶಕ್ತಿಗಳು ಪ್ರಯತ್ನಿಸುತ್ತಲಿವೆ. ಹಿಂದೆ ಇದೇ ಶಕ್ತಿಗಳು ಭಾರತ ಮತ್ತು ಪಾಕೀಸ್ತಾನಗಳ ನಡುವೆ ಸಂಬಂಧವನ್ನು ಕೆಡಿಸಿತು. ನೇಪಾಳಿಗಳು ಈಗ ಅತ್ಯಂತ ಜಾಗರೂಕರಾಗಿ ವರ್ತಿಸಬೇಕು ನಮ್ಮ ಸ್ನೇಹಿತರಾರು ಮತ್ತು ನಮ್ಮ ಶತ್ರುಗಳಾರೆಂಬುದನ್ನು ಜನರು ತಿಳಿದುಕೊಳ್ಳುವ ಕಾಲವು ಈಗ ಬಂದಿದೆ ಎಂದು ಅಲ್ಲಿಯ ವಿದೇಶಾಂಗ ಸಚಿವ ಶ್ರೀ ಡಿ. ಆರ್. ರೆಗ್ಮಿಯವರು ಹೇಳಿದ್ದಾರೆ.

ಜಪಾನಿ ಸಾಗುವಳಿ ವಿಧಾನದಲ್ಲಿ ಹೆಚ್ಚಿನಬೆಳೆ

ಹೈದರಾಬಾದಿನಲ್ಲಿ ಈ ಸಾಲಿನಲ್ಲಿ ಸುಮಾರು ಒಂದೂವರೆ ಲಕ್ಷ ಎಕರೆಗಳಲ್ಲಿ ಜಪಾನಿ ವಿಧಾನದಲ್ಲಿ ಬತ್ತದ ಸಾಗುವಳಿಯನ್ನು ನಡೆಸಲಾಗುತ್ತಿದೆಯೆಂದು ಅಲ್ಲಿಯ ಆಹಾರ ಸಚಿವರು ತಿಳಿಸಿದ್ದಾರೆ.

ಮೊದಲು ಅಲ್ಲಿಯ ಜಮೀನುಗಳಲ್ಲಿ ಎಕರೆ ಒಂದಕ್ಕೆ ೧೫೦೦ ಪೌಂಡುಗಳಷ್ಟು ಬತ್ತ ಉತ್ಪತ್ತಿಯಾಗುತ್ತಲಿದ್ದುದು ಈ ಹೊಸ ವಿಧಾನದಿಂದ ಎಕರೆಗೆ ೫೦೦೦ ಪೌಂಡುಗಳು ಆಗುತ್ತಿರುವುದಾಗಿ ಅವರು ಹೇಳಿದ್ದಾರೆ.

ಕೈಮಗ್ಗದ ದಿನಾಚರಣೆ

ಮೈಸೂರು ೯

ಈ ಸಂಜೆ ೬ ಗಂಟೆಗೆ ಕೃಷ್ಣರಾಜಮೊಹಲ್ಲಾದ ಪ್ರಭುದೇವ ಥಿಯೇಟರಿನ ಬಳಿ ಸರ್ಕಾರಿ ರೇಷ್ಮೆ ಕಾರ್ಖಾನೆ ಜನರಲ್ ಮ್ಯಾನೇಜರ್ ಶ್ರೀ ಎ. ಪಿ. ರಾವ್‌ರವರ ಅಧ್ಯಕ್ಷತೆಯಲ್ಲಿ, ಪ್ರಥಮದರ್ಜೆ ಕಾಲೇಜಿನಲ್ಲಿ ಶ್ರೀಮತಿ ಕಾಮೇಶ್ವರಮ್ಮ ಕುಪ್ಪಸ್ವಾಮಿಯವರ ಅಧ್ಯಕ್ಷತೆಯಲ್ಲಿ ಕೈಮಗ್ಗ ದಿನಾಚರಣೆ ನಡೆಯುತ್ತದೆ.

ನಾಳೆದಿನ ಸಂಜೆ ೬ ಗಂಟೆಗೆ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಆದಿಕರ್ನಾಟಕಪುರಂನ ಶಿವಪ್ಪಾಜಿ ದೇವಸ್ಥಾನದಲ್ಲೂ, ೧೧ ನೇ ತಾ॥ ಶಾರದವಿಲಾಸ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಂ.ಎಸ್. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜಯನಗರದಲ್ಲಿರುವ ವಸಿತಾಸದನದಲ್ಲೂ, ೧೨ ನೇ ತಾ॥ ಶ್ರೀ ಬಿ. ಕೆ. ಮೂರ್ತಿಯವರ ಅಧ್ಯಕ್ಷತೆಯಲ್ಲಿ ಒಂಟಿಕೊಪ್ಪಲ್‌ನಲ್ಲಿರುವ ಮಾತೃಮಂಡಲಿಯಲ್ಲೂ, ೧೩ ನೇ ತಾ॥ ರಂಗಾಚಾರ್ಲು ಸ್ಮಾರಕ ಭವನದಲ್ಲಿ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲೂ, ಈ ಸಮಾರಂಭವು ನಡೆಯುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೮—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—	೨೪. ೧೦
ಹರಳು	೨೮—	೨೯—
ಹುಚ್ಚೆಳ್ಳು	೩೭—	೪೪—
ಹೊಂಗೆಬೀಜ	೧೯—	೨೩—೮
ಹುರುಳಿ	೨೫—೧೪	೨೮—೧೦
ಕ॥ ಬೀಜ	—	—
ಹೆಸರು	೩೮—೧೪	೪೧—
ಅವರೆ	—	—
ಅಲಸಂದೆ	೩೪—	೪೩—
ಉದ್ದು	—	—
ಕೊತ್ತಂಬರಿ	೨೮—೧೨	೨೯—೨
ಎಳ್ಳು	—	—
ತೊಗರಿ	೨೪—೨	೨೭—
ಸೆಣಬು	೧೮—	೨೬—೮
ಕಡಲೆ	೪೪—	೪೫—೮
ಹುಣಸೆಬೀಜ	೧೨—೧೦	೧೨—೧೪
ಹುಣಸೆಹಣ್ಣು	೭—೪	೧೧—
ಸೀಗೆಕಾಯಿ	೪—	೫.—
ಮೆಣಸಿನಕಾಯಿ	೨೭—	೨೭—೧೦
ಬೆಲ್ಲ	—	—
ತೆಂಗಿನಕಾಯಿ	೧೬೯—	೨೬೨—

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಹೊರ ವ್ಯಾಪಾರಿಗಳಿಂದ ಮಾರಾಟ ತೆರಿಗೆ ವಸೂಲಿ

ಬೊಂಬಾಯಿ ಸರ್ಕಾರದ ನಿರ್ಧಾರ

ಹೊರಗಡೆಯಿಂದ ವ್ಯಾಪಾರ ಮಾಡುವವರಿಂದಲೂ ಮಾರಾಟತೆರಿಗೆಯನ್ನು ವಸೂಲ್ಮಾಡಲು ಬೊಂಬಾಯಿ ಸರ್ಕಾರವು ನಿರ್ಧರಿಸಿ ಈ ಬಗ್ಗೆ ಒಂದು ವಿಶೇಷ ಪ್ರಕಟಣೆಯನ್ನು ಹೊರಡಿಸಿದೆ. ಪ್ರಾಂತ್ಯದಿಂದ ಹೊರಗೆ ಇರುವವರು ಪ್ರಾಂತ್ಯಗಳಲ್ಲಿರುವವರೊಡನೆ ಸೇರಿ ವ್ಯಾಪಾರ ಮಾಡಿದರೆ ಇಲ್ಲಿಯವರೆಗೆ ಮಾರಾಟತೆರಿಗೆಯನ್ನು ವಸೂಲ್ಮಾಡುತ್ತಿರಲಿಲ್ಲ ಈಗ ಈ ಹೊಸ ಆಜ್ಞೆಯು ಇದೇ ಸಾಲಿನ ಜನವರಿ ಒಂದನೇ ತಾರೀಖಿನಿಂದಲೇ ಜಾರಿಗೆ ಬಂದಿರುವಂತೆ ಪರಿಗಣಿಸಲಾಗುವುದೆಂದು ಈ ಪ್ರಕಟಣೆಯು ತಿಳಿಸುತ್ತದೆ.

ಭಾರತೀಯ ಪೌರತ್ವ ದಾಖಲೆ

ಸಿಂಹಳದಲ್ಲಿರುವ ಭಾರತೀಯರಲ್ಲಿ ತಮ್ಮ ಭಾರತ ಪೌರತ್ವವನ್ನು ಉಳಿಸಿಕೊಳ್ಳಲು ಇಷ್ಟಪಡುವಂತಹವರು ತಮ್ಮ ಹೆಸರುಗಳನ್ನು ದಾಖಲುಮಾಡಿಕೊಳ್ಳಲು ಸಿಂಹಳದಲ್ಲಿರುವ ಭಾರತ ಹೈಕಮೀಷನರ್‌ರವರು ತಮ್ಮ ಕಛೇರಿಯಲ್ಲಿ ಒಂದು ರಾಷ್ಟ್ರೀಯ ದಾಖಲೆ ಪುಸ್ತಕವನ್ನು ಇಟ್ಟಿದಾರೆ. ಭಾರತ ಮತ್ತು ಸಿಂಹಳ ಪ್ರಧಾನಿಗಳ ನಡುವೆ ಆದ ಒಪ್ಪಂದದ ಪ್ರಕಾರ ಈ ಕಾರ್ಯವನ್ನು ಮಾಡಲಾಗಿದೆ:

ಇಂಜನಿಯರುಗಳ ವರ್ಗ

ಬೆಂಗಳೂರು ೯

ಬೆಂಗಳೂರಿನಲ್ಲಿ ಇರುವ ಸೂಪರಿಂಟೆಂಡಿಂಗ್ ಇಂಜನಿಯರ್ ಶ್ರೀ ರಾಮಸ್ವಾಮಿ ಅಯ್ಯಂಗಾರ್ಯರನ್ನು ಮೈಸೂರು ಕಾವೇರಿ ಸರ್ಕಲ್ಲಿಗೆ, ಶಿವಮೊಗ್ಗಾದಲ್ಲಿರುವ ಶ್ರೀ ಕೃಷ್ಣಸ್ವಾಮಿ ಮೊದಲಿಯಾರ್‌ರನ್ನು ಬೆಂಗಳೂರಿಗೆ, ವಿದ್ಯುಚ್ಛಕ್ತಿ ಇಲಾಖೆಯಲ್ಲಿರುವ ಶ್ರೀ ಎ. ಎಸ್. ಮಾಧವರಾಯರವರನ್ನು ಶಿವಮೊಗ್ಗಾ ಸೂಪರಿಂಟೆಂಡಿಂಗ್ ಇಂಜನಿಯರಾಗಿ ವರ್ಗ ಮಾಡಲಾಗಿದೆ.

ವಿಧಾನ ಪರಿಷತ್ತಿಗೆ ಅವಿರೋಧ ಚುನಾವಣೆ

ಬೆಂಗಳೂರು ೯

ಮೈಸೂರು ಶಾಸನಸಭೆಯಿಂದ ಶ್ರೀಗಳಾದ ಕೆ. ಸಿ. ರೆಡ್ಡಿ ಮತ್ತು ಹೆಚ್. ಸಿ. ದಾಸಪ್ಪನವರು ವಿಧಾನ ಪರಿಷತ್ತಿಗೆ ಅವಿರೋಧವಾಗಿ ಚುನಾಯಿತರಾಗಿದ್ದಾರೆ.

ಪ್ರಯಾಣಿಕರ ಗಾಡಿಗಳಲ್ಲಿ ಧೂಮಪಾನ ನಿಷೇಧ

ಪ್ರಯಾಣಿಕರ ಗಾಡಿಗಳಲ್ಲಿ ಧೂಮಪಾನವನ್ನು ಮಾಡಕೂಡದೆಂದು ಅಸ್ಸಾಂ ಸರ್ಕಾರವು ಒಂದು ಶಾಸನವನ್ನು ಮಾಡಲಿದೆ.

ಅಮೇರಿಕಾ-ಪಾಕೀಸ್ಥಾನ ಮಿಲಿಟರಿ ಒಪ್ಪಂದ ಖಂಡನೆ

ಮೈಸೂರು ೯

ಕಮ್ಯೂನಿಸ್ಟ್ ಪಾರ್ಟಿ ಮೈಸೂರು ಸಮಿತಿಯ ಆಶ್ರಯದಲ್ಲಿ ಮೊನ್ನೆ ಸಂಜೆ ಪುರಭವನಮೈದಾನದಲ್ಲಿ ಶ್ರೀ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಅಮೇರಿಕಾ ಪಾಕೀಸ್ತಾನದ ಮಿಲಿಟರಿ ಒಪ್ಪಂದವನ್ನು ಖಂಡಿಸುವ ಸಭೆಯು ನಡೆಯಿತು. ಶ್ರೀಗಳಾದ ಉಗ್ರಪ್ಪ, ಕೃಷ್ಣಮೂರ್ತಿ ಮತ್ತು ಅನಂತಸುಬ್ಬರಾಯರು ಭಾಷಣ ಮಾಡಿದರು. ಅಮೇರಿಕಾ ಪಾಕೀಸ್ತಾನ್ ಮಿಲಿಟರಿ ಒಪ್ಪಂದಕ್ಕೆ ಧಿಕ್ಕಾರ ಮತ್ತು ಭಾರತ ಪಾಕೀಸ್ತಾನಗಳ ನಡುವೆ ಸೌಹಾರ್ದ ಚಿರಾಯುವಾಗಲಿ ಎಂಬ ಘೋಷಣೆಗಳೊಡನೆ ಸಭೆಯು ಮುಕ್ತಾಯವಾಯಿತು.

ತುಳಸಿರಾಂ ಆಸ್ಪತ್ರೆಗೆ ಹೊಸ ವೈದ್ಯರು

ಮೈಸೂರು ೯

ರಾಜಧಾನಿಯ ಚಾಮುಂಡಿಪುರಂ ಮೋಹನದಾಸ್ ತುಳಸಿರಾಂ ಆಸ್ಪತ್ರೆಗೆ ಬೆಂಗಳೂರು ವಾಣಿವಿಲಾಸ ಆಸ್ಪತ್ರೆಯ ಆರ್. ಎಂ. ಓ. ರವರಾದ ಶ್ರೀಮತಿ ಪದ್ಮ ಸುಂದರಂರವರನ್ನು ವರ್ಗಾಮಾಡಲಾಗಿದೆ.

ವಾರ್ಷಿಕೋತ್ಸವ

ಮೈಸೂರು ೯

ಶಾರದಾ ವಿಲಾಸ ಹೈಸ್ಕೂಲಿನ ವಾರ್ಷಿಕೋತ್ಸವವು ಇದೇ ೧೩ ನೇ ತಾರೀಖು ಶನಿವಾರ ಸಂಜೆ ೬ ಗಂಟೆಗೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ವಿದ್ಯಾರ್ಥಿನಿಯರ ಹಾಸ್ಟಲಿಗೆ ಶೇಷಾದ್ರಿ ಭವನ

ಮೈಸೂರು ೯

ಮೈಸೂರು ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿಯರ ಹಾಸ್ಟಲಿಗಾಗಿ ಈಗ ಹಾಲಿ ಮಾರಾಟತೆರಿಗೆ ಕಛೇರಿ ಇರುವ ಶೇಷಾದ್ರಿ ಭವನವನ್ನು ಕೊಡಲಾಗಿದೆಯೆಂದು ವಿದ್ಯಾಸಚಿವರು ತಿಳಿಸಿದ್ದಾರೆ.

ಬರ್ಮಾದಿಂದ ಭಾರತಕ್ಕೆ ಅಕ್ಕಿ

ಭಾರತವು ಬರ್ಮಾದಿಂದ ಈ ಸಾಲಿನಲ್ಲಿ ೯ ಲಕ್ಷ ಟನ್ ಅಕ್ಕಿಯನ್ನು ಕೊಳ್ಳುವುದಾಗಿ ಆಹಾರ ಸಚಿವ ಶ್ರೀ ಕಿದ್ವಾಯಿಯವರು ವಿಧಾನ ಪರಿಷತ್ತಿನಲ್ಲಿ ತಿಳಿಸಿದ್ದಾರೆ. ಈ ಅಕ್ಕಿಯನ್ನು ತಿರುವಾಂಕೂರು-ಕೊಚ್ಚಿ ಮತ್ತು ಕಲ್ಕತ್ತಾಗಳಿಗೆ ಸರಬರಾಜು ಮಾಡಲಾಗುತ್ತದೆ.

ಪೋ॥ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೬೦

೧೦-೩-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮೈಸೂರು ಸರ್ಕಾರದ ಹೆಚ್ಚಿನ ತೆರಿಗೆ ನೀತಿ ಖಂಡನೆ

ವಿರುದ್ಧ ಚಳುವಳಿ ಹೂಡಬೇಕೆಂದು ಪ್ರಜಾ ಸೋಷಲಿಸ್ಟ್‌ರ ಕರೆ

ಚನ್ನಪಟ್ಟಣ ೧೦

ಮೈಸೂರು ಸರ್ಕಾರದವರು ಖೋತಾ ಬಡ್ಜೆಟ್ಟನ್ನು ಸರಿದೂಗಿಸಲು ಹೆಚ್ಚಿನ ತೆರಿಗೆ ಹಾಕಿರುವ ನೀತಿಯನ್ನು ಇಲ್ಲಿ ಸಮಾವೇಶಗೊಂಡಿದ್ದ ಪ್ರಜಾಸೋಷಲಿಸ್ಟ್ ಪಕ್ಷದ ಪ್ರಾದೇಶಿಕ ಸಮ್ಮೇಳನವು ತೀವ್ರವಾಗಿ ಖಂಡಿಸಿದೆ. ಭೂಕಂದಾಯದ ಏರಿಕೆ, ನೀರು ಮತ್ತು ವಿದ್ಯುಚ್ಛಕ್ತಿಗಳ ಮೇಲೆ ಹೆಚ್ಚಿನ ತೆರಿಗೆಗಳನ್ನು ಪ್ರತಿಭಟಿಸಿ ಅವುಗಳನ್ನು ಜನರು ನಿರಾಕರಿಸಬೇಕೆಂದೂ, ಈ ಬಗ್ಗೆ ಚಳುವಳಿ ಹೂಡಬೇಕೆಂದೂ ಮನವಿ ಮಾಡುವ ನಿರ್ಣಯ ಮಾಡಲಾಗಿದೆ.

ಇನಾಂ ರದ್ದಿಗಾಗಿ ೧೦೫ ಲಕ್ಷ ರೂ. ಪರಿಹಾರ

ಮೈಸೂರು ಸಂಸ್ಥಾನದಲ್ಲಿರುವ ಇನಾಂಗಳನ್ನು ರದ್ದುಮಾಡುವ ಮಸೂದೆಯು ಶಾಸನಸಭೆಯಲ್ಲಿ ನಿನ್ನೆ ಅಂಗೀಕಾರವಾಯಿತು. ಅದರ ಪ್ರಕಾರ ಇನಾಂದಾರರುಗಳಿಗೆ ಅದರ ರದ್ದಿನ ಬಗ್ಗೆ ೧೦೫ ಲಕ್ಷ ರೂ. ಪರಿಹಾರ ಕೊಡಬೇಕಾಗುವುದು.

ಮದುವೆಗಳ ಮೇಲೂ ತೆರಿಗೆ

ಆಂಧ್ರ ಸಂಸ್ಥಾನದಲ್ಲಿ ಖೋತಾ ಆಯವ್ಯಯನನ್ನು ಸರಿದೂಗಿಸಲು ಮದುವೆಗಳ ಮೇಲೆ ತೆರಿಗೆ ಹಾಕಬೇಕೆಂದು ಅಲ್ಲಿನ ಶಾಸನ ಸಭೆಯಲ್ಲಿ ಶ್ರೀ ವೇಮಯ್ಯನವರು ಸಲಹೆ ಮಾಡಿದ್ದಾರೆ. ಈಗಿನ ಸಂಪ್ರದಾಯಕ ವಿವಾಹದ ಬದಲು ರಿಜಿಸ್ಟ್ರೇಷನ್ ವಿವಾಹಗಳು ನಡೆಯಬೇಕೆಂದೂ, ಆ ರಿಜಿಸ್ಟ್ರೇಷನ್ನಿಗಾಗಿ ಶುಲ್ಕ ವಿಧಿಸಬೇಕೆಂದೂ ಅವರು ಹೇಳಿದ್ದಾರೆ.

ದೆಹಲಿಯಲ್ಲಿ ಕನ್ನಡ ಸಾಹಿತ್ಯ ಕಲಾ ಉತ್ಸವ

ಮುಂದಿನ ತಿಂಗಳು ೧೬ ನೇ ತಾರೀಖು ದೆಹಲಿಯಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಮತ್ತು ಕಲಾ ಉತ್ಸವದ ಆರಂಭೋತ್ಸವವನ್ನು ರಾಷ್ಟ್ರಾಧ್ಯಕ್ಷರು ನೆರವೇರಿಸುವರು ಈ ಉತ್ಸವಕ್ಕೆ ಮೈಸೂರಿನ ರಾಜಪ್ರಮುಖರು ೧ ಸಾವಿರ ರೂ. ಉದಾರ ಸಹಾಯ ಮಾಡಿದ್ದಾರೆ.

ಉಪವಾಸ ಸತ್ಯಾಗ್ರಹ ಮುಕ್ತಾಯ

ಮೈಸೂರು ೧೦

ನಂಜನಗೂಡಿನಲ್ಲಿರುವ ಕಪಿಲಾ ಟೆಕ್ಸ್‌ಟೈಲ್ ಗಿರಣಿ ಕೆಲಸಗಾರರ ಬೇಡಿಕೆಗಳನ್ನು ಕೈಗಾರಿಕಾ ನ್ಯಾಯಾಲಯಕ್ಕೆ ಒಪ್ಪಿಸಬೇಕೆಂದು ಲೇಬರ್ ಕಮೀಷನ್‌ರವರನ್ನು ಎಷ್ಟು ಬೇಡಿಕೊಂಡರೂ ಅದು ವಿಫಲವಾದ್ದರಿಂದ ಕೆಲಸಗಾರರ ಸಂಘದ ಅಧ್ಯಕ್ಷ ಶ್ರೀ ರೇವಣ್ಣ ಮತ್ತು ಇತರರು ಉಪವಾಸ ಸತ್ಯಾಗ್ರಹ ಹೂಡಿದ್ದರಷ್ಟೆ. ಕಾರ್ಮಿಕ ಸಚಿವ ಶ್ರೀ ರಾಮಚಂದ್ರರಾಯರು ಅಲ್ಲಿಗೆ ಭೇಟಿ ಇತ್ತು, ಈ ಬಗ್ಗೆ ಕ್ರಮಕೈಗೊಳ್ಳುವುದಾಗಿ ಭರವಸೆ ಇತ್ತಿದ್ದರಿಂದ ಉಪವಾಸವನ್ನು ಮೊನ್ನೆಯಿಂದ ಮುಕ್ತಾಯಗೊಳಿಸಲಾಗಿದೆ.

ಬಳ್ಳಾರಿ ಅಭಿವೃದ್ಧಿಗಾಗಿ ೪೫ ಲಕ್ಷ ರೂ. ಯೋಜನೆ

ಬಳ್ಳಾರಿ ಜಿಲ್ಲೆಯಲ್ಲಿ ಹೊಸದಾಗಿ ಫೆರೋಮ್ಯಾಂಗನೀಸ್, ಹೆಂಚು, ಸಕ್ಕರೆ ಮತ್ತು ಬಟ್ಟೆ ಕಾರ್ಖಾನೆಗಳನ್ನು ಸ್ಥಾಪಿಸಿ ಆ ಜಿಲ್ಲೆಯನ್ನು ಕೈಗಾರಿಕಾ ಕೇಂದ್ರವನ್ನಾಗಿ ಮಾಡಲು ಮೈಸೂರು ಸರ್ಕಾರದವರು ೪೫ ಲಕ್ಷ ರೂ.ಗಳ ಯೋಜನೆಯೊಂದನ್ನು ಪರಿಶೀಲಿಸುತ್ತಿರುವುದಾಗಿ ತಿಳಿದುಬಂದಿದೆ.

ಕರ್ನೂಲಿನಲ್ಲಿ ರೇಡಿಯೋ ಸ್ಟೇಷನ್

ಆಂಧ್ರ ರಾಜಧಾನಿ ಕರ್ನೂಲಿನಲ್ಲಿ ಕೂಡಲೇ ಒಂದು ರೇಡಿಯೋ ಕೇಂದ್ರವನ್ನು ಸ್ಥಾಪಿಸಬೇಕೆಂದು ಆಂಧ್ರ ಸರ್ಕಾರವು ಕೇಂದ್ರವನ್ನು ಕೇಳಿದೆ.

ವಿಶ್ವವಿದ್ಯಾಲಯದಲ್ಲಿ ಐತಿಹಾಸಿಕ ಬೋಧನೆ

ವಿಶ್ವವಿದ್ಯಾನಿಲಯಗಳಲ್ಲಿ ಇತಿಹಾಸ ಶಾಸ್ತ್ರ ಬೋಧನೆಯನ್ನು ಪ್ರಾದೇಶಿಕ ಮತ್ತು ರಾಷ್ಟ್ರೀಯ ಭಾಷೆಯಲ್ಲಿಯೇ ಮಾಡಬೇಕೆಂದೂ, ಭಾರತದ ಐತಿಹಾಸಿಕ ಮತ್ತು ರಾಷ್ಟ್ರೀಯ ನಾಯಕರುಗಳ ಬಗ್ಗೆ ಹೆಚ್ಚುಗಮನ ಕೊಡಬೇಕೆಂದೂ ದೆಹಲಿಯಲ್ಲಿ ನಡೆದ ಅಖಿಲಭಾರತ ಐತಿಹಾಸಿಕ ಪ್ರಾಧ್ಯಾಪಕರ ಸಮ್ಮೇಳನದಲ್ಲಿ ನಿರ್ಣಯ ಮಾಡಲಾಗಿದೆ.

ನಿಮ್ನ ವರ್ಗದವರಿಗೆ ಕೇಂದ್ರದ ನೆರವು

ಮೈಸೂರು ಸಂಸ್ಥಾನದಲ್ಲಿರುವ ನಿಮ್ನ ವರ್ಗದವರ ಅಭಿವೃದ್ಧಿಗಾಗಿ ಕಳೆದ ವರ್ಷ ಕೇಂದ್ರ ಸರ್ಕಾರವು ೧,೬೨, ೫೦೦ ರೂ.ಗಳನ್ನು ಮಂಜೂರು ಮಾಡಿ, ೮೧,೪೫೦ ರೂ.ಗಳನ್ನು ಕೊಡಲಾಯಿತೆಂದೂ ಈ ಹಣದ ವಿಲೇವಾರಿ ಬಗ್ಗೆ ವಿವರಗಳು ಬಂದ ಕೂಡಲೇ ಈ ತಿಂಗಳನೊಳಗಾಗಿ ಉಳಿದ ಹಣವನ್ನು ಕೊಡಲಾಗುವುದೆಂದೂ ಪಾರ್ಲಿಮೆಂಟಿನಲ್ಲಿ ಕೇಂದ್ರ ಗೃಹ ಉಪಸಚಿವರು ತಿಳಿಸಿದಾರೆ:

ಈ ಹಣದ ಪೈಕಿ, ಬಾವಿಗಳಿಗೆ 35½ ಸಾವಿರ ವಸತಿಗಳಿಗೆ ೫೦ ಸಾವಿರ, ಅಸ್ಪೃಶ್ಯತಾ ನಿರೋಧ ಪ್ರಚಾರಕ್ಕಾಗಿ ೧೨,೫೦೦, ಗೃಹ ಕೈಗಾರಿಕೆಗಳಿಗೆ ೧೫,೫೦೦ ಮತ್ತು ವ್ಯವಸಾಯ ಮತ್ತು ಹಾಲಿನ ಕೇಂದ್ರಗಳಿಗಾಗಿ ೨೫ ಸಾವಿರ ರೂ.ಗಳನ್ನು ನಿಗದಿ ಮಾಡಲಾಗಿದೆಯೆಂದು ತಿಳಿಸಲಾಗಿದೆ.

ಭಾರತ-ಪಾಕ್ ಪ್ರಧಾನಿಗಳ ಭೇಟಿ ಸದ್ಯಕ್ಕಿಲ್ಲ

ತಾವು ಭಾರತ ಪ್ರಧಾನಿ ನೆಹರೂರವರಿಗೆ ಬರೆದ ಕಾಗದಗಳಿಗೆ ಈಗ ಉತ್ತರವು ಬಂದಿರುವುದಾಗಿಯೂ ಸದ್ಯದಲ್ಲಿ ಉಭಯ ಪ್ರಧಾನಿಗಳ ಭೇಟಿಯ ಕಾರ್ಯಕ್ರಮವಿಲ್ಲವೆಂದೂ ಪಾಕ್ ಪ್ರಧಾನಿ ಮಹಮದ್ ಆಲಿಯವರು ಹೇಳಿದ್ದಾರೆ. ಆದರೆ ಕೊಲೊಂಬೋವಿನಲ್ಲಿ ಆಗ್ನೇಯ ಏಷ್ಯಾ ಪ್ರಧಾನಿಗಳ ಸಮ್ಮೇಳನಕ್ಕೆ ಮುಂಚೆ ತಾವು ಶ್ರೀ ನೆಹರೂರವರನ್ನು ನೋಡಬಹುದೆಂದೂ ಅವರು ಹೇಳಿದ್ದಾರೆ.

ಕಾಶ್ಮೀರದ ವಿಷಯವಾಗಿ ಅವರು ಮಾತನಾಡುತ್ತಾ ಅಲ್ಲಿ ಜನಾಭಿಪ್ರಾಯ ಸಂಗ್ರಹ ಅಧಿಕಾರಿ ನೇಮಕದ ವಿಷಯದಲ್ಲಿ ಏನೂ ಪ್ರಗತಿ ಸಾಧಿಸಿಲ್ಲವೆಂದೂ ತಿಳಿಸಿದ್ದಾರೆ.

ಭಾರತದಿಂದ ಫ್ರಾನ್ಸ್ ಹೋಗುವುದಿಲ್ಲ

ಭಾರತದಲ್ಲಿರುವ ಫ್ರೆಂಚ್ ಸ್ವಾಸ್ತ್ಯಗಳನ್ನು ಬಿಟ್ಟು ಕೊಡುವುದಿಲ್ಲವೆಂದು ಫ್ರಾನ್ಸಿನ ಪ್ರಧಾನಿ ಲೇನಿಯಲ್‌ರವರು ಫ್ರೆಂಚ್ ಇಂಡಿಯಾ ಕಮೀಷನರಿಗೆ ಬರೆದಿರುವ ಪತ್ರವೊಂದರಲ್ಲಿ ಸ್ಪಷ್ಟಪಡಿಸಿದ್ದಾರೆಂದು ಹೇಳಲಾಗಿದೆ.

ಈ ಪ್ರದೇಶದಲ್ಲಿ ಉಂಟಾಗಿರುವ ಬಡ್ಜೆಟ್ ಖೋತಾವನ್ನು ಸರಿದೂಗಿಸಲು ಫ್ರಾನ್ಸ್ ೧.೭೫ ಕೋಟಿ ರೂಗಳನ್ನು ಕೊಡುವುದಾಗಿಯೂ ಪ್ರಧಾನಿ ತಿಳಿಸಿದ್ದಾರೆ.

ಮೈಸೂರು ಬೆಂಗಳೂರು ಅರಮನೆ ಮಹಾರಾಜರ ಸ್ವಂತ ಆಸ್ತಿ

ಬೆಂಗಳೂರು ೧೦

ಮಹಾರಾಜರ ಸ್ವಂತ ಆಸ್ತಿಯ ಮೇಲೆ ಪೌರ ತೆರಿಗೆಯನ್ನು ಹಾಕುವ ಮಸೂದೆ ನಿನ್ನೆ ಶಾಸನ ಸಭೆಯಲ್ಲಿ ಚರ್ಚೆಗೆ ಬಂದಾಗ ಮುಖ್ಯ ಮಂತ್ರಿಗಳು ಮಾತನಾಡುತ್ತಾ ಮೈಸೂರು ಮತ್ತು ಬೆಂಗಳೂರುಗಳಲ್ಲಿರುವ ಅರಮನೆಗಳು ಶ್ರೀಮನ್ಮಹಾರಾಜರ ಸ್ವಂತ ಆಸ್ತಿಗಳೆಂದು ಹಿಂದೆ ರಾಷ್ಟ್ರಪತಿಯವರೊಡನೆ ಆದ ಕರಾರಿನಿಂದ ತಿಳಿಯ ಬರುತ್ತದೆ ಎಂದು ಹೇಳಿದರು.

ಈ ಅರಮನೆಗಳನ್ನು ಬಿಟ್ಟು ಉಳಿದುಗಿಲ್ಲ ಆಸ್ತಿಗಳ ಮೇಲೆ ಈ ಮಸೂದೆಯ ಪ್ರಕಾರ ಪೌರ ಕಂದಾಯವನ್ನು ಹಾಕಬಹುದಾಗಿದೆ. ಮಸೂದೆಯನ್ನು ಸಭೆಯು ಅಂಗೀಕರಿಸಿತು.

ಮೆಡಿಕಲ್ ಕಾಲೇಜ್ ವಿದ್ಯಾರ್ಥಿಗಳ ಸೇವಾ ಪ್ರತಿಜ್ಞೆ

ಬೊಂಬಾಯಿನ ಗ್ರಾಂಟ್ ಮೆಡಿಕಲ್ ಕಾಲೇಜಿನ ಸುಮಾರು ೬೦ ಮಂದಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರು ವಾರಕ್ಕೆ ೩ ಗಂಟೆಗಳ ಕಾಲ ಆಸ್ಪತ್ರೆಯ ಬಡ ರೋಗಿಗಳ ಕ್ಷೇಮ, ಸಮಾಚಾರದ ಬಗ್ಗೆ ಸೇವೆ ಸಲ್ಲಿಸಲು ಪ್ರತಿಜ್ಞೆ ತೆಗೆದುಕೊಂಡಿದ್ದಾರೆ.

ಅಖಿಲಭಾರತ ಆಯುರ್ವೇದ ವಿಶ್ವವಿದ್ಯಾನಿಲಯ

ಋಷಿಕೇಶದಲ್ಲಿ ಅಖಿಲಭಾರತ ಆಯುರ್ವೇದ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದೂ, ಅದರ ಶಂಕುಸ್ಥಾಪನೆಯನ್ನು ರಾಷ್ಟ್ರಾಧ್ಯಕ್ಷರು ನೆರವೇರಿಸಬೇಕೆಂದೂ ಕೊಟ್ಟಕಲ್‌ನಲ್ಲಿ ನಡೆದ ಅಖಿಲಭಾರತ ಆಯುರ್ವೇದ ಕಾಂಗ್ರೆಸ್ ಸಮ್ಮೇಳನದಲ್ಲಿ ನಿರ್ಧರಿಸಲಾಗಿದೆ.

ಏಷ್ಯಾ ಭಾಷೆಗಳ ಶಿಕ್ಷಣ ಶಾಲೆ

ಕಾಶಿ ವಿಶ್ವವಿದ್ಯಾನಿಲಯದಲ್ಲಿ ಏಷ್ಯಾ ಭಾಷೆಗಳ ಶಿಕ್ಷಣ ಶಾಲೆಯೊಂದನ್ನು ತೆರೆಯಲು ಕೇಂದ್ರ ಸರ್ಕಾರವು ೧ ಲಕ್ಷ ರೂ.ಗಳನ್ನು ಕೊಟ್ಟಿದೆ. ಈ ಶಾಲೆಯು ಮುಂದಿನ ಜುಲೈ ತಿಂಗಳಿನಿಂದ ಪ್ರಾರಂಭವಾಗುತ್ತದೆ.

ಭಾರತ-ಬರ್ಮಾ ಒಪ್ಪಂದ

ಭಾರತವು ಬರ್ಮಾದಿಂದ ೯ ಲಕ್ಷ ಟನ್ ಅಕ್ಕಿಯನ್ನು ಕೊಳ್ಳುವ ವಿಷಯದಲ್ಲಿ ಉಭಯ ಸರ್ಕಾರ ಪ್ರತಿನಿಧಿಗಳ ನಡುವೆ ನಿನ್ನೆಯದಿನ ಒಂದು ಒಪ್ಪಂದಕ್ಕೆ ಸಹಿಯಾಯಿತೆಂದು ತಿಳಿಯಬರುತ್ತದೆ.

ಪಾಕೀಸ್ತಾನಕ್ಕೆ ಅಮೆರಿಕಾ ಮಿಲಿಟರಿ ನಿಯೋಗ ಭೇಟಿ

ಮುಂದಿನವಾರ ಕರಾಚಿಗೆ ಬರಲಿದೆ

ಅಮೆರಿಕಾದ ನೌಕಾ, ವಾಯು ಮತ್ತು ಪದಾತಿ ದಳಕ್ಕೆ ಸೇರಿದ ೧೧ ಮಿಲಿಟರಿ ಅಧಿಕಾರಿಗಳ ನಿಯೋಗವೊಂದು ಮುಂದಿನ ವಾರ ಪಾಕೀಸ್ತಾನಕ್ಕೆ ಆಗಮಿಸುವುದಾಗಿ ತಿಳಿಯಬರುತ್ತದೆ.

ಈ ನಿಯೋಗವು ಅಮೆರಿಕಾವು ಪಾಕೀಸ್ತಾನಕ್ಕೆ ಮಿಲಿಟರಿ ನೆರವನ್ನು ಎಷ್ಟು ಪ್ರಮಾಣದಲ್ಲಿ ಹೇಗೆ ಕೊಡಬೇಕೆಂಬುದನ್ನು ಪರಿಶೀಲಿಸಲು ಅಲ್ಲಿಗೆ ಹೋಗುತ್ತದೆ.

ಅಕ್ಕಿಯ ಬೆಲೆಯನ್ನು ಇಳಿಸಲಾಗುತ್ತದೆ

ಈಗಿರುವ ಅಕ್ಕಿಯ ಬೆಲೆಯನ್ನು ಇಳಿಸಲಾಗುವುದೆಂದು ಕೇಂದ್ರ ಆಹಾರ ಉಪಸಚಿವ ಶ್ರೀ ಎಂ. ವಿ. ಕೃಷ್ಣಪ್ಪನವರು ಹೇಳಿದ್ದಾರೆ.

ಹೊಸ ಬಟ್ಟೆ ಗಿರಣಿಗಳ ಸ್ಥಾಪನೆಗೆ ಅವಕಾಶವಿಲ್ಲ

ಹೊಸದಾಗಿ ಬಟ್ಟೆ ಗಿರಣಿಗಳನ್ನು ಸ್ಥಾಪಿಸಲು ಸರ್ಕಾರವು ಅವಕಾಶವನ್ನು ಕೊಡುವುದಿಲ್ಲವೆಂದು ಕೇಂದ್ರ ಸರ್ಕಾರದ ಜವಳಿ ಕಮೀಷನರ್‌ರವರು ಹೇಳಿರುವುದಾಗಿ ವರದಿಯಾಗಿದೆ.

ಕೈಮಗ್ಗದವರಿಗೆ ನೆರವು ನೀಡುವ ಉದ್ದಿಶ್ಯದಿಂದ ಈರೀತಿ ಮಾಡಲಾಗುವುದೆಂದೂ ಆದರೆ ಕೈಮಗ್ಗದವರಿಗಾಗಿ ನೂಲು ಒದಗಿಸಲು ಗಿರಣಿಗಳನ್ನು ತೆಗೆಯುವುದಾದರೆ ಅದನ್ನು ಪರಿಶೀಲಿಸುವುದಾಗಿಯೂ ಅವರು ಹೇಳಿದ್ದಾರೆ.

ಮೈಸೂರು ಕೈಗಾರಿಕೆಗೆ ಉತ್ತೇಜನ ಕೊಡಿ

ಮಾದರಿಯಾದ ಗುಣವುಳ್ಳವು !

ಬಹುಕಾಲ ಬಾಳಿಕೆಬರುವವು !

ನಿಪುಣರಾದ ಕೆಲಸಗಾರರ ನೇತೃತ್ವದಲ್ಲಿ ಆಧುನಿಕ ರೀತಿಯಲ್ಲಿ ತಯಾರಾಗುವುವು !!!

★ ★ ★ ★ ★

ಮೈಸೂರು ಉಕ್ಕಿನ ಸಾಮಾನುಗಳು

ಗಾಡಿಪಟ್ಟಿ ಅಥವಾ ಪಳಿಗಳು (FLATS) ದುಂಡು ಮತ್ತು ಚದುರ ಸಲಾಕಿಗಳು (ROUNDS & SQUARES) ಕೋನ ಕಂಬಿಗಳು (ANGLES) ಸಿಮೆಂಟು ಕೆಲಸಕ್ಕೆ ಬೇಕಾಗುವ ಸರಳುಗಳು (REINFORCING RODS) ಮತ್ತು ಬೇಲುಪಟ್ಟಿಗಳು (HOOPS)

ವಿಶೇಷವಾಗಿ ಬಳಕೆಯಲ್ಲಿರುವ ಎಲ್ಲಾ ಸೈಜುಗಳಲ್ಲಿಯೂ ದೊರೆಯುವುವು

ಬೆಲೆ ಮತ್ತು ಹೆಚ್ಚಿನ ವಿವರಗಳಿಗೆ ದಯವಿಟ್ಟು ಬರೆಯಿರಿ

ಮೈಸೂರು ಕಬ್ಬಿಣದ ಮತ್ತು ಉಕ್ಕಿನ ಕಾರಖಾನೆ, ಭದ್ರಾವತಿ.

ಜನತೆಯ ಹಿತಾಶಯಗಳಿಗಾಗಿ ಶ್ರಮಿಸಬೇಕು

ಕಾಂಗ್ರೆಸ್ಸಿಗರಿಗೆ ನೆಹರೂ ಹಿತೋಕ್ತಿ

ಪೆಪ್ಸು ಶಾಸನ ಸಭೆಯಲ್ಲಿರುವ ಎಲ್ಲಾ ಕಾಂಗ್ರೆಸ್ ಸದಸ್ಯರು ತಮ್ಮ ಪಕ್ಷದ ನಾಯಕ ಮುಖ್ಯಮಂತ್ರಿ ಶ್ರೀ ಕರ್ನಲ್ ರಘುವೀರಸಿಂಗ್‌ರ ಸಮೇತ ನಿನ್ನೆಯದಿನ ಕಾಂಗ್ರೆಸ್ ಅಧ್ಯಕ್ಷ ನೆಹರೂರವರನ್ನು ದೆಹಲಿಯಲ್ಲಿ ಭೇಟಿ ಮಾಡಿದ್ದರು.

ಶ್ರೀ ನೆಹರೂರವರು ಅವರಿಗೆ ಹಿಂದಿನ ಘಟನೆಗಳನ್ನೆಲ್ಲಾ ತಿಳಿಸಿ ಅದರಿಂದ ಪಾಠ ಕಲಿತುಕೊಳ್ಳಿ ಜನತೆಯ ಹಿತಾಸಕ್ತಿಗಳಿಗಾಗಿ ಶ್ರಮಿಸಿ ಎಂದು ಹಿತ ನುಡಿದರು.

ಸದಸ್ಯರು ಇದಕ್ಕೆ ಮುನ್ನ ಎ.ಐ.ಸಿ.ಸಿ. ಕಛೇರಿಗೆ ಭೇಟಿಯಿತ್ತು ಕಾಂಗ್ರೆಸ್ಸಿನ ಧ್ಯೇಯಗಳಿಗನುಸಾರವಾಗಿ ತಾವು ನಡೆದುಕೊಳ್ಳುವುದಾಗಿ ಪ್ರಮಾಣಸ್ವೀಕಾರ ಮಾಡಿದರು.

ಕರ್ನಾಟಕ ಪ್ರಾಂತ್ಯರಚನೆ ಬಗ್ಗೆ ವಿಷಯ ಸಂಗ್ರಹಣಾ ಸಮಿತಿ

ಕರ್ನಾಟಕ ಪ್ರಾಂತ್ಯರಚನೆ ಬಗ್ಗೆ ಎಲ್ಲಾ ಅಭಿಪ್ರಾಯಗಳನ್ನು ಸಂಗ್ರಹಿಸಿ ಪ್ರಾಂತ್ಯ ವಿಂಗಡನಾ ಸಮಿತಿಗೆ ಸಲ್ಲಿಸಲು ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನಿನ್ನೆಯದಿನ ಸಭೆ ನಡೆಸಿ, ಈ ಕಾರ್ಯಕ್ಕಾಗಿ ಒಂದು ಉಪಸಮಿತಿಯನ್ನು ರಚಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೯—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—	೨೬—೮
ಎಳ್ಳು	೬೪—	೬೮—
ಹರಳು	೨೮—೧೪	೩೩—
ಹುಚ್ಚೆಳ್ಳು	೩೭—	೪೩—೧೪
ಹುಣಸೆಬೀಜ	೧೩—	—
ಹೊಂಗೆಬೀಜ	೧೭—೨	೨೪—೬
ಹುರುಳಿ	೨೬—೧೪	೨೮—೬
ಹೆಸರು	೩೭—	೪೧—೧೨
ಅಲಸಂದೆ	೩೨—೮	೩೯—೨
ಅವರೆ	೧೮—೨	—
ಉದ್ದು	೫೩—೨	—
ಹುಣಸೆಹಣ್ಣು	೫—೮	೧೦—೪
ಸೀಗೆಕಾಯಿ	೪—೨	೪—೧೧
ಮೆಣಸಿನಕಾಯಿ	೨೭—೧೦	೨೯—
ತೆಂಗಿನಕಾಯಿ	೧೫೫—	೨೮೦—
ಕಡಲೆ	೪೦—೪	೪೪—೮
ತೊಗರಿ	೨೫—	೨೬—
ಸೆಣಬು	೨೫—೧೦	೨೯—
ಕೊತ್ತಂಬರಿ	೨೪—೨	೨೯—೮
ಹು ಬೀಜ	೪೪—೨	—
ಬೆಲ್ಲ	—	—

ಕಾಲುವೆ ನೀರಿನ ಹಂಚಿಕೆ

ಭಾರತ ಮತ್ತು ಪಾಕೀಸ್ಥಾನಕ್ಕೆ ಕಾಲುವೆ ನೀರಿನ ಹಂಚಿಕೆ ಬಗ್ಗೆ ಇದ್ದ ವಿವಾದವನ್ನು ಅಂತರರಾಷ್ಟ್ರೀಯ ಬ್ಯಾಂಕ್ ಬಗೆಹರಿಸಿ ತೀರ್ಪು ಇತ್ತಿದೆಯೆಂದು ಹೇಳಲಾಗಿದೆ.

ಈ ತೀರ್ಪಿನಂತೆ ಭಾರತ ಪೂರ್ವದ ನದಿಗಳಾದ ರಾವಿ, ಬೀಯಾಸ್ ಮತ್ತು ಸೆಟ್ಲೆಜ್ ನದಿಗಳ ನೀರಿನ ಉಪಯೋಗ ಹೊಂದುವುದು.

ಪಾಕೀಸ್ಥಾನವು ಸಿಂಧೂ, ಜೀಲಂ ಮತ್ತು ಚೀನಾಬ್ ನದಿ ನೀರನ್ನು ಹೊಂದುವುದು. ಪಾಕೀಸ್ಥಾನವು ಹೊಸದಾಗಿ ಕಟ್ಟಬೇಕಾಗುವ ಕಾಲುವೆಗೆ ಭಾರತವು ೪೦ ರಿಂದ ೬೦ ಕೋಟಿ ರೂ. ಗಳನ್ನು ಪಾಕೀಸ್ಥಾನಕ್ಕೆ ಪರಿಹಾರವಾಗಿ ಕೊಡಬೇಕಾಗಿದೆ.

ಪಾಕೀಸ್ಥಾನಕ್ಕೆ ಸೇರಿರುವ ನದಿಗಳಿಂದ ಭಾರತದ ಕಡೆಗೆ ನೀರನ್ನು ತಿರುಗಿಸಿಕೊಳ್ಳದೆ ಭಾರತವು ಅಲ್ಲಿ ವಿದ್ಯುತ್ ಉತ್ಪನ್ನ ಕೇಂದ್ರ ನಿರ್ಮಿಸಿಕೊಳ್ಳಲು ಅವಕಾಶ ನೀಡಲಾಗಿದೆ.

ಅಂತರ ರಾಷ್ಟ್ರೀಯ ಬ್ಯಾಂಕ್ ತೀರ್ಮಾನವು ಭಾರತ ಮತ್ತು ಪಾಕ್ ಸರ್ಕಾರಗಳ ತೀವ್ರ ಪರ್ಯಾಲೋಚನೆಯಲ್ಲಿದೆಯೆಂದು ಹೇಳಲಾಗಿದೆ.

ಪ್ರಭಾ ★ 12-3-54ರಿಂದ ಮೂರನೇವಾರ
ದಿನವಹಿ 3 ಆಟಗಳು
ದೇವ ಕನ್ನಿಕಾ
ಕನ್ನಡ

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ	ಡ್ರಾಯಿಂಗ್
31-3-1954	19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು: ಜಿ. ಎಲ್. ಸ್ವಾಮಿ, ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೬೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೬೧

೧೧-೩-೧೯೫೪ ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಕೈಮಗ್ಗದವರ ದಿನಾಚರಣೆ

ಸ್ವ. ಸು. ಕೋಲಾರ ೧೧

ಅಖಿಲ ಭಾರತದ ಕೈಮಗ್ಗದವರ ದಿನಾಚರಣೆಯನ್ನು ಸ್ಥಳೀಯ ನೇಯಿಗೆ ಸಂಘದ ಆಶ್ರಯದಲ್ಲಿ ಇದೇ ೭ ನೇ ತಾ॥ ನಿಂದ ಆಚರಿಸಲಾಗುತ್ತಿದೆ. ಪ್ರತಿ ದಿನ ಬೆಳಿಗ್ಗೆ ಪ್ರಭಾತಭೇರಿ, ಬಟ್ಟೆಗಳ ಪ್ರದರ್ಶನಗಳು ನಡೆಯುತ್ತಿದೆ.

ಅಖಿಲ ಭಾರತ ಕೈಮಗ್ಗದ ದಿನಾಚರಣೆಯನ್ನು ವಿಧಾನ ಸಭಾ ಸದಸ್ಯರಾದ ಶ್ರೀ ಹೆಚ್. ಸಿ. ಲಿಂಗಾರೆಡ್ಡಿಯವರು ತಾ॥ ೨-೩-೫೪ ರಲ್ಲಿ ಆರಂಭಗೊಳಿಸಿದರು. ಮಾನ್ಯ ರೆಡ್ಡಿಯವರು, ಪ್ರಸ್ತುತ ಕೈಮಗ್ಗದವರ ಸ್ಥಿತಿಗಳನ್ನು ಕುರಿತು ಮಾತನಾಡುತ್ತಾ, ಪಾಶ್ಚಿಮಾತ್ಯರ ಯಾಂತ್ರಿಕ ಪ್ರಯೋಗಗಳಿಂದ, ನಮ್ಮ ಪ್ರಾಚೀನ ಕೈಮಗ್ಗದವರಿಗೆ ಪೆಟ್ಟುಬಿದ್ದಂತಾಗಿದೆಯೆಂದೂ, ಕೈಮಗ್ಗದವರಿಗೆ ಈಗ ಜನಸಮುದಾಯದಿಂದ ತಕ್ಕ ಪ್ರೋತ್ಸಾಹವು ದೊರೆಯುತ್ತಿಲ್ಲವೆಂದು ತಿಳಿಸಿದರು.
ಅನಂತರ ಶ್ರೀ ಕೆ. ಎನ್. ಸುಬ್ರಹ್ಮಣ್ಯಂರವರು, ಖಾದಿ ಮತ್ತು ಗಾಂಧೀಯತೆಯನ್ನು ಕುರಿತು ಖಾದಿಕೆಲಸಗಾರರಿಗೂ ಕೈಮಗ್ಗದವರಿಗೂ ಇರುವ ಅವತಿ ಸಂಬಂಧವನ್ನು ವಿವರಿಸಿದರು.” ಜಿಲ್ಲಾ ನೇಯ್ಗೆ ಸೂಪರ್‌ವೈಸರ್‌ರವರಾದ ಶ್ರೀ ಸುಂದರಾಜಯ್ಯನವರ ವಂದನಾರ್ಪಣೆ ಸಲ್ಲಿಸಿದರು.

ಆಂಧ್ರ ಸಂಘದ ವಾರ್ಷಿಕೋತ್ಸವ

ಸ್ಥಳೀಯ ಇಂಟರ್ ಕಾಲೇಜಿನ ಆಂಧ್ರ ಸಂಘದ ಮುಕ್ತಾಯ ಭಾಷಣವನ್ನು ಮೈ॥ ವಿಶ್ವವಿದ್ಯಾನಿಲಯದ ಅಸಿಸ್ಟೆಂಟ್ ಪ್ರೊ॥ ರಾದ ಶ್ರೀ ಕೆ. ಸುಬ್ಬರಾಯಪ್ಪನವರು ಮಾಡಿದರು.

ಕಾಲೇಜಿನ ಮುಖ್ಯಾಧಿಕಾರಿ ಶ್ರೀ ಎಸ್. ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಸಂಘದ ಅಧ್ಯಕ್ಷ ಶ್ರೀ ಸೀತಾರಾಮ ದೀಕ್ಷಿತರು ಸ್ವಾಗತಿಸಿದರು. ಅನಂತರ ಶ್ರೀ ಸುಬ್ಬರಾಮಯ್ಯನವರು ತೆಲುಗು ಸಾಹಿತ್ಯದ ಅಪರಿಮಿತ ಪ್ರಾಶಸ್ತ್ಯವನ್ನು ವಿವರಿಸಿದರು. ಶ್ರೀ ಸುಪ್ರಸಿದ್ಧ ಹಿಂಬದಿರುಗಾಯಕರಾದ ಶ್ರೀ ಬಾಗೇಪಲ್ಲಿ ಸುಬ್ರಮಣ್ಯಂರವರ ಕೆಲವು ಚಲನ ಚಿತ್ರ ಹಾಡುಗಳನ್ನು ಹಾಡಿದರು. ಸಂಘದ ಜಂಟೀ ಕಾರ್ಯದರ್ಶಿ ಶ್ರೀ ಚೆಲುವರಂಗರಾಯರವರು ವಂದನಾರ್ಪಣೆ ಸಲ್ಲಿಸಿದರು. ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು.

ತ್ಯಾಗರಾಜಾರಾಧನೆ

ಸ್ಥಳೀಯ ತ್ಯಾಗರಾಜ ಮಂಡಲಿಯ ಆಶ್ರಯದಲ್ಲಿ ತ್ಯಾಗರಾಜಾರಾಧನೆಯನ್ನು ತಾ॥ ೭ ರಿಂದ ಆಚರಿಸಲಾಗುತ್ತಿದೆ. ಪ್ರತಿ ದಿನ ರಾತ್ರಿ ಅನೇಕ ಸಂಗೀತಗಾರರಿಂದ ಕಚೇರಿ ನಡೆಯುತ್ತಿದೆ. ಅನೇಕ ಭಕ್ತಾದಿಗಳು ಪ್ರತಿದಿನವು ಸಭೆಗೂಡುತ್ತಿದ್ದಾರೆ.

ಕಾಶ್ಮೀರ ವೀಕ್ಷಕರನ್ನು ಪೌರತ್ವದ ಮೇಲೆ ಪರಿಗಣಿಸಲಾಗುವುದಿಲ್ಲ

ಅಲ್ಲಿಯ ಅಮೆರಿಕನ್ನರ ಮೇಲೆ ಕೃತ್ರಿಮ ಕೆಲಸ ಆಪಾದನೆಯಿಲ್ಲ

ವಿಶ್ವಸಂಸ್ಥೆಯ ಮಹಾಕಾರ್ಯದರ್ಶಿಯವರ ಹೇಳಿಕೆ

ಅಮೆರಿಕಾ ಪಾಕೀಸ್ತಾನ ಮಿಲಿಟರಿ ನೆರವಿನ ವಿಷಯದಲ್ಲಿ ಕಳೆದವಾರ ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನಲ್ಲಿ ಮಾತನಾಡುತ್ತಾ ಈ ಒಪ್ಪಂದದ ಫಲವಾಗಿ ಕಾಶ್ಮೀರದಲ್ಲಿ ತಟಸ್ಥವೀಕ್ಷಕ ತಂಡದಲ್ಲಿರುವ ಅಮೆರಿಕನ್ನರನ್ನು ಇನ್ನುಮುಂದೆ ತಟಸ್ಥರೆಂಬು ಪರಿಗಣಿಸಲು ಸಾಧ್ಯವಿಲ್ಲ. ಅವರು ಅಲ್ಲಿ ಮುಂದುವರಿಯುವುದು ತಕ್ಕುದಲ್ಲವೆಂದು ಭಾಷಣಮಾಡಿದ ಪ್ರತಿಯನ್ನು ವಿಶ್ವಸಂಸ್ಥೆಯಲ್ಲಿರುವ ಭಾರತ ಪ್ರತಿನಿಧಿಯು ಸಂಸ್ಥೆಯ ಮಹಾ ಕಾರ್ಯದರ್ಶಿಯವರಿಗೆ ಸಲ್ಲಿಸಿದರಷ್ಟೆ. ಆದರ ಮೇಲೆ ಮಹಾ ಕಾರ್ಯದರ್ಶಿ ಮಿ॥ ಹೆಮರ್‌ಶೋಲ್ಡ್‌ರವರು ಮಾತನಾಡುತ್ತಾ ಈ ಭಾಷಣದ ಪ್ರತಿಯನ್ನು ತಾವು ಭಾರತದಿಂದ ಬಂದ ಅಧಿಕೃತ ಪ್ರತಿಭಟನಾ ಪತ್ರವೆಂದು ಪರಿಗಣಿಸಲು ಸಾಧ್ಯವಿಲ್ಲ. ಈಗ ಅಲ್ಲಿರುವ ವೀಕ್ಷಕ ತಂಡದಲ್ಲಿ ಯಾವ ಜನಾಂಗದವರಿದ್ದರೂ ಅವರು ವಿಶ್ವಸಂಸ್ಥೆಗೆ ಜವಾಬ್ದಾರರು ಮತ್ತು ನಿಷ್ಪಕ್ಷರು ಅವರನ್ನು ಜನಾಂಗ ಅಥವಾ ಪೌರತ್ವ ದೃಷ್ಟಿಯಿಂದ ಪರಿಗಣಿಸಲಾಗುವುದಿಲ್ಲವೆಂದು ಹೇಳಿದ್ದಾರೆ.

ಈ ವೀಕ್ಷಕ ತಂಡದಲ್ಲಿರುವ ಅಮೆರಿಕನ್ನರು ಕೃತ್ರಿಮ ಕೆಲಸಗಳಲ್ಲಿ ತೊಡಗಿರುವರೆಂಬ ಬಗ್ಗೆ ಆಪಾದನೆ ಅಥವಾ ಅದಕ್ಕೆ ರುಜುವಾತು ಬಂದಿಲ್ಲ ಎಂದೂ ಅವರು ತಿಳಿಸಿದಾರೆ.

ರಾಷ್ಟ್ರಾಧ್ಯಕ್ಷರು ಅಂಡಮಾನ್ ದ್ವೀಪದಲ್ಲಿ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರ ಪ್ರಸಾದ್‌ರವರು ನಿನ್ನೆಯದಿನ ಅಂಡಮಾನ್ ದ್ವೀಪವನ್ನು ಸೇರಿದರು. ಅಲ್ಲಿ ಅವರು ೨-೩ ದಿನಗಳ ಕಾಲ ಪ್ರವಾಸ ನಡೆಸಿ ಅಲ್ಲಿ ನೆಲಸಿರುವ ಜನರ ಅಭಿವೃದ್ಧಿಕಾರ್ಯಗಳ ಬಗ್ಗೆ ಪರಿಶೀಲನೆ ನಡೆಸುವರು. ನಿನ್ನೆ ಅಲ್ಲಿ ರಾಷ್ಟ್ರಾಧ್ಯಕ್ಷರಿಗೆ ಅಭೂತ ಸ್ವಾಗತ ದೊರೆಯಿತು ಭಾರತದಿಂದ ಅವರು ಅಲ್ಲಿಗೆ ಐ. ಎನ್. ಎಸ್. ದೆಹಲಿ ಹಡಗಿನಲ್ಲಿ ಪ್ರಯಾಣ ಮಾಡಿದರು.

ಕೇಂದ್ರದ ಆಜ್ಞೆಗೆ ತಿರುವಾಂಕೂರ್ ಸರ್ಕಾರದ ತಿರಸ್ಕಾರವೆ ?

ತಿರುವಾಂಕೂರು ಕೊಚ್ಚಿಯಲ್ಲಿ ಶಾಸನ ಸಭೆಗೆ ಆಂಗ್ಲೋ ಇಂಡಿಯನ್ ಪ್ರತಿನಿಧಿಯ ನಾಮಕರಣವನ್ನು ಇದೇ ೩ ನೇ ತಾರೀಖು ಪ್ರಕಟಿಸಬೇಕೆಂದು ಮುಖ್ಯಮಂತ್ರಿ ಸೂಚನೆಯನ್ನಿತ್ತಿದ್ದಾಗ್ಯೂ ಅಲ್ಲಿಯ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಯವರು ೫ ನೇ ತಾರೀಖು ಪ್ರಕಟಿಸಿ ೨ ದಿನ ನಿಧಾನ ಮಾಡಿದುದಕ್ಕೆ ಮುಖ್ಯಮಂತ್ರಿ ಶ್ರೀ ಜಾರ್ಜ್‌ರವರು ಒಂದು ಆಜ್ಞೆಯನ್ನು ಮಾಡಿ ಇದೇ ೧೨ ನೇ ತಾರೀಖು ತಮ್ಮ ಹುದ್ದೆಯನ್ನು ಶ್ರೀ ಬಿ. ವಿ. ಕೆ. ಮೆನನ್‌ರವರಿಗೆ ವಹಿಸಿ ಕೊಟ್ಟು ಮದ್ರಾಸಿಗೆ ಹೊರಟು ಹೋಗಬೇಕೆಂದು ಶ್ರೇಷ್ಠ ಕಾರ್ಯದರ್ಶಿ ಶ್ರೀ ರಾಜನ್‌ರವರಿಗೆ ಆಜ್ಞೆ ಮಾಡಿದ್ದರು.

ಮದ್ರಾಸಿನಿಂದ ಎರವಲಾಗಿ ಕೊಟ್ಟಿದ್ದ ಈ ಅಧಿಕಾರಿಯು ಈ ವಿಷಯವನ್ನು ಕೇಂದ್ರ ಸರ್ಕಾರದ ಸಂಸ್ಥಾನ ಶಾಖೆಗೆ ತಿಳಿಸಲು ಹೊಸ ಸರ್ಕಾರವು ರಚಿಸುವವರೆಗೂ ಶ್ರೀ ರಾಜನ್‌ರವರು ಶ್ರೇಷ್ಠ ಕಾರ್ಯದರ್ಶಿಯಾಗಿಯೇ ಇರುವಂತೆ ಸೂಚನೆಯನ್ನು ಕೊಟ್ಟಿರುವುದಾಗಿ ತಿಳಿಯಬರುತ್ತದೆ.

ಆದಾಗ್ಯೂ, ಕೇಂದ್ರದ ಈ ಆಜ್ಞೆಗೆ ಮಂತ್ರಿ ಮಂಡಲವು ಸಮ್ಮತಿಸಿಲ್ಲವೆಂದೂ ವಿಷಯವನ್ನು ರಾಜಪ್ರಮುಖರ ತೀರ್ಮಾನಕ್ಕೆ ಕಳುಹಿಸಲಾಗಿದೆಯೆಂದು ತಿಳಿಯಬರುತ್ತದೆ.

ವಿವಿಧಘಟ್ಟ ಮಾರಾಟತೆರಿಗೆ ರದ್ದು ಸಾಧ್ಯವಿಲ್ಲ

ವಿವಿಧ ಘಟ್ಟಗಳಲ್ಲಿ ವಸೂಲ್ಮಾಡುತ್ತಲಿರುವ ಮಾರಾಟ ತೆರಿಗೆಯನ್ನು ರದ್ದುಗೊಳಿಸಿ ಏಕ ಘಟ್ಟದಲ್ಲಿಯೇ ಅದನ್ನು ವಸೂಲ್ಮಾಡುವ ಕ್ರಮವನ್ನು ಜಾರಿಗೆ ತರಲು ಸಾಧ್ಯವಿಲ್ಲವೆಂದು ಹೈದರಾಬಾದಿನ ಆರ್ಥಿಕ ಸಚಿವ ಶ್ರೀ ವಿನಾಯಕ ವಿದ್ಯಾಲಂಕಾರ್‌ರವರು ಅಲ್ಲಿಯ ಶಾಸನಸಭೆಯಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ನ್ಯಾಯಾಂಗ-ಕಾರ್ಯಾಂಗ ಪ್ರತ್ಯೇಕತೆ

ಬೆಂಗಳೂರು ೧೧

ನ್ಯಾಯಾಂಗವನ್ನು ಕಾರ್ಯಾಂಗದಿಂದ ಪ್ರತ್ಯೇಕಿಸಲು ಯೋಜನೆ ತಯಾರಾಗಿದೆ. ಈ ವಿಷಯದಲ್ಲಿ ಶ್ರೇಷ್ಠ ನ್ಯಾಯಾಲಯ ಸಂಸ್ಥಾನದ ಅಡ್ವೊಕೇಟ್ ಜನರಲ್, ಜಿಲ್ಲಾ ಮ್ಯಾಜಿಸ್ಟ್ರೇಟರು ಮತ್ತು ನ್ಯಾಯಾಂಗ ಸಂಘಗಳಿಂದ ಅಭಿಪ್ರಾಯ ಪಡೆಯಲಾಗಿದೆ. ಅವು ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ ಎಂದು ನ್ಯಾಯಾಂಗ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಅನ್ನ ದಾನ

ಹುಣಸೂರು ರಸ್ತೆಯಲ್ಲಿ ಮೈಸೂರು ಟೋಲ್ ಗೇಟ್ ಬಳಿಯಿರುವ ಪ್ರೀಮಿಯರ್ ಸ್ಟೂಡಿಯೋವಿನಲ್ಲಿ ನಾಳೆಯ ದಿನ ೧೨ ಗಂಟೆಗೆ ಅಂಗವಿಹೀನರಿಗೆ ಅನ್ನ ದಾನ ನಡೆಯುತ್ತದೆಯೆಂದು ವ್ಯವಸ್ಥಾಪಕರು ತಿಳಿಸುತ್ತಾರೆ.

○ ಇದೇ ೧೩ ನೇ ತಾರೀಖಿನಿಂದ ೧೫ ರವರೆಗೆ ಡಿ. ಬನುಮಯ್ಯ ಹೈಸ್ಕೂಲಿನಲ್ಲಿ ರಜತಮಹೋತ್ಸವವು ನಡೆಯುತ್ತದೆ.

೧೩ ನೇ ತಾರೀಖು ಸಂಜೆ ೫ ಗಂಟೆಗೆ ಶ್ರೀಮನ್ಮಹಾರಾಜರು ಈ ಸಮಾರಂಭವನ್ನು ಉದ್ಘಾಟಿಸುತ್ತಾರೆ.

ವೈದ್ಯಶಾಖೆ
ಕೃಷ್ಣರಾಜೇಂದ್ರ ಆಸ್ಪತ್ರೆ
ಸೆಕ್ರೆಟರಿಯವರ ಕಛೇರಿ, ಮೈಸೂರು

ಸಂಕ್ಷಿಪ್ತ ಟೆಂಡರು ಪ್ರಕಟಣೆ

1954ನೇ ಏಪ್ರಿಲ್ ಒಂದನೇತಾರೀಖಿನಿಂದ ೧೯೫೪ನೇ ಡಿಸೆಂಬರ್ 31 ನೇ ತಾರೀಖಿನವರೆಗೆ (2 ದಿನಗಳೂ ಸೇರಿ) ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆ ಮತ್ತು ಚೆಲುವಾಂಬ ಆಸ್ಪತ್ರೆಗಳ ಉಪಯೋಗಕ್ಕೆ ಬೇಕಾಗುವ ಈ ಕೆಳಗೆ ಕಂಡ ಪದಾರ್ಥಗಳನ್ನು ಸರಬರಾಜು ಮಾಡಲು ಫುಲ್‌ಸ್ಕೇಪ್ ಸೈಜು ಅರ್ಧ ಹಾಳೆಯಲ್ಲಿ ಟೈಪುಮಾಡಿ ಅಥವ ಶಾಯಿಯಲ್ಲಿ ಸ್ಪಷ್ಟವಾಗಿ ಬರೆದ 3 ಪ್ರತಿಗಳಲ್ಲಿ ಸೀಲಾದ ಟೆಂಡರುಗಳನ್ನು ಆಯಾ ಪದಾರ್ಥಗಳ ನೇರದಲ್ಲಿ ನಮೂದು ಮಾಡಿರುವತಾರೀಖು ಮತ್ತು ವೇಳೆಗಳಲ್ಲಿ ಕೆಳಗೆ ರುಜು ಮಾಡಿರುವವರಿಂದ ಮೇಲ್ಕಂಡ ಕಛೇರಿಯಲ್ಲಿ ತೆಗೆದುಕೊಳ್ಳಲಾಗುವುದು.

ವಿವರವಾದ ಟೆಂಡರು ಪ್ರಕಟಣೆಯ ಪ್ರತಿಯನ್ನು ಮೇಲ್ಕಂಡ ಕಛೇರಿಯಲ್ಲಿ ಕೆಲಸ ಕಾಲದಲ್ಲಿ ಪಡೆಯಬಹುದು.

ಪದಾರ್ಥಗಳ ವಿವರ

1) ಆಹಾರ ಪದಾರ್ಥಗಳು 1954 ನೇ ಮಾರ್ಚಿ 17 ನೇ ತಾರೀಖು ಬೆಳಿಗ್ಗೆ 10 ಗಂಟೆಗೆ.

2) ಆಸ್ಪತ್ರೆ ಅವಶ್ಯಕತೆಗಳು 1954 ನೇ ಮಾರ್ಚಿ 16 ನೇ ತಾರೀಖು ಬೆಳಿಗ್ಗೆ 10 ಗಂಟೆಗೆ.

ಎಲ್. ಕಲ್ಲಯ್ಯ, ಸೆಕ್ರೆಟರಿ
ಕೃಷ್ಣರಾಜೇಂದ್ರ ಆಸ್ಪತ್ರೆ ಮೈಸೂರು.

ಪಾಕ್-ಅಮೆರಿಕಾ ಮಿಲಿಟರಿ ವಿಷಯದಲ್ಲಿ ಭಾರತದ ನಿಲುವು

ಕಾಂಗ್ರೆಸ್ ಸಮಿತಿಗಳು ಜನರಿಗೆ ತಿಳಿಸಬೇಕು

ಎ. ಐ. ಸಿ. ಸಿ. ಕಾರ್ಯದರ್ಶಿಯವರ ಸೂಚನೆ

ಪಾಕೀಸ್ತಾನ ಮತ್ತು ಅಮೆರಿಕಾ ಮಿಲಿಟರಿ ಒಪ್ಪಂದ ವಿಷಯದಲ್ಲಿ ಕಳೆದ ವಾರ ಪ್ರಧಾನಿ ನೆಹರೂರವರು ಮಾಡಿದ ಭಾಷಣದ ಪ್ರತಿಗಳನ್ನು ಅಖಿಲಭಾರತ ಕಾಂಗ್ರೆಸ್ಸಿನ ಕಾರ್ಯದರ್ಶಿಯವರು ಎಲ್ಲಾ ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೆ ಕಳುಹಿಸಿ ಅದನ್ನು ಆಯಾ ಪ್ರಾಂತೀಯ ಭಾಷೆಗಳಲ್ಲಿ ಮುದ್ರಿಸಿ ಎಲ್ಲಾ ಜನರಿಗೂ ಹಂಚಬೇಕೆಂದೂ ಸೂಚನೆಯನ್ನಿತ್ತಿದ್ದಾರೆ. ಅಲ್ಲದೆ ಎಲ್ಲಾ ಕಾಂಗ್ರೆಸ್ ಸಮಿತಿಗಳು ಸಭೆಗಳನ್ನು ನಡೆಸಿ ಜನರ ತಿಳುವಳಿಕೆ ಬಗ್ಗೆ ಇವುಗಳನ್ನು ವಿವರಿಸಬೇಕೆಂದೂ ಅದರಲ್ಲಿ ಸೂಚಿಸಲಾಗಿದೆ.

ಅಮೆರಿಕಾ ಪಾಕೀಸ್ತಾನ ಮಿಲಿಟರಿ ನೆರವಿನಿಂದ ಯುದ್ಧವು ಭಾರತದ ಹತ್ತಿರಕ್ಕೆ ಬರುತ್ತಿದೆ ಜನತೆಯು ಈ ವಿಷಯವನ್ನು ಚೆನ್ನಾಗಿ ಅರಿತುಕೊಂಡು ತಮ್ಮ ಎಲ್ಲಾ ರಾಜಕೀಯ ಪಕ್ಷಭಾವನೆಗಳನ್ನು ತೊರೆದು ಎಚ್ಚರಗೊಳ್ಳಬೇಕಾದುದು ಅತ್ಯಾವಶ್ಯಕ. ಜನರು ಸಂಘಟಿತರಾಗಿ ಇನ್ನು ಮುಂದೆ ವರ್ತಿಸಬೇಕಾಗಿದೆ. ಈ ಅಂಶವನ್ನು ಕಾಂಗ್ರೆಸ್ ಸಮಿತಿಗಳು ಜನರಿಗೆ ತಿಳಿಸಿ ಎಚ್ಚರಗೊಳಿಸಬೇಕು ಎಂದು ಅವರು ತಿಳಿಸಿದ್ದಾರೆ.

ಸತ್ಯಮಂಗಲ-ಚಾಮರಾಜನಗರ ರೈಲು ಸದ್ಯಕ್ಕಿಲ್ಲ

ಹೈದರಾಬಾದಿನಲ್ಲಿ ಖಾಂಡಾವಾ- ಹಿಂಡೋಲಿ ರೈಲ್ವೆ ಮಾರ್ಗವು ಹೆಚ್ಚು ಮುಖ್ಯವಾಗಿರುವುದರಿಂದ ಚಾಮರಾಜನಗರ_ಸತ್ಯಮಂಗಲ ರೈಲ್ವೇ ನಿರ್ಮಾಣ ಕಾರ್ಯವನ್ನು ಮುಂದಕ್ಕೆ ಹಾಕಿರುವುದಾಗಿ ಲೋಕ ಸಭೆಯಲ್ಲಿ ರೈಲ್ವೇ ಉಪಸಚಿವರು ತಿಳಿಸಿದಾರೆ.

ಅರಮನೆ ಅಶ್ವಶಾಲಾ ಮತ್ತು ಗಜಶಾಲಾ ಮೈಸೂರು 7-3-1954

ಟೆಂಡರ್ ನೋಟೀಸ್

ಸ್ 1954-55ನೇ ಸಾಲಿನಲ್ಲಿ ತಾ|| 1-4-54 ರಿಂದ 31-3-55ರ ಪೂರ್ತಾ ಮೇಲ್ಕಂಡ ಇಲಾಖೆಯ ನಾಯಿಗಳ ಉಪಯೋಗಕ್ಕಾಗಿ ದಿನವಹಿ ಶುದ್ಧವಾದ ಕುರಿ ಮಾಂಸ, ಲೀವರ್, ಕೋಳಿಮೊಟ್ಟೆ ಮತ್ತು ನಾರ್ರೊಟ್ಟೆ ಮುಂತಾದುವುಗಳನ್ನು ಸರಬರಾಯಿ ಮಾಡಲು ಅಪೇಕ್ಷೆಯುಳ್ಳವರು ಸೀಲಾದ ಟೆಂಡರುಗಳನ್ನು ಒಂದು ನೂರು ರೂಪಾಯಿ ಠೇವಣಾತಿಯೊಂದಿಗೆ ಇದೇ ಮಾಹೆ ತಾ|| ೧೫ನೇ ಮಧ್ಯಾಹ್ನ 12 ಗಂಟೆಯೊಳಗಾಗಿ ಇಲಾಖಾ ಆಫೀಸರ್ ಇನ್ ಛಾರ್ಜರವರಿಗೆ ಕೊಡತಕ್ಕದ್ದು. ಹೆಚ್ಚಿಗೆ ವಿಷಯಗಳನ್ನು ಇಲಾಖೆಯಲ್ಲಿ ವಿಚಾರಿಸಿಕೊಳ್ಳತಕ್ಕದ್ದು.

M. GOPALA KRISHNE URS
Officer -in- charge
Palace Stables & Gajasala
MYSORE

ಸ್ವಾಮಿ ಸೀತಾರಾಂರವರ ಉಪವಾಸ

ದೇಹವು ಬಲಹೀನವಾಗುತ್ತಿದೆ

ಆಂಧ್ರದಲ್ಲಿ ಪಾನವಿರೋಧ ಶಾಸನವನ್ನು ರದ್ದುಗೊಳಿಸಕೂಡದೆಂದು ಆಮರಣಾಂತ ಉಪವಾಸವನ್ನು ಕೈಗೊಂಡಿರುವ ಸ್ವಾಮಿ ಸೀತಾರಾಂರವರು ದೇಹವು ಬಲಗುಂದುತ್ತಿದೆ. ಅವರು ಉಪವಾಸ ಪ್ರಾರಂಭಿಸಿ ಇಂದಿಗೆ ೭ ದಿನಗಳಾದುವು.

ಅವರ ದೇಹದ ತೂಕವು ಇಳಿಯುತ್ತಿದೆ ಕಾಲು ಮತ್ತು ಮುಖ ಬಾತುಕೊಂಡಿದೆ ಅವರು ಸೇವಿಸುವ ನೀರು ಸಹ ವಮನವಾಗುತ್ತಿದೆ. ಅವರ ಧ್ವನಿಯು ಕುಗ್ಗುತ್ತಲೂ, ನಡುಗುತ್ತಲೂ ಇದೆ. ಮಾತನಾಡುವುದು ಅಥವಾ ಓಡಾಡುವುದಕ್ಕಾಗಿ ಅವರಿಗೆ ಶಕ್ತಿಯೇ ಇಲ್ಲದಾಗಿದೆ. ವೈದ್ಯರು ನಿತ್ಯವೂ ಅವರನ್ನು ಪರೀಕ್ಷಿಸುತ್ತಲಿದ್ದಾರೆ.

ಹೊಸ ತೆರಿಗೆಗಳನ್ನು ಇಳಿಸಲಾಗುತ್ತದೆಯೆ ?

ಬೆಂಗಳೂರು ೧೧

ಸರ್ಕಾರದ ಮುಂದಿನ ಸಾಲಿನಿಂದ ಹಲವಾರು ಹೊಸ ತೆರಿಗೆಗಳನ್ನು ವಿಧಿಸಬೇಕೆಂಬ ವಿಷಯವನ್ನು ಮುಖ್ಯಮಂತ್ರಿಗಳ ಬಜೆಟ್ ಅಧಿವೇಶನದಲ್ಲಿ ಪ್ರಕಟಿಸಿರುವ ಪರಿಣಾಮವಾಗಿ ಶಾಸನ ಸಭೆಯ ಕಾಂಗ್ರೆಸ್ ವಲಯಗಳಲ್ಲಿಯೇ ವಿಶೇಷ ಪ್ರತಿಭಟನೆ ಬರುತ್ತಿರುವುದರಿಂದ ಈ ವಿಷಯವನ್ನು ಸರ್ಕಾರವು ಪುನಃ ಪರಿಶೀಲಿಸಿ ಹೊಸತೆರಿಗೆಗಳಲ್ಲಿ ಕೆಲವನ್ನು ಕಡಿಮೆ ಮಾಡುವ ಸಂಭವವಿದೆಯೆಂದು ಹೇಳಲಾಗುತ್ತದೆ.

ಮುಂದಿನ ಮಾಹೆ ಭಾರತ ಪಾಕ್ ಪ್ರಧಾನಿಗಳ ಭೇಟಿ

ಕಾಶ್ಮೀರ ವಿಷಯದಲ್ಲಿ ತಮ್ಮ ಮಾತುಕತೆಗಳನ್ನು ಮುಂದುವರಿಸಲು ಭಾರತ ಪ್ರಧಾನಿ ನೆಹರೂರವರನ್ನು ಮುಂದಿನ ತಿಂಗಳು ೨ನೇ ತಾ|| ತಾವು ಭೇಟಿ ಮಾಡುವುದಾಗಿ ಪಾಕೀಸ್ತಾನ ಪ್ರಧಾನಿ ಮಹಮದ್ ಆಲಿಯವರು ಹೇಳಿರುವುದಾಗಿ ತಿಳಿಯಬರುತ್ತದೆ.

ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ ಪ್ರಧಾನಿ ನೆಹರೂರವರಿಂದ ತಮ್ಮ ಪತ್ರಗಳಿಗೆ ಉತ್ತರ ಬಂದಿರುವುದಾಗಿಯೂ ಕಾಶ್ಮೀರ ವಿವಾದ ಚರ್ಚೆಗೆ ಅವರು ನಿರಾಕರಣೆಯನ್ನು ವ್ಯಕ್ತಪಡಿಸಿಲ್ಲವೆಂದೂ ಮಹಮದ್ ಆಲಿಯವರು ತಿಳಿಸಿದ್ದಾರೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೦—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—	೨೫—೬
ಎಳ್ಳು	೬೯—೨	—
ಹರಳು	೨೭—೧೨	೨೯—೧೪
ಹುಚ್ಚೆಳ್ಳು	೩೭—	೪೫—
ಹುಣಸೆಬೀಜ	೧೭—	೨೪—೨
ಹೊಂಗೆಬೀಜ	೧೩—೪	೧೩—೧೦
ಹುರುಳಿ	೨೫—೧೪	೨೮—೪
ಹೆಸರು	೩೭—	೩೯—
ಅಲಸಂದೆ	೩೦—	೪೪—
ಅವರೆ	೧೪—೬	೨೬—
ಕೊತ್ತಂಬರಿ	೨೬—೧೦	೨೮—೧೨
ಕಡಲೆ	೩೮—	೪೧—೧೨
ಉದ್ದು	—	—
ತೊಗರಿ	೨೦—೧೦	೨೩—
ಕ|| ಬೀಜ	—	—
ಸೆಣಬು	೨೬—೬	೩೦—
ಹುಣಸೆಹಣ್ಣು	೭—೬	೧೦—
ಸೀಗೆಕಾಯಿ	೪—೬	೪—೧೧
ಬೆಲ್ಲ	—	—
ಮೆಣಸಿನಕಾಯಿ	—	—
ತೆಂಗಿನಕಾಯಿ	೧೫೧—	೨೩೦—

ಅಸಿಸ್ಟೆಂಟ್ ಕಮೀಷನರುಗಳ ವರ್ಗಾವರ್ಗಿ

ಬೆಂಗಳೂರು ೧೧

ಅಸಿಸ್ಟಂಟ್ ಕಮಿಷನರ್ ದರ್ಜೆಯಲ್ಲಿರುವ ಅಧಿಕಾರಿಗಳ ವರ್ಗಾವರ್ಗಿಯು ಈ ರೀತಿ ಆಗಿದೆ:-ರಜದ ಮೇಲಿರುವ ಶ್ರೀ ಎಂ. ಮಲ್ಲೇಶ್ವಯ್ಯನವರು ಮೈಸೂರು ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟ್ ಆಗಿ; ಪರ್ಸನಲ್ ಅಸಿಸ್ಟೆಂಟ್ ಶ್ರೀ ಪಿ. ಎಸ್. ರಾಜಶೇಖರಪ್ಪನವರು ನಂಜನಗೂಡು ಸಬ್ ಡಿವಿಜನ್ ಅಧಿಕಾರಿಗಳಾಗಿ; ನಂಜನಗೂಡು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಎ. ಮುನಿಸ್ವಾಮಿಗೌಡರು ಮೈಸೂರು ಸಬ್ ಡಿವಿಜನ್ನಿಗೆ, ಮೈಸೂರು ಸಬ್ ಡಿವಿಜನ್ನಿನ ಶ್ರೀ ಎಂ. ಸೈಯದ್ ಮುರ್ಷಿದ್‌ಪೀರ್ ದಕ್ಷತೆ ತನಿಖೆಯ ವಿಶೇಷಾಧಿಕಾರಿಯ ಅಸಿಸ್ಟೆಂಟ್‌ರಾಗಿ.

ಸಂಯುಕ್ತ ವಾಮಪಕ್ಷದೊಡನೆ ಪಿ. ಎಸ್. ಪಿ. ಸೇರಕೂಡದು

ಸಂಯುಕ್ತ ವಾಮಪಕ್ಷದೊಡನೆ ಪ್ರಜಾ ಸೋಷಲಿಸ್ಟ್ ಪಕ್ಷವು ಸೇರಿ ತಿರುವಾಂಕೂರ್-ಕೊಚ್ಚಿಯಲ್ಲಿ ಮಿಶ್ರ ಸರ್ಕಾರವನ್ನು ರಚಿಸುವುದನ್ನು ವಿರೋಧಿಸಿ ಶ್ರೀ ಜಯಪ್ರಕಾಶ್ ನಾರಾಯಣರವರು ಪಕ್ಷದ ಅಧ್ಯಕ್ಷ ಆಚಾರ್ಯ ಕೃಪಲಾನಿಯವರಿಗೆ ಪತ್ರ ಬರೆದಿರುವುದಾಗಿ ತಿಳಿಯಬರುತ್ತದೆ.

.... ರಣಜಿತ್ ....

1o-3-54 ರಿಂದ ಅಮೋಘ 2 ನೇವಾರ

ಫಿಲ್ಮಿಸ್ತಾನ್‌ರವರ:-

ಸಮ್ರಾಟ್ [ಹಿಂದಿ]

ಪಾತ್ರ:-ರೆಹನ, ಅಜಿತ್, ರಾಮಸಿಂಗ್, ಮುಮ್ತಾಜ್ ಅಲಿ.

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ರಾಜಕಮಲ್, ಮೈಸೂರು

12—3—54 ರಿಂದ ಅಮೋಘ ಪ್ರಾರಂಭ

ಪ್ರತಿದಿನ ಮೂರು ಪ್ರದರ್ಶನಗಳು

ಮೂವತ್ತು ಲಕ್ಷ ರೂಪಾಯಿಗಳನ್ನು ವ್ಯಯಮಾಡಿ ಅನೇಕ ವರ್ಷಗಳಿಂದ ಶ್ರಮಪಟ್ಟು ತಯಾರಿಸಿರುವ

ಮನೋಹರ್ ಪಿಕ್ಚರ್ಸ್‌ರವರ:—

ಮನೋಹರ

[ತಮಿಳು]

ಭೂಮಿಕೆ:— ಶಿವಾಜಿ ಗಣೇಶನ್, ಕನ್ನಾಂಬ, ಗಿರಿಜ, ಟಿ. ಆರ್. ರಾಜಕುಮಾರಿ, ಪಂಡರಿಬಾಯಿ, ಬಿ. ಶಿ. ಸರಸ್ವತಿ

ಆರುವಾರಗಳ ಕಾಲ ಫ್ರೀ ಪಾಸುಗಳನ್ನು ಮನ್ನಾಮಾಡಿದೆ

ಕಡೇದಿನ:— ● ಚಂದ್ರಹಾರಂ ●

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೬೨

೧೨-೩-೧೯೫೪ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ತಿರುವಾಂಕೂರ್-ಕೊಚ್ಚಿಯಲ್ಲಿ ಮಿಶ್ರಸರ್ಕಾರ ರಚನೆಗೆ ಸಿದ್ಧವಿಲ್ಲ

ಪ್ರಜಾಸೋಷಲಿಸ್ಟರ ತೀರ್ಮಾನ

ತಿರುವಾಂಕೂರ್-ಕೊಚ್ಚಿಯಲ್ಲಿ ಸರ್ಕಾರವನ್ನು ರಚಿಸುವಂತೆ ಪ್ರಜಾಸೋಷಲಿಸ್ಟ್ ಪಕ್ಷಕ್ಕೆ ಆಹ್ವಾನ ಬಂದರೆ ಆಗ ಆ ಕಾರ್ಯವನ್ನು ಮಾಡಲು ಪಕ್ಷವು ಸಿದ್ಧವಿದೆ. ಆದರೆ ಸಂಯುಕ್ತ ಸರ್ಕಾರವನ್ನು ರಚಿಸಲು ಪಿ. ಎಸ್. ಪಿ ಪಕ್ಷವು ಸಿದ್ಧವಿಲ್ಲವೆಂಬ ತೀರ್ಮಾನವನ್ನು ಮದರಾಸಿನಲ್ಲಿ ನಿನ್ನೆ ಸೇರಿದ ಪ್ರಜಾಸೋಷಲಿಸ್ಟ್ ಪಕ್ಷದ ಕಾರ್ಯನಿರ್ವಾಹಕ ಮಂಡಲಿಯು ತೀರ್ಮಾನ ಮಾಡುವುದಾಗಿ ವರದಿಯಾಗಿದೆ.

ಈ ರೀತಿ ಪಿ. ಎಸ್. ಪಿ. ಯು ಸರ್ಕಾರವನ್ನು ರಚಿಸಲು ಇತರರ ಸಹಕಾರವನ್ನು ಮಾತ್ರ ಸ್ವೀಕರಿಸುತ್ತದೆ. ಈ ಕಾರ್ಯದಲ್ಲಿ ಸೂಕ್ತ ಕ್ರಮವನ್ನು ಅನುಸರಿಸಲು ತಿರುವಾಂಕೂರ್-ಕೊಚ್ಚಿಯ ಪಿ. ಎಸ್. ಪಿ. ಪಕ್ಷದ ನಾಯಕ ಶ್ರೀ ಪಟ್ಟಂ ತಾನುಪಿಳ್ಳೆಯವರಿಗೆ ನಿಯಮಿತ ಪ್ರಯಾಣದಲ್ಲಿ ಅಧಿಕಾರವನ್ನು ಕೊಡಲಾಗಿದೆ.

ಈ ಸಂಬಂಧದಲ್ಲಿ ಹಿಂದೆ ಶ್ರೀ ತಾನುಪಿಳ್ಳೆಯವರಿಗೂ ಮತ್ತು ಇತರಪಕ್ಷಗಳಿಗೂ ಆಗಿರುವ ತೀರ್ಮಾನವು ರದ್ದಾಗಿರುವುದಾಗಿಯೂ ಪಿ. ಎಸ್. ಪಿ. ಅಧ್ಯಕ್ಷ ಆಚಾರ್ಯ ಕೃಪಲಾನಿಯವರು ತಿಳಿದ್ದಾರೆ.

ಸರ್ಕಾರ ರಚನೆ ವಿಷಯದಲ್ಲಿ ಸಂಯುಕ್ತ ವಾಮ ಪಕ್ಷದಿಂದ ಯಾವ ಸಂದೇಶವೂ ತಮಗೆ ಬಂದಿಲ್ಲವೆಂದು ತಾನೇ ಸರ್ಕಾರವನ್ನು ರಚಿಸುವ ಕಾರ್ಯವನ್ನು ಆ ಪಕ್ಷವು ಕೈಕೊಂಡರೆ ಪಿ. ಎಸ್. ಪಿ. ಸಹಕರಿಸುವ ವಿಷಯ ಅನಂತರ ನಿರ್ಧರಿಸಲಾಗುತ್ತದೆ ಯೆಂದೂ ಅವರು ತಿಳಿಸಿದ್ದಾರೆ.

ಸಹಸ್ರಚಂಡಿ ಮಹಾಯಾಗ

ಮೈಸೂರು ೧೨

ಚಾಮುಂಡಿ ಬೆಟ್ಟದಲ್ಲಿ ಇದೇ ೧೩ ರಿಂದ ೧೮ ನೇ ತಾರೀಖಿನವರೆಗೆ ಸಹಸ್ರಚಂಡಿ ಮಹಾಯಾಗ ಮಹೋತ್ಸವವು ನಡೆಯುತ್ತದೆ.

ಈ ಮಹೋತ್ಸವವನ್ನು ಶ್ರೀಮನ್ಮಹಾರಾಜರವರು ೧೪ನೇ ತಾ|| ಬೆಳಿಗ್ಗೆ ೧೦-೩೦ ಗಂಟೆಗೆ ಉದ್ಘಾಟಿಸುತ್ತಾರೆ.

ಈಗಿನ ಯುದ್ಧಪೀಡಿತ ವಿಶ್ವದಲ್ಲಿ ಶಾಂತಿ ಸ್ಥಾಪನೆಗಾಗಿ ಚಂಡಿ ದೇವತೆಯನ್ನು ಆರಾಧಿಸಲು ಈ ಸಮಾರಂಭವನ್ನು ಪ್ರಾರಂಭಿಸಲಾಗಿದೆ. ಆ ಕಾಲದಲ್ಲಿ ಬಡವರಿಗೆ ಉಚಿತ ಅನ್ನದಾನವನ್ನು ಮಾಡುವ ವ್ಯವಸ್ಥೆ ಮಾಡಲಾಗಿದೆ. ಈ ಕಾರ್ಯಕ್ಕೆ ಮಹಾಜನರು ತಮ್ಮ ಉದಾರ ಸಹಾಯ ನೀಡಬೇಕೆಂದು ಸಮಿತಿಯ ಅಧ್ಯಕ್ಷ ಶ್ರೀ ಕೆ. ನಂದಿ ಬಸಪ್ಪನವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ವಾರ್ಷಿಕೋತ್ಸವ

ಮೈಸೂರು ೧೨

ರಾಜಧಾನಿಯ ಸಾರ್ವಜನಿಕ ವಿದ್ಯಾರ್ಥಿನಿಲಯದ ಎಂಟನೇ ವಾರ್ಷಿಕೋತ್ಸವವು ನಿನ್ನೆ ಸಂಜೆ ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಸ್ವಾಮಿನಾರ್ಥರವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಎ ಆರ್. ರಾಮಚಂದ್ರಯ್ಯನವರ ಪ್ರಾರ್ಥನೆ, ನಿಲಯದ ಅಭಿಮಾನಿಗಳಾದ ಶ್ರೀ ಆರ್. ವಾಸುದೇವಮೂರ್ತಿಯವರ ಸ್ವಾಗತ ಭಾಷಣವಾದ ನಂತರ ಶ್ರೀ ಎಂ. ಎಸ್. ನಂಜುಂಡರಾವ್‌ರವರು ವಾರ್ಷಿಕ ವರದಿಯನ್ನು ಓದಿದರು. ಅವರು ಜಾತ್ಯಾತೀತ ವಿದ್ಯಾರ್ಥಿನಿಲಯಗಳಿಗೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡಬೇಕೆಂದು ಕೋರಿದರು.

ಮಹಾರಾಜಾ ಕಾಲೇಜಿನ ಇತಿಹಾಸ ಪ್ರಾಧ್ಯಾಪಕರಾದ ಡಾ|| ಎಂ. ವಿ. ಕೃಷ್ಣರಾಯರು ಭಾಷಣಮಾಡಿ, "ಜಗತ್ತಿನಲ್ಲಿ ಒಂದು ಧರ್ಮ ಬೇಕೇ ಬೇಕು, ಧರ್ಮದ ಲಕ್ಷ್ಯವಿಲ್ಲದ ಜನ ಪಶು ಸಮಾನರು, ಮಾನವನು ಆದರ್ಶಯುತನಾಗಿ ಆಶಾವಾದಿಯಾಗಿ ಬದುಕಬೇಕಾದರೆ ಧರ್ಮದ ಗಂಗೋದಕ ಅತ್ಯಾವಶ್ಯಕ. ಸಾರ್ವಜನಿಕ ವಿದ್ಯಾರ್ಥಿನಿಲಯದ ಸರ್ವಧರ್ಮ ಸಮನ್ವಯದ ಪ್ರಶಸ್ತಿ ಕರ್ಮವನ್ನು ಕೈಕೊಂಡಿದೆ" ಎಂದು ತಿಳಿಸಿ ನಿಲಯದ ಧ್ಯೇಯಸಾಧನೆಗಳನ್ನು ಅಭಿನಂದಿಸಿ ಅವರ ಜನ್ಮದಾತರಾಗಿರುವ ಶ್ರೀ ಟಿ. ಎಸ್. ಸುಬ್ಬಣ್ಣನವರ ನಿಸ್ವಾರ್ಥ ಸೇವೆಯನ್ನು ಪ್ರಶಂಸಿಸಿದರು. ಅನಂತರ ಅಧ್ಯಕ್ಷರಾದ ಶ್ರೀ ಎಂ. ಎಸ್. ಸ್ವಾಮಿನಾರ್ಥರವರು ಬಹುಮಾನ ವಿನಿಯೋಗ ಮಾಡಿ, ನಿಲಯದ ಪುರೋಭಿವೃದ್ಧಿಗಾಗಿ ತಮ್ಮಿಂದಾದಷ್ಟು ಸಹಾಯ ಮಾಡುವುದಾಗಿ ಭರವಸೆ ಇತ್ತರು.

ಬೆಂಕಿ ಅನಾಹುತ

ಮೈಸೂರು ೧೨

ರಾಜಧಾನಿಯ ದೇವರಾಜಾ ಮೊಹಲ್ಲಾ ನಲ್ಲಪ್ಪನತಾಣಾ ಬಳಿಯಿರುವ ಕಡಲೇಕಾಯಿ ಗಿರಣಿಗೆ ನಿನ್ನೆ ರಾತ್ರಿ ೧೦-೩೦ ಗಂಟೆಗೆ ಸಮಯದಲ್ಲಿ ವಿದ್ಯುಚ್ಛಕ್ತಿಯಿಂದ ಅಕಸ್ಮಾತ್ ಬೆಂಕಿ ಹತ್ತಿಕೊಂಡಿತೆಂದೂ, ಕೂಡಲೇ ನಗರದ ಅಗ್ನಿ ಶಮನಕ ದಳದವರು ಬಂದು ಆರಿಸಿದರೆಂದೂ, ಅಷ್ಟೇನು ನಷ್ಟ ಉಂಟಾಗಿಲ್ಲವೆಂದೂ ವರದಿಯಾಗಿದೆ.

ಗೃಹ ಕೈಗಾರಿಕೆ ಅಭಿವೃದ್ಧಿಗೆ ಕೇಂದ್ರದ ನೆರವು

ಸಂಸ್ಥಾನದಲ್ಲಿ ಗೃಹ ಕೈಗಾರಿಕೆಗಳ ಸರ್ವೆ ಮತ್ತು ಅಭಿವೃದ್ಧಿ ಕಾರ್ಯಗಳಿಗಾಗಿ ಕೇಂದ್ರ ಸರ್ಕಾರವು ೩ ಲಕ್ಷ ರೂಗಳನ್ನು ಕೊಟ್ಟಿದೆ ಎಂದು ಅಖಿಲಭಾರತ ಗೃಹ ಕೈಗಾರಿಕಾ ಸಮಿತಿ ಅಧ್ಯಕ್ಷಣಿ ಶ್ರೀಮತಿ ಕಮಲಾದೇವಿಯವರು ತಿಳಿಸಿದ್ದಾರೆ.

ಕೈಮಗ್ಗ ಸಪ್ತಾಹ ಮುಕ್ತಾಯ ಸಮಾರಂಭ

ಮೈಸೂರು ೧೨

ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ನಾಳೆ ಸಂಜೆ ೫-೧೫ಗಂಟೆಗೆ ಟೌನ್ ಹಾಲಿನಲ್ಲಿ ಕೈಮಗ್ಗ ಸಪ್ತಾಹ ಮುಕ್ತಾಯ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸುವರು.

ಹೊಸತೆರಿಗೆ ಬಗ್ಗೆ ಕಾಂಗ್ರೆಸ್ಸಿಗರ ಪ್ರತಿಭಟನೆ

ನಿನ್ನೆಯದಿನ ಚನ್ನಪಟ್ಟಣದಲ್ಲಿ ತಾಲ್ಲೂಕು ಕಾಂಗ್ರೆಸ್ ಸಮಿತಿಯು ಜರೂರು ಸಭೆಯನ್ನು ನಡೆಸಿ ಸರ್ಕಾರವು ಮುಂದಿನ ಸಾಲಿನಲ್ಲಿ ವಿಧಿಸಲಿರುವ ಹೊಸ ತೆರಿಗೆಗಳ ವಿರುದ್ಧ ಪ್ರತಿಭಟನಾ ನಿರ್ಣಯ ಮಾಡಿತು.

ಸಿಮೆಂಟ್ ಮೇಲಿನ ಹತೋಟಿ ರದ್ದಿಲ್ಲ

ಸಿಮೆಂಟ್ ಮೇಲಿನ ಹತೋಟಿಯು ಈಗಾಗಲೀ ಮುಂದಿನವರ್ಷವಾಗಲಿ ರದ್ದಾಗುವ ಸಂಭವವಿಲ್ಲವೆಂದು ಕೇಂದ್ರ ಕೈಗಾರಿಕಾ ಸಚಿವರು ಪಾರ್ಲಿಮೆಂಟಿನಲ್ಲಿ ಹೇಳಿದ್ದಾರೆ.

ಖಾಸಗಿ ಶಾಲಾ ಉಪಾಧ್ಯಾಯರು ಚುನಾವಣೆಗೆ ನಿಲ್ಲಕೂಡದು

ವಿಧಾನ ಪರಿಷತ್ತಿನಲ್ಲಿ ಉಪಾಧ್ಯಾಯ ಕ್ಷೇತ್ರಕ್ಕೆ ಸಂಬಂಧಪಟ್ಟ ಚುನಾವಣೆಗಳಲ್ಲಿ ವಿನಹ ಇನ್ನು ಯಾವ ಸ್ಥಳೀಯ ಮತ್ತು ಶಾಸನ ಸಭೆಗಳ ಚುನಾವಣೆಗಳಲ್ಲಿ ನಿಲ್ಲು ಯಾವ ಖಾಸಗಿ ಶಾಲೆಯ ತನ್ನ ಉಪಾಧ್ಯಾಯರಿಗೆ ಅವಕಾಶವನ್ನೀಯುತ್ತದೆಯೋ ಅಂತಹ ಖಾಸಗಿ ಶಾಲೆಗಳಿಗೆ ಸರ್ಕಾರದ ನೆರವನ್ನು ಕೊಡಕೂಡದೆಂದು ಮದರಾಸ್‌ಸರ್ಕಾರವು ಒಂದು ಹೊಸ ಆಜ್ಞೆಯ ಹೊರಡಿಸಿದೆ.

ನೂತನ ತೆರಿಗೆಗಳನ್ನು ಹಾಕಬಾರದು

ಕಾಂಗ್ರೆಸ್ ಅಧ್ಯಕ್ಷ ವೀರಣ್ಣಗೌಡರ ತೀವ್ರ ವಿರೋಧ

ಬೆಂಗಳೂರು ೧೨

ಮೈಸೂರು ಸಂಸ್ಥಾನದ ಖೋತಾ ಆಯವ್ಯಯವನ್ನು ಸರಿದೂಗಿಸಲು ಹೊಸ ತೆರಿಗೆಗಳನ್ನು ಹಾಕಲು ನಿರ್ಧರಿಸಿರುವ ಸರ್ಕಾರದ ನೀತಿಯನ್ನು ಮೈಸೂರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೀರಣ್ಣಗೌಡರು ಶಾಸನಸಭೆಯಲ್ಲಿ ಕಟುವಾಗಿ ಖಂಡಿಸಿ, ಈ ಹೊಸ ತೆರಿಗೆಗಳಲ್ಲಿ ಬೆಂಬಲ ನೀಡಲು ಒಂದೂ ಲಾಯಕಾಗಿಲ್ಲವೆಂದು ತಿಳಿಸಿದ್ದಾರೆ.

ಸರ್ಕಾರದ ರೀತಿ ನೀತಿಗಳಿಂದ ದೇಶದ ಹಾಗೂ ಸಂಸ್ಥೆಯ ಮೇಲಾಗುವ ಅನಾಹುತವನ್ನು ಗಮನಿಸಬೇಕೆಂದೂ, ಈ ಹೊಸ ತೆರಿಗೆಗಳನ್ನು ಜನರಮೇಲೆ ಹಾಕಿ ದೇಶದಲ್ಲಿ ಅಲ್ಲೋಲಕಲ್ಲೋಲ ಉಂಟುಮಾಡಬಾರದೆಂದೂ ಅವರು ಹೇಳಿದ್ದಾರೆ.

ನಾವೆಷ್ಟು ಜನತೆಗೆ ಉಪಕಾರ ಮಾಡಬೇಕಾಗಿತ್ತೋ ಅಷ್ಟು ಮಾಡಿಲ್ಲ ಎನ್ನುವುದು ನಿಜ. ಹಳ್ಳಿಯವರ ಮತ್ತು ಇತರ ಸಾಮಾನ್ಯ ಜನರ ಕಷ್ಟ ಹಾಗೇಇದೆ. ಜನರು ತಮ್ಮಲ್ಲಿ ಶಕ್ತಿಯಿದ್ದರೆ ಮಾತ್ರ ಸರ್ಕಾರಕ್ಕೆ ಹಣ ಕೊಡಬಲ್ಲರು ಕಲ್ಲಿನಿಂದ ಎಣ್ಣೆ ತೆಗೆಯುವುದಕ್ಕೆ ಸಾಧ್ಯವಿಲ್ಲ-ಎಂದು ಅವರು ಟೀಕಿಸಿದ್ದಾರೆ.

ವರದಿ ನಿರಾಕರಣೆ

ಕಾಶ್ಮೀರ ಸಮಸ್ಯೆ ಇತ್ಯರ್ಥ ಮಾಡಲು ಪಾಕೀಸ್ತಾನಕ್ಕೆ ಅಮೆರಿಕಾ ಮಿಲಿಟರಿ ನೆರವು ಸಹಾಯಕವಾಗುವುದೆಂದು ತಾವು ಯಾವಾಗಲೂ ಹೇಳಿಲ್ಲವೆಂದೂ, ಅಮೆರಿಕಾ ಪತ್ರಿಕೆಯೊಂದು ಇದನ್ನು ಪ್ರಕಟಿಸಿತ್ತೆಂದು ಪಾಕೀಸ್ತಾನ ಪ್ರಧಾನಿ ಮಹಮದ್ ಆಲಿಯವರು ಹೇಳಿದ್ದಾರೆ.

ಭಾರತಕ್ಕೆ ಸಿಂಹಳ ಪಾರ್ಲಿಮೆಂಟ್ ಸದಸ್ಯರ ನಿಯೋಗ

೧೨ ಜನರ ಸಿಂಹಳ ಪಾರ್ಲಿಮೆಂಟ್ ಸದಸ್ಯರ ನಿಯೋಗವೊಂದು ಇದೇ ೧೫ನೇ ತಾರೀಖು ಭಾರತಕ್ಕೆ ಭೇಟಿ ಕೊಡಲಿದೆ. ಅದು ಇಲ್ಲಿ ೨ ವಾರಕಾಲವಿರುತ್ತದೆ.

ಅಮೆರಿಕಾ ಮಿಲಿಟರಿ ನೆರವು ನಿರಾಕರಣೆ

ದೇಶದ ಹಿತಕ್ಕೆ ಅನಿಷ್ಟವಾಗುವುದರಿಂದ ತಮ್ಮ ರಾಷ್ಟ್ರವು ಅಮೆರಿಕಾ ನೆರವನ್ನು ನಿರಾಕರಿಸುವುದಾಗಿ ಸೌದಿ ಅರೇಬಿಯಾ ದೊರೆಯು ಒಂದು ಹೇಳಿಕೆಯನ್ನಿತ್ತಿದ್ದಾರೆ.

○ ಪಾನನಿರೋಧ ಶಾಸನ ಪ್ರಕಾರ ಶಿಕ್ಷೆಯಾದರೆ ಪುರಸಭೆ ಚುನಾವಣೆಗೆ ಅವರು ಅನರ್ಹರಾಗುವರು ಎಂದು ಅಹಮದಾಬಾದ್ ಪುರಸಭೆಯು ತೀರ್ಮಾನಿಸಿದೆ.

ಅಮೆರಿಕಾ ವೀಕ್ಷಕರು ಕಾಶ್ಮೀರ ಬಿಟ್ಟು ಹೊರಡಬೇಕು

ಕಲ್ಕತ್ತ ಸಾರ್ವಜನಿಕ ಸಭೆಯಲ್ಲಿ ನಿರ್ಣಯ

ಪಾಕೀಸ್ತಾನ ಮತ್ತು ಅಮೆರಿಕಾ ಮಿಲಿಟರಿ ಒಪ್ಪಂದವು ವಿಶ್ವಾರಾಷ್ಟ್ರಗಳ ಶಾಂತಿಗೆ ಧಕ್ಕೆ ತರುವಂತಾಹುದಾಗಿದೆ. ಆದ್ದರಿಂದ ಕಾಶ್ಮೀರ ತಟಸ್ಥ ಪ್ರದೇಶದಲ್ಲಿರುವ ವಿಶ್ವ ಸಂಸ್ಥೆಯ ವೀಕ್ಷಕರ ತಂಡದಲ್ಲಿರುವ ಅಮೆರಿಕನ್ನರು ತಮ್ಮ ಸ್ಥಾನವನ್ನು ಬಿಟ್ಟು ಹೊರಟು ಹೋಗಬೇಕೆಂದು ಕಲ್ಕತ್ತಾದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ನಿರ್ಣಯಮಾಡಲಾಗಿದೆ. ಪಶ್ಚಿಮಬಂಗಾಳ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಅತುಲಘೋಷ್ ರವರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಶ್ರೇಷ್ಠ ಕಾರ್ಯದರ್ಶಿಯವರ ಮೇಲಿನ ಆಜ್ಞೆ ವಾಪಸ್ಸು

ತಿರುವಾಂಕೂರು ಕೊಚ್ಚಿಯ ಶ್ರೇಷ್ಠ ಕಾರ್ಯದರ್ಶಿಯವರು ಇದೇ ೧೩ ನೇ ತಾರೀಖು ತಮ್ಮ ಹುದ್ದೆಯನ್ನು ಬೇರೆಯವರಿಗೆ ವಹಿಸಿಕೊಟ್ಟು ಹೊರಟು ಹೋಗಬೇಕೆಂದು ಅಲ್ಲಿಯ ಮುಖ್ಯಮಂತ್ರಿಯವರು ಮಾಡಿದ್ದದ್ದ ಆಜ್ಞೆಯನ್ನು ಮಂತ್ರಿಮಂಡಲವು ವಾಪಸ್ಸು ತೆಗೆದುಕೊಂಡು ಅವರು ಏಪ್ರಿಲ್ ೧೫ರವರೆಗೆ ಇರಬಹುದೆಂದು ಹೊಸ ಆಜ್ಞೆ ಹೊರಡಿಸಿದೆ. ಅಲ್ಲಿಯವೇಳೆಗೆ ಹೊಸ ಸರ್ಕಾರವನ್ನು ರಚಿಸುವ ನಿರೀಕ್ಷೆಯನ್ನು ವ್ಯಕ್ತಪಡಿಸಿ ಈ ರೀತಿ ಮಾಡಲಾಗಿದೆ.

ರಾಷ್ಟ್ರಾಧ್ಯಕ್ಷರು ವಿಚಾರಣಾ ಸಮಿತಿ ರಚಿಸಬೇಕು

ಬೆಂಗಳೂರು ೧೨

ಮೈಸೂರಿನಲ್ಲಿ ರಾಜ್ಯಾಂಗಕ್ಕೂ ಕಾರ್ಯಾಂಗಕ್ಕೂ ಭಿನ್ನಾಭಿಪ್ರಾಯವು ಹೆಚ್ಚುತ್ತ ಹೊಂದಾಣಿಕೆಯಿಂದ ಕೆಲಸವೇ ನಡೆಯುತ್ತಿಲ್ಲ ಈ ವಿಷಯವು ಭಾರತದ ಶ್ರೇಷ್ಠ ನ್ಯಾಯಾಧೀಶರ ಗಮನಕ್ಕೂ ಬಂದಿದೆ. ಈ ವಿಷಯವನ್ನು ವಿಮರ್ಶಿಸಲು ರಾಷ್ಟ್ರಾಧ್ಯಕ್ಷರು ಒಂದು ವಿಚಾರಣಾಸಮಿತಿಯನ್ನು ನೇಮಿಸಬೇಕು ಅದರಿಂದ ಈ ಎರಡು ಅಂಗಗಳ ಕೆಲಸಗಳೂ ಸುಗಮವಾಗಿ ನಡೆಯುವಂತಾಗಬೇಕು-ಎಂದು ಶಾಸನ ಸಭೆಯ ವಿರೋಧಪಕ್ಷದ ನಾಯಕ ಶ್ರೀ ಜೆ.ಎಂ. ಇಮಾಂರವರು ಬಡ್ಜೆಟ್ ಮೇಲೆ ಮಾತನಾಡುತ್ತಾ ಹೇಳಿದ್ದಾರೆ.

೩ ತಿಂಗಳಲ್ಲಿ ಪಾಕೀಸ್ತಾನಕ್ಕೆ ಅಮೆರಿಕಾ ಮಿಲಿಟರಿ ನೆರವು

ಪಾಕೀಸ್ತಾನಕ್ಕೆ ಅಮೆರಿಕಾದಿಂದ ಮಿಲಿಟರಿ ನೆರವು ಇನ್ನು ೩ ತಿಂಗಳೊಳಗೆ ಪ್ರಾರಂಭವಾಗುವ ನಿರೀಕ್ಷೆಯಿರುವುದಾಗಿ ಪಾಕ್ ಪ್ರಧಾನಿ ಮಹಮದ್ ಅಲಿಯವರು ಹೇಳಿದ್ದಾರೆ.

ವಿಧಾನ ಪರಿಷತ್ತಿಗೆ ಚುನಾವಣೆ

ಬೆಂಗಳೂರು ೧೨

ಸಂಸ್ಥಾನದ ವಿಧಾನ ಪರಿಷತ್ತಿಗೆ ಸ್ಥಳೀಯ ಸಂಸ್ಥೆಗಳು, ಪದವೀಧರರು ಮತ್ತು ಉಪಾಧ್ಯಾಯರ ಕ್ಷೇತ್ರಗಳಿಂದ ಚುನಾವಣೆ ನಡೆಯಬೇಕಾಗಿದ್ದು ಈ ಬಗ್ಗೆ ವೇಳಾಪಟ್ಟಿ ಪ್ರಕಟವಾಗಿದೆ

ಸ್ಥಳೀಯ ಸಂಸ್ಥೆಗಳ ಪರವಾಗಿ ಮಂಡ್ಯ, ಮೈಸೂರು, ಹಾಸನ, ಚಿತ್ರದುರ್ಗ ಮತ್ತು ಬಳ್ಳಾರಿ ಕ್ಷೇತ್ರಗಳಿಂದ ಚುನಾವಣೆಯು ನಡೆಯಬೇಕು. ಈಬಗ್ಗೆ ಉಮೇದುವಾರಿಕೆ ಅರ್ಜಿ ಸಲ್ಲಿಸಲು ಈ ತಿಂಗಳು ೨೪ನೇ ತಾ॥ ಕೊನೆಯದಿನ. ೨೭ನೇ ತಾ॥ ಅರ್ಜಿಗಳ ಪರಿಶೀಲನೆ ೩೦ನೇ ತಾ॥ ವಾಪಸ್ ಪಡೆಯಲು ಅವಕಾಶವಿದೆ. ಏಪ್ರಿಲ್ ೨೯ನೇ ತಾರೀಖು ಚುನಾವಣೆ ನಡೆಯುತ್ತದೆ.

ಸಂಸ್ಥಾನದ ಶಾಸನಸಭೆಯಿಂದ ವಿಧಾನ ಪರಿಷತ್ತಿಗೆ ಉಮೇದುವಾರರನ್ನು ೨೮ನೇ ತಾ॥ ಬುಧವಾರ ಚುನಾಯಿಸಲಾಗುತ್ತದೆ. ಚುನಾವಣೆಯು ಆ ದಿನ ಬೆಳಿಗ್ಗೆ ೯ ಘಂಟೆಯಿಂದು ೫ ಘಂಟೆ ವರೆಗೆ ನಡೆಯುತ್ತದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೧—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—೧೪	೨೩—೪
ಎಳ್ಳು	—	—
ಹಂಳು	೨೮—೪	—
ಹೊಂಗೆಬೀಜ	೧೪—೧೨	೨೩—
ಹುಚ್ಚೆಳ್ಳು	೩೯—	೪೩—
ಹುರುಳಿ	೨೫—೧೦	೨೮—೬
ಹೆಸರು	೩೭—೮	೪೩—
ಅಲಸಂದೆ	೩೫—	—
ಅವರೆ	—	—
ಕೊತ್ತಂಬರಿ	೨೬—೧೪	—
ತೊಗರಿ	೨೩—	—
ಸೆಣಬು	೨೩—	—
ಕಡಲೆ	೪೨—	೪೨—೬
ಉದ್ದು	—	—
ಹುಣಸೆಬೀಜ	೧೨—೧೦	೧೩—೪
ಕ॥ ಬೀಜ	—	—
ಹುಣಸೆಹಣ್ಣು	೭—೩	೧೦—೮
ಮೆಣಸಿನಕಾಯಿ	—	—
ಸೀಗೆಕಾಯಿ	೪—೭	೪—೧೩
ಬೆಲ್ಲ	—	—
ತೆಂಗಿನಕಾಯಿ	೧೮೭—	೩೩೦—

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ವಿಶಾಲಾಂಧ್ರ ರಚನೆಗೆ ಸರ್ವಪ್ರಯತ್ನ

ಆಂಧ್ರ ಮುಖ್ಯಮಂತ್ರಿ ಶ್ರೀ ಪ್ರಕಾಶಂರವರ ವಿವರಣೆ

ಈಗಿನ ಆಂಧ್ರಪ್ರಾಂತ್ಯದೊಡನೆ ಒರಿಸ್ಸಾ, ಮೈಸೂರು, ಮಧ್ಯಪ್ರದೇಶ, ಹೈದರಾಬಾದ್ ಮುಂತಾದೆಡೆಯಿರುವ ಆಂಧ್ರ ಪ್ರದೇಶಗಳು ಸೇರಬೇಕೆಂದು ಹಲವಾರು ಮನವಿಗಳು ಬಂದಿದೆ. ಈ ವಿಶಾಲಾಂಧ್ರ ರಚನೆಗೆ ಆಂಧ್ರಸರ್ಕಾರವು ತನ್ನ ಸರ್ವ ಪ್ರಯತ್ನಗಳನ್ನು ಮಾಡುವುದು-ಎಂದು ಆಂಧ್ರ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ಅಲ್ಲಿಯ ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ವಜ್ರಮಹೋತ್ಸವ

ಮೈಸೂರು ೧೦

ವಿಶ್ವವಿದ್ಯಾನಿಲಯದ ಐತಿಹಾಸಿಕ ಸಂಘದ ವಜ್ರಮಹೋತ್ಸವದ ಉದ್ಘಾಟನಾ ಸಮಾರಂಭವನ್ನು ಇದೇ ೧೭ ನೇ ತಾ॥ ಸಂಜೆ ೫-೪೫ ಗಂಟೆಗೆ ಶ್ರೀಮನ್ಮಹಾರಾಜರವರು ಮಹಾರಾಜಾ ಕಾಲೇಜಿನಲ್ಲಿ ನಡೆಸುತ್ತಾರೆ.

ಆ ದಿನ ಬೆಳಿಗ್ಗೆ ಶ್ರೀಮನ್ಮಹಾರಾಜರಿಂದ ಪ್ರಾರಂಭೋತ್ಸವ, ಮಹಾರಾಜಾ ಕಾಲೇಜು ಪ್ರಿನ್ಸಿಪಾಲ್ ಶ್ರೀ ವಿ. ಎಲ್. ಡಿಸೌಜಾರವರಿಂದ ಸ್ವಾಗತ, ಡಾ॥ ಎಂ.ವಿ. ಕೃಷ್ಣರಾಯರಿಂದ ಬಿನ್ನವತ್ತಳೆ ಅರ್ಪಣೆ ಮುಂತಾದುವು ನಡೆಯುತ್ತವೆ.

ಮಾರನೇ ದಿನ ಬೆಳಿಗ್ಗೆ ಆಟಪಾಟಗಳು ವಸ್ತುಪ್ರದರ್ಶನಾರಂಭ, ಸಂಜೆ ೬ ಗಂಟೆಗೆ ಶ್ರೀ ಮಹಮದ್ ಷರೀಫ್‌ರವರ ಅಧ್ಯಕ್ಷತೆಯಲ್ಲಿ ಸಭೆ ಮುಂತಾದ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.

ಅಂಗಡಿ ಕಾನೂನು ಉಲ್ಲಂಘನೆಗೆ ಶಿಕ್ಷೆ

ಮೈಸೂರು ೧೨

ಅಂಗಡಿ ಕಾನೂನು ಉಲ್ಲಂಘಿಸಿದರೆಂಬ ಅಪಾದನೆಮೇಲೆ ಮಂಡಿ ಮೊಹಲ್ಲಾದಲ್ಲಿ ಇರುವ ಹೊಟೇಲೊಂದರ ಮಾಲೀಕರಾದ ಅಬ್ದುಲ್ ರಹಿಮಾನ್‌ರವರಿಗೆ ಎಂಟು ರೂ, ಫುಟ್‌ವೇರ್ ಮಾಲೀಕರಾದ ಅಬ್ದುಲ್ ಮಾಜಿದ್‌ರವರಿಗೆ ನಾಲ್ಕು ರೂ. ಜುಲ್ಮಾನೆಯನ್ನು ಎರಡನೇ ಸಿಟಿ ಮ್ಯಾಜಿಸ್ಟ್ರೇಟರು ವಿಧಿಸಿದ್ದಾರೆ.

ಮಹಾಮಂಗಳಾರತಿ

ಕಾಶೀಪತಿ ಅಗ್ರಹಾರದಲ್ಲಿರುವ ವಿದ್ಯಾಗಣಪತಿ ಮಂದಿರದ ಆಶ್ರಯದಲ್ಲಿ ಇದೇ ೬ನೇ ತಾರೀಖಿನಿಂದ ಶ್ರೀ ಜಯತೀರ್ಥಾಚಾರ್ಯರವರಿಂದ ನಡೆಯುತ್ತಿರುವ ಶ್ರೀ ಉದ್ಧವ ಗೀತಾ ಉಪನ್ಯಾಸದ ಮಹಾಮಂಗಳವು ಇದೇ ೧೪ನೇ ತಾ॥ ಶನಿವಾರ ರಾತ್ರಿ ೯ ಗಂಟೆಗೆ ಶ್ರೀ ಜಿ. ಆರ್. ಜೋಯ್ಸರ್‌ರವರನೇತೃತ್ವದಲ್ಲಿ ನೆರವೇರಿಸಲಾಗುತ್ತೆ.

ಪ್ರಾಂತ ವಿಂಗಡನೆ ಅಭಿಪ್ರಾಯ ಶೇಖರಣಾ ಸಮಿತಿ ರಚಿಸಿ

ಬೆಂಗಳೂರು ೧೦

ಸಂಸ್ಥಾನ ಪುನರ್ವಿಂಗಡಣಾ ಸಂಬಂಧದಲ್ಲಿ ಕೇಂದ್ರವು ರಚಿಸಿರುವ ಸಮಿತಿಯ ಮುಂದೆ ಮೈಸೂರು ತನ್ನ ಅಭಿಪ್ರಾಯವನ್ನು ಸರ್ವಾನುಮತವಾಗಿ ಇಡುವುದು ಅಗತ್ಯವಾದುದರಿಂದ ಈ ಬಗ್ಗೆ ಅಂಕಿಅಂಶ ವಿವರಗಳನ್ನು ಶೇಖರಿಸಲು ಸರ್ಕಾರವು ಒಂದು ಸಮಿತಿಯನ್ನು ರಚಿಸಬೇಕೆಂದು ವಿಧಾನ ಸಭೆಯಲ್ಲಿ ಶ್ರೀ ಇಮಾಂರವರು ತಿಳಿಸಿದ್ದಾರೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ
ಮುಕ್ತಾಯ 31-3-1954 ಡ್ರಾಯಿಂಗ್ 19-4-1954
ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ
ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ
ಮೊದಲನೆ ಬಹುಮಾನ 10000 ರೂ
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ-
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಭುದೇವಾ ಥಿಯೇಟರ್
(ಪ್ರಿ.ಡ್ಯಾ ಟಾಕೀಸ್)
12-3-54ನೇ ಶುಕ್ರವಾರದಿಂದ 1 ವಾರ ಮಾತ್ರ
★ ದ್ರೌಪದಿ ವಸ್ತ್ರಾಪಹರಣ ★
(ತೆಲುಗು)
ಪಾತ್ರ:—ಗಗ್ಗಯ್ಯ, ಕನ್ನಾಂಬ, ದಮ್ಮೋಟ ಮುಂತಾದವರು.
—: ಮುಂದಿನ ಬದಲಾವಣೆ :—
ನಿರುಪೇದಲು [ಕಡು ಬಡವರು] ತೆಲುಗುಚಿತ್ರ

ಪೋ॥ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೬೩

೧೩-೩-೧೯೫೪ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ತಿರುವಾಂಕೂರ್-ಕೊಚ್ಚಿಯಲ್ಲಿ ಸರ್ಕಾರ ರಚನೆಗೆ ಆತಂಕ

ರಾಷ್ಟ್ರಾಧ್ಯಕ್ಷ ಆಡಳಿತ ತಪ್ಪಿಸುವುದು ತಮ್ಮ ಜವಾಬ್ದಾರಿಯಲ್ಲ

ಎಂದು ಪಿ.ಎಸ್.ಪಿ. ನಾಯಕರ ಹೇಳಿಕೆ

ತಿರುವಾಂಕೂರು-ಕೊಚ್ಚಿಯಲ್ಲಿ ಕಮ್ಯೂನಿಸ್ಟ್ ಪಕ್ಷವು ಸಂಯುಕ್ತ ವಾಮ ಪಕ್ಷಗಳ ಸಹಕಾರವನ್ನು ಪಡೆದು ಮಿಶ್ರಸರ್ಕಾರವನ್ನು ರಚಿಸಲು ಸಿದ್ಧವಿರುವುದಾಗಿ ಆ ಪಕ್ಷವು ಪ್ರಕಟಿಸಿದೆ.

ಪ್ರಜಾಸೋಷಲಿಸ್ಟ್ ಕಾರ್ಯ ಮಂಡಲಿಯು ಮದ್ರಾಸಿನಲ್ಲಿ ಸಭೆ ನಡೆಸಿ ತಿರುವಾಂಕೂರು-ಕೊಚಿಯಲ್ಲಿ ಮಿಶ್ರ ಸರ್ಕಾರವನ್ನು ಸ್ಥಾಪಿಸಲು ನಿರ್ಧರಿಸಿದೆ ತನ್ನದೇ ಆದ ಬೇರೇ ಧೋರಣೆಯನ್ನು ವ್ಯಕ್ತಪಡಿಸಿ ಜನರ ಹಿತಾಸಕ್ತಿಗಳನ್ನು ಗಮನಿಸದೆ ಕಡೆಗಣ್ಣಿನಿಂದ ನೋಡಿದೆ ಎಂದೂ ತನ್ನ ಆಕ್ಷೇಪಣೆಯನ್ನು ವ್ಯಕ್ತಪಡಿಸಿರುವುದಾಗಿ ತಿಳಿಯಬರುತ್ತದೆ.

ಮಿಶ್ರಸರ್ಕಾರ ರಚನೆ ವಿಷಯದಲ್ಲಿ ಪ್ರಾಂತ್ಯದ ಪಿ. ಎಸ್. ಪಿ. ನಾಯಕ ಶ್ರೀ ಪಟ್ಟಂತಾನು ಪಿಳ್ಳೆಯವರು ಬೊಂಬಾಯಿನಲ್ಲಿ ಮಾತನಾಡುತ್ತಾ ತಿರುವಾಂಕೂರಿನಲ್ಲಿ ಪಿ ಎಸ್. ಪಿ ಯು ಮಿಶ್ರಸರ್ಕಾರವನ್ನು ರಚಿಸುವುದಿಲ್ಲವೆಂದು ಹೇಳಿದ್ದಾರೆ.

ಇದೇ ಪಕ್ಷದ ನಾಯಕ ಡಾ॥ ರಾಮ ಮನೋಹರ ಲೋಹಿಯಾವರು ಮದ್ರಾಸಿನಲ್ಲಿ ಮಾತನಾಡುತ್ತಾ ಮಿಶ್ರಸರ್ಕಾರ ರಚನೆಯು ಅಪಾಯಕರ. ತನ್ನ ಪಕ್ಷದ ಧ್ಯೇಯೋದ್ದೇಶಗಳನ್ನು ಮರೆತು ಹೊಂದಾಣಿಕೆಯ ಪರಿಸ್ಥಿತಿಗೆ ಸಿಕ್ಕಿಕೊಳ್ಳಬೇಕಾಗುತ್ತದೆ ಎಂದು ಹೇಳುತ್ತಾ ಕಮ್ಯೂನಿಸ್ಟರು ಅಲ್ಲಿ ಸರ್ಕಾರ ರಚಿಸಲು ತಮ್ಮ ಪಕ್ಷದ ಆಕ್ಷೇಪಣೆಯೇನೂ ಇಲ್ಲವೆಂದು ತಿಳಿಸಿದ್ದಾರೆ

ರಾಷ್ಟ್ರಾಧ್ಯಕ್ಷರ ಆಡಳಿತವನ್ನು ಅಲ್ಲಿ ತಪ್ಪಿಸುವುದು ತಮ್ಮ ಪಕ್ಷದ ಜವಾಬ್ದಾರಿಯಲ್ಲವೆಂದು ಅವರು ಹೇಳಿದ್ದಾರೆ.

ನಗರದ ನೀರು ಸರಬರಾಜು ಯೋಜನೆ

ಸರ್ಕಾರ ಮಂಜೂರ್ಮಾಡಬೇಕೆಂದು ಪುರಸಭೆಯ ಮನವಿ

ಮೈಸೂರು ೧೩

ನಗರದ ಪೌರ ಸಭೆಯ ರಹಸ್ಯ ಅಧಿವೇಶನವು ನಿನ್ನೆ ಶ್ರೀ ಕೆ. ಪುಟ್ಟಸ್ವಾಮಿರವರ ಅಧ್ಯಕ್ಷತೆಯಲ್ಲಿ ನಡೆದು, ನೀರಿನ ಸರಬರಾಜು ಉತ್ತಮ ಪಡಿಸುವ ಬಗ್ಗೆ ಚರ್ಚೆ ನಡೆದು, ಕೆಳಗೆ ಕಂಡ ನಿರ್ಣಯವನ್ನು ಮಾಡಲಾಯಿತು.

ನಗರದ ನೀರಿನ ಸರಬರಾಜನ್ನು ಉತ್ತಮಗೊಳಿಸುವ ಬಗ್ಗೆ ತಗಲಬಹುದಾದ ಖರ್ಚಿನಲ್ಲಿ ಅರ್ಧಭಾಗವನ್ನು ಸರ್ಕಾರವು ವಹಿಸಬೇಕೆಂಬ ಅಭಿಪ್ರಾಯವನ್ನು ಪೌರ ಸಭೆಯು ಇನ್ನೂ ಹೊಂದಿದೆಯಾದರೂ, ೮-೩-೫೩ ರಲ್ಲಿ ಬೆಂಗಳೂರಿನ ಕುಮಾರ ಕೃಪದಲ್ಲಿ ನಡೆದ ಸಭೆಯ ನಡುವಳಿಕೆಯನ್ನು ಜಾಗರೂಕತೆಯಿಂದ ಪರಿಗಣಿಸಿದ ನಂತರ, ಈ ಮೊದಲೇ ಸರ್ಕಾರದ ಮಂಜೂರಾತಿಯನ್ನು ಪಡೆದಿದ್ದ ೫೨ ಲಕ್ಷ ರೂಪಾಯಿ ಯೋಜನೆಯ ಅಂಗವಾಗಿ ಸರ್ಕಾರದವರು ೧೩.೨ ಲಕ್ಷ ರೂ. ಗಳ ಬೆಲೆಬಾಳುವ ೨೪ ಅಂಗುಲದ ಕೊಳಾಯಿಗಳನ್ನು ಗ್ರ್ಯಾಂಟ್ ರೂಪದಲ್ಲಿ ಕೊಡಲು ಸರ್ಕಾರ ಭರವಸೆ ಇತ್ತಿರುವುದಕ್ಕೆ ಸಭೆಯು ಕೃತಜ್ಞತೆಯನ್ನು ಸೂಚಿಸುತ್ತದೆ.

ಈ ಯೋಜನೆ (೩೯ ಲಕ್ಷರೂ) ಯನ್ನು ಕಾರ್ಯಗತ ಮಾಡಲು ಖಾಯಂ ಪರಿಹಾರವನ್ನು ಅತಿ ಶೀಘ್ರದಲ್ಲಿ ಒದಗಿಸಿಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುತ್ತದೆ. ಈ ದೆಸೆಯಿಂದ ಪುರಸಭೆಯು ಉಳಿದ ೨೬.೮ ಲಕ್ಷ ರೂ ಗಳನ್ನು ಖರ್ಚು ಮಾಡಲು ಒಪ್ಪಿಗೆ ನೀಡುತ್ತದೆ ಮತ್ತು ಈ ಮೊಬಲಗನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡುವ ಬಡ್ಡಿ ದರದ ಮೇಲೆ ೨೦ ಸಮ ವಾರ್ಷಿಕ ಕಂತುಗಳಲ್ಲಿ ತೀರಿಸುವ ರೀತಿಯ ಸಾಲವನ್ನು ಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುತ್ತದೆ.

ಪುರಸಭೆಯು ಈ ಬಗ್ಗೆ ೫೫-೫೬ ನೇ ಬಡ್ಜೆಟ್ಟಿನಲ್ಲಿ ೨ ೧೧ ಲಕ್ಷ ರೂ. ಗಳನ್ನು ಸಾಲ ತೀರಿಸಲು ಮೀಸಲಾಗಿಡಬೇಕೆಂದೂ ನಿರ್ಧರಿಸಲಾಯಿತು.

ಈ ನೀರಿನ ಯೋಜನೆಯನ್ನು ಬೆಂಗಳೂರಿನಲ್ಲಿ ಮಂತ್ರಿಗಳೊಡನೆ, ಸೆಕ್ರೆಟರಿ ಮತ್ತು ಇಂಜನಿಯರುಗಳೊಡನೆಯೂ ಸಮಾಲೋಚಿಸಲಾಯಿತು. ತತ್ಫಲವಾಗಿ ಪುರಸಭೆಯವರು ೨೬.೮ ಲಕ್ಷ ರೂ. ಸಾಲ ತೆಗೆದುಕೊಂಡು ಸರ್ಕಾರ ಶೇಖರಿಸಿರುವ ೧೩.೨ ಲಕ್ಷ ಬೆಲೆಬಾಳುವ ಪೈಪುಗಳನ್ನು ಉಪಯೋಗಿಸಿಕೊಂಡು ಯೋಜನೆಯನ್ನು ಕಾರ್ಯಗತ ಮಾಡುವ ಮತ್ತು ಅದನ್ನು ಗ್ರ್ಯಾಂಟಾಗಿ ಭಾವಿಸುವ ಭರವಸೆಯಿಂದ ಕೂಡಿದ ಒಂದು ಸೂಚನೆಯು ಕೊಡಲ್ಪಟ್ಟಿತು-ಎಂದು ಈ ಸಂಬಂಧದಲ್ಲಿ ಅಧ್ಯಕ್ಷರು ಮೇಲ್ಕಂಡ ನಿರ್ಣಯನ್ನೊಳಗೊಂಡ ಒಂದು ಅಧಿಕೃತ ಪ್ರಕಟಣೆ ಹೊರಡಿಸಿದ್ದಾರೆ.

ವಿವಾಹಿತ ಯುವತಿಯ ಆತ್ಮಹತ್ಯೆ

ಮೈಸೂರು ೧೩

ಕೃಷ್ಣರಾಜೇಂದ್ರ ಗಿರಣಿಯ ನೌಕರರಾದ ಶ್ರೀ ಚಿಕ್ಕತಿಮ್ಮಯ್ಯ ಎಂಬುವವರ ಪತ್ನಿ ೧೭ವರ್ಷದ ಪುಟ್ಟಮ್ಮ ಎಂಬಾಕೆಯು ಮೊನ್ನೆ ದಿನ ಈರನಗೆರೆಯಲ್ಲಿರುವ ತನ್ನ ಗೃಹದಲ್ಲಿ ನೇಣುಹಾಕಿಕೊಂಡು ಆತ್ಮಹತ್ಯ ಮಾಡಿಕೊಂಡಳೆಂದು ವರದಿಯಾಗಿದೆ. ತಾಯಿಯ ಮನೆಗೆ ಬಹುಕಾಲದಿಂದಲೂ ತನ್ನನ್ನು ಕಳುಹಿಸದಿದ್ದುದರ ಕಾರಣ ಬೇಸರಗೊಂಡು ಪ್ರಾಣ ತೆಗೆದುಕೊಂಡಳೆಂದು ಹೇಳಲಾಗಿದೆ. ಮಂಡಿ ಪೋಲೀಸರು ಮಹಜರ್ ಕ್ರಮ ನಡೆಸಿದರು.

ವೃತ್ತಪತ್ರಿಕಾ ಪ್ರದರ್ಶನ

ಮೈಸೂರು ೧೩

ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ಸಂಘದ ಆಶ್ರಯದಲ್ಲಿ ಏರ್ಪಡಿಸಿರುವ ವೃತ್ತ ಪತ್ರಿಕಾ ಪ್ರದರ್ಶನವು ನಾಳೆ ಬೆಳಿಗ್ಗೆ ೮ ರಿಂದ ೧೨, ಮಧ್ಯಾಹ್ನ ೪ ರಿಂದ ೬ ಗಂಟೆವರೆಗೆ ಸಾರ್ವಜನಿಕರಿಗೆ ತೆರೆಯಲ್ಪಟ್ಟಿರುವುದೆಂದು ವ್ಯವಸ್ಥಾಪಕರು ತಿಳಿಸಿದ್ದಾರೆ.

ಭಾರತದಲ್ಲಿ ಜೆಟ್ ವಿಮಾನ ತಯಾರಿಕೆ

ಬ್ರಿಟಿಷ್ ಕಂಪೆನಿಯೊಂದರ ಸಹಾಯದಿಂದ ಭಾರತದಲ್ಲಿ ಜೆಟ ವಿಮಾನಗಳ ತಯಾರಿಕಾ ಕಾರ್ಖಾನೆಯೊಂದನ್ನು ಸ್ಥಾಪಿಸಲು ಕೇಂದ್ರ ಸರ್ಕಾರ ಆಲೋಚಿಸುತ್ತಿದೆಯೆಂದೂ ಹೇಳಲಾಗಿದೆ. ಫ್ರಾನ್ಸ್ ಮತ್ತು ಇತರ ದೇಶಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ವಿಮಾನ ಕೊಳ್ಳಲು ವಿದೇಶಿಗಳಿಗೆ ಒಂದು ನಿಯೋಗ ಸದ್ಯದಲ್ಲಿಯೇ ಭೇಟಿ ಕೊಡಲಿದೆಯೆಂದೂ ತಿಳಿದುಬಂದಿದೆ.

ಬಳ್ಳಾರಿಯಲ್ಲಿ ಶಿಕ್ಷಣ ಪದ್ಧತಿ

ಬಳ್ಳಾರಿಯಲ್ಲಿ ಇಂಜನಿಯರಿಂಗ್ ಕಾಲೇಜ್ ಸ್ಥಾಪಿಸಬೇಕೆಂದು ಮನವಿ ಬಂದಿದೆ. ಆದರೆ ಈ ಸಾರಿ ಹೆಚ್ಚಿಗೆ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಪ್ರಯತ್ನ ಮಾಡಲಾಗುವುದು. ಅಲ್ಲಿ ಈಗಿರುವ ತೆಲುಗು ಶಾಲೆಗಳನ್ನು ರದ್ದು ಮಾಡುವುದಿಲ್ಲ. ಬಳ್ಳಾರಿಯಲ್ಲಿ ಈಗ ಮದ್ರಾಸ್ ಶಿಕ್ಷಣ ಪದ್ಧತಿಯೇ ಜಾರಿಯಲ್ಲಿದೆ. ಆ ಪದ್ಧತಿಯನ್ನು ಮೈಸೂರಿನ ಪದ್ಧತಿಯೊಳಗೆ ಹೇಗೆ ಅಳವಡಿಸಬೇಕೆಂಬುದನ್ನು ಸರ್ಕಾರ ಪರ್ಯಾಲೋಚಿಸುತ್ತಿದೆ ನೂತನ ವಿದ್ಯಾಭ್ಯಾಸ ಸಂಸ್ಥಾನದಲ್ಲಿ ಜಾರಿಗೆ ಬರುವವರೆಗೂ ಬಳ್ಳಾರಿಯಲ್ಲಿ ಹಿಂದಿನ ಪದ್ಧತಿಯೇ ಜಾರಿಯಲ್ಲಿರುವುದು-ಎಂದು ವಿದ್ಯಾ ಸಚಿವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಉತ್ತಮ ಸಾಹಿತಿಗಳ ಮಟ್ಟ ಕಲ್ಪಿಸಬೇಕು

ಭಾರತದ ಶ್ರೇಷ್ಠ ಸಾಹಿತಿಗಳ ಬಗ್ಗೆ ನಿರ್ದಿಷ್ಟ ಅರ್ಹತಾ ಮಟ್ಟವನ್ನು ಸಂಸ್ಥೆಯು ಕಲ್ಪಿಸಬೇಕೆಂದು ಕೇಂದ್ರ ವಿದ್ಯಾ ಸಚಿವ ಶ್ರೀ ಆಜಾದ್‌ರವರು ನೂತನವಾಗಿ ನಿರ್ಮಿತವಾಗಿರುವ ರಾಷ್ಟ್ರೀಯ ಸಾಹಿತ್ಯ ಅಕಾಡೆಮಿಯ ಪ್ರಪ್ರಥಮ ಸಭೆಯನ್ನುದ್ದೇಶಿಸಿ ಭಾಷಣ ಮಾಡುತ್ತಾ ತಿಳಿಸಿದ್ದಾರೆ.

ಕಾಶಿ ವಿದ್ಯಾಲಯಕ್ಕೆ ನಟರಾಜನ ಪ್ರತಿಮೆ

೧೬ ನೇ ಶತಮಾನದ ಒಂದು ನಟರಾಜನ ಪ್ರತಿಮೆಯನ್ನು ಕಾಶಿ ಹಿಂದೂ ವಿಶ್ವವಿದ್ಯಾನಿಲಯದ ಭಾರತ ಕಲಾ ಭವನಕ್ಕೆ ಮದ್ರಾಸ್ ಗೌರ್ನರು ಮದ್ರಾಸ್ ಸರ್ಕಾರದ ಪರವಾಗಿ ಕೊಟ್ಟಿದ್ದಾರೆ. ಅದು ೩ ಅಡಿ ಉದ್ದ ತಾಮ್ರದ ಪ್ರತಿಮೆ ಆಗಿದ್ದು ೫೦ ಸಾವಿರ ರೂ. ಬೆಲೆಬಾಳುವುದೆಂದು ಹೇಳಲಾಗಿದೆ.

ರಾಜಕಮಲ್ ಟಾಕೀಸ್ ಮೈಸೂರು
12—3—54 ರಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಪ್ರದರ್ಶನಗಳು
ಮೂವತ್ತು ಲಕ್ಷ ರೂಪಾಯಿಗಳನ್ನು ವ್ಯಯಮಾಡಿ ಅನೇಕ ವರ್ಷಗಳಿಂದ ಶ್ರಮಪಟ್ಟು ತಯಾರಿಸಿರುವ ಮನೋಹರ್ ಪಿಕ್ಚರ್ಸ್‌ರವರ:—
★ ಮನೋಹರ ★ [ತಮಿಳು]
ಭೂಮಿಕೆ:— ಶಿವಾಜಿ ಗಣೇಶನ್, ಕನ್ನಾಂಬ, ಗಿರಿಜ, ಟಿ. ಆರ್. ರಾಜಕುಮಾರಿ, ಪಂಡರಿಬಾಯಿ, ಪಿ. ಕೆ. ಸರಸ್ವತಿ
6 ವಾರಗಳ ಕಾಲ ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ.

ಆಹಾರ ಸಿಬ್ಬಂದಿ ಖೋತಾ

ಮೈಸೂರು ೧೩

ಏಪ್ರಿಲ್ ೧ ರಿಂದ ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಆಹಾರದ ಸಿಬ್ಬಂದಿಯಲ್ಲಿ ಖೋತಾ ಮಾಡಲು ಸರ್ಕಾರದವರು ನಿರ್ಧರಿಸಿರುವರೆಂದೂ, ಇದರಿಂದ ಸರ್ಕಾರಕ್ಕೆ ೩,೮೦,೦೦೦ ರೂ. ಉಳಿತಾಯವಾಗುವುದೆಂದೂ ತಿಳಿದುಬಂದಿದೆ. ನಗರದ ಆಸಿಸ್ಟೆಂಟ್ ರೇಷನಿಂಗ್ ಅಧಿಕಾರಿ ಮತ್ತು ೫ಜನ ಆಹಾರ ಇನ್ಸ್‌ಪೆಕ್ಟರುಗಳ, ಸರ್ಕಾರಿ ಸೆಂಟ್ರಲ್ ಡಿಪೋವಿನಲ್ಲಿರುವ ಹಲವು ಮಿಲ್ ಇನ್ಸ್‌ಪೆಕ್ಟರುಗಳ ಹುದ್ದೆಗಳು ಹೋಗುವುದೆಂದು ಹೇಳಲಾಗಿದೆ.

ಮಹಾಮಂಗಳಾರತಿ

ಮೈಸೂರು ೧೩

ಮೈಸೂರು ನಜರ್‌ಬಾದಿನಲ್ಲಿರುವ ಶ್ರೀ ದುರ್ಗಾದೇವಿಯವರ ಜಾತ್ರೆಯ ಅಂಗವಾಗಿ ಇದೇ ೧೬ನೇ ತಾರೀಖು ಮಂಗಳವಾರ ಸಂಜೆ ೭-೩೦ ಗಂಟೆಗೆ ನಜರ್‌ಬಾದ್ ಪೋಲೀಸ್ ಸ್ಟೇಷನ್ ಸರ್ಕಲ್‌ನಲ್ಲಿ ಮಹಾಮಂಗಳಾರತಿ ನಡೆಯುತ್ತದೆ. ಪುರಸಭಾ ಕಮೀಷನರ್ ಶ್ರೀ ಎನ್. ಲಕ್ಷ್ಮಣರಾವ್‌ರವರು ಇದರಲ್ಲಿ ಭಾಗವಹಿಸುತ್ತಾರೆ.

ಸರ್ವಸದಸ್ಯರ ಸಭೆ

ಮೈಸೂರು ೧೩

ನಗರದ ಉದ್ಯಾವನ ಕಲಾಸಂಘದ ಸರ್ವ ಸದಸ್ಯರ ಸಭೆಯು ೧೪ ನೇ ತಾರೀಖು ಭಾನುವಾರ ಸಂಜೆ ೪-೩೦ ಗಂಟೆಗೆ ಸಂಘದ ಕಛೇರಿಯಲ್ಲಿ ನಡೆಯುತ್ತದೆ.

ಸಕ್ಕರೆ ಅಭಿವೃದ್ಧಿ ಮಂಡಲಿ ರಚನೆ

ದೇಶದಲ್ಲಿ ಸಕ್ಕರೆ ಅಭಿವೃದ್ಧಿ ಪಡಿಸಲು ಸೂಕ್ತ ಕ್ರಮಗಳನ್ನು ಕಂಡುಹಿಡಿಯುವುದಕ್ಕಾಗಿ ಭಾರತಸರ್ಕಾರವು ಒಂದು ಸಕ್ಕರೆ ಅಭಿವೃದ್ಧಿ ಮಂಡಲಿಯನ್ನು ರಚಿಸಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೨—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೬—೮	೨೩—೪
ಎಳ್ಳು	—	—
ಹರಳು	೨೫—	೩೦—೮
ಹೊಂಗೆಬೀಜ	೧೫—೧೪	೨೪—೧೨
ಹುಚ್ಚೆಳ್ಳು	೪೦—	೪೫—೮
ಹುರುಳಿ	೨೭—೯	೨೮—೮
ಹೆಸರು	೩೭—೮	೪೨—೮
ಅಲಸಂದೆ	೩೬—	೪೪—೨
ಅವರೆ	೩೬—೧೨	—
ಕಡಲೆ	—	—
ಕೊತ್ತಂಬರಿ	೨೭—೨	೨೮—೧೨
ತೊಗರಿ	೨೫—	—
ಸೆಣಬು	೧೪—೨	೩೧—೮
ಉದ್ದು	—	—
ಹುಣಸೆಬೀಜ	೧೨—೧೦	೧೩—೪
ಕ॥ ಬೀಜ	—	—
ಹುಣಸೆಹಣ್ಣು	೭—೫	೯—೧೫
ಮೆಣಸಿನಕಾಯಿ	೨೭—೪	—
ಸೀಗೆಕಾಯಿ	೨—೨	೫—
ಬೆಲ್ಲ	—	—
ತೆಂಗಿನಕಾಯಿ	೨೦೭—	೨೬೦—

ಚೆಂಬೈರವರ ಸಂಗೀತ

ಮೈಸೂರು ೧೩

ಇದೇ ೧೪ ನೇ ತಾರೀಖು ಭಾನುವಾರ ರಾತ್ರಿ ೮ ಗಂಟೆಗೆ ಮೈಸೂರು ಆಕಾಶವಾಣಿಯಲ್ಲಿ ಶ್ರೀ ಚೆಂಬೈ ವೈದ್ಯನಾಥಭಾಗವತರ ಸಂಗೀತ ಕಛೇರಿಯನ್ನು ಶ್ರೀ ಚೌಡಯ್ಯನವರ ಪಿಟೀಲು ಮತ್ತು ಶ್ರೀ ಡಿ. ಶೇಷಪ್ಪನವರ ಮೃದಂಗದೊಡನೆ ಪ್ರಸಾರ ಮಾಡಲಾಗುತ್ತದೆ.

ಭಾರತಕ್ಕೆ ಬ್ರಿಟಿಷ್ ಪಾರ್ಲಿಮೆಂಟರಿ ನಿಯೋಗ

ಲಾಹೋರಿನಲ್ಲಿ ನಡೆಯಲಿರುವ ಕಾಮನ್‌ವೆಲ್ತ್ ಸಂಬಂಧ ಸಮ್ಮೇಳನದಲ್ಲಿ ಭಾಗವಹಿಸಲು ಬರಲಿರುವ ಬ್ರಿಟಿಷ್ ಪಾರ್ಲಿಮೆಂಟರಿ ನಿಯೋಗದವರು ಭಾರತಕ್ಕೂ ಭೇಟಿ ಕೊಡಲಿರುವರು.

ಅಖಿಲ ಭಾರತ ಸರ್ವೋದಯ ಸಮ್ಮೇಳನ

ಏಪ್ರಿಲ್ ೧೮ ರಿಂದ ೨೦ರವರೆಗೆ ಅಖಿಲ ಭಾರತ ಸರ್ವೋದಯ ಸಮ್ಮೇಳನವು ಬಿಹಾರಿನ ಬುದ್ಧಗಯಾದಲ್ಲಿ ನಡೆಯುತ್ತದೆ. ರಾಷ್ಟ್ರಾಧ್ಯಕ್ಷರು ಈ ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಭಾರತ-ಇಟಲಿ ವಿಮಾನ ಸಂಚಾರ ವ್ಯವಸ್ಥೆ

ಈ ಸಾಲಿನ ಮಧ್ಯದಲ್ಲಿ ಭಾರತ ಮತ್ತು ಇಟಲಿ ದೇಶಗಳ ನಡುವೆ ನೇರವಾದ ವಿಮಾನ ಸಂಚಾರ ವ್ಯವಸ್ಥೆಯು ಪ್ರಾರಂಭವಾಗುವುದಾಗಿ ತಿಳಿಯಬರುತ್ತದೆ.

ನ್ಯಾಯಾಲಯಗಳಲ್ಲಿ ಜ್ಯೂರಿಗಳ ಸ್ಥಾನ ರದ್ದು

ಈ ತಿಂಗಳು ಅಂತ್ಯದಲ್ಲಿ ಪಾರ್ಲಿಮೆಂಟಿನಲ್ಲಿ ನೂತನ ಮಸೂದೆ

ನ್ಯಾಯಾಲಯಗಳಲ್ಲಿ ನ್ಯಾಯದರ್ಶಿ (ಜ್ಯೂರಿ) ಮತ್ತು ಪಂಚಾಯ್ತಿಗಳ ಸ್ಥಾನಗಳ ರದ್ದಿನ ಬಗ್ಗೆ ಖಾಸಗಿ ನಿರ್ಣಯವೊಂದು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬಂದಾಗ, ನ್ಯಾಯಾಂಗ ಸಚಿವರು ಮಾತನಾಡುತ್ತಾ ಈ ಮಾಸಾಂತ್ಯದೊಳಗೆ ಕ್ರಿಮಿನಲ್ ಪ್ರೊಸೀಜರ್ ಕೋಡಿಗೆ ಈ ಸಂಬಂಧದ ತಿದ್ದುಪಡಿ ಮಸೂದೆಯನ್ನು ಪಾರ್ಲಿಮೆಂಟಿನ ಮುಂದೆ ತರಲಾಗುವುದೆಂದು ತಿಳಿಸಿದರು. ಈಗಾಗಲೇ ಎಲ್ಲಾ ಪ್ರಾಂತ್ಯಗಳಲ್ಲಿ ಜ್ಯೂರಿಗಳನ್ನು ರದ್ದು ಮಾಡುವ ವಿಷಯದಲ್ಲಿ ಏಕಾಭಿಪ್ರಾಯ ಬಂದಿರುವುದಾಗಿಯೂ, ಪಂಚಾಯ್ತಿ ಸ್ಥಾನದಲ್ಲಿ ಏನೂ ಬದಲಾವಣೆ ಮಾಡದೆ ನ್ಯಾಯದರ್ಶಿ ರದ್ದಿನಬಗ್ಗೆ ತಿದ್ದುಪಡಿ ತರಲಾಗುವುದೆಂದೂ ತಿಳಿಸಿದ್ದಾರೆ.

ಮೂರನೇ ಯುದ್ಧದ ಭೀತಿ

ಮೂರನೇ ಯುದ್ಧ ಸಂಭವಿಸುವ ಭಯವಿರುವುದರಿಂದ ರಷ್ಯವು ತನ್ನ ರಕ್ಷಣಾ ಬಲವನ್ನು ಹೆಚ್ಚಿಸಿಕೊಳ್ಳಬೇಕೆಂದು ಅದರ ರಕ್ಷಣಾ ಶಾಖಾ ಸಚಿವರು ತಿಳಿಸಿದ್ದಾರೆ.

ಅರಮನೆ ಅಶ್ವಶಾಲಾ ಮತ್ತು ಗಜಶಾಲಾ ಮೈಸೂರು 7-3-1954

ಟೆಂಡರ್ ನೋಟೀಸ್

ಸ್ ೧೯54-55ನೇ ಸಾಲಿನಲ್ಲಿ ತಾ|| 1-4-54 ರಿಂದ 31-3-55ರ ಪೂರ್ತಾ ಮೇಲ್ಕಂಡ ಇಲಾಖೆಯ ನಾಯಿಗಳ ಉಪಯೋಗಕ್ಕಾಗಿ ದಿನವಹಿ ಶುದ್ಧವಾದ ಕುರಿಮಾಂಸ, ಲೀವರ್, ಕೋಳಿಮೊಟ್ಟೆ ಮತ್ತು ನಾನ್‌ರೊಟ್ಟಿ ಮುಂತಾದುವುಗಳನ್ನು ಸರಬರಾಯಿ ಮಾಡಲು ಅಪೇಕ್ಷೆಯುಳ್ಳವರು ಸೀಲಾದ ಟೆಂಡರುಗಳನ್ನು ಒಂದು ನೂರು ರೂಪಾಯಿ ಠೇವಣಾತಿಯೊಂದಿಗೆ ಇದೇ ಮಾಹೆ ತಾ|| ೧೫ನೇ ಮಧ್ಯಾಹ್ನ 12 ಗಂಟೆಯೊಳಗಾಗಿ ಇಲಾಖಾ ಆಫೀಸರ್ ಇನ್‌ಛಾರ್ಜರವರಿಗೆ ಕೊಡತಕ್ಕದ್ದು. ಹೆಚ್ಚಿಗೆ ವಿಷಯಗಳನ್ನು ಇಲಾಖೆಯಲ್ಲಿ ವಿಚಾರಿಸಿಕೊಳ್ಳತಕ್ಕದ್ದು.

M. GOPALA KRISHNE URS
Officer -in- charge
Palace Stables & Gajasala
MYSORE

.... ರಣಜಿತ್ ....

10-3-54 ರಿಂದ ಅಮೋಘ 2 ನೇವಾರ

ಫಿಲ್ಮಿಸ್ತಾನ್‌ರವರ:-

ಸಮ್ರಾಟ್ [ಹಿಂದಿ]

ಪಾತ್ರ:-ರೆಹನ, ಅಜಿತ್, ರಾಮಸಿಂಗ್, ಮುಮ್ತಾಜ್ ಅಲಿ.

Mysore City Improvement Trust Board, Mysore

Notification No. B 3 C. 503/53-54 Dated 22—2—1954



It is hereby notified for the information of the public that 20 shop sites located in the best business centre of Mysore City, formed in the New Statue Circle between Devaraja Market and Lansdowne Buildings are available for sale. Intending purchasers are hereby intimated that sealed tenders with an earnest money deposit of Rs. 500/-each will be received in this office UPTO 5 p. m. ON MONDAY THE 22nd MARCH 1954.

Further details re: the notification, layout plan and site dimensions etc. can be had at the office of the City Improvement Trust Board, Mysore, during office hours on all working days.

(Sd.) S. LINGANNA,
Chairman.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೬೪

೧೫-೩-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ವಿದ್ಯಾ ಮತ್ತು ವೈದ್ಯಸೌಕರ್ಯ ಒದಗಿಸಲು ಇನ್ನುಮುಂದೆ ಸರ್ಕಾರಕ್ಕೆ ಸಾಧ್ಯವಿಲ್ಲ

ದಾನಿಗಳೇ ಮಾಡಬೇಕೆಂದು ಮುಖ್ಯಮಂತ್ರಿಗಳ ಮನವಿ

ಮೈಸೂರು ೧೫

ಶಾರದಾವಿಲಾಸ ಹೈಸ್ಕೂಲಿನ ೩೫ ನೇ ವಾರ್ಷಿಕೋತ್ಸವವು ಮೊನ್ನೆ ಸಂಜೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು.

ಹಳೆಯ ವಿದ್ಯಾರ್ಥಿ ಮತ್ತು ಜಿಲ್ಲಾಧಿಕಾರಿ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಸ್ವಾಗತ ಭಾಷಣಮಾಡಿ, ಈ ವಿದ್ಯಾಸಂಸ್ಥೆಗೆ ಅಡಿಪಾಯ ಹಾಕಿ ಉನ್ನತ ಪಟ್ಟಕ್ಕೆ ತಂದ ದಿವಂಗತ ಶ್ರೀ ತಾತಯ್ಯನವರ ಸೇವೆಯನ್ನು ಕೊಂಡಾಡಿದರು. ಹಳೆಯ ವಿದ್ಯಾರ್ಥಿಗಳೆಲ್ಲರೂ ಅದರ ಪುರೋಭಿವೃದ್ಧಿಯ ಕಡೆ ಗಮನ ಕೊಡುವುದಾಗಿ ತಿಳಿಸಿದರು.

ಶ್ರೀ ಬಿ. ರಾಮಣ್ಣನವರು ವರದಿಯನ್ನು ಒಪ್ಪಿಸಿ, ಸಂಸ್ಥೆಯ ಹಣಕಾಸಿನ ಅಭಾವವನ್ನು ವಿವರಿಸಿ, ಅದಕ್ಕೆ ಸಾರ್ವಜನಿಕರ ಸಹಾಯವನ್ನು ಕೋರಿದರು.

ಶಾಲೆಯ ಪ್ರಗತಿಗಾಗಿ ಮುಖ್ಯ ಮಂತ್ರಿಗಳು ಅಭಿನಂದನೆಯನ್ನು ವ್ಯಕ್ತಪಡಿಸಿ, ಇಂತಹ ಸಾರ್ವಜನಿಕ ಸಂಸ್ಥೆಗಳು ಹೆಚ್ಚಾಗಿ ಬೆಳೆಯಬೇಕೆಂದು ತಿಳಿಸಿದರು.

ಸರ್ಕಾರದವರು ಈಗ ವಿದ್ಯಾಭ್ಯಾಸಕ್ಕಾಗಿ ೪ ಕೋಟಿ ರೂ.ಗಳನ್ನು ಖರ್ಚು ಮಾಡುತ್ತಿದ್ದಾರೆ ಹಣದ ಅಭಾವದಿಂದ ಇನ್ನೂ ಹೆಚ್ಚು ಖರ್ಚುಮಾಡಲು ಸಾಧ್ಯವಿಲ್ಲ ಎಲ್ಲವನ್ನೂ ಸರ್ಕಾರವೇ ಮಾಡಬೇಕೆಂಬ ಮನೋಭಾವನೆ ಬಂದಿದೆ. ಈಗ ಅದು ಬದಲಾವಣೆ ಆಗಬೇಕಾದ ಕಾಲ ಒದಗಿದೆ ಇನ್ನು ಮುಂದೆ ವಿದ್ಯಾ ಮತ್ತು ವೈದ್ಯ ಸೌಕರ್ಯಗಳನ್ನು ದಾನಿಗಳೇ ಮುಂದೆ ಬಂದು ಒದಗಿಸಬೇಕು. ಸರ್ಕಾರ ಅದನ್ನು ಮಾಡಲು ಸಾಧ್ಯವೇ ಇಲ್ಲ. ಉತ್ತರ ಕರ್ನಾಟಕದಲ್ಲಿ ಮಠಗಳು ಮತ್ತು ಇತರ ಖಾಸಗಿಯವರು ವಿದ್ಯಾ ಮತ್ತು ಇತರ ಸಂಸ್ಥೆಗಳನ್ನು ನಡೆಸಿಕೊಂಡು ಬರುತ್ತಿರುವಂತೆ ಮೈಸೂರಿನಲ್ಲೂ ನಡೆಯಬೇಕು-ಎಂದು ಶ್ರೀ ಹನುಮಂತಯ್ಯನವರು ಮನವಿ ಮಾಡಿದರು

ಡಾ|| ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರವನ್ನು ಮುಖ್ಯಮಂತ್ರಿಗಳು ಅನಾವರಣ ಮಾಡಿ, ಅವರ ಸೇವೆಯನ್ನು ಕೊಂಡಾಡಿದರು ಅವರಿಗೆ ಈಗ ವಿಶೇಷ ವಯಸ್ಸಾಗಿ ಮುದುಕರಾಗಿದ್ದರೂ ಯಾವಾಗಲೂ ಕೆಲಸದಲ್ಲಿ ನಿರತರಾಗಿ ಕಾಲವ್ಯಯ ಮಾಡುತ್ತಿಲ್ಲ. ಅಂತಹ ಮಹಾನುಭಾವರ ಮೇಲ್ಪಂಕ್ತಿಯನ್ನು ಎಲ್ಲರೂ ಆಚರಣೆಗೆ ತರಬೇಕು-ಎಂದು ತಿಳಿಸಿದರು.

ಪತ್ರಿಕೆಗಳನ್ನು ಸ್ವಾರ್ಥಕ್ಕಾಗಿ ಉಪಯೋಗಿಸಬಾರದು

ಮುಖ್ಯ ಮಂತ್ರಿಗಳ ಮನವಿ

ಮೈಸೂರು ೧೫

ಸರ್ಕಾರ ಹೇಗೆ ಸಾರ್ವಜನಿಕರ ಸ್ವತ್ತೋ ಹಾಗೆಯೇ ಪತ್ರಿಕೋದ್ಯಮವು ಸಾರ್ವಜನಿಕರ ಸಂಸ್ಥೆ ಆಗಿದೆ. ಅದನ್ನು ಇತ್ತೀಚಿಗೆ ಕೆಲವು ಬಂಡವಾಳಗಾರರು ತಮ್ಮ ಸ್ವಾರ್ಥಕ್ಕಾಗಿ ಉಪಯೋಗಿಸುಕೊಳ್ಳುತ್ತಿರುವುದು ಶೋಚನೀಯ. ಇಂತಹ ಪವಿತ್ರವಾದ ಸಾರ್ವಜನಿಕ ಸಂಸ್ಥೆಯನ್ನು ಉದ್ದೇಶಪೂರ್ವಕವಾಗಿ ಬಂಡವಾಳಗಾರರು ತಮ್ಮ ಕೈಯ್ಯಲ್ಲಿಟ್ಟುಕೊಂಡು ಸರ್ಕಾರ, ಸಚಿವರು ಮತ್ತು ಇತರರ ನಿಂದನೆಗೆ ಉಪಯೋಗಿಸುತ್ತಿರುವುದು ದೇಶಕ್ಕೆ ಹಾನಿಕರ-ಎಂದು ಮುಖ್ಯ ಮಂತ್ರಿ ಶ್ರೀ ಕೆ.ಹನುಮಂತಯ್ಯನವರು ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ಸಂಘದ ಮುಕ್ತಾಯ ಭಾಷಣಮಾಡುತ್ತಾ ಮೊನ್ನೆ ತಿಳಿಸಿದರು.

ನಿರ್ಭಯ, ಸ್ವಾತಂತ್ರಪ್ರಿಯತೆ, ಸಹನೆ, ಸಮಾಧಾನಮನೋಭಾವನೆ ಮುಂತಾದ ಗುಣಗಳು ಮುಖ್ಯವಾಗಿ ಪತ್ರಿಕೋದ್ಯೋಗಿಗಳಿಗೆ ಇರಬೇಕು. ಮಂತ್ರಿಗಳಾಗಲು, ಪಾರ್ಲಿಮೆಂಟ್ ಸದಸ್ಯರಾಗಲು ಮತ್ತು ಪತ್ರಿಕೋದ್ಯೋಗಿ ಆಗಲು ಯಾವ ಅರ್ಹತೆಯೂ ಬೇಕಿಲ್ಲ ಎಂಬ ಭಾವನೆ ಇದೆ. ಇಂತಹ ಅಭಾಸ ಹೋಗಲೆಂದೇ ವಿಶ್ವವಿದ್ಯಾನಿಲಯದಲ್ಲಿ ಪತ್ರಿಕೋದ್ಯಮ ಶಿಕ್ಷಣಶಾಲೆ ತೆರೆಯಲಾಗಿದೆಯೆಂದು ಅವರು ತಿಳಿಸಿದರು.

ಶ್ರೀ ಡಿ. ವಿ ಗುಂಡಪ್ಪನವರ ಭಾವಚಿತ್ರವನ್ನು ಮುಖ್ಯ ಮಂತ್ರಿಗಳು ಅನಾವರಣ ಮಾಡಿದರು.

ಪ್ರಾರಂಭದಲ್ಲಿ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಸ್ವಾಗತ ಬಯಸಿದರು.

ಉತ್ತಮ ಲೇಖನ ಬರೆದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿನಿಯೋಗಿಸಲಾಯಿತು.

ಕಾಣಿಕೆ

ಮೈಸೂರು ತಾಲ್ಲೂಕ್ಕ ಸಿದ್ದರಾಮೇಗೌಡನ ಹುಂಡಿ ಶ್ರೀ ಹೊಂಬೇಗೌಡರು ತಮ್ಮ ಕುಮಾರಿ ಸೌ|| ಮಹೊಂದಮ್ಮ ಮತ್ತು ಶ್ರೀ ಸಿದ್ದೇಗೌಡರ ವಿವಾಹ ಸಮಾರಂಭದಲ್ಲಿ ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಕಾಣಿಕೆಯಾಗಿ ೨೫ ರೂ.ಗಳನ್ನು ಕೊಟ್ಟಿದ್ದಾರೆ.

ಕೈಮಗ್ಗದವರ ಅಭಿವೃದ್ಧಿಗೆ ಜನರ ಸಹಾಯ ಅಗತ್ಯ

ಮುಖ್ಯಮಂತ್ರಿಗಳ ಮನವಿ

ಮೈಸೂರು ೧೫

ಕಳೆದ ಒಂದು ವಾರದಿಂದ ದೇಶಾದ್ಯಂತ ನಡೆಯುತ್ತಿದ್ದ ಕೈಮಗ್ಗದವರ ದಿನಾಚರಣೆಯು ಮೊನ್ನೆಯದಿನ ಮುಕ್ತಾಯವಾಯಿತು. ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮೊನ್ನೆದಿನ ಸಂಜೆ ಟೌನ್‌ಹಾಲಿನಲ್ಲಿ ನಡೆದ ಸಮಾರಂಭದಲ್ಲಿ ಭಾಗವಹಿಸಿದ್ದರು.

ಶ್ರೀ ಶಂಕರಯ್ಯನವರು ಸ್ವಾಗತ ಬಯಸಿದರು. ಕೈಮಗ್ಗದವರ ಪರವಾಗಿ ಮುಖ್ಯಮಂತ್ರಿಗಳಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿ, ಅವರ ಪುರೋಭಿವೃದ್ಧಿಗಾಗಿ ಕೈಮಗ್ಗ ಪರಿಹಾರ ಕಾನೂನು ಜಾರಿಗೆ ತರಬೇಕೆಂದೂ, ಆಧುನಿಕ ಯಂತ್ರ, ನಿಪುಣರು ಮತ್ತು ಹಣದ ಸಹಾಯ ಮಾಡಬೇಕೆಂದೂ ಕೋರಲಾಯಿತು.

ಕೈಮಗ್ಗದವರ ಅಭಿವೃದ್ಧಿಗಾಗಿ ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳು ಸರ್ವಪ್ರಯತ್ನ ನಡೆಸುತ್ತಿವೆ. ಅವರಿಗೆ ಮೂರುವರೆ ಲಕ್ಷ ರೂ. ಸಲ, ೨೫ ಸಾವಿರ ರೂ. ಸಿಬ್ಬಂದಿ ಖರ್ಚು ಮುಂತಾದುವುಗಳನ್ನು ಕೊಡಬೇಕೆಂದು ಮೈಸೂರು ಸರ್ಕಾರವು ಈಗಾಗಲೇ ಆಜ್ಞೆ ಮಾಡಿದೆ. ಸರ್ಕಾರ ಎಷ್ಟು ಮಾಡಿದರೂ ಅದು ಸಫಲವಾಗುವುದಿಲ್ಲ. ಮುಖ್ಯವಾಗಿ ಸಾರ್ವಜನಿಕರ ಸಹಕಾರ ಇದಕ್ಕೆ ಅತ್ಯಗತ್ಯ. ಜನರು ಕೈಮಗ್ಗದ ಬಟ್ಟೆಯನ್ನೇ ಕೊಂಡು ಅವರನ್ನು ಉದ್ಧರಿಸಬೇಕು. ಇವರ ಜೊತೆ ಕೈಮಗ್ಗದವರು ಸುಮ್ಮನೆ ಮಾತಿನಲ್ಲಿ ಚಳುವಳಿ ಮಾಡಿ, ತಾವೇ ಮಿಲ್ ಬಟ್ಟೆಗಳನ್ನು ಧರಿಸುವುದರಿಂದ ಪ್ರಯೋಜನವಿಲ್ಲ. ತಾವು ಮೊದಲು ಮೇಲ್ಪಂಕ್ತಿ ಹಾಕಬೇಕು-ಎಂದು ಮುಖ್ಯಮಂತ್ರಿಗಳು ತಿಳಿಸಿದರು.

ಚಂಡೀ ಮಹಾಯಾಗಕ್ಕೆ ಸಹಾಯ ನೀಡಿ

ಮೈಸೂರು ೧೫

ಇದೇ ೧೩ ನೇ ತಾರೀಖಿನಿಂದ ಚಾಮುಂಡಿ ಬೆಟ್ಟದಲ್ಲಿ ಪ್ರಾರಂಭಿಸಿರುವ ಸಹಸ್ರ ಚಂಡೀ ಮಹಾಯಾಗಕ್ಕೆ ಸಾರ್ವಜನಿಕರು ಉದಾರವಾಗಿ ಸಹಾಯ ಮಾಡಬೇಕೆಂದು ಸಮಿತಿಯವರು ಪ್ರಾರ್ಥನೆಯೊಂದನ್ನು ಹೊರಡಿಸಿದ್ದಾರೆ.

ರಾಜಪ್ರಮುಖರಿಂದ ಯೋಗಗ್ರಂಥ ರಚನೆ

ಮೈಸೂರು ೧೫

ಶ್ರೀಮನ್ಮಹಾರಾಜರವರು ಯೋಗದ ವಿಷಯದಮೇಲೆ ೫೦೦ ಪುಟಗಳ ಒಂದು ಗ್ರಂಥವನ್ನು ಇಂಗ್ಲೀಷಿನಲ್ಲಿ ಬರೆದಿರುವರೆಂದೂ, ಅದು ಈಗ ನಿಪುಣರ ಪರಿಶೀಲನೆಯಲ್ಲಿದ್ದು ಇಷ್ಟರಲ್ಲೇ ಪ್ರಕಟಿಸಲಾಗುವುದೆಂದೂ ತಿಳಿದುಬಂದಿದೆ.

ಶ್ರೀ ದಕ್ಷಿಣಾಮೂರ್ತಿಯವರ ತರ್ಕಶಾಸ್ತ್ರದಮೇಲೆ ಒಂದು ಪ್ರಬಂಧವನ್ನೂ ರಾಜಪ್ರಮುಖರು ಬರೆಯುತ್ತಿರುವರೆಂದೂ ಹೇಳಲಾಗಿದೆ.

● ಮೈಸೂರು ಸರ್ಕಾರದ ಬಸ್ಸುಗಳಲ್ಲಿ ಓವರ್‌ಲೋಡ್ ಮಾಡಕೂಡದೆಂದು ನಿರ್ದಿಷ್ಟ ಸೂಚನೆಯನ್ನು ಕೊಡಲಾಗಿದೆಯೆಂದು ಕೈಗಾರಿಕಾ ಸಚಿವ ಶ್ರೀ ಸಿದ್ದವೀರಪ್ಪನವರು ಶಾಸನಸಭೆಯಲ್ಲಿ ತಿಳಿಸಿದ್ದಾರೆ. ೫೦ ಹೊಸ ಬಸ್ಸುಗಳನ್ನು ಇಷ್ಟರಲ್ಲೇ ಓಡಿಸಲಾಗುವುದೆಂದೂ ಅವರು ಹೇಳಿದ್ದಾರೆ.

ಹೋಟೇಲುಗಳಮೇಲೆ ನೂತನತೆರಿಗೆ ವಿಧಿಸಬಾರದು

ಮೈಸೂರು ೧೫

ನಗರದ ಹೋಟೇಲುಗಳ ಮಾಲೀಕರ ಸಭೆಯು ಮೊನ್ನೆ ನಡೆದು, ೭೫೦೦ ರೂಗಿಂತ ಹೆಚ್ಚು ವ್ಯಾಪಾರ ಆಗುವ ಹೋಟೇಲುಗಳಮೇಲೆ ಶೇಕಡ ೧೦ ರಂತೆ ಮಾರಾಟ ತೆರಿಗೆ ವಿಧಿಸಬೇಕೆಂದು ಸರ್ಕಾರ ಆಲೋಚಿಸಿರುವುದನ್ನು ಪರಿಶೀಲಿಸಿ, ಈ ರೀತಿ ಮಾಡುವುದರಿಂದ ಮಾಲೀಕರಿಗೆ ತುಂಬಾ ನಷ್ಟವಾಗುವುದೆಂದೂ, ಇದರಿಂದ ಹೋಟೇಲುಗಳನ್ನೇ ಮುಚ್ಚಬೇಕಾಗುವುದೆಂದೂ, ಆದ್ದರಿಂದ ನೂತನ ತೆರಿಗೆಯನ್ನು ವಿಧಿಸಕೂಡದೆಂದೂ ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯ ಮಾಡಲಾಯಿತು.

○ ತಿರುವಾಂಕೂರು-ಕೊಚ್ಚಿಯಲ್ಲಿ ಸಂಯುಕ್ತ ವಾಮಪಕ್ಷದವರು ಸರ್ಕಾರ ರಚಿಸುವುದಾದರೆ ಅದಕ್ಕೆ ಪ್ರಜಾಸೋಷಲಿಸ್ಟ್ ಪಕ್ಷವು ತನ್ನ ಪಕ್ಷದ ತತ್ವ,ಧೋರಣೆಗನುಗುಣವಾಗಿ ಬೆಂಬಲ ನೀಡುವುದೆಂದು ಆ ಪಕ್ಷದ ಸಭೆಯು ನಿರ್ಣಯಮಾಡಿದೆ.

ಶ್ರೀ ಸಹಸ್ರ ಚಂಡಿಯಾಗ ಪ್ರಾರಂಭ

ಮೈಸೂರು ೧೫

ಕೋಟೀಶ್ವರದ ದೇವೀಭಕ್ತ ಶ್ರೀ ವಿ. ಶ್ರೀನಿವಾಸರಾಯರು ಕೈಗೊಂಡಿರುವ ಶ್ರೀ ಸಹಸ್ರಚಂಡೀ ಮಹಾಯಾಗದ ಆರಂಭೋತ್ಸವವನ್ನು ಶ್ರೀಮನ್ಮಹಾರಾಜರವರು ನಿನ್ನೆಯದಿನ ಬೆಳಗ್ಗೆ ಚಾಮುಂಡಿ ಬೆಟ್ಟದಲ್ಲಿ ನೆರವೇರಿಸಿದರು.

ಈ ಸಮಾರಂಭಕ್ಕೆ ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾವ್, ಮಾಜಿ ಸಚಿವರುಗಳಾದ ಶ್ರೀ ಹೆಚ್. ಸಿ. ದಾಸಪ್ಪ, ಸಿದ್ದಲಿಂಗಯ್ಯ ಮತ್ತು ಇತರ ಅನೇಕ ಅಧಿಕಾರಿಗಳು ಪ್ರಮುಖರು ಆಗಮಿಸಿದ್ದರು.

ಈ ಚಂಡೀಯಾಗಕ್ಕಾಗಿ ನಿರ್ಮಿಸಿರುವ ಮಂಟಪದಲ್ಲಿ ಶ್ರೀಮನ್ಮಹಾರಾಜರನ್ನು ಪೂರ್ಣಕುಂಭ ಮುಂತಾದ ಮರ್ಯಾದೆಗಳೊಡನೆ ಸ್ವಾಗತಿಸಲಾಯಿತು. ರಿಸರ್ವ್ ಪೋಲೀಸಿನವರು ಗೌರವರಕ್ಷೆಯನ್ನು ಸಲ್ಲಿಸಿದರು.

ಶ್ರೀ ಶ್ರೀನಿವಾಸರಾಯರ ಪರವಾಗಿ ಶ್ರೀ ಎಂ. ರಾಮಸ್ವಾಮಿಯವರು ಮಹಾರಾಜರಿಗೆ ಬಿನ್ನವತ್ತಳೆಯನ್ನು ಅರ್ಪಿಸಿ ತಮ್ಮ ಈ ಉದ್ಯಮಕ್ಕೆ ಮಹಾರಾಜರು ಮತ್ತು ಮೈಸೂರಿನ ಅನೇಕ ಗಣ್ಯರು ಮತ್ತು ವೈದೀಕರು ಇತ್ತಿರುವ ನೆರವನ್ನು ಮನನ ಮಾಡಿಕೊಂಡರು.

ಶ್ರೀಮನ್ಮಹಾರಾಜರು ಯಾಗ ಮಂಟಪಕ್ಕೆ ಪ್ರವೇಶಿಸಿ ಅಲ್ಲಿ ಪೂಜೆ ಮತ್ತು ಮಂಗಳಾರತಿ ನಡೆದನಂತರ ಲೋಕರಕ್ಷಣಾರ್ಥವಾ ಕೈಗೊಂಡಿರುವ ಈ ಕಾರ್ಯವನ್ನು ಚಾಮುಂಡಾಂಬಿಕೆಯು ಸುಗಮವಾಗಿ ನಡೆಸುವಂತೆ ತಾವು ಜಗನ್ಮಾತೆಯನ್ನು ಪ್ರಾರ್ಥಿಸುವುದಾಗಿ ತಿಳಿಸಿದರು.

ಈ ಯಾಗದ ಅಂಗವಾಗಿ ಮೊನ್ನೆಯ ದಿನ ಮಹಾಗಣಪತಿ ಪೂಜೆ, ಯಾಗಶಾಲಾ ಪ್ರವೇಶೋತ್ಸವ ಮುಂತಾದವು ನಡೆದುವು ೧೮ ನೇ ತಾರೀಖು ಗುರುವಾರ ಈ ಯಾಗ ಪೂರ್ಣಾಹುತಿ ನಡೆಯುತ್ತದೆ. ಈ ಯಾಗದಲ್ಲಿ ಸಂಸ್ಥಾನದ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ೧೩೫ ಜನ ಋತ್ವಿಕರು ಭಾಗವಹಿಸುತ್ತಲಿದ್ದಾರೆ.

೧ ಕೋಟಿ ಟನ್ ಗೋಧಿ ನಿರಾಕರಣೆ

ಅಂತರ ರಾಷ್ಟ್ರೀಯ ಗೋಧಿ ಒಪ್ಪಂದದ ಪ್ರಕಾರ ಭಾರತವು ಪಡೆಯಬೇಕಾಗಿದ್ದ ೧ ಕೋಟಿ ಟನ್ ಗೋಧಿಯನ್ನು ತಾನು ತೆಗೆದುಕೊಳ್ಳುವುದಿಲ್ಲವೆಂದು ಭಾರತವು ಅಂತರ ರಾಷ್ಟ್ರೀಯ ಗೋಧಿ ಸಮಿತಿಗೆ ತಿಳಿಸಿರುವುದಾಗಿ ಆಹಾರ ಸಚಿವ ಕಿದ್ವಾಯ್‌ಯವರು ಲೋಕಸಭೆಯಲ್ಲಿ ಹೇಳಿದ್ದಾರೆ.

ಸಿಂಹಳಕ್ಕೆ ಭೇಟಿ

ವಿಶ್ವಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಸಿಂಹಳದಲ್ಲಿ ಒಂದುವಾರಕಾಲ ಪ್ರವಾಸ ಕೈಗೊಳ್ಳಲು ದೆಹಲಿಯಿಂದ ನಿನ್ನೆಯದಿನ ಮದರಾಸಿಗೆ ಆಗಮಿಸಿ, ಅಲ್ಲಿಂದ ವಿಮಾನದಲ್ಲಿ ಈದಿನ ಕೊಲಂಬೋವಿಗೆ ತೆರಳಿದರು.

ಅಂಕಿಅಂಶ ಶೇಖರಣಾ ಸಮಿತಿ ರಚನೆ

ಬೆಂಗಳೂರು ೧೫

ಪ್ರಾಂತ್ಯಗಳ ಪುನರ್ವಿಂಗಡನಾ ಸಮಿತಿಗೆ ಎಲ್ಲಾ ಅಂಕಿಅಂಶಗಳನ್ನು ಶೇಖರಿಸಿ ಒಪ್ಪಿಸಲು ಶಾಸನಸಭೆಯಲ್ಲಿ ಕೆಲವು ಸದಸ್ಯರು ಮಾಡಿರುವ ಸಲಹೆಯನ್ನು ಸರ್ಕಾರವು ಒಪ್ಪಿರುವುದಾಗಿ ಮುಖ್ಯಮಂತ್ರಿಯವರು ತಿಳಿಸಿದ್ದಾರೆ.

ಇಂಗ್ಲೀಷ್ ಭಾಷೆ ಕಲಿಯಲು ಅಡ್ಡಿ ತರುವುದು ದೇಶಕ್ಕೆ ಹಾನಿ

ಇಂಗ್ಲೀಷ್ ಭಾಷೆಯನ್ನು ಕಲಿಯಲು ಅಡ್ಡಿ ರುವುದರಿಂದ ದೇಶದ ಪ್ರಗತಿಗೆ ಧಕ್ಕೆ ತಂಪತಾಗುವುದೆಂದು ಬೀಹಾರ್ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಯದಲ್ಲಿ ಮಾತನಾಡುತ್ತಾ ಡಾ|| ಎ. ರಾಮಸ್ವಾಮಿ ಮೊದಲಿಯಾರ್‌ರವರು ತಿಳಿಸಿದ್ದಾರೆ.

ಪತ್ರಿಕಾ ಶಾಸನಕ್ಕೆ ೨ ವರ್ಷ ಜೀವದಾನ

ಪತ್ರಿಕಾ ಆಕ್ಷೇಪಕರ ಸಾಹಿತ್ಯ ಶಾಸನಕ್ಕೆ ಪಾರ್ಲಿಮೆಂಟಿನಲ್ಲಿ ಮೊನ್ನೆ ದಿನ ಎರಡು ವರ್ಷ ಕಾಲ ಜೀವದಾನ ದೊರೆಯಿತು.

ನಿಧನ

ಸುಪ್ರಸಿದ್ಧ ಚಿತ್ರಕಾರ ರಾಜಾ ರವಿವರ್ಮರವರ ಸಹೋದರಿ ಶ್ರೀಮತಿ ಮಂಗಲಬಾಯ್ ತಂಬುರಟ್ಟಿಯವರು ಮೊನ್ನೆದಿನ ತಮ್ಮ ೮೮ನೇ ವಯಸ್ಸಿನಲ್ಲಿ ತಿರುವನಂತಪುರದಲ್ಲಿ ನಿಧನರಾದರು. ಅವರೂ ಸಹ ಉತ್ತಮ ಚಿತ್ರಗಾರರಾಗಿದ್ದರು.

-ಮೈಸೂರು ಪೇಟೆಧಾರಣೆ-

ತಾರೀಖು ೧೩—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—೬	೨೪—೧೪
ಎಳ್ಳು	೬೫—೮	—
ಹರಳು	೨೬—	೨೯—೧೨
ಹುಚ್ಚೆಳ್ಳು	೩೮—೮	೪೪—
ಹೊಂಗೆಬೀಜ	೧೬—	೨೩—೪
ಹುರುಳಿ	೨೭—೧೨	೨೯—
ಹೆಸರು	೩೮—೪	೩೮—೧೨
ಅವರೆ	೩೦—೧೦	—
ಕೊತ್ತಂಬರಿ	—	—
ಅಲಸಂದೆ	೩೫—೪	೩೭—೧೪
ತೊಗರಿ	೨೨—೩	೨೩—೨
ಕಡಲೆ	೪೦—	—
ಸೆಣಬು	೨೭—೧೪	೩೧—
ಉದ್ದು	—	—
ಹುಣಸೆಬೀಜ	೧೩—೨	೧೩—೮
ಕ|| ಬೀಜ	—	—
ಹುಣಸೆಹಣ್ಣು	೪—೮	೯—೧೦
ಸೀಗೆಕಾಯಿ	೪—೭	೪—೧೪
ಮೆಣಸಿನಕಾಯಿ	೨೬—೧೨	೨೬—೧೪
ಬೆಲ್ಲ	—	—
ತೆಂಗಿನಕಾಯಿ	೨೦೫—	೨೭೪—

ಸ್ವಾಮಿ ಸೀತಾರಾಂರವರ ಉಪವಾಸ

ಆಂಧ್ರದಲ್ಲಿ ರಾಮಮೂರ್ತಿ ಸಮಿತಿಯ ಶಿಫಾರಸ್ಸನ್ನು ಕಾರ್ಯರೂಪಕ್ಕೆ ತಂದು ಪಾನನಿರೋಧ ರದ್ದುಗೊಳಿಸಬಾರದೆಂದು ಉಪವಾಸ ಪ್ರಾರಂಭಿಸಿರುವ ಸ್ವಾಮಿ ಸೀತಾರಾಂರವರು ತಮ್ಮ ಉಪವಾಸವನ್ನು ಮುಂದುವರಿಸಲಿದ್ದಾರೆ. ಅವರ ದೇಹಸ್ಥಿತಿಯ ದಿನೇ ದಿನೇ ಕ್ಷಯಿಸುತ್ತಲಿರುವುದಾಗಿ ವೈದ್ಯರು ತಿಳಿಸಿದ್ದಾರೆ. ಉಪವಾಸವನ್ನು ಮುಕ್ತಾಯಗೊಳಿಸಬೇಕೆಂದು ಹಲವಾರು ಜನರು ಮಾಡಿರುವ ಸಲಹೆಯನ್ನು ಶ್ರೀ ಸೀತಾರಾಂರವರು ನಿರಾಕರಿಸಿದ್ದಾರೆ.

ಮೆನನ್-ಮಾಲಟಾಫ್ ಭೇಟಿ

ರಷ್ಯಾದಲ್ಲಿ ಭಾರತ ರಾಯಭಾರಿಯಾಗಿರುವ ಶ್ರೀ ಕೆ. ಪಿ. ಮೆನನ್‌ರವರು ಮೊನ್ನೆ ರಷ್ಯಾ ವಿದೇಶಾಂಗ ಸಚಿವ ಮಿ|| ಮಾಲಟಾಫ್‌ರವರನ್ನು ಭೇಟಿಮಾಡಿ ಸುಮಾರು ಅರ್ಧಗಂಟೆಕಾಲ ಮಾತುಕತೆ ನಡೆಸಿದರು. ಮೂರು ತಿಂಗಳಲ್ಲಿ ಈ ಉಭಯತ್ರರ ಭೇಟಿ ನಡೆದಿರುವುದು ಇದು ಎರಡನೇಬಾರಿ.

ಶ್ರೀ ಮೆನನ್‌ರವರು ಮಾಲಟಾಫ್‌ರೊಡನೆ ವಿವಿಧ ವಿಷಯಗಳ ಬಗ್ಗೆ ಮಾತುಕತೆ ನಡೆಸಿದರೆಂದು ಪ್ರಕಟಿಸಲಾಗಿದೆ.

ವಿಮಾನ ಅಪಘಾತ

ಸಿಡ್ನಿಯಿಂದ ಲಂಡನ್ನಿಗೆ ಸಿಂಗಪುರದ ಮಾರ್ಗದಲ್ಲಿ ಹೋಗುತ್ತಿದ್ದ ಬಿ.ಓ.ಎ.ಸಿ. ವಿಮಾನವೊಂದು ಮೊನ್ನೆಯದಿನ ಸಿಂಗಪುರದ ಬಳಿ ಉರುಳಿ ಅದರಲ್ಲಿದ್ದ ಎಲ್ಲಾ ೩೩ ಪ್ರಯಾಣಿಕರು ಮತ್ತು ಚಾಲಕ ವರ್ಗದ ಮೃತರಾದರು ಮಡಿದವರಲ್ಲಿ ಮದರಾಸಿನ ಪ್ರಮುಖ ಬ್ಯಾಂಕರ್ ಆದ ಶ್ರೀ ಎಂ. ಸಿಟಿ. ಎಂ. ಚಿದಂಬರ ಚೆಟ್ಟಿಯಾರ್‌ರವರು ಒಬ್ಬರು.

ಹೊಸ ನೋಟುಗಳ ಚಲಾವಣೆ

ಏಪ್ರಿಲ್ ಒಂದನೇ ತಾರೀಖಿನಿಂದ ಪುನಃ ಒಂದುಸಾವಿರ, ೫ ಸಾವಿರ, ೧೦ ಸಾವಿರ ರೂಪಾಯಿಗಳ ನೋಟನ್ನು ರಿಸರ್ವ್‌ಬ್ಯಾಂಕ್ ಚಲಾವಣೆಗೆ ತರುತ್ತದೆ.

ಹಡಗು ಮುಳುಗಿತು

ಬೊಂಬಾಯಿನಿಂದ ಕಾಲಿಕಟ್ಟಿಗೆ ಹೋಗುತ್ತಲಿದ್ದ ಸಾಮಾನು ಸಾಗಾಣಿಕೆ ಹಡಗಾದ 'ಜಾನಕಿ'ಯು ಮೊನ್ನೆಯ ದಿನ ಬೊಂಬಾಯಿನ ಬಳಿ ಮುಳಗಿತು ಅದರಲ್ಲಿದ್ದ ೪೦ ಜನರ ಪೈಕಿ ೭ ಜನ ಪತ್ತೆಯಿಲ್ಲ ಇತರರನ್ನು ರಕ್ಷಿಸಲಾಗಿದೆ.

ಪ್ರತಿಭಟನೆ

ಚಲನ ಚಿತ್ರ ಮಂದಿರಗಳ ಮೇಲೆ ಮಾರಾಟ ತೆರಿಗೆಯನ್ನು ವಿಧಿಸಿರುವುದನ್ನು ಪ್ರತಿಭಟಿಸಿ ಪಂಜಾಬಿನಲ್ಲಿರುವ ಎಲ್ಲಾ ಚಲನ ಚಿತ್ರ ಮಂದಿರಗಳು ಇಂದಿನಿಂದ ಪ್ರದರ್ಶನಗಳನ್ನು ನಿಲ್ಲಿಸಲಿವೆ.

ಸಾಮಾಜಿಕ ಪ್ರಗತಿಗೆ ಬಲ್ಲಿದರ ಸಹಾಯ ಅಗತ್ಯ

ಬನುಮಯ್ಯ ಶಾಲೆಯ ರಜತ ಮಹೋತ್ಸವದಲ್ಲಿ ರಾಜಪ್ರಮುಖರ ಮನವಿ

ಮೈಸೂರು ೧೫

ರಾಜಧಾನಿಯ ಡಿ. ಬನುಮಯ್ಯನವರ ಹೈಸ್ಕೂಲಿನ ರಜತ ಮಹೋತ್ಸವವು ಮೊನ್ನೆ ಸಂಜೆ ಅತಿ ವಿಜೃಂಭಣೆಯಿಂದ ನಡೆಯಿತು.

ಶ್ರೀಮನ್ಮಹಾರಾಜರವರು ಅದರ ಪ್ರಾರಂಭೋತ್ಸವವನ್ನು ನಡೆಸಿ, ಡಿ. ಬನುಮಯ್ಯನವರು ಬಡವರಾಗಿದ್ದ ಅನಂತರ ಸ್ವತಃ ಕಷ್ಟಪಟ್ಟು ಗಳಿಸಿದ ಹಣವನ್ನು ದಾನಮಾಡಿ ಅವರು ಸೇವೆ ಸಲ್ಲಿಸಿದ್ದಾರೆ. ಇದು ಪ್ರಶಂಸನೀಯ, ಅವರ ಮೇಲ್ಪಂಕ್ತಿಯನ್ನು ಇತರರು ಅದರಲ್ಲೂ ಬಲ್ಲಿದರು ಆಚರಿಸುವುದರಿಂದ ಸಾಮಾಜಿಕ ಪ್ರಗತಿಗೆ ಸಹಕಾರವಾಗುವುದೆಂದು ತಿಳಿಸಿದರು.

ಶ್ರೀಗಳಾದ ಎಸ್. ನಾರಾಯಣ ಮತ್ತು ನಾಗಪ್ಪನವರು ವಿಭಾಗದ ಕಟ್ಟಡವನ್ನು ಕಟ್ಟಲು ಮುಂದೆ ಬಂದಿರುವುದಕ್ಕಾಗಿ ಅವರನ್ನು ಅಭಿನಂದಿಸಿ, ರಾಜಪ್ರಮುಖರು ಅದರ ಶಂಕುಸ್ಥಾಪನೆಯನ್ನು ನೆರವೇರಿಸಿದರು.

ಪ್ರಾರಂಭದಲ್ಲಿ ಶ್ರೀ ಎಸ್. ಚನ್ನಯ್ಯನವರು ಸ್ವಾಗತ ಭಾಷಣ ಮಾಡಿ ದಿವಂಗತ ಶ್ರೀ ಡಿ. ಬನುಮಯ್ಯನವರ ಸೇವೆಯನ್ನು ಕೊಂಡಾಡಿದರು.

ಕಾರ್ಯದರ್ಶಿ ಶ್ರೀ ಬಿ. ವಿ. ಬನುಮಯ್ಯನವರು ವರದಿಯನ್ನು ಒಪ್ಪಿಸಿ, ೧೯೦೮ರಲ್ಲಿ ಮಾಧ್ಯಮಿಕ ಶಾಲೆಯಾಗಿ ಸ್ಥಾಪಿತವಾಗಿ ೪೦ ವಿದ್ಯಾರ್ಥಿಗಳಿದ್ದ ಈಗ ಕಾಲೇಜಾಗಿ ೧೨೦೦ ವಿದ್ಯಾರ್ಥಿಗಳು ಇದ್ದಾರೆಂದೂ ಹಣದ ಕೊರತೆಯಿಂದ ಶಾಲೆಯ ಪುರೋಭಿವೃದ್ಧಿಗೆ ಧಕ್ಕೆ ಬಂದಿದೆಯೆಂದೂ ಆದ್ದರಿಂದ ಸಾರ್ವಜನಿಕರು ಸಹಾಯ ಮಾಡಬೇಕೆಂದೂ ಕೋರಿದರು.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ

ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ

ಒಟ್ಟು 2000 ಬಹುಮಾನಗಳು.

ಬಹುಮಾನದ ಮೊಬಲಗು 45000 ರೂ.

ಟಿಕೇಟು ಒಂದಕ್ಕೆ ಒಂದೇರೂಪಾಯಿ.

ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು:

ಜಿ. ಎಲ್. ಸ್ವಾಮಿ

ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪ ರಿಜಿಸ್ಟರ್ ನಂ. ಎಂ. ೫೩೧೯

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೬೫

೧೬-೩-೧೯೫೪ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ತೆರಿಗೆ ಇಲ್ಲದೆ ಸರ್ಕಾರ ನಡೆಸುವುದಾದರೆ ಸ್ಥಾನ ಬಿಟ್ಟುಕೊಡುವೆನು

ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರ ಸವಾಲು

ಈಗ ಸರ್ಕಾರದವರು ವಿಧಿಸಬೇಕೆಂಬ ತೆರಿಗೆಯು ಅಷ್ಟು ಹೆಚ್ಚೇನಲ್ಲ. ಸುಮ್ಮನೆ ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ಕಷ್ಟಪಟ್ಟು ಜನರು ಸಹಾಯ ಮಾಡಿದರೆ ದೇಶದ ಅಭ್ಯುದಯದಲ್ಲಿ ಹೆಚ್ಚು ಸೌಕರ್ಯ ಹೊಂದಬಹುದು. ಹೀಗಿಲ್ಲದಿದ್ದರೆ ಹೆಚ್ಚು ಹಣ ವಿದ್ಯಾಭ್ಯಾಸ ಮುಂತಾದುವುಗಳಿಗೆ ಖರ್ಚು ಮಾಡಲು ಸಾಧ್ಯವೆ ಇಲ್ಲ ನಾನು ಹಣವನ್ನ ನನ್ನ ಮನೆಗೆ ತೆಗೆದುಕೊಂಡು ಹೋಗುವುದಿಲ್ಲ. ಅದನ್ನೆಲ್ಲ ಸಂಸ್ಥಾನದ ಅಭಿವೃದ್ಧಿಗೆ ಖರ್ಚುಮಾಡಲಾಗುತ್ತಿದೆ. ಕಂದಾಯ ವಸೂಲು ಮಾಡದೇ ಸರ್ಕಾರ ನಡೆಸುವುದಾದರೆ ಅವರಿಗೆ ಈ ದಿನವೇ ನನ್ನ ಸ್ಥಾನವನ್ನು ಬಿಟ್ಟುಕೊಡುತ್ತೇನೆ. ಕೆಲವರು ಬರಿ ಟೊಳ್ಳು ಮಾತುಗಳಿಂದ ಜನರ ಮನಸ್ಸನ್ನು ಕಲಕಿಸಿದ್ದಾರೆ. ಅದಕ್ಕೆ ಕಿವಿ ಕೊಡದೆ ಸರ್ಕಾರದೊಡನೆ ಸಹಕರಿಸಿ -ಎಂದು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮಂಡ್ಯದ ಜಿಲ್ಲೆಯ ಒಂದು ಸಮಾರಂಭದಲ್ಲಿ ತಿಳಿಸಿದ್ದಾರೆ.

ತಿರುವಾಂಕೂರು-ಕೊಚ್ಚಿಯಲ್ಲಿ ಸರ್ಕಾರ ರಚನೆ

ತಿರುವಾಂಕೂರು-ಕೊಚ್ಚಿಯಲ್ಲಿ ಸಂಯುಕ್ತ ವಾಮ ಪಕ್ಷವು ಸರ್ಕಾರವನ್ನು ರಚಿಸುವುದಾದರೆ ಪ್ರಜಾಸೋಷಲಿಸ್ಟ್ ಪಕ್ಷದ ನಿಲುವೇನೆಂಬುದನ್ನು ಅಂತ್ಯ ತೀರ್ಮಾನಿಸುವ ಕಾರ್ಯವನ್ನ ಸಮಿತಿಯು ರಾಷ್ಟ್ರಿಯ ಸಮಿತಿಯ ಅಧ್ಯಕ್ಷರಿಗೆ ಬಿಟ್ಟಿದೆ.

ಆದರೆ ಅಲ್ಲಿಯ ಪಿ. ಎಸ್. ಪಿ. ನಾಯಕ ಶ್ರೀ ಪಟ್ಟಂ ತಾನುಪಿಳ್ಳೆಯವರು ತಮ್ಮ ಪಕ್ಷವು ಸಂಯುಕ್ತ ವಾಮ ಪಕ್ಷವು ಸರ್ಕಾರ ರಚಿಸಿದರೆ ಕೆಲವು ಷರತ್ತುಗಳ ಮೇಲೆ ನೆರವು ನೀಡುವುದಾಗಿ ಹೇಳಿರುವುದು ಸರಿಯಲ್ಲ. ಹಾಗೆ ಹೇಳಲು ಅವರಿಗೆ ಅಧಿಕಾರವಿಲ್ಲ ಎಂದು ಪಿ ಎಸ್. ಪಿ. ಅಧ್ಯಕ್ಷ ಆಚಾರ್ಯ ಕೃಪಾಲಾನಿಯವರು ನಾಗಪುರದಲ್ಲಿ ಮಾತನಾಡುತ್ತಾ ತಿಳಿಸಿದ್ದಾರೆ.

ಶ್ರೀ ಪಟ್ಟಂ ತಾನುಪಿಳ್ಳೆಯವರು ತಿರುವನಂತಪುರದಲ್ಲಿ ಮಾತನಾಡುತ್ತಾ ತಮಗೆ ಆಶ್ವಾಸನ ಬಂದರೆ ಸ್ಥಿರವಾದ ಸರ್ಕಾರವನ್ನು ರಚಿಸಲು ಸಿದ್ಧವಿರುವುದಾಗಿ ಮತ್ತೆ ಹೇಳಿದ್ದಾರೆ. ಪಿ. ಎಸ್. ಪಿ. ಯು ಸರ್ಕಾರವನ್ನು ರಚಿಸಿದರೆ ಕಾಂಗ್ರೆಸ್ ಸಾಮಾನ್ಯ ಬೆಂಬಲವನ್ನು ನೀಡುವುದಾಗಿ ಶಾಸನ ಸಭೆಯು ಕಾಂಗ್ರೆಸ್ ಪಕ್ಷದ ನಾಯಕರು ಹೇಳಿದ್ದಾರೆ.

ಈ ನಡುವೆ ನಿನ್ನೆಯ ದಿನ ಸಂಯುಕ್ತ ವಾಮ ಪಕ್ಷದ ನಾಯಕ ಶ್ರೀ ಟಿ. ವಿ. ಥಾಮಸ್‌ರವರು ರಾಜಪ್ರಮುಖರನ್ನು ಭೇಟಿ ಮಾಡಿ ತಮಗೆ ೪೦ ಶಾಸನ ಸದಸ್ಯರ ಬೆಂಬಲವಿರುವುದಾಗಿಯೂ ಪಿ.ಎಸ್.ಪಿ. ಯ ೧೯ ಸದಸ್ಯರ ಸಹಕಾರಕ್ಕೆ ತಾವು ಆಶ್ವಾಸನವಿತ್ತಿರುವುದಾಗಿ ತಿಳಿಸಿದ್ದಾರೆ.

ಒಟ್ಟಿನಲ್ಲಿ ತಿರುವಾಂಕೂರು-ಕೊಚ್ಚಿಯಲ್ಲಿ ಸುಭದ್ರ ಸರ್ಕಾರ ರಚನೆಗೆ ಸಾಕಷ್ಟು ಬೆಂಬಲ ದೊರೆತು ಯಾವ ಪಕ್ಷವು ಸರ್ಕಾರ ರಚಿಸುವ ಕಾರ್ಯದಲ್ಲಿ ಯಶಸ್ವಿಯಾಗುವ ನಿರೀಕ್ಷೆಯೇ ಇಲ್ಲವೆಂದು ಅಭಿಪ್ರಾಯ ಪಡಲಾಗುತ್ತಿದೆ.

ಅಮೆರಿಕದ ಪ್ರವಾಸಿಕರಿಂದ ೧ ಕೋಟಿ ರೂ. ಆದಾಯ

ಇತ್ತೀಚೆಗೆ ಭಾರತದಲ್ಲಿ ೬೦೦ ಮಂದಿ ಅಮೆರಿಕದ ಐಶ್ವರ್ಯವಂತರು ಪ್ರವಾಸ ಮಾಡಿದುದರಿಂದ ಭಾರತಕ್ಕೆ ೧ ಕೋಟಿ ರೂ. ಬೆಲೆಬಾಳುವಷ್ಟು ಡಾಲರ್ ವಿನಿಮಯ ದೊರಕಿತೆಂದೂ ಹೇಳಲಾಗಿದೆ.

ಡಕ್ಕಾ ಮಸ್ಲಿನ್ ಬಟ್ಟೆ ತಯಾರಿಕೆ ಪ್ರದರ್ಶನ

ದೆಹಲಿಯಲ್ಲಿ ಮುಂದಿನ ತಿಂಗಳು ೩ನೇ ತಾರೀಖು ನಡೆಯಲಿರುವ ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಪ್ರದರ್ಶನದಲ್ಲಿ ಇತಿಹಾಸ ಪ್ರಸಿದ್ಧ ಡಕ್ಕಾ ಮಸ್ಲಿನ್ ಬಟ್ಟೆಯ ತಯಾರಿಕೆಯನ್ನು ಪ್ರದರ್ಶಿಸಲಾಗುವುದು. ಇದು ಕೇವಲ ಶತಕಾಲದ ಕೈಗಾರಿಕೆಯಲ್ಲವೆಂದೂ, ಈಗಲೂ ಭಾರತೀಯರ ವೃದ್ಧ ಮಹಿಳೆಯರು ಗ್ರಾಮಗಳಲ್ಲಿ ಈ ಕಲೆಯನ್ನು ಉದ್ಧರಿಸಿಕೊಂಡು ಬರುತ್ತಿರುವರೆಂದೂ ಹೇಳಲಾಗಿದೆ.

ಚಿನ್ನದ ಗಣಿಯ ರಾಷ್ಟ್ರೀಕರಣವೇ ?

ಕೋಲಾರದ ಚಿನ್ನದ ಗಣಿಯಿಂದ ಸರಕಾರಕ್ಕೆ ಆದಾಯವು ವರ್ಷ ವರ್ಷೇ ಕಡಮೆಯಾಗುತ್ತಿದೆಯೆಂದೂ, ಆಡಳಿತ ವರ್ಗಲಿವರು ಸರ್ಕಾರದೊಡನೆ ಸಹಕರಿಸುತ್ತಿಲ್ಲವೆಂದೂ, ಆದ್ದರಿಂದ ಅವಶ್ಯಕ ಬಿದ್ದರೆ ಅದನ್ನು ರಾಷ್ಟ್ರೀಕರಣ ಮಾಡಲು ಕೇಂದ್ರ ಸರ್ಕಾರದಲ್ಲಿ ಒತ್ತಾಯ ಮಾಡಲಾಗುವುದೆಂದೂ ಮುಖ್ಯಮಂತ್ರಿಗಳು ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ಸಹಸ್ರ ಚಂಡಿ ಮಹಾಯಾಗ

ಮೈಸೂರು ೧೬

ಲೋಕ ಕಲ್ಯಾಣಾರ್ಥವಾಗಿ ಇದೇ ೧೩ನೇ ತಾರೀಖಿನಿಂದ ಮೈಸೂರು ಚಾಮುಂಡಿ ಬೆಟ್ಟದ ಮೇಲೆ ಶ್ರೀ ಸಹಸ್ರ ಚಂಡೀ ಮಹಾಯಾಗವು ನಡೆಯುತ್ತಿರುವುದು ಸರಿಯಷ್ಟೆ. ಇದೇ ೧೮ನೇ ತಾರೀಖು ಗುರುವಾರ ಮಧ್ಯಾಹ್ನ ೧೨-೩೩ ಘಂಟೆಗೆ ಪೂರ್ಣಾಹುತಿ ಮತ್ತು ಮಹಾಮಂಗಳಾರತಿಯೊಡನೆ ಯಾಗವು ಸಮಾಪ್ತಿಯಾಗುವುದರಿಂದ ಆ ದಿವಸ ಸಮಸ್ತರೂ ಚಾಮುಂಡಿಬೆಟ್ಟಕ್ಕೆ ಬಂದು ಯಾಗ ಮಹೋತ್ಸವದಲ್ಲಿ ಭಾಗಿಗಳಾಗಿ, ಪ್ರಸಾದವನ್ನು ಸ್ವೀಕರಿಸಿ ಜಗನ್ಮಾತೆಯ ಕೃಪೆಗೆ ಪಾತ್ರರಾಗಬೇಕೆಂದು ಮಹಾಯಾಗದ ಸಮಿತಿಯವರು ಪ್ರಾರ್ಥಿಸಿರುತ್ತಾರೆ.

ವಜ್ರ ಮಹೋತ್ಸವ

ಮೈಸೂರು ೧೬

ಮೈಸೂರು ಮಹಾರಾಜಾ ಕಾಲೇಜಿನ ಇತಿಹಾಸ ಸಂಘದ ವಜ್ರ ಮಹೋತ್ಸವವನ್ನು ನಾಳೆ ಸಂಜೆ ೫-೧೫ ಕ್ಕೆ ಶ್ರೀಮನ್ಮಹಾರಾಜರವರು ಉದ್ಘಾಟಿಸುವರು.

ಕನ್ನಡದಲ್ಲಿ ಕೋರ್ಟು ವ್ಯವಹಾರ

ಮೈಸೂರಿನ ಕೋರ್ಟುಗಳ ವ್ಯವಹಾರವೆಲ್ಲವನ್ನೂ ಕನ್ನಡದಲ್ಲೇ ನಡೆಸಬೇಕೆಂದು ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ವಿಧಾನ ಪರಿಷತ್ತಿನಲ್ಲಿ ನಿರ್ಣಯವೊಂದನ್ನು ನಿನ್ನೆ ಮಂಡಿಸಿದರು ಕನ್ನಡದಲ್ಲೇ ಸಾಕ್ಷ್ಯ ರಿಕಾರ್ಡು ಮಾಡಿಕೊಳ್ಳಬೇಕೆಂದು ಹೈಕೋರ್ಟಿಗೆ ತಿಳಿಸುವುದಾಗಿಯೂ, ಆದರೆ ಆಡಳಿತ ವ್ಯವಹಾರವನ್ನು ಕನ್ನಡದಲ್ಲಿ ನಡೆಸಲು ತೊಂದರೆಯಿದೆಯೆಂದೂ ನ್ಯಾಯಾಂಗ ಸಚಿವರು ತಿಳಿಸಿದರು. ಅದರಮೇಲೆ ನಿರ್ಣಯ ವಾಪಸಾಯಿತು.

ಕನ್ನಡ ಶಿಕ್ಷಣ ಮಧ್ಯಮ

ಬಳ್ಳಾರಿಜಿಲ್ಲೆಯ ಏಳು ತಾಲ್ಲೂಕುಗಳಲ್ಲಿರುವ ಎಲ್ಲ ಹೈಸ್ಕೂಲುಗಳಲ್ಲೂ ಕನ್ನಡ ಶಿಕ್ಷಣ ಮಾಧ್ಯಮವನ್ನು ಬರುವ ಸಾಲಿನಿಂದ ಜಾರಿಗೆ ತರಲಾಗುವುದೆಂದು ಸಂಸ್ಥಾನದ ಮುಖ್ಯ ವಿದ್ಯಾಧಿಕಾರಿಗಳು ತಿಳಿಸಿದ್ದಾರೆ.

ವಿದ್ಯುಚ್ಛಕ್ತಿ ಮೇಲಿನ ಹೆಚ್ಚಿನ ತೆರಿಗೆ ಮಸೂದೆ ಅಂಗೀಕಾರ

ಬೆಂಗಳೂರು ೧೬

ಕೈಗಾರಿಕೆಗಳಿಗೆ ಸರಬರಾಜಾಗುವ ವಿದ್ಯುಚ್ಛಕ್ತಿ ಮೇಲೆ ಸುಂಕವನ್ನು ಶೇಕಡ ೧೦ ರಿಂದ ೨೦ಕ್ಕೆ ಹೆಚ್ಚಿಸುವ ತಿದ್ದುಪಡಿ ಮಸೂದೆಯು ನಿನ್ನೆ ಶಾಸನಸಭೆಯಲ್ಲಿ ಬಹುಮತದಿಂದ ಅಂಗೀಕೃತವಾಯಿತು. ಇದರಿಂದ ಸರ್ಕಾರಕ್ಕೆ ೧೨ ಲಕ್ಷ ರೂ ವರಮಾನ ಬರುವುದು.

ಪಾಕೀಸ್ತಾನದಲ್ಲಿ ಉಳಿತಾಯ ಬಡ್ಜೆಟ್

ಪಾಕೀಸ್ತಾನದಲ್ಲಿ ೧೯೫೪--೫೫ ನೇ ಸಾಲಿನ ಬಡ್ಜೆಟ್ಟು ೨.೩೧ ಕೋಟಿ ಉಳಿತಾಯವೆಂದೂ, ಒಟ್ಟು ೧೧೩.೬೮ ಕೋಟಿ ಆದಾಯವಿದ್ದು, ಖರ್ಚು ೧೧೧.೩೩ ಕೋಟಿ ರೂ. ಎಂದು ಹೇಳಲಾಗಿದೆ

ಚೀಣಾದ ಮೇಲಿನ ಧಾಳಿಗೆ ವಿರೋಧ

ಕಮ್ಯೂನಿಸ್ಟ್ ಚೀಣಾದ ಮೇಲೆ ಧಾಳಿ ನಡೆಸುವುದಾಗಿ ಫಾರ್ಮೋಸಾದಲ್ಲಿರುವ ರಾಷ್ಟ್ರೀಯ. ಚೀಣಾ ಪ್ರಧಾನಿಯವರು ತಿಳಿಸಿರುವುದನ್ನು ಬ್ರಿಟಿಷ್ ಸರ್ಕಾರ ವಿರೋಧಿಸಿದೆಯೆಂದು ಹೇಳಲಾಗಿದೆ

ಅಕ್ಕಿ ಹತೋಟಿ ರದ್ದು

ಇದೇ ೨೧ ನೇ ತಾರೀಖಿನಿಂದ ಬೊಂಬಾಯಿ ಪ್ರಾಂತ್ಯದಲ್ಲಿ ಅಕ್ಕಿ ಹತೋಟಿಯನ್ನು ಪೂರ್ಣವಾಗಿ ತೆಗೆದು ಹಾಕಲಾಗಿದೆ. ಆದರೆ ೧೧ ನಗರಗಳಲ್ಲಿ ಮಾತ್ರ ಈಗಿರುವಂತೆಯೇ ಹತೋಟಿ ಮುಂದುವರಿಯುತ್ತಿದೆ.

ತಾನುಪಿಳ್ಳೆ ಟಿ. ಸಿ. ಮುಖ್ಯಮಂತ್ರಿ

ತಿರುವಾಂಕೂರು-ಕೊಚ್ಚಿ ಪ್ರಾಂತ್ಯದ ಮುಖ್ಯಮಂತ್ರಿಯನ್ನಾಗಿ ಅಲ್ಲಿಯ ರಾಜಪ್ರಮುಖರು ಪ್ರಜಾಸೋಷಲಿಸ್ಟ್ ನಾಯಕ ಶ್ರೀ ಪಟ್ಟಂ ತಾನುಪಿಳ್ಳೆಯವರನ್ನು ನೇಮಿಸಿದ್ದಾರೆ. ಅವರು ಈದಿನ ತಮ್ಮ ಅಧಿಕಾರವನ್ನು ವಹಿಸಿಕೊಂಡರು. ಇತರ ಎಲ್ಲಾ ಪಕ್ಷಗಳ ಸಹಕಾರವನ್ನು ಪಡೆದು ಸುಭದ್ರ ಸರ್ಕಾರವನ್ನು ಅವರು ರಚಿಸುವುದಾಗಿ ತಮ್ಮ ನೇಮಕವಾದಮೇಲೆ ತಿಳಿಸಿದ್ದಾರೆ.

ಆಲೋಚನೆ ಮಾಡುವ ಯಂತ್ರ

ಮೌಂಟ್ ಹೋಲಿಯೋಕ್ ಕಾಲೇಜಿನ ತತ್ವಶಾಸ್ತ್ರ ಪ್ರಾಧ್ಯಾಪಕರೊಬ್ಬರು 'ಆಲೋಚನೆ ಮಾಡುವ' ಯಂತ್ರವೊಂದನ್ನು ಕಂಡುಹಿಡಿದಿದ್ದಾರೆ. ಮೂಲಭೂತ ಸಾಂಕೇತಿಕ ತರ್ಕಶಾಸ್ತ್ರದ ಯಾವುದೇ ಸಮಸ್ಯೆಯನ್ನಾದರೂ ಇದು ಪರಿಹರಿಸಬಲ್ಲದೆಂದು ಈ ಪ್ರಾಧ್ಯಾಪಕರು ಹೇಳುತ್ತಾರೆ. ಯಾವ ರೀತಿ ಸಂಕಲನ ಯಂತ್ರವು ಲೆಕ್ಕದ ಸಮಸ್ಯೆಗಳನ್ನು ಪರಿಹರಿಸುವುದೋ ಅದೇರೀತಿ ಈ ಯಂತ್ರವು ತರ್ಕಶಾಸ್ತ್ರದ ಸಮಸ್ಯೆಗಳನ್ನು ಬಿಡಿಸುವುದೆಂದು ಪ್ರಾಧ್ಯಾಪಕ ರೋಜರ್ ಡಬ್ಲ್ಯು ಹಾಲ್ಸ್‌ನವರು ಹೇಳುತ್ತಾರೆ. ಈ ಯಂತ್ರವು ಸಾಂಕೇತಿಕ ತರ್ಕಶಾಸ್ತ್ರದ ಜಟಿಲ ಸಮಸ್ಯೆಗಳನ್ನು ಮನುಷ್ಯನ ಮಿದುಳಿಗಿಂತಲೂ ಹೆಚ್ಚು ವೇಗವಾಗಿ ಮತ್ತು ನಿಷ್ಕೃಷ್ಟವಾಗಿ ಪರಿಹರಿಸಬಲ್ಲದು.

ಪಾನನಿರೋಧ ನೀತಿ ಮಾರ್ಪಾಟು

ಪಾನನಿರೋಧ ನೀತಿಯು ಬದಲಾವಣೆ ವಿಷಯದಲ್ಲಿ ಆಂಧ್ರದಲ್ಲಿ ರಾಮಮೂರ್ತಿ ಸಮಿತಿಯು ಮಾಡಿರುವ ಸಲಹೆಗಳಲ್ಲಿ ಪಾನನಿರೋಧ ಮೂಲಭೂತ ತತ್ವಕ್ಕೆ ಚ್ಯುತಿ ತರದಂತಹ ಬದಲಾವಣೆಗಳನ್ನು ಅಂಗೀಕರಿಸಲು ಆಂಧ್ರ ಸರ್ಕಾರವು ಸಿದ್ಧವಿರುವುದಾಗಿ ಅಲ್ಲಿಯ ಉಪ ಮುಖ್ಯಮಂತ್ರಿ ಶ್ರೀ ಎನ್. ಸಂಜೀವರೆಡ್ಡಿಯವರು ಹೇಳಿದ್ದಾರೆ.

ಸಿಂಹಳ ಭಾರತೀಯರ ಅಂಗಡಿಗಳಿಗೆ ಬಹಿಷ್ಕಾರ ಹಾಕಬೇಕು

ಭಾರತೀಯರ ಪೌರಹಕ್ಕಿನ ಬಗ್ಗೆ ಸಿಂಹಳ-ಭಾರತಗಳೊಡನೆ ಆಗಿರುವ ಒಪ್ಪಂದವನ್ನು ವಿರೋಧಿಸಿ, ಸಿಂಹಳದಲ್ಲಿರುವ ಭಾರತೀಯರ ಅಂಗಡಿ ಮತ್ತು ವ್ಯಾಪಾರಗಳಿಗೆ ಸಾರ್ವತ್ರಿಕ ಬಹಿಷ್ಕಾರ ಹಾಕಬೇಕೆಂದು ಅಲ್ಲಿನ ಪಾರ್ಲಿಮೆಂಟ್ ಸದಸ್ಯ ಶ್ರೀ ಭಂಡಾರ ನಾಯಕೆಯವರು ಕರೆ ಇತ್ತಿದ್ದಾರೆ.

ಪೊಟ್ಟಿ ಶ್ರೀರಾಮುಲು ಜನ್ಮ ದಿನ

ಆಂಧ್ರ ಪ್ರಾಂತ್ಯ ರಚನೆಗಾಗಿ ತಮ್ಮ ತನುವನ್ನೇ ನೀಗಿದ ಶ್ರೀ ಪೊಟ್ಟಿ ಶ್ರೀರಾಮುಲುರವರ ಜನ್ಮದಿನವಾದ ಇಂದು ಆಂಧ್ರ ಪ್ರಾಂತ್ಯಾದ್ಯಂತ ರಜಾ ದಿನವನ್ನಾಗಿ ಅಲ್ಲಿಯ ಸರ್ಕಾರವು ಘೋಷಿಸಿದೆ.

ಜಮ್ಮುವಿಗೆ ರಾಷ್ಟ್ರಾಧ್ಯಕ್ಷರ ಭೇಟಿ

ಕಾಶ್ಮೀರದ ಛಳಿಗಾಲದ ರಾಜಧಾನಿಯಾದ ಜಮ್ಮು ನಗರಕ್ಕೆ ರಾಷ್ಟ್ರಾಧ್ಯಕ್ಷರು ಮುಂದಿನ ತಿಂಗಳಿನಲ್ಲಿ ಭೇಟಿ ಕೊಡುವರೆಂದು ತಿಳಿಯಬರುತ್ತದೆ. ಆಗ್ಗೆ ಅಲ್ಲಿಯ ರಾಜ್ಯಾಂಗ ಸಭೆಯನ್ನುದ್ದೇಶಿಸಿ ಅವರು ಭಾಷಣ ಮಾಡುವ ನಿರೀಕ್ಷೆಯಿದೆ.

ಭಾರತಿಯರಿಗೆ ಮುಸ್ಲಿಂ ಉಡುಪು

ಪಾಕೀಸ್ಥಾನಕ್ಕೆ ಇರಾಕ್ ದೊರೆಯ ಭೇಟಿ ಸಂಬಂಧದಲ್ಲಿ ಅವರಿಗಿತ್ತ ಸತ್ಕಾರ ಕೂಟ ಮತ್ತು ಇತರ ಸಮಾರಂಭಗಳಿಗೆ ಆಹ್ವಾನಿತರರೆಲ್ಲರು ಮುಸ್ಲಿಂ ಉಡುಪಿನಲ್ಲಿಯೇ ಬರಬೇಕೆಂದು ಅಲ್ಲಿಯ ಸರ್ಕಾರ ಮಾಡಿದ್ದ ತೀರ್ಮಾನವನ್ನು ಪ್ರತಿಭಟಿಸಿ, ಪಾರ್ಲಿಮೆಂಟಿನ ವಿರೋಧ ಪಕ್ಷದ ಭಾರತೀಯ ಸದಸ್ಯರು ಈ ಸಮಾರಂಭಗಳಿಗೆ ಬಹಿಷ್ಕಾರ ಹಾಕಿದ್ದರು. ಈ ಸಂಬಂಧದಲ್ಲಿ ವಿರೋಧ ಪಕ್ಷದ ಶ್ರೀ ಎಸ್. ಸಿ. ಚಟ್ಟೋಪಾಧ್ಯಾಯರವರು ಒಂದು ಹೇಳಿಕೆಯಿತ್ತು ಈ ರೀತಿ ಉಡುಪಿನ ನಿರ್ಧಾರ ಮಾಡಿ ಹಿಂದುಗಳಿಗೆ ಪಾಕ್ ಸರ್ಕಾರವು ವಿಶೇಷ ಅಗೌರವ ಮಾಡಿದಂತಾಗಿದೆಯೆಂದೂ ಹಿಂದೆ ತಾವು ಕಾಮನ್ವೆಲ್ತ್ ಸಮ್ಮೇಳನ, ಲಂಡನ್ ರಾಜರ ಬಕಿಂಗ್‌ಹ್ಯಾಂ‌ರವ ನೆಯಲ್ಲಿ ನಡೆದ ಸತ್ಕಾರ ಕೂಟಗಳಿಗೆ ಸಹ ತಮ್ಮ ಬಂಗಾಳ ಉಡುಪಿನಲ್ಲಿಯೇ ಹೋಗಿದ್ದರೆಂದೂ ಪಾಕೀಸ್ಥಾನ ಸರ್ಕಾರದ ಈ ನೀತಿಯು ಖಂಡನಾರ್ಹವೆಂದೂ ಹೇಳಿದ್ದಾರೆ.

ಪಾಕ್‌ನಲ್ಲೂ ಪಾನನಿರೋಧ ವಿಸ್ತರಣೆ

ಪಾಕೀಸ್ತಾನದಲ್ಲಿ ಒಂದು ಪ್ರಾಂತ್ಯವಾದ ಸಿಂಧ್‌ನಲ್ಲಿ ಪಾನನಿರೋಧ ಜಾರಿಗೆ ತರುವುದಾಗಿ ಅಲ್ಲಿಯ ಮುಖ್ಯಮಂತ್ರಿ ಹೇಳಿರುವರು ಈಗಾಗಲೆ ಪಾಕೀಸ್ತಾನ ಪಂಜಾಬ್, ವಾಯವ್ಯ ಗಡಿನಾಡು ಮತ್ತು ಪೂರ್ವ ಪಾಕೀಸ್ತಾನ ಪ್ರಾಂತ್ಯಗಳಲ್ಲಿ ಪಾನನಿರೋಧ ಜಾರಿಯಲ್ಲಿದೆ. ಕರಾಚಿಯಲ್ಲಿಯೂ ಇದನ್ನು ಜಾರಿಗೆ ತರುವ ವಿಷಯ ಪರಿಶೀಲನೆಯಲ್ಲಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೧೫—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೮—	೨೩—೧೨
ಎಳ್ಳು	೬೭—೧೪	—
ಹರಳು	೨೬—	೩೩—
ಹುಚ್ಚೆಳ್ಳು	೩೬—೮	೪೩—೧೦
ಹೊಂಗೆಬೀಜ	೧೭—	೨೨—೧೨
ಹುಣಸೆಬೀಜ	೧೩—೪	೧೩—೮
ಹುರುಳಿ	೨೩—	೨೯—೨
ಹೆಸರು	೩೬—೧೪	೪೧—೮
ಅಲಸಂದೆ	೩೬—೪	೩೯—೬
ಉದ್ದು	೬೦—	—
ಅವರೆ	—	—
ಕೊತ್ತಂಬರಿ	೨೫—	೩೦—೨
ಕಡಲೆ	೪೪—೪	—
ಸೆಣಬು	—	—
ತೊಗರಿ	೨೪—೨	೨೪—೧೦
ಕ॥ ಬೀಜ	—	—
ಹುಣಸೆಹಣ್ಣು	೭—೮	೯—೮
ಸೀಗೆಕಾಯಿ	೪—೧	೪—೧೦
ಮೆಣಸಿನಕಾಯಿ	೨೫—	೨೭—
ಬೆಲ್ಲ	—	—
ತೆಂಗಿನಕಾಯಿ	೧೫೫—	೩೩೧—

ಕೇಂದ್ರ ವಾರ್ತಾ ಉಪ ಕಾರ್ಯಾಲಯ

ಬೆಂಗಳೂರು ೧೫

ಇಂಡಿಯಾ ಸರ್ಕಾರದ ವಾರ್ತಾ ಮತ್ತು ಆಕಾಶವಾಣಿ ಶಾಖೆಯ ಸುದ್ದಿ ವಿಭಾಗದ ಉಪಕಾರ್ಯಾಲಯವು ಬೆಂಗಳೂರಿನ ಗಾಂಧಿನಗರದ ಮೊದಲನೆ ರಸ್ತೆಯ ನಂ. ೨೮ ಭವನದಲ್ಲಿ ಈ ದಿನದಿಂದ ತೆರೆಯಲ್ಪಟ್ಟಿದೆ.

ಭಾರತ ಸರ್ಕಾರದ ಚಟುವಟಿಕೆಗಳ ಸಂಬಂಧವಾದ ಸುದ್ದಿಗಳನ್ನು ತಿಳಿಸುವುದರ ಜೊತೆಗೆ ಕನ್ನಡ ಪತ್ರಿಕೆಗಳ ಸೌಕರ್ಯಕ್ಕಾಗಿ ಕನ್ನಡ ಭಾಷೆಯಲ್ಲಿ ಭಾರತ ಸರ್ಕಾರದ ಪ್ರಕಟಣೆಗಳನ್ನೂ ಇತರ ಸುದ್ದಿಗಳನ್ನೂ ಈ ಕಾರ್ಯಾಲಯದಿಂದ ಒದಗಿಲಾಗುವುದು.

ಕೃತಕ ಗೊಬ್ಬರ ಬೆಲೆ ಇಳಿತಾಯ

ಕೃತಕ ಗೊಬ್ಬರವನ್ನು ಹೆಚ್ಚಾಗಿ ರೈತರು ಉಪಯೋಗಿಸಲು ಅದರ ಬೆಲೆಯನ್ನು ಭಾರತ ಸರ್ಕಾರವು ಇಳಿಸಿದೆ. ಪ್ರಾಂತ್ಯಗಳಲ್ಲಿ ಈ ಗೊಬ್ಬರವನ್ನು ಟನ್ನಿಗೆ ೩೫೦ ರಿಂದ ೪೫೦ ರೂ. ಗಳ ವರೆಗೆ ಮಾರಲಾಗುತ್ತಿತ್ತು ಈಗ ೩೪೫ ರೂ. ಗಳಿಗೆ ಮಾರದಂತೆ ಮಾರಲಾಗುತ್ತದೆ.

ಭಾರತಕ್ಕೆ ೩೦೦೦ ಟನ್ ಉಚಿತ ಅಕ್ಕಿ

ವಿಶ್ವಸಂಸ್ಥೆಯ ಮಕ್ಕಳ ನಿಧಿಯಿಂದ ೨೩ ಲಕ್ಷ ರೂಪಾಯಿಗಳ ಬೆಲೆಯ ೩೦೦೦ ಟನ್ ಅಕ್ಕಿಯನ್ನು ಭಾರತಕ್ಕೆ ನಿಗದಿ ಮಾಡಲಾಗಿದೆ ಇದನ್ನು ಅಭಾವ ಮತ್ತು ಕ್ಷಾಮ ಪ್ರದೇಶಗಳಲ್ಲಿರುವ ಮಕ್ಕಳಿಗೆ ಮತ್ತು ತಾಯಂದರಿಗೆ ಉಚಿತವಾಗಿ ಹಂಚಲಾಗುತ್ತದೆ.

ಜಪಾನಿಗೆ ಪ್ರಕಾಶಂ ಭೇಟಿ

ಜಪಾನಿನಲ್ಲಿ ಗೃಹಕೈಗಾರಿಕಾಭಿವೃದ್ಧಿ ಮತ್ತು ಭೂ ಸಮಸ್ಯೆ ಪರಿಹಾರ ವಿಷಯಗಳನ್ನು ಪರಿಶೀಲಿಸಲು ಅಲ್ಲಿಗೆ ಆಂಧ್ರ ಮುಖ್ಯಮಂತ್ರಿ ಶ್ರೀ ಟಿ. ಪ್ರಕಾಶಂರವರು ಭೇಟಿ ಕೊಡುವರೆಂದು ತಿಳಿಯಬರುತ್ತದೆ.

ಅಮೆರಿಕಾ ಸೈನ್ಯ ಕೊರಿಯಾದಿಂದ ವಾಪಸ್ಸು

ಕೊರಿಯಾ ಯುದ್ಧದಲ್ಲಿ ಭಾಗವಹಿಸಿದ್ದ ಅಮೆರಿಕಾ ಸೈನ್ಯದ ೧೦೦೦ ಮಂದಿಯ ಮೊದಲನೆ ತಂಡವು ಅಲ್ಲಿಂದ ಸ್ವದೇಶಕ್ಕೆ ವಾಪಸ್ಸು ಹೊರಟಿದೆ.

೨೨ ಗಂಟೆಗಳ ಕಾಲ ಪಾರ್ಲಿಮೆಂಟ್ ಅಧಿವೇಶನ

ಬ್ರಿಟನ್ನಿನಲ್ಲಿ ಕಳೆದ ಶುಕ್ರವಾರ ಪಾರ್ಲಿಮೆಂಟಿನಲ್ಲಿ ರಕ್ಷಣಾ ಬಡ್ಜೆಟ್ ಚರ್ಚೆಯ ಅಧಿವೇಶನವು ಏಕಪ್ರಕಾರ ೨೨ಗಂಟೆ ೨೨ ನಿಮಿಷಕಾಲ ನಡೆಯಿತು.

ಶಾಸನ ಸಭಾಧ್ಯಕ್ಷರಿಗೆ ಶ್ರೀ ತಗಡೂರ್‌ರವರ ತಂತಿ

ಮೈಸೂರು ೧೬

ಹೊಟೇಲ್ ವ್ಯಾಪಾರದ ಮೇಲೆ ಸೇಲ್ಸ್ ಟ್ಯಾಕ್ಸ್ ವಿಧಿಸಬೇಕೆಂದಿರುವುದು ರಾಜ್ಯಾಂಗದ ೧೯ (ಜಿ)ಮತ್ತು ೨೭೭ ಕ್ಲಾಸುಗಳ ವಿರೋಧವಾದ್ದರಿಂದ ಈ ರೀತಿ ಕಾನೂನು ಮಾಡಲು ಶಾಸನ ಸಭೆಗೆ ಅಧಿಕಾರ ವಿಲ್ಲವಾದ್ದರಿಂದ ಕಾನೂನು ಮಾಡಬೇಕೆಂದಿರುವುದನ್ನು ನಿಲ್ಲಿಸಬೇಕೆಂದೂ ಇಲ್ಲದಿದ್ದರೆ ತಾವು ರಿಟ್ ದಾಖಲ್ ಮಾಡುವುದಾಗಿ ಶ್ರೀ ತಗಡೂರು ರಾಮಚಂದ್ರರಾಯರು ಶಾಸನಸಭಾ ಸ್ಪೀಕರ್‌ರವರಿಗೆ ಇತ್ತಿರುವ ತಂತಿಯಲ್ಲಿ ತಿಳಿಸಿರುವರು.

ಅವರು ಇದರ ಪ್ರತಿಯನ್ನು ಮುಖ್ಯಮಂತ್ರಿಯವರಿಗೆ ಮತ್ತು ವಿರೋಧ ಪಕ್ಷದ ನಾಯಕರಿಗೆ ಕಳುಹಿಸಿರುವರು.

ಸಂಬಳಕ್ಕೆ ತುಟ್ಟಿಭತ್ಯ ಸೇರಿಸುವ ವಿಷಯ

ಮೈಸೂರು ಸಂಸ್ಥಾನದ ಕೆಳದರ್ಜೆ ನೌಕರರ ತುಟ್ಟಿಭತ್ಯದಲ್ಲಿ ಅರ್ಧಭಾಗವನ್ನು ಸಂಬಳದಲ್ಲಿ ಸೇರಿಸಿ ಉಳಿದುದನ್ನು ತುಟ್ಟಿಭತ್ಯವಾಗಿ ಕೊಡಬೇಕೆಂಬ ಶ್ರೀ ಎ ಎನ್. ರಾಮರಾಯರ ನಿರ್ಣಯಕ್ಕೆ ವಿದ್ಯಾಸಚಿವರು ವಿಧಾನಪರಿಷತ್ತಿನಲ್ಲಿ ಉತ್ತರವಿತ್ತು, ಅದನ್ನು ಸಹಾನುಭೂತಿಯಿಂದ ಪರಿಶೀಲಿಸುವುದಾಗಿ ಭರವಸೆ ಇತ್ತುದರಿಂದ ಅದನ್ನು ವಾಪಸ್ಸು ಪಡೆಯಲಾಯಿತು.

೪೭೬೫ ಕೋಟಿ ಗಜ ಬಟ್ಟೆ ಉತ್ಪತ್ತಿ

ಭಾರತದಲ್ಲಿ ಒಟ್ಟು ೪೭೬೫ ಕೋಟಿ, ೩೦ ಲಕ್ಷ ಗಜಗಳಷ್ಟು ಮಿಲ್ ಬಟ್ಟೆ ೧೯೫೩ ರಲ್ಲಿ ತಯಾರಾಯಿತೆಂದೂ, ಅದರ ಪೈಕಿ ಎಪ್ಪತ್ತುಮರೆ ಕೋಟಿ ಗಜಗಳಷ್ಟು ಬಟ್ಟೆಯನ್ನು ಪರದೇಶಗಳಿಗೆ ರಫ್ತು ಮಾಡಲಾಯಿತೆಂದೂ ತಿಳಿಸಲಾಗಿದೆ.

ಬರ್ಮಾಕ್ಕೆ ವಿಜಯಲಕ್ಷ್ಮಿಯವರ ಭೇಟಿ

ವಿಶ್ವಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿಯವರು ಮುಂದಿನ ಮೇ ಮಾಹೆಯಲ್ಲಿ ಬರ್ಮಾ ಮತ್ತು ಇಂಡೋನೇಷ್ಯಾಗಳಿಗೆ ಭೇಟಿ ಕೊಡಲು ಒಪ್ಪಿರುವುದಾಗಿ ತಿಳಿಯಬರುತ್ತದೆ.

.... ರಣಜಿತ್ ....
18–3–54 ರಿಂದ ಅಮೋಘ ಪ್ರಾರಂಭ
ಶ್ರೀ ಚೈತನ್ಯ ಮಹಾಪ್ರಭು
[ಹಿಂದಿ]
ಪಾತ್ರ:-ಭರತ್‌ಭೂಷಣ್, ದುರ್ಗಾಕೋಟೆ ಮತ್ತು ಹಿಮಿನಾ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋ॥ ೫೭೪ ರಿಜಿಸ್ಟರ್ ನಂ. ಎಂ. ೫೧೦೮

ಸಮಾಚಾರ

ದಿನಪತ್ರಿಕೆ ಸಂಪುಟ ೪ ಸಂಚಿಕೆ ೧೬೭

೧೯-೩-೧೯೫೪ ನೇ ಶುಕ್ರವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಅಕ್ಕಿ ಬೆಲೆ ಇಳಿಯುವುದೆ

ಬೆಂಗಳೂರು ೧೯

ಮೈಸೂರು ಸಂಸ್ಥಾನವು ಅಕ್ಕಿ ವಿಷಯದಲ್ಲಿ ಈ ವರ್ಷ ಸ್ವಪರಿಪೂರ್ಣತೆಯನ್ನು ಹೊಂದಿರುವೆಯೆಂದೂ, ಭತ್ತವನ್ನು ರೈತರಿಂದ ಸರ್ಕಾರ ಕೊಂಡುಕೊಳ್ಳುವ ಬೆಲೆಯನ್ನು ಈಗ ಕಡಮೆ ಮಾಡಿರುವುದರಿಂದ, ಅಕ್ಕಿಯ ಬೆಲೆಯನ್ನು ಇನ್ನೂ ಸುಲಭ ಬೆಲೆಗೆ ಮಾರಲಾಗುವ ವಿಷಯವನ್ನು ಸರ್ಕಾರ ಪರಿಶೀಲಿಸುವುದೆಂದು ಆಹಾರ ಸಚಿವರು ಶಾಸನಸಭೆಯಲ್ಲಿ ಭರವಸೆ ಇತ್ತಿದ್ದಾರೆ.

ಈಶ್ವರ ವಿಗ್ರಹದ ಪತ್ತೆ

ಹೊಳೇನರಸೀಪುರಕ್ಕೆ ೮ ಮೈಲಿ ದೂರದಲ್ಲಿರುವ ಶ್ರೀ ಮಾವಿನಕೆರೆಬೆಟ್ಟದ ಉತ್ತರ ಭಾಗದ ಕಿಂದರಹಳ್ಳಿ ಕಡೆಯಲ್ಲಿ ಕಲ್ಲು ಕೆಲಸಮಾಡುವ ಹರಿಜನರು ಒಂದು ಬಂಡೆಯನ್ನು ಒಡೆಯಲು ಅದನ್ನು ಉರುಳಿಸಿದಾಗ, ಅದರ ಕೆಳಗಡೆ ತಲೆಯ ಜಟೆಯಲ್ಲಿ ಗಂಗೆಯನ್ನು ಧರಿಸಿದ ಒಂದು ಬೆಳ್ಳಿಯ ಈಶ್ವರ ವಿಗ್ರಹ, ಅದರ ಎರಡು ಪಾರ್ಶ್ವದಲ್ಲೂ ಲಿಂಗಾಕಾರದ ಎರಡು ಕಲ್ಲುಗಳೂ, ಮತ್ತು ಧೂಪಾರತಿಗಳು, ಒಂದು ತ್ರಿಶೂಲ ಮತ್ತು ಒಂದು ತಾಂಬ್ರದ ಚೊಂಬು ಪತ್ತೆಯಾಯಿತೆಂದೂ ವರದಿಯಾಗಿದೆ.

ಆ ಚೊಂಬಿನಿಂದ ನೀರನ್ನು ತರಲು ಒಬ್ಬ ಹರಿಜನ ಬಾಲಿಕೆಯೊಬ್ಬಳನ್ನು ಕೆರೆಗೆ ಕಳುಹಿಸಿದಾಗ ನೀರನ್ನು ತುಂಬಿದಕೂಡಲೇ ಆಕೆಯನ್ನು ನೀರಿನೊಳಕ್ಕೆ ಎಳೆಯುವ ಪ್ರಸಂಗ ನಡೆದು, 'ಸಾಧು ಸಾಧು' ಎಂದು ರಕ್ತಕಾರಿ ಆಕೆಯು ಪ್ರಜ್ಞೆತಪ್ಪಿ ಬಿದ್ದಳೆಂದೂ, ಚಿಕಿತ್ಸೆನಡೆಸಿದ ಮೇಲೆ ಆಕೆಯು ಆರೋಗ್ಯವಾಗಿದ್ದಾಳೆಂದೂ ಹೇಳಲಾಗಿದೆ.

ಈಗ ಅಲ್ಲಿನ ವೀರಶೈವ ಮತಸ್ತರು ಆ ಜಾಗದಲ್ಲಿ ಪೂಜೆ ವ್ಯವಸ್ಥೆ ಮಾಡಿದ್ದಾರೆ.

ಕಾಶ್ಮೀರ ಪರಿಹಾರಕ್ಕೆ ಇಂಡೋನೇಷ್ಯ ಮಧ್ಯಸ್ಥಿಕೆ?

ಭಾರತ ಮತ್ತು ಪಾಕೀಸ್ತಾನಗಳ ನಡುವೆ ಇರುವ ಕಾಶ್ಮೀರ ವಿವಾದವನ್ನು ಇತ್ಯರ್ಥಗೊಳಿಸಲು ಇಂಡೋನೇಷ್ಯಾವು ಮಧ್ಯಸ್ಥಿಕೆಯನ್ನು ವಹಿಸಲು ಯೋಚಿಸುತ್ತಲಿರುವುದಾಗಿ ವರದಿಯಾಗಿದೆ.

ಪತ್ರಿಕಾ ಆಕ್ಷೇಪಣಾ ತಿದ್ದುಪಡಿ ಮಸೂದೆ

ಪತ್ರಿಕೆ ಆಕ್ಷೇಪಣಾ ತಿದ್ದುಪಡಿ ಮಸೂದೆಗೆ ಪಾರ್ಲಿಮೆಂಟಿನ ಉಭಯ ಸಭೆಗಳು ಒಪ್ಪಿಗೆಯನ್ನಿತ್ತಿವೆ.

ನಗರದಲ್ಲಿ ಗೋಧಿ, ಜೋಳ ಸರಪರಾಜಿಲ್ಲ

ಸರ್ಕಾರಿ ಡಿಪೋದಲ್ಲಿ ದಾಸ್ತಾನು ಇಲ್ಲ

ಸಹಸ್ರ ಚಂಡೀಯಾಗ ಮುಕ್ತಾಯ

ಮೈಸೂರು ೧೯

ಚಾಮುಂಡಿ ಬೆಟ್ಟದ ಮೇಲೆ ಕಳೆದ ೧೩ ನೇ ತಾರೀಖಿನಿಂದ ನಡೆಯುತ್ತಿದ್ದ ಸಹಸ್ರ ಚಂಡೀ ಮಹಾಯಾಗದ ಪೂರ್ಣಾಹುತಿಯು ನಿನ್ನೆ ನಡೆಯಿತು.

ಈ ಸಮಾರಂಭಕ್ಕೆ ಶ್ರೀಮನ್ಮಹಾರಾಜರು ಮಧ್ಯಾಹ್ನ ೧ ಗಂಟೆಗೆ ದಯಮಾಡಿಸಿ, ಪ್ರಸಾದ ಸ್ವೀಕರಿಸಿದರು. ನಗರದ ಸಹಸ್ರಾರು ಜನರು ಯಾಗದ ಮುಕ್ತಾಯದ ಸಮಯದಲ್ಲಿ ಅಲ್ಲಿ ಸೇರಿದ್ದರು. ಎಲ್ಲ ಕೋವಿ.ದರಿಗೂ ಸಮಾರಾಧನೆ ನಡೆಯಿತು.

ಸುಪ್ರಸಿದ್ಧ ಶಿಲ್ಪಿಗಾರರ ಆಗಮನ

ಮೈಸೂರು ೧೯

ಪಂಜಾಬಿನ ಹೊಸ ರಾಜಧಾನಿ ಚಂಡೀಘರ್ ನಿರ್ಮಾಣದ ಮುಖ್ಯ ಶಿಲ್ಪಿಯಾದ ಶ್ರೀ ಮತಿ ಜೇನ್ ಬಿ. ಡ್ರೂರವರು ನಾಳೆ ಬೆಂಗಳೂರಿಗೆ ಆಗಮಿಸಿ, ಮಾರನೇ ದಿನ ರಾಜಧಾನಿಗೆ ಭೇಟಿ ಕೊಡುವರು. ಬೇಲೂರು, ಹಳೇಬೀಡು ಮುಂತಾದ ಪ್ರಾಚೀನ ಸ್ಥಳಗಳಿಗೂ ಅವರು ಭೇಟಿ ಕೊಡುವರು.

ಪಾಕೀಸ್ತಾನದ ಚುನಾವಣೆ

ವಿರೋಧ ಪಕ್ಷಕ್ಕೆ ಬಹುಮತ

ಪೂರ್ವಪಾಕೀಸ್ಥಾನದ ಮಹಾಚುನಾವಣೆಗಳಲ್ಲಿ ಇಲ್ಲಿಯವರೆಗೆ ಪ್ರಕಟವಾಗಿರುವ ೧೩೦ ಸ್ಥಾನಗಳ ಫಲಿತಾಂಶದಲ್ಲಿ ಸಂಯುಕ್ತ ವಿರೋಧ ಪಕ್ಷವು ೧೧೯ ಸ್ಥಾನಗಳನ್ನು ಮುಸ್ಲಿಂಲೀಗ್ ೪ ಮತ್ತು ಸ್ವತಂತ್ರರು ೭ ಸ್ಥಾನಗಳನ್ನು ಗಳಿಸಿದ್ದಾರೆ. ಅಲ್ಲಿಯ ಶಾಸನಸಭೆಯ ೨೩೭ ಸ್ಥಾನಗಳಪೈಕಿ ವಿರೋಧಪಕ್ಷವು ಈಗಾಗಲೇ ಅರ್ಧಕ್ಕಿಂತ ಹೆಚ್ಚು ಸ್ಥಾನ ಪಡೆದಂತಾಯಿತು.

ಹಿಂದಿನ ಮುಸ್ಲಿಂಲೀಗಿನ ನೂರುಲ್ ಅಮೀನರವರ ಮಂತ್ರಿಮಂಡಲದಲ್ಲಿ ಒಬ್ಬರೂ ಸಹ ಜಯಪಡೆದಿಲ್ಲ

ವಿವಾಹಿತ ಮಹಿಳೆಯರ ನೇಮಕ ನಿರ್ಬಂಧ ರದ್ದು

ಬೆಂಗಳೂರಿನಲ್ಲಿ ಇಂಡಿಯನ್ ಟೆಲಿಫೋನ್ ಕಾರ್ಖಾನೆಯಲ್ಲಿ ವಿವಾಹಿತ ಮಹಿಳೆಯರನ್ನು ನೇಮಿಸಿಕೊಳ್ಳಲು ಇದ್ದ ನಿರ್ಬಂಧವನ್ನು ಈಗ ತೆಗೆದುಹಾಕಲಾಗಿದೆ.

ಮೈಸೂರು ೧೯

ರೇಷನ್‌ದಾರರಿಗೆ ಕೊಡಲು ಜೋಳ ಮತ್ತು ಗೋಧಿ ದಾಸ್ತಾನು ಕೇವಲ ಒಂದು ವಾರಕ್ಕೆ ಆಗುವಷ್ಟು ಮಾತ್ರವಿದೆ. ಈ ದಾಸ್ತಾನು ಮುಗಿದನಂತರ ಅವುಗಳ ಸರಪರಾಜನ್ನು ನಿಲ್ಲಿಸಲಾಗುತ್ತದೆ. ಇನ್ನು ಮುಂದೆ ಅವುಗಳನ್ನು ಬಹಿರಂಗಪೇಟೆಯಲ್ಲಿ ಜನರು ಪಡೆಯಬೇಕೆಂದು ನಗರದ ರೇಷನಿಂಗ್ ಅಧಿಕಾರಿಗಳು ತಿಳಿಸಿದ್ದಾರೆ.

ಅಖಿಲಭಾರತ ಗ್ರಂಥಕರ್ತರ ಸಮ್ಮೇಳನ

ಅಖಿಲಭಾರತ ಗ್ರಂಥಕರ್ತರ ಸಮ್ಮೇಳನವು ಇದೇ ಏಪ್ರಿಲ್ ಮಾಹೆ ೧೬ನೇ ತಾರೀಖು ಅಣ್ಣಾಮಲೆ ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತದೆ. ಈ ಸಮ್ಮೇಳನವನ್ನು ಪ್ರಧಾನಿ ನೆಹರೂರವರು ಉದ್ಘಾಟಿಸುತ್ತಾರೆ. ಭಾರತ ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರು ಸಮ್ಮೇಳನದ ಅಧ್ಯಕ್ಷತೆ ವಹಿಸುತ್ತಾರೆ.

ಜವಳಿ ಕೈಗಾರಿಕೆ ಸಮ್ಮೇಳನ

ಬೊಂಬಾಯಿನಲ್ಲಿ ನಿನ್ನೆಯದಿನ ಅಖಿಲ ಭಾರತ ಜವಳಿ ಕೈಗಾರಿಕೆಯ ಸಮ್ಮೇಳನವನ್ನು ಕೇಂದ್ರ ಕೈಗಾರಿಕಾ ಸಚಿವ ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಉದ್ಘಾಟಿಸಿದರು. ಈ ಸಂಬಂಧದಲ್ಲಿ ಅಂತರರಾಷ್ಟ್ರೀಯ ಜವಳಿ ಪ್ರದರ್ಶನವನ್ನೂ ಅವರು ಪ್ರಾರಂಭಿಸಿದರು.

ಹಿರಿಯ ಶಾಸನಸಭೆ ಅನವಶ್ಯಕ

ಕೇಂದ್ರದಲ್ಲಿ ಹಿರಿಯಶಾಸನ ಸಭೆಯ ಅವಶ್ಯಕತೆಯೇ ಇಲ್ಲ ಅದನ್ನು ರದ್ದುಗೊಳಿಸಬೇಕೆಂಬ ಖಾಸಗಿ ನಿರ್ಣಯವೊಂದು ನಿನ್ನೆಯದಿನ ಪಾರ್ಲಿಮೆಂಟಿನಲ್ಲಿ ಶ್ರೀ ಗುರುಪಾದಸ್ವಾಮಿಯವರಿಂದ ಮಂಡಿಸಲ್ಪಟ್ಟು ಚರ್ಚೆಗೆ ಪ್ರಾರಂಭವಾಯಿತು.

ಪ್ರಾಂತ್ಯ ವಿಂಗಡನಾ ಸಮಿತಿಯ ಪ್ರವಾಸ

ಕೇಂದ್ರ ಸರ್ಕಾರವು ರಚಿಸಿರುವ ಪ್ರಾಂತ್ಯ ವಿಂಗಡನಾ ಸಮಿತಿಯು ಇದೇ ಮೇ ಮಾಹೆಯಲ್ಲಿ ದಕ್ಷಿಣ ಭಾರತದಲ್ಲಿ ಪ್ರವಾಸವನ್ನು ಕೈಗೊಳ್ಳುವುದೆಂದು ತಿಳಿಯಬರುತ್ತದೆ.

ಇತಿಹಾಸ ಸಂಘದ ವಜ್ರೋತ್ಸವ

ಮೈಸೂರು ೧೯

ಮಹಾರಾಜಾ ಕಾಲೇಜಿನ ಇತಿಹಾಸ ಸಂಘದ ವಜ್ರೋತ್ಸವದ ಅಂಗವಾಗಿ ಏರ್ಪಡಿಸಿರುವ ವಸ್ತುಪ್ರದರ್ಶನದ ಪ್ರಾರಂಭೋತ್ಸವವನ್ನು ನಿನ್ನೆ ಸಂಜೆ ವಿಶ್ವವಿದ್ಯಾನಿಲಯದ ಉಪಸ್ಥಾನಪತಿ ಡಾ॥ ಬಿ. ಎಲ್. ಮಂಜುನಾಥ್‌ರವರು ನೆರವೇರಿಸಿದರು.

ಅನಂತರ ಕಾಲೇಜಿನ ಒಳಾಂಗಣದಲ್ಲಿ ಶ್ರೀ ಮಹಮದ್ ಷರೀಫ್‌ರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು.

ಶ್ರೀ ಹೆಚ್. ಕೃಷ್ಣರಾಯರಿಂದ ಸ್ವಾಗತವಾದನಂತರ ಹಳೇ ವಿದ್ಯಾರ್ಥಿಗಳಾದ ಶ್ರೀ ಕೆ. ಶ್ಯಾಮರಾಜಯ್ಯಂಗಾರ್ ಮತ್ತು ಶ್ರೀ ಎನ್. ಶ್ರೀನಿವಾಸಮೂರ್ತಿರವರು ತಾವು ವ್ಯಾಸಂಗ ಮಾಡಿದ ಹಿಂದಿನ ನೆನಪನ್ನು ವಿವರಿಸಿದರು.

ಆಟಪಾಟಗಳಲ್ಲಿ ಗೆದ್ದವರಿಗೆ ಬಹುಮಾನವನ್ನು ಅಧ್ಯಕ್ಷರು ವಿನಿಯೋಗಿಸಿ, ಇತಿಹಾಸ ಸಂಘವು ಕಳೆದ ೬೦ ವರ್ಷಗಳಿಂದ ಸಲ್ಲಿಸುತ್ತಿರುವ ಸೇವೆಯನ್ನು ಕೊಂಡಾಡಿದರು.

ಪುರಸಭೆಗಳಲ್ಲಿ ಮಹಿಳೆಯರಿಗೆ ಸ್ಥಾನ

ಮೈಸೂರು ಸಂಸ್ಥಾನದ ಪುರಸಭೆಗಳಲ್ಲಿ ಶೇಕಡ ೧೦ ರಷ್ಟು ಸದಸ್ಯ ಸ್ಥಾನಗಳನ್ನು ಮಹಿಳೆಯರಿಗಾಗಿ ಮೀಸಲಾಗಿಡುವಂತೆ ಪೌರಸಭಾ ಕಾನೂನನ್ನು ತಿದ್ದುಪಡಿ ಮಾಡುವ ವಿಷಯವನ್ನು ಸರ್ಕಾರ ಪರ್ಯಾಲೋಚಿಸುವುದೆಂದು ಸ್ಥಳೀಯ ಸಂಸ್ಥೆ ಸಚಿವರು ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ತುಟ್ಟಿಭತ್ಯದ ಭಾಗ ಸಂಬಳಕ್ಕೆ ಸೇರದು

ಮೈಸೂರ. ಸರ್ಕಾರಿ ನೌಕರರ ತುಟ್ಟಿಭತ್ಯದ ಅರ್ಧಭಾಗವನ್ನು ಸಂಬಳದಲ್ಲಿ ಸೇರಿಸುವ ಉದ್ದೇಶ ಸರ್ಕಾರಕ್ಕೆ ಇಲ್ಲವೆಂದು ಮುಖ್ಯಮಂತ್ರಿಗಳು ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ವಂಶಪಾರಂಪರ್ಯ ಗ್ರಾಮಾಧಿಕಾರಿಗಳ ಹುದ್ದೆ ರದ್ದಿಲ್ಲ

ಗ್ರಾಮಾಧಿಕಾರಿಗಳ ಹುದ್ದೆಗಳು ವಂಶಪಾರಂಪರ್ಯವಾಗಿ ಬರುತ್ತಿರುವ ಪದ್ಧತಿಯನ್ನು ಸದ್ಯಕ್ಕೆ ರದ್ದುಗೊಳಿಸುವ ಯೋಜನೆಯು ಇಲ್ಲವೆಂದು ಆಂಧ್ರ ಶಾಸನಸಭೆಯಲ್ಲಿ ಅಲ್ಲಿಯ ಕಂದಾಯ ಸಚಿವರು ತಿಳಿಸಿದ್ದಾರೆ.

ಸರ್ಕಾರಿ ನೌಕರರಿಗೆ ಕಡ್ಡಾಯ ಪ್ರಾದೇಶಿಕ ಸೈನ್ಯ ಶಿಕ್ಷಣ

ಕೇಂದ್ರ ಸರ್ಕಾರದ ನಿರ್ಧಾರ

ಸರ್ಕಾರಿ ನೌಕರರು, ಸಾರ್ವಜನಿಕರ ಉಪಯುಕ್ತ ಸಂಸ್ಥೆಗಳಲ್ಲಿ ಕೆಲಸ ಮಾಡುವವರು ಇವರಿಗೆ ಕೆಲವು ವಯೋವರ್ಗಗಳ ಅನುಗುಣವಾಗಿ ಪ್ರಾದೇಶಿಕ ಸೈನ್ಯ ಶಿಕ್ಷಣವನ್ನು ಕಡ್ಡಾಯವಾಗಿ ಕೊಡಲಾಗುತ್ತದೆ ಯೆಂದು ರಕ್ಷಣಾ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಈ ಸಂಬಂಧದಲ್ಲಿ ಈ ಶಾಸನಸಭಾಧಿವೇಶನದಲ್ಲಿಯೇ ಒಂದು ಮಸೂದೆಯನ್ನು ಮಂಡಿಸಲಾಗುತ್ತದೆ.

ಪೋರ್ಚುಗೀಸ್ ಸರ್ಕಾರಕ್ಕೆ ಭಾರತದ ಪ್ರತಿಭಟನೆ

ಇತ್ತೀಚೆಗೆ ಪೋರ್ಚುಗೀಸ್ ಗೋವಾದಲ್ಲಿ ಸ್ವಾತಂತ್ರ ಹೋರಾಟ ನಡೆಸುವವರ ಮೇಲೆ ಅಲ್ಲಿಯ ಸರ್ಕಾರವು ನಡೆಸುತ್ತಿರುವ ದಬ್ಬಾಳಿಕೆ ಮತ್ತು ದೌರ್ಜನ್ಯ ಕೃತ್ಯಗಳ ಬಗ್ಗೆ ಭಾರತ ಸರ್ಕಾರವು ದೆಹಲಿಯಲ್ಲಿರುವ ಪೋರ್ಚುಗೀಸ್ ರಾಯಭಾರಿ ಕಛೇರಿಗೆ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿ ಈ ಕೃತ್ಯಗಳನ್ನು ಭಾರತವು ಸಹಿಸುವುದಿಲ್ಲ ವೆಂದು ಸ್ಪಷ್ಟಪಡಿಸಿದೆ.

ಭಾರತದೊಡನೆ ಐಕ್ಯವಾಗಬೇಕೆಂಬ ಚಳುವಳಿಯಲ್ಲಿ ಅಲ್ಲಿಯ ಪ್ರಸಿದ್ಧ ಭಾರತೀಯ ವೈದ್ಯರಾದ ಡಾ|| ಗೈಟೊಂಡೆಯವರನ್ನು ಮತ್ತೆ ಕೆಲವರನ್ನು ಪೋರ್ಚುಗೀಸ್ ಸರ್ಕಾರವು ದಸ್ತಗಿರಿಮಾಡಿ ಅವರನ್ನು ಈಗ ಲಿಸ್ಬನ್‌ಗೆ ರವಾನಿಸಲಾಗಿದೆ. ಇದಕ್ಕೂ ಭಾರತವು ಪ್ರತಿಭಟನೆ ಸೂಚಿಸಿದೆ.

ಜಪಾನ್ ವಿಧಾನದಲ್ಲಿ ಬತ್ತದ ಸಾಗುವಳಿ

ದೇಶಾದ್ಯಂತ ಈ ಸಾಲಿನಲ್ಲಿ ಸುಮಾರು ೩೦ ಲಕ್ಷ ಎಕರೆಗಳಲ್ಲಿ ಜಪಾನಿ ವಿಧಾನದಲ್ಲಿ ಬತ್ತದ ಸಾಗುವಳಿಯನ್ನು ನಡೆಸಬೇಕೆಂದು ಕೇಂದ್ರದ ವ್ಯವಸಾಯ ಸಚಿವ ಶಾಖೆಯು ನಿರ್ಧರಿಸಿದೆ.

ಕಳೆದ ಸಾಲಿನಲ್ಲಿ ೨೫ ಸಂಸ್ಥಾನಗಳಲ್ಲಿ ಒಟ್ಟು ೩ ಲಕ್ಷ ೮೦ ಸಾವಿರ ಎಕರೆಗಳಲ್ಲಿ ಪೂರ್ಣವಾಗಿಯೂ ೩೦ ಲಕ್ಷ ಎಕರೆಗಳಲ್ಲಿ ಸ್ವಲ್ಪಭಾಗದಲ್ಲಿಯೂ ಈ ವಿಧಾನದಲ್ಲಿ ಬತ್ತವನ್ನು ಬೆಳೆಯಲಾಯಿತು ಸಾಮಾನ್ಯವಾಗಿ ಈ ಪ್ರದೇಶಗಳಲ್ಲಿ ಎಕರೆಗೆ ಸುಮಾರು ೧೦೦-೧೪೦ ಮಣಗಳಷ್ಟು ಅಧಿಕ ಬೆಳೆಯಾಯಿತು.

ಈಗ ಭಾರತದಲ್ಲಿ ಬತ್ತದ ಸಾಗುವಳಿಯು ಸುಮಾರು ೭ ಕೋಟಿ ೪೦ ಲಕ್ಷ ಎಕರೆಗಳಲ್ಲಿ ನಡೆಯುತ್ತಿದೆ. ಇದರ ಪೈಕಿ ಈ ಸಾಲಿನಲ್ಲಿ ೩೦ ಲಕ್ಷ ಎಕರೆಗಳಲ್ಲಿ ಜಪಾನ್ ರೀತಿಯಲ್ಲಿ ಬತ್ತವನ್ನು ಬೆಳೆಯಲು ನಿರ್ಧರಿಸಲಾಗಿದೆ.

ಮೈಸೂರು ಸಂಸ್ಥಾನದಲ್ಲಿ ಇದನ್ನು ೨೦೦೦೦ ಎಕರೆಗಳಲ್ಲಿ ಬೆಳೆಯಾಗುತ್ತದೆ.

ಜನಪದ ಸಂಗೀತ ಮಹೋತ್ಸವ

ಮೈಸೂರು ೧೯

ಇದೇ ೨೧ನೇ ತಾರೀಖು ಭಾನುವಾರದಿಂದ ೨೬ನೇ ತಾರೀಖು ಶುಕ್ರವಾರದವರೆಗೆ ಮೈಸೂರು ಆಕಾಶವಾಣಿಯಲ್ಲಿ ಪ್ರತಿದಿನ ಸಂಜೆ ೭-೫ ಗಂಟೆಗೆ ಜನಪದ ಸಂಗೀತ ಮಹೋತ್ಸವ ಕಾರ್ಯಕ್ರಮಗಳು ನಡೆಯುತ್ತವೆ. ೨೧ನೇ ತಾರೀಖು ಭಾನುವಾರ ಸೋಲಿಗರಿಂದ ಹಾಡುಗಳು, ೨೨ನೇ ತಾರೀಖು ಹಾಸನಜಿಲ್ಲೆ ಬೇಲೂರು ಮುಂತಾದೆಡೆಯಲ್ಲಿರುವ ಜನರಿಂದ ಹಾಡುಗಳು, ೨೩ನೇ ತಾರೀಖು ತಟ್ಟಿ ಮಂಟೇ ದೇವರಪದ ಮತ್ತು ಕಾನುಸಾಳೆ ಪದಗಳು, ೨೪ನೇ ತಾರೀಖು ರಾಗೀಬೀಸುವ ಪದ, ನಾಟಪದ, ಮದುವೆ ಹಾಡುಗಳು, ೨೫ನೇ ತಾರೀಖು ಗಾಡಿಪದ, ಕೋಲಾಟ, ೨೬ನೇ ತಾರೀಖು ಮಾಯಗೌಡ ಮತ್ತು ಅವರ ವೃಂದದಿಂದ ಯಕ್ಷಗಾನ ಕಾರ್ಯಕ್ರಮಗಳು ನಡೆಯುತ್ತವೆ.

ಬಿಹಾರ್ ವಿಶ್ವವಿದ್ಯಾನಿಲಯದಲ್ಲಿ ಹಿಂದೀ ಅಧಿಕೃತ ಭಾಷೆ

ಬೀಹಾರ್ ವಿಶ್ವವಿದ್ಯಾನಿಲಯದಲ್ಲಿ ಮುಂದಿನ ಸಾಲಿನ ಜನವರಿ ಒಂದನೇ ತಾರೀಖಿನಿಂದ ಹಿಂದಿಯು ಅಧಿಕೃತ ಭಾಷೆಯಾಗುವುದೆಂದು ಅಲ್ಲಿಯ ಉಪಸ್ಥಾನಪತಿಗಳು ತಿಳಿಸಿದ್ದಾರೆ. ಕೆಲವು ನಿರ್ದಿಷ್ಟ ಭಾಷೆಗಳಲ್ಲಿ ವಿನಹ ವಿಶ್ವವಿದ್ಯಾನಿಲಯದಲ್ಲಿನ್ನೆ ಹಿಂದಿಯೇ ಶಿಕ್ಷಣ ಮಾಧ್ಯಮವಾಗುತ್ತದೆ.

ಮದ್ರಾಸ್ ಜಿಲ್ಲೆಗಳ ಪುನರ್ವಿಂಗಡನೆ

ಮದ್ರಾಸ್ ಪ್ರಾಂತ್ಯದಲ್ಲಿ ಆಡಳಿತ ಸೌಕರ್ಯಗಳಿಗಾಗಿ ಈಗಿರುವ ಜಿಲ್ಲೆಗಳನ್ನು ಪುನರ್ವಿಂಗಡಿಸಿ ಅವುಗಳ ಈಗಿನ ವಿಸ್ತೀರ್ಣವನ್ನು ಕಡಮೆಮಾಡಿ ಜಿಲ್ಲೆಗಳನ್ನು ಹೆಚ್ಚಿಸಲಾಗುವುದೆಂದು ತಿಳಿಯಬರುತ್ತದೆ.

ಗೋಪಾಲರಾಯರಿಗೆ ೨ ವರ್ಷ ಕಠಿಣ ಸಜ

ಬೆಂಗಳೂರು ೧೯

ಶ್ರೀ ಬಿ. ಎನ್. ಗೋಪಾಲರಾಯರು ಶ್ರೀಗಳಾದ ಕೆ. ಎಸ್. ರಾಮಯ್ಯ,ಮಂಡ್ಯದ ಸೀನಪ್ಪ ಮತ್ತು ಫರ್ನಾಂಡಿಸ್ ಎಂಬುವರಿಗೆ ಮೋಸಮಾಡಿದರೆಂದು ಆಪಾದಿಸಿ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಸೆಷನ್ಸ್ ನ್ಯಾಯಾಧೀಶರು ೨ ವರ್ಷ ಕಠಿಣಸಜಾ ವಿಧಿಸಿದ್ದರು. ಹೈಕೋರ್ಟಿಗೆ ಅಪೀಲು ಮಾಡಿದ್ದು ಅಲ್ಲಿಯೂ ಸಹ ಶಿಕ್ಷೆ ಖಾಯಂ ಮಾಡಲಾಯಿತು.

ಸ್ವಾಮಿ ಸೀತಾರಾಂರವರ ಸ್ಥಿತಿ ವಿಷಮಿಸುತ್ತಿದೆ

ಆಂಧ್ರ ಪ್ರಾಂತ್ಯದಲ್ಲಿ ಪಾನ ನಿರೋಧವನ್ನು ರದ್ದುಗೊಳಿಸಕೂಡದೆಂದು ಸ್ವಾಮಿ ಸೀತಾರಾಂರವರು ಉಪವಾಸವನ್ನು ಪ್ರಾರಂಭಿಸಿ ಇಂದಿಗೆ ೧೫ ದಿನಗಳಾದುವು. ಅವರ ಸ್ಥಿತಿಯು ತೀರ ವಿಷಮಿಸುತ್ತಿರುವುದಾಗಿ ವೈದ್ಯರು ಅಭಿಪ್ರಾಯ ಪಟ್ಟಿದ್ದಾರೆ. ಅವರು ಮಾತನಾಡಲು ಅಥವ ನೀರನ್ನು ಕುಡಿಯಲು ಸಹ ತ್ರಾಣವಿಲ್ಲವಾಗಿ ಜ್ಞಾನಾಜ್ಞಾನದಲ್ಲಿದ್ದಾರೆಂದು ತಿಳಿಯಬರುತ್ತದೆ.

ಉಪವಾಸವನ್ನು ಮುಕ್ತಾಯಗೊಳಿಸಬೇಕೆಂದು ಹಲವರಿಂದ ಬೇಡಿಕೆ,ಒತ್ತಾಯಗಳು ಬಂದರೂ ಅವರು ಮುಂದುವರಿಸುತ್ತಲೇ ಇದ್ದಾರೆ.

ಮೈಸೂರು-ಕೊಡಗು ರೈಲು

ಮೈಸೂರಿನಿಂದ ಹುಣಸೂರು ಮಾರ್ಗವಾಗಿ ಕೊಡಗಿಗೆ ರೈಲ್ವೆ ಹಾಕಬೇಕೆಂದು ಮೈಸೂರು ಸರ್ಕಾರದವರು ಕಳೆದವರ್ಷವೇ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿತ್ತೆಂದೂ, ಎರಡನೇ ಪಂಚವಾರ್ಷಿಕ ಯೋಜನೆಯಲ್ಲಾದರೂ ಈ ರೈಲ್ವೆ ಯೋಜನೆಯನ್ನು ಸೇರಿಸಲು ಸರ್ಕಾರ ಪ್ರಯತ್ನಿಸುವುದೆಂದೂ ರೆವಿನ್ಯೂಸಚಿವರು ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ಆಂಧ್ರಕ್ಕೆ ಪ್ರತ್ಯೇಕ ಶ್ರೇಷ್ಠ ನ್ಯಾಯಾಲಯ

ಮುಂದಿನ ಜುಲೈ ೫ ನೇ ತಾರೀಖಿನಿಂದ ಆಂಧ್ರಪ್ರಾಂತ್ಯದಲ್ಲಿ ಪ್ರತ್ಯೇಕ ಶ್ರೇಷ್ಠ ನ್ಯಾಯಾಲಯವನ್ನು ಸ್ಥಾಪಿಸುವುದಾಗಿ ಗೃಹ ಸಚಿವ ಡಾ|| ಕಟ್ಜುರವರು ವಿಧಾನ ಪರಿಷತ್ತಿನಲ್ಲಿ ತಿಳಿಸಿದ್ದಾರೆ.

ಜುಲ್ಮಾನೆ

ಮೈಸೂರು ೧೯

ಅಂಗಡಿ ಕಾನೂನನ್ನು ಉಲ್ಲಂಘಿಸಿದರೆಂದು ರಾಜಧಾನಿಯ ದೇವರಾಜಾ ಮಾರ್ಕೆಟ್ಟಿನ ಶ್ರೀ ಎ.ಎನ್. ಕಾಮತ್‌ರಿಗೆ ೫ ರೂ. ಶ್ರೀ ಕೆ. ಪಿ. ಅಬ್ದುಲ್‌ರಹೀಂಗೆ ೩ ರೂ. ಮತ್ತು ಅಶೋಕಾರಸ್ತೆಯ ಹೊಟೇಲ್ ಮಾಲೀಕ ಶ್ರೀ ಕೆ. ಪಿ. ಹರ್ಷರಿಗೆ ೮ ರೂ. ಜುಲ್ಮಾನೆಯನ್ನು ನಗರದ ದ್ವಿತೀಯ ನ್ಯಾಯಾಧೀಶರು ವಿಧಿಸಿದ್ದಾರೆ.

ನೂತನ ಆಸ್ಪತ್ರೆಗಳು

ಮೈಸೂರು ಜಿಲ್ಲೆಯಲ್ಲಿ ೩, ಬೆಂಗಳೂರು ಜಿಲ್ಲೆ ೨, ಹಾಸನ ೧, ಚಿಕ್ಕಮಗಳೂರು ೨, ಶಿವಮೊಗ್ಗ ೧, ಚಿತ್ರದುರ್ಗ ಮತ್ತು ತುಮಕೂರು ೪, ಕೋಲಾರ ೧, ಈ ರೀತಿ ಒಟ್ಟು ೧೮ ಆಸ್ಪತ್ರೆಗಳನ್ನು ೧೯೫೪-೫೫ ನೇ ಸಾಲಿನಲ್ಲಿ ತೆರೆಯಲಾಗುವುದೆಂದು ಆರೋಗ್ಯ ಸಚಿವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಹೊಸ ವಿಮಾನ ಸಂಚಾರ ವ್ಯವಸ್ಥೆ

ಬೊಂಬಾಯಿ-ಕಲ್ಕತ್ತಾ-ಬಾಂಕಾಂಗ್-ಹಾಂಕಾಂಗ್-ಟೋಕಿಯೊ ನಡುವೆ ಮತ್ತು ಬೊಂಬಾಯಿ--ಕೊಲೊಂಬೋ--ಸಿಂಗಪುರ ನಡುವೆ ಎರಡು ಹೊಸ ವಿಮಾನ ಸಂಚಾರ ವ್ಯವಸ್ಥೆಯನ್ನು ಇದೇ ಜುಲೈ ಒಂದರಿಂದ ಭಾರತ ಸರ್ಕಾರವು ಪ್ರಾರಂಭಿಸಲಿದೆ.

ವಾರ್ಷಿಕೋತ್ಸವ

ರಾಜಧಾನಿಯ ದಳವಾಯಿ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿ ಸಂಘದ ೨ ನೇ ವಾರ್ಷಿಕೋತ್ಸವವು ಇದೇ ೨೧ ನೇ ತಾ|| ಭಾನುವಾರ ಸಂಜೆ ೫-೩೦ ಗಂಟೆಗೆ ಶ್ರೀ ಎನ್. ನಾಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ ಒಟ್ಟು 2000 ಬಹುಮಾನಗಳು. ಬಹುಮಾನದ ಮೊಬಲಗು 45000 ರೂ. ಟಿಕೇಟು ಒಂದಕ್ಕೆ ಒಂದೇರೂಪಾಯಿ. ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಭುದೇವಾ ಥಿಯೇಟರ್ಸ್

ಪದ್ಮಾ ಟಾಕೀಸ್

19—3—54ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ಪ್ರತಿದಿನ ೩ ಆಟಗಳು

ನಿರುಪೇದಲು

(ಕಡುಬಡವರು) (ತೆಲುಗು)

ಪಾತ್ರ:—ನಾಗೇಶ್ವರರಾವ್, ಜಮುನಾ, ಜಾಲಸರಸ್ವತಿ ಮುಂತಾದವರು.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೬೮

೨೦-೩-೧೯೫೪ ನೇ ಶನಿವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಸರ್ಕಾರ ಇನ್ನುಮುಂದೆ ಗೋಧಿ, ಮಿಲೆಟ್ಸ್ ಮಾರುವುದಿಲ್ಲ

ಅಕ್ಕಿಯ ಬೆಲೆಯಲ್ಲಿ ಇಳಿತಾಯ

ಬೆಂಗಳೂರು ೨೦

ಸರ್ಕಾರಿ ವಶದಲ್ಲಿ ಈಗಿರುವ ಗೋಧಿ ಮತ್ತು ಮಿಲೆಟ್ಸ್‌ಗಳ ದಾಸ್ತಾನು ಮುಗಿದ ನಂತರ ಅವುಗಳ ಮಾರಾಟವನ್ನು ಸರ್ಕಾರವು ನಿಲ್ಲಿಸಿ, ಆ ಕಾರ್ಯವನ್ನು ವರ್ತಕರಿಗೇ ಬಿಟ್ಟುಬಿಡುವುದಾಗಿ ಆಹಾರ ಸಚಿವ ಶ್ರೀ ಹೆಚ್. ಸಿದ್ದವೀರಪ್ಪನವರು ಶಾಸನಸಭೆಯಲ್ಲಿ ತಿಳಿಸಿದ್ದಾರೆ.

ಪ್ರಾಂತ್ಯದಲ್ಲಿ ಆಹಾರ ಪರಿಸ್ಥಿತಿಯು ಉತ್ತಮಗೊಂಡಿರುವುದರಿಂದ ಇದೇ ೨೨ನೇ ತಾರೀಖಿನಿಂದ ಸಣ್ಣಕ್ಕಿಯನ್ನು ರೂಪಾಯಿಗೆ ಒಂದೂಮುಕ್ಕಾಲುಸೇರಿನಂತೆಯೂ, ಎರಡನೇ ದರ್ಜೆಯ ಅಕ್ಕಿಯಲ್ಲಿ ಪ್ರಥಮ ರಖಂ ಸೇರಿಗೆ ಏಳೂವರೆಆಣೆ, ೨ನೇ ರಖಂ ಸೇರಿಗೆ ಆರೂಮುಕ್ಕಾಲಾಣೆಯಂತೆಯೂ ಮಾರಲಾಗುತ್ತದೆ. ರಾಗಿ ಜೋಳದ ಬೆಲೆಯಲ್ಲಿ ಬದಲಾವಣೆಯೇನೂ ಇಲ್ಲ

ಈಗ ರೇಷನ್‌ದಾರರಿಗೆ ಕೊಡುತ್ತಿರುವ ಅಕ್ಕಿಯ ಪ್ರಮಾಣವನ್ನು ಹೆಚ್ಚಿಸುವುದಾಗಿಯೂ ತಿಳಿಸಲಾಗಿದೆ.

ಹುಣಸೂರಿನಲ್ಲಿ ಮೊಕದ್ದಮೆ ನಡೆಸುವಂತೆ ಹೈಕೋರ್ಟಿನ ತೀರ್ಪು

ಬೆಂಗಳೂರು ೨೦

ರಹದಾರಿಯಿಲ್ಲದೆ ಮರ ಸಾಗಿಸಿದರೆಂದು ಆಪಾದಿಸಿ ಪಿರಿಯಾಪಟ್ಟಣದ ಶ್ರೀ ಎಸ್. ಎಂ ಮರಿಯಪ್ಪ ಮುಂತಾದ ಆರು ಜನರಮೇಲೆ ಪೋಲೀಸರು ಹೂಡಿರುವ ಮೊಕದ್ದಮೆಯನ್ನು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆ ನಡೆಸಬೇಕೆಂದು ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್‌ರವರ ಆಜ್ಞೆಮೇಲೆ ಹೈಕೋರ್ಟಿನಲ್ಲಿ ಅಪೀಲು ಮಾಡಲಾಗಿತ್ತು.

ಹೈಕೋರ್ಟಿನಲ್ಲಿ ಛೀಫ್ ಜಸ್ಟೀಸ್ ಶ್ರೀ ಪಿ.ಮೇದಪ್ಪನವರು ಮತ್ತು ಜಸ್ಟೀಸ್ ಶ್ರೀ ಎನ್. ಬಾಲಕೃಷ್ಣಯ್ಯನವರು ಅಪೀಲನ್ನು ಪರಿಶೀಲಿಸಿ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಮಾಡಿದ್ದ ಆಜ್ಞೆಯನ್ನು ಬದಲಾಯಿಸಿ ಮೇಲ್ಕಂಡ ಮೊಕದ್ದಮೆಯು ಹುಣಸೂರಿನ ಮುನಸೀಫ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ವಿಚಾರಣೆಯಾಗಬೇಕೆಂದು ತಿಳಿಸಿದ್ದಾರೆ.

ರಾಷ್ಟ್ರೀಯ ಸಂಗೀತ ಉತ್ಸವಕ್ಕೆ ಮೈಸೂರಿನವರು

ಮೈಸೂರು ೨೦

ಮೈಸೂರಿನ ವಿದ್ವಾನ್ ಶ್ರೀ ದೇವೇಂದ್ರಪ್ಪನವರು ಮತ್ತು ವಿದ್ವಾನ್ ಶ್ರೀ ಚೌಡಯ್ಯನವರು ರಾಷ್ಟ್ರೀಯ ಸಂಗೀತ ಉತ್ಸವದಲ್ಲಿ ಭಾಗವಹಿಸಲು ಮುಂದಿನವಾರ ದೆಹಲಿಗೆ ಪ್ರಯಾಣ ಮಾಡಲಿದ್ದಾರೆ. ಮೈಸೂರು ಸರ್ಕಾರ ಈ ಉತ್ಸವದಲ್ಲಿ ಭಾಗವಹಿಸಲು ಈ ಈರ್ವರನ್ನು ನೇಮಕ ಮಾಡಿದೆ.

ಈ ಉತ್ಸವದಲ್ಲಿ ಶಾಸ್ತ್ರೀಯ ಮತ್ತು ಜಾನಪದ ಸಂಗೀತಗಳೆರಡೂ ಇರುವುವು ವಿವಿಧ ಪ್ರಾಂತಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸುವರು

ಮೈಸೂರು 'ಜೂ' ಗೆ ಜಿರಾಫೆಗಳು

ಮೈಸೂರು ೨೦

ಮೈಸೂರು ಮೃಗಾಲಯಕ್ಕೆ ಸದ್ಯದಲ್ಲಿಯೇ ೨ ಜಿರಾಫೆಗಳು ೩ ಕಾಡುಮನುಷ್ಯಗಳು ಬರಲಿವೆಯೆಂದು ತಿಳಿಯಬರುತ್ತದೆ.

ಟರ್ಕಿಗೆ ರಷ್ಯಾ ಪ್ರತಿಭಟನೆ

ಟರ್ಕಿಯು ಪಾಕೀಸ್ತಾನದೊಡನೆ ಈಗ ಮಾಡಿಕೊಂಡಿರುವ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಒಪ್ಪಂದದ ಬಗ್ಗೆ ತನ್ನ ಪ್ರತಿಭಟನೆಯನ್ನು ರಷ್ಯಾವು ಸೂಚಿಸಿ ಟರ್ಕಿಗೆ ಪತ್ರ ಬರೆದಿರುವುದಾಗಿ ತಿಳಿಯಬರುತ್ತದೆ.

ಗಿರಣಿಯಲ್ಲಿ ತಯಾರಾದ ಎಣ್ಣೆಯಮೇಲೆ ಸುಂಕ

ಗಿರಣಿಗಳಲ್ಲಿ ತಯಾರಾಗುವ ಎಣ್ಣೆಯ ಮೇಲೆ ಮಣ ಒಂದಕ್ಕೆ ಒಂದೂಕಾಲು ರೂ. ನಂತೆ ಸುಂಕವನ್ನು ವಿಧಿಸಿ ಆ ಹಣವನ್ನು ಎಣ್ಣೆ ತಯಾರಿಕೆಯ ಗೃಹಕೈಗಾರಿಕೆಯ ಅಭಿವೃದ್ಧಿಗಾಗಿ ಉಪಯೋಗಿಸುವ ವಿಷಯವನ್ನು ಕೇಂದ್ರ ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ತಿಳಿಯಬರುತ್ತದೆ.

ಹೊಸ ಸಕ್ಕರೆ ಕಾರ್ಖಾನೆಗಳು

ಮದ್ರಾಸ್ ಪ್ರಾಂತ್ಯದಲ್ಲಿ ತಿರುಚಿನಾಪಳ್ಳಿ ಜಿಲ್ಲೆಯ ಪೆಟ್ಟವತಲೈ, ಸೇಲಂ ಜಿಲ್ಲೆಯ ನಾಮಕ್ಕಲ್ ಮತ್ತು ಉತ್ತರಆರ್ಕಾಟ್ ಜಿಲ್ಲೆಯ ತಿರುವಣ್ಣಾಮಲೈಗಳಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಹೊಸದಾಗಿ ಸ್ಥಾಪಿಸಲಾಗುತ್ತದೆ.

ಎಂ. ಪಿ. ಸಿ. ಸಿ. ಕಾರ್ಯಕಾರಿ ಸಮಿತಿ

ಬೆಂಗಳೂರು ೨೦

ಮೈಸೂರು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಇದೇ ೨೭ನೇ ತಾರೀಖು ನಡೆಯುತ್ತದೆ.

ಆಮರಣಾಂತ ಉಪವಾಸ

ಬೆಂಗಳೂರು ೨೦

ಅರಮನೆ ರಸ್ತೆಯಲ್ಲಿರುವ ಶ್ರೀ ಮುನೀಶ್ವರ ದೇವಾಲಯದ ಅರ್ಚಕರ ಮನೆಯನ್ನು ಮುರಾಮತ್ ಇಲಾಖೆಯವರು ಯಾವ ತಿಳುವಳಿಕೆಯೂ ಕೊಡದೆ ಒಡೆದು ಹಾಕಿರುವುದನ್ನು ಪ್ರತಿಭಟಿಸಿ ಶ್ರೀ ಡಿ ಎನ್. ಕೃಷ್ಣಯ್ಯಶೆಟ್ಟರು ಇದೇ ೧೮ನೇ ತಾರೀಖಿನಿಂದ ಆಮರಣಾಂತ ಉಪವಾಸವನ್ನು ಪ್ರಾರಂಭಿಸಿದ್ದಾರೆ. ಸರ್ಕಾರವು ಕೂಡಲೇ ಅರ್ಚಕರಿಗೆ ಬೇರೇಮನೆ ಕಟ್ಟಿಸಿ, ಪರಿಹಾರ ಒದಗಿಸಬೇಕೆಂದು ಒತ್ತಾಯ ಮಾಡಲಾಗಿದೆ.

ಜಿಲ್ಲಾ ಟ್ರೆಷರಿಗಳ ಪರಿವರ್ತನೆ

ಬೆಂಗಳೂರು ೨೦

ಚಿಕ್ಕಮಗಳೂರು,ಚಿತ್ರದುರ್ಗ, ಹಾಸನ ಮತ್ತು ತುಮಕೂರುಗಳಲ್ಲಿರುವ ಜಿಲ್ಲಾ ಟ್ರೆಷರಿಗಳ ಕಾರ್ಯವನ್ನು ಇದೇ ಏಪ್ರೆಲ್ ಒಂದನೇ ತಾರೀಖಿನಿಂದ ರಿಸರ್ವ್ ಬ್ಯಾಂಕಿನ ಏಜೆಂಟರಾದ ಮೈಸೂರು ಬ್ಯಾಂಕಿನವರ ಆಡಳಿತಕ್ಕೆ ವಹಿಸಿಕೊಡಲು ಸರ್ಕಾರವು ನಿರ್ಧರಿಸಿದೆ.

ಸನ್ಮಾನ ಸಭೆ

ಇದೇ ೨೪ನೆ ತಾರೀಖು ಸಾಲಿಗ್ರಾಮದ ಮಹಾಜನರು ವಿಧಾನ ಪರಿಷತ್ತಿನ ಸದಸ್ಯ ಶ್ರೀ ಹೆಚ್. ಸಿ. ದಾಸಪ್ಪ ಮತ್ತು ಮೈಸೂರು ಜಿಲ್ಲಾ ಬೋರ್ಡಿನ ಮಾಜಿ ಅಧ್ಯಕ್ಷ ಶ್ರೀ ಹೆಚ್. ಎಂ. ಚನ್ನಬಸಪ್ಪನವರನ್ನು ಸಾಲಿಗ್ರಾಮದಲ್ಲಿ ಸನ್ಮಾನ ಮಾಡಲಿರುವರು. ಮೈಸೂರು ಜಿಲ್ಲಾಧಿಕಾರಿ ಶ್ರೀ ಎಂ. ಎಸ್. ಸ್ವಾಮಿನಾಥನ್‌ರವರು ಈ ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ.

ವಿದೇಶಗಳಿಗೆ ವಾಣಿಜ್ಯ ನಿಯೋಗ

ಭಾರತದ ರಫ್ತು ವ್ಯಾಪಾರವನ್ನು ಅಭಿವೃದ್ಧಿಪಡಿಸಲು ಅರಬ್ ಸಂಸ್ಥಾನಗಳ ಸಹಿತವಾಗಿ ಮಧ್ಯಪೂರ್ವ ದೇಶಗಳಿಗೆ ಒಂದು ವಾಣಿಜ್ಯ ನಿಯೋಗವನ್ನು ಕಳುಹಿಸುವ ವಿಷಯವನ್ನು ಕೇಂದ್ರಸರ್ಕಾರವು ಪರಿಶೀಲಿಸುತ್ತಲಿದೆ.

ಸರ್ಕಾರಿ ನೌಕರರಿಗೆ ಉಡುಪು

ಬೆಂಗಳೂರು ೨೦

ಈಗಿನ ದೇಶದ ಬದಲಾವಣೆ ಮತ್ತು ರಾಷ್ಟ್ರೀಯ ಆವಶ್ಯಕತೆಗಳನ್ನು ಪರಿಗಣಿಸಿ ಸರ್ಕಾರಿ ನೌಕರರು ಕಛೇರಿಗಳಿಗೆ ಬರುವಾಗ ಮತ್ತು ಇತರ ಸಮಾರಂಭಗಳಲ್ಲಿ ಉಪಯೋಗಿಸಬೇಕಾದ ಉಡುಪನ್ನು ನಿರ್ಧರಿಸಿ ಸರ್ಕಾರವು ಒಂದು ಆಜ್ಞೆಯನ್ನು ಮಾಡಿದೆ. ಕಛೇರಿಗಳಲ್ಲಿ ಬರುವಾಗ ಪೂರ್ತಾ ಗುಂಡಿಗಳನ್ನು ಹಾಕಿಕೊಂಡಿರುವ ಸಣ್ಣ ಕೋಟು,ಷರಾಯಿ ಅಥವ ಪಂಚೆ,ಸಂಜೆಯ ಸಮಾರಂಭಗಳಿಗೆ ಸಣ್ಣಕೋಟು ಮತ್ತು ಷರಾಯಿ, ಭಾರಿ ಸಮಾರಂಭಗಳಲ್ಲಿ ಕಪ್ಪು ಅಥವ ಬಿಳಿ ಲಾಂಗ್‌ಕೋಟು ಮತ್ತು ಷರಾಯಿ, ಎಲ್ಲಾ ಕಾಲದಲ್ಲಿಯೂ ತಲೆಗೆ ಜರತಾರಿ ಅಥವ ಸಾದಾ ರುಮಾಲು ಧರಿಸಬೇಕೆಂದು ಆಜ್ಞೆ ಮಾಡಲಾಗಿದೆ. ಸಾಧ್ಯವಾದಷ್ಟು ಸ್ವದೇಶಿಬಟ್ಟೆಗಳನ್ನು ಉಪಯೋಗಿಸಬೇಕೆಂದು ಕೋರಲಾಗಿದೆ.

ಕಾರ್ಮಿಕ ವಸತಿ ನಿರ್ಮಾಣ ಯೋಜನೆ

೧೯೫೨-೫೪ ನೇ ಅವಧಿಯಲ್ಲಿ ಸಹಾಯ ದ್ರವ್ಯವನ್ನು ಪಡೆದ ಕಾರ್ಮಿಕ ವಾಸದ ಮನೆಗಳ ಯೋಜನೆ ಪ್ರಕಾರ ಮಂಜೂರಾದ ೩೦೯೪೮ ವಾಸದ ಮನೆಗಳ ಪೈಕಿ ಈಗ ೫೪೪೭ ಮನೆಗಳ ನಿರ್ಮಾಣಕಾರ್ಯ ಮುಗಿದ ಇನ್ನು ೧೨೨೭೧ ಮನೆಗಳ ನಿರ್ಮಾಣಕಾರ್ಯ ದೇಶದಲ್ಲಿ ನಡೆಯುತ್ತಿದೆ.

ಮೈಸೂರು ಸಂಸ್ಥಾನದಲ್ಲಿ ೨೫೫೩ ಮನೆಗಳ ನಿರ್ಮಾಣವು ಮಂಜೂರಾಗಿ ೩೫೮ ಮನೆಗಳನ್ನು ಕಟ್ಟಲಾಗಿದೆ. ೪೪೮ ಮನೆಗಳ ನಿರ್ಮಾಣ ನಡೆಯುತ್ತಿದೆ

೧೯೫೨ ರಿಂದ ವಿವಿಧ ಪ್ರಾಂತ್ಯಗಳಲ್ಲಿ ಈ ಗೃಹನಿರ್ಮಾಣ ಕಾರ್ಯಕ್ಕಾಗಿ ೭೯೫.೦೯ ಲಕ್ಷ ರೂಪಾಯಿಗಳ ಸಹಾಯಧನ ಮತ್ತು ಸಾಲದ ರೂಪದಲ್ಲಿ ಧನಸಹಾಯ ಮಂಜೂರಾಗಿದೆ.

ಇಲ್ಲಿಯವರೆಗೆ ೧೫೧.೨೭ ಲಕ್ಷ ರೂಗಳ ಸಾಲವನ್ನು ವಿವಿಧ ಪ್ರಾಂತ್ಯಗಳಿಗೆ ಕೊಡಲಾಗಿದೆ. ಸಹಾಯ ದ್ರವ್ಯವನ್ನು ಇನ್ನೂ ಕೊಟ್ಟಿಲ್ಲ ೧೯೪೯ ರ ಕಾರ್ಮಿಕರ ವಾಸದ ಮನೆಗಳ ಯೋಜನೆ ಪ್ರಕಾರ ಬೊಂಬಾಯಿ,ಬಿಹಾರ್,ಮೈಸೂರು,ಹೈದರಾಬಾದ್, ಒರಿಸ್ಸಾ ಮತ್ತು ಮಧ್ಯ ಪ್ರದೇಶಗಳಲ್ಲಿ ೨೮೫೦ ವಾಸದ ಮನೆಗಳನ್ನು ಕಟ್ಟಿ ಮುಗಿಸಲಾಗಿದೆ ೯೪೦ ಗೃಹಗಳ ನಿರ್ಮಾಣವಾಗುತ್ತಿದೆ ಎಂದು ಭಾರತ ಸರ್ಕಾರದ ಪತ್ರಿಕಾ ಪ್ರಕಟಣೆಯಿಂದ ತಿಳಿಯಬರುತ್ತದೆ.

● ಆಸ್ಪತ್ರೆಕಾರಿ ಚಿಕಿತ್ಸೆ ನಡೆಸುವುದಾಗಿ ಹುಬ್ಬಳ್ಳಿಗೆ ಹೋಗಿರುವ ಅಮೆರಿಕಾದ ಮಿಷನರಿಗಳಾದ ದಾವೂದ್ ದಂಪತಿಗಳು ಸಾರ್ವಜನಿಕ ಸಭೆಗಳನ್ನು ನಡೆಸಲು ಹುಬ್ಬಳ್ಳಿಯ ಪೌರಸಭಾಧಿಕಾರಿಗಳು ಪ್ರತಿಬಂಧಿಸಿದ್ದಾರೆ.

ಜನರಲ್ ಮೆಕಾರ್ಥರ್-ಅಧ್ಯಕ್ಷ ಐಸೆನ್‌ಹೋವರ್ ಭೇಟಿ

ಕೊರಿಯಾದಲ್ಲಿ ಶ್ರೇಷ್ಠ ದಂಡನಾಯಕರಾಗಿದ್ದು ಟ್ರೂಮನ್ ಸರ್ಕಾರವು ವಜಾಮಾಡಲ್ಪಟ್ಟ ಜನರಲ್ ಮೆಕಾರ್ಥರ್ ಮತ್ತು ಅಮೇರಿಕಾಧ್ಯಕ್ಷ ಜನರಲ್ ಐಸೆನ್ ಹೋವರ್‌ರವರ ಭೇಟಿಯು ಮೊನ್ನೆಯ ದಿನ ವಾಷಿಂಗ್‌ಟನ್‌ನಲ್ಲಿ ನಡೆಯಿತು. ಐಸೆನ್ ಹೋವರ್‌ರವರ ಆಹ್ವಾನವನ್ನು ಮನ್ನಿಸಿ ಜನರಲ್ ಮೆಕಾರ್ಥರ್‌ರವರು ಭೇಟಿಗಾಗಿ ಆಗಮಿಸಿದ್ದರು. ಈ ಭೇಟಿಯ ಕಾಲದಲ್ಲಿ ಉನ್ನತ ಸೈನ್ಯಾಧಿಕಾರಿಗಳೂ ಹಾಜರಿದ್ದರು ಇಂಡೋಚೀಣಾ ಮತ್ತು ದೂರ ಪ್ರಾಚ್ಯಗಳ ವಿಷಯದಲ್ಲಿ ಚರ್ಚೆ ಉಭಯತ್ರರ ನಡುವೆ ನಡೆಯಿತೆಂದೂ ತಿಳಿಯಬರುತ್ತದೆ.

ಶಾಸನಸಭೆ ಹಂಗಾಮಿ ಅಧ್ಯಕ್ಷ

ಹೊಸ ಚುನಾವಣೆಗಳು ನಡೆದಮೇಲೆ ತಿರುವಾಂಕೂರು-ಕೊಚ್ಚಿಯಲ್ಲಿ ಇದೇ ೨೨ನೇ ತಾರೀಖು ಪ್ರಥಮವಾಗಿ ಶಾಸನಸಭಾಧಿವೇಶನವು ಪ್ರಾರಂಭವಾಗುತ್ತದೆ. ಆದಿನ ಸಭೆಯ ಹೊಸ ಅಧ್ಯಕ್ಷರ ಚುನಾವಣೆಯು ನಡೆಯುತ್ತದೆ. ಆ ದಿನದ ಕಾರ್ಯಕಲಾಪಗಳನ್ನು ನಡೆಸಲು ಪ್ರಜಾಸೋಷಲಿಸ್ಟ್ ಪಕ್ಷದ ಶ್ರೀ ಟಿ. ಎಸ್. ರಾಮಸ್ವಾಮಿಯವರನ್ನು ಅಲ್ಲಿಯ ರಾಜಪ್ರಮುಖರು ಹಂಗಾಮಿ ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ.

ಇಂಡೋನೇಷ್ಯಾ ಪತ್ರಿಕಾ ನಿಯೋಗ ಭಾರತಕ್ಕೆ

೬ ಸದಸ್ಯರನ್ನೊಳಗೊಂಡ ಪತ್ರಿಕಾ ನಿಯೋಗವೊಂದು ನಾಳೆಯದಿನ ಇಂಡೋನೇಷ್ಯಾದಿಂದ ಕಲ್ಕತ್ತಾಕ್ಕೆ ಆಗಮಿಸುತ್ತದೆ. ಈ ನಿಯೋಗದವರು ಭಾರತದಲ್ಲಿರುವ ಎಲ್ಲಾ ಪ್ರಮುಖ ಕೈಗಾರಿಕಾ ಮತ್ತು ಇತರ ಪಟ್ಟಣಗಳಿಗೆ ಭೇಟಿ ಕೊಡುತ್ತಾರೆ. ಈ ಭೇಟಿಯಲ್ಲಿ ಬೆಂಗಳೂರು ಮತ್ತು ಮೈಸೂರು ಸಹ ಸೇರಿವೆ.

ಬೌದ್ಧವಿಹಾರ ಪತ್ತೆ

ಶ್ರೀಕಾಕುಲಂಗೆ ೧೦ ಮೈಲಿ ದೂರದಲ್ಲಿ ಸಾಲಿಹುಂದಂ ಎಂಬಲ್ಲಿ ಕ್ರಿಸ್ತಪೂರ್ವ ೪ ಅಥವ ೫ ನೇ ಶತಮಾನದ ಬೌದ್ಧ ವಿಹಾರವು ಪತ್ತೆಯಾಗಿದೆ. ಇಲ್ಲಿ ಆಗಿನ ಕಾಲದ ನಾಣ್ಯಗಳು, ಮಣ್ಣಿನ ಪಾತ್ರೆ ಪ್ರಾಕೃತಭಾಷೆಯ ಶಾಸನಗಳು ದೊರೆತಿವೆ.

ಮಾದಕ ದ್ರವ್ಯಸಾಗಾಣಿಕೆ ಪತ್ತೆ

ರಹದಾರಿಯಿಲ್ಲದೆ ಗೋವಾದಿಂದ ಬೊಂಬಾಯಿಗೆ ಗುಪ್ತವಾಗಿ ತರುತ್ತಿದ್ದ ಒಂದು ಲಕ್ಷ ರೂಪಾಯಿಗಳ ಬೆಲೆ ಬಾಳುವ ಮಾದಕ ದ್ರವ್ಯ ಮತ್ತು ರೇಷ್ಮೆಬಟ್ಟೆ ಮುಂತಾದುವನ್ನು ಬೊಂಬಾಯಿ ಪೋಲೀಸಿನವರು ಪತ್ತೆಮಾಡಿ ವಶಪಡಿಸಿಕೊಂಡಿದ್ದಾರೆ.

ನಗರಾರೋಗ್ಯ

ಮೈಸೂರು ೨೦

ಇದೇ ೧೫ನೇ ತಾರೀಖಿಗೆ ಮುಕ್ತಾಯವಾದ ಪಕ್ಷದಲ್ಲಿ ನಗರದಲ್ಲಿ ಎಲ್ಲಿಯೂ ಪ್ಲೇಗು ಕಾಲರಾ ಮತ್ತು ಸಿಡುಬು ರೋಗಗಳಿರಲಿಲ್ಲ ಆದಾಗ್ಯೂ ಮುಂಜಾಗ್ರತೆಗಾಗಿ ೧೦೬೮ ಮನೆಗಳಿಗೆ ಸೈನೋಗ್ಯಾಸ್ ಮಾಡಲಾಯಿತು, ೫೭೭ ಪ್ರಾಥಮಿಕ ಮತ್ತು ೧೧೫೧ ರೀವ್ಯಾಕ್ಸಿನೇಷನ್, ೪೧೯ ಕಾಲರಾ ನಿರೋಧ ಇನಾಕ್ಯುಲೇಷನ್ ಮಾಡಲಾಯಿತು. ಡಿಫ್ತೀರಿಯಾ ರೋಗವು ಮೂರು ಜನಕ್ಕೆ ತಗಲಿ ಒಂದು ಮರಣವಾಯಿತು. ೪೧ ಡಿಫ್ತೀರಿಯಾ ನಿರೋಧ ಇನಾಕ್ಯುಲೇಷನ್ ಮಾಡಲಾಯಿತು.

ಟೈಫಾಯಿಡ್ ೪ ಜನಕ್ಕೆ ತಗುಲಿ ೨ ಮರಣವಾದುವು ೧೨ ಟೈಫಾಯಿಡ್ ನಿರೋಧ ಇನಾಕ್ಯುಲೇಷನ್ ಮಾಡಲಾಯಿತು.

ಕಡ್ಡಾಯ ಪ್ರಾಂತೀಯ ಸೈನ್ಯಶಿಕ್ಷಣ

ಸರ್ಕಾರಿ ಮತ್ತು ಸಾರ್ವಜನಿಕರ ಉಪಯುಕ್ತ ಸಂಸ್ಥೆಗಳಲ್ಲಿ ಕೆಲಸಮಾಡುವವರಲ್ಲಿ ೨೦ ರಿಂದ ೪೮ ವರ್ಷ ವಯಸ್ಸಿನೊಳಗಿರುವವರಿಗೆಲ್ಲಾ ಕಡ್ಡಾಯ ಪ್ರಾಂತೀಯ ಸೈನ್ಯ ಶಿಕ್ಷಣವನ್ನು ಕೊಡಲಾಗುತ್ತದೆ

-ಮೈಸೂರು ಪೇಟೆಧಾರಣೆ-

ತಾರೀಖು ೧೯—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—೧೪	೨೫ ೧೪
ಎಳ್ಳು	—	—
ಹರಳು	೨೪—೧೪	೨೮—೨
ಹುಚ್ಚೆಳ್ಳು	೩೯—೪	೪೦—೧೪
ಹೊಂಗೆಬೀಜ	೧೬—೮	೨೦—೮
ಹುಣಸೆಬೀಜ	೧೩—೪	೧೩—೬
ಹುರುಳಿ	೨೬—೧೦	೨೮—೬
ಅವರೆ	—	—
ಹೆಸರು	೩೭—೬	೪೦—
ಅಲಸಂದೆ	೩೩—೧೪	೪೩—೮
ಉದ್ದು	—	—
ಕೊತ್ತಂಬರಿ	೨೭—೨	೨೯—
ತೊಗರಿ	೨೪—	೨೫—೮
ಕಡಲೆ	೪೧—೮	೪೩—೧೨
ಸೆಣಬು	೨೨—	೨೯—
ಕಾ|| ಬೀಜ	—	—
ಹುಣಸೆಹಣ್ಣು	೫—	೧೦—
ಸೀಗೆಕಾಯಿ	೩—೮	೪—೧೫
ಮೆಣಸಿನಕಾಯಿ	೨೫—೬	—
ಬೆಲ್ಲ	—	—
ತೆಂಗಿನಕಾಯಿ	೨೫೦—	೩೧೨—

ಪ್ರಜಾಭಿಪ್ರಾಯ ಇಲ್ಲದೆ ಫ್ರೆಂಚ್ ಸ್ವಾಸ್ಥೆಗಳು ಭಾರತಕ್ಕೆ ಸೇರಬೇಕು

ಅಲ್ಲಿಯ ಸಚಿವರುಗಳ ತೀರ್ಮಾನ

ಫ್ರೆಂಚ್ ಸ್ವಾಸ್ಥ್ಯಗಳ ಆಡಳಿತ ಮಂಡಲಿಯಲ್ಲಿರುವ ೬ ಮಂತ್ರಿಗಳ ಪೈಕಿ ೫ ಜನರು ಒಂದು ಹೇಳಿಕೆಯನ್ನಿತ್ತು ಫ್ರೆಂಚ್ ಸ್ವಾಸ್ಥ್ಯಗಳು ಪ್ರಜಾಭಿಪ್ರಾಯಸಂಗ್ರಹಣೆಯನ್ನು ಪಡೆಯದೆಯೇ ಭಾರತದೊಡನೆ ಐಕ್ಯವಾಗಬೇಕೆಂದು ತೀರ್ಮಾನಮಾಡಿ ಈ ವಿಷಯವನ್ನು ಫ್ರೆಂಚ್ ರಾಷ್ಟ್ರಾಧ್ಯಕ್ಷ, ಪ್ರಧಾನಿ ಮತ್ತು ಭಾರತ ಪ್ರಧಾನಿಯವರಿಗೆ ತಿಳಿಸಿರುವುದಾಗಿ ಹೇಳಿದ್ದಾರೆ. ಈ ವಿಷಯದಲ್ಲಿ ಫ್ರೆಂಚ್ ಸರ್ಕಾರವು ಸೂಕ್ತ ಕ್ರಮವನ್ನು ಆದಷ್ಟು ಜಾಗ್ರತೆಯಾಗಿ ತೆಗೆದುಕೊಳ್ಳುವುದೆಂದು ತಾವು ಆಶಿಸುವುದಾಗಿಯೂ ಅವರು ಹೇಳಿದ್ದಾರೆ ಅವರುಗಳು ಈ ವಿಷಯದಲ್ಲಿ ಸುದ್ದಿಗಾರರೊಡನೆ ಮಾತನಾಡುತ್ತಾ ಈ ಸ್ವಾಸ್ಥ್ಯಗಳಲ್ಲಿರುವ ಜನಾಭಿಪ್ರಾಯವನ್ನು ತಾವು ವ್ಯಕ್ತಪಡಿಸುವುದಾಗಿಯೂ ಫ್ರೆಂಚ್ ಸರ್ಕಾರವು ಈ ವಿಷಯದಲ್ಲಿ ಜಾಗ್ರತೆಯಾಗಿ ಯಾವ ತೀರ್ಮಾನವನ್ನೂ ಮಾಡದಿದ್ದರೆ ತಾವು ಒತ್ತಾಯಪಡಿಸುವುದಲ್ಲದೆ ! ಶಾಂತಿಯುತ ಚಳುವಳಿ ನಡೆಸಲು ಸಿದ್ಧವಿರುವುದಾಗಿಯೂ ಹೇಳಿದ್ದಾರೆ.

ಈ ಫ್ರೆಂಚ್ ಸ್ವಾಸ್ಥ್ಯಗಳು ಭಾರತದಲ್ಲಿ ೮ ವಿಭಾಗಗಳಾಗಿವೆ. ಇದರಲ್ಲಿರುವ ಮೇಯರುಗಳು ಸಹ ಈ ತೀರ್ಮಾನಕ್ಕೆ ಪೂರ್ಣಬೆಂಬಲವನ್ನಿತ್ತಿದ್ದಾರೆ. ಇದರಿಂದ ಯಾವ ಪರಿಣಾಮವುಂಟಾದರೂ ತಾವೂ ಮತ್ತು ಅಲ್ಲಿಯ ಜನರು ಸಿದ್ಧರಿರುವುದಾಗಿ ಆ ೫ ಸಚಿವರು ಮತ್ತು ೮ ಮೇಯರುಗಳೂ ತಿಳಿಸಿದ್ದಾರೆ.

ಬೊಂಬಾಯಿನಲ್ಲಿ ಉಪಹಾರ ಮಂದಿರಗಳು

ಬೊಂಬಾಯಿ ನಗರದಲ್ಲಿ ರಹದಾರಿ ಪಡೆದು ನಡೆಸುತ್ತಲಿರುವ ಉಪಹಾರ ಮಂದಿರಗಳು ೪೫೫೮ ಇವೆ. ಮುಂದಿನ ಮಾಹೆ ಒಂದನೇ ತಾರೀಖಿನಿಂದ ಕೇವಲ ಕೆಲವು ವಿನಹ ಮಿಕ್ಕ ಉಪಹಾರ ಮಂದಿರಗಳೆಲ್ಲಾ ರಾತ್ರಿ ೧೧ ಗಂಟೆ ನಂತರ ತೆರೆದಿರಕೂಡದೆಂದು ಅಲ್ಲಿಯ ಸರ್ಕಾರ ಆಜ್ಞೆ ಮಾಡಿದೆ.

ಚಕ್ರಬಂಧಸ್ಪರ್ಧೆ ನಿಷೇಧ

ಮದ್ರಾಸ್ ಪ್ರಾಂತ್ಯದಲ್ಲಿ ಚಕ್ರಬಂಧ ಸ್ಪರ್ಧೆಯನ್ನು ನಿಷೇಧಿಸುವ ಅಥವಾ ಹತೋಟಿಗೊಳಪಡಿಸುವ ವಿಷಯವನ್ನು ಅಲ್ಲಿಯ ಸರ್ಕಾರವು ಪರಿಶೀಲಿಸುತ್ತಿರುವುದಾಗಿ ಶಾಸನಸಭೆಯಲ್ಲಿ ಹಣಕಾಸಿನ ಸಚಿವರು ತಿಳಿಸಿದ್ದಾರೆ.

ಆಂಧ್ರ ವಿದ್ಯಾಸಲಹಾ ಸಮಿತಿಗೆ ಡಾ|| ಕುಪ್ಪುಸ್ವಾಮಿ

ಮೈಸೂರು ೨೦

ಮಹಾರಾಜಾ ಕಾಲೇಜಿನ ಮನಶ್ಶಾಸ್ತ್ರ ವಿಭಾಗದ ಪ್ರೊ|| ಕುಪ್ಪುಸ್ವಾಮಿಯವರನ್ನು ಆಂಧ್ರದಲ್ಲಿ ರಚಿಸಿರುವ ವಿದ್ಯಾಸಲಹಾ ಸಮಿತಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆಯೆಂದು ಹೇಳಲಾಗಿದೆ. ಇವರು ಮುಂದಿನ ತಿಂಗಳು ಅಧ್ಯಕ್ಷ ಪದವಿಯನ್ನು ವಹಿಸಿಕೊಳ್ಳುವರೆಂದು ಹೇಳಲಾಗಿದೆ.

ಸ್ವೀಕಾರ

ರಾಜಧಾನಿಯಿಂದ ಶ್ರೀ ಎಂ. ಎಲ್. ನಾಗಣ್ಣನವರ ಸಂಪಾದಕತ್ವದಲ್ಲಿ ಪ್ರಕಟವಾಗುವ 'ಆತ್ಮವಿಚಾರ' ಎಂಬ ಮಾಸ ಪತ್ರಿಕೆಯನ್ನು ಸ್ವೀಕರಿಸಿದ್ದೇವೆ. ಈ ಸಂಚಿಕೆಯಲ್ಲಿ ಹಲವಾರು ಉಪಯುಕ್ತ ಲೇಖನಗಳಿವೆ,

.... ರಣಜಿತ್ ....
18-3-54 ರಿಂದ ಅಮೋಘ ಪ್ರಾರಂಭ
ಶ್ರೀ ಚೈತನ್ಯ ಮಹಾಪ್ರಭು
[ಹಿಂದಿ]
ಪಾತ್ರ:-ಭರತ್‌ಭೂಷಣ್, ದುರ್ಗಾಕೋಟೆ ಮತ್ತು ಹಿಮಿನಾ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ
ಮುಕ್ತಾಯ 31-3-1954 | ಡ್ರಾಯಿಂಗ್ 19-4-1954
ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ
ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ
ಮೊದಲನೆ ಬಹುಮಾನ 10000 ರೂ
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೬೯

೨೨-೩-೧೯೫೪ ನೇ ಸೋಮವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮುಸ್ಲಿಂಲೀಗಿನಲ್ಲಿ ತೀವ್ರ ಭಿನ್ನಾಭಿಪ್ರಾಯ

ಪಾಕ್ ಪ್ರಧಾನಿ ಮಹಮದ್ ಆಲಿ ರಾಜಿನಾಮೆ ಸಂಭವ

ಪಾಕೀಸ್ತಾನದಲ್ಲಿ ಆಡಳಿತದಲ್ಲಿರುವ ಮುಸ್ಲಿಂ ಲೀಗಿಗೆ ಚುನಾವಣೆಗಳಲ್ಲಿ ವಿಶೇಷವಾಗಿ ಪರಾಭವವುಂಟಾಗಿರುವುದರಿಂದ ಈಗ ಸಂಸ್ಥೆಯಲ್ಲಿಯೇ ವಿಶೇಷವಾಗಿ ಭಿನ್ನಾಭಿಪ್ರಾಯ ತಲೆದೋರುತ್ತಿದೆ. ಈಗಾಗಲೇ ಈ ಪಕ್ಷದ ಅಧ್ಯಕ್ಷ ಮತ್ತು ಪ್ರಧಾನಿಯಾಗಿರುವ ಮಹಮದಾಲಿ ನಾಯಕತ್ವವನ್ನು ಬದಲಾಯಿಸಬೇಕೆಂದು ಪಕ್ಷದ ಪ್ರಮುಖರಲ್ಲಿ ಅಭಿಪ್ರಾಯಪಡುತ್ತಿರುವುದಾಗಿ ತಿಳಿದುಬರುತ್ತದೆ.

ಈಗಾಗಲೇ ಮಹಮದಾಲಿಯವರು ತಮ್ಮ ಪ್ರಧಾನಿ ಸ್ಥಾನಕ್ಕೆ ರಾಜೀನಾಮೆಯನ್ನು ಗೌರ್‍ನರ್ ಜನರಲ್‌ರವರಿಗೆ ಇತ್ತಿರುವುದಾಗಿ ಸುದ್ದಿ ಹೊರಬಿದ್ದಿದೆ.

ಪೂರ್ವಪಾಕೀಸ್ತಾನದ ಚುನಾವಣೆಗಳಲ್ಲಿ ಮುಸ್ಲಿಂಲೀಗಿಗೆ ಜಯಲಭಿಸದೆ ಸಂಯುಕ್ತ ವಿರೋಧ ಪಕ್ಷವು ಬಹುಮತ ಪಡೆದಿರುವುದರಿಂದ ಅಲ್ಲಿ ಆ ಪಕ್ಷ ಹೊಸ ಸರ್ಕಾರವನ್ನು ರಚಿಸಲು ಸೂಚನೆ ಕೊಡಲಾಗುವುದೆಂದೂ ಮಿ|| ಮಹಮದಾಲಿಯವರು ಘೋಷಿಸಿದ್ದಾರೆ. ಈ ಪರಿಣಾಮವಾಗಿ ಕೇಂದ್ರದ ಸಚಿವ ಸಂಪುಟದಲ್ಲಿಯಾಗಲಿ ರಾಜ್ಯಾಂಗ ಸಭೆಯ ಸದಸ್ಯ ವಿಷಯದಲ್ಲಿಯಾಗಲೀ ಯಾವ ಬದಲಾವಣೆಯೂ ಆಗುವುದಿಲ್ಲವೆಂದೂ ಹೇಳಿದ್ದಾರೆ. ಪೂರ್ವಪಾಕಿಸ್ತಾನದಲ್ಲಿ ಈಗಿರುವ ಪ್ರತಿನಿಧಿಗಳೇ ರಾಜ್ಯಾಂಗ ಸಭೆಯಲ್ಲಿ ಮುಂದುವರಿಯಬೇಕೆಂದೂ ಅವರು ಹೇಳಿದ್ದಾರೆ ಆದರೆ ಇದನ್ನು ಪಕ್ಷದ ಕೆಲವು ನಾಯಕರುಗಳು ಒಪ್ಪುತ್ತಿಲ್ಲ.

ಪಕ್ಷದ ನಾಯಕತ್ವದಲ್ಲಿ ತಿರುಳಿಲ್ಲ. ಆದ್ದರಿಂದ ಪಕ್ಷದ ಮುಂದಿನ ಕಾರ್ಯಕ್ರಮಗಳಲ್ಲಿ ತೀವ್ರ ಬದಲಾವಣೆಗಳಾಗಬೇಕೆಂದು ಪಕ್ಷದ ಹಲವು ನಾಯಕರು ಪ್ರತ್ಯೇಕವಾಗಿ ಸಭೆನಡೆಸಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಈಗಿನ ಪರಿಸ್ಥಿತಿಯಲ್ಲಿ ಪಾಕೀಸ್ತಾನದಲ್ಲಿ ಹೊಸ ರಾಜಕೀಯ ಪಕ್ಷವೊಂದು ಜನಿಸುವುದೆಂದೂ ಹೇಳಲಾಗುತ್ತಿದೆ.

ಇನ್ನು ಈ ಮಾಸಾಂತ್ಯದೊಳಗೆ ಪಾಕೀಸ್ತಾನದ ಭವಿಷ್ಯದಲ್ಲಿ ಅನೇಕ ಬದಲಾವಣೆಗಳಾಗುವ ಸಂಭವ ಕಾಣಬರುತ್ತಿದೆ.

○ ದೇಶದಲ್ಲಿ ಹಿಂದಿ ಭಾಷೆಯನ್ನು ಪ್ರಚಾರಮಾಡುವುದಕ್ಕಾಗಿ ಸರ್ಕಾರವು ೫೪—೫೫ ನೇ ಸಾಲಿನಲ್ಲಿ ಸುಮಾರು ೪ ಲಕ್ಷ ರೂಪಾಯಿಗಳನ್ನು ಒದಗಿಸಿದೆ.

ಇನ್ನು ಒಂದೂವರೆ ವರ್ಷದೊಳಗೆ ಕರ್ಣಾಟಕ ಪ್ರಾಂತ್ಯ ರಚನೆ

ಕೆ. ಪಿ. ಸಿ. ಸಿ. ಅಧ್ಯಕ್ಷ ನಿಜಲಿಂಗಪ್ಪನವರ ವಿವರಣೆ

ಬೆಂಗಳೂರು ೨೨

ಇನ್ನು ಒಂದೂವರೆ ವರ್ಷದೊಳಗಾಗಿ ಕರ್ಣಾಟಕ ಪ್ರಾಂತ್ಯ ರಚನೆಯಾಗುವುದಾಗಿ ತನಗೆ ಭರವಸೆಯಿರುವುದು ಕರ್ಣಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್. ನಿಜಲಿಂಗಪ್ಪನವರು ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಮೈಸೂರು ಸಂಸ್ಥಾನವನ್ನು ವಿಭಜಿಸುವ ಪ್ರಶ್ನೆಯೇ ಇಲ್ಲ. ಮೈಸೂರಿನೊಡನೆ ಇತರ ಕನ್ನಡ ಪ್ರದೇಶಗಳು ಸೇರಿ ಕರ್ಣಾಟಕ ರಚನೆಯಾಗಬೇಕಾಗಿದೆ. ಇದನ್ನು ಮೈಸೂರಿನವರೆಲ್ಲರೂ ಒಪ್ಪಿದ್ದಾರೆ ಮೈಸೂರಿನ ರಾಜಪ್ರಮುಖರೇ ಹೊಸ ಪ್ರಾಂತ್ಯಕ್ಕೂ ರಾಜಪ್ರಮುಖರಾಗಿರಲು ಸಹ ಜನತೆಯ ಪೂರ್ಣಬೆಂಬಲವಿದೆ ಆದ್ದರಿಂದ ಕರ್ಣಾಟಕ ಪ್ರಾಂತ್ಯರಚನೆಗೆ ಯಾವ ಅಡ್ಡಿ ಆತಂಕಗಳು ಇಲ್ಲ. ಪ್ರಾಂತ್ಯ ಪುನರ್ವಿಂಗಡನಾ ಸಮಿತಿಯು ಎಷ್ಟುಬೇಗ ಈ ವಿಷಯ ಪರಿಶೀಲಿಸಿ ತನ್ನ ವರದಿಯನ್ನು ಕೇಂದ್ರಕ್ಕೆ ಒಪ್ಪಿಸುತ್ತದೆಯೋ ಅಷ್ಟು ಬೇಗ ಹೊಸ ಪ್ರಾಂತ್ಯರಚನೆಯಾಗಲು ಅವಕಾಶವಾಗುತ್ತದೆ ಎಂದು ಅವರು ಹೇಳಿದ್ದಾರೆ.

ಶ್ರೀಯುತರು ಕೊಡಗಿನ ವಿಷಯವಾಗಿ ಮಾತನಾಡುತ್ತಾ ಸಿ ಸಂಸ್ಥಾನಗಳು ಇನ್ನು ಮುಂದೆ ಉಳಿಯುವುದಿಲ್ಲ ಅವುಗಳು ಅಕ್ಕಪಕ್ಕದ ಪ್ರಾಂತ್ಯಗಳೊಡನೆ ಸೇರಲೇಬೇಕಾಗಿದೆ. ಈ ಪುನರ್ವಿಂಗಡ ಸಮಯದಲ್ಲಿ ಕೊಡಗು ಮೈಸೂರಿನೊಡನೆ ಸೇರಲೇಬೇಕಾಗುತ್ತದೆ ಎಂದು ಅವರು ಹೇಳಿದ್ದಾರೆ.

ಹೈದರಾಬಾದಿನ ವಿಷಯವಾಗಿ ಅವರು ಮಾತನಾಡುತ್ತಾ ಎಲ್ಲಾ ಸಂಸ್ಥಾನಗಳೂ ಪುನರ್ವಿಂಗಡನೆಯಾಗುವಾಗ ಹೈದರಾಬಾದ್ ಈಗಿರುವಂತೆಯೇ ಉಳಿಯಲು ಸಾಧ್ಯವೇ ಇಲ್ಲ. ಹೈದರಾಬಾದಿನ ರಾಜಪ್ರಮುಖರು ಹೊಸ ವಿಶಾಲಾಂಧ್ರದ ರಾಜಪ್ರಮುಖರಾಗುವಂತೆ ಅಲ್ಲಿಯ ಜನರು ಒಪ್ಪಿದರೆ ಕಾರ್ಯವು ಸುಗಮವಾಗಿ ನಡೆಯುವುದೆಂದೂ ಅವರು ಹೇಳಿದ್ದಾರೆ.

● ಒರಿಸ್ಸಾದ ಗೌರ್‍ನರ್ ಶ್ರೀ ಕುಮಾರಸ್ವಾಮಿ ರಾಜಾರವರು ತಮ್ಮ ಸ್ವಗ್ರಾಮವಾದ ರಾಜಪಾಳ್ಯಂನಲ್ಲಿ ಸುಮಾರು ೫೦ ಸಾವಿರ ರೂ. ಬೆಲೆಬಾಳುವ ಸ್ವಗೃಹ ಮತ್ತು ಅದಕ್ಕೆ ಸೇರಿರುವ ನಿವೇಶನವನ್ನು ಗಾಂಧಿ ಸಂಸ್ಕೃತಿ ಕೇಂದ್ರ ಸ್ಥಾಪನೆಗಾಗಿ ದಾನಮಾಡಿದ್ದಾರೆ.

ಅಗರಬತ್ತಿ ಕೈಗಾರಿಕೆಗೆ ಮಾರಾಟ ತೆರಿಗೆ ವಿನಾಯಿತಿ ಕೊಡಿ

ಮೈಸೂರು ೨೨

ಸಂಸ್ಥಾನದಲ್ಲಿ ಅಗರಬತ್ತಿ ಕೈಗಾರಿಕೆಯನ್ನು ಗೃಹ ಕಸುಬೆಂದು ಪರಿಗಣಿಸಿ ಅದಕ್ಕೆ ಮಾರಾಟ ತೆರಿಗೆ ವಿನಾಯಿತಿಕೊಡಬೇಕೆಂದೂ ಇಲ್ಲವಾದರೆ ಆ ಉದ್ಯೋಗದಲ್ಲಿ ರುವವರಿಗೆ ವಿಶೇಷ ತೊಂದರೆಯುಂಟಾಗುವುದೆಂದೂ ಮನವಿಸಿಕೊಳ್ಳಲು ಮೈಸೂರು ನಗರ ಅಗರಬತ್ತಿ ತಯಾರಿಕೆಗಾರರಾದ ಶ್ರೀಗಳಾದ ಟಿ. ಎಸ್. ಎಸ್. ಉಪಾಧ್ಯಾಯ, ಎಲ್. ನರಸಿಂಹಯ್ಯ, ಎಸ್. ಎಸ್ ಶಾಸ್ತ್ರಿ ಮುಂತಾದವರು ಮುಖ್ಯಮಂತ್ರಿಗಳಲ್ಲಿ ನಿಯೋಗ ಹೋಗಿದ್ದಾರೆ.

ವಿಮಾನ ದಳದ ವಾರ್ಷಿಕೋತ್ಸವ

ಭಾರತ ವಿಮಾನ ದಳದ ೨೧ ನೇ ವಾರ್ಷಿಕೋತ್ಸವವು ಬರುವ ಏಪ್ರಿಲ್ ಒಂದನೇ ತಾರೀಖಿನ ದಿನ ನಡೆಯುತ್ತದೆ. ಆ ದಿನ ಭಾರತ ವಿಮಾನ ದಳದ ಶ್ರೇಷ್ಠ ದಂಡನಾಯಕರಾಗಿ ಏರ್ ಮಾರ್ಷಲ್ ಮುಖರ್ಜಿಯವರು ಅಧಿಕಾರ ವಹಿಸಿಕೊಳ್ಳುತ್ತಾರೆ. ಈ ಸ್ಥಾನಕ್ಕೆ ಬರುವ ಭಾರತೀಯರಲ್ಲಿ ಇವರೇ ಮೊದಲನೆಯವರು.ಆದಿನ ದೆಹಲಿಯಲ್ಲಿ ವಿಶೇಷ ಸಮಾರಂಭಗಳನ್ನು ಏರ್ಪಡಿಸಲಾಗಿದೆ. ವಿಮಾನ ದಳದವರು 'ವೈಮಾನಿಕ ಯುದ್ಧ ಪ್ರದರ್ಶನ' ವನ್ನು ನಡೆಸಲಿರುವರು.

ವಿರೋಧ ಪಕ್ಷಕ್ಕೆ ೧೮೭ ಸ್ಥಾನಗಳು

ಪೂರ್ವ ಪಾಕಿಸ್ಥಾನದ ಮಹಾಚುನಾವಣೆಗಳಲ್ಲಿ ಇಲ್ಲಿಯವರೆಗೆ ಪ್ರಕಟವಾಗಿರುವ ೨೦೫ ಫಲಿತಾಂಶಗಳಲ್ಲಿ ಸಂಯುಕ್ತ ಜನತಾ ಪಕ್ಷವು ೧೮೭ ಸ್ಥಾನಗಳನ್ನು ಗಳಿಸಿದೆ. ಮುಸ್ಲಿಂಲೀಗ್ ೭ ಸ್ಥಾನಗಳನ್ನು ಮಾತ್ರ ಪಡೆದಿದೆ.

ಸಚಿವರ ವಜಾ

ಪಾಕೀಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಮರಾಮತ್ ಶಾಖಾ ಸಚಿವ ಖಾಜಿ ಅಬ್ದುಲ್ ಮನ್ನಾನ್‌ರವರನ್ನು ಅಲ್ಲಿಯ ಗೌರ್‍ನರ್‌ರವರು ಕಾರಣ ತಿಳಿಸದೆ ವಜಾ ಮಾಡಿದ್ದಾರೆ.

ಪುರಸಭೆ ಮಾಹೆಯಾನ ಅಧಿವೇಶನ

ಮೈಸೂರು ೨೨

ಪುರಸಭೆಯ ಮಾಹೆಯಾನಾ ಅಧಿವೇಶನವು ಇದೇ ೨೬ನೇ ತಾರೀಖು ಶುಕ್ರವಾರ ಮಧ್ಯಾಹ್ನ ೪ ಗಂಟೆಗೆ ನಡೆಯುತ್ತದೆ.

ಮೂಲಶಿಕ್ಷಣವನ್ನು ಜಾರಿಗೆ ತಂದು ಪ್ರೋತ್ಸಾಹಿಸಲು ಪುರಸಭೆಯು ನಗರದಲ್ಲಿ ಒಂದು ಮೂಲ ಶಿಕ್ಷಣ ಶಾಲೆಯನ್ನು ಸ್ಥಾಪಿಸಬೇಕೆಂದು ಶ್ರೀ ಬಿ. ಜಿ. ದಾಸ್‌ರವರು ಒಂದು ನಿರ್ಣಯವನ್ನು ಈ ಸಭೆಯಲ್ಲಿ ಮಂಡಿಸಲಿರುವರು.

ಪುರಸಭೆಯ ಸರಹದ್ದಿನಲ್ಲಿ ಗೊಬ್ಬರವನ್ನು ತುಂಬಿಕೊಂಡು ಹೋಗಲು ಹೊರಗಿನಿಂದ ಬರುವ ಗಾಡಿಗಳಿಗೆ ತಲಾ ಒಂದು ರೂಪಾಯಿನಂತೆ ಸುಂಕ ವಿಧಿಸಬೇಕೆಂದು ಮತ್ತೊಂದು ನಿರ್ಣಯವನ್ನು ಶ್ರೀ ಎಂ. ಕೆ. ಲಿಂಗಯ್ಯನವರು ತರಲಿರುವರು.

ವೀಳೆದೆಲೆ ತೋಟಗಳನ್ನು ಕೂಡಲೇ ಬೇರೆಡೆಗೆ ವರ್ಗಾಯಿಸಲು ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೋರುವ ನಿರ್ಣಯವನ್ನು ಶ್ರೀ ಶ್ರೀಕಂಠಮೂರ್ತಿಯವರು ಮಂಡಿಸಲಿದ್ದಾರೆ.

ಹರಿಜನ ದಿನಾಚರಣೆ

ಮೈಸೂರು ೨೨

ಇದೇ ೨೭ನೇ ತಾರೀಖು ಮೈಸೂರು ನಗರದಲ್ಲಿ ಸ್ಥಳೀಯ ಸೇವಾದಳ, ಸ್ಕೌಟುಗಳು ಮುಂತಾದವರ ನೆರವು ಪಡೆದು ಹರಿಜನ ದಿನಾಚರಣೆಯನ್ನು ನಡೆಯಲೇರ್ಪಾಡು ಮಾಡಲಾಗಿದೆ.

ಇದರ ಕಾರ್ಯಕ್ರಮವು ಈರೀತಿಯಿದೆ:-

೨೬ನೇ ತಾರೀಖು ಶುಕ್ರವಾರಕ್ಕೆ ಮುಂಚೆಯೇ ಹರಿಜನ ವಸತಿಗಳಲ್ಲಿ ಆಟಪಾಟ ಸ್ಪರ್ಧೆ ನಡೆಯುತ್ತೆ. ಆದಿನ ದೇವರ ಭಜನೆ, ವಸತಿ ನಿರ್ಮಲೀಕರಣ ಮುಂತಾದುವು ನಡೆಯುತ್ತವೆ ಸ್ಪರ್ಧೆಗಳಲ್ಲಿ ಭಾಗವಹಿಸುವವರು ಇದೇ ೨೫ನೇ ತಾ|| ಒಳಗೆ ತಮ್ಮ ಇಂಗಿತವನ್ನು ವ್ಯಕ್ತಪಡಿಸಬೇಕಾಗಿದೆ.

೨೭ನೇ ತಾರೀಖು ಶನಿವಾರ ಪುರಭವನದಲ್ಲಿ ಸ್ಪರ್ಧಿಗಳಿಗೆ ಬಹಿರಂಗ ಸಭೆಯಲ್ಲಿ ಬಹುಮಾನಗಳನ್ನು ಹಂಚಲಾಗುತ್ತದೆ.

ಪುರಸಭೆಯ ವಿಶೇಷ ಅಧಿವೇಶನ

ಮೈಸೂರು ೨೨

ಪುರಸಭೆಯ ವಿಶೇಷ ಅಧಿವೇಶನವೊಂದು ಇದೇ ೨೬ನೇ ತಾರೀಖು ಸಂಜೆ ೬-೩೦ ಗಂಟೆಗೆ ಪುರಸಭೆಗೆ ನ್ಯಾಯವಾದಿಗಳನ್ನು ಆರಿಸುವುದಕ್ಕಾಗಿ ನಡೆಯುತ್ತದೆ. ಶ್ರೀಗಳಾದ ಎಂ. ಆರ್. ನರಸಿಂಹಮೂರ್ತಿ ಜಿ. ಎಸ್. ನಾರಾಯಣರಾವ್, ಎಸ್. ಸುಂದರರಾವ್ ಮತ್ತು ಕೆ. ಎಸ್. ಸೂರ್ಯನಾರಾಯಣರಾವ್‌ರವರು ಉಮೇದುವಾರರು.

ಸತ್ಯನಾರಾಯಣಸ್ವಾಮಿ ವ್ರತ

ಮೈಸೂರು ೨೨

ಶ್ರೀ ಸಹಸ್ರಚಂಡೀ ಯಾಗವು ಫಲಪ್ರದವಾಗಿ ನಡೆದ ಸಂತೋಷಾರ್ಥವಾಗಿ ಚಾಮುಂಡಿ ಬೆಟ್ಟದಲ್ಲಿ ಸತ್ಯನಾರಾಯಣ ಸ್ವಾಮಿಯ ವ್ರತ ಮತ್ತು ಹೋಮಕುಂಡದ ಶುದ್ಧಿಕಾರ್ಯಗಳು ನಿನ್ನೆಯ ದಿನ ರಾತ್ರಿ ಅತ್ಯಂತ ವಿಜೃಂಭಣೆಯಿಂದ ನಡೆಯಿತು. ಈ ಕಾರ್ಯಗಳು ನಡೆದನಂತರ ಪ್ರಸಾದ ವಿನಿಯೋಗ ಮತ್ತು ಭೋಜನಕೂಟ ನಡೆಯಿತು.

ಈ ಸಮಾರಂಭಕ್ಕೆ ಗೃಹಸಚಿವ ಶ್ರೀ ಹೆಚ್. ಸಿದ್ಧವೀರಪ್ಪನವರು, ಅನೇಕ ಉನ್ನತಾಧಿಕಾರಿಗಳು, ನಗರದ ಗಣ್ಯ ಮಹನೀಯರು ಆಗಮಿಸಿದ್ದರು.

ಈ ಮಹಾಯಾಗವು ಇಷ್ಟು ಯಶಸ್ವಿಯಾಗಿ ನಡೆದುದಕ್ಕೆ ಸಚಿವರು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಪಾರ್ಲಿಮೆಂಟ್ ಸದಸ್ಯರಿಗೆ ಸಂಬಳ

ಪಾರ್ಲಿಮೆಂಟ್ ಅಧಿವೇಶನ ನಡೆಯುವಾಗ ಸದಸ್ಯರಿಗೆ ೪೦ ರೂಪಾಯಿ ದಿನಭತ್ಯ ಮತ್ತು ಪ್ರಯಾಣಕ್ಕಾಗಿ ಒಂದು-ಐದನೆ ಮೂರು ಒಂದನೇ ರೈಲ್ ತರಗತಿ ದರ ಪ್ರಕಾರ ಈಗ ಕೊಡಲಾಗುತ್ತಿವೆ. ಇದನ್ನು ನಿಲ್ಲಿಸಿ ಇನ್ನು ಮುಂದೆ ಮಾಹೆಯಾನ ೪೦೦ ರೂ ಸಂಬಳ, ಅಧಿವೇಶನ ನಡೆಯುವಾಗ ೧೫ ರೂ ದಿನ ಭತ್ಯ ಮತ್ತು ವರ್ಷದಲ್ಲಿ ಭಾರತದಲ್ಲಿ ಎಲ್ಲಿಬೇಕಾದರೂ ಪ್ರಯಾಣ ಮಾಡುವಂತೆ ೨ ಎರಡನೇ ತರಗತಿ ಮತ್ತು ಒಂದು ಮೂರನೇ ತರಗತಿ ರೈಲು ಪಾಸುಗಳನ್ನು ಕೊಡುವ ವಿಷಯವನ್ನು ಕೇಂದ್ರ ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ತಿಳಿಯಬರುತ್ತದೆ.

ಅಮೆರಿಕದ ಭಾರತೀಯರು

ಅಮೆರಿಕಾದಲ್ಲಿ ನೆಲಸಿರುವ ಭಾರತೀಯರ ಸಂಖ್ಯೆಯು ಈಗ ೨,೫೭,೦೦೦ ಇರುವುದಾಗಿ ತಿಳಿಯಬರುತ್ತದೆ.

ಇವರ ಉಪಯೋಗಕ್ಕಾಗಿಯೇ ಅಮೆರಿಕಾದಲ್ಲಿ ೫ ಕೋಟಿ ೬೦ ಲಕ್ಷ ಎಕರೆಗಳಷ್ಟು ಜಮೀನನ್ನು ಮೀಸಲಾಗಿಡಲಾಗಿದೆ. ಅವರು ಎಲ್ಲಿಬೇಕಾದರೂ ಆಸ್ತಿಯನ್ನು ಮಾಡಿಕೊಳ್ಳಬಹುದು. ಎಲ್ಲಿ ಬೇಕಾದರೂ ಕೆಲಸಕ್ಕೆ ಸೇರಿಕೊಳ್ಳಬಹುದು ತಮ್ಮ ಮಕ್ಕಳನ್ನು ತಮ್ಮಿಷ್ಟಬಂದ ಶಾಲೆಗಳಿಗೆ ಕಳುಹಿಸಬಹುದು ಯಾವರೀತಿಯ ಅಡ್ಡಿ ಆತಂಕಗಳೂ ಇಲ್ಲವೆಂದು ತಿಳಿಯಬರುತ್ತದೆ.

ಸಂಸ್ಕೃತ ವಿಶ್ವಪರಿಷತ್ತಿನ ಸಮ್ಮೇಳನ

ಭಾರತಾದ್ಯಂತವಿರುವ ಸಂಸ್ಕೃತ ಪಂಡಿತರುಗಳ ಸಂಸ್ಕೃತ ವಿಶ್ವಪರಿಷತ್ ಸಮ್ಮೇಳನವು ಇದೇ ಏಪ್ರೆಲ್ ೨೪ ನೇ ತಾರೀಖು ನಾಗಪುರದಲ್ಲಿ ನಡೆಯುತ್ತದೆ.

ಫ್ರೆಂಚ್ ಸ್ವಾಸ್ಥ್ಯಗಳಲ್ಲಿ ಹಿಂಸಾಕೃತ್ಯಗಳು

ಭಾರತ ಸರ್ಕಾರದ ತೀವ್ರ ಪ್ರತಿಭಟನೆ

ಫ್ರೆಂಚ್-ಭಾರತದಲ್ಲಿರುವ ಸಚಿವರು ಮತ್ತು ಮೇಯರುಗಳು ಇತ್ತೀಚೆಗೆ ಈ ಸ್ವಾಸ್ಥ್ಯಗಳು ಪ್ರಜಾಭಿಪ್ರಾಯ ಸಂಗ್ರಹಣೆಯನ್ನು ಪಡೆಯದೆಯೇ ಭಾರತದೊಡನೆ ವಿಲೀನವಾಗಬೇಕೆಂದು ಹೇಳಿರುವ ಠರಾವನ್ನು ಕಾರೈಕಲ್ಲಿನಲ್ಲಿರುವ ಸಂಯುಕ್ತ ವಿಲೀನೀಕರಣ ಸಮಿತಿಯು ಸ್ವಾಗತಿಸಿದೆ. ಈ ವಿಷಯದಲ್ಲಿ ಫ್ರೆಂಚ್ ಸರ್ಕಾರವು ಕೂಡಲೇ ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ತಾನು ಆಶಿಸುವುದಾಗಿಯೂ ಸಮಿತಿ ನಿರ್ಣಯವಾಗಿದೆ.

ಪಾಂಡಿಚೇರಿಯಲ್ಲಿ ಇತ್ತೀಚೆಗೆ ಈ ವಿಲೀನೀಕರಣ ಚಳುವಳಿಯು ಹೆಚ್ಚು ಹೆಚ್ಚಾಗಿ ನಡೆಯುತ್ತಿದೆ. ಇದನ್ನು ತಡೆಗಟ್ಟಲು ಫ್ರೆಂಚ್ ಪೋಲೀಸರ ಹಿಂಸಾಕೃತ್ಯಗಳು ಹೆಚ್ಚುತ್ತಲಿರುವುದಾಗಿ ತಿಳಿದುಬರುತ್ತದೆ. ಈಗಾಗಲೇ ವಿಲೀನೀಕರಣ ಸಮಿತಿ ಸದಸ್ಯರಲ್ಲಿ ಅನೇಕರ ಮೇಲೂ ಹಿಂಸಾಕೃತ್ಯಗಳು ನಡೆಯುತ್ತಿವೆ ಈ ವಿಷಯದಲ್ಲಿ ಭಾರತ ಸರ್ಕಾರವು ಫ್ರೆಂಚ್ ಸರ್ಕಾರಕ್ಕೆ ತನ್ನ ಪ್ರತಿಭಟನೆಯನ್ನು ವ್ಯಕ್ತಪಡಿಸಿದೆ.

ಗುಪ್ತರಕಾಲದ ನಾಣ್ಯಗಳ ಪತ್ತೆ

ಸೌರಾಷ್ಟ್ರದ ಗ್ರಾಮವೊಂದರಲ್ಲಿ ೧೫೦೦ ವರ್ಷಗಳ ಹಿಂದಿನ ಗುಪ್ತರಕಾಲದ ೫೬೦ ಬೆಳ್ಳಿ ನಾಣ್ಯಗಳು ದೊರೆತಿವೆ ಆ ನಾಣ್ಯಗಳಲ್ಲಿ ಕುಮಾರಗುಪ್ತನ ಚಿತ್ರವಿದೆ ಒಂದು ಭಾಗದಲ್ಲಿಒಂದು ಪಕ್ಷಿ ಅದರ ಸುತ್ತಲೂ 'ಪರಮ ಭಾಗವತ ರಾಜಾಧಿರಾಜ ಶ್ರೀ ಕುಮಾರಗುಪ್ತ ಮಹೇಂದ್ರಾದಿತ್ಯ' ಎಂಬ ಅಕ್ಷರಗಳಿವೆ.

ಈರೀತಿಯ ನಾಣ್ಯಗಳು ಅದರಲ್ಲೂ ಈ ಪ್ರಮಾಣದಲ್ಲಿ ದೊರೆತಿರುವುದು ಇದೇ ಮೊದಲನೇಸಲವೆಂದು ತಿಳಿಯಬರುತ್ತದೆ.

ನೂತನ ಶಾಸನ ಸಭಾಧಿವೇಶನ

ತಿರುವಾಂಕೂರ್-ಕೊಚ್ಚಿಯ ನೂತನ ಶಾಸನ ಸಭಾಧಿವೇಶನವು ಈದಿನ ಪ್ರಾರಂಭವಾಯಿತು. ಈ ಬೆಳಿಗ್ಗೆಯೆಲ್ಲಾ ಹೊಸ ಸದಸ್ಯರ ಪ್ರಮಾಣವಚನ ಸ್ವೀಕಾರ ನಡೆಯಿತು. ಈ ಮಧ್ಯಾಹ್ನ ಹೊಸ ಸಭಾಧ್ಯಕ್ಷರ ಚುನಾವಣೆ ಮತ್ತು ಸಂಜೆ ಸಭೆಯನ್ನುದ್ದೇಶಿಸಿ ರಾಜಪ್ರಮುಖರ ಭಾಷಣ ನಡೆಯುತ್ತದೆ. ಈ ಅಧಿವೇಶನವು ಬುಧವಾರದವರೆಗೆ ಮಾತ್ರ ಸದ್ಯಕ್ಕೆ ನಡೆಯುವುದೆಂದು ತಿಳಿಯಬರುತ್ತದೆ.

ಮಿಲ್ ಬಟ್ಟೆಮೇಲೆ ಹತೋಟಿ

ಪಾಕೀಸ್ತಾನದಲ್ಲಿ ಮಿಲ್‌ಬಟ್ಟೆಗಳ ಮೇಲೆ ಹತೋಟಿಯನ್ನು ವಿಧಿಸಲಾಗಿದೆ.

ಮೈಸೂರು ಪ್ರಾಜೆಕ್ಟ್ ದಿನಾಚರಣೆ

ಮೈಸೂರು ೨೨

ವಿಶ್ವವಿದ್ಯಾನಿಲಯದ ಟೀಚರ್ಸ್ ಕಾಲೇಜು ಮತ್ತು ಮರಿಮಲ್ಲಪ್ಪ ಹೈ ಮತ್ತು ಸ್ಕೂಲುಗಳು 'ಮೈಸೂರು ಪ್ರಾಜೆಕ್ಟ್' ದಿನವನ್ನು ಏರ್ಪಡಿಸುವರು ಈ ಸಂಬಂಧದಲ್ಲಿ ನಿನ್ನೆಯ ದಿನ ಟೀಚರ್ಸ್ ಕಾಲೇಜಿನ ಪ್ರಿನ್ಸಿಪಾಲ್‌ರವರು ನಗರದ ಪತ್ರಿಕೋದ್ಯಮಿಗಳನ್ನು ಆಹ್ವಾನಿಸಿ ಈ ದಿನಾಚರಣೆ ವಿಷಯವಾಗಿ ವಿವರಗಳನ್ನು ಇತ್ತರು. ಇದರ ಸಂಬಂಧದಲ್ಲಿ ಏರ್ಪಡಿಸಿರುವ ವಸ್ತುಪ್ರದರ್ಶನವನ್ನು ತೋರಿಸಿ ಎಲ್ಲಾ ವಿವರಗಳನ್ನಿತ್ತರು.

ಕಾಲೇಜು ಮತ್ತು ಶಾಲಾ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳು ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸ, ಕೈಗಾರಿಕೆ ಮುಂತಾದುವುಗಳಿಗೆ ಸಂಬಂಧಪಟ್ಟಂತೆ ಅಂಕಿ ಅಂಶಗಳನ್ನು ತೋರಿಸುವ ನಕ್ಷೆಗಳು, ಗಣಿತ ಶಾಸ್ತ್ರ ಮುಂತಾದುವುಗಳನ್ನು ಬೋಧಿಸಲು ಅನುಕೂಲವಾಗುವ ನಾನಾ ರೀತಿಯ ಆಕೃತಿಗಳು ಮುಂತಾದುವನ್ನು ತಯಾರಿಸಿ ಅಲ್ಲಿ ಇಟ್ಟಿದುವರು.

ಈ ದಿನ ಸಂಜೆ ೬ ಗಂಟೆಗೆ ವಿದ್ಯಾ ಮುಖ್ಯಾಧಿಕಾರಿ ಶ್ರೀ ಜೆ ಬಿ. ಮಲ್ಲಾರಾಧ್ಯರವರ ಅಧ್ಯಕ್ಷತೆಯಲ್ಲಿ ಈ ದಿನಾಚರಣೆ ನಡೆಯಲಿದೆ.

ಕುದುರೆ ಜೂಜು

ಮೈಸೂರು ೨೨

ಮೈಸೂರು ನಗರದಲ್ಲಿ ಮೇ ೨೩. ೨೬, ೩೦ ಮತ್ತು ಜೂನ್ ೨, ೬, ೯ನೇ ತಾರೀಖುಗಳಲ್ಲಿಯೂ ಬೆಂಗಳೂರಿನಲ್ಲಿ ಜೂನ್ ೧೬, ೨೦, ೨೩, ೨೭, ೩೦ ಜುಲೈ ೪, ೭, ೧೧, ೧೪, ೧೮, ೨೧, ೨೫, ೨೮ ಮತ್ತು ಆಗಸ್ಟ್ ೧ ಮತ್ತು ೪ ನೇ ತಾರೀಖುಗಳಲ್ಲಿಯೂ ಕುದುರೆಜೂಜು ನಡೆಯುತ್ತೆ.

ಪಾಕ್-ಅಮೆರಿಕಾ ಮಿಲಿಟರಿ ನೆರವು ಖಂಡನೆ

ಪೂರ್ವ ಪಾಕೀಸ್ತಾನದ ಡಕ್ಕಾದಲ್ಲಿ ವಿದ್ಯಾರ್ಥಿಗಳ ಸಭೆಯೊಂದು ನಡೆದು ಪಾಕೀಸ್ತಾನ ಅಮೆರಿಕಾಗಳ ನಡುವಿನ ಮಿಲಿಟರಿ ಒಪ್ಪಂದವನ್ನು ತೀವ್ರವಾಗಿ ಖಂಡಿಸಲಾಗಿದೆ.

ಭಾರತಕ್ಕೆ ಪತ್ರಿಕಾನಿಯೋಗ

ಭಾರತದ ಪ್ರಮುಖ ಪಟ್ಟಣಗಳಲ್ಲಿ ೪ ವಾರಕಾಲ ಪ್ರವಾಸ ನಡೆಸಲು ಇಂಡೋನೇಷ್ಯಾದಿಂದ ೬ ಜನ ಸದಸ್ಯರನ್ನೊಳಗೊಂಡ ನಿಯೋಗವೊಂದು ದೆಹಲಿಗೆ ಆಗಮಿಸಿದೆ.

ಉಪವಾಸ ಮುಕ್ತಾಯ

ಬೆಂಗಳೂರು ೨೨

ಮುನೀಶ್ವರ ದೇವಸ್ಥಾನದ ಅರ್ಚಕರ ಮನೆಯನ್ನು ಒಡೆದುದನ್ನು ಪ್ರತಿಭಟಿಸಿ ಶ್ರೀ ಡಿ. ಎಸ್. ಕೃಷ್ಣಯ್ಯಶೆಟ್ಟರು ಪ್ರಾರಂಭಿಸಿದ್ದ ಉಪವಾಸವನ್ನು ಮೊನ್ನೆಯ ದಿನ ಮುಕ್ತಾಯಗೊಳಿಸಿದರು. ಅರ್ಚಕರಿಗೆ ಪರಿಹಾರ ಕೊಡುವ ವಿಷಯವನ್ನು ಪರಿಶೀಲಿಸುವುದಾಗಿ ರೆವಿನ್ಯೂ ಸಚಿವ ಶ್ರೀ ಕಡಿದಾಳ್‌ರವರು ಭರವಸೆ ಇತ್ತಮೇಲೆ ಉಪವಾಸವನ್ನು ನಿಲ್ಲಿಸಲಾಯಿತು

ಪಾನನಿರೋಧ ನೀತಿ ಮಾರ್ಪಾಡಿಗೆ ನೆಹರು ಒಪ್ಪಿಗೆ ?

ಆಂಧ್ರದಲ್ಲಿ ಪಾನನಿರೋಧ ನೀತಿಯನ್ನು ರಾಮಮೂರ್ತಿ ಸಮಿತಿಯ ಸಲಹೆಗಳ ಪರಿಶೀಲನೆಯ ಮೇಲೆ ಸೂಕ್ತ ಮಾರ್ಪಾಡು ಮಾಡಲು ಪ್ರಧಾನಿ ನೆಹರೂರವರು ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿರುವುದಾಗಿ ತಿಳಿಯಬರುತ್ತದೆ

ಅಖಿಲ ಭಾರತ ತಯಾರಿಕೆಗಾರರ ಸಮ್ಮೇಳನ

ಅಖಿಲ ಭಾರತ ತಯಾರಿಕೆಗಾರರ ೧೪ ನೇ ಸಮ್ಮೇಳನವು ಇದೇ ೨೭ ಮತ್ತು ೨೮ ನೇ ತಾರೀಖುಗಳಲ್ಲಿ ಕಲ್ಕತ್ತಾದಲ್ಲಿ ಡಾ|| ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಡಾ|| ಬಿ. ಸಿ. ರಾಯ್‌ರವರು ಈ ಸಮ್ಮೇಳನದ ಉದ್ಘಾಟನೆ ನಡೆಸುವರು.

● ಭಾರತದಲ್ಲಿ ಆರೋಗ್ಯ, ವೈದ್ಯಸೇವೆ ಮತ್ತು ನರ್ಸಿಂಗ್ ಬಾಬುಗಳಲ್ಲಿ ವಿಶೇಷ ರೀತಿಯ ಪ್ರಗತಿಯನ್ನು ಸಾಧಿಸಲಾಗಿದೆಯೆಂದು ಮಾಜಿ ಗೌರ್ನರ್ ಜನರಲ್‌ರವರ ಪತ್ನಿ ಲೇಡಿ ಮೌಂಟ್‌ಬೇಟನ್‌ರವರು ಪ್ರಶಂಸಿಸಿದ್ದಾರೆ.

ರಾಷ್ಟ್ರೀಯ
ವಿದ್ಯೋದಯ ನಿಧಿ ಲಾಟರಿ
ಮುಕ್ತಾಯ 31-3-1954 ಡ್ರಾಯಿಂಗ್ 19-4-1954
ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು
ಮತ್ತು
ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ
ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ
ಮೊದಲನೆ ಬಹುಮಾನ 10000 ರೂ
ಒಟ್ಟು 2000 ಬಹುಮಾನಗಳು.
ಬಹುಮಾನದ ಮೊಬಲಗು 45000 ರೂ.
ಟಿಕೇಟು ಒಂದಕ್ಕೆ ಒಂದೇರೂಪಾಯಿ.
ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೭೦

೨೩-೩-೧೯೫೪ ನೇ ಮಂಗಳವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಹಿರಿಯ ಶಾಸನಸಭೆಗೆ ಚುನಾವಣೆ

ಬೆಂಗಳೂರು ೨೩

ಶಾಸನ ಸಭೆಯಿಂದ ಮೈಸೂರು ವಿಧಾನ ಪರಿಷತ್ತಿಗೆ ಚುನಾವಣೆ ನಡೆದು ಕಾಂಗ್ರೆಸ್ಸಿಗರಾದ ಶ್ರೀಗಳಾದ ಮರಿಸ್ವಾಮಯ್ಯ, ಎಲ್. ಹೆಚ್. ತಿಮ್ಮಬೋಯಿ ಪಿ. ತಿರುಮಲೆಗೌಡ ಮತ್ತು ಎಂ. ವೆಲ್ಲೂರಿಯವರೂ, ಪ್ರಜಾಸೋಷಲಿಸ್ಟ್ ಪಕ್ಷದ ಶ್ರೀ ಬಿ ಕೆ ಪುಟ್ಟರಾಮಯ್ಯನವರು ಚುನಾಯಿತರಾಗಿದ್ದಾರೆ.

ಭಾರತಕ್ಕೆ ಪೋರ್ಚುಗೀಸ್ ಪ್ರತಿಭಟನೆ

ಭಾರತದೊಡನೆ ಪೋರ್ಚುಗೀಸ್ ಗೋವಾ ಸೇರಬೇಕೆಂದು ಹೇಳಿ ಅಂತಹ ವಿಲೀನೀಕರಣ ಚಟುವಟಿಕೆಗಳಿಗೆ ಪ್ರೋತ್ಸಾಹವನ್ನು ಕೊಡುವುದು ನ್ಯಾಯಬಾಹಿರವಾದುದು ಇಂತಹ ವಿಷಯಗಳಲ್ಲಿ ಪರಕೀಯರ ಪ್ರವೇಶ ಅನವಶ್ಯಕವೆಂದು ಪೋರ್ಚುಗಲ್ ಸರ್ಕಾರವು ಒಂದು ಹೇಳಿಕೆಯನ್ನಿತ್ತಿದೆ

ಗೋವಾದಲ್ಲಿದ್ದ ಭಾರತೀಯ ಡಾಕ್ಟರ್ ಗೈಟೊಂಡೆಯವರಮೇಲೆ ಅಲ್ಲಿನ ಸರ್ಕಾರವು ನಡೆಸಿದ ದೌರ್ಜನ್ಯಕೃತ್ಯವನ್ನು ಭಾರತ ಪಾರ್ಲಿಮೆಂಟಿನಲ್ಲಿ ತೀವ್ರವಾಗಿ ಟೀಕಿಸುವುದಕ್ಕೆ ಮೇಲ್ಕಂಡ ಹೇಳಿಕೆಯನ್ನು ಪೋರ್ಚುಗೀಸ್ ಸರ್ಕಾರ ಕೊಡುತ್ತಾ ಡಾ|| ಗೈಟೊಂಡೆಯವರು ಪೋರ್ಚುಗೀಸ್ ಪ್ರಜೆ ಕಾನೂನುರೀತ್ಯಾ ಅವರ ಮೇಲೆ ವಿಚಾರಣೆ ನಡೆಸಲಾಗುತ್ತದೆ. ಎಂದೂ ಅಲ್ಲಿ ವಿವರಣೆಯನ್ನೀಯಲಾಗಿದೆ.

ಟಿ. ಸಿ. ಶಾಸನಸಭಾಧ್ಯಕ್ಷರು

ತಿರುವಾಂಕೂರ್-ಕೊಚ್ಚಿಯ ಶಾಸನಸಭೆಯಲ್ಲಿ ಅಧ್ಯಕ್ಷರ ಚುನಾವಣೆಯು ನಿನ್ನೆಯ ದಿನ ನಡೆದು ಪಿ. ಎಸ್. ಪಿ. ಪಕ್ಷದ ಶ್ರೀ ವಿ. ಗಂಗಾಧರ್‌ರವರು ಆ ಸ್ಥಾನಕ್ಕೆ ಚುನಾಯಿತರಾದರು ಅವರಿಗೆ ೬೩ ಓಟುಗಳೂ ಅವರ ಪ್ರತಿಸ್ಪರ್ಧಿ ಕಮ್ಯೂನಿಸ್ಟ್ ಪಕ್ಷದ ಶ್ರೀ ಕೆ. ಸಿ. ಜಾರ್ಜ್‌ರವರಿಗೆ ೫೯ ಓಟುಗಳೂ ಬಂದುವು. ತಿರುವಾಂಕೂರ್ ತಮಿಳುನಾಡು ಕಾಂಗ್ರೆಸ್ ಸದಸ್ಯರು ಈ ಚುನಾವಣೆಯಲ್ಲಿ ಮತ ನೀಡಲಿಲ್ಲ.

ಪರೀಕ್ಷೆಗಳು ಮುಂದಕ್ಕೆ ಹೋದುವು

ಪೂರ್ವ ಪಾಕೀಸ್ಥಾನದ ಚುನಾವಣೆಗಳಲ್ಲಿ ಭಾಗವಹಿಸಿದುದರ ಪರಿಣಾಮವಾಗಿ ತಮ್ಮ ಪರೀಕ್ಷೆಗಳನ್ನು ಮುಂದುವರಿಸಬೇಕೆಂದು ಡಕ್ಕಾ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಪ್ರಾರ್ಥನೆಯಂತೆ ಅವರ ಪರೀಕ್ಷೆಗಳನ್ನು ಬರುವ ಜೂನ್ ಮಾಹೆಗೆ ಮುಂದುವರಿಸಲಾಗಿದೆ.

ಹೆಚ್ಚಿನ ತೆರಿಗೆಗಳಲ್ಲಿ ರಿಯಾಯಿತಿ

ಕೇಂದ್ರ ಹಣಕಾಸಿನ ಸಚಿವರ ಹೇಳಿಕೆ

ಕೇಂದ್ರ ಸರ್ಕಾರದ ಅರ್ಥ ಸಚಿವ ಶ್ರೀ ದೇಶಮುಖ್‌ರವರು ಪಾರ್ಲಿಮೆಂಟಿನಲ್ಲಿ ೫೪-೫೫ನೇ ಸಾಲಿನ ಬಜೆಟ್ಟನ್ನು ಮಂಡಿಸಿದಾಗ ಕೃತಕ ರೇಷ್ಮೆ, ಪಾದರಕ್ಷೆ, ಸೋಪುಗಳಮೇಲೆ ಅಧಿಕ ಸುಂಕವನ್ನು ವಿಧಿಸಲಾಗುವುದೆಂದು ಪ್ರಕಟಿಸಿದರಷ್ಟೆ ಈ ವಿಷಯದಲ್ಲಿ ದೇಶದ ನಾನಾಭಾಗಗಳಿಂದ ಪ್ರತಿಭಟನೆ ವ್ಯಕ್ತಪಟ್ಟು ಈ ತೆರಿಗೆಗಳಲ್ಲಿ ವಿನಾಯಿತಿ ಕೊಡಬೇಕೆಂದು ಬಂದ ಮನವಿಗಳನ್ನು ಪರಿಶೀಲಿಸಿ ಮುಂದಿನ ತಿಂಗಳಿನಿಂದ ಹಲವು ರಿಯಾಯಿತಿಗಳನ್ನು ಕೊಡುವುದಾಗಿ ಹಣಕಾಸಿನ ಸಚಿವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಕೃತಕ ರೇಷ್ಮೆಬಟ್ಟೆಗೆ ಇನ್ನು ಮುಂದೆ ಗಜ ಒಂದಕ್ಕೆ ೧|| ಆಣೆ ಸುಂಕದಬದಲು ಒಂದಾಣೆಯನ್ನು ವಿಧಿಸಲಾಗುತ್ತದೆ.

ಪಾದರಕ್ಷೆಗಳ ತಯಾರಿಕೆಯಲ್ಲಿ ವಿದ್ಯುಚ್ಛಕ್ತಿಯನ್ನು ಉಪಯೋಗಿಸದೆ ೪೫ ಕಾರ್ಮಿಕರಿಗಿಂತ ಕಡಿಮೆ ಜನರನ್ನು ಹೊಂದಿರುವ ಕಾರ್ಖಾನೆಗಳಲ್ಲಿ ತಯಾರಾಗುವ ಪಾದರಕ್ಷೆಗಳ ಮೇಲೆ ಯಾವ ಸುಂಕವನ್ನು ವಿಧಿಸುವುದಿಲ್ಲ.

ಬಟ್ಟೆಗೆ ಉಪಯೋಗಿಸುವ ಸೋಪು ೧೨೫ ಟನ್, ಮೈಗೆ ಉಪಯೋಗಿಸುವ ಸೋಪು ೨೫ ಟನ್‌ಗಿಂತ ಕಡಿಮೆ ತಯಾರಿಸುವ ಕಾರ್ಖಾನೆಗಳಿಗೆ ಈ ಬಾಬಿನಲ್ಲಿ ಹಾಕುವ ಸುಂಕವನ್ನು ವಿನಾಯಿತಿ ಕೊಡಲಾಗುತ್ತದೆ.

ಜೋತಿಷ್ಯಶಾಸ್ತ್ರ ಪರಿಶೋಧನಾ ಕೇಂದ್ರ

ಕಾಶಿ ಪಟ್ಟಣಕ್ಕೆ ಸ್ವಲ್ಪ ದೂರದಲ್ಲಿ ಸಾರನಾಥ ಎಂಬಲ್ಲಿ ಸಿದ್ಧಾಂತ ಜೋತಿಷ್ಯ ಮತ್ತು ಜೋತಿಷ್ಯದಲ್ಲಿ ಪರಿಶೋಧನೆಯನ್ನು ನಡೆಸಲು ಒಂದು ಕೇಂದ್ರವನ್ನು ಉತ್ತರ ಪ್ರದೇಶ ಸರ್ಕಾರವು ಸ್ಥಾಪಿಸಲು ಸೂಕ್ತ ವ್ಯವಸ್ಥೆ ಮಾಡುತ್ತಿದೆ.

ಹೋಳಿಹಬ್ಬಕ್ಕೆ ೧೦ ಸಾವಿರ ರೂ.

ಹೋಳಿಹಬ್ಬವನ್ನು ಬೀಹಾರಿನಲ್ಲಿ ಪೊಲೀಸಿನವರು ಆಚರಿಸಲು ಅಲ್ಲಿಯ ಸರ್ಕಾರವು ಪ್ರತಿ ವರ್ಷವೂ ೧೦ ಸಾವಿರ ರೂ.ಗಳನ್ನು ಕೊಡುವುದಾಗಿ ಅಲ್ಲಿಯ ಮುಖ್ಯಮಂತ್ರಿ ಡಾ|| ಶ್ರೀ ಕೃಷ್ಣಸಿಂಹರವರು ಹೇಳಿದ್ದಾರೆ.

೫೦೦ ವರ್ಷದ ಹಿಂದಿನ ದೇಹದ ಪತ್ತೆ

ಸುಮಾರು ೫೦೦ ವರ್ಷಗಳ ಹಿಂದೆ ಮಂಜಿನ ಗೆಡ್ಡೆಯಲ್ಲಿ ಅವರಿಸಲ್ಪಟ್ಟು ಇಟ್ಟಿದ್ದ ೧೨ ವರ್ಷದ ಬಾಲಕಿಯ ದೇಹವೊಂದು ಚಿಲಿ ಎಂಬಲ್ಲಿ ಪತ್ತೆಯಾಗಿದೆ. ಜೀವಂತವಿರುವ ಬಾಲಕೀಯ ದೇಹದಂತೆಯೇ ಈ ದೇಹವೂ ಸ್ವಲ್ಪವೂ ವಿಲೀನವಾಗದೆ ಇರುವುದಾಗಿ ತಿಳಿಯಬರುತ್ತದೆ. ಈ ದೇಹವನ್ನು ಈಗ ಪರೀಕ್ಷಾರ್ಥವಾಗಿ ಚಿಲಿ ವಿಶ್ವವಿದ್ಯಾನಿಲಯದಲ್ಲಿಡಲಾಗಿದೆ.

ಆ ಬಾಲಕಿಯ ಒಂದು ಕೈನಲ್ಲಿ ಕೆಂಪು ಪಾರಿವಾಳದ ರೆಕ್ಕೆಗಳುಳ್ಳ ಒಂದು ಚೀಲ ಮತ್ತೊಂದು ಕೈನಲ್ಲಿ ಉಗುರು ತೆಗೆಯುವ ಸಣ್ಣ ಕತ್ತರಿಯೊಂದಿದೆ. ಆ ದೇಹದ ಸುತ್ತಲು ಚಿನ್ನ ಬೆಳ್ಳಿಗಳಿಂದ ಮಾಡಿದ ಅನೇಕ ವಿಗ್ರಹಗಳಿದ್ದುವು.

ತೆರಿಗೆ ವಿಚಾರಣಾ ಮಂಡಲಿ ವರದಿ

ಭಾರತ ಸರ್ಕಾರವು ಡಾ|| ಜಾನ್ ಮಥಾಯ್‌ರವರ ಅಧ್ಯಕ್ಷತೆಯಲ್ಲಿ ನೇಮಿಸಿರುವ ತೆರಿಗೆ ವಿಚಾರಣಾ ಮಂಡಲಿಯು ತನ್ನ ಕಾರ್ಯಗಳನ್ನು ಮುಂದಿನ ತಿಂಗಳು ಪೂರೈಸಿ ಈ ವರ್ಷಾದ್ಯಂತದೊಳಗೆ ವರದಿಯನ್ನು ಒಪ್ಪಿಸುವುದಾಗಿ ತಿಳಿಯಬರುತ್ತದೆ

ನೀರಿನ ಅಭಾವದ ಪರಿಣಾಮ

ಅಹಮದ್‌ನಗರದಲ್ಲಿ ಇತ್ತೀಚೆಗೆ ನೀರಿನ ಅಭಾವ ವಿಶೇಷವಾಗಿರುವುದರಿಂದ ಅಲ್ಲಿ ಅವಶ್ಯಕತೆಯಿಲ್ಲದೆ ವಾಸವಾಗಿರುವ ಜನರೆಲ್ಲರೂ ಆ ನಗರವನ್ನು ಬಿಟ್ಟು ಹೊರಟು ಹೋಗಬೇಕೆಂದು ಸಲಹೆಯನ್ನು ಅಲ್ಲಿಯ ಇಂಜನಿಯರುಗಳು ಪುರಸಭೆಗಿತ್ತಿದ್ದಾರೆ.

ಉಚಿತ ವಿದ್ಯಾ ಶಿಕ್ಷಣ

ಪ್ರಾಂತ್ಯದಲ್ಲಿ ೧೪ ವರ್ಷ ವಯಸ್ಸಿನೊಳಗಿರುವವರಿಗೆಲ್ಲಾ ಉಚಿತ ಶಿಕ್ಷಣವನ್ನು ಕೊಡುವ ವಿಚಾರವನ್ನು ತಿರುವಾಂಕೂರು-ಕೊಚ್ಚಿಯಲ್ಲಿ ಹೊಸದಾಗಿ ಬಂದಿರುವ ಸರ್ಕಾರವು ಪರಿಶೀಲಿಸುತ್ತಲಿರುವುದಾಗಿ ಶಾಸನಸಭಾಧಿವೇಶನದಲ್ಲಿ ಭಾಷಣ ಮಾಡುತ್ತಾ ಅಲ್ಲಿಯ ರಾಜಪ್ರಮುಖರು ಹೇಳಿದ್ದಾರೆ.

ಪ್ರಾಜೆಕ್ಟ್ ದಿನಾಚರಣೆ

ಮೈಸೂರು ೨೩

ವಿಶ್ವವಿದ್ಯಾನಿಲಯದ ಟೀಚರ್ಸ್ ಕಾಲೇಜಿನವರು ಏರ್ಪಡಿಸಿರುವ 'ಮೈಸೂರು ಪ್ರಾಜೆಕ್ಟ್' ದಿನಾಚರಣೆಯು ನಿನ್ನೆಯ ದಿನ ವಿದ್ಯಾ ಶಾಖಾ ಮುಖ್ಯಾಧಿಕಾರಿ ಶ್ರೀ ಜೆ. ಬಿ. ಮಲ್ಲಾರಾಧ್ಯರವರಲ್ಲಿ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎ. ಸಿ. ದೇವೇಗೌಡರು ಸ್ವಾಗತ ಭಾಷಣ ಮಾಡಿ ಭಾರತದಲ್ಲಿ ಪ್ರಥಮವಾಗಿ ಈ ಪ್ರಾಜೆಕ್ಟ್ ದಿನ ಈ ಕಾಲೇಜಿನಲ್ಲಿ ಕಳೆದ ಸಾಲಿನಿಂದ ಪ್ರಾರಂಭವಾಯಿತು ಆಗ ಅಮೆರಿಕಾ ಪ್ರಾಜೆಕ್ಟ್ ದಿನವನ್ನು ನಡೆಸಲಾಯಿತು. ಮೈಸೂರಿನ ನಾನಾ ಪ್ರಗತಿಯನ್ನು ವಿವರಿಸುವಂತೆ ಈಬಾರಿ ಮೈಸೂರು ಪ್ರಾಜೆಕ್ಟ್ ದಿನವನ್ನು ಆಚರಿಸಲಾಗುತ್ತಿದೆ. ಇದರಲ್ಲಿ ಶಾಲಾ ಉಪಾಧ್ಯಾಯರು ಬಾಲಕರು ವಿಶೇಷ ಶ್ರಮವಹಿಸಿರುವರೆಂದು ತಿಳಿಸಿದರು.

ಈ ಕೆಲಸಕಾರ್ಯಗಳ ಬಗ್ಗೆ ಶ್ರೀ ಮಲ್ಲಾರಾಧ್ಯರು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿ, ಈರೀತಿಯಾಗಿ ಪ್ರತಿವರ್ಷವೂ ನಡೆಸಬೇಕೆಂದು ಹೇಳಿದರು.

ಈ ರೀತಿಯಾದ ಪ್ರಾಜೆಕ್ಟ್ ದಿನವನ್ನು ಆಚರಿಸುವುದರಿಂದ ಏನೂ ಪ್ರಯೋಜನವಾಗುವುದಿಲ್ಲವೆಂದು ತಾವು ತಿಳಿದಿದ್ದು ಈಗ ಕಾರ್ಯವನ್ನು ನೋಡಿದರೆ ಇದನ್ನು ನಡೆಸುವುದು ಉತ್ತಮವೆಂದು ತಮಗೀಗ ಅನ್ನಿಸುವುದೆಂದು ವಿದ್ಯಾ ಡೈರೆಕ್ಟರು ಹೇಳಿದರು.

ವ್ಯಾಯಾಮ ಶಿಕ್ಷಣವಾಗಿ ಅವರು ಮಾತನಾಡುತ್ತಾ ಸಂಸ್ಥಾನದಲ್ಲಿ ಒಂದು ವ್ಯಾಯಾಮ ಶಿಕ್ಷಣ ಕಾಲೇಜಿನ ಅವಶ್ಯಕತೆಯನ್ನು ಒತ್ತಿ ಹೇಳಿದರು.

ಅನಂತರ ನಾಟಕ, ವಿವಿಧ ವಿನೋದಾವಳಿ ಮುಂತಾದುವು ನಡೆದುವು.

ಸಂಸ್ಕೃತದಲ್ಲಿ ಕಡ್ಡಾಯ ಶಿಕ್ಷಣವಾಗಬೇಕು

ದೇಶದಾದ್ಯಂತ ಎಲ್ಲಾ ಶಾಲೆಗಳಲ್ಲೂ ಸಂಸ್ಕೃತವನ್ನು ಕಡ್ಡಾಯವಾಗಿ ಅಧ್ಯಯನ ಮಾಡುವಂತೆ ಮಾಡಬೇಕೆಂದ ಕೇಂದ್ರದ ಗೃಹ ಸಚಿವ ಡಾ|| ಕಟ್ಜೂರವರು ಮಥುರೆಯ ಬೃಂದಾವನದಲ್ಲಿ ಮಾತನಾಡುತ್ತಾ ಹೇಳಿದ್ದಾರೆ ಈ ರೀತಿ ಮಾಡುವುದರಿಂದ ಭಾರತದ ಮುಂದಿನ ಪೀಳಿಗೆಗಳಿಗೆ ದೇಶದ ಸಂಸ್ಕೃತಿ ಮತ್ತು ಸಂಪ್ರದಾಯಗಳು ತಿಳಿಯುವುದಲ್ಲದೆ ಉತ್ತಮಗೊಳ್ಳುವುದೆಂದೂ ಅವರು ಹೇಳಿದ್ದಾರೆ.

● ಭಾರತದಲ್ಲಿ ಪ್ರತಿಯೊಂದು ಮಗುವಿಗೂ ತನ್ನ ಮಾತೃಭಾಷೆಯಲ್ಲಿಯೇ ವಿದ್ಯಾಭ್ಯಾಸ ಕೊಡಬೇಕೆಂದೂ, ರಾಷ್ಟ್ರೀಯಭಾಷೆಯನ್ನು ಸೂಕ್ತವಾಗಿ ಬೆಳಸಿಕೊಂಡು ಬರಬೇಕು ಎಂದೂ ಪ್ರಧಾನಿ ನೆಹರೂರವರು ಪಾರ್ಲಿಮೆಂಟಿನ ಕಾಂಗ್ರೆಸ್ ಸದಸ್ಯರ ಸಭೆಯಲ್ಲಿ ತಿಳಿಸಿದ್ದಾರೆ.

ಉತ್ತರಭಾರತದಲ್ಲಿ ಭೂಕಂಪದ ಹಾವಳಿ

ಕಟ್ಟಡ, ರೈಲುಸಂಚಾರ ಮುಂತಾದುವಕ್ಕೆ ಅಪಾಯ

ಪ್ರಾಣಾಪಾಯವೇನೂ ವರದಿಯಿಲ್ಲ

ಉತ್ತರಭಾರತದಲ್ಲಿ ಅದರಲ್ಲೂ ಅಸ್ಸಾಂ ಪಶ್ಚಿಮಬಂಗಾಳ, ಬಿಹಾರ್, ಒರಿಸ್ಸಾ ಪ್ರಾಂತ್ಯಗಳಲ್ಲಿ ನಿನ್ನೆಯದಿನ ಬೆಳಗಿನ ಜಾವ ೫ ಗಂಟೆ ಸಮಯದಲ್ಲಿ ಭಾರಿ ಭೂಕಂಪ ಸಂಭವಿಸಿತು. ಷಿಲಾಂಗಿನಲ್ಲಿ ೩ ನಿಮಿಷ ಕಾಲ ಭೂಮಿ ಗುಡುಗಿತು.

ಇದರಿಂದ ಮನೆಗಳೆಲ್ಲಾ ಅದುರಿದುವು ಅನೇಕವು ಉರುಳಿದುವು ಮನೆಗಳಲ್ಲಿ ನಿದ್ದೆ ಮಾಡುತ್ತಿದ್ದ ಜನರೆಲ್ಲಾ ತಮ್ಮ ಮಕ್ಕಳೊಡನೆ ಗಾಬರಿಯಿಂದ ಬೀದಿಗಳಿಗೆ ಓಡಿಬಂದರು.

ಗೌಹತಿ ಬಳಿ ಬ್ರಹ್ಮಪುತ್ರ ನದಿಯಲ್ಲಿ ಈ ಭೂಕಂಪದ ಫಲವಾಗಿ ಪ್ರಕ್ಷುಬ್ಧವಾದ ಭಾರಿ ಅಲೆಗಳುಂಟಾದುವು ಪ್ರವಾಹವು ಸ್ವಲ್ಪ ಬಂದಿತು. ಇದರಿಂದ ಅಕ್ಕಪಕ್ಕದಲ್ಲಿ ಸ್ವಲ್ಪ ನಷ್ಟವುಂಟಾಯಿತು. ಕೆಲವೆಡೆ ರೈಲ್ವೆ ಲೈನುಗಳು, ಟೆಲಿಫೋನ್ ಮುಂತಾದುವು ಕೆಟ್ಟುಹೋದವು.

ಕಲ್ಕತ್ತಾದಲ್ಲಿ ಸಹ ಈ ಭೂಕಂಪವು ಸುಮಾರು ೫-೧೮ ರಲ್ಲಿ ಕಾಣಬಂದಿತು.

ಪೂರ್ವಪಾಕೀಸ್ತಾನದ ರಾಜಧಾನಿ ಢಕ್ಕಾದಲ್ಲಿ ಸಹ ಜನರು ಈ ಭೂಕಂಪಕ್ಕೆ ಹೆದರಿ ದಿಕ್ಕೆಟ್ಟಂತಾದರು. ಕೆಲವೆಡೆ ದೇವಸ್ಥಾನಗಳಲ್ಲಿ ತನಗೆತಾನೇ ಗಂಟೆಯ ಧ್ವನಿಗಳು ಕೇಳಲಾರಂಭಿಸಿದುವು.

ಕ್ಷಯರೋಗವ್ಯಾಸಂಗಕ್ಕಾಗಿ ವಿದ್ಯಾರ್ಥಿವೇತನ

ನವದೆಹಲಿ ಮಾರ್ಚಿ ೨೩

ಇಂಗ್ಲೆಂಡಿನ ಕ್ಷಯರೋಗ ನಿರೋಧಕ್ಕಾಗಿ ಕೆಲಸ ಮಾಡುವ ರಾಷ್ಟ್ರೀಯ ಸಂಘವು ೧೯೫೪-೫೫ ರಲ್ಲಿ, ಕ್ಷಯರೋಗ ಸಂಬಂಧವಾಗಿ ವ್ಯಾಸಂಗಮಾಡುವ ಭಾರತೀಯ ವೈದ್ಯಪದವೀಧರರೊಬ್ಬರಿಗೆ ೩೫೦ ಪೌಂಡುಗಳಷ್ಟು ಮೌಲ್ಯದ ವಿದ್ಯಾರ್ಥಿ ವೇತನ ಕೊಡಲು ನಿರ್ಧರಿಸಿದೆ. ಭಾರತದ ಕ್ಷಯರೋಗ ಸಂಘ ಈ ಪದವೀಧರರನ್ನು ಆರಿಸುವುದು. ಆರಿಸಲ್ಪಟ್ಟ ವಿದ್ಯಾರ್ಥಿಯು ೨ ತಿಂಗಳಕಾಲ ಲಂಡನ್ನಿನ ಸ್ಯಾನಿಟೋರಿಯಂನಲ್ಲಿ, ವಿವಿಧ ಚಿಕಿತ್ಸಾಕ್ರಮಗಳನ್ನು ಅಭ್ಯಾಸ ಮಾಡಬೇಕು.

ಈ ವಿದ್ಯಾರ್ಥಿ ವೇತನಕ್ಕೆ ಸ್ಪರ್ಧಿಸಲಿಚ್ಛಿಸುವವರು ತಮ್ಮ ಅರ್ಜಿಗಳನ್ನು ಏಪ್ರಿಲ್ ೨೦ ನೇ ತಾರೀಖಿನೊಳಗೆ ಈ ವಿಳಾಸಕ್ಕೆ ಕಳುಹಿಸಬಹುದು:-

೨೨ ರೆಡ್‌ಕ್ರಾಸ್ ರಸ್ತೆ, ದೆಹಲಿ.

ಪ್ರಕಾಶಕರು ಮತ್ತು ಮುದ್ರಕರು:
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಪುಸ್ತಕ ಪ್ರದರ್ಶನ

ಮೈಸೂರು ೨೩

ಬ್ರಿಟಿಷ್ ಕೌನ್ಸಿಲ್‌ನವರು ಪುಸ್ತಕ ಮತ್ತು ಪತ್ರಿಕೆಗಳ ಪ್ರದರ್ಶನವೊಂದನ್ನು ಮೈಸೂರು ವಿಶ್ವವಿದ್ಯಾನಿಲಯದ ಯೂನಿಯನ್ ಹಾಲಿನಲ್ಲಿ ಇಂದಿನಿಂದ ೨೭ ನೇ ತಾರೀಖಿನವರೆಗೆ ಏರ್ಪಡಿಸಿರುವರು.

ಇಂಗ್ಲೀಷ್, ಅರ್ಥಶಾಸ್ತ್ರ, ಇಂಜನಿಯರಿಂಗ್, ವೈದ್ಯಶಾಸ್ತ್ರ, ವಿಜ್ಞಾನಶಾಸ್ತ್ರ, ಮತ್ತು ರಾಜ್ಯಶಾಸ್ತ್ರ ಮುಂತಾದ ಬಾಬುಗಳಿಗೆ ಸಂಬಂಧಪಟ್ಟ ಪುಸ್ತಕಗಳು ಮತ್ತು ಪತ್ರಿಕೆಗಳನ್ನು ಇಡಲಾಗಿದೆ. ಇದು ಪ್ರತಿದಿನವೂ ಬೆಳಗ್ಗೆ ೯-೩೦ ಗಂಟೆಯಿಂದ ಸಂಜೆ ೬ ಗಂಟೆವರೆಗೆ ತೆರೆದಿರುತ್ತದೆ.

ಸಾರ್ವಜನಿಕರಿಗೆಲ್ಲಾ ಇಲ್ಲಿ ಪ್ರವೇಶವುಂಟು.

ಪೌರ ಸಮಾರಂಭ

ಸಿಂಹಳದಿಂದ ದೆಹಲಿಗೆ ಹಿಂತಿರುಗುವ ಮಾರ್ಗವಾಗಿ ಮದ್ರಾಸಿಗೆ ಆಗಮಿಸಿದ ವಿಶ್ವಸಂಸ್ಥೆ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿಪಂಡಿತರಿಗೆ ನಿನ್ನೆಯದಿನ ಮದ್ರಾಸ್ ಕಾರ್ಪೋರೇಷನವರು ಪೌರ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು.

-ಮೈಸೂರು ಪೇಟೆಧಾರಣೆ-

ತಾರೀಖು ೨೨—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೧೯—೧೪	೨೪—೧೪
ಎಳ್ಳು	—	—
ಹರಳು	೨೬—೨	೨೭—೪
ಹುಚ್ಚೆಳ್ಳು	೩೭—೧೦	೪೨—೧೪
ಹೊಂಗೆಬೀಜ	೧೮—೮	೨೨—೮
ಹುಣಸೆಬೀಜ	೧೩—೮	೧೩—೧೦
ಹುರುಳಿ	೨೬—೧೨	೨೮—೧೦
ಹೆಸರು	೩೫—	೪೦—೨
ಅಲಸಂದೆ	೨೬—೨	೪೫—೨
ಅವರೆ	೩೩—	೩೪—
ಉದ್ದು	—	—
ಕೊತ್ತಂಬರಿ	೨೮—	೩೦—೬
ತೊಗರಿ	೨೪—೧೪	—
ಕಡಲೆ	೩೯—	೪೩—೮
ಸೆಣಬು	೨೧—೧೪	೨೯—೬
ಕ|| ಬೀಜ	—	—
ಹುಣಸೆಹಣ್ಣು	೬—೬	೯—೪
ಸೀಗೆಕಾಯಿ	೪—೬	೫—೧
ಮೆಣಸಿನಕಾಯಿ	೨೮—೨	—
ಬೆಲ್ಲ	—	—
ತೆಂಗಿನಕಾಯಿ	೧೫೦—	೨೬೦—

ಕರಾಚಿಗೆ ಅಮೆರಿಕಾ ಮಿಲಿಟರಿ ನಿಯೋಗದಾಗಮನ

ಭಾರತ ವಿಮಾನದಳದ ೨೧ನೆಯ ವಾರ್ಷಿಕೋತ್ಸವ

ಬೆಂಗಳೂರು ೨೩

ಏಪ್ರಿಲ್ ೧ನೆಯ ತಾರೀಖಿನ ದಿನ ನಡೆಯುವ ಭಾರತ ವಿಮಾನದಳದ ೨೧ನೆಯ ವಾರ್ಷಿಕೋತ್ಸವದ ಅಂಗವಾಗಿ ಬೆಂಗಳೂರಿನಲ್ಲಿ ವಿಮಾನದಳದ ಟ್ರೈನಿಂಗ್ ಕಮ್ಯಾಂಡಿನವರು ಆಕರ್ಷಣೀಯವಾದ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಾರೆ. ಆದಿನ ಪ್ರಾತಃಕಾಲ ಎಂಟೂವರೆ ಗಂಟೆಗೆ ಜಾಲಹಳ್ಳಿಯ ವಿಮಾನ ನಿಲ್ದಾಣದಲ್ಲಿ ವಿಮಾನ ದಳದ ಪೆರೇಡ್ ನಡೆಯುವುದು. ಆ ಸಮಯದಲ್ಲಿಯೇ ವಿಮಾನದಳದ ಟೆಕ್ನಿಕಲ್ ಟ್ರೈನಿಂಗ್ ಸಂಸ್ಥೆಯಿಂದ ಉತ್ತೀರ್ಣರಾದವರಿಗೆ ಬಹುಮಾನಗಳನ್ನು ಕೊಡುವ ಕಾರ್ಯಕ್ರಮಗಳನ್ನೂ ಇಟ್ಟುಕೊಳ್ಳಲಾಗಿದೆ.

ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ಈ ಸಮಾರಂಭಗಳಲ್ಲಿ ಭಾಗವಹಿಸಿ ಬಹುಮಾನವನ್ನು ವಿನಿಯೋಗ ಮಾಡುತ್ತಾರೆ. ಸಾರ್ವಜನಿಕರಿಗೆ ಉತ್ಸವದಲ್ಲಿ ಭಾಗವಹಿಸಲು ಅವಕಾಶವಿದೆ. ಪೆರೇಡ್ ಮುಗಿದ ಮೇಲೆ ಆಹ್ವಾನಿತ ಗಣ್ಯ ಮಹನೀಯರಿಗೆ ಮತ್ತು ಸಾರ್ವಜನಿಕರಿಗೆ ವಿಮಾನದಳದ ಶಿಕ್ಷಣ ಕೇಂದ್ರದ ನಾನಾ ವಿಭಾಗಗಳನ್ನು ತೋರಿಸಲಾಗುವುದು. ಅನಂತರ ಸಾರ್ವಜನಿಕರಿಗಾಗಿ ಹಲವು ಮನರಂಜನಾ ಕಾರ್ಯಕ್ರಮಗಳನ್ನಿಟ್ಟುಕೊಳ್ಳಲಾಗಿದೆ.

ಏಪ್ರಿಲ್ ೪ನೇ ತಾರೀಖಿನದಿನ ವಾರ್ಷಿಕೋತ್ಸವದ ಅಂಗವಾಗಿ ಯಲಹಂಕದ ವಿಮಾನನಿಲ್ದಾಣದಲ್ಲಿ ವೈಮಾನಿಕರ ರ್‍ಯಾಲಿ ನಡೆಯುವುದು ಅಲ್ಲದೆ ವಿವಿಧ ಕ್ರೀಡಾಸ್ಪರ್ಧೆಗಳನ್ನೂ ಏರ್ಪಡಿಸಲಾಗಿದೆ. ಹಾಗೂ ವೈಮಾನಿಕರ ಹಿತರಕ್ಷಣೆಗಾಗಿ ಏರ್ಪಟ್ಟಿರುವ ನಿಧಿಗೆ ಹಣ ಸಂಗ್ರಹವನ್ನು ಮಾಡಲಾಗುವುದು. ಇದಕ್ಕಾಗಿ ಮೈಸೂರ ಸರ್ಕಾರದ ಒಪ್ಪಿಗೆಪಡೆದು ಒಂದು ಲಾಟರಿಯನ್ನು ಏರ್ಪಡಿಸಲಾಗಿದೆ. ೧೯೫೪ರ ಮೇ ೧ ನೇ ತಾ|| ಈ ಲಾಟರಿಯ ಫಲಿತಾಂಶಗಳನ್ನು ಪ್ರಕಟಿಸಲಾಗುವುದು.

ಪ್ರಾಪ್ತ ವಯಸ್ಸಿಗೆ ಬಂದಿರುವುದರ ಸವಿನೆನಪಿಗಾಗಿ ಭಾರತ ವಿಮಾನದಳದ ಬೆಂಗಳೂರು ಶಾಖೆಯವರು ವಿಮಾನದಳದ ಹೆಗ್ಗುರುತಿನ ಸ್ಮಾರಕಗಳನ್ನು ತಯಾರು ಮಾಡಿಸಿದ್ದಾರೆ. ಅವುಗಳನ್ನು ಮಹಾಜನಗಳು ಕೊಂಡುಕೊಂಡು ವೈಮಾನಿಕರ ಹಿತರಕ್ಷಣಾನಿಧಿಗೆ ಸಹಾಯ ಮಾಡಬೇಕೆಂದು ಕೋರಲಾಗಿದೆ.

ಅಮೇರಿಕಾ ಮತ್ತು ಪಾಕೀಸ್ತಾನಗಳ ನಡುವೆ ಆಗಿರುವ ಮಿಲಿಟರಿ ಒಪ್ಪಂದ ಪ್ರಕಾರ ಪಾಕೀಸ್ತಾನಕ್ಕೆ ಕೊಡಬೇಕಾದ ನೆರವನ್ನು ಪರಿಶೀಲಿಸಲು ಅಮೆರಿಕಾದಿಂದ ೧೧ ಜನರ ಮಿಲಿಟರಿ ನಿಯೋಗವೊಂದು ನಿನ್ನೆಯದಿನ ಕರಾಚಿಗೆ ಆಗಮಿಸಿದೆ. ಇವರು ೨ ವಾರಕಾಲ ಇಲ್ಲಿದ್ದು ಪಾಕೀಸ್ತಾನದ ಅವಶ್ಯಕತೆಗಳನ್ನು ನೋಡಿಕೊಂಡು ಅನಂತರ ತಮ್ಮ ಸರ್ಕಾರಕ್ಕೆ ವರದಿಯನ್ನು ಒಪ್ಪಿಸುವರು.

ಈ ಮಿಲಿಟರಿ ನೆರವಿನ ವಿಷಯವಾಗಿ ಭಾರತದಲ್ಲಿರುವ ಅಮೆರಿಕಾ ರಾಯಭಾರಿ ಮಿ|| ಅಲೆನ್‌ರವರು ಮಾತನಾಡುತ್ತಾ ಈ ನೆರವನ್ನು ಯಾವ ದೇಶದಮೇಲೂ ಆಕ್ರಮಣಕ್ಕಾಗಿ ಪಾಕೀಸ್ತಾನವು ಉಪಯೋಗಿಸದಂತೆ ಕಟ್ಟುನಿಟ್ಟಾದ ಒಪ್ಪಂದದ ಮೇಲೆ ನೀಡಲಾಗುತ್ತಿದೆಯೆಂದೂ ಭಾರತ-ಪಾಕೀಸ್ತಾನಗಳ ನಡುವಿನ ಭಿನ್ನಾಭಿಪ್ರಾಯ ಪರಿಹಾರಕ್ಕೆ ಈ ಮಿಲಿಟರಿ ನೆರವಿಗೂ ಸಂಬಂಧವಿಲ್ಲವೆಂದೂ ಹೇಳಿದ್ದಾರೆ.

ಪೂರ್ವಪಾಕೀಸ್ತಾನದ ಚುನಾವಣೆಗಳಲ್ಲಿ ಸರ್ಕಾರದ ಆಡಳಿತದಲ್ಲಿರುವ ಪಕ್ಷಕ್ಕೆ ಸೋಲುಂಟಾದುದು ಈ ಒಪ್ಪಂದದ ಮೇಲೆ ಯಾವ ಪರಿಣಾಮವನ್ನು ಮಾಡುವುದಿಲ್ಲವೆಂದು ಪಾಕೀಸ್ತಾನದಲ್ಲಿರುವ ಅಮೆರಿಕಾ ರಾಯಭಾರಿಯವರು ಹೇಳಿದ್ದಾರೆ.

ಭಾರತ ಸೈನ್ಯದ ಅಶ್ವದಳ

ಸಂಸ್ಥಾನಗಳು ಕೇಂದ್ರದೊಳಗೆ ಐಕ್ಯವಾದನಂತರ ವಿವಿಧ ಪ್ರಾಂತ್ಯಗಳಲ್ಲಿದ್ದ ಆಯಾ ಸೈನ್ಯದ ಅಶ್ವದಳಗಳನ್ನೆಲ್ಲಾ ನಿವೃತ್ತಿಗೊಳಿಸಿ ಅದರಲ್ಲಿ ಉತ್ತಮ ದರ್ಜೆಯ ಕೆಲವನ್ನು ಮಾತ್ರ ಆರಿಸಿಕೊಂಡು ಭಾರತ ಸರ್ಕಾರವು ೬೧ನೇ ಅಶ್ವದಳವೆಂಬ ಒಂದು ದಳವನ್ನು ರಚಿಸಿದೆ.

ಹಿಂದಿನಿಂದಲೂ ಭಾರತದಲ್ಲಿ ಪ್ರಸಿದ್ಧರಾಗಿದ್ದ ಗ್ವಾಲಿಯರ್ ಲ್ಯಾನ್ಸರ್ಸ್, ಮೈಸೂರು ಲ್ಯಾನ್ಸರ್ಸ್, ಜೋಧಪುರ ಸರ್ದಾರ್ ರಿಸಾಲ ಮತ್ತು ಜಯಪುರ ಅಶ್ವದಳ ಇವುಗಳನ್ನು ಈ ಹೊಸ ದಳದಲ್ಲಿ ಐಕ್ಯಗೊಳಿಸಲಾಗಿದೆ.

ಏಪ್ರಿಲ್ ೧೮ನೇ ತಾರೀಖಿನ ದಿನ ಬೆಂಗಳೂರಿನ ಪುಟ್ಟಣ್ಣಚೆಟ್ಟಿ ಪುರಭವನದಲ್ಲಿ ವೈಮಾನಿಕರು ಮತ್ತು ಅವರ ಸಂಸಾರದವರಿಂದ ವಿವಿಧ ವಿನೋದಾವಳಿಗಳನ್ನು ಏರ್ಪಡಿಸಲಾಗಿದೆ.

ವಿಮಾನಶಾಖೆಯ ಬೆಂಗಳೂರು ಕಮ್ಯಾಂಡಿನ ಮುಖ್ಯಾಧಿಕಾರಿಗಳಾದ ಏರ್ ಕಮೋಡರ್ ಶ್ರೀ ಎಸ್. ಎನ್. ಗೋಯಲ್‌ರವರ ನೇತೃತ್ವದಲ್ಲಿ ಈ ಕಾರ್ಯಕ್ರಮಗಳು ಏರ್ಪಟ್ಟಿವೆ.

ಪೋ೯ ೫೭೪
ರಿಜಿಸ್ಟರ್
ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೭೧

೨೪-೩-೧೯೫೪ ನೇ ಬುಧವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ವಿಧಾನ ಪರಿಷತ್ತಿಗೆ ಕಾಂಗ್ರೆಸ್ ಸ್ಪರ್ಧಿಗಳು

ಬೆಂಗಳೂರು ೨೪

ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಮೈಸೂರು ವಿಧಾನ ಪರಿಷತ್ತಿಗೆ ನಡೆಯುವ ಚುನಾವಣೆಗೆ ಕಾಂಗ್ರೆಸ್ ಪರ ಸ್ಪರ್ಧಿಸಲು ಶ್ರೀಗಳಾದ ಜಿ. ದೇವಯ್ಯ (ಮಂಡ್ಯ), ಟಿ. ವೆಂಕಟರಮಣಯ್ಯ (ಮೈಸೂರು,) ಎಸ್. ಸಿ. ಸೂರ್ಯನಾರಾಯಣ ಶೆಟ್ಟಿ (ಹಾಸನ) ಮತ್ತು ಜಡೆ ಕೃಷ್ಣರಾವ್ (ಚಿತ್ರದುರ್ಗ-ಬಳ್ಳಾರಿ) ರವರನ್ನು ಕಾಂಗ್ರೆಸ್ ಕೇಂದ್ರ ಪಾರ್ಲಿಮೆಂಟರಿ ಸಮಿತಿ ಆರಿಸಿದೆ.

ರಿಜಿಸ್ಟರ್ ಪದವೀಧರರ ಕ್ಷೇತ್ರದಿಂದ ಶ್ರೀ ಎ ಎನ್. ರಾಮರಾವ್‌ರವರನ್ನು ಆರಿಸಲಾಗಿದೆ.

ವಿಧಾನಸೌಧ ನಿರ್ಮಾಣ ಪ್ರತಿಭಟಿಸಿ ಉಪವಾಸ

ಬೆಂಗಳೂರು ೨೪

ಕೇಂದ್ರಸರ್ಕಾರದ ಉತ್ಪಾದನಾಸಚಿವ ಶ್ರೀ ಕೆ. ಸಿ. ರೆಡ್ಡಿಯವರ ಸಹೋದರರಾದ ಶ್ರೀ ಕ್ಯಾಸಂಬಳ್ಳಿ ವೆಂಕಟರಾಮರೆಡ್ಡಿಯವರು, ಇಂದಿನ ಆರ್ಥಿಕ ದುಃಸ್ಥಿತಿಯಲ್ಲಿ ಬೆಂಗಳೂರಿನಲ್ಲಿ ಒಂದು ಕೋಟಿ ರೂಪಾಯಿನ ವೆಚ್ಚದಲ್ಲಿ ವಿಧಾನಸೌಧವನ್ನು ಕಟ್ಟುತ್ತಿರುವುದು ಅಧರ್ಮವೆಂದು ವ್ಯಕ್ತಪಡಿಸಲು ಇದೇ ೨೨ ನೇ ತಾರೀಖಿನಿಂದ ತಮ್ಮ ಗ್ರಾಮದಲ್ಲಿ ಒಂದುವಾರಕಾಲದ ಉಪವಾಸವನ್ನು ಪ್ರಾರಂಭಿಸಿದ್ದಾರೆ.

ಆಯುರ್ವೇದ ಕಾಲೇಜು ವರ್ಗಾವಣೆ

ಬೆಂಗಳೂರು ೨೪

ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜಿನ ದರ್ಜೆಯನ್ನು ಹೆಚ್ಚಿಸಲು ಇಲ್ಲಿ ಸಾಕಷ್ಟು ಅನುಕೂಲಗಳು ಇಲ್ಲವಾದ್ದರಿಂದ ಅದನ್ನು ಬೆಂಗಳೂರಿಗೆ ವರ್ಗಾಯಿಸಲು ಸರ್ಕಾರವು ನಿರ್ಧರಿಸಿರುವುದಾಗಿ ಆರೋಗ್ಯ ಸಚಿವ ಶ್ರೀ ಟಿ. ಚನ್ನಯ್ಯನವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.

ಪ್ರಾಂತ್ಯ ವಿಂಗಡನ ವಿಷಯದಲ್ಲಿ ಸರ್ಕಾರಗಳ ಅಭಿಪ್ರಾಯ

ಪ್ರಾಂತ್ಯಗಳ ಪುನರ್ವಿಂಗಡನ ವಿಷಯದಲ್ಲಿ ಎಲ್ಲಾ ಪ್ರಾಂತ್ಯ ಸರ್ಕಾರಗಳು ತಮ್ಮ ಅಭಿಪ್ರಾಯವನ್ನು ಇದಕ್ಕಾಗಿ ನೇಮಿಸಿರುವ ಪ್ರಾಂತ್ಯ ಪುನರ್ವಿಂಗಡನಾ ಸಮಿತಿಗೆ ಕಳುಹಿಸಬೇಕೆಂದು ಕೇಂದ್ರವು ಸೂಚನೆಯನ್ನಿತ್ತಿರುವುದಾಗಿ ತಿಳಿಯಬರುತ್ತದೆ.

ಪ್ರಜಾಭಿಪ್ರಾಯ ಪಡೆಯದೆ ಫ್ರೆಂಚ್ ಸ್ವಾಧೀನ ಸ್ಥಳಗಳು ಭಾರತಕ್ಕೆ ಸೇರುವುದಿಲ್ಲ

ಫ್ರೆಂಚ್ ಸರ್ಕಾರದ ನಿರ್ಧಾರ

ಪ್ರಜಾಭಿಪ್ರಾಯವನ್ನು ಪಡೆಯದೆಯೇ ಭಾರತದಲ್ಲಿರುವ ಫ್ರೆಂಚ್ ಸ್ವಾಸ್ಥ್ಯಗಳು ಭಾರತದೊಡನೆ ಸೇರಬೇಕೆಂಬ ಸಲಹೆಯನ್ನು ಫ್ರಾನ್ಸ್ ಸರ್ಕಾರವು ತಿರಸ್ಕರಿಸುವುದಾಗಿ ತಿಳಿಯಬರುತ್ತದೆ.

ಇದು ಫ್ರಾನ್ಸ್ ರಾಜ್ಯಾಂಗಕ್ಕೆ ವಿರೋಧವೆಂದು ಪ್ರಜಾಭಿಪ್ರಾಯ ಸಂಗ್ರಹಣೆಗೆ ತಕ್ಕ ವ್ಯವಸ್ಥೆ ಮಾಡಿ ಅದಾದ ನಂತರ ಅಂತ್ಯ ತೀರ್ಮಾನವನ್ನು ಮಾಡುವುದಾಗಿಯೂ ಅಲ್ಲಿಯ ಮಂತ್ರಿಮಂಡಲವು ನಿರ್ಧರಿಸಿರುವುದಾಗಿ ಗೊತ್ತಾಗಿದೆ.

ಪ್ರಧಾನಿ ನೆಹರೂರವರು ನಿನ್ನೆಯ ದಿನ ಪಾರ್ಲಿಮೆಂಟಿನಲ್ಲಿ ಈ ಸ್ವಾಸ್ಥ್ಯಗಳ ವಿಷಯವಾಗಿ ಮಾತನಾಡುತ್ತಾ ಈ ಸ್ವಾಸ್ಥ್ಯಗಳ ವರ್ಗಾವಣೆಯು ಶಾಂತಿಯುತವಾಗಿ ನಡೆಯುವುದೆಂದು ತಾವು ನಂಬಿರುವುದಾಗಿಯೂ, ಆದರೆ ಪೋರ್ಚುಗೀಸ್ ಸ್ವಾಸ್ಥ್ಯಗಳ ವರ್ಗಾವಣೆಯ ವಿಷಯದಲ್ಲಿ ಈಗ ತಾವು ಅಷ್ಟು ಆಶಾದಾಯಕವಾಗಿಲ್ಲವೆಂದೂ ಆದರೆ ಮುಂದಾದರೂ ಅದು ವರ್ಗವಾಗಬೇಕೆಂದು ತಿಳಿಸಿದ್ದಾರೆ.

ಈ ನಡುವೆ ಪೋರ್ಚುಗೀಸ್ ಸ್ವಾಸ್ಥ್ಯಗಳಲ್ಲಿ ವಿಲೀನೀಕರಣ ಯತ್ನಗಳನ್ನು ಧ್ವಂಸ ಮಾಡಿ ಅಲ್ಲಿಯ ಸರ್ಕಾರವು ತೀವ್ರ ಕ್ರಮ ನಡೆಸುತ್ತಲಿರುವುದಾಗಿ ವರದಿಗಳು ಬರುತ್ತಿವೆ. ಈಗಿರುವ ಸರ್ಕಾರವೇ ಮುಂದುವರಿಯಬೇಕೆಂದು ಸರ್ಕಾರಿ ನೌಕರರಿಂದ ಒತ್ತಾಯ ಪತ್ರ ಬರೆಸಿ ಕೊಳ್ಳುವುದು, ಪೋಲೀಸ್ ಅಧಿಕಾರಿಗಳು ಮನೆ ಮನೆಗೂ ಹೋಗಿ ಬೆದರಿಸಿ ವಿಲೀನೀಕರಣ ಚಳುವಳಿಯಲ್ಲಿ ಭಾಗವಹಿಸದಂತೆ ತಡೆಕಟ್ಟುವುದು ಮುಂತಾದ ಕ್ರಮಗಳನ್ನು ಅನುಸರಿಸುತ್ತಲಿರುವರು.

'ನೀರಾ' ತಯಾರಿಕೆಗೆ ಅನುಮತಿ

ಆಂಧ್ರಪ್ರಾಂತ್ಯದಲ್ಲಿ 'ನೀರಾ' (ಸಿಹಿ ಹೆಂಡ) ದ ತಯಾರಿಕೆಗೆ ಅಲ್ಲಿಯ ಸರ್ಕಾರವು ಅವಕಾಶ ಕೊಡುವುದಾಗಿ ತೀರ್ಮಾನಿಸಿದೆ. ಆಯಾ ಸ್ಥಳೀಯ ಗ್ರಾಮಪಂಚಾಯಿತಿಗಳ ಆಡಳಿತದಲ್ಲಿ ಈ ಕಾರ್ಯವು ನಡೆಯುತ್ತದೆ.

ರಚನವೈವಿಧ್ಯ

ಮೈಸೂರು ಆಕಾಶವಾಣಿಯಲ್ಲಿ

ಮೈಸೂರು ೨೪

ನಾಳೆಯಿಂದ ರಾತ್ರಿ ೮ ಗಂಟೆಗೆ ಆಕಾಶವಾಣಿಯಲ್ಲಿ 'ರಚನ ವೈವಿಧ್ಯ' ಎಂಬ ವಿಶೇಷ ಸಂಗೀತ ಕಾರ್ಯಕ್ರಮವನ್ನು ಪ್ರಸಾರಮಾಡಲಾಗುತ್ತದೆ. ವೀಣಾ ವಿದ್ವಾಂಸರಾದ ಶ್ರೀ ವಿ. ದೊರಸ್ವಾಮಿಯ್ಯಂಗಾರ್ ರವರು ಈ ಕಾರ್ಯಕ್ರಮದ ನಿರ್ಮಾಪಕರು. ಇದರಲ್ಲಿ ಸಂಗೀತ ವಿದ್ವಾಂಸರುಗಳಾದ ಆರ್. ಕೆ. ಶ್ರೀಕಂಠನ್, ಎಂ. ಜೆ. ಶ್ರೀನಿವಾಸಯ್ಯಂಗಾರ್, ಎನ್. ಚೊಕ್ಕಮ್ಮ, ಟಿ. ನಾಗಮ್ಮ ಮುಂತಾದವರು ಭಾಗವಹಿಸುತ್ತಾರೆ.

ಗೂಡ್ಸ್‌ಗಾಡಿನಲ್ಲಿ ಬೆಂಕಿ

ಮೈಸೂರು ೨೪

ಭದ್ರಾವತಿಗೆ ರವಾನೆ ಮಾಡಲು ಇಜ್ಜಲು ತುಂಬಿದ್ದ ಗೂಡ್ಸ್ ಗಾಡಿಯಲ್ಲಿ ಈ ದಿನ ಬೆಳಗ್ಗೆ ಬೆಂಕಿ ಕಾಣಿಸಿಕೊಂಡು ಅಗ್ನಿಶಮನ ದಳದವರು ಅಲ್ಲಿ ಹೋಗಿ ಆ ಬೆಂಕಿಯನ್ನು ಆರಿಸಿದರು. ಅದರಲ್ಲಿ ೧೯೧ ಇಜ್ಜಲ ಮೂಟೆಗಳಿದ್ದುವು ಅವುಗಳಲ್ಲಿ ೪೯ ಚೀಲಗಳು ಉರಿದು ಹೋದುವು ಉಳಿದ ಚೀಲಗಳನ್ನು ಬೇರೇ ಕಡೆಗೆ ಸಾಗಿಸಿ ಬೆಂಕಿಯನ್ನು ಆರಿಸಲಾಯಿತು.

ಗಾಯತ್ರಿ ಲಲಿತ ಕಲಾಸಂಘ

ಮೈಸೂರು ೨೩

ಸಂಗೀತ, ನಾಟಕ, ನೃತ್ಯ ಮುಂತಾದ ಲಲಿತ ಕಲೆಗಳನ್ನು ಅಭಿವೃದ್ಧಿಗೊಳಿಸುವ ಉದ್ದೇಶದಿಂದ ರಾಜಧಾನಿಯ ಕೆಂಪನಂಜಮ್ಮಾಂಬಾ ಅಗ್ರಹಾರದಲ್ಲಿ ಗಾಯತ್ರಿ ಲಲಿತ ಕಲಾಸಂಘವೆಂಬ ಒಂದು ಹೊಸ ಸಂಸ್ಥೆಯ ರಚನೆಯಾಗಿದೆ.

ಭಾರತ - ರೊಮೇನಿಯಾ ವಾಣಿಜ್ಯ ಒಪ್ಪಂದ

ಭಾರತ ಮತ್ತು ರೊಮೇನಿಯಾಗಳ ನಡುವೆ ವಾಣಿಜ್ಯಒಪ್ಪಂದ ವೊಂದಕ್ಕೆ ನಿನ್ನೆಯದಿನ ಉಭಯದೇಶದ ಪ್ರತಿನಿಧಿಗಳು ಸಹಿ ಹಾಕಿದರು.

ಸಿದ್ದಲಿಂಗಯ್ಯನವರ ವಿದೇಶಯಾತ್ರೆ

ಇದೇ ಜೂನ್ ೨೭ ರಿಂದ ಜುಲೈ ೭ರ ವರೆಗೆ ಕೆನಡಾದ ಟೊರಂಟೋವಿನಲ್ಲಿ ನಡೆಯುವ ಅಂತರ ರಾಷ್ಟ್ರೀಯ ಸಾಮಾಜಿಕ ಸಮ್ಮೇಳನದಲ್ಲಿ ಮೈಸೂರಿನ ಪ್ರತಿನಿಧಿಯಾಗಿ ಮಾಜಿ ಸಚಿವ ಶ್ರೀ ಟಿ. ಸಿದ್ದಲಿಂಗಯ್ಯನವರು ಭಾಗವಹಿಸಲು ಹೋಗುತ್ತಾರೆ. ಈ ಸಂಬಂಧದಲ್ಲಿ ಅವರು ಅಮೆರಿಕಾ, ಜರ್ಮನಿ ಮುಂತಾದ ಹಲವಾರು ವಿದೇಶೀ ರಾಷ್ಟ್ರಗಳಲ್ಲಿ ಪ್ರವಾಸ ನಡೆಸುತ್ತಾರೆ.

ಭಾರತಕ್ಕೆ ಪುನಃ ೧೦ ಲಕ್ಷ ಡಾಲರ್ ನೆರವು

ಭಾರತದಲ್ಲಿರುವ ಸಾಮುದಾಯ ಯೋಜನೆ ಕಾರ್ಯಗಳನ್ನು ಉತ್ತಮವಾಗಿ ನಡೆಸಲು ಸಹಾಯವಾಗುವಂತೆ ಗ್ರಾಮನೈರ್ಮಲ್ಯ, ವಿದ್ಯಾಭ್ಯಾಸ ಮುಂತಾದ ಬಾಬುಗಳಲ್ಲಿ ತರಪೇತು ಕೊಡಲು ಫೋರ್ಡ್ ಫೌಂಡೇಷನ್ನಿನಿಂದ ಪುನಃ ೧೦ ಲಕ್ಷ ಡಾಲರುಗಳ ನೆರವು ಬರಲಿರುವುದಾಗಿ ತಿಳಿಯಬರುತ್ತದೆ.

ಪ್ರಾತಿನಿಧ್ಯವಿಲ್ಲದವರಿಂದ ರಾಜ್ಯಾಂಗ ರಚನೆ

ಪೂರ್ವ ಪಾಕೀಸ್ಥಾನದ ಪ್ರತಿನಿಧಿಗಳಾಗಿ ಈಗ ಪಾಕೀಸ್ತಾನ ರಾಜ್ಯಾಂಗ ಸಭೆಯಲ್ಲಿರುವ ಸದಸ್ಯರೆಲ್ಲಾ ಈಗ ನಡೆದ ಮಹಾ ಚುನಾವಣೆಗಳಲ್ಲಿ ಪರಾಜಿತರಾಗಿರುವುದರಿಂದ ಅವರು ಜನತೆಯ ಪ್ರಾತಿನಿಧ್ಯವನ್ನು ಕಳೆದುಕೊಂಡಿದ್ದಾರೆ. ಅಂತಹವರು ಸೇರಿ ರಚಿಸುವ ರಾಜ್ಯಾಂಗವನ್ನು ಪೂರ್ವ ಪಾಕೀಸ್ತಾನದ ಜನರು ಒಪ್ಪಿಕೊಳ್ಳುವುದಿಲ್ಲ ಎಂದು ಅಲ್ಲಿ ಬಹುಮತ ಗಳಿಸಿರುವ ಸಂಯುಕ್ತ ಪಕ್ಷದ ನಾಯಕರು ಹೇಳಿಕೆಯಿತ್ತು ಮುಸ್ಲಿಂಲೀಗಿನ ಈಗಿನ ನೀತಿಯನ್ನು ಉಗ್ರವಾಗಿ ಟೀಕಿಸಿದ್ದಾರೆ.

ನೆಹರೂ-ಮಹಮುದಾಲಿ ಭೇಟಿ

ಭಾರತ ಮತ್ತು ಪಾಕೀಸ್ತಾನಗಳ ನಡುವೆ ಇರುವ ಆರ್ಥಿಕ ವಿಷಯಗಳು, ಕಾಶ್ಮೀರ ವಿವಾದ ಮುಂತಾದುವುಗಳ ಬಗ್ಗೆ ಪುನಃ ಉಭಯ ಪ್ರಧಾನಿಗಳ ನಡುವೆ ಮಾತುಕತೆಗಳು ಇದೇ ಮೇ ಮಾಹೆಯಲ್ಲಿ ನಡೆಯಬಹುದೆಂದು ಆರ್ಥಿಕ ಸಚಿವ ಶ್ರೀ ದೇಶಮುಖ್‌ರವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

○ ಪಾಕೀಸ್ತಾನ ಅಮೆರಿಕಾ ಮಿಲಿಟರಿ ಒಪ್ಪಂದದಿಂದ ನಾವು ಹೆದರುವುದಿಲ್ಲ, ಗಾಬರಿ ಗೊಳ್ಳುವುದಿಲ್ಲ. ನಮ್ಮ ಸೈನ್ಯಬಲಕ್ಕಾಗಿ ಹೆಚ್ಚು ಹಣ ಸುರಿಯುವುದಿಲ್ಲ. ಅವಶ್ಯಕವಿದ್ದಾಗ ಅದನ್ನು ಎದುರಿಸಲು ತಕ್ಕ ವ್ಯವಸ್ಥೆ ಮಾಡಲಾಗುತ್ತದೆ ಎಂದು ಪ್ರಧಾನಿ ನೆಹರೂರವರು ಹೇಳಿದ್ದಾರೆ.

ಸರ್ಕಾರಿ ನೌಕರರಿಗೆ ಕಡ್ಡಾಯ ಹಿಂದಿ ಪರೀಕ್ಷೆ

ಮೈಸೂರು ಸರ್ಕಾರದ ನಿರ್ಧಾರ

ಬೆಂಗಳೂರು ೨೪

ಸರ್ಕಾರದಲ್ಲಿ ಇನ್ನುಮುಂದೆ ಹಿಂದಿ ಭಾಷೆಯ ಪತ್ರವ್ಯವಹಾರಗಳನ್ನು ಅರ್ಥ ಮಾಡಿಕೊಳ್ಳಲು ಅನುಕೂಲವಾಗುವಂತೆ ಎಲ್ಲಾ ಸರ್ಕಾರಿ ಅಧಿಕಾರಿಗಳನ್ನು ಇನ್ನು ಮುಂದೆ ರಾಷ್ಟ್ರಭಾಷೆಯಾದ ಹಿಂದಿಯಲ್ಲಿ ಪರೀಕ್ಷೆಯನ್ನು ಕಡ್ಡಾಯವಾಗಿ ಮಾಡಬೇಕೆಂದು ಮೈಸೂರು ಸರ್ಕಾರವು ಒಂದು ಆಜ್ಞೆಯನ್ನು ಹೊರಡಿಸಲಿರುವುದಾಗಿ ತಿಳಿಯಬರುತ್ತದೆ. ೧೫ ವರ್ಷಕ್ಕಿಂತ ಹೆಚ್ಚು ಸರ್ವಿಸ್ ಉಳ್ಳ ಎಲ್ಲಾ ಸರ್ಕಾರಿ ಅಧಿಕಾರಿಗಳಿಗೆ ಈ ಆಜ್ಞೆಯು ಅನ್ವಯವಾಗುತ್ತದೆ. ನಿನ್ನೆಯದಿನ ಶಾಸನಸಭೆಯಲ್ಲಿ ವಿದ್ಯಾಸಚಿವರು ತಮ್ಮ ಶಾಖೆಯ ಬೇಡಿಕೆಯನ್ನು ಒಪ್ಪಿಸಿದಾಗ ಸದಸ್ಯರಾದ ಶ್ರೀ ಶಿವಪ್ಪನವರು ಹಿಂದಿಯಲ್ಲಿಯೇ ಮಾತನಾಡಿದರು ಸಭೆಯಲ್ಲಿ ಅನೇಕರಿಗೆ ಹಿಂದಿ ಗೊತ್ತಿಲ್ಲದಿರುವುದರಿಂದ ಇಂಗ್ಲೀಷ್ ಅಥವ ಕನ್ನಡದಲ್ಲಿ ಮಾತನಾಡುವಂತೆ ಅವರಿಗೆ ಅಧ್ಯಕ್ಷರು ಸಲಹೆಯನ್ನಿತ್ತರು. ಹಿಂದಿ ರಾಷ್ಟ್ರಭಾಷೆಯಾದುದರಿಂದ ಅದರಲ್ಲಿ ಮಾತನಾಡಲು ರಾಜ್ಯಾಂಗ ಪ್ರಕಾರ ತಮಗೆ ಹಕ್ಕಿರುವುದಾಗಿ ಸದಸ್ಯರು ತಿಳಿಸಿದರು.

ವಿದ್ಯಾಸಚಿವ ಶ್ರೀ ಎ. ಜಿ. ರಾಮಚಂದ್ರರಾಯರು ಇಂಗ್ಲೀಷ್ ಮತ್ತು ಹಿಂದಿಯಲ್ಲಿ ಮಾತನಾಡುತ್ತಾ ಇನ್ನು ೧೫ವರ್ಷಗಳನಂತರ ಕೇಂದ್ರ ಮತ್ತು ಸಂಸ್ಥಾನ ಸರಕಾರಗಳ ನಡುವೆ ಹಿಂದಿಯಲ್ಲಿಯೇ ಪತ್ರವ್ಯವಹಾರ ನಡೆಸುವಂತೆ ಏರ್ಪಾಡಾಗಬೇಕೆಂದು ಕೇಂದ್ರದಿಂದ ಸೂಚನೆಬಂದಿರುವುದಾಗಿ ತಿಳಿಸಿದರು.

ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಗೆ ಭಾರತದ ನಿಯೋಗ

ನವದೆಹಲಿ ಮಾರ್ಚಿ ೨೨

ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಸಮಿತಿಯ ೧೭ ನೆಯ ಅಧಿವೇಶನವು ೧೯೫೪ ನೇ ಮಾರ್ಚಿ ೩೦ ನೇ ತಾರೀಖಿನಿಂದ ನ್ಯೂಯಾರ್ಕಿನಲ್ಲಿ ಆರಂಭವಾಗುವುದು. ಈ ಅಧಿವೇಶನಕ್ಕೆ ಭಾರತದ ಪರವಾಗಿ ಕೆನಡಾದಲ್ಲಿರುವ ಭಾರತದ ಹೈಕಮೀಷನರ್ ಶ್ರೀ ಆರ್. ಆರ್. ಸಾಕ್ಸೇನಾರವರ ನಾಯಕತ್ವದಲ್ಲಿ ಒಂದು ನಿಯೋಗವನ್ನು ಕಳುಹಿಸಲಾಗುವುದು.

ಡಕ್ಕಾದಲ್ಲಿ ಭಾರಿ ದಂಗೆ

ಪೂರ್ವ ಪಾಕೀಸ್ತಾನದ ಡಕ್ಕಾದಲ್ಲಿ ಇದೇ ಸೋಮವಾರ ಒಂದು ಕಾಗದ ಕಾರ್ಖಾನೆಯಲ್ಲಿ ಕಾರ್ಮಿಕರಿಗೂ ಅಧಿಕಾರಿವರ್ಗದವರಿಗೂ ಘರ್ಷಣೆಯುಂಟಾಗಿ, ಭಾರಿ ದಂಗೆ ನಡೆಯಿತೆಂದೂ ಅದರ ಪರಿಣಾಮವಾಗಿ ೧೩ ಜನರು ಸತ್ತು ೩೯ ಜನರಿಗೆ ಗಾಯಗಳಾಗಿರುವುದಾಗಿ ತಿಳಿಯಬರುತ್ತದೆ.

ಹಿತರಕ್ಷಣಾ ಸಂಸ್ಥೆಗಳಿಗೆ ಸಹಾಯ ಧನ

ಭಾರತದಲ್ಲಿರುವ ೬೦೦ ಕ್ಕೆ ಮೇಲ್ಪಟ್ಟ ಹಿತರಕ್ಷಣಾ ಸಂಸ್ಥೆಗಳಿಗೆ ಕೇಂದ್ರ ಸಮಾಜ ಹಿತರಕ್ಷಣಾ ಸಮಿತಿಯು ೨೦ ಲಕ್ಷ ರೂಪಾಯಿಗಳಿಗಿಂತ ಹೆಚ್ಚಾಗಿ ಸಹಾಯ ಧನವನ್ನು ಮಂಜೂರು ಮಾಡಿದೆ.

ಈ ಸಮಿತಿಯ ಸ್ಥಾಯಿ ಸಮಿತಿಯ ಸಭೆಯು, ಇದರ ಅಧ್ಯಕ್ಷಿಣಿ ಶ್ರೀಮತಿ ದುರ್ಗಾಬಾಯಿ ದೇಶಮುಖ್‌ರ ನೇತೃತ್ವದಲ್ಲಿ ಇತ್ತೀಚೆಗೆ ಸೇರಿದಾಗ ದೇಶದಲ್ಲಿರುವ ೬೫ ಸಂಸ್ಥೆಗಳ ಸಹಾಯಕ್ಕಾಗಿ ೧,೬೭,೨೦೦ ರೂ.ಗಳನ್ನು ಮಂಜೂರು ಮಾಡಿತು.

ಇದಕ್ಕೆ ಮೊದಲು ೧೯೫೩ ನೇ ವರ್ಷದ ನವೆಂಬರ್ ತಿಂಗಳಿಂದ ಮೂರು ತಿಂಗಳಲ್ಲಿ ೫೪೬ ಸಂಸ್ಥೆಗಳಿಗೆ ೧೮,೫೪,೮೦೦ ರೂ.ಗಳ ಸಹಾಯ ಧನ ಕೊಡಲಾಗಿತ್ತು. ಅಂದರೆ ಒಟ್ಟಿನಲ್ಲಿ ಇದುವರೆಗೆ ೬೨೧ ಸಂಸ್ಥೆಗಳಿಗೆ ೨೦,೨೨೦೦೦ ರೂ.ಗಳ ದ್ರವ್ಯ ಸಹಾಯ ಕೊಡಲಾಗಿದೆ.

ವಿದೇಶಾಂಗ ಇಲಾಖೆ ವೆಚ್ಚ

೧೯೫೩-೫೪ ರಲ್ಲಿ ಭಾರತದ ವಿದೇಶಾಂಗ ಇಲಾಖೆಯ ವೆಚ್ಚವು ೧೦ ಕೋಟಿ ರೂಪಾಯಿಗಳಾಗಿರುವುದಾಗಿ ಪ್ರಕಟಿಸಲಾಗಿದೆ.

-ಮೈಸೂರು ಪೇಟೆಧಾರಣೆ-

ತಾರೀಖು ೨೩—೩—೧೯೫೪

ಪಲ್ಲ	ರೂ. ಆ	ರೂ. ಆ
ಕಡಲೇಕಾಯಿ	೨೦—೧೩	೨೪—೧೪
ಎಳ್ಳು	೭೦—	—
ಹುಳ್ಳು	೨೭—೬	೨೭—೧೦
ಹುಚ್ಚೆಳ್ಳು	೩೨—೨	೪೩—೧೦
ಹೊಂಗೆಬೀಜ	೧೬—೨	೨೨—೧೦
ಹುಣಸೆಬೀಜ	೧೩—೮	೧೪—೪
ಹುರುಳಿ	೨೫—೨	೨೮—೮
ಹೆಸರು	೩೯—೪	—
ಅಲಸಂದೆ	೩೧—೧೪	೩೩—
ಅವರೆ	೩೩—	—
ಉದ್ದು	—	—
ಕೊತ್ತಂಬರಿ	—	—
ತೊಗರಿ	—	—
ಕಡಲೆ	೪೨—೨	೪೩—
ಸೆಣಬು	೨೬—೬	೩೧—೪
ಕ॥ ಬೀಜ	—	—
ಹುಣಸೆಹಣ್ಣು	೬—೮	೯—೧೫
ಸೀಗೆಕಾಯಿ	೪—೧೧	—
ಮೆಣಸಿನಕಾಯಿ	—	—
ಬೆಲ್ಲ	—	—
ತೆಂಗಿನಕಾಯಿ	೧೨೧—	೨೩೦—

ಅಡಿಕೆ, ಸಿಮೆಂಟ್, ಬಟ್ಟೆ ಮೇಲೆ ಸುಂಕ ತೆಗೆಯುವುದಿಲ್ಲ

ಪಾರ್ಲಿಮೆಂಟಿನಲ್ಲಿ ಆರ್ಥಿಕ ಸಚಿವರ ವಿವರಣೆ

ಮುಂದಿನ ಸಾಲಿನಿಂದ ಅಡಿಕೆ, ಸಿಮೆಂಟ್ ಮತ್ತು ಒರಟುಬಟ್ಟೆಯಮೇಲೆ ಎಕ್ಸೈಜು ಸುಂಕವನ್ನು ವಿಧಿಸಬೇಕೆಂದು ಸರ್ಕಾರವು ಮಾಡಿರುವ ತೀರ್ಮಾನವನ್ನು ಬದಲಾಯಿಸುವುದಿಲ್ಲವೆಂದು ಆರ್ಥಿಕ ಸಚಿವ ಶ್ರೀ ಚಿಂತಾಮಣಿ ದೇಶಮುಖ್‌ರವರು ಪಾರ್ಲಿಮೆಂಟಿನಲ್ಲಿ ತಿಳಿಸಿದ್ದಾರೆ.

ಅಡಕೆಮೇಲೆ ಸುಂಕವನ್ನು ಹಾಕುವುದರಿಂದ ಗ್ರಾಹಕರಿಗೆ ಏನೂ ತೊಂದರೆಯಾಗವುದಿಲ್ಲ. ದಳ್ಳಾಳಿಗಳಿಗೆ ಮಾತ್ರ ಸ್ವಲ್ಪ ತೊಂದರೆಯಾಗುತ್ತದೆ. ಗ್ರಾಹಕರಿಗೆ ವರ್ಷವೊಂದಕ್ಕೆ ಕೇವಲ ಒಂದೂವರೆ ಆಣೆ ಸುಂಕ ಬೀಳುತ್ತದೆ ಎಂದು ಅವರು ವಿವರಿಸಿದ್ದಾರೆ. ಸಿಮೆಂಟಿನಮೇಲೆ ಸುಂಕ ವಿಧಿಸುವುದಕ್ಕೆ ಯಾವ ಸಿಮೆಂಟ್ ಕಾರ್ಖಾನೆಯೂ ತನ್ನ ವಿರೋಧವನ್ನು ವ್ಯಕ್ತಪಡಿಸಿಲ್ಲವೆಂದೂ ಅವರು ಹೇಳಿದ್ದಾರೆ.

ತಿರು-ಕೊಚ್ಚಿಯಲ್ಲಿ ಕಾಂಗ್ರೆಸ್ ವಿರೋಧಪಕ್ಷ

ತಿರುವಾಂಕೂರು – ಕೊಚ್ಚಿಯ ಶಾಸನ ಸಭೆಯಲ್ಲಿ ೪೫ ಸದಸ್ಯತ್ವ ಪಡೆದಿರುವ ಕಾಂಗ್ರೆಸ್ ಪಕ್ಷವು ವಿರೋಧಪಕ್ಷವಾಗಿರುತ್ತದೆ ಎಂದು ಸಭೆಯ ಅಧ್ಯಕ್ಷರು ತಿಳಿಸಿದ್ದಾರೆ. ೪೦ ಜನ ಸದಸ್ಯರನ್ನೊಳಗೊಂಡ ಸಂಯುಕ್ತ ಜನತಾ ಪಕ್ಷವನ್ನು ವಿರೋಧ ಪಕ್ಷವೆಂದು ಪರಿಗಣಿಸಬೇಕೆಂದು ಆ ಪಕ್ಷದ ನಾಯಕರು ಕೋರಿದ್ದರು. ಅದಕ್ಕೆ ಅಧ್ಯಕ್ಷರ ಸಮ್ಮತಿ ದೊರೆಯಲಿಲ್ಲ.

ಟಿ. ಸಿ. ಮಂತ್ರಿಗಳ ಸಂಬಳ ಖೋತಾ

ತಿರುವಾಂಕೂರು-ಕೊಚ್ಚಿಯ ಹೊಸ ಸಚಿವರುಗಳು ತಮ್ಮ ಸಂಬಳವನ್ನು ೬೫೦ ರೂ.ಗಳಿಂದ ೫೦೦ ಕ್ಕೆ ಇಳಿಸಿಕೊಂಡು ೨೫೦ ರೂ.ಗಳ ಖೋತಾವನ್ನು ಸ್ವಇಚ್ಛೆಯಿಂದ ಮಾಡಿಕೊಂಡಿದ್ದಾರೆ.

ರಾಷ್ಟ್ರೀಯ ವಿದ್ಯೋದಯ ನಿಧಿ ಲಾಟರಿ

ಮುಕ್ತಾಯ 31-3-1954 ಡ್ರಾಯಿಂಗ್ 19-4-1954

ರಾಷ್ಟ್ರೀಯ ವಿದ್ಯಾಲಯ ಬೆಂಗಳೂರು ಮತ್ತು ವಿದ್ಯೋದಯ ಹೈಸ್ಕೂಲು ಟಿ. ನರಸೀಪುರ

ಈ ವಿದ್ಯಾಸಂಸ್ಥೆಗಳ ಸಹಾಯಾರ್ಥ

ಮೊದಲನೆ ಬಹುಮಾನ 10000 ರೂ

ಒಟ್ಟು 2000 ಬಹುಮಾನಗಳು.

ಬಹುಮಾನದ ಮೊಬಲಗು 45000 ರೂ.

ಟಿಕೇಟು ಒಂದಕ್ಕೆ ಒಂದೇರೂಪಾಯಿ.

ಇಂದೇ ಟಿಕೇಟನ್ನು ಕೊಂಡು, ಸಹಾಯನೀಡಿ. ಕೇಂದ್ರ ಕಛೇರಿ:- ರಾಷ್ಟ್ರೀಯ ವಿದ್ಯಾಲಯ, ಬೆಂಗಳೂರು 4.

ಅಂಕಿ ಅಂಶಗಳು

ನವದೆಹಲಿ ಮಾರ್ಚಿ ೨೦

ಅಖಿಲಭಾರತ ಮಹಿಳಾ ಆಹಾರ ಸಮಿತಿಗೆ ೧೯೫೧-೫೨ರಿಂದ ೫೩-೫೪ರ ವರೆಗೆ ಇಂಡಿಯಾಸರ್ಕಾರವು ನೀಡಿರುವ ಒಟ್ಟು ಸಹಾಯಧನ ೪,೫೦,೦೦೦ ರೂ. ಗಳು

೧೯೫೩-೫೪ ರಲ್ಲಿ ೫೪೦೦೦ ಎಕರೆಗಳಲ್ಲಿ ಗಸಗಸೆಗಿಡಗಳನ್ನು ಬೆಳೆಯಲಾಯಿತು

ಸಾಗಾಣಿಕೆ ವೆಚ್ಚ, ಸುಂಕ, ಮಾರಾಟ ತೆರಿಗೆ ಇತ್ಯಾದಿ ತೆರಿಗೆಗಳನ್ನು ಬಿಟ್ಟು ೧೯೫೨-೫೩ ರಲ್ಲಿ ಭಾರತ ರೈಲ್ವೆಗಳು ಕಲ್ಲಿದ್ದಲಿಗಾಗಿ ಪ್ರತಿದಿನ ಮಾಡಿದ ಸರಾಸರಿ ವೆಚ್ಚ ೫ ಲಕ್ಷ ರೂಪಾಯಿಗಳಿಗೂ ಹೆಚ್ಚಾಗಿದೆ.

೧೯೫೨-೫೩ ರಲ್ಲಿ ಅಂಚೆ ಮತ್ತು ತಂತಿ ಇಲಾಖೆಯಿಂದ ೧೧೧೦ ಲಕ್ಷ ರಿಜಿಸ್ಟರ್ ಮಾಡಿದ ವೃತ್ತಪತ್ರಿಕೆಗಳ ಕಟ್ಟುಗಳೂ, ೧೩೬೦ ಲಕ್ಷ ಬುಕ್‌ಪೋಸ್ಟುಗಳ ಕಟ್ಟುಗಳೂ ಒಯ್ಯಲ್ಪಟ್ಟವೆ.

ಕಳ್ಳತನದಿಂದ ಸಾಗಿಸಲ್ಪಡುತ್ತಿದ್ದ ೧,೬೩,೪೫೦ ತೊಲಾ ಬೆಳ್ಳಿಯನ್ನು ೫೨-೫೩ ರಲ್ಲಿ ವಶಪಡಿಸಿಕೊಳ್ಳಲಾಯಿತು. ಇದರ ಹಿಂದಿನವರ್ಷ ೨,೯೭,೯೫೦ ತೊಲಾಗಳಷ್ಟು ಬೆಳ್ಳಿಯನ್ನು ವಶಪಡಿಸಿಕೊಳ್ಳಲಾಯಿತು.

೧೯೫೩ ರಲ್ಲಿ ೮.೪ ಲಕ್ಷ ಬೆಲೆಬಾಳುವ ೨೫೭,೬೩೮ ಪೌಂಡುಗಳಷ್ಟು ತಂತಿಗಳು ಕಳುವಾಗಿವೆ.

ಸ್ವಾಮಿ ಸೀತಾರಾಂರವರಿಗೆ ನೆಹರೂ ಮನವಿ

ಆಂಧ್ರದಲ್ಲಿ ಪಾನನಿರೋಧವನ್ನು ರದ್ದುಗೊಳಿಸಬಾರದೆಂದು ಆಮರಣಾಂತ ಉಪವಾಸವನ್ನು ಹೂಡಿರುವ ಸ್ವಾಮಿ ಸೀತಾರಾಂರವರಿಗೆ ಪ್ರಧಾನಿ ನೆಹರೂರವರು ಒಂದು ಪತ್ರಕಳುಹಿಸಿ, ಉಪವಾಸವನ್ನು ನಿಲ್ಲಿಸುವಂತೆ ಕೋರಿದ್ದಾರೆ.

ಪ್ರಭಾ ★ 26-3-54ರಿಂದ ಎರಡನೇವಾರ ದಿನವಹಿ 3 ಆಟಗಳು

ರಮೇಶ್ ಸೈಗಾಲ್‌ರವರ:—

★ ಶಿಕಸ್ತ್ ★

ಬೆಳಗಿನ ಪ್ರದರ್ಶನ:-26-3-54 ರಿಂದ ಮೂರು ದಿನಗಳು

ಗೀತಾಬಾಲಿ, ರಾಜ್‌ಕಪೂರ್ ನಟಿಸಿರುವ ಕೇದಾರ್‌ಶರ್ಮರವರ ಬಾವ್ರೆನೈನ್

ಪ್ರಕಾಶಕರು ಮತ್ತು ಮುದ್ರಕರು
ಜಿ. ಎಲ್. ಸ್ವಾಮಿ
ಸಮಾಚಾರ ಪ್ರೆಸ್, ಮೈಸೂರು.

ಫೋನ್ ೫೭೪
ರಿಜಿಸ್ಟರ್ ನಂ. ಎಂ. ೫೩೧೮

ಸಮಾಚಾರ

ದಿನಪತ್ರಿಕೆ
ಸಂಪುಟ ೪
ಸಂಚಿಕೆ ೧೭೨

೨೫-೩-೧೯೫೪ನೇ ಗುರುವಾರ] ★ ಸಂಪಾದಕರು:—ಜಿ. ಎಲ್. ಸ್ವಾಮಿ

ಮದ್ರಾಸ್ ಮುಖ್ಯಮಂತ್ರಿ ಶ್ರೀ ರಾಜಾಜಿಯವರ ರಾಜೀನಾಮೆಯೇ ?

ಮದ್ರಾಸಿನ ಮುಖ್ಯಮಂತ್ರಿ ಶ್ರೀ ಸಿ ರಾಜಗೋಪಾಲಾಚಾರಿಯವರು ಕಳೆದ ಒಂದುವಾರದಿಂದ ಅಸ್ವಸ್ಥರಾಗಿರುವುದರಿಂದ ಅವರು ತಮ್ಮ ಮಂತ್ರಿ ಪದವಿಗೆ ರಾಜೀನಾಮೆಯನ್ನು ಸಲ್ಲಿಸುವರೆಂದು ಹೇಳಲಾಗುತ್ತಿದೆ. ಮದ್ರಾಸ್ ಶಾಸನಸಭೆಯು ಮುಂದೆ ಈ ಸ್ಥಾನಕ್ಕೆ ಯಾರನ್ನು ಚುನಾಯಿಸಬೇಕೆಂಬ ವಿಷಯದಲ್ಲಿ ಅಲ್ಲಿಯ ಕಾಂಗ್ರೆಸ್ ನಾಯಕರಲ್ಲಿ ಈಗಾಗಲೇ ಮಾತುಕತೆಗಳು ಪ್ರಾರಂಭವಾಗಿರುವುದಾಗಿ ತಿಳಿದುಬಂದಿದೆ. ಮಲಯಾದಲ್ಲಿ ಪ್ರವಾಸ ಪೂರೈಸಿಕೊಂಡು ಮದ್ರಾಸಿಗೆ ಹಿಂತಿರುಗಿರುವ ತಮಿಳುನಾಡು ಕಾಂಗ್ರೆಸ್ ಅಧ್ಯಕ್ಷ ಶ್ರೀ ಕಾಮರಾಜನಾದಾರ್‌ರವರು ರಾಜಾಜಿಯವರನ್ನು ಈಗಾಗಲೇ ಎರಡುಬಾರಿ ಭೇಟಿಮಾಡಿ ವಿಚಾರ ವಿನಿಮಯ ನಡೆಸಿವರೆಂದೂ ಹೇಳಲಾಗುತ್ತಿದೆ.

ಉಪವಾಸ ಮುಕ್ತಾಯ

ಮೈಸೂರು ೨೫

ನಗರದ ರೈಲ್ವೆ ಸ್ಟೇಷನ್ ಹೋಟೇಲಿನ ಮಾಲೀಕರು ಕೈಗಾರಿಕಾ ನ್ಯಾಯಾಲಯದ ತೀರ್ಪನ್ನು ಕಳೆದ ಮೇ ತಿಂಗಳಿನಿಂದಲೂ ಜಾರಿಗೆ ತರದೆ ತನಗೆ ಯಾವ ಪರಿಹಾರವೂ ಸಿಕ್ಕದೆ ಇರುವುದರಿಂದ ಅಲ್ಲಿನ ಮಾಜಿ ಕೆಲಸಗಾರ ಶ್ರೀ ಕೆ. ಎಸ್. ವಾಸುಶೆಟ್ಟಿಯವರು ಅಸಿಸ್ಟೆಂಟ್ ಲೇಬರ್ ಕಮೀಷನರ ಕಛೇರಿ ಮುಂದೆ ನಿನ್ನೆ ಬೆಳಿಗ್ಗೆಯಿಂದ ಆಮರಣಾಂತ ಉಪವಾಸ ಪ್ರಾರಂಭಿಸಿದರಷ್ಟೆ.

ಈ ಸಂಬಂಧದಲ್ಲಿ ಅ॥ ಲೇಬರ್ ಕಮೀಷನರು ಮಾಲೀಕರ ಮೇಲೆ ಸೂಕ್ತಕ್ರಮ ಕೈಗೊಳ್ಳುವುದಾಗಿ ಭರವಸೆ ಇತ್ತಿದುದರಿಂದ ಶ್ರೀ ಶೆಟ್ಟಿಯವರು ತಮ್ಮ ಉಪವಾಸವನ್ನು ನಿನ್ನೆ ಸಂಜೆ ಮುಕ್ತಾಯಗೊಳಿಸಿದರೆಂದು ತಿಳಿದು ಬರುತ್ತದೆ.

ಆಸ್ಥಾನ ವಿದ್ವಾನ್ ವಾಸುದೇವಾಚಾರ್ಯರಿಗೆ ರಾಷ್ಟ್ರಾಧ್ಯಕ್ಷರ ಪ್ರಶಸ್ತಿ

ಭಾರತ ಸರ್ಕಾರವು ಸಂಗೀತ ವಿದ್ವಾಂಸರುಗಳಿಗೆ ಪ್ರತಿವರ್ಷವೂ ಕೊಡಲಿರುವ ರಾಷ್ಟ್ರಾಧ್ಯಕ್ಷರ ಪ್ರಶಸ್ತಿಯು ಈ ವರ್ಷದಲ್ಲಿ ಬಾಯಿ ಹಾಡುಗಾರಿಕೆಗಾಗಿ ಮೈಸೂರು ಆಸ್ಥಾನ ವಿದ್ವಾಂಸರಾದ ಶ್ರೀ ವಾಸುದೇವಾಚಾರ್ಯರಿಗೆ ಕೊಡಲಾಗುತ್ತದೆ. ವಾದ್ಯ ಸಂಗೀತದ ಪ್ರಶಸ್ತಿಯು ಕೊಯಮತ್ತೂರಿನ ಶ್ರೀ ಪಲ್ಲಡಂ ಸಂಜೀವರಾಯರಿಗೆ ದೊರೆತಿದೆ.

ಈ ಪ್ರಶಸ್ತಿಗಳನ್ನು ರಾಷ್ಟ್ರಾಧ್ಯಕ್ಷರು ದೆಹಲಿಯಲ್ಲಿ ಇದೇ ೩೦ ನೇ ತಾರೀಖು ನಡೆಯುವ ಸಮಾರಂಭದಲ್ಲಿ ದಯಪಾಲಿಸುತ್ತಾರೆ.

ಪೂರ್ವ ಪಾಕೀಸ್ತಾನದ ಚುನಾವಣೆ

ಪೂರ್ವ ಪಾಕೀಸ್ತಾನದಲ್ಲಿ ನಡೆದ ಚುನಾವಣೆಗಳಲ್ಲಿ ಇಲ್ಲಿಯವರೆಗೆ ಪ್ರಕಟವಾಗಿರುವ ೨೩೭ ಫಲಿತಾಂಶಗಳಲ್ಲಿ ಸಂಯುಕ್ತ ವಿರೋಧ ಪಕ್ಷವು ೨೧೭ ಸ್ಥಾನಗಳನ್ನು ಗಳಿಸಿದೆ. ಮುಸ್ಲಿಂ ಲೀಗ್ ಕೇವಲ ೮ ಸ್ಥಾನ ಪಡೆದಿದೆ. ಶಾಸನಸಭೆಯಲ್ಲಿ ಇದು ಒಂದು ಪಕ್ಷವೆಂದು ಸಹ ಪರಿಗಣಿಸಲು ಅವಕಾಶವಿಲ್ಲದಂತಾಗಿದೆ.

'ನೀರಾ' ದಿಂದ ೮-೯ ಕೋಟಿ ರೂ. ಉತ್ಪತ್ತಿ

ಆಂಧ್ರ ಪ್ರಾಂತ್ಯದಲ್ಲಿ 'ನೀರಾ' ವನ್ನು ತೆಗೆಯಲು ಅಲ್ಲಿಯ ಸರ್ಕಾರವು ಅನುಮತಿ ನೀಡಿರುವುದರಿಂದ ಈ ಬಾಬಿನಲ್ಲಿ ಸರ್ಕಾರಕ್ಕೆ ೮-೯ ಕೋಟಿ ರೂಪಾಯಿಗಳು ಉತ್ಪತ್ತಿಯಾಗುವುದಾಗಿ ಅಲ್ಲಿಯ ಆರ್ಥಿಕ ಸಚಿವರು ತಿಳಿಸಿದ್ದಾರೆ.

ಶಾಸನ ಸಭಾಧಿವೇಶನ

ಬೆಂಗಳೂರು ೨೫

ಮೈಸೂರು ಶಾಸನ ಸಭಾಧಿವೇಶನವು ಮಾರ್ಚಿ ೩೧ ನೇ ತಾರೀಖು ಮುಕ್ತಾಯವಾಗಬೇಕಾಗಿದ್ದುದು ಏಪ್ರಿಲ್ ಮಧ್ಯಭಾಗದವರೆಗೆ ನಡೆಯುವುದಾಗಿ ತಿಳಿಯಬರುತ್ತದೆ.

ಏಪ್ರಿಲ್ ೩ ತಾರೀಖಿನವರೆಗೆ ಅಧಿವೇಶನವು ನಡೆದು ೪ ರಿಂದ ೭ ನೇ ತಾರೀಖಿನವರೆಗೆ ಮಹಿನಾಡು ಸಮ್ಮೇಳಕ್ಕಾಗಿ ಬಿಡುವುಕೊಟ್ಟು ಏಪ್ರಿಲ್ ೮ ರಿಂದ ಪುನಃ ಅಧಿವೇಶನ ೫-೬ ದಿನಗಳು ನಡೆಯುವುದೆಂದು ಹೇಳಲಾಗಿದೆ.

ಬಳ್ಳಾರಿಗೆ ಹೊಸ ಡಿ.ಐ.ಜಿ.

ಬೆಂಗಳೂರು ೨೫

ಬಳ್ಳಾರಿ ಡಿ. ಐ. ಜಿ. ಯವರಾದ ಶ್ರೀ ಚಾಂಡಿಯವರು ಇದೇ ೨೦ನೇ ತಾರೀಖಿನಿಂದ ೬ ವಾರಕಾಲ ರಜಾ ಹೋಗಿರುವುದರಿಂದ ಅವರ ಸ್ಥಾನದಲ್ಲಿ ಬೆಂಗಳೂರು ನಾರ್ತ್ ಡಿ. ಎಸ್. ಪಿ ಶ್ರೀ ಕೆ. ಎಸ್. ಕೃಷ್ಣಮೂರ್ತಿಯವರನ್ನು ನೇಮಿಸಿದೆ.

ಮೈಸೂರು ಕೈಗಾರಿಕೆಗಳಿಗೆ ಕೇಂದ್ರದ ನೆರವು

ಮೈಸೂರು ಸಂಸ್ಥಾನದಲ್ಲಿ ಕಬ್ಬಿಣ ಮತ್ತು ಉಕ್ಕಿನ ಕೈಗಾರಿಕೆಯ ವಿಸ್ತರಣೆ, ಚಾಪೆ ಹೆಣೆಯುವುದು, ಮಡಕೆ ತಯಾರಿಕೆ, ಚರ್ಮ ಹದಮಾಡುವುದು, ಗಾಜಿನ ಸಾಮಾನು ತಯಾರಿಕೆ ಮುಂತಾದ ಹಲವಾರು ಕೈಗಾರಿಕೆಗಳಿಗೆ ಕೇಂದ್ರವು ದ್ರವ್ಯ ಸಹಾಯ ನೀಡುವುದಾಗಿ ತಿಳಿದುಬಂದಿದೆ.

ಸ್ವಾಮಿ ಸೀತಾರಾಂರವರ ಉಪವಾಸ ಮುಕ್ತಾಯ

ಆಂಧ್ರಪ್ರಾಂತ್ಯದಲ್ಲಿ ಪಾನನಿರೋಧ ರದ್ದಾಗಬಾರದೆಂದು ಕಳೆದ ೫ ನೇ ತಾ॥ ನಿಂದ ಉಪವಾಸ ಪ್ರಾರಂಭಿಸಿದ್ದ ಸ್ವಾಮಿ ಸೀತಾರಾಂರವರು ಅದನ್ನು ನಿನ್ನೆ ಮುಕ್ತಾಯ ಗೊಳಿಸಿದರು.

ಕಡ್ಡಾಯ ಪ್ರಾಥಮಿಕ ಶಿಕ್ಷಣ

ಬೊಂಬಾಯಿ ಪ್ರಾಂತ್ಯದಲ್ಲಿ ಮುಂದಿನ ಸಾಲಿನಿಂದ ಕಡ್ಡಾಯ ಪ್ರಾಥಮಿಕ ಶಿಕ್ಷಣ ಕ್ರಮವನ್ನು ಜಾರಿಗೆ ತರಲಾಗುವುದೆಂದು ಅಲ್ಲಿಯ ವಿದ್ಯಾಸಚಿವರು ತಿಳಿಸಿದ್ದಾರೆ.

ಜಮ್ಮುವಿಗೆ ರಾಷ್ಟ್ರಾಧ್ಯಕ್ಷರ ಭೇಟಿ

ರಾಷ್ಟ್ರಾಧ್ಯಕ್ಷ ಡಾ॥ ರಾಜೇಂದ್ರಪ್ರಸಾದ್ ರವರು ಏಪ್ರಿಲ್ ೧೦ನೇ ತಾ॥ ಜಮ್ಮುವಿಗೆ ಪ್ರಥಮ ಭೇಟಿ ಕೊಡಲಿರುವರು-

ಮೈಸೂರಿಗೆ ಇಂಡೋನೇಷ್ಯ ಪತ್ರಿಕಾ ನಿಯೋಗ

ಮೈಸೂರು ೨೫

ಭಾರತದಲ್ಲಿ ಪ್ರವಾಸ ಮಾಡುತ್ತಿರುವ ಇಂಡೋನೇಷ್ಯಾ ಪತ್ರಿಕಾ ನಿಯೋಗದವರು ಏಪ್ರಿಲ್ ೫ನೇ ತಾರೀಖು ಮೈಸೂರಿಗೆ ಬರುತ್ತಾರೆ ಆ ರಾತ್ರಿ ಅವರು ಕೃಷ್ಣರಾಜಸಾಗರದಲ್ಲಿ ಬಿಡಾರ ಮಾಡುತ್ತಾರೆ. ಮಾರನೇದಿನ ಬೆಳಿಗ್ಗೆ ಮೈಸೂರಿನಲ್ಲಿ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿಯಿತ್ತು ಬೆಂಗಳೂರಿಗೆ ಹಿಂತಿರುಗಿ ಅದೇ ರಾತ್ರಿ ಮದ್ರಾಸಿಗೆ ಪ್ರಯಾಣ ಮಾಡುತ್ತಾರೆ.

ಕಾಡುಮೃಗಗಳಿಗಾಗಿ ೫ ಲಕ್ಷ ಎಕರೆ ಭೂಮಿ

ಉತ್ತರ ಪ್ರದೇಶದಲ್ಲಿ ೫ ಲಕ್ಷ ಎಕರೆ ಭೂಮಿಯನ್ನು ಕಾಡುಮೃಗಗಳ ವಸತಿ ಪ್ರದೇಶವೆಂದು ಅದನ್ನು ಮೀಸಲಾಗಿಡಲಾಗಿದೆ.

ಮಹಾತ್ಮರ ಸ್ಮಾರಕ ಭವನ

ನವದೇಹಲಿಯ ಭಂಗಿ ಕಾಲೊನಿಯಲ್ಲಿ ಫೋರ್ಡ್ ಫೌಂಡೇಷನ್ನಿನ ಸಹಾಯದಿಂದ ೪ ಲಕ್ಷ ರೂಪಾಯಿಗಳ ಖರ್ಚಿನಿಂದ ಕಟ್ಟಲಾಗಿರುವ ಮಹಾತ್ಮರ ಸ್ಮಾರಕ ಭವನದ ಪ್ರಾರಂಭೋತ್ಸವವನ್ನು ಮುಂದಿನತಿಂಗಳು ೫ನೇ ತಾರೀಖು ರಾಷ್ಟ್ರಾಧ್ಯಕ್ಷರು ನೆರವೇರಿಸುವರು

ಕರಾಚಿಯಿಂದ ಸಿಂಹಳ ಅಧಿಕಾರಿಯ ಉಚ್ಚಾಟನೆ

ಪಾಕೀಸ್ತಾನ ವಿರೋಧ ಚಟುವಟಿಕೆಗಳಲ್ಲಿ ಭಾಗವಹಿಸಿವರೆಂಬ ಆಪಾದನೆಮೇಲೆ ಪಾಕೀಸ್ತಾನದಲ್ಲಿರುವ ಸಿಂಹಳ ಹೈಕಮಿಷನರ ದ್ವಿತೀಯ ಕಾರ್‍ಯದರ್ಶಿ ಶ್ರೀ ಎಂ. ಆರ್. ಪತೇಲಾರವರು ೨೪ ಗಂಟೆಗಳಲ್ಲಿ ಕರಾಚಿಯಿಂದ ಹೊರಟುಹೋಗಬೇಕೆಂದು ಆಜ್ಞೆಯಾಗಿ ಅವರು ಅಲ್ಲಿಂದ ಸಿಂಹಳಕ್ಕೆ ಪ್ರಯಾಣ ಮಾಡಿದರು.

ರೈಲ್ವೆ ಗಾಡಿಗಳ ನಿರ್ಮಾಣ

ತಿರಂಬೂರಿನಲ್ಲಿ ರೈಲ್ವೆ ಗಾಡಿಗಳ ನಿರ್ಮಾಣಕಾರ್ಯವು ೧೯೫೫ರಿಂದ ಪ್ರಾರಂಭವಾಗುತ್ತದೆ. ೭.೪೭ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ಕಾರ್ಖಾನೆಯನ್ನು ಸ್ಥಾಪಿಸಲಾಗುತ್ತಿದೆ.

ಇಂಡೋನೇಷ್ಯಾಕ್ಕೆ ವಿಜಯಲಕ್ಷ್ಮಿಯವರ ಭೇಟಿ

ವಿಶ್ವಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಇಂಡೋನೇಷ್ಯಾ ರಾಷ್ಟ್ರಾಧ್ಯಕ್ಷರ ಆಹ್ವಾನವನ್ನು ಮನ್ನಿಸಿ ಸಧ್ಯದಲ್ಲೇ ಅಲ್ಲಿಗೆ ಭೇಟಿ ಕೊಡುವರೆಂದು ತಿಳಿಯಬರುತ್ತದೆ.

ಟಿ. ಸಿ. ಪ್ರಾಂತ್ಯಕ್ಕೆ ಮೈಸೂರು ಅಕ್ಕಿ

ಕಳೆದ ಮಾಹೆಯಲ್ಲಿ ತಿರುವಾಂಕೂರು ಕೊಚ್ಚಿ ಪ್ರಾಂತ್ಯಕ್ಕೆ ೩೫,೪೫೪ ಟನ್ ಅಕ್ಕಿ ರವಾನೆಯಾಗಿದೆ. ಆ ಪೈಕಿ ಮೈಸೂರು ಸಂಸ್ಥಾನವು ೬೩೪ ಟನ್‌ಗಳನ್ನು ಕಳುಹಿಸಿದೆ.

ಲಂಡನ್ನಿನಲ್ಲಿ ಮೈಸೂರು ಕೈಗಾರಿಕೆ ಉತ್ಪನ್ನಗಳ ಪ್ರದರ್ಶನ

ಲಂಡನ್ನಿನಲ್ಲಿರುವ ಭಾರತದ ಹೈಕಮಿಷನರ್ ಭವನದಲ್ಲಿಯೇ ಮೈಸೂರು ಸಂಸ್ಥಾನದ ಗೃಹ ಕೈಗಾರಿಕೆಗಳ ಉತ್ಪನ್ನಗಳನ್ನು ಪ್ರದರ್ಶಿಸಲು ವ್ಯವಸ್ಥೆ ಮಾಡಲಾಗಿದೆಯೆಂದು ಕೈಗಾರಿಕಾ ಸಚಿವ ಶ್ರೀ ಸಿದ್ದವೀರಪ್ಪನವರು ಶಾಸನ ಸಭೆಯಲ್ಲಿ ತಿಳಿಸಿದ್ದಾರೆ.